40th year of publication. 6-7-1961 ೪೦ನೇ ವರ್ಷ

ಸಂಪುಟ ೪೧ Vol. 41

ನವಯುಗ

ಸಂಚಿಕೆ ೪೨ No. 42

ಬೆಲೆ 0-13

ಪ್ರಚಲಿತ ಪ್ರಸಂಗ

ಕುವೈತದಲ್ಲಿ ಸೈನಿಕ ಚಲನವಲನ

ಎರಡು ವಾರಗಳಿಗೆ ಮೊದಲು ಬ್ರಿಟಿಷರಿಂದ ಸ್ವಾತಂತ್ರ್ಯ ಪಡೆದ ಕುವೈತ್ ಇರಾಕದ ಅವಿಭಾಜ್ಯ ಅಂಗವೆಂಬ ಪ್ರಧಾನಿ ಕಾಸೀಮರ ಉದ್ಗಾರ ಅಲ್ಲಿ ಸೇನೆಯ ಚಲನವಲನಗಳಿಗೆ ಕಾರಣವಾಗಿದೆ. ಆದರೆ, ಈ 'ಶಾಬ್ದಿಕ ಒತ್ತಡ'ವು ನಿಷ್ಫಲವಾಗುವ ನಿರೀಕ್ಷೆಯೇ ಹೆಚ್ಚು.

೧೯೯೯ರಿಂದ ಬ್ರಿಟಿಷ ರಕ್ಷಣೆಯಡಿಯಲ್ಲಿ ಮುಂದುವರಿದ ಕುವೈತ್ ಕೆಲವು ದಿನಗಳಿಗೆ ಮೊದಲು ಸ್ವತಂತ್ರವಾಯ್ತು. ಬ್ರಿಟಿಷ್ ಸರಕಾರ ಮತ್ತು ಕುವೈತಿನ ಶೇಖರ ನಡುವೆ ಆದ ಒಪ್ಪಂದದಂತೆ ಶೇಖರು ಕುವೈತದ ಸಾರ್ವಭೌಮರೆನಿಸಿಕೊಂಡರು; ಬ್ರಿಟನ್ನಿನ ಹತೋಟಿಯು ಅಲ್ಲಿಂದ ದೂರವಾಯ್ತು. ಆದರೆ, ಅದರ ಬೆನ್ನ ಹಿಂದೆಯೇ ಇರಾಕದ ಪ್ರಧಾನಿ ಮೇಜರ್ ಜನರಲ್ ಅಬ್ದುಲ್ ಕರೀಮ್ ಕಾಸಿಮರು ಕುವೈತದ ಮೇಲೆ ಇರಾಕಿನ ಪ್ರಭುತ್ವವಿದೆಯೆಂಬುದನ್ನು ಸ್ಥಾಪಿಸಿ ಹೊರಟಿದ್ದಾರೆ. ಕೋಂಗೊವಿನ ಪಾರ್ಲಿಮೆಂಟು ಸೇರುವಂತಾಗಿ ನೆನೆಗುದಿ ದೂರವಾಗಿ ತಿಳಿಗೊಳ್ಳುತ್ತಿರುವ ಜಾಗತಿಕ ವಾತಾವರಣವನ್ನು ಸುನಃ ಮಲಿನಗೊಳಿಸಲು ಈ ಘಟನೆಯು ಸಾಕೆನಿಸುವಂತಾಗುತ್ತದೆ. ಇರಾಕವು ಕುವೈತದ ಮೇಲೆ ತನ್ನ ಅಧಿಕಾರವಿದೆಯೆಂದು ಹೇಳುತ್ತ ಬಂದಿರುವುದಿದೇನೂ ಪ್ರಥಮ ಬಾರಿಯಲ್ಲ. ಆದರೆ, ಅದರ ವಾದವನ್ನು ಯಾರೂ ಕೇಳುತ್ತಿರಲಿಲ್ಲ. ಆ ಬಗ್ಗೆ ತೀವ್ರವಾಗಿ ಯಾರೂ ವಿಚಾರಿಸುತ್ತಿರಲಿಲ್ಲ. ಹಾಗಿರುವಾಗ, ಕಾಸೀಮರ ಸದ್ಯದ ಘೋಷಣೆಯ ಕಡೆಗಾದರೂ ಹೆಚ್ಚಿನ ಗಮನ ಹರಿಯ ಬಹುದಾದುದು ತೀರ ಅಸಾಧ್ಯವೆಂದೇ ಹೇಳಬೇಕಾಗುವುದು. ಕುವೈತವು ಸಾರ್ವ ಭೌಮಾಧಿಕಾರವುಳ್ಳ ರಾಷ್ಟ್ರವೆಂಬುದನ್ನು ಜೋರ್ಡಾನ್, ಸೌದಿ ಅರೆಬಿಯಾ, ಇರಾಣ ಮೊದಲಾದ ಇರಾಕದ ಸುತ್ತಲಿನ ರಾಷ್ಟ್ರಗಳೇ ಮನ್ನಿಸಿರುವಾಗ, ಕಾಸೀಮರ ಘೋಷಣೆಯು ವ್ಯರ್ಥಾಲಾಪವೆಂದೇ ಹೇಳಬೇಕಾಗುತ್ತದೆ.

ಕುವೈತ ಇರಾಕ ಮೊದಲಾದುವುಗಳು ಮೊದಲನೆ ಜಾಗತಿಕ ಯುದ್ಧಕ್ಕೆ ಮೊದಲು ಒಟ್ಟೊಮನ್ ಸಾಮ್ರಾಜ್ಯದ ವಿಶಾಲೋದರದಲ್ಲಿ ವಿಲೀನವಾಗಿದ್ದುವು. ಮೊದಲನೆಯ ಯುದ್ಧದ ಕಹಿಫಲಗಳಲ್ಲಿ ಒಟ್ಟೊಮನ್ ಸಾಮ್ರಾಜ್ಯದ ವಿಭಜನೆಯೂ ಒಂದು. ಇರಾಕವು ಈ ಸಾಮ್ರಾಜ್ಯದ ಪ್ರತಿನಿಧಿಯು ತಾನೆಂದು ಹೇಳಿಕೊಂಡು ಬರುತ್ತಿರುವುದಷ್ಟೇ ಕುವೈತದ ಮೇಲೆ ಅದರ ಅರಸೊತ್ತಿಗೆಯಿದೆಯೆಂಬುದಕ್ಕೆ ಆಧಾರವಾಗಲಾರದು. ಕುವೈತವು ಮೊದಲಿನಿಂದಲೂ ಸ್ವತಂತ್ರ ಪ್ರಭುತ್ವವುಳ್ಳುದಾಗಿದ್ದು, ಅದು ಒಟ್ಟೊಮನ್ ಸಾಮ್ರಾಜ್ಯದ ಅಧೀನವನ್ನು ಸ್ವೀಕರಿಸಿದ್ದರೂ ಅದು ಕೇವಲ ನಾಮ ಮಾತ್ರಕ್ಕೆಂಬಂತಿತ್ತು. ೧೯೯೮ರಲ್ಲಿ ಶೇಖ ಸಾಮ್ರಾಜ್ಯದ ಮೇಲೆ ತುರ್ಕಿಯು ಒತ್ತಡ ಹೇರಲೆತ್ನಿಸಿದಾಗ ಶೇಖರು ಬ್ರಿಟಿಷರ ರಕ್ಷಣೆಯನ್ನು ಬೇಡಿ ಟರ್ಕಿಷರನ್ನು ದೂರವಟ್ಟಿದರು. ಅನಂತರದ ವರ್ಷದಿಂದ ಕುವೈತವು ಬ್ರಿಟಿಷ ರಕ್ಷಿತವಾಗಿದೆ. ಕೆಲವು ದಿನಗಳ ಮೊದಲು ಇಂಗ್ಲೆಂಡಿನೊಡನಾದ ಒಂದು ಹೊಸ ಒಪ್ಪಂದದನ್ವಯ ಅದು ಸ್ವತಂತ್ರವಾಗಿದೆ.

ಬ್ರಿಟಿಷ ರಕ್ಷಣೆಯಲ್ಲಿದ್ದಷ್ಟು ದಿನ ಅದರ ಮೇಲೆ ತನ್ನ ಹಕ್ಕನ್ನು ಸ್ಥಾಪಿಸಲು ಮುಂದಾಗದ ಇರಾಕವು ಈಗ ಮಾತ್ರ ಹಾಗೆ ಮಾಡುತ್ತಿರುವುದು ವಿಚಿತ್ರವೆನಿಸುತ್ತದೆ. ಸ್ವಾತಂತ್ರ್ಯವನ್ನು ಪಡೆದ ಕುವೈತವು ಸಂಯುಕ್ತ ರಾಷ್ಟ್ರ ಸಂಸ್ಥೆಗೆ ಸದಸ್ಯತನದ ಬಗ್ಗೆ ಅರ್ಜಿ ಹಾಕುವುದೆಂದೂ ಇದರಿಂದ ಇರಾಕಕ್ಕೆ ಅದರ ಮೇಲಿನ ಅಧಿಕಾರ ಸ್ಥಾಪಿಸಲು ಅವಕಾಶವಿಲ್ಲದಂತಾಗುವುದೆಂದೂ ಇರಾಕವು ಭಾವಿಸಿದಂತಿದೆ. ಈ ಪ್ರಸಂಗದಲ್ಲಿ ಶಾಂತ ವಿಧಾನವನ್ನೇ ಇರಾಕವು ಅನುಸರಿಸುವುದೆಂಬ ವಿಶ್ವಾಸವನ್ನು ಜಿಲ್ ಕಾಸಿಮ್ ಕೊಟ್ಟಿದ್ದಾರೆ. ಅವರದಿಂದ ಇವರು ಕಾರ್ಯಪ್ರವೃತ್ತರಾಗುವುದಿಲ್ಲವೆಂಬುದು ಸದ್ಯ ಸಮೂಹಾನಕರ ಕೇವಲ ಎರಡು ಲಕ್ಷ ಜನವಸತಿಯುಳ್ಳ ಕುವೈತವು ಚಿಕ್ಕ ದೇಶವಾದರೂ ಅಲ್ಲಿ ದೊರೆಯುವ ಎಣ್ಣೆಯಿಂದಾಗಿ ವಾರ್ಷಿಕ ೧೩೦ ಕೋಟಿ ರೂಪಾಯಿಗಳಿಗೂ ಮೀರಿದ ಆದಾಯವುಳ್ಳುದು. ಈಗಿನ ಅಧಿಪತಿಯ ಕಾಲಾವಧಿಯಲ್ಲಿ ಕುವೈತವು ಬಹಳಷ್ಟು ಅಭಿವೃದ್ಧಿಪಡೆದಿದೆ. ಇಲ್ಲಿ ಇತರ ಅರಬ ರಾಷ್ಟ್ರಗಳಲ್ಲಿಯೂ ಆಗದಿರುವ ಸಾಮಾಜಿಕ ಮತ್ತು ಆರ್ಥಿಕ ಪ್ರಗತಿಯನ್ನು ಸಾಧಿಸಿದೆ. ತಮ್ಮ ರಾಷ್ಟ್ರದ ಸಂಪತ್ತನ್ನು ದುರ್ವ್ಯಸನಿಯೋಗ ಪಡಿಸುವ ಇತರ ಅರಬ ರಾಜರಿಗಿಂತ ಕುವೈತದ ಶೇಖರು ಉದಾರರು; ಪ್ರಜೆಗಳ ಹಿತವನ್ನು ಬಯಸುವವರು. ಇತರ ಶೇಖರು ಅರಮನೆ ಕಟ್ಟಿಸುವುದರಲ್ಲಿಯೇ ತಮ್ಮ ದೇಶದ ಸಂಪತ್ತನ್ನು ಉಪಯೋಗಿಸಿಕೊಂಡರೆ, ಕುವೈತದ ಶೇಖರು ಪ್ರಜಾಜನರ ಕಲ್ಯಾಣಕ್ಕಾಗಿ ಅದನ್ನು ಬಳಸಿಕೊಳ್ಳುವುದಕ್ಕೆ ಹೆಸರಾಗಿದ್ದಾರೆ ದೇಶದ ಸಂಪತ್ತಿನ ಹೆಚ್ಚಿನಂಶ ಎಣ್ಣೆಯಿಂದ ಬರುವ ಆದಾಯವಿದ್ದು ಇದರ ಬಹ್ವಂಶವನ್ನು ಜನತೆಯ ಜೀವನಮಟ್ಟವನ್ನು ಸುಧಾರಿಸಲು ಅವರು ವ್ಯಯಿಸಿದ್ದಾರೆ. ದೇಶವಾಸಿಗಳೆಲ್ಲರಿಗೂ ಧರ್ಮಾರ್ಥ ವಿದ್ಯಾಭ್ಯಾಸ ಮತ್ತು ವೈದ್ಯಕೀಯ ಸೌಕರ್ಯಗಳನ್ನವರು ಒದಗಿಸಿದ್ದಾರೆ ನೀರಿಲ್ಲದ ದೇಶ ಕುವೈತಿಗೆ ನೀರಿನ ಸರಬರಾಜು ಮಾಡಿದ್ದಾರೆ. ವಿದ್ಯುದ್ಯೋಜನೆಗಳು ಭರದಿಂದ ಸಾಗುತ್ತಿವೆ. ಹೀಗೆ ಅರಬ ರಾಷ್ಟ್ರಗಳಲ್ಲಿಯೇ ಸುಧಾರಣೆ ಹೊಂದಿದ, ಹೊಂದುತ್ತಿರುವ ಕುವೈತದ ಮೇಲೆ ಇರಾಕಿನ ಇಚ್ಛೆಯೇ ಬೇರಾಗುವುದೇ ರಾಷ್ಟ್ರದ ಒತ್ತಡವು ನಿರ್ಬಲವಾಗುವುದು ನಿಸ್ಸಂಧಿಗ್ಧ.

ಇರಾಕದ ಸ್ರಧಾನಿಯವರು ಪರ್ಶಿಯನ್ ಅಖಾತದ ಕುವೈತಿನ ಒಡೆತನವು ಇರಾಕಿನದೆಂದೂ ೧೯೯೯ರಲ್ಲಿ ಬ್ರಿಟಿಷರು ಮಾಡಿಕೊಂಡಿರುವ ಒಡಂಬಡಿಕೆಯು ರೂ. ೧೫ ಸಾವಿರ ತೆತ್ತು ಸೋರ್ಜರಿ ಮಾಡಿದುದೆಂದೂ ಗುಡುಗಿದ್ದಾರೆ. ಕುವೈತದ ಸದ್ಯದ ಶೇಖರನ್ನು ಅಲ್ಲಿನ ಗವರ್ನರರಾಗಿ ನೇಮಕ ಮಾಡಿರುವುದೆಂಬ ಆಜ್ಞೆಯನ್ನು ಶೀಘ್ರದಲ್ಲಿಯೇ ಹೊರಡಿಸಲಾಗುವುದೆಂದು ಹೇಳಿದ್ದಾರೆ. ಇರಾಕದ ಅವಿಭಾಜ್ಯ ಅಂಗವೆಂದು ಕುವೈತವನ್ನು ಕರೆಯುವ ಕಾಸೀಮರು ಮೊತ್ತಮೊದಲಿಗೆ ತನ್ನ ಅಧಿಕಾರವನ್ನು ಸುನಃ ಸ್ಥಾಪಿಸಲು ಶಾಂತ ವಿಧಾನವನ್ನು ಅನುಸರಿಸುವ ಘೋಷಣೆಯನ್ನು ಮಾಡಿದ್ದಾರೆ.

ಇರಾಕದ ಉದ್ಘೋಷಣೆಯಿಂದ ಕುವೈತ ಸ್ವಾತಂತ್ರ್ಯಕ್ಕೆ ಅಪಾಯ ತಟ್ಟಿದಂತಾಗಿದೆ. ಈ ಸಂಬಂಧದಲ್ಲಿ ವಿಚಾರ ಮಾಡಲು ಕೂಡಲೇ ಸಂಯುಕ್ತ ರಾಷ್ಟ್ರ ಸಂಘದ ಸಭೆಯೊಂದನ್ನು ಕುವೈತದಲ್ಲಿಯೇ ಸೇರಿಸಬೇಕೆಂಬ ಬೇಡಿಕೆಯಂತೆ ಜುಲೈ ತಿಂಗಳಲ್ಲಿ ಅಧ್ಯಕ್ಷರಾದ ಇಕ್ವೆಡೋರಿನ ಪ್ರತಿನಿ

(ಮುನೇ ಪುಟ ನೋಡಿರಿ)



ಅಮೆರಿಕೆಯ ಪ್ರಥಮ ಗಗನಸಂಚಾರಿ ಶೆಪ್ಪರ್ಡರನ್ನು ಹೊತ್ತು ಹಾರಿದ "ರೆಡ್ ಸ್ಪೇಸ್ ರಾಕೆಟ್"

ESTD. 1921

NAVAYUGA
KANNADA WEEKLY,
UDIPI.

Founder:
Late Sri A. B. Shetty
Former Minister for Public Health, Govt. of Madras & Govt. of Mysore.

ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದ ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರತಿ ಗುರುವಾರ
ಉಡುಪಿಯಿಂದ ಹೊರಡುವ
ರಾಷ್ಟ್ರೀಯ ವಾರಪತ್ರಿಕೆ

ಸ್ಥಾಪನೆ: ೧೯೩೧.

ಗೌರವ ಸಂಪಾದಕರು:
ಎಸ್. ಗೋಪೀಚಂದ ರಾವ್, ವಿದ್ವಾನ್.
ಬಿ. ಶಾಮರಾಯ ಶೆಟ್ಟಿ, ಬಿ. ಎ., ಎಲ್. ಟಿ.

ಸಂಚಾಲಕ ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ.

●

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-50
ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3-50
ಹೆಚ್ಚಿನ ವಿವರಗಳಿಗೆ ವ್ಯವಹರಿಸಿರಿ.

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ. 0-13

ಚಂದಾಲೂಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂದಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವಸೌಕರ್ಯವಿರುವುದು.

ಧಾರಾವಾಹಿ ಕಾದಂಬರಿ

ಯಮುನ ನೆರಳು

ಮೂಲಲೇಖಕರು: ಶ್ರೀ ಎಂ. ಎಲ್. ಪಾಂಡೇಯ.
ಅನುವಾದಕರು: ಶ್ರೀ ಎಸ್. ಎಂ. ಶೆಟ್ಟಿ, ಶಿಮುಂಜೆಪರಾರಿ.
(ಕಳೆದ ಸಂಚಿಕೆಯಿಂದ)

— ೧೩ —

ಮೂಯೂವತಿಯನ್ನು ಆತ್ಮರಾಮನೊಡನೆ ಕಂಡ ಆ ದಿವಸದಿಂದ ಪ್ರಾಣದಾಸರಿಗೆ ಏನೋ ಕಳೆದುಕೊಂಡಂತೆ ಭಾಸವಾಗಿತ್ತು. ಇಲ್ಲಿ ಮೂಯೂವತಿಯು ಸೌಖ್ಯವಿಲ್ಲವೆಂದು ಆಡ್ಡಿ ಹೇಳಿ, ಕೋಣೆಯಿಂದ ಮೂಯೂವಾಗುವುದಂತೂ ಅವರನ್ನು ಇನ್ನೂ ಬೇಸರಗೊಳಿಸಿತ್ತು. ಅವರು ದಾಮೋದರರನ್ನು ಕರೆದು— "ದಾಮೋದರ್ ನಾನು ನಿಮ್ಮೊಡನೆ ಹೇಳಬೇಕೆಂದಿದ್ದ ಮಾತನ್ನು ನನ್ನ ಕಣ್ಣುಗಳಿಂದ ನೋಡದಿರುತಿದ್ದರೆ ಎಂದೂ ವಿಶ್ವಾಸವಿಡುತ್ತಿರಲಿಲ್ಲ. ಈಗ ನನ್ನ ಕಣ್ಣುಗಳಲ್ಲಿಯೇ ವಿಶ್ವಾಸವಿಲ್ಲದಂತಾಗಿದೆ.

"ಈ ವಿಚಾರ ನನ್ನನ್ನೂ ತುಂಬಾ ಬೇಸರಗೊಳಿಸಿದೆ. ಅದನ್ನು ಬಹುಶಃ ತಾವೂ ಕಂಡುಕೊಂಡಿರಬಹುದು" ಎಂದರು ದಾಮೋದರ್.

"ಹಾಗಾದರೆ ನೀವೂ ನನ್ನಂತೆ ಯಾವುದಾದರೂ ಆಶ್ಚರ್ಯಪೂರ್ಣ ವಿಷಯ ನೋಡಿದ್ದಿರೇನು?....." ಎಂದು ಬೆಚ್ಚಿ ಬಿದ್ದು ಕೇಳಿದರು ಪ್ರಾಣದಾಸರು.

"ಹೌದು, ಮೂಯೂವತಿಯು ಆತ್ಮರಾಮನೊಡನೆ ದಲಿತಸಿಂಹರ ಮನೆಗೆ ಹೋಗುವುದನ್ನು ಕಂಡಿದ್ದೇನೆ."

"ಹಾಂ, ಮೊನ್ನೆಯ ದಿನ ನಾನು ನೋಡಿದ್ದೆ. ಒಂದು ವೇಳೆ ಈ ಮಾತು ಸತ್ಯವಿದ್ದರೆ ಅವರ ಲಗ್ನದ ವಾರ್ತೆಯೂ ಸತ್ಯವಾಗಿರಬಹುದು."

"ನಿಸ್ಸಂದೇಹವಾಗಿ, ನಾನೂ ನಿಮ್ಮ ಮಾತಿಗೆ ಒಪ್ಪುತ್ತೇನೆ. ಆದರೆ ಈ ಬುರುಡೆ ಈ ವರೆಗೂ ತಿಳಿಯುವುದಿಲ್ಲವೆಂದರೆ ಅವನೊಡನೆ ಲಗ್ನವಾಗುವುದರಲ್ಲಿ ಅವಳು ಯಾವ ಒಳ್ಳೆಯದನ್ನು ಕಂಡಳು? ಏನಾದರೂ ಹೊಸ ಜಾಲದಲ್ಲಿ ಕೆಡವಿಕೊಂಡಿಲ್ಲ ತಾನೇ? ಇಲ್ಲದಿದ್ದಲ್ಲಿ ಫಲಕದಾರಿ ಇರುವಾಗ ಮುನಃ ಅತ್ಮರಾಮನೊಡನೆ ಎಂತಹ ವಿವಾಹ?"

"ಇತ್ತೀಚಿಗಿನ ವಾತಾವರಣವನ್ನು ಜಯಂತರಿಗೆ ತಿಳಿಸುವುದೊಳ್ಳೆದೆಂದೇ ನನ್ನ ಭಿಪ್ರಾಯ. ನೀವೇನು ಹೇಳುತ್ತೀರಿ?" ಎಂದರು ಪ್ರಾಣದಾಸರು.

"ನನ್ನಭಿಪ್ರಾಯವೆಂದರೆ ಪೂರ್ಣ ರೂಪದಲ್ಲಿ ಪರೀಕ್ಷೆಮಾಡದವಿನಃ ಮುಂದೆ ಹೆಜ್ಜೆಹಾಕುವುದು ತಪ್ಪಾಗುತ್ತದೆ. ಈ ದುಷ್ಟರುದಿನನಿತ್ಯ ತಮ್ಮ ಕಾರ್ಯಗಳನ್ನು ಬದಲಿಸುತ್ತಾರೆ. ಮೂಯೂವತಿಗೆ ಅವರ ಸಹಾಯದ ಅಗತ್ಯವಿದೆ. ಆದುದರಿಂದ ನಾವು ಹೇಳುವುದು ಸರಿಯಲ್ಲ. ಒಂದು ವೇಳೆ ಅವರಿಗೆ ಆ ಬಗ್ಗೆ ವಿಶ್ವಾಸವುಂಟಾದರೆ ಮುಂದೆ ಯಾವ ರೀತಿಯ ಸಹಾಯ ಸಿಗಲಿಕ್ಕಿಲ್ಲ. ಅವರ ಸಹಾಯ ಸಿಗದೆ ಹೋದರೆ ನಮಗೆ ತುಂಬಾ ಹಾನಿಯಿದೆ. ಏಕೆಂದರೆ ನಮಗೆ ದುಷ್ಟರೊಡನೆ ಬಹುಕಾಲ ಜೀವಿಸಲಿನೆ".

ಇವರು ಮಾತಾಡುತ್ತಿರುವಾಗಲೇ ಮೂಯೂವತಿ ಹರ್ಷವತಿಯರು ಅವರ ಇದಿರು ಕುರ್ಚಿಯಲ್ಲಿ ಕುಳಿತು, ತಮ್ಮ ತಮ್ಮಲ್ಲಿಯೇ ಮಾತನಾಡಕೊಳ್ಳ ತೊಡಗಿದರು. ಇವರ ಮುಂದೆ ಅವರು ಕುಳಿತಿದ್ದುದರಿಂದ ಅವರಿಗೆ ಮೂಯೂವತಿಯ ಭಾವಭಂಗಿಯನ್ನು ಪರೀಕ್ಷಿಸಿ ದೃಷ್ಟಿಯಿಂದ ನೋಡುವ ಲಾಭ ಮಾತ್ರ ಉಂಟಾಯ್ತು. ಇಬ್ಬರೂ ಅಕೆಯನ್ನು, ಅವಳಿಗೆ ಸೌಖ್ಯವಾಗಿತ್ತೇ? ಎಂಬುದನ್ನು ಮುಖದ ಮೇಲಿನಿಂದ ಗುರುತಿಸುವ ಹಾಗೆ ಜಾಣರಾಗಿ ನೋಡುತಿದ್ದರು. ಅಸೌಖ್ಯದ ಬದಲು ಅವಳು ದುಃಖಿತಳಾಗಿಯೂ ಚಿಂತಿತಳಾಗಿಯೂ ಇರುವುದು ಕಂಡು ಅವರ ಸಂದೇಹಕ್ಕೆ ಅಸ್ಪದ ದೊರೆಯಿತು. ಆದರ ಪರಿಣಾಮವಾಗಿ ಅವರಿಬ್ಬರಲ್ಲಿ ಒಬ್ಬನೂ ಮೂಯೂವತಿಯೊಡನೆ ಮಾತಾಡಲಿಚ್ಛಿಸಲಿಲ್ಲ. ಮೂಯೂವತಿಗೆ ಅವರೀರ್ವರೂ ತನ್ನೊಡನೆ ಮಾತಾಡುವರೆಂಬ ಭರವಸೆಯಿತ್ತು. ಆದರೆ ಇಂದು ತನ್ನೊಡನೆ ಯಾರೂ ಮಾತಾಡದಿರುವುದನ್ನು ಕಂಡು ಮೂಯೂಳು ಅನ್ಯಮನಸ್ಕಳಾಗಿ ಹರ್ಷವತಿಯೊಡನೆ ಸ್ವಲ್ಪ ಮಾತಾಡುತ್ತಲಿದ್ದು ಅನಂತರ ಕೋಣೆಗೆ ನಡೆದಳು.

ಅಲ್ಲಿ ಉಳಿದ ಹರ್ಷವತಿಯೊಬ್ಬಳನ್ನೇ ಕಂಡು ಪ್ರಾಣದಾಸರು ಮೂಯೂವತಿಯು ಬಂದು ಹೋದ ಕಾರಣವೇನೆಂಬುದನ್ನು ವಿಚಾರಿಸಿದರು.

"ಈ ಮಾತನ್ನು ನಾನು ತಿಳಿಸಲಾರೆ. ಕೆಲವು ವಿಷಯಗಳಿಂದ ಅವಳು ಅಸೌಖ್ಯದಲ್ಲಿದ್ದುದರಿಂದ ಮನಸ್ಸು ಬೇಸರಗೊಂಡಿರಲೂ ಬಹುದು" ಎಂದಳು ಹರ್ಷವತಿ.

"ಹಾಗಾದರೆ ಅವಳು ನಿಜವಾಗಿಯೂ ಅಸ್ವಸ್ಥಳಾಗಿದ್ದಾಳೇನು."

"ಹಾಂ, ಆದರೆ ಅವಳ ಮುಖದ ಮೇಲೆ ಆಳವಾದ ಚಿಂತೆಯೊಂದಲ್ಲದೆ ಬೇರಾವುದರಲ್ಲೂ ಅಸ್ವಸ್ಥಳಾಗಿ ಕಾಣುವುದಿಲ್ಲ"

"ನನ್ನ ಅಭಿಪ್ರಾಯವೂ ಅದೇ ಆಗಿದೆ. ಯಾಕೆಂದರೆ ಆ ದಿವಸ ನೀನು ಮತ್ತು ದಾಮೋದರರು ಬಜಾರಿಗೆಹೋಗಿದ್ದೀರಿ."

"ಹೌದು, ನಿಮ್ಮನ್ನೆಲ್ಲಾ ಚಿಂತೆಯಲ್ಲಿ ಮುಳುಗಿಸಿಟ್ಟ ವಿಷಯವಾದ ಆಶ್ಚರ್ಯದ ಸಂಗತಿಯನ್ನು ಕಂಡಿದ್ದೇನೆ. ಆದರೆ ನಿಮ್ಮ ಇವತ್ತಿನ ಮೌನ ವೃತದಿಂದ ಮೂಯೂವತಿಗೆ ಎಷ್ಟು ದುಃಖವಾಗಿಲ್ಲವೆಂಬುದನ್ನು ಬಲ್ಲಿರೇನು?

ಅಕಾರಣವಾಗಿ ಮಾತಾಡುವುದಾದರೂ ಏನು? ಎರಡನೆಯದಾಗಿ. ಇಂತಹ ಪರಸ್ಕಾರಿತ ವಿಷಯ ಇನ್ನಾವುದಿರಬಹುದು? ಈ ವಿಷಯದಿಂದಾಗಿಯೇ ನಾನು ಅವಳೊಡನೆ ಮಾತಾಡಲಿಚ್ಛಿಲಿಲ್ಲ,"

"ಈ ವಿಚಿತ್ರ ರಹಸ್ಯವು ಯಾವಾಗ ಬಯಲಾಗುತ್ತದೋ ನೋಡಬೇಕು. ಏನು ದಾಮೋದರ್, ನಿಮ್ಮ ಯೋಜನೆಯೇನು?

"ನನಗೇನೂ ತಿಳಿಯುವುದಿಲ್ಲ. ಏಕೆಂದರೆ ಈ ವರೆಗೂ ನನಗೆ ನೈಜವಸ್ತು ಸ್ಥಿತಿಯ ಪರಿಚಯವೇ ಆಗಲಿಲ್ಲ. ಆದುದರಿಂದ ಯಾವ ವರೆಗೆ ಎಲ್ಲಾ ವಿಷಯವು ತಿಳಿಯುವುದಿಲ್ಲವೋ ಆ ವರೆಗೆ ಸುಮ್ಮನಿರುತ್ತೇನೆ."

ಅಷ್ಟರಲ್ಲಿ ನವಲೇಂದ್ರನು ಬಂದು ನಮಸ್ಕರಿಸಿ, ಜಯಂತರು ಬರಲು ತಿಳಿಸಿದ್ದಾರೆಂದು ಹೇಳಿದನು. ದಾಮೋದರ ಹಾ

(೧೧ನೇ ಪುಟ ನೋಡಿರಿ)

ಸ್ಥಾಪನೆ: 1924

ದಿ ಕರ್ಣಾಟಕ ಬೇಂಕ್ ಲಿಮಿಟೆಡ್
(ಶೆಡ್ಯೂಲ್ಡ್ ಬೇಂಕ್)
ರಿಜಿಸ್ಟರ್ಡ್ & ಹೆಡ್ ಆಫೀಸು: ಡೊಂಗರಕೇರಿ, ಮಂಗಳೂರು—3.

ಈ ಕೆಳಗಿನ ಏರಿಸಿದ ಬಡ್ಡಿದರಗಳಲ್ಲಿ ಠೇವಣಾತಿಗಳನ್ನು ಸ್ವೀಕರಿಸಲಾಗುವುದು.

ಒಂದರಿಂದ ಎರಡು ತಿಂಗಳುಗಳ ವರೆಗೆ	....	ಸಾ|| ಸೇಕಡಾ 3-75	ನ.ಪೈಸೆ
ಮೂರರಿಂದ ಐದು ತಿಂಗಳುಗಳ ವರೆಗೆ	....	,, 4-25	,,
ಆರು ತಿಂಗಳುಗಳಿಂದ 12 ತಿಂಗಳುಗಳ ವರೆಗೆ	....	,, 4-50	,,
12 ತಿಂಗಳು ಮಿಕ್ಕಿ 24 ತಿಂಗಳುಗಳ ವರೆಗೆ	....	,, 4-75	,,
24 ತಿಂಗಳು ಮಿಕ್ಕಿ 48 ತಿಂಗಳುಗಳ ವರೆಗೆ	....	,, 5-00	,,
48 ತಿಂಗಳುಗಳಿಗೆ ಮಿಕ್ಕಿ	....	,, 5-25	,,

ಸೇವಿಂಗ್ಸ್ ಬ್ಯಾಂಕ್ ಬಡ್ಡಿ ದರವನ್ನು
ಸಾ. ಸೇಕಡ 2½% ದಿಂದ 3¼%ಗೆ ಏರಿಸಲಾಗಿದೆ.

THE KARNATAKA BANK LIMITED.

ಅಮೃತಾಂಜನ
ಎಲ್ಲಾ ನೋವುಗಳಿಗೆ ಸಿದ್ಧೌಷಧ
ಎಲ್ಲಾತರದ ಸಿಡಿತ ಮತ್ತು ನೋವುಗಳಿಗೆ
50 ವರ್ಷ ಪ್ರಾಯದ
ಮಾರ್ಕೆಟ್ ಡಾಕ್ಟರ್
ಅಮೃತಾಂಜನ ಲಿ ಬೊಂಬಾಯಿ ಮೆಡಿಸಿನ್ಸ್

ಸಾಹಿತ್ಯ ಕ್ಷೇತ್ರ

ವಿಶ್ವಕಲ್ಯಾಣವೇ ಸಾಹಿತ್ಯದ ಉದ್ದೇಶ

ಮಾನವೀಯತೆಯೊಂದಿಗೆ ಹೊಂದಿಕೊಂಡ ಮಾನವ ಜೀವನದ ಉದ್ಧಾರಕ್ಕಾಗಿ ಸಾಹಿತಿ ವಿಶ್ವಹಿತಚಿಂತನೆಯ ಯೋಗಿಯಾಗಬೇಕು. ಅಂತಹ ಸಾಹಿತ್ಯ ಸೃಷ್ಟಿಯಿಂದಂದೇ ಸಾಹಿತ್ಯದ ಪ್ರಭಾವ ಅಸೀಮವಾಗುವುದು; ಮಾನವನ ಜೀವನ ನಿತ್ಯನೂತನ ನಂದನವನವಾಗುವುದು.

ಶ್ರೀ ಸಿದ್ಧರಾಜ ಬಾಳೇಕುಂದ್ರಿ, ತೇರದಾಳ.

ಇಂದಿನ ಜಗತ್ತು ವಿಜ್ಞಾನದ ಸುಖ ಸೌಖ್ಯದ ಸಾಧನಗಳಿಂದ ವೈಭವಯುತ ವಿಲಾಸ ಜೀವನವನ್ನು ಮಾನವನಿಗೆ ದಯಪಾಲಿಸಿದೆ. ಯಂತ್ರಸಾಗರಕತೆ ಬೆಳೆದ ಈ ಯುಗದಲ್ಲಿ ಮಾನವ ಪ್ರತಿಯೊಂದು ಕೆಲಸವನ್ನು ಯಂತ್ರೋಪಕರಣಗಳಿಂದ ತೆಗೆದುಕೊಳ್ಳುವದರ ಪರಿಣಾಮವಾಗಿ ಅವನಲ್ಲಿ ಶಾರೀರಿಕ ಮಾನಸಿಕ ಆರೋಗ್ಯ ಸರಿಯಾಗಿ ಮೊದಲಿನಂತೆ ಉಳಿದಿಲ್ಲ. ವಿಲಾಸದ ಸಾಧನಗಳು ಅನುದಿನ ಹೆಚ್ಚಾಗುತ್ತಿರುವದರಿಂದ ಮಾನವನ ಚಿತ್ತಸ್ಥಿತಿ ಮನೋದೌರ್ಬಲ್ಯ ಬೆಳೆದು ಅಕಾಲ ಮೃತ್ಯುವಿಗೆ ಈಡಾಗುತ್ತಿದ್ದಾನೆ. ಆಟಂ ಹೈಡ್ರೋಜನ ಬಾಂಬುಗಳು ಮಾನವನ ಶಾಂತಿಯುತ ಜೀವನಕ್ಕೆ ಗಂಡಾತರವನ್ನು ತಂದೊಡ್ಡುತ್ತಲಿವೆ. ಮನುಷ್ಯ ಯಾವ ಕ್ಷಣದಲ್ಲಿ ಬಾಂಬುಗಳು ಬೀಳುವವೋ ಎಂಬ ಭಯದಲ್ಲಿರುವದರಿಂದ ಅವನ ಜೀವನದಲ್ಲಿ ಅಶಾಂತಿ ಪರ್ವ ಆರಂಭವಾಗಿದೆ. ಇಂಥ ಸಂಧಿಗ್ಧ ಸಮಯದಲ್ಲಿ ಮಾನವನ ಮಾನಸಿಕ ಸ್ವಾಸ್ಥ್ಯಚ್ಯುತಿಗೆ ವಿಕಾಸವಾಗಬೇಕಾದರೆ ಸಾಹಿತಿಗಳು ಎಂಥ ಸಾಹಿತ್ಯ ನಿರ್ಮಾಣದಲ್ಲಿ ಕ್ರೀಯಾಶೀಲರಾಗಬೇಕೆಂಬುದು ಗಮನಾರ್ಹ ವಿಷಯವಾಗಿದೆ.

ನಿಜವಾದ ಸಾಹಿತ್ಯಯಾವದು? ಜನ ಮನದ ಸಂತಾಪ ಸಂಕ್ಲೇಶದಿಂದ ಮಾನವನನ್ನು ಮುಕ್ತಗೊಳಿಸಿ ಬಾಳಿನಲ್ಲಿ ಶಾಂತಿ ನಿರ್ಮಿಸುವದೇ ನಿಜವಾದ ಸಾಹಿತ್ಯವೆಂದು ಹೇಳಬೇಕಾಗುತ್ತೆ. ಆಂಗ್ಲ ಸಾಹಿತಿ ವಿಲಿಯಮ ಪಾಕನರರು ಮೇಲಿನ ನೂತನ ವ್ಯಾಖ್ಯೆಯನ್ನು ಕೊಟ್ಟಿದ್ದಾರೆ. ಇಂದು ನಾವು ವಿಶ್ವವಂಚನೀಯ ಅದಿಭೌತಿಕ ಸಂಕಟಕ್ಕೆ ಬಳಗಾಗಿದ್ದೆವೆ. ಕ್ಷಣ ಕ್ಷಣಕ್ಕೂ ಅತಿ ಗಂಭೀರ ದುರ್ಧರ ಪ್ರಸಂಗಗಳನ್ನು ಎದುರಿಸಬೇಕಾಗಿದೆ. ಈ ಬಗೆಯ ಸಂಕಟಗಳನ್ನು ಸಹಿಸುತ್ತ ಕೂಡುವದರಲ್ಲಿ ಅದಾವ ಪುರುಷಾರ್ಥವಿದೆ? ವಿಜ್ಞಾನಿಗಳಂತೆ ತತ್ವಜ್ಞಾನಿಗಳು ಮಾನವನಿಗೆ ಅನೇಕ ಬಗೆಯಾಗಿ ಸೇವೆಯನ್ನು ಸಲ್ಲಿಸಿದ್ದಾರೆ. ತತ್ವಜ್ಞಾನದ ಭೋಧನೆಯಿಂದ ಅಂತರಿಕ ಮಾಧುರ್ಯ ಬಹಿರಂಗದ ಸೌಂದರ್ಯ ಬೆಳೆಯುವದು ಆದರೆ ಇಂದು ಬಾಂಬುಗಳ ಭಯ ಮಾನವನಜೀವನದಲ್ಲಿ ದೊಡ್ಡ ಬಿರುಗಾಳಿಯನ್ನೆಬ್ಬಿಸಿದೆ. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಸ್ವಪ್ರತಿಷ್ಠೆ ಸ್ವಸಾಮ್ರಾಜ್ಯ ವಿಸ್ತರಣೆ, ಸ್ವಧರ್ಮ, ಸ್ವರಾಜಕೀಯ ತತ್ವ ಪ್ರಸಾರಣೆಯ ಮೋಹವಿದ್ದಕಾರಣ ಇಂದು ಉಂಟಾದ ಸ್ವಾರ್ಥ ಪ್ರತಿಷ್ಠಾಪನೆಯ ಸ್ಪರ್ಧೆ ವಿಶ್ವವನ್ನೆ ವಂಚಿಸುತ್ತಿರುವದಲ್ಲದೆ ಚಿಂತೆಗೆ ಗುರಿಮಾಡಿದೆ ರಶಿಯಾ ಚೀನ ಅಮೇರಿಕಾ ಮೊದಲಾದ ಪ್ರಬಲ ರಾಷ್ಟ್ರಗಳು ವಿಶ್ವಶಾಂತಿಗೆಸಾಧಕವಾಗಿವೆಯೋ ಭಾದಕವಾಗಿಯೂ ಎಂಬುದನ್ನು ಜನರೆಬಲ್ಲರು. ಇಂಥ ಪರಿಸ್ಥಿತಿಗೆ ಜಗತ್ತು ತುತ್ತಾಗಿರುವಾಗ ಸಾಹಿತಿಗಳ ಕರ್ತವ್ಯವೇನು? ಇಂದಿನ ನವ ಜನಾಂಗದ ಸಾಹಿತಿಗಳು ಮಾನವನ ಅಂತರಿಕ ಸಮಸ್ಯೆಗಳಿಂದ ಎಷ್ಟು ದೂರ ಇರಬೇಕೆಂಬುದನ್ನು ಉದಾಹರಣೆಯೊಂದಿಗೆ ಬರೆಯುತ್ತ ಹೋದರೆ ದೊಡ್ಡ ಪುಸ್ತಕವಾಗಬಹುದು. ಮಾನವ ಪಾಪಪಾಪಗಳನ್ನು ಕಡಿಮೆ ಮಾಡುವ ಸಾಹಿತ್ಯ ಮಾನವನಿಗೆ ದೊರಕಿಲ್ಲ. ಅಂತರಿಕ ಸಮಸ್ಯೆಗಳನ್ನು ಪ್ರಧಾನ ವಿಷಯವನ್ನಾಗಿಟ್ಟುಕೊಂಡು ಲೇಖಕ ಸಾಹಿತ್ಯ ರಚನೆಗೆ ಕಂಕಣ ಬದ್ಧನಾದರೆ ಅವನ ಕೃತಿ ಸರ್ವಾಂಗ ಸುಂದರವಾಗುವದಲ್ಲದೆ ಸಮರಸವೇ ಜೀವನವೆಂಬ ಜೀವನ ತತ್ವಪ್ರತಿಪಾದಿಸುವ ಸಫಲಕೃತಿಯೂ ಗಬಲ್ಲದು. ಆ ಸಾಹಿತ್ಯದಲ್ಲಿ ಸುಖ ದುಃಖ ಹರ್ಷ ಶೋಕ ಸಂತಸ ಮಾಧುರ್ಯ ತುಂಬಿರುವದು. ಎರಡು ವಸ್ತುಗಳ ಚಿತ್ರಣ ವಿರುವಂತೆ ಸಮನ್ವಯ ದೃಷ್ಟಿ ಸಮುಂಡಸವಾಗಿರಬೇಕು. ಇಂದಿನ ವಿಶ್ವದ ಬಹು ರಾಷ್ಟ್ರಗಳ ಲೇಖಕರು ತನ್ನ ನಾಡಿನ ಧರ್ಮವೇ ಶ್ರೇಷ್ಠ ತನ್ನ ನಾಡಿನ ರಾಜಕೀಯ ಪ್ರಣಾಲಿಯೇ ಯೋಗ್ಯ ತನ್ನ ನಾಡಿನ ಆದರ್ಶವನ್ನು ಎಲ್ಲ ರಾಷ್ಟ್ರಗಳು ಅನುಸರಿಸಬೇಕೆನ್ನುವ ವಿಚಾರದಿಂದ ಬರೆಯುವದರಿಂದ ಆ ಕೃತಿ ರಾಜಕೀಯ ತತ್ವ ಪ್ರಚಾರದ ಸಾಧನವಾಗಬಹುದೇ ವಿನಃ ಸಾಹಿತ್ಯವೆನಿಸಿಕೊಳ್ಳಲಾರದು. ಕೆಲವು ರಾಷ್ಟ್ರಗಳು ಸಾಹಿತಿಗಳಿಗೆ ತಮ್ಮ ರಾಷ್ಟ್ರೀಯತೆಯನ್ನೇ ಸಾಹಿತ್ಯದಲ್ಲಿ ಅಳವಡಿಸಿಕೊಳ್ಳಬೇಕೆಂಬ ತತ್ವವನ್ನೂ ಸಾರಿವೆ. ಕಾಯ್ದೆಯಿಂದ ರೂಢಿಯಲ್ಲಿ ತಂದಿವೆ. ಸರಕಾರದ ತಾಳಲಯಕ್ಕೆ ಹೆಜ್ಜೆ ಹಾಕುವ ಮನೋವೃತ್ತಿ; ಸಾಹಿತಿಗಳಲ್ಲಿ ಬೆಳೆಯುತ್ತಲಿರುವದರಿಂದ ‘ವಿಶ್ವಪ್ರೇಮ, ವಿಶ್ವ ಬಾಂಧವ್ಯ. ವಿಶ್ವ ಕುಟುಂಬ ಎಂಬ ಮಾನವ ಧರ್ಮದ ತತ್ವಗಳು ಉಚ್ಚ ಸಾಹಿತ್ಯ ಕೃತಿಗಳಲ್ಲಿ ಕಾಣದೆ ಮುಗಿಲು ಮಲ್ಲಿಗೆಯಾಗಿವೆ.

ನಾಳಿನ ಪರಿಸ್ಥಿತಿ ಎಷ್ಟು ಗಂಭೀರವಾಗಿದೆ ಎಂಬುದನ್ನು ಚೆನ್ನಾಗಿ ಬಲ್ಲಲೇಖಕರು ಯಾವ ಬಗೆಯ ಸಾಹಿತ್ಯ ನಿರ್ಮಾಣದಲ್ಲಿರುವರು? ಈ ಯುಗದ ಹಿರಿಕಿರಿ ಸಾಹಿತಿಗಳು ಮಾನವೀಯ ವಿಷಯಗಳತ್ತ ದೃಷ್ಟಿಯನ್ನು ಹೊರಳಿಸಬೇಕು. ಮಾನವ ಕುಲದ ವಿಕಾಸದ ಬಗ್ಗೆ ಚಿಂತನೆ ಸಾಗಿಸುವ ವಿಶ್ವಯೋಗಿಯಾಗಬೇಕು. ವೀರ ತಪಸ್ವಿಯಾದಾಗಲೆ ಮಾನವ ಜಾತಿಯ ಉದ್ಧಾರ ಸಾಧ್ಯ. ಲೇಖಕರೆ ಇಂದಿನ ಪರಿಸ್ಥಿತಿಗೆ ಭಯಭೀತರಾದರೆ ಅದು ಅವರ ಹೀನತೆಯನ್ನು ಸೂಚಿಸುವದು. ಸಾಹಿತಿಗಳು ಬಹುದಿನಗಳಿಂದ ಪರಂಪರಾಗತವಾಗಿ ಬಂದ ಶಾಶ್ವತ ಮೌಲ್ಯಗಳಾದ ಪ್ರೇಮ, ತ್ಯಾಗ, ಕರುಣೆ ಆತ್ಮಗೌರವ, ಆತ್ಮೋನ್ನತಿ. ಸಕ್ರಿಯ ಸಹಾನುಭೂತಿ, ಮಾನವ ಸಹಜವಾದ ಬಾಂಧವ್ಯ ಮೊದಲಾದ ತತ್ವಗಳನ್ನೂ ಸಾಹಿತ್ಯದ ಉದ್ದೇಶಕ್ಕೆ ಹಿತಮಿತವಾಗಿ ಸಾಹಿತ್ಯ ಕೃತಿಗಳಲ್ಲಿ ಪ್ರತಿಪಾದಿಸ ಬೇಕು. ಸಾಹಿತ್ಯ ರಚನೆಯ ಮಹತ್ವಕ್ಷಣಿಕ ಆನಂದವಲ್ಲ. ಮಾನವನಿಗೆ ಆತ್ಮೋನ್ನತಿಯ ಮಾರ್ಗ ತೋರಿಸುವ ನಂದಾದೀಪ.

Literature always anticipates life. It does not copy it but moulds it to its purpose ಸಾಹಿತ್ಯ ಜೀವನವನ್ನು ಅನುಸರಿಸುವದಿಲ್ಲ. ಭಾವಿದರ್ಶನಕ್ಕಾಗಿ ಜೀವನದ ಉದ್ದೇಶಕ್ಕಾಗಿ ಅದು ಜೀವನವನ್ನೂ ಅನುರೂಪಗೊಳಿಸುತ್ತದೆ. ಅಸ್ಕರವಾಯಿಲ್ಡನ ವಿಚಾರ ಇಂದಿನ ಪರಿಸ್ಥಿತಿಯಲ್ಲಿ ಗಮನೀಯವಾಗಿದೆ. ಈ ವಿಚಾರಕ್ಕೆ ವ್ಯತಿರಿಕ್ತವಾಗಿ ಸಾಹಿತ್ಯ ರಚನೆಯಲ್ಲಿ ತೊಡಗಿದರೆ ಸಾಹಿತಿಯ ಶ್ರಮ ವ್ಯರ್ಥ. ಆ ಸಾಹಿತ್ಯ ಸಹ ನಿರರ್ಥಕ. ಇಂಥ ಸಾಹಿತ್ಯದಲ್ಲಿ ಆಶೆ ಅಮಿಶವಾಗಿರುವದು. ಮಾನವನಿಗೆ ಅವಶ್ಯವಾದ ಕರುಣೆ ಹಾಗೂ ಸದಾನುಭೂತಿಗಳ ಭಾವನಾಲೋಪತೆ ಉಂಟುಆಶಾವಾದ ರಹಿತ ಸಾಹಿತ್ಯ ಮಾನವ ಹಿತಚಿಂತನೆಯನ್ನು ಮಾಡಲಾರದು. ಆಶಾವಾದಿಯಾಗಬೇಕಾದ ಮಾನವ ನಿರಾಶಾವಾದಿಯಾಗಲು ಸಾಹಿತ್ಯಸಹಕರಿಸಿದರೆ ಅದು ಸಾಹಿತ್ಯವೆಅಲ್ಲ.ಅದ್ದರಿಂದ ವಿಶ್ವದ ಕವಿಲೇಖಕರು ಇಂದು ಮಾನವನಲ್ಲಿ ಆಶಾವಾದ ಸಂವರ್ಧಿಸುವ ಹೃದಯ ಬಲ, ಸಾಹಸ, ನ್ಯಾಯ, ಆಶೆ ಆಕಾಂಕ್ಷೆ, ಸ್ವಾಭಿಮಾನ ಕರುಣೆ ತ್ಯಾಗ ಮತ್ತು ಬಲಿದಾನದ ದರ್ಶನವನ್ನು ಮಾಡಿಕೊಡುವ ಸಾಹಿತ್ಯ ಸೃಷ್ಟಿಯ ಬ್ರಹ್ಮರಾಗಬೇಕು. ಸಾಹಿತಿ ಕೃತಿಗಳಲ್ಲಿ ವಿಶ್ವ ಮಾನವೀಯತೆಯ ಉಜ್ವಲ ವಿಚಾರದ ಜೊತೆಗೆ ವಿಶ್ವಪ್ರೇಮವನ್ನು ಸ್ವರಾಷ್ಟ್ರ ಸ್ವಧರ್ಮದಲ್ಲಿ ನಿರತನಾಗಿ ಸಾಧಿಸುವ ಸತ್ಪುರುಷನಾಗಿಬೇಕು. ಸಾಹಿತ್ಯದಲ್ಲಿ ಈ ವಿಚಾರಗಳು ರಸಾಯನವಾದಾಗಲೆ ಸಾಹಿತ್ಯ ಮಾನವೀಯತೆಯನ್ನು ಅಮರಗೊಳಿಸುವ ಸಂಜೀವಿನಿಯಾಗಬಲ್ಲದು.

ಇಂದಿನ ಲೇಖಕರು ಹೆಚ್ಚಾಗಿ ಕಾಮ ಪ್ರಚೋದನೆಯ ಕೃತಿಗಳನ್ನು ನಿರ್ಮಿಸಿದರೆ ನೈತಿಕ ಮಟ್ಟ ಉಚ್ಚವಿರಬೇಕೆಂಬ ವಿಚಾರವು ಕೃತಿಯಲ್ಲಿ ಬರುವದೆ? ಕೇವಲ ಪ್ರೇಮ ಪ್ರಧಾನ ಕಥೆಗಳನ್ನು ಬರೆದರೆ ಪ್ರೇಮದ ವಿಶ್ವವ್ಯಾಪಕ ಅರ್ಥ ಜೀವನದಲ್ಲಿ ಇಳಿಯಬಲ್ಲದೆ? ಕಲಾವಿದ, ವಿಧವೆ, ವೇಶ್ಯೆಯರ ಮೇಲೆ ಕಾದಂಬರಿ ಬರೆದರೆ ಅವರ ಉದ್ಧಾರವಾಗಬಲ್ಲದೆ? ಸಾಹಿತ್ಯ ಮಾನವ ಜೀವನದಲ್ಲಿಅಂತರಿಕವಾಗಿ ಹೊಕ್ಕುಪೀಡಿಸುವಅನೇಕಸಮಸ್ಯೆಗಳಾಚೆಗೂ ಇರುವ ಸೂಕ್ಷ್ಮವಾದನೋವನ್ನುಅರಿತುಕೊಂಡು. ಆ ಸಮಸ್ಯೆಯನ್ನು ಬಿಡಿಸಬೇಕೆನ್ನುವದಿಲ್ಲ. ಆದರೆ ಪರಿಣಾಮವನ್ನು ಕಲಾಕುಶಲತೆಯಿಂದ ಚಿತ್ರಿಸಿ ಪರಿಹಾರ ಮಾರ್ಗವನ್ನು ಮಾನವನೆ ಕಂಡುಹಿಡಿದುಕೊಳ್ಳುವಂತೆ ಮಾಡಬೇಕು. ಮಾನವ ಜೀವನ ಅನೇಕ ಸಮಸ್ಯೆಗಳಿಂದ ಕೂಡಿದೆ. ಅನೇಕ ವೇದನೆಗಳ ಜ್ವಾಲೆ ಅವನ ಶಾಂತಿಯನ್ನು ಧ್ವಂಸಮಾಡಿವೆ ನಾಡಿನ ಅನೇಕ ಸಮಸ್ಯೆಗಳತ್ತ ಅವನ ದೃಷ್ಟಿ ಇಲ್ಲ. ಸಾಹಿತಿ ಕೇವಲ ವೇಶ್ಯೆ, ವಿಧವೆ, ಕಲಾವಿದ,ಒಕ್ಕಲಿಗ, ಸನ್ಯಾಸಿಯ ಜೀವನ ದರ್ಶನದ ಸಾಹಿತ್ಯ ವಿಮರ್ಶಿಸಿದರೆ ಅದು ನಿತಿಯಲ್ಲಿದ್ದ ಸಾಹಿತ್ಯ. ಸಾಹಿತ್ಯ ಸೀಮಾತೀತವಾಗಿದೆ. ಶಿಕ್ಷಕನ ಮನೋದೌರ್ಬಲ್ಯ, ನರ್ಸಳ ಉಪಕಾರ ಜೀವನ. ಅಮೂಡ ಜಿಪ್ಸಿಗಳ ಜೀವನ, ಮಾನವತೆಯೊಂದಿಗೆ ಹೊಂದಿಕೊಂಡ ಮಾನವ ಜೀವನ ಉದ್ಧಾರಕ್ಕಾಗಿ ಸಾಹಿತಿ ವಿಶ್ವ ಹಿತಚಿಂತನೆಯ ಯೋಗಿಯಾಗಬೇಕು. ಅಂದರೆ ಮಾನವ ಹಿತಸಾಧನೆಯ ಸಾಹಿತ್ಯವೆಂಬ ನಾಣ್ಣುಡಿ ಸತ್ಯವಾಗಿ ಜೀವನ ನಿತ್ಯನೂತನವಾದ ನಂದನವನವಾಗಬಲ್ಲದು. ಇಂಥ ಸಾಹಿತ್ಯದಿಂದಲೆ ವಿಶ್ವಕಲ್ಯಾಣ. ವಿಶ್ವ ಕಲ್ಯಾಣವೇ ಸಾಹಿತಿಯ ಜೀವನ. ಸಾಹಿತಿ ವಿಶ್ವಕಲ್ಯಾಣಕ್ಕಾಗಿ ನೀಲಕಂಠನಾದಾಗಲೆ ವಿಶ್ವ ಬದುಕಬಲ್ಲದು. ಭೂಲೋಕ ಸ್ವರ್ಗಲೋಕವಾಗುವದು.

ಡಿ. ಕೆ. ಭಾರದ್ವಾಜರ
ಇಂಗ್ಲಿಷ್, ಇಂಗ್ಲಿಷ್-ಕನ್ನಡ
ಡಿಕ್ಷನರಿ
ಬೆಲೆ: ರೂ. ನಾಲ್ಕು.
ಐದು ರೂಪಾಯಿ ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ ಕಳಿಸಲಾಗುವುದು.
ನವಭಾರತ ಪುಸ್ತಕ ಭಂಡಾರ ಉಡುಪಿ.

41 ವರ್ಷಗಳ ಭದ್ರ ಹಾಗೂ ಸಮರ್ಥ ಬೇಂಕಿಂಗ್ ಸೇವೆ.
ದಿ. ಪಾಂಗಾಳ ನಾಯಕ್ ಬೇಂಕ್ ಲಿ.
ನಮ್ಮ 3 ವರ್ಷ ವ್ಯಾದೆಯ ಕೇಶ್ ಸರ್ಟಿಫಿಕೇಟುಗಳಲ್ಲಿ ರೇವಣೆ ಮಾಡಿರಿ: ಬಡ್ಡಿ ಸೇಕಡಾ 5ರಂತೆ: ರೂ. 87—00 3 ವರ್ಷಗಳ ಅಂತ್ಯದಲ್ಲಿ ಬಡ್ಡಿ ಕೂಡಿ ರೂ. 100—00 ಒದಗಿಸುವುದು.
ಕರೆ, ಚಿಕ್ಕ ವ್ಯಾದೆ, ನಿರಖು ರೇವಣಾತಿಗಳ ಮೇಲೆ ಆಕರ್ಷಣೀಯ ಶರ್ತಗಳು: ಬಡ್ಡಿ ಸೇಕಡಾ 5½ರ ವರೆಗೆ.
ತಾ. 1—4—1961ರಿಂದ ಸೇವಿಂಗ್ಸ್ ಬೇಂಕ್ ಖಾತೆಗಳ ಮೇಲೆ ಬಡ್ಡಿ ಸೇಕಡಾ 3ರಂತೆ.
THE PANGAL NAYAK BANK LTD.
Estd: 1920

ವಿಜ್ಞಾನ ಸಾಧನೆ

ಕೃಷಿ ಕ್ಷೇತ್ರದ ಮೇಲೆ ವಿಜ್ಞಾನದ ಪ್ರಭಾವ

ಅಣುವಿಕಿರಣದಲ್ಲಿ ಹೊರಬರುವ ಗಾಮಾಕಿರಣಗಳಿಂದ ಆಹಾರ ವಸ್ತುಗಳನ್ನು ಕೆಡದಂತಿಡಬಹುದು; ಅಧಿಕ ಉತ್ಪಾದನೆಯನ್ನು ಗಳಿಸಬಹುದು. ಜಗತ್ತಿನ ಆಹಾರ ಸಮಸ್ಯೆಯು ಆಹಾರೋತ್ಪಾದನೆಯಿಂದಲೇ ಪರಿಹಾರವೆಂಬುದರಿಂದ ಅಣುವಿಕರಣದ ಸಹಾಯ ಪಡೆದರೆ ಆಶ್ಚರ್ಯವಿಲ್ಲ.

ಅಣವಿಕ ಭಟ್ಟಿಗಳಿಂದ ಗಿರಣಿ-ಕಾರಖಾನೆಗಳು ಮತ್ತು ಮನೆಮರಗಳಿಗೆ ಅಗ್ಗದ ದರದಲ್ಲಿ ವಿದ್ಯುತ್ತು ದೊರೆಯಲು ಇನ್ನೂ ಬಹುಕಾಲ ಹಿಡಿಯಬಹುದು. ಆದರೂ ರೇಡಿಯೋ ಐಸೋಟೋಪ್‌ಗಳು ಈಗಲೇ ಮಾನವ ಸಮಾಜಕ್ಕೆ ಅನುಪಮ ಸೇವೆಯನ್ನು ಸಲ್ಲಿಸಲು ಆರಂಭ ಮಾಡಿವೆ. ಅಣವಿಕ ವಿಖಂಡನದ ವೇಳೆ ಗೌಣರೂಪದಲ್ಲಿ ದೊರೆಯುವ ರೇಡಿಯೋ ಧರ್ಮವಿರುವ ಈ ಐಸೋಟೋಪ್‌ಗಳು ಕೃಷಿ ಕ್ಷೇತ್ರದಲ್ಲಿ ವಿಶೇಷವಾಗಿ ಮಹತ್ವಪೂರ್ಣ ಪ್ರಭಾವವನ್ನು ಬೀರಿವೆ.

ರೇಡಿಯೋ ಐಸೋಟೋಪ್‌ಗಳ ಉಪಯೋಗದಿಂದ ಮತ್ತು ವಿಕಿರಣಗಳಿಂದ ರಾಸಾಯನಿಕ ಗೊಬ್ಬರಗಳನ್ನು ಉತ್ತಮ ರೀತಿಯಲ್ಲಿ ಬಳಸಿಕೊಂಡು ಉತ್ಪಾದನೆಯಲ್ಲಿ ಹೆಚ್ಚುವರಿಯನ್ನು ಸಾಧಿಸುವುದು ಸಾಧ್ಯವೆನಿಸಿದೆ. ಪೈರನು ಕೊಯ್ಯುವುದರಲ್ಲಿ ಉತ್ತಮ ವಿಧಾನವನ್ನೂ ಕಂಡು ಹಿಡಿಯಲಾಗಿದೆ. ಸ್ಟೈನ್‌ಫರ್ಡ್ ರಿಸರ್ಚ್ ಇನ್ಸ್ಟಿಟ್ಯೂಟ್ ನ ಮೂಲಕ ಈಗ ತಾನೆ ಸಂಶೋಧಿತವಾದಂತೆ ರೇಡಿಯೋ ಐಸೋಟೋಪ್‌ಗಳ ಸಹಾಯದಿಂದ ಅಮೆರಿಕೆಯೊಂದರಲ್ಲೇ ಮುಂದಿನ ೨೦ ವರ್ಷಗಳ ವರೆಗೆ ಕೃಷಿಯ ಕ್ಷೇತ್ರದಲ್ಲಿ ಪ್ರತಿ ವರ್ಷ ಕಡಿಮೆಯೆಂದರೆ ೧೮ ಕೋಟಿ ಡಾಲರ್ ಉಳಿತಾಯವಾಗುವುದು.

ಕಳೆದ ವರ್ಷ ಕ್ರಿಮಿಕೀಟಗಳಿಂದಾಗಿ ಗಿಡಗಳಿಗೆ ತಾಗುವ ರೋಗಗಳ ವಿರುದ್ಧ ಸಾದಿಸಿದ ಸಂಘರ್ಷದಲ್ಲಿ ಉಲ್ಲೇಖನೀಯ ಪ್ರಗತಿ ಕಂಡು ಬಂದಿದೆ. ಪ್ರಚಂಡ ಶಕ್ತಿಯುಳ್ಳ ಐಸೋಟೋಪ್‌ಗಳ ವಿಕಿರಣದಿಂದ ಗಿಡಗಳ ಉತ್ಪಾದನೆ, ಕ್ರಿಮಿಗಳ ನಾಶ ಹಾಗೂ ಖಾದ್ಯ ಪದಾರ್ಥಗಳ ಸಂರಕ್ಷಣೆಗಳಲ್ಲಿ ಅದ್ಭುತ ಸಾಫಲ್ಯ ಪ್ರಾಪ್ತವಾಗಿದೆ. ತಯಾರಿಸಲ್ಪಟ್ಟ ಹೊಸ ಜಾತಿಯ ಗಿಡಗಳಲ್ಲಿ ಪೋಷಣ ತತ್ವಗಳು ಅಧಿಕವಿರುವುವು. ಮಾತ್ರವಲ್ಲ ಅವುಗಳ ಉತ್ಪಾದನೆಯೂ ಹೆಚ್ಚಿರುವುವು. ಮಣ್ಣು ಅನುಕೂಲವಿಲ್ಲವಾದರೂ ಅವುಗಳು ಉಳಿದ ಜಾತಿಯ ಗಿಡಗಳಿಗಿಂತ ಅಧಿಕ ಉತ್ಪತ್ತಿಕೊಡಬಲ್ಲವು. ಈ ವಿಧದ ಗಿಡಗಳು ಅನಾವೃಷ್ಟಿ ಮತ್ತು ರೋಗಗಳನ್ನೆದುರಿಸುವುದರಲ್ಲಿ ಅಧಿಕ ಸಮರ್ಥವಾಗುವುವು. ಯಂತ್ರಗಳ ಮೂಲಕ ಕೊಯ್ಯುವುದಕ್ಕೆ ಕೂಡ ಅವು ಅತ್ಯುಪಯುಕ್ತವಾಗಿವೆ.

ಪ್ಲೋರಿಡಾ ಮತ್ತು ಆಗ್ನೇಯ ರಾಜ್ಯಗಳಲ್ಲಿ "ಸ್ಕ್ರೂವರ್ಮ್" ಎಂಬ ಹೆಸರಿನ ನೊಣಗಳನ್ನು ನಿರ್ನಾಮಗೊಳಿಸಲಾಗಿದ್ದು ಇದು ಕೃಷಿ ಕ್ಷೇತ್ರದಲ್ಲಿ ವಿಕಿರಣದ ಕ್ರಿಯಾತ್ಮಕ ಉಪಯೋಗಕ್ಕೊಂದು ಉತ್ತಮ ನಿದರ್ಶನ. ಈ ನೊಣಗಳು ಪಶುಗಳ ಚರ್ಮವನ್ನು ಕಚ್ಚಿ ಅಥವಾ ಮರೆಯ ಭಾಗಗಳಲ್ಲಿ ಮೊಟ್ಟೆಗಳನಿಟ್ಟು ಗಾಯಮಾಡುತ್ತವೆ ಇದರಿಂದ ಪಶುಗಳ ಶಕ್ತಿಯು ಕುಂದುವುದು; ಆದ ಗಾಯ ತುಂಬಿ ಬರುವುದಿಲ್ಲ; ಕೆಲವೊಮ್ಮೆ ಅವು ಮೃತ್ಯುಮುಖವಾಗುವುದೂ ಇದೆ.

ಸ್ಕ್ರೂವರ್ಮ್‌ಗಳನ್ನು ನಾಶಗೊಳಿಸುವುದಕ್ಕಾಗಿ ಅವುಗಳ ಡಿಂಬಗಳ ಮೇಲೆ ಗಾಮಾಕಿರಣಗಳನ್ನು ಬಿಡಲಾಯಿತು. ಆಗ ಇವುಗಳ ಗರ್ಭಧಾರಣಾ ಶಕ್ತಿಯು ನಷ್ಟವಾಯಿತು. ಈ ಬಗೆಯ ಸುಮಾರು ಮೂರು ಅರಬ ನೊಣಗಳನ್ನು ವಿಮಾನದ ಮೂಲಕ ಫ್ಲೋರಿಡಾದ ಬಹುದೊಡ್ಡ ಭಾಗದಲ್ಲಿ ಹರಡಲಾಯಿತು. ಅವು ಇತರ ನೊಣಗಳೊಂದಿಗೆ ಸಂಪರ್ಕ ಪಡೆದುವು. ಇದರಿಂದಾಗಿ ಕೆಲವೇ ತಲೆಮಾರು (ನೊಣಗಳ)ಗಳಲ್ಲಿ ಆ ವಿಭಾಗದ ಸ್ಕ್ರೂವರ್ಮ್‌ಗಳು ಸಂಪೂರ್ಣ ನಾಶವಾದುವು.

ಆಹಾರ ಸಾಮಗ್ರಿಗಳು ಕೆಟ್ಟು ಹೋಗುವುದರಿಂದ ಇಡಿಯ ಪ್ರಪಂಚದಲ್ಲಿ ಬಹಳಷ್ಟು ಆಹಾರಧಾನ್ಯಗಳು ನಷ್ಟವಾಗುತ್ತವೆ. ಈಗ ವಿಕಿರಣದಿಂದ ಖಾದ್ಯ ಸಾಮಗ್ರಿಗಳನ್ನು ಸಂರಕ್ಷಿಸುವ ಬಹಳಷ್ಟು ವಿಷಯವು ತೋರಿ ಬಂದಿದೆ. ವಿಕಿರಣದ ಮೂಲಕ ಮೊಂಸ ಮತ್ತು ಇತರ ಆಹಾರ ಪದಾರ್ಥಗಳನ್ನು ಕೆಡಿಸುವ ಕೀಟಾಣುಗಳನ್ನೂ ನಾಶ ಮಾಡುವುದು ಸಾಧ್ಯವಾಗಿದೆ. ಅಲೂಗೆಡ್ಡೆಯನ್ನು ಮೊಳಕೆ ಬರದಂತೆ ತಡೆಯ ಬಹುದು. ಹೆಂದಿಯ ಮಾಂಸ ಮತ್ತು ಗೋಧಿಗಳನ್ನು ಕೀಟಾಣುಗಳಿಂದ ಸಂರಕ್ಷಿಸ ಬಹುದು.

ಅಣವಿಕ ಪ್ರಕ್ರಿಯೆಗಳನ್ನು ಸ್ವೀಕರಿಸುವುದರಿಂದ ಆಹಾರ ವಸ್ತುಗಳಲ್ಲಿ ವಿಕಿರಣದ ಸ್ವಲ್ಪಾಂಶವಾದರೂ ಉಳಿಯುವುದಿಲ್ಲವೆಂದು ಗೊತ್ತಾಗಿದೆ. ಆದರೆ, ಬೀರೆ ಕೆಲವು ಸಮಸ್ಯೆಗಳು ಏಳುತ್ತವೆ. ವಿಕಿರಣ ಪ್ರಕ್ರಿಯೆಯಿಂದಾಗಿ, ವಸ್ತುಗಳ ರುಚಿಯು ಕಡಿಮೆಯಾಗುವುದು; ಜೀವಸತ್ವ ಹಾಗೂ ಮತ್ತಿತರ ಪೋಷಕ ಸತ್ವಗಳು ನಷ್ಟಗೊಳ್ಳುವುವು--ಎಂದು ಹೇಳುವವರಿದ್ದಾರೆ. ಆದರೆ, ಇದುವರೆಗೆ ನಡೆಸಿದ ಪ್ರಯೋಗಗಳಿಂದ ಅವುಗಳು ಉಳಿದ ಯಾವುದೇ ಆಹಾರ ವಸ್ತುಗಳಿಗಿಂತ ಕಡಿಮೆ ಮಟ್ಟದವುಗಳಲ್ಲವೆಂಬುದು ಖಂಡಿತವಾಗಿದೆ.

ಭವಿಷ್ಯದಲ್ಲಿ ವಿಕಿರಣ ಸಂರಕ್ಷಣಾ ವಿಧಾನವನ್ನು ಹೆಚ್ಚಾಗಿ ಬಳಸಿಕೊಳ್ಳಲಾಗುವುದೆಂದು ಅಮೆರಿಕೆಯ ಅಣುಶಕ್ತಿ ಕಮಿಶನ್ನಿನ ಐಸೋಟೋಪ್ ವಿಕಾಸ ವಿಭಾಗದ ಅಧಿಕಾರಿ ಡಾ. ಪಾಲ್ ಸಿ. ಐಬರ್ಸೋಲ್ಡರು ದೃಢ ವಿಶ್ವಾಸಪಟ್ಟಿದ್ದಾರೆ. "ಆಹಾರ ವಸ್ತುಗಳನ್ನು ತಣ್ಣಗಾಗಿಸಿ ಸಂರಕ್ಷಿಸುವ ವಿಧಾನವಿಲ್ಲದೆಡೆಗಳಲ್ಲಿ ವಿಕಿರಣ ವಿಧಾನವನ್ನು ಸ್ವೀಕರಿಸಿ ಖಾದ್ಯ ಪದಾರ್ಥಗಳ ವಿತರಣೆಯ ವ್ಯವಸ್ಥೆಯನ್ನು ಹೆಚ್ಚಿಸಬೇಕು; ಮತ್ತು ಸಸಾರಜನಕದ ಅಭಾವವನ್ನು ದೂರೀಕರಿಸಬೇಕು" ಎಂದು ಅವರು ಹೇಳುತ್ತಾರೆ.

ವಿಶ್ವದ ಜನಸಂಖ್ಯೆ ಅತ್ಯಧಿಕ ವೇಗದಿಂದ ಹೆಚ್ಚುತ್ತಿರುವ ಮಹಾ ಸಮಸ್ಯೆ ಇಂದು ನಮ್ಮೆಲ್ಲರ ಮುಂದಿದೆ. ಇದರಿಂದ ನಮ್ಮ ಆಹಾರದ ಪ್ರಶ್ನೆಯು ಬಹಳಷ್ಟು ಗಡುಸಾಗುತ್ತ ಹೋಗುವುದು ಆಹಾರದ ಅಭಾವವು ಅವಶ್ಯ ಮುಂದಿನ ವರ್ಷಗಳಲ್ಲಿ ಕಾಣಿಸಿಕೊಳ್ಳುವುದು. ನಾವು ಇದನ್ನು ತುಂಬಿಕೊಳ್ಳಲು ಈಗಿಂದೀಗಲೇ ಪ್ರಯತ್ನಮಾಡಬೇಕು. ನಮ್ಮ ಕೃಷಿ ಕ್ಷೇತ್ರದಲ್ಲಿ ಗಮನೀಯ ಪ್ರಗತಿ ಸಾಧಿಸುವುದೇ ಇದಕ್ಕೆ ಉತ್ತಮವಾದ ಪರಿಹಾರ ಮಾರ್ಗವೆಂಬುದು ವಿದಿತವಿದೆ. ಕೃಷಿ ಕ್ಷೇತ್ರದಲ್ಲಿ ಐಸೋಟೋಪ್‌ಗಳನ್ನು ಧಾರಾಳವಾಗಿ ಉಪಯೋಗಿಸುವುದರಿಂದ ನಾವು ಸಾಧನೆಯಲ್ಲಿ ಜಯಶೀಲರಾಗಬಹುದು. ಭಾರತದಲ್ಲಿಯೂ ಇವುಗಳ ಉಪಯೋಗವು ವ್ಯವಹಾರಕ್ಕೆ ಬರಲು ಅಧಿಕ ಸಮಯಬೇಕಾಗಲಾರದು.

ಅಮೆರಿಕೆಯ ಅಧ್ಯಕ್ಷ ಶ್ರೀ ಕೆನೆಡಿಯವರನ್ನು ಶ್ರೀಮತಿ ರೂಜವೆಲ್ಟರು ಶೈಕ್ಷಣಿಕ ಟೆಲಿವಿಜನಿನ ಬಗ್ಗೆ ವಿಚಾರವಿನಿಮಯ ಮಾಡಲು ಭೆಟ್ಟಿಯಾದಾಗ ತೆಗೆದ ಚಿತ್ರವಿದು.

ಸ್ವಲ್ಪ ಸ್ವಲ್ಪವಾಗಿ, ಅಲ್ಲೊಮ್ಮೆ ಇಲ್ಲೊಮ್ಮೆ, ನೀವು ಉಳಿಸುತ್ತಿರುವ ಹಣವು ಬೇಗ ಬೇಗನೆ ವೃದ್ಧಿಗೊಂಡು, ನಿಮ್ಮ ಭವಿಷ್ಯದ ಭದ್ರತೆಯು ಹೆಚ್ಚೆಚ್ಚಾಗಿ ಪರಿಣಮಿಸುವಂತೆ

ಕೊಪ್ಪೊರೇಶನ್ ಬೇಂಕು

ನಿಮ್ಮ ಸೇವಿಂಗ್ಸ್ ಬೇಂಕ್ ಎಕೌಂಟುಗಳ ಮೇಲೆ ಇನ್ನು ಮುಂದಕ್ಕೆ ಸಾಲಿಯಾನ್ ಸೇಕಡಾ **3** ರ ದರದಲ್ಲಿ ನಿಮಗೆ ಬಡ್ಡಿ ಕೊಡುವುದು.

ವಿವರಗಳಿಗೆ ವಿಚಾರಿಸಿರಿ:

ದಿ. ಕೆನರಾ ಬೇಂಕಿಂಗ್ ಕೊಪ್ಪೊರೇಶನ್ ಲಿಮಿಟೆಡ್

(ಸ್ಥಾಪನೆ: 1906) (ರಿಜಿಸ್ಟರ್ಡ್ ಆಫೀಸು: **ಉಡುಪಿ.**

ಆಡಳಿತ ಆಫೀಸು: **ಮಂಗಳೂರು—1**

ದಕ್ಷಿಣ ಕನ್ನಡಾ ಸಬೋರ್ಡಿನೇಟ್ ಜಡ್ಜರ ಕೋರ್ಟಿನಲ್ಲಿ

S. C. 39/61

ಪುರುಷೋತ್ತಮ ಆರ್. ದಲಾಲ್—ವಾದಿ, ಮತ್ತು

ತಂಡೇಲ್ ಹಮ್ಮದ್ —ಪ್ರತಿವಾದಿ.

ಕಾಸರಗೋಡು ತಾಲ್ಲುಕ ತಲಂಗರೆ ಗ್ರಾಮದಲ್ಲಿರುವ, ಮಮ್ಮದ ಬ್ಯಾರಿಗಳ ಮಗ ತಂಡೇಲ್ ಹಮ್ಮದ್‌ರಿಗೆ—

ಮೇಲ್ಕಾಣಿಸಿದ ವಾದಿಯು ವ್ಯಾಜ್ಯದಲ್ಲಿ ಕೇಳಿದ ನಿವೃತ್ತಿ ಬಗ್ಗೆ ಮೇಲ್ಕಂಡ ದಾವೆಯನ್ನು ದಾಖಲು ಮಾಡಿರುತ್ತಾರೆ ಸದ್ರಿ ವ್ಯಾಜ್ಯವು ತಾರೀಕು 17—7—61ಕ್ಕೆ ನಿಮ್ಮ ಹಾಜರಾತಿ ಬಗ್ಗೆ ಇಟ್ಟಿರುತ್ತಾ ಆ ದಿವಸ ನೀವು ಹಗಲು 11 ಘಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಖುದ್ದಾಗಿ ಯಾ ವಕೀಲರ ಮುಖಾಂತ್ರ ಹಾಜರಾಗದಿದ್ದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ವ್ಯಾಜ್ಯವನ್ನು ತೀರ್ಮಾನಿಸಲಾಗುವುದು.

(ಕೋರ್ಟು ಹುಕ್ಕುಂ ಮೇರೆಗೆ)

(sd) ಎನ್. ಮಹಾಬಲ
ಬಿ.ಎ.ಬಿ.ಎಲ್.
ವಾದಿ ಕಡೆ ಎಡ್ವಕೇಟ್.

ಮಂಗಳೂರು. ತಾ. 19—6—1961

ಗೃಹಯೋತ್ರೆ

ಚಂದ್ರನ ಅದೃಶ್ಯ ಭಾಗ

ಕೋಟ್ಯಂತರ ಸಂಪತ್ತಿ, ಕಾಲಾಂತರ ಪರಿಶ್ರಮಗಳ ಫಲವಾಗಿ ಚಂದ್ರನ ಅದೃಶ್ಯ ಭಾಗವೂ ದೃಶ್ಯ ಭಾಗದಂತೆಯೇ ಇದೆ ಎಂಬುದನ್ನು ವಿಜ್ಞಾನಿಗಳು ಕಂಡುಕೊಂಡಿದ್ದಾರೆ. ಚಂದ್ರನ ಸಂಬಂಧದಲ್ಲಿ ಇನ್ನೂ ಹೆಚ್ಚಿನ ಶೋಧ ನಡೆಯಲು ಇದು ನಾಂದಿಯಾಯಿತು.

ನಮ್ಮ ಕವಿಗಳು ಚಂದ್ರನ ಮೇಲಿನ ಕಲಂಕವನ್ನು ನಾನಾ ರೀತಿಯಾಗಿ ಉತ್ಪ್ರೇಕ್ಷಿಸಿರುವಂತೆಯೇ ಆಧುನಿಕ ವೈಜ್ಞಾನಿಕರು ಆತನ ಬೆಂಭಾಗದ ಬಗ್ಗೆ ಕಲ್ಪನೆಯನ್ನು ಮಾಡಿದ್ದಾರೆ.

ಚಂದ್ರನ ಮುಖವೆಂದು ಕರೆಯುವ ಒಂದು ಪಾರ್ಶ್ವ ಮಾತ್ರ ಯಾವಾಗಲೂ ದೃಷ್ಟಿಗೋಚರವಾಗುತ್ತದೆ ಎಂಬ ಸತ್ಯ ಬಹಳ ಹಿಂದಿನ ಕಾಲದಿಂದಲೇ ವಿಜ್ಞಾನಿಗಳಿಗೆ ಗೊತ್ತಿತ್ತು. ಬರಿಗಣ್ಣಿನಿಂದ ನೋಡಲಿ ಅಥವಾ ದುರ್ಬೀನಿನಿಂದ ವೀಕ್ಷಿಸಲಿ, ಶತಶತಮಾನಗಳಿಂದಲೂ ಜಗತ್ತಿನ ಜನರಿಗೆ ಈ ಮುಖವು ಮಾತ್ರ ತೋರುತ್ತಿದೆ.

೨೭ ದಿನ ೭ ಘಂಟೆ ೪೩ ನಿಮಿಷ ಮತ್ತು ೧೧.೪೭ ಸೆಕುಂಡುಗಳಲ್ಲಿ ಚಂದ್ರನು ಭೂಮಿಯನ್ನೊಂದು ಬಾರಿ ಸುತ್ತುತ್ತಾನೆ. ತನ್ನ ಅಕ್ಷದಲ್ಲಿ ಒಂದು ಸುತ್ತು ಬರುವುದಕ್ಕೂ ಈತನಿಗೆ ಇಷ್ಟೇ ಕಾಲಾವಕಾಶ ಬೇಕಾಗುವುದು. ಆದುದರಿಂದಲೇ ಆತನ ಪೃಷ್ಠಭಾಗ ನಮಗೆ ಗೋಚರಿಸುವುದಿಲ್ಲ. ವಾಸ್ತವವಾಗಿ ಭೂಮಿಯೂ ಚಂದ್ರನೂ ಒಂದೇ ಕೇಂದ್ರದ ಸುತ್ತ ತಿರುಗುತ್ತಾರೆ; ಈ ಕೇಂದ್ರವಾದರೂ ಇರುವುದು ಭೂಮಿಯಲ್ಲೇ

ತನ್ನ ಪರಿಶ್ರಮ-ಪಥದಲ್ಲಿ ಒಂದು ಸುತ್ತು ಪೂರ್ತಿ ಬರಲು ಚಂದ್ರನಿಗೆ ಯಾವಾಗಲೂ ಇಷ್ಟೇ ಸಮಯ ತಗಲುವುದು. ಆದರೆ ಆತನ ಪಥವು ಸಂಪೂರ್ಣ ಗೋಲಾಕಾರವಿರುವುದಿಲ್ಲ. ಭೂಮಿ ಮತು ಚಂದ್ರರ ನಡುವಿರುವ ಅಂತರವು ಹೆಚ್ಚುಕಡಿಮೆಯಾಗುವಂತೆ ಅದೇ ಅನುಪಾತದಲ್ಲಿ ಚಂದ್ರನ ಗತಿಯು ಹೆಚ್ಚುಕಡಿಮೆಯಾಗುವುದು.

ಭೂಮಿಯ ಅತಿ ಸಮೀಪಾಬಂದಾಗ ನಮಗೆ ತೋರುವ ಚಂದ್ರಬಿಂಬದ ಹತ್ತರಲ್ಲಿ ಒಂದಂಶವಾದರೂ ಆತ ದೂರದಲ್ಲಿರುವಾಗ ಕಾಣುವುದಿಲ್ಲ. ಆದುದರಿಂದಲೇ ಚಂದ್ರ ಕೆಲವೊಮ್ಮೆ ಅತ್ತ ಇನ್ನು ಕೆಲವೊಮ್ಮೆ ಇತ್ತ ಬಾಗಿರುವಂತೆ ಕಂಡು ಬರುತ್ತಾನೆ. ಕೆಲವೊಮ್ಮೆ ಆತನ ಧ್ರುವಪಾರದ ಸ್ವಲ್ಪ ಭಾಗವು ನಮಗೆ ತೋರುತ್ತದೆ. ಹೀಗೆ ಒಟ್ಟು ಚಂದ್ರನ ನೂರರಲ್ಲಿ ೫೯ ಭಾಗದಷ್ಟನ್ನು ಭೂಮಿಯಲ್ಲಿ ನಾವು ಕಾಣಬಲ್ಲೆವು. ಆದರೆ ಸೇಕಡಾ ೫೦ಕ್ಕಿಂತ ಅಧಿಕ ಅಂಶ ಒಂದೇ ಬಾರಿ ದೃಷ್ಟಿಗೋಚರವಾಗುವುದಿಲ್ಲ.

ಅದೃಶ್ಯವಾಗಿರುವ ಸೇಕಡಾ ೪೧ ಅಂಶವನ್ನು ಕಾಣುವ ತಹತಹದಿಂದಾಗಿ ಮಾನವ ಚಂದ್ರ ಲೋಕದತ್ತ ಪ್ರಯಾಣಮಾಡಲು ಹವಣಿಸುತ್ತಿದ್ದಾನೆ. ಮಾನವನು ಈಗಾಗಲೇ ಎರಡು ಬಾರಿ ಅಂತರಿಕ್ಷಯಾತ್ರೆಯನ್ನು ಮಾಡಿ ಬಂದಿದ್ದಾನೆ. ಇದರಿಂದ ಚಂದ್ರ ಲೋಕವನ್ನು ಮುಟ್ಟುವುದು ನಮ್ಮ ಜೀವನ ಕಾಲದಲ್ಲೇ ಸಾಧ್ಯವೆಂದು ಹೇಳುವುದು ಸಾಧ್ಯವಾಗಿದೆ.

ಭೂಮಿಗೆ ಅತಿ ಸಮೀಪವಿರುವ ಚಂದ್ರನ ಭಾಗದಲ್ಲಿ ಒಂದು 'ಗುಂಬಜ'ದಂತಹ ರಚನೆಯಿರುವುದು ತೋರುತ್ತದೆ. ಚಂದ್ರನು ದ್ರವಾವಸ್ಥೆಯಲ್ಲಿದ್ದಾಗ ಆತನಲ್ಲಿ ಜ್ವಾಲಾಮುಖಿಗಳು ಬಹಳವಾಗಿದ್ದುವು; ಆಗ, ಭೂಮಿಯ ಗುರುತ್ವಾಕರ್ಷಣ ಶಕ್ತಿಯು ಅಲ್ಲಿನ ನೆಲನಿರ್ಮಾಣದ ಕಾರ್ಯದಲ್ಲಿ ಬಹಳ ಪ್ರಭಾವ ಬೀರಿತ್ತು ಎಂದು ಇದರಿಂದ ಊಹಿಸಬಹುದಾಗಿದೆ.

ಇದರ ಆಧಾರದಿಂದ ಹೇಳುವುದಾದರೆ, ಚಂದ್ರನ ಪೃಷ್ಠ ಭಾಗವು ಈ ತೆರದ ಪ್ರಭಾವದಿಂದ ಮುಕ್ತವಾಗಿದೆ. ಇದರ ನೆಲನಿರ್ಮಾಣ ಕಾರ್ಯವು ಬೇರೆಯ ವಿಧಾನದದಲ್ಲಾಗಿರ ಬಹುದು. ಚಂದ್ರಮನ ಎಲ್ಲಗಾಳಿ ಮತ್ತು ನೀರು ಈ ಪೃಷ್ಠ ಭಾಗದಲ್ಲಿದೆಯೆಂದೂ ಈ ಕಾರಣದಿಂದ ಅಲ್ಲಿ ಜೀವನತತ್ವ ಶಾಶ್ವತವಿರಬಹುದೆಂದೂ ಖಗೋಳ ಶಾಸ್ತ್ರಿಗಳಾದ ಮೆನ್ಸನ್‌ರ ತಿಳಿವಳಿಕೆಯಾಗಿತ್ತು.

ಆದರೆ, ಸರಿಯಾಗಿ ಪರ್ಯಪೇಕ್ಷಣೆ ನಡೆಸಿದಾಗ, ಚಂದ್ರನ ಅದೃಶ್ಯಮಂಡಲದ ಭಾಗವು ದೃಶ್ಯ ಭಾಗಕ್ಕಿಂತ ಭಿನ್ನವಾಗಿದೆಯೆಂಬುದು ನಿರಾಧಾರವೆಂದು ತಿಳಿದು ಬಂದಿದೆ. ದೂರದರ್ಶಕದಿಂದ ಚಂದ್ರನ 'ಟೈಕೊಕ್ರೆಟರ್'ನಿಂದ ಕಿರಣಗಳು ಹೊರಡುವುದೆಂದೂ ಅವುಗಳ ಪ್ರಕಾಶ ನೂರಾರು ಮೈಲುಗಳ ವರೆಗೆ ಹರಡುವುದೆಂದೂ ನೋಡಿದ್ದಾರೆ. ಇಂತಹುದೇ ಕಿರಣವು ಆತನ ಪೃಷ್ಠಭಾಗದಿಂದಲೂ ಹೊರಡುವುದು ಕಂಡುಬಂದಿದೆ. ಒಂದು ಹಡನು ಕಿರಣೋದ್ಗಮ ಸ್ಥಾನಗಳನ್ನೀಗ ಕಂಡು ಹಿಡಿದಿದ್ದಾರೆ.

"ಚಂದ್ರನ ಮುಖಭಾಗದಂತೆಯೇ ಪೃಷ್ಠಭಾಗವೂ ಇರುವುದು ಸಂಭವನೀಯ" ವೆಂದು ೧೯೫೬ರಲ್ಲಿ ಪ್ರಕಟಗೊಂಡ ಒಂದು ಪುಸ್ತಕದಲ್ಲಿ ಉಲ್ಲೇಖಿಸಲಾಗಿದೆ. ೧೯೬೦ರ ವರೆಗೂ ನಮಗೆ ಚಂದ್ರನ ಸಂಬಂಧದಲ್ಲಿದ್ದ ಜ್ಞಾನವೆಂದರೆ ಇಷ್ಟು ಮಾತ್ರ.

ಚಂದ್ರನತ್ತ ರಾಕೇಟನ್ನು ಮೊತ್ತ ಮೊದಲಿಗೆ ಕಳಿಸುವುದರಲ್ಲಿ ೨೬-೧೦-೧೯೫೯ ರಂದು ರಶ್ಯನ್ ವೈಜ್ಞಾನಿಕರು ಸಮರ್ಥರಾದರು. ರಾಕೇಟಿನಲ್ಲಿದ್ದ ಕೆಮೆರಾಗಳು ಚಂದ್ರನ ಚಿತ್ರವನ್ನೂ ಬರೆದು ತಂದುವು. ಇವು ಇಡಿಯ ವಿಶ್ವದಲ್ಲಿ ಸ್ವಕಾತಿತಗೊಂಡುವು.

ಇದೊಂದು ಮಹಾ ವಿಜಯವೆನ್ನುವಂತಿತ್ತು. ಯಂತ್ರತಂತ್ರಗಳ ವಿಕಾಸವೇ ಈ ವಿಜಯ ಪ್ರಾಪ್ತಿಯನ್ನು ಸಂಭವವೆಂದೆನಿಸಿತು. ಭೂಮಿಯ ಗುರುತ್ವಾಕರ್ಷಣ ಶಕ್ತಿಯಿಂದ ಬಿಡುಗಡೆ ಹೊಂದುವಂತೆ ಒಂದು ತಾಸಿಗೆ ೧೫,೨೦೦ ಮೈಲು ಅಥವಾ ಸೆಕುಂದಿಗೆ ೨ ಮೈಲು ವೇಗವನ್ನು ರಾಕೇಟು ಪಡೆಯುವುದು ಅವಶ್ಯವಾಗಿತ್ತು. ಹೀಗಾದರೆ ಮಾತ್ರ ರಾಕೇಟು ಚಂದ್ರನನ್ನು ಮುಟ್ಟುವುದು ಸಾಧ್ಯವಿತ್ತು. ಇ ಇಷ್ಟು ಮಾತ್ರನಲ್ಲ, ಇನ್ನೂ ಒಂದು ಸಂಗತಿ ಅಜ್ಞಾತವಿತ್ತು. ಚಂದ್ರನ ಸಮೀಪ ರಾಕೇಟು ಬರಿಸ ತ್ತಿರುವಾಗ ಆತನ ಬಳಿಯನ್ನು ದಾಟುತ್ತ ಇಷ್ಟೆಲ್ಲದರೂ ಸರಿದು ಹೋಗುವುದೆ, ಚಂದ್ರನ ಮೇಲೆಯೇ ಬಿದ್ದು ಬಿಡುವುದೇ ಅಥವಾ ಚಂದ್ರನ ಸುತ್ತ ಬಂದು ಭೂಮಿಗೆ ಮರಳಿ ಬರುವುದೇ ಎಂಬ ವಿಷಯದಲ್ಲೂ ಸಂಪೂರ್ಣ ಅನಿಶ್ಚಿತತೆ ತುಂಬಿತುಳುಕಾಡುತಿತ್ತು.

ಚಂದ್ರನ ಪೃಷ್ಠ ಭಾಗವನ್ನು ಮುಟ್ಟಿದ ರಾಕೇಟು ರಶ್ಯದ 'ಲೂನಿಕ್-೩' ಎಂಬುದು. ಮೊದಲಿನ ಪ್ರಯೋಗದಲ್ಲಿ 'ಲೂನಿಕ್-೧' ಎಂಬ ರಾಕೇಟು ಚಂದ್ರನಿಂದ ಸುಮಾರು ನಾಲ್ಕು ಮೈಲು ದೂರದಲ್ಲಿ ಹಾದು ಸೂರ್ಯನ ಕಕ್ಷೆಯನ್ನು ಸೇರಿಬಿಟ್ಟಿತು. ಎರಡನೆಯ ಪ್ರಯೋಗದಲ್ಲಿ 'ಲೂನಿಕ್ ೨' ಚಂದ್ರನ ಮೇಲೆ ಇಳಿಯಿತು.

ಅಕ್ಟೋಬರ ೪ರಂದು 'ಲೂನಿಕ್-೩'ನ್ನು ಭೂಮಿಯಿಂದ ಬಿಡಲಾಯಿತು. ಅದು ೩೪ ತಾಸುಗಳಲ್ಲಿ ೧೭೦ ಸಾವಿರ ಮೈಲು ದೂರವನ್ನು ಕ್ರಮಿಸಿತು. ಒನೆಯ ಅಕ್ಟೋಬರದ ಸಂಧ್ಯಾಸಮಯದಲ್ಲಿ ಚಂದ್ರನಿಗೆ ಅತಿನಿಕಟ—೪,೫೫೦ ಮೈಲು ದೂರ—ವಿತ್ತು. ತನ್ನ ವಿಶೇಷ ವೇಗ ಮತ್ತು ದಿಶೆ ಹಾಗೂ ಚಂದ್ರನ ಗುರುತ್ವಾಕರ್ಷಣ ಶಕ್ತಿಯ ಪ್ರಭಾವಗಳಿಂದ ಅದು ಚಂದ್ರಮನ ಹಿಂಭಾಗದತ್ತ ಧಾವಿಸಿತು. ಮುಂದಿನ ದಿನ ಅದು ಅದೇ ಕಡೆಯಲ್ಲಿ ಮೂವತ್ತು ಸಾವಿರ ಮೈಲು ದೂರ ಸಂದು ಹೋಯಿತು,

ಚಂದ್ರ, ಸೂರ್ಯ ಮತ್ತು ಭೂಮಿಗಳ ನಡುವಿನಲ್ಲಿ ರಾಕೇಟು ಸಂಚಾರ ಮಾಡುತ್ತಿರುವಾಗ, ಚಂದ್ರನ ಚಿತ್ರಗಳನ್ನು ತೆಗೆಯುವುದಕ್ಕಾಗಿ ರಾಕೇಟಿನೊಳಗಿಟ್ಟ ಯಂತ್ರಗಳು ಚಾಲಾದುವು. ಎರಡು ಕೆಮೆರಾಗಳು ಚಂದ್ರನ ಮೇಲೆ ಕೇಂದ್ರೀಕೃತವಾದುವು. ಒಂದು ಕೆಮೆರಾದಲ್ಲಿ ಇನ್ನೂರು ಮಿಲ್ಲಿಮಿಟರಿನ ಮತ್ತು ಇನ್ನೊಂದರಲ್ಲಿ ಐನೂರು ಮಿಲ್ಲಿಮಿಟರಿನ ಭೂತಕನ್ನಡಿಗಳಿದ್ದುವು. ಒಂದು ಚಂದ್ರನ ಎಲ್ಲ ನೆಲಭಾಗದ ಚಿತ್ರ ತೆಗೆಯತೊಡಗಿತು; ಎರಡನೆಯದು ಒಂದಂಶದ ಭಾಗವನ್ನು ತೆಗೆಯಿತು. ೪೦ ಸಿಮಿ.ಪಗಳ ವರೆಗೆ ಎರಡೂ ಕೆಮರಗಳು ಕೆಲಸದಲ್ಲಿ ತೊಡಗಿದುವು. ರಾಕೇಟಿನಲ್ಲಿ ಫಿಲ್ಮ್‌ಗಳು ತಾವಾಗಿಯೇ ತೊಡಗಿಯೇ ತೊಳೆಯಲ್ಪಟ್ಟು ಒಣಗಿಳಲ್ಪಟ್ಟವು.

"ಲೂನಿಕ್—೩" ಅನುಕೂಲ ಸ್ಥಿತಿಗೆ ಬಂದಾಗ ಭೂಮಿಯಿಂದ ರೇಡಿಯೋ ಸಂಕೇತಗಳನ್ನು ಕಳಿಸಲಾಯಿತು. ಆ ಚಿತ್ರಗಳು ಟೆಲಿವಿಜನ್ನಿನ ಮೂಲಕ ರೆಕ್ಕೆ ಬಂದುವು. ಅಲ್ಲಿಂದ ಇಡಿಯ ಪ್ರಪಂಚದಲ್ಲಿ ಪ್ರಸಾರಿತವಾದವು: ಚಂದ್ರನ ಸೇಕಡಾ ೪೧ ಭಾಗದಷ್ಟು ಅದೃಶ್ಯವಾಗಿತ್ತು; ಅದರಲ್ಲಿ ಈಗ ಸೇಕಡಾ ೭೦ರಷ್ಟು ಅಂಶವನ್ನು ಚಿತ್ರಗಳ ಸಹಾಯದಿಂದ ನೋಡುವುದು ಸಾಧ್ಯವಾಯಿತು.

ಅತ್ಯಂತಾಸಕ್ತಿಯಿಂದ ಈ ಚಿತ್ರಗಳ ಅಧ್ಯಯನ ವೀಗ ನಡೆಯುತ್ತಿವೆ. ಕೆಲವೊಂದು ವಿಷಯಗಳು ಈ ಚಿತ್ರಗಳಿಂದ ಸ್ಪಷ್ಟವಾಗಿವೆ. ಕೆಲವು ಪರ್ವತಗಳು, ಇನ್ನು ಕೆಲವು ಹಳೆಯ ಜ್ವಾಲಾಮುಖಿಯ ಬಾಯಿಗಳೀಗ ಗುರುತಿಸಲ್ಪಟ್ಟಿವೆ. ರಶ್ಯನರು ಇದಕ್ಕೆ ನಾಮಕರಣವನ್ನೂ ಮಾಡಿದ್ದಾರೆ. ಇವುಗಳಲ್ಲಿ ೧,೯೦೦ ಮೈಲು ವ್ಯಾಸವಿರುವ ಮಾಸ್ಕೋ ಸಾಗರ ಮತ್ತು ಟೆಲೋಕೋಬ್‌ಸ್ಕಿ, ಲೊಮೋನೋಸೋವ್ ಮತ್ತು ಜೋಲಿಯೋ ಕ್ಯೂರೀ ಜ್ವಾಲಾ ವಿವರಗಳು ಪ್ರಧಾನವಾದುವು. ಒಟ್ಟಿನಲ್ಲಿ ಚಂದ್ರನ ಹಿಂಭಾಗವು ಮುಂಭಾಗದಂತೆಯೇ ಇದೆಯೆಂಬುದನ್ನು ಈ ಚಿತ್ರಗಳು ಪುಷ್ಟೀಕರಿಸುತ್ತವೆ. ಇಕ್ಕಡೆಗೂ ಏಕಸಮವಾಗಿ ಶೂನ್ಯವಾಗಿವೆ.

ಕೋಟ್ಯಂತರ ರುಪಾಯಿ ಹಾಗೂ ವರ್ಷಾಂತರಗಳ ಪರಿಶ್ರಮಗಳಿಂದ ಏನುಸಲ ದೊರೆತಂತಾಯಿತು? ಮೊದಲು ನಾವೂ ಚಂದ್ರನ ಹಿಂಭಾಗವು ಮುಂಭಾಗದಂತೆಯೇ ಇದೆಯೆಂದು ಊಹಿಸಿ ಹೇಳುತಿದ್ದೆವು; ಆದರೆ, ಈಗ ಅದೇ ಮಾತನ್ನು ನಿಶ್ಚಯವಾಗಿ ಹೇಳಬಲ್ಲವರಾದೆವು. ಇದೇನು ಮಹಾ ಎಂದು ಅನ್ನಬೇಡಿ. ಸತ್ಯದ ಲವಾಂಶವಾದರೂ ಕೋಟ್ಯಂತರ ಮನುಷ್ಯರುಗಳಲ್ಲಿ ವಿಸರಿಸುವುದರಿಂದ ವೈಜ್ಞಾನಿಕರ ದೃಷ್ಟಿಯಲ್ಲಿ ಅದರ ಮೌಲ್ಯ ಅತ್ಯಧಿಕವಾಗುತ್ತದೆ.

(ಸಂಗ್ರಹಿತ)

—ಗೋರಾ.

ಉದಯೋನ್ಮುಖ ಲೇಖಕ ಶ್ರೀ. ಪಿ. ಎನ್. ಹೆಬ್ಬಾರ ('ಸಿರಿಪತಿ')
ಅವರ ನವೀನ ಕೃತಿ—

ಕಪಾಳ ಮೋಕ್ಷ

(ಮುನ್ನುಡಿ— ಡಾ| ಟಿ. ಎಂ. ಎ. ಪೈ, ಎಂ. ಬಿ., ಬಿ. ಎಸ್.)

ಏಳು ಪ್ರಬಂಧ, ಎಂಟು ಸಣ್ಣ ಕತೆಗಳನ್ನೊಳಗೊಂಡ ಮೌಲಿಕ ಕೃತಿ. ನೈಜ ಘಟನೆಗಳ ಆಧಾರದ ಮೇಲೆ ನೆಯ್ದ ವರ್ಣನಾತ್ಮಕ ಪ್ರಬಂಧಗಳಾದರೂ ಸಣ್ಣ ಕತೆಯತ್ಪೇ ಸ್ವಾರಸ್ಯಪೂರ್ಣವಾಗಿವೆ. ಕತೆಗಳಲ್ಲಿ ಕತೆಗಾರರ ಸಹಜ ಸುಂದರ ಶೈಲಿ, ಸಾಮಾಜಿಕ ನ್ಯಾಯ—ಅನ್ಯಾಯ ಹಾಗೂ ವಿಧಿವಿಲಾಸದ ಸುಳಿವು ಹೊಳವುಗಳನ್ನು ಕಾಣಬಹುದು.

180 ಪುಟಗಳು — ಬಿಳಿ ಕಾಗದ — ಬೆಲೆ ರೂ. 2=00

ರೂ. ೨=೫೦ ನ. ಪೈಸೆ ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಬಹುದು
ಪುಸ್ತಕ ವ್ಯಾಪಾರಿಗಳಿಗೆ ವಿಪುಲ ಕಮಿಶನ್!

ನವಭಾರತ ಪುಸ್ತಕ ಭಂಡಾರ, ಉಡುಪಿ.

ನೂಣಗಳಿಗೆ ಕೊಂಡಿಯಲ್ಲಿ, ಹಾವುಗಳಿಗೆ ಹಲ್ಲಿನಲ್ಲಿ, ಚೇಳುಗಳಿಗೆ ಬಾಲದಲ್ಲಿ ವಿಷವಿರುವುದು; ಆದರೆ ದುರ್ಜನರ ಶರೀರವಿಡೀ ವಿಷಮಯವಾಗಿರುವುದು.

ನವಯುಗ

೪೦ ವರುಷ	ಉಡುಪಿ ೬-೭-೬೧	ವಾರ ೪೨

ಕಾರ್ಯಸಾಧನೆ ಬೇಕು

ಮೈಸೂರಿನ ವಿದ್ಯಾ ಇಲಾಖೆಯ ಕಾರ್ಯದರ್ಶಿ ಮತ್ತು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಸರಕಾರ ಮತ್ತು ಪರಿಷತ್ತುಗಳ ನಡುವಣ ನಿಘಂಟುವಿಗೆ ಸಂಬಂಧಪಟ್ಟು ಒಡಂಬಡಿಕೆಯೊಂದಕ್ಕೆ ಸಹಿ ಹಾಕಿದುದರಿಂದ ಈಗಾಗಲೇ ಸಿದ್ಧವಾಗಿ ಹೊರಬರಬೇಕಾಗಿದ್ದ ಕನ್ನಡ-ಕನ್ನಡ ಕೋಶವು ೬೭ ಸುಮಾರಿಗಾದರೂ ಕನ್ನಡಿಗರಿಗೆ ದೊರೆಯುವುದೆಂದು ಆಶಿಸಬಹುದು. ನಿಘಂಟುವಿನ ರಚನಾಕಾರ್ಯದಲ್ಲಿ ಪ್ರಗತಿಯಾದಂತೆಯೇ ಸರಕಾರವು ಹದಿನೈದು ಲಕ್ಷ ರೂಪಾಯಿಗಳನ್ನು ಬೇಕೆಂದಾಗ ಪರಿಷತ್ತಿಗೆ ನೀಡಲು ಇದೀಗ ಸಿದ್ಧವಾಗಿದೆ. ನಿಘಂಟುವಿನ ನಿರ್ಮಾಣದಲ್ಲಿ ಅನಸೇಕ್ಷಿತ ವಿಲಂಬವಾಗುತ್ತಿರುವುದಕ್ಕೆ 'ಅವಶ್ಯಕವಾದ ಧನಸಹಾಯ ತಕ್ಕ ಪ್ರಮಾಣದಲ್ಲಿ ಒದಗಿಸಬಾರದಿರುವುದೇ' ಕಾರಣವೆಂಬದು ಇನ್ನು ಮುಂದಕ್ಕೆ ಒಪ್ಪಿ ಬರುವ ಮಾತಾಗದು. ಸಂಪಾದಕ ಮಂಡಳಿಯವರೂ ಅದಕ್ಕೆ ಸಂಬಂಧಿಸಿದವರೂ ಸಂಪೂರ್ಣ ಪರಿಶ್ರಮದಿಂದ, ಬಹುದಿನಗಳಿಂದ ಕನ್ನಡಿಗರು ನಿರೀಕ್ಷಿಸುತ್ತಿರುವ ಕೋಶವನ್ನು ನಿಶ್ಚಿತ ದಿನಕ್ಕೆ ಮೊದಲೇ ತಯಾರಿಸಲು ಪ್ರಯತ್ನಿಸುವರೆಂದು ಆಶಿಸಬೇಕಾಗಿದೆ.

ಸಾಹಿತ್ಯ ಪರಿಷತ್ತು ಈ ನಿಘಂಟನ್ನು ತಯಾರಿಸಲು ತೊಡಗಿದ ನಂತರದ ಅವಧಿಯಲ್ಲಿಯೇ ಕನ್ನಡದಲ್ಲಿ ಕೆಲವಾರು ಕೋಶಗಳು ಪ್ರಕಟವಾಗಿವೆ. ಅವೆಲ್ಲವೂ ಕನ್ನಡಿಗರ ಸಾಮಾನ್ಯ ಅವಶ್ಯಕತೆಯನ್ನು ಪೂರೈಸಬಲ್ಲವಾದರೂ ಸಾಹಿತ್ಯ ಸಮೃದ್ಧಿಯಿರುವ ಸುರಾತನ ಇತಿಹಾಸವಿರುವ ಕನ್ನಡಕ್ಕೊಂದು ಆಧುನಿಕವೂದರೆಯ ಪ್ರಮಾಣಿಕ ಆದರ್ಶಕೋಶವೊಂದರ ಆವಶ್ಯಕತೆ ಹಿಂದಿನಿಂದಲೂ ಇದೆ; ಈಗಂತೂ ಇದು ಮತ್ತಷ್ಟು ಹೆಚ್ಚಿದೆ. ಕಳೆದ ಶತಮಾನದಲ್ಲಿ ವಿದೇಶದಿಂದ ನಮ್ಮ ರಾಜ್ಯಕ್ಕೆ ಬಂದು, ಇಲ್ಲಿ ಕನ್ನಡವನ್ನು ಕಲಿತು, ಕನ್ನಡದ ಅಧ್ಯಯನಕ್ಕೆ, ಅಭಿವೃದ್ಧಿಗೆ ಕೋಶವೊಂದರ ಅಭಾವ ತೊಡಗಿರುವುದನ್ನು ಮನಗಂಡ ಕಿಟ್ಟೆಲ್ ಸಾಹೇಬರ ಅದಮ್ಯ ಉತ್ಸಾಹ ಆಸೀಮಸೇವೆ, ಅನಾಧ್ಯ ಪರಿಶ್ರಮಗಳ ಫಲವಾಗಿ ಕಿಟ್ಟೆಲ್-ಕೋಶ ರೂಪಗೊಂಡಿತು. ಆದರೆ ತಯಾರಿಕೆಯಲ್ಲಿ ವಿದ್ವನ್ಮಣಿಗಳು ಹೃತ್ಪೂರ್ವಕ ಸಹಾಯ ನೀಡಿದ ರೆಂಬುದು ಒಪ್ಪತಕ್ಕುದೇ ಆದರೂ ಕೋಶ ರಚನೆಯ ಭಾರವನ್ನು ಹೊತ್ತವರ ಎದೆಗಾರಿಕೆಯು ಎಲ್ಲರಿಗೂ ಆದರ್ಶಪ್ರಾಯವಾಗಿದೆ. ಹಿಂದಿನಿಂದ ಇಂದಿನ ವರೆಗೆ ಕನ್ನಡದ ಕೋಶಗಳಲ್ಲಿ ಬೃಹತ್ತಾಗಿಯೂ ಮಹತ್ತಾಗಿಯೂ ಇರುವುದೆಂದರೆ ಇದೊಂದೇ. ಈಗ, ಅದರ ಪ್ರತಿಗಳೂ ದೊರೆಯದೆ ಬಹುಕಾಲವಾಗುವುದರಿಂದ ಕನ್ನಡಿಗರು ಕೈಗೆ ನಿಲುಕುವ ಚಿಕ್ಕ ಪುಟ್ಟ ಕೋಶಗಳಿಂದಲೇ ಸಮಾಧಾನ ಪಟ್ಟುಕೊಳ್ಳಬೇಕಾಗಿದೆ. ಅಧಿಕಾರಿಕವಾಗಿ ಪದಗಳ ಅರ್ಥವನ್ನು ವಿವರಿಸುವ, ಪರ್ಯಾಯ ಪದಗಳನ್ನು ತಿಳಿಸುವ ಮುಖ್ಯವಾಗಿ ಅಬದ್ಧ ಪ್ರಯೋಗದಿಂದ ಅಬದ್ಧವಾಗುತ್ತಿರುವ ಪದಗಳ ಶುದ್ಧ ರೂಪಗಳನ್ನು ತಿಳಿಸುವ ಪ್ರಾಮಾಣಿಕವೆನ್ನಬಹುದಾದ ಉಸಯುಕ್ತ ಕೋಶದ ರಚನೆ ಕನ್ನಡ ಸಾಹಿತ್ಯ ಪರಿಷತ್ತಿನ ನೇತೃತ್ವದಲ್ಲಿ ನಡೆಯಬೇಕಾದುದು ಅತ್ಯವಶ್ಯ. ಕನ್ನಡದ ರಾಜ್ಯ ಸರಕಾರವು ಇದಕ್ಕೆ ಸಹಾಯ ಸಲ್ಲಿಸುವುದು ಕರ್ತವ್ಯ. ಸದ್ಯ ಶ್ರೀ ಟಿ. ಎನ್. ಶ್ರೀಕಂಠಯ್ಯನವರು ಅಧ್ಯಕ್ಷರಾಗಿಯೂ ಶ್ರೀ ಎಲ್. ಗುಂಡಪ್ಪನವರು ಸಂಪಾದಕರಾಗಿಯೂ ಇರುವ ಸಂಪಾದಕ ಮಂಡಳಿಯು ನಿಘಂಟು ತಯಾರಿಯನ್ನು ಭರದಿಂದ ಮುಂದೊತ್ತುತ್ತಿದೆಯೆಂದು ಕೇಳುತ್ತೇವೆ. ೧೫೦ ಪುಟಗಳ ನಾಲ್ಕು ಸಂಪುಟಗಳಲ್ಲಿ ಇದು ಹೊರಬರುವುದೆಂದೂ ತಿಳಿಯುತ್ತೇವೆ. ಒಟ್ಟು ಐದು ಸಾವಿರ ಪುಟಗಳ ಪ್ರಮಾಣದಲ್ಲಿ ಪ್ರಕಟವಾಗುವ ಈ ಮಹಾ ಕೋಶವು ಸರ್ವಾಂಗ ಪರಿಪೂರ್ಣವಿದ್ದು, ಕನ್ನಡದ ಅಭಾವವೆಲ್ಲವನ್ನೂ ಹೋಗಲಾಡಿಸಲು ಸರ್ವಶಕ್ತವಾಗುವಂತೆ ಇರಬೇಕಾದುದು ಅತಿ ಮುಖ್ಯ. ಲಕ್ಷಾಂತರ ಹಣ ವೆಚ್ಚ ಮಾಡುವಾಗ, ಮಾಡುವ ವೆಚ್ಚವು ಸಫಲದಾಯಕವಾಗುವಂತಿರಬೇಕೆಂಬುದನ್ನೂ, ಸಾಧಿಸಿದ ಕಾರ್ಯವು ಅಜರಾಮರವಾಗುವಂತಿರಬೇಕೆಂಬುದನ್ನೂ ಮರೆಯಬಾರದು. ಆರ್ವಾಚೀನ-ಪ್ರಾಚೀನ ಗ್ರಂಥಾಧ್ಯಯನ, ಅವುಗಳ ಪ್ರಯೋಗವೈಖರಿಗಳಿಂದ ಮಾತ್ರವಲ್ಲ, ಇನ್ನಿತರ ಸಂಶೋಧನಾತ್ಮಕ ವಿಧಾನಗಳಿಂದಲೂ ಶಬ್ದಗಳನ್ನು ಗ್ರಹಿಸಿ ತೂಕಿಸಿ ನೋಡುವ ಕೆಲಸ ಸರ್ವ ಸಾಮಾನ್ಯವೆನ್ನುವಂತಿಲ್ಲ. ಈ ಕಾರ್ಯ ಅನಸರದಿಂದ ಮುಗಿಯುವಂತೆಯೂ ಇಲ್ಲ, ಮುಗಿದರೆ ಪ್ರಯೋಜನವೂ ಇಲ್ಲ.

ಇದು ವರೆಗಿನ ಕಾರ್ಯವು ಸಹಸ್ರಪದ ಗಮನದಂತೆ ನಡೆದಿರುವುದಕ್ಕೆ ಆರ್ಥಿಕ ಸಹಾಯೂ ಭಾವವನ್ನೇ ಕನ್ನಡಸಾಹಿತ್ಯ ಪರಿಷತ್ತು ಮುಂದೊಡ್ಡುತ್ತಿತ್ತು. ಈಗ ಕಾರ್ಯ ಸಾಧಿಸಿದಂತೆಲ್ಲ ಬೇಕೆಂಬಾಗ ಸರಕಾರದ ಸಹಾಯಧನವನ್ನು ಹಂತ ಹಂದಲ್ಲಿ ಪಡೆಯುವುದು ಸಾಧ್ಯವಾದುದರಿಂದ ಈ ಕೆಲಸವು ತೀವ್ರಗತಿಯಲ್ಲಿ ಮುಂದುವರಿಯಲು ಆತಂಕವಿಲ್ಲವೆಂಬಂತಾಯಿತು ಆದುದರಿಂದ ನಿಯೋಜಿತ ಸಮಯದಲ್ಲಿಯೇ ಕನ್ನಡ ಸರಸ್ವತಿಗೆ ಕಂಠಾಭರಣ ಸದೃಶವಾದ ಕನ್ನಡ-ಕನ್ನಡ ಕೋಶ ಹೊರಬರಲಿ; ಅದರಿಂದ ಕನ್ನಡಿಗರ ಕನ್ನಡತನದ ಅಂತಸ್ತು ಮೇಲಕ್ಕೇರಲಿ ಎಂಬ ಸದಾಶಯವನ್ನು ಎಲ್ಲರೂ ಇಟ್ಟುಕೊಳ್ಳಬೇಕು. ಸಾಹಿತ್ಯಪರಿಷತ್ತು ಈ ದಿಸೆಯಲ್ಲಿ ಮುಂದಗಮನವನ್ನು ತೋರಿದು, ಮುಂದುವರಿದು ಕನ್ನಡಿಗರ ವಿಶ್ವಾಸಕ್ಕೆ ಪಾತ್ರವಾಗಬೇಕು;

ಯೋಜನೆಯ ಮೊದರಿ

ಆಧುನಿಕ ವಿಶ್ವದ ಎರಡು ಮುಖಗಳಂತಿರುವ ರಶ್ಯ ಮತ್ತು ಅಮೆರಿಕೆಗಳು ಅಭಿವೃದ್ಧಿಹೊಂದಿದ ಬಗೆಗಳೇ ಬೇರೆ ಬೇರೆ. ರಶ್ಯದಲ್ಲಿ ರಾಜ್ಯಕ್ರಾಂತಿಯಾಗುವುದಕ್ಕೆ ದೊದಲೇ ಅದು ಔದ್ಯಮಿಕ ರಂಗದಲ್ಲಿ ಮುಂದುವರಿದಿತ್ತು. ಅನಂತರವಾದರೂ ಏಕಪಕ್ಷೀಯವಾದ ಆಡಳಿತೆಯಿಂದ ಅದು ಮತ್ತಷ್ಟು ಉನ್ನತಿಹೊಂದಿ ಮುಂದುವರಿಯಿತು. ಅಮೆರಿಕೆ ಸ್ವಾತಂತ್ರ್ಯ ಪ್ರಾಪ್ತಿಯ ನಂತರ ಸಂಪನ್ನ ದೇಶವಾಯಿತಾದರೂ ಅಲ್ಲಿನ ಜನರಲ್ಲಿನ ಉಳಿತಾಯ ಮನೋವೃತ್ತಿ ಹಾಗೂ ಪರಿಶ್ರಮ ಪಟುತ್ವಗಳೇ ಅವರ ಅಭಿವೃದ್ಧಿಗೆ ಹೇತುವೆನ್ನಬಹುದು. ಇಂದೀಗ ಸ್ವತಂತ್ರವಾದ ಹಿಂದುಳಿದ ರಾಷ್ಟ್ರಗಳು ತಮ್ಮ ಭವಿಷವನ್ನು ಸುಖಮಯವಾಗಿಡುವ ಸಲುವಾಗಿ ಅಭಿವೃದ್ಧಿ ಯೋಜನೆಗಳನ್ನು ರೂಪಿಸುವುದು ನ್ಯಾಯೋಚಿತವಿದೆ; ಅವು ಅಮೆರಿಕೆ— ರಶ್ಯಗಳಲ್ಲಿಯೂವುದಾದರೊಂದನೆಡೆದ ದಾರಿಯನ್ನು ತುಳಿಯಬಹುದಾಗಿದೆ. ಆದರೆ, ಆಸ್ಪಿಕೆಯ ಅತಿ ಸೊಡ್ಡದಾದ ನೈಜೀರಿಯೂದ ಪ್ರತಿನಿಧಿಯ ಅಭಿಪ್ರಾಯದಂತೆ, ಇತ್ತೀಚೆಗೆ ಸ್ವತಂತ್ರವಾದ ರಾಷ್ಟ್ರಗಳ ಉನ್ನತಿಗೆ ಭಾರತವು ರೂಪಿಸಿಕೊಂಡಿರುವಯೋಜನಾಮಾದರಿಯೇ ಸಮರ್ಪಕವಾಗಿದೆ. ಭಾರತದ ಯೋಜನೆಗೆ ಆಕಾರವನ್ನಿತ್ತ ಮಹನೀಯರನ್ನು ನೈಜೀರಿಯಕ್ಕೆ ಅವರು ಆಮಂತ್ರಿಸಿದ್ದಾರೆ. ಪ್ರಾಕೃತಿಕ ಸಂಪನ್ಮೂಲಗಳಿದ್ದರೂ ಆರ್ಥಿಕವಾಗಿ ಹಿಂದುಳಿದ ನೈಜೀರಿಯಾಕ್ಕೆ ಅಮೆರಿಕೆ—ರಶ್ಯಗಳ ಆರ್ಥಿಕಯೋಜನೆ ಅನುಪಯುಕ್ತ ಮತ್ತು ಅವ್ಯಾವಹಾರಿಕನೆಂಬುದರಿಂದ ಅವರು ಭಾರತದ ಅರ್ಥವ್ಯವಸ್ಥೆಯನ್ನು ಬಹುವಾಗಿ ಮೆಚ್ಚಿಕೊಂಡಿದ್ದಾರೆ. ಇದೇ ಅಭಿಪ್ರಾಯವು ಟ್ರಿನಿಡಾಡಿನ ಪ್ರತಿನಿಧಿಗಳದ್ದೂ ಆಗಿದೆ. ಆದರೆ, ನಮ್ಮ ಯೋಜನೆಗಳ ಬಗೆಗೆ ನಮ್ಮವರ ಪ್ರತಿಕ್ರಿಯೆಹೇಗಿದೆ?

ಸಂಕ್ಷಿಪ್ತ ಸುದ್ದಿಗಳು

ರಾಜೇಂದ್ರ ಪ್ರಸಾದ

ಉನ್ನತ ಸ್ಥಾನವು ಬಯಸಿದವರಿಗೆ ಸಿಗುವುದಿಲ್ಲ; ಬಯಸದವರನ್ನು ಅದು ಬೆಂಬಾಲಿಸಿ ಬರುತ್ತದೆ. ದೇಶರತ್ನ ಬಾಬು ರಾಜೇಂದ್ರ ಪ್ರಸಾದರು ರಾಷ್ಟ್ರಪತಿಸ್ಥಾನವನ್ನು ಅಪೇಕ್ಷಿಸಿರಲಿಲ್ಲ. ಆದರೂ ಒಂದಲ್ಲ ಎರಡು ಬಾರಿ ಅವರು ಆ ಗದ್ದುಗೆಯನ್ನು ಅಲಂಕರಿಸಿದರು. ಅವರು ಇಚ್ಛೆಪಡುವುದಾದರೆ ಮುಂದಿನ ಐದು ವರ್ಷಗಳ ಕಾಲವೂ ಅವರು ಆ ಸ್ಥಾನವನ್ನು ಪಡೆಯಬಲ್ಲರು. ಈ ಸಲ ಅವರು ನಿವೃತ್ತರಾಗುವುದು ಖಂಡಿತವೆಂಬುದರಿಂದ ಅವರ ಮುಂದಿನ ಜೀವನದ ಬಗ್ಗೆ ಊಹಾಮೋಹೆ ನಡೆಯ ತೊಡಗಿದೆ. ೧೯೨೫ರಿಂದ ೪೬ರ ವರೆಗೆ ಇದ್ದು ನಲಿದಾಡಿದ ಪಾಟ್ನದ ಸದಾಶ್ವತ ಆಶ್ರಮದಲ್ಲಿ ಉಳಿದು ಸರ್ವೋದಯ ಕಾರ್ಯದಲ್ಲಿ ನಿಮಗ್ನರಾಗುವರು ಎಂಬ ಸುದ್ದಿ ಸಂಭವನೀಯವೂ ಆಗಬಹುದು.

ಪ್ರಧಾನಿ ನೆಹರು

ಭಾರತದಲ್ಲಿ ಪ್ರಧಾನ ಮಂತ್ರಿ ನೆಹರು ಮಾತಿಗೆ ಪ್ರತಿ ಹೇಳುವವರು ಒಂದು ಕಾಲದಲ್ಲಿ ಇರಲಿಲ್ಲವೆಂದರೂ ಸಲ್ಲುವುದು. ಆದರೆ, ಈಗೀಗ ಅವರ ಅಭಿಪ್ರಾಯಗಳಿಗೆ ಅಲ್ಲಲ್ಲಿ ಸಾರ್ಥಿಗಳ ಕುಹಕ ನುಡಿಗಳು ಏಳುತ್ತಿವೆ. ಅಸಾಮದ ಗುಡ್ಡಗಾಡಿನ ಭಾಗವನ್ನು ಪ್ರತ್ಯೇಕಿಸಿ ಆಗ್ನೇಯ ಗಡಿನಾಡು ಎಂಬ ಹೊಸ ರಾಜ್ಯದ ಬೇಡಿಕೆಯನ್ನು ನೆಹರು ಬದಿಗಿರಿಸಿ, ಅಸಾಮ ರಾಜ್ಯದಡಿಯಲ್ಲಿಯೇ ಹೊಸ ಆಡಳಿತ ವ್ಯವಸ್ಥೆಯನ್ನು ನಡೆಸುವ ಸೂಚನೆಯನ್ನು ಮುಂದಿಟ್ಟಿದ್ದರು, ಆದರೆ, ಆ ಗುಡ್ಡಗಾಡಿನ ಜನತೆಯ ನಾಯಕರು ಈ ಕೊಡುಗೆಯನ್ನು ತಿರಸ್ಕರಿಸಿದ್ದಾರೆ. ಅಸಾಮಿ ಭಾಷೆಯನ್ನು ತಮ್ಮ ಮೇಲೆ ಹೇರಿಸಲಾಗುವುದೆಂಬ ಭೀತಿಯೊಂದೇ ಅವರ ಈ ಕೃತ್ಯಕ್ಕೆ ಕಾರಣ. ತಲೆಯ ಮೇಲೆ ಸವಾರಿ ಮಾಡುವ ಈ ವಿಭ್ರಮ ಪಿಶಾಚಿಯನ್ನು ನೆಹರು ಓಡಿಸುವಲ್ಲಿ ಸಮರ್ಥರಾಗಾರೆ?

ಡಾ. ಪಾವಟೆ

ಕರ್ನಾಟಕ ವಿಶ್ವವಿದ್ಯಾನಿಲಯದ ಉಪಕುಲಪತಿ ಡಿ. ಸಿ. ಪಾವಟೆಯವರು ಕರ್ನಾಟಕಕ್ಕೆ ಮಾತ್ರವಲ್ಲ ಭಾರತಕ್ಕೇನೇ ತಿಲಕಪ್ರಾಯರು. ವಿಶ್ವವಿದ್ಯಾಲಯಗಳಲ್ಲಿ ವಶೀಲಿ, ಲಂಚ ಸ್ವೀಕಾರ ಮೊದಲಾದ ದುರ್ವರ್ತನೆಗಳನ್ನು ತಾನು ಸಹಿಸುವುದಿಲ್ಲವೆಂದೂ ವಿಶ್ವವಿದ್ಯಾಲಯದ ಗೌರವವನ್ನು ಉಳಿಸಿಕೊಳ್ಳುವುದಕ್ಕಾಗಿ ತನ್ನ ಹಿತಾಸಕ್ತಿಯನ್ನಾದರೂ ಕಡೆಗಣಿಸಿ ಅವನ್ನು ಹತ್ತಿಕ್ಕಲು ಪ್ರಯತ್ನಿಸುವೆನೆಂದೂ ಅವರು ಘೋಷಿಸಿದರು. ಪೂರ್ವ ವೃತ್ತಿಪರ ಶಿಕ್ಷಣದ ವರ್ಗಗಳನ್ನು ವೃತ್ತಿಪರ ಕಾಲೇಜುಗಳಲ್ಲಿಯೇ ತೆರೆದುದರಿಂದ ಸಾಮಾನ್ಯ ಕಾಲೇಜುಗಳಲ್ಲಿ ಪದವೀವರ್ಗಗಳ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗುವುದರಿಂದ ಅದನ್ನು ವಿರೋಧಿಸಿದರು. ಈ ವಿರೋಧವು ಸಾಭಿಪ್ರಾಯವಿರುವುದರಿಂದ ಶಿಕ್ಷಣ ಕ್ಷೇತ್ರ ತಜ್ಞರು ವಿಚಾರಿಸಬಹುದಾಗಿದೆ.

ಚೆನ್ನಬಸಪ್ಪ

ಮೈಸೂರಿನ ಗೃಹಮಂತ್ರಿ ಚೆನ್ನಬಸಪ್ಪನವರು ಉತ್ತಮ ವ್ಯಕ್ತಿತ್ವವುಳ್ಳವರು; ಪಾವನಪ್ರತಿಬಂಧಕಾಯದೆಯ ಅಸಫಲತೆಯನ್ನು ಕಂಡು. ಅದರ ಬಗ್ಗೆ ನಾಲ್ಕೂ ನಿಟ್ಟುಗಳಿಂದ ಟೀಕೆಯ ಮಳೆ ಸುರಿದುದನ್ನು ಕೇಳಿನೊಂದವರು ಎಂತಲೇ ಈಗೀಗ ಸದಾ ಸಂಚಾರಿ ಮಂತ್ರಿವರ್ಯರಾಗಿ ಬಿಟ್ಟಿದ್ದಾರೆ. ಅವರು ಹೋದಲ್ಲಿ ಬಂದಲ್ಲಿ ಮದ್ಯದ ಪತ್ತೆಯಾಗ ತೊಡಗಿದೆ. ಈ ಅಕ್ರಮ ಮದ್ಯ ನಿಷೇಧವಾಗಿ ತಯಾರಿಸಿದ್ದೇ ಆಥವಾ ಮಂತ್ರಿಗಳನ್ನು ತೃಪ್ತರಾಗಿಸಲು ತಯಾರಿಸಿ ತಂದುದೇ ಇನ್ನೂ ಸರಿಯಾಗಿ ತಿಳಿದಿಲ್ಲ. ಆದರೂ ಗೃಹ ಖಾತೆಯು ಹಿಂದಿಗಿಂತ ಇಂದು ಚೇತನಪೂರ್ಣವಾಗಿ ಈ ಬಗ್ಗೆ ಲಕ್ಷ್ಯ ಹರಿಸುತ್ತಿದೆ ಎಂಬುದರಿಂದ ಚೆನ್ನಬಸಪ್ಪನವರ ಕಾರ್ಯಕ್ರಮ ವೆಚ್ಚ ಬರುವಂತಿದ್ದರೂ ಸ್ತುತ್ಯಾರ್ಹವೆನ್ನುವವರಿಗೆ ಕಡಿಮೆಯಿಲ್ಲ.

ನುಕ್ರೂಮಾ

ಘಾನಾದ ಅಧ್ಯಕ್ಷ ಕ್ವಾಮೇನುಕ್ರೂಮಾ ಅಫ್ರಿಕನ್ ಒಕ್ಕೂಟದ ಸಾಧನೆಯಲ್ಲಿ ಜಯಶಾಲಿಯಾಗಿ ಆಫ್ರೇಸ್ಯದ ನಾಯಕ ಮಣಿಗಳ ಸಾಲಿನಲ್ಲಿ ಅಗ್ರಗಣ್ಯರಾದರು. ಗಿನಿ, ಮಾಲಿ ಮತ್ತು ಘಾನಾಗಳ ಈ ಒಕ್ಕೂಟವು ಪ್ರತ್ಯೇಕ ರಾಷ್ಟ್ರಗಳ ಸಾರ್ವಭೌಮತೆಗೆ ಭಂಗತರದೆ ಸಾಮೂಹಿಕ ರಕ್ಷಣಾ ವ್ಯವಸ್ಥೆಯೇ ಮೊದಲಾದ ಕೆಲವೊಂದು ನಿಯಮಗಳನ್ನು ಪಾಲಿಸಲಿದೆ.

(೬ನೇ ಪುಟಕ್ಕೆ)

ಅಲ್ಲಲ್ಲಿಯ ಸುದ್ದಿಸಾರ

ಕೃಷಿ ಬಂಧುಗಳಿಗೆ ಸರಕಾರದಿಂದ ದೊರೆಯುವ ಸಹಾಯ— ಅಧಿಕ ಆಹಾರ ಉತ್ಪಾದನೆಗೆ ಸದ್ಯಾಯ ಆಗುವರೆ ಕೈಯಿಂದ ಬೆಲಾಯಿಸುವ ಡಸ್ಟರ್ ಮತ್ತು ಸ್ಪ್ರೇಯರ್‌ಗಳನ್ನು ಕೇಂದ್ರ ಮತ್ತು ರಾಜ್ಯ ಸರಕಾರವು ಕೃಷಿಕರಿಗೆ ಅರ್ಧ ಕ್ರಯದಲ್ಲಿ ಒದಗಿಸುವ ಒಂದು ಹುಕುಂ ಜ್ಯಾರಿಗೆ ಬಂದಿದೆ.

ನಮ್ಮ ಕೃಷಿಕ ಬಂಧುಗಳು ಕೂಡಲೇ ಆಯಾಯ ಕೃಷಿ ವಿಸ್ತರಣಾಧಿಕಾರಿಗಳಿಗೆ ಅರ್ಜಿ ಮಾಡಿ ಈ ಸೌಲಭ್ಯವನ್ನು ಪಡೆದುಕೊಳ್ಳಬೇಕೆಂತ ಜಿಲ್ಲಾ ಕೃಷಿ ಸಂಘದ ಅಧ್ಯಕ್ಷರಾದ ಶ್ರೀ ಸಿ. ಎಸ್. ತಿಮ್ಮಪ್ಪ ಶೆಟ್ಟಿ ತಿಳಿಸುತ್ತಾರೆ.

ವಿದಾಯ ಸತ್ಕಾರ— ಮಂಗಳೂರು ನಗರ ಸಭೆಯ ಕಮಿಶನರಾಗಿದ್ದ ಶ್ರೀ ಟಿ. ಹರಿಶ್ಚಂದ್ರ ರಾಯರು ಇದೇ ಜುಲಾಯಿಯಿಂದ ನಿವೃತ್ತರಾದ ಪ್ರಯುಕ್ತ ಕಳೆದ ತಾ. 30ರಂದು ನಗರ ಸಭಾಪತಿ ಶ್ರೀ ಮಚೇಲ್ ಶ್ರೀನಿವಾಸ ನಾಯ್ಕರು ವಿದಾಯ ಸತ್ಕಾರ ಸಮಾರಂಭವೊಂದನ್ನು ಏರ್ಪಡಿಸಿದ್ದರು. ಶ್ರೀ ಹರಿಶ್ಚಂದ್ರರಾಯರು ಮಂಗಳೂರಲ್ಲಿಯೇ ನಗರ ಸಭೆಯ ಜೀವನವನ್ನು ಆರಂಭಿಸಿ ಅದನ್ನು ಇಲ್ಲಿಯೇ ಮುಕ್ತಾಯಗೊಳಿಸಿದ್ದು ಮಹತ್ವವಾದುದೆಂದೂ ಅವರು ಕಮಿಶನರಾಗಿ ಉಡುಪಿ, ಕೊಚ್ಚಿ, ತಲಚೇರಿ, ಮಂಗಳೂರು ಮೊದಲಾದ ಕಡೆಗಳಲ್ಲಿ 35 ವರ್ಷಗಳ ಅವಿರತ ಸೇವೆಯನ್ನು ನಗರ ಸಭೆಗಳಿಗೆ ಸಲ್ಲಿಸಿರುವರೆಂದೂ ಮಂಗಳೂರು ನಗರ ಸಭೆಯ ಕಮಿಶನರಾಗಿ 5 ವರ್ಷ ದಕ್ಷ ಕೆಲಸ ಮಾಡಿರುವರೆಂದೂ ತಮ್ಮ 35 ವರ್ಷಗಳ ಸೇವಾವಧಿಯಲ್ಲಿ ಅವರು ಕೇವಲ 7 ತಿಂಗಳುಗಳ ರಜೆ ಪಡೆಕೊಂಡಿರುವುದು ಎತ್ತಿ ಹೇಳಿ ತಕ್ಕ ವಿಚಾರವೆಂದೂ ಅವರು ಮನಃಪೂರ್ವಕವಾಗಿ ಸಮರ್ಥ ಸೇವೆ ಸಲ್ಲಿಸಿ ಜನಾನುರಾಗ ಗಳಿಸಿರುವರೆಂದೂ ಅವರ ಉತ್ಸಾಹ ಪರಿಶ್ರಮ ಪರಿಪಕ್ವ ಅನುಭವಗಳಿಂದಾಗಿ ಇಲ್ಲಿ ಅನೇಕ ಗಣ್ಯ ಕಾರ್ಯಗಳು ನಡೆದಿವೆಯೆಂದೂ ಮುಂತಾಗಿ ಶ್ರೀ ನಾಯ್ಕರು ತಮ್ಮ ಭಾಷಣದಲ್ಲಿ ಅವರ ಮುಂದಿನ ಜೀವನ ಸುಗಮವಾಗಲೆಂದು ಹಾರೈಸಿದರು. ಕೌನ್ಸಿಲರುಗಳಾದ ಡಾ. ಎಸ್. ಸಿ. ಶಾಸ್ತ್ರಿ, ಶ್ರೀಗಳಾದ ಜೆ. ಬಿ. ಮಚ್ಚಾದೊ, ಎಸ್. ಜಿ. ಸಾಲಿಯನ್, ಕೆ. ವಿ. ಕಾಮತ್, ಜಿ ಸೋಮಶೇಖರ್ ರಾವ್ ಮೊದಲಾದವರು ಶ್ರೀ ಹರಿಶ್ಚಂದ್ರ ರಾಯರಿಗೆ ಕಾರ್ಯಕುಶಲತೆಯ ಕುರಿತು ಭಾಷಣವಿತ್ತರು. ಶ್ರೀ ಹರಿಶ್ಚಂದ್ರ ರಾಯರು ತಮಗೆ ಕೊಟ್ಟ ಸಹಕಾರ ಮತ್ತು ಗೌರವಗಳಿಗೆ ಕೃತಜ್ಞತೆಗಳನ್ನರ್ಪಿಸಿ ಮಾತಾಡಿದರು.

ಮಲೆಯಾಳಿಗೆ "ಮರಳಿ ಮಣ್ಣಿಗೆ"— ಶ್ರೀ ಕಾರಂತರ ಪ್ರಸಿದ್ಧ ಕನ್ನಡ ಕಾದಂಬರಿ 'ಮರಳಿ ಮಣ್ಣಿಗೆ' ಪುಸ್ತಕದ ಮಲೆಯಾಳಂ ಅನುವಾದವನ್ನು ಮಾಡಲಿಕ್ಕಾಗಿ ಮಲೇಯಾಳಂ ಭಾಷೆಯ ಮಹಾಕವಿ ವಳ್ಳತೋಲ್‌ರವರ ಹೆಸರಾಂತ ಕವಿತೆ 'ಮಗ್ದಲನ ಮರಿಯಂ"ವನ್ನು ಕನ್ನಡಿಸಲಿಕ್ಕಾಗಿ ಕಾಸರಗೋಡಿನ ಸಾಹಿತಿಗಳಾದ ಜಿ. ಟಿ. ಉಬೈದ್ ಸಾಹೇಬರನ್ನು ಕೇರಳದ ಕೇಂದ್ರ ಸಾಹಿತ್ಯ ಅಕಾಡೆಮಿಯವರು ನೇಮಿಸಿರುವರೆಂದು ತಿಳಿದು ಬರುತ್ತದೆ.

ಶಿರ್ವದಲ್ಲಿ ರವೀಂದ್ರ ಶತಮಾನೋತ್ಸವ— ವಿಶ್ವಕವಿ ರವೀಂದ್ರನಾಥ ಟಾಗೋರರ ಶತಮಾನೋತ್ಸವವು ಕಳೆದ ತಾ. 29ರಂದು ಶಿರ್ವ ಪಂಚಾಯತ್‌ನ ನೇತೃತ್ವದಲ್ಲಿ ಶ್ರೀ ಕೆ. ಪಂಕಟ್ರಮಣ ಶಾಮರ್ತ್‌ರವರ ಅಧ್ಯಕ್ಷತೆಯಲ್ಲಿ ಜರಗಿತು. ಉಡುಪಿ ತಾಲೂಕು ಬೋರ್ಡಿನ ಉಪಾಧ್ಯಕ್ಷ ಡಾ| ಯು. ಕೆ. ಆಚಾರ್ಯರು ಕವಿ ರವೀಂದ್ರರ ಭಾವ ಚಿತ್ರವನ್ನು ಅನಾವರಣಗೈದರು.

ಆರಂಭದಲ್ಲಿ ಪಂಚಾಯತ್ ಕಾರ್ಯದರ್ಶಿ ಶ್ರೀ ರಾಮರಾಯರು ಸ್ವಾಗತಿಸಿದರು. ಶ್ರೀಗಳಾದ ಕೆ. ಎಂ. ಹೊಳ್ಳ, ಶಂಕರ ಶೆಟ್ಟರೇ ಮೊದಲಾದವರು ಸಂದರ್ಭೋಚಿತ ಭಾಷಣವಿತ್ತರು. ಗ್ರಾಮಸೇವಕ ಶ್ರೀ ಆರ್. ಎನ್. ಚಿಪ್ಳುಂಕರರು ಧನ್ಯವಾದ ಅರ್ಪಿಸಿದರು.

ದಿ. ಕುದ್ಮುಲ್ ರಂಗರಾಯರ 102ನೇ ಜನ್ಮ ದಿನೋತ್ಸವವು— ಕಳೆದ ತಾ.29ರಂದು ಮಂಗಳೂರಲ್ಲಿ ಕುದ್ಮುಲ್ ರಂಗರಾವ್ ನಗರದ ಸ್ವಾಮಿ ಈಶ್ವರಾನಂದ ಭಜನಾ ಮಂಡಳಿಯಲ್ಲಿ ವಿಧಾನ ಸಭಾ ಸದಸ್ಯರಾದ ಶ್ರೀ ಕೆ. ದೊಮ್ಮಪ್ಪನವರ ಅಧ್ಯಕ್ಷತೆಯಲ್ಲಿ ಜರಗಿತು. ವಿಧಾನ ಸಭಾ ಸದಸ್ಯ ಶ್ರೀ ಎಫ್. ಎಕ್ಸ್. ಡಿ. ಪಿಂಟೋರವರು ಕುದ್ಮುಲ್ ರಂಗರಾವ್ ವಿದ್ಯಾರ್ಥಿ ಸಂಘವನ್ನು ಉದ್ಘಾಟಿಸಿದರು. ಶ್ರೀಗಳಾದ ಎಂ. ರಾಜೀವ ಮತ್ತು ಪಿ. ಕಮಲಾಕ್ಷರವರು ಭಾಷಣ ಮಾಡಿದರು. ಆರಂಭದಲ್ಲಿ ಸಂಘದ ಅಧ್ಯಕ್ಷ ಶ್ರೀ ಡಿ. ಆನಂದನವರು ಸ್ವಾಗತಿಸಿದರು. ಕಾರ್ಯದರ್ಶಿ ಶ್ರೀ ಬಿ. ಎ. ಅಂಚನ್‌ರವರು ಧನ್ಯವಾದಗಳನ್ನರ್ಪಿಸಿದರು.

ಡಿಫ್ಟೀರಿಯಾ ನಿರೋಧಕ ಕಾರ್ಯ— ಮಂಗಳೂರು ನಗರ ಸಭಾ ಕ್ಷೇತ್ರದೊಳಗಿರುವ 21 ಶಾಲೆಗಳ 7225 ಮಕ್ಕಳಿಗೆ ಡಿಫ್ಟೀರಿಯಾ ಟಿಟೆನಸ್ ಮತ್ತು ನಾಯಿ ಕೆಮ್ಮು ಪ್ರತಿಬಂಧಕ ಇಂಜಕ್ಷನ್ ಕೊಡುವ ನಿರ್ಧಾರವಾಗಿರುವುದೆಂದು ಕಳೆದ ತಾ 26ರಂದು ಜರಗಿದ ಸತ್ರಿಕಾ ಗೋಷ್ಠಿಯಲ್ಲಿ ಮಂಗಳೂರು ಪೌರ ಸಭೆಯ ಆರೋಗ್ಯಾಧಿಕಾರಿ ಶ್ರೀ ಆರ್. ರಾಮರಾಯರು ತಿಳಿಸಿದರು. ಈ ಯೋಜನೆಯು ಅಗೋಸ್ತು 3ರಗಳ ಮೊದಲ ವಾರದಲ್ಲಿ ಸಾರ್ವಜನಿಕ ಭವನಗಳುವುದು 5 ಕೇಂದ್ರಗಳಲ್ಲಿ ಇಂಜಕ್ಷನ್ ಕೊಡಲಾಗುವುದು. ಈ ಕಾರ್ಯಕ್ರಮವು ವೈದ್ಯಕೀಯ ತಜ್ಞರ ನಾಯಕತ್ವದಲ್ಲಿ 5 ತಂಡಗಳಾಗಿ ಜರಗುವುದು. ಈ ಕಾರ್ಯಕ್ರಮದಲ್ಲಿ ಕಸ್ತೂರ್‌ಬಾ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಗಳೂ ಭಾಗವಹಿಸುವರು. ಎರಡು ವರ್ಷಗಳ ಹಿಂದೆ ರೂ 30,000 ವೆಚ್ಚದಲ್ಲಿ ಇಂತಹ ಇಂಜಕ್ಷನ್ ಕಾರ್ಯಕ್ರಮವನ್ನು ಕೈಕೊಂಡಾಗ 1943 ಮಕ್ಕಳು ಪ್ರಥಮ ಬಾರಿಯ ಇಂಜಕ್ಷನ್, 1135 ಮಕ್ಕಳು ದ್ವಿತೀಯ ಇಂಜಕ್ಷನ್ ಮತ್ತು 714 ಮಂದಿ ತೃತೀಯ ಇಂಜಕ್ಷನ್ ಪಡೆದಿದ್ದರು. ಶಾಲಾ ವಿದ್ಯಾರ್ಥಿಗಳಲ್ಲದೆ ಹೊರಗಿನ ಮಕ್ಕಳಿಗೂ ಇಂಜಕ್ಷನ್ ಕೊಡಲಾಗುವುದೆಂದೂ ಅವರು ತಿಳಿಯಪಡಿಸಿದರು.

ಕವಿ ಟಾಗೋರರ ಜಯಂತಿ— ಕೋಟೆ ಪಂಚಾಯತದ ಆಶ್ರಯದಲ್ಲಿ ಏರ್ಪಡಿಸಿದ ವಿಶ್ವಕವಿ ಡಾ| ರವೀಂದ್ರನಾಥ ಟಾಗೋರರ ಶತಮಾನೋತ್ಸವವು ಸ್ಥಳೀಯ ಸಮಾಜ ಮಂದಿರದಲ್ಲಿ ಶ್ರೀ ಕೋಟೆ ಬೀಡು ಭುಜಂಗ ಎಲ್. ಶೆಟ್ಟಿ, ಎಂ ಎ., ಇವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು. ಜಿಲ್ಲಾ ಕಾಂಗ್ರೆಸಿನ ಅಧ್ಯಕ್ಷ ಶ್ರೀ ಟಿ. ಎ. ಪೈಯವರು ರವೀಂದ್ರರ ಜೀವನ ಚರಿತ್ರೆಯ ಕುರಿತು ವಿಚಾರಪೂರ್ಣ ಭಾಷಣ ಮಾಡಿ ಕವಿವರರ ಭಾವಚಿತ್ರ ಅನಾವರಣಗೈದರು. ಶ್ರೀ ಕೆ. ಆರ್. ಅನಂತ ಸುರಾಣಿಕ, ಕನ್ನಡ ವಿದ್ವಾನ್ ಸಂಸ್ಕೃತ ಶಿರೋಮಣಿ ಇವರಿಂದ ವಿಶ್ವಕವಿಯ ಸಂಸ್ಕೃತಿಗೆ ಕುರಿತು ಅನುಭವಪೂರ್ಣ ಭಾಷಣವಾದ ಬಳಿಕ ಭಕ್ತರ ಪರವಾಗಿ ಶ್ರೀ ಕುಂಜಾಲು ಭುಜಂಗ ಶೆಟ್ಟರು ರಾಷ್ಟ್ರರತ್ನ ಅದ್ವಿತೀಯ ಪ್ರತಿಭೆ ಸಾತ್ವಿಕ ಜೀವನವನ್ನು ಹಾಡಿ ಹೊಗಳಿದರು. ಪೂಜ್ಯ ಕವಿವರ್ಯರ ಹುಟ್ಟು ಪ್ರತಿಭೆ—ವಿಶ್ವ ಸಾಹಾರ್ದ ಬಾಂಧವ್ಯ ಬೆಳೆಯಲು ಅವರು ಮಾಡಿದ ಸತತ ಪ್ರಯತ್ನಗಳ ಕುರಿತು ಅಧ್ಯಕ್ಷರು ಭಾವಪೂರ್ಣವಾಗಿ ಭಾಷಣ ಮಾಡಿದರು ಗಾನ, ನರ್ತನಾದಿ ಮನರಂಜನಾ ಕಾರ್ಯಕ್ರಮಗಳು ಜರಗಿ ಸಹಿತಿಂದಿಯ ವಿತರಣೆಯು ನಡೆಯಿತು. ನೃತ್ಯ ಕಲಾವಿದರಿಗೆ ಪಂಚಾಯತದ ವತಿಯಿಂದ ಅಧ್ಯಕ್ಷರು ರಜತ ಪದಕಗಳ ಬಹುಮಾನ ನಿತರಣೆ ಮಾಡಿದರು.

ಅಕ್ಕಿ ಸಂಕದ ಉದ್ಘಾಟನೆ— ಮಂಗಳೂರು ನಗರದ ಕೇಂದ್ರದಲ್ಲಿ ಸುಮಾರು 86,500 ರೂಪಾಯಿ ವೆಚ್ಚದಿಂದ ಸಾರ್ವಜನಿಕ ಕಾಮಗಾರಿ ಇಲಾಖೆಯವರಿಂದ ನೂತನವಾಗಿ ಕಟ್ಟಿಸಲ್ಪಟ್ಟ ಅಕ್ಕಿ ಸಂಕದ ಉದ್ಘಾಟನಾ ಸಮಾರಂಭವು ಇದೇ ತಾ. 3ರಂದು ಮಂಗಳೂರು ನಗರ ಸಭಾಧ್ಯಕ್ಷ ಶ್ರೀ ಮಚೇಲ್ ಶ್ರೀನಿವಾಸ ನಾಯ್ಕರಿಂದ ನೆರವೇರಿಸಲ್ಪಟ್ಟಿತು ಕುನ್ನೋಳಿ ಶ್ರೀ ಗೋವರ್ಧನಾಪ ದೇವಸ್ಥಾನದ ಸಮೀಪದ ಸಭಾ ಭವನದಲ್ಲಿ ಸಮಾರಂಭ ಜರಗಿದಾಗ ಇಂಜಿನಿಯರ್ ಶ್ರೀ ಡಬ್ಲ್ಯು. ಜಿ. ಎಸ್. ಸಲ್ದಾನರವರು ಸ್ವಾಗತಿಸಿ ಅಕ್ಕಿ ಸಂಕದ ರಚನೆಯ ಕುರಿತಾದ ವಿವರಗಳನ್ನಿತ್ತರು. ಉದ್ಘಾಟಕ ಶ್ರೀ ನಾಯ್ಕರು ಮಾತನಾಡುತ್ತಾ ಈ ಸಂಕವು ಕಿಕ್ಕಿರಿದಾಗಿ ರಚನೆಯಾಯಿದುದರಿಂದ ನಗರದ ಹೊಡ್ಡ ಕೊರತೆಯೊಂದು ನಿವಾರಣೆಯಾದಂತಾಯ್ತೆಂದರು. ಕಾಟ್ರಾಕ್ಟರ್. ಶ್ರೀ ಅಬ್ದುಲ್ ಖಾದರ್‌ರವರಿಗೆ ಹಾರವಿತ್ತೂ, ಈ ಕೆಲಸವನ್ನು ನೆರವೇರಿಸಿದ ಶ್ರೀ ಗೋಪಾಲನಿಗೆ ಬಹುಮಾನವಿತ್ತು ಗೌರವಿಸಲಾಯ್ತು. ಅಂತ್ಯದಲ್ಲಿ ಇಂಜಿನಿಯರ್ ಶ್ರೀ ಕೆ. ಸುಂದರ ನಾಯ್ಕರು ಕೃತಜ್ಞತೆಗಳನ್ನರ್ಪಿಸಿದರು.

ಎನ್. ಇ. ಎಸ್. ಬ್ಲೋಕಿನ ಉದ್ಘಾಟನೆ— ಇದೇ ತಾ. 3ನೇ ಸಂಜೆ ಮೈಸೂರು ಸರಕಾರದ ಗೃಹಮಂತ್ರಿ ಶ್ರೀ ಎಚ್. ಎಮ್. ಚೆನ್ನಬಸಪ್ಪನವರು ಹಿರಿಯಡ್ಕ ಬೋರ್ಡ್ ಹೈಸ್ಕೂಲಿನಲ್ಲಿ ಎನ್. ಇ. ಎಸ್. ಬ್ಲೋಕಿನ ಉದ್ಘಾಟನೆಯನ್ನು ನೆರವೇರಿಸಿದರು ಸಮಾರಂಭದ ಅಧ್ಯಕ್ಷತೆಯನ್ನು ಜಿಲ್ಲಾ ಕಾಂಗ್ರೆಸ್ಸಿನ ಅಧ್ಯಕ್ಷ ಶ್ರೀ ಟಿ. ಎ. ಪೈಗಳು ವಹಿಸಿದ್ದರು ಉಡುಪಿ ತಾಲೂಕು ಬೋರ್ಡಿನ ಅಧ್ಯಕ್ಷ ಶ್ರೀ ಎಸ್. ಮುದ್ದಣ್ಣಾಜರು ಸ್ವಾಗತಿಸುತ್ತಾ ಕಾಪು ಕೇಂದ್ರಕ್ಕೆ 80 ಗ್ರಾಮಗಳಿದ್ದು ಹಿಂದು ಲಕ್ಷ ಜನ ಸಂಖ್ಯೆ ಇದೆಯೆಂದೂ ಹಿರಿಯಡ್ಕ ಕೇಂದ್ರಕ್ಕೆ ಬರೇ 25 ಗ್ರಾಮಗಳಿದ್ದು 76,000 ಜನಸಂಖ್ಯೆ ಇರುವುದರಿಂದ ಮೂಡು ಮತ್ತು ಪಡು ತೋನ್ಸ ಗ್ರಾಮಗಳನ್ನು ಈ ಕೇಂದ್ರಕ್ಕೆ ಸೇರಿಸಬೇಕೆಂದೂ ಸಲಹೆಯಿತ್ತರು. ಹಿರಿಯಡ್ಕ ಪಂಚಾಯತಿನ ಪರವಾಗಿ ಅಧ್ಯಕ್ಷ ಶ್ರೀ ವಿ. ಗೋವಿಂದರಾಜ ಪೆಗ್ಡೆಯವರು ಮಂತ್ರಿಗಳಿಗೆ ಮಾನಪತ್ರವನ್ನು ಅರ್ಪಿಸಿದರು ತಾಲೂಕು ಬೋರ್ಡಿನ ಉಪಾಧ್ಯಕ್ಷ ಡಾ. ಕುಪ್ಪಣ್ಣ ಆಚಾರ್ಯರು ಸಂದೇಶಗಳನ್ನು ಓದಿದರು. ತಾಲೂಕು ಬೋರ್ಡ್ ಸದಸ್ಯ ಶ್ರೀ ದೇವೇಂದ್ರ ಪೆಜತ್ತಾಯರು ಧನ್ಯವಾದಗಳನ್ನರ್ಪಿಸಿದರು.

ಎಸ್. ಆರ್. ಎಸ್. ಹೋಮ್, ಕುಂದಾಪುರ—ಸ್ಥಳೀಯ ಎಸ್. ಆರ್. ಎಸ್. ಹೋಮ್ (ಬಂಟ್ಸ್ ಹೋಸ್ಟೇಲ್)ನಲ್ಲಿ, 1961ನೇ ಮಾರ್ಚ ಎಸ್ಸೆಲ್ ತಿಂಗಳುಗಳಲ್ಲಿ ಜರಗಿದ ವರ್ಷಾವಧಿ ಮತ್ತು ಎಸ್. ಎಸ್. ಎಲ್. ಸಿ. ಪರೀಕ್ಷೆಗಳಲ್ಲಿ ಕುಳಿತ ಎಲ್ಲಾ ವಿದ್ಯಾರ್ಥಿಗಳು ತೇರ್ಗಡೆಯಾಗಿ ಭವನಕ್ಕೆ ಯಶಸ್ಸನ್ನು ತಂದಿರುತ್ತಾರೆ.

ಮಂಗಳೂರು ಬಂದರ ರಚನೆ— ಮಂಗಳೂರಿಗೆ ಸರ್ವಋತು ಬಂದರವನ್ನು ರಚಿಸುವ ಕುರಿತು ನಮ್ಮ ಮಾನ್ಯ ಮಂತ್ರಿಯವರು ರೂ. 12.7 ಕೋಟಿ ವ್ಯಯದಲ್ಲಿ ಇದನ್ನು ರಚಿಸಲಾಗುವುದೆಂದೂ ಈ ಬಗ್ಗೆ ನಡೆದ ಯಾವತ್ತೂ ಸಮೀಕ್ಷೆಗಳು ಉತ್ತೇಜನಕರವಾಗಿದ್ದು, ಕೃಷಿಯ ಯೋಜನೆಯಲ್ಲಿ ಕೇಂದ್ರದಿಂದ ಈ ಬಂದರ ರಚನೆಗೆ ದೊರೆಯುವ ಮೊದಲಗನ್ನು ಕೇಳಿ ಕೊಂಡು ಸರಕಾರದ ಸೇವೆ ಒತ್ತಾಯಿಸಾಕಲಾಗಿದೆಯೆಂದೂ, ಬಂದರ ರಚನೆಯಲ್ಲಿ ಮೈಸೂರು ಸರಕಾರವು ಕೇಂದ್ರದಪಾಲುದಾರನಾಗಿ ಕಾರ್ಯ ನಿರ್ವಹಿಸುವೆನೆಂದು ತಿಳಿಸಿರುವುದಾಗಿಯೂ ವಿವರಿಸಿದ್ದಾರೆ.

ಉಡುಪಿ ಇನ್‌ಕೂರೆನ್ಸ್ ಇನ್‌ಸ್ಟಿಟ್ಯೂಟಿನ ಉದ್ಘಾಟನೆ—ತಾ. 30ರಂದು ಸಂಜೆ ಮೈಸೂರಿನ ಗೃಹಮಂತ್ರಿ ಶ್ರೀ ಎಚ್. ಎಂ. ಚೆನ್ನಬಸಪ್ಪನವರು ಜೀವನಪೂರ್ಣ ಕೋರ್ಪೊರೇಶನ್ನಿನ ಉಡುಪಿ ವಿಭಾಗ ಕಾರ್ಯಾಲಯದಲ್ಲಿ ಉಡುಪಿ ಇನ್‌ಶೂರೆನ್ಸ್ ಇನ್‌ಸ್ಟಿಟ್ಯೂಟನ್ನು ಉದ್ಘಾಟಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ ಕೋರ್ಪೊರೇಶನ್ನಿನ ಸೆಕ್ರೆಟರಿ ಶ್ರೀ ಜನರ್ಲ್ ಮೆನೇಜರ್ ಶ್ರೀ ಟಿ. ಆರ್. ಎ. ಪೈಗಳು ಇನ್‌ಸ್ಟಿಟ್ಯೂಟಿನ ಉದ್ದೇಶಗಳನ್ನು ವಿವರಿಸಿದ ತರುವಾಯ ಮಾನ್ಯ ಸಚಿವರು ಭಾಷಣ ಮಾಡುತ್ತಾ, ಈ ಇನ್‌ಸ್ಟಿಟ್ಯೂಟಿನಿಂದ ಜೀವನಪೂರ್ಣ ನೌಕರರು ಜೀವ ವಿಮೆಯ ಬಗ್ಗೆ ಹೆಚ್ಚಿನ ತಿಳಿವಳಿಕೆಯನ್ನು ಹೊಂದಿ ಆತ್ಯಧಿಕ ಕಾರ್ಯದಕ್ಷತೆಯಿಂದ ಕೂಡಿದವರಾಗುವರೆಂದು ಆಶಿಸಿದರು. ಗೌರವ ಕಾರ್ಯದರ್ಶಿ ಶ್ರೀ ಬಿ. ಸುಬ್ಬರಾಯರು ಧನ್ಯವಾದವನ್ನರ್ಪಿಸಿದ ಬಳಿಕ ಸಮಾರಂಭ ಕೊನೆಗೊಂಡಿತು.

ಉಡುಪಿಗೆ ಸಬ್‌ಕೋರ್ಟು— ಮೈಸೂರು ಸರಕಾರದಿಂದ ಮಂಜೂರಾಗಿರುವುದಾಗಿ ತಿಳಿದು ಬರುತ್ತದೆ ಈ ಕೂಡಲು ಪಲವು ವರ್ಷಗಳಿಂದ ಸತತ ಪ್ರಯತ್ನ ನಡೆಯುತ್ತಿದ್ದು ಇದೀಗ ಫಲಕಾರಿಯಾಗುವಂತಾಗಿದೆ.



ಕೆನಿಯೊದ ಕಾನು ಪಕ್ಷದ ಶ್ರೀ ಜೋಂಪ್ಪೋಯೊರವರನ್ನು ಶ್ರೀ ಜೋಕಿಂ ಅಲ್ವರು ಭೆಟ್ಟಿಯಾದಾಗ ತೆಗೆದ ಚಿತ್ರ. ಶ್ರೀ ಅಲ್ವರು ಕೆನಿಯದ ಗವರ್ನರ ಜನರಲ್ಲರನ್ನು ಭೆಟ್ಟಿಯಾಗಿದ್ದರು. ರಾಷ್ಟ್ರೀಯ ನಾಯಕ ಶ್ರೀ ಜೊಮೊ ಕೆನ್ಯಟ್ಟರನ್ನು ಕಾಣಲು ಅವರಿಗೆ ಅಸಾಧ್ಯವಾಯಿತಾದರೂ ಅವರ ಮಗಳು ಮಾರ್ಗರೆಟು ಕೆನ್ಯಟ್ಟರನ್ನು ಕಂಡರು.

ಕಾಂಗೋ ಒಕ್ಕೂಟವು ಬೆರುಕಿನಿಂದ ಕಂಗೆಟ್ಟಿರುವಾಗ, ಅದರ ಸಮೀಪದಲ್ಲಿಯೇ ಈ ಹೊಸ ವ್ಯವಸ್ಥೆಯು ರೂಪುಗೊಂಡುದು ಆಶ್ಚರ್ಯವೆಂಬಂತಿದ್ದರೂ ಸುಕ್ರಾಮರ ಉನ್ನತ ವ್ಯಕ್ತಿತ್ವಕ್ಕೆ ಎಲ್ಲವನ್ನೂ ಸಾಧ್ಯವೆನಿಸುವ ಶಕ್ತಿಯಿದೆಯೆಂಬುದನ್ನು ತೋರಿಸುತ್ತದೆ. ದ. ಆಫ್ರಿಕೆಯನ್ನು ಕಾಮನ್‌ವೆಲ್ತಿನಿಂದ ಹೊರತಳ್ಳ ಬೇಕಂಬ ಪ್ರಸ್ತಾವನ್ನು ಮುಂದಿಟ್ಟು ಸಫಲರಾದವರೂ ಇವರೇ.

ಹಕಮಾರಿ ಶೋಂಬೆ

ಕಟಂಗಾದ ಸ್ವಾತಂತ್ರ್ಯ ಮತ್ತು ಕಾಂಗೋ ಪ್ರಧಾನಿ ಪೆಟ್ರಿಸ್ ಲುಮುಂಬಾರ ಹತ್ಯೆಗಳಿಂದ ಅಂತಾರಾಷ್ಟ್ರೀಯ ವ್ಯಕ್ತಿಗಳ ಸ್ಥಾನಗಳಿಸಿದ ಶೋಂಬೆ ಇನ್ನೂ ಕಾಂಗೋವಿನ ಏಕತೆಗೆ ಕಂಟಕವಾಗಿಯೇ ಇದ್ದಾರೆ. ಕಾಂಗೋ ಪಾರ್ಲಿಮೆಂಟು ನೇರುವುದಕ್ಕೆ ಮೊದಲು ಕಾಂಗೋ ನಾಯಕರ ಸಭೆಯೊಂದು ಕಾಂಗೋವಿನ ಹೊರಗೆ ನಡೆಯಬೇಕೆಂದು ಅವರು ಆಗ್ರಹಪಡಿಸಿದ್ದಾರೆ. ಕಾಂಗೋವು ಸ್ವತಂತ್ರವಾಗಿ ಒಂದು ವರ್ಷ ಸಂದಿತಾದರೂ ಸ್ವಾತಂತ್ರ್ಯ ಪಡೆದ ಬಳಿಕದ ಒಂದು ವರ್ಷದಲ್ಲಿ ಪ್ರಗತಿಹೊಂದುವ ಬದಲಿಗೆ ಹಿಂದಿಗಿಂತಲೂ ಮಿಗಿಲಾಗಿ ಹಿಂದುಳಿದಿರುವುದರಿಂದ ಇದಕ್ಕೆ ಶ್ರೀ ಶೋಂಬೆಯೊಬ್ಬರೇ ಕಾರಣರು. ಶೋಂಬೆಯವರು ಹರ ಬಿಡುವ ವರೆಗೆ ಕಾಂಗೋವಿನಲ್ಲಿ ಶಾಂತಿ ಸ್ಥಾಪನೆ ಸಾಧ್ಯವಿಲ್ಲ ಎಂದೀಗ ಎಲ್ಲರೂ ಬಲ್ಲವರಾಗಿದ್ದಾರೆ.

ಅಭಿಪ್ರಾಯ

ಭಾರತಕ್ಕೆ ಅಪೂರ್ವ ಗೌರವ ಪ್ರದಾನ

ಸಂಯುಕ್ತ ರಾಷ್ಟ್ರ ಸಂಘದ ಕಾರ್ಯಾಲಯ ಪ್ರಮುಖರಾಗಿ ಭಾರತದ ಶ್ರೀ ಚಕ್ರವರ್ತಿ ವಿ. ನರಸಿಂಹನರ ನೇಮಕವಾಯ್ತು. ಇದರಿಂದ ಭಾರತದ ಮಹತ್ವ ವಿಶ್ವದಲ್ಲಿಯೇ ಹೆಚ್ಚುತ್ತಿದೆಯೆಂದು ತಿಳಿಯಬಹುದು.

ಸಂಯುಕ್ತ ರಾಷ್ಟ್ರ ಸಂಘವನ್ನು ವಿಶ್ವ ಜನಮತದ ದರ್ಪಣವೆಂದು ನಾವು ಒಪ್ಪುವುದಾದರೆ, ಅಲ್ಲಿ ಭಾರತದ ಬಗ್ಗೆ ಇರುವ ಗೌರವಾದರಗಳು ಬೆಳೆಯುತ್ತಿ ಬರುತ್ತಿರುವುದು ನಿಶ್ಚಿತವಲ್ಲಿಯೇ ಭಾರತಕ್ಕೆ ಮಹತ್ವದ ಸ್ಥಾನವಿದೆಯೆಂಬುದರ ದ್ಯೋತಕವೆನ್ನಲೇಬೇಕಾಗುತ್ತದೆ. ಸಂ. ರಾ. ಸಂಘದ ಕಾರ್ಯಾಲಯ ಪ್ರಮುಖ ಪದವಿಗೆ ಭಾರತದ ಶ್ರೀ ಸಿ. ಪಿ. ನರಸಿಂಹನ್‌ರವರ ನೇಮಕವಾದುದು ಇದಕ್ಕೆ ಜ್ವಲಂತ ನಿದರ್ಶನ. ಪ್ರಧಾನ ಕಾರ್ಯದರ್ಶಿ ಡಾಗ್ ಹೆಮ್ಮರ್‌ಶೀಲ್ಡರೂ ವಿಶ್ವ ಜನಮತವನ್ನು ಗಮನಿಸಿಯೇ ಈ ನಿಯುಕ್ತಿಯನ್ನು ಮಾಡಿದ್ದಾರೆಂಬುದೂ ಸ್ವಯಂಸಿದ್ಧ.

೧೯೫೪ರಲ್ಲಿ ಶ್ರೀ ವಿ. ಕೆ. ಕೃಷ್ಣ ಮೆನನ್ ಮತ್ತು ಅನಂತರ ಪ್ರಧಾನಿ ನೆಹರುರವರು ಸಂಯುಕ್ತ ರಾಷ್ಟ್ರ ಸಂಘದ ಉಚ್ಚ ಪದವಿಗಳಲ್ಲಿ ಏಶ್ಯನ್ ವ್ಯಕ್ತಿಗಳನ್ನು ನಿಯುಕ್ತಿಗೊಳಿಸಬೇಕು ಎಂಬುದನ್ನು ಪ್ರತಿಪಾದಿಸಿದ್ದರು. ಆಗ, ಇದಕ್ಕೆ ಉತ್ತರ ರೂಪವಾಗಿ ಜೇಳಕೆ ನೀಡುತ್ತ ಪ್ರಧಾನ ಕಾರ್ಯದರ್ಶಿಯವರು ಜನಸಂಖ್ಯೆಗನುಸಾರವಾಗಿ ಪದವಿಯನ್ನು ಹೆಂಚುವಾಗ, ಸಂಯುಕ್ತ ರಾಷ್ಟ್ರ ಸಂಘಕ್ಕೆ ಯಾವ ರಾಷ್ಟ್ರದಿಂದ ಎಷ್ಟು ಸಹಾಯ ಧನ ದೊರೆತಿದೆಯೆಂಬುದನ್ನೂ ಗಮನಿಸ ಬೇಕಾಗುವುದೆಂದು ತಿಳಿದಿದ್ದರು. ಕಳೆದ ಏಳು ವರ್ಷಗಳಲ್ಲಿ ಭಾರತದ ಜನಸಂಖ್ಯೆಯ ಮತ್ತು ಅದು ನೀಡುವ ಸಹಾಯ ಧನದ ದಾವಾರಯದಲ್ಲಿ ಯಾವುದೇ ಹೆಚ್ಚಿನ ಪರಿವರ್ತನೆಯೊಗಿಲ್ಲವೆಂಬುದೂ ಸುವಿದಿತವಿದೆ. ಆದುದರಿಂದ ವಿಶ್ವದಲ್ಲಿ ಭಾರತವು ಮಹತ್ವಪೂರ್ಣ ಸ್ಥಾನಗಳಿಸುತ್ತಿರುವುದಾದರೆ, ಅದು ಈ ಎರಡೂ ಕಾರಣಗಳಿಂದಲ್ಲ. ಸಂಯುಕ್ತರಾಷ್ಟ್ರ ಸಂಘದ ಬೇರೆ ಬೇರೆ ಸಭೆಗಳಲ್ಲಿ ಭಾರತವು ಪಾಲಿಸಿಕೊಂಡು ಬಂದಿರುವ ನೀತಿಯಿಂದಲೇ, ಅದು ಜಗತ್ತಿನ ಹೆಚ್ಚಿನ ರಾಷ್ಟ್ರಗಳ ವಿಶ್ವಾಸವನ್ನು ಪಡೆದಿದೆ; ಈ ವಿಶ್ವಾಸಕ್ಕೆ ಜೊತೆ ಸಲ್ಲಲೇ ಭಾರತೀಯ ನರಸಿಂಹನ್ನರ ಸದ್ಯದ ನಿಯುಕ್ತಿ.

ಶ್ರೀ ನರಸಿಂಹನ್ನರು ಈಗ ೪೬ ವರ್ಷ ಪ್ರಾಯದವರು. ಇವರು ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಸ್ನಾತಕರು ೧೯೩೬ರಲ್ಲಿ ಇಂಡಿಯನ್ ಸಿವಿಲ್ ಸರ್ವಿಸ್‌ನಲ್ಲಿ ಭರ್ತಿ ಹೊಂದಿದ ಇವರು ಮದ್ರಾಸ್ ಸರಕಾರದಲ್ಲಿ ಸೇವೆ ಸಲ್ಲಿಸುತ್ತಿದ್ದರು. ೧೯೪೨ರ ನಂತರ ಕೇಂದ್ರದ ಆಹಾರೋತ್ಪಾದನೆ, ಕೃಷಿ ಮತ್ತು ಅರ್ಥ ಶಾಖೆಗಳಲ್ಲಿ ಕೂಡ ಇವರ ಸಂಬಂಧ ಬೆಳೆಯಿತು. ೧೯೫೧ರಲ್ಲಿ ಸಂಯುಕ್ತ ರಾಷ್ಟ್ರ ಸಂಘದಲ್ಲಿ ಅಂತರ್ಗತವಾಗಿ ಏಶ್ಯ ಮತ್ತು ದೂರ ಪ್ರಾಚ್ಯ ಆರ್ಥಿಕ ಆಯೋಗವೊಂದು ಸ್ಥಾಪಿತವಾಯಿತು. ಇದರ ಕಾರ್ಯದರ್ಶಿಯಾಗಿ ಚಕ್ರವರ್ತಿ ವಿ. ನರಸಿಂಹನ್ನರನ್ನು ನೇಮಿಸಲಾಯಿತು. ಈ ಪದವಿಯಲ್ಲಿವರು ಮೂರು ವರ್ಷಗಳ ಕಾಲವಿದ್ದರು. ಆ ಮೇಲೆ ಇವರು ಮೊನ್ನೆ ಮೊನ್ನೆಯ ಜಿನೀವಾ ಸಂಯುಕ್ತ ರಾಷ್ಟ್ರ ಸಂಘದಲ್ಲಿ ಕೆಲಕಾಲದಲ್ಲಿ ಬೇರೆ ಬೇರೆ ಮಹತ್ವಪೂರ್ಣ ಹುದ್ದೆಗಳಲ್ಲಿದ್ದರು.

ಕೊಲಂಬೋ ಯೋಜನೆ ಮತ್ತು ಅಮೆರಿಕೆಯ ಆರ್ಥಿಕ ಸಹಾಯ ಕಾರ್ಯಕ್ರಮಗಳಲ್ಲಿ ಸಮನ್ವಯ ಸ್ಥಾಪನೆ ಮಾಡುವಲ್ಲಿ ಶ್ರೀ ನರಸಿಂಹನ್ನರ ಸಹಕಾರ ಅದ್ವಿತೀಯವಾಗಿತ್ತು, ಸಂಯುಕ್ತ ರಾಷ್ಟ್ರ ಸಂಘದಲ್ಲಿನ ೩೩ ಉಪಕಾರ್ಯದರ್ಶಿಗಳಲ್ಲಿ ಸಂಘದ ಕಾರ್ಯಾಲಯ ಪ್ರಮುಖರಾಗಿ ನೇಮಿಸಲ್ಪಟ್ಟವರಲ್ಲಿ ಇವರೇ ಮೊತ್ತ ಮೊದಲಿಗರು. ಉಪಕಾರ್ಯದರ್ಶಿಯಾದಾಗ ಇವರಿಗೆ ವಾರ್ಷಿಕ ೧೫ ಸಾವಿರ ಡಾಲರ್ ವೇತನ ದೊರೆಯುತ್ತಿತ್ತು.

ರಾಷ್ಟ್ರ ಸಂಘದ ಪ್ರಮುಖರ ಪದವಿಗೆ ಏಶ್ಯನ್ ರಾಷ್ಟ್ರಗಳವರನ್ನು ನೇಮಿಸುವುದೆಂದರೆ, ಅಷ್ಟು ಸುಲಭವೆನ್ನುವಂತಿಲ್ಲ. ಮುಖ್ಯವಾಗಿ ಏಶ್ಯನ್ ರಾಷ್ಟ್ರಗಳು ಸಂಯುಕ್ತ ರಾಷ್ಟ್ರ ಸಂಘಕ್ಕೆ ಸಲ್ಲಿಸುವ ಸಹಾಯ ಧನವು ಅಲ್ಪ ಪ್ರಮಾಣದ್ದು. ರಶ್ಯವು ರಾಷ್ಟ್ರಸಂಘದ ಪ್ರಧಾನ ಕಾರ್ಯದರ್ಶಿಯವರ ಮೇಲೆ ಪದೇ ಪದೇ ಅವಿಶ್ವಾಸ ಕಾರುತ್ತ ಬರುವುದರಿಂದ, ಪ್ರಮುಖರ ಸ್ಥಾನಕ್ಕೆ ನಿಯುಕ್ತಿಗೊಳಿಸುವಾಗ, ರಶ್ಯನ ವಿರೋಧವೂ ತಟ್ಟದಂತೆ ನೋಡಿಕೊಳ್ಳುವುದು ಹೆಮ್ಮರ್ ಶೀಲ್ಡರಿಗೆ ಅನಿವಾರ್ಯವೆಂಬಂತಿತ್ತು. ಪಾಶ್ಚಾತ್ಯ ರಾಷ್ಟ್ರಗಳಾವುವುಗಳ ಮೇಲೆಯೂ ರಶ್ಯ ವಿಶ್ವಾಸ ವಿಡುವುದು ತೀವ್ರ ಅಸಾಧ್ಯವಾದುದರಿಂದ ಈ ಹುದ್ದೆಗೆ ಏಶ್ಯನ್ ರಾಷ್ಟ್ರಗಳಲ್ಲಿಯೇ ಒಂದನ್ನು ಆರಿಸುವುದು ಅವಂಗೆ ಅನಿವಾರ್ಯವಾಯ್ತು.

ಪಾಶ್ಚಾತ್ಯ ಹಾಗೂ ಪೌರ್ವಾತ್ಯ ರಾಷ್ಟ್ರಗಳಲ್ಲಿ ಸಮಾನ ಸಂಮಾನ ಪಾತ್ರವಾದ ಭಾರತವೇ ಅವರಿಗೆ ಈ ಪದವಿ ತುಂಬಲು ದೃಷ್ಟಿಗೋಚರವಾದರೆ ಆಶ್ಚರ್ಯವಲ್ಲ.

ಭಾರತದ ಪ್ರತಿನಿಧಿಯಾದರೂ ತಾ ನು ಗಳಿಸಿದ ಪದವಿಯ ಮಹತ್ವವನ್ನು ಅರಿತು ಅದನ್ನು ನಿರ್ವಹಿಸುವುದರಲ್ಲಿ ತನ್ನ ಚಾಕಚಕ್ಯತೆಯನ್ನು ಪ್ರದರ್ಶಿಸುವರೆಂಬುದು ಖಂಡಿತ.

ವಿಶ್ವಕವಿ ಟಾಗೋರರ ಪುಣ್ಯಸ್ಮರಣೆಗಾಗಿ
ಅವರ ಶತಮಾನೋತ್ಸವದ ಸುಸಂದರ್ಭದಲ್ಲಿ
ಪ್ರಕಟವಾದ ಕಿರುಗಾಣಿಕೆಗಳು

ಚಿತ್ರಾಂಗದೆ

ಬೆಲೆ: ೬೦ ನ. ಪೈಸೆ.

(ಶ್ರೀ ಕೆ. ಕೆ. ಶೆಟ್ಟಿ, ಎಂ. ಎಲ್. ಸಿ. ಅವರಿಂದ ಅನುವಾದಿತ)

ರವೀಂದ್ರನಾಥರ ಕಿರುಗತೆಗಳು

ಬೆಲೆ: ೯೦ ನ. ಪೈಸೆ.

(ಶ್ರೀ ಹನುಮಂತರಾವ್ ಮಂಜರೇಕರ, ಕಾರವಾರ ಅವರಿಂದ ಅನುವಾದಿತ)

ಪ್ರಕಾಶಕರು:
ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ನವಯುಗ ಪ್ರೆಸ್, ಉಡುಪಿ.

ವಿವೇಚನೆ

ನಾಗವಲ್ಲಿಯ ಮಹತ್ವ

ಭಾರತೀಯ ಸಂಸ್ಕೃತಿಯ ಪ್ರತೀಕವಾಗಿ ಉಳಿದು ಬಂದುದು ನಾಗವಲ್ಲಿ ಅಥವಾ ತಾಂಬೂಲ. ಇದರ ಮಹತ್ವವಿಂದಿಗೂ ಹಿಂದಿನಂತೆಯೇ ಉಳಿದಿದೆ— ಇದೇ ಆಶ್ಚರ್ಯ.

ಭಾರತೀಯ ಸಂಸ್ಕೃತಿ ಮತ್ತು ಸತ್ಕಾರಗಳಲ್ಲಿ ತಾಂಬೂಲಕ್ಕೆ ಮಹತ್ವಪೂರ್ಣ ಸ್ಥಾನವಿದೆ. ಇದನ್ನು ಭಾರತೀಯ ಸಂಸ್ಕೃತಿ ಮತ್ತು ಸತ್ಕಾರಗಳ ಪ್ರತೀಕವೆಂದು ಹೇಳಬಹುದು. ಈಗ ಈಗ, ಹೊಗೆ ಸೇದುವುದನ್ನು ಅಭ್ಯಾಸ ಮಾಡಿಕೊಂಡಿರುವುದರಿಂದ, ಭಾರತೀಯ ಸಂಸ್ಕೃತಿಯಲ್ಲಿ ತಾಂಬೂಲದ ಸ್ಥಾನವು ಗೌಣವಾಗುತ್ತ ಬರುತ್ತಿರುವುದಾದರೂ ಇಂದಿಗೂ ಇದರ ಉಪಚಾರ ಪರ್ಯಾಪ್ತ ಪ್ರಮಾಣದಲ್ಲಿ ನಡೆಯುತ್ತಿದೆ. ಪ್ರೇಮ, ಶೌರ್ಯ, ಸಂದರ್ಶನ, ಮಂಗಳ ಮುಹೂರ್ತ ಅಥವಾ ಯಾವುದಾದರೊಂದು ಶುಭ ಪ್ರಸಂಗಗಳಲ್ಲಿ ತಾಂಬೂಲವು ಶಕುನ ಮತ್ತು ಸತ್ಕಾರದ ರೂಪದಲ್ಲಿ ಮುಂದೆ ಬರುತ್ತದೆ. ಇದರ ಉತ್ಪತ್ತಿ ಮತ್ತು ಪ್ರಯೋಗಗಳ ಬಗ್ಗೆ ಹಲವಾರು ಲೋಕ ಕಥೆಗಳೂ ಪ್ರಾಸಂಗಿಕ ಕಿಂವದಂತಿಗಳೂ ಭಾರತೀಯ ಸಾಹಿತ್ಯದಲ್ಲಿ ತುಂಬಿ ಹೋಗಿವೆ.

ಆರ್ಯೇತರ ಮೂಲ ಭಾರತೀಯ ಸಂಸ್ಕೃತಿಯಲ್ಲಿಯೂ ತಾಂಬೂಲದ ಅಸ್ಥಿತ್ವವಿದ್ದಿತ್ತು. ಮೊಹೆಂಜದಾರೊ ಮತ್ತು ಹರಪ್ಪಗಳಲ್ಲಿ ದೊರೆತ ಹಲವಾರು ಮುದ್ರೆಗಳಲ್ಲಿ ಅಶ್ವತ್ಥ ಮತ್ತು ನಾಗವಲ್ಲಿ (ತಾಂಬೂಲ)ಯ ಎಲೆಗಳ ಚಿತ್ರಗಳೂ ಇರುವುದು ಇದಕ್ಕೆ ಸಾಕ್ಷಿ.

ಸಂಸ್ಕೃತದ ಕೋಶಕಾರನಾದ ಅಮರನು ಇದನ್ನು ತಾಂಬೂಲವಲ್ಲೀ, ತಾಂಬೂಲೀ, ನಾಗವಲ್ಲಯಪಿ ಎಂದು ಉಲ್ಲೇಖಿಸಿದ್ದಾನೆ. ಪ್ರಾಕೃತ ಮತ್ತು ಪಾಳಿಗಳಲ್ಲಿ ಇದನ್ನು ಣಾಗವಲ್ಲೀ, ಣಾಗಲಪ್ಪಾ, ನಾಗಲತಾ, ತಾಂಬೂಲೀ ಮತ್ತು ನಾಗವಲ್ಲೀ ಎಂದು ಮುಂತಾಗಿ ಹೆಸರಿಸಲಾಗಿದೆ. ಕನ್ನಡ ಸಾಹಿತ್ಯಕಾರರು ವೀಳೆಯ ಎಂದಿದನ್ನು ಕರೆದಿದ್ದರಲ್ಲದೇ 'ವೀಳೆಯಂಗೊಡು' ಎಂದು ಒಂದು ಧಾತುವನ್ನೇ ನಿರ್ಮಿಸಿಕೊಂಡಿದ್ದರು. ಯುದ್ಧಕ್ಕೆ ತೆರಳಲು ಮತ್ತು ಅಲ್ಲಿ ಪರಾಕ್ರಮದಿಂದ ಹೋರಾಡಲು ಅನುಮತಿ ಕೊಡುವುದನ್ನು ಹೀಗೆಂದು ಕರೆಯುತ್ತಿದ್ದರು.

ಈ ಬಹು ಚರ್ಚಿತ ಮಹತ್ವಪೂರ್ಣ ತಾಂಬೂಲದ ಉತ್ಪತ್ತಿಯ ವಿಷಯದಲ್ಲಿ ಭಾರತೀಯ ಹಾಗೂ ದಕ್ಷಿಣ ಏಶ್ಯದ ಸಾಹಿತ್ಯದಲ್ಲಿ ಹಲವು ಕಥೆಗಳು ದೊರೆಯುತ್ತವೆ. ರಾಜಶೇಖರನು ಬರೆದ 'ಉದಯನ ಪ್ರಬಂಧ'ದಂತೆ, ನಾಗರಾಜ ವಾಸುಕಿಯು ಉದಯನಿಗೆ ವರದಕ್ಷಿಣೆಯ ರೂಪದಲ್ಲಿ ವೀಣೆ, ತಿಳಕ, ಪೂಜೆ ಮತ್ತು ತಾಂಬೂಲಗಳನ್ನು ಒಪ್ಪಿಸಿದ್ದನೆಂದು ತಿಳಿಯುತ್ತದೆ.

ನಾಗವಲ್ಲಿಯ ಉತ್ಪತ್ತಿಯ ಬಗ್ಗೆ ಒಂದು ರೋಚಕ ಪೌರಾಣಿಕಕಥೆಯು ಪ್ರಚಲಿತವಿದೆ. ಸಮುದ್ರಮಂಥನದ ನಂತರ ಅಮೃತ ವಿತರಣೆಯ ಸಮಯ ದೇವ ದಾನವ-ವಿವಾದವು ಉಗ್ರವಾದುದನ್ನು ಕಂಡು ಐರಾವತವು ಅಮೃತಕಲಶವನ್ನು ಒಡೆದು ಉರುಳಿಸಿತು. ಆಗ ಅಮೃತವು ತೋಯ್ದು ನೆಲದ ಭಾಗದಲ್ಲಿ ಕಾಲಕಾಲಾಂತರದಲ್ಲಿ ನಾಗವಲ್ಲರಿಯ ಅಂಕುರ ಬೆಳೆದು ಬಂತು.

ವಿಜಯಿಗಳಾದ ಪಾಂಡವರಿಗೆ ರಾಜಸೂಯಯಾಗದ ವೇಳೆ ತಾಂಬೂಲದ ಆವಶ್ಯಕತೆಯಿದ್ದಾಗ, ಅವರು ಎಲ್ಲೆಡೆಗೂ ದೂತರನ್ನಟ್ಟಿದರು. ಆದರೆ, ಎಲ್ಲಿಯೂ ಅದು ಲಭಿಸಲಿಲ್ಲ. ದೂತರು ನಿರಾಶರಾಗಿ ಮರಳಿದ ಮೇಲೆ ಅರ್ಜುನನು ಪಾತಾಳ ಲೋಕವನ್ನು ಹೊಕ್ಕನು. ಅಲ್ಲಿಯ ರಾಜರಾಣಿಯು ತನ್ನ ಕನಿಷ್ಠ ಅಂಗುಲಿ (ಕಿರಿಬೆರಳು)ಯನ್ನು ಕತ್ತರಿಸಿಕೊಟ್ಟಳು. ಯಜ್ಞವೇದಿಕೆಯ ಸಮೀಪಸ್ಥ ಭೂಮಿಯಲ್ಲಿ ಆ ಬೆರಳನ್ನು ಇಟ್ಟಾಗ, ನಾಗಲತೆಯು ಮೊಳೆದು ಬಂತು—ಎಂದು ಮಹಾ ಭಾರತದ ಕಥೆಯಿದೆ.

ತಾಂಬೂಲ ಪ್ರಯೋಗದ ಸಂಬಂಧದಲ್ಲೂ ಹಲವಾರು ಕಥೆಗಳಿವೆ. ಮೈತ್ರಿ, ವಿಗ್ರಹ, ಕೂಟನೀತಿ ಅಥವಾ ಪ್ರಣಯ ವ್ಯಾಪಾರದಲ್ಲಿ ಕೂಡ ಇದಕ್ಕೆ ಮಹತ್ವಪೂರ್ಣ ಸ್ಥಾನವಿತ್ತು. ಯುದ್ಧದ ವೇಳೆ ರಾಜಪೂತರು ತಾಂಬೂಲದ ಬೀಡವನ್ನು ಎಸೆದು ವೀರ ಶೂರರನ್ನು ಪರೀಕ್ಷಿಸುತಿದ್ದರಂತೆ! ಶೂರ—ವೀರರು ತಮ್ಮ ಶಿರಸ್ಸಿನ ರಕ್ತವನ್ನು ಹೆಚ್ಚಿ ಅದನ್ನು ಕೆಂಪು ಮಾಡುತಿದ್ದರಂತೆ. ಇಂದಿಗಾದರೂ ಸ್ವಾಗತ ಸಮಾರೋಪಗಳಲ್ಲಿ ತಾಂಬೂಲವೀಯದಿರುವುದು ಮತ್ತು ಇತ್ತುದನ್ನು ಸ್ವೀಕರಿಸದಿರುವುದು ಅಪಮಾನವೆಂದು ಪರಿಗಣಿಸಲಾಗುತ್ತಿದೆ.

ನವಯುಗ ವಾರ ಪತ್ರಿಕೆಗೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ

ಪುಸ್ತಕ ವಿಮರ್ಶೆ

[ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿ ವಿನಂತಿ.— ಸಂ. ನ.

ಮಕ್ಕಳ ಸಾಹಿತ್ಯದ ಎರಡು ಕೃತಿಗಳು

೧. ನರಿಯ ಫಜೀತಿ: ಬರೆದವರು 'ಸಿಸು' ಸಂಗಮೇಶ. ಪ್ರಕಾಶಕರು: ಭಾರತೀಯ ಸಾಹಿತ್ಯ ಭಾಂಡಾರ, ವಿಜಾಪುರ. ಪುಟಗಳು: ೩೦. ಬೆಲೆ: ೦-೭೫ ನ.ಪೈ.

೨. ಪುಟಾಣಿ ಕತೆಗಳು: ಲೇಖಕ ಮತ್ತು ಪ್ರಕಾಶಕರು: ಪಳಕಳ ಸೀತಾರಾಮ ಭಟ್ಟ, ಶಿಶುಸಾಹಿತ್ಯ ಮಾಲೆ, ಮಿತ್ತಬೈಲ್, ದ.ಕನ್ನಡ. ಪುಟಗಳು:೪೨.ಬೆಲೆ: ರೂ. ೧.

ನಮ್ಮ ದೇಶದಲ್ಲಿಯೇ ಏನೊಂದೂ ಪ್ರಗತಿ ಸಾಧಿಸದ ಸಾಹಿತ್ಯ ಪ್ರಕಾರವೆಂದರೆ ಮಕ್ಕಳ ಸಾಹಿತ್ಯ. ನಮ್ಮ ನಾಡಿನ ಶಿಕ್ಷಿತ ಜನವರ್ಗದಲ್ಲಿ ಜ್ಞಾನಲಾಲಸೆಯೊಗಲಿ ಸ್ವವಿಚಾರ ಶಕ್ತಿಯೊಗಲಿ ಅಧಿಕವಾಗಿ ಬೆಳೆದು ಬಂದಿಲ್ಲದಿರುವುದಕ್ಕೆ ಎಳೆಯರಾಗಿದ್ದಾಗಿ ಓದುವುದರಲ್ಲಿ ಆಸಕ್ತಿ ತೋರಿಪದಿರುವುದೇ ಮುಖ್ಯಕಾರಣ. ಜೀವನದ ಹೋರಾಟದಲ್ಲಿ ತೊಡಗಿದ ಇಂತಹ ವ್ಯಕ್ತಿಗೆ ಪುಸ್ತಕ ಮುಟ್ಟುವುದಕ್ಕಾದರೂ ಅವಕಾಶವೆಲ್ಲಿದೆ? ಇದಕ್ಕಾಗಿ ಎಳೆಯರಲ್ಲಿ ಓದಿನ ಅಭಿರುಚಿಯನ್ನಾವು ಹುಟ್ಟಿಸಬೇಕಾಗಿದೆ. ಈ ದಿಸೆಯಲ್ಲಿ ಎಳ್ಳಿನಷ್ಟಾದರೂ ಪ್ರಯತ್ನ—ಸಾಹಸ ನಡೆದರೆ, ನಾವು ಅದನ್ನು ಸ್ವಾಗತಿಸಬೇಕಾಗಿದೆ.

ಮಕ್ಕಳ ಸಾಹಿತ್ಯ ನಿರ್ಮಾಣವಾದರೂ ವಯಸ್ಕರ ವಾತಾವರಣದಲ್ಲಿ ನಡೆಯಬಾರದು. ಮಕ್ಕಳ ಸಾಹಿತ್ಯವನ್ನೂ ಪ್ರೇರೇಪಿಸುವ ಒಂದು ಮೂಲಪ್ರೇರಣೆ ಬೇರೆಯಿದೆ—ಮಕ್ಕಳ ಪ್ರಪಂಚವಂತೂ ವಯಸ್ಕರಿಗಿಂತ ಸಂಪೂರ್ಣ ಭಿನ್ನವಿದೆ. ಮಕ್ಕಳ ಪ್ರಪಂಚ ತೀರ ಕಲ್ಪನೆಯದು. ಅಲ್ಲಿ ವಾಸ್ತವಿಕತೆಗೆ ಪ್ರಾಧಾನ್ಯ ಕಡಿಮೆ. ಆದುದರಿಂದಲೇ ಮಕ್ಕಳ ಪ್ರಪಂಚಕ್ಕೆ ಹೋಗಿ ಅಲ್ಲಿನ ಸಾಹಿತ್ಯ ಪ್ರೇರಕ ದ್ರವ್ಯವನ್ನು ಅರಗಿಸಿಕೊಂಡು ಸಾಹಿತ್ಯ ನಿರ್ಮಿಸುವುದು ಬಹು ಸಾಹಸದ ಕಾರ್ಯ. ಇಂತಹ ಮಹಾ ಸಾಧನೆಯನ್ನು ಸಹೃದಯ ಕವಿಗಳೂ ನೈಪುಣ್ಯ ಶಿಕ್ಷಕರೂ ಮಾಡಬಲ್ಲರು. ಪಾಶ್ಚಾತ್ಯ ಭಾಷೆಗಳಲ್ಲಿ ಉನ್ನತಸ್ತರಕ್ಕೇರಿದ ಈ ಸಾಹಿತ್ಯ ಪ್ರಾಕಾರ ಕನ್ನಡದಲ್ಲಿಯೂ ದಿವಂಗತ ಪಂಜೆ, ಹೊಯಿಸಳ ಲಕ್ಷ್ಮಣರಾವ್ ಹಾಗೂ ಶ್ರೀ ಕಾರಂತ ಮೊದಲಾದವರಿಂದ ಬೆಳೆದು ಬಂದಿದೆ. ಆ ಪರಂಪರೆಯನ್ನು ಮುಂದುವರಿಸುವವರು ನಮ್ಮಲ್ಲಿ ಇಂದಿಗೂ ಇರುವುದು ನಿರಾಶೆಯ ಅಂಧಕಾರದಲ್ಲಿ ಬೆಳಗುವ ಮಂದ ಜ್ಯೋತಿಯೆಂದು ಭಾಸವಾಗುತ್ತದೆ.

ಶ್ರೀ 'ಸಿಸು'ಸಂಗಮೇಶ ಹಾಗೂ ಶ್ರೀ ಸೀತಾರಾಮ ಭಟ್ಟರು 'ಸಾಹಿತ್ಯ ರಚನಾಲಯ'ದಲ್ಲಿ ಭಾಗವಹಿಸಿ ಅನುಭವ ಪಡೆದ ತಂತಮ್ಮೂರಿಗೆ ಮರಳಿ ಕನ್ನಡದ ಕಂದರಿಗೆ ಉಪಯುಕ್ತವಾಗುವ ಒಂದೊಂದು ಸಾಹಿತ್ಯ ಕೃತಿಗಳನ್ನು ರಚಿಸಿದ್ದಾರೆ. ಈ ಮೊದಲೂ ಇವರು ಮಕ್ಕಳ ಸಾಹಿತ್ಯದಲ್ಲಿ ದುಡಿದವರು; ಅದಕ್ಕಾಗಿಯೇ ತಮ್ಮ ಜೀವನ—ಸಾಧನೆಯನ್ನು ವಿಮರ್ಶಿಸಲಿಟ್ಟವರು. ಈ ಕೃತಿಗಳು ಸಚಿತ್ರವಾಗಿವೆ; ವರ್ಣ—ವಿವರ್ಣಗಳಲ್ಲಿ ಚಿತ್ರಗಳನ್ನು ಅಚ್ಚು ಮಾಡಲಾಗಿದೆ; ಗುಂಡಗಿನ ಅಚ್ಚಿನ ಮೊಳೆಗಳನ್ನು ಉಪಯೋಗಿಸಲಾಗಿದೆ. ವಿದೇಶೀಯ ಭಾಷೆಗಳ ಪುಸ್ತಕಗಳಲ್ಲಿ ಬಳಸಿದ ಕಾಗದ, ಅವುಗಳ ಅಂದ ಚಂದ, ಟಾಪು ಟೀಪುಗಳು ಇವುಗಳಲ್ಲಿಲ್ಲವೆಂಬುದು ನಿಜವಾದರೂ ನೋಡಿದೊಡನೆಯೇ ಜುಗುಪ್ಸೆ ಬಂದು ಎತ್ತಿ ಎಸೆಯುವಂತಹ 'ಮಾಸಲು' ಸ್ಥಿತಿಯಲ್ಲಿಲ್ಲ. ಆದುದರಿಂದ ಮಕ್ಕಳಿಗೆ ಕೊಟ್ಟರೆ, ಅವರು ಖಂಡಿತಕ್ಕೂ ಓದಲು ಪ್ರಯತ್ನಿಸುವುದು ಖಂಡಿತ.

'ಸಿಸು' ಸಂಗಮೇಶರ 'ನರಿಯ ಫಜೀತಿ'ಯಲ್ಲಿ ಗುಂಡಪ್ಪ, ತುಂಡಪ್ಪ, ಮೊಂಡಪ್ಪ; ಕಕ್ಕನರಿಗೆ ತಕ್ಕ ಶಿಕ್ಷೆ ಮತ್ತು 'ನರಿಯ ಫಜೀತಿ' ಎಂಬ ಮೂರು ಕಥೆಗಳಿವೆ. ಕೊನೆಯ ಎರಡರಲ್ಲಿ ನಡು ನಡುವೆ ಪದ್ಯಗಳನ್ನೂ ಬಳಸಿಕೊಳ್ಳಲಾಗಿದೆ. ಸೀತಾರಾಮ ಭಟ್ಟರ ಪುಟಾಣಿ ಕತೆಗಳಲ್ಲಿ ಕುಟುಂಕುಟುಂ ಕಪ್ಪೆಯಣ್ಣ, ಹೂದೇಟಿದ ಹುಡುಗಿಯರು, ವಿಂತಾಯಿ ಬೊಂಬೆ ಓಡಿ ಹೋಯಿತು, ಬೆಕ್ಕಿನ ಮರಿ ಹಕ್ಕಿ ಆಯಿತೆ? ಮತ್ತು ಕುಣಿ ಕುಣಿದಾಡಿದ ಅಳಿಲಣ್ಣ ಎಂಬ ಐದು ಕಥೆಗಳಿದ್ದು ಪದ್ಯಗಳ ಉಪಯೋಗದ ಮೂರು ಕಥೆಗಳಲ್ಲಿ ಯೋಚಿತವಾಗಿ ಸಾಗಿದೆ. ಮೊದಲೇ ಹೇಳಿದಂತೆ ಮಕ್ಕಳ ಸಾಮ್ರಾಜ್ಯ ಕಲ್ಪನಾ ಸಾಮ್ರಾಜ್ಯವಾದುದರಿಂದ ಇಲ್ಲಿ ಆಯ್ದುಕೊಂಡ ವಸ್ತುಗಳ ಬಗ್ಗೆ ಏನೂ ಹೇಳುವಂತಿಲ್ಲ ಆದರೂ ವಸ್ತುವನ್ನು ಎಳೆಯ ಮಕ್ಕಳಿಗೆ ಆಕರ್ಷಕವಾಗುವಂತೆ, ಗ್ರಾಹ್ಯವಾಗುವಂತೆ ಅವರಲ್ಲಿ ಓದಿನ ಹುಚ್ಚು ಹಿಡಿಸುವಂತೆ ಹೇಳುತ್ತ ಹೋಗಿದೆಯೇ ಎಂದರೆ, ಖಂಡಿತಕ್ಕೂ ಹೌದೆನ್ನಬೇಕಾಗುತ್ತದೆ. ಸಾಮಾನ್ಯವಾಗಿ ಎಳೆಯ ಪ್ರಾಯದ ಮಕ್ಕಳಲ್ಲಿರ ಬಹುದಾದ ಶಬ್ದ ಸಂಪತ್ತನ್ನು ಮಾತ್ರ ಬಳಸಿ, ಅವನ್ನು ಸಾಧುಕಾಗಿ ಮನಮುಟ್ಟುವಂತೆ ಕೋದ ಜಾಣ್ಮೆ ಪ್ರಶಂಸನೀಯವಿದೆ ಕೆಲವೊಂದು ಕಥೆಗಳನ್ನು ಹಿರಿಯರಾದವರು ಓದಿದಾಗ, ತಾವು ಎಳೆಯರಾದಾಗ ಅಜ್ಜಿಯೋ ಅಧ್ಯಾಪಕರೋ ಹೇಳುತಿದ್ದ ಇವೇ ಮಾದರಿಯ ಇತರ ಕಥೆಗಳ ಅಭಾಸ ತೋರಿಬರಬಹುದಾದರೂ ಅದನ್ನು ದೋಷವೆನ್ನುವಂತಿಲ್ಲ. ಕಾಲ್ಪನಿಕ ಪ್ರಪಂಚದಲ್ಲಿ ವಿಹರಿಸುವಾಗ, ಮಕ್ಕಳ ಮನೋಧರ್ಮವನ್ನು ತೂಗಿ ನೋಡುವ ಶಕ್ತಿಯು ಇವರು ಲೇಖಕರಲ್ಲಿಯೂ ಇದೆ. ಕನ್ನಡ ಕಂದರ ಹೆತ್ತವರು ಈ ಎರಡೂ ಪುಸ್ತಕಗಳನ್ನು ಕೊಂಡುಕೊಂಡು ತಮ್ಮ ಮಕ್ಕಳಿಗೆ ಓದಲು ಕೊಡುವುದರಿಂದ ಮಕ್ಕಳಲ್ಲಿ ಓದುವ ತಹತಹ ಹೆಚ್ಚಿ ಅವರ ಜ್ಞಾನ ವಿಕಾಸವಾಗುತ್ತದೆ; ಲೇಖಕರಿಗೂ ಮುಂದಿನ ಹೆಜ್ಜೆಯನ್ನಿಡಲು ಪ್ರೋತ್ಸಾಹ ದೊರೆಯುತ್ತದೆ. ಆದರೆ, ಓದಿನ ಹುಚ್ಚನ್ನೇ ನಿಜವಾದ ಹುಚ್ಚೆಂದು ಭ್ರಮಿಸುವುದಾದರೆ, ನಮ್ಮ ಮಕ್ಕಳ ಸಾಹಿತ್ಯಲತೆ ಮುರುಟಬೇಕೆಂದೇ ಅಂತಹರ ಅಭಿಲಾಷೆಯೆನ್ನಬೇಕಾಗುತ್ತದೆ. 'ಕುರಿ ತೋದದೆಯುಂಪಂಣತ ಮತ'ಗಳೆಂದು ಹೆಸರಾದ ಕನ್ನಡಿಗರು ತಮ್ಮ ದಾರಿದ್ರ್ಯದಲ್ಲಿಯೇ ಪುಡಿಗಾಸನ್ನುಳಿಸಿ ತಮ್ಮ ಮಕ್ಕಳ ಜ್ಞಾನತೃಷೆಯನ್ನು ನೀಗಿಸಲು ಮುಂದಾಗಲೆಂದು ಪ್ರಾರ್ಥಿಸುತ್ತೇವೆ.

ಯಕ್ಷಗಾನ ಶ್ರೀ ಕಟೀಲು ಕ್ಷೇತ್ರ ಮಹಾತ್ಮೆ ಅಥವಾ ಅರುಣಾಸುರ ವಧೆ—ಲೇಖಕರು: ಶ್ರೀ ಯನ್. ನಾರಾಯಣ ಶೆಟ್ಟಿ. ಪ್ರಕಾಶಕರು: ಯಕ್ಷಗಾನ ಕಲಾನಿಲಯ, ಎಳತ್ತೂರು, ಕಿನ್ನಿಗೋಳಿ, ದ. ಕನ್ನಡ. ಪುಟಗಳು: ೪೦. ಬೆಲೆ: ರೂ. ೦=೬೨.

ದಕ್ಷಿಣ ಕನ್ನಡದ ಸುಪ್ರಸಿದ್ಧ ದೇವೀ ಮಂದಿರಗಳಲ್ಲಿ ಕಟೀಲು ಒಂದಾಗಿದೆ. ಶುಂಭ ನಿಶುಂಭಾಸುರರ ಮಂತ್ರಿ ಅರುಣಾ ಸುರನನ್ನು ಮಹಾ ಮಾಯೆಯು ಮೋಹಿನಿಯ ರೂಪದಲ್ಲಿ ಬಲಿ ತೆಗೆದುಕೊಂಡ ಮಹಾ ಸ್ಥಳವಿದು. ಈ ರಾಕ್ಷಸ ಬಲಿಯಾಗ ಬೇಕಾದರೆ, ನಂದಿನಿಯು ನದೀ ರೂಪದಲ್ಲಿ ಹರಿಯಬೇಕಾಯಿತು, ಸುರಗುರು ಬೃಹಸ್ಪತಿ ಅರುಣಾಸನ್ನು ದುರ್ಮಾರ್ಗ ಪ್ರವೃತ್ತನನ್ನಾಗಿ ಮಾಡಬೇಕಾಯಿತು. ದೇವ ಪಕ್ಷಪಾತಿಯಾಗಿ ಮೋಹಿನಿ ಉಪಾಯಾಂತರದಿಂದ ಅರುಣನ ಪ್ರಾಣ ಹೀರಿದಳು, ಜಗದಂಬೆಯಾಗಿ ಅಲ್ಲಿ ನೆಲಸಿದಳು. ಈ ಕ್ಷೇತ್ರದ ಮಾಹಾತ್ಮ್ಯವನ್ನು ಯಕ್ಷಗಾನ ರೂಪದಲ್ಲಿ ಬಿತ್ತರಿಸುವ ಸಂಕ್ಷಿಪ್ತಕೃತಿಯನ್ನು ಲೇಖಕರು ಹತ್ತು ಜನರ ಸಹಾಯದಿಂದ ರಚಿಸಿದ್ದಾರೆ. ತಾಳಮದ್ದಲೆಯ ರಂಗಕ್ಕೆ ಹಿಡಿಸುವಂತಹ, ಬಯಲಾಟದ ರಂಗ ಭೂಮಿಗೆ ದೇವೀ ಮಹಾತ್ಮೆಯಂತೆಯೇ ಜನಪ್ರಿಯವಾಗುವಂತಹ ಪ್ರಸಂಗವಿದು.

ಆದರ್ಶ ವಿದ್ಯಾರ್ಥಿ— (ಭಾಗ ೪) ಲೇಖಕರು ಶ್ರೀ ಕೆ. ಎನ್. ವಿಶ್ವನಾಥ ಶೆಟ್ಟಿ B. A. (Madras) B. Ed. ಪ್ರಕಾಶಕರು. ಉಪಾಧ್ಯಕ್ಷ ವಿ. ಶೆಡ್ಡಿ, ದೇವರ ಮನೆ, ಉಪ್ಪಿನಂಗಡಿ ರಸ್ತೆ ಪುತ್ತೂರು. ಪುಟಗಳು: ೧೬. ಬೆಲೆ ರೂ ?

ಕಾಲೇಜು ಹಾಗೂಶಾಲೆಗಳ ಪ್ರತಿಯೊಬ್ಬವಿದ್ಯಾರ್ಥಿಗೂ ವಿದ್ಯಾರ್ಥಿನಿಗೂ ಅತ್ಯಗತ್ಯವಾಗಿ ತನ್ನೊಡನಿರಬೇಕಾದ ಪುಸ್ತಕ' ನೆಂದು ಮುಖಪುಟದಲ್ಲಿ ದೊಡ್ಡ ಅಕ್ಷರಗಳಿಂದ ಭಾಸಿಸಿರುವುದಾದರೂ ಓದಿದ ನಂತರ ಏಕೆ? ಎಂಬ ಪ್ರಶ್ನೆ ಪ್ರಶ್ನೆಯಾಗಿಯೇ ಉಳಿಯುತ್ತದೆ. ಲೇಖಕರು ಮತ್ತು ಪ್ರಕಾಶಕರ ಚಿತ್ರಗಳೂ ಮುದ್ರಿಸಲ್ಪಟ್ಟಿವೆ. 'ಕನ್ನಡ! ಕನ್ನಡಾ! ಕನ್ನಡಾ!" ಎಂಬೊಂದು ಪದವು ತುಸು ಒತ್ತಿಯದಿದೆ. ಇಲ್ಲಿ ಕಾಣುವ ಎಲ್ಲ ತುಳು ಕನ್ನಡ ಗೀತೆಗಳು ಭಾವಾವೇಶದ ಪರಾತಾತ್ಪರ್ಯಲ್ಲಿ ಹೃದಯ ತಲಪಿದಾಗ ಮೂಡಿದ ಕೇವಲ 'ಶಬ್ದ ಸಂಚಯ" ಮಾತ್ರವಂತಿವೆ. ಇಂತಹ ಗೀತೆಗಳ ಪ್ರಕಟಣೆಯಿಂದ ಯಾರಿಗೆ ಏನು ಲಾಭವೋ ತಿಳಿಯುವುದಿಲ್ಲ. ಈ ಸಂಕಲನದಲ್ಲಿನ ಕೆಳಗಿನ ಎಂದು ಗೀಟುಗಳ ಒಂದೇ ಒಂದು ಪದ್ಯವನ್ನು ಉದಾಹರಿಸಿದರೆ ಪುಸ್ತಕದ ಮೌಲ್ಯದ ಅರಿವಾಗುತ್ತದೆ:

ಪರ್ವತರಾಜನ ಪ್ರಾರ್ಥನೆ— ಮಗಳನು ಕೊಡು ಎನಗೆ! ದೇವಾ|| ಪ|| ಅಳಿಯನ ತರುವಾ ||ಅ.ಪ.||
ಹುಟ್ಟಿದ ಮನೆಯನು| ಹೊಕ್ಕ ಮನೆಯನು| ಝಗ ಝಗ ಝಗ ಝಗ ಝಗ ಎನಿಸುವ ||ಅ.ಪ.|| —ಗೋರಾ.

ಕಾರ್ಕಳ ಡಿ. ಮು. ಕೋರ್ಟನಲ್ಲಿ

O. S. 104/ 1961.

ಭಾಗೀರತಿ ಅಮ್ಮ —ವಾದಿಳು
ನರ್ಸಿಶೆಡ್ಡಿ ಕೂಡಿ —ಪ್ರತಿವಾದಿಳು ೨ನೇ ಪ್ರತಿವಾದಿ.

ಭುಜಂಗ ಹೆಗ್ಡೆ, ಕಾನಂಗಿ ಗೋವಿಂದ ಹೆಗ್ಡೇರ ಆಳಿಯ, ಕಾರ್ಕಳ ತಾಲೂಕು, ಹಿರ್ಗಾನ ಗ್ರಾಮ. ಇವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ,

ವಾದಿಗಳಿಗೆ ತಾರೀಖು 31—3—1957, 20—3—1958, 8—4—1959 ನ 27—3—1960 ನೇ ವ್ಯಾಜಿಗಳಿಗೆ ಬರತಕ್ಕ ಮೂಲಗೇಣಿ ಗೇಣಿ ಬಡ್ಡಿ ವ ಗೈರೆ ದಿಪ್ಪಾ 1714—07 n. P. ಕೇಳಿ ನಿಮ್ಮ ವ ಮಿಕ್ಕ ಪ್ರತಿವಾದಿರ ಮೇಲೆವಾದಿಳು ದಾಕಲು ಮಾಡಿದ ದಾವೆಯು ನಿಮ್ಮ ಹಾಜ್ರಾತಿ ಬಗ್ಗೆ ತಾರೀಖು 10—7—1961 ಕ್ಕೆ ಇಟ್ಟಿದೆ ಆ ಕುರಿತು ನಿಮಗೆ ಅಕ್ಷೇಪಣೆಗಳಿದ್ದರೆ ಮೇಲ್ಕಂಡ ಕೋರ್ಟನಲ್ಲಿ ತಾ. 10—7—1961 ಕ್ಕೆ ಪೂರ್ವಾಹ್ನ ಘಂಟೆ 10 ಕ್ಕೆ ನೀವು ಖುದ್ದಾಗಲೀ ವಕೀಲರ ಮೂಲಕವಾಗಲೀ ಹಾಜ್ರಾಗಿ ಉದಾಹರಿಸಿ ಕಳ್ಳದ್ದು. ತಪ್ಪಿದಲ್ಲಿ ಈ ಕೋರ್ಟನವರಿಗೆ ಯಾತ್ಕಂದಂತೆ ತೀರ್ಮಾನಿಸಲಾದೀತು.

D. Venkatesh Bhat.
ವಾದಿ ಕಡೆ ವಕೀಲ.

Karkala, 18—6—1961

ದಿ ವಿಜಯ ಬೇಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬೇಂಕ್. ಸ್ಥಾಪನೆ: 1931

ರಿಜಿಸ್ಟರ್ಡ್ ಆಫೀಸು:
ವಿಜಯ ಬೇಂಕ್ ಬಿಲ್ಡಿಂಗ್, ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು-3, ಸೌತ್ ಕೆನರಾ.

ಕಾಯಂ ಠೇವಣಾತಿ ಬಡ್ಡಿ ದರವನ್ನು ಶೇಕಡ ೪½ ರ ವರೆಗೆ ಹೆಚ್ಚಿಸಲಾಗಿದೆ.
ಏಳು ದಿವಸದ ನೋಟೀಸಿನಲ್ಲಿ ಕೇಳಿದಾಗ್ಯೆ ಸಿಂದೆ ಪಡೆಯುವ ಡಿಪೋಸಿಟುಗಳನ್ನು (Call Deposits) ಆಕರ್ಶಕ ಬಡ್ಡಿ ದರದಲ್ಲಿ ಸ್ವೀಕರಿಸೋಣಾಗುತ್ತದೆ.
ಹೆಚ್ಚಿನ ಮಾಹಿತಿಗೆ ನಮ್ಮ ಶಾಖೆಗಳಲ್ಲಿ ದಯಮಾಡಿ ವಿಚಾರಿಸಿರಿ.

Tel: 'BLUEYAGAR'. —— ಚಿನ್ನ ಮತ್ತು ವಜ್ರಗಳ ಆಧುನಿಕ ತವರುಮನೆ —— Phone: 374.

ಕೆ.ಆರ್.ಕೆ.ಶೇಟ್ ಡಯಮಂಡ್ ಮಾರ್ಟ್

ಸ್ಥಾಪನೆ:1919] ಚಿನ್ನ ಮತ್ತು ವಜ್ರದ ವ್ಯಾಪಾರಿಗಳು,(ಗವರ್ನ್‌ಮೆಂಟ್ ಕಾಲೇಜ್ ಎದುರುಗಡೆ)ಮಂಗಳೂರು. ಮಾಲಿಕ:ಕೆ.ಕೆ.ಆರ್.ಶೇಟ್

ಶುದ್ಧ ಹರಟೆ

ತಾಳಿ ಕಟ್ಟುವುದಕ್ಕೆ ಹೆದರಬೇಡಿ

ಜೀವನಕ್ಕೆ ಭದ್ರತೆ ನೀಡುವ ಜೀವವಿಮೆಯಿಳಿಸಿದಿರೆಂದರೆ, ನೀವು ವಿವಾಹಿತರಾದಂತೆ. ಆ ಮೇಲೆ ಯಾವ ಏಜೆಂಟನೂ ನಿಮ್ಮನ್ನು ಹಿಂಬಾಲಿಸಲಾರ. ತಾಳಿ ಕಟ್ಟಿದರೆಂದರೆ, ಮತ್ತೆ ಅವರನ್ನು ಮೂಸುವವರಾರು?

ನಾಗರಾಜ, 'ಹಿಂದೀರತ್ನ', ಉಜಿರೆ.

ನಾನೂ ನನ್ನ ಮಿತ್ರರೊಬ್ಬರೂ ರೆಸ್ಟೋರೆಂಟ್ ಒಂದರಲ್ಲಿ ಕಾಫಿ ಕುಡಿದು ಹೊರ ಬರುತ್ತಿದ್ದೆವು. ಇಷ್ಟರಲ್ಲಿ ಒಂದು ಕಾರು ರಸ್ತೆಯಲ್ಲಿ ನಿಂತಿತು. ಒಳಗಿಂದೊಂದು ವ್ಯಕ್ತಿಯಿಳಿಯಿತು.

ಇದ್ದಕ್ಕಿದ್ದಂತೆ ನನ್ನ ಮಿತ್ರರು, ನನ್ನನ್ನು ಬಿಟ್ಟೇಬಿಟ್ಟು; ಹತ್ತಿರದ ಬೀಡಾಬೀಡಿ ಅಂಗಡಿಯನ್ನು ತುರಾತುರಿಯಿಂದ ನುಗ್ಗಿದ್ದನ್ನು ನೋಡಿ, ನನಗೆ ಆಶ್ಚರ್ಯವೆನಿಸಿತು. ಶಾಲಾದಿನಗಳಲ್ಲಿ ಈ ನನ್ನ ಮಿತ್ರ ಬಹಳ ಸಾಹಸಿ; ಹಲವಾರು ಸಲ, ಮುಖ್ಯೋಪಾಧ್ಯಾಯರಿಗೂ ಎದುರು ನಿಂತ ವ್ಯಕ್ತಿ. ಅಂತಹ ವ್ಯಕ್ತಿಗೂ ಸುಕ್ಕರಂತೆ ಅಡಗಿಕೊಳ್ಳಬೇಕಾದ ಪ್ರಸಂಗವೆಂತಹದೆಂದು ತಿಳಿಯುವ ಕುತೂಹಲವುಂಟಾಯ್ತು.

"ಏನಯ್ಯಾ?" ಎಂದು ಮಿತ್ರರನ್ನೇ ಕೇಳಿದೆ.

"ಏನು ಹೇಳಲಿ ಮಾರಾಯ? ಆ ಕಾರಿನಿಂದ ಒಂದು ಜನ ಇಳಿಯಿತಲ್ಲ—ಅದೊಂದು ಇನ್ಯೂರೆನ್ಸ್ ಏಜಂಟ್! ಒಂದು ವಾರದಿಂದ ಬೆನ್ನು ಹತ್ತಿದೆ—ಯಮನ ಏಜಂಟನ ಹಾಗೆ. ಅವರಿಂದ ತಪ್ಪಿಸಿಕೊಳ್ಳಲು, ಹಲವಾರು ಅಡ್ಡಿ ಹೇಳಿದ್ದಾಯ್ತು. ಪ್ರತಿಯೊಂದು ಅಸ್ತ್ರಕ್ಕೂ ಪ್ರತ್ಯಸ್ತ್ರ ಅವರ ಬತ್ತಳಿಕೆಯಲ್ಲಿ ಇದ್ದೇ ಇದೆ. ಏನು ಮಾಡಲಿ? ಸದ್ಯ ಇದೇ ಉಪಾಯ!"-ಎಂದು ಮುಗುಳ್ನಕ್ಕು ಬರ್ಗಾಲಿಗೆ ಬೆಂಕಿ ಹಚ್ಚಿದರು.

ಇಂತಹ ಹಲವಾರು ಉಪಾಯ ಹಲವಾರು ಮಂದಿಯದು! ನನ್ನ ಅನುಭವ ಮಾತ್ರ ಬೇರೆಯೇ ಇದೆ.

ನೆನಪ್ಮಾರಲ್ಲಿ ಒಬ್ಬರು ಪ್ರತಿಷ್ಠಿತ ಮಹನೀಯರಿದ್ದರು; ಯಾವಾಗಲೂ ಶ್ರೀಮದ್ಗಾಂಭೀರ್ಯದಿಂದ ಶೋಭಿಸುವವರು. ಸಾಮಾನ್ಯರನ್ನು ಸಿಕೊಂಡವರೊಡನೆ ವ್ಯವಹಾರವಿಟ್ಟುಕೊಂಡರೆ, ಅಭಿಮಾನಕ್ಕೆ ಕುಂದೆಂದು ಭಾವಿಸಿದ್ದರೋ ಏನೋ—ನಮ್ಮೆದುರು ತುಟಿ ಬಿಚ್ಚುತ್ತಿರಲಿಲ್ಲ.

ಒಮ್ಮೆ ಅವರೇ ಹೇಳಿ ಕಳಿಸಿ, ನನ್ನನ್ನು ಬರಮಾಡಿಕೊಂಡಾಗ, ಬಹಳ ಆಶ್ಚರ್ಯವೆನಿಸಿತು. ಎಂತಹ ಆದರ! ಇಷ್ಟರ ತನಕ ಎಂತಹರ ಮೇಲೆ ಎಂತಹ ಅಭಿಪ್ರಾಯ ಇಟ್ಟುಕೊಂಡಿದ್ದೆ—ಎಂದು ನೊಂದುಕೊಂಡೆ.

ಹತ್ತಿರದ ಹೋಟೇಲಿನಿಂದ ಚಹಾ—ತರಿಸಿಕೊಟ್ಟರು. ಸವಿಯೂಗಿ ಅರ್ಧ ಗಂಟೆ ನನ್ನ ವಿಚಾರ, ಲೋಕದ ವಿಚಾರ ಮಾತನಾಡಿದರು. ನನ್ನ ವೃತ್ತಿಯ ವಿಚಾರ, ಕಡ್ಡಾಯ ಜೀವ ವಿಮೆಯ ವಿಚಾರ ಬಂತು. ಬಳಿಕ—

"ನೀವು ಪಾಲಿಸಿ ತಗೊಂಡಿದ್ದೀರಾ?" ಎಂಬ ಪ್ರಶ್ನೆ ಬಂತು.

"ಇಲ್ಲ.....ಆದರೆ....."

"ಆದರೆ.....ಎಂಬ ಸಂಕೋಚವೇನೂ ಬೇಡ! ನನಗೇ ಏಜನ್ಸಿಯಿದೆ ನೋ ನೋಡಿ. ಈಗ ಹಳೆಯ ಕಂಪೆನಿ ಪದ್ಧತಿಯಲ್ಲ. ಕಾರ್ಪೋರೇಶನ್! ಏನು ಚಲೋ ವ್ಯವಸ್ಥೆ! ಸೆಂಟ್ರಲ್ ಗವರ್ನ್ಮೆಂಟ್‌ನ ಆಧಾರ ಇದೆ—ನೋಡಿ...."

—ಇತ್ಯಾದಿ ಇನ್ನೂ ಏನೇನೋ ಹೇಳುವುದರಲ್ಲಿದ್ದರು. ಆದರೆ ಅಷ್ಟರಲ್ಲೇ "ನನಗೆ ಪಾಲಿಸಿ ಬಂದಿಲ್ಲವಷ್ಟೇ! ಎರಡು ಸಾವಿರಕ್ಕೆ ಮೊನ್ನೆ ವಿಮೆಯಿಳಿಸಿದಷ್ಟೆ!"

—ಎಂದಾಗ ಆ ಹೊಸತಾದ ಪ್ರಭಾವವನ್ನುಂಟುಮಾಡಿದ್ದ, ಮಹನೀಯರ ಮುಖದ ಮೇಲಿದ್ದ ಮಂದಹಾಸದ ಕಳೆ, ಝಾರ್ರನೆ ಇಳಿದುಹೋಯ್ತು. ಹುಣ್ಣಿಮೆಯ ದಿನದ ಚಂದ್ರ ಆಗಸದ ಮಧ್ಯೆ ಪೂರ್ಣ ಕಳೆಯಿಂದ ಶೋಭಿಸುತ್ತಿದ್ದಾಗಲೇ ಅಸ್ತಹೊಂದಿದಂತಾಯ್ತು.

"ಅಯ್ತು ಹೋಗಿ ಹಾಗಿದ್ರೆ"

—ಎಂಬ ಶುಷ್ಕವಾದ ಮಾತಿನಿಂದ, ಒಲ್ಲದ ಗಂಡನನ್ನು ಹೊರ ಹಾಕುವ ಪ್ರೇಶಿಯಿಂದ, ಗೌರವದಿಂದ ಬೀಳ್ಕೊಂಡರು.

ಆ ಬಳಿಕ, ಆಗಾಗ್ಗೆ ಅವಸರದಿಂದ ವಿಮೆಮಾಡಿ,—ಒಂದು ತಪ್ಪುಮಾಡಿದಂತಾಯ್ತೋ ಎಂಬ ಯೋಚನೆಯು ಸುಳಿದುದೂ ಇದೆ. ವಿಮೆ ಮಾಡದವನೆಂದರೆ ಅವಿವಾಹಿತ ವರಸಿದ್ದ ಹಾಗೆ! ಹೆಣ್ಣು ಹೆತ್ತ ತಂದೆಗಳಂತಹ ಏಜಂಟರ ಪಾದ ಧೂಳಿ, ನಿಮ್ಮಲ್ಲಿಗೆ ಹಲವಾರು ಬಾರಿ ಸಂಬಂಧ ಬೆಳೆಯಿಸುವಾಶೆಯಿಂದ. ಕಾಣಿಸಿಕೊಳ್ಳುತ್ತದೆ. ನೀವು ಒಮ್ಮೆ ಆ ಬಲೆಯಲ್ಲಿ ಹಾಕಿಸಿಕೊಂಡಿರೋ—ಅಲ್ಲಿಗೆ ಮುಗಿಯಿತು. ಏಕ ಪತ್ನೀವ್ರತದವರಾದ ನಮಗೆ ಒಂದೇ ಪಾಲಿಸಿ ಸಾಕೆಂಬ ನಿರ್ಧಾರದ ಏಜಂಟರಿಂದ—ಸದ್ಯಕ್ಕೆ ದ್ವಿಪತ್ನೀ ತಾಪತ್ರಯದಿಂದ ಪಾರಾದಷ್ಟೇ.—ಸಂಭ್ರಮದ ನಿಟ್ಟುಸಿರನ್ನು ಬಿಡಬಹುದು!

ಹೀಗಿದ್ದರೂ, ಈ ಏಜಂಟರ ಕಾಟದಿಂದ ಏಕೆ ಪಾರಾಗ ಬೇಕೋ ನನಗೆ ತಿಳಿಯದಾಗಿದೆ. ಏಕೆಂದರೆ, ನಮ್ಮ ಭಾರತ. ಅಧ್ಯಾತ್ಮದ ತುತ್ತತುದಿಯಲ್ಲಿ ತಮ್ಮ ಹೃದಯವನ್ನು ತೂಗಬಿಟ್ಟು ಬೀದಿಗಳಲ್ಲೇ ತಿರುಗಾಡಹತ್ತುವ ಜನರುಳ್ಳ ನಾಡು! ಶಾಸ್ತ್ರಗಳೆಲ್ಲ 'ಮನುಷ್ಯನ ಸಾವು ಕಟ್ಟಿದ್ದು—ಯಾವಾಗಲಾದರೂ ಸಾಯಲು ಸಿದ್ಧರಿರಬೇಕು' ಎಂದು ಬೋಧಿಸುತ್ತಿವೆ. ಅಂತಹ ಸಾವಿನಿಂದಲೂ ಪ್ರಯೋಜನ ಪಡೆಯುವ ಈ ಯೋಜನೆ ಪ್ರಶಂಸನೀಯವಿದೆ. ಇನ್ನು ಕೆಲವರ ವಾದವಿದೆ. ವಿಮೆಯಿಂದ ವಿಮೆ ಮಾಡಿದವರಿಗೆ ಪ್ರಯೋಜನವಿಲ್ಲ—ಮಕ್ಕಳಿಗೆ ಇಲ್ಲವೇ—ಉತ್ತರಾಧಿಕಾರಿಗಳಿಗೆ—ಅದೂ ವಿಮೆ ಮಾಡಿದವ ಸತ್ತಾಗ—ಎನ್ನುತ್ತಾರೆ. ಆದರೆ ಈ ವಾದದಲ್ಲೂ ಹುರುಳಿಲ್ಲ—ನಮ್ಮ ಮಕ್ಕಳೆಂದರೆ ನಮ್ಮ ಆತ್ಮಜರು. ನಾವೇ ಆ ಮಕ್ಕಳ ರೂಪದಿಂದಿದ್ದೇವೆ—ಎನ್ನುವ, ಪುನರ್ಜನ್ಮವನ್ನು ನಂಬುವ ನಾವು, ನಮ್ಮ ಮಕ್ಕಳ ಹೆಸರಿಗೆ ಹಣ ಸಿಗುವಂತೆ, ನಿಶ್ಚಿಂತೆಯಿಂದ ಸಾವನ್ನಪ್ಪಬಹುದು; ಯಮನ ಪಾಶಕ್ಕೆ ತಲೆಯನ್ನೊಡ್ಡಬಹುದು.

ನನ್ನನ್ನೊಮ್ಮೆ ಹಳ್ಳಿಯೊಂದಕ್ಕೆ ಟ್ರಾನ್ಸ್‌ಫರ್ ಮಾಡಿದಾಗ, ಆ ಊರಲ್ಲಿ ಕಾಡು ಪ್ರಾಣಿಗಳ ಹಾವಳಿಯಿದೆಯೆಂದು ನನ್ನ ಹಿತೈಷಿಗಳು ಎಚ್ಚರಿಸಿದರು. ಆದರೆ ನಾನೇ ಜೀವವಿಮೆಯದೆ—ಎಂಬ ಭರವಸೆಯಿಂದ ಹೆಗಲು-ರಾತ್ರಿಯೆನ್ನದೆ ಧೈರ್ಯದಿಂದ ಅಲೆದಾಡುತ್ತಿದ್ದೆ. ಆದರೆ, ಯಾವುದೇ ವನ್ಯಜೀವಿಗೆ, ನನ್ನ ಮೈಮೇಲೆ, ಕೈ ಹಾಕುವ ಧೈರ್ಯವಿರಲಿಲ್ಲೋ — ಏನೋ ಆ ಮೇಲೆ ಜೀವವಿಮೆಯೆಂದರೆ 'ಮೃತ್ಯುಂಜಯ'ಯೆಂದೇ ನನ್ನ ಭಾವನೆ.

ಜೀವವಿಮೆ-ಇತ್ತೀಚೆಗೆ ಬಂದುದರಿಂದ, ನಾವು ಪಡೆಯುವಂತಹ ಲಾಭ—ನಮ್ಮ ಪೂರ್ವಜರಿಗೆ, ಪಡೆಯಲು ಸಾಧ್ಯವಾಗದೆ ಹೋಯಿತಲ್ಲ! ಅನ್ನಿಸುತ್ತದೆ.

ಹಿಂದೆ, ಸಾವಿತ್ರಿಗೆ ಆವಳ ಗಂಡ ಸತ್ಯವಾನ, ಸಾಯುತ್ತಾನೆ—ಎಂದು ತಿಳಿಯಿತು. ಕೂಡಲೇ ಆವಳು ದೇವರನ್ನೊಲಿಸಿಯಾದ್ರೂ--ಗಂಡನನ್ನುಳಿಸಿಕೊಳ್ಳಬೇಕೆಂದು ಯತ್ನಿಸಿದಳು. ಆದರೆ ಬದಲು, ಕೂಡಲೇ ಒಬ್ಬರು ಏಜಂಟರನ್ನು ಕಂಡು, ಒಂದೋ ಎರಡೋ—ಲಕ್ಷಕ್ಕೆ ವಿಮೆಯಿಳಿಸಿ ಬಿಡುತ್ತಿದ್ದರೆ, ಗಂಡನೂ ಉಳಿಯುತ್ತಿದ್ದ—ಸಾಕಷ್ಟು ಸಂಪತ್ತೂ ಸಿಗುತ್ತಿತ್ತು.

ಮಹಾಭಾರತ ಯುದ್ಧದಂತಹ ಸಮಯದಲ್ಲಿ ವಿವಿಧೋದ್ದೇಶದ ಪಾಲಿಸಿಗಳನ್ನು ಆ ಅಕ್ಷೋಹಿಣಿ ಸೈನ್ಯದಿಂದ ಸೈನಿಕರಿಗೆ ಕೊಡಿಸುತ್ತಿದ್ದರೆ, ಇನ್ಯೂರೆನ್ಸ್ ಕಂಪೆನಿ, ನಾಲ್ಕೈದಿನಗಳಲ್ಲಿ ಪಾಪರಾಂಗುತಿತ್ತು! ಹಾಗೆ ಇನ್ಯೂರೆನ್ಸ್‌ನ ಭರವಸೆಯಿದ್ದರೆ, ಗಂಡ ಸತ್ತೊಡನೆ, ಸೈನಿಕರ ಅನಾಥರಾದ ಮಡದಿ-ಮಕ್ಕಳು ಯುದ್ಧರಂಗಕ್ಕೆ ಬಂದು, ಪತಿಯ ಹೆಣವನ್ನು ಅಪ್ಪಿ ಬೊಬ್ಬಿಡುವ, ಪ್ರಸಂಗ ವರ್ಣನೆಯೇ ನಮ್ಮ ಕವಿಗಳಿಗೆ, ಸಿಗದೆ ಹೋಗುತ್ತಿತ್ತು.

'ನೀನು ಸತ್ತು ಹೋಗು', 'ಭಸ್ಮವಾಗಿ ಹೋಗು'... ಇತ್ಯಾದಿ ಋಷಿಗಳ ಶಾಪಕ್ಕೆ ಗುರಿಯಾದ ತಪಶಕ್ತಿಯಿಲ್ಲದ ಜನ, ಶಾಪ ಫಲಿಸುವ ವರೆಗೆ ನನೆಯುತ್ತಾ ದಿನಗಳೆಯುವದನ್ನು ಕಂಡಾಗಲೂ—ಇನ್ಯೂರೆನ್ಸ್ ಕಂಪೆನಿಯ ಯೋಜನೆಯೇಕೆ ಹೊಳೆಯಲಿಲ್ಲವೋ—ನಾಕಾಣೆ. ಹಾಗಿದ್ದಲ್ಲಿ—ಆ ಶಾಪಗಳಿಗೆ ಯಾರೂ ಅಂಜದೆ, ಲಕ್ಷ ಗಟ್ಟಲೆಯ ಕನಸು ಕಾಣಬಹುದಿತ್ತು.

—ಇಷ್ಟೆಲ್ಲಾ ಕಾರಣಗಳಿಂದ ಅವಶ್ಯಕವೆನಿಸಲ್ಪಡುವ, ಜೀವವಿಮೆ—ನಿನಗೆ ಬೇಡವೆಂದಿದ್ದರೆ, ಅವರ ಕಾಟ ತಡೆಯುಲಾಗದಿದ್ದೆ—ಅದಕ್ಕೆ ಒಂದೇ ಒಂದು ಉಪಾಯ—ಕೂಡಲೇ ಒಂದು ಪಾಲಿಸಿ ಕೊಂಡುಬಿಡಿ. ಮುಂದೆ ತಾಳಿ ಕಟ್ಟುವವರನ್ನು ಮಾತನಾಡಿಸಲು ಯಾರೂ ಬರಲಾರರು.

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು.ರಾಘವೇಂದ್ರ ಆಚಾರ್ಯ, ಎಂ.ಎ.)

ಸಾಮಾನ್ಯ ರೋಗಗಳು
(ಡಾ. ಕೆ.ಎಲ್.ಪಿತಾಳ, ಎಂ.ಬಿ.ಬಿ.ಎಸ್
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.

ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—ನವಭಾರತ ಪುಸ್ತಕ ಭಂಡಾರ, ಉಡುಪಿ.

ಬದಲಾವಣೆಗೆಂದು ಒಮ್ಮೆ
ಎಸ್. ಆರ್. ಬೀಡಿಯನ್ನು
ಬಳಸಿ ನೋಡಿರಿ,
ಅಂದರೆ ನೀವು ತಪ್ಪದೆ ಅದನ್ನೇ
ಎಂದೆಂದಿಗೂ ಕೊಂಡು
ಕೊಳ್ಳುವಿರಿ.

S.R. BEEDI
WORKS,
UDIPI, S.K.

ಶ್ರೀ ಎ. ಬಿ. ಶೆಟ್ಟಿ
ಸ್ಮಾರಕ ನಿಧಿಗೆ
ಸಹಾಯ ಮಾಡಿರಿ

ಯಮನ ನೆರಳು

(೨ನೇ ಪುಟದಿಂದ)

ಗೂ ಪ್ರಾಣದಾಸರು ಬೇಗನೇ ವಸ್ತ್ರ ಬದಲಾಯಿಸಿ, ನವಲೇಂದ್ರನೊಡನೆ ಮಹೇಂದ್ರಗಡಕ್ಕೆ ಹೊರಟರು. ಆ ಸಮಯದಲ್ಲಿ ಜಯಂತರು ತನ್ನ ಕೋಣೆಯಲ್ಲಿರದೆ, ಗೆಲರಿಯಲ್ಲಿ ಕುಳಿತು ಯೂವುದೋ ಚಿತ್ರಪಡುತಿದ್ದರು. ಇವರನ್ನು ನೋಡಿ ಜಯಂತರು ಪ್ರಾಣದಾಸರೊಡನೆ "ಏನು ವರ್ತಮಾನ?" ಎಂದರು.

ಇದನ್ನು ಕೇಳಿ ಪ್ರಾಣದಾಸರು ದಾಮೋದರರ ಕಡೆ ನೋಡಿದರು. ಅವರ ಕಣ್ಣುಗಳು "ಇವರಿಗೆಲ್ಲಾ ತಿಳಿದಿದೆ" ಎಂಬಂತೆ ಸೂಚಿಸುತ್ತಿತ್ತು. ದಾಮೋದರರು ಏನೊಂದೂ ಹೇಳದೆ ತಲೆ ತಗ್ಗಿಸಿದರು. ಮತ್ತು ಯೂವುದೋ ಗೂಢ ವಿಚಾರದಲ್ಲಿ ಮುಳುಗಿದರು.

ದಾಮೋದರರನ್ನು ಈ ದೆಸೆಯಲ್ಲಿ ನೋಡಿ ಪ್ರಾಣದಾಸರು ಜಯಂತರೊಡನೆ, "ಯೂವುದಾದರೂ ಹೊಸ ವಿಷಯ ಚಿಂಗೆ ಕಾರಣವಾದರೆ ಅದನ್ನು ವರ್ಣಿಸಲಾಗುವುದಿಲ್ಲ" ಎಂದರು.

"ಏನು ದಾಮೋದರ್, ಏನು ಯೋಚಿಸುತ್ತೀರಿ? ನಿಮಗಂತೂ ಪಟ್ಟಿಣದ ವಿಷಯ ಹೆಚ್ಚಿರುತ್ತದೆ."

"ಏನು ಹೇಳಲಿ ಮಹಾರಾಯರೇ, ಈ ಕಾರಣದಿಂದಲೇ ನಾನು ತುಂಬಾ ಅಸ್ತವ್ಯಸ್ತವಾಗಿದ್ದೇನೆ."

"ಅದೇಕೆ ನಿಜವಾದ ಮಾತು ಹೇಳಲು ಹಿಂದೆ ಮುಂದೆ ನೋಡಬೇಕು?"

"ಮಾತೇ ಅಂತಹುದು. ಕಣ್ಣುಂದು ನೊಡುತ್ತದೆ, ಮನಸ್ಸು ಒಂದು ಹೇಳುತ್ತದೆ. ನಿಷಯವು ವಿಶ್ವಾಸ ಹಾಗೂ ಸಂದೇಹಗಳ ಮಧ್ಯದಲ್ಲಿ ಸಿಕ್ಕಿಹಾಕಿಕೊಂಡಿದೆ."

"ಆಗಲಿ ನಾನು ನಿಮಗೆ ಕಷ್ಟಪಟ್ಟು ಇಲ್ಲಿಗೆ ಬರಹೇಳಿದ್ದು ಯೂಕೆಂದರೆ, ಒಂದು ಖುದಾಯಕ ಹಾಗೂ ಆಶ್ಚರ್ಯಜನಕ ಮಾತು ತಿಳಿಸಲಿಕ್ಕಾಗಿ."

"ನಿಜ, ನಿಜ. ಅದೇನು? ಎಂದರು ಪ್ರಾಣದಾಸರು.

ಇದನ್ನು ಕೇಳಿ ಜಯಂತರು ಬೆಲ್ ಹೊಡೆದರು. ನವಲೇಂದ್ರನು ಒಳಗೆ ಬಂದನು. "ಹಾಂ, ನವಲೇಂದ್ರ ನೀನು ಏನು ನೋಡಿದೆ ಎಂಬುದನ್ನು ವಿವರಿಸು" ಅಂದರು.

"ನಾನು ನಿನ್ನೆ ಹಾಗೂ ಈ ದಿನ ಮಾರ್ಕೆಟಿಗೆ ಹೋಗಿದ್ದೆ. ನಾನು ಕಾರ್ಯತುರವಾಗಿ ಫೂಟ್‌ಪಾಥಿನಲ್ಲಿ ಬರುವಾಗ ಬಹಳ ವೇಗದಿಂದ ಒಂದು ಮೋಟಾರು ಬಂತು. ಅದರಲ್ಲಿ ರಾಜಕುಮಾರಿ ಮಾಯಾವತಿ ಮತ್ತು ಗುಂಡಾ ಆತ್ಮರಾಮರಿದ್ದರು. ಇದು ನನ್ನ ಭ್ರಮೆಯಿರಬೇಕೆಂದು ಸುಮ್ಮನಿದ್ದೆ. ಆದರೆ ಈವತ್ತು ಪುನಃ ಈ ದೃಶ್ಯವನ್ನು ದಲಿತಸಿಂಹರ ಮನೆಯ ಮುಂದೆಯೇ ನೋಡಿದೆ. ಈ ಸಲ ಮೋಟಾರಿನ ಬದಲು ಟಾಂಗಾವಿತ್ತು, ಅಲ್ಲದೆ ಅವರ ಜತೆಯಲ್ಲಿ ಫಲಕದಾರಿಯೂ ಇದ್ದನು. ನಾನು ನನ್ನ ಸಂದೇಹವನ್ನು ದೂರೀಕರಿಸಲಿಕ್ಕಾಗಿ ಗಾಡಿಯನ್ನು ನೆಟ್ಟ ದೃಷ್ಟಿಯಿಂದ ಕಂಡಾಗ ಫಲಕದಾರಿ ಮತ್ತು ಆತ್ಮರಾಮರು ನಗೆಯಾಡಿ ಏನೋ ಮಾತನಾಡಿಕೊಂಡರು" ಎಂದ ನವಲೇಂದ್ರ.

"ಈಗೇನು ಹೇಳುತ್ತೀರಿ ಪ್ರಾಣದಾಸರೆ?" ಎಂದು ವಿಚಾರಿಸಿದರು ಜಯಂತರು.

"ನವಲೇಂದ್ರನು ಕಂಡದುದನ್ನೇ ಬಹುಶಃ ದಾಮೋದರರೂ ಹೇಳಬಹುದು. ಯೂಕೆಂದರೆ ನಾವೂ ಈ ದೃಶ್ಯವನ್ನು ಕಂಡಿರುವೆವು."

"ಈ ದೃಶ್ಯವನ್ನು ಕಣ್ಣು ನೋಡಿತೆಂದನಗೆ ಕಿವಿ ಕೇಳಿತು ಎಂದು ಸುಮ್ಮನಿರಬೇಕಾಗುತ್ತದೆ. ನಾನು ಇದನ್ನು ನಂಬಲಾರೆ, ಇದರಲ್ಲಿ ಏನೋ ಭಯಂಕರ ಜಾಲವು ಹಬ್ಬಿಕೊಂಡಿದೆಯೆಂಬುದು ನನ್ನಭಿಪ್ರಾಯ. ನೀವೇನು ಹೇಳುತ್ತೀರಿ ದಾಮೋದರ್?" ಎಂದರು ಜಯಂತ್.

"ನಾನೂ ಅದನ್ನೇ ಯೋಚಿಸುತಿದ್ದೆ, ಇದರಲ್ಲಿ ಯೂವುದೋ ಜಾಲ ಹಬ್ಬಿಕೊಂಡಿದೆ ಎಂಬುದು ನಿರ್ವಿವಾದ."

"ಆತ್ಮರಾಮನ ವಿವಾಹ ದಿನ ಎಂದು?" ಎಂದರು ಜಯಂತ್.

"ಬಹುಶಃ ನಾಳದಾಗಿರಬೇಕು" ಎಂದರು ಪ್ರಾಣದಾಸರು.

"ನಿಮ್ಮನ್ನು ಅವರು ಖಂಡಿತ ಕರೆಯಬಹುದು. ಕರೆಯಲೇಬೇಕು. ಒಂದು ವೇಳೆ ಅವರು ಕರೆಯದಿದ್ದರೂ, ತಾವು ಹೋಗಬೇಕು. ಅಲ್ಲಿ ತಮ್ಮ ಅವಶ್ಯಕತೆಯಿದೆ." ಎಂದರು ಜಯಂತ್;

"ಇವರು ತಮ್ಮ ರಹಸ್ಯಗಳನ್ನು ಮಿತ್ರರಿಗೂ ತಿಳಿಯಗೊಡುವುದಿಲ್ಲವಾದುದರಿಂದ ಇವರ ರಹಸ್ಯಗಳನ್ನು ಭೇದಿಸಲು ಸ್ವಲ್ಪ ಕಷ್ಟವೆ!" ಎಂದರು ದಾಮೋದರರು.

"ಯೂವ ಮಾತನ್ನು ಅಡಗಿಸಲಾರದೋ, ಅಂತಹುದನ್ನು ಅಡಗಿಸಲು ಸಾಧ್ಯವಿಲ್ಲ" ಎಂದರು ಜಯಂತ್.

"ನಿಮ್ಮ ಆದೇಶದಂತೆ, ನಾನು ಖಂಡಿತ ಅಲ್ಲಿಗೆ ಬರುತ್ತೇನೆ. ಒಂದು ವೇಳೆ ಏನಾದರೂ ಪತ್ತೆಯಾಗಲೂ ಬಹುದು" ಎಂದರು.

ದಾಮೋದರರು ಪ್ರಾಣದಾಸರೊಡನೆ ಹೊರಟರು.

ಆತ್ಮಾರಾಮನ ಮನೆಯಲ್ಲಿ ಉತ್ಸಾಹವೇ ಉತ್ಸಾಹ. ವಾದ್ಯ ಓಲಗ ನಡೆಯುತ್ತಿತ್ತು. ಅತಿಥಿಗಳನ್ನು ಸ್ವಾಗತಿಸುವ ಕೆಲಸವು ದಲಿತಸಿಂಹರಿಗೆ ಒಪ್ಪಿಸಲ್ಪಟ್ಟಿತ್ತು. ಫಲಕದಾರಿ ರಾಮಸಿಂಹರು ಇದರಲ್ಲಿ ನೆರವಾಗುತಿದ್ದರು. ಒಳಗಿನ ಕೋಣೆಯಲ್ಲಿ ಮಹಿಳೆಯರು ತುಂಬಿದ್ದರು. ಒಂದು ಬದಿಯಲ್ಲಿ ಕುರ್ಚಿಯ ಮೇಲೆ ಶೃಂಗಾರಲಂಕೃತನಾಗಿ ಮದುಮಗ ಆತ್ಮರಾಮನುಕೂತಿದ್ದನು. ಮಗುದೊಂದು ಕೋಣೆಯಲ್ಲಿ ವಧುವೂ ಆಭರಣಾಲಂಕೃತಳಾಗಿ ಸೆರಗನ್ನು ಮುಖಕ್ಕೆ ಸರಿಸಿ ನಾಚಿಕೊಂಡಿದ್ದಳು.

ಏನನ್ನೋ ಯೋಚಿಸುತ್ತಿದ್ದ ದಲಿತಸಿಂಹರು ಒಮ್ಮಿಂದೊಮ್ಮೆಲೇ ಕೂಡಲೇ ಫಲಕದಾರಿಯನ್ನು ಕರೆದು ರಣವೀರಸಿಂಹನು ಇದ್ದದಿಕ್ಕಿಗೆ ಕರೆದುಕೊಂಡು ಹೋದರು. ನಾವೆಷ್ಟು ಬೇಗ ಮುಗಿಸಬೇಕೆಂದಿದ್ದೆವೋ ಅಷ್ಟೆ ವಿಳಂಬವಾಗುತ್ತಿದೆ" ಎಂದರವರು.

"ನೀವು ಯಾರನ್ನು ಕಾಯುತಿದ್ದೀರಿ. ಎಂದ ಫಲಕದಾರಿ.

"ನಾನು ಆತ್ಮಾರಾಮನ ಪರವಾಗಿ ದಾಮೋದರ ಹಾಗೂ ಪ್ರಾಣದಾಸರನ್ನು ಈ ಸಮಾರಂಭಕ್ಕೆ ಕರೆದಿದ್ದೆ. ಅವರಿಬ್ಬರೂ ಬರುವುದಾಗಿ ಒಪ್ಪಿದ್ದಾರೆ. ಆದರೆ ಈ ಪರಿಗೂ ಒಬ್ಬರೂ ಬರಲಿಲ್ಲ

ಅವರಲ್ಲೊಬ್ಬನಾದರೂ ಈ ಸಮಾರಂಭಕ್ಕೆ ಬೇಕೇ ಬೇಕು. ನನಗೆ ಆ ದಿನ ದುರ್ಘಟನೆ ನೆನಪಿಗೆ ಬರುವಾಗ ಮದುವೆಗೆ ಬಾರದಿಬಹುದೆಂದೆನಿಸುತ್ತದೆ. ಜಮುನಾ ಪ್ರಸಾದನು ಆ ದಿವಸ 'ಬಿಜ್ಜಾ' ಕೆಗೆದುದು ಅನುಚಿತವಾಯ್ತು" ಎಂದು ನುಡಿದರು ದಲಿತಸಿಂಹರು.

"ಹೀಗೆಂದೂ ಆಗಲಿಕ್ಕಿಲ್ಲ. ಜಮುನಾ ಪ್ರಸಾದನು ಹುಚ್ಚನಂತೆ ಕಾಣುತ್ತಾನೆ. ಹುಚ್ಚನು ಮಾಡಿದ ಕಾರ್ಯಕ್ಕೆ ನಾವು ಉತ್ತರಾಧಿಕಾರಿಗಳಲ್ಲ. ಮತ್ತಾತ್ಕ್ರಮಣ ವಿಷಯು ಅವರು ಆಲೋಚಿಸಲಿಕ್ಕಿಲ್ಲ. ಯೂಕೆಂದರೆ ನಾವೇನೂ ಅವರಿಗೆ ಸಂಕೇತ ಮಾಡಿದ್ದಿಲ್ಲ" ಎಂದ ಫಲಕದಾರಿ.

"ನಾವು ಸಂಕೇತವನ್ನು ಮುಖದಿಂದ ಗಲೀ ಹೇಳಲಿಲ್ಲ ಎಂಬುದು ಸತ್ಯ. ಆದರೆ ಆಕ್ರಮಣವಾದುದು ನಮ್ಮ ಕಡೆಯಿಂದ ತಾನೆ?"

"ಸುಮ್ಮನೆ ಕಾಲಹರಣವಾಗುತ್ತಿದೆ. ಯಾರನ್ನಾದರೂ ಆಮಂತ್ರಿಸಿದ್ದರೆ ಸ್ವಲ್ಪ ಕಾಯಬಹುದು. ಯೂಕೆಂದರೆ ಅವರ ಸಮ್ಮಿಲನ ಅತ್ಯಗತ್ಯ" ಎಂದು ರಾಮಸಿಂಹ.

"ನಾನೊಂದು ಪ್ರಶ್ನೆ ಕೇಳಲಿಚ್ಛಿಸುತ್ತೇನೆ. ಅಜ್ಞೆ ಕೊಟ್ಟೆರಿ!' ಎಂದ ಫಲಕದಾರಿ.

"ಹಾಂ, ಹಾಂ, ಕೇಳಿರೆಲ್ಲಾ' ಎಂದರು ದಲಿತಸಿಂಹ.

"ಈ ಸಂದರ್ಭದಲ್ಲಿ ನಿಮಗೆ ಮತ್ತು ಆತ್ಮರಾಮನಿಗೆ ಜಯ ಸಿಗುವುದು ಆದರೆ ಆ ರಹಸ್ಯ ಎಂದಿನ ವರೆಗೆ ಮುಚ್ಚಲು ಸಾಧ್ಯ?'

"ಈ ಮಾತನ್ನು ಸುರಕ್ಷಿತವಾಗಿಡುವುದು ಕಷ್ಟವೇನೋ ಹೌದು, ಆದರ ನಮಗದರ ಉಪಾಯವೂ ಗೊತ್ತು."

"ಅದು ಹೇಗೆ?"

"ಯೂವ ಹೆಸರಿನಲ್ಲಿ ನಾವು ವ್ಯವಹಾರ ಮಾಡುತ್ತಿದ್ದೆವೋ ಅದನ್ನು ಮುಚ್ಚಿಬಿಡುವುದು.'

"ಹೇಗೆ? ಅವೆಂದಿನ ವರೆಗೆ?"

"ಎಂದೆಂದಿನ ವರೆಗೂ, ಹೇಗೆ ಎಂಬ ಪ್ರಶ್ನೆಗೆ ಸಮಯ ನೋಡಿ ಉತ್ತರಿಸುತ್ತೇನೆ'

'ಫಲಕದಾರಿ.....ಇದು ಮಾತಾಡುವ ಹೊತ್ತಲ್ಲ. ಅಲ್ಲಿ ನೋಡು ಅತಿಥಿಗಳೆಲ್ಲಾ ಸುಮ್ಮನೆ ನೋಡುತಿದ್ದಾರೆ. ನಾವು ಮಾಡಬೇಕಾದ ಕೆಲಸ ನ್ಯಾಯದ ವಿರೋಧವಾಗಿದೆ ಎಂಬುದನ್ನು ನೆನಪಿನಲ್ಲಿಟ್ಟು ಕೆಲಸ ಮಾಡು ತಿಳಿಯಿತೇನು? ಎಲ್ಲಾದರೂ ತಪ್ಪಿ ಹೋಗಿ ಇನ್ನೊಬ್ಬರನ್ನು ಬಂದಿಸು

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ, ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಹೊಸ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.

ಬೆಲೆ ರೂ. 1-4-0 (1=25).

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್.ಎ.ಎಮ್

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ. ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.

ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ

ವಿ. ಸೂ.—ಅಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0=25 N.P ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕಗಳಿಸಲಾಗುವುದು.

ನಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ನಮಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

NAVAYUGA WEEKLY, UDIPI.
REGD. NO.BG. 176
6-7-1961
LICENSE NO. 31
Licensed to Post without Prepayment

ನ ನಮ್ಮ ಜಾಲ ನಮ್ಮನ್ನೇ ಹಿಡಿಯದಿದ್ದರೆ ಸಾಕು. ಅದಕ್ಕಾಗಿಯೂದರೂ ನೀನು ಈಗ ಸಮ್ಮತಿಸಿರು' ಎಂದ ರಾಮಸಿಂಹ.

"ಒಳ್ಳೇದು ಪಲಕಧಾರಿ. ಅತಿಥಿಗಳ ಮಧ್ಯದಲ್ಲೆಲ್ಲಾ ತಿರುಗುತ್ತಿರು. ಅವರು ಹೋದ ನಂತರ. ನಮ್ಮನ್ನು ದೂರುವುದು ಬೇಡ"

ಬಹಳ ಸಮಯ ಕಳೆಯಿತು. ಆದರೆ, ದಾಮೋದರರು, ಪ್ರಾಣದಾಸರು ಬರುವ ಸೂಚನೆಯಿರಲಿಲ್ಲ ಕುಟೀರವಂತೂ ಎಳ್ಳು ಹಾಕಿದರೆ ಸ್ಥಳಸಿಗದಂತೆ ತುಂಬಿತ್ತು. ಅದಕ್ಕಾಗಿ ದಲಿತಸಿಂಹರು ಕಾರ್ಯಕ್ಕೆ ಅಸ್ಪಕೆ ಕೊಟ್ಟರು.

ಪ್ರಾಣದಾಸ ಮತ್ತು ದಾಮೋದರರು ಕಪಟ ವೇಷ ಧರಿಸಿ ಅಲ್ಲಿಯೇ ಉಪಸ್ಥಿತರಿದ್ದರು. ಇವರು ಮುಂದಕ್ಕೆ ಹೋಗಿ ವಧುವಿನ ಮುಖ ನೋಡಲಪೇಕ್ಷಿಸಿದರು. ಅದು ಸಾಧ್ಯವಾಗಲಿಲ್ಲ. ಕಾರಣ ಮುಖ ತುಂಬಾ ಮುಸುಕು ಹಾಕಲಾಗಿತ್ತು. ಆದರೆ ಎತ್ತರ ಗಾತ್ರ, ಮೈ ಬಣ್ಣ ಇವೆಲ್ಲದರಲ್ಲಿ ಮೂಯೂವತಿಯನ್ನು ಹೋಲುತ್ತಿತ್ತು ಇದನ್ನು ನೋಡಿ ಅವರ ಸಂದೇಹಕ್ಕೆ ಮೇರೆ ಇಲ್ಲದಂತಾಯ್ತು.

ವಧೂವರರನ್ನು ಮಂಟಪದಲ್ಲಿ ಕುಳ್ಳಿರಿಸಲಾಯ್ತು. ಪಂಡಿತರು ತಮ್ಮ ಕೆಲಸವನ್ನು ಪ್ರಾರಂಭಿಸುತ್ತಿದ್ದರು. ಅಷ್ಟರಲ್ಲಿ 'ಬುರ್ಖಾ'ದಲ್ಲಿ ಓರ್ವ ಸ್ತ್ರೀ ಪ್ರವೇಶಿಸಿದಳು. ಅವಳೊಟ್ಟಿಗೆ ಸೋಲೀಸ್ ಕೇಪ್ಟನ್ ಶರ್ಮಾಜೀ, ಡಿ. ಎಸ್- ಪಿ. ಹಾಗೂ ಇನ್ನಿತರ ಇಬ್ಬರು ಇನ್ಸ್‌ಪೆಕ್ಟರುಗಳು ಇದ್ದರು. 'ಬುರ್ಖಾ'ದಲ್ಲಿದ್ದ ಸ್ತ್ರೀಯು ವಧುವಿನ ಮುಸುಕನ್ನು ತರೆದವಳೇ 'ಯಮುನಾ' ಎಂದು ಚೀತ್ಕಾರ ಮಾಡಿದಳು.

ಇದನ್ನು ಕೇಳುತ್ತಲೇ ಸಭೆಯಲ್ಲಿ ಗಲಭೆಯುಂಟಾಯ್ತು. ಆತ್ಮರಾಮನು ನಿರಾಶನಾದರೂ, ಸಾಹಸವನ್ನು ಬಿಡದೆ ಆಗಂತುಕ ಸ್ತ್ರೀಯೊಡನೆ—"ಏ ನೀನು ಯಾರು? ಅತೀ, ಈ ತುರುಕಳನ್ನು ಒಳಗೆ ಯಾರು ಬಿಟ್ಟದ್ದೋ? ಹುಚ್ಚರಾಗಿದ್ದೀರೇನು?" ಎಂದ ಆತ್ಮರಾಮ

"ಏಕೆ ಮಾತಾಡುವುದಿಲ್ಲ. ಯಾರು ನೀನು?' ಎಂದು ಕೆರುಚಿದರು ದಲಿತಸಿಂಹರು.

"ಬದ್ಮಾಶ್, ನನ್ನ ಪರಿಚಯವಿಲ್ಲವೇನು? ನೋಡು ಬುರ್ಖಾ ತೆಗೆದು ಬಿಸುಟು, 'ಈಗಲಾದರೂ ನೋಡಿ ಗುರುತಿಸು ತಿಳಿಯುತೇನು?

"ಮೂಯೂವತೀ.....!" ಎಂದು ಭಯಭೀತರಾಗಿ ನುಡಿದರು ದಲಿತಸಿಂಹರು.

"ಹಾಂ ದುಷ್ಟ, ನಾನು ನಿಮ್ಮ ಜಾಲ ಪರಿಸುವ ಮೊದಲೇ ಎಚ್ಚರದಿಂದಿದ್ದೆ. ನೀವೇ ನನ್ನ ಅಭಾಗಿ ಅಕ್ಕನನ್ನು ಎಲ್ಲಿಯೋ ಬಚ್ಚಿಟ್ಟಿರುವಿರೆಂದು ನನಗೆ ಸಂದೇಹವಿತ್ತು. ಆದರೆ ಪಾಪ ಅವಳು ನಿಮ್ಮ ಜಾಲಕ್ಕೆ ಸಿಕ್ಕಿ ಕೊಂಡಳು.' ಒಳ್ಳೇದು ಶರ್ಮಾಜೀ, ಇವರನ್ನು 'ದಸ್ತಗಿರಿ' ಮಾಡಿರಿ ಎಂದಳು.

ಅನಂತರ ಮೂಯೂಳು ಅಕ್ಕನ ಕಡೆ ತಿರುಗಿದಳು. ಕೆರುಚಿ ಕೊಂಡಳು ಭೂಮಿಯಲ್ಲಿ ಬೀಳುತ್ತಾ ಬಟುಗಟ್ಟಿದಳು.—

ಪ್ರಚಲಿತ ಪ್ರಸಂಗ

(೧೯ನೇ ಪುಟದಿಂದ)

ಧಿಯು ಸಭೆ ಕರೆದಿದ್ದಾರೆ. ಕುವೈತದ ವಿದೇಶ ಮಂತ್ರಿ ಶ್ರೀ ಬಾದರ್—ಅಲ್‌ಮುಲ್ಲಾರು ಒಂದು ತಂತಿಯನ್ನು ಕಳುಹಿಸಿ ಅದರಲ್ಲಿ ಕುವೈತದ ಸ್ವಾತಂತ್ರ್ಯದ ಮೇಲೆ ಅಪಾಯ ತಟ್ಟಿರುವುದೆಂದೂ ಇದರಿಂದ ಅಂತರಾಷ್ಟ್ರೀಯ ಶಾಂತಿಯು ಭಂಗವಾಗುವ ಸಂಭವವಿದೆಯೆಂದೂ ಈ ಸಂಬಂಧದಲ್ಲಿ ವಿಚಾರ ವಿಮರ್ಶೆ ಮಾಡಲು ಸಂ.ರಾ. ದ ಸಭೆ ಕರೆಯ ಬೇಕೆಂದೂ ಕೇಳಿಕೊಂಡಿದ್ದಾರೆ. ಹೊಂಗ್‌ಕಾಂಗದಲ್ಲಿದ್ದ ಎರಡು ಬ್ರಿಟಿಷರಣ ನೌಕೆಗಳು ಕುವೈತದತ್ತ ಆಕಸ್ಮಿಕವಾಗಿ ರವಾನೆಯಾಗಿದ್ದು, ತನ್ನ ಎಣ್ಣೆ ಶುದ್ಧೀಕರಣದ ಕ್ಷೇತ್ರವನ್ನು ರಕ್ಷಿಸುವ ಸಲುವಾಗಿವೇ ಇವು ತೆರಳಿವೆ.ಅಲ್ಲದೆ ಬ್ರಿಟಿಷ ವಿಮಾನ ಸೇನೆಯ ಜೆಟ್‌ರಣ ವಿಮಾನ ಮತ್ತು ಟೇಂಕರುಗಳು ಕುವೈತವನ್ನು ಸೇರಿವೆ. ಇರಾಕದ ಆಕ್ರಮಣವನ್ನು ಎದುರಿಸುವಲ್ಲಿ ತನಗೆ ಸಹಾಯಮಾಡಬೇಕೆಂದು ಅದು ಬ್ರಿಟನ್ನನ್ನು ಕೇಳಿಕೊಂಡಿತ್ತು. ಸೌದಿ ಅರೇಬಿಯೂದ ಸೇನೆಯು ಕೂಡ ಸಹಾಯ ನೀಡಲು ಕುವೈತನ್ನು ಸೇರಿದೆ.

ಕುವೈತದ ಬಂದರು ಸ್ಥಳದಲ್ಲಿ ಭದ್ರಕಾವಲು ನಡೆಯುತ್ತಿದೆ. ಸೀಮೂ ಪ್ರದೇಶದಲ್ಲಿ ಸೈನಿಕ ಚಲನವಲನಗಳು ತೋರುತ್ತಿವೆ. ಆದರೂ ಒಟ್ಟಿನಲ್ಲಿ ಅಲ್ಲಿ ಶಾಂತಿಯಿದೆ. ಇರಾಕದಲ್ಲಿ ಕೂಡ ಸೈನಿಕರ ಭರ್ತಿ ನಡೆಯುತ್ತಿದೆ. ಸೈನಿಕ ಚಟುವಟಿಕೆಗಳು ತೀವ್ರವಾಗ ತೊಡಗಿವೆ. ಘೋಷಣೆಯೇನೇ ಇದ್ದರೂ ಇರಾಕದ ಬಲಾತ್ಕಾರ, ಗದರಿಕೆಗಳು ಬ್ರಿಟಿಷ ಪ್ರಧಾನಿ ಮೆಕಮಿಲನರೆನ್ನುವಂತೆ ಕೇವಲ ಶಾಬ್ದಿಕವಾಗಿ ಮಾತ್ರ ಪರಿಣಾಮ ಹೊಂದುವುದೆಂದು ನಿರೀಕ್ಷಿಸಬಹುದು. ಹಾಗಾದಲ್ಲಿ ಈ ಬೆದರಿಕೆ-ಗದರಿಕೆಗಳು ಪ್ರದರ್ಶನ ಮಾತ್ರ.

— ——

ಭಾವನೆಯಿಂದ ಕರ್ತವ್ಯ ದೆಡೆಗೆ

೧೯೬೦ರ ಜನವರಿ ೨೫ನೆಯ ದಿನ ರಾಷ್ಟ್ರಪತಿ ರಾಜೇಂದ್ರ ಪ್ರಸಾದರ ಅಕ್ಕ. ಭಗವತೀ ದೇವಿಯವರು ಮೃತ್ಯುಮುಖರಾಗಿದ್ದರು. ಭಗವತಿಯವರು ರಾಜೇಂದ್ರ ಬಾಬುಗಳಿಗೆ ತಾಯಿಯೂ ಅಕ್ಕನೂ ಆಗಿದ್ದರು. ಅವರ ಅಪಮ್ಯ ಆದರ್ಶವಾದ ಮತ್ತು ಅನುಚಿತ ಮೃದುಲ ಸ್ವಭಾವಗಳಿಗಾಗಿ ಟೀಕಿಸುವ ಏಕ ಮಾತ್ರ ವ್ಯಕ್ತಿಯಾಗಿದ್ದರು ಅಕ್ಕ. ತಮ್ಮ—ಅಕ್ಕಂದಿರ ಸ್ವಭಾವದಲ್ಲಿ ಬಹಳಷ್ಟು ಅಂತರವಿತ್ತು. ಹಾಗಿದ್ದರೂ ಅವರಿಬ್ಬರಲ್ಲಿ ಅಪಾರ ಪ್ರೇಮವೂ ಇತ್ತು. ಸೋದರಿಯು ಯಥಾರ್ಥವಾದಿಯಾಗಿದ್ದರೆ, ತಮ್ಮನಿಗೆ ಮಾನವನ ನೇರ ಸರಳತನದಲ್ಲಿ ಅಚಲ ವಿಶ್ವಾಸವಿತ್ತು; ಆದರೂ ಇಬ್ಬರೂ ಪ್ರೇಮಲತೆಯಿಂದ ಬಂಧಿತರಾಗಿದ್ದರು.ಅಕ್ಕನ ಮೃತ್ಯುವಿನಿಂದಾಗಿ ರಾಜೇಂದ್ರಬಾಬುಗಳ ಜಂಘಾಬಲ ಉಡುಗಿಹೋಯ್ತು.ಅವರುಶೋಕಾತಿರೇಕದಿಂದಪ್ರಜ್ಞಾಶೂನ್ಯರಾಗಿ ಮೃತ್ಯು ಶಯ್ಯೆಯ ಬಳಿಕುಳಿತು ಬಿಟ್ಟರು. ರಾತ್ರಿ ಬಹಳವಾದ ನಂತರ ಅವರನ್ನು ಹೇಗಾದರೂ ಸಮಾಧಾನ ಮಾಡಿದ ನಂತರ ಅವರು ಮಲಗಲು ಒಪ್ಪಿಕೊಂಡರು. ಆಗಲೇ ಅವರಿಗೆ ತಿಳಿಯಿತು. ರಾತ್ರಿ ಕಳೆಯುವುದರಲ್ಲಿದೆ. ಸೂರ್ಯೋದಯದೊಡನೆಯೆ ಭಾರತದ ಹತ್ತನೆಯ ಗಣರಾಜ್ಯ ದಿನಾಚರಣೆ ನಡೆಯಲಿದೆ. ಆದರಲ್ಲಿ ರಾಷ್ಟ್ರಪತಿಗಳ ಸ್ಥಾನಬಲದಿಂದ ತಮಗೆ ಸೇನೆಯ ಗೌರವ ರಕ್ಷೆಯನ್ನು ಸ್ವೀಕರಿಸಬೇಕಾಗಿದೆ. ಸಾರ್ವಜನಿಕ ಕರ್ತವ್ಯ ಭಾವನೆಯು ಜಾಗ್ರತವಾದೊಡನೆಯೇ ಸ್ವಂತ ದುಃಖದ ಮೇಲೆ ಪರದೆ ಬಿದ್ದಿತು. ಮರುದಿನ ಗೌರವ ರಕ್ಷೆ ಸ್ವೀಕರಿಸಲು ಅವರು ಸಿದ್ಧರಾದರು. ಅವರ ಗಂಭೀರ ಮುಖದಲ್ಲಿ ದುಃಖದ ಯಾವ ಚಿಹ್ನೆಯೂ ತೋರಿ ಬರಲಿಲ್ಲ. ಮಧ್ಯಾಹ್ನದ ಹೊತ್ತು ಅವರು ಮರಳಿ ಅಕ್ಕನ ಅಂತ್ಯೇಷ್ಟಿ ಕ್ರಿಯೆಯಲ್ಲಿ ಭಾಗ ವಹಿಸಲು ಯಮುನಾತಟವತ್ತ ತೆರಳಿದರು.

'ಹಾಯ್ ಯಮುನಾ, ಅಪಮಾನ ಸಹಿಸಲಾರದೆ ವಿಷತಿಂದೆಯಾ" ಎಂದು.

ವಾಸ್ತವವಾಗಿ ಯಮುನಳು ತೀರಿ ಹೋಗಿದ್ದಳು. ಇದರಿಂದಾಗಿ ಅತಿಥಿಗಳು ಆಗಲಿದರು. ಪ್ರಾಣದಾಸರು ದಾಮೋದರರೂ ಎಲ್ಲರೂ ಡನೆ ಹೊರಹೊರಟು ಹೋದರು. ಪೋಲೀಸು ಆಫೀಸರರು ಯಮುನಳ ಶವದ ಬಳಿ ಸಾಗಿದರು. ಇದಕ್ಕಿಂತ ಮೊದಲೇ ಗುಂಡಾಗಳು ಒಬ್ಬರೂ ಸಿಗದೆ ನಾಪತ್ತೆಯಾಗಿದ್ದರು. ಮೂಯೂವತಿಯು ಒಮ್ಮೆಲೆ ಕಿರುಚಿಕೊಂಡಿದ್ದುದರಿಂದ ಒಂದು ಕ್ಷಣ ಅವರೆಲ್ಲರ ದೃಷ್ಟಿಯು ಯಮುನಳ ಶವದ ಬಳಿ ಸೇರಿತ್ತು. ಮೂಯೂವತಿಯು ಕೆಳಗೆನಿಂತಿದ್ದು ಕುರ್ಚಿಯಲ್ಲಿ ಕೂಡಿದಳು. ಯಮುನಾಳ ಕಳೇಬರವನ್ನು ಭೂಮಿತಾಯ ಅಂಗೈಯುರಿಸಲಾಯ್ತು.

ಮೂಯೂವತಿಯು ಎದ್ದು ನಿಂತು, "ಶರ್ಮಾಜೀ, ಶವವನ್ನು ಕೊಂಡು ಹೋಗಿ, ಏನು ಮಾಡಬೇಕಾಗಿದೆಯೋ ಅದನ್ನು ಮುಗಿಸಿ" ಎಂದು ಹೊರ ಹೊರಟು ಹೋದಳು.

(ಮುಂದುವರಿಯುವುದು.)

ಅಮೃತ ಬಿಂದು

ಶ್ರೀಮಂತರಿಂದ ಹಣವನ್ನೂ, ಬಡವರಿಂದ ಓಟುಗಳನ್ನೂ ತೆಗೆದು ಕೊಂಡು ಶ್ರೀಮಂತರಿಂದ ಬಡವರನ್ನೂ, ಬಡವರಿಂದ ಶ್ರೀಮತರನ್ನೂ ರಕ್ಷಿಸುವುದಾಗಿ ಒಪ್ಪಿಸುವ ಕಲೆಯೇ—ರಾಜಕೀಯ!

೦೦ ೦೦

ಮಾಡುವದು ಹೇಳುವದಕ್ಕಿಂಥಾ ಶತಪಾಲು ಒಳ್ಳೇದು. ಆದ್ದರಿಂದಲೇ ದಾನ ಕೊಡುವದಾದರೂ ಬಲಗೈಯಲ್ಲಿ ಕೊಟ್ಟದ್ದು ಎಡಗೈಗೆ ತಿಳಿಯದಂತಿರಬೇಕು ಎನ್ನಲಾಗಿದೆ. ಕೊಟ್ಟದಾನವೂ ಹೇಳಿ ಕೊಂಡಾಗ ಬೆಲೆ ಕಳೆದು ಕೊಳ್ಳುತ್ತದೆ.

೦೦ ೦೦

ಮುದುಡಿದ ಮುಖ ಗೊಣಗುವ ನಾಲಗೆ ಕೂಡದು. ಮುಖ ಅರಳಿರಬೇಕು; ನಗು ಸೂಸುತ್ತಿರಬೇಕು. ಇವು ನಿನಗಾಗಿ ಅಲ್ಲ; ನಿನ್ನನ್ನು ನೋಡುವವರಿಗಾಗಿ!

೦೦ ೦೦

ಬೆಂಕಿ ಯೂ ದೀಪದ ಬೆಳಕನ್ನು ಕಂಡಾಗ ಕ್ರಿಮಿಕೀಟ ಹಾಗೂ ಚಿಟ್ಟೆಗಳು ಅದನ್ನು ಮುತ್ತುವಂತೆ ನಗು ಮುಖದವರ ಸುತ್ತು ಜನ ಸೇರುತ್ತಾರೆ.

೦೦ ೦೦

ಪರಿಸ್ಥಿತಿಯೆಂಬುದು ನಿರ್ಬಲರ ಅಧಿಕಾರಿ. ಬುದ್ಧಿವಂತರ ಪ್ರಗತಿಯ ಸಾಧನ.

೦೦ ೦೦

ಎಲ್ಲಿ ಯೂವ ಕುಟುಂಬದಲ್ಲಿ ಹುಟ್ಟುವದೆನ್ನುವದು ಮನುಷ್ಯನ ಕೈಯೊಳಗಿಲ್ಲ. ಆದರೆ ಕೆಸರಿನಲ್ಲಿ ಹುಟ್ಟಿದ ತಾವರೆಯಂತೆ ಹುಟ್ಟಿದ ಸ್ಥಳವನ್ನು ಶೋಭೆಗೊಳಿಸುವುದು ಆತನ ಕೈಯಲ್ಲಿದೆ!

೦೦ ೦೦

ಕಾತುರ, ಅಡ್ಡ ಮನಸ್ಸು, ಅನೀತಿಯ ಭಾವನೆ ಬಂದಾಗ ಅವನ್ನು ಹೊರಬಿಡಬೇಡ.ಹೊರಬಿಟ್ಟರೆ ಹರಡಿಹಬ್ಬಿ ಅವು ನಿನ್ನನ್ನು ವಶಪಡಿಸಿ ಕೊಳ್ಳುವವು. ಹೊರಬಿಡದೆ ಅದುಮಿ ಹಿಡಿದರೆ ನಿನ್ನ ಕೈ ಯೊಳಗಿರುವವು.

"ಅತ್ಯುತ್ತಮ ಬ್ಯಾಂಕಿಂಗ್ ಸೇವೆ"

- ಸಿಗ್ನಿ
- ಕ್ಯೂಮುಲೇಟಿವ್
- ಇನ್ವೆಸ್ಟ್‌ಮೆಂಟ್ ಏಜನ್ಸಿ
- ಲಕ್ಷ್ಮೀ ಮತ್ತು ಸಿಂಡಿಕೇಟ್ ಬ್ಯಾಂಕ್ ಕೇಶ್ ಸರ್ಟಿಫಿಕೇಟುಗಳು
- ಭದ್ರತಾ ಕೋಶಗಳು
- ವಿದ್ಯಾರ್ಥಿಗಳಿಗೆ ಮತ್ತು ಧರ್ಮ ಸಂಘ—ಸಂಸ್ಥೆಗಳಿಗೆ ವಿಶೇಷ ಸೌಕರ್ಯಗಳು

ಇನ್ನಿತರ ಎಲ್ಲಾ ವಿಧದ ಬ್ಯಾಂಕಿಂಗ್ ಸೇವೆಗಳು
ದಕ್ಷಿಣ ಭಾರತದಾದ್ಯಂತ ಹಬ್ಬಿರುವ 141 ಶಾಖೆಗಳು

ಸಿಂಡಿಕೇಟ್ ಬ್ಯಾಂಕ್

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್,
ರಿಜಿಸ್ಟರ್ಡ್ ಆಫೀಸ್: ಮುಳುಂದ ನಿವಾಸ, ಉಡುಪಿ, (ಮೈಸೂರು ರಾಜ್ಯ)
ಸ್ಥಾಪನೆ: 1925.

Edited Printed & Published by K. H. Shetty, at the Navayuga Press, Udipi, S. India.

40th year of publication. 13-7-1961 ೪೦ನೇ ವರ್ಷ

ಸಂಪುಟ ೪೧ ನವಯುಗ Vol. 41

ಸಂಚಿಕೆ ೪೩ No. 43

ಬೆಲೆ 0=13

ಪ್ರಚಲಿತ ಪ್ರಸಂಗ:

ಅತಿವೃಷ್ಟಿಯಿಂದ ಅನಾಹುತ

ಕೇರಳ, ಮೈಸೂರು, ಮದ್ರಾಸು, ಒಡಿಸ್ಸ ರಾಜ್ಯಗಳಲ್ಲಿ ಅತಿವೃಷ್ಟಿಯಿಂದ ಸಾವುನೋವುಗಳು ಕಾಣಿಸಿಕೊಂಡಿವೆ. ಇವರ ಪುನರ್ವಸತಿಯ ಕಾರ್ಯ ಭರದಿಂದ ನಡೆಯ ತೊಡಗಿದೆ ಇತ್ತೀಚೆಗಿನ ಹಲವು ವರ್ಷಗಳಲ್ಲಿ ಇಂತಹ ಹಾನಿ ಕಟ್ಟಿಲ್ಲವೆಂದು ಹೇಳಲಾಗುತ್ತಿದೆ.

ದಕ್ಷಿಣಭಾರತದ ರಾಜ್ಯಗಳಲ್ಲಿ ವಿಪರೀತವಾಗಿ ಮಳೆ ಸುರಿದುದರಿಂದ ಅಲ್ಲಿನ ಚಿಕ್ಕದೊಡ್ಡ ನದಿನದಗಳೆಲ್ಲವೂ ತುಂಬಿ ಹರಿದು ಮಹಾಪೂರವೆದ್ದು ಸುತ್ತುಮುತ್ತಲಿನ ಪ್ರದೇಶಗಳಲ್ಲಿಬಹುವಾಗಿ ಹರಡಿದುದರಿಂದ ಪ್ರಕೃತಿಯು ಪ್ರಕೋಪಕ್ಕೆ ಜನ ತುತ್ತಾಗಿದ್ದಾರೆ. ಕರಾವಳಿಯ ಜಿಲ್ಲೆಗಳು ಮಾತ್ರವಲ್ಲ ಒಳನಾಡಿನ ಜಿಲ್ಲೆಗಳಲ್ಲಿಯೂ ಇದರಿಂದಾಗಿ ಸಾವು ನೋವುಗಳು ತಲೆನೋರಿವೆ. ಇಂತಹ ದುಷ್ಪರಿಣಾಮದಾಯಕ ಮಹಾಪೂರವು ಸರ್ವತ್ರ ೧೯೨೪ರಿಂದ ಈಚೆಗೆ ನಡೆದಿರಲಿಲ್ಲವೆಂದು ಹೇಳಲಾಗದೆ ಅತಿವೃಷ್ಟಿಯಿಂದಾಗಿ ನೆರೆ ನಿಂತುದು ಮಾತ್ರವಲ್ಲ ಜನಹಾನಿ, ಬೆಳೆಹಾನಿ ಮತ್ತು ಮನೆಹಾನಿಗಳೂ ದಕ್ಷಿಣದ ಕೇರಳ, ಮದ್ರಾಸು ಮತ್ತು ಮೈಸೂರು ರಾಜ್ಯಗಳಲ್ಲಿ ಸಂಭವಿಸಿವೆ. ರಾಜ್ಯ ಸರಕಾರಗಳು ಮಹಾಪೂರದಿಂದ ಸಂತ್ರಸ್ತರಾದವರಿಗೆ ಪುನರ್ವಸತಿಯ ಸೌಕರ್ಯವನ್ನು ಒದಗಿಸಲು ಮತ್ತು ಅವರನ್ನು ಸುರಕ್ಷಿತ ಸ್ಥಳಕ್ಕೆ ಕೊಂಡೊಯ್ಯಲು ಪ್ರಯತ್ನ ನಡೆಸಿದುದರಿಂದ ಪ್ರಾಣಹಾನಿಯು ಬಹಳ ಕಡಿಮೆಯಾಗಿತ್ತು. ಒಡಿಸ್ಸ ರಾಜ್ಯದಲ್ಲಿಯೂ ಮಹಾ ನದಿಯು ಉಕ್ಕಿ ಹರಿದುದರ ಪ್ರಯುಕ್ತ ಅಲ್ಲಿಯೂ ನೆರೆಯ ಹಾವಳಿ ಭೀಕರವೆನ್ನಲಾಗಿದೆ.

ಪಶ್ಚಿಮ ಕರಾವಳಿಯ ಅಗಲಕಿರಿದಾದ ರಾಜ್ಯ ಕೇರಳದಲ್ಲಿ ಭಯಂಕರ ಪರಿಣಾಮವನ್ನು ನೆರೆಯು ಮಾಡಿದೆಯೆಂದು ತಿಳಿಯುತ್ತದೆ. ಇಲ್ಲಿನ ಪ್ರತಿಯೊಂದು ನದಿಯೂ ಮಹಾಪೂರದಿಂದಾಗಿ ಕೇರಳ ರಾಜ್ಯದ ಬಯಲು ಭಾಗವೆಲ್ಲವೂ ನೀರಿನಡಿಯಲ್ಲಿ ಮುಳುಗಿದೆಯೆಂದು ಗೊತ್ತಾಗಿದೆ. ಇದರ ಪರಿಣಾಮವಾಗಿ ರಾಜ್ಯದ ಸಾರಿಗೆ ಸಂಪರ್ಕಗಳೆಲ್ಲವೂ ಕಡಿದು ಹೋಗಿವೆ. ಕೊಚ್ಚಿಯಿಂದ ತಿರುವನಂತಪುರದ ವರೆಗಿನ ಸಂಪೂರ್ಣ ಭೂಭಾಗವು ಮಹಾಪೂರಕ್ಕೆ ತುತ್ತಾಗಿ ಸಮುದ್ರ ಪಾಲಾಗಿರುವಂತೆ ಭಾಸವಾಗುತಿತ್ತು ಎಂದು ಈ ಪ್ರದೇಶದ ಮೇಲೆ ವಿಮಾನ ಮೂಲಕ ಸಾರಿದ್ದ ವೈಮಾನಿಕನೊಬ್ಬನ ಹೇಳಿಕೆಯಿದೆ. ಭೂಪ್ರಯಾಣ ಮಾಡಲಾಗದುದರಿಂದ ನೆರೆಯಿಂದ ಪೀಡಿತವಾದ ಪ್ರದೇಶಗಳನ್ನು ಪ್ರತ್ಯಕ್ಷ ಕಂಡು ಪರಿಹಾರ ವಿಧಾನವನ್ನು ಯೋಚಿಸಲು ಕೇರಳದ ಸಚಿವರು ವಿಮಾನದ ಮೂಲಕ ವೀಕ್ಷಿಸಬೇಕಾಗಿ ಬಂತೆಂಬುವಾಗ ಅಲ್ಲಿನ ಧಾರುಣ ಪರಿಸ್ಥಿತಿಯ ಅರಿವಾಗುವುದು. ಕಳೆದ ೩೬ ವರ್ಷಗಳಲ್ಲಿ ಕಾಣದಿರುವ ಅದ್ಭುತ ಭಯಾನಕ ದೃಶ್ಯವು ಕೇರಳದಲ್ಲಿ ದೃಷ್ಟಿಗೋಚರವಾಗುತಿತ್ತು. ಮುಖ್ಯಮಂತ್ರಿ ಶ್ರೀ ಪಟ್ಟಂ ಥಾನು ಪಿಳ್ಳೆಯವರೆನ್ನುವಂತೆ, ಈ ಮಹಾಪೂರದಿಂದಾಗಿ ಇಡಿಯ ಕೇರಳ ಹಾಗೂ ಅದರ ಆಪಾರ ಸಂಪತ್ತು ನೀರುಪಾಲಾಗಿದೆ. ಇದನ್ನು ತುಂಬಿಕೊಳ್ಳುವುದಕ್ಕೆ ಬಹು ಸಮಯ ಬೇಕಾಗುವುದು.

ಮೈಸೂರು ರಾಜ್ಯದ ಕೊಡಗು ಜಿಲ್ಲೆಯಲ್ಲಿ ಸುರಿದಷ್ಟು ಮಳೆ ಸದ್ಯ ಎಲ್ಲಿಯೂ ಸುರಿದಿರಲಾರದು. ಇದರ ದೆಸೆಯಿಂದಾಗಿ ಕಾವೇರಿ ನದಿಯಲ್ಲಿ ನೀರಿನ ಪ್ರಮಾಣವು ಮಿತಿ ಮೀರಿ ಏರಿದೆ. ಕೃಷ್ಣರಾಜಸಾಗರದಲ್ಲಿ ಅಪಾಯದ ಮಟ್ಟವನ್ನು ಮುಟ್ಟಲು ೧೧ ಅಡಿಯಿದ್ದರೂ ಮೆಟ್ಟೂರಲ್ಲಿ ಅದನ್ನೂ ಮುಟ್ಟಿತ್ತು. ಕಪಿನಿ, ಹೇಮಾವತಿ ನದಿಗಳೆಲ್ಲವೂ ಮೀರಿ ಹರಿದುದರಿಂದ ಮೈಲುಗಟ್ಟಲೆ ವಿಸ್ತೀರ್ಣದಲ್ಲಿ ನೀರೇ ನೀರು ಎನ್ನುವಂತಿದ್ದುವು. ೧೧೦ ವರ್ಷ ಪುರಾತನವಾದ ಶ್ರೀರಂಗ ಪಟ್ಟಣದ ಸೇತುವೆಯು ಕೂಡ ನೀರಿನಡಿ ಮುಳುಗಿದ್ದುದರಿಂದ ಬೆಂಗಳೂರು ಮೈಸೂರು ಸಾರಿಗೆಯ ಕ್ರಮದಲ್ಲಿಯೂ ವ್ಯತ್ಯಯವುಂಟಾಗಿತ್ತು. ಪಿರಿಯಾಪಟ್ಟಣ ಮತ್ತು ಫ್ರೇಸರ್ ಪೇಟೆಗಳ ನಡುವಣ ಬಯಲು ಭಾಗವು ನೀರಿನಲ್ಲಿ ಮುಳುಗಿತ್ತು. ಇದರಿಂದ ಮೈಸೂರು ಮಡಿಕೇರಿ ಬಸ್ಸುಗಳೂ ಸ್ತಬ್ಧವಾಗಿದ್ದುವು.



ಅಣುಶಕ್ತಿಯನ್ನು ವಿದ್ಯುತ್ತಾಗಿ ಪರಿವರ್ತಿಸುವ ಅತಿ ಚಿಕ್ಕದಾದ ಯಂತ್ರಪ್ರೊಂದನ್ನು ಸೂಕ್ಷ್ಮವಾಗಿ ಪರಿಶೀಲಿಸಲಾಗುತ್ತಿದೆ. ಈ ಯಂತ್ರವು ಇನ್ನೂರು ರಾತಲು ಭಾರವಿರುವುದು.

ದಕ್ಷಿಣಕನ್ನಡದ ಜಿಲ್ಲೆಯಲ್ಲಿ ಸುರಿದ ಮಳೆಯ ಪ್ರಮಾಣವು ವಿತಿಮೀರಿಲ್ಲದಿದ್ದರೂ ನದಿಗಳಲ್ಲಿ ನೆರೆಯೇರಿತ್ತು. ಜಿಲ್ಲೆಯನ್ನು ಘಟ್ಟದ ಮೇಲಿನ ನಗರಗಳೊಡನೆ ಜೋಡಿಸುವ ಘಾಟಿ ಮಾರ್ಗಗಳೆಲ್ಲವೂ ಕುಸಿದಿದ್ದುದರಿಂದ ಅತ್ತಿತ್ತ ಸಂಚಾರವೆಯು ಅಸಾಧ್ಯವೆನಿಸಿತು. ಆದರೂ ಸಂಚಾರಾನು ಕೂಲತೆಗಳನ್ನು ಸರಿಪಡಿಸುವ ಪ್ರಯತ್ನಗಳು ನಡೆದಿದ್ದುದರಿಂದ ಎಲ್ಲವೂ ಸರಿಗೊಳ್ಳುತ್ತಿವೆ. ಉಡುಪಿ ತಾಲೂಕಿನ ಮೂಬುಕಳದಲ್ಲಿ ಕಟ್ಟುತ್ತಿರುವ ಸೇತುವೆಗೆ ಪೂರಕವಾಗಿ ಅರ್ಧ ಹೊಳೆಯ ವರೆಗೆ ನಿರ್ಮಿಸಿದ ರಸ್ತೆಯ ದೆಸೆಯಿಂದ ಅದರ ಪೂರ್ವಕ್ಕಿರುವ ಹಳ್ಳಿಗಳೆಲ್ಲವೂ ಮಹಾಪೂರಕ್ಕೆ ತುತ್ತಾಗಿವೆ. ಕುಂದಾಪುರ ತಾಲೂಕಿನಲ್ಲಿ ನೆರೆಯಿಂದಾಗಿ ಆರು ಮರಣಗಳೂ ಸಂಭವಿಸಿವೆಯೆಂಬ ವರದಿಗಳು ಬಂದಿವೆ. ಆದರೂ ಪೀಡಿತರಿಗೆ ಸಹಾಯವೊದಗಿಸುವಲ್ಲಿ ವಹಿಸಿದ ಜಾಗರೂಕತೆಯಿಂದಾಗಿ ದುರಂತಗಳು ಕಡಿಮೆಯಾಗಿದ್ದುವು. ಒಂದರೆ ಹೊತ್ತು ಬಸ್ಸುಗಳ ನೇರ ಸಂಚಾರ ಮಾತ್ರ ನಿಂತು ಹೋಗಿತ್ತು.

ಆದರೆ, ಉತ್ತರ ಕನ್ನಡದ ಸ್ಥಿತಿಯು ಭೀಕರವಾಗಿತ್ತೆಂದು ತಿಳಿಯುತ್ತದೆ. ಕಾಳಿ, ಅಘನಾಶಿನಿ, ತಂಡಾವತಿ ಮೊದಲಾದುವುಗಳು ತುಂಬಿ ಹರಿದುದರಿಂದ ಸುತ್ತುಮುತ್ತ ನೀರು ನಿಂತು ಜಿಲ್ಲೆಯ ಸಂಪರ್ಕವೇ ಇಲ್ಲದಂತಾಗಿದೆ. ಕುಮಟೆ ಮತ್ತು ಹೊನ್ನಾವರಗಳು ಬೇರೆ ಬೇರೆ ನಡು ಗುಡ್ಡೆಗಳಂತೆ ಕಾಣ ತಿದ್ದುವೆಂದು ವರದಿಯಾಗಿದೆ. ಇಡಿಯ ಉತ್ತರ ಕನ್ನಡ ಜಿಲ್ಲೆಯಲ್ಲಿ ನೆರೆಯು ಬಾಯಿಗೆ ಬೀಳದ ಒಂದೇ ಒಂದು ನಗರವೆಂದರೆ ಘಟ್ಟದ ಮೇಲಿನ ಸಿರ್ಸಿ. ಇದನ್ನು ಸೌಭಾಗ್ಯದ ನಗರವೆನ್ನುತ್ತಿದ್ದರು. ಕೇವಲ ವರ್ಷದ ಪ್ರಕೋಪ ಮಾತ್ರವಲ್ಲ ಸಮುದ್ರರಾಜನ ಮುನಿಸೂ ಮೈಸೂರಿನ ಕರಾವಳಿಯ ಮೇಲೆ ಪರಿಣಾಮ ಬೀರಿದಂತಿದೆ. ಬಿರುಸಾದ ಬಿರುಗಾಳಿಯೊಂದಾಗಿ ಸಮುದ್ರವು ತೀವ್ರವಾಗಿ ಉಕ್ಕಿ ಹರಿದುದರಿಂದ ಗೋಕರ್ಣದ ವಿಸ್ತೃತ ಭೂಭಾಗವು ಸಮುದ್ರ ನೀರಿನ ಪಾಲಾಗಿರುವುದಾಗಿ ತಿಳಿದುಬಂದಿದೆ. ಬಿತ್ತಿದ ಬೆಳೆಯೆಲ್ಲವೂ ಉಪ್ಪು ನೀರಿನಡಿ ಮುಳುಗಿ ವ್ಯರ್ಥವಾಗಿವೆ. ಇದೇ ರೀತಿಯ ಸಮುದ್ರದ ಕೊರೆತವು ಅಲ್ಲಲ್ಲಿ ನಡೆಯುತ್ತಿರುವ ಸುದ್ದಿಯಿದೆ.

(೧೦ನೇ ಪುಟ ನೋಡಿರಿ)

ESTD. 1921

NAVAYUGA
KANNADA WEEKLY,
UDIPI.

Founder:
Late Sri A. B. Shetty
Former Minister for Public Health, Govt. of Madras & Govt. of Mysore.

ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದ ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರತಿ ಗುರುವಾರ
ಉಡುಪಿಯಿಂದ ಹೊರಡುವ
ರಾಷ್ಟ್ರೀಯ ವಾರಪತ್ರಿಕೆ

ಸ್ಥಾಪನೆ: ೧೯೨೧.

ಗೌರವ ಸಂಪಾದಕರು:
ಎಸ್. ಗೋಪೀಚಂದ ರಾವ್, ವಿದ್ವಾನ್.
ಬಿ. ಶಾಮರಾಯ ಶೆಟ್ಟಿ, ಬಿ. ಎ., ಎಲ್. ಟಿ.

ಸಂಚಾಲಕ ಸಂಪಾದಕರು:
ಕೆ. ಹೊನ್ನಗ್ಯು ಶೆಟ್ಟಿ.

●

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-50
ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3-50
ಹೆಚ್ಚಿನ ವಿವರಗಳಿಗೆ ವ್ಯವಹರಿಸಿರಿ.

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವಸೌಕರ್ಯವಿರುವುದು.

ಧಾರಾವಾಹಿ ಕಾದಂಬರಿ

ಯಮುನ ನೆರಳು

ಮೂಲಲೇಖಕರು: ಶ್ರೀ ಎಂ. ಎಲ್. ಪಾಂಡೇಯ.
ಅನುವಾದಕರು: ಶ್ರೀ ಎಸ್. ಎಂ. ಶೆಟ್ಟಿ, ಶಿಮುಂಜೆಪರಾರಿ.
(ಕಳೆದ ಸಂಚಿಕೆಯಿಂದ)

— ೧೩ —

ಜಯಂತರಿಗೆ ಈ ಸುದ್ದಿಯನ್ನು ದಾನೋದರ ಹಾಗೂ ಪ್ರಾಣದಾಸರು ವಿಶದವಾಗಿ ವಿವರಿಸಿದರು. ಇಡೀ ನಗರವೇ ಇದರ ಕುರಿತು ಮಾತಾಡುತ್ತಿತ್ತು. ಯಮುನಾಳು ತೀರಿಹೋಗಿ ಹಲವು ದಿನಗಳು ಕಳೆದುವು. ಪೋಲೀಸಿನವರು ಪ್ರಾಣದ ಪರಿವೆಯಿಲ್ಲದೆ ಪರಿಶ್ರಮಪಟ್ಟರೂ, ಗುಂಡಾಗಳು ಯಾರು? ಎಲ್ಲಿರುವರು? ಎಂಬುದನ್ನು ಪತ್ತೆಹಚ್ಚಲಾರದಾದರು. ದಲಿತ ಸಿಂಹರ ಈ ದುರ್ಮರ್ಮದಿಂದ ಜನತೆಯಲ್ಲೂ ಕ್ರೋಧ ಹುಂಬಿತ್ತು. ಪ್ರತಿಯೋರ್ವ ಸದ್ಗೃಹಸ್ಥರೂ ಇವರನ್ನು ಮನಸಾರ್ವಕವಾಗಿ ಬೈಯುತ್ತಿದ್ದರು.

ಜಯಂತರವರು ಪ್ರಾಣದಾಸರೊಡನೆ "ನೋಡಿ, ಇನ್ನು ನೀವು ಮೂಯೂವತಿಯನ್ನು ತುಂಬಾ ಜಾಗ್ರತೆಯಾಗಿ ನೋಡಿಕೊಳ್ಳಬೇಕು. ಗುಂಡಾಗಳು ಅವಳ ಮೇಲೆ ಪ್ರತೀಕಾರ ತೀರಿಸದಿರಲಿಕ್ಕಿಲ್ಲ. ಜನತೆಯ ದೃಷ್ಟಿಯಲ್ಲಿ ನಾವು ಹೀನರಾಗುವಂತೆ ಮಾಡಿದವಳೇ ಅವಳು. ಜಾಗ್ರತೆಯಾಗಿರಲಿ"

"ರಾಣಿಯ ನಿಧನದ ಬಳಿಕ ನಾವು ತುಂಬಾ ಜಾಗ್ರತೆಯಿಂದ ಅವಳನ್ನು ನೋಡುತ್ತಿದ್ದೇನೆ. ಆದರೆ ಮುಂದೆ ಮತ್ತೂ ಜಾಗ್ರತೆಯಾಗಿ ನೋಡಿಕೊಳ್ಳುತ್ತೇವೆ. ಅವಳನ್ನು ಹೊರ ಹೋಗಲು ಬಿಡುವುದಿಲ್ಲ. ಕೆಲವೊಂದು ಸಲ ನನಗೆ ಇಲಾಖೆಗೆ ಹೋಗಬೇಕಾಗುತ್ತದೆ. ಆಗ ದಾನೋದರರು ನೋಡಿಕೊಳ್ಳುತ್ತಾರೆ."

"ತಾವು ನಿಶ್ಚಿಂತರಾಗಿರಿ. ನಾನವಳನ್ನು ಎಲ್ಲಿಗೂ ಹೋಗಗೊಡಲಿಕ್ಕಿಲ್ಲ." ಎಂದರು ದಾನೋದರ್‌ರವರು.

"ಹಾಂ, ಈ ಮಾತು ನೆನಪಿನಲ್ಲಿರಲಿ" ಎಂದರು ಜಯಂತ್. "ಈ ಸಮಸ್ಯೆಗಳಂತೂ ದಿನದಿಂದ ದಿನಕ್ಕೆ ಜಟಿಲವಾಗುತ್ತಿವೆ" ಎಂದರು ದಾನೋದರ್.

"ಪರವಾ ಇಲ್ಲ, ಆದರೆ ನೀವು ಮಾತ್ರ ನಿಮ್ಮ ಕಾರ್ಯವನ್ನು ಜಾಗ್ರತೆಯಿಂದ ಪೂರೈಸಬೇಕು". ಜಯಂತ್‌ರವರು ಹೇಳಿದರು.

"ನಾನು ಅಹೋರಾತ್ರಿ ಈ ರಹಸ್ಯ ಭೇದದ ಕಾರ್ಯ ಮಾಡುತ್ತಿದ್ದೇನೆ. ಈ ಪ್ರಯತ್ನದಿಂದಲೇ ಶೀಘ್ರಾತಿ ಶೀಘ್ರವಾಗಿ ರಹಸ್ಯವು ಹೊರಬೀಳುವುದೆಂದು ನಂಬಿದ್ದೇನೆ."

ತದನಂತರ ಇಬ್ಬರೂ ಬೀಳ್ಕೊಟ್ಟು ಹೊರ ಹೊರಟರು.

ಇತ್ತ ಯಮುನಾಳ ಮೃತ್ಯುವಿನಿಂದಾಗಿ ಮೂಯೂವತಿಯು ಯಾವಾಗಲೂ ಚಿಂತಿತಳಾಗಿರುತಿದ್ದಳು. ಪ್ರಾಣದಾಸರ ಉಪದೇಶದಿಂದ ಅವಳು ಕೆಲವೊಂದು ಸಲ ನಿಶ್ಚಿಂತಳಾದರೂ, ಅವಳನ್ನು ಪುನಃ ಚಿಂತೆಯು ಕಾಡುತಿತ್ತು. ಅವಳು ಶೋಕ ಸಂತಪ್ತಳಾಗಿದ್ದಳು. ಹಲವು ದಿನಗಳಿಂದ ಮನೆಯಲ್ಲೇ ಸೆರೆಹಾಕಿ ಇಟ್ಟುದುದರಿಂದ ಹೊರ ಹೋಗಲಪೇಕ್ಷಿಸಿ, ಹರ್ಷವತಿಯೊಡನೆ—"ಬಹಳ ದಿನಗಳಿಂದ ಹೊರ ಹೋಗಲಿಲ್ಲ. ಮಹೇಂದ್ರಗಡಕ್ಕಾದರೂ ಹೋಗಿ ಬರುವ" ಅಂದಳು—ಹರ್ಷವತಿಯು ಸಿದ್ಧಳಾದಳು ಇಬ್ಬರೂ ಕಾರಿನಲ್ಲಿ ಕುಳಿತು ಮಹೇಂದ್ರಗಡದತ್ತ ಹೊರಟರು.

ಮೂಯೂವತಿಯ ಕಾರು ಮಹೇಂದ್ರಗಡಾಭಿಮುಖವಾಗಿ ಹೊರಟಿತು. ಪಟ್ಟಣದಿಂದ ದೂರವಾಗಿ ಒಂದು ಪ್ರಶಾಂತ ಸ್ಥಾನದಲ್ಲಿ ಹೋಗುತ್ತಿರುವಾಗ ಮೂಯೂ ಹಾಗೂ ಹರ್ಷವತಿಯರಿಗೆ—"ಇನ್ನೂ ಸ್ವಲ್ಪ ದೂರ....." ಎಂಬ ಆರ್ತನಾದ ಕೇಳಿಸಿತು. ಮೋಟಾರು ವೇಗದಿಂದ ಸಾಗತೊಡಗಿತು ಅವರಿಬ್ಬರೂ ಸ್ವರವೆಲ್ಲಿಂದ ಬಂತೆಂದು ಅರಿಯದೆ ಆಶ್ಚರ್ಯಚಕಿತರಾಗಿದ್ದರು. ಸ್ವಲ್ಪ ಮುಂದುವರಿದು ಕಾರು ಒಮ್ಮಿಂದೊಮ್ಮೆ ನಿಂತಿತು. "ಏನಾಯ್ತು?" ಎಂದಳು ಹರ್ಷವತಿ. "ಇಂಜಿನು ಕೊಂಚ ಕೊಂದರೆ ಕೊಡುತ್ತದೆ, ಎಂದುತ್ತರವಿತ್ತು ಕೆಳಗಿಳಿದಳು ಮೂಯೂವತಿ. ಅಷ್ಟರಲ್ಲಿ ಕೆಲವು ಕಪ್ಪು ಮುಸುವಾಡ ಧರಿಸಿದ ವ್ಯಕ್ತಿಗಳು ಮೋಟಾರನ್ನು ಮುತ್ತಿದ್ದರು. ಒಬ್ಬನು ಡ್ರೈವರ್ ಸೀಟಿನ ಕೆಳಗಡೆಯಿಂದಿದ್ದನು. ಹರ್ಷವತಿ ಇದೇನೆಂದು ಕಣ್ಣು ಬಾಯಿ ಬಿಡುತ್ತಿರುವಾಗಲೇ, ಅವರು ಮೂಯೂವತಿಯನ್ನು ಎತ್ತಿಕೊಂಡು ಹೋದರು ಹಾಗೂ ಡ್ರೈವರನೂ ಅವರೊಡನೆ ಅದೃಶ್ಯನಾದನು.

ಹರ್ಷವತಿ ಒಬ್ಬಳೇ ಕಾರಿನಲ್ಲಿ ಕುಳಿತು—"ಕಳ್ಳರು, ಕಳ್ಳರು, ಬದುಕಿಸಿ" ಎಂದು ಬೊಬ್ಬೆ ಹೊಡೆಯ ಹತ್ತಿದಳು. ಬಹಳ ಹೊತ್ತಿನ ನಂತರ ಕೆಲವು ಜನ ರೈತರು ಬಂದರು. ಮತ್ತು ಅವಳು ಅಳುವ ಕಾರಣವನ್ನು ವಿಚಾರಿಸಿದರು.—"ನನ್ನ ತಂಗಿಯನ್ನು ಕೆಲವು ದರೋಡೆಗಾರರು ಹೊತ್ತುಕೊಂಡು ಹೋದರು. ಡ್ರೈವರನೂ ಅವರೊಂದಿಗೆ ಸೇರಿರುವನಾದುದರಿಂದಲೇ ಹೀಗಾಯ್ತು ದಯವಿಟ್ಟು ಪತ್ತೆ ಹಚ್ಚುತ್ತೀರಾ" ಎಂದಳಾಕೆ.

ಎರಡು ಮೂರು ಜನ ಹರ್ಷವತಿಯ ಸಂಕೇತದತ್ತ ಹೊರಟರು. ಮತ್ತಿಬ್ಬರು ಕಾರಿನ ಬಳಿ ನಿಂತರು. ಈ ಊರಿನಲ್ಲಿ ಯಾರಾದರೂ ಡ್ರೈವರ್ ಇದ್ದಾನೇನು?" ಎಂದಳು ಹರ್ಷವತಿ.

"ಹೂಂ, ಒಬ್ಬನಿದ್ದಾನೆ," ಎಂದ ರೈತ.

"ದಯವಿಟ್ಟು ಅವನನ್ನು ಕರೆತರುವಿರಾ?"

ಇದನ್ನು ಕೇಳಿ ಕಾರಿನ ಬಳಿ ನಿಂತವರು ಡ್ರೈವರನನ್ನು ಕರೆ ತರಲು ಹೋದರು. ಮೂಯೂವತಿಯನ್ನು ಹುಡುಕಹೋದವರು ಅಸಫಲರಾಗಿ ಸ್ವಲ್ಪ ಸಮಯದ ನಂತರ ಹಿಂತಿರುಗಿದರು. ಅಷ್ಟರಲ್ಲಿ ಹಳ್ಳಿಯ ಡ್ರೈವರನು ಅಲ್ಲಿಗೆ ಬಂದನು. ಅವನನ್ನುಡ್ರೈವ್‌ಮಾಡುವಂತೆಹರ್ಷವತಿಯು ಹೇಳಿದಳು. ಅವನೂ ಒಪ್ಪಿಗೆಯಿತ್ತನು. ಹರ್ಷವತಿಯು ಬಂಗಲೆಗೆ ಹಿಂತಿರುಗಿದ ಕೂಡಲೇ ದಾನೋದರರಿಗೆ ಎಲ್ಲಾ ವಿಷಯವನ್ನು ತಿಳಿಸಿದಳು. ಅವರೂ ಹೆದರಿ ಈ ಸಮಸ್ಯೆಯನ್ನು ಪ್ರಾಣದಾಸರ ಮುಂದಿಟ್ಟರು.

"ನಡೆಯಿರಿ ಜಯಂತರಲ್ಲಿಗೆ ಹೋಗುವ" ಎಂದು ಎದ್ದು ನಿಂತು, ದಾನೋದರರ ಸಂಗಡ ಪ್ರಾಣದಾಸರು ಕಾರಿನಲ್ಲಿ ತೆರಳಿದರು.

(೧೦ನೇ ಪುಟ ನೋಡಿರಿ)

ಸ್ಥಾಪನೆ: 1924

ದಿ ಕರ್ಣಾಟಕ ಬೇಂಕ್ ಲಿಮಿಟೆಡ್
(ಶೆಡ್ಯೂಲ್ಡ್ ಬೇಂಕ್)
ರಿಜಿಸ್ಟರ್ಡ್ & ಹೆಡ್ ಆಫೀಸು: ಮಂಗಳೂರು—3.

ಈ ಕೆಳಗಿನ ಏರಿಸಿದ ಬಡ್ಡಿದರಗಳಲ್ಲಿ ಠೇವಣಾತಿಗಳನ್ನು ಸ್ವೀಕರಿಸಲಾಗುವುದು-

ಒಂದರಿಂದ ಎರಡು ತಿಂಗಳುಗಳ ವರೆಗೆ	....	ಸಾ|| ಸೇಕಡಾ 3-75	ನ.ಪೈಸೆ
ಮೂರರಿಂದ ಐದು ತಿಂಗಳುಗಳ ವರೆಗೆ	....	,, 4-25	,,
ಆರು ತಿಂಗಳುಗಳಿಂದ 12 ತಿಂಗಳುಗಳ ವರೆಗೆ	....	,, 4-50	,,
12 ತಿಂಗಳು ಮಿಕ್ಕಿ 24 ತಿಂಗಳುಗಳ ವರೆಗೆ	....	,, 4-75	,,
24 ತಿಂಗಳು ಮಿಕ್ಕಿ 48 ತಿಂಗಳುಗಳ ವರೆಗೆ	....	,, 5 00	,,
48 ತಿಂಗಳುಗಳಿಗೆ ಮಿಕ್ಕಿ	....	,, 5-25	,,

ಸೇವಿಂಗ್ಸ್ ಬ್ಯಾಂಕ್ ಬಡ್ಡಿ ದರವನ್ನು
ಸಾ. ಸೇಕಡ 2½% ರಿಂದ 3½%ಗೆ ಏರಿಸಲಾಗಿದೆ.

THE KARNATAKA BANK LIMITED.

ಅಮೃತಾಂಜನ
ಎಲ್ಲಾ ನೋವುಗಳಿಗೆ ಸಿದ್ಧೌಷಧ
ಎಲ್ಲಾತರದ ಸಿಡಿತ ಮತ್ತು ನೋವುಗಳಿಗೆ
50 ವರ್ಷ ಪ್ರಾಯದ
ಪಾಕೆಟ್ ಡಾಕ್ಟರ್
ಆಯಿ. ಕಂಪನಿ ಲಿ ಬೊಂಬಾಯಿ ಮದ್ರಾಸ್ ಕಲ್ಕತ್ತಾ

ಶುದ್ಧ ಹರಟೆ:

ವನ ಮಹೋತ್ಸವಾಚರಣ ಮಾಹಾತ್ಮ್ಯೆ

ಜುಲೈ ಮಾಸದ ವೈಶಿಷ್ಟ್ಯಗಳಲ್ಲಿ ವನಮಹೋತ್ಸವ ಸಪ್ತಾಹದ ಆಚರಣೆಯೊಂದು. ವರ್ಷಂಪ್ರತಿ ಈ ಮಹೋತ್ಸವದ ವೇಳೆ ಲಕ್ಷಾಂತರ ಗಿಡಗಳು ನೆಡಲ್ಪಡುವುವಾದರೂ ಅವು ಬೆಳೆದು ಬಂದುದು ಗೋಚರಿಸುವುದಿಲ್ಲ.

ಶ್ರೀ ಸಾ| ಚಂದ್ರಶೇಖರ ಚಡಗ

ಅದೊಂದು ದಿನ ಬೆಳಿಗ್ಗೆ ಸೇಟಿಯಿಂದ ಮನೆಗೆ ಬರುವಾಗ ರಸ್ತೆಯ ಒಂದು ಪಕ್ಕದಲ್ಲಿ ನಮ್ಮ ಮಂಜು ಹೊಂಡವೊಂದನ್ನು ಮಾಡುತಿದ್ದುದು ಕಂಡು ಬಂತು. ಅರೇ, ಇದೇನಪ್ಪಾ! ಇವನು ರಸ್ತೆಯ ಬದಿಯಲ್ಲಿ ಹೊಂಡವೇಕೆ ತೋಡುತ್ತಾನೆ ಎಂದುಕೊಂಡೆ. ಮೊದಲಿನಿಂದಲೂ ನನಗೂ ಮಂಜುವಿಗೂ ಬಹಳ ಸಲಿಗೆ.

"ಏನೋ ಮಂಜೂ, ಇಲ್ಲೇಕೆ ಹೊಂಡ ತೋಡುತ್ತಿರುವಿ? ನಿಮ್ಮ ಮನೆಯ ದನದ ಕರುವೇನಾದರೂ ಸತ್ತುಹೋಗಿದೆಯೋ?" ಎಂದು ಕೇಳಿದೆ ಹಾಗೆ ಕೇಳಲು ಕಾರಣವಿಲ್ಲದಿಲ್ಲವೆನ್ನಿ. ಕೆಲವು ವರ್ಷಗಳಿಂದ ಮಂಜುವಿನ ಮನೆಯಲ್ಲಿ ಒಂದು ಮುದಿ ದನವಿದೆ. ಆ ದನದ ರೂಪವನ್ನು ವರ್ಣಿಸುವುದು ಕಾಳಿದಾಸನಂತಹ ಮಹಾ ಕವಿಗಳಿಗೂ ಸಾಧ್ಯವಿಲ್ಲ. ನಮ್ಮ ನಿಮ್ಮ ಮನೆಯ ದನವನ್ನು ಕೈ ತೊಳೆದುಕೊಂಡು ಮುಟ್ಟಬೇಕಾದರೆ ಅವನ ಮನೆಯ ದನವನ್ನು ಮುಟ್ಟಿ ಕೈತೊಳೆದುಕೊಳ್ಳಬೇಕು ಅದರ ದೇಹದಲ್ಲಿ ರಕ್ತವೆಂಬ ವಸ್ತು ಇದೆಯೇ ಎಂದು ಪರೀಕ್ಷಿಸಲು ಅಮೇರಿಕದಿಂದ ಸ್ಪೆಷಲ್ ಸೂಕ್ಷ್ಮದರ್ಶಕ ತರಿಸಿಕೊಳ್ಳಬೇಕಾದೀತು! ಅದೂ ಅಲ್ಲದೆ ಎಕ್ಸ್‌ರೇ ತೆಗೆಯದೇ ಅದರ ದೇಹದ ಎಲುಬುಗಳ ಕುರಿತು ಯಾವ ಸ್ತ್ರೀ ಮಾಹಿತಿಯನ್ನು ಪಡೆಯಬಹುದು. ಅದಕ್ಕೆ 'Holland Cow" ಎಂಬ ಬಿರುದನ್ನು ನಾವು ದಯಾಳಿಸಿದ್ದೆವು. ಆ ದನವು ಹೊತ್ತಿಗೆ ನೆಗದಿ ೧/೨ ಕುಡ್ತೆ ಹಾಲು ಕೊಡುತ್ತಿದ್ದರೂ ನನ್ನ ಮಂಜು ದಿನವೊಂದರಳ ಕುಡ್ತೆ ಹಾಲನ್ನು ಮಾರುತ್ತಾನೆ ಎಂಬ ಸಂಗತಿ ಗುಟ್ಟಾಗಿಯೇ ಇರಲಿ.

ಒಂದೊಮ್ಮೆ ನಾನು ಮಂಜುವನ್ನು ಇದರ ರಹಸ್ಯವೇನೆಂದು ಕೇಳಿದಾಗ, "ಅಯ್ಯನೋರೆ, ಬಾವಿಯಲ್ಲಿ ಶುದ್ಧ ನೀರು, ಅಂಗಡಿಯಲ್ಲಿ ಹಾಲು ಹೆಚ್ಚು ಇರುವಾಗ ಎತ್ತು ಬೇಕಾದರೂ ಹಾಲು ಮಾರಬಹುದಲ್ಲಾ ಎಂದಿದ್ದನು. ಒಮ್ಮೆ ನಮ್ಮೂರಿನಲ್ಲಿ ಪಶು ಪ್ರದರ್ಶನವಾಗಿತ್ತು. ಉತ್ತಮ ದನಗಳಿಗೆ ಬಹುಮಾನ ಕೂಡಾ ಹಂಚಲಾಗಿತ್ತು. ಆಗ ನಾನು ವಿನೋದಕ್ಕಾಗಿ ಮಂಜುವಿನೊಡನೆ ಮಂಜೂ, ನಿನ್ನ ವಿಲಾಯತಿ ದನವನ್ನು ಪ್ರದರ್ಶನಕ್ಕೆ ಕೊಂಡೊಯ್ಯು, ನಿನಗೆ ಮೆಡಲ್ ಸಿಗುತ್ತದೆ ಎಂದೆನು. ಅದಕ್ಕೆ ಮಂಜು ಅಯ್ಯನೋರೆ, ನಮ್ಮ ಮನೆಯಲ್ಲಿ ಮಡಲಿಗೇನೂ ಕೊರತೆಯಿಲ್ಲವೆಂದಿದ್ದನು. ಆ ದನದ ಕರುವಿನ ಪಾಲಿಗೆ ಹುಟ್ಟಿದ ೧೨ ದಿನಗಳ ವರೆಗೆ ಹಾಲು ಕುಡಿದುದೇ ಬಂತು. ಅಮೇಲೆ ತಾಯಿ ಹಾಲಿನ ಸವಿ ಕಾಣಬೇಕಾದರೆ ತಾಯಿಯನ್ನು ಮೇಯಲು ಹೊಲದಲ್ಲಿ ಕಟ್ಟಿ ಹಾಕಿದಾಗ ತಾಯಿಯ ಬಳಿಗೆ ಕದ್ದು ಬಂದು ಹಾಲು ಕುಡಿಯಬೇಕು. ಹಾಗೆ ಕುಡಿದ ದಿನ ಮಂಜುವಿನ ಆಕ್ರೋಶ ನೋಡಿದರೆ ಸಾಕ್ಷಾತ್ ಜಮದಗ್ನಿಯಂತೆ ಕಾಣಿಸುತ್ತಾನೆ (ಆದರೆ ಅವನ ಕೊರಳಿನಲ್ಲಿ ಯಜ್ಞೋಪವೀತವಿರುವುದಿಲ್ಲವೆನ್ನಿ!) ತಾಯಿಯ ಹಾಲು ಕದ್ದು ಕುಡಿದ ಸಲುವಾಗಿ ಒಂದು ಹೊತ್ತು ಅದನ್ನು ಉಪವಾಸ ಕೆಡಹಿದಿದ್ದರೆ ಮಂಜುವಿಗೆ ರಾತ್ರಿ ನಿದ್ರೆಯೇ ಬಾರದು. ಆದುದರಿಂದ ಅವನ ಮನೆಯ ದನದ ಕರುಗಳ ಸರಾಸರಿ ಆಯುಷ್ಯ ಮೂರು ತಿಂಗಳಿಗಿಂತ ಹೆಚ್ಚಾಗದೆಂದು ಯಾರೂ ಲೆಕ್ಕ ಹಾಕಬಲ್ಲ. ನಮ್ಮ ಮಂಜು ಕಳೆದ ಬಾರಿ ದನದ ಕರು ಸತ್ತು ಹೋದಾಗ ಅದರ ಶವವನ್ನು ಎಳೆದು ಕೊಂಡು ಒಂದು ರಸ್ತೆಯ ಪಕ್ಕದಲ್ಲಿ ಎಸೆದು ಹಸಿದ ನಾಯಿ, ಹದ್ದು, ಕಾಗೆ ಮೊದಲಾದ ಮೂಕ ಜಂತುಗಳಿಗೆ ಊಟವಿಕ್ಕಿದ ಪುಣ್ಯವನ್ನು ಕಟ್ಟಿಕೊಂಡಿದ್ದನು. ಜೊತೆಗೆ ರಸ್ತೆಯಲ್ಲಿ ಅಡ್ಡಾಡುವ ಜನರಿಗೆ ಸುಗಂಧ ಸೇವನೆಗೂ ಅವಕಾಶ ಮಾಡಿಕೊಟ್ಟಿದ್ದನು. ಈ ಸುಗಂಧ(?) ಸೇವನೆಯಿಂದ ಬೇಸತ್ತ ಜನರು ಊರ ಪಂಚಾಯ್ತಿ ಬೋರ್ಡಿನ ಅಧ್ಯಕ್ಷರಿಗೆ ದೂರುಕೊಡಲಾಗಿ ಅವರು ಅದನ್ನು ಅಲ್ಲಿಂದ ತೆಗೆಸಿ ಮಣ್ಣುಗೂಡಿಸುವ ಕೆಲಸ ಮಾಡಿಸಿದರಲ್ಲದೆ ಆ ಬಗ್ಗೆ ಮಂಜುವನ್ನು ಗದರಿಸಿ ಕೂಡಾ ಬಿಟ್ಟಿದ್ದರು. ಆದುದರಿಂದಲೇ ನಾನು ಮಂಜುವಿನೊಡನೆ 'ನಿಮ್ಮ ಮನೆಯ ದನದ ಕರುವೇನಾದರೂ ಸತ್ತುಹೋಗಿದೆಯೇ?' ಎಂದು ಕೇಳಿದುದು.

'ಅಯ್ಯನೋರೆ, ಮೊದಲೇ ಅಪಶಕುನ ನುಡಿದಿರಾ? ಈ ಬಾರಿಯ ಕರು ಈಗಾಗಲೇ ದಿನ ಲೆಕ್ಕಮಾಡಲು ಆರಂಭಮಾಡಿದೆ ಎಂದು ಹೇಳುವಷ್ಟರಲ್ಲಿಯೇ, ಓಹೋ, ಅದಕ್ಕೇ ಕರು ಸಾಯುವ ಮೊದಲೇ ಹೊಂಡಮಾಡಿ ಇಡುತ್ತಿಯೊ?" ಎಂಬ ಪ್ರಶ್ನೆ ತಾನಾಗಿಯೇ ಹೊರಬಿತ್ತು.

"ಅಲ್ಲ ಅಯ್ಯನೋರೆ, ಈ ಸರಕಾರದವರು ವನಮಹೋತ್ಸವವೋ, ಒಣಮಹೋತ್ಸವೋ-ಅದೇನೋ ಮಾಡುತ್ತಾರಂತೆ. ಅದಕ್ಕೆ ಹೊಂಡಮಾಡಿ ಕೊಡುವ ಕೆಲಸ ನನಗೆ ಸಿಕ್ಕಿದೆ" ಎಂದಾಗ ನನಗೆ ತಡೆಯಲಾರದ ನಗು ಬಂತು. ಮುಂದುವರಿಸಿ ಅವನೇ "ನೋಡಿ ಅಯ್ಯಾ, ಗೌರ್ಮೆಂಟನವ್ರು ರಸ್ತೆ ಬದಿಯಲ್ಲಿ ಈ ವರ್ಷ ಏನೇನೋ ಹೊಸ ಗಿಡ ನೆಡಿಸುತ್ತಾರಂತೆ ಅದರ ಬದಲಿಗೆ ಒಂದೆರಡು ಮೂವಿನ ಗಿಡ ಹಾಕಿದರೆ—ಅದು ಬದುಕಿ ಉಳಿದರೆ—ದೊಡ್ಡದಾಗಿ ಫಲಬಿಟ್ಟರೆ—ನನ್ನಂತಹವರಿಗೆ ಮಿಡಿ, ಕಾಯಿ, ಹಣ್ಣುಗಳನ್ನು ಕದ್ದು ಮಾರಿ ಕೈಯಲ್ಲಿ ನಾಲ್ಕು ಕಾಸು ಮಾಡಿಕೊಳ್ಳಲಿಕ್ಕೇನಡ್ಡಿ? ಆದರೆ, ಹೋದರೆ, ಹತ್ತಿ ಬೆಳೆದರೆ, ಅಜ್ಜಿಗೊಂದು ಸಟ್ಟಿಸೀರೆ ಎನ್ನುವಂತೆ. ನೋಡಿ, ಈ ಗೌರ್ಮೆಂಟನ ದಿನಕ್ಕೊಂದು ಹೊಸ ಅವತಾರ ಶುರುಮಾಡುವ ಹುಚ್ಚು" ಎಂದು ಮಾಮೂಲಿನಂತೆ ಸರಕಾರದ ಮೇಲೆ ತನ್ನ ಬೈಗಳ ಅಮೋಘ ಶರವರ್ಷವನ್ನು ಸುರಿಸತೊಡಗಿದನು. ಹಾಗೇ ಅದನ್ನು ಕೇಳುತ್ತಾ ಕುಳಿತರೆ ಮಧ್ಯಾಹ್ನವಾದರೂ ಅವನ ಪುರಾಣ ಮುಗಿಯದೆಂದು ಚೆನ್ನಾಗಿ ಅರಿತಿದ್ದ ನಾನು "ಕೆಲಸವಿದೆ, ಬರುತ್ತೇನೆ" ಎಂದು ಅಲ್ಲಿಂದ ಕಾಲು ಕಿತ್ತೆ.

ಮರುದಿನ ಬೆಳಿಗ್ಗೆ ಬಂದು ನೋಡುತ್ತೇನೆ—ರಸ್ತೆಯ ಬದಿಯ ಅನೇಕ ಹೊಂಡಗಳಲ್ಲಿ ನಾನಾ ತರದ ಗಿಡಗಳನ್ನು ನೆಟ್ಟಿದ್ದರು. ಅದು ವನಮಹೋತ್ಸವ ಸಪ್ತಾಹ ಆಚರಣೆಯ ಸಲುವಾಗಿ ಎಂದು ನನಗೆ ತಿಳಿಯಿತು. ಇತ್ತೀಚೆಗೆ ವನಮಹೋತ್ಸವ, ಬೆಂಕಿನಿರೋಧ, Grow more food, ಕ್ಷಯನಿರೋಧ, ಮಿತ ಸಂತಾನ ಪ್ರಚಾರ ಸಪ್ತಾಹ ಮೊದಲಾದ ೬೦-೭೦ ಸಪ್ತಾಹಗಳನ್ನು ಆಚರಿಸುವ ಪದ್ಧತಿ ಆರಂಭವಾಗಿ ಬಿಟ್ಟಿದೆ. ಆದರೆ ದುರದೃಷ್ಟವಶಾತ್ ಯಾವನೋ ಒಬ್ಬ ಪಾಪಾತ್ಮನು ವರ್ಷಕ್ಕೆ ೫೨ ವಾರಗಳು ಮಾತ್ರ ಎಂದು ಮಾಡಿದುದರಿಂದ ವರ್ಷಕ್ಕೆ ೫೨ ಕ್ಕಿಂತ ಹೆಚ್ಚು ಸಪ್ತಾಹಗಳನ್ನು ಆಚರಿಸಲು ಅನಾನುಕೂಲವಾಗುತ್ತೆ. ಇಲ್ಲಿ ನನ್ನ ಕಿವಿಗೆ ಬಿದ್ದ ಒಂದು ಸ್ವಾರಸ್ಯಕರ ವಿಷಯವನ್ನು ಹೇಳುತ್ತೇನೆ. ಒಬ್ಬ ಗ್ರಾಮಾಧಿಕಾರಿಗೆ ಮೇಲಿನ ಅಧಿಕಾರಿಗಳಿಂದ "ನಿಮಗೆ ನಾವು ಈ.....ಈ.....ಸಪ್ತಾಹಗಳನ್ನು ಆಚರಿಸುವ ಆಜ್ಞೆ ಇತ್ತಿದ್ದೇವೆ. ಆದರೆ ನೀವು ಮಾತ್ರ ೨೨ ಗಳನ್ನು ಆಚರಿಸಲಿಲ್ಲವೆಂದು ಅಧಿಕೃತವಾಗಿ ತಿಳಿದು ಬಂದಿದೆ. ಇದರ ಕಾರಣವನ್ನು ಕೂಡಲೇ ತಿಳಿಸತಕ್ಕದ್ದು" ಎಂಬ ಆಜ್ಞೆ ಬಂದಿತ್ತು. ಅದಕ್ಕೆ ಆ ಅಧಿಕಾರಿಯು, "ಸ್ವಾಮಿ, ವರ್ಷಕ್ಕೆ ಐವತ್ತೆರಡೇ ಸಪ್ತಾಹಗಳಿರುವಾಗ ಅದಕ್ಕಿಂತ ಹೆಚ್ಚಾಗಿರುವ ಸಪ್ತಾಹಗಳನ್ನು ಮಾತ್ರ ಆಚರಿಸಲಾಗಲಿಲ್ಲ" ಎಂದು ಉತ್ತರ ಕಳುಹಿಸಿದನಂತೆ!

ಜುಲೈ ತಿಂಗಳಲ್ಲಿ ಆಚರಿಸುವ ಸಪ್ತಾಹಗಳಲ್ಲಿ ವನಮಹೋತ್ಸವಕ್ಕೆ ತುಂಬಾ ಪ್ರಾಧಾನ್ಯತೆಯಿದೆ. ಮೇಲಧಿಕಾರಿಗಳಿಂದ ಪ್ರತಿ ಶಾಲೆಗಳಿಗೂ ಈ ವನಮಹೋತ್ಸವವನ್ನು ಆಚರಿಸಬೇಕೆಂಬ ಆಜ್ಞೆ ದೊರಕುತ್ತದೆ. ಶಾಲೆಗಳಲ್ಲಿ ಈ ಸಲುವಾಗಿ ಸಭೆ ಸಮಾರಂಭಗಳು ನಡೆಯುತ್ತವೆ. ಊರ ಮಹನೀಯರೂ ಇದರಲ್ಲಿ ಭಾಗ ವಹಿಸುತ್ತಾರೆ. ಶಾಲಾ ಮುಖ್ಯೋಪಾಧ್ಯಾಯರು ಸ್ವತಃ ಒಂದೆರಡು ಗಿಡಗಳನ್ನು ಶಾಲಾ ವಠಾರದಲ್ಲಿ ನೆಡುತ್ತಾರೆ. ಅವು ಬೇಸಗೆಯ ರಜಾ ದಿನಗಳಲ್ಲಿ ನೀರಿಲ್ಲದೆ ಸಾಯುವುದೂ ಒಂದು ವಾಡಿಕೆಯಾಗಿಬಿಟ್ಟಿದೆ. ಇದಕ್ಕೆ ಮಾತ್ರ ವನಮಹೋತ್ಸವ ಸಪ್ತಾಹಾಚರಣೆಯಲ್ಲ. ಶಾಲಾ ಮುಖ್ಯೋಪಾಧ್ಯಾಯರೂ, ಸಹೋಪಾಧ್ಯಾಯರೂ, ಊರ ಮಹನೀಯರೂ ವನಮಹೋತ್ಸವದ ಕುರಿತು ಭೀಷಣ ಭಾಷಣ ಬಿಗಿಯುತ್ತಾರೆ.

ಇನ್ನು ರಸ್ತೆಯ ಬದಿಯಲ್ಲಿ ನೆಟ್ಟಗಿಡಗಳ ಕುರಿತು ಒಂದೆರಡು ಮಾತುಗಳನ್ನು ಹೇಳುವೆ. ಅಲ್ಲಿ ನೆಟ್ಟ ಗಿಡಗಳ ಸುತ್ತಲೂ ಮುಳ್ಳಿನ ಬೇಲಿ ಮಾಡುವ ಪದ್ಧತಿ ಕೂಡಾ ಇರುತ್ತದೆ. ಆದರೆ ರಸ್ತೆಯ ಪಕ್ಕದಲ್ಲಿ ತೋಟಗಳ ಬೇಲಿಗೆ ಮುಳ್ಳಿನ ಅವಶ್ಯಕತೆ ಬಿದ್ದಾಗ ಬಲುಜಾಗರೂಕತೆಯಿಂದ ಆ ಗಿಡಗಳ ಸುತ್ತಲೂ ನೆಟ್ಟಿದ್ದ ಮುಳ್ಳುಗಳನ್ನು ಕಿತ್ತು ತಮ್ಮ ಕೆಲಸಕ್ಕೆ ಉಪಯೋಗಿಸಿಕೊಳ್ಳುವ ದೇಶಿ ಭಕ್ತರ ಸಂಖ್ಯೆ ಕಡಿಮೆಯಿಲ್ಲದಿರುವುದರಿಂದ ಕೆಲವೇ ದಿನಗಳಲ್ಲಿ ಆ ಗಿಡಗಳು ರಕ್ಷಣೆಯನ್ನು ಕಳೆದುಕೊಂಡು ಬಿಡುತ್ತವೆ. ಆ ಮೇಲೆ ಕೇಳ ಬೇಕೇ? ರಸ್ತೆಯ ಪಕ್ಕದ ಮನೆಗಳ ದನಕರುಗಳಿಗೆ ತನ್ನ ಹಸಿವನ್ನು ತೀರಿಸಿಕೊಳ್ಳುವ ಸಲುವಾಗಿ ಆ ಎಳೆಯ ಗಿಡಗಳನ್ನೆಲ್ಲಾ "ಸ್ವಾಹಾ" ಮಾಡಿ ಬಿಡುವುವು. ಪುಣ್ಯವಶಾತ್ ಗಿಡಗಳು ಅಲ್ಪ ಸ್ವಲ್ಪ ಬಲಿಷ್ಠವಾಗಿ ಬಿಟ್ಟರೆ ಅದೇ ಪಕ್ಕದ ಮನೆಗಳವರು ದನ ಕರುಗಳನ್ನು ಆ ಗಿಡಕ್ಕೆ ಕಟ್ಟಿ ಬಿಡುತ್ತಾರೆ. ಆ ದನ ಕರುಗಳಿಗೆ ಅಲ್ಲಿಂದ ಕಾಲ್ಕಿಗೆಯುವ ಮನ ಬಂದರೆ ಆ ಗಿಡಗಳನ್ನು ಕಿತ್ತು, ಗಿಡ ಸಹಿತ ಸಲಾಯನ ಮಾಡುವುವು. ಇಷ್ಟೆಲ್ಲಾ ಆಗಿ ಒಂದೆರಡು ಗಿಡಗಳು ಅಳಿದುಳಿದರೆ ಬೇಸಗೆಯ ದಿನಗಳಲ್ಲಿ ನೀರು ಹಾಕುವ ವಿಚಾರವು ಇಲ್ಲದಿರುವುದರಿಂದ ಅವು "ಗೊಟಕ್ ಸೀತಾರಾಮ್" ಎನ್ನುವುವು. ಹುಟ್ಟಿಸಿದ ದೇವರು ಹುಲ್ಲು ಮೇಯಿಸುವನೇ? "ಜೀವವಿದ್ದರೆ ಜೈಬೇಡಿ ತಿನ್ನ ಬಹುದು" ಎಂಬ ಗಾದೆಗಳು ಪ್ರಾಯಶಃ ಮನುಷ್ಯರಿಗೆ ಮಾತ್ರ ಅನ್ವಯಿಸುತ್ತವೆ.

ಈ ವನಮಹೋತ್ಸವದ ಅಂಗವಾಗಿ ಹೆಚ್ಚು ಗಿಡಗಳನ್ನು ನೆಟ್ಟವರಿಗೆ ಬಹುಮಾನ

(೧೦ನೇ ಪುಟ ನೋಡಿರಿ)

ದಿ ವಿಜಯ ಬೇಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬೇಂಕ್. ಸ್ಥಾಪನೆ: 1931

ರಿಜಿಸ್ಟರ್ಡ್ ಆಫೀಸು:

ವಿಜಯ ಬೇಂಕ್ ಬಿಲ್ಡಿಂಗ್, ಲೈಟ್ ಹೌಸ್ ಹಿಲ್ ರೋಡ್,

ಮಂಗಳೂರು-3, ಸೌತ್ ಕೆನರಾ.

ಕಾಯಂ ಠೇವಣಾತಿ ಬಡ್ಡಿ ದರವನ್ನು ಶೇಕಡ ೫½ರ ವರೆಗೆ ಹೆಚ್ಚಿಸಲಾಗಿದೆ.

ಏಳು ದಿವಸದ ನೋಟೀಸಿನಲ್ಲಿ ಕೇಳಿದಾಗ್ಯೆ ಹಿಂದೆ ಪಡೆಯುವ ಡಿಪೋಸಿಟುಗಳನ್ನು (Call Deposits) ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸೋಣಾಗುತ್ತದೆ.

ಹೆಚ್ಚಿನ ಮಾಹಿತಿಗೆ ನಮ್ಮ ಶಾಖೆಗಳಲ್ಲಿ ದಯಮಾಡಿ ವಿಚಾರಿಸಿರಿ.

ಶ್ರೀ ಎ. ಬಿ. ಶೆಟ್ಟಿ ಸ್ಮಾರಕ ನಿಧಿಗೆ ಸಹಾಯ ಮಾಡಿರಿ

ರವೀಂದ್ರವಾಣಿ:

ವ್ಯಕ್ತಿತ್ವ ಮತ್ತು ಅದರ ಸಾರ್ಥಕತೆ

ಅಜ್ಞಾನದಿಂದ ಅಹಂಭಾವವು ತಲೆದೋರುತ್ತದೆ. ಆಗ ಆತನು ತನ್ನನ್ನೇ ತಾನು ಸುಟ್ಟುಕೊಳ್ಳುತ್ತಾನೆ; ಆಗ ತಮ್ಮವರನ್ನೇ ತಿಂದು ಬದುಕುವ ಪ್ರಾಣಿಯಂತಾಗುತ್ತಾನೆ. ಇದರಿಂದ ವ್ಯಕ್ತಿತ್ವದ ಸಾರ್ಥಕತೆಯೂಗಲಾಗದು.

ಮೂಲ ಲೇಖಕರು: ವಿಶ್ವಕವಿ ರವೀಂದ್ರನಾಥ ಟಾಗೋರ್.
ಅನುವಾದಕರು: ಕೆ. ಎನ್. ಭಟ್, ಶಿರಾಡಿಪಾಲ್.

ನನ್ನ ವ್ಯಕ್ತಿತ್ವದ ಒಂದು ಪಾರ್ಶ್ವವು ವಿಶ್ವದ ವಸ್ತುಗಳೊಡನೆ ಸಮಭಾವವನ್ನು ತಳೆದಿರುವುದು. ಇಲ್ಲಿ ನಾನು ವಿಶ್ವವ್ಯಾಪಕವಾದ ವಿಧಾನಗಳ ನಿಯಮಗಳನ್ನು ಒಪ್ಪಿಕೊಳ್ಳಬೇಕಾಗುತ್ತದೆ. ನನ್ನ ಅಸ್ತಿತ್ವದ ಪಂಚಾಂಗವು ಈ ಕ್ಷೇತ್ರದಲ್ಲೇ ಬಹಳ ಆಳವಾಗಿದ್ದು ಮೇಲೆ ನಿಂತಿದೆ. ವ್ಯಾಪಕವಾದ ವಿಶ್ವದ ಬಲವಾದ ಹಿಡಿತ, ಮತ್ತು ಇತರ ಎಲ್ಲಾ ವಸ್ತುಗಳೊಡನೆಯೂ ಇರಬೇಕಾದ ಪೂರ್ಣವಾದ ಸಮಾನತೆ, ಇವುಗಳೇ ಈ ಪಂಚಾಂಗದ ದೃಢತೆಯ ಆಧಾರಗಳಾಗಿವೆ.

ಆದರೆ ನನ್ನ ವ್ಯಕ್ತಿತ್ವದ ಇನ್ನೊಂದು ಪಾರ್ಶ್ವವೂ ಇದೆ. ನಾನು ಎಲ್ಲರಿಗಿಂತಲೂ, ಬೇರೆಯೇ ಆಗಿ ಒಬ್ಬನೇ ಒಬ್ಬನಾಗಿರುವುದು, ಇದು ನನ್ನ ವ್ಯಕ್ತಿತ್ವದ ಇನ್ನೊಂದು ಪಾರ್ಶ್ವವಾಗಿದೆ. ನಾನು ಈ ಪಾರ್ಶ್ವದಿಂದ ಎಲ್ಲರೊಡನೆಯೂ, ಕಟ್ಟಿಲ್ಪಡಬೇಕಾದ ಸಮಾನತೆಯ ಸಂಕಲೆಯನ್ನು—ಬಲೆಯನ್ನು ಕಡಿದುಗೆದು, ಒಬ್ಬನೇ ಒಬ್ಬನಾಗಿ ನಿಂತಿದ್ದೇನೆ. ನಾನು ಇಲ್ಲಿ ಸರ್ವಥಾ ಅದ್ವಿತೀಯನಾಗಿದ್ದೇನೆ; ಮತ್ತು ನಾನು ನಾನೇ ಆಗಿದ್ದೇನೆ. ಹಾಗೂ ಯಾವುದರೊಡನೆಯೂ, ಹೋಲಿಸಲು ಸಾಧ್ಯವಿಲ್ಲದವನಾಗಿ, ಅತುಲ್ಯನಾಗಿದ್ದೇನೆ. ಇಲ್ಲಿ ವಿಶ್ವದ ಸಮಸ್ತ ಭಾರವೂ ನನ್ನನ್ನು ಅಂದರೆ ನನ್ನ ವ್ಯಕ್ತಿತ್ವವನ್ನು ಜಂಜಲಗೊಳಿಸಲಾರದಾಗಿರುವುದು. ವಿಶ್ವದ ಜುಂಬಕೀಯ ಶಕ್ತಿಗಳ ಆಕರ್ಷಣೆಯನ್ನೂ ಅವಹೇಳನ ಮಾಡುತ್ತ ನಾನು ದೃಢವಾಗಿ ನಿಂತಿದ್ದೇನೆ. ನೋಡಲು, ಈ ನಾನು, ಬಹಳ ಚಿಕ್ಕವನಾಗಿ ಕಾಣುತ್ತೇನೆ. ಆದರೆ ವಸ್ತುತಃ ಇವನು ಚಿಕ್ಕವನಲ್ಲ; ಬಹಳ ದೊಡ್ಡವನಾಗಿದ್ದಾನೆ. ಹೇಗೆಂದರೆ, ಇವನು ತನ್ನ ವ್ಯಕ್ತಿತ್ವವನ್ನು ನಾಶಮಾಡಬಲ್ಲ ಪ್ರತಿಯೊಂದು ಶಕ್ತಿಯನ್ನೂ ಎದುರಿಸುತ್ತ ಅದರ ವಿರೋಧವಾಗಿ ಒರ್ವನೇ ನಿಂತಿದ್ದಾನೆ.

ಅಳವಾದ ಅಜ್ಞಾತ ಆಧಾರದ ಮೇಲೆ ಏಕಾಂಗಿಯಾಗಿ ನಿಂತಿರುವ, ಇದುವೇ ಆತ್ಮದ, ಆತ್ಮಭವನವಾಗಿದೆ. ಇದಕ್ಕೆ ತನ್ನ ಒಂಟಿತನದ ಬಗ್ಗೆ ಅಹಂಕಾರವಿದೆ. ತನ್ನನ್ನು ನಿರ್ಮಿಸಿದಪನ ಒಂದು ಕಲ್ಪನೆಯನ್ನು ಇಂತು ಸಾಕಾರ ಮಾಡಿರುವ ಈ ಅಭೇದಾನಂದವೂ ಅದಕ್ಕಿದೆ. ಏಕೆಂದರೆ, ಇದು ಅನುಪಮವಾಗಿದೆ. ಈ ಅನುಪಮತ್ವವನ್ನು ನಷ್ಟಗೊಳಿಸುವುದರಿಂದ ಇದಕ್ಕೆ ಯಾವುದೇ ರೀತಿಯ—ಭೌತಿಕ ಹಾನಿಯಾಗದು. ಅಂದರೆ, ಇದರ ಒಂದು ಕಣವೂ ನಷ್ಟವಾಗದು. ಆದರೆ. ರಚನಾತ್ಮಕವಾದ ಯಾವ ಆನಂದವು ಈ ವ್ಯಕ್ತಿತ್ವದಲ್ಲಿ ಸಾಕಾರ ರೂಪದಿಂದ ಸಮಾವೇಶಗೊಂಡಿರುವುದೋ, ಅದು ಮಾತ್ರ ನಷ್ಟವಾಗಿ ಹೋಗುವುದು. ಈ ನಷ್ಟದಿಂದ ಇದರ ನಾಶದಿಂದ ನಾವು ಬಹಳ ದರಿದ್ರರಾಗಿ ಬಿಡುತ್ತೇವೆ. ಏಕೆಂದರೆ, ನಾವು "ನಮ್ಮದು" ಎಂದು ಹೇಳಬಹುದಾದ ಇದು, ಇದೊಂದೇ ಆಗಿರುವುದು. ಇದರ ಎಂದರೆ, ಈ ವ್ಯಕ್ತಿತ್ವದ ಹಾನಿಯೆಂದರೆ, ಕೇವಲ ನಮಗೆ ಮಾತ್ರವಲ್ಲ; ಸಮಸ್ತ ವಿಶ್ವಕ್ಕೇ ಹಾನಿಯೊದಗುವುದು. ಇದು ವಿಶ್ವದ ಒಂದು ಅಂಶವಾಗಿಯೇ ಇಲ್ಲದಿರುವುದರಿಂದ, ಇದರ ಮಹತ್ವ ಹೆಚ್ಚಿದೆ. ಆದರೆ ಈ ವ್ಯಕ್ತಿತ್ವದ ಮೂಲಕವೇ—ನಾವು ವಿಶ್ವವನ್ನು ತಿಳಿದುಕೊಳ್ಳುತ್ತೇವೆ; ತನ್ಮೂಲಕ ಪಡೆಯುತ್ತೇವೆ. ವಿಶ್ವಾನುಭವದ ಈ ಆನಂದವು ಒಂದು ವೇಳೆ ನಮಗೆ ಪ್ರಾಪ್ತವಾಗದಿರುತ್ತಿದ್ದರೆ, ಆಗ ನಾವು ನಮ್ಮ ವ್ಯಕ್ತಿತ್ವವನ್ನು ಕಳೆದುಕೊಂಡು, ವಿಶ್ವದ ಒಂದು ಅಂಶರೂಪವಾಗಿ, ಅದರಲ್ಲೇ ಸಮಾವೇಶಗೊಂಡಿರುತ್ತಿದ್ದೆವು.

ಇಂತಹ ಈ ವ್ಯಕ್ತಿತ್ವದ ಅದ್ವಿತೀಯತೆಯನ್ನು ಮನುಷ್ಯನು ಎಷ್ಟು ಅಮೂಲ್ಯವೆಂದು, ಭಾವಿಸುತ್ತಾನೆಂಬುದು, ಈ ಉದಾಹರಣೆಯಿಂದ ಸ್ಪಷ್ಟವಾಗುವುದು. ಅಂದರೆ, ಮನುಷ್ಯನು ವ್ಯಕ್ತಿತ್ವದ ರಕ್ಷಣೆಗಾಗಿ, ಎಷ್ಟೋ ಪರಿಯಿಂದ ಕಷ್ಟಗಳನ್ನು ಅನುಭವಿಸುತ್ತಾನೆ. ಎಷ್ಟೆಷ್ಟೋ ಪಾಪಕೃತ್ಯಗಳನ್ನು ಮಾಡುತ್ತಾನೆ. ಎಲ್ಲರಿಗಿಂತಲೂ ಭಿನ್ನವಾದ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು, ಮನುಷ್ಯನು-ಸಂದರ್ಭಬಂದರೆ, ಮೃತ್ಯುವನ್ನೂ ಸ್ವಾಗತಿಸುತ್ತಾನೆ. ಈ ವ್ಯಕ್ತಿತ್ವವೆಂದರೆ, ಅತನಿಗೆ—ಪ್ರಕೃತಿಯ ಆವರಣದಲ್ಲಿ ಅಹಂಕಾರ ಪೂರ್ಣವಾದ ಚಟುವಟಿಕೆಗಳಿಂದ ಅನಭಿಜ್ಞವಾಗಿ, ಸ್ತಬ್ಧವಾಗಿರುವ ಅತ್ಯದ ಆ ಸ್ವರ್ಗಕ್ಕಿಂತಲೂ, ಅತ್ಯಧಿಕ ಪ್ರಿಯವಾಗುತ್ತದೆ.

ನಮ್ಮ ವ್ಯಕ್ತಿತ್ವವನ್ನು ಅದ್ವಿತೀಯವನ್ನಾಗಿ ಮಾಡಲು—ಅದರ ಅದ್ವಿತೀಯತೆಯನ್ನು ಸ್ಥಿರಗೊಳಿಸಲು, ನಾವು—ಸದಾ ಕಷ್ಟಪಡಬೇಕಾಗುವುದು. ಸದಾ ಪ್ರಯತ್ನಶೀಲರಾಗಿರಬೇಕಾಗುವುದು. ಈ ಕಷ್ಟ ಮತ್ತು ಪ್ರಯತ್ನ—ಇವುಗಳು, ಈ ವ್ಯಕ್ತಿತ್ವದ ಬೆಲೆಯನ್ನು ನಿರ್ಧರಿಸುತ್ತವೆ.

ಈ ಬೆಲೆಯು ಒಂದು ಪಾರ್ಶ್ವವು ಇದರ ವ್ಯಯವನ್ನು ಗುರುತಿಸುವ ಬಲಿದಾನವಾಗಿದ್ದರೆ, ಇನ್ನೊಂದು ಪಾರ್ಶ್ವದ, ಲಾಭವನ್ನು ಗುರುತಿಸುವ ಪಾರ್ಶ್ವವಾಗಿದೆ. ವ್ಯಕ್ತಿತ್ವದ ಅರ್ಥವು, ಒಂದು ವೇಳೆ ಕಷ್ಟವನ್ನನುಭವಿಸುವುದು, ಮತ್ತು ಬಲಿದಾನಗಳನ್ನು ನೀಡುವುದು, ಇದಿಷ್ಟರಲ್ಲೇ ಆಗಿರುತ್ತಿದ್ದರೆ, ನಾವು ಇದನ್ನು ಅಮೂಲ್ಯವೆಂದು, ಎಂದೂ ಭಾವಿಸುತ್ತಿರಲಿಲ್ಲ. ಮತ್ತು ನಾವು ಸ್ವೇಚ್ಛೆಯಿಂದ, ತ್ಯಾಗ—ಬಲಿದಾನಗಳನ್ನು ಮಾಡಲು, ಎಂದೂ ಮುಂದಾಗುತ್ತಿರಲಿಲ್ಲ.

ಮನುಷ್ಯನು, ಬಲಿದಾನಗಳಿಂದ, ತ್ಯಾಗದಿಂದ, ಆತನ ವ್ಯಕ್ತಿತ್ವವು ಇಷ್ಟೆಷ್ಟು ಅಮೂಲ್ಯವಾಗುತ್ತದೆ. ಯಾರು ವ್ಯಕ್ತಿತ್ವವನ್ನು ವರ್ಧಿಸಿಕೊಂಡು, ಅದರ ವರದಾನಗಳನ್ನು ಉಪಯೋಗ ಮಾಡಿಕೊಂಡಿರುವರೋ, ಮತ್ತು ಅದರ ಉತ್ತರಾಧಿಕಾರದ ಕೊಡುಗೆಯನ್ನು ತತ್ಪರತೆಯಿಂದ ತಮ್ಮದನ್ನಾಗಿ ಮಾಡಿಕೊಂಡಿರುವರೋ, ಅಥವಾ ಇದರ ಪ್ರಾಪ್ತಿಗಾಗಿ, ಅತಿ ಉತ್ಸಾಹದಿಂದ ಯಾರು, ಕಷ್ಟಗಳನ್ನು ಅನುಭವಿಸಿರುವರೋ, ಅಂಥವರು ಮಾತ್ರ ಇದರ ಬೆಲೆಗೆ ಸಾಕ್ಷಿಯಾಗಿರುತ್ತಾರೆ. ಅವರ ಸ್ವಾನುಭವವು ನಮ್ಮ ಈ ಮೇಲಿನ ವಿವರಣೆಯನ್ನು ಸ್ಪಷ್ಟಗೊಳಿಸುವುದು.

ಈ ಮೇಲಿನ ಪ್ರಸ್ತಾವನೆಯನ್ನು ಪೂರ್ಣಗೊಳಿಸಿದ ಬಳಿಕ, ಈಗ ನನ್ನ ಶ್ರೋತೃವರ್ಗದವರು ಕೇಳಿದ—"ಅಹಂಕಾರವನ್ನು ನಿರ್ಮೂಲಗೊಳಿಸುವುದೇ ಭಾರತೀಯ ವಿಚಾರಕರಅಂತಿಮಧ್ಯೇಯವಾಗಿರಲಿಲ್ಲವೇ?" ;ಎಂಬ ಪ್ರಶ್ನೆಗೆ ಉತ್ತರ ಕೊಡಲು—ಸರಳವಾಗ ಬಹುದು

ಈ ಪ್ರಶ್ನೆಯನ್ನು ಉತ್ತರಿಸುವ ಮೊದಲು, ನಾನು ಒಂದು ವಿಚಾರವನ್ನು ಹೇಳಬೇಕಾಗಿದೆ. ಅದೇನಂದರೆ ಮನುಷ್ಯನು ತನ್ನ ವಿಚಾರಗಳನ್ನು ಪ್ರಕಟಿಸುವಲ್ಲಿ ಕೇವಲ ಶಬ್ದಗಳನ್ನೇ ಆಶ್ರಯಿಸಿ ಇರುವುದಿಲ್ಲ ಶಬ್ದಗಳು ಮಾತ್ರ ಆತನ ಭಾವವನ್ನು ವ್ಯಕ್ತಗೊಳಿಸುವುದಲ್ಲ; ಪ್ರಾಯಃ ಈ ಶಬ್ದಗಳು, ಆತನ ಭಾಷೆಯಾಗಿರದೆ, ಕೇವಲ, ಮೂಗನ ಭಾವ ಭಂಗಿಗಳಿಗೆ ಸಮಾನವಾದ ಚೇಷ್ಟೆಯಂತೆ, ಆಗಿ ಬಿಡುತ್ತವೆ. ಅಂದರೆ ಈ ಶಬ್ದಗಳ ಮೂಲಕ ಆತನ ಮನೋಭಾವದ, ಸಂಕೇತಗಳು ಮಾತ್ರ ಕಾಣಿಸಬಲ್ಲವೇ ಹೊರತು, ವಿಚಾರಗಳ ಅಭಿವ್ಯಕ್ತಿ ಲಭಿಸಲಾರದು ವಿಚಾರಗಳು ಮಹತ್ವಪೂರ್ಣವಾಗಿದ್ದರೆ, ಕೇವಲ ಶಬ್ದಗಳ ಮೂಲಕ ಅವುಗಳನ್ನು ಪ್ರಕಟಿಸಲಾರದ ಸಂಭವವೇ ಹೆಚ್ಚಾಗಿರುವುದು. ವಿಚಾರಗಳ ಅಭಿವ್ಯಕ್ತಿಗಾಗಿ, ಆ ಶಬ್ದಗಳನ್ನು ವಿಚಾರಕನ ಜೀವನಾನುಭವದ ಛಾಯೆಯ ಮೂಲಕ ನೋಡ ಬೇಕಾಗುವುದು. ಜೀವನದ ಅನುಭವದಿಂದಲೇ ಆ ಪುಗಳ ಸರಿಯಾದ ಅರ್ಥವನ್ನು ಗ್ರಹಿಸಬೇಕಾಗುವುದು.

ಶಬ್ದಕೋಶದ ಮೂಲಕ ಅರ್ಥಜ್ಞಾನವನ್ನು ಹೊಂದುವ ಸಂಶೋಧಕನು, ಆ ಅರ್ಥದ ಹೊರಗಿನ ಆವರಣದ ವರೆಗೆ ಮಾತ್ರ ತಲುಪ ಬಲ್ಲನು. ಒಳಗಿನ ದ್ವಾರವು ಆತನ ಪಾಲಿಗೆ ಮುಚ್ಚಿಯೇ ಇರುವುದು. ನಮ್ಮ ಋಷಿಗಳು ಹೇಳಿರುವ ಅನೇಕ ಸೂತ್ರಗಳ ಅರ್ಥ ಹಾಗೂ ವ್ಯಾಖ್ಯಾನಗಳು ಭಿನ್ನ ಭಿನ್ನವಾಗಿರುತ್ತವೆ. ಇವುಗಳ ಅರ್ಥವನ್ನು ತಿಳಿದುಕೊಳ್ಳಲು ಕೇವಲ ಶಬ್ದ ಜ್ಞಾನ ಎಷ್ಟು ಮಾತ್ರಕ್ಕೂ ಸಾಲದು, ಆದರೆ ನಾವು ಶಬ್ದಗಳ ಅರ್ಥವನ್ನು ಮಾತ್ರ ಗ್ರಹಿಸುವ ಪ್ರಯತ್ನ ಮಾಡುತ್ತೇವೆಯೇ ಹೊರತು ಆ ವಿಚಾರಗಳನ್ನು ನಮ್ಮ ಜೀವನದಲ್ಲಿ ಅನುಭವ ಮಾಡಿ ನೋಡುವ ಪ್ರಯತ್ನವನ್ನು ಮಾಡುತ್ತಿಲ್ಲ. ಈ ರೀತಿಯ ಅಭಿಶಾಪಗ್ರಸ್ತ ಶಬ್ದ ಜ್ಞಾನಿಗಳ ಸ್ಥಿತಿಯನ್ನು ನೀನು ಹಿಡಿಯುವ ಕೆಲಸದತ್ತ ವಿಶೇಷವಾಗಿ ಗಮನಕೊಡದೆ ತನ್ನ ಬಲೆಯ ರೂಪ, ರೀತಿಗಳನ್ನೇ ನೋಡುತ್ತ ಇರುವ ನೀನುಗಾರನಿಗೆ ಹೋಲಿಸಬಹುದು.

ಆತ್ಮತ್ಯಾಗದ ಮಹತ್ವವನ್ನು ನಾವು ಕೇವಲ ಭಾರತೀಯ ಯಾ ಬೌದ್ಧ ಧರ್ಮದಲ್ಲಿ ಮಾತ್ರವಲ್ಲ; ಕ್ರೈಸ್ತ ಧರ್ಮದಲ್ಲಿಯೂ, ಇದರ ಗೌರವದ ಗುಣಗಾನವಿದೆ. ಇದು ಎಷ್ಟರ ಮಟ್ಟಿಗಿರುವುದೆಂದರೆ, ಜೀವನ್ಮುಕ್ತನಾಗುವ ಸಫಲತೆಯನ್ನೂ ಹೊಂದಲು ಮೃತ್ಯು ಚಿಹ್ನೆಯನ್ನು ಲಾಕ್ಷಣಿಕವೆಂದು ಭಾವಿಸಲಾಗಿದೆ. ಜೀವನದ ಜ್ಯೋತಿಯು ನಂದಿ ಹೋಗುವ ಲಕ್ಷಣವಿರುವ, ಇದೇ ನಿರ್ವಾಣವಾಗಿರುವುದು.

ಭಾರತೀಯ ವಿಚಾರಕರು—ಅವಿದ್ಯೆಯಿಂದಮುಕ್ತಿ ಹೊಂದುವುದೇ ನಿಜವಾದ ಮುಕ್ತಿಯಾಗಿದೆ, ಎಂದು ಒಪ್ಪಿಕೊಂಡಿರುವರು. ಮುಕ್ತಿ ಎಂಬುದರ ಅರ್ಥವು ವಿದ್ಯಾಮಾನ ವಸ್ತುಗಳ ವಿನಾಶವಲ್ಲ. ಆದರೆ, ಅವಿದ್ಯೆ, ಮತ್ತು ಅಸತ್ಯ ಇವುಗಳನ್ನು ನಿವಾರಿಸುವ ಮಾರ್ಗವೇ ಮುಕ್ತಿಯೆಂದೆನಿಸುವುದು. ಅವಿದ್ಯೆಯು ಸಂಪೂರ್ಣವಾಗಿ ನಾಶವಾದಾಗ ನಮ್ಮ ದೃಷ್ಟಿಯು ಮೇಲಕ್ಕೆಳುವುದು. ನಮ್ಮ ಕಣ್ಣಿನ ರೆಪ್ಪೆಗಳು ಮೇಲಕ್ಕೇಳುತ್ತವೆ. ಕಣ್ಣಿನ ರೆಪ್ಪೆಗಳು ಮೇಲಕ್ಕೆಳುವುದು, ಅಂದರೆ ನಮ್ಮ ದೃಷ್ಟಿ ಮೇಲಕ್ಕೇಳುವುದು, ಕಣ್ಣುಗಳಿಗೆ ಅಪಾಯವೆಂದು, ಎಂದೂ ಹೇಳಲಾಗುವುದಿಲ್ಲ.

ನಮ್ಮ "ಅಹಂ"ರೂಪದಲ್ಲಿಯೇ ವಾಸ್ತವಿಕತೆ, ಮತ್ತು ಪೂರ್ಣತೆ ಇದೆ, ಎಂ

(ಇನೇ ಪುಟ ನೋಡಿರಿ)

41 ವರ್ಷಗಳ ಭದ್ರ ಹಾಗೂ ಸಮರ್ಥ ಬೇಂಕಿಂಗ್ ಸೇವೆ.

ದಿ. ಪಾಂಗಾಳ ನಾಯಕ್ ಬೇಂಕ್ ಲಿ.

ನಮ್ಮ 3 ವರ್ಷ ವ್ಯಾದೆಯ ಕೇಶ್ ಸರ್ಟಿಫಿಕೇಟುಗಳಲ್ಲಿ ಠೇವಣಿ ಮಾಡಿರಿ: ಬಡ್ಡಿ ಸೇಕಡಾ 5ರಂತೆ: ರೂ. 87—00 3 ವರ್ಷಗಳ ಅಂತ್ಯದಲ್ಲಿ ಬಡ್ಡಿ ಕೂಡಿ ರೂ. 100—00 ಒದಗಿಸುವುದು.

ಕರೆ, ಚಿಕ್ಕ ವ್ಯಾದೆ, ನಿರಖು ಠೇವಣಾತಿಗಳ ಮೇಲೆ ಆಕರ್ಷಣೀಯ ಶರ್ತಗಳು: ಬಡ್ಡಿ ಸೇಕಡಾ 5½ರ ವರೆಗೆ.

ತಾ. 1—4—1961ರಿಂದ ಸೇವಿಂಗ್ಸ್ ಬೇಂಕ್ ಖಾತೆಗಳ ಮೇಲೆ ಬಡ್ಡಿ ಸೇಕಡಾ 3ರಂತೆ.

THE PANGAL NAYAK BANK LTD.

Estd: 1920

ಮಾನವನ ಜೀವಂತಭಾಯಿ—ನಾಯಿ

ನಾಯಿ—ಒಂದು ಕ್ಷುದ್ರ ಪ್ರಾಣಿವಾಚಕ ಶಬ್ದ. ಆದರೆ, ಕೆಲವೊಮ್ಮೆ ನಮ್ಮ ಕಲ್ಪನೆ—ತಿಳುವಳಿಕೆಗಳು ತಲೆಕೆಳಗಾಗುವುದೂ ಇದೆ. ನೀವು ಧಿಕ್ಕರಿಸಿದರೂ ಪ್ರೀತಿಸುವ ನಾಯಿಯ ಸಂಬಂಧದಲ್ಲಿ ನಿಮಗೆ ಸದಭಿಪ್ರಾಯವಿರಲೇಬೇಕು.

"ರಂಜನೆ", ಬೆಂಗಳೂರು.

ಜಗತ್ತಿನಲ್ಲಿ ಪ್ರಾಚೀನ ಕಾಲದಿಂದಲೂ ನಾಯಿ ಸಾಕಣೆ ನಡೆದು ಬಂದಿದೆ. ಹಿಂದೂ ಪುರಾಣದಲ್ಲಿ ದತ್ತಾತ್ರೇಯರು ವೇದಗಳನ್ನೇ ನಾಯಿಗಳನ್ನಾಗಿ ಪರಿವರ್ತಿಸಿರುವುದು ಭಾರತೀಯರು ನಾಯಿಗಳಿಗಿತ್ತ ಪ್ರಾಶಸ್ತ್ಯವಾಗಿದೆ. ನಾಯಿಗಳನ್ನು ಮೈಲಿಗೆಯೆಂದು ಹೊಡೆದೋಡಿಸುತ್ತಿದ್ದವರೇ ಇಂದು ಸಾಕು ಪ್ರಾಣಿಗಳನ್ನಾಗಿ ಬೆಳೆಸುತ್ತಿರುವುದು ಮಾನವನಿಗೆ ಕ್ರಮೇಣ ಆ ಜಾತಿಯ ಕರ್ತವ್ಯ ನಿಷ್ಠೆಯ ಬಗ್ಗೆ ಆದ ದೃಢತೆಯಿಂದಲೇ ಎಂದರೆ ತಪ್ಪಾಗಲಾರದು.

ನಾಯಿ ತನ್ನದೇ ಆದ ಅಸಹ್ಯತೆಯನ್ನು ಹೊಂದಿದ್ದರೂ ಅದು ಯಾವ ವಿಧದ ರಹಸ್ಯವನ್ನೂ ಇಟ್ಟುಕೊಳ್ಳುವುದಿಲ್ಲ. ಅದರಲ್ಲಿ ಕಾಣಸಿಗುವ ಕೆಟ್ಟ ನಡತೆ ಒಂದಾದರೆ ಅದರ ಒಳ್ಳೆಯತನ ಅಕ್ಷಯವಿದೆ.

ಪಾಶ್ಚಾತ್ಯ ದೇಶಗಳಲ್ಲಿ ಜನರಿಗೆ ನಾಯಿಗಳಲ್ಲಿರುವ ನಂಬಿಕೆ ಮಕ್ಕಳಲ್ಲೂ ಇಲ್ಲವೆಂದರೆ ಉತ್ಪ್ರೇಕ್ಷೆಯಾಗಲಾರದು. ಕಾರಣ ಶತ-ಶತಮಾನಗಳಿಂದಲೂ ನಾಯಿಯ ಜಾತಿಗಳೆಲ್ಲವೂ ಒಡೆಯನಲ್ಲಿ, ಆತನ ಕುಟುಂಬದವರಲ್ಲಿ, ಒಡನಾಡಿಗಳಲ್ಲಿ, ಸ್ನೇಹ, ಪ್ರಾಮಾಣಿಕತೆ, ಆತನಿಗೆ ಕೆಲಸದಲ್ಲಿ ಸಹಾಯ, ಆತನ ರಕ್ಷಣೆ, ಇವುಗಳಲ್ಲಿ ಎಲ್ಲಾ ವಿಧಗಳಲ್ಲೂ ನಿಷ್ಠೆಯಿಂದಿದ್ದು ಮಾನವನ ನಂಬಿಕೆಗೆ ಪಾತ್ರವಾಗಿವೆ.

ಇತಿಹಾಸದ ಯಾವೊಂದು ಪಂಕ್ತಿಯಲ್ಲಿಯೂ ನಾಯಿಯ ನಿಷ್ಠೆಯ ಬಗ್ಗೆ ವಿರೋಧದ ಒಂದು ಪದವೂ ಸಿಗುವುದಿಲ್ಲ. ನಾಯಿ ಮನುಷ್ಯನ ನೆರಳಂತೆ ಯಜಮಾನನಿಗೆ ಹತ್ತಿಕೊಂಡಿರುತ್ತದೆ.

ಆಸ್ಟ್ರೇಲಿಯಾದ ಕ್ವೀನ್ಸ್‌ಲೆಂಡಿನಲ್ಲಿ ಶ್ರೀ ರೋಗರ್ ಬೈಲಿ ಒಂದು ಬೆಳಗಿನ ಜಾವ ಕಾರಿನಲ್ಲಿ ಹೋಗುತ್ತಿದ್ದರು. ಇದ್ದಕ್ಕಿದ್ದಂತೆ ಒಂದು ಆಲ್ಸೇಷನ್ ನಾಯಿ ಅವರ ಕಾರಿನ ಮುಂಭಾಗದ ಮೇಲೆ ಹಾರಿ ಜೋರಾಗಿ ಕಿಟಕಿಯ ಗಾಜನ್ನು ಪರಚಿ ತೊಡಗಿತು ಆತ ಬೇಗ ಕಾರು ನಿಲ್ಲಿಸಿದ ಹಾಗೂ ಹೊರಬಂದ.

ಅನಂತರ ನಾಯಿ ಅವನ ಪ್ಯಾಂಟನ್ನು ಹಿಡಿದೆಳೆಯ ತೊಡಗಿತು. ಅದು ಅವನನ್ನು ಒಂದು ಹಳ್ಳದ ತುದಿಗೆ ಕರೆದೊಯ್ದಿತು. ಹಳ್ಳದಲ್ಲಿ ಒಂದು ಗಾಡಿ ತಲೆಕೆಳಗಾಗಿ ಬಿದ್ದಿತ್ತು. ಒಳಗಡೆ ಒಬ್ಬ ಹಿರಿಯನೂ ಆತನ ಹದಿನೆಂಟು ಹಾಗೂ ಹನ್ನೆರಡು ವರ್ಷದ ಇಬ್ಬರು ಮಕ್ಕಳೂ ಬಂಧಿತರಾಗಿದ್ದರು.

ಆ ಸ್ವಾಮಿ ನಿಷ್ಠೆಯ ನಾಯಿಯಿಂದಾಗಿ ಅವರು ಮೂವರು ಬದುಕಿ ಕೊಂಡರು.

ನಾರ್ಥ ವೇಲ್ಸಿನ ಡೆನ್ ಬ್ರೈಗ್ ಬುದ್ಧಿ ಸ್ಥಿಮಿತವಿಲ್ಲವಾಗಿ ಒಂದು ಹೊಳೆಗೆ ಬಿದ್ದ ಅದೃಷ್ಟದಂತೆ.ಆತನ ನಾಯಿಯೂ ಆ ಕಾಲದಲ್ಲಿ ಅವನ ಹತ್ತಿರವಿತ್ತು. ಆದು ಸಹಾಯ ದೊರಕುವ ವರೆಗೂ ಬಿಡುವಿಲ್ಲದೇ ಅರಚುತ್ತಲಿತ್ತು. ಯಜಮಾನ ಬಂದವರಿಂದ ಉಳಿಸಲ್ಪಟ್ಟ ಆ ನಾಯಿಗೆ 'ನೀಲಿಕ್ರಾಸ್' ಪದಕ ಕೊಡಲಾಯಿತು.

ಲೆಕ್ಕವಿಲ್ಲದಷ್ಟು ಜನ ತಮ್ಮ ಕಸುಬಿಗೆ ತಕ್ಕಂತೆ ನಾಯಿಗಳನ್ನು ಪಳಗಿಸಿ ಕೊಳ್ಳುತ್ತಾರೆ. ಪಳಗಿದ ನಾಯಿಗಳು ಬುದ್ಧಿವಂತಿಕೆಯಲ್ಲಿ ಕೆಲವೊಮ್ಮೆ, ಮನುಷ್ಯನನ್ನೂ ಮೀರಿಸುವುದಿರುತ್ತದೆ.

ಲಂಡನ್ನಿನ ಜಾರ್ ಸನ್ ಒಬ್ಬ ಹೆಸರಾಂತ ಮನುಷ್ಯನಿದ್ದ. ಆತನ ಕೆಲಸ—ಕಾರ್ಯವೇನೂ ಒಬ್ಬರಿಗೂ ತಿಳಿದಿರಲಿಲ್ಲ. ಆತನೊಡನೆ ಯಾವಾಗಲೂ ಒಂದು ಸುಂದರ ನಾಯಿಯಿರುತ್ತಿತ್ತು. ಒಮ್ಮೆ ಒಂದು ಔತಣ ಕೂಟದಿಂದ ಹೊರ ಬರುತ್ತಿದ್ದ. ಆತ ಹಾಗೂ ನಾಯಿಯನ್ನು ಕಂಡ ಮಿತ್ರನೊಬ್ಬ ನಾಯಿಗೆ ಪ್ರೀತಿಯಿಂದ ಬಿಸ್ಕತ್ತು ಹಾಕಿದ. ನಾಯಿ ಅದನ್ನು ಮೂಸಿ ಕೂಡ ನೋಡಲಿಲ್ಲ. ಅದರ ಘನತೆಗೆ ಮೆಚ್ಚಿ ನಡೆದ ಮಿತ್ರನಿಗೆ ಅದರ ಬಾಯಲ್ಲಿ ಅಪಹೃತ ಉಂಗುರವಿದ್ದುದು ತಿಳಿಯುವ ಬಗೆ ಹೇಗೆ?

ನಾಯಿ ತನ್ನ ಯಜಮಾನನನ್ನೇ ಅಲ್ಲದೇ ಆತನ ಪರಿವಾರ ಹಾಗೂ ಪದಾರ್ಥಗಳನ್ನೂ ತನ್ನ ಚುರುಕು ಕಣ್ಣಿನಿಂದ ಕಾಯುತ್ತಿರುತ್ತದೆ.

ದಕ್ಷಿಣ ಆಫ್ರಿಕಾದ ಒಂದು ಹಳ್ಳಿಯ ರೈತನೊಬ್ಬನ ಮೂರು ವರ್ಷದ ಗಂಡು ಮಗು ಇದ್ದಕ್ಕಿದ್ದಂತೆ ಒಂದು ದಿನ ಕಾಣೆಯಾಯಿತು. ತಂದೆ, ತಾಯಿಗಳು ಹಾಗೂ ಅಕ್ಕಪಕ್ಕದವರು ರಾತ್ರಿಯೆಲ್ಲಾ ಹುಡುಕಿದರೂ ಸಿಗಲಿಲ್ಲ.

ಬೆಳಗಿನ ಜಾವವಾಗುವ ವೇಳೆಗೆ ಒಬ್ಬ ನೀಗ್ರೋ ಹುಡುಗ ನಾಯಿಯ ಗುರುಗುಟ್ಟುವಿಕೆಯನ್ನು ಮೈಲು ಕಲ್ಲುಗಳ ಹಿಂದಿನಿಂದ ಕೇಳಿದ. ಅದೇನೆಂದು ಯೋಚಿಸಿ ಹುಡುಕಲಾಗಿ ಬಿಚ್ಚು ಗಣ್ಣಿನಿಂದ ನೋಡುತ್ತಿದ್ದ ಎರಡು ತಂದೆಯ ಕುರಿಕಾಯುವ ನಾಯಿಗಳ ಮಧ್ಯೆ ಕಳೆದು ಹೋಗಿದ್ದ ಮಗು ಬೆಚ್ಚಗೆ ಮುಚ್ಚಿಟ್ಟು ಕೊಂಡಿದ್ದುದು ಕಂಡು ಬಂತು.

ರಾತ್ರಿಯೆಲ್ಲಾ ಚಳಿಗೆ ಮೈಗೊಟ್ಟು ಆ ನಾಯಿಗಳು ಯಜಮಾನನ ಮಗುವನ್ನು ದುಷ್ಟ ಪ್ರಾಣಿಗಳಿಂದ ರಕ್ಷಿಸಿದ್ದವು.

ಲಂಡನ್ನಿನಲ್ಲೊಮ್ಮೆ ಕುದುರೆ ಗಾಡಿಯಿಂದಿಳಿದವನೊಬ್ಬ ಅಂಗಡಿಯ ಮುಂದೆ ಗಾಡಿ ಬಿಟ್ಟು, ಅಂಗಡಿಯ ಒಳಹೊಕ್ಕ. ಏನಾಯಿತೋ ಏನೊ? ಕುದುರೆಗಳು ಬೆದರಿ ಓಡತೊಡಗಿದವು ಗಾಡಿಯೊಡನೆ. ಸಂಗಡಲೇ ಇದ್ದ ನಾಯಿ ಕೂಡಲೇ ಅದರ ಹಿಂದೆ ಓಡಿತು. ಗಾಡಿಗೆ ಹಾರಿತಲ್ಲದೇ ಕಡಿವಾಣವನ್ನು ಬಾಯಿಯಲ್ಲಿ ಭದ್ರವಾಗಿ ಕಚ್ಚಿಕೊಂಡು ತುಯ್ಯತೊಡಗಿತು. ಸ್ವಲ್ಪ ಕಾಲ ಕುದುರೆಗಳನ್ನು ತಡೆಯಲು ಸಾಧ್ಯವಾಗದಿದ್ದರೂ ಕೊನೆಗೆ ಜಯಸಡೆದಿತ್ತು. ಗಾಡಿಯಲ್ಲಿ ಮಲಗಿದ್ದ ಮಗುವು ಎದ್ದು ಕೆರುಚುತಲಿತ್ತು.

ಪತ್ತೇದಾರಿಕೆಯಲ್ಲಿ ನಾಯಿಯ ಉಪಕಾರ ಅತೀ ಹೆಚ್ಚಿನದಿದೆ. ಪುರಾತನ ಕಾಲದಲ್ಲೂ ಅದು ತನ್ನ ಈ ಗುಣಕ್ಕೆ ಹೆಸರಾಗಿತ್ತು. ಅದರ ಸಹಜ ಗುಣಗಳಲ್ಲಿದೂ ಒಂದು.

ಒಬ್ಬ ರೋಮನ್ ಗುಲಾಮ ದೇಶೀಯ ಯುದ್ಧದಲ್ಲಿ ಕೊಲೆ ಮಾಡಲ್ಪಟ್ಟ. ಆತನ ನಾಯಿ ಸತ್ತ ದೇಹವನ್ನು ಬಿಟ್ಟು ಕದಲಲಿಲ್ಲ ಹಾಗೂ ಹತ್ತಿರ ಯಾರನ್ನೂ ಬಿಡಲೂ ಇಲ್ಲ. ರಾಜ ಪಿರ್ರಿಸ್ ಈ ವಾರ್ತೆ ಕೇಳಿ ಅತ್ತ ಬಂದ. ಮೂರು ದಿನಗಳಿಂದ ಅನ್ನ ಆಹಾರ ಸ್ವೀಕರಿಸದೇ ಯಜಮಾನನ ಶವ ಕಾಯುತ್ತಿದ್ದ ಅದನ್ನು ಬಹು ಕಷ್ಟದಿಂದ ಬೇರ್ಪಡಿಸಿ ಶವವನ್ನು ಸಂಸ್ಕಾರ ಮಾಡಿಸಿದ. ಆ ನಾಯಿಯನ್ನು ತನ್ನಲ್ಲಿಗೆ ಕರೆಯಿಸಿಕೊಂಡ.

ಅಂದು ಸೈನಿಕರ ಕವಾಯತು ನಡೆದಿತ್ತು. ಸೈನಿಕರು ಮಂದಿಸುತ್ತಾ ಮುಂದುವರೆದಿದ್ದರು. ನಾಯಿ ರಾಜನ ಕಾಲ ಬಳಿ ಮಲಗಿತ್ತು. ಇದ್ದಕ್ಕಿದ್ದಂತೆ ಚಂಗನೆ ನೆಗೆದು ಅದು ಒಬ್ಬ ಸೈನಿಕನನ್ನು ಘಾಸಿಮಾಡತೊಡಗಿತು. ರಾಜನಿಗೆ ಆತನೇ ಅದರ ಯಜಮಾನನ ಕೊಲೆಗಾರನೆಂದು ವಿಚಾರಿಸಿ ತಿಳಿಯುವುದಕ್ಕೆ ವೇಳೆಯೂ ಗಲಿಲ್ಲ. ಅಂತೆಯೇ ಕೊಲೆಗಾರನಿಗೆ ದಂಡನೆಯಾಯಿತು.

ನಾಯಿಯು ಬುದ್ಧಿವಂತಿಕೆಯಲ್ಲೂ ಕಳಪೆಯೇನಿಲ್ಲ.

ಪ್ರಾನ್ಸಿನ ಒಂದು ಶಿಶು ವಿಹಾರದಲ್ಲಿ ಇಪ್ಪತ್ತು ಜನ ಬಡ ಜನರಿದ್ದರು. ಅವರಿಗೆ ನಿಯಮಿತ ವೇಳೆಯಲ್ಲಿ ಆಹಾರ ಕೊಡಲಾಗುತ್ತಿತ್ತು. ಅವರೊಡನೆ ಒಂದು ನಾಯಿಯು ವಾಸವಾಗಿತ್ತು. ದಿನವೂ ಅದು ತಿಂದು ಮಿಕ್ಕ ಆಹಾರಕ್ಕಾಗಿ ಕಾದು ಕುಳಿತಿರುತ್ತಿತ್ತು. ಆದರೆ ತಾವೇ ತುಂಬು ಹಸಿದಿರುತ್ತಿದ್ದ ಜನ ಒಂದು ಚೂರು ಆಹಾರವನ್ನೂ ಬಿಸುಡುತ್ತಿರಲಿಲ್ಲ. ಆಹಾರ ಕೊಡುವ ಪದ್ಧತಿ ಈ ರೀತಿ ಇತ್ತು:—ನಿಗದಿತ ಒಂದು ಚಿಕ್ಕ ಕಿಟಕಿಯ ಬಳಿ ಹೋಗಿ ಅಲ್ಲಿದ್ದ ಗಂಟೆಬಾರಿಸಿದೊಡನೆಯೇ ಆ ಕಿಟಕಿಯಿಂದ ಒಂದು ತಟ್ಟೆ ಹೊರ ಬರುತ್ತಿತ್ತು. ಅದನ್ನು ಗಮನಿಸುತ್ತಿದ್ದ ನಾಯಿ, ಎಲ್ಲರೂ ತಮ್ಮ ವಾಲನ್ನು ತೆಗೆದುಕೊಂಡು ಹೋದ ಮೇಲೆ ತಾನೂ ಬಂದು ಗಂಟೆ ಬಾರಿಸುತ್ತಿತ್ತು ಎಂದಿನಂತೇ ಒಂದು ತಟ್ಟೆ ಹೊರ ಬರುತ್ತಿತ್ತು. ೨೦ ತಟ್ಟೆಗೆ ಬದಲಾಗಿ ಆ ವಿಭಾಗದಲ್ಲಿ ೨೧ ತಟ್ಟೆಗಳು ಖರ್ಚಾಗುತ್ತಿದ್ದುದನ್ನು ಗಮನಿಸಿದ ಅಧಿಕಾರಿಗಳು ಕೊನೆಗೆ ನಿಜ ಕಂಡು ಹಿಡಿದು ನಾಯಿಯ ಜಾಣ್ಮೆಗೆ ಮೆಚ್ಚಿ ಅದಕ್ಕೂ ಒಂದು ಪಾಲು ಆಹಾರವನ್ನು ಕೊಡುವ ಕಾಯಿದೆ ತಂದರು.

ನಾಯಿ ತನ್ನ ಅಸಾಧ್ಯ ಧೈರ್ಯಕ್ಕೆ ಹೆಸರಾದುದು ಎಂತಹ ಸಂದಿಗ್ಧ ಪರಿಸ್ಥಿತಿಯಲ್ಲೂ ಹಿಂಜರಿಯದ ಪ್ರಾಣಿಯೆಂದರೆ ನಾಯಿ.

'ಕೆಂಟ್'ನ ಪಡತ್ಯೆ ಸ್ವಲ್ಪ ದೂರದಲ್ಲಿ ಒಮ್ಮೆ ಒಂದು ಹೆಡಗು ಬಿರುಗಾಳಿಯಿಂದ ಹೊಯ್ದಾಡ ತೊಡಗಿತ್ತು. ದೊಡ್ಡ ದೊಡ್ಡ ಅಲೆಗಳಿಂದ ಹಡಗು ಒಡೆದು ಚೂರಾಗುವ ಸಂಭವವೂ ಹತ್ತಿರವಿತ್ತು. ಅದರಲ್ಲಿ ಎಂಟು ಜನರಿದ್ದರು. ಎಲ್ಲರೂ ಸಹಾಯಕ್ಕಾಗಿ ಅಳತೆ ಮೀರಿ ಕೆರುಚುತ್ತಲಿದ್ದರು. ಅಲೆಗಳು ಬಹು ದೊಡ್ಡ ವಿದ್ದುದರಿಂದ ಯಾವ ದೋಣಿಯೂ ಅವರ ಸಹಾಯಕ್ಕೆ ಬರಲು ಸಾಧ್ಯವಿದ್ದಿರಲಿಲ್ಲ. ಪಡದಲ್ಲಿ ಸುಮ್ಮನೆ ಬಿಡುಗಣ್ಣಿನಿಂದ ಒಂದು ದೊಡ್ಡ ಗುಂಪೇ ಕಾದಿತ್ತು. ಏನು ಮಾಡಬೇಕೆಂಬುದು ಅವರಿಗೆ ತಿಳಿದಿರಲಿಲ್ಲ.ಆವರಲ್ಲಿಒಬ್ಬ ಮನುಷ್ಯ ತನ್ನ ನ್ಯೂ ಫೌಂಡ್‌ಲ್ಯಾಂಡಿನ ನಾಯಿಯೊಡನೆ ಬಂದಿದ್ದ. ಆತ ಒಂದು ಹಗ್ಗಕ್ಕೆ ಕೋಲನ್ನು ಕಟ್ಟಿ ಅದರ ಬಾಯಲ್ಲಿಟ್ಟು ಬಿರುಗಾಳಿಗೆ ಹೊಯ್ದಾಡುತ್ತಿದ್ದ ಹಡಗನ್ನು ತೋರಿಸಿದ. ಅರ್ಥ ಗ್ರಹಿಸಿದ ನಾಯಿ ಕೂಡಲೇ ನೀರಿಗೆ ನೆಗೆಯಿತು. ಆ ಹಿರಿಯಲೆಗಳ ದವಡೆಯಲ್ಲಿ ನಾಯಿಗೆ ಹಡಗು ಸೇರುವುದು ಬಹು ಕಷ್ಟವಾಗಿತ್ತಾದರೂ ಅದು ತನ್ನ ಸಾಹಸ ಬಿಡಲಿಲ್ಲ. ಹಡಗನ್ನು ಏರಲು ಸಾಧ್ಯವಾಗದೇ ಕಷ್ಟ ಪಡುತ್ತಿದ್ದ ನಾಯಿಯನ್ನು ಕಂಡ ಹಡಗಿನವರು ತಾವೇ ಹಡಗಿನ ಒಂದು ದೊಡ್ಡ ಹಗ್ಗಕ್ಕೆ ಕಡ್ಡಿಯೊಂದನ್ನು ಕಟ್ಟಿ ಅದರ ಕಡೆಗೆ ಎಸೆದರು. ಕೂಡಲೇ ನಾಯಿ ತನ್ನ ಬಾಯಲ್ಲಿನ ಕಡ್ಡಿ ಬಿಟ್ಟು ಅದನ್ನು ಕಚ್ಚಿಕೊಂಡು ಪಾಪಸು ದಡ ಸೇರಿತು. ಈಗಲೋ ಆಗಲೋ, ಸಾಯುವಂತಿದ್ದ ಆ ನಾಯಿಯನ್ನು ಕಂಡಾಗ ಯಜಮಾನನಿಗೆ ಸಂಕಟ ಬಹುವಾಗಿ ಹೊಮ್ಮಿತಾದರೂ ಅದರಿಂದ ಎಂಟು ಪ್ರಾಣಗಳು ಉಳಿಸಲ್ಪಟ್ಟವೆಂದು ತಿಳಿದಾಗ ಅದರ ಪುಟ್ಟ ಜೀವದ ಶ್ರಮ ಸಾರ್ಥಕವಾಗಿತ್ತು.

(ಆನೇ ಪುಟ ನೋಡಿರಿ)

ಸ್ವಲ್ಪ ಸ್ವಲ್ಪವಾಗಿ, ಆಲ್ಲೊಮ್ಮೆ ಇಲ್ಲೊಮ್ಮೆ, ನೀವು ಉಳಿಸುತ್ತಿರುವ ಹಣವು ಬೇಗ ಬೇಗನೆ ವೃದ್ಧಿಗೊಂಡು, ನಿಮ್ಮ ಭವಿಷ್ಯದ ಭದ್ರತೆಯು ಹೆಚ್ಚೆಚ್ಚಾಗಿ ಪರಿಣಮಿಸುವಂತೆ

ಕೊಪ್ಪೊರೇಶನ್ ಬೇಂಕು

ನಿಮ್ಮ ಸೇವಿಂಗ್ಸ್ ಬೇಂಕ್ ಏಕೌಂಟುಗಳ ಮೇಲೆ ಇನ್ನು ಮುಂದಕ್ಕೆ ಸಾಲಿಯಾನ್ ಸೇಕಡಾ 3 ರ ದರದಲ್ಲಿ ನಿಮಗೆ ಬಡ್ಡಿ ಕೊಡುವುದು.

ವಿವರಗಳಿಗೆ ವಿಚಾರಿಸಿರಿ:

ದಿ. ಕೆನರಾ ಬೇಂಕಿಂಗ್ ಕೊಪ್ಪೊರೇಶನ್ ಲಿಮಿಟೆಡ್

(ಸ್ಥಾಪನೆ: 1906) (ರಿಜಿಸ್ಟರ್ಡ್ ಆಫೀಸು: ಉಡುಪಿ.

ಆಡಳಿತ ಆಫೀಸು: ಮಂಗಳೂರು—1

ಸುಲಭ ದರದಲ್ಲಿ
ಶಾಲೆಗಳಿಗೆ ಬೇಕಾಗುವ
ಯಾವತ್ತೂ ಫಾರ್ಮುಗಳೂ
ಹಾಜರಿ ರಿಜಿಸ್ಟ್ರಿಗಳೂ ಸಿಗುತ್ತವೆ
ನವಯುಗ ಪ್ರೆಸ್ ಉಡುಪಿ.

> ಕರ್ತವ್ಯ ಪಾಲಿಸುವುದಕ್ಕೆ ಹಿಂದೋಡುವವನು ಸಾಫಲ್ಯವನ್ನೆಂದಿಗೂ ಪಡೆಯಲಾರನು; ಧೈರ್ಯವನ್ನು ಕಳೆದುಕೊಳ್ಳುವವನು ತನ್ನ ಕರ್ತವ್ಯವನ್ನು ಪೂರೈಸಲಾರನು.

ನವಯುಗ

ವಾರ	ಉಡುಪಿ	ವರುಷ
೨೪	೧೩-೭-೬೦	೪೩

ಸಿಂಹದ ಪಾಲು

ಮೈಸೂರು ಮತ್ತು ಆಂಧ್ರ ರಾಜ್ಯಗಳ ನಡುವೆ ನದಿಯ ನೀರಿಗಾಗಿ ನಡೆಯುವ ಹೊಯ್ದಾಟ ಮುಂದವಾಗುತ್ತಿರುವ ಬದಲು ಮತ್ತಷ್ಟು ತೀವ್ರವಾಗಿ ಹೋಗುತ್ತಿರುವುದು ಉಭಯ ರಾಜ್ಯಗಳ ಹಿತದೃಷ್ಟಿಯಿಂದ ಶುಭಸೂಚಕವೆನ್ನಲಾಗುವುದಿಲ್ಲ. ಹೀಗೆಯೇ ಮುಂದುವರಿಯುತ್ತ ಹೋದರೆ ಕುರುಕ್ಷೇತ್ರವೇ ಆಗಬಹುದೆಂಬ ಭೀತಿ ಮೂಡುವುದು ಸ್ವಾಭಾವಿಕ. ಅದರಲ್ಲೂ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ನೀಲಂ ಸಂಜೀವ ರೆಡ್ಡಿಯವರು ಇತ್ತೀಚೆಗೊಂದು ಅನುಪಯುಕ್ತ ಮತ್ತು ಅವ್ಯವಹಾರ್ಯವಾದ ಸಲಹೆಯೊಂದನ್ನು ತಮ್ಮ ಹೇಳಿಕೆಯಲ್ಲಿ ಇತ್ತು ಮೊದಲೇ ಕಲುಷಿತಗೊಂಡ ವಾತಾವರಣದಲ್ಲಿ ಮತ್ತಷ್ಟು ಕೊಳೆಜೆಯೆಬ್ಬಿಸುವಂತೆ, ಒಂದು ಪ್ರಶ್ನೆಯನ್ನು ಬಿಡಿಸಲು ಪ್ರಯತ್ನಿಸಿ ನೂರಾರು ಉಪಪ್ರಶ್ನೆಗಳಿಗೆ ಉತ್ತರವರಸುವಂತೆ ಮಾಡಿದುದು ಶೋಚನೀಯವಿದೆ. ೧೯೫೧ರಲ್ಲಿ ಕೃಷ್ಣ ನದಿ ನೀರಿನ ಹಂಚಿಕೆಯ ಸಂಬಂಧದಲ್ಲಿ ಆಗಿದ್ದ ಒಪ್ಪಂದದ ಮೂಲ್ಯಾಂಕನವನ್ನು ಸರ್ವೋಚ್ಚ ನ್ಯಾಯಾಲಯದ ಮೂಲಕ ಮಾಡಿಕೊಳ್ಳಬಹುದು ಎಂಬುದೇ ಶ್ರೀ ರೆಡ್ಡಿಯವರ ಅಪೂರ್ವ ಸಲಹೆಯಾಗಿದೆ.

ಶ್ರೀ ರೆಡ್ಡಿಯವರು ದುರುದ್ದೇಶಪ್ರೇರಿತರಾಗಿಯೇ ಈ ಸಲಹೆಯಿತ್ತರೆಂದು ನಾವು ತಿಳಿಯುವುದಿಲ್ಲ ಆದರೂ ಅವರು ಹೇಳಿಕೆ ಕೊಡುವ ಮೊದಲು ಪೂರ್ವಾಪರಗಳನ್ನು ಸರಿಯಾಗಿ ತಿಳಿದುಕೊಂಡಿಲ್ಲವೆಂದು ಮಾತ್ರ ಬೇಸರ. ಅವರ ಸಲಹೆಯು ಎರಡೂ ರಾಜ್ಯಗಳ ನಡುವೆ ತಪ್ಪು ತಿಳುವಳಿಕೆಗಳು ಹೆಚ್ಚಾಗಲು ಮತ್ತು ಅನಪೇಕ್ಷಣೀಯ ಗೊಂದಲಗಳುಂಟಾಗಲು ಕಾರಣವಾಗುವಂತಾಗಿದೆಯೆಂದು ವಿಷಾದ ಸೂಚಿಸಬೇಕಾಗಿದೆ. ಕೃಷ್ಣಾ—ಗೋದಾವರೀ ನದಿಗಳು ಮಹಾರಾಷ್ಟ್ರ ಮೈಸೂರು ಮತ್ತು ಆಂಧ್ರ ರಾಜ್ಯಗಳಲ್ಲಿ ಹರಿದು ಅಂತಾರಾಜ್ಯ ನದಿಗಳಾಗಿವೆ. ಅಂತಾರಾಜ್ಯ ನದಿಗಳ ವಿವಾದ ಸಂಬಂಧಿ ಕಾನೂನಿನ ಸಹಾಯದಿಂದ ಕೇಂದ್ರ ಸರಕಾರದ ಸಹಕಾರ ಪಡೆದು ಈ ಮೂರು ರಾಜ್ಯಗಳು ಯಾವ ರೀತಿಯಾಗಿ ನೀರನ್ನು ಹಂಚಿಕೊಳ್ಳಬೇಕು ಎಂಬುದನ್ನು ವಿಚಾರ ವಿನಿಮಯದಿಂದಲೇ ನಿರ್ಧರಿಸಿಕೊಳ್ಳುವುದು ಅಸಾಧ್ಯವೆಂದು ನಾವು ಭಾವಿಸುವುದಿಲ್ಲ. ಆರ್ಥಿಕವಾಗಿ ಮತ್ತು ಉತ್ಪತ್ತಿದಾಯಕವಾಗಿ ಅಂತಾರಾಜ್ಯೀಯ ನದಿಗಳಲ್ಲಿ ರಾಜ್ಯ ಸರಕಾರಗಳು ತೊಡಗುವ ಯೋಜನೆಗಳ ಮೇಲೆಯೂ ಕೇಂದ್ರ ಸರಕಾರಕ್ಕೆ ಹೊಣೆಗಾರಿಕೆಯಿದೆಯೆಂಬುದನ್ನು ನಾವು ಒಪ್ಪಿಕೊಳ್ಳುವುದಾದರೆ, ನಾಗಾರ್ಜುನ ಸಾಗರ ಮತ್ತು ಶ್ರೀಶೈಲಯೋಜನೆಗಳಿಂದಾಗಿ ಮೈಸೂರಿಗಾಗುತ್ತಿರುವ ಅನ್ಯಾಯವನ್ನದು ಅರಿತುಕೊಳ್ಳಬೇಕಿತ್ತು. ಸದ್ಯ ನೀರಿನ ಹಂಚಿಕೆಗೆಂದಿರುವ ೧೯೫೧ರ ಒಡಂಬಡಿಕೆಯಂತೆ ಆಗ ಅದಕ್ಕೆ ಸಹಿ ಹಾಕಿದ ನಾಲ್ಕು ರಾಜ್ಯಗಳು ಸಮ ಪ್ರಮಾಣದಲ್ಲಿ ನೀರನ್ನು ಪಡೆಯಬೇಕು. ಆದರೆ, ೧೯೫೬ರಲ್ಲಿ ಆದ ರಾಜ್ಯ ಪುನರ್ಘಟನೆಯ ನಂತರ ಈ ರಾಜ್ಯಗಳ ಸ್ವರೂಪವೇ ಪರಿವರ್ತನೆಗೊಂಡುದರಿಂದ, ಮಹತ್ವದ ಬದಲಾವಣೆಗಳು ಮೂಲ ಒಪ್ಪಂದದ ಅನಂತರ ಸಂಭವಿಸಿದುದರಿಂದ ಅದನ್ನು ಪುನರ್ವಿಮರ್ಶಿಸಬೇಕೆಂದು ಮೈಸೂರು ಅಥವಾ ಮಹಾರಾಷ್ಟ್ರಗಳು ಬಯಸಿದರೆ, ದುರಾಗ್ರಹವೆಂದು ಆಂಧ್ರ ತಿಳಿಯುವುದು ಆದರ ಬುದ್ಧಿಶೂನ್ಯತೆಯ ಪ್ರದರ್ಶನವೆನ್ನಬೇಕು. ಮೂರು ತಿಂಗಳ ವಾಯದೆಯೊಳಗೆ ಕರಾರಿನ ಹಣವನ್ನು ಪಾವತಿ ಮಾಡದಿದ್ದರೆ, ತನ್ನ ಶರೀರದ ಒಂದು ರಾತಲು ಮಾಂಸವನ್ನು ಕೊಡುತ್ತೇನೆಂದು ಬರೆದ ಅಂಥೋನಿಯು ಹಣ ಮುಟ್ಟಿಸಲು ಅಸಾಧ್ಯನಾದಾಗ, ಕರಾರಿನಂತೆ ಒಂದು ರಾತಲು ಮಾಂಸವನ್ನೇ ಪಟ್ಟುಹಿಡಿದು ನ್ಯಾಯಕ್ಕಾಗಿ ಹಾತೊರೆದ ಶೈಲಕನ ಸಂಕುಚಿತ ಪ್ರವೃತ್ತಿ ಆಂಧ್ರ ಪ್ರದೇಶಕ್ಕೆ ಶೋಭಾಕರವೆನ್ನುವಂತಿಲ್ಲ, ಆದರೆ, ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳದೆ ಅಥವಾ ಅಧಿಕ ಪಾಲು ತನಗೆ ದೊರೆಯಬೇಕೆಂಬ ಅತಿಲೋಭತನದಿಂದ ಆಂಧ್ರವು ಸಮೂಹಾನಕರ ತೀರ್ಮಾನಕ್ಕೆ ಬರಲು ನಿರಾಕರಿಸುತ್ತಿರುವುದು ಶೋಚನೀಯವೇ ಸರಿ. ನ್ಯಾಯವಾದ ಪಾಲು ಬೇಡುವ ಮೈಸೂರು, ಸಿಂಹದ ಪಾಲು ಬಯಸುವ ಆಂಧ್ರಗಳ ಹೊಡೆದಾಟವು ಎರಡೂ ರಾಜ್ಯಗಳು ಒಮ್ಮನಸ್ಸಿನಿಂದ ಮುಂದುವರಿಯಲಿದ್ದ ಮಾರ್ಗಗಳನ್ನು ಬಿಟ್ಟುಕೊಟ್ಟಂತಾಗಿದೆ. ಇದರ ಪರಿಣಾಮವಾಗಿಯೇ ಎಂಬಂತೆ ಕೇಂದ್ರ ಸರಕಾರವು ಶ್ರೀ ಗುಲ್ಜೆಟಿ ಸಮಿತಿಯನ್ನು ನೇಮಿಸಿ, ವಿವಾದ ಪರಿಹಾರದ ಸಂಬಂಧದಲ್ಲಿ ವರದಿ ನೀಡಲು ಆದೇಶವಿತ್ತಿತು.

ಶ್ರೀ ಗುಲ್ಜೆಟಿಯವರು ತನ್ನ ಸಮಿತಿಯ ಸದಸ್ಯರೊಡನೆ ಸಂಬಂಧಿತ ರಾಜ್ಯಗಳೊಡನೆ ಸಮಾಲೋಚನೆ ನಡೆಸಿದ್ದಾರೆ. ಸುದೈವದಿಂದಾಗಿ ಎಲ್ಲ ಸರಕಾರಗಳೂ ಅವರಿಗೆ ಸಂಪೂರ್ಣ ಸಹಕಾರ ನೀಡುತ್ತಿವೆ. ಇದರ ಪರಿಣಾಮವಾಗಿ ನ್ಯಾಯೋಚಿತ ವಿಧಾನದಲ್ಲಿ ವಿವಾದ ಇತ್ಯರ್ಥಗೊಳ್ಳುವುದೆಂದು ಹಾರೈಸಬಹುದು, ಇಂತಹ ಪರಿಸ್ಥಿತಿಯಲ್ಲಿ ಕುದಿಯುವ ಎಣ್ಣೆಗೆ ನೀರು ಹೊಯ್ಯುವಂತಹ ಕಾರ್ಯವನ್ನು ಶ್ರೀ ಸಂಜೀವ ರೆಡ್ಡಿಯವರು ಮಾಡಬಾರದಿತ್ತು. ಅಂದಿಗಿಂತ ಇಂದು ರಾಜ್ಯಗಳ ಗಡಿ ರೇಖೆ, ರೂಪ, ಪ್ರಮಾಣವೆಲ್ಲವೂ ಬೇರೆಯಾಗಿರುವುದು. ಹಾಲಿನಷ್ಟು ಬೆಳ್ಳಗಾಗಿರುವಾಗ, ಅಂದಿದ ಒಪ್ಪಂದವನ್ನು ಸರ್ವೋಚ್ಚ ನ್ಯಾಯಾಲಯದ ಮೂಲಕ ಮೂಲ್ಯಾಂಕನಗೊಳಿಸಬೇಕೆಂಬ ಅವರ ಸಲಹೆ ತುಟಿಮೀರಿದುದೆಂದು ಪ್ರತ್ಯೇಕ ಹೇಳಬೇಕಾಗಿಲ್ಲ; ಒಂದು ವೇಳೆ ಹೀಗೆ ಮಾಡುವುದಾದರೆ, ಅದರಿಂದ ವಿವಾದ ಬಗೆಹರಿಯುವ ಬದಲು ಎರಡೂ ರಾಜ್ಯಗಳ ಮಧ್ಯೆ ಹುಟ್ಟಿದ ಕಹಿ ಭಾವನೆಗಳು—ಬಿರುಕುಗಳು ಮತ್ತಷ್ಟು ಹೆಚ್ಚಾಗಿ ಸೌಹಾರ್ದತೆಯಿಂದ ಬಾಳುವ ಅವಕಾಶವೇ ಇಲ್ಲದಂತಾಗುವುದು ಖಂಡಿತ. ಇದಕ್ಕೆ ಉಭಯ ಪಕ್ಷದವರೂ ಅಪ್ಪದ ಕೊಡುವಷ್ಟು ಆದೂರ ದೃಷ್ಟಿಗಳಾಗದಿರಲಿ.

ಪ್ರವಾಹ ಪೀಡಿತರು

ಆರ್ದ್ರಾ ನಕ್ಷತ್ರದಲ್ಲಿ ಹಿಡಿದ ಮಳೆ ಬೇಕಾದುದಕ್ಕಿಂತ ಹೆಚ್ಚಾಗಿ ಸುರಿದು ಮೈಸೂರು, ಕೇರಳ, ಮದ್ರಾಸು, ಒಡಿಸ್ಸ, ಮಹಾರಾಷ್ಟ್ರಗಳಲ್ಲಿ ವಿಪರೀತ ಪರಿಣಾಮಗಳನ್ನಾಂಟುಮಾಡಿದ ವರದಿಗಳು ದಿನೇ ದಿನೇ ಬರುತ್ತಿವೆ. ಕೇರಳ, ಮೈಸೂರು ಮತ್ತು ಮದ್ರಾಸಗಳಲ್ಲಿ ಆದ ಹಾನಿಯು ಅಗಣಿತವೆನ್ನಬಹುದು. ಇಡಿಯ ಕೇರಳ ನೀರಿನಡಿ ಮುಳುಗಿದ್ದಿತೆನ್ನಬಹುದಾದರೆ, ಅರ್ಧ ಮೈಸೂರು ಕೆಟ್ಟು ಹೋಗಿದೆಯೆನ್ನಬೇಕು. ಪ್ರಕೃತಿಯನ್ನು ಅಂಕೆಯಲ್ಲಿಡಲು ಮಾನವ ಸ್ರಯತ್ನಿಸುತ್ತಿರುವನಾದರೂ ಪ್ರಕೃತಿ ತನ್ನ ಮಾಯೆಯಿಂದ ಆತನನ್ನೇ ವಂಚಿಸುತ್ತಿದೆ. ಪ್ರಕೃತಿಯ ಪ್ರಕೋಪವನ್ನು ತಡೆಯುವುದು ಸದ್ಯ ಮಾನವನಿಂದ ಅಸಾಧ್ಯವೇ ಆಗಿದೆ. ಅಂತೂ ಅಲ್ಲಲ್ಲಿ ಎದ್ದ ಬಿರುಗಾಳಿ, ಬಿದ್ದ ಮಳೆ ಏರಿದ ನೆರೆಗಳಿಂದಾಗಿ ಅನೇಕ ಹಳ್ಳಿಗಳು ಮುಳುಗಿವೆ, ಮನೆಗಳು ಬಿದ್ದಿವೆ, ಜನರ ಪ್ರಾಣಹಾನಿಯೂ ಆಗಿದೆ. ಸತ್ತ ಜನರಿಗಾಗಿ ಸಂತಾಪ ವ್ಯಕ್ತಪಡಿಸುವುದಲ್ಲದೆ ಮತ್ತೇನನ್ನೂ ನಾವು ಮಾಡಲಾರೆವು; ಆದರೆ, ಬದುಕುಳಿದ ಸಂತ್ರಸ್ತರಿಗಾಗಿ ನಾವು ಮಾಡಬೇಕಾದ ಕರ್ತವ್ಯ ಬಹಳವಿದೆ. ಮಹಾಪೂರದಿಂದ ನೊಂದ ಜನರು ಮಾನವರಾಗಿ ಬದುಕುವಂತೆ ನೋಡುವ ಜೊಣೆಗಾರಿಕೆ ಸರಕಾರದ್ದು; ಅದಕ್ಕಿಂತಲೂ ಹೆಚ್ಚು ನಾಗರಿಕರದ್ದು. ಕೊಂಕಣದ ಸಂತ್ರಸ್ತರಿಗೆ ಆರ್ಥಿಕ ಸಹಾಯ ನೀಡುವ ಏರ್ಪಾಡೊಂದು ಇಷ್ಟರಲ್ಲಿಯೇ ಪ್ರಾರಂಭವಾಗಿದೆ. ಹಾಗೆಯೇ ಉಳಿದ ಪ್ರದೇಶಗಳಲ್ಲಿಯೂ ಪರಿಹಾರ ಕಾರ್ಯ ಆರಂಭವಾಗಬೇಕು, ಈ ದೆಸೆಯಲ್ಲಿ ಸರಕಾರ ಮತ್ತು ಸಾರ್ವಜನಿಕರು ಮುಕ್ತ ಮನಸ್ಸಿನಿಂದ ಉದಾಹರಣೆಯಿಂದ ಸೇವೆ ಸಲ್ಲಿಸಬೇಕು. ಮನೆಮಠಗಳನ್ನು ಕಳೆದುಕೊಂಡ ನಮ್ಮವರು ಮರಳಿ ನಮ್ಮಂತೆ ಬಾಳುವುದಕ್ಕೆ ಶಕ್ತ್ಯನುಸಾರ ಸಹಾಯ ನೀಡುವುದು ನಮ್ಮ ಧರ್ಮವೆಂಬುದನ್ನು ಜ್ಞಾಪಿಸಿಕೊಳ್ಳಬೇಕು.

ಸಂಕ್ಷಿಪ್ತ ಸುದ್ದಿಗಳು

ಕೃಷ್ಣಮೆನನ್

ಸಂರಕ್ಷಣಾ ಶಾಖೆಯ ಮಂತ್ರಿ ಶ್ರೀ ಕೃಷ್ಣಮೆನನ್ನರ ಬಗ್ಗೆ ದೇಶದೊಳಗೆ ಯಾವ ಅಭಿಪ್ರಾಯಗಳೇ ಇರಲಿ, ವಿದೇಶಗಳಲ್ಲಿ ಸದಭಿಪ್ರಾಯವಿದೆ. ನೆಹರುರವರಿಗೆ ಬೇಕಾದವರೆಂಬುದರಿಂದಲೇ ಅವರಿಂದು ಕೇಂದ್ರದಲ್ಲಿ ವಿರಾಜಿಸುತ್ತಾರೆ. ದೇಶದ ಸಮಗ್ರತೆಯ ಬಗ್ಗೆ ಇತ್ತೀಚೆಗೆ ಅವರು ಒತ್ತಾಯ ಬಹಳವಾಗಿ ಹೆಚ್ಚ ತೊಡಗಿದೆ. ಯು. ಎನ್. ಪೊ.ನಲ್ಲಿ ಕಾಶ್ಮೀರದ ಬಗ್ಗೆ ತಾಸುಗಟ್ಟಲೆ ಮಾತಾಡಿ, ಭಾರತದ ವಾದವನ್ನು ಸಮರ್ಥಿಸುತ್ತ ಮೂರ್ಛೆ ಹೋಗಿದ್ದ ಇವರು ಕಾಶ್ಮೀರದ ಗಡಿಯಲ್ಲಿ ಪಾಕಿಸ್ತಾನವು ಸೈನ್ಯ ಜಮಾಯಿಸುತ್ತಿದೆಯೆಂದು ಕೇಳಿ ಮನಃ ಪಾಕಿಸ್ತಾನಕ್ಕೆ ಎಚ್ಚರಿಕೆ ನೀಡಬೇಕಾಗಿ ಬಂತು. "ಭಾರತವು ಶಾಂತ ವಿಧಾನದಿಂದಲೇ ತನ್ನ ಸಮಗ್ರತೆಯನ್ನು ಕಾಯ್ದುಕೊಳ್ಳುವುದು; ಒಂದು ಪಕ್ಷಯುದ್ಧವನ್ನೇ ಅದಕ್ಕಾಗಿಮಾಡಬೇಕಾಗಿ ಬಂದರೆ, ಶತ್ರುಗಳನ್ನು ಅವರ ದೇಶಕ್ಕೋಡಿಸುವ ವರೆಗೂ ವಿಶ್ರಮಿಸೆವು" ಎಂಬಧೀರೋತ್ತಿ ಈ ಹಳೆಯ ಬ್ರಹ್ಮಚಾರಿಯ ಬಾಯಿಯಿಂದ ಹೊರಬಿದ್ದಿದೆ.

ನಿಜಲಿಂಗಪ್ಪ

ಕರ್ನಾಟಕದ ಹಿತಾಸಕ್ತಿಗಳ ಬಗ್ಗೆ ಮಾತನಾಡುವುದರಲ್ಲಿಮತ್ತು ಕಾರ್ಯಶೀಲರಾಗುವದರಲ್ಲಿ ಶ್ರೀನಿಜಲಿಂಗಪ್ಪನವರು ಒಬ್ಬರು. ಆರ್ಥಿಕ ತಳಹದಿಯಲ್ಲೇ ಹಿಂದುಳಿದಿರುವಿಕೆಯನ್ನು ನಿಶ್ಚಯಿಸ ಬೇಕೆಂಬ ಅವರ ವಾದವು ಸರಕಾರದ ನಿರ್ಧಾರದಿಂದ ಅಲ್ಲಿಯೇ ಮಗುಚಿಬಿತ್ತಾದರೂ ಇಡಿಯ ಲಿಂಗಾಯತರ ಸಮಾಜ ಮತ್ತು ವಕ್ಕಲಿಗರ ಉಪಜಾತಿ 'ಬಂಟ'ರು ಹಿಂದುಳಿದವರಾದರು. ಕೃಷ್ಣಾ-ಗೋದಾವರಿ ನೀರ ತಂಟೆಯಲ್ಲಿ ಆಂಧ್ರ ಸರಕಾರದ ಹಠ ಮೂರಿತನ ನೀಗಬೇಕೆಂಬವಾದ ನಿಜಲಿಂಗಪ್ಪನವರದು. ಮೈಸೂರಿಗೆ ನ್ಯಾಯವಾಗಿ ದೊರೆಯ ಬೇಕಾದ ಪಾಲನ್ನು ಪಡದೇ ತೀರ ಬೇಕೆಂಬ ಹಠ ಇವರದು. ಇದೆಷ್ಟು ಕಾರ್ಯರೂಪಕ್ಕೆ ಇಳಿದೀತು ಎಂದು ಹೇಳಬೇಕಾದವರು ಗೊಲ್ಜೆಟ್ಟಿ ಸಮಿತಿಯೋ ಆಂಧ್ರ ಸರಕಾರವೋ ತಿಳಿಯದಾಗಿದೆ.

ಅಷ್ಟ ಗ್ರಹ ಯೋಗ

ಅಪೂರ್ವವಾದ ಅಷ್ಟ ಗ್ರಹ ಯೋಗ ಮುಂದಿನ ವರ್ಷ ಫೆಬ್ರವರಿಯಲ್ಲಿ ಬರಲಿರುವುದರಿಂದ ಇಡಿಯ ಜಗತ್ತಿನಲ್ಲಿ ಅಪೂರ್ವ ಅನಾಹುತಗಳು ಸಂಭವಿಸುವುವೆಂದು ಜ್ಯೋತಿಷಿಗಳು ಭವಿಷ್ಯನುಡಿಯುತ್ತಾರೆ. ಈ ಅನಾಹುತಗಳ ಸ್ವರೂಪವು ಹೇಗಿರಬಹುದು ಎಂಬುದನ್ನೂ ಖಚಿತವಾಗಿ ವ್ಯಕ್ತಪಟ್ಟಿಲ್ಲವಾದರೂ ಬಿರುಗಾಳಿ ಭೂಕಂಪನ ಮೊದಲಾದ ದುರ್ಶಿಕ್ಷೆಗಳು ತೋರಿಬಂದು ಅಪಾರ ನಷ್ಟ ಸಂಭವಿಸುವುದು ಖಂಡಿತವೆಂದು ಹೇಳಲಾಗುತ್ತಿದೆ. ಈ ಯೋಗದ ಸಂಬಂಧದಲ್ಲಿ ಜಗತ್ತಿನ ವಿಖ್ಯಾತ ಜ್ಯೋತಿಷಿಗಳು ಮತ್ತು ಖಗೋಳ ಶಾಸ್ತ್ರಜ್ಞರ ಅಭಿಪ್ರಾಯಗಳನ್ನು ಕ್ರೋಢೀಕರಿಸುವ ಸಾಹಸವನ್ನು ಭಾರತೀಯ ಜೋತಿಷ ಪರಿಷತ್ತು ಮಾಡುವುದಂತೆ. ದಕ್ಷಿಣದ ಭಾರತದ ರಾಜ್ಯಗಳಲ್ಲಿ ಎದ್ದ ಮಹಾಪೂರವೂ ಇದೇ ಯೋಗದ ಮುನ್ಸೂಚನೆಯೆಂದು ಇಲ್ಲಿನ ನಿವಾಸಿಗಳು ತಿಳಿದರೆ ಆಶ್ಚರ್ಯವಿಲ್ಲ.

'NAVAYUGA' WEEKLY is in the list of periodicals and Newspapers approved for use in Secondary School as per proceedings Roc. No. 466 N/50 date 2-12-1950 of the Directors of public Instruction Madras.

ಅಲ್ಲಲ್ಲಿಯ ಸುದ್ದಿಸಾರ

ಎಂ. ಜಿ. ಎಂ. ಕಾಲೇಜಿನ ಡಿಗ್ರಿ ಪರೀಕ್ಷಾ ಫಲಿತಾಂಶ—

ಉಡುಪಿಯ ಎಂ. ಜಿ. ಎಂ. ಕಾಲೇಜಿನ ಮೈಸೂರು ಯುನಿವರ್ಸಿಟಿ ಡಿಗ್ರಿ ಪರೀಕ್ಷೆಗಳ ಉತ್ತಮ ಫಲಿತಾಂಶವು ಈ ಕೆಳಗಿನಂತಿದೆ.

ಬಿ. ಎ. ಡಿಗ್ರಿ ಕ್ಲಾಸು—	
(1) ಇಂಗ್ಲೀಷ್, ಇತಿಹಾಸಿಕ್ಸ್—	96%
(2) ಇಂಗ್ಲೀಷ್, ಹಿಸ್ಟರಿ—	91%
ಬಿ. ಎಸ್. ಸಿ ಡಿಗ್ರಿ ಕ್ಲಾಸು—	92%
(1) ಮೆತಮೆಟಿಕ್ಸ್, ಫಿಸಿಕ್ಸ್—	62%
(2) ಫಿಸಿಕ್ಸ್, ಕೆಮಿಸ್ಟ್ರಿ—	69%
(3) ಬೊಟನಿ, ಜೂವೋಲಜಿ:—	88%
ಬಿ. ಕಾಂ. ಡಿಗ್ರಿ ಕ್ಲಾಸು—	50%
	64%

ಸಾಹಿತ್ಯ ಸಂಘದ ಉದ್ಘಾಟನೆ—

ಉಡುಪಿ ಬೋರ್ಡು ಹೈಸ್ಕೂಲಿನ ಸಾಹಿತ್ಯ ಸಂಘದ ಉದ್ಘಾಟನೆಯನ್ನು ದಿನಾಂಕ 6-7-61 ರಂದು ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ ಕೆ. ವಿಟ್ಟಲ ಶೆಣೈಯವರು ನೆರವೇರಿಸಿದರು. ಪ್ರಾರ್ಥನೆಯೊಡನೆ ತರುವಾಯ ಸಂಘದ ಕಾರ್ಯದರ್ಶಿಯು, ರಾಜಗೋಪಾಲಾಚಾರ್ಯರು ಸ್ವಾಗತಿಸುತ್ತಾ, ಸಂಘದ ಉದ್ದೇಶ ಮತ್ತು ಚಟುವಟಿಕೆಗಳನ್ನು ವಿವರಿಸಿದರು. ಉದ್ಘಾಟನೆಯನ್ನು ಮಾಡುತ್ತಾ ಜಿಲ್ಲಾ ವಿದ್ಯಾಧಿಕಾರಿಗಳು ಈ ಸಾಹಿತ್ಯ ಸಂಘದಲ್ಲಾ ಚಟುವಟಿಕೆಗಳು ಅಲ್ಪಾಯುಷಿಗಳಾಗದೆ ಅಮರಾಯುಷಿಗಳಾಗಿ ವಿದ್ಯಾರ್ಥಿಗಳಲ್ಲಿ ಸಾಹಿತ್ಯಾಭಿರುಚಿಯನ್ನು ಜಾಗೃತಗೊಳಿಸಬೇಕೆಂದು ಹೇಳಿದರು. ಸಭೆಯ ಅಧ್ಯಕ್ಷರಾಗಿದ್ದ ಮುಖ್ಯೋಪಾಧ್ಯಾಯ ಶ್ರೀ ಕೆ. ವಿಟ್ಟಪ್ಪನವರು ಮಾನ್ಯ ಜಿಲ್ಲಾವಿದ್ಯಾಧಿಕಾರಿಗಳ ಎಲ್ಲಾ ಸಲಹೆಗಳನ್ನು ಸ್ವಾಗತಿಸಿದರು. ಈ ಮೂರಿ ಚಂದ್ರಕಲಾ ಪ್ರಭು, ವತ್ಸಲಾ ಕುಮಾರಿ. ಕೆ. ಮತ್ತು ಟಿ. ಮೂಲಿಯವರು ಹಾಡುಗಳನ್ನು ಹಾಡಿದರು. ಜತೆ ಕಾರ್ಯದರ್ಶಿ ಶ್ರೀ ಕೆ. ರಘುನಾಥ ಶಾನುಭೋಗರು ಧನ್ಯವಾದಗಳನ್ನರ್ಪಿಸಿದರು.

ಉಡುಪಿ ರೋಟರಿ ಕ್ಲಬ್ಬಿನ ಸಭೆ—

ಉಡುಪಿ ರೋಟರಿ ಕ್ಲಬ್ಬಿನ ಹೊಸ ಪದಾಧಿಕಾರಿಗಳ ಸ್ಥಾಪನಾ ಸಮಾರಂಭವು ಇದೇ ತಾ. 4ರಂದು ಮಣಿಪಾಲದಲ್ಲಿ ಜರಗಿದಾಗ ಎಕೆಡೆಮಿ ರಿಜಿಸ್ಟ್ರಾರ್ ಡಾ| ಟಿ. ಎಂ. ಎ. ಪೈಯವರು ಭಾಷಣಮಾಡುತ್ತಾ ನಮ್ಮಲ್ಲಿಯ ಕಾಲೇಜುಗಳ ಮಟ್ಟವು ಕಡಿಮೆಯದೇನೂ ಅಲ್ಲವೆಂದೂ, ನಮ್ಮ ವಿದ್ಯಾರ್ಥಿಗಳು ಪರದೇಶಗಳಿಗೆ ಹೋಗುವುದು ಗೌರವವೆಂದು ತಿಳಿಯಬಾರದೆಂದೂ ವಿದೇಶಗಳಿಂದ ಭಾರತಕ್ಕೆ ವಿದ್ಯಾರ್ಥಿಗಳನ್ನು ಆಮಂತ್ರಿಸಲು ರೋಟರಿ ಕ್ಲಬ್ ಪ್ರಯತ್ನಿಸಬೇಕೆಂದೂ ಸಲಹೆ ಇತ್ತರು. ಆರಂಭದಲ್ಲಿ ಮಾಜಿ ಅಧ್ಯಕ್ಷ ಶ್ರೀ ಅರೂರು ಲಕ್ಷ್ಮೀನಾರಾಯಣ ರಾಯರು ಶ್ರೀ ಟಿ. ಆರ್. ಎ. ಪೈಗಳಿಗೆ ಅಧ್ಯಕ್ಷ ಪಥವಿಯನ್ನು ಒಪ್ಪಿಸಿದರು. ಶ್ರೀ ಕೆ. ಕೆ. ಪೈ ಮತ್ತು ಶ್ರೀ ಇ. ಯು. ಜಾಕೊಲ್‌ರವರು ಉಪಾಧ್ಯಕ್ಷರುಗಳಾಗಿಯೂ, ಶ್ರೀ ಟಿ. ರಮೇಶ ಪೈಗಳು ಕಾರ್ಯದರ್ಶಿಗಳಾಗಿಯೂ, ಡಾ| ಕೃಷ್ಣ ಸ್ವಾಮಿಗಳವರು ಜತೆ ಕಾರ್ಯದರ್ಶಿಯಾಗಿಯೂ, ಶ್ರೀ ಎ. ಜಿ. ಅಪ್ಪಯವರು ಕೋಶಾಧಿಕಾರಿಯಾಗಿಯೂ ಶ್ರೀ ಟಿ. ಪಾಂಡುರಂಗ ಪೈಯವರು ಸಾರ್ಜಂಟ್ ಎಟ್, ಆರ್ಮ್ಸ್ ಆಗಿಯೂ ನೇಮಕಗೊಂಡಿರುವುದಾಗಿ ಹೊಸ ಅಧ್ಯಕ್ಷರು ಸಭೆಗೆ ತಿಳಿಸಿದರು. ಮಾಜಿ ಕಾರ್ಯದರ್ಶಿ ಶ್ರೀ ಕೆ. ಕೆ. ಪೈಗಳು ಸದಸ್ಯರು ತಮಗೆ ಕೊಟ್ಟ ಸಹಕಾರವನ್ನು ಸ್ಮರಿಸಿದರು.

ಜೈನ್ ಹೈಸ್ಕೂಲಿಗೆ ಅಭಿನಂದನೆ—

ಮೂಡಬಿದ್ರೆಯ ಜೈನ್ ಹೈಸ್ಕೂಲಿನಿಂದ ಈ ವರ್ಷ, ಎಸ್. ಎಸ್. ಎಲ್. ಸಿ. ಪರೀಕ್ಷೆಗೆ ಕುಳಿತಿಸಲ್ಪಟ್ಟ 79 ವಿದ್ಯಾರ್ಥಿಗಳಲ್ಲಿ 78 ಮಂದಿ ಪಾಸಾಗಿ ಶಾಲೆಗೆ 92.4% ಫಲಿತಾಂಶ ಬಂದಿರುತ್ತದೆ. ಕಳೆದ ನಾಲ್ಕೈದು ವರ್ಷಗಳಿಂದ ಹೀಗೆಯೇ ಶೇಕಡಾ 90ಕ್ಕೆ ಮಿಕ್ಕಿಯೇ ಫಲಿತಾಂಶ ಬಂದಿರುವ ಬಗೆಗೆ ಶಾಲೆಯನ್ನು ಅಭಿನಂದಿಸಿ, ಸಲ್ಲೇಯ ಸುವರ್ಣಯರಾದ ಶ್ರೀ ಬಿ. ಧರ್ಮಪಾಲ ಶೆಟ್ಟಿ ಮತ್ತು ಶ್ರೀ ಕೆ. ಎಸ್. ಅಧಿರಾಜಯ್ಯನವರು ಶಾಲಾ ಮುಖ್ಯೋಪಾಧ್ಯಾಯರನ್ನೂ ಸಹೋದ್ಯೋಗಿಗಳನ್ನೂ ಒಂದು ಸತ್ಕಾರಕೂಟವನ್ನೇರ್ಪಡಿಸಿ ಗೌರವಿಸಿದರು. ತಮ್ಮನ್ನು ಮತ್ತು ತನ್ನ ಸಹೋದ್ಯೋಗಿಗಳನ್ನು ಈ ರೀತಿ ಗೌರವಿಸಿದುದಕ್ಕಾಗಿ ಮುಖ್ಯೋಪಾಧ್ಯಾಯ ಶ್ರೀ ಎ. ಸೋಮಪ್ಪ ರೈಗಳು ಅವರಿಗೆ ಧನ್ಯವಾದಗಳನ್ನರ್ಪಿಸಿದರು.

ಯಕ್ಷಗಾನ—

ದೇಲಂಪಾಡಿ ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಕಲಾ ಮಂದಿರದಲ್ಲಿ ದಿನಾಂಕ 8—7—61ರಂದು "ಭಕ್ತ ಸುಧನ್ವ" ಎಂಬ ಕಥಾ ಭಾಗದ ಯಕ್ಷಗಾನ ತಾಳಮದ್ದಳೆಯು ಪ್ರದರ್ಶಿಸಲ್ಪಟ್ಟಿತು.

ಶ್ರೀಗಳಾದ ಕೀ. ವ. ಕೇಶವ, ಯಂ. ಕೃಷ್ಣ ಭಟ್ಟ, ಕೆ. ಶಂಕರ ಭಟ್ಟ, (ಹಿರಿಯ ಕೆನ) ವೇಷಧಾರಿ ಗುಡ್ಡಪ್ಪ ಗೌಡ (ಸುಧನ್ವ) ಕೆ. ಅಣ್ಣಯ್ಯ ಭೆಂಡಾರಿ (ಅರ್ಜುನ) ಬಾಬು ರೈ (ಕೃಷ್ಣ)ಎಂ. ಎಸ್. ಗೌಡ (ಹಂಸಧ್ವಜ) ಎಂ. ಎಸ್. ರೈ (ಮನ್ಮಥ) ಯಂ. ರಾಮ (ವೃಷಕೇತು)ಬಿ. ಎ. ಪಾಟಾಳಿ(ಅನುಸಾಲ್ವ) ಡಿ. ಲಕ್ಷ್ಮಣ (ಮಂತ್ರಿ)ರೇ ಮುಂತಾದವರು ಭಾಗ ವಹಿಸಿದ್ದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಕೀರಿಕ್ಕಾಡು ಮಾಸ್ಟರ್ ವಿಷ್ಣು ಭಟ್ಟರು ವಹಿಸಿದ್ದರು.

ಪ್ರಾರಂಭದಲ್ಲಿ—ಕಾರ್ಯಕ್ರಮದ ವ್ಯವಸ್ಥಾಪಕರಾದ ಶ್ರೀ ಮಾದಿಯೂರು ನಾರಾಯಣ ರೈಗಳು ಸ್ವಾಗತಿಸಿ, ಕೊನೆಗೆ ಧನ್ಯವಾದವಿತ್ತರು.

ನಗಾದಿ ತಗಾದೆ ನಾಟಕ—

ಶ್ರೀ ರಮಾನಂದ ಚೋರ್ಯರ ಕರ್ನಾಟಕ ಲಲಿತ ಕಲಾ ಮಾಧವನ ಸಂಸ್ಥೆಯವರಿಂದ ಉಡುಪಿ ವರದೇಂದ್ರ ಕಲಾ ಮಂದಿರದಲ್ಲಿ ಇದೇ ತಾ. 4 ರಂದು ಶ್ರೀ ಕಾಶೀ ಮಠಾಧೀಶ ಶ್ರೀ ಸುಧೀಂದ್ರ ತೀರ್ಥ ಶ್ರೀ ಪಾದಂಗಳವರ ಸಮಕ್ಷಮದಲ್ಲಿ ನಗಾದಿ ತಗಾದೆ ಎಂಬ ನಗೆ ನಾಟಕವು ಯಶಸ್ವಿಯಾಗಿ ಅಭಿನಯಿಸಲ್ಪಟ್ಟಿತು. ನಗರ ಸಭಾ ಉಪಾಧ್ಯಕ್ಷ ಶ್ರೀ ಕೆ. ರಂಗನಾಥ ಶೆಣೈಯವರು ಕಲಾವಿದರ ಪ್ರತಿಭೆಯನ್ನು ಶ್ಲಾಘಿಸಿ ಮಾತನಾಡಿದರು.

ತಾ. 3ನೇ ರಾತ್ರಿ ಇದೇ ನಾಟಕವು ಮಣಿಪಾಲದ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಶ್ರೋತೃವೃಂದದಲ್ಲಿ ನಗರ ಸಭಾಧ್ಯಕ್ಷ ಡಾ| ಕೆ. ಎಲ್. ಪತಾಳರ ಹಿರಿತನದಲ್ಲಿ ಜಯಶೀಲವಾಗಿ ಪ್ರದರ್ಶಿಸಲ್ಪಟ್ಟಿತು. ಮೈಸೂರಿನ ಗೃಹಮಂತ್ರಿ ಶ್ರೀ ಎಚ್. ಎಮ್. ಚೆನ್ನಬಸಪ್ಪನವರೂ ಇತರರೂ ಈ ನಾಟಕವನ್ನು ಅದ್ಯಂತವಾಗಿ ನೋಡಿ ಸಂತೋಷವನ್ನೂ ಮೆಚ್ಚುಗೆಯನ್ನೂ ವ್ಯಕ್ತಪಡಿಸಿದರು.

ಜಿಲ್ಲಾ ಖಾಸಗಿ ಪ್ರಾ| ಶಾಲೆಗಳಿಗೆ ಧಕ್ಕೆ—

ದ. ಕ. ಜಿಲ್ಲಾ ಖಾಸಗಿ ಪ್ರಾ. ಶಾಲೆಗಳ ಮೆನೇಜರರ ಸಂಘದ ಕಾರ್ಯಕಾರಿ ಸಮಿತಿಯ ಸಭೆಯೊಂದು ಇದೇ ತಾ. 6ರಂದು ಉಡುಪಿಯಲ್ಲಿ ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಎಂ. ಇ. ಆರ್, ನಿಬಂಧನೆಗಳ ಅವಸರದ ಬಳಲಾವಣೆ, ಮೈಂಟೆನೆನ್ಸ್ ಗ್ರಾಂಟಿನ ರದ್ದತಿಯಿಂದ ಖಾಸಗಿ ಶಾಲೆಗಳಿಗೊದಗುವ ಧಕ್ಕೆಯ ಕುರಿತು ಪರಿಶೀಲಿಸಲಾಯಿತು. ಈ ಗಂಭೀರ ಸಮಸ್ಯೆಯನ್ನು ಬಗೆಹರಿಸಲು ಮುಂದಿನ ಕಾರ್ಯಕ್ರಮವನ್ನು ನಿರ್ಧರಿಸಲು ಜಿಲ್ಲಾ ಖಾಸಗಿ ಶಾಲಾ ಮೆನೇಜರರ ಮಹಾಸಭೆಯನ್ನು ಇದೇ ತಾ. 23ನೇ ಆದಿತ್ಯವಾರ ಬೆಳಗ್ಗೆ 9 ಗಂಟೆಗೆ ಉಡುಪಿ ಮೈನ್ ಶಾಲೆಯಲ್ಲಿ ಜರಗಿಸಬೇಕೆಂದೂ ನಿರ್ಧರಿಸಲಾಯಿತು.

ಕುಂದಾಪುರ ಡಿ ಮು ಕೋರ್ಟಿನಲ್ಲಿ

R. E. A. 281/61 R. E. P. 500/59

O. S. 9/56.

Between

1. ಜಿ.ಗೋಪಾಲ ಶ್ಯಾನುಭಾಗ,2 ತ್ರಿವಿಕ್ರಮ ಶ್ಯಾನುಭಾಗ. —ಅರ್ಜಿದಾರರು.

ಮತ್ತು

1. ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್, 2. ಗಣೇಶ ಶ್ಯಾನುಭಾಗ. —ಎದ್ರಿರು.

ಅರ್ಜಿದಾರರು ಮೇಲ್ಕಾಣಿಸಿದ ಅಮ್ಲಜ್ಜಾರಿಯಲ್ಲಿ ಕೋರ್ಟಿನಲ್ಲಿ ಡಿಪೋಜಿಟು ಆಗಿರುವ ಹಣವನ್ನು ಕೊಡಿಸಬೇಕಾಗಿ ಅರ್ಜಿ ಕೊಟ್ಟಿರುತ್ತಾರೆ. ಸದ್ರಿ ಅರ್ಜಿ ತಾ 4-8-61ಕ್ಕೆ ತಪ್ಪಿಗೆ ಇದೆ. ಆ ಕಾರಣ ಆಕ್ಷೇಪ ಇದ್ದಲ್ಲಿ ಆ ದಿವ್ಸ ಕೋರ್ಟು ಮುಂದೆ ಜ್ಞಾಪೀರುಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಅರ್ಜಿದಾರರಿಗೆ ಹಣ ಕೊಡಲಾದೀತು.

H. Laxminarayanayya,
ಎಡ್ವಕೇಟ್.

ಕುಂದಾಪುರ, 10-7-61.

ಉಡ್ಪಿ ಡಿ. ಮು. ಕೋರ್ಟಿನಲ್ಲಿ

O. S. No. 132/61

ಶೇಕ್‌ಯಿಸ್ಮಾಲ್ ಸಾಹೇಬ—ವಾದಿ.

ಮತ್ತು

1. ಚಾಂದಬೀ 2. ರುಕ್ಮಾಬೀ 3. ಹಸನ್ ಸಾಹೇಬ 4. ಯಿಮಾಮ್ ಸಾಹೇಬ —ಪ್ರತಿವಾದಿರು.

ಯಿದರೊಳಗೆ

ಸದ್ರಿ 2 3 4 ಪ್ರತಿವಾದಿರು ಉಡ್ಪಿ ತಾಲ್ಲುಬಡಾಗ್ರಾಮದಲ್ಲಿರುವವರು—

ಮೇಲ್ಕಂಡ ವ್ಯಾಜ್ಯವು ಹಿಂದೆ ಬಗ್ಗೆ ನೂಡಿದ ದಾವೆಯಾಗಿದ್ದು ಸದ್ರಿ ವ್ಯಾಜ್ಯದಲ್ಲಿ ಸದ್ರಿ 2, 3, 4ನೇ ಪ್ರತಿವಾದಿರಿಗೆಅಗತಕ್ಕ ವ್ಯಾಜ್ಯದ ನೋಟೀಸುತಾ. 5—8—1961ಕ್ಕೆ ಯಿಟ್ಟಿರುವದ್ರಿಂದ ಆ ದಿವ್ಸ ಸದ್ರಿ ಪ್ರತಿವಾದಿರು ತಂಮ ಆಕ್ಷೇಪ ಹೇಳುವದನ್ನು ಸದ್ರಿ ಕೋರ್ಟು ಮುಂದೆ ಹಾಜ್ರಾಗಿ ಜ್ಞಾಪೀರು ಮಾಡಿಕೊಳ್ಳತಕ್ಕದ್ದು.

P. Padmanabha Rao
Vakil for Plaintiff.

Udipi, Dated 11-7-1961

ಬಂಟರ ಯಾನೆ ನಾಡವರ ವಿದ್ಯಾವರ್ಧಕ ಸಂಘ (ರಿಜಿಸ್ಟರ್ಡ್) ಶಿರ್ವ, ದ. ಕ.

ವಿಶೇಷ ಮಹಾಸಭೆಯ ನೋಟೀಸು

ಇದೇ ತಾ. 23—7—1961ನೇ ಆದಿತ್ಯವಾರ ಅಪರಾಹ್ನ ಘಂಟೆ 2ಕ್ಕೆ ಶಿರ್ವ ಹಿಂದೂ ಹಾಯರ್ ಎಲಿಮೆಂಟರಿ ಶಾಲಾ ಕಿತ್ಯಾನಂದ ಸದನದಲ್ಲಿ ಮೇಲಿನ ಸಂಘದ ವಿಶೇಷ ಮಹಾ ಸಭೆಯು ಜರಗಲಿರುವುದರಿಂದ ಸಂಘದ ಸದಸ್ಯರೆಲ್ಲರೂ ಹಾಜರಿರಬೇಕಾಗಿ ವಿನಂತಿ.

ಸಭೆಯಲ್ಲಿ ಬರತಕ್ಕ ವಿಷಯಗಳು:—

1. ಪ್ರಕೃತದ ಅಧ್ಯಕ್ಷರು ಮತ್ತು ಕರೆಸ್ಪಾಂಡೆಂಟರು ಇವರುಗಳ ರಾಜಿನಾಮೆಯಿಂದಾಗಿ ಸಂಘದ ಮತ್ತು ಶಾಲೆಗಳ ಅವ್ಯವಸ್ಥೆಯ ವಿಷಯದಲ್ಲಿ ಪರ್ಯಾಲೋಚಿಸುವುದು.

2. ಗತವರ್ಷಗಳ ಜಾರ್ಟರ್ಡ್ ಎಕೌಂಟೆಂಟರಿಂದ ಪರಿಶೋಧಿಸಲ್ಪಟ್ಟ ಲೆಕ್ಕಪತ್ರಗಳು ಮತ್ತು ರಿಕಾರ್ಡುಗಳ ಪರಿಶೀಲನೆ (ಸಂಬಂಧ ಪಟ್ಟವರು ಲೆಕ್ಕ ಪತ್ರಗಳನ್ನೂ ಮತ್ತು ರಿಕಾರ್ಡುಗಳನ್ನೂ ಜೊತೆಯಲಿಸತಕ್ಕದ್ದು.)

3. ಸಂಘದ ಮೆಮರಂಡಮ್ ಆಫ್ ಎಸೋಸಿಯೇಶನ್ ಮತ್ತು ಕ್ರಮ ನಿಬಂಧನೆಗಳ ಈ ಕೆಳಗಿನ ತಿದ್ದುಪಡಿಗಳು.

ಮೆಮರಂಡಮಿನ 1ರಲ್ಲಿ, 2ರಲ್ಲಿ, 2(c)ಯಲ್ಲಿ, 3ರಲ್ಲಿ, 4ರಲ್ಲಿ, "ಬಂಟರ ಯಾನೆ ನಾಡವರ"ಎಂಬುದನ್ನು ಲೋಪಪಡಿಸುವುದು. 2(f)ನಲ್ಲಿ "ಈಡುಯಾ ಆಡವು ಮಾಡುವುದು" ಈ ವಾಕ್ಯ ಸೂಚಿಯಾದ ಕೂಡಲೇ "ಕ್ರಯ ವಾ ಧರ್ಮ ಸಾಧನ ಯಾ ಪರಾಬರೆ ಮಾಡುವುದು" ಎಂಬುದನ್ನು ಸೇರಿಸುವುದು.

ಕ್ರಮ ನಿಬಂಧನೆಗಳ 1ರಲ್ಲಿ, 7ರಲ್ಲಿ "ಬಂಟರ ಯಾನೆ ನಾಡವರ" ಎಂಬುದನ್ನು ಲೋಪಪಡಿಸುವುದು 2ರಲ್ಲಿ "ಬಂಟರ ಯಾನೆ ನಾಡವರ ಸಮಾಜಕ್ಕೆ ಸೇರಿದವರಾಗಿರತಕ್ಕದ್ದು ಮತ್ತು" ಎಂಬುದನ್ನು ಲೋಪಪಡಿಸುವುದು. 5(o) ಈ ವಾಜಿಕವನ್ನು ಸಂಪೂರ್ಣ ಲೋಪಪಡಿಸುವುದು. (ಮಹಾ ಸಭೆಯಲ್ಲಿ ಬರುವ ಇತರ ತಿದ್ದುಪಡಿಗಳೆದ್ದರೆ).

4. ಚಾಲ್ತಿ ವರ್ಷದ ಕಾರ್ಯಕಾರಿ ಮಂಡಳಿಯ ಆಯ್ಕೆ.

5. ಅಧ್ಯಕ್ಷರ ಅನುಮತಿಯ ಮೇರೆಗೆ ಬರುವ ಇತರ ವಿಷಯಗಳು.

ಶಿರ್ವ ದ. ಕ.
6—7—1961

ಶಿರ್ವ ದುಗ್ಗಪ್ಪ ಹೆಗ್ಡೆ ಕೂಡಾ 16ಮಂದಿ
ಕಾರ್ಯಕಾರಿ ಮಂಡಳಿಯ ಸದಸ್ಯರು
ಮತ್ತು ಸಾಮಾನ್ಯ ಸದಸ್ಯರು.

ಉಡುಪಿ. ಡಿ. ಮು. ಕೋರ್ಟಿನಲ್ಲಿ.

O. S. 426/1959. R. E. P. 92/1961

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಉಡುಪಿ —ಅರ್ಜಿದಾರ.

ಮತ್ತು

ತುಂಗು ಹೆಂಗ್ಸು ಕೂಡಾ —ಎದ್ರಿರು.

2 ಕೃಷ್ಣಪ್ಪ, 6. ಶೀನ—ನಾಗಪ್ಪಪಡರ ಮಗಂದಿರು-ಮೂಡನಪಡಂಬೂರು ಗ್ರಾಮದ ಶಿರಬೀಡು—

ಸದರಿ 2, 6ನೇ ಎದ್ರಿರಿಗೆ—

ಮೇಲೆ ಹೇಳೋಣಾದ ವ್ಯಾಜ್ಯದಲ್ಲಿ ಡಿಕ್ರಿ ಹೊಂದಿದವನಾದ ಅರ್ಜಿದಾರನು ಪ್ರಿಲಿಮಿನರಿ ಡಿಕ್ರಿಯಿಂದ ಕಾಣುವ ಸ್ವತ್ತಾಸ್ತಿ ವಿಕ್ರಯದ ಟೈಮ್ ಹಾಜರುಪಡಿಸಿದ ವಿಕ್ರಯದ ಇಸ್ತಿಹಾರಿನ ಶರತುಗಳನ್ನು ನಿರ್ಣಯಿಸಲಿಕ್ಕೆ 1961ನೇ ಇಸವಿ ಜುಲಾಯಿ 13ಗಿಳ ತಾರೀಕು 10ಯಂತ ನಿಶ್ಚಯಿಸೋಣಾಗಿರುವದೆಯಂತ ನಿಮಗೆ ಇದರಿಂದ ತಿಳಿಯಪಡಿಸೋಣಾಗಿಯದೆ—

ಕೋರ್ಟು ಹುಕುಂ ಪ್ರಕಾರ.

ಎಂ. ದಾಮೋದರ ಕಾಮತ್,
ಅರ್ಜಿದಾರನ ಕಡೆ ಎಡ್ವಕೇಟ್.

ಉಡುಪಿ, 10-7-61.

ಉಡುಪಿ. ಡಿ. ಮು. ಕೋರ್ಟಿನಲ್ಲಿ.

O. S. 166/1961.

ದಾರೆಂಮ ಶೆಟ್ಟಿ —ವಾದಿಳು.

ಮತ್ತು.

ಅಕ್ಕಂಮ ಶೆಟ್ತಿ ಕೂಡಾ —ಪ್ರತಿ ವಾದಿರು

ಯಿದರೊಳಗೆ

2ನೇ ಪ್ರತಿವಾದಿ: ರಾಮಂಣ ಶೆಟ್ಟಿ ಸಂಕಮ್ಮ ಶೆಟ್ತಿಳ ಮಗ. ಉಡುಪಿ ತಾಲೂಕು ಕೆಂಜಾರು ಗ್ರಾಮದಲ್ಲಿರುವ ಇವರಿಗೆ ಈ ಮೂಲಕ ತಿಳಿಯ ಪಡಿಸುವುದೇನಂದ್ರೆ.

ವಾದಿಳಿಗೆ ನಿಮ್ಮಿಂದ ಕಳೆದ ಶಾವರಿ ಸಂರಕ್ಷೆ ಬರಬೇಕಾದ ಬಾಲ ಗೇನ ಬಾಕಿ ಬಗ್ಗೆ ಮಾಡಿದ ಮೇಲ್ಕಂಡ ದಾವೆಯು ತಾರೀಕು 20-7-1961ಕ್ಕೆ ಇಟ್ಟಿರುವುದರಿಂದ ಆ ಕಾರಿತ್ತು ಉಪಾಹರಿಸುವಂಥಾದ್ದಿದ್ದೆ ಆ ದಿವಸ ಪೂರ್ವಾಹ್ನ 10 ಗಂಟೆಗೆ ಸದ್ರಿ ಕೋರ್ಟು ಮುಂದೆ ಹಾಜ್ರಾಗಿ ಜ್ಞಾಪೀರು ಮಾಡಿಕೊಳ್ಳಲು ತಪ್ಪದಲ್ಲಿ ನಿಮ್ಮ ಗೈರು ಹಾಜರಿಯಿಂದ ಯೇಕ ಪಕ್ಷವಾಗಿ ತೀರ್ಮಾನಿಸಲಾದೀತು.

K. Balachandra Rao,
Advocate for Plaintiff.

ಉಡ್ಪಿ, ತಾರೀಕು. 11—7—1961.

ಚಂದಾಹಣ ಬಾಕಿ ಇರುವವರು ದಯವಮಾಡಿ ಕಳುಹಿಸಿಕೊಡಬೇಕಾಗಿ ವಿನಂತಿ.

ಮಹಿಳಾ ಮಂಡಳ:

ತಾಯಂದಿರ ಕರ್ತವ್ಯ—ಮಕ್ಕಳ ರಕ್ಷಣೆ

ಮಕ್ಕಳು ಮನೆಯನ್ನು ರಾಜಮಂದಿರವೆಂದು ಪ್ರೀತಿಸಬಹುದು; ಮೃತ್ಯು ಪಂಜರವೆಂದು ಅದನ್ನು ಕರೆಯಬಹುದು. ಮಗುವಿನ ಮೇಲೆ ಪರ್ಯಾಪ್ತ ಪ್ರಭಾವ ಬೀರಬಲ್ಲವಳು ತಾಯಿ ಮಾತ್ರವಾದುದರಿಂದ ಮಗುವಿನ ಮನೋವೃತ್ತಿಗೆ ಕಾರಣೀಭೂತಳೇ ಆಕೆ. ಆ ತಾಯಿ ಎಚ್ಚರಿಕೆಯಿಂದಿರಬೇಡವೆ?

ಮಗುವು ತನ್ನ ಮನೆಯು ಮೃತ್ಯು ಪಂಜರವಲ್ಲವೆಂಬುದನ್ನು ತಿಳಿಯದಂತೆ ಮಾಡುವ ಉತ್ತರ ದಾಯಿತ್ವ ಕುಟುಂಬದ ಉಳಿದ ಸದಸ್ಯರಿಗಿಂತ ತಾಯಿಯ ಮೇಲೆ ಹೆಚ್ಚಿದೆ. ಅಜ್ಞಾನ, ಗೃಹಸ್ಥಿತಿಯ ಕಾರ್ಯಕಲಾಪಗಳಲ್ಲಿಯೇ ವ್ಯಸ್ತವಾಗಿರುವುದಲ್ಲದೆ ಮಕ್ಕಳ ಕಾರ್ಯಕಲಾಪಗಳ ಕಡೆಗೆ ಎಚ್ಚರಿಕೆ ವಹಿಸದಿರುವುದರಿಂದಲೇ ಮನೆಯು ಮಕ್ಕಳಿಗೆ ಮೃತ್ಯುಪಂಜರವೆಂದು ಭಾಸವಾಗುತ್ತದೆ.

ಗೃಹಿಣಿಯು ತನ್ನ ಮನೆಯ ನಿತ್ಯಕರ್ಮಗಳಲ್ಲಿ ಮತ್ತು ಮಕ್ಕಳ ಕ್ರಿಯಾಕಲಾಪಗಳಲ್ಲಿ ಏಕ ಸಮವಾದ ದೃಷ್ಟಿ ಸರಿಸಬೇಕು. ಪ್ರಾರಂಭದಿಂದಲೇ ಬೆಂಕಿ—ನೀರುಗಳಿಂದ ಆಗುವ ಅನಾಹುತಗಳ ಪರಿಚಯವನ್ನು ಅವಕ್ಕೆ ಮಾಡಿಕೊಡಬೇಕು. ತನ್ನಿಂದ ದೂರವಿರುವಂತೆ ಆವುಗಳಲ್ಲಿ ಅಭ್ಯಾಸ ಮಾಡಿಸ ಬೇಕು.

ಮಕ್ಕಳನ್ನು ಸದಾ ಸರ್ವದಾ ಮಂಡಿಲ್ಲಿಟ್ಟುಕೊಂಡು ತಿರುಗಾಡಬಾರದೆಂಬುದು ಸರಿ. ಆದರೆ, ತಾಯಂದಿರು ತಮ್ಮ ನೆರೆ ಹೊರೆಯವರೊಡನೆ ಹರಟೆ ಹೊಡೆಯುತ್ತ ಇರಲಿ, ಇಲ್ಲವೇ ತಮ್ಮ ಕಾರ್ಯಗಳಲ್ಲಿ ಮಗ್ನರಾಗಿರಲಿ; ಮಕ್ಕಳು ಟೆರಿಸಿನ ಮೇಲೆ ತಿರುಗಾಡುತ್ತಿರಲಿ, ಬಾಗಿಲು ಅಥವಾ ಕಿಟಿಕಿಗಳೆಡೆಯಲ್ಲಿ ಇಣಿಕಿ ನೋಡುತ್ತಿರಲಿ, ಉಪ್ಪರಿಗೆಯ ಮೆಟ್ಟಲುಗಳನ್ನು ಏರುತ್ತಿರಲಿ, ಇಳಿಯುತ್ತಿರಲಿ ಎಂದು ಯಾರಾದರೂ ಹೇಳಿದರೆ, ಅದನ್ನು ಒಪ್ಪುವುದು ಸಾಧ್ಯವಿಲ್ಲ. ಮಗುವನ್ನು ನಿಕಾಳೆಯಾಗಿ ಎಲ್ಲಿಯೇ ಆಗಲಿ ಇರಗೊಡುವುದರಿಂದ ಮತ್ತು ತಾಯಂದಿರು ಮಗುವಿನ ಕಡೆಗೆ ಉದಾಸೀನವಾಗಿರುವುದರಿಂದ ಅನಾಹುತಗಳು ಖಂಡಿತಕ್ಕೂ ಸಂಭವಿಸುತ್ತವೆ.

ಕಿಟಿಕಿಯ ಬಳಿ ಆಡುತ್ತಿರುವಾಗ, ತಡೆಯಿಲ್ಲದ ಜಗಲಿಯಲ್ಲಿ ಸುಳಿದಾಡುತ್ತಿರುವಾಗ ಮಗುವನ್ನು ತಕ್ಷಣ ತಡೆಯ ಬೇಕು. ಕಿಟಿಕಿ ಬಾಗಿಲುಗಳಿಗೆ ಬಲೆಯನ್ನು ಹಾಕುವುದು ಮಗುವಿನ ರಕ್ಷಣೆಗೆ ಹಿತಕರ. ಮುಂಡುಗೋಡೆಗಳಿಲ್ಲದ ಟೆರಿಸಿನಲ್ಲಿ ಇಲ್ಲವೇ ಜಗಲಿಯಲ್ಲಿ ಮಗುವನ್ನು ಓಡಾಡಬಿಡಬಾರದು

ಮನೆಯಲ್ಲಿ ಯಾವಾಗಲೂ ಮದ್ದಿನ ಬಾಟಲಿ ಮೆಣಸು ಮಸಾಲೆಯ ಕರಡಿಗೆ ನೊಣಕೊಲ್ಲುವ ಪುಡಿ, ಹೊಗೆಸೊಪ್ಪು ಮೊದಲಾದುವನ್ನು ಚಲ್ಲಾಪಿಲ್ಲಿಯಾಗಿ ಚೆಲ್ಲಿರುವಂತೆ ಬಿಡಬಾರದು. ಕೈಗೆ ಸಿಕ್ಕಿದ ಯಾವುದೇ ವಸ್ತುವನ್ನು ಬಾಯಿಗಿಟ್ಟುಕೊಳ್ಳುವ ಅಭ್ಯಾಸ ಮಗುವಿನಲ್ಲಿರುತ್ತದೆ. ಬೇಜವಾಬ್ದಾರಿಯಿಂದ ಮನೆಯಲ್ಲಿ ನೊಣಸು—ಡಿ. ಡಿ. ಟಿ. ಮೊದಲಾದ ವಸ್ತುಗಳನ್ನು ಎಲ್ಲೆಂದರಲ್ಲಿ ಎಸೆದು ಬಿಟ್ಟರೆ ಮಗು ಅವನ್ನು ಬಾಯಿಗಿಡುವ ಪ್ರಸಂಗ ಬರಬಹುದು ಇದೆಷ್ಟು ಅಪಾಯಕಾರಿಯೆಂದು ಬೇರೆ ಹೇಳಬೇಕಾಗಿಲ್ಲ. ಆದುದರಿಂದ, ಮನೆಯಲ್ಲಿ ಯಾವುದೇ ಪದಾರ್ಥವನ್ನು ಓರಣವಾಗಿಡುವ ಅಭ್ಯಾಸವನ್ನು ಗೃಹಿಣಿಯರು ಬೆಳೆಸಿಕೊಂಡುಬರಬೇಕು; ಚಿಕ್ಕದಾದರೂ ತಮ್ಮ ಮನೆಯನ್ನು ಚೊಕ್ಕವಾಗಿಡಲು ಅವರು ಪ್ರಯತ್ನಿಸಬೇಕು. ಅಪಾಯಕಾರಿ ಪದಾರ್ಥಗಳನ್ನು ಮಕ್ಕಳ ಕೈಗೆ ನಿಲುಕದಂತೆ ಆದಷ್ಟು ಎತ್ತರದಲ್ಲಿ, ಮುಚ್ಚಿಡಬೇಕು. ಮಗು ಅದೆಷ್ಟು ಪ್ರಯತ್ನಪಟ್ಟರೂ ಅದರ ಕೈಗೆ ನಿಲುಕದಂತೆ ಇಡಬೇಕು.

ನೀರು ಮತ್ತು ಬೆಂಕಿಗಳಿಂದಾಗುವ ದುರ್ಘಟನೆಗಳು ಬಹಳವಿವೆ. ಆದುಗೆ ಮನೆಗೆ ಮಗುವನ್ನು ಹೋಗುವುದಕ್ಕೆ ಬಿಡಲೇಬಾರದು. ಅದರಲ್ಲೂ ಅಂಗಿ ವಸ್ತ್ರಗಳನ್ನು ತೊಡಿಸಿದ ಮಗುವಿನ ಬಗ್ಗೆ ಬಹಳ ಗಮನಹರಿಸಬೇಕು. ಕಟ್ಟಿಯಿಲ್ಲದ ಬಾವಿಯಿರುವ ಮನೆಯಲ್ಲಿ ಮಗುವಿನ ಕಡೆಗೆ ಅದೆಷ್ಟು ಗಮನ ಹರಿಸಿದರೂ ಸಾಲದು. ಸ್ವಾಭಾವಿಕವಾಗಿ ಚಂಚಲ ಸ್ವಭಾವದ ಮಕ್ಕಳು ಹೊಸ ವಸ್ತುಗಳಿಂದ ಆಕರ್ಷಿತರಾಗುತ್ತಾರೆ. ಬಿಸಿ ನೀರಿನ ಪಾತ್ರೆ, ಬೇಯಿಸಿದ ಗಂಜಿಯಿರುವ ಪಾತ್ರೆ—ಮೊದಲಾದುವುಗಳಿಗೆ ಮಗು ಕೈ ಹಾಕುವ ಸಂಭವ ಹೆಚ್ಚು. ಮಗುವಿನ ರಕ್ಷಣೆಗೆ ಅತೀವ ಅಪಾಯಕಾರಿಯೊಗಿರುವ ಬೆಂಕಿ ಮತ್ತು ನೀರುಗಳಿಂದ ಅವನ್ನು ಎಷ್ಟು ದೂರವಿರುವಂತೆ ನೋಡಿಕೊಂಡರೂ ಸಾಲದು.

ಸೇಟಪಟ್ಟಣಗಳಲ್ಲಿ ಮಕ್ಕಳು ತೆರೆದ ಬಾಗಿಲುಗಳ ಮೂಲಕ ಹೊರಬಂದು ಬೀದಿಗಿಳಿಯುವ ಸಂಭವ ಕಡಿಮೆಯಿಲ್ಲ ಆಗ ಆಗುವ ಅನಾಹುತಗಳ ಅಗಣಿತವಾಗಿವೆ. ಮಗುವಿನ ಬಗ್ಗೆ ಅದೆಷ್ಟು ಎಚ್ಚರಿಕೆ ವಹಿಸಿದರೂ ಸಾಲದು.

ಮಗ ಹತಮೂರಿಯಂತೆ ತಾಯಂದಿರಿಗೆ ಕಂಡುಬರಬಹುದು. ಅವರನ್ನು ರೊಚ್ಚಿಗೇಳುವಂತೆ ಮಾಡಬಹುದು. 'ಬಾಲಾನಾಂ ರೋದನಂ ಬಲಂ' ಎಂಬಂತೆ ಮಗುವು ಯಾವಾಗಲೂ ಅಳುತ್ತಲೇ ಇರಬಹುದು. ಅದರ ಅಳುವಿನ ಅರ್ಥವು ತಾಯಿಗೆ ಆಗಬೇಕು. ಮಗುವಿನೆದುರು ತಾಯಿ ತಾನು ಪ್ರಬುದ್ಧೆಯೆಂಬುದನ್ನು ಮರೆತು ಮಗುವಿನಂತಹ ನಿಷ್ಕಲ್ಮಶ ಪ್ರೇಮದಿಂದ ಮಗುವನ್ನು ಕಾಣಬೇಕು. ಈ ನಿಷ್ಕಲ್ಮಶ ಪ್ರೇಮವೇ ತಾಯಿ—ಮಗುಗಳಲ್ಲಿ ನಿಕಟ ಸಂಬಂಧವನ್ನು ಬೆಸೆಯುವುದು. ತಾಯಿಯೇ ಮಗುವನ್ನು ಹಿಂಸಿಸಿದರೆ, ಆಕೆಯೇ ಮಗುವನ್ನು ಅಲಕ್ಷ್ಯದಿಂದ ಕಾಣತೊಡಗಿದರೆ—ಈ ಕಾಲಚಕ್ರ ತಿರುಗಲಾರದು. ಎಂತಲೇ ತಾಯಿಯ ಹೊಣೆಗಾರಿಕೆಯು ಅತಿ ಮಹತ್ವಪೂರ್ಣವಾದುದು. ಇದನ್ನು ಎಲ್ಲ ತಾಯಂದಿರೂ ನಿರ್ವಹಿಸಿದರೆ ಮಗುವಿಗೆ ಮನೆ ಮೃತ್ಯು ಪಂಜರವಾಗಲಾರದು. ರಾಜಮಂದಿರ ಸಮಾನವಾಗುವುದು.

ಮಾನವನ ಜೀವಂತಭಾಯಿ-ನಾಯಿ

(೫ನೇ ಪುಟದಿಂದ)

ನಾಯಿಗಳು ಬೆಲ್ಜಿಯಂನಲ್ಲಿ ಗಾಡಿಗಳನ್ನೆಳೆದರೆ ಯೊರ್ಕ್ ಶೈರಿನಲ್ಲಿ ಕುರಿ, ಪಶುಗಳನ್ನು ಚದುರಿಹೋಗದೇ ಒಂದೇ ಗುಂಪಿನಲ್ಲಿ ಹೋಗುವಂತೆ ನೋಡಿಕೊಳ್ಳುತ್ತದೆ.

ರಾತ್ರಿಯಲ್ಲಿ ಬರುವ ಕಳ್ಳನಿಗೆ 'ಮನೆಯಲ್ಲಿ ಯಾರೂ ಎಚ್ಚರಿಲ್ಲವೆಂದು" ನಿರ್ಭಯವಾಗಿ ಹೋಗಲು ತಡೆಯನ್ನುಂಟುಮಾಡುವುದೇ ಅಲ್ಲದೇ ಮನೆಯನ್ನು ಯಾವಾಗಲೂ ಶಿಸ್ತಿನಿಂದ ವಿಧೇಯುತೆಯಿಂದ ಕಾಯುತ್ತಿರುತ್ತದೆ. ಆದಕ್ಕೆ ಖರ್ಚಾಗುವ ಹಣಕ್ಕೆ ಹತ್ತರಷ್ಟು—ನೂರರಷ್ಟು ಉಪಕಾರಗಳನ್ನು ಮಾಡುತ್ತಿರುವ ಮಾನವನ ಏಕೈಕ ಜೀವಂತ ನೆರಳೆಂದರೆ—ನಾಯಿ.

ಪುಸ್ತಕ ವಿಮರ್ಶೆ

[ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿ ವಿನಂತಿ.— ಸಂ. ನ.

ರವೀಂದ್ರನಾಥ ಠಾಕೂರ್ ಶತಮಾನೋತ್ಸವ ಸ್ಮರಣ ಸಂಚಿಕೆ 1961— ಭಾರತ—ರಶ್ಯ ಸಾಂಸ್ಕೃತಿಕ ಸಂಘ ತುಮಕೂರು—ಇವರು ವಿಶ್ವಕವಿ ಶತಮಾನೋತ್ಸವದ ಸಂದರ್ಭದಲ್ಲಿ ಪ್ರಕಟಿಸಿದ ಈ ಸಂಚಿಕೆಯನ್ನು ಸ್ವಾಗತಿಸುತ್ತೇವೆ. ಕವಿ ಠಾಕೂರರ ಜೀವನದವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದ ಅಭ್ಯಾಸಪೂರ್ಣ ಬರಹಗಳನ್ನು ಇಂಗ್ಲಿಷ್ ಮತ್ತು ಕನ್ನಡ ಭಾಷೆಗಳಲ್ಲಿ ನಾವಿಲ್ಲಿ ಓದಬಹುದು ಆದರ್ಶ ಜೀವನವನ್ನು ಬದುಕಿ ವಿಶ್ವವಿಖ್ಯಾತರಾದ ರವೀಂದ್ರರು ಗುರುದೇವರೆಂದು ಹೆಸರಾಂತ ಕವೀಂದ್ರರು ಲೋಕಪ್ರಸಿದ್ಧಿಯನ್ನು ಗಳಿಸುವುದಕ್ಕೆ ಕಾರಣವಾದ ಅವರ ಜೀವನ ಪರಿಕ್ರಮವು ಆದರ್ಶವಿದೆ ರವೀಂದ್ರರ ವಿವಿಧ ಪ್ರವೃತ್ತಿಗಳನ್ನು ಅರಿತುಕೊಳ್ಳಲು ಈ ಸಂಚಿಕೆ ಉಪಯುಕ್ತವಿದೆ. ಇಲ್ಲಿನ ಲೇಖನಗಳು ವಿದ್ವಾಂಸರಿಂದ ಬರೆಯಲ್ಪಟ್ಟಿದ್ದು ಅವಶ್ಯ ವಾಚನೀಯವಿವೆ. ಹಲವಾರು ಚಿತ್ರಗಳನ್ನೂ ಸಂಚಿಕೆಗೆ ಜೋಡಿಸಲಾಗಿದ್ದು ಇದರಿಂದ ಮೆರಗು ಹೆಚ್ಚಿದೆ.

ಕಲ್ಕಿ ಅಥವಾ ನಾಗರಿಕತೆಯ ಭವಿಷ್ಯ ಸ್ಥಿತಿ:— ಮೂಲ ಲೇಖಕರು: ಎಸ್. ರಾಧಾಕೃಷ್ಣನ್ ಕನ್ನಡ ಅನುವಾದಕರು: ಸಿ. ಕೆ. ವೆಂಕಟರಾಮಯ್ಯ. ಪ್ರಕಾಶಕರು: ಭಾರತ ಸರಕಾರದ ಸಮೂಹಾರ ಮತ್ತು ಪ್ರಸಾರ ಸಚಿವಾಲಯದ ಪ್ರಕಾಶನ ವಿಭಾಗ, ದೆಹಲಿ. ಪುಟಗಳು: ೧೬೬ ಬೆಲೆ: ರೂ. ೧=೭೫.

(೧೨ನೇ ಪುಟ ನೋಡಿರಿ)

ಪುತ್ತೂರು ಡಿ. ಮು. ಕೋರ್ಟಿನಲ್ಲಿ

S. C. 101/61.

ಕೆ. ಕುಮಾರ ರೈ —ವಾದಿ.
ಗಂಗಯ್ಯ ಪೂಜಾರಿ ಕೊಡಾ—ಪ್ರತಿವಾದಿರು.

1ನೇ ಪ್ರತಿವಾದಿ ಗಂಗಯ್ಯ ಪೂಜಾರಿ ಅಕ್ಕು ಹೆಂಗ್ಸಿನ ಮಗ ಪುತ್ತೂರು ತಾಲ್ಲೂಕ ಅಲಂಕಾರು ಗ್ರಾಮದ ಕಯ್ಯೂಪೆ ಎಂಬಲ್ಲಿರುವನ.

ಸದ್ರಿ 1ನೇ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ:

ನೀವು ತಾ. 28-8-1958ರಲ್ಲಿ ಸೋಮು ಹೆಂಗ್ಸಿನ ಮಗ ಶಿವಪ್ಪ ಪೂಜಾರಿಗಳಿಗೆ ಬರೆಕೊಟ್ಟ ಡಿ. ಪ್ರೊನೋಟಿನ ಆಸ್ಲು ಮತ್ತು ಬಡ್ಡಿ ವಿಷಯಗಳನ್ನು ನಿಮ್ಮಿಂದ ವಸೂಲು ಮಾಡುವ ಹಕ್ಕನ್ನು ಮೇಲ್ಕಂಡ ವಾದಿಯು ಪಡೆದು, ಸದ್ರಿ ಪ್ರೊನೋಟಿನ ವಸೂಲಿ ಬಗ್ಗೆ ವಾದಿಯು ದಾಖಲು ಮಾಡಿದ ಮೇಲಿನ ದಾವೆಯು ಇದೇ 1961ನೇ ಇಸ್ವಿಯ ಜುಲ್ಯಾ ತಾ. 20ಕ್ಕೆ ಇಟ್ಟಿರುವುದರಿಂದ ನೀವು ಸದ್ರಿ ದಿನದ ಪೂರ್ವಾಹ್ನ ಗಂಟೆ 11ಕ್ಕೆ ಮೇಲ್ಕಂಡ ಕೋರ್ಟು ಮುಂದೆ ಹಾಜ್ರಾಗಿ, ನಿಮ್ಮ ಉಪಾಧರಣೆಯನ್ನು ದಾಖಲ್ಮಾಡತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರು ಹಾಜರಿಯಿಂದ ಸದ್ರಿ ದಾವೆಯನ್ನು ನಿಶ್ಚ ಪಕ್ಷವಾಗಿ ತೀರ್ಮಾನಿಸಲ್ಪಡುವುದು.

(ಕೋರ್ಟು ಹುಕುಂ ಪ್ರಕಾರ)

Sd/. P. Anantharaja Ariga,
Advocate for plaintiff.

ಪುತ್ತೂರು, 5-7-1961.

ಪ್ರಣಯ ಮಾದರಿಯಿಂದ ವಿಭಿನ್ನವಾಗಿ,
ಸಮಾಜದ ಸಮಸ್ಯಾನಿರೂಪಣೆ ವಸ್ತುವಾಗಿ,
ಬೆಳಕು ಕಂಡ ನಿತ್ಯನೂತನ ಕಥೆಗಳು!

ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ.

ಕಥಾ ಕೌಮುದಿ

(ಹದಿಮೂರು ವಿಶಿಷ್ಟ ಕಥೆಗಳ ಸಂಕಲನ)

ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

ಬೆಲೆ: ರೂ. ೧—೮—೦ (1 = 50)

ರೂ. 1 = 75 ಮುನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಕಳಿಸಬಹುದು.

ದೊರೆವ ಸ್ಥಳ.

ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.
ನವಭಾರತ ಪುಸ್ತಕ ಭಂಡಾರ ಉಡುಪಿ.
(ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿಯೂ ವಿಚಾರಿಸಿರಿ)

ನವಯುಗ ವಾರ ಪತ್ರಿಕೆಗೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ

ಶಿಕ್ಷಣ ಕ್ಷೇತ್ರ:

ಖಡ್ಡಾಯ ಶಿಕ್ಷಣ ಕಾಯದೆಯ ಸಾರಾಂಶ

ಆಗಸ್ಟ್, ೬ರಿಂದ ನಮ್ಮ ರಾಜ್ಯದಲ್ಲಿ ಬರಲಿರುವ ಖಡ್ಡಾಯ ಶಿಕ್ಷಣ ಯೋಜನೆಯನ್ನು ಯಶಸ್ವಿಗೊಳಿಸಲು ಎಲ್ಲರೂ ಕಟಿಬದ್ಧರಾಗಬೇಕಾಗಿದೆ. ಅದಕ್ಕೆ ಕಾಯದೆಯ ಸಾರಾಂಶವನ್ನು ತಿಳಿಯುವುದು ಸಹಕಾರಿಯಾಗದುಳಿಯದು.

ನಮ್ಮ ಸಂವಿಧಾನದಲ್ಲಿ ೯ರಿಂದ ೧೪ ವರ್ಷ ಪ್ರಾಯದ ಮಕ್ಕಳಿಗೆ ಅನಿವಾರ್ಯ ಶಿಕ್ಷಣ ನೀಡುವ ಅನುಚ್ಛೇದವನ್ನು ಕಾರ್ಯಾನ್ವಯಗೊಳಿಸಲು ತೃತೀಯ ಪಂಚವಾರ್ಷಿಕ ಯೋಜನೆಯಲ್ಲಿ ೯ರಿಂದ ೧೧ ವರ್ಷ ಪ್ರಾಯದ ಮಕ್ಕಳನ್ನು ಖಡ್ಡಾಯ ಶಿಕ್ಷಣದ ಕಕ್ಷೆಗೆ ತರುವ ಸಾಹಸ ಮಾಡಲಾಗುತ್ತಿದೆ. ಈ ಶಿಕ್ಷಣ ಯೋಜನೆಯು ಹಂತ ಹಂತದಲ್ಲಿ ಪೂರ್ಣವಾಗಲಿದೆ. ನಮ್ಮ ರಾಜ್ಯದಲ್ಲಿಯೂ ಖಡ್ಡಾಯ ಶಿಕ್ಷಣ ಸಂಬಂಧದ ಮಸೂದೆಯು ಇದೇ ಆಗಸ್ಟ್ ಮೊದಲನೇ ದಿನಾಂಕದಿಂದ ಜ್ಯಾರಿಯಲ್ಲಿ ಬರುವುದು. ಈ ಕಾಯದೆಯಂತೆ ಮುಂದಿನ ೫ ವರ್ಷದಲ್ಲಿ ಸುಮಾರು ೧೦ ಲಕ್ಷ ಮಕ್ಕಳು ಹೊಸತಾಗಿ ಶಾಲೆ ಸೇರುವರು. ಇವರಿಗೆ ಕಲಿಸುವುದಕ್ಕೆ ೧೯,೮೦೦ ಅಧ್ಯಾಪಕರು ನೇಮಿಸಲ್ಪಡುವರು. ರಾಜ್ಯ ಸರಕಾರವು ಸುಮಾರು ೧೫—೨ ಕೋಟಿ ರೂಪಾಯಿಗಳನ್ನು ಇದಕ್ಕಾಗಿ ವ್ಯಯಿಸುವುದು. ಶಾಲೆಯಿಲ್ಲದ ಹಳ್ಳಿಗಳಲ್ಲಿ ಪ್ರಾಥಮಿಕ ಶಾಲೆಯನ್ನು ತೆರೆದು ಮಗುವಿನ ವಾಸಸ್ಥಾನದ ಒಂದು ಮೈಲಿನ ಪರಿಸರದಲ್ಲಿಯೇ ಶಿಕ್ಷಣ ದೊರೆಯುವಂತೆ ಮಾಡಲಾಗುವುದು. ಈ ಸಂಬಂಧದ ಕಾಯದೆಯ ಸಾರವನ್ನು ಹೀಗೆ ಸಂಗ್ರಹಿಸಬಹುದು.

ಇದೇ ಆಗಸ್ಟ್ ೧ನೆ ತಾರೀಕಿನಿಂದ ರಾಜ್ಯದ ಆದ್ಯಂತ ಕಡ್ಡಾಯ ಪ್ರಾಥಮಿಕ ಶಿಕ್ಷಣ ಕಾಯದೆಯು ಜ್ಯಾರಿಗೆ ಬರುವುದು. ಆ ತಾರೀಕಿಗೆ ಐದು ವರ್ಷ ೧೦ ತಿಂಗಳು ಪೂರ್ತಿ ತುಂಬಿದ ಮಕ್ಕಳನ್ನು ಶಾಲೆಗೆ ಸೇರಿಸಲೇ ಬೇಕಾಗುವುದು. ಮುಂದೆ ೬ ವರ್ಷ ತುಂಬಿದವರನ್ನೆಲ್ಲ ದಾಖಲು ಮಾಡಬೇಕು.

ಅಧ್ಯಾಪಕರು ತಂತಮ್ಮ ಶಾಲಾಕ್ಷೇತ್ರದಲ್ಲಿರುವ ಇನ್ನೂ ಶಾಲೆಗೆ ಸೇರದಿರುವ ಎಲ್ಲ ಮಕ್ಕಳನ್ನೂ ಸೇರಿಸಿಕೊಳ್ಳುವಂತೆ ಪ್ರಯತ್ನ ನಡೆಸಬೇಕು.

ಶಾಲೆಯ ಅಭಿವೃದ್ಧಿಯೇ ಚಿಂತನೆಯೊಗಿರುವ ಒಂದು ಸಮಿತಿಯು ಶಾಲೆಯಲ್ಲಿ ಏರ್ಪಡುವುದು. ಇದಕ್ಕೆ ಶಾಲಾಭಿವೃದ್ಧಿ ಸಮಿತಿಯೆಂದು ಹೆಸರು. ಇದರಲ್ಲಿ ಶಾಲಾ ಕ್ಷೇತ್ರದ ಪಂಚಾಯತದ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಪಂಚಾಯತದಿಂದ ನಿರ್ದೇಶಿಸಲ್ಪಟ್ಟ ಪಂಚಾಯತ್ ಸದಸ್ಯರೊಬ್ಬರು (ಇವರು ಸಮಿತಿಯ ಅಧ್ಯಕ್ಷರಾಗುವರು), ಮಹಿಳಾ ಸದಸ್ಯರೊಬ್ಬರು, ಪರಿಶಿಷ್ಟ ವರ್ಗದ ಸದಸ್ಯರೋರ್ವರು, ಹೆತ್ತವರ ಸರವಾಗಿ ಇಬ್ಬರು ಮತ್ತು ಶಾಲೆಯ ಮುಖ್ಯೋಪಾಧ್ಯಾಯರು (ಇವರು ಸಮಿತಿಯ ಕಾರ್ಯದರ್ಶಿಯಾಗುವರು) ಹೀಗೆ ಒಟ್ಟು ಎಂಟು ಜನ ಸದಸ್ಯರಿರುವರು. ಈ ಸಮಿತಿಯು ಶಾಲೆಯ ಅಭಿವೃದ್ಧಿಗಾಗಿ ಮತ್ತು ಕಾಯದೆಯ ಯಶಸ್ವಿಗಾಗಿ ದುಡಿಯುವುದು.

ಶಾಲೆಗೆ ಮಗುವನ್ನು ಕಳಿಸಲು ತಪ್ಪಿದರೆ, ಅಂತಹ ಮಗುವಿನ ಹೆತ್ತವರ ಮೇಲೆ ಶಕ್ಷೇರು ಹೊಡಬೇಕಾಗುವುದು. ಇಂತಹ ಶಕ್ಷೇರುಗಳನ್ನು ವಿಚಾರಿಸಲು ಪಂಚಾಯತ್ ಕೋರ್ಟುಗಳಿರುತ್ತವೆ. ಇವುಗಳಲ್ಲಿ ಗ್ರಾಮ ಪಂಚಾಯತಿನ ಉಪಾಧ್ಯಕ್ಷರು, ಶಾಲಾ ಸಮಿತಿಯ ಅಧ್ಯಕ್ಷರು ಮತ್ತೊಬ್ಬ ಪಂಚಾಯತ ಸದಸ್ಯರೂ ಇರುವರು. ಇವರಲ್ಲಿ ಇಬ್ಬರು ಹಾಜರಿದ್ದರೆ, ವಿಚಾರಣೆ ನಡೆಸುವ ಅಧಿಕಾರ ಈ ಕೋರ್ಟಿಗೆ ಬರುವುದು.

ಆಯಾ ವಿಭಾಗದ ಶಾಲಾ ಇನ್ಸ್ಪೆಕ್ಟರರು ತನ್ನ ವಿಭಾಗದ ಮಕ್ಕಳ ಹಾಜರಿಯ ಹೊಣೆಗಾರಿಕೆಯನ್ನು ಹೊರುತ್ತಾರೆ. ಆಗಸ್ಟ್ ೧ರ ಬಳಿಕ ಶಾಲೆಗೆ ಮಕ್ಕಳನ್ನು ಕಳಿಸದ ಪಾಲಕರ ಹೆಸರುಗಳನ್ನು ಮುಖ್ಯೋಪಾಧ್ಯಾಯರು ಇನ್ಸ್ಪೆಕ್ಟರರಿಗೆ ಕಳಿಸುವರು. ಆ ಮೇಲೆ ಇನ್ಸ್ಪೆಕ್ಟರರು ಅಂತಹ ಪಾಲಕರಿಗೆ ಮುನ್ನೆಚ್ಚರಿಕೆಯ ಜ್ಞಾಪತಪತ್ರವನ್ನು ಕಳಿಸುವರು. ಅಂಗಹೀನ ಅಥವಾ ಮಾನಸಿಕ ದುರ್ಬಲತೆ ಇರುವ ಮಕ್ಕಳನ್ನು, ಮನೆಯಲ್ಲೇ ಸಮರ್ಪಕವಾಗಿ ಶಿಕ್ಷಣ ಪಡೆಯುವ ಏರ್ಪಾಡುಗಳನ್ನು ಮಾಡಿದ ಹೆತ್ತವರ ಮಕ್ಕಳನ್ನು, ನಿವಾಸ ಸ್ಥಾನದಿಂದ ಒಂದು ಮೈಲಿಗಿಂತ ಶಾಲೆ ದೂರವಿರುವ ಮಕ್ಕಳನ್ನು ಶಾಲೆಗೆ ಕಳಿಸದಿದ್ದರೆ, ಅದು ಶಕ್ಷೇರಾಗಲಾರದು. ತಮ್ಮ ಊರಿನ ಶಾಲೆಯಲ್ಲಿ ಯಾವುದೇ ಒಂದು ಮತಧರ್ಮದ ಶಿಕ್ಷಣ ಕೊಡುತಿದ್ದರೆ, ಅಂತಹ ಶಾಲೆಗೂ ಮಕ್ಕಳನ್ನು ಕಳಿಸದಿರಲು ಹೆತ್ತವರು ಸ್ವತಂತ್ರರಿದ್ದಾರೆ.

ಮೇಲೆ ಹೇಳಿದ ಯಾವುದೇ ಕಾರಣಗಳಿಲ್ಲದೆ ತಮ್ಮ ಮಕ್ಕಳನ್ನು ಶಾಲೆಗೆ ಕಳಿಸದಿರುವ ಹೆತ್ತವರು ಜ್ಞಾಪತಪತ್ರದಲ್ಲಿ ಸೂಚಿಸಿದ ತಾರೀಕಿನೊಳಗೆ ಶಾಲೆಗೆ ಸೇರಿಸದಿದ್ದರೆ, ಅದು ಅಪರಾಧವಾಗುವುದು. ಅವರಿಗೆ ಮತ್ತೊಮ್ಮೆ ಎಚ್ಚರಿಕೆಯ ಪತ್ರವನ್ನು ಕೊಡಲಾಗುವುದು. ಅದನ್ನೂ ಕೆಳಗಿವಿಗೇಳಿದವರನ್ನು ಅಪರಾಧಿಯೆಂದು ಪರಿಗಣಿಸಿ, ಪಂಚಾಯತ್ ನ್ಯಾಯಾಲಯದಲ್ಲಿ ಅವರ ಮೇಲೆ ಖಟ್ಲೆ ಹೊರಿಸುವರು. ನ್ಯಾಯಾಲಯದವರು ಅಂತಹ ಪಾಲಕರನ್ನೂ ಉಪಸ್ಥಿತಿ ಅಧಿಕಾರಿಯನ್ನೂ ಬರಮಾಡಿಕೊಂಡು, ವಿಚಾರಣೆ ನಡೆಸಿ, ದಂಡ ವಿಧಿಸುವರು. ಮೊದಲನೆಯ ಸಾರಿ ರೂ. ೨ ಮತ್ತು ಮುಂದಿನ ಪ್ರತಿ ಒಂದು ದಿನದ ಅನುಪಸ್ಥಿತಿಗೆ ಎರಡು ನಯೇ ಪೈಸೆಯಂತೆ ಒಟ್ಟು ೧೦೦ ರೂಪಾಯಿಗಳ ವರೆಗೆ ದಂಡ ವಿಧಿಸಲಾಗುವುದು. ಈ ದಂಡವನ್ನು ಕಂದಾಯ ವಸೂಲು ಮಾಡುವ ರೀತಿಯಲ್ಲಿ ವಸೂಲು ಮಾಡಲಾಗುವುದು. ಪಂಚಾಯತ್ ನ್ಯಾಯಾಲಯಕ್ಕೆ ದ್ವಿತೀಯ ಶ್ರೇಣಿಯ ಮೆಜಿಸ್ಟ್ರೇಟರ ಅಧಿಕಾರವಿರುವುದು.

ಶಾಲೆಯ ಅಭಿವೃದ್ಧಿ ಸಮಿತಿಯವರು ಶಾಲಾ ಪ್ರಾಯದ ಮಕ್ಕಳನ್ನು ಶಾಲೆಗೆ ಸೇರಿಸುವುದಲ್ಲದೆ ಬಡ ಮಕ್ಕಳಿಗೆ ಉಚಿತವಾಗಿ ಮಧ್ಯಾಹ್ನದ ಊಟದ ವ್ಯವಸ್ಥೆ ಮಾಡಬಹುದು. ಶಾಲೆಗೆ ಬೇಕಾದ ಕಟ್ಟಡ ಉಪಕರಣಗಳ ಪೂರೈಕೆ ಮಾಡುವುದು, ಮಕ್ಕಳಿಗೆ ಬಟ್ಟೆ ಬರೆ ಮೊದಲಾದುವನ್ನು ಒದಗಿಸುವುದು—ಮೊದಲಾದ ಕೆಲಸಗಳನ್ನು ಮಾಡುವುದು ಊರವರ ಸಹಾಯದಿಂದ ಶಾಲೆಯ ಅಭಿವೃದ್ಧಿಗಾಗಿ ದುಡಿಯುವುದೇ ಈ ಶಾಲಾಭಿವೃದ್ಧಿ ಸಮಿತಿಯ ಪ್ರಧಾನ ಕರ್ತವ್ಯವಾಗಿದೆ.

ರವೀಂದ್ರವಾಣಿ

(ಕಳೇ ಪುಟದಿಂದ)

ದು ಭಾವಿಸುವುದು ನಮ್ಮ ಅಜ್ಞಾನವಾಗಿರುವುದು. ಈ ಭಯಪೂರ್ಣವಾದ ಜ್ಞಾನದ ದೆಸೆಯಿಂದ ನಾವು ಅಹಂಭಾವವನ್ನೇ ಜೀವನದ ಪರಮ ಧ್ಯೇಯವೆಂದು, ಭಾವಿಸುತ್ತೇವೆ. ಈ ಭಾವನೆಯಿಂದಲೇ ನಾವು ಮಾರ್ಗದ ಹಿಡಿಮಣ್ಣನ್ನು ಹಿಡಿದು, ಕೊಂಡು, ಮೇಲೆ ನೋಡುತ್ತ ಮಾಳಿಗೆಯನ್ನೇರುವ ವ್ಯರ್ಥ ಕಲ್ಪನೆ ಮಾಡಿ, ನಿರಾಶನಾಗುವ ವ್ಯಕ್ತಿಯಂತೆ ನಿರಾಶರಾಗುತ್ತೇವೆ, ನಮ್ಮನ್ನು ಬಿಗಿಯಾಗಿ ಹಿಡಿದಿಡುವಂತಹ ಯಾವ ಶಕ್ತಿಯೂ, ಅಹಂನಲ್ಲಿ ಇರುವುದಿಲ್ಲ. ಮನುಷ್ಯನು ಬಹಳ ಪ್ರಯತ್ನದಿಂದ, ತನ್ನ ಸುಖ ಭೋಗಕ್ಕಾಗಿ, ಯಾವಾಗ ಭೋಗ ಸಾಮಗ್ರಿಗಳನ್ನು ಒಟ್ಟುಗೂಡಿಸುತ್ತಾನೋ ಆಗ ಆತನು ತನ್ನನ್ನೇ ಸುಟ್ಟು ಬೂದಿಯನ್ನಾಗಿ ಮಾಡಬಲ್ಲ, ಅಗ್ನಿಯನ್ನು ಹುಟ್ಟಿಸಿದಂತಾಗುತ್ತದೆ. ಈ ಅಗ್ನಿಯಿಂದ ಉಪಯೋಗ ಹೊಂದಲು ಆತನೊಡನೆ, ರೊಟ್ಟಿ ಮಾಡುವ ಹಿಟ್ಟುಗಲೇ ಅಥವಾ ಇತರ ಸಾಮಗ್ರಿಗಳಾಗಲೀ ಯಾವುದೂ ಇರುವುದಿಲ್ಲ. ಆಗ ಆತನು—ತಮ್ಮ ಅಂಗಗಳನ್ನೇ ಅಥವಾ ತಮ್ಮ ವರ್ಗದ ಪ್ರಾಣಿಗಳನ್ನೇ ತಿಂದು ತೃಪ್ತಿಗೊಳ್ಳುವ ಪ್ರಾಣಿಗಳಂತೆ ಆಗಿಬಿಡುತ್ತಾನೆ. ಅರ್ಥಾತ್ ಆತನು ತನ್ನ ಹತ್ಯೆಯನ್ನು ತಾನೇ ಮಾಡಿಕೊಂಡು ಕೊನೆಗೆ ಸ್ವಯಂ ಭಸ್ಮವಾಗುತ್ತಾನೆ.

(ಸಶೇಷ)

NOTICE

In the Court of the Subordinate Judge of South Kanara

S. C. No. 2 of 1961.

Between

The Pie Money Bank (Private) Ltd, Mangalore, represented by its Manager R. M. Guru.

—Plaintiff.

Vs.

Abdul Khader and 2 others.

—Defendants.

To

D 1. Abdul Khader, son of K. Hussain, Merchant. Asian Fruit Stall, Bhavanthi Street, Mangalore-1.

Please take notice that the above suit filed by the Plaintiff for recovery of the amount due under the Pro-note dated 22--4--1959, stands posted to 17th July, 1961 at 11 O'clock for notice to you. Take notice that, in default of your appearence on the date afore mentioned, the suit will be heard and determined in your absence.

(By order of the Court.)

(Sd.) G. Narayana Rao,

Vakil for Plaintiff.

Mangalore, 1--7--61,

'ಇಂಗ್ಲಿಷ್ ಕಲಿಯಲಿಲ್ಲವಲ್ಲಾ' ಎಂದು ಚಿಂತಿಸಬೇಡಿರಿ!

ಅನ್ಯರ ಸಹಾಯವಿಲ್ಲದೆ ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಕಲಿಯಬಹುದಾದ ಆಂಗ್ಲ ಸ್ವಯಂಬೋಧಿನಿ ಪುಸ್ತಕವನ್ನು ಇಂದೇ ಕೊಂಡುಕೊಳ್ಳಿರಿ!

ಸುಲಭದಲ್ಲಿ ಇಂಗ್ಲಿಷ್

ENGLISH MADE EASY

ಸಾವಿರಾರು ಜನರು ಈ ಪುಸ್ತಕದಿಂದ ಸುಲಭವಾಗಿ ಇಂಗ್ಲಿಷನ್ನು ಕಲಿತುಕೊಂಡಿದ್ದಾರೆ.

ನೀವೂ ಪ್ರಯತ್ನಿಸಿ, ಇಂಗ್ಲಿಷ್ ಭಾಷೆ ಕಲಿಯಿರಿ! ವಿದ್ಯಾರ್ಥಿಗಳಿಗಂತೂ ಅತ್ಯುಪಯುಕ್ತ ಪುಸ್ತಕ.

ಹೊಸ ಮುದ್ರಣ—ಸಾದಾ ಪ್ರತಿ 2:00. ಉತ್ತಮ ಪ್ರತಿ 2:50.

ಪುಸ್ತಕದ ಬೆಲೆಯೊಂದಿಗೆ ೨೫ ನ. ಪೈ. ಸೇರಿಸಿ ಮನಿಯಾರ್ಡರು ಮಾಡಿದರೆ ಪ್ರತಿಯೊಂದನ್ನು ಕಳಿಸಲಾಗುವುದು.

ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ದೊರೆಯದಿದ್ದರೆ ನಮಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕನ್ನಡ.

ಅಭಿಪ್ರಾಯ:

ಜೀವನದಲ್ಲಿ ಸಫಲರಾಗಬೇಕೆ?

ತಮ್ಮ ಜೀವನವು ಯಶಸ್ವಿಯಾಗಬೇಕು, ತಾವು ಅದರಲ್ಲಿ ಸಾಫಲ್ಯ ಗಳಿಸಬೇಕು ಎಂಬ ಹಂಬಲ ಯಾರಿಗಿಲ್ಲ? ಜೀವನದಲ್ಲಿ ಕೃತಕೃತ್ಯರಾಗಬೇಕಾದರೆ ವಿನಮ್ರತೆಯ ಪಾಠವನ್ನು ಮೊತ್ತಮೊದಲು ಕಲಿತುಕೊಳ್ಳಬೇಕು ಎನ್ನುತ್ತಾರೆ ಶ್ರೀ ಕೆ. ಎಂ. ಪಾಣಿಕ್ಕರ್.

ಮಾನವನ ಸರ್ವ ಪ್ರಯತ್ನಗಳ ಸಾಫಲ್ಯ ಸಾಮಾನ್ಯವಾಗಿ ಅದೃಷ್ಟವನ್ನೇ ಹೊಂದಿಕೊಂಡಿದೆ ಎಂಬ ಒಂದು ಪಾಠವನ್ನು ಜೀವನದಿಂದರಿತುಕೊಳ್ಳಬೇಕು. ದೃಢನಿಶ್ಚಯ, ಅಧ್ಯವಸಾಯ ಮತ್ತು ಹಲವಾರು ಆತ್ಮಿಕ ಹಾಗೂ ಬೌದ್ಧಿಕ ಗುಣಗಳಿಲ್ಲದೆ ಜೀವನದಲ್ಲಿ ಸಫಲಗಾಣಲಾರೆವು ನಿಜವಾದರೂ ಇವೆಲ್ಲವುಗಳೊಡನೆ ಸದವಸರ ಮತ್ತು ಅನುಕೂಲ ಪರಿಸ್ಥಿತಿಗಳಿಲ್ಲದೆ ಹೋದರೆ, ಮಾನವನೇನನ್ನೂ ಮಾಡಲಾರ.

ಬಾಲ್ಯಾವಸ್ಥೆಯಲ್ಲಿ ನನ್ನ ಓದುಬರಹವು ಸಂತೋಷಜನಕವಾಗಿರಲಿಲ್ಲ. ಹೈಸ್ಕೂಲು ತರಗತಿಯಲ್ಲೇ ನಾನು ಒಂದಕ್ಕಿಂತ ಹೆಚ್ಚು ಸಲ ಅನುತ್ತೀರ್ಣನಾದೆ. ಕೊನೆಗೆ, ನನ್ನ ರಕ್ಷಕರು ಭಿನ್ನ ಪುರುಷೋಚಿತ ಶಿಕ್ಷಣವನ್ನು ಕೊಡಿಸಲು ಆಕ್ಸ್‌ಫರ್ಡಿಗೆ ಕಳಿಸಲು ನಿಶ್ಚಯಿಸಿದರು.

ನಾನು ಮದ್ರಾಸಿನ ಮೆಟ್ರಿಕ್ ಪಾಸು ಮಾಡಿಕೊಂಡಿದ್ದೆ. ಆದುದರಿಂದ ಕ್ರೈಸ್ತ ಚರ್ಚ್ ಕಾಲೇಜಿನಲ್ಲಿ ಪ್ರವೇಶದ ಬಗ್ಗೆ ಅರ್ಜಿ ಸಲ್ಲಿಸುವಾಗ, ನನಗೇನೂ ಆಶೆಯಿದ್ದಿರಲಿಲ್ಲ. ಆದರೆ, ಒಬ್ಬ ಸದವೀಧರನಿಗೆ ಪ್ರವೇಶ ದೊರೆಯದೆ ನನಗೆ ಸಿಕ್ಕಾಗ ನನಗೇನೇ ಆಶ್ಚರ್ಯವಾಯಿತು.

ವಿದ್ಯಾರ್ಥಿಗಳನ್ನು ಆರಿಸುವ ಅಧಿಕಾರಿ ಡಾ ಜಾನ್ ಮರೆಯುವರಲ್ಲಿ ಆರನೆಯ ಇಂದ್ರಿಯವೆಂದು ಹೆಸರಾದ ಒಂದು ಅದ್ಭುತ ಶಕ್ತಿಯಿತ್ತು. ಪ್ರವೇಶಾರ್ಥಿಗಳ ಬರಹದಿಂದಲೇ ಅವರ ಚರಿತ್ರೆವನ್ನು ಮರೆಯುವರು ಅರಿತುಕೊಳ್ಳುತಿದ್ದರು. ಇದರಿಂದ ಅವರು ಯಾರಿಗೆ ಪ್ರವೇಶ ನೀಡಬೇಕೆಂದು ನಿರ್ಣಯಿಸುತಿದ್ದರು. ಅವರ ಅಪೂರ್ವ ಶಕ್ತಿಯ ದೆಸೆಯಿಂದ ನನಗೆ ಪ್ರವೇಶ ದೊರೆಯಿತು.

ಆಧುನಿಕ ಇತಿಹಾಸವನ್ನು ತೆಗೆದುಕೊಂಡು ನಾನು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣನಾದೆ; ಸದವೀಧರನೆನಿಸಿದೆ. ನನ್ನ ಪರಿಶ್ರಮಕ್ಕೇನೇ ಇದರ ಶ್ರೇಯಸ್ಸು ಸಲ್ಲಬೇಕು. ಆದರೂ ಇದರಲ್ಲೂ ಸಂಯೋಗದ ಕೈವಾಡ ಇದ್ದೇ ಇತ್ತು. ಆ ಕಾಲದಲ್ಲಿ ಆಕ್ಸ್‌ಫರ್ಡಿನಲ್ಲಿ ಕಲಿಯುತಿದ್ದ ಹೆಚ್ಚಿನ ಭಾರತೀಯ ವಿದ್ಯಾರ್ಥಿಗಳು ಅನರ್ಸ್ ಪದವೀಧರರಿದ್ದರು. ಮೆಟ್ರಿಕ್ ಪಾಸಾದ ವಿದ್ಯಾರ್ಥಿಯ ಮೇಲೆ ಅವರಿಗೆ ಜುಗುಪ್ಸೆಯೆನಿಸುತಿತ್ತು. ನನ್ನ ಬುನಾದಿ ಏನೂ ಗಟ್ಟಿಯಿಲ್ಲವೆಂದವರನ್ನುತಿದ್ದರು. ಈ ಮಾತು ನನ್ನ ಅಂತಸ್ಥಲವನ್ನು ಕುಗ್ಗಿತು; ಅಶಾಂತಗೊಳಿಸಿತು. ನನ್ನನ್ನು ಬಹಳ ಗೇಲಿ ಮಾಡುತಿದ್ದವನನ್ನು ನಾನು ಆಹ್ವಾನಿಸಿಯೇ ಹೇಳಿದೆ— ಇದು ವರೆಗಿನ ಓದು ಹೀಗೇ ಸಾಗಿರಲಿ, ಸ್ನಾತಕ ಪರೀಕ್ಷೆಯಲ್ಲಿ ನಿನ್ನಿಂದ ನಾನು ಖಂಡಿತಮುಂದಿರುತ್ತೇನೆ

ನನ್ನ ಜೀವನದ ದೆಸೆಯನ್ನು ಸಂತೋಷಗವೇ ಭಾರತದಲ್ಲಿಯೂ ನಿರ್ಧರಿಸಿತು. ಆಗ ಮದ್ರಾಸಿನಿಂದ ಶ್ರೀ ಟಿ. ಕೆ. ಸ್ವಾಮಿನಾಥನ್ ಎಂಬವರ ಸಂಪಾದಕತನದಲ್ಲಿ ಒಂದು ಪತ್ರಿಕೆ ಹೊರಡುತಿತ್ತು. ಅದರ ಮೂಲಕ "ಬ್ರಿಟಿಷ ವಸಾಹತುಗಳಲ್ಲಿ ಭಾರತೀಯರ ಸ್ಥಿತಿ" ಎಂಬ ವಿಷಯದ ಮೇಲೆ ಸ್ಪರ್ಧೆ ನಡೆಯಿತು. ಇದರಲ್ಲಿ ನಾನೂ ಭಾಗವಹಿಸಿದೆ. ಸರ್ವೋತ್ತಮ ನಿಬಂಧಕ್ಕೆ ನೂರು ರೂಪಾಯಿ ಪುರಸ್ಕಾರ ಕೊಡುವುದಿತ್ತು. ಈ ಹಣವನ್ನು ಸರ್ ಸಿ. ಪಿ. ರಾಮಸ್ವಾಮಿ ಅಯ್ಯರರು ನೀಡಿದ್ದರು. ನಿರ್ಣಾಯಕರೂ ಅವರೇ ಆಗಿದ್ದರು. ನನ್ನ ಲೇಖ ಅವರಿಗೆ ಮೆಚ್ಚುಗೆಯಾಯಿತು.

ಇದೊಂದು ಸಾಮಾನ್ಯ ರೂಪದ ಸಫಲತೆ. ಆದರೆ, ಇದರ ಪರಿಣಾಮವು ಬಹಳ ವಿಚಿತ್ರವಾಯಿತು. ಶ್ರೀ ಸ್ವಾಮಿನಾಥನರು ರಾಮಸ್ವಾಮಿ ಅಯ್ಯರರ ಪ್ರಸ್ತಾವನೆಯೊಂದಿಗೆ 'ದಿ ಪ್ರೋಟೆಸ್ಟ್‌ಮ್ಯಾನ್ ಆಫ್ ಗ್ರೇಟರ್ ಇಂಡಿಯಾ' ಎಂಬ ಹೆಸರಿನಿಂದ ನನ್ನ ಲೇಖವನ್ನು ಪ್ರಕಟಿಸಿದರು.

ಆಕ್ಸ್‌ಫರ್ಡಿನ ಒಬ್ಬ ಅನಾಮಧೇಯ ಭಾರತೀಯ ವಿದ್ಯಾರ್ಥಿಯು ಬರೆದ ಪುಟ್ಟ ಪುಸ್ತಿಕೆಯ ಮೇಲೆ ಲಂಡನ್ನಿನ ಒಂದು ಪತ್ರಿಕೆಯಲ್ಲಿ ಸರ್ ರೆಜಿನಾಲ್ಡ್ ವಿಲ್ಸನರು ದೀರ್ಘ ಸಮಾಲೋಚನೆಯನ್ನು ಪ್ರಕಾಶಪಡಿಸಿದರು. ಇದರ ಪರಿಣಾಮವಾಗಿ ಈಸ್ಟ್ ಇಂಡಿಯಾ ಎಸೋಸಿಯೇಶನ್‌ನವರು ಭಾಷಣ ಮಾಡಲು ನನ್ನನ್ನು ಆಮಂತ್ರಿಸಿದರು. ಈ ಎಸೋಸಿಯೇಶನ್ ಭಾರತ ಸರಕಾರದ ನೌಕರಿಯಿಂದ ನಿವೃತ್ತರಾದ ಆಂಗ್ಲ ಅಧಿಕಾರಿಗಳ ದುರ್ಗವಾಗಿತ್ತು. ನಾನಲ್ಲಿ "ಭಾರತದಲ್ಲಿ ಶಿಕ್ಷಣ" ಎಂಬ ವಿಷಯದ ಮೇಲೆ ಭಾಷಣವಿತ್ತೆ.

ಹಲವರ ಗಮನ ಈ ಭಾಷಣದತ್ತ ಸರಿಯಿತು. 'ಲಂಡನ್ ಟಾಯಮ್ಸ್'ನ ಶಿಕ್ಷಣ ಪರಿಶಿಷ್ಟದಲ್ಲಿ ಇದರ ಮೇಲೆ ಸಂಪಾದಕೀಯ ಟಿಪ್ಪಣಿಯೂ ಪ್ರಕಟವಾಯಿತು. ಇದರಿಂದ ಸರ್ ರಾಸ್ ಮಸೂದರ ದೃಷ್ಟಿ ನನ್ನತ್ತ ಆಕೃಷ್ಟವಾಯಿತು. ಅವರು ನಾನು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣನಾದುದನ್ನೂ ಟಾಯಮ್ಸ್ ಪತ್ರಿಕೆಯಲ್ಲಿ ನನ್ನ ಬಗ್ಗೆ ಪ್ರಕಟವಾದ ಪ್ರಶಂಸಾ ವಚನಗಳನ್ನೂ ಎತ್ತಿ ಹಿಡಿದು ಆಲಿಗಢವಿಶ್ವವಿದ್ಯಾಲಯದ ಅಧಿಕಾರಿಗಳಿಗೆ ನನ್ನನ್ನು ಸಿಫಾರಸು ಮಾಡಿದರು.

ಆಲಿಗಢದಲ್ಲಿ ನಾನು ಮೂರು ವರ್ಷಗಳ ಕಾಲವಿದ್ದೆ. ಅಸಹಯೋಗದ ಪ್ರಭಾವದೊಳಗೆ ನಾನು ಸಿಕ್ಕಿಬಿದ್ದೆ. ೧೯೨೨ರಿಂದ ೨೫ರ ವರೆಗೆ ನಡೆದ ರಾಜಕಾರಣ ಸಂಘರ್ಷದಲ್ಲಿ ಸೇರಿಕೊಂಡೆ. ಆ ದಿನಗಳಲ್ಲಿಯೂ ಒಂದು ಅದ್ಭುತ ಘಟನೆ ನಡೆಯಿತು. ಒಮ್ಮೆ ಒಬ್ಬ ಹೆಸರೇಳಿದ ವಿಶೇಷಜ್ಞನು ಸ್ವರಾಜ್ಯ ಕಾರ್ಯಾಲಯಕ್ಕೆ ಬಂದು ನನ್ನ ಹೆಸರು ಮುದ್ರಿಯನ್ನು ಕೇಳಿದ. ಮೊದಲು ನಾನು ನಿರಾಕರಿಸಿದರೂ ಅತನ ಬಲವಂತದ ಮೇಲೆ ಕೊಟ್ಟು ಬಿಟ್ಟೆ. ಅಲ್ಲಿಂದ ಆತ ಮರಳಿ ಹೋದ. ಹತ್ತು ದಿನಾ ನಂತರ ಒಂದು ಟೈಪ್ ಮಾಡಿದ ಕಾಗದ ಬಂತು. ಅದರಲ್ಲಿ "ನೀವು ಒಂದು ವರ್ಷದೊಳಗೆ ರಾಜನೀತಿಯಿಂದ ಬೇರೆಯಾಗುತ್ತೀರಿ. ಉತ್ತರ ಭಾರತದ ಒಂದು ರಾಜ್ಯದಲ್ಲಿ ನೌಕರಿಗೆ ಸೇರುತ್ತೀರಿ,' ಎಂದು ಬರೆದಿತ್ತು. ಆ ಸಮಯ ಇದರ ಕಡೆಗೇನೂ ನಾನು ಗಮನ ಹರಿಸಲಿಲ್ಲ. ಆದರೆ, ಈ ಭವಿಷ್ಯವಾಣಿ ಸತ್ಯವಾಯ್ತು.

ಸನ್ ೧೯೧೯ರಲ್ಲಿ ಆಕ್ಸ್‌ಫರ್ಡಿನಲ್ಲಿರುವಾಗಲೇ 'ಭಾರತೀಯ ರಾಜ್ಯಗಳ ಭವಿಷ್ಯ' ಎಂಬ ಹೆಸರಿನ ಒಂದು ಸುದೀರ್ಘ ಲೇಖವನ್ನು ಬರೆದಿದ್ದೆ. ಆಗ ಈ ಸಂಬಂಧದಲ್ಲಿ ಪುಸ್ತಕ ಬರೆಯುವ ವಿಚಾರ ನನ್ನದಿರಲಿಲ್ಲ. ಆದರೆ, ಆರು ವರ್ಷಗಳ ಮೇಲೆ ದೆಹಲಿಯಲ್ಲಿ ಹಿಂದುಸ್ಥಾನ್ ಟಾಯಮ್ಸ್ ಪತ್ರಿಕೆಯ ಸಂಪಾದಕನಾದಾಗ ಬಿಡುವಿನ ವೇಳೆಯಲ್ಲಿ ದೇಶೀ ರಾಜ್ಯಗಳ ಪ್ರಶ್ನೆಯ ಬಗ್ಗೆ ಆಳವಾದ ಅಧ್ಯಾಸ ನಡೆಸತೊಡಗಿದೆ. ಈ ಅಧ್ಯಯನದ ಸಾರವನ್ನು ನಾನು "ದಿ ರಿಲೇಶನ್ಸ್ ಆಫ್ ದಿ ಗವರ್ನಮೆಂಟ್ ಆಫ್ ಇಂಡಿಯಾ ವಿದ್ ಇಂಡಿಯನ್ ಸ್ಟೇಟ್ಸ್" ಎಂಬ ಪುಸ್ತಕದಲ್ಲಿ ವಿವರಿಸಿದೆ.

ಈ ಪುಸ್ತಕ ಪ್ರಕಟವಾಗಿ ಕೆಲ ದಿನಗಳು ಕಳೆದ ನಂತರ ಲಂಡನ್ನಿನ ರಿಟ್ಜ್ ಹೋಟೆಲ್ಲಿನ ಲ್ಲಿಒಬ್ಬ ಅಪರಿಚಿತ ಸಜ್ಜನರು ಬಂದು ನನ್ನ ಪರಿಚಯ ಕೇಳಿದರು. ತಿಳಿದ ನಂತರ "ನಾನು ಕರ್ಜಲ್ ಹಸ್ಸರ್. ಹಲವು ದಿನಗಳಿಂದ ನಿಮ್ಮನ್ನು ಕಾಣಲು ಪ್ರಯತ್ನಿಸುತಿದ್ದೇನೆ. ದಯವಿಟ್ಟು ಮೇಲಿರುವ ನನ್ನ ಕೋಣೆಗೆ ಬರುವಿರಾ? ತುಸು ಮಾತಾಡುವ ವಿಚಾರವಿದೆ" ಎಂದರು.

ನಾನು ಅವರನ್ನು ಹಿಂಬಾಲಿಸಿದೆ. ಅವರು ಮಾಜಿ ಭಾರತ—ಮಂತ್ರಿ ಲಾರ್ಡ್ ಓಲಿವಿಯರರಿಂದ ಒಂದು ಪರಿಚಯ ಪತ್ರವನ್ನು ತಂದಿದ್ದರು." ಭಾರತ ಮತ್ತು ದೇಶೀ ರಾಜ್ಯಗಳ ಸರಕಾರಗಳ ಪಾರಸ್ಪರಿಕ ಸಂಬಂಧದಲ್ಲಿ ಪರಿಶೀಲನೆ ನಡೆಸಲು ಬಟ್ಲರ್ ಸಮಿತಿಯನ್ನು ರಚಿಸುವ ಬಗ್ಗೆ ಇಂಡಿಯಾ ಆಫೀಸಿನಲ್ಲಿ ಮಾತುಕತೆ ನಡೆಸಿದ್ದೇನೆ. ಸಮಿತಿಯ ಮುಂದೆ ದೇಶೀ ರಾಜ್ಯಗಳ ಪಕ್ಷವನ್ನು ಬೆಂಬಲಿಸುತಗೊಳಿಸಲು ಸಹಾಯ ಮಾಡ ಬೇಕು" ಎಂದವರು ಹೇಳಿದರು.

ಹೀಗೆ ದೇಶೀ ರಾಜ್ಯಗಳ ಸೇವೆ ಆರಂಭವಾಗಿ ೧೯೨೮ರಿಂದ ೪೮ರ ವರೆಗೆ ನನ್ನ ಮುಖ್ಯ ಕಾರ್ಯ ಕ್ಷೇತ್ರವೇ ಆದಾಯಿತು. ಕರ್ನಲ್ ಕೈಲಾಶ್ ಹಾಕಯರರಿಂದಲೇ ಮುಂದೆ ಬಂದು ದೇಶೀ ರಾಜ್ಯನಲ್ಲಿ ನನ್ನ ನಿಯುಕ್ತಿಯಾಯಿತು. ೧೯೧೯ರಲ್ಲಿ ಮೋಡರ್ನ್ ರಿವ್ಯೂವಿನಲ್ಲಿ ಮುದ್ರಿಸಿದ ಒಂದು ಲೇಖನದಲ್ಲಿ ಹಾಗೂ ೨೭ರಲ್ಲಿ ಬರೆದು ಪ್ರಕಟಿಸಿದ ಪುಸ್ತಕದಲ್ಲಿ ಬ್ರಿಟಿಷರು ಭಾರತದೊಡನೆ ನಿಕಟ ಸಂಬಂಧವಿಟ್ಟುಕೊಳ್ಳುವುದರಲ್ಲೇ ದೇಶೀ ರಾಜ್ಯಗಳ ಹಿತವಿದೆ; ಎರಡರ ನಡುವೆ ಕಂದಕ ವಿರಗೊಡುವುದರಿಂದ ಮುಖ್ಯವಾಗಿ ದೇಶೀ ರಾಜ್ಯಗಳಿಗೆ ಘಾತಕವೆಂದು ಹೇಳಿದ್ದೆ. ದೇಶೀ ರಾಜ್ಯಗಳಲ್ಲಿ ಕೆಲಸ ಮಾಡುತ್ತಿರುವಾಗ ಈ ವಿಶ್ವಾಸವನ್ನು ಮತ್ತಷ್ಟು ದೃಢಗೊಳಿಸಿದೆ; ಈ ಕಾರಣದಿಂದಲೇ ೧೯೪೬—೪೭ರಲ್ಲಿ ದೇಶೀ ರಾಜ್ಯಗಳ ವಿಲಯನದಲ್ಲಿ ದೇಶಕ್ಕೆ ನನ್ನ ಸೇವೆಯನ್ನರ್ಪಿಸುವ ಅವಕಾಶವೊದಗಿತು.

೧೯೪೮ರಿಂದ ೫೮ರ ವರೆಗೆ ನಾನು ಕ್ರಮವಾಗಿ ಚೀನ, ಐಗುಪ್ತ ಮತ್ತು ಫ್ರಾನ್ಸ್‌ಗಳಲ್ಲಿ ರಾಯಭಾರಿಯಾಗಿದ್ದೆ. ನನ್ನ ಕಾರ್ಯಕಾಲದಲ್ಲಿ ಸಾಮೂರ ದೇಶಗಳಲ್ಲಿ ಕ್ರಾಂತಿಕಾರೀ ಪರಿವರ್ತನೆಯಾಯಿತು. ಯಾವ ದೃಷ್ಟಿಯಿಂದ ನೋಡಿದರೂ ಚೀನದ ಕ್ರಾಂತಿಯು ವಿಶ್ವೇತಿಹಾಸದ ಅತಿ ಮಹತ್ವಪೂರ್ಣ ಘಟನೆಗಳಲ್ಲಿ ಒಂದು ಐಗುಪ್ತದ ಕ್ರಾಂತಿಯು ಅಷ್ಟು ಮಹತ್ವದ್ದಲ್ಲ; ಆದರೆ, ಸಾಮರಿಕ ಮಹ

(೧೩ನೇ ಪುಟದಿಂದ)

ನಗಳನ್ನೂ ಶೀಲ್ಡುಗಳನ್ನೂ ಕೊಡುವ ಕ್ರಮವಿದೆ. ರಾತ್ರಿಯ ಹೊತ್ತು ಹಲವು ಹೊಲಗಳ ಭತ್ತದ ಪೈರನ್ನು ಕಟಾವು ಮಾಡಿಸಿ, ಒಂದೇ ಹೊಲದಲ್ಲಿ ಇಡಿಸಿ, ಮರುದಿನ Agriculture Officerರನ್ನು ಕರತರಿಸಿ ಅವರೆದುರು ಭತ್ತ ತೆಗೆಯಿಸಿ ಹೆಚ್ಚು ಭತ್ತ ಬೆಳೆಯಿಸಿದ ಸಲುವಾಗಿ ಬಹುಮಾನವನ್ನು ಪಡೆಯುವ ಸಜ್ಜನ ಮಹಾಶಯರಂತೆ ಕಾಗದದಲ್ಲೇ ಗಿಡಗಳನ್ನು ಬೆಳೆಸಿ ಬಹುಮಾನ ಹಾಗೂ ಶೀಲ್ಡುಗಳನ್ನು ಪಡೆಯುವವರ ಕೊರತೆ ನಮ್ಮಲಿಲ್ಲ.

ಆದುದರಿಂದ ಪ್ರತಿ ವರ್ಷವೂ ವನಮಹೋತ್ಸವನ್ನು ವಿಜೃಂಭಣೆಯಿಂದ ನಡೆಸಿದರೂ ದೇಶದಲ್ಲಿ ಮರಗಳ ಸಂಖ್ಯೆಯಲ್ಲಿ ಮಾತ್ರ ಯಾವ ಪ್ರಗತಿಯನ್ನೂ ಕಾಣೆವು ಎಂಬುದು ಸಾಮಾನ್ಯರಿಗೆ ಗೋಚರಿಸುವ ವಿಷಯವಾಗಿದೆ. ಹೀಗಿರುತ್ತಾ, "ನಾವೇ ವಾಸ್ತೇ" ನಡೆಯುವ ಈ ವನಮಹೋತ್ಸವವನ್ನು ಒಣ ಮಹೋತ್ಸವವೆಂದು ಕರೆದಲ್ಲಿ ತಪ್ಪೇನೆಂದು ವಾಚಕಮಹಾಶಯರೇ ಹೇಳಬೇಕು.

— ——

Tel: 'BLUEYAGAR'. —— ಚಿನ್ನ ಮತ್ತು ವಜ್ರಗಳ ಆಧುನಿಕ ತವರುಮನೆ —— Phone: 374.

ಕೆ.ಆರ್.ಕೆ.ಶೇಟ್ ಡಯಮಂಡ್ ಮಾರ್ಟ್

ಸ್ಥಾಪನೆ:1919] ಚಿನ್ನ ಮತ್ತು ವಜ್ರದ ವ್ಯಾಪಾರಿಗಳು,(ಗವರ್ನಮೆಂಟ್ ಕಾಲೇಜ್ ಎದುರುಗಡೆ)ಮಂಗಳೂರು. ಮಾಲಿಕ:ಕೆ.ಕೆ.ಆರ್.ಶೇಟ್

ಯಮನ ನೆರಳು

(೨ನೇ ಪುಟದಿಂದ)

ದಾರಿಯಲ್ಲಿ ಒಂದು ಮೋಟಾರು ತಮ್ಮತ್ತ ಬರುವುದು ಕಂಡಿತು. ದಾಮೋದರರು ಮೋಟಾರು ನಿಲ್ಲಿಸಿ ತುಂಡು ಗೋಡೆಯ ಅಡ್ಡದಲ್ಲಿ ಅವಿತುಕೊಂಡರು. ಕಾರು ಹತ್ತಿರ ಬಂತು. ಅದರಲ್ಲಿ ಕೆಲವು ಜನ ಕಪ್ಪು ಮುಖವಾಡ ಧರಿಸಿದವರೂ ಅವರ ಮಧ್ಯದಲ್ಲಿ ಮಾಯಾವತಿಯೂ ಕುಳಿತು ಕೊಂಡುದುದು ಕಂಡು ಬಂತು.

"ನೋಡಿದಿರೇನು?" ಎಂದರು ಪ್ರಾಣದಾಸರು.

"ಹೌದು ಈಗ ನಾವು ಇವರನ್ನು ಹಿಂಬಾಲಿಸ ಬೇಕೋ ಬೇಡವೋ? ಎಂದು ದಾಮೋದರು ಪ್ರಶ್ನಿಸಿದರು.

"ಬೇಡ ಅವರನ್ನು ಹಿಂಬಾಲಿಸುವುದು ಉಚಿತವಲ್ಲ. ಯಾಕೆಂದರೆ ಅವರು ಮೊದಲೇ ನಮ್ಮ ಕಾರನ್ನು ಗುರುತಿಸಿರಬಹುದು. ಆದ್ದರಿಂದ ಜಾಗ್ರತೆಯಿಂದಿರುವುದೇ ಬಹಳ ಉತ್ತಮ."

ಹೀಗೆ ಆಲೋಚಿಸುತ್ತಾ ಅವರು ಮಹೇಂದ್ರಗಢವನ್ನು ತಲಪಿದರು. ಜಯಂತರು 'ಅಗನೆಯಲ್ಲಿ ಅಡ್ಡಾಡುತಿದ್ದರು. ಅವರದ್ದಲ್ಲಿಗೆ ಹೋಗಿ ಪ್ರಣಾಮಮಾಡಿ, ಎಲ್ಲಾ ವಿಷಯವನ್ನು ವಿಶದೀಕರಿಸಿದರು.

"ನನಗೆ ಹೀಗೇ ಆಗುತ್ತದೆಂದು ಮೊದಲೇ ಗೊತ್ತು. ಅದಕ್ಕಾಗಿಯೇ ಜಾಗ್ರತೆಯಿಂದಿರಲು ತಿಳಿಸಿದ್ದೆ. ಆಗಲಿ ಪೋಲೀಸರಿಗಂತೂ ಈ ದುರ್ಘಟನೆಯ ಬಗ್ಗೆ ವರ್ತಮಾನ ಕೊಡಲೇ ಬೇಕು;" ಎಂದರು ಜಯಂತ್.

"ನೀವು ನಮ್ಮೊಡನೆ ಬನ್ನಿ" ಎಂದರು ದಾಮೋದರ್.

ಜಯಂತರವರು ಓರ್ವ 'ಕಾಬೂಲಿ'ನವನ ಡ್ರೆಸ್ ಮಾಡಿಕೊಂಡು, ಮೂವರೂ ಸೇರಿ ಪೋಲೀಸ್ ಕೇಪ್ಟನ್ ಇದ್ದಲ್ಲಿಗೆ ಹೊರಟರು. ಆ ಸಮಯದಲ್ಲಿ ಶರ್ಮಾರು ಏನೋ ಬರೆಯುವುದರಲ್ಲಿ ಮಗ್ನರಾಗಿದ್ದರು.

"ಹಲೋ! ದಾಮೋದರ್ ಸೌಖ್ಯತಾನೆ ಹೇಗೆ ಬರೋಣವಾಯ್ತು" ಶರ್ಮಾಜಿಯವರು ಕೇಳಿದರು.

"ಒಂದು ಅತ್ಯಾವಶ್ಯಕ ಕಾರಣವಿದ್ದುದರಿಂದ"

"ನೀವು ನಿಮ್ಮ ಮಾತು ಹೇಳಿ. ತದನಂತರ ನನಗೂ ಕೊಂಚ ಮಾತಾಡಲವಕಾಶ ಒದಗಿಸಬೇಕು. ಫೈಲನ್ನು ಒಂದು ಕಡೆ ಇಡುತ್ತಾ ಹೇಳಿದರು ಶರ್ಮಾರವರು.

"ಇವತ್ತು ಗಂಡಾಗಳು ಮಾಯಾವತಿಯನ್ನು ಮೋಟಾರಿನಿಂದ ಎತ್ತಿಕೊಂಡು ಹೋದರು" ಎಂದರು ದಾಮೋದರ್.

"ಮೋಟಾರಿನಿಂದ! ಅದು ಹೇಗೆ ಅಚ್ಚರಿಯಿಂದ ಕೇಳಿದರು ಶರ್ಮಾ.

ಅನಂತರ ದಾಮೋದರರು ಪ್ರತಿಯೊಂದು ಮಾತನ್ನು ನಿಧಾನವಾಗಿ ವಿವರಿಸಿದರು. ಅಲ್ಲದೆ "ಅವರಲ್ಲಿ ಡ್ರೈವರನು ಕೂಡಿಕೊಂಡಿದ್ದರಿಂದಲೇ ಹೀಗಾಯ್ತು. ಆವನೂ ಗುಂಡಾಳುಗಳ ಒಟ್ಟಿಗೆ ಮಾಯವಾಗಿದ್ದಾನೆ" ಎಂದು ಹೇಳಲು ಮರೆಯಲಿಲ್ಲ.

"ಮಾಯಾವತಿಗೆ ಮಹೇಂದ್ರಗಢದಲ್ಲಿ ಏನು ಕೆಲಸ? ಅವಳ್ಯಾಕೆ ಅಲ್ಲಿ ಹೋಗುತ್ತಿದ್ದಳು? ಎಂದು ಉತ್ಸಾಹಪೂರ್ವಕವಾಗಿ ಕೇಳಿದರು ಶರ್ಮಾಜಿ."

"ನಮಗೂ ಮಹೇಂದ್ರಗಢಕ್ಕೂ ಸಂಬಂಧವಿದೆ. ಅದೂ ಒಂದು ರಹಸ್ಯ. ಅದನ್ನು ಈಗ ನಾನು ಬಯಲುಮಾಡಲಾರೆ" ಎಂದರು ದಾಮೋದರರು.

"ಅಲ್ಲಿಯೂ ಒಬ್ಬ ಪೋಲೀಸರ ಸಂದೇಹಕ್ಕೊಳಗಾದ ಹಾಗೂ ಯಾರಿಗೂ ಕಾಣಸಿಗದಂತೆ ವಾಸಿಸುವ ವ್ಯಕ್ತಿಯೋರ್ವನಿದ್ದಾನೆ. ಪೋಲೀಸರು ಬಹಳ ಸಾರಿ ಅವನನ್ನು ಪತ್ತೆ ಮಾಡಲು ಪ್ರಯತ್ನಿಸಿದರೂ, ಅಸಫಲವಾಯ್ತು.'

'ಹಾಗಾದರೆ ತಮಗೆ ಆ ವ್ಯಕ್ತಿ ಈ ಗುಂಡಾಗಳ ವರ್ಗದಲ್ಲಿ ಸೇರಿಕೊಂಡಿದ್ದಾನೆಂದು ಶಂಕೆ ಬಂದಿದೆ' ಎಂದು ನಗುತ್ತಾ ಹೇಳಿದರು ದಾಮೋದರ್.

"ಯಾವನು ಸಭೆ, ಸೊಸೈಟಿಗಳಿಗೆ ಹೋಗುವುದಿಲ್ಲವೋ ತನಗೆ ಯಾರಾದರೂ ಸಿಗಲು ಬಂದರೆ ತಪ್ಪಿಸಿಕೊಳ್ಳುತ್ತಾನೋ ಅಂತವನ ಮೇಲೆ ಸಂಶಯಕ್ಕಾಸ್ಪದ ಉಂಟಾಗುತ್ತದೆ."

"ಆದರೆ, ಮೌನದಲ್ಲಿ ಜೀವಿಸುವ ವ್ಯಕ್ತಿಯನ್ನು ನಾವು ಗುಂಡಾನೆಂದು ಸಂಶಯಪಡಬಹುದೆ?

"ತಾವೆನ್ನುವುದು ನಿಜ, ಆದರೆ ನನ್ನ ಅಭಿಪ್ರಾಯದಂತೆ 'ಕಪ್ಪು ನಕಾಬಿ'ನವರ ಎದುರು ಬಿದ್ದು ಯಾವಾಗಲೂ 'ಯಮನ ನೆರಳು' ಜಯಗಳಿಸುವಂತೆ ಮಾಡುವ ವ್ಯಕ್ತಿಯು ಅವನೇ ಎಂದು ಸಂಶಯಪಡಬೇಕಾಗಿದೆ."

"ಆದರೆ, ಅವರ ಯೊಪ್ಪೊಂದೂ ಅಪರಾಧದ ರಿಪೋರ್ಟು ಇಲ್ಲವಲ್ಲ?'

"ಹಾಂ, ಅದೇನೋ ಸರಿ. ಅವರು 'ಕಪ್ಪು ನಕಾಬಿ'ನ ದಳದಿಂದ ಕಾರಣಾಂತರವಾಗಿ ಬೇರೆಯಾದವರಿರಬಹುದು.'

"ಇದನ್ನು ತಾವು ಸಿದ್ಧಪಡಿಸಿದ್ದೀರಾ? ಇಲ್ಲ ಅನುಮಾನವೇ?'

"ಕೇವಲ ಅನುಮಾನದಿಂದ ಮಾತ್ರ. ಇಂದಿನ ವರೆಗೂ ಅವನಾವ ವ್ಯಕ್ತಿಯೆಂದು ತಿಳಿದು ಬರಲಿಲ್ಲ. ಅವನ ಇರುವಿಕೆಯನ್ನು ನೋಡಿದರೆ ಓರ್ವ ಪ್ರತಿಷ್ಠಿತ ವ್ಯಕ್ತಿಯಂತೆ ಕಾಣುತ್ತಾನೆ. ವಿನಃ ಬೇರಾವ ವಿಶಿಷ್ಟತೆಯೂ ಕಾಣಲೊಲ್ಲದು. ಓರ್ವ ಪೈಂಟರ್ ಅಥವಾ ಚಿತ್ರಕಾರನು ಇಷ್ಟು ವೈಭವದಲ್ಲಿರಲು ಸಾಧ್ಯವಿಲ್ಲ."

"ಈ ಮಾತು ಅಸಂಮಂಜಸ ಪೂರ್ಣವಾಗಿದೆ, ಒಳ್ಳೆದು ತಮಗವರ ಹೆಸರು ಗೊತ್ತೇ?"

"ಒಹೋ ಜಯಂತಸ್ವರೂಪ ಚಿತ್ರಗಾರ."

ಶರ್ಮಾರವರ ಮಾತು ಕೇಳಿ ಜಯಂತರವರು ಮುಗುಳ್ನಕ್ಕರು. ದಾಮೋದರರು ಬಿಲಬಿಲನೆ ನಗುತ್ತಾ—"ಕ್ಷಮಿಸಿ, ತಾವು ಎದುರಿಗೇ ಪ್ರಶಂಸುತ್ತೀರಿ ಆದರೆ ಅನಭಿಜ್ಞರಾಗಿ" ಎಂದರು.

"ಅಂದರೆ..... ' ಚಕಿತರಾಗಿ ಕೇಳಿದರು ಶರ್ಮಾ.

ಜಯಂತರನ್ನು ತೋರಿಸುತ್ತಾ "ಇವರ ಬಗ್ಗೆಯೇ ತಾವು ಹೇಳುತಿದ್ದುದು. 'ಇವರೇ ವಿ! ಜಯಂತ್' ಎಂದರು ದಾಮೋದರರು.

"ಹಾಂ!.....ಆದರೆ ತ ವು....." ಶರ್ಮಾರವರು ಮುಂದೇನೂ ಹೇಳಲಿಲ್ಲ.

"ಕಾಬೂಲೀ ಮುಸ್ಲೀಮರಲ್ಲ" ಎಂದು ಪ್ರಾಣದಾಸರು ವಾಕ್ಯ ಪೂರ್ತಿಮಾಡಿದರು. ಶರ್ಮಾರವರ ವಿಸ್ಮಯವು ಅಳಿಯಲಿಲ್ಲ.....ಆದಕ್ಕಾಗಿ ಜಯಂತರು ಕಪಟವಾಗಿ ಧರಿಸಿಕೊಂಡಿದ್ದ, ವಿಗ್ಗು, ಗಡ್ಡ, ಕಾಬೂಲೀ ಕೋಟು, ಪಗಡಿಯನ್ನು ಮೇಜಿನ ಮೇಲೆ ತೆಗೆದಿಟ್ಟರು.

"ವಾಹ್ ಜಯಂತ್ ಕುವರ..... ಅರೇ ತಾವು!"

"ಹೌದು," ಎಂದು ಹಸ್ತಲಾಘವನ್ನಿತ್ತು. ಯಾರ ವಾಯರ್‌ಲೆಸ್ಸಿಗೆ ಉತ್ತರದಲ್ಲಿ 'ನನಗೆ ನಿನ್ನಲ್ಲಿ ವಿಶ್ವಾಸವಿಲ್ಲ', ನಾನು ಯಾವ ರಹಸ್ಯದಲ್ಲೂ ಭಾಗ ವಹಿಸಲಾರೆ ಎಂದು ಉತ್ತರಿಸಿದ್ದೀರೋ! ಅವನೇ ನಾನು.!"

ಶರ್ಮಾರವರು ನಾಚಿಕೆಯಿಂದ ತಲೆ ತಗ್ಗಿಸಿದರು—"ಹೌದು, ತಾವು ವಿವಶರಾಗಿಯಾದರೂ ಪ್ರತ್ಯಕ್ಷರಾಗುವಿರೆಂದು ನನ್ನ ಅಭಿಪ್ರಾಯವಿತ್ತು" ಎಂದರು.

"ಹೌದು, ನಾನೂ ಹಾಗೆ ಎಂದುಕೊಂಡೆ. ಆದರೆ ಆ ಸಮಯದಲ್ಲಿ ನಾನು ಬಂದು ಪರಿಚಯ ಕೊಡುವುದು ಹಾನಿಕರವಾಗಿತ್ತು. ಆದುದರಿಂದಲೇ ನಾನು ಎಲ್ಲಿಗೂ ಹೋಗುತ್ತಿರಲಿಲ್ಲ. ಮನೆಯಲ್ಲಿ ಯಾರಿಗೂ ಸಿಗುತ್ತಿರಲಿಲ್ಲ. ಯಾರೊಡನೆಯೂ ಕಲೆಯುತ್ತಿರಲಿಲ್ಲ." ಎಂದರು ಜಯಂತ್.

"ಆದರೆ ನಮಗಾದರೂ ಗುಪ್ತವಾಗಿ ತಿಳಿಸುತಿದ್ದರೆ, ನೀವು ಯಾರೆಂದು ಕಂಡು ಹಿಡಿಯುವ ಕಷ್ಟವನ್ನು ನಾವು ಮಾಡುತ್ತಲೇ ಇರಲಿಲ್ಲ. ನಾನು ತಲೆಕೆಡಿಸಿಕೊಳ್ಳುತ್ತಲೂ ಇರಲಿಲ್ಲ." ಎಂದು ನಗುತ್ತಾ ನುಡಿದರು ಶರ್ಮಾ.

"ಹಾಗಾದರೆ ಗಮ್ಮತ್ತು ಆಗುತ್ತಿರಲಿಲ್ಲ. ಅಲ್ಲದೆ ಆ ಸಂದರ್ಭದಲ್ಲಿ ಬೇರೆ ವಿಷಯಗಳ ಪತ್ತೆ ನಡೆಸಲು ಅವಕಾಶವಿದ್ದಿರಲ್ಲಾ ಅದು ಇಷ್ಟು ಸುಲಭ ಸ್ಥಿತಿಯಲ್ಲಿರಲಿಲ್ಲ ಎಂದು ನಗುತ್ತಾ ನುಡಿದರು ಜಯಂತರು

"ಹಾಗಾದರೆ ಹುಜೂರು ಸಾಹೇಬರು ಪೋಲೀಸರ ಮೂರ್ಖತೆ ಎಷ್ಟು ಎಂದು ಆಳೆಯುತಿದ್ದೀರೇನು? ಒಳ್ಳೆದು ಸಾಹೇಬರೇ, ಇನ್ನೇನು ಆಜ್ಞೆಯಿದೆ? ಪೋಲೀಸರು ಈ ಕಾರ್ಯದಲ್ಲಿ ಅಸಫಲರಾಗಿರುವುದಂತೂ ನಿಶ್ಚಯ. ಈಗ ಇನ್ನು ತಾನೇ ನಿಮ್ಮ ಮುಖಂಡತ್ವ ವಹಿಸಿಕೊಳ್ಳಬೇಕು. ಆಜ್ಞಾಪಾಲನೆಗಾಗಿ, ಈ ಸೇವಕನು ಸರ್ವಶಕ್ತಿಸಹಿತ ತಮ್ಮ ಸೇವೆಗಾಗಿ ತಯಾರಿದ್ದಾನೆ."

"ಸುಮ್ಮ ಸುಮ್ಮನೆ ತಮಾಶೆ ಸಾಕು ಮಾಡಿರಪ್ಪಾ! ತಾವು ತಮ್ಮ ಆರಿಸಿದ ಕೆಲವು ಚತುರ ಪೋಲೀಸರೊಂದಿಗೆ ಈಗ 'ಯಮಪುರಿ' ಎಂದು ಹೆಸರಾಗಿರುವ ಆ ತೋಟದ ತನಿಖೆ ನಡೆಸಲು ಬನ್ನಿ: ನನ್ನಭಿಪ್ರಾಯದಲ್ಲಿ ಕೊಲೆಗಾರರು ಹೋಗಿ ಅಲ್ಲೇ ಅವಿತಿದ್ದಾರೆ." ಎಂದರು ಜಯಂತ್ ಕುಮಾರರು.

"ಅಪ್ಪಣೆ" ಎಂದು ಶೀಘ್ರ ಆಜ್ಞೆಕೊಟ್ಟ ಅನಂತರ ಪೋಲೀಸರೊಂದಿಗೆ ಲಾರಿಯಲ್ಲಿ ಜಯಂತರೊಡನೆ ಕುಳಿತರು. ಜಯಂತರು ದಾಮೋದರರೊಂದಿಗೆ—ನೀವು ಕಾರಿನಿಂದ ಹೋಗಿ ನವಲನ್ನು ಕರೆದು ಕೊಂಡು ಯಮಪುರಿಗೆ ಬನ್ನಿ ಎಂದರು.

ತದ ನಂತರ ದಾಮೋದರರು ಮಹೇಂದ್ರಗಢದತ್ತ ಹಾಗೂ ಇತರರೆಲ್ಲರೂ ಯಮಪುರಿಯತ್ತ ಹೊರಟರು.

(ಮುಂದುವರಿಯುವುದು)

ವಿಶ್ವಕವಿ ಟಾಗೋರರ ಪುಣ್ಯಸ್ಮರಣೆಗಾಗಿ
ಅವರ ಶತಮಾನೋತ್ಸವದ ಸುಸಂದರ್ಭದಲ್ಲಿ
ಪ್ರಕಟವಾದ ತಿರುಗಾಣಿಕೆಗಳು

ಚಿತ್ರಾಂಗದೆ

ಬೆಲೆ: ೬೦ ನ. ಪೈಸೆ.
(ಶ್ರೀ ಕೆ. ಕೆ. ಶೆಟ್ಟಿ, ಎಂ. ಎಲ್. ಸಿ. ಅವರಿಂದ ಅನುವಾದಿತ)

ರವೀಂದ್ರನಾಥರ ಕಿರುಗತೆಗಳು

ಬೆಲೆ: ೧೦ ನ. ಪೈಸೆ.
(ಶ್ರೀ ಹನುಮಂತರಾವ್ ಮಾಂಜಲೇಕರ, ಕಾರವಾರ ಅವರಿಂದ ಅನುವಾದಿತ)

ಪ್ರಕಾಶಕರು:
ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ನವಯುಗ ಪ್ರೆಸ್, ಉಡುಪಿ.

ಡಿ. ಕೆ. ಭಾರದ್ವಾಜರ
ಇಂಗ್ಲಿಷ್, ಇಂಗ್ಲಿಷ್-ಕನ್ನಡ

ಡಿಕ್ಷನೆರಿ

ಬೆಲೆ: ರೂ. ನಾಲ್ಕು.

ಐದು ರೂಪಾಯಿ ಮುನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ ಕಳಿಸಲಾಗುವುದು.

ನವಭಾರತ ಪುಸ್ತಕ ಭಂಡಾರ ಉಡುಪಿ.

NAVAYUGA WEEKLY, UDIPI.
REGD. NO.BG. 176

13-7-1961

LICENSE NO. 31
Licensed to Post without Prepayment

ಪ್ರಚಲಿತ ಪ್ರಸಂಗ

(೧ನೇ ಪುಟದಿಂದ)

ಮದ್ರಾಸ ರಾಜ್ಯದಲ್ಲಿ ಕಾವೇರಿ ನದಿಯ ನೀರು ಹರಿದುದಿಂದ ಅಲ್ಲಿಯೂ ಮಹಾಪೂರದ ದುಷ್ಪರಿಣಾಮ ಪ್ರಭಾವ ಬೀರಿದೆ. ಕಾವೇರಿ ಮತ್ತದರ ಉಪನದಿಕೋವೆರೊನ ನದಿಗಳಲ್ಲಿ ಹಿಂದೆಂದೂ ಕಾಣದಿದ್ದ ಪ್ರಮಾಣದಲ್ಲಿ ನೀರೇರಿ, ಆ ನದಿಗಳ ನಂಬೆಯಲ್ಲಿರುವ ಕೊಯಮುತ್ತೂರು, ತಿರುಚಿ ಮತ್ತು ತಂಜಾವೂರು ಜಿಲ್ಲೆಗಳ ಅನೇಕಾನೇಕ ಗ್ರಾಮಗಳು ಕಂಗಾಲಾಗಿವೆ. ಫಲವತ್ತಾದ ಹೊಲಗದ್ದೆಗಳ ಬೆಳೆ ಸಂಪೂರ್ಣ ನಷ್ಟವಾಗಿವೆ.

ಉತ್ತರ ಕರ್ನಾಟಕದ ಬೆಳಗಾಂವಿ ಜಿಲ್ಲೆಯಲ್ಲಿ ಘಟಪ್ರಭಾ ಮತ್ತು ಮಲಪ್ರಭಾ ನದಿಗಳಲ್ಲಿಯೂ ಹಿರಣ್ಯಾಕ್ಷಿಯಲ್ಲಿಯೂ ನೀರಿನ ಪ್ರಮಾಣವು ಏರಿದ್ದರೂ ಹೆಚ್ಚಿನ ಅಪಾಯವಾಗುವ ಸೂಚನೆಯಿಲ್ಲ. ಆದರೆ ಶಂತಾವತಿಕೊಳ್ಳದ ಪರಿಸ್ಥಿತಿಯು ತೀರ ಭಿನ್ನವಿದೆ. ಈ ಪ್ರದೇಶದಲ್ಲಿ ಹಲವಾರು ಜನರು ನೀರನಡುವಣ ಬೆಟ್ಟಗಳ ಮೇಲೆ ದಿನದೂಡುತಿದ್ದಾರೆ. ಈ ಯೋಜನೆಯಿಂದ ವಸತಿಯನ್ನು ಕಳೆದುಕೊಳ್ಳುವವರಿಗೆ ಬೇರೆ ಭೂಮಿಯನ್ನು ಕೊಡದೆ ಇದ್ದುದರಿಂದ ಇವರು ಅಲ್ಲಿಯೇ ಉಳಿದಿದ್ದರು. ಆದರೆ, ಮಹಾಪೂರದಿಂದಾಗಿ ಅವರ ಮನೆಮೂರು ಮೂತ್ರವಲ್ಲ ಸುಮಾರು ೧೦೦೦ ಎಕ್ರೆ ಸಂಮೃದ್ಧ ಭೂಮಿಯೂ ವರುಣನ ಬಾಯಿಗೆ ತುತ್ತಾಗಿದೆ. ಆದುದರಿಂದ ಇಲ್ಲಿನ ಸಮಸ್ಯೆಯನ್ನು ಪರಿಹರಿಸಲಿರುವ ಏಕಮೇವ ಉಪಾಯವೆಂದರೆ, ರೈತ ಜನರಿಗೆ ಬೇರೆ ಭೂಮಿಯನ್ನಿತ್ತು ಅಲ್ಲಿಗೆ ಸಾಗಿಸುವುದು ಮತ್ತು ಅದುವರೆಗೆ ಯೋಜನೆಯನ್ನು ಮುಂದೂಡುವುದೇ ಮಾತ್ರವೆಂದು ಹೇಳಲಾಗುತ್ತಿದೆ.

ಹೀಗೆ ದಕ್ಷಿಣದ ರಾಜ್ಯಗಳು ಸಾಮೂಹಿಕವಾಗಿ ಮಳೆರಾಯನ ಸಿಟ್ಟಿಗೆ ಗುರಿಯಾದುದರಿಂದ ಅಪಾರಸಂಪತ್ತು ಪ್ರಾಣಗಳು ನಷ್ಟವಾಗಿವೆ; ಇದು ಗಂಡಾಂತರಕಾರಿಯೆಂಬುದು ಸ್ಪಷ್ಟವಿದೆ. ವಿವಿಧ ರಾಜ್ಯಗಳು ತಂತಮ್ಮ ನೆಲೆಯಲ್ಲಿ ಮಹಾಪೂರ ನಿರಾಶ್ರಿತರ ಸುಖ ವ್ಯವಸ್ಥೆಗಾಗಿ ಕೈಲಾದ ಪ್ರಯತ್ನವನ್ನು ಮಾಡುತ್ತಿವೆ. ಪ್ರಧಾನಿ ನೆಹರುರವರು ಸಹ ತನ್ನ ಪರಿಹಾರ ನಿಧಿಯಿಂದ ರೂ. ೫೦ ಸಾವಿರವನ್ನು ಕೇರಳದ ಮುಖ್ಯ ಮಂತ್ರಿಗುವರಿಗೆ ಕಳಿಸಿದ್ದಾರೆ. ಅಲ್ಲದೆ, ಬರಿದಾಗುತ್ತಿರುವ ಈ ನಿಧಿಗೆ ದಾನ ನೀಡುವಂತೆ ಭಿನ್ನವಿಸಿದ್ದಾರೆ. ಅವರ ವಿನಂತಿಗೆ ದೇಶದ ಮೂಲೆ ಮೂಲೆಗಳಿಂದ ಮನ್ನಣೆ ಲಭಿಸುತ್ತಿದೆ. ಮೈಸೂರು ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಶ್ರೀ ನಿಜಲಿಂಗಪ್ಪನವರೂ ಮಹಾಪೂರ ಪೀಡಿತರಿಗೆ ಸರ್ವ ಸ್ವಕಾರದ ಸಹಾಯ ನೀಡುವಂತೆ ಕೇಳಿಕೊಂಡಿದ್ದಾರೆ. ರಾಷ್ಟ್ರಪತಿ ಡಾ| ರಾಜೇಂದ್ರ ಪ್ರಸಾದರು ಪೀಡಿತ ರಾಜ್ಯಗಳ ರಾಜ್ಯಪಾಲರಿಗೆ ಸಂತಾಪ ಸೂಚಕ ಸಂದೇಶವನ್ನು ಕಳಿಸಿ, ರಾಜ್ಯ ಸರಕಾರವು ಶಕ್ಯವಿದ್ದ ರೀತಿಯಲ್ಲಿ ಸಂಪೂರ್ಣ ಸಹಾಯವನ್ನು ಮಹಾಪೂರ ಸಂತ್ರಸ್ತರಿಗೆ ಒದಗಿಸಬೇಕೆಂದು ಹೇಳಿದ್ದಾರೆ.

ಅಭಿಪ್ರಾಯ

(೧೦ನೇ ಪುಟದಿಂದ)

ತ್ವವುಳ್ಳದರಿಂದ ಗಣನೀಯವಾಗಿದೆ. ಫ್ರಾನ್ಸದ ನಾಲ್ಕನೆಯ ಪ್ರಜಾತಂತ್ರದ ಪತನ ಮತ್ತು ಹತ್ತು ವರ್ಷದ ರಾಜನೀತಿಕ ಅಜ್ಞಾತವಾಸದ ಅನಂತರ ಡಿಗಾಲೆಯವರು ಪುನಃ ಸತ್ತೆಯನ್ನು ಪಡೆದುದು ದೊಡ್ಡ ನಾಟಕೀಯ ಘಟನೆ. ಇಡಿಯ ಯುರೋಪಿನಲ್ಲಿ ಇದರ ಪ್ರಭಾವ ಹರಿಯಿತು.

ಈ ಮೂರು ಪರಸ್ಪರ ಅಸದೃಶ ಪರಿಸ್ಥಿತಿಗಳಲ್ಲಿ ಆದ ರಾಜನೀತಿಕ ಅನುಭವಗಳಿಂದ ನಾನೊಂದು ವಿಚಾರವನ್ನು ಅರಿತುಕೊಂಡೆ. ರಾಯಭಾರಿಯೊಡನನಿಗೆ ತನ್ನ ಸರಕಾರದ ನೀತಿಯ ಮೇಲೆ ಸಂಪೂರ್ಣ ವಿಶ್ವಾಸ ಮತ್ತು ದೃಢತೆಯಿರಬೇಕು; ತಾನು ಇರುವ ದೇಶದ ಸರಕಾರಕ್ಕದು ಸರಿಬರಲಿ ಬಾರದಿರಲಿ, ಅದರ ಗೊಡವೆ ಮಾಡಬಾರದು. ಅಗಲೇ ರಾಯಭಾರಿಯು ಗೌರವ ಮತ್ತು ಸಫಲತೆಗಳನ್ನು ಗಳಿಸಬಲ್ಲ.

ರಾಜ್ಯ ಪುನರ್ಘಟನಾ ಯೋಗ (೧೯೫೪—೫೫) ದ ಕಾರ್ಯಕಲಾಪದ ವೇಳೆ, ಶಾಂತಿ ಕಾಲದಲ್ಲಿ ಜನ ಸಾಮಾನ್ಯರು ರಾಷ್ಟ್ರೀಯ ಹಿತಕ್ಕಿಂತ ಸ್ಥಾನೀಯ ಸ್ವಾರ್ಥವನ್ನು ಅಧಿಕ ಮಹತ್ವಪೂರ್ಣವೆಂದು ಪರಿಗಣಿಸುತ್ತಾರೆಂದು ತಿಳಿದುಕೊಂಡೆ.

ಸಾಹಿತ್ಯಾಭಿರುಚಿಯು ನನ್ನ ಪೈತೃಕ ಸಂಪತ್ತಿ. ಶಾಲೆಯಲ್ಲಿ ಓದುತ್ತಿರುವಾಗಲೇ ನಾನು ಪದ್ಯರಚನೆಯನ್ನು ಮಾಡುತಿದ್ದೆ. ಕಷ್ಟಗಳು ತಾಕಲಾಡುತ್ತಿರುವಾಗ ಕಾವ್ಯರಚನೆಯಿಂದ ಅಧಿಕ ಶಾಂತಿ ದೊರೆಯುವುದೆಂದು ನನ್ನ ಅನುಭವ.

ಅನುವಾದ ಕಾರ್ಯವೆಂಬುದು ಅಂತರಿಕ ಶಾಸನಕ್ಕೆ ಅತಿ ಮುಖ್ಯವಾದುದು ಎಂದು ನನ್ನ ತಿಳುವಳಿಕೆ. ಚಿಂತೆಯ ದೂರೀಕರಣಕ್ಕಿದು ತಾರಣೋಪಾಯ. ನಾನ್‌ಕಿಂಗ್‌ನಲ್ಲಿ ರಾಯಭಾರಿಗಳ ಸಂಚಾರ ಸ್ವಾತಂತ್ರ್ಯವನ್ನು ಚೀನೀಯ ಸಾಮ್ಯವಾದಿಗಳು ಅಪಹರಿಸಿದಾಗ, ನಾವು ನಮ್ಮ ರಾಯಭಾರಿ ಕಛೇರಿಯಲ್ಲೇ ಸ್ಥಾನಬದ್ಧರಾದಾಗ, ಅನುವಾದ ಕಾರ್ಯವೇನನ್ನಲ್ಲಿ ಬಲದುಂಬಿತು. ಅಗಲೇ ನಾನು ಕಾಲಿದಾಸನ ಕುಮಾರ ಸಂಭವವನ್ನು ಮಲಯಾಳಕ್ಕೆ ಪದ್ಯಾನುವಾದ ಮಾಡಿದೆ. ಪ್ರಸಿದ್ಧ ಚೀನಿ ನಾಟಕ "ಪಾಶ್ಚಾತ್ಯಪ್ರಕೋಪ್ಯ"ವನ್ನು ಆಂಗ್ಲ ಭಾಷೆಗೆ ಭಾಷಾಂತರ ಮಾಡಿದೆ.

ಜೀವನವೆಂದರೇನು? ಹಿಂದಿನ ಅನುಭವಗಳನ್ನು ನಿತ್ಯ ಸೂಚನವಾಗಿ ವ್ಯಾಖ್ಯಾನ ಮಾಡುತ್ತ ಬರುತ್ತಿರುವುದೇ ಜೀವನ. ಮನುಷ್ಯನ ಪ್ರಯತ್ನಗಳು ಕಷ್ಟ ಬರಿಯುತವಾಗಿಯೇ ಇರಲಿ, ಅವಿಷ್ಟು ಸಾವಧಾನದಿಂದ ನಿಯೋಜಿತವಾಗಿಯೇ ಇರಲಿ, ಬುದ್ಧಿ ವ ತ್ತೆಯಿಂದ ಕೂಡಿದ್ದಿರಲಿ, ಫಲಸಿದ್ಧಿಯು ಮಟ್ಟಿಗೆ ಅತನ ಅಂಶ ಬಹು ಅಲ್ಪ.

ಭಾಗ್ಯ, ಅದೃಷ್ಟ, ಅವಕಾಶ—ಇದನ್ನು ಯಾವ ಹೆಸರಿನಿಂದ ಬೇಕಾದರೂ ಉಲ್ಲೇಖಿಸಬಹುದು, ಖಂಡಿತಕ್ಕೂ ಇದೆ; ಆದರೆ ಅದು ನಮ್ಮ ದೃಷ್ಟಿಯಿಂದ ಬಂಧಿತವಾಗುವುದಿಲ್ಲ. ಪ್ರಬಲದಲ್ಲಿ ಪ್ರಬಲವಾದ ಮೆದುಳು ಚಿಕ್ಕದುರಲ್ಲಿ ಚಿಕ್ಕವಾದ ಒಂದು ರಕ್ತವಾಹಿನಿಯು ಕಟ್ಟು ಹೋಗುವುದರಿಂದ ನಿರುಪಯೋಗಿ ಯಾಗುವುದು. ಆದುದರಿಂದ ಜೀವನದ ಸರ್ವೋತ್ತಮ ಪಾಠವೆಂದರೆ, ಸಾಫಲ್ಯದ ಗಳಿಗೆಗಳಲ್ಲಿ ಮಾನವರಾದ ನಾವು ನಮ್ಮ ಆತ್ಮ ನಿರ್ಭರತೆಯ ಅಭಿಮಾನದಿಂದ ಮರೆತು ಬಿಡುವ ವಿನಮ್ರತೆ. ಈ ವಿನಮ್ರತೆಯನ್ನು ಸದಾ ನಾವು ಕಲಿತುಕೊಂಡಿದ್ದರೆ, ಜೀವನದಲ್ಲಿ ಸಫಲವಾಗುವುದು ಸಂಭವನೀಯ.

(ಸಂಗ್ರಹ)

ಮಹಾಪೂರದ ಪ್ರಮಾಣವು ಇಷ್ಟರಯೇ ಇಳಿಯುತ್ತಿದೆ. ಇದು ಇಳಿದ ನಂತರವೇ ಇದರ ಪ್ರಭಾವವೆಷ್ಟು, ಇದರಿಂದಾದ ಹಾನಿಯೆಷ್ಟು ಎಂಬುದರ ಬಗ್ಗೆ ಖಚಿತ ವಿವರಗಳು ದೊರೆಯ ಬಹುದು. ಆದರೂ ಇಂತಹ ಬೃಹತ್ಪ್ರಮಾಣದ ನಷ್ಟವನ್ನು ತುಂಬಿಸಿಕೊಳ್ಳಲು ಬಹು ಸಮಯ ತಗಲುವುದೆಂಬುದು ನಿಶ್ಚಯ.

ಮೊದಲ ಹೆಜ್ಜೆ

ಒಂದು ಸೇವಿಂಗ್ಸ್ ಬ್ಯಾಂಕ್ ಖಾತೆಯನ್ನು ತೆರೆಯಲು ನೀವಿಡುವ ಮೊದಲ ಹೆಜ್ಜೆ — ನಿಮ್ಮ ಪ್ರಥಮ ಪ್ರಯತ್ನ ಅತ್ಯಂತ ಪ್ರಾಮುಖ್ಯವಾದುದು. ಯಾಕೆಂದರೆ ಅದು ನಿಮಗೆ ಆರ್ಥಿಕ ಸುಸ್ಥಿರತೆ, ಸಾಮಾಜಿಕ ಯಶಸ್ಸುಗಳಿಗೆ ಹೊಸ ಅವಕಾಶಗಳನ್ನು ಒದಗಿಸಿಕೊಟ್ಟು ಭವಿಷ್ಯತ್ತಿನ ಸುಖದತ್ತ ನಿಮ್ಮನ್ನು ಮುನ್ನಡೆಸುವುದು.

ಒಂದು ಸೇವಿಂಗ್ಸ್ ಬ್ಯಾಂಕ್ ಖಾತೆಯನ್ನು ತೆರೆಯಿರಿ.

ಸಿಂಡಿಕೇಟ್ ಬ್ಯಾಂಕ್

ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸ್: ಮುಕುಂದ ನಿವಾಸ, ಉಡುಪಿ, (ಮೈಸೂರು ರಾಜ್ಯ)
ಸ್ಥಾಪನೆ: ೧೯೩೫.

ಸ್ವೀಕಾರ ವಿಮರ್ಶೆ

(೮ ನೇ ಪುಟ ದಿಂದ)

ಪ್ರಪಂಚದ ಉನ್ನತ ದಾರ್ಶನಿಕರಲ್ಲಿ ಭಾರತದ ಉಪ ರಾಷ್ಟ್ರಪತಿ ಡಾ| ರಾಧಾಕೃಷ್ಣನ್ ಒಬ್ಬರು. ತಾಲು ಶತಮಾನಕ್ಕೆ ಮೊದಲು ಬರೆದು ಅಗಲೇ ಇಂಗ್ಲೆಂಡಿನಲ್ಲಿ ಪ್ರಕಟವಾದ ಇವರ ಕೃತಿಯ ಕನ್ನಡದ ರೂಪಾಂತರನನ್ನು ಭಾರತ ಸರಕಾರವು ಪ್ರಕಾಶಿಸುತ್ತಿದೆ. ವಿದೇಶಗಳಲ್ಲಿ ಕಲ್ಕಿಯೊಂದು ಉತ್ಕೃಷ್ಟ ಗ್ರಂಥವೆಂಬ ಹೆಸರು ಪಡೆದಿದೆ. ಮಾನವನು ಜಾಗೃತನಾಗುತ್ತಿರುವ ಈ ಕಾಲದಲ್ಲಿ ಆತನಲ್ಲಿ ಪರಸ್ಪರ ವಿರುದ್ಧ ಗುಣದ ಎರಡು ಪ್ರವೃತ್ತಿಗಳು ಸಂಘರ್ಷಿಸಿಕೊಳ್ಳುವುವು. ಈ ಜಾಗ್ರತ ಮತ್ತು ಅಜಾಗ್ರತ ಪ್ರವೃತ್ತಿಗಳ ನಿರಂತರ ಹೋರಾಟದಿಂದ ಮಾನವನ ಮನಸ್ಸು ವಿಕ್ಷುಬ್ಧ ಸಾಗರದಂತಿರುತ್ತದೆ. ಪ್ರಚಲಿತ ಜಾಗ್ರತ ಪ್ರವೃತ್ತಿಯಿಂದ ವಿವಿಧ ಯಂತ್ರೋಪಕರಣಗಳು. ನಾನಾ ವೈಜ್ಞಾನಿಕ ಪ್ರಯೋಗಗಳು ಮುಂದಡಿಯಿಟ್ಟು ನಾಗರಿಕತೆಯೆಂದರೆ ತಾವೇ ಎನ್ನತೊಡಗಿವೆ. ನಾಗರಿಕತೆಯ ಪಂಕಷ್ಟೆಯನ್ನು ಮುಟ್ಟಿದ್ದೇನೆ— ಮುಟ್ಟಿತಿದ್ದೇನೆ ಎನ್ನುತ್ತಿದ್ದಾನೆ ಮಾನವ. ಆದರೆ, ಈ ನಾಗರಿಕತೆಯಲ್ಲಿಯೂ ನ್ಯೂನಾತಿರೇಕವಿಲ್ಲವೆ? ವಿಜ್ಞಾನವೃಕ್ಷದ ತುತ್ತತುದಿಗಡರಿದ ಪಾಶ್ಚಾತ್ಯ ದೇಶಗಳಿಗೆ ಕೂಡ ತಮ್ಮ ಸಭ್ಯತೆಯಲ್ಲಿ ಅದೇನೋ ಒಂದು ಕೊರತೆಯಿರುವಂತೆ ಭಾಸವಾಗತೊಡಗಿದೆ. ವೈಜ್ಞಾನಿಕ ಪ್ರಗತಿಯಿಂದ ಜಾಗ್ರತ ಪ್ರವೃತ್ತಿಯಿಂದ ಮಾನವನಲ್ಲಿ ಮಾಯವಾದ ಕೌಟುಂಬಿಕ, ಸಾಮಾಜಿಕ, ರಾಜನೀತಿಕ ಮತ್ತು ಧಾರ್ಮಿಕ ಸಂಬಂಧ ಅದರಿಂದಲೇ ತೃಪ್ತಗೊಳ್ಳುತಿದ್ದ ಮಾನವ ಪ್ರವೃತ್ತಿ —ಇವನ್ನು ಅರಿತುಕೊಳ್ಳಬೇಕು. ನಾಗರಿಕತೆಯ ಈ ಎರಡು ಮಾರ್ಗಗಳಲ್ಲೂ ನ್ಯೂನತೆಗಳಿವೆ; ಎಂತಲೇ ಇವು ಲೋಕ ಕಲ್ಯಾಣ ಸಾಧನೆಯಲ್ಲಿ ಅಸಫಲವಾಗಿವೆ. ಆದುದರಿಂದ, ಭವಿಷ್ಯದ ನಾಗರಿಕತೆಯು ಲೋಕಹಿತಸಾಧಕವೆನಿಸಬೇಕಾದರೆ, ಆಧ್ಯಾತ್ಮ್ಯ ಮತ್ತು ವಿಜ್ಞಾನಗಳೆರಡೂ ಹೊಂದಿಕೊಂಡು ಗಂಗೆಯೊಡನೆ ಸೇರಿಯಮುನೆ ಹರಿಯುವಂತೆ ಮುಂದುವರಿಯಬೇಕು—ಇದೇ ಕಲ್ಕಿಯ ಸಂದೇಶ ಎಂದು ಡಾ| ರಾಧಾಕೃಷ್ಣನ್ ಹೇಳುತ್ತಾರೆ. ಅವರ ವಿಚಾರಧಾರೆಗೆ ಅಂದಿನಿಂದ ಇಂದಿನ ವರೆಗೂ ಅನೇಕ ಸಮರ್ಥಕರು ತೋರಿಬಂದಿದ್ದಾರೆ. ಮಿಲಿಟರಿ ಅಧಿಕಾರಿಯಾಗಿದ್ದ ಜಿ|| ಮೆಕಾರ್ಥರು ಕೂಡಾ ಇದೇ ಅಭಿಪ್ರಾಯವನ್ನು ಹೊರಗೆಡಹಿದ್ದಾರಿಂದ ಮೇಲೆ ಉಳಿದವರ ಮಾತೇನು?

ಅನುವಾದನ ಕಾರ್ಯವು ಚಲೋದಿದೆಯಾದರೂ ಕೆಲವೆಡೆ ವಿಷಯವು ಚರ್ವಿತ ಚರ್ವಣವಾದಂತೆ ಭಾಸವಾಗುತ್ತದೆ; ಇದರಿಂದಾಗಿ ಕನ್ನಡತನವನ್ನು ಸ್ವಲ್ಪ ಮಟ್ಟಿಗಾದರೂ ಕಳೆದುಕೊಂಡಂತಿದೆ. ಉತ್ತಮವಾದ ಕಾಗದ ಸುಂದರವಾದ ಮುದ್ರಣಗಳು ಪುಸ್ತಕಕ್ಕೆ ಶೋಭೆ ತರುತ್ತವೆ. ವಿದ್ಯಾವಂತರೆಲ್ಲರೂ ಎಳೆಯ ಹರೆಯದಲ್ಲಿಯೇ ಓದಿ ಅಧ್ಯಯನ ನಡೆಸಬಹುದಾದ—ಬೇಕಾದ ಪುಸ್ತಕವಿದು. —ಗೋರಾ.

Edited Printed & Published by K. H. Shetty, at the Navayuga Press, Udipi, S. India.

40th year of publication. 20-7-1961 ೪೦ನೇ ವರ್ಷ

ಸಂಪುಟ ೪೧ Vol. 41

ನವಯುಗ

ಸಂಚಿಕೆ ೪೪ No 544

ಬೆಲೆ 0=13

ಪ್ರಚಲಿತ ಪ್ರಸಂಗ

ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರಗಳ ಪೂರೈಕೆ

ಪಾಕ್ ರಾಷ್ಟ್ರಪತಿ ಅಯೂಬ ಖಾನ ಮತ್ತು ಅಮೆರಿಕನ್ ಅಧ್ಯಕ್ಷ ಜಾನ್ ಕೆನ್ನೆಡಿಯವರಲ್ಲಿ ನಡೆದ ಭೆಟ್ಟಿಯ ಪರಿಣಾಮವಾಗಿ ಪಾಕಿಸ್ಥಾನಕ್ಕೆ ಈಗಾಗಲೇ ನೀಡುತ್ತಿರುವ ಶಸ್ತ್ರಾಸ್ತ್ರ ಸಹಾಯವು ಮತ್ತೂ ಹೆಚ್ಚುವುದು. ಭಾರತದ ಮೇಲೆ ಪಾಕಿಸ್ತಾನ ಆಕ್ರಮಣ ಮಾಡುವುದಂಬ ಭಯವಿಲ್ಲವಾದರೂ ಅವಿವೇಕಿ ಇಲ್ಲವೇ ಉನ್ಮತ್ತ ಮಾಡದಿರುವುದೇನು?

೧೯೩೪ರಲ್ಲಿ ಬ್ರಿಟನ್ನಿನ ಪ್ರಧಾನ ಮಂತ್ರಿಯಾಗಿದ್ದ ವಿನ್ಸ್‌ಟನ್ ಚರ್ಚಿಲ್ಲರು ಬೇರಿಸ್ಟರ್ ಜಯಕರರೊಡನೆ ಅಂದಿದ್ದರು ಸ್ವಾತಂತ್ರ್ಯಪ್ರಾಪ್ತಿಯಾದ ನಂತರ ತನ್ನ ನೆರೆಯ ರಾಷ್ಟ್ರ ಒಂದರೊಡನೆ ಭಾರತವು ಹೋರಾಡುತ್ತ ಇರಬೇಕಾಗುವುದು ಎಂದು ಅಂತಹ ನೆರೆಯ ರಾಷ್ಟ್ರಯಾವುದು ಎಂದವರನ್ನು ಪ್ರಶ್ನಿಸಿದಾಗ, ಅವರು ಹೆಚ್ಚುಗೇನನ್ನೂ ಹೇಳದೆ, "ಶ್ರೀ ಅಟ್ಲಿಯವರು ಗದ್ದುಗೆಯೇರಿದ ನಂತರ ಭಾರತವು ಸ್ವತಂತ್ರವಾಗುವುದು. ಅಲ್ಲದೇ ಈ ಹೋರಾಡುವ ಸಮಸ್ಯೆಯಾದರೂ ಆ ಸಮಯದಲ್ಲಿಯೇ ಉದ್ಭವಿಸುವುದು" ಎಂದು ಮಾತ್ರ ನುಡಿಗಿದ್ದರು. ಮುಂದೆ ಬೇರಿಸ್ಟರ್ ಜಯಕರರು ಈ ವಿಚಾರವನ್ನು ಮಹಮ್ಮದಾಲಿ ಜಿನ್ನ ಮತ್ತು ಜಫರುಲ್ಲಾ ಖಾನರೊಡನೆ ಪ್ರಸ್ತಾಪಿಸಿದಾಗ "ಇದು ಶುದ್ಧ ಮೂರ್ಖತೆಯ ಪ್ರದರ್ಶನ"ವೆಂದವರಿಬ್ಬರೂ ಉದ್ಗರಿಸಿದರು.

ಶ್ರೀ ಚರ್ಚಿಲ್ಲರು ನುಡಿದಂತೆ ೧೩ ವರ್ಷಗಳ ನಂತರ ಅಟ್ಲಿಯವರು ಬ್ರಿಟನ್ನಿನ ಪ್ರಧಾನ ಮಂತ್ರಿಯಾದರು; ಅದೇ ಸಮಯದಲ್ಲಿ ಭಾರತವು ಸ್ವಾತಂತ್ರ್ಯ ಪಡೆಯಿತು. ಜತೆಗೆ ಚರ್ಚಿಲ್ಲರು ಸೂಚ್ಯವಾಗಿ ತಿಳಿಸಿದ್ದ ಭಾರತದ ನೆರೆಯ ರಾಷ್ಟ್ರವು ಪಾಕಿಸ್ತಾನವೆಂಬ ಹೆಸರಿನಿಂದ ಹೊಸತಾಗಿ ರೂಪುಗೊಂಡಿತು. ಅಂದಿನಿಂದಲೂ ಭಾರತ-ಪಾಕಿಸ್ತಾನಗಳ ನಡುವೆ ಚಿಕ್ಕ ಪುಟ್ಟ ವಾದ ವಿವಾದಗಳು ಏಳುತ್ತ ಬಂದಿವೆ, ಬರುತ್ತಿವೆ. ಆದರೆ, ಇತ್ತೀಚೆಗಿನ ದಿನಗಳಲ್ಲಿ ಇವೆರಡರ ಮೈಮನಸ್ಯವು ಪರಮಾವಧಿಗೇರಿದೆ; ಇದು ಇನ್ನೂ ಮುಂದುವರಿಯುವ ಸೂಚನೆಗಳೇ ದೃಗ್ಗೋಚರವಾಗುತ್ತಿವೆಯಲ್ಲದೇ ಪಾಕ್ ಅಧ್ಯಕ್ಷ ಅಯೂಬ ಖಾನರ ಅಮೆರಿಕೆಯ ಸಂಚಾರ, ಅಲ್ಲಿ ಉಭಯ ಅಧ್ಯಕ್ಷರ ಮಾತುಕತೆ ನೊದಲಾದುವುಗಳು ಈ ಭೀತಿಯನ್ನೇ ಮತ್ತಷ್ಟು ಹೆಚ್ಚಿಸಲು ಕಾರಣವಾಗುವಂತಿದೆ.

ಅಮೇರಿಕನ್ ಅಧ್ಯಕ್ಷ ಕೆನ್ನೆಡಿ ಹಾಗೂ ಪಾಕ್ ರಾಷ್ಟ್ರಪತಿ ಅಯೂಬರ ನಡುವೆ ನಡೆದ ಮಾತುಕತೆಗಳ ಸಂಪೂರ್ಣ ವಿವರವು ತಿಳಿದುಬಂದಿಲ್ಲವಾದರೂ ಅಯೂಬರು ತನ್ನ ದೇಶಕ್ಕೆ ಹಿತವಾದ, ಭಾರತಕ್ಕೆ ವಿರೋಧಿಯಾಗುವ ವಿಚಾರಗಳನ್ನು ಮುಂದಿಟ್ಟಿರಬೇಕೆಂಬುದು ಖಂಡಿತವೆ ಅಯೂಬ ಖಾನರ ಮನಸ್ಸಿನಲ್ಲಿ ಕಳವಳವೆದ್ದಿರುವುದಕ್ಕೆ ಮುಖ್ಯವಾದ ಕಾರಣಗಳು ಎರಡು ಮೊದಲನೆಯದಾಗಿ ಪಾಕಿಸ್ತಾನವು ಬೇರೆ ಬೇರೆ ಸೈನಿಕ ಒಡಂಬಡಿಕೆಗಳಲ್ಲಿ ಸೇರಿಕೊಂಡಿರುವುದಾದರೂ ತನ್ನ ಸೈನಿಕ ಶಕ್ತಿ ಪರ್ಯಾಪ್ತವಿಲ್ಲವೆಂಬ ಮನೋಭಾವನೆ ಮತ್ತು ಎರಡನೆಯದಾಗಿ ಅಮೆರಿಕೆಯಿಂದ ಭಾರತಕ್ಕೆ ಸೈನಿಕಸಹಾಯ ದೊರೆಯುತ್ತಿದೆಯೆಂಬುದು ಆದರೆ, ಅಮೆರಿಕದಿಂದ ಭಾರತಕ್ಕೆ ದೊರೆತಿರುವ ಸೈನಿಕ ಸಹಾಯದ ರೀತಿಯನ್ನು ಅಯೂಬರು ಅರ್ಥಮಾಡಿಕೊಂಡಂತಿಲ್ಲ ಅಮೆರಿಕೆಯಿಂದ ಭಾರತವು ಹಲವಾರು ನವೀನ, ಮಾದರಿಯ ರಣಸಜ್ಜಿಕೆಗಳನ್ನು ತರಿಸಿಕೊಂಡಿದೆ ನಿಜವೇ. ಭಾರತದಲ್ಲಿರುವ ನೆಲ ಜಲ ವಾಯು ಸೇನೆಗಳಲ್ಲಿ ಬೆಲೆ ತೆರದೆ ತಂದ ಯಾವುದೇ ಸಾಧನಗಳಿಲ್ಲ; ಇದ್ದರೂ ಅವು ಥರ್ಡ್‌ರ್ಥವಾಗಿ ದೊರೆತಿರುವುವುಗಳು ಹೀಗಿರುವಾಗ ಭಾರತವು ೬೦೦ ಟೇಂಕರುಗಳನ್ನು ಅಮೆರಿಕದಿಂದ ಕೊಂಡುಕೊಂಡಿದೆ. ಅಮೆರಿಕೆಯು ಭಾರತಕ್ಕೆ ಸೈನ್ಯ ಸಹಾಯ ನೀಡುತ್ತಿದೆ, ಪಾಕಿಸ್ತಾನ—ಭಾರತದ ಗಡಿಯಲ್ಲಿ ಭಾರತವು ತನ್ನ ಸೇನೆಯ ಮುಕ್ಕಾಲಂಶವನ್ನು ಇರಿಸಿದೆ—ಎಂದು ಮುಂತಾಗಿ ಖಾರಿಕೆಯ ಮಾತುಗಳನ್ನು ಉದ್ಗರಿಸುತ್ತಿರುವುದು ಶೋಚನೀಯವೆನ್ನಬೇಕು.

ಅಯೂಬಖಾನರಿಗೆ ಅಮೆರಿಕೆಯ ಸಂರಕ್ಷಣಾ ಮಂತ್ರಿಗಳುತಟಸ್ಥ ರಾಷ್ಟ್ರಗಳಿಗೆ ಸೈನ್ಯ ಸಹಾಯವನ್ನು ನೀಡಲು ಅಮೆರಿಕೆಯು ಸಂದು ಬರುತ್ತಿದೆಯೆಂದು ಹೇಳಿ, ಭಾರತವು ಸೈನಿಕ ಸಹಾಯವನ್ನು ಯಾಚಿಸಿಲ್ಲವೆಂಬುದನ್ನೂ ಸಮಯ ಸಮಯದಲ್ಲಿ ಪ್ರಚಲಿತ ಮೌಲ್ಯದಲ್ಲಿ ಭಾರತವು ಕೆಲವೊಂದು ಶಸ್ತ್ರಾಸ್ತ್ರಗಳನ್ನು ಕೊಂಡುಕೊಂಡಿದೆಯೆಂಬುದನ್ನೂ ಇಂದಿನ ಪರಿಸ್ಥಿತಿಯಲ್ಲಿ ಭಾರತಕ್ಕೆ ಸೈನಿಕ ಸಹಾಯ ನೀಡುವ ವಿಚಾರವೇ ಇಲ್ಲವೆಂಬುದನ್ನೂ ಸ್ಪಷ್ಟಪಡಿಸಿದ್ದಾರೆ. ಇದಕ್ಕಾಗಿ ಮಂತ್ರಿ ಮೈಕನಾಮಾದರನ್ನು ಒಪ್ಪಿನಂದಿಸಬೇಕಾಗಿದೆ

ಭಾರತಕ್ಕೆ ಅಮೆರಿಕೆಯಿಂದ ಸೈನಿಕ ಸಹಾಯ ಬೇಕೆಂದಿದ್ದರೆ, ಅದೆಂದೋ ದೊರೆಯುತ್ತಿತ್ತು. ಅಲ್ಲಿನ ಹಿಂದಿನ ಅಧ್ಯಕ್ಷ ಐಸನ್ ಹಾವರರು ತನ್ನ ಕಾಲಾವಧಿಯಲ್ಲಿ ಹಲವಾರು ಬಾರಿ ಇಂತಹ ಸಹಾಯ ನೀಡಲು ತಮ್ಮ ತೀವ್ರೇಚ್ಛೆಯನ್ನು ವ್ಯಕ್ತಪಡಿಸಿದ್ದರು. ಆದರೆ, ಸೈನಿಕ ಸಹಾಯದಿಂದ ಪ್ರಪಂಚದ ಯಾವ ಭಾಗದಲ್ಲೇ ಆಗಲಿ, ಯಾವುದೊಂದು ಸಮಸ್ಯೆಯೂ ಪರಿಹರಿಸಲ್ಪಡುವುದಿಲ್ಲ ಎಂಬ ದೃಢ ನಿರ್ಧಾರದಿಂದ ಭಾರತವು ಅಂತಹ ಕೊಡುಗೆಯನ್ನು ತಿರಸ್ಕರಿಸಿತ್ತು. ದೇಶವು ಸಬಲವೆನಿಸ ಬೇಕಾದರೆ, ಅಭಿವೃದ್ಧಿಯೋಜನೆಗಳು ಮುಖ್ಯ ಹೊರತು ಸೈನ್ಯ ಸಂಗ್ರಹವಲ್ಲವೆಂಬುದೇ ಭಾರತದ ಆಚಲ ವಿಶ್ವಾಸವಿದ ಭಾರತಕ್ಕೆ ತನ್ನ ನೆರೆಯ ರಾಜ್ಯ ಪಾಕಿಸ್ತಾನಕ್ಕೆ ಸ್ವರಕ್ಷಣೆಗಾಗಿ ಅಮೆರಿಕವು ಸಹಾಯ ಮಾಡುವುದರಿಂದ ಕಸಿವಿಸಿಯಿಲ್ಲ ಅಂತಹ ಮಾದರಿಯ ಸಹಾಯವನ್ನದು ಸ್ವಾಗತಿಸುತ್ತದೆ. ಅಮೆರಿಕೆಯಾದರೂ ಭಾರತವನ್ನು ಹೆದರಿಸುವುದಕ್ಕಾಗಿ ಶಸ್ತ್ರಾಸ್ತ್ರಗಳನ್ನು ಪಾಕಿಸ್ತಾನಕ್ಕೆ ನೀಡುತ್ತಿದೆಯೆಂದೂ ಭಾರತದ ಅಭಿಪ್ರಾಯವಲ್ಲ. ಆದರೆ, ಅವಿವೇಕಿಗಳ ಕೈಯಲ್ಲಿ ಶಸ್ತ್ರಾಸ್ತ್ರಗಳನ್ನು ಕೊಡುವುದು ಮಾರಿಗೇ ಆಗಲಿ, ಅಪಾಯಕಾರಿಯೆಂಬುದನ್ನು ಎಲ್ಲರೂ ಒಪ್ಪಬೇಕಾದುದೇ

ಅಯೂಬ ಖಾನರು ಅಮೆರಿಕೆಯಿಂದ ಕೇಳಿದ ಶಸ್ತ್ರಾಸ್ತ್ರಗಳಾದರೂ ಯಾವುವು? ಅವರೇನೂ ಅಧಿಕ ಪ್ರಮಾಣದಲ್ಲಿ ಸೈನಿಕ ಸಹಾಯ ಬೇಡಲಿಲ್ಲ. ಆದರೆ, ತಮ್ಮ ಸೈನಿಕ ಬಲವನ್ನು ಹೆಚ್ಚಿಸುವ ಕೆಲವೊಂದು. ಶಸ್ತ್ರಾಸ್ತ್ರಗಳನ್ನು ಅವರು ಬಯಸಿದ್ದಾರೆ 'ಸೈಡ್ ವಿಂಡರ್ಸ್'ಗಳನ್ನು ಅಮೆರಿಕೆಯು ಪಾಕಿಸ್ತಾನಕ್ಕೆ ನೀಡಿದೆ

(೨ನೇ ಪುಟ ನೋಡಿರಿ)



ಚಂದ್ರನ ಸಮತಳದಲ್ಲಿ ಸಂಚರಿಸುವ ಗಗನಯಾತ್ರಿಗಳಿಗೆ ಅನುಕೂಲ ಉಡುಗೆ ತೊಡುಗೆಗಳನ್ನು ತೊಟ್ಟ ಒರ್ವ ವೈಮಾನಿಕ.

ESTD. 1921

NAVAYUGA
KANNADA WEEKLY,
UDIPI.

Founder:
Late Sri A. B. Shetty
Former Minister for Public Health, Govt. of Madras & Govt. of Mysore.

ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದ ಬಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರತಿ ಗುರುವಾರ ಉದುಸಿಯಿಂದ ಹೊರಡುವ ರಾಷ್ಟ್ರೀಯ ವಾರಪತ್ರಿಕೆ

ಸ್ಥಾಪನೆ: ೧೯೩೧.

ಗೌರವ ಸಂಪಾದಕರು:
ಎಸ್. ಗೋಪೀಚಂದ ರಾವ್, ವಿದ್ವಾನ್.
ಬಿ. ಶಾಮರಾಯ ಶೆಟ್ಟಿ, ಬಿ. ಎ., ಎಲ್. ಟಿ.

ಸಂಚಾಲಕ ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ.

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-50
ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3-50

ಹೆಚ್ಚಿನ ವಿವರಗಳಿಗೆ ವ್ಯವಹರಿಸಿರಿ.

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾನ ಮಿರ್ಜೊ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವಸೌಕರ್ಯವಿರುವುದು.

ಧಾರಾವಾಹಿ ಕಾದಂಬರಿ

ಯಮುನ ನೆರಳು

ಮೂಲಲೇಖಕರು: ಶ್ರೀ ಎಂ. ಎಲ್. ಪಾಂಡೇಯ.
ಅನುವಾದಕರು: ಶ್ರೀ ಎಸ್. ಎಂ. ಶೆಟ್ಟಿ, ಶಿವಮುಂಜೆಪರಾರಿ.
(ಕಳೆದ ಸಂಚಿಕೆಯಿಂದ)

— ೧೬ —

ಮೋಟಾರಿನಿಂದ ಮೂಯೂವತಿಯನ್ನು ಕೆಳಗಿಳಿಸುವಾಗ ಅವಳು ಬಹಳ ಹೆದರಿದ್ದರೂ ತನ್ನ ಸಾಹಸವನ್ನೆಲ್ಲಾ ಒಟ್ಟುಗೂಡಿಸಿ ಹೋರಾಡಲು ಸಿದ್ಧಳಾದಳು. ಅವಳನ್ನು ಕಾರಿನಲ್ಲಿ ಕುಳ್ಳಿರಿಸಿ ಯಮುನರಿಗೆ ಕರೆತರಲಾಯಿತು. ಈ ತೋಟವು ದುರ್ಗದಂತಿದ್ದು ಇದರಲ್ಲಿ ಸಾವಿರಾರು ಕೋಣೆಗಳು ಇದ್ದವು. ವರಾಂಡದಲ್ಲಿ ದೊಡ್ಡ ದೊಡ್ಡ ಮರಗಳು ಸಾಕಲ್ಪಟ್ಟಿದ್ದವು. ಪ್ರತಿಯೊಂದು ಕೋಣೆಯ ಕಿಟಕಿಯ ಬಳಿ ಮರದ ಪೆಟ್ಟಿಗೆಗಳಲ್ಲಿ ಗಿಡಗಳನ್ನು ಸಾಕಲಾಗಿತ್ತು. ಆ ಗಿಡಗಳ ಎಲೆಗಳು ಒಬ್ಬ ಮನುಷ್ಯನನ್ನು ಪ್ರಯೋಸವಿಲ್ಲದೆ ಕಟ್ಟಲು ಸಾಧ್ಯವಾಗುವಷ್ಟು ದೊಡ್ಡದಾಗಿದ್ದುವು. ನಡುವಿನ ಕೋಣೆಯಲ್ಲಿ ಒಂದು ಮೇಜು ಇತ್ತು. ಅದರ ಉದ್ದಳತೆಯು ಸಾಧಾರಣ ಇಪ್ಪತ್ತು ಗಜಕ್ಕಿಂತ ಕಡಿಮೆಯಿರಲಿಲ್ಲ. ಮತ್ತೊಂದು ಕೋಣೆಯಲ್ಲಿ ವಿಭಿನ್ನಾ ಕೃತಿಯ ಸಣ್ಣ ಮೇಜುಗಳಿದ್ದುವು. ಆದರೆ ಇಷ್ಟು ದೊಡ್ಡ ಭವನದಲ್ಲಿ ಎಲ್ಲಿಯೂ ಮಾನವನ ಪತ್ತೆ ಇರಲಿಲ್ಲ ಈ ಮನೆಯ ಮಧ್ಯದಲ್ಲಿ ಒಂದು 'ಕುಂಜರವೇಟರಿ' ಇತ್ತು. ಅದರ ನಾಲ್ಕೂ ಕಡೆ ಹಾಗೂ ಮೇಲೆಯೂ ಗಾಜಿನಿಂದ ಮುಚ್ಚಲ್ಪಟ್ಟಿತ್ತು. ಒಳ ಹೋಗಲು ಒಂದೇ ಮಾರ್ಗ.

ಈ ದುಷ್ಟರು ಮೂಯೂವತಿಯನ್ನು ತಂದು ಒಂದು ಮೇಜಿನ ಮೇಲೆ ಕುಳ್ಳಿರಿಸಿದರು. ಅವರಲ್ಲೊಬ್ಬನು "ರಾಜ ಕುಮಾರಿ, ನೋಡಿದಿಯೇನು? ನಿನ್ನ ಅಂಗರಕ್ಷಕರೂ ನಿನ್ನ ರಕ್ಷಣೆಯನ್ನು ಮಾಡಲಾರದಾದರು. ಕೊನೆಗೂ ನಮ್ಮ ಕೈಗೇನೇ ಸಿಕ್ಕಿ ಬಿದ್ದಿ....."

"ಇದರಿಂದ ನಿನಗೇನು? ನಾನು ನಿನಗೆ ಏನು ತೊಂದರೆ ಕೊಟ್ಟಿದ್ದೇನೆ?" ಎಂದಳು ಮೂಯೂ.

ಹಾಂ, ಹಾಂ, ತೊಂದರೆಯ ವಿಷಯ ಕೇಳುತಿದ್ದಿಯೇನು? ನಮ್ಮ ಪೂರಾ ಉಪಾಯಗಳಿಗೆ ತಣ್ಣೀರೆರಚಿದೆ. ಇನ್ನೇನು ತೊಂದರೆ ಕೊಡಬೇಕಾಗಿದೆ?"

ಅರೇ, ಇವಳು ಜ್ವಾಲಾಮುಖಿ" ಎಂದು ನಗೆಯಾಡಿದ ಇನ್ನೊಬ್ಬ.

"ಅಂತೂ ನಾನು ನಿಮ್ಮ ಯಾವ ಯೂ ವ್ಯವಹಾರಗಳನ್ನು ಹಾಳು ಮಾಡಿದೆನೆಂಬುದು ತಿಳಿಸಿರಲ್ಲ" ಎಂದಳು ಮೂಯೂ.

"ಈಗ ನಾವು ಹೆಚ್ಚು ಮಾತನಾಡುವುದಿಲ್ಲ. ಯಮುನಾವತಿಯ ಮರಣಕ್ಕೆ ಕಾರಣರೇ ತಾವು. ಆ ಮದುವೆಯು ನಿಮ್ಮ ಹೆಸರಿನಲ್ಲಿ ನಡೆಯುತಿತ್ತು. ಇದರಿಂದಾಗಿ ನಮಗೆ ಒಂದು ದೊಡ್ಡ ಸಫಲತೆ ಸಿಗುವುದರಲ್ಲಿತ್ತು," ಎಂದ ಮೊದಲನೆಯ ವ್ಯಕ್ತಿ.

"ನಿಮ್ಮ ಸಫಲತೆ ಸಮೂಹದಲ್ಲಿ ಬಹಳ ಸ್ಥಾನ ಪಡೆಯುತಿತ್ತು. ಇನ್ನುಳಿದುದು ಯಮುನಾಳ ಮೃತ್ಯುವಿನ ವಿಷಯ. ಅದರ ದುಃಖ ನನಗಾಗ ಬೇಕೋ ನಿಮಗೋ ನಿಮ್ಮಿಂದಾಗಿ ಅವಳ ಕೊಲೆಯಾದರೂ ಅದರ ಬಗ್ಗೆ ನಿಮಗೆ ಸ್ವಲ್ಪವೂ ನಾಚಿಕೆಯೂ ಗವುದಿಲ್ಲ"

"ಒಳ್ಳೆದು, ಈ ಹಳೇ ಮಾತುಗಳನ್ನೆಲ್ಲಾ ಬಿಡು ನಮ್ಮ ಎರಡು ಪ್ರಶ್ನೆಗಳನ್ನು ನೀನು ಉತ್ತರಿಸು."

"ಅವು ಉತ್ತರ ಕೊಡುವಂತಿದ್ದರೆ ಖಂಡಿತ ಉತ್ತರ ಕೊಡುತ್ತೇನೆ" ದೃಢತೆಯಿಂದ ಹೇಳಿದಳು ಮೂಯೂವತಿ.

"ಒಳ್ಳೆದು ಮಹೇಂದ್ರಗಢದಲ್ಲಿ ನಿನಗೆ ಏನು ಸಂಬಂಧ? ಅಲ್ಲಿ ವಾಸಿಸುವವನಾರು?

"ಅದು ನನಗೇನೂ ತಿಳಿಯದು. ಅಲ್ಲಿ ನನಗೂ ಅವರಿಗೂ ಯಾವ ಸಂಬಂಧವೂ ಇಲ್ಲ. ಆದರೆ ಅವರು ಓರ್ವ ಒಳ್ಳೆಯ ಚಿತ್ರಗಾರರು. ಹಾಗೂ ನಾನು ನನ್ನ ಚಿತ್ರಗಳನ್ನು ಅವರಿಂದ ಬರೆಯಿಸಿದ್ದೇನೆ"

"ಫಲಕದಾರಿ ಸಿಂಹರು ನಿನ್ನನ್ನು ತುಂಬಾ ಪ್ರೀತಿಸುತ್ತಾರೆ. ನೀನು ಅವರನ್ನು ವಿವಾಹವಾಗಬೇಕು."

"ಅಸಂಭವ. ಅದೆಂದಿಗೂ ಸಾಧ್ಯವಿಲ್ಲ"

"ನೀನು ನಮ್ಮ ಎರಡೂ ಪ್ರಶ್ನೆಗಳಿಗೆ ಉತ್ತರ ಸರಿಯಾಗಿ ಕೊಡಲಿಲ್ಲ. ಇದರಿಂದ ನೀನು ಆ ಚಿತ್ರಕಾರನನ್ನು ಪ್ರೀತಿಸುವಿಯೆಂದು ಭಾಸವಾಗುತ್ತನೆ. ಆದುದರಿಂದಲೇ ಅವನು ನಿನ್ನ ಅಂಗರಕ್ಷಕರೊಂದಿಗೆ ಹೋಗಿ ಫಲಕದಾರಿಯಿಂದ ಆ ಕಾಗದವನ್ನು ಜಬರ್‌ದಸ್ತಿಯಿಂದ ಪಡಕೊಂಡನು. ಒಳ್ಳೆದು, ನೀನು ನಮ್ಮ ವಶದಲ್ಲಿರುವಿಯೆಂದು ನೆನಪಿನಲ್ಲಿಡು. ನೀನು ಫಲಕದಾರಿಯನ್ನು ಮದುವೆಯಾಗಬೇಕಾಗುವುದು."

"ನಾನು ನಿಮ್ಮ ಬೆದರಿಕೆಗೆ ಹೆದರಲಾರೆ. ವಿವಾಹವಾಗುವುದು ನನ್ನಿಚ್ಛೆ. ನನಗೆ ಫಲಕದಾರಿಯಂತಹನ ಪತ್ನಿಯಾಗಿ ಜೀವಿಸಲು ಸ್ವಲ್ಪವೂ ಇಚ್ಛೆಯಿಲ್ಲ."

"ಹೊಂ. ಫಲಕದಾರಿಯವರೇ, ನೀವೇ ಅವಳನ್ನು ಸಮಜಾಯಿಸಿರಿ" ಎಂದು ಮೊದಲನೆಯವ ನುಡಿದ ಕೂಡಲೇ ಎರಡನೆಯವನು ತನ್ನ ಮುಖವಾಡವನ್ನು ತೆರೆದನು. ಅವನೇ ಫಲಕದಾರಿ. ಅವನನ್ನು ನೋಡುತ್ತಲೇ ಮೂಯೂವತಿಯ ಹುಬ್ಬು ಜೋಡಿತು. ಹಣೆಯಲ್ಲಿ ನೆರಿಗೆಗಳು ಬಿದ್ದವು. ಕೊಂಚ ಭಯವೂ ಆವರಿಸಿತು. ಫಲಕದಾರಿಯು ಏನೋ ಹೇಳುವವನಿದ್ದ, ಅಷ್ಟರಲ್ಲಿ ಕುಂಟ ಜಮುನಾ ಪ್ರಸಾದನು ಅಲ್ಲಿಗೆ ಬಂದನು. ಅವನೂ ತುಂಬಾ ಹೆದರಿದ್ದನು. ಅವನನ್ನು ಕಂಡ ಇತರರ ಮುಖದಲ್ಲಿ ಭಯದ ಚಿಹ್ನೆಗಳು ಕಂಡುಬಂದವು.

"ದಲಿತಸಿಂಹ, ತಾವು ತಮ್ಮ ಅನುಯಾಯಿಗಳೊಡನೆ ಇಲ್ಲಿಂದ ಗುಪ್ತಮಾರ್ಗವಾಗಿ ಬಹಳ ಬೇಗ ಹೊರಟು ಹೋಗಿರಿ. ಪೋಲೀಸರು ಮುತ್ತಿಗೆ ಹಾಕಿದ್ದಾರೆ' ಎಂದ ಜಮುನಾ ಪ್ರಸಾದ.

"ಫಲಕದಾರಿ, ಮೂಯೂಳನ್ನು ದಕ್ಷಿಣದ ಗುಪ್ತ ಕೋಣೆಗೆ ಕರಕೊಂಡು ಹೋಗು' ಎಂದ ದಲಿತಸಿಂಹ. ಅವಳಿಗೆ ತಿಳಿಸು. ಕೇಳದಿದ್ದರೆ ಅವನನ್ನು ಮುಗಿಸಿ, ಸುರಂಗ ಮಾರ್ಗದಿಂದ ಓಡಿ ಬಾ ಎಂದ.

ಫಲಕದಾರಿಯು ಮೂಯೂಳನ್ನು ತನ್ನ ಬಾಹುಗಳಲ್ಲಿತ್ತಿಕೊಂಡುಒಂದು ಕಡೆಗೂ ದಲಿತಸಿಂಹ ಮೊದಲಾದವರು ಬೇರೊಂದು ಕಡೆಗೆ ಓಡಿದರು. ಸುರಂಗವನ್ನು ಪೋಲೀಸರು ಮುತ್ತಿದ್ದರು. ಅವರು ವಿವರಗಾಗಿ ಪುನಃ ಒಳಗೆ ಹಿಂತಿರುಗಿದರು.

ಇತ್ತ ಫಲಕದಾರಿಯು ಮೂಯೂಳನ್ನು ಒಂದು ಕೋಣೆಗೆ ಕೊಂಡು ಹೋಗಿ ನೆಲದ ಮೇಲೆ ಕುಳ್ಳಿರಿಸಿ "ನೋಡು ಮೂಯೂ, ನಿನ್ನ 'ನ'ಕಾರಾವೆಲ್ಲಾ ವ್ಯರ್ಥ.

"ಫಲಕದಾರೀ, ನೀನು ಸುಮ್ಮನೆ ಯಾಕೆ ತೊಂದರೆ ಕೊಡುತ್ತೀ? ಮೊದಲಿನಿಂದಲೂ ನಾನು ನಿನ್ನನ್ನು ಪ್ರೀತಿಸಿಲ್ಲ.

(೧೧ನೇ ಪುಟ ನೋಡಿ)

ಸ್ಥಾಪನೆ: 1924

ದಿ ಕರ್ಣಾಟಕ ಬೇಂಕ್ ಲಿಮಿಟೆಡ್

(ಶೆಡ್ಯೂಲ್ಡ್ ಬೇಂಕ್)

ರಿಜಿಸ್ಟರ್ಡ್ & ಹೆಡ್ ಆಫೀಸು: ಡೊಂಗರಕೇರಿ, ಮಂಗಳೂರು—3.

ಈ ಕೆಳಗಿನ ಏರಿಸಿದ ಬಡ್ಡಿದರಗಳಲ್ಲಿ ಠೇವಣಾತಿಗಳನ್ನು ಸ್ವೀಕರಿಸಲಾಗುವುದು.

ಒಂದರಿಂದ ಎರಡು ತಿಂಗಳುಗಳ ವರೆಗೆ	.... ಸಾ|| ಸೇಕಡಾ	3-75	ನ.ಪೈಸೆ
ಮೂರರಿಂದ ಐದು ತಿಂಗಳುಗಳ ವರೆಗೆ	.... ,,	4-25	,,
ಆರು ತಿಂಗಳುಗಳಿಂದ 12 ತಿಂಗಳುಗಳ ವರೆಗೆ....	,,	4-50	,,
12 ತಿಂಗಳು ಮಿಕ್ಕೆ 24 ತಿಂಗಳುಗಳ ವರೆಗೆ	,,	4-75	,,
24 ತಿಂಗಳು ಮಿಕ್ಕೆ 48 ತಿಂಗಳುಗಳ ವರೆಗೆ	.	5-00	,,
48 ತಿಂಗಳುಗಳಿಗೆ ಮಿಕ್ಕೆ	.... ,,	5-25	,,

ಸೇವಿಂಗ್ಸ್ ಬ್ಯಾಂಕ್ ಬಡ್ಡಿ ದರವನ್ನು
ಸಾ. ಸೇಕಡ 2½% ರಿಂದ 3¼%ಗೆ ಏರಿಸಲಾಗಿದೆ.

THE KARNATAKA BANK LIMITED.

ಮಹಿಳಾ ಮಂಡಳ:

ಬಾಲಮನೋವಿಜ್ಞಾನ

ಮಕ್ಕಳ ಮನಸ್ಸನ್ನು ತಿಳಿದುಕೊಂಡು ಅವುಗಳಲ್ಲಿ ಏರುಪೇರುಗಳಿದ್ದರೆ ಅದನ್ನು ಸರಿಗಳಿಸುವುದು ತಾಯಂದಿರ ಪರಮ ಕರ್ತವ್ಯ. ಇದನ್ನು ಅವರು ಎಷ್ಟರ ಮಟ್ಟಿಗೆ ನಿರ್ವಹಿಸುತ್ತಾರೆಯೋ ಅಷ್ಟು ಪಾಲು ಮಕ್ಕಳು ಒಳ್ಳೆಯರಾಗುತ್ತಾರೆ.

"ರಂಜನೆ", ಬೆಂಗಳೂರು

ಮಾನವನ ನಿತ್ಯ ಜೀವನದಲ್ಲಿ ಆತನ ಪ್ರತಿಯೊಂದು ಸೂಕ್ಷ್ಮ ನಡತೆಯೂ ಆತನ ಗುಣವನ್ನು ಬಿಟ್ಟು ಕೊಡುತ್ತದೆ. ಕೋಪಗೊಂಡ ಜನರು ಸಾಧಾರಣವಾಗಿ ಬುದ್ಧಿ ತಿಳಿಯದ ಮಕ್ಕಳಂತೆ ಆಡುವರು. ಕೆಲವರು ಶೀಘ್ರ ಕೋಪಿಗಳಿದ್ದು ತಮ್ಮ ನಡತೆಯ ಬಗ್ಗೆ ಅವರು ಸಂಪೂರ್ಣ ತಿಳುವಳಿಕೆಯಿಲ್ಲದೆ ಅವರ ಬಗ್ಗೆ ಅಡುವ ಪ್ರತಿಯೊಂದು ಕೆಟ್ಟ ಯೂ ಒಳ್ಳೆಯ ವಿಷಯಗಳೆಲ್ಲವನ್ನೂ ಹಣೆ ಕುಗ್ಗಿಸಿ ಆಲಿಸುವರು. ಅಂತಹವರ ಜೀವನದಲ್ಲಿ ಕಾಲಕ್ರಮೇಣ ಬಹು ಕಷ್ಟಗಳು, ಅನುಮಾನ ಸಂಬಂಧದ ಘಟನೆಗಳೂ ಉದ್ಭವಿಸುವುದಲ್ಲದೇ ಸಮಾಜದಲ್ಲಿ ಅವರು ಹೆಸರು ಪಡೆದು ನಿಲ್ಲಲಾರರಾಗುತ್ತಾರೆ. ಶಾಂತ ಮನಸ್ಸಿನವರು ಜೀವನದ ಆಗು ಹೋಗುಗಳನ್ನು ಸುಲಭವಾಗಿ ತೆಗೆದುಕೊಳ್ಳುವವರಿದ್ದು ತಮ್ಮ ಮನಸ್ಸನ್ನು ಸಂಪೂರ್ಣ ಹತೋಟಿಯಲ್ಲಿಟ್ಟುಕೊಳ್ಳಲು ಸಮರ್ಥರಿರುತ್ತಾರೆ. ಅಂತಹವರು ಮೇಧಾವಿಗಳೇ ಅಲ್ಲದೇ ಇತರರಿಗೆ ಮಾರ್ಗದರ್ಶಕರಾಗಲು ಪೂರ್ಣ ಅರ್ಹರಾಗಿರುತ್ತಾರೆ.

ಮಕ್ಕಳಲ್ಲಿ ಶೀಘ್ರ ಕೋಪ, ಅವಿಚಾರ ಬುದ್ಧಿ ಇವುಗಳನ್ನು ಸುಲಭವಾಗಿ ಕಂಡು ಹಿಡಿಯಬಹುದಾಗಿದೆ. ಶ್ರೀಘ್ರ ಕೋಪಿಗಳು ಕಾಲಕ್ರಮೇಣ ಮುಂದೆ ಬರಲಾರರು ಕಾರಣ ಜನ ಅವರ ಬಗ್ಗೆ ರೋಸಿದವರೂ, ಅತೃಪ್ತರೂ, ಅವರನ್ನು ಕಂಡರೆ ದೂರ ಸರಿಯುವವರೂ ಆಗಿ ಸಮಾಜಕ್ಕೆ ಅವರ ಉಪಯೋಗ ಎಳ್ಳಷ್ಟೂ ಇಲ್ಲವಾಗುತ್ತದೆ. ಅಂತಲೇ ಹುಡುಗತನದಲ್ಲೇ ಮಕ್ಕಳಿಗೆ ಮನಸ್ಸನ್ನು ಅಂಕೆಯಲ್ಲಿಟ್ಟುಕೊಳ್ಳಲು ಅಭ್ಯಾಸಮಾಡಿಸಿ ಅವರಲ್ಲಿನ ಶೀಘ್ರ ಕೋಪ, ಅನ್ಯೇರಣೆ, ಅವಿಚಾರ ಶಕ್ತಿ ಇವುಗಳನ್ನು ತೊಡೆದು ಹಾಕಿ ನಾಡಿನ ಶ್ರೇಷ್ಠ ಜೀಗಳನ್ನಾಗಿ ಮಾಡುವುದು ಪ್ರತಿಯೊಬ್ಬ ತಾಯಿ ಹಾಗು ತಂದೆಯ ಗುರುತರವಾದ ಕರ್ತವ್ಯವಾಗಿದೆ.

ನಿಮ್ಮ ಮಕ್ಕಳನ್ನು ಅವರಿಗೇ ಅರಿಯದಂತೆ ಸೂಕ್ಷ್ಮವಾಗಿ ಗಮನಿಸಿ ತಮ್ಮನ್ನು ತೊಂದರೆ ಪಡಿಸಿದವರನ್ನು ಪ್ರತಿಯೂಗಿ ತೊಂದರೆಗೊಳಿಸದೆ ಸೌಮ್ಯರಾಗಿರುವರೇ? ಒಮ್ಮೆ ಹೊಡೆದಾಡಿ ಹೋದವನನ್ನು ನಿಮ್ಮ ಮಕ್ಕಳು ಮತ್ತೊಮ್ಮೆ ಕಂಡಾಗ ಹಿಂದಿನದನ್ನು ಮರೆತು ನಿಷ್ಕಪಟತನದಿಂದ ಗೆಳೆತನಕ್ಕೆ ನಿಡಿದಾಗಿ ಕೈಚಾಚುವರೇ? ಆಟೆ-ಪಾಟಗಳಲ್ಲಿ ಮುಂದುವರೆಯಲು ಆಶೆಯವರಿದ್ದರೂ ಗುಂಪಿನಲ್ಲಿ ನುಸುಳಿ ಹೋಗುವ ಆತುರ ಪಡದೇ, ಇತರರ ಗಮನ ಸೆಳೆಯದೇ ತನ್ನು ಸರಸಿಗಾಗಿ ಕಾದು ನಿಲ್ಲುವರೇ? ತಾವು ಆಸಕ್ತಿಯಿಂದ ತುಂಬಾತುರಿಯ ಕೆಲಸದಲ್ಲಿರುವಾಗ ಅಡ್ಡ ಮಾತಾಡುವ ಹಾಗು ಬರುವವರೊಡನೆ ಅಸಂಬದ್ಧವಾಗಿಯೂ, ಅಸಭ್ಯರಾಗಿಯೂ ವರ್ತಿಸದೆ ಸೌಮ್ಯವಾಗಿ ಉತ್ತರಿಸುವ, ಅಲ್ಲದೇ ಮನೆಯ ಕಷ್ಟಗಳನ್ನು ಪರಿಚಯಿಸ್ಥರೊಡನೆನೆಯೂ ಹೇಳಿಕೊಳ್ಳದಿರುವ ಅಭ್ಯಾಸ ನಿಮ್ಮ ಮಕ್ಕಳಲ್ಲಿ ಬೆಳೆದುಬಂದಿರುವುದೇ? ಅಂತಿದ್ದರೆ ನಿಮ್ಮ ಮಕ್ಕಳು ಪ್ರಗತಿಯ ಹಾದಿಯಲ್ಲೇ ಸಾಗ ತ್ತಿದ್ದಾರೆ ಅವರಿಗೆ ನಿಮ್ಮ ಬೆಂಬಲವಿರಲಿ.

ನಿಮ್ಮ ಮಕ್ಕಳು ಎಂದಾದರೂ ಅಪರೂಪವಾಗಿ ಕೋಪಗೊಳ್ಳುವರೊ? ಕೋಪವಿಳಿದ ನಂತರ ತಮ್ಮ ಆ ಕಾರ್ಯದ ಬಗ್ಗೆ ನಾಚಿಕೆಪಟ್ಟುಕೊಳ್ಳುವರೇ? ಅಲ್ಲದೇ ತಮ್ಮ ಆ ಕಷ್ಟಿಗೆ ಕ್ಷಮಾಪಣೆ ಕೇಳಿಕೊಳ್ಳುವರೇ? ಕ್ರಮೇಣ ಅವರ ಕೋಪಗೊಳ್ಳುವಿಕೆ ಕಡಿಮೆಯಾಗುತ್ತಿದೆಯೆ? ನಿಮ್ಮ ಮಕ್ಕಳೊಡನೆ ಸಾಮಾನ್ಯವಾಗಿ ಯಾರಾದರೂ ಜಗಳಕ್ಕೆ ಬಂದಾಗ ಅವರಲ್ಲಿ ಪ್ರತಿಯಾಗಿ ಹಾರಿಬೀಳದೆ ಜಗಳದಿಂದ ನುಸುಳಿಹೋಗುವವರಿದ್ದಾರೇನು? ಅಂತಿದ್ದರೆ ನಿಮ್ಮ ಮಕ್ಕಳಲ್ಲಿ ತಿದ್ದಬೇಕಾದ್ದು ಬಹು ಸ್ವಲ್ಪವಿದೆ. ಚಿಕ್ಕಂದಿನಲ್ಲಿಯೇ ಅವರ ಆ ತಪ್ಪುಗಳನ್ನು ತೋರಿಸಿಕೊಡುವುದೇ ಅಲ್ಲದೆ ಸಂದಿಗ್ಧ ಪರಿಸ್ಥಿಯಲ್ಲಿ ಎಂತಹ ದಾರಿಯಲ್ಲಿ ಹೋಗಬೇಕೆನ್ನುವುದನ್ನು ತಿಳಿ ಭಾಷೆಯಲ್ಲಿ ತಿಳಿಸುವುದೊಳ್ಳೆಯದು.

ಮಕ್ಕಳಿಗೆ ನಮ್ಮ ಅಭಿಪ್ರಾಯ ಕೊಡುವುದಕ್ಕೆ ಮೊದಲು, ಅವರ ತಪ್ಪುಗಳನ್ನು ಅವರಿಗೆ ತೋರಿಸಿಕೊಟ್ಟು ತಿದ್ದುವ ಮುಂಚೆ, ನಾವು ಆ ಪ್ರಶ್ನೆಗಳಿಗೆ ಉತ್ತರಿಸಿ ಸ್ವಯಂಪರೀಕ್ಷೆ ಮಾಡಿಕೊಳ್ಳುವುದು ಉತ್ತಮ. ಆ ಗುಣಗಳನ್ನೆಲ್ಲ ನಾವು ಪಡೆದಿರಬೇಕಲ್ಲದೆ ನಮ್ಮ ನಡೆ-ನುಡಿಗಳಲ್ಲೂ ಅಪ್ಪಿ-ತಪ್ಪಿಯಾದರೂ ಅಡ್ಡ ದಾರಿ ತುಳಿಯಬಾರದು. ಕಾರಣ ನಮ್ಮ ಮಕ್ಕಳು ಅವರು ಅನುಸರಿಸಲಿಕ್ಕಾಗಿ ನಮ್ಮ ನಡೆ-ನುಡಿಗಳನ್ನು ಅತಿ ಸೂಕ್ಷ್ಮವಾಗಿ ಗಮನಿಸುತ್ತಿರುತ್ತಾರೆ. ಇನ್ನೂ ಬೆಳೆಯಲಿರುವ ಅವರ ತಿಳಿ ಮೆದುಳಿನಲ್ಲಿ ನಮ್ಮ ನಡತೆಗಳು ಅಚ್ಚೊತ್ತಿದಂತಾಗಿ ಅವರಿಗೇ ತಿಳಿಯದಂತೆ ನಮ್ಮ ದಾರಿ ತುಳಿಯತೊಡಗುತ್ತಾರೆ.

ನೀವು ಯಾವಾಗಲೂ ಸೌಮ್ಯ ಮುಖದವರಿದ್ದು ನಿಮ್ಮ ಮಕ್ಕಳಿಗೆ ದಾರಿಗರಾಗಬೇಕು. ನೀವು ಜಗಳಗಳನ್ನು ದೂರವಿಡುವವರಿರಬೇಕು. ನಿಮಗಾಗದವರನ್ನು ಕಂಡಾಗ ಅವರೊಡನೆ ಕೆಲಸ ಮಾಡುವಾಗ ಆಗಬಹುದಾದ ಕಸಿ-ವಿಸಿಗಳನ್ನು ತಡೆಯುವವರೇ ಅಲ್ಲದೇ ಅವರೊಡನೆ ಅಸಹಕಾರತೆಯನ್ನು ತೋರದೆ ಸಹಕರಿಸಬೇಕು.

ನಿಮ್ಮ ಮಿತ್ರರ ಅಭಿಪ್ರಾಯಗಳನ್ನು ಶಾಂತವಾಗಿ ಕೇಳುವವರೂ, ಅವರೊಡನೆ ಸಹಕರಿಸಲಿಕ್ಕಾಗಿ ನೀವೇ ಮುಂದೆ ಬರುವವರೂ ಇದ್ದು ನಿಮ್ಮ ಬಗ್ಗೆ ಬರುವ ಕಟು ವಿಮರ್ಶೆಯನ್ನು ರೋಸಗೊಳ್ಳದಲೇ ತೆಗೆದುಕೊಳ್ಳಬೇಕು. ಏನನ್ನಾದರೂ ಕಳೆದು ಕೊಂಡಾಗ ಅದರ ಬಗ್ಗೆ ಹೆಚ್ಚು ಯೋಚಿಸುವುದಾಗಲಿ ದುಃಖಿಸುವುದಾಗಲಿ ಕೂಡದು. ನಿಮಗಾಗದವರು ಸಂತೋಷದಲ್ಲಿದ್ದಾಗ, ನಿಮ್ಮ ಅಭಿಪ್ರಾಯಗಳನ್ನು ಇತರರು ಮನ್ನಿಸದಿದ್ದಾಗ ನೀವು ನಿಮ್ಮ ಮನಸ್ಸಿನಲ್ಲಾಗಲಿ—ಹೊರಗಡೆಯಾಗಲಿ ಮುಖ ಸಪ್ಪಗೆ ಮಾಡಿಕೊಳ್ಳುವುದಾಗಲೀ, ಇಲ್ಲವೇ ಯಾವುದೇ ವಿಧವಾದ ಕೆಟ್ಟ ಭಾವನೆಗಳನ್ನು ಹೊರ ಹೊಮ್ಮಿಸುವುದಾಗಲಿ ಕೂಡದು.

ಕೊನೆಯದಾಗಿ ನಿಧಾನವಾಗಿ ಅರ್ಥ ಮಾಡಿಕೊಳ್ಳುವವರೊಡನೆ ತಾಳ್ಮೆಯಿಂದಿರುವುದು ಬಹು ಮುಖ್ಯ. ಕಾರಣ ಅಂತಹವರಲ್ಲಿ ನಮ್ಮ ಮಕ್ಕಳೂ ಒಬ್ಬರಿರುತ್ತಾರೆ.

(ಅಧಾರಗಳಿಂದ)

ಡಿ. ಕೆ. ಭಾರದ್ವಾಜರ
ಇಂಗ್ಲಿಷ್, ಇಂಗ್ಲಿಷ್-ಕನ್ನಡ
ಡಿಕ್ಷನರಿ
ಬೆಲೆ: ರೂ. ನಾಲ್ಕು.
ಐದು ರೂಪಾಯಿ ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ ಕಳಿಸಲಾಗುವುದು.
ನವಭಾರತ ಪುಸ್ತಕ ಭಂಡಾರ, ಉಡುಪಿ.



ವಿಜ್ಞಾನ:

ಅಚಲಗಳೂ ಚಲಿಸುತ್ತಿವೆ!

ಮಹಾ ಮಹಾ ಭೂಖಂಡಗಳು ಸ್ಥಿರವೆಂದು ಪರಿಗಣಿತವಾಗಿದ್ದರೂ ಭೂಗೋಲದಲ್ಲಿ ಅವು ನಿಧಾನವಾಗಿ ಚಲಿಸುತ್ತಿರುತ್ತವೆಯೆಂದು ಇತ್ತೀಚೆಗಿನ ಸಂಶೋಧನೆಗಳು ಘೋಷಿಸುತ್ತವೆ. ಕೆಂಟನ್ ನಗರದಲ್ಲಿ ಮಾನನಿರ್ಮಿತ ತೇಲುವ ಭೂಮಿಯಿದ್ದರೆ, ಈ ಭೂಖಂಡಗಳು ದೈವ ನಿರ್ಮಿತ ತೇಲುವ ಭೂಮಿಯೆನ್ನಬಹುದು.

ಅಮೆರಿಕೆಯು ನಿರ್ಮಿಸಿದ ಭೂಗರ್ಭೋಷ್ಣತೆಯಿಂದ ವಿದ್ಯುದುತ್ಪಾದನೆ ಮಾಡುವ ಕಾರಖಾನೆ.

ಇಂದು ಮರುಭೂಮಿಯಿರುವಲ್ಲಿ ಹಿಂದೆ ವಿಶಾಲ ಹಿಮಸ್ನಾತ ಸಾಗರವಿತ್ತು; ಇಂದು ಸಮುದ್ರವಿರುವಲ್ಲಿ ಹಿಂದೆ ಭೂತಳವಿತ್ತು. ಲಕ್ಷಾಂತರ ವರ್ಷಗಳಿಂದ ಚಲಾಯಮಾನವಾದ ಪೃಥ್ವಿ ಹಾಗೂ ಇದರ ಬಾಹ್ಯ ಮತ್ತು ಅಂತರ ಚಲಿಸುತ್ತಿದೆ. ೧೫ ಕೋಟಿ ವರ್ಷಗಳಿಗೆ ಮೊದಲು ಭಾರತದ ಕೇಂದ್ರ ಸ್ಥಳವಾದ ನಾಗಪುರವು ದೂರದ ದಕ್ಷಿಣ ಧ್ರುವದ ಕ್ಷೇತ್ರದಲ್ಲಿತ್ತು; ಐವತ್ತು ಕೋಟಿ ವರ್ಷಗಳಿಗೆ ಮೊದಲು ಭೂಮಧ್ಯ ರೇಖೆಯು ಇಂದಿನ ಪೇರಿಸ್ ನಗರದಲ್ಲಿತ್ತು ಎಂದರೆ ನೀವು ಇದೇನು ಹುಚ್ಚು ಎನ್ನದಿರಲಾರಿರಿ. ಮುಂದಿನ ಕೆಲವು ಸಾವಿರ ವರ್ಷಗಳಲ್ಲಿ ನಮ್ಮ ಭೂಖಂಡಗಳಲ್ಲಿ ಯಾವ ಯಾವ ಉಷ್ಣ ಪ್ರದೇಶಗಳು ಶೀತ ಪ್ರದೇಶಗಳಾಗಬಹುದು ಹಾಗೂ ಇಂದು ಶೀತವೆಂದು ಕರೆಯಲ್ಪಡುವ ದೇಶಗಳು ಘನಾರಣ್ಯಗಳೂ ಅಧಿಕ ಉಷ್ಣತೆಯುಳ್ಳ ವಿಷುವದ್ರೇಖೆಯ ಪ್ರದೇಶಗಳಾಗುವುವೆಂದು ಹೇಳಲಾರರು. ಈ ಸಂಬಂಧದಲ್ಲಿಗೆ ಬಹಳಷ್ಟು ಸಂಶೋಧನೆ ನಡೆಸುತ್ತ ಇದೆ.

ಪ್ರೊ| ಎಂ. ಎಸ್. ಬ್ಲೆಕೆಟ್‌ರವರು ಹಳೆಯ ಬಂಡೆಗಳಲ್ಲಿರುವ ಆಯಸ್ಕಾಂತ ಶಕ್ತಿಯ ಸಂಬಂಧದಲ್ಲಿ ನಡೆಸಿದ ಸಂಶೋಧನೆಗಳಿಂದ ಗತಿಶೀಲತೆಯ ಮೇಲೆ ಹೊಸ ಪ್ರಕಾಶ ಬಿದ್ದಿದೆ. ಭೂಖಂಡಗಳು ಸ್ವಾಭಾವಿಕವಾಗಿ ಗತಿಶೀಲವಾಗಿವೆಯೆಂಬುದನ್ನು ಈ ಶತಮಾನದ ಆರಂಭದಲ್ಲಿ ಜರ್ಮನ್ ವಿಜ್ಞಾನಿ ಆಲ್ಫ್ರೆಡ್ ವೆಜೆನರ್ ಎಂಬವನು ಮೊತ್ತಮೊದಲು ಪ್ರತಿಪಾದಿಸುತ್ತ ಬಂದನು. ಈತನ ಸಿದ್ಧಾಂತದಂತೆ ಮೊದಲು ಭೂಮಿಯು ಸಾಗರದಿಂದ ಸುತ್ತುವರಿಯಲ್ಪಟ್ಟ ಒಂದು ಮಹಾ ದ್ವೀಪದಂತಿತ್ತು. ಕಾಲಾಂತರದಲ್ಲಿ ಭೂಮಿಯು ಚಿಕ್ಕ ಪುಟ್ಟ ತುಂಡುಗಳಾಗಿ ಇಂದಿನ ಸ್ವರೂಪವನ್ನು ಪಡೆಯಿತು. ಇದರ ಆಧಾರದಿಂದ ಭೂಖಂಡಗಳು ಇಂದಿಗೂ ಚಲಿಸುತ್ತಿವೆಯೆಂದು, ಇವುಗಳ ಸ್ಥಿತಿ ಇಂದಿಗೂ ಬದಲಾಗುತ್ತಿದೆಯೆಂದು ಹೇಳಬಹುದು.

ಮೊದಮೊದಲಿಗೆ ಈ ಸಿದ್ಧಾಂತದಲ್ಲಿ ಯಾರಿಗೂ ವಿಶ್ವಾಸ ಹುಟ್ಟಲಿಲ್ಲ; ಇದರಿಂದಾಗಿಯೇ ಎಲ್ಲರೂ ಒಂದಾಗಿ ಇದನ್ನು ಟೀಕಿಸತೊಡಗಿದರು. ಭೂಖಂಡದಂತಹ ವಿಶಾಲ ಭೂಭಾಗಗಳು ಕುಸಿಯುವುದಕ್ಕೆ ಕಾರಣವೇನೆಂಬುದನ್ನು ಅವರು ಆರಿತುಕೊಂಡಂತಿರಲಿಲ್ಲ. ಆದರೆ ಕಾಲಕ್ರಮೆದಲ್ಲಿ ವೆಜೆನರನ ಸಿದ್ಧಾಂತವನ್ನು ಸತ್ಯವೆಂದು ಲೋಕ ಒಪ್ಪಿಕೊಂಡಿದೆಯೆನ್ನಬಹುದು.

ಕೆಲವು ಬಂಡೆಗಳಲ್ಲಿ ಚುಂಬಕೀಯ ಶಕ್ತಿಯಿರುವುದು ಕಂಡುಬಂದಿದೆ. ಭೂಗರ್ಭದಲ್ಲಿರುವ ಈ ಬಂಡೆಗಳ ಅಧ್ಯಯನದಿಂದ ಇವು ವಿಶಾಲವಾಗಿಯೂ ಮೊನಚಾಗಿಯೂ ಇರುತ್ತವೆ; ಇವುಗಳ ತುದಿಯು ಚುಂಬಕೀಯ ಉತ್ತರ ದಿಕ್ಕಿಗಿಂತ ಭಿನ್ನ ದಿಕ್ಕಿನತ್ತ ಇದೆಯೆಂದೂ ಗೊತ್ತಾಗಿದೆ. ಇವುಗಳು ಧ್ರುವರೂಪದಲ್ಲಿರುವಾಗಲೇ ಚುಂಬಕೀಯ ಗುಣವನ್ನು ಪಡೆದಿದ್ದುವೆಂದು ತಿಳಿಯುತ್ತದೆ. ಪ್ರೊ. ಬ್ಲೆಕೆಟ್ ಮತ್ತವರ ಇಬ್ಬರು ಸಹಯೋಗಿಗಳಾಗಿದ್ದ ಡಾ| ಜೆ. ಎ. ಕ್ಲೇಗ್ ಮತ್ತು ಡಾ| ಪಿ. ಎಸ್. ಸ್ಮಿಥ್‌ರು ಭೂತಳದಲ್ಲಿ ದೊರೆತ ಬಂಡೆಗಳ ಚುಂಬಕೀಯ ಆಕರ್ಷಣೆಯ ವಿಶ್ಲೇಷಣೆ ಮಾಡುತ್ತ ಬಂಡೆಗಳು ಹಳೆಯದಾಗುತ್ತ ಬಂದಂತೆ ಅವುಗಳ ಚುಂಬಕ ಶಕ್ತಿಯು ಹೆಚ್ಚಾಗುತ್ತ ಬರುತ್ತದೆ. ಎಂಬ ಮಹತ್ವಪೂರ್ಣ ನಿರ್ಣಯವನ್ನು ಹುಡುಕಿ ತೆಗೆದರು.

ಈ ಮೊದಲಿಯ ಕೆಲಸವು ನಿರಂತರ ನಡೆಯುತ್ತಿರುತ್ತದೆ. ಪ್ರೊ| ಬ್ಲೆಕೆಟ್‌ರವರು ಹೇಳುವಂತೆ ಮಹಾದ್ವೀಪಗಳ ಸ್ಥಿತಿಯಲ್ಲಿ ದಿಶಾಪರಿವರ್ತನೆಯು ಒಂದು ಸಾರಗರ್ಭಿತ ಸಿದ್ಧಾಂತ. ಈ ಸಿದ್ಧಾಂತಕ್ಕನುಸಾರವಾಗಿ ಚುಂಬಕಿಯ ಶಕ್ತಿಯು ಉತ್ತರ ಮತ್ತು ದಕ್ಷಿಣದಲ್ಲಿ ಭೂಗೋಲಿಕ ಧ್ರುವಗಳ ಸಮೀಪದಲ್ಲಿಯೇ, ಅವು ಇಂದು ಇರುವಲ್ಲಿಯೇ ಇದ್ದರೂ, ಮಹಾ ದ್ವೀಪಗಳ ಸ್ಥಿತಿಯು ಮಾತ್ರ ಬದಲಾಯಿತು. ಹೀಗೆ ಬಂಡೆಗಳ ಹೊಸ ದೃಷ್ಟಿ ಹೊಸದಿಸೆಯ ಕಡೆಗಿರುತ್ತಿರುತ್ತಿತ್ತು.

ಪ್ರೊ|ಬ್ಲೆಕೆಟ್‌ರವರ ಈ ಸಿದ್ಧಾಂತದಂತೆ ಯುರೋಪು, ಅಮೆರಿಕೆ, ಆಸ್ಟ್ರೇಲಿಯಾ ಮತ್ತು ಭಾರತಗಳು ಇಪ್ಪತ್ತು ಕೋಟಿ ವರ್ಷಗಳಿಗೆ ಮೊದಲು ಬಹು ತೀವ್ರವಾಗಿ ಉತ್ತರಾ ಪಥಕ್ಕೆ ಸರಿಯ ತೊಡಗಿದುವು. ಅದರ ಪೂರ್ವ ಪಶ್ಚಿಮ ಯುರೋಪ್ ಮತ್ತು ಉತ್ತರ ಅಮೆರಿಕೆಗಳನ್ನು ಇವು ಭೂಮಧ್ಯ ರೇಖೆಯ ಸಮೀಪದಲ್ಲಿದ್ದುವು. ಉತ್ತರದತ್ತ ತಳ್ಳಲ್ಪಡುತಿದ್ದಂತೆಯೇ ಒಂದು ಇನ್ನೊಂದನ್ನು ಪರಿಕ್ರಮಿಸುತಿತ್ತು. ಆಸ್ಟ್ರೇಲಿಯಾ ಬಹಳ ವೇಗದಿಂದ ಸಂಚಲಿಸುತಿತ್ತು. ೪೦ ಕೋಟಿ ವರ್ಷಗಳಿಗೆ ಮೊದಲು ಭೂಮಧ್ಯ ರೇಖೆಯ ಬಳಿಯಿದ್ದ ಈ ಭೂಖಂಡವಿಂದು ಧ್ರುವನಾಗಕ್ಕೆ ನಿಕಟವಾಗಿ ಸರಿಯಿತು. ಆ ನಂತರ ಇಪ್ಪತ್ತು ಕೋಟಿ ವರ್ಷಗಳ ಹಿಂದೆ ಉತ್ತರದತ್ತ ತಳ್ಳಲ್ಪಡಲು ತೊಡಗಿ ಇಂದು ಈಗಿರುವ ಸ್ಥಾನದಲ್ಲಿ ಬಂದು ನಿಂತಿದೆ.

ಉಳಿದೆಲ್ಲ ಮಹಾದ್ವೀಪಗಳಿಗಿಂತ ಭಾರತವು ಅತೀವ ಶೀಘ್ರದಲ್ಲಿ ಸಂಚಲಿಸುತ್ತಿದೆ. ೨೫ ಕೋಟಿ ವರ್ಷಗಳಿಗೆ ಮೊದಲು ೫೦ ಡಿಗ್ರಿ ದಕ್ಷಿಣ ಅಕ್ಷಾಂಶದಲ್ಲಿದ್ದ ಭಾರತ ಭೂಮಧ್ಯ ರೇಖೆಯ ಬಳಿಗೆ ಬಂದುಮುಟ್ಟಿತು. ಅದಾದ ಕೆಲವು ಕೋಟಿ ವರ್ಷ ತಿರುಗಾಡಿ ಈಗಿರುವ ೨೦ ಡಿಗ್ರಿ ಉತ್ತರಕ್ಕೆ ಬಂದ ನಿಂತಿದೆ. ಈ ಸಿದ್ಧಾಂತವನ್ನು ಪ್ರತಿಪಾದಿಸಲು ಡಾ| ವೆಜೆನರನು ಹಲವಾರು ಪ್ರಮಾಣವನ್ನು ನೀಡಿದ್ದಾನೆ. ದಕ್ಷಿಣ ಅಮೆರಿಕದ ಪೂರ್ವ ಸಾಗರ ತಟದ ಹಳೆಯ ಬಂಡೆಗಳು ಮತ್ತು ಆಫ್ರಿಕೆಯ ಪಶ್ಚಿಮ ತಟದ ಮೇಲಿನವುಗಳಲ್ಲಿ ಸಮಾನತೆಯು ಕಂಡುಬಂದಿದೆ ಆದರೆ, ಪ್ರೊ| ಬ್ಲೆಕೆಟರ ಅಭಿಪ್ರಾಯದಂತೆ ಮಹಾ ದ್ವೀಪಗಳ ಸ್ಥಿತಿಯಲ್ಲಾದ ಪರಿವರ್ತನೆಗೆ ವಿಶ್ವಸನೀಯ ಪ್ರಮಾಣವೆಂದರೆ ಪ್ರಾಚೀನ ಹವಾಮಾನದ ಅಧ್ಯಯನದಿಂದ ಪ್ರಾಪ್ತವಾದುವು ಮಾತ್ರ. ಹೀಗೆ ಒಪ್ಪಿಕೊಳ್ಳುವುದಾದರೆ ಭೌಗೋಲಿಕ ಧ್ರುವಗಳು ಹಿಂದೆ ಇದ್ದಲ್ಲಿಯೇ ಇಂದಿಗೂ ಇವೆ. ಆದರೆ, ಐವತ್ತು ಕೋಟಿ ವರ್ಷಗಳಿಗೆ ಮೊದಲು ಇಂದಿನ ಪೇರಿಸ್ ನಗರವಿರುವಲ್ಲಿ ವಿಷುವದೇಖಾ ಪ್ರದೇಶದ ಹವಾಮಾನವಿತ್ತು. ಪ್ರೊ| ಬ್ಲೆಕೆಟರು ಹವಾಮಾನವನ್ನು ಅಧ್ಯಯನ ನಡೆಸಿಕೊಂಡು ಬಂದ ಸಂಗತಿಗಳು ಚುಂಬಕೀಯ ಪ್ರಭಾವದ ಸಿದ್ಧಾಂತವನ್ನು ಸಂಪೂರ್ಣವಾಗಿ ಸರಿಗೂಡುತ್ತವೆ.

ಭಾರತ, ಆಸ್ಟ್ರೇಲಿಯಾ, ದಕ್ಷಿಣ ಅಮೆರಿಕೆ ಮತ್ತು ದಕ್ಷಿಣ ಆಫ್ರಿಕೆ ಮೊದಲಾದುವುಗಳಲ್ಲಿ ಲಭ್ಯಮಾನವಾದ ಎರಡು ಕೋಟಿ ವರ್ಷ ಹಿಂದಿನ ಬಂಡೆಗಳಲ್ಲಿ ಹಿಮದ ಚಿಹ್ನೆಗಳು ದೃಷ್ಟಿಗೋಚರವಾಗುತ್ತವೆ ಇದರಿಂದ ಮತ್ತು ಅವುಗಳಲ್ಲಿಯ ಚುಂಬಕೀಯ ಗುಣಗಳಿಂದ ಈ ಇಡಿಯ ಮಹಾ ದ್ವೀಪವು ಮೊದಲು ದಕ್ಷಿಣ ಧ್ರುವಕ್ಕೆ ಸಮೀಪವಿತ್ತು ಎಂದು ತಿಳಿಯುತ್ತದೆ. ಬ್ರಿಟನ್ನಿನಲ್ಲಿ ಈಗ ದೊರೆಯುವ ಮರಳು ಗಲ್ಲುಗಳಲ್ಲಿ ಸಹರಾ ಮರುಭೂಮಿಯ ಹವಾಗುಣವು ಕಂಡುಬರುವುದು. ಚುಂಬಕೀಯ ಗುಣಾಧಾರದಿಂದ ಅಂದು ಬ್ರಿಟನ್ ಇಂದಿನ ಸಹರಾ ಮರುಭೂಮಿಯಿದ್ದಲ್ಲಿತ್ತೆಂದು ತಿಳಿಯುತ್ತದೆ.

ಈ ಸಂಬಂಧದಲ್ಲಿ ನಡೆಯುತ್ತಿರುವ ಪ್ರಯೋಗಗಳ ಪರಿಣಾಮವಾಗಿ ಭೂಮಿಯ ರಚನೆ ಮತ್ತು ಅದರ ಕ್ರಮಿಕ ವಿಕಾಸ ಸಂಬಂಧದದಲ್ಲಿ ಪ್ರಚಲಿತವಿರುವ ಸಿದ್ಧಾಂತ ಮತ್ತು ಆಧುನಿಕ ವಿಚಾರ ಧಾರೆಯಲ್ಲಿ ಗಂಭೀರವೂ ಮಹತ್ವಪೂರ್ಣವೂ ಆದ ಸಂಶೋಧನೆಗಳ ಸೃಷ್ಟಿಯಾಗುವುದು ಸಂಭವನೀಯವಿದೆ.

ನಮ್ಮ ಪರ್ವತಗಳು ಅಚಲವೆಂಬ ಉಲ್ಲೇಖ ಪುರಾಣಗಳಲ್ಲಿ ದೊರೆಯುತ್ತದೆ. ಆದರೆ, ಹಿಮಾಲಯ, ಎಂಡಿಸ್ ಮೊದಲಾದ ಮಹಾ ಮಹಾ ಪರ್ವತಾವಳಿಗಳೂ ಭೂಮಿಯೊಡನೆ ಚಲಿಸತೊಡಗಿವೆಯೆಂಬುದನ್ನು ಅಲ್ಲಗಳೆಯುವಂತಿಲ್ಲ. ಭೂಧರ ಎಂಬ ಇನ್ನೊಂದು ಹೆಸರನ್ನು, ಪರ್ವತಕ್ಕೆ ನಮ್ಮ ಹಿರಿಯರು ಕೊಟ್ಟಿದ್ದಾರೆ. ಭೂಮಿಯನ್ನು ಧರಿಸಿಕೊಂಡಿರುವುದು, ಅದನ್ನು ಅತ್ತಿತ್ತ ಸರಿಯದಂತೆ ತಡೆಯುವುದು ಎಂದಿದರ ವ್ಯಾಖ್ಯೆ ಬರೆದರೆ, ಭೂಮಿಯ ಭಾರ ಹೆಚ್ಚಾಗಲು ಕಾರಣವಾದ ಪರ್ವತಾವಳಿಗಳು ತೇಲಿ ಹೋಗುವ ಭೂಮಿಯ ಗತಿಯನ್ನು ತಡೆಯುತ್ತವೆಯೆಂದು ಹೇಳಬಹುದು. ಪರ್ವತಗಳು ಭೂಮಿಯ ಮೇಲೆ ಇಲ್ಲದಿರುತಿದ್ದರೆ, ಭೂಮಿಯ ಭಾರ ಕಡಿಮೆಯಾಗುತ್ತಿತ್ತು; ಅಂದು ಸ್ವಯಂಗತಿಶೀಲವಾದುದರಿಂದ ಗಾಳಿ ಬಂದತ್ತ ಅತಿ ಶೀಘ್ರದಲ್ಲಿ ತೂರಿಕೊಳ್ಳುವ ಸಂಭವಿತ್ತು. ಅದನ್ನು ತಡೆದು ಮೋಟರಿಗೆ ಬ್ರೇಕು—ಗೇರು ಹಾಕುವಂತೆ ಪರ್ವತಗಳು ಭೂಮಿಯ ವೇಗವನ್ನು ನಿಯಂತ್ರಿಸುತ್ತವೆ. ಇದನ್ನು ತಿಳಿದೇ "ಭೂಧರ ಎಂಬ ಹೆಸರನ್ನು ಅವಕ್ಕೆ ಇತ್ತಿರ ಬಹುದೆ?

41 ವರ್ಷಗಳ ಭದ್ರ ಹಾಗೂ ಸಮರ್ಥ ಬೇಂಕಿಂಗ್ ಸೇವೆ.

ದಿ. ಪಾಂಗಾಳ ನಾಯಕ್ ಬೇಂಕ್ ಲಿ.

ನಮ್ಮ 3 ವರ್ಷ ವ್ಯಾದೆಯ ಕೇಶ್ ಸರ್ಟಿಫಿಕೇಟುಗಳಲ್ಲಿ ರೇವಣೆ ಮಾಡಿರಿ: ಎಡ್ಡಿ ಸೇಕಡಾ 5ರಂತೆ: ರೂ. 87—00 3 ವರ್ಷಗಳ ತರ್ತ್ಯದಲ್ಲಿ ಬಡ್ಡಿ ಕೂಡಿ ರೂ 100—00 ಒದಗುವುದು.

ಕರೆ, ಚಿಕ್ಕ ವ್ಯಾದೆ, ನಿರಖು ರೇವಣಾತಿಗಳ ಮೇಲೆ ಆಕರ್ಷಣೀಯ ದರ್ಗಳು: ಬಡ್ಡಿ ಸೇಕಡಾ 5½ರ ವರೆಗೆ.

ತಾ 1—4—1961ರಿಂದ ಸೇವಿಂಗ್ಸ್ ಬೇಂಕ್ ಖಾತೆಗಳ ಮೇಲೆ ಬಡ್ಡಿ ಸೇಕಡಾ 3ರಂತೆ.

THE PANGAL NAYAK BANK LTD.

Estd: 1920

ವಿಚಾರವರ್ಷ

ಭಾರತ ಸರಕಾರದಿಂದ ಲೇಖಕರಿಗೆ ಅನ್ಯಾಯ

ಭಾರತ ಸರಕಾರದ ಸಾಂಸ್ಕೃತಿಕ ಮೂಲ ಸಾಹಿತ್ಯ ನಿರ್ಮಾಣದ ಮೂರನೆಯ ಸ್ಪರ್ಧೆಯ ನಿಯಮಗಳು ತೀರ ಅನುದಾರವಿವೆ. ಈ ಸಂಬಂಧದಲ್ಲಿ ಕರ್ನಾಟಕ ಲೇಖಕರ ಸಂಘದ ಅಧ್ಯಕ್ಷ ಶ್ರೀ ನಾಗರಾಜಯ್ಯರ ಅಭಿಪ್ರಾಯ ಇಲ್ಲಿದೆ.

ಭಾರತ ಸರಕಾರದವರು ಓದುಬಂಹಕಲಿತ ವಯಸ್ಕರ ಸಲುವಾಗಿ, ಜ್ಞಾನ ಪ್ರಸಾರ ಸಾಹಿತ್ಯವನ್ನು ನಿರ್ಮಿಸುವುದಕ್ಕೆ ಉತ್ತೇಜನ ಕೊಡುವ ಸಲುವಾಗಿ ಈ ವರ್ಷ "ಸಾಂಸ್ಕೃತಿಕ ಮೂಲ ಸಾಹಿತ್ಯ ನಿರ್ಮಾಣ"ದ ಮೂರನೆಯ ಸ್ಪರ್ಧೆಯನ್ನು ಏರ್ಪಡಿಸಿದ್ದಾರೆ. ಇದು ಸ್ತುತ್ಯವಾದ ಕಾರ್ಯವಾದರೂ ಕೆಲವು ಅಸಂಬದ್ಧ ತೊಡಕುಗಳಿಂದ ಕೂಡಿದೆ. ಸಂಬಂಧಪಟ್ಟ ನಿಯಮವಳಿಯ ಪಟ್ಟಿಯನ್ನು ತರಿಸಿ ನೋಡಿದಾಗ ಅವು ನನ್ನ ಗಮನಕ್ಕೆ ಬಂದವು. ಸಾರ್ವಜನಿಕರ ಅದರಲ್ಲೂ ಲೇಖಕರ ಹಿತದೃಷ್ಟಿಯಿಂದ ಅವುಗಳನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ.

ಈ ಸ್ಪರ್ಧೆಯಲ್ಲಿ ಎಲ್ಲ ಭಾರತೀಯ ಭಾಷೆಗಳವರೂ ಭಾಗವಹಿಸಬಹುದಾದರೂ ತಾವು ಬರೆದ ಪ್ರಾದೇಶಿಕ ಭಾಷೆಯ ಮೂಲದ ಅಧಿಕೃತ ಆಂಗ್ಲ ಭಾಷಾ ಭಾಷಾಂತರದೊಡನೆ ಖಡ್ಡಾಯವಾಗಿ ಕಳಿಸಬೇಕಾದುದು ಮುಖ್ಯ ವಿಚಾರ. ಅಷ್ಟೇ ಅಲ್ಲ, ಸರ್ಕಾರದವರು ಈ ಭಾಷಾಂತರದ ಆಧಾರದ ಮೇಲೆಯೇ ತೀರ್ಮಾನವನ್ನು ಕೈಗೊಳ್ಳುವುದರಿಂದ ಭಾಷಾಂತರದ ಹೊಣೆಗಾರಿಕೆಯನ್ನೆಲ್ಲಾ ಮೂಲ ಲೇಖಕರ ಮೇಲೆ ಹೊರಿಸಲಾಗಿದೆ. ಇದಕ್ಕೆ ಬದಲಾಗಿ ಇಂಗ್ಲೀಷಿನಲ್ಲಿ ಬರೆಯಲು ಸಾಧ್ಯವಿದ್ದವರು ಮಾತ್ರ ಭಾಗವಹಿಸಲಿ ಎಂದು ಹೇಳಿದ್ದಿದ್ದರೆ ಬಹಳ ಚೆನ್ನಾಗಿತ್ತು. ಒಂದು ಕೈಯಿಂದ ಕೊಡಬಹುದಾದ ವರವನ್ನು ಇನ್ನೊಂದು ಕೈಯಿಂದ ಕಿತ್ತುಕೊಳ್ಳುವುದಾಗಿದೆ ಈಗ ಅನುಸರಿಸಿರುವ ಮಾರ್ಗ. ಭಾರತ ಸರ್ಕಾರಕ್ಕೆ ಭಾಷಾಂತರದ ಅವಶ್ಯಕತೆ ಇದ್ದರೆ ತನ್ನ ಹೊಣೆಗಾರಿಕೆಯ ಮೇಲೆ ಸರ್ಕಾರ ತಾನೆ ಭಾಷಾಂತರ ಮಾಡಿಕೊಳ್ಳಬೇಕೆ ಹೊರತು ಲೇಖಕರ ಮೇಲೆ ಹೊರಿಸುವುದು ತೀರ ಅನ್ಯಾಯ. ಭಾಷಾಂತರದಲ್ಲಿ ಮೂಲದ ರಸ ಭಾವಗಳೆಲ್ಲ ಬರುವುದಿಲ್ಲವೆಂಬ ವಿಷಯ ಪ್ರಖ್ಯಾತವಾಗಿರುವಾಗ ಭಾಷಾಂತರದಿಂದ ಮೂಲದ ಯೋಗ್ಯತೆ ಏನಿರಬಹುದೆಂಬುದನ್ನು ಅಳೆಯುತ್ತೇವೆ ಎಂಬುದು ಬಹಳ ವಿಚಿತ್ರಕಾರಕವಾದುದು. ಭಾಷಾಂತರದ ಈ ಕೈ ಕೋಳವನ್ನು ಭಾರತ ಸರ್ಕಾರ ತೆಗೆಯದಿದ್ದರೆ ಪ್ರಾದೇಶಿಕ ಭಾಷೆಯ ಲೇಖಕರು ಬಹುಸಂಖ್ಯೆಯಲ್ಲಿ ಭಾಗವಹಿಸಲು ಸಾಧ್ಯವಿಲ್ಲ.

ಭಾಷಾಬೆಳವಣಿಗೆಗೆ ಮತ್ತು ಲೇಖಕರ ಹಿತ ಎಂಬ ಎರಡು ತತ್ವ ಇದರಲ್ಲಿ ಏನು ಅಡಕವಾಗಿದೆ, ಅದು ಕಾರ್ಯರೂಪಕ್ಕೆ ಬರಲಾಗದ ಕಾಗದದ ಮೇಲಿನ ತತ್ವವಾಗುತ್ತದೆ. ಅಲ್ಲದೆ ಆಂಗ್ಲ ಭಾಷಾ ಪರಿಚಯ ಚೆನ್ನಾಗಿಲ್ಲದ ಮತ್ತು ಆಂಗ್ಲಭಾಷೆಗೆ ಉತ್ತಮ ಭಾಷಾಂತರವನ್ನು ಮಾಡಿಸಿಕೊಳ್ಳಲು ಆರ್ಥಿಕ ಸಂಪತ್ತು ಸಾಲದ ಪ್ರಾದೇಶಿಕ ಭಾಷಾ ಲೇಖಕ ತನ್ನ ಭಾಷೆಯಲ್ಲಿ ಎಷ್ಟೇಚೆನ್ನಾಗಿ ಬರೆಯುವವನಾಗಿದ್ದರೂ ಅವನು ಈ ಸ್ಪರ್ಧೆಗೆ ಅಯೋಗ್ಯನಾಗುತ್ತಾನೆ. ಈ ರೀತಿಯ ಅನವಶ್ಯಕವಾದ, ಅಸಾಧ್ಯವಾದ ಅತಂಕವನ್ನು ತಂದೊಡ್ಡಿ ಲೇಖಕರನ್ನು ಹಿಮ್ಮೆಟ್ಟಿಸುವುದು ಮೂಲಗುರಿಗೆ ವಿರೋಧವಾದುದು. ಅದರಿಂದ, ಈ ಭಾಷಾಂತರದ ನಿಯಮವನ್ನು ಒಡನೆಯೇ ತೆಗೆದು ಈ ಬಹುಮಾನವನ್ನು ಭಾಷಾವಾರಾಗಿ ಪ್ರತಿ ಭಾಷೆಯಲ್ಲಿನ ಉತ್ತಮ ಗ್ರಂಥಕ್ಕೆ ಕೊಡಲಿ, ಅಖಿಲ ಭಾರತದ ಮಟ್ಟದಲ್ಲಿ ಅತ್ಯುತ್ತಮ ಕೃತಿಯನ್ನು ನಿರ್ಣಯಿಸಬೇಕಾದರೆ ಬಹುಮಾನಿತ ಭಾಷಾವಾರಿನ ಕೃತಿಗಳನ್ನು ಸರ್ಕಾರ ತನ್ನ ಹೊಣೆಗಾರಿಕೆಯ ಮೇಲೆ ಭಾಷಾಂತರಿಸಿಕೊಂಡು ಒಂದು ನಿರ್ಣಯಕ್ಕೆ ಬರಬಹುದು.

ಇನ್ನೊಂದು ವಿಷಯದಲ್ಲಿ ಸಹ ಸರ್ಕಾರದ ಧೋರಣೆ ಸರಿಯೆನಿಸುವುದಿಲ್ಲ, ಬಹುಮಾನ ಪಡೆದ ಗ್ರಂಥದ ಹಕ್ಕಿನ ಸಂಬಂಧವಾದ ಒಪ್ಪಂದವನ್ನು ಲೇಖಕ ಸರ್ಕಾರದೊಡನೆ ಮಾಡಿಕೊಂಡಲ್ಲದೆ ಬಹುಮಾನದಹಣವನ್ನಿಗೆ ಸಲ್ಲುವಂತಿಲ್ಲ. ನಿರ್ದಿಷ್ಟವಾಗಿ ಗೌರವ ಹಣ (Royalty) ಇಷ್ಟು ಎಂದು ಮೊದಲೇ ಹೇಳಿದರೆ ಒಂದು ರೀತಿ. ಈ ವಿಷಯವನ್ನು ಅನಿರ್ದಿಷ್ಟವಾಗಿಟ್ಟು ಬಹುಮಾನ ಕೊಟ್ಟ ಮೇಲೆ ಸರ್ಕಾರ ಹಾಕ ಬಹುದಾದ ಕಾಪಿರೈಟ್ ನಿಯಮಗಳಿಗೆ ಲೇಖಕ ಒಪ್ಪದಿದ್ದರೆ ಬಹುಮಾನಪಡೆದುದುಬರೇ ಹೆಸರಿನಲ್ಲಿಮಾತ್ರ ಉಳಿಯುತ್ತದೆ. ಹಣದ ರೂಪದಲ್ಲಿ ಅಲ್ಲ. ಇದು ಅಪ್ರಕಟಿತ ಹಸ್ತಪತ್ರಿಕೆಗೆ ಸಂಬಂಧಿಸಿದ್ದು.

ಪ್ರಕಟಿತ ಪುಸ್ತಕಕ್ಕೂ ತೊಂದರೆ ಇದೆ ಬಹುಮಾನ ಪಡೆದ ಗ್ರಂಥದ ಪ್ರತಿಗಳನ್ನು ಸಂಧಾನದ ಮೂಲಕ ಒಪ್ಪಿತವಾದ ಬೆಲೆಗೆ ಹೆಚ್ಚು ಸಂಖ್ಯೆಯಲ್ಲಿ ಪ್ರಕಾಶಕರಿಂದ ಸರ್ಕಾರ ಕೊಳ್ಳಬಹುದಂತೆ ಅಂತಹ ಸಂದರ್ಭದಲ್ಲಿ ಆ ಪ್ರತಿಗಳ ಮೇಲಿನ ರಾಯಲ್ಟಿಯನ್ನು ಪ್ರಕಾಶಕರಿಂದ ಪಡೆಯುವ ಹೊಣೆಗಾರಿಕೆ ಲೇಖಕನದಂತೆ. ಅನಂತರದಲ್ಲಿ ಲೇಖಕನಿಗೆ ಮತ್ತು ಒಂದು ಸಾವಿರ ರೂಪಾಯಿಯನ್ನು ಸರ್ಕಾರ ಕೊಟ್ಟುಬಿಟ್ಟರೆ ಲೇಖಕನ ಸರ್ವ ಹಕ್ಕುಗಳು ಸರ್ಕಾರದ್ದಾಗುತ್ತದೆ. ಮತ್ತು ಆ ಕಾರಣವಾಗಿ ಸರ್ಕಾರ ನಿರ್ಬಾಧಿತವಾಗಿ ಎಲ್ಲ ಭಾರತೀಯ ಭಾಷೆಗಳಲ್ಲೂ ಅದನ್ನು ಪ್ರಕಟಿಸುವ ಸರ್ವ ಸ್ವಾಮ್ಯವನ್ನು ಪಡೆಯುತ್ತದೆ. ಅಂದರೆ ಇಪ್ಪತ್ತು ಸಾವಿರ ಪಡೆಗಳ (ಅದು ನಿರ್ದೇಶಿಸಲ್ಪಟ್ಟಿರುವ ಗ್ರಂಥದ ವ್ಯಾಪ್ತಿ) ಗ್ರಂಥದ ಸರ್ವ ಸ್ವಾಮ್ಯ ಭಾರತ ಸರ್ಕಾರಕ್ಕೆ ಕೇವಲ ಎರಡು ಸಾವಿರ ರೂಪಾಯಿಗಳಿಗೆ ಬಂದಂತಾಗುತ್ತದೆ.

ಸಾಮಾನ್ಯವಾಗಿ ಉತ್ತಮ ಲೇಖಕನಿಗೆ 15% ರಾಯಲ್ಟಿ ಸಿಗುತ್ತದೆ. ಪುಸ್ತಕಕ್ಕೆ ಒಂದು ರೂಪಾಯಿ ಬೆಲೆ ಯಿಟ್ಟು ಒಂದೊಂದು ಭಾಷೆಯಲ್ಲಿಯೂ ಐದೈದು ಸಾವಿರ ಪ್ರತಿಗಳನ್ನು ಅಚ್ಚು ಹಾಕಿದರೂ, ಎಲ್ಲ ಭಾಷೆಯ ಮೊದಲನೆಯ ಮುದ್ರಣದಿಂದ ಶೇಕಡ 5 ಸರಾಸರಿ ರಾಯಲ್ಟಿ ಬಂದರೂ ಒಟ್ಟು ರೂ. 3500/= ಲೇಖಕನಿಗೆ ಸಿಗುತ್ತದೆ. ಹೀಗಿರುವಾಗ ಸರ್ಕಾರದ ನೀತಿ ಎಷ್ಟು ಪ್ರೋತ್ಸಾಹಕರವಾಗಿದೆಯೆಂಬುದನ್ನು ಇದರಿಂದ ಗಮನಿಸಬಹುದು. ಸರ್ಕಾರ ಗ್ರಂಥ ಸ್ವಾಮ್ಯವನ್ನು ಪಡೆಯುವ ಬದಲು ಪ್ರಕಟನೆಯ ಹಕ್ಕನ್ನು ಪಡೆದು ಇಂತಿಷ್ಟು ರಾಯಲ್ಟಿ ಎಂದು ಮೊದಲೇ ನಿರ್ದಿಷ್ಟ ಮಾಡುವುದು ಉಭಯತರಿಗೆ ಒಳಿತು.

ಹಸ್ತಪ್ರತಿಯ ಜೊತೆಗೆ ಕಡ್ಡಾಯವಾಗಿ ಚಿತ್ರಗಳಿರಬೇಕೆಂಬ ಇನ್ನೊಂದು ನಿರ್ಬಂಧವಿದೆ. ಪುಸ್ತಕಕ್ಕೆ ಬಹುಮಾನ ಬರಲಿ ಬಿಡಲಿ, ಪುಸ್ತಕ ಪ್ರಕಟವಾಗಲಿ ಬಿಡಲಿ, ಲೇಖಕ ಚಿತ್ರಗಾರನಿಗೆ ಮುಂಗಡವಾಗಿ ಹಣ ಕೊಡಬೇಕು. ಸಾಕಷ್ಟು ಚಿತ್ರಗಳಿರಬೇಕೆಂಬ ನಿಯಮವಿದೆ. 'ಅಂದರೆ 10—15 ಚಿತ್ರಗಳಾದರೂ ಸಿದ್ಧವಾಗಬೇಕು. ಅಂದರೆ ಚಿತ್ರಗಾರನಿಗೆ ಲೇಖಕ ಮೊದಲೆ ರೂ. 200 ರಿಂದ 300 ಕೊಟ್ಟುಬಿಡಬೇಕು. ಅಂತಹ ಸಾವುಕಾರ ಲೇಖಕರು ನಮ್ಮಲ್ಲಿದ್ದಾರೆಯೇ?

ಪ್ರಕಟಿತ ಪುಸ್ತಕವಾದರೆ ಈ ತೊಂದರೆ ಇರುವುದಿಲ್ಲ. ಪ್ರಕಾಶಕ ಆ ಹೊಣೆಗೆಲ್ಲ ಆಗಲೆ ಸಿದ್ಧವಾಗಿರುತ್ತಾನೆ. ಆದರಿಂದ ಹಸ್ತಪ್ರತಿಗಳ ಜತೆಗೆ ಚಿತ್ರಗಳ ಸ್ಥಾನ ನಿರ್ದೇಶ ಮಾಡಿ ಅವುಗಳ ವಿವರಣೆಯನ್ನು ಕೊಡಬಹುದೇ ಹೊರತು ಚಿತ್ರಗಳನ್ನು ಪರಿಶೀಲನೆಗೆ ಮೊದಲೇ ಬಯಸುವುದು ಸಹ ತೊಡಕುಂಟುಮಾಡುವುದಾಗಿದೆ. ಆದರಿಂದ ಹಸ್ತಪ್ರತಿಯ ಜೊತೆಗೆ ಚಿತ್ರಗಳನ್ನು ಕೇಳುವುದನ್ನು ಬಿಡಬೇಕು.

ಒಟ್ಟಿನಲ್ಲಿ ಈ ನಿಬಂಧನೆಗಳನ್ನು ಸಡಿಲಿಸಿ, ಮಾರ್ಪಡಿಸಿ ಈ ಕೆಳಗಿನ ಬದಲಾವಣೆ ಮಾಡಿಕೊಂಡು ಈ ಸ್ಪರ್ಧೆಯನ್ನು ನಡೆಸಿದರೆ ನಿಜವಾಗಿ ಲೇಖಕರ ಜಗತ್ತಿಗೆ ಮತ್ತು ಜ್ಞಾನ ಜಗತ್ತಿಗೆ ಉಪಕಾರವಾಗುತ್ತದೆ.

ಪ್ರತಿ ಪ್ರಾದೇಶಿಕ ಭಾಷೆಯ ಉತ್ತಮ ಪ್ರತಿಗೆ ಒಂದು ಸಾವಿರ ರೂಪಾಯಿ ಬಹುಮಾನವನ್ನು ಯಾವ ತಯ್ಯೂ ಇಲ್ಲದೆ ಫಲಿತಾಂಶ ಪ್ರಕಟವಾದ ಕೂಡಲೇ ಕೊಡಬೇಕು.

ಆಂಗ್ಲ ಭಾಷಾಂತರವನ್ನು ಕೇಳಬಾರದು.

ಅಖಿಲ ಭಾರತದ ಮಟ್ಟದಲ್ಲಿ ಅತಿ ಉತ್ತಮವೆಂದು ತೀರ್ಮಾನಿಸಲು ಬಹುಮಾನಿತ ಪ್ರಾದೇಶಿಕ ಭಾಷಾ ಕೃತಿಗಳನ್ನು ಸರ್ಕಾರ ತಾನೇ ಭಾಷಾಂತರಿಸಲು ಏರ್ಪಡಿಸಿ ಅತ್ಯುತ್ತಮವಾದುವು ಎಂದು ನಿರ್ಣಯಿತವಾದ ಮೂರು ಗ್ರಂಥಗಳಿಗೆ ರೂ. 5000/-, 3000/-, 2000/- ಮೊತ್ತದ ವಿಶೇಷ ಬಹುಮಾನವನ್ನು ಕೊಡಬಹುದು.

ಹಸ್ತಪ್ರತಿಯೊಂದಿಗೆ ಚಿತ್ರಗಳನ್ನು ಕೇಳಬಾರದು.

ಬಹುಮಾನದ ಹೆಣವಲ್ಲದೆ ಪ್ರಕಟಿತ ಪುಸ್ತಕಗಳ ಮೇಲೆ ಮೂಲ ಲೇಖಕರಿಗೆ ಮೂಲ ಭಾಷೆಯಲ್ಲಿ ಶೇಕಡ 15ರಂತೆಯೂ, ಭಾಷಾಂತರಗಳ ಮೇಲೆ ತದರ್ಥದಂತೆಯೂ ರಾಯಲ್ಟಿಯನ್ನು ಕೊಡತಕ್ಕದ್ದು, ಭಾಷಾಂತರಕಾರನಿಗೆ ಸಂದರ್ಭಾನುಸಾರವಾಗಿ ಉಳಿದ ಶೇಕಡ 7½ ರಾಯಲ್ಟಿಯನ್ನಾಗಲೀ ಅಥವಾ ಒಪ್ಪಿತವಾದ ಒಂದು ಮೊಬಲಗನ್ನೋ ಕೊಡತಕ್ಕದ್ದು.

ನನ್ನ ಅಭಿಪ್ರಾಯದೊಡನೆ ಅನೇಕ ಲೇಖಕ ಮಿತ್ರರ ಸಹಮತವಿದೆ. ನನ್ನ ಅಂತರಂಗಕ್ಕೆ ಗೋಚರವಾದಂತೆ ಎಲ್ಲ ಲೇಖಕರೂ ನನ್ನೊಡನೆ ಈ ವಿಷಯದಲ್ಲಿ ಸಹಮತವುಳ್ಳವರಾಗಿರುತ್ತಾರೆಂದು ನಂಬಿದ್ದೇನೆ. ಆದರಿಂದ ವಿಷಯವನ್ನು ಸಾರ್ವಜನಿಕರು ಅರಿತಿರುವುದು ಯುಕ್ತವೆಂದು ಭಾವಿಸಿ "ಕರ್ನಾಟಕ ಲೇಖಕ ಸಂಘ"ದ ಅಧ್ಯಕ್ಷನಾಗಿ ನಾನು ಈ ಕುರಿತು ಬರೆದಿದ್ದೇನೆ. ಪತ್ರಿಕೆಗಳವರು ಜನಾಭಿಪ್ರಾಯವನ್ನು ರೂಪಿಸುವರೆಂಬ ನಂಬಿಕೆ ನನಗಿದೆ.

— ಪಿ. ಕೆ. ನಾಗರಾಜ ರಾವ್
ಬೆಂಗಳೂರು, 30—6—61.

"ನಚಿಕೇತ"ರ
ಇನ್ನೊಂದು ನವೀನ ಕಾದಂಬರಿ—
ಋಣ ಯಾತ್ರೆ
ಇದೀಗ ಪ್ರಕಟವಾಗಿದೆ.
ಬೆಲೆ ರೂ. 1-50 ನ. ಪೈಸೆ.
ಮೊದಲು ಪ್ರಕಟವಾದ ಕಾದಂಬರಿ—
ಭಾವಾರ್ಚನೆ
ಬೆಲೆ ರೂ. 1-25 ನ. ಪೈಸೆ.
ಪ್ರತಿಗಳು ಸಿಗುವ ಸ್ಥಳಗಳು:—
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ

ಕೊರ್ಪೊರೇಶನ್ ಬೇಂಕ್
ಶೇವಣಾಶಿಗಳ ಮೇಲಿನ ಸಾಲಿಯಾನ್ ಶೇಕಡಾ ಬಡ್ಡಿ ದರಗಳು:
3 ಸೇವಿಂಗ್ಸ್ ಬೇಂಕ್ ಖಾತೆ
3½ ಯಿಂದ 5¼ ಕಾಯಂ (ವಿವಿಧಾವಧಿಗಳಿಗೆ)
5¼ ವಜ್ರೋತ್ಸವ
5 ಕ್ಯುಮುಲೇಟಿವ್
ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
(ಸ್ಥಾಪನೆ: 1906)
ರಿಜಿಸ್ಟರ್ಡ್ ಆಫೀಸು: ಉಡುಪಿ | ಆಡಳಿತ ಆಫೀಸು: ಮಂಗಳೂರು

ಕಲೆಯನ್ನು ನಿರ್ಮಾಣಿಸಿಕೊಳ್ಳಲು ಬುದ್ಧಿ ಮತ್ತು ಹೃದಯಗಳು ಪ್ರಾಥಮಿಕ ಆವಶ್ಯಕತೆಗಳು; ಹಣವಲ್ಲ. ಸ್ನೇಹವೆಂಬುದನ್ನೂ ಕಲಿಯೆನ್ನಬಹುದಾದರೆ, ಇದನ್ನು ಬೆಳೆಸಲು ಸಹ ದಯತೆ ಅವಶ್ಯ ಹೊರತು ಮೂತುಗಳಲ್ಲ.

ನವಯುಗ

ವಾರ	ಉಡುಪಿ	ವರುಷ
೨೪	೨೦-೭-೬೧	೪೩

ಅಮೆರಿಕ ಸಂದರ್ಶನ

ಪಾಕಿಸ್ತಾನದ ದ್ವಿತೀಯ ಪಂಚ ವಾರ್ಷಿಕ ಯೋಜನೆಗೆ ಸಹಾಯವನ್ನು ಪಡೆಯಲು ಅಮೆರಿಕೆಯ ಯಾತ್ರೆ ಕೈಗೊಳ್ಳಬೇಕೆಂಬ ಇಚ್ಛೆ ಅಧ್ಯಕ್ಷ ಅಯೂಬ ಖಾನರಲ್ಲಿ ಬಹಳವಾಗಿತ್ತು. ಅದು ಸ್ವತಂತ್ರವಾದ ಮೊದಲಿನ ವರ್ಷಗಳಲ್ಲಿ ಚ್ಚಿಟನ್ನಿನ ಮುಖವನ್ನೇ ಎಲ್ಲದಕ್ಕೂ ನೋಡಿಕೊಂಡಿದ್ದರೂ ಇತ್ತೀಚೆಗಿನ ಕೆಲವೊಂದು ವರ್ಷಗಳಿಂದ ಅಮೆರಿಕೆಯ ಸಹಾಯವನ್ನೂ ಯೂಚಿಸಲು ಪಾಕಿಸ್ತಾನ ಮುಂದಾಗಿದೆ. ಅನಭಿವೃದ್ಧ ಆಫ್ರೇಶ್ಯದ ಯಾವುದೇ ರಾಷ್ಟ್ರದ ಅಭಿವೃದ್ಧಿ ಯೋಜನೆಗಳಿಗಾಗಿ ಪಾಶ್ಚಾತ್ಯ ರಾಷ್ಟ್ರಗಳು ನೀಡುವ ನೆರವನ್ನು ಸ್ವಾಗತಿಸುವುದು ಧರ್ಮವೆಂಬುದರಿಂದ ಪಾಕಿಸ್ತಾನಕ್ಕೆ ಅಮೆರಿಕೆಯು ನೀಡುವ ಆರ್ಥಿಕ ಸಹಾಯದ ಬಗ್ಗೆ ಭಿನ್ನಾಭಿಪ್ರಾಯವಿಲ್ಲ. ಈ ಸಂಬಂಧದಲ್ಲಿ ಅಮೆರಿಕೆಯು ಅದಕ್ಕೆ ಅದೆಷ್ಟು ರೂಪದಿಂದ ಸಹಾಯ ಸಲ್ಲಿಸಲಿ ಭಾರತವು ಆ ಬಗ್ಗೆ ತುಟಿಯೆತ್ತುವುದಿಲ್ಲ. ಜಾನ್‌ಫಾಸ್ಟರ್ ಡಲ್ಲೆಸರು ಅಮೆರಿಕೆಯ ರಾಜ್ಯಾಂಗ ಮಂತ್ರಿಯಾಗಿದ್ದಾಗ, ಪಾಕಿಸ್ತಾನವು ಅಮೆರಿಕೆಯೊಡನೆ ಸೈನಿಕ ಒಡಂಬಡಿಕೆಯನ್ನು ಮಾಡಿಕೊಂಡಂದಿನಿಂದ ಪರಿಸ್ಥಿತಿ ಬದಲಾಯಿತೆನ್ನಬಹುದು. ಅದೇ ಸಮಯದಲ್ಲಿ ಭಾರತಕ್ಕೆ ಕೂಡ ಇಂತಹ ಸಹಾಯ ನೀಡಲು ಅಮೆರಿಕೆಯು ಉತ್ಸುಕವಾಗಿತ್ತು. ಪ್ರಜಾಪ್ರಭುತ್ವದಲ್ಲಿ ವಿಶ್ವಾಸವಿಟ್ಟು, ಆರ್ಥಿಕ ಉನ್ನತಿಯ ಪಥದತ್ಯ ಧಾವಿಸುತ್ತಿರುವಾಗ, ಈ ಮಾದರಿಯ ಮಿಲಿಟರಿ ಒಡಂಬಡಿಕೆಯಿಂದ ಭಾರತವು ಸಾಧಿಸಬಹುದಾದ ಪುರುಷಾರ್ಥನಿಲ್ಲವೆಂಬುದರಿಂದ ಅಂದಿನಿಂದಲೂ ಭಾರತವು ದೂರ ಸರಿಯುತ್ತ ಬಂದಿದೆ. ಆದರೆ, ಇತರ ವಿಧಾನಗಳಿಂದ ಅಮೆರಿಕೆಯು ನೀಡುತ್ತಿರುವ ಸಹಾಯವನ್ನು ಅದು ಹೃತ್ಪೂರ್ವಕ ಸ್ವಾಗತಿಸುತ್ತದೆ.

ಅಮೆರಿಕೆಯಲ್ಲಿ ಐಸನ್ ಹಾವರರ ನಂತರ ಅಧಿಕಾರಕ್ಕೆಬಂದ ಕೆನ್ನೆಡಿ ಸರಕಾರವು ತನ್ನ ನೀತಿಯನ್ನು ಹಿಂದಿಗಿಂತ ತುಂಬ ಬದಲಿಸಿದೆ. ಹೊಸ ಅಮೆರಿಕನ್ ಅಧ್ಯಕ್ಷರನ್ನು ಕಂಡು, ದ್ವಿತೀಯ ಯೋಜನೆಗೆ ಸಹಾಯ ಪಡೆಯುವ, ವಿಚಾರ ವಿನಿಮಯ ಮಾಡಬೇಕೆಂಬ ಆಕಾಂಕ್ಷೆ ಅಯೂಬರಲ್ಲಿತ್ತು. ಅವರು ಮೊದಲಿಟ್ಟುಕೊಂಡ ಯೋಜನೆಯಂತೆ ಈ ಭೆಟ್ಟಿಯು ಇದೇ ನವಂಬರದಲ್ಲಿ ನಡೆಯ ಬೇಕಿತ್ತು. ಆದರೆ, ಭಾರತದ ಪ್ರಧಾನಿ ಜವಾಹರಲಾಲರು ಇದೇ ಸಪ್ತಂಬರ—ಒಕ್ಟೋಬರ ಮಾಸದಲ್ಲಿ ಕೆನ್ನೆಡಿಯವರನ್ನು ಕಾಣುವರೆಂಬ ನಿರೀಕ್ಷೆಗೆ ಸುಟ್ಟಿ ದೊರೆತುದರಿಂದ ಅವರು ಬೇಗನೇ ವ್ಯವಸ್ಥೆಗೊಳಿಸಿ ಬೆಟ್ಟಿಯೊದರು. ಕೆನ್ನಡಿ=ಅಯೂಬರ ಮಾತುಕತೆ ಮತ್ತು ಅದರ ಪರಿಣಾಮಗಳನ್ನು ಕಾಣುವಾಗ, ಅಯೂಬಖಾನರು ಭಾರತದ ಬಗ್ಗೆ ಹೇರಿದ ಸರ್ವಾರೋಪಗಳೂ ಸಂಚಾಂಗವಿಲ್ಲದ ಮನೆಯಂತೆ ಆಧಾರಹಿತವೆಂಬುದು ಸಂಪೂರ್ಣ ಸತ್ಯವಾಗಿದೆ. ಅಮೆರಿಕೆಯ ಆಡಳಿತಗಾರರು ಅವರಿಗೆ ತಾವು ಭಾರತಕ್ಕೆ ಆರ್ಥಿಕ ಸಹಾಯವನ್ನಷ್ಟೆ, ನೀಡುತ್ತಿರುವೆವೆಂಬುದನ್ನು ಸುಸ್ಪಷ್ಟವಾಗಿ ಸಾರಿ ಹೇಳಿದ್ದಾರೆ. ಭಾರತದಲ್ಲಿ ಪ್ರಜಾಪ್ರಭುತ್ವವು ತನ್ನ ಬಲವಾದ ಬೇರನ್ನು ಬಿಡತೊಡಗಿದೆ; ಇದರ ಪರಿಣಾಮವಾಗಿ ಭಾರತದ ನೀತಿಯೂ ದರೂ ಪ್ರಜಾಪ್ರಭುತ್ವಕ್ಕೆ ಹೊಂದಿಕೊಂಡಿರುವುದೇ ಆಗಿದೆ. ಕಾಶ್ಮೀರ ಇಲ್ಲವೇ ಆಗ್ನೇಯ ಏಶ್ಯದ ಸಮಸ್ಯೆಗಳ ಪರಿಹಾರಕ್ಕೆ ಭಾರತವು ಹಿಡಿದ ಸೂತ್ರಗಳು ಆವಾಸ್ತವವೇನೂ ಅಲ್ಲ. ವಾಶಿಂಗ್‌ಟನ್‌ಮತ್ತು ನವದೆಹಲಿಗಳ ಸಂಬಂಧವಾದರೂ ದೃಢಪಾಗುದು; ಸಿಂಧೂನದೀ ನೀರಿನ ವಿವಾದವೇ ಮೊದಲಾದುವನ್ನು ಪಾಕಿಸ್ತಾನದೊಡನೆ ಸೇರಿ ಬಗೆಹರಿಸಬೇಕೆಂದು ಅಮೆರಿಕೆ ಭಾರತಕ್ಕೆ ಸಲಹೆ ನೀಡಿದರೆ, ಅದರಲ್ಲಿ ಆಶ್ಚರ್ಯವಿಲ್ಲ. ಅದು ತಿರಸ್ಕಾರಾರ್ಹವೂ ಅಲ್ಲ. ಅಯೂಬಖಾನರು ಯೊಸ ಸ್ನೇಹಿತರನ್ನು ಮಾಡಿಕೊಂಡು ತನ್ನ ಬೇಳೆ ಬೇಯಿಸಿಕೊಳ್ಳುವ ಹವಣಿಕೆಯ ನಾಟಕವನ್ನು ಅದೆಷ್ಟು ಆತ್ಮನಿಷ್ಠೆಯಿಂದ ಆಡಿದರೂ ಅದು ಯಶಸ್ವಿಯಾಗುವುದಿಲ್ಲವೆಂದು ಹೇಳಬಹುದು. ಪಾಕಿಸ್ತಾನವು ಅಮೆರಿಕೆಯನ್ನೀಗ ಬಹಳಷ್ಟು ಹೊಂದಿಕೊಂಡಿರ ಬೇಕಾಗಿ ಬಂದುದರಿಂದ ಅದು ತನ್ನ ಮೂಲಭೂತ ಸಿದ್ಧಾಂತಗಳಿಗನ್ನೇ ಬದಲಾಯಿಸಿಕೊಳ್ಳಬೇಕಾಗುತ್ತದೆ.

ಪಾಕಿಸ್ತಾನಕ್ಕೆ ಸೈನ್ಯ ಸಹಾಯ ನೀಡುತ್ತಿರುವುದನ್ನು ಮುಂದುವರಿಸುವುದು, ಯೋಜನೆಗಳಿಗೆ ಆರ್ಥಿಕ ಸಹಾಯ ನೀಡುವುದು ನೀರ ಸಂಗ್ರಹದ ಬಗ್ಗೆ ಅಮೆರಿಕನ್ ವಿಜ್ಞಾನಿಗಳಿಂದ ಪರಿಶೀಲನೆ—ಮೊದಲಾದುವುಗಳ ಉಲ್ಲೇಖವಿರುವ ಅವರಿಬ್ಬರ ಸಂಯುಕ್ತ ಪ್ರಕಟಣೆಯಲ್ಲಿ, ಕಾಶ್ಮೀರದ ಪ್ರಶ್ನೆಯ ಶೀಘ್ರ ಪರಿಹಾರದ ಬಗ್ಗೆಯೂ ಉಲ್ಲೇಖವಿದೆ. ಅಯೂಬಖಾನರು ಈ ಸಂಬಂಧದ ಪರಿಹಾರವು ಶೀಘ್ರಾತಿ ಶೀಘ್ರದಲ್ಲಾಗಬೇಕೆಂದು ಹೇಳಿದರೆಂದೂ ಕೆನ್ನೆಡಿ ಇದನ್ನು ಅನುಮೋದಿಸಿದರೆಂದೂ ತಿಳಿಯುತ್ತದೆ. ಪಾಕಿಸ್ತಾನದ ಮುಂದಿನ ಮುಂಗಡ ಪತ್ರವನ್ನು ಚುನಾಯಿತ ಪಾರ್ಲಿಮೆಂಟು ಮಂಜೂರು ಮಾಡುವುದೆಂದು ಅಯೂಬರು ಅಂದರಂತೆ. ಪಾಕಿಸ್ತಾನದಲ್ಲಿ ಪಾರ್ಲಿಮೆಂಟರಿ ಪದ್ಧತಿಯನ್ನು ಪುನಃ ಸ್ಥಾಪಿಸುವುದು ಅತಿ ಪ್ರಯಾಸ—ಇದೇ ಇನ್ನು ಆಗ ಬೇಕಾಗಿದೆ. ಏಶ್ಯದಲ್ಲಿ ಸರಕಾರವು ಅಸಮರ್ಥತೆ ಮತ್ತು ದಿವಾಳಿತೋರ ತನವನ್ನು ಪ್ರದರ್ಶಿಸುತ್ತದೆಂಬ ಆರೋಪದ ಮೇಲೆ ನಾಗರಿಕ ಆಡಳಿತೆಯನ್ನು ಪದಚ್ಯುತಗೊಳಿಸಿ ದಂಡಿನ ಆಡಳಿತೆ ಸ್ಥಾಪಿಸಿದ ರಾಷ್ಟ್ರಗಳು ಕೆಲವಿವೆ. ಇದಕ್ಕೆ ವಿದೇಶಗಳಿಂದ ಬಂದ ಸೈನಿಕ ಸಹಾಯವೇ ಕಾರಣವೆನ್ನಬಹುದು. ಇದನ್ನು ಮನವರಿಕೆ ಮಾಡಿಕೊಂಡರೂ ಅಮೆರಿಕೆಗೆ ತನ್ನ ಪ್ರಚಲಿತ ನೀತಿಯನ್ನು ಬದಲಾಯಿಸುವುದು ಅತಿ ದುಸ್ತರವೆನಿಸುವುದು. ಅದರೂ ಪಾಕಿಸ್ತಾನಕ್ಕೆ ಹೆಚ್ಚಿನ ಆರ್ಥಿಕ ಸಹಾಯವನ್ನು ನೀಡುವುದಾಗಿ ಅದು ಆಶ್ವಾಸನೆಯಿಂದ ಬಡತನ ಮತ್ತು ಪರಾವಲಂಬನೆಗಳ ಮೇಲೆ ತೀವ್ರ ಹೋರಾಟ ನಡೆಸುವುದಕ್ಕೆ ಅಮೆರಿಕೆಯು ಮುಕ್ತ ಹಸ್ತದಿಂದ ನೆರವು ನೀಡುವುದೆಂದು ನಂಬಬಹುದಾಗಿದೆ. ಅಯೂಬ ಖಾನರು ತಮ್ಮ ಕಾಶ್ಮೀರ ನೀತಿಯನ್ನು ಕೆನ್ನೆಡಿಯವರೆದುರಿಗೆ ಅದೆಷ್ಟೇ ಸಮರ್ಥಿಸಿಕೊಂಡಿರಲಿ, ಅದರಿಂದೇನೂ ಕೆಲಸವಾಗುವಂತಿಲ್ಲ. ಕಾಶ್ಮೀರದ ಪರಿಹಾರ ಮಾರ್ಗವನ್ನು ಪಾಕಿಸ್ತಾನವೇ ಮುಚ್ಚಿಬಿಟ್ಟಿದ್ದುದರಿಂದ ಅದರ ಹೊಣೆಗಾರಿಕೆಯೇ ಹೆಚ್ಚಿನದಾಗಿದೆ. ಇದಕ್ಕೆ ಪಾಕ್ ಧುರೀಣರು ತುಳಿಯುತ್ತ ಬಂದಿದ್ದ ಭಾರತ ವಿರೋಧಿ ನೀತಿಯೇ ಕಾರಣವಾಗಿತ್ತು. ಈ ಸಂಬಂಧದಲ್ಲಿ ಕೆನ್ನೆಡಿ ಮಾಡುವುದಾದರೂ ಏನನ್ನು?

ಅಧಿಕ ಆಹಾರೋತ್ಪಾದನೆ

ಯೋಜನೆಗಳು ಹಳ್ಳಿಗಳ ಮಟ್ಟದಿಂದ ಮೇಲಿನ ಮಟ್ಟಕ್ಕೆ ಹೋಗ ಬೇಕೆಂಬುದು ಯಾರೂ ಅನ್ನಬಹುದಾದ ಸಿದ್ಧಾಂತ. ಇಂತಹುದನ್ನು ಅರಿತುಕೊಳ್ಳಲು ಭಾರತಕ್ಕೆ ಎರಡು ಪಂಚವಾರ್ಷಿಕ ಯೋಜನೆಗಳನ್ನು ದಾಟ ಬೇಕಾಯ್ತು. ತೃತೀಯ ಯೋಜನಾವಧಿಯಲ್ಲಿ ಎಲ್ಲ ಹಳ್ಳಿಗಳನ್ನೂ ಸಮಾಜವಿಕಾಸಯೋಜನೆಯಡಿಯಲ್ಲಿ ತಂದು, ಗ್ರಾಮಪಂಚಾಯತು, ಸಹಕಾರಿಸಂಘಗಳ ಸಹಾಯದಿಂದ ಅಧಿಕ ಆಹಾರೋತ್ಪಾದನೆಯ ಗುರಿಯನ್ನು ಸಾಧಿಸ ಬೇಕು ಎಂಬ ಆಶಯ ಸಮಯೋಚಿತವಾಗಿದೆ. ಅಧಿಕ ಆಹಾರೋತ್ಪಾದನೆಯ ನಮ್ಮ ಪ್ರಾಥಮಿಕ ಆವಶ್ಯಕತೆಗಳಲ್ಲಿ ಅತಿ ಪ್ರಮುಖವೆಂಬುದರಿಂದ, ಈ ಕಡೆಗೆ ನಾವು ಉದಾಸೀನತೆಯನ್ನು ಪ್ರದರ್ಶಿಸುವುದಾಗದು. ಕಾರಣದಿಂದ ಸಮಾಜವಿಕಾಸ ಯೋಜನೆಗಳು ಅತ್ಯಂತ ಯಶಸ್ವಿಯಾಗ ಬೇಕಾದುದು ಅನಿವಾರ್ಯ. ಇದಕ್ಕಾಗಿ ಜಿಲ್ಲೆಯ ಆಡಳಿತೆಯ ಯಂತ್ರವನ್ನೇಪುನರ್ಘಟಿಸಬೇಕೆಂಬ ಕೇಳಿಕೆ ಹೊರಡುವುದೂ ನ್ಯಾಯೋಚಿತವೇ. ನಾವು ಸ್ವಾತಂತ್ರ್ಯಪಡೆದು ೧೪ ವರ್ಷಗಳಾಗುತ್ತ ಬಂದರೂ ನಮ್ಮೆಲ್ಲ ಆಡಳಿತೆಯು ಬ್ರಿಟಿಷ ಸಾಮ್ರಾಜ್ಯದ ಶಾಹಿಯ ಮಾದರಿಯಲ್ಲೇ ಮುಂದುವರಿಯುತ್ತಿದೆ. ಕೇಂದ್ರ ಮತ್ತು ರಾಜ್ಯಗಳಲ್ಲಿ ಚುನಾಯಿತ ಪ್ರತಿನಿಧಿ ಮಂಡಳಗಳಿರುವುವಾದರೂ ಜಿಲ್ಲೆಯ ಮಟ್ಟದ ಆಡಳಿತೆಯ ನಿರ್ವಹಣೆಗೆ ರಾಜ್ಯದ ಪ್ರತಿನಿಧಿಗಳು ಮಾತ್ರ ಇದ್ದಾರೆ. ಹಳ್ಳಿಗರಲ್ಲಿ ಉತ್ಸಾಹ—ಆಸಕ್ತಿಗಳನ್ನು ಕೆರಳಿಸಿ, ಅವರಲ್ಲಿ ಅಧಿಕ ಆಹಾರೋತ್ಪಾದನೆಯ ಕಡೆಗೆ ದೃಷ್ಟಿ ಕೇಂದ್ರೀಕರಿಸುವ ಕೆಲಸ ಈ ಆಡಳಿತೆ ಪುನರ್ಘಟನೆಯಿಂದಾಗ ಬಹುದೆಂಬ ನಿರೀಕ್ಷೆಯಿದೆ.

ಅಲ್ಲಲ್ಲಿಯ ಸುದ್ದಿಸಾರ

ಶ್ರೀ ಮಲ್ಯರಪಷ್ಟ್ಯಬ್ದಿ ಪೂರ್ತಿ ಸಮಾರಂಭ— ಅಖಿಲ ಭಾರತ ಕಾಂಗ್ರೆಸ್ಸಿನ ಮಾಜಿ ಕಾರ್ಯದರ್ಶಿಗಳೂ, 40 ವರ್ಷಗಳಿಂದ ಸದ್ದು ಗದ್ದಲಗಳಿಲ್ಲದೆ ಕಾಂಗ್ರೆಸ್ ಸೇವೆ ಸಲ್ಲಿಸುತ್ತಿರುವ ನಾಡಿನ ಮುತ್ಸದ್ದಿಗಳೂ ಆದ ಶ್ರೀ ಯು. ಶ್ರೀನಿವಾಸ ಮಲ್ಯರ ಷಷ್ಟ್ಯಬ್ದಿ ಪೂರ್ತಿ ಸಮಾರಂಭವು ಇದೇ ತಾ. 16ರಂದು ಮಂಗಳೂರಿನ ಕಸ್ತೂರ್‌ಬಾ ಮೆಡಿಕಲ್ ಕಾಲೇಜಿನ ಶ್ರೋತೃಮಂದಿರದಲ್ಲಿ ಜಿಲ್ಲಾ ಕಾಂಗ್ರೆಸ್ಸಿನ ಅಧ್ಯಕ್ಷ ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ವೈಭವಪೂರ್ವಕ ನೆರವೇರಿತು. ಮಂಗಳೂರಿನ ಕಾಂಗ್ರೆಸ್ ಕಾರ್ಯಕರ್ತರು ವ್ಯವಸ್ಥೆಗೊಳಿಸಿದ ಈ ಸಮಾರಂಭಕ್ಕೆ ಜಿಲ್ಲೆಯ ಎಲ್ಲಾ ಭಾಗಗಳಿಂದಲೂ ಕಾಂಗ್ರೆಸ್ ಕಾರ್ಯಕರ್ತರು ಆಗಮಿಸಿದ್ದರು. ಅತಿಥೇಯ ಸಮಿತಿಯ ವ್ಯವಸ್ಥಾಪಕ ಶ್ರೀ ಎಸ್. ಆರ್. ಕಿಣಿಯವರು ಸ್ವಾಗತ ಭಾಷಣ ಮಾಡಿ ಶುಭಾಶಯಗಳನ್ನು ಹಿಡಿದರಲ್ಲದೆ ಕಾಂಗ್ರೆಸ್ ಕಾರ್ಯಕರ್ತರ ಕಡೆಯಿಂದ ಅತಿಥಿ ಮಲ್ಯರಿಗೆ ಮಾನಪತ್ರವನ್ನು ಒಪ್ಪಿಸಿದರು. ಕೆನರಾ ಚೇಂಬರ್ ಆಫ್ ಕೋಮರ್ಸಿನ ಕಾರ್ಯದರ್ಶಿ ಶ್ರೀ ಪಂಚಮಲಾ ನರಸಿಂಗರಾಯರು ಶ್ರೀ ಮಲ್ಯರು ವಾಣಿಜ್ಯ ಬಂಧುಗಳಿಗೆ ಮಾಡಿದ ಸಹಾಯದ ಕುರಿತು ಮಾತನಾಡಿದರು. ಶ್ರೀ ಕೆ. ಕೆ. ಶೆಟ್ಟಿ, ಎಂ. ಎಲ್. ಸಿ.ಯವರು, ಶ್ರೀ ಮಲ್ಯರು ರಾಜಕೀಯ ರಂಗದಲ್ಲಿ ತೆರೆಯಮರೆಯಲ್ಲಿ ಕಾರ್ಯಮಾಡುತ್ತಿರುವ ಶಕ್ತಿವ್ಯಕ್ತಿಯೆಂದರಲ್ಲದೆ ಇವರ ರಾಷ್ಟ್ರ ಸೇವಾ ಕಾರ್ಯದಲ್ಲಿ ಸಹಕರಿಸುತ್ತಿರುವ ಶ್ರೀಮತಿ ಇಂದಿರಾ ಮಲ್ಯರನ್ನು ಕೊಂಡಾಡಿದರು. ನಗರ ಸಭಾಧ್ಯಕ್ಷ ಶ್ರೀಗಳಾದ ಮಚೇಲ್ ಶ್ರೀನಿವಾಸ ನಾಯಕ್, ಎಸ್ ನಸರಪ್ಪಯ್ಯ ಎಂ. ಎಲ್. ಸಿ, ಆರ್. ಕೆ. ಸಂಜೀವರಾವ್, ವೈ ಮಂಜಯ್ಯ ಶೆಟ್ಟಿ, ಎಂ. ಎಲ್. ಎ, ಕಾನೂನು ಮಂತ್ರಿ ಬಿ. ವೈಕುಂಠ ಬಾಳಿಗ, ಕಾಂಗ್ರೆಸ್ ಕಾರ್ಯದರ್ಶಿ ಎಂ. ರಮಾನಾಥ್, ಎಫ್. ಎಕ್ಸ್. ಡಿ. ಪಿಂಟೋ, ಎಂ. ಎಲ್. ಎ., ಎನ್. ಡಿ. ಸಾಮ್ರಾಜ್ಯ, ಕೆ. ದೂಮಪ್ಪ, ಎಂ. ಎಲ್ ಎ., ಡಾ! ಎಸ್. ಚಂಸ ಎಂ. ಎಲ್. ಸಿ. ಶ್ರೀಮತಿ ಒಕ್ಕೇವಿಯೂ, ಅಲ್ಬುಕರ್ಕ್, ಎಂ. ಡಿ. ಅಧಿಕಾರಿ, ಗಣಾನನರಾವ್ ಪಂಡಿತ್ ಎಂ. ಎಲ್. ಎ., ಮಂಜಪ್ಪ ಉಳ್ಳಾಲ್ ಎಂ. ಎಲ್. ಎ. ಮೊದಲಾದವರು ಶ್ರೀ ಮಲ್ಯರ ದಕ್ಷತೆ, ವ್ಯಕ್ತಿತ್ವ ಮೊದಲಾದ ಕುರಿತು ಮಾತನಾಡಿ, ಶುಭಪೇಯ ಕೋರಿದರು. ಬಳಿಕ ಶ್ರೀಮಲ್ಯರು ಮಾತನಾಡುತ್ತಾ ನೀವು ತೋರಿಸಿರುವ ಪ್ರೀತಿ ವಿಶ್ವಾಸಗಳಿಗೆ ನಾನು ಕೃತಜ್ಞತೆಯಿಂದ ಪ್ರತಿಯೊಬ್ಬನೂ ಪ್ರಯತ್ನಿಸಿ ನ್ಯಾಯಾನುಸಾರ ಮನಸ್ಸೊಲಿಸಿ ವ್ಯವಹರಿಸಿದರೆ ಕೆಲಸ ಸಾಧಿಸಬಹುದೆಂದೂ ಯಾರನ್ನೂ ದೂರಿ ಅಥವಾ ಯಾರ ಮೇಲಾದರೂ ರೇಗಿ ಫಲವಿಲ್ಲವೆಂದೂ ನಾನು ಪಾರ್ಲಿಮೆಂಟಿಗೆ ನಿಂತರೂ, ನಿಲ್ಲದಿದ್ದರೂ ಜನತೆಗಾಗಿ ದುಡಿಯುತ್ತೇನೆಂದೂ ಹೇಳಿದರು. ಅಧ್ಯಕ್ಷ ಶ್ರೀ ಟಿ ಎ. ಪೈಗಳು ಭಾಷಣಮಾಡುತ್ತಾ ಕೃತಜ್ಞತೆಯು ದೊಡ್ಡ ಗುಣ, ಅದು ನಮ್ಮ ಜಿಲ್ಲೆ

ಚಂದಾದಾರರಲ್ಲಿ ವಿನಂತಿ

ಇದೇ ಬರುವ ಆಗೋಸ್ತು ತಿಂಗಳಾಂತ್ಯಕ್ಕೆ "ನವಯುಗ"ದ ಆರನೆಯ ವರ್ಷವು ಅಂತ್ಯವಾಗಿ ಸಪ್ಟೆಂಬರ ಆದಿಯಿಂದಲೂ ಏಳನೆಯ ಹೊಸ ವರ್ಷಾರಂಭವಾಗುತ್ತದೆ. ಈ ಅವಧಿಗೆ ಚಂದಾ ಅವಧಿ ಮುಗಿಯುವವರೂ ಚಂದಾ ಹಣ ಬಾಕಿ ಇರುವವರೂ ದಯಮಾಡಿ ತಮ್ಮ ಬಾಕಿಯನ್ನು ಆದಷ್ಟು ಬೇಗನೇ ಕಳುಹಿಸಿಕೊಟ್ಟು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥಿಸುತ್ತೇವೆ.

—ಮೆನೇಜರ್.

ಯ ವಿಶಿಷ್ಟ ಸಂಸ್ಕೃತಿ ಆದನ್ನು ನಾವಿಂದು ತೋರಿಸಿದ್ದೇವೆ. ಮಲ್ಯರು ಒಬ್ಬ ಆದರ್ಶ ಸಂಸತ್ ಸದಸ್ಯರು. ಅವರ ವ್ಯಕ್ತಿತ್ವ ಬರಿಯ ಜಿಲ್ಲೆಯ ಸೊತ್ತಲ್ಲ. ಅದು ದೇಶದ ಸಂಪತ್ತು. ಅರುವತ್ತು ವರ್ಷ ತುಂಬಿದ ಶ್ರೀಮಲ್ಯರು ಸರ್ವ ಸಮಸ್ಯೆಗಳನ್ನು ತಿಳಿಯುವ ಶಕ್ತಿಯುಳ್ಳವರಾಗಿದ್ದಾರೆ ಎಂದು ಮುಂತಾಗಿ ಹೇಳಿ ಜಿಲ್ಲೆಯಲ್ಲಿ ಆಗ ಬೇಕಾದ ಅವಶ್ಯಕ ಕಾರ್ಯಗಳೇನೆಂಬುದನ್ನು ಸೂಚಿಸಿದರು. ಜಿಲ್ಲಾ ಕಾಂಗ್ರೆಸ್ ಸಂಘಟನಾ ಕಾರ್ಯದರ್ಶಿ ಶ್ರೀ ಬಿ. ನಾರಾಯಣ ನಾಯಕ್‌ರು ಅಂತ್ಯದಲ್ಲಿ ಆಭಾರ ಸೂಚಿಸಿದರು.

ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನ, ಮಂಗಳೂರು—ಈ ಭವನದ ಯೂನಿಯನ್ನಿನ ಕಾರ್ಯಕಾರಿ ಮಂಡಳಿಯ ಚುನಾವಣೆ ಮತ್ತು ಹೊಸಸ್ಟೆಲ್ ಫೃಷೆಕ್ಟ್ ಕಮಿಟಿ ಚುನಾವಣೆ ನಗ್ಸರೆ ತಾ. 15ನೇ ರಾತ್ರಿ ಶ್ರೀ ಎ. ವಿ. ಪೂಂಜ ಹೋಟೆಲಿನಲ್ಲಿ ಸುಪರಂಟೆಂಡೆಂಟ್ ಶ್ರೀ ಪಿ. ಯಸ್. ತಿಮ್ಮಪ್ಪ ಶೆಟ್ಟಿ ಅಧ್ಯಕ್ಷತೆಯಲ್ಲಿ ಜರಗಿತು. ಯೂನಿಯನ್ನಿನ ಜೊತೆ ಕಾರ್ಯದರ್ಶಿಗಳಾಗಿ ಶ್ರೀ ಯಸ್. ಸೀತಾರಾಮ ಶೆಟ್ಟಿ, ಮತ್ತು ಯಸ್. ಶ್ರೀಕರ ಶೆಟ್ಟಿ, ಮೆಸ್‌ಮೆನೇಜರ್‌ಗಳಾಗಿ ಶ್ರೀ ಬಿ. ರತ್ನಾಕರ ಅಳ್ವ ಮತ್ತು ಯಮ್. ಲಕ್ಷ್ಮೀನಾರಾಯಣ ರೈ, ಮತ್ತು ಸ್ಪೋರ್ಟ್ಸ್ ಸೆಕ್ರೆಟರಿಯಾಗಿ ಶ್ರೀ ವೈ. ರತ್ನಾಕರ ಶೆಟ್ಟಿ, ರೈಟ್ರೀರ ಮತ್ತು ರೀಡಿಂಗ್ ರೂಮ್ ಸೆಕ್ರೆಟರಿಗಳಾಗಿ ಶ್ರೀ ಜಿ. ಶಶಿಧರ ಶೆಟ್ಟಿ, ಮತ್ತು ಹಾಜರಿ ಸೆಕ್ರೆಟರಿಯಾಗಿ ಶ್ರೀ ಕೆ. ಲಕ್ಷ್ಮೀನಾರಾಯಣ ರೈ ಮತ್ತು ಶ್ರೀ ಯಮ್. ರಮಾಕಾಂತ ಶೆಟ್ಟಿ, ರೇಡಿಯೋ ಸೆಕ್ರೆಟರಿಗಳಾಗಿ ಶ್ರೀ ಕೆ. ಸೀತಾರಾಮ ರೈ, ಹೋಸ್ಟೆಲ್ ಪತ್ರಿಕೆಯ ಸಂಪಾದಕರಾಗಿ ಶ್ರೀ ಕೆ. ಜಯರಾಮ ಶೆಟ್ಟಿ ಮತ್ತು ಶ್ರೀ ಚಂದ್ರಶೇಖರ ಹೆಗ್ಡೆ, ಮತ್ತು ಫ್ರಿಫೆಕ್ಟ್ ಕಮಿಟಿ ಮೆಂಬರರಾಗಿ ಶ್ರೀ ಐ. ಭಾಸ್ಕರ ಶೆಟ್ಟಿ, ಶ್ರೀ ಸುಧಾಕರ ಶೆಟ್ಟಿ, ಶ್ರೀ ಭಾಸ್ಕರ ಹೆಗ್ಡೆ ಮತ್ತು ಶ್ರೀ ನಾಜೀವ ರೈ, ಮತ್ತು ಕೋಪರೇಟಿವ್ ಸೊಸೈಟಿಯ ಪೈಸ್ ಪ್ರೆಸಿಡೆಂಟರಾಗಿ ಶ್ರೀ ಯಮ್. ಶಂಕರ ಶೆಟ್ಟಿ, ಮತ್ತು ಸೆಕ್ರೆಟರಿಯಾಗಿ ಶ್ರೀ ಕೆ. ಸದಾಶಿವ ಶೆಟ್ಟಿ ಮತ್ತು ಇನ್ನಿತರೆ ಎಂಟು ಜನರನ್ನು ಡೈರೆಕ್ಟರರಾಗಿ ಮತ್ತು "ರುಪೀ" ಫಂಡ್ ಸೆಕ್ರೆಟರಿಗಳಾಗಿ ಶ್ರೀ ಚಂದ್ರಶೇಖರ ಹೆಗ್ಡೆ ಮತ್ತು ಶ್ರೀ ಶಶಿಧರ ಶೆಟ್ಟಿನ್ನು ಸರ್ವಾನುಮತದಿಂದ ಆರಿಸಲಾಯಿತು.

ಹೊಸ ವಿದ್ಯಾರ್ಥಿಗಳಿಗೆ ರೂಮ್‌ಗಳನ್ನು ಹಂಚಿದ ತರುವಾಯ ಸುಪರಂಟೆಂಡೆಂಟರು ಭವನದ ನಿಯಮಗಳನ್ನು ವಿವರಿಸಿದ್ದಲ್ಲದೆ ಭವನದ ಎಲ್ಲಾ ನಿವಾಸಿಗರು ಭವನದ ಏಳಿಗೆಗೆ ಮತ್ತು ಶ್ರೇಯಸ್ಸಿಗೆ ದುಡಿಯಬೇಕಾಗಿ ಕೇಳಿಕೊಂಡರು. ಕಾರ್ಯದರ್ಶಿ ಶ್ರೀ ಸೀತಾರಾಮ ಶೆಟ್ಟರು ಧನ್ಯವಾದಗಳನ್ನರ್ಪಿಸಿದರು.

ಬ್ರಹ್ಮಕಲಶಾಭಿಷೇಕ—ಶ್ರೀ ನಿತ್ಯಾನಂದ ಭಜನಾ ಮಂಡಳಿ ಕಂಬಳಕಟ್ಟೆ ಕೊಡಪೂರು ಮತ್ತು ಊರ ಪರಪೂರ ಮಹನೀಯರ ಪ್ರೋತ್ಸಾಹದಿಂದ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಅಷ್ಟಬಂಧ ಪ್ರತಿಷ್ಠಾದಿ ಬ್ರಹ್ಮಕಲಶಾಭಿಷೇಕವು ತಾ. 9ರಿಂದ 11ರ ತನಕ ವಿವಿಧ ಕಾರ್ಯಕ್ರಮಗಳೊಂದಿಗೆ ವಿಧಿಪೂರ್ವಕ ಯಶಸ್ವಿಯಾಗಿ ಕೊನೆಗೊಂಡಿತು. ಶ್ರೀ ನಿತ್ಯಾನಂದ ಭಜನಾ ಮಂಡಳಿ ಮತ್ತು ಪಂಜುರ್ಲಿ ದೇವಸ್ಥಾನದ ಪ್ರತಿನಿಧಿಗಳಾದ ಶ್ರೀ ಕೆ. ಗೋಪಾಲ ಶೆಟ್ಟರು ಈ ಕಾರ್ಯಗಳನ್ನು ವಿನಿಯೋಗಿಸಿ ನೆರವೇರುವಂತೆ ಶ್ರಮಿಸಿದ ಶ್ರೀ ಸುತ್ತೂರು ಯಜ್ಞ ನಾರಾಯಣ ತಂತ್ರಿಗಳನ್ನೂ ವೈದಿಕ ಮಂಡಳಿಯನ್ನೂ ಮುಂದಿನ ಪೂಜಾ ವಿನಿಯೋಗವನ್ನು ಪಹಿಸಿಕೊಂಡ ಶ್ರೀ ವಾದಿರಾಜ ಉಪಾಧ್ಯಾರನ್ನೂ ಅಭಿನಂದಿಸಿದರು. ಶ್ರೀ ತಂತ್ರಿಗಳು ಜನಾಸಹಕಾರ ಕೋರಿ ಮಾತನಾಡಿದರು. ವೈದ್ಯ ಭೂಷಣ ಶ್ರೀ ಯು. ಬಿ. ಆಚಾರ್ಯರು ತನ್ನ ಅಧ್ಯಕ್ಷತಾ ಭಾಷಣ, ಖಾಸಗೀ ಸಂಸ್ಕೃತಿಯದ್ಯೋತಕಗಳಾದ ಈ ದೇವ ಮಂದಿರಗಳನ್ನು ಉಳಿಸಿಕೊಂಡು ಬರುವ ಕರ್ತವ್ಯದ ಕಡೆಗೆ ಜನತೆ ದೃಷ್ಟಿ ಹರಿಸಿದ್ದು ಕಾಲೋಚಿತವಾಗಿದೆಂದು ಹೇಳಿದರು.

ಉಡುಪಿ ತಾ ಖಾಸಗಿ ಪ್ರಾ. ಶಾಲಾ ಮೆನೇಜರರ ಸಭೆಯು— ಇದೇ ತಾ. 16ರಂದು ನೋಡರ್ಸ್ ಹಾ. ಎ. ಶಾಲೆಯಲ್ಲಿ ಶ್ರೀ ಎ. ಜಿ. ಅಲ್ಸೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಜಿಲ್ಲಾ ಸಂಘದ ಕಾರ್ಯದರ್ಶಿ ಶ್ರೀ ಕುರುಕಾಲು ಗಣಪಯ್ಯ ಸೆಟ್ಟರು ಸಭೆ ಕರೆದ ಉದ್ದೇಶವನ್ನು ವಿವರಿಸುತ್ತಾ ಖಾಸಗಿ ಶಾಲೆಗಳ ಭವಿಷ್ಯಕ್ಕೆ ಹಾನಿಯನ್ನುಂಟುಮಾಡುವ ಸರಕಾರಿ ಕಾನೂನಿನ ಕೆಲವೊಂದು ತಿದ್ದುಪಡಿಗಳನ್ನು ಪ್ರತಿಭಟಿಸುವ ಅವಶ್ಯಕತೆ ಇದೆಯೆಂದೂ, ಜಿಲ್ಲೆಯ ಖಾಸಗಿ ಶಾಲೆಗಳಲ್ಲಿ ⅓ ಅಂಶ ಶಾಲೆಗಳು ಉಡುಪಿ ತಾಲೂಕಿನಲ್ಲಿರುವುದರಿಂದ ತಾಲೂಕು ನೆಲೆಯಲ್ಲಿ ಈ ಪ್ರಶ್ನೆಯನ್ನು ಮುಂದಾಗಿ ಚರ್ಚಿಸಿ ನಿರ್ಧಾರಕ್ಕೆ ಬರಲು ಅನುಕೂಲವಾಗುವಂತೆ ಇದೇ ತಾ. 23ರಂದು ಉಡುಪಿಯಲ್ಲಿ ಜರಗಲಿರುವ ಜಿಲ್ಲಾ ಖಾಸಗಿ ಶಾಲಾ ಮೆನೇಜರರ ಮಹಾ ಸಭೆಯ ಪೂರ್ವಭಾವಿಯಾಗಿ ಈ ಸಭೆಯನ್ನು ಕರೆದುದಾಗಿ ಎಂದು ಹೇಳಿದರು. ಅಧ್ಯಕ್ಷರು ಈ ವಿಚಾರದಲ್ಲಿ ಜಿಲ್ಲಾ ಸಂಘದ ಕಾರ್ಯಕಾರಿ ಸಮಿತಿಯ ನಿಲುಮೆಯನ್ನು ವಿವರಿಸಿ ಸದಸ್ಯರ ಸ್ಪಷ್ಟ ಅಭಿಪ್ರಾಯವನ್ನು ಕೋರಿದರು. ಶ್ರೀಗಳಾದ ಎಚ್. ಆರ್. ಹೆಗ್ಡೆ, ಶ್ರೀನಿವಾಸ ರಾವ್, ಕೆ. ಜಗನ್ನಾಥ ನಾಯಕ್, ಕಲ್ಲೂರರೇ ಮೊದಲಾದವರು ತಮ್ಮ ಅಭಿಪ್ರಾಯವನ್ನು ಇತ್ತ ಮೇಲೆ ಅಧ್ಯಕ್ಷರು ಮಂಡಿಸಿದ (1)ಪ್ರಾಥಮಿಕ ಶಾಲೆಗಳಿಗೆ ಸಂಬಂಧಿಸಿದ ಮನ್ರಾಸು ವಿದ್ಯಾನಿಯಮಗಳಿಗೆ ಮೈಸೂರು ಸರಕಾರ ತಂದಿರುವ ತಿದ್ದುಪಡಿಗಳನ್ನು ಅಕ್ಷೇಪಿಸಿ ಕಾರ್ಯಕಾರಿ ಸಮಿತಿಯು ಮಾಡಿರುವ ನಿರ್ಣಯವನ್ನು ಈ ಸಭೆ ಬೆಂಬಲಿಸುತ್ತಿದೆ. 2) ಜಿಲ್ಲಾ ಸಂಘದ ಕಾರ್ಯಕಾರಿ ಸಮಿತಿಯ ನಿವೇದನೆಯನ್ನು ಮೈಸೂರು ಸರಕಾರ ಅಂಗೀಕರಿಸಿದ್ದರೆ ಸರಕಾರ ತಂದಿರುವ ತಿದ್ದುಪಡಿಗಳ ಕೃಮ ಬಿಂದಾಧನೆಗಳಲ್ಲಿರುವ ಮೋಸ ದೋಷಗಳನ್ನು ಹಿಡಿದೆತ್ತಿ ರಿಟ್ ಅರ್ಜಿ ಸಲ್ಲಿಸುವ ವಿಷಯವನ್ನು ತಜ್ಞರಿಂದ ಪರಿಶೋಧಿಸಿ ತಕ್ಕ ಕಾರ್ಯಕ್ರಮ ಕೈಗೊಂಡು ನ್ಯಾಯ ದೊರಕಿಸಿಕೊಳ್ಳಬೇಕೆಂದು ಈ ಸಭೆ ನಿರ್ಣಯಿಸುತ್ತದೆ. ಕಾನೂನು ಪ್ರಕಾರ ಅಸಾಧ್ಯವಾದರೆ ಈ ಶಾಲೆಗಳ ಆಡಳಿತವನ್ನು ಸರಕಾರವೇ ವಹಿಸಬೇಕೆಂದು ಈ ಸಭೆ ಕೇಳಿಕೊಳ್ಳುತ್ತದೆ.ಎಂಬ ನಿರ್ಣಯಗಳು ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟವು.

ಜಿಲ್ಲಾ ಖಾಸಗಿ ಪ್ರಾ. ಶಾಲಾ ಮೆನೇಜರರ ಸಂಘ— ಖಾಸಗಿ ಶಾಲೆಗಳ ಭವಿಷ್ಯಕ್ಕೆ ಹಾನಿಯನ್ನುಂಟುಮಾಡುವ ಸರಕಾರಿ ಕಾನೂನಿನ ಕೆಲವೊಂದು ತಿದ್ದುಪಡಿಗಳಿಂದಾಗಿ, ಮುಖ್ಯವಾಗಿ ಮೈಂಟೆನೆನ್ಸ್ ಗ್ರಾಂಟು ಸಿಗದೆ ಖಾಸಗಿ ಶಾಲೆಗಳನ್ನು ನಡೆಸುವುದು ಅಸಾಧ್ಯವಾದ ಕಾರಣ ಈ ಬಗ್ಗೆ ಕೊನೆಯ ನಿರ್ಧಾರ ಮಾಡುವರೆ ಜಿಲ್ಲಾ ಮೆನೇಜರರ ಸಂಘದ ವಿಶೇಷ ಮಹಾ ಸಭೆಯನ್ನು ಇದೇ ತಾ. 23—7—61ನೇ ಆದಿತ್ಯವಾರ ಬೆಳಗ್ಗೆ 11 ಗಂಟೆಗೆ ಉಡುಪಿ ಮುನ್ಸಿಪಲ್ ಮಹಾತ್ಮಾಗಾಂಧಿ ಹಾ. ಎ. ಶಾಲೆಯಲ್ಲಿ ಜರಗಿಸಬೇಕಾಗಿ ನಿರ್ಧರಿಸಲಾಗಿದೆ. ಇದಕ್ಕೆ ಜಿಲ್ಲೆಯ ಎಲ್ಲಾ ಮೆನೇಜರರೂ ತಪ್ಪದೆ ಬರಬೇಕಾಗಿಯೂ ಈ ತಿದ್ದುಪಡಿಯಿಂದ ಬಾಧಕ ಹೊಂದುವ ಅಂದರೆ ತಾ. 22—5—60ರ ನಂತರ ಕೆಲಸಕ್ಕೆ ಸೇರಿದ ಅಧ್ಯಾಪಕರ ಹೆಸರು ಗ್ರೇಡು ನೇಮಿಸಲ್ಪಟ್ಟ ತಾರೀಕು ಇತ್ಯಾದಿ ವಿವರಗಳನ್ನು ಕೂಡಲೇ ಕಾರ್ಯದರ್ಶಿಗಳಿಗೆ ಕಳುಹಿಸಿಕೊಡಬೇಕಾಗಿಯೂ ನ್ಯಾಯ ದೊರಕಿಸಲು ಹೋರಾಡುವರೆ ಹೆಚ್ಚಿನ ಹಣದ ಸಂಗ್ರಹ ಅಗತ್ಯವಾದುದರಿಂದ ಸಂಘದ ಬಾಕಿಯಾದ ವರ್ಗಣವನ್ನು ಎಲ್ಲರೂ ತಪ್ಪದೆ ಪಾವತಿಮಾಡಬೇಕಾಗಿಯೂ ವಿನಂತಿ. ಈ ಮಹಾ ಸಭೆಯನ್ನು ಮಂಗಳೂರು ನಗರಸಭೆಯ ಮಾಜಿ ಅಧ್ಯಕ್ಷ ಶ್ರೀ ಕೆ. ಸೂರ್ಯನಾರಾಯಣ ಅಡಿಗರು ಉದ್ಘಾಟಿಸಲಿರುವರು. ಸಭಾಧ್ಯಕ್ಷತೆಯನ್ನು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶ್ರೀ ಟಿ. ಎ. ಪೈಗಳು ವಹಿಸಲಿರುವರು.

ಕುರುಕಾಲು ಗಣಪಯ್ಯ ಸೆಟ್ಟಿ
ಕಾರ್ಯದರ್ಶಿ, ಕುಂಜಾರುಗಿರಿ ಪೋಸ್ಟು.

ಅಯೂಬಖಾನ್

ದಂಡಿನಾಳಕೆಯ ನಾಯಕರಾಗಿ ಪಾಕಿಸ್ತಾನದ ಅಧ್ಯಕ್ಷರಾಗಿ ಬಂದ ಅಯೂಬ ಖಾನ್ ನೆಹರುಗಿಂತ ಮುಂದಾಗಿ ಕೆನ್ನೆಡಿಯವರನ್ನು ಕಂಡರು; ತಮ್ಮ ಗೋಳನ್ನು ತೋಡಿಕೊಂಡರು. ಪ್ರಜಾಪ್ರತಿನಿಧಿ ಸಭೆಯನ್ನು ಕೆಲವೇ ಸಮಯದಲ್ಲಿ ರಚಿಸಲಾಗುವುದೆಂಬ ವಿಶ್ವಾಸ ವ್ಯಕ್ತ ಪಡಿಸಿದರು. ಸ್ವಾತಂತ್ರ್ಯ ನಂತರ ಪಾಕಿಸ್ತಾನದಲ್ಲಿ ಹಲವಾರು ಸಂಕಾರಗಳು ತಿಂಗಳಗಳೊಳಗೆ ಪತನಗೊಂಡಿರುವುದನ್ನೂ ದಂಡಿನಾಳಕೆಯೇ ಅಲ್ಲಿ ಕೆಲವರ್ಷಗಳಿಂದ ನಿಂತಿದ್ದು ಅಲ್ಲಿ ತುಸು ನೆಮ್ಮದಿ ಕಂಡಿರುವುದನ್ನೂ ಅವಲೋಕಿಸುವಾಗ, ಪಾರ್ಲಿಮೆಂಟರಿ ಪದ್ಧತಿಯು ಅಲ್ಲಿ ಸ್ಥಾಪಿತವಾಗುವುದೆಂದು ಹೇಳುವಲ್ಲಿ ಸಂದೇಹವೇಳುವುದು ರಾಜಕಾರಣವೇ ಸುಪ್ತಾವಸ್ಥೆಗೆ ಸಂದಲ್ಲಿ ರಾಜಕೀಯವಾದರೂ ಎಲ್ಲಿರಬೇಕು?

ಜಾನ್ ಕೆನ್ನೆಡಿ

ಅಮೆರಿಕೆಯಲ್ಲಿ ಆಡಳಿತೆಯ ಪರಿವರ್ತನೆಯೊಂದಿಗೆ ನೀತಿಯ ಪರಿವರ್ತನೆಯೂ ಆಯಿತು. ಆದರೆ, ಹಿಂದಿನ ಎಂಟು ವರ್ಷಗಳಿಂದ ಮುಂದುವರಿದುಕೊಂಡು ಬಂದ ನೀತಿಯನ್ನು ಒಮ್ಮಿಂದೊಮ್ಮೆಲೇ ತಡೆ ಹಿಡಿಯುವುದು ಕೆನ್ನೆಡಿಯವರಿಗೆ ಮಾತ್ರವಲ್ಲ, ಎಲ್ಲರಿಗೂ ಕಷ್ಟವೆನಿಸುವುದು. ಮಿಲಿಟರಿ ಸಹಾಯ ನೀಡುವ ಧೋರಣೆಯ ಜನಕ ಡಲ್ಲೆಸರು ಇಂದು ನಮ್ಮ ಕಣ್ಣಮುಂದಿಲ್ಲವಾದರೂ ಅವರ ನೀತಿಯ ಪರಿಣಾಮವನ್ನು ನಾವೆಲ್ಲರೂ ಕಾಣುತಿದ್ದೇವೆ. ಕಾಶ್ಮೀರದ ಪರಿಹಾರದಲ್ಲಿ ಭಾರತವೇ ತೊಡಕಾಗಿದೆಯೆಂದ ಅಯೂಬರ ಮಾತನ್ನು ಕೇಳಿ ಕೆನ್ನೆಡಿ ತಲೆದೂಗಿದರು; ತಲೆದೂಗಾಟದ ಅರ್ಥವನ್ನು ತನಗೆ ಬೇಕಾದಂತೆ ಅಯೂಬರು ಮಾಡಿಕೊಂಡರೆ, ಅದರಲ್ಲಿ ಕೆನ್ನೆಡಿಯವರ ತಪ್ಪೇನು?

ಶ್ರೀನಿವಾಸ ಮಲ್ಯ

ಡೆಲ್ಲಿಯಲ್ಲಿ ಕೂತರೂ ದಕ್ಷಿಣ ಕನ್ನಡ ಜಿಲ್ಲೆಯಿಂದ ಆರಿಸಿ ಹೋಗುವ ಕಾಂಗ್ರೆಸ್ ಸದಸ್ಯ ಯು. ಶ್ರೀನಿವಾಸ ಮಲ್ಯನವರು ಇಡಿಯ ಜಿಲ್ಲೆಯ ದೃಷ್ಟಿಯಿಂದ ಕಾರ್ಯಮಾಡುವವರು. ಅವರು ಎರಡು ಚುನಾವಣೆಗಳಲ್ಲಿಯೂ ಗೆದ್ದು ಬರುವಂತೆ ಮತದಾನ ನೀಡಿದ ಮತದಾರರಲ್ಲಿ ಹೆಚ್ಚಿನವರು ಅವರ ಮುಖವನ್ನು ನೋಡಿರಲಾರರು. ಮಲ್ಪೆ ಬಂದರದ ಯೋಜನೆಯು ಅಮೂರ್ತವಾಗಿಯೇ ಉಳಿದರೂ ಮಂಗಳೂರು ಬಂದರ, ನೇತ್ರಾವತಿ ಸೇತುವೆ, ಸುರತ್ಕಲ್ ಇಂಜನಿಯರಿಂಗ್ ಕಾಲೇಜು ಹೀಗೆಗೆಯೇ ಪ್ರತಿಯೊಂದೂ ಮಲ್ಯರಿಂದಲೇ ಆದುದೆಂದು ಹೇಳುತ್ತಾರೆ ಅವರು ಕರೆದುಕೊಂಡ ಮಂತ್ರಿಗಳು. ಕೇಂದ್ರ ಸರಕಾರದ ಮೇಲೆ ಪ್ರಭಾವ ಬೀರಬಲ್ಲ ಶ್ರೀ ಮಲ್ಯರು ಜಿಲ್ಲೆಯ ಶಕ್ತಿ—ಎಂತಲೇ ಅವರ ಪ್ರಸ್ಪಷ್ಟಬುದ್ಧಿ ಸೂರ್ತಿಯ ಮೇಳೆ ಎಲ್ಲರೂ ಅವರಿಗೆ ಶತಾಯುಷ್ಯವನ್ನು ಪ್ರಾರ್ಥಿಸಿಕೊಂಡರು.

ಅಜ್ರಿಹರೆ— ಇದೇ ತಾ. 14ರಂದು ಪೋಸ್ಟಲ್ ಇನ್ಸ್‌ಪೆಕ್ಟರ್ ಶ್ರೀ ಬಿ. ಆರ್. ಜೋಶಿಯವರ ಅಧ್ಯಕ್ಷತೆಯಲ್ಲಿ ಅಜ್ರಿ ಪಂಚಾಯತಿನ ನೆರವಿನಿಂದ ಬ್ರಾಂಚ್ ಪೋಸ್ಟ್ ಆಫೀಸು ಉದ್ಘಾಟಿಸಲ್ಪಟ್ಟಿತು.

ವಿದೇಶ ಪ್ರಯಾಣ—ಮಂಗಳೂರಿನ ಜನಪ್ರಿಯ ಡಾಕ್ಟರರೂ ಮಂಗಳೂರು ಕೋಟರಿ ಕ್ಲಬ್ಬಿನ ಅಧ್ಯಕ್ಷರೂ ಆದ ಡಾ. ಎಂ. ಡಿ.ಅಡಪ್ಪರು ಪೇರಿಸ್‌ನಲ್ಲಿ ಈ ತಿಂಗಳ ಅಂತ್ಯದಲ್ಲಿ ಜರಗಲಿರುವ VII ನೇ ಅಂತಾರಾಷ್ಟ್ರೀಯ Otorhinolaryngology ಸಮ್ಮೇಲನದಲ್ಲಿ ಭಾಗವಹಿಸಲು ಸಪತ್ನೀಕರಾಗಿ ಇದೇ ತಾ. 13ರಂದು ತೆರಳಿರುತ್ತಾರೆ. ಅಲ್ಲಿಂದ ಅವರು ಜರ್ಮನಿ, ಯು. ಕೆ. ಮತ್ತು ಇತರ ರಾಷ್ಟ್ರಗಳ ಬೇರೆ ಬೇರೆ ಆಸ್ಪತ್ರೆಗಳನ್ನು ಸಂದರ್ಶಿಸಲಿರುವರು.

ಪೆಡುಬಳಿತ್ತೂರು—ಪ್ರಾಥ ಪ್ರಾ. ಶಾಲೆಯಲ್ಲಿ ತಾ. 3ರಂದು ಕಡ್ಡಾಯ ಶಿಕ್ಷಣ ಪ್ರಚಾರ ಸಭೆಯು ಶ್ರೀ ಗೋಪಾಲಕೃಷ್ಣ ಪೈಯವರ ಅಧ್ಯಕ್ಷತೆಯಲ್ಲಿ ಜರಗಿ ಶ್ರೀ ಪೂಲ್ಯ ದೇಜು ಸೆಟ್ಟರ ಭಾಷಣವಾಯಿತು. ಅನಂತರ ಶಾಲಾ ಶ್ರೇಯೋಭಿವೃದ್ಧಿ ಸಮಿತಿ ಚುನಾವಣೆ ನಡೆಯಿತು.

ಉಡ್ಪಿ ಡಿ. ಮು. ಕೋರ್ಟಿನಲ್ಲಿ

O S. 50/1961.

ಪುಟ್ಟಮರಿ ಮಂಜ —ವಾದಿ.

ಮತ್ತು

ಅಬ್ಬಕ್ಕ ಶೆಡ್ತಿ ಕೂಡ —ಪ್ರತಿವಾದಿರು.

ಇವರೊಳಗೆ

ಪ್ರತಿವಾದಿರು: 8) ಸದಾಶಿವ ಶೆಟ್ಟಿ— ಅಬ್ಬಕ್ಕ ಶೆಡ್ತಿ ಮಗ 9) ಶಾರದ ಶೆಡ್ತಿ, 10) ಮೋನಪ್ಪ ಶೆಟ್ಟಿ, 11) ಸೀತಾರಾಮ, 12) ಸೀತಮ್ಮ —ರುದ್ರಮ್ಮ ಶೆಡ್ತಿ ಮಕ್ಕಳು.

ಉಡ್ಪಿ ತಾಲ್ಲೂ ಹನೆಹಳ್ಳಿ ಗ್ರಾಮದ ಕೂರಾಡಿಯಲ್ಲಿರುವವರು.

ಸದ್ರಿ ಪ್ರತಿವಾದಿರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ:

ವಾದಿಯು ಇಲ್ಲಿ ಕೂಡಾ ವಗೈರೆರ ಮೇಲೆ ಈದಿನ ಅಸಲು ಬಡ್ಡಿ ಕೇಳಿ ವಗೈರೆ ಮಾಡಿದ ಮೇಲ್ಕಂಡ ದಾವೆಯು ತಾರೀಕು 27—7—61 ಕ್ಕೆ ನಾಮ ನೋಟೀಸಿನ ಬಗ್ಗೆ ಯಿಟ್ಟಿದೆ. ಆ ಕುರಿತು ನಿಮಗೇನಾದರೂ ಉದಾಪರಿಸುವಂತಾದಿದ್ದರೆ ಆ ದಿವ್ಸ ಹಗಲು 11 ಗಂಟೆಗೆ ಸರಿಯಾಗಿ ಈ ಕೋರ್ಟು ಮುಂದೆ ಬಂದು ಹಾಜ್ರಾಗಿ ಜ್ಞಾಪೀರುಮಾಡಿಕೊಳ್ಳಬೇಕು. ತಪ್ಪಿದ್ರೆ ನಿಮ್ಮ ಗೈರ್‌ಹಾಜರಿಯಿಂದ ತೀರ್ಮಾನಿಸಲ್ಪಡುವುದು.

(By order of the Court.)

P. N. Krishnamurthi Rao,
Advocate for plaintiff.
Udipi, S. K. Dated 10-7-61

ಉಡ್ಪಿ ಡಿ. ಮು. ಕೋರ್ಟಿನಲ್ಲಿ

O. P. No. 32/1961.

ಮೈರೆ ಸೆಡ್ತಿ-ಮಂಜಮ್ಮ ಸೆಡ್ತಿ ಮಗಳು-ಬೊಮ್ಮರಬೆಟ್ಟು ಗ್ರಾಮದ ಮೂಲ್ಯಾ. —ಅರ್ಜಿದಾರಳು.

ಮತ್ತು

1) ಆನಂದಿ ಬ್ಯಾ- B. ಸಾಧು ಸೆಟ್ಟಿ ವಿಧವೆ 2) ಗೀತಾ 3) ಸದಿತಾ 4) ಸಣ್ಣಮಗು —ಮೈಸರ್ರು 1ನೇ ಎದ್ರಿ ಮಕ್ಕಳು.

ಗಾರ್ಡಿಯನ್ ತಾಯಿ- 1ನೇ ಎದ್ರಿಳು ಬೊಮ್ಮರಬೆಟ್ಟು ಗ್ರಾಮದ ಮೂಲ್ಯಾ—ಎದ್ರಿರು.

ಇವರೊಳಗೆ

ಅರ್ಜಿದಾರಳ ಮಗ, 1ನೇ ಎದ್ರಿಳ ಗಂಡ 2ರಿಂದ 4ನೇ ಎದ್ರಿರ ತಂದೆ ಮೃತ. B. ಸಾಧು ಸೆಟ್ಟಿಗೆ ಪೋಲಿಸ ನಂಬ್ರ 141100ರ ಪ್ರಕಾರವೂ ಪೋಲಿಸ ನಂಬ್ರ 473669ರ ಪ್ರಕಾರವೂ ಬಜಾ ಐವಜಿನಲ್ಲಿ ಅರ್ಜಿದಾರಳಿಗೆ ಸದ್ರಿ ಸಾಧು ಸೆಟ್ಟಿ ವಾರ್ಸದಾರಳಿಗಾಗಿ ಸಿಕ್ಕತಕ್ಕ ಐವಜು ರೂ. 341.60ಕ್ಕೆ ಸಕ್ಸೆಶನ್ ಸರ್ಟಿಫಿಕೇಟು ಕೊಡಬೇಕಾಗಿ ಕೇಳಿ ದಾಖಲು ಮಾಡಿದ ಅರ್ಜಿಯು ತಾ 29—7—61ಕ್ಕೆ ಇಟ್ಟಿದೆ ಆ ಬಗ್ಗೆ ಅಕ್ಷೇಪಿಸತಕ್ಕವರು ಸದ್ರಿ ದಿವಸ ಪೂರ್ವಾಹ್ನ ಘಂಟೆ 10ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಮೇಲಿನ ಅರ್ಜಿಯಲ್ಲಿ ಹಾಜರಾಗಿ ಜ್ಞಾಪೀರುಮಾಡಿಕೊಳ್ಳತಕ್ಕದ್ದು.

(Sd) GRATIAN C REGO,
Pleader for Petitioner

ಉಡ್ಪಿ, 17—7—1961

ನಿಮಗೂ ಗೊತ್ತಿರಲಿ

ಗುಜರಾತದ ಮುಖ್ಯಮಂತ್ರಿ ಮೆಹೆತಾ

ಎಲ್ಲೋಪಥಿ ವೈದ್ಯರಾದರೂ ಪ್ರಕೃತಿ ಚಿಕಿತ್ಸೆಯ ಆರಾಧಕ ಮೆಹೆತಾ ಕೇಳುತ್ತಾರೆ. ಔಷಧಿಗಳಿಗಾಗಿ ನೂರಾರು ರೂಪಾಯಿ ಸುರಿಯುವವರು ೯—೧೦ ರೂಪಾಯಿ ಗಳ ಮಾರಾಟ ತೆರಿಗೆಯನ್ನು ಏಕೆ ತಪ್ಪಿಸುತ್ತಾರೆ?

ಹತ್ತು ವರುಷಗಳ ವರೆಗೆ ಪದವಿಗಳಲ್ಲಿ ವಿರಾಜ ಮಾನರಾದ ಕಾಂಗ್ರೆಸ್ಸಿಗರು ಸ್ವೇಚ್ಛೆಯಿಂದ ನಿವೃತ್ತರಾಗ ಬೇಕೆಂದು ಕಾಂಗ್ರೆಸ್ ವರಿಷ್ಠರ ಮುಖದಿಂದ ಹೊರ ಬಿದ್ದುದರಿಂದ ಎಲ್ಲ ರಾಜ್ಯಗಳಲ್ಲಿಯೂ ಜಟಿಲತೆ ಅನುಭವಕ್ಕೆ ಬರ ತೊಡಗಿದೆ. ಗುಜರಾತದ ಮುಖ್ಯ ಮಂತ್ರಿ ಡಾ। ಜೀವರಾಜ ಮೆಹತಾರು ಕೂಡಾ ಈ ನಿಯಮವನ್ನು ವಿಶಿಷ್ಟ ವಿಧಾನ ಸಭಾಸ್ಥಾನಕ್ಕೆ ಮುಂದಿನ ಸಾರ್ವತ್ರಿಕಚುನಾವಣೆಯಲ್ಲಿ ಸ್ಪರ್ಧಿಸುವುದಾಗಿ ಘೋಷಣೆಯನ್ನೂ ಹೊರಡಿಸಿದ್ದಾರೆ. ಕಾಂಗ್ರೆಸ್ ಅಧ್ಯಕ್ಷ ಸಂಜೀವರೆಡ್ಡಿಯವರಾದರೂ ಈ ವಿಷಯವನ್ನು ಉದಾರ ನೀತಿಯಿಂದ ಅನ್ವಯಿಸುವಂತೆ ಗುಜರಾತ ಕಾಂಗ್ರೆಸಿಗೆ ಮಾತ್ರವಲ್ಲ ಸಾಮಾನ್ಯವಾಗಿ ಎಲ್ಲ ಕಾಂಗ್ರೆಸ್ ಸಮಿತಿಗಳಿಗೂ ಸಲಹೆ ನೀಡಿದಂತೆ ಭಾಸವಾಗುತ್ತದೆ. ಇದರಿಂದಾಗಿ ಹೆಚ್ಚಿನ ಪದವೀರಾಜಿತರು ಮುಂದಿನ ಚಾರಿಯೂ ಚುನಾವಣೆಗಿಳಿಯುವುದು ಖಂಡಿತ.

೭೪ ವರ್ಷದ ಜೀವರಾಜ ಮೆಹತಾರು ಒಂದು ಸಾಮಾನ್ಯ ಕೃಷಿಕ ಮನೆತನದಲ್ಲಿ ಹುಟ್ಟಿ ಬೆಳೆದು ತನ್ನ ಪ್ರತಿಭೆ ಮತ್ತು ಸರಿಶ್ರಮಗಳಿಂದಲೇ ಇಂದಿನಉನ್ನತಸ್ಥಾನವನ್ನು ಪಡೆದಿದ್ದಾರೆ.ಹಿಂದಿನ ಬರೋಡಾ ಸಂಸ್ಥಾನದಲ್ಲಿಇವರಹುಟ್ಟೂರುಅಮರೇಲಿ ಇದೆ. ಅಲ್ಲಿಯೇ ಪ್ರಾಥಮಿಕಶಿಕ್ಷಣವನ್ನು ಪಡೆದರು ಇವರು. ಹೈಸ್ಕೂಲು ವಿದ್ಯಾಭ್ಯಾಸವನ್ನು ಮುಗಿಸಿದ ಬಳಿಕ ವೈದ್ಯಕೆಯವನ್ನು ಕಲಿಯುವ ಆಶೆಯಿಂದ ಬೊಂಬಾಯಿಯ ಗ್ರೇಂಟ್ ಮೆಡಿಕಲ್ ಕಾಲೇಜನ್ನು ಪ್ರವೇಶಿಸಿದರು. ಡಾ। ಮೆಹತಾರವರ ಹಲವಾರು ಸಹಪಾಠಿಗಳು ಇಂದಿಗೂ ವೈದ್ಯಕೀಯವನ್ನೇ ಜೀವನ ವೃತ್ತಿಯನ್ನಾಗಿ ಮಾಡಿಕೊಂಡಿದ್ದಾರೆ, ಆದರೆ ಇವರು ಹಿಂದಿನ ಬೊಂಬಾಯಿ ರಾಜ್ಯದಲ್ಲಿ ಅರ್ಥ ಮಂತ್ರಿಯಾಗಿ ದುಡಿದು ಗುಜರಾತ ರಾಜ್ಯ ನಿರ್ಮಾಣವಾದ ನಂತರ ಅದರ ಮುಖ್ಯಮಂತ್ರಿಯಾಗಿ ರಾಜ್ಯದ ಭವಿಷ್ಯ ರೂಪಿಸುವುದರಲ್ಲಿಯೇ ನಿಮಗ್ನರಾಗಿದ್ದಾರೆ. ಸ್ವರ್ಗೀಯ ಗೋಪಾಲಕೃಷ್ಣ ಗೋಖಲೆ, ಮಹಾತ್ಮಾ ಗಾಂಧಿಜಿಯವರ ಸಂಗಡಿಗರಾದ ಮೆಹೆತಾರು ಒರ್ವ ನಿಪುಣ ವೈದ್ಯರಾದುದರಿಂದ, ಬರೋಡೆಯ ಮಾಜಿ ಮಹಾರಾಜ ಸ್ವರ್ಗೀಯ ಸಯಾಜಿ ರಾವ್ ಗಾಯಕವಾಡ, ದಿವಂಗತ ರತನ್ ತಾತಾ ಮತ್ತು ಗಾಂಧೀಜಿಯವರಂತಹ ಮಹಾವ್ಯಕ್ತಿಗಳ ಚಿಕಿತ್ಸೆ ಮಾಡಿದ ನಂತರ, ಎಲ್ಲೋಪಥಿಗಿಂತ ಪ್ರಾಕೃತಿಕ ಚಿಕಿತ್ಸೆಯಲ್ಲಿ ಅಧಿಕ ವಿಶ್ವಾಸವನ್ನು ಇಟ್ಟಿದ್ದಾರೆ. ಟ್ರಾಫ್ಯಾಡಿಗೆ ರಾಮಬಾಣವಾಗಿರುವ 'ಕ್ಲೋರೋಮೈಸೀನ್" ಎಂಬುದು ಕುಡಿಯುವ ಔಷಧವೇ ಅಲ್ಲ, ಅದನ್ನು ಇಂಜೆಕ್ಷನ್ ಮೂಲಕ ಪ್ರಯೋಗಿಸುವುದೇ ಎಂಬುದನ್ನೂ ಡಾ। ಮೆಹೆತಾಬ ಬಹುವರ್ಷದ ವರೆಗೆ ತಿಳಿದಿರಲಿಲ್ಲವೆಂಬುದು ಎಲ್ಲೋಪಥಿ ಚಿಕಿತ್ಸಾಕ್ರಮದಲ್ಲಿ ಅವರಿಗಿದ್ದ ಉದಾಸೀನತೆಯನ್ನು ತೋರಿಸುವುದು ಒರ್ವ ನಿಪುಣ ಅರ್ಥಮಂತ್ರಿಯವರಾದುದರಿಂದ, ಬೆಲೆ ಬಾಲುವ ಔಷಧಗಳಿಗಾಗಿ ತನ್ನ ಅಭರಣಗಳನ್ನು ಅಡವಿಡುವುದಕ್ಕೆ ಇಲ್ಲವೇ ಮನೆಯ ಅಮೂಲ್ಯ ವಸ್ತುಗಳನ್ನು ಮಾರಾಟ ಮಾಡುವುದಕ್ಕೆ ಹಿಂದು ಮುಂದು ನೋಡದವರು ಸರಕಾರಕ್ಕೆ ೯—೧೦ ರೂಪಾಯಿಗಳ ಮಾರಾಟ ಕರ ತೆರಲು ಯಾಕೆ ಹಿಂಜರಿಯಬೇಕೆಂದು ಅವರು ಪ್ರಶ್ನಿಸುತ್ತಾರೆ.

ಇನ್ನೂ ಬಾಲ್ಯಾವಸ್ಥೆಯಲ್ಲಿರುವ ಗುಜರಾತಕ್ಕೆ ಜೀವರಾಜ ಮೆಹತರು ಇನ್ನೂ ಬೇಕಾಗಿದ್ದಾರೆ ರಾಜ್ಯದ ಭವಿಷ್ಯ ರೂಪಿಸುವಲ್ಲಿ ಅವರು ಸಶಕ್ತರಿದ್ದಾರೆ-ಎಂತಲೇ ಅವರು ಮುಂದಿನ ಚಾರಿಯೂ ಚುನಾವಣೆಯಲ್ಲಿ ಸ್ಪರ್ಧಿಸಿ ಗೆದ್ದು ಬರುತ್ತಾರೆ.

ಸುಲಭ ದರದಲ್ಲಿ ಶಾಲೆಗಳಿಗೆ ಬೇಕಾಗುವ

ಯೂನಿಫಾರ್ಮುಗಳೂ ಹಾಜರಿ ರಿಜಿಸ್ಟ್ರಿಗಳೂ ಸಿಗುತ್ತವೆ

ನವಯುಗ ಪ್ರೆಸ್ ಉಡುಪಿ.

ಪ್ರಚಲಿತ ಪ್ರಸಂಗ

(೧ನೇ ಪುಟದಿಂದ)

ಯೊದರೂ ಭಾರತಕ್ಕೆ ಕೊಡಲು ನಿರಾಕರಿಸಿದೆ. ಭಾರತ ಉಪಖಂಡದಲ್ಲಿ ಪಾಕಿಸ್ತಾನವೇ ಸೈನಿಕ ಬಲದಲ್ಲಿ ಮುಂದುವರಿಯುವಂತಹ ಕೆಲವೊಂದು ಗುಪ್ತ ಶಸ್ತ್ರಾಸ್ತ್ರಗಳೂ ಅದಕ್ಕೆ ದೊರೆಯುತ್ತಿವೆ. ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರಗಳನ್ನು ನೀಡುವಾಗ, ಎರಡೂ ರಾಷ್ಟ್ರಗಳ ಸಾಪೇಕ್ಷಿಕ ಸೈನಿಕ ಶಕ್ತಿಯ ಬಗ್ಗೆ ವಿಚಾರ ಮಾಡಲಾಗುವುದೆಂದೂ ಈ ಸಂಬಂಧದಲ್ಲಿ ಮುಂದಿನತಿಂಗಳಲ್ಲಿ ವಿಚಾರಕ್ಕೆ ತೊಡಗುವುದೆಂದೂ ತಿಳಿಯುತ್ತದೆ. ಆದರೆ, ವಾತಿಂಗ್‌ಟನ್ನಿನ ಪ್ರಣಾಳಿಯು ದ್ವಿವಿಧವಾಗಿದೆ. ನೀತಿಯ ಪ್ರತಿಪಾದನೆಯೊಂದು ಕಡೆಯೂದರೆ, ಅದರ ಕ್ರಿಯಾನ್ವಯ ಮತ್ತೊಂದು ಕಡೆ, ಅಮೆರಿಕೆಯ ಸಶಸ್ತ್ರ ಸೇನೆಯ ಪ್ರಧಾನಕಾರ್ಯಾಲಯ ಪೆಂಟಾಗನ್‌ಗೆ ಪಾಕಿಸ್ತಾನದ ಪರಿಚಯವಿರುವುದಲ್ಲದೆ ಭಾರತದ ಹೆಸರೇ ತಿಳಿದಂತಿಲ್ಲ. ವಿದೇಶ ಮಂತ್ರಿ ಶಾಖೆಯ ಅಧಿಕಾರಿಗಳೊಡನೆ ಮಾತ್ರ ಭಾರತದ ಹೆಸರೇ ತಿಳಿದಂತಿಲ್ಲ. ವಿದೇಶ ಮಂತ್ರಿ ಶಾಖೆಯ ಅಧಿಕಾರಿಗಳೊಡನೆ ಮಾತ್ರ ಭಾರತವು ಹೆಚ್ಚಾಗಿ ಸಂಪರ್ಕವಿಟ್ಟುಕೊಂಡಿದೆ. ಇದರಿಂದಾಗಿ ಪಾಕಿಸ್ತಾನದ ಬಗ್ಗೆ ಅಮೆರಿಕೆಯ ನೀತಿಯು ಯಾವ ರೀತಿ ಕಾರ್ಯರೂಪಕ್ಕಿಳಿಯಬಹುದೆನ್ನುವುದು ಬಹುದುಸ್ತರ.

"ಇಬ್ಬರೂ ರಾಷ್ಟ್ರಪತಿಗಳು ಪಾಕಿಸ್ತಾನಕ್ಕೆ ನೀಡಲಾದ ಸೈನಿಕ ಸಹಾಯದ ಪ್ರಗತಿಯ ಬಗ್ಗೆ ಮಾತಾಡಿದರು. ಕೆನ್ನೆಡಿ ಸಂರಕ್ಷಣೆಗೆ ಸಾಕಾಗುವಂತೆ ಸೇನೆಯನ್ನಿಟ್ಟುಕೊಳ್ಳಲು ಅನುಕೂಲವಾಗುವಂತೆ ಸೈನ್ಯ ಸಹಾಯವನ್ನು ಹೆಚ್ಚಿಸಲಾಗುವುದು" ಎಂಬ ಸಂಯುಕ್ತ ಪ್ರಕಟಣೆಯಿಂದಾಗಿ ಈಗಾಗಲೇ ಕೊಡಲಾದ ಸಹಾಯದಲ್ಲಿ ಕಡಿತವಿಲ್ಲ, ಬದಲು ಹೆಚ್ಚುವರಿಯೇ ಇದೆಯೆಂಬುದು ತಿಳಿಯುತ್ತದೆ. ಕೆನ್ನೆಡಿ ಪ್ರಶಾಸನದ ನವನೀತಿಯಿಂದ ಈ ಸಹಾಯ ಅಪ್ರಭಾವಿತವಾಗಿಯೇ ಇರುವುದು. ನವೀನ ನೀತಿಯು ಸೈನಿಕ ಸಹಾಯಕ್ಕೆ ವಿಶೇಷ ಬಲ ನೀಡದೆ,ಸಾಮಾಜಿಕ ಸಮಾನತೆಯ ಕಡೆಗೆ ಗಮನ ನೀಡುತ್ತದೆ.

ಭಾರತವು ಅಮೆರಿಕೆಯಿಂದ ಕ್ರಯಕ್ಕೆ ಕೆಲವೊಂದು ಶಸ್ತ್ರಾಸ್ತ್ರಗಳನ್ನು ಕೊಂಡಿದೆಯೇ ಹೊರತು ಅದಕ್ಕೆ ಸೈನಿಕ ಸಹಾಯ ನೀಡುವ ವಿಚಾರ ಸದ್ಯಕ್ಕಿಲ್ಲವೆಂದು ಪಾಕ್ ರಾಷ್ಟ್ರಪತಿ ಅಯೂಬ ಖಾನರಿಗೆ ಸ್ಪಷ್ಟಪಡಿಸಿದ ಅಮೆರಿಕೆಯ ಸಂರಕ್ಷಣಾ ಮಂತ್ರಿ ಶ್ರೀ ರಾಬರ್ಟ್ ಮೆಕ್‌ನಮಾರೆರು.

ಸೈನಿಕ ಸಹಾಯದ ಕುರಿತು ಮಾತ್ರವಲ್ಲ ಕಾಶ್ಮೀರ ಸಂಬಂಧದಲ್ಲಿಯೂ ಅಯೂಬ ಖಾನರು ಕೆನ್ನೆಡಿಯವರೊಡನೆ ಸಮಾಲೋಚನೆ ನಡೆಸಿದರು. ಈ ಪ್ರಶ್ನೆಯು ಬೇಗನೇ ಬಗೆಹರಿಯ ಬೇಕೆಂಬುದಕ್ಕೆ ಅಮೆರಿಕೆಯು ಮೊತ್ತಮೊದಲಿಗೆ ಉತ್ಸುಕವಾಗಿದೆ. ಆದುದರಿಂದ ಅತಿನಿಕಟದಲ್ಲಿ ಅಮೆರಿಕಕ್ಕೆ ದರ್ಶನ ನೀಡುವ ಪ್ರಧಾನಿ ನೆಹರುರವರೊಡನೆ ಕೆನ್ನೆಡಿಯವರು ಈ ವಿಷಯವಾಗಿ ಹೆಚ್ಚಿನ ವಿಚಾರ ವಿನಿಮಯ ಮಾಡುವ ನಿರೀಕ್ಷೆಯಿದೆ. ಕಾಶ್ಮೀರದ ತಂಟೆಯು ಸಂಯುಕ್ತ ರಾಷ್ಟ್ರಸಂಘದಲ್ಲಿರುವುದರಿಂದ, ಅದರ ಗೊತ್ತುವಳಿಗಳನುಸಾರವಾಗಿಯೇ ಅದು ಇತ್ಯರ್ಥಗೊಳ್ಳ ಬೇಕೆಂಬುದು ನಿಜ. ಆದರೆ, ಕಾಶ್ಮೀರದ ಭಾಗದಿಂದ ಪಾಕ್ ಸೇನೆಯು ಹಿಂದೆಗೆಯಬೇಕೆಂಬ ಗೊತ್ತುವಳಿಯನ್ನು ಬಹು ಹಿಂದೆಯೇ ಉಲ್ಲಂಘಿಸಿದ್ದ ಪಾಕಿಸ್ತಾನದ ಯಾವ ವಾದವನ್ನೂ ಒಪ್ಪಲು ಭಾರತವು ಸಿದ್ಧವಿಲ್ಲ.

ಅಯೂಬ—ಕೆನ್ನೆಡಿಯವರಿದು ಮೊತ್ತಮೊದಲಭೆಟ್ಟಿ-ಚರಿತ್ರಾರ್ಹವಾದಸಂದರ್ಶನವೊದಲ ನೋಟವು ಒಬ್ಬನ ಮೇಲೆ ಯಾವ ಅಭಿಪ್ರಾಯವನ್ನು ಪಡುವುದೋ ಅದುವೇ ಅಂತ್ಯದ ತನಕವೂ ಇರುವುದೆನ್ನುತ್ತಾರೆ. ಪಾಕಿಸ್ತಾನದ ಅಧ್ಯಕ್ಷ ಮೇಜರ್ ಜನರಲ್ ಅಯೂಬ ಖಾನರ ಬಗೆ ಅಮೆರಿಕನ್ ಅಧ್ಯಕ್ಷ ಜಾನ್ ಕೆನ್ನೆಡಿಯವರಲ್ಲಿ ಯಾವ ಅಭಿಪ್ರಾಯ ಮೂಡುವಂತೆ ಈ ಸಂದರ್ಶನ ಮಾಡಿದೆಯೆಂಬುದಕ್ಕೆ ಭವಿಷ್ಯವೇ ಉತ್ತರ ಹೇಳಬೇಕಾಗಿದೆ. ಆದೇನೇ ಇದ್ದರೂ ಭಾರತವು ತನ್ನ ಸಮಗ್ರತೆಯನ್ನು ಉಳಿಸಿಕೊಳ್ಳಲು ಐಕ್ಯವನ್ನೂ ರಾಷ್ಟ್ರೀಯ ಮನೋಭಾವವನ್ನೂ ಹೆಚ್ಚಿಸಿಕೊಳ್ಳಬೇಕಾದುದು ಅತ್ಯವಶ್ಯ.

—ಗೋರಾ.

ದಿ ವಿಜಯ ಬೇಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬೇಂಕ್. ಸ್ಥಾಪನೆ: 1931

ರಿಜಿಸ್ಟರ್ಡ್ ಆಫೀಸು:

ವಿಜಯ ಬೇಂಕ್ ಬಿಲ್ಡಿಂಗ್, ಲೈಟ್ ಹೌಸ್ ಹಿಲ್ ರೋಡ್,

ಮಂಗಳೂರು -3, ಸೌತ್ ಕೆನರಾ.

ಕಾಯಂ ಠೇವಣಾತಿ ಬಡ್ಡಿ ದರವನ್ನು ಶೇಕಡ 5½ರ ವರೆಗೆ ಹೆಚ್ಚಿಸಲಾಗಿದೆ.

ಏಳು ದಿವಸದ ನೋಟೀಸಿನಲ್ಲಿ ಕೇಳಿದಾಗ್ಯೆ ಹಿಂದೆ ಪಡೆಯುವ ಡಿಪೋಸಿಟುಗಳನ್ನು (Call Deposits) ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸೋಣಾಗುತ್ತದೆ.

ಹೆಚ್ಚಿನ ಮಾಹಿತಿಗೆ ನಮ್ಮ ಶಾಖೆಗಳಲ್ಲಿ ದಯಮಾಡಿ ವಿಚಾರಿಸಿರಿ.

Tel: 'BLUEYAGAR'. — ಚಿನ್ನ ಮತ್ತು ವಜ್ರಗಳ ಆಧುನಿಕ ತವರುಮನೆ — Phone: 374.

ಕೆ.ಆರ್.ಕೆ.ಶೇಟ್ ಡಯಮಂಡ್ ಮಾರ್ಟ್

ಸ್ಥಾಪನೆ:1919] ಚಿನ್ನ ಮತ್ತು ವಜ್ರದ ವ್ಯಾಪಾರಿಗಳು,(ಗವರ್ನ್‌ಮೆಂಟ್ ಕಾಲೇಜ್ ಎದುರುಗಡೆ)ಮಂಗಳೂರು. ಮಾಲಿಕ:ಕೆ.ಕೆ.ಆರ್.ಶೇಟ್

ನಿಸರ್ಗ ದರ್ಶನ:

ಪ್ರಕೃತಿಯ ಕಲಾಶಾಲೆ—ಭೇಡಾಘಾಟಿ

ಜಬ್ಬಲಪುರದ ನಿಕಟದಲ್ಲಿ ನರ್ಮದೆ ಹರಿಯುತ್ತಿದೆ. ಅಲ್ಲಿನ ಸೃಷ್ಟಿ ಸೌಂದರ್ಯವನ್ನು ಹುಣ್ಣಿಮೆಯ ರಾತ್ರಿ ಸವಿಯಬೇಕು. ಅಲ್ಲೇ ಇದ್ದು ಬಿಡೋಣವೆನ್ನಿಸುತ್ತದೆ!

ಪ್ರಪಂಚವು ವೈವಿಧ್ಯಪೂರ್ಣ ಸೌಂದರ್ಯದಿಂದ ಕೂಡಿದೆ. ವಜ್ರ, ಮುತ್ತು, ಮೊದಲಾದುವು. ಕಲ್ಲಿನ ಹರಳುಗಳಾದರೂ ಅವುಗಳಲ್ಲಿ ತಮ್ಮದೇ ಆದ ಸೌಂದರ್ಯವಿದೆ. ಬಂಡೆಕಲ್ಲು ಕೂಡ ಒಬ್ಬ ಕುಶಲ ಕಲಾವಿದನ ಕೈಮೂಸೆಯಿಂದ ಹೊರ ಬರುವಾಗ ಅತಿ ಸುಂದರವಾಗುತ್ತದೆ. ಕಲಾವಿದನು ಒರಟಾದ ಕಲ್ಲನ್ನು ನಾನಾ ವಿಧದ ಮೂರ್ತಿಯಾಗಿ ಕಡೆದು ಅವುಗಳಿಗೆ ಸೌಂದರ್ಯವನ್ನು ತಂದೆರೆಯ ಬಲ್ಲನು. ಆದರೆ, ಭೂಮಿಯ ಮೇಲೆ ಅನಾದಿ ಕಾಲದಿಂದೆಂಬಂತೆ ನಿಂತಿರುವ ಬಂಡೆಕಲ್ಲುಗಳು ಸೃಷ್ಟಿಯ ಕರ್ಮ ಶಾಲೆಯಲ್ಲಿ ರೂಪ ಧಾರಣೆ ಮಾಡುತ್ತ ಇಂದಿಗೂ ನಿಂತಿವೆ. ಈ ಬಂಡೆಗಳನ್ನು ಪ್ರಕೃತಿಯೇ ತನ್ನ ಸ್ವ ಹಸ್ತಗಳಿಂದ ಕಡೆದಿದೆ.

ಜಬ್ಬಲಪುರ ನಗರದಿಂದ ೧೩ ಮೈಲು ದೂರದಲ್ಲಿ ಭೇಡಾಘಾಟ್ ಎಂಬಲ್ಲಿರುವ ಬಂಡೆಕಲ್ಲುಗಳಲ್ಲಿ ಇಂತಹುದೇ ಅದ್ಭುತ ರೀತಿಯ ಸೌಂದರ್ಯವಿದೆ. ಇಲ್ಲಿ ಪವಿತ್ರವಾದ ನರ್ಮದಾ ನದಿಯು ಸಂಕರೀ ಪರ್ವತ ಘಾಟಿಯನ್ನು ಸೀಳಿ ಮುಂದುವರಿಯುತ್ತದೆ. ಒಂದೂಕಾಲು ಮೈಲುದ್ದದ ಈ ಕಣಿವೆಯು ಚಂದ್ರಕಾಂತ ಶಿಲೆಯೆಂದರೆ ನೀವು ಬೆಕ್ಕಸ ಬೆರಗಾಗುವಿರಿ. ಮನೋರಮವಾದ ಈ ಮಾರ್ಬಲ್ ಬಂಡೆಗಳ ನಡುವೆ ಕೆಲವೆಡೆ ಬಹಳ ಜೋರಾದ ಗಲಭೆಯೆಬ್ಬಿಸಿ, ಇನ್ನು ಕೆಲವೆಡೆ ಗಂಭೀರವಾಗಿ ಶಾಂತವಾಗಿ ಹರಿಯುತ್ತದೆ. ನದಿಯ ಇಕ್ಕಡೆಗಳಲ್ಲಿಯೂ ಬಂದಂ— ಕುದಾನ್ ಎಂಬ ಹೆಸರಿನಿಂದ ಪ್ರಸಿದ್ಧವಾದ ಬಿಳಿವರ್ಣದ ಕಲ್ಲಿನ ಬೆಟ್ಟವಿದೆ. ಇದು ೧೫೦ ಅಡಿಯಿಂದ ಹೆಚ್ಚು ಉದ್ದವಿದೆ.

ಸೂರ್ಯನ ಪ್ರಖರ ಕಿರಣಗಳು ಈ ಬಂಡೆಕಲ್ಲುಗಳ ಮೇಲೆ ಬಂದು ಹೊಡೆಯುವಾಗ, ಅದರ ಪ್ರಕಾಶ ಇಮ್ಮಡಿಯಾಗುವುದು. ನೋಡುವವನಿಗೆ ಈ ಪ್ರಕಾಶದ ಮುಂದೆ ಕಣ್ಣು ಬಿಡುವುದೂ ಅಸಾಧ್ಯವೆನಿಸುವಷ್ಟು ಕುಕ್ಕುತ್ತದೆ. ಯಾವುಬಾದರೊಂದು ಬೆಳ್ಳಿಯ ಪರ್ವತವನ್ನು ತಾನು ಹಾದು ಹೋಗುತ್ತಿರುವಂತೆ ಅತನಿಗೆ ಭಾಸವಾಗುವುದು.

ಪೂರ್ಣಮಿಯ ದಿನ ದೂರದೂರದ ವರೆಗಿನ ಬಂಡೆಗಳ ಮತ್ತು ಅವುಗಳೆಡೆ ಹರಿಯುವ ನೀರಿನ ಮೇಲೆ ಚಂದ್ರಿಕೆಯು ಹರಡಿದಾಗ, ಇಲ್ಲಿನ ದೃಶ್ಯವು ಮತ್ತಷ್ಟು ಪ್ರೇಕ್ಷಣೀಯ ವೆನಿಸುವುದು. ನದಿ, ಬೆಳುದಿಂಗಳು ಮತ್ತು ಸಂಗ ಮರ್ಮರ ವೆಲ್ಲವೂ ಸೇರಿ, ಆಕರ್ಷಕ ರಾತ್ರಿ ಮತ್ತು ಅನುಪಮ ಸುಂದರ ವಾತಾವರಣವನ್ನು ಸೃಷ್ಟಿಸುತ್ತವೆ.

ಘಾಟಿಯಲ್ಲಿ ಬಿಳಿಯ ಸಂಗ ಮರ್ಮರ ಕಲ್ಲಿನ ಬಂಡೆಯಿರುವಲ್ಲಿಯೇ ನಡುನಡುವೆ ಕೆಲವು ಕೆಲವು ಗುಲಾಬಿ, ಹಳದಿ ಮತ್ತು ನೀಲಿ ಬಣ್ಣದ ಬಂಡೆಗಳೂ ಇರುತ್ತವೆ. ಇದು ಸ್ವಾಭಾವಿಕ ಸೌಂದರ್ಯವನ್ನು ಮತ್ತಷ್ಟು ಹೆಚ್ಚಿಸುತ್ತದೆ. ಘಾಟಿಯು ಮುಕ್ತಾಯಗೊಳ್ಳುವಲ್ಲಿಂದ ನರ್ಮದೆಯು ತನ್ನ ಪೂರ್ಣ ವೇಗದಿಂದ ಹರಿಯುತ್ತದೆ. ಇದರಿಂದ ಅಸುಪಾಸಿನ ಬಂಡೆಗಳು ವಿಚಿತ್ರವಾದ ರೂಪ ಪಡೆದಿವೆ. ಇವನ್ನು ಹಸ್ತಪಾದ ಮತ್ತು ಅಶ್ವಪಾದಗಳೆಂದು ಹೇಳುತ್ತಾರೆ.

ಭೇಡಾ ಘಾಟಿನ ಜಲಪಾತದ ಮಾರ್ಗವು ಮಾರ್ಬಲ್ ಬಂಡೆಗಳಿಂದ ಸುಮಾರು ೭ ಪರ್ಲಾಂಗ್ ದೂರದಲ್ಲಿದೆ. ಈ ಜಲಪಾತವು ೪೦ ಅಡಿ ಎತ್ತರವಿದ್ದು ಕಾಲಗುಣಕ್ಕನುಸಾರವಾಗಿ ಇದು ಹೆಚ್ಚು ಕಡಿಮೆಯಾಗುತ್ತದೆ. ಮಳೆಗಾಲದಲ್ಲಿ ಈ ಜಲಪಾತದ ಶಕ್ತಿ ಅತೀವವಿರುತ್ತದೆ. 'ಧೂಮ್ರಧಾರಾ' ಎಂಬ ಹೆಸರಿನ ಈ ಜಲಪಾತದಲ್ಲಿ ಬೀಳುವಾಗ, ನೀರು ಹೊಗೆಯಂತೆ ಅತ್ತಿತ್ತ ಹಾರಾಡುತ್ತಿರುತ್ತದೆ. ದೊಡ್ಡ ದೊಡ್ಡ ಬಂಡೆಗಳನ್ನು ಜಿಗಿಯುತ್ತ ನರ್ಮದೆಯ ಜಲವು ದೈತ್ಯನ ಕೂಗಿನಂತೆ ಗರ್ಜಿಸುತ್ತ ಮುಂದುವರಿದು ಬಂದು, ನಟ್ಟ ನಡುವೆ ಎತ್ತರವಾದ ಬಂಡೆಯೊಂದನ್ನು ಸುತ್ತುವರಿಯುತ್ತಿದೆ. ಈ ಬಂಡೆಯನ್ನು ನದಿಯ ನೀರು ಸುತ್ತುವರಿದು ಕಡೆದ ಆಕೃತಿಯಾದರೂ ಹಿಂದುಸ್ತಾನದ ರೂಪವನು ಹೋಲುತ್ತದೆಯೆಂದರೆ ಯಾರಿಗೆ ಅಚ್ಚರಿಯೆನಿಸದು? ಸಾವಿರಾರು ವ್ಯಕ್ತಿಗಳು ಪ್ರಕೃತಿಯ ಈ ಚಮತ್ಕಾರವನ್ನು ನೋಡಿ ಹರ್ಷಪುಲಕಿತ ಗಾತ್ರರಾಗುತ್ತಾರೆ.

ಚೌಂಸಠ್ ಯೋಗಿಗಳ ಮಂದಿರವು ಇಲ್ಲಿದೆ. ಈ ಮಂದಿರದಲ್ಲಿ ಉತ್ಕೃಷ್ಟವಾದ ಭಾರತೀಯ ಮೂರ್ತಿಕಲೆಯ ನೂರಾರು ಮೂರ್ತಿಕೆಗಳು ಇವೆ. ದೇವಾಲಯದ ಸುತ್ತಲೂ ಮೂರ್ತಿಗಳ ಕೆತ್ತನೆಯಿದೆ. ಈ ಮೂರ್ತಿಗಳು ಅಲ್ಲಲ್ಲಿ ಮುರಿದಿವೆ. ಇವನ್ನು ಅವರಂಗಜೇಬನು ಮುರಿಸಿದನೆಂದು ಹೇಳುತ್ತಾರೆ.

ಪರಮಾತ್ಮನು ತನ್ನ ಅನುಪಮ ಬುದ್ಧಿಮತ್ತೆಯಿಂದ ನೋಡಿದವರನ್ನು ತತ್‌ಕ್ಷಣ ಅವಾಕ್ಕಾಗುವಂತೆ ಸಗುವ ಸೌಂದರ್ಯವನ್ನು ಇಲ್ಲಿನ ಬಂಡೆಕಲ್ಲುಗಳಲ್ಲಿ ಮೂಡಿಸಿದ್ದಾನೆ. ಅದನ್ನು ಸವಿಯುತಿದ್ದಂತೆಯೇ ಮಾನವ ಆನಂದ ವಿಭೋರನಾಗುತ್ತಾನೆ; ಅಲ್ಲಿಯೇ ಅತನಿಗೆ ಶಾಂತಿಲಭಿಸುತ್ತದೆ. ಒಂದು ಬಾರಿ ನೋಡಿದನೆಂದರೆ ಶೀಘ್ರಾತಿ ಶೀಘ್ರವಲ್ಲಿ ಮರಳಿಬರಬೇಕು ಎಂಬ ಆಶೆಯು ಅತನಲ್ಲಿ ಅವಶ್ಯ ಮೂಡುವುದು

— —

ಅಮೃತ ಬಿಂದು

ಹಿಡಿಯ ಸಹಾಯದಿಂದಲೇ ಉಪಯೋಗಕ್ಕೆ ಬೀಳುವ ಕತ್ತಿಯು ಅಲಗು ಹಿಡಿಯನ್ನು ಬೊಡ್ಡೆಂದು ಅರಿಯಬಾರದು.

○ ○ ○

ಕಣ್ಣುಗಳು ತಮ್ಮ ದೃಷ್ಟಿ ಶಕ್ತಿಗೆ ಹೆಮ್ಮೆಪಡುವುದನ್ನು ಬಿಟ್ಟು ತಮ್ಮ ಕನ್ನಡಕಗಳಿಗಾಗಿ ಹೆಮ್ಮೆಪಡಬಾರದು.

○ ○ ○

ತಪ್ಪು ಯಾ ಕೆಟ್ಟದೆಂಬುದು ಎಷ್ಟೇ ಶಕ್ತಿಯುತವಾಗಿ ಬೆಳೆದರೂ ಅದು ಸರಿ ಯಾ ಒಳ್ಳೆಯದೆನಿಸದು.

○ ○ ○

ಭೂಮಿಯ ಹುಲ್ಲು ಆಕಾಶದ ನಕ್ಷತ್ರವಾಗುವ ಬಯಕೆಪಟ್ಟರೆ ಅದರ ಸ್ವಪ್ನವು ಗಿಡದ ಹೂವಾದರೂ ಆಗಬಹುದು!

○ ○ ○

ನಾನೂ ಪಾತರಗಿತ್ತಿಯಂತೆಹಾರಾಡುವನೆಂದು ಹೊವು ಬಯಸಿದರೆ ಅದು ರಸ್ತೆಯ ಧೂಳಿನಲ್ಲಿ ಜನರ ಕಾಲಡಿಗೆ ಬೀಳಬೇಕಾಗುವದು.

○ ○ ○

ಯೌವನವೆಂಬ ಬೆಳಕಿನಲ್ಲಿ ಕುರುಡು ಪ್ರೇಮ ರಾಗ ಹಾಡಿದರೂ, ಪಾಂಡಿತ್ಯವೆಂಬ ಕತ್ತಲಲ್ಲಿ ಜ್ಞಾನದ ಹಣತೆ ಹಿಡಿಯಬೇಕು.

○ ○ ○

ಕಾಲನ್ನೆತ್ತುವದೂ, ಕೆಳಗಿಡುವದೂ ಹೇಗೆ ನಡಿಗೆಯ ಒಂದೊಂದು ಭಾಗವೋ ಹಾಗೆಯೇ ಜನನ ಮರಣಗಳೂ ಜೀವನದ ಭಾಗಗಳು.

○ ○ ○

ಸುಂದರ ಹೂ ಮತ್ತು ರವ್ಯರಮಣೀಯತೆಯಲ್ಲಿ ಭಗವಂತನ ಪಿಸುಮಾತನ್ನು ಅರಿತಂತೆಯೇ ದುಃಖ ಮತ್ತು ಮೃತ್ಯುಗಳಲ್ಲಿ ಆತನ ವಾಣಿಯನ್ನರಿಯಬೇಕು.

○ ○ ○

ಜಗತ್ತಿಗೆ ಅಗಂತುಕನಾಗಿ ಬಂದಿರುವ ಮನುಷ್ಯನು ಇಲ್ಲಿ ಅತಿಥಿಯಾಗಿ ಜೀವಿಸಿ, ಗೆಳೆಯನಾಗಿ ಜಗತ್ತನ್ನು ನಿಡಬೇಕು.

○ ○ ○

ಸೂರ್ಯಾಸ್ತಮಾನದ ನಂತರ ಸೂರ್ಯನ ಕೆಂಬಣ್ಣ ದಿಗಂತವನ್ನು ಬೆಳಗುವಂತೆ ಮರಣದ ನಂತರ ಮಾನವನ ಸತ್ಕೃತಿಯು ಬೆಳಗಬೇಕು.

○ ○ ○

ಕತ್ತಲೆಯಲ್ಲಿರುವ ಮಗು ತಾಯಿಗಾಗಿ ಕೈನೀಡುವಂತೆ ಜಗದಲ್ಲಿರುವ ಮನುಷ್ಯ ಭಗವಂತನಿಗಾಗಿ ಕಾತರಿಸಬೇಕು.

○ ○ ○

ಪ್ರಪಂಚವನ್ನು ಪ್ರೀತಿಸುವ ಮನುಷ್ಯನು ಮಾತ್ರ ನಿಜವಾದ ಅರ್ಥದಲ್ಲಿ ಪ್ರಪಂಚದಲ್ಲಿ ಜೀವಿಸುವನು.

○ ○ ○

ಮೃತರಾದವರಿಗೆ ಕೀರ್ತಿಯು ಅಮರತ್ವವನ್ನು ಕೊಟ್ಟರೆ ಜೀವಿಸುತ್ತಿರುವವರಿಗೆ ಪ್ರೀತಿಯು ಅಮರತೆಯನ್ನೀಯುವದು.

ಶ್ರೀ ಎ. ಬಿ. ಶೆಟ್ರ
ಸ್ಮಾರಕ ನಿಧಿಗೆ
ಸಹಾಯ ಮಾಡಿರಿ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ, ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಹೊಸ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ. 1-4-0 (1=25).

ಮನೆಯೆಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್.ಎ.ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ. ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.
ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ
ವಿ. ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0=25 N.P ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕಗಳಿಸಲಾಗುವುದು.
ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ನಮಗೆ ಬರೆಯಿರಿ.
ನವಭಾರತ ಪುಸ್ತಕ ಭಂಡಾರ, ಉಡುಪಿ.

'NAVAYUGA' WEEKLY is in the list of periodicals and Newspapers approved for use in Secondary School as per proceedings Roc. No. 466 N/50 date 2-12-1950 of the Directors of public Instruction Madras.

ವಿಡಂಬನೆ:

ಅಮೋಘ ಚುನಾವಣಾ ಭಾಷಣ

ಇದು ಎಲೆಕ್ಷನ್‌ಯುಗ. ಪ್ರತಿಯೊಬ್ಬ ಮೀಸೆ ಬಂದ ಯುವಕ ನಿಗೂ ಸೀರೆಯುಡುವ ಯುವತಿಗೂ ಓಟು ಕೊಡುವ ಹಕ್ಕು ಇದೆ. ಅದನ್ನು ಚಲಾಯಿಸಲು ಇರುವ ಸ್ವಾತಂತ್ರ್ಯವನ್ನೂ ಕಸಿದುಕೊಳ್ಳುವ ಚುನಾವಣಾ ಭಾಷಣಗಳು ನೂರಾರಿವೆ!

ಶ್ರೀ ಎಚ್. ಗೋಪಾಲ ಭಟ್ಟ.

ಅಕ್ಕತಂಗಿಯರೇ, ಅಣ್ಣತಮ್ಮಂದಿರೇ, ಹಿರಿಕಿರಿಯರೇ, ಚಿಳ್ಳೆಪಿಳ್ಳೆಗಳೇ, ನಿಂತಿರುವವರೇ, ಕುಂತಿರುವವರೇ, ಅಲೆಯುವವರೇ ಕಾಗೂ ಮಲೆಯುವರೇ,

ನೀವೆಲ್ಲಾ ಇಂದು ಈ ಸಭೆಯಲ್ಲಿ ಭಾಗವಹಿಸಿರುವುದನ್ನು ಕಂಡು ನನಗೆ ಆನಂದವಾಗಿದೆ. ಭಾಷಣದ ಮೇಲೆ ನಿಮಗಿರುವ ಅಭಿಮಾನ, ಪ್ರೀತಿ, ವಿಶ್ವಾಸಗಳನ್ನು ಕಂಡು ಪುಳಕಿತನಾಗಿದ್ದೇನೆ. ಭಾಷಣಗಾರನ ಮೇಲೆ ನಿಮಗಿರುವ ಪ್ರೀತಿ, ವಿಶ್ವಾಸ, ಕರುಣೆ, ಕನಿಕರಗಳನ್ನು ಕಂಡು ಮೂರು ಹೋಗಿದ್ದೇನೆ ಹಾಗೆಯೇ ನನ್ನ ಒಂದೆರಡು ಮಾತುಗಳನ್ನು ಕೇಳಿ ನಡೆಸಿಕೊಡುವಿರೆಂದು ನಂಬಿದ್ದೇನೆ. ನೀವು ಅದನ್ನು ನಡೆಸಿಕೊಟ್ಟರೆ ನಿಮ್ಮ ಬಾಳು ಪವಿತ್ರವಾದಂತೆ, ನನ್ನ ಜನ್ಮ ಸಾರ್ಥಕವಾದಂತೆ, ನನ್ನ ಭಾಷಣ ಯಶಸ್ವಿಯಾದಂತೆ.

ಬಂಧುಗಳೇ, ಇದು ಯಾವ ಯುಗವೆಂದು ನೀವೆಲ್ಲಾ ತಿಳಿದಿದ್ದೀರಿ? ಇದು ಆಟಂ ಯುಗವಲ್ಲ, ರಾಕೆಟ್ ಯುಗವಲ್ಲ, ರೇಷನ್ ಯುಗವಲ್ಲ, ಫ್ಯಾಷನ್ ಯುಗವಲ್ಲ, ಕಾರ್ಮಿಕ ಭಂಡಾರಗಳ ಯುಗವಲ್ಲ, ಗಾಂಧೀ ನೆಹ್ರೂಗಳ ಯುಗವಲ್ಲ, ಇದು ಚುನಾವಣಾ ಯುಗ, ಓಟಿನ ಯುಗ, ಓಟಿನ ಬೇಟೆಯ ಯುಗ. ಈಗ ಎಲ್ಲಿ ನೋಡಿ ಅಲ್ಲಿ ಚುನಾವಣೆ, ಎಲೆಕ್ಷನ್, ಜಯಕಾರ. ಇಂದು ಚುನಾವಣೆಗಿರುವ ಮಹತ್ವ, ಚುನಾವಣಾ ಸ್ಪರ್ಧೆಗಿರುವ ಮಹತ್ವ, ಓಟುದಾರನಿಗಿರುವ ಮಹತ್ವ ಇನ್ನಾರಿಗಿದೆ? ಸರ್ವತಂತ್ರ ಸ್ವತಂತ್ರವಾದ ನಮ್ಮ ಗಣರಾಜ್ಯದಲ್ಲಿ, ಚುನಾವಣೆಗೆ ಹೆಚ್ಚಿನ ಮಹತ್ವ ಇದೆ, ಗೌರವ ಇದೆ, ಅದರಲ್ಲಿ ಜನತೆಗೆ ಹೆಚ್ಚಿನ ಉತ್ಸಾಹ ಇದೆ. ನಮ್ಮ ನಾಡಿನ ಪ್ರತಿಯೊಂದು ಮೀಸೆ ಬಂದ ಯುವಕನಿಗೂ, ಪ್ರತಿಯೊಬ್ಬ ಸೀರೆಯುಡುವ ಯುವತಿಗೂ ಓಟು ಕೊಡುವ ಹಕ್ಕು ಇದೆ ಶಕ್ತಿ ಇದೆ. ನಿಮ್ಮ ನಿಮ್ಮ ಓಟನ್ನು ಧೈರ್ಯವಾಗಿ ಚಲಾಯಿಸುವ ಹಕ್ಕು ಇದೆ. ಹುರಿಯಾಳುಗಳನ್ನು ಆರಿಸುವ ಯಾ ಹಾರಿಸುವ ಶಕ್ತಿ ನಿಮ್ಮಲ್ಲಿದೆ. ನಿಮ್ಮ ಊರಿಗೆ, ಕೇರಿಗೆ, ಗ್ರಾಮಕ್ಕೆ, ಮನೆಗೆ, ಕುಟುಂಬಕ್ಕೆ, ವ್ಯಕ್ತಿಗೆ ಬೇಕಾದ ಸೌಲಭ್ಯಗಳನ್ನು ಕೇಳಿಪಡೆಯುವ ಹಕ್ಕು ನಿಮಗಿದೆ. ಹಾಗೆಯೇ ನೀವು ಓಟನ್ನು ಯಾರಿಗೆ ಕೊಡಬೇಕೆನ್ನುವುದರ ಬಗ್ಗೆ ಯೋಚಿಸುವ ಹಕ್ಕೂ ನಿಮಗಿದೆ. ಆ ನಿಮ್ಮ ಬುದ್ಧಿವಂತಿಕೆಯನ್ನು ಪರೀಕ್ಷಿಸುವ ಕಾಲ ಇಂದು ಬಂದೊದಗಿದೆ. ನೀವೆಲ್ಲಾ ಈ ಚುನಾವಣೆಯಲ್ಲಿ ಭಾಗವಹಿಸಬೇಕಾದ ವ್ಯಕ್ತಿಗಳು ಆದ್ದರಿಂದ ನಿಮ್ಮ ಅಮೂಲ್ಯವಾದ, ಅಮೋಘವಾದ, ಘನವಾದ, ಪವಿತ್ರವಾದ ಓಟನ್ನು ಯಾರಿಗೆ ಕೊಡುತ್ತೀರಿ? ನಿಮ್ಮ ಓಟು ಯಾರಿಗೆ? ಅದರ ಬಗ್ಗೆ ಯೋಚಿಸುತ್ತೀರಾ? ಯೋಚಿಸಿದ್ದೀರಾ? ಯೋಚಿಸುವಿರಾ? ಆ ಪ್ರಶ್ನೆಗೆ ಉತ್ತರಿಸಲೇ ನಾನಿಲ್ಲಿ ನಿಂತಿದ್ದೇನೆ.

ನೀವು ಯೋಚನೆ ಮಾಡಬೇಕಾದ ಅವಶ್ಯಕತೆಯೇ ಇಲ್ಲ. 'ನಿಮ್ಮ ಓಟನ್ನು ಶ್ರೀಮಾನ್.....ರಿಗೇ ಕೊಡಿ'—ಎಂದು ಕೇಳಿಕೆ ಕೊಳ್ಳುತ್ತೇನೆ. ನಿಮ್ಮ ಪವಿತ್ರವಾದ ಓಟನ್ನು ಪರಿಶುದ್ಧವಾದ ಮನಸ್ಸಿನಿಂದ ಅವರಿಗೇ ಅರ್ಪಿಸಿ; ಅವರನ್ನೇ ಚುನಾಯಿಸಿ; ಅವರಿಗೇ ಹೂಮಾಲೆಗಳನ್ನು ಹಾಕಿ; ಅವರನ್ನೇ ಮೆರವಣಿಗೆಯಲ್ಲಿ ಕರೆದೊಯ್ಯಿರಿ.

ಆ ಹೆಸರೇನೂ ನಿಮಗೆ ಹೊಸದಲ್ಲ. ನಿಮಗೆ ಹತ್ತಿರದ ನೆರೆಯ, ಉತ್ತಮ ವ್ಯಕ್ತಿ ಎಂದರೆ ಅವರು. ಅವರ ಹೆಸರನ್ನು ಕೇಳದ ಕಿವಿ ಇದೆಯೇ ಇಲ್ಲಿ? ಅವರ ಯೋಗ್ಯತೆ ತಿಳಿಯದ ಮನವಿದೆಯೇ ಇಲ್ಲಿ? ಅವರ ವ್ಯಕ್ತಿತ್ವವನ್ನರಿಯದ ವ್ಯಕ್ತಿ ಇದೆಯೇ ಇಲ್ಲಿ? ಅವರ ಮಹಿಮೆಯನ್ನು ಕೇಳದವರಿದ್ದಾರೆಯೇ? ಇಲ್ಲ. ಇಲ್ಲ. ಇಲ್ಲ ಅಂಥ ಅಸಾಧಾರಣ ವ್ಯಕ್ತಿತ್ವ ಅವರದು. ಅಂಥ ಅಸಾಮಾನ್ಯ ವ್ಯಕ್ತಿ ಅವರು.

.....ರ ಬಗ್ಗೆ ಜೊಕ್ಕ ಹಾಗೂ ಚಿಕ್ಕ ಮಾತುಗಳೆರಡನ್ನು ಹೇಳುತ್ತೇನೆ ಕೇಳಿ! ಅವರು ಹೇಗೆ ಆಸ್ಪತ್ರೆಯಲ್ಲೇ ಜನಿಸಿದರು. ಚಿಕ್ಕಂದಿನಲ್ಲಿ ಗೋಲಿಯಾಟ, ಪಗಡೆಯಾಟ, ಇಸ್ಪೀಟು ಆಟಗಳಲ್ಲಿ ವಿಶೇಷ ಆಸಕ್ತಿ ಹೊಂದಿದ್ದ ಅವರು ಶಾಲೆಯ ಮುಖವನ್ನು ಕಾಣದಿದ್ದರೇನಂತೆ? ಶಾಲೆಯ ಹಿಂಭಾಗದ ಮರದ ಬುಡದಲ್ಲಿ ಅವರು (ಕಳ್ಳ) ಬಟ್ಟೆಯನ್ನು ತಯಾರಿಸುವವರ ಗುಂಪಲ್ಲಿ ಕಲೆತಿದ್ದರು. ತಮ್ಮೂರಿನ ಕೆರೆಯಲ್ಲಿ ಮೂರು ಸಲ ಮುಳುಗಿ ಎರಡೇ ಸಲ ಮೇಲಕ್ಕೆದ್ದಾಗ ಮೂರನೆಯ ಸಲ ಅವರ ಪೂಜ್ಯ ಪಿತೃಪಾದರು ಅವರನ್ನು ಮೇಲಕ್ಕೆಳೆದುಹಾಕಿ ಹೊಟ್ಟೆ ಸೇರಿದ್ದ ನೀರನ್ನು ಹೊರಕ್ಕೆ ತೆಳ್ಳಿ 'ನಿನಗೆ ಸಾಯಲು ಇಷ್ಟವಿದ್ದರೆ ದೊಡ್ಡವನಾಗಿ ಹೆಸರುಗಳಿಸಿ, ಕೀರ್ತಿವಂತನಾಗಿ ಸಾಯು. ಆಗ ನಿನ್ನ ಹೆಸರನ್ನು ಬಂಡೆಕಲ್ಲಿನ ಮೇಲಾದರೂ ಕೊರೆಯುತ್ತಾರೆ'ಎಂದು ವಾಚಾಮಗೋಚರವಾಗಿ ಬೈದಾಗ ಅವರ ಆತ್ಮಾಭಿಮಾನಕ್ಕೆಧಕ್ಕೆ ಬಂದು ಕೋಳಿ, ಚಿನ್ನಿಕೋಲು, ಗೋಲಿ, ಎಲ್ಲವನ್ನೂ ಎಲ್ಲರನ್ನೂ, ತ್ಯಜಿಸಿ ಬೊಂಬಾಯಿಗೆ ಓಡಿಹೋದರು. ಎಂಥ ತ್ಯಾಗ! ಎಂಥ ಸಾಹಸ!! ಎಂಥ ಧೈರ್ಯ!!! ಕೈಯಲ್ಲಿ ಕಾಸಿಲ್ಲ, ಮೈಯಲ್ಲಿ ಬಲವಿಲ್ಲ, ಹಾಕಲು ಬಟ್ಟೆ ಇಲ್ಲ, ಇರಲು ಗುಡಿ ಇಲ್ಲ. ಬೃಹತ್ ಮುಂಬಯಿಯಲ್ಲಿ ಯಾರಿಂದಲೋ ಹಾರಿಸಿಕೊಂಡು ಹೋಗಿದ್ದ ಗಿಡ್ಡಿ, ಸೋಮಿ, ಲಚ್ಚಿ, ಕೊರಪಳು ಇವರ ಪರಿಚಯವಾಗಿ ಅವರ ಸಹಾಯದಿಂದ ಹೋಟೇಲೊಂದರಲ್ಲಿ ಲೋಟ ತೊಳೆಯುವ ಕೆಲಸಕ್ಕೆ ಸೇರಿದರು. ಲೋಟ ತೊಳೆಯುವುದು ಕೇಳು ಕೆಲಸವೇ? ಅಲ್ಲ. ಶುಚಿಗೈಯ ಮಹಾ ಸೇವೆ! ಲೋಟ ಗ್ಲಾಸು ಒಡೆದರು, ಕಪ್ಪು ಬಸಿ ತೊಳೆದರು, ಒಡೆ ಹಾಗೂ ಒಡೆ ತಿಂದರು, ಬೈಸಿಕೊಂಡರು ಜಾಗೂ ಹೊಡೆಸಿಕೊಂಡರು ಅದರೇನು? ಸ್ಥಿತಪ್ರಜ್ಞರಂತೆ ಆದರು. ಕಷ್ಟ ಸಂಕಷ್ಟಗಳ ಮೂಸೆಯಲ್ಲಿ ಸಕ್ಕರವಾದರು. ಬೊಂಬಾಯಿ ಕನ್ನಡಿಗರ ಪರಿಚಿತರಾದರು. ಕೇರಿ ಕೇರಿಗಳಲ್ಲಿ ಸುತ್ತಿಬಂದರು. ಹಣದೊಡೆಯಂತಾದರು. ಒಂದು ಹೊಸ ಹೋಟೇಲನ್ನೇ ಸ್ಥಾಪಿಸಿದರು. ವ್ಯಾಪಾರೇಸಿನ ಕುದುರೆಯಂತೆ ಓಡಿತು. ಗುಜರಾಥಿ ಸೇಠ್‌ಗಳು ಇವರು ಕೇಳಿದಷ್ಟು ಹಣವನ್ನು ಶೇಕಡಾ ಇಪ್ಪತ್ತರ ಬಡ್ಡಿಯಂತೆ ಕೊಟ್ಟರು. ಸಾವಿರಾಧೀಶ್ವರರಾಗಿ ಲಕ್ಷಾಧೀಶ್ವರರೂ ಆದರು. ಕೊನೆಗೆ ಹೋಟೇಲಿಗೆ ಬಾಗಿಲು ಹಾಕಿ ಈ ಹೋಟೆಲನ್ನು ಮೈಸೂರಿನ ಚಾಮುಂಡೀ ಪುರದ ಏಳನೇ ಗಲ್ಲಿಯ ಎಂಟನೇ ಮನೆಗೆ ವರ್ಗಾಯಿಸಿದೆ, ಎಂಬ ಬೋರ್ಡನ್ನು ತಗಲಿಸಿ ಮುಂಬಯಿಯಿಂದ ಮುಸುರಾಬಾದಿಗೆ ತೆರಳಿದರು. ಸಾಲಿಗರು ಮೈಸೂರಿಗೆ ಬಂದು ಹೋಟೆಲನ್ನು ಕಾಣದೆ ನಿರಾಶರಾಗಿ ಕನ್ನಾಂಬಾಡಿಯಲ್ಲಿ ಕಾವೇರಿಯ ನೀರನ್ನು ಕುಡಿದು ನಿಟ್ಟುಸಿರು ಬಿಟ್ಟೇ ತೆರಳಿದರು. ನೋಡಿ, ಹೇಗಿದೆ ಚಾಣಕ್ಯತನ! ಸಾಲಿಗರಿಗೆ ಕೈ ಕೊಟ್ಟರೂ ಅವರ ಕೈಯಲ್ಲಿ ಹಣವೇನೋ ಬೇಕಾದಷ್ಟಿತ್ತು ಸಟ್ಟವ್ಯಾಪಾರಕ್ಕಿಳಿದು ಹೈದರಾಬಾದಿನ ನಿಜಾಮರಾಗಬೇಕೆಂದು ಬಯಸಿದರು. ಆದರೆ ಆ ಆಸೆಗೆ ಹಜಾಮತ್ ಆಯಿತು.

ಆದರೇನಂತೆ? ಶ್ರೀ....ರಲ್ಲಿ ಉದಾರತೆಗೆ ಕಪ್ಪುಮುಂಟೇ? ಅವರು ದೇಹಿ ಎಂದವರಿಗೆ ನಾಸ್ತಿ ಅನ್ನಲಿಲ್ಲ. ಕಾಫಿ ಕೇಳಿದವರಿಗೆ ಕಲಗಚ್ಚನ್ನಾದರೂ ಕೊಟ್ಟರು. ರೂಪಾಯಿ ಕೇಳಿದವರಿಗೆ ರೂಪಾಯಿ ಮಾಡುವ ಉಪಾಯವನ್ನೂ ಹೇಳಿಕೊಟ್ಟರು. ಅವರು ಮಾಡಿದ ದಾನಧರ್ಮಗಳು ಲೆಕ್ಕವಿಲ್ಲದಷ್ಟು. ರೈಲ್ವೆ ಸ್ಟೇಷನ್ನುಗಳಲ್ಲಿ ಮಲಗುವ ಕೂಲಿಗಾರರ ಬಳಿ ಇರುವ ಗೋಣಿ ಚೀಲಗಳು ಯಾರವು? ದೇವಸ್ಥಾನದಲ್ಲಿ ಹರಿಕಥೆ ನಡೆಯುವಾಗ ಮುಂದೆ ಹಾಸುವ ಚಾಪೆಗಳು ಯಾರವು? ಕೋಳಿ ಅಂಕಗಳಲ್ಲಿ ಹಾಕಿದ್ದ ಚಪ್ಪರಕ್ಕೆ ಗಳಗಳನ್ನು ಕೊಟ್ಟವರಾರು? ಬೀರಣ್ಣ ಸತ್ತಾಗ ಅವನನ್ನು ಹೂಳುವ ಗುಂಡಿ ತೆಗೆಯಲು ಹಾರೆ ಕೊಟ್ಟವರಾರು? ಊರಿನ ಬಯಲಾಟಕ್ಕೆ ಫ್ರೀ ಪಾಸುಗಳನ್ನು ಕೊಡಿಸಿದವರು ಯಾರು? ಬೂದನ ಮನೆಯ ಮೂರು ಕೋಳಿಗಳು ಮಾದನ ಮನೆಗೆ ಹೋದದ್ದು ಯಾರ ಸಹಾಯದಿಂದ? ಅವರೇ ಅಲ್ಲವೇ? ಇಂಥ ನೂರಾರು ಅಲ್ಲ ಸಾವಿರಾರು ದಾನಧರ್ಮ ಪರೋಪಕಾರಗಳನ್ನು ಮಾಡಿ ಹೆಡೆಗೆಗಟ್ಟಲೆ ಪುಣ್ಯವನ್ನು ಸಂಪಾದಿಸಿ ಕೀರ್ತಿಶಾಲಿಯಾಗಿದ್ದಾರೆ. ಎಷ್ಟೋ ಮನೆಗಳನ್ನು ಕಟ್ಟಲು ಮಣ್ಣು ಕೊಟ್ಟಿದ್ದಾರೆ. ಸಟ್ಟೆ ಆಡುವವರಿಗೆ, ಹೂಡ ಕುಡಿಯುವವರಿಗೆ ಹಣ ಕೊಟ್ಟಿದ್ದಾರೆ. ಸೂಳೆಯರಿಗೆ, ವಿಧವೆಯರಿಕೆ ಆಶ್ರಯ ನೀಡಿದ್ದಾರೆ. ನಾಡನುಡಿಯ ಸೇವೆಗಾಗಿ ಹೆಂಗಸರೊಡನೆಯೂ ಭುಜಕ್ಕೆ ಭುಜಕೊಟ್ಟು ದುಡಿದಿದ್ದಾರೆ. ಸತ್ತವರಿಗೆಲ್ಲಾ ಒಂದೊಂದುತೊಟ್ಟು ಕಣ್ಣೀರನ್ನು ಬಿಟ್ಟಿದ್ದಾರೆ.

ಕಳೆದ ಬಾರಿ ಮಂತ್ರಿಗಳು ಬಂದಾಗ ಮೊದಲು ಮಾತನಾಡಿಸಿದ್ದು ಇವರನ್ನೇ ಅಲ್ಲವೆ? ಅವರೇನು ಸಾಮಾನ್ಯದ ವ್ಯಕ್ತಿಯೇ! ಇಂದಿನ ಚುನಾವಣೆಯಲ್ಲಿ ಅವರೇನಾದರೂ ಗೆದ್ದರೆ (ಗೆದ್ದೇಗೆಲ್ಲುತ್ತಾರೆ) ಸಂಚರಿಸುವ ವಿಮಾನಗಳೆಲ್ಲಾ ಇಳಿದು ಹೋಗುವಂತೆ ಮಾಡುತ್ತಾರೆ. ನಿಮ್ಮ ಎಲ್ಲಾ ಸಭೆ ಸಮಾರಂಭಗಳಿಗೆ ಅಧ್ಯಕ್ಷತೆಯನ್ನು ವಹಿಸಲೂ, ಉದ್ಘಾಟನೆಗಳನ್ನು ನೆರವೇರಿಸಲೂ ಜರೂರಾಗಿ ನೀವು ಕೇಳಿದೊಡನೆಯೇ ಓಗೊಟ್ಟು ಓಡೋಡಿ ಬರುವರು; ಅವರು ಚುನಾಯಿತರಾಗಿ ಬಂದರೆ ನೀವು ಸ್ವೇಚ್ಛೆಯಾಗಿ ಕುಡಿದು ತೂರಾಡಬಹುದು, ಎಲ್ಲಿ ಬೇಕೆಂದಲ್ಲಿ ಹೊಡೆದಾಡಬಹುದು, ಜೂಜಾಡಬಹುದು,

ಮಹೇಶ್ವರಿಯರೇ ಹೇಳಬೇಕಾದ ವಿಚಾರ ಬೇಕಾದಷ್ಟಿದೆ. ನೀವು ಕೇಳಬೇಕಾದ, ತಿಳಿದುಕೊಳ್ಳಬೇಕಾದ ವಸ್ತು ತುಂಬಾ ಇದೆ. ಆದರೆ ಈಗ ಸಮಯಾಭಾವದಾಗಿದೆ. ಫಸ್ಟ್ ಷೋ ಸಿನಿಮಾ ಬಿಟ್ಟಿದೆ. ನಿಮ್ಮಲ್ಲಿ ನೇಕರಿಗೆ ಸೆಕೆಂಡ್ ಶೋಗೆ ಹೋಗಲು ತಡೆಯಾದೀತು ನನ್ನ ಈ ಭಾಷಣದಿಂದ. ಇಂದು ನನ್ನ ಭಾಷಣ ಕೇಳಿದ ನಿಮ್ಮಂಥ ವಿಗಳೇ ಧನ್ಯ! ನೀವೇ ಪುಣ್ಯವಂತರು-ಹೇಳಿದ್ದನ್ನು ಕೇಳಿದ್ದನ್ನು ಮರೆತು ಬಿಡಬೇಡಿ. ಶ್ರೀಮಾನ್.....ರಿಗೇ ನಿಮ್ಮ ಮಹತ್ವಾದ ಓಟನ್ನು ಅವರು ಕಳುಹಿಸುವ ಗಾಡಿಗಳಲ್ಲಿ ಬಂದು ಚಲಾಯಿಸಿ, ಅವರನ್ನು ಚುನಾಯಿಸಿ ಮಳೆಗಾಲದಲ್ಲಿ ಅವರ ಹನ್ನೆರಡು ಮಕ್ಕಳೂ ಹೇಡತಿಯೂ ದಿನದೂಡುವಂತೆ ಮಾಡಬೇಕೆಂದು ಮನಃಪುನಃ ಪ್ರಾರ್ಥಿಸಿ ನನ್ನ ಈ ಅಮೋಘವಾದಭಾಷಣವನ್ನು ನಿಲ್ಲಿಸುತ್ತೇನೆ.

ಜೈ ಮೊಂದ್!



ಯಮನ ನೆರಳು

(೨ನೇ ಪುಟದಿಂದ)

ನನ್ನ ವಂಶವನ್ನೇ ನಿರ್ಮೂಲ ಮಾಡಿದ ಕೊಲೆಗಾರ ತಂಡದ ನಾಯಕ ನೀನು.

"ಮಾಯಾ, ನೀನು ನನ್ನವಳಾಗುವವರೆಗೆ ಮಾತ್ರ ನಾನು ಅವರಲ್ಲಿ ಬೆರೆತುಕೊಂಡಿದ್ದೇನೆ. ಇತ್ತ ನೀನು ನನ್ನವಳಾದ ಕೂಡಲೇ ಅತ್ತ ನಾನು ಅವರ ಕೂಟವನ್ನು ಬಿಟ್ಟುಕೊಡುತ್ತೇನೆ ಎಂದ ಫಲಕದಾರಿ.

ನಾನು ನಿನಗೆ ಮೊದಲೇ ಹೇಳಿದ್ದೇನೆ. ನಾನು ನಿನ್ನೊಡನೆ ವಿವಾಹವಾಗಲಾರೆ ಎಂದು.

'ನೀನೀಗ ನನ್ನ ಅಧಿಕಾರಕ್ಕೊಳಗಾಗಿದ್ದೀ ತಿಳಿಯಂದೇನು? ನಾನು ನಿನ್ನನ್ನು ವಿವಾಹವಾಗಬಲ್ಲೆ'

"ನೀನು ನನಗೇನೂ ಮಾಡಲಾರೆ. ಯಾಕೆಂದರೆ ನನ್ನದೇಹದ ಮೋಹ ನನಗಿಲ್ಲ!" ಎಂದಳು ಮಾಯಾ.

ಫಲಕದಾರಿಯು ಕೋಪದಿಂದ ನರಭಕ್ಷಕನಂತಾದನು:— "ಮಾಯಾವತೀ ಸ್ತ್ರೀಯು ಪುರುಷನೆದುರು ಬಗ್ಗಿ ನಡೆಯಲೇ ಬೇಕಾಗುತ್ತದೆ. ಪುರುಷನ ಬಾಹುಬಲವನ್ನು ತೋರಿಸುತ್ತೇನೆ.' ಎಂದು ಕೆರಳಿ ಕಿಸೆಯಿಂದ ಹಗ್ಗ ತೆಗೆದು ಅವಳ ಕೈಕಾಲುಗಳನ್ನು ಕಟ್ಟಲು ಬಗ್ಗಿದನು. ಕೂಡಲೇ ಮಾಯಾಳು ಅವನ ಸೊಂಟದಲ್ಲಿದ್ದ ರಿವಾಲ್ವರನ್ನು ತೆಗೆದು ಅವನ ಎನೆಯ ಎದುರಿಗೆ ಹಿಡಿದು—"ಈಗ ಬಡಬಡಿಸೋ.....ಕೈ ಮೇಲಕ್ಕೆತ್ತು" ಎಂದು ಹೇಳಿದಳು.

ಇದನ್ನು ನೋಡಿ ಫಲಕದಾರಿಗೆ ಸ್ಮೃತಿ ತಪ್ಪಿದಂತಾಯ್ತು. ಭಯಭೀತನಾದ ಅವನು ತನ್ನ ಕೈಯನ್ನು ಮೇಲಕ್ಕೆತ್ತಿದನು. ಮಾಯಾವತಿಯು ಹಿಂದೆ ಹಿಂದೆ ಸರಿದು ಕೋಣೆಯಿಂದ ಹೊರಗೆ ಹೋದಳು ಮತ್ತು ಬಾಗಿಲನ್ನು ಸಂಕೋಲೆಗೆ ಸಿಕ್ಕಿಸಿ ಅವಳೆಲ್ಲೋ ಓಡಿದಳು

ಅವಳು ದೊಡ್ಡ ಕೋಣೆಯಲ್ಲಿದ್ದ ದೊಡ್ಡ ಮೇಜಿನ ಬಳಿ ಓಡಿದಳು. ಅಲ್ಲಿ ಮೇಜಿನ ಅಡ್ಡದಲ್ಲಿ ಕುಳಿತು, ಈ ಕೊಲೆಗಾರರ ಕೈಯಿಂದ ಹೇಗೆ ತಪ್ಪಿಸಿಕೊಳ್ಳುವುದೆಂದೇ ಆಲೋಚಿಸುತ್ತಿದ್ದಳು. ಅಷ್ಟರಲ್ಲಿ ಅಲ್ಲಿಗೆ ಕೆಲವರು ಬರುವ ಶಬ್ದವಾಯಿತು. ಅವಳಲ್ಲಿಯೇ ಸುಮ್ಮನೆ ಕುಳಿತು ಕೊಂಡಳು ಅವಳಿಗೆ ಯಾರೆಂದು ನೋಡುವ ಸಾಹಸ ಉಂಟಾಗಲಿಲ್ಲ.

ಬರುತ್ತಿರುವ ವ್ಯಕ್ತಿಗಳಾರು? ಎಂದು ಆಕೆಗೆ ತಿಳಿದಿರಲಿಲ್ಲ. ಅವರು ಜಯಂತ ಮತ್ತು ಶರ್ಮಾಜೀಯವರಾಗಿದ್ದರು. ಅವರು ಮನೆಯ ಪ್ರತಿಯೊಂದು ವಸ್ತು ಹಾಗೂ ಪ್ರತಿಯೊಂದು ಮೂಲೆಯನ್ನು ಬಿಡದೆ ಪರಿಶೀಲಿಸುತ್ತಿದ್ದರು. ಒಮ್ಮಿಂದೊಮ್ಮೆ ಜಯಂತರು 'ಗಮಲೆ' ಎಂಬ ಗಿಡದ ಹತ್ತಿರ ಬಂದು ನಿಂತು ಧ್ಯಾನಪೂರ್ವಕವಾಗಿ ನೋಡ ಹತ್ತಿದರು. "ಶರ್ಮಾಜೀ ಈ ಮನೆಯ ಪ್ರತಿಯೊಂದು ವಸ್ತುವೂ ನೋಡಲು ಆಶ್ಚರ್ಯಜನಕವಾಗಿದೆ. ಅಪರಾಧಿಗಳಿಗೆ ಅಪರಾಧ ಮಾಡಲು ಇದಕ್ಕಿಂತ ಒಳ್ಳೆಯ ಸ್ಥಳ ಬೇರೆಲ್ಲಿಯೂ ದೊರಕಲಾರದು. ಈ ಭವನ ಕಟ್ಟಿ 'ಯಮಪುರಿ' ಮಾಡಿದರು" ಎಂದರು ಜಯಂತ್.

"ವಿಜ್ಞಾನದಿಂದಾಗಿ ಅಕಸ್ಮಾತ್ ಬೀಳುವ ಲೈಟಿನ ವ್ಯವಸ್ಥೆ ಮಾಡಲಾಗಿತ್ತು. ಭೂಕಂಪದ ಭಯದಿಂದ ಯಾರೂ ಆ ಕಡೆ ಸುಳಿಯದಿರಲೆಂದು ಒಂದೊಮ್ಮೆ ಯಾರಾದರೂ ತಿರುಗಾಡಲು ಬಂದವರು ಈ ಕಡೆ ಬಂದರೆ ಪಾಪಾಸು ಬರುತ್ತಿರಲಿಲ್ಲ. ಇದರಿಂದಾಗಿ ಇದು ವಾಸ್ತವದಲ್ಲಿಯೂ 'ಯಮಪುರಿ'ಯಾಯ್ತು. ಜನತೆಯು ಹೆದರಿ ಈ ಕಡೆ ಬರುವುದನ್ನೇ ನಿಲ್ಲಿಸಿದೆ" ಎಂದರು ಜಯಂತ್ ಕುವಾರ್.

"ಹಾಗಾದರೆ ಮಾಯ ಹೇಗಾಗುತ್ತಾರೆ? ಒಂದು ವೇಳೆ ಕೊಲ್ಲಲ್ಪಟ್ಟರೆ ದಫನ ಮಾಡಬೇಕಾಗುತ್ತದೆ ಎಂದು ವಿಚಾರಿಸಿದರು ಶರ್ಮಾ.

"ಇಲ್ಲಿ ಕೊಲ್ಲಲ್ಪಟ್ಟವರನ್ನು ಚಿತೆಗೇರಿಸುವ ಕಷ್ಟ ಅವರು ಮಾಡುವುದೇ ಇಲ್ಲ"

"ಹಾಗಾದರೆ, ಮೃತ ವ್ಯಕ್ತಿಗಳನ್ನೇನು ಮಾಡುತ್ತಾರೆ"

"ನಾನೀಗ ತೋರಿಸುತ್ತೇನೆ" ಎಂದು ಹೇಳಿ ಜಯಂತರು ನವಲೇಂದ್ರನೊಡನೆ ಒಂದು ಮೊಲ ತರಹೇಳಿದರು. ಆ ತೋಟದಲ್ಲಿ ವಿಸರೀತ ಮೊಲಗಳು ವಾಸವಾಡಿದ್ದವು. ನವಲೇಂದ್ರನು ಕೂಡಲೇ ಒಂದು ಮೊಲ ಹಿಡಿದುಕೊಂಡು ಬಂದನು. ಜಯಂತರು ಮೊಲವನ್ನು ಮರದ ಚೌಕಟ್ಟಿನಲ್ಲಿ ಕುಳ್ಳಿರಿಸಿ ಮರದ ಶಾಖೆ ಒಡೆದಲ್ಲಿಟ್ಟು "ಸರಿಯಾಗಿ ಎಲ್ಲರೂ ನೋಡಿ" ಎಂದರು.

ಸ್ವಲ್ಪವೇ ಸಮಯದಲ್ಲಿ ಆ ಉದ್ದಗಲ ಎಲೆಯು ಮುರುಟಿಕೊಂಡಿತು. ಸ್ವಲ್ಪ ಸಮಯದಲ್ಲಿ ಏನೋ ಸಣ್ಣ ಹೊಗೆಯು ಕಂಡು ಬಂತು. ತದನಂತರ ಅದು 'ತಂಬಿಗೆ'ಯಂತೆ ಕಂಡು ಬಂದು ಮುನಃ ಮಾಯವಾಯ್ತು. ಇತರರೆಲ್ಲರೂ ಧ್ಯಾನಪೂರ್ವಕವಾಗಿ ನೋಡುತ್ತಿದ್ದರು. ಅರ್ಧ ತಾಸಿನ ನಂತರ ತಂಬಿಗೆಯ ತಲಪು ಕಣ್ಮಿಂದ ತಾನೇ ತೆರೆದುಕೊಂಡಿತು. ಮೊಲವು ಸಂಪೂರ್ಣವಾಗಿ ಹಿಮದಂತೆ ಕರಗಿ ಗಿಡದ ತರಲ ಪದಾರ್ಥವಾಗಿ ಗಿಡದಲ್ಲಿ ಸೇರತೊಡಗಿತು. ಪ್ರೇಕ್ಷಕರೆಲ್ಲಾ ಚಕಿತರಾದರು.

"ನೋಡಿದಿರೇನು.—ಈ 'ಗಮಲೆ' ಎಷ್ಟು ದೊಡ್ಡದಿದೆ ಇದರ ಪ್ರತಿಯೊಂದು ಎಲೆಯೂ ಅಗಲದಲ್ಲಿ ಒಂದೊಂದು ಗಜವಿದೆ. ಉದ್ದ ಮನುಷ್ಯನಷ್ಟೆ ಇದೆ. ಇದು ಮನುಷ್ಯನನ್ನು ಈ ರೀತಿಯಾಗಿ ಕರಗಿಸಬಲ್ಲುದಾಗಿದೆ. 'ಮಾನವ ಮೃತ್ಯು'ವಾದ ಈ ಗಿಡವು ಬರೇ ಆಫ್ರಿಕದಲ್ಲಿ ಮಾತ್ರ ಇರುವುದು. ಗುಪ್ತ ದಳದ ನಾಯಕನು ಹೆಚ್ಚು ಸಮಯ ಆಫ್ರಿಕಾದಲ್ಲಿದ್ದ. ಹಾಗೂ ಅಲ್ಲಿಂದ ಬರುವಾಗ ಈ ಗಿಡಗಳನ್ನು ತಂದಿದ್ದಾನೆ. ಇಲ್ಲಿನೇ ಆಫ್ರಿಕಾದಲ್ಲಿ ಬಹಳ ಕಾಲ ಕಳೆದು ಭಾರತಕ್ಕೆ ಮರಳಿ ಬಂದ ನಂತರ ಜಗತನ್ನ ತನ್ನ ಕೃತ್ಯಗಳಿಂದ ದಬ್ಬಲು ಪ್ರಯತ್ನಿಸುತ್ತಿದ್ದಾನೆ. ಇದೇ ಅಭಿಪ್ರಾಯದಿಂದ ಅವನು ನಾನಾ ಪ್ರಕಾರದ ಪ್ರಚಾರದಿಂದ ಈ ಸುಂದರ ಭವನವನ್ನು ಭೂತ ಗೃಹವನ್ನಾಗಿ ಮಾರ್ಪಡಿಸಿದನು. ಇದರ ಮೊದಲೇ ಆಫ್ರಿಕಾದಿಂದ ಅವನು ನಾನಾ ಪ್ರಕಾರದಿಂದ ಈ ಗಿಡವನ್ನು ತರಿಸಿಕೊಂಡು ಇದನ್ನೂ ಸಾಕ್ಷಾತ್ 'ಯಮಪುರಿ'ಯನ್ನಾಗಿ ಬದಲಿಸಿದನು ಎಂದರು ಜಯಂತ್.

"ಅದರೆ ರಾಜ ಸಾಹೇಬ ಮುಂತಾದವರ ಮೃತ್ಯು..."ಶರ್ಮರನ್ನು ಮಧ್ಯದಲ್ಲಿಯೇ ತಡೆದು ಜಯಂತರು-"ಹೌದು ಅವರನ್ನು ಇಲ್ಲಿಗೆ ತರಲು ಸಾಧ್ಯವಿರಲಿಲ್ಲ. ಅದಕ್ಕಾಗಿ ಬೇರೆ ಮಾರ್ಗ ಅವಲಂಭಿಸಬೇಕಾಯ್ತು."

"ಅದರೆ.....ಕೊಲೆಯ ಉದ್ದೇಶ"

"ಅದನ್ನು ತಿಳಿಸುವ ಸಮಯವಿದಲ್ಲ. ಅದರೆ ಇಷ್ಟೊಂದು ಮಾತ್ರ ತಿಳಿಯಿರಿ. ಕೊಲೆ ಮಾಡಲ್ಪಟ್ಟವರು ಒಂದೇ ವಂಶದವರಲ್ಲ. ಅದರೆ ಪರಿವಾರದ ಸದಸ್ಯರು ಖಂಡಿತ. ಒಂದೇ ಪರಿವಾರದ ಇಷ್ಟು ಜನರು ಯಾಕೆ ಕೊಲ್ಲಲ್ಪಟ್ಟರು, ಎಂಬುದಕ್ಕೂ ಕಾರಣವಿದೆ. ಆದರೆ ಈಗ ಮಾತ್ರ ಮಾಯಾವತಿಯನ್ನು ಹುಡುಕಿ.' ಎಂದು ಎಲ್ಲರೂ ಹುಡುಕುತ್ತಾ ಮಾಯಾವತಿಯು ಇದ್ದ ಹಾಲಿನೊಳಗೆ ಹೊಕ್ಕರು. ಜಯಂತರು ಎಲ್ಲರಿಗಿಂತ ದೂರವಿದ್ದು ಬೇರೆ ವೇಷದಲ್ಲಿದ್ದರು.

ಜಯಂತರು ಬಗ್ಗಿ ಒಂದು ಗಿಡವನ್ನು ನೋಡುತ್ತಿರುವಾಗಲೇ ಮಾಯಾವತಿಯು ಅವರು ಗುಂಡಾಗಳ ಪಂಗಡದವರೆಂದು ತಿಳಿದು ಭಯದಿಂದ ಗುಂಡು ಹಾರಿಸಿದಳು. ಅದು ಜಯಂತರ ಕಾಲಿಗೆ ಬಿತ್ತು. ಅವರು ಭೂಮಿಯಲ್ಲಿ ಕುಳಿತುಬಿಟ್ಟರು. ಜಯಂತರ ಬಳಿಯಲ್ಲಿಯೇ ಇದ್ದ ನವಲೇಂದ್ರನು ತನ್ನ ಸ್ವಾಮಿಯ ಹತ್ತಿರ ಹೋಗಿ ಈಕ್ಷಿಸಹತ್ತಿದನು. ಅಷ್ಟರಲ್ಲಿ ಶರ್ಮಾರವರು ಅಲ್ಲಿಗೆ ಬಂದರು. ಇದನ್ನು ಮಾಯಾವತಿಯು ಒಳಗಿಂದೊಳಗೇ ನೋಡುತ್ತಿದ್ದಳು. ಶರ್ಮಾರವರನ್ನು ಕಂಡೊಡನೆಯೇ ಅವಳ ಪಿಸ್ತೂಲು ನೆಲವನ್ನು ಸೇರಿತು.

'ತಾನು ಯಾರಿಗೆ ಹೊಡೆದುದು' ಎಂಬುದನ್ನು ತಿಳಿದುಕೊಂಡು — "ಹಾಯ್ ನಾನೇನು ಮಾಡಿದೆ" ಎಂದು ಕಿರುಚಿ ಅವಳು ಜಯಂತರ ಹತ್ತಿರ ಓಡಿಬಂದಳು.

'ಅರೇ.....ಮಾಯಾವತೀ! ಎಂಬ ಮಾತು ಶರ್ಮಾರವರ ಬಾಯಿಯಿಂದ ಹೊರಸಿತ್ತು. ಜಯಂತರು ಅವಳನ್ನು ನೆಟ್ಟ ದೃಷ್ಟಿಯಿಂದ ನೋಡಿ ಅನಂತರ ಮುಗುಳ್ನಕ್ಕರು.

ಮಾಯಾವತಿಯು ಮೊಣಕಾಲೂರಿ ಕೂತು ಅವರ ಕೈಯನ್ನು ತನ್ನ ಕೈಯಲ್ಲಿ ಹಿಡಿದು—"ಕ್ಷಮಿಸಿರಿ, ನಾನು ನೀವು ಯಾರೋ ಕೊಲೆಗಾರರಲ್ಲೊಬ್ಬರೆಂದು ತಿಳಿದಿದ್ದೆ....."ಎಂದು ಸಜಲನೇತ್ರಳಾಗಿ ನುಡಿದಳು.

"ತಾವು ಚಿಂತಿಸಬೇಡಿ, ತಾವೇನು ಮಾಡಿದ್ದೀರೋ ಅದು ತಮ್ಮ ಪ್ರಾಣರಕ್ಷಣೆಯ ಭಯದಿಂದ ಮಾಡಿದ್ದೀರಿ. ಅದುದರಿಂದ ತಮ್ಮ ತಪ್ಪು ಕ್ಷಮ್ಯವಾಗಿದೆ ಎಂದು ಸಮಾಧಾನ ಹೇಳಿ, ಜಯಂತರು ನಗಲು ಪ್ರಾರಂಭಿಸಿದರು. ಅಷ್ಟರಲ್ಲಿ ಒಬ್ಬ ಸಾರ್ಜೆಂಟನು ಬಂದು—"ಸಾರ್ ನಿಮ್ಮನ್ನು ಗುಂಡಾಗಳು ಮುತ್ತಿಕೊಂಡಿದ್ದಾರೆ" ಅಂದನು.

"ಗುಂಡಾಗಳು ಎಷ್ಟು ಮಂದಿ ಇದ್ದಾರೆ ಎಂದರು ಕೇಪ್ಟನ್"

"ಒಟ್ಟಿಗೆ ಬಹುಶಃ ನಲ್ವತ್ತಿರಬಹುದು.

"ಈಗೇನು ಮಾಡುವುದು ಡಾಪೋದರ್ ಜೀ?

"ನಮ್ಮ ಎಲ್ಲಾ ಸಿಪಾಯಿಗಳು ಅವರವರ ಸ್ಥಾನದಲ್ಲಿದ್ದಾರೆ ನಾವು ಏಳೆಂಟು ಮಂದಿ ಇವರನ್ನು ಎದುರಿಸಲಾರೆವು. ಗಾಯಗೊಂಡಿರುವ ಜಯಂತರು ತಪ್ಪೊಂದಿದಿದ್ದಾರೆ. ಅಲ್ಲದೆ ನಮ್ಮೊಟ್ಟಿಗೆ ಮಾಯಾವತಿ ಇದ್ದಾಳೆ. ಆದುದರಿಂದ ನಾವೆಲ್ಲಾ ಉಪಾಯದಿಂದ ಹಿಂದೆ ಸರಿದು ಬಂದು ಸುರಕ್ಷಿತ ಸ್ಥಾನವನ್ನು ಸೇರಿ ಎಲ್ಲರೂ ಧೈರ್ಯವಾಗಿ ಶತ್ರುಗಳನ್ನೆದುರಿಸುವ.

"ಹಾಂ ಹಾಂ ಒಳ್ಳೆಯದು ಎಂದರು ಶರ್ಮಾ. "ಒಳ್ಳೇದು, ನವಲೇಂದ್ರ ನೀನು ಜಯಂತರನ್ನು ಮತ್ತು ಮಾಯಾವತಿ

ವಿಶ್ವಕವಿ ಟಾಗೋರರ ಪುಣ್ಯಸ್ಮರಣೆಗಾಗಿ
ಅವರ ಶತಮಾನೋತ್ಸವದ ಸುಸಂದರ್ಭದಲ್ಲಿ
ಪ್ರಕಟವಾದ ಕಿರುಗಾಣಿಕೆಗಳು

ಚಿತ್ರಾಂಗದೆ

ಬೆಲೆ: ೧ ರೂ. ೫೦ ನ. ಪೈಸೆ.

(ಶ್ರೀ ಕೆ. ಕೆ. ಶೆಟ್ಟಿ, ಎಂ. ಎಲ್. ಸಿ. ಅವರಿಂದ ಅನುವಾದಿತ)

ರವೀಂದ್ರನಾಥರ ಕಿರುಗತೆಗಳು

ಬೆಲೆ: ೪೦ ನ. ಪೈಸೆ.

ಶ್ರೀ ಹನುಮಂತರಾವ್ ಮಾಂಜರೇಕರ, ಕ. ರವಾಸ ಅವರಿಂದ ಅನುವಾದಿತ)

ಪ್ರಕಾರಕರು:

ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ನವಯುಗ ಪ್ರೆಸ್, ಉಡುಪಿ





NAVAYUGA WEEKLY, UDIPI.
REGD. NO.BG. 176

20—7—1961

LICENSE NO. 31
Licensed to Post without Prepayment

ಯನ್ನು ಕೂಡಿಕೊಂಡು ಜಾಗ್ರತೆಯಿಂದ ಹೊರಹೋಗು. ಈ ಕೊಲೆಗಾರರು ಮುಂದಿನಿಂದ ಬರುತ್ತಾರೆ ಆದುದರಿಂದ ‘ಕುಂಜರವೇಟರಿಯ ಗುಪ್ತ ಮಾರ್ಗ ಖಾಲಿ ಇರಬಹುದು. ಆದುದರಿಂದ ನೀನು ನಿರ್ವಿಘ್ನವಾಗಿ ಹೋಗಬಹುದು. ನಿಮ್ಮೊಂದಿಗೆ ಓರ್ವ ಸಾರ್ಜಂಟ್ ಬರುತ್ತಾನೆ. ನೀವು ತಪ್ಪಿಸಿಕೊಂಡ ಸುದ್ದಿ ನಮಗೆ ಅವನು ತಿಳಿಸುತ್ತಾನೆ” ಎಂದು ಹೇಳಿ ದಾಮೋದರರು ಶರ್ಮಾರ ಕಡೆ ನೋಡಿದರು.ಶರ್ಮಾರು ಓರ್ವ ಸಾರ್ಜಂಟನ್ನು ನವಲೇಂದ್ರನೊಡನೆ ಕಳುಹಿಸಿದರು. ಅವರು ‘ಕುಂಜರವೇಟರಿಯ ಕಡೆಗೆ ಹೋಗಿ ಅದೃಶ್ಯರಾದರು.

“ಹಾಗಾದರೆ ನಾವೆಲ್ಲರೂ ಅಡಗಬೇಕು” ಎಂದರು ಡಿ. ಎಸ್. ಪಿ. ಶ್ರೀ ಸಿಂಹರು.

“ಬನ್ನಿ, ‘ಕುಂಜರವೇಟರಿ’ಗಿಂತ ಸುರಕ್ಷಿತ ಸ್ಥಳ ಇನ್ನೆಲ್ಲಿದೆ?” ಎಂದರು ದಾಮೋದರರು. ಅವರು ಏಳು ಆಫೀಸರರನ್ನು ಕರೆದುಕೊಂಡು ‘ಕುಂಜರವೇಟರಿ’ಗೆ ಹೊಕ್ಕು ಬಾಗಿಲು ಮುಚ್ಚಿದರು. ಆದರೆ ಶತ್ರುಗಳಿಗೆ ಇಂತಹ ಸುರಕ್ಷಿತತೆ ಇರಲಿಲ್ಲ. ಅವರ ಮುಂದೆ ದೊಡ್ಡ ದೊಡ್ಡ ಕನ್ನಡಿಯದ್ದುದರಿಂದ ಅವರ ನಿಶಾನಿ ತಪ್ಪುತ್ತಿತ್ತು.

ಪೋಲೀಸರ ಬಂದೂಕಿನಿಂದ ಹತ್ತು ಹನ್ನೆರಡು ಮಂದಿ ಗಾಯಗೊಂಡು. ಧರಾಶಾಯಿಯಾದರು. ಈಗ ಶತ್ರುಗಳು ಮುಂದುವರಿಯುತ್ತಿರಲಿಲ್ಲ. ದಾಮೋದರರು ನಿಶಾನಿಯಿಂದ ಮುಂದುವರಿದರು. ಇನ್ನೊಬ್ಬ ಬಿದ್ದುಬಿಟ್ಟ. ಶರ್ಮಾರವರು ‘ಗೋಲಿ’ಯಿಂದ ಮತ್ತೊಬ್ಬ ಶತ್ರುವು ಬಿದ್ದನು. ಅವರಿಬ್ಬರು ಬೀಳುತ್ತಲೇ ದಳದಲ್ಲಿ ಗಲಿಬಿಲಿಯುಂಟಾಯ್ತು ಎಲ್ಲರೂ ಕಾಲಿಗೆ ಬುದ್ಧಿ ಹೇಳಿದರು.

(ಮುಂದುವರಿಯುವುದು)

ಉಡುಪಿ ಕರ್ನಾಟಕ ಸಂಘದ ಒಂದೊಂದು ರೂಪಾಯಿ ಬೆಲೆಯ ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು.ರಾಘವೇಂದ್ರ ಆಚಾರ್ಯ,ಎಂ.ಎ.)

ಸಾಮಾನ್ಯ ರೋಗಗಳು
(ಡಾ. ಕೆ.ಎಲ್.ಐತಾಳ,ಎಂ.ಬಿ.ಬಿ.ಎಸ್
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.
ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ, ಉಡುಪಿ.

ನವಯುಗ ವಾರ ಪತ್ರಿಕೆಗೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ

ಅಭಿಪ್ರಾಯ

ಭಾಷೆಗಳ ಅಧ್ಯಾಪನ ಕಾರ್ಯ

ಭಾರತೀಯ ಭಾಷೆಗಳನ್ನು ಕಲಿಸುವ ಭಾಷಾಪಂಡಿತರ ಸ್ಥಾನಮಾನಗಳನ್ನು ಕುಗ್ಗಿಸಿ ಅವರಿಗೆ ಅಪಚಾರವೆಸಗಿದ ರಾಜ್ಯ ಸರಕಾರ ಪಂಡಿತರ ಸ್ಥಾನದಲ್ಲಿ ಪದವೀಧರರನ್ನೇ ನೇಮಿಸುವ ಬಗ್ಗೆ ವಿಚಾರ ಮಾಡುತ್ತಿದೆಯಂತೆ!

ಸಂವಿಧಾನದಲ್ಲಿ ಮಾನ್ಯವಾದ ಸಂಸ್ಕೃತ ಭಾಷೆಯ ಅಧ್ಯಯನವು ಹೆಚ್ಚಾಗಬೇಕೆಂಬ ಕೂಗು ಆ ಸೇತು ಹಿಮಾಚಲ ಪ್ರತಿಧ್ವನಿತವಾಗುತ್ತಿದೆ. ರಾಷ್ಟ್ರದ ಕೆಲವು ವಿಶ್ವವಿದ್ಯಾಲಯಗಳೂ ಸರಕಾರದಿಂದ ನೇಮಿತವಾದ ಬೋರ್ಡೂ ಸಂಸ್ಕೃತ ಭಾಷೆಯಲ್ಲಿಯೇ ಉಚ್ಚ ಶಿಕ್ಷಣದ ಸೌಲಭ್ಯಗಳನ್ನು ಒದಗಿಸಿವೆ. ಮಾತ್ರವಲ್ಲ ಇತರ ಕೆಲವು ಪ್ರಚಾರ ಸಮಿತಿಗಳೂ ಸಂಸ್ಕೃತ ಭಾಷೆಯಲ್ಲಿ ವಿವಿಧ ಪರೀಕ್ಷೆಗಳನ್ನು ಏರ್ಪಡಿಸಿ ಸಂಸ್ಕೃತಾಧ್ಯಯನಕ್ಕೆ ಪ್ರೋತ್ಸಾಹ ನೀಡುತ್ತಿವೆ. ಸಂಸ್ಕೃತವನ್ನು ಅಧ್ಯಯನ ಮಾಡಿದವರು ವಿದ್ವಾಂಸರೂ ಪರಿಣತರೂ ಆಗಿರುತ್ತಾರೆ. ಇದೇ ರೀತಿಯಲ್ಲಿ ಹಿಂದೀ ಹಾಗೂ ಕನ್ನಡವೇ ಮೊದಲಾದ ಭಾಷೆಗಳಲ್ಲಿಯೂ ಉಚ್ಚ ಶಿಕ್ಷಣವನ್ನು ಕೊಟ್ಟು, ಬೇರೆ ಬೇರೆ “ಬಿರುದು” (Title) ಗಳನ್ನು ನೀಡಿ ಪುರಸ್ಕರಿಸುವ ಪದ್ಧತಿ ಹಲವು ವರ್ಷಗಳಿಂದ ನಡೆದುಬರುತ್ತಿದೆ. ಸರಕಾರವಾದರೂ ಇಂತಹ ಬಿರುದುದಾರರು ಆಯಾ ಭಾಷೆಗಳನ್ನು ಕಲಿಸಲು ಆರ್ಹರೆಂದು ತೀರ್ಮಾನಿಸಿ, ಪ್ರಾಥಶಾಲೆಗಳಲ್ಲಿಯೂ ವಿಶ್ವವಿದ್ಯಾಲಯದವರು ಕಾಲೇಜುಗಳಲ್ಲಿ ಸಹ, ಶಿಕ್ಷಕರ ಕೆಲಸಕ್ಕೆ ಅವರನ್ನು ನೇಮಿಸಲು ಅನುಮತಿಯಿತ್ತಿದ್ದುವು.

ಆದರೆ, ನಮ್ಮ ರಾಜ್ಯ ಸರಕಾರ ‘ಪಂಡಿತ’ರೆಂದು ಹೆಸರಿಸಲ್ಪಡುವ ಇಂತಹ ಬಿರುದುದಾರರ ಬದಲಿಗೆ ದ್ವಿತೀಯ ಅಥವಾ ತೃತೀಯ ಭಾಗದಲ್ಲಿ ಭಾಷೆಯಾಗಿ ಕನ್ನಡ-ಸಂಸ್ಕೃತ ಮೊದಲಾದುವನ್ನು ತೆಗೆದುಕೊಂಡ ‘ಪದವೀಧರ’ (Graduates) ರನ್ನೇ ಮುಂದಕ್ಕೆ ನೇಮಿಸಿಕೊಳ್ಳಬೇಕೆಂದು ನಿರ್ಧರಿಸಲು ನೋಡುತ್ತಿದೆ. ಪಂಡಿತ ಅಥವಾ ವಿದ್ವತ್ ಮೊದಲಾದ ಬಿರುದು ಪರೀಕ್ಷೆಗಳ ಪಾಠ್ಯಕ್ರಮವನ್ನೂ ಇವನ್ನು ಅಭ್ಯಸಿಸುವ ವಿದ್ಯಾರ್ಥಿಗಳು ಪಡುತ್ತಿರುವ ತ್ರಾಸವನ್ನೂ ತಿಳಿದುಕೊಂಡವರು ‘ಪದವೀಧರ’ರಿಗೆ ದ್ವಿತೀಯ ಭಾಷೆಯಲ್ಲಿರುವ ಪಾಂಡಿತ್ಯವೆಷ್ಟು ಎಂಬುದನ್ನು ತಿಳಿದುಕೊಳ್ಳಲು ಸಮರ್ಥರು, ನಮ್ಮ ಕನ್ನಡ-ಸಂಸ್ಕೃತ ಮೊದಲಾದ ಭಾಷೆಗಳ ಪ್ರಾಚೀನ-ಅರ್ವಾಚೀನ ಸಾಹಿತ್ಯವನ್ನು ಶಾಸ್ತ್ರೀಯವಾಗಿ ಅಧ್ಯಯನ ಮಾಡುವ ಪದ್ಧತಿ ಇದುವರೆಗೆ ಇತ್ತು ಎಂತಲೇ ಅವನ್ನೂ ಅಳಿಯದೆ ಉಳಿದುಬಂದಿವೆ. ಪಂಡಿತ ಜನರಾದರೂ ನಮ್ಮ ಹಳೆಯ ಸಾಹಿತ್ಯವನ್ನು ಓದಿ ಅರ್ಥಮಾಡಿಕೊಳ್ಳಬಲ್ಲರು; ಅವರು ತಮ್ಮ ವಿದ್ಯಾರ್ಥಿಗಳಲ್ಲಿ ಅವುಗಳ ಬಗ್ಗೆ ಆಸಕ್ತಿ ಕೆರಳಿಸಬಲ್ಲರು. ತಾವು ಕಲಿಸುವಾಗ, ಭಾಷೆಯಲ್ಲಿ ಸಂಪೂರ್ಣ ಪರಿಣತಿಯಿರುವುದರಿಂದ ಅವರು ವಿದ್ಯಾರ್ಥಿಗಳಿಗೆ ಮಂದೆಟ್ಟಾಗುವಂತೆ ಶಬ್ದ-ಶಬ್ದ ವಿವರಿಸಿ ಭಾಷೆಯ ಮಹತ್ವವನ್ನು ತಿಳಿಸಿ ಹೇಳಬಲ್ಲರು. ತಾವು ಕಲಿಯುವ ಭಾಷೆಯ ಬಗ್ಗೆ ವಿದ್ಯಾರ್ಥಿಗಳು ಅಭಿಮಾನ ಪಡುವಂತೆ ಮಾಡುವ ಅದ್ಭುತ ಪವಾಡ ಶಕ್ತಿ ಅವರಲ್ಲಿರುವುದು. ಇದರಿಂದಾಗಿ ವಿದ್ಯಾರ್ಥಿಗಳಾದರೂ ಉತ್ತಮ ಭಾಷಾ ಸಂಪತ್ತನ್ನು ಪಡೆಯಲು ಸಮರ್ಥರಾಗುವರು. ಪಂಡಿತರು ಕಲಿಸುವಾಗ ಕಲಿಯುವ ಮಕ್ಕಳ ಮಾನಸಿಕ ಶಕ್ತಿಯನ್ನು ಗ್ರಹಿಸಿಕೊಂಡರೆಂದರೆ, ಜೊಕ್ಕವಾಗಿ ಸುಲಕ್ಷಣವಾಗಿ ತಮ್ಮ ಕರ್ತವ್ಯವನ್ನು ಪೂರೈಸಬಲ್ಲರು.

ಆದರೆ, ಪದವೀಧರರು ತೆಗೆದುಕೊಳ್ಳುವ ವಿಶೇಷ ವಿಷಯಗಳೇ ಬೇರೆಯಿರುವುವು. ಅವರು ಅವನ್ನು ಕಲಿಸುವಲ್ಲಿ ಸರ್ವ ಸಮರ್ಥರು. ಒಂದು ನಾಲ್ಕು ಹಳೆಯ ಪದ್ಯಗಳನ್ನೋ ಒಂದೆರಡು ಆಧುನಿಕ ಕಾದಂಬರಿ ಕಥಾಸಂಗ್ರಹಗಳನ್ನೋ ಓದಿದ ಮಾತ್ರಕ್ಕೆ ಕನ್ನಡ ಸಾಹಿತ್ಯದ ತ್ರಿವೇಣಿಯ ಪರಿಚಯ ಅವರಿಗಾಗುವುದಿಲ್ಲ ಕನ್ನಡ ರಾಜ್ಯದ ಪ್ರಜೆಗೆ ಕನ್ನಡ ಬರುವುದೆಂದು-ಆತ ಹತ್ತಾರು ಕಾದಂಬರಿ ಓದಿರುವನೆಂದು-ಆತನನ್ನು ಕನ್ನಡ ಕಲಿಸಲು ನೇಮಿಸಲಾದೀತೆ? ಆದರೂ ಆತನ ಪರಿಶ್ರಮ ಉದ್ದೇಶ ಕೈಗೂಡೀತೆ? ಬಾವಿ ಮುಳುಗುವವನು ಸಮುದ್ರ ಮುಳುಗಬಲ್ಲನೆ? ಬಾವಿಯಷ್ಟು ಆಳ ಸಮುದ್ರದಲ್ಲಿ ಮುಳುಗಿದರೆ ಹೆಣ ಮೊರೆಯುವುದುಂಟೆ? ಪದವೀಧರರು ತಿಳಿದುಕೊಂಡಷ್ಟೇ ಭಾಷೆಯ ವೈಶಾಲ್ಯವಲ್ಲ; ಪರಿಪೂರ್ಣ ಜ್ಞಾನವಿಲ್ಲದವರು ಬೋಧಿಸುವುದಾದರೂ ಎನ್ನನ್ನು? ಅದೆಷ್ಟು ಪಂಪ ಕ್ವವಾದೀತು? ಇನ್ನು ಸರ್ವತೋಮುಖರಾದ ಪದವೀಧರರು ಇಲ್ಲವೆಂದಲ್ಲ. ಅವರ ಸಂಖ್ಯೆ ಮಾತ್ರ ಬಹು ಕಡಿಮೆ.

ಸಂಸ್ಕೃತವೇ ಇರಲಿ ಕನ್ನಡವೇ ಇರಲಿ ಅಥವಾ ಬೇರಾವುದೇ ಭಾಷೆಯಿರಲಿ, ಅದನ್ನು ಕಲಿಸಲು ಪಂಡಿತರು ಸಮರ್ಥರಾಗುವಂತೆ ಪದವೀಧರರಾಗುವುದು ಅಸಾಧ್ಯ. ಮಕ್ಕಳು ತಮ್ಮ ಭಾಷೆಯಲ್ಲಿ ಪರಿಪಕ್ವ ಜ್ಞಾನ ಪಡೆಯಬೇಕು, ತಮ್ಮ ಸಾಹಿತ್ಯ ಸಂಪ್ರದಾಯವನ್ನು ಅಭಿಮಾನದಿಂದ ಕಾಣಬೇಕೆಂದಾದಲ್ಲಿ ಪದವೀಧರರು ಭಾಷಾ ಪಾಠವನ್ನು ಕಲಿಸಲೇಬಾರದು.ಇದು ಕೇವಲ ಇಂದು ನಿರುದ್ಯೋಗಿಗಳಾದ ಪಂಡಿತರ ಅಭಿಪ್ರಾಯವಲ್ಲ;ಈಗ ಕೆಲಸದಲ್ಲಿರುವ ಪಂಡಿತರದ್ದೂ ಅಲ್ಲ.ರಾಷ್ಟ್ರದ ಅಮೋಘ ಸಾಹಿತ್ಯ, ರಾಷ್ಟ್ರದ ಉಜ್ವಲ ಪರಂಪರೆಯು ಉಳಿಯ ಬೇಕು; ಆದರಿಂದ ನಾವು ಧೈರ್ಯ ಚೇತನಗೊಂಡು ಕಾರ್ಯಪ್ರವೃತ್ತರಾಗ ಬೇಕು ಎಂಬ ಧ್ಯೇಯವಾದಿಗಳೆಲ್ಲರ ಅಂಬೋಣ. ಸರಕಾರವು ಈಗಾಗಲೇ ಭಾಷಾ ಪಂಡಿತರ ಸ್ಥಾನಮಾನಗಳನ್ನು ಪದವೀಧರರಿಗಿಂತ ಹೀನ ಮಾಡಿ ಅವರಿಗೆ ಅಪಚಾರವೆಸಗಿದೆ; ಇದನ್ನು ಬಲವತ್ತರವಾಗಿ ಖಂಡಿಸಿ, ಸರಕಾರವು ಭಾಷಾ ಪಾಠ ಕಲಿಸಲು ಪದವೀಧರರೇ ಸಮರ್ಥರು ಎಂದು ತೀರ್ಮಾನಿಸಲು ಮುಂದುವರಿಯದಂತೆ ಎಚ್ಚರಿಕೆಯಿಂದಿರ ಬೇಕು. ಇದಕ್ಕೆ ಸಾರ್ವಜನಿಕ ಹಿತಾಸಕ್ತರು ಮುಂದು ಬರಬೇಕು.

—ಗೋರಾ.

5 ರೂ. ಮಾತ್ರ

- ನೀವಿನ್ನೂ ಸಿಂಡಿಕೇಟ್ ಬೇಂಕಿನಲ್ಲಿ ಓದುವ
- ಸೇವಿಂಗ್ಸ್ ಬೇಂಕ್ ಖಾತೆಯನ್ನು ತೆರೆದಿಲ್ಲವೆ?
- ಹಾಗಾದರೆ ಇನ್ನು ತಡಮಾಡಬೇಡಿರಿ.
- ಕೇವಲ ಐದು ರೂಪಾಯಿಗಳಿಂದ ನೀವು
- ಸೇವಿಂಗ್ಸ್ ಬೇಂಕ್ ಲೆಕ್ಕವನ್ನು ಪ್ರಾರಂಭಿಸಬಹುದು.
- ನಿಮಗೆ ಸಾಧ್ಯವಿದ್ದಷ್ಟನ್ನು—25 ನಯಾ ಪೈಸೆಯಷ್ಟನ್ನು
- ಸಹಾ ನೀವು ನಿಮ್ಮ ಲೆಕ್ಕಕ್ಕೆ ಕೂಡಿಸುತ್ತಾ ಹೋಗಬಹುದು.
- ಸಿಂಡಿಕೇಟ್ ಬೇಂಕಿನ ಚೆಕ್ ಮತ್ತು ಪಾಸ್ ಪುಸ್ತಕಗಳೆರಡು
- ನಿಮ್ಮ ಗೌರವದ ಸೊತ್ತುಗಳಾಗುವುವು.
- ಮಾತ್ರವಲ್ಲ, ನಿಮ್ಮ ಹಣಕ್ಕೆ ಯೋಗ್ಯ ಬಡ್ಡಿಯನ್ನೂ
- (ಅರು ತಿಂಗಳಿಗೊಮ್ಮೆ ಸಾ.ಶೇಕಡಾ 3ರಷ್ಟು) ಗಳಿಸಬಹುದು.

ಇಂದೇ ನಿಮಗೆ ಸಮೀಪವಿರುವ ನಮ್ಮ ಶಾಖೆಯೊಂದನ್ನು ದಯವಾಡಿ ಸಂದರ್ಶಿಸಿರಿ.

ಆಗಾಗ ಉಳಿಸಲು
ಮಿತವಾಗಿ ವ್ಯಯಿಸಲು
ಬಡ್ಡಿಯನು ಗಳಿಸಲು

ಸೇವಿಂಗ್ಸ್ ಬೇಂಕ್

ಸಿಂಡಿಕೇಟ್ ಬೇಂಕ್

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಸೂಚನೆ

“ನವಯುಗ”ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರ ಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ.ನ.

Edited Printed & Published by K. H. Shetty, at the Navayuga Press, Udipi, S. India.

40th year of publication. 27-7-1961 ೪೦ನೇ ವರ್ಷ

ಸಂಪುಟ ೪೧

ನವಯುಗ

Vol. 41

ಸಂಚಿಕೆ ೪೫

No. 45

ಜೆಲೆ 0-13

ಪ್ರಚಲಿತ ಪ್ರಸಂಗ

ಖಾಸಗಿ ಪ್ರಾಥಮಿಕ ಶಾಲೆಗಳ ಭವಿಷ್ಯ?

ಹತ್ತಾರು ವರ್ಷಗಳಿಂದ ಜನತೆಯಲ್ಲಿ ವಿದ್ಯಾ ಪ್ರಸಾರ ಮಾಡುತ್ತ ಬಂದಿರುವ ನಮ್ಮ ಜಿಲ್ಲೆಯ ಖಾಸಗಿ ಪ್ರಾಥಮಿಕ ಶಾಲೆಗಳ ಮೇನೇಜರರ ಮೇಲೆ ಸರಕಾರ ರಾಮಬಾಣವನ್ನು ಯಾವ ಉದ್ದೇಶದಿಂದ ಹೆದೆಗೇರಿಸಿದೆ? ಬಾಣ ಬಿಡುವುದು ಸುಲಭ, ಬಿಟ್ಟಷ್ಟು ಸುಲಭದಲ್ಲಿ ಕಡೆಯಲಾಗದೇತೆ?

ದಕ್ಷಿಣ ಕನ್ನಡ ಜಿಲ್ಲೆಯು ಮೈಸೂರು ರಾಜ್ಯಕ್ಕೆ ಸೇರಿದ ದಿನದಿಂದ ವರ್ಷ—ಎರಡು ವರ್ಷಗಳಿಗೊಮ್ಮೆ ಇಲ್ಲಿನ ವಿದ್ಯಾಕ್ಷೇತ್ರದಲ್ಲಿ ಗೊಂದಲಗಳು—ತಪ್ಪು ಅಭಿಪ್ರಾಯಗಳು ಎದ್ದು ಹಲವಾರು ಅನಾಹುತಗಳಿಗೆ ಕಾರಣವಾಗಿವೆ. ಈ ವರ್ಷದಲ್ಲಿ ಇಲ್ಲಿನ ಖಾಸಗಿ ಪ್ರಾಥಮಿಕ ಶಾಲೆಗಳ ಅಸ್ತಿತ್ವದ ಮೇಲೆಯೇ ಬಲವಾದ ಕೊಡಲಿಯೇಟು ಬೀಳುವ ಪ್ರಮೇಯ ಅತಿ ಹೆಚ್ಚಿನದೆಂದು ಹೇಳಬೇಕಾಗಿದೆ. ಸರಕಾರವು ಮದ್ರಾಸಿನ ಸಹಾಯಧನ ನಿಯಮಗಳಿಗೆ ಮಾಡಿದ ಕೆಲಪೊಂದು, ಎಲ್ಲಕ್ಕಿಂತ ಮುಖ್ಯವಾಗಿ 'ಮೈಂಟೆನೆನ್ಸ್ ಗ್ರಾಂಟ್' ಕೊಡುವುದನ್ನು ನಿಲ್ಲಿಸುವ, ತಿದ್ದುಪಡಿಗಳಿಂದಾಗಿ ಖಾಸಗಿ ಶಾಲೆಗಳ ಮೇನೇಜರರ ವರ್ಗದಲ್ಲಿ ಹಾಹಾಕಾರ ಮೇಳುವಂತಾಗಿದೆ. 'ಮೈಂಟೆನೆನ್ಸ್ ಗ್ರಾಂಟ್' ಕೊಡದೆ ಹೋದರೆ, ಶಾಲೆಗಳನ್ನು ಖಾಸಗಿ ವ್ಯಕ್ತಿಗಳಾಗಲಿ ಸಂಘ ಸಂಸ್ಥೆಗಳಾಗಲಿ ನಡೆಸುವುದು ಸಾಧ್ಯವಿಲ್ಲದಿರುವುದರಿಂದ ಅವರು ಶಾಲೆಗಳನ್ನು ಮುಚ್ಚಬೇಕಾಗಿಯೂ ಬರಬಹುದು.

ಒಂದು ಪ್ರಾಥಮಿಕ ಶಾಲೆಯನ್ನು ಖಾಸಗಿಯಾಗಿ ನಡೆಸಿಕೊಂಡು ಬರಬೇಕಾದರೆ, ತುಂಬ ಕಷ್ಟ. ಅಧ್ಯಾಪಕರ ಸಂಬಳ ಮತ್ತು ತುಟ್ಟಿ ಭತ್ತೆಯ ಬಗ್ಗೆ ಸಂಪೂರ್ಣ ಸಹಾಯವನ್ನು ಸದ್ಯ ಸರಕಾರವೇ ನೀಡುತ್ತಿದೆಯಾದರೂ ಶಾಲೆಯ ಕಟ್ಟಡದ ವಿಸ್ತರಣೆ, ಬೋಧನೋಪಕರಣಗಳು, ಬೆಂಚು ಕುರ್ಚಿಗಳು, ರಿಜಿಸ್ಟ್ರಿ ಇತ್ಯಾದಿಗಳು ಮಾತ್ರವಲ್ಲ, ಆಟದ ಬಯಲು ತೋಟ, ಕಟ್ಟಡದ ರಿಪೇರಿ—ಹೀಗೆ ಪ್ರತಿಯೊಂದನ್ನೂ ಸಮರ್ಪಕವಾಗಿ ನಡೆಸಿಕೊಂಡು ಬರುವುದಾದರೆ, ತುಟ್ಟಿಯ ದಿನಗಳಾದ ಇಂದು ಆ ಹಳೆಯ ವೇತನ ಮಟ್ಟದ ಮೇಲೆ ಹೊಂದಿಕೊಂಡು ನೀಡುವ 'ಮೈಂಟೆನೆನ್ಸ್ ಗ್ರಾಂಟ್' ಏನೇನೂ ಸಾಲದು. ಅಧ್ಯಾಪಕರ ನೂತನ ವೇತನ ಮಟ್ಟದ ಮೇಲೆ ರೂಪಾಯಿಗೆ ಮೂರು ನಯೇ ಪೈಸೆಯಂತೆ ಮೇನೇಜ್‌ಮೆಂಟನ ಖಾಲನ್ನೂ ಅವರು ಹಾಕಬೇಕಾಗುವುದು. ಆಗ, ಖಾಸಗಿ ಶಾಲೆಯಲ್ಲಿ ತೊಡಗಿಸಿದ ಬಂಡವಾಳಕ್ಕೆ ನ್ಯಾಯ ದರದ ಬಡ್ಡಿಯೂ ಸಿಗದಂತಹ ಪ್ರಮೇಯಗಳೇ ಇಂದು ಹೆಚ್ಚಿಗೆ. ಬೇಂಕಿನವರು ಸಹ ಬಡ್ಡಿಯ ದರವನ್ನು ಹೆಚ್ಚಿಸಿದಾಗ ತಮಗೂ ಹೊಸ ವೇತನ ಮಟ್ಟದ ಮೇಲೆಯೇ ಮೈಂಟೆನೆನ್ಸ್ ಗ್ರಾಂಟು ಸಿಗಬೇಕೆಂದು ಮೇನೇಜುಮೆಂಟುಗಳು ವಾದಿಸುವುದು ತಪ್ಪೇನಲ್ಲ. ಸರಕಾರದ ನೌಕರರೇ ಸೇವಾಭಾವನೆಯನ್ನು ಬಿಟ್ಟುಗೊಡುತ್ತಿರುವಾಗ ಈ ಮೇನೇಜರರಿಗೇಕೆ ಸೇವೆ? ತನ್ನ ಶಾಲೆಯನ್ನೂ ತನ್ನ ಶಾಲೆಯ ಅಧ್ಯಾಪಕರನ್ನೂ ಮಕ್ಕಳನ್ನೂ ಸರಿಯಾಗಿ ನಿರ್ವಾಚಸೆಯಿಂದ ನೋಡುವ ಮೇನೇಜರರಿಗೆ ಸರಕಾರ ಈಗ ನೀಡುತ್ತ ಬರುತ್ತಿರುವ ಮೈಂಟೆನೆನ್ಸ್‌ಗ್ರಾಂಟು ಸಾಲದು ಎಂಬುದು ಸ್ಪಯಂಸಿದ್ಧ.

ಆದರೆ, ಅಧ್ಯಾಪಕರನ್ನು ಸರಿಯಾಗಿ ಕಾಣದಿರುವ ಮೇನೇಜರರು ಇಲ್ಲವೆಂದಿಲ್ಲ. ಬರುವ ಸಂಬಳದಲ್ಲಿಯೇ ಒಂದಂಶವನ್ನು ಸಡೆಯುವ, ಪ್ರೊವಿಡೆಂಟ್ ಫಂಡಿನ ದೇಣಿಗೆಯಲ್ಲಿ ಮೇನೇಜರರ ಖಾಲನ್ನು ಕೂಡ ಅಧ್ಯಾಪಕರಿಂದಲೇ ವಸೂಲು ಮಾಡುವ, ಅಂಚೆ ವೆಚ್ಚ, ಬಿಲ್ ಕೇಶ್ ಮಾಡಿಸುವ ವೆಚ್ಚವೆಂದು ಮುಂತಾದ ಚಿಲ್ಲರೆ ಪಲ್ಲರೆ ವಿಷಯಗಳಿಗೂ ಅಧ್ಯಾಪಕರಿಂದಲೇ ವಸೂಲಿ ಮಾಡುವ ಮೇನೇಜರರು ಇಲ್ಲವೇ ಇಲ್ಲವೆಂದು ಎದೆಹಟ್ಟಿ ಹೇಳುವಂತಿಲ್ಲ. ನೀರಿದ್ದಲ್ಲಿ ಕೊಳಚೆಯಿದೆಯೆಂ ಒಂತೆ ಒಳ್ಳೆಯವರ ನಡುವೆ ಕೆಟ್ಟವರೂ ಇರುವುದು ಸ್ವಾಭಾವಿಕ ಹಂಸಗಳ ಮಧ್ಯೆ ಕೆಲವು ಬಕಗಳು ಬಂದು ಕುಳಿತ ಮಾತ್ರಕ್ಕೆ ಇಡಿಯ ಸಂಗಡವೇ ಬಕಗಳಾಗುವುದಿಲ್ಲ. ಬಕಗಳನ್ನು ಕೊಲ್ಲುವ ಉದ್ದೇಶದಿಂದ ಹಂಸಗಳನ್ನೂ ಗುಂಡಿಕ್ಕಿ ಕೊಲ್ಲುವುದು ನ್ಯಾಯೋಚಿತವಲ್ಲ—ಅದು ಬಕಗಳಾವುವೆಂದು ತಿಳಿಯುವ ಬಗ್ಗೆ ಅವರಿಗಿರುವ ಅಜ್ಞಾನ ಮತ್ತು ನಿರ್ಬಲತೆಗಳ ಪ್ರದರ್ಶನ ಮಾತ್ರ.

ಇಂದು ಖಾಸಗಿ ಪ್ರಾಥಮಿಕ ಶಾಲೆಗಳನ್ನು ಸೂಕ್ಷ್ಮ ಸೂಕ್ಷ್ಮದ ವೆಚ್ಚದಲ್ಲಿ ಅವುಗಳ ಮೇನೇಜರರು ನಡೆಸುತ್ತಾರೆ ಅತ್ಯಾವಶ್ಯಕವಾದ ವೆಚ್ಚಗಳನ್ನಷ್ಟೇ ಅವರು ಮಾಡುತ್ತಾರೆ; ಒಂದು ವೇಳೆ ಶಾಲೆಯ ವೆಚ್ಚ ಹೆಚ್ಚಾದರೂ ಸರಕಾರವು ಅದನ್ನು ತೆರಲು ಸಾಧ್ಯವಿರುವುದಿಲ್ಲ. ಆದರೆ, ಸರಕಾರವು ಇವೇ ಶಾಲೆಗಳನ್ನು ನಡೆಸಿಕೊಂಡು ಹೋಗಬೇಕಾದರೆ, ಈಗ ಮೈಂಟೆನೆನ್ಸ್ ಗ್ರಾಂಟ್ ಕೊಡಲು ತಗಲುವ ವೆಚ್ಚಕ್ಕಿಂತ ನಾಲ್ಕಾರು ಪಟ್ಟು ಹೆಚ್ಚು ಹಣಬೇಕಾಗುತ್ತದೆ. ಇಷ್ಟನ್ನೂ ಸಂಕಾರವೇ ನೋಡಿಕೊಳ್ಳಬೇಕಾಗುತ್ತದೆ. ಇದರ ಸತ್ಯಾಸತ್ಯತೆಗಳನ್ನು ಕಂಡು ಹಿಡಿಯಲು ಬೇರೆಡೆ ಹೋಗಬೇಕಾಗಿಲ್ಲ. ಸರಕಾರಿ ಆಡಳಿತೆಯಲ್ಲಿರುವ ಮತ್ತು ಖಾಸಗಿಯಾಗಿರುವ ಒಂದೊಂದು ಶಾಲೆಯ ನ್ಯಾಯೋಚಿತ ಆಯವ್ಯಯಗಳನ್ನು ತೂಗಿ ನೋಡಿದರೆ ಸಾಕನಿಸುವುದು.

ಮೈಂಟೆನೆನ್ಸ್ ಗ್ರಾಂಟನ್ನು ಕೊಡದೆ ಹೋದರೆ, ಶಾಲೆಯ ವೆಚ್ಚಗಳನ್ನು ಎದುರಿಸುವುದು ಹೇಗೆ? ಒಟ್ಟು ವೆಚ್ಚದ (ಅಧ್ಯಾಪಕರ ವೇತನ ಮತ್ತು ತುಟ್ಟಿ ಬತ್ತಿಗಳೂ ಸೇರಿ, ಸೇಕಡಾ ಇಂತಿಷ್ಟು ಮಾತ್ರ ಸಹಾಯ ನೀಡುವುದಾದರೆ, ಉಳಿದ ಹತ್ತಂಶವನ್ನು ತುಂಬಿಸಬೇಕಾದರೂ ಯಾರು ಅದು ಬರಬೇಕಾದರೂ ಎಲ್ಲಿಂದ? ಅಧ್ಯಾಪಕರ ದೃಷ್ಟಿಯಿಂದ ಹೇಳುವುದಾದರೆ, ಈ ಅಂಶ ಅವರ ಪಾಲಿಗೆ ಕಡಿತ ಎನಿಸುವ ಸಂದರ್ಭವೇ ಹೆಚ್ಚು.

ಖಡ್ಡಾಯ ತಿಕ್ಷಣ ಯೋಜನೆಯನ್ನು ಕಾರ್ಯಾಚರಣೆಗಿಳಿಸಿದ ಸರಕಾರವು ತಿಕ್ಷಣ ಕ್ಷೇತ್ರದಲ್ಲಿ ಮಹತ್ವದ ಸೇವೆ ಸಲ್ಲಿಸುತ್ತಿರುವ ಖಾಸಗಿ ಸಂಸ್ಥೆಗಳ ಸಹಾಯವು ಅತ್ಯಾವಶ್ಯವಿದೆ, ಅವನ್ನು ಬಿಟ್ಟುಬಿಟ್ಟರೆ, ನಮ್ಮ ಜಿಲ್ಲೆಯಲ್ಲಿ ಸಾಮ್ಯ ಪ್ರಚಾರದಲ್ಲಿ ಪ್ರಗತಿ ಕಂಡು ಬರುವುದು ಸರ್ವಥಾ ಸಾಧ್ಯವಿಲ್ಲ. ಸರಕಾರವು ಎಲ್ಲವನ್ನೂ ಮಾಡುತ್ತೇನೆಯೆಂದು ಡಂಗುರ ಹೊಯ್ಯುವುದರಿಂದಲೇ ಕಾರ್ಯಸಾಧನೆಯಾಗುವುದಿಲ್ಲ ಸರಕಾರದ ಎಲ್ಲ ಯೋಜನೆಗಳ ಹೆಸರಿನಲ್ಲಿಯೂ, ನೀರಿನಂತೆ ವ್ಯಯವಾಗುತ್ತಿರುವ ಹಣವನ್ನು ಕಂಡು ಯಾರಿಗಾದರೂ ಅಯ್ಯೋ ಎನ್ನಬೇಕಾಗುವುದು. ನಾಳೆ, ಶಾಲೆಗಳನ್ನು ಸರ[illegible] ನಡೆಸಲು ಮುಂದೆ [illegible]

(೧೨ನೇ ಪುಟ ನೋಡಿರಿ)

ನ್ಯೂಯೋರ್ಕಿನಲ್ಲಿ ಈಸ್ಟರ್ ವೇಳೆ ಪರೇಡ್ ನಡೆಯುವ ರೊಕ್‌ಫೆಲ್ಲರ್ ಕೇಂದ್ರ ಭವನದ ಮೇಲ್ಭಾಗ.

ESTD. 1921

NAVAYUGA
KANNADA WEEKLY,
UDIPI.

Founder:
Late Sri A. B. Shetty
Former Minister for Public Health, Govt. of Madras & Govt. of Mysore.

ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದ ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರತಿ ಗುರುವಾರ
ಉಡುಪಿಯಿಂದ ಹೊರಡುವ
ರಾಷ್ಟ್ರೀಯ ವಾರಪತ್ರಿಕೆ

ಸ್ಥಾಪನೆ: ೧೯೩೧.

ಗೌರವ ಸಂಪಾದಕರು:
ಎಸ್. ಗೋಪೀಚಂದ ರಾವ್, ವಿದ್ವಾನ್.
ಬಿ. ಶಾಮರಾಯ ಶೆಟ್ಟಿ, ಬಿ. ಎ., ಎಲ್. ಟಿ.

ಸಂಚಾಲಕ ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ.

●

ಜಾಹೀರಾತು ದರಗಳು:

ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-50
ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3-50

ಹೆಚ್ಚಿನ ವಿವರಗಳಿಗೆ ವ್ಯವಹರಿಸಿರಿ.

ಚಂದಾ:

ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವಸೌಕರ್ಯವಿರುವುದು.

ಧಾರಾವಾಹಿ ಕಾದಂಬರಿ

ಯಮನ ನೆರಳು

ಮೂಲಲೇಖಕರು: ಶ್ರೀ ಎಂ. ಎಲ್. ಪಾಂಡೇಯ.
ಅನುವಾದಕರು: ಶ್ರೀ ಎಸ್. ಎಂ. ಶೆಟ್ಟಿ, ಶಿವಮುಂಜೆಪರಾರಿ.
(ಕಳೆದ ಸಂಚಿಕೆಯಿಂದ)

— ೧೭ —

ಶತ್ರುಗಳು ಪಲಾಯನ ಮಾಡಿದರು. ದಾಮೋದರರು 'ಕುಂಜರವೇಟರ'ಯಿಂದ ಹೊರಬಂದು ಗಾಯಗೊಂಡವರ ಮುಖ ನಾಡವನ್ನು ಕಳಚಿ, ಗುರುತು ಹಚ್ಚಲು ಪ್ರಯತ್ನಿಸಿದರು. ಶರ್ಮಾರ ಗೋಲಿಗೆ ಆಹುತಿಯಾದವನು ರಣವೀರಸಿಂಹನಾಗಿದ್ದನು. ದಾಮೋದರರು ತನ್ನ ಶಿಖಾರಿಯನ್ನುನೋಡಿದರು ಅವನು ಆತ್ಮರಾಮನಾಗಿದ್ದನು. ಈರ್ವರೂ ಮೃತರಾಗಿದ್ದರು. ಇನ್ನುಳಿದವರಲ್ಲಿ ಇಬ್ಬರು ಸತ್ತಿದ್ದರು. ಗಾಯಗೊಂಡವರನ್ನು ಬಂಧಿಸಿ ಕೋಳ ಹಾಕಿ ಒಂದು ಕೋಣೆಯಲ್ಲಿ ಹಾಕಿದರು.

"ಈಗೇನು ಮಾಡಬೇಕು?" ಎಂದರು ದಾಮೋದರ್‌ರವರು.

"ಇಲ್ಲಿಂದ ಬೇಗನೇ ಹೊರಡಬೇಕು ಎಂದರು ಶರ್ಮಾ.

"ಹಾಂ ನಡೆಯಿರಿ.....ಆದರೆ ನಿಜವಾದ ಸಾದಾ ರಸ್ತೆಯಿಂದ ಹೋದರೆ ಕೊಲೆಗಡುಕರ ಬಂದೂಕಿಗೆ ಆಹುತಿಯಾಗುವುದು ನಿಶ್ಚಯ" ಎಂದರು ದಾಮೋದರರು ಹಾಲಿನತ್ತ ಮುನ್ನಡೆದರು.

"ನವಲೇಂದ್ರನು ಹೋದ ದಿಕ್ಕಿನಿಂದ ನಾವೇಕೆ ಹೋಗಬಾರದು?" ಎಂದು ವಿಚಾರಿಸಿದರು ಮಿ॥ ಶರ್ಮಾ.

"ಬೇಡ, ಈ ಸುರಂಗವು ಒಂದು ಮೂಲೆಯಿಂದ ಇನ್ನೊಂದು ಮೂಲೆಗೆ ಹೋಗಲು ಮಾಡಿದುದಾಗಿದೆ. ಅಲ್ಲಿಂದ ಪುನಃ ಹಿಂತಿರುಗಿ ಹೋಗಲು ಸಾಧಾರಣ ಒಂದು ಫರ್ಲಾಂಗಿದೆ. ಪೋಲೀಸರಿರುವುದರಿಂದ ಶತ್ರುಗಾಳ್ಯಾರೂ ಅಲ್ಲಿಂದ ಹೋಗಲಾರರು. ನಾವು ಹೋಗುವುದು ಸಾಧ್ಯವಿಲ್ಲ. ಏಕೆಂದರೆ ಶತ್ರುಗಳಲ್ಲಿ ಕೆಲವರಾದರೂ ಹೊರ ಹೊರಡುವಲ್ಲಿ ಇರಬಹುದು." ಎಂದುತ್ತರಿಸಿದರು ದಾಮೋದರ್.

ದಾಮೋದರರ ಮಾತು ಎಲ್ಲರಿಗೂ ಮನದಟ್ಟಾಯ್ತು. ಅಷ್ಟರಲ್ಲಿ ಸಾರ್ಜಂಟನು ಬಂದು ನವಲೇಂದ್ರನು ಸ್ವಾಮ್ಯವಾಗಿ ಬಂಗಲೆಯಿಂದ ಹೊರಗೆ ಹೋದನು ಎಂದು ತಿಳಿಸಿದನು.

"ಸರಿ ಸುರಂಗದಿಂದಾಗಿ ನಾವು ಶೀಘ್ರದಲ್ಲಿಯೇ ಹೊರಬೀಳುವ," ಅಂದರು ದಾಮೋದರ್. ಎಲ್ಲರೂ ಹಾಲಿಗೆ ಬಂದು ಆ ದೊಡ್ಡ ಮೇಜಿನ ಅಡ್ಡದಿಂದ ಮಾರ್ಗ ಸುರಕ್ಷಿತವಾಗಿದೆಯೇ ಎಂದು ನೋಡಿದರು. ಮಾರ್ಗವು ಸುರಕ್ಷಿತವಾಗಿತ್ತು. ಅವರೂ ಅಲ್ಲಿಂದ ಹೊರ ಹೊರಡುವಷ್ಟರಲ್ಲಿ ಶರ್ಮಾರವರು ದಾಮೋದರರೊಡನೆ —"ಇಷ್ಟು ದೊಡ್ಡ ಮೇಜು ಇಲ್ಲಿಟ್ಟಿರುವುದರ ತಾತ್ಪರ್ಯವೇನು?" ಎಂದು ವಿಚಾರಿಸುತ್ತಲೇ ಅವರು ಮೇಜಿನ ಮೇಲೆ ಹಾರಿ ನಿಂತು, ಇನ್ನೊಂದು ಬದಿಗೆ ಜಿಗಿಯುತಿದ್ದರು. ಅವರು ಮೇಜಿನ ಮೇಲೆ ಹಾರುತ್ತಲೇ ಆ ವಿಶಾಲ ಹಾಲ್‌ನ ಎಲ್ಲಾ ದ್ವಾರಗಳೂ ಒಮ್ಮಿಂದೊಮ್ಮೆಲೇ ತನಗೆ ತಾನೇ ಮುಚ್ಚಿಕೊಂಡುವು ಎಂಟೂ ಜನರು ಹೋಗಿ ಬಾಗಿಲು ತೆರೆಯಲು ಬಹುವಾಗಿ ಪ್ರಯತ್ನಿಸಿದರೂ ಅಸಫಲರಾದರು. ಬದಿಯ ಒಂದು ಅತಿ ಸಣ್ಣ ಛಿದ್ರದಿಂದ ಒಂದು ತುಂಡು ಕಾಗದವು ಒಳಬಿದ್ದು ಕೂಡಲೇ ಆ ಛಿದ್ರವು ಮುಚ್ಚಿಕೊಂಡಿತು. ಆ ಅಂಧಕಾರದಲ್ಲಿ ಮಿ. ಶರ್ಮಾರವರು ತನ್ನ ಕಿಸೆಯಿಂದ ಟೋರ್ಚ್ ತೆಗೆದು ಅದನ್ನು ಓದತೊಡಗಿದರು. ಅದರಲ್ಲಿ ಅದೇ "ಯಮನ ನೆರಳು" ದಳದವರ ಗುರುತು ಮತ್ತು 'ಸ್ಯಾಹನಕಾಬಿ'ನ ಸಹಿ ಇತ್ತು. ಅದರಲ್ಲಿ ಹೀಗೆ ಬರೆಯಲಾಗಿತ್ತು.

"ಶ್ರೀ ದಾಮೋದರ್‌ರಿಗೆ."

ಜಯ ಹಿಂದ್—

ಈ ದಿವಸ ಸ್ವತಃ ನಿಮ್ಮನ್ನು ನಿಮ್ಮಮಿತ್ರರೊಡನೆ ಬಂಧಿಸಿದ್ದೇವೆ. ಆದರೂ ನಿಮ್ಮಿಂದ 'ಸ್ಯಾಹನಕಾಬಿ'ನ ದಳದ ಶಕ್ತಿಯನ್ನು ಗುರುತಿಸಲಾಗಲಿಲ್ಲ. ಜಗತ್ತಿನ ಇತರ ಸೆರೆಮನೆಗಳಿಂದ ಮಾನವನು ಬಿಡುಗಡೆ ಹೊಂದ ಬಲ್ಲನು, ವಾಸ್ತವ ಜಗತ್ತಿನ ಗಾಳಿ ಬೆಳಕುಗಳನ್ನು ಸೇವಿಸ ಬಲ್ಲನು. ತನ್ನ ಬಂಧು ಬಾಂಧವರಿಗೆ ಮಾತಾಡ ಸಿಗಬಲ್ಲನು. ಆದರೆ ನಮ್ಮ ಬಂಧೀಖಾನೆಯಲ್ಲಿ ಅದಾವ ವಿಶೇಷತೆಯೂ ಇಲ್ಲವೆಂದು ತಿಳಿಸುವರೇ ನಾನು ತುಂಬಾ ಬೇಸರ ಪಡುತ್ತೇನೆ! ಆದರೆ ತಾವು ತಮ್ಮ ಪ್ರತಿಷ್ಠಿತ ಮಿತ್ರರೊಂದಿಗೆ ನಮ್ಮ ಅತಿಥಿಯಾಗುವಿರೆಂದು ನಮಗೇನು ಗೊತ್ತು? ಗೊತ್ತಿದ್ದಲ್ಲಿ ನಾವು ಯೋಗ್ಯ ಸೌಕರ್ಯಗಳನ್ನು ಅವಶ್ಯವಾಗಿ ಒದಗಿಸುತ್ತಿದ್ದೆವು.

ತಾವು ಈ ಕೋಟೆಯನ್ನು ಎಲ್ಲಾ ಕಡೆಗಳಿಂದಲೂ ಮುತ್ತಿಗೆ ಹಾಕಿಸಿದ್ದೀರಿ. ಆದರೆ ನಾವು ತಪ್ಪಿಸಿಕೊಳ್ಳ ಬಲ್ಲೆವು. ತಪ್ಪಿಸಿಕೊಳ್ಳುತ್ತಿದ್ದೇವೆ. ನೀವು ಇಲ್ಲಿಗೆ ಬಂದು ನಮ್ಮ ಜಾಲದಲ್ಲಿ ಖಂಡಿತವಾಗಿಯೂ ಸಿಕ್ಕಿಬೀಳುವರೆಂಬ ಭರವಸೆ ನನಗಿತ್ತು. ನಮಗೆ ನಮ್ಮ ಇಬ್ಬರು ಸಹಕಾರಿಯವರ ಮೃತ್ಯುವಿನಿಂದಾಗಿ ತುಂಬಾ ದುಃಖವಾಗಿದೆ. ಅವರು ಉದ್ಧಟತನದಿಂದ ಮುಂದುವರಿಯದಿರುವುದ್ದರೆ ಅವರೆಂದೂ ಮೃತ್ಯುವನ್ನಪ್ಪುತ್ತಿರಲಿಲ್ಲ!

ಮಾಯಾವತಿಯು ಫಲಕದಾರಿಯನ್ನು ಒಂದು ಕೋಣೆಯಲ್ಲಿ ಬಂಧಿಸಿದ್ದಳು. ಅವನನ್ನು ನಿಮ್ಮ ಸಹಯೋಗಿ ಮಿ. ಪ್ರಧಾನ್‌ರವರು ದಸ್ತಗಿರಿ ಮಾಡಿದ್ದಾರೆ ನಿಮ್ಮನ್ನು ನಾವು ಬಂಧಿಸಿರುವುದರಿಂದ ತಾವು ಇನ್ಸ್‌ಪೆಕ್ಟರ್ ಪ್ರಧಾನ್‌ರವರಿಗೆ ಸಿಗಲಾರಿರಿ ಎಂದು ವಿಶಾದ ಪೂರ್ಣವಾಗಿ ಹೇಳಬೇಕಾಗಿದೆ. ಫಲಕದಾರಿಯನ್ನು ಸೀದಾ ಜೈಲಿಗೆ ಕಳುಹಿಸಲಾಗಿದೆ, ಆದರೂ ಇವತ್ತಿನಿಂದ ಇಪ್ಪತ್ತೆರಡು ದಿವಸಗಳೊಳಗೆ ಫಲಕದಾರಿಯನ್ನು ಪೋಲೀಸ್ ಪಹರೆಯುಳ್ಳ ಜೈಲಿನಿಂದಲೇ ತಪ್ಪಿಸಿ ತರುತ್ತೇವೆ ಎಂದು ಎದೆ ತಟ್ಟಿ ವಿಶ್ವಾಸ ಕೊಡುತ್ತೇವೆ ದಲಿತಸಿಂಹರ ಮಿತ್ರರು ಪೋಲೀಸ್ ಯಾ ಸರಕಾರಿ ಜೈಲಿಯಲ್ಲಿ ಹೆಚ್ಚು ಸಮಯವಿರುವುದಿಲ್ಲ.

ಸರಿ ನಮಸ್ತೆ!

ಅಜಮೀರ ೩—೧೨—೪೯

ಇತಿ, ಶುಭಚಿಂತಕ,
ದಲಿತಸಿಂಹ.

(೧೧ನೇ ಪುಟ ನೋಡಿರಿ)

ಸ್ಥಾಪನೆ: 1924

ದಿ ಕರ್ಣಾಟಕ ಬೇಂಕ್ ಲಿಮಿಟೆಡ್

(ಶೆಡ್ಯೂಲ್ಡ್ ಬೇಂಕ್)

ರಿಜಿಸ್ಟರ್ಡ್ & ಹೆಡ್ ಆಫೀಸು: ಡೊಂಗರಕೇರಿ, ಮಂಗಳೂರು—3.

ಈ ಕೆಳಗಿನ ಬಡ್ಡಿದರಗಳಲ್ಲಿ ಠೇವಣಾತಿಗಳನ್ನು ಸ್ವೀಕರಿಸಲಾಗುವುದು.

ಒಂದರಿಂದ ಎರಡು ತಿಂಗಳುಗಳ ವರೆಗೆ	....	ಸಾ॥ ಸೇಕಡಾ 3-75	ನ.ಪೈಸೆ
ಮೂರರಿಂದ ಐದು ತಿಂಗಳುಗಳ ವರೆಗೆ	....	,, 4-25	,,
ಆರು ತಿಂಗಳುಗಳಿಂದ 12 ತಿಂಗಳುಗಳ ವರೆಗೆ	....	,, 4-50	,,
12 ತಿಂಗಳು ಮಿಕ್ಕಿ 24 ತಿಂಗಳುಗಳ ವರೆಗೆ	....	,, 4-75	,,
24 ತಿಂಗಳು ಮಿಕ್ಕಿ 48 ತಿಂಗಳುಗಳ ವರೆಗೆ	....	,, 5-00	,,
48 ತಿಂಗಳುಗಳಿಗೆ ಮಿಕ್ಕಿ	....	,, 5-25	,,

ಸೇವಿಂಗ್ಸ್ ಬ್ಯಾಂಕ್ ಬಡ್ಡಿ ದರವನ್ನು
ಸಾ. ಸೇಕಡ 2½% ರಿಂದ 3¼%ಗೆ ಏರಿಸಲಾಗಿದೆ.

THE KARNATAKA BANK LIMITED.

"ನಚಿಕೇತ"ರ
ಇನ್ನೊಂದು ನವೀನ ಕಾದಂಬರಿ—

ಯಮ ಯಾತ್ರೆ

ಇದೀಗ ಪ್ರಕಟವಾಗಿದೆ.
ಬೆಲೆ ರೂ. 1-50 ನ. ಪೈಸೆ.

ಮೊದಲು ಪ್ರಕಟವಾದ ಕಾದಂಬರಿ—

ಭಾವಾರ್ಚನೆ

ಬೆಲೆ ರೂ. 1-25 ನ. ಪೈಸೆ.

ಪ್ರತಿಗಳು ಸಿಗುವ ಸ್ಥಳಗಳು:—
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ

ರವೀಂದ್ರವಾಣಿ

ವ್ಯಕ್ತಿತ್ವ ಮತ್ತು ಅದರ ಸಾರ್ಥಕತೆ

ದುಃಖದಿಂದ ದೂರವಿರಲು ಪ್ರೇಮಾಧೀನರಾಗುವುದೇ ತಾರಕೋಪಾಯ. ಪ್ರೇಮಪೂರ್ಣ ವ್ಯವಹಾರಗಳಲ್ಲಿ ಕಷ್ಟ ಮತ್ತು ದುಃಖದ ತಿಲಾಂಶಾನುಭವವೂ ಇರುವುದಿಲ್ಲ; ಬದಲು ಆತ್ಮತೃಪ್ತಿಯಿರುವುದು.

ಮೂಲಲೇಖಕರು ವಿಶ್ವಕವಿ ರವೀಂದ್ರನಾಥ ಟಾಗೋರ್.
ಅನುವಾದಕರು: ಶ್ರೀ ಕೆ. ಎನ್. ಭಟ್, ಶಿರಾಡಿಪಾಲ್.

ಯಾವ ಭಾಷೆಯ ಜ್ಞಾನವು ನಮಗೆ ಪೂರ್ಣವಾಗಿ ಇರುವುದಿಲ್ಲವೋ, ಆ ಭಾಷೆಯ ಶಬ್ದಗಳು ನಮಗೆ ಬಹು ಕ್ರೂರವಾಗಿ ತಡೆಯನ್ನೊಡ್ಡುತ್ತಿವೆ; ಎಂಬಂತೆ ಭಾಸವಾಗುವುದು. ಆ ಶಬ್ದಗಳು, ಯಾವ ಸೂಚನೆಯನ್ನೂ ಕೊಡಲಾರವು; ಆದರೆ ತಡೆಯನ್ನುಂಟುಮಾಡುವುದನ್ನು— ಮಾತ್ರ ಬಿಡಲಾರವು. ಶಬ್ದಗಳ ಈ ಜಂಜಾಟದಿಂದ—ಬಿಡುಗಡೆ ಹೊಂದಬೇಕಾದರೆ, ೨. ಅವಿದ್ಯೆಯಿಂದ ಮುಕ್ತಿಯನ್ನು ಹೊಂದಬೇಕಾಗುತ್ತದೆ ಆಗ ನಮ್ಮ ಮನಸ್ಸು ಶಬ್ದಗಳ ಅರ್ಥದೊಡನೆ ಸ್ವತಂತ್ರವಾಗಿ ವಿಚಾರಮಾಡಬಲ್ಲುದು. ಶಬ್ದಗಳನ್ನೇ ನಷ್ಟಗೊಳಿಸಿದರೆ ನಮಗೆ ಈ ಸ್ವಾತಂತ್ರ್ಯ ದೊರೆಯಲಾರದು. ನಮಗೆ ನಿಜವಾದ ಜ್ಞಾನ ಉಂಟಾದಾಗ ಮಾತ್ರ ಶಬ್ದಗಳು ಅವುಗಳ ಸ್ಥಾನಗಳಲ್ಲಿ ಸರಿಯಾಗಿ ನಿಲ್ಲುತ್ತವೆ. ಅವು ಸ್ಥಿರವಾಗಿರುತ್ತವೆ. ಆಗ ಅವು ನಮ್ಮನ್ನು ಜಂಜಾಟದಲ್ಲಿ ಸಿಲುಕಿಸಲಾರವು. ಮತ್ತು ಸ್ವೇಚ್ಛೆಯಿಂದ ಮುಂದುವರಿಯಲೂ ಬಿಡಲಾರವು. ಇಂತು ಇವು ನಮ್ಮನ್ನು ಅಭ್ಯುದಯದ ಮಾರ್ಗದಲ್ಲಿ ತೆಗೆದುಕೊಂಡು ಹೋಗಬಲ್ಲವು.

ಅವಿದ್ಯೆಯ "ಅಹಂಕಾರವನ್ನುಂಟುಮಾಡಿ, ಅದೇ ನಮ್ಮ ಧ್ಯೇಯವೆಂಬ ಮಿಥ್ಯಾ ಜ್ಞಾನವನ್ನು ಕೊಡುವುದು; ಎಂಬುದನ್ನಾಗಿ ನಾವು ವಿಚಾರಮಾಡಿ ನೋಡಿದ ಹಾಗಾಯಿತು. ಈ ಅಹಂಕಾರವು ನಮ್ಮನ್ನು ಹೊರಗಿನ ಪರಿಸರದಲ್ಲಿ ದೃಷ್ಟಿಯಿಟ್ಟು ನೋಡದಂತೆ ಮಾಡುವುದು ಆಗ ವಿಚಾರವಂತನಾದವನು — "ಅವಿದ್ಯೆಯಿಂದ ಮುಕ್ತನಾಗು—ಆತ್ಮನನ್ನು ತಿಳಿ! ಮತ್ತು ನಿನ್ನ ಅಹಂಕಾರವೆಂಬ ಅದರ ಬಂಧನದಿಂದ ಮುಕ್ತನಾಗು!" ಎಂದು ಬೋಧಿಸುತ್ತಾನೆ.

ನಾವು ನಮ್ಮ ಪ್ರಕೃತಿಯೊಡನಿದ್ದಾಗ ಮಾತ್ರ ನಮಗೆ ಸ್ವಾತಂತ್ರ್ಯ ಲಭಿಸುವುದು. ಕಲೆಗಾರನಿಗೆ ಕಲೆಯ ಧ್ಯೇಯದ ತಿಳುವಳಿಕೆ ಉಂಟಾದಾಗ ಮಾತ್ರ ಆತನಿಗೆ ಕಲಾತ್ಮಕ ಸ್ವಾತಂತ್ರ್ಯ ಲಭಿಸುವುದು. ಆಗ ಆತನು ಅನುಕರಣೆಯ ಕಠೋರ ಪರಿಶ್ರಮವನ್ನು ಬಿಟ್ಟು ಸ್ವತಂತ್ರವಾದ ಕಲಾಕೃತಿಯನ್ನು ನಿರ್ಮಾಣ ಮಾಡುತ್ತಾನೆ. ಧರ್ಮದ ಕರ್ತವ್ಯವೂ ಹೀಗೇ ಇರುವುದು ಅಂದರೆ, ಧರ್ಮವು ನಮ್ಮ ಪ್ರಕೃತಿಯನ್ನು ನಷ್ಟಗೊಳಿಸುವುದಕ್ಕಾಗಿರದೆ, ನಮ್ಮ ಪ್ರಕೃತಿಯ ಅಭಾವಗಳನ್ನು ದೂರಗೊಳಿಸಲಿಕ್ಕಾಗಿ ಇರುವುದು.

ಇಂಗ್ಲೀಷಿನ Religion ಶಬ್ದವನ್ನು ಸಂಸ್ಕೃತದಲ್ಲಿ ಧರ್ಮ ಎಂದು ಹೇಳುತ್ತಾರೆ. ಈ ಶಬ್ದದ ಧರ್ಮ ಎಂಬ ಅರ್ಥವು ಬಹು ವ್ಯಾಪಕವಾಗಿದೆ. ಧರ್ಮವು ಎಲ್ಲವುಗಳ ಅಂತರಿಕ ಪ್ರವೃತ್ತಿಯೂಗಿ—ಸಾರವಸ್ತುವಾಗಿ ಅಕ್ಷಯವಾದ ಸತ್ಯವಾಗಿದೆ. ನಮ್ಮ ಅಂತರಿಕ ಜಗತ್ತಿನ ಅಂತಿಮ ಧ್ಯೇಯವು ಧರ್ಮವೇ ಆಗಿದೆ. ಯಾವುದಾದರೂ ಧರ್ಮವಿರುದ್ಧವಾದ ಕಾರ್ಯ ನಡೆದಾಗ ನಾವು—"ನಮ್ಮ ಧರ್ಮವು ನಷ್ಟವಾಯಿತು." ಎನ್ನುತ್ತೇವೆ. ನಮ್ಮ ಪ್ರಕೃತಿಗೆ ವಿರುದ್ಧವಾದ ಕಾರ್ಯ ನಡೆದು ಹೋಯಿತು, ಎಂಬುದೇ ಇದರ ಅರ್ಥವಾಗಿದೆ. ಧರ್ಮವು ಕೆಲವು ವೇಳೆ ಅಸ್ಪಷ್ಟವಾದಂತೆ ತೋರುವುದಿದೆ. ಈ ಅಸ್ಪಷ್ಟತೆಯ ವೇಳೆ ಜನರು "ಪಾಪ ಮಾಡುವುದು, ಮನುಷ್ಯನ ಪ್ರಕೃತಿಯೂಗಿದೆ" ಎಂದು ತಿಳಿದುಕೊಳ್ಳುವುದೂ ಇದೆ. ಈಶ್ವರನ ಕೃಪೆಯಿಂದ ಮಾತ್ರ—ಮನುಷ್ಯನು ಪಾಪದಿಂದ ಮುಕ್ತನಾಗಬಲ್ಲನು, ಎಂಬ ಈ ಮೂಢತು, ಬೀಜದ ಪ್ರಕೃತಿಯು ಅದರ ತೊಗಟೆಯೊಳಗಿದೆ; ಯಾವುದೋ ಒಂದು ಚಮತ್ಕಾರದಿಂದ ಅದು ಅಂಕುರಿಸಿ — ಮುಂದೆ ವೃಕ್ಷವಾಗುವುದು, ಎಂದು ಭಾವಿಸುವ ಭ್ರಮೆಯಂತಿರುವುದು. ಬೀಜದ ಪ್ರಕೃತಿಯನ್ನು ತಿಳಿದುಕೊಂಡಿರುವ ರೀತಿಯೇ ಭ್ರಮೆಯಂತಿದೆ! ಎಂದು ಇಲ್ಲಿ ತಿಳಿದು ಬರುವುದಿಲ್ಲವೇ?

ಬೀಜದ ರಾಸಾಯನಿಕ ವಿಶ್ಲೇಷಣೆ ನಡೆಸಿದಾಗ ಅದರಲ್ಲಿ ಕಾರ್ಬನ್, ಅಥವಾ ಸ್ಫೋಟೇನುಗಳ ತತ್ವ ಸಿಕ್ಕುತ್ತದೆ. ಆದರೆ ಅದು ವೃಕ್ಷರೂಪ ಧಾರಣೆ ಮಾಡುವ ಅಥವಾ ಅಂಕುರ ರೂಪಧಾರಣೆ ಮಾಡುವ ಯಾವ ಆಧಾರವೂ ಅದರಲ್ಲಿ ಕಾಣಬರುವುದಿಲ್ಲ. ಬೀಜವು ಅಂಕುರ ರೂಪಧಾರಣೆ ಮಾಡಿದಾಗ ಮಾತ್ರ ಅದು, ಅಂಕುರ ರೂಪಧಾರಣೆ ಮಾಡಿತು, ಎಂದು ತಿಳಿದು ಬರುವುದು. ಇದು ಬೀಜದ ಧರ್ಮವೂ ಅದರ ಪ್ರಯೋಜನವೂ ಆಗಿರುವುದು.

ಮನುಷ್ಯನ ಧರ್ಮವು ಮಹಾ ಪುರುಷರ—ಮಹತ್ಕಾರ್ಯಗಳ ರೂಪದಿಂದ, ಮೊಳಕೆ ಯೊಡೆಯುವ ತನಕ, ಅದರ ಪ್ರಯೋಜನದ ಪ್ರಮಾಣವನ್ನು ಕೊಡುವುದಿಲ್ಲ. ಬಹು ಸಂಖ್ಯೆಯಲ್ಲಿ ಜನರು ನಿಷ್ಫಲವಾಗಿರುವರ ಅರ್ಥವು ಮನುಷ್ಯ ಪ್ರಕೃತಿಯು ನಿರ್ಬೀಜವೆಂಬುದರಿಂದ ಅಲ್ಲ; ಆದರೆ, ತನ್ನ ಆವರಣವನ್ನು ಕಿತ್ತೆಸೆದು, ಹೊರಗೆ ಹೊರಡುವುದು, ಮತ್ತು—ಜ್ಞಾನ ಪ್ರಕಾಶದಲ್ಲಿ ಅಥವಾ ಸುತ್ರಣ ಪರಿಸರದಲ್ಲಿ ವಿಕಾಸ ಹೊಂದಿ, ಪುಷ್ಟಿತವಾಗುವುದು, ಮನುಷ್ಯ ಪ್ರಕೃತಿಯ ಅರ್ಥವಾಗಿದೆ.

ಬೀಜದ ಸ್ವಾತಂತ್ರ್ಯದ ಅರ್ಥವು ಅದು ವೃಕ್ಷರೂಪವನ್ನು ತಾಳುವ ಧರ್ಮದ ಸ್ವಾತಂತ್ರ್ಯವಾಗಿದೆ. ಇದು ಅಪೂರ್ಣವಾದರೆ ಆಗ ಅದಕ್ಕೆ ಕಾರಾಗೃಹ ವಾಸದಂತೆಯೇ ಸರಿ.

ಯಾವ ಬಲಿದಾನದ ಮೂಲಕ ಒಂದು ವಸ್ತು ತನ್ನ ಧರ್ಮವನ್ನು ಪೂರ್ತಿಗೊಳಿಸುವುದೋ, ಆ ಬಲಿದಾನವು ಮೃತ್ಯುವಿನ ಮುಖಕ್ಕೆ ತೆಗೆದುಕೊಂಡು ಹೋಗುವ ಬಲಿದಾನವಾಗಿರುವುದಿಲ್ಲ. ಪರಂತು ಬಂಧನದ ಆವರಣವನ್ನು ಕಿತ್ತೆಸೆದು, ಸ್ವಧರ್ಮ ಪಾಲನೆಯ ಸ್ವಾತಂತ್ರ್ಯವನ್ನು ಹೊಂದುವುದೇ ಆಗಿದೆ.

ಮನುಷ್ಯನ ನಿಜವಾದ ಸ್ವಾತಂತ್ರ್ಯವೂ ಮತ್ತು ಅತ್ಯುನ್ನತ ಆದರ್ಶದ ಜ್ಞಾನವು ಯಾವಾಗ ನಮಗಾಗುವುದೋ ಆಗ ನಮಗೆ ಧರ್ಮದ ಹಾಗೂ, ಅದರ ಪ್ರಕೃತಿಯ ಮತ್ತು ಅದರ ಅಸ್ತಿತ್ವದ—ವಾಸ್ತವಿಕ ಪ್ರಯೋಜನದ ಜ್ಞಾನವೂ ಉಂಟಾಗುವುದು.

ನಾವು ನಮ್ಮ "ಅಹಂ"ಮನ್ನು ಎರಡು ರೂಪಗಳಿಂದ — ನೋಡಬಹುದು. ಒಂದು ತನ್ನನ್ನೇ ಪ್ರದರ್ಶಿಸುವುದಾಗಿದ್ದರೆ ಮತ್ತೊಂದು, ರೂಪವು ಪ್ರಕಾರವನ್ನು ಪ್ರತಿಕ್ಷೇಪ ಮಾಡುತ್ತ ತನ್ನ ಪ್ರಯೋಜನವನ್ನು ಸ್ವಯಂ ಉದ್ಘಾಟಿಸುವುದಾಗಿದೆ. ತನ್ನನ್ನು ಪ್ರದರ್ಶಿಸಿಕೊಳ್ಳುವಲ್ಲಿ ಅದು, ತಾನು ಮಹಾವ್ಯಕ್ತಿಯೆಂದು, ತೋರಿಸುವ ಪ್ರಯತ್ನ ಮಾಡುವುದು. ತನ್ನ ಸಂಕುಚಿತವಾದ ಸ್ವತ್ವಗಳ ಆಧಾರದ ಮೇಲೆ ನಿಂತು ಎತ್ತರಕ್ಕೇರುವ ಪ್ರಯತ್ನ ಮಾಡುವುದು. ಇದಕ್ಕೆ ವಿರುದ್ಧವಾದ ಇನ್ನೊಂದು ರೂಪವು ತನ್ನನ್ನು ಪ್ರದರ್ಶಿಸಿಕೊಳ್ಳುವಾಗ ಸ್ವತ್ವವನ್ನು ತ್ಯಜಿಸುವುದು, ಮತ್ತು ಮೊಗ್ಗಾಗಿ ಇದ್ದು, ಅರಳಿದ ಪುಷ್ಪದಂತೆ, ವಿಕಾಸದಲ್ಲಿ ಪೂರ್ಣತೆಯನ್ನು ಹೊಂದುವುದು.

ನಂದಿಹೋದ ದೀಪ, ತನ್ನಲ್ಲಿದ್ದ ಎಣ್ಣೆಯನ್ನು ಸುರಕ್ಷಿತವಾಗಿ ಇಡುವುದು. ಅಂದರೆ, ಅದು ಒಬ್ಬ ಕಡುಲೋಭಿಯಂತೆ ತನ್ನ ಎಣ್ಣೆಯನ್ನು ತನ್ನಲ್ಲೇ ರಕ್ಷಿಸಿಕೊಳ್ಳುತ್ತ ಇರುವುದು. ಆದರೆ, ಆ ದೀಪಕ್ಕೆ ಜ್ಯೋತಿಯ ಸ್ಪರ್ಶವಾದೊಡನೆಯೇ ಅದು ತನ್ನ ಪ್ರಯೋಜನವನ್ನು ಗುರುತಿಸುವುದು. ಮತ್ತೆ ಒಂದು ಚಣದೊಳಗಾಗಿ ಅದು ದೂರ—ಸವಿಾಪದ ಎಲ್ಲಾ ವಸ್ತುಗಳೊಡನೆಯೂ ಸಂಪರ್ಕವನ್ನು ಹೊಂದಿ ತನ್ನ ಜ್ಯೋತಿಯನ್ನು ಪ್ರಜ್ವಲಿತವಾಗಿರಿಸಿಕೊಳ್ಳಲು ಬಹು ಉದಾರತೆಯಿಂದ ತಾನು ಶೇಖರಿಸಿಟ್ಟ ಎಣ್ಣೆಯನ್ನು ದಾನ ರೂಪವಾಗಿ ನೀಡುವುದು.

ನಮ್ಮ ಆತ್ಮದೀಪವೂ ಹೀಗೆಯೇ ಇರುವುದು. ಎಂದಿನ ತಕಕ—ಅದು ತನ್ನ ವಿಭೂತಿಗಳನ್ನು ಒಟ್ಟುಗೂಡಿಸುತ್ತ ಸಂಚಿತಗೊಳಿಸುತ್ತ ಇರುವುದೋ ಅಂದಿನ ತನಕ ಅದು ಜ್ಯೋತಿಹೀನವಾಗುತ್ತದೆ. ಆದರೆ, ಅದು ಜ್ಯೋತಿರ್ಮಯವಾದೊಡನೆಯೇ ತನ್ನ ಎಲ್ಲೆಗಳನ್ನು ಮರೆತುಬಿಡುತ್ತದೆ. ಮತ್ತು ತನ್ನ ಪ್ರಕಾಶವನ್ನು—ಸ್ವತ್ತೆಲ್ಲಾ ಹರಡಿಸುತ್ತದೆ. ಹಾಗೂ— ತನ್ನ ಸುತ್ತುಮುತ್ತಿನ ಎಲ್ಲಾ ವಸ್ತುಗಳನ್ನೂ ತನ್ನ ದೀಪ್ತಿಯಿಂದ ಪ್ರಕಾಶಗೊಳಿಸುತ್ತದೆ. ಈ ಕಾರ್ಯದಲ್ಲಿಯೇ ಇದರ ವ್ಯಕ್ತಿತ್ವ, ಧರ್ಮ ಮತ್ತು ಚಾರಿತ್ರ್ಯವೂ ಇರುವುದು. ಈ ಕಾರ್ಯದ ಮೂಲಕವೇ ಇವುಗಳ ಉದ್ಘಾಟನೆ, ಅರ್ಥಾತ್ ಆರಂಭವಾಗುವುದು. ಬುದ್ಧನೂ ಈ ಆತ್ಮೋದ್ಘಾಟನೆಯ ಸ್ವಾತಂತ್ರ್ಯವನ್ನೇ ಪ್ರಚಾರ ಮಾಡಿದ್ದನು. ಈ ಪ್ರಕಾಶದ ಬತ್ತಿಗೆ ತನ್ನ ಎಣ್ಣೆಯನ್ನು ದಾನ ಕೊಡಬೇಕು" ಎಂದು ಬುದ್ಧನು ಬೋಧಿಸಿದ್ದನು. ಅದರೆ— 'ಈ ಸರಿಯಾ ಪ್ರಯೋಜನರಹಿತವಾದ ತ್ಯಾಗದಿಂದ ನಿಜವಾದ ತ್ಯಾಗ ಮಾಡಿದಂತಾಗುವುದಿಲ್ಲ, ಎಂಬುದಾಗಿ ಬುದ್ಧನು ಎಂದೂ ಹೇಳಿರಲಾರನು. ದೀಪಕ್ಕೆ ಪ್ರಕಾಶ ನೀಡುವ ಪ್ರಯೋಜನಕ್ಕಾಗಿಯೇ ತೈಲ ದಾನ ನೀಡಬೇಕು. ಮತ್ತು ಉಸರಿಯಯಾವ ಧ್ಯೇಯವು—ಅದರ ಸಂಗ್ರಹದಲ್ಲಿ ಸೀಮಿತವಾಗಿರುವುದೋ ಅದನ್ನು ಸ್ವತಂತ್ರಗೊಳಿಸಬೇಕು. ಇದೇ ವಾಸ್ತವಿಕವಾದ ಅಭ್ಯುದಯವಾಗಿದೆ. ಬುದ್ಧನ ಜ್ಞಾನ ಮಾರ್ಗವು ಕೇವಲ ಆತ್ಮ ವಿಸರ್ಜನಕ್ಕಾಗಿ ಅಲ್ಲ; ಪ್ರೇಮದ ಮೂಲಕ ಆತ್ಮವನ್ನು ವಿನಾಶಗೊಳಿಸುವುದಕ್ಕಾಗಿ ತೆರೆದಿರುವುದು. ಬುದ್ಧನ ಪ್ರವಚನಗಳು ಈ ಭಾವಾರ್ಥವನ್ನೇ ಒಳಗೊಂಡಿವೆ.

ಬುದ್ಧನಪ್ರವಚನಗಳ ಮೂಲಕ ತೋರಿಸಲ್ಪಟ್ಟ ನಿರ್ವಾಣ ಪಥವು ಪ್ರೇಮ ಪಥದ ಮಾರ್ಗವೇ ಆಗಿದೆ. ಎಂಬುದನ್ನು ನಾವು ತಿಳಿದುಕೊಂಡಾಗ, ನಿಶ್ಚಯವಾಗಿಯೂ ನಿರ್ವಾಣವು ಪ್ರೇಮದ ಪೂರ್ಣತೆಯಲ್ಲಿಯೇ ಇದೆ, ಎಂದು ತಿಳಿದು ಬರುವುದು. ಪ್ರೇಮವೇ ಸ್ವಯಂ ನನ್ನ ಧ್ಯೇಯವಾಗಿದೆ. ಬೇರೆ ಎಲ್ಲಾ ವಿಚಾರಗಳಲ್ಲಿಯೂ ಒಂದು "ಹೇತು" ಅಥವಾ ಸಂಶಯ ಇರುವುದು. ಮತ್ತು ಏಕೆ?" ಎಂಬ ಪ್ರಶ್ನೆಯೂ ಇರುವುದು. ಆದರೆ ಪ್ರೇಮದಲ್ಲಿ ಈ ಮೇಲಿನ ಪ್ರಶ್ನೆಯೂ ಬರುವುದ ಹೇತುವಾಗಲೀ ಇರುವುದಿಲ್ಲ. ಪ್ರೇಮವು

(೧೦ ನೇ ಪುಟ ನೋಡಿರಿ)

ಕೊಪ್ಪೊರೇಶನ್ ಬೇಂಕ್
ಠೇವಣಾತಿಗಳ ಮೇಲಿನ ಸಾಲಿಯಾನ್ ಶೇಕಡಾ ಬಡ್ಡಿ ದರಗಳು:
3 ಸೇವಿಂಗ್ಸ್ ಬೇಂಕ್ ಖಾತೆ
3½ ಯಿಂದ 5½ ಕಾಯಂ (ವಿವಿಧಾವಧಿಗಳಿಗೆ)
5¼ ವಜ್ರೋತ್ಸವ
5 ಕ್ಯುಮುಲೇಟಿವ್
ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
(ಸ್ಥಾಪನೆ: 1906)
ರಿಜಿಸ್ಟರ್ಡ್ ಆಫೀಸು: ಉಡುಪಿ | ಆಡಳಿತ ಆಫೀಸು: ಮಂಗಳೂರು

ಸಾಫಲ್ಯದ ಮೂಲ

ಅನುಶಾಸನಬದ್ಧ ಜೀವನ

ಜೀವನದ ಏರುಪೇರುಗಳಲ್ಲಿ ಸಿಕ್ಕು ಅಸಫಲರಾದವರು ನಿರಾಶರಾಗಬೇಕಾಗಿಲ್ಲ; ತಮ್ಮ ಜೀವನವನ್ನು ಸಂಪೂರ್ಣ ಅನುಶಾಸನಕ್ಕೆ ಅಳವಡಿಸಿಕೊಳ್ಳುವುದರಿಂದ ಅಸಫಲತೆಯ ವಾತಾವರಣವನ್ನೇ ದೂರಪೋಡಿಸಬಹುದು. ಅನುಶಾಸನ ಮತ್ತು ಆತ್ಮವಿಶ್ವಾಸಯುತ ಭಾವನೆಗಳೇ ಸಫಲತೆಯ ಸಹಚರರು ಎನ್ನುತ್ತಾರೆ ಡರೋಥೀ ಬ್ರೈಂಡ್.

ಮಾನವ ಸದಾ ಕ್ರಿಯಾಶೀಲನಾಗಿರಬೇಕಾದರೆ, ಅತನಲ್ಲಿ ಉತ್ಸಾಹ ತುಂಬಿ ತುಳುಕಾಡುತ್ತಿರಬೇಕು. ಕ್ರಿಯಾಶೀಲನಾದವನು ಮಾತ್ರವೇ ಸಾಫಲ್ಯಗಳಿಸಬಲ್ಲ. ಅಸಫಲತೆಯು ಮಾನವ ಮನದಲ್ಲಿ ನಿರಾಶೆಯನ್ನು ಹುಟ್ಟಿಸುವುದು; ಅತನಲ್ಲಿರುವ ಸ್ವಾಭಾವಿಕ ರಚನಾತ್ಮಕ ಶಕ್ತಿಯನ್ನು ಅಪವ್ಯಯಗೊಳಿಸುವುದು ಮತ್ತು ಅವನಲ್ಲಿ ಜಡತೆಯು ಜನಿಸುವಂತೆ ಮಾಡುವುದು. ಇಂತಹ ನೀರಸ ಜಾಡ್ಯದ ಪರಿಣಾಮವಾಗಿ ಜೀವನದ ಮೇಲೆ ಒಂದು ವಿಚಿತ್ರರೂಪದ ಮುಸುಕು ಹರಡುವುದು; ಯಾವುದೇ ಒಂದು ಹೊಸಗೆಲಸಕ್ಕೆ ಕೈಹಾಕುವುದರಿಂದ ಅವನನ್ನು ಹಿಂದಕ್ಕೆ ಸೆಳೆಯುವುದು; ಹೆದರಿಸುವುದು. ಉತ್ಸಾಹ ಇಲ್ಲವೇ ಆಶುರದ ಬದಲು ಅತನಲ್ಲಿ ಸದಾ ತಂದ್ರಾವಸ್ಥೆಯೇ ಬಲವಾಗುವಂತೆಮಗುವುದು.

ಅದರಿ, ಸಫಲತೆಯು ಇಂತಹ ದುಷ್ಪರಿಣಾಮಗಳನ್ನು ಮಾಡುವುದಿಲ್ಲ. ನಿರಾಶೆಯ ಅಂಧಕಾರದಲ್ಲಿ ಮುಂದೋರದವನಿಗೆ ಸಾಫಲ್ಯದ ತುಣುಕೊಂದಾದರೂ ದೃಷ್ಟಿ ಗೋಚರವಾಯಿತೆಂದರೆ, ಅತನು ಕುಣಿದಾಡಲುದ್ಯುಕ್ತನಾಗುತ್ತಾನೆ. ಅದು ಮುಂದಿನ ಕಾರ್ಯಕಲಾಪಗಳಿಗೆ ಸದ ನ್ರೇರಣೆಯನ್ನು, ನವೋತ್ಸಾಹವನ್ನು ನೀಡಬಲ್ಲದು. ಮಾತ್ರವಲ್ಲ, ಮಾನಸಿಕ ಸ್ವಾಸ್ಥ್ಯ ಮತ್ತು ದೃಢತೆಗೂ ಅದು ಸಹಕಾರಿಯಾಗಬಲ್ಲುದು.

ಯಾವುದೇ ಒಂದು ಕಾರ್ಯವನ್ನು ಕೈಗೊಳ್ಳುವಾಗ ಪ್ರಾರಂಭಿಕಾವಸ್ಥೆಯಲ್ಲಿ ಅಂಜಿಕೆ ಇಲ್ಲವೇ ಸಂದೇಹಗಳು ಹುಟ್ಟುವುದು ಸರ್ವಸ್ವಾಭಾವಿಕ ಈ ದೃಷ್ಟಿಕೋಣವನ್ನು ಇನ್ನೊಂದು ಹೆಸರಿನಿಂದ ಕರೆಯುವುದಾದರೆ, "ಹೀನ ಭಾವನೆಗಳು" ಎನ್ನಬಹುದು. ಇದು ಉದ್ಭವಿಸುವುದಾದರೂ ಹೇಗೆ? ತನ್ನ ಹಿಂದಿನ ಅಸಫಲತೆಗಳಿಂದ ಉತ್ಪನ್ನವಾದ ಕಟು ಅನುಭವ, ಅವಜ್ಞೆ ಅಥವಾ ನಿರಾಶೆಗಳಿಂದಾಗಿಯೇ ಮಾನವನು ತಿಳಿದಿರಲಿ ಇಲ್ಲದಿರಲಿ, ಅತನ ಸ್ಮೃತಿಪಟಲಗಳಲ್ಲಿ ಅವು ಅಂಕಿತವಾಗಿರುತ್ತವೆ.

ನಮ್ಮ ಸ್ಮೃತಿಗಳನ್ನು ಹೀನಭಾವನೆಗಳಿಂದ ಜನಿಸಿದ ದುಷ್ಟ ವಿಕಾರಗಳ ಭಾರದಿಂದ ಮುಕ್ತಗೊಳಿಸುವುದೇ ಕಾರ್ಯಸಾಫಲ್ಯಕ್ಕೆ ಹೇತುವೆಂದು ಸುಪ್ರಸಿದ್ಧ ವೈಜ್ಞಾನಿಕ ಮಾಯರರು ಹೇಳುತ್ತಾರೆ. ಚಿತ್ತ ಭಿತ್ತಿಯಲ್ಲಿರುವ 'ಕಶೋರಾನುಭವ'ಗಳನ್ನು ಅಮೂಲಾಗ್ರವಾಗಿ ಕಿತ್ತೆಸೆದು, ಹೊಸ ಸಮೂರಂಭವನ್ನು ಸಫಲಗೊಳಿಸಬೇಕಾಗಿದೆ. ನೀವು ಒಂದು ಬಾರಿ ಸಫಲರಾದಿರಿ ಎನ್ನೋಣ ಇಷ್ಟರಿಂದ ನಿಮ್ಮ ಸ್ಮೃತಿಯ ಮೇಲೆ ಹೊರಲಾಗಿದ್ದ ಭಾರವು ತುಸುವಾದರೂ ಲಘುವಾಗುವುದು ಸ್ವಾಭಾವಿಕವೇ. ಆದರೆ, ಆ ಭಾರವು ಸದಾ ಕಾಲಕ್ಕೆ ದೂರವಾಗುವುದೆನ್ನುವಂತಿಲ್ಲ. ಸಫಲತೆಯನ್ನು ನಿಮ್ಮ ದಾಸಿಯನ್ನಾಗಿಮಾಡಿಕೊಳ್ಳಬೇಕೆಂದಿದ್ದರೆ, ಕಶೋರ ಅನುಶಾಸನ ಮೂಲಕಮನಸ್ಸನ್ನು ಆ ಭಾರವಾದ ಪರದೆಯಿಂದ ಮೆಲ್ಲ ಮೆಲ್ಲನೆ ಮುಕ್ತಗೊಳಿಸಬೇಕಾಗಿದೆ.

ನಿಮ್ಮ ಮನಸ್ಸಿನಲ್ಲಿ ಅಂಕಿತವಾದ ಅಸಫಲತೆಯ ಸ್ಮೃತಿಗಳನ್ನು ಬೇರುಸಹಿತ ಕಿತ್ತು ದೂರಕ್ಕೆಸೆದು ಬಿಡಿರಿ. ಅವುಗಳ ಸ್ಥಾನದಲ್ಲಿ, ಜೀವನದಲ್ಲಿ ಸಾಧಿಸಿದ ಪ್ರೇರಕ ಸ್ಮೃತಿಗಳ ಮಾಲೆಯನ್ನು ಪೋಣಿಸಿರಿ. ಹೀಗೆ ಮಾಡುವುದರಿಂದ, ಕೆಲವೇ ದಿನಗಳಲ್ಲಿ ಮನಸ್ಸು ತಾನಾಗಿಯೇ ಹೊಸ ಕಾರ್ಯಗಳತ್ತ ಮಾಲುವುದು. ಆಗ, ದೃಢತೆ ಮತ್ತು ಸ್ವಾಸ್ಥ್ಯಗಳು ಮನಸ್ಸಿನೊಳಗೆ ಈ ಬಾರಿ ಅಸಫಲತೆ ಅಸಂಭವವೆಂದು ಸಾರುವುವು. ನಿರಾಶೆಯ ವಾತಾವರಣದಲ್ಲಿ ಆಶೆಯು ಗೋಚರವಾಗುವುದಿಲ್ಲವೆಂದೇನೂ ಸಿದ್ಧಾಂತವಲ್ಲ ತಾನೆ?

ಮನುಷ್ಯನ ಮೆದುಳು ವಿಚಿತ್ರ ವಿಧಾನದಲ್ಲಿ ನಿರ್ಮಿತವಾಗಿದೆಯೆಂದು ಮನೋವಿಜ್ಞಾನ ಸಾರುತ್ತದೆ. ಸಾವಿರಾರು ನಿರಾಶೆಗಳು ಅದರಲ್ಲಿ ಹುದುಗಿದ್ದು ಅದು ಅಂಧಕಾರಮಯವಾಗಿದ್ದರೂ ಅಶಾಪ್ರದ ಜ್ಯೋತಿಕಿರಣಗಳು ಅದರಿಂದ ಸಂಪೂರ್ಣಮಾಸಿಹೋಗುವುದಿಲ್ಲ. ಅವನ್ನು ಪುನರುಜ್ಜೀವಿತಗೊಳಿಸುವುದು ಮಾತ್ರ ಬಹಳ ಕಠಿಣ.

ಜೀವನದಲ್ಲಿ ಹೊಸ ವಿಚಾರ ಸ್ಫುರಣೆ ಮತ್ತು ಸಫಲ ಮನಸ್ಥಿತಿಗಳರುಪುದರಿಂದ, ಕಾರ್ಯ ಮಾಡುವುದಕ್ಕೆ ಹೊಸ ಉತ್ತೇಜನವೊಂದು ಕಾರ್ಯಮಾಡುತ್ತದೆ. ನಿಮ್ಮ ಕೆಲಸ ಮಾಡುವಲ್ಲಿ ನಿಮ್ಮ ಸಂಪೂರ್ಣ ಕ್ರಿಯಾಶಕ್ತಿಯನ್ನೂ ಆಸಕ್ತಿಯನ್ನೂ ಬಳಸಿಕೊಂಡರೆ, ಅದು ಬಹು ಬೇಗನೇ ಮುಂದುವರಿಯುವುದೆಂಬುದನ್ನೂ ಕಾರ್ಯಪೂರೈಸುವಲ್ಲಿ ನೀವು ಪರಿಶ್ರಮವನ್ನು ಕೂಡ ಗಮನಿಸುವುದಿಲ್ಲವೆಂಬುದನ್ನೂ ಕಂಡುಕೊಳ್ಳಬಲ್ಲಿರಿ.

ಅಸಫಲತೆಯನ್ನು ಉತ್ಪನ್ನಗೊಳಿಸುವ ವಾತಾವರಣದಿಂದ ನೀವು ಬಿಡುಗಡೆಗೊಳ್ಳಬೇಕಾದರೆ, ಕೆಲವೊಂದು ಉಪಾಯಗಳನ್ನು ಅನುಸರಿಸಬೇಕಾಗುವುದು. ಇವನ್ನು ಪ್ರಯೋಗಕ್ಕೆ ತರಲು ಪ್ರಯತ್ನಿಸಿರಿ.

೧. ಪ್ರತಿದಿನ ಪ್ರಶ್ನೆಗಳಿಗೆ ನೇರವಾದ ಉತ್ತರ ಕೊಡುವವರಲ್ಲಿ ಕೆಲವು ತಾಸುಗಳನ್ನು ಕಳೆಯಿರಿ. ನಿಮ್ಮ ನಡವಳಿಕೆಯಲ್ಲಿ ಅಂತರವು ಕಲೆದೋರದಂತೆ ಎಚ್ಚರಿಕೆ ವಹಿಸಿರಿ. ಸಂಪೂರ್ಣ ಸ್ವಾಭಾವಿಕವಾಗಿಯೇ ಮಾತಾಡಿರಿ. ನಿಮ್ಮ ಬಂಡವಾಳದಿಂದ ಏನನ್ನೂ ಖರ್ಚುಮಾಡಬೇಡಿರಿ; ನಿಮಗೆ ಕೇಳಿದ ಪ್ರಶ್ನೆಗಳನ್ನು ಮಾತ್ರ ಸಂಪೂರ್ಣರೂಪದಲ್ಲಿ ಉತ್ತರಿಸಿರಿ.

೨. ಒಂದು ವಿಷಯದ ಮೇಲೆ ಅರ್ಧ ಗಂಟೆಯ ಕಾಲ ಆಲೋಚಿಸುವುದನ್ನು ಅಭ್ಯಾಸವನ್ನಾಗಿ ಮಾಡಿಕೊಳ್ಳಿರಿ. ಹೀಗೆ ಅಭ್ಯಾಸ ಮಾಡುವುದು ಮೊದಮೊದಲಿಗೆ ಕಷ್ಟವೆನಿಸಬಹುದು. ಆದರೆ, ಪ್ರಾರಂಭದಲ್ಲಿ ಐದು ನಿಮಿಟುಗಳನ್ನಾದರೂ ವಿನಿಯೋಗಿಟ್ಟು, ಕಾಲಕ್ರಮದಲ್ಲಿ ಈ ಅವಧಿಯನ್ನು ಹೆಚ್ಚಿಸುತ್ತ ಬನ್ನಿರಿ. ಆಗ ತಾನಾಗಿಯೇ ಈ ಅಭ್ಯಾಸ ನಿಮ್ಮದಾಗುವುದು. ಎತ್ತೆತ್ತಲೂ ಸಂಚರಿಸುವ ನಿಮ್ಮ ಮೆದುಳಿಗೆ ಇದು ಕಡಿವಾಣವಾಗುವುದು. ಇದರಿಂದ ಮುಂದೆ ನೀವು ಬಯಸುವ ಕಾರ್ಯವನ್ನು ನಿಮ್ಮ ಮೆದುಳಿನಿಂದ ಮಾಡಿಸಿಕೊಳ್ಳಬಹುದು.

೩. ನಾನು, ನನ್ನ, ನನ್ನನ್ನು, ನನಗೆ ತನ್ನ ಈ ಶಬ್ದಗಳನ್ನು ಪತ್ರ ಬರೆಯುವಾಗ ಉಪಯೋಗಿಸಬೇಡಿರಿ. ನಿಮ್ಮನ್ನು ನೀವು ನಿರಪೇಕ್ಷರಾಗಿ ನೋಡುವುದಕ್ಕೆ ಇದರಿಂದ ಸಹಾಯ ಲಭಿಸುವುದು. ಪತ್ರಗಳಲ್ಲಿ ವ್ಯಕ್ತಿಗತ ನಿಂದೆ-ದೂರುಗಳನ್ನು ದೂರವಿಡಿರಿ. ಆತ್ಮ ಪರೀಕ್ಷಣವನ್ನು ಸುವಿಕಸಿತಗೊಳಿಸಬೇಕಾದರೆ, ನೀವು ಉತ್ತಮ ಪತ್ರಲೇಖಕರಾಗುವುದು ಅತ್ಯವಶ್ಯ. ಸಾಫಲ್ಯದ ಸ್ವರೂಪವಾಗಿ ನಿಮ್ಮ ಪತ್ರಗಳನ್ನು ಬರೆಯಿರಿ.

೪. ಪ್ರತಿ ದಿನಕ್ಕೂ ಒಂದು ನಿಶ್ಚಿತ ದಿನ ಚರ್ಯೆಯನ್ನು ರಚಿಸಿಕೊಳ್ಳಿರಿ. ಎರಡು ಗಂಟೆಗಳ ಕಾರ್ಯಕ್ರಮವನ್ನು ರೂಪಿಸಿ ಮೊದಲಿಗದನ್ನು ಅನುಷ್ಠಾನಕ್ಕೆ ತರಬಹುದು. ಈ ಹೊತ್ತಿನಲ್ಲಿ ಮಾಡಬೇಕಾದ ಕೆಲಸಗಳಾವುವೆಂದು ನಿಶ್ಚಯಿಸಿರಿ. ನಿರ್ಧಾರಿತ ಕಾರ್ಯಕ್ರಮದಂತೆ ಹತ್ತು ಗಂಟೆಗೆ ನಿಮಗೆ ಬೇರೊಂದು ಕೆಲಸ ಮಾಡುವುದಿದ್ದರೆ, ಮೊದಲು ಹಿಡಿದ ಕಾರ್ಯ ಪೂರ್ಣವಾಗದಿದ್ದರೂ ಅದನ್ನು ಅಲ್ಲಿಯೇ ಬಿಟ್ಟು ಕಟ್ಟುನಿಟ್ಟಾಗಿ ಕಾರ್ಯಕ್ರಮವನ್ನು ಅನುಸರಿಸಿರಿ. ಹೀಗೆ ಜೀವನವನ್ನು ಅನುಶಾಸನ ಬದ್ಧಗೊಳಿಸುವುದರಿಂದ, ಅಸಫಲತೆಗಳನ್ನು ಸೃಷ್ಟಿಗೊಳಿಸುವ ವಾತಾವರಣವನ್ನೇ ದೂರ ಮಾಡ ಬಹುದು. ಸಫಲತೆಗೆ ಅಗತ್ಯವಿರುವ ಏಕಾಗ್ರತೆಯನ್ನು ಪ್ರಾಪ್ತಿಸಿದ ನಂತರ ಮಾನವ, ನಿಸ್ಸಂಕೋಚ ದೃಢತೆಯಿಂದ ಜೀವನ ರಥವನ್ನು ಪ್ರಬಲ ಗತಿಯಿಂದ ಪ್ರಗತಿ ಪಥದಲ್ಲಿ ಮುಂದುವರಿಸಲು ಸರ್ವ ಸಮರ್ಥನಾಗುತ್ತಾನೆ.

ಅಮೃತಾಂಜನ
ಎಲ್ಲಾತರದ ಸಿಡಿತ ಪುಣ್ಣು ನೋವುಗಳಿಗೆ
ಎಲ್ಲಾತರದ ಸಿಡಿತ ಪುಣ್ಣು ನೋವುಗಳಿಗೆ
೩೦ ವರ್ಷ ಪ್ರಾಯದ
ಪ್ರಾಕೃತಿಕ ವಾಂಶ
ಅಮೃತಾಂಜನ ಲಿ. ಮೂಲಾಯ ಸಾಲೆ

41 ವರ್ಷಗಳ ಭದ್ರ ಹಾಗೂ ಸಮರ್ಥ ಬೇಂಕಿಂಗ್ ಸೇವೆ.

ದಿ. ಪಾಂಗಾಳ ನಾಯಕ್ ಬೇಂಕ್ ಲಿ.

ನಮ್ಮ 3 ವರ್ಷ ವ್ಯಾದೆಯ ಕೇಶ್ ಸರ್ಟಿಫಿಕೇಟುಗಳಲ್ಲಿ ಠೇವಣಿ ಮಾಡಿರಿ: ಬಡ್ಡಿ ಸೇಕಡಾ 5ರಂತೆ: ರೂ. 87—00 3 ವರ್ಷಗಳ ಅಂತ್ಯದಲ್ಲಿ ಬಡ್ಡಿ ಕೂಡಿ ರೂ. 100—00 ಒದಗಿಸುವುದು.

ಕರೆ, ಚಿಕ್ಕ ವ್ಯಾದೆ, ನಿರಖು ಠೇವಣಾತಿಗಳ ಮೇಲೆ ಆಕರ್ಷಣೀಯ ಶರ್ತಗಳು: ಬಡ್ಡಿ ಸೇಕಡಾ 5½ರ ವರೆಗೆ.

ತಾ. 1—4—1961ರಿಂದ ಸೇವಿಂಗ್ಸ್ ಬೇಂಕ್ ಖಾತೆಗಳ ಮೇಲೆ ಬಡ್ಡಿ ಸೇಕಡಾ 3ರಂತೆ.

THE PANGAL NAYAK BANK LTD.

Estd: 1920

ಉಡ್ಪಿ ಡಿ. ಮುನ್. ಕೋರ್ಟಿನಲ್ಲಿ
O. S. No. 99/1961

ಕೆ. ಸದಾಶಿವ ರಾವ್—ಜನರಲ್ ಏಜಂಟ್ ಕೆ. ರಾಮರಾವ್ —ವಾದಿ

ಮತ್ತು

ಚಂದ್ರ ಮೌಳಿ ರಾವ್ ಕೂಡಾ —ಪ್ರತಿವಾದಿರು

ಇವರೊಳಗೆ

3ನೇ ಪ್ರತಿವಾದಿ—ಚಂದ್ರ ತಿಲಕ ರಾವ್
5ನೇ ಪ್ರತಿವಾದಿಳು—ಜಲಾ ಬಾಯಿ
—ವೆಂಕಟ ರಾಯರ ಮಕ್ಕಳು.

ಉಡ್ಪಿ ತಾಲ್ಲುಕಿನ ಅಕ್ಕಳಬೆಟ್ಟು ಗ್ರಾಮದ ಕೊಜಕಳೆ—ಯಿವರಿಗೆ ಯಾ ಮೂಲ್ಕ ತಿಳಿಸುವದೇನಂದರೆ—

ಪ್ರತಿವಾದಿರಿಂದ ಬರತಕ್ಕ ಮೂಲಗೇಣಿ ಬಾಕಿ ಲಸಲು ಬಡ್ಡಿಗೆ ವಾದಿಯು ದಾಕ್ಲು ಮಾಡಿದ ಮೇಲ್ಕಂಡ ದಾವೆಯಲ್ಲಿ 3, 5ನೇ ಪ್ರತಿವಾದಿರ ನೋಟೀಸಿನ ಬಗ್ಗೆ ತಾರೀಖು 7—8—1961ಕ್ಕೆ ಯಿಟೋಡಾಗಿಯದೆ. ಆ ಕಾರಣ, 3, 5ನೇ ಪ್ರತಿವಾದಿರಿಗೆ ಆಕ್ಷೇಪ ಹೇಳತಕ್ಕದ್ದು ಯಿದ್ರೆ ಸದ್ರಿ ದಿನ್ಸ ಮೇಲ್ಕಂಡ ಕೋರ್ಟು ಮುಂದೆ ಹಾಜ್ರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು ಯೆಂದು ಸಂಗ್ತಿ ತಿಳಿಸೋಡಾಗಿಯದೆ.

V. R. Kidyure.
Advocate for Plaintiff.

ಉಡ್ಪಿ, 20—7—1961.

ನವಯುಗ'ಕ್ಕೆ
ಚಂದಾದಾರರಾಗಿ
ಪ್ರೋತ್ಸಾಹಿಸಿರಿ

ವಿಚಾರವೀಚಿ

ಸಾಮಾಜಿಕ ಸಮಸ್ಯೆ - ಹುಚ್ಚು

ಅಮೆರಿಕೆಯಂತಹ ಸಂಪತ್ಸಮೃದ್ಧ ದೇಶಗಳಲ್ಲಿಯೂ ಹುಚ್ಚು ಸಾಮಾಜಿಕ ಸಮಸ್ಯೆಯಾಗಿರುವಾಗ, ಆರೋಗ್ಯ ಸೌಕರ್ಯವೇನೂ ಸಾಲದಂತಿರುವ ಭಾರತದ ಬಗ್ಗೆ ಏನು ಹೇಳಬೇಕು? ಇದರ ನಿವಾರಣೋಪಾಯ ಸಾಧ್ಯವೆನಿಸದೆ?

ಆರ್ಥಿಕ ಮತ್ತು ಶೈಕ್ಷಣಿಕ ದೃಷ್ಟಿಯಿಂದ ವಿಕಸಿತಗೊಂಡ ದೇಶಗಳಲ್ಲಿ ಸಾಮಾನ್ಯ ಸಾರ್ವಜನಿಕ ಆರೋಗ್ಯವು ರಕ್ಷಿತವಾಗಿದ್ದರೂ ಮಸ್ತಿಷ್ಕ ರೋಗವು ದೊಡ್ಡ ಸಮಸ್ಯೆಯಾಗಿ ಪರಿಣಮಿಸಿದೆ. ಕೇನ್ಸರ್, ಹೃದ್ರೋಗ ಮತ್ತು ಕ್ಷಯ ರೋಗಗಳಿಂದ ನರಳಿ ಆಸ್ಪತ್ರೆಗಳಲ್ಲಿ ದಾಖಲಾದ ರೋಗಿಗಳ ಒಟ್ಟು ಸಂಖ್ಯೆಗಿಂತ ಹೆಚ್ಚಿನ ಸಂಖ್ಯೆಯ ಜನರು ಮಸ್ತಿಷ್ಕ ವಿಕೃತಿಯಿಂದ ಬವಣೆ ಪಡುತಿದ್ದಾರೆ. ಮಸ್ತಿಷ್ಕ ರೋಗದ ಕಾರಣದಿಂದ ಆಸ್ಪತ್ರೆಯ ಬಾಗಿಲು ಕಂಡಿರುವವರಿಗಿಂತ ಇಮ್ಮಡಿಯಷ್ಟು ಹೊರಗಡೆ ಕಾಣಸಿಗುತ್ತಾರೆ!

ಕೇವಲ ಅಮೆರಿಕೆಯೊಂದರಲ್ಲೇ ಸುಮಾರು ೯೦ ಲಕ್ಷ ಜನರು ಒಂದಲ್ಲಿ ಒಂದು ತರದ ಮಸ್ತಿಷ್ಕ ಸಂಬಂಧಿ ರೋಗಗಳಿಂದ ಪೀಡಿತರಾಗಿದ್ದಾರೆ. ಇವರಲ್ಲಿ ಪ್ರತಿವರ್ಷ ಕೇವಲ ೨|| ಲಕ್ಷ ಜನರು ಆಸ್ಪತೆಗಳಲ್ಲಿ ಚಿಕಿತ್ಸೆ ಪಡೆಯುತಿದ್ದಾರೆ. ಉಳಿದವರು ತಮ್ಮಷ್ಟಕ್ಕೆ ತಿರುಗಾಡುತ್ತ ಇದ್ದಾರೆ.

"ಸೀಜೊಫ್ರೇನಿಯಾ" ಎಂಬುದು ಎಲ್ಲ ಮಸ್ತಿಷ್ಕ ರೋಗಗಳಿಗಿಂತಲೂ ಅಪಾಯಕಾರಿ. ಹೆಚ್ಚಾಗಿ ಇದನ್ನು "ಯುವಕರ ರೋಗ" ಎನ್ನುತ್ತಾರೆ. ಕಿಶೋರಾವಸ್ಥೆಯವರಿಗೂ ಮಕ್ಕಳಿಗೂ ಕೆಲಪೊಮ್ಮೆ ಈ ರೋಗ ತಗಲುವುದುಂಟು. ಈ ರೋಗದ ಸ್ವರೂಪವನ್ನು ತಿಳಿದುಕೊಳ್ಳಬೇಕಾದರೆ- ನೀವು ಯಾವುದಾದರೊಂದು ಹುಚ್ಚರ ಆಸ್ಪತ್ರೆಗೆ ಹೋಗಬೇಕು. ಅಲ್ಲಿ ಉಗ್ರ ಪ್ರಕೃತಿಯ ಹುಚ್ಚರು ಬಂಧಿತರಾಗಿರುವುದನ್ನು ಕಾಣಬಹುದು.

ಮೇರಿಯು ಇಂತಹುದೇ ಒಂದು ಆಸ್ಪತ್ರೆಯ ನಿವಾಸಿ. ಆಕೆಯ ಪ್ರಾಯ ೨೮ ವರ್ಷ. ಕಳೆದ ಎಂಟು ವರ್ಷಗಳಿಂದ ಆಕೆ ಇಲ್ಲಿದ್ದಾಳೆ. ಪ್ರತಿಕ್ಷಣವೂ ಆಕೆ ಮರದ ಮಂಚದ ಮೇಲೆ ನಿಶ್ಚೇಷ್ಟಿತಳಾಗಿ ಕುಳಿತಿರುತ್ತಾಳೆ. ಆಕೆಯ ಕೇಶರಾಶಿಗಳು ಕೆದರಿರುತ್ತವೆ. ಅತೀವ ಕೃಶೆಯಾದುದರಿಂದ, ಆಕೆಯು ಎಲುಬುಗೂಡು ಮುಷ್ಟಿಗಿಂತ ಹೆಚ್ಚು ತೋರವಿಲ್ಲ. ಆಕೆ ಸದಾ ಚಿಂದಿಯಾದಕೊಳಕು ನೈಟ್ ಗೌನನ್ನು ಧರಿಸಿರುತ್ತಾಳೆ. ಬೇಡವೆಂದು ಕಂಡರೆ, ಅದನ್ನೂ ಕಿತ್ತೆಸೆಯುತ್ತಾಳೆ. ಊಟ ಉಪಚಾರಗಳಿಗಾದರೂ ಮತ್ತೊಬ್ಬರು ಕೈಹಿಡಿದು ಎತ್ತುವ ವರೆಗೂ ಆಕೆ ನಿಳುವವಳಲ್ಲ. ಆದುದರಿಂದಲೇ ನಳಿಗೆಗಳ ಮೂಲಕ ನೇರವಾಗಿ ಆಕೆಯ ಹೊಟ್ಟೆಗೆ ಆಹಾರವನ್ನು ಕಳುಹಿಸುತ್ತಾರೆ. ಆಕೆಯ ಚಾರ್ಟನ್ನು "ಕೆಟಾಟೋನಿಕ್ ಸಿಜೋಫ್ರೇನಿಯಾ" ಎಂದು ರೋಗದ ಹೆಸರನ್ನು ನಮೂದಿಸಿದ್ದಾರೆ. ಸೀಜೊಫ್ರೇನಿಯಾದ ಪ್ರಮುಖ ನಾಲ್ಕು ಉಪಾಂಗಗಳಲ್ಲಿ ಇದೊಂದಾಗಿದೆ.

ಆಸ್ಪತ್ರೆಯ ಫೈಲುಗಳಿಂದ ಮೇರಿಯ ಬಗ್ಗೆ ಈ ವಿವರಗಳು ತಿಳಿಯುತ್ತವೆ. ಬಾಲ್ಯಾವಸ್ಥೆಯಲ್ಲಿ ಆಕೆಗೆ ತಾಯ್ತಂದೆಗಳ ಪ್ರೇಮವು ಲಭಿಸಿರಲಿಲ್ಲ. ತಾಯಿಯಂತೆ ಆಕೆಯ ಬಗ್ಗೆ ಉದಾಸೀನತೆಯನ್ನೇ ತೋರಿಸುತಿದ್ದಳು. ತಂದೆಯು ಕುಡುಕನೂ ಕ್ರೋಧಿಯೂ ಆಗಿದ್ದನು. ಮಾತು ಮಾತಿಗೆ ಆತ ರೇಗುತಿದ್ದನಲ್ಲದೆ ಹೊಡೆಯುತ್ತಲೂ ಇದ್ದನು. ಆದುದರಿಂದ ಆಕೆ ಸ್ವಪ್ನಾವಸ್ಥೆಯಲ್ಲಿಯೇ ಅವರ ಪ್ರತೀಕಾರ ಮಾಡುತಿದ್ದಳು.

ಹದಿನಾರನೆಯ ವರ್ಷದಲ್ಲಿ ಆಕೆಯು ಸ್ನಾಯು ದೌರ್ಬಲ್ಯಕ್ಕೆ ಗುರಿಯಾದಳು. ಒಂದು ದಿನ ಆಕೆ ಮನೆಯಿಂದ ಓಡಿ ಹೋದಳು; ಬಹಳಷ್ಟು ಹುಡುಕಿದ ನಂತರ ಕಾಡಿನ ಮಧ್ಯದಲ್ಲಿ ಅದೃಶ್ಯ ಮನುಷ್ಯರೊಡನೆ ಜೋರಾಗಿ ಮಾತುಕತೆ ನಡೆಸುತ್ತಿರುವ ಆಕೆಯು ದೊರೆತಳು ಚಿಕಿತ್ಸಕರ ಸಲಹೆಯಂತೆ ಆಕೆಯನ್ನೊಂದು "ನರ್ಸಿಂಗ್ ಹೋಂ"ನಲ್ಲಿ ಹಾಕಲಾಯಿತು. ಅನುಕೂಲ ವಾತಾವರಣವು ಲಭಿಸಿದುದರಿಂದ ವಿಶೇಷ ಚಿಕಿತ್ಸೆಯಿಲ್ಲದೇನೇ ಆಕೆಯ ಸ್ಥಿತಿಯು ಸಾಕಷ್ಟು ಸುಧಾರಿತವಾಯಿತ.

ಮುಂದೆ ಆಕೆಯ ವಿವಾಹವಾಗಿ, ಒಂದು ಮಗುವಿನ ತಾಯಿಯೂ ಆದಳು ಪತ್ನಿ ಮತ್ತು ಮಾತೆಯ ಹೆಚ್ಚಿನ ಜವಾಬ್ದಾರಿಯನ್ನು ಆಕೆಯು ಮೆದುಳು ಹೊರಲಿಲ್ಲ. ಒಂದು ದಿನ ಸಂಜೆ ಪತಿಯು ಬಂದು ನೋಡುವಾಗ ಆಕೆಯು ಮರದ ಮೂರ್ತಿಯಂತೆ ನಿಶ್ಚೇಷ್ಟಿತಳಾಗಿ ಕುಳಿತಿದ್ದಳು. ಬಹಳಷ್ಟು ಮಾತಾಡಿಸಿದರೂ ಆಕೆ ತುಟಿ ಬಿಚ್ಚಲಿಲ್ಲ. ಕೈಹಿಡಿದೆತ್ತಿದರು; ಕೈ ಮೇಲೆತ್ತಿ ಆಕೆ ನಿಂತುಕೊಂಡಳು. ಅಂದಿನಿಂದಲೂ ಆಕೆ ಆಸ್ಪತ್ರೆಯಲ್ಲಿದ್ದಾಳೆ ಸಾಮಾನ್ಯವಾಗಿ ಆಕೆ ನಿಶ್ಚೇಷ್ಟಿತಳಾಗಿಯೇ ಇರುತ್ತಾಳೆ ಆದರೆ, ಕೆಲಪೊಮ್ಮೆ ಉಗ್ರ ರೂಪ ಧರಿಸುವುದೂ ಇದೆ.

ಇನ್ನೊಬ್ಬ ರೋಗಿಯನ್ನು ತೆಗೆದುಕೊಳ್ಳಿ. ಆತನ ಹೆಸರು ಜಾರ್ಜ್ ಎಂದು. ಆತ ಸೀಜೊ ಫ್ರೇನಿಯಾದ ಇನ್ನೊಂದು ವಿಧದಿಂದ ಬಳಲುತ್ತಾನೆ. ಈ ರೋಗವನ್ನು ಶಾಸ್ತ್ರೀಯ ಭಾಷೆಯಲ್ಲಿ "ಪೆರನೈಡ್ ಸೀಜೊಫ್ರೇನಿಯಾ" ಎನ್ನುತ್ತಾರೆ. ಜಾರ್ಜನ ಮೆದುಳಿನಲ್ಲಿ ಒಂದು ವಿಚಿತ್ರ ದರ್ಪಣವಿದ್ದು, ಅದು ಪ್ರತಿಯೊಂದು ವಸ್ತುವಿನ ವಿಕೃತ ರೂಪನನ್ನು ತೋರಿಸುತ್ತದೆ. ಆಹಾರ ತಿನ್ನಿಸುವವನು ಆತನಿಗೆ ಶತ್ರುವಾಗಿ ತೋರುತ್ತಾನೆ. ಆತನು ತನಗೆ ವಿಷತಿನ್ನಿಸುವನೆಂಬ ಹೆದರಿಕೆಯಿಂದ ಜಾರ್ಜ್ ಚಡಪಡಿಸುತ್ತಾನೆ.

ಸೀಜೊ ಫ್ರೇನಿಯಾದಲ್ಲಿ ಇನ್ನೂ ಹಲವು ವಿಧಗಳಿವೆ. ಆದರೆ, ಇವು ಶರೀರ ಮತ್ತು ಮೆದುಳು ಎರಡಕ್ಕೂ ಸಂಬಂಧಿಸಿದ ರೋಗಗಳು. ಇದರಿಂದ ನಾಜೂಕಾದ ಶರೀರ ಶಂಕುಲನ ಅಸ್ತವ್ಯಸ್ತವಾಗುತ್ತದೆ. ರೋಗಿಯ ಕೈಕಾಲುಗಳು ತಣ್ಣಗಾಗುತ್ತವೆ ಚರ್ಮವು ಒಂದು ತರದ ನೀಲ ಬಣ್ಣ ತಾಳುತ್ತದೆ. ಕೆಲಪೊಮ್ಮೆ ನೋವನ್ನೂ ಅನುಭವ ಮಾಡುವ ಶಕ್ತಿ ಕೂಡ ಮಾಯವಾಗುತ್ತದೆ.

ಚಿಕಿತ್ಸಾ ಕ್ರಮದಲ್ಲಾದ ಹೊಸ ಹೊಸ ಸಂಶೋಧನೆಗಳು ರೋಗಿಯು ಗುಣಮುಖನಾಗುವ ಅವಕಾಶಗಳನ್ನು ಹೆಚ್ಚಿಸಿವೆ. ಹೀಗಿದ್ದರೂ ಸೀಜೊಫ್ರೇನಿಯಾದ ಚಿಕಿತ್ಸಾ ಕ್ರಮವೊಂದು ವಿಕಟ ಸಮಸ್ಯೆಯಾಗಿ ಪರಿಣಮಿಸಿದೆ.

ಈ ರೋಗದ ಕಡೆಗೆ ಸಮಾಜವು ಹೆಚ್ಚಿನ ಜಾಗರೂಕತೆ ವಹಿಸುತ್ತಿಲ್ಲವೆಂಬುದಕ್ಕೆ ಈ ಕೆಳಗಿನ ಅಂಕಿಸಂಖ್ಯೆಗಳನ್ನು ಉದಾಹರಿಸಬಹುದು: ಇಡಿಯ ಪ್ರಪಂಚದ ಬೇರೆ ಬೇರೆ ದೇಶಗಳಲ್ಲಿ ಸೀಜೊಫ್ರೇನಿಯಾದ ಚಿಕಿತ್ಸಾ ಸಂಶೋಧನೆಯ ಬಗ್ಗೆ ವೆಚ್ಚವಾಗುವ ಎಲ್ಲ ಹಣದಿಂದ ಬಾಂಬು ಸುರಿಸುವ ಒಂದು ಜೆಟ್ ವಿಮಾನವನ್ನು ಕೊಳ್ಳುವುದೂ ಅಸಾಧ್ಯವಾಗಿದೆ. ಅಮೆರಿಕೆಯಲ್ಲಿ ಪ್ರತ್ಯೇಕ ಪೋಲಿಯೋ ರೋಗಿಗೆ ಪ್ರತಿ ವರ್ಷ ೨೮.೮ ಡಾಲರಿನಂತೆ, ಕ್ಷಯ ರೋಗಿಗೆ ೨೬.೦೦ ಡಾಲರಿನಂತೆ ಮತ್ತು ಕೇನ್ಸರ್ ರೋಗಿಗೆ ೨೭.೭ ಡಾಲರಿನಂತೆ ಕೇವಲ ಚಿಕಿತ್ಸಾ ಸಂಶೋಧನೆಗಾಗಿ ವ್ಯಯವಾಗುವುದು. ಆದರೆ, ಸೀಜೊಫ್ರೇನಿಯೋ ರೋಗಿಗೆ ೪೧೫ ಡಾಲರಿನಷ್ಟು ಮಾತ್ರ ತತ್ಸಂಬಂಧಿತ ಸಂಶೋಧನೆಗಳಿಗಾಗಿ ವ್ಯಯವಾಗುವುದು.

ಅಮೆರಿಕೆಯ ೨೯ ಚಿಕಿತ್ಸಾಲಯಗಳಲ್ಲಿ ಸೀಜೊ ಫ್ರೇನಿಯಾದ ಸುಮಾರು ೩೭ ಸಾವಿರ ರೋಗಿಗಳಿದ್ದಾರೆ. ಇವರಲ್ಲಿ ಹೆಚ್ಚಿನವರು ರೋಗವು ವಿಕಟಾವಸ್ಥೆಗೆ ಬಂದು ತಲಪಿದ ನಂತರವೇ ಆಸ್ಪತ್ರೆ ಸೇರಿದವರು. ಈ ರೋಗವು ಪ್ರಾರಂಭಿಕಾವಸ್ಥೆಯಲ್ಲಿರುವಾಗ ಚಿಕಿತ್ಸೆಯು ಪರಿಣಾಮಕಾರಿಯಾಗುವ ಸಂಭವ ಹೆಚ್ಚಿದೆಯಾದರೂ ರೋಗವು ಪ್ರಬಲವಾಯಿತೆಂದರೆ, ಗುಣವಾಗುವ ಸಂಭವವೂ ಅತ್ಯಲ್ಪ.

ಈ ಚಿಕಿತ್ಸಾಲಯಗಳು ಸೆರಮನೆಯಂತಿವೆ. ಅಲ್ಲಿ ರೋಗಿಯ ಅಳಿದುಳಿದ ಮಾನಸಿಕ ಸ್ವಾಸ್ಥ್ಯವೂ ನಷ್ಟವಾಗುವುದು. ರೋಗಿಗಳನ್ನೂ ಮರುಳರನ್ನೂ ಅಲ್ಲಿ ಒತ್ತಟ್ಟಿಗೆ ಸೇರಿಸಲಾಗುವುದು. ಸೀಜೊಫ್ರೇನಿಯಾದ ರೋಗಿಗೆ ತನಗೆ ಮಾಡಬೇಕೆಂದು ಕಂಡ ಕೆಲಸವನ್ನು ಅವಶ್ಯಮಾಡಲೇಬೇಕಾಗುತ್ತದೆ. ಆದರೆ, ಈ ಸಾಮಾನ್ಯ ನಿಯಮವನ್ನೂ ಅಲ್ಲಿ ಸರಿಯಾಗಿ ಪಾಲಿಸುತ್ತಿಲ್ಲ.

(ಅನೇ ಪುಟ ನೋಡಿರಿ)

ಬ್ರಿಗೇಡಿಯರ್ ರಾಜಾ

ಭಾರತೀಯ ಪಡೆಯ ಕಮಾಂಡರ್ ಬ್ರಿಗೇಡಿಯರ್ ರಾಜಾ ಇವರನ್ನು ಉತ್ತರ ಕಟಾಂಗದಲ್ಲಿರುವ ಸಂಯುಕ್ತ ರಾಷ್ಟ್ರ ಸಂಘದ ಪಡೆಯ ಮಹಾ ದಂಡನಾಯಕನಾಗಿ ನೇಮಿಸಲಾಗಿದೆ.

ಬಾಲುಬ ಬುಡಕಟ್ಟಿನವರ ವಿರುದ್ಧ ಶೋಭೆಯ ಪಡೆಗಳು ಕಾರ್ಯನಿರತಗೊಂಡಿರುವ ದೃಷ್ಟಿಯಿಂದ ಸಂ. ರಾ. ಸಂಘದ ಪಡೆಗಳನ್ನು ಅನುಕ್ರಮವಾಗಿ ಕೂಡಿಸುವ ಮತ್ತು ನಿರ್ದೇಶಿಸುವ ಉದ್ದೇಶದಿಂದ ಒಂದು ಉನ್ನತ ಸೈನಿಕಾಧಿಕಾರಿಯನ್ನು ನೇಮಿಸುವುದು ಅಗತ್ಯವೆಂದು ತಿಳಿದು ವಿಶ್ವ ಸಂಸ್ಥೆ ಬ್ರಿಗೇಡಿಯರ್ ರಾಜಾ ಇವರನ್ನು ನೇಮಿಸಿದೆ.

ದಿ ವಿಜಯ ಬೇಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬೇಂಕ್. ಸ್ಥಾಪನೆ: 1931

ರಿಜಿಸ್ಟರ್ಡ್ ಆಫೀಸು:

ವಿಜಯ ಬೇಂಕ್ ಬಿಲ್ಡಿಂಗ್, ಲೈಟ್ ಹೌಸ್ ಹಿಲ್ ರೋಡ್,

ಮಂಗಳೂರು 3, ಸೌತ್ ಕೆನರಾ.

ಕಾಯಂ ರೇವಣಾತಿ ಬಡ್ಡಿ ದರವನ್ನು ಶೇಕಡ 5½ರ ವರೆಗೆ ಹೆಚ್ಚಿಸಲಾಗಿದೆ.

ಏಳು ದಿವಸದ ನೋಟೀಸಿನಲ್ಲಿ ಕೇಳಿದಾಗ್ಯೆ ಹಿಂದೆ ಪಡೆಯುವ ಡಿಪೋಸಿಟುಗಳನ್ನು (Call Deposits) ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸೋಣಾಗುತ್ತದೆ.

ಹೆಚ್ಚಿನ ಮಾಹಿತಿಗೆ ನಮ್ಮ ಶಾಖೆಗಳಲ್ಲಿ ದಯಮಾಡಿ ವಿಚಾರಿಸಿರಿ.

ಪುತ್ತೂರು ಡಿ. ಮು. ಕೋರ್ಟನಲ್ಲಿ

O S. 69,61.

ಶ್ರೀದೋಗೀಶ್ವರಮರ —ವಾದಿ.

ಮೇರನಟ್ಟೋಣೆ ಸಹಾ—ಪ್ರತಿವಾದಿರು.

3ನೇ ಪ್ರತಿವಾದಿ: V. ಶುಕ್ಕಪ್ಪ—ಮೇರ ತನಿಯನ ಮಗ—

I No 1480 E L F. Electric Department Mysore —

ಇವರಿಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ನಿಮಗೆ ತಿಳಿಯಪಡಿಸುವುದೇನೆಂದರೆ

ದಾವಾ ಆಸ್ತಿಯನ್ನು ಸಾಲು ಕೇಳಿಯೂ ಹುಟ್ಟುವಳ್ಳಿ ಕೇಳಿಯೂ ನಿಮ್ಮ ಸಗೈರ ಮೇಲೆ ನೂಡಿದ ಮೇಲಿನ ದಾವೆಯನ್ನು ತಾ. 9-8-61ಕ್ಕೆ ನಿಮ್ಮ ನೋಟೀಸಿನ ಬಗ್ಗೆ ಇಟ್ಟಿರುತ್ತದೆ. ಇ ದಿವಸ ಈ ಕೋರ್ಟು ಮುಂದೆ ಹಾಜರಾಗಿ ಉತ್ತರಿಸತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಶಿಕ್ಷಾಮಾಡಿ ಯುಕ್ತಕಂಡಂತೆ ತೀರ್ಮಾನಿಸಲಾದೀತು.

(Sd.) M. Sadashiva Rao,

Vakil for Petitions

ಪುತ್ತೂರು, ತಾ. 22-7-61.

ಹೊಸ ಪ್ರಯೋಗಗಳು ಅಸಫಲಗೊಳ್ಳಬಹುದು. ಆದರೆ, ಹಳೆಯ ಪ್ರಯೋಗಗಳಿಂದ ಪಡೆಯುವ ಸಾಫಲ್ಯಕ್ಕಿಂತ ಈ ಅಸಫಲತೆ ಬಹು ಶ್ರೇಷ್ಠವಾದುದು.

ನವಯುಗ

ವಾರ	ಉಡುಪಿ	ನಂಬರ
೪೭	೨೭-೭-೬೧	೪೦

ಸೂಕ್ತ ಎಚ್ಚರಿಕೆ

ಕಾಶ್ಮೀರದ ಯುದ್ಧವಿರಾಮ ರೇಖೆಯ ಮೇಲೆ "ವಿಮೋಚನಾಆಂದೋಲನ"ವನ್ನು ಮಾಡುವುದಕ್ಕೆ ಉತ್ಸಾಹಕಾದ ಅಜಾದ ಕಾಶ್ಮೀರದ ಕೆಲವರಿಗೆ ಪ್ರೋತ್ಸಾಹವನ್ನು ನೀಡುತ್ತ ಬರುತ್ತಿರುವ ಪಾಕಿಸ್ತಾನದ ಸರ್ವಾಧಿಕಾರಿ ಮೇ| ಜ| ಅಯೂಬಖಾನರಿಗೆ ಪ್ರಧಾನಿ ನೆಹರು ಇತ್ತ ಎಚ್ಚರಿಕೆ ಸಮಯೋಚಿತವಾಗಿದೆ. ಗಡಿರೇಖೆಯ ಬಳಿ ಈಗ್ಗೆ ಕೆಲವೊಂದು ವರ್ಷಗಳಿಂದ ನಡೆದು ಬರುತ್ತಿರುವುದಾದರೂ ಇದೇ' ಕೆಲವೊಮ್ಮೆ ಗುಂಡಿನ ಹಾರಾಟವೂ ನಡೆದಿದ್ದುದನ್ನು ಮರೆಯುವಂತಿಲ್ಲ. ಕಾಶ್ಮೀರವನ್ನು ಹೇಗಾದರೂ ಮಾಡಿ ಕಬಳಿಸುವ ಮಹತ್ವಾಕಾಂಕ್ಷೆಯಿಂದ ಪಾಕಿಸ್ತಾನವು ಮಾಡಬಹುದಾದ ದಾಳಿಯು ಸರ್ವ ಭಾವಿಯಾಗಿ ಪತಾಣರ ಪಂಗಡವೊಂದನ್ನು ಸೀಮಾ ರೇಖೆಯ ಮುಂದೆ ಕಳಿಸುವ ಯೋಜನೆಯೂ ಇದ್ದಿತ್ತು. ಸೈನಿಕ ಜೀವನವನ್ನು ಬಾಳಿದ್ದ ಬಾಳುತ್ತಿರುವ ಅಯೂಬ ಖಾನರಿಗೆ ಕದನವೆಸಗುವ ತಹತಹ ಅವಶ್ಯ ಇರಬಹುದು. ಈಗ ಅಯೂಬ ಖಾನರು ಭಾರತದ ಬಗ್ಗೆ ಮತ್ಸರದಿಂದ ದೂರುವುದಾದರೂ ಏನನ್ನು? ಭಾರತವು ಸೈನಿಕ ಶಕ್ತಿಯನ್ನು ಹೆಚ್ಚಾಗಿ ಪಡೆದಿದೆ; ಇದರಿಂದ ಪಾಕಿಸ್ತಾನಕ್ಕೆ ಗಂಡಾಂತರವೊದಗುತ್ತಿದೆಯೆಂಬುದು. ಅಯೂಬರು ಭಾವಿಸುವಂತೆ ಭಾರತಕ್ಕೆ ಆಕ್ರಮಣ ಮಾಡಬೇಕೆಂಬ ಇಚ್ಛೆಯಿರುವುದಾದರೆ, ಪೋರ್ಚುಗೀಸ ವಸಾಹತನ್ನು ವಶಪಡಿಸಿಕೊಳ್ಳುವಂತೆಯೇ ಸೈನಿಕ ಕಾರ್ಯಾಚರಣೆಯನ್ನು ಕೈಗೊಂಡು ಅಜಾದ ಕಾಶ್ಮೀರವನ್ನು ತನ್ನ ವಶಕ್ಕೆ ತಂದುಕೊಳ್ಳಬಹುದಿತ್ತು. ಆದರೆ, ಭಾರತವು ತನ್ನ ನೆರೆಹೊರೆಯವರಿರಲಿ, ಬೇರಾರೇ ಇರಲಿ, ಅವರೊಡನಿರಬಹುದಾದ ವಿವಾದಗಳ ಪರಿಹಾರಕ್ಕೆ ಸೈನಿಕ ಕಾರ್ಯಾಚರಣೆಯೇ ಸಾಧನವೆಂದು ಇದುವರೆಗೆ ಬಗೆದಿಲ್ಲ; ಮುಂದಕ್ಕೆ ಬಗೆಯುವಂತೆಯೂ ಇಲ್ಲ.

ಒಂದಲ್ಲ ಅನೇಕ ವೇಳೆ ಪಾಕಿಸ್ತಾನವು ಸೀಮಾತಿಕ್ರಮಣವನ್ನು ಮಾಡಿ ಸೈನಿಕ ಕಾರ್ಯಕ್ರಮವನ್ನು ಆಹ್ವಾನಿಸಿದರೂ ಶಾಂತಿಯನ್ನು ಭಂಗಿಸಿದರೂ ಭಾರತವು ಅಸುದ್ರಿಕ್ತವಾಗಿ ಸಮಾಧಾನದಿಂದಲೇ ಮುಂದುವರಿಯುತ್ತಿದೆಯೆಂಬುದನ್ನು ಗಮನಿಸಬೇಕು. ಕಾಶ್ಮೀರದ ಭವಿಷ್ಯವನ್ನು ಅಲ್ಲಿಯ ಜನರೇ ನಿರ್ಧರಿಸಬೇಕು ಎಂಬುದು ಅಯೂಬರ ವಾದವಾದರೆ, ತಮ್ಮ ನಿರ್ಧಾರವನ್ನು ಕಾಶ್ಮೀರಿ ನಾಗರಿಕರು ಆದೆಂದೋ ಮಾಡಿ ಬಿಟ್ಟಿದ್ದಾರೆ ಎಂಬುದು ನಮ್ಮ ಅಭಿಪ್ರಾಯ. ಅಯೂಬ ಖಾನರು ಅದರ ಭವಿಷ್ಯದ ಸಂಬಂಧದಲ್ಲಿ ಮತದಾನ ನಡೆಯಬೇಕೆಂದು ಕೇಳಿಕೊಳ್ಳುತಿದ್ದಾರೆ. ಪ್ರಧಾನಿ ನೆಹರು ಹೇಳುವಂತೆ, ರೂಪಧಾರಣೆ ಮಾಡಿದಂದಿನಿಂದ ಇದುವರೆಗೆ ಒಂದೇ ಒಂದು ಚುನಾವಣೆಯನ್ನು ಕಾಣದಂತಹ ಒಂದು ರಾಷ್ಟ್ರದ ಸರ್ವಾಧಿಕಾರಿಯ ಮುಖದಿಂದ ಈ ಮಾತು ಹೊರಬೀಳುವುದರ ಒಳಗುಟ್ಟನ್ನು ಬಿಡಿಸಿ ಹೇಳಬೇಕಾಗಿಲ್ಲ. ಕಾಶ್ಮೀರದಲ್ಲಿ ಈಗಾಗಲೇ ಸಾರ್ವತ್ರಿಕ ಚುನಾವಣೆಗಳು ನಡೆದಿದ್ದು ಅಲ್ಲಿಯ ಜನರು ಭಾರತದೊಡನೆ ಸೇರುವ ತಮ್ಮ ಅಭಿಲಾಷೆಯನ್ನು ವ್ಯಕ್ತಪಡಿಸಿದ್ದಾರೆ. ಸರ್ವಾಧಿಕಾರಿ ಅಯೂಬಖಾನರನ್ನು ಅಮೆರಿಕೆಯ ಅಧ್ಯಕ್ಷರಾದ ಜಾನ್ಸನರು "ಮಾನವ ಸ್ವಾತಂತ್ರ್ಯ ಸಲ್ಲವಿಯ ತೀಕ್ಷ್ಣಕಂಠ" ಎಂದು ಒಂದೆಡೆ ಪರಿಚಯಮಾಡಿಕೊಟ್ಟುದು ಬಹು ಸೋಜಿಗವೆನಿಸುತ್ತದೆ. ಮಾನವ ಸ್ವಾತಂತ್ರ್ಯವೆಂದರೆ ಕಮ್ಯುನಿಜಂ ವಿರೋಧವೆನ್ನುವುದಾದರೆ, ಈ ಬಿರುದನ್ನು ಒಪ್ಪಬಹುದೋ ಏನೋ! ಆದರೆ ಮಾನವ ಸ್ವಾತಂತ್ರ್ಯ ಶಬ್ದದ ಅರ್ಥವನ್ನು ಅಷ್ಟು ಸಂಕೋಚ ಮಾಡುವುದೆ? ಪಾಕಿಸ್ತಾನದಲ್ಲಿ ಅಳಿದುಳಿದ ಪಾರ್ಲಿಮೆಂಟರಿ ಪ್ರಣಾಳಿಯನ್ನು ಕೊನೆಗಾಣಿಸಿ, ಗದ್ದುಗೆಯನ್ನಡರಿದ ಅಯೂಬ ಖಾನರೇ 'ಮಾನವ ಸ್ವಾತಂತ್ರ್ಯದ ತೀವ್ರ ಸಮರ್ಥಕರೆನ್ನುವುದು ಎಂತಹ ಹಾಸ್ಯಾಸ್ಪದ! ಇನ್ನು ಪಾಕಿಸ್ತಾನದ ಪರಿಸ್ಥಿತಿಯಾದರೂ ಏನು? ಅಲ್ಲಿ ಪ್ರಜಾಸತ್ತೆಯಾಗಲಿ, ಆರ್ಥಿಕ ಪರಿಸ್ಥಿತಿಯಾಗಲಿ ಇದುವರೆಗೆ ಸುಧಾರಣೆಗೊಂಡುದಿಲ್ಲ. ಶೀತಲ ಯುದ್ಧವನ್ನು ನಡೆಸುವ ಚತುರ ಪ್ರಯತ್ನಗಳು ಅಲ್ಲಿ ಹಿಂದಿನಿಂದಲೂ ನಡೆದು ಬರುತ್ತಿವೆ. ಕಮ್ಯೂನಿಸ್ಟ್ ದಾಳಿಯನ್ನೆದುರಿಸಲು ಉಪಯೋಗಿಸಬಹುದಾದ ಅಮೆರಿಕೆಯ ಸೈನಿಕ ಸಹಾಯವನ್ನು ಭಾರತ ಸೀಟೋಸೆಂಟೊಗಾಗಿ ವಿನಿಯೋಗಿಸಿ ಅನ್ಯಾಯ ಮಾಡುತ್ತಿದೆ; ತಾನು ತನ್ನ ಸಂಪನ್ಮೂಲದ ಬಲ್ಲಂಶವನ್ನು ಮಿಲಿಟರಿಗಾಗಿ ವ್ಯಯಗೊಳಿಸುವುದಲ್ಲದೆ, ಅದು ಭಾರತಕ್ಕೂ ಮಿಲಿಟರಿ ಶಕ್ತಿಯನ್ನು ಹೆಚ್ಚಿಸಬೇಕಾಗುವಂತೆ ಮಾಡುತ್ತಿದೆ. ಇದರಿಂದ ಭಾರತದ ಅಭಿವೃದ್ಧಿ ಯೋಜನೆಗಳು ತಡೆಯುವಂತೆ ಮಾಡುತ್ತಿದೆ. ಹಾಗಾದರೆ, ಪಾಕಿಸ್ತಾನದ ನಿಜವಾದ ಅಭಿಲಾಷೆ ಯಾವುದು?

ಭಾರತವು ತನ್ನ ಧೈರ್ಯ ಸಾಹಸಗಳಿಂದ ದೇಶದ ಸಂಪತ್ತಿನಿಂದ, ವಿದೇಶಗಳ ಸಹಾಯದಿಂದ ಪಂಚವಾರ್ಷಿಕ ಯೋಜನೆಗಳನ್ನು ಕೈಗೊಂಡು ಆರ್ಥಿಕವಾಗಿ, ಸಾಮಾಜಿಕವಾಗಿ ಮುಂದಡಿಯಿಡುತ್ತಿದೆ. ಪಾರ್ವಾತ್ಯ ರಾಷ್ಟ್ರಗಳ ಮತ್ರವಲ್ಲ ಪ್ರಪಂಚದ ಸರ್ವರಾಷ್ಟ್ರಗಳ ಸಾಲಿನಲ್ಲಿಯೂ ಅಗ್ರಗಣ್ಯ ಸ್ಥಾನವನ್ನೆದು ಪಡೆಯುತ್ತಿದೆ. ಅಂತಾರಾಷ್ಟ್ರೀಯ ರಾಜಕಾರಣದಲ್ಲಿ ಇದು ಉನ್ನತ ಸ್ಥಾನ ಸಂಪಾದಿಸುತ್ತಿದೆ. ತನ್ನ ನೆರೆಯ ಒಂದು ರಾಷ್ಟ್ರ ತನ್ನೊಡನೆಯೇ ರೂಪುಗೊಂಡ ಭಾರತ—ಹೀಗೆ ಸರ್ವತೋಮುಖ ಪ್ರಗತಿ ಪಡೆಯುತ್ತಿರುವುದನ್ನು ಕಂಡು ಕರುಬಿ ಸಹಿಸಲಾಗದ ಅಯೂಬರ ಈ ಆಲಾಪ ಶುದ್ಧ ಗೋಳಾಟ; ಪಾಕ್ ದಿವಾಳಿಗೋರತನದ ಪೇಚಾಟ. ಭಾರತವು ವಿಶಿಷ್ಟ ರಾಜಕಾರಣಕ್ಕೆ ಹೆಸರಾಗಿದೆಯೆಂದೇ ಅದರ 'ತಾಟಸ್ಥ್ಯ' ನೀತಿಯು ಅನೈತಿಕವೆಂದು ಕರೆಯಲ್ಪಟ್ಟಿದಿಲ್ಲ.

ಪಂಚಾಯತ್ ರಾಜ್ಯ

ಪಂಚಾಯತ್ ರಾಜ್ಯಗಳ ಆದರ್ಶವನ್ನು ವ್ಯವಹಾರಕ್ಕೆ ಇಳಿಸುವುದಕ್ಕೆ ಮೊದಲೇ ಅವುಗಳ ಕಾರ್ಯಕ್ಷೇತ್ರವನ್ನು ನಿಶ್ಚಯಿಸುವುದು ಅತ್ಯವಶ್ಯ. ಅವುಗಳ ಕರ್ತವ್ಯಗಳು ಯಾವುವು ಅದಕ್ಕೆ ಬೇಕಾದ ಆರ್ಥಿಕ ಮೂಲಗಳು ಯಾವುವು—ಎಂದು ಮುಂತಾದ ಪ್ರಶ್ನೆಗಳನ್ನೂ ಪೂರ್ಣರೂಪದಲ್ಲಿ ಉತ್ತರಿಸಲ್ಪಟ್ಟಿಲ್ಲದೆ ಹೈದರಬಾದಿನಲ್ಲಿ ಸೇರಿದ ಸಾಮಾಜಿಕಾಭಿವೃದ್ಧಿ ಸಮ್ಮೇಳನದಲ್ಲಿ ವಿ. ಟಿ. ಕೃಷ್ಣಮಾಚಾರಿಯವರು ಪಂಚಾಯತ ರಾಜ್ಯಗಳು ಯಶಸ್ವಿಯಾಗುವುದಕ್ಕೆ ಜಿಲ್ಲೆಯ ಸದ್ಯದ ಆಡಳಿತ ವ್ಯವಸ್ಥೆಯು ಬದಲಾಗಬೇಕೆಂದು ಹೇಳಿದ್ದಾರೆ. ಇಂದು ನಾವು ಒಂದೇ ಕಾರ್ಯವನ್ನು ಸರಕಾರದ ಹಲವಾರು ವಿಭಾಗಗಳು ಮಾಡುತ್ತಿರುವುದನ್ನು ಕಾಣುತ್ತೇವೆ. ವಿದ್ಯಾಭ್ಯಾಸದ ಹೊಣೆ ನಿರ್ವಹಿಸುವಾಗ ಖಾಸಗಿ ವ್ಯಕ್ತಿ—ಸಂಘ-ಸಂಸ್ಥೆಗಳು ಮಾತ್ರವಲ್ಲ ಸ್ಥಳೀಯ ಸಂಸ್ಥೆಗಳು, ಫಿಶರೀಸ್ ವಿಭಾಗ, ಹರಿಜನ್ ವೆಲ್‌ಫೇರ್ ವಿಭಾಗ, ವಿದ್ಯಾ ಇಲಾಖೆ—ಹೀಗೆ ಬೇರೆ ಬೇರೆ ವಿಭಾಗಗಳಲ್ಲಿ ಕಾರ್ಯ ನಡೆದು ಶಕ್ತಿಯ ಅಪವ್ಯಯವಾಗುವುದು ಗೊತ್ತಾಗುತ್ತದೆ. ಫಿಶರೀಸ್ ವಿಭಾಗವು ವಿದ್ಯಾರ್ಥಿಯನದತ್ತ ಗಮನ ಹರಿಸುವುದರಿಂದ ಮೀನುಗಾರಿಕೆಯತ್ತ ತನ್ನ ದೃಷ್ಟಿಯನ್ನು ಕೇಂದ್ರೀಕರಿಸುವುದು ಅಸಾಧ್ಯವಾಗುತ್ತದೆ. ಕೃಷಿ, ಪಶು ಸಂಗೋಪನೆ ಫಿಶರೀಸ್, ಶಿಕ್ಷಣ, ಸಾರ್ವಜನಿಕ ಆರೋಗ್ಯ, ನೀರಾವರಿ ಮೊದಲಾದ ಎಲ್ಲಾ ಕಾರ್ಯಗಳೂಈಗಜಿಲ್ಲಾ ಮಟ್ಟದಲ್ಲಿ ನಡೆಯುತ್ತಿದ್ದು, ಇವುಗಳ ಆಡಳಿತೆಯಲ್ಲಿ ಪುನಾರಚನೆಯಾಗ ಬೇಕೆನ್ನುತ್ತಾರೆ ಕೃಷ್ಣಮಾಚಾರಿಯವರು. ಪಂಚಾಯತುಗಳ ಅಧಿಕಾರದ ಬಗ್ಗೆಯೇ ನಿರ್ದಿಷ್ಟ ನಿರ್ಧಾರವಾಗದಿರುವುದು ಈ ದಿಸೆಯಲ್ಲಿನ ಕಂಟಕ. ಕೆಲವರು ಪಂಚಾಯತುಗಳ ಗೆಹೆಚ್ಚಿನ ಅಧಿಕಾರವೀಡಬೇಕೆಂದು ವಾದಿಸಿದರೆ, ಮತ್ತೆ ಕೆಲವರು ಅಧಿಕಾರ ಮಿತವಾಗಿರ ಬೇಕೆನ್ನುತ್ತಾರೆ. ಪಂಚಾಯತದ ಎಲ್ಲಾ ನಿರ್ಧಾರಗಳೂಒಮ್ಮತದಿಂದಿರ ಬೇಕೆಂಬ ಸದಾಶಯವನ್ನು ಕೆಲವರು ವ್ಯಕ್ತಪಡಿಸಿ ಚುನಾವಣೆಗಳಲ್ಲಿ ರಾಜಕೀಯ ತರುವುದಾದರೆ, ಇದು ಸಾಧ್ಯವಿಲ್ಲವೆನ್ನುತ್ತಾರೆ. ಪ್ರಜಾ ಪ್ರತಿನಿಧಿ ಮಂಡಳಗಳಾದ ಈ ಪಂಚಾಯತಗಳು ಅವಿರೋಧವಾಗಿಯೇ ಆಯ್ಕೆಗೊಳ್ಳಬೇಕಾಗ ಬಹುದು. ಅದರೂ ಅನ್ಯದಂತೆ ರೋಮ ರೋಮಗಳಲ್ಲಿ ಹರಿದಾಡುವ ರಾಜಕಾರಣ ಸದಾ ತನ್ನ ಬೇಳೆ ಬೇಯಿಸುವ ಹೊಂಚನ್ನು ಹಾಕುತ್ತಿರುವುದನ್ನು ನಾವು ಅವಶ್ಯ ಗಮನಿಸಬೇಕು. ಕಲ್ಯಾಣ ರಾಷ್ಟ್ರದ ಕರ್ತವ್ಯ ನಿರ್ವಹಣೆಗೆ ನಮ್ಮ ಪಂಚಾಯತುಗಳು ಸಮರ್ಥವಿವೆಯೇ ಎಂದು ಪರಿಶೀಲಿಸ ಬೇಕು. ಈ ದೃಷ್ಟಿಯಿಂದು ನೋಡುವುದಾದರೆ, ಪಂಚಾಯತ್‌ಗಳಿಗೆ ಮಿತಾಧಿಕಾರವೇ ಸಾಕೆನಿಸುತ್ತದೆ.

ಸಂಕ್ಷಿಪ್ತ ಸುದ್ದಿಗಳು

ಶ್ರೀನಿವಾಸ ಮಲ್ಯ

ದಿಲ್ಲಿಯಲ್ಲಿಯೇ ಇದ್ದು ಈಗ ತಾನೇ ತನ್ನ ಮತದಾರ ಕ್ಷೇತ್ರವನ್ನು ಕಾಣಬಂದ ಶ್ರೀ ಶ್ರೀನಿವಾಸ ಮಲ್ಯರು ಎಲ್ಲಿದ್ದರೂ ಜಿಲ್ಲೆಯ ಕೆಲಸವಾಗುತ್ತದೆ. ಕೇಂದ್ರ ಸರಕಾರದ ಮೇಲೆ ಪ್ರಭಾವ ಬೀರುವ ವ್ಯಕ್ತಿತ್ವ ಅವರದಾದುದರಿಂದ ಇಲ್ಲಿನ ಹೊಳೆಗಳು ಸೇತುವೆಗಳನ್ನು ಕಾಣುವಂತಾಯಿತು ರಿಜನಲ್ ಇಂಜನಿಯರಿಂಗ್ ಕಾಲೇಜು ಉದ್ಭವವಾಯ್ತು, ಮಂಗಳೂರು ಬಂದರ ಅಭಿವೃದ್ಧಿಯಾಗುವುದೆಂದಾಯ್ತು. ಸರಕಾರಿ ಕ್ಷೇತ್ರದಂತೆಯೇ ಖಾಸಗಿ ಕ್ಷೇತ್ರಗಳಿಗೂ ಪ್ರೋತ್ಸಾಹ ದೊರೆಯಬೇಕೆನ್ನುತ್ತಾರೆ ಶ್ರೀ ಮಲ್ಯರು. ಮಂಗಳೂರಲ್ಲಿ ಮೆಡಿಕಲ್ ಕಾಲೇಜು ಸ್ಥಾಪನೆಯಾಗುವುದರಿಂದ ಹೆಚ್ಚಿನ ಪ್ರಯೋಜನ ಆಗುವುದಿಲ್ಲ; ಇದಕ್ಕೆ ಬದಲಾಗಿ ಕಸ್ತೂರ್ಬಾ ಮೆಡಿಕಲ್ ಕಾಲೇಜಿನಲ್ಲಿಯೇ ಕೆಲವು ಸೀಟುಗಳನ್ನು ಸರಕಾರ ಪಡೆದು ತನ್ನ ಶಕ್ತಿಯನ್ನು ಉಳಿದ ಸರಕಾರಿ ಮೆಡಿಕಲ್ ಕಾಲೇಜುಗಳ ಉನ್ನತಿಯ ಬಗ್ಗೆ ಕೇಂದ್ರೀಕರಿಸ ಬೇಕು ಎನ್ನುತ್ತಾರೆ ಅವರು. ಮಣಿಪಾಲದಲ್ಲಿ ತನ್ನ ಪಸ್ಟ್‌ಶ್ರೀ ಪೂರ್ತಿಯ ಗೌರವಾರ್ಥ ಏರ್ಪಟ್ಟ ಸತ್ಕಾರ ಕೂಟದಲ್ಲಿ ಮಾತಾಡಿದ ಇವರು ಸುವ್ಯವಸ್ಥಿತ ರೀತಿಯಲ್ಲಿ ಬೆಳೆದು ಯೋಗ್ಯ ರೀತಿಯಲ್ಲಿ ಮುಂದುವರಿಯುತ್ತಿರುವ ಈ ಕಾಲೇಜಿನಲ್ಲಿ ಸರಕಾರಿ ಹಸ್ತಕ್ಷೇಪ ಅನಪೇಕ್ಷಣೀಯ ಎಂದು ಘೋಷಿಸಿದರು. ಈ ಘೋಷಣೆ ಅರಣ್ಯರೋದನವಾಗದಿರಲಿ.

ರಾಜೇಂದ್ರ ಪ್ರಸಾದ

ರಾಜೇಂದ್ರ ಪ್ರಸಾದರು ಭಾರತದ ರಾಷ್ಟ್ರಪತಿಗಳೆಂದು ಮಾತ್ರ ಗೌರವಪಡೆಯುತ್ತಿಲ್ಲ; ಅವರು ಉತ್ತಮ ಮಟ್ಟದ ಕಾರ್ಯಕುಶಲರೂ, ದೇಶಭಕ್ತರೂ, ಧೈರ್ಯವಂತ ಭಕ್ತರೂ ಆಗಿದ್ದಾರೆ. ಜನತೆ ಮತ್ತು ಅವರಿಗಿರುವ ಸಂಬಂಧ ಅತಿಸಿಕಟವಾದುದು. ಎಂತಲೇ ಅವರು 'ದೇಶ ರತ್ನವೆಂಬ ಹೆಸರನ್ನು ಪಡೆದಿದ್ದಾರೆ. ಮುಂದಿನ ಚುನಾವಣಾ ನಂತರ ಇವರು ಅಧಿಕಾರ ತ್ಯಾಗ ಮಾಡುವುದು ಸರಿಯಲ್ಲವೆನ್ನುವವರು ಕೆಲವರಿದರೂ ಸದ್ಯ ಅವರು ರೋಗಸೀಡೆಯಿಂದ ಬಿಡುಗಡೆಯಾಗಲಿಯೆಂದು ಭಾಕೋಟಿ ಭಾರತೀಯರು ಮಾತ್ರವಲ್ಲ ಇಡಿಯ ಜಗತ್ತು ಪ್ರಾರ್ಥಿಸುತ್ತದೆ. ಬಾಬು ರಾಜೇಂದ್ರ ಪ್ರಸಾದರು ವಿಶ್ವದ ಆದರಕ್ಕೆ ಪಾತ್ರರಾಗಿದ್ದಾರೆ. ಅವರಂತಹ ಕೆಲವೊಂದು ವ್ಯಕ್ತಿಗಳು ಉನ್ನತ ಪದವಿಗಳಲ್ಲಿ ರಾರಾಜಿಸುತ್ತಿರುವುದರಿಂದಲೇ ಭಾರತದ ಕೀರ್ತಿ ಪತಾಕೆ ವಿಂದ್ಯಹಿಮಗಿರಿಗಳುನ್ನತಿಯನ್ನು ಮೀರಿ ಹಾರತೊಡಗಿದೆ.

ಸುಲಭ ದರದಲ್ಲಿ ಶಾಲೆಗಳಿಗೆ ಬೇಕಾಗುವ

ಯಾವತ್ತೂ ಫಾರ್ಮುಗಳೂ ಹಾಜರಿ ರಿಜಿಸ್ಟ್ರಗಳೂ ಸಿಗುತ್ತವೆ

ನವಯುಗ ಪ್ರೆಸ್ ಉಡುಪಿ.

ಅಲ್ಲಲ್ಲಿಯ ಸುದ್ದಿಸಾರ

ಕೆಥೋಲಿಕ್ ಯೂನಿಯನಿನ ಚುನಾವಣೆ—

ಉಡುಪಿಯ ಕಾಲೇಜುಗಳ ಕೆಥೋಲಿಕ್ ವಿದ್ಯಾರ್ಥಿಗಳ ಸಂಘದ ವಾರ್ಷಿಕ ಚುನಾವಣೆಯು ತಾ. 14ರಲ್ಲು "ಜೋಸ್ ಜೋಸ್ಫ್" ಕ್ಲಬ್ಬಿನಲ್ಲಿ ಶ್ರೀ ಶಿರ್ವಾಡಿ ವಿಲಿಯಂ ಪಿಂಟೋರವರ ಅಧ್ಯಕ್ಷತೆಯಲ್ಲಿ ಜರಗಿತು.

ರೆ. ಫಾ. ಸಿಲ್ವೆಸ್ಟರ್ ಡಿ'ಸೋಜರ ಹಿತ ಸೂಚನೆಗಳ ತರುವಾಯ, ಶ್ರೀ ಮೇರಿಯಾನ್ ರೊಡ್ರಿಗಸ್ ಅಧ್ಯಕ್ಷ, ಮಿಸ್ ನೋಲಿನ್ ಡಿ. ಸೋಜ ಉಪಾಧ್ಯಕ್ಷೆ, ಗ್ರೆಗೋರಿ ಅಂದ್ರಾದೆ ಮತ್ತು ಡಿ'ಕೋಸ್ತಾ ಕಾರ್ಯದರ್ಶಿಗಳು; ವಿನ್ಸೆಂಟ್ ಪಾಲ್ ಪಿಜ್ಜಾಂಜಿಗಳಾಗಿ ಚುನಾಯಿತರಾದರು.

ಕಸಿ ಗಿಡಗಳು—ಮಂಗಳೂರು ಪಡೀಲಿನಲ್ಲಿರುವ ಸರಕಾರಿ ಕೃಷಿ ಇಲಾಖೆಯ ಮೂಡಂ ತೋಟಗಾರಿಕೆ ಮತ್ತು ಸಂಗೋಪನಾಲಯದಲ್ಲಿ ಮೂರಾಬೆಳ್ಳೆ ಸಿಗುವ ವಿವಿಧ ರೀತಿಯ ಹಣ್ಣುಹಂಪಲು ಮತ್ತು ಹೂಗಳ ಕಸಿ ಗಿಡಗಳನ್ನು ರೈತರು ಕೃಷಿ ವಿಸ್ತರಣಾಧಿಕಾರಿಗಳ ಮುಖಾಂತರವಾಗಲೀ ಸಂಗೋಪನಾಲಯವನ್ನು ಸಂದರ್ಶಿಸಿ ಅಲ್ಲಿಂದಾಗಲಿ ಪಡೆದುಕೊಳ್ಳಬಹುದೆಂದು ದ. ಕ. ಜಿಲ್ಲಾ ವ್ಯವಸಾಯ ಸಂಘದ ಅಧ್ಯಕ್ಷರು ತಿಳಿಸುತ್ತಾರೆ.

ಕರ್ನಾಟಕ ಸಂಘ, ಬ್ರಹ್ಮಾವರ—ಈ ಸಂಘವು ಇದೇ ವರ್ಷದ ನಾಡ ಹಬ್ಬದ ಹೊತ್ತಿಗೆ ಸರಿಯಾಗಿ "ನೆನ್ನ ಅಜಪುರ" (ಬ್ರಹ್ಮಾವರ) ಎಂಬ ಗ್ರಂಥವನ್ನು ಪ್ರಕಟಿಸಬೇಕೆಂದು ನಿರ್ಧರಿಸಿದೆ. ಸ್ಥಾಲವಾಗಿ ಈ ವಿಷಯಕ್ಕೆ ಸಂಬಂಧಿಸಿದಂತೆ ಅಂದರೆ ಅಜಪುರದ ಪುರಾಣ, ಇತಿಹಾಸ, ಇಲ್ಲಿನ ಅಭಿವೃದ್ಧಿ ಕಾರ್ಯ, ವಿದ್ಯಾ ಯೋಜನೆ, ಸಂಸ್ಕೃತಿ, ಸ್ಥಳ ಪರಿಚಯ, ನಿಸರ್ಗ ಸೌಂದರ್ಯ, ಪ್ರಖ್ಯಾತ ಪುರುಷರು, ವಾಣಿಜ್ಯ ವ್ಯಾಪಾರ, ಇತ್ಯಾದಿ ವಿಷಯಗಳ ಕುರಿತು ಸುರಿತ ಬರಸಗಾರರಿಂದ ಲೇಖನಗಳನ್ನು ತರಿಸಿಕೊಳ್ಳಬೇಕೆಂದೂ ನಿರ್ಧರಿಸಿದ್ದೇವೆ.

ಈ ಗ್ರಂಥವನ್ನು ನಮ್ಮ ಹಿರಿಯ ಸಾಹಿತಿಗಳಾದ ಶ್ರೀ ಮಂ. ಗೋವಿಂದ ಪೈಗಳಿಗೆ—ಅವರ ಒಪ್ಪಿಗೆ ಪಡೆದು—ಅರ್ಪಿಸಬೇಕೆಂದೂ ನಿರ್ಧರಿಸಿದ್ದೇವೆ ಎಂದು ಕಾರ್ಯದರ್ಶಿ ಶ್ರೀ ಬೈಕಾಡಿ ವೆಂಕಟಕೃಷ್ಣ ರಾಯರು ತಿಳಿಸುತ್ತಾರೆ.

ವಿದ್ಯಾರ್ಥಿ ನಾಯಕರ ಚುನಾವಣೆ—ತಾ. 19-7-1961ರಂದು ಉಡುಪಿ ಬೋರ್ಡ್ ಹೈಸ್ಕೂಲಿನಲ್ಲಿ ಜರಗಿದ ನಾಯಕ ಮತ್ತು ಉಪನಾಯಕ ಚುನಾವಣೆಯಲ್ಲಿ ಶಿವಾನಂದ ಶೆಟ್ಟಿ ಮತ್ತು ಎಮ್. ಸುಭಾಸ್‌ಚಂದ್ರ ಶೆಟ್ಟರು ಅನುಕ್ರಮವಾಗಿ ನಾಯಕ ಮತ್ತು ಉಪನಾಯಕರಾಗಿ ಬಹುಮತದಿಂದ ಆರಿಸಲ್ಪಟ್ಟಿದ್ದಾರೆ.

ನಿಧನ—ಬೆಳ್ಳಾಲ ಗ್ರಾಮದ ಮೂಡು ಮುಂಡಾ ಪಟೇಲ್ ಶ್ರೀ ಮಾಲಿಂಗ ಸೆಟ್ಟಿ ತನ್ನ 85ನೇ ವಯಸ್ಸಿನಲ್ಲಿ ತಾ. 14-7-61 ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರು ಅನರ್ಹ ಕೃಷಿಕರಾಗಿದ್ದು ಅಸುಪಾಸಿನ ಗ್ರಾಮಸ್ಥರಿಗೆ ಮೇಲ್ಪಂಕ್ತಿಯಾಗಿದ್ದರು. ಅವರು ಸರೋಪಕಾರಿಗಳೂ ದಾನಶೀಲರೂ ಆಗಿದ್ದರು.

ಸ್ಥಾನೀಯ ಸಮಿತಿಯ ಚುನಾವಣೆ—ಉಡುಪಿ ಮಂಡಲ ಜನಸಂಘದ ಕದಿಯೂಳಿ ಸ್ಥಾನೀಯ ಸದಸ್ಯರ ಸಭೆಯು ತಾ. 19ರಂದು ಸೇರಿ ಮುಂದಿನ ವರ್ಷದ ಪದಾಧಿಕಾರಿಗಳ ಚುನಾವಣೆಯನ್ನು ನಡೆಸಲಾಗಿ ಶ್ರೀಗಳಾದ ದೇವದಾಸ ಪೈ (ಅಧ್ಯಕ್ಷ), ಶ್ರೀ ಹರಿದಾಸ ಭಟ್ (ಕಾರ್ಯದರ್ಶಿ) ರಾಮಕೃಷ್ಣ ಶಾಮತ್, ರಾಮಚಂದ್ರ ಉಪಾಧ್ಯ, ಬಿ. ಎಸ್. ಪ್ರಭು ಸುಂದರ ಮತ್ತು ಎಸ್. ರಾಮದಾಸ ಪೈರವರು ಸಮಿತಿಯ ಸದಸ್ಯರಾಗಿ ಆರಿಸಲ್ಪಟ್ಟರು. ಜನಸಂಘದ ಮಂಡಲ ಕಾರ್ಯದರ್ಶಿಗಳಾದ ಶ್ರೀ ಅನಂತಕೃಷ್ಣ ಶರ್ಮರವರು ಗತವರ್ಷದಲ್ಲಿ ಜನಸಂಘವು ಸಾಧಿಸಿದ ಪ್ರಗತಿಯನ್ನು ತಿಳಿಸಿ, ಮುಂದೆ ನಡೆಸಬೇಕಾದ ಕಾರ್ಯಕ್ರಮಗಳ ಕುರಿತು ಮಾರ್ಗದರ್ಶನ ಮಾಡಿದರು. ನೂತನ ಚುನಾಯಿತ ಅಧ್ಯಕ್ಷ ಶ್ರೀ ದೇವದಾಸ ಪೈರವರು ಮಾತನಾಡುತ್ತಾ ಸ್ಥಾನೀಯ ಸಮಿತಿಗಳೇ ಜನಸಂಘದ ಆಧಾರಸ್ತಂಭವೆಂದೂ ಸದಸ್ಯರೆಲ್ಲರೂ ಕೂಡಿ ಕೆಲಸವನ್ನು ಇನ್ನೂ ಹೆಚ್ಚಾಗಿ ಸಾಗಿಸುವಲ್ಲಿ ಸಹಕರಿಸಬೇಕೆಂದು ವಿನಂತಿಸಿದರು. ದೇಶದಲ್ಲಿ ಅನೇಕ ಸ್ಥಳಗಳಲ್ಲಿ ನೆರೆ ಪೀಡಿತರಾಗಿ ಮೃತ್ಯುವಿಗೊಳಗಾದವರ ಆತ್ಮಕ್ಕೆ ಶಾಂತಿ ಕೋರಿ ದ್ರುವಿ ಸೂಚನಾರ್ಥವಾಗಿ ಮೌನ ಪ್ರಾರ್ಥನೆ ಮಾಡಲಾಯಿತು.

ಮಿತ್ತಬಾಗಿಲು ಪಂಚಾಯತ್—ಕದಿರುದ್ಯಾವರ ಪಂಚಾಯತ್ ಶಾಲೆಯಲ್ಲಿ ತಾ. 22—7—61ರಂದು ಕೊಡಿಯೇಲು ಬೈಲು ಪ್ರಾಥಮಿಕ ಬೇಸಿಕ್ ಶಾಲೆಯೂ ಕೂಡಿ ಜರಗಿದ ಸಾರ್ವಜನಿಕ ಸಭೆಯು ಪಂಚಾಯತ್ ಚೇರ್‌ಮೇನ್ ಶ್ರೀ ವೆಂಕಟ್ ಸುಬ್ಬರಾವ್, ಪಟೇಲರವರ ದಿಗ್ದರ್ಶನದಿಂದ ಶ್ರೀ ಕೆ. ಎಸ್ ಭಟ್, ವಿದ್ವಾನ್, ಶಿರಾಡಿ ಪಾಲರವರ ಅಧ್ಯಕ್ಷತೆಯಲ್ಲಿ ನೆರವೇರಿ—ಎರಡು ಶಾಲೆಗಳಿಗೂ ಎರಡು ಬೆಟರ್‌ಮೆಂಟ್ ಕಮಿಟಿಗಳ ನೇಮಕವಾಗಿ ಅಂಗೀಕರಿಸಲಾಯಿತು. ಕಡ್ಡಾಯ ಶಿಕ್ಷಣದ ಮಹತ್ವ—ಕಾನೂನು—ಜನತೆಯ ಕರ್ತವ್ಯದ ಕುರಿತು ಭಾಷಣಗಳು—ವಿಚಾರ ವಿನಿಮಯ—ವಂದನಾರ್ಪಣಗಳೊಂದಿಗೆ ಸಭೆಯು ಯಶಸ್ವಿಯಾಗಿ ಜರಗಿತು.

ಮೆನನರಿಗೆ ಬೆಂಬಲ—ಮುಂಬಾಯಿ ಪ್ರದೇಶ ಹೋಟೆಲು ಮತ್ತು ರೆಸ್ಟೋರೆಂಟ್ ಮ್ಯೂಲಿಕರ ಸಂಘ, ಉಪನಗರ, ಹೋಟೆಲ್ ಮ್ಯೂಲಿಕರ ಸಂಘದ ಕಾರ್ಯದರ್ಶಿ ಮಾಧಾರಾಷ್ಟ್ರ ಹೋಟೆಲ್ ಓನರ್ಸ್ ಫೆಡರೇಶನಿನ ಮೆಂಬರ್ ಹಾಗೂ "ಯಿಫ್"ವಾರ್ಡ್ ಕೋಂಗ್ರೆಸ್ಸಿನ ಒಬ್ಬ ಕ್ರಿಯಾಶೀಲ ಕೋಂಗ್ರೆಸ್ಸ್ ಕಾರ್ಯಕರ್ತರಾದ ಶ್ರೀ ಬೈಲೂರು ಗೋಪಾಲ ಶೆಟ್ಟಿ, ಮುಂಬಯಿನ ಸಾರ್ವತ್ರಿಕ ಚುನಾವಣೆಯಲ್ಲಿ ಉತ್ತರ ಮುಂಬಾಯಿಯ ಮತದಾರ ಕ್ಷೇತ್ರದಿಂದ ಶ್ರೀ ವಿ. ಕೆ. ಕೃಷ್ಣ ಮೆನನರೇ ಆಯ್ಕೆಯಾಗಿರುವಂತೆ ಲೋಕ ಸಭೆಯ ಸ್ಥಾನಕ್ಕೆ ಸ್ಪರ್ಧಿಸುವುದಕ್ಕೆ ಉಪನಗರ ಹೋಟೆಲು ಮ್ಯೂಲಿಕರೆಲ್ಲರೂ ಸಂಪೂರ್ಣ ಬೆಂಬಲ ನೀಡುತ್ತಾರೆಂದು ಹೇಳಿಕೆಯಿತ್ತಿದ್ದಾರೆ.

ಶ್ರೀ ಮೆನನರ, ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಕ್ಷೇತ್ರದಲ್ಲಿಯ ಶ್ಲಾಘನೀಯ ಕಾರ್ಯಗಳನ್ನು ಕೊಂಗ್ರೆಸ್ಸಿಗರೇ ಅದ ಹೋಟೆಲು ಮ್ಯೂಲಿಕರೆಲ್ಲರೂ, ಮಾತ್ರವಲ್ಲದೆ ಉತ್ತರ ಬೊಂಬಾಯಿಯ ಮತದಾರರೆಲ್ಲರೂ ಅತಿಯಾಗಿ ಮೆಚ್ಚಿದ್ದಾರೆ. ನ್ಯಾಯ ಪರಿಶೀಲನೆ ಮಾಡುವಲ್ಲಿ ಸಂಕುಚಿತ ಸ್ವಾನೇಶಿಕ ಭಾವನೆಗಳು ಬಾರದಿರಲಿ, ವಿಶಾಲ ಮನೋಭಾವದ ಮೆನನರು ಭಾರತದ ಪ್ರತಿಯೊಂದು ಭಾಗಕ್ಕೂ ಸೇರಿದವರು. ಉತ್ತರ ಮುಂಬ್ಯಾಗೂ ಸೇರಿದವರು. ಭಾರತದ ಎಲ್ಲಾ ರಾಜ್ಯಗಳ ಜನರ ಕೂಡುವಿಕೆಯು ಈ ಮತದಾರ ಕ್ಷೇತ್ರದವರ ಘನ ಬರವಸೆ ಅವರಲ್ಲಿ ತೋರಿಸುವರೆಂದರೆ ಸಮಗ್ರ ಭಾರತದ ಭರವಸೆ ಅವರಲ್ಲಿದ್ದಂತೆ ಉತ್ತರ ಮುಂಬಾಯಿ ಮತದಾರರಿಗೆ ಅವಗಲ್ಲಿರುವ ಭರವಸೆ ಎಂದಿಗೂ ಕುಂದಿಸದು. ಇದನ್ನು ನಾವು ಕಳೆದ ಸಾರ್ವತ್ರಿಕ ಚುನಾವಣೆಯಲ್ಲಿ ತೋರಿಸಿದ್ದೇವೆ ಎಂಬತ್ಯಾದಿಗಳೇ ಹೇಳಿಕೆಯ ಸಾರಾಂಶವಾಗಿದೆ.

ಸತ್ಕಾರ ಕೂಟ—ಉಡುಪಿಯ ಎಮ್. ಜಿ. ಎಮ್. ಕಾಲೇಜು ಉತ್ತಮ ಪರೀಕ್ಷಾ ಫಲಿತಾಂಶ ಪಡೆದುದಕ್ಕಾಗಿ ಆಡಳಿತ ವೃಂದದವರು ಕಾಲೇಜಿನ ಸಿಬಂಧಿಯವರಿಗೆ ಇದೇ ತಾ. 11ರಂದು ಸತ್ಕಾರ ಕೂಟವೊಂದನ್ನು ಏರ್ಪಡಿಸಿದ್ದರು. ಕಾಲೇಜಿನ ಕರೆಸ್ಪೊಂಡೆಂಟ್ ಶ್ರೀ ಟಿ. ಎ. ಪೈಯವರು ಈ ಸಂದರ್ಭದಲ್ಲಿ ಮಾತನಾಡುತ್ತಾ ಪದವೀಧರರನ್ನು ಒದಗಿಸುವುದರಿಂದಲೇ ವಿದ್ಯಾಸಂಸ್ಥೆಗಳು ತೃಪ್ತಿಹೊಂದದೆ ಉತ್ತಮ ಆಡಳಿತಗಾರರು ವಿಜ್ಞಾನಿಗಳು ಉದ್ಯಮಿಗಳೇ ಮೊದಲಾದವರನ್ನು ರಾಷ್ಟ್ರಕ್ಕೆ ನೀಡುವಂತಾಗಬೇಕು. ಪ್ರತಿಭಾವಂತ ವಿದ್ಯಾರ್ಥಿಗಳನ್ನು ಆಕರ್ಷಿಸಿ ಸರ್ವ ಅನುಕೂಲತೆಗಳನ್ನು ಒದಗಿಸುವುದರಿಂದ ಮಾತ್ರ ಇದು ಸಾಧ್ಯ, ನಮ್ಮ ಕಾಲೇಜಿನ ಪ್ರಗತಿಗಾಗಿ ಸಂತೋಷ ಪಡಬಹುದಾಗಿದೆ. ಈ ವರ್ಷ ವಿದ್ಯಾರ್ಥಿಗಳ ಪ್ರವೇಶ ಸಂಖ್ಯೆಯೂ ಹೆಚ್ಚಾಗಿದೆ. ಕಳೆದ ವರ್ಷ 240 ಪ್ರವೇಶಾರ್ಥಿಗಳಿದ್ದರೆ ಈ ವರ್ಷ 314ಕ್ಕೆ ಮಿಕ್ಕಿದೆ. ಇಲ್ಲಿಯ ಸೌಲಭ್ಯಗಳು ವಿದ್ಯಾರ್ಥಿಗಳನ್ನು ಆಕರ್ಷಿಸುತ್ತಿದೆ ಎಂಬುದು ಆನಂದಕರ ಎಂದು ನುಂತಾಗಿ ಹೇಳಿದರು. ಈ ಕಾಲೇಜು ಅಖಿಲ ಭಾರತ ಖ್ಯಾತಿ ಪಡೆಯುವಂತಾಗಲಿ ಎಂದೂ ಹಾರೈಸಿದರು. ಶ್ರೀ ಎ. ಎಲ್. ಎನ್. ರಾಯರು ಭಾಷಣ ಮಾಡಿದ ಬಳಿಕ ಪ್ರಾಂಶು. ಶಿ. ಹರಿದಾಸ ಭಟ್ಟರು ಪ್ರಾಧ್ಯಾಪಕರ ಪರವಾಗಿ ಮಾತನಾಡಿ ಕಾಲೇಜಿನ ಉತ್ತಮ ಮುಟ್ಟ ಕಾಯ್ದು ಕೊಳ್ಳಲು ಪ್ರಯತ್ನಪಡುವ ಭರವಸೆ ಇತ್ತರು. ಪ್ರಿನ್ಸಿಪಾಲ್ ಶ್ರೀ ಎಚ್. ಸುಂದರ ರಾಯರು ಅಡಳಿತ ಮಂಡಳಿಯನ್ನು ಅಭಿನಂದಿಸಿ ಮಾತನಾಡಿದರು.

ಎಡಿಶನಲ್ ಮುನ್ಸಿಫ್ ಮತ್ತು ಮೆಜಿಸ್ಟ್ರೇಟ್ ಕೋರ್ಟ್—ಇದೇ ತಾ 17ರಿಂದ ಮೈಸೂರು ರಾಜ್ಯದಲ್ಲಿ II ನೇ ಕ್ಲಾಸಿನ ಸಬ್ ಮೆಜಿಸ್ಟ್ರೇಟ್ ಕೋರ್ಟುಗಳು ಸಜ್ಜಾ ಮಾಡಲ್ಪಟ್ಟಿವೆ. ದ. ಕ. ಜಿಲ್ಲೆಯಲ್ಲಿರುವ ಎಲ್ಲಾ II ಕ್ಲಾಸ್ ಮೆಜಿಸ್ಟ್ರೇಟರಿಗೆ I ಕ್ಲಾಸ್ ಮೆಜಿಸ್ಟ್ರೇಟರ ಅಧಿಕಾರವೂ, ಎಲ್ಲಾ ಡಿಸ್ಟ್ರಿಕ್ಟ್ ಮುನ್ಸೀಫರಿಗೆ I ಕ್ಲಾಸ್ ಮೆಜಿಸ್ಟ್ರೇಟರ ಅಧಿಕಾರವೂ ದೊರೆತಿದೆ. ಅದರಂತೆ ಉಡುಪಿ ಸಬ್ ಮೆಜಿಸ್ಟ್ರೇಟರ ಕೋರ್ಟು ಎಡಿಶನಲ್ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಾಗಿ ಉತ್ತೀರ್ಣಗೊಂಡಿದೆ. ಇಲ್ಲಿಯ ಜ್ಯೂಡಿಶಿಯಲ್ ಸಬ್ ಮೆಜಿಸ್ಟ್ರೇಟರಾದ ಶ್ರೀ ಬಿ. ವಿಶ್ವನಾಥ ರೈಗಳು ಎಡಿಶನಲ್ ಡಿಸ್ಟ್ರಿಕ್ಟ್ ಮುನ್ಸೀಫ್ ಮತ್ತು ಮೆಜಿಸ್ಟ್ರೇಟರಾಗಿ ಬಡ್ತಿ ಹೊಂದಿದ್ದಾರೆ. ಈ ಕೋರ್ಟಿನ ಅಧಿಕಾರ ಕ್ಷೇತ್ರವು ಮೂಲ್ಕಿ, ಉಡುಪಿ ಪಟ್ಟಣ, ಉಡುಪಿ ರೂರಲ್, ಶಿರ್ವಾ, ಕಾಪು ಹಿರಿಯಡ್ಕ, ಪೆರ್ಡೂರು ಎಂದು ತಿಳಿದು ಬರುತ್ತದೆ.

ಸಭೆ—ಬೊಂಬಾಯಿಯ ವಾರ್ಡ್ ಟವರ್ ಬೈಬ್ಲ್ ಮತ್ತು ಟ್ರೇಕ್ಟ್ ಸೊಸೈಟಿಯು ಉಡುಪಿಯ ಬನ್ನಂಜೆಯಲ್ಲಿರುವ ಶ್ರೀ. ಬ್ರಹ್ಮ ಗುರುನಾರಾಣ ಭಜನಾಮಂದಿರದಲ್ಲಿ ಅಗೋಸ್ತು ತಾ. 4ರಿಂದ 6ರವರೆಗೆ 3ದಿನಗಳ ಸಭೆಯೊಂದನ್ನು ಏರ್ಪಡಿಸಲಿದೆ ಎಂದೂ ಇದಕ್ಕೆ ಬೇರೆ ಬೇರೆ ಕಡೆಗಳಿಂದ ಪ್ರತಿನಿಧಿಗಳು ಬರಲಿರುವರೆಂದೂ, ಕೊನೆಯ ದಿನ ಸಂಜೆ ಅಸ್ಟ್ರೇಲಿಯದ ಶ್ರೀ. ಟಿ. ಎಚ್. ಸಂಡರ್ಸನ್ ರವರ ಭಾಷಣವಿರುವುದೆಂದೂ ಸಂಬಂಧಪಟ್ಟವರು ತಿಳಿಸುತ್ತಾರೆ.

ಶಾಲಾ ಮೆನೇಜರರ ಮಹಾಸಭೆ—ಮೊದಲು ಪ್ರಕಟವಾದಂತೆ ದ. ಕ. ಜಿಲ್ಲಾ ಖಾಸಗಿ ಪ್ರಾಥಮಿಕ ಶಾಲಾ ಮೆನೇಜರರ ಸಂಘದ ವಿಶೇಷ ಮಹಾ ಸಭೆಯು ಇದೇ ತಾ. 23ರಂದು ಉಡುಪಿಯಲ್ಲಿ ಮುನ್ಸಿಪಲ್ ಮಹಾತ್ಮ ಗಾಂಧಿ ಹಾ. ಎ. ಶಾಲೆಯಲ್ಲಿ ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ನೆರವೇರಿತು. ಶ್ರೀ ಕುರು ಕಾಲು ಗಣಪಯ್ಯ ಸೆಟ್ಟರು ಸ್ವಾಗತ ಭಾಷಣ ಮಾಡುತ್ತಾ ತಾ 9—7—61 ರಲ್ಲು ಉಡುಪಿ ತಾಲೂಕು ಸಭೆಯು ಸೇರಿ ಮೂಡಲಾದ ನಿರ್ಣಯಕ್ಕನುಗುಣವಾಗಿ ತೀರ್ಮಾನಕ್ಕೆ ಬರಲು ಈ ಜಿಲ್ಲಾ ಮಟ್ಟದ ಸಭೆಯನ್ನು ಕರೆದುದಾಗಿ ಹೇಳಿದುದಲ್ಲದೆ ಜಿಲ್ಲಾ ಸಭೆಯನ್ನು ಉಡುಪಿಯಲ್ಲಿ ಕರೆದುದನ್ನು ಸಮರ್ಥಿಸುತ್ತಾ ಜಿಲ್ಲೆಯ 480 ಖಾಸಗಿ ಶಾಲೆಗಳ ಪೈಕಿ 161 ಶಾಲೆಗಳು ಈ ತಾಲೂಕಿನಲ್ಲಿವೆ ಎಂದರು.

ಶ್ರೀ ಪೈಗಳು ಭಾಷಣ ಮಾಡುತ್ತಾ ಈಗಿನ ಪ್ರಾಸ್ ವಿದ್ಯಾನಿಯಮಗಳಿಗೆ ಮೈಸೂರು ಸರಕಾರ ತಂದೊಡ್ಡಿದ ಬದಲಾವಣೆಗಳಿಂದ ಒದಗಿದ ಸಮಸ್ಯೆಯು ಶಾಲಾ ಮೆನೇಜರರಿಗೆ ಮಾತ್ರವಲ್ಲ ಜಿಲ್ಲೆಯ ವಿದ್ಯಾಭ್ಯಾಸದ ಭವಿಷ್ಯದ ಪ್ರಶ್ನೆಯಾಗಿದೆ ಎಂದರು. ನ್ಯಾಯವಾದ ರೀತಿಯಲ್ಲಿ ಶಾಲೆಗಳ ರಾಷ್ಟ್ರೀಕರಣವಾಗುವುದಾದ್ರೆ ಯಾರೂ ಅಡ್ಡಿಮಾಡಲಿಕ್ಕಿಲ್ಲವೆಂದೂ ಒಸ್ತಾಯದ ರಾಷ್ಟ್ರೀಕರಣಕ್ಕೆ ಮೆನೇಜುಮೆಂಟು ತಲೆ ಬಾಗಿಸದಂತಲೂ ಅಭಿಪ್ರಾಯಪಟ್ಟರು. ವಿದ್ಯೆಯ ಜವಾಬುದಾರಿಯನ್ನು ಮ್ಯೂನಿಜುಮೆಂಟು ಹೊತ್ತಿರುವುದು ಸರಕಾರಕ್ಕೆ ಸಮ್ಮತವಿಲ್ಲವೆಂ ಎಂಬಂತೆ ತೋರುತ್ತದೆ. ಈ ಸಂದರ್ಭದಲ್ಲಿ ವಿದ್ಯಾಭ್ಯಾಸದ ಹೊಣೆಯನ್ನು ಸರಕಾರ ವಹಿಸಿಕೊಳ್ಳದಿರುವುದು ವ್ಯಸನಕರವೆಂದರು. ಮೈಂಟೆನೆನ್ಸ್ ಗ್ರಾಂಟಿನ ಅಂಕೆಸಂಖ್ಯೆಗಳನ್ನು ಕೊಡುತ್ತಾ ಈಗ ದ. ಕ. ಜಿಲ್ಲೆಗಳ ಶಾಲೆಗಳಿಗೆ ಸರಕಾರ 4 ಲಕ್ಷದಷ್ಟು ಗ್ರಾಂಟು ಕೊಡುತ್ತಾ ಇದೆ. ರಾಷ್ಟ್ರೀಕರಣವಾದರೆ 10 ಲಕ್ಷ ಖರ್ಚು ಮಾಡಬೇಕಾದೀತು. ಈಗ ಕೊಡುತ್ತಿರುವ ಗ್ರಾಂಟುಗಳ ರೀತಿಯೇ ಸಮರ್ಪಕವಲ್ಲವೆಂದು ಹೇಳುತ್ತ ನಿರ್ಣಯಗಳನ್ನು ಸಮರ್ಥಿಸಿದರಲ್ಲದೆ ಜಿಲ್ಲಾ ಕೊಂಗ್ರೆಸಿನ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿದರು

ನಿರ್ಣಯಗಳ ಮೇಲೆ ಮಾತನಾಡುತ್ತಾ ರೆವರೆಂಡ್ ವಿ. ಕುಲಾಸೊರವರು ಕೇರಳ ಕಮ್ಯುನಿಸ್ಟ್ ಸರಕಾರ ವಿದ್ಯಾ ಸಂಸ್ಥೆಗಳಿಗೆ ಮಾಡಿದ ಅನ್ಯಾಯದಂತೆಯೇ ಮೈಸೂರಿನಲ್ಲಿರುವ ಕೊಂಗ್ರೆಸ್ ಸರಕಾರ ಈ ರೀತಿ ಮಾಡಿದುದು ವಿಷಾದಕರವೆನ್ನುತ್ತ ಪಿಡ್ಡಾಯ ಶಿಕ್ಷಣ ಜಾರಿಯಾಗುವ ದಿನವಾದ 1-8-1961ರಿಂದ ಎಲ್ಲಾ ಶಾಲೆಗಳನ್ನು ಮುಚ್ಚಬೇಕೆಂದೂ ಈ ವಿಷಯವನ್ನು ತಂತಿ ಮುಖಾಂತರ ಸರಕಾರಕ್ಕೆ ತಿಳಿಸಬೇಕಾಗಿ ಒತ್ತಾಯಿಸಿದರು.

ಹೆಚ್ಚು ಮಟ್ಟದ ಚರ್ಚೆ ಇಲ್ಲದೆ ಈ ಕೆಳಗಿನ ನಿರ್ಣಯಗಳು ಮಂಜುರಾದವು.

1) 1:40 ರೇಶಿಯನ್ನು ಇದೀಗ ರಾಜ್ಯಕ್ಕೆ ಅನ್ವಯಿಸುವಂತೆ ಮಾಡುವದಾದರೆ ವಿರೋಧವಿಲ್ಲ.

2) 22—5—61ರಲ್ಲಿ 1 ವರ್ಷಕ್ಕಿಂತ ಕಡಿಮೆ ಸರ್ವಿಸಾದ ಅಧ್ಯಾಪಕರನ್ನು ಕೆಲಸದಿಂದ ತೆಗೆಯಬಾರದು.

3) ತಿಂಗಳ 5ನೇ ತಾರೀಕಿನೊಳಗೆ ಅಧ್ಯಾಪಕರಿಗೆ ಸಂಬಳ ಕೊಡಬೇಕೆನ್ನುವ ನಿಯಮಕ್ಕಾಗಿ 1 ತಿಂಗಳ ಗ್ರೇಂಟಿನ್ನು ಮುಂಗಡವಾಗಿ ಸರಕಾರಕೊಡಬೇಕು.

4) ಮೈಂಟೆನೆನ್ಸ್ ಗ್ರೇಂಟಿನ್ನು ಕಳೆದ 5 ವರ್ಷಗಳ ಸರಾಸರಿಯಂತೆ ಕೊಡಲೇಬೇಕು. ಅಥವಾ ಸ್ವಂತ ಕಟ್ಟಡಗಳಿಗೆ ಜಾಡಿಗೆ ಸಲಕಣಗೆಗಳಿಗೆ ಪರಿಹಾರ ಮತ್ತು ಮೇಲ್ವಾಜಬದಾರಿ ವೇತನವನ್ನು ಕೊಡಬೇಕು. ಅಥವಾ ಪರಿಹಾರ ಕೊಟ್ಟು ಸರಕಾರವೇ ಶಾಲೆಗಳನ್ನು ನಡೆಸಬೇಕು.

ಕೊಡಲೇ ಮೇಲಿನ ಕಾರ್ಯಗಳನ್ನು ಕಾರ್ಯಗತ ಮಾಡುವರೆ ಒಂದು ಶಿಷ್ಟಮಂಡಳಿಯನ್ನು ಕಳುಹಿಸಬೇಕೆಂದೂ, ಇಚ್ಛಿಸಿದೆ ಪರಿಹಾರ ಸಿಗದಿದ್ದಲ್ಲಿ ಅಗೋಸ್ತು 15ರೊಳಗೆ ಶಾಲೆಯನ್ನು ಮುಚ್ಚುವರೆ 3ತಿಂಗಳ ನೋಟೀಸನ್ನು ಸರಕಾರಕ್ಕೆ ಕೊಡಬೇಕೆಂದೂ ನಿಶ್ಚಯಿಸಲಾಯ್ತು. ಶ್ರೀ ಸುಬ್ಬಣ್ಣ ಹೆಗಡೆಯವರು ಧನ್ಯವಾದಗಳನ್ನರ್ಪಿಸಿದರು.

FRESH SCHOLARSHIP LOANS GRANTED

During 1961, the Canara Bank has granted Loan Scholarships to 50 Scholars prosecuting studies in Medicine, Engineering and Technology, thus bringing the total number of scholars getting such loan scholarships to 189. The total amount sanctioned so far is Rs. 2,10,650. These scholars, selected by the Canara Bank Jubilee Education Fund, are drawn from different parts of India.

CANARA BANK LIMITED

(Estd: 1906)

— In the service of the people —

ಅನುಭವ

ತಪ್ಪಿಗೆ ಪ್ರಾಯಶ್ಚಿತ್ತ

ಆ ದಿನಗಳಲ್ಲಿ ನಾನು ಕಾಲೇಜಿನಲ್ಲಿ ಕಲಿಯುತಿದ್ದೆ. ನಮ್ಮ ವೈಸ್ ಪ್ರಿನ್ಸಿಪಲರು ಬಹಳ ಉದಾರಚೇತರೂ ಸರಳ ವ್ಯಕ್ತಿಗಳೂ ಆಗಿದ್ದರು. ವರ್ಷದ ಅಂತ್ಯದ ದಿನಗಳಲ್ಲಿ ನಾನು ಫೀಸು ತುಂಬಿಸಬೇಕಾಗಿತ್ತು. ಹತ್ತು ರೂಪಾಯಿಗಳ ದಂಡವನ್ನೂ ತೆರಬೇಕಿತ್ತು. ಪ್ರಿನ್ಸಿಪಲ್ ಸಾಹೇಬರನ್ನು ಕಾಣುತ್ತಲೇ ಗಡಗಡ ನಡುಗುತಿದ್ದುದರಿಂದ ಅವರು ರಜೆ ಪಡೆಯುವ ದಿನವನ್ನೇ ಎದುರು ನೋಡುತಿದ್ದೆ.

ಆ ದಿನವೂ ಉದಯವಾಗಲು ಬಹು ಸಮಯ ಕಳೆಯಲಿಲ್ಲ. ಅವರು ರಜೆಯ ಮೇಲೆ ಹೋದರು. ನಾನು ದಂಡದ ಹಣವನ್ನು ಮಾಫಿಮಾಡುವಂತೆ ವೈಸ್ ಪ್ರಿನ್ಸಿಪಲರ ಬಳಿಗೆ ಹೋದೆ. ಪ್ರಾರ್ಥನಾ ಪತ್ರದಲ್ಲಿ ಹತ್ತು ರೂಪಾಯಿಗಳ ಬದಲು ಏಳು ರೂಪಾಯಿಗಳಷ್ಟು ದಂಡ ತೆರಬೇಕಾಗಿದೆಯೆಂದೂ ಅದನ್ನು ಮಾಫೀ ಮಾಡಬೇಕೆಂದು ಕೇಳಿಕೊಂಡೆ. ಅವರು ಕೇವಲ ಎರಡು ರೂಪಾಯಿಗಳ ದಂಡ ತುಂಬಿಸುವಂತೆ ಆಜ್ಞೆಯಿತ್ತರು. ಕಾಲೇಜಿನಿಂದ ಹಿಂತಿರುಗಿದಾಗ, ಸಹಪಾಠಿಗಳಿಗೆ ಈ ವಿಚಾರವನ್ನು ತಿಳಿಸಿದೆ. ಅವರೆಲ್ಲರೂ ಆಶ್ಚರ್ಯಪಟ್ಟೇಕೆ ಏಕೆಂದು ಬರೆದೆ? ಎಂದು ಪ್ರಶ್ನಿಸಿದರು. ನಗುನಗುತ್ತ, ನನ್ನ ಅರ್ಜಿಯಲ್ಲಿದ್ದ ವಿಷಯನ್ನು ಹತ್ತನ್ನಾಗಿ ತಿದ್ದಿ ಬರೆದರು. ಬ್ಲೇಡು, ಶಬ್ಬರುಗಳಿಂದ ತಿಕ್ಕಿ ಬರಸಿ ಎಷ್ಟು ಸಮಮಾಡಿದರೂ ತಿದ್ದು ಅಳಿಯಲಿಲ್ಲ. ಆ ಪತ್ರವನ್ನು ಹಿಡಿದುಕೊಂಡು ನಾನು ನೇರವಾಗಿ ಕ್ಲರ್ಕರಲ್ಲಿಗೆ ಹೋದೆ. ಹಣ ತುಂಬಿಸಲು. ಅವರು ಪತ್ರವನ್ನು ನೋಡುತ್ತಲೇ ವಿವರ್ಣರಾದರು. ನನ್ನೊಡನೆ ಹೇಳಿದರು—"ನನಗೇನೋ ಸಂದೇಹ. ನೀನು ಹೋಗಿ ಇನ್ನೊಂದು ಕಾಗದದಲ್ಲಿ ಎಷ್ಟು ರೂ. ಗಳಲ್ಲಿ ಎಷ್ಟನ್ನು ಮಾಫಿ ಮಾಡಿದ್ದಾರೆಂದುಬರೆಸಿ ತಾ" ಎಂದರು.

ಈಗ ನನ್ನ ಪರಿಸ್ಥಿತಿ ಹೇಗಾಗಿರ ಬಹುದೆಂದು ಹೇಳುವುದಕ್ಕಿಂತ ಊಹಿಸುವುದೇ ಮೇಲು. ಅವೆರಿ, ಬೇರೆ ಉಪಾಯಂತರವಾದರೂ ಯಾವುದಿತ್ತು? ನನ್ನ ಎದೆಯಲ್ಲಿ ಹದಿನಾಲ್ಕು ಒನಕೆಗಳ ಬಡೆದಾಟಕ್ಕೆ ಆರಂಭವಾಯಿತು. ನನ್ನ ಕಷ್ಟವನ್ನು ನಾನು ಒಬ್ಬ ಮಿತ್ರನಿಗೆ ತಿಳಿಸಿದೆನು. ವೈಸ್ ಪ್ರಿನ್ಸಿಪಲರ ಮುಖ ಕಾಣುವಷ್ಟು ಧೈರ್ಯನನ್ನಲ್ಲಿಲ್ಲವೆಂದು ಅತ್ತು ಗೋಗರೆದುಕೊಂಡೆ. ಇದನ್ನು ಕೇಳಿದ ಆತ ತಾನೇ ಅವರಲ್ಲಿಗೆ ಹೋಗಿ ಸಂಗತಿ ತಿಳಿಸಿ ಆಜ್ಞಾಪತ್ರ ತರುವುದಾಗಿ ಹೇಳಿಹೋದ. ವೈಸ್ ಪ್ರಿನ್ಸಿಪಲ್‌ರು ಹಿಂದು ಮುಂದು ನೋಡದೆ 'ಹತ್ತು ರೂಪಾಯಿಗಳಲ್ಲಿ ಎಂಟು ರೂಪಾಯಿಗಳನ್ನು ಮಾಫಿ ಮಾಡಿದ್ದೇನೆ' ಎಂದು ಬರೆದು ಕೊಟ್ಟರು.

ವೈಸ್ ಪ್ರಿನ್ಸಿಪಲರ ಈ ಸರಳತನದಿಂದ ನನ್ನ ಮುಖಕ್ಕೇನೇ ಹೊಡೆದಂತಾಯಿತು. ನನಗೆ ಅತೀವ ದುಃಖವಾಯಿತು. ಕೆಲವು ದಿನಗಳ ವರೆಗೆ ಅವರ ಮುಖ ನೋಡುವುದೇ ನನಗೆ ಅಸಾಧ್ಯವೆನಿಸಿತು. ನಾನು ಮಾಡಿದ ತಪ್ಪಿನ ಅರಿವಾದೊಡನೆಯೇ ಎದೆ ಜುಮ್ಮೆನ್ನುತಿತ್ತು. ನಾನು ಮುಂದೆ ಈ ರೀತಿಯ ತಪ್ಪು ಮಾಡುವುದಿಲ್ಲವೆಂದು ಪ್ರತಿಜ್ಞೆ ಮಾಡಿದೆನು. ದಿನಗಳು ಕಳೆದ ನಂತರ ನಾನೇ ಈ ವಿಚಾರವನ್ನು ಅವರ ಕಿವಿದೆರೆಗೆ ಹಾಕಿದೆನು. ಆಗ ಅವರು "ಮಗೂ, ತಪ್ಪುಗಳನ್ನು ಮಾಡದಿರುವುದೇ ಮಾಡಿದ ತಪ್ಪಿಗೆ ಪ್ರಾಯಶ್ಚಿತ್ತ" ಎಂದು ಪ್ರೀತಿಯಿಂದ ಮೈದಡವಿದರು.

—ರಾ.

ಪುತ್ತೂರು ಡಿ. ಮು. ಕೋರ್ಟಿನಲ್ಲಿ

R. L. P. 162/1961 in O.S. 466/55

ಜಳ್ಳ ರಾಮಚಂದ್ರಯ —ಅರ್ಜಿದಾರ

ಸಣಂಗೋಲು ಕೃಷ್ಣ ಭಟ್ಟ —ಎದ್ರಿ

ಎದ್ರಿ—ಸಣಂಗೋಲು ಕೃಷ್ಣ ಭಟ್ಟ, ಅಚ್ಯುತ ಭಟ್ಟರ ಮಗ, ಪುತ್ತೂರು ತಾಲೂಕು ಪಡುವನ್ನೂರು ಗ್ರಾಮದಲ್ಲಿ ಪೋಸ್ಟು ಕಾವು.

ಮೇಲ್ಕಂಡ ದಿಕ್ರಿ ಅಮಲ್ಜಾರಿಯಲ್ಲಿ ನಿಂಮಿಂದ ಬಹಾ ಹಣಗಳ ವಸೂಲಿಗೆ ನಿಂಮ ಹಕ್ಕಿನ ಸ್ತಿರಾಸ್ತಿಯಂನು ಜಪ್ತಿ ಪಣ್ಣಿರುತ್ತಾರೆ ಆ ಕುರಿತು ನಿಮಗೇನಾದರೂ ಆಕ್ಷೇಪಣೆಯಿದ್ದರೆ ಸದ್ರಿ ಅರ್ಜಿಯ ತನ್ವೀಜ್ಜಾದೆಯಾದ ತಾ. 4—8—1961ಕ್ಕೆ ಮೇಲ್ಕಂಡ ಕೋರ್ಟು ಮುಂದೆ ಬೆಳಿಗ್ಗೆ ಗಂಟೆ 11ಕ್ಕೆ ಹಾಜ್ರಾಗಿ ಉದಾಹರಿಸಿಕೊಳ್ಳತಕ್ಕದ್ದೆಂತಲೂ, ತಪ್ಪಿದ್ರೆ ನಿಂಮನು ಶಿಕ್ಷಾಮಾಡಿ ಮುಂದಿರಿಸಲಾಗುವುದೆಂತಲೂ ಕೋರ್ಟು ಹುಕುಂ ಪ್ರಕಾರ ನಿಮಗೆ ಈ ಮೂಲ್ಕ ತಿಳಿಸೋಣಾಗ್ಯದೆ.

(Sd) N. Subramanyam,
Advocate for Petr.

ಮೊಕ್ಕಾಂ ಪುತ್ತೂರು, ತಾ. 17—7—61

ವಿಚಾರವೀಚಿ

(೫ನೇ ಪುಟದಿಂದ)

ಒಂದು ಈ ದೃಷ್ಟಿಯಿಂದ ಈ ಚಿಕಿತ್ಸಾಲಯಗಳು ಜೇಲುಖಾನೆಗಳಿಗಿಂತಲೂ ಹೀನಸ್ಥಿತಿಯಲ್ಲಿವೆ. ನ್ಯೂಯಾರ್ಕ್ ರಾಜ್ಯದಲ್ಲಿ ಪ್ರತಿ ಕೈದಿಯ ಬಗ್ಗೆ ೪೪ ಡಾಲರ್‌ಗಳನ್ನು ದಿನನಿತ್ಯ ವೆಚ್ಚಮಾಡುತ್ತಾರೆ. ಅದೇ ರಾಜ್ಯದ ಚಿಕಿತ್ಸಾಲಯಗಳಲ್ಲಿ ಮೆದುಳಿನ ರೋಗಿಗಳಿಗಾಗಿ ಸರಕಾರದ ಕಡೆಯಿಂದ ಪ್ರತಿದಿನ ತಲಾ ೩.೭ ಡಾಲರ್ ಮಾತ್ರ ಖರ್ಚಾಗುತ್ತಿದೆ.

ಶರೀರದಲ್ಲಿ ಉತ್ಪನ್ನವಾದ ಒಂದು ಬಗೆಯ ವಿಷದಿಂದಾಗಿ ಸೀಜೊಫ್ರೇನಿಯಾ ರೋಗವು ತಲೆದೋರುವುದೆಂದು ವಿಶೇಷಜ್ಞರು ಅಭಿಪ್ರಾಯ ಪಡುತ್ತಾರೆ. ಈ ವಿಷವು ಮೆದುಳಿನ ಕೆಲಸದಲ್ಲಿ ತಡೆಯನ್ನುಂಟು ಮಾಡಿರುತ್ತದೆ ಮಾತ್ರವಲ್ಲ, ಹೊರಗಿನಿಂದ ಅನುಭವವೆಲ್ಲವನ್ನೂ ಅದು ವಿಕಾರಗೊಳಿಸಿ ತಿಳಿಸುತ್ತದೆ.

ಇದೇ ತಳಹದಿಯಲ್ಲಿ ವಿಷವನ್ನು ರಾಸಾಯನಿಕತತ್ವಗಳ ಮೂಲಕ ನಷ್ಟಗೊಳಿಸಿ, ರೋಗಿಯನ್ನು ಸ್ವಸ್ಥಗೊಳಿಸಬಹುದು. 'ರೆಸರ್ಪಾನ್' ಮತ್ತು "ಕ್ಲೋರೋಪ್ರೊಮಾಜ್ಯಾನ್" ಮೊದಲಾದ ನೂತನ ಔಷಧಿಗಳಿಂದ ಬಹು ಉತ್ಸಾಹದಾಯಕ ಪರಿಣಾಮವು ಹೊರಪಟ್ಟಿದೆ. ಆದರೆ, ಸೀಜೊಫ್ರೇನಿಯಾಕ್ಕೆ ನೇರ ರಾಮಬಾಣದಂತಹ ಮದ್ದು ಸಂಶೋಧಿತವಾಗಿಲ್ಲ ಔಷಧದಿಂದ ಏನೂ ಲಾಭ ಕಾಣಿಸದಿದ್ದರೆ, ಈ ಕೆಳಗಿನ ಮೂರು ಬಗೆಯ ಉಪಚಾರಗಳನ್ನು ಮಾಡಲು ಡಾಕ್ಟರರು ಸಲಹೆ ನೀಡುತ್ತಾರೆ,

೧. ರೋಗಿಯ ಶರೀರದಲ್ಲಿನ ಸಕ್ಕರೆಯ ಪ್ರಮಾಣವನ್ನು ಬಹಳಷ್ಟು ಕಡಿಮೆ ಮಾಡುವುದು. ಇದರಿಂದ ಆತನ ಮೆದುಳು ಸುಸ್ತಾಗಿಬಿಡುತ್ತದೆ. ಈ ಉಪಚಾರವನ್ನು "ಇನ್ಸುಲಿನ್ ಕೋಮಾ" ಎನ್ನುತ್ತಾರೆ. "ಸೀಜೆಫ್ರೇನಿಯಾ" ಮತ್ತು 'ಮೃಗೀ'ಗಳು ಒತ್ತಟ್ಟಿಗಿರುವುದಿಲ್ಲ. ಇದ್ದರೆ, "ಮೃಗೀ"ಯ ಲಕ್ಷಣಗಳ ನಂತರವೇ "ಸೀಜೊಫ್ರೇನಿಯಾ"ದ ಲಕ್ಷಣಗಳ ಉಗ್ರತೆಯು ಕಡಿಮೆಯಾಗುತ್ತದೆ. ಇದನ್ನು ಆಧರಿಸಿಕೊಂಡೇ "ಇಲೆಕ್ಟ್ರೋ ಕನ್ವಿಲ್ಸಾಲ್" ಎಂಬ ಚಿಕಿತ್ಸಾಕ್ರಮವು ಜನ್ಮದಳೆದಿದೆ.

೨. ಧಮನಿಗಳಿಗೆ ಕರ್ಪೂರದಂತಹ ರಾಸಾಯನಿಕ ದ್ರವ್ಯವಾದ 'ಮೆಟ್ರಜೋಲ್' ಅಥವಾ 'ಕಾರ್ಡಿಯಾ ಜೋಲ್'ಗಳ ಇಂಜೆಕ್ಷನ್ ಕೊಡುತ್ತಾರೆ. ಮೂವತ್ತು ಸೆಕಂಡುಗಳಲ್ಲಿಯೇ ರೋಗಿಗೆ 'ಮೃಗೀ'ಯ ಲಕ್ಷಣಗಳು ಗೋಚರವಾಗುತ್ತವೆ. ಆದರೆ, ರೋಗಿಯು ಇದರಿಂದ ಭಯಭೀತನಾಗುತ್ತಾನೆ; ಆದುದರಿಂದ ಈಗ ಇಂಜೆಕ್ಷನ್ನಿನ ಬದಲು ಲಘುವಾದ ವಿದ್ಯುತ್—ಆಘಾತಗಳನ್ನು ಕೊಡುತ್ತಾರೆ.

೩. ಮೂರನೆಯದಾದ 'ಲೋಬೊಟೊಮಿ' ಒಂದು ಪ್ರಕಾರದ ಶಲ್ಯಕ್ರಿಯೆಯಾಗಿದೆ. ಮೆದುಳಿಗೆ ಕೆಲವು ನರಗಳೊಡನಿರುವ ಸಂಬಂಧವನ್ನು ಕತ್ತರಿಸಿ ಇಲ್ಲವಾಗಿಸುತ್ತಾರೆ. ಸಾಮಾನ್ಯವಾಗಿ ಈ ಪ್ರಕಾರದ ಚಿಕಿತ್ಸೆಯಿಂದ ರೋಗಿಯು ಆಕಾಂಕ್ಷೆ, ಸಂಕಲ್ಪಶಕ್ತಿ ಮತ್ತು ಅಂತರ್ದೃಷ್ಟಿ ಮೊದಲಾದ ಸದ್ಗುಣಗಳನ್ನು ಕಳೆದುಕೊಳ್ಳುತ್ತಾನೆ ಎಂಬ ಭಯವಿದೆ. ಮಾತ್ರವಲ್ಲ, ಇಷ್ಟೆಲ್ಲ ಮಾಡಿಯಾದರೂ ಕಷ್ಟಗಳನ್ನು ಅನುಭೋಗಿಸಿಯಾದರೂ ರೋಗಿಯು ರೋಗ ವಿದೂರನಾಗುವನೆಂಬ ನಂಬುಗೆ ಇರುವುದಿಲ್ಲ.

ಇಂತಹ ರುದ್ರ ಭಯಾನಕ ರೋಗಿಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿರುವುದನ್ನು ಕಾಣುವಾಗ ವಿವಂಚನೆಯುಂಟಾಗುವುದು ಸ್ವಾಭಾವಿಕವೇ. ನಾನಾ ರೋಮಾಂಚಕಾರಿ ಸಂಶೋಧನೆಗಳಿಗೆ ಹೆಸರಾದ ಈ ಕಾಲದಲ್ಲಿ ಈ ರೋಗಿಗಳನ್ನು ವಿನೋಚನೆಗೊಳಿಸುವ ದಿವ್ಯೌಷಧಿಯು ಆವಿಷ್ಕಾರವಾಗಲಾರದೆ?

(ಸಂಗ್ರಹ)



ಅತ್ಯಾಧುನಿಕ ಮೂದರಿಯ ಅಮೆರಿಕೆಯ ವಾಯು ಪಡೆಯ ಫೈಟರ್ ವಿಮಾನ ಹಾರಾಟದಲ್ಲಿ ನಿರತವಾಗಿರುವುದನ್ನು ಕಾಣಬಹುದು.

ಪುತ್ತೂರು ಡಿ. ಮು. ಕೋರ್ಟಿನಲ್ಲಿ

R.E.P. 180/1961

O S. 94/59

ಪುತ್ತೂರು ಶ್ರೀ ಶಾಂತಿನಾಥ ದೇವರ ಭಂಡಾರದವರ ಆಡಳ್ತೆದಾರ ಪುತ್ತೂರು ಶ್ರೀ ಬ್ರಹ್ಮಯ್ಯ ಶೆಟ್ಟಿ —Petr.

ಶೇಷಪ್ಪ ಕೊಟ್ಟಾರಿ ಕೂಡಾ

— Respondents

1ನೇ ಎದ್ರಿ ಶೇಷಪ್ಪ ಕೊಟ್ಟಾರಿ ದೇವಂಮನವರ ಮಗ, ವ. ಸುಬ್ರಮಣ್ಯ ಕೊಟ್ಟಾರಿಗಳ ಅಳಿಯ, ಪುತ್ತೂರು ತಾಲ್ಲೂ ನೆರಿಮೊಗ್ರು ಗ್ರಾಮದ ಕೈಪಂಗಳ ಮನೆಯಲ್ಲಿರುವವ.

ಸದ್ರಿ 1ನೇ ಎದ್ರಿಗೆ ಈ ಮೂಲ್ಕ ತಿಳಿಯಪಡಿಸುವುದೇನಂದ್ರೆ—

ಮೇಲ್ಕಂಡ ದಿಕ್ರಿ ಹೊಂದಿದ ಅರ್ಜಿದಾರನು ಸ್ಥಿರಾಸ್ತಿ ವಿಕ್ರಯದ ಇಸ್ತಿಹಾರಿನ ಶರತುಗಳನ್ನು ನಿಬಾಯಿಸುವ ಬಗ್ಗೂ, ಸ್ಥಿರಾಸ್ತಿಯೇಲಂ ಸಮಯ ಎಲ್ಲರಂತೆ ದೆರ್ವಾಸ್ತಿಗೆ ನಿಲ್ಲುವರೆ ಕೂಡಾ ದೇವರ ಭಂಡಾರದ ಕಡೆಯಿಂದ ಅರ್ಜಿದಾರರಿಗೆ ಸರ್ಟಿಫಿಕೆಟ್ ಕೊಡಿಸಬೇಕಾಗಿ ಮಾಡಿದ ಅರ್ಜಿಯು ತಾರೀಕು 10—8—61ಕ್ಕೆ ಇಟ್ಟಿರುವುದರಿಂದ, ಸದ್ರಿ ದಿವಸ ಪೂರ್ವಾಹ್ನ ಘಂಟೆ 11ಕ್ಕೆ ಮೇಲ್ಕಂಡ ಕೋರ್ಟು ಮುಂದೆ ಹಾಜ್ರಾಗಿ ನಿಂಮ ಆಕ್ಷೇಪಣೆಯನ್ನು ಹಾಜ್ರುಪಡಿಸತಕ್ಕದ್ದು. ತಪ್ಪಿದ್ರೆ ಸದ್ರಿ ವಿಷಯ ಏಕ ಪಕ್ಷವಾಗಿ ತೀರ್ಮಾನಿಸಲ್ಪಡುವುದು.

॥ ಕೋರ್ಟು ಹುಕುಂ ಪ್ರಕಾರ ॥

(Sd) P. Anantharaja Ariga
Advocate for Petitioner.

ಪುತ್ತೂರು, ತಾ. 20—7—1961.

ವಿದ್ಯಾರ್ಥಿಗಳಿಗೆ ಅತ್ಯುಪಯುಕ್ತ ಪುಸ್ತಕಗಳು

ಸುಲಭದಲ್ಲಿ ಇಂಗ್ಲಿಷ್
(ಆಂಗ್ಲ ಸ್ವಯಂಬೋಧಿನಿ)
ರೂ. 2·00.

ಸುಲಭದಲ್ಲಿ ಪತ್ರಲೇಖನ
Letter Writing Made Easy
ಆಂಗ್ಲ ಪತ್ರವ್ಯವಹಾರ ಬೋಧಿನಿ
ರೂ 1—25.

ವಿಚಾರಿಸಿರಿ:
ನವಭಾರತ ಪುಸ್ತಕ ಭಂಡಾರ,
ಉಡುಪಿ.

ನಮ್ಮಲ್ಲಿ ಸಿಗುವ, ಯಾವತ್ತೂ ಲೈಬ್ರೆರಿಗಳಿಗೆ ಯೋಗ್ಯವಾದ ವಿವಿಧ ಪುಸ್ತಕಗಳು

ಕತೆಗಳು

ರವೀಂದ್ರರ ಕಿರುಗತೆಗಳು	ಹ ಮಾಂಜ್ರೇಕರ	0	15
ಅಮೆರಿಕದ ಆರು ಕತೆಗಳು	ಕು. ಶಿ. ಭಟ್	1	12
ಕಪಾಳ ಮೋಕ್ಷ	ಸಿರಿಪತಿ	2	0
ಅನ್ನದೇವರು ಮತ್ತು ಇತರ ಕತೆಗಳು	ಕಯ್ಯಾರ	1	0
ಅಂತರಂಗದ ಕತೆಗಳು	ಸಂಕಲನ	1	4
ಆಕಾಶ ಗಂಗೆ	ಎಸ್. ವೆಂಕಟ್ರಾಜ್	1	12
ಸಂಗಾತಿ	ಕು. ಚಂದ್ರಿಕಾ	1	8
ಮಹಾತ್ಮಾ	ಜಿ. ಅರ್. ಹೆಗಡೆ	1	4
ಮಾರ್ಗದರ್ಶಕ	ಎಂ. ವಿ. ಸೀತಾರಾಮಯ್ಯ	1	8
ಬೃಂದಾವನ	ತ್ರಿವಿಕ್ರಮ	0	12
ಪಗಾರದಾಕೆ	ಭೀ. ಗ. ಮು. ದೇಸಾಯಿ	0	12
ವಿಜಯಶ್ರೀ	ಮಿರ್ಜಿ ಅಣ್ಣಾರಾಯ	1	0
ಅಮೇರಿಕದ ಕತೆ	ಸೀತಾರಾಮ ಶಾಸ್ತ್ರಿ	1	8
ಆದರ್ಶ ಚಿತ್ರಗಳು	ಕಲಾಕಿಂಕರ	1	8
ಗೋವಿಜಯ	ಮು. ಉಪಾಧ್ಯಾಯ	0	8
ಮದುವೆ ಸೀರೆ	ಎಸ್. ಎಲ್. ಸುಬ್ರಹ್ಮಣ್ಯಂ	1	0
ನಾಲ್ಕು ಕತೆಗಳು	ಬಿ. ಈಶ್ವರ ಭಟ್ಟ	1	0
ನಾಟಕ ಕಥೆಗಳು	ಬಿ. ಎಮ್. ಶರ್ಮ	0	12
ಕಥಾ ಕೌಮುದಿ	ಎಸ್. ಗೋಪಿಚಂದ ರಾವ್	1	8
ಜರ್ಮನಿಯ ಗುಪ್ತಹೇರರು	ಸಂಜಾರಿ	1	0
ಪ್ರವಾದಿ	ದೇಸಾಯಿದತ್ತಮೂರ್ತಿ	1	4
ಮಹಾಸತಿ	ವರದರಾಜ ರಾವ್	1	4
ಕಾಂಪೂಷನ ಚರಿತ್ರೆ	M. S. ಪುಟ್ಟಣ್ಣ	0	10
ಕಾಂಗ್ರೆಸ್ಸಿನ ಇತಿಹಾಸ	ಗುರುನಾಥ ಜೋಶಿ	0	12
ಮೈಸೂರು ನಿರ್ಮಾಪಕರು	ರಾಜಾರಾವ್	1	0
ಅಟವಾಹಿತೆ	ಶ್ರೀನಿವಾಸ ಹಾವನೂರ	1	4
ಪಾಶ್ಚಾತ್ಯ ಕಲಾವಿದರು	ಕಲಮದಾನಿ	3	0
ಭಾರತದ ಬಾಪೂ	ಅ. ನ. ಕೃ.	1	4
ಬುದ್ಧ ದೇವ	ಸ. ಶ್ರೀನಿವಾಸ ಆಚಾರ್	0	8
ಹೃದಯ ವಿದ್ರಾವಕ	ಸೂರ್ಯನಾರಾಯಣ	0	5
ಮಣಿ ಮೇಖಲೆ	ಬಿ. ಶಂಕರ ಭಟ್ಟ	0	12
ಮೊರ್ಟನನ ಸಾಹಸ	,,	0	12
ವಿಶಾಖಾ ಮೃಗಾರ ಮಾತೆ	ಬಿ. ಎಮ್. ಶರ್ಮ	0	10
ಮಂಗಳ ಗೌರಿ	ಎಸ್. ಗುರು ರಾವ್	0	6
ಹತೀಮ್ ತಾಯಿ ಭಾಗ ೧	ಐಯ್ಯಂಗಾರ್	0	5
,, ,, ೨	,,	0	6
ಪ್ರೇಮ ಪ್ರವಾಹ	ಸಂಕಲನ	1	0
ಕಲ್ಪನಾ ವಿಲಾಸ	ಪಿ. ವೇಣುಗೋಪಾಲ	0	12
ಗಾಯದ ನೋವು	ಪಿ. ವೆಂಕೋಬಾಚಾರ್ಯ	1	4
ಮೋಪಾಸಾನ ಓಲೆಗಳು	,,	1	4
ಬದುಕಿನ ಚಿತ್ರಗಳು	ಎಸ್. ವಿ. ರಾವ್	1	0
ಕೊನೆಯ ಹಾಡು	ಎಂ. ಎಸ್. ಶೆಟ್ಟಿ	1	8
ಗಾಯ್ ಡಿ. ಮೋಪಾಸನ ಕತೆಗಳು	ಚುಳಕಿ	1	0
ನಮ್ಮ ಬದುಕು	ಆನಂದ ಕಂದ	0	14
ಭಾವ ಸಂಧಿ	ರಾಮ ಲಿಂಗಯ್ಯ	0	14
ಲೀಲಾಜಾಲಾ	ಶಂಕರ ನಾಯ್ಕ	0	14
ವೃಷ್ಟಿಧಾರೆ	ಧನ್ವಂತ	0	12
ಚಕಮಕಿ	ಬೇಂದ್ರೆ ಲಕ್ಷ್ಮಣ ರಾಯ	2	0
ಮೊರೆ ಮತ್ತು ನಾನು	ಕೆ. ವಿ. ಶೆಣೈ	1	0
ಸೈಮನನ ತಂದೆ	ಸಂಕಲನ	1	12
ನಂದಾ ದೀಪ	ಕೊರಡ್ಕಲ್	0	14
ನಾರೀ ಹೃದಯ	ಶಿವಾಣಿ ದೇವಿ	1	8
ಉರ್ದೂ ಕಥಾವಲಿ	ಗುರುನಾಥ ಜೋಶಿ	0	8
ಬೇಬಿ ಮತ್ತು ಇತರ ಚಿತ್ರಗಳು	ಎನ್. ಸೂರಪ್ಪ	0	12
ನ್ಯಾಯ ಕ್ಷಮೆ	ಟಿ. ಆರ್. ಭಾಗವತ	0	8
ಮೃಗಜಲ	,,	0	12
ಬಾಳ್ಮೋಟಗಳು	ಹಾ. ಮಾ. ನಾಯಕ	0	6
ಮುದ್ದಿನ ಕಣಿ	ಗೊ. ವೆಂ. ಚುಳಕಿ	0	12
ನಾಡ ಕತೆಗಳು	ಸಂಕಲನ	0	4
ನಕ್ಕರೂ ನಗಬಹುದು	ದೇವಕಿ ಎಂ ಸೆಟ್ಟಿ	0	10
ನನ್ನ ಕಥೆಗಳು	ಕೆ. ವಿ. ಆಚಾರ್ಯ	0	10
ಚಿಗುರು	ಸಂಕಲನ	0	10
ಲೋಪಾಮುದ್ರೆ	ರಂಗನಾಥ	1	0
ರೂಪರಾಶಿಗಳ ಸಂತೆ	ಎಂ. ಬಿ. ಮರಕಿಣಿ	0	15
ತಾಪತ್ರಯ	ಸಂಕಲನ	0	6
ಕಾಲಯಾನ	ಭಾರತೀ ಸುತ	1	10
ಪ್ರಳಯ ಪ್ರೇಮ	ಭಾಯಾಪತಿ	0	10
ಭಾರತೀಯ ಕತೆಗಳು ಆನು: ಕೊರಡ್ಕಲ್		1	12
ಕದಂಬ	ರಾಜವಾಡೆ	1	4
ನಗೆ ನೋಟಗಳು	ಕೆ. ವಿಠಲ ಶೆಣೈ	1	4
ನೀತಿ ವಿನೋದ ಕತೆಗಳು	ಯಗಟಿ	1	0
ಸಪ್ತ ಸಾಗರ	ಎಸ್. ವೆಂಕಟರಂಜ್	0	12
ಮಧುವನ	ಸಂಕಲನ	3	0
ವಿಷ್ಣುವಿನ ದಶಾವತಾರ	ಎಂ. ವಿ. ಹೆಗ್ಡೆ	0	12
ಬಾಳಿನ ಬೆಳೆ	ಯಶೋದೆ ಬಾಯಿ	0	12
ಕಿರಾತಾರ್ಜುನೀಯ ಕತೆಗಳು	ಕೃ.ಭ. ಪೆರ್ಲ	0	13
ಭಗವಾನ ಶ್ರೀಕೃಷ್ಣ ಸೀತಾನದಿ	ಗಣಪಯ್ಯ ಸೆಟ್ಟಿ	0	12
ಸಾಹಸದ ಕತೆಗಳು	ಎಚ್ಚಾರ್ಕೆ	0	6
ಅತಿ ದೊರದ ಜಗತ್ತಿನಲ್ಲಿ (ಹೆಗಡೆ ಬಂಧುಗಳು)		0	12
ಮುಂದೇನು	ದೇವುಡು	0	8
ದೆವ್ವದ ಕಥೆಗಳು	ಎಮ್. ಜಿ. ಅಡಿಗ	0	8
ವಾರದ ಕುಡುಗ	ನಿರಂಜನ	1	4
ಸುಧಾ	ಪದ್ಮಾ ಬಾಳಿಗ	0	8
ಮಹಾತ್ಮಾ	ಮಹಾಬಲ ಭಟ್ಟ	0	6
ಅವಳೇ ನನ್ನ ಸ್ರೇಯಸಿ	ಕೆ. ಎಲ್. ಅಣ್ಣಿಗೇರಿ	0	12
ಚೈತ್ರ ಪಲ್ಲವ	ಕೊ. ರಾಮಚಂದ್ರ	1	6
ಮೃತ್ಯು ಮಂಥನ	ಕೆ. ಎಲ್. ಅಣ್ಣಿಗೇರಿ	0	12
ಹೆಂಗುಸರ ಕತೆಗಳು	ಸಂಕಲನ	2	0
ಸಂಪಿಗೆ ಹೂ	ವ್ಯಾಸರಾಯ ಬಲ್ಲಾಳ	1	8
ನೆರಳು	ಎಕ್ಕುಂಡಿ	1	0
ರಾಗವಿರಾಗ	ಘಂಡರಿನಾಥಾಚಾರ್ಯ	1	12
ಕಲ್ಪನೆಯ ಕನಸು	ಕೆ. ಜಿ. ಶೆಟ್ಟಿ	0	10

ಕಾದಂಬರಿಗಳು

ಸುವರ್ಣ ಪ್ರವಾಹ	ಎಚ್. ವಿಠಲ ಶೆಣೈ	1	8
ಕುಮಾರಿ ಸುನೇತ್ರ	ತಲಚೇರಿಕರ	0	12
ಬಿಳಿ ಕೊಕ್ಕರೆ	ಗೌರೀಶ ಕಾಯ್ಕಿಣಿ	1	4
ರಾಕ್ಷಸನ ಸೋಲು	ಲಿಂಗಣ್ಣಯ್ಯ	1	8
ಹೊನ್ನಿನ ಹಂಬಲ	ಐಯ್ಯಂಗಾರ್	2	12
ಶಾಂತಿ ಸದನ	ನಾಗೇಶ ಶ್ಯಾನುಭಾಗ್	1	8
ಬೀಳದ ತೆರೆ	ಸುಶೀಲಾ ಜೋಶಿ	2	0
ಉತ್ಕಲಾ ಭಾಗ ೧	ಹರಿಜಾತ	3	0
ಉತ್ಕಲಾ ಭಾಗ ೨	,,	2	0
ಆಶಾ	ರಾಜ	1	8
ಕಾಂತಾಪುರದ ವಜ್ರ	ಎಸ್. ಎನ್. ಕೋಡಕಣಿ	1	0
ಪ್ರತಾಪ ಮುದಲಿ	ಮು. ಕೃಷ್ಣಮೂರ್ತಿ	1	4
ಕೊಕ್ಕೊರೋ	ಇ. ವಿ. ರಾಘವೇಂದ್ರ	1	0
ಸಿದ್ದಾರ್ಥ	ಬಿ. ಎಸ್. ಆರ್. ಐಯ್ಯಂಗಾರ್	2	0
ನಮ್ಮ ಸುತ್ತಲಿನ ಕಡಲು	ಶಿವರಾಮ ಕಾರಂತ	1	12
ಭಾವಾರ್ಚನೆ	ನಚಿಕೇತ	1	4
ಅವಳ ಋಣ	ಮುರಲೀಧರ	1	8
ಸಕಾಪಲಂಬ	ಜನಾರ್ದನ ಗುರ್ಕಾರ್	2	8
ಮೋಹಿನೀ ಮಂದಿರ	ಹೊ. ಗುಡ್ಡಪ್ಪ	2	0
ಸ್ವರ್ಣ ಭೂಮಿ	ವಾಮನ ಮಲ್ಯ	1	8
ತರಲಾ	ಸ್ವಾಮಿ ಸತ್ಯ ಭಕ್ತರು	1	0
ಬಿರುಗಾಳಿ ಭಾಗ ೧	ನಾ. ಸೀ. ಪಡಕೆ	1	8
ವೈಕುಂಠನ ಮೃತ್ಯು ಪತ್ರ	ಶರತ್	1	0
ಮನ್ನೂ ಮದುವೆ	ಎಂ. ಜಿ. ವೆಂಕಟೇಶಯ್ಯ	2	0
ಆಕ್ಕಾಜಿ	ಶರತ್—ಮಲ್ಲಾರಿ	1	4
ಭ್ರಾಂತಿಯ ಸುಳಿಯಲ್ಲಿ	ಎಂ. ಎನ್. ಭಟ್	1	12
ಹೃದಯ ವೀಣೆ	ಮಾ. ವಿ. ನಾಯಕ್	1	4
ಬೆಂದ ಜೀವ	ರುದ್ರ ಮುನಿಸ್ವಾಮಿ	1	12
ಗುಣ	ಪಿ. ವೆಂಕೋಬಾಚಾರ್ಯ	1	6
ಪುನರಾಗಮನ	ಧನ್ವಂತ	1	4
ಬಂಧನ ಬಾಂಧವ್ಯ	ಸೇವ ನಮಿರಾಜಮಲ್ಲ	1	0
ಜ್ಞಾನ ಪ್ರಭಾ	ಧನ್ವಂತ	1	0
ಇವೆತ್	ಪಿ. ವೆಂಕೋಬಾಚಾರ್ಯ	1	12
ಮಾಧವ ಲೀಲೆ	ವೆಂಕಟೇಶಯ್ಯ	1	8
ರಂಗ ವಿಲಾಸಿನಿ	ಮಲ್ಲಾರಿ	3	0
ಹೊಸ ಹೆಜ್ಜೆ	ಭಾರ್ಗವ	0	10
ಸ್ಮಶಾನ ವೈರಾಗ್ಯ	ಚು. ಗೋವಿಂದರಾಯ	1	8
ಪುರಸ್ಕಾರ	ಗಣಪತಿ ಮೊಳೆಯಾರ	1	0
ಹೊಸೂರಿನ ಹಲವರು	ಟಿ. ಮು. ಭಟ್ಟ	2	0
ವೃಂದ	ಪಿ. ವೆಂಕೋಬಾಚಾರ್ಯ	1	8
ಘಂಟಮಾರಾ	ಕು. ಶಿ. ಹರಿದಾಸ ಭಟ್ಟ	2	0
ಜಮೀನ್ದಾರ	ಹೊಸಮನಿ ಗುಡ್ಡಪ್ಪ	1	8
ಬಾಳಿನ ಬೆಡಗು	ನಾರಾಯಣ ಭಟ್ಟ	1	4
ಶಿವಗಳ ಸಾಗಾಟ	ಸು. ಕೃಷ್ಣ ಹೆಗಡೆ	0	12
ಕುಲವಿಲ್ಲದ ಹೆಣ್ಣು	ಪಿ. ವೆಂಕೋಬಾಚಾರ್ಯ	1	8
ಸನ್ಯಾಸಿಯ ಸೋಗಿನಲ್ಲಿ	ಕೆ. ಕೆ. ಶೆಟ್ಟ	0	12
ಮಾರಾಮಾರಿ (ಪತ್ತೇದಾರಿ)	ಎಚ್ಚಾರ್ಕೆ	0	14
ಪದ್ಮಾನದಿಯ ನಾವಿಕ	ಶಿವಾನಂದ ಜೋಶಿ	1	8
ಕುಟುಂಬ ಸೌಖ್ಯ	ಎಲ್. ಗುಂಡಪ್ಪ	2	4
ಯಾತ್ರಿಕ	ಪ್ರ. ಕು ಸನ್ಯಾಲ	1	8
ಅಮರನಾಥ	ವಿ. ಗುರುರಾಜನ್	1	0
ಮೋಹದ ಮಹಾಜಾಲ	ವೀರಸ್ವ ಯಗಟಿ	1	12
ನಡುಹಗಲಿನ ಕಗ್ಗತ್ತಲೆ	ಕು.ಶಿ. ಹರಿದಾಸ ಭಟ್ಟ	2	8
ಚಿಗುರು ಹಾಸಿಗೆ	ಭಾರತೀಸುತ	2	8
ಪ್ರಿಯತಮೆಯ ಪಿತೂರಿ	ಎನ್. ಗುಂಡ ಶಾಸ್ತ್ರಿ	1	8
ಮಂಗಳಗ್ರಹದ ಮಾಯಾಂಗನೆ	ಕಿದಿಯೂರು	0	12
ಕುಯುದರ ಕಾಮಿನಿ	,,	0	12
ಮಿಸ್ ಪದ್ಮಾ	ಎಲ್ಲಾರ್ಕೆ	1	8
ದ್ವೀಪದ ರಹಸ್ಯ	ಚರಣ	1	0
ಪುಷ್ಪಹಾರ	ನಿರಂಜನ	2	0
ಜಯ ಗೋಮಂತಕ	ಆನಂದವರ್ಮ	1	0
ಪರಿಜಾರ	ದತ್ತಾತ್ರೇಯ ಕುಲಕರ್ಣಿ	2	0
ಕೈವಾಂಸ	ಜನಾರ್ಧನ ಗುರ್ಕಾರ	1	8
ರಕ್ತದ ರೂಪಾಯಿ	ಸೇವ ನಮಿರಾಜ ಮಲ್ಲ	1	8
ತಿರುಗಿದ ಕುರ್ಚಿ	ಬಾಲಚಂದ್ರ	2	0
ಕೊನೆಯ ಭೇಟಿ	ಸರೋಜಮ್ಮ	1	8
ಪ್ರೇಮ ಪಿಶಾಚಿ	ಎನ್. ನರಸಿಂಹ	1	8
ಪತ್ತೇದಾರ ಮಧುಸೂಧನ	,,	2	0
ಅಧ್ಯಕ್ಷರ ಮಗಳು	,,	2	0
ಸೇತುವೆಯಲ್ಲಿ ಮರಣ ಕಾದಿತ್ತು	ಸೇ.ನ. ಮಲ್ಲ	1	4
ಅಂತಃಕರಣ	ಅಯ್ಯಂಗಾರ	1	0
ಕೃಪಾನಿಧಿ	,,	1	0
ಶೋಭಾರಾಣಿ	ಆರ್. ಯು. ಪಾಟೀಲ	0	12
ಜೀವನ ಜೋಕಾಲಿ	ಎಂ. ದಸ್ತಗೀರ್	1	8
ಕೈಕೊಟ್ಟ ಕಾಮಿನಿ	ಎಚ್ಚಾರ್ಕೆ	0	8
ಜ್ವಾಲಾಮುಖಿ	ಡಿ. ವಿ. ರಾಘವೇಂದ್ರ	0	10
ಅಳದ ಮೇಲೆ	ಶಿವರಾಮ ಕಾರಂತ	2	12
ದುಃಖಾರ್ತರು	ಎ. ಪಿ. ಸುಬ್ಬಯ್ಯ (ಸಾದ)	4	8
	ಉತ್ತಮ)	6	8
ಪುಣ್ಯ ಪ್ರವಾಹ	ದಿನೇಶ	1	12
ನಂಬಿಕೆಯ ನೆರಳು	ಮಹಾಲಿಂಗ ಭಟ್	1	4
ಋಣಯಾತ್ರೆ	ನಚಿಕೇತ	1	8

ಲೈಬ್ರೆರಿಗಳಿಗೆ ವಿಶೇಷ ಸವಲತ್ತುಗಳಿವೆ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಭವಿಷ್ಯವಾಣಿ:

ಮುಂದಿನ ವರ್ಷ ಪ್ರಳಯವಿಲ್ಲ

ಮುಂದಿನ ಫೆಬ್ರವರಿಯಲ್ಲಿ ನಡೆಯುವ ಅಷ್ಟ ಗ್ರಹಯೋಗವು ಪ್ರಳಯಂಕರವಲ್ಲ; ಇದರ ಪರಿಣಾಮವಾಗಿ, ದಿವ್ಯ ಜ್ಞಾನಿಯೂದ ಮಹಾ ಯುಗಪುರುಷನೊಬ್ಬನ ಜನನವಾಗಬಹುದು; ಲೋಕಕ್ಕೆ ಈ ಯೋಗ ಕ್ಷೇಮಂಕರವಾಗುವುದು.

ಕ್ರಿ. ಶ. ೧೯೬೨ನೇ ವರ್ಷವು ಇಡಿ ಜಗತ್ತಿನಲ್ಲೇ ಒಂದು ಮಹತ್ವಪೂರ್ಣವಾದ ಶುಭಕೃತು ಸಂವತ್ಸರದ ಸುಭಿಕ್ಷ ವರ್ಷ. ಫೆಬ್ರವರಿ ಮೂಹೆಯಲ್ಲಿ ಎಂಟು ಗ್ರಹಗಳು ಒಂದೇ ರಾಶಿಯಲ್ಲಿ ಸೇರುವುದರಿಂದ ಪ್ರಪಂಚದ ಯಾವ ಭಾಗದಲ್ಲೂ ತೊಂದರೆಯಾಗುವುದಿಲ್ಲ. ಸುಭಿಕ್ಷ, ಕ್ಷೇಮ, ಆರೋಗ್ಯ, ಸಸ್ಯವೃದ್ಧಿ, ಗೋಬ್ರಾಹ್ಮಣರಿಗೆ ಶುಭಯೋಗ, ಶಾಂತಿ ಸಮಾಧಾನಗಳು, ಸತ್ಯಕ್ಕೆ ಸರ್ವತೋಮುಖವಾದ ವಿಜಯವುಂಟಾಗುತ್ತವೆ.

ತಾ ೪—೨—೧೯೬೨ನೇ ಭಾನುವಾರ, ಅಮಾವಾಸ್ಯೆ, ಸಂಪೂರ್ಣ ಸೂರ್ಯಗ್ರಹಣ. ರವಿ, ಚಂದ್ರ, ಕುಜ, ಬುಧ, ಗುರು, ಶುಕ್ರ, ಶನಿ ಮತ್ತು ಕೇತು ಈ ಎಂಟು ಗ್ರಹಗಳು ಮಕರ ರಾಶಿಯೆಂಬ ಕ್ರಾಂತಿ ವೃತ್ತದ ಒಂದೇ ಸರಳ ರೇಖೆಯಲ್ಲಿ ಎಷ್ಟೋಲಕ್ಷ-ಕೋಟಿ ಮೈಲುಗಳ ಅಂತರದಲ್ಲಿ ಕಾಣ ಬರುತ್ತವೆಯೇ ಹೊರತು ಒಂದೇ ರೂಮಿನಲ್ಲಿ ಎಂಟು ಗ್ರಹಗಳೂ ಸೇರಿ ಮೀಟಿಂಗ್ ಮಾಡುವುದಿಲ್ಲ.

ಸೂರ್ಯನೆ. ಪೃಥ್ವಿಯ ಮೇಲಿನ ಎಲ್ಲ ಪ್ರಾಣಿ ಮತ್ತು ವನಸ್ಪತಿಗಳ ಪೋಷಕನಾಗಿರುವ ಒಂದು ಮಹಾ ನಕ್ಷತ್ರ. ಅವನಿಂದ ಹೊರಯುವ ಪ್ರಕಾಶ ಮತ್ತು ಉಷ್ಣಗಳೆನ್ನೇ ಸೌರಪ್ಯೂಹದೊಳಗಿನ ಎಲ್ಲ ಗ್ರಹಗಳೂ ಅವಲಂಬಿಸಿರುತ್ತವೆ. ಇಡಿ ಬಿಗೋಳದಲ್ಲಿ ಕಾಣ ಬರುವ ಅನೇಕ ಕೋಟಿ-ಕೋಟಿ ನಕ್ಷತ್ರಗಳಲ್ಲಿ ರವ್ಯಾದಿ ನವ ಗ್ರಹಗಳೂ, ಸಪ್ತರ್ಷಿ ಮಂಡಲವೂ, ಧ್ರುವನಕ್ಷತ್ರವೂ ಮುಖ್ಯವಾಗಿವೆ. ಈ ಸೂರ್ಯನಿಂದ ಪ್ರಕಾಶವು ಪೃಥ್ವಿಗೆ ಬಂದು ಮುಟ್ಟಲುಲ ನಿಮಿಷ ೨೦ಸೆಕುಂಡುಗಳಾಗುವುವೆಂದು ವಿಜ್ಞಾನ ಶಾಸ್ತ್ರದ ಮೂಲಕ ಕಂಡುಹಿಡಿದಿರುವುದರಿಂದ ಜ್ಯೋತಿರ್ವರ್ಷದಲ್ಲಿ ಚಂದ್ರಲೋಕವೇ ಬೇರೆ ಸೂರ್ಯ ಲೋಕವೇ ಬೇರೆ. ಪ್ರತಿಯೊಂದು ಗ್ರಹಮಂಡಲವೂ ಬೇರೆ ಬೇರೆಯಾಗಿ ತಂತಮ್ಮ ಅಕ್ಷದ ಮೇಲೆ ಸಂಚರಿಸುತ್ತಿವೆ ಈ ಕಾರಣದಿಂದಲೇ ವೈಜ್ಞಾನಿಕರು ಚಂದ್ರಲೋಕಕ್ಕೆವಿಮಾನದ.ಮೂಲಕ ಹೋಗಿ ಬರಲು ಪ್ರಯತ್ನಿಸುತ್ತಿರುವದು ಸರ್ವರಿಗೂ ತಿಳಿದ ವಿಷಯವೇ ಆಗಿರುವಾಗ ಎಂಟು ಗ್ರಹಗಳು ಒಂದೇ ರಾಶಿಯಲ್ಲಿ ಸೇರುವುದಾದರೂ ಹೇಗೆ? ಅದುದರಿಂದ ಚಾಂದ್ರಮಾನ ಮತ್ತು ಸೌರಮಾನರೀತ್ಯ 354×365= 129,210 ಜ್ಯೋತಿರ್ವರ್ಷಗಳಿಗೊಮ್ಮೆ ನವ ಗ್ರಹಗಳು ಜ್ಯೋತಿಶ್ಚಕ್ರದ ಒಂದು ಸರಳ ರೇಖೆಯ ಕ್ರಾಂತಿ ವೃತ್ತದಲ್ಲಿ ಕಾಣಬರುವುದರಿಂದ ಪ್ರಪಂಚದಲ್ಲಿ ಒಂದು ನವೀನ ಬದಲಾವಣೆಯಾಗುತ್ತದೆ. ಭಿನ್ನ ಭಿನ್ನ ಮತಗಳ ಅಭಿಪ್ರಾಯಗಳು ಒಂದು ನಿರ್ದಿಷ್ಟತೀರ್ಮಾನಕ್ಕೆ ಬರುತ್ತವೆ. ಶಾಂತಿ ಸಮಾಧಾನಗಳೇರ್ಪಟ್ಟು ಜಗತ್ತಿಗೆ ಶುಭವುಂಟಾಗುತ್ತದೆ

೧೯೬೧ರಲ್ಲಿ ಪ್ರವಾಹಗಳಿಂದ ಅಧಿಕ ನಷ್ಟವಾಗಿದೆಯೂದುದರಿಂದ ನನ್ನ ಜ್ಯೋತಿಷ ಸಹೋದರರು ೧೯೬೨ರಲ್ಲಿ ಪ್ರಪಂಚ ಪ್ರಳಯವೆಂದು ಅನುಮಾನದಿಂದ ಊಹಿಸಿ ಹೇಳಿರುವುದು ನಿರಾಧಾರವಾದುದು. ೧೯೫೪ ಮತ್ತು ೧೯೫೫ರಲ್ಲಿ ಇದೇ ರೀತಿ ಹೆಚ್ಚಿನ ಪ್ರವಾಹ ಬಂದಿರುವುದು ಪ್ರಪಂಚಕ್ಕೇ ಗೊತ್ತಿರುವ ವಿಷಯ. ನೀರಿನ ಅಧಿಪತಿಗಳಾದ ರವಿ ಚಂದ್ರರೂ, ಪ್ರಳಯಕ್ಕೆ ಅಭಿಮಾನ ದೇವತೆಯೂದ ಶನಿ ಮಹಾ ರಾಜನೂ ಜಲಕಕ್ಷದಲ್ಲಿ ಸಂಚರಿಸುತ್ತಾ, ಉಚ್ಚ ಗ್ರಹವಾದ ಅಂಗಾರಕನೂ, ವಿಜ್ಞಾನಕಾರಣನಾದ ಬುದ್ಧನೂ, ಜೀವನಕ್ಕೆ ಅಧಿಪತಿಗಳಾದ ಗುರು ಶುಕ್ರರೂ, ಮೋಕ್ಷಕಾರಕನಾದ ಕೇತುವೂ ತೇಜಸ್ಕಕಕ್ಷದಲ್ಲಿ ಪ್ರಕಾಶಿಸುತ್ತಾ ಒಂದೇ ಕ್ರಾಂತಿವೃತ್ತದಲ್ಲಿರುವುದರಿಂದ ದಿವ್ಯ ಜ್ಞಾನಿಯೂದ ಮಹಾ ಯುಗಪುರುಷನೊಬ್ಬನು ಜನಿಸಬಹುದು; ಸ್ವಲ್ಪ ಮಟ್ಟಿಗೆ ಜಾತಿ ಸಾಂಕರ್ಯವಾಗಬಹುದು; ಶತ್ರುಗಳಿಗೆ ಪರಾಭವವೂ, ಮಿತ್ರರಿಗೆ ವಿಜಯವೂ ವುಂಟಾಗಿ ಜಗತ್ತಿನ ಅಜ್ಞಾನವೆಂಬ ಅಂಧಕಾರವು ತೊಲಗಿ, ಜ್ಞಾನವೆಂಬ ಬೆಳಕು ವುಂಟಾಗುವುದು.

ಕಳೆದ ವರ್ಷ ಭೂಕಂಪವಾಗುತ್ತೆಂದು ಬರೆದಿದ್ದ ಇಟಾಲಿಯನ್ ವಿಜ್ಞಾನಿಗಳ ಅಭಿಪ್ರಾಯವನ್ನು ಖಂಡಿಸಿ, ತಾ. ೯-೭-೬೧ "ಪ್ರಜಾವಾಣಿ"ಯಲ್ಲಿ ನನ್ನ ಲೇಖನವು ಪ್ರಕಟವಾಗಿದೆ.

ಈ ಗ್ರಹಗಳ ಯೋಗವು ಶುಭಯೋಗವಾಗಿ ಪ್ರಪಂಚದ ಮುಂದಿನ ಭವಿಷ್ಯ ಉಜ್ವಲವಾಗಿ ರಾಷ್ಟ್ರದ ಮತ್ತು ರಾಷ್ಟ್ರನಾಯಕರ ಮಹೋನ್ನತಿಗೆ ಕಾರಣವಾಗಿದೆ. ಸತ್ಯಕ್ಕೆ ವಿಜಯವುಂಟಾಗುತ್ತದೆ. ಮಕರ ರಾಶಿಯವರು ನವಗ್ರಹ ಶಾಂತಿ ಮಾಡಿಕೊಳ್ಳುವುದು ಉತ್ತಮ.

—ಡಿ. ಸುಬ್ಬರಾವ್
(ಭಾರತ ರಾಷ್ಟ್ರಾಧ್ಯಕ್ಷ ಡಾ| ರಾಜೇಂದ್ರ ಪ್ರಸಾದ್ ಮತ್ತು ಮೈಸೂರು ಶ್ರೀ ಮನ್ನಹಾರಾಜರವರ ಮೆಚ್ಚುಗೆ ಪಡೆದ ಜ್ಯೋತಿಷ ಪ್ರವೀಣ, 530, ಅಂಜನೇಯ ದೇವಸ್ಥಾನದ ಬೀದಿ, ವಿಶ್ವೇಶ್ವರ ಪುರಂ, ಬೆಂಗಳೂರು-4)

ನಿಮಗೂ ತಿಳಿದಿರಲಿ

ವಿಶ್ವದ ವಿವಿಧ ವಿಷಯಗಳು

"ರಂಜನೆ", ಬೆಂಗಳೂರು.

ಆಸ್ಪತ್ರೆಗಳಲ್ಲಿ ಕ್ಷಣಕ್ಕೊಮ್ಮೆ ಅಸಂಖ್ಯಾತ ಮಕ್ಕಳ ಜನನವಾಗುತ್ತದೆ. ಆಗ ಹುಟ್ಟುವ ಮಕ್ಕಳುಗಳನ್ನು ಇಂತಹವರ ಮಕ್ಕಳೆಂದೇ ಗುರುತಿಸುವುದು ಬಹು ಪ್ರಾಮುಖ್ಯವಾದ ಕರ್ತವ್ಯವಾಗಿದೆ.

ಭಾರತದಲ್ಲಿ ಬಹುಕಾಲದಿಂದಲೂ ಅಂಥ ಪದ್ಧತಿಯಿಂದಲೇ ಈ ಕಾರ್ಯ ಸಾಗುತ್ತಿದೆ. ಮಗುವಾದ ತಾಯಿಗೂ ಮತ್ತು ಮಗುವಿಗೂ ಕೈಗೆ ಒಂದೇ ಬಣ್ಣದ ಬಟ್ಟೆ ಕಟ್ಟುವುದು ಮುಂತಾದ ತಮ್ಮದೇ ಆದ ಒಂದು ಪದ್ಧತಿಯನ್ನು ಅನುಸರಿಸಿಕೊಂಡು ಬರುತ್ತಿದ್ದಾರೆ. ಇಂತಹವುಗಳಲ್ಲಿ ಒಮ್ಮೊಮ್ಮೆ ಮಕ್ಕಳು ಬದಲಾಗುವ ಸಂಭವಗಳುಂಟು, ಇತ್ತೀಚೆಗೆ ವೈಜ್ಞಾನಿಕವಾಗಿ ಮಕ್ಕಳು ಹಾಗು ತಾಯಿಯರನ್ನು ಗುರ್ತಿಸುವ ಪತ್ತೆ ಹಚ್ಚಲಾಗಿದೆ.

ಚಿಕಾಗೋದಿನ ಕುಕ್‌ಕೌಂಟಿ ಆಸ್ಪತ್ರೆಯವರು ಇದನ್ನು ಕಂಡುಹಿಡಿದಿರುವರು.

ಯಾವ ಎರಡು ಮಕ್ಕಳ ಕಿವಿಗಳೂ ಆಕಾರ ಹಾಗು ಗಾತ್ರದಿಂದ ಒಂದೇ ರೀತಿಯಿರುವುದಿಲ್ಲ. ಬೆರಳು ಗುರ್ತಿನಂತೆ ಅವುಗಳಲ್ಲಿ ಬೇಧವಿರುತ್ತದೆ. ಬರಿಯ ಕಣ್ಣಿಗೇ ಅವುಗಳ ವ್ಯತ್ಯಾಸ ಕಾಣಬರುವುದು.

ಒಂದು ವಿಶೇಷ ಛಾಯಾಗ್ರಾಹಕದಿಂದ ಪಾರದರ್ಶಕ ಪ್ಲಾಸ್ಟಿಕ್‌ನ ಮೇಲೆ ಚಿತ್ರಿಸಿಕೊಂಡರೆ ಕಿವಿಯಲ್ಲಿನ ಅತಿ ಸೂಕ್ಷ್ಮ ಚುಕ್ಕಿಗಳೂ, ಗೆರೆಗಳೂ ಕಾಣಸಿಗುವುವು. ಆ ಚಿತ್ರದೊಡನೆ ತಾಯಿಯ ಬೆರಳು ಗುರ್ತನ್ನೂ ಸೇರಿಸಿ ದಾಖಲೆಗಾಗಿ ಇಟ್ಟುಕೊಂಡರೆ ನಿರಂತರ ಹಾಗೂ ನಂಬಲರ್ಹವಾದ ದಾಖಲೆಗಳು ದೊರಕಿದಂತಾಗಿ ತಾಯಿಯವರಿಗೆ ಮಕ್ಕಳಲ್ಲಿ ಬರಬಹುದಾದ ಅನುಮಾನ ನಾಶವಾಗುತ್ತದೆ.

ನಿಜವಾದ ವಜ್ರಗಳ ಗುರುತಿಸುವಿಕೆ

ನಿಜವಾದ ವಜ್ರಗಳನ್ನು ಕೃತ್ರಿಮ ವಜ್ರಗಳಿಂದ ಗುರುತಿಸುವಿಕೆ ಬಹು ಸುಲಭವಿದೆ.

೧) ನಿಜವಾದ ವಜ್ರಗಳು ಪ್ರೊಮೋಡ್ ದ್ರಾವಣದಲ್ಲಿ(Promode Solution)ನಲ್ಲಿ ಮುಳುಗುತ್ತದೆ.

೨) ಅಲ್ಟ್ರಾ—ವೈಲೆಟ್ ಕಿರಣಗಳಲ್ಲಿ (Ultra-violet rays) ವಿವಿಧ ಬಣ್ಣಗಳನ್ನು ನಿಜವಾದ ವಜ್ರ ಬಿಟ್ಟುಕೊಡುವುದು.

ನೋವಿಗೆ ಗುಣಕಾರಿ—ಶಬ್ದ

ಬೋಸ್ಟನ್ನಿನ ದಂತ ವೈದ್ಯರು ಶಬ್ದವನ್ನೇ ನೋವು ಪರಿಹಾರಕವನ್ನಾಗಿ ಉಪಯೋಗಿಸುವ ಪ್ರಯೋಗದಲ್ಲಿ ಯಶಸ್ವಿಯಾಗಿರುವರು. ೫,೦೦೦ ರೋಗಿಗಳಲ್ಲಿ ಶೇ. ೯೦ರಷ್ಟು ಜನರಿಗೆ ಪ್ರಯೋಗ ಯಶಸ್ವಿಯಾಗಿ ಕೆಲಸ ಮಾಡಿದೆ.

ಕಿವಿಯಲ್ಲಿ ಇಟ್ಟುಕೊಂಡ ಹೆಡ್‌ಫೋನಿನಿಂದ (Head-phone) ಸಂಗೀತವನ್ನು ಕೇಳುತ್ತಿದ್ದಾಗ ಹಲ್ಲುಗಳನ್ನು ಕೀಳಲಾಗುತ್ತಿತ್ತು. ರೋಗಿ ನೋವಿನ ಅನುಭವದ ಅಲ್ಪ ಚಿಹ್ನೆ ತೋರಿಸಿದಾಗ ಶಬ್ದ ಹೆಚ್ಚಾಗಿಸುವರು. ಆದರಿಂದ ಆತನು ನೋವಿನ ಅನುಭವವನ್ನು ಪಡೆಯುವುದಿಲ್ಲ. ಆ ಶಬ್ದಗಳು ಕೆಲವೊಮ್ಮೆ ಜಲಪಾತದ ಶಬ್ದ, ಇತ್ಯಾದಿ ಇರುತ್ತದೆ.

ಕಾಫಿ ಕುಡಿಯಲು ಅಂತರ

ಮಿಚಿಗನ್ ಕೇಂದ್ರ ವೈದ್ಯಾಲಯದವರು. ಪ್ರತಿಸಲ ಕಾಫಿ ಕುಡಿಯಲು ಕನಿಷ್ಠ ಅಂತರ ಮೂರು ಗಂಟೆಗಳಾದರೂ ಇರಬೇಕೆಂದು ಹೇಳುತ್ತಾರೆ. ಒಂದು ಲೋಟ ಕಾಫಿ ಕುಡಿಯುವುದರಿಂದ ಅದು ಬೇಗನೆ ಉತ್ತೇಜಿಸಿ ಕೇವಲ ೨೦ ನಿಮಿಷಗಳಲ್ಲಿ ಚೈತನ್ಯದ ಶಿಖರವನ್ನು ಏರಿ ಸುಮಾರು ೩॥ ಗಂಟೆಗಳ ಕಾಲ ಅದರ ಪ್ರಭಾವವನ್ನು ಏಕ ಪ್ರಕಾರವಾಗಿರಿಸುತ್ತದೆ. ಅನಂತರ ಚೇತನ ಶಕ್ತಿ ಕುಸಿಯುತ್ತದೆ. ಈ ಎರಡೂವರೆ-ಗಂಟೆಗಳಲ್ಲಿ ಮತ್ತೊಂದು ಲೋಟ ಕಾಫಿ ಕುಡಿದರೆ ಅದು ಮೊದಲನೆ ಲೋಟ ಕೊಡುವಷ್ಟು ಚೇತನ ಶಕ್ತಿ ಒದಗಿಸಲಾರದೇ ಹೋಗುತ್ತದೆ.

(ಸಾಧಾರ)

ರವೀಂದ್ರವಾಣಿ

(೩ನೇ ಪುಟದಿಂದ)

ಸ್ವಯಂಪೂರ್ಣವಾಗಿದೆ. ಸ್ವಯಂ ತನಗೆ ತಾನೆ ಉತ್ತರವಾಗಿದೆ.

ಸ್ವಾರ್ಥವೂ ಕೂಡ ಸ್ವಲ್ಪವಾದರೂ ತ್ಯಾಗದ ಅಪೇಕ್ಷೆಯಿಂದ ಕೂಡಿದೆ. ಎಂಬುದರಲ್ಲಿ ಸಂದೇಹವಿಲ್ಲ. ಆದರೆ ಸ್ವಾರ್ಥಿ ಮನುಷ್ಯನು ಸಹಜವಾಗಿ ತ್ಯಾಗ ಮಾಡಲಾರನು. ಆತನು ಕಷ್ಟಗಳನ್ನು ಅನುಭವಿಸಿದ ಬಳಿಕವೇ ತ್ಯಾಗ ಮಾಡುತ್ತಾನೆ. ಪ್ರೇಮದ ಮೂಲಕವಾದರೆ ತ್ಯಾಗವು ಸ್ವೇಚ್ಛೆಯಿಂದಲೇ ಆಗುವುದು. ಇಲ್ಲಿ ಈ ತ್ಯಾಗದಲ್ಲಿ ಆನಂದವಿದೆ. ನಮ್ಮ ಸ್ವತ್ವವು ನಮ್ಮ ಶರೀರದ ಅಂಗವಾಗಿರುವುದು. ಆದುದರಿಂದ ಇದನ್ನು ಬೇರ್ಪಡಿಸುವಾಗ ದುಃಖವಾಗುವುದು, ಆದರೆ, ನಾವು ಪ್ರೇಮಾಧೀನರಾದಾಗ ಮಾತ್ರ ನಮಗೆ ಈ ದುಃಖದ ಅನುಭವವೇ ಉಂಟಾಗುವುದಿಲ್ಲ.

ಹಣ್ಣಾಗಿರುವ ಫಲಗಳನ್ನು ತೃಪ್ತಿಸವಾಗ ವೃಕ್ಷಕ್ಕೆ ಹೇಗೆ ಸಂತಾಪವಾಗುವುದಿಲ್ಲವೋ, ಮಗುವಿಗೆ ಹೊಲೆಯನ್ನುಣಿಸುತ್ತಿರುವ ಮಾತೆಗೆ ಸ್ವಲ್ಪವೂ ಹೇಗೆ ಕಷ್ಟವೆಂಬುದೇ ಅನುಭವವಾಗುವುದಿಲ್ಲವೋ ಹಾಗೆಯೇ ನನಗೂ, ಪ್ರೇಮಪೂರ್ಣವಾದ ವ್ಯವಹಾರಗಳಲ್ಲಿ ಕಷ್ಟ ಮತ್ತು ದುಃಖದ ಅನುಭವ ತಿಲ ಮಾತ್ರವೂ ಉಂಟಾಗುವಂತಿಲ್ಲ. ಈ ಪರಿಯ ಕೊಡುಗೆಯಲ್ಲಿ ಒಂದು ಬಗೆಯ ಆತ್ಮ ತೃಪ್ತಿ ಇರುವುದು. ಆತ್ಮ ಸಂತೋಷವಿರುವುದು. ಅರ್ಥಾತ್ ಇದೇ ನಮ್ಮ ಸೃಷ್ಟಿಯಾಗಿರುವುದು.

(ಸಶೇಷ)

Tel: 'BLUEYAGAR'. —— ಚಿನ್ನ ಮತ್ತು ವಜ್ರಗಳ ಆಧುನಿಕ ತಪಸಿರುಮನೆ —— Phone: 374.

ಕೆ.ಆರ್.ಕೆ.ಶೇಟ್ ಡಯಮಂಡ್ ಮಾರ್ಟ್

ಸ್ಥಾಪನೆ:1919] ಚಿನ್ನ ಮತ್ತು ವಜ್ರದ ವ್ಯಾಪಾರಿಗಳು,(ಗವರ್ನ್‌ಮೆಂಟ್ ಕಾಲೇಜ್ ಎದುರುಗಡೆ)ಮಂಗಳೂರು. ಮಾಲಿಕ:ಕೆ.ಕೆ.ಆರ್.ಶೇಟ್

ಯಮನ ನೆರಳು

(೨ನೇ ಪುಟದಿಂದ)

ಪತ್ರ ಓದಿ ಎಲ್ಲರಿಗೂ ತಲೆತಿರುಗತೊಡಗಿತು. ಎಲ್ಲರೂ ಧೈರ್ಯಶಾಲಿಗಳು ಹಾಗೂ ಅನುಭವಿಗಳಾದುದರಿಂದ ವಿಶ್ವಾಸಬಿಡಲಿಲ್ಲ. ಎದುರಿರುವ ಮುಚ್ಚಿದ ಕಪಾಟಿನೆಡೆಗೆ ಎಲ್ಲರೂ ಸರಿಯತೊಡಗಿದರು. ಎಷ್ಟು ಪ್ರಯತ್ನಪಟ್ಟರೂ ಕಪಾಟು ತೆರೆಯಲಿಲ್ಲ. ಎಲ್ಲರೂ ಇನ್ನೊಂದು ತೆರೆದ ಕಪಾಟಿನೆಡೆಗೆ ಹೊರಟರು. ಟಾರ್ಚಿನ ಮಂದ ಬೆಳಕಿಗೆ, ಬೆಳಕು ಮೂಡುವ ಮತ್ತು ನಂದಿಸುವ ನೂಲು ಮಾತ್ರ ಕಂಡಿತು. ಇವರು ನೂಲು ಎಳೆದು ಸ್ವಲ್ಪವಾದರೂ ಪ್ರಕಾಶ ಬೀಳುವಂತೆ ಮಾಡಲು ಪ್ರಯತ್ನಿಸಿ ವಿಫಲರಾದರು. ಈ ನೂಲಿನಿಂದ ಏನೂ ಪ್ರಯೋಜನವಾಗದುದನ್ನು ಕಂಡು, ಡಿ. ಎಸ್. ಪಿ. ಸಾಹೇಬರು ಸಿಟ್ಟಿನಿಂದ 'ಛತ್ತ್ರೀರಿ' ಎಂದಂದು ಅದನ್ನು ಗಟ್ಟಿಯಾಗಿ ಎಳೆದರು. ಕೈಯಲ್ಲಿದ್ದ ನೂಲೂ ಕುಂಡಾಯಿತು. ಹಾಗೂ ಮೇಲಿದ್ದ ಒಂದು ಕೀಲೂ ಕೆಳಗಡೆ ಜಾರಿತು.

ಕೀಲು ಜಾರುತ್ತಲೇ ಅವರು ನಿಂತಿದ್ದ ಇಡಿ ಹಾಲು ಒಂದು ಸಲ ಅಲುಗಾಡಿತು. ಇದೇನೆಂದು ಅವರು ತಿಳಿದುಕೊಳ್ಳುವ ಮೊದಲೇ ನಿಂತಿದ್ದ ಹಾಲ್ ಲಿಫ್ಟಿನಂತೆ ಕೆಳಗಿಳಿಯತೊಡಗಿತು. ಸಾಧಾರಣ ಇಪ್ಪತ್ತು ಗಜ ಕೆಳಗಿಳಿದ ನಂತರ ಸ್ಥಿರವಾಗಿ ನಿಂತಿತು. ಅಲ್ಲಿಯಂತೂ ಅತಿ ಘೋರ ಅಂಧಕಾರವಡಗಿತ್ತು.

ಶರ್ಮಾರವರು ಟಾರ್ಚ್ ಹಾಕುತ್ತಲೇ ಅವರು ಲಿಫ್ಟಿನ ಮುಖಾಂತರ ಬೇರೊಂದು ಕೋಣೆಗೆ ಬಂದುದನ್ನು ತಿಳಿದರು. ಕೋಣೆಗೆ ಕಾಲಿಟ್ಟಕೂಡಲೇ ತನ್ನಿಂದ ತಾನೇ ದೀಪ ಉರಿಯ ತೊಡಗಿತು. ಮೂರು ಗೋಡೆಗಳು ಕಪ್ಪು ಬಣ್ಣದಿಂದ ಕೂಡಿದವುಗಳಾಗಿದ್ದುವು. ಒಂದು ಮೂಲೆಯಲ್ಲಿದ್ದ ವಿದ್ಯುದ್ದೀಪದಿಂದಲೇ ಈ ಪ್ರಕಾಶ ಎಂದು ಕಂಡುಕೊಂಡರು. ಕೋಣೆಯು ಎತ್ತರವು ಹತ್ತು ಗಜಕ್ಕಿಂತ ಹೆಚ್ಚಿರಲಿಲ್ಲ. ಕೋಣೆಯು ಬಹು ಸುಂದರವಾಗಿತ್ತು. ಮೇಲ್ಗಡೆಗೆ ಕಪ್ಪು ಕಲ್ಲನ್ನೂ ಕೆಳಗಡೆ ಸಂಗಮರವರೆ ಕಲ್ಲನ್ನೂ ಹಚ್ಚಿದುದರಿಂದ ಬೀಚುವ ಇಂಗಿ ಹೋಗದೆ ಹೊರಗೆಡಹಲ್ಪಟ್ಟು ಶೋಭಾಯಮಾನವಾಗಿತ್ತು. ಗೋಡೆಯನ್ನು ಧ್ಯಾನಪೂರ್ವಕವಾಗಿ ನೋಡಿದರೆ ಅದು ಕಪ್ಪು ಕಲ್ಲಿನಿಂದ ಮಾಡಲ್ಪಟ್ಟಿಲ್ಲ. ಅದಕ್ಕೆ ಕಪ್ಪು ವಸ್ತ್ರವನ್ನು ಅಷ್ಟು ಸುಂದರವಾಗಿ ಕುಳ್ಳಿರಿಸಲಾಗಿದೆ ಎಂದು ಭಾಸವಾಗುತಿತ್ತು. ಆದರೆ ಆ ಕಪ್ಪು ವಸ್ತ್ರ ಹಾಕಿದುದರ ತಾತ್ಪರ್ಯವೇನೆಂದು ಮಾತ್ರ ತಿಳಿಯಲಿಲ್ಲ.

ಕೈದಿಗಳ ಜಿಜ್ಞಾಸೆ ಹೆಚ್ಚಾಯ್ತು. ಅವರು ಪರದೆಯನ್ನು ಸರಿಸಲು ಪ್ರಯತ್ನಿಸಲಾರಂಭಿಸಿದರು. ಒಬ್ಬನಾದ ನಂತರ ಇನ್ನೊಬ್ಬರಂತೆ ಮೂರು ಮಂದಿ ಪ್ರಯತ್ನಿಸಿ ವಿಫಲರಾದರು. ನಾಲ್ಕನೆಯವನು ಪ್ರಯತ್ನಿಸುವಷ್ಟರಲ್ಲಿ ಪರದೆ ಹರಿಯಿತು. ಮತ್ತು ನಾಲ್ಕು ಪರದೆಗಳೂ ತನ್ನಷ್ಟಕ್ಕೆ ಮೇಲೇರ ತೊಡಗಿದುವು. ಮೂರು ಕಡೆಗಳಲ್ಲಿಯೂ ಪರದೆಯ ಹಿಂದೆ ಸಾಧಾರಣ ಒಂದು ಗಜ ದೂರದಲ್ಲಿ ಗೋಡೆಯಿತ್ತು. ಹಾಗೂ ಅವರಲ್ಲಿ ಅತಿ ಸುಂದರ ನಮೂನೆಯ ಕಲಾಚಿತ್ರಗಳಿದ್ದುವು, ಆದರೆ ನಾಲ್ಕನೆ ಕಡೆ ಏನೂ ಇರಲಿಲ್ಲ. ಅವರೆಲ್ಲಾ ಆ ಬದಿಗೆ ಸಾಗಿದರು. ಅವರು ಪರದೆಯ ಸ್ಥಳವನ್ನು ದಾಟುತ್ತಿದ್ದಂತೆ ನಾಲ್ಕೂ ಪರದೆಗಳು ಕೆಳಗೆ ಬಿದ್ದುದರಿಂದ ಇವರು ಇನ್ನೊಂದು ಅಂಧಕಾರ ಪೂರ್ಣ ಕೊಠಡಿಯಲ್ಲಿ ಬಂಧಿಸಲ್ಪಟ್ಟರು.

ಈ ಎಂಟೂ ಹಿರಿಯ ಪೋಲೀಸ್ ಅಧೀಕರರ ಆಶ್ಚರ್ಯವು ಸೀಮಾತೀತವಾಗಿತ್ತು. ಒಂದು ಹೊಸ ಸಂಕಷ್ಟಕ್ಕೆ ಸಿಕ್ಕಿಕೊಂಡಿದ್ದರು. ಬಹಳ ಯೋಚಿಸಿದಾಗಲೂ ಅಲ್ಲಿಂದ ಹೊರ ಬೀಳುವ ಉಪಾಯವು ಗೋಚರಿಸಲಿಲ್ಲ. ಎಲ್ಲರೂ ಬೆಳಗ್ಗೆ ಬೇಗನೆ ಹೊರಟಿದ್ದರು. ಈಗ ಸಾಯಂಕಾಲ ೫ ಗಂಟೆಯಾಗಿತ್ತು. ಸಸಿವೆ, ನೀರಡಿಕೆ, ಭಯ.ಗಳಿಂದ ಅವರ ಸ್ಥಿತಿ ಚಿಂತಾಜನಕವಾಗಿತ್ತು. ವಿಶ್ರಾಂತಿಗಾಗಿ ಅಲ್ಲಿಯೇ ಅವರು ಸ್ವಲ್ಪ ವಿಶ್ರಮಿಸಿಕೊಳ್ಳ ತೊಡಗಿದರು.

೧೮

ಸುರಂಗದ ರಹಸ್ಯ ಜಯಂತರಿಗೆ ಮೊದಲೇ ತಿಳಿದಿದ್ದುದರಿಂದ ಸ್ವಲ್ಪ ಸಿಪಾಯಿಗಳನ್ನು 'ಕುಂಜರವೇಟರಿಯ ಮಾರ್ಗದಲ್ಲೂ ಸ್ವಲ್ಪ ಸಿಪಾಯಿಗಳನ್ನು ಸುರಂಗದ ಮಾರ್ಗದಲ್ಲೂ ಕಾವಲಿಡಲಾಗಿತ್ತು. ಹೊರಗಿನ ಎಲ್ಲಾ ಸಿಪಾಯಿಗಳ ನೇತೃತ್ವವು ಜನರಲ್ ಕಮಾಂಡ್, ಚೀಫ್ ಇನ್ಸ್‌ಪೆಕ್ಟರ್ ಪ್ರಧಾನ್‌ರವರಿಗೆ ಒಪ್ಪಿಸಲಾಗಿತ್ತು. ಮಧ್ಯಾಹ್ನದ ಮೂರು ಗಂಟೆಯ ವರೆಗೆ ಪೋಲೀಸ್ ಕೇಪ್ಟನರಾಗಲೀ ದಾಮೋದರರಾಗಲೀ ಹೊರ ಬರದುದರಿಂದ ಇನ್ಸ್‌ಪೆಕ್ಟರ್ ಪ್ರಧಾನ್‌ರವರು ಹನ್ನೊಂದು ಮಂದಿಯ ಗಾರ್ಡನ್ನು ಸಿದ್ಧಪಡಿಸಿ ತೋಟವನ್ನು ಪ್ರವೇಶಿಸಿದರು.

ಫಲಕದಾರಿಯ ದಸ್ತಗಿರಿಯ ನಂತರ ಇನ್ಸ್‌ಪೆಕ್ಟರ್ ಪ್ರಧಾನ್‌ರವರು ತನ್ನ ಮೇಲಾಧೀಸರರು ಹಾಗೂ ಸಹಯೋಗಿಗಳನ್ನು ಹುಡುಕ ಹೊರಟರು. 'ಯಮಸುರಿ'ಯನ್ನೇ ತಾನು ಪ್ರವೇಶಿಸುತ್ತಿರುವುದು ಎಂಬ ಕಲ್ಪನೆ ಅವರಿಗಿದ್ದರೂ, ತನ್ನ ಕರ್ತವ್ಯ ನಿಷ್ಠೆಯ ಬೃಹತ್ ನಿಶ್ಚಯವು, ಅವರಲ್ಲಿ ಧೈರ್ಯವನ್ನು ತುಂಬುತಿತ್ತು. 'ಯಮಪುರಿ'ಯ ಮೂಲೆಮೂಲೆಯನ್ನವರು ಅರಸತೊಡಗಿದರು. ಅನಂತರ ಕೋಣೆಗಳ ಜಪ್ತಿಗಾರಂಭವಾಯ್ತು.

ಬಹಳ ಕೋಣೆಗಳನ್ನು ಪರಿಶೀಲಿಸಿದ ನಂತರ ಅವರು ಒಂದು ಅತಿ ಸಣ್ಣ ರೂಮನ್ನು ಪ್ರವೇಶಿಸಿದರು. ಇವರು ಕೋಣೆಯ ಒಳ ಹೊಕ್ಕ ಕೂಡಲೇ ಕೋಣೆಯು ತನ್ನಿಂದ ತಾನೇ ಮೇಲೇರುವಂತೆ ಭಾಸವಾಯ್ತು ಆದರೆ ಸ್ವಲ್ಪ ಹೊತ್ತಿನಲ್ಲಿಯೇ ತಾವು ನಿಂತಿರುವ ಕೋಣೆಯು ಸರಾಗವಾಗಿ ಕೆಳಗಿಳಿಯುತ್ತಿದೆ ಎಂದು ತಿಳಿಯಿದು, ನಾವು ಯಾವುದೋ ಗುಹೆಯನ್ನು ಮುಟ್ಟುತ್ತೇವೆ ಎಂದು ಭಾವಿಸತೊಡಗಿದರು

ಸ್ವಲ್ಪ ಸಮಯ ನಂತರ ಅವರ ಲಿಫ್ಟು ಒಂದು ಕೋಣೆಯಲ್ಲಿ ನಿಂತಿತು. ಅವರೆಲ್ಲರೂ ಕೆಳಗೆ ಹಾರಿದರು, ತಕ್ಷಣ ಲಿಫ್ಟು ಶೀಘ್ರವಾಗಿ ಮೇಲೇರತೊಡಗಿತು, ಆದು ಮೇಲೇರುವ ರಭಸವನ್ನು ಕಾಣಲು ಅವರೆಲ್ಲಾ ಒಂದೇ ಬದಿಯಲ್ಲಿ ನಿಂತಿದ್ದರು. ನಿಂತ ಸ್ಥಳವು ಸುನಕಿ ಲಿಫ್ಟಿನಂತೆ ಕೆಳಗಿಳಿದು ಒಂದು ಕೋಣೆಯ ಎದುರಿಗೆ ನಿಂತಿತು. ಈಗಂತೂ ಅವರ ಹೃದಯದಲ್ಲಿದ್ದ ಅಲ್ಪ ಸ್ವಲ್ಪ ಧೈರ್ಯಗಳೂ, ನಿರಾಶೆ ಅಧೈರ್ಯಗಳಾಗಿ ಮಾರ್ಪಟ್ಟಿದ್ದುವು. ಇನ್ನೂ ಒಂದೆರಡು ಸಲ ಹಾಗೆಯೇ ಅವರು ಲಿಫ್ಟಿನ ಮುಖಾಂತರ ಕೆಳಗಿಳಿಯತೊಡಗಿದರೆ ಖಂಡಿತವಾಗಿಯೂ ಅವರು ಹೃದಯಸ್ತಂಭನದಿಂದಲೇ ಸಾಯುತ್ತಿದ್ದರು. ಮೊರಬರುವ ಮಾರ್ಗವೆಲ್ಲಿಯೂ ಗೋಚರಿಸದುದರಿಂದ ಗೋಡೆ ಒಡೆಯುವುದರಲ್ಲಿ ತತ್ಪರರಾದರು. ಸಾಧಾರಣ ಎರಡು ಗಂಟೆಗಳ ಸತತ ಪರಿಶ್ರಮದ ನಂತರ ಕೆಲವು ಇಟ್ಟಿಗೆಗಳು ತಮ್ಮ ಸ್ಥಾನದಿಂದ ಅಲುಗಾಡಿದುವು. ಅವರು ಒಬ್ಬ ಮನುಷ್ಯನು ನಿರಾಯಾಸವಾಗಿ ತೂರಿ ಹೋಗುವಷ್ಟು ದೊಡ್ಡ ಕಿಂಡಿಯನ್ನು ಗೋಡೆಯಲ್ಲಿ ರಚಿಸಿದರು. ಇನ್ಸ್‌ಪೆಕ್ಟರ್ ಪ್ರಧಾನ್‌ರವರು ಆ ಗುಹೆಯ ಮುಖಾಂತರ ಒಂದು ಅತ್ಯದ್ಭುತ ದೃಶ್ಯವನ್ನು ಕಂಡರು.

ಪ್ರಧಾನ್‌ರವರು ಟಾರ್ಚ್ ಹಾಕುತ್ತಲೇ ಆ ಬೆಳಕಿನಲ್ಲಿ ಪೋಲೀಸ್ ಕೇಪ್ಟನ್ ಮತ್ತವರ ಸಹಕಾರಿಗಳು ಇವರತ್ತ ಪಿಸ್ತೂಲು ಹಿಡಿದು ನಿಂತುದು ಕಂಡುಬಂತು ಭಯದಿಂದ ಪ್ರಧಾನರು ಹಿಂದೆ ಸರಿಯುವಷ್ಟರಲ್ಲಿ "ಶಹಬಾಸ್.....ಪ್ರಧಾನ್ ಹೆದರಬೇಡಿ, ಇಲ್ಲಿಗೆ ಬನ್ನಿರಿ!" ಎಂದರು ಶರ್ಮಾಜಿ.

ಒಬ್ಬೊಬ್ಬರಾಗಿ ಎಲ್ಲರೂ ಆ ಕೋಣೆಯನ್ನು ಪ್ರವೇಶಿಸಿದರು=ಇಲ್ಲಿಂದ ಹೊರ ಹೋಗಲು ಏನಾದರೂ ದಾರಿಯಿದೆಯೇನು?" ಎಂದು ವಿಚಾರಿಸಿದರು. ಶರ್ಮಾಜಿ ಪ್ರಧಾನರು ತಂವು ಇಲ್ಲಿಗೆ ಬರುವ ಮೊದಲುಪಟ್ಟ ಕಷ್ಟವನ್ನು ವಿವರಿಸುತ್ತಲೇ ಇದ್ದ ಅಲ್ಪ ಧೈರ್ಯವನ್ನೂ ಕಳೆದುಕೊಂಡು ಹತಾಶರಾಗಿ ತಲೆಗೆ ಕೈಗೊಟ್ಟು ನಿಶ್ಚಲರಾಗಿ ಕುಳಿತರು ಶರ್ಮಾಜೀ.

"ಈಗೇನು ಮಾಡುವುದು ದಾಮೋದರ್ ಜೀ?" ಎಂದರು ಕೇಪ್ಟನ್.

"ಬನ್ನಿ ಯಾವ ರೀತಿಯಲ್ಲಿ ಇವರು ಗೋಡೆ ಒಡೆದು ಇಲ್ಲಿಗೆ ಬಂದರೋ ಅದೇ ರೀತಿಯಲ್ಲಿ ನಾವೆಲ್ಲರೂ ಗೋಡೆ ಒಡೆದು ಹೊರಗೆ ಹೋಗುವ ಪ್ರಯತ್ನ ಮಾಡುವ" ಎಂದರು ದಾಮೋದರ ಸ್ವರೂಪ. ಇವರು ಗೋಡೆ ಒಡೆಯುವ ಸಿದ್ಧತೆ ಮಾಡುತ್ತಿರುವಾಗಲೇ ಎದುರಿಗಿದ್ದ ಒಂದು ಹಲಗೆಯು ಬದಿಗೆ ಸರಿಯಿತು. ಶರ್ಮಾರವರು ಬ್ಯಾಟರಿ ಹಾಕಿ ನೋಡುವಾಗ ಅದು ಒಂದು ಸುರಂಗ ಮಾರ್ಗದಂತೆ ಕಂಡು ಬಂತು. ಎಲ್ಲರೂ ಆಶಾತುರರಾಗಿ ಆ ಸುರಂಗ ಮಾರ್ಗದ ಮೂಲಕ ಸಾಧಾರಣ ಎರಡು ಫರ್ಲಾಂಗು ನಡೆದರು. ಈ ಕಡೆಯಲ್ಲಿ ಸುರಂಗದ ಕೆಲಸ ಅರ್ಧಕ್ಕೆ ನಿಲ್ಲಿಸಿದಂತೆ ಕಂಡು ಬರುತಿತ್ತು.

"ಈಗ.. .....? ಎಂದರು ದಾಮೋದರ್.

"ಸರಿ, ಗೋಡೆ ಒಡೆಯುವ ಕೆಲಸ ಎಂದರು ಶರ್ಮಾಜಿ. ಸೀಪಾಯಿಗಳು ಮಂತಾವರೆಲ್ಲಾ ಕೈಗೆ ಸಿಕ್ಕಿದ ಸರಂಜಾಮುಗಳಿಂದ ಕೊರೆಯ, ತೊಡಗಿದರು. ಆಗಲೇ ಸುರಂಗದ ಬಲ ಬದಿಯಿಂದ ಎಲ್ಲಿಂದಲೋ ಜೋರಾಗಿ ಗಾಳಿ ಬೀಸಿತು. ಅವರೆಲ್ಲರೂ ಮೇಲೆ ನೋಡಿದಾಗ ಅಲ್ಲಿ ಸಿಪಾಯಿಗಳು ಅರ್ಧ ಇಂಚು ಅಗಲದ ತೂತು ರಚಿಸಿದ್ದರು. ನೋಡುತ್ತಿರುವಂತೆಯೇ

ವಿಶ್ವಕವಿ ಟಾಗೋರರ ಪುಣ್ಯಸ್ಮರಣೆಗಾಗಿ
ಅವರ ಶತಮಾನೋತ್ಸವದ ಸುಸಂದರ್ಭದಲ್ಲಿ
ಪ್ರಕಟಿಸಿದ ಕಿರುಗಾಣಿಕೆಗಳು

ಚಿತ್ರಾಂಗದೆ

ಬೆಲೆ: ೬೦ ನ. ಪೈಸೆ.

(ಶ್ರೀ ಕೆ. ಕೆ. ಶೆಟ್ಟಿ, ಎಂ. ಎಲ್. ಸಿ. ಅವರಿಂದ ಅನುವಾದಿತ)

ರವೀಂದ್ರನಾಥರ ಕಿರುಗತೆಗಳು

ಬೆಲೆ: ೯೦ ನ. ಪೈಸೆ.

(ಶ್ರೀ ಹನುಮಂತರಾವ್ ಮಾಂಜರೇಕರ, ಕಾರವಾರ ಅವರಿಂದ ಅನುವಾದಿತ)

ಪ್ರಕಾಶಕರು:
ನವಯುಗ ಎಂಟರ್‌ಪ್ರೈಸಸ್ ಲಿಮಿಟೆಡ್, ನವಯುಗ ಪ್ರೆಸ್, ಉಡುಪಿ.

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು. ರಾಘವೇಂದ್ರ ಆಚಾರ್ಯ, ಎಂ.ಎ.)

ಸಾಮಾನ್ಯ ರೋಗಗಳು
(ಡಾ. ಕೆ.ಎಲ್. ಐತಾಳ್, ಎಂ. ಬಿ. ಬಿ. ಎಸ್
ಜನರಿಗೆ ತಗಲುವ ಪಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.

ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ, ಉಡುಪಿ.



NAVAYUGA WEEKLY, UDIPI.
REGD. NO.BG. 176

27—7—1961

LICENSE NO. 31
Licensed to Post without Prepayment

ಸುರಂಗ ಮೇಲಿನಿಂದ ನೀರು ಹರಿಯ ತೊಡಗಿದುದರಿಂದ ಅರ್ಧ ಗಂಟೆಯ ಒಳಗೆ ನೀರು ಮೊಣಕಾಲ ವರೆಗೆ ಏರಿತು. ಮೇಲೆ ಮೂಡಿದ ತೂತು ನೀರಿನ ರಭಸಕ್ಕೆ ದ್ವಿಗುಣಿತವಾಗಿ ನೀರು ಸುರಂಗದೊಳಗೆ ರಭಸದಿಂದ ಹರಿಯತೊಡಗಿತು. ತೂತನ್ನು ಮುಚ್ಚಲು ಯಾವ ಉಪಾಯವೂ ಇರಲಿಲ್ಲ. ಒಂದು ಗಂಟೆಯೊಳಗೆ ನೀರು ಕುತ್ತಿಗೆಗೇರಿತು.

"ನಿಷ್ಪ್ರಯೋಜಕರಾಗಿ ಸಾಯುತ್ತಿದ್ದೇವೆ" ಎಂದುದ್ಗರಿಸಿದರು ಡಿ. ಎಸ್. ಸಿ. ಸಾಹೇಬರು.

"ಪರಿಸ್ಥಿತಿಯೇನೋ ಭಯಂಕರವಾಗಿದೆ. ಆದರೆ ಧೈರ್ಯ ಬಿಟ್ಟರೆ ಹೇಗೆ?" ಎಂದು ಧೈರ್ಯವೀಯುವ ಸಾಹಸ ಮಾಡಿದರು. ಕೇಪ್ಟನ್ ಸಾಹೇಬರು.

"ಸನ್ಮಾನ್ಯ ಡಾಮೋದರ್ ಜೀಯವರೇ.....ಜಯಂತರಿಗೇನಾದರೂ ಅಂತಿಮ ಸಂಕೇತವಿದೆಯೇನು?.....ಭಾವೀ ಮಡದಿ ಹರ್ಷವತಿಗಾಗಿ ಸ್ವಲ್ಪ ಸಂಪತ್ತು ಇಟ್ಟುಬಿಡಿ ಪಾಪ!.....ಏನಾದರೂ ಹೇಳಲಿದ್ದರೆ ಬೇಗ ಹೇಳಿಬಿಡಿ! ಎಂದು ಎಲ್ಲಿಂದಲೋ ಕರ್ಕಶ ಅಟ್ಟಹಾಸ ಪೂರ್ಣ ಸ್ವರ ಕೇಳಿಬಂತು.

ಪೋಲೀಸರಂತೂ ಭಯದಿಂದ ಕಂಗಾಲಾಗಿದ್ದರು. ಒಡ್ಡೊಡ್ಡೀತೆಂಬ ಭಯದಿಂದ ಬಂದೂಕು, ರಿವಾಲ್ವಾರುಗಳನ್ನು ಕಲೆಯಿಂದ ಮೇಲಕ್ಕೆತ್ತಿ ಹಿಡಿದಿದ್ದರು. ಬಂದೂಕಿನ ತುದಿ ಸುರಂಗದ ಮೇಲ್ಬಾಗಕ್ಕೆ ಮುಟ್ಟುತಿತ್ತು.

ನೇಪಥ್ಯದಿಂದ ಮಾತಾಡುವವನು ಎಲ್ಲಿಯೋ ಮೇಲ್ಬಾಗದಿಂದ ಮಾತಾಡುತ್ತಿರುವುದರಿಂದ ಬೇರಾವುದೋ ಮಾರ್ಗವಿದೆಯೆಂದು ತಿಳಿದ ಶರ್ಮಾರವರು ಸುತ್ತಲೂ ಟೋರ್ಚ್ ಹಾಕಿದರು. ಮೇಲಕ್ಕೆ ಒಂದು ರೂಪಾಯಿಯ ಆಕೃತಿಯ ತೂತು ಇತ್ತು. ಅದರೊಳಗೆ ಒಂದು 'ಮೈಕ್ರೊಫೋನ್' ಮತ್ತು ಒಂದು ಸಣ್ಣ 'ಸ್ಪೀಕರ್' ಇಡಲಾಗಿತ್ತು. ಒಬ್ಬ ಸೀಪಾಯಿಯು ತನ್ನ ಕೈಯಲ್ಲಿದ್ದ ಸರಳಿನಿಂದ ತೂತನ್ನು ಗಟ್ಟಿಯಾಗಿ ಹೊಡೆದನು. ಅವನು ಮೂರು ಬಾರಿ ಹೊಡೆಯುತ್ತಲೇ ಛೇದವು ದೊಡ್ಡದಾಯ್ತು, ನೀರು ರಭಸದಿಂದ ಹರಿಯುವುದು ನಿಂತುದರಿಂದ ಅವರಿಗೆ ಸರಿಯಾಗಿ ನೆಲದ ಮೇಲೆ ನಿಲ್ಲಲಿಕ್ಕಾಯ್ತು.

ಸೀಪಾಯಿಗಳು ಬಹು ಪ್ರಯತ್ನಪಟ್ಟು ಒಬ್ಬನು ತೂರಿಹೋಗುವಷ್ಟು ತೂತು ರಚಿಸಿದರು. ಶರ್ಮಾರು ಒಬ್ಬ ಸೀಪಾಯಿಯ ಮೇಲೆ ಇನ್ನೊಬ್ಬನನ್ನು ನಿಲ್ಲಿಸಿ ಹೊರಗೆ ನೋಡಲು ಹೇಳಿದರು. ಹೊರಗೆ ಯಾರೂ ಇರಲಿಲ್ಲ. ಹಾಗೂ ವಾಸ್ತವವಾಗಿಯೂ ಸುರಂಗವು ತೋಟದ ಮಧ್ಯಗಲ್ಲೇ ಕೊನೆಗೊಂಡಿತ್ತು. ಯಾರೂ ಅಲ್ಲರದಿದ್ದುದರಿಂದ ಒಬ್ಬೊಬ್ಬರಾಗಿಯೇ ಮೇಲಕ್ಕೇರಿ ಬಂದಿದ್ದರು. ಶತ್ರುಗಳಾರೂ ಗೋಚರಿಸದುದರಿಂದ ಅವರು ನಿರ್ವಿಘ್ನರಾಗಿ ತೋಟದ ಹೆಬ್ಬಾಗಿಲ ಕಡೆ ಹೊರಟರು. ಆಗ ರಾತ್ರಿ ಹನ್ನೊಂದು ಗಂಟೆಯಾಗಿತ್ತು. ಪ್ರಧಾನರು ಹಾಗೂ ಅವರ ಶೂರ ಪೋಲೀಸರು ಎಂಟು ಜನ ಆಫೀಸರರ ಪ್ರಾಣರಕ್ಷಣೆ ಮಾಡಿದುದಕ್ಕಾಗಿ ಶರ್ಮಾರವರು ಅವರನ್ನು ಅಭಿನಂದಿಸಿದರು.

(ಮುಂದುವರಿಯುವುದು)

ಪ್ರಚಲಿತ ಪ್ರಸಂಗ

(೧ನೇ ಪುಟ ದಿಂದ)

ಅಥವಾ ಒಟ್ಟು ವೆಚ್ಚದ ಸೇ. ೯೦ ಮಾತ್ರ ಗ್ರಾಂಟು ನೀಡುವುದೆಂದು ಅದೇಶವಿತ್ತರೂ ಆಗುವ ವೆಚ್ಚದ ಪ್ರಮಾಣ ಖಂಡಿತಕ್ಕೂ ಹೆಚ್ಚುವುದು. ಆರ್ಥಿಕ ದೃಷ್ಟಿಯಿಂದ ಸರಕಾರ ಈ ಹೊಸ ಉದ್ಯಮಕ್ಕೆ ಕೈಹಾಕಿದುದಾದರೆ, ಅದು ಕೈ ಸುಟ್ಟುಕೊಳ್ಳುವುದು ಖಂಡಿತ.

ಇನ್ನು ಮೆನೇಜ್‌ಮೆಂಟಿನವರ ಮೇಲೆ ಪರೋಕ್ಷವತ್ಪಾಯ ಹೇರಿ ಈ ಶಾಲೆಗಳನ್ನು ಸರಕಾರವು ತೆಗೆದುಕೊಳ್ಳಬಯಸುತ್ತದೆಯೆಂದರೆ, ಅದು ಸರಿಯಾದ ನೇರ ಮಾರ್ಗವೆನ್ನುವಂತಿಲ್ಲ. ಶಾಲೆಗಳ ರಾಷ್ಟ್ರೀಕರಣವನ್ನು ಸಾಧಿಸುವುದೇ ಸರಕಾರ ಉದ್ದೇಶವಾಗಿದ್ದರೆ, ಅ ಬಗ್ಗೆ ಆಜ್ಞೆಯನ್ನೇ ಹೊರಡಿಸುವುದು ಕ್ಷೇಮ ಹೊರತು ಇಂತಹ ವಕ್ರ ಮಾರ್ಗ ಹಿಡಿಯುವುದಲ್ಲ. ಅಥವಾ ಅಧ್ಯಾಪಕರ ಮೇಲೆ ಮೆನೇಜುಮೆಂಟಿನವರು ಮಾಡಬಹುದಾದ ದಬ್ಬಾಳಿಕೆಯನ್ನು ತಡೆಹಿಡಿಯಲು ಇದೊಂದು ಮಾರ್ಗವೆಂದರೆ ಇದರಿಂದ ಅದು ನಿಲ್ಲಲಾರದೆಂದೇ ಹೇಳಬಹುದು. ಅಧ್ಯಾಪಕರಿಗೆ ನೇರ ವೇತನ ಬಟವಾಡೆಯ ವ್ಯವಸ್ಥೆಯನ್ನು ಮಾಡಬೇಕೇ ಹೊರತು ಈ ರೀತಿಯ ಮಂಗಮಾಯ್ಕೆಯಲ್ಲಿ ಒಂದನ್ನು ಹಿಡಿಯಲು ಮುಂದಾದರೆ, ಅದರಿಂದ ಮತ್ತೂ ದುಷ್ಪರಿಣಾಮವಾಗುವುದು. ಯಾರ ಹಿತಕ್ಕಾಗಿ ಈ ಯೋಜನೆ ಬರುತ್ತಿದೆಯೋ ಅವರ ಅಹಿತವೇ ಇದರಿಂದ ಆಗುವುದು ಖಂಡಿತ.

ಮೆನೇಜ್‌ಮೆಂಟಿನವರೆಲ್ಲರೂ ಕೊನೆಯದಾಗಿ ಸರಕಾರದ ಅಂತಿಮ ನಿರ್ಧಾರವೇನೆಂದು ತಿಳಿದು ಮುಂದುವರಿಯುವರೆಂದು ತಿಳಿಯುತ್ತದೆ. ಸಾಮಾನ್ಯ ವ್ಯಕ್ತಿಗಳಾಗಿ ವ್ಯಕ್ತಿಗತ ಪರಿಶ್ರಮ ಮತ್ತು ಸೇವಾಕಾಂಕ್ಷೆಯಿಂದ ಕಳೆದ ಹಲವಾರು ವರ್ಷ ನಡೆಸಿಕೊಂಡು ಬರುತ್ತಿರುವ ಶಾಲೆಗಳ ಮೆನೇಜರರು ಬೆಳವಲದ ಶ್ರೀಮಂತರಲ್ಲವೆಂಬುದರಿಂದ, ಸರಕಾರವು ತನ್ನ ಹಠಕ್ಕೆ ಬಲವಾಗಿ ಅಂಟಿಕುಳಿತರೆ, ಶಾಲೆ ಮುಚ್ಚುವೆವೆಂದು ಸರಕಾರಕ್ಕೂ ಅಧ್ಯಾಪಕರಿಗೂ ಸಾಕಷ್ಟು ಪೂರ್ವಭಾವಿ ಸೂಚನೆ ಕೊಡುವರೆಂದೂ ಗೊತ್ತಾಗಿದೆ. ಇದ್ದ ಶಾಲೆಗಳನ್ನು ಮೆನೇಜುಮೆಂಟಿನವರು ಮುಚ್ಚಿದಂದಿನಿಂದ ಅನಿವಾರ್ಯ ಶಿಕ್ಷಣದ ಕಾರಣದಿಂದಲಾದರೂ ಸರಕಾರವೇ ನೋಡಿಕೊಳ್ಳಬೇಕಾಗುತ್ತದೆ. ಈಗ ಉದ್ಯೋಗದಲ್ಲಿದ್ದ ಆಗ ನಿರುದ್ಯೋಗಿಗಳಾಗುವ ಅಧ್ಯಾಪಕರ ಸಮಸ್ಯೆಗಳಿಗೆ ಉತ್ತರ ಕಂಡು ಹಿಡಿಯಬೇಕಾಗುತ್ತದೆ. ಧಾಳಿಯಾದ ನಂತರ ಕತ್ತಿ ಹುಡುಕುವುದಕ್ಕಿಂತ ಕತ್ತಿಯಿಟ್ಟುಕೊಂಡೇ ಸುತ್ತಾಡುವುದು ಉಭಯತರರಿಗೂ ಕ್ಷೇಮಕರವಿದೆ. ಮೈಸೂರು ಸರಕಾರದೊಡನೆ ಇರಬಹುದಾದ ಕತ್ತಿಯೂ ಮಾಮೂಲು ಸವಕಲಾದರೆ ಪ್ರಯೋಜನವೇನು?

— ಗೋರಾ.

ಅಮೃತ ಬಿಂದು

ಮಹಾತ್ಮರಾದ ಜನರ ಬಗ್ಗೆ ಸಂಶಯ ಪಡುವವರ ಚಿಕ್ಕತನಕ್ಕೆ ಬೇರೆ ನಿದರ್ಶನ ಬೇಕಿಲ್ಲ.

○○ ○○

ಆಪನಂಬಿಕೆಯು ಮನುಷ್ಯರು ತಮ್ಮ ತಪ್ಪನ್ನು ಮುಚ್ಚಲು ಯತ್ನಿಸುತ್ತಾರೆ. ನಂಬಿಕೆಯುವರು ತಪ್ಪನ್ನು ಒಪ್ಪಿಕೊಳ್ಳುತ್ತಾರೆ.

○○ ○○

ತಮ್ಮ ಕರ್ತವ್ಯ ತಿಳಿದೂ ಮಾಡದವರಿಂಧಾ ನಿಕೃಷ್ಟರು ಬೇರಿಲ್ಲ.

○○ ○○

ಭಕ್ತನಿಗೆ ಪ್ರಾರ್ಥನೆ ಭಜನೆಗಳಿದ್ದಂತೆ ದೈನಿಕ ಕರ್ತವ್ಯಗಳೂ ಆತನ ಮುನ್ನಡೆಗೆ ಸಹಾಯಕ.

○○ ○○

ಯಾವ ಪ್ರಯತ್ನವೂ ಎಷ್ಟೇ ಚಿಕ್ಕದಾದರೂ ವ್ಯರ್ಥವಲ್ಲ. ಮಳೆ ಹನಿ ಎಷ್ಟೇ ಚಿಕ್ಕದಾದರೂ ಅದು ಬಿದ್ದೆಡೆ ಜೀವ ತುಂಬದೆ?

○ ○

ಸುಣ್ಯಾತ್ಮನೆಂದು ಕರೆದು ಗೌರವಿಸಲ್ಪಟ್ಟ ಅನೇಕ ಪಾಪಿಗಳು ಸುಣ್ಯಾತ್ಮರಾದುದಿದೆ.

○ ○

ಪ್ರಕೃತಿಯ ಸಂಪನ್ನತೆಯಲ್ಲಲ್ಲ; ಮಾನವನ ಚೈತನ್ಯದಲ್ಲಿ ಪ್ರಗತಿ ನಿಂತಿದೆ.

○ ○

ಜಯವೆಂಬ ರೈಲಿನ ಮುಂದೋಟಕ್ಕೆ ಉತ್ಸಾಹವೆಂಬ ಇಂಜಿನೇ ಆಧಾರ.

○ ○

ಪ್ರೇಮ ಪ್ರೇಮವಿದಂದ, ಭಾವನೆ ಭಾವನೆಯಿಂದ, ಆನಂದ ಆನಂದದಿಂದ ಬೆಳೆಯುತ್ತದೆ. ಇನ್ನೊಬ್ಬರು ಹೇಗಿರಬೇಕೆಂದು ನೀನು ಆಶಿಸುವಿಯೋ ಅದರಂತೆ ಮೊದಲು ನೀನಿರಬೇಕು.

○ ○

ಕೆಟ್ಟ ಸರಕಾರವು ತಮಗೆ ಬೇಕಿರುವವರಿಗೆ ಅಧಿಕಾರ ನಿರ್ಮಿಸುತ್ತದೆ. ಉತ್ತಮ ಸರಕಾರವು ಉತ್ತಮರನ್ನು ಅಧಿಕಾರಕ್ಕೆ ಹುಡುಕುತ್ತದೆ.

○ ○

ಸೌಂದರ್ಯದಿಂದ ಆಕರ್ಷಿಸಬಹುದು. ಆದರೆ ಆಕರ್ಷಿತರನ್ನು ಇಟ್ಟುಕೊಳ್ಳಬೇಕಾದರೆ ಬೇರೆ ಗುಣಗಳಿರಬೇಕು.

○ ○

ಹೆಂಗಸು ತನ್ನ ಉಡಿಗೆ ತೊಡಿಗೆಯ ವಿಚಾರ ಮಾತಾಡುತ್ತಾಳೆ. ಗಂಡಸು ತನ್ನ ವಿಚಾರವಾಗಿಯೇ ಮಾತಾಡುತ್ತಾನೆ.

○ ○

ತನ್ನಲ್ಲಿ ತಾನು ತೃಪ್ತನಾಗಿರುವವನಿಗೆ ಇತರರಲ್ಲಿ ಅತೃಪ್ತಿ ಇರದು.

○ ○

ಗುಟ್ಟನ್ನು ಇಟ್ಟುಕೊಳ್ಳದವರಷ್ಟು ಗುಟ್ಟಿನ ವಿಷಯದ ಮೇಲೆ ಆಸಕ್ತಿ ಇರುವವರು ಬೇರಿಲ್ಲ; ಆಸಕ್ತಿಯ ಕಾರಣವೇ ಇತರರಿಗೆ ಅದನ್ನು ಹೇಳುತ್ತಾರೆ!

○ ○

ಕಷ್ಟವು ಹೆಂಗಸಿನ ಶಕ್ತಿಗೆಡಿಸದು, ಅದು ಆಕೆಯ ಜೀವನದ ಒಂದು ಭಾಗವಾಗಿ ಅದರಲ್ಲೇ ಆಕೆ ಬೆಳೆಯುತ್ತಾಳೆ.

ಹೆಚ್ಚು ಬಡ್ಡಿ ಸಹಾ.....

3 %

ಸೇವಿಂಗ್ಸ್ ಬ್ಯಾಂಕ್ ಖಾತೆಯಲ್ಲಿನ
ಅನೇಕ ಅನುಕೂಲತೆಗಳ ಜೊತೆಗೆ
ಇತ್ತೀಚೆಗೆ ಬಡ್ಡಿಯ ದರವನ್ನು
ಸಹಾ ಹೆಚ್ಚಿಸಲಾಗಿದೆ.
ಈಗ ಸೇವಿಂಗ್ಸ್ ಬ್ಯಾಂಕ್ ಖಾತೆಯಲ್ಲಿ
ನೀವು ಸಾ. ಸೇ. ಮೂರರ ದರದಲ್ಲಿ
ಬಡ್ಡಿಯನ್ನು ಪಡೆಯುವಿರಿ.

ಸೇವಿಂಗ್ಸ್ ಬ್ಯಾಂಕ್ ಖಾತೆಯನ್ನು ತೆರೆಯಿರಿ.

ಸಿಂಡಿಕೇಟ್ ಬ್ಯಾಂಕ್

ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸ್: ಮುಕುಂದ ನಿವಾಸ, ಉಡುಪಿ, (ಮೈಸೂರು ರಾಜ್ಯ)
ಸ್ಥಾಪನೆ: ೧೯೩೬.

ಉಡುಪಿ ಡಿ. ಮು. ಕೋರ್ಟಿನಲ್ಲಿ
O. S. No. 126/1961

ಉಡುಪಿ ಅದಮಾರು ಮಠದ ಶ್ರೀ ವಿಭುಧೇಶ ತೀರ್ಥ ಸ್ವಾಮಿರು—ಜನರಲ್ ಏಜಂಟ್ ವಿ. ಶ್ರೀಪತಿ ರಾವ್ —ವಾದಿರು

ಮತ್ತು

ಶಾಂತಯ್ಯ ಸೇವೆಗಾರ -ವೆಂಕಟ್ರಮಣ ಸೇವೆಗಾರರ ಮಗ ಉಡುಪಿ ತಾಲ್ಲುಕ್ ಅರೋಡಿ ಗ್ರಾಮ —ಪ್ರತಿವಾದಿ

ಯವರೊಳಗೆ

ಸದ್ರಿ ಪ್ರತಿವಾದಿಗೆ ತಿಳಿಸುವದೇನೆಂದರೆ—

ವಾದಿರು—ಪ್ರತಿವಾದಿಯಿಂದ ಬರತಕ್ಕ ಚಾಲಗೇಣಿ ಬಾಕಿ ಬಗ್ಗೆ ಮಾಡಿದ ಮೇಲ್ಕಂಡ ದಾವೆಯು ತಾ. 8—8—1961ಕ್ಕೆ ತಸ್ಕೀಗೆಯಿಟ್ಟಿದೆ—ಪ್ರತಿವಾದಿಗೆ ಅಕ್ಷೇಪ ಹೇಳತಕ್ಕದ್ದುಯೆದ್ರೆ ಸದ್ರಿ ದಿನ್ನ ಮೇಲ್ಕಂಡ ಕೋರ್ಟ್ ಮುಂದೆ ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದುಯೆಂಬ ಸಂಗ್ತಿ ತಿಳಿಸೋಣಾಗಿಯಂತೆ.

V. R. Kidyur,
Advocate for Plaintiff.

ಉಡ್ಪಿ, 22—7—1961.

Edited Printed & Published by K. H. Shetty, at the Navayuga Press, Udipi, S. India.

40th year of publication. 3-8-1961 ೪೦ನೇ ವರ್ಷ

ಸಂಪುಟ ೪೧

ನವಯುಗ

Vol. 41

ಸಂಚಿಕೆ ೪೬

No. 46

ಬೆಲೆ 0=13

ಪ್ರಚಲಿತ ಪ್ರಸಂಗ

ಉದ್ದಿಮೆರಂಗದಲ್ಲಿ ಮಹತ್ವದ ಹೆಜ್ಜೆ

ಹಿಂದುಸ್ತಾನ ಯಂತ್ರೋಪಕರಣ ಕಾರಖಾನೆಯು ಎರಡನೆ ವಿಭಾಗದ ಜೋಡಣೆಯಿಂದ ದೇಶದ ಉದ್ದಿಮೆಯ ರಂಗವು ಮತ್ತೊಂದು ಮೈಲು ಮುಂದು ವರಿಯಿತು. ಕೈಗಡಿಯೂರದ ಜೋಡಣೆಯು ಭಾರತದಲ್ಲೇ ನಡೆದ ಸುದಿನವನ್ನು ನಾವು ಕಾಣುವಂತಾಯ್ತು.

ಬ್ರಿಟಿಷ ಸಾಮ್ರಾಜ್ಯದಿಂದ ಸಿಡಿದು ಪ್ರತ್ಯೇಕ ಸ್ವತಂತ್ರ ರಾಷ್ಟ್ರವಾಗಿ, ಪ್ರಜಾಸತ್ತೆಯಾಗಿ ದಿನದಿಂದ ದಿನಕ್ಕೆ ಬೆಳೆದು ಬರುತ್ತಿರುವ ಆಸ್ಯನ್ ರಾಷ್ಟ್ರಗಳಲ್ಲಿ ಭಾರತವು ಅಗ್ರಗಣ್ಯವಾಗಿದೆ. ಭಾರತವು, ಹಲವು ದೋಷಯುಕ್ತವಾಗಿದ್ದರೂ ಸದ್ಯದ ವಾತಾವರಣಕ್ಕೆ ಪ್ರಜಾಪ್ರಭುತ್ವಕ್ಕಿಂತ ಉತ್ತಮವಾದ ಆಡಳಿತ ಪದ್ಧತಿಯು ಬೇರಿಲ್ಲವೆಂಬುದರಿಂದ, ಪ್ರಜಾಸತ್ತೆಯನ್ನು ಸ್ಥಾಪಿಸಿಕೊಂಡಿದೆ. ನಮ್ಮ ದೇಶದಲ್ಲಿ ವ್ಯಾಪಾರಕ್ಕಾಗಿ ತಕ್ಕಡಿ ಹಿಡಿದುಕೊಂಡು ಬಂದ ಇಂಗ್ಲೀಷರು ತಮ್ಮ ಉಪಾಯ ಪಂಚಿಕೆಗಳಿಂದ ಇಲ್ಲಿನ ಜನರನ್ನು ಮೋಸಗೊಳಿಸಿ ತಮ್ಮ ಪ್ರಭುತ್ವವನ್ನು ಜಮಾಯಿಸಿದ ರೀತಿ, ವ್ಯಾಪಾರದ ಹೆಸರಿನಲ್ಲಿ ನಮ್ಮ ದೇಶದ ಸರ್ವ ಸಂಪತ್ತನ್ನು ಅಪಹರಿಸಲು ಮಾಡಿದ ಪ್ರಯತ್ನ-ಕುತಂತ್ರ-ಮೊದಲಾದುವು ಜನಜನಿತವಿವೆ ಆಂಗ್ಲ ಸರಕಾರವು ತೋರಿಕೆಯ ಮಟ್ಟಿಗೆ ಸುಖಸ್ಥಾಪನೆ ಮಾಡಿತ್ತಾದರೂ ವಾಸ್ತವವಾಗಿ ಅದು ನಮ್ಮ ರಕ್ತವನ್ನೇ ಹೀರುತಿತ್ತು ಎಂಬುದನ್ನು ಪ್ರತ್ಯೇಕ ಹೇಳಬೇಕಾಗಿಲ್ಲ.

ಜಗತ್ತು ವೈಜ್ಞಾನಿಕ ಪ್ರಸಂಚದಲ್ಲಿ ಮುಂದುವರಿಯುತ್ತ ಬಂದು, ಔದ್ಯೋಗಿಕ ಕ್ರಾಂತಿಯನ್ನೆಬ್ಬಿಸಿ, ಅದರಿಂದ ಅಸ್ತಿತ್ವದಲ್ಲಿಯೇ ಪರಿವರ್ತನೆ ಹೊಂದುತ್ತ ಬಂದರೂ ಭಾರತದಲ್ಲಿ ಯಾವುದೇ ಉದ್ಯೋಗ ದಂಧೆಗಳು ಬೆಳೆಯುವ ಅವಕಾಶ ನಮಗೆ ನೊದಲಿರಲಿಲ್ಲ. ನಮ್ಮ ದೇಶದಿಂದ ಅಸಿದ್ಧ ವಸ್ತುಗಳನ್ನು ಒಯ್ದು ಇಂಗ್ಲೆಂಡಿನಲ್ಲಿ ಸಿದ್ಧಗೊಳಿಸಿದ್ದ ವಸ್ತುಗಳನ್ನು ನಮಗೆ ಪ್ರಭುಗಳು ಒದಗಿಸುತ್ತಿದ್ದರೆಂಬ ಕಥೆ ಇಂದು ಹಳೆಯದಾಗಿದೆ. ಎಳೆಯ ಗುಂಡುಸೂಜಿ, ಉಡುವ ಬಟ್ಟೆಕೂಡ ವಿದೇಶದಿಂದ ನಮಗೆ ಬರಬೇಕಾಗಿತ್ತೆನ್ನುವಾಗ, ಗಡಿಯೂರ, ರೇಲುಗಾಡಿ, ವಿಮಾನ ಅಸ್ತ್ರಶಸ್ತ್ರಗಳು-ಮೊದಲಾದುವುಗಳ ಬಗ್ಗೇನು ಹೇಳಬೇಕು?

ಆದರೆ, ಭಾರತವು ಆಂಗ್ಲೇಯರ ಕಪಿಮುಷ್ಟಿಯಿಂದ ವಿಮುಕ್ತವಾಯಿತು. ಅದು ತನ್ನನ್ನು ತಾನೇ ಬೇಕಾದಂತೆ ರೂಪಿಸಿಕೊಳ್ಳುವ ಹೊಣೆ ಹೊತ್ತಿತು ದೇಶವನ್ನು ಸುವೀರಾಜ್ಯವನ್ನಾಗಿ ಕಟ್ಟುವ ಹೊಂಗನಸುಗಳನ್ನು ನಮ್ಮ ನಾಯಕರು ಕಂಡು, ಅವನ್ನು ನನಸಾಗಿಸಲು ಯೋಜನೆಗಳ ತಯಾರಿಯಲ್ಲಿ ತೊಡಗಿದರು. ಕೃಷಿಗೆ ಹೆಸರಾಂತ ನಮ್ಮ ಭಾರತದಲ್ಲಿ ಕೃಷಿಯನ್ನು ಲಕ್ಷ್ಯಪೂರ್ವಕ ನೋಡಿಕೊಳ್ಳುವುದು ಅನಿವಾರ್ಯವಾಗಿದ್ದುದರಿಂದ, ಆಹಾರದ ಮಟ್ಟಿಗೆ ಪರಿಪೂರ್ಣತೆಯನ್ನು ಪಡಕೊಳ್ಳುವುದು ಅತ್ಯವಶ್ಯವಾದುದರಿಂದ ಇತ್ತ ತೀವ್ರ ಗಮನವನ್ನು ಕೊಡಬೇಕಾಯಿತು; ನ್ಯಾಯವೇ. ಆದರೆ, ದೇಶವನ್ನು ಕಾಡುತ್ತಿರುವ ಇನ್ನೊಂದು ಮಹಾ ಪ್ರಶ್ನೆಗೆ ಉತ್ತರವರಸುವುದೂ ಅತ್ಯಗತ್ಯವಾಗಿತ್ತು.

ದೇಶದಲ್ಲಿ ಹೇಳಿಸಿಕೊಳ್ಳಬಹುದಾದ ಯಾವುದೇ ಉದ್ದಿಮೆಗಳಿಲ್ಲದುದರಿಂದ ಆಧುನಿಕ ಯುಗದಲ್ಲಿ ಆವಶ್ಯಕವೆನಿಸಿದ ಪ್ರತಿ ಪದಾರ್ಥಗಳನ್ನೂ ಅಯೂತ ಗೊಳಿಸುವುದಕ್ಕಾಗಿ ದೇಶದ ಸಂಪತ್ತನ್ನು ಹೇರಳ ಸುರಿಯ ಬೇಕಾಗುವುದು ಮಾತ್ರವಲ್ಲ, ಜನ ಸಂಖ್ಯೆಯ ಹೆಚ್ಚಳದಿಂದಾಗಿ ನಿರುದ್ಯೋಗ ಸಮಸ್ಯೆಯನ್ನೂ ನಾವು ಎದುರಿಸ ಬೇಕಾಗಿದೆ. ಈ ಕಾರಣಗಳಿಂದ 'ಔದ್ಯೋಗೀಕರಣ'ದತ್ತ ಗಮನ ಹರಿಸದಿರುವುದು ಅಸಾಧ್ಯವಾದುದೆನಿಸಿತು. ಸರ್ವದೃಷ್ಟಿಯಲ್ಲಿಯೂ ಸ್ವಪರಿಪೂರ್ಣತೆ ಅಥವಾ ಸ್ವಾವಲಂಬನವನ್ನು ಸಾಧಿಸುವ ಪ್ರಯತ್ನಗಳ ನಾಂದಿಯಾಗಿ ದೇಶದಲ್ಲಿ ಹಲವಾರು ಕಾರಖಾನೆಗಳು ಸಂಸ್ಥಾಪಿತವಾದುವು; ಮುಂದಕ್ಕೂ ಆಗುತ್ತಿವೆ. ಬೆಂಗಳೂರಿನಲ್ಲಿ ರಚಿತವಾದ ಹಿಂದುಸ್ತಾನ್ ಯಂತ್ರೋಪಕರಣ ಕಾರಖಾನೆಯು ಸ್ವತಂತ್ರ ಭಾರತದ ಕಲಶ ಪ್ರಾಯವಾದ ಕೆಲವೇ ಉದ್ದಿಮೆ ಕ್ಷೇತ್ರಗಳಲ್ಲಿ ಒಂದಾಗಿದೆ.

ಹಿಂದುಸ್ತಾನ್ ಯಂತ್ರೋಪಕರಣ ಕಾರಖಾನೆಯು ಎರಡನೆಯ ಉದ್ದಿಮೆಯ ವಿಭಾಗವೊಂದು ಕಳೆದ ವಾರದಲ್ಲಿ ಪ್ರಧಾನಿ ನೆಹರುವರಿಂದ ಉದ್ಘಾಟಿತವಾಯ್ತು. ಇದು ಆಧುನಿಕ ಭಾರತದ ಇತಿಹಾಸದಲ್ಲಿಯೇ ಚಿರಸ್ಮರಣೀಯವಾದ ದಿನ. ಅಂದು ಭಾರತೀಯರಿಂದಲೇ ಜೋಡಿಸಲ್ಪಟ್ಟ ಕೈಗಡಿಯೂರಗಳು ನಿರ್ಮಾಣಗೊಂಡ ಸುದಿನ. ಇದೇ ರೀತಿಯಲ್ಲಿ ಭಾರತವು ತನ್ನ ದೇಶದ ಅಂತರಂಕ ಬೇಡಿಕೆಗಳನ್ನು ಮಾತ್ರವಲ್ಲ ವಿದೇಶಗಳಿಂದ ಬರಬಹುದಾದ ಬೇಡಿಕೆಗಳನ್ನೂ ಪೂರೈಸುವಲ್ಲಿ ಕೆಲವೇ ಕಾಲದಲ್ಲಿ ಸಶಕ್ತವಾಗುವುದೆಂದು ಹೇಳಬಹುದು.

ಹಿಂದುಸ್ತಾನ ಯಂತ್ರೋಪಕರಣ ಕಾರಖಾನೆಯಲ್ಲಿ ಕೈಗಡಿಯೂರಗಳನ್ನು ಜೋಡಿಸುವ ಕಾರ್ಯದಲ್ಲಿ ತರಬೇತಿ ನೀಡುವ ವ್ಯವಸ್ಥೆಯಿದೆ. ಈ ತರಬೇತಿದಾರರು ಈಗ ೩೦೦ ಪುರುಷರು ಮತ್ತು ೩೦೦ ಸ್ತ್ರೀಯರು ಕೈಗಡಿಯೂರಗಳನ್ನು ಜೋಡಿಸಿದ್ದಾರೆ. ಈಗ ಸ್ಥಾಪಿತವಾಗಿರುವ ಹೊಸ ಕಾರಖಾನೆಗಾಗಿ ತಜ್ಞರ ತರಬೇತಿಯನ್ನು ನಡೆಸುವ ವ್ಯವಸ್ಥೆಯಿದೆ. ಈ ಸಂಬಂಧದಲ್ಲಿ ಸಿಟಿಜನ್ ವಾಚ್ ಕಂಪೆನಿಯೆಂಬ ಜಾಪಾನೀ ಸಂಸ್ಥೆಯೊಂದರ ಸಹಕಾರವನ್ನು ಪಡೆಯಲಾಗುತ್ತಿದೆ. ೨೨ ಜನ ಭಾರತೀಯರು ಗಡಿಯೂರ ಜೋಡಣೆಯ ತರಬೇತಿಯನ್ನು ಈಗ ಜಪಾನದಲ್ಲಿ ಪಡೆಯುತಿದ್ದಾರೆ. ಸಿಟಿಜನ್ ವಾಚ್ ಕಂಪೆನಿಯ ಸಹಾಯದ ಸವಿನೆನಪಿಗಾಗಿ ಈ ಕಾರಖಾನೆಯಲ್ಲಿ ಜೋಡಿಸಲಾಗುವ ಪುರುಷರ ಕೈಗಡಿಯೂರಗಳನ್ನು 'ಎಚ್. ಎಂ. ಟಿ ಸಿಟಿಜನ್' ಎಂದು ಹೆಸರಿಸಲಾಗುವುದು. 'ಸುಜಾತಾ' ಎಂಬುದು ಸ್ತ್ರೀ ಗಡಿಯೂರದ ಹೆಸರಾಗುವುದು.

ಕೆಲಿಫೋರ್ನಿಯಾ ವಿಶ್ವವಿದ್ಯಾಲಯದ ೧೪ ವಿದ್ಯಾರ್ಥಿಗಳ್ಳೊಂದು ತಂಡವು ಭಾರತವನ್ನು ಸಂದರ್ಶಿಸುತ್ತಿದೆ. ತಂಡವು ಬೊಂಬಾಯಿಯಲ್ಲಿಳಿದಾಗ ತೆಗೆದ ಚಿತ್ರವಿದು.

ಭಾರತದಲ್ಲಿ ಸರಕಾರಿ ಉದ್ದಿಮೆರಂಗದಲ್ಲಿಯೇ ನಾಲ್ಕು ಯಂತ್ರೋಪಕರಣಗಳ ಕಾರಖಾನೆಗಳನ್ನು ಸ್ಥಾಪಿಸುವ ಕಾರ್ಯಕ್ರಮದಂತೆ ಹಿಂದುಸ್ತಾನ್ ಮೆಶಿನ್ ಟೂಲ್ಸ್‌ರವರು ಅಲ್ಪಾವಧಿಯಲ್ಲಿಯೇ ಕಟ್ಟಿಸಿದ ಈ ಕಾರಖಾನೆಯು ಎರಡನೆಯದಾಗಿದೆ. ಮೊದಲಿನ ಕಾರಖಾನೆಯು ಬಳಿಯಲ್ಲಿಯೇ ಸುಮಾರು ೬೦೦ ಎತ್ತರ ಜಮೀನಿನಲ್ಲಿ ಇದು ಇದೆ. ಯಾವ ವಿದೇಶೀಯರ ಸಹಾಯವಿಲ್ಲದೇನೇ ಭಾರತೀಯ ಇಂಜಿನಿಯರರು ಕೇವಲ ೧೪ ತಿಂಗಳುಗಳಲ್ಲಿ ಇದನ್ನು ಜೋಡಿಸಿದ್ದರು ಇದು ಪ್ರತಿ ವರ್ಷ ಒಂದು ಸಾವಿರ ಯಂತ್ರಗಳನ್ನು ತಯಾರಿಸುವ ಸಾಮರ್ಥ್ಯ ಪಡೆದಿದೆ. ಈ ಎರಡೂ ಕಾರಖಾನೆಗಳು ತಯಾರಿಸುವಷ್ಟು ಯಂತ್ರಗಳನ್ನು ಜಗತ್ತಿನ ಈ ಭಾಗದಲ್ಲಿ ಕಮ್ಯುನಿಸ್ಟ್ ರಾಷ್ಟ್ರಗಳನ್ನುಳಿದರೆ, ಮತ್ತಾವ ರಾಷ್ಟ್ರವೂ ನಿರ್ಮಿಸುತ್ತಿಲ್ಲ. ಹೊಸ ಕಾರಖಾನೆಯ ಸ್ಥಾಪನೆಯಿಂದ ಸಂಖ್ಯೆಯೆರಡಾದರೂ ಅವುಗಳ ಆತಳತೆಯು ಒಂದೇ ಆಗಿರುವುದು.

ಭಾರತೀಯರು ಯಾವುದರಲ್ಲಿಯೂ ಹಿಂದುಳಿದಿಲ್ಲ ಆವಕಾಶ ದೊರೆತರೆ, ಅವರು ತಮ್ಮ ಶಕ್ತಿ ಸರ್ವಸ್ವವನ್ನೂ ಕೇಂದ್ರೀಕರಿಸಿ ರಾಷ್ಟ್ರದ ಅಭಿವೃದ್ಧಿಗಾಗಿ ದುಡಿಯುವರು ಎಂಬುದಕ್ಕೆ ಎರಡು ಪಂಚ

(೧೨ನೇ ಪುಟ ನೋಡಿರಿ)

ESTD. 1921

NAVAYUGA
KANNADA WEEKLY,
UDIPI.

Founder:
Late Sri A. B. Shetty
Former Minister for Public Health, Govt. of Madras & Govt. of Mysore.

ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದ ಬಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ರಾಷ್ಟ್ರೀಯ ವಾರಪತ್ರಿಕೆ

ಸ್ಥಾಪನೆ: ೧೯೩೧.

ಗೌರವ ಸಂಪಾದಕರು:
ಎಸ್. ಗೋಪೀಚಂದ ರಾವ್, ವಿದ್ವಾನ್.
ಬಿ. ರಾಮರಾಯ ಶೆಟ್ಟಿ, ಬಿ. ಎ., ಎಲ್. ಟಿ.

ಸಂಚಾಲಕ ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ.

●

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-50
ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3-50

ಹೆಚ್ಚಿನ ವಿವರಗಳಿಗೆ ವ್ಯವಹರಿಸಿರಿ.

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವಸಾಕಾರ್ಯವಿರುವುದು.

ಧಾರಾವಾಹಿ ಕಾದಂಬರಿ

ಯಮುನ ನೆರಳು

ಮೂಲಲೇಖಕರು: ಶ್ರೀ ಎಂ. ಎಲ್. ಪಾಂಡೇಯ.
ಅನುವಾದಕರು: ಶ್ರೀ ಎಸ್. ಎಂ. ಶೆಟ್ಟಿ, ಶಿಮುಂಜೆಪರಾರಿ.
(ಕಳೆದ ಸಂಚಿಕೆಯಿಂದ)

— ೧೯ —

ಗುಪ್ತ ಪತ್ತೆದಾರ ಜಯಂತರು ಈಗ ನಿಮ್ಮದಿ ತಾಳಿದ್ದರು. ಅವರ ಮನೆಯಲ್ಲಿ ಮಿತ್ರಗೋಷ್ಠಿ ನಡೆದಿತ್ತು. ರಾಜಕುಮಾರಿ ಮಾಯಾವತಿಯೂ ಪ್ರಾಣದಾಸರೊಂದಿಗೆ ಆಗಮಿಸಿದ್ದಳು. ಸೋಲೀಸ್ ಕೇಪ್ಟನ್ ಶರ್ಮಾರಿನ್ನೂ ಬಂದಿರಲಿಲ್ಲ ಎಲ್ಲರೂ ಅವರನ್ನೇ ಪ್ರತೀಕ್ಷಿಸುತ್ತಿದ್ದರು.

ಸ್ವಲ್ಪ ಸಮಯ ನಂತರ ಇನ್ಸ್‌ಪೆಕ್ಟರ್ ದೀಕ್ಷಿತ್ ಮತ್ತು ಪ್ರಧಾನರೊಡನೆ ಕೇಪ್ಟನ್ ಆಗಮಿಸಿದರು. ಕುಶಲ ವಾರ್ತೆಗಳು ನಡೆಯುತ್ತಿದ್ದಂತೆಯೇ ಜಯಂತ್ ಕುಮಾರರು ಬಂದು ಗೋಷ್ಠಿಯಲ್ಲಿ ಸೇರಿಕೊಂಡರು.

"ನನ್ನ ತಪ್ಪಿನಿಂದಾಗಿಯೇ ನೀವು ಕಷ್ಟ ಅನುಭವಿಸಬೇಕಾಯ್ತು, ನನ್ನನ್ನು ಕ್ಷಮಿಸಿ!" ಎಂದು ಮುಗ್ಧಕಂಠದಿಂದ ನುಡಿದಳು ಮಾಯಾ.

"ತಾವು ಮೋಸದಲ್ಲಿ ಹಾಗೂ ಪ್ರಾಣರಕ್ಷಣೆಗಾಗಿಯೇ ತಪ್ಪುಮಾಡಿದುದರಿಂದ ಅದು ಕ್ಷಮಾರ್ಹವಾಗಿದೆ." ಎಂದುತ್ತರವಿತ್ತರು ಜಯಂತರು.

"ಹಾಂ, ಮಾಯಾವತಿ ತಾವು ಹೇಗೆ ಮೋಸಹೋದಿರಿ?" ಎಂದು ವಿಚಾರಿಸಿದರು ಶ. ಶರ್ಮಾ. ಮಾಯಾಳು ಅತ್ಯಂತವಾಗಿ ಎಲ್ಲಾ ಕಥೆಗಳನ್ನು ವಿವರಿಸಿದಳು.

"ಸರಿ, ಆ ದಿವಸದ ನಂತರ ಈಗ ಒಂದು ತಿಂಗಳು ಕಳೆದರೂ ಕೊಲೆಗಾರರನ್ನು ಕಂಡುಹಿಡಿಯಲಾಗಲಿಲ್ಲ." ಎಂದರು ಪುನಃ ಕೇಪ್ಟನ್.

ಹೌದು, ಈಗಂತೂ ಅವರು ಯಾರ ಜೀವ ತೆಗೆಯಲೂ ಹಿಂದೆ ಮುಂದೆ ನೋಡಲಿಕ್ಕಿಲ್ಲ. ಏಕೆಂದರೆ ಅವರ ಇಬ್ಬರು ಸಹಾಯಕರು ಮೃತರಾದುದಲ್ಲದೆ ಎಲ್ಲಾ ಸಾಹಸ ಕಾರ್ಯಗಳಿಗೆ ನಾನು ಪೂರ್ಣವಾಗಿ ತಣ್ಣೀರೆರಚಿಬಿಟ್ಟಿದ್ದೇನೆ" ಎಂದುತ್ತರವಿತ್ತರು ಜಯಂತ್ ಕುಮಾರ.

"ಇವರಂತಹ ನಿರ್ಭಯ ವ್ಯಕ್ತಿಗಳು ಎಂಥ ದರೋಡೆಯನ್ನು ಬೇಕಾದರೂ ಮಾಡಬಹುದು, ಆದರೆ ಈ ಕೊಲೆಗಳಿಗೇನಾದರೂ ಕಾರಣ ಯಾ ಉದ್ದೇಶವಿರಬೇಕಾದುದು ಅವಶ್ಯತಾನೇ?" ಎಂದರು ಪ್ರಧಾನ್.

"ಧನಾರ್ಜನೆಯೇ ಇವರ ಕಾರ್ಯವೆಂಬುದೇನೋ ಹೌದು.. ಆದರೆ ಇವರು ಸಾಧಾರಣ ದರೋಡೆ ಯಾ ಕಳ್ಳತನ ಎಂಬ ಹೆಸರು ಗಳಿಸಲಿಚ್ಛಿಸದೆ ಕೊಲೆ ಮಾಡಿಯೇ ದರೋಡೆ ಮಾಡುತ್ತಾರೆ.' ಎಂದರು ಜಯಂತ ಕುಮಾರರು.

"ಹಾಗಾದರೆ ಇವರ ನೈಜಕೃತ್ಯವೇನು? ಎಂದು ವಿಚಾರಿಸಿದರು ದಿಕ್ಷಿತ್.

"ಧನಾರ್ಜನೆಯೊಡನೆ ಕೈಯನ್ನೂ ಉದ್ದಮಾಡಿಕೊಳ್ಳಬೇಕೆಂದೇ ಅವರ ಆಶೆ."

"ಕೈಯುದ್ದವೆಂದರೆ ಯಾವ ಅರ್ಥದಲ್ಲಿ?' ಎಂದರು ಕೇಪ್ಟನ್.

"ಇದೇ ಮುಖ್ಯ ಪ್ರಶ್ನೆ ಹಾಗೂ ಇದರ ಅರ್ಥವೇ ಈ ಸಮಸ್ಯೆಯ ಉತ್ತರ!' ಎಂದರು ಜಯಂತ್.

"ಅದರೆ ಅವರು ನಮ್ಮ ರಾಜಪರಿವಾರದ ಸುತ್ತಲೂ ಶಪಿಗ್ರಹದಂತೆ ಏಕೆ ಸುತ್ತಾಡುತ್ತಾರೆ?" ಎಂದರು ಪ್ರಾಣದಾಸರು.

"ಓಹ್...ಇದು ಶರ್ಮಾರವರ ಪ್ರಶ್ನೆಯ ಮತ್ತೊಂದು ರೂಪ!" ಅಂದರು ಜಯಂತ್ ಕುಮಾರ್.

"ನೀವು ಸುಮ್ಮಸುಮ್ಮನೆ ಗಾದೆ ಹೇಳುತ್ತಿರುವಿರಲ್ಲಾ?' ಎಂದಳು ಮಾಯಾ.

"ಈ ದಳದ ಸರದಾರನು ಇಷ್ಟು ಪಾಪವನ್ನು ಹೊತ್ತುಕೊಳ್ಳುವಂತೆ ಮಾಡಿದವರು ನಿಮ್ಮ ಪರಿವಾರದವರೇ ಎಂದು ನಿಮಗೆ ಈಗಲೇ ತಿಳಿಯುವುದು."

"ವಾಸ್ತವದಲ್ಲಿ ಈ ದಳದ ಸರದಾರನು ಯಾರು?" ಎಂದು ವಿಚಾರಿಸಿದರು ಶರ್ಮಾರವರು.

"ಡಾಕ್ಟರ್ ರಣಜಿತ್‌ಸಿಂಹ ಚೌಹಾನರು' ಎಂದುತ್ತರವಿತ್ತರು ಜಯಂತ್.

"ಹಾಂ, ನಾವು ದಲಿತಸಿಂಹರೆಂದೇ ತಿಳಿದಿದ್ದೆವಲ್ಲಾ!' ಎಂದು ಆಶ್ಚರ್ಯ ಪ್ರಕಟಿಸಿದರು ಕೇಪ್ಟನ್.

"ಹೌದು ಡಾಕ್ಟರ್ ರಣಜಿತ್‌ಸಿಂಹ ಚೌಹಾನರ ಮತ್ತೊಂದು ಪ್ರತಿಷ್ಠಿತ ಹೆಸರು 'ಮಿ. ದಲಿತಸಿಂಹ'....ಇಂದಿನಿಂದ ಹಲವಾರು ವರ್ಷಗಳ ಹಿಂದೆ ಅಜಮೀರದಲ್ಲಿ ಒಂದು ಧನಾಢ್ಯ ಪರಿವಾರ ವಾಸಿಸುತಿತ್ತು. ದೈವಗತಿಯಿಂದ ಈ ಪರಿವಾರವು ದಿವಾಲಿಯಾಗಿ ಸಂಪೂರ್ಣ ನಾಶವಾಯ್ತು. ರಾಜಬಹದ್ದೂರ್ ಪ್ರಣಜೀತ್ ಸಿಂಹರು ತಮ್ಮ ಏಕ ಮಾತ್ರ ಪುತ್ರನನ್ನು ಅಧ್ಯಾಯನಕ್ಕಾಗಿ ವಿದೇಶಕ್ಕೆ ಕಳುಹಿಸಲು ಇದ್ದ ಅಲ್ಪ ಸ್ವಲ್ಪ ಭೂಮಿ ಸೊತ್ತುಗಳನ್ನು ಮಾರಿದರು. ಇಪ್ಪತ್ತು ವರ್ಷ ರಣಜೀತನು ವಿದೇಶದಲ್ಲಿ ನೆಲೆಸಿಂತನು, ಮತ್ತು 'ಓಕ್ಸ್‌ಫರ್ಡ್'ಯುನಿವರ್ಸಿಟಿಯಲ್ಲಿ 'ಡಿ. ಎಸ್. ಪಿ.' ಡಿಗ್ರಿ ಪಡೆದನು. ಅಧ್ಯಯನ ಕಾಲದಲ್ಲಿಯೇ ಡಾಕ್ಟರ್ ರಣಜೀತನಿಗೆ ಪ್ರವಾಸದ ಆಶೆ ಹುಟ್ಟಿತ್ತು. ಸಾಯನ್ಸ್ ಡಾಕ್ಟರರಾದ ಕಾರಣ ಹೊಸ ಹೊಸ ಶೋಧನೆಗಾಗಿ ಈ ದೇಶದಿಂದ ಆ ದೇಶವೆಂಬಂತೆ ಅಡ್ಡಾಡುತಿದ್ದನು. ಬೋಟನೀ ಅವನ ಪ್ರೀತಿಯ ಪಾಠವಾದುದರಿಂದ ಗಿಡಮರಗಳ ಸಂಶೋಧನೆಗಾಗಿ ಅವನು ಹತ್ತು ವರ್ಷಗಳಲ್ಲಿ ಆಫ್ರಿಕದ ನಿರ್ಜನ ಕಾಡುಗಳಲ್ಲಿ ಕಳೆದನು. ಅಲ್ಲಿಯೇ ಅವನಿಗೆ 'ಮನುಷ್ಯ ವಿದ್ವಂಸಕ' ಗಿಡದ ಪತ್ತೆಯಾಯ್ತು.

ಕೆಲವು ಕಾಲಾನಂತರ ಅವನು ಭಾರತಕ್ಕೆ ಮರಳಿ ಬಂದನು...ಆಗವನು ಸಂಪೂರ್ಣವಾಗಿ ಧನಹೀನನಾಗಿದ್ದನು. ತನ್ನ ಅಳಿದುಳಿದ ಭೂಮಿಯನ್ನು ಮಾರಿ ಪ್ರಯೋಗವನ್ನು ಮುಂದುವರಿಸಲಿಕ್ಕಾಗಿಯೇ ಅವನು ಭಾರತಕ್ಕೆ ಬಂದಿದ್ದನು. ಅವನು ಯಾವುದೋ ಒಂದು ನವ್ಯ ವಸ್ತುವಿನ ಮೂಲಕ ಹೊಸ ಶೋಧನೆಯನ್ನು ಮಾಡುವವನಿದ್ದನು. ಆದರೆ ಭಾರತಕ್ಕೆ ಬಂದ ನಂತರ ತನ್ನ ಎಲ್ಲಾ ಭೂಮಿಯೂ 'ಲೀಲಾವು" ಆಗಿದೆಯೆಂದವನಿಗೆ ತಿಳಿಯಿತು. ತಂದೆಯು ತೀರಿ ಹೋಗಿದ್ದರು. ಅವನು ವಿದೇಶದಿಂದಲೇ ತನ್ನ ಕಾರ್ಬಾರನ್ನು ತನ್ನ ಸಂಬಂಧಿಕನೋರ್ವನಿಗೆ ಬಿಟ್ಟುಕೊಟ್ಟಿದ್ದನು. ಆ ಸಂಬಂಧಿಯ ಪತ್ತೆಯೇ ಅವನಿಗಾಗಲಿಲ್ಲ. ಆಫ್ರಿಕದ ಗುಡ್ಡಕಾಡುಗಳಲ್ಲಿ ತಿರುಗುತಿದ್ದ ಇವನಿಗೆ ಸ್ವದೇಶದ ಬಗ್ಗೆ ಏನೂ ತಿಳಿದಿರಲಿಲ್ಲ. ಇದರಿಂದ ನಿರಾಶನಾದ ಅವನು ಸಂಬಂಧಿಕರಿಂದ ಸಾಲ ಕೇಳುವ ಪ್ರಯತ್ನಮಾಡಿ ಅದರಲ್ಲೂ ವಿಫಲನಾದನು. ಇವನ ಹಲವಾರು ಕೆಲಸಗಳು ಕೆಟ್ಟವು; ಪ್ರಯತ್ನ

(೧೧ನೇ ಪುಟ ನೋಡಿರಿ)

41 ವರ್ಷಗಳ ಭದ್ರ ಹಾಗೂ ಸಮರ್ಥ ಬೇಂಕಿಂಗ್ ಸೇವೆ.

ದಿ. ಪಾಂಗಾಳ ನಾಯಕ್ ಬೇಂಕ್ ಲಿ.

ನಮ್ಮ 3 ವರ್ಷ ವ್ಯಾದೆಯ ಕೇಶ್ ಸರ್ಟಿಫಿಕೇಟುಗಳಲ್ಲಿ ರೇವಣಿ ಮಾಡಿರಿ: ಎಡ್ಡಿ ಸೇಕಡಾ 5ರಂತೆ: ರೂ. 87—00 3 ವರ್ಷಗಳ ಅಂತ್ಯದಲ್ಲಿ ಬಡ್ಡಿ ಕೂಡಿ ರೂ. 100—00 ಒದಗಿಸುವುದು.

ಕರೆ, ಚಿಕ್ಕ ವ್ಯಾದೆ, ನಿರಖು ರೇವಣಾತಿಗಳ ಮೇಲೆ ಆಕರ್ಷಣೀಯ ಶರ್ತಗಳು: ಬಡ್ಡಿ ಸೇಕಡಾ 5½ರ ವರೆಗೆ.

ತಾ. 1—4—1961ರಿಂದ ಸೇವಿಂಗ್ಸ್ ಬೇಂಕ್ ಖಾತೆಗಳ ಮೇಲೆ ಬಡ್ಡಿ ಸೇಕಡಾ 3ರಂತೆ.

THE PANGAL NAYAK BANK LTD.
Estd: 1920

ಅಭಿಪ್ರಾಯ:

ಕಮ್ಯುನಿಸ್ಟರ ದ್ವಿಮುಖ ಧೋರಣೆ

ಉಕ್ಕಿನ ಪಕ್ಷವೆಂದು ಹೆಸರಾದ ಭಾರತೀಯ ಕಮ್ಯುನಿಸ್ಟ್ ಪಕ್ಷದಲ್ಲಿಯೂ ಒಳಗುಂಪುಗಳ ಸಂಖ್ಯೆ—ಅಭಿಪ್ರಾಯ ಭೇದದಿಂದ—ಹೆಚ್ಚುತ್ತಿದೆ. ಅಧಿಕಾರದ ಮೇಲೆ ಕಣ್ಣಿಟ್ಟಿರುವ ಇವರು ಒಂದೊಂದೆಡೆ ಒಂದೊಂದು ನೀತಿಯನ್ನು ಅನುಸರಿಸುತಿದ್ದಾರೆ.

ಶ್ರೀ ಶಿವಶಂಕರ, ಮದ್ರಾಸು.

ಕೆಲ ಸಮಯದ ಹಿಂದೆ ಅಮೆರಿಕದವನೊಬ್ಬನು ಸೇನಾಧಿಪತಿ ತಿಮ್ಮಯ್ಯನವರ ಕುರಿತು ಬರೆದಿರುವ ಒಂದು ಪುಸ್ತಕವು ಪ್ರಕಟವಾದಾಗ ಭಾರತದ ಲೋಕ ಸಭೆಯಲ್ಲಿ ಹಾಗೂ ರಾಜ್ಯ ಸಭೆಯಲ್ಲಿ ಕಮ್ಯೂನಿಸ್ಟರು ದೊಡ್ಡ ಕೋಲಾಹಲವನ್ನೆಬ್ಬಿಸಿದರು. ಅನಂತರ ಜರ್ಮನ್ ಭಾಷೆಯಲ್ಲಿ ಭಾರತದ ಕುರಿತಾದ (ಕಮ್ಯೂನಿಸ್ಟರನ್ನು ರೀಕಿಸಿ) ಬರೆದಿರುವ ಪುಸ್ತಕವೊಂದು ಪ್ರಕಟವಾದಾಗಲೂ ಅದೇ ಕಮ್ಯೂನಿಸ್ಟ್ ಸದಸ್ಯರು ದೊಡ್ಡರಾದ್ಧಾಂತವನ್ನು ಮಾಡಿದರು. ಅನ್ಯದೇಶದವರಿಂದ ಭಾರತಕ್ಕೇನಾದರೂ ಅಪಮಾನವಾದಲ್ಲಿ ಅದನ್ನು ರೀಕಿಸುವವರು ತಾವು ಮಾತ್ರ ಎಂಬಂತೆ ಬಹಳಷ್ಟು ಮಾತಾಡಿದರು. ನಿಜವಾಗಿ ಅವರು ಆ ಪುಸ್ತಕಗಳನ್ನು ಓದಿದ್ದಾರೆಯೇ ಅಥವಾ ರಷ್ಯಾದಿಂದ ಅವರಿಗೆ ಬಂದಿರಬಹುದಾದ ಗುಪ್ತ ಆದೇಶದ ಮೇಲೆ ಅವರು ಗುಲ್ಲನ್ನೆಬ್ಬಿಸಿದರೋ ಎನ್ನುವದನ್ನು ಅವರೇ ತಿಳಿಯಪಡಿಸುವದೊಳ್ಳೆಯದು.

ಕಳೆದ ಬಾರಿ ಕೃಷ್ಣಾಲನಿಯವರು ಲೋಕ ಸಭೆಯಲ್ಲಿ ರಕ್ಷಣಾ ಮಂತ್ರಿಯವರನ್ನು ರೀಕಿಸಿದಾಗ ಬೊಂಬಾಯಿಯ ಆಂಗ್ಲ ವಾರಪತ್ರಿಕೆಯೊಂದು ಅವರ ಕುರಿತು ಹೀನಾಯಮಾನ ಬರೆದಾಗ, ಅದೇ ಪತ್ರಿಕೆಯು ಜಬ್ಬಲಪುರದ ಗಲಭೆಗೆ ವಿಚಿತ್ರ ಬಣ್ಣವನ್ನಿತ್ತು ಪ್ರಕಟಿಸಿದಾಗ ಇದೇ ಕಮ್ಯೂನಿಸ್ಟರು ಅದರ ಬೆಂಬಲಿಗರ ಹಾಗೆ ವಾದಿಸಿದರೇ ವಿನಃ ನ್ಯಾಯದತ್ತ ಒಂದಿಷ್ಟೂ ಗಮನ ಹರಿಸಲಿಲ್ಲ. ರಷ್ಯಾದ ಕೆಲ ಪುಸ್ತಕಗಳಲ್ಲಿ ಭಾರತದ ಕುರಿತು ತುಚ್ಛವಾಗಿ ಬರೆದಿರುವಾಗಲೂ ಈ ಪಕ್ಷದವರು ಅದಕ್ಕೇನನ್ನೂ ಆಡಿರುವದಿಲ್ಲ. ಅಲ್ಲದೆ ಭಾರತದ ಗಡಿಗಳನ್ನು ತಪ್ಪಾಗಿ ಗುರುತಿಸಿ, ಭಾರತದ ಭೂಪ್ರದೇಶವು ಚೀನಾಕ್ಕೆ ಸೇರಿರುವ ಹಾಗೆ ಸೂಚಿಸುವ ಭೂಪಟಗಳನ್ನು ರಷ್ಯಾ ಇತ್ಯಾದಿ ಕಮ್ಯೂನಿಸ್ಟ್ ದೇಶದವರು ಪ್ರಕಟಿಸಿರುವಾಗ ಅದನ್ನು ರೀಕಿಸಲು ಕಮ್ಯೂನಿಸ್ಟರಿಗೆ ಒಂದೇ ಒಂದು ಶಬ್ದ ಕೂಡಾ ಸಿಗಲಿಲ್ಲ. ಆ ಪುಸ್ತಕಗಳ ಮೇಲೆ ತಮ್ಮ ವೈರವನ್ನು ಸಾಧಿಸಿದಂತೆ ಈ ಭೂಪಟಗಳ ಮೇಲೇತಕ್ಕೆ ಅವರು ಬಿಸಿಬಿಸಿಯಾಗಿ ಮಾತಾಡುವದಿಲ್ಲ? ನಿರ್ಜೀವ ಭೂಪಟಗಳೇತಕ್ಕೆ? ಸ್ವತಃ ಚೀನಿ ಕಮ್ಯೂನಿಷ್ಟರು ಆಕ್ರಮಣ ನಡೆಸಿರುವಾಗ ಈ ಕಮ್ಯೂನಿಷ್ಟರು ಹೇಳುತ್ತಿರುವದಾದರೂ ಏನು? "ಭಾರತ ಮತ್ತು ಚೀನಾದ ಗಡಿಗಳೆಂದೂ ನಿಶ್ಚಯಿಸಲ್ಪಟ್ಟಿರುವದಿಲ್ಲ? ಅಲ್ಲದೆ ಚೀನಿಯರು ಶಾಂತಿಪ್ರಿಯರು, ಆಕ್ರಮಣ ನಡೆಸುವವರಲ್ಲ. ಇಲ್ಲಿಯ ಪ್ರತಿಗಾಮಿಗಳು ಬೇಕೆಂದೇ ದೊಡ್ಡ ಕೋಲಾಹಲವನ್ನೆಬ್ಬಿಸುತ್ತಿದ್ದಾರೆ" ಈ ರೀತಿ ಈ ದೇಶದ ಪ್ರಜೆಗಳನ್ನೇ ರೀಕಿಸುತ್ತಿದ್ದಾರೆಯೇ ವಿನಹ ಆಕ್ರಮಣದ ಕುರಿತು ಬಾಯಿ ತೆರೆಯುವದಿಲ್ಲ. ಪಕ್ಷದ ಧೋರಣೆ ಹಾಗಿದ್ದರೂ ಕೂಡಾ ಕೆಲ ಕಮ್ಯೂನಿಸ್ಟ್ ಸದಸ್ಯರು ಆಕ್ರಮಣವನ್ನು ಮೆಲ್ಲಗಾಗಿಯಾದರೂ ಖಂಡಿಸಿರುವದು ಸ್ವಾಗತಾರ್ಹವಿದೆ. ಇದು ಕೇವಲ ವೈಯುಕ್ತಿಕ ಅಭಿಪ್ರಾಯ ಮಾತ್ರವಿದೆ.

ಈ ಭಿನ್ನತೆಯನ್ನು ವಿಜಯವಾಡದಲ್ಲೂ ಕಾಣಬಹುದಿತ್ತು. ಉಕ್ಕಿನ ಪಕ್ಷವೆನಿಸಿಕೊಂಡಿದ್ದ ಕಮ್ಯೂನಿಸ್ಟ್ ಪಕ್ಷದಲ್ಲೂ ಮೂರು ಪಂಗಡಗಳು ಹುಟ್ಟಿ ಕೊಂಡಿವೆ. ತಮ್ಮ ತಮ್ಮ ಗುಂಪಿನ ಬಲವನ್ನು ಹೆಚ್ಚಿಸಿಕೊಳ್ಳಲು ಅವರು ಹೆಣಗಾಡುತ್ತಿದ್ದಾರೆ. ಚೀನಾ ನಡೆಸಿರುವ ಆಕ್ರಮಣವನ್ನು ಅದು ಆಕ್ರಮಣವೆಂದು ಘೋಷಿಸಿ ನೆಹ್ರೂರವರ ಹಿಂದುಗಡೆ ನಿಲ್ಲ ಬೇಕೆನ್ನುವವರ ಸ್ವರ ಬಹಳ ಕ್ಷೀಣವಿದೆ. ಅದರ ಬದಲು ಗಡಿಪ್ರದೇಶಗಳಿಗೆ ಹೋಗಿ ಚೀನಾದ ಪರವಾಗಿ ಪ್ರಚಾರ ಮಾಡುವವರ ಕಾರ್ಯಾನವೇ ಬಲವಾಗಿದೆ. ಇವುಗಳ ನಡುವೆ ಮೂರನೇ ಗುಂಪು 'ಸೇತುವೆ' ಎಂಬ ಹೆಸರಿನಿಂದ ಕಾರ್ಯಮಗ್ನವಾಗಿದೆ.

ಈ ಭಿನ್ನತೆಗೆ ಚೀನಾ ಮಾತ್ರ ಕಾರಣವಲ್ಲ. ಒಂದು ಗುಂಪು ಕಾಂಗ್ರೆಸ್ಸಿನೊಂದಿಗೆ ಸೇರಿಕೊಂಡು ಒಂದಾಗ ಬೇಕೆಂದು ಹೇಳಿದಲ್ಲಿ, ಇನ್ನೊಂದು ಗುಂಪು ಕಾಂಗ್ರೆಸ್ಸೇತರ ವರ್ಕ್ಸ್ (ವಗೈರೆ)ವಾದಿಗಳೊಂದಿಗೆ ಸೇರಿಕೊಂಡು ಕಾಂಗ್ರೆಸ್ಸಿಗೆ ಎದುರಾಗಿ ರಂಗವನ್ನು ರಚಿಸಬೇಕೆಂದು ಹೇಳುತ್ತಿದೆ. ಮೂರನೇ ಗುಂಪು ಸಮಯ ಸಾಧಕರಂತೆ ವರ್ತಿಸುತ್ತಿದೆ. ರಷ್ಯಾದಿಂದ ಕ್ರುಶ್ಚಾಫ್ ಇಲ್ಲಿಗೆ ಬಂದಿದ್ದಾಗ ಕಮ್ಯೂನಿಸ್ಟ್ ಪಾರ್ಟಿ ಎನ್ನುವಂತಹ ಪಕ್ಷದ ಆವಶ್ಯಕತೆ ಇಲ್ಲ, ಅದು ಕಾಂಗ್ರೆಸ್ಸಿನೊಂದಿಗೆ ವಿಲೀನವಾಗಿ ವರ್ಕ್ಸ್‌ವಾದವನ್ನು-ಸಮತಾವಾದವನ್ನು—ಪ್ರಚಾರ ಮಾಡಿದರೆ ಸಾಕೆಂದು ಹೇಳಿರುವುದನ್ನೇ ಒಂದು ಗುಂಪು ಈಗಲೂ ಸಮರ್ಥಿಸುತ್ತಿದೆ. ಕಾಂಗ್ರೆಸ್ ಪಕ್ಷವು ಸ್ವತಃ ಸಮಾಜವಾದಿಯಾಗಿರುವಾಗ ತಲೆಗೊಂದು ಅಂತಹ ಪಂಗಡಗಳ ಆವಶ್ಯಕತೆ ಇಲ್ಲವೆನ್ನುವದೇ ಅವರ ಅಭಿಪ್ರಾಯ. ಹಾಗೆ ಕಾಂಗ್ರೆಸ್ಸಿನೊಂದಿಗೆ ಕೂಡಿದಲ್ಲಿ ತಮ್ಮ ಸ್ಥಾನ, ಮಾನ, ಧೋರಣೆಗಳಿಗೆ ಧಕ್ಕೆ ಬಂದೀತೆನ್ನುವದೇ ಮತ್ತೊಬ್ಬರ ಭಯ. ಕಮ್ಮಿ ಬಲವಿರುವವನು ಹೆಚ್ಚು ಬಲವಿರುವವನೊಟ್ಟಿಗೆ ಸೇರಿದರೆ ಏನಾದೀತು? ಇದನ್ನು ಯೋಚಿಸಿಕೊಂಡು ಇನ್ನೊಂದು ಗುಂಪು ಇತರ ಚಿಕ್ಕ ಸುಟ್ಟ ಕೆಂಪು, ಗುಲಾಲಿ, ಕಂದು ಪಕ್ಷಗಳನ್ನು ತನ್ನಲ್ಲಿ ಕರಗಿಸಿಕೊಂಡು ಕಾಂಗ್ರೆಸ್ಸಿಗೆ ಡಿಕ್ಕಿ ಹೊಡೆಯಲು ತಯಾರಿ ನಡೆಸುತ್ತಿದೆ. ಅಧಿಕಾರ ಗದ್ದುಗೆಯತ್ತ ಸಾಗಲು ಯಾವದು ಹತ್ತಿರದ ದಾರಿ ಎಂದು ಮೂರನೇ ಗುಂಪು ಯೋಚಿಸುತ್ತಿದೆ. ಕಾಂಗ್ರೆಸ್ಸಿನೊಂದಿಗೆ ಕೂಡಿಕೊಂಡಲ್ಲಿ ನೆಹರೂರವರ ನಂತರ ಅಧಿಕಾರ ಗದ್ದುಗೆಯನ್ನು ಆಕ್ರಮಿಸಿಕೊಂಡು ರಷ್ಯಾದೊಂದಿಗೆ ಸುಲಭವಾಗಿ ಸೇರಿಬಿಡಬಹುದೆಂಬುದು ಒಬ್ಬರ ಯೋಚನೆ. ಮೆಲ್ಲನೆ ಪ್ರಬಲವಾಗುತ್ತ ಬಂದಲ್ಲಿ ನೆಹರೂರವರ ನಂತರ, ಕಾಂಗ್ರೆಸ್ಸಿಗರು ಕಚ್ಚಾಡಿಕೊಳ್ಳುತ್ತಿರುವಾಗ, ಉಳಿದ ಭಯಂಕರ ಪಕ್ಷವು ಕಲಹಾದಿಗಳನ್ನುಂಟು ಮಾಡಿಕೊಂಡು ರಷ್ಯಾದೊಂದಿಗೆ ಅಥವಾ ಚೀನಾದೊಂದಿಗೆ ಸುಲಭವಾಗಿ ಸೇರಿಕೊಳ್ಳಬಹುದೆಂಬುದು ಎರಡನೆ ಗುಂಪಿನ

ಯುಕ್ತ ರಾಷ್ಟ್ರಸಂಘದಲ್ಲಿ ಅಮೆರಿಕೆಯ ಪ್ರತಿನಿಧಿ ಅಡ್ಲಾಯ್ ಸ್ಟಿವನ್ಸನ್.

ಯೋಚನೆ. ಹೀಗೆಲ್ಲಾ ಅವರಲ್ಲಿ ಭಿನ್ನತೆ ಹುಟ್ಟಿಕೊಂಡು ಈಗಾಗಲೇ ಹಲವಾರು ಸದಸ್ಯರು ಪಕ್ಷಕ್ಕೆ ರಾಜಿನಾಮೆ ಕೊಟ್ಟು ಕಾಂಗ್ರೆಸ್ಸಿಗೆ ಸೇರಿದ್ದಾರೆ. ಬೇರೆ ಕೆಲವರು ಬೇರೆ ಕೆಲ ಹೊಸ ಗುಂಪುಗಳನ್ನು ಸೃಷ್ಟಿಸಿಕೊಂಡಿದ್ದಾರೆ. ಇದಕ್ಕೆ ಇತ್ತೀಚೆಗೆ ನಡೆದ ಡೆಲ್ಲಿ ಉಪ-ಚುನಾವಣೆಯಲ್ಲಿ ಕಮ್ಯೂನಿಸ್ಟ್ ಪಕ್ಷವು ತಳೆದ ಧೋರಣೆಯು ಗಾಳಿ ಹಾಕಿದೆ. ಅದರಿಂದಾಗಿ ಕೆಲವರಿಗೆ ಬಹಳ ಬೇಸರವಾಗಿದೆ.

ಹಾಗಿದ್ದರೂ ಅಧಿಕಾರ ಗದ್ದುಗೆಯತ್ತ ಲಕ್ಷ್ಯವಿಟ್ಟುಕೊಂಡಿರುವ ಕಮ್ಯೂನಿಸ್ಟರು ಹೇಗೆ ಬೇಕಾದರೂ ಸ್ವಲಾಭಕ್ಕಾಗಿ ವರ್ತಿಸಲು ಸಿದ್ಧರಿದ್ದಾರೆ. ಭೂಸೇರ ಗುಪ್ತರವರು ಮದ್ರಾಸಿಗೆ ಬಂದಿದ್ದಾಗ ದ್ರಾವಿಡ ಮುನ್ನೇಟ್ರ ಕಳಗಂ ಎಂಬ ಸ್ಥಾನೀಯ ಪಕ್ಷದೊಂದಿಗೆ ಚುನಾವಣಾ ಒಡಂಬಡಿಕೆಯನ್ನು ಮಾಡಿಕೊಂಡು ಹೋದರು. ಈ ಕಳಗಂ ಸ್ವಲ್ಪಮಟ್ಟಿಗೆ ವರ್ಕ್ಸ್‌ವಾದವನ್ನು ಸಮಯಕ್ಕೆ ಸರಿಯಾಗಿ ಒಪ್ಪಿರುತ್ತದೆ. ಮದ್ರಾಸಿನ ಎಲ್ಲಾ ವಿರೋಧಿ ಪಕ್ಷಗಳನ್ನು ರಾಜಾಜಿಯವರು ತಮ್ಮ ಚಾಣಕ್ಯತನದಿಂದ ಏನಾದರೂ ಮಾಡಬೇಕೆಂದಿದ್ದಾರೆ. ಕಳಗಮಿನವರು ರಾಜಾಜಿಯವರ ಸ್ವತಂತ್ರದೊಟ್ಟಿಗೆ ಚುನಾವಣಾ ಮೈತ್ರಿಯನ್ನು ಮಾಡಿಕೊಂಡಿದ್ದಾರೆ. ಹಾಗೆ ರಾಜಾಜಿಯವರ ಸ್ವತಂತ್ರದವರು ಒರಿಸ್ಸಾದಲ್ಲಿ ಗಣತಂತ್ರ ಪರಿಷತ್ತಿನೊಂದಿಗೆ ಸೇರಬೇಕೆಂದು ಯೋಚಿಸಿಕೊಂಡಿದ್ದರು. [ಅನಂತರ ಡೆಲ್ಲಿ ಉಪಚುನಾವಣೆಯ ಫಲಿತಾಂಶ ಗೊತ್ತಾದ ಮೇಲೆ ನಿಲ್ಲುವದೇ ಬೇಡವೆಂದು ಧುರೀಣರು ಯೋಚಿಸಿಕೊಂಡರಾದರೂ ಅಲ್ಲಿಯ ಸ್ವತಂತ್ರರು ಗಲಭೆ ಎಬ್ಬಿಸಿದ್ದಾರೆ.] ಗಣತಂತ್ರ ಪರಿಷತ್ತು ಕಾಂಗ್ರೆಸ್ಸನ್ನು ಸೋಲಿಸುವ ದೃಷ್ಟಿಯಿಂದ ಕಮ್ಯೂನಿಸ್ಟರನ್ನೂ ತಮ್ಮ ಸಂಯುಕ್ತ ರಂಗಕ್ಕೆ ಕರೆಯಿತು. ಆಗ ಈ ಕಮ್ಯೂನಿಸ್ಟರು ಆಡಿದ ಮಾತೇನು? ಗಣತಂತ್ರ ಪರಿಷತ್ತಿನವರು ಬಂದವಾಳಷಾಹಿ ಹಾಗೂ ಪ್ರತಿಗಾಮಿ ಪಕ್ಷ ಸ್ವತಂತ್ರದವರೊಂದಿಗೆ ಸೇರುವದರಿಂದ ಅವರೊಟ್ಟಿಗೆ ರಂಗಕ್ಕೆ ಬರಲು ಸಿದ್ಧರಿಲ್ಲ. ಹಾಗಾದರೆ ಮದ್ರಾಸಿನಲ್ಲಿ ಹಾಗೇತಕ್ಕೆ? ಮದ್ರಾಸಿನ ಸ್ವತಂತ್ರರು ಒರಿಸ್ಸಾದ ಸ್ವತಂತ್ರರಿಗಿಂತ ಭಿನ್ನತೆಯವರೇ? ಮದ್ರಾಸಿನಲ್ಲಿ ಹಾಗೆ ಸೇರಿಕೊಂಡರೆ ಏನಾದರೂ ಬರುವ ಆಶೆ ಇದೆ; ಆದರೆ ಒರಿಸ್ಸಾದಲ್ಲಿ ರಂಗಕ್ಕೆ ಹೋದರೂ ಪ್ರಯೋಜನವಿಲ್ಲ. ಇದು ಕಮ್ಯೂನಿಸ್ಟರ ದ್ವಿಮುಖ ಧೋರಣೆ ಇದೆ.

ಸ್ಥಾಪನೆ: 1924

ದಿ ಕರ್ಣಾಟಕ ಬೇಂಕ್ ಲಿಮಿಟೆಡ್

(ಕೆಡ್ಯೂಲ್ಡ್ ಬೇಂಕ್)

ರಿಜಿಸ್ಟರ್ಡ್ & ಹೆಡ್ ಆಫೀಸು: ಮಂಗಳೂರು—3.

ಈ ಕೆಳಗಿನ ಏರಿಸಿದ ಬಡ್ಡಿದರಗಳಲ್ಲಿ ರೇವಣಾತಿಗಳನ್ನು ಸ್ವೀಕರಿಸಲಾಗುವುದು.

ಒಂದರಿಂದ ಎರಡು ತಿಂಗಳುಗಳ ವರೆಗೆ	....	ಸಾ|| ಸೇಕಡಾ 3-75	ನ.ಪೈಸೆ
ಮೂರರಿಂದ ಏಳು ತಿಂಗಳುಗಳ ವರೆಗೆ	....	,, 4-25	,,
ಆರು ತಿಂಗಳುಗಳಿಂದ 12 ತಿಂಗಳುಗಳ ವರೆಗೆ	....	,, 4-50	,,
12 ತಿಂಗಳು ಮಿಕ್ಕೆ 24 ತಿಂಗಳುಗಳ ವರೆಗೆ	....	,, 4-75	,,
24 ತಿಂಗಳು ಮಿಕ್ಕೆ 48 ತಿಂಗಳುಗಳ ವರೆಗೆ	....	,, 5-00	,,
48 ತಿಂಗಳುಗಳಿಗೆ ಮಿಕ್ಕೆ	....	,, 5-25	,,

ಸೇವಿಂಗ್ಸ್ ಬ್ಯಾಂಕ್ ಬಡ್ಡಿ ದರವನ್ನು ಸಾ. ಸೇಕಡ 2½% ರಿಂದ 3¼%ಗೆ ಏರಿಸಲಾಗಿದೆ.

THE KARNATAKA BANK LIMITED.

ರವೀಂದ್ರವಾಣಿ ೧೬

ವ್ಯಕ್ತಿತ್ವ ಮತ್ತು ಅದರ ಸಾರ್ಥಕತೆ

ವ್ಯಕ್ತಿ ಸುಖ ಭೋಗಗಳು, ಆನಂದ—ಇವುಗಳ ಹಿಂದೆ ಓಡುತ್ತಾನೆ. ಜೀವನದ ಉದ್ದೇಶ ಇವೇ ಅಲ್ಲ. ಆದುದರಿಂದಲೇ ಇವನ್ನರಸುತ್ತ ಹೋದ ಮಾನವ ಮತ್ತಷ್ಟು ದುಃಖವನ್ನೇ ಅನುಭವಿಸುತ್ತಾನೆ. ಅವಿದ್ಯೆಯನ್ನು ಹೋಗಲಾಡಿಸಿದಾಗಲೇ ವ್ಯಕ್ತಿ ಪರಿಪೂರ್ಣನಾಗುತ್ತಾನೆ; ಆಗಲೇ ಆತನ ವ್ಯಕ್ತಿತ್ವ ರೂಪಿಸಲ್ಪಡುತ್ತದೆ.

ಮೂಲಲೇಖಕರು ವಿಶ್ವಕವಿ ರವೀಂದ್ರನಾಥ ಟಾಗೋರ್.
ಅನುವಾದಕರು: ಶ್ರೀ ಕೆ. ಎನ್. ಭಟ್, ಶಿರಾಡಿಸಾಲ್.

ಪ್ರೇಮದ ಪರಿಪೂರ್ಣತೆಯಲ್ಲಿ ಮಾತ್ರ ಆತ್ಮದ ಸ್ವತಂತ್ರ ಪ್ರಕೃತಿಯನ್ನು ನಾವು ನೋಡಬಲ್ಲೆವು. ಪ್ರೇಮದಿಂದ ಯಾವುದು ಆಚರಿಸಲ್ಪಡುವುದೋ ಅದು ಎಷ್ಟೇ ಕಷ್ಟಕರವಾದ ಕಾರ್ಯವಾಗಿದ್ದರೂ, ಸ್ವೇಚ್ಛೆಯಿಂದ ಮಾಡಲ್ಪಡುವುದು. ಇದರಿಂದಾಗಿ ತಿಳಿಯುವುದೇನೆಂದರೆ—ಪ್ರೇಮದಿಂದ ಕೂಡಿದ, ಪ್ರೇಮಹಿತಕಾರ್ಯಮಾಡುವುದೆಂದರೆ, ಅದು ಸ್ವತಂತ್ರವೇ ಆಗಿರುತ್ತದೆ. ಗೀತೆಯ ನಿಷ್ಕಾಮ ಕರ್ಮದ ಅರ್ಥವೂ ಕೂಡ ಇದೇ ಆಗಿರುವುದು. ಗೀತೆಯು—"ಕರ್ಮವು ಅತ್ಯಾವಶ್ಯಕವಾಗಿರುವುದು" ಎಂದು ಬೋಧಿಸುವುದು. ಏಕೆಂದರೆ ಕರ್ಮದ ಮೂಲಕವೇ ನಾವು ನಮ್ಮ ಪ್ರಕೃತಿಯನ್ನು ಪ್ರದರ್ಶಿಸಬಲ್ಲೆವು.

ನಾವು ಮಾಡುವ ಕರ್ಮವು ಸ್ವತಂತ್ರವಾಗಿ ಇಲ್ಲದಿದ್ದರೆ, ನಮ್ಮ ಕರ್ಮವು, ಅದರ ಪ್ರದರ್ಶನವು ಅಪೂರ್ಣವಾಗುತ್ತದೆ. ಭಯ ಅಥವಾ ಅಭಿಲಾಷೆ, ವಿಷಯ ವಾಸನೆಗಳಿಂದ ಪ್ರೇರೇಪಿತರಾಗಿ ಮಾಡುವ ಕರ್ಮವು ಸ್ವತಂತ್ರ ಕರ್ಮವೆಂದು ಹೇಳಲ್ಪಡುವುದಿಲ್ಲ. ಇಂತಹ ಕರ್ಮಗಳಲ್ಲಿ ನಮ್ಮ ಪ್ರಕೃತಿಯು ಪ್ರಕಟವಾಗುವುದಿಲ್ಲ. ಮಾತೆಯು ತನ್ನ ಮಗುವಿನ ಹಿತಸಾಧನೆಯಲ್ಲಿ ಹಿತವಾದ ಕಾರ್ಯದ ಮೂಲಕ ತನ್ನ ಪ್ರಕೃತಿಯನ್ನು ಪ್ರದರ್ಶಿಸುತ್ತಾಳೆ. ಮಾತೆಯ ಈ ಕಾರ್ಯದಲ್ಲಿ ಭಯವಾಗಲೀ ವಿಶೇಷವಾದ ಅಭಿಲಾಷೆಯಾಗಲೀ ಇರುವುದಿಲ್ಲ. ಈ ಕಾರ್ಯವು ಸ್ವತಂತ್ರವಾದ ಪವಿತ್ರ ಭಾವನೆಯಿಂದಲೇ ನಡೆಯುತ್ತದೆ.

ಈಶ್ವರನು ತನ್ನ ರಚನೆಗಳ ಮೂಲಕ ಪ್ರಕಟವಾಗುತ್ತಾನೆ. ಉಪನಿಷತ್ತುಗಳು—"ಸ್ವಾಭಾವಿಕೀ ಜ್ಞಾನ ಬಲ ಕ್ರಿಯಾಶ್ಚ" ಎಂದು ಸೇಳುತ್ತವೆ. ಅಂದರೆ, ಜ್ಞಾನ ಶಕ್ತಿ ಮತ್ತು ಕರ್ಮ, ಇವು ಈ ಪ್ರಕಟಿತ ರೂಪದ ಸ್ವಾಭಾವಿಕ ಗುಣಗಳಾಗಿವೆ. ಯಾವುದೇ ಬಾಹ್ಯ ಪ್ರೇರೇಪಣೆಯಿಂದ ಇವುಗಳ ಉದಯವಾಗುವುದಿಲ್ಲ. ಅವುಗಳ ಕರ್ಮದಲ್ಲೇ ಅವುಗಳ ಸ್ವಾತಂತ್ರ್ಯವಿದ್ದು ತನ್ನ ರಚನೆಗಳ ಮೂಲಕವೇ ಈಶ್ವರನು ತನ್ನನ್ನು ಪ್ರಕಟೀಕರಿಸುತ್ತಾನೆ. ಈ ಸತ್ಯವನ್ನು ಉಪನಿಷತ್ತುಗಳು ಬೇರೆ ಬೇರೆ ರೀತಿಯಿಂದ ಹೇಳಿವೆ.—"ಆನಂದಾ ದ್ಯೇವ ಖಲ್ವಿಮಾನಿ ಭೂತಾನಿ ಜಾಯಂತೆ, ಆನಂದೇನ ಜಾತಾನಿ ಜೀವಂತಿ ಆನಂದಂ ಪ್ರಯಂತ್ಯಭಿಸಂವಿಶಂತಿ,, ಅರ್ಥಾತ್ ಆನಂದದಿಂದಲೇ ಈ ಜಗತ್ತು ಸೃಷ್ಟಿಯಾಗಿದೆ! ಆನಂದವೇ ಇದನ್ನು ಸಜೀವವಾಗಿರಿಸಿದೆ! ಆನಂದದ ಕಡೆಗೇ ಇದರ ಚಲನೆ ಇರುವುದು, ಮತ್ತು ಆನಂದದಲ್ಲಿಯೇ ಇದರ ಅಂತಿಮ ವಿಲಯವಾಗಿದೆ! ಎಂದು ಹೇಳಿವೆ. ಇದರ ಒಟ್ಟು ಅಭಿಪ್ರಾಯವೇನೆಂದರೆ—ಈಶ್ವರನ ರಚನೆಯ ಆಧಾರವು ಕೇವಲ ಆನಂದವಾಗಿದೆ. ಈ ಆನಂದದ ಪ್ರೇಮವೇ ಇದರ ರಚನೆಯನ್ನು ಮಾಡುವುದು. ಆದುದರಿಂದ ಈ ರಚನೆಯು, ಈಶ್ವರನ ಸ್ವರೂಪದ ಛಾಯೆಯೇ ಆಗಿರುವುದು.

ತನ್ನ ಕಲಾತ್ಮಕವಾದ ಕಲ್ಪನೆಯಿಂದ ಆನಂದ ಹೊಂದುವ ಕಲಾವಿದನು ಆ ಕಲ್ಪನೆಗೆ ಒಂದು ರೂಪವನ್ನು ಕೊಡುತ್ತಾನೆ. ಬಳಿಕ ಅದನ್ನು ತನ್ನಿಂದ ಪ್ರತ್ಯೇಕ ಪಡಿಸಿ ಇಟ್ಟು ಮತ್ತೂ ಮತ್ತೂ ಆನಂದವನ್ನು ಪಡೆಯುತ್ತಾನೆ. ಆದರೆ, ಈ ಪ್ರತ್ಯೇಕತೆಯು ವಿಯೋಗದ ಆಧಾರವು ಪ್ರೇಮವೇ ಆಗಿರುವುದು, ಹೊರತು ತಿರಸ್ಕಾರವಲ್ಲ ತಿರಸ್ಕಾರದಲ್ಲಿ ಕೇವಲ ವಿಯೋಗದ ತತ್ವವೊಂದೇ ಇರುವುದು. ಆದರೆ ಪ್ರೇಮದಲ್ಲಿ ವಿಯೋಗ ಮತ್ತು ಮಿಲನ ಇವೆರಡೂ ಇರುತ್ತವೆ. ಪ್ರೇಮದ ಹೇತುವಿನಿಂದ ಆಗುವ ವಿಯೋಗವೂ ಕೂಡ ಮಿಲನದ ಅರ್ಥದಿಂದಲೇ ಕೂಡಿರುವುದು. ಸತ್ಯ ದರ್ಶನವು ಮಿಲನದ ಮೂಲಕವೇ ಆಗುವುದು.

ಇದೇ ರೀತಿ ನಮ್ಮ "ಅಹಂ"ವೆಂಬುದರ ಅರ್ಥ ಈಶ್ವರನಿಂದ ವಿಯೋಗಹೊಂದುವುದಾಗಿಲ್ಲ; ಮಿಲನ ಹೊಂದುವುದರಲ್ಲಿದೆ ಎಂದು ನಾವು ತಿಳಿದುಕೊಳ್ಳಬೇಕು. ಈ ಮಿಲನವು ಆವರಣ ಶೂನ್ಯವಾದ ಚಿತ್ರದ ಕಡೆಗಲ್ಲ; ಆವರಣದಿಂದೊಡಗೂಡಿದ ಚಿತ್ರಗಾರನು ಚಿತ್ರವನ್ನು ನಿರ್ಮಿಸುತ್ತಿರುವ ಆ ಕಡೆಗೆ ಸೇರಿ ಆಗ ಬೇಕಾಗಿದೆ. ಇದರಿಂದ ನಾವು ಪರಮಾತ್ಮನಿಂದ ವಿಯೋಗ ಹೊಂದಿದ ಆ ಸ್ಥಿತಿಯನ್ನು ದರ್ಶನಕಾರರು "ಮಾಯಾ" ಎಂದು ಕರೆದಿರುವರು. ಏಕೆಂದರೆ, ಇದರಲ್ಲಿ ಆಂತರಿಕವಾದ ವಾಸ್ತವಿಕತೆ ಇರುವುದಿಲ್ಲ. ಈ ಅವಸ್ಥೆಯು ವಿನಾಶಕವಾಗಿರುವುದು. ಇದು ವಿಯೋಗವನ್ನು ಮತ್ತೂ ಹೆಚ್ಚಿಸುವುದು; ಮತ್ತು ನಿಶ್ಚಿತ ಅಸ್ತಿತ್ವದ ಮೇಲೆ ಕಪ್ಪು ಛಾಯೆಯನ್ನು ಪಸರಿಸಿ ಬಿಡುತ್ತದೆ. ಹೊರಗಿನಿಂದ ಈ ಸ್ಥಿತಿಯು, ಭೀಷಣ—ಹಾಗೂ, ವಿಧ್ವಂಸಕ ಪ್ರಿಯವಾಗಿ ಕಾಣುವುದು.

ಇದರಲ್ಲಿ ಗರ್ವವೂ ಇದೆ, ಆಧಿಪತ್ಯದ ಭಾವನೆಯೂ ಇದೆ. ಈ ಸ್ಥಿತಿಯು, ಬೇಕಾದರೆ, ತನ್ನ ಕ್ಷಣಿಕ ಸುಖಕ್ಕಾಗಿ, ಏನನ್ನೂ ಮಾಡ ಬಲ್ಲುದು. ಪ್ರಪಂಚವನ್ನೇ ಸೂರೆ ಮಾಡಲೂ ಹಿಂಜರಿಯದು. ಮತ್ತು ಸೌಂದರ್ಯದಿಂದ ಕೂಡಿದ ಒಂದು ಪಕ್ಷಿಯ ರೆಕ್ಕೆಯನ್ನಾದರೂ ಸರಿ, ಅವುಗಳನ್ನು ಬಡಿದು ತೆಗೆದು, ತನ್ನ ಕುರೂಪದಿಂದ ಆದನ್ನು ವಿರೂಪಗೊಳಿಸುವ ಉದ್ಯೋಗವನ್ನೂ ಇದು ಕೈಗೊಳ್ಳುವುದು. ಅಂದರೆ ಇದೆಲ್ಲವೂ ಅವಿದ್ಯೆಯ ಆವರಣದಿಂದ—"ಮಾಯೆ"ಯಿಂದಲೇ ಹೀಗಾಗುತ್ತಿರುವುದು. ಇದು ಪ್ರೇಮದ ದಿವ್ಯ ಜ್ಯೋತಿಯನ್ನು—ಮುಸುಕುವ, ಒಂದು ಬಗೆಯ ಆವರಣದಂತಿರುವುದು.

ಈಗ ನೀವೊಂದು ಕಲ್ಪನೆ ಮಾಡಿಕೊಳ್ಳಿರಿ. ಅದೇನೆಂದರೆ—ಓರ್ವ ಮೂರ್ಖನಾದ ದೈತ್ಯನೆಂತಿರುವವನಿಗೆ—"ಕಾಗದದ ನೋಟುಗಳಲ್ಲಿ ಬೇಕಾದುದೆಲ್ಲವನ್ನೂ ಪಡೆಯ ಬಹುದಾದ ಒಂದು ಪವಾಡವಿದೆ" ಎಂದು ತಿಳಿದ ಕೂಡಲೇ ಆತನು ಆ ನೋಟುಗಳನ್ನು ಒಟ್ಟುಗೂಡಿಸುತ್ತಾನೆ; ಮತ್ತು ಅವುಗಳನ್ನು ಅಡಗಿಸಿಟ್ಟು ಅವುಗಳ ಮೇಲೆ ಕುಣಿಯುತ್ತಾನೆ. ಆದರೆ ಕೊನೆಗೆ ಈ ಕಾಗದದ ನೋಟುಗಳನ್ನು ಉಪಯೋಗಿಸುವ ಕ್ರಮ ಆತನಿಗೆ ತಿಳಿಯದಿದ್ದುದರಿಂದ ಆ ನೋಟುಗಳು ನಿರುಪಯೋಗಿಯಾದಂತೆ ಭಾಸವಾಗಿ ಕೊನೆಗಾತನು ಆ ನೋಟುಗಳಿಗೆ ಬೆಂಕಿ ಹಚ್ಚಿಬಿಡುತ್ತಾನೆ. ಆದರೆ, ಆ ನೋಟುಗಳ ಉಪಯೋಗವನ್ನರಿತ ತಿಳುವಳಿಕೆಯುಳ್ಳ ವ್ಯಕ್ತಿಯು, ಅವುಗಳ ನಿಜವಾದ ಅರ್ಥವನ್ನು ಗ್ರಹಿಸುತ್ತಾನೆ. ಈ ಕಾಗದದ ನೋಟುಗಳು, ಬ್ಯಾಂಕಿಗೆ ಹೋಗಿ, ನಾಣ್ಯ ರೂಪದ ಹಣವನ್ನು ಪಡೆಯುವ ವರೆಗೆ ಒಂದು ಮಾಯೆಯಂತೆ ಇರುತ್ತವೆ; ಎಂಬುದನ್ನು ಆತ ತಿಳಿದುಕೊಳ್ಳುತ್ತಾನೆ. ನಮ್ಮ ಅವಿದ್ಯೆಯೂ ಕೂಡ ಇದೇ ರೀತಿಯೂ ಇದ್ದು—ಪರಮಾತ್ಮನ ವಿಯುಕ್ತವಾದ ರೂಪವನ್ನೇ ಮಹತ್ವದೆಂದುಗ್ರಹಿಸುತ್ತದೆ ಆದರೆ ತಿಳುವಳಿಕೆಯುಂಟಾದ ಬಳಿಕ, ಬರಿದಾದನಿರೂಪ ಯೋಗೀ ಕಾಗದಗಳನ್ನು ಸುಟ್ಟು ಹಾಕುವಂತೆ, ಈ ಭಾವನೆ ಪರಿವರ್ತನೆಯಾಗುವುದು. ಅವಿದ್ಯೆಯ ಆವರಣವು ದೂರವಾದ ಮೇಲೆಯೇ ನಮ್ಮ ಈ ರೂಪವು ನಿಜವಾದ ರೂಪದಲ್ಲಿ ಪರಿವರ್ತನೆಯಾಗುತ್ತದೆ. ಈ ಸ್ವರೂಪದಲ್ಲಿ ಬ್ರಹ್ಮನ ಸ್ವರೂಪವಿದೆ. ಏಕೆಂದರೆ, ಅದು ತನ್ನನ್ನು ಅನೇಕ ಅಮೃತ ರೂಪಗಳಲ್ಲಿ ಪ್ರಕಟಗೊಳಿಸುತ್ತದೆ. ಆದರೆ ಈ ರೂಪಗಳು ಆ ಬ್ರಹ್ಮನಿಂದ ಭಿನ್ನವಾಗಿವೆ. ಅವೆಲ್ಲ ರೂಪಗಳ ಮಹತ್ವವು ಪರಮಾತ್ಮನು ಅವುಗಳಿಗೆ ಕೊಟ್ಟಿಂತೆಯೇ ಇರುವುದು.

ಕೇವಲ ಅನಿವಾರ್ಯತೆಯೇ ಮನುಷ್ಯನಿಂದ ಯಾವಾಗ ಕೆಲಸ ಮಾಡಿಸುದೋ ಆಗ, ಅದು ಯಾವುದಾದರೂ ದುರ್ಘಟನೆ ಸಂಭವಿಸಿದಂತೆ, ಅಥವಾ, ಕ್ಷಣಕವಾದ ಕಾರ್ಯಕ್ಕಾಗಿ ಯಾವುದಾದರೂ ಸಿದ್ಧತೆ ಮಾಡಿದಂತೆ, ಕ್ಷಣಿಕವಾದ ಪ್ರಭಾವವನ್ನು ಬೀರತಕ್ಕದಾಗಿದೆ, ಎಂದು ಭಾವಿಸಬೇಕು. ಅಂದರೆ ಈ ಅನಿವಾರ್ಯತೆಯ ಪರಿಸ್ಥಿತಿ ಕಳೆದು, ಹೋದ ಮೇಲೆ, ಆಕಲಸವನ್ನು ಯಾವುದಾದರೂ ನಿರ್ಜೀವ ವಸ್ತುಗಳನ್ನು ತ್ಯಜಿಸಿದಂತೆ, ಬಿಟ್ಟು ಬಿಡ ಬೇಕಾಗುತ್ತದೆ. ಆದರೆ ಮಾಡುವ ಕೆಲಸವು ಆತ್ಮ ಸಂತೋಷ ನೀಡುವ ಕೆಲಸವಾಗಿದ್ದರೆ, ಆಗ ಅದರಲ್ಲಿ ಅಮರತೆ ಬಂದು ಬಿಡುವುದು. ಮನುಷ್ಯನ ಹೃದಯ ನಿವಾಸಿಯು ಈ ಕಾರ್ಯದ ಮೇಲೆ, ಅಮರತೆಯ ಅಚ್ಚನ್ನು ಒತ್ತಿ ಬಿಡುತ್ತಾನೆ.

ಪರಮಾತ್ಮನು ತನ್ನ ಆನಂದಕ್ಕಾಗಿಯೇ ನಮ್ಮನ್ನು ಸೃಷ್ಟಿಸಿದನು. ಆದುದರಿಂದ ನಮ್ಮ ಆತ್ಮದಲ್ಲಿ ಆತನ ಆನಂದದ ರೂಪವೇ ಪ್ರತಿಬಿಂಬಿತವಾಗಿರುವುದು. ಆದರ ಮೇಲೆ ಅಮರತೆಯ ಪಡಿಯಚ್ಚು ಒತ್ತಲ್ಪಟ್ಟಿರುವುದು. ಪರಮಾತ್ಮನ ಆನಂದವೇ ಅಮೃತವಾಗಿದೆ.

"ಆನಂದ ರೂಪಮಮೃತಂ ಯದ್ವಿಭಾತಿ,, ಅಂದರೆ ಬ್ರಹ್ಮನು ತನ್ನನ್ನು ಅನೇಕ ಅಮೃತ ರೂಪಗಳಲ್ಲಿ ಪ್ರಕಟಿಸುತ್ತಾನೆ.

ಈ ಕಾರಣದಿಂದಲೇ ನಾವು ಮರಣದ ನಿಶ್ಚಿತ ರೂಪವು ನಮ್ಮ ಮುಂದಿದ್ದೂ ಅದನ್ನು ತಿಳಿದು ಕೊಂಡ ಬಳಿಕವೂ ಕೂಡಾ, ಈ ಮರಣದ ಭಯದಿಂದ ನಾವು ಮುಕ್ತರಾಗಿರುತ್ತೆವೆ. ಈ ಎರಡು ಪರಸ್ಪರ ವಿರೋಧೀ ಶಕ್ತಿಗಳ ಮಧ್ಯನಾವೊಂದು ಸಮಾನವಾದ ಶಕ್ತಿಯನ್ನು ಸ್ಥಾಪಿಸುತ್ತ ಈ ಸತ್ಯದ ಹಂತಕ್ಕೆ ನಾವು ಬಂದು ತಲುಪುತ್ತೇವೆ. ಅರ್ಥಾತ್, ಮೃತ್ಯು ಮತ್ತು ಜೀವನ ಇವೆರಡರಲ್ಲೂ ಒಂದು ರೀತಿಯ ಸಮಾನತೆ ಇರುವುದು. ಆತ್ಮದ ಒಂದು ಮೇರೆಗೊಳಪಟ್ಟ ಜೀವನವು, ಆಮೇರೆಯಿಂದ ಮೇಲೇರಿ, ಅಂದರೆ, ಅಮರತೆಯ ಕಡೆಗೆ ಅಮರತೆಯ ಪ್ರಾಪ್ತಿಗಾಗಿ ಯಾವ ಪಥದ ಮೂಲಕ ಹೋಗ ಬೇಕಾಗುವುದೋ ಆ ಪಥವು ಮೃತ್ಯುವಿನ ದ್ವಾರದಿಂದಾಗಿ ಹೋಗುವುದು.

(ಇನೇ ಪುಟ ನೋಡಿರಿ)

ಕೊರ್ಪೊರೇಶನ್ ಬೇಂಕ್
ಶೇವಣಾತಿಗಳ ಮೇಲಿನ ಸಾಲಿಯಾನ್ ಶೇಕಡಾ ಬಡ್ಡಿ ದರಗಳು:
3 ಸೇವಿಂಗ್ಸ್ ಬೇಂಕ್ ಖಾತೆ
3½ ಯಿಂದ 5¼ ಕಾಯಿಂ (ವಿವಿಧಾವಧಿಗಳಿಗೆ)
5¼ ವಜ್ರೋತ್ಸವ
5 ಕ್ಯುಮುಲೇಟಿವ್
ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
(ಸ್ಥಾಪನೆ: 1906)
ರಿಜಿಸ್ಟರ್ಡ್ ಆಫೀಸು: ಉಡುಪಿ | ಆಡಳಿತ ಆಫೀಸು: ಮಂಗಳೂರು

ಹರಟೆ

ಆಮಂತ್ರಣ ಪತ್ರ ಮಹಿಮೆ

ದೊಡ್ಡ ಮನುಷ್ಯರ ದೊಡ್ಡಸ್ತನ ಮತ್ತಷ್ಟು ದೊಡ್ಡದಾಗಬೇಕಾದರೆ, ಆಮಂತ್ರಣ ಪತ್ರಿಕೆಗಳು ಸದಾ ಬರುತ್ತಿರಲೇಬೇಕು. ಒಬ್ಬ ಮನುಷ್ಯನು ತನಗಾಗಿ ನಿತ್ಯ ಹಂಬಲಿಸುತ್ತಿರುವಂತೆ ಮಾಡುವ ಈ ಪತ್ರಿಕೆಯ ಮಂತ್ರಶಕ್ತಿಯೆಷ್ಟಿರಬೇಡ?

ಶ್ರೀ ಪಿ. ಎಸ್. ರಾವ್ ಮಂಗಳೂರು.

ಮಾನವನಾಗಿ ಜನಿಸಿ, ಗೌರವ ಮಾನವ ಕೋಟಿಯಿಂದ ಮಾನ್ಯತೆ ಪಡೆಯುವ 'ಯೋಗ್ಯತೆ' ಪಡೆದನೆಂದು ತಿಳಿದು ಬರಬೇಕಾದರೆ, ಒಂದಲ್ಲ ಒಂದು ವಿಧದ ಆಮಂತ್ರಣಗಳು ಬರಲೇ ಬೇಕು. ಆಮಂತ್ರಣ ಬಾರದವನು ತೃಣ ಸಮಾನ! ಸಂಘ—ಸಂಸ್ಥೆಗಳಲ್ಲಿ ನಡೆಯಲಿರುವ ಕಾರ್ಯಕ್ರಮ, ಬೀಳ್ಕೊಡುವ ಸಮಾರಂಭದಲ್ಲಿ ನಡೆಯುವ ಸತ್ಕಾರ ಕೂಟ, ಮಾನ್ಯ ಮಂತ್ರಿಗಳ ಭಾಷಣದ ತಿಳಿವಿನ ಓಲೆ ಬಂದಾಗ 'ಮಾನವ' ನಿಜ ಮಾನವನಾಗುತ್ತಾನೆ. ತಮ್ಮ ಗೌರವ—ಘನತೆ—ಪ್ರತಿಷ್ಠೆಯ ಪ್ರತಿ ಬಿಂಬವೇ ಈ ಆಮಂತ್ರಣ ಪತ್ರಿಕೆ ಎಂದು ಭಾವಿಸಿ ಹೆಮ್ಮೆಯಿಂದ ಹೆಂಡಂದಿರ ಮುಂದೆ ತಾನು ಸಮಾಜದಲ್ಲಿ ಪಡೆಯುತ್ತಿರುವ ಮಾನ ಸನ್ಮಾನಗಳನ್ನು ಕೊಚ್ಚಿಕೊಳ್ಳುವವರು ಹಲವರಿರುವರು. ತನ್ನ ಗಂಡನೇರುತ್ತಿರುವ ಗೌರವದ ಅಂತಸ್ತಿಗೆ ತಲೆದೂಗದ ಹೆಂಡತಿಯಿರುವಳೇ?

ಬರಬೇಕಾದ—ಬರಲೂ ಬಹುದಾದ ಆಮಂತ್ರಣದ ಕರೆಬಾರದೆ ಇದ್ದಾಗ 'ಏಕೆ ಬರಲಿಲ್ಲ' ಎಂದು ಬೇಸರ ಪಡುವವರು ಹಲವರಿರುವರು. ಅಂತಹ ಸಂದರ್ಭದಲ್ಲಿ ಹುಚ್ಚು ಹಂಬಲದ ನಿರೀಕ್ಷೆ ಹುಚ್ಚೆದ್ದು ಕುಣಿಯಲಿದೆ. ತನಗೊಂದು ಆಮಂತ್ರಣ ಬರಬೇಕಾಗಿತ್ತು ಎಂದು ತಲೆ ಕೆರೆದುಕೊಳ್ಳುವರು. ಮುಖ್ಯವಾಗಿ ಸಮಾರಂಭದಲ್ಲಿ ಬುದ್ಧಿವಂತ ಮೇಧಾವಿಗಳು ಕೊರೆಯುವ ಭಾಷಣದ ಬೀಸಣತೆಗಿಂತಲೂ, ತಪ್ಪಿ ಹೋಗಲಿರುವ 'ಲಘು ಉಪಹಾರ'-ಆದ ಕ್ಕಿಂತಲೂ, ತನ್ನನ್ನು ಒತ್ತಾಯದಿಂದ ವೇದಿಕೆಯ ಮೇಲೆ ಕರೆದ್ದೊಯ್ದು, ಹಾರ—ಶುಂಠಾಯಿಯಿಂದ ಗೌರವಿಸಿ, ನಾಲ್ಕು ಅನುಭವೋಕ್ತಿ ಹೇಳಿಸಿ, ಮಾರನೆಯ ದಿನ ಪತ್ರಿಕೆಯಲ್ಲಿ ಬರಬಹುದಾದಂತಹ ಭಾಷಣದ ಸಾರಾಂಶದೊಂದಿಗೆ ಹೆಸರು ತಪ್ಪಿ ಹೋಗುವುದಲ್ಲ! ಎಂದು ಮರುಕಗೊಂಡು ಆಮಂತ್ರಣ ಬರುವಿಕೆಗಾಗಿ ಹೊಸ ತಂತ್ರ ಹೂಡುವರು. ಪರಿಚಿತರೂ ಸಂಘಕ್ಕೆ ಸಂಬಂಧಿಸಿದವರೊಡನೆ 'ನಾಳೆ ತಮ್ಮ ಸಂಘದ ವಾರ್ಷಿಕೋತ್ಸವ' ಎಂದು ನಾನು ಪೇಪರಿನಲ್ಲಿ ನೋಡಿದೆ ಎಂದು ತಿಳಿಸಿ, ಈ ಬಾರಿ ತಮಗೆ ಆಮಂತ್ರಣ ಬಾರದಿರುವುದನ್ನು ವ್ಯಕ್ತಪಡಿಸಿ ತರಿಸಿಕೊಳ್ಳುತ್ತಾರೆ. ಹೀಗೆ ಆಮಂತ್ರಣ ತರಿಸಿಕೊಂಡವರಿಗೆ 'ಜಂಭ' ಜಾಸ್ತಿ. ಸಮಾರಂಭ ಏರ್ಪಡಿಸಿದ ಕ್ಲಪ್ತ ಸಮಯಕ್ಕಿಂತಲೂ ಅರ್ಧ ಗಂಟೆಮೊದಲೇ ಹಾಜರಾಗಿ, ಅಪ್ತರೊಡನೆ, ಮುಖ ಪರಿಚಿತರೊಡನೆ, ಮುಗುಳು ನಗೆಯಿಂದ ಪರಿಚಯ ಬೆಳಸಿಕೊಂಡವರೊಡನೆ, ತಮಗೆ ಕೊನೆಯ ಗಳಿಗೆಯಲ್ಲಿ ಆಮಂತ್ರಣ ಬಂದುದಾದರೂ, ಈ ಉತ್ಸಾಹದಿಂದ ಕಾರ್ಯವೂಡುತ್ತಿರುವ ಸಂಘದ ಮೇಲೆ ಅಭಿಮಾನವಿರಿಸಿ ತನ್ನ ಬಹು ಬೆಲೆಯ ಕಾರ್ಯವನ್ನೆಲ್ಲಾ ಬದಿಗೊತ್ತರಿಸಿಟ್ಟು, ಬಂದಿರುವೆನೆಂದು ಗಟ್ಟಿ ಮಾತಾಡುವರು.

ಮದುವೆಯ ಕರೆಯೋಲೆ ಬಂದರೆ ಬೇಸರ! ಇಂಥಲ್ಲಿಗೆ ಹೋದರೆ, ಹೊಟ್ಟೆಗೆ ಸಿಹಿ—ಕಾರ ಎರಡೂ ಸೇರಿದರೂ, ಪತ್ರಿಕೆಯಲ್ಲಿ ತಮ್ಮ ಪ್ರತಿಷ್ಠೆಯ ಪ್ರಚಾರವಾಗುವುದಿಲ್ಲ. ಅದೂ ಅಲ್ಲದೆ, ಜೀವನದಲ್ಲಿ ಒಮ್ಮೆಯೇ ನಡೆಯುವ ಸಂತಸದ ಸಮಾರಂಭ ಎಂದು, ಕವರಿನಲ್ಲಿ ಶುಭಾಶಯ ಕೋರಿ ಎರಡು ರೂಪಾಯಿ ಉಡುಗೊರೆಯಿಡದಿದ್ದರೆ, ವ್ಯಕ್ತಿ ಘನತೆಯೇ ಹೋಗಿ ಬಿಡುತ್ತದೆ. ವಿವಾಹ ಆಮಂತ್ರಣವನ್ನು ತರಿಸಿಕೊಂಡು ಹೋದವರಿರಲಾರರು. ವಿವಾಹ ಸಮಾರಂಭ ಕಳೆದ ನಂತರ 'ತನಗೆ ಆಮಂತ್ರಣವೇ ಕಳುಹಿಸಲಿಲ್ಲ' ಎಂದು ಕಣ್ಣು ಕಟ್ಟಿನ ವ್ಯಥೆ ಪಡುವವರು ಕೆಲವರಿರುವರು.

ಬಿಡುವಿನ ಭಾನುವಾರದಂದು ಆಮಂತ್ರಿತನಾಗಿ ಸಮಾರಂಭಕ್ಕೆ ಹೋಗುವ ಶೀವಿಯನ್ನು ನೋಡಬೇಕು. ಸಮಾರಂಭದಲ್ಲಿ, ಆಮಂತ್ರಿತರಿಗಿಂತಲೂ, ತನ್ನ ಘನತೆಯ ಪ್ರಭೆ ಪ್ರಸುಲ್ಲವಾಗಿ ಹರಡಬೇಕು, ತನ್ನತ್ತ ಎಲ್ಲರ—ಅದರಲ್ಲೂ ನವ ವೋಹನಿಯರ ದೃಷ್ಟಿ ಹಾಯ್ದು, ತಾನೊಬ್ಬ ಪ್ರತಿಭಾವಂತನೆಂದಾಗ ಬೇಕೆಂದು ನೀಟಾಗಿ ಡ್ರೆಸ್ ಮಾಡಿಕೊಂಡು ಮಾಜಿಯೂ ಭಾವೀ ಮದುಮಗನಂತೆ ಹೊರಟು ಬಿಡುತ್ತಾರೆ. ಪರಿಚಿತ ರಾರಾದರೂ ದಾರಿಯಲ್ಲಿ ನಿಲ್ಲಿಸಿ, ಅಲಂಕಾರ ಸಾರ್ವಭೌಮನನ್ನು ಎತ್ತ ಹೊರಟರುವಿರಿ ಎಂದು ಹೇಳಿದರೆ, ಮನುಷ್ಯ 'ತೋರೆ' ಆಗುತ್ತಾನೆ. ಹೆಮ್ಮೆ ಉಕ್ಕೇರಿ ನರನಾಡಿಗಳಲ್ಲಿ ಹರಿಯುತ್ತದೆ. ಬೆವರು ಮುಖದಲ್ಲಿದ್ದರೂ, ತನ್ನ ಮುಖ ಒರಸಿ, ಶುಟ ಸರಿಪಡಿಸಿ, ಕಾಲರ್ ಕೊಂಕಿಸಿ, ಹುಬ್ಬು ಹಾರಿಸಿ, ಏನ್ರಿ ಇವತ್ತು ಸಹೋದರ ಕಲಾತ್ಮಂದನ ಅಧ್ಯಕ್ಷತೆಯಲ್ಲಿ ನಡೆಯಲಿರುವ ಸಾಂಸ್ಕೃತಿಕ ಕಾರ್ಯ ಕ್ರಮದಲ್ಲಿ ಬೆಂಗಳೂರು ಸುಪ್ರಸಿದ್ಧ ಸಾಹಿತಿಗಳಾದ....ಭಾಷಣ ಮಾಡಲಿರುವರಂತೆ. ನನ್ನನ್ನು ಆಗತ್ಯ ಬರಬೇಕೆಂದು ಒತ್ತಾಯಿಸಿದ್ದರು. ನಾನು ಈ ವಾರ ಹೆಂಡ್ತಿ ಮನೆಗೆ ಹೋಗಬೇಕೆಂದು ನಿರ್ಧರಿಸಿದ್ದೆ. ಅವರು ವಿಶ್ವಾಸದಿಂದ ಬರಹೇಳಿದಾಗ ಹೋಗದಿರಲಾಗುತ್ತದೆಯೇ? ಅದೂ ಅಲ್ಲದೆ ನಾವೆಲ್ಲಿಯೂದೊರೂ, ಹೆಂಡಿ ಮುಖನೋಡಲು ಓಡಿಹೋಗುತ್ತೇನೆಯೇ ಎಂದು ಭಾವಿಸಿ ಇಂದು ಎರಡು ಬಾರಿ 'ಫೋನ್' ಮಾಡಿ, ಬರಲೇ ಬೇಕೆಂದು ನಾಲ್ಕೈದು ಬಾರಿ ಭಿನ್ನವಿಸಿಕೊಂಡಿರುವಾಗ ಹೋಗದಿರಲಾಗುವುದೇ ಎಂದು ಸುಳ್ಳಿನ ಸರಪಳಿಯನ್ನೇ ಹರಿಯ ಬಿಡುವರು.

ಭಜನಾ ಭಕ್ತರ ಅವಸ್ಥೆಯೇ ಬೇರೆ. ಭಜನಾಭಿಮಾನಿಗಳನ್ನು ಬನ್ನಿರಿ ಎಂದು ಆಮಂತ್ರಿಸಿದರೆ ಸರಿ. ಮನೆಯಲ್ಲಿ ಮೇಲುಸಿರೆಳೆಯುತ್ತಾ ಮಲಗಿದ್ದ ಮಡದಿಯನ್ನು ನಿರ್ಲಕ್ಷಿಸಿ ಭಜನೆಗಾಗಿ ಹಾಜರಾಗುವವರು ಹಲವರಿರುವರು. ದೇವರ ಕಾರ್ಯ ಮೊದಲು— ಅನಂತರ ಮಾನವ ಪ್ರಾಟಭಜನೆಗೆ ಬಂದು ತಮ್ಮ ಅಪಸ್ವರದ ಕಂಠದಲ್ಲಿ ನಾಲ್ಕೈದು ಕೀರ್ತನೆ ಹಾಡಿ, ಮರಳುವಾಗ, ತಾವೇ ಬರುವಾಗ ದುಡ್ಡು ಕೊಟ್ಟು ತಂದು ಕಿಸೆಯಲ್ಲಿ ಬಚ್ಚಿಟ್ಟುಕೊಂಡಿದ್ದ ಹೂವಿನ ಹಾರವನ್ನು ಕೈಯಲ್ಲಿ ಸುತ್ತಿಕೊಂಡು, ಕಂಡ ಕಂಡವರೊಡನೆ, ತನ್ನನ್ನು 'ನಿತ್ಯಾಮಹಾನಂದ ಭಜನಾ ಮಂಡಳಿ'ಯವರು ಆಧರದಿಂದ ಬರಮಾಡಿಕೊಂಡು, ಹೊಸನ ಹಾರ ಹಾಕಿ ಗೌರವಿಸಿದರು ಎಂದು ಎದೆ ತಟ್ಟಿ ಮೆರೆಯುವವರೂ ಇರುವರು.

ಆಮಂತ್ರಣ ಬಾರದೆ ಇದ್ದರೆ ಪೇಚಾಡುವವರು ಹಲವರಿರುವರು. ನಿಶ್ಚಯಿಸಿದ ಕಾರ್ಯಕ್ರಮದ ಮೊದಲ ದಿನ ನಾಲ್ಕೈದು ಮೈಲಾದರೂ ಬಾಡಿಗೆ ಸೈಕಲ್ ತುಳಿದು, ಕಾರ್ಯದರ್ಶಿಯನ್ನೋ, ಅಧ್ಯಕ್ಷರನ್ನೋ ಕಂಡು ತನಗೆ ಬಾರದ ಆಮಂತ್ರಣಕ್ಕಾಗಿ, ಇನ್ನೊಬ್ಬ ಗೆಳೆಯನ ನೆವನ ಹೇಳಿ, ಅವನಿಗೆ ಆಮಂತ್ರಣ ಬರಲಿಲ್ಲ ಎಂದು ತಿಳಿಸಿದನೆಂದು ತಿಳಿಯಪಡಿಸಿ, ತನಗೂ ಬಾರದಿದ್ದುದನ್ನು ವ್ಯಕ್ತಪಡಿಸಿ, ಇಬ್ಬರಿಗೂ ಬರೆಸಿ, ಬಟವಾಡೆ ಕೆಲಸವನ್ನೂ ಮಾಡುವವರೂ ಇರುವರೆಂಬಾಗಾಗ ಆಮಂತ್ರಣಕ್ಕೆ ಎಷ್ಟು ಬೆಲೆಯಿದೆ ಎಂದು ಹೇಳಲಸಾಧ್ಯ.

ಅಂತೂ, ಮಾನವನಾಗಿ ಜನಿಸಿ, ನಾಲ್ಕು ಜನರಿಂದ 'ಮಾನ'ವನೆಂದೆನಿಸ ಬೇಕಾದರೆ ಆಮಂತ್ರಣಗಳು ಬರುತ್ತಲೇ ಇರಬೇಕು. ಇಲ್ಲದಿದ್ದರೆ ಅಗೋಚರ ಮಾನವನಾಗುತ್ತಾನೆ.

ವಿಜ್ಞಾನ

ಸಂದೇಶವಾಹಕ - ಟೆಲಿಪ್ರಿಂಟರ್

ಆಧುನಿಕ ವಿಜ್ಞಾನವು ಮಾನವನಿಗೆ ಮಾಡಿದ ಉಪಕಾರಗಳಲ್ಲಿ ಟೆಲಿಪ್ರಿಂಟರ್ ಒಂದಾಗಿದೆ. ಇತರ ವೈಜ್ಞಾನಿಕ ಸಾಧನಗಳಂತೆ ದ್ವಿತೀಯ ಯುದ್ಧಾನಂತರ ಇದರ ಅಭಿವೃದ್ಧಿ ಬೃಹದ್ರೂಪ ಪಡೆಯಿತು.

ಸೂಚನೆ ಮತ್ತು ಸಂಚಾರದ ಶಕ್ತಿಶಾಲೀ ಮಾಧ್ಯಮವಿಂದು ಟೆಲಿಪ್ರಿಂಟರ್ ಆಗಿದೆ ನಮ್ಮ ದೇಶದಲ್ಲಿಯೂ ಇಂದು ಇವುಗಳ ಉತ್ಪಾದನೆಯೊಗ ತೊಡಗಿರುವುದು ಸಂತೋಷದ ಸಂಗತಿ. ವರ್ತಮಾನ ಪತ್ರಗಳ ಸಂಚಾಲನೆಯು ಮಾತ್ರ ಇಂದು ಟೆಲಿಪ್ರಿಂಟರಿನ ಕರ್ತವ್ಯವಾಗಿ ಉಳಿದಿಲ್ಲ. ಈಗೀಗ ಬೇರೆ ಬೇರೆ ಕಾರ್ಯಗಳಿಗಾಗಿಯೂ ಇದನ್ನು ಬಳಸಿ ಕೊಳ್ಳುವುದು ಸಾಧ್ಯವಿದೆ. ಶಿಕ್ಷಣ, ವ್ಯಾಪಾರ, ಉದ್ಯೋಗ ಮತ್ತು ಸಂತೋಧನೆಗಳ ಕ್ಷೇತ್ರದಲ್ಲಿ ಅಧಿಕಾಧಿಕ ಪ್ರಮಾಣದಲ್ಲೇ ಟೆಲಿಪ್ರಿಂಟರಿನ ಉಪಯೋಗ ನಡೆಯುತ್ತಿರುತ್ತದೆ.

ಜರ್ಮನಿಯಲ್ಲಿ ಈಗ ೩೪ಸಾವಿರ ಟೆಲಿಪ್ರಿಂಟರ್ ಯಂತ್ರಗಳಿವೆ. ಜರ್ಮನಿಯನ್ನುಳಿದ ಇಡಿಯ ಯುರೋಪಿನಲ್ಲಿ ಒಟ್ಟು ಇಷ್ಟು ಯಂತ್ರಗಳಿಲ್ಲ. ಜನ ಸಂಖ್ಯೆ ಮತ್ತು ಈ ಯಂತ್ರಗಳ ಪ್ರಮಾಣವನ್ನು ನೋಡುವಾಗ ಅಮೆರಿಕೆಯಲ್ಲೂ ಇಷ್ಟು ಸಂಖ್ಯೆಯ ಟೆಲಿಪ್ರಿಂಟರ್‌ಗಳಿಲ್ಲ. ಯಾವುದಾದರೊಂದು ಕ್ಷೇತ್ರದಲ್ಲಿ ಟೆಲಿಪ್ರಿಂಟರಿನ ಬಾಲವನ್ನು ಹರಡಿಸುವುದಾದರೆ, ಅಷ್ಟು ದೊಡ್ಡ ಜಾಲ ಮತ್ತೆಲ್ಲಿಯೂ ನೋಡ ಸಿಗದು.

ಜರ್ಮನಿಯಲ್ಲಿ ಟೆಲಿಪ್ರಿಂಟರ್‌ಗಳ ಉದ್ಯೋಗದ್ರುತಗತಿಯಿಂದ ಸಾಗುವುದಕ್ಕೆ ಕಾರಣವೇನು? ಅಲ್ಲಿ ಇವು ಯಾಕೆ ಲೋಕಪ್ರಿಯವಾಗಿವೆ? ಇದಕ್ಕೆ ಕಾರಣಗಳೂ ಇಲ್ಲದಿಲ್ಲ. ೧೯೩೯ರಲ್ಲಿ ಅನೇಕ ಪ್ರಯೋಗಗಳ ಫಲವಾಗಿ ಅಂತಾರಾಷ್ಟ್ರೀಯ ಸೂಚನಾ ಪ್ರಣಾಳಿಯನ್ನು ಸ್ವೀಕರಿಸಲಾಯಿತು. ಸಂದೇಶ ಕಳಿಸುವವರು ಹಾಗೂ ಅದನ್ನು ಪಡೆಯುವವರ ನಡುವೆ ಯಾವುದೇ ಮಾಧ್ಯಮವಿಲ್ಲದ ನೇರ ಸಂಬಂಧವನ್ನೇರ್ಪಡಿಸುವುದೇ ಇದರ ಮುಖ್ಯ ಉದ್ದೇಶವಾಗಿತ್ತು, ಯುದ್ಧದ ಭಯಾನಕ ಸನ್ನಿವೇಶದಲ್ಲಿಯೂ ಜರ್ಮನಿಯ ಟೆಲಿಪ್ರಿಂಟರ್ ಜಾಲ ವಿಸ್ತಾರದಲ್ಲಿ ಯಾವ ವಿಘ್ನ ಬಾಧೆಗಳೂ ತಲೆಹಾಕಲಿಲ್ಲ. ಸಂದೇಶ ಕಳಿಸುವುದಕ್ಕೆ ಹಲವಾರು ಸಾಧನಗಳು ಯುದ್ಧಾವಧಿಯಲ್ಲಿ ಉಪಯೋಗಕ್ಕೆ ಬಂದರೂ ಅವುಗಳಲ್ಲಿ ಜರ್ಮನ್ ಟೆಲಿಪ್ರಿಂಟರೊಂದೇ ಯುದ್ಧಾಂತ್ಯದ ತನಕವೂ ಜೀವಂತವಳಿದ ಸಾಧನವೆನಿಸಿತ್ತು. ಟೆಲಿಗ್ರಾಫ್ ಅಥವಾ ಟೆಲಿಫೋನ್‌ಗಳನ್ನು ಕಳಿಸಲು ಹಾಕಲುಬೇಕಾದ ಸಾಮಗ್ರಿಗಳ ಮತ್ತು ಸಮಯದ ಅಲ್ಪಾಂಶ ಮಾತ್ರ ಟೆಲಿಪ್ರಿಂಟರಿನ ಬಳಕೆಗೆ ಸಾಕಾಗುವುದೇ ಇದಕ್ಕೆ ಮುಖ್ಯ ಕಾರಣ. ಟೆಲಿಫೋನ್ ಮತ್ತು ಟೆಲಿಗ್ರಾಫ್‌ಗಳಿಗೆ ಸಾವಿರಾರು ಗಜ ಸರಿಗೆ ಬೇಕಾಗಿದರೆ, ಇದಕ್ಕೆ ಕೆಲವೇ ಗಜಗಳಷ್ಟು ಸಾಕಾಗುವುದು.

ಯುದ್ಧಾನಂತರ ಆರ್ಥಿಕ ಸಂಕಷ್ಟವು ದೂರವಾದ ಮೇಲೆ ವ್ಯಾಪಾರಿಮಂಡಳಿವು ಟೆಲಿಪ್ರಿಂಟರಿನ ಉದ್ದಿಮೆಯು ಮಹತ್ವವನ್ನು ಅರಿತುಕೊಂಡಿತು. ಟೆಲಿಪ್ರಿಂಟರ್ ಮೂಲಕ ಕಳಿಸಲಾಗುವ ಸಂದೇಶಗಳು ಸುಸ್ಪಷ್ಟ ರೂಪದಲ್ಲಿರುವುದರಿಂದ ಇತ್ತ ಅವರ ಗಮನ ಕೇಂದ್ರೀಕೃತವಾಯ್ತು. ರಾತ್ರೆ ಹೆಗಲು ಯಾವ ಸಮಯದಲ್ಲಾದರೂ ಇದನ್ನು ಬಳಸಿಕೊಳ್ಳುವುದು ಸಾಧ್ಯ. ಇದಕ್ಕೆ ತಗಲುವ ವ್ಯಯವಾದರೂ ಅತ್ಯಲ್ಪವೆಂಬುದರಿಂದ ಇದು ಜನಪ್ರಿಯವಾಗುತ್ತ ಬಂತು.

ಜರ್ಮನಿಯಲ್ಲಿ ವ್ಯಾಪಾರಿಕ ಕ್ಷೇತ್ರಗಳಲ್ಲಿ ಟೆಲಿಪ್ರಿಂಟರ್‌ಗಳು ಕೆಲಸಮಾಡುತ್ತಿವೆ. ಬೇಂಕು ಹಾಗೂ ದೊಡ್ಡ ದೊಡ್ಡ ಸಂಘ ಸಂಸ್ಥೆಗಳು ಇದನ್ನು ಉಪಯೋಗಿಸುತ್ತಿವೆ. ಜರ್ಮನಿಯ ಆಧುನಿಕ ವ್ಯಾಪಾ

(೨ನೇ ಪುಟ ನೋಡಿರಿ)

ಮಾನವನು ಮಾನವನನ್ನು ಪ್ರೀತಿಸಲು ಕಲಿತೆಂದು ಪ್ರಪಂಚದಲ್ಲಿ ಲಂಚಗಳಿತನ ಕಳ್ಳತನ ಮತ್ತು ಕೃಪಣತನ ಮೊದಲಾದ ದುರ್ಗುಣ ದುರಾಚಾರಗಳು ದೂರವಾಗುವುವು.

ನವಯುಗ

ವಾರ	ಉಡುಪಿ	ವರುಷ
೪೬	೩-೮-೬೧	೪೦

ದಕ್ಷಿಣಕ್ಕೆ ರೈಲ್ವೆ

ದೇಶದ ಒಳನಾಡಿನಲ್ಲಿ ಪ್ರಯಾಣಿಕರನ್ನೂ ಸಾಮಾನು ಸರಂಜಾಮುಗಳನ್ನೂ ಬ್ರಹತ್ಪ್ರಮಾಣದಲ್ಲಿ ಸಾಗಿಸಲಿರುವ ಏಕಮಾತ್ರ ಸಾಧನವೆಂದರೆ, ರೈಲು. ಯಾವ ದೇಶದಲ್ಲಿ ರೈಲು ಸಾರಿಗೆಯ ವ್ಯವಸ್ಥೆಯು ಪರ್ಯಾಪ್ತವಾಗಿರುವುದೋ ಆ ದೇಶವು ಸುಖವನ್ನು ಪಡೆಯುವುದು ಸಾಧ್ಯವಿದೆ. ಬಹಳಷ್ಟು ಪ್ರಮಾಣದಲ್ಲಿ ಆಗ್ಗದ ದರದಲ್ಲಿ ಸಾರಿಗೆಯ ಸೌಕರ್ಯವನ್ನಿದು ಒದಗಿಸುತ್ತದೆ. ಈ ಕಾರಣದಿಂದ ಆಧುನಿಕ ಯುಗದ ಆರಂಭದೊಡನೆಯೇ ಮನುಷ್ಯ ಬುದ್ಧಿಯ ಹೋರಾಟದ ಪರಿಣಾಮವಾಗಿ ರೈಲಿನ ನಿರ್ಮಾಣವಾಯಿತು. ಅದರ ಉಪಯುಕ್ತತೆಯ ಸದ್ಗುಣಗಳಿಂದಾಗಿ ಕೆಲವೇ ದಿನಗಳಲ್ಲಿ ಎಲ್ಲ ದೇಶಗಳಲ್ಲಿಯೂ ಹರಡಿತು.

ಲಾರ್ಡ್ ಡಾಲಹೌಸಿಯ ಕಾಲದಲ್ಲಿ ಮೊದಲಾದ ನಮ್ಮ ದೇಶದ ರೈಲು ದಾರಿಯ ನಿರ್ಮಾಣವು ಇಂದಿಗೂ ಮುಂದುವರಿಯುತ್ತಿದೆ. ಆದರೆ, ಭಾರತದ ರೈಲು ದಾರಿಗಳನ್ನು ತೋರಿಸುವ ಭೂಪಟವನ್ನು ನಾವು ಕಾಣುವಾಗ ನಮ್ಮ ಎಲ್ಲ ರೈಲು ದಾರಿಗಳೂ ಉತ್ತರ ಭಾರತದಲ್ಲಿಯೇ ಹರಡಿರುವುವು ಎಂಬುದರ ಮನವರಿಕೆಯಾಗುವುದು. ದಕ್ಷಿಣದ ರಾಜ್ಯಗಳೆಂದು ಕರೆಯಲ್ಪಡುವ ಮೈಸೂರು, ಆಂಧ್ರ, ಮದ್ರಾಸು ಮತ್ತು ಕೇರಳದಲ್ಲಿ ಭಾರತವು ಸ್ವತಂತ್ರವಾದ ನಂತರ ನಿರ್ಮಾಣಗೊಂಡ ರೈಲು ಮಾರ್ಗವೆಷ್ಟು? ಒಂದು ರೀತಿಯಿಂದ ಉತ್ತರದ ರಾಜ್ಯಗಳಿಂದ ದಕ್ಷಿಣದ ರಾಜ್ಯಗಳು ತಿರಸ್ಕೃತವಾಗುತ್ತಿವೆಯೆನ್ನುವ ಭಾವನೆಗಳಿಗೆ ಅವಕಾಶ ಕಲ್ಪಿಸುವ ಕಾರ್ಯ ನಡೆದಿದೆ. ಮೈಸೂರು ರಾಜ್ಯದ ಒಳನಾಡು ಮತ್ತು ಕರಾವಳಿಯನ್ನು ಜೋಡಿಸುವ ಒಂದು ರೈಲುದಾರಿಬೇಕೆಂದು ಹಲವು ವರ್ಷಗಳಿಂದ ಗೋಗರೆದುದರಿಂದ ಅದು ಸಫಲವಾಗುವ ನಿರೀಕ್ಷೆ ಇದೀಗ ತಾನೇ ತೋರಿ ಬರುತ್ತಿದೆ. ರಾಜ್ಯದ ಕರಾವಳಿಯಲ್ಲಿ ಪ್ರಬುದ್ಧ ಬಂದರುಗಳಿಲ್ಲದಿದ್ದರೂ ಇರುವ-ಮುಂದೆ ಅಭಿವೃದ್ಧಿಹೊಂದುವ—ದೊಡ್ಡ ಬಂದರನ್ನು ಹಿನ್ನಾಡಿನೊಂದಿಗೆ ಸೇರಿಸುವ ರೈಲ್ವೆ ದಾರಿಯ ಅವಶ್ಯಕತೆಯು ಮನವರಿಕೆಯಾಗಬೇಕಾದರೆ, ನಮ್ಮಕೇಂದ್ರ ಸರಕಾರಗಳಿಗೆ ಇಷ್ಟು ಕಾಲ ಬೇಕಾಯಿತು. ತೃತೀಯ ಯೋಜನೆಯಲ್ಲಿ ದಕ್ಷಿಣದ ರಾಜ್ಯಗಳಿಗೆ ರೈಲು ದಾರಿಯನ್ನು ನಿರ್ಮಿಸುವ ಕಾರ್ಯಕ್ರಮಕ್ಕೆ ಹೆಚ್ಚಿನ ಸೌಲಭ್ಯಗಳನ್ನು ನೀಡಿರಲಿಲ್ಲ. ಆದರೂ ದಕ್ಷಿಣದ ಬಲವಾದ ಮತ್ತು ನ್ಯಾಯವಾದ ಕೇಳಿಕೆಯನ್ನು ತೀರ ಅಲಕ್ಷಿಸುವುದುಅಸಾಧ್ಯವಾದುದರಿಂದ ಯೋಜನಾ ಆಯೋಗವು ಪುನಃ ೨೫ ಕೋಟಿ ರೂಪಾಯಿಗಳನ್ನು ಇದಕ್ಕಾಗಿತೆಗೆದಿರಿಸಲು ನಿಶ್ಚಯಿಸಿದೆ. ಆದರಂತೆ ದಕ್ಷಿಣದ ರಾಜ್ಯಗಳು ಬಯಸುವ ಅತಿ ಮುಖ್ಯವಾದ ರೈಲುದಾರಿ ಯಾವುದು, ಮತ್ತು ಅದರಿಂದ ಯಾವ ಯಾವ ಲಾಭಗಳಿವೆಯೆಂಬುದನ್ನು ತಿಳಿದುಕೊಂಡು ಕೇಂದ್ರಸರಕಾರಕ್ಕೆ ತಿಳಿಸುವಂತೆ ಕೇಳಿಕೊಂಡಿದೆ ಈ ಸಂಬಂಧದಲ್ಲಿಪ್ರತಿಯೊಂದು ರಾಜ್ಯ ಸರಕಾರವೂ ತನ್ನ ಬೇಡಿಕೆಯನ್ನು ಮುಂದಿಟ್ಟಿದೆಯೆಂದೂ ಈ ಎಲ್ಲ ಬೇಡಿಕೆಗಳನ್ನು ದಕ್ಷಿಣ ವಲಯ ಸಭೆಯಲ್ಲಿ ಒತ್ತಿಟ್ಟಿನಲ್ಲಿ ಚರ್ಚಿಸಲಾಗುವುದೆಂದೂ ತಿಳಿಯುತ್ತದೆ.

ಕರಾವಳಿಯಲ್ಲಿ ದೊಡ್ಡ ಬಂದರವಾಗಿ ಬೆಳೆದು ಬರುತ್ತಿದ್ದು ಕೆಲಕಾಲದಲ್ಲಿಯೇ ಇನ್ನೂ ಬೆಳೆಯಲಿರುವ ಮಂಗಳೂರನ್ನು ಮಲೆನಾಡಿನೊಡನೆ ಜೋಡಿಸುವುದರಿಂದ ಬಂದರಿನ ಅಭಿವೃದ್ಧಿಗೆ ಸಹಾಯವಾಗುವುದೆಂಬುದು ಸರ್ವಶ್ರುತ. ಇದಕ್ಕಾಗಿಯೇ ಹಾಸನ—ಮಂಗಳೂರು ರೈಲ್ವೆಯನ್ನು ಮೈಸೂರು ಸರಕಾರವು ಬಹು ದಿನಗಳಿಂದಲೂ ಕೇಳುತ್ತಿದೆ. ಈ ದಾರಿಯನ್ನು ಸದ್ಯ ಮರಳಿ ಒತ್ತಾಯಿಸಿದೆಯೆಂದು ನಂಬಬಹುದು. ಉತ್ತರ ಕನ್ನಡದ ಅಪಾರ ಅರಣ್ಯ ಸಂಪತ್ತನ್ನು ಸದುಪಯೋಗಪಡಿಸಿಕೊಳ್ಳಬೇಕಾದರೆ, ಅಲ್ಲಿಯೂ ರೇಲ್ವೆ ದಾರಿಯ ನಿರ್ಮಾಣವು ಅವಶ್ಯವೆ ಬೇಕಾಗಿದೆ. ಇದೇ ರೀತಿಯಲ್ಲಿ ಮಂಗಳೂರಿನಲ್ಲಿ ಅಂತ್ಯವಾಗುವ ದಕ್ಷಿಣ ರೇಲ್ವೆಯನ್ನು ರಾಜ್ಯದ ಕರಾವಳಿ ಗುಂಟ ಮುಂದುವರಿಸುವುದರಿಂದ ಬಹಳಷ್ಟು ಲಾಭವಿದೆ. ಬೆಂಗಳೂರು—ಸೇಲಂ ದಾರಿಯಿಂದ ಮೈಸೂರು—ಮದ್ರಾಸು ರಾಜ್ಯಗಳೆರಡಕ್ಕೂ ಒಳಿತಿದೆ. ಇದೇ ರೀತಿಯಾಗಿ ದಾರಿಗಳ ಯಾದಿಯನ್ನು ಬೆಳೆಸುತ್ತ ಹೋಗಬಹುದು. ನಮಗೆಲ್ಲೆಲ್ಲಿ ರೈಲು ದಾರಿ ಬೇಕು ಎಂಬುದಕ್ಕಿಂತ ಎಲ್ಲೆಲ್ಲ ಇದೆಯೆಂದು ತಿಳಿದುಕೊಂಡು ಇಲ್ಲದ ಎಲ್ಲೆಡೆ ರೈಲು ದಾರಿಯನ್ನು ರಚಿಸುವುದು ಅಪೇಕ್ಷಣೀಯವಾಗಿದೆ. ಭಾರತೀಯ ರೇಲ್ವೆಗಳ ಉದ್ದ ಆರೇಳು ಸಾವಿರ ಮೈಲುಗಳಷ್ಟಿದ್ದರೂ ಮೈಸೂರು ರಾಜ್ಯದಲ್ಲಿ ಅದರ ಉದ್ದ ಒಂದೆರಡು ನೂರು ಮೈಲುಗಳು. ಆದರೆ, ಇಪ್ಪತ್ತೈದು ಕೋಟಿ ರೂಪಾಯಿಗಳಲ್ಲಿ ನಾಲ್ಕು ರಾಜ್ಯಗಳ ರೈಲ್ವೆ ಅವಶ್ಯಕತೆಯನ್ನು ಪೂರೈಸುವುದು ಎಂದಿಗೂ ಸಾಧ್ಯವಿಲ್ಲ. ಆದುದರಿಂದಲೇ ಅವು ತಮ್ಮ ಮಂಗಲ ಬೇಡಿಕೆಯನ್ನು ಪುನರ್ವಿಮರ್ಶಿಸಿ, ತೀರ ಅವಶ್ಯಕವಾದ ಮತ್ತು ಅನಿವಾರ್ಯವಾದ ದಾರಿಗಳನ್ನಷ್ಟೇ ಹೆಸರಿಸುವಂತೆ ಕೇಂದ್ರದ ಆದೇಶವಿದೆ. ದಕ್ಷಿಣ ವಲಯ ಸಭೆಯಲ್ಲಿ ಎಲ್ಲ ರಾಜ್ಯಗಳ ಮುಖ್ಯ ಮಂತ್ರಿಗಳು ತಂತಮ್ಮ ಬೇಡಿಕೆಯನ್ನು ಮುಂದಿಟ್ಟು ಅದನ್ನು ಸಮರ್ಥಿಸುವರು; ನಮ್ಮ ಮುಖ್ಯ ಮಂತ್ರಿಯವರು ಕೂಡ ಮೈಸೂರಿಗೆ ೨೫ ಕೋಟಿಯಲ್ಲಿ ನ್ಯಾಯೋಚಿತವಾದ ಪಾಲು ದೊರೆತು ಉಪಯುಕ್ತ ರೈಲ್ವೆ ನಿರ್ಮಾಣವಾಗುವಂತೆ ಮಾಡುವುದರಲ್ಲಿ ಹಿಂದುಳಿಯಲಾರರೆಂದು ನಂಬುತ್ತೇವೆ.

ಭಾರತೀಯ ಚಲಚ್ಚಿತ್ರ

"ಭಾರತೀಯ ಚಲಚ್ಚಿತ್ರೋದ್ಯಮಿಗಳು ತಮ್ಮ ಸಮಾಜಘಾತಕ ಪಥವನ್ನು ಭಾರತ ತನ್ನ ಜೀವಿತ ಕಾಲದಲ್ಲಿಯೇ ಬಹಳಷ್ಟು ಮುಂದುವರಿಯಬೇಕು ಎನ್ನುವ ನೆಹರು ಆಶಯಕ್ಕೆ ನಾಲ್ಕೂ ನಿಟ್ಟಿನಿಂದ ವಿಘ್ನಬಾಧೆಗಳು ತಟ್ಟುತ್ತಿವೆ. ಪ್ರಕೃತಿಯ ವಿಕೋಪ—ಪರಿಸ್ಥಿತಿಯ ವಿಕೋಪಗಳ ದವಡೆಯಡೆ ಸಿಕ್ಕಿಕೊಂಡ ಭಾರತವನ್ನು ಸರಿದಾರಿಯಲ್ಲಿ ಸಮಂಜಸವಾಗಿ ಮುಂದುವರಿಸುವವರೊಬ್ಬ ನಾಯಕನಿರುವದಾದರೆ, ಅವರು ಪಂಡಿತ ನೆಹರು ಮಾತ್ರ. ಅವರಂತೆ ಎಲ್ಲ ಭಾರತೀಯರೂ ಭಾರತದ ಬಗ್ಗೆ ಚಿಂತಿಸಿದರೆ, ಭಾರತದಲ್ಲಿ ಎಂದೋ ಹಾಲು ಸುರಿಯುತಿತ್ತು.

ರಾಜೇಂದ್ರ ಪ್ರಸಾದ

ದೇಶಭಕ್ತಿ—ಜನಸೇವೆಗಳ ಹೆಸರು ಕೇಳುವಲ್ಲಿ ದೈವಭಕ್ತಿಯು ದೂರವೋಡುತ್ತಿರುವುದು ಇಂದಿನ ಕಾಲದಲ್ಲಿಸ್ವಾಭಾವಿಕ. ಆದರೆ, ನಿಜವಾದ ದೇಶಭಕ್ತ ಮತ್ತು ಜನಸೇವಕ, ತ್ಯಾಗಿ ದೈವದ ಅನನ್ಯ ಭಕ್ತನೂ ಆಗುತ್ತಾನೆ. ಭಾರತದ ರಾಷ್ಟ್ರಪತಿ ರಾಜೇಂದ್ರ ಪ್ರಸಾದರು ಇಂತಹ ನೈಜ ಸ್ವಾಭಾವಿಕ ದೇಶಭಕ್ತರಲ್ಲಿ ಒಬ್ಬರು. ಅವರು ಕರುಳಿನ ರಕ್ತಸ್ರಾವದಿಂದ ನರಳುತ್ತಿರುವರೆಂದು ಗೊತ್ತಾದೊಡನೆಯೇ ಇಡಿಯ ಜಗತ್ತು ಅವರ ಆರೋಗ್ಯಕ್ಕಾಗಿ ಪ್ರಾರ್ಥಿಸಿತು. ಇದರ ಪರಿಣಾಮವಾಗಿ ಅವರಿಂದು ಗುಣಮುಖರಾಗುತ್ತಿರುವರು. ಮುಂದಿನ ವರ್ಷದಿಂದವರು ಅಧಿಕಾರ ತ್ಯಾಗಮಾಡುತ್ತಾರೆಂಬುದು ಈಗ ಖಂಡಿತವಾಗಿದೆ. ತನ್ನನ್ನೇ ತ್ಯಾಗಮಾಡಿಕೊಂಡವರಿಗೆ ಅಧಿಕಾರ ತ್ಯಾಗಮಾಡುವುದು ಏನು ದೊಡ್ಡ ಕೆಲಸ?

ಬಿ. ಡಿ. ಜತ್ತಿ

'ಮಾತು ಬಲ್ಲವನಿಗೆ ಜಗಳವಿಲ್ಲ'ವೆಂಬ ಗಾದೆಯೊಂದಿದೆ. ಬಲ್ಲ ಕೆಲವೇ ಮಾತುಗಳನ್ನಾದರೂ ಉಚಿತಾನುಚಿತತೆಯರಿತು ಹೇಳಲು ಬಾರದವನಿಗೆ ಮಾತು ಬಂದರೂ ಒಂದೇ ಬರದಿದ್ದರೂ ಒಂದೇ. ನಿತ್ಯ ಜಗಳ. ಮೈಸೂರಿನ ಮುಖ್ಯ ಮಂತ್ರಿ ಜತ್ತಿಯವರ ಬುದ್ಧಿವಂತಿಕೆಯ ಬಗೆಗೆ ಭಿನ್ನಾಭಿಪ್ರಾಯಗಳಿವೆ. ಆದರೂ ಅವರು ಮಾತುಬಲ್ಲವರೆಂತಲೇ ಈಗ ನಾಲ್ಕು ವರ್ಷಗಳಿಂದ ಗುಡುಗಿದ ಗುಡುಗು, ಸುರಿದ ಮಳೆ—ಎಲ್ಲವನ್ನೂ ತಮ್ಮ ಮಾತುಗಳಿಂದಲೇ ಸಮಾಧಾನಪಡಿಸಿ ದೂರವಿಟ್ಟರು. ಇದುವರೆಗೆ "ನೀರಿನ ನೆರೆ ಹರಿಯಿತು; ಇನ್ನು ಹಣದ ನೆರೆ ಹರಿಯಲಿ" ಎಂಬ ಅವರ ಸಂದೇಶ ಅರ್ಥ ಗರ್ಭಿತವಿದೆ; ತಿಳಿದ ಮಾತನ್ನು ಪರಿಯಾಗಿ ಅವರು ಹೊರಗೆಡಹುದ್ದಾರೆ.

ಸಂಕ್ಷಿಪ್ತ ಸುದ್ಧಿಗಳು

ಜವಾಹರಲಾಲ ನೆಹರು

ಬಯಸಿದುದೆಲ್ಲ ಮನುಷ್ಯನಿಗೆ ದೊರೆಯುವುದಿಲ್ಲ. ಆದರೂ ಬಯಕೆಯನ್ನು ಮನುಷ್ಯ ಬಿಟ್ಟು ಬಿಡುವುದಿದೆಯೆ? ಆತ ಮತ್ತೂ ಮತ್ತೂ ಹೆಚ್ಚಿನ ಕನಸನ್ನು ಕಾಣುತ್ತಾನೆ. ಪರಿಶ್ರಮ ಬಲದಿಂದ ತನ್ನ ಆಶಯಗಳಲ್ಲಿ ಎಲ್ಲವನ್ನಲ್ಲವಾದರೂ ಕೆಲವನ್ನು ಆತ ಜೀರ್ಣಿಸಿಕೊಳ್ಳಬಲ್ಲ. ಸ್ವತಂತ್ರ ಬಿಡದೆ ಇದೇ ರೀತಿ ಮುಂದುವರಿದರೆ, ಸಾರ್ವಜನಿಕ ಹಿತದೃಷ್ಟಿಯಿಂದ ಈ ಕೈಗಾರಿಕೆಯನ್ನು ರಾಷ್ಟ್ರೀಕರಿಸಬೇಕಾದೀತು" ಎಂದು ಯೋಜನಾ ಆಯೋಗದ ಸದಸ್ಯ ಶ್ರೀಮನ್ನಾರಾಯಣರಿಗೆ ಆಚಾರ್ಯ ವಿನೋಬಾ ಭಾವೆಯವರು ಬರೆದಿರುವರೆಂದು ತಿಳಿದುಬಂದಿದೆ. ಅಧಿಕಾರ ವಿಕೇಂದ್ರೀಕರಣ—ಗ್ರಾಮರಾಜ್ಯದ ಪ್ರತಿಪಾದಕರಾದ ವಿನೋಬಾರೀ ಈ ರೀತಿಯಾಗಿ ಅಭಿಪ್ರಾಯ ಪಡಬೇಕಾದರೆ, ನಮ್ಮ ಚಲಚ್ಚಿತ್ರಗಳ ಮಟ್ಟವು ಯಾವ ಸ್ಥಿತಿಯಲ್ಲಿವೆಯೆಂದು ಊಹಿಸುವುದೇ ಉತ್ತಮ. ಆಧುನಿಕ ಯುಗದಲ್ಲಿ ಮನೋರಂಜನೆ ಮಾತ್ರವಲ್ಲ ಶಿಕ್ಷಣವೇ ಮೊದಲಾದ ಉದ್ದೇಶಗಳಿಗೂ ಚಲಚ್ಚಿತ್ರಗಳು ಮಾಧ್ಯಮವೆಂಬುದರಿಂದ, ಇವುಗಳನ್ನು ಉತ್ತಮ ಸ್ಥಿತಿಯಲ್ಲಿರಿಸಿಕೊಂಡು, ಅವುಗಳಿಂದ ನಮ್ಮ ಸಮಾಜ ರಚನೆಯ ಉದ್ದೇಶವನ್ನು ಸಫಲವಾಗಿಸಿಕೊಳ್ಳುವುದು ಸಾಧ್ಯವಿದ್ದರೂ ನಮ್ಮ ಹೆಚ್ಚಿನ ಚಿತ್ರಗಳು ಅನೀತಿ, ಅಶ್ಲೀಲ, ಅವಾಸ್ತವ ಭಾವೋನ್ಮಾದಗಳ ಗುಂಗಿನಲ್ಲಿಯೇ ಭ್ರಮಿಸುತ್ತ ಪ್ರೇಕ್ಷಕರಲ್ಲಿಯೂ ಇವನ್ನೇ ಅಚ್ಚೊತ್ತುತ್ತಿರುವುದು ಕಾಣುತ್ತದೆ. ಕೆಲವೆಡೆ ಇವುಗಳ ಸುಧಾರಣೆಯತ್ತ ಗಮನ ಹರಿದರೂ ಖಾಸಗಿ ದಂಧೆಯೊಡ ಇದರ ಮೂಲೋದ್ದೇಶವುಗಳಿಕೆಯೆಂಬುದರಿಂದ ಅದರತ್ತ ಹರಿಯುವಷ್ಟು ಗಮನ ಬೇರೆಡೆ ಹರಿಯುವುದಿಲ್ಲ. ಪೂರ್ವ ಪರಿಶೀಲನಾ ಮಂಡಳವು ತನ್ನ ಕತ್ತರಿಯನ್ನು ಹರಿತಗೊಳಿಸಿದರೂ ಇಷ್ಟರಿಂದಲೇ ಉದ್ದೇಶ ಪೂರೈಸೀತೆಂದು ವಿಶ್ವಾಸವಿಲ್ಲ. ಕೋಟ್ಯಂತರ ಜನರ ದೃಷ್ಟಿಗೆ ಬೀಳುವ ಚಲಚ್ಚಿತ್ರಗಳ ಮಟ್ಟವನ್ನು ಉನ್ನತಗೊಳಿಸಿ ಸಮಾಜವನ್ನು ಸರಿದಾರಿಯಲ್ಲಿ ಮುಂದುವರಿಯುವಂತೆ ನಮ್ಮ ಚಿತ್ರ ನಿರ್ಮಾಪಕರು ಹೆಚ್ಚಿನ ಗಮನ ಹರಿಸಬೇಕು. ತಪ್ಪಿ ನಡೆದರೆ ಅನಿಷ್ಟ ಪರಿಣಾಮವಾದೀತು.

ವಿಶೇಷ ಸಂಚಿಕೆ

'ನವಯುಗ'ದ ತಾ.17-8-1961ರ ಸಂಚಿಕೆಯು

ಸ್ವಾತಂತ್ರ್ಯ ದಿನೋತ್ಸವ ವಿಶೇಷ ಸಂಚಿಕೆಯಾಗಿ

ವಿಶಿಷ್ಟ ರೀತಿಯಲ್ಲಿ ಪ್ರಕಟವಾಗುವುದು.

ಈ ಸಂಬಂಧ ಬರುವ ವಾರದ (ತಾ. 10—8—61ರ) ಸಂಚಿಕೆಯನ್ನು ನಿಲ್ಲಿಸಲಾಗಿದೆ. ವಾಚಕರು ದಯಮಾಡಿ ಗಮನಿಸಬೇಕಾಗಿ ವಿನಂತಿ.

ನಮ್ಮ ಚಂದಾದಾರರು ತಮ್ಮ ಬಾಕಿಯನ್ನು ದಯಮಾಡಿ ಸಹೃದತೆಯಿಂದ ಆದಷ್ಟು ಬೇಗನೆ ಕಳುಹಿಸಿಕೊಟ್ಟು ಸಹಕರಿಸಬೇಕಾಗಿಯೂ ಬಿನ್ನಹ.

—ಸಂಪಾದಕ.

ಅಲ್ಲಲ್ಲಿಯ ಸುದ್ದಿಸಾರ

ದ. ಕ. ಜಿಲ್ಲಾ ಖಾಸಗಿ ಪ್ರಾಥಮಿಕ ಶಾಲಾ ಮೆನೇಜರರ ಸಂಘ, ಉಡುಪಿ.— ತಾ. 23—7—61ರಲ್ಲು ಉಡ್ಪಿಯಲ್ಲಿ ಜರಗಿದ ಜಿಲ್ಲಾ ಸಂಘದ ಮಹಾಸಭೆಯಲ್ಲಿ ನಿರ್ಧಾರವಾದಂತೆ ಇದೇ ತಾ. 13—8—61ನೇ ಆದಿತ್ಯವಾರ ಬೆಂಗಳೂರಿನ ವಿದ್ಯಾರ್ಥಿಗಳಿಗಳ ಬಳಿಗೆ ಜಿಲ್ಲಾ ಸಂಘದ ಶಿಷ್ಟಮಂಡಲವು ಹೋಗಲಿಕ್ಕಿದೆ ಎಂತಲೂ ಆಬಗ್ಗೆ ಅಧಿಸ್ವಾಯ ವಿನಿಮಯ ಕ್ಕಾಗಿ ತಾ. 6—8—61ನೇ ಆದಿತ್ಯವಾರ ಅಪರಾಹ್ನ ಘಂಟೆ 3ಕ್ಕೆ ಉಡ್ಪಿ ಮುಕುಂದ ನಿವಾಸದಲ್ಲಿ ಸಂಘದ ಅಡಳ್ತಿ ಮಂಡಳಿಯ ಸಭೆ ಜರಗಲಿಕ್ಕಿದೆ ಎಂತಲೂ ಜಿಲ್ಲಾ ಸಂಘದ ಕಾರ್ಯದರ್ಶಿಯವರಾದ ಶ್ರೀ ಕುಕ್ಕಾಲು ಗಣಪಯ್ಯ ಶೆಟ್ಟಿ ತಿಳಿಸುತ್ತಾರೆ.

ದ. ಕ. ಜಿಲ್ಲಾ ಫಾರ್ಮರ್ಸ್ ಫೋರಂ—ಇದರ ವತಿಯಲ್ಲಿ ತಾರೀಕು 21—7—1961ರಂದು ಫೋರಂ ಅಧ್ಯಕ್ಷರು ಮತ್ತು ಜಿಲ್ಲಾ ಕೃಷಿ ಅಧಿಕಾರಿಗಳು ಜಿಲ್ಲೆಯ ಕೆಲವು ಪ್ರದೇಶಗಳಲ್ಲಿ ಕೃಷಿಕರಿಗೆ ವನ ಮಹೋತ್ಸವದ ಮಹತ್ವವನ್ನು ವಿವರಿಸಿ, ಸಾಣೂರು ಕೃಷಿ ಕ್ಷೇತ್ರದಲ್ಲಿ ವನ ಮಹೋತ್ಸವವನ್ನು ಆಚರಿಸಿ, ಎರಡು ತೆಂಗಿನ ಸಸಿಗಳನ್ನು ನೆಟ್ಟರು. ತರುವಾಯ ಇಟ್ಟೆ ಪ್ರದೇಶದಲ್ಲಿ ಗ್ರಾಮದ ರೈತರ ಸಭೆಯು ಕೃಷಿ ಅಧಿಕಾರಿ ಶ್ರೀ ತಿಪ್ಪೆ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಜಿಲ್ಲಾ ಮುಖ್ಯಾಧಿಕಾರಿ ಮತ್ತು ಅನೇಕರು ಭಾಷಣ ಮಾಡಿದರು. ಇಟ್ಟೆ ಪಂಚಾಯತ್ ಅಧ್ಯಕ್ಷ ಶ್ರೀ ಶಕೂರು ಸದೇಬರು ಸಭೆಯಲ್ಲಿ ಭಾಗವಹಿಸಿದರು. ಶ್ರೀ ಪಿ. ಯಸ್ ತಿಮ್ಮಪ್ಪ ಶೆಟ್ಟರು ಸಿಹಿತಿಂಡಿ ಹಂಚಿ ವನಮಹೋತ್ಸವದ ಆವಶ್ಯಕತೆಯನ್ನು ವಿವರಿಸಿದರು ಅಧ್ಯಕ್ಷರ ಭಾಷಣದೊಂದಿಗೆ, ಧನ್ಯವಾದ ಅರ್ಪಿಸಿ ಸಭೆ ಮುಕ್ತಾಯವಾಯಿತು. ನಂತರ ಪತ್ರಿರದ ತೋಟದಲ್ಲಿ ಎಲ್ಲರೂ ಸಾಮೂಹಿಕರಾಗಿ 10—50 ವಿವಿಧ ವೃಕ್ಷಗಳನ್ನು ನೆಟ್ಟರು.

ತಾ. 22—7—61ರಂದು ಜಿಲ್ಲಾ ಕೃಷಿ ಅಧಿಕಾರಿಗಳ ಅಧೀನದಲ್ಲಿ ವನ ಮಹೋತ್ಸವವು ನಿವೃತ್ತ ಕೃಷಿ ಅಧಿಕಾರಿ ಶ್ರೀ ಕೆ. ಯಸ್ ರಾಮಣ್ಣ ರೈಗಳ ಅಧ್ಯಕ್ಷತೆಯಲ್ಲಿ ಜರಗಿಸಲ್ಪಟ್ಟಿತು. ಕಂಕನಾಡಿ ಭತ್ತ ಪರಿಶೋಧನಾ ಅಧಿಕಾರಿ ಶ್ರೀ ಉದಯಪರು ಪದೀಲು ಹಣ್ಣಹಂಪಲು ಕ್ಷೇತ್ರದ ಶ್ರೀ ರಘು ಶೆಟ್ಟಿ, ಶ್ರೀ ಶ್ರೀನಿವಾಸ ಮತ್ತು ಶ್ರೀ ಪಿ. ಎಸ್. ತಿಮ್ಮಪ್ಪ ಶೆಟ್ಟರು ಭಾಷಣ ಮಾಡಿದರು. ಕೊನೆಗೆ ಅಧ್ಯಕ್ಷರು ವನಮಹೋತ್ಸವವನ್ನು ಅಚರಿಸುವಾಗ ಅಯಾಯ ಜಿಲ್ಲೆಯ ಸಮಯಾನುಕೂಲವನ್ನು ಹೊಂದಿಕೊಂಡು ಆಚರಿಸುವುದು ಅಗತ್ಯವೆಂದು ಹೇಳಿದ ನಂತರ ಜಿಲ್ಲಾ ಕೃಷಿ ಅಧಿಕಾರಿಗಳು ವಂದನಾರ್ಪಣೆ ಮಾಡಿ ಅಧೀನಿನ ವರಾರದಲ್ಲಿ ಕೆಲವು ಸಸಿ ನೆಟ್ಟು ಸಸಿಸಪ್ತಾಹವನ್ನು ಆಚರಿಸಲಾಯ್ತು.

ರಕ್ತದಾನಿಗಳಿಗೆ ಪ್ರಶಸ್ತಿ—ಮಣಿಪಾಲದ ಕೂಸ್ತೂರ್ಬಾ ಆಸ್ಪತ್ರೆಯ ಉಪಯೋಗಾರ್ಥವಾಗಿ ಉಡುಪಿ ಲಯನ್ಸ್ ಕ್ಲಬ್ಬಿನವರು ಸ್ವಯಿಚ್ಛೆಗೊಳಿಸಿದ್ದ ರಕ್ತದಾನ ಚಳವಳಿಗೆ ರಕ್ತದಾನಿಸಿತ್ತ ಸಿಂಡಿಕೇಟ್ ಬೇಂಕಿನ ನೌಕರರಿಗೆ ಉಡುಪಿ ರೊಟರಿ ಕ್ಲಬ್ಬಿನ ಪ್ರಶಸ್ತಿ ಪತ್ರ ವಿತರಣೆಯು ಕಳದ ತಾ. 19ರಂದು ಡಾ|| ಟಿ. ಎಂ. ಎ. ಪೈಗಳಿಂದ ಜರಗಿತು. ಲಯನ್ಸ್ ಕ್ಲಬ್ಬಿನ ಪರವಾಗಿ ಶ್ರೀ ನಗರ್‌ಕಾರರು ಉಪಕಾರ ಸ್ಮರಿಸಿದರು. ರಕ್ತದಾನಿಗಳ ಕಡೆಯಿಂದ ಶ್ರೀ ಟಿ. ಎ. ಪೈಗಳು ಭಾಷಣ ಮಾಡಿ, ತಮಗೂ ತಮ್ಮ ಸಹೋದ್ಯೋಗಿಗಳಿಗೂ ಕೊಟ್ಟ ಗೌರವಕ್ಕಾಗಿ ಧನ್ಯವಾದಗಳನ್ನರ್ಪಿಸಿದರು.

ಸಣಜೂರು—ಸ್ಥಳೀಯ ಅಧ್ಯಮಹಿಳೆಯರೂ, ಸಣಜೂರು ಪಂಚಾಯತದ ಅಧ್ಯಕ್ಷರೂ, ವಿದ್ಯಾಭಿಮಾನಿಗಳೂ ಆಗಿರುವ ಶ್ರೀ ಸಣಜೂರು ಗುತ್ತು ವೆಂಕಪ್ಪ ರೈಗಳವರು ತಾ. 27—7—61ರಂದು ತಮ್ಮ ಸ್ವಗೃಹವಾದ ಲಕ್ಷ್ಮೀ ಪ್ರಸಾದದಲ್ಲಿ ಸಣಜೂರು, ಮೊಗವೀರ, ಕುದ್ರಾರು, ಪ್ರಣ ಜಿನ್ಪಾಡಿ ಮತ್ತು ಕುಮಾರ ಮಂಗ್ಲ ಶಾಲೆಗಳ ಮಕ್ಕಳಿಗೂ ಮತ್ತು ಊರಿನ ಎಲ್ಲಾ ಬಡ ಮಕ್ಕಳಿಗೂ ತನ್ನ ಐವತ್ತೇಳನೆಯ ಹುಟ್ಟು ಹಬ್ಬದ ಸ್ಮರಣಾರ್ಥವಾಗಿ ಪರಮಾನ್ನದ ಸಿಹಿಯೂಟವನ್ನಿತ್ತು ತೃಪ್ತಿಪಡಿಸಿದರು. ಭೋಜನದ ಬಳಿಕ ಸದ್ರಿ ಶಾಲಾ ಮುಖ್ಯೋಪಾಧ್ಯಾಯರುಗಳು ಶ್ರೀ ರೈಗಳವರ ಉದಾರತೆಯ ಕುರಿತು ಕೊಂಡಾಡಿ ಅವರಿಗೆ ಮುಂದಿನ ಜೀವನವು ಸುಗಮವಾಗುವಂತೆ ಶುಭಕೋರಿದರು.

ಉಡುಗೆ ವಿತರಣೆ— ಉಡುಪಿಯ ಮೊದರ್ನ್ ಹಾ. ಎ. ಶಾಲೆಯ ಬಡ ಮಕ್ಕಳಿಗೆ ಶಾಲೆಯ ಬೆನಿಫಿಟ್ ಟ್ರಸ್ಟ್ ಫಂಡಿನಿಂದ ಉಡುಗೆ ಮತ್ತು ಪುಸ್ತಕವನ್ನು ಪಡೆಯುವ ಸಮಾರಂಭವು ಕಳೆದ ತಾ 30ರಂದು ಶ್ರೀ. ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಮೆನೇಜರ್ ಜಗನ್ನಾಥ ನಾಯಕರು ಸ್ವಾಗತಿಸಿ ಟ್ರಸ್ಟಿನ ಮಾಹಿತಿಯನ್ನಿತ್ತರು. ಶಾಲಾ ಇನ್ಸ್‌ಪೆಕ್ಟರ್ ಶ್ರೀ ವೈ. ಗೋಪಾಲ್ ಅವರು ಉಡುಗೆ ಮತ್ತು ಪುಸ್ತಕಗಳನ್ನು ವಿತರಣೆ ಗೈದು ಟ್ರಸ್ಟಿನ ಅನುಕರಣೀಯ ಮತ್ತು ಆದರಣೀಯ ಕಾರ್ಯವನ್ನು ಕೊಂಡಾಡಿದರು. ಅಧ್ಯಕ್ಷ ಶ್ರೀ ಪೈಗಳು ಕಡ್ಡಾಯ ಶಿಕ್ಷಣವೇ ಮೊದಲಾದ ವಿಷಯಗಳ ಕುರಿತು ಮಾತನಾಡಿದ ಮೇಲೆ ಶ್ರೀ ಕೆ. ಜಗನ್ನಾಥ ನಾಯಕರು ಧನ್ಯವಾದಗಳನ್ನರ್ಪಿಸಿದರು.

ಮತದಾರ ಯಾದಿ—ಕುಂದಾಪುರ, ಬೈಂದೂರು, ಬ್ರಹ್ಮಾವರ, ಉಡುಪಿ, ಕಾಪು, ಈ ಐದು ವಿಸೆಂಬ್ಲಿ ಮತದಾರ ಕ್ಷೇತ್ರದ ಮತದಾರರ ಯಾದಿಯನ್ನು ಅನುಕ್ರಮವಾಗಿ ಆಯಾಯ ಅಸಿಸ್ಟಾಂಟ್ ಕಮಿಷನರರ ಆಫೀಸು, ತಾಲೂಕು ಆಫೀಸು, ಸಬ್ ರಿಜಿಸ್ಟ್ರಾರರ ಆಫೀಸು, ಬ್ಲೋಕ್ ಡೆವೆಲಪ್‌ಮೆಂಟ್ ಆಫೀಸುಗಳಲ್ಲಿ ಸಾರ್ವಜನಿಕರ ಅವಗಾಹನೆಗಾಗಿ ಪ್ರಕಟಿಸಲಾಗಿದೆ. ಇದರಲ್ಲಿ ಕಿಂದುಪಡಿ ಅಕ್ಷೇಪಣೆಗಳೇನಾದರೂ ಇದ್ದರೆ ಇದೇ ಆಗೋಸ್ತು 31ರ ಒಳಗೆ ಕುಂದಾಪುರದ ಇಲೆಕ್ಟೋರಲ್ ರಿಜಿಸ್ಟ್ರೇಶನ್ ಆಫೀಸರ್ ಮತ್ತು ಅಸಿಸ್ಟಾಂಟ್ ಕಮಿಷನರರು ತಿಳಿಸುತ್ತಾರೆ.

ಕುಂದಾಪುರ— ಸ್ಥಳೀಯ ಬಾರ್ಬರ್ಸ್ ಯೂನಿಯನ್‌ನ ದ್ವಿತೀಯ ವಾರ್ಷಿಕ ಆಧಿವೇಶನವು ತಾ. 25—7—1961ರಂದು ರಾಷ್ಟ್ರಭಾಷಾ ವಿದ್ಯಾಭವನದಲ್ಲಿ ಉಡುಪಿಯ ಶ್ರೀ ಯು. ಪಿ. ಸುವರ್ಣರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೆ. ಕೃಷ್ಣ ಭಂಡಾರಿಯವರು ಯೂನಿಯನ್ ಕೈಕೊಳ್ಳಬೇಕಾದ ಚಟುವಟಿಕೆಗಳ ಕುರಿತು ಸೂಕ್ತ ಸಲಹೆಗಳನ್ನಿತ್ತರು. ಬಳಿಕ ಮುಂದಿನ ಕಾರ್ಯವಾಹಕ ಸಮಿತಿಯ ಆಯ್ಕೆ ನಡೆದು ಅಧ್ಯಕ್ಷರ ಭಾಷಣ, ಕಾರ್ಯದರ್ಶಿಯವರಿಂದ ಧನ್ಯವಾದ ಸಮರ್ಪಣೆ ನಡೆಯಿತು.

ಜೇನು ನೊಣ ಸಾಕಣೆಯ ಪ್ರಾದೇಶಿಕ ತರಬೇತಿ ಸಂಸ್ಥೆಯ ಉದ್ಘಾಟನೆ—ಉಡುಪಿಯ ಎಂ. ಜಿ. ಎಂ. ಕಾಲೇಜಿನಲ್ಲಿ ಇದೇ ತಾ. 1ರಂದು ಧಾರವಾಡದ ಜೇನು ನೊಣ ಸಾಕಣೆ ಮತ್ತು ಖಾದಿ, ಗ್ರಾಮ ಕೈಗಾರಿಕಾ ಕಮಿಶನದ ಡೈರೆಕ್ಟರ್ ಶ್ರೀ ಎಸ್. ಕೆ. ಕಲ್ಲಾಪೂರ್ ಅವರಿಂದ ನೆರವೇರಿಸಲ್ಪಟ್ಟಿತು. ಸಮಾರಂಭದ ಅಧ್ಯಕ್ಷತೆಯನ್ನು ಮೈಸೂರು ರಾಜ್ಯದ ಖಾದಿ ಮತ್ತು ಗ್ರಾಮೀಣ ಕೈಗಾರಿಕೆಗಳ ಸಮಿತಿಯ ಅಧ್ಯಕ್ಷ ಶ್ರೀ ಸಿದ್ದ ವೀರಪ್ಪನವರು ವಹಿಸಿದ್ದರು. ಕಾಲೇಜಿನ ಕರೆಸ್ಪಾಂಡೆಂಟ್ ಶ್ರೀ ಟಿ. ಎ. ಪೈಗಳು ಸ್ವಾಗತಿಸುತ್ತಾ ಎಂ. ಜಿ. ಎಂ. ಕಾಲೇಜಿನ ಆವರ್ಣ ಈ ಹೊಸ ಸಂಸ್ಥೆಯನ್ನು ಸ್ಥಾಪಿಸುವುದರ ಉದ್ದೇಶ ಇಂದಿನ ಶಿಕ್ಷಣ ರಂಗದಲ್ಲಿಯ ಸಮಸ್ಯೆ ನೊವಲಾದುವನ್ನು ವಿವರಿಸಿ ವಿದ್ಯಾರ್ಥಿಗಳೂ ಜನತೆಯೂ ಇದರ ಪ್ರಯೋಜನ ಪಡೆಯುವಂತಾಗಲಿ ಎಂದರು. ಉದ್ಯಾಮಿಕರು ಜೇನು ನೊಣ ಸಾಕಣೆಯ ಇತಿಹಾಸವನ್ನೂ ಅದಕ್ಕಾಗಿ ಕೇಂದ್ರ ಸರಕಾರವು ಮೊತ್ತಿರುವ ಪ್ರಯತ್ನ, ಕೈಗೆತ್ತಿರುವ ಪ್ರೋತ್ಸಾಹ ಈ ಕಾರ್ಯದಲ್ಲಿ ಎದುರಿಸಬೇಕಾದ ಸಮಸ್ಯೆ ಮೊದಲಾದುವನ್ನು ವಿವರಿಸಿ ಈ ಕೇಂದ್ರವು ಎಲ್ಲರ ಸಹಕಾರದಿಂದ ಜಯಶೀಲವಾಗುವಂತಾಗಲೆಂದೂ, ಇಲ್ಲಿಯೇ ಸಂಶೋಧನಾ ಕೇಂದ್ರವು ಸ್ಥಾಪಿಸಲ್ಪಡುವ ಸಂಭವವಿದೆಯೆಂದೂ ಹೇಳಿದರು. ಅಧ್ಯಕ್ಷರು ಭಾಷಣ ಮಾಡುತ್ತಾ ಖಾದಿ ಮತ್ತು ಗ್ರಾಮೀಣ ಕೈಗಾರಿಕೆಗಳಿಗೆ ಜನರ ಪ್ರೋತ್ಸಾಹ ಅತ್ಯಗತ್ಯವೆಂದೂ ವಿದ್ಯಾ ಸಂಸ್ಥೆಗಳನ್ನು ಖಾಸಗಿ ಪ್ರಯತ್ನದಲ್ಲಿ ಉತ್ತಮ ರೀತಿಯಲ್ಲಿ ನಡೆಸಿಕೊಂಡು ಬರುತ್ತಿರುವ ಪೈ ಬಂಧುಗಳಿಗೆ ಈ ಹೊಸ ಪ್ರಯತ್ನದಲ್ಲಿ ಯಶಸ್ಸು ದೊರೆಯುವುದು ಖಂಡಿತವೆಂದೂ ಹೇಳಿದರು. ಪ್ರಿನ್ಸಿಪಾಲ್ ಶ್ರೀ ಎಚ್ ಸಂಪರಿರಾಯರು ಧನ್ಯವಾದಗಳನ್ನಿತ್ತು ತಮ್ಮ ಮತ್ತು ಸಿಬಂದಿಯ ಸಹಕಾರದ ಭರವಸೆಯಿತ್ತರು.

ಮಂತ್ರಿ ಡಾ|| ಕೆ. ಕೆ. ಹೆಗ್ಡೆಯವರ ಸಂಚಾರ—ಮೈಸೂರು ಸರಕಾರದ ಆರೋಗ್ಯ ಮಂತ್ರಿ ಕೆ. ಕೆ. ಹೆಗ್ಡೆಯವರು ಬೆಂಗಳೂರಿನಿಂದ ತಾ. 1ಕ್ಕೆ ಬಂದು 2ರಿಂದ 6ರ ತನಕ ದ. ಕ. ಜಿಲ್ಲೆಯಲ್ಲಿ ನೆರೆಹಾವಳಿಗೊಳಗಾದ ಸ್ಥಳಗಳಲ್ಲಿ ಸಂಚರಿಸಲಿರುವರು. ತಾ. 7ರಂದು ಅವರು ಬೆಂಗಳೂರಿಗೆ ಹಿಂತಿರುಗುವರು.

ಪುತ್ತೂರು ಡಿ. ಮು. ಕೋರ್ಟಿನಲ್ಲಿ

S. C. No. 157/1961.

B. S. ಶಿವರಾಮ ರೈ —ವಾದಿ.

ದೇರಣ್ಣ ರೈ—ಗೋಪಾಲ ಮೇಸ್ತ್ರಿಗಳ ಮಗ, ಹಾಲಿ ಬಡಗನ್ನೂರು ಗ್ರಾಮದ ಎಡೆಬೋಡು ಕೆಕ್ಕಿತಡಿ ಎಂಬಲ್ಲಿ—Post ಬಡಗನ್ನೂರು —ಪ್ರತಿವಾದಿ.

ವಾದಿಗೆ ಪ್ರತಿವಾದಿಯಿಂದ ಬರಬಾಕಿದಾರನೊಂದ ಪ್ರೊ. ನೋಟಿನ ಅಸಲು ರೂ. 135—93ರ ವಸೂಲಿಗೆ ಮಾಡಿದ ದಾವೆಯು ಪ್ರತಿವಾದಿಯು ಕೈಸೇತು ನೋಟಿನ ಬಗ್ಗೆ ತಾ. 16—8—1961ಕ್ಕೆ ವ್ಯಾಜ್ಯ ಇಟ್ಟಿರುವುದರಿಂದ ಆ ದಿನ 11 ಗಂಟೆಗೆ ಈ ಕೋರ್ಟು ಮುಂದೆ ಪ್ರತಿವಾದಿಯು ಹಾಜ್ರಾಗಿ ಬರಹ ಮೂಲಕ ತನ್ನ ಅಕ್ಷೇಪಗಳೇನಾದರೂ ಹೇಳುವದಿದ್ದರೆ ತಿಳಿಸತಕ್ಕದ್ದು—ಇದಕ್ಕೆ ತಪ್ಪಿದರೆ ಅತನನ್ನು ಶಿಕ್ಷಾಯ ಎಂತಾಗಿ ಈ ದಾವೆಯು ಮುಂದಿನ ತನ್ನಿಯಿಂದ ತೀರ್ಮಾನಿಸಲಾಗುವದು ಎಂತ ಈ ಕೋರ್ಟು S. J. A. 118/61ನೇ ಅರ್ಜಿ ಹುಕುಂ ಪ್ರಕಾರ ಈ ನೋಟೀಸು ಮಾಡಿಸಿಯಿದೆ.

(Sd.) B Ramechandra Rao.
M. A. B. L.
Pleader for Plaintiff

ಪುತ್ತೂರು, 30—7—1961.

ಏಲಂ ನೋಟೀಸು

ದಿ ಕೆಥೋಲಿಕ್ ಬ್ಯಾಂಕ್ ಲಿಮಿಟೆಡ್, ಶಿರ್ವ.

The Catholic Bank Ltd., Shirva.

ಈ ಕೆಳಗೆ ಹೆಸರು ತಾಡಿಸಿದ ಮಹಾಸೀಯರು, ಸದ್ರಿ ಬ್ಯಾಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡಕೊಂಡ ಸಾಲವನ್ನು ಕ್ರಮಪ್ರಕಾರ ರಿಜಿಸ್ಟ್ರಿ ನೋಟೀಸು ಕೊಟ್ಟಲ್ಲಿ ಕೊಡಾ ಮರುಪಾವತಿ ಮಾಡದಿರುವುದರಿಂದ ಸದ್ರಿಯವರಿಗೆ ವ, ಸದ್ರಿಯವರು ಮೃತಪಟ್ಟಲ್ಲಿ ಸದ್ರಿಯವರ ವಾರೀಸುವಾರರಿಗೆ ಈ ಮೂಲಕ ತಿಳಿಸುವುದೇನೆಂದರೆ; ಸದ್ರಿಯವರು ಈಗಿಟ್ಟಿನಗಗಳನ್ನು ಇದೇ ತಾರೀಕು 21—8—1961ರ ಒಳಗೆ ಬಿಡಿಸದಿದ್ದಲ್ಲಿ ತಾರೀಕು 26—8—1961 ಶನಿವಾರ ಮಧ್ಯಾಹ್ನ ಗಂಟೆ 2ಕ್ಕೆಯೂ ನಮಗೆ ಯುಕ್ತಕಂಡ ಇನ್ನಿತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೇ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು.

G. L. No.	Name and Address	Amount
1184	ಶ್ರೀ ಜಗನ್ನಾಥ ಸೆಟ್ಟಿ N/o ಪಿಚಿನ ಸೆಟ್ಟಿ, ಮಾನಿಬೆಟ್ಟು ಹೊಸಬೆಟ್ಟು ಮಟ್ಟಾರ್. ದ. ಕ.	35/-
2038	ಶ್ರೀ ಕಾಡ್ಯ ಸೆಟ್ಟಿ, N/o ತುಳ್ಳ ಸೆಟ್ಟಿ, ಕರಿಮೂರು ಮನೆ, ಪಿಲಾರು ಪೋಸ್ಟ್ ದ. ಕ	70/-
30/384	ಶ್ರೀ ಮನುವೆಲ್ ಕಸ್ತೆಲೇನ್ S/o ಇಂತ್ರುಕಸ್ತೆಲೇನ್, ಪಲ್ಲ ಹೊರ್ಟೂಟ್ಟು, ಪಳ್ಳಿ ಪೋಸ್ಟ್ ದ. ಕ.	40/-
414	ಶ್ರೀ ವಿಲ್ಲಪ್ಪ ಹೆಗ್ಡೆ, S/o ಸುಬ್ಬಯ ಹೆಗ್ಡೆ, ಬ್ರಾಂಟ್ ಪೋಸ್ಟ್ ಮೂಸ್ಟರ್ ಕುತ್ಯಾರ್ ಪೋಸ್ಟ್ ದ. ಕ.	100/-
470	ಶೇಕ್ ಹುಸೈನ್ S/o ಸಟುಜ್ಜಾನ್ ಸಹೇಬ್, ಟೈಲರ್, ಶಿರ್ವಪೋಸ್ಟ್ ದ. ಕ.	10/-
788	ಶ್ರಿ ಸದಾನಂದ ಸೆಟ್ಟಿ, N/o ದೇವು ಸೆಟ್ಟಿ, ಪನಪಾಡಿ, ಸೂಡೆ ಪೋಸ್ಟ್ ದ. ಕ.	125/-
925	ಶ್ರೀ ಗೋಪ ಸೆಟ್ಟಿ, N/o ಮನ್ಸ ಸೆಟ್ಟಿ, ಹೊಸಮನೆ, ಮಟ್ಟಾರ್ ಪೋಸ್ಟ್ ದ. ಕ.	20/-
948	ಶ್ರೀಮತಿ ಅಕ್ಕು ಸೆಟ್ಟಿ, D/o ದೊಡ್ಡು ಸೆಟ್ಟಿ, ಅಂಜಾರುಮನೆ, ಕುತ್ಯಾರ್ ಪೋಸ್ಟ್, ದ. ಕ.	60/-
1017	ಶ್ರೀ ಶೀನ ಮೂಲ್ಯ N/o ಕುಟ್ಟಿ ಮೂಲ್ಯ, ಪಾಪೊರು ಪೋಸ್ಟ್, ದ. ಕ.	20/-
1149	ಶ್ರೀ ಗಾಬ್ರಿಯೆಲ್ ಸಲ್ಡೇಶ್, S/o ಜೋನ್ ಸಲ್ಡೇಶ್, ಕಲತ್ತೂರು ಪೋಸ್ಟ್, ದ. ಕ.	20/-

Office of the Catholic Bank Ltd.
Shirva Branch, S. K.
Dated 22—7—1961.

(Sd.) M. B. Shet,
Agent.

ಕಾರ್ಕಳ ಡಿ. ಮು. ಕೋರ್ಟಿನಲ್ಲಿ.

O. P. No. 30/1961.

ಜಲಜ ಶೆಟ್ತಿ —ಅರ್ಜಿದಾರಳು.
ಮತ್ತು
ಸಂಜೀವಶೆಟ್ಟಿ —ಎದ್ರಿ
ಇವರೊಳಗೆ

ಈ ಮೂಲಕ ಸಮಸ್ತ ಜನರಿಗೆ ತಿಳಿಸುವುದೇನೆಂದ್ರೆ

ಅರ್ಜಿದಾರಳ ಸೋದರಮಾವ ಮೃತ ಬಾಬು ಶೆಟ್ಟಿ ತಾರೀಕು 5—11—1950 ರಲ್ಲು ಬರೆದಿಟ್ಟ ವೀಲನಾಮೆ ಪ್ರಕಾರ ಬಾಬಾ ಸೊತ್ತುಗಳಿಗೆ ಅರ್ಜಿದಾರಳಿಗೆ ವಾರೀಸು ಸರ್ಟಿಫಿಕೇಟು ಕೊಡಬೇಕಾಗಿ ಅರ್ಜಿದಾರಳು ದಾಕ್ಲು ಮಾಡಿದ ಮೇಲಿನ ಅರ್ಜಿ ತಾರೀಕು 28—8—1961ಕ್ಕೆ ಇಟ್ಟದೆ ಸದ್ರಿ ದಿನಸ, ಅಕ್ಷೇಪಿಸುವವರು ಸದ್ರಿ ಕೋರ್ಟು ಮುಂದೆ ಬೆಳಗ್ಗೆ 10 ಗಂಟೆಗೆ ಸ್ವತಹಾ ಯಾ ವಕೀಲರ್‌ದ್ವಾರಾ ಹಾಜ್ರಾಗಿ ಉತ್ತರಿಸತಕ್ಕದ್ದು ಎಂತ ಈ ಮೂಲಕ ತಿಳಿಸೋಣಗುತ್ತದೆ.

by Order of the Court.
N. M. Adyanthaya,
Advocate for petitioner.

Karkala, 31—7—61.

ಪಕ್ಷಿ ಪರಿಚಯ

ಚಂದ್ರಿಕಾ ಪ್ರಮತ್ತ ಚಕೋರ

ಬೆಳುದಿಂಗಳನ್ನೇ ತಿಂದು ಜೀವಿಸುವ ಪಕ್ಷಿ ಇದೆಯೆಂದು ಹೇಳಿದರೆ, ನೀವು ಖಂಡಿತಕ್ಕೂ ನಂಬಲಾರಿರಿ. ಆದರೆ, ಕವಿಗಳ ಜಗತ್ತಿನಲ್ಲಿ ಚಕೋರಗಳು ಬೆಳುದಿಂಗಳನ್ನದೆ ಮತ್ತೇನನ್ನೂ ತಿನ್ನಲಾರವು. ಇಂತಹ ವಿಚಿತ್ರಾಹಾರಿ ಪಕ್ಷಿಯ ಬಗೆಗೆ ನಿಮಗೇನು ತಿಳಿದಿದೆ?

ಚಕೋರ! ಕಾವ್ಯಾಭ್ಯಾಸಿಯು ಹೆಗಲಿರುಳು ನೆಲುಕು ಹಾಕುವ ಪದವಿದು. ಚಕೋರ ಪಕ್ಷಿಯು ಕವಿಗಳ ವರ್ಣನೆಯಿಂದಷ್ಟೇ ಹೆಸರು ಪಡೆದಿದೆ; ಅದರ ಸೌಂದರ್ಯ ಕೂಡ ಹೇಳಿಸಿಕೊಳ್ಳುವಂತಹುದು ನಿಜವಾದ ಚಕೋರದ ಪರಿಚಯವಿರುವವರು ವಿರಳಾತಿ ವಿರಳರಾದರೂ ಕವಿಗಳ ಕಲ್ಪನೆಯ ಚಕೋರನನ್ನು ತಿಳಿಯದಿರುವವರೂ ವಿರಳವೇ. ಚಕೋರ-ಚಕೋರಿಗಳ ಅಗಾಧ ಪ್ರೇಮ, ಚಂದ್ರನ ಜ್ಯೋತ್ಸ್ನೆಗಾಗಿ ಅದರ ಅತೃಪ್ತ ತೃಷೆ ಮತ್ತು ಉರಿಯುವ ಅಂಗಾರವನ್ನಾದರೂ ನುಂಗಿಬಿಡುವ ಅನುಪಮ ಪವಾಡ ಶಕ್ತಿಗಳಿಂದಾಗಿ ಪಕ್ಷಿ ಜಾತಿಯಲ್ಲಿ ಚಕೋರವು ತನ್ನದೇ ಸ್ಥಾನವೊಂದನ್ನು ಗಳಿಸಿಕೊಂಡಿದೆ. ಕವಿಗಳು ಹೇಳುವ ಅದರ ಈ ಕಾರ್ಯಕ್ಷಮತೆಯು ಎಷ್ಟರ ಮಟ್ಟಿಗೆ ನಿಜ ಎಂಬ ವಿಚಾರದಲ್ಲಿ ಮಾತ್ರ ಭಿನ್ನಾಭಿಪ್ರಾಯವಿದೆ. ತಾವು ಬೆಂಕಿಯ ಕೆಂಡವನ್ನು ನುಂಗುತ್ತಿದ್ದ ಚಕೋರವನ್ನು ಕಂಡಿದ್ದೇವೆ ಎಂದು ಹೇಳುವವರು ಇದ್ದಾರೆ. ಅದು ಯಾವ ಸಂದರ್ಭದಲ್ಲಿ ಎಂಬುದು ಅವರಿಗೆ ಮಾತ್ರ ಗೊತ್ತು. ಆದರೆ, ಜೀವ ವಿಜ್ಞಾನದಂತೆ ಯಾವ ಜೀವಂತ ಪ್ರಾಣಿಯೇ ಇರಲಿ ಉರಿಯುವ ಕೆಂಡವನ್ನುನುಂಗಲಾರದು; ಅದನ್ನು ಮುಟ್ಟಿದೊಡನೆಯೇ ಸ್ಪರ್ಶಿಸಿದ ಭಾಗ ಸುಟ್ಟು ಹೋಗಲೇಬೇಕು.

ಚಕೋರ—ಚಕೋರಿಗಳ ಗಾಢವಾದ ಪ್ರೇಮ ಸಂಬಂಧವು ಆದರ್ಶಪ್ರಾಯವೆಂದು ತಿಳಿಯಲ್ಪಡಬಹುದು. ವಾಸ್ತವಿಕವಾಗಿ ಇವುಗಳಲ್ಲಿ ಇಂತಹ ಪ್ರೇಮವಿದೆಯೆಂದು ಹೇಳುವಂತಿಲ್ಲ. ಹೆಣ್ಣು ಮತ್ತು ಗಂಡು ಚಕೋರಗಳು ಗರ್ಭಧಾರಣೆಗೆ ಅನುಕೂಲವಾದ ಕಾಲದಲ್ಲಿ—ವಸಂತ ಕಾಲಾರಂಭವಾದ ಮೇಲೆ—ಮಾತ್ರ ಒಟ್ಟು ಸೇರುತ್ತವೆ. ಶರತ್ ಮತ್ತು ಹೇಮಂತ ಕಾಲದ ನಾಲ್ಕಾರು ತಿಂಗಳು ಚಕೋರಗಳು ಗುಂಪಾಗಿ ವಾಸಿಸುತ್ತವೆ. ಪ್ರತಿಯೊಂದು ಪಂಗಡದಲ್ಲಿ ೧೫ರಿಂದ ೨೦ ಕೆಲವೊಮ್ಮೆ ಇನ್ನೂ ಹೆಚ್ಚು ಸಂಖ್ಯೆಯ ಚಕೋರ—ಚಕೋರಿಗಳು ಒಂದಾಗಿ ಸೇರಿಕೊಂಡಿರುತ್ತವೆ. ಚಂದ್ರಕಿರಣಗಳನ್ನೇ ನಿರೀಕ್ಷಿಸುತ್ತಿರುವುದೆನ್ನುವ ನೂತನ ವಿಶೇಷವೇನೂ ಅಲ್ಲ. ಬೆಳದಿಂಗಳಲ್ಲಿ ಅಧಿಕ ಕ್ರೀಡೆಯನ್ನಾಡುವ ಪಶು ಪಕ್ಷಿಗಳು ಬೇಕಾದಷ್ಟಿವೆ. ಹಾಗಿರುವಾಗ ಅದು ಚಕೋರಿಯ ವೈಲಕ್ಷಣ್ಯವೆನ್ನುವಂತಿಲ್ಲ.

ಆಕಾರ—ಬಣ್ಣಗಳಲ್ಲಿ ಚಕೋರವು ನಿಜವಾಗಿಯೂ ಅತ್ಯಂತ ಮನೋಹರವಾದ ಪಕ್ಷಿ. ಅದರ ಶರೀರದ ವರ್ಣಗಳ ಅನಂದ ಪ್ರತ್ಯಕ್ಷದರ್ಶದಿಂದ ಆಗಬೇಕಲ್ಲದೆ ಶಬ್ದ ಚಿತ್ರದಿಂದಲ್ಲ. ಇವುಗಳ ಪ್ರಾಕೃತಿಕ ನಿವಾಸಸ್ಥಾನ ಹಿಮಾಲಯ ಪರ್ವತ ಮಾಲೆಯೆನ್ನುವಂತಾದರೂ ಸಾಮಾನ್ಯ ಪಕ್ಷಿಯ ಗೂಡುಗಳಲ್ಲಿಯೂ ನಾವಿದನ್ನು ನೋಡಬಹುದು. ನಸು ಕಂದು ಅಥವಾ ಬಾದಾಮಿ ಬಣ್ಣದ ಶರೀರದಲ್ಲಿ ಕಡು ಗೆಂಪು ಬಣ್ಣದ ಕೊಕ್ಕು, ಕಾಲು ಮತ್ತು ಗುಗಳ ಬೆರಳುಗಳು ಬಹು ಶೋಭಾಯಮಾನವಾಗಿವೆ. ರೆಪ್ಪೆಗಳೂ ಕೆಂಪು ಬಣ್ಣದ್ದಾಗಿದ್ದು ಕಣ್ಣಿನ ಸುತ್ತಲೂ ಸುತ್ತ ಕೆಂಬಣ್ಣದ ಪ್ರಕಾಶ ದೃಗ್ಗೋಚರವಾಗುತ್ತದೆ. ಇಷ್ಟು ಮಾತ್ರವಲ್ಲ ಚಕೋರದಲ್ಲಿ ಇನ್ನೂ ಕೆಲವು ವೈಶಿಷ್ಟ್ಯಗಳಿವೆ. ಮೊದಲನೆಯದಾಗಿ "ಕಂಠಹಾರ". ಇದು ಕರಿಯ ಬಣ್ಣದ್ದು. ತಲೆಯ ಮೇಲಿನಿಂದ ಕೊಕ್ಕಿನ ಹಿಂದೆ ತೊಡಗಿ ಕಣ್ಣುಗಳ ಮೇಲೆ ಹರಿದು, ಕುತ್ತಿಗೆಯ ಹತ್ತಿರ ಸಂಧಿಸುವ ಈ ಹಾರ ಚಿತ್ತಾಕರ್ಷಕವಿದೆ. ರೆಕ್ಕೆಗಳ ಕೆಳಭಾಗದಲ್ಲಿ ಶರೀರದ ಇಕ್ಕಡೆಗಳಲ್ಲಿಯೂ ಇರುವ ಕರಿ ಮತ್ತು ಬಾದಾಮಿ ಬಣ್ಣದ ರೇಖೆಗಳು ಇನ್ನೊಂದು ನಯನ ಮನೋಹರ ವೈಶಿಷ್ಟ್ಯ. ಚಕೋರದ ಬಾಲವು ಬಹು ಕಿರಿದು ಅದರ ಮೊನಚು. ಎಳೆಯ ಚಕೋರಿಯ ಸೌಂದರ್ಯ ಇಷ್ಟಿರುವುದಿಲ್ಲ. ಅದರ ಕೊಕ್ಕು ಕಂದು ಇಲ್ಲವೇ ಕಪ್ಪಾಗಿರುತ್ತದೆ. ಹೆಣ್ಣು ಚಕೋರವು ಗಂಡಿಗಿಂತ ಆಕಾರದಲ್ಲಿ ತುಸು ಚಿಕ್ಕದು; ಇದಲ್ಲದೆ ಇವುಗಳ ರೂಪದಲ್ಲಿ ಮತ್ತಾವ ಅಂತರವೂ ಇರುವುದಿಲ್ಲ.

ನಮ್ಮ ದೇಶದಲ್ಲಿ ಹಿಮಾಲಯದ ಪರ್ವತ ಮಾಲೆಯಲ್ಲಿ ಕಾಶ್ಮೀರದಿಂದ ಪೂರ್ವೋತ್ತರ ಭಾಗದ ವರೆಗೆ ಚಕೋರವು ಕಾಣಸಿಗುವುದು. ತಪ್ಪಲು ಪ್ರದೇಶಗಳಲ್ಲಿ ಮಾತ್ರವಲ್ಲ, ೧೪ ಸಾವಿರ ಅಡಿ ಎತ್ತರದ ಪರ್ವತಗಳಲ್ಲಿ ಕೂಡಾ ಚಕೋರವು ಸುಲಭವಾಗಿ ಬದುಕಬಲ್ಲುದು. ಹಿಮಾಲಯದ ಚಳಿ ಪ್ರದೇಶಗಳಲ್ಲಿಯೂ ಅರೇಬಿಯಾದ ಉಷ್ಣದಲ್ಲಿಯೂ ಚಕೋರಗಳುಕಾಣಸಿಕ್ಕೆ ನೆ. ಹೆಚ್ಚಾಗಿ ಮರೆ—ತೆರೆಯಿಲ್ಲದಲ್ಲಿ ಇವು ವಾಸಿಸುವುದಿಲ್ಲ. ಹುಲ್ಲಿನಿಂದಾವೃತವಾದ ಸ್ಥಳ ಇಲ್ಲವೇ ವನಸ್ಪತಿಗಳಿಂದ ತುಂಬಿದ ಬೆಟ್ಟಗಳಲ್ಲಿಯೇ ಇವು ಇರುವುವು. ವಸಂತ ಋತ್ವಾನಂತರತನ್ನ ಗುಂಪನ್ನು ಬಿಟ್ಟು ಗಂಡು ಚಕೋರವು ಜೋಡಿಯನ್ನು ಸೇರುತ್ತದೆ; ಮನೆಕಟ್ಟುತ್ತದೆ. ಇವುಗಳ ಮನೆಯೊಡರೂ ವಿಚಿತ್ರ ರೀತಿಯದು. ಭೂಮಿಯಲ್ಲಿರ ಬಹುದಾದ ಸಾಮಾನ್ಯ ಗುಳಿ! ಇದರ ಮೇಲೆ ಹುಲ್ಲು ಕಡ್ಡಿ ಎಲೆಗಳ ಹಾಸು ಹಾಸುತ್ತದೆ ಕೆಲವೊಮ್ಮೆ ಬಿಸಿಲಿನಿಂದ ರಕ್ಷಿಸಿಕೊಳ್ಳುವುದಕ್ಕೋಸ್ಕರ ಯಾವುದಾದರೂ ಪೊದರಿನಲ್ಲಿಯೋ ಅಥವಾ ಬಂಡೆಯ ಮರೆಯಲ್ಲಿಯೋ ಮನೆಕಟ್ಟುವುದುಂಟು. ಚಕೋರಿಯು ಒಮ್ಮೆಗೇ ಸುಮಾರು ೮—೧೦ ಮೊಟ್ಟೆಗಳನ್ನಿಡುವುದು. ಆದರೆ, ಕೆಲವು ಸಂಜಾರಿಗಳು ಒಂದೇ ಗೂಡಿನಲ್ಲಿ ೨೦—೨೧ ಮೊಟ್ಟೆಗಳು ದೊರೆತಿವೆಯೆನ್ನುತ್ತಾರೆ.

ಈ ಚಕೋರಗಳನ್ನು ಬೇಟೆಯಾಡುವುದರಲ್ಲಿ ಆಸಕ್ತಿ ತೋರಿಸುತ್ತಿರುವವರಿರುವಂತೆಯೇ ಇದನ್ನು ಪಾಲಿಸುವವರೂ ಇದ್ದಾರೆ ಸಾಕು ಚಕೋರವು ತನ್ನ ಯಜಮಾನನನ್ನು ಸರಿಯಾಗಿ ಗುರುತಿಸಿಕೊಳ್ಳಬಲ್ಲುದು ಹಾಗೂ ಆತನ ಹಿಂದೆ ಸ್ವೇಚ್ಛೆಯಿಂದ ಸಂಚರಿಸಬಲ್ಲುದು. ಕೆಲವೊಮ್ಮೆ ಚಕೋರಗಳನ್ನು ಪರಸ್ಪರ ಹೋರಾಡಲು ಬಿಟ್ಟು ಆನಂದ ಪಡುವವರೂ ಇದ್ದಾರೆ. ಚಕೋರಗಳ ಜೂಜಿನಲ್ಲಿ ಯುರೋಪಿನ ಜನರು ನೂರಾರು ರೂಪಾಯಿಗಳ ಪಂಥವಿಡುವ ಪದ್ಧತಿಯೊಂದು ಕಾಲದಲ್ಲಿತ್ತು. ಅನಾಯಾಸವಾಗಿ ಯೂರಿಗಾದರೂ ಚಕೋರಗಳು ಬೀಡು ಬಿಡುವುದು ಕಂಡರೆ, ಸುಖ, ಸಮೃದ್ಧಿ ಮತ್ತು ಧನಪ್ರಾಪ್ತಿಯ ಲಕ್ಷಣವೆಂದು ಶಾಸ್ತ್ರ ಹೇಳುತ್ತದೆಯೆಂಬ ವಿಶ್ವಾಸ ಭಾರತದಲ್ಲಿದೆ.

ಚಂದ್ರ ಕಿರಣಗಳಲ್ಲಿ ಚಕೋರಗಳಿಗಿರುವ ಆಸಕ್ತಿಯನ್ನು ಕವಿಗಳು ವರ್ಣಿಸಿದ ರೀತಿ ಕಾಣಿರಿ:

ಇಂಗಡಲೊಳಗೋಲಾಡುವ
ವಿಂಗಳ ಬಳಗಂಗಳೆಂ
ಬಿನಂ ಶರದದ ಬೆ
ಳ್ದಿಂಗಳೊಳಾಡಿದುವು ಚಕೋ
ರಂಗಳ್ ಚಂದ್ರಾಂಶು ಪೂರ್ಣ
ಚಂಚು ಪುಟಂಗಳ್ ॥

—ಮಲ್ಲಿನಾಥ ಪುರಾಣ

ಶರದೃತುವಿನ ಇರುಳು ಪಸರಿಸಿದ ಬೆಳುದಿಂಗಳಲ್ಲಿ ಸಮುದ್ರದಲ್ಲಿ ಓಲಾಡಿ ಮೈಮರೆಯುತ್ತಿರುವ ಮೀನುಗಳ ಸಮೂಹದಂತೆ ಚಕೋರಗಳು ಚಂದ್ರಿಕಾ ಪಾನ ಮಾಡುತ್ತ ಓಲಾಡಿದುವು.

ನೆರೆದು ಚಕೋರ ಪ್ರಕರಂ
ಖರಚಂಚುವಿ ನುಡಿದು
ತಿನೆಸುಧಾಕರ ಕಿರಣಾಂ
ಕುರನಿಕರ ಮನಮರ್ದಿನ ಸೊನೆ
ಸುರಿದಪುದೆನೆ ಪಸರಿಸಿತ್ತು
ಪೊಸ ವೆಳ್ದಿಂಗಳ್ ॥

(ಲೀಲಾವತಿ)

ಚಕೋರಗಳು ಗುಂಪು ಕಟ್ಟಿಕೊಂಡು ತಮ್ಮ ತೀಕ್ಷ್ಣವಾದ ಚಂಚುಗಳಿಂದ ಚಂದ್ರ ಕಿರಣಗಳೆಂಬ ಲತಾಂಕುರಗಳನ್ನು ಕುಟುಕಿ ತಿನ್ನುತ್ತಿರುವಾಗ, ಅಮೃತದ ಧಾರೆಯೇ ಭೂಮಿಗೆ ಸುರಿಯುತ್ತಿರುವಂತೆ ಚಂದ್ರಿಕೆಯು ಪಸರಿಸಿತು.

—ಗೋರಾ.

ವಿಜ್ಞಾನ

(ಜನೇ ಸುಟದಿಂದ)

ರಿಕ ಸಂಸ್ಥೆಗಳ ಪ್ರಗತಿಯು ಇದರ ಕಾರ್ಯಪದ್ಧತಿಯನ್ನು ಹೊಂದಿಕೊಂಡಿರುವುದರಿಂದ, ಟೆಲಿಪ್ರಿಂಟರ್ ಸೇವೆಯಲ್ಲಿ ವಿಕಾಸವು ಅತೀವ ತೀವ್ರವಾಗಿ ನಡೆಯುತ್ತಿದೆ.

ಇಂದು ಟೆಲಿಪ್ರಿಂಟರಿನಿಂದ ಆಗುವ ಕೆಲವೊಂದು ಕಾರ್ಯಗಳನ್ನು ಕೇಳಿ ನಾವು ವಿಸ್ಮಯಗೊಳ್ಳಬೇಕು. ಅಮೆರಿಕೆಯ ಸುವಿಶಾಲ ನಗರ ಚಿಕಾಗೊದಲ್ಲಿ ಅಂಗಡಿಯಿಂದ ಸಾಮಾನು ಕದ್ದ ಕಳ್ಳರನ್ನು ಪತ್ತೆ ಹಚ್ಚಲು ಇವು ಉಪಯೋಗಿಸಲ್ಪಟ್ಟಿತ್ತವೆ. ಅಂಗಡಿಯ ಯಾವುದಾದರೊಂದು ಮೂಲೆಯಲ್ಲಿ ಕಳ್ಳತನ ನಡೆದರೆ, ಈ ಸಂಗತಿಯು ಅಲ್ಲಿಯೇ ಇನ್ನೊಂದು ಮೂಲೆಯಲ್ಲಿ ಕುಳಿತ ಮೇನೇಜರನಿಗೆ ತತ್‌ಕ್ಷಣ ತಿಳಿಯುವುದು.

ವಿಮಾನ ಕಂಪೆನಿಗಳಲ್ಲಿ ಕೆಲವು ವಿಮಾನಗಳಲ್ಲಿ ಟೆಲಿಪ್ರಿಂಟರ್‌ಗಳನ್ನಿಟ್ಟು ಹವಾಮಾನದ ಸ್ಥಿತಿ ಮತ್ತು ಭವಿಷ್ಯವಾಣಿಗಳನ್ನು ಮುದ್ರಿಸಿಕೊಳ್ಳುತ್ತಾರೆ. ವಿಮಾನಯಾನವು ಸುರಕ್ಷಿತವಾಗುವುದಕ್ಕೆ ಹವಾಮಾನದ ಪರಿಪೂರ್ಣ ಜ್ಞಾನ ಅತ್ಯವಶ್ಯವಿದೆ.

ವ್ಯಾಪಾರೀ ಮಂಡಳದ ಲೆಕ್ಕಪತ್ರಗಳೆಲ್ಲವನ್ನೂ ಟೆಲಿಪ್ರಿಂಟರ್ ಇಡಬಲ್ಲುದು. ನ್ಯೂಯಾರ್ಕಿನ ಒಂದು ಕಂಪೆನಿಯು ಲಂಡನ್ನಿನ ಮತ್ತೊಂದು ಕಂಪೆನಿಗಳಲ್ಲಿ ಕೊಡಕೊಳ್ಳಾಟ ಟೆಲಿಪ್ರಿಂಟರ್‌ನ ಸಹಾಯದಿಂದ ನಡೆಯುತ್ತೆಂದರೆ, ಆಗ, ಆ ವ್ಯವಹಾರದ ಸಂಪೂರ್ಣ ವಿವರಗಳು ಅವಂಬಳಿ ಶಾಶ್ವತವಾಗಿ ಉಳಿಯುವುವು.

ಜರ್ಮನಿಯಲ್ಲಿ ಹೆಣ್ಣು, ಕಾಳು ಅಥವಾ ಮೀನು ಮೊದಲಾದುವುಗಳ ರಫಂ ವ್ಯಾಪಾರಗಳು ಟೆಲಿಪ್ರಿಂಟರ್‌ನ ಮೂಲಕವೇ ಬೇರೆ ಬೇರೆ ಸ್ಥಳಗಳಲ್ಲಿ ವ್ಯಾಪಾರ ನಡೆಸುವರು. ಫ್ರಾನ್ಸ್ ಸರಕಾರವು ಚುನಾವಣೆಗಳ ಸಮಯ ಇಡಿಯ ದೇಶದಲ್ಲಿ ಟೆಲಿಪ್ರಿಂಟರ್ ಜಾಲವನ್ನು ಹರಡಿಸುವುದು. ಚುನಾವಣೆಯ ಪರಿಣಾಮವು ಏಕಕಾಲದಲ್ಲಿ ಎಲ್ಲ ಸ್ಥಳಗಳಲ್ಲಿ ಉದ್ಘೋಷಿತವಾಗುವುದು,

ಇಡಿಯ ವಿಶ್ವದಲ್ಲಿಂದು ಸುಮಾರು ೨॥ ಲಕ್ಷ ಟೆಲಿಪ್ರಿಂಟರುಗಳಿವೆ. ಸಮಾಚಾರ ಮತ್ತು ಸಂದೇಶಗಳನ್ನು ಕಳಿಸಲು ಹೆಲವಾರು ಮಾಧ್ಯಮಗಳಿದ್ದರೂ ಟೆಲಿಪ್ರಿಂಟರ್‌ನ ಮುಂದೆ ನಿಲ್ಲುವ ಶಕ್ತಿಯು ಮತ್ತಾತ್ತುದಕ್ಕೂ ಇಲ್ಲ. ಎಂತೇ ಇವುಗಳ ಉಪಯೋಗ ದಿನೇ ದಿನೇ ಹೆಚ್ಚುತ್ತಿದೆ. ಈ ಉದ್ದಿಮೆಯು ಉನ್ನತಿಯ ಪಥ ಭ್ರಮಣ ಮಾಡುತ್ತಿದೆ.

ದಿ ವಿಜಯ ಬೇಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬೇಂಕ್. ಸ್ಥಾಪನೆ: 1931

ರಿಜಿಸ್ಟರ್ಡ್ ಆಫೀಸು:

ವಿಜಯ ಬೇಂಕ್ ಬಿಲ್ಡಿಂಗ್, ಲೈಟ್ ಹೌಸ್ ಹಿಲ್ ರೋಡ್,

ಮಂಗಳೂರು-3, ಸೌತ್ ಕೆನರಾ.

ಕಾಯಂ ಠೇವಣಾತಿ ಬಡ್ಡಿ ದರವನ್ನು ಶೇಕಡ ೫½ರ ವರೆಗೆ ಹೆಚ್ಚಿಸಲಾಗಿದೆ.

ಏಳು ದಿವಸದ ನೋಟೀಸಿನಲ್ಲಿ ಕೇಳಿದಾಗ್ಯೆ ಹಿಂದೆ ಪಡೆಯುವ ಡಿಪೋಸಿಟುಗಳನ್ನು (Call Deposits) ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸೋಣಾಗುತ್ತದೆ.

ಹೆಚ್ಚಿನ ಮಾಹಿತಿಗೆ ನಮ್ಮ ಶಾಖೆಗಳಲ್ಲಿ ದಯಮಾಡಿ ವಿಚಾರಿಸಿರಿ.

ನವಯುಗ ವಾರ ಪತ್ರಿಕೆಗೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ

ವಾರ್ತೆಯಲ್ಲಿ ವ್ಯಕ್ತಿ

ಉಪರಾಷ್ಟ್ರಪತಿ - ರಾಧಾಕೃಷ್ಣನ್

ಶಿಕ್ಷಣ ಕ್ಷೇತ್ರದಲ್ಲಿಯೇ ಸಫಲ ಭ್ರಮಣ ಗೆಯ್ದಿದ್ದ ಡಾ| ರಾಧಾಕೃಷ್ಣನ್ ಸಫಲ ರಾಜಕಾರಣಿಯೂ ಆಗಿದ್ದಾರೆ. ರಾಷ್ಟ್ರಪತಿಗಳ ಅಧಿಕಾರವನ್ನು ಅವರ ಅಸ್ವಾಸ್ಥ್ಯದ ನಿಮಿತ್ತ ವಹಿಸಿಕೊಂಡ ಇವರು ಅದನ್ನು ಯಥೋಚಿತವಾಗಿ ನಿರ್ವಹಿಸುವುದು ನಿಸ್ಸಂಶಯ.

ಸಂವಿಧಾನದ ೬೫(೨)ನೇಯುಮದಂತೆ ಉಪರಾಷ್ಟ್ರಪತಿ ಡಾ| ರಾಧಾಕೃಷ್ಣನ್‌ರು ರಾಷ್ಟ್ರಪತಿಯವರ ಅಧಿಕಾರವನ್ನು ಕಳೆದ ೫೫ನೇ ದಿನಾಂಕದಂದು ವಹಿಸಿಕೊಂಡರು. ಇದರಿಂದ ಈ ಗುರುತರ ಭಾರವನ್ನವರು ಈಗ ಎರಡನೇ ಬಾರಿ ಹೊತ್ತಂತಾಯಿತು. ೧೯೬೦ರ ಜೂನ್ ಮಾಸದಲ್ಲಿ ರಾಷ್ಟ್ರಪತಿ ರಾಜೇಂದ್ರ ಪ್ರಸಾದರು ಸೋವಿಯತ್ ರಶ್ಯದ ಸಂಚಾರಕ್ಕೆ ತೆರಳಿದ್ದಾಗ ತಾತ್ಕಾಲಿಕವಾಗಿ ಇವರು ಅಧಿಕಾರ ಸ್ವೀಕರಿಸಿದ್ದರು. ಇದೀಗ ರಾಷ್ಟ್ರಪತಿಯವರ ಅಸ್ವಾಸ್ಥ್ಯದ ಕಾರಣದಿಂದ ಅವರ ಅಪೇಕ್ಷೆಯಂತೆ ಅಧಿಕಾರ ಸ್ವೀಕರಿಸಿದರು.

ತತ್ವದರ್ಶಿಗಳಾದ ಡಾ| ರಾಧಾಕೃಷ್ಣನ್ ಭಾರತೀಯ ನಾಗರಿಕತೆ ಮತ್ತು ಸಂಸ್ಕೃತಿಯ ಬಲವಾದ ಪ್ರತೀಕದಂತಿದ್ದಾರೆ. ಭಾರತೀಯ ಸಂಸ್ಕೃತಿ ರಕ್ಷಣೆಗಾಗಿ ಇವರು ವಹಿಸುತ್ತಿರುವ ಕಳಕಳಿಯು ಅಗಣ್ಯವಾಗಿದೆ." ಪಾಕಿಸ್ತಾನದಿಂದ ಓಡಿ ಬರಬೇಕಾದವರು ಪವಿತ್ರ ನಿರಾಶ್ರಿತರೆಂದು ನಾನು ತಿಳಿಯುವುದಿಲ್ಲ. ಸಾಂಸ್ಕೃತಿಕ ದೃಷ್ಟಿಯಿಂದ ನೋಡುವುದಾದರೆ, ನಾವೆಲ್ಲರೂ ಇಂದು ನಿರ್ಗತಿಕರಾಗಿದ್ದೇವೆ. ನಮ್ಮ ಜೀವನಕ್ಕೆಂದು ಧ್ಯೇಯವಾದ ಉದ್ದೇಶವೊಂದಿಲ್ಲ. ಜನತೆಗೆ ನ್ಯಾಯವಾದ ಮುಂದಾಳುತನ ಮತ್ತು ಸರಿಯಾದ ಜೀವನ ದೃಷ್ಟಿಗಳನ್ನಿತ್ತು ಜನತೆಯಲ್ಲಿ ಸದ್ಗುಣಗಳ ಸೃಷ್ಟಿಗೆ ಅವಕಾಶಕೊಡಬೇಕು" ಎಂಬ ಇವರ ಉದ್ಗಾರವೇ ಇದಕ್ಕೊಂದು ಉದಾಹರಣೆ.

ಹಿಂದೆ ಭಾರದ್ವಾಜ ಋಷಿಯಿದ್ದನು. ಅವನು ತನ್ನ ಜೀವನವಿಡೀ ಜ್ಞಾನ ಸಾಧನೆಯಲ್ಲಿಯೇ ಕಳೆದನು. ಜನ್ಮಜನ್ಮಾಂತರದಲ್ಲಿಯೂ ಇದೇ ರೀತಿಯ ಸಾಧನೆಯಲ್ಲಿ ತೊಡಗಬೇಕು ಎಂಬ ಹಂಬಲ ಅತನಿಗಿತ್ತು. ಡಾ| ರಾಧಾಕೃಷ್ಣನ್ ಅವರ ಹೃತ್ಪೂರ್ವಕ ಅಭಿಮತವಾದರೂ ಇದೇ ಆಗಿದೆ. ಆದುದರಿಂದ ಇವರನ್ನು ಭಾರದ್ವಾಜ ಮುನಿಗೆ ಹೋಲಿಸುವವರೂ ಇಲ್ಲದಿಲ್ಲ.

ಒಬ್ಬ ನಿಜವಾದ ಜ್ಞಾನಿಯು ಒರ್ವ ನಿಜವಾದ ವಿದ್ರೋಹಿಯೂ ಆಗಬಲ್ಲ. ಡಾ| ರಾಧಾಕೃಷ್ಣನ್ ಇದಕ್ಕೆಅಪವಾದವಲ್ಲ. ಸ್ವಾತಂತ್ರ್ಯಪ್ರಾಪ್ತಿಗೆಕೆಲವುದಿನ ಮೊದಲು ಪ್ರಯೋಗ ವಿಶ್ವವಿದ್ಯಾಲಯದ ಸ್ನಾತಕರೆದುರು ಬ್ರಿಟಿಷ ಗವರ್ನರ್ ಸರ್ ಮಾಲ್‌ಕಂ ಹೇಲಿಯವರ ಉಪಸ್ಥಿತಿಯಲ್ಲಿಯೇ ಅನ್ಯಾಯ ಮತ್ತು ಅತ್ಯಾಚಾರವನ್ನು ವಿರೋಧಿಸುವ ಸಲಹೆ ನೀಡುತ್ತ ಯುಗ ಪುರುಷ ಮಹಾತ್ಮಾ ಗಾಂಧೀಜಿಯವರ ಮಾರ್ಗವನ್ನು ಅನುಸರಿಸಬೇಕು ಎಂದು ಅವರನ್ನು ಕೇಳಿಕೊಂಡಿದ್ದ ಕ್ರಾಂತಿ ಪುರುಷರಿವರು.

ಡಾ| ರಾಧಾಕೃಷ್ಣನ್‌ರ ಭಾಷಣ ಶೈಲಿ ಮತ್ತು ಲೇಖನ ಭಾಷೆಯಲ್ಲಿ ವ್ಯಾಪಿಸಿರುವ ಭಾವ ಗಾಂಭೀರತೆಯು ಅಖಂಡ ವಿಶ್ವದಲ್ಲಿ ಪ್ರಶಂಸನೀಯವೆನಿಸಿದೆ. ಸುಪ್ರಸಿದ್ಧ ವಿಮರ್ಶಕನೆನಿಸಿದ ನ್ಯೂಮನ್‌ನ ವಿಚಾರಗಳಿಂದು ಮೂಸಿದ ಚಿತ್ರಗಳಂತಿರುವುದರಿಂದ ಡಾ| ರಾಧಾಕೃಷ್ಣನ್‌ರು ಅವರಿಗಿಂತ ಶ್ರೇಷ್ಠರು-ಎಂದು ಒರ್ವ ಪಾಶ್ಚಾತ್ಯ ವಿಮರ್ಶದಾತ ಹೇಳಿದ್ದಾನೆ. ಡಾ| ರಾಧಾಕೃಷ್ಣನ್‌ರ ತತ್ವಜ್ಞಾನ ಸಾಶ್ವತ ಸುಂದರವಾದ ಚಿತ್ರದಂತಿದೆ ಎಂದು ಅವನ ಅಭಿಪ್ರಾಯವಿದೆ.

೧೯೪೯ರ ವರೆಗೆ ಡಾ| ರಾಧಾಕೃಷ್ಣನ್‌ರ ಜೀವನದ ಸೀಮೆ ಶೈಕ್ಷಣಿಕ ಕ್ಷೇತ್ರದೊಳಗೆ ಮಾತ್ರವಿತ್ತು ಎನ್ನಬಹುದು. ಭಾರತದ ರಾಯಭಾರಿಯಾಗಿ ರಶ್ಯಕ್ಕೆ ತೆರಳಿದಾಗಲೇ ಇವರು ಮೊತ್ತಮೊದಲಿಗೆ ರಾಜಕಾರಣದಲ್ಲಿ ಕಾಲಿಟ್ಟಂತಾಯಿತು. ತನ್ನ ಅಧಿಕಾರಾವಧಿಯ ನಾಲ್ಕು ವರ್ಷಗಳಲ್ಲಿ ಅವರು ಆಗಿನ ರಶ್ಯನ್ ಪ್ರಧಾನಿ ಸ್ಟಾಲಿನರನ್ನು ಎರಡು ಬಾರಿ ಭೆಟ್ಟಿಯಾಗಿದ್ದರು. ಸೋವಿಯತ್ ದೇಶದಲ್ಲಿ ಸನ್ಮಾನ ಪಡೆದ ಮೊದಲಿಗರಲ್ಲಿ ಇವರೂ ಒಬ್ಬರಾಗಿದ್ದರು.

ರಾಯಭಾರಿತನವನ್ನು ಯಶಸ್ವಿಯಾಗಿ ಪೂರೈಸಿ ಮರಳಿ ಬಂದ ರಾಧಾಕೃಷ್ಣರನ್ನು ಉನ್ನತ ಗೌರವ ಕಾದಿತ್ತು. ಅವರು ಅವಿರೋಧವಾಗಿ ಉಪರಾಷ್ಟ್ರಪತಿಗಳ ಸ್ಥಾನಕ್ಕೆ ಚುನಾಯಿತರಾದರು. ಇವರು ವಿಶ್ವಾಸಪಾತ್ರರೂ ಸಮರ್ಥರೂ ಆದುದರಿಂದಲೇ ಇಂದಿಗೂ ತನ್ನ ವಿಶ್ವಾಸವನ್ನು ಳಿಸಿಕೊಂಡಿದ್ದಾರೆ, ಸದ್ಯ ತನಗೆ ರಾಷ್ಟ್ರಪತಿಗಳ ಅಧಿಕಾರದೊಂದಿಗೆ ಅವರ ವೇತನ ಮತ್ತು ಭತ್ತೆಗಳು ದೊರೆಯುತ್ತಿವೆ ಯಾದರೂ ತನ್ನ ಮೂಲ ವೇತನಕ್ಕಿಂತ ಹೆಚ್ಚಿನದನ್ನು ಸರಕಾರಕ್ಕೇನೇ ಬಿಟ್ಟುಕೊಟ್ಟು ವಿಚಾರದಿಂದಲೇ ಇವರ ನಿರಾಡಂಬರತೆಯು ಹಾಗೂ ದೇಶ ಪ್ರೇಮಗಳ ಸ್ವರೂಪವನ್ನು ತಿಳಿಯ ಬಹುದು.

ಡಾ| ರಾಧಾಕೃಷ್ಣನ್ ಆಧುನಿಕ ಯುಗದ ಸುಪ್ರಸಿದ್ಧ ದಾರ್ಶನಿಕ. ಪ್ರಾಚೀನತೆಯನ್ನು ಬಿಡದೆ ಆಧುನಿಕತೆಯನ್ನು ತೆಗಳದೆ ಒಂದಾಗಿಸಿಕೊಂಡಿಸಿಕೊಂಡರೆ ಮಾತ್ರ ಸದ್ಯದವಾತಾವರಣದಲ್ಲಿ ಶಾಂತಿದೊರೆತೀತುಎನ್ನುತ್ತಾರೆ ಇವರು. ಇವರದರ್ಶನ ಶಾಸ್ತ್ರ ಪ್ರಾಚೀನ ಋಷಿಮುನಿಗಳ ಅಮರ ತತ್ವಗಳಿಂದಲೂ ಅವಾರ್ಚೀನ ವೈಜ್ಞಾನಿಕರ ಚಿಂತನ ಸತ್ಯಗಳಿಂದಲೂ ಕೂಡಿದೆ. ಡಾ| ರಾಧಾಕೃಷ್ಣನ್‌ರು ಸ್ವಭಾವತಃ ದಾರ್ಶನಿಕರಾಗಿದ್ದರೂ ರಾಜಕಾರಣದಲ್ಲಿಯೂ ಶೋಭನವಾಗಿ ಕೈಯಾಡಿಸ ಬಲ್ಲವರೆಂದು ಕಳೆದ ಕೆಲವರ್ಷಗಳಲ್ಲಿ ವ್ಯಕ್ತಪಟ್ಟಿದೆ.



ಉಪರಾಷ್ಟ್ರಪತಿ ಡಾ| ರಾಧಾಕೃಷ್ಣನ್

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ, ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಹೊಸ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.

ಬೆಲೆ ರೂ. 1-4-0 (1=25).

ಮನೆಯೆಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್.ಐ.ಎಮ್

ಮಕ್ಕಳು, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಯಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ವಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ. ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.

ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ ಎರಡೂವರೆ

ವಿ. ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0=25 N.P ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕಕಳಿಸಲಾಗುವುದು.

ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ನಮಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ರವೀಂದ್ರ ವಾಣಿ

(ಳನೇ ಪುಟದಿಂದ)

ಮೃತ್ಯುವಿನಲ್ಲಿ ಜೀವನವಿಲ್ಲ! ಅದು ಏಕ ರಸವಾಗಿದೆ. ಆದರೆ ಜೀವನದಲ್ಲಿ ದ್ವಿತ್ವ ಇರುವುದು. ಛಾಯೆ, ಮತ್ತು ಸತ್ಯ, ಇವೆರಡು ರೂಪಗಳಲ್ಲಿಯೂ ಇದುಇರುವುದು. ಈಛಾಯೆಯೆಂಬುದೇಮೃತ್ಯುವಿನ ರೂಪವಾಗಿದೆ. ಜೀವನದ ಬೆನ್ನುಬಿಡದ ಈ ಛಾಯೆಯೇ ಮಾಯೆಯಾಗಿದೆ ವಿಕಾಸ ಮತ್ತು ಪರಿವರ್ತನೆ ರೂಪದ ಸದಾ ಪ್ರವಾಹವುಳ್ಳ ಅನೇಕ ನಾಲೆಗಳ ಮೂಲಕ ನಮ್ಮ ಆತ್ಮವು ಮುಂದುವರಿಯ ಬೇಕಾಗುತ್ತದೆ. ಇದನ್ನೇ ಪ್ರವಾಹಮಯವಾದ ಜೀವನ, ಅಥವಾ ಮೃತ್ಯು, ಎಂದು ಹೇಳಬಹುದು. ಅಥವಾ ಇದಕ್ಕೆ ಯಾವ ಹೆಸರನ್ನೂ ಕೊಡಬಹುದು. ಯಾವಾಗ ನಾವು ನಮ್ಮ ಆತ್ಮದ ಮೂಲಕ ವಿಕಾಸದ ಪ್ರೇರಣೆಯನ್ನು ಹೊಂದಲಾರೆವೋ, ಮತ್ತು ಈ ಪ್ರವಾಹದ ಗತಿಯನ್ನು ಯಾವಾಗ ನಾವು ಮುಂದಗೊಳಿಸುತ್ತ ಬರುವೆವೋ ಆಗ ಪರಮಾತ್ಮನು ನಮಗೆ ಮರಣದ ಸಂಕೇತವನ್ನು ಕೊಡತ್ತಿದ್ದಾನೆ ಎಂದು ತಿಳಿಯ ಬಹುದು. ಹೀಗಾದ ಬಳಿಕ ಹಗಲಿನ ಪ್ರಕಾಶದಲ್ಲಿ ದೀಪ ನಂದಿಹೋದಂತೆ ಮೃತ್ಯು ನಮ್ಮನ್ನಾವರಿಸುವುದು. ಆಗ ನಾವು ಮರಣಹೊಂದುತ್ತೇವೆ.

ನಮ್ಮ ವ್ಯಕ್ತಿತ್ವದಲ್ಲಿ ಇಚ್ಛೆಗಳು ಅಪೇಕ್ಷೆಗಳು ಸದಾ ನೆಲೆಸಿರುತ್ತವೆ. ಇವುಗಳೊಳಗೆ ಸಮಾನತೆಯನ್ನು ಸ್ಥಾಪಿಸಲು, ನಾವು ಪ್ರಯತ್ನಪಡಬೇಕು. ನಮ್ಮ ಭೌತಿಕ ಪ್ರಕೃತಿಗೆ ಸಂಬಂಧಿಸಿದ ಇಚ್ಛೆಗಳು ಯಾವುವೆಂದು ನಾವು ಅನುಭವ ಪಡಿಕೊಳ್ಳುತ್ತೇವೆ. ನಾವು ನಮ್ಮ ಭೋಜನದಿಂದ ತೃಪ್ತಿಯನ್ನು ಅಪೇಕ್ಷಿಸುತ್ತೇವೆ, ಮತ್ತು ದೈಹಿಕ ಸುಖ ಭೋಗಗಳ ಹಿಂದೆ ಓಡುತ್ತೇವೆ. ಸುಖಭೋಗಗಳ ಈ ಅಪೇಕ್ಷೆಯು, ಪ್ರಾಯಃ ನಮ್ಮ ಜೀರ್ಣಶಕ್ತಿಗೆ ವಿರುದ್ಧವಾದುದಾಗಿದ್ದು ಮತ್ತೂ ಮತ್ತೂ ಅದು ವೃದ್ಧಿಯಾಗುತ್ತಲೇ ಇರುವುದು.

—(ಸಶೇಷ)

ಯಾವತ್ತೂ ಲೈಬ್ರೆರಿಗಳಿಗೆ ಯೋಗ್ಯ ಪುಸ್ತಕಗಳು

ನಾಟಕಗಳು

ಅಭಿಷೇಕ ನಾಟಕ	ಸುಂದರ ಶಾಸ್ತ್ರಿ	0	6
ಭೋಗಜಾಲ	ಅನಂತರಾವ್	2	0
ಗಜಂಠಾ	ನಾರಾಯಣ	1	0
ಕೌಮುದಿ	,,	1	8
ಕಲ್ಕಿ	ರಮಾಕಾಂತ	0	10
ಮಯಾಶ್ವೇತೆ	ರಾಮರಾಯ	0	14
ನಳಪಾಕ	ಶ್ರೀವತ್ಸ	0	12
ಮನೋರಾಜ್ಯ	ರಂ. ಶ್ರೀಮುಗಳಿ	1	12
ನಾವನ ಪಾವಕ	,,	0	12
ಬಂಡ್ವಾಳಿಲ್ಲದ ಬಡಾಯಿ	ಕೈಲಾಸಂ	0	12
ಪಾರ್ಕಿನ ಲಚುಮಿ	ಗೋಪಾಲ ಕೃಷ್ಣ	0	8
ಧನದ ಬಿಂದಿಗೆ	(ಸಂಕಲನ)	1	8
ಸರಸ್ವತಿ	ಮಾಧವಾಚಾರ್ಯ	0	12
ದೇಶಭಕ್ತ	ಕೆ. ಕೆ. ಶೆಟ್ಟಿ	1	4
ವ್ಯಭಿಚಾರಿಣಿ ಯಾರು	,,	1	0
ಪ್ರೇಮ ವಿಜಯ	,,	1	0
ಕುಶಲವ	,,	0	8
ಹೆಂಡ್ತಿ ಗಂಡನಾದರೆ	,,	0	4
ಪುರುಷ ವಧು	,,	0	4
ಧರ್ಮ ಸಂಕಟ	ಕೊರಡ್ಕಲ್	0	6
ರಂಗಭೂಮಿ	ಎಸ್. ವೆಂಕಟರಾಜ್	0	10
ಪ್ರಕಾಶ	ಸೇಟ್ ಗೋವಿಂದದಾಸ	2	4
ಮೂರು ಪ್ರಹಸನ	ಕೊರಡ್ಕಲ್	1	0
ಭಾಗ್ಯಲಕ್ಷ್ಮಿ	ಲಕ್ಷ್ಮಣರಾವ್	1	0
ಶಿಲ್ಪಿ	ಶಿಮ್ಮಪ್ಪ	1	8
ಪ್ರತೀಕಾರ	ರಂಗನಾಥ	0	8
ಜೀವನ ಸಂಗ್ರಾಮ	ಪಿ. ಶೀನ ಸೆಟ್ಟಿ	1	8
ಆರೋಗ್ಯ ಪ್ರತಾಪ	ಕೊರಡ್ಕಲ್	0	10
ಪ್ರತಿಜ್ಞಾ ಪೂರ್ತಿ	ಸು. ಕೃ. ಹೆಗ್ಡೆ	0	12
ದುರ್ಗಾದಾಸ	ಪಿ. ಎಸ್. ರಾಮಪ್ಪ	1	8
ಉದ್ಧಾರ	ತಿರುಕ	1	8
ಜೀಕುವ ಜೀವ	ರಾಮ ಪಾಟೀಲ	0	6
ವಿಶ್ವಮೇಧ	ರೇಣುಕಾಚಾರ್ಯ	1	8
ಸ್ವತಂತ್ರ ಜೀವನೋಪಾಯ	ಕೆ. ಎಚ್. ಶೆಟ್ಟಿ	0	4
ಸಂಶಯ ಪಿಶಾಚಿ	ಕೆ. ಕೆ. ಶೆಟ್ಟಿ	0	10
ಅಮ್ಮಲೋ ಸಮಾಜ	ಎನ್. ಲಕ್ಷ್ಮಣ ಪೈ	0	6
ನಾಗಾನಂದ	ಹೆ. ರಾ. ಕಿದಿಯೂರು	1	4
ಗೆಳೆಯ ನೀನು ಹೆಳೆಯ ನಾನು	ಶ್ರೀರಂಗ	2	0
ಪಾದುಕಾ ಪ್ರಧಾನ	ಕೃ. ಭ. ಸೆರ್ಲ	1	8
ಚಿತ್ರಾಂಗದೆ	ಕೆ. ಕೆ. ಸೆಟ್ಟಿ	0	10
ಕರುಳಿನ ಸೆಳೆತ	ಸಿ. ಅಂತಪ್ಪ	0	12
ಔತಣ	ಪರ್ವತವಾಣಿ	0	8
ಸೋಲು ತಂದ ಸ್ವಯಂವರ	ಪರಮಶಿವಯ್ಯ	0	8

ಕಾವ್ಯಗಳು

ಆಲಾಪನೆ	ಧನ್ವಂತ	0	8
ಜೀವನಲತೆ	ಪೂ. ಹೆ. ಆಚಾರ್ಯ	0	8
ಪರಾಗ	ಸಂಕಲನ	0	10
ಕಲಸು ಮೇಲೋಗರ	ಅನಂತ ರಾವ್	0	14
ಮುಂಬೆಳಗು	ಸಂಕಪ್ಪ ರೈ	0	12
ಉದ್ಘೋಷ	ಸಂಕಲನ	0	12
ವಿಜಯನಾದ	ಅಮರವಾಣಿ	0	8
ಕವಿತಾ ಕಾಮಿನಿ	ವೆಂಕಟರಾಜ	2	0
ಅಮರನಾಥೈ ತಂದೆ	ಪ. ಸು. ಭಟ್ಟ	1	4
ನೂರು ಪುಟಾಣಿ	ಜಿ. ಸಿ. ರಾಜರತ್ನಂ	0	4
ವಿಜ್ಞಾನ ವಿಶ್ವಾಮಿತ್ರ	ಎಸ್. ವೀರಪ್ಪ	0	8
ಹೆಳೆಗನ್ನಡ ನಡುಗನ್ನಡ ಕಾವ್ಯಸಂಗ್ರಹ		1	8
ಹೂಗಂಪು	ಶ್ರೀಧರ ಖಾನೋಳಕರ	0	12
ಬಳ್ಳಾರಿಯ ಬೆಳಗು	ಹೀ. ಮಾ. ನಾಗಯ್ಯ	1	0
ಮೇಕೆದಾಟು	ಎನ್. ಎಸ್. ವೀರಪ್ಪ	0	12
ಮುರಲಿ	ಎನ್. ಎಸ್. ಕಿಲ್ಲೆ	0	12
ವೀರ ಪಥಿಕ	ಕಾಡಹಕ್ಕಿ	0	10
ಮುಗುಳು	ಕೆ. ಹೊನ್ನಯ್ಯ ಶೆಟ್ಟಿ	0	6
ವಸಂತ ಗೀತಾಂಜಲಿ	ಕಾ. ಪ. ನ. ಭ.	0	4
ತಾನ ತರಂಗ	ಬಾಳೇಕುಂದ್ರಿ	0	8
ಬಾಲರ ಬಂಧು	ಕೆ. ಜಿ. ಶೆಟ್ಟಿ	0	5
ಅವರ ನೆನೆದೇವು	ಪರಮಶಿವಯ್ಯ	1	4
ಜನಪದ ಗೀತಗಳು	ಜಂ. ಶೇ. ಸ್ವಾಮಿ	1	8
ಆದಿ ಚಿಂತನಗಿರಿ	ಕ. ರಾ. ಕೃ.	5	0
ತಾರಾ ಸಖ	ಸಿ. ಪಿ. ಕೆ.	1	4

ವಿವಿಧ ಪುಸ್ತಕಗಳು

ನವರತ್ನ	ಬಿ. ಎಚ್. ಶ್ರೀಧರ	2	8
ಪ್ರಸವ ವಿಜ್ಞಾನ	ಡಾ| ದೊಡ್ಡೇರಿ	2	0
ಕಾಮ ಶಿಕ್ಷಣ	,,	1	0
ಒಸಗೆ	ಕರ್ನಾಟಕ ಸಂಘದ ಪ್ರಕಟಣೆ	3	8
ಕುಟುಂಬ ಯೋಜನೆ		0	3
ಯಶೋಧರ ಚರಿತೆ	ಕೆ. ಪಿ. ವೆಂಕಪ್ಪ ಶೆಟ್ಟಿ	1	8
ಸಾಹಿತ್ಯ ಶಿಲ್ಪಿಗಳು	ಟಿ. ಮಹಾಬಲೇಶ್ವರ ಭಟ್ಟ	1	8
ನೆನಪಿಗಾಗಿ	ಸಂಕಲನ	2	0
ತತ್ತ್ವೋಪನ್ಯಾಸಗಳು	ಶ್ರೀವಿಜಯ ಇಂದ್ರ	2	0
ದೇವರು ಯಾರು	ಶ್ರೀ ಮೂರ್ತಿ	1	8
ಗ್ರಾಮೋದ್ಧಾರ	ಮಹಾತ್ಮಾಗಾಂಧಿ	0	12
ಕನ್ನಡದಲ್ಲಿ ವಿಡಂಬನ ಸಾಹಿತ್ಯ	ಕೃಷ್ಣಸ್ವಾಮಿ	0	6
ಜ್ಞಾನಜ್ಯೋತಿ	ನಾರಾಯಣ ದಾಸರು	0	8
ಅಗ್ನಿವಿದ್ಯೆ	ಶಾಂಡಿಲ್ಯ	0	9
ಶ್ರೀ ಶಂಕರಾಚಾರ್ಯರ ಆಖ್ಯಾನ	ಹೊ. ಚಿ.	0	12
ಗುಣ ನಿರೂಪಣೆ	,,	0	12
ಗೃಹಿಣಿ	ಸಾವಿತ್ರಮ್ಮ	0	12
ವೇದಾಂತ ರಹಸ್ಯೋಪಾನ್ಯಾಸಗಳು	ಕುಲಕರ್ಣಿ	0	8
ನಾಲ್ವಾಡಿ ಕೃಷ್ಣನ ಮೈಸೂರು	ಶ್ರೀನಾಥ	0	6
ಸುಲಭದಲ್ಲಿ ಇಂಗ್ಲಿಷ್	(ಸಾದಾಪ್ರತಿ	2	0
ಮನೆ ಮದ್ದು	ಡಾ|| ವೆಂಕಟ್ರಾವ್	2	0
ಸಾಮಾನ್ಯ ರೋಗಗಳು	ಡಾ| ಐತಾಳ	1	0
ಭೌತಿಕ ದರ್ಶನ	ಬಡೆಕ್ಕಿಲ ಕೃಷ್ಣ ಭಟ್ಟ	1	0
ಚಂದ್ರ ಲೋಕಕ್ಕೆ ಪ್ರಯಾಣ	ರಾ. ಆಚಾರ್	1	0
ಹಿರೋಶಿಮಾದಿಂದ ಜಿನೇವ	ರಾ. ಆಚಾರ್	1	8
ತಿಕ್ಷಣದ ಧ್ಯೇಯಗಳು	ಕೆ. ಬಿ. ರಾ. ರಾವ್	2	4
ಸ್ವಾತಂತ್ರ್ಯ ಮತ್ತು ಸಂಸ್ಕೃತಿ	ಕು.ಶಿ.ಹ. ಭಟ್	2	0
ಏಶಿಯಾದ ಸಂಪತ್ತು	,,	2	0
ಜಾರ್ಜ್ ವಾಶಿಂಗ್‌ಟನ್	ಯು.ಎಲ್ ಆಚಾರ್	1	4
ಭಾರತೀಯ ಮಹಾ ಪುರುಷರು	ಗೋ.ರಾ.	1	8
ಭಾರತದ ಅಂಗ ಕಾಶ್ಮೀರ	ರಘುನಂದನ ರಾವ್	0	5
ಭಾರತದಲ್ಲಿ ಜಾತಿ ಭೇದ	ಸುಬ್ರಹ್ಮಣ್ಯಂ	1	0
ಪ್ರಜಾಪ್ರಭುತ್ವವನ್ನು ಕುರಿತು	ಶಿ. ಕಾರಂತ	0	8
ವಿಚಿತ್ರ ವಿಶ್ವ	ಹಾ. ರಾ. ಕಿದಿಯೂರ	1	8
ಕನ್‌ಫ್ಯೂಷಿಯಸ್	ಶಿವರಾಮ ರಾವ್	0	6½
ಭಾರದ್ವಾಜರ	ಇಂಗ್ಲಿಷ್-ಕನ್ನಡ ಡಿಕ್ಷನರಿ	4	0
ಶ್ರೀ ಗೀತಾ ಸಾರೋಕ್ತಿ	ಅನಂತ ಅಪ್ಟೆ	0	12

ಚಾಲೆಗಳಿಗೆ ವಿಶೇಷ ಸವಲತ್ತುಗಳಿವೆ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಅಮೃತ ಬಿಂದು

ಇಪ್ಪತ್ತರಲ್ಲಿ ಜಗತ್ತನ್ನು ಸುಧಾರಿಸುವ ಹುರುಪಿರುತ್ತದೆ. ಎಪ್ಪತ್ತರಕ್ಕೆ ಬಂದಾಗ ಜಗತ್ತು ಆತನನ್ನು ಸುಧಾರಿಸಿರುತ್ತದೆ.

o o

ಔಷಧಿ ತುಂಬಿದ ಹೊಟ್ಟೆ, ಮತ್ತು ರಿಪೇರಿಯಾದ ಬಟ್ಟೆ ಬಹುಕಾಲ ಬಾಳುವದಿಲ್ಲ.

o o

ಜನರು ಏನನ್ನೂ ಕೊಡದಿದ್ದರೂ ಉಪದೇಶವನ್ನು ಧಾರಾಳವಾಗಿ ಕೊಡುತ್ತಾರೆ.

o o

ತಾಯಿಯ ಹೃದಯದಲ್ಲಿ ನೂರು ಮಕ್ಕಳಿಗೂ ಇಂಬು ಕೊಡುತ್ತದೆ. ಆದರೆ ನೂರು ಮಕ್ಕಳ ಅಂಗಳದಲ್ಲಿ ಒಬ್ಬ ತಾಯಿಗೆ ಇಂಬು ಇರುವುದಿಲ್ಲ.

o o

ಮೂರ್ಖರನ್ನೇ ಹೆಚ್ಚಿನ ಬುದ್ಧಿವಂತರೆಂದು ತಿಳಿದುಕೊಂಡು ಪ್ರಶಂಸೆ ಮಾಡುವ ಹೆಚ್ಚಿನ ಮೂರ್ಖರಿಂದಾಗಿ ನಮ್ಮ ಜಗತ್ತು ಹೀಗಿದೆ.

o o

ಪ್ರತಿ ವೈತನು ತಾನು ಮುಂದಿನ ವರ್ಷ ಶ್ರೀಮಂತನಾಗಿ ಪರಿಸ್ಥಿತಿ ಸುಧಾರಿಸುವದೆಂದು ಆಶಿಸಿರುವದರಿಂದಲೇ ಸ್ವಸಾಯಕ್ಕೆ ಅಂಟಿಕೊಂಡಿದ್ದಾನೆ!

o o

ಫ್ಯಾಶನ್ ಕೂಡ ಕುರೂಪವೆನ್ನಲಡ್ಡಿಯಿಲ್ಲ. ಇಲ್ಲದಿದ್ದರೆ ಆರು ತಿಂಗಳಿಗೊಮ್ಮೆ ಫ್ಯಾಶನ್ ಬದಲಾಗಬೇಕೇಕೆ?

o o

ಬಂಗಾರದಂಥಾ ಮಾತಿದ್ದರೆ ಕಬ್ಬಿಣದ ಬಾಗಿಲೂ ತೆರೆಯುತ್ತದೆ.

o o

ಗಾಢ ನಿದ್ರೆಯಲ್ಲಿರುವವನಿಗೆ ತಲೆ ದಿಂಬು ಅಗತ್ಯವಿಲ್ಲದಂತೆ ಪ್ರೇಮ ತುಂಬಿರುವವನಿಗೆ ಸೌಂದರ್ಯದ ಗಣನೆ ಇಲ್ಲ.

o o

ಬಿಸಿಯೂದಾಗ ಮನುಷ್ಯನು ತಣ್ಣಗಿರಬೇಕೆನ್ನುತ್ತಾನೆ. ತಣ್ಣಗಿರುವಾಗ ಬಿಸಿಬೇಕೆನ್ನುತ್ತಾನೆ, ಇಲ್ಲದುದನ್ನು ಬಯಸುವುದೇ ಮನುಷ್ಯನ ಲಕ್ಷಣ.

o o

ದೇವರು ಮತ್ತು ಧರ್ಮ ಎಂಬುದಿದ್ದೇ ಮನುಷ್ಯನು ಇಷ್ಟೊಂದು ಕ್ರೂರಿಯಾಗಿರುವಾಗ ಅವಿಲ್ಲದಿದ್ದರೆ ಜಗತ್ತೇ ನಾರವಾಗುತ್ತಿತ್ತೇನೋ!

o o

ನಗೆಯ ಲಾಸ್ಯ ಮುಖದಲ್ಲಿ ಸದಾ ನಲಿಯುತ್ತಿದ್ದರೆ ಅಂದಗೆಟ್ಟ ಮುಖವೂ ಚಂದ ಕಾಣುತ್ತದೆ.

ಚಂದಾದಾರರಲ್ಲಿ ವಿನಂತಿ

ಇದೇ ಅಗೋಸ್ತು ತಿಂಗಳಾಂತ್ಯಕ್ಕೆ "ನವಯುಗ"ದ ಎಳನೆಯ ವರ್ಷವು ಅಂತ್ಯವಾಗಿ ಸಪ್ಟಂಬರ ಆದಿಯಿಂದಳನೆಯ ಹೊಸ ವರ್ಷಾರಂಭವಾಗುತ್ತದೆ. ಈ ಅವಧಿಗೆ ಚಂದಾ ಅವಧಿ ಮುಗಿಯುವವರೂ ಚಂದಾ ಹಣ ಬಾಕಿ ಇರುವವರೂ ದಯವಾಡಿ ತಮ್ಮ ಬಾಕಿಯನ್ನು ಆದಷ್ಟು ಬೇಗನೇ ಕಳುಹಿಸಿಕೊಟ್ಟು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥಿಸುತ್ತೇವೆ.

—ಮೆನೇಜರ್.

Tel: 'BLUEYAGAR'. —— ಚಿನ್ನ ಮತ್ತು ವಜ್ರಗಳ ಆಧುನಿಕ ತವರುಮನೆ —— Phone: 374.

ಕೆ.ಆರ್.ಕೆ.ಶೇಟ್ ಡಯಮಂಡ್ ಮಾರ್ಟ್

ಸ್ಥಾಪನೆ:1919] ಚಿನ್ನ ಮತ್ತು ವಜ್ರದ ವ್ಯಾಪಾರಿಗಳು,(ಗವರ್ನ್‌ಮೆಂಟ್ ಕಾಲೇಜ್ ಎದುರುಗಡೆ)ಮಂಗಳೂರು. ಮಾಲಿಕ:ಕೆ.ಕೆ.ಆರ್.ಶೇಟ್

ಯಮುನ ನೆರಳು

(೨ನೇ ಪುಟದಿಂದ)

ಗಳು ಹಾಳಾದುವು; ಪವನು ಹತಾಶನಾದನು. ಹೊಟ್ಟೆಗಿಲ್ಲದೆ ಬಾಯ್ಬಿಡುವ ಪ್ರಸಂಗ ಬಂತು. ಇವನು ತನ್ನ ಶೋಧನೆಯ ಗುಂಗಿನಲ್ಲಿ ಎಲ್ಲಿಯೂ ಕೆಲಸಮಾಡಲಿಚ್ಛಿಸಲಿಲ್ಲ ಸ್ವಲ್ಪ ಹಣ ಸಂಪಾದಿಸಿ ತನ್ನ ಶೋಧನೆಯನ್ನವನು ಮುಂದುವರಿಸಲಿಕ್ಕಾಗಿ ಮುಂಬಾಯಿಗೆ ಹೊರಟುಬಂದನು.

ಒಂದುದಿವಸ ಮುಂಬಾಯಿಯ ಕಡಲದಂಡೆಯಲ್ಲಿ ಅವನಿಗೆ ಒದುಬರಹ ಕಲಿತಗುಂಡನಾದ ರಾಮಸಿಂಹನ ಪರಿಚಯವಾಯ್ತು. ಅವನು ಹಣ ಕೊಡುವುದಾಗಿ ಭರವಸೆಯಿತ್ತು ರಣಜೀತನ ಮನಸ್ಸನ್ನು ತನ್ನ ಪಾಶ ವೀಕೃತ್ಯಗಳತ್ತ ಬದಲಾಯಿಸತೊಡಗಿದನು ಡಾಕ್ಟರ್ ರಣಜೀತನು ರಾಮಸಿಂಹನ ಸಹಯೋಗಿಗಳಲ್ಲಿ ಒಬ್ಬನಾದನು. ೧೯೩೮ರಲ್ಲಿ ರಾಮಸಿಂಹನಿಂದಾಗಿ ನಗರಬೇಂಕು ಪೈಲಾಯ್ತು. ಉಳಿದ ಹಣ ಮತ್ತು ಸಹಯೋಗಿಗಳೊಡನೆ ಅವರೆಲ್ಲರೂ ಅಜಮೀರಕ್ಕೆ ಬಂದರು 'ಅಜಮೀರ 'ಕುಂಜರವೇಟರಿ'ಯ ಪರಿಚಯ ಡಾಕ್ಟರ್ ರಣಜೀತನಿಗೆ ಮೊದಲಿನಿಂದಲೂ ಇತ್ತು. ಸರಿಸ್ಥಿತಿಯು ಅವನ ನೈತಿಕ ಪತನ ಮಾಡುವಲ್ಲಿ ಸಂಪೂರ್ಣ ಸಾಫಲ್ಯ ಪಡೆಯಿತು. ಅವರೆಲ್ಲರೂ ಕೂಡಿ ತನ್ನ ಬುದ್ಧಿ-ಯುಕ್ತಿ-ತಂತ್ರ-ಕುತಂತ್ರಗಳಿಂದ 'ಕುಂಜರವೇಟರಿ'ಯನ್ನು ಯಮಪುರಿಯನ್ನಾಗಿ ಬದಲಾಯಿಸಿದರು

ಮುಂಬಾಯಿಯಿಂದ ತಂದ ಹಣದ ಸಹಾಯದಿಂದ ಇವರು ಅಜಮೀರದಲ್ಲಿ 'ದಲಿತ ಬೇಂಕ್'ನ್ನು ಸ್ಥಾಪಿಸಿದರು. ಬರೇ ಐದು ವರ್ಷಗಳಲ್ಲಿ 'ದಲಿತ ಬೇಂಕ'ನ್ನು ಸ್ಥಾಪಿಸಿದರು. ಬರೇ ಐದು ವರ್ಷಗಳಲ್ಲಿ 'ದಲಿತ ಬೇಕ' ಉನ್ನತಿಯ ಶಿಖರವನ್ನು ಮುಟ್ಟಿತು ರಾಜಾ ಸಾಹೇಬರ ಮರಣದ ನಂತರ, ರಾಣಿ ಇಲಾವತಿಯ ವಿಶಿಷ್ಟ ಸ್ತುತಿ ಮಾಡಿ ಇವರು ಆಗಾಗ ಶಾಲ ತರುತ್ತಿದ್ದರು ಬೇಂಕಿನ ಮೂಲಧನ ಹೆಚ್ಚಾಗುತ್ತಾ ಹೋಯ್ತು. ಆದರೆ ಕೆಲವು ತಿಂಗಳಿಂದ ನಡೆದ ಘಟನೆಗಳಿಗೆ ರಾಣಿ ಇಲಾವತಿಯು ಕೊಂಡುಕೊಂಡ ಇಲಾಖೆಯೇ!"ಕಾರಣ ಎಂದು ಸುಧೀರ್ಘ ಭಾಷಣವಿತ್ತರು ಜಯಂತರು

"ಅದು ಸೇಗೆ... ...?" ಎಂದು ಮಧದಲ್ಲಿಯೇ ನುಡಿದಳು ಮೂಯೂವತಿ

"ಒಂದು ವೇಳೆ ರಾಣಿಯು ಹೊಸ ಇಲಾಖೆ ಕೊಂಡುಕೊಳ್ಳದಿದ್ದರೆ, ಈ ಕೊಲೆಗಳ ಮಳೆಯಾಗುತ್ತಿರಲಿಲ್ಲ!"

ಆದರೆ ಹೇಗೆ?" ಎಂದರು ಪ್ರಾಣದಾಸರು

"ರಾಣಿಯು ಈ ಇಲಾಖೆ ಕೊಂಡುಕೊಳ್ಳುವ ಮೊದಲೇ ದಲಿತಸಿಂಹ ನಾವ್ ಡಾಕ್ಟರ್ ರಣಜೀತರಿಗೆ ಇಲ್ಲಿ 'ವಜ್ರದ ಖನಿ'ಯಿದೆಯೆಂಬ ವರ್ತಮಾನ ಸಿಕ್ಕಿತ್ತು.,,

"ವಜ್ರದ ಖನಿ !!" ಎಂಬ ಮಾತು ಎಲ್ಲರ ಬಾಯಿಯಿಂದಲೂ ಒಮ್ಮೆಲೇ ಹೊರಬಿತ್ತು.

"ಇದರಿಂದ ದಲಿತಸಿಂಹರಿಗೇನು ಹಾನಿ"" ಎಂದು ವಿಚಾರಿಸಿದರು ದೀಕ್ಷಿತ್

"ಅವರು ವಜ್ರದ ಖನಿಯ ಆಸೆಯಿಂದಾಗಿಯೇ ಹೆಡ್ ಆಫೀಸಿನ ಎಕೌಂಟಿನಿಂದ ನಾಲ್ಕು ಲಕ್ಷ ರೂಪಾಯಿಯನ್ನು ಬ್ರೇಂಚ್ ಆಫೀಸಿಗೆ ಕಳುಹಿಸಿ ಬೇಂಕ್ ಫೈಲ್ ಮಾಡಿದರು"

"ರೂಪಾಯಿಯನ್ನು ಬ್ರೇಂಚ್ ಆಫೀಸಿಗೇಕೆ ಕಳುಹಿಸಿದರು?" ಎಂದರು ಶರ್ಮಾಜಿ.

"ರೂಪಾಯಿಯನ್ನು ಕಳುಹಿಸಲಿಲ್ಲ, ಇಲಾಖೆಯನ್ನು ಕೊಂಡುಕೊಳ್ಳಲಿಕ್ಕಾಗಿ ಹಣ ತೆಗೆದಿಟ್ಟುಕೊಂಡು, ರಾಜಾರಾಮ ಪಾಲಸಿಂಹರ ರುಂಡವಿಲ್ಲದ ಮುಂಡವನ್ನು ಕಳುಹಿಸಿದರು.

ಎಲ್ಲರೂ ಒಮ್ಮೆಲೇ "ಹಂ" ಎಂದರು. ಮತ್ತು ರಾಜಾರಾಮಪಾಲಸಿಂಹರ ಕೊಲೆ ಏಕೆ ಮಾಡಲಾಯ್ತು?,' ಎಂದೆಂದಳು ಮೂಯೂ.

"ಅದನ್ನು ಅನಂತರ ಹೇಳುತ್ತೇನೆ— ಈ ರೀತಿಯಲ್ಲಿ ನಾಲ್ಕು ಲಕ್ಷ ರೂಪಾಯಿ ಸಿಕ್ಕಿತು ಇನ್ನು ಎಂಟು ಲಕ್ಷ ರೂಪಾಯಿ ಹೇಗೆ ಒಟ್ಟು ಮಾಡುವುದು ಎಂದು ಯೋಚಿಸುತ್ತಿರುವಾಗಲೇ, ರಾಣಿಯು ಇಲಾಖೆಯನ್ನು ಕೊಂಡು ಕೊಂಡಳು.

ಹೊಂ, ಇಲಾಖೆಯನ್ನು ಕೊಂಡುಕೊಳ್ಳುವ ಮೊದಲೇ ರಾಜ ಸಾಹೇಬರ ಕೊಲೆಯು ಏಕೆ ಮಾಡಲಾಯ್ತು? ಎಂದರು ಪ್ರಾಣದಾಸರು.

"ಅದೇ ಸಮಯದಲ್ಲಿ ರಾಜಾ ಸಾಹೇಬರ ವಿವಾಹವಾಗಿತ್ತು. ಇವರ ಕೊಲೆಯಿಂದಾಗಿ ಈ ಇಲಾಖೆಯೇ ಅವಶಕುನವೆಂದು ರಾಣಿಯು ಇಲಾಖೆಯನ್ನು ಕೊಂಡುಕೊಳ್ಳಲಿಕ್ಕಿಲ್ಲ ಎಂದವರು ಬಗೆದಿದ್ದರೋ, ದೃಢ ನಿಶ್ಚಯದ 'ರಾಜಪೂತಿನಿ' ಯಾದ ರಾಣಿಯು ಇಲಾಖೆಯನ್ನು ಕೊಂಡುಕೊಂಡಳು, ಅವರ ಲೆಕ್ಕ ತಪ್ಪಿತು ಎಂದರು ಜಯಂತ್.

"ಮತ್ತೆ ಅನ್ಯಕೊಲೆಗಳೇಕಾದುವು?" ಎಂದಳು ಕುಮಾರಿ ಮೂಯೂ.

"ರಾಮಸಿಂಹನ ತೀವ್ರ ಬುದ್ಧಿಗೆ ಮತ್ತೊಂದು ಉಪಾಯ ಗೋಚರಿಸಿತು. ."

"ಇದು ಸಾದಾರಣವಾದುದು ಏಕೆಂದರೆ ರಾಣಿಯ ಪೂರ್ಣ ಸಂಪತ್ತಿಗೆ ಇಬ್ಬರೇ ಹಕ್ಕುದಾರರು. ಮೊದಲನೆಯವಳಾದ ಯಮುನಾ ಕುಮಾರಿಯಂತೂ ವಿಧವೆಯಾಗಿದ್ದಾಳೆ. ಎರಡನೆಯವಳಾದ ಮೂಯೂಳೊಡನೆ ಯಾರಾದರೊಬ್ಬರು ಮದುವೆಯಾದರೆ, ಅರ್ಧ ಸಂಪತ್ತಿನ ಮಾಲಕರಂತೂ ಆಗಿಯೇ ಆಗುತ್ತೀವೆ ಅದಕ್ಕಾಗಿಯೇ ಸಲಳದಾರಿಯನ್ನು ಸ್ವೀಕಸ ಮಾಡಲು ಬಿಟ್ಟ ರಾಜ್ಯ ಪ್ರತಾಪಸಿಂಹರನ್ನು ಕೊಲೆ ಮಾಡಲಾಯ್ತು ಆಗಲೇ ಮತ್ತೊಂದು ವಿಚಾರ ಬಂತು. ರಾಣಿ ಜೀವಂತವಿರುವ ತನಕ ಮೂಯೂವತಿಯನ್ನು ಫಲಕದಾರಿಯು ಮದುವೆಯಾಗಲು ಸಾಧ್ಯವಿಲ್ಲ ಇದರಿಂದಾಗಿ ಅವಳ ಕೊಲೆಯನ್ನು ಮಾಡಲಾಯ್ತು" ಎಂದು ಜಯಂತರನ್ನು ಮಧ್ಯದಲ್ಲೇ ತಡೆದು ವಿವರಿಸಿದರು ಶರ್ಮಾರವರು

'ಸತ್ಯ! ನಿಮ್ಮ ಅನುಮಾನವು ಅಕ್ಷರಶಃ ನಿಜ, ನೀವು ಇಷ್ಟು ಬೇಗನೆ ರೀತಿಯನ್ನು ತರ್ಕಿಸಿದುದಕ್ಕಾಗಿ ಅಭಿನಂದಿಸುತ್ತೇನೆ.' ಎಂದರು ಜಯಂತ್

"ಸರಂತು ಕೊಲೆ ಮಾಡಲ್ಪಡುವವರು ಯಾವ ರೀತಿಯಿಂದ ಕೊಲೆ ಮಾಡಲ್ಪಡುತ್ತಾರೆಂದು ತಿಳಿಯಲೇ ಇಲ್ಲವಲ್ಲ?" ಎಂದರು ಇನ್ಸ್‌ಪೆಕ್ಟರ್ ಪ್ರಧಾನ್.

"ಅದನ್ನು ವಿವರಿಸುವ ಸಮಯಕ್ಕಾಗಿ ಕಾಯಬೇಕು." ಎಂದರು ಜಯಂತ್.

"ಅಂದರೆ ನಾನು ಕೊಲ್ಲಲ್ಪಟ್ಟು ಸ್ವಯಂ ಅನುಭವ ಪಡೆಯಬೇಕಂದು ತಮ್ಮ ಅಭಿಪ್ರಾಯವೇನು?" ಎಂದ ನಗುತ್ತಾ ನುಡಿದರು ಮಿ. ಪ್ರಧಾನ್.

"ಊಹುಂ, ಹಾಗಲ್ಲ, ಅದಕ್ಕೆ ಉತ್ತರ ಕೊಡುವ ಸಮಯ ವಿದಲ್ಲವೆಂದಿದ್ದೇ ಸೂಚಿಸಿದೆ ಶತ್ರುಗಳು ಬಂದ ನಂತರ ನಾನೇ ಬಗ್ಗೆ ತಿಳಿಸುತ್ತೇನೆ." ಎಂದುತ್ತರಿಸಿದರು ಮಿ. ಜಯಂತ್.

"ಆದರೆ ಈ ರಹಸ್ಯವನ್ನು ತಾವು ಹೇಗೆ ಕಂಡುಹಿಡಿದಿರಿ?" ಎಂದು ವಿಚಾರಿಸಿದರು ಶರ್ಮಾರವರು

"ಶೀಘ್ರದಲ್ಲಿಯೇ ಅದೂ ಗೊತ್ತಾಗುತ್ತದೆ!" ಎಂದುತ್ತರವಿತ್ತರು ಜಯಂತ್.

"ಒಳ್ಳೆದು ರಾಜಾರಾಮ ಪಾಲಸಿಂಹರ ತಲೆಯನ್ನೆಲ್ಲಿ ಅಡಗಿಸಿಟ್ಟಿದ್ದಾರೆ?" ಎಂದರು ದೀಕ್ಷಿತ್.

"ಮೂಯೂವತಿಯು ನನ್ನ ಕಾಲಿಗೆ ಶೂಟ್ ಮಾಡಿದಲ್ಲಿ, ನಾನು ಬಗ್ಗಿ ಗಿಡದ ಬದಿಯಲ್ಲಿ ಅಡಗಿಸಿಟ್ಟ ವಸ್ತುವನ್ನು ನೋಡುವಷ್ಟರಲ್ಲಿ ಮೂಯೂಳ ಪಿಸ್ತೂಲು ನನಗೆ ತಾಗಿತು.' ಎಂದಂದು ಜಯಂತರು ನವಲೇಂದ್ರನ ಕಡೆ ನೋಡುತ್ತಲೇ ಅವನಲ್ಲಿಂದ ಹೊರಟುಹೋದನು

ಸ್ವಲ್ಪ ಸಮಯಾ ನಂತರ ನವಲೇಂದ್ರನು ಬೇನೇ ವರ್ಣದ ತಟ್ಟೆಯಲ್ಲಿ ಒಂದು ರುಂಡವನ್ನು ತಂದನು ಹಾಗೂ ಅದಕ್ಕೆ ನೆರಳು ಬೀಳುವಂತೆ ಒಂದು ಗಿಡವನ್ನು ರುಂಡದ ಮೇಲ್ಬದಿಗೆ ಹಿಡಿದಿದ್ದನು ಇದನ್ನು ನೋಡುತ್ತಲೇ ಎಲ್ಲರೂ ಜಯಂತರ ಕಡೆಗೆ ಆಶ್ಚರ್ಯಚಕಿತರಾಗಿ ನೋಡತೊಡಗಿದರು

"ಪ್ಲೇಟ್‌ನಲ್ಲಿ ರುಂಡವಿಟ್ಟುದರಿಂದ ನನಗೂ ತುಂಬಾ ವಿಸ್ಮಯವಾಯ್ತು ವಿಮಗಾದರೂ ನವಲೇಂದ್ರನು ಗಿಡವನ್ನು ರುಂಡದ ಮೇಲ್ಗಡೆ ಹಿಡಿದು ನೆರಳು ಮಾಡಿದುದರಿಂದ ಆಶ್ಚರ್ಯವಾಗಿ ನೋಡಿದೆವು. ಆದರೆ ನನಗೆ ತಟ್ಟೆಯಲ್ಲಿ ರುಂಡವಿಟ್ಟುದನ್ನು ಕಂಡು ಮಾತ್ರ ಆಶ್ಚರ್ಯವಾಗಿ

ಅಮೆರಿಕಯ ಪ್ರಥಮ ಗಗನ ಯಾತ್ರಿ ಶ್ರೀ ಶೆಪ್ಪರ್ಡರನ್ನು ಹೊತ್ತು ಹಾರುತ್ತಿರುವ ಹೆಲಿಕಾಪ್ಟರ್

NAVAYUGA WEEKLY, UDIPI.
REGD. NO.BG. 176

3-8-1961

LICENSE NO. 31
Licensed to Post without Prepayment

ಬಿಟ್ಟಿತಷ್ಟೇ, ರಾಣಾ ಸಾಹೇಬರು ಸತ್ತು ಹ ಲವಾರುದಿವಸಗಳಾದರೂ ಮುಖಾಕೃತಿ ಯು ಸ್ವಲ್ಪವೂ ಬದಲಾಗದಿದ್ದುದರಿಂದ ಈ ಗಿಡದ ಪ್ರಭಾವವೆಂದು ನಾನು ತಿಳಿದು ಕೊಂಡೆ. ಇಲ್ಲಿಗೆ ವಾಪಾಸು ಬಂದ ಮರುದಿ ವಸವೇ ನಾನು ನವಲನಿಂದ ಆ ರುಂಡವ ನ್ನು ಗಿಡ ಸಮೇತವಾಗಿ ತರಿಸಿದೆ, ಈ ಗಿಡ ದಡಿಯಲ್ಲಿಟ್ಟು ಯಾವೊಂದೂ ಹಸಿಮಾಂ ಸವು ಹಾಳಾಗುವುದಿಲ್ಲ. ಪ್ರಯೋಗಕ್ಕಾಗಿ ನಾನು ಖಾದ್ಯ ಪದಾರ್ಥ, ಹಾಲು ಹಾಗೂ ಬೇಯಿಸಿದ ಮಾಂಸವನ್ನಿಟ್ಟು ಪರೀಕ್ಷಿಸಿ ದೆ. ಆದರೆ ಹಸಿಮಾಂಸದ ಹೊರತು ಇ ನ್ನಾವ ವಸ್ತುವಿನ ಮೇಲೂ ಇದು ತನ ಪ್ರಭಾವ ಬೀರುವುದಿಲ್ಲ." ಎಂದು ವಿವರಿಸಿ ದರು ಜಯಂತ್.

ಶ್ರೋತೃಗಳೆಲ್ಲಾ ಪ್ರತಿಮೆಗಳಂತಾಗಿ ದ್ದರು. ವಿಸ್ಮಯಪೂರ್ಣ ವಾತಾವರಣ ಕಡಿಮೆಯಾಗುತ್ತಲೇ ಪ್ರಧಾನ ಜೀಯವರ "ಡ್ರೈವರ್ ಮತ್ತು ರಾಣಿಯರ ಮೃತ್ಯು ಹೇಗಾಯ್ತು?" ಎಂದು ವಿಚಾರಿಸಿದರು.

"ಅದಕ್ಕೀಗ ಉತ್ತರ ಕೊಡುವುದಿಲ್ಲ,, ನೆಂದರು ಜಯಂತ್ ಜೀ

"ಒಂದು ವೇಳೆ ಡಾಕ್ಟರ್ ರಣಜೀತ ರು ತನ್ನ ಕಾರ್ಯ ಕೌಶಲ್ಯವನ್ನು ಮಾನ ವ ಹಿತಕ್ಕಾಗಿ ಉಪಯೋಗಿಸುತ್ತಿದ್ದರೆ ಎ ಷ್ಟೊ ದೊಡ್ಡ ಮನುಷ್ಯರಾಗಿರುತ್ತಿದ್ದರು' ಎಂದರು ಪ್ರಾಣದಾಸರು.

"ನಿಸ್ಸಂದೇಹವಾಗಿ, ಅವರಿಗೆ ಒಂದು ವೇಳೆ ರಾಮಸಿಂಹನಂತಹ ಗುಂಡಾನ ಪ ರಿಚಯವಾಗದೆ ಯುಕ್ತ ಸಮಯದಲ್ಲಿ ಸ್ವಲ್ಪ ಹಣ ಸಿಗುತಿದ್ದರೆ ಅವರು ಸರ್ ಜೆ. ಸಿ. ಬೋಸ್. ಸರ್ ಸಿ. ಸಿ. ರೋ ಯ್ ಯಾ ಸರ್ ರಾಧಾ ರಮಣರಿಗೆ ಸರಿ ಸಮಾನವಾಗಿರುತಿದ್ದರು. ಆದರೆ ಅವರ ಭಾಗ್ಯ ರೇಖೆ..."

"ಒಳ್ಳೇದು ನಾನೊಂದು ಮಾತು ಕೇಳ ಲು ಮರೆತೇ ಬಿಟ್ಟಿದ್ದೆ!,, ಎಂದರು ದಾ ಮೋದರ್.

"ಏನದು ಎಂದರು ಜಯಂತ್.

"ಶರ್ಮಾಜಿ, ನಿಮಗೆ ದಲಿತಸಿಂಹರ ಪತ್ರದ ನೆನಪಿದೆ ತಾನೆ. ನಾಳೆ ಇಪ್ಪತ್ತೆರಡನೇ ತಾರೀಕು; ಅವನು ಫಲಕದಾರಿಯನ್ನು ಬಿಡಿಸಿಕೊಂ ಡು ಹೋಗುವ ದಿನ."

ಹಾಂ, ನೆನಪಿದೆ; ನಾನೆಲ್ಲಾ ಸರಿಯಾ ದ ವ್ಯವಸ್ಥೆ ಮಾಡಿದ್ದೇನೆ. ನಾಳೆ ಒಂದು ವೇಳೆ ಅವನು ಫಲಕದಾರಿಯನ್ನು ಬಿಡಿ ಸಲು ಬಂದರೆ ಅವನು ಸಿಕ್ಕಿಬಿದ್ದಂತೆಯೇ ಸರಿ!" ಎಂದರು ಶರ್ಮಾ.

"ಆದರೂ ನಾಳೆ ಅತಿ ಎಚ್ಚರಿಕೆಯಿಂ ದಕಾಯಬೇಕು." ಎಂದರು ಜಯಂತ್. ಎಲ್ಲರೂ ಹೊರಡಲು ಸಿದ್ಧರಾದರು. "ಮಾ ಯಾವತಿಯ ರಕ್ಷಣೆಯ ಬಗ್ಗೆ ತಮ್ಮ ಅ ಭಿಪ್ರಾಯವೇನು!' ಎಂದು ವಿಚಾರಿಸಿದ ರು ಪ್ರಾಣದಾಸರು.

"ಒಂದನೆಯದಾಗಿ ಇವಳೆಲ್ಲಿಗೂ ಒ ಬ್ಬಂಟಿಗಳಾಗಿ ಹೋಗ ಕೂಡದು" ಎಂ ದು ಜಯಂತರು ಶರ್ಮಾರನ್ನು ದಿಟ್ಟಿಸು ತ್ತಾ ನುಡಿದಳು.

"ಹೌದು, ಆದರೆ....ಅವಳು ಅಲ್ಲಿಗಿಂತ ಇಲ್ಲಿ ಹೆಚ್ಚು ಸುರಕ್ಷಿತಳಾಗಿರಬಲ್ಲಳು."

ಎಂದು ನುಡಿದರು ಪ್ರಾಣದಾಸರು.

"ಸರಿ, ನನ್ನಿಂದೇನೂ ಅಕ್ಷೇಪವಿಲ್ಲ!" ಎಂದು ನುಡಿದರು ಮಿ. ಜಯಂತ್ ಕು ಮಾರ್,

"ನಿಜ ಅವಳೀವತ್ತಿನಿಂದಲೇ ಇಲ್ಲಿರ ಲಿ." ಎಂದರು ಶರ್ಮಾಜೀ.

ಪ್ರಾಣದಾಸ, ದಾಮೋದರರನ್ನುಳಿದು ಇತರ ಆಫೀಸರರೆಲ್ಲರೂ ನಮಸ್ಕರಿಸಿ ಹೊ ರಟು ಹೋದರು.

(ಮುಂದುವರಿಯುವುದು)

ಹಸಿಗತೆ

ಆನಂದ ಹೊರಗಿಲ್ಲ; ಒಳಗಿದೆ

ಒಬ್ಬ ಅರಸನಿದ್ದನು, ಆತನು ತನ್ನ ಶ ತ್ರುಗಳನ್ನೆಲ್ಲಾ ಗೆದ್ದು ವಿಶಾಲ ರಾಜ್ಯವ ನ್ನೂ ಅಷ್ಟೈಶ್ವರ್ಯವನ್ನೂ, ಪಡೆದನು. ಪ್ರಪಂಚದ ಅತುಲೈಶ್ವರ್ಯ, ಸರಿಸಾಟಿ ಇಲ್ಲದ ಅಧಿಕಾರ, ರತಿಯನ್ನು ಮೀರಿಸುವ ಹೆಂಡತಿ, ಆದರ್ಶ ಮಕ್ಕಳಿದ್ದರೂ ಆತನಿಗೆ ಸುಖವಿರಲಿಲ್ಲ. ಆದ್ದರಿಂದ ರಾಷ್ಟ್ರದ ಎ ಲ್ಲಾ ಬುದ್ಧಿವಂತರನ್ನೂ ಕರೆಸಿ ನಿರ್ಬಾಧ ಕ ಶಾಶ್ವತ ಸುಖವೆಲ್ಲಿ ದೊರೆಯುವದು' ಎಂದು ಪ್ರಶ್ನಿಸಿದನು. ಯಾರೂ ಸಮರ್ಪ ಕ ಉತ್ತರ ಕೊಡಲಿಲ್ಲ. ಕಡೆಗೆ ಒಬ್ಬ ಪಂ ಡಿತನು, 'ಸದಾ ಆನಂದಶೀಲನಾದ ಮ ನುಷ್ಯನ ಶರ್ಟಿನ ಮೇಲೆ ಮೂರು ದಿನ ಮಲಗಿದರೆ ನಿನಗೆ ಶಾಶ್ವತ ಸುಖ ದೊರೆ ಯುವದು' ಎಂದು ಹೇಳಿದನು.

ರಾಜನು ಸುಖದಿಂದಿರುವ ಮನುಷ್ಯ ನನ್ನು ಹುಡುಕಲು ತನ್ನ ಸೇವಕರನ್ನು ಕಳುಹಿಸಿದನು. ಎಲ್ಲಿ ಹುಡುಕಿದರೂ ತಾ ನು ಸುಖಿ ಎನ್ನುವ ಮನುಷ್ಯನು ದೊರೆ ಯಲಿಲ್ಲ. ರಾಜನು ಖಿನ್ನನಾಗಿ ತಾನೇ ಹು ಡುಕಲು ಹೊರಟನು.

ಒಂದು ದಿನ ಬೆಳಿಗ್ಗೆ ರಾಜನು ಓರ್ವ ರೈತನನ್ನು ಕಂಡನು. ಆತನು ಹರಕು ಬ ಟ್ಟೆ ಹಾಕಿದ್ದನು. ತನ್ನ ಹೊಲದಲ್ಲಿ ಉಳ ಲು ಎತ್ತುಗಳನ್ನು ಹೊಡೆದುಕೊಂಡು ಹೋಗುತ್ತಿದ್ದನು. ಆತನು ಹಾಡೊಂದ ನ್ನು ಹಾಡುತ್ತಾ ನಡೆದಿದ್ದನು. ರಾಜನು ಆತನನ್ನು ಕರೆದು ನೀನು ಸಂಪೂರ್ಣ ಸು ಖಿಯಾಗಿರುವೆಯಾ? ಎಂದು ಪ್ರಶ್ನಿಸಿ ದನು.

'ನನಗೆ ಚಿಕ್ಕದೊಂದು ಗುಡಿಸಲಿದೆ. ಒಳ್ಳೆಯ ಹೆಂಡತಿ ಇದ್ದಾಳೆ. ನಾಲ್ಕು ಮ ಕ್ಕಳಿವೆ. ನನಗೆ ದಿನನಿತ್ಯ ನನ್ನ ಕೆಲಸ ವಿದೆ. ಆ ಕೆಲಸಗಳನ್ನು ಮಾಡಲು ಶಕ್ತಿ ಇದೆ. ನಾನು ದೇವರೊಂದಿಗೂ, ನನ್ನ ನೆರೆಕರೆಯವರೊಂದಿಗೂ ಅನ್ಯೋನ್ಯವಾ ಗಿದ್ದೇನೆ. ನನ್ನ ಜೀವನ ಸುಖಕರವಲ್ಲದೆ ಮತ್ತೆ ನನಗೇನು ಬೇಕಿದೆ?' ಎಂದು ರೈತ ನು ಉತ್ತರಿಸಿದನು.

ಸುಖಿಯೂದ ಮನುಷ್ಯ ಈತನೆಂದು ರಾಜನಿಗೆ ಖಚಿತವಾಗಿ, 'ನಿನ್ನ ಶರ್ಟನ್ನು ನನಗೆ ಕೊಡುವೆಯಾ?' ಎಂದು ಕೇಳಿ ದನು.

'ಅಯ್ಯೋ, ನನ್ನದೆನ್ನುವ ಶರ್ಟೇ ನನ ಗಿಲ್ಲ, ನಾನು ನನ್ನ ಹೆಂಡತಿಗೆ ಮಕ್ಕಳಿಗೆ ಬಟ್ಟೆಮಾಡಿಕೊಟ್ಟಿದ್ದೇನೆಯೇ ವಿನಾ ನನ ಗಾಗಿ ಮಾಡಿಸಿಕೊಂಡಿಲ್ಲ. ನಾನು ತಂಬಾ ಬಡವನು. ನಾನು ಇದನ್ನು ಶರ್ಟಾಗಿ ಉಡುತ್ತೇನೆ' ಎಂದು ಆತನು ಉಟ್ಟು ಕೊಂಡಿದ್ದ ಆತನ ಹೆಂಡತಿಯ ಹರಿದ ರವ ಕೆಯನ್ನು ಎತ್ತಿಕೊಟ್ಟನು. ಶರೀರ ಆತನ ನಗ್ನವಾಯಿತು.

ರಾಜನಿಗೆ ಆಗ ಮನವರಿಕೆಯಾಯಿತು. ಆನಂದವುಹೊರಗಿನಿಂದದೊರೆಯುವಂಥಾ ದ್ದಲ್ಲ. ಶರೀರದ ಒಳಗಿನಿಂದ ಪಡೆಯಬೇ ಕಾದದ್ದೆಂದು!

ನೀವು ಆನಂದದಿಂದಿರುವಿರಾದರೆ ಅದ ನ್ನು ಇತರರೊಡನೆ ಹಂಚಿಕೊಳ್ಳಿರಿ ಆನಂ ದ ಇಮ್ಮಡಿಸುವದು!



ಸೂರ್ಯನ ಬಗ್ಗೆ ಅಧಿಕ ಜ್ಞಾನ ಪಡೆಯಲು ಅನುಕೂಲವಾದ ಭಾರತೀಯ ಸೂಕ್ಷ್ಮ ವರ್ಣಕ ಯಂತ್ರಗಳು.

ಪ್ರಚಲಿತ ಪ್ರಸಂಗ

(ನಿನೇ ಪುಟದಿಂದ)

ವಾರ್ಷಿಕ ಯೋಜನೆಗಳು ಯಶಸ್ವಿಯಾಗಿ ಕೊನೆಗೊಂಡುದೇ ನಿದರ್ಶನ. ಯಾರ ಸಹಾಯವೂ ಇಲ್ಲದೆ ಕೇವಲ ಭಾರತೀಯ ಇಂಜಿನಿಯರರೇ ತಮ್ಮ ಸ್ವಂತ ಬುದ್ಧಿ ಮತ್ತೆಯಿಂದ ಕಟ್ಟಿದ ಈ ಕಾರಖಾನೆ ಯು ಭಾರತೀಯರ ಕೌಶಲದ ಪ್ರತೀಕ ವಾಗಿದೆ. ಪಾಶ್ಚಾತ್ಯರನ್ನೇ ಪ್ರತಿಯೊಂದ ಕ್ಕೂ ಹೊಗಳುವವರು ನಮ್ಮಲ್ಲಿ ಇನ್ನೂ ಕೆಲವರು ಇದ್ದಾರೆಂಬುದರಿಂದ ಅವರು ಅವಶ್ಯ ತಿಳಿಯಕೊಳ್ಳಬೇಕಾದ ವಿಷಯ ವಿದು. ಭಾರತದ ಉದ್ಯಮರಂಗದಲ್ಲಿ ಅಪೇ ಕ್ಷಣೀಯ ಸೇವೆಸಲ್ಲಿಸಲು ನಮ್ಮ ಇಂಜಿನಿ ಯರರು ಸಿದ್ಧರೆಂಬುದಕ್ಕಿದೊಂದು ಜ್ವ ಲಂತ ನಿದರ್ಶನ. ಇದೇ ರೀತಿಯಲ್ಲಿ ಭಾರ ತವು ಸ್ವಯಂ ಪೂರ್ಣವಾಗುವಂತೆ ಶ್ರಮಿ ಸುವುದು ನಮ್ಮೆಲ್ಲರ ಆದ್ಯ ಕರ್ತವ್ಯ.

"ಅತ್ಯುತ್ತಮ ಬ್ಯಾಂಕಿಂಗ್ ಸೇವೆ"

- ಪಿಗ್ಮಿ
- ಕ್ಯುಮುಲೇಟಿವ್
- ಇನ್ವೆಸ್ಟರ್ಸ್ ಏಜನ್ಸಿ
- ಲಕ್ಷ್ಮೀ ಮತ್ತು ಸಿಂಡಿಕೇಟ್ ಬ್ಯಾಂಕ್ ಕೇಶ್ ಸರ್ಟಿಫಿಕೇಟುಗಳು
- ಭದ್ರತಾ ಕೋಶಗಳು
- ವಿದ್ಯಾರ್ಥಿಗಳಿಗೆ ಮತ್ತು ಧರ್ಮ ಸಂಘ— ಸಂಸ್ಥೆಗಳಿಗೆ ವಿಶೇಷ ಸೌಕರ್ಯಗಳು ಇನ್ನಿತರ ಎಲ್ಲಾ ವಿಧದ ಬ್ಯಾಂಕಿಂಗ್ ಸೇವೆಗಳು

ದಕ್ಷಿಣ ಭಾರತದಾದ್ಯಂತ ಹಬ್ಬಿರುವ 141 ಶಾಖೆಗಳು

ಸಿಂಡಿಕೇಟ್ ಬ್ಯಾಂಕ್

ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸ್: ಮುಕುಂದ ನಿವಾಸ, ಉಡುಪಿ (ಮೈಸೂರು ರಾಜ್ಯ)
ಸ್ಥಾಪನೆ: ೧೯೩೬.

ಶ್ರೀ ಎ. ಬಿ. ಶೆಟ್ರ
ಸ್ಮಾರಕ ನಿಧಿಗೆ
ಸಹಾಯ ಮಾಡಿರಿ

Edited Printed & Published by K. H. Shetty, at the Navayuga Press, Udipi, S. India.



ಸ್ವಾತಂತ್ರ್ಯ ದಿನೋತ್ಸವ
ಸಂಚಿಕೆ ೧೯೬೧

INDEPENDENCE DAY SPECIAL 1961

ಬೆಲೆ: ೨೫ ನಯೇಪೈ.

ಭಾರತ ಸ್ವಾತಂತ್ರ್ಯದ ಶುಭದಿನದಲ್ಲಿ
ಸುಭದ್ರ ನವಭಾರತ ನಿರ್ಮಾಣಕ್ಕಾಗಿ ದುಡಿಯುವ ನಿರ್ಧಾರ ಮಾಡೋಣ.

ಗೃಹ ನಿರ್ಮಾಣ, ಕಟ್ಟಡ ರಚನೆಯ ಸುಸಂದರ್ಭದಲ್ಲಿ ಸುಭದ್ರವಾದ ಕಟ್ಟಡಗಳಿಗೆ ಬೇಕಾಗುವ

ಯಾವದೇ ಅಳತೆಯ ಮತ್ತು ನಮೂನೆಯ ಬೇಕಾದಷ್ಟು ಉಕ್ಕಿನ ಕಿಟಕಿ, ಬಾಗಿಲು,
ಮಾಡಿನ ಟ್ರಿಸ್ಸುಗಳು, ವೆಂಟಿಲೇಟರುಗಳು, ಕಂಪೌಂಡು ಗೇಟುಗಳು. ರೋಲಿಂಗ್ ಶಟರುಗಳು
ಇತ್ಯಾದಿ ಇತ್ಯಾದಿಗಳಿಗೆ ನಾವು ಆರ್ಡರು ಸ್ವೀಕರಿಸುತ್ತೇವೆ.

ಬಿಲ್ಡಿಂಗ್ ಕಂಟ್ರಾಕ್ಟರರಿಗೆ ಸುಸಂದರ್ಭ.

ಆಫೀಸು, ಮನೆ, ಆಸ್ಪತ್ರೆಗಳಿಗೆ ಬೇಕಾಗುವ ಉಕ್ಕಿನ ಕಪಾಟುಗಳೂ
ಸೋಫಾ ಮೊದಲಾದ ಯಾವತ್ತೂ ಫರ್ನಿಚರುಗಳೂ ಸದಾ ಸಿದ್ಧವಿವೆ.

ಹೆಚ್ಚಿನ ವಿವರಗಳಿಗೆ ವಿಚಾರಿಸಿರಿ:

ಶ್ರೀ ಸ್ಟೀಲ್ ಫರ್ನಿಚರ್ಸ್

ಹಂಪನಕಟ್ಟೆ - - - ಮಂಗಳೂರು - 1.

MEN WHO KNOW
BUY
CANARA SPRINGS
WITH CONFIDENCE

In actual service CANARA SPRINGS have always given a good account of themselves. Made from the best material and tested carefully before despatch, the springs inspire confidence in users. The consistent quality is a guarantee of permanent satisfaction. CANARA SPRINGS create and maintain confidence as the best.

THE CANARA WORKSHOPS LIMITED.

Works at: Maroli, Mangalore. Amraoti Road, Nagpur.

QUALITY IN
PRINTING INKS
MEANS MANY THINGS....

- Brilliance
- Depth of colour
- Covering power
- Drying capacity
- Workability
- Fastness to light etc.

in GANGES inks

the emphasis is on QUALITY

used and proved for 35 years

Factories at:

HOWRAH — BOMBAY — MADRAS

ಸ್ವಾತಂತ್ರ್ಯ ದಿನದ ಶುಭಾಶಯಗಳು.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

- ನಮ್ಮ 3 ವರ್ಷ ವ್ಯಾದೆಯ ಕೇಶ್ ಸರ್ಟಿಫಿಕೇಟುಗಳಲ್ಲಿ ಠೇವಣಿ ಮಾಡಿರಿ. ಬಡ್ಡಿ:
  ರೂ. 8=70 3 ವರ್ಷಗಳ ಅಂತ್ಯದಲ್ಲಿ ಬಡ್ಡಿ ಕೂಡಿ ರೂ. 10=00 ಒದಗಿಸುವುದು.
- ಕರೆ, ಚಿಕ್ಕ ವ್ಯಾದೆ, ನಿರಖು ಠೇವಣಾತಿಗಳ ಮೇಲೆ ಆಕರ್ಷಣೀಯ ಶರ್ತಗಳು ಬಡ್ಡಿ:
- ಸೇವಿಂಗ್ಸ್ ಖಾತೆಗಳ ಮೇಲೆ ಬಡ್ಡಿ:

ಸೇಕಡಾ 5 ರಂತೆ

ಸೇಕಡಾ 5½ ರ ವರೇಗೆ

ಸೇಕಡಾ 3 ರಂತೆ

The Pangal Nayak Bank Ltd.,

REGD. OFFICE: UDIPI. S. KANARA. ESTD: 1920

INDEPENDENCE DAY
GREETINGS AND GOOD WISHES
TO ALL OUR FRIENDS.

WE ARE PROUD OF THE TREMENDOUS PROGRESS
MADE BY OUR COUNTRY
DURING THE FOURTEEN YEARS OF INDEPENDENCE
AND ON THIS HAPPY OCCASION
WE PLEDGE ANEW FOR
PLANNED EXPANSION
AND REDEDICATE OURSELVES FOR SERVICE IN A
GREATER MEASURE

CHANDARANA BROTHERS

ESTD: 1935

WHOLESALE DEPARTMENT
MISSIONSTREET
MANGALORE—1
(Phone 116)

RETAIL DEPARTMENT
HAMPANKATTA
MANGALORE—1
(Phone: 460)

Greetings from

SRINIVAS BROTHERS

CAR STREET, MANGALORE-1.

***

J. B. A. PRINTING INKS PRIVATE LTD.,

AGRA ROAD, BHANDUP, BOMBAY-78.

Manufacturers of

Finest Qualities of Printing Inks

&

All types of Varnishes.

‡ ‡

FOR YOUR REQUIREMENTS PLEASE CONTACT

SRINIVAS BROTHERS

PAPER MERCHANTS,
BOOK-SELLERS & STATIONERS

POST BOX No 130,

MANGALORE-1.

Phone: 449 Grams: ACTIVE

MYSORE LAMP ... BUYERS' BEST
FOR BRIGHTER LIGHT AND LONGER LIFE

RELY ON

MYSORE LAMPS

Available throughout the country.

THE MYSORE LAMP WORKS LTD.,

BANGALORE—12.

Agents for Mysore State:

M/s. K. S. Gowder & Company,

48, Subedarchatram Road,

BANGALORE-9.

ಯಂ. ಗಣಪಯ್ಯ ಎಂಡ್ ಸನ್ಸ್

ಆಯುರ್ವೇದಿಕ್ ಫಿಜಿಸಿಯನ್ಸ್
ರಥಬೀದಿ, ಮಂಗಳೂರು.

ಇವರ 1876 ನೇ ಇಸವಿಯಿಂದಲೂ ಪ್ರಸಿದ್ಧಿಹೊಂದಿದ ಔಷಧಿಗಳು

ದೇಹಪುಷ್ಟಿ ಲೇಹ (ಸುವರ್ಣ ಸಾಲಾಮಿಶ್ರಿ, ಕಲ್ಮದ ಮಿಶ್ರ) ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಾಸ್ಥ್ಯವನ್ನೆ, ಶರೀರದ ಉನ್ನತಿ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಅಶಕ್ತತೆ—ಇವುಗಳನ್ನೆಲ್ಲ ಹೋಗಲಾಡಿಸಿ, ಆಯಸ್ಸನ್ನೂ ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು. ಅಲ್ಲದೆ ಸರಗಳ ದೌರ್ಬಲ್ಯಕ್ಕೆ ದಿವ್ಯ. ಪೌಂಡಿಗೆ ರೂ. 7—00 ಪೌ. ½ರ ರೂ. 4—00

ಕಸ್ತೂರಿ ಮಿಶ್ರಣ ದಶಮೂಲ ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ ರಸಾಯನ. ರಕ್ತಧಾತುವು ಅಭಿವೃದ್ಧಿಯಾಗಿ ಬಾಣಂತಿಯರು ಪುಷ್ಟಿಹೊಂದುವರಲ್ಲದೆ ಶಿಶುವಿಗೂ ಧಾರಾಳವಾಗಿ ಹಾಲು ಸಿಗುವಂತೆ ಮಾಡುವುದು. 24 ಔ. ಬಾ ರೂ. 6—00
12ಔ. ರೂ. 3—00 8ಔ ರೂ. 2—00

ಕಸ್ತೂರಿ ಮಿಶ್ರ ದಶಮೂಲಾರಿಷ್ಟ ಅರುಚಿ, ವಾಂತಿ, ಅಜೀರ್ಣ, ಅಗ್ನಿಮಾಂದ್ಯ ಅಶಕ್ತಿ, ಶಫ, ಕೆಮ್ಮು, ದಮ್ಮು, ಕಾಮಲೆ, ವಾತ, ಒಳಜ್ವರ, ಮೊದಲಾದವುಗಳನ್ನು ಗುಣಪಡಿಸುವುದು. ಇದನ್ನು ಬಾಣಂತಿಯರು ಸಹ ಉಪಯೋಗಿಸಬಹುದು. 24 ಔನ್ಸ್ ಬಾಟ್ಲಿ ರೂ. 4—50
16 ಔನ್ಸ್ 3-25 12 ಔನ್ಸ್ 2—50 8 ಔನ್ಸ್ 1—75

ಚವನ ಪ್ರಾಶ (ಬಂಗಾರ ಮಿಶ್ರ) ಇದು ಅತ್ಯಂತ ಶಕ್ತಿ ವರ್ಧಕ ರಸಾಯನ. ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ, ರಕ್ತವೃದ್ಧಿಯನ್ನೂ ಉಂಟು ಮಾಡುವುದು. ಪೌಂಡಿಗೆ ರೂ. 6—00
½ಪೌ. ರೂ. 3—25
ಚ್ಯವನಪ್ರಾಶ್ಯ ಪೌಂಡು 1ರ ರೂ 4—50 ¼ಪೌ. ರೂ. 2—25

ಅಶೋಕಾರಿಷ್ಟ ಮತ್ತು ಮಾತ್ರೆ ಇದು ಸ್ತ್ರೀಯರಿಗೆ ಉತ್ತಮವಾದ ಟಾನಿಕ್ ರಕ್ತಹೀನತೆ, ಒಳಜ್ವರ, ಸೊಂಟನೋವು, ಕೈಕಾಲು ಬಚ್ಚಿ ಬರುವುದು, ಕೈಕಾಲು ಉರಿ, ಮುಂತಾದವುಗಳಿಗೆ ದಿವ್ಯ. ಬಾಟ್ಲಿ 1ರ ರೂ. 4—00

ಔಷಧಿ ಸಿಗುವ ಸ್ಥಳ: 1) ನ್ಯೂ ಕೆನರಾ ಜನರಲ್ ಸ್ಟೋರ್ಸ್, ವಿಕ್ಟೋರಿಯಾ ಗಾರ್ಡನ್ ರೋಡ್, ಬ್ಯಾಕುಲ್ಲಾ, ಬೊಂಬಾಯಿ, 2) ನ್ಯೂ ಬ್ಯಾಕುಲ್ಲಾ ಸ್ಟೋರ್ಸ್, ಕಮಿಸ್ಟ್, 648-A, ಡಿಲ್ಸಾಲ್ ರೋಡ್, ಬ್ಯಾಕುಲ್ಲಾ, ಬೊಂಬಾಯಿ 27. 3) ವಿನಾಯಕ ಜನರಲ್ ಸ್ಟೋರ್ಸ್ ಗೋವಂದಿ ರೋಡ್ ಚೆಂಬೂರು, ಬೊಂಬಾಯಿ. 4) ಮಂಗಳೂರು ಜನರಲ್ ಸ್ಟೋರ್ಸ್, Near ಪೆರಿಡ್ಯಾಸ್ ಸಿನಿಮಾ, ಮಾಹಿಮ್, ಬೊಂಬಾಯಿ. 5) K. C. ಶೆಟ್ಟಿ, ರಘುರಾಜ್ ಭವನ್, ಗೋಖಲೆ ರೋಡ್, ಬಾಂದ್ರಾ. 6) K. D. ಶೆಟ್ಟಿ, Near Mohan Studio, ಕುರ್ಲಾ ರೋಡ್, ಅಂಧೇರಿ. 7) ಶ್ರೀ ವೆಂಕಟೇಶ ಪ್ರೊವಿಜನ್ & ಜನರಲ್ ಸ್ಟೋರ್ಸ್, ಶೇಷಾದ್ರಿಪುರಂ ಬೆಂಗಳೂರು. 8) ಧನಲಕ್ಷ್ಮೀ ಸ್ಟೋರ್ಸ್, ಕಳಸಾ, 9) P. A. ಸುಬ್ಬರಾವ್, ಕೆಮಿಸ್ಟ್, ಕೊಪ್ಪ. 10) ಜ್ವರಾರಿ ಕಂಪನಿ, ಶಿವಮೊಗ್ಗ. 11) ಕೆನರಾ ಸ್ಟೋರ್ಸ್, ಮುಡಿಕೇರಿ. 12) P. K. ಪುಟ್ಟಿ ಶೆಟ್ಟಿ, ಪ್ರೈ ಸ್ಟೋರ್ಸ್ ಕಾಣಿಯೂರು. 13) ಪ್ರಭು ಫಾರ್ಮಸಿ, ಕಾರ್ಕಳ. 14) ವೆಂಕಾಟೆ ಸ್ಟೋರ್ಸ್ ಸುಳ್ಯ. 15) ಶ್ರೀಧರ್ ಭಟ್ ಬ್ರದರ್ಸ್, ಪುತ್ತೂರು. 16) ಪೈ ಸ್ಟೋರ್ಸ್, ಪುತ್ತೂರು. 17) ಕೆ. ವೆಂಕಟೇಶ ನ್ಯಾಕ್, ಗುರುವಾಯನಕೆರೆ. 18) ಜಯಾ ಫಾರ್ಮಸಿ, ಕುಂದಾಪುರ. 19) H. ಗಣಪಯ್ಯ ನರಸಿಂಹ ಕಾಮತ್, ಕುಂದಾಪುರ. 20) ಕೃಷ್ಣಾ ಮೆಡಿಕಲ್ಸ್, ಕಾಸರಗೋಡು. 21) ಶ್ರೀ ಕೃಷ್ಣಾ ಫಾರ್ಮಸಿ ಪುತ್ತೂರು.

ಪೋಸ್ಟ್ ಮುಖಾಂತರ ಔಷಧಿ ಬೇಕಾದವರು ಔಷಧಿ ಕ್ರಯದ ಅರ್ಧಾಂಶ ಹಣವನ್ನು ಮನಿಯಾರ್ಡರ್ ಮೂಲಕ ರವಾನಿಸತಕ್ಕದ್ದು.

ESTD. 1921

NAVAYUGA
KANNADA WEEKLY,
UDIPI.

Founder:
Late Sri A. B. Shetty
Former Minister for Public Health, Govt. of Madras & Govt. of Mysore.

ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದ ದಿ| ಎ. ಬಿ. ಶೆಟ್ಟಿರಿಂದ ಸ್ಥಾಪಿತವಾದ

ನವಯುಗ

ಪ್ರತಿ ಗುರುವಾರ
ಉಡುಪಿಯಿಂದ ಹೊರಡುವ
ರಾಷ್ಟ್ರೀಯ ವಾರಪತ್ರಿಕೆ

ಸ್ಥಾಪನೆ: ೧೯೭೧.

ಗೌರವ ಸಂಪಾದಕರು:
ಎಸ್. ಗೋಪೀಚಂದ ರಾವ್, ಎಮ್.ಎಸ್.
ಬಿ. ಶಾಮರಾಯ ಶೆಟ್ಟಿ, ಬಿ. ಎ., ಎಲ್. ಟಿ.

ಸಂಚಾಲಕ ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ.

○

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್) ಕಲಂ ಇಂಚಿಗೆ ರೂ. 2-50
ಅನಿಯಮಿತ (ಕೆಜುವಲ್) ಕಲಂ ಇಂಚಿಗೆ ರೂ. 3-50
ಹೆಚ್ಚಿನ ವಿವರಗಳಿಗೆ ವ್ಯವಹರಿಸಿರಿ.

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವಸೌಕರ್ಯವಿರುವುದು.

ನವಯುಗ

ಸ್ವಾತಂತ್ರ್ಯ ದಿನೋತ್ಸವ ಸಂಚಿಕೆ ೧೯೬೧

Vol. 41 No. 47 & 48
ಸಂಪುಟ ೪೧ ಸಂಚಿಕೆ ೪೭ & ೪೮

ಭಾರತೀಯರ ಪರ್ವದಿನ

ಭಾರತ ಸ್ವಾತಂತ್ರ್ಯದೆಯ ಶುಭದಿನ ಆಗೋಸ್ತು ಹದಿನೈದು. ಆ ಶುಭದಿನದ ಹೊಸ ಬೆಳಕು ಹರಡಿ ಇದೀಗ ಹದಿನಾಲ್ಕು ವರ್ಷಗಳು ಸಂದುವು. ಬಾಲ್ಯಾವಸ್ಥೆಯಲ್ಲಿದ್ದ ಈ ಸ್ವಾತಂತ್ರ್ಯ ಕೂಸು ಇದೀಗ ಯುವಾವಸ್ಥೆಯ ಪ್ರಾಥಮಿಕ ಹಂತಗಳನ್ನು ಮೆಟ್ಟುತ್ತಿದೆ. ಹದಿನಾಲ್ಕರ ಹುಡುಗನಷ್ಟು ಕಿರುಕಾಳವನ್ನು ಮತ್ತಾರೂ ಕೊಡುವುದಿಲ್ಲ; ಏಕೆಂದರೆ, ಈ ಸಮಯದಲ್ಲಿ ಆತನಲ್ಲಿ ಸ್ವಯಂ ವಿಚಾರ ಪರಿಣತಿಯಿರುವುದಿಲ್ಲ; ಹಾಗೆಂದು ಇನ್ನೊಬ್ಬರು ಹೇಳಿದ.ದನ್ನು ಇದ್ದಕ್ಕಿದ್ದಂತೆಯೇ ಒಪ್ಪಿ ತಲೆದೂಗುವ ಪರಿಪಾಕದಲ್ಲಿ ವಿಶ್ವಾಸವಿರುವುದಿಲ್ಲ. ಹದಿನಾಲ್ಕು ಪೂರೈಸಿದ ಸ್ವತಂತ್ರ ಭಾರತವೂ ಒಂದು ಸಂಧಿಕಾಲದಲ್ಲಿ ಉಯ್ಯಲಾಡುತ್ತಿದೆ; ಅದು ಗುರಿ ಮುಟ್ಟುವುದೊ ಇಲ್ಲವೊ ಎಂಬ ಶಂಕೆಯನ್ನು ಮಾತ್ರ ಹುಟ್ಟಿಸುವುದಿಲ್ಲ; ಖಂಡಿತಕ್ಕೂ ಪೂರೈಸಿಯೇ ಬಿಡುವುದು.

ಬ್ರಿಟಿಷರ ಕಾಲಕ್ಕೆ ಮೊದಲಿದ್ದು ಆನಂತರ ಮಣ್ಣು ಪಾಲಾದ ಗ್ರಾಮರಾಜ್ಯ ವ್ಯವಸ್ಥೆಯನ್ನು ಪುನಃ ಸ್ಥಾಪಿಸುವ ಸಾಹಸವನ್ನು ನಾವು ಮಾಡುತ್ತಿದ್ದೇವೆ. ಸತ್ಯ, ಸ್ವಾಮಾಣಿಕತೆ ಮತ್ತು ಸಹಕಾರಗಳ ಮೂಲಕ ಸಹಜೀವನವನ್ನೂ ಸ್ವಾವಲಂಬನವನ್ನೂ ಸಾಧಿಸುವ ಪ್ರಯತ್ನ, ದೇಶವನ್ನು ಸಮೃದ್ಧವಾಗಿ ಮಾಡಲಿಯ ಜಾತ್ಯತೀತ ಕಲ್ಯಾಣರಾಷ್ಟ್ರವಾಗಿ ರೂಪಿಸುವ ಉದ್ದೇಶ ಸಹೋದರತೆ-ಸಹಜೀವನ-ಸ್ವಾತಂತ್ರ್ಯಗಳ ಅಮರ ಆದರ್ಶಗಳನ್ನು ಮುಂದಿಟ್ಟ ವಿದೇಶ ವ್ಯವಹಾರ-ನಮ್ಮದು. ಕಳೆದ ಹದಿನಾಲ್ಕು ವರ್ಷಗಳ ಅನುಭವದಿಂದ ನಮ್ಮ ಗುರಿ ಸಾಧನೆಯಲ್ಲಿ ನಿಧಾನವಾಗಿ ಸೂದರೂ ಯಶಸ್ವಿಗಳಾಗುವೆವು ಎಂಬ ದೃಢ ವಿಶ್ವಾಸ ನಮ್ಮಲ್ಲಿ ಮೂಡಿ ಬಂದಿದೆ.

ನಮ್ಮ ಸ್ವಾತಂತ್ರ್ಯದ ಹದಿನೈದನೆಯ ವರ್ಷವು ನಮ್ಮ ಇತಿಹಾಸದಲ್ಲಿ ಮಾತ್ರವಲ್ಲ ಜಾಗತಿಕ ಚರಿತ್ರೆಯಲ್ಲೂ ಮಹತ್ವದ ವರ್ಷ. ಖಗೋಳ ಶಾಸ್ತ್ರಜ್ಞರೆನ್ನುವಂತೆ ಅಪ್ಪಗ್ರಹಯೋಗ ನಡೆಯುವುದು; ಇದರಿಂದ ಇಡಿಯ ಜಗತ್ತಿನಲ್ಲಿ ನಾವು ನೋವುಗಳು ಕಾಣಿಸಿಕೊಳ್ಳುವುವು. ಭೂಕಂಪ, ಸಮುದ್ರದುಬ್ಬರ, ಪ್ರವಾಹಾದಿ ಪ್ರಾಕೃತಿಕವಿಕೋಪಗಳಿಂದ ಕೊಟ್ಯಂತರ ಜೀವಗಳು ನಷ್ಟವಾಗುವುವು ಸ್ಥಿರ ಜಂಗಮ ವಸ್ತುಗಳು ಧಕ್ಕೆ ಹೊಂದುವುವು. ನಮ್ಮ ಅಭಿವೃದ್ಧಿ ಯೋಜನೆಗಳು ಹದಿನಾಲ್ಕು ವರ್ಷದ ಪರಿಶ್ರಮ ಫಲನೀಡಲು ಅನುವಾಗುತ್ತಿವೆ ಎಂಬಾಗ ಪಣ್ಣುಪಾಲಾಗಿಹುದಾದರೆ ಬದಕ್ಕಿಂಕ ದೊಡ್ಡ ಹಾನಿಯೇನು?

ನಮ್ಮ ಮಹಾದೇಶದ ಸುಮಾರು ೧೨೦೦ ಕೋಟಿ ರೂಪಾಯಿಗಳ ತೃತೀಯ ಪಂಚವಾರ್ಷಿಕ ಯೋಜನೆಯೊಂಗ ರೂಪುಗೊಂಡಿದೆ. ಇಷ್ಟೊಂದು ದೊಡ್ಡ ಮೊತ್ತದ ಯೋಜನೆಯನ್ನು ಈ ಹರೆಯದಲ್ಲಿ ಕೇಳಿಸುವುದು ಸಾಹಸದ ಕಾರ್ಯ ಇದು ಎರಡನೆಯದರ ಇಮ್ಮಡಿಯಿದೆ. ಅನಿವಾರ್ಯ ಪ್ರಾಥಮಿಕ ಶಿಕ್ಷಣವು ಕಾರ್ಯಗತವಾಗುವುದೂ ಇದೇ ಯೋಜನೆಯಲ್ಲಿ. ಜಟ್ಟಿ ಕಾಳಗದಲ್ಲಿ ಗೆಲ್ಲಬೇಕೆಂದಿಲ್ಲ; ಆತನ ಗರಡಿ ಸಾಧನೆಯು ವ್ಯರ್ಥವಾಗುವುದಿಲ್ಲ. ಇದರಿಂದಾಗಿ ಯೋಜನೆಯ ಶಸ್ವಿಗಾಗಿ ನಾವು ದುಡಿದರೆ, ಅದರಿಂದನಮ್ಮ ಉದ್ಧಾರವನ್ನು ನಾವೇ ಮಾಡಿಕೊಂಡಂತೆಯೆಂದು ಬೇರೆ ಹೇಳಬೇಕಾಗಿಲ್ಲ.

ಈ ವರ್ಷ ಮೂರನೆಯ ಸಾರ್ವತ್ರಿಕ ಚುನಾವಣೆಗಳು ನಡೆಯುವುವು. ಪ್ರಜಾಸತ್ತೆಯು ಸ್ಥಾಪನೆಯಾದ ನಂತರ ಮೂರನೆಯ ಬಾರಿಗೆ ನಮ್ಮ ರಾಜಕೀಯ ಮುಖಂಡರು ತಮ್ಮ ಹೃದಯವನ್ನು ನಾಗರಿಕರ ಮುಂದೆ ಬಿಚ್ಚಿ ಮತ ಕೇಳುವುದಕ್ಕೆ ಇಳಿಯುವರು. ಕಳೆದೆರಡು ಬಾರಿಯೂ ನಿಶ್ಚಲ ಬಹುಮತ ಪಡೆದ ಕಾಂಗ್ರೆಸು, ಈ ಬಾರಿಯೂ ಜಯಿಸುವುದು ನಿಶ್ಚಯ; ನಾವು ಮಾತ್ರಕ್ಕಿರುವ ವಿರೋಧಿ ಪಕ್ಷಗಳು ಅಧಿಕಾರದ ಸೂತ್ರ ವಹಿಸುವ ಶಕ್ತಿ ಪಡೆಯಲು ಇನ್ನೆಷ್ಟು ದಶಕಗಳು ಬೇಕೋ ಏನೋ! ನಮ್ಮ ಪ್ರಜಾಪ್ರಭುತ್ವದಲ್ಲಿರುವ ಏಕಮೇವ ಕೊರತೆಯೆಂದರೆ, ಬಲವಾದ ವಿರೋಧಿ ಪಕ್ಷದ್ದು. ಪ್ರ. ಸ. ಪಾ. ಪಕ್ಷವು ನಿಸ್ತೇಜವಾಗಿದೆ; ಕಮ್ಯೂನಿಜಂ ಭಾರತದ ವಾತಾವರಣದಲ್ಲಿ ಬೆಳೆಯದು; ಸ್ವತಂತ್ರ ಪಕ್ಷದ ವಿಚಾರಧಾರೆ, ಇಂದಿನ ಕಾಲಕ್ಕೆ ಒಗ್ಗುವಂತಿಲ್ಲ. ಇನ್ನು ಕೆಲವು ಜಾತಿಯ ತಳಹದಿಯಲ್ಲಿ ನಿರ್ಮಾಣವಾದುವು. ಇವುಗಳಿಂದ ಸಮಗ್ರ ರಾಷ್ಟ್ರದ ಹಿತಸಾಧನೆಯೊಗುವುದೆಂದರೆ ಅದು ಕನಸಿನ ಗಂಟು ಮಾತ್ರ. ಭಾರತಕ್ಕೆ ಹಿತವಾಗುವ, ಭಾರತೀಯರಿಗೆ ಬೇಕಾಗುವ ಎಲ್ಲವನ್ನೂ ಕಾಂಗ್ರೆಸ್ಸೇ ಮಾಡುತ್ತಿರುವಾಗ, ಇತರ ಪಕ್ಷಗಳಾದರೂ ಏಕೆ? ಜನತೆಗೆ ಬೇಕಾದ, ಸರಕಾರ ಪಕ್ಷ ಸ್ವೀಕರಿಸದ ನೀತಿಯೊಳಗೂ ಭಾರತದಲ್ಲಿಲ್ಲ ಎಂಬಲೇ ವಿರೋಧಿ, ಪಕ್ಷಗಳ ಬೆಳವಣಿಗೆಗೆ ನಮ್ಮಲ್ಲಿ ಅವಕಾಶ ಕಡಮೆ. ಇದು ಸಂಬದ್ಧವೇ ಅಸಂಬದ್ಧವೇ—ವಿಚಾರಾರ್ಹ.

ಕಳೆದ ವರ್ಷದ ಇದೇ ಸಮಯದಲ್ಲಿ ಉತ್ತರ ಗಡಿಯಲ್ಲಿ ಚೀನೀಯರ ಧಾಳಿ ನಡೆದ ವರ್ತಮಾನ ಕೇಳಿ ಬಂದಿದ್ದು, ಭಾರತೀಯರ ರಾಷ್ಟ್ರೀಯತೆಗೆ ಆಘಾತ ಬಂದಿತ್ತು. ಈ ವರ್ಷ ಪಾಕಿಸ್ತಾನದ ಕಿರುಕುಳವೂ ಕಂಡು ಬರುತ್ತದೆ ಭಾರತದ ನೆರೆಯ ರಾಷ್ಟ್ರಗಳು ಪದೇ ಪದೇ ಇಂತಹ ಉಪದ್ರವವನ್ನು ನೀಡಿ, ನಮ್ಮ ಪುನರುತ್ಥಾನ ಕಾರ್ಯವನ್ನು ತಡೆಯುವಂತೆ ವಕ್ರಪಥ ಹಿಡಿದಿರುವಾಗ, ನಾವು ನಿಶ್ಚಿಂತೆಯಿಂದಿರುವುದು ಸಾಧ್ಯವಿಲ್ಲ. ೬೧ರ ಜನಗಣತಿಯ ಪ್ರಕಾರ ನಮ್ಮ ಜನ ಬಲ ೪೩ ಕೋಟಿಗೂ ಮೀರಿದೆ. ಇಷ್ಟೊಂದು ಜನಬಲವು ಒಂದು ಸೇರಿದರೆ, ಆ ಮಾನವ ಶಕ್ತಿಗೆ ಇರುವುದು? ಆದರೆ, ನಮ್ಮಲ್ಲಿ ಐಕ್ಯ, ಸಹಜೀವನ, ಸ್ವಾತಂತ್ರ್ಯಗಳ ಸುಫಲದಾಯಕ ಬೀಜ ಮಾತ್ರ ನಾವು ಬಿತ್ತಿಕೊಳ್ಳಬೇಕು. ನಮ್ಮ ಮತ್ತು ನಮ್ಮವರ ಸ್ವಾತಂತ್ರ್ಯ ರಕ್ಷಣೆ, ಸುಭಿಕ್ಷೆಗಾಗಿ ಅಹೋರಾತ್ರಿ ಪರಿಶ್ರಮಿಸುವ ಪ್ರತಿಜ್ಞೆಯನ್ನು ನಾವು ಪುನಃ ಸ್ಮರಿಸಿ, ಸ್ವಾತಂತ್ರ್ಯ ಭಾಸ್ಕರನಿಗೆ ಅನನ್ಯಭಾವದಿಂದ ನಮಿಸೋಣ ಆತನ ಪ್ರಕಾಶದ ಆಧಾರದಿಂದ ನಾವು ಮುಂದುವರಿಯೋಣ.

ಸ್ವವಿಷಯ

ಭಾರತೀಯರಿಗೆಲ್ಲ ಪವಿತ್ರ ದಿನವಾದ ಸ್ವಾತಂತ್ರ್ಯ ದಿನದ ಸಂಸ್ಮರಣೆಗಾಗಿ ವಿಶೇಷಾಂಕವೊಂದನ್ನು ಹೊರಡಿಸುವ ನಮ್ಮ ಗುರಿ ಸಫಲವಾಗಿದೆ. ಇದರಲ್ಲಿ ಸಹಕಾರ ನೀಡಿದ ಲೇಖಕರು, ಜಾಹಿರಾತುದಾರರು ಹಾಗೂ ವೈಸ್ಸಿನ ಕೆಲಸಗಾರರಿಗೆ ನಮ್ಮ ಅಭಿನಂದನೆಗಳು.

ಕನ್ನಡದಲ್ಲಿ ಪತ್ರಿಕೋದ್ಯಮವೆಂಬುದು ವಿಷಮ ಪರಿಸ್ಥಿತಿಯಲ್ಲಿದೆ. ದಿನದಿಂದ ದಿನಕ್ಕೆ ಏರುತ್ತಿರುವ ವೃತ್ತ ಪತ್ರದ ಬೆಲೆ; ಸಮಯಕ್ಕೆ ಸರಿಯಾಗಿ ಅದು ದೊರೆಯದಿರುವ ಆತಂಕ ಇವು ಎಂತಹ ಪತ್ರಿಕಾಕರ್ತರನ್ನಾದರೂ ಕಂಗಾಲು ಗೊಳಿಸಲು ಸಾಕು. ಇದರಿಂದಾಗಿ ಚಿಕ್ಕ ಪತ್ರಿಕೆಗಳಿಗೆ ತಲೆಯೆತ್ತಿ ಬಾಳುವುದೇ ದುಸ್ಸಾಧ್ಯವೆಂಬಂತಾಗಿದೆ. ಇದರ ಮೇಲೆ ಪ್ರಜಾರ ಸಾಧನಗಳಾದ ಇಂತಹ ಪತ್ರಿಕೆಗಳನ್ನು ಉಪಯೋಗಿಸುವಲ್ಲಿ ಉದ್ಯಮಿಗಳು ಸಂಘೆಗಾರರು, ವ್ಯಾಪಾರಿಗಳು ಅಷ್ಟೊಂದು ಉತ್ಸಾಹವನ್ನು ವಹಿಸುವುದಿಲ್ಲ. ಕನ್ನಡ ರಾಜ್ಯ ಸರಕಾರವೇ ಐದು ಸಾವಿರಕ್ಕಿಂತ ಕಡಿಮೆ ಪ್ರಸಾರವಿರುವ ಪತ್ರಿಕೆಗಳಿಗೆ ತನ್ನ ಜಾಹಿರಾತನ್ನು ನೀಡಲು ಒಪ್ಪದಿರುವಾಗ ಇದೇನೂ ಆಶ್ಚರ್ಯವಲ್ಲ. ಸರಕಾರವು ಭಾಷಾ ಪತ್ರಿಕೆಗಳನ್ನು ಮಲತಾಯಿ ಮಕ್ಕಳಂತೆ ಕಾಣುವ ದೃಷ್ಟಿ ದೂರವಾಗುವ ವರೆಗೆ ಕನ್ನಡ ಪತ್ರಿಕೋದ್ಯಮ ಸುಗಮವಾಗಲಾರದು. ಸರಕಾರವು ತನ್ನ ನೀತಿಯನ್ನು ಬದಲಿಸಿ ಜನಾಭಿಪ್ರಾಯ ಪ್ರಕಟಣೆಗೆ ಮಾಧ್ಯಮವಾದ ಕನ್ನಡ ಪತ್ರಿಕೆಗಳ ಮೇಲೂ ಅಭಿಮಾನವನಿಡುವ ಸೌಜನ್ಯ ತೋರಿಸಲಿ. ಉಳಿದವರೂ ಅದನ್ನು ಅನುಸರಿಸಲಿ.

ತ್ರಿವಿಧ ಪಾಪಗಳು - ತ್ರಿವಿಧ ತಾಪಗಳು

(ಇಂದಿನ ದುರಂತ ಸ್ಥಿತಿಗತಿಗಳ ವಿಷಯದ ಒಂದು ನೋಟ)

ಶಾರೀರಿಕ, ಮಾನಸಿಕ ಮತ್ತು ವಾಚಸಿಕವೆಂಬ ತ್ರಿವಿಧ ಪಾಪಗಳನ್ನು ಮಾನವ ಮಾಡುತ್ತಾನೆ; ಇದಕ್ಕೆ ಪ್ರತಿಯಾಗಿ ಆಧ್ಯಾತ್ಮಿಕ, ಆಧಿಭೌತಿಕ ಮತ್ತು ಆಧಿದೈವಿಕವೆಂಬ ತ್ರಿವಿಧ ತಾಪಗಳು ಅತನನ್ನು ಕಾಡುತ್ತವೆ. ನಿಷ್ಪಾಪಿಯೂ ನಿಸ್ವಾರ್ಥನೂ ನಿಸ್ಕಲಂಕನೂ ಆಗಿರುವುದರಿಂದರೇ ಮಾನವ ಸುಖಿಯಾಗಬಲ್ಲ.

ಶ್ರೀ ಸುಬೋಧ ಎಂ. ರಾಮರಾವ್, ಬೆಂಗಳೂರು.

ಇಂದಿನ ಲೋಕ ಸ್ಥಿತಿಯು ವಿಚಿತ್ರವಾಗಿದೆ. ಈ ಹಿಂದಿದ್ದದಕ್ಕಿಂತಲೂ ಇಂದು ಜನತೆ ಹೆಚ್ಚು ನಾಗರಿಕರಾಗಿರುವಂತೆ ಕಂಡು ಬರುತ್ತಿದ್ದಾರೆ. ದೇಶದಲ್ಲಿ ಅಗಾಧ ಆಣೆಕಟ್ಟು ನೀರಾವರಿ ಸಾಧನಗಳ ಮೂಲಕ ವಿಶೇಷ ಬೆಳೆ ಬೆಳೆಯುತ್ತಿದೆ. ಹಿಂದಿನಕ್ಕಿಂತಲೂ ಲಕ್ಷಾವಧಿ ಎಕರೆಗಳ ಭೂಮಿ ಸಾಗುವಳಿಗೆ ಬಂದಿದೆ. ವ್ಯವಸಾಯ-ವ್ಯಾಪಾರ, ಕೈಗಾರಿಕೆ ಮುಂತಾದುವೆಲ್ಲ ಒಂದಕ್ಕೆ ಹತ್ತರಷ್ಟು ಹೆಚ್ಚಿರುವಂತೆ ಕಂಡು ಬರುತ್ತಿವೆ. ಆದರೆ ಜನತೆ ಅಂದಿದ್ದಷ್ಟು ಸುಖವಾಗಿದ್ದಾರೋ. ಅಂದಿದ್ದಷ್ಟು ನಿಶ್ಚಿಂತರಾಗಿದ್ದಾರೋ, ಅಂದಿದ್ದಷ್ಟು ಶಾಂತ ಮನಸ್ಕರಾಗಿದ್ದಾರೋ, ದೈವಭಕ್ತರಾಗಿದ್ದಾರೋ ಎಂದು ವಿಚಾರ ನಡೆಸಿದರೆ,ಅದು ಮಾತ್ರ ಎಲ್ಲೆಲ್ಲೂ ಅಭಾವವಾಗಿರುವುದು ಕಂಡು ಬರುತ್ತಿದೆ. ಒಬ್ಬೊಬ್ಬನೂ ಅಂದಿಗಿಂತ ಹತ್ತರಷ್ಟು ಹೆಚ್ಚು ಸಂಪಾದಿಸುತ್ತಾನೆ-ಹೆಚ್ಚು ಸುಖಭೋಗಗಳಲ್ಲಿರುವಂತೆ ಕಂಡು ಬರುತ್ತಾನೆ ಆದರೆ,ನಿಜವಾದ ಶಾಂತಿ, ಸುಖಗಳಿಂದ ದೂರವಾಗಿದ್ದಾನೆ—ಇದೇಕೆ?

ಮನುಷ್ಯನು ತನಗೆ ಎಂದೆಂದಿಗೂ ಸುಖವೇ ಬೇಕೆಂದು ಬಯಸುತ್ತಿರುವುದು ಸ್ವಭಾವ. ಆದರೆ ಆ ಸುಖವನ್ನು ದೊರಕಿಸುವ ಸಾಧನವ್ಯಾವುದು ಎಂಬುದನ್ನು ಮಾತ್ರ ಯೋಚಿಸುವುದಿಲ್ಲ.—ಹಾಗೆಯೇ ತನಗೆ ಎಂದೂ ಕಷ್ಟವು ಪ್ರಾಪ್ತವಾಗದಿರಲೆಂದು ಅಪೇಕ್ಷಿಸುವನು. ಆದರೆ ಕಷ್ಟ ನಿವೃತ್ತಿಯಾಗುವ ಮಾರ್ಗವೇನೆಂದು ಯೋಚಿಸಿ, ಆ ಮಾರ್ಗವನ್ನು ಮಾತ್ರ ಅನುಸರಿಸುವುದಿಲ್ಲ.

ಸುಖವಾಗಲಿ ಕಷ್ಟವಾಗಲಿ ಯೋಗ್ಯ ಕಾರ್ಯಕಾರಣ ಸಂಬಂಧವಿಲ್ಲದೆ ಯಾರಿಗೂ ಎಂದಿಗೂ ಬಂದೊದಗಲಾರವು. ಪ್ರಕೃತಿ ನಿಯಮದಲ್ಲಿ ಎಂದಿಗೂ ಅನ್ಯಾಯ ನಡೆಯಲಾರದು.

ತನಗೆ ಸುಖವಾಗಬೇಕೆಂದು ಬಯಸಿ ಮಾನವನು ಅನೇಕ ವೇಳೆ ಅದಕ್ಕೆ ವ್ಯತಿರಿಕ್ತವಾದ ಹಲವು ಪಾಪ ಕಾರ್ಯಗಳನ್ನು ಮಾಡುತ್ತಿರುವನು. ಪಾಪವು ತ್ರಿವಿಧವಾಗಿರುವುದು; ಶಾರೀರಿಕವಾಗಿ ಮಾಡುವ ಪಾಪಗಳು ಕೆಲವು; ವಾಚಸಿಕವಾದ ಪಾಪಗಳು ಕೆಲವು; ಮಾನಸಿಕವಾಗಿ ಮಾಡುವ ಪಾಪಗಳು ಕೆಲವು. ಪಾಪವೆಂದರೆ ಮತ್ತೇನೂ ಅಲ್ಲ! ಅಯುಕ್ತವಾದುದ್ಯಾವುದೋ, ಮಾಡಬಾರದುದ್ಯಾವುದೋ ಅದನ್ನು ಮಾಡುವುದು ಪಾಪ. ಉದಾಹರಣೆಗೆ: ಮಧ್ಯಾಹ್ನ ಕಾಲಕ್ಕೆ ಹಸಿವು ಬಾಯಾರಿಕೆಗಳಿಂದ ಬಳಲುತ್ತ ಬಬ್ಬ ಮನುಷ್ಯನು ಬಾಗಿಲಿಗೆ ಬರುವನು. ಅವನನ್ನು ನೋಡಿ, ಕನಿಕರಗೊಂಡು ಅನ್ನವನ್ನಿಕ್ಕಿ ನೀರನ್ನು ಕುಡಿಯಲಿತ್ತು, ಒಳ್ಳೆಯ ಮಾತುಗಳಿಂದ ಆದರಿಸುವುದು ಯುಕ್ತವಾದ ಕಾರ್ಯವಲ್ಲವೆ? ಹಾಗಲ್ಲದೆ, ಅವನನ್ನು ಬೈದು ಭಂಗಿಸಿ ಏನೂ ಕೊಡದೆ ತಳ್ಳಿ—ಅಥವಾ ನಾಯಿಗಳನ್ನು ಬಿಟ್ಟು ಹೆದರಿಸಿ ಓಡಿಸುವುದು ಯುಕ್ತವೆ?ಯೋಗ್ಯ ಕಾರ್ಯವೆ? ಇದೇ ಪಾಪವೆಂಬುದು. ಈ ಕಾರ್ಯವು ಆ ಆಗಂತುಕ ಮನುಷ್ಯನಿಗೆ ತಾಪವನ್ನುಂಟು ಮಾಡುವುದು. ಮೊದಲು ಹೇಳಿದಂತೆ ಆ ಮನುಷ್ಯನಿಗೆ ಅನ್ನನೀರುಗಳನ್ನಿತ್ತು ಆದರಿಸಿದ್ದರೆ ಅದು ಅವನಿಗೆ ಸಂತೋಷವನ್ನುಂಟು ಮಾಡುತ್ತಿತ್ತು. ಅದು ಪುಣ್ಯ ಕಾರ್ಯವು. ಪುಣ್ಯ ಕಾರ್ಯವು ಕರ್ತೃವಿಗೆ ಸುಖವನ್ನು ಒದಗಿಸುವ ಸಾಧನ. ಪಾಪ ಕಾರ್ಯವು ಕರ್ತೃವಿಗೆ ದುಃಖ-ಸಂಕಟಗಳನ್ನು ಒದಗಿಸುವ ಸಾಧನ.

ಮನುಷ್ಯ ದೇಹಕ್ಕೆ ಆರೋಗ್ಯಕರವಾದ ಆಹಾರ ಪಾನೀಯಗಳು, ಯೋಗ್ಯ ಕಾಲದಲ್ಲಿ ನಿದ್ರೆ ವಿಶ್ರಾಂತಿಗಳು ದೊರೆಯುತ್ತಿದ್ದರೆ ಅದು ರೋಗ ಬರದಂತೆ ಕಾಪಾಡುವುದಲ್ಲವೆ? ಅದಕ್ಕೆ ವ್ಯತಿರಿಕ್ತವಾಗಿ ವಾಗಿ ದುಷ್ಟ ಆಹಾರ, ಅವೇಳೆಯಲ್ಲಿ ನಿದ್ರೆ, ವಿರಾಮ ವಿಲ್ಲದ ದುಡಿಮೆ— ಇವು ದೇಹ ವಿಷಯದಲ್ಲಿ ನಡೆವ ಪಾಪಗಳು. ವ್ಯಾಧಿಗಳು ಉಂಟಾಗಲು ದೇಹ ವಿಷಯದಲ್ಲಿ ನಡೆವ ಈ ತಾಪದಾಯಕ ಅಯುಕ್ತ ಕಾರ್ಯಗಳೇ ಕಾರಣಗಳಾಗಿ ಪರಿಣಮಿಸುವುವು. ಆ ಪುಗಳ ವಿಷಯದಲ್ಲಿ ಯೋಗ್ಯ ಕಾಲದಲ್ಲಿ ತಕ್ಕ ಉಪಶಮನ ಉಪಾಯಗಳನ್ನು ಕೈಗೊಳ್ಳದಿದ್ದರೆ, ಅವೇ ಮಹಾರೋಗ ಕಾರಣಗಳಾಗಿ ಅತ್ಯಂತ ಉಪದ್ರವವನ್ನುಂಟುಮಾಡುವುವು. ಅಲ್ಲವೆ? ಹೀಗೆ ಮನುಷ್ಯನು ದೇಹ ವಿಷಯದಲ್ಲಿ, ಮನಸ್ಸಿನ ವಿಷಯದಲ್ಲಿ,ಆತ್ಮನ ವಿಷಯದಲ್ಲಿ ನಡೆಸುವ ಹಲವಾರು ಅಯುಕ್ತ ಕಾರ್ಯಗಳು ತ್ರಿವಿಧ ತಾಪಗಳಿಗೆ-ತ್ರಿವಿಧ ವ್ಯಾಧಿಗಳಿಗೆ ಕಾರಣಗಳಾಗಿ ಬಾಧಿಸುವುವು.

ಪ್ರಕೃತಿಯಲ್ಲಿ ಯಾವುದೊಂದು ಗೊತ್ತಾದ ಕಾರಣವಿಲ್ಲದೆ ಎಂದೂ ಯಾವ ಕಾರ್ಯವೂ ನಡೆಯದು. ಒಬ್ಬ ವ್ಯಕ್ತಿ

(೨೭ನೇ ಪುಟ ನೋಡಿರಿ)

ವೈದ್ಯರತ್ನಂ ಪಿ. ಎಸ್. ವಾರಿಯರ್‌ರ

ಆರ್ಯ ವೈದ್ಯ ಶಾಲಾ,

ಕೋಟ್ಟಕಲ್ (ಕೇರಳ ರಾಜ್ಯ)

ಸ್ಥಾಪನೆ: 1902.

ಹೆಡ್ ಆಫೀಸು: ಕೋಟ್ಟಕಲ್ ಫೋನ್ ನಂ. 44 (ತ್ರಿರೂರು Exchange)

ಶಾಖೆಗಳು:

1. ಕೋಝಿಕೋಡ್ (ಫೋನ್ ನಂ. 2155) ಕಲ್ಲಾಯಿ ರೋಡ್.
2. ತಿರೂರು (ಫೋನ್ ನಂ. 31) ಸ್ಟೇಶನ್ ರೋಡ್.
3. ಪಾಲ್ಘಾಟ್ (ಫೋನ್ ನಂ. 104) ವಡಕ್ಕಂತರ.
4. ,, ಸೇಲ್ಸ್ ಡಿಪೋ, ಜಿ. ಬಿ. ರೋಡ್.
5. ಎರ್ನಾಕುಳಂ (ಫೋನ್ ನಂ. 674) ಮಹಾತ್ಮಾ ಗಾಂಧೀ ರೋಡ್.
6. ತ್ರಿವೆಂದ್ರಮ್ (ಫೋನ್ ನಂ. 3924) ಸ್ಟೇಜು ರೋಡ್.
7. ಈರೋಡು (ಫೋನ್ ನಂ. 172) ಮುನ್ಸಿಪಾಲ್ ಬಸ್ ಸ್ಟ್ಯಾಂಡಿನ ಎದುರು.

ಕೋಟ್ಟಕಲ್‌ನಲ್ಲಿರುವ ನಮ್ಮ ಹೆಡ್ ಆಫೀಸು ಮತ್ತು ಶಾಖೆಗಳಲ್ಲಿ ಶುದ್ಧ ಸ್ಟಾಂಡಾರ್ಡ್ ಆಯುರ್ವೇದಿಕ್ ಔಷಧಿಗಳು ಮತ್ತು ತಜ್ಞ ವೈದ್ಯಕೀಯ ಸಲಹೆ ದೊರೆಯುತ್ತವೆ. ಕೋಟ್ಟಕಲ್‌ನ ನಮ್ಮ ಪ್ರಧಾನ ವೈದ್ಯಾಧಿಕಾರಿಯವರು ಪತ್ರವ್ಯವಹಾರದ ಮೂಲಕ ವೈದ್ಯಕೀಯ ಸಲಹೆ ನೀಡುವರು. ಪಿಝಿಚಿಲ್, ನವರಕಿಝಿ ಮೊದಲಾದ ವಿಶಿಷ್ಟ ಚಿಕಿತ್ಸೆಗಳನ್ನು ನಮ್ಮ ಪ್ರಧಾನ ವೈದ್ಯಾಧಿಕಾರಿಗಳ ಮೇಲ್ವಿಚಾರಣೆಯಲ್ಲಿ

ಗೋಲ್ಡನ್ ಜ್ಯುಬಿಲಿ ನರ್ಸಿಂಗ್ ಹೋಮ್

ಇಲ್ಲಿ ನಡೆಸಲಾಗುತ್ತದೆ.

ಮೆನೇಜಿಂಗ್ ಟ್ರಸ್ಟಿ.

ನಮ್ಮ ಮೂರನೆಯ ಯೋಜನೆ-ಧ್ಯೇಯ ಮತ್ತು ಸಿದ್ಧಿ

—o—

ಶ್ರೀ ಕು. ಶಿ. ಹರಿದಾಸ ಭಟ್ಟ, ಎಂ. ಎ.

ದೇಶದ ಪುನಾರಚನೆಯ ಕಾರ್ಯಕ್ಕಾಗಿ ಈಗ, ನಮ್ಮ ನಾಯಕರು ಮೂರನೆಯ ಪಂಚವಾರ್ಷಿಕ ಯೋಜನೆಯನ್ನು ರೂಪಿಸಿದ್ದಾರೆ. ಮೊದಲಿನ ಯೋಜನೆಗಳಂತೆಯೇ ಇದರ ಧ್ಯೇಯವೇನೋ ಹಿರಿದು; ಆದರೆ ಸಿದ್ಧಿಯ ಪ್ರಮಾಣವೆಷ್ಟು ಎಂಬುದು ಕಳವಳಕ್ಕೆ ಕಾರಣವಾಗಿದೆ.

ನಮ್ಮ ಮೂರನೆಯ ಯೋಜನೆಯು ಭಾರತೀಯ ಪ್ರಜಾ ಸಮುದಾಯಕ್ಕೆನೇ ಒಂದು ಪಂಥಾಹ್ವಾನವೆಂಬುದಾಗಿ ಪ್ರಧಾನಿ ನೆಹರೂ ಮೊನ್ನೆ ತಾನೇ ಅಪ್ಪಣೆ ಕೊಡಿಸಿದರು. ಆದರೆ ಭಾರತದ ಸಾಮಾನ್ಯ ಪ್ರಜೆ ನೆಹರೂ ಅವರ ಆಹ್ವಾನವನ್ನು ಸ್ವೀಕರಿಸುವನೆ, ಅತ ಹಾಗೆ ಅದನ್ನು ಸ್ವೀಕರಿಸಬೇಕೇ ಬೇಡವೆ ಎಂಬ ವಿಚಾರವನ್ನು ಸ್ಥೂಲವಾಗಿ ಇಲ್ಲಿ ಪ್ರಸ್ತಾವಿಸಲಾಗುವುದು. ಆಡಳಿತದ ಹಲವು ಲೋಪದೋಷಗಳಿಂದಾಗಿ ನಾವು ಇರಿಸಿಕೊಂಡಿರುವ ಧೋರಣೆಯ ಕುರಿತೇ ಮಹಾ ಜನರಿಗೆ ಸಂದೇಹ ಬರುವ ಸಂಭವ್ಯತೆಯುಂಟಾಗಿರುವುದರಿಂದ ಮತ್ತೊಮ್ಮೆ ನಮ್ಮ ಧ್ಯೇಯಗಳನ್ನು ಸ್ಪಷ್ಟೀಕರಿಸಿಕೊಳ್ಳುವುದು ಯುಕ್ತವಾಗಿದೆ; ಅಂತೆಯೇ ನಾವು ಹಿಡಿದಿರುವ ಯೋಜನಾತ್ಮಕ ಮಾರ್ಗವು ಈ ಧ್ಯೇಯ ಸಾಧನೆಗೆ ಎಷ್ಟು ಮಟ್ಟಿಗೆ ಅನುಕೂಲವಾಗಿದೆ ಎಂಬುದನ್ನು ನಾವು ಚರ್ಚಿಸಬೇಕಾಗಿದೆ.

ಧ್ಯೇಯ ನಿರೂಪಣೆ

ಭಾರತದ ಘಟನೆಯಲ್ಲಿ ನಮ್ಮ ರಾಷ್ಟ್ರಕ್ಕೇ ಹಾಕಿಕೊಟ್ಟಿರುವ ಘನೋದ್ದೇಶಗಳನ್ನು ಪೂರಯಿಸಲು ಯೋಜನೆಯು ಒಂದು ಉಪಕರಣವಾಗಿದೆ ಸಮಾಜವಾದದ ನೆಲೆಯಲ್ಲಿ ಕಟ್ಟಲಾಗುವ ಶುಭೇ ರಾಜ್ಯದ ಕನಸಿಗೆ ಯೋಜನೆಯು ಒಂದು ದಾರಿಯಾಗಿದೆ. ಮೂರನೆಯ ಯೋಜನೆಯಲ್ಲಿ ಸರ್ಕಾರದ ಮತ್ತು ಜನತೆಯ ಮುಂದೆ ಈ ಕೆಳಗಿನ ಧ್ಯೇಯಗಳನ್ನು ಇರಿಸಿದ್ದಾರೆ:

(1) ಮೂರನೆಯ ಯೋಜನೆಯ ಅವಧಿಯಲ್ಲಿ ವರ್ಷಕ್ಕೆ 5%ನಂತೆ ರಾಷ್ಟ್ರದ ವರಮಾನ ಹೆಚ್ಚುವಂತೆ ಇನ್ವೆಸ್ಟ್‌ಮೆಂಟ್ ಧೋರಣೆಯನ್ನು ಹೊಂದಿಸಿ ಕೊಳ್ಳುವುದು.

2) ಆಹಾರ ಸಾಮಗ್ರಿಗಳ ವಿಷಯದಲ್ಲಿ ರಾಷ್ಟ್ರವು ಸ್ವಾವಲಂಬಿಯಾಗಬೇಕು; ಅಲ್ಲದೆ ಉದ್ಯಮ ಮತ್ತು ನಿರ್ಯಾತದ ಅವಶ್ಯಕತೆಗಳ ಪೂರೈಕೆಗಾಗಿ ಬೇಕಾಯಿದ ಉತ್ಪನ್ನಗಳನ್ನು ಹೆಚ್ಚಿಸುವುದು.

3) ಹಣ್ಣು ವರ್ಷಗಳ ಕಾಲದಲ್ಲಿ ನಮ್ಮ ಔದ್ಯಮಿಕ ರಂಗಕ್ಕೆ ಬೇಕೆನಿಸುವ ಸಕಲ ಯಂತ್ರ ಸಾಮಗ್ರಿಗಳನ್ನು ನಾವೇ ತಯಾರು ಮಾಡಲನುಕೂಲವಾಗುವಂತೆ ನಮ್ಮ ಯಂತ್ರೋತ್ಪಾದನಾ ಸಾಮರ್ಥ್ಯವನ್ನು ವಿಸ್ತರಿಸುವುದು; ಇದಕ್ಕೆ ಪೋಷಕವಾಗಿ ಉಕ್ಕು, ವಿದ್ಯುತ್ತು, ಇಂಧನವೇ ಮುಂತಾದ ಮೂಲೋದ್ಯಮಗಳಿಗೆ ಅಧಿಕ ಪ್ರಾಶಸ್ತ್ಯವನ್ನೀಯುವುದು.

4) ದೇಶದ ಜನಶಕ್ತಿಯನ್ನು ಬಳಸಿಕೊಳ್ಳುವ ಏರ್ಪಾಟನ್ನು ಮಾಡಿ ಹೆಚ್ಚು ಉದ್ಯೋಗವನ್ನು ಕಲ್ಪಿಸಿಕೊಡುವುದು.

5) ಅರ್ಥಶಕ್ತಿಯ ಸಮಾನ ವಿತರಣೆಯ ಮೂಲಕ ವರಮಾನ ಮತ್ತು ಸಂಪತ್ತಿನ ದೃಷ್ಟಿಯಿಂದ ದೂರದಲ್ಲಿ ವ್ಯಾಪಿಸಿರುವ ಅಸಮಾನತೆಯನ್ನು ಕಡಮೆ ಮಾಡಲು ಯತ್ನಿಸುವುದು.

ಧ್ಯೇಯ—ಸಾಧನೆ

ಈ ಧ್ಯೇಯಗಳನ್ನು ಎಷ್ಟು ಮಟ್ಟಿಗೆ ಪೂರ್ತಿಗೊಳಿಸಬಹುದೆಂಬುದನ್ನು ಪರ್ಯಾಲೋಚಿಸುವಾಗ ನಮ್ಮ ಹಿಂದಿನ ಯೋಜನೆಗಳನ್ನು ಇಲ್ಲಿ ನೆನಪಿಸಿಕೊಳ್ಳುವುದು ಅಗತ್ಯವಾಗುವುದು. ಎರಡನೆಯ ಯೋಜನೆಯಲ್ಲಿಯೂ 1956-61ರ ನಡುವಿನ ಐದು ವರ್ಷಗಳಲ್ಲಿ ನೂರಕ್ಕೆ 25ರಷ್ಟು—ಅಂದರೆ ವರ್ಷಕ್ಕೆ 5%ನಂತೆ—ನಮ್ಮ ವರಮಾನ ಹೆಚ್ಚಿತೆಂದು ಸರ್ಕಾರಿ ಮೂಲಗಳಲ್ಲಿ ಸಾರಲಾಗಿದೆ. ಅಂಕೆ-ಸಂಖ್ಯೆಗಳಿಂದ ಸ್ಪಷ್ಟೇ ನಾವು ತೃಪ್ತಿಪಡುವಂತಿಲ್ಲ. ಹಣದ ಲೆಕ್ಕಾಚಾರದಲ್ಲಿ ಸಾಮಾನ್ಯ ಮನುಷ್ಯನ ವರಮಾನದಲ್ಲಿ ಇಷ್ಟು ಹೆಚ್ಚಳವಾಗಿದೆಯೆ? ಆಗಿದ್ದರೂ ಕೂಡ ಅವನ ನಿಜವಾದ ವರಮಾನ ಎಷ್ಟು? ಎಂಬುದನ್ನು ವಿಚಾರಿಸಿದರೆ ಮಾತ್ರ ಅವನ ಮಟ್ಟಿಗೆ ಸುಖೀ ರಾಜ್ಯತ್ವ ಕನಸೇನನಸೇ ಎಂಬುದು ವಿದಿತವಾಗುವುದು. ಈ ಐದುವರ್ಷಗಳಲ್ಲಿಅವನ ವರಮಾನವು ಹೆಚ್ಚಿದಂತೆ ಸಮಾಂತರ ಗಳ ಬೆಲೆಯೂ ಏರುತ್ತಲೇ ಇದ್ದುವರಮಾನದ ಹೆಚ್ಚಳವು ಕಂಡೂ ಕಾಣದಂತಾಗಿದೆ ಆಹಾರ ದವಸಗಳ ಬೆಲೆ ಏರಿದರೆ ಕೂಲಿಯ ಬೆಲೆ ಏರುತ್ತದೆ; ಹೆಚ್ಚು ಕೂಲಿ ಕೊಟ್ಟು ಕೆಲಸಮಾಡಿಸಿದರೆ ಔದ್ಯಮಿಕ ಸರಕುಗಳ ಬೆಲೆ ಏರುತ್ತದೆ; ಬಳಕೆಗಾರನಿಗೆ ಪೇಟೆಯಲ್ಲಿ ಎಲ್ಲ ಸರಕುಗಳೂ ತುಟ್ಟಿ ಎಂದು ಕಾಣುವುದರಿಂದ ಅವನ ಸಂಪತ್ತಿನ ಹೆಚ್ಚುವರಿಯು ಕನಸಿನ ಗಂಟಾಗಿರುವುದು ಇಂದು ದೇಶದ ಪ್ರಜೆಗಳೆಲ್ಲರ ಅನುಭವವೂ ಆಗಿದೆ. ದೇಶದೊಳಗಿನ ಪೇಟೆಯ ಒಂದು ರೂಪಾಯಿಗೆ 20 ಪೈಸೆ ಬೆಲೆ ಕಟ್ಟಬಹುದೋ ಏನೋ. ಆದುದರಿಂದ ವಿಸ್ತೃತವಾಗಿ ಸರಕಾರಿ—ಖಾಸಗಿ ಎರಡು ಕ್ಷೇತ್ರಗಳಲ್ಲೂ ಬಂಡವಾಳದ ಸಂಚಯ ನವು ನಡೆಯುತ್ತಿರುವ ಕಾಲದಲ್ಲಿಯೇ ನೋಟಿನ ಅತಿ ಪ್ರಸರಣದ ಯುಗದಲ್ಲಿಯೇ ಸಾಮಾನ್ಯ ಪ್ರಜೆಯು ಆರ್ಥಿಕ ಮುಗ್ಗಟ್ಟಿನಿಂದ ಬಳಲುತ್ತಿರುವ ದೃಶ್ಯವು ನಮಗೆ ಕಂಡು ಬರುತ್ತಿದೆ.

2) ಆ ಮೂರನೆಯ ಯೋಜನೆಯ ಕರಡು ಈಗ ಒಂದು ವರ್ಷದ ಕೆಳಗೆ ಸಿದ್ಧವಾದಾಗ 1961ರ ಜನಗಣತಿಯ ವರದಿ ಇನ್ನೂಬಂದಿರಲಿಲ್ಲ. ಈ ವರದಿಯಲ್ಲಿ ನಮ್ಮ ಜನ ಸಂಖ್ಯೆ ನಿರೀಕ್ಷೆಗೂ ಮೀರಿಲಾಗಿ ಬೆಳೆದ ಸುದ್ದಿ ಕೇಳುತ್ತೇವೆ. 43 ಕೋಟಿ ಜನರ ಹೊಟ್ಟೆ ತಣಿಸುವಷ್ಟು ಆಹಾರ ಸಾಮಗ್ರಿಗಳನ್ನು ನಾವು ಉತ್ಪಾದಿಸುತ್ತೇವೆ ಎನ್ನುವ ಧೈರ್ಯವೂರಿದೆ? ಅಲ್ಲದೆ 1966ರ ಒಳಗೆ ಇನ್ನು 2½ ಕೋಟಿ ಜನರ ಸಲುವಾಗಿ ಆಹಾರ ಸಿದ್ಧವಾಗ ಬೇಕಾದೀತು. ಅಂತು ಅಮೇರಿಕದ ಗೋಧಿಯೊಂದಲ್ಲವಾದರೆ ಆಹಾರದ ತುಟಾಗ್ರತೆ ನೀಗಿಸುವಂತೆಯೇ ಇಲ್ಲವೇನೋ ಎನಿಸುವ ಕಾಲ ಬಂದಿದೆ. ಕಾಫಿ, ಚಹ, ಸಕ್ಕರೆ, ಸಣಬು—ಪ್ರತಿಯೊಂದರಲ್ಲೂ ನಮ್ಮ ನಿರ್ಯಾತದ ಮಾರುಕಟ್ಟೆಗಳಲ್ಲಿ ತುಂಬ ಸ್ಪರ್ಧೆ ಇರುವಂತೆಯೂ, ಮುಂದಿನದಿನಗಳಲ್ಲಿ ಅದು ಇನ್ನಷ್ಟು ಉಗ್ರವಾಗುವಂತೆಯೂ ತೋರುವುದರಿಂದ ನಿರ್ಯಾತರಂಗದಲ್ಲಿ ಹೆಚ್ಚು ಆಸೆ ಕಟ್ಟಿಕೊಳ್ಳುವುದು ತಪ್ಪಾದೀತು. ಹೊಸ ಔದ್ಯಮಿಕ ನಗರಗಳ ನಿರ್ಮಾಣದಿಂದ ಆಹಾರದವಸಗಳಿಗೆ ಬೇಡಿಕೆ ಹೆಚ್ಚುವುದರಿಂದ ಕೃಷಿ ಮಂಡಲಕ್ಕೆ ಪ್ರೋತ್ಸಾಹ ಸಿಗುವುದು ನಿಜ. ಹೀಗೆಂದು ಕೃಷಿ ಮಂಡಲವನ್ನು ಕೃತಕವಾಗಿ ಉತ್ತೇಜಿಸಲು ನಾವು ಪ್ರಯೋಗಿಸುವ 'ಸಮಾಜ ವಿಕಾಸ' ಇತ್ಯಾದಿ ಯೋಜನೆಗಳು ಗ್ರಾಮಾಂತರದ ಕೆಲವೇ ಮಂದಿ ರಾಜಕೀಯ ಕೈವಾರಿಗಳ ಸ್ವಂತ ಸೊತ್ತಾಗುವುದರಿಂದ ಸರಕಾರ ಕಣ್ಣು ತೆರೆದು ಇಂಥ ಯೋಜನೆಗಳನ್ನು ಸ್ವಾಗತಗೊಳಿಸುವುದು ಉತ್ತಮ ಬೇಸಾಯದ ಉತ್ಪನ್ನಗಳಿಗೆ ಒಳ್ಳೆಯ ಧಾರಣೆಯ ಮಟ್ಟದಷ್ಟು ಉತ್ತಮವಾದ ಉತ್ತೇಜನೆ ಬೇರಿನ್ನೇನು ಬೇಕು? ಧಾರಣೆವಾಸಿ ಸರಿಯಾಗಿರುವಂತೆ ನೋಡಿಕೊಂಡರೆ ಸಾಲದೆ?

(3) ಹಿಂದುಳಿದ ಒಂದು ದೇಶವು ಅಭಿವೃದ್ಧಿ ಮುಖವಾಗಿ ನಡೆಯುವಾಗ ಮೂಲೋದ್ಯಮಗಳಿಗೆ ಪ್ರಾಶಸ್ತ್ಯ ಕೊಡಬೇಕಾದುದು ನ್ಯಾಯೋಚಿತವಾಗಿದೆ ಎಂತಲೆ ನಮ್ಮ ಮೂರನೆ ಯೋಜನೆಯಲ್ಲಿ ಮಹೋದ್ಯಮಗಳಿಗೂ ಅವುಗಳಿಗೆ ನೆರವಾಗುವ ಕಾರ್ಯಗಳಿಗೂ ಒಟ್ಟು 3975 ಕೋಟಿ ರೂಪಾಯಿ ಮೊತ್ತವನ್ನು ಸಂಕಾರವು ತನ್ನ ಕ್ಷೇತ್ರದಲ್ಲಿ ವೆಚ್ಚಮಾಡ ಬೇಕೆಂದು ನಿರ್ಣಯಿಸಿದೆ. ಇದರಲ್ಲಿ ವಿದ್ಯುತ್ತು —925 ಕೋಟಿ
ಉದ್ಯಮ ಖನಿಜಗಳು—1500 ,,
ಸಾರಿಗೆ ಸಂಪರ್ಕ —1450 ,,
ಸರ್ಕಾರಿ ಕ್ಷೇತ್ರದಲ್ಲಿ ಹೂಡಲಾಗುವ 7,250 ಕೋಟಿ ರೂಪಾಯಿಗಳಲ್ಲಿ ಅರ್ಧಕ್ಕೂ ಮಿಕ್ಕಿ ಮೊಬಲಗನ್ನು ಮಹೋದ್ಯಮಗಳ ಸಲುವಾಗಿಯೇ ವಿನಿಯೋಗಿಸಲಾಗುವುದರಿಂದ ನಮ್ಮ ಧ್ಯೇಯಗಳ ನಡುವೆಯೇ ಒಂದು ಸಂಘರ್ಷ ಏರ್ಪಡುವುದಕ್ಕೆ ಕಾರಣವಾಗುತ್ತದೆ ಸರಕಾರಿ ಮತ್ತು ಖಾಸಗಿ ಮಹೋದ್ಯಮಗಳು ಯಂತ್ರಭೂಯಿಷ್ಠವಾದ ಯೋಜನೆಗಳಾದುದರಿಂದ ಜನಶಕ್ತಿಯ ಬಳಕೆ, ಉದ್ಯೋಗದ ವಿಕಾಸದ ಮೇಲೆ ಬಹಳ ಪರಿಣಾಮವಾಗಲಾರದು. ಉದ್ಯೋಗದ ಹೆಚ್ಚುವರಿಯ ದೃಷ್ಟಿಯಿಂದ ಎಂಡನೆಯ ಯೋಜನೆ ಸೋಲನ್ನೊಪ್ಪಿಕೊಳ್ಳ ಬೇಕಾಗಿದೆ. ಇದೇ ರೀತಿ ಮಹೋದ್ಯಮಗಳನ್ನು ನೆಮ್ಮಿದರೆ ಮೂರನೆಯ ಯೋಜನೆಯ ಅಂತ್ಯದಲ್ಲಿಯೂ ನಮ್ಮ ದೇಶದಲ್ಲಿ ನಿರುದ್ಯೋಗ ನಿವಾರಣೆ ಆಗಲಾರದು. ಇದೇ ನಮ್ಮ ಐದನೆಯ ಧ್ಯೇಯಕ್ಕೆ ನಮ್ಮ ಮೂರನೆಯ ಧ್ಯೇಯವು ಅಡ್ಡಿಯಾಗಲಿದೆ. ಎರಡನೇಯ ಯೋಜನೆಯ ಕಾಲದಲ್ಲಿ ದೇಶದಲ್ಲಿ ವ್ಯಾಪಾರ—ವಹಿವಾಟು ಉತ್ತಮ ಮಟ್ಟವನ್ನು ಕಾಯ್ದುಕೊಂಡಿತೆಂಬುದಕ್ಕೆ ಸರ್ಕಾರದ ಮತ್ತು ಖಾಸಗಿ ಕ್ಷೇತ್ರಗಳಲ್ಲಿ ನೂರಾರು ಕಂಪೆನಿಗಳು ಹುಟ್ಟಿಕೊಂಡುದು ಸಾಕ್ಷಿ ಹೇಳಬಹುದು. ಅಂದರೆ ಸಾಂಘಿಕವಾಗಿ ನಮ್ಮ ಸಂಪತ್ತು ಹೆಚ್ಚಿತೆಂದು ತೋರಿದರೂ, ದೇಶದಲ್ಲಿ ಬಂಡವಾಳವು ಅಲ್ಲಲ್ಲಿ ಕೇಂದ್ರೀಕೃತವಾಗುವುದನ್ನು ನೋಡಿದರೆ ಆರ್ಥಿಕ ಸಮಾನತೆಯು ಬಿಸಿಲ್ಗುದುರೆಯಂತೆ ನಮ್ಮ ಎಟುಕಿಗೆ ನಿಲುಕದೆ ಮುಂದೋಡುತ್ತಿದೆ ಎಂದು ತೋರಿದಿರದು. ಒಟ್ಟಿನಲ್ಲಿ ಮಹೋದ್ಯಮಗಳಿಗೇ ನಾವು ನೀಡಿರುವ ಪ್ರಾಶಸ್ತ್ಯದಿಂದಾಗಿ ಮುಖ್ಯವಾಗಿ ನಮ್ಮ ನಿರುದ್ಯೋಗದ ಸಮಸ್ಯೆಯೂ, ಸಾಮಾಜಿಕ—ಆರ್ಥಿಕ ಸಮಾನತೆಯ ಸಮಸ್ಯೆಯೂ ಪರಿಹಾರವಾಗದೆ ಉಳಿಯುವ ಸಂಭವ ತೋರುವುದರಿಂದ ದೇಶದ ಸಾಮಾನ್ಯ ಪ್ರಜೆಗೆ ಸುಖಸಡುವ ದಿನ ಇನ್ನೂ ದೂರವಾಗುವುದು.

ಸಿದ್ಧಿ ಎಂದು?

ಇಂಥ ಅಡಚಣೆಗಳನ್ನೆಲ್ಲ ಮೀರಿ ನಿಲ್ಲುವ ಉತ್ಸಾಹವು ಜನತೆಯಲ್ಲಿ ಉಂಟಾಗ ಬೇಕಾದರೆ ನಾಯಕವರ್ಗವೂ, ಆಡಳಿತ ವರ್ಗವೂ ಧ್ಯೇಯ ನಿರೂಪಣೆ ಮತ್ತು ಸಾಧನೆಯ ವಿಷಯದಲ್ಲಿ ಹೆಚ್ಚಿನ ಪ್ರಾಮಾಣಿಕತೆಯನ್ನೂ ವಿಶ್ವಾಸವನ್ನೂ ತಾವೇ ತೋರಿಸಿ ಮಾರ್ಗದರ್ಶನವನ್ನು ಮಾಡುತ್ತಿರಬೇಕು. ಅಸಮ್ಯಯ, ದುರ್ವ್ಯಯಗಳನ್ನು—ಯಾವ ಕ್ಷೇತ್ರದಲ್ಲಿಯೇ ನಡೆದರೂ—ಕೂಡಲೇ ನಿಷ್ಠುರವಾ ಕ್ರಮಗಳನ್ನು ಕೈಗೊಂಡು ಜನತೆಗೆ ಮೇಲ್ಪಂಕ್ತಿ ಹಾಕಿಕೊಡಬೇಕು. ಜನತೆ ಕೊಟ್ಟಿರುವ ಸುವರ್ಣಸಂದರ್ಭವನ್ನು ಸಿದ್ಧಾರ್ಥತೆಯಿಂದ ಬಳಸಬೇಕು. ಹಾಗೆ ಬಳಸುವುದು ಜನತೆಯ ಕಣ್ಣಿಗೆ ಕಾಣಬೇಕು.

ವಿದ್ಯಾರ್ಥಿಗಳ ಶಿಕ್ಷಣದ ಹೊಣೆ ‡

ತಾಂತ್ರಿಕ ಶಿಕ್ಷಣದ ಪ್ರಾಬಲ್ಯವೇಗ ತೋರುತ್ತಿರುವುದಾದರೂ ಕಲೆ-ವಿಜ್ಞಾನಗಳು ಕಳೆಯೆಂದು ತಿಳಿಯಬಾರದು. ರಾಷ್ಟ್ರಕ್ಕೆ ಡಾಕ್ಟರರೂ ಇಂಜಿನಿಯರರೂ ಬೇಕು; ಆದರೆ, ಅವರಿಂದಲೇ ದೇಶ ಸಜೀವಿತೆ? ನ್ಯಾಯಾಧೀಶರು, ಅಡಳಿತದಾರರು, ವಕೀಲರು, ದಂಡನಾಯಕರು— ಕಲೆ-ವಿಜ್ಞಾನಗಳ ಸರ್ವತೋಮುಖ ಜ್ಞಾನ ಮತ್ತು ವಿಶ್ವವ್ಯಾಪಿ ದೃಷ್ಟಿಯಿಂದಲೇ ನಿರ್ಮಾಣಗೊಳ್ಳುವರು.

ಡಾ| ಟಿ. ಮಾಧವ ಪೈ, ರಿಜಿಸ್ಟ್ರಾರ್.
ಅಕೆಡೆಮಿ ಅಫ್ ಜನರಲ್ ಎಡ್ಯುಕೇಶನ್.

ಡಾ| ಪೈ.

ನಾನು ಈ ಕಾಲೇಜಿನ ಹಳೆಯ ವಿದ್ಯಾರ್ಥಿ; ಇಲ್ಲಿಂದ ನನಗೆ ಬಂದ ಆಮಂತ್ರಣವನ್ನು ಅನುಗ್ರಹವೆಂದು ಪರಿಗ್ರಹಿಸಿ ಬಂದಿದ್ದೇನೆ. ಈ ಸಂಸ್ಥೆಯನ್ನು ಸ್ಥಾಪಿಸಿದ ಸನ್ಯಾಸಿ ಸಂಘದವರು ದೂರದ ಇಟಲಿಯಿಂದ ನಮಗೆ ಅರಿವಿನ ಬೆಳಕನ್ನುಡಲು ಬಂದು ಹಲವು ವರ್ಷಗಳಿಂದ ನಮ್ಮ ಜಿಲ್ಲೆಯ ಬುದ್ಧಿಳ ವಿಕಾಸಕ್ಕೋಸ್ಕರ ಹೆಣಗಿರುವರು. ಇವರ ಪ್ರಯತ್ನದಿಂದಲೇ ನಾನು ಸ್ಫೂರ್ತಿಯನ್ನು ಪಡೆದು ನನ್ನ ಕೆಲವು ಸಂಸ್ಥೆಗಳನ್ನು ಕಟ್ಟಿದ್ದೇನೆ; ಮಂಗಳೂರಿನ ಮತ್ತು ಜಿಲ್ಲೆಯ ಶೈಕ್ಷಣಿಕ—ಆರ್ಥಿಕ ಬೆಳವಣಿಗೆಯಲ್ಲಿ ಆಸಕ್ತಿ ವಹಿಸಿದ್ದೇನೆ. ದೇವರು ಕೊಟ್ಟ ಸಾಧನ ಸಂಪತ್ತಿನ ಸದುಪಯೋಗದಿಂದ ಮಂಗಳೂರು ಭವಿಷ್ಯದಲ್ಲಿ ಭಾರೀ ದೊಡ್ಡ ಕೇಂದ್ರವಾಗಿ ನಮಗೆಲ್ಲ ಹೆಮ್ಮೆಯನ್ನು ತರುವ ನಗರವಾದೀತೆಂಬುದರಲ್ಲಿ ನನಗೆ ಸಂದೇಹವಿಲ್ಲ.

ಇಂದು ನಮ್ಮ ದೇಶದ ಶೈಕ್ಷಣಿಕ ಸಾಕಾಶೆಯಲ್ಲಿ ಮೆಡಿಕಲ್ ಇಂಜನಿಯರಿಂಗ್ ಮುಂತಾದ ತಾಂತ್ರಿಕ ಶಾಲೆಗಳಿಗೆ ಪ್ರಾಧಾನ್ಯ, ಪ್ರೋತ್ಸಾಹ ಅತಿಶಯವಾಗಿ ದೊರೆಯುವಂತೆ ಕಂಡರೆ ಆಶ್ಚರ್ಯವಿಲ್ಲ. ನಾಡಿನ ಸಂಪತ್ತಿಗೆ ಅವಶ್ಯಕವಾದ ತಂತ್ರವಿದ್ಯೆಯನ್ನು ಹೆಚ್ಚು ವಿದ್ಯಾರ್ಥಿಗಳು ಅಳವಡಿಸಿಕೊಳ್ಳಬೇಕೆಂದು ನಾಡಿನ ಯೋಜಕರು ನಿರ್ಣಯಿಸಿದ್ದಾರೆ. ಇದು ನ್ಯಾಯಸಮ್ಮತವಾದ್ದೇ. ಆದರೆ ಇದರಿಂದ ನಮ್ಮ ಆರ್ಟ್ಸ್ ಮತ್ತು ಸೈನ್ಸ್ ಕಾಲೇಜುಗಳ ಭವಿತವ್ಯವು ಮುಗಿಯಿತೆಂದು ತಿಳಿದರೆ ತಪ್ಪಾದೀತು. ಡಾಕ್ಟರ್ ಇಂಜನಿಯರುಗಳು ಸಮಾಜಕ್ಕೆ ಎಷ್ಟು ಹಿತವಂದಿಗರೋ, ಅಂತೆಯೇ ನಾಳಿನ ಅಡಳಿತದಾರರು, ನ್ಯಾಯಾಧೀಶರು, ವಕೀಲರು ಕೂಡ ಅಗತ್ಯವಾಗಿ ಬೇಕಾದವರೆ ನೀವು ಇಂಥ ಆರ್ಟ್ಸ್-ಸೈನ್ಸ್ ಕಾಲೇಜುಗಳಲ್ಲಿ ಪಡೆಯುವ ಶಿಕ್ಷಣವೇ ಇಂಥ ಜವಾಬುದಾರಿ ಸ್ಥಾನಗಳಿಗೆ ನಿಮ್ಮನ್ನು ಅರ್ಹರನ್ನಾಗಿ ಮಾಡುವುದು. ಮಹಾನ್ ನ್ಯಾಯಾಧೀಶರು, ಅಡಳಿತದಾರರು ಆಗಲಪೇಕ್ಷೆಯುಳ್ಳ ನೀವು ಕಾಯಾ-ವಾಚಾ-ಮನಸಾ ಪರಿಶುದ್ಧತೆಯನ್ನು ಕಾಯ್ದುಕೊಂಡು, ಕಾಲೇಜಿನಲ್ಲಿ ತಕ್ಕ ಸಂಸ್ಕಾರವನ್ನು ಪಡೆದು ಪ್ರಕಾಶಿಸಬೇಕಲ್ಲವೆ?

ನೀವೀಗ ವಿಶ್ವವಿದ್ಯಾಲಯದಲ್ಲಿರುವುದರಿಂದ ನಿಮ್ಮ ದೃಷ್ಟಿ ವಿಶಾಲವಾಗಬೇಕು, ನಿಶ್ಚತೋವ್ಯಾಪಿಯಾಗಬೇಕು ಎಂಬ ಉದ್ದೇಶದಿಂದ ನಿಮ್ಮ ಯೂನಿಯನ್ ಸಂಘಟಿತವಾಗಿದೆ ಎಂದು ನಾನು ತಿಳಿದಿದ್ದೇನೆ. ಪರಸ್ಪರ ಚರ್ಚೆ, ವಿಚಾರ ವಿನಿಮಯ, ಹೃದಯ ಸಂಪರ್ಕ ಮುಂತಾದ ಗುಣಗಳನ್ನು ಬೆಳೆಯಿಸುವ ಯೂನಿಯನ್ ಚಟುವಟಿಕೆಗಳಿಂದ ನಿಮ್ಮ ವಿದ್ಯಾರ್ಥಿ ಜೀವನವು ಫಲಕಾರಿಯಾಗಿ ವಿಕಸಿಸುವುದೆಂಬ ವಿಶ್ವಾಸ ಉಳ್ಳವನು ನಾನು. ಆದುದರಿಂದಲೇ ನಿಮ್ಮ ಆಮಂತ್ರಣಕ್ಕೆ ನಾನು ಕೃತಜ್ಞನು. ನಿಮ್ಮ ಚಟುವಟಿಕೆಗಳ ದೆಸೆಯಿಂದ ನೀವು ಗುರುಹಿರಿಯರಲ್ಲಿ ವಿಧೇಯತೆಯನ್ನೂ, ಜೀವನದಲ್ಲಿ ಸಂಯಮವನ್ನೂ, ಬುದ್ಧಿಯಲ್ಲಿ ತಿದ್ದಿಕೆಯನ್ನೂ ಹೊಂದಿಸಿಕೊಳ್ಳುವ ಪ್ರಯತ್ನವನ್ನು ವೀಕ್ಷಿಸುವುದೇ ಒಂದು ಸೌಭಾಗ್ಯ. ಎಲ್ಲರಲ್ಲಿಯೂ ದೊಡ್ಡವರಾಗಬೇಕೆಂಬ ಹಂಬಲ ಮಾತ್ರವಲ್ಲ ದೊಡ್ಡವರಾಗಬಲ್ಲ ಶಕ್ತಿಯೂ ಇದೆ ಎಂದು ನನ್ನ ನಂಬಿಕೆ. ಆದರೆ ಇದಕ್ಕೆ ಸರಿಯಾದ ಅವಕಾಶ, ಸಂದರ್ಭ, ಸಂಸ್ಕಾರ ದೊರೆಯದೆ ಎಷ್ಟೋ ಸಾರಿ ದೊಡ್ಡತನವು ಪ್ರಕಟವಾಗದೆ ಅಡಗಬಹುದು. ಮನುಷ್ಯನ ದೊಡ್ಡತನವನ್ನು ಕುದುರಿಸುವ, ತಿದ್ದುವ ಈ ಶಿಕ್ಷಣ ಸಂಸ್ಥೆಗಳ ಪಾತ್ರ ಬಹಳ ಮಹತ್ತರವಾದುದು

ನಮಗೆ ಸ್ವಾತಂತ್ರ್ಯ ದೊರೆತ ತರುವಾಯ ಸಮಾಜದಲ್ಲಿಯೂ, ವಿದ್ಯಾರ್ಥಿಗಳಲ್ಲಿಯೂ ಸ್ವಾತಂತ್ರ್ಯದ ಪ್ರವೃತ್ತಿಯ ಸ್ವಚ್ಛಂದ ವೃದ್ಧಿಯಾಗಿ ವಿಕಾರ ಪಡೆದುದನ್ನು ನಾವೆಷ್ಟೋ ಸಾರಿ ನೋಡಿದ್ದೇವೆ. ಯುವಕರಿಗೆ ಸರಿಯಾದ ಮಾರ್ಗದರ್ಶನ ದೊರೆಯದೆ ಹೀಗಾಯಿತು. ವಿದ್ಯಾರ್ಥಿಗಳಿಗೆ ತಮ್ಮ ಉಪಾಧ್ಯಾಯರ ಮೇಲೆ ಭಕ್ತಿ—ವಿಶ್ವಾಸಗಳಿರುವಲ್ಲಿ ಶಿಕ್ಷುಗೇಡಿತನದ ಸಮಸ್ಯೆಯೇ ಉದ್ಭವವಾಗುವುದಿಲ್ಲ. ಸ್ವಾತಂತ್ರ್ಯವೆಂದರೇನು? ಎಂಬ ಪ್ರಶ್ನೆಗೆ ಸರಿಯಾದ ಉತ್ತರ ದೊರೆಯಬೇಕಾದರೆ ಅನುಭವಸ್ಥರಾದ ನಿಮ್ಮ ಪ್ರಾಧ್ಯಾಪಕರ ನೆರವು ಬೇಕೇಬೇಕು. ಜೀವನವೆಂಬ ಸಾಗರದಲ್ಲಿ ನಿಮ್ಮ ಪ್ರಾಧ್ಯಾಪಕರು ದಿಕ್ಸೂಚಿಗಳಂತೆ ನಿಮ್ಮ ಬದುಕನ್ನು ಸರಿಯಾದ ದಾರಿಯಲ್ಲಿ ನಡೆಯಿಸಬಲ್ಲರು, ಅವರ ಜೀವನ ನಿಮ್ಮ ಅಭ್ಯುದಯಕ್ಕೆ ಮಿಸಲು, ನಿಮ್ಮ ಉನ್ನತಿಯನ್ನೇ ಬಯಸುತ್ತಾ ಹೆಗಲಿರುಳು ಯುವ ಜನರ ಹಿತಚಿಂತನೆಯನ್ನು ಮಾಡುತ್ತಾ ಜೀವನಯಾತ್ರೆ ಮಾಡುವ ನಿಮ್ಮ ಪ್ರಾಧ್ಯಾಪಕರಲ್ಲಿ ನೀವು ಆದರ ವಿಶ್ವಾಸಗಳನ್ನು ತೋರಿಸದಿದ್ದರೆ ಕೃತಘ್ನರಾದೀರಿ. ಇತ್ತೀಚೆಗೆ ನಾವು ದೇಶದಲ್ಲಿ ಎಷ್ಟೋ ಕಡೆ ವಿದ್ಯಾರ್ಥಿಗಳು ಶಿಕ್ಷುಗೇಡಿಗಳಾಗಿ ವರ್ತಿಸಿದ ಅವಮಾನಕರ ವಾರ್ತೆಯನ್ನು ಕೇಳುತ್ತಿದ್ದೇವೆ. ಇದಕ್ಕೆ ಗುರುಹಿರಿಯರಲ್ಲಿ ಭಕ್ತಿಯು ಲೋಪವಾಗಿರುವುದೇ ಕಾರಣ. ಪುಣ್ಯವಶಾತ್ ಈ ದುಃಶ್ಯಕ್ತಿಗಳನ್ನು ನಮ್ಮ ಜಿಲ್ಲೆಗೆ ಕಾಲಿಟ್ಟಿಲ್ಲ. ಇಲ್ಲಿ ನಾವು ಸತ್ಪ್ರಸಿದ್ಧಪರಂಪರೆಯನ್ನು ಕಾಯ್ದುಕೊಂಡು ಪರೀಕ್ಷೆಗಳಲ್ಲಿಯೂ, ಬದುಕಿನ ಇತರ ರಂಗಗಳಲ್ಲಿಯೂ, ಉತ್ತಮ ವರ್ಗದಲ್ಲಿಯೇ ಪಾಸಾಗುತ್ತಿದ್ದೇವೆಂಬುದಕ್ಕೆ ನಿಮ್ಮ ಸಂಸ್ಥೆಯನ್ನೆತ್ತಿ ಹೇಳಬಹುದು. ಗುರುಗಳಿಗೂ ಹಿರಿಯರಿಗೂ ತಗ್ಗಿ ನಡೆಯುವುದು ಭಾರತೀಯನ ಪ್ರಥಮ ಕರ್ತವ್ಯ; ಈ ಸಂಪ್ರದಾಯವನ್ನು ಪಾಲಿಸಿದಲ್ಲಿ ಯಾವ ಕಾಲಕ್ಕೂ ನಮ್ಮ ಅಭ್ಯುದಯಕ್ಕೆ ಚ್ಯುತಿ ಬರಲಾರದು.

ಮೊದಲಾಗಿ ಮಾತಾಡಿದ ನಿಮ್ಮ ಅಧ್ಯಕ್ಷರು ನೀವು ಯೂನಿಯನ್ ನಡೆಸುವ ಸಭೆಗಳಿಗೆ ಅಧಿಕ ಸಂಖ್ಯೆಯಲ್ಲಿ ಹಾಜರಿದ್ದು ಪ್ರೋತ್ಸಾಹಿಸಬೇಕೆಂದು ಕೋರಿದರು. ನಿಮ್ಮ ಯೂನಿಯನ್ ಸಭೆಗಳ ಬಗ್ಗೆಯೇ ನೀವು ನಿರುತ್ಸಾಹಿಗಳಾದರೆ ನಿಮ್ಮ ಜೀವನದ ಹಲವು ಸಮರಂಭಗಳನ್ನು ಅದು ಹೇಗೆ ಮೆಚ್ಚುವಿರೋ ನನಗೆ ತಿಳಿಯದು. ನಿಮ್ಮ ರಚನಾತ್ಮಕ ಸಲಹೆಗಳನ್ನು ನೀವು ಕೊಡಲಂಜಿದರೆ ದೇಶದ ಗತಿ ಏನಾಗಬೇಕು? ದೇಶದ ಶಾಸನ ಸಭೆಗಳಲ್ಲೂ, ಸಂಸತ್ ಸಭೆಗಳಲ್ಲೂ ಹೋಗಲು ತರಬೇತಿ ಪಡೆಯುವ ನೀವುಗಳೇ ಈಗ ಬಾಯಿಗೆ ಬೀಗ ಹಾಕಿ ಕೂತರೆ ಮುಂದೆ ಅಲ್ಲಿಗೆ ಹೋದ ಮೇಲೇನು ಮಾಡುವಿರಿ? ನಾಡಿನ ಸಂಸ್ಕೃತಿಯ ಭಾರವನ್ನೂ, ನಾಯಕತ್ವದ ಹೊಣೆಯನ್ನೂ ನಿರ್ವಹಿಸಬೇಕಾದ ನೀವು ಈಗಿನಿಂದಲೇ ನಿಮ್ಮ ಹೊಣೆಯನ್ನರಿತುಕೊಳ್ಳಬೇಡವೆ? ಎತ್ತ ತಿರುಗಿದರೂ ಈ ಆರ್ಟ್ಸ್, ಸೈನ್ಸ್ ಪದವೀಧರರಿಂದ ಏನು ಪ್ರಯೋಜನವೆಂದು ನಿರಾಶಾವಾದದ ಸೊಲ್ಲು ಇತ್ತಿತ್ತ ನಮಗೆ ಕೇಳಬರುತ್ತಿದೆ. ಅದಕ್ಕೆ ನನ್ನ ಉತ್ತರವಿಷ್ಟೆ. ದೇಶಕ್ಕೆ ಡಾಕ್ಟರರು, ಇಂಜಿನಿಯರುಗಳು ಮಾತ್ರ ಬೇಕಾದವರಲ್ಲ. ಪ್ರಧಾನಿ ಬೇಡವೆ, ನ್ಯಾಯಮಾತರು ಬೇಡವೆ, ನ್ಯಾಯ ನಿರ್ಮಾತೃಗಳು ಬೇಡವೆ, ದಂಡ ನಾಯಕರು ಬೇಡವೆ? ಈಗಿರುವ ಇವರೆಲ್ಲ ಡಾಕ್ಟರುಗಳೇ ಇಂಜಿನಿಯರರೇ, ಬರಿಯ ಪದವೀಧರರೆ ಎಂಬುದನ್ನು ನಾವು ಪರಿಶೀಲಿಸಬೇಕು. ನಮ್ಮ ನಾಡಿನ ಮಹಾ ಪ್ರಧಾನಿಗೆ ಸರಿಸಮಾನವಾದ ಒಬ್ಬ ಮನುಷ್ಯನನ್ನು ನಿಮ್ಮ ಕಾಲೇಜಿನಲ್ಲೇ ತರಬೇತು ಪಡಿಸಿದರೆ ಏನನ್ನುವಿರಿ? ದೇಶದಲ್ಲಿರುವ ಬುದ್ಧಿವಂತ ವಿದ್ಯಾರ್ಥಿಗಳ ಬುದ್ಧಿ—ಮನಸ್ಸು—ಹೃದಯಗಳನ್ನು ಪರಿಣತಗೊಳಿಸುವ ಇಂಥ ಶಿಕ್ಷಣಾಲಯಗಳು ಧನ್ಯ ಸಂಸ್ಥೆಗಳು!

ನಮ್ಮ ದೇಶದಲ್ಲಿ ಬುದ್ಧಿವಂತ ವಿದ್ಯಾರ್ಥಿಗಳಿಗೇನೂ ಕೊರತೆ ಇಲ್ಲವಾದರೂ, ಸಾಮಾನ್ಯ ಮಟ್ಟದವರೂ, ದಡ್ಡರೆನಿಸಿಕೊಂಡು 'ಥರ್ಡ್ ಕ್ಲಾಸ್' ಪಡೆಯುವವರು ಬಹು ಜನರಷ್ಟೆ. ಇಂಥ ದಡ್ಡರನ್ನೂ ನಾವು ತಿರಸ್ಕರಿಸಿಬಿಡಬಾರದು. ಉದಾಹರಣೆಗೆ ನನ್ನ ಎಕ್ಯಾಡಮಿಯ ಮೆಡಿಕಲ್ ಮತ್ತು ಇಂಜನಿಯರಿಂಗ್ ಕಾಲೇಜುಗಳಲ್ಲಿ ನಾವು ಸಾಮಾನ್ಯವಾಗಿ 45% ದೊರೆತ ಯಾವ ವಿದ್ಯಾರ್ಥಿಗೂ ಸ್ವತಂತ್ರ ಅರ್ಹತೆಯನ್ನು ಕಲ್ಪಿಸಿದ್ದೇವೆ. ಫಸ್ಟ್‌ಕ್ಲಾಸ್ ದೊರೆತವರೆಲ್ಲರೂ ಸರ್ಕಾರದ ತಾಂತ್ರಿಕ ಕಾಲೇಜುಗಳಿಗೆ ಪ್ರವೇಶಬಯಸಿದರೆ ನಿಮ್ಮ ಜನರಲ್ ಆರ್ಟ್ಸ್-ಸೈನ್ಸ್ ಕಾಲೇಜುಗಳಿಗೆ ಮೂರನೆಯ ವರ್ಗದವರೇ ಗತಿಯಲ್ಲವೆ? ಆದರೆ ಇದರಿಂದ ನಾವು ಎದೆಗುಂದುವ ಅವಶ್ಯವಿಲ್ಲವೆಂದು ನಾನು ಧೈರ್ಯ ಹೇಳಬಲ್ಲೆ. ಈ ಸಾರಿ ನಮ್ಮ ಫಲಿತಾಂಶವನ್ನಷ್ಟು ನಿಮಗೆ ಹೇಳಿದರೆ ನಂಬಿಕೆಯಾದೀತು! ಮಣಿಪಾಲದ ಇಂಜನಿಯರಿಂಗ್ ಕಾಲೇಜಿನಲ್ಲಿ 85% ವಿದ್ಯಾರ್ಥಿಗಳು ಪಾಸಾಗಿದ್ದಾರೆ. ಮೆಡಿಕಲ್ ಕಾಲೇಜನಲ್ಲಿ 78%, ಲಾ ಕಾಲೇಜಿನಲ್ಲಿ 95% ಇವರಲ್ಲಿ ನೂರಕ್ಕೆ ತೊಂಭತ್ತೊಂಭತ್ತು ಜನರನ್ನೂ ನೀವು 'ದಡ್ಡ'ರೆಂದು ಬೇರೆ ಕಡೆ ವಿಸರ್ಜಿಸಿರಬಹುದು, ಬೇಡವೆಂದಿರಬಹುದು. ನಾವು ಅವರಲ್ಲಿ ಪ್ರತಿ ಒಬ್ಬನಿಗೂ ವೈಯಕ್ತಿಕವಾದ ಆಸಕ್ತಿ ತೋರಿಸಿ, ದುಡಿದು, ವಿಶ್ವವಿದ್ಯಾಲಯವು ಅವನಿಗೆ ಪದವಿಯನ್ನು ಕೊಡಬೇಕಾದ ಅರ್ಹತೆಯನ್ನು ಅವನಲ್ಲಿ ಸ್ಥಾಪಿಸುತ್ತಿದ್ದೇವೆ. (ಪಶ್ಚಿಮ ದೇಶದ ಕಾಲೇಜುಗಳಲ್ಲಿ ಯಾವ ವಿದ್ಯಾರ್ಥಿಯೂ ಅವನ ಪಾಠದ ಕೆಲಸಗಳನ್ನು ಮಾಡದೆ ಮನೆಗೆ ಹೋಗುವಂತಿಲ್ಲವೆಂಬುದನ್ನು ನಾವು ಇಲ್ಲಿ ಜ್ಞಾಪಿಸಿಕೊಳ್ಳಬೇಕು; ಪ್ರತಿ ವಿದ್ಯಾರ್ಥಿಗೂ ಅಲ್ಲಿ ಪ್ರಾಧ್ಯಾಪಕರ ನಿಕಟ ಸಂಪರ್ಕವಿರುವುದನ್ನೂ ನಾನು ಕಂಡಿದ್ದೇನೆ). ನಮ್ಮ ವಿದ್ಯಾ ಪ್ರವಾಸಕ್ಕೆ ಹೊರಡುವ ನಾಲ್ಕು ಕೋಟಿ ವಿದ್ಯಾರ್ಥಿಗಳಲ್ಲಿ, ಹೈಸ್ಕೂಲು ಮಟ್ಟಕ್ಕೆ ಬರುವಾಗ 1½ ಕೋಟಿ ವಿದ್ಯಾರ್ಥಿಗಳೂ, ಕಾಲೇಜು ಮಟ್ಟದಲ್ಲಿ ಬರಿಯ 9 ಲಕ್ಷ ವಿದ್ಯಾರ್ಥಿಗಳೂ ಉಳಿಯುವುದನ್ನು ಗಮನಿಸಿದರೆ ಈ ವಿದ್ಯಾರ್ಥಿಗಳ ಬಗ್ಗೆ ನಮ್ಮ ಘೋರಣೆಯ ಬದಲಾಗ ಬೇಕಾದ ಅಗತ್ಯವು ನಿಮಗೆ ಕಂಡು ಬಂದೀತು ಕಡಮೆ ಸಂಖ್ಯೆಯಲ್ಲಿರುವ ಇವರನ್ನು ನಾವು ಕಳಪೆಯೆಂದು ತಿರಸ್ಕರಿಸಿದರೆ ನಾಡಿನ ಗತಿ ಏನಾಗಬೇಕು? ನಾಲ್ಕು ತೋಟ ಜನರ ಪೈಕಿ ಮಧಿಸಿತೆಗೆದ ಈ ಕೆನೆಯೂ 'ಥರ್ಡ್ ಕ್ಲಾಸ್' ಎನಿಸುವುದಾದರೆ ನಮಗೆ ಬೇಕಾದ ಫಸ್ಟ್ ಕ್ಲಾಸುಗಳು ಎಲ್ಲಿದ್ದಾರೆ? ವಿದ್ಯಾರ್ಥಿಗಳು ಅಧ್ಯಾಪಕರೆಡೆಗೆ ನಿಕಟವಾದ ಸ್ನೇಹ, ವಿಶ್ವಾಸಗಳನ್ನಿಟ್ಟುಕೊಂಡು, ತಮ್ಮ ಪಾಠದ ಸಮಸ್ಯೆಗಳಿಗೆ ಕಾಲಕಾಲಕ್ಕೆ ಪರಿಹಾರವನ್ನು ಕಂಡುಕೊಳ್ಳುವುದಾದರೆ ಅವರ ಯೋಗ್ಯತೆಗೆ ಯಾವ ಕುಂದೂ ಬಾರದು. ಅಂತೆಯೇ ಪ್ರಾಧ್ಯಾಪಕರೂ ವಿದ್ಯಾರ್ಥಿಗಳ ಜೀವನದಲ್ಲಿ ಬೆರೆತು ಅವರ ಮೇಲೆ ಪ್ರೀತಿಯನ್ನಿಟ್ಟರೆ ಮಧುರ ಸ್ನೇಹದ ನೆರವಿನಿಂದ ನಾವು ಒಂದು ಹೊಸ ಮನ್ವಂತರವನ್ನೇ ನಿರ್ಮಿಸಬಹುದು.

ನಿಮ್ಮ ವಿದ್ಯಾರ್ಥಿ—ಅಧ್ಯಕ್ಷರು ನುಡಿದ ಒಂದು ಮಾತಿಗೆ ನಾನೂ ಬೆಂಬಲ

(ಮುಂದೆ ಪುಟ ನೋಡಿರಿ)

‡ಕಳೆದ ಜುಲೈ 20ರಂದು ಮಂಗಳೂರಿನ ಸೈಂಟ್ ಆಲೋಸಿಯಸ್ ಕಾಲೇಜಿನ ಯೂನಿಯನ್ ಉದ್ಘಾಟನೆಯ ಸಮಯ ಮಾಡಿದ ಭಾಷಣದ ಸಾರಾಂಶ.

ಸಾಹಿತಿ ಮತ್ತು ಬಾಹ್ಯ ಪ್ರೇರಣೆ

ಸಾಹಿತಿಗೆ ದೊರೆಯುವ ಪ್ರೇರಣೆಗಳು ಎರಡು ಬಗೆಗಳವು. ಅಂತಃ ಪ್ರೇರಣೆಯಿಂದ ವೈಯಕ್ತಿಕ ಧ್ವನಿಪ್ರಧಾನವಾದ ಭಾವಗೀತೆಗಳು ಜನ್ಮಗೊಳ್ಳ ಬಹುದು; ಬಾಹ್ಯ ಪ್ರೇರಣೆಯಿಂದ ಧ್ವನಿಪ್ರಧಾನವಾದ ಕೃತಿಗಳನ್ನು ರಚಿಸ ಬಹುದು.

ಶ್ರೀ ಬಿ. ಎಚ್. ಶ್ರೀಧರ, ಎಂ. ಎ.

ಇಂದಿನ ಮನೋವಿಜ್ಞಾನವು ಮನುಷ್ಯನ ಪ್ರಜ್ಞೆಯು ಅಜ್ಞಾತ ಪ್ರಜ್ಞಾಸ್ತರದಿಂದ ಆರಂಭವಾಗಿ ಜ್ಞಾತಪ್ರಜ್ಞಾಸ್ತರದಲ್ಲಿ ಕೊನೆಗೊಳ್ಳುತ್ತದೆ ಎಂದು ಸಿದ್ಧಾಂತಿಸಿದೆ. ಈ ಅಜ್ಞಾತ ಪ್ರಜ್ಞೆಯ ಚಟುವಟಿಕೆಗಳು ಅಜ್ಞಾತ; ಆದರೆ ಅದರ ಪರಿಣಾಮಗಳು ಮನುಷ್ಯನ ವ್ಯಕ್ತಿತ್ವದ ಮೇಲೆ ಆಗುವುದನ್ನು ಮನೋವಿಜ್ಞಾನಿಗಳು ಗುರುತಿಸಬಲ್ಲರು. ಇತರರಂತೆ ಸಾಹಿತ್ಯ ಕಲಾವಿದನೂ ಒಬ್ಬ ವ್ಯಕ್ತಿ. ಅವನಿಗೊಂದು ವಿಶಿಷ್ಟ ವ್ಯಕ್ತಿತ್ವವಿದೆ. ಆ ವ್ಯಕ್ತಿತ್ವಕ್ಕೊಂದು ಮನಃ ಪ್ರವೃತ್ತಿಯಿದೆ,ಚಾರಿತ್ರ್ಯವಿದೆ. ಒಬ್ಬನು ಅಂತರ್‌ಮುಖ ಸ್ವಭಾವದವನಾದರೆ ಇನ್ನೊಬ್ಬನು ಬಹಿರ್ಮುಖನಾಗಿರಬಹುದು.

ಮನುಷ್ಯನ ಅಜ್ಞಾತ ಪ್ರಜ್ಞೆಯು ಅವನ ಕುಲಸಂಸ್ಕಾರದ ಆಕರ. ಅವನ ಜಾಗರಿತ ಅಥವಾ ಜ್ಞಾತ ವ್ಯಕ್ತಿತ್ವಾಂಶಕ್ಕೆ ಸೂರಕವಾಗಿ ಮಾನವ ಸಮಾಜದ ಅನುಭವಗಳ ಸಾರದ ಸುಪ್ತಸಂಸ್ಕಾರವು ಅಜ್ಞಾತ ಪ್ರಜ್ಞೆಯಲ್ಲಿ ಅಡಕವಾಗಿರುತ್ತದೆ. ಸಾಹಿತಿಯೊಬ್ಬನು ಅಂತರ್‌ಮುಖನಾಗಿರಲಿ ಅಥವಾ ಬಹಿರ್ಮುಖನಾಗಿರಲಿ, ತನ್ನ ಬದುಕಿನ ಮತ್ತು ತನ್ನ ಸಹಜೀವಿಗಳ ಬದುಕುಗಳ ತನಗೆ ಗಣ್ಯವೆನ್ನಿಸುವ ಅಂಶಗಳನ್ನು ಕಂಡು ಅರ್ಥಮಾಡಿಕೊಳ್ಳುತ್ತಿರುತ್ತಾನೆ. ಆ ಬಗೆಯ ಅರ್ಥಸಂಗ್ರಹದಲ್ಲಿ ಒಬ್ಬ ಸಾಹಿತಿಯು ಭಾವನೀತಶೀಲನಾದರೆ ಇನ್ನೊಬ್ಬನು ಜಗತ್ಕುಟುಂಬ ಶೀಲನಾಗಿರಬಹುದು. ಎಲ್ಲ ಸಂದರ್ಭದಲ್ಲೂ ಜೀವನವೇ ಸಾಹಿತ್ಯ ಸೌಧದ ತಳಪಾಯ.

ಜೀವನದ ಸುಖ-ದುಃಖ ಪ್ರಜ್ಞೆಯು ಕಲಾತ್ಮಕ ಅನುಕರಣ ಶೀಲವು ಸಾಹಿತಿಯ ಕಲಾಪ್ರಜ್ಞೆಗೆ ಸಹಜ. ಅದರ ಗಣ್ಯವಾದ ಸಂತೋಷಕರ-ಅಸಂತೋಷಕರ ವಸ್ತು, ಪಾತ್ರ, ರಸಗಳ ಸಂದರ್ಭಗಳನ್ನು ಅಥವಾ ಸನ್ನಿವೇಶಗಳನ್ನು ಸಾಹಿತ್ಯ ರೂಪಕ್ಕೆ ತಿರುಗಿಸುವ ಶಕ್ತಿಯೇ ಪ್ರತಿಭೆ. ಪ್ರತಿಭೆಯು ಸ್ಫುರಣಗತಿಯುಳ್ಳದ್ದು. ಪ್ರತಿಭೆಯ ಸ್ಫುರಣಕ್ಕೆಅಥವಾ ಪ್ರಕಾಶಕ್ಕೆ ಬಲವಾದ ಒಂದು ಅಂತಃಪ್ರೇರಣೆ ಅಥವಾ ಬಾಹ್ಯ ಪ್ರೇರಣೆ ಕಾರಣವಾಗುತ್ತದೆ. ಅಂತಃ ಪ್ರೇರಣೆಯು ವೈಯಕ್ತಿಕ ಧ್ವನಿ ಪ್ರಧಾನವಾದ ಭಾವಗೀತೆಗಳಂತಹ ಕೃತಿಗಳನ್ನು ಸಾಹಿತಿಯ ಮೂಲಕ ಹಡೆಯಬಲ್ಲುದಾದರೆ, ಬಾಹ್ಯ ಪ್ರೇರಣೆಯು ಸುತ್ತಲಿನ ಜನರ ಸಾಮೂಹಿಕ ಧ್ವನಿ ಪ್ರಧಾನವಾದ ನಾಟಕಾದಿ ಕೃತಿಗಳನ್ನು ಅವನ ಮೂಲಕ ಹೊರಗೆಡಹಬಲ್ಲುದು.

ಜೀವನಪೊಂದು ಭಾವಸಾಗರ. ಭಾವವೆಂಬುದು ಮನಸ್ಸಿನ ಒಂದು ಅವಸ್ಥೆ. ಅಂಥ ಒಂದು ಇಡಿ ಅವಸ್ಥೆಯಲ್ಲಿಇಚ್ಛೆ—ಭಾವನೆ-ಬುದ್ಧಿಗಳ ಅಂಶಗಳು ಸಮರಸವಾಗಿ ಕೂಡಿರುತ್ತವೆ. ತರಂಗಗಳಂತಹ ಭಾವಗಳು ಒಬ್ಬನಲ್ಲಾಗಲಿ ಒಂದು ಜನಸ್ತೋಮದಲ್ಲಾಗಲಿ, ಸಹಕರಿಸಿ ಸಾಗಬಹುದು ಇಲ್ಲವೇ ಅಸಹಕರಿಸಿ ಸಾಗಬಹುದು ಹಾಗೆ ಅವು ಅಸಹಕರಿಸಿದಾಗ ಭಾವಸಂಘರ್ಷ ಅಥವಾ ಭಾವಗಳ ದ್ವಂದ್ವಯುದ್ಧ ಉಂಟಾಗುತ್ತದೆ. ಅದರ ಫಲವಾಗಿ ಮಹಾ ಕಲ್ಪನೆಗಳು ಉದಯಿಸುತ್ತವೆ. ಅವೇ ಸಾಹಿತಿಗೆ ಸಿಗುವ ಬಾಹ್ಯ ಪ್ರೇರಣೆಗಳು. ಫ್ರೆಂಚ್ ಕ್ರಾಂತಿಯಿಂದ ಸಮಾನತೆ, ಸ್ವಾತಂತ್ರ್ಯ ಮತ್ತು ಸೋದರ ಭಾವಗಳೆಂಬ ಮಹಾ ಕಲ್ಪನೆಗಳು ಹುಟ್ಟಿದರೆ, ಭಾರತದಲ್ಲಿಯ ಬ್ರಿಟಿಷರ ದಬ್ಬಾಳಿಕೆಯಿಂದ ದೇಶಭಕ್ತಿಯು ವಿವಿಧ ಮಹಾ ಕಲ್ಪನೆಗಳೊಡನೆ ನವಜೀವನದಿಂದ ಉದಯಿಸಿ ಅನೇಕಹಿಮಾಚಲ ವ್ಯಾಪಿಸಿತು.

ಸಾಶ್ಚಾತ್ಯರ ಸಂಪರ್ಕದಿಂದ ಭಾರತದ ದೇಶಭಕ್ತಿಯ ಮಹಾ ಪ್ರವಾಹದಲ್ಲಿ ಫ್ರೆಂಚ್ ಕ್ರಾಂತಿಯ ಮಹಾ ಕಲ್ಪನೆಗಳೂ ಸೇರಿಕೊಂಡವು. ರಶಿಯದಲ್ಲಾದ ಮಾರ್ಕ್ಸ್ ವಾದದ ವಿಜಯವು ಸಾಮ್ಯವಾದದ ಭಾವತರಂಗವನ್ನೂ ಭಾರತಕ್ಕೆ ತಂದು ಸೇರಿಸಿತು. ಜಾಗತಿಕ ಮಹಾ ಯುದ್ಧಗಳೆರಡು ನಡೆದು ವಿವಿಧ ರಾಷ್ಟ್ರಗಳಲ್ಲಿ ಒಂದಾದ ಭಾರತದಲ್ಲೂ ಶಾಂತಿಪ್ರಿಯತೆಯ ಅಲೆಯನ್ನೆಬ್ಬಿಸಿದವು. ದೇಶಭಕ್ತಿಯು ಅಂಗವಾಗಿ ಸತ್ಯ-ಅಹಿಂಸೆಗಳೆಂಬ ಪ್ರಾಚೀನ ಮಹಾ ಕಲ್ಪನೆಗಳು ಮನರುದಯಹೊಂದಿದ್ದಲ್ಲದೆ, ಸ್ವಾತಂತ್ರ್ಯ ಸಾಧನೆಗಾಗಿ ಸತ್ಯಾಗ್ರಹ-ಅಸಹಕಾರಗಳೆಂಬ ನಿಷ್ಕ್ರೀಯ ಪ್ರತೀಕಾರದ ಕಲ್ಪನೆಗಳೂ ಪುಟಿದೆದ್ದವು. ಆಂಗ್ಲರ ಸಾರ್ವಭೌಮ ಆಡಳಿತದ ಅಂತಃಸಟೆದಾಣೆಗೆ ಭಾರತೀಯರ ದೃಷ್ಟಿಹರಿದು ಅವರ ಮತ್ತು ಅವರ ಮಿತ್ರರಾಷ್ಟ್ರಗಳಲ್ಲಿಯ ಪ್ರಜಾಪ್ರಭುತ್ವ ಕಲ್ಪನೆ ಕೂಡ ಇತ್ತ ಹಾಯ್ದಿತು. ಹೀಗೆ ಮಹಾ ಕಲ್ಪನೆಗಳ ವಿವಿಧ ತರಂಗಗಳು ಕಳೆದ ೪೩ ವರ್ಷಗಳ ಐತಿಹಾಸಿಕ ಅವಧಿಯಲ್ಲಿ ಭಾರತೀಯರ ಜೀವನದ ಭಾವಸಾಗರದಲ್ಲಿ ಬಹು ಎತ್ತರಕ್ಕೆ ಎದ್ದು ಪ್ರೇರ್ಯಕೈದಯವುಳ್ಳ ಭಾರತೀಯ ಸಾಹಿತಿಗಳ ಮಾನಸತಟಗಳನ್ನು ಬಡಿದಪ್ಪಳಿಸಿದವು. ಬೇರೆ ಬೇರೆ ಬಗೆಯ ಅನುಭವಗಳ ಹಿನ್ನೆಲೆಯುಳ್ಳ ಸಾಹಿತಿಗಳು ಬೇರೆ ಬೇರೆ ಮಹಾ ಕಲ್ಪನೆಗಳನ್ನು ತಮ್ಮ ಹೃದಯ ಮಂದಿರಕ್ಕೆ ಸ್ವಾಗತಿಸಿದರು.

ರಸಾಸ್ವಾದದ ಮನೋವೈಜ್ಞಾನಿಕ ಸೂತ್ರದಲ್ಲಿ ರಸಾನುಭೂತಿಯ ಕ್ಷಣದಲ್ಲಿ ರಸಿಕನಿಗೆ ತನಗಾಗುತ್ತಿರುವ ಅನುಭವವು

(ಮುಂದೆ ಪುಟ ನೋಡಿರಿ)

ಸ್ವತಂತ್ರ ಭಾರತದ

ಬೆಂಗೋಲಿನಂತಿರುವ

ಸಹಸ್ರಾರು ಉಳಿತಾಯಗಾರರ

ಸೇವೆಗಾಗಿ

ಕೊಪ್ಪೋರೇಶನ್ ಬೇಂಕ್

ಭಾರತ ಸ್ವಾತಂತ್ರ್ಯ ದಿನಾಚರಣೆಯ ಈ ಶುಭ ದಿನದಂದು

ತನ್ನನ್ನು

ಸಮರ್ಪಿಸುತ್ತಿದೆ!

ದಿ ಕೆನರಾ ಬೇಂಕಿಂಗ್ ಕೊಪ್ಪೋರೇಶನ್ ಲಿಮಿಟೆಡ್

(ಸ್ಥಾಪನೆ: 1906) (ರಿಜಿಸ್ಟರ್ಡ್ ಆಫೀಸು: ಉಡುಪಿ)

ಆಡಳಿತ ಆಫೀಸು: ಮಂಗಳೂರು—1.

ನಾಡಿನಲ್ಲಿ ನಾಗರಿಕ

ಇದು ಪ್ರಜಾಭುತ್ವದ ಯುಗ; ವ್ಯಕ್ತಿ ಸ್ವಾತಂತ್ರ್ಯದ ಸಮಯ. ಪ್ರಜಾಸತ್ತೆಯಲ್ಲಿ ನಾಗರಿಕನೇ ಶಾಸನಾಧಿಕಾರಿ—ಮತದಾತ. ತನ್ನ ಕರ್ತವ್ಯ ನಿರ್ವಹಣೆಯನ್ನು ಮಾಡಬಲ್ಲ ನಾಗರಿಕನೇ ನಾಡಿನ ಶಕ್ತಿ-ಸಂಪತ್ತು; ಕೀರ್ತಿಕಲಶ.

ಶ್ರೀಮತಿ ಬಿ. ಎಸ್. ಚಂದ್ರಕಲಾ.

ನಾಗರಿಕನು ಯಾರು?

ನಮ್ಮ ಭರತ ಖಂಡದಲ್ಲಿ ನಾಗರಿಕನ ಸ್ಥಾನವೇನು? ಎಂದು ಕೇಳುವ ಮೊದಲು "ನಾಗರಿಕ"ನೆಂದರೆ ಯಾರು? ಎಂಬ ಸಂಶಯ ಏಳುತ್ತೆ. ಸಾಮಾನ್ಯವಾಗಿ ನಾಗರಿಕನೆಂದ ಕೂಡಲೇ ನಮಗೆ ಹೊಳೆಯುವುದು ಮುಂದುವರಿದ ಮಾನವ ಅಂತ. "ಮುಂದುವರಿದ" ಅಂದರೆ ಯಾವುದರಲ್ಲಿ? ಎಂಬ ಪ್ರಶ್ನೆಯು ಹಿಂದೆ ಏಳುತ್ತೆ. ಸಾಶ್ಚಾತ್ಯ ವ್ಯಾಖ್ಯಾನದ ಧಾಳಿಯಲ್ಲಿ ಸಿಕ್ಕಿದವ ಮುಂದುವರಿದವನೇ? ಹೆಸರಿನ ಮುಂದೆ ನಾನಾ ಡಿಗ್ರಿಗಳನ್ನು ನೇತುಹಾಕಿಕೊಂಡು ವಿದ್ಯಾವಂತನೆನ್ನಿಸಿಕೊಂಡಿರುವವ ಮುಂದುವರಿದವನೇ? ಕಲೆಗಾರನೇ? ರಾಜಕಾರಣಿಯೇ? ಸಾಹಿತಿಯೇ ಯಾರು ಮುಂದುವರಿದವರು? ಇವರ್ಯಾರೂ ನಾಗರಿಕರಲ್ಲ. ಆದರೆ ಇವರೆಲ್ಲರೂ ನಾಗರಿಕರೇ! ಅಂದರೆ ದೇಶದ ಪ್ರತಿಯೊಬ್ಬ ಪ್ರಜೆಯೂ ನಾಗರಿಕನೇ; ಅವನೇ ಸಂಶೋಧನೆಯ ಶಾಸಕನೂ ಕೂಡ. ಅದರಲ್ಲೂ ಪ್ರಜಾರಾಜ್ಯದಲ್ಲಿ ಇಂದಿನ ನಾಗರಿಕನ ಮಹತ್ವ ಅಪಾರ. ಅಂತಹವರ ಪ್ರಭಾವವನ್ನರಿಯುವ ಮೊದಲು ಪೂರ್ವಯುಗದ ಮಾನವ, ಅವನ ಸ್ಥಿತಿಗತಿ, ಅವನ ಪೀಳಿಗೆಯಿಂದಾವಿರ್ಭವಿಸಿದ ಜನಾಂಗ, ಈ ಜನಾಂಗದಿಂದುಂಟಾದ ರಾಷ್ಟ್ರ ಮತ್ತು ಈ ರಾಷ್ಟ್ರ—ನಾಗರಿಕರ ನಡುವಿನ ಸಂಬಂಧ ಇತ್ಯಾದಿಯನ್ನರಿಯೋಣ.

ಸಭ್ಯತೆಯ ವಿಕಾಸದ ಮುನ್ನ

ಸೃಷ್ಟಿಯ ಆದಿಯಲ್ಲಿ ಸಭ್ಯತೆಯ ವಿಕಾಸದ ಮುನ್ನ ಮಾನವ ಮೃಗದಂತೆ ವಾಸಿಸುತ್ತಿದ್ದ. ಕೇವಲ ಹೊಟ್ಟೆಹೊರೆಯುವ ಚಿಂತೆ ವಿನಃ ಬಾಕಿ ಯೋಜನೆಗಳು ಅವನಿಗಿರಲಿಲ್ಲ. ಆವನಿಗೆ ಜಾತಿ ಜನಾಂಗಗಳ ಭೇಧವಾಗಲೀ, ವಿದ್ಯಾಬುದ್ಧಿಯ ಮಹತ್ವವಾಗಲೀ, ರಾಜ್ಯ-ಕೋಶಗಳ ಭಾರವಾಗಲೀ ಒಂದರ ಅರಿವೂ ಇರಲಿಲ್ಲ. ನಗ್ನರೂಪದಲ್ಲೋ, ಮೃಗಚರ್ಮ ಹೊದ್ದೋ, ಗೆಡ್ಡೆಗೆಣಸನ್ನು ತಿಂದೋ ವನ್ಯಮೃಗಗಳ ಹಸಿಮಾಂಸವನ್ನೇ ತಿಂದೋ ಅಂತೂ ಜೀವಿಸಿದ್ದರು. ವನ್ಯಮೃಗಗಳ ಹಾವಳಿಯಿಂದ ತಮ್ಮನ್ನು ರಕ್ಷಿಸಿಕೊಳ್ಳಲು ಉಪಯೋಗಿಸುತ್ತಿದ್ದ ಆಯುಧವೆಂದರೆ ಕವಣೆಕಲ್ಲು! ತಾಯಿ-ತಂಗಿ-ಹೆಂಡತಿ ಎಂಬ ಭೇದಭಾವವನ್ನರಿಯದೆ ಸ್ತ್ರೀ ಮಾತ್ರದವಳಲ್ಲಿ ಕ್ರೀಡಿಸುತ್ತಾ ಮಾನವನ ಪೀಳಿಗೆಗೆ ನಾಂದಿಯಾಗಿದ್ದರು!! ಮಾನವ ಪೀಳಿಗೆ ಬೆಳೆಯಿತು. ಜಲ-ವಸತಿ-ಆಹಾರಗಳ ಅಭಾವ ಉಂಟಾಯಿತು. ಹೊಟ್ಟೆಯಲ್ಲಿ ಹಸಿವಿನ ಭೂತ ಅರ್ಭಟಿಸಿದಾಗ ಅವರ ದಪ್ಪ ಮೆದುಳು ಚುರುಕಾಯಿತು. ಆಗ ತನ್ನ ನಿಯಮಿತ ಸ್ಥಳ ತ್ಯಜಿಸಿ ಹೊಸ ನೆಲೆಗಳನ್ನರಿಯುತ್ತಾ ಮಾನವ ಪೀಳಿಗೆ ಗುಂಪು ಗುಂಪಾಗಿ ಕವಲೊಡೆದು ಭೌತಿಕ ಪದಾರ್ಥಗಳಿಗನುಕೂಲವಾದ ಪ್ರದೇಶಗಳನ್ನು ಅನ್ವೇಷಣೆ ಮಾಡುತ್ತಾ ಜಗತ್ತಿನ ನಾನಾ ಭಾಗಗಳಲ್ಲಿ ಪಸರಿಸಿತು. ಹೀಗೆ ಹೊರಟ ಒಂದೊಂದು ಗುಂಪೂ ತಾವು ಅನ್ವೇಷಣೆ ಮಾಡಿದ ಭೂಭಾಗಗಳಲ್ಲಿ ಅನೇಕ ವರ್ಷಗಳ ಕಾಲ ಒಟ್ಟುಗೂಡಿ ನೆಲೆಸಿ ನಿಂತ ಕಾರಣ ಅವರ ವ್ಯವಹಾರದಲ್ಲಿ, ರೀತಿ ನೀತಿಯಲ್ಲಿ, ವೇಶ ಭೂಷಣದಲ್ಲಿ, ತಿನ್ನುವ ಆಹಾರ ಪಾನೀಯಗಳಲ್ಲಿ, ಆಡುವ ಭಾಷೆಯಲ್ಲಿ ಒಂದೇ ರೀತಿಯ ಹೋಲಿಕೆ ಇದ್ದು ಸುಖ ದುಃಖಗಳಲ್ಲಿ, ಧರ್ಮ-ಕರ್ಮಗಳಲ್ಲಿ, ಹಬ್ಬ ಹರಿದಿನಗಳಲ್ಲಿ ಪರಸ್ಪರ ಭಾಗವಹಿಸುತ್ತಾ ಬಂದ ಕಾರಣ ಭಿನ್ನ-ಭಿನ್ನ ಜನಾಂಗ ಅಥವಾ ಜಾತಿ ಎನಿಸಿದವು.

ಜಾತಿ-ಜನಾಂಗ ಎಂದರೇನು?

ಜನಾಂಗ ಅಥವಾ ಜಾತಿ ಎಂದರೆ ನಾವೆಣಿಸುವ ಬ್ರಹ್ಮ, ಕ್ಷತ್ರಿಯ, ವೈಶ್ಯ, ಶೂದ್ರ ನೆಂತಾಗಲೀ, ಕ್ರಿಶ್ಚಿಯನ್-ಮುಸಲ್ಮಾನ್, ಸಿಕ್ಕ, ಹಿಂದೂ ಎಂತಾಗಲೀ, ಸಂಕುಚಿತ ಅರ್ಥದಿಂದೊಡಗೂಡಿರದೆ ಒಂದು ವ್ಯಾಪಕ ಅರ್ಥವುಳ್ಳದ್ದಾಗಿರುತ್ತೆ. ಮೇಲೆ ಹೇಳಿದ ನಾನಾ ಜಾತಿಗಳ ಸಂಘಟನಾ ಸ್ವರೂಪವೇ ಜನಾಂಗವೆನ್ನಿಸಿಕೊಳ್ಳುತ್ತೆ. ಅಂದರೆ ಅಮೇರಿಕನ್ ಜನಾಂಗ, ರಷ್ಯನ್ನರು, ಭಾರತೀಯರು, ಜರ್ಮನೀಯರು ಇತ್ಯಾದಿಗಳೇ ಜಾತಿ ಅಥವಾ ಜನಾಂಗವೆನ್ನಿಸುವುವು.

ರಾಷ್ಟ್ರದ ಆಧಾರಸ್ತಂಭ ನಾಗರಿಕ

ಇಂತಹ ಶಕ್ತಿಶಾಲೀ ಜನಾಂಗವು ಭೌಗೋಳಿಕ ಆರ್ಥಿಕ ರಾಜನೈತಿಕ, ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಐಕ್ಯದಿಂದೊಡಗೂಡಿ, ಪರಕೀಯರ ಅಧಿಕಾರಕ್ಕೆ ಸಿಲುಕದೆ, ತಮ್ಮದೇ ಆದ ಶಾಸನದ ಡಿಯಲ್ಲಿ ಸ್ವತಂತ್ರ ರೂಪದಿಂದ ಆಶ್ರಯಪಡೆದು ಸರ್ವಸಮಾನ ಭಾವನೆಯಿಂದ ಪರಸ್ಪರ ಕಷ್ಟಸುಖಗಳಲ್ಲಿ ಆಪತ್ತು—ವಿಪತ್ತುಗಳಲ್ಲಿ ಪರಸ್ಪರ ಸಹಾನುಭೂತಿಯುಳ್ಳವಂತಾಗಿ ರಾಜ್ಯ ಕಟ್ಟುವರೋ ಆ ದೇಶವೇ ರಾಷ್ಟ್ರವೆನ್ನಿಸಿಕೊಳ್ಳುತ್ತೆ. ಇಂತಹ ರಾಷ್ಟ್ರದ ಆಧಾರ ಸ್ತಂಭವೇ ನಾಗರಿಕ. ನಾಗರಿಕನ ಶಕ್ತಿಯ ಪ್ರತಿಬಿಂಬವೇ ರಾಷ್ಟ್ರ.

ಪ್ರಜೆ ಮತ್ತು ಜನತೆ

ಏಕ ತಂತ್ರವಾದದ ಕಾಲದಲ್ಲಿ ನಾಗರಿಕನಿಗೆ ಯಾವ ಮನ್ನಣೆಯೂ ಇರಲಿಲ್ಲ ಆ ಸಮಯದಲ್ಲಿ ಶಾಸಕ ವ್ಯಕ್ತಿಗಳೇ ಪ್ರಜೆಗಳೆನ್ನಿಸಿಕೊಳ್ಳುತ್ತಿದ್ದರು. ಹಿಂದಿನ ಪ್ರಜೆಗಳೇ, ಇಂದಿನ ಜನತೆ ಅಥವಾ ನಾಗರಿಕ. ಇಲ್ಲಿ ಪ್ರಜೆ ಮತ್ತು ಜನತೆಯಲ್ಲಿರುವ ಭೇದವನ್ನು ಪರಿಗಣಿಸಬೇಕು. 'ಪ್ರಜೆ' ಎಂಬ ಪದವು ಚಕ್ರಾಧಿಪತಿಗಳ ಸಮಯದಲ್ಲಿ ಬಳಸುತ್ತಿದ್ದು ಅದರಿಂದ ದಾಸ್ಯತ್ವದ ಭಾವನೆಯು ಅಭಾವದ ಪ್ರಚೋದನೆಯೂ ಗುತ್ತೆ. 'ಪ್ರಜೆ' ಎಂಬ ಪದದಲ್ಲಿ ಸುಖೀ ಭಾವನೆಯು ಸರ್ವಾಶೇಗೊಂಡಿರಬಹುದು. ಆದರೆ ಅಧಿಕಾರ ಸ್ವಾತಂತ್ರ್ಯವಿಲ್ಲ. ಅದೇ ಜನತೆ ಎಂಬ ಶಬ್ದದಲ್ಲಿ ಸುಖೀ

(೨೩ನೇ ಪುಟ ನೋಡಿರಿ)

For your requirements in:
School and College Books
Books on Current Day Politics and fiction etc.
Stationery and office requisites
Paper and Printers Sundries

The Reputed Firm in South Kanara.

SCHOOL BOOK COMPANY

Book Sellers — Publishers — Stationers

PRINCIPAL PAPER DEALERS

Head Office:
CAR-STREET
MANGALORE
Phone No. 229

Branch Office:
K. S. R. ROAD
HAMPANKATTA,
MANGALORE
Phone: No. 229 A

Distributors for:
The Mysore Paper Mills, Ltd.
BHADRAVATHI
(For S. Kanara & N. Malabar)

Agents of:
Ganges Printing Ink Factory, Ltd.
HOWRAH

ಜ್ಯೋತಿ ಟಾಕೀಸ್,
ಮಂಗಳೂರು.

11-8-61 ರಿಂದ
ವಿಜಯಾರವರ
ಅಮೋಘ ಕನ್ನಡ ಚಿತ್ರ

ಜಗದೇಕವೀರನ ಕಥೆ

N. T. ರಾಮರಾವ್ • **B.** ಸರೋಜಾ ದೇವಿ

ಬರಲಿದೆ—
"ಕೈವಾರ ಮಹಾತ್ಮೆ" (ಕನ್ನಡ)
"ಶಭಾಸ್ ಮಾಪಿಳ್ಳೈ" (ತಮಿಳು)

ಕ್ರಿಯಾ ಸಿದ್ಧಿ

ಧುರೀಣರ ಮುಖದಿಂದುದುರಿದ ಮಾತಿನಂತೆ ನಡೆಯುತಿದ್ದ ಕಾಲವೊಂದಿತ್ತು; ಅದರೆ, ಅದಿಂದಿಗೆ ಗತಕಾಲವಾಗಿದೆ. ಒಂದೆ ಕ್ರಿಯಾಸಿದ್ಧಿಗಳಿಸಿದ ನಾಯಕರಿದ್ದಿದ್ದರೆ, ಇಂದು ಕೇವಲ ವಾಕ್ಸಿದ್ಧಿಗಳಿಸಿದವರು ಮಾತ್ರ ತೋರಿಬರುತ್ತಾರೆ. ಇಂತಹ ಧುರೀಣರು ಪ್ರಜೆಗಳ ಮನಸ್ಸನ್ನು ಹೇಗೆ ಗೆದ್ದುಕೊಂಡರು?

ಶ್ರೀ ತದ್ದಲಸೆ ವಿಘ್ನೇಶ್ವರ ಶರ್ಮಾ.

ಅಗಸ್ಟು ೧೫ ದೇಶಕ್ಕೆ ಸ್ವಾತಂತ್ರ್ಯ ಬಂದ ದಿನ ದೇಶದ ತುಂಬಾ ಅಂದು ಸ್ವಾತಂತ್ರ್ಯೋತ್ಸವ ಸಂಭ್ರಮದಿಂದ ನಡೆಸಲಾಗುತ್ತಿದೆ. ಸ್ವಾತಂತ್ರ್ಯ ಸಂಪಾದನೆಯ—ಸ್ವಾತಂತ್ರ್ಯ ಸಮರದ ಕುರಿತಾಗಿಯೂ—ಸ್ವಾತಂತ್ರ್ಯದಿಂದ ನಾವು ಕಾಣಬಯಸಿದ ಭವ್ಯ ಭವಿಷ್ಯತ್ತಿನ ಬಗ್ಗಾಗಿಯೂ ವಿಚಾರ ನಡೆಯುತ್ತದೆ. ದೇಶದ ಆಗುಹೋಗುಗಳ ಅಳತೆಯನ್ನೂ ಮಾಡಲಾಗುತ್ತದೆ. ಇದು ಆ ದಿನದ ಒಂದು ವಿಧಿ ನಿಯಮ.

ಈ ನಿಯಮ ಪಾಲನೆಯಲ್ಲಿಯೂ ನಮ್ಮ ಮನೋಧರ್ಮ ಬದಲಾಗ ತೊಡಗಿದೆ. ಆರಂಭದಲ್ಲಿ ಇರುವ ಉತ್ಸಾಹ, ಸ್ಫೂರ್ತಿಗಳು ಇಂದು ಕುಗ್ಗ ತೊಡಗಿವೆ. ದೇಶದ ಉತ್ಸವ, ಕಾರ್ಯಗಳು ಕೇವಲ ರಾಜಕೀಯಕ್ಕೆ ಮಾತ್ರ ಸಂಬಂಧಿಸಿದ್ದು ಎನ್ನುವ ಮಟ್ಟಿಗೆ ಜನತೆಯ ಭಾವನೆಯಾಗುತ್ತಿದ್ದುದು ಕಂಡು ಬರುತ್ತಿದೆ.

ಹಿಂದೆ ಸ್ವಾತಂತ್ರ್ಯ ಸಂಪಾದನೆಯಲ್ಲಿ "ದೇಶಕ್ಕಾಗಿ ದುಡಿಯಬೇಕು, ಇಲ್ಲವೇ ಮಡಿಯಬೇಕು" ಎನ್ನುವ ಸ್ಫೂರ್ತಿ ಇಡಿ ದೇಶವ್ಯಾಪಿಯಾಗಿದ್ದಿತು. ದೇಶಕ್ಕಾಗಿ ದುಡಿಯುವದು ತನಗಾಗಿಯೇ ದುಡಿಯುವದು ಎನ್ನುವಂತೆ ತಿಳಿಯಲಾಗಿತ್ತು. ಹಾಗಾಗಿ ಸತ್ವಶಾಲಿಯಾದ ಆ ಸಮರಕ್ರಿಯೆ ಸಿದ್ಧಿಯನ್ನು ತಂದಿತು.

ಆದರೆ ಸ್ವಾತಂತ್ರ್ಯ ಸಿದ್ಧಿಯಾಯಿತೇ ವಿನಃ ಸಮೃದ್ಧಿಯ ಸಾಧನೆ ಸಾಕಷ್ಟು ಮುಂದುವರಿಯಲಿಲ್ಲ ನಿಧಾನವಾಗುತ್ತಲಿವೆ. ಇದಕ್ಕೆ ಕಾರಣವೇನು ಎನ್ನುವುದು ಮಾತ್ರ ತಿಳಿಯುವುದೂ, ಹೇಳುವುದೂ ಕಷ್ಟದ ಕೆಲಸ. ಹಿಂದೆ ಸ್ವಾತಂತ್ರ್ಯ ಗಳಿಸುವಾಗ ಮುಖಂಡರ ಹೇಳಿಕೆಯಂತೆ ಇಂದೂ ಮುಖಂಡರ ಹೇಳಿಕೆ, ಕೇಳಿಕೆಗಳಿವೆ. ಆದೇಶ-ನಿರ್ದೇಶನಗಳಿವೆ. ಆದರೂ ಯಾಕೋ ದೇಶದ ಯೋಜನೆ, ಕ್ರಿಯೆ, ಕಾರ್ಯಗಳೆಲ್ಲ ಒಂದು ನಾಟಕೀಯವಾಗಿ ನಡೆಯುತ್ತಿದೆಯೇ ಹೊರತು ಜನತೆಯ ಅಂತರಂಗವನ್ನು ಕೆರಳಿಸಿ ಕೆಚ್ಚನಿಂದ ಮುನ್ನುಗ್ಗಿಸುತ್ತಿಲ್ಲ.

ಹಿಂದೆ ಸ್ವಾತಂತ್ರ್ಯ ಸಮರದಲ್ಲಿ—ಉಪ್ಪಿನ ಸತ್ಯಾಗ್ರಹ, ಜಂಗಲ ಕಾಯಿದೆ ಭಂಗ ಇದರಲ್ಲಿ ದೇಶದ ಧುರೀಣರು ಒಂದು ಆದೇಶಕೊಟ್ಟು ನಿರ್ದೇಶನ ಮಾಡಿದರೆ ಸಾಕು. ದೇಶಕ್ಕೆ ದೇಶವೇ ಜಾಗ್ರತವಾಗಿ ಧುಮುಕುತ್ತಿತ್ತು. ನಾವು-ನೋವುಗಳ ಪರಿವೆ ಇಲ್ಲದೇ ಲಾಠಿ ಏಟುಗಳ ಗಣನೆಯಿಲ್ಲದೇ "ಭಾರತ ಮಾತಾಕೀ ಜೈ" ಎಂದು ವೀರ ಗರ್ಜನೆ ಮಾಡುತ್ತ ಸಾಗುವ ಆ ಧೈರ್ಯ, ಹುಮ್ಮಸ್ಸು ಈಗೆಲ್ಲಿ ಅಡಗಿ ಹೋಯಿತೋ ತಿಳಿಯುವದೇ ಇಲ್ಲ.

ಅಂದಿನ ವಿಚಾರವನ್ನು ನಾವಿಂದು ಮಾಡುತ್ತ ಕುಳಿತರೆ ನಮಗೇ ಆಶ್ಚರ್ಯವಾಗುತ್ತದೆ. ಹೇಗೆ ಆ ಮನೋಭಾವ ಬೆಳೆಯಿತೆಂಬುದು ತಿಳಿಯುವುದೇ ಇಲ್ಲ. ಎಲ್ಲಿ ನೋಡಿದರೂ ಸತ್ಯಾಗ್ರಹ ಚಳುವಳಿ ರಾಷ್ಟ್ರದಾದ್ಯಂತ ವ್ಯಾಪಿಸಿ ಬಿಟ್ಟಿತ್ತು. ನಾನು ಆಗ ವಿದ್ಯಾರ್ಥಿಯಾಗಿದ್ದೆ. ಆದರೂ ಈ ವಿದ್ಯಾರ್ಥಿಗಳಲ್ಲೂ ಅದೇ ಮನೋವೃತ್ತಿ. ಊರಿಂದೂರಿಗೆ ಕರಪತ್ರ ಹಂಚುವುದು ನಮ್ಮ ಕೆಲಸವಾಗಿತ್ತು. ಊರಿನ ಜನಗಳೆಲ್ಲಾ ಸೇರಿ ಕರಪತ್ರ ಓದುತ್ತಿರುವಾಗ ನಾವು ಅಭ್ಯಾಸ ಬಿಟ್ಟು ಅದನ್ನು ಕೇಳುತ್ತಿದ್ದೆವು. ಆಗ ನಮ್ಮ ಮೈ, ಮನಸ್ಸು ಉಬ್ಬಿಹೋಗುತ್ತಿತ್ತು.

ಚಳುವಳಿಯ ಕಾಲದಲ್ಲಿ ಎಷ್ಟೆಲ್ಲಾ ಜನ ಮನೆಮಠಗಳನ್ನು ಕಳೆದುಕೊಳ್ಳಲಿಲ್ಲ? ದೀರ್ಘ ಕಾಲದ ಜೈಲು ವಾಸ, ಲಾಠೀ ಚಾರ್ಜು, ಸುಂಡಗಂದಾಯ, ಇನ್ನೆಷ್ಟೋ ರೀತಿಯಲ್ಲಿ ಹಿಂಸೆ. ಆದರೂ ದೇಶಕ್ಕಾಗಿ ದುಡಿಯಬೇಕೆನ್ನುವ ಉಜ್ವಲ ಅಭಿಮಾನ ಸ್ವಯಂಸ್ಫೂರ್ತಿ ತಗ್ಗಲಿಲ್ಲ.

ಇಂಥ ಅಮೋಘ ಚೈತನ್ಯವನ್ನು ದೇಶದ ಜನತಾಂಗದಲ್ಲಿ ಯಾರು ತುಂಬಿದರು? ಅವರ ನರನಾಡಿಗಳೆಲ್ಲಾ ಜಾಗ್ರತವಾಗುವಂತೆ ಯಾರು ಮಾಡಿದರು? ದೇಶದ ಮೂಲೆ ಮೂಲೆಯಲ್ಲಿಯೂ ಇಂಥ ಸೇವೆ, ತ್ಯಾಗ, ಬಲಿದಾನ, ಕ್ರಿಯೆಗಳಿಗೆ ಯಾರಿಂದ ಪ್ರಚೋದನೆಯಾಯಿತು?

ಅಂದಿನ ದೇಶದ ಧುರೀಣರು ಕೊಡುತ್ತಿದ್ದ ಸಂದೇಶ, ಆದೇಶಗಳು ಇಡಿ ದೇಶದ ಮೇಲೆಯೇ ಪರಿಣಾಮ ಮಾಡುತ್ತಿತ್ತು. ದೇಶದ ಜನತೆ ಧುರೀಣರ ಮಾತನ್ನು ವೇದ ವಾಕ್ಯದಂತೆ ಪಾಲಿಸುತ್ತಿತ್ತು. ಯಾವ ಕಷ್ಟ ನೋವುಗಳಿಗೂ ಹೆದರದೇ ರಾಷ್ಟ್ರೀಯ ಮನೋಭಾವನೆಯನ್ನು ಬಲಪಡಿಸಿ ಬೆಳೆಸುತ್ತಿತ್ತು. ಅವರ ಇಚ್ಛಾ—ಜ್ಞಾನ ಕ್ರಿಯೆಗಳು ಸಿದ್ಧಿ ಪಡೆಯುತ್ತಿತ್ತು.

ಈ ಶಕ್ತಿತ್ರಯಗಳ ವಿಕಾಸವೇ ದೇಶಕ್ಕೆ ಬಹು ದೊಡ್ಡ ಪರಿಣಾಮವನ್ನುಂಟು ಮಾಡುತ್ತಿದೆ. ಇವು ಜಾಗ್ರತವಾದ ಹೃದಯದಿಂದ ಚಿಮ್ಮಿದ ಮಾತು ಫಲಕಾರಿಯಾಗುತ್ತದೆ.

ಇಂಥ ಅಮೋಘ ಶಕ್ತಿ ಸಂಚಯವನ್ನು ಪಡೆದವರೇ ದೇಶದ ಧುರೀಣತೆನಿಸುತ್ತಿದ್ದರು. ಪರಿಶುದ್ಧ ಸೇವೆ, ತ್ಯಾಗಗಳೇ ಧುರೀಣತೆಯನ್ನು ತಂದುಕೊಡುವ ಸಾಧನಗಳಾಗುತ್ತಿದ್ದವು. ಇಂದಿನಂತೆ ಅಧಿಕಾರ, ಪ್ರತಿಷ್ಠೆ, ಪ್ರಭಾವಕ್ಕಾಗಿ ಧುರೀಣತ್ವ ದೊರೆಯುತ್ತಿರಲಿಲ್ಲವಾಗಿತ್ತು. ಹಾಗಾಗಿಯೇ ಅವರ ಒಂದೊಂದು ಮಾತು ಇಡಿಯ ದೇಶದ ಮೇಲೆಯೇ ಪ್ರಭಾವ ಬೀರುತ್ತಿತ್ತು.

ಇಂದು ಕಾಂಗ್ರೆಸ್ ಪಕ್ಷವೇ ಅಧಿಕಾರದಲ್ಲಿದೆ. ಅನೇಕರು ಅಧಿಕಾರ ಸಂಪನ್ನರೂ ಆಗಿದ್ದಾರೆ. ಈ ಮಂತ್ರಿ ಮುಖಂಡರ ಮಾತು ಎಷ್ಟರ ಮಟ್ಟಿಗೆ ಫಲಕಾರಿಯಾಗುತ್ತಿವೆಯೆಂದು ತುಸು ಗಮನಿಸೋಣ! ದಿನವೂ ಅನೇಕ ಯೋಜನೆಗಳು ಹುಟ್ಟಿಕೊಳ್ಳುತ್ತಿವೆ. ಅನೇಕ ಆದೇಶಗಳು ಹೊರ ಬರುತ್ತಿವೆ. ಆದರೆ ಅವೆಲ್ಲ ಯಾಕೋ-ಸರಿಯಾಗಿ ಜನತೆಯ ಹೃದಯವನ್ನೇ ಮುಟ್ಟಲಾರವು. ಅನೇಕ ಯೋಜನೆಗಳಲ್ಲಿ ಕೆಲವೊಂದು ಮಾತ್ರ ಫಲಕಾರಿಯಾದರೆ ಅವರ ಪುಣ್ಯ. ಇನ್ನು ಅವರ ಭಾಷಣಗಳನ್ನಂತೂ ಕೇಳುವುದಕ್ಕೆ ಜನ ಆಸಕ್ತಿ ಪಡುವುದೇ ಇಲ್ಲ. ಅಧಿಕಾರಿಗಳಿಂದ ಬಂದ ಆದೇಶವೆಂದು ಕೆಲವು ಅಧಿಕಾರಿಗಳೇ ಅವರ ಯೋಜನೆಯ ಬಗ್ಗೆ "ವರದಿ"ಯ ನಾಟಕವನ್ನು ಕಳಿಸಿ ಕೊಡುತ್ತಾರೆ. ಈ ವರದಿಯಿಂದ ದೇಶದಲ್ಲಿ ಯೋಜನೆಗಳು ಫಲಕಾರಿಯಾಗಿ ಸಮೃದ್ಧಿಯನ್ನು ತಂದಿದೆಯೆಂದು ಮುಖಂಡರು ತಿಳಿದುಕೊಳ್ಳುತ್ತಾರೆ. ಉದಾಹರಣೆಗೆ ವನಮಹೋತ್ಸವವನ್ನೇ ಇಟ್ಟುಕೊಳ್ಳೋಣ. ಹಲವಾರು ವರ್ಷಗಳಿಂದ ಈ ತ್ಸವದ ಆಂದೋಲನ ನಡಿಸುತ್ತಿದ್ದೇವೆ. ಆದರೆ ಎಷ್ಟು ಪುರುಷಾರ್ಥ ಸಾಧಿಸಿದ್ದೇವೆ ಎಂದು ಹೇಳುವ ಧೈರ್ಯ ಮಾತ್ರ ನಮಗೇ ಸಾಲದು ಇದಕ್ಕಾಗಿ ನಾವು ಮಾಡಿದ ಖರ್ಚು ಎಷ್ಟು? ಪ್ರಗತಿ ಎಷ್ಟು? ಅಧಿಕಾರಿಗಳ ಒತ್ತಾಯಕ್ಕಾಗಿ "ನಾವು ಇಷ್ಟು ನೆಟ್ಟಿದ್ದೇವೆ. ಎಂಬ ಹೇಳಿಕೆಯಿಂದ ಸಂಗ್ರಹಿಸಲಾದ ವರದಿಯಿಂದ ನಮ್ಮ ಸರಕಾರೀ ಲೆಕ್ಕದಲ್ಲಿ, ಮಾತ್ರ ಲಕ್ಷಾಂತರ ಸಸಿಗಳು ಬೆಳೆದಿರಬಹುದು, ಆದರೆ ದೇಶದಲ್ಲಿ ಎಷ್ಟು ಬೆಳೆದಿವೆ? "ಹೆಚ್ಚು ಬೆಳೆಯಿರಿ, ಚಿಕ್ಕ ಉಳಿತಾಯ ಮಾಡಿರಿ" ಎಂಬುದನ್ನು ಪ್ರಚಾರದ ಭಿತ್ತಿ ಪತ್ರಿಕೆಗಳಲ್ಲೇ ಕಂಡು ಅವುಗಳ ಪ್ರಗತಿಯನ್ನೂ ವರದಿ—ರಿಪೋರ್ಟ್‌ಗಳಲ್ಲಿ ಹೆಚ್ಚಿಸಿದರೆ ದೇಶದ ಕೊರತೆ ಹೇಗೆನ್ನೀಗೀತು? ಅಭಿವೃದ್ಧಿ ಹೇಗೆ ಬೆಳದೀತು?

ಅಂದಿನ ದೇಶದ ಧುರೀಣರು ಕ್ರಿಯಾಸಿದ್ಧಿಯುಳ್ಳವರು. ಅವರ ಮಾತು ಕೂಡಲೇ ಕೃತಿಯಲ್ಲಿಳಿಯುತ್ತಿತ್ತು. ಇಂದಿನವರದು ಮಾತಿನಲ್ಲೇ ಉಳಿಯುತ್ತದೆ. ಇದು ಏಕೆಂಬುದನ್ನು ಧುರೀಣರು ಸೂಕ್ಷ್ಮವಾಗಿ ವಿಚಾರಿಸಬೇಕು. ತಮ್ಮ ಆತ್ಮನಿರೀಕ್ಷಣೆಯನ್ನು ತಾವೇ ಮಾಡಿಕೊಳ್ಳಬೇಕು. ನಮಗಿಂದು ಮಾತಿನ ಮಂಟಪ, ಮಾತಿನ ಸಾಮ್ರಾಜ್ಯ ಬೇಕಾಗಿಲ್ಲ. ಸಮೃದ್ಧ ಸುಂದರ ನಾಡನ್ನು ನಿರ್ಮಿಸಬೇಕಾಗಿದೆ, ಅದಕ್ಕೆ ಅಸಂಖ್ಯ ಪ್ರಜಾಕೋಟಿಗಳು ದುಡಿಯಬೇಕು. ಅವರಲ್ಲಿರುವ ಕ್ರಿಯಾ ಶಕ್ತಿಗಳು ಜಾಗ್ರತವಾಗ ಬೇಕು.

ಗಾಂಧೀಜಿಯವರಂಥ ಮಹಾತ್ಮರವೀರವಾಣಿ ದಾಸ್ಯದ ನಿದ್ದೆಯಲ್ಲಿದ್ದವರನ್ನೂ ಬಡಿದೆಬ್ಬಿಸಿತು. ಹೊಸ ಜೀವಕಳೆಯನ್ನೇ ತುಂಬಿತು. ಅದು ಅವರ ದೇಶಕ್ಕಾಗಿ ದುಡಿದ ನಿಃಸ್ವಾರ್ಥಸೇವೆಯ ಭವ್ಯ ತಪಃ ಪ್ರಭಾವದಿಂದ ಬಂದ ದಿವ್ಯಮಾತು. ಸಮಸ್ತ ಪ್ರಜಾಕೋಟಿಯನ್ನೂ ಬಂಧುಪ್ರೇಮದ ಒಂದೇ ಭಾವದಿಂದ ನೋಡಿದ ದಿವ್ಯ ದೃಷ್ಟಿಯಿಂದ ಸೃಷ್ಟಿಯಾದ ಮಾತು

ನಮ್ಮ ಇಂದಿನ ಮುಖಂಡರ ಮಾತು ಅಂಥ ಶಕ್ತಿ—ಅಂಥ ಹೃದಯದಿಂದ ಹೊರ ಸೂಸಬೇಕು. ಪ್ರಜೆಗಳ ಹೃದಯದ ಭಾವನೆಯನ್ನೂ ಹಿಡಿತ ಮಿಡಿತಗಳನ್ನೂ ಅರಿತಿರಬೇಕು. ಅಂದಾಗ ಅಂಥ ಮಾತು ಮಾಣಿಕ್ಯವಾದೀತು. ಅಂಥ ಕ್ರಿಯೆ ಸಾಮ್ರಾಜ್ಯಕ್ಕೆ ಸಮೃದ್ಧಿಯನ್ನು ತಂದೀತು.

ಭಾಷಣಕಾರನೊಬ್ಬ ಸಿಗರೇಟು ಸೇದುತ್ತಾ—ಸಿಗರೇಟು ಸೇದುವುದರಿಂದ ಶರೀರಕ್ಕೆ ಅನೇಕ ವ್ಯಾಧಿಗಳು ಅಂಟಿಕೊಳ್ಳುತ್ತವೆ. ಯಾರೂ ಸಿಗರೇಟು ಸೇದಬಾರದು" ಎಂದು ಭಾಷಣ ಬಿಗಿದರೆ ಅದು ಎಷ್ಟು ಜನರ ಮೇಲೆ ಪರಿಣಾಮ ಮಾಡೀತು? ಹಾಗೇ ನಮ್ಮಲ್ಲಿಯ ಧುರೀಣರ ಮಾತು ಇಷ್ಟೇ ಸಾರ ಸತ್ವಗಳನ್ನು ಪಡೆದರೆ ಏನು ಪ್ರಯೋಜನ! ಉಪದೇಶ ಪಾಂಡಿತ್ಯ, ಪುಸ್ತಕದ ಬದನೇಕಾಯಿಯಿಂದ ನಮ್ಮ ಹೊಟ್ಟೆತುಂಬುವುದಿಲ್ಲ.

ಪ್ರಜೆಗಳು ಕ್ರಿಯಾಸಿದ್ಧಿಯುಳ್ಳವರಾಗಬೇಕು. ಪ್ರಭುಗಳು ವಾಕ್ ಸಿದ್ಧಿಯುಳ್ಳವರಾಗಬೇಕು. ಈ ವಾಕ್-ಕ್ರಿಯೆಗಳ ಹಿನ್ನೆಲೆಯಲ್ಲಿ ಇಚ್ಛಾಶಕ್ತಿ ಜಾಗ್ರತವಾಗಬೇಕು. ಇವುಗಳ ಮಧುರ ಸಂಬಂಧವೇ ದೇಶವನ್ನು ಸಂಪತ್ ಸಮೃದ್ಧವನ್ನಾಗಿರಿಸುತ್ತದೆ. ಅಂಥ ದಿಶೆಯಲ್ಲಿ ನಾವು ಸಾಗಬೇಕು. ಸತ್ವಶಾಲಿಯಾದ ಈ ವಾಕ್-ಕ್ರಿಯೆಗಳು ನಮ್ಮ ದೇಶಕ್ಕೆ ಸ್ವಾತಂತ್ರ್ಯವನ್ನೇ ಗಳಿಸಿ ಕೊಟ್ಟವೆ. ಅಂದಾಗ ನಮಗೆ ಬೇಕಾದ ಅಭಿವೃದ್ಧಿಯನ್ನು ತರಲಾರದೇ?

ಡಿ. ಕೆ. ಭಾರದ್ವಾಜರ
ಇಂಗ್ಲಿಷ್, ಇಂಗ್ಲಿಷ್-ಕನ್ನಡ
ಡಿಕ್ಷನೆರಿ
ಬೆಲೆ: ರೂ. ನಾಲ್ಕು.
ಐದು ರೂಪಾಯಿ ಮನಿಯೊರ್ಡರು ಮಾಡಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ ಕಳಿಸಲಾಗುವುದು.
ನವಭಾರತ ಪುಸ್ತಕ ಭಂಡಾರ, ಉದುಪಿ.

ವಸಂತ ಕಥೆ-ಕಾದಂಬರಿಗಳ ಮಾಸ ಪತ್ರಿಕೆ.
ವಾ.ಚಂದಾ ರೂ.8. ಬಿಡಿಪ್ರತಿ 75 ನೈಸೆ
ಮಾದರಿ ಸಂಚಿಕೆಗೆ 75ನ.ಪೈ. ಕಳುಹಿಸಿರಿ
1-ಪಾರ್ಕ್ ರಸ್ತೆ — ಬೆಂಗಳೂರು-2.

PHONE 203 ESTD 1926
FOUNDATION STONE
Engraved
MARBLE TABLETS
(GOLD FILLED & LEAD FILLED)
DONE AT
Crown RUBBER STAMP CO.
BALMATTA ROAD, MANGALORE.

ಅಮೃತಾಂಜನ
ಎಲ್ಲಾ ನೋವುಗಳಿಗೂ ಸಿದ್ಧೌಷಧ
ಎಲ್ಲಾ ಕಡೆ ಸಿಗುತ್ತದೆ
50 ವರ್ಷ ಪ್ರಾಯದ
ಮಾರ್ಟಿನ್ ಡ್ರಾಕ್ಟರ್
ಅಮೃತಾಂಜನ ಲಿ. ಮೆಂಬೈ ಮಾಹಿಮ್ ಸಿಲೋನ್

ಕರ್ಮ, ಫಲ ಮತ್ತು ತ್ಯಾಗ

(ಒಂದು ಚರ್ಚಾತ್ಮಕ ಸಮಸ್ಯೆ)

ಭಗವದ್ಗೀತೆಯ ಹೆಸರಾಂತ ಕರ್ಮಯೋಗದಲ್ಲಿ ಮಾನವನಿಗೆ ಕರ್ಮ ಮಾಡುವ ಅಧಿಕಾರ ದೊರೆಯುತ್ತದೆಯೇ ಹೊರತು ಅದರ ಫಲದಲ್ಲಿಯಲ್ಲ. ಆದರೆ, ಫಲಾಶಾರಹಿತ ಕರ್ಮ"ವೆಂದರೆ ಏನು, ಅದಿರುವುದು ಇಂದಿನ ಯುಗಮಾನದಲ್ಲಿ ಸಾಧ್ಯವೇ ಎಂಬುದನ್ನು ಇಲ್ಲಿ ವಿವೇಚಿಸಲಾಗಿದೆ.

ಶ್ರೀ ಗೌರೀಶ ಕಾಯ್ಕಿಣಿ, ಗೋಕರ್ಣ.

ಭಗವದ್ಗೀತೆಯ ವಿಶೇಷವಾದ ಅನನ್ಯ ಸಾಮಾನ್ಯವಾದ ಸಂದೇಶ ಯಾವುದು? ಕರ್ಮಯೋಗ ಅನಾಸಕ್ತಿ ಯೋಗ, ಫಲಾಶಾರಹಿತವಾಗಿ ಕರ್ಮ ಮಾಡುವ ಕೌಶಲ್ಯಯೋಗ. ಅದರಲ್ಲಿ ಅನುಷಂಗಿಕವಾಗಿ ಅನೇಕಾನೇಕ ವಿಷಯಗಳು ತತ್ವಪ್ರಣಾಲಿಗಳು ಚರ್ಚೆಗೆ ಒಳಪಟ್ಟಿದ್ದರೂ ಗೀತೋಪನಿಷತ್ತಿನ ಮುಖ್ಯ ಗುರಿ, ಮೂಲದ ಗುಟ್ಟು ಕರ್ಮ ಫಲತ್ಯಾಗದ ಉಪದೇಶವೇ ಆಗಿದೆಯೆಂಬುವದರ ಬಗೆಗೆ ಇಂದಿಗೆ ಎಲ್ಲಾ ದಾರ್ಶನಿಕರ ಹಾಗೂ ವಿದ್ವಾಂಸರನಿಕಮತ್ಯವಿದೆ. ಈ ದೃಷ್ಟಿಯಿಂದ ಭಗವದ್ಗೀತೆಯ ನೂರಾರು ಜನಪ್ರಿಯ, ಸರ್ವಶ್ರುತ ಸುನಃಸುನಃ ಉದ್ಧೃತವಾದ ವಚನಗಳಲ್ಲಿ ಅತ್ಯಂತ ಲೋಕವಿಖ್ಯಾತ ಶ್ಲೋಕವು ಯಾವದೆಂಬ ಕುರಿತು ಸಂದೇಹ ಉಳಿದಿಲ್ಲ. ಕೀರ್ತನಕಾರರಿಂದ ರಾಜಕಾರಣಿಗಳ ವರೆಗೂ ವೇದಾಂತಿಗಳಿಂದ ವಿದ್ಯಾರ್ಥಿಗಳ ವರೆಗೂ ಉದಾಹರಿಸಲಾಗುವ ಆ ಶ್ಲೋಕವು—

ಕರ್ಮಣ್ಯೇ ವಾಧಿಕಾರಸ್ತೇ ಮಾಫಲೇಷು ಕದಾಚನ!

ಮಾಕರ್ಮ ಫಲಹೇತುರ್ಭೂರ್ಮಾತೇ ಸಂಗೋಸ್ತ್ವಕರ್ಮಣಿ ॥

ಈ ಶ್ಲೋಕವನ್ನೇ ಕುರಿತು ಇಂದು ಪುನರ್ವಿಚಾರ ಮಾಡ ಬೇಕೆಂದಿದ್ದೇನೆ. ಇದರಲ್ಲಿ ಅಡಕವಾದ, ಕಾಲಕಾಲಕ್ಕೆ ವ್ಯಾಖ್ಯಾನಿಸಲ್ಪಡಲಾಗುವ ಕರ್ಮಫಲ ತ್ಯಾಗದ ವಾಚ್ಯಾರ್ಥವೇನು ವ್ಯಾಪ್ತಿಎಷ್ಟು? ಗೀತೆಯಲ್ಲಿ ಭಗವಂತನ ಮುಖದಿಂದ ಈ "ಆವೃತವಾಣಿ" ಹೊರಟ ಸಂದರ್ಭ ಯಾವದು? ಅದನ್ನು ಎಂದಿನಿಂದಲೂ ನಾವು ಅನ್ವಯಿಸಿಕೊಂಡು ಅರ್ಥವಿಸಿಕೊಂಡು ಬಂದ ಜೀವನದ ಸಂದರ್ಭ ಎಂತಹದು? ಪೂರ್ವ ಸೂಚಿಗಳ ಮೂತಿನ ಬೆನ್ನಿಗೆ ಅರ್ಥ ಹಿಡುತ್ತದೆ. ಅಂಥ ಮೂತುಗಳು ದೇಶಕಾಲೋಚಿತವಾಗಿ "ಸಂಭವಾಮಿ ಯುಗೇ ಯುಗೇ" ಎಂಬಂತೆ ಹೊಸ, ಹೆಚ್ಚಿನ, ಅರ್ಥದ ಅವತಾರಗಳನ್ನು ಪಡೆಯುತ್ತವೆ. ಭಗವದ್ಗೀತೆಯಂಥ ಗ್ರಂಥದ ಚಿರಂಜೀವಿತ್ವದ "ರಾಜಗುಹ್ಯ"ವೇ ಅದರ ಇಂಥ ತ್ರಿಕಾಲಾಬಾಧಿತಸತ್ಯದ ಸತ್ವದಲ್ಲಿದೆ. ಇದೆಲ್ಲ ನಿರ್ವಿವಾದ. ಆದರೆ ಹೀಗೆ ಗೀತೆಯ ವಚನ ಪ್ರಾಮಾಣ್ಯವನ್ನು ಒಪ್ಪಿಕೊಂಡರೂ ಅದರಪಾರಮಾರ್ಥದ ಪರಿಮಿತಿಯು ನಿರಪವಾದವಲ್ಲ. ಅವ್ಯಾಪ್ತಿಗಿಂತ ಅತಿವ್ಯಾಪ್ತಿಯ ದೋಷವೇ ಇಂಥ ಪ್ರಮಾಣ ವಚನಗಳಿಂದ ಮೊಳಗಿಬಂದ ವಿಚಾರಗಳನ್ನು ಬೆಂಕಿಯನ್ನು ಸುತ್ತಿದ ಹೊಗೆಯಂತೆ ಆವರಿಸಿದಂತಿದೆ.

ಗೀತೆಯು ಕರ್ಮಯೋಗವನ್ನೇ ನಿರಪೇಕ್ಷವಾಗಿ ಸಾರುತ್ತಿರುವಾಗ ಭಾರತೀಯ ಸಂಸ್ಕೃತಿಯ ಹಾಗೂ ಸಮಾಜ ಧರ್ಮದ ಇತಿಹಾಸದಲ್ಲಿ ನೈಷ್ಕರ್ಮ್ಯವು ನಿಷ್ಕ್ರಿಯತೆಯಿಂದ ವಿಶೇಷ ಬೇರೆಯೂದಂತಿಲ್ಲ. ಹೀಗಾದದ್ದೇಕೆ? ಇದಕ್ಕೆ ಕೇವಲ ಶಂಕರಾಚಾರ್ಯರುಮಾಡಿದಜ್ಞಾನಯೋಗದ ಸಂನ್ಯಾಸ ಪರವಾದ ಅರ್ಥಭಾಷ್ಯವೊಂದೇ ಕಾರಣವಲ್ಲ. ಪ್ರಾಚೀನ ಕಾಲದ ಸಂಗತಿಯೇನೇಇದ್ದರೂ ಅಧುನಿಕಕಾಲದಲ್ಲಿ ಶ್ರೀ ಸ್ವಾಮಿ ವಿವೇಕಾನಂದರಿಂದ ಸೂಜ್ಯ ವಿನೋಬಾಜೀಯವರ ತನಕವೂ ಗೀತೆಯ ಕರ್ಮಯೋಗ ಪರವಾದ ಕರ್ತವ್ಯ ಪರಾಜ್ಞಾಮನಲ್ಲದ ಅರ್ಥವನ್ನೇ ಪ್ರತಿಪಾದಿಸುತ್ತಾ ಬರಲಾಗಿದೆ. ಅದಾಗ್ಯೂ ನಮ್ಮ ವೈಚಾರಿಕ ಪ್ರಪಂಚದಲ್ಲಿ ಯಾವ ಮಟ್ಟಿಗೆ ಎಂಥ ಮಟ್ಟದಲ್ಲಿ ಕರ್ತವ್ಯ ಜಾಗ್ರತಿ ಇಲ್ಲವೆ ಕಾರ್ಯ ತತ್ಪರತೆ ಕಂಡು ಬರುತ್ತದೆ? ಅದರ ಬದಲಾಗಿ "ಸಂಗಂ ತ್ಯಕ್ತ್ವಾ ಸಮೋಭವ" ಎಂಬ ಸೂತ್ರದ ಎಳೆಯನ್ನು ಅಡಿದ ನಮ್ಮ ಬುದ್ಧಿವಂತ ವರ್ಗಗಳಲ್ಲಿ ಹೊಣೆಗೇಡಿತನ, ತಮ್ಮ ಕರ್ಮದ ಅಗುಹೋಗುಗಳ ಕುರಿತು ಪೂರ್ತಿ ಉದಾಸೀನತೆ, ಉಪೇಕ್ಷೆ—ಇವುಗಳನ್ನೇ ವ್ಯಕ್ತಪಡುವ ಜನ ಹೆಚ್ಚು ಹೆಚ್ಚು ಕಂಡು ಬರುತ್ತಾರೆ. ಭಗವಂತನ ಅಥವಾ ಭಗವದ್ಗೀತೆಯ ಪಾಂಚಜನ್ಯ ಊದಿದ್ದು ಇಂಥ ಕ್ಲೈಬ್ಯ ಕಾರ್ಪಣ್ಯಗಳನ್ನೇ ತೊಡೆದು ಸಾಕಿ ಕರ್ತವ್ಯ ಬುದ್ಧಿಯನ್ನು ಬಡಿದೆಬ್ಬಿಸಲಿಕ್ಕೆ ತಾನೇ? ಹಾಗಿದ್ದರೆ ಅದನ್ನೇ ಹೀಗೆ ವಿಪರೀತ ವ್ಯವಹಾರಕ್ಕೆ ಪ್ರಮಾಣವಾಗಿಟ್ಟುಕೊಂಡ ವಿಚಾರಸರಣಿಗೆ ಆಧಾರವೇನು?

ಇದನ್ನೆಲ್ಲ ಪರಿಶೀಲಿಸುವ ಸಮಯ ಇಂದು ಒದಗಿದೆ. **ಸ್ವಾತಂತ್ರ್ಯ ಪ್ರಾಪ್ತರದ ನಮ್ಮ ಅಭಿವೃದ್ಧಿಯ ಸಾಧನೆಯಲ್ಲಿ ಆಸ್ಥೆ ಇಲ್ಲದ ಅನಾಸಕ್ತಿ ಯೋಗ ಸಲ್ಲದು.** ಒಂದು ಉತ್ಸಾಹ, ಒಂದು ಉನ್ಮಾದವೇರಿದಂಥ ಉನ್ನತ ಧ್ಯೇಯ-ಪ್ರೇರಣೆ ತಡೆಯದ ತಗ್ಗದ ಕಾರ್ಯಸ್ಫೂರ್ತಿ ಇಂದು ದೇಶದಾದ್ಯಂತ ಉಕ್ಕಿ ಹರಿಯಬೇಕು. ಚಿಮ್ಮಿ ಹಬ್ಬಬೇಕು. ಕಟ್ಟಿದ ಟೊಂಕ, ಬಿಗಿದ ಮುಷ್ಟಿ, ಎತ್ತಿದ ಕೈ, ಉಬ್ಬಿದ ಎದೆ, ಸೆಟೆದ ನಿಲುವು, ಹಟದ ಹೆಜ್ಜೆ, ಇಂದಿನ ಮುನ್ನಡೆಯಕುರುಹಾಗಬೇಕು. ಆದರೆಇಂದು ನಾವು ಕಾಣುವದೇನು? "ಕಾರ್ಪಣ್ಯದೋಷೋಪ ಹತ ಸ್ವಭಾವಃ" ಕ್ಷುದ್ರ ಹೃದಯ ದೌರ್ಬಲ್ಯ! ಹತಾಶೆ ಉದಾಸೀನತೆ ನಿರ್ವೇದ ಬಾಳಿನ ನೆಮ್ಮುಗೆಗಳನ್ನೇ ಅಲ್ಲಗಳೆಯುವ ಪ್ರಜ್ಞಾವಾದ (cynicism) ಇಂದಿನ ಕುರುಕ್ಷೇತ್ರದಲ್ಲಿ ನಿಂತ "ಭಾರತ"ವನ್ನು ಆವರಿಸಿದೆ.

"ಕುತಃ ತ್ವಾಂಕಶ್ಮಲ ಮಿಂದಂ ವಿಷಮೇ ಸಮುಪ ಸ್ಥಿತಂ?"ಎಂದು ಯುಗಪುರುಷ ಕೇಳುತಿದ್ದಾನೆ! ಅಂದರೆ ಇಂದು ನಮ್ಮ ರಾಷ್ಟ್ರದ ಉತ್ಕರ್ಷಕ್ಕೆ ಬೇಕಾದ ಉದ್ಯೋಗವು ತಟಸ್ಥ ವೃತ್ತಿಯಿಂದ ಉಂಟಾಗುವಂತಿಲ್ಲ. ಅದಕ್ಕೆ ಬೇಕು ತಾದಾತ್ಮ್ಯ ವೃತ್ತಿ. ಅದರೆ ನಾವು ಈ ವರೆಗೆ ಪ್ರತ್ಯಕ್ಷವಾಗಿ ಕಲಿತುಕೊಂಡ ಕರ್ಮಯೋಗ ನಮ್ಮನ್ನು ತೀರ ಕೆಳ ಮಟ್ಟದ ಅರ್ಥದಲ್ಲಿ "ಯದೃಚ್ಛಾಲಾಭ ಸಂತುಷ್ಟ"ರನ್ನಾಗಿಮಾಡಿಬಿಟ್ಟಿದೆ. ನಾವು "ಲಾಭಾಲಾಭ" ಜಯಾ ಜಯಗಳಲ್ಲಿ ಶುದ್ಧ ಉದಾಸೀನರಾಗಿದ್ದೇವೆ. ನಮ್ಮ ಈ ಸಮದರ್ಶಿತನ ಕೇವಲ ಜಡತ್ವವಾಗಿದೆ.

"ಕರ್ಮಣ್ಯೇ ವಾಧಿಕಾರಸ್ತೇಽಽ" ಎಂಬ ಆದೇಶ ಸಾರಿದ ಕರ್ಮಯೋಗವು ಇದಕ್ಕೆ ಇಳಿಯಿತೇ? ಹಾಗಾದರೆ ಇಲ್ಲಿ ಮೂಲದಲ್ಲಿಯೇ ಎಲ್ಲಿಯೋ ಪ್ರಮಾದವಾಗಿರಬೇಕು. ಹೇಗೆಂದು ನೋಡೋಣವೇ? "ಕೇವಲ ಕರ್ಮದ ಅಧಿಕಾರವು ಮಾತ್ರ ನಿನ್ನದು; ಫಲದಲ್ಲಿ ಅಲ್ಲ" ಎಂಬ ಸೂತ್ರ ಬದುಕಿನ ಎಲ್ಲ ಅಂಗಗಳಿಗೂ ಅನ್ವಯಿಸುವದೇ? ಹಾಗೆ ಅದು ಅನ್ವಯಿಸುವದೆಂದು ಅದೊಂದು ದೇವಕೀ ಕೃಷ್ಣನದೋ ದೈವಪಾಯನ ಕೃಷ್ಣನದೋ ಹೊಸ ಸಿದ್ಧಾಂತವೆಂದು ಒಪ್ಪಿಕೊಂಡರೂ ಅದು ಭಾರತೀಯ ಪರಂಪರೆಗೆ ತತ್ವ ಸಂಸ್ಕಾರಾಯಕ್ಕೆ ಒಗ್ಗುವಂತಹದೇ? ಜೀವನದ ಯಾವ ಅಂಗಗಳನ್ನು ಯಾವ ಅರ್ಥದಲ್ಲಿ ಈ ಕರ್ಮ ಫಲಾಧಿಕಾರ ವಿವೇಕದ ಸೂತ್ರ ಅನ್ವಯಿಸುವಂತಿದೆ? ಒಂದು ತೆರವಾದ ಮನಸ್ಸಿನಿಂದ ಈ ಚರ್ಚೆಗೆ ನಾನು ಹೊರಟಿದ್ದೇನೆ (ಇನ್ನು ತೆರವಾದ ಮನಸ್ಸಿಗೂ ತಳವು ಮುಟ್ಟಿರ ಬೇಕು. ಎಲ್ಲಿಡೆಗೂ ತೆರವಾದರೆ ಆ ಮನಸ್ಸು ಏನನ್ನೂ ಹಿಡಿದು ಇಡಲಾರದು!)

ಮೇಲೆ ಎತ್ತಿದ ಪ್ರಶ್ನೆಗಳಲ್ಲಿ ಎರಡನೆಯದನ್ನು ಮೊದಲು ಉತ್ತರಿಸೋಣ. ಕರ್ಮ ಫಲದ ಕುರಿತು ಉದಾಸೀನತೆ ಉಪೇಕ್ಷೆ ಅಸಡ್ಡೆ ಭಾರತದ ಆಭಿಜಾತ ಪರಂಪರೆಯದಲ್ಲ. ಜೀವನದ ಪುರುಷಾರ್ಥದ ನೋಟ ನಮ್ಮಲ್ಲಿ ಪ್ರಾಚೀನರಲ್ಲಿ ಆಸ್ಫೋಟದು ವಿರಕ್ತಿ-ಉಪರತಿಗಳದಲ್ಲ. "ಯತ ಅಭ್ಯುದಯಂ ನಿಶ್ರೇಯಸಃ ಸಧರ್ಮಃ" ಎಂಬ ನಮ್ಮ ಧರ್ಮ ಜಿಜ್ಞಾಸೆ ಭಾರತೀಯರ ಪ್ರಮಾಣಭೂತ ಪ್ರತಿ ಕ್ರಿಯೆಯಾಗಿದ್ದರೆ, ಅಭ್ಯುದಯದಿಂದ ನಿಃಶ್ರೇಯಸವನ್ನೂ ಸಾಧಿಸ ಹೊರಟ ನಮ್ಮ ವಿಜಿಗೀಷುವಾದವರ್ಥಿಷ್ಣುವಾದ ವ್ಯಭಿವಿಷ್ಣುವಾದ ಧರ್ಮಪ್ರಿಯ ಫಲಕ್ಕೆ ಪರಾಙ್ಮುಖವಾಗಿದ್ದಿಲ್ಲ. ದೇವೀ ಅಥರ್ವ ಶೀರ್ಷದಲ್ಲಿ ದುರ್ಗಾದೇವಿಯ ವರ್ಣನೆಯು "ಕರ್ಮಫಲೇಷು ಜುಷ್ಟಾಂ" ಎಂದು ಬರುತ್ತದೆ. ಕರ್ಮಕ್ಕೆ ತಕ್ಕ ಫಲ ಕೊಡುವದರಲ್ಲಿ ಮಹಾ ಶಕ್ತಿತೊಡಗಿದೆ. ಕಾಲಿದಾಸ ರಘುವಂಶದ ರಾಜರನ್ನು ವರ್ಣಿಸುವಾಗ ಅವರು "ಅಫಲೋದಯಂ ಕರ್ಮ"ನ್ನು ಮಾಡುತ್ತಾರೆ. ಫಲದ ಕುರಿತು ಉದಾಸೀನರಿದ್ದರೆ ಆ ಅರಸರು ದಿಗ್ವಿಜಯಗಳಾದ ಕ್ಷತ್ರಿಯರೇ ಇದ್ದಿಲ್ಲ. ಫಲೋದಯವಾಗಲಿಕ್ಕೆ ನಕವೂ ಅವರು ಕರ್ಮವನ್ನು ಬಿಡುತ್ತಿಲ್ಲ. ಇಂಥವರಿಗೆ "ಮಾ ಕರ್ಮಫಲಹೇತೂಃ ಭೂ" ಎಂದು ಎಚ್ಚರಿಕೆ ಕೊಟ್ಟರೆ ಹೇಗೆ? ಕೇವಲ ಪ್ರಾಪ್ತ ಕರ್ತವ್ಯ

(ಮುಂದೆ ಪುಟ ನೋಡಿರಿ)

ಮಕ್ಕಳ ಮುಮತೆಯ
ಕೆ
"ಬಿಕ್ಕೊ" ರವರ ಗ್ಲುಕೋಸ್ ಕೂಡಿದ
ಪೆಪ್ಪರ್ ಮಿಠಾಯಿಗಳು—ರುಚಿಕರ
ಸೇವನೆಗೆ ಪ್ರಸಿದ್ಧಿಪಟ್ಟಿವೆ.
"ಬಿಕ್ಕೊ" ರವರ
ಹಣ್ಣಿನ ಶರಬತ್ತುಗಳು
ಅತಿಥಿಗಳ ಆದರದ ಸತ್ಕಾರಕ್ಕೆ ಅತ್ಯನುಕೂಲ.
ತಯಾರಕರು:
ಭಾರತ್ ಇಂಡಸ್ಟ್ರಿಯಲ್ ಎಂಡ್
ಕ್ಯಾನಿಂಗ್ ಕಂಪೆನಿ ಲಿಮಿಟೆಡ್,
ಕಾಪು, ದ. ಕ.

ರುಚಿಗೆ! ಗುಣಕ್ಕೆ!! ತೃಪ್ತಿಗೆ!!!

ಪ್ರತಿ ದಿನ ಒಂದಕ್ಕೆ

ಒಂದೂಮುಕ್ಕಾಲು ಕೋಟಿಗೂ

ಮೇಲ್ಪಟ್ಟು ಬೀಡಿಗಳ ತಯಾರಿಕೆಯಿಂದ,

ದಕ್ಷಿಣ ಭಾರತದಲ್ಲಿ ಮೊದಲನೆ ಸ್ಥಾನವನ್ನು ಗಳಿಸಿರುವ,

ಭಾರತದ ಬೃಹತ್ ಉದ್ಯಮದ ಉತ್ಪನ್ನಗಳು.



ಪ್ರಧಾನ ಕಛೇರಿ:

ಮಂಗಳೂರು ಗಣೇಶ ಬೀಡಿ ವರ್ಕ್ಸ್

ಸಂತೇಪೇಟೆ, ಮೈಸೂರು.

Telegrams: "AROMA". *Telephone:* 421.

ಶಿಕ್ಷಣದಲ್ಲಿ ನೀತಿಯ ಪುನರುತ್ಥಾನ

ರಾಮರಾಜ್ಯ, ಅಶೋಕ ಸಾಮ್ರಾಜ್ಯ ಎಂದು ಉದ್ಗರಿಸಿದ ಮಾತ್ರಕ್ಕೆ ಒಂದು ರಾಷ್ಟ್ರ ನೆನ್ನುದಿಯಾದಿರುವುದು ಅಸಾಧ್ಯ. ನೀತಿಯ ಪಂಚಾಂಗದ ಮೇಲೆ ನಿರ್ಮಿತವಾದ ಸಮಾಜವು ಉದಿಸಿದಂದೇ ಈ ಆದರ್ಶ ಕಲ್ಪನೆಗಳು ಮೂರ್ತಸ್ವರೂಪಕ್ಕೆ ಬರುವುವು. ಇದಕ್ಕಾಗಿ ನಮ್ಮ ಶಿಕ್ಷಣದಲ್ಲಿ ನೀತಿಯ ಪುನರುದಯವಾಗಬೇಕು.

ಶ್ರೀ ಯು. ನಾ. ಉಡುಪಿ, ವಿದ್ವಾನ್.

ಭಾರತವು ಧರ್ಮಭೂಮಿ. ಧರ್ಮನೀತಿಗಳೇ ಇಲ್ಲಿಯ ಜನರ ಜೀವನದ ತಿರುಳು. ಧರ್ಮವನ್ನು ಬಿಟ್ಟರೆದ ಜೀವನೋತ್ಕರ್ಷದ ಮಾರ್ಗಗಳೆಲ್ಲಾ ಭಾರತೀಯರಿಗೆ ಸ್ವಾಗತವೇ. ಭಾರತೀಯರು ಭೂತಕಾಲದಲ್ಲಿ ಯಶೋವಂತರಾದುದೂ ಧರ್ಮದಿಂದಲೇ ವರ್ತಮಾನ ಕಾಲವೂ ಇದರ ಪ್ರಭಾವದಿಂದಲೇ ಪ್ರಭಾವಿತವಾಗಬೇಕು; ಭವಿಷ್ಯತ್ಕಾಲವೂ ಇದರ ಆಶೀರ್ವಾದದಿಂದಲೇ ಸುಖಿಯಾಗಬೇಕು. ಇಂತಹ ಭಾರತದ ಪಂಚಪ್ರಾಣವನ್ನು ಭಾರತೀಯರು ಇಂದು ಅರ್ಧಚಂದ್ರ ಪ್ರಯೋಗದಿಂದ ಗೌರವಿಸಿರುವುದು ಎಂತಹ ಶೋಚನೀಯ ವಿಚಾರ!

ಧರ್ಮ—ನೀತಿಗಳು ವಿಶೇಷ ಅರ್ಥ ವ್ಯತ್ಯಾಸವಿಲ್ಲದ ಸಹೋದರ ಸಂಸ್ಕೃತ ಪದಗಳು. ಬಾಳಿನ ನುಡಿವಂತಿಕೆಯನ್ನೇ ನೀತಿಯೆನ್ನುವರು. ಬಾಳನ್ನು ಸಂಸ್ಕರಿಸುವುದೇ ನೀತಿಯ ಧ್ಯೇಯ. ಆ ಸಂಸ್ಕಾರದ ಮಾರ್ಗವನ್ನೇ ಶಿಕ್ಷಣವೆನ್ನುವರು. ಶಿಕ್ಷಣವು ಮನುಷ್ಯನನ್ನು ಜ್ಞಾನಿಯಾಗಿ, ನಿರೋಗಿಯಾಗಿ, ತೇಜಸ್ವಿಯಾಗಿ, ಪರೋಪಕಾರಿಯಾಗಿ ರೂಪಿಸ ಬೇಕು. ಅದೇ ಮನುಷ್ಯನನ್ನು ಪಶುವಾಗಿಯೋ, ರಾಕ್ಷಸನಾಗಿಯೋ, ಪಿಶಾಚಿಯಾಗಿಯೋ ಪರಿವರ್ತಿಸಿದರೆ ಆ ಶಿಕ್ಷಣವನ್ನು ಶಿಕ್ಷಣವೆನ್ನಲಾದೀತೆ? ಶಿಕ್ಷಕನನ್ನು ಶಿಕ್ಷಕನೆನ್ನ ಬಹುದೆ? ಆ ಸಂಸ್ಕೃತಿಯನ್ನು ವಿದ್ಯೆಯೆನ್ನ ಬಹುದು?

ಒಂದು ರಾಷ್ಟ್ರದ ಪ್ರಾಬಲ್ಯವು ಸಂಪೂರ್ಣ ಅದರ ಶಿಕ್ಷಣ ಪದ್ಧತಿಯನ್ನು ಹೊಂದಿಕೊಂಡಿದೆ. ಪ್ರತಿಯೊಂದು ರಾಷ್ಟ್ರದ ಮುಖಂಡರು ಮೊದತಕ್ಕ ಪ್ರಥಮ ಕರ್ತವ್ಯವೆಂದರೆ ಜನರ ದಾರಿದ್ರ್ಯವನ್ನು ಹೋಗಲಾಡಿಸುವುದು; ಆ ಮೇಲೆ ಅವರನ್ನು ಜ್ಞಾನವಿಜ್ಞಾನ ಸಂಪನ್ನರನ್ನಾಗಿ ಮಾಡುವುದು. ಇವೆರಡರ ತಾಳಮೇಳಗಳಲ್ಲಿ ಸಮತೆ ಬಾರದಿದ್ದರೆ ರಾಮರಾಜ್ಯವು ತಾನಾಗಿ ದೇಶದಲ್ಲಿ ಕಾಣಿಸುವುದು ಹೇಗೆ? ಈ ಸೂತ್ರವನ್ನು ಕೊಡವಿ ನಿವಾಳಿಸಿ ಅಶೋಕನ ಕಾಲದ ಕೆಲವು ಚಿಹ್ನೆಗಳನ್ನು ದೇಶದಾದ್ಯಂತ ಮೆರವಣಿಗೆ ಮಾಡಿದರೆ ಅಶೋಕನ ರಾಜ್ಯವು ಭಾರತದಲ್ಲಿ ಅವತರಿಸುವುದೆ? ರಾಮರಾಜ್ಯದ ಅವತಾರಕ್ಕಾಗಿ ಅಶೋಕನು ನೀತಿಯ ಕಡೆಗೆ ಎಷ್ಟು ಗಮನಕೊಟ್ಟಿದ್ದನೆಂದು ಅವನ ಕಾಲದ ಶಿಲಾಶಾಸನಗಳೇ ಸಾರುತ್ತಿವೆ. ಈಗಿನ ಭಾರತೀಯರು ಧರ್ಮವನ್ನು ಕೊಲೆಗೈದು ನರಭಕ್ಷಕರಾಗಿದ್ದಾರೆ! ಒಂದು ನರಭಕ್ಷಕ ವ್ಯಾಘ್ರಕ್ಕಿಂತ ಒಬ್ಬ ನರಭಕ್ಷಕ ಮನುಷ್ಯನಿಂದ ಇಂದು ಜನತೆಗೆ ಸಹಸ್ರಾರಾಧಗಳಾಗುತ್ತಿವೆ. ಯೂವಉತ್ತಮ ಗುಣದ ಪೋಷಣೆಯಿಂದ ಪ್ರಜೆಗಳಲ್ಲಿ ಶಾಂತ ಜೀವನವು ಪ್ರಾಪ್ತವಾಗಿತ್ತೋ—ರಸ್ತೆಯ ಮೇಲೆ ಬಿದ್ದ ನಿಧಿಯನ್ನು ಮುಟ್ಟುವ ಮನಸ್ಸೂ ಆಗುತ್ತಿರಲಿಲ್ಲವೋ—ರಾತ್ರಿಯ ಕಾಲದಲ್ಲಿ ಮನೆಯ ಬಾಗಿಲನ್ನು ತೆರೆದುಕೊಂಡು ನಿರ್ಭಯವಾಗಿ ಮಲಗುತ್ತಿದ್ದರೋ, ಅಂತಹ ನೀತಿ ಚಿಂತಾಮಣಿಯನ್ನು ಇಂದು ಕಣ್ಣೆತ್ತಿಯೂ ಕಾಣದೆ ಕಾಲಿನಿಂದ ತುಳಿದುಮಣ್ಣುಮುಕ್ಕಿಸುತ್ತಿದ್ದಾರೆ! ಧರ್ಮಪ್ರಿಯ ಭಾರತೀಯರೇ, ಭಾರತಮಾತೆಯ ಪ್ರಾಣಜ್ಯೋತಿಗಳಾಗಿ ನಿಮಗಿಂತಹ ಪೈಶಾಚಿಕ ಜೀವನವು ಎಲ್ಲಿಂದ ಗಂಟುಬಿತ್ತು? ಇಂದಿನ ಶಿಕ್ಷಣವೇ ನಿಮ್ಮ ಮುಖಕ್ಕೆ ಮಸಿಯನ್ನು ಬಳಿದಿದೆ ಎಂದರೆ ಅನೃತವಾದೀತೆ?

ವರ್ಷ ಹೋದಂತೆ ಶಾಲೆಗಳೇನೋ, ಹೆಚ್ಚುತ್ತಿವೆ; ಅಕ್ಷರಸ್ಥರ ಸಂಖ್ಯೆಯೂ ಕೊಂಚ ಕೊಂಚವೇರುತ್ತಿದೆಯೆಂಬುದೂ ಸತ್ಯವೇ. ಕೇವಲ ಅಕ್ಷರ ಜ್ಞಾನದಿಂದಲೇ ಯಾವ ಪುರುಷಾರ್ಥವೂ ದೊರೆಯಲಾರದು. ವಿದ್ಯೆಯೊಡನೆ ನೀತಿಯೂ ವಿದ್ಯಾರ್ಥಿಗೆ ನೈವೇದ್ಯವಾಗಬೇಕು. ಇಂದು ನೀತಿಯನ್ನು ಬಿಟ್ಟ ವಿದ್ಯೆಯೆಂಬುದು ಪ್ರಾಣತೊಲಗಿದ ದೇಹದಂತಿದೆ. ಬರೇ ಗುಲ್ಲು! ವ್ಯರ್ಥಗದ್ದಲ! ಇಂದಿನ ಶಿಕ್ಷಣ ಹೊಂದಿದ ನಾಗರಿಕರ ಕುರಿತು ನಾಲ್ಕು ಮಾತುಗಳನ್ನಾಡಿದರೆ ಅತಿಶಯವಾಗದು. ಎಲ್ಲಿ ನೋಡಿದರೂ ಕಿರಿಯರಿಗೆ ವಿನಯವೆಂದರೇನೆಂದೇ ಗೊತ್ತಿಲ್ಲ. ವಿದ್ಯೆಯು ವಿನಯವನ್ನು ಕೊಡುತ್ತದೆಂಬುದು ಈಗ ಅಸ್ಪಷ್ಟ ಸುಳ್ಳಾಗಿದೆ. ಗುರುಹಿರಿಯರ ಅನುಭವಕ್ಕೆ ಈಗ ಚಿಕ್ಕಾಸೂ ಹೆಡೆಯದೆ ಅವರ ಸ್ಥಾನಮಾನವು ವಿಮಾ ಮೇಷವನ್ನೆಣಿಸುತ್ತಿದೆ. ಸರೋಪಕಾರವನ್ನು ಮೆಟ್ಟಿ ಸ್ವಾರ್ಥವು ವಿಶ್ವವ್ಯಾಪಕವಾಗಿದೆ. ಪುರುಷಾರ್ಥಗಳಲ್ಲಿ ಸಂಪತ್ತಿನ ಸಂಗ್ರಹವೇ ಜೀವನದ ಪರಮ ಧ್ಯೇಯವಾಗಿದೆ. ದೇವರು ಧರ್ಮಗಳೆಲ್ಲಾ ಗೊಡ್ಡಾಚಾರಗಳಾಗಿವೆ. ಇದರಿಂದ ಜೀವನದ ಬಂಡಾಟವು ದಿನದಿನಕ್ಕೂ ಹೆಚ್ಚುತ್ತಿದೆ. ಜನರ ಹೃದಯ ಮತ್ತು ವಾಕ್ಕುಗಳಲ್ಲಿ ಸಂಬಂಧವು ತಪ್ಪಿ ಹೋಗಿದೆ. ಪ್ರತಿಯೊಬ್ಬನೂ ಜೀವನದಲ್ಲೆಲ್ಲಾ ಉತ್ತಮ ನಟನಾಗಿಯೇ ನಟಿಸಲು ಶತಪ್ರಯತ್ನ ಮಾಡುತ್ತಿರುವನು. ಇದರ ಫಲಿತಾಂಶವೇನು? ಜೀವನದುದ್ದಕ್ಕೂ ಶಾಂತಿ ಇಲ್ಲ. ಎಲ್ಲೆಲ್ಲೂ ಅಂಧಕಾರದ ಛಾಯೆ! ಭೀಷಣ ನರಕದ ನೆರಳೇ ಎದ್ದುಕಾಣಿಸುತ್ತಿದೆ!

ಈಗ ಸರಕಾರವೇ ಇರಲಿ; ರಾಷ್ಟ್ರ ಮುಖಂಡರೇ ಇರಲಿ; ಶಿಕ್ಷಣದಲ್ಲಿ ಒತ್ತಾಯದಿಂದಾದರೂ ನೀತಿಯನ್ನು ಪ್ರವೇಶಮಾಡಿಸಿ ಅದಕ್ಕೆ ಪ್ರಾಧಾನ್ಯ ಕೊಡಬೇಕಾಗಿದೆ. ಈಗಲೂ ಶಾಲೆಗಳಲ್ಲಿ 'ಮೋರಲ್' ಎಂಬ ಪಾಠವೇನೊ ಇದೆ. ಅದು ಮಾತ್ರ ಕಾಲುಕಿತ್ತ ಇಂಗ್ಲಿಷ್ ಭಾಷೆಯನ್ನು ಕಳವೂರಿಸುವ ಪ್ರಯತ್ನದಲ್ಲೇ ವ್ಯಯವಾಗುತ್ತಿದೆ. ಇಂದಿನ ಹೆಚ್ಚಿನ ಶಿಕ್ಷಕರಿಗೆ 'ಮೋರಲ್' ಪಾಠವನ್ನು ಮಾಡಲೂ ಗೊತ್ತಿಲ್ಲ. ಭಾರತ ರಾಮಾಯಣಗಳ ಕಥಾಜ್ಞಾನವನ್ನು ಉಪಾಧ್ಯಾಯರು ಮರೆಯುತ್ತಿದ್ದಾರೆ, ಸಾಮಾಜಿಕ ಕಾದಂಬರಿಗಳು ವಿಶೇಷವಾಗಿ ಇಂದಿನ ಜನಜೀವನದ ಚಿತ್ರಗಳಾಗಿವೆ. ಅವುಗಳು ನೀತಿಯನ್ನು ಸಾರಿದರೆ ಬಿಕರಿಯಾಗುವಂತಿಲ್ಲ. ಶಿಕ್ಷಣಾಧಿಕಾರಿಗಳು ಶಾಲೆಗಳ ವಾರ್ಷಿಕ ಪರೀಕ್ಷೆಗೆ ಬಂದಾಗ ನೈತಿಕ ಪಾಠಗಳ ಕಡೆಗೆ ಗಮನ ಕೊಡುವುದೇ ಇಲ್ಲ. 'ಎಷ್ಟು ಪ್ರಬಂಧಗಳಾಗಿವೆ? ಪದ್ಯ ಬಾಯಿಪಾಠ ಎಷ್ಟು ಬರುತ್ತಿದೆ? ಗಣಿತದ ಅಭ್ಯಾಸಗಳೆಷ್ಟಾಗಿವೆ? ಸರಕಾರಿ ಪರೀಕ್ಷೆಯಲ್ಲಿ ಸೇಕಡಾ ಎಷ್ಟು ಮಂದಿ ಪಾಸಾಗಿದ್ದಾರೆ? ಇವುಗಳ ಉತ್ತರಗಳೇ ಇಂದಿನ ಶಿಕ್ಷಣದ ತಿರುಳು. ಈಗ ಹೆಚ್ಚಿನ ಉಪಾಧ್ಯಾಯರೇ ದುರಾಚಾರಗಳ ಪಿಂಡಗಳು. (ಉಪಾಧ್ಯಾಯ ಬಂಧುಗಳು ಈ ಕರಿನಾ ವಾಕ್ಕಿಗಾಗಿ ನನ್ನನ್ನು ಕ್ಷಮಿಸಬೇಕು. ನಾನು ಸುಮಾರುತ್ತನಾಲ್ಕು ವರ್ಷಗಳಿಂದ ಅಧ್ಯಾಪಕನಾಗಿದ್ದು ಪ್ರತ್ಯಕ್ಷ ಕಂಡುಂಡ ವಿಷಯಗಳನ್ನಷ್ಟೇ ಬರೆಯುತ್ತಿದ್ದೇನೆ.) ಅವರಲ್ಲಿ ಕುಡುಕರೂ ಇದ್ದಾರೆ. ಇಂಥವರಿಂದ ಶಿಕ್ಷಣೋದ್ಧಾರವಾಗುವುದು ಹೇಗೆ?

ಗಾಂಧೀಜಿಯ ಗರಡಿಯಲ್ಲಾಡಿದ ಶ್ರೀ ವಿನೋಬ ಭಾವೆಯವರು ಭಾರತದ ಶಿಕ್ಷಣದ ಕುರಿತು ಹೀಗೆಂದಿದ್ದಾರೆ—ಭಾರತದಲ್ಲಿ ಜೀವನೋಪಯೋಗಿ ಜ್ಞಾನ ಸಿಕ್ಕದು. .. ..ನಮ್ಮ ದೇಶದಲ್ಲಿ ಬಡತನವಿದೆ; ಇದಕ್ಕಾಗಿ ನಾವಷ್ಟು ವ್ಯಸನಪಡುವುದಿಲ್ಲ. ಆದರೆ ಅಜ್ಞಾನವಿದೆ; ಅದರದೇ ದುಃಖ .....ನಮಗೆ ಅಜ್ಞಾನ ಸ್ಥಿತಿಯಲ್ಲಿರುವವರೇ ಕಲಿಸಿದ್ದಾರೆಂಬುದನ್ನು ಶಿಕ್ಷಿತಂದ ನಾವು ಮರೆಯಬಾರದು.....ಇಂದಿನ ಶಿಕ್ಷಿತರಿಗೆ ಬೇರೆಯುವರತ್ತ ನೋಡಲೂ ಸಮಯವಿಲ್ಲ.....ಇಂದು ಭಾರತದ ತುಂಬಾ ವ್ಯರ್ಥ ಶಿಕ್ಷಣದ ವಿಕ್ರಮ ಜಯಭೇರಿಯು ಬಾರಿಸಲ್ಪಡುತ್ತಿದೆ!" ಭಾರತದ ಇಂದಿನ ಶಿಕ್ಷಣಕ್ರಮವನ್ನು ಮೆಚ್ಚಿದವರೊಬ್ಬರೂ ಇಲ್ಲ; ಆದರೆ ಅದಕ್ಕೆ ಸ-ಸ್ವರೂಪ ಕೊಡುವ ಎದೆಗಾರಿಕೆ ಒಬ್ಬರಿಗೂ ಇಲ್ಲ!

ಮನಸ್ಸಿದ್ದಲ್ಲಿ ಮಾರ್ಗವೂ ಇದೆ. ಇಂದಿನ ಶಿಕ್ಷಣದಲ್ಲಿ ಉತ್ತಮ ಪೌರನಾಗಲು ಸತ್ಪ್ರಜೆಯಾಗಲು ಬೇಕಾದ ಗುಣಗಳಂಟುಮಾಡುವ ಪಠ್ಯಪುಸ್ತಕಗಳನ್ನು ಮೊದಲು ಧಾರ್ಮಿಕ ಶಿಕ್ಷಣ ತಜ್ಞರಿಂದ ಬರೆಸಬೇಕು. ಸಾಮಾನ್ಯವಾಗಿ ವಿದ್ಯಾರ್ಥಿದೆಸೆಯು ಮುಗಿಯುವ ವರೆಗೆ ಆಕ್ಷೇಪಲ ಗ್ರಂಥಗಳನ್ನು ಸ್ಪರ್ಶಿಸಲೂ ಬಾರದೆಂದು ನಿಷೇಧಿಸಬೇಕು. ವೀರ್ಯವನ್ನು ದೇಹದಲ್ಲಿ ಇಂಗಿಸಿಕೊಳ್ಳುವ ವಿಧಾನವನ್ನು ಅವರಿಗೆ ಕಲಿಸಬೇಕು. ಭಾರತೀಯರ ಗುಪ್ತ ಯೋಗ ಶಾಸ್ತ್ರದ ಪ್ರವಚನವು ಶಾಲೆಗಳಲ್ಲಿ ನಡೆಯಬೇಕು. ಪುರುಷ ಸಿಂಹರಾಗುವ ವಿಧಾನವನ್ನು ಬೋಧಿಸಬೇಕು. ಪ್ರತಿಯೊಂದು ಶಾಲೆಗೂ 'ಸೋಸೈಟಿಲ್' ಒಂದನ್ನಿಟ್ಟು ವಿದ್ಯಾರ್ಥಿಯು ಯಾವಾಗಲೂ ಉಪಾಧ್ಯಾಯರ ಕಣ್ಣುಮುಂದೆಯೇ ಇರುವಂತಾಗಬೇಕು. ಆಗ ಅವರ ಆರೋಗ್ಯದ ಹೊಣೆಯನ್ನು ಸರಕಾರವು ಹೊರಬೇಕು. ಹೋಸ್ಟೆಲಿನಲ್ಲೂ ಶಾಲೆಯಲ್ಲೂ 'ಟಿಸ್ಟು' ಜೀವಾಳವಾಗಬೇಕು. ವರ್ಷವೆಲ್ಲಾ ವಿದ್ಯಾರ್ಥಿಯ ನಡತೆಯ ಕಡೆಗೆ ಗಮನವಿಟ್ಟು ಉಪಾಧ್ಯಾಯರು, ಅವನಿಗೆ ಇತರ ವಿಷಯಗಳಂತೆ ಅದಕ್ಕೂ ಅಂಕಗಳನ್ನು ನೀಡಬೇಕು. ನೈತಿಕ ಪರೀಕ್ಷೆಯಲ್ಲಿ ತೇರ್ಗಡೆಯಾಗದವನು ಎಂತಹ ಮೇಧಾವಿಯಾದರೂ ಆ ಕಡೆಗೆ ಗಮನ ಕೊಡಬಾರದು; ಅವನು ಸಂಪೂರ್ಣ ತೇರ್ಗಡೆಯಾದನೆಂದು ಭಾವಿಸಬಾರದು. ಇಲ್ಲಿ ಮಕ್ಕಳ ನೀತಿಯನ್ನು ತೂಕಮಾಡುವ ಶಿಕ್ಷಕನು ಮಾತ್ರ ಆದರ್ಶನಾಗಿರಬೇಕೆಂಬುದನ್ನು ಮರೆಯಬಾರದು. ಅಶೋಕನು ದೇವಾನಾಂ ಪ್ರಿಯನಾದುದರಿಂದಲೇ ರಾಮರಾಜ್ಯವನ್ನು ಭಾರತದಲ್ಲಿ ಮರುಕಳಿಸಲು ಸಮರ್ಥನಾದನು.

ಯಾವ ವಿದ್ಯಾರ್ಥಿಯು ನೀತಿ ಪಾಠಗಳಲ್ಲಿ ಹೆಚ್ಚು ಅಂಕಗಳನ್ನು ತೆಗೆದುಕೊಳ್ಳುತ್ತಾನೇ ಅಂಥವನನ್ನೇ ಮುಂದೆ ಉಪಾಧ್ಯಾಯ ವರ್ಗಕ್ಕೆ ಕರೆದುಕೊಳ್ಳಬೇಕು. ಹೀಗೆ ಕೆಲವು ವರ್ಷಗಳ ಚುನಾವಣೆಯಿಂದಲೇ ರಾಷ್ಟ್ರದಲ್ಲಿ ಸಜ್ಜನರ ಸಂಖ್ಯೆಯು ಏರ ತೊಡಗುವುದು. ಇದೊಂದು ಬೆಕ್ಕಿಗೆ ಗಂಟೆ ಕಟ್ಟುವ ಈಸೋಪನ ಕಥೆಯಲ್ಲ. ಇದರಿಂದ ಕ್ರಮೇಣ ಲಂಚರುಷುವತ್ತುಗಳು ಅಡಗುವುವು. ಸಾರಾಂಶ—ಜನರ ಹೃದಯವನ್ನು ಪರಿವರ್ತಿಸುವ ಶಿಕ್ಷಣ ಬೇಕು. ಆಗ ಜನರಲ್ಲಿದ್ದ ಕುತ್ತಿಗೆ ಮುರಿಯುವ ವಿದ್ಯೆಯ ಅವಲು ತಗ್ಗುವುದು. ವಿದ್ಯಾಭ್ಯಾಸದಲ್ಲಿ ಸರಕಾರವು ನೀತಿಗೆ ಸ್ಥಾನ ಕೊಡದಿರುವುದೇ ದೇಶದ ಕೈತ್ಕೀಳಿಯ ಮುಖ್ಯ ಕಾರಣ. ಇಂದು ವಿದ್ಯಾರ್ಥಿಗಳೇ ಉಪಾಧ್ಯಾಯರಿಗೆ ಸುಡಿ, ಬೀಡಿ, ಸಿಗರೇಟುಗಳನ್ನು ತಂದು ಕೊಡುತ್ತಿದ್ದಾರೆ. ಉಪಾಧ್ಯಾಯರು ಬೀಡಿಯ ಮೇಲೆ ರಾಜಾ ರೂಡಿಯಾಗಿ ಬೀಡಿ ಸಿಗರೇಟುಗಳ ಹೊಗೆಯನ್ನು ಮಸಮಸನೆ ಹಾರಿಸುತ್ತಾ ತಿರುಗುತ್ತಿದ್ದಾರೆ! ಇದರಿಂದ ಗುರುವಿನಂತೆ ಶಿಷ್ಯರಾಗಿದ್ದಾರೆ. ಸರಕಾರವು ನೀತಿಯ ದಿವಾಳಿಯೂದ ಉಪಾಧ್ಯಾಯರನ್ನು ಮೊದಲು ಎಚ್ಚರಿಸಬೇಕು.

ಭಾರತದ ಮುಖಂಡರಾದ ಶ್ರೀ ರಾಜೇಂದ್ರ ಪ್ರಸಾದರೂ, ರಾಜಗೋಪಾಲಾಚಾರ್ಯರೂ, ಡಾ! ರಾಧಾಕೃಷ್ಣನ್ನರೂ, ಪೂಜ್ಯರಾದ ವಿನೋಬಾ ಭಾವೆಯವರೂ ಶಿಕ್ಷಣದಲ್ಲಿ ನೀತಿಯ ದಿವಾಳಿಯ ಕುರಿತು ಟೀಕಿಸಿ ಭಾಷಣ ಮಾಡುತ್ತಿದ್ದಾರೆ. ಆದರೆ ಶಿಕ್ಷಣಾಂಗದಲ್ಲಿನ್ನೂ ನೀತಿಯು ತಲೆಯೆತ್ತಿ ತಿರುಗುವಂತಾಗಿಲ್ಲ. ವರ್ಷ ಹೋದಂತೆ ಸರಕಾರವು ಹೊಸ ವಿಷಯಗಳನ್ನು ಶಿಕ್ಷಣದಲ್ಲಿ ತುರುಕಿಸಿ ಮುಂದಿನ ಜನಾಂಗವನ್ನು ಯಂತ್ರವನ್ನಾಗಿ ನಿರ್ಮಾಣ ಮಾಡುತ್ತಿದೆ. ವಿಜ್ಞಾನ ಮೊದಲಾದ ವಿಷಯಗಳೊಡನೆ ಮನುಷ್ಯನ ಹೃದಯಕ್ಕೂ ಶಿಕ್ಷಣವಿತ್ತರೆ ಆಗ ಸಂಪೂರ್ಣ ಶಿಕ್ಷಣವಾಗುವುದು.

ಭಾರತೀಯರಿಗೆ ಪೂಜ್ಯ ಗಾಂಧೀಜಿಯ ಹೆಸರನ್ನೆತ್ತುವುದೂ, ಅವರ ಮಾತು

(೧೯ನೇ ಪುಟ ನೋಡಿರಿ)

ಸ್ವಾತಂತ್ರ್ಯವೂ ಆಯುರ್ವೇದವೂ

ಸ್ವಾತಂತ್ರ್ಯೋತ್ಸವ ಭಾರತದಲ್ಲಿ ಆಯುರ್ವೇದದ ಬಗ್ಗೆ ಸರಕಾರ ತಳೆಯುತ್ತಿರುವ ಧೋರಣೆ ಅಸಮಂಜಸ. ಅಲೋಪಥಿಯನ್ನು ಮುಗಿಲೆತ್ತರಕ್ಕೆ ಎತ್ತುವುದಕ್ಕಾಗಿ ಆಯುರ್ವೇದವನ್ನು ಪಾತಾಳಕ್ಕೆನೂಕುವ ಪಿತ್ಯಾಸವು ಸಲ್ಲದು.

ಡಾ| ಎಂ. ಗೋಪಾಲಕೃಷ್ಣ ರಾವ್, ಎಲ್. ಎ. ಎಂ ಎಸ್.

ಭಾರತಕ್ಕೆ ಸ್ವಾತಂತ್ರ್ಯ ಬಂದು ಹದಿನಾಲ್ಕು ವರ್ಷಗಳಾದವು. ಈ ಹದಿನಾಲ್ಕು ವರ್ಷಗಳಂದಲೂ ನಾನು ಯೋಚಿಸುತ್ತಿದ್ದೇನೆ; ಮಿನಿಸ್ಟರುಗಳ ಭಾಷಣ, ಘೋಷಣಗಳನ್ನು ಕೇಳುತ್ತಿದ್ದೇನೆ. ಆದರೂ ನಮ್ಮ ಭಾರತೀಯ ಸರಕಾರವು ಆಯುರ್ವೇದಕ್ಕಾಗಿ ವೆಚ್ಚಿಸುತ್ತಿರುವ ಹಣದ ಉದ್ದೇಶವು ಆಯುರ್ವೇದೋದ್ಧಾರಕ್ಕಾಗಿದೆಯೋ, ಆಯುರ್ವೇದ-ಸಂಹಾರಕ್ಕಾಗಿದೆಯೋ, ಎಂದು ನನಗಿನ್ನೂ ತಿಳಿಯಲಿಲ್ಲ. ಆಯುರ್ವೇದಕ್ಕೆ ಸಂಬಂಧಿಸಿದ ಶಾಸನಗಳ, ಕಮಿಟಿಗಳ, ಯೋಜನೆಗಳ ರಚನೆಯಲ್ಲಿ ಸಹ, ಸರಕಾರವು ಆಯುರ್ವೇದದ ಉನ್ನತಿಯನ್ನುಗುರಿಯಾಗಿರಿಸಿಕೊಂಡಿದೆಯೋ ಅಥವಾ ಆಯುರ್ವೇದವನ್ನು ಜನತೆಯ ಎದುರಿನಲ್ಲಿ ಜಗತ್ತಿನ ಎದುರಿನಲ್ಲಿ ಅಪಹಾಸ್ಯಕ್ಕೊಳಪಡಿಸುವ ಗುರಿಯರಿಸಿಕೊಂಡಿದೆಯೋ, ಎಂಬುದು ತಿಳಿಯಲಿಲ್ಲ.

ಮಂತ್ರಿಮಂಡಲದಲ್ಲಿಯ ಯಾವ ಮಂತ್ರಿಗಳೇ ಆಗಲಿ ಸರಕಾರದ ಹಿರಿಮೆಯ ಹೊಗಳಿಕೆಯನ್ನು ದೇವರ ಪ್ರಾರ್ಥನೆಗಿಂತ ಹೆಚ್ಚಾಗಿ ಮಾಡುತ್ತಿರುವ ಯಾವ ಕಾಂಗ್ರೆಸ್ ಆಗಲಿ, ಈ ಹದಿನಾಲ್ಕು ವರ್ಷಗಳಲ್ಲಿ ಕಾಂಗ್ರೆಸ್ ಸರಕಾರವು ಆಯುರ್ವೇದಕ್ಕೆ "ಇಂತಹದೊಂದು ಉಪಕಾರ ಮಾಡಿದೆ" ಎಂದು ಎತ್ತಿ ತೋರಿಸಬೇಕೆಂದು ನಾನು ಅಹ್ವಾನಸೂರ್ವಕವಾಗಿ ಕೇಳುತ್ತೇನೆ. ಹತ್ತು ಕಮಿಟಿಗಳನ್ನು ರಚಿಸಿರಬಹುದು; ಇಪ್ಪತ್ತು ಶಾಸನಗಳನ್ನು ರಚಿಸಿರಬಹುದು ಆದರೆ ಅದರಿಂದ ಆಯುರ್ವೇದದ ಅಥವಾ ಆಯುರ್ವೇದಿಯರ ಸ್ಥಿತಿ ಉತ್ತಮಗೊಂಡಿದೆಯೇ? ಸರಕಾರವು ಕೈಕೊಳ್ಳುವ ಯಾವುದೊಂದು ಯೋಜನೆಯ ಉದ್ದೇಶವನ್ನು ಪರಿಣಾಮದಿಂದ ತಿಳಿಯಬೇಕಲ್ಲದೆ ಬರಿ ಭಾಷಣ, ಘೋಷಣೆಗಳಿಂದಲ್ಲವಷ್ಟೆ! ಈ ಸ್ವಾತಂತ್ರ್ಯೋತ್ಸವ ಹದಿನಾಲ್ಕು ವರ್ಷಗಳಲ್ಲಿ ಆಯುರ್ವೇದೀಯರ ಸ್ಥಿತಿಯು ಕ್ರಮವಾಗಿ ಕೆಡುತ್ತಲೇ ಹೋಗಿದೆ; ಎಂದು ಪರಿಶೀಲನಾಂತ್ಯದಲ್ಲಿ ಸಿದ್ಧವಾದರೆ, ಸರಕಾರದ ಆಯುರ್ವೇದೋದ್ಧಾರಕ ಮಸಿತು, ಕೃತಿಗಳ ಹಿನ್ನೆಲೆಯಲ್ಲಿ ಆಯುರ್ವೇದದ ಕತ್ತು ಹಿಚುಕುವ ಉದ್ದೇಶವೇ ಇದೆಯೆಂದು ಒಪ್ಪಲೇಬೇಕಷ್ಟೆ!

(೧) 'ಆಯುರ್ವೇದವು ಒಂದು ಭಾರತೀಯ ಶಾಸ್ತ್ರ' ಎಂಬ ಕಾರಣದಿಂದ ಮಾತ್ರ ಅದಕ್ಕೆ ಸರಕಾರವು ಪ್ರೋತ್ಸಾಹ ಕೊಡುತ್ತಿದೆಯೇ? ಅದೊಂದೇ ಕಾರಣವಾಗಿದ್ದರೆ ಸರಕಾರವು ಆಯುರ್ವೇದಕ್ಕಾಗಿ ಹಣವನ್ನು ವೆಚ್ಚಿಸುತ್ತಿದ್ದರೆ ಅದು ಬಡ ಬೋರೇ ಗೌಡನ ಸುಲಿಗೆಯೆನಿಸೀತು! ಆಯುರ್ವೇದವು ಮಿಕ್ಕ ವೈದ್ಯ—ಪದ್ಧತಿಗಳಿಗಿಂತ ಶ್ರೇಷ್ಠವೆಂಬ ಅಭಿಪ್ರಾಯವು ಸರಕಾರಕ್ಕಿಲ್ಲದಿದ್ದರೆ ಅದನ್ನು ಪ್ರೋತ್ಸಾಹಿಸುವುದು ದುರಭಿಮಾನವೆನಿಸುವುದು; ಆದಕ್ಕೆ ವೆಚ್ಚಿಸಿದ ಹಣವು ರಾಷ್ಟ್ರ ಸಂಪತ್ತಿನ ಅಪವ್ಯಯವೆನಿಸುವುದು; ಅಯೋಗ್ಯ ವೈದ್ಯ ಶಾಸ್ತ್ರವನ್ನು ಉಳಿಸಿ ರೋಗಿಗಳ ಕೊಲೆ ಮಾಡಿದಂತಾಗುವುದು. ಆದ್ದರಿಂದ ಆಯುರ್ವೇದವು ಸರ್ವಶ್ರೇಷ್ಠ ಚಿಕಿತ್ಸಾ ವಿಜ್ಞಾನವಲ್ಲವೆಂದು ಸರಕಾರವು ತಿಳಿದಿದ್ದರೆ ದೇಶದಲ್ಲಿಯ ಆಯುರ್ವೇದ ವಿದ್ಯಾಲಯಗಳನ್ನೂ ಚಿಕಿತ್ಸಾಲಯಗಳನ್ನೂ ಕೂಡಲೇ ಮುಚ್ಚಿಸಿ ಅವುಗಳಿಗೆ ಅಪವ್ಯಯಿಸುತ್ತಿರುವ ಹಣವನ್ನು ಸರ್ವಶ್ರೇಷ್ಠವಾದ ಯಾವುದಾದರೂ ವೈದ್ಯ ಪದ್ಧತಿಗೆ ವೆಚ್ಚಿಸಲಿ. ಪುಢಾರಿಗಳೂ ಮಂತ್ರಿಗಳೂ ಆಯುರ್ವೇದವನ್ನು ಹೊಗಳುವ ಆತ್ಮ ವಂಚನೆಯನ್ನು ಸಲ್ಲಿಸಲಿ. ಇಲ್ಲದಿದ್ದರೆ ಚುನಾವಣೆಗಳಲ್ಲಿ ಆಯುರ್ವೇದ ಪ್ರೇಮಿಗಳ ಓಟುಗಳನ್ನು ಕಳೆದುಕೊಳ್ಳಬಾರದೆಂಬುದೇ ಆಯುರ್ವೇದ ಪ್ರೋತ್ಸಾಹನದಲ್ಲಿ ಸರಕಾರದ ಧ್ಯೇಯವಾಗಿದೆಯೆಂದು ಆರೋಪಿಸಿದರೆ ಶಪ್ಪೇನು!

ಆಯುರ್ವೇದವು ಕೇವಲ ಭಾರತೀಯವೆಂಬ ಒಂದೇ ಕಾರಣದಿಂದ ಅದಕ್ಕೆ ಪ್ರೋತ್ಸಾಹವೀಯುವ ಅಗತ್ಯವಿಲ್ಲ. ಸತೀ ಸಹಗಮನವನ್ನು ತೊಡೆದು ಹಾಕಲಿಲ್ಲವೇ; ಅಸ್ಪೃಶ್ಯತೆಯನ್ನು ನಾಶ ಮಾಡುತ್ತಿಲ್ಲವೇ; ವಿಧವೆಯರ ಮೇಲಿನ ಅತ್ಯಾಚಾರಗಳನ್ನು ತಡೆದು ಅವರಿಗೆ ಆಸ್ತಿಯ ಹಕ್ಕುಗಳನ್ನು ಕೊಡಲಿಲ್ಲವೇ; ವರದಕ್ಷಿಣೆಯನ್ನು ಮಟ್ಟ ಹಾಕಲಿಲ್ಲವೇ; ಮಠ-ದೇವಸ್ಥಾನಗಳ ಆಸ್ತಿಗಳನ್ನು ಕಸಿದುಕೊಳ್ಳುತ್ತಿಲ್ಲವೇ; ಜಮೀನುದಾರರಿಗೆ ಭಿಕ್ಷಾಪಾತ್ರೆಯನ್ನು ಕೊಡುತ್ತಿಲ್ಲವೇ; ರಾಜ-ಮಹಾರಾಜರುಗಳನ್ನು ಬೀದಿಗೆ ಬೀಳಿಸಲಿಲ್ಲವೇ; ಮತ್ತೆ, ಆ ಪಾಪಿ ಆಯುರ್ವೇದವೊಂದನ್ನು ಉಳಿಸುವುದೇಕೆ? ಅದನ್ನು ಕೂಡಲೇ ಪಾತಾಳಕ್ಕೆ ಮೆಟ್ಟದಿದ್ದರೆ ಸರಕಾರವು ನಿರ್ಲಜ್ಜವೆನಿಸೀತು! ಜನಹಿಂಸಾಕಾರಿಯೆನಿಸೀತು!

(೨) ಆಯುರ್ವೇದವು ಸರ್ವಶ್ರೇಷ್ಠ ವೈದ್ಯ ವಿಜ್ಞಾನವೆಂಬ ಅಭಿಪ್ರಾಯದಿಂದಲೇ ಸರಕಾರವು ಅದನ್ನು ಪ್ರೋತ್ಸಾಹಿಸುತ್ತಿದೆಯೆ? ಅಹುದಾದರೆ ಈಗ ಸರಕಾರವು ಅದಕ್ಕೆ ಕೊಡುತ್ತಿರುವ ಧನ ಸಹಾಯವು ಆಯುರ್ವೇದದ ಸರ್ವಶ್ರೇಷ್ಠತೆಯನ್ನು ಪ್ರತ್ಯಕ್ಷ ಕಾರ್ಯದಿಂದ ತೋರಿಸಿ ಕೊಡಲು ಸಾಕೇ? ಪಂಚವಾರ್ಷಿಕ ಯೋಜನೆಯಲ್ಲಿ ೨೬೦ ಕೋಟಿ ರೂಪಾಯಿಗಳನ್ನು ಅಲೋಪಥಿಗೆ ಕೊಟ್ಟು ಆಯುರ್ವೇದಯುನಾನಿ, ಹೊಮಿಯೊಪಥಿ ಈ ಮೂರಕ್ಕೂ ಸೇರಿ ೨ ಕೋಟಿ ಮಾತ್ರ ಕೊಟ್ಟರೆ ಆಯುರ್ವೇದದ ಸರ್ವಶ್ರೇಷ್ಠತೆ ಹೇಗೆ ತೋರಿಸಿ ಕೊಡಬೇಕು? ಮಧ್ಯಪಾನ ನಿರೋಧದ ಹೆಸರಿನಲ್ಲಿ ಅನಾರಿಷ್ಟಗಳ ತಯಾರಿಕೆ, ಮಾರಾಟಗಳ ವ್ಯವಹಾರಗಳನ್ನು ಹೆಡಮುರಿಗೆ ಕಟ್ಟುವ ಶಾಸನಗಳನ್ನು ಮಾಡಿದರೆ ಆಯುರ್ವೇದವು ಸರ್ವಶ್ರೇಷ್ಠತೆಯನ್ನು ಹೇಗೆ ಸಿದ್ಧಪಡಿಸಿ ತೋರಿಸಬೇಕು? ಆಯುರ್ವೇದದ ಗಂಧ—ಗಾಳಿ ಕೂಡ ಇಲ್ಲದ ಮತ್ತು ಆಯುರ್ವೇದದ ಬಗ್ಗೆ ಸಾಕಷ್ಟು ಸದಭಿಪ್ರಾಯವಿಲ್ಲದವರ ಕೈಗೆ ಆಯುರ್ವೇದ ಯೋಜನೆಗಳನ್ನು ನಿರ್ಮಿಸುವ ಅಧಿಕಾರವನ್ನು ಕೊಟ್ಟರೆ ಆಯುರ್ವೇದವು ತನ್ನ ಶ್ರೇಷ್ಠತೆಯನ್ನು ಹೇಗೆ ಪ್ರಕಾಶಪಡಿಸಬೇಕು? ಅಲೋಪಥಿಯ ವಿಷಯಗಳನ್ನೆಲ್ಲ ಒಬ್ಬ ಆಯುರ್ವೇದ ವೈದ್ಯರ ಕೈಗೆ ಕೊಡುವ ಧೈರ್ಯವನ್ನು ಕಾಂಗ್ರೆಸ್ ಸರಕಾರವೆಂದಾದರೂ ಮಾಡಿದೆಯೇ? ಆಯುರ್ವೇದದ ವಿಷಯದಲ್ಲಿ ಮಾತ್ರ ಆ ಮೂರ್ಖತನವೇಕೆ?

"ಜನಸಾಮಾನ್ಯರು ಅಲೋಪಥಿ ಆಸ್ಪತ್ರೆಗಳನ್ನೇ ಕೊಡಿರೆಂದು ಕೇಳುತ್ತಾರೆ; ಆಯುರ್ವೇದವನ್ನು ಬೇಡುವುದಿಲ್ಲ; ಆದ್ದರಿಂದ ಆಯುರ್ವೇದಕ್ಕೆ ಅಲೋಪಥಿಯಷ್ಟು ದುಡ್ಡನ್ನು ಕೊಡುವುದು ಹೇಗೆ ಸಾಧ್ಯ?" ಎಂದು ಹೇಳುವವರಿದ್ದಾರೆ. ಜನರು ಯಾವುದನ್ನು ಬೇಡುತ್ತಾರೆಂಬುದನ್ನು ನಿರ್ಧರಿಸಲು ಇವರು ಯಾವ ಉಪಾಯವನ್ನು ಅನುಸರಿಸಿದರೆಂಬುದು ನಮಗಿನ್ನೂ ತಿಳಿದಿಲ್ಲ. ಆದರೆ ಬರಬರುತ್ತ ಜನತೆಗೆ ಆಯುರ್ವೇದದ ವಿಷಯದಲ್ಲಿ ತಿರಸ್ಕಾರ ಹುಟ್ಟುವಂತೆ ಮಾಡಿದ್ದು ಸರಕಾರವೇ ಅಲ್ಲವೆ? ಅನೇಕ ಮೂರ್ಖ ಶಾಸನಗಳನ್ನು ರಚಿಸಿ ಆಯುರ್ವೇದದ ಉಸಿರು ಕಟ್ಟಿಸಲಾಗುತ್ತಿದೆ; ಆಯುರ್ವೇದ ಆಸ್ಪತ್ರೆಗಳು ಕತ್ತೆಯ ಕೊಟ್ಟಿಗೆಗಳಿಗಿಂತ ಕಡೆಯಾಗಿರುವಂತೆ ಮಾಡಲಾಗಿದೆ; ಆಯುರ್ವೇದ ವೈದ್ಯರಿಗೆ ಭಿಕ್ಷುಕರಸಂಬಾಧನೆಗಿಂತ ಕಡಿಮೆ ಸಂಬಳ ಕೊಡಲಾಗುತ್ತಿದೆ; ಆ ವೈದ್ಯರ ಜುಟ್ಟು ಸಿವಿಲ್ ಸರ್ಜನ್ ಅಥವಾ ಸ್ಯಾನಿಟರಿ ಇನ್‌ಸ್ಪೆಕ್ಟರನ ಕೈಯಲ್ಲಿ ಕೊಡಲಾಗುತ್ತಿದೆ; ಆಯುರ್ವೇದ ಆಸ್ಪತ್ರೆಗಳಿಗೆ ಕಟ್ಟಡಗಳಾಗಲಿ, ಕಂಪೌಂಡರುಗಳಾಗಲಿ, ಸೇವಕರಾಗಲಿ ಅಗತ್ಯವೇ ಇಲ್ಲವೆಂದು ಸರಕಾರ ಭಾವಿಸಿದೆ; ಒಂದೊಂದು ಆಸ್ಪತ್ರೆಗೆ ಒಂದು ತಿಂಗಳ ಔಷಧಗಳಿಗಾಗಿ ೨೫-೩೦ರೂಪಾಯಿಗಳಷ್ಟು ಧಾರಾಳವಾದ ವೆಚ್ಚವನ್ನು ಕೊಡಲಾಗುತ್ತಿದೆ. ಇಂತಹ ತಿಂಡಿ ರೂಪವನ್ನು ಆಯುರ್ವೇದಕ್ಕೆ ಕೊಟ್ಟರೆ ಜನಸಾಮಾನ್ಯರು ಅದನ್ನು ಹೇಗೆ ಬೇಡುವುದು?

ಈಗಾಗಲೇ ಅನೇಕ ಶತಮಾನಗಳಿಂದ ಹಳ್ಳಿಗಳ ಸೇವೆ ಮಾಡುತ್ತಿದ್ದ ಆಯುರ್ವೇದ ವೈದ್ಯರ ನಿರ್ನಾಮ ಮಾಡಲು ಹೆಲ್ತ್ ಯೂನಿಟ್‌ಗಳನ್ನು ಹಳ್ಳಿಗಳಿಗೆ ಕಳಿಸಲಾಗುತ್ತಿದೆ. ಆಯುರ್ವೇದ ಪದವೀಧರರಿಗೇ ಹೆಲ್ತ್ ಯೂನಿಟಿಗೆ ಅವಶ್ಯಕವಾದ ವಿಷಯಗಳಪ್ರಶಿಕ್ಷಣವನ್ನುಕೊಟ್ಟುಅವರನ್ನೇ ಹೆಲ್ತ್‌ಯೂನಿಟ್‌ಗಳಲ್ಲಿ ಸೇರಿಸಿಕೊಳ್ಳಿರೆಂಬ ಸೂಚನೆಯು ಸರಕಾರಕ್ಕೆ ಪಥ್ಯವೆನಿಸುವುದಿಲ್ಲ. ಕಡಿಮೆ ವೆಚ್ಚದ ಸೂಚನೆ ಹೇಗೆ ಪಥ್ಯವಾದೀತು! ಅವರಿಗೆ ಅಲೋಪಥಿ ದೇವತೆಗೆ ಕೊಟ್ಟಾವಧಿ ಪೆಚ್ಚಿಸುವಹುಚ್ಚು ತಲೆಗೇರಿದೆ. ಹಳ್ಳಿಗಳಿಗೆ ಹೋಗಲು ಒಲ್ಲೆ! ಒಲ್ಲೆವೆಂದು ಗೋಳಿಡುವ ಡಾಕ್ಟರುಗಳಿಗೆ "ಸಂಬಳ ಹೆಚ್ಚು ಕೊಡುತ್ತೇವೆ; ವಾಹನ ಕೊಡುತ್ತೇವೆ; ಮನೆಕೊಡುತ್ತೇವೆ (ಮದುವೆ ಮಾಡುತ್ತೇವೆ)" ಎಂದು ಸರಕಾರವು ಮೊರೆಯಿಟ್ಟು ಪ್ರಾರ್ಥಿಸುತ್ತಿದೆ. ಒಂದು ಮೆಡಿಕಲ್ ಕಾಲೇಜ್ ಪ್ರಾರಂಭಿಸ

(ಜನೇ ಪುಟ ನೋಡಿರಿ)

ಭಾರತ ಸ್ವಾತಂತ್ರ್ಯೋತ್ಸವದ
ಇಂದಿನ ಶುಭ ದಿನದಲ್ಲಿ ನಮ್ಮ ಗ್ರಾಹಕರಿಗೂ ಹಿತೈಷಿಗಳಿಗೂ
ಹೃತ್ಪೂರ್ವಕ ಶುಭ ಸಂತೋಷವನ್ನು ಬಯಸುವೆವು.

ಸಾರೀ ಎಂಪೋರಿಯಮ್
ಕಥೋಲಿಕ್ ಕ್ಲಬ್ಬಿನ ಎದುರು
ಹಂಪನಕಟ್ಟಾ - - - ಮಂಗಳೂರು

● ನೀವು ಅಪೇಕ್ಷಿಸುತ್ತಿರುವ ಯಾವತ್ತೂ ಮಿಲ್ ವಸ್ತ್ರಗಳ ಮೇಲೆ ಮಿಲ್ ಛಾಪಿತ ದರಗಳಿರುವುದನ್ನು ನೀವು ಕಾಣುವಿರಿ.

●● ಹತ್ತಿಯ ಹಾಗೂ ಸಿಲ್ಕಿನ ಸೀರೆಗಳು — ಎಲ್ಲವೂ ವಿವಿಧ ಮಾದರಿಗಳಲ್ಲಿ ಮತ್ತು ಮನೋಹರ ಬಣ್ಣಗಳಲ್ಲಿ — ನಿಶ್ಚಿತ ಬೆಲೆಯಲ್ಲಿ ಸಿಗುವುವು.

●●● ನಿಮ್ಮ ಉತ್ತಮ ಆಯ್ಕೆಗೆ ಯೋಗ್ಯವೆಂದೆನಿಸಿದೆ— ಬನಾರಸ್— ಕಾಶ್ಮೀರ್, ಬೆಂಗಳೂರು, ಬಂಗಾಳ, ಧರ್ಮಾವರಂ, ಕಾಂಜೀವರಂ ರೇಶ್ಮೆ ಸೀರೆಗಳು — ಮತ್ತು

ಕೊಯಮುತ್ತೂರು, ಮಧುರಾ, ಸೇಲಂ, ಮುಂಬಾಯಿ ಬೆಳಗಾಂ ಮತ್ತು ಉತ್ತರ ಪ್ರದೇಶದ ಹತ್ತಿ ನೂಲಿನ ಸೀರೆಗಳು ಸರ್ವೋತ್ಕೃಷ್ಟವಾಗಿವೆ.

ಯಾವತ್ತೂ ತರದ ಶರ್ಟಿಂಗ್, ಕೋಟಿಂಗ್, ಜಿಂಟ್ಸ್, ಸಿಲ್ಕ್, ಸ್ಕೈಲಾನ್ ಇತ್ಯಾದಿ ಬಟ್ಟೆಬರೆಗಳು ಸದಾ ದೊರೆಯುತ್ತವೆ.

— ಇಂದೇ ಸಂದರ್ಶಿಸಿರಿ —

SAREE EMPORIUM
Opp: Catholic Club,
HAMPANKATTA -- MANGALORE

ಭಾರತ ಸ್ವಾತಂತ್ರ್ಯೇತಿಹಾಸದ ಪಕ್ಷಿನೋಟ

ಭಾರತವು ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವಾಗ ಇಲ್ಲಿನ ನರನಾರಿಯರಲ್ಲಿ ಉತ್ಸಾಹ, ಇಚ್ಛಾಶಕ್ತಿ, ಧೈರ್ಯ, ಸಾಹಸಗಳೆಲ್ಲವೂ ಅಸೀಮವಾಗಿದ್ದುವು; ಇವುಗಳ ಬಲದಿಂದಲೇ ಅಹಿಂಸಾರೂಪಿ ಕದನದಲ್ಲಿ ನಾವು ಗೆದ್ದೆವು. ಸ್ವತಂತ್ರ ಭಾರತದ ಪುನಾರಚನೆಯ ಮಹಾ ಕಾರ್ಯದಲ್ಲೂ ಇವೆಲ್ಲವುಗಳ ಆವಶ್ಯಕತೆ ಅವಶ್ಯವಿದೆ.

"ರಂಜನೆ", ಬೆಂಗಳೂರು.

"ಸ್ವಾತಂತ್ರ್ಯ" ಪ್ರತಿಯೊಂದು ಜೀವಿಯೂ ಚಿರಕಾಲ ಅನುಭವಿಸ ಬಯಸುವ ಮನೋನೇತ್ರಕ ಸಂವೇದನೆ. ಆದಿಮಾನವನ ಸ್ವತಂತ್ರ ಜೀವನ ಸಂಗ್ರಾಮವಲ್ಲಿ ಅತ ಅರಿತ ಮೂಲ ಅರ್ಥ "ಸಮರಸದ ಸಂಘ ಜೀವನವೇ ಸ್ವಾತಂತ್ರ್ಯ."

ಸ್ವಾತಂತ್ರ್ಯ ಬಯಸದಿರುವ ಜೀವಿಗಳು ಜಗತ್ತಿನಲ್ಲಿ ಕಾಣ ಸಿಗುವುದಿಲ್ಲ. ಹೊಸಲು ದಾಟಲೆತ್ನಿಸಿದ ಪುಟ್ಟ ಮಗುವನ್ನು ತಾಯಿ ಕಂಡು ಒಳಗೆಳೆದು ತಂದಾಗ ಅದು ತನ್ನಇಚ್ಛೆಗೆ ವಿರುದ್ಧವಾಯಿತೆಂದು ಅಳುತ್ತದೆ, ಮುಖವನ್ನು ಕುಗ್ಗಿಸುತ್ತದೆ. ಮತ್ತೇನನ್ನೂ ಮಾಡಲು ಅದಕ್ಕೆ ಶಕ್ತಿಯಿರುವುದಿಲ್ಲ. ಮನೆಯಲ್ಲಿ ಸರ್ವ ಸ್ವಾಮಿತ್ವಕ್ಕೆ ಸ್ತ್ರೀ ಆಶಿಸಿದರೆ ಬಾಹ್ಯ ಜಗತ್ತಿನಲ್ಲಿ ಅದನ್ನೇ ಪುರುಷ ಬಯಸುತ್ತಾನೆ.

"ಸ್ವಾತಂತ್ರ್ಯ" ಜಗತ್ತಿನ ನರನಾಡಿಗಳಲ್ಲೆಲ್ಲಾ ಒಕ್ಕೊರಲಿನಿಂದ ಮೂಡಿ ಬರುತ್ತಿರುವ ಏಕೈಕ ಪದವಾಗಿದೆ. 'ಸ್ವಾತಂತ್ರ್ಯ'ವೆಂದು ಹೋರಾಡಿದ—ಸ್ವಾತಂತ್ರ್ಯ ಬೇಕೆಂದು ಬಯಸಿದ ಅತಿ ಪುರಾತನ ದೇಶಗಳಲ್ಲಿ ಭಾರತವೇ ಮೊದಲನೆಯದಾಗಿದೆ—ಮಹತ್ವದ್ದಾಗಿದೆ.

ಭರತನ ನಂತರ ಸಂಪೂರ್ಣ—ಭಾರತ ಯೂರೋಪ್ಯರ ಸಿರಿಕಂಠ ಅಳ್ಳಿಕೆಗೂ ಒಳಪಟ್ಟಿರಲಿಲ್ಲ. ದೊಡ್ಡ ಚಕ್ರಾಧಿಪತ್ಯ ಕಟ್ಟಿ ಆಳಿದ ಮೊಗಲರಿಗೂ ದಕ್ಷಿಣದ ಲೆಕ್ಕವಿಲ್ಲದಷ್ಟು ಪ್ರದೇಶಗಳು ಮಣಿಯಲಿಲ್ಲ. ಪ್ರಾಂತ್ಯ—ಪ್ರಾಂತ್ಯಕ್ಕೂ, ರಾಜ್ಯ—ರಾಜ್ಯಕ್ಕೂ ಒಬ್ಬೊಬ್ಬ ರಾಜನಿರುತ್ತಿದ್ದ ಈ ಭಾರತದ ಇತಿಹಾಸದಲ್ಲಿ ಯಾವ ವರುಷದಲ್ಲೇ ಆಗಲಿ ಒಂದಲ್ಲ ಒಂದು ರಾಜ್ಯದಲ್ಲಿ ಯುದ್ಧ ನಡೆಯುತ್ತಲೇ ಇತ್ತು. ಒಬ್ಬ ರಾಜನಲ್ಲಿ, ಮತ್ತೊಬ್ಬ ರಾಜ ಪರಾಕ್ರಾಂತ ಮಾಡುತ್ತಲೇ ಇದ್ದ, ಅಲ್ಲನೇ ಹೊರಗಿನವರ ಭೀತಿ ಉತ್ತರ ಭಾರತಕ್ಕೆ ತಪ್ಪಿದ್ದಿರಲಿಲ್ಲ. ಅಂತೆಯೇ ಸಂಪೂರ್ಣ ಭಾರತ ಯೊಂದು ವರ್ಷದಲ್ಲೇ ಆಗಲಿ ಬ್ರಿಟಿಷರ ಅಳ್ವಿಕೆ ಬರುವುದಕ್ಕೆ ಮುಂಚೆ ಕಲಹಗಳಿಲ್ಲದೇ ಶಾಂತಿಯುತವಾಗಿ ಜೀವಿಸಿದ್ದಿಲ್ಲ. ಅಂತಹ ಜೀವನವನ್ನು ಕೊನೆಗಾಣಿಸಿ ಭಾರತವನ್ನು ಅನೇಕ ಶತಮಾನಗಳ ಬಳಿಕ ಒಕ್ಕೂಡಿಸಿ ಒಂದೇ ಸ್ವಾಮಿತ್ವ ಗಳಿಸಿಕೊಂಡ ಕೀರ್ತಿ ನಿಜಕ್ಕೂ ಬ್ರಿಟಿಷರಿಗೆ ಸಲ್ಲುವುದು.

ಭಾರತದಲ್ಲಿ ಸ್ವಾತಂತ್ರ್ಯ ಪ್ರಿಯರಿದ್ದಿರದಿರಲಿಲ್ಲ. ಪ್ರತಿಯೊಂದು ರಕ್ತಕಣದಲ್ಲೂ ಸ್ವಾತಂತ್ರ್ಯ ಪ್ರಿಯತೆ ಇದ್ದೇ ಇತ್ತು. ಆದರೆ ವಾತಾವರಣ, ಸಹವಾಸ ಅವರಿಗೆ ಸಹಕಾರಿಯಾಗಿರಲಿಲ್ಲ. ಕೆಲವರಿಗೆ ತಮ್ಮ ರಾಜ್ಯದ ಮಟ್ಟಿಗೆ ಮಾತ್ರ ಪ್ರೀತಿ-ನಿಷ್ಠೆಗಳಿದ್ದರೆ, ಪರರಾಜ್ಯದ ಅವನತಿಗಾಗಿಯೇ ಹೃದಯ ಮಿಡಿಯುತ್ತಿದ್ದವರು ಲೆಕ್ಕವಿಲ್ಲದಷ್ಟಿದ್ದರು. ಸಮಗ್ರ ಭಾರತಕ್ಕೆ ಸ್ವಾಮಿಯೊಬ್ಬನನ್ನು ಆರಿಸಲು ಎಂದೂ ಜನತೆಯ ಮನ ಹರಿದಿರಲಿಲ್ಲ. ಅಂತೆಯೇ ಪರಕೀಯರ ಕುತಂತ್ರಿಕೆಯ ಸುಳಿಗೆ ಸಿಕ್ಕ ಭಾರತ ಅವರ ವಾದತಲದಲ್ಲಿ ನೊಂದು ಬರಡಾಗಬೇಕಾಯ್ತು.

ಭಾರತದ ದಾಸ್ಯಕ್ಕೆ ಯೊವನೊಬ್ಬ ಭಾರತೀಯನೂ ಕಾರಣನಲ್ಲ ಬರ್ನಾರ್ಡ್ ಷಾ ರೆಂದಂತೆ

"....ಬುದ್ಧಿವಂತರು, ದೇಶ ದ್ರೋಹಿಯೆಂಬ ಪದವನ್ನೇ ಉಪಯೋಗಿಸುವುದಿಲ್ಲ, ಕಾರಣ ತನ್ನ ದೇಶದ ಸ್ವಾತಂತ್ರ್ಯಕ್ಕೆ ಹೋರಾಡುವವನು ಅಜ್ಞಾನಿ, ಮೂರ್ಖನಾಗಿರ ಬಹುದಾದರೂ ಅವನು ದೇಶ ದ್ರೋಹಿಯೆಂದು ಯಾರೂ ಒಪ್ಪಲಾರರು."

ಭಾರತದ ಏಸಿರಿ—ಐಶ್ವೋಗ ಯಾವ ದೇಶಕ್ಕೂ ಹಿಂದಿರಲಿಲ್ಲ. ಕೌಶಲ್ಯ ಯಾವ ದೇಶಕ್ಕೂ ಕಳವೆಯಿರಲಿಲ್ಲ, ಶಕ್ತಿಯಲ್ಲಿ ಕುಂದಿರಲಿಲ್ಲ. ಆದರೂ ಕಪಟತೆಯ ವ್ಯೂಹಕ್ಕೆ ಸಿಕ್ಕಿ ಅವನತಿಯ ಶಿಖರ ಮುಟ್ಟಬೇಕಾಯ್ತು.

ರಾಜಕೀಯ ಹಾಗೂ ಅಧಿಕಾರದ ಸ್ವಾತಂತ್ರ್ಯ ಕಳೆದುಕೊಂಡ ಭಾರತ ಮೊತ್ತಮೊದಲು ತನ್ನ ಹಕ್ಕು ಮತ್ತೆ ಪಡೆಯ ಬಯಸಿದ್ದು ೧೮೫೭ರಲ್ಲಿ. ಶತ—ಶತ ಮಾನಗಳಿಂದ ಸುಪ್ತಗೊಂಡು ಅಡಗಿದ್ದ ಜ್ವಾಲೆ ಒಮ್ಮೆಗೇ ಹೊರಗೆ ಬಂದದ್ದು ಅಂದಿನ 'ಸಿಪಾಯಿ ದಂಗೆ' ಯಲ್ಲಿ.

೧೮೫೭ರ ಮೇ ತಿಂಗಳ ಕೊನೆಯಲ್ಲಿ ಪ್ರಾರಂಭವಾದ ಭಾರತದ ಈ ಸ್ವತಂತ್ರ ಕೋರಿಕೆಯ ಹೋರಾಟಕ್ಕೆ ಬ್ರಿಟಿಷರು 'ಬಂಡು', 'ದಂಗೆ' ಎಂದು ಹೆಸರಿಟ್ಟರು. ಅದು ಪ್ರಾರಂಭವಾದ ರೀತಿ ಬಹು ಚಿಕ್ಕದಿದೆ ಆದರೆ ಅದು ಭಾರತದ ಸನಾತನ ಧರ್ಮದ ಸಲುವಾಗಿ ಮೀಸಲಾದ ಕ್ಷಾತ್ರ ತೇಜಸ್ಸಿನ ಶಕ್ತಿಯನ್ನು ಎತ್ತಿ ತೋರಿಸುವುದಾಗಿತ್ತು.

ಅಂದು ಭಾರತೀಯರ ಕುಲಗೆಡಿಸುವ ಸನ್ನಾಹ ಬ್ರಿಟಿಷರ ತಲೆಗೇರಿತು. ಅದೇ ಅವರ ಅಧಃಪತನದ ಮೊದಲ ಹಂತವಾಯಿತು. ದನ ಮತ್ತು ಹಂದಿಗಳ ಕೊಬ್ಬು ಸವರಿದ್ದ ಬಂದೂಕು ಹಾಗು ಗುಂಡುಗಳನ್ನು ಜಾತಿ ಕೆಡಿಸಲು-ಮನಸ್ಥೈರ್ಯ ಪರೀಕ್ಷಿಸಲು ಹಿಂದೂ—ಮುಸ್ಲಿಂ ಸೈನಿಕರಿಗೆ ಕೊಟ್ಟಾಗ ಮದ್ದಿಗೆ ಬೆಂಕಿ ತಾಗಿಸಿದಿತ್ತು. ೧೯ ಸೈನಿಕರು ಪ್ರಥಮತಃ ಆ ಬಂದೂಕುಗಳನ್ನು ಮುಟ್ಟಲಿಲ್ಲ. ಅವರೆಲ್ಲರನ್ನೂ ದೊಡ್ಡ ಮೈದಾನಕ್ಕೆ ಕರೆದೊಯ್ಯಲಾಯಿತು. ಅಲ್ಲಿ ಅವರಿಗೆ ಹಿಂಸೆ—ಕೊಟ್ಟು ಅವರ ಆಯುಧಗಳ ಕಸಿಯುವಿಕೆಯ ಸನ್ನಾಹ ನಡೆದು ವೃರ್ಥವಾಗಿತ್ತು.

ಸೈನ್ಯದಲ್ಲಿದ್ದ ಭಾರತ ವೀರ ಮಂಗಳ ಪಾಂಡೆ ತನ್ನ ಮೇಲಧಿಕಾರಿಯನ್ನು ಮೊದಲಿಗೆ ಎದುರಿಸಿದ. ಹ್ಯೂಜ್ ಸಾರ್ಜೆಂಟ್ ಮೇಜರನೊಬ್ಬ ಮಂಗಳನ ಮೇಲೆ ಬಿದ್ದ ಆತನ ಗುಂಡಿಗೆ ಬಲಿಯಾದ. ಮಂಗಳನೊಡನೆ ಸುಮಾರು ಅಂಗ್ಲರು ಹೊಡೆದಾಡಿ ಸತ್ತು ಬಿದ್ದರು. ಶಕ್ತಾವಿಕ್ಕಿಯೂಗಿ ದೊಡ್ಡ ದಂಡನ್ನೇ ಅವನ ಮೇಲೆ ಬಿಟ್ಟಾಗ, ಮಂಗಳ ಆಪಿರಂಗಿಯವರ ಕೈಯಲ್ಲಿ ಸಾಯಲಿಚ್ಛಿಸದೇ ತನ್ನನ್ನು ತಾನೇ ಗುಂಡಿಟ್ಟುಕೊಂಡ. ಸೇಡು ತೀರಿಸಿಕೊಳ್ಳಲು ಕ್ಷುದ್ರ ಜೀವಿಗಳು ಅವನ ಅರೆ ದೇಹವನ್ನೇ ಗಲ್ಲಿಗೇರಿಸಿ ಸಂತಸ ಪಟ್ಟರು. ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಆರೆ ಕೊಟ್ಟು ಪ್ರಥಮತಃ ಜೀವ ತೊರೆದ ಭಾರತ ವೀರ ಮಂಗಳಪಾಂಡೆ.

ಇದರಿಂದ ಭಾರತೀಯರು ರೊಚ್ಚಿಗೆದ್ದರು. ವಿಷಯವರಿತ ಬ್ರಿಟಿಷರು ಆ ಕಾಲದಲ್ಲಿ ಮಾಡದ ಹೇಯ ಕೃತ್ಯವಿಲ್ಲ. ನಂದನವನದಂತಹ ಊರುಗಳ ಸುಲಿಗೆ ಮಾಡಿ ಅವಕ್ಕೆ ಬೆಂಕಿ ಇಟ್ಟರು. ಹಿರಿಯ—ಕಿರಿಯರೆನ್ನದೇ, ಹೆಂಗಸರು ಮಕ್ಕಳೆನ್ನದೇ ಕೊಲ್ಲುತ್ತಾ—ಕತ್ತರಿಸುತ್ತಾ ಸಂಭ್ರಮಾಚರಿಸಿದ ಬ್ರಿಟಿಷ್ ಸೈನಿಕನೊಬ್ಬ ಲಂಡನ್ನಿನಲ್ಲಿದ್ದ ತನ್ನ ಪ್ರಿಯತಮೆಗೆ ಬರೆದ ಪತ್ರದಲ್ಲಿ

"..... .....ಈಗ ಇಲ್ಲಿನ ಚಲ್ಲಾಟ್ಟ ಬಹಳ ಅದ್ಭುತವಿದೆ—ಮೋಜಿನದಿದೆ. ಕಪ್ಪು ಜನರಿಗೆ ಗುಂಡು ಹೊಡೆದು ಕೊಲುವುದು ಕ್ರಿಸ್‌ಮಸ್ ಹಬ್ಬದಂತಿದೆ"

—ಎಂದೊಕ್ಕಣಿಸಿದ್ದ. ಆತ ಅಹಿಂಸಾ ಬೋಧಕ ಕ್ರಿಸ್ತನ ಅನುಯಾಯಿಯೂ ಗಿದ್ದ!

ಆಂಗ್ಲ ಸರಕಾರ ಪ್ರಚುರಿಸಿದ ಒಂದು ಪುಸ್ತಕದಲ್ಲಿ ಈ ರೀತಿ ಮುದ್ರಿಸಲಾಗಿದೆ.

".....ಬಜಾರಿನ ಮಧ್ಯ ಸ್ಥಳದಲ್ಲಿ ತೂಗುಹಾಕಿ ಕೊಲ್ಲಲ್ಪಟ್ಟ ಶವಗಳ ಸಾಗಾಣಿಕೆಗೆ ಎಂಟು ಗಾಡಿಗಳು ಹಗಲು ರಾತ್ರಿಯೆನ್ನದೇ ಎಡಬಿಡದೇ ಮೂರು ತಿಂಗಳ ಕಾಲ ತೆಗೆದು ಕೊಂಡುವು. ಒಂದೇ ಸ್ಥಳದಲ್ಲಿ ಆರು ಸಾವಿರ ಜನರ ಭಯಂಕರ ಕೊಲೆಯಾಗಿತ್ತು"

—ಇದಿಷ್ಟೆ ಸಾಲದೆ ತನ್ನ ಅಧರ್ಮಯುತ ನಡತೆಯನ್ನು ಇಂಗ್ಲಿಷ್ ಗಣ್ಯ ಅಧಿಕಾರಿಯೊಬ್ಬ ತಾನೇ ಬರೆದಿದ್ದಾನೆ

"ನಾವು ಅದೆಷ್ಟೋ ದಂಗೆಕೋರರನ್ನು ಕೊಂದೆವು. ಬೇಕಾದಷ್ಟು ಜನರನ್ನು ಫಾಸಿಗೆ ಏರಿಸಿದೆವು. ತೋಫಿನ ಬಾಯಿಗೆ ಕೊಟ್ಟೆವು. ಆದರೆ ಅವರಲ್ಲಿ ಲೆಕ್ಕವಿಲ್ಲದಷ್ಟು ಜನ ಸಾಮಾನ್ಯ ಹಳ್ಳಿಗರಾಗಿದ್ದರು. ಅವರನ್ನು ಕೇವಲ ಸಂಶಯದಿಂದ ಕರೆತಂದು ಕೊಲ್ಲಲಾಗುತ್ತಿತ್ತು"

ಇದನ್ನೆಲ್ಲಾ ಸಹಿಸಿಕೊಂಡ ಭಾರತ ಅಂದು ಜಗತ್ತಿನ ಗಮನವನ್ನು ತನ್ನೆಡೆಗೆ ಸೆಳೆಯಿತು, ಲೆಕ್ಕವಿಲ್ಲದಷ್ಟು ಸ್ವಾತಂತ್ರ್ಯ ಪ್ರಿಯರು ಭಾರತದ ಈ ಅವಸ್ಥೆಗೆ ಮರು

(೧೭ನೇ ಪುಟ ನೋಡಿರಿ)

ಶುದ್ಧ ಮತ್ತು ತಾಜಾ

ತೆಂಗಿನೆಣ್ಣೆ ಮತ್ತು ಎಳ್ಳೆಣ್ಣೆ

ಕೆಲಗೂರು ಚಾ

ವಿಚಾರಿಸಿರಿ:

ಜೈ ಭಾರತ್ ಮಿಲ್ಸ್

ಪ್ರೈವೇಟ್ ಲಿಮಿಟೆಡ್,

JAI BHARATH MILLS

PRIVATE LTD.,

"Chittaranjan Bldgs."

UDIPI.

Tel: PROTECTION. Phone: 11.

ಪ್ರಜಾಪ್ರಭುತ್ವ

ವಾಸ್ತವಿಕ ಜನಾಭಿಪ್ರಾಯ ರಾಜಕೀಯ ಪಕ್ಷಗಳಿಗೆ ತಿಳಿಸಬೇಕಾದರೆ, "ಪ್ರಜಾಸಂಘ"ವು ಪ್ರತಿ ಗ್ರಾಮದಲ್ಲೂ ನಿರ್ಮಾಣವಾಗಬೇಕು. ರಾಜಕೀಯದಿಂದ ಸಂಪೂರ್ಣ ನಿರ್ಲಿಪ್ತರಾದವರನ್ನು—ಅವರ ಪ್ರಯೋಜನಕ್ಕಾಗಿಯೇ—ರಾಜಕೀಯದಲ್ಲಿ ಆಸಕ್ತಿ ವಹಿಸುವಂತೆ ಮಾಡಬೇಕು

●

ಶ್ರೀ ಬೈಕಾಡಿ ವೆಂಕಟಕೃಷ್ಣ ರಾಯ

ನಾವು ಪ್ರಜಾಪ್ರಭುತ್ವಕ್ಕೊಳಪಟ್ಟಿದ್ದೇವೆ. ಇಲ್ಲಿ ಆಳುವವರೂ ನಾವೇ; ಆಳಿಸಿಕೊಳ್ಳುವವರೂ ನಾವೇ ಅಂದ ಮೇಲೆ ಇದರ ಒಳಿತು ಕೆಡುಕಿಗೆಲ್ಲ ನಾವೇ ಹೊಣೆಗಾರರು. ದೇಶ ಸ್ವತಂತ್ರವಾಗಬೇಕು ಎಂದಾಗಲೇ ಸ್ವತಂತ್ರವಾದ ದೇಶ ಪ್ರಜಾಪ್ರಭುತ್ವಕ್ಕೊಳಪಡಬೇಕು ಎಂಬುದೇ ನಮ್ಮ ನಿರ್ಧಾರವಿತ್ತು. ಭಾರತಕ್ಕೆ ಪ್ರಜಾಪ್ರಭುತ್ವದ ಅನುಭವ ಸಾಕಷ್ಟು ಆಗಿದೆ. ಈ ಅನುಭವ ಸರಿ ಎನ್ನುವುದು ಒಂದು ಪಕ್ಷ. ಸಿಹಿಯೆನ್ನುವುದು ಇನ್ನೊಂದು ಪಕ್ಷ. ಏನೂಗೊಡವೆಯಿಲ್ಲದೆ ನಿರ್ಲಿಪ್ತವಾಗಿರುವುದೇ ಬಹುದೊಡ್ಡ ಒಂದು ಪಕ್ಷ! ಅದೇ ಪ್ರಜಾಪ್ರಭುತ್ವಕ್ಕೆ ಗಂಡಾಂತರ.

ಮೂರನೆಯ ಚುನಾವಣೆಯ ಹೊತ್ತಿಗಾದರೂ ಈ ರೀತಿಯ ಪ್ರಜಾಪ್ರಭುತ್ವ ದೇಶಕ್ಕೆ ಸಾಧುವೆ? ಎಂಬುದ ವಿಮರ್ಶಿಸಲ್ಪಡಬೇಕು ಪ್ರಜೆಗಳೇ ವಿಮರ್ಶಿಸಬೇಕು. ಪ್ರಜೆಗಳು ಎಂದರೆ ಯಾರು? ಸರಕಾರದ ಸೂತ್ರ ಹಿಡಿದ ಆಳುವ ಪಕ್ಷ—ಇನ್ನೊಂದು ವಿರೋಧಿ ಪಕ್ಷ. ನಮ್ಮದು ಪಾರ್ಲಿಮೆಂಟರಿ ಪದ್ಧತಿಯ ಪ್ರಜಾಪ್ರಭುತ್ವ ಇಲ್ಲಿ ಪಕ್ಷಗಳು ಅನಿವಾರ್ಯ ಆದ ಮೇಲೆ, ನಮ್ಮಲ್ಲಿ ಈ ಪಕ್ಷಗಳ ನೆಲೆ ಹೇಗೆನೆ?

ಕಾಂಗ್ರೆಸ್ಸು ಆರಂಭದಿಂದಲೇ ದೇಶದ ಆಳುವ ಪಕ್ಷವಾಗಿ ಉಳಿದದ್ದು ಸಾಧು ಮತ್ತು ಸ್ವಾಭಾವಿಕ. 1947ರಲ್ಲಿ ಅಡಳಿತದ ಹೊರೆ ಹೊರುವ ಮತ್ತೊಂದು ಪಕ್ಷವಿರಲಿಲ್ಲ. ಅಂದಿನಿಂದಲಾದ ಪ್ರಜಾಪ್ರಭುತ್ವ ಹೇಗಿರಬೇಕೆಂಬ ಒಂದು ಸ್ಪಷ್ಟ ಚಿತ್ರವನ್ನು ಜನತೆಯ ಮುಂದಿಟ್ಟದ್ದು ಕಾಂಗ್ರೆಸ್ಸು ಇಂದಿಗೂ ರಾಜಕೀಯವಾಗಿ ಇಷ್ಟೊಂದು ಬೃಹತ್ ಪ್ರಮಾಣದಲ್ಲಿ ಇನ್ನೊಂದು ಪಕ್ಷ ಅಡಳಿತೆ ನಿರ್ವಹಿಸುವ ದೃಷ್ಟಿಯಿಂದ ಸಿದ್ಧವಾಗಲಿ ಎಂದರೆ ಯಾರೂ ಸಿದ್ಧರಾಗಿ ಪಡಬಾರದು

ಅಡಳಿತ ನಮ್ಮ ಕೈಗೆ ದೊರಕಿ ಆಳುವ ಸೂತ್ರಧಾರಿಗಳು ಚದುರಂಗದ ಮಣೆಯ ಮೇಲೆ ಡಾಳಹಾಕಿದ ಮೇಲೆ ತಾನೇ ವಿರೋಧಿಪಕ್ಷ ಹುಟ್ಟಬೇಕು ಪ್ರಥಮ ಚುನಾವಣೆಯ ಹೊತ್ತಿಗೆ ಬಹು ಸಂಖ್ಯೆಯಲ್ಲಿ ಪಕ್ಷಗಳ ಹೆಸರು ವಿರೋಧಿಸ್ಥಾನದಲ್ಲಿ ಕೇಳ ಬಂದಿತ್ತು ಎರಡನೆ ಚುನಾವಣೆಯ ಹೊತ್ತಿಗೆ ಈ ಸಂಖ್ಯೆ ಕಡಿಮೆಯಾಗಿತ್ತಾದರೂ ವಿರೋಧಿ ಪಕ್ಷದ ಬಲ ಸಾಕಷ್ಟು ಬಲವಾಗಿಯೇ ಬೆಳೆದಿತ್ತು ಇವು ನೀಡಿದ ದೊರಾಟವೇನೂ ಕಡಿಮೆಯಿರಲಿಲ್ಲ. ಕೆಲವೊಂದು ಕ್ಷೇತ್ರಗಳಲ್ಲಿ—ಕೆಲವೊಮ್ಮೆ ಶಾಸನ ಸಭೆಗಳಲ್ಲಿ—ಆಳುವ ಪಕ್ಷಕ್ಕೆ ವಿರೋಧಿ ಪಕ್ಷ ಸುಂಗಲಾರದ ತುತ್ತಾಗಿ ಪರಿಣಮಿಸಿತ್ತು,—ಆಳುವ ಪಕ್ಷದ ಆತ್ಮಲೋಪನಾ ಕಾರ್ಯಕ್ಕೂ ಆದು ನೆರವಾಗಿತ್ತು. ಹೆಸರೆತ್ತಿ ಹೇಳಬಹುದಾದರೆ, ಪ್ರಜಾಸಮಾಜವಾದಿ ಪಕ್ಷ ದೇಶದಲ್ಲಿ ಒಂದು ವಿರೋಧಿ ಪಕ್ಷವಾಗಿ ಸಿಲ್ಲುವ ಸ್ಥಾನದಲ್ಲಿತ್ತು. ಕಮ್ಯುನಿಸ್ಟರು ಸಂಖ್ಯೆಯಲ್ಲಿ ಬಲಿಷ್ಠರಾದರು ಅವರ ರಾಷ್ಟ್ರೀಯ ನೀತಿ ಮತ್ತು ಧೋರಣೆ ಪ್ರಶ್ನಾರ್ಹವಾದದ್ದು. ಉಳಿದವುಗಳಲ್ಲಿ ಜಾತೀಯತೆಯೇ ಮುಂತಾದ ಸಂಕುಚಿತ ಹಾಗೂ ರಾಷ್ಟ್ರಘಾತಕ ಚಟುವಟಿಕೆಗಳ ಲಕ್ಷಣಗಳೇ ಹೆಚ್ಚು ತೋರಿ ಅವು ಬೆಳವಣಿಗೆಯಲ್ಲಿ ಕುಂಠಿತವಾಗಿವೆ ಇತ್ತೀಚೆಗೆ ಹುಟ್ಟಿದ ಸ್ವತಂತ್ರಪಕ್ಷ ತೀರ ಚಿಕ್ಕವ್ಯಾಯದಲ್ಲಿಯೇ ದೊಡ್ಡತನದ ಲಕ್ಷಣವನ್ನು ತೋರಿಸುವುದು ಪ್ರಶಂಸನೀಯವಾಗಿದೆ.

ಈ ಪಕ್ಷಗಳ ಸ್ಥಾನಮಾನವೇನು, ಆಳುವ ಪಕ್ಷವಾಗಲೀ ವಿರೋಧ ಪಕ್ಷವಾಗಲೀ ಇಡಿಯ ದೇಶವನ್ನು ಎಷ್ಟು ಪ್ರಮಾಣದಲ್ಲಿ ಇವು ಪ್ರತಿನಿಧಿಸ ತ್ತಿವೆ? ಸಾಕಷ್ಟು ಪ್ರತಿನಿಧಿಸ ತ್ತಿಲ್ಲವಾದರೆ, ನಮ್ಮದು ಪ್ರಜಾಪ್ರಭುತ್ವವೆ? ನಮ್ಮಲ್ಲಿ ಪ್ರಜಾಪ್ರಭುತ್ವ ಯಶಸ್ವಿಯಾಗಿದೆ ಎಂದು ನಾವು ಭುಜ ತಟ್ಟಿಕೊಳ್ಳಬಹುದೆ?— ಯಶಸ್ವಿಯಾಗಿಲ್ಲವೆಂದರೆ ಅದರ ಹೊಣೆಗಾರಿಕೆ ಯಾರದು? ಇದಕ್ಕೆ ಯಾರು ಉತ್ತರ ಹೇಳಬೇಕು? (ಪ ಕಿಸ್ತಾನದ ಅಯೂಬರು ನಮ್ಮ ಭಾರತದ ರೀತಿಯ ಪ್ರಜಾಪ್ರಭುತ್ವ ಬಹು ಬೆಲೆಯ ಸಾಧ್ದು. It is a costly game—ಅಂದಿದ್ದರು)

ಆಡಳಿತ ಪಕ್ಷ ಬಲವಾಗಿದೆ, ಬೃಹದಾಕಾರವಾಗಿ ಬೆಳೆದಿದೆ. ಅದು ಅಸಮಬಲ ಸಮಾನ ಹೀಗಾಗಿ ಅಸಮಾನ ಬಲದಿಂದ ಅದಿಕಾರ ಪೀಠದಲ್ಲಿ ಆರೂಢವಾಗಿ ವಿರೋಧಿ ಪಕ್ಷವನ್ನು ತಲೆಯೆತ್ತಲು ಬಿಡುವುದಿಲ್ಲ ಅಧಿಕಾರದಲ್ಲಿ ಮೋಹನಾಸ್ತ್ರವಿದೆ ಎಂತಲೇ ಜನ ತಾತ್ಕಾಲಿಕ ಹಿತವನ್ನೋ ಲಾಭವನ್ನೋ ಗಮನಿಸಿ ಆ ಪಕ್ಷಕ್ಕೇ ಹೆಚ್ಚುಮಾಲುತ್ತಾರೆ ಕೇವಲ ತ್ಯಾಗ ಶೀಲರು ನಿಷ್ಕಾಮ ಸೇವಿಗಳು ಮಾತ್ರ ವಿರೋಧಿ ಪಕ್ಷದಲ್ಲಿ ಉಳಿಯುತ್ತಾರೆ. ಇಲ್ಲಿಯೇನೂ ಆಕರ್ಷಣೆಯಿಲ್ಲ ರಾಜಕೀಯದ ಲಾಭವಿಲ್ಲ—ಇದು ಇಂದಿನ ದೂರು. ಪಕ್ಷ ಪ್ರತಿಪಕ್ಷಗಳ ಆರೋಪ ಪ್ರತ್ಯಾರೋಪ ಇದ್ದದ್ದೇ ಇಂದಿನ ವಿರೋಧ ಪಕ್ಷವೇ ನಾಳೆ ಆಡಳಿತ ಪಕ್ಷವಾದರೇನೂ ಈ ದೂರು ತಪ್ಪಿದ್ದಲ್ಲ.

ಪ್ರಜಾಪ್ರಭುತ್ವದಲ್ಲಿ ಪಕ್ಷಗಳು ಅನಿವಾರ್ಯ ಹೇಗೋ ಹಾಗೇ ಪಕ್ಷಗಳಲ್ಲೂ ಈ ನೀತಿ ಆ ನೀತಿಗಳು ತಾತ್ಕಾಲಿಕವಾಗಿ ಆದರೂ ಅನಿವಾರ್ಯ. ಯಾವ ದೇಶದಲ್ಲಾದರೂ ಯಾವ ಕಾಲದಲ್ಲಾದರೂ ಆದರ್ಶವೇ ಪ್ರಧಾನವಾಗಿತ್ತೇ ಎಂಬುದು ಸಂಶಯ ಸ್ಪಲ್ಪೋ "ಪ್ರಜಾಪ್ರಭುತ್ವವೇ ಇನ್ನು ಕೇವಲ ಒಂದು ಆದರ್ಶವಾಗಿಯೇ ಉಳಿದಿದೆ" ಎಂದಿದ್ದಾನೆ ರಾಜ ಕಾರಣ-ಆದರ್ಶಗಳೆರಡೂ ಒಂದೆಡೆ ಸೇರುವುದು ಲಕ್ಷ್ಮೀ ಸರಸ್ವತಿಯರು ಒಂದು ಮನೆಯಲ್ಲಿದ್ದಂತೆಯೇ ಸರಿ.

ಅಂದರೆ, ಪಕ್ಷಗಳು ತಮ್ಮ ಸ್ವಾರ್ಥ ಸಾಧನೆಗಾಗಿಯೇ ಅವಕಾಶಗಳನ್ನು ಉಪಯೋಗಿಸಬೇಕೆಂದರ್ಥವಲ್ಲ. ಆಳುವ ಪಕ್ಷದ ಮೇಲೆ ವಿರೋಧಿ ಪಕ್ಷದ ಪ್ರ—ಕಿರಣ ಬೀರುವಂತೆಯೇ ಇವೆರಡರ ಮೇಲೆಯೂ ಕಿರಣ ಸೂಸುವ ಪ್ರಜಾಪಕ್ಷವೊಂದಿರ ಬೇಕು. ಆಳುವ ಮತ್ತು ವಿರೋಧಿ ಪಕ್ಷಗಳನ್ನು ಇವರೇ ವಿಮರ್ಶಿಸಬೇಕು? ಪ್ರಜಾಪ್ರಭುತ್ವದಲ್ಲಿ ಪ್ರಜೆ ನಿರ್ಲಿಪ್ತನಾದರೆ, ಜಡಭರತನಾದರೆ, ಆಗ ಪ್ರಜಾಪ್ರಭುತ್ವದ ಲಾಭ ಕೆಲವರ ಸೊತ್ತಾಗುತ್ತದೆ.

ನಮ್ಮ ದೇಶದಲ್ಲಿ ಕೆಲವೇ ಕೋಟಿ ಪ್ರಜೆಗಳು ಮಾತ್ರ ರಾಜಕೀಯ ಪಕ್ಷದ ಸದಸ್ಯರಿರುವರು; ಅಥವಾ ಪಕ್ಷದ ಕಾರ್ಯಗಳಲ್ಲಿ ಭಾಗ ವಹಿಸುತ್ತಿರುವರು. ನಲುವತ್ತೆರಡು ಕೋಟಿ ಪ್ರಜೆಗಳ ಈ ದೇಶದಲ್ಲಿ ಹತ್ತರಲ್ಲಿ ಎಂಟು ಜನರಾದರೂ ರಾಜಕೀಯದಿಂದ ದೂರವಾಗಿ ದೇಶದ ಒಳಿತು ಕೆಡುಕುಗಳ ವಿಮರ್ಶನಾ ಕಾರ್ಯಕ್ಕೆಳಿಯದೆ ನಿರ್ಲಿಪ್ತರಾಗಿರುವವರು ಈ ನಿರ್ಲಿಪ್ತರಾಗಿರುವ ಜನಶಕ್ತಿಯನ್ನು ಹೊದೆದೆಬ್ಬಿಸದಿದ್ದರೆ, ನಮ್ಮ ದೇಶದಲ್ಲಿ ಪ್ರಜಾ ಪ್ರಭುತ್ವವೇ ಅಯಶಸ್ವಿಯಾಗಿ, ದೇಶಕ್ಕೆ ಗಂಡಾಂತರ ಹೆಚ್ಚಿ ನಮ್ಮ ವ ಹಾತ್ಮರ ಕಲ್ಪನೆಗಳಲ್ಲಿ ಮಣ್ಣು ಸಾಲಾಗುವುದು.

ಇದರ ಸೂಚನೆಗಳು ಈ ತನಕ ಕಾಣಲಿಲ್ಲವೆಂದಲ್ಲ—ಎರಡು ಮಹಾ ಚುನಾವಣೆಗಳಲ್ಲಿ ಮತದಾನ ಮಾಡಿದವರ ಸಂಖ್ಯೆಯೆಷ್ಟು? ಅದರಲ್ಲಿ ನಾನಾ ಪ್ರಭಾವಕ್ಕೆ ಒಳಗಾಗಿ ನಾನಾ ವಿಶ್ವಾಸಕ್ಕೆ ಗಂಟುಬಿದ್ದು ಮತದಾನ ಮಾಡಿದವರೆಷ್ಟು? ನಿಷ್ಪಕ್ಷಪಾತ ಮತದಾನಗಳೆಷ್ಟು?

ಆಳುವ ಪಕ್ಷದಲ್ಲಿ ಮಹಾ ಮೇಧಾವಿಗಳಿರಲಿ, ಮಹಾತ್ಮರಿರಲಿ, ಅವರೆಲ್ಲರೂ ಮಾನವ ಶರೀರ ಹೊತ್ತವರೇ ಅವರಲ್ಲಿಯೂ ದೌರ್ಬಲ್ಯವಿದೆ. ಅವರ ಸತ್ಯ—ಸತ್ವಪರೀಕ್ಷೆ ಆಗಾಗ ನಡೆದರೆ, ಸುವರ್ಣನಂತೆ ಎಣ್ಣೆ ಕೊಪ್ಪರಿಗೆಯಲ್ಲಿಟ್ಟರೆ, ಮಾತ್ರ ಅವರು ಪರಿಶುದ್ಧರಾದಾರು. ಯಾರ ಮೇಲೂ ಅಂಧ ವಿಶ್ವಾಸ-ಅತಿ ವಿಶ್ವಾಸ-ಅದರಲ್ಲೂ ದೇಶದ ಕಾರ್ಯದಲ್ಲಿ ಸರ್ವಥಾ ಸಲ್ಲದು. ಈ ಸತ್ವಪರೀಕ್ಷೆಯ ಕಾರ್ಯ-ವಿಮರ್ಶನಾ ಕಾರ್ಯ ವಿರೋಧಿ ಪಕ್ಷ ಮಾಡುತ್ತದೆ. ಆದರೆ, ಆ ವಿರೋಧಿ ಪಕ್ಷವೇ ದುರ್ಬಲವಾದರೆ? ಆಳುವ ಪಕ್ಷ ಹೇಗಿದ್ದರೂ ಎಂತಿದ್ದರೂ ಅವರನ್ನು ವಿರೋಧಿ ಪಕ್ಷದವರು ರೀಕಿಸಿಯೂ ದರ ಸರಿ ಮಾಡಿಕೊಂಡು ಹೋದಾರು. ವಿರೋಧಿ ಪಕ್ಷದ ಹೆದರಿಕೆಯಿಂದಲಾದರೂ ಆಳುವ ಪಕ್ಷ ಕಾರ್ಯ ನಾಗಿಸೀತು. ವಿರೋಧಿ ಪಕ್ಷ ಮಾತ್ರ ಅತ್ಯಂತ ನಿಷ್ಕಾಮಿಗಳಿಂದ ತ್ಯಾಗ ಶೀಲರಿಂದ, ಪ್ರಚಂಡ ಮೇಧಾವಿಗಳಿಂದ ಕೂಡಿಕೊಳ್ಳ ಬೇಕಾಗುತ್ತದೆ.

ನಮ್ಮಲ್ಲಿಂದು ಹೀಗಿದೆಯೆ? ಒಂದೊಮ್ಮೆ ಅಡಳಿತ ಪಕ್ಷ ಒಳ್ಳೆಯದು ಮಾಡಿದ್ದರೂ ತನ್ನ ವಿಚಿತ್ರ ದೋರಣೆಯಿಂದ, ವಿರೋಧಿ ಪಕ್ಷ ಒಂದೇ ಸವನೆ ಅದನ್ನು ರೀಕಗೆ ಗುರಿಪಡಿಸುತ್ತದೆ. ಸತ್ಯಾಗ್ರಹ—ಮಾ ಪ್ರಕಗಳೆಂದು ದಿನನಿತ್ಯದ ಅಡಳಿತಕ್ಕೆ ಅಡಚಣೆಯನ್ನುಂಟು ಮಾಡಿ ಆಳುವ ಪಕ್ಷವನ್ನು ಕಣ್ಣುಕಾಯಿ ನೀರುಕಾಯಿ ಮಾಡುವುದಿದೆ ಅದರಿಂದ ವಿರೋಧಿ ಪಕ್ಷವೇ ದುರ್ಬಲವಾಗಿ ಆಳುವ ಪಕ್ಷ ಅತಿ ಬಲವಾಗಿ ತನ್ನಲ್ಲೇ ಅಧಿಕಾರಲಾಲಸೆಯಿಂದ ಕಲಹ ಉತ್ಪನ್ನವಾಗಿ ಅಧಿಕಾರದ

(೧೭ನೇ ಪುಟ ನೋಡಿರಿ)

Estd 1930

THE MODERN SCHOOL OF COMMERCE

UDIPI, S K

UNIQUE SHORTHAND RESULT

May 1958— First rank in the Madras Karnatak area in Shorthand Lower

Oct 1959— First rank in the Madras Karnatak area in Shorthand Lower

May 1960 - Secured third and ninth ranks in the whole of Mysore State in Shorthand Lower

Oct 1960— The only first class in Shorthand Higher in the whole of Mysore State

Expert tuition and efficient coaching Join the classes and secure coveted merits

Moderate Feesl

T A. Vasudevan,
Headmaster.

ಎಂಜಿನಿಯರಯಂ

ಪ್ರಾಸ್ತಾವಿಕ

ಇತ್ತೀಚಿನ ವರುಷಗಳಲ್ಲಿ ಭಾರತವು ಸೂರ್ಯೆಸಬೇಕೆಂದು ಕೈಕೊಂಡಿರುವ ಪಂಚವಾರ್ಷಿಕ ಯೋಜನೆಗಳಿಂದಾಗಿ ಈ ಎಲ್ಲ ಯೋಜನೆಗಳ ಜೀವಾಳದಂತಿರುವ ಯಂತ್ರ ಶಿಲ್ಪ ಶಾಸ್ತ್ರಕ್ಕೆ ಹೆಚ್ಚಿನ ಪ್ರಾಮುಖ್ಯತೆಯು ಬಂದಿದೆ. ಇಂತಹ ಯೋಜನೆಗಳನ್ನು ರೂಪಿಸಿ ಕಾರ್ಯಗತಗೊಳಿಸಲು ಮತ್ತು ಹೀಗೆ ರಚಿತವಾದವುಗಳನ್ನು ಮುಂದುವರಿಸಿಕೊಂಡು ಹೋಗಲು ಬೇಕಿರಬಹುದಾದ ತಜ್ಞರನ್ನು ತಯಾರಿಸಲು ದೇಶವಾಂದ್ಯಂತ ಅನೇಕ ಎಂಜಿನಿಯರಿಂಗ ಕಾಲೇಜುಗಳನ್ನು ಸ್ಥಾಪಿಸಲಾಗಿದೆಯಲ್ಲದೆ, ಇವುಗಳ ಸಂಖ್ಯೆಯನ್ನು ಪ್ರತಿ ವರುಷವೂ ಹೆಚ್ಚಿಸಲಾಗುತ್ತದೆ. ಎಂಜಿನಿಯರಿಂಗ ಎಂದೊಡನೆ ಎಲ್ಲರಿಗೂ ಪರಿಚಿತವಿರುವ—ವಾಸ್ತುಶಿಲ್ಪ (Civil), ಯಂತ್ರ ಶಿಲ್ಪ (Mechanical) ವಿದ್ಯುತ್ತಿನ (Electrical) ಮುಂತಾದ ವಿಭಾಗಗಳೇ ಜನಸಾಮಾನ್ಯರಿಗೆ ಗೋಚರಿಸುವುವು. ಸ್ಥೂಲವಾಗಿ ವಿಚಾರಮಾಡಿದಾಗ ಕಲೆಯ ಯಾವುದೇ ವಿಭಾಗವನ್ನು ವೈಜ್ಞಾನಿಕ ನಿಯಮಗಳ ಹಿನ್ನೆಲೆಯಲ್ಲಿ ವಿಕಾಸಗೊಳಿಸಲು ಮತ್ತು ಆ ವಿಭಾಗಗಳನ್ನು ನಾಗರಿಕತೆಗೆ ಪೋಷಕವಾಗುವ ರೀತಿಯಲ್ಲಿ ಬೆಳೆಯಿಸಲು ಬೇಕಿರುವ ಉಪಕರಣಗಳನ್ನು ರಚಿಸುವ ಕಾರ್ಯವು ಎಂಜಿನಿಯರರಿಗೆ ಸಂಬಂಧಿಸಿದುದು ಎಂದು ಹೇಳಬಹುದು. ರಾಷ್ಟ್ರವನ್ನು, ಭದ್ರವಾದ ಮತ್ತು ಸುಖ ಸಮೃದ್ಧವಾದ ಮತ್ತು ಆರ್ಥಿಕವಾಗಿಯೂ ಯೋಗ್ಯವಾಗ ತಳಹದಿಯ ಮೇಲೆ ಕಟ್ಟುವ ಕಾರ್ಯವು ಇವರನ್ನೇ ಅವಲಂಬಿಸಿದೆಯೆಂದು ಹೇಳುವುದು ಸೂಕ್ತವೆನಿಸುವುದು.

ಎಂಜಿನಿಯರರು

ಎಂಜಿನಿಯರ ಎಂದೊಡನೆ ಕೇವಲ ಶಿಲ್ಪಶಾಸ್ತ್ರ, ಯಂತ್ರ ಶಾಸ್ತ್ರ, ವಿದ್ಯುತ್ತು ಇವುಗಳಷ್ಟೇ ಇರದೆ ಯಾವ ಯಾವ ವಿಭಾಗಗಳಲ್ಲಿ ತಜ್ಞತೆಯು ಉಪಯುಕ್ತವಿದೆಯೋ ಆ ಆ ವಿಭಾಗಗಳಲ್ಲಿಯ ತಜ್ಞರು ಈ ಗಂಪಿಗೆ ಸೇರಿದವರು ಎಂಬ ಕಲ್ಪನೆಯು ಬಾರದೆ ಹೋಗದು. ಉದಾಹರಣೆಗಾಗಿ ಜಲವಿದ್ಯುತ್ತು, ಒಕ್ಕಲುತನ, ರೈಲುಗಳು, ಪ್ಲಾಸ್ಟಿಕ್ ಉದ್ದಿಮೆ ಮುಂತಾದ ಅನೇಕಾನೇಕ ವಿಭಾಗಗಳಲ್ಲಿ ಕಾರ್ಯಮಾಡುವ ತಜ್ಞರೆಲ್ಲರೂ ಎಂಜನಿಯರರೇ, ಇವರೆಲ್ಲರೂ ಕಾರ್ಯಮಾಡುವುದರ ಹಿನ್ನೆಲೆಯನ್ನು ವಿವೇಚಿಸಿದಾಗ ಸ್ಥಿತಿಸ್ಥಾಪಕತ್ವಗುಣ ಧರ್ಮವನ್ನು (Elasticity) ಕೂಲಂಕಷವಾಗಿ ಅಭ್ಯಸಿಸಿದ ರಾಬರ್ಟ ಹುಕ್, ಬೇಳೆಯನ್ನು ಅಳೆಯುವ ಉಪಕರಣಗಳಿಗೆ ಮಾರ್ಗದರ್ಶನವನ್ನು ಮಾಡಿದ ಗ್ಯಾಲಿಲಿಯೋ, ಗತಿವಿಷಯಕ ನಿಯಮಗಳನ್ನು ಮತ್ತು ಕ್ಯಾಲ್ಕುಲಸ್ ಎಂಬ ಗಣಿತ ವಿಭಾಗವನ್ನು ಸಂಶೋಧಿಸಿ ಪ್ರತಿಪಾದಿಸಿದ ನ್ಯೂಟನ್ ಮುಂತಾದವರೇ ಇಂದಿನ ಈ ಶಾಸ್ತ್ರದ ಜನಕರೆಂದು ಹೇಳಬಹುದು.

ಇತಿಹಾಸವನ್ನು ಪರಿಶೀಲಿಸಿದಾಗ ಈ ವಿಭಾಗವು ಕಾಲವೂನವನ್ನು ಅನುಸರಿಸಿ ಬೆಳೆಯುತ್ತಿರುವುದಾಗಿ ಕಂಡು ಬಂದಿದೆ. ಯುದ್ಧಕಾಲದಲ್ಲಿ ಊರ್ಜಿತ ಹೊಂದಿದ ಜ್ಞಾನವು ಶಾಂತಿ ಕಾಲದಲ್ಲಿ ಭಿನ್ನ ರೀತಿಯಲ್ಲಿ ಬೆಳೆಯಲಿರುವುದಾಗಿ ಕಂಡುಬಂದಿದೆ. ಶಾಂತಿಕಾಲದಲ್ಲಿ ಉದ್ಯಮಗಳಿಗೆ ಪೋಷಕವಾಗುವಂತಹ—ಮಾರ್ಗಗಳನ್ನು ನಿರ್ಮಿಸುವುದು, ಕಾಲುವೆಗಳನ್ನು ತೋಡುವುದು, ಸೇತುವೆಗಳನ್ನು ರಚಿಸುವುದು ಇವೇ ಮೊದಲಾದ ನಾಗರಿಕರಿಗೆ ಉಪಯುಕ್ತವಾದ ರೀತಿಗಳಲ್ಲಿ ಈ ಜ್ಞಾನವು ಬೆಳೆಯತೊಡಗುವುದು. ಅದೇ ಪ್ರಕಾರವಾಗಿ ಎರಡನೆಯ ಜಾಗತಿಕ ಯುದ್ಧವನ್ನು ಮುಗಿಯಿಸಲು ಕಾರಣವಾದ ಅಣುಶಕ್ತಿ ಮತ್ತು ವಿಮಾನ ದಾಳಿಗಳು ಮಾಡಬಹುದಾದ ಹೆಚ್ಚಿನ ಜಾನಿಯನ್ನು ತಪ್ಪಿಸಲು ಕಾರಣವಾದ ರಾಡರ್ ಇವುಗಳು ಇಂದು ಶಾಂತಿಕಾಲದಲ್ಲಿ ಹೆಚ್ಚಿನ ಅನುಕೂಲತೆಗಳನ್ನು ಕಲ್ಪಿಸಿ ಕೊಡಬಹುದಾಗಿವೆ.

ಎಂಜಿನಯರರು ಮತ್ತು ವಿಜ್ಞಾನಿಗಳು

ಎಂಜಿನಿಯರರು ಮತ್ತು ವಿಜ್ಞಾನಿಗಳಲ್ಲಿ ಯಾವ ಪ್ರಭೇದವನ್ನು ಕಲ್ಪಿಸಬಹುದು ಎಂಬುದನ್ನು ತಿಳಿಯುವಾ. ಇವರಿಬ್ಬರೂ ಸಾಧಾರಣವಾಗಿ ಅದೇ ವಿಷಯಗಳನ್ನು ಅಭ್ಯಾಸಿಸುವವರು ಅನೇಕ ವೇಳೆ ಅದೇ ತರದ ಹುದ್ದೆಗಳಲ್ಲಿರುವರು ಇಲ್ಲವೆ ಅವರು ಇವುಗಳನ್ನು ಆದಲು ಬದಲು ಮಾಡಿಕೊಳ್ಳಲೂ ಬಹುದು, ಇವರಿಬ್ಬರಲ್ಲಿ ಇಷ್ಟು ಸಾಮ್ಯವಿದ್ದರೂ ಅಂತರವೂ ಸಹ ಉಂಟು.

ವಿಜ್ಞಾನಿಯು ತನ್ನ ಜ್ಞಾನಪಿಪಾಸೆಯನ್ನು ತೀರಿಸಿಕೊಳ್ಳಲು ನಿಸರ್ಗವನ್ನೂ ಪ್ರಶ್ನಾರ್ಥಕ ದೃಷ್ಟಿಯಿಂದ ನೋಡುವುದಲ್ಲದೆ ಯೋಗ್ಯವಾದ ಪ್ರಯೋಗಗಳನ್ನು ಜರಗಿಸಿ ಇಂತಹ ಪ್ರಶ್ನೆಗಳ ಉತ್ತರವನ್ನು ಪಡೆಯುವನು. ಇಂತಹ ಹಾದಿಯನ್ನು ಕ್ರಮಿಸಿ ತಾನು ದೊರಕಿಸಿ ಸಂಚಯಿಸಿದ ಜ್ಞಾನವು ಯಾವುದೇ ವ್ಯಾವಹಾರಿಕ ಉಪಯುಕ್ತತೆಯಲ್ಲಿ ಪರಿಣಮಿಸಬಹುದೇ ಎಂಬುದು ಇವನಿಗೆ ಗೌಣವಾದ ವಿಷಯ. ವಿಜ್ಞಾನಿಯು ದೊರಕಿಸಿದ ಜ್ಞಾನವು ಯಾವುದಾದರೂ ವ್ಯಾವಹಾರಿಕ ಉಪಯುಕ್ತತೆಯಲ್ಲಿ ಪರಿಣಮಿಸಬಹುದೇ ಎಂಬುದು ಎಂಜಿನಿಯರರ ಕಕ್ಷೆಯಲ್ಲಿ ಬರುವುದು.

ಗಣಿತ, ಭೌತಶಾಸ್ತ್ರ, ರಸಾಯನ ಶಾಸ್ತ್ರ ಯಂತ್ರ ಶಕ್ತಿ, ವಸ್ತುಗಳ ಯಾಂತ್ರಿಕ ಶಕ್ತಿ. ವಿದ್ಯುದಯಸ್ಕಾಂತ ಕ್ಷೇತ್ರಗಳು ಮುಂತಾದ ತನಗೆ ಸಂಬಂಧಿಸಿದ ವಿಷಯಗಳಲ್ಲಿ ತಜ್ಞತೆಯನ್ನು ಪಡೆದ ಎಂಜಿನಿಯರರು ಯಾವುದೊಂದು ಕಾರ್ಯವು 'ಹೀಗೇಕೆ ಜರಗುವುದು ಎಂಬುದನ್ನು ತಿಳಿಯಬಯಸುವವರು. ಸಮಸ್ಯೆಗಳನ್ನು ಬಿಡಿಸುವುದು ಇವರಿಗೆ ಒಂದು ಸ್ವಭಾವವಾಗಿಯೇ ಪರಿಣಮಿಸುವುದು. ಸಮಸ್ಯೆಗಳನ್ನು ಬಿಡಿಸಲು ಅನೇಕ ರೀತಿಗಳಲ್ಲಿ ಪ್ರಯತ್ನಿಸುವುದಲ್ಲದೆ ಅವುಗಳಲ್ಲಿ ಸುಲಭವೂ ಮತ್ತು ಲಾಭದಾಯಕವೂ ಆದ ರೀತಿಯನ್ನು ಕಂಡುಹಿಡಿಯುವರು.

ಸ್ವತಂತ್ರ ಭಾರತದಲ್ಲಿ ವಿಜ್ಞಾನಿಗಳು ಹಾಗು ಎಂಜಿನಿಯರರ ಪಾತ್ರ

ಜಗತ್ತಿನ ರಾಜಕಾರಣದಲ್ಲಿ ಶಾಂತಿ—ಎಂಜಿನಿಯರರ ಪಾತ್ರವನ್ನು ವಹಿಸುತ್ತಿರುವ ರಾಷ್ಟ್ರಪತಿ ಡಾ. ರಾಜೇಂದ್ರ ಪ್ರಸಾದ ಮತ್ತು ಪ್ರಧಾನ ಮಂತ್ರಿ ಭಾರತ ರತ್ನ ಪಂಡಿತ ಜವಾಹರಲಾಲ ನೆಹರು ಇವರ ನೇತೃತ್ವದಲ್ಲಿ ಪುರಸ್ಕಾರಹೊಂದಿ ಬೆಳೆಯುತ್ತಿರುವ ಭಿನ್ನ ಭಿನ್ನ ವಿಷಯಗಳಿಗೆ ಸಂಬಂಧಿಸಿದ ರಾಷ್ಟ್ರೀಯ ಪ್ರಯೋಗಶಾಲೆಗಳು ನಿಸರ್ಗವನ್ನು ಪ್ರಶ್ನಿಸುವ ವಿಜ್ಞಾನಿಗಳನ್ನು ತಯಾರುಗೊಳಿಸುತ್ತಿದ್ದರೆ, ಇಲ್ಲಿ ದೊರೆತ ಜ್ಞಾನವನ್ನು ಉಪಯುಕ್ತ ವಿಜ್ಞಾನದಲ್ಲಿ ಪೂರ್ಪಡಿಸುವ ಅನೇಕ ಕಾರಖಾನೆಗಳು, ಅಣುಶಕ್ತಿ ರಿಯಾಕ್ಟರುಗಳು ಈಗಕಾರ್ಯೋನ್ಮುಖವಾಗಿವೆ. ಇಂತಹಯೋಜನೆಗಳು ನಮ್ಮ ಎಲ್ಲ ಪಂಚವಾರ್ಷಿಕ ಯೋಜನೆಗಳ ಜೀವಾಳವಾಗಿರುವುವಲ್ಲದೆ ದೇಶದಲ್ಲಿಯ ಎಲ್ಲ ಸಂಪತ್ತನ್ನು ಕಲೆಹಾಕಿ ನಮ್ಮ ಪ್ರಧಾನ ಮಂತ್ರಿಗಳು ಭಾರತಕ್ಕೆ ಸ್ವಾತಂತ್ರ್ಯವು ಸಿಕ್ಕ ದಿವಸ ಹೇಳಿದ 'ಅಜ್ಞಾನ, ದಾರಿದ್ರ್ಯ ಮತ್ತು ರೋಗ' ಇವುಗಳನ್ನು ನಿವಾರಿಸಿ ಸಮೃದ್ಧ ಭಾರತವನ್ನು ಕಟ್ಟುವಲ್ಲಿ ನೆರವಾಗುತ್ತವೆ ಎಂದು ನಿಸ್ಸಂದೇಹವಾಗಿ ಹೇಳಬಹುದು. ತಾಜಮಹಾಲ, ಗೋಳಗುಮ್ಮಟ, ಹಳೇಬೀಡು, ಬೇಲೂರ, ಮಧುರೆಯ ಮೀನಾಕ್ಷಿ ಮಂದಿರ ಮುಂತಾದವುಗಳನ್ನು ಅನೇಕ ಶತಮಾನಗಳ ಹಿಂಬೆಯೇ ರಚಿಸಿ ತಮ್ಮ ವಾಸ್ತುಶಿಲ್ಪ ಕೌಶಲ್ಯವನ್ನು ಪ್ರದರ್ಶಿಸಿದ ನಮ್ಮ ಪೂರ್ವಜರ ಜ್ಞಾನವನ್ನು ಅಳವಡಿಸಿಕೊಂಡು ಮುಂದುವರಿದಲ್ಲಿ ಈ ದಿಶೆಯಲ್ಲಿಯೂ ನಮ್ಮ ಘನತೆಯನ್ನು ಉಳಿಸಿಕೊಳ್ಳಬಹುದು. ಅದೇ ಪ್ರಕಾರವಾಗಿ ಭಾರತ ರತ್ನರಾದ ಸರ್ ವಿಶ್ವೇಶ್ವರಯ್ಯ, ಸರ್ ಸಿ. ವಿ. ರಾಮನ್ ಮತ್ತು ದಿವಂಗತರಾದ ಆಚಾರ್ಯರೇ, ಜಗದೀಶ

ಭಾರತದಲ್ಲಿ ಈಗ ಬಹಳ ಸಂಖ್ಯೆಯ ಎಂಜಿನಿಯರರು ತಯಾರಾಗುತಿದ್ದಾರೆ. ಆದರೆ, ಎಂಜಿನಿಯರರು ಎಂದರೆ ಯಾರು, ಅವರ ಕರ್ತವ್ಯವೇನು ಎಂಬುದು ಸ್ವಯಂ ಎಂಜಿನಿಯರರೇ ತಿಳಿಯದಿರುವಾಗ, ಸಾಮಾನ್ಯ ಜನತೆಯನ್ನೇಕೆ ಪ್ರಶ್ನಿಸಬೇಕು?

ಪ್ರೊ|| ಕೆ. ಎಸ್. ಸವಣೂರ, ಎಂ. ಎಸ್. ಸಿ.

* * *

ಚಂದ್ರ ಬೋಸ್, ಮೇಘನಾದ ಸಹಾ ಮೊದಲಾದವರು ಅನುಕರಣೀಯ ಕಾರ್ಯಗಳನ್ನು ಎಸಗಿದ್ದಾರೆ. ಇವರೆಲ್ಲರೂ



ಡಾ|| ಯು.
ಮದ್ರಾಸು ವಿಧಾನ ಸಭೆಯ ಸ್ಪೀ
ನಲ್ಲಿ ಜನಪ್ರಿಯರೂ ಸಾರ್ವಜನಿಕ
ಇವರು ತಾ. 2-8-61ರಲ್ಲಿ

ರೇನು ?*

ನಮಗೆ ರಚಿಸಿಕೊಟ್ಟ ಹಾದಿಯನ್ನು ಕ್ರಮಿಸುವುದೇ ಸ್ವತಂತ್ರ ಭಾರತದಲ್ಲಿ ನಾವು ಮುಂದುವರಿಯಲು ಸುಲಭದ ಮಾರ್ಗವೆಂದು ಹೇಳಬಹುದು.

ಎಂಜಿನಿಯರರ ಜವಾಬ್ದಾರಿ

ಇಂದು ವಿಮಾನ ಅಪಘಾತಗಳು, ರೈಲು ಅಪಘಾತಗಳು ಮುಂತಾದ ಬೇರೆ ಅಕಸ್ಮಿಕ ಘಟನೆಗಳು ನಿತ್ಯದ ವಿಷಯಗಳಾಗಿ ಪರಿಣಮಿಸಿವೆ. ಅದೇ ಪ್ರಕಾರವಾಗಿ ಜೂಲೈ ತಿಂಗಳನಲ್ಲಿ ಭಾರತದಾದ್ಯಂತ



ರಾಯರು
, ಮಾಜಿ ಮಂತ್ರಿಗಳೂ ತಮಿಳು ನಾಡಿರೂ ಆಗಿದ್ದ ದಕ್ಷಿಣ ಕನ್ನಡಿಗರಾದ ಸಂಗಾದುದು ವಿಷಾದಕರವಿದೆ.

ವೂ ಅತಿವೃಷ್ಟಿ ಮೂಲಕವಾಗಿ ಅನೇಕ ಜಲಸಂಚಯಗಳು ನಿರುಪಯುಕ್ತವಾಗಿ ವಿತ್ತ ಮತ್ತು ಪ್ರಾಣಹಾನಿಗಳಲ್ಲಿ ಸಂಭವಿಸಿದ ಪರಿಣಾಮಗಳು ಇನ್ನೂ ಎಲ್ಲರ ಸ್ಮೃತಿಪಟಲದಲ್ಲಿ ಉಳಿದಿವೆ. ಎಲ್ಲ ಸಂದರ್ಭಗಳಲ್ಲಿ ಇಲ್ಲಿಯ ದೋಷಗಳನ್ನು ಎಂಜಿನಿಯರರ ಮೇಲೆ ಹೊರಿಸುವುದು ಯೋಗ್ಯವೆನಿಸದು. ಇಂತಹ ಸಂದರ್ಭಗಳಲ್ಲಿ ಯಾವುದೊಂದು ಉಪಕರಣವನ್ನು ಅಥವಾ ಬೇರೆ ಅನುಕೂಲತೆಯನ್ನು ರಚಿಸುವಲ್ಲಿ ನಿಸರ್ಗ ನಿಯಮಗಳ ಉಲ್ಲಂಘನೆಯಾಗಿದೆಯೇ ಎಂಬುದು ಒರೆಗಲ್ಲಾಗಿ ಪರಿಣಮಿಸುವುದು. ಇಲ್ಲಿಯ ಉಲ್ಲಂಘನೆಯು ಯಾಂತ್ರಿಕ ದೋಷದಲ್ಲಿಯೂ ಇರಬಹುದು ಅಥವಾ ಇಲ್ಲಿಯ ನಿಯಮಗಳು ನಮಗೆ ಪೂರ್ತಿಯಾಗಿ ಅವಗತವಾಗದಿರುವಾಗಲೇ ನಾವು ನಮ್ಮ ಕಾರ್ಯದಲ್ಲಿ ಉದ್ಯುಕ್ತರಾಗಿರಬಹುದು. ಹೀಗಿದ್ದರೆ ಇಲ್ಲಿಯ ಗುಣ ದೋಷಗಳನ್ನು ನಿಷ್ಕರ್ಷಿಸುವುದು ಹೇಗೆ ಎಂಬ ಪ್ರಶ್ನೆಯನ್ನು ನಮಗೆ ಉತ್ತರಿಸಬೇಕಾಗುವುದು. ಈ ಪ್ರಶ್ನೆಯನ್ನು ಉತ್ತರಿಸಲು ಇಂದು ಅಮೇರಿಕೆಯಲ್ಲಿ ಪ್ರಚಲಿತವಿರುವ ಒಂದು ಪದ್ಧತಿಯನ್ನು ನಮ್ಮಲ್ಲಿಯ ಎಂಜನಿಯರರು ಅನುಸರಿಸುವವರಾಗಬೇಕು. ಅಲ್ಲಿ ಬೇರೆ ಬೇರೆ ವಿಭಾಗಗಳ ಎಂಜನಿಯರರು ತಮ್ಮ ತಮ್ಮ ಸಂಸ್ಥೆಗಳನ್ನು ಸ್ಥಾಪಿಸಿಕೊಂಡಿರುವರಲ್ಲದೆ ಅವರು ಒಂದಿಲ್ಲೊಂದು ಸಂಸ್ಥೆಯ ಸದಸ್ಯರಾಗಿರುವರು. ಇಲ್ಲಿಯ ವಿಭಾಗಗಳು ತಾವು ಮಾಡಲಿರುವ ಕಾರ್ಯವನ್ನೇ ತಮ್ಮ ಸಂಸ್ಥೆಯ ಹೆಸರನ್ನಾಗಿಸಿರುವವು. ಸಂಶೋಧನೆಗಳಿಗೆ, ಅಭಿವೃದ್ಧಿಗಳಿಗೆ, ಯೋಜನೆಗಳಿಗೆ, ಮಾದರಿಗಳಿಗೆ, ಉತ್ಪಾದನೆಗಳಿಗೆ, ಉದ್ಯಮಗಳಿಗೆ, ಮಾರಾಟಗಳಿಗೆ, ಆಡಳಿತೆಗಳಿಗೆ ಮುಂತಾಗಿ ಭಿನ್ನ ಭಿನ್ನ ಎಂಜನಿಯರರಿರುವರು.

ಇಲ್ಲಿಯ ಎಂಜನಿಯರರು ಸಾಮಾನ್ಯವಾಗಿ ತಮ್ಮ ಕಾರ್ಯವನ್ನು ಭಿನ್ನ ರೀತಿಗಳಲ್ಲಿ ಪರೀಕ್ಷಿಸಿ ಕೊನೆಯ ಪರಿಣಾಮವು ಅದೇ ಆಗಿರುವುದೆಂಬುದನ್ನು ಮನವರಿಕೆಮಾಡಿಕೊಳ್ಳುವರು. ತನ್ನ ಒಬ್ಬ ಗಿರಾಕಿಯು ಬಾರದಿದ್ದರೂ ಚಿಂತೆಯಿಲ್ಲ; ಅದರಿಂದ ತನ್ನ ಅಭಿಪ್ರಾಯದಲ್ಲಿ ಸುರಕ್ಷಿತವಲ್ಲವೆಂದು ಎನಿಸಿದ ಯಾವುದೇ ರಚನೆಯನ್ನು ಇಲ್ಲಿಯ ಗಣ್ಯ ಎಂಜನಿಯರನು ನಿರ್ವಹಿಸನು.

'ನ್ಯಾಶನಲ್ ಸೊಸಾಯಿಟಿ ಆಫ್ ಪ್ರೊಫೆಶನಲ್ ಎಂಜನಿಯರ್ಸ್' ಎಂಬ ಸಂಸ್ಥೆಯ ಸದಸ್ಯರು ಈ ಸಂಸ್ಥೆಯನ್ನು ಸೇರಿದೊಡನೆ ಕೆಳಗೆ ಕಾಣಿಸಿದಂತೆ ಒಂದು ಪ್ರತಿಜ್ಞೆಯನ್ನು ಕೈಕೊಳ್ಳುವರು. ಈ ಪ್ರತಿಜ್ಞೆಯು ಒಳಗೊಂಡ ಆಶಯವೇ ಎಂಜನಿಯರರ ಜವಾಬುದಾರಿಯನ್ನು ಅಳೆದು ನೋಡುವ ಒರೆಗಲ್ಲೆಂದು ತಿಳಿಯಬಹುದು.

"ಎಂಜನಿಯರರ ಕಸಬಿಗೆ ಸೇರಿದ ನಾನು ನನ್ನನ್ನು ಹಾಗು ನನ್ನ ವೃತ್ತಿಗೆ ಸಂಬಂಧಿಸಿದ ಜ್ಞಾನ ಮತ್ತು ಜಾಣ್ಮೆಯನ್ನು ಮಾನವ ಜನಾಂಗದವಳ್ಳಿಗೆ ಮತ್ತು ಸುಧಾರಣೆಗೆ ಸಮರ್ಪಿಸುತ್ತೇನೆ. ನನ್ನ ಕೈಲಾದ ಎಲ್ಲವನ್ನು ಮಾಡಲು, ಪ್ರಾಮಾಣಿಕ ವ್ಯವಹಾರವನ್ನು ಹೊರತು ಪಡಿಸಿ ದೂರುದರಲ್ಲಿಯೂ ಭಾಗ ವಹಿಸದಿರಲು, ಉದ್ಯಮಕ್ಕೆ ಸಂಬಂಧಿಸಿದ ಪರಮಾವಧಿಯ ನತತೆಯಿಂದ ಮತ್ತು ಮಾನವ ಸಹಜವಾದ ನಿಯಮಗಳಿಂದ ಬದ್ಧನಾಗಿ ಕಾರ್ಯಮಾಡುವೆನೆಂದು, ಲಾಭ ಹಾಗು ಮಾನಸನ್ಮಾನಗಳು ನನ್ನ ವ್ಯವಸಾಯದೆದುರು ಗೌಣ ವಿಷಯಗಳೆಂದು ಮತ್ತು ನನ್ನ ಸ್ವಂತದ ಲಾಭಕ್ಕಿಂತಲೂ ನನ್ನ ಉದ್ಯೋಗವನ್ನು ತಿಳಿಯುವದನ್ನು ಮುಖ್ಯವೆಂದು ಗಣಿಸುವುದಾಗಿ ಹಾಗು ಎಲ್ಲ ವಿಚಾರಗಳಿಗಿಂತಲೂ ಸಾರ್ವಜನಿಕರ ಕಲ್ಯಾಣವೇ ಎಲ್ಲ ಕ್ಕೂ ಹೆಚ್ಚಿನದೆಂದು ತಿಳಿಯುವುದಾಗಿ, ಪ್ರತಿಜ್ಞೆಯನ್ನು ಕೈಕೊಳ್ಳುತ್ತೇನೆ. ನಮ್ರತೆಯಿಂದ ಮತ್ತು ದೈವೀ ಮಾರ್ಗದರ್ಶನವನ್ನು ಕೋರಿ ನಾನು ಈ ಪ್ರತಿಜ್ಞೆಯನ್ನು ಮಾಡುತ್ತಿದ್ದೇನೆ."

ಅಮೇರಿಕೆಯ ಎಂಜನಿಯರರು ಕೈಕೊಳ್ಳುವ ಮೇಲಿನ ಆಶಯದ ಪ್ರತಿಜ್ಞೆಯನ್ನು ಭಾರತದಲ್ಲಿ ಭಿನ್ನ ಭಿನ್ನ ಉದ್ಯೋಗಗಳಲ್ಲಿ ಕಾರ್ಯ ಮಾಡುವ ನಾವೆಲ್ಲರೂ ಕೈಕೊಂಡು ಇದನ್ನು ಸತ್ಯ ಸೃಷ್ಟಿಯಲ್ಲಿ ಇಳಿಸುವವರಾದರೆ ಭಾರತದ ಪ್ರಭೆಯು ಸೂರ್ಯನ ಪ್ರಭೆಯನ್ನೇ ಕುಕ್ಕಿಸುವಂತಾದೀತು.

*ಮೇ ೧೯೬೧ರ ಸಾಯನ್ಸ್ ಡಾಯಜೆಸ್ಟದಲ್ಲಿ ಪ್ರಕಟವಾದ 'What is an Engineer' ಎಂಬ ಲೇಖನದೊಳಗಿನ ಪಲವು ವಿಚಾರಗಳನ್ನು ಉಪಯೋಗಿಸಿದ್ದೇನೆ.—ಲೇ.

— ಪ್ರಜಾಪ್ರಭುತ್ವ —

(೧೫ನೇ ಪುಟದಿಂದ)

ದುರುಪಯೋಗವಾಗುವುದೂ ಇದೆ. ಇವೆಲ್ಲ ದೇಶಹಿತ ದೃಷ್ಟಿಯಿಂದ ಹಾನಿಕರ. ಇದನ್ನು ತಡೆಗಟ್ಟಬಲ್ಲ ಶಕ್ತಿ ಜನತೆಯಲ್ಲಿದೆ; ಎಚ್ಚೆತ್ತ ಜನತೆಯಲ್ಲಿದೆ—ಅಂದರೆ, ಜನತೆ ಇಂದು ಎದ್ದೇಳಬೇಕಾಗಿದೆ.

ನಲವತ್ತು ಕೋಟಿ ಪ್ರಜೆಗಳು ಒಂದಲ್ಲ ಒಂದು ರಾಜಕೀಯ ಪಕ್ಷದಲ್ಲಿದ್ದು, ರಾಜಕೀಯವನ್ನೇ ತಲೆಗೆ ಸುತ್ತಿ ಅದನ್ನೇ ಕಸಬಾಗಿಟ್ಟುಕೊಂಡಿರುವುದು ಆಸಾಧ್ಯ—ಹಾಗೆ ಇಟ್ಟುಕೊಂಡರೂ ಇನ್ನಷ್ಟು ವಿಪತ್ತು ಹೆಚ್ಚಾದೀತು. ನ್ಯಾಯಾಧೀಶ, ಕಾರ್ಮಿಕ, ಬೇಸಾಯಗಾರ, ಉಪಾಧ್ಯಾಯ, ವಕೀಲ, ಕಲೆಗಾರ, ಸಾಹಿತಿ—ಇವರಲ್ಲದೆ ಬೃಹತ್ ಮಹಿಳಾಲೋಕ ಇನ್ನೊಂದು—ಹಾಗೂ ಅನಕ್ಷರಸ್ಥರ ಪ್ರಪಂಚ ಮತ್ತೊಂದು ಇರುವ ನಮ್ಮ ಈ ದೇಶದಲ್ಲಿ ರಾಜಕೀಯ ಕೆಲವೇ ಜನರ ಸೊತ್ತಾಗಿರುವುದು ಆಶ್ಚರ್ಯವಲ್ಲ; ತಪ್ಪೂ ಅಲ್ಲ. ಮಿಕ್ಕವರು ಮೌನವಾಗಿರಬೇಕು—ತಮ್ಮನ್ನು ಸೂರೆಗೊಳ್ಳಲು ಇನ್ನೊಬ್ಬರಿಗೆ ಅವಕಾಶ ಕೊಡಬೇಕೆಂದು ಅರ್ಥವಲ್ಲ. ಚುನಾವಣೆಗಳ ಕಾಲದಲ್ಲಿ ಮಾತ್ರ ಎಚ್ಚತ್ತು ಮಿಕ್ಕ ಕಾಲದಲ್ಲಿ ಸುಸ್ತಾವಸ್ಥೆಯಲ್ಲಿರುವುದೂ ಸಾಧ್ಯವಲ್ಲ.

ಅಥವಾ ಈ ಕ್ರಮದ ಚುನಾವಣೆ ಹಾಗೂ ನಾಯಕರ ಆಯ್ಕೆ ತನಗೆ ಸಮ್ಮತವಲ್ಲವಾದರೆ, ಜನತೆ ತನ್ನ ಅಭಿಪ್ರಾಯವನ್ನು ಬಹಿರಂಗಪಡಿಸಬೇಕು. ನಮ್ಮ ಪ್ರಜಾಪ್ರಭುತ್ವ ನಮಗೆ ಕೊಟ್ಟಿರುವ ಹಕ್ಕು, ವಿಚಾರ ಸ್ವಾತಂತ್ರ್ಯ ಮಿಕ್ಕುಳಿದ ದೇಶಗಳಲ್ಲಿ ಯಾರೂ ಕೊಟ್ಟಿರಲಾರರು. ಜನತೆ ಇಂತಹ ವಿಚಾರಗಳಲ್ಲಿ ಹೆಚ್ಚಿನ ತಿಳಿವಳಿಕೆಯುಳ್ಳವರಾಗಬೇಕು. ಅದಕ್ಕೇನು ಮಾರ್ಗ?

ಪ್ರತಿ ಗ್ರಾಮದಲ್ಲೂ ಅನಕ್ಷರಸ್ಥರು ಇದ್ದಾರೆ. ಅಕ್ಷರಸ್ಥರೂ ತಿಳಿವಳಿಕೆಯುಳ್ಳವರೂ ಇದ್ದಾರಲ್ಲ—ಇರಲೇಬೇಕು. ಶಾಲೆಗಳಿವೆ ಎಂದ ಮೇಲೆ ಉಪಾಧ್ಯಾಯರಾದರೂ ಇರಬೇಕು. ವೈದ್ಯರೂ ಗ್ರಾಮಮುಖಂಡರೂ, ಸಂಜಾಖಿತದಾರರೂ ಇದ್ದಾರೆ. ಇವರೆಲ್ಲರೂ ರಾಜಕೀಯ ಪಕ್ಷಗಳಲ್ಲಿರಲಾರರು; ಪಕ್ಷದ ರಾಜಕೀಯದಲ್ಲಿ ಒಲವಿದ್ದವರಾಗಿರಲಾರರು. ದೇಶಹಿತ ದೃಷ್ಟಿಯಿಂದ ನಿಷ್ಪಕ್ಷವಾದ ರಾಜಕೀಯ ಮನೋಭಾವ ಇದ್ದವರಾದರೂ ಕೆಲವರಿರಬಹುದು—ಅಂತಹವರದ್ದೇ ಒಂದು ಸಂಘವಾಗಬೇಕು, ಕರ್ನಾಟಕ ಸಂಘ ಕಲಾ ಸಂಘ ಮುಂತಾದ ಸಂಘಗಳಿದ್ದಂತೆ ಪ್ರತಿ ಗ್ರಾಮದಲ್ಲೂ ಇಂತಹ ಒಂದು ಸಂಘವಿದ್ದರೆ ಚೆನ್ನು. ಈ ಸಂಘ ದೇಶದ ಪ್ರಜಾಪ್ರಭುತ್ವ ಕ್ರಮವನ್ನು ನಿಷ್ಪಕ್ಷವಾದ ದೃಷ್ಟಿಯಿಂದ ವಿಮರ್ಶಿಸಬೇಕು—ತನ್ನ ಧ್ವನಿಯನ್ನು ಸರ್ಕಾರಕ್ಕೂ ವಿರೋಧ ಪಕ್ಷಕ್ಕೂ ಆಗಾಗ ತಿಳಿಸಬೇಕು.—ಅವರೂ ಜನತೆಯ ಬೆಂಬಲ ಪಡೆಯಲು ಇದೊಂದು ಸುಗಮ ಮಾರ್ಗವಾದೀತು.

ಚುನಾವಣಾ ಕಾಲದಲ್ಲಿ ನೀವು ನಿಲ್ಲಿಸುವ ಮಂದಿಗೆ ನಾವು ಮತ ಕೊಡುವುದಕ್ಕಿಂತ ನಾವು ಸೇರುವ ಮಂದಿಯನ್ನೇ ನೀವು ನಿಲ್ಲಿಸಿ—ನಾವು ನಿಮ್ಮನ್ನು ಪ್ರೋತ್ಸಾಹಿಸುತ್ತೇವೆ ಎಂದು ಅಧಿಕಾರ ವಾಣಿಯಿಂದ ಇಂತಹ ಸಂಘಗಳು ಹೇಳಬಹುದು. ಆಗ ನಮ್ಮ ಚುನಾವಣೆಗಳೂ ಸುಗಮವಾಗಿ ಹೆಚ್ಚಿನ ಖರ್ಚಿಲ್ಲದೆ ನಡೆದಾವು-ಯೋಗ್ಯರೂ ದಕ್ಷರೂ ಜನಪ್ರತಿನಿಧಿಗಳಾಗಿ ದೇಶದ ಹಿತವನ್ನು ಕಾಪಾಡಿಯಾರು. ಅಂದರೆ ಇಂದಿನದೆಲ್ಲ ಅಸವಾದ ಪೂರಿತವೆಂದರ್ಥವಲ್ಲ—ಇದು ಇನ್ನೊಂದು ಸುಗಮವಾದ ಮಾರ್ಗ ಎಂದಷ್ಟೇ.

ಇದೊಂದು ಹುಚ್ಚು ಭಾವನೆ—ಇದನ್ನು ಎಲ್ಲರೂ ಸ್ವೀಕರಿಸಬೇಕೆಂದಿಲ್ಲ—ಇದು ಬೃಹಸ್ಪತಿ ವಾಕ್ಯವೂ ಅಲ್ಲ ಸ್ವೀಕರಿಸುವವರು ಸ್ವೀಕರಿಸಲಿ. ಶ್ರೀಮಂತ ವರ್ಗ ಸ್ವಾಭಾವಿಕವಾಗಿ ಆಳುವವರ ಮುಖವನ್ನೇ ನೋಡುತ್ತದೆ. ಕೂಲಿಕಾರರು ಬೆದರಿಸಿಯಾದರೂ ತಮ್ಮ ಹಿತವನ್ನು ಸಾಧಿಸಿಕೊಂಡಾರು. ಚುನಾವಣೆ ಬಂದಾಗ ಈ ಎರಡೂ ವರ್ಗ ಕೈಗೊಂಬೆಯಾಗುತ್ತದೆ. ಈ ವರ್ಗಗಳಿಂದ ಶೋಷಿಸಲ್ಪಡುವ ಮಧ್ಯಮ ವರ್ಗ ಇಂದು ಕಂಗಾಲಾಗಿದೆ. ಅದಾದರೂ ಇಂತಹ ಇನ್ನಿತರ ವಿಚಾರಗಳ ಕುರಿತು ತಲೆ ತುರಿಸಿಕೊಂಡಾರು ಎಂದು ಭಾವಿಸಬಹುದು. ವಿಚಾರ ಸ್ವಾತಂತ್ರ್ಯದ ಈ ಕಾಲದಲ್ಲಿ ಈ ಲೇಖಕನಿಗೆ ಮುಂಬರುವ ಚುನಾವಣೆ ಕುರಿತು ಯೋಚಿಸಿದಾಗ ಹುಟ್ಟಿದ ವಿಚಾರಗಳು ಇವು.

ಭಾರತಾಂಬೆಯ ಮಹಿಮೆ

ಕೀರ್ತನೆ

1ಭಾರತವನುಳಿಯುತ್ತ ನನಗೆ ಜೀವನವೆತ್ತ?
ಭಾರತವೆ ನನ್ನುಸಿರು, 2ನನ್ನೊಗೆದ ಬಸಿರು;
ಭಾರತವೆ ಧನಧಾನ್ಯ, ಭಾರತವೆ ಮನೆಮಾನ್ಯ,
ಭಾರತವೆ 3ದೇವಾರವೆನ್ನ ಸಂಸಾರ. ೪

ಭಾರತದ ನೆಲಹೊಲವು 4ಸುರಭಿಯುಳಿ ಕೆಚ್ಚಾವು,
ಭಾರತದ ತಿಳಿಜಳವು ಸೊದೆಯ ಸವಿ ಸೆಳವು;
ಭಾರತದ ಶ್ಯಾಮಲತೆ ತನುಮನಕೆ 5ಕಾಮಲತೆ,
ಭಾರತದ ಪಶುಪಕ್ಷಿ ವೈಚಿತ್ರ್ಯ ಸಾಕ್ಷಿ ೮

ಭಾರತದ 6ಸಕ್ಕದವು ಜ್ಞಾನನಿಧಿಯೊಕ್ಕದವು7,
ಭಾರತದ ಹಲ 8ಮಾತೆ 9ಮೇಳವದ ಗೀತೆ;
ಭಾರತದ ಶುಭ ಚರಿತ ಧರೆಗೆ ಧರ್ಮದ ಕರೆತ,
ಭಾರತದ 10ತೋಳ್ಮಿಗಿಲು ಹಗೆಯ 11ಬಗೆದಿಗಿಲು. ೧೨

ಭಾರತ ಸ್ವಾತಂತ್ರ್ಯ ರಕ್ಷಣವೆ ನಿಜ ಮಂತ್ರ,
ಭಾರತದ ಜಯಮೂರ್ತಿ ಮನ್ಮನಸಿ ಪೂರ್ತಿ;
ಭಾರತದ 12ಸೋದರಿಕೆ ನನ್ನ ದಿನದಿನದೆರಕೆ13,
ಭಾರತ ಯಶೋಗಾನವೆನ್ನದೆಯ 14ತಾನ. ೧೬

ಭಾರತದ ಮಂಗಲವು ಭುವನವಲ್ಲಭನೊಲವು,
ಭಾರತ ಸಮುಚ್ಚ್ರಯವು ಶಾಂತಿಗಾಶ್ರಯವು;
ಭಾರತದ ಜನಕುಲವು ಭುವಿಯ ಬಳಗಕೆ ಬಲವು,
ಭಾರತಾಂಬೆಯ ಭಕ್ತಿ ನನಗಾತ್ಮ ಶಕ್ತಿ.

—ಗೋವಿಂದ ಪೈ

1 ಭಾರತವನುಳಿಯುತ್ತ = ಭಾರತವನ್ನು ಬಿಟ್ಟು. 2 ನನ್ನೊಗೆದ = ನಾನು ಹುಟ್ಟಿದ; ಬಸಿರು=ಹೊಟ್ಟೆ; ಅಂದರೆ ನನ್ನ ತಾಯಿ; 3 ದೇವಾರ=ದೇವಾಲಯ. 4 ಸುರಭಿ = ಕಾಮಧೇನು; ಇಳೆಕೆಚ್ಚಲ = ತುಂಬಿದ ಪಾಲು ಇಳೆಯುತ್ತಿರುವ ಕೆಚ್ಚಲು. 5 ಕಾಮಲತೆ=ಬಯಸಿದುದನ್ನು ನೀಡುವ ಬಳ್ಳಿ 6 ಸಕ್ಕದ = ಸಂಸ್ಕೃತ ಭಾಷೆ, 7 ಒಕ್ಕದ = ಒಂದೇ ಕಡೆ ಅಂದರೆ ಒಂದೇ ಬಾಗಿಲು, 8 ಮಾತು = ಭಾಷೆ, 9 ಮೇಳವ = ಸಂಗೀತದ ಕೂಟ, 10 ತೋಳ್ಮಿಗಿಲು = ವಿಶೇಷವಾದ ಪರಾಕ್ರಮ. 11 ಬಗೆದಿಗಿಲು = ಎದೆಯ ಭೀತಿ. 12 ಸೋದರಿಕೆ = ಸೋದರರಂತೆ ಪರಸ್ಪರ ಪ್ರೀತಿಯಿಂದ ಇರೋಣ, 13 ಎರಕೆ = ಬೇಡುವಿಕೆ, ಪ್ರಾರ್ಥನೆ (ದೇವರೊಡನೆ) 14 ತಾನ = ಹಾಡನ್ನು ಹಾಡುವ ಒಂದು ವಿಧಾನ.

ಬಾಳ್ ತಣಿವು

ನೋಡಲೇನು ಬರಿದೆ ಜೀವನ
ಮುಂದಿನಾಳವು ಕಾಣದು
ಕಾಣುವೆನುತಲಿ ಮುಳುಗುತಿರಲು
ದುಗುಡವೆನಗೆ ಬೆಳೆಯಿತು.

ಬಾಳಿನಾಟದ ಸರಸ ವಿಷಯದ
ನಿಮಿಷಗಳನೂ ಅಳೆಯುತ
ತಿಳಿವಿನಾಳವ ಸೇರಿದಿರಲು
ಮನವು ಮೇಲಕೆ ಬಾರದು.

ಮುಳುಗಿ ಮುಳುಗಿ ಮುಳುಗಿ ಮುಳುಗಿ
ಉಸಿರು ತಾನೇ ಮುಳುಗಿತು
ಅಳುಕಿ ಅಳುಕಿ ಇಣಿಕಿ ನೋಡಲು
ಮನವು ಮೇಲೆ ಹೋಗದು.

ದಣವು ತುಂಬಿ ಮನವು ಇಂಬಿ
ತಣಿವಿಗಾಗಿಯೇ ನಿಂತೆನು
ಕಾಣುವೆದೆಗೆ ನಂಬಿ ನಿಂತೆನು
ಹರುಷವಿದುವೆಂದರಿತೆನು.

—ಶ್ರೀ ಮೋಹನ ಮುತಾಲಿಕ,
ಬೆಳಗಾವಿ.

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ, ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಹೊಸ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ. 1-4-0 (1=25).

ಮನೆಯೆಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್.ಐ.ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ। ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ. ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.
ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ

ವಿ. ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0=25 N P ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕಗಳಿಸಲಾಗುವುದು.
ನಿಮ್ಮೂರ ಪುಸ್ತಕ ಸ್ಟಾಲಿನಲ್ಲಿ ಸಿಗದಿದ್ದರೆ ನಮಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಭಾರತ ಸ್ವಾತಂತ್ರ್ಯೇತಿಹಾಸದ ಪಕ್ಷಿನೋಟ

(೧೨ನೇ ಪುಟದಿಂದ)

ಗಿದರು ಪರೋಕ್ಷವಾಗಿ ಅಪರೋಕ್ಷವಾಗಿ ಸಹಾಯ ಮಾಡಿದರು.

ದಾಸ್ಯದಲ್ಲಿದ್ದಾಗಲೇ ಭಾರತಕ್ಕೆ ಬ್ರಿಟಿಷರ ಧ್ವಜಕ್ಕೆಮರುಗಾಗಿ ರಾಷ್ಟ್ರ ಧ್ವಜ ತಯಾರಿಸಿದ ಕೀರ್ತಿ ಶ್ರೀಮತಿ ಕಾಮಾರವರಿಗೆ ಸಲ್ಲತಕ್ಕುದ್ದಿದೆ. ಅವರು ೧೯೦೭ರ ಆಗಸ್ಟ್ ೧೮ರಂದು ಜರ್ಮನಿಯಲ್ಲಿ ಸಮಾಜವಾದೀ ಕಾಂಗ್ರೆಸ್ ಅಧಿವೇಶದನಲ್ಲಿ ಭಾರತ ರಾಷ್ಟ್ರೀಯ ಧ್ವಜವನ್ನು ಹಾರಿಸಿ ಭಾರತದ ಸ್ವತಂತ್ರದ ಕಹಳೆಯನ್ನು ಹೊರ ದೇಶದಲ್ಲಿಯೂ ಊದಿದರು. ಅದೂ ತ್ರಿವರ್ಣದಿದ್ದು ಮೇಲಿನ ಪಟ್ಟೆ ಹಸಿರು ಮಧ್ಯದ್ದು ಹಳದಿ ಕೆಳಗಿನದು ಕೆಂಪು ವರ್ಣವಾಗಿತ್ತು. ಹಸಿರು ಪಟ್ಟೆಯಲ್ಲಿ ಒಂದು ಬಿಳೀ ಕಮಲ ಹಾಗೂ ಏಳು ನಕ್ಷತ್ರಗಳಿದ್ದುವು. ಮಧ್ಯದ ಹಳದಿಯಲ್ಲಿ 'ವಂದೇ ಮಾತರಂ' ದೇವನಾಗರಿಯಲ್ಲಿದ್ದು ಕೆಂಪು ಪಟ್ಟೆಯಲ್ಲಿ ಸೂರ್ಯ ಹಾಗೂ ಅರ್ಧ ಚಂದ್ರ ತಾರೆಗಳಿದ್ದುವು.

ಸಮ್ಮೇಳನವನ್ನುದ್ದೇಶಿಸಿ ಆಕೆ ಹೇಳಿದ್ದರು.

"……ಈ ಧ್ವಜ ಭಾರತದ ಸಂಕೇತ ಇದು ಇಂದು ಜನ್ಮವೆತ್ತಿದೆ ಯುವ ಜನಸ್ತೋಮದ ಬಲಿ ರಕ್ತದಿಂದ ಸುನೀತವಾಗಿದೆ. ಮಹನೀಯರೇ ನೀವೆಲ್ಲ ಎದ್ದು ನಿಂತು ಈ ಸ್ವಾತಂತ್ರ್ಯ ಲಾಂಛನಕ್ಕೆ ಗೌರವ ಸಲ್ಲಿಸಬೇಕೆಂದು ನಮ್ರಳಾಗಿ ಕೇಳಿಕೊಳ್ಳುತ್ತೇನೆ. ಈ ಧ್ವಜದ ಹೆಸರಿನಲ್ಲಿ ಪ್ರಪಂಚದ ಎಲ್ಲ ಸ್ವಾತಂತ್ರ್ಯ ಪ್ರೇಮಿಗಳಲ್ಲೂ ನಾನು ಕೇಳಿಕೊಳ್ಳುವುದೇನೆಂದರೆ ಮಾನವ ಕುಲದ ಮೂರನೇಯ ಒಂದು ಭಾಗದಷ್ಟು ಜನರು ದಾಸ್ಯದಲ್ಲಿದ್ದಾರೆ— ಅವರನ್ನು ವಿಮೋಚನೆಗೊಳಿಸಿ……"

ಅವರ ಈ ಕೋರಿಕೆಗೆ ಪ್ರಚಂಡ ಚಂಬಲ ಸಿಕ್ಕಿತು. ಭಾರತದ ವಿಮೋಚನೆಗೆ ಕಷ್ಟಪಟ್ಟವರು ಒಬ್ಬಿಬ್ಬರಲ್ಲ. ನೆತ್ತರು ಹರಿಸಿದವರ ಲೆಕ್ಕವಿಲ್ಲ. ಚಿಕ್ಕ ಮಕ್ಕಳಿಂದ ಹಿಡಿದು ಹೆಣ್ಣು ಹೆಣ್ಣು ಮುದುಕರ ವರೆಗಿನ ಕೋಟ್ಯಂತರ ಭಾರತೀಯರ ಒಕ್ಕೊರಲಿನ ಕೋರಿಕೆ— "ಸ್ವಾತಂತ್ರ್ಯ", ದ್ರೋರಕಬೇಕಾದರೆ ಹತ್ತಿರ ಹತ್ತಿರ ಶತಮಾನಗಳು ಬೇಕಾದವು. ಕಷ್ಟಕಷ್ಟಗಳು ಅಸಾಧ್ಯವಿದ್ದವು.

ಭಾರತದ ಸ್ವಾತಂತ್ರ್ಯೇತಿಹಾಸದಲ್ಲಿ ದೊರಕುವ ಲೆಕ್ಕವಿಲ್ಲದಷ್ಟು ಪ್ರಸಂಗಗಳು ಜಗತ್ತಿಗೇ ಮಾರ್ಗದರ್ಶಕವಾಗಿವೆ.

ಮಿಲಿಟರಿ ನ್ಯಾಯಾಲಯದ ಮುಂದೆ ಸ್ವಾತಂತ್ರ್ಯ ವೀರ ತಾತ್ಯಾನನ್ನು ನಿಲ್ಲಿಸಿ, ಒಂಬತ್ತು ಜನ ಸೇನಾಧಿಕಾರಿಗಳನ್ನು ಕೊಂದ ಅಪಾದನೆಯನ್ನು ಆತನ ಮೇಲೆ ಹೊರಿಸಿದರು.

"ನೀನು ಎಷ್ಟು ಜನ ರಾಜನಿಷ್ಠ ಅಧಿಕಾರಿಗಳನ್ನು ಕೊಂದಿದ್ದೀಯಾ ಬಲ್ಲೆಯಾ?"

—ಕೋಪದಲ್ಲಿ ಕಮಿಷನರು ಕೇಳಿದರು. ತಾತ್ಯಾ ಸಹಜವಾಗಿ ನಗುತ್ತಾ

"ಕ್ಷಮಿಸಿ, ನಾನು ಎಣಿಕೆ ಇಡಲಿಲ್ಲ. ನನಗೆ ತಿಳಿದಂತೆ ನಾನು ಎಣಿಕೆಗೆ ಬಾರದಷ್ಟು ಈ ಬಡ್ಡಕ್ಕೆ ನಿವೇದಿಸಿದ್ದೇನೆ!"

ಕಮಿಷನರಿಗೆ ಅವಮಾನವಾಯಿತು. ಬೂಡ್ಸ್ ಕಾಲನ್ನು ನೆಲಕ್ಕಪ್ಪಳಿಸಿ

"ಸುಮ್ಮನಿರು, ಇಂತಹ ರಾಜದ್ರೋಹಿ ಕೊಲೆಗಾರನಿಗೆ ಏನು ಶಾಸನವಿದೆ ತಿಳಿದಿದೆಯೋ? ನಿನ್ನ ಪ್ರಾಣ ತೆಗೆಯುತ್ತೇವೆ"

ಮಿಸೆಯಲ್ಲಿಯೇ ನಗುತ್ತಿದ್ದ ತಾತ್ಯಾ ಶಾಂತವಾಗಿ ಉತ್ತರಿಸಿದ.

"ನಿಮ್ಮ ದುಶ್ಶಾಸನ ನನಗೆ ಬಾಧೆ ಮಾಡದು, ನನ್ನ ಪ್ರಾಣವನ್ನು ದೇಶಕ್ಕಾಗಿ ಯಾವಾಗಲೋ ಅರ್ಪಿಸಿದ್ದಾಯಿತು. ನಿಮಗೆ ತೆಗೆದು ಕೊಳ್ಳಲಿಕ್ಕೆ ಪ್ರಾಣವಿಲ್ಲೆಂದು ತಿಳಿಸಲು ವ್ಯಸನಪಡುವೆ"

ನ್ಯಾಯಾಲಯ ತಬ್ಬಿಬ್ಬಾಗಿ ನಿಂತಿತ್ತು. ಗಂಡುವೀರರ ಶೌರ್ಯದ ಕಾರ್ಯಗಳಿಂತಹುವುವಿದ್ದರೆ, ಹೆಣ್ಣು ಮಕ್ಕಳಿಗೂ ಗಂಡೆದೆಯಷ್ಟೆ ಕೆಚ್ಚು—ಸ್ಪತಿಷ್ಠೆಗಳಿತ್ತೆಂದು ತೋರುವ ಉದಾಹರಣೆಗಳು ಲೆಕ್ಕವಿಲ್ಲದಷ್ಟಿವೆ.

ನೇತಾಜಿಯವರ ಆಜಾದ್ ಹಿಂದ್ ಫೌಜಿನ ವೀರರ ಸೈನಿಕ ನ್ಯಾಯಸಭೆ ಕೆಂಪು ಕೋಟೆಯಲ್ಲಿ ನಡೆಯುತ್ತಿದ್ದ ಕಾಲ. ಅಂದು ಬ್ರಿಟಿಷ್ ಅಧಿಕಾರಿಗಳು ಝಾನ್ಸಿರಾಣಿ ರೆಜಿಮಿಂಟಿನ ವೀರ ರಮಣಿಯರನ್ನು ವಿಚಾರಣೆ ನಡೆಸುತ್ತಿದ್ದರು. ಅವರ ಯಾವ ಪ್ರಶ್ನೆಗಳಿಗೂ ಉತ್ತರ ಸಿಗುತ್ತಿರಲಿಲ್ಲ. ಅಧಿಕಾರಿಗಳು ಅವರಿಗೆ ಕೊಡುತ್ತಿದ್ದ ಕಿರುಕುಳ ನೋಡಿ ಸಹಿಸುವಷ್ಟು ಸಹಿಸಿ ಕೊನೆಗೆ ಸಹನೆ ಮೀರಿದ ಕ್ಯಾಪ್ಟನ್ ಲಕ್ಷ್ಮಿಸಿಂಹಿಣಿಯಂತೆ ಘರ್ಜಿಸಿದರು.

"ಅವರನ್ನೇಕೆ ಗೋಳು ಹೊಯ್ದುಕೊಳ್ಳುವಿರಿ? ನನ್ನನ್ನು ಕೇಳಿ. ಝಾನ್ಸಿ ರಾಣಿ ರೆಜಿಮೆಂಟಿನ ಕಮಾಂಡರ್ ನಾನೆ!"

ಸಿಂಹಿಣಿಯ ಘರ್ಜನೆ ಅಧಿಕಾರಿಗಳನ್ನು ಬೆಚ್ಚಿಸಿತು. ಸಾವರಿಸಿಕೊಂಡು ಕೊನೆಗೊಬ್ಬ ಬ್ರಿಟಿಷ್ ಅಧಿಕಾರಿ ಕೇಳಿದ.

"ರಣರಂಗದಲ್ಲಿ ಎಲ್ಲಾ ಆಯುಧಗಳ ಪ್ರಯೋಗ ಬಲ್ಲಿರೋ?"

"ಯಾವ ಆಯುಧಗಳನ್ನಾದರೂ ಪ್ರಯೋಗಿಸಬಲ್ಲೆ!"

"ಕತ್ತಿ, ರೈಫಲ್, ಪಿಸ್ತೂಲ್?"

ಆಶ್ಚರ್ಯದಿಂದ ಕೇಳಿದ ಅಧಿಕಾರಿ.

"ನಿಸ್ಸಂಶಯವಾಗಿ"

"ಕದನದಲ್ಲಿ ಎದುರಾಗಿದ್ದರೆ ಏನು ಮಾಡುತ್ತಿದ್ದಿರಿ?" ಅಧಿಕಾರಿ ಕೇಳಿದ.

"ಕದನದಲ್ಲಿ ಎದುರಾಗಿದ್ದರೆ ಗುಂಡು ಹಾಕಿ ಕೊಲ್ಲುತ್ತಿದ್ದೆ"

ಬ್ರಿಟಿಷ್ ಅಧಿಕಾರಿ ಕಂಗಾಲಾಗಿ ತೆಪ್ಪಗಾದ.

ಎಂತಹ ಸಮಯದಲ್ಲಿ ಎಂತಹ ಧೈರ್ಯ, ಎಂತಹ ಕೆಚ್ಚು—ಗಂಡೆದೆ! ಆದರ್ಶ ಪ್ರಾಯವಾದ ಇಂತಹ ಹೆಣ್ಣು ಮಕ್ಕಳನ್ನು ಪಡೆದ ತಾಯಿ ಭಾರತಿ ಧನ್ಯೆ! ಧನ್ಯೆ!!

ಸ್ವಾತಂತ್ರ್ಯ ಸಾಧನೆಯಲ್ಲಿ ಶೌರ್ಯ—ಕಾರ್ಯಗಳ ಮಾತು ಇಂತಾದರೆ ಅಹಿಂಸೆ, ಧರ್ಮ—ಧೈರ್ಯಗಳಲ್ಲಿ ಪಥಿಸಿದ ನಾರೀ ಮಣಿಯರಿಗೇನು ಕಡಮೆಯಿಲ್ಲ.

೧೯೩೧ರ ಏಪ್ರಿಲ್ ತಿಂಗಳು. ಜವಾಹರರು ಬರೈಲಿ ಜೈಲಿನಲ್ಲಿದ್ದರು. ಅವರ ತಾಯಿ ಸ್ವರೂಪರಾಣಿ ೧೯೧೯ರ ಜಲಿಯನ್ ವಾಲಾಬಾಗಿನ ಮಹಾ ದುರಂತದ ನೆನಪಿಗಾಗಿ ಪ್ರಯಾಗದಲ್ಲಿ ಹೊರಟ ರಾಷ್ಟ್ರೀಯ ವಾರದ ಮೆರವಣಿಗೆಯಲ್ಲಿ ಮುಂದಾಳುತ್ವ ವಹಿಸಿದ್ದರು. ಸ್ವಲ್ಪ ದೂರ ಹೋಗುವುದರಲ್ಲಿ ಪೋಲಿಸರು ತಡೆದರು. ಆಗ ಯಾರೋ ಸ್ವರೂಪರು ಕುಳಿತುಕೊಳ್ಳಲು ಕುರ್ಚಿ ತಂದು ಹಾಕಿದರು. ಗುಂಡು ಚದರದಾದಾಗ ಪೋಲಿಸರು ಲಾಠಿ ಪ್ರಯೋಗಿಸಿದರು. ಸ್ವರೂಪರನ್ನು ಕುರ್ಚಿಯಿಂದುರುಳಿಸಿ ಲಾಠಿ ಪ್ರಯೋಗಿಸಿದರು. ಮೈ, ಕೈ ಹಾಗೂ ತಲೆಯಿಂದ ರಕ್ತ ಹರಿಯ ತೊಡಗಿ ಪ್ರಜ್ಞೆ ತಪ್ಪಿತು. ಬಹಳ ಹೊತ್ತು ನಡುಬೀದಿಯಲಿ ಬಿದ್ದಿದ್ದ ಅವರನ್ನು ಆನಂದ ಭವನಕ್ಕೆ ಒಬ್ಬ ತಂದು ಹಾಕಿ ಹೊರಟು ಹೋದ. ವಿಷಯ ನೆಹರೂಗೆ ತಿಳಿಯಿತು.

"ವೃದ್ಧಳೂ, ಅಶಕ್ತರೂ ಆದ ನನ್ನ ತಾಯಿ ರಕ್ತದಲ್ಲಿ ನನೆದು ನಡು ಬೀದಿಯಲ್ಲಿ ಬಿದ್ದಿದ್ದುದು ನನ್ನನ್ನು ಬಹಳವಾಗಿ ಬಾಧಿಸಿತು. ಒಂದು ವೇಳೆ ಆ ಕಾಲದಲ್ಲಿ ನಾನು ಆ ಸ್ಥಳದಲ್ಲಿದ್ದರೆ ಏನಾಗುತ್ತಿತ್ತು? ನಿಜವಾಗಿ ನಾನು ಅಹಿಂಸಾ ತತ್ವವನ್ನು ಅನುಸರಿಸುತ್ತಿದ್ದೆನೆ? ಅದು ಖಂಡಿತ ಆಗುತ್ತಿರಲಿಲ್ಲವೆಂದು ನನಗೆ ಭಯವಾಗುತ್ತದೆ."

—ಎಂದು ಈ ಘಟನೆಯ ಬಗ್ಗೆ ಆ ಮೇಲೆ ಬರೆದರು.

ಸ್ವರೂಪರಾಣಿ ಸ್ವಲ್ಪ ಗುಣ ಹೊಂದಿದ ಮೇಲೆ ಸೆರೆಮನೆಯಲ್ಲಿ ಮಗನನ್ನು ಕಂಡು ನಗುತ್ತಾ.

"ಮಗು ನನ್ನ ಸ್ವಯಂಸೇವಕ ಪುತ್ರರೊಡನೆ ನಾನೂ ನನ್ನ ಭಾಗದ ಏಟು ತಿಂದೆ"

—ಎಂದರು. ಅಹಿಂಸೆಯಿಂದ ಹಿಂಸೆಯನ್ನು ಗೆದ್ದು ಜಗತ್ತಿನ ಇತಿಹಾಸದಲ್ಲೇ ಬೊಸ ಅಧ್ಯಾಯವನ್ನು ತೆರೆದ ಗಾಂಧಿ, ನೆಹರೂಗಳನ್ನು ಪಡೆದ ಭಾಗ್ಯ ಭಾರತಕ್ಕಿದೆ. ಸಾಮ್ರಾಜ್ಯಶಾಹಿ ಆಡಳಿತಗಳ ನಿರ್ಮೂಲಗೊಳಿಸಲಿಕ್ಕೇ ಭಾರತ ಸಾಮ್ರಾಜ್ಯಶಾಹಿ ಆಡಳಿತದಿಂದ ಪ್ರಥಮತಃ ವಿಮೋಚನೆಗೊಂಡಿತು.

ಭಾರತ ಸ್ವಾತಂತ್ರ್ಯದ ಜಯಭೇರಿ ಭಾರಿಸಿದ ರೀತಿಯಲ್ಲಿ ಪ್ರಪಂಚದ ಬೇರಾವ ದೇಶಗಳ ಚರಿತ್ರೆಯಲ್ಲೂ ವಿಜಯ ಸಾಧಿಸಿದ ಉದಾಹರಣೆಗಳಿಲ್ಲ. ಪರಸ್ಪರ ಶೌರ್ಯ, ಶಕ್ತಿ, ಯುದ್ಧ ಹಾಗೂ ಕುಟಿಲತೆಗಳಿಂದ ಗೆದ್ದು ಭಾರತ ಸಾಮ್ರಾಜ್ಯ ಕಟ್ಟಿಲ್ಲ. ಭಾರತದ ಬಿಡುಗಡೆಯೂವಾಗಿನಿಂದ ಪ್ರಾರಂಭವಾಗಿ ಜಗತ್ತಿನ ಲೆಕ್ಕವಿಲ್ಲದಷ್ಟು ರಾಷ್ಟ್ರಗಳು ಸ್ವತಂತ್ರವಾಗಿವೆ. ಸಾಮ್ರಾಜ್ಯಶಾಹಿಗಳ ಆಡಳಿತ ಬುಡ ಮೇಲಾಗಿದೆ. ಪ್ರತಿಯೊಂದೂ ಸ್ವತಂತ್ರ ರಾಷ್ಟ್ರವಾಗತೊಡಗಿದೆ ಇಲ್ಲವೇ ಅದಕ್ಕಾಗಿ ಹೋರಾಡುತ್ತಿವೆ.

ಚಂದಾದಾರರಲ್ಲಿ ವಿನಂತಿ

ಇದೇ ಆಗೋಸ್ತು ತಿಂಗಳಾಂತ್ಯಕ್ಕೆ "ನವಯುಗ"ದ ಎರಡನೆಯ ವರ್ಷವು ಅಂತ್ಯವಾಗಿ ಸಪ್ಟಂಬರ ಆದಿಯಿಂದಲೂ ಮೂರನೆಯ ಹೊಸ ವರ್ಷಾರಂಭವಾಗುತ್ತದೆ. ಈ ಅವಧಿಗೆ ಚಂದಾ ಅವಧಿ ಮುಗಿಯುವವರೂ ಚಂದಾ ಹಣ ಬಾಕಿ ಇರುವವರೂ ದಯವಮಾಡಿ ತಮ್ಮ ಬಾಕಿಯನ್ನು ಬೇಗನೇ ಕಳುಹಿಸಿಕೊಟ್ಟು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥಿಸುತ್ತೇವೆ.

With Compliments from:

Sri M. Madhva Raj

Proprietor:

Coronet Canning Company

MALPE

(S. INDIA)

ಉತ್ತಮ ಹಾಗೂ ಸುಖಕರ ಪ್ರಯಾಣಕ್ಕಾಗಿ

ವೆಸ್ಟ್ ಕೋಸ್ಟ್ ಟ್ರಾನ್ಸ್‌ಪೋರ್ಟ್

ಸರ್ವಿಸು ಬಸ್ಸುಗಳಲ್ಲಿಯೇ ಪ್ರಯಾಣಿಸಿರಿ.

ಡೈರೆಕ್ಟ್ ಪೆಸೆಂಜರರಿಗೆ ಯೋಗ್ಯ ಪ್ರಯಾಣ ಸೌಕರ್ಯ.

ಮಂಗಳೂರಿನಿಂದ ಮೂಲ್ಕಿ ಮಾರ್ಗವಾಗಿ ಸೋಮೇಶ್ವರಕ್ಕೂ, ಕುಂದಾಪುರ ಸೋಮೇಶ್ವರ ಮಾರ್ಗವಾಗಿ ಮಂಗಳೂರಿಗೂ, ಕುಂದಾಪುರದಿಂದ ಸೋಮೇಶ್ವರ ಮಾರ್ಗವಾಗಿ ಧರ್ಮಸ್ಥಳಕ್ಕೂ, ಕಾರ್ಕಳ ಪಡುಬಿದ್ರಿ ಮಾರ್ಗವಾಗಿ ಉಡುಪಿಗೂ ಹೋಗಿ ಬರುವ ನೇರಾದ ಸರ್ವಿಸಿನ ವ್ಯವಸ್ಥೆಗಳು.

ಎ. ನಾರಾಯಣ ಹೆಗ್ಡೆ, ಪೆರ್ಡೂರು, ಮೆನೇಜಿಂಗ್ ಡೈರೆಕ್ಟರ್.

ಡಾ| ಪಿ. ವಿ. ವ್ಯಾಸ ರಾವ್, ಚೆಯರ್‌ಮ್ಯಾನ್.

ಪ್ರಫುಲ್ಲಚಂದ್ರ ರೇ

ಮೂವರು ಭಾರತೀಯ ಸತ್ಪುರುಷರ ಶತಾಬ್ದಿಯ ಆಚರಣೆಯ ಅಮೃತ ವರ್ಷ—೧೯೬೧. ಇವರಲ್ಲಿ ಪ್ರಫುಲ್ಲಚಂದ್ರ ರೇ ಒಬ್ಬರು. ಪ್ರಸಿದ್ಧ ವಿಜ್ಞಾನಿಯಾದ ರೇ ಆದರ್ಶ ಶಿಕ್ಷಕರೂ ನೈಜ ನಾಯಕರೂ ಆಗಿದ್ದರು. ಅವರ ಸವಿ ನೆನಪನ್ನು ಮಾಡಿ ನಾವೂ ಕೃತಾರ್ಥರಾಗೋಣ.

ಶ್ರೀ ಸಂಜೀವ ಲಕ್ಷ್ಮೇಶ್ವರ, ಬಿ. ಎ.

ಸ್ವಾತಂತ್ರ್ಯದಿನೋತ್ಸವದ ಈ ಶುಭದ ಮೂರಂಭವಂದು ಭಾರತಾಂಬೆಯ ಒಬ್ಬ ಸತ್ಪುತ್ರನ ಪರಿಚಯ ಮಾಡಿಕೊಡುವದೇ ಈ ಲೇಖನದ ಉದ್ದೇಶ. ದಿವಂಗತ ಪ್ರಫುಲ್ಲ ಚಂದ್ರರೇ ಅವರು.

ಹಿಂದುಸ್ಥಾನದ ಇತಿಹಾಸದಲ್ಲಿ ೧೮೬೧ ನೇ ಇಸ್ವಿಗೆ ಬಹಳ ಮಹತ್ವವಿದೆ. ಏಕೆಂದರೆ ೧೮೬೧ರಲ್ಲಿಯೇ ಭಾರತಾಂಬೆಯ ಮೂವರು ಸತ್ಪುತ್ರರು ಜನಿಸಿದರು. ರವೀಂದ್ರನಾಥ ಠಾಕೂರ, ಮೋತಿಲಾಲ ನೆಹರು ಹಾಗು ಪ್ರಫುಲ್ಲ ಚಂದ್ರರೇ. ಈಗ ೧೯೬೧ರಲ್ಲಿ ಈ ಮೂವರ ಶತಾಬ್ದಿಯ ಉತ್ಸವ ನಡೆದಿದೆ.

೧೮೬೧ ಆಗಸ್ಟ ೨ರಂದು ಹುಟ್ಟಿದ ಆಚಾರ್ಯ ಪ್ರಫುಲ್ಲ ಚಂದ್ರ ರೇ ಜಗದ್ವಿಖ್ಯಾತ ವಿಜ್ಞಾನಿಗಳು. ವಿಜ್ಞಾನಿಗಳೆಂದು ಅವರು ತಮ್ಮ ಜೀವನವನ್ನೆಲ್ಲ ಪ್ರಯೋಗಶಾಲೆಯಲ್ಲಿ ಕಳೆಯಲಿಲ್ಲ. ದೇಶಕಾರ್ಯ, ಸಮಾಜ ಕಲ್ಯಾಣ ಹಾಗು ಶೈಕ್ಷಣಿಕ ಕ್ಷೇತ್ರದಲ್ಲಿ ಅವರು ತುಂಬ ದುಡಿದರು. ೧೯೨೨ರಲ್ಲಿ ಬಂಗಾಲದಲ್ಲಿ ಆದ ನೆರೆ ಹಾವಳಿಯಲ್ಲಿ ರೇ ಅವರು ಮಾಡಿದ ಕಾರ್ಯ ಪ್ರಶಂಸನೀಯವಾಗಿತ್ತು. ಅವರ ಕಾರ್ಯ ನೋಡಿ ಯುರೋಪದ ಒಬ್ಬ ನಿರೀಕ್ಷಕನು ಹೀಗೆ ಉದ್ಗಾರ ತೆಗೆದಿದ್ದಾನೆ. "If Mr. Gandhi had been able to create two more Sir. P. C. Rays we would have succeeded in getting Swaraj within this year".

ಜನ್ಮತಃ ವಿಜ್ಞಾನಿಗಳಾದ ಅವರಿಗೆ ಹೊಸ ಸಿದ್ಧಾಂತಗಳನ್ನು ಶೋಧಿಸುವ ಆಕಾಂಕ್ಷೆ ಇದ್ದರೂ ಅವರ ದೇಶಾಭಿಮಾನವು ಹೆಚ್ಚು ಉಜ್ವಲವಾಗಿತ್ತು ಎಂಬುದು ಅವರ ಮಾತಿನಿಂದಲೇ ತಿಳಿದು ಬರುವದು. "Researches can wait, Industries can wait but Swaraj cannot wait" ಹೀಗೆಂದು ಪ್ರಯೋಗಶಾಲೆಯಲ್ಲಿ ಕೊಳೆಯುವೇ ಹೊರಬಿದ್ದು ದೇಶ ಸ್ವಾತಂತ್ರ್ಯಕ್ಕಾಗಿ ಹಾಗು ಬಡವ ಬಳಲಿದವರ ಸೇವೆ ಗೈದರು.

ಎಡಿನ್‌ಬರೋ ವಿಶ್ವವಿದ್ಯಾಲಯದಲ್ಲಿ ಬಿ. ಎಸ್. ಸಿ. ಕಲಿಯುತ್ತಿರುವಾಗ ಅವರು ಬರೆದ "ಬಂಡಾಯದ ಮೊದಲು ಹಾಗು ನಂತರದ ಹಿಂದುಸ್ಥಾನ" ಎಂಬ ಪ್ರಬಂಧವು ಅವರ ದೇಶಾಭಿಮಾನದ ಕೆಚ್ಚನ್ನು ಹೊರಗೆಡಹಿತು. ಸದವೀಧರರಾದ ಮೇಲೆ ನೌಕರಿಗಾಗಿ ಪ್ರಯತ್ನಿಸಬೇಕಾದಾಗ ಅವರು ಲಂಡನ್ನದಲ್ಲಿದ್ದು ಇಂಡಿಯಾ ಆಫೀಸಿನ ಜನರ ಕೋಪಕ್ಕೆ ಪಾತ್ರರಾಗಿ ಒಂದು ವರ್ಷ ನಿರುದ್ಯೋಗಿಯಾಗಿರಬೇಕಾಯಿತು.

ನೌಕರಿಗೆ ಬೇಕಾದ ಅರ್ಹತೆ ಇದ್ದರೂ ತಮಗೆ ತೋರಿದ ಮಲತಾಯಿ ಧೋರಣದಿಂದಾಗಿ ಅವರು ದೇಶದ ಸ್ವಾತಂತ್ರ್ಯಕ್ಕಾಗಿ ದುಡಿಯುವಂತಾಯಿತು. ೧೯೯೬ರಲ್ಲಿ ಅವರು ಶೋಧಿಸಿದ Mercurous nitriteದ ಮೂಲಕವಾಗಿ ಅವರು ಜಗತ್ಪ್ರಸಿದ್ಧರಾದರು. ಅವರು ತಮ್ಮಲ್ಲಿದ್ದ ಅಗಾಧ ಜ್ಞಾನವನ್ನು ಮುಚ್ಚಿಡದೇ ಅನೇಕರಲ್ಲಿ ಹಂಚಿದರು. ಜ್ಞಾನದ ನಿಜವಾದ ಸುಖವು ಕೇವಲ ಒಂದು ವ್ಯಕ್ತಿಯು ಪಡೆಯುವುದರಲ್ಲಿರದೇ ಅದನ್ನು ಅನೇಕರಲ್ಲಿ ಹಂಚುವದರಲ್ಲಿದೆ ಎಂದು ಅವರ ಮತವಿತ್ತು. ಅವರ ಈ ಉದಾತ್ತ ವಿಚಾರಗಳನ್ನು ನೋಡಿ ರವೀಂದ್ರನಾಥ ಟಾಗೋರರು ಹೀಗೆ ಉದ್ಗಾರ ತೆಗೆದಿದ್ದಾರೆ— Acharya Prafulla Chandra has become many in his students and has made his heart alive in the hearts of many.

ಪ್ರಸಿದ್ಧ ರಸಾಯನ ಶಾಸ್ತ್ರಜ್ಞರಾದ ರೇ ಅವರು ಅನೇಕ ಉದ್ದಿಮೆಗಳಿಗೆ ಕಾರಣೀಭೂತರಾಗಿದ್ದಾರೆ. ಅನೇಕ ಉದ್ದಿಮೆಗಳನ್ನು ಚಿಕ್ಕ ಸ್ವರೂಪದಲ್ಲಿ ಪ್ರಾರಂಭಿಸಿ ಅವನ್ನು ದೊಡ್ಡವನ್ನಾಗಿ ಮಾಡಲು ಶ್ರಮ ವಹಿಸಿದ್ದಾರೆ. ಚಿಕ್ಕ ವಯಸ್ಸಿನಲ್ಲಿ ಕಷ್ಟಪಟ್ಟಿದ್ದರಿಂದ ಅವರ ಗಳಿಕೆಯ ಬಹು ಭಾಗವು ದಲಿತರ ಉದ್ಧಾರಕ್ಕಾಗಿಯೇ ವಿನಿಯೋಗವಾಗುತ್ತಿತ್ತು.

೧೯೨೨ರಲ್ಲಿ ಬಂಗಾಲದಲ್ಲಿ ಆದ ನೆರೆ ಹಾವಳಿಯ ಕಾಲಕ್ಕೆ ರೇ ಅವರು ಮಾಡಿದ ಕಾರ್ಯವು ಹಿಂದುಸ್ಥಾನದ ಅದರಲ್ಲಿಯೂ ವಿಶೇಷತಹ ಬಂಗಾಲದ ಜನತೆಯು ಎಂದಿಗೂ ಮರೆಯಲಾರದಂತಹುದು. ಅವರು ಆಗ ಮಾಡಿದ ಕಾರ್ಯದ ಕಲ್ಪನೆ ಬರಬೇಕಾದರೆ "ಮ್ಯಾಂಚೆಸ್ಟರ ಗಾರ್ಡಿಯನ್" ಪತ್ರಿಕೆಯ ವಿಶೇಷ ಸಿದ್ಧಿಗಾರನ ವರದಿಯನ್ನು ಅವಶ್ಯ ನೋಡಬೇಕು. In these circumstances a Professor of chemistry Sir P.C. Ray stepped in forward and called upon his country men to make good the country's omission. His call was answered with enthusiasm the Public of Bengal in one month gave three lakhs of rupees, rich women giving their silk and ornaments and the poor their spare garments. He is a real organiser and a teacher. He is too warm blooded and energetic a man to make a perfectly fair critic of Government.

ಅವರ ವಿಶಾಲವಾದ ಜ್ಞಾನವು ಕೇವಲ ವಿಜ್ಞಾನಕ್ಕಾಗಿಯೇ ವಿನಿಯೋಗವಾಗಲಿಲ್ಲ. ಅವರ ಜೀವನ ಚರಿತ್ರೆ "Life and experiences of a Bengali chemist"ಯು ಅವರ ಜೀವನದಲ್ಲಿ ಜರಗಿದ ಅನೇಕ ಘಟನೆಗಳನ್ನು ಬೆಳಕಿಗೆ ತಂದಿವೆ. ಹತ್ತು ವರ್ಷಗಳ ಕಾಲದ ಪ್ರಯೋಗದ ಫಲವಾಗಿ ಅವರು ಬರೆದ History of Hindu chemistry ಎಂಬ ಗ್ರಂಥವು ಒಳ್ಳೆ ಉದ್ಯೋಧಕವಾಗಿದೆ. Bengal Chemical and Pharmaceutical works ಹಾಗೂ Indian school of chemistry ಎಂಬ ಅವರು ಪ್ರಾರಂಭಿಸಿದ ಸಂಸ್ಥೆಗಳು ಅವರ ಕೀರ್ತಿಯನ್ನು ಇನ್ನೂ ಬೆಳಗುತ್ತಿವೆ.

೧೯೪೪ರ ಜೂನ್ ೧೬ರಂದು ರೇ ಅವರು ಮೃತರಾದರು. ಪಂಡಿತ ಮದನಮೋಹನ ಮಾಲವೀಯರು "Sir P.C.Ray was one of the most widely esteemed sons of the mother land" ಎಂದು ದುಃಖಾಶ್ರುಗಳನ್ನು ಉದುರಿಸಿದರು. ಇಂಥ ಈ ವೀರನಿಗೆ ಅವರ ಶತಾಬ್ದಿಯ ಸಮಯಕ್ಕೆ ಅವರ ಕಾರ್ಯವನ್ನು ಸ್ಮರಿಸಿ ಅವರಿಗೆ ಸದ್ಗತಿಯನ್ನು ಕೊಡುವದು ಪ್ರತಿಯೊಬ್ಬ ಭಾರತೀಯರ ಕರ್ತವ್ಯವೇ ಸರಿ.

[Times of Indiaದಲ್ಲಿ ಪ್ರಕಟವಾದ ಶ್ರೀ ಹರಿಶ ಬೂಚ ಅವರ ಲೇಖನದಿಂದ.]

ಸ್ವಾತಂತ್ರ್ಯವೂ ಆಯುರ್ವೇದವೂ

(೧೧ನೇ ಪುಟದಿಂದ)

ಲು ಬರಿ ಕಟ್ಟಡಕ್ಕೆ, ೨ಕೋಟಿರೂಪಾಯಿ ಸುರಿಯುತ್ತದೆ ಆದರೆ ಸಮಗ್ರ ಭಾರತದ ಸಮಗ್ರ ಆಯುರ್ವೇದೀಯ ಯೋಜನೆಗಳಿಗೆಲ್ಲ ಸೇರಿ ಐದು ವರ್ಷಗಳಿಗೆ ಐದೇ ಕೋಟಿ!! ವಸ್ತು ಸ್ಥಿತಿ ಹೀಗಿದ್ದು ಸರಕಾರವು ಆಯುರ್ವೇದಕ್ಕೆ ಧಾರಾಳವಾದ ಪ್ರೋತ್ಸಾಹ ಕೊಡುತ್ತಿದೆಯೆಂದು ಘೋಷಿಸಲು ನಾಚಿಕೆಯೊದರೂ ಹೇಗೆ ಬಾರದು! ರಾಷ್ಟ್ರಕ್ಕೆ ಸ್ವಾತಂತ್ರ್ಯ ಬಂತಂತೆ! ರಾಷ್ಟ್ರೀಯ ಆಯುರ್ವೇದಕ್ಕೆ ಸ್ವಾತಂತ್ರ್ಯ ಬಂತೇ? ಪ್ರಾಮಾಣಿಕ ಕಾಂಗ್ರೆಸು ಉತ್ತರಿಸಲಿ ಪ್ರಾಮಾಣಿಕತೆಯಿದ್ದರೆ!

ಆಸ್ತಮಾ ರೋಗಿಗಳ
ತಿಳುವಳಿಕೆಗಾಗಿ—

ಪ್ರಖ್ಯಾತವಾದ ಆಸ್ತಮಾ ಹಿಮಾಲಯನ್ ಮೂಲಿಕೆಯನ್ನು ಹಾಲು ಮತ್ತು ಅನ್ನದಿಂದ ತಯಾರಿಸಿದ ಬೀರ್‌ನೊಂದಿಗೆ ತಾ.26 8–61 ಪೂರ್ಣಿಮೆಯ ರಾತ್ರಿ ಸೇವಿಸಿದರೆ ಆಸ್ತಮಾ, ನೇವಸ, ಕೆಮ್ಮು, ಉಬ್ಬಸ, ಉಸಿರಾಟಕ್ಕೆ ಕಷ್ಟವಾಗುವಿಕೆ, ಉಸಿರು ಕಟ್ಟುವಿಕೆ ಇವು ಗುಣವಾಗುವುವು. ಕೂಡಲೇ ಇಂಗ್ಲಿಷಿನಲ್ಲಿ ಪತ್ರವ್ಯವಹಾರ ಮಾಡಿರಿ.

Sri Mahatma Sidh Baba Seva Ashram, P. O. Chitrakot, U. P.

ಎಲ್ಲಾ ತರದ ಕೈಮಗ್ಗದ ಉತ್ತಮ ತರಗತಿಯ
ಖಾತ್ರಿ ರಂಗಿನ ಶೀರೆಗಳಿಗೆ
ಒಮ್ಮೆ ಸಂದರ್ಶಿಸಿರಿ.

ಪೂರ್ಣಿಮಾ ಸ್ಟೋರ್ಸ್

— ರಖಂ ಮತ್ತು ಚಿಲ್ಲರೆ ಕೈಮಗ್ಗದ ಜವುಳಿ ಮಳಿಗೆ —
ಪೊಪ್ಯುಲರ್ ಇನ್‌ಶೂರೆನ್ಸ್ ಕಟ್ಟಡ,

ಮಂಗಳೂರು-೧

ಅಖಿಲ ಭಾರತ ಕೈಮಗ್ಗ ಸಪ್ತಾಹದ ಪ್ರದರ್ಶನದಲ್ಲಿ
ಪದಕ ಮತ್ತು ಪ್ರಶಸ್ತಿ ಪಡೆದ
ನಮ್ಮ ಶೀರೆಗಳನ್ನು ಉಪಯೋಗಿಸಿರಿ.

ಮೈಸೂರು ಟೈಪ್ ಫೌಂಡ್ರಿ,

ಸುಬೆದಾರ್ ಛತ್ರಂ ರೋಡು, ಬೆಂಗಳೂರು—2.

ಆಧುನಿಕ ಯಂತ್ರ ಸಾಧನಗಳಿಂದ ಸುಸಜ್ಜಿತವಾದ "ಮೈಸೂರು ಟೈಪ್ ಫೌಂಡ್ರಿ"ಯಲ್ಲಿ ಪ್ರಿಂಟಿಂಗ್ ಟೈಪುಗಳನ್ನು (ಕನ್ನಡ) ರೀಕಾಸ್ಟ್ ಮಾಡಿಸುವುದರಿಂದ ವಿಶೇಷ ಉಳಿತಾಯವಾಗುತ್ತದೆ.

ದಕ್ಷಿಣ ಕನ್ನಡದ ಹಲವು ಮುದ್ರಣಾಲಯಗಳಿಗೆ ನಾವು ಟೈಪು ರೀಕಾಸ್ಟು ಮಾಡಿಕೊಡುತ್ತಿದ್ದೇವೆ.
ಇಂದೇ ವಿವರಗಳಿಗೆ ಬರೆಯಿರಿ:—

THE MYSORE TYPE FOUNDRY
Subedar Chatram Road, BANGALORE-2.

ವ್ಯಕ್ತಿ ಸ್ವಾತಂತ್ರ್ಯ ಮತ್ತು ಮನಸಾಕ್ಷಿ

ವ್ಯಕ್ತಿಯೆಂಬವನಿಗೆ ಮನಸ್ಸಾಕ್ಷಿಯಿದ್ದೇ ಇದೆ. ವ್ಯಕ್ತಿಗೆ ಸತ್ಯೋಚಿತತೆಯನ್ನು ಪಿಸುಮಾತಿನಿಂದ ಇದು ತಿಳಿಸುತ್ತದೆ. ಆದರೆ ಕೆವಿಗೊಡದ ಪ್ರಜಾಜನರ ಸಂಖ್ಯೆ ಹೆಚ್ಚಾಯಿತೆಂಬಾಗಲೇ ಸ್ವಾತಂತ್ರ್ಯದ ಸ್ಥಾನವನ್ನು ಸ್ವೇಚ್ಛೆ ಕಬಳಿಸುತ್ತದೆ; ರಾಷ್ಟ್ರಕ್ಕೆ ಕಾದಿದೆ—ವ್ಯಕ್ತಿ ಸ್ವಾತಂತ್ರ್ಯದ ಹೆಸರಿಲ್ಲದ ಅಡಳಿತ ಪದ್ಧತಿ.

ಶ್ರೀ ಎ. ಎಸ್. ರಾಮಕೃಷ್ಣ.

ಪ್ರಜಾಪ್ರಭುತ್ವವನ್ನು ಅಂಗೀಕರಿಸಿದ ಒಂದು ರಾಷ್ಟ್ರದ ಪ್ರಜೆಗೆ ವ್ಯಕ್ತಿ ಸ್ವಾತಂತ್ರ್ಯಕ್ಕೆ ಕಡಮೆಯೇನಿಲ್ಲ. ರಾಜ್ಯದ ಘಟನೆಯೇ ಆ ಸ್ವಾತಂತ್ರ್ಯದ ರಕ್ಷಣೆಯ ಹೊಣೆ ಹೊತ್ತಿರುತ್ತದೆ. ಆದರೆ ವ್ಯಕ್ತಿಯು ತನ್ನ ಸ್ವಾತಂತ್ರ್ಯವನ್ನು ಇತರ ಪ್ರಜೆಗಳಿಗೆ ಅಥವಾ ಒಟ್ಟು ಸಮೂಹಕ್ಕೆ ಹಾನಿಯಾಗುವ ರೀತಿಯಲ್ಲಿ ಉಪಯೋಗಿಸದಂತೆ ಶಾಸನಗಳ ಕಡಿವಾಣವೂ ಇದೆ. ಆದರೂ ಪ್ರಜೆಗಳಲ್ಲನೇಕರು ತಮ್ಮ ಸ್ವಾತಂತ್ರ್ಯವನ್ನು ಚಲಾಯಿಸುವ ಭರದಲ್ಲಿ ಇತರ ನಾಗರಿಕರ ಕ್ಷೇಮವನ್ನು ಲೆಕ್ಕಿಸದೆ ನಡೆದುಕೊಂಡು, ಸಮೂಹಕ್ಕೆ ಕರಿಣ ಸಮಸ್ಯೆಗಳನ್ನು ತಂದೊಡ್ಡುವುದು ಹಚ್ಚಿನ ಪ್ರಜಾರಾಜ್ಯಗಳಲ್ಲಿ ಸಾಮಾನ್ಯವಾಗಿ ಕಂಡು ಬರುವ ವಿಷಯ. ಅಂಥವರು ಶಾಸನಗಳ ಕಟ್ಟಿನಿಂದ ಹೇಗಾದರೂ ಸುಣ್ಣಿಕೊಳ್ಳುತ್ತಾರೆ. ಇದನ್ನು ಕಂಡು, ಈ ಪ್ರಜಾಪ್ರಭುತ್ವ ಪದ್ಧತಿಯ ಯಶಸ್ಸಿನ ಕುರಿತು ವಿಚಾರವಾದಿಗಳು ಶಂಕೆಪಡುವಂತಾಗುತ್ತದೆ. ಹಾಗೆಂದು, ವ್ಯಕ್ತಿ ಸ್ವಾತಂತ್ರ್ಯವನ್ನು ಹೆಚ್ಚು ಹೆಚ್ಚು ಮಿತಗೊಳಿಸುವ ಮಾರ್ಗವು ಪ್ರಜಾಪ್ರಭುತ್ವದ ಮೂಲ ತತ್ವಗಳಿಗೇ ವಿರುದ್ಧವಾಗುತ್ತದೆ. ಆದುದರಿಂದ ತನಗಿರುವ ಸ್ವಾತಂತ್ರ್ಯವನ್ನು ಪ್ರಜೆಯು ಹದವರಿತು ಉಪಯೋಗಿಸುವಂತಾದರೆ ಮಾತ್ರ ಪ್ರಜಾಪ್ರಭುತ್ವವು ಒಂದು ರಾಷ್ಟ್ರದಲ್ಲಿ ಭದ್ರವಾಗಿ ಬೇರೂರಲು ಅವಕಾಶವಾಗುವುದು. ವ್ಯಕ್ತಿಯನ್ನು ಹಾಗೆ ಹದವರಿತು ನಡೆದುಕೊಳ್ಳುವಂತೆ ಮಾಡುವುದು ಅವನ ಮನಸ್ಸಾಕ್ಷಿ—

ವ್ಯಕ್ತಿಗೆ ಎರಡು ಜೀವನ ಕ್ರಮಗಳಿವೆ. ಒಂದು ಮನಸ್ಸಾಕ್ಷಿಗೆ ಹೊಂದಿಕೊಂಡು ಬಾಳುವ ಕ್ರಮ; ಇನ್ನೊಂದು ಮನಸ್ಸಾಕ್ಷಿಯನ್ನು ಅದುಮಿ, ತನಗಿಷ್ಟಬಂದಂತೆ ಬದುಕುವ ರೀತಿ.

ಮೊದಲನೆಯ ಕ್ರಮ ಪೈಗೂಡಬೇಕಾದರೆ ವ್ಯಕ್ತಿಗೆ ನ್ಯಾಯ ನೀತಿಗಳ ಕುರಿತು ಸ್ಪಷ್ಟವಾದ ಕಲ್ಪನೆಯಿರಬೇಕಾಗುತ್ತದೆ. ಅವುಗಳ ಕುರಿತು ಗೌರವವೂ ಇರಬೇಕಾಗುತ್ತದೆ. ಇದು ವ್ಯಕ್ತಿಗೆ ಸಂಸ್ಕಾರ ಬಲದಿಂದ ಸ್ವಾಭಾವಿಕವಾಗಿ ಬರಬಹುದು; ವಾತಾವರಣದಿಂದ ಅಥವಾ ಎಚ್ಚರಣದಿಂದ ಸಿದ್ಧಿಸಲೂಬಹುದು.

ಎರಡನೆಯ ಮಾರ್ಗವನ್ನನುಸರಿಸಲು ಕಷ್ಟವಿಲ್ಲ. ಮನಸ್ಸಾಕ್ಷಿಯ ಕೆರುದನಿಗೆ ಕಿವಿಯನ್ನು ಕಿವುಡುಮಾಡಿ ಕೊಂಡಂತಾಯಿತು. ಸ್ವಾರ್ಥ ಸಾಧನೆಯೊಂದನ್ನೇ ಬದುಕಿನ ಆದರ್ಶವಾಗಿಟ್ಟುಕೊಂಡು, ತಮ್ಮ ವೃತ್ತಿ ವ್ಯವಸಾಯಗಳಲ್ಲಿಯೋ ನೌಕರಿಯಲ್ಲಿಯೋ ಮುಳುಗಿದಂತಾಯಿತು. ಅಂಥವರಿಗೆ ಮನಸ್ಸಾಕ್ಷಿಯ ಪಿಸುಮಾತು ಕ್ರಮೇಣ ಕೇಳಿಸದೆ ಹೋಗಲೂಬಹುದು. ಮಾತ್ರವಲ್ಲ ಮನಸ್ಸಾಕ್ಷಿಯೆಂಬುದೊಂದಿದೆ ಎಂದು ಕೂಡ ಅವರು ಕೊನೆಗೆ ಒಪ್ಪಲಾರರು. ಅವರಿಗೆ ನ್ಯಾಯ ನೀತಿಗಳ ಸ್ಪಷ್ಟ ಕಲ್ಪನೆಯೂ ಇಲ್ಲ. ಅದನ್ನು ಅರಿಯಲು ಅವರು ಯತ್ನಿಸುವುದೂ ಇಲ್ಲ. ಮಾತ್ರವಲ್ಲದೆ ಸ್ವಾರ್ಥ ಸಾಧನೆಯ ಭರದಲ್ಲಿ ನ್ಯಾಯ ನೀತಿಗಳನ್ನು ಗೌರವಿಸುವ ಮನೋಭಾವಕ್ಕೆ ಅವರಲ್ಲಿ ಅವಕಾಶವಿರುವುದಿಲ್ಲ. ಸುತ್ತಮುತ್ತ ಲಂಚ, ಅಕ್ರಮ, ಅನಾಚಾರ, ಅಲ್ಪತನಗಳು ಮೆರೆಯುತ್ತಿರುವಾಗ ಮನಸ್ಸಾಕ್ಷಿಗೆ ಕಲ್ಲು ಬೀಳಲೆಂದುಕೊಂಡು ಅವರು ತಮ್ಮ ತಾಪತ್ರಯ, ಮನರಂಜನೆ, ಗಳಿಕೆ, ವೆಚ್ಚ, ಉಳಿತಾಯ ಇವುಗಳಲ್ಲಿ ತಲ್ಲೀನರಾಗುತ್ತ ತಮ್ಮ ಹಿತಕ್ಕೆ ಅಡಚಣೆ ಬರುವಂಥಾದ್ದೇನಿದ್ದರೂ ಅದನ್ನು ತಪ್ಪೋ ಸರಿಯೋ ಎಂದು ಕ್ಷಣಮಾತ್ರ ಯೋಚಿಸದೆ ತುಳಿದು ಮುಂದುವರಿಯಲು ನುಗ್ಗುತ್ತಾರೆ.

ಇನ್ನು ನ್ಯಾಯ ನೀತಿಗಳನ್ನು ಸ್ವಲ್ಪ ಮನಸ್ಸಿಗೆ ಹಚ್ಚಿಕೊಳ್ಳುವ ಸೂಕ್ಷ್ಮ ಮನಸ್ಸಿನ ಕೆಲವರಿರುತ್ತಾರೆ ಅವರ ಮನಸ್ಸಾಕ್ಷಿಯು ಕೂಗುಕೊಂಚ ಬಲವಾಗಿರುತ್ತದೆ. ಅದನ್ನು ಅದುಮಲು ಅವರಿಗೆ ಸುಲಭವಲ್ಲ. ಹೆಚ್ಚೆ ಹೆಚ್ಚೆಗೆ ಅದು ಅವರನ್ನು ಪೀಡಿಸುತ್ತದೆ. ಅವರ ಅನೀತಿ ಅನ್ಯಾಯದ ಮಾರ್ಗವನ್ನು ಭರ್ತ್ಸನೆ ಮಾಡುತ್ತದೆ. ಅಂಥವರು ಆತ್ಮಸಾಕ್ಷಿಗೆ ತಲೆಬಾಗಿ ತಮ್ಮ ಜೀವನ ಕ್ರಮವನ್ನು ಬದಲಿಸಿಕೊಳ್ಳುವುದೂ ಉಂಟು. ಅಂಥವರಿಗೆ ಒಂದು ವೇಳೆ ಅಂತಃಸಾಕ್ಷಿಯನ್ನು ಅದುಮಲೇ ಬೇಕೆಂಬ ಛಲವಿದ್ದರೆ, ಅದೇ ಅವರ ವ್ಯಾಪ್ತಿಯಾದರೆ ಮಾದಕ ವಸ್ತುಗಳ ಮರೆಯಲ್ಲಿ ಮನಸ್ಸನ್ನು ಮಂಕುಗೊಳಿಸುವುದೊಂದೇ ಗತಿ! ಅಂಥವರೂ ನಮ್ಮ ಸಮೂಹದಲ್ಲಿ ಇಲ್ಲದಿಲ್ಲ.

ಹೀಗೆ, ಮನಸ್ಸಾಕ್ಷಿಯ ಕರೆಗೆ ಕಿವಿಗೊಟ್ಟು ನಡೆಯುವವರು ಮನಸ್ಸಾಕ್ಷಿಯನ್ನುಗಮನಕ್ಕೇ ತಂದುಕೊಳ್ಳದೆ ಯಥೇಚ್ಛತಥವಾಗಿ ಬದುಕುವವರು, ಇನ್ನು ಕೊನೆಯದಾಗಿ ಮನಸ್ಸಾಕ್ಷಿಯನ್ನು ಮರೆಸಲು ಮದುಳನ್ನೇ ಮಂಕುಗೊಳಿಸಿ ಬಾಳುವವರು—ಈ ಮೂರು ಬಗೆಯವರೂ ನಮ್ಮಲ್ಲಿದ್ದಾರೆ.

ಇವರಲ್ಲಿ ಮೊದಲನೆಯ ವರ್ಗದವರು ವೃದ್ಧಿಯಾದರೆ ಸಮೂಹದ ಸೌಖ್ಯ ಹೆಚ್ಚುತ್ತದೆ. ಅವರೇ ಸಜ್ಜನಿಗೆಳು. ಅಂಥವರು ಬಹು ಸಂಖ್ಯೆಯಲ್ಲಿರುವ ರಾಷ್ಟ್ರದಲ್ಲಿ ಪ್ರಜಾಪ್ರಭುತ್ವಕ್ಕೆ ಒಳ್ಳೆಯ ಭವಿಷ್ಯವಿದೆಯೆನ್ನಬಹುದು.

ಮೂರನೆಯ ವರ್ಗದವರ ಬದುಕು ಒಂದು ಸುರುತವೇ ಹಲವೊಮ್ಮೆ ಅವರು ನಮ್ಮ ಕನಿಕರಕ್ಕೆ ಪಾತ್ರರು.

ಇನ್ನು ಈ ಎರಡನೆ ಬಗೆಯವರದೇ ಘಜೀತಿ. ಅಂಥವರೇ ನಮ್ಮ ಸಮೂಹದಲ್ಲಿ ಹೆಚ್ಚು ಮಂದಿ. ಅವರ ಜಟುವಟಿಕೆಗಳಿಗೇನೂ ಕಡಿವಾಣವಿಲ್ಲ. ರಾಜಕೀಯವೋ, ವಾಣಿಜ್ಯವೋ, ಮತವೋ, ಪ್ರತಿಯೊಂದು ರಂಗದಲ್ಲಿಯೂ ಇವರು ಯಥೇಚ್ಛವಾಗಿರುತ್ತಾರೆ. ತಮ್ಮ ಸ್ವಾರ್ಥ ಸಾಧನೆಗೆ ಅಡ್ಡಬರುವ ಮನಸ್ಸಾಕ್ಷಿಯ ಯಾವುದೇ ಸಂಕೇತಗಳನ್ನು ಅವರು ಲಕ್ಷಿಸುವುದಿಲ್ಲ. ಹಲವೊಮ್ಮೆ ಮನಸ್ಸಾಕ್ಷಿಯೇ ಇಲ್ಲವೆಂಬಂತೆ ಅವರು ನಡೆದುಕೊಳ್ಳುತ್ತಾರೆ. ತಮಗಿರುವ ವ್ಯಕ್ತಿ ಸ್ವಾತಂತ್ರ್ಯವನ್ನು ಮನಸಾಕ್ಷಿಯ ಕಡಿವಾಣವಿಲ್ಲದೆ ಉಪಯೋಗಿಸಿ ಇಷ್ಟಬಂದಂತೆ ವಿಜೃಂಭಿಸುತ್ತಾರೆ. ಇತರರ ಸ್ವಾತಂತ್ರ್ಯಕ್ಕೆ ತಮ್ಮಿಂದಾಗಿ ಹಾನಿಯಾಗುತ್ತದಂಬುದನ್ನು ಅವರು ಲೆಕ್ಕಿಸುವುದಿಲ್ಲ. ವ್ಯಕ್ತಿ ಸ್ವಾತಂತ್ರ್ಯವನ್ನು ದುರುಪಯೋಗಪಡಿಸಿ ಆ ಸ್ವಾತಂತ್ರ್ಯವನ್ನು ತಮಗೆ ನೀಡಿದ ಪ್ರಜಾಸ್ರಭುತ್ವ ಪದ್ಧತಿಗೇ ಎರಡು ಬಗೆಯುವ ಈ ಪ್ರವೃತ್ತಿ ಬಲಿಯುತ್ತ ಬಂದರೆ ಒಂದು ಪ್ರಜಾರಾಜ್ಯ ಮರಣ ಹೋಗುವಂದಂತೆಯೇ. ಮುಂದೆ ಆ ರಾಷ್ಟ್ರವನ್ನು ಕಾದಿರುತ್ತದೆ—ವ್ಯಕ್ತಿ ಸ್ವಾತಂತ್ರ್ಯದ ಹೆಸರಿಲ್ಲದಂಥ ಅಡಳಿತ ಪದ್ಧತಿ.



ಶಿಕ್ಷಣದಲ್ಲಿ ನೀತಿಯ ಪುನರುತ್ಥಾನ

(೧೦ನೇ ಪುಟದಿಂದ)

ಗಳನ್ನು ಉದಾಹರಿಸುವುದೂ ಎಂದರೆ ತುಂಬಾ ಇಷ್ಟ. ಆದರೆ ಆ ನೀತಿಯ ಮೂರ್ತಿಯಂತೆ ಜನತೆಯನ್ನು ಕಿದ್ದವುದರಲ್ಲಿ ಉದಾಸೀನವೇಕೋ? ಶ್ರೀಮಂತರಾದ ಕಮಲನಯನ ಬಜಾಜರು ಹೆಚ್ಚಿನ ವ್ಯಾಸಂಗಕ್ಕಾಗಿ ವಿದೇಶಕ್ಕೆ ಹೊಟಾಗ ಗಾಂಧೀಜಿಯು ಮಾಡಿದ ಹಿತೋಪದೇಶದ ಕುರಿತು ಎಲ್ಲಾ ಶಿಕ್ಷಕರೂ ಅವಲೋಕಿಸಬೇಕು. ಇಂದಿನ ವಿದ್ಯಾರ್ಥಿಗಳಿಗೆ ಗಾಂಧೀಜಿಯಂತಹ ಹಿತೋಪದೇಶಕರ ಮತ್ತು ಮಾರ್ಗದರ್ಶಕರ ಅಗತ್ಯವಿದೆ. ೧. ಅತಿ ಕಡಿಮೆ ಮಾತಾಡು. ೨. ಪ್ರತಿಯೊಬ್ಬನ ಮಾತಿಗೂ ಕಿವಿಕೊಡು; ಆದರೆ ನಿನಗೆ ಸರಿತೋರಿದ್ದನ್ನು ಮಾತ್ರ ಮಾಡು. ೩. ಪ್ರತಿಯೊಂದು ನಿಮಿಷದ ಬಗ್ಗೆ ಜಾಗರೂಕನಾಗಿದ್ದು, ಮಾಡಬೇಕಾದ ಕೆಲಸವನ್ನು ಸಕಾಲದಲ್ಲಿಯೇ ಮಾಡು. ೪. ಒಬ್ಬರ ಹಾಗೆ ಜೀವಿಸು; ಶ್ರೀಮಂತಿಕೆಯ ಒಗ್ಗೆ ಅಭಿಮಾನ ಪಡಬೇಡ. ೫. ನೀನು ಖರ್ಚು ಮಾಡುವ ಪ್ರತಿಯೊಂದು ಕಾಸಿನ ಲೆಕ್ಕವನ್ನಿಡು. ೬. ಮನಸ್ಸುಕೊಟ್ಟು ಅಭ್ಯಾಸ ಮಾಡು. ೭. ನಿಯಮಿತವಾಗಿ ವ್ಯಾಯಾಮ ಮಾಡು; ೮. ಅವಶ್ಯಕವಿದ್ದಷ್ಟೇ ತಿನ್ನು. ೯. ದೈನಿಕ ದಿನಚರಿಯನ್ನಿಡು,' ಗಾಂಧೀಜಿಯ ದೈನಿಕ ಪ್ರಾರ್ಥನೆಯನ್ನು ಯಾವ ವಿದ್ಯಾರ್ಥಿಯು ಮರೆಯಬಲ್ಲ?

ಇಂದಿನ ಹೆಚ್ಚಿನ ಶಿಕ್ಷಕರಿಗೆ ಜೀವನದ ಗುರಿಯೇ ತಿಳಿದಿಲ್ಲ. ಜನತೆಗೂ—ಶಿಕ್ಷಣ ರಂಗದಲ್ಲಿ ವಿದ್ಯಾರ್ಥಿಗಳಿಗೂ—'ದೇವರ ಸಾಕ್ಷಾತ್ಕಾರವೇ ಬಾಳಿನ ಬೆಳಕು' ಎಂಬುದನ್ನು ಎಷ್ಟೆಷ್ಟು ಮಂದಟ್ಟು ಮಾಡಲು ಸಮರ್ಥರಾಗುತ್ತೇವೋ, ಅಷ್ಟಷ್ಟು ಜಗತ್ತಿನಿಂದ ಕಷ್ಟ, ದುಃಖ, ದಾರಿದ್ರ್ಯಗಳು ಕಾಲು ಕೀಳುವುವು. ಹರ್ಷನ ಕಾಲದ ಭಾರತವೂ, ಪುಲಿಕೇಶಿಯ ಕಾಲದ ಕರ್ನಾಟಕವೂ ಯಾವುದರ ನೆರಳಿನಲ್ಲಿ ಸಮೃದ್ಧವಾಗಿತ್ತು? ಪ್ರಜೆಗಳ ನೀತಿ ಪರಾಯಣತೆಯ ಪ್ರಭಾವದಿಂದಲ್ಲವೆ? ಜನರ ಸುಖ ಸಂತೋಷಗಳಿಗಾಗಿ ನೀತಿ ಧರ್ಮಗಳಿಗೇ ಶರಣು ಹೋಗಬೇಕು ಅವಶ್ಯಾಗಿ ಶಿಕ್ಷಣದಲ್ಲಿ ನೀತಿಯ ಪುನರುತ್ಥಾನವಾಗಬೇಕು. ನಾವು ಆ ಕಡೆಗೆ ಇನ್ನೂ ಕೆಲವು ಕಾಲ ಗಮನ ಕೊಡದಿದ್ದರೆ ಭಗವಂತನೇ ಸಾಧುಗಳ ರಕ್ಷಣೆಗಾಗಿ, ದುಷ್ಟರ ದಮನಕ್ಕಾಗಿ ಕೈ ಹಾಕುವನು. ಆಗ ಜಗತ್ತಿನ ವಿವಿಧ ಭಾಗಗಳಲ್ಲಿ ಪ್ರಳಯದ ವಿವಿಧ ಮುಖಗಳು ಕಾಣಿಸಿ ಕೊಳ್ಳುವುವು. ಅದಕ್ಕೆ ನಾವು ಸಿದ್ಧರಿರುವೆವೆ?

ಜ್ಯಾಹೀರುಮಾಡಲ್ಪಟ್ಟ ಸಾಮಾನುಗಳನ್ನೇ ಪಡೆಕೊಳ್ಳಿರಿ.

ಚಿಂತನ *

ಕವಿ:
ಶ್ರೀ ಕಯ್ಯಾರ ಕಿಞ್ಞಣ್ಣ ರೈ,
ಎಂ. ಎ.



— ೧ —

ಓ ಚಿನ್ಮಯ!
ನಿನ್ನಯ ದಯ
ಹೊನ್ನಿನ ಹೊಳಹಿನಲಿ
ಅಂಗಾಂಗವಿ
ಕಂಗೊಳಿಸಿತು
ಮಂಗಳ ಲೇಪದಲಿ.
ನಿಕಾಂತಕು
ಲೋಕಾಂತಕು
ನಾಕಾಂತಕು ತುಂಬಿ;
ಜಲು ಚೆಲ್ಲಿತು
ನಲವೇರಿತು
ಗೆಲವಾಯಿತು ನಂಬಿ.

— ೨ —

ನಿಲೆಯಲಿ ರಶಿ
ಬಿಲೆಯಲಿ ಪೊನ್
ಪಂಕದಿ ಪಂಕಜವು;
ತಾಗಲೆಬಲಿನ
ಮಾಂಸದ ಮೈ
ಅಂತರ ಚಿಂತನವು.
ಕತ್ತಲೆಯಲಿ
ಮಿಂಚಿದುದೆನೆ
ಎತ್ತಿದ ಕೊಳ ತುಳುಕೆ;
ಕರುಣಾಮಯ
ಕಿರಣದೊಳೀ
ಹರಣಕೆ ಹೆಗ್ಗಳಕೆ.

— ೩ —

ಮೂರ್ಖತೆಯಲಿ
ಮಾರ್ದವವನ
ವಿದ್ವೇಷದಿ ದಯೆಯಂ;
ವಿಷ ಕುಂಭದಿ
ರಸ ತುಂಬಿಸಿ
ಅಮರತ್ವದ ನೆಲೆಯಂ,
ಸಲ್ಲಲಿತದ
ಹಲ್ಲ ಚಿಗುರ್
ಕಲ್ ಕೆಸರೊಳಗುದಿಸಿ;
ಎಲ್ಲಿಯು
ಸ್ಪರ್ಶಮಣಿಯು
ಬಲ್ಲವನೀ ಹರಸೆ!

— ೪ —

ಮಹಿಳಾಮಣಿ
ಮಾಂಗಲ್ಯದಿ
ಮುಕ್ಕಳ ಮುದ್ದಿನಲಿ;
ಸುರುಚೋತ್ತಮ
ಸೌರುಷದಲಿ
ಸಂತಸ ಸುದ್ದಿಯಲಿ;
ಸತ್ಯದಿ ಸೌಂ-
ದರ್ಯದಿ ಶುಚಿ-
ಚಿತ್ತದ ಶೋಭೆಯಲಿ;
ನಿತ್ಯವು ನೂ-
ದುರ್ಯದಿ ರುಚಿ-
ವಸ್ತುವೆ! ನೀನಲ್ಲಿ!

— ೫ —

ಇದು ಸನ್ನುತ
ಮಹಿಮೋನ್ನತ
ಪದವೆನ್ನುತ ಮಣಿವೆ!
ಬದುಕಿನ ಬೆಲೆ
ನಿಲುಮೆಯ ನೆಲೆ
ಕರುಣೆಯ ಕಲೆ ಕುಣಿವೆ!
ಇಂದಾದರು
ಮುಂದಾದರು
ಎಂದಾದರು ಸಾಕು;
ಬಂದಾಗುತ
ಬಂಧನದೀ
ಕ್ರಂದನ ಬಿಡಬೇಕು.

— ೬ —

ಓ ಚಿನ್ಮಯ!
ನಿನ್ನಯ ದಯ
ಮೃಣ್ಮಯ ದೇಹದಲಿ
ತುಂಬಿಸಿ, ಪ್ರತಿ-
ಬಿಂಬಿಸಿದೆಯ?
ನಂಬಿದ ನೇಹದಲಿ.
ಎತ್ತಲು ಮನೆ
ಕತ್ತಲು, ಮನ
ಮುಕ್ತಲು ಮೋಹದಲಿ;
ರನ್ನದ ಸೊಡ-
ರನ್ನೊಡಲಲಿ
ಬೆಳಗಿತು ಗೇಹದಲಿ.

— ೭ —

ಕೊರಡಾದರು
ಕೊನರಿಡದೆ?
ಮರುಧರೆ ಬೆಳೆ ಕೊಡದೆ?
ಪುಣ್ಯಾಮೃತ
ರಸಧಾರೆಗೆ
ಪಾಷಾಣವು ಪೂ ಬಿಡದೆ?
ಹೊಲೆ ಬಸಿರಲಿ
ಕೊಳೆ ಕೆಸರಲಿ
ಬಿದ್ದದ್ದಿಹ ಮೈಗೆ,
ನಿನ್ನೊಲವಿನ
ಜೆಲು ಚೆಲ್ಲಿರೆ
ಬಗೆ ಹಿಗ್ಗಿತು-ಹೀಗೆ.

— ೮ —

ಮೋಡಗಳೆಡೆ
ಮದ್ದಳೆ ಬಡೆ-
ದಾಟದ ಬಗುವೇರೆ;
ಮಿಗವಕ್ಕಿಗು
ಸೊಗವುಕ್ಕಿತು
ಹಿಮ್ಮೇಳಕೆ ಸೇರೆ!
ಆಕಾಶಕು
ಸಂತೋಷವು
ಕಡಲುಕ್ಕಿತು ಬೇರೆ;
ಮಂಗಳಧರೆ
ಯಂಗಣದಲಿ
ರಿಂಗಣ ಗತಿಮೀರೆ!

— ೯ —

ಬಗೆ ನವಿಲಿದು
ಕುಣಿ ಕುಣಿಯಿತು
ಕಣ್ಣರಿಗಳ ಬಿಚ್ಚಿ;
ಶತಲೋಚನ
ದವಲೋಕನ
ಬ್ರಹ್ಮಾಂಡವ ಮುಚ್ಚಿ
ಆದ್ಯಂತದ
ಪೇದಾಂತದ
ಬೋಧಾಂತಕೆ ಮೆಚ್ಚಿ;
ಆತ್ಮಗೆ ಪರ—
ಮಾತ್ಮನ ಸಾ—
ಯುಜ್ಯದ ಸುಖ ಹಚ್ಚಿ!

— ೧೦ —

ಆನಂದಮಯ
ನಿನ್ನಯ ದಯ
ಸಂಕಟ ಸುಖಗಳಲಿ;
ಹಗಲಿರುಳಲಿ
ಮುನ್ ಬೆನ್ನಲಿ
ಮಮ ಜೀವಕೆ ಸಲಲಿ!
ಚಿಂತಾವಿಷ—
ಸಂತಾನದ
ಕಾಂತಾರದಿ ಸುಳಯೆ;
ಹಾಲ್ಗಡಲಿನ
ನೊರೆಯುಕ್ಕಿತು
ಕರುಣೆಯ ಹನಿ ಹರಿಯೆ!

— ೧೧ —

ಅಗ್ಗದ ಸೊಗ
ವಗ್ಗಳಿಸಿತು
ಹಿಗ್ಗಿರೆ ನಿನ್ನೊಲ್ಮೆ
ಸಗ್ಗದೊಡೆಯ!
ತಗ್ಗಿದೆ ನಾ
ಒಗ್ಗಿರೆ ನಿಜನಲ್ಮೆ!
ತನುಮನ ಧನ
ಕೃಪಾ ಕಿರಣ
ಕರ್ತೃ ನೀನೆ ಕಾರಣ;
ಭವ ಬಂಧನ—
ದವಿಮೋಚನ
ಇದೆ ಜೀವನ ಚಿಂತನ!

— ೧೨ —

ಕೃತಿಯಿದು ಕವ
ಮತಿಮಧುರಸ
ಧ್ಯಾನ ರಸಾಯನವು;
ತನು ನಶ್ವರ
ಮನ ಸುಸ್ಥಿರ
ಚಿಂತನ ಶಾಶ್ವತವು!
ತನನಾಮದ
ಚಿರಧಾಮದ
ಪರಿಣಾಮದಿ ನಿಲಲಿ!
ಭಾವೈಕ್ಯದಿ
ಜೀವೈಕ್ಯದಿ
ಮಂಗಳ ಮಸಗಿರಲಿ!

* ಬೇಗನೇ ಪ್ರಕಟವಾಗಲಿರುವ ಕವನ ಸಂಗ್ರಹದಿಂದ.

80 Volumes of
Vedas & Mahabharata
[IN THREE EDITIONS]

	Text & Translation	Pre-publication price
1	ಸಂಸ್ಕೃತ—ಕನ್ನಡ	ರೂ. ೨೦೦-೦೦
2	संस्कृत-कोंकणी	रू. २५०-००
3	**Sanskrit-English**	**Rs. 750-00**

Full details from —
Laxman Babani Pai Memorial Publications,
MANIPAL, (South Kanara) India

ನಮ್ಮ ಗ್ರಾಹಕರಿಗೂ, ಹಿತಚಿಂತಕರಿಗೂ
೧೪ನೇ ಸ್ವಾತಂತ್ರ್ಯೋತ್ಸವದ
ಹಾರ್ದಿಕ ಅಭಿನಂದನೆಗಳು
ಶ್ರೀ ಗಜಾನನ ಕ್ಲೋತ್ ಸ್ಟೋರ್ಸ್
ತೆಂಕಪೇಟೆ - - - -ಉಡುಪಿ
SRI GAJANANA CLOTH STORES
TENKAPET, UDIPI.
THE FASHION CREATORS IN THE TOWN &
WHERE ALWAYS SOME THING IS NEW!

ಕರ್ಮ, ಫಲ ಮತ್ತು ತ್ಯಾಗ

(ಆನೇ ಪುಟದಿಂದ)

ಅವಶ್ಯವಾದ ಕಾರ್ಯ—ಎಂಬೊಂದು ಒತ್ತಾಯದ ಭಾವನೆಯಿಂದಲೇ ಶ್ರೀ ರಾಮಚಂದ್ರನಿಂದ ಶ್ರೀ ಹರ್ಷನ ವರೆಗಿನ ನಮ್ಮ ರಾಜಾಧಿರಾಜರು ಕೆಲಸ ಮಾಡಿದ್ದಿಲ್ಲ. ತಮ್ಮ ಕ್ಷಾತ್ರ ಧರ್ಮದಲ್ಲಿ, ಅವರಿಗೊಂದು ಅನನ್ಯ ಉತ್ಸಾಹವಿತ್ತು—ಈರ್ಷ್ಯೆ ಇತ್ತು. ಮಹದಾಕಾಂಕ್ಷೆ ಇತ್ತು. ಕೇವಲ ತಟಸ್ಥ ವೃತ್ತಿಯಿಂದ ತೀಕ್ಷ್ಣೆಯ ವೃತ್ತಿಯಿಂದ ಅವರು ರಾಜ್ಯ ನಾಕೆಯನ್ನು ಪಡೆಯಲಿಲ್ಲ. ಇಂಥ ದುರ್ದಮ್ಯ ಉತ್ಸಾಹ ಜೀವನದ ಅಸಕ್ತಿ ಫಲಾಶಾರಹಿತರಿಗೆ ಬಂದೀತೇ?

ಎಲ್ಲ ವರ್ಣಗಳೂ ರಾಜನನ್ನು ಆಶ್ರಯಿಸಿ ನಿಲ್ಲುವಂತೆ ಎಲ್ಲ ಆಶ್ರಮಗಳೂ ಗೃಹಸ್ಥನನ್ನು ಆಶ್ರಯಿಸಿ ನಡೆಯುತ್ತವೆ. ಮನು ಸ್ಮೃತಿಯೇ ಹೇಳುವಂತೆ: "ಯಥಾವಾಯುಂ ಸಮಾಶ್ರಿತ್ಯ ವರ್ತಂತೇ ಸರ್ವಜಂತವಃ | ತಥಾ ಗೃಹಸ್ಥಮಾಶ್ರಿತ್ಯ ವರ್ತಂತೇ ಸರ್ವ ಆಶ್ರಮಾಃ||" ಅಂದಿನ ಗೃಹಸ್ಥಾಶ್ರಮಿಯೇ ಇಂದಿನ ನಾಗರಿಕ, ಪೌರ, ಸಾರ್ವಜನಿಕ—ಸಾಮಾಜಿಕ ಜೀವನದ ಒಬ್ಬ ಸಕ್ರಿಯ ಸದಸ್ಯ. ಇವನ ಬದುಕು "ಅದಕೂ ಇದಕೂ ಎದಕೂ" ಸಹೇತುಕ. ಪ್ರಯೋಜನ ಪ್ರಾಪ್ತಿಯದು. "ಪ್ರಯೋಜನಂ ಅನುದ್ದಿಶ್ಯ ನ ಮಂದೋಪಿ ಪ್ರವರ್ತತೇ" ಹಾಗೆ ನಿರುದ್ದೇಶವಾಗಿ ನಿಷ್ಪ್ರಯೋಜಕವಾಗಿ ಬದುಕ. ಎವನು ಮುಕ್ತನೋ ಪಶುವೋ ಇರಬೇಕು. ಅಂಥವರಿಗೂ ಶರೀರ ಧರ್ಮ ತಪ್ಪಿದ್ದಲ್ಲ. ಶರೀರ ಯಾತ್ರೆಯ ಚಟುವಟಿಕೆ ಬಿಟ್ಟಿದ್ದಲ್ಲ. ಬೆಳೆಯ ಆಸೆಯಿಲ್ಲದ ರೈತ, ಕೂಲಿಯ ಆಸೆ ಬಿಟ್ಟ ಕೆಲಸಗಾರ, ಪದವಿಯ ಮೋಹಕ್ಕೆ ಹೊರತಾದ ರಾಜಕಾರಣಿ, ಚಪ್ಪಾಳೆಗಳಿಗೆ ಹೇಸುವ ಭಾಷಣಕಾರ, ಓದುಗರೇ ಬೇಡವೆನ್ನುವ ಲೇಖಕ, ಎವರೆಸ್ಟ್ ಶಿಖರವನ್ನು ಮುಟ್ಟದೇ ಮರಳುವ ತೇನಸಿಂಗ—ಇಂಥ ಉದಾಹರಣೆಗಳನ್ನು ಕಂಡವರಿದ್ದಾರೆಯೇ?

ಹಿಂದೊಮ್ಮೆ ಪೋಲಂಡದಲ್ಲಿ ಒಬ್ಬ ಕ್ರೈಸ್ತ ಯತಿ ಇರುತಿದ್ದ. ತೀರ ಬಡವ. ಅವನಿಗೆ ಒಂದೇ ಒಂದು ಆಕಾಂಕ್ಷೆ. ಒಂದೊಮ್ಮೆ ರೋಮಕ್ಕೆ ಹೋಗಿ ಪೋಪನನ್ನು ನೋಡಿ ಬರಬೇಕೆಂದು. ಆದರೆ ಪೋಲಂಡದಿಂದ ರೋಮು ನಗರ ಆ ಕಾಲದಲ್ಲಿ ಎಷ್ಟೊಂದು ದೂರ! ಆದರೂ ಆ ಯತಿ ತನ್ನ ಬಪ್ಪಂತ ಬಾಳು ರೋಮದ ಯಾತ್ರೆಗಾಗಿ ಹಣ ಶೇಖರಿಸುವುದರಲ್ಲಿಯೇ ಕಳೆದ. ಅದೊಂದು ಆಸೆಗಾಗಿ ಇತರ ಎಲ್ಲ ಆಸೆ ಆಸಕ್ತಿಗಳನ್ನೂ ಬಿಟ್ಟುಕೊಟ್ಟ ಕೊನೆಗೂ ರೋಮದ ಯಾತ್ರೆಗೆ ಹೊರಟ. ವರ್ಷಾವಧಿ ಘಟ್ಟಿ ಬೆಟ್ಟ ಕಾಡು ಮೇಡು ತುಳಿದು ರೋಮವನ್ನು ಪ್ರವೇಶಿಸಿ ಪೋಪನ ವ್ಯಾಟಿಕನ್ ಅರಮನೆಯ ದ್ವಾರದಲ್ಲಿ ನಿಂತ—ದ್ವಾರಕೆಗೆ ಬಂದ ಸುದಾಮನಂತೆ! ಆದರೆ ಅಲ್ಲಿಯೇ ಅವನಿಗೆ ಒಂದು ವಿಚಾರ ಹೊಳೆಯಿತು. ಇಷ್ಟೆಲ್ಲ ಕಾಮ-ಲೋಭ ಮೋಹಗಳನ್ನು ಗೆದ್ದ ನಾನು ಇದೊಂದು ಹೆದ್ದಾಸೆಯನ್ನೂ ಏಕೆ ಗೆಲ್ಲಬಾರದು? ಸರಿ. ಅಲ್ಲಿಂದಲೇ ಹಿಂದಿರುಗಿದ. ಪೋಪನನ್ನು ನೋಡುವ ಒತ್ತಾಸೆಯನ್ನೂ ಹತ್ತಿಕ್ಕಿ ಮರಳಿದ—ಎಲ್ಲಿಗೆ? ಕೊನೆಯ ದಿನಗಳನ್ನು ಹುಟ್ಟಿನ ಊರ್ಮಾದದಲ್ಲಿ ತನ್ನ ಮಠದ ಒಂದು ಕಿರಿಕೋಣೆಯಲ್ಲಿ ಕಳೆದನು. ಎಲ್ಲ ಕಾಮನೆಗಳನ್ನು ಒಂದು ಹಿರಿಯ ಕಾಂಕ್ಷೆಯ ವೇದಿಕೆಯ ಮೇಲೆ ಬಲಿಯಿಟ್ಟು ಕೊನೆಗೆ ಆ ಕಾಂಕ್ಷೆಯನ್ನು ಬಾಳಿನ ಅಗ್ನಿಕುಂಡದಲ್ಲಿ ಹೋಮಿಸಿದ ಆ ಯತಿಯ ಬದುಕಿನ ಕೇಂದ್ರವೇ ಸಿಡಿದು ಹೋಯಿತು. ಗೀತೆ ಹೇಳುತ್ತದೆ "ವಿಷಯಾಃ ವಿನಿವರ್ತಂತೇ ನಿರಾಹಾರಸ್ಯ ದೇಹಿನಃ| ರಸವರ್ಜಂ ರಸೋಪ್ಯಸ್ಯ ಪರಂ ದೃಷ್ಟ್ವಾ ನಿವರ್ತತೇ||" ಯೂವರಸ ನಿಷ್ಪತ್ತಿಗೂ ಒಂದು. ಆಲಂಬನ ಬೇಕು. ಬದುಕಿನ ಸ್ಥಾಯಿಭಾವಕ್ಕೆ ಅಂಥ ಒಂದು ಆಲಂಬನವೇ ಕಳೆದು ಹೋದಾಗ ರಸವೆಲ್ಲಿಯದು? ಅಂಥ ಸ್ಥಿತಪ್ರಜ್ಞ 'ಪರಂ ದೃಷ್ಟ್ವಾ' ಆತ್ಮಸಂತುಷ್ಟನಾಗಿ ನಿಲ್ಲಬಹುದು. ಆದರೆ ಉಳಿದವರ ಪಾಡೇನು? ಇನ್ನು ಈ 'ಪರಂ' ದರ್ಶನವೂ ಒಂದು ಫಲ ಉದ್ದಿಷ್ಟ ವಿಷಯವಾಗುವದಿಲ್ಲವೇ?

ತಾತ್ಪರ್ಯವೇನೆಂದರೆ ಕರ್ಮವೆಂದೊಡನೆ ಅದರ ಫಲ ಬೆನ್ನಿಗೆ ಬಂದೇ ಬಂತು. ಪರಮಾರ್ಥದ ಮಾತಿರಲಿ ಪದಾರ್ಥ ವಿಜ್ಞಾನವೂ 'ಕರ್ಮ'ವನ್ನು 'ಸಹೇತುಕ ಶಕ್ತಿ ವಿನಿಯೋಗ"ವೆಂದೇ ವ್ಯಾಖ್ಯೆ ಮಾಡುತ್ತದೆ. (Work is application of force with a purpose.) ಜೀವನದ ಸುಖದುಃಖ ಪುಣ್ಯಪಾಪ ರಾಗದ್ವೇಷ ನಾಕ-ನರಕಗಳೆಲ್ಲ ಗಂಟು ಗಂಟಾಗಿ ಅಂಟಿಕೊಂಡಿರುವದೇ ಈ purpose. ಈ 'ಫಲ'ದ ಪ್ರಶ್ನೆಯ ಸುತ್ತಲ ಅಂದಾಗ ಕರ್ಮದ ಫಲವನ್ನು ತ್ಯಾಗ ಮಾಡುವವರು ಕೇಗೆ ಮತ್ತು ಯಾರು? ಇದನ್ನು ಕುರಿತು ಗೀತೆಯನ್ನೇ ಶರಣು ಹೋಗೋಣ.

"ಕಾರ್ಯೇ—ಕಾರಣ ಕರ್ತೃತ್ವೇ ಹೇತುಃ ಪ್ರಕೃತಿರುಚ್ಯತೇ |" ಅಂದರೆ ಪ್ರಕೃತಿಯೇ ಕಾರ್ಯಕ್ಕೂ ಕಾರಣಕ್ಕೂ ಕಾರ್ಯವಾಗಿಸುವ ಕರ್ತೃತ್ವಕ್ಕೂ ಹೇತುವಾಗಿ ಪ್ರಚೋದಕವಾಗಿದೆ. ಈ ಪ್ರಕೃತಿಯೇ ಅನಾದಿ. ಆದರಿಂದ ಕೊಮ್ಮುವ ವಿಕಾರಗಳೂ ಗುಣಗಳೂ ತನ್ನ ತಾಯಿಯ ಲಕ್ಷಣವನ್ನು ತರದೇ ಬಿಡುವವೇ? ಅವುಗಳ ನಾಮರೂಪಗಳು ಬೇರೆಯಾಗುತಿದ್ದರೂ ಅವು ಒಟ್ಟಾರೆ ಅನಾದಿ, ಪ್ರಕೃತಿಗೇನೇ ಒಳಪಟ್ಟವು. ಅವುಗಳಿಂದ ವಿಸ್ಫುರಿತವಾದ ಕರ್ಮದ ಗತಿ? ಗಹನಾ ಕರ್ಮಣೋಗತಿ: ಗೀತೆಯನ್ನು ಗ್ರಹಣ ಮಾಡಿದ ವ್ಯಾಸನೇ ಮಹಾ ಭಾರತದ ಅನುಶಾಸನ ಪರ್ವದಲ್ಲಿ ಹೇಳಿದ್ದುಂಟು.

"ಯಥಾ ಛಾಯಾ ತಪೌ ನಿತ್ಯಂ ಸಂಸಂಬದ್ಧಾ ನಿರಂತರಂ| ತಥಾ ಕರ್ಮ ಚ ಕರ್ತಾ ಚ-ಸಂಬದ್ಧಾ ಆತ್ಮಕರ್ಮಭಿಃ||" ನೆಳಲು ಬಿಸಿಲಿನಂತೆ ಕರ್ತೃ ಮತ್ತು ಕರ್ಮಗಳು ಒಂದನ್ನೊಂದು

INDIA'S MOST DURABLE & ECONOMICAL

DIESEL TRUCK & BUS CHASSIS....

TATA - MERCEDES - BENZ

DIESEL TRUCKS & BUS CHASSIS

ARVIND MOTORS

BALMATTA ROAD : : MANGALORE

ಅಂಟಿಕೊಂಡಂಥವು. "ಅವಶ್ಯಂ ಅನುಭೋಕ್ತವ್ಯಂ ಕೃತಂ ಕರ್ಮ ಶುಭಾಶುಭಂ". ಏಕೆಂದರೆ ಗೀತೆಯ ಮೇರೆಗೆ "ಪುರುಷಃ ಸುಖದುಃಖಾನಾಂ ಭೋಕ್ತೃತ್ವೇ ಹೇತುರುಚ್ಯತೇ" ಪ್ರಕೃತಿ ಕರ್ಮಕ್ಕೆ ಹೇತು. ಆದರೆ ಪುರುಷ ಭೋಗಕ್ಕೆ ಹೇತು.

ಆದ್ದರಿಂದಲೇ "ಲೋಕೋಯಂ ಕರ್ಮ ಬಂಧನಃ ಯಾರೂಒಂದು ಕ್ಷಣವು ಕರ್ಮವನ್ನು ಬಿಟ್ಟು ನಿಲ್ಲುವಂತೆ ಇಲ್ಲ. "ನಹಿಕಶ್ಚಿತ್ ಕ್ಷಣಮಪಿ ಜಾತು ತಿಷ್ಠತ್ಯ ಕರ್ಮಕೃತ್" ಆದ್ದರಿಂದ ನಹಿ ದೇಹಭೃತಾ ಶಕ್ಯಂ ತ್ಯಕ್ತುಂ ಕರ್ಮಾಣಿಅಶೇಷತಃ||ಹೀಗೆಕರ್ಮವನ್ನು ಬಿಡಲು ಅಗತ್ಯವಾದಾಗ ಅದರ ಭೋಗ ಫಲಪ್ರಾಪ್ತಿಯನ್ನು ಬಿಡಲುಶಕ್ಯವೇ? ಏಕೆಂದರೆ ತನ್ನ ಫಲದೊಂದಿಗೆ ಪ್ರತಿಯೊಂದು ಕರ್ಮವೂ ಬಂಧನಕಾರಿ. ಸತ್ವಗುಣಿಗೆ ಜ್ಞಾನಸಂಗದಿಂದ, ರಜೋಗುಣಿಗೆ ಕರ್ಮಸಂಗದಿಂದ ತಮೋಗುಣಿಗೆ ಪ್ರಮಾದ ಆಲಸ್ಯ—ನಿದ್ರೆಯೇ ಮುಂತಾದ ಮೋಹ ಸಂಗದಿಂದ ಕರ್ಮವು ಕಟ್ಟು ಬೀಳುತ್ತದೆ. ಈಗ ಬಿಡುಗಡೆ ಎಂತು?

"Deliverence? Where is this deliverence to be found?" ಕವಿ ರವೀಂದ್ರರು ಕೇಳಿಲ್ಲವೇ ಗೀತಾಂಜಲಿಯ ಒಂದು ಪದ್ಯದಲ್ಲಿ? ಬಿಡುವವನು ಯಾರು? ಕೊಡುವವನು ಯಾರು? ಭಕ್ತನ ಪೇಳಿಕೆ "ಕೊಡುವ ಕರ್ತೃ ಬೇರೆ" ಇದ್ದಾನೆಂದು. ಕ್ರೈಸ್ತನೂ ಇದನ್ನೇ ಹೇಳಿದ "Vengence is mine. I will nepoy" ಪ್ರತಿಫಲ ಪ್ರತೀಕಾರ ನನ್ನ ಹೆರಿಬ. ನಾನು ತೆರುತ್ತೇನೆ." ಹೀಗೆ ಕೊಡುವಾತ ಬೇರೆ ಇದ್ದಾಗ ಬಿಡುವಾತ ನಾನು. ನೀನು ಹೇಗೆ. "ನೈವ ಕಿಂಚಿತ್ ಕರೋಮೀತಿ ಯುಕ್ತಾಮನ್ಯೇತ ತತ್ತ್ವವಿತ್" ತಾನು ಏನನ್ನು ಮಾಡುವದಿಲ್ಲ ಎಂದು ತತ್ವಜ್ಞಲ್ಲ ಯೋಗಿಯು ತಿಳಿದುಕೊಳ್ಳ ಬೇಕಂತೆ. ಏಕೆಂದರೆ "ನಕರ್ತೃತ್ವಂ ನಕರ್ಮಾಣಿ ಲೋಕಸ್ಯ ಸೃಜತಿಪ್ರಭುಃ |
ನ ಕರ್ಮ ಫಲಸಂಯೋಗಂ ಸ್ವಭಾವಸ್ತು ಪ್ರವರ್ತತೇ ||

ಕರ್ತೃತ್ವ ಕರ್ಮ ಕರ್ಮ-ಫಲದ ಸಂಯೋಗ ಇದನ್ನು ಏನೂ ದೇವರು ಮಾಡುವದಿಲ್ಲವಂತೆ! ಇಲ್ಲಿ ಸ್ವಭಾವವೇ ಮೂಲ. ಆದ್ದರಿಂದ ಸ್ವಭಾವ ನಿಯತವಾದ ಕರ್ಮ ಮಾಡಲೇ ಬೇಕು. ಯಾವದು ನನ್ನ ವಶದ್ದಲ್ಲವೋ, ಯಾವದು ನನ್ನ ಕರ್ತೃತ್ವವೆಂದು ಭಾವಿಸುವದು ಜಾಣತನದ್ದಲ್ಲವೋ ಅದನ್ನು ಬಿಟ್ಟುಕೊಡುವ ಅಹಂಕಾರ ನಮಗೇಕೆ?

ಹಾಗಿದ್ದರೆ ಕರ್ಮ ಫಲ ತ್ಯಾಗದ ಅರ್ಥವೇನು? "ಮಾ ಕರ್ಮ ಫಲ ಹೇತುಃ ಭೂ" ಎಂಬುದರ ಮರ್ಮವೇನು? ನಿಜವಾಗಿಯೂ ಇದು ಅತ್ಯಂತ ಸ್ವಾರಸ್ಯವಾದ ಅಗತ್ಯವಾದ ಸಮಸ್ಯೆ. ಆಧುನಿಕ ನಾಗರಿಕತೆಯ ಜೀವನದಲ್ಲಿ ವ್ಯಕ್ತಿವ್ಯಕ್ತಿಯ ದುರಂತವೇ ಇದು. ಆಧುನಿಕ ಮನುಷ್ಯ ಏರಿಕ್ ಫ್ರಾಂ ಅನ್ನುವಂತೆ alienated man.He is alienated in the sense that his acts and forces have becemee estranged from him....Man does not experience himself as the active bearer of his own forces. Man hates his working life, because it makes him prisoner and a friend-" ಇಂದಿನ ಮಾನವನಿಗೆ ತನ್ನ ಕೆಲಸದಲ್ಲಿ ಆನಂದವಿಲ್ಲ. ತನ್ನ ಕೆಲಸದ ಇದುರು ಆತನಿಗೆ ಅರ್ಜುನನಂತೆಯೇ ವಿಷಾದ ಯೋಗ. ಏಕೆ? ಆತ ಕೇವಲ ಫಲದ ಆಶೆಯಿಂದ ಆ ಕೆಲಸಕ್ಕೆ ಬಂದವನು. ಆವನ ಪಾಲಿನ ಕಾರಕೂನು, ಕಾರಖಾನೆಯ ಕೆಲಸ, ಕಣಿಯ ದುಡಿತ ಎಲ್ಲ ಯಾವದೋ ಪ್ರಚಂಡವಾದ ಅಜಸ್ರವಾದ ಕಾರ್ಯಸಿದ್ಧಿಯ ಯಂತ್ರದ ಬಿಡಿ ಕೀಲಗಳು. ಅವುಗಳ ಪ್ರಯೋಜನ ಅವನಿಗಿಲ್ಲ. ಅವುಗಳ ಕುರಿತು ಆತ ನಿರ್ಲಿಪ್ತ. ತಿಂಗಳ ಕೊನೆಯ ಸಂಬಳ ಅವನ ಫಲ. ಕೆಲಸದ ಚಟುವಟಿಕೆಯ ಆನಂದ ಅವನಿಗಿಲ್ಲ. ಕಾಡು ಮನುಷ್ಯ ಹಸಿವಾಗ ಬೇಟೆಗೆ ಎದ್ದರೆ ಆ ಬೇಟೆಯ ಹೆಜ್ಜೆ ಹೆಜ್ಜೆಗೂ ಅವನಲ್ಲಿ ಉತ್ಸಾಹ ಆಸಕ್ತಿತುಳುಕಾಡುತಿತ್ತು. ಇಂದಿನ ಸುರಕ್ಷಿತ ಆದರೆ ಅಲಪ್ತಿತ ಮನುಷ್ಯನ ಕರ್ಮ ಮತ್ತು ಅದರ ಫಲ ಇವುಗಳ ನಡುವಿನ ಬಂಧ ಅವನ ಸ್ವಭಾವದಿಂದ ಆಗುವದಲ್ಲ, ಆಗುವದಿಲ್ಲ. ಹೀಗೆ ಕೇವಲ ಫಲ ಹೇತುವಿನಿಂದ ನಡೆದ ಕಾರ್ಯ ಒಂದು ಬಂಧನ, ವಿಡಂಬನೆ. ಆತ್ಮವಂಚನೆ ಕೃತ್ರಿಮ ಘಟಾಟೋಪ ಏನೂ ಆಗಬಹುದು–ವಿನಿಯೋಗ ಧನದ ಮೇಲೆ ಕಣ್ಣಿಟ್ಟು ಇಂದಿನ ಹಲವು ಯೋಜನಾ ಕಾರ್ಯಗಳು ನಡೆಯುವದಿಲ್ಲವೇ? ಹಾಗೆ, ಹೀಗೆ "ಫಲ ಹೇತುಕವಾಗಿಯೇ ಕೆಲಸ ಮಾಡಬೇಡ. ಅದು ಅಕರ್ಮಕ್ಕೆ ಅಲ್ಲದ ಕೆಲಸಕ್ಕೆ ಒಯ್ಯುತ್ತದೆ ಜೋಕೆ!" ಎಂದಿದ್ದಾನೆ ಗೀತಾಚಾರ್ಯ.

ಆದರೆ ಇದಕ್ಕೆಉಪಾಯವೇನು? ಲೋಕದ ಕರ್ಮಸೂತ್ರದಲ್ಲಿ ವ್ಯಕ್ತಿಯು ಸೋಣೆಸಲ್ಪಟ್ಟಿರುವಾಗ ಅವನಿಗೆಲ್ಲಿ ಸ್ವಾತಂತ್ರ್ಯ? ಫಲ ಹೇತುವನ್ನು ಬಿಟ್ಟರೆ ಆತ ಸಾಯುವದೇ ಸೈ. ಏಕೆಂದರೆ ಇಂದು ಅವನ ಕರ್ಮ ಅವನ ಗುಣಕ್ಕೆ, ಸ್ವಭಾವಕ್ಕೆ ಅನುಸಾರವಾಗಿಲ್ಲ. ಇಂದು ಅವನೊಬ್ಬ ಆತ್ಮವಂತ ವ್ಯಕ್ತಿತ್ವವೇ ಅಲ್ಲ. ಈ ಬಗೆಯ "ಭಿನ್ನಜಾತ್ರ್ಯ" ಪ್ರಾಚೀನರದಿದ್ದಿಲ್ಲ. ಕೇವಲ ಕರ್ಮಕ್ಕೆ ಅಂಟಿ ನಿಂತ ಫಲಕ್ಕಾಗಿಯೇ ಆ ಕರ್ಮವನ್ನೆಸಗಲು ಹೆಣಗುವ ಇಂದಿನ ಸಾಮಾಜಿಕನಿಗೆ "ಮಾ ಕರ್ಮ ಫಲ ಹೇತುರ್ಭೂ' ಎಂದರೆ ಪ್ರಯೋಜನವಿಲ್ಲ.

ಇನ್ನು ಕೇವಲ ಕರ್ಮಾಧಿಕಾರದ ಸಂದೇಶ ಯಾರಿಗೆ ಯೋಗ್ಯ? ಕರ್ತವ್ಯ ಕರ್ಮಗಳಿಗೆ "ನಿನ್ನ ಪಾಲಿನ ಕೆಲಸ ನೀನು ನಿರ್ವಹಿಸು. ಅದರ ಇತ್ಯರ್ಥ ನಿನ್ನದಲ್ಲ. ಕೃತಕೃತ್ಯತೆ ನಿನ್ನದು. ಸಾರ್ಥಕತೆ ನಿನಗೆ ಮೀರಿದ್ದು." ಸೈನಿಕ, ಆಶ್ರಮ ಧರ್ಮ, ಹಾಕಿಕೊಟ್ಟ ಕೆಲಸದ ಆಳು ಇವರಿಗೆಲ್ಲ ಈ ತತ್ವ ಒಂದೇ ಶ್ರೇಯಸ್ಕರ. ಆದರೆ ಇಲ್ಲಿಯೂ ಇನ್ನೊಂದು ಮಗ್ಗಲಿದೆ. ಫಲದಲ್ಲಿ ಆಸಕ್ತಿ ಬೇಡವೆಂದರೆ ಕರ್ಮದಲ್ಲಿ ಅಭಿರುಚಿ ಬೇಡವೆಂದಲ್ಲ. ಫಲದಲ್ಲಿ ಇಡಬೇಕಾದ ಆಸಕ್ತಿ ಕರ್ಮದ ನಿರ್ವಹಣೆಯಲ್ಲಿ ಇಡಬೇಕು. ಇದನ್ನು ಸುಸ್ಪಷ್ಟವಾಗಿ ಗೀತೆ ಹೇಳಿಲ್ಲ ಆದ್ದರಿಂದಲೇ ಅನಾಸಕ್ತಿ ಯೋಗ ಹೊಣೆಗೇಡಿತನಕ್ಕೆ ಹಾದಿಯಾಗಿದೆ.

ಗೀತೆಯಲ್ಲಿ ಕರ್ಮಫಲಾಧಿಕಾರದ ವಿವೇಚನೆ ಬಂದ ಸಂದರ್ಭ ವೇದವಾದದ ನಿಂದೆಯದು. ಅಲ್ಲಿ ಬುದ್ಧಿಯುಕ್ತನಾಗಿ ಮನೀಷಿಯು ಕರ್ಮದಿಂದ ಹುಟ್ಟಿದ ಫಲವನ್ನುಬಿಟ್ಟುಜನ್ಮ ಬಂಧವಿನಿರ್ಮುಕ್ತನಾಗುತ್ತಾನೆಂದು ಮುಂದಿನ ಸಂದರ್ಭ. ಆಮಟ್ಟಿಗೆ "ಕರ್ಮ"ವೆಂದರೆ ವೇದೋಕ್ತ ಸಕಾಮ ಕರ್ಮ, "ಹವ್ಯ ಕವ್ಯ, ಯಜ್ಞಯಾಗಾದಿ ವಿಾಮಾಂಸಕರ ಕರ್ಮ. "ಅಪೂರ್ವ" "ಅದೃಷ್ಟ"ಪುಣ್ಯಾಪಾಪಗಳನ್ನು ನಿರ್ಮಿಸಿ ಪುನರ್ಜನ್ಮಕ್ಕೆ ಕಾರಣವಾಗುವ ಕರ್ಮ. ಈ ಸಂಕುಚಿತ ಸಂದರ್ಭಕ್ಕೆ ಈ ಪ್ರಸಿದ್ಧ ಶ್ಲೋಕದ ಅರ್ಥ ಸಮುಚಿತವೇ ಸರಿ.

ಆದರೆ ವ್ಯಾಪಕವಾಗಿ ಜೀವನ ವ್ಯವಹಾರಕ್ಕೆ ಅನ್ವಯಿಸುವಾಗ ಮೇಲೆ ಹೇಳಿದ ತೊಡಕುಗಳು ತಲೆ ಎತ್ತುತ್ತವೆ. ಜೀವನದಲ್ಲಿ ಎಷ್ಟೋ ಕರ್ಮಗಳಿಂದ ಫಲವೆಂಬುವದು ಬೇರೆ ಇರುವದೇ ಇಲ್ಲ. ಒಬ್ಬ ಹಾಡಲು ಕಲಿಯುತ್ತಾನೆ. ಆಗ ಕರ್ಮದ ಆಸಕ್ತಿಯೇ ಫಲಾಸಕ್ತಿ ಹಾಡಿದಂತೆ ಹಾಡಿಕೆ ಸಳಗಿ ಹಾಡುಗಾರಿಕೆ ಸೊಗಸಾಗುವದು. ಮುಖ್ಯವಾಗಿ ಅವಶ್ಯವಾಗಿ ಬೇಕು ಕರ್ಮದಲ್ಲಿ ಆಸಕ್ತಿ. ಇನ್ನು ಆಸಕ್ತಿ ಒಂದು ಮೋಹವಾಗಬಾರದು ಕುರುಡು ಒತ್ತಾಸೆ ಆಗಬಾರದು. ಇಲ್ಲಿ ಬಂತು "ಅಸಂಗತ್ವ"ದ ಅಗತ್ಯ ಉತ್ತಮವಾದ ಅಭಿಲಾಷೆಯನ್ನು ಇಟ್ಟುಕೊಂಡೂ ಅಧಮದ ನಿರೀಕ್ಷೆ ಮರೆಯಬಾರದು. ಯಶಸ್ಸಿನ ಸಾಧನೆಯ ತುದಿಗೆ ಅಪಯಶಸ್ಸಿಗಾಗಿ ಮಾನಸಿಕ ಸಿದ್ಧತೆಯೂ ಇರಬೇಕು. ಅದರೆ ಇದರ ಅರ್ಥ ಯಶಾಪಯಶಗಳನ್ನು ಜಯಾಪಜಯಗಳನ್ನು ಒಂದೇ ನಿರ್ವಿಕಾರ ದೃಷ್ಟಿಯಿಂದ ನೋಡಬೇಕೆಂದಲ್ಲ. ಆದರೆ ಗೀತೆಯ ಜನಪ್ರಿಯ ಸಂಸ್ಕಾರ ಇಂಥ ಉದಾಸೀನತೆಗೆ ಕರೆಯೋಲೆಯಾಗಿದೆ.

"ವಿದ್ವಾಂಸನಂತೆ ಅವಿದ್ವಾಂಸನೂ ಕರ್ಮದಲ್ಲಿ ಆಸಕ್ತನಾಗಿರಬೇಕು. ಇಷ್ಟೇ ವಿದ್ವಾಂಸನು ತನಗಾಗಿ ಅಲ್ಲ ಲೋಕಸಂಗ್ರಹಕ್ಕಾಗಿ ಹಾಗೆ ಮಾಡಬೇಕು ಅಂದಿದೆ ಗೀತೆ. ಅಂದರೆ ಇಲ್ಲಿ ಕರ್ಮಫಲ ಹೇತುವಿನ ತ್ಯಾಗವಿಲ್ಲ. ವಿಶಾಲತೆ, ಉದಾತ್ತತೆ ಇದೆ. ಸ್ವಾರ್ಥದ ಉನ್ನಯನ (Sublimation) ಇದೆ. "Enlightened self initerest"ಅನ್ನುತ್ತಾರಲ್ಲ, ಆ ರೀತಿ. ಏಕೆಂದರೆ ಕೇವಲ ಪರ ಹಿತಕ್ಕಾಗಿಯೇ ದುಡಿಯುವ ಮಹಾತ್ಮರು ಕೆಲವರೇ ಇರುತ್ತಾರೆ. ಆ ದುಡಿತದ ಆನಂದವೇ ಅವರ ಸ್ವಾರ್ಥವೆನ್ನ ಬಹುದು. "ಉದ್ದೇಶ"(ends)ಮತ್ತು"ಉಪಾಯ" (means)ಗಳ ತಳಕಿನ ತಾಕಲಾಟದ ಜಟಿಲ ಸಮಸ್ಯೆಯಲ್ಲಿಯೂ ಉದ್ದೇಶದ ಉದಾತ್ತತೆಯೇ ಅಭಿಪೇತವಿದೆ. ನಿರುದ್ದೇಶ ನಿರ್ಹೇತುಕ ಅಥಾರ್ತ್ ಫಲಾಶಾರಹಿತ ಕರ್ಮ ಗೀತೆ ಪೇಳುವದಾದರೆ ಸಾಧ್ಯ ಸಾಧನಗಳ ಸಮಸ್ಯೆಯೇ ವ್ಯರ್ಥ. ಜೀವನದಲ್ಲಿ ಕರ್ಮ ಬಂಧ (involvement) ತಪ್ಪಿದ್ದೇ ಅಲ್ಲ. ಅಂದಾಗ ಕುಲಕ್ರಮ ಕರ್ತವ್ಯನಿಷ್ಠೆ ಪ್ರಾಪ್ತಕರ್ಮ, ಸ್ವಭಾವಧರ್ಮ ಇವುಗಳ ಹೊರತಾಗಿ ಉಳಿದ ಮಾದರಿಯ ಜೀವನ ಕರ್ಮಗಳಿಗೆಲ್ಲ ಫಲಾಶಾರಹಿತ ಕರ್ಮಾಧಿಕಾರದ ಉದೇಶ ಅನ್ವಯಿಸುವದಿಲ್ಲ.

ಪ್ರಣಯ ಮಾದರಿಯಿಂದ ವಿಭಿನ್ನವಾಗಿ,
ಸಮಾಜದ ಸಮಸ್ಯಾನಿರೂಪಣೆ ವಸ್ತುವಾಗಿ,
ಬೆಳಕು ಕಂಡ ನಿತ್ಯನೂತನ ಕಥೆಗಳು!

ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ.

ಕಥಾ ಕೌಮುದಿ

(ಹದಿಮೂರು ವಿಶಿಷ್ಟ ಕಥೆಗಳ ಸಂಕಲನ)

ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

ಬೆಲೆ: ರೂ. ೧—೮—೦ (1 = 50)

ರೂ. 1 = 75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಕಳಿಸಬಹುದು.

ದೊರೆವ ಸ್ಥಳ.

ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.
ನವಭಾರತ ಪುಸ್ತಕ ಭಂಡಾರ ಉಡುಪಿ.
(ನಿಮ್ಮೂರ ಪುಸ್ತಕ ವ್ಯಾಪಾರಿಗಳ್ಳಿಯೂ ವಿಚಾರಿಸಿರಿ)

ಹೊಸ ಪುಸ್ತಕ

ಅಮೇರಿಕದ ಆರು ಮಂದಿ
ಪ್ರಖ್ಯಾತ ಕಥೆಗಾರರ
ಆರು ಉತ್ತಮ ಕಥೆಗಳ
ಸುಂದರ ಕಥಾಸಂಕಲನ

ಅಮೆರಿಕದ ಆರು ಕತೆಗಳು

ಅಮೆರಿಕದ ಗ್ರಾಮಜೀವನದ ಸುಂದರ, ಸಜೀವ ಮತ್ತು ಮಾರ್ಮಿಕ ಚಿತ್ರಗಳನ್ನು ಒತ್ತಟ್ಟಿಗೆ ಪೋಣಿಸಿರುವುದು ಈ ಕಥಾಸಂಕಲನದ ವೈಶಿಷ್ಟ್ಯ

ಅನುವಾದಿಸಿದವರು:
ಕು. ಶಿ. ಹರಿದಾಸ ಭಟ್ಟ, ಎಂ.ಎ.

ಪ್ರಕಾಶಕರು:
ನವಯುಗ ಎಂಟರ್‌ಪ್ರೈಸ್ ಲಿ.

ಬೆಲೆ: ರೂ. 1=75; ಬಿಳಿ ಕಾಗದ!
ರೂ. ೩ನ್ನು M.O. ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಾಗಿ ಕಳಿಸಬಹುದು

ವ್ಯಾಪಾರಿಗಳಿಗೆ ಧಾರಾಳ ಕಮಿಷನ್

ಪ್ರತಿಗಳು ಸಿಗುವ ಸ್ಥಳಗಳು:
ನವಯುಗ ಪ್ರೆಸ್ ಉಡುಪಿ.
ನವಭಾರತ ಪುಸ್ತಕ ಭಂಡಾರ,
ಉಡುಪಿ.

ನಾಡಿನಲ್ಲಿ ನಾಗರಿಕ

(೬ನೇ ಪುಟದಿಂದ)

ಭಾವನೆಯು ಅಭಾವವಿದ್ದರೂ ಅಧಿಕಾರ, ಸ್ವತಂತ್ರ ಮನೋಭಾವ ಇದ್ದೇ ಇದೆ.

ರಾಷ್ಟ್ರದ ಶಕ್ತಿಶಾಲೀ ಅಂಶ ನಾಗರಿಕ

ಈ ಯುಗದಲ್ಲಿ ವಿಶ್ವದ ಪ್ರಗತಿ ಮತ್ತು ಅದರಿಂದುಂಟಾದ ಸಂಘರ್ಷಣೆಯಿಂದಿಟವು ಸುಖಶಾಂತಿಗಳ ಕಡೆ ಹರಿಯದೆ ಅಧಿಕಾರ ಶಕ್ತಿಗಳ ಕಡೆ ಹರಿಯುತ್ತಿದೆ. ಆದರಿಂದಾಗಿ ಇಂದಿನ ನಾಗರಿಕರು ತಾನೂ ದೇಶದ ಮೇಲೆ ಸಂಪೂರ್ಣ ಅಧಿಕಾರವನ್ನು ಹೊಂದಿರುವೆನೆಂದು ತಿಳಿದು ತಾನೂ ಒಂದು ರಾಷ್ಟ್ರದ ಶಕ್ತಿಶಾಲೀ ಅಂಗವೆಂದು ನೆನೆಸುತ್ತಾನೆ. ಏಕೆಂದರೆ ದೇಶದ ಉಚ್ಚ ಸ್ಥಾನದ ಅಧಿಕಾರಿಗಳೂ ತನ್ನ ಅಭಿಮತದಿಂದಲೇ ಆ ಸ್ಥಾನಕ್ಕೆ ಏರುವನೆಂದು ಚೆನ್ನಾಗಿ ತಿಳಿದಿದ್ದಾನೆ. ಆದ್ದರಿಂದಲೇ ತನ್ನ ಶಕ್ತಿ ಅಧಿಕಾರಗಳ ಮೇಲೆ ಹೆಮ್ಮೆಪಟ್ಟುಕೊಳ್ಳುವುದು.

ಜಾಗೃತ ನಾಗರಿಕ

ಇಂದಿನ ವರೆಗೂ ಜನತೆಯು ರಾಜ ಮಹಾ ರಾಜರುಗಳನ್ನೇ ದೇವರೆಂದು ತಿಳಿದು ಅವರ ವಾಕ್ಯವೇ ವೇದವಾಕ್ಯವೆಂದು ನಂಬಿ ದೇಶದ ಸಂಪೂರ್ಣ ಆಡಳಿತ ಅಧಿಕಾರಗಳನ್ನು ಅವರ ವಶಕ್ಕೆ ಬಿಟ್ಟು ಅವರ ಆಜ್ಞೆಯನ್ನು ಮಹತ್ ಪ್ರಸಾದವೆಂದು ತಿಳಿದು ನಡೆಸುತ್ತಾ ಬಂದಿತ್ತು. ಆ ರಾಜನೇನಾದರೂ ಅಕೃತ್ಯ ಅತ್ಯಾಚಾರಗಳನ್ನೆಸಗಿದರೂ ಬಲಿ ಪಶುಗಳಂತೆ ತಲೆ ಬಾಗಿಸುತ್ತಿದ್ದ ಕಾಲವೂ ಒಂದಿತ್ತು. ಆದರೆ ಈಗ ಕಾಲ ಬದಲಾಯಿಸಿದೆ. ವಿಶ್ವದ ಜನರು ಜಾಗೃತಿ ಹೊಂದಿದ್ದಾರೆ. ಇಂಗ್ಲೆಂಡಿನಲ್ಲಿ ರಾಜ ಮತ್ತು ಪ್ರಜೆಗಳ ಮಧ್ಯೆ ಒಂದು ಯುಗದ ವರೆಗೂ ಸಂಘರ್ಷಣೆ ನಡೆಯಿತು. ರಷ್ಯಾದಲ್ಲಿ ಜಾರನ ವಿರುದ್ಧ ಜನತೆಯು ಜ್ವಾಲೆಯನ್ನೇ ಹೆಬ್ಬಿಸಿ ಅವನ ಕೈಯಿಂದ ಆಡಳಿತವನ್ನು ಕಸಿದುಕೊಂಡು ಸಾಮ್ಯವಾದವನ್ನು ಸ್ಥಾಪಿಸಿತು. ಇಂದು ಅಲ್ಲಿ ಕಮ್ಯುನಿಸ್ಟ್ ಸರಕಾರವಿದೆ. ಅಮೇರಿಕಾದಲ್ಲಿ ಜನತಂತ್ರಾತ್ಮಕ ರಾಜ್ಯವಿದೆ. ಮತ್ತು ಅಲ್ಲಿ ಜನರಿಂದ ಚುನಾಯಿಸಿದ ಪ್ರತಿನಿಧಿಯೇ ರಾಜ್ಯದ ಅಧಿಕಾರಿಯಾಗುತ್ತಾನೆ.

ಹೀಗೆ ಭವನ ನಿರ್ಮಾಣದಲ್ಲಿ ಆಧಾರ ಶಿಲೆಯ ಪಾತ್ರ ಹೆಚ್ಚು ಮಹತ್ವಪೂರ್ಣದ್ದೋ ಹಾಗೇ ರಾಷ್ಟ್ರದಲ್ಲಿ ನಾಗರಿಕನೂ ಮಹತ್ವ ಪಡೆದಿದ್ದಾನೆ. "ಹನಿಗೂಡಿದರೆ ಹಳ್ಳ"ವೆಂಬ ಸೂಕ್ತಿಯಂತೆ ಒಬ್ಬೊಬ್ಬ ನಾಗರಿಕನು ಸೇರಿದರೇ ರಾಷ್ಟ್ರವೆನ್ನಿಸಿಕೊಳ್ಳುದು. ಇಂದಂತೂ ದೇಶದ ಸಾಮಾನ್ಯ ನಾಗರಿಕನೂ ಯೋಗವಿದ್ದರೆ ರಾಷ್ಟ್ರದ ಉನ್ನತ ಅಧಿಕಾರ ಪಟ್ಟವನ್ನಾಳಬಹುದು. ಇಂದಿನ ನಾಗರಿಕ ತೂಕಡಿಸುತ್ತಿಲ್ಲ. ಎಚ್ಚತ್ತಿದ್ದಾನೆ. ಹಿಂದಿನಷ್ಟು ಅಜ್ಞಾನಿಯಲ್ಲ. ಅನಾಗರಿಕ ಸ್ಥಿತಿಯಲ್ಲಿಲ್ಲ. ಸುಜ್ಞಾನದ ಕಡೆ ಸಭ್ಯತೆಯ ಕಡೆ ಅವನ ಒಲಿವು ಹರಿಯುತ್ತಿದೆ. ತನ್ನ ರಾಷ್ಟ್ರದ ಹಿತಾಹಿತಗಳನ್ನು ಕಷ್ಟಸುಖಗಳನ್ನು ಅಗುಹೋಗುಗಳನ್ನು ತಿಳಿಯುತ್ತಾನೆ. ಅದರ ಮೇಲೆ ಚಿಂತಿಸುತ್ತಾನೆ.

ಪ್ರಜಾತಂತ್ರವು ಕರ್ಮಾರ ಹಿತನೇ?

ಇಂದು ಪ್ರಜಾತಂತ್ರ ರಾಜ್ಯದ ಯುಗ. ಈ ಪ್ರಜಾತಂತ್ರ ಯುಗವು ಒಳ್ಳೆಕರ್ಮಠ ಹಿತನಂತೆ ತನ್ನ ರಾಷ್ಟ್ರದ ನಾಗರಿಕನನ್ನು ಸುಜ್ಞಾನಿಯನ್ನಾಗಿ ಮಾಡುವುದರಲ್ಲಿ ಪ್ರಗತಿ ಶೀಲವನ್ನಾಗಿ ಪರಿವರ್ತಿಸುವುದರಲ್ಲಿ ಶ್ರಮಿಸುತ್ತಿದೆ. ಒಳ್ಳೆಯ ಶಿಕ್ಷಣ ಪಡೆಯಲೂ ಸುಸ್ಥಬಂಧ ವ್ಯವಸ್ಥೆಗಳನ್ನು ನೂಡಿ ತನ್ನ ದೇಶದ ನಾಗರಿಕನನ್ನು ಸರ್ವವಿಧದಲ್ಲೂ ಯೋಗ್ಯನನ್ನಾಗಿ ಪೂರ್ಸಡಿಸಲು ಪ್ರಯತ್ನಿಸುತ್ತಿದೆ. ಯಾವ ರಾಷ್ಟ್ರದ ನಾಗರಿಕನು ಸುರಕ್ಷಿತನೂ ದೃಢಕಾಯನೂ ಚತುರನೂ ನೈಜ ದೇಶಭಕ್ತನೂ ರಾಷ್ಟ್ರೀಯ ಮನೋಭಾವ ಉಳ್ಳವನೂ ಆಗುವನೋ ಆ ರಾಷ್ಟ್ರ ಸದೃಢಗೊಂಡು ಉನ್ನತಿ ಹೊಂದುವುದರಲ್ಲಿ ಸಂದೇಹವೇನು?

ಸದಸ್ಯನನ್ನಳೆಯುವ ಮಾನದಂಡ ನಾಗರಿಕನೇ?

ಇಂದಿನ ನಾಗರಿಕನು ತನ್ನ ನಗರದ ಪ್ರಾಂತ್ಯದ ರಾಷ್ಟ್ರದ ಶಾಸನ ಪ್ರಬಂಧಗಳಲ್ಲಿ ಭಾಗವಹಿಸುತ್ತಾನೆ. ಇಂತಹ ನಾಗರಿಕನ ಯೋಗ್ಯತೆಯ ಮೇಲೇ ಅವನು ಚುನಾಯಿಸುವ ಸದಸ್ಯನ ಯೋಗ್ಯತೆ ಅವಲಂಬಿಸಿದೆ.

ಅಂದಮೇಲೆ ನಾಗರೀಕನ ಯೋಗ್ಯತೆಯೇ ತಾನು ಚುನಾಯಿಸಿದ ಸದಸ್ಯನ ಯೋಗ್ಯತೆಯನ್ನಳೆಯುವ ಮಾನದಂಡವಾಯಿತು. ಯಾವ ದೇಶ ಜಾಗೃತಿ ಹೊಂದಿ ದೀರ್ಘಾವಧಿಯಿಂದ ತನ್ನ ರಾಷ್ಟ್ರವನ್ನು ತಾನೇ ಸ್ವತಃ ಸಂಚಾಲನೆ ಮಾಡುತ್ತಾ ಬಂದಿದೆಯೋ ಆ ದೇಶದ ನಾಗರಿಕನಿಗೆ ಮಾತ್ರ ಮೇಲಿನ ಮಾತು ಅನ್ವಯಿಸುತ್ತೆ ಎಂಬುದು ಗಮನೀಯ ಅಂಶ. ಅಂದರೆ ಯಾವ ದೇಶ ಇನ್ನೂ ಹಿಂದುಳಿದಿದೆಯೋ ಆ ದೇಶದ ನಾಗರಿಕನೂ ಇನ್ನೂ ಪರಕೀಯರ ಪ್ರಭಾವಗಳಿಂದ ಮುಕ್ತನಾಗಿರುವನೆಂದು ತಿಳಿದರೆ ತಪ್ಪಾಗುವುದಿಲ್ಲ.

ನಾಗರಿಕ ಮತ್ತು ಮತದಾನ

ಇನ್ನು ಎಚ್ಚೆತ್ತ ನಾಗರಿಕನೂ ಒಮ್ಮೊಮ್ಮೆ ತನ್ನ ದೇಶದ ಪ್ರತಿನಿಧಿಯನ್ನು ಚುನಾಯಿಸುವಾಗ ಎಡವುದುಂಟು. ಇದಕ್ಕೆ ಕಾರಣ ದುಷ್ಟ ಪ್ರಭಾವಗಳು, ನಾನಾ ರೀತಿಯಲ್ಲಿ ಮತದಾರರ ಮೇಲೆ ಬೀಳುವುದೇ ಆಗಿದೆ. ಮತದಾನ ಪದ್ಧತಿಯು ಬಹಳ ಪವಿತ್ರವಾದುದು. ಆದರೆ ಅದರ ಪವಿತ್ರತೆಯನ್ನು ನಾಗರಿಕನು ಅರಿತಿದ್ದರೆ ಮಾತ್ರ ಅದರ ಪವಿತ್ರತೆ ಉಳಿಯುತ್ತೆ. ಹಾಗಿಲ್ಲದೆ ದುಡುಕಿದರೆ, ಲಂಚಕ್ಕೆ ಕೈ ಒಡ್ಡಿದರೆ, ಅಧಿಕಾರಿಗಳ ದರ್ಪಕ್ಕೆ ಮಣಿದರೆ, ಮತದಾನದ ಮೌಲ್ಯವೆಲ್ಲಿ ಉಳಿಯುತ್ತೆ. ಶ್ರೀಮಂತರು ಶ್ರೀದೇವಿಯನ್ನು ನೀಡಿ ಮತ ಕೊಂಡುಕೊಳ್ಳುತ್ತಾರೆ. ಜಮೀನುದಾರರು ದರ್ಪತೋರಿಸಿ ತಮ್ಮ ಕೈಕೆಳಗಿನ ಬಡ ಜನತೆ ಹಾಗೂ ರೈತರನ್ನು ಬೆದರಿಸಿ ಮತ ಪಡೆಯುತ್ತಾರೆ. ಇನ್ನು ಕೆಲವೆಡೆ ಸರ್ಕಾರೀ ಕರ್ಮಚಾರಿಗಳು. ತಮ್ಮ ಪಕ್ಷದ ಸದಸ್ಯರಿಗಾಗಿ ಜನರ ಮೇಲೆ ದಬ್ಬಾಳಿಕೆ ನಡೆಸಿ ಮತವನ್ನು ಸುಲಿಯುತ್ತಾರೆ. ಆದ್ದರಿಂದಲೇ ಜನತೆಗೆ ತಮ್ಮ ನಿಜ ಹಿತೈಷಿ ಪ್ರತಿನಿಧಿಯನ್ನಾರಿಸುವಾಗ ನಾನಾ ತೊಂದರೆಗಳನ್ನು ಎದುರಿಸಬೇಕಾಗುತ್ತೆ. ಇದನ್ನರಿತೇ ಶುಭಚಿಂತಕ ಮುಖಂಡರುಗಳು ಈ ಕ್ಲಿಷ್ಟ ಪರಿಸ್ಥಿತಿಯನ್ನು ಸುಗುಮಗೊಳಿಸಲೋಸುಗ ಸದಾ ನಾಗರಿಕರನ್ನು ಎಚ್ಚರಗೊಳಿಸುವುದರಲ್ಲಿ ನಿರತರಾಗಿದ್ದಾರೆ. ಮೇಲೆ ಹೇಳಿದ ನಾನಾ ತೊಂದರೆಗಳು ಕೇವಲ ಭಾರತದಲ್ಲಷ್ಟೇ ಅಲ್ಲದೆ ಸಮಸ್ತ ಜಗತ್ತಿನಲ್ಲೇ ಒಂದಲ್ಲಾ ಒಂದು ರೀತಿ ವ್ಯಾಪಕಗೊಂಡು ಭೂತಾಕಾರ ತಾಳಿದೆ

ಹಿಂದಿನ ದಿನಗಳಲ್ಲಿ ಭಾರತವು ಒಳತಿಕ್ಕಾಟ ಜಗಳಗಳಿಂದ ರಾಜ ಮಹಾ ರಾಜರುಗಳ ಆಂತರಿಕ ಮನಸ್ತಾಪದಿಂದ ಹರಿದು ಹಂಚಿಹೋಗಿತ್ತು. ಒಂದೆಡೆ ಮುಸಲ್ಮಾನ ಹಿಂದೂಗಳ ಮಧ್ಯೆ ಕಲಹ. ಮತ್ತೊಂದೆಡೆ ಮರಾಠಾ ಇಂಗ್ಲೀಷರ ಘರ್ಷಣೆ, ಈ ಮಧ್ಯೆ ಪೋರ್ಚುಗೀಸ್, ಫ್ರೆಂಚ್, ಇಂಗ್ಲೀಷರ ಒಳಸಂಚು ಕಾರುಬಾರುಗಳು ಇದರಿಂದಾಗಿ ಭಾರತದ ಜನತೆಯಲ್ಲಿ ರಾಷ್ಟ್ರೀಯ ಭಾವನೆ ಲುಪ್ತವಾಗಿ ಹೋಗಿತ್ತು. ಜನರು ಜಡಭರಿತರಾದರು. ರಾಜರುಗಳ ದಬ್ಬಾಳಿಕೆಯಲ್ಲಿ ಸಿಕ್ಕಿ ಸ್ವತಂತ್ರವನ್ನೇ ಕಳೆದುಕೊಂಡಿದ್ದರು. ಕಡೆಗೆ ಇಂಗ್ಲೀಷರ ಹಿಡಿತಕ್ಕೆ ಭಾರತ ಸಿಕ್ಕಿ ರಾಜ ಮಹಾ ರಾಜಾದಿಗಳ ನೊಕ್ಕೇನೋ ಅಡಗಿತು. ಆದರೆ ಜನತೆ ಪರಕೀಯರ ಗುಲಾಮರಾದರು. ಅಂದಿನ ನಾಗರಿಕ ಇಂದಿನ ನಾಗರಿಕನಂತೆ ಸ್ವತಂತ್ರವಾಗಿ ತಲೆಯೆತ್ತಿ ಮೆರೆದಾಡುವಂತಿರಲಿಲ್ಲ. ಇಂಗ್ಲೀಷರ ಕೈ ಗೊಂಬೆಯಾಗಿ ಬಾಳಬೇಕಾಯಿತು. ಆದರೆ ಜನತೆ ಸುಮ್ಮನಿರಲಿಲ್ಲ. ತಮ್ಮ ಸ್ಥಿತಿಯ ಅರಿವಾಗಿ, ತಮ್ಮ ಉದ್ಧಾರಕ್ಕಾಗಿ ಸೆಣಸಿದರು. ತತ್ಫಲವಾಗಿ ದೇಶ ಸ್ವತಂತ್ರವಾಯಿತು. ಪ್ರಜಾತಂತ್ರಾತ್ಮಕ ವಾಸನೆ ಜಾಗೃತಿಗೆ ಬಂತು. ದೇಶದ ಪ್ರತಿಯೊಬ್ಬ ನಾಗರಿಕನೂ ಸ್ವತಂತ್ರನಾಗಿ ತನ್ನ ದೇಶದ ಮೇಲೆ ಅಧಿಕಾರ ಹೊಂದಿದನು. ತನ್ನ ನಾಯಕನನ್ನು ತಾನೇ ಚುನಾಯಿಸುವಂತಾದನು. ಈಗ ಭಾರತದಲ್ಲೇ ಏಕೆ ಇಡಿ ವಿಶ್ವದಲ್ಲೇ ನಾಗರೀಕನ ಗೌರವ, ಮಾನ ಮರ್ಯಾದೆ ಮಹತ್ವಗಳು ಹೆಚ್ಚಿವೆ. ಎಲ್ಲೋ ಕೆಲವೆಡೆ ಬಿಟ್ಟರೆ ಇಡೀ ವಿಶ್ವದ ನಾಗರೀಕರು ಸ್ವಾತಂತ್ರ್ಯ ಪಡೆದಿದ್ದಾರೆ. ಮತದಾರರಾಗಿದ್ದಾರೆ. ತಮ್ಮ ತಮ್ಮ ರಾಷ್ಟ್ರಗಳ ನಿರ್ಮಾತೃಗಳಾಗಿದ್ದಾರೆ. ಪ್ರತಿಯೊಬ್ಬ ನಾಗರಿಕನ ಅಭಿಮತಾನುಸಾರವೇ ರಾಷ್ಟ್ರದ ಆಗುಹೋಗುಗಳು ನಿರ್ಭರಗೊಂಡಿವೆ.

ನಾಗರಿಕನ ಸ್ವರೂಪ

ಇಂದಿನ ನಾಗರಿಕ ಪೂರ್ಣ ಸಶಕ್ತ. ತನ್ನ ಭಾಗ್ಯದ ನಿರ್ಮಾತೃ ತಾನೇ ತನ್ನ ವಿಷಯದಲ್ಲಿ ಹಿಂದುಮುಂದು ಯೋಚಿಸಿ ಕಾರ್ಯಗೊಳ್ಳುವ ಅಧಿಕಾರ ತಾನೇ ಪಡೆದಿದ್ದಾನೆ-ರಾಷ್ಟ್ರದ ಶಕ್ತಿ, ನಿಜಧನ, ವೈಭವ ಸನ್ಮಾನ ಎಲ್ಲವೂ ಇಂದಿನ ನಾಗರಿಕನೇ. ರಾಷ್ಟ್ರವು ಅವನ ಭುಜದಂಡದ ಮೇಲೆ ಆಧಾರ ಪಡೆದಿದೆ. ಅವನೇ ರಾಷ್ಟ್ರದ ಸಮಸ್ಯೆಗಳ ಭಾರವನ್ನು ಹೊರುವ ಏಕಮಾತ್ರ ಸೂತ್ರಧಾರಿ. ಅಂತೇ ನಾಗರಿಕ ಎಷ್ಟು ಯೋಗ್ಯನಾಗಿದ್ದರೆ ಅವನ ರಾಷ್ಟ್ರವೂ ಅಷ್ಟು ಸಮೃದ್ಧಿಗೊಂಡು ಏಳಿಗೆ ಹೊಂದಿ ಸೋದರ ರಾಷ್ಟ್ರಗಳ ಮುಂದೆ ತಲೆ ಎತ್ತಿ ನಿಲ್ಲಬಹುದು. ಆದ್ದರಿಂದಲೇ ಇಂದಿನ ನಾಗರಿಕನ ಮಹತ್ವ ವಿಶ್ವದಲ್ಲಿ ಬಹಳ ವ್ಯಾಪಕಗೊಂಡಿದೆ.

ಕರ್ನಾಟಕ ಸಂಘ(ಉಡುಪಿ)ದ ಮೂರು ಪ್ರಕಟಣೆಗಳು
ಓದಲೇ ಬೇಕಾಗಿರುವ ನವೀನ ಪುಸ್ತಕಗಳು!

೧. ಚಂದ್ರಲೋಕಕ್ಕೆ ಪ್ರಯಾಣ

ಲೇಖಕರು: ಯು. ರಾಘವೇಂದ್ರ ಆಚಾರ್ಯ, ಎಂ. ಎ.

ಆಧುನಿಕ ಪ್ರಪಂಚದ ಮಹತ್ತರವಾದ ಆಂದೋಲನಗಳು, ಪ್ರಪಂಚವನ್ನೆಲ್ಲಾ ಅಲುಗಾಡಿಸುತ್ತಿರುವ ಆರ್ಥಿಕ, ರಾಜಕೀಯ ಚಳುವಳಿಗಳು, ಅವುಗಳ ಹಿಂದಿರುವ ತತ್ವಗಳು, ಅವುಗಳಿಗೆ ಮಾನವನ ಪ್ರತಿಕ್ರಿಯೆ ಇವನ್ನೆಲ್ಲಾ ಗಮನಿಸಿ ರಚಿಸಿರುವ, ನಮ್ಮಲ್ಲಿ ವಿಚಾರಶಕ್ತಿ ಬೆಳೆಯಲು ನೆರವಾಗುವ ವೈಜ್ಞಾನಿಕ ಗ್ರಂಥ.

೨. ಸಾಮಾನ್ಯ ರೋಗಗಳು

ಲೇಖಕರು: ಡಾ| ಕೆ. ಎಲ್. ಪಿತಾಳ, ಎಂ. ಬಿ. ಬಿ. ಎಸ್.
ಉಡುಪಿ ನಗರ ಸಭಾಧ್ಯಕ್ಷರು.

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಅತ್ಯುಪಯುಕ್ತ ಪುಸ್ತಕ.

೩. ಭೌತಿಕ ದರ್ಶನ

ಲೇಖಕರು: ಬಡೆಕ್ಕಿಲ ಕೃಷ್ಣ ಭಟ್ಟ, ಎಲ್‌ಎಲ್.ಬಿ.

ಸಜ್ಜನರ, ವಿದ್ವಜ್ಜನರ, ವಿಜ್ಞಾನಿಗಳ ಅಭಿಮತವನ್ನು ಸಂಗ್ರಹಿಸಿ ಬರೆದ ಭೌತಿಕ ದರ್ಶನದ ಸ್ಥೂಲ ಪರಿಚಯ.

ಪ್ರತಿಯೊಂದು ಪುಸ್ತಕದ ಬೆಲೆ ಬರೇ ಒಂದು ರೂಪಾಯಿ.

ರೂ. ೩-೨೫ನ್ನು ಮನಿಯೋರ್ಡರು ಮಾಡಿದರೆ ಮೂರೂ ಪುಸ್ತಕಗಳನ್ನು ಬುಕ್ ಪೋಸ್ಟಾನಿಂದ ಕಳಿಸಬಹುದು.

ಪುಸ್ತಕ ವ್ಯಾಪಾರಿಗಳಿಗೆ ವಿಶೇಷ ಸವಲತ್ತುಗಳಿವೆ.

ವಿಚಾರಿಸಿರಿ:
ನವಭಾರತ ಪುಸ್ತಕ ಭಂಡಾರ, ಉಡುಪಿ.

ಜೀವನದ ವಿವಿಧ ಘಟನೆಗಳನ್ನು ಹೃದಯಸ್ಪರ್ಶಿಯಾಗಿ ಚಿತ್ರಿಸುವ ಕಥಾಸಂಗ್ರಹ

ಮದುವೆ ಸೀರೆ

ಮದುವೆ ಕಾಲದಲ್ಲಿ ವಧೂವರರಿಗೆ ಉಡುಗೊರೆಯಾಗಿ ಕೊಡಲಿಕ್ಕೂ ಯೋಗ್ಯವಾದ ಪುಸ್ತಕ.

ಬೆಲೆ: ರೂಪಾಯಿ ಒಂದು.

ರೂ. 1-25 ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು

ನವಭಾರತ ಪುಸ್ತಕ ಭಂಡಾರ, ಉಡುಪಿ.

ಸಾಹಿತಿ ಮತ್ತು ಬಾಹ್ಯ ಪ್ರೇರಣೆ

(೨೩ನೇ ಸುಟದಿಂದ)

"ತನ್ನದೋ, ವರರನೋ?" ಎಂಬ ಭೇದ ಜ್ಞಾನವಿರುವುದಿಲ್ಲ ಎಂದು ಹೇಳಿದೆ. ರಂಗಸ್ಥಲದಲ್ಲಿ ನಟನು ತನ್ನ ಪಾತ್ರದ ಅಭಿನಯನದ ಮೂಲಕ ಸೂಚಿಸಿ, ರಸಿಕ ಹೃದಯದಲ್ಲಿ ಎಬ್ಬಿಸಿದ ಸ್ಥಾಯಿಭಾವದ ರಸಸ್ಥಿತಿಗೂ ಜನಜೀವನದಲ್ಲಿ ಸಮರಸಭಾವ ತಾಳಿ ಬದುಕುತ್ತಿರುವ ಸಾಹಿತ್ಯ ಕಲಾವಿದನ ಲೌಕಿಕ ಭಾವ-ರಸ ಸ್ಥಿತಿಗೂ ಬಹಳ ಹೋಲಿಕೆಯಿದೆ. "ಸಹಜೀವಿಗಳಂತೆಯೇ ತಾನೂ" ಎಂಬ ಸಾಧಾರಣೀಕೃತ ಪ್ರಜ್ಞೆಯ ಬಲದಿಂದ ಇತರರ ಸುಖ-ದುಃಖಗಳಲ್ಲಿ ಅವನು ಸಮಭಾಗಿಯಾಗುತ್ತಾನೆ. ಈ ಸಮಭಾಗದ ಅಥವಾ ಸಂವಿಭಾಗದ ಪ್ರವೃತ್ತಿಯಿಂದ ಸಾಹಿತಿಯು ಒಂದು ಜನಸ್ತೋಮದ ಐತಿಹಾಸಿಕ ಸಂದರ್ಭದಲ್ಲಿ ಅನಿವಾರ್ಯ ಆವಶ್ಯಕತೆಯೆನಿಸುವ ಮಹಾಕಲ್ಪನೆಗಳ ಹುಟ್ಟು, ಬೆಳವಣಿಗೆ ಇಲ್ಲವೆ ಪ್ರಸಾರಗಳನ್ನು ತನ್ನ ಸಾಹಿತ್ಯ ಕೃತಿಗಳ ಮೂಲಕ ನಿರ್ವಹಿಸುತ್ತಾನೆ.

ಉಪನಿಷತ್ತುಗಳೆಲ್ಲವೂ ಹಸುಗಳೆಂದಾದರೆ, ಕೃಷ್ಣನು ಅವುಗಳ ಎಲ್ಲ ಹಾಲನ್ನೂ ಭಗವದ್ಗೀತೆಯಲ್ಲಿ ಕರೆದಿಟ್ಟಿದ್ದಾನಂತೆ. ಹಾಗೇ ಇಂದಿನ ಯುಗದಲ್ಲಿ ಜಗತ್ತಿನ ವಿವಿಧ ರಾಷ್ಟ್ರಗಳಲ್ಲಿಯ ಬೇರೆ ಬೇರೆ ಜನಸ್ತೋಮಗಳ ಸಾಮಾಜಿಕ, ಧಾರ್ಮಿಕ, ರಾಜಕೀಯ, ಆರ್ಥಿಕ, ತಾತ್ವಿಕ ಮತ್ತು ಕಲಾತ್ಮಕ ಆಂದೋಲನಗಳ ಫಲವಾಗಿ ನೆಗೆದಿದ್ದ ಮಹಾ ಕಲ್ಪನೆಗಳನೇಕ ನಮ್ಮ ನವಭಾರತದಲ್ಲಿ ತುಂಬಿಕೊಂಡಿವೆ, ಭಾರತದ ಆಧ್ಯಾತ್ಮಿಕ ಮಹಾಭಾಷೆಗಳ ಸಾಹಿತಿಗಳಲ್ಲಿ ಗಣ್ಯರು ಅಂಥ ಒಂದೋ ಹಲವೋ ಮಹಾಕಲ್ಪನೆಗಳಿಂದ ಪ್ರೇರಿತವಾದ ಪ್ರತಿಭೆಯ ಮೂಲಕ ಹಲವಾರು ಮಹಾಕೃತಿಗಳನ್ನು ನಿರ್ಮಿಸಿದ್ದಾರೆ. ದಿವಂಗತ ಬಂಕಿಂಚಂದ್ರಚಟ್ಟೋಪಾಧ್ಯಾಯರ 'ಆನಂದ ಮಠ'ವು ದೇಶಭಕ್ತಿಯ ಗಂಗಾಮೂಲವೆನಿಸಿದೆ. ಮಹಾತ್ಮಾ ಗಾಂಧಿಯವರ ಪ್ರಬಂಧಗಳಲ್ಲಿ ಹಲವು ಉತ್ತಮ ಸಾಹಿತ್ಯ ಶೈಲಿಯಿಂದ ಕೂಡಿ—ಸತ್ಯ, ಅಹಿಂಸೆ, ಸತ್ಯಾಗ್ರಹ, ಅಸಹಕಾರಗಳೆಂಬ ಮಹಾಕಲ್ಪನೆಗಳನ್ನು ಪ್ರಚುರಪಡಿಸಿ, ಆ ಮೂಲಕ ಅನೇಕ ಸಾಹಿತಿಗಳ ಕೃತಿನಿರ್ಮಾಣಕ್ಕೆ ಸ್ಫೂರ್ತಿಯನ್ನಿತ್ತವು. ಅಂಥ ಸ್ಫೂರ್ತಿ ನಿರ್ಭರ ಸಾಹಿತಿಗಳಲ್ಲಿ ದಿವಂಗತ ರವೀಂದ್ರನಾಥ ಠಾಕೂರರು ಅಗ್ರಗಣ್ಯರು.

ಪ್ರತಿಭೆಯು ನವನವೋನ್ಮೇಷ ಶಾಲಿಯಾದ ಪ್ರಜ್ಞೆ. ಅದರ ಭಾವೋನ್ಮೇಷದ ಕಲ್ಪಕತೆಯು ನವತ್ವಕ್ಕೆ ಅಥವಾ ಅಪೂರ್ವತೆಗೆ ಅದರ ಅಡಿಗಲ್ಲಾಗಿರುವ ಅಜ್ಞಾತ ಪ್ರಜ್ಞೆಯ ಭಾವಸಂಪತ್ತಿನ ಸ್ವತಂತ್ರ ಚಟುವಟಿಕೆಗಳೇ ಕಾರಣ. "ಅಜ್ಞಾತಪ್ರಜ್ಞೆಯು ಜ್ಞಾತಪ್ರಜ್ಞೆಗೆ ಆಧಾರ, ಜನಕ, ಹಿನ್ನೆಲೆ; ಮತ್ತು ಅದು ಜ್ಞಾತಪ್ರಜ್ಞೆಯೊಟ್ಟಿಗೆ ಇಲ್ಲವೆ ಅದನ್ನು ಮೀರಿ ನಡೆದುಕೊಳ್ಳುತ್ತದೆ"—ಎನ್ನುತ್ತಾರೆ ಕಾರ್ಲ್ ಜಿ ಯುಂಗ್. ರಸಪ್ರಜ್ಞೆಯು ಜ್ಞಾತಪ್ರಜ್ಞೆಯ ಒಂದು ಅಂಗವಾಗಿರುವುದರಿಂದ ಅದರ ಉನ್ಮೇಷಕ್ಕೂ ಅಜ್ಞಾತ ಪ್ರಜ್ಞೆಯೇ ಮೂಲಾಧಾರ. ಕರ್ನಾಟಕದ ಪ್ರಸಿದ್ಧ ಸಾಹಿತಿಗಳಾದ ಕೈಲಾಸಂ ಅಥವಾ ಕಾರಂತರು ಸಹಜೀವಿಗಳ ವರ್ತಮಾನ ಕಾಲೀನ ಮಹಾ ನ್ಯೂನತೆಗಳಿಂದ ಪ್ರಕ್ಷುಬ್ಧರಾಗಿ, ಮಹಾ ಕಲ್ಪನೆಗಳಿಗೆ ತಮ್ಮ ಅಂತಃಕರಣದಲ್ಲಿ ಸ್ವಾಗತವಿತ್ತು, ನಾಟಕಗಳನ್ನೂ ಕಾದಂಬರಿಗಳನ್ನೂ ಬರೆದರು. ಪಾಶ್ಚಾತ್ಯ ನಾಗರಿಕತೆಯ ಸಂಪರ್ಕದಿಂದ ಉಂಟಾದ ದಾಂಭಿಕತೆಯ ಉಚ್ಚಾಟನೆಯಂತೆ ಭಾರತಕ್ಕೆ ರೋಗವಾಗಿ ಪರಿಣಮಿಸಿದ ಅಸ್ಪೃಶ್ಯತೆಯ ನಿವಾರಣೆಯೂ ಒಂದು ಮಹಾ ಕಲ್ಪನೆ. ಈ ಕಲ್ಪನೆಗಳು ಉಕ್ತ ಗ್ರಂಥಕರ್ತರ ಕೆಲ ಕೃತಿಗಳಿಗೆ ಬಹಿಃ ಪ್ರೇರಣೆಗಳಾದುದು ಸುವ್ಯಕ್ತ.

ಬಾಹ್ಯ ಪ್ರೇರಣೆಗಳಿಂದ ರಸಾವೇಶ ಹೊಂದಿದ ಕೆಲ ಸಾಹಿತಿಗಳ ಕೃತಿಗಳಲ್ಲಿಯ ಪಾತ್ರಗಳು ನಿರ್ಜೀವ, ಯಾಂತ್ರಿಕ ಎನ್ನಿಸಲು ಅವರ ರಸಾವೇಶದ ಗಾಢತೆಯೇ ಕಾರಣ. ಅಂಥ ಕೃತಿಗಳು ಶುಷ್ಕವಾದ ಪ್ರಚಾರ ಸಾಹಿತ್ಯ, ಜಾಹೀರು ಪ್ರಕಟನೆ ಎನ್ನಿಸುತ್ತವೆ. ಪಂಚವಾರ್ಷಿಕ ಯೋಜನೆಗಳನ್ನು ಪ್ರಚುರಪಡಿಸಲು ಬರೆದ ಹಲ ಕೆಲ ಬರಹಗಳು ಶುದ್ಧ ಜಾಹೀರಾತುಗಳೂ ಅಲ್ಲ, ವಿಚಾರಯುಕ್ತವಾಗಿ ಬರೆದ ನೀತಿಬೋಧಕ ಗ್ರಂಥಗಳೂ ಅಲ್ಲ; ಕಾಂತಾಸಂಮಿತಿಯ ಕಾವ್ಯಕೃತಿಗಳಂತೂ ಅಲ್ಲವೇ ಅಲ್ಲ—ಎನ್ನಿಸಿವೆ. ಹೀಗಾಗಲು ಅವುಗಳ ಲೇಖಕರು ಯೋಜನೆಗಳ ಅಥಾರ ಭಾತವಾದ ದೇಶಹಿತದ ಭಾವೋದ್ರೇಕವನ್ನು ತಕ್ಕಷ್ಟು ಅನುಭವಿಸದುದು, ಸಾಹಿತ್ಯಕಲೆಯ ಧ್ವನಿವರ್ಗದ ಅಥವಾ ಕಾಂತಾಸಂಮಿತಿ ತಂತ್ರದ ಮೇಲಿನ ಪ್ರಭುತ್ವವನ್ನು ಸಂಪೂರ್ಣವಾಗಿ ಅಳವಡಿಸಿಕೊಳ್ಳದುದು ಮತ್ತು ತಮ್ಮ ಆತ್ಮಕ್ಕೆ ತಿಳಿದಿರುವಂತೆ ಸಾಹಿತ್ಯೇತರವೆನಿಸುವ ಧನ, ಸ್ಥಾನ, ಮಾನ ಅಥವಾ ಪ್ರಸಿದ್ಧಿ ಮುಖ್ಯೋದ್ದೇಶವಾಗಿರುವಾಗ ಯೋಜನೆಗೆ ಸಂಬಂಧಿಸಿದ ಕಲ್ಪನೆಗಳನ್ನಾಧರಿಸಿ ಬರೆಯ ತೊಡಗಿದುದು—ಎಂಬೀ ಮೂರು ವಿಕಲ್ಪಗಳಲ್ಲಿ ಒಂದೋ ಎರಡೋ ಇಲ್ಲವೇ ಮೂರೋ ಕಾರಣ. ಈ ಕಾರಣಗಳಿಂದ ಆಂತರಿಕವಾದ ಮನಸ್ಸು ಯಾವ ಮಹಾ ಕಲ್ಪನೆಯನ್ನೂ ಜೀರ್ಣಿಸಿ, ರಕ್ತಗತ ಮಾಡಿಕೊಂಡು, ವೀರ್ಯವತ್ತಾದ ಸಾಹಿತ್ಯ ಕೃತಿಯನ್ನು ರಚಿಸಲಾರದು. ನಿರ್ವೀರ್ಯ, ಶುಷ್ಕ, ನೀರಸ ಎನ್ನಿಸುವ ಕೃತಿಗಳ ರಚನೆಗೆ ಕರ್ತರಲ್ಲಿ ಮೇಲೆ ಹೇಳಿದ ಮೂರು ಕಾರಣಗಳು ಅಥವಾ ಮೂಲಭೂತವಾದ ವ್ಯತಿಭಾಶಕ್ತಿ, ಲೋಕಾನುಭವ—ಶಾಸ್ತ್ರ ಜ್ಞಾನಗಳಿಂದ ಬರುವ ನಿಪುಣತೆ ಮತ್ತು ಕಾವ್ಯ ರಚನಾತಂತ್ರ ಜ್ಞಾನ—ಇವುಗಳ ಅಭಾವವು ಹುಸ್ಸೆಲೆಯೂಗರಿತ್ತದೆ. ಪ್ರತಿಭೆ ಎಲ್ಲ ಕಲೆಗೂ ಆದಿ; ಅದಿಲ್ಲದ ಯಾವನೂ ಕಲೆಗಾರನೆನ್ನಿಸನು, ಸಾಹಿತಿಯಾಗಲಾರನು.

ಸಾಹಿತ್ಯ ಕೃತಿಯೊಂದು ರಸಾವಹ, ಆನಂದಕರ ಎನ್ನಿಸಲು ಅದರ ಕಣಿಕೆವೂ ಚೆನ್ನಾಗಿರಬೇಕು, ಹೊರಣವೂ ಚೆನ್ನಾಗಿರಬೇಕು; ಅವು ಸಮನ್ವಿತವಾಗಿ ಬೆಂದು ಹದವಾಗಿರಲೂ ಬೇಕು. ಬರಹಗಾರನ ಹೃದಯದಲ್ಲಿ ಕಲ್ಪನೆಯ ಹೊರಣವು ಹದವಾದ ಪಾಕಕ್ಕೆ ಬಂದಿರಬೇಕು. ಹಾಗೆ ಪಕ್ವವಾದ ಹೊರಣವನ್ನು ತುಂಬಲು ತಕ್ಕ ಹದ ಬರುವಂತೆ ನಾದಿದ ವಾಙ್ಮಯವಾದ ಕಣಿಕೆವು ಸಿದ್ಧವಾಗಬೇಕು ಉಚಿತ ಪ್ರಮಾಣದಲ್ಲಿ ಹೊರಣ-ಕಣಿಕೆಗಳ ಬೆಸುಗೆಯೂಗಬೇಕು, ರಸೋದ್ಬೋಧಕನಾದ ಸಂವಿಧಾನದ ಹಂಚಿನ ಮೇಲೆ ಹದವಾಗಿ ಬೇಯಿಸಿ ತೆಗೆಯಬೇಕು! ಆಗ ಉತ್ತಮ ಸಾಹಿತ್ಯಕೃತಿ ಎಂಬ ಹೋಳಿಗೆ ಸಿದ್ಧವಾಗುತ್ತದೆ. ಇಂಥ ಹೋಳಿಗೆಯನ್ನು ಪ್ರಧಾನವಾಗಿ ತನಗೇ ಎಂಬ ಅಂತಃ ಪ್ರೇರಣೆಯಿಂದ ಮಾಡ ಹೊರಡುವವನು ಅಂತರ್ಮುಖ ಸಾಹಿತಿ; ಅವನದು ವೈಯಕ್ತಿಕ ಭಾವಗಳನ್ನಷ್ಟೇ ತೋಡಿಕೊಳ್ಳುವ ದೃಷ್ಟಿ. ಅಂಥವನ ಒಂದು ಮಹಾ ಕೃತಿಯು ಅವನ ಕಾಲದ ಬಹುಸಂಖ್ಯ ರಸಿಕರ ಮೆಚ್ಚಿಗೆಯನ್ನು ಪಡೆಯದೆ ಹೋಗಬಹುದು. ಅವನು ಆಧ್ಯಾತ್ಮಿಕನೋ ಇನ್ನೇನೋ ಆದಾನು—ಆದರೆ ಜನಪ್ರಿಯ ಸಾಹಿತಿ ಎಂದು ಹೇಳಿಸಿಕೊಳ್ಳಲಾರನು, ರಾಷ್ಟ್ರೀಯ ಅಥವಾ ಸಾಮಾಜಿಕ ದೃಷ್ಟಿಯಿಂದ ಜನಜೀವನದ ಸುಧಾರಣೆಗೆ ಅವನೆಂದೂ ತನ್ನ ಜೀವಿತ ಕಾಲದಲ್ಲಿ ಪ್ರೇರಕನಾಗಲಾರನು.

ಬಹಿರ್ಮುಖನಾದ ಸಾಹಿತಿಯು ತನ್ನ ಸುತ್ತುಮುತ್ತಲಿನ ಅಥವಾ ದೂರದ ಜನರ ಅನುಭವಗಳನ್ನು ತಾದಾತ್ಮ್ಯಭಾವದಿಂದ ಅನುಭವಿಸಿ, ಅವರ ಮೂಕ ಶೋಕಕ್ಕೋ ಹರ್ಷಕ್ಕೋ ಬಾಯಿಯೂಗುತ್ತಾನೆ ಅವರ ಸಂಕಟದ ಕತ್ತಲೆಯನ್ನು ಪರಿಹರಿಸುವ ಬೆಳಕನ್ನು ಹುಡುಕುತ್ತಾನೆ. ಅವನ ದರ್ಶನ ಶಕ್ತಿಯು ಪರೋಂಗಿತ ಜ್ಞಾನವುಳ್ಳದ್ದು. ಆದರೆ ಈ ನಡುವೆ ಒಂದು ಅಂಶವನ್ನು ಮರೆಯದಿರಬೇಕು: ಯಾವನೂ ಸಂಪೂರ್ಣ ಅಂತರ್ಮುಖನೂ, ಅಲ್ಲ, ಸಂಪೂರ್ಣ ಬಹಿರ್ಮುಖನೂ ಅಲ್ಲ. ಎರಡೂ ಶೀಲಗಳು ವಿವಿಧ ಪ್ರಮಾಣಗಳಲ್ಲಿ ಪ್ರತಿಯೊಬ್ಬನಲ್ಲೂ ಬೆರೆತೆಯೂಗರಿತ್ತವೆ. ವರ್ಗೀಕರಣಕ್ಕೆ ಆಯಾ ಶೀಲದ ಪ್ರಾಧಾನ್ಯವೊಂದೇ ಕಾರಣ. ಸಂಪೂರ್ಣ ಅಂತರ್ಮುಖ್ಯ ಅಥವಾ ಸಂಪೂರ್ಣಬಹಿರ್ಮುಖ ಎನನ್ನೂ ಅರ್ಥಮಾಡಿಕೊಳ್ಳಲಾರ. ಜೊತೆಗೆ, ಮೆಚ್ಚುವವರ ಬರಿಯ ಸಂಖ್ಯಾಮಾನದಿಂದ ಸಾಹಿತ್ಯ ಕೃತಿಯೊಂದರ ಯೋಗ್ಯತೆಯನ್ನು ಅಳೆಯಲೂ ಸಾಧ್ಯವಿಲ್ಲ. ಹಾಗೆ ಅಳೆದರೆ ಅದು ತಪ್ಪು. ವರ್ತಮಾನ ಕಾಲದ ಜೀವನಾವರಣವೊಂದರ ಮೇಲಿಂದಲೂ ಅದರ ಬೆಲೆಯನ್ನು ನಿರ್ಣಯಿಸುವುದು ಶುದ್ಧ ವಿಮರ್ಶೆಯೆನಿಸದು. ವಿವಿಧ ಮಹಾ ಕಲ್ಪನೆಗಳ ಮಹತ್ವವು ಕೆಲವೊಮ್ಮೆ ಕಾಲಾಧೀನ ಮತ್ತು ಕೆಲವೊಮ್ಮೆ ಕಾಲಾತೀತ. ಎಲ್ಲ ಕಾಲ—ದೇಶಗಳಲ್ಲೂ ಎಲ್ಲರಿಗೂ ಬೇಡವೆನ್ನಿಸಬಹುದಾದ ಕೃತಿಯೊಂದನ್ನು ಹುಡುಕಿ ತೆಗೆಯುವುದಕ್ಕಿಂತಲೂ ಎಲ್ಲರಿಗೂ ಬೇಕೆನ್ನಿಸಬಹುದಾದ ಕೃತಿಯೊಂದನ್ನು ಹುಡುಕಿ ತೆಗೆಯುವುದು ಕಷ್ಟ.

ಒಟ್ಟಿನಲ್ಲಿ, ಮಹಾ ಕಲ್ಪನೆಗಳು ಎಬ್ಬಿಸುವ ಉತ್ಸಾಹ, ಅವುಗಳು ಅನಿವಾರ್ಯವೆನ್ನಿಸುವ ಅಗತ್ಯವು ಜನಜೀವನದಲ್ಲಾಂಟಾಗುವ ಕಾಲ ಮತ್ತು ಅಂಥ ಕಲ್ಪನೆಗಳಿಂದ ಸ್ಫೂರ್ತಿಹೊಂದುವ ಸಾಹಿತ್ಯಕ ಬಹಿರ್ಮುಖತೆ ಅಲ್ಲದೆ, ಹಾಗೆ ಸ್ಫೂರ್ತವಾದ ಮಹಾ ಕಲ್ಪನೆಗಳನ್ನು ಸಾಹಿತ್ಯ ಕೃತಿಯನ್ನಾಗಿ ಮೂರ್ತರೂಪಕ್ಕೆ ತರುವ ಕಲಾಕುಶಲ ಹಾಗೂ ಅವುಗಳ ರಸವನ್ನು ಸವಿಯ ಬೇಕಾದ ಜನಾಭಿರುಚಿ-ಎಂಬಿವು ಒಂದು ಸರಪಳಿಯ ಕುಣಿಕೆಗಳಂತೆಂದನ್ನೊಂದು ಅವಲಂಬಿಸಿ, ಒಂದಕ್ಕೊಂದು ಅಂಟಿಕೊಂಡಿವೆ. ಈ ಸರಪಳಿಯಲ್ಲಿ ಯಾವುದಾದರೂ ಒಂದು ಕುಣಿಕೆ ಹರಿದು ಹೋದರೂ ಸಾಕು—ಸಾಹಿತ್ಯಕ್ಕೂ ಮಹಾ ಕಲ್ಪನೆಗೂ ಇರುವ ಸಂಬಂಧವು ಮುರಿದು ಹೋಗುತ್ತವೆ. ಅಡಿಗೆ ಅಪಕ್ವವಾಗಿದ್ದರೂ ಹೋಯ್ತು, ಊಟವಾಡುವವರ ನಾಲಿಗೆಗೆ ಅಗ್ರವಾಗಿದ್ದರೂ ಹೋಯ್ತು. ಪಾಕ ಮಾಡುವುದು ವಿಜ್ಞಾನಾಂಶಕ್ಕಿಂತ ಕಲಾಂಶದಿಂದ ಹೆಚ್ಚಾಗಿ ಕೂಡಿರುವುದರಿಂದ ಅದರ ಯೋಗ್ಯತೆಯನ್ನು ರಸಾಯನ ಶಾಸ್ತ್ರಜ್ಞನಿಗಿಂತ ರಸಜ್ಞನಾದ ಅತಿಥಿಯೇ; ಉಂಡು ಚೆನ್ನಾಗಿ ಅರಿಯಬಲ್ಲನು! ಉಂಡೇ ಸಂಪೂರ್ಣವಾಗಿ ಅರಿಯಬಲ್ಲುದನ್ನು ಬರಿದೆ ಕಂಡು ದೂರವನೂ ಬಣ್ಣಿಸಲಾರನು.

ನಮ್ಮಲ್ಲಿ ಗೃಹಕೃತ್ಯಕ್ಕೆ ಬೇಕಾದ ಬೆಳ್ಳಿ, ತಾಮ್ರ, ಹಿತ್ತಾಳೆ, ಸ್ಟೀಲ್, ಕಂಚು ಹಾಗೂ ಎಲ್ಯೂಮಿನಿಯಮಿನ ತರವಾರು ಪಾತ್ರೆಗಳು ರಖಂ ವ ಚಿಲ್ಲರೆಯಾಗಿ ಮಿತಬೆಲೆಗೆ ದೊರೆಯುವವು.

ದೇವರ ಪೂಜೆಗೆ ಬೇಕಾದ ಅತ್ಯಾಧುನಿಕ ಮಾದರಿಯ ಪಾತ್ರೆಗಳೂ ಪಂಚಲೋಹದ ವಿಗ್ರಹಗಳೂ ಸದಾ ಮಾರಾಟಕ್ಕೆ ಸಿದ್ಧವಿರುವವು.

ಮೆಸರ್ಸ ಐರೋಡಿ ರಾಧಾಕೃಷ್ಣಪೈ

ಪಾತ್ರೆ ವ್ಯಾಪಾರಸ್ಥರು

ರಥಬೀದಿ - - - ಉಡುಪಿ

ಸಚಿತ್ರ ಕ್ಯಾಟಲಾಗಿಗೆ ಬರೆದರೆ ಉಚಿತವಾಗಿ ಕಳುಹಿಸುವೆವು.

ವರ್ಗ—ಊಳಿಗ

ಮೊದಲಾದ ಯಾವತ್ತೂ ತರದ

ಎಕೌಂಟ್ ಪುಸ್ತಕಗಳು

ಶಾಲಾ ರಿಜಿಸ್ಟ್ರಿಗಳು,

ಫಾರ್ಮುಗಳು,

ದೊರೆಯುತ್ತವೆ.

ವಿಚಾರಿಸಿರಿ—

ನವಯುಗ ಪ್ರೆಸ್, ಉಡುಪಿ

ಜಾತಿಯ ಭೂತದೃಷ್ಟಿ

ಜಾತ್ಯತೀತ ರಾಷ್ಟ್ರದಲ್ಲಾ ಜಾತಿಗಳಿವೆಯೆಂಬುದು ದೊಡ್ಡ ಕಲಂಕ. ಕೆಲ ಜಾತಿಯವರು ಹೆಚ್ಚಿನವರೆಂದೋ ಕೆಳಗಿನವರೆಂದೋ ವಿಭಜನೆ ಮಾಡುವುದು ಮತ್ತೊಂದು ಪಂಗಡವನ್ನು ಎದುರು ಹಾಕಿಕೊಂಡಂತೆ! ನಾವೆಲ್ಲಾ ಒಂದೇ ದೇಶೀಯರೆಂಬ ವಿಶಾಲ ದೃಷ್ಟಿಯವರಾದರೆ ಮಾತ್ರ ನಮ್ಮ ಉನ್ನತಿಯಾದೀತು.

ಶ್ರೀ ಎಂ. ರಂಗ ರಾವ್.

"ರಿಂದೆ ನಮ್ಮ ಪೂರ್ವಿಕರು ಎಷ್ಟೋ ಹಿಂದುಳಿದು ಹೋಗಿದ್ದರು. ನಾವಾದರೋ ಈ ನವಯುಗದಲ್ಲಿ ಎಷ್ಟೋ ಮುಂದುವರಿದ ಭಾಗ್ಯಶಾಲಿಗಳು" ಎಂದು ಈಗ ಅಲ್ಲಿ ಇಲ್ಲಿ ಕೆಲವರು ಹೆಚ್ಚಳಿಸಿಕೊಂಡು ಮಾತಾಡುವುದುಂಟು. ಯಾರು ಯಾರೋ ಹಾಗೆ ಹೇಳುತ್ತಾ ಇದ್ದಾರೆಯೇ ಹೊರತು, ನಮ್ಮ ಎದೆಯ ಮೇಲೆ ಕೈಯಿಟ್ಟುಕೊಂಡು, ನಾವು ನಿಜಕ್ಕೂ ಮುಂದುವರಿದ ಭಾಗ್ಯಶಾಲಿಗಳೆಂದು ಹೇಳಬಲ್ಲೆವೇ?

"ಅಯ್ಯೋ! ಎಲ್ಲಿ ಬಂತು! ಈಗ ಮುಂದುವರಿದ ದೇಶಗಳೊಂದಿಗೆ ಹೋಲಿಸುವಾಗ ನಾವು ಹಿಂದೆಯೇ—ಎಷ್ಟೋ ಹಿಂದೆಯೇ ಇದ್ದೇವೆ" ಎಂಬುದನ್ನು ಎಲ್ಲರೂ ಒಪ್ಪಿಕೊಳ್ಳಲೇ ಬೇಕಾಗುತ್ತದೆ.

ಈ ಪರಿಸ್ಥಿತಿಗೆ ಮೂಲಕಾರಣವೇನೆಂದು ನೋಡಿದವರಿಗೆ ಜಾತಿಯೊಂದು ಭೂತದಂತೆ ಕಂಡು ಬಾರದಿರದು. ನಮ್ಮ ಹಳೇ ಜನರೇ ಜಾತಿಗಳ ಬೀಜ ಬಿತ್ತಿದರೆಂದು ಅನೇಕರು ಅವರ ಮೇಲೆಯೇ ದೂರು ಹಾಕಿಬಿಡುತ್ತಿದ್ದಾರೆ. ಆದರೆ ನಿಜಕ್ಕೂ ಹಿಂದಿನವರು ಯಾರೂ ಯಾವ ಬುದ್ಧಿದೇಶ ಅಥವಾ ಸದುದ್ದೇಶದಿಂದಲೂ ಆದನ್ನು ಬಿತ್ತಿಬಿಟ್ಟಿಲಿಲ್ಲ. ಅದು ಪ್ರಕೃತಿ ಸಹಜವಾಗಿ ಮಾನವಾಭಿವೃದ್ಧಿಯೊಂದಿಗೇ ಬೆಳೆದುಕೊಂಡು ಬಂತೆಂಬುದು ಬಹಿರಂಗ ರಹಸ್ಯವಾಗಿದೆ. ಇದು ನಾವೇ ನಮ್ಮೊಳಗೆ ನೋಡಿಕೊಂಡರೆ ಗೊತ್ತಾಗುವಂಥಾದ್ದು. ಇದು ಈ ಭಾರತ ದೇಶದ ಮಾನವ ಜಾತಿಗೆ ಮಾತ್ರವಲ್ಲ, ಇಡಿಯ ಪ್ರಪಂಚದ ಮಾನವ ಜಾತಿಗೂ ಉಂಟು.

ಮಾನವರು ಮಾಡುವ ಎಲ್ಲಾ ಕಾರ್ಯಗಳನ್ನೂ ನಾಲ್ಕು ವಿಭಾಗಗಳನ್ನಾಗಿ ಮಾಡಬಹುದು. ೧—ಜ್ಞಾನಕಾರ್ಯ, ೨—ರಕ್ಷಣಕಾರ್ಯ, ೩—ವ್ಯಾಪಾರಕಾರ್ಯ ೪—ಕೃಷಿಕಾರ್ಯ. ಈ ನಾಲ್ಕು ಕರ್ಮಗಳೂ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂದಾದುವು. ಪ್ರತಿ ವ್ಯಕ್ತಿಯೂ ಈ ನಾಲ್ಕು ಕರ್ಮಗಳನ್ನೂ ಮಾಡುವವನೇ. ಬುದ್ಧಿಯಿಂದ ಯೋಚಿಸುವುದು ಬ್ರಾಹ್ಮಣಕರ್ಮ, ತನ್ನ ರಕ್ಷಣೆಗಾಗಿ ಬಲವನ್ನು ಪಯೋಗಿಸಿಕೊಳ್ಳುವುದು ಕ್ಷತ್ರಿಯ ಕರ್ಮ, ಅರ್ಥ ವಿತರಣೆ ಮಾಡಿಕೊಳ್ಳುವುದು ವೈಶ್ಯ ಕರ್ಮ, ಕೈ ಕಾಲುಗಳಿಂದ ಇತರ ಕೆಲಸಗಳನ್ನು ಮಾಡಿಕೊಳ್ಳುವುದು ಶೂದ್ರ ಕರ್ಮ. ಈ ನಾಲ್ಕು ಕರ್ಮಗಳು ಒಂದು ಕುಟುಂಬದೊಳಗೂ ನಡೆಯುತ್ತದೆ. ಸಮಾಜದೊಳಗೂ ನಡೆಯುತ್ತದೆ.

ಹೀಗೆ ಕರ್ಮ ವಿಭಾಗಗಳಲ್ಲಿ ಸಹಜವಾಗಿಯೇ ಇದ್ದುವುಗಳಿಗೆ ಆಯಾ ಕಾಲಕ್ಕನುಸಾರವಾಗಿ ಧರ್ಮ ನಿಯಮಗಳುದುವು. ಆ ಧರ್ಮಗಳು ಜಾತಿಯ ಸಂಕೇತಗಳೆನಿಸಿ ಪ್ರಸಿದ್ಧವಾದುವು. ಅದು ನ್ಯಾಯವೂ ಲೋಕನೀತಿಗೆ ಅನುಗುಣವಾಗಿಯೂ ಬಹು ಕಾಲವಿತ್ತು. ಕ್ರಮೇಣ ಮಾನವರೊಳಗಿನ ಸಹಜಗುಣಗಳ ಮೇಲಾಟದಿಂದ ತಾನು ಮೇಲೆ, ಅನು ಕೆಳಗೆ, ತನ್ನ ಕಾರ್ಯ ಮಹತ್ವದ್ದು, ಅವನದು ಸಾಮಾನ್ಯವಾದುದು ಎಂಬ ತಾರತಮ್ಯಗಳೆದ್ದುವು. ಇದೇ ಜಾತಿಗಳಿಗೆ ಅಂಟಿಕೊಂಡ ಕೆಡುಕು ಅದರಿಂದ ಅನೇಕ ನಿಯಮಾವಳಿಗಳಾದುವು. ಅವುಗಳೊಳಗೆ ಘರ್ಷಣೆಗಳಾದುವು. ನಾಲ್ಕು ಜಾತಿಗಳೂ ನಾಲ್ಕು ನಾಲ್ಕಲಿಹದಿನಾರಾಗಿ ಹಲವಾದುವು. ಪರಸ್ಪರ ಜಗಳಗಳಾಗಿ, ಇಬ್ಬರ ಜಗಳ ಮೂರನೆಯವರಿಗಾದಾಯವೆನಿಸಿ ಪರಕೀಯರು ಎಡೆಯಲ್ಲಿ ತಲೆ ಹಾಕಿ ತಳಪೂರಿ ಅಧಿಪತ್ಯಕ್ಕೂ ಕೈಹಾಕಿದರು. ಸ್ವಾತಂತ್ರ್ಯವು ತಿಳಿಯದಂತೆಯೇ ಪರಕೀಯರ ಪಾಲಾಯಿತು.

ಅನೇಕ ವರ್ಷಗಳ ವರೆಗೆ ಭಾರತಂ ತ್ರ್ಯವನ್ನನುಭವಿಸಿದ ಮೇಲೆ ಮಹಾತ್ಮರ ಬೋಧನೆಗಳಿಂದ ಜಾತಿಭೇದವನ್ನು ಬಿಟ್ಟುಕೊಡುವಷ್ಟು ಜನರೆಲ್ಲಾ ತುಸು ಜ್ಞಾನವಂತರಾಗಿ, ಒಗ್ಗಟ್ಟಾಗಿ ಸ್ವರಾಜ್ಯವಿಷ್ಟು ಸಂಪಾದಿಸಿಕೊಂಡು ಬಿಟ್ಟೆವು. ಪ್ರಜಾರಾಜ್ಯವನ್ನು ಸ್ಥಾಪಿಸಿಕೊಂಡದ್ದಾಯಿತು. ಆ ಮೇಲೇನಾಯಿತೆಂಬುದನ್ನು ನೋಡುವಾಗ. ನಾವು ಯಾವ ಜಾತಿಭೇದವನ್ನಿದಿರಿಸಿ ಒಗ್ಗಟ್ಟಾಗಿ ಬಲಿಷ್ಠರಾದೆವೋ, ಅದೇ ಜಾತಿಭೇದವು ಇನ್ನೊಂದು ರೂಪದಲ್ಲಿ ಮಲಿತು ಭೂತವಾಗಿ ದೇಶದ ಸೌಭಾಗ್ಯವನ್ನೂ ಬಲವನ್ನೂ ಕುಂದಿಸುತ್ತಾ ಇರುವುದನ್ನು ಕಾಣಬಹುದು.

ದೇಶೀಯ ದೃಷ್ಟಿಯಲ್ಲೇ ನೋಡುವುದಾದರೆ, ಪೂರ್ವಕಾಲದ ಚತುರ್ವರ್ಣಗಳೂ, ತತ್ಸಂಬಂಧವಾದ ಕರ್ಮಗಳೂ ಈ ಕಾಲದಲ್ಲಿ ಹುಸಿಹೆಂಜಾಗಿ ಹೋಗಿವೆ. ಈಗೇನೂ ಕರ್ಮಗಳು ವರ್ಣಗಳನ್ನಂಟಿಕುಳಿತಿರುವುದಿಲ್ಲ. ಎಲ್ಲರೂ ಎಲ್ಲಾ ಕರ್ಮಗಳನ್ನೂ ಭೇದವಿಲ್ಲದೆ ಮಾಡುತ್ತಿರುವುದನ್ನು ಕಾಣುತ್ತೇವೆ. ಹಾಗಿರುವಾಗ ಪ್ರತಿ ವ್ಯಕ್ತಿಯ ಮನಸ್ಸಿನಲ್ಲಿಯೂ ನಾವೆಲ್ಲಾ ಒಂದೇ ಭಾರತೀಯರೆಂಬ ಭಾವನೆ ಅಚ್ಚೊತ್ತಿ ಹೋಗಬೇಕಲ್ಲವೆ? ಹಾಗುಂಟೆ?

ಜಾತಿಯೇ, ತತ್ಸಂಬಂಧವಾದ ಆಚಾರವ್ಯವಹಾರಗಳೋ ಮತಾಚಾರಗಳೊಂಗೆ ಪರಿಮಿತವಾಗಿರಲೆಂದರೆ, ಅದಕ್ಕೆ ಯಾರೂ ತಡೆ ಹೇಳಲಾರರು. ಆದರೆ ಅದು ರಾಜಕೀಯ ವಾತಾವರಣದಲ್ಲಿ ಪ್ರವೇಶ ಮಾಡಲಾಗದು. ನಾವು ಕಷ್ಟಪಟ್ಟು ಸಂಪಾದಿಸಿ ಕೊಂಡ ಸ್ವರಾಜ್ಯವು ಕುಲರಾಜ್ಯವಾಗಬಾರದು. ಹೀಗಾದರೆ ದೇಶದಲ್ಲಿ ಆರ್ಥಿಕ ಅವನತಿಯುಂಟಾಗಿ ಘೋರ ಪರಿಣಾಮವಾದೀತೆಂದು ಹಿರಿಯರೂ ತಿಳಿದವರೂ ಒತ್ತೊತ್ತಿ ಹೇಳುತ್ತಲೇ ಇದ್ದಾರೆ. ಅದನ್ನು ಕೇಳುವವರೇ ಕಡಿಮೆ. ಹಿರಿಯರೂ ಕಿವಿಕೊಡದಿರಿಕೊಂಡು ಬಿಡುತ್ತಾರೆ. ಒಟ್ಟಾರೆ ಸ್ವಾರ್ಥವೂ ದುರಭಿಮಾನವೂ ಕೇಳಬೇಕಾದವರ ಕಿವಿಗಳನ್ನು ಮುಚ್ಚಿ ಬಿಟ್ಟವೆ.

ಜಾತಿಭೇದವೀಗ ಇನ್ನೊಂದು ರೂಪದಲ್ಲಿರುವುದನ್ನೂ ಬಿಚ್ಚಿ ಹೇಳಬೇಕೆಂದರೆ, ಹಿಂದೆ ಶ್ರೇಷ್ಠರೆಂದು ಮೆರೆದ ಜಾತಿಯವರನ್ನು ಈಗ ಹೆಗೆ ತೊಟ್ಟು ಹತವಾಡಲೆಳಸುವ ಹಾಗೆಯೇ ಕಾಣುತ್ತದೆ. ಅವರನ್ನು ಅನೇಕ ವಿಧದಲ್ಲಿ ಬಲಹೀನಗೊಳಿಸಲೆತ್ನಿಸುವುದೆಂದರೆ, ಹಿಂದೆ ಅವರು ಮಾಡಿದ ತಪ್ಪನ್ನೇ ಈಗ ಇನ್ನೊಬ್ಬರು ಮಾಡುತ್ತಾರೆಂದಾಯಿತು. ಅಂದು ಅವರು ಮಾಡಿದರೆಂದು ಇಂದು ಇವರು ಮಾಡಿದರೆ ಇದಕ್ಕೂ ಒಂದು ಅಂತ್ಯವಾಗಿ, ಮತ್ತೆ ಮೊದಲಿನವರೇ ಹೆಗೆ ತೀರಿಸುವ ಸರದಿಯನ್ನೆತ್ತಿಕೊಂಡು.....ಹೀಗಾದರೆ ಇದಕ್ಕೆ ಅಂತ್ಯವೆಲ್ಲಿ? ಇದು ಗಾಂಧೀಯ ಧರ್ಮವೆನಿಸೀತೆ?

ಎಲ್ಲರೂ ಮಾನವರೂಬ ತತ್ವದಲ್ಲಿ ಹಿಂದೆ ಹೀನ ಕುಲದವರೆಂದೆಣಿಕೆಪಟ್ಟವರನ್ನು ಮೇಲಕ್ಕೆತ್ತುವಂತಹ ಪತಿತಪಾವನ ಕಾರ್ಯವು ಸುನೀತವೆನ್ನಲು ಸಂದೇಹವೇ ಇಲ್ಲ ಅದು ಅಗತ್ಯವಾದುದು ಕೂಡ. ಆದರೆ ಅದೇ ಸಮಯದಲ್ಲಿ ಇನ್ನೊಂದು ಪಂಗಡವು ಕೆಳಗಿಳಿಯುದಂತೆ, ಪತಿತವಾಗದಂತೆ ನೋಡಿಕೊಳ್ಳಬೇಕೋ ಬೇಡವೊ? ಅದಕ್ಕೆ ಬದಲಾಗಿ ಬೇಕೆಂತಲೇ ಇನ್ನೊಂದು ಜಾತಿಯನ್ನು ತುಳಿದು ಹಾಕಲೆತ್ನಿಸುವುದರಿಂದ, ಅಥವಾ ತುಳಿದು ಹಾಕುವಂತಹ ನಿಯಮಾವಳಿಗಳನ್ನು ಒತ್ತಾಯಿಸುವುದರಿಂದ, ದೇಶದ ಏಳಿಗೆಗೆ ಸಹಾಯಕವಾದೀತೆ?

ಆಗಲಾರದೆಂದೇ ಹೇಳಬಹುದು. ಜ್ಞಾನವು ಎಲ್ಲರಿಗೂ ಬೇಕಾದುದು. ಯಾರು ಯಾರಿಗೆ ಎಷ್ಟೆಷ್ಟು ಜ್ಞಾನ ಗ್ರಹಣಕ್ಕೆ ಶಕ್ತಿಯುಂಟೋ ಅಷ್ಟಷ್ಟು ಜ್ಞಾನ ಎಲ್ಲರಿಗೂ ಸಿಕ್ಕುವ ಸೌಕರ್ಯವಿರಬೇಕು.

ಇಂದು ಕೆಲವು ಜಾತಿಗಳು ಹೆಚ್ಚಿನವರೆಂದೋ, ಹೆಚ್ಚಿನ ಸಲಿಗೆಯವರೆಂದೋ ವಿಜೃಂಭಿಸಿದರೆ ನಾಳೆ ಅದು ಅವರ ಕಡೆಗೇ ತಿರುಗಲಾರದೆಂದು ಹೇಳಲಾದೀತೆ? ವ್ಯಕ್ತಿಗತವಾದ ಮೇಲಾಟಗಳಾವುವೂ ಸಾಮಾಜಿಕವಾಗಿಯೋ ದೇಶೀಯವಾಗಿಯೋ ಪರಿಣಾಮ ಹೊಂದಲು ಬಿಡಬಾರದು. ಒಬ್ಬನನ್ನು ಕೆಳಕ್ಕೆ ದಬ್ಬಿದರೇನೇ ಇನ್ನೊಬ್ಬ ಮೇಲೇರಬಹುದೆಂಬ ನಂಬುಗೆ ಎಂದಿಗೂ ಒಳ್ಳೆಯದಲ್ಲ. ಎಲ್ಲರೂ ಮೇಲೇರುವಂತೆ ದಾರಿ ವಿಶಾಲವಾಗಲಿ. ರಾಶಿಷ್ಟೆನಷ್ಟು ಮೇಲೇರಿದ ಈ ವಿಜ್ಞಾನ ಯುಗದಲ್ಲಿ ನಾವೆಲ್ಲಾ ಒಂದೇ ದೇಶೀಯರೆಂಬ ವಿಶಾಲ ದೃಷ್ಟಿಯುಳ್ಳವರಾಗಿದ್ದರೇನೇ ಅಭಿವೃದ್ಧಿಯಾದೀತು. ಕೀರ್ತಿ ಬಂದೀತು, ಬಲವೆಚ್ಚೀತು.

ವಿದ್ಯಾರ್ಥಿಗಳ ಶಿಕ್ಷಣದ ಹೊಣೆ

(೪ನೇ ಪುಟದಿಂದ)

ಕೊಡುತ್ತೇನೆ. ನೀವು ನಿಮ್ಮ ಸಭೆಗಳಲ್ಲಿ ಕ್ರಿಯಾತ್ಮಕವಾಗಿ ಭಾಗ ವಹಿಸಬೇಕು. ಮಾತನ್ನು ಚೆನ್ನಾಗಿ ಆಡಲು, ಬಳಸಲು ಕಲಿತರೆ ನಿಮ್ಮ ಕೆಲಸಗಳು ನಿರ್ವಿಘ್ನದಿಂದ ನೆರವೇರುವುವು ಮಾತು ಬಲ್ಲವಗೆ ಜಗಳವಿಲ್ಲ ಎಂಬ ಗಾದೆಯನ್ನು ಮಾತಿನಿಂದ ಮೂರು ಲೋಕವನ್ನು ಗೆಲ್ಲಬಹುದು ಎಂಬುದಾಗಿ ಈಗಿನ ಕಾಲಕ್ಕೆ ಅನ್ವಯಿಸಬಹುದು. ನಾನು ಅಮೇರಿಕಕ್ಕೆ ಹೋದಾಗ ಅಲ್ಲಿ ಮಾತು ಬಾರದವರಿಗೆ ಭಾಷಣ ಕಲೆಯನ್ನು ಕಲಿಸುವ ಸಂಘಗಳನ್ನು ನೋಡಿದ್ದೇನೆ. ಒಬ್ಬನು ಮಾತಾಡಿದರೆ ನಾಲ್ಕಾರು ಜನ ಕಜ್ಜರು ಆದನ್ನಾಲಿಸಿ ಅವನು ನಿಂತ ಭಂಗಿ, ಆಡಿದ ಧಾಟಿ, ಪದಸಂಯೋಜನೆ ಮುಂತಾದ ಬಗ್ಗೆ ವಿವರವಾಗಿ ವಿಮರ್ಶಿಸಿ ಅವನಿಗದನ್ನು ತಿಳಿಯಹೇಳಿ, ತರಬೇತಿಯನ್ನೇ ಮುಂದುವರಿಸುತ್ತಿದ್ದರು. ನಿಮ್ಮ ಯೂನಿಯನ್ ಇದೇ ರೀತಿ ಭಾಷಣಕಲೆಯನ್ನೆ ನಿಮಗೆ ಹೊಂದಿಸಿಕೊಡಬೇಕು ಈಗ ಪ್ರಪಂಚದಲ್ಲಿ ಜಗಳವಾಡಲೂ ಮಾತಿನ ಆಶ್ರಯಬೇಕೆಂದು ನೀವು ಬಲ್ಲಿರಿ. ಕತ್ತಿಯುದ್ಧದಂತೆ ಮಾತಿನ ಯುದ್ಧವೂ ಇದೆ. ಮಾತಿನ ಯುದ್ಧವನ್ನು ಭಾರತೀಯರಾದ ನಾವು ನಡೆಸಿ ಚೀನಿಯರನ್ನು ನಮ್ಮ ಗಡಿಯಲ್ಲಿ ತಡೆದು ಸಿಲ್ಲಿಸಿದ್ದೇವೆಂದು ನಾನು ನನ್ನ ಅಮೇರಿಕ ಯಾತ್ರೆಯಲ್ಲಿ ಎಷ್ಟೋ ಸಾರಿ ಹೇಳಿದ್ದೇನೆ.

ನನ್ನಂಥ ಜನರಿಗೆ ಇದು ಸಾಯಂಕಾಲ. ಆದರೆ ನಿಮಗಿದು ಇನ್ನೂ ಸುಪ್ರಭಾತ ಜೀವನದ ಹಲವು ರಸಸಿದ್ಧಿಗಳನ್ನು ನಾಡಿನ ಜೀವನದ ಮಹಾ ಸರ್ವದಿನಗಳನ್ನು ಕಾಣುವ ಭಾಗ್ಯಶಾಲಿಗಳು ನೀವು. ನಿಮ್ಮ ಸ್ವಾಧ್ಯಾಪಕರ ಮಾರ್ಗದರ್ಶನದಲ್ಲಿ ಬದುಕನ್ನು ತಿದ್ದಿಕೊಂಡರೆ ನೀವು ದೊಡ್ಡ ಬಾಳುವೆಯನ್ನೇ ಬಾಳಿ ನಾಯಕಮಣಿಗಳೆನಿಸುವಿರಿ, ಪರೋಪಕಾರಕ್ಕೋಸ್ಕರ ದುಡಿಯುವ ಸಮಾಜಸೇವಕರೆನಿಸುವಿರಿ ಎಂಬ ವಿಶ್ವಾಸ ನನಗಿದೆ. ದೇವರು ನಿಮ್ಮನ್ನು ಹರಸಲಿ.

Tele: GOLDKING

ಸರ್ವರಿಗೂ ಭಾರತ ಸ್ವಾತಂತ್ರ್ಯೋತ್ಸವದ ಹಾರ್ದಿಕ ಶುಭಾಶಯಗಳು.

ಎಸ್. ಎಲ್. ಶೇಟ್

ಡಾಯಮಂಡ್ ಹೌಸ್

ಕೆ. ಎಸ್. ರಾವ್ ರೋಡ್,

ಮಂಗಳೂರು—1.

Prop. S. L. SHET.

ಶ್ರೀ ಮಧ್ವಾಚಾರ್ಯರ ದೃಷ್ಟಿಯಲ್ಲಿ ಪುರಾಣಗಳು

ನಲುವತ್ತುಮೂರು ವರ್ಷಗಳ ಇತಿಹಾಸವನ್ನೊಳಗೊಂಡ ನಮ್ಮ ಹದಿನೆಂಟು ಪುರಾಣಗಳು ಭಾರತೀಯ ಜ್ಞಾನ-ವಿಜ್ಞಾನ ವೈಭವವನ್ನು ಸಾರುತ್ತಿವೆ. ಇವನ್ನು ಆಚಾರ್ಯತ್ರಯರಲ್ಲಿ ಒಬ್ಬರಾದ ಶ್ರೀ ಮಧ್ವಾಚಾರ್ಯರು ಯಾವ ರೀತಿಯಲ್ಲಿ ಕಾಣುತ್ತಿದ್ದರು ಎಂಬುದನ್ನಿಲ್ಲಿ ಓದಿ ತಿಳಿಯಿರಿ.

ಶ್ರೀ ಜಿ. ಆರ್. ಪಾಂಡೇಶ್ವರ.

ಪೂರ್ವಕಾಲದಲ್ಲಿ ನಡೆದದ್ದೇ ಪುರಾಣ (ಪೂರ್ವಸ್ಮಿನ್ ಭೂತಮಿತಿ ಪುರಾಣಂ) ಎಂದು ಪುರಾಣಕರ್ತೃಗಳು ಸಾರಿದ್ದಾರೆ-ಆಂದ ಮೇಲೆ ಅವುಗಳಲ್ಲಿ ಇತಿಹಾಸದ ಘಟನೆಗಳೂ ಉಂಟೆಂದಂತಾಯಿತು. ಹದಿನೆಂಟು ಪುರಾಣಗಳೂ, ನಾಲ್ಕು ಯುಗಗಳಲ್ಲಿ ಹಂಚಿ ಹೋಗಿರುವ ದಶಾವತಾರಗಳೂ ಪುನಃ ಪುನಃ ಬರುತ್ತವೆಂಬುದಕ್ಕೆ "ಚತುರ್ಯುಗ ಸಹಸ್ರಾಣಿ ಬ್ರಹ್ಮಣೋ ದಿವಮುಚ್ಯತೇ" ಎಂಬ ಮಾತು ಉಪಷ್ಟಂಭಕವಾಗುವದು. ಆದ್ದರಿಂದ ಅನೇಕಾನೇಕ ಸಂಖ್ಯೆಯಲ್ಲಿ ಭಾರತ ರಾಮಾಯಣಗಳು ಆಗಿ ಹೋಗಿವೆ. ಮುಂದೆಯೂ ಆಗುತ್ತವೆ. ಒಂದು ಯಂತ್ರದಿಂದ ಒಂದೇ ಆಕೃತಿಯ ವಸ್ತುಗಳು ಪುನಃ ಪುನಃ ತಯಾರಾಗುವಂತೆಯೇ ಈ ಯುಗಗಳೂ, ಅವುಗಳೊಳಗಿನ ಅವತಾರ ಪುರುಷರೂ ತಯಾರಾಗುತ್ತ ಹೋಗುವವರೆಂದಂತಾಯಿತು. ಈ ಮಾತಿನ ಸತ್ಯದ ಇತ್ಯರ್ಥ ಹೇಗಿದ್ದರೂ, ಈ ಭೂಖಂಡದ ಮೇಲೆ ಮಾನವವ್ಯಾಣಿ ಹುಟ್ಟಿ ಎಷ್ಟು ಕೋಟಿ ವರ್ಷ ಆಯಿತೋ ಅಂದಿನಿಂದಲೂ ಅನೇಕ ನಾಗರಿಕತೆಗಳೂ ಸಂಸ್ಕೃತಿಗಳೂ ತಲೆದೋರಿ, ಹುಟ್ಟತ್ತಲೂ ಸಾಯುತ್ತಲೂ ಹೋಗಿರುವುವೆಂಬುದು ಸತ್ಯ. ನಮ್ಮ ಪುರಾಣಗಳು ವ್ಯಕ್ತಪಡಿಸುವ ಯುಗಗಳ ಕಾಲಪ್ರಮಾಣ (ಕೃತ ೧೭೨೮೦೦೦ ವರ್ಷ ತ್ರೇತೆ ೧೨೯೬೦೦೦ ವರ್ಷ,)ಗಳನ್ನು ಲೆಕ್ಕಿಸುತ್ತ, ಈಗಿನ ಚತುರ್ಯುಗವು ಅಷ್ಟ ಲಕ್ಷ ವರ್ಷವನ್ನು ಮೀಗವುದೆನ್ನಬೇಕು. ನಮ್ಮ ಅಷ್ಟಾದಶ ಪುರಾಣಗಳು ಅಷ್ಟ ಲಕ್ಷ ವರ್ಷಗಳ ಇತಿಹಾಸಾಂಶಗಳನ್ನೊಳಗೊಂಡಿರಬೇಕೆಂದಾಯಿತು. ಇಷ್ಟು ಪ್ರಾಚೀನವಾದ ಇತಿಹಾಸವುಳ್ಳಂಥಾಪ್ಪುವು ಬೇರಾವುದೂ ಇದ್ದಂತೆ ತೋರುವುದಿಲ್ಲ. ಈ ಪುರಾಣಗಳನ್ನು ಲಕ್ಷ್ಯವಿಟ್ಟು ಅಭ್ಯಸಿಸಿದರೆ, ಬಗೆಬಗೆಯ ಜನಾಂಗಗಳ, ಆಚಾರವಿಚಾರಗಳ, ವಿಜ್ಞಾನ ಸಂಶೋಧನೆಗಳ ಕುರಿತಾದ ಮಾಹಿತಿಗಳು ವಿಮಲವಾಗಿ ಹೊರೆಯುತ್ತವೆ. ಈಗ ತಯಾರಿಸಲ್ಪಡುತ್ತಿರುವ ವಿಮಾನಾದಿ ಆಕಾಶಯಾನ ಪಾತ್ರಗಳೂ ಭೀಕರ ವಿನಾಶದ ಅಣುಶಕ್ತ್ಯಾಯುಧಗಳೂ, ಪುರಾಣೋಕ್ತ ಯುದ್ಧಗಳಲ್ಲಿ ಉಪಯೋಗಿಸಲ್ಪಟ್ಟದ್ದು ವ್ಯಕ್ತವಾಗುತ್ತಿವೆ. ಇಂತಹ ಮಾಹಿತಿಗಳು ಜಗತ್ತಿನ ಬೇರೆ ಯಾವ ದೇಶದ ಪ್ರಾಚೀನ ಗ್ರಂಥಗಳಲ್ಲಿಯೂ ಕಂಡು ಬರುವುದಿಲ್ಲ. ಅಂದ ಮೇಲೆ ಭಾರತದ ಪುರಾಣಕರ್ತೃಗಳ ಅಗಾಧವಾದ ಜ್ಞಾನವನ್ನು ಕಂಡು ವಿಸ್ಮಯಪಡಬೇಕಾಗುವುದಲ್ಲವೆ? ಈ ಪುರಾಣಗಳೆಲ್ಲವೂ ಆರ್ಯಭಾಷೆ, ದೇವಭಾಷೆ ಎಂದು ಕರೆಯಲ್ಪಟ್ಟ ಸಂಸ್ಕೃತದಲ್ಲಿವೆಯಷ್ಟೆ.

ಸಂಸ್ಕೃತೇತರ ಭಾಷೆಗಳಲ್ಲಿ ಪುರಾಣಗಳಿದ್ದಂತೆ ತೋರುವುದಿಲ್ಲ. ಶೈವ-ವೈಷ್ಣವ ಎಂಬ ವಿಭಾಗೀಕರಣ ಮಾಡಿ, ವಿಷ್ಣುವಿನ ಸರ್ವೋತ್ತಮತೆಯ ಅವತಾರಲೀಲೆಗಳನ್ನು ಬಣ್ಣಿಸುವ ವೈಷ್ಣವ ಪುರಾಣಗಳೇ ದೂ, ಶಿವೋತ್ತಮತೆಯನ್ನೆತ್ತಿ ಹಿಡಿಯುವ ಶೈವ ಪುರಾಣಗಳೆಂದೂ ಇಬ್ಭಾಗವೂ ಆಗಿ ಬರುವುದು. ಆದರೂ ಶೈವ ಪುರಾಣಗಳಿಲ್ಲವೂ ಮೂಲದಲ್ಲಿ ಸಂಸ್ಕೃತ ಭಾಷೆಯಲ್ಲೇ ಬರೆಯಲ್ಪಟ್ಟಿವೆಂತೆ ತೋರುವುದು. ಅವುಗಳು ಸಂಸ್ಕೃತೇತರ ಭಾಷೆಗಳಲ್ಲಿರುತ್ತಿದ್ದರೆ, ಅವುಗಳ ಮೂಲ ಗ್ರಂಥಗಳನ್ನೆಲ್ಲ ನಾಶ ಮಾಡಿ, ಅವುಗಳ ಸಾರವನ್ನು ಸಂಸ್ಕೃತ ಭಾಷೆಯಲ್ಲಿ ಭಾಷಾಂತರಿಸಿಟ್ಟುಕೊಂಡಿರಬಹುದು. ವೇದಗಳು ಅನಂತವಾಗಿವೆ. ಎಂಬುದನ್ನು ಪಟಿಕ್ಕೇದಿಸಿ ನೋಡಿದರೆ, ಸಂಸ್ಕೃತ ಭಾಷಾ ಜನಾಂಗವು ತನಗೆ ಸಂಪರ್ಕ ಬಂದ ಎಲ್ಲ ಅನ್ಯ ಜನಾಂಗಗಳ ಸಾರವತ್ತಾದ ಜ್ಞಾನಗಳನ್ನು ಸಂಸ್ಕೃತೀಕರಿಸಿ ತನ್ನ ಜ್ಞಾನಕೋಶಗಳಾದ ವೇದಗಳಲ್ಲಿ ತಂದಿಟ್ಟುಕೊಂಡಂತೆ ತೋರುವುದು ವೇದ(ವಿದ್= ತಿಳಿ)ವೆಂದರೆ ಜ್ಞಾನ ಎಂದರ್ಥವಷ್ಟೆ. ಈ ದೃಷ್ಟಿಯಿಂದ ಸಂಗೀತವನ್ನು ಗಾಂಧರ್ವವೇದವೆಂದು ಬೆರಿಸಿದರೆ, ಶಸ್ತ್ರಾಸ್ತ್ರ ವಿದ್ಯೆಯನ್ನು ಧನುರ್ವೇದವೆಂದೂ, ಆಯುರ್ವೇದ್ಯಬೋಧನ ವಿದ್ಯೆಯನ್ನು ಆಯುರ್ವೇದವೆಂದೂ ಹೆಸರಿಸಿದರು. ಇವುಗಳಲ್ಲಿ ಸಂಸ್ಕೃತೇತರ ಭಾಷಾ ಜನರಲ್ಲಿ ಬಳಕೆಯಲ್ಲಿದ್ದ ಅನೇಕ "ಜ್ಞಾನ"ಗಳು ಕೂಡಿಕೊಂಡಿನೆಂಬುದು ಗಣ್ಯವಾಗಿದೆ. ಹಿತಕಾರಕವೂ ಉಪಯುಕ್ತವೂ ಆದ ತಿಳಿವಳಿಕೆಗಳು ಎಷ್ಟಿದ್ದರೂ, ಯಾರಲ್ಲಿದ್ದರೂ, ಅವುಗಳನ್ನು ಜ್ಞಾನಲಾಲಸಾ ದೃಷ್ಟಿಯಿಂದ ಸಂಗ್ರಹಿಸಿ, ತನ್ನದನ್ನಾಗಿ ಮಾಡಿಕೊಳ್ಳಬೇಕೆಂಬ ವಿಶ್ವವಿಶಾಲ ಭಾವನೆಯು ಸಂಸ್ಕೃತ ಭಾಷಾ ಜನಾಂಗದಲ್ಲಿ ತುಂಬಿ ತುಳುಕುತ್ತಿದ್ದಿತೆಂಬುದು ಸ್ಪಷ್ಟವಾಗುವದು.

ತ್ರಿಮೂರ್ತಿಕಲ್ಪನೆ

ಈ ವಿಶಾಲ ಮನೋಧರ್ಮದವರೇ ಪುರಾಣಗಳ ಕರ್ತೃಗಳಾಗಿದ್ದರೆನ್ನಬಹುದು. ಆದ್ದರಿಂದಲೇ ಪುರಾಣಗಳು ಸಮಸ್ತ ಜ್ಞಾನಗಳ ಒಂದು ಅಕ್ಷಯ ಭಂಡಾರವೆನಿಸಿವೆ. ಇವರು, ಬ್ರಹ್ಮ, ವಿಷ್ಣು, ಮಹೇಶ್ವರರೆಂಬ ಮೂರು ಮೂರುತಿಗಳನ್ನೂ, ಅವರು ಎತ್ತಿ ತೋರುವ ಸತ್ವರಜಸ್ತಮ ತ್ರಿಗುಣಗಳನ್ನೂ ತಮ್ಮ ಪುರಾಣಗಳಲ್ಲಿ ಓತಪ್ರೋತವಾಗಿ ಹೆಣೆದು ತೋರಿದ್ದಾರೆ. ಭೀಕರವಾದ ನಾಶಕ್ಕೆ ತುತ್ತಾಗದಂತೆ ಮಾನವ ಸಮಾಜಗಳು ಪರಸ್ಪರ ಪ್ರೇಮಾದರ ಬದ್ಧವಾದ ಮಿತಾಚರಣೆಯಿಂದ ಸಾಗುವಂತೆ ವಿಧಿಸುವ ವಿಷ್ಣು ಶಕ್ತಿಯನ್ನು ಸ್ಥಿತಿಶಕ್ತಿ ಎಂದು ಕರೆದು ಅದನ್ನು ಮಧ್ಯಸ್ಥಾನದಲ್ಲಿ ಇಕ್ಕಡೆಯನ್ನೂ ಸಮತ್ವದಲ್ಲಿ ಡುವಂತೆ ಇಟ್ಟಿದ್ದಾರೆ. ಈ ದೃಷ್ಟಿಯಿಂದಲೇ ಬ್ರಹ್ಮ-ರುದ್ರರನ್ನು ಕೂಡಾ ವಿಷ್ಣುವೇ ಅಪಾಯದಿಂದ ತಪ್ಪಿಸಿದನೆಂಬ ಅನೇಕ ಕಥಾ ವೃತ್ತಾಂತಗಳನ್ನು ಹೇಳಲಾಗಿದೆ. ಹಾಗೆಯೇ, ವಿಷ್ಣುಶಕ್ತಿ ಮತ್ತು ರುದ್ರಶಕ್ತಿಗಳ ನಡುವೆ ಹೋರಾಟವಾಗಬಾರದೆಂದೂ, ಒಂದು ಬೇಳೆ ಹೋರಾಟ ಉಂಟಾದಲ್ಲಿ ಎರಡೂ ಸಮತ್ವಬುಳ್ಳವುಗಳಾಗುವುವೆಂದೂ, ಆದ್ದರಿಂದ ಅವುಗಳು ಪರಸ್ಪರ ಸಹಜೀವನದಿಂದ ನಡೆದು ಸೃಷ್ಟಿಯನ್ನುಮುನ್ನಡೆಯುಗೊಡಬೇಕೆಂದೂ ಪುರಾಣಗಳ ಅನೇಕ ಕಥೆಗಳು ಎತ್ತಿ ಹೇಳುತ್ತಿವೆ. ಈ ಪ್ರಪಂಚ ಜೀವನಕ್ಕೆ ಪಂಚಭೂತಗಳೂ, ತ್ರಿಗುಣ ಸತ್ವಗಳೂ, ಹಗಲಿರುಳುಗಳೂ ಹೇಗೆ ಅನಿವಾರ್ಯ ಘಟಕಗಳಾಗಿರಬೇಕಾಗಿವೆಯೋ ಹಾಗೆ, ವಿವಿಧ ರೀತಿಯ ವೇಷಭೂಷಣಗಳೂ, ಭಾಷಾ ಸಂಸ್ಕೃತಿಗಳೂ, ತತ್ತ್ವಾಲೋಚನೆಗಳೂ, ಆಚಾರ ವಿಚಾರ ಸಂಪ್ರದಾಯಗಳೂ, ಅನಿವಾರ್ಯವಾಗಿವೆ. ಅವುಗಳು ಪರಸ್ಪರ ಮಾರಕಸ್ಥಿತಿಗೆ ಬರದಂತೆ, ತಮ್ಮ ತಮ್ಮ ಮೇರೆಯೊಳಗೇ ನಿಂತು, ಪರಸ್ಪರ ಪೂರಕ ಸತ್ವಗಳಾಗಿ ನಡೆಯುವುದೇ ವಿಷ್ಣುಶಕ್ತಿಯ ಸ್ಥಿತಿ ಸ್ಥಾಪನೋದ್ದೇಶವಾಗಿದೆ.

ಈ ಪರಿಯಿಂದಲೇ ಪುರಾಣಗಳ ಅಭ್ಯಾಸ ಮಾಡಬೇಕು. "ಜಗತ್ಪ್ರವಾಹಃ ಸತ್ಯೋಽಯಂ ಪಂಚಭೇದಸಮನ್ವಿತಃ" ಎಂದೂ "ಅಭೇದ ಸರ್ವರೂಪೇಷು ಜೀವ ಭೇದಸ್ತಥೈವಹಿ" ಎಂದೂ "ಪಂಚಭೇದಾ ಇಮೇ ನಿತ್ಯಾಃ ಸರ್ವಾವಸ್ಥಾಸು ನಿತ್ಯಶಃ" ಎಂದೂ ಶ್ರೀಮನ್ಮಧ್ವಾಚಾರ್ಯರು ನಿರ್ಣಯಿಸಿಕೊಂಡು, ವಿಷ್ಣುವಾರಮ್ಮನನ್ನೇ ದಶಾವತಾರ ಲೀಲೆಯಲ್ಲಿ ಕಂಡುಕೊಂಡಿದ್ದಾರೆ. ಭರತಖಂಡದ ಅನೇಕ ಪ್ರದೇಶಗಳಲ್ಲಿ ಉಸಲುಬ್ದವಿದ್ದ ಪುರಾಣ ಪ್ರತಿಗಳನ್ನೆಲ್ಲ ಪರೀಕ್ಷಿಸಿ (ದೇಶೇ ದೇಶೇ ತಥಾ ಗ್ರಂಥಾನ್ ದೃಷ್ಟ್ವಾಚೈವ ಪೃಥಗ್ವಿಧಾನ್) ಹತ್ತೂ ಅವತಾರಗಳಿಗೂ, ಅವುಗಳ ಸಮಕಾಲೀನ ನಾಯಕ ಪ್ರತಿನಾಯಕ ಪರಿವಾರಗಳಿಗೂ ಕ್ರಮಾಗತವಾದ ಜನ್ಮಾಂತರ ಲೀಲೆಗಳ ಸಂಬಂಧವು ಅವಿಚ್ಛಿನ್ನವಾಗಿದೆಂದೂ ಸಾರಿದ್ದಾರೆ. ಇದೇ ಅವರ ಅದ್ಭುತವಾದ ಪೂರ್ಣಪ್ರಜ್ಞತಾದ್ಯೋತಕವಾದ "ಭಾರತ ಪುರಾಣ ತಾತ್ಪರ್ಯ ನಿರ್ಣಯ" ಎಂಬ ಗ್ರಂಥವಾಗಿದೆ.

"ಸಮಸ್ತ ಶಾಸ್ತ್ರಾರ್ಥ ವಿನಿರ್ಣಯೋಽಯಂ
ವಿಶೇಷತೋ ಭಾರತಕರ್ತೃಚಾರೀ।
ಗ್ರಂಥಃ ಕೃತೋಽಯಂ
ಜಗತಾಂ ಜನಿತ್ರಂ
ಪರಿಂಗುರುಂಪ್ರೀಣಯತಾಮುನೈವ

ಎಂದು ಅವರು ಅದರ ಕುರಿತು ಹೇಳುತ್ತ,

"ಅರ್ಥೋಽಯಮೇವ ನಿಖಿಲೈರಪಿ ವೇದವಾಕ್ಯೈಃ
ರಾಮಾಯಣೇಂ ಸಹಿತ ಭಾರತ ಪಂಚರಾತ್ರೈಃ
ಅನ್ಯೈಶ್ಚ ಶಾಸ್ತ್ರವಚನೈಃ ಸಹ ತತ್ತ್ವಸೂತ್ರೈಃ
ನಿರ್ಣೀಯತೇ ಸಹೃದಯಂ ಸರಿಣಾ ಸದೈವ"

ಅಂದಿದ್ದಾರೆ.

ವಿಷ್ಣುವು ಭೂಭಾರ ಹರಣಕ್ಕಾಗಿಯೇ ಪುನಃ ಪುನಃ ಅವತರಿಸುತ್ತನೆಂಬ ಮಾತನ್ನು ಗೀತೆಯಲ್ಲಿ 'ಸಂಭವಾಮಿ ಯುಗೇ ಯುಗೇ' ಎಂಬಲ್ಲಿ ಕೃಷ್ಣನು ಹೇಳಿದ್ದಾನಷ್ಟೆ. ಇದನ್ನೇ ಶ್ರೀಮದಾಚಾರ್ಯರು --

'ಭೂಭಾರಹರಣೇ ವಿಷ್ಣೋಃ
ಪ್ರಧಾನಾಂಗಂ ಹಿ ಮಾರುತಿಃ
ಮಾಗಧಾದಿವಧಾದೇವ
ದುರ್ಯೋಧನವಧಾದಪಿ"

ಎಂಬಲ್ಲಿಯೂ,

"ಕೃಷ್ಣ-ರಾಮಾದಿ ರೂಪೇಷು ಬಲ-
ಶಾಲಿಯೋ ಜನಾರ್ದನಃ
ದತ್ತ-ವ್ಯಾಸಾದಿ ರೂಪೇಷು
ಜ್ಞಾನಶಕ್ತ್ಯಾಧಿಕಸ್ತಥಾ ಪ್ರಭುಃ"

(೨೧ನೇ ಪುಟ ನೋಡಿರಿ)

"ಕಟ್ಟು ಬುತ್ತಿಯ ಮುಂದೆ
ಉಣಲುಂಟು ತಾಳು" ||

...ಎಂದು ಕನ್ನಡದ ಕವಿಯೊಬ್ಬರು ಹಾಡಿದರು. ತಾಳುವಿಕೆಗಿಂತ ತಪವು ಬೇರಿಲ್ಲವೆಂಬ ಮಹಾ ನೀತಿವಾಕ್ಯವನ್ನು ಜನರ ಮುಂದಿಟ್ಟ ಈ ವರಕವಿಯು ಅದರ ಸಮರ್ಥನೆಗಾಗಿ ಅನೇಕ ನುಡಿಮುತ್ತುಗಳನ್ನು ಹೆಣೆದು ಅಮರಗೀತವೊಂದನ್ನು ರಚಿಸಿದರು.

"ಇಂದಿನ ತ್ಯಾಗಬುದ್ಧಿಯಿಂದ ನಾಳಿನ ಸುಖ
ಪ್ರಪಂಚವನ್ನು ರಚಿಸಿಕೊ. ಇಂದು ಉಳಿಸಿ ನಾಳೆ ಉಣ್ಣು" ಎಂದು ಶೇವಣಾತಿಯ ಮಹತ್ವಿಕೆಯನ್ನು ಅಂದಿನ ದಿನಗಳಲ್ಲೂ ಹಾಡಿದರು.

— ನಿಮ್ಮ ಆರ್ಥಿಕ ಯೋಜನೆ —
- ಮುಂದೆ ಉಣಲು ಇಂದು ಬುತ್ತಿ ಕಟ್ಟುವ —
— ಶೇವಣಾತಿಯ ವಿವರಗಳಿಗೆ ನಮ್ಮಲ್ಲಿ ವಿಚಾರಿಸಿರಿ —

ಒಂದು ಸೇವಿಂಗ್ಸ್ ಬ್ಯಾಂಕ್ ಖಾತೆಯನ್ನು ತೆರೆಯಿರಿ

ಸಿಂಡಿಕೇಟ್ ಬ್ಯಾಂಕ್

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್,
ಉಡುಪಿ.

ತ್ರಿವಿಧ ಪಾಪಗಳು -- ತ್ರಿವಿಧ ತಾಪಗಳು

(೨೬ನೇ ಪುಟದಿಂದ)

ಎಂಬಲ್ಲಿಯೂ ಎತ್ತಿ ಹೇಳಿದ್ದಾರೆ. ಶಕ್ತಿ ಪ್ರದರ್ಶನದಿಂದ ದುಶ್ಶಕ್ತಿಗಳನ್ನು ಹಾದಿಗೆ ತರುವಲ್ಲಿ ರಾಮ-ಕೃಷ್ಣಾದಿ ಕ್ಷತ್ರಿಯ ರೂಪದಿಂದಲೂ ಜ್ಞಾನ ಪ್ರಸಾರದಿಂದ ಅಜ್ಞಾನದ ಅನರ್ಥಗಳನ್ನು ತಪ್ಪಿಸುವಲ್ಲಿ ದತ್ತ ವ್ಯಾಸಾದಿಗಳ ರೂಪದಿಂದಲೂ ಹರಿಯು ಅವತರಿಸುತ್ತಾನೆಂಬುದೇ ಅವರ ನಿರ್ಣಯ. ಹಾಗೂ ಹರಿಯ ಈ ಮಹಾಕಾರ್ಯ ನಿರ್ವಹಣೆಗಾಗಿ ಮೂರು ಮಾನುಷ ಶರೀರರೂಪೀ ಸಾಧನ ಸಲಕರಣೆಗಳನ್ನುಳ್ಳವನಾಗಿದ್ದಾನೆಂದೂ ಶ್ರೀ ಮಧ್ವಾಚಾರ್ಯರು ಸಾರಿದ್ದಾರೆ.

ಪ್ರಥಮೋ ಹನುಮಾನ್ನಾಮ
ದ್ವಿತೀಯೋ ಭೀಮ ಏವಚ!
ಪೂರ್ಣಪ್ರಜ್ಞಃ ತೃತೀಯಸ್ತು
ಭಗವತ್ ಕಾರ್ಯಸಾಧಕಃ

ಎಂಬಲ್ಲಿ, ಹರಿಯ (ಭಗವಂತನ) ಕಾರ್ಯಸಾಧನೆಗೆ ಹನುಮಂತನು ಪ್ರಥಮ ಶಕ್ತಿ, ಭೀಮನು ದ್ವಿತೀಯ ಶಕ್ತಿ ಹಾಗೂ ಸ್ವತಃ ಶ್ರೀಮದಾಚಾರ್ಯರೇ ತೃತೀಯ ಶಕ್ತಿಯಾಗಿ ಅವತರಿಸಿದ್ದಾರೆಂದು ಸ್ಪಷ್ಟವಾಗಿ ಹೇಳಿದ್ದಾರೆ. ಈ ಮೂವರೂ ಮಹಾನು ಭಾವರು ವಾಯುದೇವರ ಅವತಾರವೆಂದೂ ಅವರು ಅನ್ನುತ್ತಾರೆ.

ಈ ಮಾತುಗಳಲ್ಲಿ ವಿಶೇಷ ಅರ್ಥಗಳುಂಟು. ರಾವಣಾದಿಗಳ ಸಂಹಾರವನ್ನು ರಾಮನೇ ಮಾಡಿದನಾದರೂ, ರಾಕ್ಷಸಸ್ಥಾನವನ್ನು ಕಂಡುಹಿಡಿದ ಭೃತ್ಯಕಾರ್ಯವು ಹನುಮಂತನಿಂದೇ ಆಯಿತಲ್ಲವೇ? ಹಾಗೆಯೇ ಅರ್ಜುನಾದಿಗಳು ಭೀಷ್ಮ-ದ್ರೋಣ ಕರ್ಣಾದಿಗಳನ್ನು ವಧಿಸಿದರೂ, ಭಾರತದ ಪ್ರತಿನಾಯಕರಾದ ಕೌರವ-ದುಶ್ಶಾಸನರನ್ನು ಕೊಂದವನು ಭೀಮನೇ ಅಲ್ಲವೇ? ಇದೇ ಮೇರೆಗೆ, ವೇದವಿಂಗಡಣೆ, ಪುರಾಣ ರಚನೆಯನ್ನು ಮಾಡಿ ವೈದಿಕ ಜ್ಞಾನದಾನ ಮಾಡಿದವರು ವ್ಯಾಸರೇ ಅಲ್ಲವೇ? ಹೀಗೆ, ಪುರಾಣೋಕ್ತ ದುಷ್ಟ ಶಾಸನ ಶಿಷ್ಟಪಾಲನೆ ಕಾರ್ಯಗಳಂದ, ಜಗಜೀವನವನ್ನು ಸುಖಮಯಗೊಳಿಸುವುದೇ ಅವತಾರಗಳ ಉದ್ದೇಶ. ಶ್ರೀಮದಾಚಾರ್ಯರು ಈ ಉದ್ದೇಶವನ್ನು ಹೃದಯಂಗಮವಾಗಿ ವಿವರಿಸುತ್ತ, ತಮ್ಮ ಈ "ತಾತ್ಪರ್ಯ ನಿರ್ಣಯ" ಗ್ರಂಥದ ಕೊನೆಯಲ್ಲಿ, "ರಾಜ್ಯ ಪ್ರಥಮೋ ಧರ್ಮೋ ಭಗವದ್ಧರ್ಮ ಪಾಲನಂ" ಎಂದು (ಭಗವಂತನ ಧರ್ಮ ಪಾಲನೆ ಮಾಡುವುದೇ ಕ್ಷತ್ರಿಯ ರಾಜನ ಪ್ರಥಮ ಕರ್ತವ್ಯ ಎಂದು) ಭೀಷ್ಮರ ಮಾತಿನಿಂದ ಎತ್ತಿ ತೋರಿಸಿದ್ದಾರೆ. ಈ ಧರ್ಮಕ್ಕೆ ವರ್ಣಾಶ್ರಮೋಚಿತವಾದ ಕರ್ಮ ಕೈಂಕರ್ಯಗಳೇ ಅವಷ್ಟಂಭಕ; ಏತನ್ನಿರುದ್ಧವೆಲ್ಲವೂ ನಿಷಿದ್ಧ ಎಂಬುದೇ ಅವರ ಸಿದ್ಧಾಂತ.

ಸಂಖ್ಯಾಕರಾದ ಮಾನವರು ತಮ್ಮ ತಮ್ಮ ಸ್ವಾರ್ಥಸಾಧನೆ, ಸ್ವಲಾಭಗಳು ದುರಾಶೆ ದುರ್ದೋಹಗಳು, ಇವುಗಳ ಅಪೇಕ್ಷೆಯಿಂದ ಮಾನಸಿಕವಾದ ಹಲವು ಬಗೆಯ ದುರ್ಯೋಚನೆ—ದುಷ್ಟ ಸಂಕಲ್ಪಗಳು ಇವುಗಳ ಮೂಲಕವಾಗಿ ಉದ್ಭವವಾಗುವ ನಿಷ್ಠುರವಾದ ಅಸತ್ಯವಾದ, ಭೀಭತ್ಸ ಮಾತು—ಬರೆವಣಿಗೆಗಳು ಮುಂತಾದುವನ್ನು ಪ್ರಬಲಗೊಳಿಸಿ ತನ್ಮೂಲಕ, ಹಿಂಸೆ, ಮೋಸ, ಕಳ್ಳತನ, ದಂಗೆ, ದರೋಡೆ, ಕೊಲೆ ಮುಂತಾಗಿ ಆಚರಿಸುವ—ಈ ಬಗೆಯ ಮಾನಸಿಕ, ವಾಚಿಕ, ಮತ್ತು ಕಾಯಿಕವೆನ್ನಿಸುವ ತ್ರಿವಿಧ ಅಯುಕ್ತಕಾರ್ಯಗಳನ್ನು—ತ್ರಿವಿಧ ಪಾಪಗಳನ್ನು ಮಾಡುತ್ತಿದ್ದರೆ ಅವುಗಳ ಫಲವಾಗಿ ರಾಷ್ಟ್ರಕ್ಕೆ ತ್ರಿವಿಧ ತಾಪಗಳು ರಾಷ್ಟ್ರ ಪಾಪ (National Sins)ಗಳಾಗಿ ತ್ರಿವಿಧ ವ್ಯಾಧಿಗಳನ್ನುಂಟುಮಾಡುವ ಸಾಧನಗಳಾಗದಿರುವುವೇ?

ಸ್ವಾರ್ಥತೆ, ಸ್ವಲಾಭ, ದುರ್ದೋಹ, ದುರಾಸೆ, ದುರಭಿಮಾನ ಮುಂತಾದುವುಗಳ ಪ್ರಾಬಲ್ಯದಿಂದ ಅಂಧನಾದ ಮನುಷ್ಯನು ತಾನು ಮಾಡುವ ದುಷ್ಟ ಯೋಚನೆ ದುರಂತ ಸಂಕಲ್ಪಗಳನ್ನು ಯಾರೂ ತಿಳಿಯಲಾರರು ಎಂದು ಭಾವಿಸುವನು—ಅಲ್ಲದೆ ತಾನು ಬಹು ಬುದ್ಧಿವಂತಿಕೆಯಿಂದ ಮಾಡುವ ದುಷ್ಕಾರ್ಯಗಳನ್ನೂ ಯಾರೂ ನೋಡಲಾರರು ಎಂದುಕೊಳ್ಳುವನು. ಆದರೆ ತನ್ನಲ್ಲೇ ಅಂತರಾತ್ಮನಾಗಿ ಸದಾ ಜಾಗ್ರತನಾಗಿರುವ ಪರಮಾತ್ಮನನ್ನುಮೋಸಗೊಳಿಸಲು ಸಾಧ್ಯವಿಲ್ಲವೆಂಬುದನ್ನು ಆ ವಿವೇಕಿಯು ತಿಳಿಯಲಾರನು. ಯಾವುದೊಂದು ಅಯುಕ್ತವಾದ, ಅಸತ್ಯವಾದ ಕಾರ್ಯ ಮಾಡುವಾಗಲೂ ಮನಸ್ಸಾಕ್ಷಿಯೂದ ಆ ಅಂತರಾತ್ಮನು ಅದು ಪಾಪಕರವಾದುದು ಅಯೋಗ್ಯ ಕಾರ್ಯ ಎಂದು ಸೂಚಿಸುವನು. ಆದರೆ ದುರ್ವಿನೀತನಾದ ಮಾನವನು ಆ ಸೂಚನೆಯನ್ನು ಅಲಕ್ಷ್ಯಮಾಡಿ ಧಿಕ್ಕರಿಸಿ ನಿರ್ಭೀತಿಯಿಂದ ದುಷ್ಕಾರ್ಯಗಳನ್ನು ಮಾಡುವನು. ಹಾಗೆ ಧಿಕ್ಕರಿಸಲ್ಪಟ್ಟ ಮನಸ್ಸಾಕ್ಷಿಯು ಮುಂದೆ ಅಂತಹ ಸೂಚನೆಗಳನ್ನೇ ಕೊಡದೆ ಸ್ತಬ್ಧವಾಗುವುದು. ತರುವಾಯ ಮುಂದೆ ಕೇಳುವುದೇನು? ಅಂತಹ ಮನುಷ್ಯನು ನಿರಂಕುಶಪ್ರವೃತ್ತಿಯಿಂದ ದುಷ್ಕಾರ್ಯಾಚರಣೆಯಲ್ಲಿ ಧುರೀಣನಾಗುವನು. ಈ ದುಷ್ಕಾರ್ಯದಫಲವು ಒಡನೆ ಆಗುವುದು ಸಾಧ್ಯವಿಲ್ಲ! ಇಂದು ನಡಲ್ಪಟ್ಟ ಒಂದು ಬೀಜದ ಬೀಜವು ಇಂದೇ ಮೊಳಕೆಯೊಡೆದು ಗಿಡವಾಗಿ—ಮರವಾಗಿ ಕಹಿಯಾದ ಫಲವನ್ನು ಇಂದೇ ಕೊಡಲಾರದಷ್ಟೆ! ಅದರಂತೆಯೇ ಇಂದು ಆಚರಿಸಿದ ಆ ದುಷ್ಕಾರ್ಯವೂ ಒಂದು ಪಾಪ ಬೀಜವಾಗಿ ನಿಂತು ಮುಂದೆ ಸಕಾಲದಲ್ಲಿ ದುಷ್ಟಫಲವನ್ನು ಕೊಡಲು ಕಾದಿರುವುದು. ಇದನ್ನು ಮೂರ್ತ ದುಷ್ಕಾರ್ಯನಿರತರಾದ ಯಾರೂ ಅಲಕ್ಷ್ಯಮಾಡಿ ಇಂದು ಇತರರನ್ನು ಮೋಸಗೊಳಿಸಿ ಗೆದ್ದೆವೆಂದು ನಿರ್ಭೀತರಾಗಿರುವುದು ಸಲ್ಲದು. ಅದರ ಫಲ ಎಂದಿದ್ದರೂ ಒಂದಕ್ಕೆ ಹತ್ತಾಗಿ ಪೀಡಿಸುವುದು ತಪ್ಪದು.

ಹೀಗೆ ಮನುಷ್ಯನು ತನ್ನ ಜೀವನ ಕ್ಷೇತ್ರದಲ್ಲಿ ನಡೆಸುವ ತ್ರಿವಿಧ ಪಾಪಗಳಿಗೆ ಫಲವಾಗಿ ತ್ರಿವಿಧ ತಾಪಗಳು—ದೈಹಿಕ

ಒಂದೇ ಸಂಸ್ಥೆಯಿಂದ
ಬಹುಮುಖ ಸೇವೆ

ಮನೋರಂಜನೆಗೆ ಉತ್ತಮ ಚಲಚಿತ್ರಗಳು!

ಮನಸ್ಸು, ಮಿದುಳಿನ ವಿಕಾಸನೆಗೆ—
ಉತ್ತಮ ಜಾಹೀರಾತಿಗೆ ಉತ್ತಮ ಸಾಧನ—
"ಪ್ರಕಾಶ" ವಾರಪತ್ರಿಕೆ

ಮದುವೆ, ಮುಂಜಿಗೆ ಥಿಯೇಟರಿನ ವ್ಯವಸ್ಥೆ,
ಸಭೆ ಸಮಾರಂಭಗಳಲ್ಲಿ ಧ್ವನಿವರ್ಧಕ ಯಂತ್ರ,
ವ್ಯಾಪಾರ ವಹಿವಾಟು ಸಮೃದ್ಧಿಗೆ ಸ್ಲೈಡ್ ಪ್ರದರ್ಶನ,
ಇತ್ಯಾದಿ ಸೇವಾ ಸೌಲಭ್ಯಗಳಿವೆ.

ಶ್ರೀ ರಾಮಕೃಷ್ಣ ಥಿಯೇಟರ್
ಲಿಮಿಟೆಡ್,
ಉಡುಪಿ, ದ. ಕ.

ಸರ್ವರಿಗೂ ಭಾರತ ಸ್ವಾತಂತ್ರ್ಯ ದಿನದ
ಹಾರ್ದಿಕ ಶುಭಾಶಯಗಳು!

ಉಡುಪಿಯಲ್ಲಿ ಅತ್ಯಾಧುನಿಕ ಸೌಕರ್ಯಗಳಿಂದೊಡಗೂಡಿರುವ ಅತ್ಯುತ್ಕೃಷ್ಟ ವಸತಿ ಮಂದಿರ

ರೋಯಲ್ ಮಹಾಲ್!

ಶುಚಿ ರುಚಿಗಳಿಗೆ ಹೆಸರಾಗಿರುವ

ಪ್ರವಾಸಿಕರ ಆದರ್ಶ ನಿವಾಸ.

ಉಡುಪಿ ನಗರದ ಕೇಂದ್ರ ಸ್ಥಳದಲ್ಲಿ
ಪ್ರಶಾಂತ ವಾತಾವರಣದಲ್ಲಿರುವ

ಪ್ರಥಮ ಶ್ರೇಣಿಯ ಭೋಜನ ಮತ್ತು ವಸತಿ ಗೃಹ

ರೋಯಲ್ ಮಹಾಲ್
ಉಡುಪಿ.

ಮ್ಯಾನೇಜರು:- ಕೆ. ವೆಂಕಟ್ರಮಣ ಭಟ್.

ಕ್ತಿಕ ಅಥವಾ ಸಾಮೂಹಿಕ ಕಷ್ಟ-ನುಖಗಳ ಮೂಲಕ ಒದಗಿ ಬಂದು ಎಂತೂ—ಮಾಡಿಟ್ಟುಕೊಂಡ ಆಡಿಗೆಯನ್ನು ಉಣ್ಣಿಸದೆ ಬಿಡವು. ಪಾಪಗಳು ಹೇಗೆ ದೈಹಿಕ ವಾಚನಿಕ ಮಾನಸಿಕ ಎಂಬಂತೆ ತ್ರಿವಿಧವಾಗಿರುವುವೋ ಹಾಗೆಯೇ ಅದೇ ಕಾರಣವಾಗಿ ಸಂಭವಿಸುವ ತಾಪಗಳು ಸಹ ಆಧ್ಯಾತ್ಮಿಕ, ಆಧಿದೈವಿಕ, ಮತ್ತು ಆಧಿಭೌತಿಕ ಎಂದು ತ್ರಿವಿಧವಾಗಿರುವುವು. ದೈಹಿಕ ರೋಗರುಜಿನೆಗಳು, ಮನಃಕ್ಲೇಶ ಚಿತ್ತಭ್ರಾಂತಿ, ವಾಕ್ಕಲಹ ವಿನಾಕಾರಣ ದೂಷಣೆ ಅಪನಿಂದೆ ಅಪಮಾನಾದಿ ಇವುಗಳು ಆಧ್ಯಾತ್ಮಿಕವಾಗಿ ಒದಗುವ ತಾಪಗಳು. ಹಾಪು,ಚೇಳು,ಹುಲಿ, ಸಿಂಹ ಮುಂತಾದ ದುಷ್ಟ ಪ್ರಾಣಿಗಳು—ಮಿಡತೆಯ ದಂಡು ಕ್ರಿಮಿಕೀಟಾದಿಗಳ ಮೂಲಕ ಉಂಟಾಗುವ ಪೀಡೆಮುಂತಾದುವು. ಆಧಿಭೌತಿಕ ಎಂದರೆ ಭೂಚರಜಲ ಪ್ರಾಣಿ ವರ್ಗಗಳ ಮೂಲಕ ಒದಗುವ ತಾಪಗಳು—ಇನ್ನು ಆಧಿದೈವಿಕ ಎಂದರೆ ಪ್ರಕೃತಿಯ ಸಂಚ ಭೂತಾದಿ ದೇವತೆಗಳ ಎಂದರೆ ಪೃಥ್ವಿ ಅಪ್ ತೇಜೋವಾಯು ಆಕಾಶಗಳ ಅಧಿಮಾನಿ ದೇವತಾಧೀನವಾಗಿ ಉಂಟಾಗುವ ಭೂಕಂಪಗಳು ಪ್ರವಾಹಾದಿಗಳ ಮೂಲಕಉಂಟಾಗುವ ಪ್ರಳಯಕಾರಿ ಹಾವಳಿಗಳು, ಅಗ್ನಿ ಅನಾಹುತಗಳು—ಸಮುದ್ರದ ಉಬ್ಬರವಿಳಿತಗಳ ಮೂಲಕ ಉಂಟಾಗುವ ಹಾನಿಗಳು, ಚಂಡಮಾರುತ ಸುಂಟರಗಾಳಿಗಳ ಮೂಲಕ ಉಂಟಾಗುವ ಅನಾಹುತಗಳು ಇನ್ನೆಲ್ಲ—ದೈವಿಕ ಪ್ರಕೋಪದಿಂದ ಲೋಕಕ್ಕೆ ಸಂಭವಿಸುವ ದುರಂತಗಳು. ಹೀಗೆ ಆಧ್ಯಾತ್ಮಿಕ ಆಧಿಭೌತಿಕ ಆಧಿದೈವಿಕ ತಾಪಗಳು ಸಹ ಮೇಲೆ ಹೇಳಿದಂತಹ ಮಾನವ ವರ್ಗದ ತ್ರಿವಿಧ ಪಾಪಗಳ ಫಲವಾಗಿಯೇ ಪ್ರಾಪ್ತವಾಗುತ್ತಿರುವುವು.

ಆಧುನಿಕ ನಾಗರಿಕತೆಯ ಫಲವಾಗಿ ಪ್ರತಿಯೊಂದು ಕಾರ್ಯಕ್ಕೂ ಒಂದು ಕಾರಣವಿರಬೇಕು ಎಂಬ ತತ್ವವನ್ನು ಒಪ್ಪುವ ನಮ್ಮ ಇಂದಿನ ಪ್ರೌಢ ಜನತೆಯು—ಇಂದಿನ ಈ ಅಗಾಧ ದುರಂತ ಕಾರ್ಯಗಳು ಯಾವ ಕಾರಣಗಳ ಫಲವಾಗಿ ಸಂಭವಿಸುತ್ತಿವೆ ಎಂಬುದನ್ನು ಅಗತ್ಯ ಯೋಚಿಸಬೇಕು. ಮತ್ತು ಸಕಾರಣವಾಗಿ ಮೇಲೆ ಹೇಳಿದ ವಿವರಣೆಯನ್ನು ಮಾನ್ಯಮಾಡಬೇಕು.

ಆದರೆ ನಾವು ಇಂದು ನಮ್ಮ ದೇಶದ ಸಂಸ್ಕೃತಿ ಸಂಪ್ರದಾಯಗಳಿಗೆ ಸ್ವಾಭಾವಿಕವಾಗಿ ಬಂದ ಸಕಲವಿಧ ಆಸ್ತಿಕ ಭಾವನೆಗಳನ್ನೂ ನೀಗಿಕೊಂಡಿದ್ದೇವೆ. ದೇವ ದೇವತೆಗಳು ಈ ಪ್ರಪಂಚದ ರಕ್ಷಣೆಗಾಗಿ ಇದ್ದು ತಮ್ಮ ಆದೃಶ್ಯ ಅಗಾಧ ಶಕ್ತಿಗಳ ಮೂಲಕ ಲೋಕದ ಸಕಲಕಾರ್ಯಗಳನ್ನೂ ನಿಯಮಬದ್ಧವಾಗಿ ನಡೆಸುತ್ತಿರುವರು ಎಂಬ ನಂಬಿಕೆಯನ್ನು ಪೂರ್ತಿಯಾಗಿಮರೆತು, ಪಾಶ್ಚಾತ್ಯ ಸಂಸ್ಕಾರ ಪ್ರಭಾವದಿಂದ ಕೇವಲ ಪ್ರತ್ಯಕ್ಷವಾಗಿ ಕಾಣುವ ಭೌತಿಕವಸ್ತುಗಳನ್ನು—ಯಂತ್ರಗಳನ್ನು ಮಾತ್ರನೋಡಿ, ಅವುಗಳೇ ಸ್ವತಂತ್ರಿಸಿ ಕಾರ್ಯ ನಡೆಸುವುವು ಎಂಬ ಭಾವನೆಯಿಂದ ಸ್ಫೋರಿತರಾಗಿದ್ದೇವೆ. ಜಡವಸ್ತುಗಳೇ ಸ್ವಾತಂತ್ರ್ಯವಹಿಸಿ ಯಾವ ಕಾರ್ಯ ಮಾಡಲೂ ಶಕ್ತವಾಗಲಾರವು ಎಂಬುದರ ಸತ್ಯತೆಯು ನಮಗೆ ತೋರಲಾರದು. ಭೂಮಿಗೆ ಬಿತ್ತಿದ ಬೀಜಕ್ಕೆ ಸಕಾಲದಲ್ಲಿ ಜಲ ವಾಯು ತೇಜಸ್ಸು ಮುಂತಾದುಗಳ ಸಹಾಯವೊದಗದಿದ್ದರೆ ಅದು ಮೊಳೆತು ಬೆಳೆಯಲಾರದು—ಹೂ ಹೀಚು ಕಾಯಿ ಹಣ್ಣುಗಳನ್ನು ಕೊಡಲಾರದು- ಜಡವಸ್ತುಗಳಿಗೆ ಹಿಂದಿದ್ದು ಅದೃಶ್ಯವಾಗಿ ಕೆಲಸಮಾಡುವ ಶಕ್ತಿಯೊಂದಿಲ್ಲದಿದ್ದರೆ, ಲೋಕದ ಯಾವಕಾರ್ಯವೂ ನಡೆಯಲಾರದು. ಈ ಅದೃಶ್ಯ ಶಕ್ತಿಯೇ ವಿವಿಧ ದೇವತಾಸ್ವರೂಪವಾಗಿ—ಸೃಷ್ಟಿ ಕಾರ್ಯವನ್ನೂ—ಸೃಷ್ಟಿಯಾದ ಅಸಂಖ್ಯ ಪ್ರಾಣಿವರ್ಗ ವನಸ್ಪತಿ ವರ್ಗಗಳಿಗೆ ಆಹಾರ ಪಾನೀಯ ಗಾಳಿ ಬೆಳಕುಮುಂತಾದ ಹಲವಾರು ಜೀವನ ಸಾಮಗ್ರಿಗಳನ್ನೂ ಒದಗಿಸಿ—ಬೆಳೆದು ಬಾಳುವಂತೆ ಸಹಕರಿಸುವ ಸ್ಥಿತಿಕಾರ್ಯವನ್ನೂ— ಮುಂದೆ ಯೋಗ್ಯ ಕಾಲಾವಧಿಯನಂತರ—ಹಾಗೆ ಬಾಳಿ ಬೆಳೆದ ಜೀವಜಾಲವನ್ನು ಲಯಗೊಳಿಸುವ ಕಾರ್ಯವನ್ನೂ ಅನಂತಕಾಲದಿಂದ ನಡೆಸಿಕೊಂಡು ಬಂದಿರುವುದು. ಲೋಕದಲ್ಲಿ ಕ್ಲಿಪ್ತಕಾಲ ಧರ್ಮವನ್ನನುಸರಿಸಿ ನಡೆಯುತ್ತಿರುವ ಅದೃಶ್ಯ ಶಕ್ತಿಗಳ ಈ ಕಾರ್ಯಗಳನ್ನು ಲಕ್ಷವಿಟ್ಟು ಪರೀಕ್ಷಿಸಿರುವ ನಿರ್ಮಾತೃರಿಗಳೂ- ಪ್ರಾಮಾಣಿಕರೂ ಆದ ಭೌತಿಕ ಶಾಸ್ತ್ರಜ್ಞರನೇಕರು ಇಂತಹ ಒಂದು ಅವ್ಯಕ್ತ ಶಕ್ತಿಯ ಅಸ್ತಿತ್ವವಿಲ್ಲದಿದ್ದರೆ— ಆತ್ಯಾಶ್ಚರ್ಯಕರವಾದ ಸೃಷ್ಟಿಯಲ್ಲಿನ ಈ ಕಾರ್ಯಗಳು ನಡೆಯುವುದು ಸಾಧ್ಯವಿಲ್ಲ ಎಂಬ ತೀರ್ಮಾನಕ್ಕೆ ಬಂದಿದ್ದಾರೆ. ಲೋಕದಲ್ಲಿನ ಮಾನವ ವರ್ಗವು ನಡೆಯಿಸುವ ಸಕಲ ಕಾರ್ಯಗಳನ್ನೂ ನೋಡುವವರು ಯಾರೂ ಇಲ್ಲವೆಂದು ತಿಳಿದು ಮತ್ತನಾಗಿರುವುದರಿಂದಲೇ ಅಜ್ಞಾನಿ ಮಾನವನು, ಪಾಪ ಪುಣ್ಯಗಳ, ಸತ್ಯಾಸತ್ಯಗಳ, ಯುಕ್ತಾಯುಕ್ತಗಳ ಕಡೆಗೆ ಲಕ್ಷ್ಯವೇ ಇಲ್ಲದೆ ಮನಬಂದಂತೆ, ನಡೆಯತೊಡಗಿರುವನು. ಲೋಕದ ಯೋಗಕ್ಷೇಮ ಚಿಂತಕರಾಗಿರುವ ಅಭಿಮಾನಿ ದೇವತೆಗಳೂ, ಅವ್ಯಕ್ತನಾಗಿದ್ದರೂ ಸರ್ವಸಾಕ್ಷಿಯಾಗಿರುವ ಸರ್ವಜ್ಞನಾಗಿರುವ ಜಗದ್ರಕ್ಷಕ ಭಗವಂತನೂ—ಅನೇಕಾನೇಕ ಮಂದಿ ಸಾಧು ಸಂತರು, ಭಗವದ್ಭಕ್ತರ್ಯರು, ಆಚಾರ್ಯ ಪುರುಷರು ಮುಂತಾದವರ ಮೂಲಕ ಅನೇಕ ಬಗೆಯ ಧರ್ಮ—ನೀತಿಗಳನ್ನು ಬೋಧಿಸಿ-ಮನುಷ್ಯನು, ನ್ಯಾಯಾನ್ಯಾಯ - ಯುಕ್ತಾಯುಕ್ತಗಳನ್ನು ತಿಳಿದು ಕ್ಷೇಮವಾಗಿ ಬದುಕಲಿ-ಹಾಗೆ ಬದುಕಿ ಅತ್ಯುತ್ತಮವಾದ ಮನುಷ್ಯಜನ್ಮವನ್ನು ಸಾರ್ಥಕಪಡಿಸಿಕೊಳ್ಳಲಿ ಎಂದು ಹಲವಾರು ಸಾಧನಗಳನ್ನು ಒದಗಿಸಿಕೊಟ್ಟಿರುವರು.

ಆದರೆ ಮನುಷ್ಯನು ಅಗಾಧವಾದ ಈ ವಿಶ್ವದಲ್ಲಿ ತಾನು ಎಷ್ಟರವನು, ತನ್ನ ಸ್ಥಾನವೇನೆಷ್ಟರದು ಎಂಬುದರ ಅರಿವಿಲ್ಲದೆ, ತನ್ನ ಸೃಷ್ಟಿಕರ್ತನನ್ನು ಮರೆತು, ತಾನೇ ಸರ್ವಸ್ವತಂತ್ರನೆಂದುಕೊಂಡು, ಈ ಲೋಕದ ಸಮಸ್ತ ವಸ್ತುಜಾಲವೂ ಸಕಲೈಶ್ವರ್ಯವೂ-ತನ್ನ ವೈಯ್ಯಕ್ತಿಕ ಸುಖ-ಸಂತೃಪ್ತಿಗಳಿಗಾಗಿ ಮಾತ್ರವೇ ಒದಗಿಬಂದಿರುವ ಸಾಧನವೆಂದು ಬಗೆದು ಎಂದು ಸ್ವಾರ್ಥಲೋಲುಪನಾಗಿರುವನೋ ಅಂದು ಅವನ ಕಣ್ಣುಗಳಿಗೆ ಸ್ವಲ್ಪ ತೀಕ್ಷ್ಣವಾದ ಅಂಜನವನ್ನು ಹಚ್ಚಿ ತೆರೆಯಿಸಬೇಕಾದ ಅವಶ್ಯಕತೆಯೊದಗುವುದು. ಸಾಮ ದಾನ ಭೇದ ಎಂಬೀ ಮೂರು ಉಪಾಯಗಳಿಗೂ ಮಣಿಯದ ಪೊಂಡನನ್ನು ಚತುರ್ಥೋಪಾಯವಾದ ದಂಡೋಪಾಯದಿಂದಲೇ ಮರ್ದಿಸಿ ಕ್ಷುದ್ರಪ್ರಾಣಿಯೊದ ಅವನ ಸ್ಥಾನ-ಮಾನ ಎಷ್ಟು ಎಂಬುದರ ಅರಿವನ್ನು ಉಂಟುಮಾಡಿ ಕೊಡುವುದು ಲೋಕತಿಕ್ಷಕನೂ-ಲೋಕಗುರುವೂ ಆದ ಆ ಪರಮಾತ್ಮನಿಗೆ ಯುಕ್ತವೆಂದು ತೋರಿದರೆ ಅದೇನು-ತಪ್ಪಲ್ಲವಷ್ಟೆ! ಅಂತೆಯೇ ಇಂದು ಲೋಕದಲ್ಲಿ ಅಭೂತಪೂರ್ವವಾದ ಅತಿವೃಷ್ಟಿ ಅನಾವೃಷ್ಟಿಗಳು, ದುರಂತ ಪ್ರವಾಹಗಳು-ಸಮುದ್ರದ ಏರಿಕೆಗಳು, ಅಗ್ನಿ ಅನಾಹುತಗಳು, ಚಂಡಮಾರುತ ಭೂಕಂಪಾದಿಗಳು-ಕಾಲರಾ ಮುಂತಾದ ದುರ್ವ್ಯಾಧಿಗಳು ಮುಂತಾದ ಆಧಿದೈವಿಕ ವ್ಯಾಧಿಗಳು ಲೋಕಕ್ಕೆ ಸಂಭವಿಸಿವೆ. ಕಾಲಕರ್ಮವಶವಾಗಿ ಅಂತಹ ದುಷ್ಟರ-ದುರ್ವಿನೀತರ ಸಂಬಂಧದಲ್ಲಿರುವ ಅನೇಕ ಮಂದಿ ನಿರಪರಾಧಿಗಳೂ ಸಾಧು ಜನರ ಈ ಬಗೆಯ ದುಃಖ ಸಂಕಟಗಳಿಗೆ ಬಾಲಾಗಬೇಕಾಗುವುದು ತಪ್ಪದು—ಆದರೆ ಅಂತಹ ದುರಂತ ಪರಿಸ್ಥಿತಿಯಲ್ಲೂ ಅಂಧವರ ರಕ್ಷಣೆಯಾಗುತ್ತಿರುವ ಆಶ್ಚರ್ಯಕರ ಸನ್ನಿವೇಶವನ್ನು ನೋಡಿದರೆ ಭಗವಂತನು ದಯಾಘನನು- ಭಯಕೃದ್ಭಯನಾಶಕನು ಎಂಬುದು ಗೋಚರವಾಗುವುದು.

ಜಗತ್ತಿನಲ್ಲಿ ಅತ್ಯಗಾಢ ರೀತಿಯಿಂದ ನಡೆಯುತ್ತಿರುವ-ಪರಮಾತ್ಮನ ಈ ಅಡಳಿತ ವ್ಯವಸ್ಥೆಯ ತಂತ್ರವನ್ನು ಅರಿತು-ಮನುಷ್ಯನು, ದುಷ್ಕಾರ್ಯ ದುರಾಚಾರಾದಿಗಳಿಗೆ ಪ್ರವೇಶಿಸಿ ಲೋಕದ ಸುಖಜೀವಿತವನ್ನು ಹಾಳುಗೆಡಿಸದೆ, ನ್ಯಾಯಾನ್ಯಾಯ-ಸತ್ಯಾಸತ್ಯಗಳ ಸ್ವರೂಪವನ್ನರಿತು-ಧರ್ಮಬದ್ಧನಾಗಿ-ಸ್ವಾರ್ಥದುರಾಭಿಮಾನಿಗಳಿಗೆ ವಶನಾಗದೆ-ಭಗವದ್ವಿನೀತನಾಗಿ ನಡೆವನಾದರೆ, ದಯಾನಿಧಿಯೊದ ಭಗವಂತನ ಆಜ್ಞಾನುಸಾರ ಅವೇ ಪಂಚಭೂತಾಭಿಮಾನಿ ದೇವತೆಗಳ ಮೂಲಕ-ಸಕಲ ಸೌಭಾಗ್ಯಗಳೂ ಕಾಲ ಕಾಲಕ್ಕೆ ಒದಗಿಬಂದು ಲೋಕಕ್ಷೇಮ ಸುರಕ್ಷಿತವಾಗಿರುವುದು.

* ಚಾತುರ್ಮಾಸ್ಯ ಸಂಕಲ್ಪಕ್ಕಾಗಿ ಬೆಂಗಳೂರಲ್ಲಿ ತಂಗಿರುವ ಶ್ರೀ ಶ್ರೀ ಪರಮಹಂಸೇತ್ಯಾದಿ ಶೃಂಗೇರಿ ಜಗದ್ಗುರುಗಳವರು ತಮ್ಮ ಒಂದು ಭಾಷಣದಲ್ಲಿ ಸೂಚಿಸಿದ ಭಾಷಣವನ್ನು ಕುರಿತು ವಿಸ್ತರಿಸಿ ಬರೆಯುವುದು.

ಕಾರ್ಕಳ ಡಿ. ಮು. ಕೋರ್ಟಿನಲ್ಲಿ
O. P. No. 35/1961.

ಗೌರಮ್ಮ —ಅರ್ಜಿದಾರಳು,
1 ಶಂಕರನಾರಾಯಣ ರಾವ್.
2 ನಾಗಪ್ಪಯ್ಯ —ಎದ್ರಿರು

ಎದ್ರಿರಿಗೆ ಮತ್ತು ಇತರ ಸಮಸ್ತರಿಗೆ ಈ ಮೂಲ್ಕ ತಿಳಿಸುವದೇನಂದ್ರೆ ಅರ್ಜಿದಾರಳಿ ಗಂಡ ಮತ್ತು ಎದ್ರಿರ ಸಹೋದರ ತಾ. 20-4-61 ರಲ್ಲು ಮೃತಪಟ್ಟಿರುವ ವೆಂಕಪ್ಪಯ್ಯನವರಿಗೆ S. K. A. C. M. S. Ltd., ಮಂಗಳೂರು ಇವರಿಂದ ಬರತಕ್ಕ ರೂಪಾಯಿ 649—31ನ್ನು ವಸೂಲು ಮಾಡುವರೆ ತನಗೆ ವಾರೀಸು ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರಳು ದಾಕ್ಲು ಮಾಡಿದ ಸದ್ರಿ ಅರ್ಜಿಯು ತಾರೀಕು 30—8—1961ಕ್ಕೆ ಇಟ್ಟಿದೆ. ಆಕ್ಷೇಪ ಇದ್ದವರು ಸದ್ರಿ ದಿನ ಬೆಳಗ್ಗೆ 10 ಘಂಟೆಗೆ ಮೇಲ್ಕಂಡ ಕೋರ್ಟು ಮುಂದೆ ಹಾಜ್ರಾಗಿ ಉಡಾವರೆಣೆ ಕೊಡತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರು ಹಾಜ್ರಿಯಲ್ಲಿ ತೀರ್ಮಾನವಾಗುವದು ಎಂತ ಕೋರ್ಟು ಸ್ಯಂ ಪ್ರಕಾರ ಈ ಮೂಲಕ ತಿಳಿಸಿಯದೆ.

K. V. Kamath,
Advocate for Petitioner.
Karkala, 11—8—1961.

ಮೊರ್ಗರೇಟರ್

ಫಿಟ್ಸ್‌ಕೂರ್

ಮಕ್ಕಳ ಭಯಂಕರ ಬಾಲಗ್ರಹ ವ ಇತರ ಕಾಹಿಲೆಗಳನ್ನು ಆಶ್ಚರ್ಯಕರವಾದಷ್ಟು ಸ್ವಲ್ಪ ಸಮಯದಲ್ಲಿ ನಿಲ್ಲಿಸುವುದು.

ತಯಾರಕರು: ಮೊರ್ಗರೇಟ್ ಪ್ರೊಡಕ್ಟ್ಸ್ ಕಂಪೆನಿ, ಉಡುಪಿ.

ದಿ. ಕೆಥೋಲಿಕ್ ಬೇಂಕ್ ಲಿಮಿಟೆಡ್, ಕುಂದಾಪುರ.

ಏಲಂ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ನಮ್ಮ ಬೇಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡಕೊಂಡ ಸಾಲವನ್ನು ರಿಜಿಸ್ಟ್ರಿಪಡಿಸಿ ಕೊಟ್ಟಿಲ್ಲೂ ಮರುಪಾವತಿ ಮಾಡದೆಯಿರುವುದರಿಂದ, ಸದ್ರಿಯವರು ಈಡಿಟ್ಟ ಚಿನ್ನಾಭರಣಗಳನ್ನು ಇದೇ ತಿಂಗಳ ತಾರೀಕು 28—8—1961ನೇ ಬುಧವಾರ ಗಂಟೆ 12ಕ್ಕೆ ಸರಿಯಾಗಿ ನಮ್ಮ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು.

ಮೇಲ್ಕಾಣಿಸಿದ ತಾರೀಕಿಗೆ ಏಲಂ ಮಾಡಲು ಅಸಾಧ್ಯವಾದಲ್ಲಿ ಪುನಃ ನೋಟೀಸು ಕೊಡದೆವು ಬೇಂಕಿಗೆ ಯುಕ್ತಕಂಡ ಇನ್ನಿತರ ದಿನಗಳಲ್ಲಿ ಏಲಂ ಮುಂದುವರಿಸಲಾದೀತು.

ಲೋನ್ ನಂಬ್ರ	ಸಾಲಗಾರನ ಹೆಸರು ಮತ್ತು ವಿಳಾಸ	ಸಾಲದ ಮೊಬಲಗು ರೂ. ನ.ಪೈ
35/951	ವಿಠ್ಠಲ ಸೆಟ್ಟಿ S/o. ಸೇಸಮ್ಮ ಸೆಟ್ತಿ, ಕೊಂಜಾಡಿ, ಬೈಲುಮನೆ, ಅಲ್ಬಾಡಿ ಗ್ರಾಮ, ಪೋಸ್ಟು ಅಡ್ಡಿ.	200 =00
36/1420	ಬಚ್ಚ ಪೂಜಾರಿ, N/o. ಬೆನ್ನ ಪೂಜಾರಿ, ವಾಡೇರ ಹೋಬಳಿ, ಬಗ್ಗಿ ಮನೆ, ಪೋಸ್ಟು, ಕುಂದಾಪುರ.	50 =00
36/1485	ಯು. ಜಿ. ನಾಸುದೇವ ಮೇಲಾಡಿ, S/o. ನಾರಾಯಣ ಮೇಲಾಡಿ, ಪೋಸ್ಟು ಉಪ್ಪಿನಕುದ್ರು.	180 =00
36/1659	ವಿಠ್ಠಲ ಸೆಟ್ಟಿ, N/o. ಗೋವಿಂದ ಸೆಟ್ಟಿ, ಕಂಬಗೆ ಮನೆ, ಬೆಳ್ಳಾರು ಗ್ರಾಮ, ಪೋಸ್ಟು, ಕೋಟ.	135 =00
36/1693	ಎ. ಸಂಜೀವ ಸೆಟ್ಟಿ, S/o. ಚತ್ತಾರು ಮಂಜಯ ಸೆಟ್ಟಿ, ಜವುಳಿ ವ್ಯಾಪಾರಿ, ಕುಂದಾಪುರ ಪೋಸ್ಟು.	420 =00

Office of the Catholic Bank, Ltd.,
Coondapoor, 7-8-1961.

I. Menezes,
Agent.

ನಮ್ಮ ಗ್ರಾಹಕರಿಗೂ ಹಿತೈಷಿಗಳಿಗೂ
ಸ್ವಾತಂತ್ರ್ಯದಿನೋತ್ಸವದ ಶುಭಾಶಯಗಳು

ಅತ್ಯಾಧುನಿಕ ಮಾದರಿಯ ವಿವಿಧ

ಕೈಮಗ್ಗ, ಗಿರಣಿ ಮತ್ತು ಸಿಲ್ಕ್ ಬಟ್ಟೆಗಳು

ಸದಾ ದೊರೆಯುವ ವೈವಿಧ್ಯಪೂರ್ಣ ಜವುಳಿ ಮಳಿಗೆ

ಮಿತದರ! ಖಾತ್ರಿ ಮ್ಯಾಲು! ನವಾಕರ್ಷಣೆ! ಹಾರ್ದಿಕ ಸ್ವಾಗತ—

ಸುಂದರ ಕ್ಲೋತ್ ಸ್ಟೋರ್ಸ್

ಕೆಥೊಲಿಕ್ ಬೇಂಕಿನ ಎದುರು

ಉಡುಪಿ

ಸ್ಥಾಪನೆ: 1924

ದಿ ಕರ್ನಾಟಕ ಬೇಂಕ್ ಲಿಮಿಟೆಡ್

(ಶೆಡ್ಯೂಲ್ಡ್ ಬೇಂಕ್)

ರಿಜಿಸ್ಟರ್ಡ್ & ಹೆಡ್ ಆಫೀಸು: ಡೊಂಗರಕೇರಿ, ಮಂಗಳೂರು—3.

ಈ ಕೆಳಗಿನ ಏರಿಸಿದ ಬಡ್ಡಿದರಗಳಲ್ಲಿ ಠೇವಣಾತಿಗಳನ್ನು ಸ್ವೀಕರಿಸಲಾಗುವುದು.

ಒಂದರಿಂದ ಎರಡು ತಿಂಗಳುಗಳ ವರೆಗೆ	....	ಸಾ|| ಸೇಕಡಾ 3-75	ನ.ವೈಸೆ
ಮೂರರಿಂದ ಐದು ತಿಂಗಳುಗಳ ವರೆಗೆ	....	,, 4-25	,,
ಆರು ತಿಂಗಳುಗಳಿಂದ 12 ತಿಂಗಳುಗಳ ವರೆಗೆ	....	,, 4-50	,,
12 ತಿಂಗಳು ಮಿಕ್ಕಿ 24 ತಿಂಗಳುಗಳ ವರೆಗೆ	....	,, 4-75	,,
24 ತಿಂಗಳು ಮಿಕ್ಕಿ 48 ತಿಂಗಳುಗಳ ವರೆಗೆ	....	,, 5 00	,,
48 ತಿಂಗಳುಗಳಿಗೆ ಮಿಕ್ಕಿ	....	,, 5-25	,,

ಸೇವಿಂಗ್ಸ್ ಬ್ಯಾಂಕ್ ಬಡ್ಡಿ ದರವನ್ನು
ಸಾ. ಸೇಕಡ 2½% ರಿಂದ 3¼%ಗೆ ಏರಿಸಲಾಗಿದೆ.

THE KARNATAKA BANK LIMITED.

ಸ್ವಾತಂತ್ರ್ಯ ಚಿರಾಯುವಾಗಲಿ

ಸರ್ವರಿಗೂ

ಸ್ವಾತಂತ್ರ್ಯದಿನದ ಶುಭಾಶಯಗಳು

ನವಯುಗ ಪ್ರೆಸ್, ಉಡುಪಿ.

ಪುತ್ತೂರು ಡಿ ಮುನ್ಸಿಫ್ ಕೋರ್ಟ್‌ನಲ್ಲಿ

R. E. P. 158/1961 in O. S. 18/1946.

ಕಲ್ಲೂರು ಲಕ್ಷ್ಮೀನಾರಾಯಣ ರಾವ್ —ಅರ್ಜಿದಾರವಾದಿ

ಮತ್ತು

ಗಂಗಯ್ಯ ಗೌಡ, ಕಾಂತಪ್ಪ ಗೌಡರ ಮಗ, ಕುಟುಂಬದ ಯಜಮಾನ ಮತ್ತು ಆಡಳ್ತೆದಾರ, ಬೆಳ್ತಂಗಡಿ ತಾಲೂಕು ಮಲವಂತಿಗೆ ಗ್ರಾಮ. —ಎದ್ರಿ ದಿವಾ.

ಎದ್ರಿಗೆ ಕೋರ್ಟುಹುಕುಂ ಪ್ರಕಾರ ಈ ಮೂಲಕ ತಿಳಿಸುವುದೇನೆಂದರೆ.

ವಾದಿಯು ಮೇಲಿನ ದಿಕ್ಕಿ ಪ್ರಕಾರ ತನಗೆ ಬರಕಕ್ಕ ಆ್ಯವೇಜುಗಳ ವಸೂಲಿ ಬಗ್ಗೆ ನಿಮ್ಮ ಮೇಲೆ ಮಾಡಿದ ಮೀಲ್ಕಂಡ ಅವ್ಲಜ್ಜಾರಿಯಲ್ಲಿ ನಿಮ್ಮ ಮೂಲ ಹಕ್ಕಿನ ಬಾಬ್ತು ಮಲವಂತಿಗೆ ಗ್ರಾಮದ ಸರ್ವೆ ನಂಬ್ರ 200/2, 3, 4A, 6B, 201/2 ಮತ್ತು 202/2 ನೇ ಆಸ್ತಿಗಳನ್ನು ಜಪ್ತಿ ಪಡಿಸಿರುವುದರಿಂದ ನೀವು ಕೋರ್ಟಿನಿಂದ ಇಸ್ಕೊಂಡು ಹುಕುಂ ಕೊಡುವ ತನಕ ಸದ್ರಿ ಮೇಲಂಕ್ಕಿದ ಆಸ್ತಿಗಳನ್ನು ಯಾವುದೇ ವಿಧವಾದ ಪರಸ್ವಾಧೀನ ಮಾಡ ಕೂಡದಾಗಿಯೂ ಮತ್ತು ಸದ್ರಿ ಅವ್ಲಜ್ಜಾರಿಯು ತಾ. 31—8—61ಕ್ಕೆ ಇಟ್ಟಿರುವುದರಿಂದ ನೀವು ಸದ್ರಿ ದಿವಸ ಪುತ್ತೂರು ಕೋರ್ಟು ಮುಂದೆ ಸ್ವತಹ ಇ ವಕೀಲರದ್ವಾರಾ ಹಾಜರಾಗಿ ಉತ್ತರಿಸಿ ಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರು ಹಾಜರಿಯಿಂದ ತೀರ್ಮಾನಿಸಲಾದೀತು ಎಂತ ಈ ಮೂಲಕ ತಿಳಿಸೋಣಾಗುತ್ತದೆ.

ಪುತ್ತೂರು, ತಾ. 10—8—1961. (Sd.) C. S. Shastry,
Vakil for Petitioner.

ತಾಯಿಯಂತೆ ಮಗು....
ಆರೋಗ್ಯಕರವಾದ ಬಾಳಿನ ರಹಸ್ಯ ಆಹಾರದಲ್ಲಿ

ಶಂಖ ಮಾರ್ಕ್

ಮೈದಾ-ಸಜ್ಜಿಗೆ-ಹಿಟ್ಟು

ಇವುಗಳಿಂದ ತಯಾರಾದ ಗೋಧಿಯ ಆಹಾರ ಪದಾರ್ಥಗಳು ನಿಮಗೂ ನಿಮ್ಮ ಸಂತತಿಗೂ ಶಕ್ತಿ ಮತ್ತು ಚೇತನಗಳನ್ನು ಕೊಡುತ್ತವೆ. ಗೋಧಿ ಆಹಾರಪದಾರ್ಥಗಳ ಆವಶ್ಯಕತೆಯನ್ನು ಎಲ್ಲರೂ ತಿಳಿದುಕೊಂಡುಬಿಟ್ಟರು.

ಮನೆಗಳೂ ಉಪಾಹಾರ ಗೃಹಗಳೂ ಬೇಕರಿಗಳೂ ಮತ್ತು ಇತರರೂ ಇದನ್ನೇ ಬಯಸುತ್ತಾರೆ. ನೀವೂ ಪಡೆದುಕೊಂಡು ಲಾಭಗಳಿಸಿರಿ.

ಶಂಖ ಮಾರ್ಕ್

ಮೈದಾ-ಸಜ್ಜಿಗೆ-ಹಿಟ್ಟು

(ಕೈಗಳ ಉಪಯೋಗವಿಲ್ಲದೆ ಆಧುನಿಕ ಯಂತ್ರಗಳಿಂದ ತಯಾರಾದುದು)

ಮೀನಾಕ್ಷಿ ರೋಲರ್ ಫ್ಲೋರ್ ಮಿಲ್ಸ್,

ವಿಳಂಗುಡಿ — — ಮದುರೈ.

(ನಮ್ಮ ಸ್ಟಾಕಿಸ್ಟರು)

1. ಕೆ. ವಿ. ಅಂಬಿ ಅಯ್ಯರ್ ಸನ್ & ಅರ್. ಮತ್ತು ಮಾಣಿಕಂ ಚೆಟ್ಟಿಯಾರ್, ಕರೂರ್ (ಫೋನ್ ನಂ. 80)
2. ಅರ್ ದೇವೇಂದ್ರನ್, 122, ಎಸ್ ಎಸ್. ದೇವಸ್ಥಾನ ಬೀದಿ, ಪೊಲ್ಲಾಚಿ, (ಫೋನ್ ನಂ. 141. ತಂತಿ: ARRSLE
3. ಎಸ್. ರಾಮನಾಥ ಚೆಟ್ಟಿಯಾರ್, ಜವಾಹರ್ ಬಜಾರ್, ಕರೂರ್. (ಫೋನ್ ನಂ 149)
4. ಎಂ ವಿ ಪಂಡಯೂಥೆನ್ ಚೆಟ್ಟಿಯಾರ್, 260, ದೊಡ್ಡಪೇಟೆ ಬೀದಿ, ಧಾರಾಪುರಂ.
5. ಎಸ್. ಕೆ. ಸುಬ್ರಮಣ್ಯ ಚೆಟ್ಟಿಯಾರ್, ರಾಮನಾಥಪುರಂ
6. ಎಸ್. ಕೃಷ್ಣನ್ ಚೆಟ್ಟಿಯಾರ್, ಮೇಲಿನ ರಥಬೀದಿ, ದಿಂಡಿಗಲ್, (ತಂತಿ: ರಾಜಾ ಸ್ಟೋರ್ಸ್, ಫೋನ್ ನಂ. 83.)
7. ಎಸ್. ವಿ. ಕೆ. ಮಾಣಿಕವಾಸಕ ನಾಡಾರ್, 37, ಪಿ. ಕೆ ರೋಡ್, ಮೀನಾಕ್ಷಿಪುರಂ, ತಿರುನಲ್ವೇಲಿ.
8. ವಿ ಎಂ ಕೃಷ್ಣನ್ ಚೆಟ್ಟಿ ಬ್ರದರ್ಸ್, ಶೇಷಾ ಪೇಟೆ. ಸೇಲಂ, (ತಂತಿ: ಗಣಪತಿ. ಫೋನ ನಂ. 4)
9. ಟಿ. ಎಂ. ಎಂ. ತಪಿಕ್ಕೋದಿ ನಾಡರ್ ಸನ್ಸ್, ಬಜಾರ್, ವಿರುಧುನಗರ್ (ತಂತಿ: ಕಾಫಿ ಫೋನ್ ನಂ 44.
10. ಎಸ್. ಸ್ವಾಮಿನಾಥ ಪಿಳ್ಳೈ ಸನ್ ತಂಕ ಮಾಡ್ಡಿ ಬೀದಿ, ಪುದುಕೋಟೆ. (ತಂತಿ: ಲಕ್ಕಿ ಫೋನ್ ನಂ. 18.)
11. ಆಪ್ಪೈಯ್ ಮಳಿಗೆ, ದಕ್ಷಿಣ ಬಾಗಿಲು, ತಿರುಚಿರಪಳ್ಳಿ (ತಂತಿ: ಆಪ್ಪೈಯ್ ಫೋನ್ ನಂ. 115.)
12. ನ್ಯೂ ಇಂಡಿಯಾ ಟ್ರೇಡರ್ಸ್, ವೀರಭದ್ರ ದೇವಸ್ಥಾನ ಬೀದಿ, ನಾಗಪಟ್ಟಣ. (ತಂತಿ: ಟ್ರೇಡರ್ಸ್, ಫೋನ್ ನಂ. 120)
13. ಎಸ್. ಎಸ್. ಎ ಎಂ. ಪಳನಿಗ ನಾಡಾರ್, 107, ದಕ್ಷಿಣ ರಾಜ ಬೀದಿ, ತೂತ್ತುಕುಡಿ (ತಂತಿ: ಶಿವಕಾಮಿ; ಫೋನ್ ನಂ. 218.)
14. ಎಸ್. ಎಸ್. ಎ. ಎಂ ಅರುಣಗ ನಾಡಾರ್, ದಕ್ಷಿಣ ರಾಜ ಬೀದಿ, ತೂತ್ತುಕುಡಿ. (ತಂತಿ: ಮೂರ್ತಿ. ಫೋನ್ ನಂ. 193.)
15. ರಾಮಲಕ್ಷ್ಮಣ್ & ಕೋ., ಕಲ್ಲುಕಟ್ಟು, ಕಾರೈಕುಡಿ.
16. ತಿರುಚಿ ರೈಸ್ ಸಪ್ಲೈಸ್ ಆರ್ಕೇಡ್ಸ್, ಎಂ. ಎಲ್. ರೋಡ್, ಕೊಟ್ಟಾಯಂ. (ತಂತಿ:CASH)
17. ಎಂ. ಎಸ್ ಪುಗಳಗಿರಿ ನಾಡಾರ್ ಸನ್ಸ್, ಪಳನಿ.
18. ಮಯೂರಂ ಕಮ್ಯುನಿಟಿಯಲ್ ಟ್ರೇಡರ್ಸ್, ಮಯೂರಂ
19. M/s. ಕಲ್ಲ ಪೆರುಮಾಲ್ & ಲಕ್ಷ್ಮೀನಾರಾಯಣನ್ ಕೋ., 164 ಪಕ್ಷಿಣ ರಥಬೀದಿ, ಚಿದಂಬರಂ.
20. ಕುಮಾರನ್ ಪ್ರೊವಿಜನ್ ಸ್ಟೋರ್ಸ್, ವಿಜಯಪುರಂ, P. O. ತಿರುವರೂರ್.
21. ಎ. ಹಾಜಿ ಸೊಹಿದ್ದೀನ್, 856, ಕೆಳಗಿನ ಬಾಗಿಲು, ತಂಜಾವೂರು.
22. M/s. ಹಾಜಿ ಎಂ. ಮದಮರ್, ಕಾಸೀಮ್ ಕುಂಭಕೋಣಂ.
23. M/s. ಲಕ್ಷ್ಮೀ ವಿಲಾಸ್, ದೊಡ್ಡ ಪೇಟೆ, ಕುಂಭಕೋಣಂ.

ಟಿಫಾ ಏಜಂಟ್: ಎನ್. ಶಿವಣ್ಣ,
48, ಕೆಳ ಆವನಿಮೂಲ ಬೀದಿ, ಮಧುರೈ.
ತಂತಿ: CHANAMATAR. ಫೋನ್: 2302.

ಆರೋಗ್ಯ ವಾತಾವರಣ!

ಅತ್ಯಾಧುನಿಕ ವ್ಯವಸ್ಥೆ!!

ನಿಮ್ಮ ಕಲ್ಪನೆಗಿಂತ ಮಿಗಿಲಾದ

ಕಲ್ಪನಾ

ತಾ. 15-8-'61ರಿಂದ ಪ್ರಾರಂಭ

ಸುಸಜ್ಜಿತವಾದ ವಸತಿಗೃಹ

"ಉಪೇಂದ್ರ ಬಾಗ್"

ಉಡುಪಿ, ದ. ಕ.

"ಭಾರತ ಸ್ವಾತಂತ್ರ್ಯೋತ್ಸವ"ದ

ಇಂದಿನ ಶುಭದಿನದಲ್ಲಿ ದೇಶದ ಸರ್ವತೋಮುಖ ಅಭಿವೃದ್ಧಿಯಲ್ಲಿ ನಮ್ಮ ಅಂಶದಾನವನ್ನು ಸಲ್ಲಿಸುವೆವೆಂಬ ಪ್ರತಿಜ್ಞೆಯ ನವೀಕರಣದಿಂದ, ದೇಶದ ಜನತೆಗೆ ಮುಂದಕ್ಕೂ ಹೆಚ್ಚಿನ ಸೇವೆ ಸಲ್ಲಿಸುವೆವೆಂದು ಸರ್ವರಿಗೂ ಹೃತ್ಪೂರ್ವಕ ಶುಭ-ಸಂತೋಷವನ್ನು ಬಯಸುವೆವು.

ಭಾರತ ಬೀಡಿ ವರ್ಕ್ಸ್

(ರಿಜಿಸ್ಟರ್ಡ್)

ನಂಬ್ರ **30** ಮಾರ್ಕಿನ

ಬೀಡಿಗಳ ತಯಾರಕರು

ಕಾರ್ಕಳ, ದ. ಕ.

ಭಾರತ ಸ್ವಾತಂತ್ರ್ಯ ದಿನದ ಶುಭಕಾಲದಲ್ಲಿ ನಮ್ಮ ಅಪಾರ ಗ್ರಾಹಕರಿಗೂ ಪ್ರೋತ್ಸಾಹಕರಿಗೂ ಹಿತೈಷಿಗಳಿಗೂ ಮನಃಪೂರ್ವಕ ಶುಭಾಶಯಗಳನ್ನು ಸಲ್ಲಿಸುತ್ತೇವೆ.

'ಅನುಭವವೇ ಅಮೃತ'

ನಾಡಿನ ಜನತೆಗೆ **40** ವರ್ಷಗಳಿಂದ ಅನುಭವಪೂರ್ಣ ಸೇವೆ ಸಲ್ಲಿಸುತ್ತಿರುವ ಚಿನ್ನ ಮತ್ತು ವಜ್ರಗಳ ಆಧುನಿಕ ತವರು ಮನೆ—

ಕೆ. ಆರ್. ಕೆ. ಶೇಟ್
ಡಯಮಂಡ್ ಮಾರ್ಟ್

(ಚಿನ್ನ ಮತ್ತು ವಜ್ರದ ವ್ಯಾಪಾರಿಗಳು ಹಾಗೂ ಬ್ಲೂಯೊಗರ ವಜ್ರಗಳ ಸ್ಪೆಶ್ಯಲಿಸ್ಟರು)

ಗವರ್ನಮೆಂಟ್ ಕಾಲೇಜ್ ಎದುರುಗಡೆ, ಮಂಗಳೂರು

ಮ್ಯಾನೇಜಿಂಗ್—ಕೆ. ಕೆ. ಆರ್. ಶೇಟ್

Tele: "BLUEYAGAR" : : . Phone No 374.

ಸ್ಥಾಪನೆ: 1919.

ದಿ ಕೆನರಾ ನರ್ಸರಿ ರಿಸರ್ಚ್ ಗಾರ್ಡನ್ಸ್

ಪೋಸ್ಟ್: ಉಳಿಯಾರಗೋಳಿ, ಕಾಪು, ದ. ಕ.

ಸ್ಥಾಪನೆ: 1914

45 ವರ್ಷಗಳ ಅನುಭವದಿಂದ ಸಿದ್ಧಪಡಿಸಿದ ವಿವಿಧ ಮಾವು, ಚಿಕ್ಕು, ಪೇರಳೆ, ಅಂಜೂರ, ಪನ್ನೇರಳೆ, ಜಂಬುನೇರಳೆ, ಸೀತಾಫಲ, ಮಾದಾಳ, ಸಕ್ಕರೆಕಂಚು, ಕತ್ತಳೆ, ಪಪ್ಪಾಯಿ, ದೀಪುಹಲಸು, ತೆಂಗು, ಒಡಂಬ, ಕಾಫಿ, ಅನಾನಾಸು, ಬಾಳೆ ಕಶಿಗಿಡಗಳೂ ಅಲ್ಲದೆ 26ಜಾತಿ ಕಶಿಗುಲಾಬಿ ಗಿಡಗಳೂ ನಮ್ಮಲ್ಲಿ ಮಾರಾಟಕ್ಕೆ ಸಿದ್ಧವಿವೆ.

ದಕ್ಷಿಣ ಕನ್ನಡದಲ್ಲೇ ಪ್ರಸಿದ್ಧವಾದ ನಮ್ಮಿಗಿಡಗಳನ್ನು ಭಾರತದಾದ್ಯಂತ ಉಪಯೋಗಿಸಲಾಗುತ್ತದೆ. ಅಲ್ಲದೆ ಸರಕಾರಿ ಪ್ರದರ್ಶನಗಳಲ್ಲಿ ಪ್ರಶಸ್ತಿಗಳನ್ನೂ ತುಂಬಾ ಪದಕಗಳನ್ನೂ ಪಡೆದಿವೆ.

ನಮ್ಮ ಕೆನರಾ ನರ್ಸರಿ ಗಿಡಗಳೆಂದು ಹೇಳಿ ಮೋಸ ಮಾಡುವವರಿರುವುದರಿಂದ ಖಾತ್ರಿಯಾಗಿ ನಮ್ಮಿಂದಲೇ ಪಡಕೊಳ್ಳಿರಿ.

ಒಮ್ಮೆ ಸಂದರ್ಶಿಸಿ ತೃಪ್ತಿ ಪಡೆಯಿರಿ.

THE MYSORE SUGAR COMPANY, LIMITED

HEAD OFFICE:
Shree Jayachamaraja Wadiyar Road,
BANGALORE-2.

Factory and Distillery:
MANDYA (Mysore State)

Manufacturers of
PURE WHITE CRYSTAL SUGAR

Other products Include:
Delicious Golden Syrup and a wide range of Alcohols— Absolute, Rectified, Denatured and Potable.

Best of Automobile Service offered by the Engineers of

MODERN GARAGE
UDIPI.

Your Cars and Trucks made new by the most modern and experienced Body Builders & spray painters

Phone: 65 Grams: KARNAD

ಗ್ರಾಹಕರ ಬೆಂಬಲ ಮತ್ತು ನಂಬಿಕೆಯೇ ಬೇಂಕಿನ ಜೀವಾಳ. ಆದುದರಿಂದಲೇ ನಾವು ಕಳೆದ 30 ವರ್ಷಗಳಲ್ಲಿ ದಿನೇ ದಿನೇ ಅಭಿವೃದ್ಧಿ ಹೊಂದುತ್ತಲಿದ್ದೇವೆ.

ಸಾರ್ವಜನಿಕರು ಹೆಚ್ಚು ಹೆಚ್ಚಾಗಿ ನಮ್ಮ ಗ್ರಾಹಕರಾಗ ಬೇಕೆಂಬುದೇ "ಸ್ವಾತಂತ್ರ್ಯೋತ್ಸವದ ದಿನ"ದ ಸಲುವಾಗಿ ನಮ್ಮ ಸಂದೇಶ.

ನಿಮಗೆ ನಮ್ಮ ಸಹಾಯವು ಏನಾದರೂ ಬೇಕಾಗಿದ್ದಲ್ಲಿ ನಿಮ್ಮ ಸಮೀಪದ ನಮ್ಮ ಶಾಖೆಯಲ್ಲಿ ದಯಮಾಡಿ ವಿಚಾರಿಸಿರಿ.

ದಿ ವಿಜಯ ಬೇಂಕ್ ಲಿಮಿಟೆಡ್,
(ಶೆಡ್ಯೂಲ್ಡ್ ಬೇಂಕ್)

ರಿಜಿಸ್ಟರ್ಡ್ ಆಫೀಸು: ವಿಜಯ ಬೇಂಕ್ ಬಿಲ್ಡಿಂಗ್,
ಲೈಟ್ ಹೌಸ್ ಹಿಲ್‌ರೋಡ್,
ಮಂಗಳೂರು-3.

ಸ್ಥಾಪನೆ:—1931.] * [ಫೋನ್ ನಂ. 240.

ದಿ ಸದ್ವೈದ್ಯಶಾಲಾ (ಪ್ರೈವೆಟ್) ಲಿಮಿಟೆಡ್,
ನಂಜನಗೂಡು. (ಮೈಸೂರು ಡಿಸ್ಟ್ರಿಕ್ಟು)

48 ವರ್ಷಗಳಿಗೆ ಮೇಲ್ಪಟ್ಟು ಜನತಾ ಸೇವೆಯಲ್ಲಿ ತೊಡಗಿರುವ
ಈ ಔಷಧ ಕಾರ್ಖಾನೆಯಲ್ಲಿ
ರೋಗಗಳನ್ನೆಲ್ಲಾ ನಾಶಗೊಳಿಸುವ
ಮತ್ತು
ಆರೋಗ್ಯವನ್ನು ಸಂರಕ್ಷಿಸುವ
ಚೂರ್ಣ, ಲೇಹ, ತೈಲ, ಘೃತ, ಆಸವ, ಅರಿಷ್ಟ,
ಅರ್ಕ, ಗುಟಿಕಾ, ಕ್ವಾಥ, ಅಂಜನ, ಲೇಪ
ಮುಂತಾದ
ಸಿದ್ಧೌಷಧಗಳು
ಮತ್ತು
ಭಸ್ಮ, ಸಿಂಧೂರ, ಕೂಪೀಪಕ್ವರಸಗಳೂ
ಅತ್ಯಾಧುನಿಕ ಕ್ರಮದಲ್ಲಿ ಪೂರ್ಣ ಸತ್ವಯುತವಾಗಿ
ಭಾರತೀಯ ಆಯುರ್ವೇದ ಶಾಸ್ತ್ರದ ಆಧಾರದ ಮೇಲೆ
ನಿತ್ಯವೂ ತಯಾರಾಗುತ್ತಲಿವೆ.
—: ಔಷಧ ಸೂಚೀಪತ್ರಕ್ಕೆ ಈ ದಿನವೇ ಬರೆಯಿರಿ :—
ಶಾಖೆಗಳು:— ಮೈಸೂರು, ಬೆಂಗಳೂರು, ಮಂಗಳೂರು.

ಸೋಲ್ ಏಜಂಟರು: (ಕನ್ನಡಸೀಮೆ ಬಿಟ್ಟು)
ದಿ ಯುನೈಟೆಡ್ ಕನ್ಸರ್ನ್, 54, ಬಂದರ್ ಸ್ಟ್ರೀಟ್, ಮದ್ರಾಸ್.

Regd. No. B. G. 176
LICENCE NO. 31
Licensed to Post without Prepayment.

"ಸ್ವಾತಂತ್ರ್ಯವೆನ್ನುಸಿರು, ಅದುವೆ ಎನ್ನಯ ಜೀವ ।
ಅದಕಿಂತ ಸಗ್ಗ ಮೇಲಿನದಹುದೆ? ಅರಿಯಲಾರೆ ॥
ವ್ಯಕ್ತಿಹಿತ ತ್ಯಾಗದಿಂ ನಾಡಹಿತ ಸಾಧಿಸುವ ।
ಜನತೆ ದೇವತೆಗಳೆಂಬುದನು ನಾ ಮರೆಯಲಾರೆ ॥"

"ಸ್ವಾತಂತ್ರ್ಯ ಚಿರಾಯುವಾಗಲಿ"

ಸಿಂಡಿಕೇಟ್ ಬ್ಯಾಂಕ್

ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸ್: ಮುಕುಂದ ನಿವಾಸ, ಉಡುಪಿ, (ಮೈಸೂರು ರಾಜ್ಯ)
ಸ್ಥಾಪನೆ: ೧೯೨೫.

Edited, Printed & Published by K H Shetty at the Navayuga Press, Udipi, S. India

40th year of publication. 24-8-1961 ೪೦ನೇ ವರ್ಷ

ಸಂಪುಟ ೪೧ Vol. 49

ನವಯುಗ

ಶ್ರೀ ಸಂಚಿಕೆ ೪೯ No. 46

ಬೆಲೆ 0=13

ಪ್ರಚಲಿತ ಪ್ರಸಂಗ:-

ತಾರಾಸಿಂಗರ ಅನಶನವ್ರತ

ಪ್ರಾಂತೀಯತೆ, ಭಾಷೀಯತೆ, ಜಾತೀಯತೆಗಳ ವಿರುದ್ಧ ಹೊರಾಡ ಬೇಕಾದ ಭಾರತದಲ್ಲಿ ಅವು ಮತ್ತೂ ಮತ್ತೂ ಬಲಿಯುತ್ತ ಹೋಗುವ ಘಟನೆಗಳು ನಡೆಯುತ್ತಿವೆ ಇದಕ್ಕೊಂದು ಜ್ವಲಂತ ನಿದರ್ಶನ ಮಾಸ್ಟರ್ ತಾರಸಿಂಗರ ಆಮರಣ ಅನಶನವ್ರತ.

ಭಾರತದ ಸ್ವಾತಂತ್ರ್ಯ ದಿನದ ಹದಿನೈದನೆಯ ಆಚರಣೆಯ ದಿನವಾದ ಆಗೋಸ್ತು ಹದಿನೈದರಿಂದ ಪ್ರತ್ಯೇಕ ಪಂಜಾಬಿ ಸುಬಾದ ಬೇಡಿಕೆಯನ್ನು ಮುಂದಿಟ್ಟು ಅಕಾಲಿ ನಾಯಕ ಮಾಸ್ಟರ್ ತಾರಾಸಿಂಗರು ಕೊನೆಗೂ ತನ್ನ ಆಮರಣ ಅನಶನವ್ರತವನ್ನು ಪ್ರಾರಂಭಿಸಿಯೇ ಬಿಟ್ಟರು. ಇದೇ ಉದ್ದೇಶದಿಂದ ಕಳೆದ ವರ್ಷ ದಶಂಬರ ೧೮ರಂದು ಇನ್ನೊಬ್ಬ ಅಕಾಲಿ ಧುರೀಣ ಫತ್ತೇಸಿಂಗರು ಉಪವಾಸವನ್ನು ಮಾಡಿದ್ದರು. ಪ್ರಧಾನಿ ನೆಹರುರವರು ಈ ಕುರಿತು ಮುಕ್ತ ಮನಸ್ಸಿನಿಂದ ಮಾತುಕತೆ ನಡೆಸಲು ತಾನು ಸಿದ್ಧನಿರುವೆನೆಂದೂ ಸಿಂಗರು ತನ್ನ ಅನಶನವ್ರತವನ್ನು ನಿಲ್ಲಿಸಬೇಕೆಂದೂ ಕೇಳಿಕೊಂಡ ಮೇರೆಗೆ ೨೩ ದಿನಾನಂತರ ಇದೇ ವರ್ಷದ ಜನವರಿ ೯ ರಂದು ಅವರು ತನ್ನ ವ್ರತವನ್ನು ನಿಲ್ಲಿಸಿದ್ದರು. ಆಗ, ನೆಹರು—ಫತ್ತೇಸಿಂಗರ ಸಂದರ್ಶನ ಹಾಗೂ ಬಿಚ್ಚು ಮನಸ್ಸಿನ ವಿಚಾರವಿನಿಮಯದಿಂದ ಸಮಸ್ಯೆಯು ಬಗೆಹರಿಯ ಬಹುದೆಂಬ ಆಶಯ ಅಕಾಲಿದಳದವರಲ್ಲಿ ಇದ್ದಿತ್ತು. ಆದರೆ, ಅವರ ಆಕಾಂಕ್ಷೆಯು ಈಡೇರಲಿಲ್ಲ; ಇದರಿಂದಾಗಿಯೇ ಮಾಸ್ಟರ್ ಸಿಂಗರೂ ಅದೇ ಮಾರ್ಗವನ್ನು ಅನುಸರಿಸ ಬೇಕಾಗಿ ಬಂದುದು ಭಾರತದ ದುರ್ದೈವ; ಮುಖ್ಯವಾಗಿ ಅಕಾಲೀ ನಾಯಕರ ದುರದೃಷ್ಟ.

ಭಾಷೆಯ ತಳಹದಿಯಲ್ಲಿ ಭಾರತದ ರಾಜ್ಯಗಳನ್ನು ಪುನಾರಚಿಸುವುದು ನಮ್ಮ ದೇಶದ ಹಲವಾರು ಸಮಸ್ಯೆಗಳ ಪರಿಹಾರಕ್ಕೆ ತಾರಕವೆಂದು ಸ್ವಾತಂತ್ರ್ಯಕ್ಕೆ ಮೊದಲು ತಿಳಿದುಕೊಂಡಿದ್ದ ಕಾಂಗ್ರೆಸ್ಸು ಅಂದು ಈ ಬಗ್ಗೆ ಆಶ್ವಾಸನೆಯನ್ನೂ ಜನತೆಗೆ ನೀಡಿತ್ತು. ಆದರೆ, ಪ್ರತ್ಯಕ್ಷ ಅನುಭವವಿಲ್ಲದ ಆ ಸಮಯದಲ್ಲಿ ಇತ್ತ ಆಶ್ವಾಸನೆಯನ್ನು ಅಧಿಕಾರಕ್ಕೆ ಏರಿದಾಗ ಪೂರೈಸಲು ಮೀನ ಮೇಷವೆಣಿಸಬೇಕಾಯಿತು. ಹಾಗಿದ್ದರೂ ಪೊಟ್ಟಿಲು. ಶ್ರೀ ರಾಮುಲು ಆಂಧ್ರರಾಜ್ಯ ಸ್ಥಾಪನೆಗಾಗಿ ಉಪವಾಸವನ್ನು ಆರಂಭಿಸಿ, ತನ್ನ ಪ್ರಾಣಾರ್ಪಣೆ ಮಾಡಿದುದರಿಂದ ಆಂಧ್ರ ಪೂರ್ರೂಪುಗೊಂಡುದಲ್ಲ, ರಾಜ್ಯ ಪುನರ್ಘಟನೆಗೂ ಇದು ಕಾರಣವಾಯಿತು. ಸ್ವಾತಂತ್ರ್ಯ ಲಭಿಸಿದ ಆರನೆಯ ವರ್ಷದಲ್ಲಿಯೇ ಆಂಧ್ರ ರಾಜ್ಯವನ್ನು ಸ್ಥಾಪಿಸುವ ಘೋಷಣೆ ನಡೆಯಿತು. ಭಾರತದ ವಿವಿಧ ರಾಜ್ಯಗಳು ಪುನಾರಚಿತವಾಗಿ ಈಗ ಐದು ವರ್ಷಗಳು ಕಳೆದುವು.

ಅಂದಿನಿಂದ ಇದು ವರೆಗೆ ಗಳಿಸಿದ ಅನುಭವದಿಂದ ಅಂದು ನಡೆದುದು ತಪ್ಪು ಎಂಬುದು ಕಾಂಗ್ರೆಸ್ ನಾಯಕರಿಗೆ ಮನದಟ್ಟಾಗಿದೆ. ಹಾಗಿದ್ದರೂ ಹಲವಾರು ಒತ್ತಾಯ ಮತ್ತು ಸಮಸ್ಯೆಗಳಿಗೆ ಕಟ್ಟುಬಿದ್ದು ದ್ವಿಭಾಷಾ ಮುಂಬಯಿ ರಾಜ್ಯವನ್ನೂ ವಿಭಜಿಸಲು ಕಾಂಗ್ರೆಸ್ಸು ಒಪ್ಪಲೇ ಬೇಕಾಯಿತು; ತಿಳಿತಿಳಿದೂ ಅಪರಾಧವನ್ನು ಮಾಡಲೇ ಬೇಕಾಯಿತು. ಆಂಧ್ರ ರಾಜ್ಯ ಸ್ಥಾಪನೆಯಾಗಿ, ರಾಜ್ಯ ಪುನರ್ಘಟನೆಯಾಗುವ ವರೆಗಿನ ನಾಲ್ಕಾರು ವರ್ಷಗಳ ಕಾಲ ಮಾತ್ರ ಅಂತಾರಾಜ್ಯ ಶಾಂತಿ ಭಾರತದಲ್ಲಿ ನೆಲೆಸಿತ್ತು ಎಂದರೆ ಅತಿಶಯೋಕ್ತಿಯಲ್ಲ. ಅನಂತರ ಪುನರ್ಘಟನಾಕಾರ್ಯ ಸಮರ್ಪಕವಾಗಿಲ್ಲವೆಂಬ ದೂರು ಎಲ್ಲೆಲ್ಲೂ ಕೇಳಿ ಬಂದು ದೇಶದ ಆಂತರಿಕ ಶಾಂತಿಯನ್ನು ಭಂಗಿಸುತ್ತಿರುವುದು ಕಂಡು ಬರುತ್ತದೆ.

ಈ ಏರುಪೇರುಗಳ ಸಂಬಂಧದಲ್ಲಿ ಈ ಐದು ವರ್ಷಗಳಲ್ಲಿ ಯಾವುದೇ ಹೊಂದಾಣಿಕೆಯು ನಡೆಯುವುದು ಅಸಾಧ್ಯವಾಯಿತು. ನಡುವೆಯೇ ವಿದರ್ಭ, ಮಹಾಜೆಹಲಿ ಮತ್ತು ಪಂಜಾಬಿ ಸುಬಾದ ಬೇಡಿಕೆಯು ಮುಂದುವರಿಯತೊಡಗಿತು. ಪಂಜಾಬೀ ಸುಬಾದ ಬೇಡಿಕೆಯು ಹಿಂದೆ ಭಾಷಾವಾದ ಮಾತ್ರವಲ್ಲ, ಸಿಖ್ಖರ ಜಾತಿವಾದವೂ ಇರುವುದರಿಂದ ಇದು ಅತಿ ಗಂಭೀರವಾದ ಬೇಡಿಕೆ ಎಂಬುದು ನಿಸ್ಸಂದೇಹ. ರಾಷ್ಟ್ರದಲ್ಲಿ ಜಾತೀಯ—ಪ್ರಾಂತೀಯವಾದಗಳು ದೂರವಾಗಿ ಏಕತೆಯ ಭಾವನೆಯು ಉನ್ನತವಾಗ ಬೇಕೆಂಬ ಆಶಾವಾದಕ್ಕೆ ಇದು ನಿಜವಾಗಿಯೂ ಕುಠಾರಪ್ರಾಯವೆನಿಸಿದೆ.

ಇಲ್ಲಿ ಇನ್ನೂ ಒಂದು ವಿಚಿತ್ರ ಸನ್ನಿವೇಶವಿದೆ. ಮಾಸ್ಟರ್ ತಾರಾಸಿಂಗರು ಪಂಜಾಬವನ್ನು ವಿಭಜಿಸಬೇಕೆಂದು ಪತ್ತಾಯ ತರುವುದಕ್ಕಾಗಿ ಆಮರಣ ಉಪವಾಸ ಪ್ರಾರಂಭಿಸಿದ್ದರೆ, ಅದರ ಮರುದಿನವೇ ಆ ದಿನ ದೇಶದ ಸ್ವಾತಂತ್ರ್ಯೋತ್ಸವ (ದಿನಾಚರಣೆಯೂಗಿದ್ದುದರಿಂದ) ಪಂಜಾಬ-ಹಿಂದೀರಕ್ಷಾ ಸಮಿತಿಯ ಅಧ್ಯಕ್ಷ ಸ್ವಾಮಿ ರಾಮೇಶ್ವರಾನಂದರೂ ಇದಕ್ಕೆ ವಿರುದ್ಧವಾಗಿ ಆಮರಣ ಅನಶನವ್ರತವನ್ನು ಪ್ರಾರಂಭಿಸಿದ್ದಾರೆ. ಇವರು ನವದೆಹಲಿಯಲ್ಲಿದ್ದಾರೆ. ಮಾಸ್ಟರ್ ತಾರಾಸಿಂಗರು ಉಪವಾಸ ಮಾಡುತ್ತಿರುವಲ್ಲಿಯೇ ಭಾರತೀಯ ನ್ಯಾಯಸಭಾ ಕುರುಕ್ಷೇತ್ರದ ಯೋಗರಾಜ ಸೂರ್ಯದೇವರು ೧೫ನೆ ಆಗಸ್ತದಂದೇ ಅನಶನವ್ರತಕ್ಕೆ ತೊಡಗಿದ್ದಾರೆ. ಇಂತಹ ಘಟನೆ ಇದು ವರೆಗಿನ ಇತಿಹಾಸದಲ್ಲಿ ಇರಲಾರದು.

"ಶ್ರೀ ಗಾಂಧಿಯವರು ಹಲವಾರು ಬಾರಿ ಉಪವಾಸ ಮಾಡಿದರು; ಆದರೆ ಯಾವುದೇ ವ್ಯಕ್ತಿಗತ ಲಾಭ ಇಲ್ಲದೇ ಸ್ವಾರ್ಥಕ್ಕಾಗಿ ಎಂದೂ ಅವರು ಹಾಗೆ ಮಾಡಲಿಲ್ಲ ಇದರಿಂದಾಗಿಯೇ ಪ್ರತಿಯೊಂದು ಉಪವಾಸವೂ ಅವರಿಗೆ ವ್ಯಕ್ತಿಗತ ಮತ್ತು ರಾಜನೈತಿಕ ಶಕ್ತಿಯನ್ನು ತಂದುಕೊಟ್ಟುವು" ಎಂದು ಅಮೆರಿಕನ್ ಪತ್ರಿಕಾಕರ್ತ ಶ್ರೀ ಜಾನ್ ಗುಂಥರ್ ಗಾಂಧೀಜಿಯವರ ಉಪವಾಸದ ಬಗ್ಗೆ ಆಡಿದುದನ್ನು ಈ ಸಂದರ್ಭದಲ್ಲಿ ಸ್ಮರಿಸಬಹುದು.

ಜಾನ್ ಗುಂಥರರ ಈ ಪರುಷಗಲ್ಲಿನಿಂದ ಇತರ ರಾಜಕೀಯ ಉಪವಾಸಗಳನ್ನು ಒರೆದು ನೋಡುವುದಾದರೆ, ಅನಶನದ ಮೌಲ್ಯವನ್ನು ತೂಕಮಾಡಬಹುದು. ಯತೀಂದ್ರನಾಥ ೬೪ ದಿನಗಳ ಕಾಲ ಜೇಲುಖಾನೆಯಲ್ಲಿ ಉಪವಾಸ ಮಾಡಿದ್ದರು; ಸ್ವಾತಂತ್ರ್ಯ ಸಂಗ್ರಾಮದ ವೇಳೆ ಅದೆಷ್ಟೋ ದೇಶಪ್ರೇಮಿಗಳು ಯತೀಂದ್ರನಾಥರಂತೆಯೇ ಅನಶನ ವ್ರತವನ್ನು ಕೈಗೊಂಡು ದೇಶಕ್ಕಾಗಿ ಪ್ರಾಣಾರ್ಪಣೆ ಮಾಡಿದ್ದರು.

"ನನ್ನ ಆತ್ಮ ಶುದ್ಧಿಗಾಗಿ ನಾನು ಉಪವಾಸ ಮಾಡುತಿದ್ದೇನೆ" ಎಂದು ಗಾಂಧೀಜಿಯವರು ಉಪವಾಸಾರಂಭದಲ್ಲಿ ಅನ್ನುತಿದ್ದರು. "ನನ್ನ ಅಂತರಾತ್ಮವು ನೀಡುವ ಪ್ರೇರಣೆಯು ಸತ್ಯ; ಒಡನಾಡಿ ಇಲ್ಲವೇ ಸರಕಾರವು ಅದನ್ನು ಒಪ್ಪಿಕೊಳ್ಳಲು ಸಿದ್ಧರಿಲ್ಲವೆಂದಾದರೆ, ನನ್ನಲ್ಲಿ ಏನೋ ಒಂದು ಕೊರತೆಯಿರುವುದು ಖಂಡಿತ. ಈ ಅಭಾವವನ್ನು ತುಂಬಿಸಿಕೊಳ್ಳುವುದಕ್ಕಾಗಿಯೇ ಆತ್ಮವನ್ನು ಶುದ್ಧೀಕರಿಸುವುದು ಉಚಿತ. ಆಗಲಾದರೂ ನನ್ನ ನಿಜ ಮತವನ್ನು ಎಲ್ಲರೂ ಒಪ್ಪಿಕೊಳ್ಳುವರು" ಎಂದು ಸಮರ್ಥಿಸುತಿದ್ದರು. ರಾಜನೈತಿಕ ಲಾಭ ನಷ್ಟಗಳಿಗಾಗಿ ಅವರು ಉಪವಾಸ ಮಾಡುತ್ತಿರದೆ, ಆತ್ಮದ ಪಾವಿತ್ರ್ಯ ಮತ್ತು ಶುದ್ಧಿಗಾಗಿ ಅದಕ್ಕೆ ಮನವೊತ್ತುತಿದ್ದರೆಂಬುದಿದರಿಂದ ಸ್ಪಷ್ಟವಾಗುವುದು.

ಹಾಗಿರುವಾಗ, ಪ್ರಜಾಪ್ರಭುತ್ವದಲ್ಲಿ—ದಾಸ್ಯ ಶೃಂಖಲಾ ಬಂಧಿತರಾಗಿರುವಾಗ ಅಲ್ಲ—ಇಂದು-ಅನಶನ ವ್ರತದಿಂದ ಯಾವುದೇ ಉದ್ದೇಶವನ್ನು ಪೂರ್ಣಗೊಳಿಸುವುದು ಉಚಿತವೇ ಹೇಗೆಂಬುದನ್ನು ಯೋಚಿಸಬೇಕು. ನಮ್ಮ ಸಂವಿಧಾನ ಪ್ರತ್ಯೇಕ ನಾಗರಿಕನಿಗೆ ಮತದಾನದ ಅಧಿಕಾರ ನೀಡಿದೆ. ಯಾವುದೇ ರಾಜಕೀಯ ಪ್ರಶ್ನೆಯ ಅನಶನದ ಬೇಲಿಟ್ಟಿನಿಂದ ಇತ್ಯರ್ಥವಾಗಬೇಕೆ? ಅಥವಾ ಸಾಮಾನ್ಯ ಮತದಾನದಿಂದ ಬಗೆಹರಿಯಬೇಕೆ?

ಅನಶನವೆಂಬುದೂ ಒಂದು ಅಸ್ತ್ರ. ಇದರ ಪ್ರಯೋಗದಲ್ಲಿಯೂ ಹಲವಾರು ಬಗೆಗಳಿವೆ. ಧಾರ್ಮಿಕ ಸಾಮಾಜಿಕ, ರಾಜನೈತಿಕ ಕ್ಷೇತ್ರಗಳಲ್ಲಿ ಇವುಗಳಿಗೆ ಮನ್ನಣೆ. ಧರ್ಮಲಾಭಕ್ಕಾಗಿ, ಸಮಾಜದಲ್ಲಿ ಪ್ರತಿಷ್ಠೆಯನ್ನು ಹೆಚ್ಚಿಸಲಿಕ್ಕಾಗಿ ಮತ್ತು ರಾಜಕೀಯ ಲಾಭಕ್ಕಾಗಿ ಮಾಡುವ ಉಪವಾಸ ಎಂದು ಇವುಗಳನ್ನು ವಿಸಂವಸಬಹುದು.

ಎಷ್ಟು ದಿನಗಳ ವರೆಗೆ ಮಾಡಿದರೂ ಶರೀರದ ಮೇಲೆ ಯಾವುದೇ ವಿಶೇಷ ಪ್ರಭಾವ ಬೀರದಿರುವ ಉಪವಾಸವೊಂದಿದೆ; ಇಂದಿನ ಕಾಲದಲ್ಲಿ ಇದು ಕಾರ್ಯರೂಪಕ್ಕೆ ಬರುವುದು ಅಸಾಧ್ಯ, ಉದ್ದೇಶ ಸಾಧನೆಯಾಗದೆ ಹೋದರೂ ಇಡಿಯ ದೇಶದಲ್ಲಿ ತನ್ನ ನಾಮವು ಪ್ರಚಾರಕ್ಕೆ ಬರುವುದೆಂಬ ಇರಾದೆಯಿಂದ ಇದಕ್ಕೆ ಕೈಹಾಕುವವರೂ ಇದ್ದಾರೆ. ಹಗಲು ಮಾತ್ರ ಉಂಡು ತಿಂದು ರಾತ್ರಿ ಕಾಲದಲ್ಲಿ ಏನನ್ನೂ ತಿನ್ನದ ಜೈನರ ಉಪವಾಸವೊಂದಿದೆ. ಹಾಗೆಯೇ ಮುಸಲ್ಮಾನರ ರಂಜಾನದ ಉಪವಾಸವಿದೆ; ಆದರೆ, ಜೈನರ ಉಪವಾಸಕ್ಕಿಂತ ಇದು ಸಂಪೂರ್ಣ ವಿರುದ್ಧವಿದೆ. ಈ ಪಟ್ಟದ ಸಮಯದಲ್ಲಿ ರಾತ್ರಿಯಲ್ಲಿ ಬೇಕೆಂಬ

(೧೨ ಪುಟ ನೋಡಿರಿ)

ESTD. 1921

NAVAYUGA
KANNADA WEEKLY,
UDIPI.

Founder:
Late Sri A. B. Shetty
Former Minister for Public Health, Govt. of Madras & Govt. of Mysore.

ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದ ದಿ| ಎ. ಬಿ. ಶೆಟ್ಟಿರಿಂದ ಸ್ಥಾಪಿತವಾದ

ನವಯುಗ

ಪ್ರತಿ ಗುರುವಾರ
ಉಡುಪಿಯಿಂದ ಹೊರಡುವ
ರಾಷ್ಟ್ರೀಯ ವಾರಪತ್ರಿಕೆ

ಸ್ಥಾಪನೆ: ೧೯೩೧.

ಗೌರವ ಸಂಪಾದಕರು:
ಎಸ್. ಗೋಪೀಚಂದ ರಾವ್,
ವಿದ್ವಾನ್.
ಬಿ. ಶಾಮರಾಯ ಶೆಟ್ಟಿ,
ಬಿ. ಎ., ಎಲ್. ಟಿ.

ಸಂಚಾಲಕ ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ.

O

ಜಾಹೀರಾತು ದರಗಳು:

ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-50

ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3-50

ಹೆಚ್ಚಿನ ವಿವರಗಳಿಗೆ ವ್ಯವಹರಿಸಿರಿ.

ಚಂದಾ:

ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಪೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವಸೌಕರ್ಯವಿರುವುದು.

ಧಾರಾವಾಹಿ ಕಾದಂಬರಿ

ಯಮನ ನೆರಳು

ಮೂಲಲೇಖಕರು: ಶ್ರೀ ಎಂ. ಎಲ್. ಪಾಂಡೇಯ.
ಅನುವಾದಕರು: ಶ್ರೀ ಎಸ್. ಎಂ. ಶೆಟ್ಟಿ, ಶಿವಮುಂಜೆಪರಾರಿ.

— ೨೦ —

(ಆಗಸ್ಟ್ ೩ನೇ ತಾರೀಕಿನ ಸಂಚಿಕೆಯಿಂದ)

ಫಲಕದಾರಿಯ ಮೇಲೆ ಮೊಕದ್ದಮೆ ಹೂಡುವಷ್ಟು ಯಾವೊಂದು ಆಧಾರವೂ ಸಿಕ್ಕದುದರಿಂದ ಅವನು ಈ ವರೆಗೂ ಕೈದಿಯಾಗಿದ್ದನು. ಪೋಲೀಸರು ಸಾಕ್ಷಿಗಾಗಿ ತುಂಬಾ ಪೇಚಾಡುತಿದ್ದರು.

ಈ 'ಯಮನ ಛಾಯೆ'ಯ ಮುಖಂಡನು ಸ್ವಾತಂತ್ರ್ಯ 'ಆವಾಜ್' ಎಂಬ ಪತ್ರಿಕೆಗೆ ಒಂದು ಸುದ್ದಿಯನ್ನು ಕಳುಹಿಸಿದ್ದನು. ಅದರಲ್ಲಿ ಇಂತಹ ದಿನ, ಇಂಥ ಸಮಯದಲ್ಲಿ ನಾವು ನಮ್ಮ ಸಹಯೋಗಿಯನ್ನು ಕರೆದುಕೊಂಡು ಹೋಗುವುದಾಗಿ ತಿಳಿಸಿದ್ದನು. ತಮ್ಮ ದಳದ ಮನುಷ್ಯನನ್ನು ಹೇಗೆ ಬಿಡಿಸಿಕೊಂಡು ಹೋಗುತ್ತಾರೆ ಎಂಬುದನ್ನು ಕಾಣಲಿಕ್ಕಾಗಿ ಜನತೆಯು ಪೋಲೀಸ್ ಸ್ಟೇಶನನ್ನು ಮುತ್ತಲಾರಂಭಿಸಿತ್ತು.

ಇಂದು ಆಫೀಸಿಗೆ ಬಹು ಬೇಗ ಬಂದ ಕೇಪ್ಟನ್ ಸಹರಿಯನ್ನು ಹೆಚ್ಚಾಗಿ ಇಟ್ಟಿದ್ದರು. ಹೆಚ್ಚಿಗೆ ಪೋಲೀಸರನ್ನು ಕರೆಯಲಾಗಿತ್ತು. ಮಿಲಿಟ್ರಿಯಿಂದ ತರಿಸಿದ್ದ ರಿಸರ್ವ್ ಪೋಲೀಸ್'ದಳ ಎದುರಿನ ವೈದಾಸಿನಲ್ಲಿ ಶಿಬಿರವೇರ್ಪಡಿಸಿತ್ತು. ಬೆಳಗ್ಗಿನ ಸಾಧಾರಣ ಹತ್ತು ಗಂಟೆಯ ಹೊತ್ತಿಗೆ ಡಿ. ಐ ಜಿ. ಯವರೂ ಪೋಲೀಸ್ ಕಮಿಶನರೂ ಬಂದರು. ನೋಡು ನೋಡುತ್ತಲೇ ಸಂಜೆಯ ಐದು ಗಂಟೆಯಾಯ್ತು.

ರಾತ್ರಿಯ ಹತ್ತು ಗಂಟೆಯಾಯ್ತು. ಆದರೆ 'ಸ್ಯಾಹ-ನಕಾಬ್'ಬಳದ ಪತ್ತೆಯೇ ಇರಲಿಲ್ಲ. ಹನ್ನೊಂದು ಗಂಟೆಗೆ ಪೋಲೀಸ್ ಕಮಿಶನರ್ ಮತ್ತು ಡಿ.ಐ.ಜಿ.ಯವರು ತಮ್ಮ ಬಂಗಲೆಗೆ ಹೊರಟುಹೋದರು ಕೊತುವಾಲ; ಕೇಪ್ಟನ್ ಶರ್ಮಾ ಡಿ.ಎಸ್.ಪಿ. ಶ್ರೀ ಸಿಂಹಾ; ಚೀಫ್ ಇನ್ಸ್‌ಪೆಕ್ಟರ್ ಪ್ರಧಾನ್ ಮತ್ತು ಇನ್ಸ್‌ಪೆಕ್ಟರ್ ದೀಕ್ಷಿತ್ ರವರೆಲ್ಲರೂ ಸ್ವಇಚ್ಛೆಯಿಂದಲೇ ಅಲ್ಲಿಯೇ ನಿಂತರು.

ರಾತ್ರಿ ಅವರು ಜಾಗರಣೆಯಲ್ಲಿಯೇ ಕಳೆದರು. ಆದರೆ 'ಯಮನ—ದಳದ ಸರದಾರನು ಬರಲೇ ಇಲ್ಲ.

"ಹೂಂ, ಹೋಗುವ" ಎಂದರು ಶರ್ಮಾಜೀ.

"ಇವರೆಲ್ಲರನ್ನೂ ಕಳುಹಿಸಿ ಬಿಡಿ, ಮತ್ತು ರಿಸರ್ವ್ ಪೋಲೀಸರನ್ನೂ ಹಿಂತಿರುಗಿಸಿರಿ. ಮೊದಲಿನಂತೆಯೇ ಕಾವಲಿರಲಿ" ಎಂದನ್ನಪ್ಪಣೆಯಿತ್ತು ಪೋಲೀಸ್ ಕೇಪ್ಟನ್ ಮತ್ತು ಡಿ ಎಸ್. ಪಿ.ಯವರು ತಮ್ಮ ಬಂಗಲೆಗಳಿಗೆ ಹೊರಟರು. ಅಲ್ಲಿ ಸಂಪೂರ್ಣ ವ್ಯವಸ್ಥೆ ಮಾಡಿದನಂತರ ದೀಕ್ಷಿತ್ ಮತ್ತು ಪ್ರಧಾನರು ತಮ್ಮ ತಮ್ಮ ಮನೆಗಳತ್ತ ಹೊರಟರು.

"ಜೈಲಿನಲ್ಲಿ ನೊದಲಿನಂತೆಯೇ ಕಾವಲಿತ್ತು. ಜನರು ಪೋಲೀಸರ ಕಾರ್ಯತತ್ಪರತೆಯನ್ನು ಪ್ರಶಂಸಿಸುತ್ತಿದ್ದರು. 'ಆವಾಜ್" ಪತ್ರಿಕೆಯ ಸಂಪಾದಕರು ದರೋಡೆಕೋರರ ಗೊಡ್ಡು ಹೆದರಿಕೆಯ ಪತ್ರ ನಿಷ್ಪ್ರಯೋಜಕವೆಂದು, ಪೋಲೀಸರ ಕಾರ್ಯ ಕೌಶಲ್ಯವನ್ನು ಹೊಗಳಿ ಲೇಖನ ಬರೆದಿದ್ದರು.

ಸಂಜೆಗೆ ಕೇಪ್ಟನ್ ಶರ್ಮಾರವರು ಟೆಲಿಫೋನ್ ಮಾಡಿದರು, ಜೈಲ್ ಇಂಚಾರ್ಜನು ಎಲ್ಲವೂ ಸರಿಯಾಗಿನೆಯೆಂದು ರಿಪೋರ್ಟಿತ್ತನು. ಸಾಯಂಕಾಲ ೬ ಗಂಟೆಗೂ ಅವರು ಟೆಲಿಫೋನು ಮಾಡಿದರು. 'ಎಲ್ಲವೂ ಸರಿಯಾಗಿದೆ'ಎಂಬ ಉತ್ತರ ಜೈಲ್ ಇಂಚಾರ್ಜನಿಂದ ಕೇಳಿ ಅವರು ಸಂತುಷ್ಟರಾದರು.

ರಾತ್ರಿಯ ಎಂಟು ಗಂಟೆಗೆ ಪುನಃ ಟೆಲಿಫೋನ್ ಮಾಡಿದಾಗಲೂ ಸಂತೋಷದಾಯಕ ರಿಪೋರ್ಟು ಸಿಕ್ಕಿತು. ರಾತ್ರಿಯ ಹತ್ತು ಗಂಟೆಗೆ ಶರ್ಮಾರಿಂದ ಇನ್ನೊಂದು ಬಾರಿ ಫೋನು ಬಂತು, "ನೋಡು ದರೋಡೆಕೋರರೆಲ್ಲರೂ ಸಿನೆಮಾ ನೋಡಲು ಬಂದಿದ್ದಾರೆ ಆದುದರಿಂದ ನೀನು ಎಲ್ಲಾ ಪೋಲೀಸರನ್ನೂ ಒಟ್ಟುಗೂಡಿಸಿ ಐದು ಮಿನಿಟಿನೊಳಗೆ ಬಂದು ಟಾಕೀಸಿನ ಬದಿಯಲ್ಲಿರುವ ಶಾಂತ ಸ್ಥಳದಲ್ಲಿ ನಮ್ಮನ್ನು ಕಾಯುತ್ತಿರು. ಆದಷ್ಟು ಹೆಚ್ಚು ಜನರನ್ನು ಕರೆದುಕೊಂಡು ಬರಲು ಪ್ರಯತ್ನಿಸು." ಎಂದು ಅವಸರವಸರವಾಗಿ ಅಪ್ಪಣೆಯಿತ್ತರು.

ಅವರು ಹೋದ ಮೂರು ನಾಲ್ಕು ಮಿನಿಟಿನ ನಂತರ ಇಬ್ಬರು ಸಿಪಾಯಿಗಳು ಬಂದು ಸೀದಾ ಜೈಲ್ ಡಿಪಾರ್ಟ್‌ಮೆಂಟಿನೆಡೆಗೆ ಹೋದರು. ಅಲ್ಲಿ ಕಾಯುತಿದ್ದ ಸಿಪಾಯಿಯೊಡನೆ—"ಎಲ್ಲಾ ಬದ್ಮಾಷರೂ ಹಿಡಿಯಲ್ಪಟ್ಟಿದ್ದಾರೆ. ಈಗ ಬಡೆಮಾನ ಹಂಚುತ್ತಿದ್ದಾರೆ ಯಾರೂ ಬಾಕಿ ಉಳಿಯಬಾರದೆಂದು ಅಪ್ಪಣೆಯಾದುದರಿಂದ ನಾವು ಬಂದೆವು ಈಗ ನೀನು ಹೋಗು ನಾವಿಲ್ಲಿ ಕಾಯುತ್ತೇವೆ" ಎಂದರು ಆಗಂತುಕ ಸಿಪಾಯಿಗಳು ಅವನಿಂದ ಬಂದೂಕನ್ನೂ ಬೀಗದ ಕೈಗೊಂಚಲನ್ನೂ ತೆಗೆದುಕೊಂಡು ಅಲ್ಲಿ ಬಂದೂಕಿನ ಅಗತ್ಯವಿಲ್ಲ. ಈ ಸಿಸ್ತ್ರಾಲು ನಿನ್ನಲ್ಲಿರಲಿ ಎಂದವನಿಗೊಂದು ರಿವಾಲ್ವಾರನ್ನೂ ಕೊಟ್ಟರು. ಬಹುಮಾನದ ಆಶೆಯಿಂದ ಸಿಪಾಯಿಯು ಅಲ್ಲಿದ್ದ ಒಂದು ಸೈಕಲಿನಲ್ಲಿ ಕುಳಿತು ಸೀದಾ ಟಾಕೀಸಿನ ಕಡೆ ಹೊರಟನು. ಅವನು ಹೋದ ನಂತರ ಅವರಲ್ಲೊಬ್ಬನು ಫಲಕದಾರಿಯ ಕೋಣೆಯ ಬಾಗಿಲು ತೆರೆದು ಅವರು ತಂದಿದ್ದ ಪೋಲೀಸ್ ಡ್ರೆಸ್ಸನ್ನು ಅವನಿಗಿತ್ತು ಶೀಘ್ರವಾಗಿ ತೊಟ್ಟುಕೊಳ್ಳುವಂತೆ ಹೇಳಿದರು.

ಜೈಲಿನಿಂದ ಸ್ವಲ್ಪ ದೂರದಲ್ಲಿ ಒಂದು ಕಾರು ಕಾದುನಿಂತಿತ್ತು. ಮೂವರೂ ಅದರಲ್ಲಿ ಕುಳಿತು ಎತ್ತಲೋ ಹೋದರು. ಇತ್ತ ಸಿನೆಮಾ ಟಾಕೀಸಿನ ಹತ್ತಿರ ಬಂದಿದ್ದ ಜೈಲ್ ಇಂಚಾರ್ಜನು ಅರ್ಧ ಗಂಟೆ ಕಾದರೂ ಯಾರ ಪತ್ತೆಯೂ ಇಲ್ಲದಿರಲು ಕೇಪ್ಟನಿಗೆ ಫೋನು ಮಾಡಿ—"ನಾನು ಇನ್ನೂ ಇಲ್ಲಿ ಕಾಯಬೇಕೋ?" ಎಂದು ವಿಚಾರಿಸಿದನು. ಕೇಪ್ಟನ್ ಸಾಹೇಬರು ವಿಚಲಿತರಾದರು. 'ತಾನೊಂದು ಬಾರಿಯೂ ಟೆಲಿಫೋನು ಮಾಡಿಲ್ಲ'ವೆಂದವರು ತಿಳಿಸಿ ಅವರೆಲ್ಲರನ್ನೂ ಆಫೀಸಿಗೆ ಬರಹೇಳಿ ಟೆಲಿಫೋನ್ ರಿಸೀವರ್ ಕೆಳಗಿಟ್ಟರು.

ಇನ್‌ಚಾರ್ಜ್ ಸಾಹೇಬರ ತಲೆತಿರುಗಲಾರಂಭಿಸಿತು. ಅನಂತರ ಬಂದ ಸಿಪಾಯಿಯು ಏಕೆ ಮತ್ತು ಹೇಗೆ ಬಂದನೆಂಬುದನ್ನು ಭಾವಿಸಿಯೇ ಅವರು ಕಂಪಿಸಿದರು. ಲಾರಿಯಲ್ಲಿ ಕುಳಿತು ಅವರು ಜೈಲಿನೆಡೆಗೆ ಹಿಂತಿರುಗಿದರು. ಜೈಲ್ ಇನ್‌ಚಾರ್ಜ್ ಬರುವ ಮೊದಲೇ ಕೇಪ್ಟನರು ಅಲ್ಲಿಗಾಗಮಿಸಿದ್ದರು. ಅನಂತರ ಬಂದ ಸಿಪಾಯಿಗಳೇವರು. ಮತ್ತು ಫಲಕದಾರಿ ಮಾಯವಾಗಿದ್ದರು!

ಕೇಪ್ಟನರು ಇಂಚಾರ್ಜನ ಮೂರ್ಖತೆಗಾಗಿ ಹಣೆ ಹಣೆ ಬಡಿದುಕೊಂಡರು. ಮ

(೧೧ನೇ ಪುಟ ನೋಡಿರಿ)

ಸ್ಥಾಪನೆ: 1924

ದಿ ಕರ್ಣಾಟಕ ಬೇಂಕ್ ಲಿಮಿಟೆಡ್

(ಶೆಡ್ಯೂಲ್ಡ್ ಬೇಂಕ್)

ರಿಜಿಸ್ಟರ್ಡ್ & ಹೆಡ್ ಆಫೀಸು: ಮಂಗಳೂರು—3.

ಈ ಕೆಳಗಿನ ಏರಿಸಿದ ಬಡ್ಡಿದರಗಳಲ್ಲಿ ಠೇವಣಾತಿಗಳನ್ನು ಸ್ವೀಕರಿಸಲಾಗುವುದು.

ಒಂದರಿಂದ ಎರಡು ತಿಂಗಳುಗಳ ವರೆಗೆ	.... ಸಾ||	ಸೇಕಡಾ 3-75	ನ.ಪೈಸೆ
ಮೂರರಿಂದ ಐದು ತಿಂಗಳುಗಳ ವರೆಗೆ	....	,, 4-25	,,
ಆರು ತಿಂಗಳುಗಳಿಂದ 12 ತಿಂಗಳುಗಳ ವರೆಗೆ	....	,, 4-50	,,
12 ತಿಂಗಳು ಮಿಕ್ಕಿ 24 ತಿಂಗಳುಗಳ ವರೆಗೆ	....	,, 4-75	,,
24 ತಿಂಗಳು ಮಿಕ್ಕಿ 48 ತಿಂಗಳುಗಳ ವರೆಗೆ	....	,, 5-00	,,
48 ತಿಂಗಳುಗಳಿಗೆ ಮಿಕ್ಕಿ	....	,, 5-25	,,

ಸೇವಿಂಗ್ಸ್ ಬ್ಯಾಂಕ್ ಬಡ್ಡಿ ದರವನ್ನು
ಸಾ. ಸೇಕಡ 2½% ರಿಂದ 3¼%ಗೆ ಏರಿಸಲಾಗಿದೆ.

THE KARNATAKA BANK LIMITED.

ಭಾರತಕ್ಕೆ ನೆಹರುರವರ ಧುರೀಣತ್ವ

ನಲ್ವತ್ತಮೂರು ಕೋಟಿ ಭಾರತೀಯರ ಪ್ರತಿನಿಧಿ ಜವಾಹರಲಾಲರು ಪ್ರಜಾಪ್ರಭುತ್ವಕ್ಕೆ ವಿರೋಧವಾದುದನ್ನು ಮಾಡುವುದಿಲ್ಲ ನೆಹರು ಎಂದರೆ ಭಾರತ, ಭಾರತವೆಂದರೆ ನೆಹರು—ಎಂಬ ಉದ್ಗಾರದಲ್ಲಿ ನೂರಕ್ಕೆ ನೂರರಷ್ಟು ಯಥಾರ್ಥತೆಯಡಗಿದೆ ಅಂತಹ ನೆಹರು ಧುರೀಣತ್ವ ಭಾರತಕ್ಕೆ ಇನ್ನೂ ಕೆಲ ಕಾಲ ಬೇಕು.

ಶ್ರೀ ಎನ್. ನಾರಾಯಣ ಬಲ್ಲಾಳ.

ಸ್ವಾತಂತ್ರ್ಯದ ಹದಿನೈದನೇ ವರ್ಷದಲ್ಲಿ ನಾವು ಮುನ್ನಡೆಯುತ್ತಿದ್ದೇವೆ ಸ್ವತಂತ್ರ ಭಾರತದ ಪ್ರಗತಿಪರ ಉತ್ಸಾಹ, ಕಾರ್ಯದ ಅನಂತ ಶಕ್ತಿ ಎಲ್ಲೆಲ್ಲೂ ತೋರಿ ಬರುತ್ತಲಿದೆ,

ಭಾರತವು ಎಂಡು ಪಂಚವಾರ್ಷಿಕ ಯೋಜನೆಯನ್ನು ಸೂರ್ವನಿಶ್ಚಿತ ತಳಹದಿಯಲ್ಲೇ ಮುಗಿಸಿಕೊಂಡ. ಇದೀಗ ತೃತೀಯ ಪಂಚವಾರ್ಷಿಕ ಯೋಜನೆಯ ಕಾರ್ಯಪ್ರವೃತ್ತಿಗಾಗಿ ಯತ್ನಿಸಲಾಗುತ್ತಿದೆ.

ಈ ಸಂದರ್ಭದಲ್ಲಿ ಭಾರತದ ಸ್ವತಂತ್ರ ನಾಗರಿಕನು ಸ್ವತಂತ್ರ ಭಾರತದ ಅಸ್ತಿತ್ವ, ಅದು ಸಾಗಿ ಬಂದ ದಾರಿ, ಮುಂದಿನ ಭವಿಷ್ಯದ ಬಗ್ಗೆ ನಿರ್ಧಾರಾತ್ಮಕ ಭರವಸೆಯ ಕುರಿತು ವಿಮರ್ಶೆ ನಡೆಸಿದರೆ ಎಂದಿಗೂ ತಪ್ಪಾಗಲಾರದು.

ಭಾರತವು ನೂರು ವರ್ಷಗಳ ಪಾರತಂತ್ರ್ಯದ ಬಳಿಕ ಸ್ವತಂತ್ರವಾಯಿತು. ದೊರೆತ ಸ್ವಾತಂತ್ರ್ಯವೂ ಸಹಜ ಸಂಪೂರ್ಣವಾಗಿರಲಿಲ್ಲ. ಒಂದಾಗಿದ್ದ ದೇಶ ಎರಡು ಹೋಳಾಗಿ ಒಡೆಯಲ್ಪಟ್ಟಿತು. ಕಣದುಬ್ಬರ, ಜಾತೀಯ ವೈಷಮ್ಯ, ಆರ್ಥಿಕ ಅಧಃಪತನ, ಸಾಮಾಜಿಕ ವೈಪರೀತ್ಯದ ಕಾಲದಲ್ಲೇ ಭಾರತಕ್ಕೆ ಸ್ವಾತಂತ್ರ್ಯ ದೊರಕಿತು.

ಸ್ವತಂತ್ರ ಭಾರತದ ಚುಕ್ಕಾಣಿಯನ್ನು ನಮ್ಮ ರಾಷ್ಟ್ರ ನಾಯಕರು ಹಿಡಿದಾಗ ದೇಶದಾದ್ಯಂತ ಕ್ಷೋಭೆಯ ವಾತಾವರಣ, ಅಸಹನೀಯ ಆಂತರಿಕ ವಿರೋಧಾಭಾಸ ಎದ್ದಿತು. ದೇಶೀ ಸಂಸ್ಥಾನಗಳಿಂದ ಕಾಶ್ಮೀರ, ಜುನಾಗಢ, ಹೈದ್ರಾಬಾದು, ತಿರುವಾಂಕೂರುಗಳು ಸ್ವಾತಂತ್ರ್ಯದ ಜೊತೆಗೆ ಭಾರತದ ಮಾರಕ ಪ್ರಶ್ನೆಗಳಾಗಿ ಬಿಟ್ಟವು ನೆರೆಯ ಪಾಕಿಸ್ತಾನವಂತೂ ದಾಯಾದಿ ಮತ್ಸರದಿಂದಲೇ ತಮ್ಮ ದ್ವೇಷ ದಾವಾಗ್ನಿಗೆ ತುಪ್ಪ ವೆರೆಚಿತು. ನಿರಾಶ್ರಿತರ ಸಮಸ್ಯೆ ಭಾರತದ ಸ್ವಾತಂತ್ರ್ಯಕ್ಕೆ ಪ್ರಳಯ ಮಹಾಪೂರದಂತಾಯಿತು. ಈ ರೀತಿಯ ಹದಗೆಟ್ಟ ಪರಿಸ್ಥಿತಿಯಲ್ಲೂ ಭಾರತವು ತನ್ನ ಸ್ವಾತಂತ್ರ್ಯವನ್ನು ಉಳಿಸಿಕೊಂಡುದು ಒಂದು ಸವಾಡವೆಂದೇ ಸೀಳಬಹುದು ಸದ್ಯದ ಜಾಗತಿಕ ಪರಿಸ್ಥಿತಿಯನ್ನು ವಿಮರ್ಶಿಸಿದವರಿಗೆ ಸ್ವತಂತ್ರಗುಂಡು ಸ್ವತಂತ್ರಗೊಳ್ಳುತ್ತಿರುವ ರಾಷ್ಟ್ರಗಳ ಅರಾಜಕೀಯ ಉಲ್ಬಣಾವಸ್ಥೆಯನ್ನು ನಿರೀಕ್ಷಿಸಿದವರಿಗೆ ಭಾರತವು ಸ್ವಾತಂತ್ರ್ಯಪಥದಲ್ಲಿ ನಡೆಸಿದ ಪ್ರಗತಿ ಸಾಹಸಪೂರ್ಣ ಮಾತ್ರವಲ್ಲ, ಅಭಿಮಾನ ಪೂರ್ಣ ಎನಿಸದಿರದು.

ಈ ಯಥಾರ್ಥ ಸತ್ಯವನ್ನು ಜಾಗತಿಕ ರಂಗದ ಎಲ್ಲ ರಾಜ ತಾಂತ್ರಿಕಜ್ಞರೂ ಒಪ್ಪುತ್ತಾರೆ. ನೂರು ಭಾಷೆ, ಸಂಸ್ಕೃತಿ, ಸಹಸ್ರ ಜಾತಿ, ಶತಸಹಸ್ರ ವರ್ಗಗಳ ಬೀಡು ನಮ್ಮದು ನಮ್ಮ ಈ ದೇಶ ಆಂತರಿಕವಾಗಿ ಹಲವು ಮತಭೇದಗಳ ತವರೂರು. ಆದರೆ ಭಾರತ ಸ್ವಾತಂತ್ರ್ಯದ ಭವ್ಯ ಬುನಾದಿ ಹಾಕಿಕೊಂಡು ಮುನ್ನಡೆದುದನ್ನು ಕಂಡು ಎಲ್ಲರೂ ದಂಗು ಬಡೆದಿದ್ದಾರೆ ಶತಮಾನಗಳ ಸ್ವಾತಂತ್ರ್ಯದ ಅನುಭವವುಳ್ಳ ರಾಷ್ಟ್ರಗಳೇ ಇಂದು ತತ್ತರಿಸುವಾಗ ಭಾರತ ಪ್ರಗತಿ ಪಥದಲ್ಲಿ ವಿಧಿ ಬದ್ಧವಾಗಿ ಸಾಗುತ್ತಿದೆ.

ಇದಕ್ಕೆ ಕಾರಣ ನಮ್ಮ ಜವಾಹರಲಾಲ್ ನೆಹರೂರವರ ಸಮರ್ಥ ಮುಂದಾಳುತನವೇ ಎಂದು ನಿರ್ವಿವಾದವಾಗಿ ಹೇಳಬಹುದು.

ಪ್ರಜಾಪ್ರಭುತ್ವ ಕಾಲದಲ್ಲಿ ಏಕ ವ್ಯಕ್ತಿಯ ನಿಷ್ಠೆಯಲ್ಲಿ ನಮ್ಮ ರಾಜ್ಯದ ಪ್ರಗತಿಯನ್ನು ರೂಪಿಸಿಕೊಳ್ಳುವುದು ಅಥವಾ ನಂಬಿ ಕೊಂಡಿರುವುದು ಪ್ರಜಾಪ್ರಭುತ್ವದ ಭವಿಷ್ಯಕ್ಕೆ ಆರೋಗ್ಯಕರವಲ್ಲವೆನ್ನುವವರಿದ್ದಾರೆ, ಇದೊಂದು ಬಗೆಯ ಸರ್ವಾಧಿಕಾರಿಯ ಆಡಳಿತೆ ಎನ್ನುವವರೂ ಇದ್ದಾರೆ, ಪ್ರಜಾಪ್ರಭುತ್ವವನ್ನು ನಂಬಿ ಮುನ್ನಡೆಯುವ ರಾಷ್ಟ್ರಕ್ಕೆ ಭವಿಷ್ಯತ್ತಿನ ಅಧೀರತೆಯನ್ನು ತಂದುಕೊಡುವ ಪ್ರವೃತ್ತಿ ಎನ್ನುವವರೂ ಇದ್ದಾರೆ. ಆದರೆ ಇಲ್ಲಿ ನಾವು ವಿವೇಚಿಸಬೇಕಾದ್ದು ಭಾರತದ ಪ್ರಜಾಪ್ರಭುತ್ವದ ಸದ್ಯದ ರಾಜಕಾರಣ ಪರಿಸ್ಥಿತಿಯನ್ನು ಅಂದರೆ ಭಾರತವು ಪ್ರಜಾಪ್ರಭುತ್ವದ ಭದ್ರ ತಳಹದಿಯಲ್ಲೇ ಮುನ್ನಡೆಯುತ್ತಿರುವಾಗ ಅದು ಏಕನಾಯಕ ನಿಷ್ಠೆಯಲ್ಲಿರಲಿ, ಬಹುಮತೀಯ ಬೆಂಬಲದಲ್ಲಿರಲಿ—ಪ್ರಜಾಪ್ರಭುತ್ವದ ತತ್ವಕ್ಕೆ ವಿರೋಧವಾಗಿದೆಯೇ ಎಂಬುದನ್ನು ಒಪ್ಪಿಸಬೇಕು. ಈ ಹಿನ್ನೆಲೆಯಲ್ಲಿ ನಾವು ವಿವೇಚಿಸುವುದಾದರೆ ಜವಾಹರ ಲಾಲರ ಬಗ್ಗೆ ಭಾರತದ ಜನಕೋಟಿ ಏಕ ನಿಷ್ಠೆಯಲ್ಲಿಯಲ್ಲಿದ್ದಾರೆಂಬುದು ನಿಜವಾದರೂ ಅವರು ಎಂದಿಗೂ ಸರ್ವಾಧಿಕಾರಿ ನೀತಿಯನ್ನು ಪ್ರತಿಪಾದಿಸಿಲ್ಲ ತಮ್ಮ ಧೋರಣೆಗಳನ್ನು ಘಟನಾ ವಿರೋಧವಾಗಿ ಜನರ ಮೇಲೆ ಹೇರಿದ್ದಿಲ್ಲ ಅವರಿಗೆ ಜನ ತೋರುವ ಏಕನಿಷ್ಠೆ, ಅವರ ಮೇಲಿನ ಅಚಲ ವಿಶ್ವಾಸದಿಂದ, ಆ ಮಹಾ ಜೀವ ತನ್ನ ಜೀವನದುದ್ದಕ್ಕೂ ದೇಶಕ್ಕಾಗಿ ತೋರಿದ ಅಮಿತ ತ್ಯಾಗದ ಸ್ಫೂರ್ತಿಯಿಂದ, ಸೇವಾ ತತ್ಪರತೆ, ದೇಶದ ಪ್ರಗತಿಗಾಗಿ ಅವರಿಗಿರುವ ಕಳಕಳಿ, ಅವರ ಸಮರ್ಥ, ವಿವೇಕ

ಪೂರ್ಣ ನೇತೃತ್ವ ಶಕ್ತಿ, ಅವರ ನಿಷ್ಕಳಂಕ ಮನೋಭಾವ—ಇವುಗಳಿಗಾಗಿ ಜನ ಅವರನ್ನು ಗೌರವದಿಂದ ನೋಡುತ್ತಾರೆ. ಭಾರತದ ಐಕ್ಯ ಜವಾಹರ ಲಾಲರ ವ್ಯಕ್ತಿತ್ವದಿಂದ ಸುಭದ್ರವಾಗಿ ನೆಲೆಗೊಂಡಿದೆ.

ಇಂತಹ ಒಂದು ನಾಯಕತ್ವದಿಂದಲೇ ಭಾರತದ ನೂರಾರು ಸಮಸ್ಯೆಗಳು ಹೇಳ ಹೆಸರಿಲ್ಲದಾದುವು ಪ್ರಜಾಪ್ರಭುತ್ವದ ಐಕ್ಯನೀತಿ ಪ್ರಸ್ಫುಟಿಸಲ್ಪಟ್ಟಿತು. ಸಂಕುಚಿತ ಪ್ರಾಂತೀಯತೆ, ಪ್ರಾದೇಶಿಕ ವ್ಯಾಮೋಹ, ಭಾಷಾ ವೈಷಮ್ಯ ಹೇಳ ಹೆಸರಿಲ್ಲದೆ ಮಾಯವಾದವು.

ಭಾರತದ ಸ್ವಾತಂತ್ರ್ಯ ಸಮರ್ಥ ನಾಯಕತ್ವದಿಂದ ಉಳಿವಿಗೆ ಸ್ವಾತಂತ್ರ್ಯಾನಂತರದ ಪ್ರಗತಿ ಅಭೂತಪೂರ್ವವಾಗಿ ನಡೆಯುತ್ತಿದೆ.

ಅಂತರಾಷ್ಟ್ರೀಯದಲ್ಲೂ ಮನ್ನಣೆ ಪಡೆದಂತಹ ಪ್ರಾಮಾಣಿಕ ವ್ಯಕ್ತಿತ್ವ ನೆಹರೂರವರದು. ಅವರ ಧೋರಣೆಯು ಸತ್ಯದ ತಳಹದಿಯಲ್ಲಿ ರೂಪಿತವಾಗಿದೆ. ಅವರು ಒಂದು ವಿಚಾರವನ್ನು ವಿವೇಚಿಸುವಾಗ ದಲಿತರ ಶ್ರೇಯೋಭಿವೃದ್ಧಿಯ

(೧೦ನೇ ಪುಟ ನೋಡಿರಿ)



ರವೀಂದ್ರವಾಣಿ ೧೭

ವ್ಯಕ್ತಿತ್ವ ಮತ್ತು ಅದರ ಸಾರ್ಥಕತೆ

"ಅಹಂ" ಎಂಬುದು ಅನಾದಿ ವ್ಯಕ್ತಿಯಲ್ಲಿರುವ ಈ "ಅಹಂ" ಅಸೀಮವಾದ ವಿರಾಟ್ ರೂಪದ ಪ್ರಕೃತಿಯ "ಅಹಂ"ನಲ್ಲಿ ಸಮಭಾವವನ್ನು ದೊರಕಿಸಿಕೊಂಡಾಗ ಪೂರ್ಣತೆಯನ್ನೂ ಪಡೆಯುವುದು ಆಗಲೇ ಅವಿದ್ಯೆ ಮತ್ತು ಮಾಯೆಯಿಂದ ಅದು ಒಂದುಮುಕ್ತವಾಗುವುದು

ಮೂಲ ಲೇಖಕರು ಡಾ| ರವೀಂದ್ರನಾಥ ಟಾಗೋರ್
ಅನುವಾದಕರು, ಶ್ರೀ ಕೆ ಎನ್ ಭಟ್, ಶಿರಾಡಿಪಾಲ್

ಪೆರಂಬೂರಿನ ಕೋಚ್ ಫಾಕ್ಟರಿಯಲ್ಲಿ ತಯಾರಾದ ಗಾಡಿಯೊಂದರ ಒಳ ಭಾಗ.

ನಮ್ಮ ದೇಹದಲ್ಲಿ ಸಾವಯವಿಕವಾಗಿ ಒಗ್ಗೂಡಿರುವ ಇಚ್ಛೆಗಳೇ ನಮ್ಮ ಇತರ ಕಾಮನೆಗಳಾಗಿವೆ ಬಹುಶಃ ನಾವು ಇವುಗಳನ್ನು ತಿಳಿದುಕೊಳ್ಳದವರಾಗುತ್ತೇವೆ. ಸ್ವಾಸ್ಥ್ಯ ರಕ್ಷಣೆಯ ಇ ಒಂದು ಇಚ್ಛೆಯಾಗಿದೆ ಈ ಇಚ್ಛೆಯೂ ಸದಾ ಜಾಗೃತಾವಸ್ಥೆಯಲ್ಲಿದ್ದು ನವ ಸಧಾರಣೆ ಅಥವಾ ದುರ್ಘಟನೆಗಳ ಸಮಯದಲ್ಲಿ ಹೂಸ ಹೊಸ ಉಪಚಾರಗಳಿಂದ ಕಾರ್ಯಶೀಲವಾಗಿರುತ್ತದೆ ಈ ಇಚ್ಛೆಯು—ಶರೀರವನ್ನು ಸಮತೋಲವಾಗಿ ನಿಲ್ಲಿಸಲು, ಚಾತುರ್ಯದಿಂದ ಕೆಲಸ ಮಾಡುತ್ತಿರುತ್ತದೆ ಶರೀರದ ತತ್ಕಾಲೀನವಾದ ಭೋಗೇಚ್ಛೆಗಳ ಕಡೆಗೆ ಈ ಇಚ್ಛೆ ಗಮನಿಸುವುದಿಲ್ಲ ಈ ಇಚ್ಛೆಯು ದೂರ ದೃಷ್ಟಿಯುಳ್ಳದ್ದಾಗಿದ್ದು ಭೂತ ಮತ್ತು ಭವಿಷ್ಯ ಕಾಲಗಳೊಡನೆ ಸಂಬಂಧವನ್ನಿರಿಸುವುದು, ಮತ್ತು ಶರೀರದ ಬೇರೆ ಬೇರೆ ಅವಯವಗಳನ್ನು ಸಮಾನತೆಯಿಂದ ಸ್ಥಿರಪಡಿಸುವುದು ಬುದ್ಧಿವಂತನಾದವನು ಇದನ್ನು ತಿಳಿದುಕೊಂಡು, ತನ್ನ ಇತರ ದೈಹಿಕ ಅಪೇಕ್ಷೆಗಳನ್ನು ಇದಕ್ಕೆ ಸರಿಯಾಗಿ ದೊಂದಿಸಿಕೊಂಡು, ನಡೆಯುವ ಪ್ರಯತ್ನ ಮಾಡುವನು

ನಮ್ಮ ಶರೀರವು ಎರಡು ರೀತಿಯಿಂದಿರುವುದು. ಒಂದು ವ್ಯಾಪಕವಾದುದ, ಮತ್ತೊಂದು ಸಾಮಾಜಿಕವಾದ ದು ಸಮಾಜವು ಒಂದು ಶರೀರದ ಸಮಾನವಾಗಿರುವುದು. ನಾವು ಇದರ ಅವಯವ ರೂಪಗಳಿಂದ ನಮ್ಮ ವೈಯಕ್ತಿಕ ಇಚ್ಛೆಗಳನ್ನು ತಿಳಿದುಕೊಳ್ಳುತ್ತೇವೆ ನಾವು ನಮ್ಮ ಸುಖವನ್ನೇ ಅಪೇಕ್ಷಿಸುತ್ತ ಇರುತ್ತೇವೆ ಬಹಳ ಕಡಿಮೆ ಖರ್ಚಿನಿಂದ ಅತ್ಯಧಿಕ ಲಾಭವನ್ನು ಹೊಂದುವ ಅಪೇಕ್ಷೆಯನ್ನು ನಾವು ಇಟ್ಟುಕೊಂಡಿರುತ್ತೇವೆ ಇದರಿಂದಾಗಿ ಪರಸ್ಪರ ಸಂಘರ್ಷ ಹಾಗೂ ತೊಡಕುಗಳು ಉಂಟಾಗುವುವು ಆದರೆ ನಮ್ಮ ಹೃದಯದಲ್ಲಿ—ನಮ್ಮ ಸಾಮಾಜಿಕ ವ್ಯಕ್ತಿತ್ವದ ಆಳದಲ್ಲಿ, ಇರುವ ಮತ್ತೊಂದು ಇಚ್ಛೆಯು ಸಾಮಾಜಿಕ ಕಲ್ಯಾಣಕಾರೀ ಭಾವನೆಯದಾಗಿರುವುದು ಈ ಭಾವನೆಯು ಕ್ಷಣಿಕ ಸುಖ ಭೋಗಗಳ ಪರಿಸರದಿಂದ ಹೊರಗೆ ತನ್ನ ದೃಷ್ಟಿಯನ್ನು ಬೀರುತ್ತಲಿರುವುದು. ಈ ಇಚ್ಛೆಯೇ ನಮ್ಮನ್ನು ಅಮರತೆಯ ಕಡೆಗೊಯ್ಯುವ ಸದಿಚ್ಛೆಯಾಗಿರುವುದು

ಯಾವ ಮನುಷ್ಯನು ತನ್ನ ಭೋಗೇಚ್ಛೆಗಳನ್ನು ಸಮಾಜ ಕಲ್ಯಾಣದ ಉಪಯೋಗಕ್ಕೆ—ಅನುಕೂಲವಾಗಿ ಪರಿವರ್ತಿಸುತ್ತಿರುವನೋ ಅಂಥವನು ತನ್ನ ವಿರಾಟ್ ಆತ್ಮದ ಸಾಕ್ಷಾತ್ಕಾರವನ್ನು ಹೊಂದಬಲ್ಲನು.

ನಮ್ಮ ಭೌತಿಕ ಪ್ರವೃತ್ತಿಗಳ ಲಕ್ಷ್ಯವು ಆರೋಗ್ಯ ಮತ್ತು ಸಮಾಜ ಕಲ್ಯಾಣದ ಕಡೆಗಿದ್ದರೆ, ಆತ್ಮದ ಲಕ್ಷ್ಯವು ಪ್ರೇಮದ ಕಡೆಗಿರುವುದು.— ಬುದ್ಧನು, ಸ್ವಾರ್ಥದಿಂದ ನಿರ್ವಾಣವೆಂದು ಹೇಳಿರುವ—ಅಂತಿಮ ಲಕ್ಷ್ಯವೂ ಇದೇ ಆಗಿರುವುದು ಇದು ಪ್ರೇಮದ ಸಾಧನೆಯಾಗಿದೆ ಇದ.— ಪ್ರೇಮ ಪ್ರಕಾಶದ ಕಡೆಗೆ ನಮ್ಮನ್ನೊಯ್ಯುವುದು ಈ ಪ್ರೇಮ ಪ್ರಕಾಶವೇ ನಮ್ಮ ಹೃದಯದಲ್ಲಿ ಅಮರತೆಯ ಆನಂದಮಯ ಜ್ಯೋತಿಯನ್ನು ಪ್ರಜ್ವಲಿಸುವುದು.

ಪ್ರತಿಯೊಬ್ಬ ವ್ಯಕ್ತಿಗೂ ತನಗಿರುವ ಸ್ವತಂತ್ರವಾದ ವ್ಯಕ್ತಿತ್ವದ ಮೂಲಕವೇ ಮುನ್ನಡೆದು ಆತ್ಮ ಸಾನ್ನಿಧ್ಯಕ್ಕೆ ತಲಪಬೇಕಾಗುವುದು ಈ ಪಥವು ಯಾವುದೇ ಬಾಹ್ಯ ಪ್ರೇರಣೆಗಳಿಂದ ಕಾಣುವುದಾಗಿರದೆ, ವ್ಯಕ್ತಿಯ ಅಂತರಿಕವಾದ ಪ್ರೇರಣೆಯಿಂದ, ಸ್ವೇಚ್ಛೆಯಿಂದ ಕಂಡುಬರುವುದಾಗಿದೆ ಆದರ ವ್ಯಕ್ತಿಯ ಸ್ವತಂತ್ರವಾದ ಇಚ್ಛೆಯು ಕೆಲವು ವೇಳೆ ತನ್ನ ಧ್ಯೇಯವನ್ನು ಮರೆತು, ಬೇರೆ ದಾರಿ ಹಿಡಿಯುವುದೂ ಇದೆ ಆದರೆ ಈ ಗತಿಯು ಬಹಳ ಕಾಲ ಹಾಗೆಯೇ ಇರಲಾರದು. ತನ್ನ ಧ್ಯೇಯವನ್ನು ಪೂರ್ಣವಾಗಿ ಮರೆತು, ಇದು ಬಹು ದೂರದ ವರೆಗೆ, ವಿಪರೀತವಾಗಿ ಮುಂದೆ ಮುಂದೆ ಸಾಗಲಾರದು ಈ ಮಾರ್ಗ ಅನಂತವಾಗಿ ಇಲ್ಲದುದರಿಂದ ಒಹು ಬೇಗನೆ ಅದರ ಅಂತ್ಯವಾಗುವುದು ನಮ್ಮ ಸ್ವತಂತ್ರವಾದ ಇಚ್ಛೆಯು, ನಮ್ಮನ್ನು ಕಲ್ಯಾಣ ಅಥವಾ ಪ್ರೇಮಮಾರ್ಗದ ಮೂಲಕ ಮುಂದೆ ಸಾಗಿಸುವುದಕ್ಕಾಗಿ ಇರುವುದು ಈ ಮಾರ್ಗವೇ ಅಮರತೆಯ ಕಡೆಗೆ ಹೋಗುವುದಾಗಿದೆ ವ್ಯಕ್ತಿಗತವಾದ ಸ್ವಾತಂತ್ರ್ಯವು ಈ ಮಾರ್ಗದ ಮೂಲಕ ಪರಿಪೂರ್ಣತೆಯನ್ನು ಪಡೆಯಬಲ್ಲದು. ಅಮರಪಥದ ಮೂಲಕ ಮುನ್ನಡೆಯಲು ಅದಕ್ಕೆ ಸ್ವಾತಂತ್ರ್ಯವಿದೆ ಸ್ವಾತಂತ್ರ್ಯದ ಮೂಲಭೂತ ಆಧಾರವನ್ನು ಬಿಟ್ಟು ನಮ್ಮ ಇಚ್ಛೆಯು ಸ್ವಾತಂತ್ರ್ಯವನ್ನು ಪಡೆಯಲಾರದು. ಸ್ವಯಂ ಆತ್ಮಘಾತವನ್ನು ಮಾಡಿ ಅದೆಂದಿಗೂ ಬದುಕಲಾರದು. ನಮಗೆ ಅಬಾಧಿತವಾದ ಸ್ವಾತಂತ್ರ್ಯ ಅರ್ಥಾತ್ ನಮ್ಮನ್ನು ನಾವೇ ಸಂಕಲೆಗಳಿಂದ ಬಿಗಿದುಕೊಳ್ಳುವ ಸ್ವಾತಂತ್ರ್ಯ ಲಭಿಸಬೇಕೆಂದು—ನಾವು ಹೇಳಲಾರವು ಏಕೆಂದರೆ, ಈ ಸಂಕಲೆಗಳೇ ಸ್ವಾತಂತ್ರ್ಯವನ್ನು ಕೊನೆಗಾಣಿಸುತ್ತವೆ

ನಮ್ಮ ವ್ಯಕ್ತಿಗತವಾದ ಸ್ವಾತಂತ್ರ್ಯದಲ್ಲಿಯೂ-ಮಾಯೆ ಮತ್ತು ಸತ್ಯ-ಈ ದ್ವಿತ್ವವಿರುವುದು ವ್ಯಕ್ತಿಗತವಾದ ಇಚ್ಛೆ ಯಾವುದಿದೆಯೋ ಅದೇ ಮಾಯೆ ಮತ್ತು ಪ್ರೇಮವೆಂಬುದೇ ಸತ್ಯವಾಗಿರುವುದು ನಾವು ನಮ್ಮ ಇಚ್ಛೆಗಳನ್ನು ಪ್ರೇಮರಹಿತವನ್ನಾಗಿ ಮಾಡಿದಾಗ ನಮಗೆ ದುಃಖ ಉಂಟಾಗುವುದು ಪ್ರತಿಯೊಂದು ವಸ್ತು ಕೂಡ "ಮಾಯೆ" ಮತ್ತು "ಸತ್ಯ"ಗಳಿಂದಲೇ ಕೂಡಿರುವುದು ರಬ್ಬನೆಂಬುದು, ಕೇವಲ ದ್ವಂಸಿಯಿಂದೊಡಗೂಡಿದ್ದಾಗ ಅದೇ "ಮಾಯೆ" ಎನಿಸುವುದು ಅದೇ ಶಬ್ದವು ವಿಚಾರಪೂರ್ಣವಾಗಿದ್ದಾಗ-ಸತ್ಯವೆನಿಸುವುದು ನಮ್ಮ ವ್ಯಕ್ತಿತ್ವವು ಕೇವಲ ಅಸ್ತಿತ್ವ ಮಾತ್ರವಾಗಿದ್ದಾಗ, ಅದೇ ಮಾಯೆ ಎನಿಸುವುದು. ಆದರೆ, ಅದೇ ವ್ಯಕ್ತಿತ್ವದ ಮೂಲತ ಯಾವಾಗ ವಿರಾಟ್ ಆತ್ಮದ ಅಮರತೆಯ ಪ್ರತಿಬಿಂಬಿತವಾಗುವುದೋ, ಆಗ ಅದು ಸತ್ಯವೆನಿಸುವುದು ಈಸಾಮ ಸೀಹನೂ ಕೂಡ ಇದನ್ನು ತಿಳಿದ್ದನು. ಆತನು —"ಅಬ್ರಾಹಮನಿಗಿಂತಲೂ ಮೊದಲಿನಿಂದಲೇ "ಅಹಂ" ಎಂಬುದು, ಅಸ್ತಿತ್ವದಲ್ಲಿದ್ದಿತು ನನ್ನ ಒಳಗಿನಿಂದ ಮಾತನಾಡುತ್ತಿರುವ ಈ ಅಹಂ ಎಂಬ ದು, ಅನಾದಿಯಿಂದಲೇ ಇದ್ದುದಾಗಿರ ವುದು" ಎಂದು ಹೇಳಿದ್ದನು ಈ ವ್ಯಕ್ತಿಗತವಾದ "ಅಹಂ" ಯಾವಾಗ ಅಸೀಮವ ದ ವಿರಾಟ್ ರೂಪದ, ಅಹಂ,ದೊಡನೆ, ಸಮಭಾವವನ್ನು ಅನುಭವಮಾಡಿಕೊಳ್ಳುವುದೋ, ಆಗ ಪೂರ್ಣತೆಯನ್ನು ದೊರಕಿಸಿಕೊಳ್ಳುವುದು. ಆಗಲೇ ಅದಕ್ಕೆ ಅವಿದ್ಯೆಯಿಂದ ಮತ್ತು-ಮಾಯೆಯಿಂದ ಮುಕ್ತಿಲಭಿಸುವುದು ಮಾಯೆಯಿಂದ ಮುಕ್ತಿ ಹೊಂದಿದ ಬಳಿಕ—"ಅಹಂ" ಇದು "ಶಾಂತಂ ಶಿವಂ, ಅದ್ವೈತವಂ" ಈ ರೂಪಗಳನ್ನು ಹೊಂದುತ್ತವ ಆಗ ಇದು, ಸತ್ಯದಲ್ಲಿ ಪೂರ್ಣ ವಿಶ್ರಾಂತಿ, ಕಲ್ಯಾಣದಲ್ಲಿ ಕಾರ್ಯ ಮಗ್ನತೆ, ಮತ್ತು ಪ್ರೇಮದಲ್ಲಿ ಪೂರ್ಣಮಿಲನ ಈ ಸ್ಥಿತಿಯನ್ನು ಪ್ರಾಪ್ತ ಮಾಡಿಕೊಳ್ಳುವುದು.

ನಮ್ಮ ವ್ಯಕ್ತಿತ್ವದಲ್ಲೇ ಆಜ್ಞ, ಪ್ರಕೃತಿಯಲ್ಲಿಯೂ, ವಿರಾಟ್ ಆತ್ಮನೊಡನೆ, ಪ್ರತ್ಯೇಕತೆಯಿದೆ. ಅದನ್ನು ನಮ್ಮ ದರ್ಶನಿಕರು "ಮಾಯೆ" ಎಂದು ಕರೆದಿರುವರು. ಈ ಭಿನ್ನತೆಯು ತನ್ನ ಆಧಾರವನ್ನು ಅವಲಂಬಿಸಿಲ್ಲ; ಹಾಗೂ ವಿರಾಟ್ ಆತ್ಮದ ಅಸೀಮತೆಯನ್ನು ಅವರಿಸುವುದೂ ಇಲ್ಲ ಯಾವ ಬಂಧನವು ಅದರಲ್ಲಿ ವಿದ್ಯಮಾನವಾಗಿರುವುದೋ ಅದನ್ನು ವಿಧಾತನು, ತನ್ನ ಸ್ವೇಚ್ಛೆಯಿಂದ ನಿರ್ಧಾರಮಾಡಿ ಇರಿಸಿರುವನು. ತನ್ನ ಶಕ್ತಿಗಳನ್ನೂ, ಆತನು ತನ್ನ ಇಚ್ಛೆಯಿಂದಲೇ ನಿಯಮಗಳ ಮೂಲಕ

(ನಂತರ ಪುಟ ನೋಡಿರಿ)

41 ವರ್ಷಗಳ ಭದ್ರ ಹಾಗೂ ಸಮರ್ಥ ಬೇಂಕಿಂಗ್ ಸೇವೆ

ದಿ. ಪಾಂಗಾಳ ನಾಯಕ್ ಬೇಂಕ್ ಲಿ.

ನಮ್ಮ 3 ವರ್ಷ ವ್ಯಾದೆಯ ಕೇಶ್ ಸರ್ಟಿಫಿಕೇಟುಗಳಲ್ಲಿ ರೇವಣೆ ಮಾಡಿರಿ ಬಡ್ಡಿ ಸೇಕಡಾ 5ರಂತೆ ರೂ. 87—00 3 ವರ್ಷಗಳ ಅಂತ್ಯದಲ್ಲಿ ಬಡ್ಡಿ ಕೂಡಿ ರೂ 100—00 ಒದಗಿಸುವುದು.

ಕರೆ, ಚಿಕ್ಕ ವ್ಯಾದೆ, ನಿರಖು ರೇವಣಾತಿಗಳ ಮೇಲೆ ಆಕರ್ಷಣೀಯ ಶರ್ತಗಳು: ಬಡ್ಡಿ ಸೇಕಡಾ 5½ರ ವರೆಗೆ

ತಾ 1—4—1961ರಿಂದ ಸೇವಿಂಗ್ಸ್ ಬೇಂಕ್ ಖಾತೆಗಳ ಮೇಲೆ ಬಡ್ಡಿ ಸೇಕಡಾ 3ರಂತೆ.

THE PANGAL NAYAK BANK LTD.
Estd: 1920

ವಿವೇಚನೆ

ಜನತೆಯ ರಕ್ಷಣೆ - ಸರಕಾರದ ಕರ್ತವ್ಯ

ತೆರಿಗೆದಾರರ ಹಿತಸಾಧನೆಯ ಕರ್ತವ್ಯವನ್ನು ಸರಕಾರ ನಿರ್ವಹಿಸಬೇಕು. ಇದಕ್ಕೆ ಸಾರ್ವಜನಿಕರ ಸಹಕಾರವನ್ನು ಬಯಸುವುದು ತಪ್ಪಲ್ಲವಾದರೂ ಇದನ್ನು ನಾಗರಿಕರೇ ಮಾಡಲೆಂಬ ಮನೋಭಾವ ಸಲ್ಲದು.

ಪ್ರತಿಯೊಂದಕ್ಕೂ ಸರಕಾರದ ಮುಖ ನೋಡುವುದು ತರವಲ್ಲ; ಸಾರ್ವಜನಿಕರು ಉದಾರರಾಗಿ ವರ್ತಿಸಿ ತಮ್ಮ ಊರಿನ ಅವಶ್ಯಕತೆಗಳನ್ನು ಪೂರೈಸಿಕೊಳ್ಳುವುದು ಅಪೇಕ್ಷಣೀಯವೆಂಬ ಉಪದೇಶವಿಂದು ಬೀದಿಯ ಸೊತ್ತಿನಂತೆ ಕಂಡುಬರುತ್ತಿದೆ. ಗ್ರಾಮದ ಎಲ್ಲ ಬೇಡಿಕೆಗಳನ್ನೂ ಈಡೇರಿಸಬೇಕಾದಲ್ಲಿ ಅದಕ್ಕೆ ಗ್ರಾಮವಾಸಿಗಳ ಬೆಂಬಲ—ಸಹಕಾರ ಬೇಕೇ ಬೇಕು ಎಂಬುದನ್ನು ಒಪ್ಪಲೇ ಬೇಕು. ಆದರೆ, ಇಂದು ಜನತೆಯದಾದ ಸರಕಾರವು ಈ ಸಂಬಂಧದಲ್ಲಿ ವಿಶೇಷ ಲಕ್ಷ್ಯ ಪೂರೈಸುವುದು ಅವಶ್ಯವಲ್ಲವೆ?

ಸರಕಾರವು ಜನತೆಯಿಂದ ಕರಗಳನ್ನು ಹೇರಿ ಹಣವನ್ನು ಒಟ್ಟು ಕೂಡಿಸುತ್ತದೆ. ದೇಶದ ಅಭಿವೃದ್ಧಿಯಾಗುತ್ತ ಎಂದಂತೆ ಅದು ಹೇರುವ ಕರಗಳ ಪ್ರಮಾಣವೂ ಹೆಚ್ಚುತ್ತ ಬರುತ್ತಿದೆ. ಅಲ್ಲದೆ ಹೆಚ್ಚಿನೆಡೆಗಳಲ್ಲಿ ವಿಧಿಸುವ ಕರದ ಭಾರವು ಪರಮಾವಧಿಯ ಮಿತಿಯನ್ನು—ಎಂದರೆ, ಜನತೆಯ ಶಕ್ತಿಯನ್ನು—ಮೀರಿಸಿಂತಿದೆ. ಇಂದು ಕರದಿಂದ ವಿಮುಕ್ತವಾದ ಪದಾರ್ಥವೆಂಬುದೂ ಇದೆಯೆ? ಹೇರಿದ ಕರದ ಪ್ರಮಾಣವಾದರೂ ಕಡಿಮೆಯೆಂಬುದಿದೆಯೆ? ಎಂದು ಪ್ರಶ್ನಿಸಿದರೆ ನಕಾರಾತ್ಮಕವಾದ ಉತ್ತರವೇ ದೊರೆತೀತು ದಾನದತ್ತಿಗಳ ಮೇಲೆಯೂ ಕರ, ಪಿತೃವಿನ ಆಸ್ತಿ ಸ್ವಾಧೀನತೆಯ ಮೇಲೂ ಕರವು ಹೇರಲ್ಪಟ್ಟಿರುವಾಗ ಈ ಮಾತಿನ ಸತ್ಯತೆಯ ಅರಿವಾಗುತ್ತದೆ. ಹೀಗೆ ಸರಕಾರ ಒಂದಲ್ಲ ಒಂದು ರೀತಿಯಿಂದ ಜನತೆಯಿಂದ ಅದರ ಶಕ್ತಿಗೆ ಮೀರಿದ ಪ್ರಮಾಣದಲ್ಲಿ ತೆರಿಗೆಯ ಮೂಲಕ ಹಣ ಒಟ್ಟು ಸೇರಿಸುತ್ತದೆ ಎಂಬುದು ವೇದ್ಯವಾಗುವುದು.

ಜನತೆಯು ಕರಗಳನ್ನು ತೆರುವುದು ಏತಕ್ಕೆ? ತಮ್ಮ ರಕ್ಷಣೆ—ಅಭಿವೃದ್ಧಿಯನ್ನು ಹಾರೈಸಿ ಅದಕ್ಕೆ ದುಡಿಯಬೇಕು; ತಮ್ಮ ಜೀವನ ಸುಖಮಯವಾಗಬೇಕು; ತಾವು ತಮಗಾಗಿ ಮಾಡಿಕೊಳ್ಳಬೇಕಾದ ಈ ಕಾರ್ಯವನ್ನು ಸಾಮೂಹಿಕ ಉಪಯೋಗಾರ್ಥವಾಗಿ ಸರಕಾರ ಮಾಡಬೇಕು ಎಂಬ ಉದ್ದೇಶದಿಂದ. ಆದರೆ, ಈ ಉದ್ದೇಶವು ಎಷ್ಟರ ಮಟ್ಟಿಗೆ ಸಫಲವಾಗಿದೆ? ಕರ ವಸೂಲಿ ಮಾಡಿ ನೌಕರರ ವೇತನಕ್ಕಾಗಿ ಅದನ್ನು ವಿನಿಯೋಗಿಸಿ, ಹೆಚ್ಚುಳಿದ ಚೂರ-ಪಾರುಗಳನ್ನು ಜನತೆಯ ಹಿತಚಿಂತನೆಗೆಂದು ಬೆಟ್ಟ ಮಾಡುವುದಾದರೆ, ಅದರಿಂದ ಎಂತಹ ಪ್ರಗತಿ ಕಾರ್ಯ ನಡೆದೀತು? ಸುಲೈಪದಿಂದ ನಮ್ಮ ದೇಶಕ್ಕೆ ವಿದೇಶಗಳು ಧಾರಾಳ ಮನಸ್ಸಿನಿಂದ ದೊಡ್ಡ ಮೊತ್ತದ ದೀರ್ಘಾವಧಿಯ ಸಾಲಗಳನ್ನು ನೀಡುತ್ತಿವೆ—ಎಂತಲೇ ದೇಶದಲ್ಲಿ ಕೆಲವೊಂದು ಅಭಿವೃದ್ಧಿ ಯೋಜನೆಗಳು ರೂಪುಗೊಳ್ಳುತ್ತಿವೆ. ಇಲ್ಲವಾದರೆ, ದೇಶದ ಆಂತರಿಕ ಅರ್ಥಿಕಾದಾಯವನ್ನೇ ಹೊಂದಿಕೊಂಡಿರುವುದಾದರೆ, ಅದರ ಪ್ರಮಾಣ ಅತ್ಯಲ್ಪವಾದೀತು.

ಸಾರ್ವತ್ರಿಕವಾಗಿ ವಿಧಿಸಲಾದ ಕರಗಳನ್ನು ದೇಶದ ಸಾಮಾನ್ಯ ಜನತೆಯೇ ತೆರುತ್ತಿದೆ. ಶ್ರೀಮಂತರ ವರ್ಗದ ಮೇಲೆ ಹೇರುವ ಕರದ ಪ್ರಮಾಣವು ಹೆಚ್ಚಿದೆಯೂ ದರೂ ಕರತೆರುವ ಶಕ್ತಿಗಿಂತ ಅದು ತೀರ ಕಡಿಮೆಯಿದೆ. ನಮ್ಮ ಸರಕಾರದ ಧೋರಣೆಯಂತೆ ಒಂದು ಗ್ರಾಮದಲ್ಲಿ ಕೆಲವೊಂದು ಅಭಿವೃದ್ಧಿ ಯೋಜನೆಗಳು ಆಗ ಬೇಕಾದರೆ, ಆ ಗ್ರಾಮದವರು ತಮ್ಮ ಪಾಲಿನ ವಂತಿಗೆಯನ್ನು ತೆರಬೇಕಾಗುವುದು. ಶ್ರೀಮಂತರ ಸಂಖ್ಯೆ ಮೊದಲೇ ನಮ್ಮ ದೇಶದಲ್ಲಿ ಕಡಿಮೆ; ಇದ್ದವರಲ್ಲಿಯೂದೂ ಉದಾರತೆಯ ಮನೋಭಾವವು ದೃಗ್ಗೋಚರವಾಗುವುದು ಅಪರೂಪ. ಹಾಗಿರುವಾಗ ತೀರ ಬಡವರೇ ತುಂಬಿರುವ ಒಂದು ಹಳ್ಳಿಗೆ ಹೊಸ ರಸ್ತೆಯೊಗಲಿ, ಶಾಲಾ ಕಟ್ಟಡವಾಗಲಿ ಏನೂ ಬೇಡವೆ? ಆ ಗ್ರಾಮದವರು ತಮ್ಮ ದಾರಿದ್ರ್ಯದ ನಡುವೆಯೂ ನಿತ್ಯೋಪಯೋಗಿ ಪದಾರ್ಥಗಳ ಮೇಲಿನ ತೆರಿಗೆ ತೆರುತ್ತ ಬರುತ್ತಿಲ್ಲವೆ? ಅಂತಹ ತೆರಿಗೆದಾರರಿಗೆ ಸರಕಾರದ ಪ್ರಗತಿ ಕಾರ್ಯದ ಗಾಳಿಯೂದರೂ ಸೋಕಬೇಡವೆ?

ಇದೇ ಪ್ರಶ್ನೆ ಶಿಕ್ಷಣರಂಗದಲ್ಲಿಂದು ತಲೆದೋರುತ್ತಿದೆ. ಮೈಸೂರು ರಾಜ್ಯದ ಮುಖ್ಯಾಯ ಶಿಕ್ಷಣ ಯೋಜನೆಯಂತೆ ಶಾಲಾಪ್ರಾಯದ ಮಕ್ಕಳನ್ನು ಶಾಲೆಗೆ ಬರುವಂತೆ ಮಾಡಿಕೊಳ್ಳಬೇಕಾಗಿದೆ. ಬಡ ಮಕ್ಕಳೇ ಹೆಚ್ಚಿರುವ ನಮ್ಮ ಹಳ್ಳಿಗಳ ಶಾಲೆಗಳಲ್ಲಿ ಅವರಿಗೆ ಮಧ್ಯಾಹ್ನದ ಊಟ, ಅಂಗಿ-ವಸ್ತ್ರ, ಪುಸ್ತಕ ಮೊದಲಾದುವುಗಳನ್ನು ಒದಗಿಸುವುದು ಅವಶ್ಯವೆಂಬುದರಲ್ಲಿ ಎರಡು ಮಾತಿಲ್ಲ. ಆದರೆ, ಇವನ್ನು ಯಾರು ಪೂರೈಸಬೇಕು? ಹೆತ್ತವರು ನಿಸ್ಸಹಾಯಕರಾಗಿದ್ದರೆ ಅವರೇನು ಮಾಡಬಲ್ಲರು? ಶಾಲೆಯ ಅಭಿವೃದ್ಧಿ ಸಮಿತಿಯು ಊರವರ ಸಹಕಾರದಿಂದ ಇಂತಹ ಯೋಜನೆಗಳನ್ನು ಕಾರ್ಯರೂಪಕ್ಕೆ ತರಬೇಕಂತೆ. ಈ ಅಭಿವೃದ್ಧಿ ಮಂಡಳಿಗಳು ಊರವರಿಂದಲೇ ವಂತಾಡವೆತ್ತಬೇಕು ತಾನೆ? ಊರ ಪ್ರತ್ಯೇಕ ತೆರಿಗೆದಾರನೂ ವಿದ್ಯಾ ತೆರಿಗೆಯನ್ನು ಸಂಚಾಯತ ಬೋರ್ಡು ಇಲ್ಲವೇ ನಗರ ಸಭೆಗಳಿಗೆ ತೆರುತ್ತ ಬರುತ್ತಿದ್ದಾನೆ. ಸಂಚಾಯತಿಯ ಆಡಳಿತ ಸೀಮೆಯೊಳಗಿನ ಎಲ್ಲ ತೆರಿಗೆದಾರರಿಂದಲೂ ಅದು ವಿದ್ಯಾಕರ ವಸೂಲು ಮಾಡುವಾಗ, ಆ ಪ್ರದೇಶದ ಎಲ್ಲ ಮಕ್ಕಳಿಗೂ ಶಿಕ್ಷಣ ಸೌಕರ್ಯವನ್ನು ಒದಗಿಸಿಕೊಡಬೇಡವೆ? ಅದಕ್ಕಾಗಿ ಸುತ್ತಿ ತೆರಿಗೆದಾರರಿಂದ ಸಹಾಯ ಬಯಸುವುದರಿಂದ ಮೊದಲೇ ಕಂಗಾಲಾದ ಸಾಮಾನ್ಯ ಜನತೆಯನ್ನು ಚಿಂತಾಗ್ರಸ್ತವಾಡಿದಂತಾಗಲಿಲ್ಲವೆ? ಇಂತಹ ಸ್ಥಳೀಯ ಸಂಸ್ಥೆಗಳು ಒಂದೆರಡು ಶಾಲೆಗಳನ್ನು ನಡೆಸಿದ ಮಾತ್ರಕ್ಕೆ ಶಿಕ್ಷಣದ ಹೊಣೆಯನ್ನು ನಿರ್ವಹಿಸಿದಂತಾಯಿತೆ?

ಸರಕಾರವು ತೆರಿಗೆಯ ಹಣವನ್ನು ವಸೂಲು ಮಾಡುವುದು ಕೇವಲ ಸಿಬ್ಬಂದಿಯ ಹೆಚ್ಚಳಕ್ಕಲ್ಲ. ಕರದ ಒಂದಂಶ ಸಿಬ್ಬಂದಿಗೆ ಹೋಗಲೇ ಬೇಕಾದರೂ ಬಹ್ವಂಶ ಜನತೆಯ ಉಪಯೋಗಕ್ಕೆ-ಅವರ ಸಾಲಭ್ಯಕ್ಕೆ ಒದಗಬೇಕು. ನಮ್ಮ ಮುಖ್ಯ ಮಂತ್ರಿಗಳು ಒಂದೆಡೆ ಮಾತಾಡುತ್ತ ಪ್ರವಾಹ ಸಂತ್ರಸ್ತರ ಪುನರ್ನಿವೇಶನದ ಹೊಣೆಗಾರಿಕೆಯನ್ನು ನಾಗರಿಕರು ನಿರ್ವಹಿಸಬೇಕು ಎಂದು ಹೇಳಿ, ಈ ಸಂಬಂಧದಲ್ಲಿ ಸರಕಾರದ ಕರ್ತವ್ಯ ತಿಲಾಂಜಲಿಯದೆಯೂ ಇಲ್ಲವೆಂಬ ಅಭಿಪ್ರಾಯ ಬರುವಂತೆ ಮಾಡಿದ್ದಾರೆ. ಈ ಕಾರ್ಯ ಮಾತ್ರವಲ್ಲ ದೇಶದ ಪ್ರತಿಯೊಂದು ಸಾಧನೆಯೂ ನಾಗರಿಕರ ಸಹಾನುಭೂತಿಯುತ್ತು ಸಹಕಾರದಿಂದಲೇ ಯಶಸ್ವಿಯಾಗುವುದೆಂಬುದು ಒಪ್ಪತಕ್ಕುದೇ. ಆದರೆ, ತೆರಿಗೆ ವಸೂಲು ಮಾಡಿ, ಜನತೆಯ ರಕ್ಷಣೆ—ಪಾಲನೆ—ಪೋಷಣೆಯ ಭಾರವನ್ನು ಸರಕಾರ ವಹಿಸಿಕೊಂಡಿರುವಾಗ, ಇಂತಹ ಅಲಾಪ ಅಪಲಾಪವೆಂದು ಪ್ರತ್ಯೇಕ ಹೇಳಬೇಕಾಗಿಲ್ಲ. ತೆರಿಗೆಯ ಹಣವು ನೈಯ್ಯಕ್ತಿಕ ಸುಖ ವಿಲಾಸಕ್ಕೆಂದು ತಿಳಿಯುತಿದ್ದ ರಾಜಪತ್ತೆ ದೂರ ಹೋಗಿದೆ; ತನ್ನ ಅಧಿಕಾರಿಗಳ ಹಿತಚಿಂತನೆಗೆಂಬ ನಿದೇಶೀ ಸತ್ತೆ ಸತ್ತು ಹೋಗಿದೆ. ಇಂದು ಪ್ರಜೆಗಳಿಗಾಗಿ ಅವರದೇ ಸರಕಾರವಿದೆ. ಪ್ರಜೆಗಳ ಮಾನ—ಅಪಮಾನ, ಸುಖ-ಕಷ್ಟ ಈ ಪ್ರಜಾ ಸರಕಾರಕ್ಕೆ ಸೇರಿದುದು. ತನಗಾಗಿಯೇ ತೆರಿಗೆದಾರನಿಂದು ತೆರಿಗೆ ನೀಡುತ್ತಿರುವಾಗ ತೆರಿಗೆದಾರನಹಿತವನ್ನು ಕಡೆಗಣಿಸಿ, ಆತನ ಸಂಕಷ್ಟವನ್ನು ಕೇಳಯೂ ಕೇಳದಂತೆ ಮಾಡುವುದು ಪ್ರಜಾ ಸರ್ಕಾರಕ್ಕೇನೇ ಲಜ್ಜಾವಹ.! ಸರ್ಕಾರದ ಶಿರೋಮಣಿಗಳು ಈ ರೀತಿಯಾಗಿ ಉದ್ಗರಿಸುವುದು ಪ್ರಜಾಜನರಿಗೆ ಮಾಡಿದ ಅಪಮಾನ.

ಅದರೆ, ಸರಕಾರವು ಸಾರ್ವಜನಿಕರಿಂದ ಸಹಾಯ ಪಡೆಯಬಾರದು ಎಂದಿದರ ಅರ್ಥವಲ್ಲ; ಅಲ್ಲದೆ ನಾಗರಿಕರಾದರೂ ತೆರಿಗೆ ತೆತ್ತೊಡನೆಯೇ ತಮ್ಮ ಕರ್ತವ್ಯ ಮುಗಿಯಿತೆಂದು ತಿಳಿಯಬೇಕೆಂದೂ ಅಲ್ಲ. ತೆರಿಗೆ ತೆರುವುದೆಂದರೆ, ಇನ್ಶೂರೆನ್ಸ್ ಪ್ರೀಮಿಯಂ ತೆತ್ತಂತೆ ಬಿಂದಿಕಕ್ಕೂ ಅಲ್ಲ. ವಿಮೂಕಂತು ಪಾವತಿ ಮಾಡಿದವನಿಗೆ ತನ್ನ ಪಾಲಿಸಿಯ ಮೇಲೆ ಸಂಪೂರ್ಣ ಅಧಿಕಾರವಿದೆ; ಅದನ್ನು ಆತ ಮರಳಿ ಪಡೆಯಬಲ್ಲನು; ಆದರೆ ಕರವು ಅಂತಹ ಯಾವ ಪಾಲಿಸಿಯನ್ನೂ ತಂದುಕೊಡುವುದಿಲ್ಲ. ತನ್ನ ಸ್ಥಿತಿಗತಿಗನುಗುಣವಾಗಿ, ಆತ ರಾಜ್ಯಕ್ಕೆ ನಿರ್ಧರಿಸಿ ಪ್ರಮಾಣದಲ್ಲಿ ವಂತಿಗೆ ಕೊಡುಬರುತ್ತಾನೆ. ಶಕ್ತಿವಂತರಿಗೆ ಇಂತಹ ವಂತಿಗೆಯನ್ನು ಕಾನೂನಿನಲ್ಲಿ ಹೇಳಿದುದಕ್ಕಿಂತ ಹೆಚ್ಚಿಗೆ ತೆರುವುದು ಸಾಧ್ಯವಿಲ್ಲ. ಇಂತಹವರಲ್ಲಿ ಉದಾರಿಗಳು ಮುಕ್ತಹಸ್ತದಿಂದ ದಾನಮಾಡಿದರೆ, ಅದನ್ನು ಸರ್ವಥಾ ಸ್ವೀಕರಿಸಬೇಕು. ಅದರೆ, ಈ ರೀತಿಯ ದಾನಿಗಳಲ್ಲದೆಡೆ ನಾಗರಿಕರಿಗೆ ಅವಶ್ಯ ಒದಗಬೇಕಾದ ಸೌಕರ್ಯಗಳಲ್ಲಿ ವ್ಯತ್ಯಯ ಮಾಡಬಾರದು.

ಶಿಕ್ಷಣವೇ ಇರಲಿ, ಸಾರಿಗೆ ಸಂಪರ್ಕವೇ ಇರಲಿ, ನಿರಾಶ್ರಿತರ ಪುನರ್ನಿವೇಶನವೇ ಇರಲಿ, ಯಾವುದೇ ಪ್ರಕಾರದ ಅಭಿವೃದ್ಧಿ ಯೋಜನೆಯಿರಲಿ, ಅವುಗಳ ಲಾಭ ಎಲ್ಲ ತೆರಿಗೆದಾರರಿಗೂ ಸಮಪ್ರಮಾಣದಲ್ಲಿ ದೊರೆಯುವಂತಾಗಬೇಕು. ಒಂದು ಕಣ್ಣಿಗೆ ಮಣ್ಣು, ಒಂದು ಕಣ್ಣಿಗೆ ಬೆಣ್ಣೆ ಎರಚುವುದು ಸಲ್ಲದು. ನಾಗರಿಕರು ತಮ್ಮೆಲ್ಲ ಆವಶ್ಯಕತೆಗಳಿಗೆ—ವೈಯಕ್ತಿಕವನ್ನುಳಿದು-ಸರಕಾರದ ಮುಖ ನೋಡಬಾರದೆನ್ನುವುದಾದರೆ, ಸರಕಾರವಿರುವುದಾದರೂ ಏತಕ್ಕೆ ಎನಿಸುತ್ತದೆ. ಸರಕಾರವು ಜನತೆಯನ್ನು ಸರದಿಯಂತೆಯಲ್ಲಿ ಮುಂದುವರಿಸಿಕೊಂಡು ಹೋಗಬೇಕು. ಇಂದು ಸರಕಾರ-ನಾಗರಿಕರ ನಡುವೆ ಭೇದ ಕಲ್ಪಿಸುವುದು ಅಪಮಾನಕರ. ಏಕೆಂದರೆ ಸರಕಾರವೇ ನಾಗರಿಕರದು. ನಾಗರಿಕರೇ ಸರಕಾರ ನಿರ್ಮಾಪಕರು. ಆದುದರಿಂದ ನಾಗರಿಕರ ಆವಶ್ಯಕತೆಗಳೆಲ್ಲವನ್ನೂ ಪೂರೈಸುವುದು ಸರಕಾರದ ಪರಮ ಕರ್ತವ್ಯ. ಇದರಲ್ಲಿ ತೋರಿಸುವ ಅಸಡ್ಡೆ ನಾಗರಿಕರಿಗೆ ಆಗುವ ಅಪಮಾನ ನಾಗರಿಕರಿಂದ ಸರ್ವಾಧಿಕಾರವನ್ನೂ ತನ್ನ ಕೈಗೆ ತಂದುಕೊಂಡಿರುವ ಸರಕಾರಕ್ಕೆ ಸಾಧ್ಯವಿದ್ದಲ್ಲಿ ಸಾರ್ವಜನಿಕ ಸಹಾಯ ಪಡೆದು ಸಾಧ್ಯವಿಲ್ಲದಲ್ಲಿ ಅದಿಲ್ಲದೇನೇ ಎಲ್ಲ ಕಾರ್ಯಕ್ರಮಗಳನ್ನೂ ಮೂರ್ತರೂಪಕ್ಕೆ ಇಳಿಸಬೇಕು. ತಮಗೆ ಸೌಲಭ್ಯವೊದಗದೆ ಹೋದೆಲ್ಲ ತೆರಿಗೆಯವರೂ ಏಕೆ ತೆರಬೇಕು ಎಂಬ ಸಮಸ್ಯೆ ನಾಗರಿಕರಲ್ಲಿ ಮೂಡಿದರೆ ಆಶ್ಚರ್ಯವಲ್ಲ. —ರಾಶಿ.

ಕೊರ್ಪೊರೇಶನ್ ಬೇಂಕ್

ಶೇವಣಾತಿಗಳ ಮೇಲಿನ ಸಾಲಿಯಾನ್ ಶೇಕಡಾ ಬಡ್ಡಿ ದರಗಳು:

3 ಸೇವಿಂಗ್ಸ್ ಬೇಂಕ್ ಖಾತೆ

3½ ಯಿಂದ 5½ ಕಾಯಂ (ವಿವಿಧಾವಧಿಗಳಿಗೆ)

5½ ನಜೋತ್ಸವ

5 ಕ್ಯುಮುಲೇಟಿವ್

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ಸ್ಥಾಪನೆ: 1906)

ರಿಜಿಸ್ಟರ್ಡ್ ಆಫೀಸು: ಉಡುಪಿ | ಆಡಳಿತ ಆಫೀಸು: ಮಂಗಳೂರು

ಶ್ರೀ ಎ. ಬಿ. ಶೆಟ್ಟಿ ಸ್ಮಾರಕ ನಿಧಿಗೆ ಸಹಾಯ ಮಾಡಿರಿ

ಓದುವುದಕ್ಕಿಂ ಹೆಚ್ಚು ವಿಚಾರ ಮಾಡುವುದು, ಆಡುವುದಕ್ಕಿಂತ ಹೆಚ್ಚು ಆಲಿಸಿ ತಿಳಿದುಕೊಳ್ಳುವುದು—ಬುದ್ಧಿವಂತರಾಗಲು ಇರುವ ಏಕಮಾತ್ರ ಮಾರ್ಗ.

ನವಯುಗ

ವಾರ	ಉದಯಿಸಿ	ಸರುಷ
೪೯	೨೪-೮-೬೧	೪೦

ಜಪಾನದ ಸಾಲ

ನಮ್ಮ ತೃತೀಯ-ಯೋಜನೆಯ ಅಂತ್ಯದಲ್ಲಾದರೂ ಆಹಾರದ ಮಟ್ಟಿಗೆ ಸ್ವಾವಲಂಬನೆವನ್ನು ಸಾಧಿಸುವ ಗುರಿಯಿದೆ. ಇದಕ್ಕಾಗಿಯೇ ಯೋಜನೆಯಲ್ಲಿ ವ್ಯವಸಾಯೋತ್ಪನ್ನಗಳ ಹೆಚ್ಚಳದತ್ತ ವಿಶೇಷ ಗಮನವನ್ನು ಹರಿಸುವ ನಿರ್ಧಾರವಾಗಿದೆ. ಈ ವರ್ಷದಲ್ಲಿ ನಡೆದ ಜನಗಣನೆಯ ಅಂಕಿ ಸಂಖ್ಯೆಗಳಿಂದ ದೇಶದ ಪ್ರಜಾ ಜನರ ಸಂಖ್ಯೆಯು ಪ್ರತಿ ವರ್ಷ ಗಣನೀಯ ಪ್ರಮಾಣದಲ್ಲಿ ಏರುತ್ತ ಹೋಗುತ್ತಿದೆಯೆಂಬುದರಿಂದ, ನಾವು ಈ ಉದ್ದೇಶ ಸಾಧನೆಗಾಗಿ ಬಹಳಷ್ಟು ಶ್ರಮಿಸಬೇಕಾಗಿದೆ. ಆಹಾರೋತ್ಪಾದನೆಯ ಹೆಚ್ಚಳವನ್ನು ಸಾಧಿಸುವುದಕ್ಕೆ ವ್ಯವಸಾಯದಲ್ಲಿ ಆಧುನಿಕ ಯಂತ್ರೋಪಕರಣಗಳನ್ನು ಬಳಸಿಕೊಳ್ಳುವುದು, ಉತ್ತಮ ಬೀಜಗಳನ್ನು ಉಪಯೋಗಿಸುವುದು ಕಾರಣವಾಗಿವೆಯಾದರೂ ಸಾರಸಮೃದ್ಧವಾದ ಗೊಬ್ಬರಗಳ ಬಳಕೆಯ ಸ್ಥಾನವೂ ಅಗ್ರಗಣ್ಯವಿದೆ. ಈಗಾಗಲೇ ಒಂದೆರಡು ಗೊಬ್ಬರದ ಕಾರಖಾನೆಗಳನ್ನು ನಾವು ನಿರ್ಮಿಸಿರುವೆವಾದರೂ ಅವು ಸಾಲವಾಗಿವೆ; ಆದುದರಿಂದಲೇ ಮೂರನೆಯ ಯೋಜನೆಯಲ್ಲಿ ಉತ್ತರ ಪ್ರದೇಶದಲ್ಲೊಂದು ಗೊಬ್ಬರದ ಖಾರಖಾನೆಯನ್ನು ಸ್ಥಾಪಿಸುವ ಪ್ರಯತ್ನ ನಡೆಯುತ್ತಿದೆ. ಅಲ್ಲದೆ, ಆಧುನಿಕ ಕಾರಖಾನೆಗಳ ಬೇಡಿಕೆಗಳನ್ನು ಪೂರೈಸಲು ಉಕ್ಕಿನ ಅಗತ್ಯವೂ ಹೆಚ್ಚಿರುವುದರಿಂದ ಇನ್ನೊಂದು ಉಕ್ಕಿನ ಕಾರಖಾನೆಗೂ ಶೀಘ್ರದಲ್ಲಿಯೇ ಟೆಂಡರುಗಳನ್ನು ಕರೆಯಲಾಗುವುದೆಂದು ತಿಳಿಯುತ್ತದೆ.

ನಮ್ಮ ಯೋಜನೆಯ ಯಶಸ್ಸು ವಿದೇಶಗಳಿಂದ ದೊರೆಯುವ ಸಾಲಗಳ ಮೊತ್ತವನ್ನು ಅವಲಂಬಿಸಿದೆ; ಅಥವಾ ವಿದೇಶಗಳಿಂದ ಧಾರಾಳವಾಗಿ ಸಾಲವೊರೆಯುತ್ತಿದೆಯೆಂಬುದರಿಂದಲೇ ನಮ್ಮ ಯೋಜನೆಗಳು ಒಂದರ ಮೇಲೊಂದರಂತೆ ಅಚರಣೆಗೆ ಬರುತ್ತಿವೆ. ಪುನಾರಚನೆಯೊಗಬೇಕಾದುದು ಅತ್ಯಗತ್ಯವೆಂಬುದರಿಂದ ಭಾರತವು ಇಂತಹ ಸಾಲಗಳನ್ನು ಸ್ವೀಕರಿಸುತ್ತಿದೆ. ಜಪಾನ ಸರಕಾರವು ಯನ್ ರೂಪದಲ್ಲಿ ಈಗ ಕೊಡಮಾಡಿದ ಸುಮಾರು ೫೨ ಕೋಟಿ ರೂಪಾಯಿಗಳು (೮ ಕೋಟಿ ಡಾಲರ್) ಇಂತಹ ಸಾಲಗಳಲ್ಲಿ ಒಂದು. ಈ ಸಾಲವನ್ನು ಭಾರತದ ತೃತೀಯ ಯೋಜನೆಯ ಮೊದಲಿನೆಂಟು ವರ್ಷಗಳ ಮಟ್ಟಿಗೆ ಕೊಡಲಾಗಿದೆ. ಜಪಾನ ಸರಕಾರ ಮಾತ್ರವಲ್ಲ ಅಮೆರಿಕ ವಿದೇಶ ವಿನಿಮಯ ಬೇಂಕುಗಳು ಮತ್ತು ಕೆಲವು ಖಾಸಗಿ ಬೇಂಕುಗಳೂ ಕೂಡಿ ಈ ಸಾಲದ ಕೊಡುಗೆಯನ್ನು ಮುಂದಿಟ್ಟಿವೆ ೧೯೬೭ರ ನಂತರ ೨೦ ಸಮಾನ ಪಾಲ್ಗಾಸಿಗೆ ಕಂತುಗಳಲ್ಲಿ ಸಾಲದ ಮೊತ್ತವನ್ನು ಮರಳಿಸಬೇಕಾಗುವುದು; ಸೇಕಡಾ ೬ರ ಸಲೆಯಲ್ಲಿ ಬಡ್ಡಿಯನ್ನು ತೆರಬೇಕಾಗುವುದು; ಜಪಾನದ ಯಂತ್ರೋಪಕರಣಗಳಿಗೆ ಅಥವಾ ಎರಡೂ ಸರಕಾರಗಳು ಒಪ್ಪುವ ಇನ್ನಿತರ ಉದ್ಯಮಗಳಿಗೆ ಇದನ್ನು ಉಪಯೋಗಿಸಬಹುದು. ದ್ವಿತೀಯ ಯೋಜನೆಗೂ ಜಪಾನವು ಇದೇ ರೀತಿಯಲ್ಲಿ ೧೮ ಬಿಲಿಯ ಯನ್‌ಗಳ ಸಾಲವನ್ನು ಕೊಟ್ಟಿತ್ತು.

ಜಪಾನದಿಂದ ನಿರೀಕ್ಷಿಸಲಾಗಿದ್ದ ಈ ಸಾಲದ ಅವಧಿಯು ಮತ್ತೂ ದೀರ್ಘವಿರಬೇಕೆಂದೂ ಆಕರಿಸುವ ಬಡ್ಡಿಯ ದರವು ಕಡಿಮೆಯಿರಬೇಕೆಂದೂ ನೊಂದಲು ಭಾರತ ಬಯಸಿತ್ತು. ಆದರೆ, ಜಪಾನವು ಇದಕ್ಕೆ ಒಪ್ಪಲಿಲ್ಲ. ಈಸಾಲದ ಹಣವನ್ನು ಈಗಾಗಲೇ ಸಾಕಷ್ಟುಮುಂದುವರಿದ ಘಟ್ಟದಲ್ಲಿರುವ ಉಕ್ಕಿನ ಪ್ರದೇಶದ ಗೊಬ್ಬರದ ಕಾರಖಾನೆಗೂ ದೇಶದಲ್ಲಿ ಕಟ್ಟಲಾಗುವ ಹೊಸ ಉಕ್ಕಿನ ಕಾರಖಾನೆಗೂ ಉಪಯೋಗಿಸಲ್ಪಡಬಹುದೆಂದು ಹೇಳಲಾಗುತ್ತಿದೆ. ಈ ಎರಡೂ ಯೋಜನೆಗಳು ಅತ್ಯಗತ್ಯದವಾದುದರಿಂದ ಜಪಾನ ಸರಕಾರದ ಒಪ್ಪಿಗೆಯನ್ನು ಸದೆದು ಕಾರ್ಯವನ್ನು ಭಾರತ ಸರಕಾರವು ಶೀಘ್ರದಲ್ಲಿ ಮುಂದುವರಿಸುವುದೆಂದು ಆಶಿಸ ಬಹುದು.

ಕೇರಳದಲ್ಲಿರುವ ಒಂದು ಇಂಜಿನಿಯರಿಂಗ್ ಕಾಲೇಜಿನ ಪ್ರಾಕಾಶ್ಯಬೋಧನೋಪಕರಣಗಳು ಇಲ್ಲವಾದುದರಿಂದ ಅದರಲ್ಲಿನ ವಿದ್ಯಾರ್ಥಿಗಳು ಕಷ್ಟವನುಭವಿಸ ಬೇಕಾಯ್ತೆಂದೂ ಇವುಗಳ ಅಭಾವಕ್ಕೆ ವಿದೇಶ ವಿನಿಮಯ ನಾಣ್ಯಗಳ ಕೊರತೆಯೇ ಕಾರಣವಾಯ್ತೆಂದೂ ತಿಳಿಯುತ್ತದೆ. ನಮಗೆ ಲಭ್ಯವಿರುವ ವಿದೇಶ ವಿನಿಮಯವನ್ನು ಅವಶ್ಯಕತೆಯ ಪ್ರಾಶಸ್ತ್ಯಕ್ಕೆ ಸರಿಯಾಗಿ ಹಂಚಿ ಕೊಡುವ ನೀತಿಯನ್ನು ನಾವು ಅನುಸರಿಸುವ ಸಪ್ತರಂಪರೆಯಿಟ್ಟುಕೊಂಡಿಲ್ಲವಾದುದರಿಂದಲೇ ಇಂತಹ ದುಸ್ಥಿತಿ ತಲೆದೋರಿದೆ. ದೇಶದ ಪುನಾರಚನೆಗೆ ನಿಸುವ ಇಂಜಿನಿಯರರನ್ನು ತಯಾರುಮಾಡುವುದರಲ್ಲಿ ನಾವು ಈ ರೀತಿಯ ಅಲಕ್ಷ್ಯತೋರಿಸುವುದು ಅಸಮರ್ಥನೀಯವಾಗಿದೆ; ಅನಪೇಕ್ಷಣೀಯವಿದೆ. ಬೇರೆ ದೇಶಗಳಿಂದ ಸಾಲ ಪಡೆಯುವಾಗ, ನಮ್ಮ ಆಂತರಿಕ ಸಂಪತ್ತನ್ನು ಬಳಸಿಕೊಳ್ಳುವಾಗ, ನಮ್ಮ ಆವಶ್ಯಕತೆಯ ಸಂಪೂರ್ಣ ಚಿತ್ರವನ್ನು ಕಣ್ಣಮುಂದೆ ಇಟ್ಟುಕೊಳ್ಳಬೇಕು; ಅದರಂತೆ ಆವಶ್ಯಕತೆಗೆ ಅಗ್ರ ಪ್ರಾಶಸ್ತ್ಯ ನೀಡಬೇಕು.

ಕುತ್ಸಿತ ವಿನೋದ

ರೇಲ್ವೆಗಳಲ್ಲಿರುವ ಅಪಾಯ ಸೂಚಕ ಸರಪಳಿಯ ವ್ಯವಸ್ಥೆಯನ್ನು ತೆಗೆದು ಹಾಕುವುದರ ಕುರಿತು ತೀವ್ರವಾಗಿ ಸರಕಾರ ಪರಿಶೀಲನೆ ನಡೆಸುತ್ತಿದೆ ಎಂದು ತಿಳಿಯುತ್ತದೆ. ಈ ಸರಪಳಿಗಳನ್ನು ಕೇವಲ ವಿನೋದಕ್ಕಾಗಿ ಜಗ್ಗುವ ಪ್ರವೃತ್ತಿ ಬೆಳೆಯುತ್ತಿರುವುದೇ ಇಂತಹ ವಿಚಾರ ಮಾಡಲು ಕಾರಣವಾಯಿತೆಂದೂ ಗೊತ್ತಾಗುತ್ತದೆ. ಹೀಗೆ ಸರಪಳಿಗಳನ್ನು ಎಳೆದು ವೃಥಾ ಕಿರುಕುಳ ಕೊಡುವವರಲ್ಲಿ ಉಚ್ಚ ವಿದ್ಯಾರ್ಥಿಗಳೂ ಸೇರಿರುವರೆಂಬುದನ್ನು ಅಲ್ಲಗಳೆಯಬಾರದು. ರೇಲ್ವೆಗಳಲ್ಲಿ ಟಿಕೇಟಿಲ್ಲದೆ ಪ್ರಯಾಣ ಮಾಡುವುದು ಮೊದಲಾದ ಕುತ್ಸಿತ ವಿನೋದಗಳಲ್ಲಿಯೂ ಇವರು ತೊಡಗಿರುವುದು ರಾಷ್ಟ್ರಕ್ಕೆ ಅಪಮಾನ. ಸೋನಾಪುರದಲ್ಲಿ ಇಂತಹ ವಿದ್ಯಾರ್ಥಿಗಳನ್ನು ತೊಲಗಿಸಲುಗೋಳಿಬಾರು ಮಾಡಬೇಕಾಯಿತು. ಹಾಗೆಯೇ ವಿಶ್ವವಿದ್ಯಾಲಯ ಮತ್ತು ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳು ತಮ್ಮ ಉದ್ದೇಶವನ್ನು ಬದಿಗಿಟ್ಟು ಅಶಿಸ್ತು-ಅಶಿಸ್ತುಗಳಿಗೆ ಮಾರುಹೋಗಿರುವ ನಿದರ್ಶನಗಳು ಪದೇ ಪದೇ ಕೇಳಿಬರುತ್ತಿದೆ. ಭಾರತೀಯ ವಿದ್ಯಾರ್ಥಿಯೆಂದರೆ, ಅಶಿಸ್ತು—ಅಸಹನೆ ಮತ್ತು ಅಸಭ್ಯತೆಯ ಪ್ರತಿರೂಪವೆಂಬ ಕಲ್ಪನೆ ಮೂಡುವಂತೆ ಹಲವಾರು ವಿಶ್ವವಿದ್ಯಾಲಯಗಳಲ್ಲಿ ನಡೆದ ಅನಪೇಕ್ಷಣೀಯ ದುರ್ಘಟನೆಗಳು ಮಾಡಿವೆ. ಈ ವಿದ್ಯಾರ್ಥಿಗಳೇ ಬೆಳೆದು ಮುಂದೆ ರಾಷ್ಟ್ರದ ನಾಯಕತ್ವವನ್ನು ನಡೆಸುವುದು ಸೂರ್ಯಚಂದ್ರರಂತೆ ತಿಳಿಯಾಗಿರುವಾಗ, ರಾಷ್ಟ್ರದ ಸ್ಥಿತಿಯೆಲ್ಲಿಗೆ ಬಂದು ಮುಟ್ಟೀತು ಎಂದು ಹೇಳಬರುವಂತಿಲ್ಲ. ನಮ್ಮ ವಿದ್ಯಾರ್ಥಿಗಳಲ್ಲಿ ಭೌತಿಕ ಜ್ಞಾನದಂತೆ ನೈತಿಕ ಜ್ಞಾನ ಬೆಳೆದಿಲ್ಲವೆಂಬುದೇ ಇದಕ್ಕೆ ಕಾರಣವೆನ್ನುವವರೂ ಇದ್ದಾರೆ. ನಮ್ಮ ಶಿಕ್ಷಣಾಲಯಗಳಲ್ಲಿ ನೈತಿಕ ಪಾಠಕ್ಕಿರುವ ಗೌಣಸ್ಥಾನವನ್ನು ನೋಡುವಾಗ ಇದು ಹೌದೆಂದು ಅನಿಸುತ್ತದೆ ರಾಷ್ಟ್ರಘಾತುಕವಾದ ಈ ಕುಪ್ರವೃತ್ತಿ ದೂರವಾಗುವಂತೆ ಮಾಡಲು ಇನ್ನಾದರೂ ಶಡಮಾಡಬಾರದು.

ಸಂಕ್ಷಿಪ್ತ ಸುದ್ದಿಗಳು

ಲಾಲ ಬಹದೂರ ಶಾಸ್ತ್ರಿ

ನೆಹರುಗಳಿಗೆ ಬೇಕಾದವರು ಎನ್ನುವುದಕ್ಕಿಂತ ಸಮರ್ಥರು ಎಂಬುದರಿಂದಲೇ ಲಾಲ ಬಹದೂರ ಶಾಸ್ತ್ರಿಗಳು ನಿವಂಗತ ಪಂತರ ಉತ್ತರಾಧಿಕಾರಿಯಾಗಿ ಗೃಹ ಖಾತೆಯ ಆಡಳಿತೆಯನ್ನು ವಹಿಸಿದರು. ನೆಹರುಗಳಂತೆಯೇ ಪ್ರಾಂತೀಯತೆ—ಜಾತೀಯತೆಯ ತೀವ್ರ ವಿರೋಧಿಗಳಾದ ಶಾಸ್ತ್ರಿಗಳವರು ಈ ಖಾತೆಯಲ್ಲಿದ್ದಾರೆ ಎಂತಲೇ ಮಾಸ್ತರ ತಾರ ಸಿಂಗರ ಆಗ್ರಹ ವ್ಯರ್ಥವಾಗಿ ಅವರು ಅನಶನ ಮಾಡಬೇಕಾಯಿತು. ಪಂಜಾಬ ಸುಬಾದ ಬೇಡಿಕೆಯು ಪ್ರಾಂತೀಯ ವಾದಕ್ಕಿಂತಲೂ ಜಾತೀಯ ವಾದಕ್ಕೆ ಹೆಚ್ಚಿನ ಕಾರಣವಾಗಿದೆಯೆಂದೂ, ರಾಷ್ಟ್ರೀಯ ಐಕ್ಯಕ್ಕೆ ಇದರಿಂದ ಭಂಗವಿರುವುದೆಂದೂ ಶಾಸ್ತ್ರಿಯವರು ದೃಢವಾಗಿ ನಂಬಿದ್ದಾರೆ. ಆಕಾಲಿ ದಳವು ಈ ಬೇಡಿಕೆಯನ್ನು ಮುಂದಿಟ್ಟು ಅರಾಷ್ಟ್ರೀಯತೆ ಪ್ರದರ್ಶಿಸುವುದಕ್ಕಿಂತ ಮುಂದಿನ ಚುನಾವಣೆಗಿಳಿಯುವುದು ಕ್ಷೇಮವೆನ್ನುತ್ತಾರೆ ಇವರು.

ಡಾ| ರಾಧಾಕೃಷ್ಣನ್

ಸೋವಿಯೆಟ್‌ಸರ ವಸಾಹತುವಾಗಿದ್ದ ದಾದ್ರಾ ನಗರ ಹವೇಲಿಗಳು ಸ್ವತಂತ್ರವಾಗಿದ್ದರೂ ಅವು ಕಾನೂನು ಬದ್ಧವಾಗಿ ಭಾರತದಲ್ಲಿ ವಿಲೀನಗೊಳ್ಳಲು ಇಷ್ಟು ಕಾಲ ಬೇಕಾಯಿತು. ಕೇಂದ್ರ ಸರಕಾರದ ಆಡಿಯಲ್ಲಿಯ ರಾಜ್ಯವಾಗಿ ಸೇರಿಸಲ್ಪಡಲು ಸಂವಿಧಾನದಲ್ಲಿ ಮಾಡಿದ ತಿದ್ದುಪಡಿ ವಿಧೇಯಕವು ಉಭಯ ಸಭೆಗಳಲ್ಲಿ ಸ್ವೀಕೃತವಾಯಿತು. ಅಂತೆಯೇ ರಾಷ್ಟ್ರಪತಿಗಳ ಅಧಿಕಾರವನ್ನು ನಿರ್ವಹಿಸುವ ಉಪರಾಷ್ಟ್ರಪತಿ ಡಾ| ರಾಧಾಕೃಷ್ಣನ್ನರು ಇದಕ್ಕೆ ಒಪ್ಪಿಗೆಯನ್ನೂ ಕೊಟ್ಟಿರುವರು. ರಾಷ್ಟ್ರಪತಿಗಳ ಕೆಲಸ ನಿರ್ವಹಿಸಲು ತೊಡಗಿದ ನಂತರ ಇವರು ಅನುಮತಿಯಿತ್ತ ಪ್ರಥಮ ವಿಧೇಯಕವಿದು. ಇದರ ಮೇಲೆ ಶೋಚ್ಯಗಲಿನ ಅಪವಾದವಿದೆಯಾದರೂ ಅದರಲ್ಲಿ ಹುರುಳಿಲ್ಲವೆಂಬುದು ನೀರಿನಷ್ಟು ತಿಳಿಯಾಗಿದೆ.

ಮೆದುಳಿಲ್ಲದ ರಾಜ್ಯ

ಐದು ವಿಭಿನ್ನ ಕಾಯದೆ-ಕಾನೂನುಗಳು ಜ್ಯಾರಿಯಲ್ಲಿದ್ದ ವಿಭಿನ್ನ ಪ್ರದೇಶಗಳ ಸೇರ್ಪಡೆಯಿಂದಾದ ಕರ್ನಾಟಕ ಯೂನೆಮೈಸೂರು ರಾಜ್ಯದ ಸರಕಾರದ ಅಜ್ಞೆಗಳ ಮೇಲೆ ಸುರಿದಷ್ಟು ರಿಟ್ ಅರ್ಜಿಗಳು ಮತ್ತಾವ ಸರಕಾರದ ಮೇಲೂ ಬಿದ್ದಿರಲಾರವು, ರಾಜ್ಯ ಪುನರ್ಘಟನೆಯಾಗಿ ವರ್ಷ ಐದು ಸಂದರೂ ಇನ್ನೂ ಇಡಿಯ ರಾಜ್ಯದ ಶಾಸನಗಳಲ್ಲಿ ಏಕರೂಪತೆಯನ್ನು ತರುವುದು ಸಾಧ್ಯವಾಗಲಿಲ್ಲ. ಶಿಕ್ಷಣದ ವಿಭಾಗವಂತೂ ಗೊಬ್ಬರದ ಗುಂಡಿಯೇ ಎಂಬಂತಾಗಿದೆ. ಮನುಷ್ಯನಿಗೆ ಮೆದುಳು-ಹೃದಯಗಳು ಹೇಗೆ ಮುಖ್ಯವೋ ಹಾಗೆ ರಾಜ್ಯಕ್ಕೆ ಶಿಕ್ಷಣ ಮತ್ತು ಅರ್ಥ ಶಾಖೆಗಳು ಮುಖ್ಯ. ಆದರೆ, ನಮ್ಮ ರಾಜ್ಯದಲ್ಲಿ ಮೆದುಳೇ ಉಳಿದಿಲ್ಲ; ಬರೇ ಹೃದಯ ಮಾತ್ರ ಏನೋ ಲಬ್ ಡಬ್ ಎನ್ನುತ್ತಿದೆ! ಇದರ ಬಲದಿಂದಲೇ ಇಲ್ಲದ ಮೆದುಳೂ ಇದೆಯೆನ್ನಿಸಿಕೊಳ್ಳುತ್ತಿದೆ.

ವಿಜಯಲಕ್ಷ್ಮಿ

ಪ್ರಧಾನಿ ನೆಹರುವರ ತಂಗಿ ವಿಜಯಲಕ್ಷ್ಮಿಯವರು ಇಂಗ್ಲೆಂಡಿನಲ್ಲಿ ಭಾರತದ ಹೈಕಮಿಶನರಾಗಿದ್ದಾರೆ. ಇವರು ತನ್ನ ನಿವೃತ್ತಿಯ ಬಗ್ಗೆ ವತ್ತಾಯ ಮಾಡುತ್ತಿರುವುದರಿಂದ ಅವರ ಬಗ್ಗೆ ಬೇರೆ ಬೇರೆಯವರು ಬೇರೆ ಬೇರೆ ಅಭಿಪ್ರಾಯ ಪಟ್ಟಿದ್ದಾರೆ. ಆದರೆ ವಿಜಯಲಕ್ಷ್ಮಿ ಮಂತ್ರಿಪಟ್ಟವೂ ಬೇಡ, ಗವರ್ನರ ಪದವಿಯೂ ಬೇಡ, ರಾಯಭಾರಿತನವೂ ಬೇಡ, ಕೇವಲ ವಿಶ್ರಾಂತಿ ಬೇಕು ಎನ್ನುತ್ತಾರೆ. ತನ್ನ ಜೀವನ ಚರಿತ್ರೆಯೊಂದನ್ನು ಬರೆಯಲು ತೊಡಗಿದ್ದು ಅದನ್ನು ಮೊದಲಿಗೆ ಪೂರ್ಣವಾಗಬೇಕೆಂದೂ ದೇಶದ ಶಿಕ್ಷಣ ರಂಗದಲ್ಲಿ ಸಾಧ್ಯವಾದಷ್ಟು ದುಡಿಯುವ ವಿಚಾರತನಗಿರುವುದೆಂದೂ ಅವರು ಸ್ಪಷ್ಟ ಪಡಿಸಿದ್ದಾರೆ. ಅಧಿಕಾರಿಗಿಂತ ಅನಧಿಕಾರಿಯು ಸಾರ್ವಜನಿಕ ಸೇವೆಯನ್ನು ಸರಿಯಾಗಿ ಮತ್ತು ಹೆಚ್ಚಾಗಿ ಮಾಡಬಲ್ಲನೆಂದು ಇವರಿಗೆ ಗೊತ್ತು.

ಚಂದಾದಾರರಲ್ಲಿ ವಿನಂತಿ

ಇದೇ ಆಗೋಸ್ತು ತಿಂಗಳಾಂತ್ಯಕ್ಕೆ "ನವಯುಗ"ದ ಎರನೆಯ ವರ್ಷವು ಅಂತ್ಯವಾಗಿ ಸಪ್ಟಂಬರ ಆದಿಯಿಂದಲೂ ಎರನೆಯ ಹೊಸ ವರ್ಷಾರಂಭವಾಗುತ್ತದೆ ಈ ಅವಧಿಗೆ ಚಂದಾ ಅವಧಿ ಮುಗಿಯುವವರೂ ಚಂದಾ ಹಣ ಬಾಕಿ ಇರುವವರೂ ದಯೆಮಾಡಿ ತನ್ನ ಬಾಕಿಯನ್ನು ಬೇಗನೇ ಇಳುಹಿಸಿಕೊಟ್ಟು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥಿಸುತ್ತೇವೆ.

ಅಲ್ಲಲ್ಲಿಯ ಸುದ್ದಿಸಾರ

ಉಡುಪಿಯಲ್ಲಿ ಸ್ವಾತಂತ್ರ್ಯೋತ್ಸವ— ನಗರ ಸಭೆಯವತಿಯಿಂದ ವಿಜೃಂಭಣೆಯಿಂದ ಜರಗಿತು. ಬೆಳಿಗ್ಗೆ ಡಾ| ಕೆ. ಎಲ್. ಐತಾಳರಿಂದ ಧ್ವಜಾರೋಹಣವಾಗಿ ಶಾಲಾ ಮಕ್ಕಳಿಗೆ ಪರ್ಯಾಯ ಶ್ರೀಪಾದಂಗಳವರ ಕೈಯಿಂದ ಸಿಹಿತಿಂಡಿ ಹಂಚಲಾಯಿತು ಸಂಜೆ ಬೋರ್ಡ್ ಹೈಸ್ಕೂಲಿನ ಜನತಾ ಭವನದಲ್ಲಿ ಶ್ರೀ ಪಿ. ರಂಗನಾಥ ಶೆಣೈಯವರ ಅಧ್ಯಕ್ಷತೆಯಲ್ಲಿ ಸಭೆ ಜರಗಿ ಡಾ. ಐತಾಳರಿಂದ ಸ್ವಾಗತವಾದ ಮೇಲೆ ವಿವಿಧ ಸ್ಪರ್ಧೆಗಳಲ್ಲಿ ಗೆದ್ದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆಯಾಯಿತು. ಡಾ| ಪಿ. ಆರ್. ನಾಯಕರು ಭಾಷಣ ಮಾಡುತ್ತಾ ಘಟನಾತ್ಮಕವಾಗಿ ನಮಗೆ ಕೊಡಲ್ಪಟ್ಟ ಸಕ್ಕರೆಗಳನ್ನು ನಾವು ಸಾರ್ಥಕಗೊಳಿಸಬೇಕೆಂದೂ, ತೃತೀಯ ಪಂಚವಾರ್ಷಿಕ ಯೋಜನೆಯು ಜಯಪ್ರದವಾಗುವಂತೆ, ಎಲ್ಲರೂ ನೆರವಾಗಬೇಕೆಂದೂ ಹೇಳಿದರು ಅಧ್ಯಕ್ಷರ ಭಾಷಣಾನಂತರ ಮನರಂಜನಾ ಕಾರ್ಯಕ್ರಮಗಳಾದುವು.

ಉಡುಪಿ ತಾಲೂಕು ಬೋರ್ಡ್ ಆಫೀಸಿನಲ್ಲಿ ಅಧ್ಯಕ್ಷ ಶ್ರೀ ಎಂ. ಮಧ್ವರಾಜರು ಧ್ವಜಾರೋಹಣ ಮಾಡಿ ಭಾರತ ಸ್ವಾತಂತ್ರ್ಯೋತ್ಸವದ ವಿಚಾರವಾಗಿ ಭಾಷಣಮಾಡಿದರು.

ವಿಕ್ಟೋರಿಯಾ ಜುಬಿಲಿ ಯೂನಿಯನ್ ಕ್ಲಬ್ಬಿನಲ್ಲಿ ಶ್ರೀ ಟಿ. ಎ. ಪೈಗಳವರ ಅಧ್ಯಕ್ಷತೆಯಲ್ಲಿ ಸ್ವಾತಂತ್ರ್ಯೋತ್ಸವವು ವಿವಿಧ ಕಾರ್ಯಕ್ರಮಗಳಿಂದ ಜರಗಿತು.

ಉದ್ಘಾಟನೆ—ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜಿನ ಯೂನಿಯನಿನ ಉದ್ಘಾಟನಾ ಸಮಾರಂಭವು ಇದೇ ತಾ. 18ರಂದು ಸಂಗಾಳೂರು ಗವರ್ನಮೆಂಟ್ ಟ್ರೈನಿಂಗ್ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಎಸ್. ಆರ್. ಕೊಡಿಯೇಕಾರವರಿಂದ ನೆರವೇರಿಸಲ್ಪಟ್ಟಿತು. ಯೂನಿಯನ್ ಅಧ್ಯಕ್ಷ ಶ್ರೀ ಯನ್. ಯನ್. ಬಲ್ಲಾಳರು ಸ್ವಾಗತಿಸಿದ ಬಳಿಕ, ಕಾರ್ಯದರ್ಶಿ ಶ್ರೀ ಪರೋಡಿ ವಿಶ್ವನಾಥ ಶೆಟ್ಟರು ಶುಭಸಂದೇಶಗಳನ್ನು ಓದಿದರು. ಯೂನಿಯನಿನ ಗವರ್ನರ್ ಪ್ರಿನ್ಸಿಪಾಲ್ ಎಚ್. ಸುಂದರರಾಯರು ಸೂಕ್ತ ಸಲಹೆಯಿತ್ತರು.

ಲಾ ಕಾಲೇಜು ಯೂನಿಯನ್ ಚುನಾವಣೆ— ಇದೇ ತಾ. 11ರಲ್ಲು ನಡೆದು ಶ್ರೀ ಎಲ್. ಜೆ. ಸುವಾರಿಸ್‌ರವರು ಅಧ್ಯಕ್ಷರಾಗಿ, ಶ್ರೀ ಎ ಶಂಕರನಾರಾಯಣ ಹೆಬ್ಬಾರರು ಜನರಲ್ ಕಾರ್ಯದರ್ಶಿಯಾಗಿ, ಶ್ರೀ ವಿಲಿಯಂ ಸಿಂಟೋ ಸಾಂಸ್ಕೃತಿಕ ಕಾರ್ಯದರ್ಶಿಯಾಗಿ, ಶ್ರೀ ದಿವಾಕರ ಶೆಟ್ಟರು ಕ್ರೀಡಾ ಕಾರ್ಯದರ್ಶಿಯಾಗಿ ಆಯ್ಕೆಯಾದರು.

ಕ್ಲಿನಿಕ್‌ನ ಆರಂಭೋತ್ಸವ—ಉಡುಪಿಯ ಪ್ರಸಿದ್ಧ ಮತ್ತು ಜನಪ್ರಿಯ ಡಾಕ್ಟರರಾಗಿದ್ದ ಡಾ. ಎಸ್. ಆರ್. ಪೈಗಳ ಮಕ್ಕಳು ಡಾ. ಯು. ವಿಶ್ವನಾಥ ಸುಂದರರಾಮ ಪೈ ಅವರು ಉಡುಪಿಯಲ್ಲಿ ಡಾ. ಎಸ್. ಆರ್. ಪೈಸ್ ಕನ್ಸಲ್ಟಿಂಗ್ ರೂಮ್ಸ್ & ಫಾರ್ಮಸಿ ಎಂಬ ದವಾಖಾನೆಯನ್ನು ಪ್ರಾರಂಭಿಸಿರುವರು. ಈ ಸಂಬಂಧ ತಾ. 20ನೇ ಸಂಜೆ ಸ್ವಾಗತ ಸತ್ಕಾರ ನಡೆಯಿತು ಡಾ. ಪೈಗಳಿಗೆ ಶುಭವಾಗಲೆಂದು ಹಾರೈಸುತ್ತೇವೆ.

ಕಲ್ಪನಾ— ಎಂಬ ಅತ್ಯಾಧುನಿಕ ವಸತಿ ಗೃಹವು ಉಡುಪಿಯ ಉಪೇಂದ್ರ ಬಾಗ್‌ನಲ್ಲಿ ಇದೇ ತಾ. 15ರಿಂದ ಪ್ರಾರಂಭವಾಗಿದೆ. ಈ ಸಂಬಂಧ ಸಂಜೆ ಉಪಾಹಾರ ಸಮಾರಂಭವನ್ನೇರ್ಪಡಿಸಲಾಗಿತ್ತು.

ಭಜನಾ ಸಪ್ತಾಹ— ಉಡುಪಿಯ ಶ್ರೀ ವೆಂಕಟೇಶ ದೇವಸ್ಥಾನದಲ್ಲಿ ವಾಡಿಕೆಯಂತೆ ಭಜನಾ ಸಪ್ತಾಹವು ಇದೇ ತಾ. 16ರಿಂದ ತಾ. 23ರ ವರೆಗೆ ಯಥಾ ಸಾಂಗವಾಗಿ ನೆರವೇರಿತು.

ದುಃಖ ಸೂಚಕ ಸಭೆ— ಉಡುಪಿ ಮೋಡರ್ನ್ ಸ್ಕೂಲ್ ಟ್ರಿಫ್ ಕೋಮರ್ಸ್‌ನಲ್ಲಿ ತಾ. 9-8-61ರಲ್ಲಿ ಗುರುದೇವ ಶ್ರೀ ನಿತ್ಯಾನಂದ ಸ್ವಾಮಿಯವರ ಮಹಾ ನಿರ್ಯಾಣದ ಕುರಿತು ಉಡುಪಿ ನಾಗರಿಕರ ಶೋಕ ಪ್ರದರ್ಶನ ಸಭೆ ಡಾ| ಕೇಳಾ ಸಂದಿಯೂರರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀ ಟಿ ಎ. ವಾಸುದೇವನ್‌ರು ಸ್ವಾಗತಿಸಿದ ಬಳಿಕ ಡಾ| ಪಿ. ಜಿ. ಆಚಾರ್, ಶ್ರೀ ಪಿ. ಶೀನ ಶೆಟ್ಟಿ, ಶ್ರೀ ಕೆ. ಎ. ಜೇನವಾಸ, ಶ್ರೀ ನೂಥಿನ ರಾವ್, ಶ್ರೀ ಪಿ. ರಂಗನಾಥ ಶೆಣೈ, ಇವರು ಸ್ವಾಮಿಜಿಯವರ ಕುರಿತು ಭಾಷಣ ಮಾಡಿದರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಹಿಂದೆ ಸ್ವಾಮಿಜಿಯವರು ಉಡುಪಿಗೆ ಬಂದಾಗತಮ್ಮಲ್ಲಿ ಉಳಿಕೊಂಡಿದ್ದಾಗ ಅವರ ಮಹತ್ತಾದ ದೈವೀಶಕ್ತಿಯನ್ನು ಕಂಡು ಗೌರವಿಸುತ್ತಿದ್ದ ಹಾಗೂ ಅವರ ಜೀವನ ಕಥಾಸಾರವನ್ನು ವಿವರಿಸಿದರು.

ಶ್ರೀ ಟಿ. ಎ. ವಾಸುದೇವನವರು ನೊತನಾದುತ್ತಾ ಉಡುಪಿಯ ನಗರದ ಮಧ್ಯದಲ್ಲಿ ಶ್ರೀಮತಿ ಸೀತಾ ಸಿತ್ತಿಯವರು ಕಟ್ಟಿಸಿದ ನಿತ್ಯಾನಂದ ಮಂದಿರ ಪ್ರವೇಶೋತ್ಸವವು ಬೇಗನೆ ಜರಗಲಿರುವುದೆಂದರಲ್ಲದೆ ಧನ್ಯವಾದಗಳನ್ನರ್ಪಿಸಿದರು.

ಅಶೋಕ ಧ್ವಜದ ಉದ್ಘಾಟನೆ— ಉಡುಪಿಯ ಮುನ್ಸಿಪಲ್ ಹೈಸ್ಕೂಲ ಶಾಲೆಗೆ ಶ್ರೀ ಎಂ ರಘುರಾಮ ಪೈ ಮತ್ತು ಸಹೋದರರು ದಾನವಾಗಿ ಕೊಟ್ಟ ಅಶೋಕ ಧ್ವಜಸ್ತಂಭದ ಉದ್ಘಾಟನಾ ಸಮಾರಂಭವು ಇದೇ ತಾ. 13ರಂದು ಶ್ರೀ ಪಿ. ಆರ್. ಶೆಣೈಯವರ ಅಧ್ಯಕ್ಷತೆಯಲ್ಲಿ ಡಾ. ಕೆ. ಎಲ್. ಐತಾಳರಿಂದ ನೆರವೇರಿಸಲ್ಪಟ್ಟಿತು.

ದೈವಜ್ಞ ವೆಲ್‌ಫೇರ್ ಸೆಂಟರ್, ಮಂಗಳೂರು, ಇದರ ವತಿಯಿಂದ ಸ್ವಾತಂತ್ರ್ಯ ದಿನೋತ್ಸವವು ಬಸವನಗುಡಿ ಬಳಿಯಿರುವ ಶ್ರೀ ಲಕ್ಷ್ಮೀನಾರಾಯಣ ದೇವಸ್ಥಾನದ ಎರಾರದಲ್ಲಿ ತಾ.15ರಂದು ಜರಗಿತು ಪ್ರಾತಃಕಾಲ 7.45ಕ್ಕೆ ಶ್ರೀ ಯು. ಸುಬ್ರಾಯ, ರಿಟಾಯರ್ಡ್ ಡೆಪ್ಯೂಟಿ ಸೂಪರಿಂಟೆಂಡೆಂಟ್ ಆಫ್ ಸೆಂಟ್ರಲ್ ಎಕ್ಸೈಸ್, ಇವರು ರಾಷ್ಟ್ರೀಯ ಧ್ವಜವನ್ನೇರಿಸುತ್ತಾ ರಾಷ್ಟ್ರದ ಸಂಸ್ಕೃತಿ, ಧರ್ಮಾದಿಗಳ ಸಾಂಕೇತಿಕವಾದ ಧ್ವಜದ ಕುರಿತು ಭಾಷಣ ಮಾಡಿದರು. ಬಳಿಕ ವೆಲ್ ಫೇರ್ ಸೆಂಟರಿನ ಸಂಚಾಲಕರಾದ ಶ್ರೀ ಕೆ. ಕೆ. ಆರ್. ಶೇಟ್‌ರವರು ಬಾಲಕರಿಗೆ ಸಿಹಿತಿಂಡಿ ಹಂಚಿದರು.

ನಿಡಂಬೂರು—ಸ್ವಾತಂತ್ರ್ಯೋತ್ಸವವು ಪಂಚಾಯಿತಿಗೆ ಸೇರಿದ ಐದು ಶಾಲೆಗಳ ಮಕ್ಕಳ ಕೂಡುವಿಕೆಯಿಂದ ಜರಗಿತು ಪಂಚಾಯತ್ ಅಧ್ಯಕ್ಷ ಶ್ರೀ ಕೆ. ಶ್ಯಾಮ ಶೆಟ್ಟರಿಂದ ಧ್ವಜಾರೋಹಣವಾಗಿ ಶ್ರೀ ಕೆ. ಪದ್ಮನಾಭ ಭಟ್ಟರ ಅಧ್ಯಕ್ಷತೆಯಲ್ಲಿ ಸಭೆ ಜರಗಿತು. ಪಂಚಾಯತ್ ಕಡೆಯಿಂದ ಸಿಹಿತಿಂಡಿ ಹಂಚಲಾಯಿತು. ಪಂಚಾಯತ್ ಕಾರ್ಯದರ್ಶಿ ಶ್ರೀ ದೊಡ್ಡಣ್ಣ ಶೆಟ್ಟರು ಧನ್ಯವಾದವಿತ್ತರು. ಪಂಚಾಯತ್ ಅಭೀಸಿನಲ್ಲಿ ಡಾ| ರವೀಂದ್ರನಾಥ ಟಾಗೋರರ ಭಾವ ಚಿತ್ರವನ್ನು ಶ್ರೀ ಕೆ. ಪದ್ಮನಾಭ ಭಟ್ಟರು ಪಂಚಾಯತ್ ಚೇರ್ಮೆನ್‌ರವರ ಅಧ್ಯಕ್ಷತೆಯಲ್ಲಿ ಅನಾವರಣ ಮಾಡಿದರು.

ಸಮಣೂರು— ಸ್ಥಳೀಯ ಪಂಚಾಯತ್ ಅಧ್ಯಕ್ಷ ಶ್ರೀ ಎಸ್. ವೆಂಕಪ್ಪ ರೈಗಳವರ ಅಧ್ಯಕ್ಷತೆಯಲ್ಲಿ ಸ್ವಾತಂತ್ರ್ಯ ದಿನಾಚರಣೆಯು ಶ್ರೀಗಳಾದ ಎ. ಎಮ್. ಸೀನಪ್ಪ ರೈ ಪಿ. ಗಂಗಾಧರ, ಎಮ್. ಮುತ್ತಪ್ಪ ಗೌಡ ಮೊದಲಾದವರ ಭಾಷಣದೊಂದಿಗೆ ನೆರವೇರಿತು.

ಕನ್ನಡ ಪ್ರೊಗ್ರೆಸ್ಸಿವ್ ರಾತ್ರಿ ಶಾಲೆ—ಬೊಂಬಾಯಿಯ ಪರೇಲ್‌ನಲ್ಲಿರುವ ಈ ಶಾಲೆಯಲ್ಲಿ ಸ್ವಾತಂತ್ರ್ಯ ದಿನಾಚರಣೆಯು ಶ್ರೀ ನಾಗಪ್ಪ ಶೆಟ್ಟಿ ಅಧ್ಯಕ್ಷತೆಯಲ್ಲಿ ಜರಗಿ ನಾಟಕಾಭಿನಯವಾಗಿ ಉತ್ತಮವಾಗಿ ಅಭಿನಯಿಸಿದ ಶ್ರೀಧರ ಶೆಟ್ಟಿ, ಕುಮಾರಿ ಚಂಪಾ ಎಂಬ ವಿದ್ಯಾರ್ಥಿಗಳಿಗೆ ಬಹುಮಾನವೀಯಲಾಯಿತು.

ಮಹಾ ಮೈಸೂರು ಮಿನುಗಾರರ ಪರಿಷದ್— ನಮ್ಮ ಪ್ರಾಂತ್ಯದಲ್ಲಿ ಇತ್ತೀಚೆಗೆ ಬಂದ ಅನಾವೃಷ್ಟಿತ ನೆರೆಹಾವಳಿಯಿಂದಾಗಿ ತಮ್ಮ ಮನೆ ಮರಗಳನ್ನೂ, ವೃತ್ತಿಗೆ ಬೇಕಾದ ದೋಣಿ, ಬಲೆಗಳನ್ನೂ ಕಳಕೊಂಡು ಪೀಡಿತರಾದ ಮಿನುಗಾರರ ಸಂಕಷ್ಟಗಳಿಗಾಗಿ ಈ ಪರಿಷತ್ತು ತಮ್ಮ ಸಂತಾಪ ವ್ಯಕ್ತಪಡಿಸುತ್ತದೆ. ಮತ್ತು ಅವರು ತಮ್ಮ ಕಷ್ಟನಷ್ಟಗಳ ತಪಶೀಲನ್ನು ಅವರ ಹೆಸರು, ವಿಳಾಸದೊಂದಿಗೆ ಹೊಗೆ ಬಜಾರ್, ಮಂಗಳೂರಲ್ಲಿರುವ ನಮ್ಮ ಕಾರ್ಯಾಲಯಕ್ಕೆ ಕಳುಹಿಸಿಕೊಟ್ಟು ಸರಕಾರದೊಂದಿಗೆ ಪರಿಹಾರ ಪಡೆಯುವರೇ ಸಹಕರಿಸಬೇಕಾಗಿ ಸಂಘದ ಅಧ್ಯಕ್ಷರು ಅಪೇಕ್ಷಿಸುತ್ತೇರೆ.

ಅಭೀಸಿನ ಉದ್ಘಾಟನೆ—ಬೊಂಬಾಯಿಯ ಕರ್ನಾಟಕ ಧರ್ಮಾರ್ಥ ರಾತ್ರಿ ಪ್ರೌಢ ಶಾಲಾ ಹಳೆ—ವಿದ್ಯಾರ್ಥಿ ಸಂಘದ ಹೊಸ ರಿಜಿಸ್ಟರ್ಡ್ ಅಭೀಸಿನ ಉದ್ಘಾಟನೆಯು, ತಾ 15ರಂದು ಶ್ರೀ ಕೆ. ವಿಠಲ್ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಧ್ವಜಾರೋಹಣವಾದ ಬಳಿಕ ಸಂಘದ ಅಧ್ಯಕ್ಷ ಆರ್. ಎಸ್. ಮುಚ್ಚುರ್ ಅವರು ಸ್ವಾಗತಿಸಿದರು ಶ್ರೀಗಳಾದ ಮೂಲ್ಕಿ ಗಂಗಯ್ಯ ಶೆಟ್ಟಿ, ಕೆಣಿ ಮಾಸ್ಟರ್ ಉಮರಬ್ಬಿ, ಕೆ. ಎಸ್. ಸಾಲಿಯನ್‌ಗಳವಾರು ಶಾಮ ಶೆಟ್ಟಿ ಮೊದಲಾದವರು ಭಾಷಣ ಗೈದರು. ಸಭಾಧ್ಯಕ್ಷರು ಸಂಘವು ಸಾಧಿಸಿದ ಪ್ರಗತಿಯನ್ನು ಪ್ರಶಂಸಿಸಿದರು. ಶ್ರೀ ಎಸ್. ಎಸ್. ಶೆಟ್ಟಿ ಸಿಮುಂಜೆ ಪರಾರಿಯವರು ಧನ್ಯವಾದ ಅರ್ಪಿಸಿದರು.

ಅಂಬಲಪಾಡಿ—ಸ್ಥಳೀಯ ಬುನಾದಿ ಶಾಲಾ ಪರಾರದಲ್ಲಿ ತಾ 15ರಂದು ಪರೇಲ್ ಎ. ಜಗನ್ನಾಥ ಶೆಟ್ಟಿ ಅಧ್ಯಕ್ಷತೆಯಲ್ಲಿ ವನಮಹೋತ್ಸವ ದಿನಾಚರಣೆ ಜರಗಿ ಶ್ರೀ ರಾಮಚಂದ್ರ ರಾವ್‌ರವರ ಭಾಷಣವಾಯಿತು.

ಆದಿಉಡುಪಿ—ಸ್ಥಳೀಯ ಕಿರಿಯ ಬುನಾದಿ ಶಾಲೆ ಮತ್ತು ಹಾ. ಎ. ಶಾಲೆಯಲ್ಲಿ ಡಾ| ಪಿ. ಎ ವ್ಯಾಸರಾವ್, ಇವರ ಹಿರಿತನದಲ್ಲಿ ಸ್ವಾತಂತ್ರ್ಯ ದಿನಾಚರಣೆಯು ಆರಿಸಲ್ಪಟ್ಟಿರುವ ಪಾರ್ವಾಸ್ಥ ಧ್ವಜಾರೋಹಣ, ಅಧ್ಯಕ್ಷರ ವತಿಯಿಂದ ಸಿಹಿತಿಂಡಿ ಹಂಚೋಣ ಮತ್ತು ಸಭೆ, ಅಪರಾಹ್ನ ಮಕ್ಕಳ ಸಮಕಾರದಿಂದ ಸಾಮೂಹಿಕ ಭೋಜನ, ವಿನೋದಾವಳಿಗಳು ಜರಗಿದುವು.

ಸುರತ್ಕಲ್— ಮಕ್ಕಳ ಮಿತ್ರಪಟ್ಣ ಸೊಗಯೀರ ಧರ್ಮಾರ್ಥ ರಾತ್ರಿ ಶಾಲೆ ಮತ್ತು ಅಗ್ನಿದಕರ ಹಾ. ಎ. ಶಾಲಾ ಮಕ್ಕಳ ಒಡನಾಟದಿಂದ ಸ್ವಾತಂತ್ರ್ಯ ದಿನಾಚರಣೆಯು ಯಥಾ ಸಾಂಗವಾಗಿ ನೆರವೇರಿತು.

ಬೈಲೂರು—ಸ್ಥಳೀಯ ಯಂ. ಯಂ. ಕಿರಿಯ ಬುನಾದಿ ಶಾಲೆಯಲ್ಲಿ ಶ್ರೀ ಕೆ. ದೇವಯ್ಯ ಹೆಗ್ಡೇರ ಅಧ್ಯಕ್ಷತೆಯಲ್ಲಿ ಸ್ವಾತಂತ್ರ್ಯ ದಿನಾಚರಣೆಯು ಜರಗಿ ಹಲವರ ಭಾಷಣಗಳಾದುವು

ಮಲ್ಪೆ—ಸ್ಥಳೀಯ ಯು. ಬಿ. ಎಮ್. ಸಿ. ಕಿರಿಯ ಬುನಾದಿ ಶಾಲೆಯಲ್ಲಿ ಶ್ರೀ ಎಂ. ಗಿರಿಯಪ್ಪನವರಿಂದ ಧ್ವಜಾರೋಹಣವಾಗಿ ಶ್ರೀ ಡಿ. ಐ. ಆನಂದನವರಿಂದ ಭಾಷಣವಾಯಿತು.

ವಿದ್ಯಾರ್ಥಿ ಭವನಗಳು— ಮಂಗಳೂರು ರಾಮಕೃಷ್ಣ ವಿದ್ಯಾರ್ಥಿನಿ ಭವನದ ಆಡಳಿತ ಕಮಿಟಿ ಸಭೆಯು. ತಾ. 5ರಲ್ಲಿ ಸೇರಿ ಶ್ರೀ ಬಿ. ವಂಜಯ್ಯ ಹೆಗ್ಡೆಯವರನ್ನು ಅಧ್ಯಕ್ಷರನ್ನಾಗಿ, ಶ್ರೀಮತಿ ಲಕ್ಷ್ಮಿ ಎ. ಶೆಟ್ಟಿ ಸೆಕ್ರೆಟರಿ ಮತ್ತು ಖಜಾನ್ಚಿಯಾಗಿ ಆರಿಸಲಾಯಿತು.

ತಾ. 12—8—1961ರಲ್ಲು ರಾಮಕೃಷ್ಣ ವಿದ್ಯಾರ್ಥಿ ಭವನದ ಕಮಿಟಿಯ ಸಭೆ ಜರಗಿ ಶ್ರೀ ಕೆ. ಜಿ. ಯಂ. ಭಂಡಾರಿಗಳನ್ನು ಅಧ್ಯಕ್ಷರನ್ನಾಗಿ, ಶ್ರೀ ಬಿ. ಎಸ್ ಭಾಸ್ಕರ ರೈಯವರನ್ನು ಕಾರ್ಯದರ್ಶಿಗಳನ್ನಾಗಿ ಆರಿಸಲಾಯಿತು. ಸಂಘದ ಕಾರ್ಯಕಾರಿ ಸಮಿತಿ ಕೆಲವು ಸದಸ್ಯರ ಹಿಂದೆ ಶ್ರೀ ಕೆ ಟಿ. ಅಳ್ವರ ಅಧ್ಯಕ್ಷತೆಯಲ್ಲಿ ಸೇರಿ ಈ ವರ್ಷ ಬಡ ವಿದ್ಯಾರ್ಥಿ ಫಂಡಿನಿಂದ 65 ವಿದ್ಯಾರ್ಥಿ—ವಿದ್ಯಾರ್ಥಿನಿಗಳಿಗೆ ವಿದ್ಯಾರ್ಥಿನೇತನ ಹಂಚಿಕೊಡುವ ಕೆಲವು ಎಸ್ಟಿಮೇಟುಗಳನ್ನು ಮಂಜೂರು ಮಾಡಿದೆ. ಭವನದ ಸುಧಾರಣೆಯೆಂತೆಂಬ ಶ್ರೀ. ಪಿ. ಎಸ್. ತಿಮ್ಮಪ್ಪ ಶೆಟ್ಟಿ ಧನ್ಯವಾದಗಳನ್ನರ್ಪಿಸಿದರು.

ಶ್ರೀ ರಮೇಶ ಪೈಗಳ ವಿದೇಶ ಪ್ರವಾಸ—ಭಾರತದ ನ್ಯಾಷನಲ್ ಪ್ರೊಡಕ್ಟಿವಿಟಿ ಕೌನ್ಸಿಲ್‌ನವರು ಅಮೇರಿಕಾ ಟೆಕ್ಸಿಕಲ್ ಕೋಪರೇಶನ್ ಮಿಶನ್ ಯೋಜನೆಯ ನೆಲೆಯಲ್ಲಿ ಅಭೀಸು ಆಡಳಿತೆಯ ಮಾಡಿಸಿಯ ಬಗ್ಗೆ ಆರಿಸಿರುವ ವಿದೇಶ ಪ್ರವಾಸ ತಂಡದ ಸದಸ್ಯರಲ್ಲಿ ಒಬ್ಬರಾಗಿರುವ ಉಡುಪಿಯ ಸುಪ್ರಸಿದ್ಧ ಕೈಗಾರಿಕಾ ವಾಣಿಜ್ಯ ಸಂಸ್ಥೆಗಳ ಸಂಚಾಲಕರಾಗಿರುವ ಶ್ರೀ ಟಿ. ರಮೇಶ ಪೈಗಳು ಇದೇ ತಾ. 24ರಿಂದ ಇದೇಗ ಮೂರನೆ ಬಾರಿ ವಿದೇಶ ಪ್ರವಾಸ ಕೈಗೊಂಡಿರುವರು ಇವರು ಜಪಾನ್, ಅಮೇರಿಕಾ, ಬ್ರಿಟನ್‌ಗಳಲ್ಲಿ ಸಂಚರಿಸಲಿರುವರು. ಶ್ರೀ ಪೈಗಳ ಪ್ರವಾಸ ಸುಗಮವಾಗಲೆಂದು ಕೋರುತ್ತೇವೆ.

ಸ್ವಾತಂತ್ರ್ಯ ದಿನಾಚರಣೆ— ಉಡುಪಿಯ ಶ್ರೀ ಬ್ರಹ್ಮಬೈದರ್ಕಳ ಧಾರ್ಮಿಕ ಯಕ್ಷಗಾನ ಸಂಘದ ಕಾರ್ಯಾಲಯದಲ್ಲಿ ಬೆಳಿಗ್ಗೆ ಶ್ರೀ ಗಣಪತಿ ರಾವ್ ಪೈಂಟರ್ ಅವರಿಂದ ಧ್ವಜಾರೋಹಣ ರಾತ್ರಿ ಯಕ್ಷಗಾನ ಕೂಟ ನಡೆಯಿತು.

ಮಣಿಪಾಲದ ಕಿರಿಯ ಬುನಾದಿ ಶಾಲೆಯಲ್ಲಿ ಶ್ರೀ ಟಿ. ಟಿ. ಆಚಾರ್‌ರಿಂದ ಧ್ವಜಾರೋಹಣ, ಸಭೆ, ಡಾ ಟಿ ಮಾಧವ ಪೈಯವರಿಂದ ಭಾಷಣ, ಮಕ್ಕಳ ವಿನೋದಾವಳಿಗಳಾದುವು.

ಶ್ರೀ ಭಾಸ್ಕರ ರೈಗಳ ನಿಧನ—ಜಿಲ್ಲೆಯ ತರುಣೋತ್ಸಾಹಿ ಸಾರ್ವಜನಿಕ ಕೆಲಸಗಾರರೂ, ಬಂಟರ ಸಮಾಜದ ಪ್ರಸಿದ್ಧ ಕೊಡಿಯಾಲಗುತ್ತು ಮನೆತನದವರೂ, ವಕೀಲರೂ ಆಗಿದ್ದ ಶ್ರೀ ಬಿ. ಎಸ್. ಭಾಸ್ಕರ ರೈಯವರು ಇದೇ ತಾ. 21ನೇ ಬೆಳಿಗ್ಗೆ ಅಕಸ್ಮಾತ್ತಾಗಿ ಪ್ರಾರಂಭವಾದ ಧನುರ್ವಾತದಿಂದ ತಮ್ಮ 45ನೇ ವಯಸ್ಸಿನಲ್ಲಿ ನಿಧನಹೊಂದಿದರೆಂದು ತಿಳಿಸಲು ಅತ್ಯಂತ ವಿಷಾದವಾಗುತ್ತದೆ. ಇವರು ಯುವಕ ಸಂಘಾಟಕರಾಗಿ, ಸಹಕಾರಿ ಸಂಘಗಳನ್ನೆಗಳಲ್ಲಿ ಉನ್ನತ ಸ್ಥಾನಾಪನ್ನರಾಗಿ, ಜಿಲ್ಲಾ ಬೋರ್ಡು, ನಗರಸಭೆಗಳ ಸದಸ್ಯರಾಗಿ, ಕ್ರೀಡಾಪಟುಗಳಾಗಿ, ಜಿಲ್ಲಾ ಸ್ಕೌಟ್ ಕಮಿಶನ್ನರಾಗಿ ಧೈರ್ಯಸ್ಥೈರ್ಯದ ಪ್ರಮುಖ ಕಾರ್ಯಕರ್ತರಾಗಿ ಸಾರ್ವಜನಿಕ ಕ್ಷೇತ್ರದಲ್ಲಿ ವಿಶೇಷವಾಗಿ ದುಡಿದು ಜನಪ್ರಿಯರಾಗಿದ್ದರು. ದೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯ ಸದಸ್ಯರಾಗಿದ್ದರಲ್ಲದೆ, ಗುರುಪುರ ಬೆಳ್ಳಿಯ್ಯ ಹೈಸ್ಕೂಲುಗಳಿಗೆ ಸ್ಥಾಪನೆಗೆ ಹೆಚ್ಚಾಗಿ ದುಡಿದಿದ್ದರು. ಬಂಟ ಸಮಾಜದ ಉಜ್ವಲ ಭವಿಷ್ಯದ್ದಳ್ಳ ಪ್ರತಿಷ್ಠಿತ ವ್ಯಕ್ತಿಯೊಬ್ಬರ ಅಕಾಲ ಮರಣವು ಅತ್ಯಂತ ದೋಷನೀಯ.

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. No. 243/1961

ಮಿಸಕಳ್ಳ ಶೆಟ್ಟಿ — ವಾದಿಳು.

ಅಬ್ಬಕ್ಕ ಶೆಟ್ಟಿ,—ನಾಗಮ್ಮ ಶೆಟ್ಟರ ಮಗಳು, ಕಾರ್ಕಳ ತಾಲ್ಲುಕು ಕಿಂಜಾಲ ಗ್ರಾಮದ ಪಂಜಾಳ ಮುದುಮನೆ ಎಂಬಲ್ಲಿರುವವಳು— ಪ್ರತಿವಾದಿಳು.

ಸದ್ರಿ ಪ್ರತಿವಾದಿಳಿಗೆ ಈ ಮೂಲಕ ತಿಳಿಸುವದೇನಂದರೆ—

ವಾದಿಳು ಮತ್ತು ನಿನ್ನ ಕುಟುಂಬದೊಳಿಗೆ ತಾ. 31—8—1921ರಲ್ಲು ರಿಜಿಸ್ಟ್ರಿ ನಿತಿ ಆದ ಸಾಲುಪಟ್ಟಿ ಶರತ ಪ್ರಕಾರ ನಿನ್ನಿಂದ ವಾದಿಳಿಗೆ ಪ್ಲವ ಸಂ|ರದ ಚೈತ್ರ 30ರ ಬಾಬ್ತದೆಗೆ ಬರತಕ್ಕ ಸಲುವಳಿಕೆ ಬಡ್ಡಿ ವಗೈರೆ ರೂಪಾ 313-95ನ್ನು ಬರವಾಗಿ ಕೊಳ್ಳುವರೆ ನಿನ್ನ ಮೇಲೆ ದಾಕ್ಲು ಮಾಡಿದ ಸದ್ರಿ ದಾವೆಯು ತಾರೀಕು 31—8—1961 ಕ್ಕೆ ನಿಮಗೆ ಅಪೈರೆ ನೋಟೀಸಿನ ಬಗ್ಗೆ ಇಟ್ಟಿದೆ. ಅಕ್ಷೇಪಯಿದ್ರೆ ಸದ್ರಿ ದಿನ ಬೆಳಿಗ್ಗೆ 10 ಘಂಟೆಗೆ ಮೇಲ್ಕಂಡ ಕೋರ್ಟು ಮುಂದೆ ನೀವು ಹಾಜ್ರಾಗಿ ಉದಾಹರಣೆ ಕೊಡತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರ ಹಾಜ್ರಿಯಲ್ಲಿ ದಾವಾ ತೀರ್ಮಾನವಾಗುವದು ಎಂತ ಕೋರ್ಟು ಹುಕುಂ ಪ್ರಕಾರ ತಿಳಿಸಿಯದೆ.

K. V. Kamath,
Advocate for Plaintiff,

ಕಾರ್ಕಳ, 19—8—61.

ಕಲಾಪ್ರಪಂಚ

ಕುಶಲ ಕಲಾವಿದರಿಗೆ ಮಾರ್ಗದರ್ಶನ

ಬೆಂಗಳೂರಿನ ಡಿಸೈನ್ ಡೆವಲಪ್‌ಮೆಂಟ್ ಸೆಂಟರ್ ಆಂಧ್ರ, ಮದ್ರಾಸು, ಕೇರಳ ಮತ್ತು ಕರ್ನಾಟಕದ ಎಲ್ಲ ವಿಧದ ಕುಶಲ ಕಲಾವಿದರಿಗೆ ಬಹುಮುಖವಾಗಿ ಸಹಾಯ ನೀಡುತ್ತಿದೆ. ಬೆಂಗಳೂರಿಗೆ ಸೋಗುವ ಕಲಾವಿದರು ಈ ಕೇಂದ್ರವನ್ನು ಅವಶ್ಯ ಕಂಡು ಬರಬೇಕು.

ಕುಶಲ ಕೈಗಾರಿಕೆಗಳಿಗೆ ಸಂಬಂಧಿಸಿದಂತೆ ಹೊಸ ಹೊಸ ನಮೂನೆಗಳನ್ನು ಜನರಿಗೆ ತರುವುದರ ಆವಶ್ಯಕತೆಯನ್ನು ಮನಗಂಡು ಅಖಿಲ ಭಾರತದ ಕುಶಲ ಕೈಗಾರಿಕೆಗಳ ಮಂಡಲಿಯು ಬೆಂಗಳೂರು, ಮುಂಬಯಿ, ಕಲ್ಕತ್ತ ಮತ್ತು ನವದೆಹಲಿ ಈ ನಾಲ್ಕು ನಗರಗಳಲ್ಲಿ ಪ್ರಾದೇಶಿಕವಾಗಿ ನಾಲ್ಕು 'ಡಿಸೈನ್ ಡೆವಲಪ್‌ಮೆಂಟ್ ಸೆಂಟರುಗಳನ್ನು ಸ್ಥಾಪಿಸಿದೆ.

ಬೆಂಗಳೂರಿನಲ್ಲಿ ೧೯೫೫ರ ಆಗಸ್ತು ೧೯ರಂದು ಸ್ಥಾಪಿತವಾದ ಈ ಕೇಂದ್ರ ಮೈಸೂರು, ಕೇರಳ, ಮದರಾಸ್ ಮತ್ತು ಆಂಧ್ರ ಪ್ರದೇಶ-ಈ ನಾಲ್ಕು ರಾಜ್ಯಗಳಲ್ಲಿ ಕುಶಲ ಕಲಾವಿದರನ್ನು ಪತ್ತೆ ಹಚ್ಚಿ ಅವರಿಗೆ ಹೊಸ ಹೊಸ ನಮೂನೆಗಳನ್ನು ಪರಿಚಯಮಾಡಿ ಕೊಡುವ ವಸ್ತು ಅವರ ಉದ್ಯಮದಲ್ಲಿ ಒಂದು ಹೊಸ ಹುರುಪನ್ನು ತುಂಬುವ ಕಾರ್ಯದಲ್ಲಿ ನಿರತವಾಗಿದೆ. ಹೊಸ ಹೊಸ ಡಿಸೈನ್ ಅಥವಾ ನಮೂನೆಗಳನ್ನು ಕುಶಲ ಕಲಾವಿದರು ಈ ಕೇಂದ್ರದ ನೆರವಿನಿಂದ ತಿಳಿಯ ಬಹುದು ಮತ್ತು ತಮಗೆ ಆವಶ್ಯಕವಾಗಿರುವ ನೆರವನ್ನು ಪಡೆಯ ಬಹುದು.

ಈ ಡಿಸೈನ್ ಸೆಂಟರಗಳನ್ನು ಸ್ಥಾಪಿಸಿರುವ ಉದ್ದೇಶ ಬಹುಮುಖವಾಗಿದೆ. ಹೊಸ ಹೊಸ 'ಡಿಸೈನ್'ಗಳಬಗ್ಗೆ ವಸ್ತುಗಳನ್ನು ತಯಾರಿಸುವ ತಂತ್ರದಲ್ಲಿ ಸಂಶೋಧನೆ ನಡೆಸುವುದು ಕುಶಲ ಕೈಗಾರಿಕೆಗಳಿಗೆ ಸಂಬಂಧಿಸಿದಂತೆ ಆವಶ್ಯಕ ಮೂಲವಸ್ತುಗಳನ್ನು ಸೂಚಿಸುವುದು ಇತ್ಯಾದಿ ಕಾರ್ಯಗಳು ಈ ಕೇಂದ್ರಗಳ ಪಾಲಿಗಿರುತ್ತವೆ. ತಮ್ಮ ತಮ್ಮ ಪ್ರದೇಶದಲ್ಲಿರುವ ಕುಶಲ ಕಲಾವಿದರೊಡನೆ ನಿಕಟವಾದ ಸಂಬಂಧವನ್ನು ಹೊಂದಿದ್ದು ಮುಖ್ಯವಾಗಿ ಒಳ್ಳೆಯ ಮಾರುಕಟ್ಟೆ ದೊರಕಬಹುದಾದ ಕೆಲವು ಕೈಕಸುಬುಗಳನ್ನು ಆರಿಸಿಕೊಂಡು ಅವುಗಳಲ್ಲಿ ಕುಶಲ ಕಲಾವಿದರು, ಆಸಕ್ತಿ ಮತ್ತು ಸಂತೆಯಂತೆ ಮಾಡುವುದೂ ಆವಶ್ಯಕ ನೆರವು ನೀಡುವುದೂ ಈ ಕೇಂದ್ರಗಳ ಕೆಲಸವಾಗುತ್ತದೆ.

ಕುಶಲ ಕಲಾವಿದರು 'ಡಿಸೈನ್ ಸೆಂಟರ್ ಸೂಚಿಸುವ ಮಾದರಿ ಅಥವಾ ನಮೂನೆಗಳನ್ನೇ ಅನುಸರಿಸಬೇಕೆಂಬುದೇನೂ ಉದ್ದೇಶವಲ್ಲ. ಎಷ್ಟೋ ನೇಕಾರ ಕಲಾವಿದರಿಗೆ 'ಡಿಸೈನ್ ಸೆಂಟರ್' ಮಾರ್ಗದರ್ಶನಕ್ಕಾಗಿ ಬರೆದು ಕೊಡುವಂತಹ ನಮೂನೆಗಳು ಅರ್ಥವಾಗುವುದೂ ಇಲ್ಲ. ಆ ನಮೂನೆಗಳು ಕುಶಲ ಕಲಾವಿದರ ವಿಚಾರ ಶಕ್ತಿಯನ್ನು ಕೆರಳಿಸಿ ಅವರು ಹೊಸ ನಮೂನೆಗಳ ಕಡೆಗೆ ಮತ್ತು ಮಾರುಕಟ್ಟೆಯ ಅಗತ್ಯಗಳ ಕಡೆಗೆ ಗಮನ ಕೊಟ್ಟರೇ ಸಾಕು. ಲಂಕಾರದ ಜೊತೆಗೆ ಉಪಯೋಗವನ್ನೂ ಮನದಟ್ಟುಮಾಡಿ ಕೊಡುವುದು ಈ ಡಿಸೈನ್ ಕೇಂದ್ರಗಳ ಉದ್ದೇಶವಾಗುತ್ತದೆ.

ಮರ ಮತ್ತು ಕಲ್ಲಿನ ಕೆತ್ತನೆ ಕೆಲಸ ತಂಜಾವೂರು ಕಡೆಯ ಅಲಂಕಾರ ಪ್ರಾಧಾನ್ಯವಾದ ಮರದ ಕೆಲಸ, ನಂತದ ಕೆತ್ತನೆ ಕೆಲಸ, ಲೋಹದ ಎರಕ ಹಾಕಿ ಕುಶಲ ಕಲಾವಸ್ತುಗಳನ್ನು ತಯಾರಿಸುವ ಕೆಲಸ, ಲೋಹದ ಹಗಡಿನಲ್ಲಿ ಮಾಡುವ ಕುಶಲ ಕೆಲಸಗಳು, ಕಲಾತ್ಮಕ ಮಣ್ಣಿನ ಪಾತ್ರೆ ಕೆಲಸ, ಮರದಲ್ಲಿ ಬೊಂಬೆಗಳನ್ನು ಮಾಡುವುದು ಮತ್ತು ಬಣ್ಣದ ಆಟಿಕೆ ಸಾಮಾನುಗಳನ್ನು ಮಾಡುವುದು—ಹೀಗೆ ಒಟ್ಟು ಏಳು ಬೇರೆ ಬೇರೆ ರಾಜ್ಯಗಳು ಬೆಂಗಳೂರು ಕೇಂದ್ರಕ್ಕೆ ಸೇರಿಕೊಂಡಿವೆ.

ಮರದಲ್ಲಿ ಮಾಡುವ ಕೆತ್ತನೆ ಕೆಲಸ ದಕ್ಷಿಣ ಭಾರತದಲ್ಲಿಬಹಳ ಹಿಂದಿನಿಂದಲೂ ಬೆಳೆದು ಬಂದಿರುವ ಒಂದು ಕುಶಲ ಕಲೆ. ಗಂಧದ ಮರ, ತೇಗದ ಮರ, ಬೀಟಿ ಜಾತಿಯ 'ರೋಜ್ ವುಡ್' ವತ್ತು ಎಬೊನಿ ಅಥವಾ ಕರಿಮರ—ಇವೇ ಮೊದಲಾದ ಜಾತಿಯ ಮರಗಳನ್ನು ಕೆತ್ತನೆ ಕಾರ್ಯಕ್ಕಾಗಿ ಉಪಯೋಗಿಸಿಕೊಳ್ಳಲಾಗುತ್ತದೆ. ಮೈಸೂರಿನ ಗಂಧದ ಕೆತ್ತನೆ ಕೆಲಸ ಜಗತ್ಪ್ರಸಿದ್ಧವಾದುದು. ಒಳ್ಳೆಯ ಸುವಾಸನೆಯ ಜೊತೆಗೆ ಕಲಾಕೌಶಲ್ಯ ಸೇರಿಕೊಂಡಾಗ ದೈವಿಕವಾದ ಒಂದು ಪರಿಪೂರ್ಣತೆ ಕಲಾಕೃತಿಗೆ ಬರುತ್ತದೆ. 'ರೋಸ್‌ವುಡ್' ಮತ್ತು 'ಟೀಕ್‌ವುಡ್'ನಲ್ಲಿ ತಯಾರಾಗುವ ಕಲಾತ್ಮಕ ವಸ್ತುಗಳಂತೂ ತುಂಬಾ ಶೋಭಾಯಮಾನವಾಗಿರುತ್ತವೆ. ಈ ಮರಗಳಮೇಲೂ ಒಳ್ಳೆಯ ಕಲಾತ್ಮಕ ಕುಸುರಿ ಕೆಲಸಮಾಡಬಹುದು. ಎಬೊನಿ ಅಥವಾ ಕರಿ ಮರದಲ್ಲಿ ಕೆತ್ತನೆ ಕೆಲಸ ಅಷ್ಟು ನಾಜೂಕಾಗುವುದಿಲ್ಲ. ಜೊತೆಗೆ ಕೆತ್ತನೆ ಕಾರ್ಯ ಕೂಡ ಸ್ವಲ್ಪ ಕಷ್ಟವಾಗುತ್ತದೆ. ಆದರೂ ಈ ಮರದಲ್ಲಿ ತಯಾರಾಗುವ ಉಪಯೋಗದ ವಸ್ತುಗಳಿಗೆ ಒಳ್ಳೆಯ ಮಾರುಕಟ್ಟೆ ಇದೆ. ಬೆಂಗಳೂರಿನ 'ಡಿಸೈನ್ ಕೇಂದ್ರ'ದಲ್ಲಿರುವ ಕುಶಲ ಕಲಾವಿದರು ಈ ದಿಶೆಯಲ್ಲಿ ತುಂಬಾ ಮುಂದುವರಿದಿದ್ದಾರೆ ಎನ್ನಬಹುದು.

ಶಾಶ್ವತವಾಗಿ ನೆರೆಯನ್ನು ನಿಯಂತ್ರಿಸುವ ಕಾರ್ಯವು ದೇಶದ ವಿವಿಧೆಡೆಗಳಲ್ಲಿ ನಡೆಯ ತೊಡಗಿದೆ. ಬಿಹಾರದಲ್ಲಿ ಇಂತಹ ಒಂದು ಯೋಜನೆಯು ಮುಂದುವರಿಯುತ್ತಿರುವುದನ್ನು ಈ ಚಿತ್ರದಲ್ಲಿ ನೋಡಬಹುದು.

ಕಲ್ಲಿನ ಕೆತ್ತನೆ ಕಲೆಕ್ಕಂತೂ ದಕ್ಷಿಣ ಭಾರತ ಜಗತ್ಪ್ರಸಿದ್ಧಿ ಪಡೆದಿದೆ. ಬಳಪದ ಕಲ್ಲಿನಲ್ಲಿ ಒಳ್ಳೊಳ್ಳೆ ಕಲಾತ್ಮಕ ವಸ್ತುಗಳನ್ನು ತಯಾರಿಸಿರುವುದನ್ನು ಬೆಂಗಳೂರಿನ ಡಿಸೈನ್ ಕೇಂದ್ರದ 'ಷೋ ರೂಮ್ಸ್'ನಲ್ಲಿ ನೋಡಬಹುದು. ತುಂಬಾ ಸಣ್ಣ ಆಕಾರದ ವಿಗ್ರಹಗಳನ್ನೂ ಈ ಕಲ್ಲಿನಲ್ಲಿ ಕೆತ್ತಬಹುದು. ಮತ್ತು ಜೊತೆಗೆ ತುಂಬಾ ಉಪಯುಕ್ತವಾದ ವಸ್ತುಗಳನ್ನೂ ತಯಾರಿಸಬಹುದು ಎಂಬುದನ್ನು ಈ ಕೇಂದ್ರ ತೋರಿಸಿಕೊಟ್ಟಿದೆ.

ದಂತದ ಕೆಲಸಕ್ಕೂ ದಕ್ಷಿಣ ಭಾರತ ಬಹಳ ಹಿಂದಿನಿಂದಲೂ ಹೆಸರುವಾಸಿಯಾಗಿದೆ. ಕೇರಳದ ಕುಶಲ ಕಲಾವಿದರು ಕೆಲವು ಹೊಸ ನಮೂನೆಯ ಕೆತ್ತನೆ ಕೆಲಸಗಳನ್ನು ಮಾಡಿರುವುದನ್ನು 'ಡಿಸೈನ್ ಕೇಂದ್ರ'ದಲ್ಲಿ ಕಾಣಬಹುದಾಗಿದೆ. ತಂಜಾವೂರಿನ ಕಲಾವಿದರು "ತಾರಿವಾಳ ಮರ"ದಿಂದ ಎಂತಹ ಕಲಾತ್ಮಕ ವಸ್ತುಗಳನ್ನು ಮಾಡಬಲ್ಲರು ಎಂಬುದನ್ನು ಡಿಸೈನ್ ಕೇಂದ್ರದಲ್ಲಿ ನೋಡಬಹುದು. ದಕ್ಷಿಣ ಭಾರತದ ಇನ್ನೊಂದು ಕುಶಲ ಕಲೆಯೆಂದರೆ ಹಿತ್ತಾಳೆಯಲ್ಲಿ ದೊಡ್ಡ ದೊಡ್ಡ ವಿಗ್ರಹಗಳನ್ನು ತಯಾರಿಸುವುದು ಹಿತ್ತಾಳೆಯ ಪಾತ್ರೆಗಳಲ್ಲೂ ಕುಶಲ ಕಲಾವಿದರ ಹಸ್ತ ಕೌಶಲ್ಯವನ್ನು ಕಾಣಬಹುದು.

ಹಿತ್ತಾಳೆಯಲ್ಲಿ ಎರಕಹೊಯ್ಯುವ ಕಾರ್ಯ ಬಹಳ ಕಷ್ಟದ್ದಾಗುತ್ತದೆ ಇದಕ್ಕೆ ವಿಶೇಷ ತಾಂತ್ರಿಕ ಜ್ಞಾನ ಕೂಡ ಬೇಕಾಗುತ್ತದೆ. ಮೊದಲು ಮಣ್ಣಿನಲ್ಲಿ ಮಾಡಲ್ ತಯಾರಿಸಿಕೊಂಡು ಅದರ ಮೇಲೆ ಹಿತ್ತಾಳೆಯ ಎರಕ ಹೊಯ್ದು ಅನಂತರ ಅದಕ್ಕೊಂದು ಕಲಾತ್ಮಕ ರೂಪ ಕೊಡಲಾಗುತ್ತದೆ.

'ವುಡ್ ಟರ್ನಿಂಗ್' ಕಲೆಯ ಮೂಲಕ ಬಹಳ ಸುಂದರವಾದ ಬೊಂಬೆಗಳನ್ನೂ ಆಟಿಕೆ ಸಾಮಾನುಗಳನ್ನೂ ತಯಾರಿಸಬಹುದು. ಹಳದಿ ತೇಗವನ್ನು ಇದಕ್ಕಾಗಿ ಉಪಯೋಗಿಸಲಾಗುತ್ತದೆ. ಅತ್ಯಂತ ಕಡಿಮೆ ವೆಚ್ಚದಲ್ಲಿ ಅತ್ಯಂತ ಸುಂದರವಾದ ಕಲಾತ್ಮಕ ವಸ್ತುಗಳು ಇಲ್ಲಿ ತಯಾರಾಗುತ್ತವೆ. ಲೇಥಿನ ಸಹಾಯದಿಂದ ಆಕಾರಗಳನ್ನು ಸಿದ್ಧಗೊಳಿಸಿಕೊಂಡು ಅದರ ಮೇಲೆ ಬಣ್ಣಗಳನ್ನು ಹಾಕಿ ಈ ವಸ್ತುಗಳನ್ನು ಸಿದ್ಧಗೊಳಿಸಲಾಗುತ್ತದೆ. ಈ ಕುಶಲ ಕೈಗಾರಿಕೆಯಲ್ಲಿ 'ಡಿಸೈನ್ ಕೇಂದ್ರ' ಪ್ರಚಾರಕ್ಕೆ ತಂದಿರುವ ಹೊಸ ಹೊಸ ನಮೂನೆಗಳು ಚನ್ನಪಟ್ಟಣ ಬಣ್ಣದ ಸಾಮಾನುಗಳ ಕುಶಲ ಕೈಗಾರಿಕೆಗಳಿಗೆ ಒಂದು ಹೊಸ ಚೈತನ್ಯವನ್ನು ತುಂಬಿವೆ. ಮಣ್ಣಿನ ಪಾತ್ರೆಗಳೂ ಸಹ ಈ ಡಿಸೈನ್ ಕೇಂದ್ರದಲ್ಲಿ ಒಂದು ಹೊಸ ರೂಪವನ್ನು ಹೊಂದಿವೆ.

ಈ ಕೇಂದ್ರದ ಕುಶಲ ಕರ್ಮಿಗಳು ಪುರಾತನ ದೇವಾಲಯಗಳು ಮತ್ತು ಶಿಲ್ಪಕಲಾ ಕೇಂದ್ರಗಳಿಗೆ ಹೋಗಿ ಅಲ್ಲಿರುಬಹುದಾದ ಕಲಾವಿದರ ಪರಿಚಯ ಪಡೆದು ಬರುತ್ತಾರೆ. ಮತ್ತು ಅಲ್ಲಿಯ ನಮೂನೆಗಳ ಮಾದರಿಗಳನ್ನು ತಂದು ಕೇಂದ್ರದಲ್ಲಿ ತಯಾರಿಕೆಯಾದ ಕುಶಲ ಕಲಾವಸ್ತುಗಳ ಮೇಲೆ ಅವುಗಳನ್ನು ಅಳವಡಿಸುತ್ತಾರೆ.

ಬೆಂಗಳೂರಿಗೆ ಕಲಾಭಿಮಾನಿಗಳು ಬಂದಾಗ ಈ ಕೇಂದ್ರಕ್ಕೆ ಭೇಟಿಕೊಟ್ಟು ಇಲ್ಲಿಯ ಕೆಲಸ ಕಾರ್ಯಗಳನ್ನು ಪರಿಚಯಮಾಡಿಕೊಂಡು ಹೋಗದಿದ್ದರೆ ಅವರ ಭೇಟಿ ಅಪೂರ್ಣವಾಗುತ್ತದೆ ಎಂದರೆ ಅತಿಶಯವಾಗಲಾರದು.

ಪ್ರಣಯ ಮಾದರಿಯಿಂದ ವಿಭಿನ್ನವಾಗಿ,
ಸಮಾಜದ ಸಮಸ್ಯಾನಿರೂಪಣೆ ವಸ್ತುವಾಗಿ,
ಬೆಳಕು ಕಂಡ ನಿತ್ಯನೂತನ ಕಥೆಗಳು!

ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ.

ಕಥಾ ಕೌಮುದಿ

(ಹದಿನೂರು ವಿಶಿಷ್ಟ ಕಥೆಗಳ ಸಂಕಲನ)

ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

ಬೆಲೆ: ರೂ. ೧—೮—೦ (1=50)

ರೂ. 1=75 ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಕಳಿಸಬಹುದು.

ದೊರೆವ ಸ್ಥಳ.

ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.
ನವಭಾರತ ಪುಸ್ತಕ ಭಂಡಾರ ಉಡುಪಿ.
(ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿಯೂ ವಿಚಾರಿಸಿರಿ)

ನವಯುಗ ವಾರ ಪತ್ರಿಕೆಗೆ
ಚಂದಾದಾರರಾಗಿ ಪ್ರೋತ್ಸಾಹಿಸಿರಿ

ರವೀಂದ್ರ ವಾಣಿ

(೪ನೇ ಪುಟದಿಂದ)

ಬಂಧಿಸಿರುವನು. ಚದುರಂಗ ಆಡುವ ಬುದ್ಧಿವಂತರು ತಮ್ಮ ಆಟದ ಕಾಲಾಳು ಮೊದಲಾದ ಚದುರಂಗ ಸೈನ್ಯವನ್ನು ತಮ್ಮ ಇಚ್ಛೆಯಂತೆಯೇ ಆದರೂ, ಒಂದು ನಿಯಮದಿಂದ ನಡೆಸುವರು. ಹಾಗೆ ನಡೆಸಿದಾಗಲೇ ಅವರ ಆಟ ಚೆನ್ನಾಗಿ ಸಾಗುವುದು. ಒಂದು ವೇಳೆ ಈ ಆಟಗಾರರು, ತಮ್ಮ ಪಗಡೆಗಳ ಚಲಾವಣೆಯನ್ನು ತಿಳಿಯದಿದ್ದರೆ, ಅವರ ಆಟ ಸಾಗಲಾರದು. ಈಶ್ವರನು, ತನ್ನ ಶಕ್ತಿಗಳನ್ನು ಸ್ವಚ್ಛಂದ ಪ್ರವೃತ್ತಿಯಲ್ಲಿ ತೊಡಗಿಸಿದ್ದೇ ಆದರೆ, ಸೃಷ್ಟಿಯು ನಿರ್ಣಾಮವಾಗಬಹುದು. ಹಾಗೂ ಆ ಶಕ್ತಿಗಳಿಂದ ಪ್ರಯೋಜನವೇ ಇಲ್ಲವೆಂದಾಗಿ ಬಹುದು. ಯಾವ ಶಕ್ತಿಯೂ ದರೂ ಸರಿ, ಅದು ನಿಯಮಗಳಿಗೊಳಪಟ್ಟು ನಿಯಮಬದ್ಧವಾಗಿದ್ದರೆಮಾತ್ರ ಅದು ಶಕ್ತಿಯೆನಿಸುವುದು ಈಶ್ವರನ ಜಲರೂಪೀ ಶಕ್ತಿಯು, ಜಲ ರೂಪದಿಂದಲೇ ಇರಬೇಕಾಗುವುದು. ಪೃಥ್ವಿಗೆ ಪೃಥ್ವಿಯ ರೂಪದಿಂದಲೇ ಇರಬೇಕಾಗುವುದು. ಯಾವ ನಿಯಮಗಳಿಂದ ಈಶ್ವರನು ಈ ಶಕ್ತಿಗಳನ್ನು ಬೇರೆ ಬೇರೆ ರೂಪ, ನಿಯಮಗಳಿಗೊಳಪಡಿಸಿರುವನೋ ಆ ನಿಯಮಗಳೆಲ್ಲ ಈಶ್ವರನು ತಾನು ಸ್ವೇಚ್ಛೆಯಿಂದಮಾಡಿದ ನಿಯಮಗಳಾಗಿವೆ. ಈ ನಿಯಮಗಳೇ ಆಟವನ್ನು ಆಟಗಾರನಿಂದ ಬೇರ್ಪಡಿಸಿವೆ. ಏಕೆಂದರೆ, ಆಟಗಾರನ ಆನಂದವು ಇದರಲ್ಲೇ ಇರುವುದಾಗಿದೆ.

ಯಾವ ರೀತಿಯಿಂದ ನಿಯಮಗಳ ಸೇರೆಯು ಪ್ರಕೃತಿಯನ್ನು ಪರಮಾತ್ಮನಿಂದ ಬೇರ್ಪಡಿಸಿರುವುದೋ, ಅದೇ ರೀತಿಯಿಂದ ಅಹಂಕಾರದ ಸೇರೆಯು ನಮ್ಮನ್ನು ಈಶ್ವರನಿಂದ ಬೇರ್ಪಡಿಸಿರುವುದು. ಈಶ್ವರನು ತನ್ನ ಶಕ್ತಿಗಳ ಶಾಸನವನ್ನು ಸಂಕುಚಿತಗೊಳಿಸಿ, ನಮಗೆ ನಮ್ಮ ಈ ಚಿಕ್ಕದಾದ ಪ್ರಪಂಚದಲ್ಲಿ ಸ್ವತಂತ್ರವಾಗಿ ಕಾರ್ಯಗಳನ್ನು ನಡೆಸುವ ಒಡೆತನವನ್ನು ಕರುಣಿಸಿರುವನು. ಪಿತನು ಸುತನಿಗೆ ತನ್ನ ಸ್ವಾರ್ಜಿತ ಸಂಪತ್ತಿನಿಂದ ಒಂದು ಭಾಗವನ್ನು ಕೊಡುವಂತೆ, ಈಶ್ವರನು ನಮಗೆ ಈ ಸ್ವಾತಂತ್ರ್ಯವನ್ನು ಕೊಟ್ಟಿರುವನು. ಇದರ ಆಧಾರವು ಕೇವಲ ಪ್ರೇಮವೇ ಆಗಿರುವುದು. (ಇದುದರಿಂದಲೇ ಈ ಕಾರ್ಯ ಸ್ವತಂತ್ರವಾಗಿರುವುದು. ಪುತ್ರನಿಗೆ ಸ್ವಾತಂತ್ರ್ಯವನ್ನು ಕೊಟ್ಟ ಬಳಿಕವೇ ಪಿತನು ಎರಡು ಸ್ವತಂತ್ರ ಆತ್ಮಗಳ ಆತ್ಮೀಯ ಆನಂದವನ್ನೂ ಹೊಂದಬಲ್ಲನು.

ಅತ್ಯಾಚಾರಿಯು ತನ್ನ ಆಜ್ಞಾನುವರ್ತಿಗಳನ್ನು ತನ್ನ ಸ್ವಾರ್ಥ ಸಾಧನೆಯ, ಉಪಕರಣಗಳೆಂದೇ ಭಾವಿಸುತ್ತಾನೆ. ತನ್ನ ಆ ಸ್ವಾರ್ಥವನ್ನು ಪೂರ್ಣ ಸುರಕ್ಷಿತಗೊಳಿಸುವುದಕ್ಕಾಗಿ ಆತನು ತನ್ನ ಆಜ್ಞಾಧಾರಕರ ಸ್ವಾತಂತ್ರ್ಯವನ್ನು ನಷ್ಟಗೊಳಿಸುತ್ತಾನೆ.

ಆತನ ಸ್ವಾರ್ಥವು ಪರರಲ್ಲಿ ಸ್ವಾತಂತ್ರ್ಯದ ಒಂದು ಬೀಜವಿರುವುದನ್ನೂ ಸಹಿಸಿಕೊಳ್ಳಲಾರದು ಇದರ ಕಾರಣವೇನೆಂದರೆ—ಅತ್ಯಾಚಾರಿಯು, ಸ್ವಯಂ ಸ್ವತಂತ್ರನಾಗಿರುವುದಿಲ್ಲ. ವಸ್ತುತಃ ಆತನು ತನ್ನ ದಾಸರ ದಾಸನಾಗಿಯೇ ಇರುತ್ತಾನೆ. ಈ ಕಾರಣದಿಂದಲೇ ಆತನು, ತನ್ನ ದಾಸರಿಂದ ಪೂರ್ಣ ಉಪಯೋಗವನ್ನು ಹೊಂದುವುದಕ್ಕಾಗಿ ಅವರನ್ನು ತನ್ನ ಆಜ್ಞಾಪಾಲಕರನ್ನಾಗಿ ಮಾಡಲು, ಪ್ರಯತ್ನಪಡುತ್ತಾನೆ

ಆದರೆ ಪ್ರೇಮಪೂರ್ಣವಾದ ಅನುಶಾಸನದಲ್ಲಿ ಇಂತು ನಡೆಯಲಾರದು. ಪ್ರೇಮವು ಎರಡು ಸ್ವತಂತ್ರ ಆತ್ಮಗಳ ಮಿಲನದಲ್ಲಿಯೇ ಪೂರ್ಣತೆಯನ್ನು ಅನುಭವಮಾಡಿ ಕೊಳ್ಳಬಲ್ಲುದು. ಈ ಜಗತ್ತಿನಲ್ಲಿ ವಿಶ್ವಾತ್ಮನ ಇಚ್ಛೆಯಿಂದಲೇ ನಮಗೆ ಈ ಸ್ವಾತಂತ್ರ್ಯ ಲಭಿಸಿರುವುದು. ತಂತಮ್ಮ ಕಾರ್ಯಗಳನ್ನು ಮಾಡುತ್ತಲಿದ್ದು ಕೊಂಡು, ವಿಶ್ವಾತ್ಮನೊಡನೆ ಸಂಬಂಧವನ್ನು ಬೆಳೆಸಿಯೇ ಪೂರ್ಣತೆಯನ್ನು ಹೊಂದುವ ಪ್ರಯತ್ನಮಾಡುವ ಈ ಸ್ವಾತಂತ್ರ್ಯವು ನಮಗೆ, ಪರಮಾತ್ಮನಿಂದ ವಿಯುಕ್ತವಾದ ಬಳಿಕ ಸ್ವತಂತ್ರರೂಪದಿಂದ ಜೀವನ ನಡೆಸಲು ಮಂಜೂರಾಗುವುದು. ಆದರೆ ಈ ಯೂತ್ರೆಯು ಅನಂತ ಕಾಲದ ವರೆಗೆ ನಡೆಯಲಾರದು ಅಂದರೆ ಇದು ಪ್ರತಿ ಕ್ಷಣಕ್ಷಣಕ್ಕೂ ತನ್ನ ದೃಷ್ಟಿಯನ್ನು ಅನಂತ—ಅಮರ ಪದದೆಡೆಗೆ ಹೊರಳಿಸುತ್ತಲೇ ಇರುವುದು.

ನಮ್ಮ ವ್ಯಕ್ತಿತ್ವವು ಸದಾ ಅಮರಯೌವನದಿಂದ ಶೋಭಿಸುತ್ತಿರಲಿ, ಎಂಬ ಆಕಾಂಕ್ಷೆಯಿಂದ ನಮ್ಮ ವ್ಯಕ್ತಿತ್ವಕ್ಕೆ ಆಗಾಗ ನಮ್ಮ ವಯಸ್ಸಿನ ಬಂಧನವನ್ನು ಬದಲಾವಣೆಮಾಡಿ ಕೊಂಡಂತೆ ಭಾವಿಸಬೇಕಾಗುವುದು. ಮತ್ತು ಈ ಯೌವನದ ವಿಯೋಗವು ಸೌಂದರ್ಯ ಮತ್ತು ಶಕ್ತಿ ಈ ರೂಪಗಳಿಗೆ ಪರಿವರ್ತನೆಯಾಗಿ ಸಂಗಮಗೊಂಡು, ಸಮಾನವಾಗಿ ಸಮತೋಲವಾಗಿ ಇರುತ್ತಿರಲಿ, ಎಂಬ ಭಾವನೆಯಿಂದ—ನಮ್ಮ ವ್ಯಕ್ತಿತ್ವಕ್ಕೆ ಈ ಜಗತ್ತಿನ ಆಧಾರ ಭೂತವಾದ ಐಕ್ಯದ ಸಂಸ್ಪರ್ಶದೊಡನೆ ಪ್ರತಿ ಕ್ಷಣಕ್ಷಣವೂ ಇರಬೇಕಾಗುವುದು.

(ಸಶೇಷ)



ಸ್ಟೀಲ್‌ಲೆಂಡಿನ ಹಿಮವನ್ನು ಕರಗಿಸಿ ಅಣುಶಕ್ತಿಯ ವಿದ್ಯುದಾಲಯವನ್ನು ಕಟ್ಟಲಾಯಿತು. ಅದರ ಒಂದು ನೋಟವಿದು. ಭಾಗಗಳು: 1. ಉಷ್ಣ ಪರಿವರ್ತಕ. 2. ಪೇಪರ್ ಕಂಡೆನ್ಸರ್ 3. ಟರ್ಬನ್ ಜನರೇಟರ್. 4. ಫೀಡ್‌ವಾಟರ್ 5. ರಿಯಾಕ್ಟರ್. 6 ನಿಯಂತ್ರಣ ಕೇಂದ್ರ

ಶಿಕ್ಷಣ ಮಾಧ್ಯಮದ ಪ್ರಶ್ನೆ

ವಿವಿಧ ರಾಜ್ಯಗಳ ಮುಖ್ಯ ಮಂತ್ರಿಗಳ ಸಮ್ಮೇಳನವು ನವದೆಹಲಿಯಲ್ಲಿ ಸೇರಿ ಕೆಲವೊಂದು ಮಹತ್ವದ ನಿರ್ಣಯಗಳನ್ನು ಸ್ವೀಕರಿಸಿತು. ರಾಜಸ್ಥಾನವೊಂದನ್ನು ಬಿಟ್ಟು ಉಳಿದ ಎಲ್ಲ ರಾಜ್ಯಗಳ ಮುಖ್ಯ ಮಂತ್ರಿಗಳು ಪ್ರಧಾನಿ ನೆಹರುರವರ ಅಧ್ಯಕ್ಷತೆಯಲ್ಲಿ ಸೇರಿದ್ದ ಈ ಸಮ್ಮೇಳನದಲ್ಲಿ ಭಾಗವಹಿಸಿದ್ದರು ಭಾಷಾ ಅಲ್ಪಸಂಖ್ಯಾತರಿಗೆ ಸಂವಿಧಾನ ದತ್ತವಾಗಿ ಒದಗಿಸಬೇಕಾದ ಸೌಲಭ್ಯಗಳನ್ನು ಪುನರುಚ್ಚರಿಸಿ, ಹಿಂದೀ ಭಾಷೆಯನ್ನು ರಾಜಭಾಷೆಯನ್ನಾಗಿ ಸ್ವೀಕರಿಸುವುದಕ್ಕೆ ಮತ್ತು ಇಂಗ್ಲಿಷ್ ಭಾಷೆಯನ್ನು ಇದರೊಂದಿಗೆ ಉಪಯೋಗಿಸುವುದಕ್ಕೆ ಸಮ್ಮೇಳನವು ತನ್ನ ಒಪ್ಪಿಗೆಯನ್ನು ನೀಡಿತು. ಇದರಿಂದ ಹಿಂದಿಯನ್ನು ವತ್ತಾಯದಿಂದ ತಮ್ಮ ಮೇಲೆ ಹೇರಲಾಗುವುದೆಂಬ ಅಂಜಿಕೆಯನ್ನು ದೂರ ಪಡಿಸಲು ಪ್ರಯತ್ನ ನಡೆಯಬೇಕಾಗಿ ಬಹುದು. ಹಿಂದೀ ಭಾಷಾಭ್ಯಾಸಿ ಕೆಲವರು ಮಾಧ್ಯಮಿಕ ಶಿಕ್ಷಣದ ಮಟ್ಟದಲ್ಲಿ ದಕ್ಷಿಣ ಭಾರತದ ಒಂದು ಭಾಷೆಯನ್ನು ಅವಶ್ಯ ಕಲಿಯಲೇಬೇಕು ಎಂಬ ನಿರ್ಣಯವನ್ನು ಕೈಗೊಂಡ ಈ ಸಮ್ಮೇಳನವು ಉತ್ತರ ಮತ್ತು ದಕ್ಷಿಣ ಭಾರತಗಳ ಸಂಬಂಧವನ್ನು ಸುದೃಢಗೊಳಿಸುವ ಮತ್ತು ದಕ್ಷಿಣ ಭಾರತೀಯರಲ್ಲಿ ಹಿಂದಿಯ ಬಗ್ಗೆ ಹುಟ್ಟಿರುವ ಭಯಭಾವನೆಯನ್ನು ದೂರೀಕರಿಸುವ ಆಶ್ಚರ್ಯವನ್ನೆ ವ್ಯಕ್ತಪಡಿಸಿವೆ.

ಪ್ರಾಥಮಿಕ ಶಿಕ್ಷಣವು ಮಾತೃಭಾಷೆಯಲ್ಲಿ ಮಾಧ್ಯಮಿಕ ಶಿಕ್ಷಣವು ಪ್ರಾದೇಶಿಕ ಭಾಷೆಯಲ್ಲಿ ನೀಡಲ್ಪಟ್ಟು ಮುಖ್ಯ ಮಂತ್ರಿ ಸಮ್ಮೇಳನವು ಅನುಕೂಲಾಭಿವೃದ್ಧಿಪಟ್ಟರೂ ವಿಶ್ವವಿದ್ಯಾಲಯದ ಮಾಧ್ಯಮವನ್ನು ಪ್ರಾದೇಶಿಕ ಭಾಷೆಯಾಗಿಸುವುದರಿಂದ ತುಂಬ ತೊಡಕಿದೆಯೆಂದು ಹೇಳಿವೆ ಕಾಲಕ್ರಮದಲ್ಲಿ ಹಿಂದಿಯೇ ಉಚ್ಚ ಶಿಕ್ಷಣದ ಮಾಧ್ಯಮವಾಗಬೇಕೆಂದೂ ಅದುವರೆಗೆ ಇಂಗ್ಲಿಷ್ ಭಾಷೆಯೇ ಆ ಸ್ಥಾನವನ್ನು ಪಡೆಯಬೇಕೆಂದೂ ಸಮ್ಮೇಳನವು ಉಚ್ಚರಿಸಿದೆ. ಜ್ಞಾನ-ವಿಜ್ಞಾನಗಳನ್ನು ತಿಳಿಯಲು ಮಾಧ್ಯಮವಾದ ಔಚಿತ್ಯ ಭಾಷೆಗಳನ್ನು ಕಡೆಗಣಿಸಬಾರದೆಂದೂ ಸದ್ಯ ಇಂಗ್ಲಿಷ್ ಭಾಷೆಯು ವಿಶಾಲ ಪ್ರಚಾರದ್ದಾಯವುದರಿಂದ ಅದರ ಅಧ್ಯಯನವಕ್ಕೆ ವಿಶೇಷ ಲಕ್ಷ್ಯಹರಿಸಬೇಕೆಂದು ಸಮ್ಮೇಳನವು ಒತ್ತಾಯಿಸಿದೆ.

ಇವೆಲ್ಲ ನಿರ್ಧಾರಗಳು ಸಾಮಾನ್ಯ ಸಮಷ್ಟಿಗೆ ಸ್ವೀಕೃತವಿದೆಯೊದರೂ ಭಾಷಾ ಲಿಪಿಯ ಪ್ರಶ್ನೆಗೆ ಸಮ್ಮೇಳನವು ಕಂಡುಕೊಂಡ ಉತ್ತರವು ತುಸು ವಿಲಕ್ಷಣವೆನಿಸುತ್ತದೆ. ಅಖಿಲ ಭಾರತೀಯ ಲಿಪಿಯಾಗಿ ದೇವನಾಗರಿ ಲಿಪಿಯನ್ನು ಸ್ವೀಕರಿಸಬೇಕೆಂದೂ ಎಲ್ಲ ಭಾರತೀಯ ಭಾಷೆಗಳಿಗೂ ಈ ಲಿಪಿಯನ್ನು ಬಳಸುವತ್ತ ಗಮನ ಹರಿಸಬೇಕೆಂದೂ ಸಮ್ಮೇಳನವು ಅಭಿಪ್ರಾಯವಿದೆ: ಭಾಷೆಯ ಸೌಂದರ್ಯ ವಿಶೇಷಗಳಿಗೆ ದಕ್ಕೆ ಬರದಂತೆ ಏಕ ಲಿಪಿಯವಾದಯಶಸ್ವಿಯಾಗುವುದೇ ಎಂಬುದು ಸಂದೇಹಾಸ್ಪದ. ಸಮನ್ವಯ ಹೆಸರಿನಲ್ಲಿ ಭಾಷೆಯ ಕುಲಗೆಡಿಸುವುದು ನ್ಯಾಯವೆಂದು ಯಾರೂ ಅನ್ನಲಾರರು.

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು.ರಾಘವೇಂದ್ರ ಆಚಾರ್ಯ, ಎಂ.ಎ.)

ಸಾಮಾನ್ಯ ರೋಗಗಳು
(ಡಾ. ಕೆ.ಎಲ್.ಐತಾಳ, ಎಂ.ಬಿ.ಬಿ.ಎಸ್ ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.

ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ, ಉಡುಪಿ.

ಉದಯೋನ್ಮುಖ ಲೇಖಕ ಶ್ರೀ. ಪಿ. ಎನ್. ಹೆಬ್ಬಾರ ('ಸಿರಿಪತಿ')
ಅವರ ನವೀನ ಕೃತಿ—

ಕಪಾಳ ಮೋಕ್ಷ

(ಮುನ್ನುಡಿ— ಡಾ| ಟಿ. ಎಂ. ಎ. ಪೈ, ಎಂ. ಬಿ, ಬಿ.ಎಸ್.)

ಏಳು ಪ್ರಬಂಧ, ಎಂಟು ಸಣ್ಣ ಕತೆಗಳನ್ನೊಳಗೊಂಡ ಮೌಲಿಕ ಕೃತಿ. ಸ್ವೈಜ ಘಟನೆಗಳ ಆಧಾರದ ಮೇಲೆ ನೆಯ್ದ ವರ್ಣನಾತ್ಮಕ ಪ್ರಬಂಧಗಳಾದರೂ ಸಣ್ಣ ಕತೆಯಷ್ಟೇ ಸ್ವಾರಸ್ಯಪೂರ್ಣವಾಗಿವೆ. ಕತೆಗಳಲ್ಲಿ ಕತೆಗಾರರ ಸಹಜ ಸುಂದರ ಶೈಲಿ, ಸಾಮಾಜಿಕ ನ್ಯಾಯ—ಅನ್ಯಾಯ ಹಾಗೂ ವಿಧಿವಿಲಾಸದ ಸುಳಿವು ಹೊಳೆವುಗಳನ್ನು ಕಾಣಬಹುದು.

180 ಪುಟಗಳು — ಬಿಳಿ ಕಾಗದ — ಬೆಲೆ ರೂ. 2=00

ರೂ. 2=25 ನ.ಪೈಸೆ ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಬಹುದು
ಪುಸ್ತಕ ವ್ಯಾಪಾರಿಗಳಿಗೆ ವಿಪುಲ ಕಮಿಶನ್!

ನವಭಾರತ ಪುಸ್ತಕ ಭಂಡಾರ, ಉಡುಪಿ.

ಭಾರತಕ್ಕೆ ನೆಹರುರವರ ಧುರೀಣತ್ವ

(೩ನೇ ಪುಟದಿಂದ)

ನ್ನೇ ಗಣನೆಗೆ ತಂದುಕೊಳ್ಳುತ್ತಾರೆ. ಎಂತಲೇ ಅವರು ಇಡಿ ಲೋಕದ ಸುಖ-ಶಾಂತಿಗಳ ಬಗ್ಗೆ ಮಾತಾಡುವ ಪ್ರಾಮಾಣಿಕ ಕರ್ತಾರರೆನಿಸಿಕೊಂಡಿದ್ದಾರೆ; ಅಂಧಕಾರದಿಂದ ತತ್ತರಿಸುವ ರಾಷ್ಟ್ರಗಳ ಅಶಾಕಿರಣವೆನಿಸಿದ್ದಾರೆ.

ಭಾರತವು ಅಂತರಿಕವಾಗಿ ಎಷ್ಟೆಲ್ಲ ಸಮಸ್ಯೆಗಳನ್ನು ಎದುರಿಸಿತು? ಪ್ರತಿಯೊಂದು ಸಮಸ್ಯೆಯೂ ದೇಶಕ್ಕೆ ಮಾರಕವಾಗಿಯೇ ಪರಿಣಮಿಸಿತ್ತು. ಆದಿಲ್ಲವನ್ನೂ ಧೈರ್ಯದಿಂದ ಎದುರಿಸಿ, ಅನ್ಯಾಯವನ್ನು ಪ್ರತಿಭಟಿಸಿ, ಐಕ್ಯವನ್ನು ಪ್ರಸ್ತಾಪಿಸಿ ದೇಶವನ್ನು ಮುನ್ನಡೆಸಿದರು ಪಂಡಿತ್ ನೆಹರೂ. ಪ್ರಾಂತೀಯಸಮಸ್ಯೆ, ನಿರಾಶ್ರಿತರ ಸಮಸ್ಯೆ, ಪ್ರಾವಿಡ ಸ್ತಾನದ ಗಲಬೆ, ಸಿಖ್ಖರ ಪ್ರತ್ಯೇಕತಾ ಧೋರಣೆ, ಕಾಶ್ಮೀರದ ಹೊಳಸಂಚು, ಪ್ರಾಂತೀಯ ಸ್ವಾರ್ಥ ನೆಹರೂರವರ ಸಮರ್ಥ ವ್ಯಕ್ತಿತ್ವದಿಂದ ಹೇಳ ಹೆಸರಿಲ್ಲದಾಯಿತು.

ದೇಶದ ಪ್ರಗತಿಯೂ, ರಾಷ್ಟ್ರದ ಪುನರ್ರಚನೆಯೂ ಅದರ ಐಕ್ಯಶಕ್ತಿಯನ್ನೇ ಹೊಂದಿಕೊಂಡಿದೆ. ರಾಷ್ಟ್ರದಲ್ಲಿ ಐಕ್ಯವಿಲ್ಲದಿದ್ದುದರಿಂದಲೇ ನೆರೆಯ ಪಾಕಿಸ್ತಾನ ಸರ್ವಾಧಿಕಾರಿ ಕಸಿಮುಷ್ಟಿಗೆ ಸಿಲುಕಿತು. ಅಮೇರಿಕನ್ ಸಾಮ್ರಾಜ್ಯಶಾಹಿಗಳ ಬಾಲ ಹಿಡಿಯಿತು. ಭಾರತವು ತನ್ನ ಐಕ್ಯ ಶಕ್ತಿಯಿಂದ ಬಾಳಿದುದರಿಂದಲೇ ತಟಸ್ಥ ರಾಷ್ಟ್ರವೆನಿಸಿ ಇಡಿ ಲೋಕಕ್ಕೆ ನೀತಿ ಹೇಳುವ ರಾಷ್ಟ್ರವೆನಿಸಿತು. ಪರಚಿಂತನ ತತ್ವದ ಮಹತ್ವವನ್ನು ಈ ಕೈಡ್ರೋಜನ್ ಯುಗದಲ್ಲೂ ಸಾರುವೆಂತಾಯಿತು. ಅಲ್ಲದೆ ದೇಶದ ಪ್ರಗತಿಪರ ಪುನಾರಚನೆಗೆ ವಿದೇಶೀ ರಾಷ್ಟ್ರಗಳು ಉತ್ಸಾಹದಿಂದ ಸಹಕರಿಸುತ್ತಿರುವುದು ನಮ್ಮ ರಾಷ್ಟ್ರದ ಪ್ರಾಮಾಣಿಕ ಧ್ಯೇಯವನ್ನು ಒಪ್ಪಿಯೇ. ಇಷ್ಟಕ್ಕೆ ನಮ್ಮ ನೆಹರೂರವರೇ ಕಾರಣರಾಗಿದ್ದಾರೆ.

ಲೋಕದ ದುರಾಕ್ರಮಣವನ್ನು ಪ್ರತಿಭಟಿಸಲು ಇಂದು ಪ್ರಪಂಚ ಯಾರ ಮುಖ ನೋಡುತ್ತಿದೆಯೋ, ಲೋಕದ ಶಾಂತಿ ಪ್ರಸ್ತಾಪನೆಗೆ ಜಗತ್ತಿನ ಅನಂತ ಕಣ್ಣುಗಳು ಯಾರನ್ನು ಪ್ರತೀಕ್ಷಿಸುತ್ತಿವೆಯೋ, ಲೋಕದ ಸಾಮ್ರಾಜ್ಯ ಶಾಹಿಗಳ ದುರ್ಭರ ನೀತಿಗೆ ನಿರ್ಭಯದಿಂದ ಎದುರಿಸುವ ಶಕ್ತಿಯಾಗಿದೆಯೋ, ಅಂತಹ ಮಹಾನ್ ವ್ಯಕ್ತಿ ನಮ್ಮ ಪ್ರಧಾನಿಗಳಾಗಿರುವುದು ಒಂದು ಮಹಾ ಸೌಭಾಗ್ಯ ಎಂದರೆ ಅತಿಶಯೋಕ್ತಿಯಲ್ಲ.

ಇಂತಹ ಮಹಾನ್ ವ್ಯಕ್ತಿ ಒಮ್ಮೊಮ್ಮೆ ರಾಜಕೀಯ ವೈರಾಗ್ಯವನ್ನು ತೋರ್ಪಡಿಸುತ್ತಾರೆ. ಇದಕ್ಕೆ ಕಾರಣವೇನು? ಯಾರು ಕಾರಣರು? ಪರಿಹಾರವೇನು? ಇದನ್ನು ಯೋಚಿಸುವಾಗ ಭಾರತದ ೪೩ ಕೋಟಿ ಜನ ತಮ್ಮ ಹೃದಯವನ್ನು ತಮ್ಮ ನೈತಿಕ ವಿವೇಕದ ಕಣ್ಣಡಿಯಲ್ಲಿ ನಿರುಕಿಸಬೇಕು. ಈ ರಾಜಕೀಯ ವೈರಾಗ್ಯಕ್ಕೆ ನಾವೇ ಕಾರಣರಿದ್ದೇವೆ. ನಮ್ಮಿಂದಲೇ ಲೋಕ ಮಹಾನಾಯಕನ ಮನಸ್ಸು ವ್ಯಥಿತವಾಗಿದೆ. ನಮ್ಮ ಅತಿ ಮಂದಾಂಧತೆಯ ಸ್ವಾರ್ಥಲೋಲುಪತೆಯೇ ನಮ್ಮ ಜನನಾಯಕನ ಮನೋನಿರ್ಧಾರವನ್ನು ಸಡಿಲುಗೊಳಿಸಿದೆ.

ಹೌದು! ಮನುಷ್ಯನ ಜೀವನ ಶಾಶ್ವತವಲ್ಲ. ಒಬ್ಬನಿಂದಲೇ ಲೋಕ ಬದುಕುವುದಿಲ್ಲ. ವ್ಯಕ್ತಿ ಸೂಜಿಯ ಕಾಲ ಕಳೆದು ಹೋಗಿದೆ. ನೆಹರೂರವರೊಬ್ಬರೇ ಎಂದೆಂದಿಗೂ ನಾಯಕರಾಗಿ ಉಳಿಯಲಾರರು. ನಮ್ಮವರಲ್ಲಿ ಕೆಲವರು ಇದೇ ಘಾಟಿಯಲ್ಲಿ ವರ್ತನಾಡಬಹುದು. ಆದರೆ, ನೆಹರೂ ಎಂಬ ಮೂರಕ್ಷರದ ಉಚ್ಚಾರದಲ್ಲಿ ಭಾರತದ ಒಟ್ಟು ಐಕ್ಯ ಅಡಗಿದೆ.

ನೆಹರೂ ಒಂದು ವ್ಯಕ್ತಿಯಲ್ಲ. ಭಾರತೀಯರ ಮಟ್ಟಿಗೆ ಅವರೊಂದು ಐಕ್ಯ. ಭಾರತದ ಅನಂತ ಜನಸಾಗರ ನೆಹರೂ ನೀತಿಗೆ ಕೊಡುವ ಪ್ರಾಧಾನ್ಯ, ತೋರುವ ಒಲವು, ನೀಡುವ ಐಕ್ಯ—ಇವು ಇಡೀ ಪ್ರಪಂಚವನ್ನೇ ಬೆರಗುಗೊಳಿಸಿವೆ. ತನ್ನ ನಿಷ್ಕಪಟ ಜೀವನದಿಂದ ನೆಹರೂ ಭಾರತದ ಒಟ್ಟು ಐಕ್ಯದ ದೃಷ್ಟಿಯಿಂದ, ಲೋಕ ಶಾಂತಿಯ ದೃಷ್ಟಿಯಿಂದ ಬಾಹುವಿನ 'ರಾಮರಾಜ್ಯ' ಸಿದ್ಧಿಯ ಧ್ಯೇಯದಿಂದ ನಮ್ಮ ಮುಂದಾಳಾಗಿ ಉಳಿಯಲೇ ಬೇಕು.

ನೆಹರೂರವರಿಗಿಂತ ಉತ್ತಮ ಆಡಳಿತಗಾರ ಸಿಗಬಹುದು; ಆದರೆ ಸಂಘಟನಾವಾದಿ ಸಿಗಲಾರ. ಸಂಘಟನಾ ಚಾಣಕ್ಯ ದೊರೆಯಬಹುದು ಜನಪ್ರಿಯನನ್ನು ಕಾಣಲಾರೆವು. ಜನಪ್ರಿಯನನ್ನು ಕಾಣಬಹುದು ನಿಷ್ಕಲಂಕಧ್ಯೇಯದ ತ್ಯಾಗಮಯಿ ದೊರೆಯಲಾರ. ನೆಹರೂರವರ ವ್ಯಕ್ತಿತ್ವಕ್ಕೆ ಸರಿಸಾಟಿ ಈ ವರೆಗೆ ನಮಗೆ ಗೋಚರಕ್ಕೆ ಬರಲಿಲ್ಲ.

ಇಂದು ನೆಹರೂ ಕಾರ್ಯೋತ್ಸಾಹದ ಗಾಯತ್ರಿ ಮಂತ್ರವನ್ನೇ ಹೋದಲ್ಲೆಲ್ಲಾ ಪಸರಿಸುತ್ತಿದ್ದಾರೆ. ಎಳೆಯ ಜೀವಗಳನ್ನು ಕಂಡು ನಲಿದಾಡಲು ಮುಖ್ಯ ಕಾರಣ—ಆ ಚಿಕ್ಕ ಬಾಲಕರು ನಿಷ್ಕಪಟಿಗಳು, ಪರಿಶುದ್ಧವಾದ ಹೃದಯವುಳ್ಳವರು.

ರವೀಂದ್ರರ ಬಾಲ್ಯಸ್ಮರಣೆ

ವಿಶ್ವಕವಿ ರವೀಂದ್ರನಾಥರು ಪಾಠಶಾಲೆಯೊಳಗಿನ ಕೋಣೆಯ ಗೋಡೆಗಳ ಅವರಣದಲ್ಲಿ ವಿದ್ಯಾಭ್ಯಾಸ ಪಡೆಯಲು ನಿರಾಕರಿಸುತಿದ್ದರು. ಅವರು ಚಿಕ್ಕ ಸುಟ್ಟ ಕವಿತೆಗಳನ್ನು ಬರೆದು, 'ಕಳ್ಳಕವಿ' ಎಂಬ ಬಿರುದನ್ನು ಗಳಿಸಿದ್ದರೂ ಶಿಕ್ಷಣದಲ್ಲಿ ಅವರಿಗೆ ಇಷ್ಟವಿರಲಿಲ್ಲ. ಮನೆಯಲ್ಲಿ ಶಿಕ್ಷಣ ನೀಡುವ ವ್ಯವಸ್ಥೆ ನಡೆದಾಗ ದೀಪದ ಮಂದ ಬೆಳಕಿನಲ್ಲಿ ಉಪಾಧ್ಯಾಯರು ಓದಿಸಲು ತೊಡಗಿದೊಡನೆಯೇ ಅವರಿಗೆ ಆಕಳಿಕೆ ಬರುತ್ತಿತ್ತು; ಅದರ ಹಿಂದೆಯೇ ಜೊಂಪು ಹಾಗೂ ನಿದ್ರೆಗಳು ಅವರನ್ನು ಆವರಿಸುತಿದ್ದುವು. ಆಗ ಅವರಿಗೆ ರಜೆಯಲ್ಲದೆ ಮತ್ತೇನು ದೊರೆಯಬೇಕು?

ಮುಂದೆ ಶಾಲೆಯಲ್ಲಿ ಇವರ ಸೇರ್ಪಡೆಯಾಯಿತು. ಶಾಲೆಯಿಂದ ತಪ್ಪಿಸಲು ಅವರು ಬೇರೆ ಬೇರೆ ನೆವನವನ್ನು ಹುಡುಕುತಿದ್ದರು. ಶೀತವಾದರೆ ಶಾಲೆಗೆ ಹೋಗಬೇಕಾಗಿಲ್ಲವಾದುದರಿಂದ, ಅವರು ನೀರಿನಲ್ಲಿ ಮುಳುಗಿಸಿದ ಮೆಟ್ಟನ್ನು ಮೆಟ್ಟುತ್ತ ದಿನವಿಡಿ ತಿರುಗಾಡುತಿದ್ದರು. ವಿಶೇಷ ಚಳಿಯಿರುವಾಗ ಮಾಡಿಲ್ಲದ ಅಂಗಳದಲ್ಲಿ ಮಲಗುತಿದ್ದರು. ಇದಾವುದೂ ಸಫಲವಾಗದಿದ್ದರೆ, ತಾಯೊಡನೆ ಹೊಟ್ಟೆ ನೋವೆಂದು ಅತ್ತು ಗೋಗರೆಯುತಿದ್ದರು. ಮಗನ ಆಶಯ ತಾಯಿಗೆ ತಿಳಿಯದೆ? ಆಕೆ ಮಗನ ಸ್ನಿನಲ್ಲೇ ನಗುತ್ತ ಶಾಲೆಗೆ ಹೋಗುವುದು ಬೇಡ ಎನ್ನುತಿದ್ದರು. ರಾತ್ರೆಯಾಗುತ್ತಲೇ ಇಂದುಪಾಠಬೇಡವೆಂದು ಹೇಳಿಬಾಎಂದು ಸೇವಕನನ್ನು ಅಧ್ಯಾಪಕರಲ್ಲಿಗೆ ಅಟ್ಟುತಿದ್ದರು.

ರವೀಂದ್ರರು ಸ್ವಯಂ ಪಾರಿಗಳು ಸ್ವಾಧ್ಯಾಯ ಶೀಲರು. ಅವರಿಗೆ ಕಲಿಸಬೇಕಾಗಿಲ್ಲ; ತಮಗೆ ಬೇಕಾದುದನ್ನು ತಾವೇಕಲಿತುಕೊಳ್ಳುತಿದ್ದರು. ಅವರಿಗೆ ಸಂಗೀತದಲ್ಲಿ ಆಸಕ್ತಿ ಅಧಿಕ. ಯೊವಾಗಲೂ ಒಂದಲ್ಲ ಒಂದು ಚರಣವನ್ನು ಗುಣುಗುಟ್ಟಿರುವುದು ಅವರ ಸ್ವಭಾವ. ಅವರ ಮಿತ್ರರಿಗೆ ಈ ಸಂಗೀತ ಪ್ರಿಯವಾಗಿತ್ತು. ಒಂದು ಬಾರಿ ರವೀಂದ್ರರ ಮನೆಗೊಬ್ಬ ಸಂಗೀತಗಾರರ ಆಗಮನವಾಯಿತು. ಅವರು ತಂಬೂರಿ ಮೀಟುತ್ತ ಹಾಡುತಿದ್ದರು. ಒಂದು ದಿನ ತನ್ನ ಪಕ್ಕದ ಕೋಣೆಯಲ್ಲಿ ಸಂಗೀತದ ಅಲಾಪನೆಗಳುವುದನ್ನು ಕಂಡು ಅವರಿಗೆ ಆಶ್ಚರ್ಯವಾಯಿತು. ವಿಚಾರಿಸಿದಾಗ ರವೀಂದ್ರರು ಹಾಡುತ್ತಿರುವರೆಂದೂ ಅವರಿಗೆ ಸಂಗೀತವನ್ನು ಯಾವ ಗುರುಗಳೂ ಕಲಿಸುತ್ತಿಲ್ಲವೆಂದೂ ತಿಳಿಯಿತು ಹುಡುಗನ ಬುದ್ಧಿವಂತಿಕೆಯಿಂದ ಮರುಳಾದ ಸಂಗೀತಾಚಾರ್ಯರು ತಾನು ಸಂಪೂರ್ಣ ಕಲಿಸಿಯೇ ಹೋಗುತ್ತೇನೆ ಎಂದು ನಿರ್ಧರಿಸಿದರು. ಆದರೆ, ಬಾಲ ರವಿಯು ಗುರುವಿಲ್ಲದೇನೇ ವಿದ್ಯಾಧ್ಯಯನ ಮಾಡುವವ. ಒತ್ತಾಯಕ್ಕೆ ಬಗ್ಗುವವನಲ್ಲ; ಸ್ವೇಚ್ಛೆಯಿಂದಲೇ ಆತ ನಡೆಯುವವ ಎಂದು ತಿಳಿದಾಗ, ಆ ಗುರುವಿನ ವಿಸ್ಮಯಕ್ಕೆ ಪಾರವುಳಿಯಲಿಲ್ಲ!

—ಗೋರಾ.

ಅವರೇ ಮುಂದಿನ ರಾಷ್ಟ್ರ ನಿರ್ಮಾಪಕರು. ಅವರ ಭವಿಷ್ಯದಲ್ಲೇ ಭಾರತದ ಭವ್ಯ ಇತಿಹಾಸ ಅಡಗಿದೆ. ಅವರನ್ನು ಸನ್ಮಾರ್ಗಕ್ಕೆ ತರಲು ಹಿರಿಯರು ಕಂಕಣಬದ್ಧರಾಗಬೇಕೆಂದೇ ನೆಹರೂ ಜಯಂತಿಯಂದು 'ಮಕ್ಕಳ ದಿನ' ಆಚರಿಸುವುದಾಗಿದೆ. ಕಿರಿಯರಾದರೂ ಅದನ್ನು ಮನನಮಾಡಿ ಜಾತೀಯತೆ, ಪ್ರಾಂತೀಯತೆ, ಸಂಕುಚಿತ ಕಿಲ್ಬಿಷಗಳನ್ನು ಹೊಡೆದಟ್ಟಿ ಸತ್ಯ, ಸೌಹಾರ್ದ, ನ್ಯಾಯ, ಪರಿಪಾಲನೆಗಳನ್ನು ತಮ್ಮ ಜೀವನದಲ್ಲಿ ಆಚರಿಸಲು ಪ್ರತಿಜ್ಞಾಬದ್ಧರಾಗಬೇಕು.

ಕೋಟಿ-ಕೋಟಿ ನೆಹರೂಗಳು ನಮ್ಮ ನಾಡಿನಲ್ಲಿ ಪ್ರತಿಬಿಂಬಿಸುವ ಕಾಲ ಬರಲಿ! ಎಲ್ಲ ಭಾರತೀಯರ ಹೃದಯದಲ್ಲಿ ಪವಿತ್ರ ನೆಹರೂರವರ ಪ್ರತಿಬಿಂಬ ಮೂಡುವ ಹೊತ್ತು ಬರಲಿ!

[ಬೆಳಗಾವಿಯ ಭಾರತ ಸೇವಕ ಸಮಾಜದವರು ನೆಹರೂ ಜಯಂತಿಯ ಅಂಗವಾಗಿ ಏರ್ಪಡಿಸಿದ ಪ್ರಬಂಧ ಸ್ಪರ್ಧೆಯಲ್ಲಿ ದ್ವಿತೀಯ ಬಹುಮಾನ ಪಡೆದ ಬರಹವಿದು]

ದಿ ವಿಜಯ ಬೇಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬೇಂಕ್. ಸ್ಥಾಪನೆ: 1931

ರಿಜಿಸ್ಟರ್ಡ್ ಆಫೀಸು:

ವಿಜಯ ಬೇಂಕ್ ಬಿಲ್ಡಿಂಗ್, ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು-3, ಸೌತ್ ಕೆನರಾ.

ಕಾಯಂ ಠೇವಣಾತಿ ಬಡ್ಡಿ ದರವನ್ನು ಶೇಕಡ 5½ರ ವರೆಗೆ ಹೆಚ್ಚಿಸಲಾಗಿದೆ. ಏಳು ದಿವಸದ ನೋಟೀಸಿನಲ್ಲಿ ಕೇಳಿದಾಗ್ಯೆ ಹಿಂದೆ ಪಡೆಯುವ ಡಿಪೋಸಿಟುಗಳನ್ನು (Call Deposits) ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸೋಣಾಗುತ್ತದೆ.

ಹೆಚ್ಚಿನ ಮಾಹಿತಿಗೆ ನಮ್ಮ ಶಾಖೆಗಳಲ್ಲಿ ದಯಮಾಡಿ ವಿಚಾರಿಸಿರಿ.

ವಿದ್ಯಾರ್ಥಿಗಳಿಗೆ ಅತ್ಯುಪಯುಕ್ತ ಪುಸ್ತಕಗಳು

ಸುಲಭದಲ್ಲಿ ಇಂಗ್ಲಿಷ್
(ಆಂಗ್ಲ ಸ್ವಯಂಬೋಧಿನಿ)
ರೂ. 2-00.

ಸುಲಭದಲ್ಲಿ ಪತ್ರಲೇಖನ
Letter Writing Made Easy
ಆಂಗ್ಲ ಪತ್ರವ್ಯವಹಾರ ಬೋಧಿನಿ
ರೂ 1—25.

ವಿಚಾರಿಸಿರಿ:
ನವಭಾರತ ಪುಸ್ತಕ ಭಂಡಾರ,
ಉಡುಪಿ.

Tel: 'BLUEYAGAR'. — ಚಿನ್ನ ಮತ್ತು ವಜ್ರಗಳ ಆಧುನಿಕ ತವರುಮನೆ — Phone: 374.

ಕೆ.ಆರ್.ಕೆ.ಶೇಟ್ ಡಯಮಂಡ್ ಮಾರ್ಟ್

ಸ್ಥಾಪನೆ:1919] ಚಿನ್ನ ಮತ್ತು ವಜ್ರದ ವ್ಯಾಪಾರಿಗಳು,(ಗವರ್ನ್‌ಮೆಂಟ್ ಕಾಲೇಜ್ ಎದುರುಗಡೆ)ಮಂಗಳೂರು. ಮಾಲಿಕ:ಕೆ.ಕೆ.ಆರ್.ಶೇಟ್

ಯಮುನ ನೆರಳು

(೨೩ನೇ ಪುಟದಿಂದ ಮುಂದುವರಿದದು)

ರುದಿವಸದ ಪತ್ರಿಕೆಯಲ್ಲಿ ಈ ಕೆಳಗಿನ ಪತ್ರ ಪ್ರಕಟವಾಗಿತ್ತು.

ಪ್ರಿಯ ಸಂಪಾದಕರೇ,

ಜಯ ಹಿಂದ್.

ನಾವು ನಮ್ಮ ಮಾತಿನಂತೆ ನಿನ್ನೆ ನಮ್ಮ ಸಹಯೋಗಿಯನ್ನು ಬಿಡಿಸಲಾಗಲಿಲ್ಲವೆಂದು ತಿಳಿಸಲು ನಾವು ತುಂಬಾ ಬೇಸರ ಪಡುತ್ತೇನೆ. ಇದಕ್ಕಾಗಿ ಜನತೆಯು ನಿಷ್ಕಾರಣವಾಗಿ ಪ್ರತೀಕ್ಷೆ ಮಾಡಬೇಕಾಯ್ತು. ದಿನಸವನ್ನು ಸೂಚಿಸುವ ಭರದಲ್ಲಿ ಆದುಯಾವ ವಾರ ಎಂಬುದು ನಮ್ಮ ಗಮನಕ್ಕೆ ಬರಲೇ ಇಲ್ಲ. ಶನಿವಾರವನ್ನು ನಾವು ಅಶುಭ ದಿನವೆಂದು, ಭಾವಿಸಿ ಆ ದಿನ ಯಾವ ಕಾರ್ಯವನ್ನೂ ಮಾಡುವುದಿಲ್ಲ. ನಿಷ್ಕಾರಣವಾಗಿ ಪ್ರತೀಕ್ಷೆ ಮಾಡಿಸಿದಕ್ಕಾಗಿ ಜನತೆಯು ನಮ್ಮನ್ನು ಕ್ಷಮಿಸುವುದಾಗಿ ನಾವು ನಂಬುತ್ತೇನೆ.

ಇತಿ,

ದಲಿತಸಿಂಹ.

೨೧

'ಯಮುಪುರಿ'ಯ ಒಂದು ಸುರಕ್ಷಿತ ಕೋಣೆಯಲ್ಲಿ ದಲಿತಸಿಂಹ, ರಾಮಸಿಂಹರು ತಮ್ಮ ಸಹಯೋಗಿಗಳೊಂದಿಗೆ ಮಂಡಿಸಿದ್ದರು. ಜಮುನಾ ಪ್ರಸಾದನೂ ಇದ್ದನು.

"ನಮ್ಮ ಅದೃಷ್ಟವೇ ಸರಿಯಿಲ್ಲ. ಹೂಡಿದ ಕಾರ್ಯಗಳು ನಮಗೇ ತಿರುಗಿ ಬೀಳುವುದೆಂದರೆ ಅರ್ಥವೇನು?" ಎಂದ ದಲಿತಸಿಂಹ.

"ನಿಮಗೆ ನಿಮ್ಮಯ ಕೈಗಳಲ್ಲಿ ಅವಾರ ವಿಶ್ವಾಸವಿತ್ತಲ್ಲ, ಎಲ್ಲಾ ಏನಾಯ್ತು? ಡಾಕ್ಟರೇ ವಿದ್ಯೆಗೂ ಒಂದು ದಳವನ್ನು ನಡೆಸುವ ರೀತಿಗೂ ತುಂಬಾ ಅಂತರವಿದೆ ಸ್ವಾಮಿ." ಸಿಟ್ಟಿನಿಂದಂದ ರಾಮಸಿಂಹ.

"ನಿನ್ನ ತರ್ಕ ವಿತರ್ಕಗಳನ್ನೆಲ್ಲಾ ಕಟ್ಟಿಡು. ಮಹೇಂದ್ರಗಡದ ಚಿತ್ರಶಾಲೆಯ ಬಗ್ಗೆ ಸುಳಿವೇನಾದರೂ ಸಿಕ್ಕಿತೇನು?" ಎಂದವನ ಸದ್ದಡಗಿಸುತ್ತಾ ಕೇಳಿದರು ದಲಿತಸಿಂಹ.

"ಅವನಾರೋ ದೆವರೇ ಬಲ್ಲ! ಅಂತೂ ಈಗ ಮೂಯೂವತಿಯ ಪ್ರಿಯಕರನೆಂದು ಕರೆಯುವುದೇ ಯುಕ್ತ" ಎಂದ ಫಲಕದಾರಿ.

"ಅವನು ಯಾರೇ ಆಗಿರಲಿ....ಅಂತೂ ನಮಗಿಂತಲೂ ಚತುರನಾಗಿದ್ದಾನೆ. ನಮ್ಮೆಲ್ಲಾ ಕಾರ್ಯಗಳೂ ಅವನಿಗೆ ಮೊದಲೇ ತಿಳಿಯುತ್ತವೆ. ಹಾಗೂ ಯುಕ್ತ ಸಮಯದಲ್ಲಿ ಬಂದು ನಮ್ಮ ಕಾರ್ಯಗಳನ್ನು ಮಣ್ಣುಗೂಡಿಸುತ್ತಾನೆ" ಎಂದ ರಾಮಸಿಂಹ.

"ಮೂಯೂವತಿಯು ಸುರಕ್ಷಿತ ಸ್ಥಾನವದೆಂದು ತಿಳಿದು ಈಗ ಅಲ್ಲಿಯೇ ಇದ್ದಾಳೆಂದು ನನಗೀಗಷ್ಟೇ ತಿಳಿಯಿತು" ಎಂದ ದಲಿತಸಿಂಹ.

"ಇದನ್ನಾರು ಹೇಳಿದರು ನಿಮಗೆ? ಎಂದ ರಾಮಸಿಂಹ

"ಜಮುನಾ ಪ್ರಸಾದ್"

"ನಿಮಗೆ ಇವತ್ತು ಗೊತ್ತೇನೂ? ಅವಳಲ್ಲಿಗೆ ಹೋದ ದಿನವೇ ನನಗದು ತಿಳಿಯಿತು" ಎಂದ ಫಲಕದಾರಿಸಿಂಹ.

"ನಮ್ಮ ಎಲ್ಲ ಪ್ರಯತ್ನಗಳು ಕೆಡಲು ಸಾಧ್ಯವಿಲ್ಲ. ಇದು 'ಮಹೇಂದ್ರಗಡ' ತಾನೇ, ಅವಳು ಭೂಮಿಯಲ್ಲಡಗಿದರೂ ನಾನವಳನ್ನು ಹುಡುಕಿ ತರುತ್ತೇನೆ" ಎಂದು ಗುಡುಗಿದ ದಲಿತಸಿಂಹ,

"ಇತ್ತೀಚೆಗೆ ಕೆಲವು ಸಮಯದಿಂದ ನಮ್ಮ ಕಾರ್ಯಗಳೆಲ್ಲವೂ ಅಪಜಯದಲ್ಲಿ ಕೊನೆಗೊಳ್ಳುತ್ತಿವೆ. ಈ ಸಲವೂ ಅಪಜಯವಾದರೆ ಮುಳುಗಿ ಸಾಯುವಂತಾಗುತ್ತದೆ" ಎಂದ ರಾಮಸಿಂಹ.

"ಈ ಕಾರ್ಯ ಸೂಡದೆ ಹಿಂತಿರುಗುವುದಿಲ್ಲ. ಹಾಗೂ ಇವತ್ತೇ ರಾತ್ರಿ ಹನ್ನೆರಡು ಗಂಟೆಗೆ ಹೋಗುವುದಾಗಿ ನಿಶ್ಚಯಿಸಿರಿ."

"ನಾವು ತಯಾರಿದ್ದೇವೆ. ಆದರೆ ಜಮುನಾಪ್ರಸಾದರ ಆಗತ್ಯವಿದೆ" ಅವರು ಬಲ್ಲವರಾಗಿದ್ದಾರೆ.

"ನಾನು ನಿಮ್ಮ ಆಜ್ಞೆಯನ್ನು ಎಂದು ಉಲ್ಲಂಘಿಸಿದ್ದೇನೆ?" ಎಂದೆಂದ ಜಮುನಾ ಪ್ರಸಾದ್

"ನಮ್ಮ ಸಹಯೋಗಿಗಳಲ್ಲಿ ನಿಜವಾದ ವೀರ ಪುರುಷನೆಂದರೆ ನೀನೇ ಸರಿ!"

'ಏನೇನು ಮಾಡಲಿದೆಯೋ ಅದನ್ನಿಂದೇ ಮಾಡಬೇಕು. ಒಳ್ಳೇಯರೀತಿಯಲ್ಲಿ ಕಾರ್ಯವಾಗದಿದ್ದರೆ, 'ಯಮನ-ನೆರಳ'ನ್ನೂ ಹಾಕಿಎಂದ ರಾಮಸಿಂಹ.

ಅನಂತರ ಎಲ್ಲರೂ ತಮ್ಮತಮ್ಮ ಕಾರ್ಯಕ್ಕೆ ತೊಡಗಿದರು.

ಜಯಂತರು ಕೋಣೆಯಲ್ಲಿ ಒಮ್ಮಿಂದೊಮ್ಮೆಲೆ ವಾಯರ್‌ಲೆಸ್ ಗಂಟೆಯು ಹೊಡೆದ. ಕೊಳ್ಳ ತೊಡಗಿತು. ಜಯಂತರು ಕೂಡಲೇ ವೆಶೀನ್ ಸ್ಟಾರ್ಟ್ ಮಾಡಿದರು, ಸೂಚನೆಗಳನ್ನು ಬರೆದುಕೊಳ್ಳತೊಡಗಿದರು.

"ಈ ದಿನ ರಾತ್ರಿ ನಿಮ್ಮ ಮತ್ತು ಮೂಯೂವತಿಯ ಅಪಹರಣ ಯೂ ಕೊನೆಯ ಉದ್ದೇಶದಿಂದ ಗುಂಡಾಗಳು ನಿಮ್ಮಲ್ಲಿಗೆ ಬರುವವರಿದ್ದಾರೆ. ನಮ್ಮ ರಕ್ಷಣೆಯ ವ್ಯವಸ್ಥೆಯನ್ನು ಯೋಗ್ಯ ರೀತಿಯಿಂದ ಮಾಡಿಕೊಳ್ಳಿರಿ. ಶರ್ಮಾರವರನ್ನು ತನ್ನ ಸಹಕಾರಿ ಮತ್ತು ಓರ್ವ ಗಾರ್ಡನೊಡನೆ ಬರುವಂತೆ ತಿಳಿಸಿರಿ. ಅವರ ದಸ್ತಗಿರಿಯನ್ನು ಬೇರೆ ಸಮಯದಲ್ಲಿ ಮಾಡಲು ಸಾಧ್ಯವಿಲ್ಲ. ಈ ಸುಸಂದರ್ಭವನ್ನು ತಪ್ಪಿಸಿಕೊಳ್ಳಬೇಡಿ

ಸೂಚನೆಯನ್ನು ಅದ್ಯಂತವಾಗಿ ಓದಿ ಗಂಟೆ ಬಾರಿಸುತ್ತಲೇ ನವಲೇಂದ್ರನು ಉಪಸ್ಥಿತನಾದನು.

"ಶರ್ಮಾರವರಿಗೆ ಅವರ ಸಹಕಾರಿ ಮತ್ತು ಒಬ್ಬ ಗಾರ್ಡನೊಡನೆ ರಾತ್ರಿ ಹನ್ನೊಂದು ಗಂಟೆಗೆ ಬರುವಂತೆ ತಿಳಿಸು." ಎಂದರು ಜಯಂತ್.

ನವಲೇಂದ್ರನು ಹೋದ ನಂತರ ಜಯಂತರು ಮೂಯೂವತಿಯೊಡನೆ "ಇವತ್ತು ಬಹಳ ಸೆಕೆ ಇದೆ. ಎಂಟು ಗಂಟೆಯಾಯ್ತಷ್ಟೇ ನಾವೇಕೆ ಅಗಸೆಯಲ್ಲಿ ಕುಳಿತುಕೊಳ್ಳಬಾರದು ಎಂದರು.

"ತಮ್ಮ ಇಚ್ಛೆ ಎಂದು ಹೇಳಿದಳು ಮೂಯೂವತಿ.

ಜಯಂತರು ಮತ್ತು ಮೂಯೂವತಿ ಅಗಸೆಯಲ್ಲಿ ಕುಳಿತಿದ್ದರು. ಪ್ರಾಣದಾಸರೂ ಅಲ್ಲಿಗೆ ಆಗಮಿಸಿದರು. ಜಯಂತರವರನ್ನು ಸ್ವಾಗತಿಸಿ, ಕುಳಿತು ಕೊಳ್ಳಲು ಸಂಕೇತ ಮಾಡಿದರು.

"ಶತ್ರುಗಳು ಕೊನೆಗೂ ಫಲಕದಾರಿಯನ್ನು ಬಿಡಿಸಿಕೊಂಡೇ ಹೋದರು!' ಎಂದರು ಪ್ರಾಣದಾಸರ.

"ಕೂಂ, ಅಂತೂ ಒಂದು ಒಳ್ಳೆಯ ಹಾಸ್ಯದ ಘಟನೆಯಾಯ್ತು'

ಅಷ್ಟರಲ್ಲಿ ಪೊಲೀಸ್ ಕೇಪ್ಟನ್ ಶರ್ಮಾರವರು, ಇನ್ಸ್‌ಪೆಕ್ಟರ್ ದೀಕ್ಷಿತ್ ಮತ್ತು ಪ್ರಧಾನರೊಡನೆ ಆಗಮಿಸಿದರು. ಗಾರ್ಡ್‌ನನ್ನವರು ಕೆಳಗೇ ನಿಲ್ಲಿಸಿದ್ದರು.

"ಎಲ್ಲರೂ ಕುಶಲ ತಾನೇ? ಎಂದು ಬರುತ್ತಲೇ ನುಡಿದರು. ಶರ್ಮಾಜೀ!"

"ಹೌದು ತಮ್ಮ ದಯೆ" ಎಂದಂದು ಜಯಂತರು ಸೂಚನೆಯನ್ನು ಬರೆದು ತೆಗೆದುಕೊಂಡ ಪತ್ರವನ್ನು ಶರ್ಮಾರ ಕೈಯಲ್ಲಿಟ್ಟರು. ಅವರದನ್ನು ಮೌನವಾಗಿಯೇ ಓದಿ—"ಇಂದಂತೂ ಅತ್ಯುತ್ತಮ ಸಂಧಿ. ನಾವು ಎಲ್ಲಾ ಏರ್ಪಾಡುಮಾಡಿತಯಾರಿರಬೇಕಷ್ಟೆ? ಜನರನ್ನು ಗುಪ್ತ ಸ್ಥಾನದಲ್ಲಡಗಿಸುವಂತೆ ನವಲೇಂದ್ರನಿಗೆ ಸೂಚನೆಯೊಯಿರಿ' ಎಂದರು.

ಜಯಂತರು ಎಲ್ಲಾ ವಿಷಯವನ್ನು ವಿವರವಾಗಿ ತಿಳಿಸಿದರು. ಸ್ವಲ್ಪ ಸಮಯದಲ್ಲಿಯೇ ಎಲ್ಲಾ ಕಾರ್ಯಗಳು ಸಿದ್ಧವಾದುವು. ತದನಂತರ ಅವರೀರ್ವರೂ ಬಂದು ಪುನಃ ಆಸೀನರಾದರು. ಮೂಯೂವತಿ ಸಿತಾರ ಬಾರಿಸತೊಡಗಿದಳು.

ಸುಮಾರು ೧೧ ಘಂಟೆಯ ಸಮಯ ನವಲೇಂದ್ರನು ಬಂದು ಜಯಂತರ ಕಿವಿಯಲ್ಲಿ ಮೆಲ್ಲನೆ ಏನೋ ಹೇಳಿದನು. ಕೂಡಲೇ ಜಯಂತ ಕುಮಾರರು—"ನೀನು ಮೂಯೂಳನ್ನು ಕರಕೊಂಡು ಹೋಗಿ, ನನ್ನ ಕೆಂಪು ಕೋಣೆಯ ಮೇಲಿನ ರೂಮಿನಲ್ಲಿ ಕುಳ್ಳಿರಿಸಿ, ಹೊರಬರದಂತೆ ಎಚ್ಚರಿಕೆಯಿತ್ತು ಬಾ ಎಂದರು.

ನವಲೇಂದ್ರನು ಹಾಗೆಯೇ ಮಾಡಿದನು. ಅವರೆಲ್ಲರೂ ಮೊದಲು ಕುಳಿತಿದ್ದ ಸ್ಥಳ ಖಾಲಿ ಮಾಡಿದರು. ನವಲೇಂದ್ರನು ಒಂದು ಗುಪ್ತ ಸ್ಥಾನದಲ್ಲಿ ನಿಂತು ಅಲ್ಪ ಸಮಯದಲ್ಲೇ ಪೂರ್ವ ಪರಿಚಿತ ನೇರಳೆ ಮೆಟ್ಟಲ ಮೇಲೆ ಬಿದ್ದುದನ್ನು ಕಂಡನು. ಪ್ರತಿಯೊಬ್ಬರೂ ಕಪ್ಪು ವಸ್ತ್ರಧಾರಿಗಳಾಗಿದ್ದರು. ಹಿಂದಿನಂತೆಯೇ ಕುಂಟನು ಇಂದೂ ಪಥದರ್ಶಕನಾಗಿದ್ದನು.

ಅವರೆಲ್ಲರೂ ಈಗ ಜಯಂತ ಕುಮಾರ ಮುಂತಾದವರು ಕುಳಿತು ಹಾಡು ಕೇಳುತಿದ್ದ ಸ್ಥಳಕ್ಕೆ ಬಂದು ಮುಟ್ಟಿದರು. ಅಲ್ಲಿ ಯಾರನ್ನೂ ಕಾಣದೆ ಅವರು ಜಮುನಾ ಪ್ರಸಾದನ ಆದೇಶಾನುಸಾರವಾಗಿ ಮನೆಯ ಮತ್ತೊಂದು ಬದಿಯಲ್ಲಿದ್ದಂತೆ ತೋಟದ ಕಡೆಗೆ ನಡೆದರು. ಅವರಲ್ಲೊಬ್ಬರು ವೈದ್ಯಾನಿಸಿಂದ ಸ್ವಲ್ಪ ದೂರದಲ್ಲಿ ಹೋಗ ನಿಂತರು. ಒಬ್ಬನು ಜಯಂತರ ಕೊರಡಿಗೆ ನುಗ್ಗಿದನು. ಅಷ್ಟರಲ್ಲಿ ಅಲ್ಲಿಗೆ ಜಮುನಾ ಪ್ರಸಾದನು ಧಾವಿಸಿ ಬಂದು ಅವನಿಗೇನೋ ಸೂಚನೆಯಿತ್ತು, ತಾನು ಇತರ ಸಹಯೋಗಿಗಳೊಡನೆ ಕೂಡಿಕೊಂಡನು. ಮುಖವಾಡದವನು ಕೆಂಪು ಕೋಣೆ ಪ್ರವೇಶಿಸುತ್ತಲೇ, ಇನ್ನೊಂದು ದ್ವಾರವು ತನ್ನಿಂದ ತಾನೇ ತೆರೆದುಕೊಂಡಿತಲ್ಲವೆ, ಆ ದ್ವಾರದ ಮೂಲಕ ನವಲೇಂದ್ರನು ರಿವಾಲ್ವರ್ 'ಬಾರ್' ಮಾಡಿಕೊಂಡೇ ಪ್ರವೇಶಿಸಿದನು. ಇವನನ್ನು ಕಂಡು ಮುಖವಾಡದವನು ಹಿಂತಿರುಗುವಷ್ಟರಲ್ಲೇ ನವಲೇಂದ್ರನವನನ್ನು ಒದ್ದು ಕೆಡವಿಬಿಟ್ಟನು; ಹಾಗೂ ತನ್ನ ಕಿಸೆಯಿಂದ ಹಗ್ಗವೊಂದನ್ನು ತೆಗೆದು ಮುಖವಾಡದವನ ಕೈಕಾಲು ಬಂಧಿಸಿ ಕಣ್ಣಿಗೊಂದು ಪಟ್ಟಿ ಕಟ್ಟಿ ಒಂದು ಕೋಣೆಯಲ್ಲಿರಿಸಿದನು.

ಜಮುನ ಪ್ರಸಾದನ ಇನ್ನಿತರ ಮಿತ್ರರು ಬಂಗಲೆಯ ಕೆಳಭಾಗವನ್ನು ಪ್ರವೇಶಿ

ವಿಶ್ವಕವಿ ಟಾಗೋರರ ಪುಣ್ಯಸ್ಮರಣೆಗಾಗಿ
ಅವರ ಶತಮಾನೋತ್ಸವದ ಸುಸಂದರ್ಭದಲ್ಲಿ
ಪ್ರಕಟವಾದ ಕಿರುಗಾಣಿಕೆಗಳು

ಚಿತ್ರಾಂಗದೆ

ಬೆಲೆ: ೬೦ ನ. ಪೈಸೆ.

(ಶ್ರೀ ಕೆ. ಕೆ. ಶೆಟ್ಟಿ, ಎಂ. ಎಲ್. ಸಿ. ಅವರಿಂದ ಅನುವಾದಿತ)

ರವೀಂದ್ರನಾಥರ ಕಿರುಗತೆಗಳು

ಬೆಲೆ: ೧೦ ನ. ಪೈಸೆ.

(ಶ್ರೀ ಹನುಮಂತರಾವ್ ಮಂಜರೇಕರ, ಕಾರವಾರ ಅವರಿಂದ ಅನುವಾದಿತ)

ಪ್ರಕಾಶಕರು:

ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ನವಯುಗ ಪ್ರೆಸ್, ಉಡುಪಿ

NAVAYUGA WEEKLY, UDIPI.
REGD. NO.BG. 176
24-8-1961
LICENSE NO. 31
Licensed to Post without Prepayment

ನಿದಾಗ, ಅವನನ್ನೇ ಕಾಯುತ್ತಿದ್ದ ಶರ್ಮೂರವರ ಗಾರ್ಡ್ ಮತ್ತು ಸೋಲೀಕರ ಕೈಯಲ್ಲಿದ್ದ ಸಿಕ್ಕುಲನ್ನು ನೋಡಿ ಅವರು ಹತಾಶರಾದರು. ಕೂಡಲೇ ಅವನನ್ನು ಬೇರೊಂದು ಕೋಣೆಯಲ್ಲಿ ಬಂಧಿಸಲಾಯ್ತು.

ಸದನಂತರ ನವಲೇಂದ್ರನು ಬಂದು ಜಯಂತರೊಡನೆ—"ಸಾರ್, ನಾನು ಮೈದಾನಿನಲ್ಲಡಗಿರುವವರನ್ನು ಸರಿಪಡಿಸಲು ಹೋಗುತ್ತೇನೆ. ಒಂದೊಮ್ಮೆ 'ಯಮನ—ನೆರಳೆ ನಿಂದಾಗಿ ನಾನು ಅಸಫಲನಾದರೆ ನನ್ನನ್ನು ಮರೆತು ಬಿಡಬೇಡಿರಿ" ಎಂದನು.

ನವಲ್.....ಎಂಥಹ ಮಾತಿದು?!"

"ಬೇರೇನೂ ಇಲ್ಲ; ನನ್ನ ಒಡೆಯನಿಗಾಗಿ ಪ್ರಾಣಾರ್ಪಣೆ ಮಾಡಿ, ವೀರನಾಗಿ ದೇಹಾರ್ಪಣೆ ಮಾಡಲು ಹೊರಟಿರುವೆನು. ಮೈದಾನಿನಲ್ಲಿ ಅಡಗಿರುವ ಇಬ್ಬರನ್ನು ಹಿಡಿಯುವುದು ಅತಿ ಅವಶ್ಯಕ. ಅವರಲ್ಲಿ ಒಬ್ಬನು 'ಯಮನ-ಛಾಯೆ'ಯ ಸಂಚಾಲಕ ಹಾಗೂ, ಒಂದು ವೇಳೆ ಅವನ ಛಾಯೆ, ನನ್ನ ವೇಳೆ ಬೀಳಲೂ ಬಹುದು. ತಪ್ಪಿದರೆ ನಾನವರನ್ನು ಹೆಡೆಮುಡಿ ಕಟ್ಟಿ ತರುತ್ತೇನೆ, ಅಗಲೇ ನಮಸ್ತ ಜನರಿಗೆ 'ಯಮನ-ಛಾಯೆ'ಯ ದಳದ ಬಗ್ಗೆ ಗೊತ್ತಾಗುವುದು." ಎಂದುತ್ತರವಿತ್ತ ನವಲೇಂದ್ರ.

"ಯಮನ-ಛಾಯೆ"....ಕೆಳಗೆ? ಏನನ್ನುತ್ತಿರುವೆ ನವಲೇಂದ್ರ?" ಎಂದು ಬೆಚ್ಚಿ ಬಿದ್ದು ನುಡಿದರು ಶರ್ಮೂರವರು.

"ನಾನು ಜಯಗಳಿಸಿ ಬಂದರೆ ಅನಂತರ ಹೇಳುತ್ತೇನೆ. ಇಲ್ಲವೇ, ನನ್ನ ಒಡೆಯರೇ ನಿಮಗೆ ನನ್ನ ಮೃತ್ಯುವಿನ ನಂತರ ತಿಳಿಸುತ್ತಾರೆ" ಎಂದ ನವಲೇಂದ್ರ.

"ಹೆದರಬೇಡ.... .....ನವಲ್ ಭಗವಂತನ ಕೃಪೆ ನಿನ್ನೊಂದಿಗಿದೆ. ನಾನು ಹೇಳಿದ ರೀತಿಯಲ್ಲಿ ಕಾರ್ಯವನ್ನು ಪೂರೈಸು 'ಯಮನ-ಛಾಯೆ'ಯ ಗಾಳಿಯೂ ನಿನ್ನನ್ನು ನೋಂಕದೆಂಬ ಭರವಸೆ ನನಗಿದೆ" ಎಂದರು ಜಯಂತ್.

"ಅಪ್ಪಣೆ, ನೀವೆಲ್ಲರೂ ಹೋಗಿ ಕುಂಜದಲ್ಲಿ ಕುಳಿತು ಕಮೂಷೆ ನೋಡಿ" ಎಂದು ನವಲೇಂದ್ರನು ಹೊರಟನು. ಇತ್ತ ಇವರೆಲ್ಲರೂ ಕುಂಜದಲ್ಲಿ ಉಪಸ್ಥಿತರಾದರು; ನವಲೇಂದ್ರನ, ಎರಡೂ ಕೈಯಲ್ಲಿ ತಲಾ ಗಜ ಉದ್ದದ 'ಕಿರಮಿಚಿ' ಇತ್ತು. ಅದರ ಎರಡೂ ಬದಿಯಲ್ಲಿ, ಮರದ ತುಂಡುಗಳಿದ್ದವು. ಶರ್ಮೂ ಮುಂತಾದವರು ಮೈಯೆಲ್ಲಾ ಕಣ್ಣಾಗಿ ನೋಡುತಿದ್ದರು.

ನವಲೇಂದ್ರನು ಈಗ ತಾನೇ ಮೈದಾನಿನಲ್ಲಿ ಪ್ರವೇಶಿಸಿದನೆನ್ನೋ. ಅಷ್ಟರಲ್ಲಿ ಅಬನಿಗೆ 'ಝುಂ' ಎಂಬೊಂದು ಶಬ್ದ ಕೇಳಿ ಬಂತು. ಕೂಡಲೇ ನವಲೇಂದ್ರನು ಎಡೆ ಮತ್ತು ಹೊಟ್ಟೆಗೆ 'ಕಿರಮಿಚಿ'ನ್ನು ಗಟ್ಟಿಯಾಗಿ ಒತ್ತಿ ಹಿಡಿದುಕೊಂಡನು. ಬರೇ ಒಂದು ಸೆಕುಂಡಿನೊಳಗೆ ಏನೋ ವಸ್ತು ಬಂದು 'ಕಿರಿಮಿಚಿ'ಗೆ ತಾಗಿತು. ಕೂಡಲೇ ನವಲೇಂದ್ರನು ತನ್ನ ಬೆನ್ನನ್ನು ಬಾಗಿಸಿ 'ಕಿರಿಮಿಚಿ'ನಿಂದ ಅದನ್ನು ಸುತ್ತಿ ದೂರ ಎಸೆದು ಸ್ವಯಂ ಶವದಂತಲ್ಲಿ ನಿಶ್ಚೇಷ್ಟಿತನಾಗಿ ಬಿದ್ದುಬಿಟ್ಟನು.

ಈ ಕಾರ್ಯ ಮೈದಾನಿನಲ್ಲಿ ನಿಂತಿದ್ದ ದರೋಡೆಕೋರರದ್ದಾಗಿತ್ತು. ನವಲೇಂದ್ರನು ಕೆಳಗೆ ಬೀಳುತ್ತಲೇ ಅವರೀರ್ವರೂ ಅವನ ಹತ್ತಿರ ಹಾರಿದರು. ಅವನನ್ನು ನೋಡಲು ಬಗ್ಗಿದಾಗ ನವಲೇಂದ್ರನು ಅವರಲ್ಲೊಬ್ಬನ ಕುತ್ತಿಗೆಯನ್ನು ಹಿಡಿದು ರಭಸವಾಗಿ ಎಳೆದನು. ಇಷ್ಟು ಕಾಣುತ್ತಲೇ ಶರ್ಮೂಜೀ ಮುಂತಾದವರೆಲ್ಲಾ ಅಲ್ಲಿಗೆ ಶೀಘ್ರವಾಗಿ ಓಡಿ ಬಂದರು. ಇವರನ್ನು ನೋಡುತ್ತಲೇ ಮತ್ತೊಬ್ಬ ದರೋಡೆಕೋರನು ಪಂಚಾರಿಯೊದನು.

ನವಲೇಂದ್ರ ತಾನು ಹಿಡಿದ ಮುಖವಾಡದವನನ್ನು ಎಳೆದುದರಿಂದ ಅವನು ಕೆಳಮುಖವಾಗಿ ಬಿದ್ದಿದ್ದನು. ಅವನನ್ನಲ್ಲಿಯೇ ಒತ್ತಿ ಹಿಡಿದು ನವಲೇಂದ್ರನು ವಿವಶನನ್ನಾಗಿ ಮಾಡಿದ್ದನು. ಇನ್ಸ್‌ಪೆಕ್ಟರ್ ದೀಕ್ಷಿತರು ಮುಂದುವರಿದು ಅವನ ಕೈಗೆ 'ಕೋಳ'ವನ್ನು ತೊಡಿಸಿದರು.

ಮುಖವಾಡ ತೆಗೆದಾಗ ಅವನು ರಾಮಸಿಂಹನಾಗಿದ್ದನು.

(ಮುಂದುವರಿಯುವುದು)

ಪ್ರಚಲಿತ ಪ್ರಸಂಗ

(ಗಿನೇ ಸುಟದಿಂದ)

ಸ್ಟು ತಿಂದು, ಹಗಲಿನಲ್ಲಿ ಉಪವಾಸವಿರುತ್ತಾರೆ. ಸ್ವಾರ್ಥ ಸಾಧನೆಗಾಗಿ ಪರಾರ್ಥ ಸಾಧನೆಗಾಗಿ ಮಾಡುವ ಉಪವಾಸವೂ ಇದೆ.

ಕೂಲಿಗಾರರು-ಮಂದಿ ಭಿಕ್ಷುಕರು-ಅತಿ ದರಿದ್ರರು ಮಾಡುವ ಉಪವಾಸವು ಇವೆಲ್ಲ ಬಗೆಯ ಉಪವಾಸಕ್ಕಿಂತ ದಯನೀಯವಾದುದು. ಸಂಪಾದನೆಯೇನೂ ಇಲ್ಲದ ಮಳೆಗಾಲದ ಆಷಾಢ ಮಾಸದಲ್ಲಿ ಇವರು ಅನಶನ ವ್ರತವನ್ನು ಬೇಕಾಗಿಯೋ ಬೇಡವಾಗಿಯೋ ಕೈಗೊಳ್ಳುವುದು ಅನಿವಾರ್ಯವಾಗುತ್ತದೆ!

ಇಷ್ಟೆಲ್ಲ ವಿವೇಚನೆ ನಡೆದ ನಂತರ, ಪ್ರ

ಖಾಸಗಿ ಶಾಲೆಗಳ ವಿಚಾರ

ಬೆಂಗಳೂರಿಗೆ ಹೋದ ಶಿಷ್ಟಮಂಡಳ— ಮೇ ತಿಂಗಳಲ್ಲಿ ಸರಕಾರವು

M. E. R.ನಲ್ಲಿ ಕೆಲವು ತಿದ್ದುಪಡಿಗಳನ್ನು ಮಾಡಿ ಜ್ಞಾಪಿಗೆ ತಂದುದರಿಂದ ಖಾಸಗಿ ಶಾಲಾ ಮೆನೇಜರರಿಗೆ-ವಿ. ಉಪಾಧ್ಯಾಯರಿಗೆ ಉಂಟಾದ ಗಂಡಾಂತರಗಳ ವಿಷಯದಲ್ಲಿ ವಿದ್ಯಾ ಇಲಾಖಾಧಿಕಾರಿಗಳಿಗೆ ಮನವಿಯನ್ನು ಸಮರ್ಪಿಸುವರೆ, ದ. ಕ. ಜಿಲ್ಲಾ ಖಾಸಗಿ ಶಾಲಾ ಮೆನೇಜರರ ಸಂಘದ ವತಿಯಿಂದ ಶ್ರೀಗಳಾದ ಎ. ಜೆ. ಆರ್ಸ್, ಕುರುಕಾಲು ಗಣಪಯ್ಯ ಶೆಟ್ಟಿ, ಯಜ್ಞ. ರಾಮಚಂದ್ರ ಹೆಗ್ಡೆ, ಕೆ. ಫಾ. ಬಿ. ಯಸ್. ಡಿ'ಸೋಜ, ಆರ್. ಡಿ. ಜತನ್ನ, ರಮೇಶ ರಾವ್— ಇವರೂ, ಬಳ್ಳಾರಿ ಜಿಲ್ಲಾ ಮೆನೇಜರರ ಸಂಘದ ವತಿಯಿಂದ ಶ್ರೀಗಳಾದ ಹುಲಿಕಂಠಾಚಾರ್, ಮತ್ತು ಭಾಸ್ಕರ ಆಚಾರ್— ಇವರೂ, ದ. ಕ. ಜಿಲ್ಲಾ ಪ್ರಾಥಮಿಕ ಶಾಲಾ ಅಧ್ಯಾಪಕರ ಯೂನಿಯನಿನ ವತಿಯಿಂದ ಶ್ರೀಗಳಾದ ಬನ್ನಾಡಿ ಸುಬ್ಬಣ್ಣ ಹೆಗ್ಡೆ, ಬಿ. ವೆಂಕಟ್ರಾಯ್ ಮತ್ತು ಯಜ್ಞ. ಎ. ಸಿ. ಕಿದಿಲ್ಲಾಯ— ಇವರೂ ಕೂಡಾ ಮೂರು ಸಂಸ್ಥೆಗಳ ಸಂಯುಕ್ತ ಶಿಷ್ಟಮಂಡಲದವರು ದ. ಕ. ಜಿಲ್ಲಾ ಮೆನೇಜರರ ಸಂಘದ ಅಧ್ಯಕ್ಷ ಶ್ರೀ ಬಿ. ಎ. ಪೈಯವರ ಮುಂದಾಳುತನದಲ್ಲಿ ತಾ. 13—8—61ರಂದು ಬೆಂಗಳೂರಲ್ಲಿ ವಿದ್ಯಾ ಮಂತ್ರಿಗಳಾದ ಶ್ರೀ ಅಣ್ಣಾರಾವ್ ಗಣಮುಖಿ ಮತ್ತು ಕಾನೂನು ಮಂತ್ರಿಗಳಾದ ಶ್ರೀ ಬಿ. ವೈಕುಂಠ ಬಾಳಿಗರವರನ್ನು ಏಕಕಾಲದಲ್ಲಿ ಭೇಟಿಯಾದರು. ಸದ್ರಿ ಭೇಟಿಯ ಕಾಲದಲ್ಲಿ ವಿದ್ಯಾ ಇಲಾಖೆಯ ಜ್ಯೂಂಟ್ ಡೈರೆಕ್ಟರರೂ, ವಿದ್ಯಾ ಮಂತ್ರಿಗಳ ಪರ್ಸನಲ್ ಸೆಕ್ರೆಟರಿರಿಗಳೂ, ದ. ಕ. ಜಿಲ್ಲಾ ವಿದ್ಯಾಧಿಕಾರಿಗಳೂ ಉಪಸ್ಥಿತರಿದ್ದು, ಮನವಿಗಳಲ್ಲಿರುವ ಈ ಕೆಳಗಿನ ಮುಖ್ಯ ವಿಷಯಗಳನ್ನು ಚರ್ಚಿಸಲಾಯ್ತು.

ತಾ. 23—5—60ರ ನಂತರ ನೇಮಿಸಲಾಗಿದ್ದು ಹೊಸ ತಿದ್ದುಪಡಿಗಳ ಮೇರೆಗೆ ಕೆಲಸ ಕೆಳಕೊಳ್ಳುವ ಅಧ್ಯಾಪಕರ ಸಂಖ್ಯೆ ದ. ಕ. ಜಿಲ್ಲೆಯಲ್ಲಿ 346. ಬಳ್ಳಾರಿ ಜಿಲ್ಲೆಯಲ್ಲಿ ಸುಮಾರು 200 ಆಗಿದೆ. ತರಬೇತಾದ ಈ ಅಧ್ಯಾಪಕರಲ್ಲಿ ಹೆಚ್ಚಿನವರು ಖಾಯಂ ಇನಮುಗಳಿಗೆ ನೇಮಿಸಲ್ಪಟ್ಟವರಾದ ಕಾರಣ ಅವರನ್ನು ಕೆಲಸದಿಂದ ಹೊರತಳ್ಳಿ ನಿರುದ್ಯೋಗ ಸಮಸ್ಯೆಯನ್ನು ಹೆಚ್ಚಿಸಬಾರದೆಂಬುದಾಗಿ ಕೇಳಿಕೊಳ್ಳಲಾಯ್ತು. ಇದೇ ಮೈಸೂರು ಪ್ರಾಂತ್ಯಕ್ಕೆ ಒಂದೇ ರೀತಿಯ "ಗ್ರಾಂಟ್ ಇನ್ ಎಡ್ಡ್ ಕೋಡ್"ಇಲ್ಲದಿರುವಾಗ ಮದ್ರಾಸು ರೂಲುಗಳನ್ನು ಮಾತ್ರ ತಿದ್ದುಪಡಿ ಮಾಡಿ ಈ ಜಿಲ್ಲೆಗಳ ಖಾಸಗಿ ಪ್ರಾಥಮಿಕ ಶಾಲೆಗಳಿಗೆ ಮೈಸೂರಿನ್ಸ್ ಗ್ರಾಂಟ್ ಕೊಡದಿದ್ದಲ್ಲಿ ಶಾಲೆಗಳನ್ನು ನಡಿಸುವರೆ ಅಸಾಧ್ಯವೆಂದು ಸ್ಪಷ್ಟೀಕರಿಸಲಾಯ್ತು. ಅಧ್ಯಾಪಕರ ಮಾಸಿಕ ತಲಬು ಅದಷ್ಟು ಬೇಗನೆ ಮರುತಿಂಗಳಲ್ಲಿ ಸಿಗುವಂತಾಗ ಬೇಕೆಂದೂ, ಎಲಿಮೆಂಟರಿ ಶಾಲಾ ಮುಖ್ಯ ಅಧ್ಯಾಪಕರಿಗೆ ಅವರು ಹೊತ್ತ ಹೊಣೆಗಾರಿಕೆಗಾಗಿ ಸ್ಪೆಶ್ಯಲ್ ಎಲೊವೆನ್ಸ್ ಕೊಡಿಸೋಣವಾಗ ಬೇಕೆಂಬಲೂ, ಮದ್ರಾಸು ರೂಲುಗಳ ಮೇರೆಗೆ ನಿವೃತ್ತಿ ವೇತನ ಪಡೆಯಲು ಅರ್ಹರಾಗಿದ್ದ ಅಧ್ಯಾಪಕರಿಗೆ ಈಗಿನಂತೆ ಯಾವ ಅತಂಕ ತೊಂದರೆಗಳೂ ಇಲ್ಲದೆ ನಿವೃತ್ತಿ ವೇತನ ಸಿಗುವಂತಾಗ ಬೇಕೆಂದೂ ವೃತ್ತಿ ಶಿಕ್ಷಕರಿಗೆ 1960ನೇ ಜೂನ್ 1ರವೊದಲುಸಿಗುತ್ತಿದ್ದ ಸಂಬಳವೇ ದೊರೆಯಬೇಕೆಂದೂ ವಿನಂತಿಸಿಕೊಳ್ಳಲಾಯ್ತು. ಈ ಎಲ್ಲಾ ಕೇಳಿಕೆಗಳ ಕುರಿತು ಸಾಕಷ್ಟು ಚರ್ಚೆಯಾದ ಬಳಿಕ ಮಾನ್ಯ ಮಂತ್ರಿಗಳು ಈ ಕೇಳಿಕೆಗಳನ್ನು ಪೂರೈಸಿಕೊಡುವ ವಿಷಯದಲ್ಲಿ ಸಹಾನುಭೂತಿ ಪೂರ್ವಕವಾದ ಭರವಸೆಯನ್ನಿತ್ತರು.

ಮನವಿಗಳಲ್ಲಿರುವ ಇತರ ಸಾಮಾನ್ಯ ವಿಚಾರಗಳನ್ನು ಇದೇ ಮೈಸೂರು ಪ್ರಾಂತ್ಯಕ್ಕೆ ಒಂದೇ ತರದ ವಿದ್ಯಾ ಮಸೂದೆ ಜ್ಯಾರಿಗೆ ಬರುವಾಗ ಪರ್ಯಾಲೋಚಿಸಲಾಗುವುದು.

ಹೊಸ ಕಾರ್ಯಕಾರಿ ಮಂಡಳಿ

ದ. ಕ. ಜಿಲ್ಲಾ ಶಿವ ಬಿ. ಎನ್. ವಿದ್ಯಾವರ್ಧಕ ಸಂಘ (ರಿ)ದ ವಿಶೇಷ ಮಹಾ ಸಭೆಯು ತಾ. 23—7—1961ರಂದು ಶ್ರೀ ಕೆ. ನಾರಾಯಣ ಶೆಟ್ರ ಅಧ್ಯಕ್ಷತೆಯಲ್ಲಿ ಜರಗಿ, ಸಂಘದ ಘಟನೆಯ ತಿದ್ದುಪಡಿಗಳನ್ನು ಮಾಡಲಾಯ್ತಲ್ಲದೆ ಜಾಲ್ತಿ ವರ್ಷಕ್ಕೆ ಶ್ರೀಗಳಾದ ನಾಗಪ್ಪ ಶೆಟ್ಟಿ (ಅಧ್ಯಕ್ಷ), ಎಸ್. ಸದಾಶಿವ ಹೆಗ್ಡೆ (ಉಪಾಧ್ಯಕ್ಷ), ಕೆ. ವಾಸುದೇವ ಶೆಟ್ಟಿ (ಕಾರ್ಯದರ್ಶಿ), ಕೆ. ಜಗನ್ನಾಥ ಶೆಟ್ಟಿ (ಉಪಕಾರ್ಯದರ್ಶಿ) ಬಿ ಜಯರಾಮ ಶೆಟ್ಟಿ (ಕೋಶಾಧಿಕಾರಿ), ಎಸ್. ದುಗ್ಗಪ್ಪ ಹೆಗ್ಡೆ, ಕೆ. ನಾರಾಯಣ ಶೆಟ್ಟಿ, ಕೆ. ತಿಮ್ಮಪ್ಪ ಶೆಟ್ಟಿ, ಬಿ. ಚಂದ್ರಹಾಸ ಹೆಗ್ಡೆ, ಎಸ್. ರೋಕಯ್ಯ ಶೆಟ್ಟಿ, ಎಸ್. ನಂದಪ್ಪ ಶೆಟ್ಟಿ, ಕೆ. ಎಲ್ಲಪ್ಪ ಹೆಗ್ಡೆ, ಕೆ. ಭೋಜ ಶೆಟ್ಟಿ, ಜಿ. ಅಣ್ಣಯ್ಯ ಶೆಟ್ಟಿ, ಎಸ್. ಜಯರಾಮ ಶೆಟ್ಟಿ, ಮತ್ತು ಕೆ. ವಾಸು ಶೆಟ್ಟಿ (ಸದಸ್ಯರು) ಇವರನ್ನೊಳಗೊಂಡ ಕಾರ್ಯಕಾರಿ ಮಂಡಳಿಯನ್ನು ಆರಿಸಲಾಯ್ತು. ಸಭಿಕರಭಿಪ್ರಾಯಗಳಾದ ಅನಂತರ ಶ್ರೀ ದುಗ್ಗಪ್ಪ ಹೆಗ್ಡೆಯವರು ಧನ್ಯವಾದವನ್ನರ್ಪಿಸಿದರು.

"ಅತ್ಯುತ್ತಮ ಬ್ಯಾಂಕಿಂಗ್ ಸೇವೆ"

- ಸಿಗ್ಮಿ
- ಕ್ಯುಮುಲೇಟಿವ್
- ಇನ್ವೆಸ್ಟರ್ಸ್ ಏಜನ್ಸಿ
- ಲಕ್ಷ್ಮೀ ಮತ್ತು ಸಿಂಡಿಕೇಟ್ ಬ್ಯಾಂಕ್ ಕೇಶ್ ಸರ್ಟಿಫಿಕೇಟುಗಳು
- ಭದ್ರತಾ ಕೋಶಗಳು
- ವಿದ್ಯಾರ್ಥಿಗಳಿಗೆ ಮತ್ತು ಧರ್ಮ ಸಂಘ -- ಸಂಸ್ಥೆಗಳಿಗೆ ವಿಶೇಷ ಸೌಕರ್ಯಗಳು

ಇನ್ನಿತರ ಎಲ್ಲಾ ವಿಧದ ಬ್ಯಾಂಕಿಂಗ್ ಸೇವೆಗಳು

ದಕ್ಷಿಣ ಭಾರತದಾದ್ಯಂತ ಹಬ್ಬಿರುವ 141 ಶಾಖೆಗಳು

ಸಿಂಡಿಕೇಟ್ ಬ್ಯಾಂಕ್

ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸ್: ಮುಕುಂದ ನಿವಾಸ, ಉಡುಪಿ, (ಮೈಸೂರು ರಾಜ್ಯ)
ಸ್ಥಾಪನೆ: 1925.

Edited Printed & Published by K. H. Shetty. at the Navayuga Press. Udipi. S. India.

40th year of publication. 31-8-1961 ೪೦ನೇ ವರ್ಷ

ಸಂಪುಟ ೪೦ Vol. 40

ನವಯುಗ

ಸಂಚಿಕೆ ೫೦ No. 50

ಬೆಲೆ 0=13

ಪ್ರಚಲಿತ ಪ್ರಸಂಗ

ಗೋವೆಯಲ್ಲಿ ಯುದ್ಧಸಿದ್ಧತೆಯೆ?

ಗೋವೆಯ ಬಂಧನ ಬಿಡಿಸಲು ಭಾರತವು ಸೈನಿಕ ಬಲ ಪ್ರಯೋಗಿಸುವ ದಿನವೂ ಬರಬಹುದೆಂಬ ಪ್ರಧಾನಿಯವರ ಹೇಳಿಕೆ ಸಾಲಝಾರ ಪ್ರಭುವಿನ ಎದೆಯೊಡೆತಕ್ಕೆ ಕಾರಣವಾಗಿದೆ; ಎಂತಲೇ ಗೋವೆಯೊಗ ಸೈನಿಕ ಕೇಂದ್ರವಾಗಿ ಪರಿಣಮಿಸುತ್ತಿದೆ.

ಭಾರತದಲ್ಲಿರುವ ಪೋರ್ಚುಗೀಸ ವಸಾಹತು ಗೋವೆಯ ಸಂಬಂಧದಲ್ಲಿ ಹೃದಯ ಸ್ಪರ್ಶಿಯೂದ ಘಟನೆಗಳು ನಡೆದು ಬರುತ್ತಿದ್ದು ಇವು ದಿನದಿಂದ ದಿನಕ್ಕೆ ಕುತೂಹಲದಾಯಕವಾಗುತ್ತ ಹೋಗುತ್ತಿವೆ. ಭಾರತೀಯ ಸ್ವಾತಂತ್ರ್ಯದ ಸುದಿನವಾಗಿದ್ದ ಆಗಸ್ತು ೧೫ ಸಮೀಪಿಸುತ್ತಿದ್ದಂತೆಯೇ ಅಲ್ಲಿ ಸೈನಿಕ ಚಲನವಲನಗಳು ಮಿತಿಮೀರ ತೊಡಗಿತ್ತೆಂದು ವರದಿಯಾಗಿದೆ; ಅಲ್ಲದೆ, ಈ ಸೈನಿಕ ಸಮೀಕರಣದ ಕಾರ್ಯ ಇಂದಿಗೂ ಮುಂದುವರಿಯುತ್ತಿದೆ. ಅಸ್ಥಾಯೊ ರೂಪದಲ್ಲಿ ಅಲ್ಲಿಗೆ ಬಂದಿದ್ದ ೧,೨೦೦ ಬಿಳಿಯ ಸೈನಿಕರೀಗ ಸ್ಥಾಯಿಯಾಗಿ ಅಲ್ಲಿಯೇ ನಿಲ್ಲುವಂತಹ ಕಾರ್ಯಕ್ರಮ ನಡೆದಿದೆಯೆಂದು ಗೊತ್ತಾಗಿದೆ. ಗೋವೆ—ಭಾರತಗಳ ಗಡಿಯಲ್ಲಿ ವಿಶೇಷ ಸಂಖ್ಯೆಯಲ್ಲಿ ಪೋಲೀಸರು ಗಸ್ತು ತಿರುಗುತ್ತಿರುವರೆಂದೂ ಸೈನಿಕರು ಹೆಚ್ಚಿನ ಪ್ರಮಾಣದಲ್ಲಿಸುತ್ತುತ್ತಿರುವರೆಂದೂ ತಿಳಿಯುತ್ತದೆ. ಈ ಹೆಚ್ಚಿನ ಸೈನ್ಯ ಮತ್ತು ಸೈನಿಕೋಪಕರಣಗಳನ್ನು 'ನಾಟೊ' (ಉತ್ತರ ಅಟ್ಲಾಂಟಿಕ ಸೈನಿಕ ಒಡಂಬಡಿಕೆಯ) ಸಹಾಯದಿಂದ ಪೂರೈಸಲಾಗುತ್ತಿದೆಯೆಂಬುದು ನಿಸ್ಸಂಶಯ.

ಗೋವೆಯು ತನ್ನ ಸಾರ್ವಭೌಮಾಧಿಕಾರಕ್ಕೆ ಸೇರಿದುದೆಂದೂ ಅದು ತನ್ನ ಒಂದು ಪ್ರಾಂತ್ಯವೆಂದೂ ಪೋರ್ಚುಗಲ್ಲು ಕೆಲವು ಸಮಯಕ್ಕೆ ಮೊದಲು ವಿಚಿತ್ರವಾದವನ್ನು ಹೊಡಿದೆ. ಈ ರೀತಿಯ ಚತುರತೆಯ ಪ್ರದರ್ಶನದಿಂದಲಾದರೂ ಅದನ್ನು ತನ್ನ ಬಗಲಿಗೆ ಹಾಕಿಕೊಂಡು, ಸ್ವಾರ್ಥಸಾಧಿಸುವ ನಿಚ್ಚಣಿಕೆ ಸಾಲಝಾರ ದೊರೆಯದು. ಆದರೆ, ಭಾರತ ಉಪಖಂಡದಲ್ಲಿರುವ ಯಾವುದೇ ಒಂದು ಭೂಭಾಗ ನಾಲ್ಕಾರು ಸಾವಿರಮೈಲು ದೂರದ ಪೋರ್ಚುಗಲ್ಲಿನ ಅವಿಭಾಜ್ಯ ಅಂಗವಾಗುವುದಾದರೂ ಹೇಗೆ? ಭಾರತದಂತಹ ತಮ್ಮ ಸಾಮ್ರಾಜ್ಯದ ದೊಡ್ಡ ವಸಾಹತುವೊಂದನ್ನು ಸ್ವತಂತ್ರಗೊಳಿಸಿ, ಅಂತೆಯೇ ವಿಶ್ವದ ಅನ್ಯತ್ರವಿರುವ ತಮ್ಮಲ್ಲಿ ವಸಾಹತುಗಳಿಗೂ ಸ್ವಾತಂತ್ರ್ಯವೀಯುವ ಉದಾರತೆಯನ್ನು ಬ್ರಿಟನ ಜನತೆ ತೋರಿಸಿರುವಾಗ, ಆಧುನಿಕ ಯುಗವಾಣಿಯನ್ನು ಮನ್ನಿಸದೆ 'ಕುರುಡ ಹಿಡಿದದ್ದೇ ಬಡಿಗೆಯೆಂದು ಅರ್ಭಟಿಸುವ ಸಾಲಝಾರರು ಇನ್ನೂ ಹೆತ್ತೊಂಬತ್ತನೆಯ ಶತಮಾನದಲ್ಲಿಯೇ ಉಳಿದಿದ್ದಾರೆನ್ನಬೇಕು. ಅವರಿಗೆ ಗೋವೆಯ ಮೇಲೆ ಅದೇಕೆ ಅಷ್ಟು ವ್ಯಾಮೋಹವೋ ಅರಿಯದು. ಮುಳ್ಳಿನ ಮೊನೆಯುಚ್ಚಳಿಸುವಿತು ಭೂಮಿಯನ್ನು ಅವರದಾದ ಅರ್ಧರಾಜ್ಯದಲ್ಲಿ ಕಾರುರಾಯ ಪಾಂಡವರಿಗೆ ಕೊಡಲಾರೆನೆಂದು ಛಲಕಾಗಿ ಇರಿದಂತೆ, ಭಾರತದ ಭೂಭಾಗವಾದ ಗೋವೆಯು ತನ್ನದು ಅದನ್ನು ಹಿಡಿದು ಸುಲಿಯುವ ಸಾಲಝಾರರೂ ಈ ಮುದಿ ಪ್ರಾಯದಲ್ಲೂ ಒಂದು ಪಾತಕಲಿಯದಿರುವುದು ವಿಷಾದಕರವಿದೆ

ಭಾರತದ ವಿದೇಶ ನೀತಿಯು ಪಂಚಶೀಲಗಳ ತಳಹದಿಯಲ್ಲಿ ರೂಪಿಸಲ್ಪಟ್ಟಿರುವುದರಿಂದ, ಮತ್ತು ನಮ್ಮ ನೇತಾರರು ಈ ನೀತಿಯನ್ನು ಬದಲಿಸುವುದರಲ್ಲಿ ಉತ್ಸಾಹ ತೋರಿಸದಿದ್ದುದರಿಂದ ಗೋವೆಯು ಪೋರ್ಚುಗೀಸರ ಅಂಕಿತದೊಳಗೆ ಇನ್ನೂ ಬವಣೆಯುಣ್ಣುವಂತಾಗಿದೆ. ಧರ್ಮರಾಯನು ಧರ್ಮಕ್ಕೆಕಟ್ಟುಬಿದ್ದುಕನ್ನಮಡದಿಯವನ್ತಾಪಕರಣವಾಗುವಾಗಲು ಕೈಕಟ್ಟಿ ಕೂತಂತೆ ಭಾರತವು ವಿದೇಶ ನೀತಿಯ ಪಾವಿತ್ರ್ಯಕ್ಕೆ ಕುಂದನ್ನುಂಟು ಮಾಡಬಾರದು, ಇತರ ಐರೋಪ್ಯ ರಾಷ್ಟ್ರಗಳು ಅಲ್ಲಿಯ ಜನತೆಯ ಅಪೇಕ್ಷೆ ಮೇರೆಗೆ ಸೌಜನ್ಯದಿಂದಲೇ ತಮ್ಮ ವಸಾಹತುಗಳನ್ನು ಸ್ವತಂತ್ರಗೊಳಿಸುತ್ತ ಬಂದಂತೆ ಅವರನ್ನು ನೋಡಿಯಾದರೂ ಪೋರ್ಚುಗೀಸು ಬುದ್ಧಿ ಕಲಿತೀತು ಎಂದು ಭಾರತದ ಭಾವನೆಯಿತ್ತು. ಈ ಉದಾತ್ತತೆಯು ದುರ್ಲಭವನ್ನು ಪಡೆದು ಅಲ್ಲಿ ತನ್ನ ಬೇರನ್ನು ಮತ್ತಷ್ಟು ಬಲಗೊಳಿಸುವ ದುಸ್ಸಾಹಸದಲ್ಲಿ ಅದುತೊಡಗಿದುದು ದುರ್ದೈವವೆನ್ನಬೇಕು.

ಆದರೆ, ಈಗ್ಗೆ ಕೆಲದಿನಗಳಿಂದ ಗೋವೆಯ ಆಂತರಿಕ ವಾತಾವರಣವು ತೀವ್ರ ಬಿಸಿಗೊಳ್ಳುತ್ತಿದೆ. ಮೊನ್ನೆ ಆಗೋಸ್ತು ಹದಿನೈದರಂದು ಗೋವಾಂತಕರು ಹಲವಾರು ಹಳ್ಳಿಗಳಲ್ಲಿಅಂಜುತ್ತಂಜುತ್ತಲಾದರೂ ಭಾರತೀಯ ಸ್ವಾತಂತ್ರ್ಯದ ಪ್ರತೀಕವಾದ ತ್ರಿವರ್ಣ ಧ್ವಜವನ್ನು ಹಾರಿಸುವ ಸಾಹಸವನ್ನು ಮಾಡಿದುದು ಅಭಿವಂದನೀಯವಿರುವಂತೆಯೇ ಪೋರ್ಚುಗೀಸರ ಪಾಷಾಣ ಹೃದಯದಲ್ಲಿಯೂ ಅಂದು ಒಂದು ಅಲಗು ನಾಟಿದಂತಾಯಿತು. ಇದಕ್ಕೆ ಪೂರಕವಾಗಿ, ಭಾರತೀಯ ಸಂಸತ್ತಿನಲ್ಲಿ ಪ್ರಧಾನಿ ನೆಹರುಗಳ ಒಂದು ಹೇಳಿಕೆಯು ಅವರಿಗೆ ವಜ್ರಾಘಾತವಾಗಿ ಪರಿಣಮಿಸಿತು. ಇದರಿಂದ ದಿಕ್ಕುಗಾಣದ ಸಾಲಝಾರರು ತಾನು ಕಂಡಿದ್ದ ಕನಸುಗಳು ಕೇವಲ ಕನಸುಗಳಾಗಿಯೇ ಉಳಿಯಬಹುದೆಂಬ ಶಂಕೆಗೊಳಗಾದರು. ಈ ಶಂಕೆಯ ದೂರೀಕರಣಕ್ಕಾಗಿ ಅವರೀಗ ವಿಶ್ವ ಪ್ರಯತ್ನ ಮಾಡುತ್ತಿರುವರೆಂಬುದು ಸ್ಪಷ್ಟವಿದೆ.

ಸಾಲಝಾರರ ನಿರಂಕುಶ ಆಡಳಿತೆಗೆ ಚ್ಯುತಿ ತರುವ ಅದಾವ ಮಾತನ್ನು ಪ್ರಧಾನಿ ನೆಹರು ಹೇಳಿದ್ದಾರೆ? ಲೋಕ ಸಭೆಯಲ್ಲಿ ವಿದೇಶ ನೀತಿ ಸಂಬಂಧದ ಚರ್ಚೆ ನಡೆದಾಗ ಅವರು ಉದ್ಗರಿಸಿದ್ದರು: ಗೋವೆಯು ಭಾರತದ ಅಂಗವೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಅದು ಭಾರತಕ್ಕೆ ಸೇರಬೇಕೆಂಬುದೂ ನಿರ್ವಿವಾದ. ಈ ಸಂಬಂಧದ ನೀತಿಯನ್ನು ನಾವು ಪರಿಸ್ಥಿತಿಗೆ ಸರಿಯಾಗಿ ಬದಲಾಯಿಸ ಬೇಕಾಗುತ್ತದೆ. ಒಂದು ವೇಳೆ ನಮ್ಮದಾದ ಭಾಗವನ್ನು ನಮ್ಮದಾಗಿಸಲು ಸೈನ್ಯವನ್ನೇ ಕಳಿಸಬೇಕಾಗಿ ಬಂದರೂ ಭಾರತವು ಹಿಂಜರಿಯದು. ಅಂತಹ ಸಮಯ ಬರಲೂ ಬದು. ನನ್ನ ಜೀವಿತಾವಧಿಯಲ್ಲಿಯೇ ಗೋವೆಯು ಭಾರತದಲ್ಲಿ ವಿಲೀನವಾಗುವುದೆಂಬ ಸದಾಶಯವನ್ನವರು ಹೊರಗೆಡಗಿದ್ದರು. ಈ ವಾಗ್ದಾಳಿಯು ಸಂಸತ್ತಿನ ಸದಸ್ಯರಲ್ಲಿ ಉತ್ಸಾಹ ಹಾಗೂ ತೃಪ್ತಿಯನ್ನುಂಟು ಮಾಡಿದ್ದರೂ ಭಾರತೀಯರಲ್ಲಿ ಸಮಾಧಾನ ತಂದಿದ್ದರೂ ಪೋರ್ಚುಗೀಸರ ಎದೆಗಿದು ಶೂಲವಾಗಿರಿಯಿತು. ಎಂತಲೇ ಅವರು ಭಾರತದ ಸೈನಿಕ ಧಾಳಿಯು ಬಂದೇ ಬರುವುದೆಂದು ನಂಬಿ ಅದಕ್ಕಾಗಿ ಸಾಕಷ್ಟು ಮುಂಜಾಗ್ರತೆಗಳನ್ನು ಕೈಗೊಂಡಿದ್ದಾರೆ.

ಕೌರವನು ಪಾಂಡವರೊಡನೆ ಮೊದಲೇ ಯುದ್ಧ ನಿಶ್ಚಯ ಗೈದು ಭೂಮಿಕೊಡೆನು ಎಂದಂತೆ ದುರಾಲೋಚನೆಯಿಂದಾಗಿಯೇ ಪೋರ್ಚುಗಲ್ ಈಗ ಯುದ್ಧವನ್ನೆ ದುರಿಸುವ ಸಿದ್ಧತೆ ಮಾಡುತ್ತಿದೆ ಎನ್ನಬಹುದು. ಗೋವೆಯನ್ನು ಪೋರ್ಚುಗಲಿನ ಪ್ರಾಂತ್ಯವೆಂದು ಒಪ್ಪುವವರು ಯಾರು? ಅದು ಭಾರತದ ಒಂದು ಭಾಗವೆಂಬುದು ಸ್ವಯಸಿದ್ಧರಿರುವಾಗ, ಗೋವಾಂತಕರೆಲ್ಲರೂ ಭಾರತದಲ್ಲಿಯೇ ಸೇರಬೇಕೆಂದು ತಹತಹಿಸುತ್ತಿರುವಾಗ, ಪೋರ್ಚುಗಲ್ಲಿನ ವಾದಕ್ಕೆ ಮಾನ್ಯತೆಯೆಲ್ಲಿ ಉಳಿಯಿತು? ಪಾಕಿಸ್ತಾನದ ಗೃಹಮಂತ್ರಿ ಶ್ರೀ ಎನ್. ಕೆ. ದೆಹಲವೀಯವರು ಮಾತಾಡುತ್ತ ಭಾರತವು ಪಾಕಿಸ್ತಾನಕ್ಕೆ ಹೆದರುವ ಅಗತ್ಯವಿಲ್ಲ; ಆದರೆ, ಪಾಕಿಸ್ತಾನವೇ ಭಾರತಕ್ಕೆ ಅಂಜುತ್ತಿರಬೇಕಾಗುತ್ತವೆ ಎಂದು ಉದ್ಗರಿಸಿ, "ಭಾರತದ ಸೇನೆಯು ಪಾಕ್ ಸೇನೆಗಿಂತ ಮೂರು ಪಟ್ಟು ಹೆಚ್ಚಿದೆ; ಭಾರತವು ದೊಡ್ಡ ದೇಶ; ಅದರ ಜನಶಕ್ತಿ ಅಪಾರ; ಅಲ್ಲದೆ ಅದೀಗೀಗ ಜೈಂಕ್ ಮತ್ತು ಸ್ಕ್ಷೇಪಾಸ್ತ್ರಗಳನ್ನೂ ತಯಾರಿಸುತ್ತಿದೆ; ಅಣುಶಕ್ತಿ ವಿಕಾಸದಲ್ಲಿಯೂ ಮುಂದುವರಿಯುತ್ತಿದೆ" ಎಂಬುದನ್ನು ಒಪ್ಪಿಕೊಂಡಿದ್ದಾರೆ. ಗೋವೆಯನ್ನು ಭಾರತದ ಭಾಗವೆಂದೇ ಜಗತ್ತಿನ ಇತರರಾಷ್ಟ್ರಗಳು ಮನ್ನಿಸಿರುವಾಗ, ವಸಾಹತು ವಾದಕ್ಕೆ ಜನ ಮನ್ನಣೆಯಿಲ್ಲದ ಈ ಯುಗದಲ್ಲಿ ಪೋರ್ಚುಗಾಲದ ಬೆಂಬಲಕ್ಕೆ ಬರುವವರೂ ಯಾರೂ ಇಲ್ಲವೆನ್ನಬಹುದು ಹಾಗಿರುವಾಗ, ಕೇವಲ ಸಾಲಝಾರರು ಗೋವಾಂತಕರನ್ನೇ ಎದುರು ಹಾಕಿಕೊಂಡು ಭಾರತದೊಡನೆ ಹೋರಾಡುವುದಾದರೂ ಅಷ್ಟರಲ್ಲಿಯೇ ಇದೆ. ಪೈದರಬಾದಿನ ನೈಜಾಮರು ದಾಷ್ಟ್ಯದಿಂದ ಮೊದಲುನಡೆದು ಕೊನೆಗೆ ತಲೆ ತಗ್ಗಿಸಿದಂತೆ ಸಾಲಝಾರರಾದರೂ ಗೋವೆಯಿಂದ ಹೊರಬೀಳಲೇ ಬೇಕಾಗುತ್ತದೆ; ಆ ಅಮೃತ ಸಮಯ ಅತಿ ನಿಕಟವಾಗುತ್ತ ಬರುತ್ತಿದೆ. ಆದರೂ ಇದಕ್ಕಾಗಿ ಭಾರತದೊಡನೆ ವೈಮನಸ್ಯವನ್ನು ಕಟ್ಟಿ ಮುಂದೆ ಒಡಂಬಡುವುದಕ್ಕಿಂತ ಈಗಿಂದೀಗಲೇ ಅಲ್ಲಿಂದ ಕಾಲ್ತೆಗೆಯುವುದು ಭೂಷಣವಾಗಿದೆ. ಅಹಿಂಸೆಯನ್ನು ಆಚರಿಸಿಯೂ ಗೋವೆಯನ್ನು ನಮ್ಮದಾಗಿಸಿ ಕೊಳ್ಳುವ ಇರಾದೆಯು ಈದೇರದೆ ಹೋದರೆ, ಸೈನಿಕಕಾರ್ಯಾಚರಣೆಗೆ ವಿಲಂಬವಾಗಲಾರದು. ಗೋವಾಂತಕರ ಬಂಧವಿಮೋಚನೆ ಶೀಘ್ರಾತಿಶೀಘ್ರದಲ್ಲಿ ಆಗಿಯೇ ಆಗುವುದು.

ESTD. 1921

NAVAYUGA
KANNADA WEEKLY,
UDIPI.

Founder:
Late Sri A. B. Shetty
Former Minister for Public Health, Govt. of Madras & Govt. of Mysore.

ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದ ದಿ| ಎ. ಬಿ. ಶೆಟ್ಟರಿಂದ ಸ್ಥಾಪಿತವಾದ

ನವಯುಗ

ಪ್ರತಿ ಗುರುವಾರ
ಉಡುಪಿಯಿಂದ ಹೊರಡುವ
ರಾಷ್ಟ್ರೀಯ ವಾರಪತ್ರಿಕೆ

ಸ್ಥಾಪನೆ: ೧೯೨೧.

ಗೌರವ ಸಂಪಾದಕರು:
ಎಸ್. ಗೋಪೀಚಂದ ರಾವ್, ವಿದ್ವಾನ್.
ಬಿ. ರಾಮರಾಯ ಶೆಟ್ಟಿ, ಬಿ. ಎ., ಎಲ್. ಟಿ.

ಸಂಚಾಲಕ ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ.

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-50
ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3-50
ಹೆಚ್ಚಿನ ವಿವರಗಳಿಗೆ ವ್ಯವಹರಿಸಿರಿ.

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಪ್ರತಿಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವುದು ಸೌಕರ್ಯವಿರುವುದು.

ಧಾರಾವಾಹಿ ಕಾದಂಬರಿ

ಯಮನ ನೆರಳು

ಮೂಲಲೇಖಕರು: ಶ್ರೀ ಎಂ. ಎಲ್. ಪಾಂಡೇಯ.
ಅನುವಾದಕರು: ಶ್ರೀ ಎಸ್. ಎಂ. ಶೆಟ್ಟಿ, ಶಿವಮುಂಜೆಪರಾರಿ.

(ಆಗಸ್ಟ್ ೩ನೇ ತಾರೀಕಿನ ಸಂಚಿಕೆಯಿಂದ)

ಜಯಂತರು ನವಲೇಂದ್ರನ ಬೆನ್ನು ತಟ್ಟಿ ಇತರರೊಡನೆ ತನ್ನ ಕೋಣೆಗೆ ಬಂದರು.

"ನವಲೇಂದ್ರಾ, 'ಯಮನ—ನೆರಳು ಎಂದರೆ ಏನು? ನೀನಲ್ಲಿ ಮಾಡಿದುದೇನು? ಎಂದು ಉತ್ಸುಕತೆಯಿಂದ ಹೇಳಿದರು ಶರ್ಮಾಜೀ.

"ನನಗಿಂತಲೂ ನನ್ನ ಒಡೆಯರ ಬಾಯಿಯಿಂದಲೇ ಕೇಳಿ!" ಎಂದು ನವಲೇಂದ್ರನೆನ್ನುತ್ತಲೇ ಜಯಂತರ ಕಡೆಗೆ ತಿರುಗಿದರು.

"ಕೈದಿಗಳು ಬರಲಿ ಎಲ್ಲರಿಗೂ ತಿಳಿಸುತ್ತೇನೆ!" ಎಂದರು ಜಯಂತರು.

ಕೈದಿಗಳೆಲ್ಲರೂ ಬಂದ ನಂತರ ಜಯಂತರು ಜಮುನಾಪ್ರಸಾದಜೀಯವರೇ ನಮ್ಮ ಸರಕಾರ, ಸಮಾಜ, ಹಾಗೂ ನಾವೆಲ್ಲರೂ ನಿಮಗೆ ಅಪಾರ ಕೃತಜ್ಞರು. ತಾವು ದುಃಖವಿಟ್ಟು ಎರಡು ಕಾಲಿನವರು ಮತ್ತು ಎರಡು ಕೈಯವರಾಗಬೇಕು. ತಮ್ಮ ಅಪಾರ ಪರಿಶ್ರಮದಿಂದಲೇ ನಾವಿಂದು 'ರಹಸ್ಯೋದ್ಘಾಟನೆ, ಮಾಡುತ್ತಿದ್ದೇವೆ" ಎಂದರು.

ಜಮುನಾಪ್ರಸಾದರು ಎರಡೂ ಕಾಲಿನಿಂದ ಸರಿಯಾಗಿ ನಿಂತು ತನ್ನ ಮುಖದ ಆಕೃತಿಯನ್ನೇ ಬದಲು ಮಾಡಿದರು. ಮುಖವಾಡವನ್ನು ತೆಗೆದೊಗೆದರು; ಒಕ್ಕಣ್ಣ ಜಮುನಾ ಪ್ರಸಾದರವರ ಸ್ಥಾನದಲ್ಲೀಗ ಶ್ರೀ ದಾಮೋದರ ಸ್ವರೂಪರು ಮುಗುಳ್ನಗುತ್ತಾ ನಿಂತಿದ್ದರು.

ದರೋಡೆಕೋರರು ದಾಮೋದರರನ್ನು ನೋಡಿ ಹೆಲ್ಲು ಮಸೆಯತೊಡಗಿದರು. ಕೈದಿಗಳನ್ನು ಶ್ರೀ ಕೃಷ್ಣ ಜನ್ಮ ಸ್ಥಾನಕ್ಕೆ ಕಳುಹಿಸಲಾಯ್ತು. ಇತ್ತ ಎಲ್ಲವೂ ಸರಿಯಾಗಿದೆ. ಎಂದು ತಿಳಿಸಿದರು ದೀಕ್ಷಿತರು. "ರಾವ್.ಸಿಂಹನ ಜೊತೆಗಾರ ವ್ಯಾಯಶ್ಯ ಡಾಕ್ಟರ್ ರಣಜೀತ್ ಸಿಂಹ ಚೌಹಾನ ರಾಗಿರಬೇಕು." ಎಂದರು.

"ನಿಸ್ಸಂಶಯವಾಗಿ. ಆದರೆ ಅವ ತಪ್ಪಿಕೊಂಡನಲ್ಲಾ" ಎಂದು ಕೈ ಕೈ ಹಿಸಕಿಕೊಂಡರು ಶರ್ಮಾಜೀ. "ಇವರಿಷ್ಟು ಸಮಯದಿಂದ ದರೋಡೆ, ಕೊಲೆ, ಮೋಸಗಳನ್ನು ಮಾಡಿದ್ದರೂ ೧೨ ಲಕ್ಷ ರೂಪ್ಯಾ ಇರದೆ ಇದ್ದುದು ವಿಚಿತ್ರ." ಎಂದು ಸಂಶಯಚಿತ್ತರಾಗಿ ನುಡಿದರು ಪ್ರಧಾನ್ ರವರು.

"ನಿಮ್ಮ ಅನುಮಾನ ತಪ್ಪು ಸಾರ್! ಡಾಕ್ಟರ್ ರಣಜೀತ್ ಸಿಂಹರು ತುಂಬಾ ಒಳ್ಳೆಯ ಮನುಷ್ಯ. ಸ್ತ್ರೀ ಮತ್ತು ಸಮಾಜಗಳನ್ನವರು ತಿರಸ್ಕರಿಸುತ್ತಾರೆ, ಶರಾಬು ಮುಂತಾದುವುಗಳನ್ನವರು ಸೇವಿಸುವುದಿಲ್ಲ' ರಾಮಸಿಂಹನೂ ವ್ಯಭಿಚಾರಿಯಲ್ಲ. ಆದರೆ ಅವನ ಮಾನಸಿಕ ಪ್ರವೃತ್ತಿಯು ಯೂವಾಗಲೂ ಇತರರಿಗೆ ದುಃಖತೊಂದರೆ, ಉಪದ್ರವ ಕೊಡುವುದರಲ್ಲೇ ತಲ್ಲೀನವಾಗಿರುತ್ತದೆ. ಇವನ ಸ್ವಭಾವದ ಮಿಲನದಿಂದಾಗಿಯೇ ಡಾಕ್ಟರರ ತಲೆಯೂ ಹಾಳಾಯ್ತು. ರಾಮಸಿಂಹನು ಅತೀ ಚತುರ'ಯಮಪುರಿ'ಯ ನಿರ್ಮಾಣಕ್ಕಾಗಿಯೇ ಆತನು ಲಕ್ಷಗಟ್ಟಲೆ ಖರ್ಚು ಮಾಡಿದನು ಡಾಕ್ಟರ್ ರಣಜೀತರು 'ಯಮಪುರಿ'ಯ ನಿರ್ಮಾಣದಲ್ಲಿ ಬೇಡಿಯೇ ಕನಸು ಕಾಣುತಿದ್ದರು. ರಾಮಸಿಂಹನೋರ್ವನೇ ಕುಳಿತುಕೊಂಡು ವಾಸ್ತವ 'ಯಮಪುರಿ'ಯ ನಿರ್ಮಾಣ ಮಾಡಿದನು. ಜಗತ್ತಿನ ಎಲ್ಲಾ ಸಂಪತ್ತು ತನ್ನ ಬಳಿ ಸೇರುವುದಾಗಿ ಅವನು ಹಗಲು ಕನಸು ಕಾಣುತ್ತಿದ್ದನು. ಭಾರತವಷ್ಟೇ ಅಲ್ಲ ಜಗತ್ತಿನ ಎಲ್ಲಾ ಶ್ರೀಮಂತರೂ ತನ್ನ ಮುಷ್ಟಿಯಲ್ಲಿರುವುದಾಗಿ ಭಾವಿಸಿಕೊಂಡನು. ತಾನೆಲ್ಲವನ್ನೂ ನೋಡುತ್ತಾ ಮಾಡುತ್ತಾ ಡಾಕ್ಟರ್ ರಣಜೀತರ ಸರ್ವಾಧಿಕಾರವನ್ನೂ ಒಪ್ಪಿಕೊಂಡನು."

"ವಜ್ರದ ಖನಿಯ ಆಶೆಗಾಗಿ ಡಾಕ್ಟರರು 'ಯಮಪುರಿ'ಯ ನಿರ್ಮಾಣವನ್ನು ಮಾಡಿದರು. ಆ 'ಯಮಪುರಿ'ಯೊಳಗೊಂದು ಉತ್ಕೃಷ್ಟವಾದ ಪ್ರಯೋಗ ಶಾಲೆಯು ಸಿದ್ಧವಾಯ್ತು. ವಜ್ರದ ಖನಿ ಅವರ ವಶ ಬಂದ ನಂತರ ಅವರು ಬೇಕಾದ ಪ್ರಯೋಗವನ್ನು ನಿರ್ವಿಘ್ನವಾಗಿ ಮಾಡಬಹುದಿತ್ತು. ತನ್ನ ಪ್ರಯೋಗದ ದೃಷ್ಟಿಯಲ್ಲಿ ಅವರಿಗೆ 'ಮಾನವ ಭಕ್ಷಣ' ಯೂ ಮಾನವ 'ಸಂಹಾರ' ಏನೂಂದೂ ಪಾಪವೆಂದು ಕಾಣಲಿಲ್ಲ. ಅದಕ್ಕಾಗಿ ರಾಣಿ ಮತ್ತವರ ಸಂಬಂಧಿಕರ ಕೊಲೆ ನೇರಲಿಂದ ಮೇಲೆ ಆಗುತ್ತಾ ಹೋಯ್ತು. ಆದರೆ ರಾಮಸಿಂಹ ಮತ್ತು ರಣಜೀತಸಿಂಹರ ದೃಷ್ಟಿಕೋನದಲ್ಲಿ ಅಜಗಜಾಂತರವಿದೆ' ಎಂದು ಜಯಂತರು ವಿವರಿಸುತ್ತಾ ಹೋದರು. ಶ್ರಾವಕರು ಅವರ ವಾಗ್ಜಾಲದಲ್ಲಿ ತೇಲುತ್ತಿದ್ದರು.

ಜಯಂತರು ಮುನಃ "ಹಾಂ, ಡಾಕ್ಟರರು ತನ್ನ ವಿವೇಕದಿಂದ 'ಯಮ-ನೆರಳ'ನ ನಿರ್ಮಾಣ ಮಾಡಿದರು. ನೀವು ಹಂದೊಮ್ಮೆ ಮೊಲದ ಭಕ್ಷಣ ಮಾಡಿದ ಗಿಡವನ್ನು ಕಂಡಿದ್ದೀರಿ. ಅದರ ಎಲೆಯ ರಸದಿಂದಮೊಂಸಗ್ರಾಹಕ ವಿಷವನ್ನು ತಯಾರಿಸಿದರು. ಅದು ಮೈಗೆ ಬಿದ್ದಗಿಮಿನಿಟಿನೊಳಗಾಗಿ ಶರೀರದ ಸಂಪೂರ್ಣ ಮಾಂಸವನ್ನು ಕರಗಿಸಿ ಬಿಡುತ್ತದೆ. ಈ ರಸಾಯನಕ್ಕೆ ಚರ್ಮದ ವರ್ಣವನ್ನೇ ಕೊಟ್ಟಿದ್ದರು ಆದುದರಿಂದ ಇದನ್ನು ಬರೇ ದೃಷ್ಟಿಯಿಂದ ಕಾಣಲಾಗುವುದಿಲ್ಲ." ಎಂದು ವಿವರಿಸಿದರು.

"ಆದರೆ ಅದು ಮನುಷ್ಯನ ಶರೀರದಲ್ಲಿ ಹೇಗೆ ಪ್ರವೇಶಿಸುತ್ತದೆ?" ಎಂದರು ಚೀಫ್ ಇನ್ಸ್‌ಪೆಕ್ಟರ್ ಪ್ರಧಾನ್.

"ಸಿಗರೇಟ್ ಲೈಟರಿನ ಆಕಾರದ ಒಂದು 'ಮುಖ ನಾಳ'ವಿರುತ್ತದೆ. ಈ ಮುಖ ನಾಳವು ಸ್ವಲ್ಪ ಕೆಳಗೆ ಬಗ್ಗಿರುತ್ತದೆ. ಸಿಟ್ರೋಲಿನ ಸ್ಥಾನದಲ್ಲಿ ವಿಷ ತುಂಬಿರುತ್ತದೆ. ಲೈಟರ್ ಉರಿಸಲು ಒತ್ತುವಂತೆಯೇ ಈ ಮುಖನಾಳವನ್ನೂ ಒತ್ತಬೇಕು. ಕೂಡಲೇ 'ಝುನ್' ಎಂಬ ಶಬ್ದ ಉಂಟಾಗುತ್ತದೆ. ಸಾಧಾರಣ ೧೦೦ ಗಜದ ದೂರದವರೆಗೆ ತನ್ನ ಕಾರ್ಯವನ್ನು ನಿರ್ವಯಿಸಬಲ್ಲ ಶಕ್ತಿ ಈ 'ಮುಖನಾಳ'ಕ್ಕಿದೆ. ಇದು ಸಾಧಾರಣ ಲೈಟರಿನ ಎಂಡರಷ್ಟು ಉದ್ದಗಲ ಇದೆ." ಎಂದುಜಯಂತರು ನವಲೇಂದ್ರನ ಮುಖ ನೋಡಿದರು. ನವಲೇಂದ್ರನು ಲೈಟರಿನ ರೂಪದ ಮುಖನಾಳವನ್ನು ಕೆಸಿಯಿಂದ ತೆಗೆದು ಮೇಜಿನ ಮೇಲಿಟ್ಟನು.

"ಈ ಪ್ರಾಣಘಾತಕ ಮುಖನಾಳವನ್ನು ರಾಮಸಿಂಹನ ಕೆಸಿಯಿಂದ ನವಲೇಂದ್ರನು ಹಾರಿಸಿದ್ದನು. ಈಗ ನಾವಿದರ ಪ್ರಯೋಗ ಮಾಡಿ ನೋಡುವ" ಎಂದರು ಜಯಂತ್. ನವಲೇಂದ್ರನು ಒಂದು ಬಿಳಿ ನಾಯಿಯನ್ನು ತಂದು ಮೇಜಿನ ಮೇಲೆ ನಿಲ್ಲಿಸಿದನು. ಎಲ್ಲರೂ ಕೋಣೆಯ ಹೊರಗೆ ಬಂದರು. ಜಯಂತರು ಮೇಜಿನ ಮೇಲೆ ನಿಲ್ಲಿಸಿದ ನಾಯಿಗಿಂತ ಮೂರು ಗಜ ದೂರದಲ್ಲಿ ನಿಂತು; ರಿವಾಲ್ವರಿನಂತೆ ಗುರಿಯಿಟ್ಟು ಮುಖನಾಳವನ್ನು ಒತ್ತಿದುದೇ ತಡ 'ಝುನ್' ಎಂಬ ಶಬ್ದ ಕೇಳಿ ಬಂತು. ಕೆಲವೇ ಕ್ಷಣಗಳಲ್ಲಿ ನಾಯಿ ಮೇಜಿನಿಂದ ಕೆಳಗೆ ಬಿದ್ದು ಪ್ರಾಣ ಬಿಟ್ಟಿತು. ಅವರೆಲ್ಲರೂ ನಾಯಿಯ ಹತ್ತಿರ ಬಂದು, ಅದರ ಬೆನ್ನನ್ನು ಪರೀಕ್ಷಿಸಿದಾಗ, ಅಲ್ಲಿ ಒಂದು ಹೊಗರಿ ಬೇಳೆಯಷ್ಟು ದೊಡ್ಡ ಮಾನವ ಕೈಚೆಯ ವರ್ಣವಿತ್ತು.

"ಬಿಳಿ ನಾಯಿಯಾದುದರಿಂದ ಮಾತ್ರ ನಮಗೆ ಕಲೆಯನ್ನು ಗುರುತಿಸಲು ಸಾಧ್ಯವಾಯಿತು." ಎಂದರು ಜಯಂತ್.

(೧೦ನೇ ಪುಟ ನೋಡಿರಿ)

41 ವರ್ಷಗಳ ಭದ್ರ ಹಾಗೂ ಸಮರ್ಥ ಬೇಂಕಿಂಗ್ ಸೇವೆ.

ದಿ. ಪಾಂಗಾಳ ನಾಯಕ್ ಬೇಂಕ್ ಲಿ.

ನಮ್ಮ 3 ವರ್ಷ ವ್ಯಾದೆಯ ಕೇಶ್ ಸರ್ಟಿಫಿಕೇಟುಗಳಲ್ಲಿ ಠೇವಣಿ ಮಾಡಿರಿ: ಬಡ್ಡಿ ಸೇಕಡಾ 5ರಂತೆ: ರೂ. 87—00 3 ವರ್ಷಗಳ ಅಂತ್ಯದಲ್ಲಿ ಬಡ್ಡಿ ಕೂಡಿ ರೂ. 100—00 ಒದಗಿಸುವುದು.

ಕರೆ, ಚಿಕ್ಕ ವ್ಯಾದೆ, ನಿರಖು ಠೇವಣಾತಿಗಳ ಮೇಲೆ ಆಕರ್ಷಣೀಯ ಶರ್ತಗಳು: ಬಡ್ಡಿ ಸೇಕಡಾ 5½ರ ವರೆಗೆ.

ತಾ. 1—4—1961ರಿಂದ ಸೇವಿಂಗ್ಸ್ ಬೇಂಕ್ ಖಾತೆಗಳ ಮೇಲೆ ಬಡ್ಡಿ ಸೇಕಡಾ 3ರಂತೆ.

THE PANGAL NAYAK BANK LTD.
Estd: 1920

ರವೀಂದ್ರವಾಣಿ: ೧೮

ವ್ಯಕ್ತಿತ್ವ ಮತ್ತು ಅದರ ಸಾರ್ಥಕತೆ

ಪ್ರಕೃತಿಯು ಪುರಾತನವಾದರೂ ನಿತ್ಯ ನವೀನವಿದೆ; ವಿಶ್ವಾತ್ಮನೊಡನೆ ಮಿಲನಗೊಳ್ಳುವ ಸಾಧನೆಯಲ್ಲಿ ವ್ಯಕ್ತಿ ತೊಡಗಿದನೆಂದರೆ, ಆಗ ವ್ಯಕ್ತಿತ್ವದ ಸಾರ್ಥಕತೆಯಾಗುತ್ತದೆ. ಪ್ರೇಮಾಧೀನತೆ ಅದಕ್ಕಾಗಿ ನಮ್ಮ ವ್ಯಕ್ತಿತ್ವ ಸಮರ್ಪಣೆಯಗುರಿ ನಮ್ಮದಾಗಬೇಕು.

ಮೂಲ: ವಿಶ್ವಕವಿ ರವೀಂದ್ರನಾಥ ಟಾಗೋರ್.
ಅನುವಾದ: ಶ್ರೀ ಕೆ. ಎನ್. ಭಟ್, ಶಿರಾಡಿಪಾಲ್.

ಜೀವನ—ಮೃತ್ಯು, ಇವುಗಳ ಈ ಆಟ, ಸರ್ವತ್ರ ನಡೆಯುತ್ತಲೇ ಇರುವುದು, ಹಳೆಯದು ಹೊಸ ರೂಪವನ್ನು ಧರಿಸುತ್ತಿರುವುದು, ಎಲ್ಲೆಡೆಗಳಲ್ಲೂ ಕಂಡು ಬರುತ್ತಿರುವುದು, ಉದಯವಾಗುತ್ತಿರುವ ಪ್ರತಿಯೊಂದು ದಿನವೂ— ಸ್ವಚ್ಛವೂ, ಸುಂದರವೂ ಆಗಿ ಹೊಸದಾಗಿ ಅರಳುವ ಮೊಗ್ಗಿನಂತೆ ಉದಯವಾಗುವುದು. ಇಷ್ಟಾದರೂ, ನಾವು ಇದು ಪುರಾತನವಾದುದು, ಅಂದರೆ, ಹಳೆಯದು, ಎಂದೇ ಭಾವಿಸುತ್ತೇವೆ. ನಿಜವಾಗಿಯೂ ಅದು ಹಳೆಯದರ ಪ್ರತಿರೂಪನೇ; ಹೊಸತಾಗಿ ಸೃಷ್ಟಿಯಾದ ಪೃಥ್ವಿಯನ್ನು ತನ್ನ ಭುಜಗಳಿಂದ ಯಾವ ದಿನವು ಆಲಿಂಗನ ಮಾಡಿ, ಅದನ್ನು ತನ್ನ ಪ್ರಕಾಶದಿಂದ ಬೆಳಗಿಸಿ, ಬಳಿಕ ನಕ್ಷತ್ರಲೋಕದ ಯಾತ್ರೆಗಾಗಿ ಕಳುಹಿಸಿದ್ದಿತೋ, ಆ ಪುರಾತನದ ಹಳೆಯ ದಿನವೇ ಇದೂ ಆಗಿರುವುದು. ಹೊಸದೇನೂ ಅಲ್ಲ.

ಇಷ್ಟಾದರೂ ಈ ದಿನದ ಅವಯವಗಳಲ್ಲಿ ಬಳಲಿಕೆಯಾಗಲೀ ಕಣ್ಣುಗಳಲ್ಲಿ ದೃಷ್ಟಿ ಮಾಂದ್ಯವಾಗಲೀ ಇರುವದಿಲ್ಲ. ಇದರ ವಶ ಅನಾದಿ ಶಕ್ತಿಯ ಸ್ವರ್ಗೀಯ ಅಪ್ಸರೆಯಾದ ಪುರುಷ ಶಕ್ತಿ (ಕಟ್ಟಿಣವನ್ನು ಚಿನ್ನ ಮಾಡುವ ಶಕ್ತಿ) ಇರುವುದು. ಈ ಕಾರಣದಿಂದ ಈ ಶಕ್ತಿಯ ಸ್ವತಂತ್ರವಾದೊಡನೆಯೇ ಸೃಷ್ಟಿಯ ಮುಸ್ತಕದ ವೃದ್ಧಾಪ್ಯದ ಸುಕ್ಕುಗಳು ಬಿಡಿಸಲ್ಪಟ್ಟು ನವ ತಾರುಣ್ಯದಿಂದ ಸುಂದರವಾಗಿ ತೋರುವುದು. ಈ ಜಗತ್ತಿನ ಹೃದಯದಲ್ಲಿ ಅಮರ ಯೌವನವು ವಾಸ ಮಾಡಿಕೊಂಡಿರುವುದು. ಮೃತ್ಯು ಮತ್ತು ರೋಗ ಇವುಗಳು—ಕ್ಷಣಿಕವಾದ ಛಾಯೆಯಂತೆ ಬಂದು, ಇದನ್ನು ಅವರಿಸಿ ಒಡನೆಯೇ ಹೊರಟು ಹೋಗುತ್ತವೆ. ಇವು ಜಗತ್ತಿನ ಮೇಲೆ ತಮ್ಮ ಆಗಮನದ ನಿಶಾನಿಯನ್ನೊತ್ತಿ ಬಿಟ್ಟು ಹೋಗಲಾರವು. ಜಗತ್ತಿನ ಈ ಸತ್ಯವು ಸದಾ ನೂತನವೂ ತಾರುಣ್ಯಮಯವೂ ಆಗಿರುವುದು.

ಈ ದಿನವೆಂಬುದು, ಪ್ರತಿನಿತ್ಯವೂ ಉದಯ ಕಾಲದಲ್ಲಿ—ಪ್ರತಿ ಸಲವೂ ಹೊಸ ಹೊಸ ಜನ್ಮವೆತ್ತುತ್ತಿರುವುದು. ಇದು ಸಂಗೀತ-ಸ್ವರಗಳ ತಾಳದ ಕ್ರಮದಂತೆ, ಮತ್ತೆ ಮತ್ತೆ ಬಂದುಬಿಡುವುವು. ಒಂದು ಸೇಳೆ ಇದರ ಗತಿಯು ನೇರವಾಗಿ—ಮುಂದೆ ಮುಂದೆಯೇ ಇರುತ್ತಿದ್ದರೆ, ಈ ದಿನವು ಕತ್ತಲೆಯ ಮಡುವಿನಲ್ಲಿ ಮುಳುಗಿ ಹೋಗಿ, ವಿಶ್ರಾಂತಿಹೀನವಾಗುತ್ತಿತ್ತು. ಪುನಃ ಪುನಃ ಅನಂತ ಜೀವನದ ಆಂಶಿಕಭೂಮಿಯಲ್ಲಿ ಪುನರ್ಜನ್ಮವೆತ್ತುತ್ತಲಿರಲಿಲ್ಲ. ತನ್ನ ಅನಂತ ಮಾರ್ಗದ ಮೂಲಕ ಸತ್ಯವನ್ನೂ ಲಕ್ಷಿಸದೆ, ತನ್ನ ಪಾದಚಿಹ್ನೆಯ ಮೇಲೆ ಮಣ್ಣನ್ನೆರಚುತ್ತ ಹೋಗುತ್ತಲಿರಬಹುದಿತ್ತು. ಹೀಗಾಗಿದ್ದರೆ ಸತ್ಯವು ಸದಾ ಮುಚ್ಚಿಯೇ ಹೋಗುವಂತೆ ಆಗುತ್ತಿತ್ತು. ಇಂತಾಗಿದ್ದರೆ, ಪ್ರತಿಯೊಂದು ಕ್ಷಣವೂ ತನ್ನ ಭಾರವನ್ನು ಸಮಯದ ಮೇಲೆ ಹೊರಿಸಿ ತನ್ನ ಬಳಲಿಕೆಯ ಭಾರವನ್ನು ಇಳಿಸುತ್ತಿತ್ತು. ಈ ಅನಂತ ಮೃತ್ತಿ ಕಾಮಯವಾದ ರಾಜ್ಯ ಸಿಂಹಾಸನದ ಮೇಲೆ, ಕೇವಲ ನಿರಾಶೆ, ಮತ್ತು ಬಳಲಿಕೆಯೇ ತನ್ನ ಆಧಿಪತ್ಯವನ್ನು ಸ್ಥಾಪಿಸಬಹುದಿತ್ತು.

ಆದರೆ ಈಗ ಪ್ರತಿಯೊಂದು ದಿನವೂ ಹೊಸ ಅರಳಿದ ಹೂವುಗಳೊಡನೆ, ನವ ಜನ್ಮವೆತ್ತಿ ಆಸೆ, ಮತ್ತು ಆಶ್ವಾಸನೆಯ ಸಂದೇಶಗಳನ್ನು ಪುನರ್ಜೀವಿತ ಗೊಳಿಸಿ ಹೋಗುವುದು. ಹೊಸ ಭಾವನೆಗಳೊಡನೆ "ಮೃತ್ಯುವು ಕ್ಷಣಿಕವಾಗಿದೆ. ಅಶಾಂತಿಯ ವಾತಾವರಣವು ಕೇವಲ ಕ್ಷಣಿಕವಾದುದು. ಶಾಂತಿ ಸಮುದ್ರದ ಶಾಂತವಾತಾವರಣಕ್ಕಿದು ಸಾಟಿಯಲ್ಲ ಎಂದು ಹೇಳುತ್ತಿರುವುದು.

ರಾತ್ರೆ, ಎಂಬ ಪರದೆ ಸರಿದೊಡನೆಯೇ ಸತ್ಯವು ತನ್ನ ಉಡುಸಿನ ಮೇಲೆ, ಒಂದೇ ಒಂದು ಧೂಳಿನ ಕಣಕೂಡ ಇಲ್ಲದಂತೆ, ಸ್ವಚ್ಛವಾಗಿ, ಮುಖದ ಮೇಲೆ ವೃದ್ಧಾಪ್ಯದ ಒಂದೇ ಒಂದು ರೇಖೆಯೂ ಇಲ್ಲದ ರೀತಿಯಿಂದ ನವತಾರುಣ್ಯದೊಡನೆ ಪ್ರಕಟವಾಗುವುದು. ಸಾವಿರಾರು ವರ್ಷಗಳ ಹಿಂದಿನಿಂದಲೂ ಇದು ಯಾವ ರೂಪದಲ್ಲಿದ್ದಿತೋ ಅದೇ ರೂಪದಿಂದ ಇಂದೂ ಇರುವುದನ್ನು ನಾವು ಕಾಣುತ್ತೇವೆ.

ಸೃಷ್ಟಿಯ ಸಂಗೀತದ ಪ್ರತಿಯೊಂದು ಸ್ವರವೂ ಈ ಸತ್ಯದ ಮುಖದಿಂದ ಹೊರಡುವುದು. ಈ ವಿಶ್ವವು ಅಕಾಶದ ಒಂದು ಕಡೆಯಿಂದ ಮತ್ತೊಂದು ಕಡೆಗೆ ನಿರಾಧಾರವಾಗಿ ಸಂಚರಿಸುವ ಒಂದು ಧ್ವನಿಯಾಗಿಲ್ಲ. ಸೃಷ್ಟಿಯ ಅಸ್ತವ್ಯಸ್ತತೆಯ ಕಾಲದಲ್ಲಿ ಹಾಡಲ್ಪಟ್ಟ ಗೀತದ ಅವಶೇಷವನ್ನು ಇದು ಹಾಡುತ್ತಿರುವುದಲ್ಲ. ಈ ಧ್ವನಿಯು ಪ್ರತಿ ಕ್ಷಣಕ್ಷಣವೂ ವಿಧಾತನ ಹೃದಯದಿಂದ ಹೊರಡುವ ಧ್ವನಿಯಾಗಿದೆ.

ಈ ಕಾರಣದಿಂದಲೇ ಇದು ಕಲ್ಪನೆಯ ಸಾಕಾರ ರೂಪದ ಕವಿತೆಯಂತೆ ಆಕಾಶದಲ್ಲಿ ಸರಿಸಿ ಸಾಕಾರವಾಗುತ್ತದೆ. ಮತ್ತು ಎಂದೂ ತನ್ನ ಸಂಗ್ರಹದ ಧಾರದಿಂದ ಬಳಲಿಕೆಯನ್ನು ಹೊಂದುವುದಿಲ್ಲ. ಆದುದರಿಂದಲೇ ಪ್ರಾರಂಭದಲ್ಲಿದ್ದಂತೆಯೇ ಇದು ಇಂದೂ ವಿವಿಧ ರೂಪಗಳಿಂದಇರುವುದು. ಪ್ರಾರಂಭಕ್ಕೆ ಯಾವುದೂ ಅಂತ್ಯವೆಂಬುದಿಲ್ಲ. ಈ ಜಗತ್ತು ಸದಾ ಹಳೆಯದಾಗಿಯೂ ಸದಾ ಹೊಸದಾಗಿಯೂ ಇರುವುದು.

ಈ ದಿನವೆಂಬುದು, ನಮ್ಮ ಜೀವನದ ಪ್ರತಿಯೊಂದು ಕ್ಷಣ, ಕ್ಷಣಕ್ಕೂ ಹೊಸ ಹೊಸದಾಗಿ ಸೃಷ್ಟಿಯಾಗುವುದು ಎಂಬುದನ್ನು ತಿಳಿದು ಕೊಳ್ಳುವುದು ನಮ್ಮ ಕರ್ತವ್ಯ. ಇದು ಜೀವನದ ವ್ಯತ್ಯಯ ಭಯ, ಬಳಲಿಕೆ ಹಾಗೂ, ವೃದ್ಧಾಪ್ಯದ ಸಮಸ್ತ ಆವರಣಗಳನ್ನೂ ಕಿತ್ತು ಬಿಸುಟು ಮಣ್ಣಾಪಾಲು ಮಾಡುವುದು.

ಜೀವನವು ಒಂದು ಅಮರವಾದ ತಾರುಣ್ಯ. ಜೀವನದ ಗತಿಯಲ್ಲಿ ಬಾಧಕವಾಗುವ ದೀಪದ ಛಾಯೆಯಂತೆ ಜೀವನದ ಬೆನ್ನು ಬಿಡದ ಆ ವಯಸ್ಸಿನ ಬಗೆಗೆ, ಈ ತಾರುಣ್ಯವು ತಿರಸ್ಕಾರಭಾವವನ್ನು ಹೊಂದುವುದು.

ನಮ್ಮ ಜೀವನವು ನದಿಯ ಅಲೆಗಳಂತೆ, ತನ್ನ ತಟಗಳನ್ನು ಸ್ಪರ್ಶಿಸುತ್ತಿರುವುದು. ತನ್ನ ಸೀಮೆಗಳ ಬಂಧನವನ್ನು ಅನುಭವ ಮಾಡಿಕೊಳ್ಳುವದಕ್ಕಾಗಿ ಅಲ್ಲ; ಅದರ ಅನಂತ ಪಥವು ಸಮುದ್ರದ ಕಡೆಗೆ ತೆರೆದಿದೆ ಎಂಬುದನ್ನು ಪ್ರತಿಕ್ಷಣವೂ ಅನುಭವ ಮಾಡಿಕೊಳ್ಳುವುದಕ್ಕಾಗಿ.

ಜೀವನವು, ಭೂದಾಸ್ತ್ರದ ಕಠೋರವಾದ ಅನುಶಾಸನಕ್ಕೆ ಒಳಪಡದೆ ಕವಿತೆಯಂತೆ ಇರುವುದು. ಇದರಿಂದ ಇದು, ತನ್ನ ಆಂತರಿಕವಾದ ಸ್ವಾತಂತ್ರ್ಯ ಹಾಗೂ ಸಮಾನತೆಯನ್ನು ಹಚ್ಚು ಹಚ್ಚಾಗಿ ಪ್ರಕಟಿಸುವುದು.

ನಮ್ಮ ವ್ಯಕ್ತಿತ್ವದ ಸೀಮೆಗಳು ನಮ್ಮನ್ನು ತಮ್ಮ ಪ್ರಾಂತದ ಕಡೆಗೆ ನೂಕುತ್ತವೆ. ಇದೇ ರೀತಿ ಅಸೀಮದ ಕಡೆಗೂ ಕೆಗೆದುಕೊಂಡು ಹೋಗುತ್ತವೆ.

ಯಾವಾಗ ಈ ಸೀಮೆಗಳನ್ನು ಸೀಮೂರಹಿತವನ್ನಾಗಿ ಮಾಡಲು ಪ್ರಯತ್ನಿಸುವೆವೋ ಆಗ ನಾವು ಪರಸ್ಪರ ವಿರೋಧಿ ಭಾವನೆಗಳ ಸಂಘರ್ಷವನ್ನು ಕಾಣುತ್ತೇವೆ. ಮತ್ತು ಆಗ—ನಾವು ದುಃಖವನ್ನು ಅನುಭವಿಸಬೇಕಾಗುತ್ತದೆ

ಮಾನವನ ಇತಿಹಾಸದಲ್ಲಿ ಈ ಪರಿಸ್ಥಿತಿಯೇ—ಮಹಾ ಕ್ರಾಂತಿಗೆ, ಜನ್ಮವೀಯುವುದು. ಯಾವುದಾದರೂ ವಸ್ತುವಿನ ಒಂದು ತುಣುಕು, ಪ್ರತ್ಯೇಕವಾಗಿಯೇ ಇದ್ದರೆ, ಆಗ ಎಲ್ಲಾ ಭಾಗಗಳಿಂದ ಕೂಡಿ ಪೂರ್ಣವಾದ ಒಂದು ಭಾಗವು ಅದನ್ನು ತಿರಸ್ಕರಿಸುವುದು. ಮತ್ತು ಅದನ್ನು ನಾಶ ಮಾಡುವುದು. ಒಬ್ಬ ವ್ಯಕ್ತಿಯು ಜಗತ್ತಿನ ಶಕ್ತಿಗಳ ಪ್ರವಾಹ ಪೂರ್ಣವಾದ ಧಾರೆಯನ್ನು ತಡೆಯಲು ಮುಂದಾಗಿ, ಅವುಗಳನ್ನು ಕೇವಲ ತನ್ನ ಉಪಯೋಗಕ್ಕೆ ಆಳವಡಿಸಿಕೊಳ್ಳಲು, ಪ್ರಯತ್ನಪಟ್ಟರೆ ಆಗ ಅದರ ಪರಿಣಾಮವು....ಸರ್ವ ನಾಶವೇ ಆಗುವುದು. ವ್ಯಕ್ತಿಯು ಯಾರೇ ಆಗಿರಲಿ, ಎಷ್ಟೇ ಶಕ್ತಿ ಸಂಪನ್ನನಾಗಿರಲಿ, ಆದರೆ, ಆತನು ಅಸೀಮ ಶಕ್ತಿಯೊಡನೆ, ವಿದ್ರೋಹ ಗೈದು ಬಹಳ ಕಾಲ ಶಕ್ತಿಶಾಲಿಯಾಗಿ ಉಳಿಯಲಾರನು.

"ಅಧರ್ಮೇ ನೈಧತೇ ತಾವತ್ ತತೋಭದ್ರಾಣಿ ಪಶ್ಯತಿ | ತತಃಸಪತ್ನಾನ್ ಜಯತಿ ಸಮೂಲಸ್ತು ವಿನಶ್ಯತಿ || ಅರ್ಥಾತ್, ಅಧರ್ಮಾಚರಣೆಯ ವ್ಯಕ್ತಿಯೂ ಚಿನ್ನಾಗಿ ಬಾಳಿ ಬದುಕುತ್ತಾನೆ. ತನ್ನ ಅಭೀಷ್ಟವನ್ನೂ ಪೂರ್ಣಗೊಳಿಸಿಕೊಳ್ಳುತ್ತಾನೆ ತನ್ನ ಶತ್ರುಗಳನ್ನೂ ಸೋಲಿಸಿ ಗೆಲ್ಲುತ್ತಾನೆ ಎಂದು ಜೀಳ್ಳಪಡುವುದು. ಆದರೆ ಕೊನೆಗೆ ವೃಕ್ಷದ ಬೇರುಗಳು ಮೇಲೆ ಬಿದ್ದು ಅದು ಪೂರ್ಣ ನಾಶವಾಗುವಂತೆ, ಆ ಮನುಷ್ಯನ ಸರ್ವನಾಶವಾಗುವುದು. ನಮ್ಮ ವ್ಯಕ್ತಿತ್ವವು ಮಹಾ ವ್ಯಕ್ತಿತ್ವವಾಗಿ ನಾವು ಮಹಾ ವ್ಯಕ್ತಿಗಳಾಗಬೇಕಾದರೆ, ನಮ್ಮ ವ್ಯಕ್ತಿತ್ವದ ಬೇರುಗಳು ವಿಶ್ವದ, ಅತಿ ಆಳಕ್ಕೆ ವಿಶಾಲವಾಗಿ ಇಳಿಯಬೇಕಾಗಿವೆ.

ವಿಶ್ವಾತ್ಮನೊಡನೆ, ಮಿಲನಗೊಳ್ಳುವ ಸಾಧನೆ ಮಾಡುವ, ಧ್ಯೇಯವೇ ನಮ್ಮ "ಅಹಂ"ನ ಧ್ಯೇಯವಾಗಿದೆ. ಚಿಕ್ಕವರು, ದೊಡ್ಡವರು, ಎಲ್ಲರೂ ಎಲ್ಲಿ ನೇರವಾಗಿ ಅಲ್ಲಿ ನಮಗೆಪ್ರೇಮದಿಂದ ಶಿರಬಾಗಿ ನಿಲ್ಲಬೇಕಾಗಿದೆ. ನಮಗೆ ನಮ್ಮ ನಷ್ಟದಿಂದಲೇ ಲಾಭವನ್ನು ಕೊಂಡುಬೇಕಾಗಿದೆ. ನಮ್ಮ ಬಲಿದಾನದ ಮೂಲಕವೇ ನಾವು ಉನ್ನತಿಗೆ ಏರಬೇಕಾಗಿದೆ. ನಾವು ಪ್ರೇಮಾಧೀನರಾಗಿಯೂ, ನಮ್ಮ ಅಹಂಕಾರ ಮತ್ತು ವ್ಯಕ್ತಿತ್ವವನ್ನು ಅಳಿಸಲು ಅಸಮರ್ಥರಾದರೆ ಆಗ ನಮ್ಮ ವ್ಯಕ್ತಿತ್ವ ಹಾಗೂ ಅಹಂಕಾರಇವೆರಡೂ ನಮಗೆ ಅಭಿಶಾಪದಂತಾಗುವುವು. ಸದಾ ಸುಂದರ ಹಾಗೂ ನಿತ್ಯ ನೂತನವಾಗಿರುವ ಅಸೀಮದ ಛಾಯೆಯು ನಮ್ಮಲ್ಲಿ ಸ್ಫುಟವಾಗಿದ್ದು ನಮ್ಮ ವ್ಯಕ್ತಿತ್ವವನ್ನು ಸಾರ್ಥಕಪಡಿಸುವುದುಎಂದು, ನಾವು ತಿಳಿದುಕೊಳ್ಳಬೇಕು.

(ಸಶೇಷ)

ಕೊಪ್ಪೊರೇಶನ್ ಬೇಂಕ್

ಠೇವಣಾತಿಗಳ ಮೇಲಿನ ಸಾಲಿಯಾನ್ ಶೇಕಡಾ ಬಡ್ಡಿ ದರಗಳು:

3 ಸೇವಿಂಗ್ಸ್ ಬೇಂಕ್ ಖಾತೆ

3½ ಯಿಂದ 5¼ ಕಾಯಂ (ವಿವಿಧಾವಧಿಗಳಿಗೆ)

5¼ ವಜ್ರೋತ್ಸವ

5 ಕ್ಯುಮುಲೇಟಿವ್

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ಸ್ಥಾಪನೆ: 1906)

ರಿಜಿಸ್ಟರ್ಡ್ ಆಫೀಸು: ಉಡುಪಿ | ಆಡಳಿತ ಆಫೀಸು: ಮಂಗಳೂರು

ನವಯುಗ ವಾರ ಪತ್ರಿಕೆಗೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ

ಲಘು ಹರಟೆ

ಪ್ರಜಾಪ್ರಭುತ್ವ ಮತ್ತು ನಾಲಿಗೆ

ಸರ್ವೇಂದ್ರಿಯಗಳಲ್ಲಿ ನಯನಕ್ಕಿಂತಲೂ ನಾಲಿಗೆಯು ಪ್ರಧಾನ. ಈ ನಾಲಿಗೆಯ ಪಾಠಕ್ಕೆ ಒಳಗಾದವರು ಯಾರು ಇಲ್ಲ, ಪ್ರಜಾಪ್ರಭುತ್ವದಲ್ಲಿ ನಾಲಿಗೆಯೇ ಪ್ರಜಾಸ್ಥಾನದಲ್ಲಿ ವಿರಾಜಿಸುತ್ತಿದೆ.

ಮಾನವನಿಗೂ ಪಶುಗಳಿಗೂ ಹಲವಾರು ಅಂತರಗಳಿವೆಯೆಂಬುದನ್ನು ಒಪ್ಪಲೇ ಬೇಕಾದರೂ ಅವುಗಳಲ್ಲಿ ಗಣನೀಯವಾದುವು ಕೆಲವು ಮಾತ್ರ ದ್ವಿಪಾದಿಯಾದ ಮನುಷ್ಯ ಮತ್ತು ಚತುಷ್ಪಾದಿಯಾದ ಜಾನುವಾರುಗಳಲ್ಲಿ ದೃಷ್ಟಿ ಗೋಚರವಾಗುವ ಒಂದು ವ್ಯತ್ಯಾಸವೆಂದೆರೆ, ಬಾಲ. ಆದರೆ, ಆಧುನಿಕ ವೈಜ್ಞಾನಿಕರು ಮಾನವನನ್ನು ಮಂಗನ ಜಾತಿಗೆ ಸೇರಿಸುವ ಧೈರ್ಯತೋರಿಸಿದನಂತರ ಮಾನವನಾದರೂ ತನ್ನ ಮಾನವನ್ನು ತೊರೆದು ಅದಕ್ಕೆ ಹೌದೆಂದು ತಲೆದೂಗಿದನಂತರ ಇನೇ ಬಾಲದ ಕೆಲಸ ಮಾಡುವ ನಾಲಿಗೆಯಲ್ಲಿ ಮಾತ್ರ ಈ ಅಂತರವುಳಿದಿದೆ. ಇದುವರೆಗೆ ಗೊರಿಲ್ಲನೂ ನಮ್ಮಂತಯೇ ನಾಲಿಗೆಯನ್ನು ಬೇಕಾದಂತೆ ಬಳಸಿ ಕೊಳ್ಳುವಷ್ಟು ಬುದ್ಧಿವಂತನಿದ್ದನೆಂದು ತೀರ್ಮಾನಿಸದಿರುವುದರಿಂದ ಮಾನವನ ಅಮೂಲ್ಯ ಅಂಗವೆಂದರೆ ನಾಲಿಗೆಯೊಂದೇ.

ನಾಲಿಗೆಯು ಎಲುಬುಗಳಿಂದ ತಯಾರಾಗಿಲ್ಲವೆನ್ನುತ್ತಾರೆ. "ಎಲುಬಿಲ್ಲದ ನಾಲಗೆ ಎಂದು ದಾಸ್ಯವರ್ಯರೂ ಹಾಡಿದ್ದಾರೆನ್ನುವಾಗ, ಅದನ್ನು ವಿರಾಲಾಗದು ಆದರೂ ಅದಕ್ಕೊಂದು ನಿರ್ದಿಷ್ಟ ಆಕಾರವಿರುದರಿಂದ ಅದು ಅಸ್ಥಿಗಳಿಂದಲ್ಲವಾದರೂ ಮೃದ್ವಸ್ಥಿನಿರ್ಮಿತ ವೆಂದರೆ ಅತಿರೇಕೋಕ್ತಿಯಾಗದು. ಹೆಂಗುಸರ ನಾಲಗೆಯ ಉದ್ದ ಗಂಡಸರಕ್ಕಿಂತ ಚುಕ್ಕಿ ಸೊನ್ನೆರಿಕ ರಿಂಗ್ ಒಂದು ಮಿಲ್ಲಿ ಮಿಟರಾದರೂ ಉದ್ದವಿರ ಬೇಕೆಂದು ಯಾವ ಗಂಡಸೇ ಆದರೂ ಅನುಭವದಿಂದ ಹೇಳುಲ್ಲ. ಕಂರನ ಅತಃಭಾಗದಿಂದ ಹುಟುವ ಈ ನಾಲಗೆ ಜಾಚಿದರೆ ಮೂಗಿಗೆ ತಗಲುವಷ್ಟೂ ಉದ್ದವಿರುವುದುಂಟೆಂದು ತಿಳಿಯುತ್ತದೆ. ನಾಲಿಗೆ ಉದ್ದವಾಗಿರುವುದೇನೂ ಅವಲಕ್ಷಣವಲ್ಲ. ಮನುಷ್ಯನನ್ನು ಪ್ರಾಣಿವರ್ಗದಿಂದ ಬೇರ್ಪಡಿಸಿ ಮನುಷ್ಯನನ್ನಾಗಿ ಮಾಡಿದ ಕೀರ್ತಿ ಎಲುಬಿಲ್ಲದ ಈ ನಾಲಿಗೆಗೆ ಸೇರಿದೆಯಲ್ಲವೆ?

ನಾಲಿಗೆ ಏನು ಕೆಲಸ ಮಾಡುತ್ತದೆಯೆಂದು ಹೇಳಬೇಕಾಗಿಲ್ಲ. ಬಿಡ್ಡವು ಮಾಡದ ಕಾರ್ಯವನ್ನು ಮಾಡುತ್ತದೆ ಲೇಖನಿಯು ಸಾಧಿಸದ ಕಾರ್ಯವನ್ನು ನಾಲಿಗೆಯು ಖಂಡಿತಕ್ಕೂ ಮಾಡುತ್ತದೆ. ಅದರಲ್ಲೂ ಪ್ರಜಾಪ್ರಭುತ್ವದಲ್ಲಿ ನಾಲಿಗೆಗಿರುವಷ್ಟು ಮನ್ನಣೆ ಮೆದುಳಿಗೂ ಇಲ್ಲ ರುಚಿ ನೋಡುವುದು, ಬಾಯಿಗಿಟ್ಟ ಆಹಾರವನ್ನು ಮಗುಚಿ ಹಾಕುವುದು, ಜೊಲ್ಲು ಸುರಿಸುವುದು (ನೆಲಕ್ಕೆ?) ಮೊದಲಾದ ಕಾರ್ಯಗಳನ್ನು ನಾಲಿಗೆ ಮಾಡುವುದೆನ್ನುವ ವಿಜ್ಞಾನಿಗಳನ್ನು ಬಿಟ್ಟುಬಿಡಿ; ಅನುಭವದಿಂದ ಹೇಳುವುದಾದರೆ, ನಾಲಿಗೆ ಮಾಡದ ಒಂದೇ ಒಂದು ಕಾರ್ಯವಿಲ್ಲ. ನಿಲ್ಲಲು ಒಂದು ಸ್ಥಳ, ಎತ್ತಲು ಸಾಕಷ್ಟು ಉದ್ದದ ಕೋಲು ಕೊಟ್ಟರೆ, ಭೂಗೋಲವನ್ನೇ ಎತ್ತಿಬಿಡುವೆನೆಂದೊಬ್ಬ ವಿಜ್ಞಾನಿ ಅಂದಿದ್ದನಂತೆ. ಆದರೆ, ಇವಾವುವೂ ಇಲ್ಲದೆ ಕೇವಲ ತನ್ನ ಹತ್ತಂಗುಲದ ನಾಲಿಗೆಯ ಸಹಾಯದಿಂದ ಬ್ರಹ್ಮಾಂಡವನ್ನೇ ಉರುಳಿಸುವುದಿರಲಿ, ಸುಟ್ಟು ಬೊಟ್ಟಿಡುವ ಮಹಾ ಶಕ್ತಿ ಸಂಪನ್ನರು ಇರಲಿಲ್ಲವೇ? ಈಗ ಇಲ್ಲವೇ? ಮೂರು ಲೋಕವನ್ನೇ ಸೃಷ್ಟಿಸುವಳಿಸುವ ಆಳುವ ತಾಕತ್ತು ನಾಲಿಗೆಗಿದೆಯೆಂತಲೇ ಆಳಿಸುವ ಆಳುವ ಶಕ್ತಿಯಿಲ್ಲದ ಬ್ರಹ್ಮನನ್ನು ಬಿಟ್ಟು ಶಾರದೆ ನಾಲಿಗೆಯ ತುದಿಯಲ್ಲಿ ಮೂರನೆ ಪಂಚವಾರ್ಷಿಕ ಯೋಜನಾರಂಭದಲ್ಲೇ ಬಂದು ನೆಲಸಿದ್ದಾಳೆ. ಪಾಲಿಸೆನ್ನ ಮುದ್ದು ಶಾರದೆ, ಎನ್ನ ನಾಲಿಗೆಯೊಳುನಿಲ್ಲ ಬಾ ರದೆ? ಎಂದು ಕರೆದು ಪ್ರಾರ್ಥಿಸುವುದು ಅಗತ್ಯವಿಲ್ಲ ಶಾರದೆ ನಾಲಿಗೆಯ ತುತ್ತ ತುದಿಯಲ್ಲಿ ಸದಾಗಮಿಸುತ್ತಾಳೆ. ಜಡವಾದ ಕಮಲ ಪೀಠವನ್ನು ಪರಿತ್ಯಜಿಸಿ ಜಿಹ್ವಾಗ್ರದಲ್ಲಿ ನೆಲಸುತ್ತಾಳೆ. ಇದರಿಂದಲೇ ಮನುಷ್ಯನ ನಾಲಿಗೆಯ ಶ್ರೇಷ್ಠತೆಯು ಅರಿವಾಗುವುದಿಲ್ಲವೇ?

ಮಾನವನ ಶಕ್ತಿ ಸಾಮರ್ಥ್ಯ ವಿಚಾರಗಳಲ್ಲಿ ಕಾಲಾನು ಕಾಲಕ್ಕೆ ಪರಿವರ್ತನೆಯಾಗುತ್ತ ಬಂದಂತೆ ನಾಲಿಗೆಯ ಆಕಾರ—ಶಕ್ತಿಗಳಲ್ಲೂ ಆಗಿದೆಯೆನ್ನಬೇಕು. ಹಿಂದಿನ ಕಾಲದ ಜನರು ನಾಲಿಗೆಯ ಉಪಯೋಗವನ್ನು ಸಾಕಷ್ಟು ಕಂಡುಕೊಂಡಿರಲಿಲ್ಲವೋ ಮಾಡಿಕೊಳ್ಳುತ್ತಿರಲಿಲ್ಲವೊ ಅಥವಾ ಅದರ ಶಕ್ತಿ ಕುಂಠಿತವಾಗಿತ್ತೊ ಸರಿಯಾಗಿ ತಿಳಿದು ಬಂದಿಲ್ಲ. ಆದರೂ ಯುವರಾಜನಾಗಿ ಪಟ್ಟಾಭಿಷಿಕ್ತನಾಗಲು ಅಲಂಕೃತನಾದ ತನ್ನನ್ನು ವನವಾಸಕ್ಕಟ್ಟಲು ಕೈಕೆಯು ಬಯಸಿದಾಗ ರಾಮನ ನಾಲಿಗೆ ಉಡುಗಿ ಹೋಗಿತ್ತು. ಹರಿಶ್ಚಂದ್ರನನ್ನು ವಿಶ್ವಾಮಿತ್ರ ರಾಜ್ಯ-ಭಂಡಾರವೆಲ್ಲ ದಾನ ಪಡೆದ ನಂತರ ದಕ್ಷಿಣೆಯ ಹಣ ಕೇಳಿದಾಗ ಅದು ನಿರ್ಬಲವಾಗಿತ್ತು. ಹೀಗಿದ್ದರೂ ಮಹಾಭಾರತದ ಕಾಲಕ್ಕೆ ನಾಲಿಗೆಯ ಉದ್ದವೂ ಶಕ್ತಿಯೂ ಹೆಚ್ಚಾಗಿತ್ತೆಂಬುದಕ್ಕೆ ತುಂಬಿದ ಸಭೆಯಲ್ಲಿ ದ್ರೌಪದಿಯ ನಾಲಿಗೆ ಬೇಸರ ಬರಿಸುವದಕ್ಕಿಂತಲೂ ಅಧಿಕ ಸಮಯ "ಕ್ರೂರನಿವ ದುಶ್ಶಾಸನನು....,, ಎಂದು ಮುಂತಾಗಿ ಹಾಡಿದ ದಕ್ಕಿಂತ ಬೇರೆ ಬಲವಾದ ಪ್ರಮಾಣ ಬೇಕೆ? ಈ ಗೀಗೆಲಂತೂ ನಾಲಿಗೆಯು ಸರ್ವಶಕ್ತಿ ಸಂಪನ್ನನಾಗಿ ಬೆಳೆಯುತ್ತ ಇದೆಯೆಂಬುದು ಸರ್ವಸ್ತುತವಿದೆ.

ನಾಲಿಗೆಯು ಮಾಡುವ ಕೆಲಸವನ್ನು "ಮಾತು,, ಎಂಬ ಹೆಸರಿನಿಂದ ಕರೆಯುತ್ತಾರೆ. ಈ ಮಾತಿನ ಬಗ್ಗೆ ಹಲವಾರು ಅಭಿಪ್ರಾಯಗಳಿವೆ. "ಮಾತಾಡಿದರೆ ಮುತ್ತು ಸುರಿಯಬೇಕು,, ಎಂದು ನಾಲಿಗೆಯ ಕೆಲಸ ಮುತ್ತಿನಂತಾಗುವ ಆಶಯ ಕೆಲವರದ್ದು "ಮಾತಿಗೆ ದಾರಿದ್ರ್ಯವೇನಯ್ಯ? ಹೇಗೂ ಹೇಳಿಬಿಡುತ್ತೇನೆ,, ಎಂದು ಹೇಳಿಯೇ ಬಿಡುವ ಸ್ವಭಾವ ಮತ್ತೆ ಕೆಲವರದ್ದು. "ಯಶಂ ವದಿಷ್ಯಾಮಿ; ಸತ್ಯಂ ವದಿಷ್ಯಾಮಿ,, ಎಂಬ ಉಪನಿಷದ್ವಾಕ್ಯಕ್ಕೆ ನಾಲಿಗೆಯನ್ನು ಕಟ್ಟಿಹಾಕುವ ಬಂಧನ ಪ್ರಿಯರು ಬೇರೆ ಕೆಲವರು. "ಜಿಹ್ವಾಮೇ ಮಧುಮತ್ತಮಾ,, ಎಂದು ಸಿಹಿಯಾದ ಮಾತುಗಳನ್ನೇ ಆಡಬೇಕೆನ್ನುವವರು ಇನ್ನು ಕೆಲವರು. "ಸತ್ಯಂ ಬ್ರೂಯಾತ್ ಪ್ರಿಯಂ ಬ್ರೂಯಾತ್ ನ ಬ್ರೂಯಾತ್ ಸತ್ಯಮಪ್ರಿಯಂ,, ಎಂದು ಪ್ರಿಯವಾದ ಸತ್ಯವನ್ನೇ ಆಡಬೇಕೆಂಬ ಛಲವಾದಿಗಳು ಉಳಿದ ಕೆಲವರು. ಇನ್ನೊಂದು ಜಾತಿಯ ಜನರಿದ್ದಾರೆ. ಅವರ ಉಪದೇಶದ ವೈಖರಿಯೇ ಬೇರೆ. ,, ಮಾತಿನಿಂ ನಗೆನುಡಿಯು ಮಾತಿನಿಂ ಹಗೆ ಕೊಲೆಯು ಮಾತಿನಿಂ ಸರ್ವ ಸಂಪದವು ಲೋಕಕ್ಕೆ ಮಾತೆ ಮಾಣಿಕ್ಯ,, ಎನ್ನುತ್ತಾರೆ ಇವರು. ಮಾತಿನ ಅರ್ಥಾತ್ ನಾಲಿಗೆಯ ಬಗ್ಗೆ ಸಂಪೂರ್ಣ ವಿಶ್ವಾಸವಿಡುವವರೂ ಇಲ್ಲದಿಲ್ಲ. "ಶತಂ ವದ ಏಕಮಪಿ ಮಾಲಿಖ,, ಎಂದು ನೂರಾರು ಹೇಳಬೇಕೆಂದು ಆದೇಶವೀಯುವವರೂ ಇದ್ದಾರೆ.

ನಾಲಿಗೆಯನ್ನು ಮಾಣಿಕ್ಯವೆಂದು ಹೇಳಿ, ಅದನ್ನು ಕನ್ನಡಿಯ ಬೀರುವಿನಲ್ಲಿಡುವ ಪ್ರಯತ್ನ ನಡೆದಿತ್ತು ಸರಿಯೇ. ಆದರೆ, ಕೊಲೆ ಸುಲಿಗೆ ಕಳವು ಮಾಡಿದವರನ್ನೂ ರಾಷ್ಟ್ರೀಯ ಪರ್ವದಿನಗಳ ಹೆಸರಿನಲ್ಲಿ ಬಿಡುಗಡೆ ಮಾಡುವ ಈ ಪ್ರಜಾಸತ್ತೆಯಲ್ಲಿ ನಾಲಿಗೆಯನ್ನಾದರೂ ಏಕೆ ಸೆರೆಮನೆಯಲ್ಲಿಡಬೇಕು? ಸ್ವಾತಂತ್ರ್ಯಪ್ರಿಯರಾದ ಮನುಷ್ಯರ ನಾಲಿಗೆಯು ಮಾತ್ರ ಸ್ವಾತಂತ್ರ್ಯದಲ್ಲಿದಿನ ದೂಡುವುದೆಂದರೆ ಅದು ಮಹಾನ್ಯಾಯ. ವಿಶ್ವದ ಪ್ರತಿ ವಸ್ತುವೂ ಸ್ವತಂತ್ರವಾಗಬೇಕೆಂದು ಬಯಸುವ ಭಾರತೀಯರು ಹಲ್ಲು-ತುಟಿಗಳ ಬಂಧನದಿಂದ ನಾಲಿಗೆಯನ್ನು ಬಿಡುಗಡೆ ಮಾಡಿದ್ದಾರೆಂದಾದರೆ ಯಾವ ಅನುಚಿತ ವಾಸವನ್ನೂ ಮಾಡಿದಂತಾಗಲಿಲ್ಲ, ನಾಲಿಗೆಯಾದರೂ ತನಗೆ ದೊರೆತ ಸ್ವಾತಂತ್ರ್ಯದ ಅವಕಾಶವನ್ನು ಸಾಧ್ಯವಾದಷ್ಟು ಸಫಲ ಮಾಡಿಕೊಳ್ಳುತ್ತಿದೆಯೆಂಬುದಕ್ಕೆ ಪ್ರಮಾಣ ಬೇಡ.

ನಾಲಿಗೆಗಳಲ್ಲಿಯೂ ಹವಾರು ವಿಧಗಳಿವೆ ಹಿಂದಿನವರನಾಲಿಗೆಯು ಒಂದುಬಾರಿ ಹೊರ ಬಂದರೆ ಮತ್ತೆ ಅದು ಅನೆಯ ದಾಡೆಗಳಂತೆ ಎಂದೂ ಒಳಹೋಗಲಾರದು. ದಧೀಚಿಯು ವಾಸ, ತನ್ನ ನಾಲಗೆಯ ಮರ್ಯಾದೆ ಉಳಿಸಲು ದೇಹ ತ್ಯಾಗ ಮಾಡಿ ನಾಲಗೆಯ ಅಂತ್ಯಕ್ರಿಯೆ ಯನ್ನು ಮಾಡಿಕೊಳ್ಳಬೇಕಾಯಿತು. ಶಿಬಿ ತನ್ನ ಶರೀರವನ್ನೇ ಕತ್ತರಿಸಬೇಕಾಯ್ತು; ಬಲಿ ತನ್ನ ತಲೆಯ ಮೇಲೆ ತಾನೇ ವಾಮನ ಪಾದದಿಂದ ತುಳಿಸಿಕೊಳ್ಳಬೇಕಾಯ್ತು. ಪನ್ನಿ ತನ್ನ ಮಗನಿಂದಲೇ ಕೈ ತೊಳೆದುಕೊಳ್ಳಬೇಕಾಯ್ತು. ಧರ್ಮರಾಯ ನರಕದ ಬಾಗಿಲ ಒಳಹೋಗಬೇಕಾಯ್ತು. ಹೀಗೆಯೇ ನಾಲಿಗೆಯು ಗಿಡ್ಡವಾದುದರಿಂದಲೂ ಅದು ಆಡ್ಡ ಬೆಳೆಯುವರಿಂದಲೇ ಬೇಕೆಂಭಾಗ ಅಥವಾ ಯಾವಾಗಲೂ ಹೊರಬರುತ್ತಿರಲಿಲ್ಲ; ಎರಡನೆ ಬಾರಿ ತಲೆ ಹೊರಗೆ ಹಾಕುವ ಕೆಚ್ಚು ಅದಕ್ಕೆರುತ್ತಿರಲಿಲ್ಲ.

ಕಾಲ ಗುಣ—ನೆಲದ ಗುಣಗಳಿಂದಾಗಿ ಪರಿವರ್ತನೆಯೇಲವಾದುದು ನಾಲಿಗೆ. ನಿರಂಕುಶ ಪ್ರಭುತ್ವದಲ್ಲಿ ಸರ್ಪದಂತೆ ಮುರುಟಿ ಕುಮುಗಿಕೊಳ್ಳುವ ನಾಲಿಗೆ ಸಾಂಕುಶವಲ್ಲಿ ತನ್ನ ಹಿರಿಮೆಗುಣವನ್ನು ತಾನೇ ಗೊಣಗಿ ತೃಪ್ತಿಪಡುವುದು. ಪ್ರಜಾಸತ್ತೆಯಲ್ಲಿ ಭಾರಿ ಮಹಾಪೂರದಂತೆ ಅದ. ಹೆಚ್ಚು ಹುಚ್ಚು ಹುಚ್ಚು ಹೊಳೆಯಾಗಿ ಯಾವ ಅಡ್ಡಿ ಆತಂಕಗಳಿಲ್ಲದೆ ಹರಿಯುವುದು. ಭಾರತೀಯರಿಗೆ ಹೊಸತಾಗಿ

(ನೇ ಪುಟ ನೋಡಿರಿ)

ಸ್ಥಾಪನೆ: 1924

ದಿ ಕರ್ಣಾಟಕ ಬೇಂಕ್ ಲಿಮಿಟೆಡ್

(ಶೆಡ್ಯೂಲ್ಡ್ ಬೇಂಕ್)

ರಿಜಿಸ್ಟರ್ಡ್ & ಹೆಡ್ ಆಫೀಸು: ಡೊಂಗರಕೇರಿ, ಮಂಗಳೂರು—3.

ಈ ಕೆಳಗಿನ ಏರಿಸಿದ ಬಡ್ಡಿದರಗಳಲ್ಲಿ ರೇವಣಾತಿಗಳನ್ನು ಸ್ವೀಕರಿಸಲಾಗುವುದು.

ಒಂದರಿಂದ ಎರಡು ತಿಂಗಳುಗಳ ವರೆಗೆ	....	ಸಾ॥ ಸೇಕಡಾ 3-75	ನ.ಪೈಸೆ
ಮೂರರಿಂದ ಐದು ತಿಂಗಳುಗಳ ವರೆಗೆ	....	,, 4-25	,,
ಆರು ತಿಂಗಳುಗಳಿಂದ 12 ತಿಂಗಳುಗಳ ವರೆಗೆ	....	,, 4-50	,,
12 ತಿಂಗಳು ಮಿಕ್ಕಿ 24 ತಿಂಗಳುಗಳ ವರೆಗೆ	....	,, 4-75	,,
24 ತಿಂಗಳು ಮಿಕ್ಕಿ 48 ತಿಂಗಳುಗಳ ವರೆಗೆ	....	,, 5 00	,,
48 ತಿಂಗಳುಗಳಿಗೆ ಮಿಕ್ಕಿ	....	,, 5-25	,,

ಸೇವಿಂಗ್ಸ್ ಬ್ಯಾಂಕ್ ಬಡ್ಡಿ ದರವನ್ನು ಸಾ. ಸೇಕಡ 2½% ರಿಂದ 3¼%ಗೆ ಏರಿಸಲಾಗಿದೆ.

THE KARNATAKA BANK LIMITED.

ಯಶಸ್ಸಿನ ಮೂಲ:

ಜಯಶೀಲರಾಗ ಬಯಸುವಿರಾ?

ಹಿಡಿಯುವ ಕೆಲಸ ಸಫಲರಾಗಬೇಕೆಂದೆಲ್ಲವೆ ಎಲ್ಲರ ಆಶಯ? ಅದರೆ, ಹಾಗೆ ಜಯಶೀಲರಾಗಬೇಕಾದರೆ, ಸಹಿಷ್ಣುತೆ ಮತ್ತು ಲಾಭ ಹಾನಿಗಳನ್ನು ತೂಗಿ ನೋಡುವ ಪ್ರವೃತ್ತಿ ಬೇಕು.

'ರಂಜನೆ', ಬೆಂಗಳೂರು,

ಎಲ್ಲ ಮಾನವನ ಜೀವನದಲ್ಲೂ ಕಷ್ಟ ಸುಖಗಳು, ಹಗಲು-ರಾತ್ರಿಗಳಂತೆ ನಿಲ್ಲಲಾಗದ ಅನುಭವಗಳಾಗಿವೆ. ಅಂತೆಯೇ ಪ್ರಾಚೀನ ಕಾಲದಿಂದಲೂ ಹಿರಿಯರು ಉಕ್ತಿಗಳು, ವೇದ, ಪುರಾಣ ಧರ್ಮ ಗ್ರಂಥಗಳು ಸುಖದುಃಖಗಳಲ್ಲಿ ಮಾನವ ಸಮಾನ ಮನಸ್ಸಿನವನಿರಬೇಕೆಂದೂ ತನ್ನ ಆತ್ಮದ ಉದ್ಧಾರವೇ—ಮುಕ್ತಿಯೇ ಆತನ ಪರಮೋದ್ದೇಶವಾಗಿರಬೇಕೆಂದೂ— ಆತನ ಅಚಲ ಕರ್ತವ್ಯವಾಗಿರಬೇಕೆಂದೂ ಹೇಳುತ್ತವೆ.

ಪುಣ್ಯ—ಪಾಪ, ಹಗಲು—ರಾತ್ರಿ, ಸುಖ—ದುಃಖ, ಸಿಹಿ—ಕಹಿ ನಾಣ್ಯದ ಎರಡು ಮುಖಗಳಂತೆ ಇರಲೇಬೇಕು. ಸರಿಯಾದ ಜಿಜ್ಞಾಸಿಗೆ ಇವಾವುವೂ ಯಾವ ವಿಧವಾದ ಮನಕ್ಷೋಭೆಯನ್ನೇ ಆಗಲಿ ಮನೋವಿಕಾರವನ್ನೇ ಆಗಲಿ ತರಲಾರವು. ಸರಿಯಾದ ಜಿಜ್ಞಾಸಿಯಾಗಲು ಮಾನವರಾಗಿ ಹುಟ್ಟಿದ ನಮಗೆ ಒಮ್ಮೆಲೇ ಸಾಧ್ಯವೂ ಆಗದು. ಮಾನವ ಸಹಜ ಪ್ರವೃತ್ತಿಗಳು ನಮಗೆ ರಕ್ತದಲ್ಲೇ ಹುಟ್ಟಿ-ಹರಿದು ಬರುವುದಿದೆ. ಆದರೆ ಬಿಡದ ಅಭ್ಯಾಸದಿಂದ ಕ್ರಮೇಣ ನಾವು ಈ ಮನೋವಿಕಾರಗಳಿಗೆ ಹೊರತಾಗಬಹುದೆನ್ನುವುದು ಸುಳ್ಳಾದ ಮಾತಾಗದೆ.

ಸುಖ, ಸಂತೋಷದ ಸಮಯದಲ್ಲಿ ಯಾವುದೊಂದೇ ಕಾರ್ಯದ ಯೋಜನೆಯನ್ನು ಮಾಡಿ ಮುಗಿಸುವಷ್ಟು ಸುಲಭವಾಗಿ ಕಷ್ಟ-ಸಂಧಿಗ್ಧ ಪರಿಸ್ಥಿತಿಯಲ್ಲಿ ಸಾಧ್ಯವಾಗದು. ಕಾರಣ ಸುಖ ಸಂತೋಷ ಸಮಯಗಳಲ್ಲಿ ಮನಸ್ಸಿನ ಹಿಡಿತ ಹಗುರಾಗಿ, ವಿಕಾಸಗೊಂಡಿದ್ದು ಎಲ್ಲ ಕಡೆಗೂ ತನ್ನದೇ ಆಸೆ ಮನೋ ವೇಗದಲ್ಲಿ ಚಲಿಸುತ್ತ ಎಲ್ಲ ಅಂಕೆ - ಅಂಶ—ಮೂಹತಿಗಳಲ್ಲೂ ಪಕ್ಷಿ ನೋಟ ಬೀರುವ ಅವಶ್ಯವಾದುವುಗಳನ್ನೆಲ್ಲಾ ಸರಸರನೆ ತಿಳಿವಿಗೆ ಕೊಡುತ್ತ ಕೆಲಸವನ್ನು ಹಗುರಾಗಿಸುತ್ತದೆ. ಬೇಗ ಮುಗಿಸಲು ಸಹಕರಿಸುತ್ತದೆ. ಅದೇ ಕಷ್ಟ ಸಮಯದಲ್ಲೇ ಆಗಲಿ ಸಂಧಿಗ್ಧ ಪರಿಸ್ಥಿತಿಯಲ್ಲೇ ಆಗಲಿ ಮನಸ್ಸಿನ ಆವೇಗ ಒಂದು ಸ್ಥಿಮಿತದಲ್ಲಿಲ್ಲದೇ ಸಂಕುಚಿತಗೊಂಡು ಯೋಚಿಸಿದುದನ್ನೇ ನೋಚಿಸುತ್ತ ಕುಂಟುತ್ತಾ ನಡೆಯುವಿರಲಿ ಅಲ್ಲಲ್ಲಿ ಎಡವಿ ಬೀಳುತ್ತ, ಎಡವಿ ಬಿದ್ದಾಗಲಾದರೂ ಎಚ್ಚರಗೊಳ್ಳದೇ ಮತ್ತೆ-ಮತ್ತೆ ಬೀಳುತ್ತ ನೋವಿನ ಜೊತೆಗೆ ನೋವನ್ನು ಕೂಡಿಸಿಕೊಳ್ಳುತ್ತ ಕೆಲಸದ ಸಾಧನೆಯ ಬದಲು ಕಾಲ ವ್ಯರ್ಥವನ್ನೂ ಮಾಡಬೇಕಾಗುವುದು.

ಲೆಕ್ಕವಿಲ್ಲದಷ್ಟು ಮಂದಿ ತಮ್ಮ ಕೆಲಸ ಕಾರ್ಯಗಳನ್ನು ತಮ್ಮ ಜೀವನಸ್ಥನು ಗುಣವಾಗಿ ಆಳವಡಿಸಿಕೊಳ್ಳದೇ—ಜನ, ಸಮಾಜ ಇವುಗಳಲ್ಲಿ ಸಮರಸವಾಗಿ ಹೋಗಲಿಕ್ಕಾಗದೆ ಅಸಂತೋಷಿಗಳಾಗಿರುತ್ತಾರೆ. ಅವರು ಮಾಡುತ್ತಿರುವ ಕೆಲಸಗಳನ್ನು ದ್ವೇಷಿಸುತ್ತಾರೆ. ಬೇಸರದಿಂದ ಬೇರೆ ಕೆಲಸಕ್ಕೆ ಹೋದರಾದರೂ ಸ್ವಲ್ಪ ದಿವಸಗಳ ನಂತರ ಅದರಲ್ಲೂ ನೀರಸರಾಗುತ್ತಾರೆ. ಅಂತಹವರು 'ಅಸಂತೋಷಿಗಳೆಂದು' ಅವರೇ ಅಲ್ಲದೇ ನಾವೂ ಒಪ್ಪಲೇಬೇಕಾಗುವುದು. ಅವರ ಮೇಲೆ ನಾವು ಅನುಕಂಪವನ್ನು ತೋರುತ್ತೇವೆ. ಆದರೆ ಸರಿಯಾದ ಕೆಲಸ ಕೈಗೊಳ್ಳಲು—ಜೀವನದಲ್ಲಿ ಸಂತೋಷಿಗಳಾಗಲು ಅವರೇ ತಮ್ಮ ಜೀವನದ ಮೂಲ ತತ್ವಗಳನ್ನು ಬದಲಿಸಿಕೊಳ್ಳಬೇಕಿದೆ. ಅವರು ಸತ್ಯವನ್ನು ಕಂಡುಕೊಳ್ಳದೇ ತಮ್ಮನ್ನು ತಾವೇ ವಂಚಿಸಿಕೊಳ್ಳುವುದು ಸಿಲ್ಲುವ ತನಕ ಒಂದು ಕೆಲಸದಿಂದ ಮತ್ತೊಂದಕ್ಕೆ ಹಾರುತ್ತಿರುತ್ತಲೇ ಬೇಕಿರುತ್ತದೆ. ಅವರ ಅತೃಪ್ತಿ ಕೊನೆಗೊಳ್ಳದೇ ಇಮ್ಮಡಿಸುತ್ತಲೇ ಇರುತ್ತದೆ. ಮಾನಸಿಕ ದೌರ್ಬಲ್ಯ ಹೆಚ್ಚುತ್ತಿರುತ್ತದೆ.

ಅದಕ್ಕೆ ಉತ್ತಮ ಉಪಾಯ ಒಂದೇ ಒಂದಿದೆ. ಕಷ್ಟಗಳನ್ನು ಸರಿಯಾದ—ಸಮಾನ ದೃಷ್ಟಿಯಿಂದ ನೋಡಬೇಕಿದೆ. ಕೆಲವರು ಇರುವೆಯಷ್ಟು ಕೆಲಸವನ್ನು ಆನೆಯಷ್ಟರಗಂತೆ ಮಾಡಿ ಪೇಚಾಡಿದರೆ ಮತ್ತೆ ಕೆಲವರು ಬೆಟ್ಟದಷ್ಟನ್ನು ಹುಲ್ಲಿನಂತೆ ಯೋಚಿಸಿಕೊಳ್ಳುತ್ತಾರೆ. ಇದರಿಂದ ಮೊದಲ ಗುಂಪಿನವರಿಗೆ ವಾಸ್ತವಿಕವ ಕಷ್ಟಗಳು ಕೂಡಲೇ ತಲೆಯೆತ್ತಿ ಅವರ ಯೋಜನೆಯನ್ನು ತಲೆ ಕೆಳಗೆ ಮಾಡುವುದಾದರೆ, ಎರಡನೆಯ ಗುಂಪಿನವರಿಗೆ ಪ್ರಾರಂಭದಲ್ಲೇ ಹೆದರಿಕೆ ಅಂಕುರಿಸಿ ಕೆಲಸ ಪ್ರಾರಂಭವಾಗದೇ ಉಳಿಯಬಹುದು.

ಜೀವನದ ಸಮಸ್ಯೆಯನ್ನು ಸರಿಯಾದ ರೀತಿಯಲ್ಲಿ, ಸಂಪೂರ್ಣ ಸತ್ಯ—ಯಥಾರ್ಥ ದರ್ಶನವಾಗಿ ಚಿತ್ರಿಸಿಕೊಳ್ಳಬೇಕು. ಯಾವಾಗಲೂ ಜನರ ಲಕ್ಷ್ಯ ಹಾಗು ಕರುಣೆಗಳನ್ನು ಸೆಳೆಯಲು ನಾಟಕೀಯವಾಗಿ ಅಭಿನಯಿಸದಿರಬೇಕು.

ಒಂದು ಕಾರ್ಯದ ಯಶಸ್ಸು ಅದರ ಬಗ್ಗೆ ನಾವು ಕೊಡುವ ತೀರ್ಮಾನದ ಮೇಲೆ ಅವಲಂಬಿಸಿರುತ್ತದೆ. ಅಂತಲೇ ಬಿಕ್ಕಟ್ಟು, ಅತಿ ರಾಗಭಾವ, ಮನೋವಿಕಾರ, ವೇದನೆ, ಕಳವಳ ಹಾಗೂ ಚಿತ್ತಕ್ಷೋಭೆಯಲ್ಲಿಯೇ ಆಗಲಿ ಇಲ್ಲ ಅನುಕಂಪ ಸೂಚನೆಯ ಕಾರ್ಯದಲ್ಲಿರುವಾಗಲೇ ಆಗಲಿ ಎಂದೂ ಮಹತ್ವದ ತೀರ್ಮಾನಕ್ಕೆ ಬರಬಾರದು. ನಾವು ಕೆಲ ನಿಮಿಷಗಳ ಕಾಲ ನಿಧಾನವಾಗಿ ಯೋಚಿಸುವುದಾದರೆ ಅದಕ್ಕೂ ಉತ್ತಮ ವಿವರಣೆ--ಉತ್ತರ ದೊರಕಬಹುದು.

ಬಹಳ ತುರಾತುರಿಯಲ್ಲಿ, ಚಿತ್ತಕ್ಷೋಭೆಯಿಂದ ನರಳುತ್ತಿರುವ ಮಂದಿಯಿಂದಲೂ ಕೆಲಪೊಮ್ಮೆ ಅವರೊಡನಾಡಿಗಳು ಮನೋವಿಕಾರಕ್ಕೊಳಗಾಗಬೇಕಾಗುವುದು. ಅದಕ್ಕೆ ಸಿದ್ಧರಿರಬೇಕು. ಕಷ್ಟ ಸಂದರ್ಭದಲ್ಲೆಲ್ಲಾ ನಿಧಾನ, ತಾಳ್ಮೆ ಹಾಗು ಯೋಚನೆಗಳಿಂದ ಮುಂದುವರಿಯಬೇಕು.

ಒಂದು ಕ್ಲಿಷ್ಟವಾದ ಕಾರ್ಯವನ್ನು ಮಾಡಬೇಕಾದಾಗ ಒಬ್ಬನೇ ನಿಧಾನವಾಗಿ ಯೋಚಿಸಿ ಮುಂದುವರಿಯುವುದು ಉತ್ತಮ. ಮನೆ ಬೇಸರಕ್ಕೆ ಬಂದಾಗ ಸ್ವಲ್ಪ ಕಾಲ ಬೇರೊಂದು ಕೆಲಸದಲ್ಲಿ ಮನ ಹರಿಯಬಿಡಿರಿ. ಅನಂತರದಲ್ಲಿ ನಿಮ್ಮ ಮನ ತಿಳಿವಿಗೆ ಬಂದು ಹೊಸ ಬೆಳಕು ನಿಮ್ಮ ಯೋಜನೆಯ ಮೇಲೆ ಬಿದ್ದು ಕಾರ್ಯ ಬಹು ಸುಲಭವಾಗಬಹುದು.

ಯಾವೊಂದು ಕಾರ್ಯದ ನಿರ್ಧಾರಕ್ಕೆ ಬರಬೇಕಾದರೂ ಸಮಂಜಸ ಅಂಕೆ ಅಂಶಗಳ ಒಟ್ಟು ಕಲೆ ಹಾಕಬೇಕು ಇದನ್ನು ಸಾಧಿಸಲು ಹಲವಾರು ರೀತಿಗಳಿದ್ದರೂ ಅತ್ಯುತ್ತಮವಾದ ವಿಧಾನವೆಂದರೆ, ಒಂದ ಕಾಗದದ ಮೇಲೆ ಮಾಡಬೇಕಾದ ಕೆಲಸದ ಶೀರ್ಷಿಕೆ ಬರೆದು ಅದರ ಕೆಳಗೆ ಎರಡು ಭಾಗಗಳನ್ನು ಮಾಡಿ ಒಂದು ಕಡೆ ಪರವಾದದ್ದ (ಸಹಕಾರಿಯಾದದ್ದ)ನ್ನೆಲ್ಲಾ ಕಲೆ ಹಾಕಬೇಕು. ಮತ್ತೊಂದೆಡೆ ವಿರೋಧದ್ದನ್ನೆಲ್ಲಾ ಕಲೆ ಹಾಕಿ ನಿವಾರಣೆ ಮಾಡಬಹುದಾದ ಅಡಚಣೆಗಳನ್ನೆಲ್ಲಾ ಹೊಡೆದು ಹಾಕಬೇಕು. ಅನಂತರ ಬರಹದಲ್ಲಿ ಉಳಿದಿರುವ ಅಂಶಗಳು ನಿಮ್ಮ ಸರಾಗವಾದ ಯೋಚನೆಗೆ ಸಿಕ್ಕುವುದು. ನಿಮ್ಮ ಕೆಲಸ ಹಗುರಾಗುವುದು.

ಮಾಡುತ್ತಿರುವ ಕೆಲಸದಲ್ಲಿ ಒದಗಿ ಬರುವ ಎಂತಹ ಕೆಟ್ಟ ಯಾ ದೊಡ್ಡ ಕಷ್ಟಗಳನ್ನೂ ಎದುರಿಸುವ ಮನಸ್ಸಿನವರಿರಿ. ಕಷ್ಟಗಳು ಬರದಿರಬಹುದು. ಆದರೂ ಧೈರ್ಯದಿಂದ ಬರಬಹುದೆಂದು ಯೋಚಿಸಿಕೊಂಡು ತಯಾರಿದ್ದು ಮುಂದುವರಿಯುತ್ತಿದ್ದರೆ ಆ ಕಷ್ಟದ ಚಿಂತೆ ಬಹಳಷ್ಟು ಹಗುರಾಗುತ್ತದೆ. ಮುಂದುವರಿಯಲು ಉತ್ತಮ ಹೆಂತವಾಗುತ್ತದೆ. ಅಂತಹ ಸಮಯದಲ್ಲಿ ಕೆಲಸವನ್ನು ಕುಲಗೆಡಿಸುವ ಅತಿ ಮೂರ್ಖ ಕೆಲಸವೆಂದರೆ ಹೆದರಿ ಹಿಂದುರಿದು ಓಡುವುದೇ ಆಗಿದೆ. ಕಷ್ಟವೇ ಇಲ್ಲವೆಂದು ಯೋಚಿಸಿ ಧೈರ್ಯದಿಂದ ಮುಂದುವರಿಯದೇ, ಕೆಲಸ ಮಾಡದೇ ಸುಮ್ಮನಿದ್ದರೆ, ತೊಂದರೆಗಳು ಹೊರಟು ಹೋಗುತ್ತವೆಯೆನ್ನುವುದು ಬಹುಮೂಢ ಯೋಚನೆ ಯಾಗಿರುತ್ತದೆ.

ಯಾವಾಗಲೂ ನಿಮಗೆ ನೀವೇ 'ಮಾಡಬಲ್ಲೆ'ನೆಂದು ಹೇಳಿಕೊಳ್ಳುವ ನಟನೆಯ ಶೌರ್ಯವನ್ನು ತೋರಿಸಿ ಮೋಸಹೋಗುವ ಕಾರ್ಯವನ್ನು ಮಾಡಬೆಡಿ. ಅದರಿಂದ ನಿಮಗೆ ತತ್ವಮಯ ಭಾವನಾ ಸಾಮ್ರಾಜ್ಯದಲ್ಲಿ ಕಷ್ಟ ಕಾರ್ಯವನ್ನು ಸುಲಭವಾಗಿ ಪರಿಹರಿಸಿದೆನೆಂಬ ಸಂತೋಷ—ಆನಂದ ಸಿಗಬಹುದಾದರೂ ವಾಸ್ತವಿಕದಲ್ಲಿ ಕೆಲಸಕ್ಕೆ ತೊಡಗಿದಾಗ ಆ ತೊಡಕುಗಳು ಕೂಡಲೇ ಬೃಹದಾಕಾರವಾಗಿ ತಲೆಯೆತ್ತಿ ನಿಮ್ಮ ಕಾರ್ಯಕ್ಕೆ ಅಡಚಣೆಯಾಗಿ ನಿಲ್ಲುವುದು.

ಯಾವಾಗಲೂ ಬಹು ಬಂಡಿತವಾದ ವ್ಯಾವಹಾರಿಕರಾಗಿರಿ. ಕಷ್ಟದ ಕೆಲಸಗಳ ಮೂಲಕ್ಕೇ ಇಳಿದು ಸ್ಥಿತಿಗತಿಗಳನ್ನು ಗಮನಿಸಿರಿ. ಕಷ್ಟಗಳನ್ನು ಸಾಧ್ಯವಾದಷ್ಟು ಹಂತಗಳನ್ನಾಗಿ ವಿಭಾಗಿಸಿರಿ, ಮೂಹತಿಗಳು ಒಟ್ಟಾಗಿ ಸೇರಿ ಸಂಪೂರ್ಣ ಚಿತ್ರ ಸರಿಯಾಗಿ ನಿಮ್ಮ ಮನಃಪಟಲದ ಮುಂದೆ ನಿಂತಾಗ ಅದನ್ನು ನಿವಾರಿಸುವ ಉಪಾಯ ಬಹು ಸುಲಭವಾಗಿ ಸಿಗುವುದು. ನಾವು ಈ ರೀತಿ ಒಂದು ಕೆಲಸ—ಸಮಸ್ಯೆಯನ್ನು ಬಿಡಿಸತೊಡಗಿದಾಗ ಎಷ್ಟು ಸುಲಭವಾಗಿ ಮುಗಿಯಿತೆನ್ನುವುದು ನಿಜಕ್ಕೇ ಆಶ್ಚರ್ಯ ಬರಿಸುವುದಿರುತ್ತದೆ. ನಾವು ಅದಕ್ಕೆ ಹೆದರಿದಾಗ ಮಾತ್ರ ಅದು ನಮ್ಮನ್ನು ಸೋಲಿಸುವುದಿರುತ್ತದೆ.

ನಾವೆಷ್ಟೇ ಜಾಗರೂಕರಿದ್ದರೂ, ನಮ್ಮ ಆಳತೆ ವಿರಿ ಒಮ್ಮೊಮ್ಮೆ ಹಗಲು-ರಾತ್ರಿಗಳಂತೆ, ಗೆಲುವು—ಸೋಲುಗಳು ಎರಗಿ ಬರುವುದುಂಟು. ಸೋಲಾಯಿತೆಂದು ಮುಖ ಸಣ್ಣಗೆ ಮಾಡಿಕೊಂಡು ಇಳಿಬಿಟ್ಟು ಕುಳಿತುಕೊಳ್ಳುವುದೇ ಆಗಲಿ, ಯಾವುದೇ ಕಾರಣಕ್ಕೆ ಬೇರೆಯವರ ಮೇಲೆ ತಪ್ಪು ಹಾಕಿ ಮುಖ ಸಿಂಡರಿಸಿಕೊಳ್ಳುವುದೇ ಆಗಲಿ ಕೂಡದು. ಎಲ್ಲವನ್ನೂ ಸಾಮಾನ್ಯವಾಗಿ ಪರಿಗಣಿಸಿ ಜೀವನದ ಸಾರ್ಥಕತೆಯನ್ನು ಸಫಲಗೊಳಿಸಿಕೊಳ್ಳಬೇಕು.

ಕೊನೆಯದಾಗಿ ಯಾವಾಗಲೂ ಆರಾಪೂರ್ಣರಾಗಿರಿ. ನಿಮ್ಮ ಸ್ವರಕ್ತಿಯ ಬಗ್ಗೆ ದೃಢಚಿತ್ತರಾಗಿರಿ. ಸಂಪೂರ್ಣ ಮೂಹತಿಗಳನ್ನು ಸಂಗ್ರಹಿಸಿರಿ. ಪ್ರಯೋಗಕ್ಕೆ ತರುವ ಶಕ್ತಿಯುಳ್ಳವರಾಗಿರಿ—ದೃಢತೆಯವರಿರಿ. ಒಳ್ಳೆಯ ಸಲಹೆಗಳನ್ನು ಬಯಸಿರಿ. ಬಂದ ಸಲಹೆಗಳ ಮೇಲೆ ಬಲವಾದ ನಿಶ್ಚಯಕ್ಕೆ ಬರುವವರಿದ್ದು, ಕೂಡಲೇ ಕಾರ್ಯ ಸಂಧಾನ ಮಾಡಿರಿ. ಇಷ್ಟಗಳು ನಿಮಗೆ ಜಯ ಮಾಲೆ ಲಭಿಸಲು ಸೇರ್ಪಡಿಸುವ ಸಹಾಯ ಮಾಡುವುವು.

ದಿ ವಿಜಯ ಬೇಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬೇಂಕ್. ಸ್ಥಾಪನೆ: 1931

ರಿಜಿಸ್ಟರ್ಡ್ ಆಫೀಸು:

ವಿಜಯ ಬೇಂಕ್ ಬಿಲ್ಡಿಂಗ್, ಲೈಟ್ ಹೌಸ್ ಹಿಲ್ ರೋಡ್,

ಮಂಗಳೂರು-3, ಸೌತ್ ಕೆನರಾ.

ಕಾಯಂ ಠೇವಣಾತಿ ಬಡ್ಡಿ ದರವನ್ನು ಶೇಕಡ 5½ರ ವರೆಗೆ ಹೆಚ್ಚಿಸಲಾಗಿದೆ. ಏಳು ದಿವಸದ ನೋಟೀಸಿನಲ್ಲಿ ಕೇಳಿದಾಗ್ಯೆ ಹಿಂದೆ ಪಡೆಯುವ ಡಿಪೋಸಿಟುಗಳನ್ನು (Call Deposits) ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸೋಣಾಗುತ್ತದೆ.

ಹೆಚ್ಚಿನ ಮಾಹಿತಿಗೆ ನಮ್ಮ ಶಾಖೆಗಳಲ್ಲಿ ದಯಮಾಡಿ ವಿಚಾರಿಸಿರಿ.

ಶ್ರೀ ಎ. ಬಿ. ಶೆಟ್ಟಿ
ಸ್ಮಾರಕ ನಿಧಿಗೆ
ಸಹಾಯ ಮಾಡಿರಿ

ವ್ಯಸನವು ಮಾನವನ ಅಧೀನದಲ್ಲಿರುವ ವರೆಗೆ ಆತನು ಬದುಕಿರುವುದು ಸಾಧ್ಯ. ಆದರೆ, ಮಾನವನನ್ನೇ ವ್ಯಸನವು ವಶಪಡಿಸಿಕೊಂಡಿತೆಂದರೆ, ಅಂದೇ ಅವನ ಮೃತ್ಯುವಾದಂತೆ.

ನವಯುಗ

ವಾರ	ಉಡುಪಿ	ನರುಸ
೫೦	೨೪-೮-೧೦	೪೦

ಕಾಂಗ್ರೆಸ್ ಹುದ್ದೆರಿಗಳು

೧೯೩೧ರ ಆದಿಯಲ್ಲಿ ನಡೆಯಲಿರುವ ಸಾರ್ವತ್ರಿಕ ಚುನಾವಣೆಗಳಲ್ಲಿ ವಿವಿಧ ಪ್ರದೇಶಗಳಲ್ಲಿ ವಿಧಾನ ಸಭೆ ಮತ್ತು ಲೋಕ ಸಭೆಯ ಸ್ಥಾನಗಳಿಗೆ ಸ್ಪರ್ಧಿಸಲು ತಮ್ಮ ಅಪೇಕ್ಷಾಪತ್ರಗಳನ್ನು ಪ್ರಾದೇಶಿಕ ಕಾಂಗ್ರೆಸ್ ಸಂಸ್ಥೆಗೆ ಸಲ್ಲಿಸಿರುವರೆಂದು ತಿಳಿಯುತ್ತದೆ. ಈ ಅಪೇಕ್ಷಾಪತ್ರಗಳನ್ನು ಪರಿಶೀಲಿಸಿದ ನಂತರ ಯಾವ ಕ್ಷೇತ್ರದಲ್ಲಿ ಯಾರು ನಿಲ್ಲುವರೆಂದು ನಿರ್ಧಾರವಾಗುವುದು ಇದಕ್ಕೆ ಕೆಲವು ಕಾಲ ಬೇಕಾಗಬಹುದು ಈ ನಡುವೆ ಕಾಂಗ್ರೆಸ್ ನಾಯಕರು ಜಾಗೂ ಹಿತಚಿಂತಕರು ಪರಿಶೀಲನೆ ನಡೆಸಬೇಕಾದ ವಿಚಾರಗಳು ಕೆಲವಿವೆ ಈ ವಿಚಾರವನ್ನು ನಿಷ್ಪಕ್ಷಪಾತ ದೃಷ್ಟಿಯಿಂದ ವಿವೇಕಯುತವಾಗಿ ವಿವರಿಸಬೇಕಾಗಿದೆ. ಕಾಂಗ್ರೆಸ್ ಪಕ್ಷವು ದೇಶದ ಹಿರಿಯ ರಾಜಕೀಯ ಪಕ್ಷವೆಂಬುದರಿಂದ, ಇಂದು ಅದನ್ನು ಎದುರಿಸಬಲ್ಲ ಬೇರೆ ಪ್ರತಿಪಕ್ಷವಿಲ್ಲವೆಂಬುದರಿಂದ ಅದರ ಹೊಣೆಗಾರಿಕೆ ಎಲ್ಲರಿಗಿಂತ ಹೆಚ್ಚಿನದಾಗಿದೆಯೆಂಬುದನ್ನು ಒತ್ತಿಹೇಳಬೇಕಾಗಿಲ್ಲ

ಕಾಂಗ್ರೆಸ್ ಸಂಸ್ಥೆಯು ದಿನದಿಂದ ದಿನಕ್ಕೆ ಬೆಳೆಯುತ್ತ ಬರುತ್ತಿದೆ. ಆದರೆ, ಸಂಸ್ಥೆಯ ಸದಸ್ಯರ ಸಂಖ್ಯೆ ಹೆಚ್ಚುತಿದ್ದರೂ ಅದರಂತೆ ನಿಷ್ಠೆ, ಸತ್ಯ ಪ್ರಿಯತೆ ಮತ್ತು ವ್ರಾಮಾಣಿಕತೆಯ ಅಭಾವವು ಎದ್ದು ತೋರುತ್ತಿದೆ. ಇದರಿಂದಾಗಿ ಪಕ್ಷದೊಳಗೇನೇ ಉಪ ಪಕ್ಷಗಳು ಹುಟ್ಟಿಕೊಂಡು ಪಕ್ಷಬಲವನ್ನು ಕುಂದಿಸುವಂತಹ ದುರ್ಘಟನೆಗಳು ಅಲ್ಲಲ್ಲಿ ನಡೆಯುತ್ತಿರುವುದು ಶೋಭನೀಯವಲ್ಲ ಈ ದೃಷ್ಟಿಯಿಂದ, ಕಾಂಗ್ರೆಸ್‌ನ ಬಲ ಸಂವರ್ಧನೆ, ಅದರ ಸತ್ಯಕಾರ್ಯತತ್ವ ನಿಷ್ಠತೆಗಳ ಪುನಃ ಸ್ಥಾಪನೆಗಾಗಿ ಚುನಾವಣೆಗಳಲ್ಲಿ ಅಭ್ಯರ್ಥಿಗಳನ್ನು ಆರಿಸುವಾಗ ತೀವ್ರ ಜಾಗರೂಕತೆಯಿರಬೇಕೆಂಬುದನ್ನು ಮರೆಯಬಾರದು ಕಾಂಗ್ರೆಸ್ಸಿನೊಳಗೆ ಅಧಿಕಾರಕ್ಕಾಗಿ ಕೆಲವೆಡೆಯಾದರೇ ಕಲಹದಂತಹ ಘಟನೆಗಳು ನಡೆಯುವುದು ಎಂದಿಗೂ ಅಪೇಕ್ಷಣೀಯವಲ್ಲ. ಅಧಿಕಾರವನ್ನು ಪಡೆಯುವುದು ಅದಕ್ಕಾಗಿ ಚುನಾವಣೆಗಳಲ್ಲಿ ಗೆಲ್ಲುವುದೂ ಇದಕ್ಕಾಗಿ ಎದುರು ಪಕ್ಷವನ್ನು ಸೋಲಿಸುವೆನೆಂಬ ಧೈರ್ಯವಿರುವ ಉಮೇದ್ವಾರರನ್ನೇ ಆರಿಸುವುದು ಸಲ್ಲದು. ಸುಯೋಗ್ಯ, ಸುದಕ್ಷ, ಸುಶೀಲ, ಸದ್ಗುಣ ಸಂಪನ್ನ ಕಾರ್ಯಕರ್ತರನ್ನು ಕಾಂಗ್ರೆಸ್ ಮುಂದೆ ತರಬೇಕಾಗಿದೆ. ಇಂದಿನ ಆಡಳಿತೆಯ ಮೇಲಿರುವ ದೃಷ್ಟಿಯಂತೆಯೇ ಮುಂದಿನ ಭಾರತದ ಆಡಳಿತೆಯ ಮೇಲೂ ದೂರದೃಷ್ಟಿ ಬೀರಬೇಕಾಗುತ್ತದೆ. ಇದಕ್ಕಾಗಿ ಹೊಸಬರಿಗೆ ಅವಕಾಶ ಮಾಡಿಕೊಡಬೇಕು ಎಂಬ ವಾದವೀಗ ಮುಂದೆ ಬಂದಿದೆ. ಹಳಬರಾರೂ ತಮ್ಮ ಸ್ಥಾನವನ್ನು ಬಿಟ್ಟುಕೊಡಲು ಬಯಸದೆ ಹಟ್ಟು ಹಿಡಿದು ಕುಳಿತರೆ, ಹೊಸಬರಿಗೆ ಸ್ಥಾನವಾದರೂ ಹೇಗೆ ದೊರೆಯಬೇಕು? ಸದ್ಯ ಪ್ರಕಟವಾದಂತೆ ಪ್ರಚಲಿತ ಸದಸ್ಯರು ಬಹು ಪ್ರಮಾಣದಲ್ಲಿ ಅಪೇಕ್ಷಾಪತ್ರಗಳನ್ನು ಸಲ್ಲಿಸಿರುವುದು ತಿಳಿಯುತ್ತದೆ. ಕಾಂಗ್ರೆಸ್ ತತ್ವಗಳನ್ನು ಒಪ್ಪಿಕೊಂಡು ಆದರಂತೆ ನಡೆಯುವ, ಹಲವಾರು ವ್ರಾಮಾಣಿಕ ವ್ಯಕ್ತಿಗಳು ಇದ್ದಾರೆಂಬುದರಲ್ಲಿ ಸಂದೇಹವಿಲ್ಲ. ಇಂತಹರಿಗೆ ಮುಂದೆ ಬಂದು ಸೇವೆ ಸಲ್ಲಿಸುವ ಅವಕಾಶವನ್ನು ಒದಗಿಸಿಕೊಡಬೇಕಾದುದು ಇಂದು ಕಾಂಗ್ರೆಸ್ಸಿನ ಕರ್ತವ್ಯ ಹೊಸಬರು ಬಂದು ಮಾಡುವುದೇನು ಎಂಬ ಒಂದು ವಿಚಿತ್ರವಾದವೂ ಇದೆ. ಹೀಗೆ ಪ್ರಶ್ನಿಸುವವರಲ್ಲಿ ಹೆಚ್ಚಿನವರು ಪ್ರಚಲಿತ ಪ್ರತಿನಿಧಿಗಳಾಗಿರುವವರು. ಆದರೆ, ಪ್ರಶ್ನೆ ಮಾಡುವವರೂ ಒಂದು ಕಾಲದಲ್ಲಿ ಹೊಸಬರಾಗಿಯೇ ಚುನಾವಣಾರಂಗಕ್ಕೆ ಇಳಿದವರು; ಗೆದ್ದು ಬಂದವರು. ಅವರೇ ಸಾಧಿಸಿದ ಕೆಲಸದಲ್ಲಿ ಅವರನ್ನೇ—ಅವರಿಗಿಂತಲೂ ಹೆಚ್ಚಿನ ಸಾಮರ್ಥ್ಯವಿರುವವರು ಯಶಸ್ವಿಗಳಾಗುವರೆಂಬ ವಿಶ್ವಾಸ ಮೂಡಬೇಕಾದುದು ಅಗತ್ಯ.

ಅಷ್ಟು ಮಾತ್ರವಲ್ಲ ಗೆಲ್ಲುವುದೊಂದೇ ಕಾಂಗ್ರೆಸ್ಸಿನ ಧ್ಯೇಯವಾಗಬಾರದೆಂಬುದನ್ನು ಅದೆಷ್ಟು ಬಾರಿ ಹೇಳಿದರೂ ಸಾಲದು. ಜಟ್ಟಿ ಕಾಳಗದಲ್ಲಿ ಒಬ್ಬನು ಸೋತು ಹೋಗಲೇಬೇಕು. ಆದರೆ, ಆತ ಸೋತರೂ ಗರಡಿಯ ಸಾಮು ಪಟ್ಟೆಪರಸುಗಳೆಲ್ಲ ವ್ಯರ್ಥವಾಗುವುದಿಲ್ಲ. ಇಂತಹ ಜಟ್ಟಿಗಳಾದರೂ ನ್ಯಾಯ ಮಾರ್ಗದಲ್ಲೇ ಕಾಳಗ ಮಾಡಬೇಕಾದುದು ಅಪೇಕ್ಷಣೀಯ. ಹಾಗೆಯೇ ಕಾಂಗ್ರೆಸ್ಸು ತನ್ನ ಅಭ್ಯರ್ಥಿಗಳನ್ನು ಆರಿಸುವಾಗ ಜಾಗರೂಕವಿರಬೇಕು. ಯಾವ ಹಂಗು ದಾಕ್ಷಿಣ್ಯಗಳಿಗೆ ಒಳಗಾಗದೆ ಪಕ್ಷದ ಪಾವಿತ್ರ್ಯವನ್ನೂ ಗರಿಮೆಯನ್ನೂ ಉಳಿಸಿಕೊಂಡು ಆಡುವ ತತ್ವವನ್ನು ಆಚರಿಸ ತೋರಿಸಬೇಕು. ಇದಕ್ಕಾಗಿ ಹರಿಯೂಳುಗಳನ್ನು ಆರಿಸುವಾಗ ಸ್ಥಾನಗಳನ್ನು ಮಾರುಕಟ್ಟೆಯ ವಸ್ತುಗಳಂತೆ ಕಾಣಬಾರದು. ಉಮೇದ್ವಾರರ ಶಿಕ್ಷಣ, ತ್ಯಾಗಶೀಲತೆ, ಪ್ರಾಮಾಣಿಕತೆ, ತತ್ವನಿಷ್ಠೆ, ಸುಸಂಸ್ಕೃತತೆ, ಸದಾಚರಣೆ—ಮೊದಲಾದುವುಗಳನ್ನೇ ಅಳತೆಗೋಲನ್ನಾಗಿ ಮಾಡಿಕೊಂಡು ಸುಯೋಗ್ಯರೇ ಕಾಂಗ್ರೆಸ್ ಹರಿಯೂಳುಗಳಾಗುವಂತೆ ನೋಡಿಕೊಳ್ಳಬೇಕಾಗಿವೆ ಪ್ರಚಲಿತ ಸದಸ್ಯರಾಗಿರುವವರ ಮೇಲೆ ಒತ್ತಾಯ ತರುವುದಕ್ಕೆ ಮೊದಲೇ ಅವರು ಸ್ವೇಚ್ಛೆಯಿಂದ ಉತ್ಸಾಹಿ ಕಾರ್ಯನಿಷ್ಠ ನವಯುಗಕ್ಕೆ ಚುನಾವಣೆಯ ಬಾಗಿಲನ್ನು ತೆರೆದು ಕೊಡಬೇಕು ಹಳೆಯರ ಅನುಭವ ಮತ್ತು ಹೊಸಬರ ಕಾರ್ಯಶಕ್ತಿಗಳಿಂದಲೇ ಕಾಂಗ್ರೆಸ್ ಕಾರ್ಯಪ್ರವೃತ್ತವಾಗಿ ಜನಶಕ್ತಿಯನ್ನು ಗೆದ್ದುಕೊಳ್ಳಬೇಕಾಗಿದೆ,

ಸಂಕ್ಷಿಪ್ತ ಸುದ್ದಿಗಳು

ಅಕಾಲಿಗಳ ಆಗ್ರಹ

ಪಂಜಾಬ ಸುಬಾದ ಬೇಡಿಕೆಯ ನ್ಯಾಯಾ ನ್ಯಾಯಗಳನ್ನು ಒತ್ತಟ್ಟಿಗಿಟ್ಟರೆ ಒಂದು ವರ್ಷದ ಮಾಸ್ಟರ್ ತಾರಾಸಿಂಗರು ಉಪವಾಸ ಆರಂಭಿಸಿದುದು ಅನುಚಿತವೆಂಬುದೀಗ ವ್ಯಕ್ತವಾಗಿದೆ ಉಪವಾಸಗಳಿಂದ ಇಂತಹ ಸಂಕುಚಿತ ಪ್ರವೃತ್ತಿಗಳನ್ನು ಸಾಧಿಸಬಹುದು ಎಂದು ಅವರು ಬಯಸಿದ್ದರೆ, ಅದೀಗ ನಿರಾಶವಾಗುವ ಲಕ್ಷಣಗಳೇ ದೃಗ್ಗೋಚರವಾಗುತ್ತಿವೆ ಅಕಾಲಿ ನಾಯಕ-ಭಾರತ ಸರ್ಕಾರಗಳ ನಡುವೆ ನಡೆದ ಮಾತುಕತೆಗಳೆಲ್ಲವೂ ವ್ಯರ್ಥಗೊಂಡುದರಿಂದ ತಾರಾಸಿಂಗರು ನಿರಾಹಾರಿಯಾಗಿ ಸುಬಾದ ತತ್ವವನ್ನೊಪ್ಪಿಕೊಂಡರೆ ಸಾಕು, ಉಪವಾಸ ಹಿಂತೆಗೆಯುತ್ತೇನೆ ಎಂಬಲ್ಲಿ ವರೆಗೆ ಬಂದಿದ್ದಾರೆ ಈ ಸಂಬಂಧದಲ್ಲಿ ದೃಢವಾಗಿ ನಿಂತ ಪ್ರಧಾನಿ ನೆಹರೂ ಯಾವುದೇ ಕರಾರುಗಳ್ಳಿದೆ ಮಾತುಕತೆ ನಡೆಸಲು ಸಿದ್ಧರೇ ವಿನಃ ತತ್ವವನ್ನು ಒಪ್ಪಿಕೊಳ್ಳುವ ಕರ್ತವನ್ನು ದುನ್ನಿಸುವುದಿಲ್ಲ. ಅಕಾಲಿ ದುರೀಣರ ವರ್ತನೆ ಅಕಾಲಿಕವಾಯಿತೆಂದು ಬೇರೆ ಹೇಳಬೇಕೆ?

ಬರ್ಲಿನ್ ಪ್ರಶ್ನೆ

ಭಾರತವು ಪ್ರಗತಿ ಪಡೆಯಬೇಕಾದರೆ, ಕನ್ನ ಜೀವಿತಾವಧಿಯಲ್ಲೇ ಬಹು ಪ್ರಯತ್ನ ನಡೆಯಬೇಕೆಂಬ ಆಶಯ ಪ್ರಧಾನಿ ನೆಹರುಗಳದು ಭಾರತದ ಬಗ್ಗೆ ಅಹೋರಾತ್ರಿ ದುಡಿಯುವ, ಚಿಂತಿಸುವ, ಅಭ್ಯಾಸ ನಡೆಸುವ ಏಕ ಮೇವಾದ್ವಿತೀಯರಾದ ನೆಹರು ಭಾರತದಂತೆಯೇ ವಿಶ್ವದ ಬಗ್ಗೆಯೂ ಚಿಂತಿಸುತ್ತಾರೆ. ವಿಶ್ವ ಶಾಂತಿಯ ಪಲ್ಲವಿಯನ್ನೂ ಹಾಡುತ್ತಾರೆ ಕೊರಿಯಾ ಇಂಡೊನೇಸ್ಯ ಮೊದಲಾದೆಡೆಗಳ್ಳಗಡಿಕ್ಕಿಟ್ಟಿಗಳನ್ನು ಸಮರ್ಥ ರೀತಿಯಿಂದ ಬಗೆಹರಿಸಿದ ಭಾರತದ ಧುರೀಣ ನೆಹರುಗಳ ಮಧ್ಯಸ್ಥಿಕೆಯನ್ನು ಬರ್ಲಿನ್ ಸಮಸ್ಯಾ ಪರಿಹಾರಕ್ಕೂ ಬಯಸಲಾಗಿದೆ ಇದು ನೆಹರುಗಳಲ್ಲಿ ಜಗತ್ತಿಗಿರುವ ಗೌರವ ಮತ್ತು ವಿಶ್ವಾಸಗಳದ್ಯೋತಕ ತನಗೆ ಲಭಿಸಿದ ಈ ಅವಕಾಶವನ್ನು ನೆಹರು ಸಮರ್ಥ ನ್ಯಾಯೋಚಿತ ರೀತಿಯಲ್ಲಿ ಉಪಯೋಗಿಸುವರೆಂಬುದು ಖಂಡಿತ.

ಮಂಗಳೂರು ಹಾಸನ ರೇಲ್ವೆ.

ಮಂಗಳೂರು ಬಂದರಾಗುವುದೆಂಬುದು ವಕ್ತವಾದ ಮೇಲೆ, ಮಂಗಳೂರು ಹಾಸನ ರೈಲುದಾರಿಯ ಬೇಡಿಕೆಗೂ ಒಂದು ಗತ್ತು ಗಾರಿಕೆ ಬಂದಿತ್ತು ದಕ್ಷಿಣ ರೈಲ್ವೆಯ ಪಶ್ಚಿಮದ ಕೊನೆಯ ನಿಲ್ದಾಣವಾದ ಮಂಗಳೂರು ತನ್ನ ಹಿನ್ನಾಡಿನೊಂದಿಗೆ ಸೇರಿಸಲ್ಪಡುವಂತಾದುದು ಸಂತಸದ ಸುದ್ದಿ ಗುಲ್ಬರ್ಗಿಲಾಲನಂದಾರು ಮೂರನೆಯ ಯೋಜನೆಯ ಚರ್ಚೆಗೆ ಉತ್ತರ ಕೊಡುತ್ತಾ ಹಾಸನ—ಮಂಗಳೂರು ರೇಲ್ವೆ ಮತ್ತು ಮಂಗಳೂರು ಬಂದರಗಳು ಪರಸ್ಪರ ಸಂಬಂಧಿಸಿದ ಪ್ರಶ್ನೆಗಳು ಎಂದು ಯಥಾರ್ಥವನ್ನೇ ನುಡಿದರು.

ನಲ್ವತ್ತು ವರ್ಷಗಳು

ಈ ಸಂಚಿಕೆಯೊಡನೆ 'ನವಯುಗ'ವು ತನ್ನ ನಲ್ವತ್ತು ವರ್ಷಗಳನ್ನು ಮುಗಿಸುವುದು ಕನ್ನಡ ಪತ್ರಿಕೋದ್ಯಮವು ದಿನದಿಂದ ದಿನಕ್ಕೆ ಜಟಿಲವಾಗುತ್ತ ಬರುತ್ತಿರುವುದು, ಪತ್ರಿಕಾ ವ್ಯವಸಾಯದ ಭವಿಷ್ಯ ಉಳಿದ ಭಾಷೆಗಳಿಗಿಂತ ಕನ್ನಡದಲ್ಲಿ ತೀವ್ರ ಅಗೋಚರವಿರುವುದು ಸರ್ವ ವಿದಿತ ತತ್ವ-ಆದರ್ಶಗಳು ಕೇವಲ ಬಾಯಿ ಹಾರಿಕೆಯ ಮಟ್ಟಿಗೆ ಮಾತ್ರವಿರುವಂತೆ ಭಾಸವಾಗುವ ಈ ಸಂದಿಗ್ಧ ಅವಧಿಯಲ್ಲಿ ಪತ್ರಿಕೆಗಳಾದರೂ ಆದರ್ಶ-ತತ್ವಗಳನ್ನು ಹಿಡಿದು ಮುಂದುವರಿಯುವುದು ಕಠಿನವಾಗಿದೆ. ವೈಯಕ್ತಿಕ ಟೀಕೆಟಿಪ್ಪಣಿಗಳಿಗೆ ಅವಕಾಶವೀಯದೆ ನ್ಯಾಯ ಪ್ರತಿಪಾಲನೆಮಾಡುತ್ತಮುಂದುವರಿಯುವುದೆಂದರೆ, ಅದು ಹೆರಕ್ಲಿಸನ ಸಾಹಸವೇ ಎಂದು ಹೇಳಬೇಕು. ಇಂತಹ ಪರಿಸ್ಥಿತಿಯಲ್ಲೂ 'ನವಯುಗ'ವು ಇಗನೆಯ ವರ್ಷಕ್ಕೆ ಪಾದಾರ್ಪಣ ಮಾಡುವಂತಾದುದು ಸಂತೋಷದ ಸುದ್ದಿಯೂಗಿದೆ. ಇದಕ್ಕೆ ಕಾರಣರಾದವರು ಒಬ್ಬಿಬ್ಬರಲ್ಲ. ನಮ್ಮ ಬರೆಹಗಾರರು, ಜಾಹೀರಾತುದಾರರು ಇದರ ಯಶಸ್ಸಿನಲ್ಲಿ ಭಾಗವಹಿಸಿದವರು. ಎಲ್ಲರಿಗಿಂತ ಹೆಚ್ಚಾಗಿ ನಮ್ಮ ಚಂದಾದಾರರು ಬಹ್ವಂಶ ಯಶಸ್ಸಿಗೆ ಕಾರಣರಾಗಿದ್ದಾರೆ.

ಇವರಿಗೂ ಹಿತೈಷಿ—ಶುಭಚಿಂತಕರಿಗೂ ನಮ್ಮ ತುಂಬು ಹೃದಯದ ಅಭಿಂತ ಕೃತಜ್ಞತೆಗಳನ್ನು ಸಮರ್ಪಿಸುತ್ತೇವೆ. ಮುಂದಕ್ಕೂ ಇವರ ಸಹಕಾರ ಯೋಚಿಸುತ್ತೇವೆ. ಮುಖ್ಯವಾಗಿ ಬರೆಹಗಾರರು ಕಳಿಸುವ ಲೇಖನವು ವಿವಿಧ ಅಭಿರುಚಿಗಳಿಗೆ ಒಪ್ಪುವಂತಹವಿದ್ದು, ಅತಿ ಚಿಕ್ಕವಾಗಿರುವುದು ಅಗತ್ಯ. ಚಿಕ್ಕ ಚಿಕ್ಕ ಲೇಖನಗಳು ಬಹು ಸಂಖ್ಯೆಯಲ್ಲಿ ಲೇಖನ ಪ್ರಕಾಶನಕ್ಕೆ ಆಸ್ಪದ ವೀಯುವುದು ಸಾಧ್ಯವಾಗುವುದು. ಸಾಪ್ತಾಹಿಕ ಪತ್ರಿಕೆಗಳ ಮುಖ್ಯ ಜೀವಾಳವೆಂದರೆ ಚಂದಾದಾರರೆಂಬುದನ್ನು ಮರೆಯುವುದು ಸಾಧ್ಯವಿಲ್ಲ. ಇವರು ತಮ್ಮಿಂದ ಸಲ್ಲತಕ್ಕ ಚಂದಾಹಣವನ್ನು ಹೊತ್ತಿಗೆ ಸರಿಯಾಗಿ ಕ್ರಮವಾಗಿ ಪಾವತಿ ಮಾಡುತ್ತ ಬರುವುದು ಅಗತ್ಯವಿದೆ ಅಲ್ಲದೇ ಅದಷ್ಟು ಹೆಚ್ಚಿನ ಚಂದಾದಾರರನ್ನು ಕೂಡಿಸಿ ಕೊಡುವುದು, ಪಂಚಾಯತ ಬೋರ್ಡು-ಊರ ವಾಚನಾಲಯ—ಶಾಲೆ--ಕಾಲೇಜುಗಳಿಗೆ ಕರಿಸಿಕೊಳ್ಳುವಂತೆ ಪ್ರಯತ್ನಿಸುವುದು—ಮೊದಲಾದ ರೀತಿಗಳಿಂದ ಸಹಕರಿಸಬಹುದು ಹೀಗೆ ಬಹುಜನರ ಸೇವೆಗಳು ನಡೆಯಲಿ; 'ನವಯುಗ'ವು ಸ್ವಪಾದಗಳ ಮೇಲೆ ನಿಲ್ಲುವಂತಾಗಲಿ.

ವಿನಂತಿ

ಚಂದಾಹಣ ಬಾಕಿ ಇರುವ ನಮ್ಮ ಚಂದಾದಾರರಿಗೆಲ್ಲಾ ಈ ವೇಳೆಲೇ ಕಾರ್ಡು ಬರೆದಿರುತ್ತೇವೆ ಅದರಂತೆ ಕೆಲವರು ಈಗಾಗಲೇ ಚಂದಾಹಣವನ್ನು ಪಾವತಿ ಮಾಡಿರುತ್ತಾರೆ ಇನ್ನೂ ಸಾವತಿ ಮಾಡದವರು ದಯಮಾಡಿ ಅದಷ್ಟು ಧೈರ್ಯ ಕಳುಹಿಸಿಕೊಡುವಂತೆ ಬಿನ್ನವಿಸುತ್ತೇವೆ. ವಿ ಪಿ ಮಾಡಿದರೆ 75 ನಯೇಪೈಸೆಯಷ್ಟು ಹೆಚ್ಚಿಗೆ ಬೀಳುವುದರಿಂದ ಎಲ್ಲರೂ ಮುಂದಾಗಿ ಮನಿಯಾರ್ಡರು ಮಾಡುವಂತೆ, ಇಲ್ಲವೇ ಸಿಂಡಿಕೇಟ್ ಬ್ಯಾಂಕಿನಲ್ಲಿ ಕಟ್ಟುವಂತೆ ಅಪೇಕ್ಷಿಸುತ್ತೇವೆ. ಅಂತೂ ಚಂದಾ ಬಾಕಿದಿದ್ದರೆ ಕ್ರಮಶಃ ವಿ ಪಿ ಮಾಡುತ್ತೇವೆ.

—ಮೆನೇಜರ್.

ಅಲ್ಲಲ್ಲಿಯ ಸುದ್ದಿಸಾರ

ಉದ್ಘಾಟನಾ ಸಮಾರಂಭ— ಉಡುಪಿ ನಗರ ಸಭೆಯ ರಜತೋತ್ಸವ ಸಮಿತಿಯವರು ಪ್ರಕಟಿಸಿದ ರಜತೋತ್ಸವ ಸ್ಮಾರಕ ಸಂಚಿಕೆಯ ಉದ್ಘಾಟನಾ ಸಮಾರಂಭವು ಇದೇ ತಾ. 26ರಂದು ಶ್ರೀ ಕೋಟಿ ಶಿವರಾಮ ಕಾರಂತರಿಂದ ಮುನ್ಸಿಪಲ್ ಮಹಾತ್ಮಾ ಗಾಂಧಿ ಸೀನಿಯರ್ ಬೇಸಿಕ್ ಶಾಲಾ ಕಟ್ಟಡದಲ್ಲಿ ಶ್ರೀ ಟಿ. ಎ ಪೈಗಳ ಅಧ್ಯಕ್ಷತೆಯಲ್ಲಿ ನೆರವೇರಿಸಲ್ಪಟ್ಟಿತು. ಡಾ. ಕೆ. ಎಲ್. ಐತಾಳರು ಸ್ವಾಗತಿಸಿದ ಬಳಿಕ ಶ್ರೀ ಎ. ಜಿ. ಅಲ್ಲಿಯವರು ವರದಿಯನ್ನೊಪ್ಪಿಸಿದರು. ಶ್ರೀ ಕೆ. ಎಸ್. ಹರಿದಾಸ ಭಟ್ಟರು ಸಂದೇಶಗಳನ್ನೋದಿದರು. ಶ್ರೀ ಕಾರಂತರು ನಗರ ಸಭಾ ಸದಸ್ಯರ ಹೊಣೆಗಾರಿಕೆ, ನಗರದ ಬೆಳವಣಿಗೆಗಾಗಿ ಕಟ್ಟಡಗಳನ್ನು ರಚಿಸುವ ಅವಶ್ಯಕತೆ, ನಗರ ಸೌಂದರ್ಯ ಸೌಕರ್ಯಗಳ ಕಡೆಗೆ ಇಡಬೇಕಾದ ಗಮನಾದಿಗಳನ್ನು ವಿವರಿಸಿ ಸ್�ಾರಕ ಸಂಚಿಕೆಯನ್ನು ಉದ್ಘಾಟಿಸಿದರು. ಅನಂತರ ಡಾ. ಪಿ. ಜಿ. ಆಚಾರ್ಯರು ಉಡುಪಿ ನಗರ ಸಭೆಯ ಮೆನೇಜರರಾಗಿದ್ದ ಶ್ರೀ ಕೆ. ರಾಘವೇಂದ್ರ ಕಾಮತರ ತೈಲಚಿತ್ರವನ್ನು ಉದ್ಘಾಟಿಸಿ ಅವರ ದಕ್ಷತೆ ಕರ್ತವ್ಯ ನಿರ್ವಹಣೆ, ಗುಣ ನಡತೆಗಳನ್ನು ಕೊಂಡಾಡಿ, ಇಂದಿನ ಸಿಬಂದಿ ಅವರನ್ನು ಅನುಕರಿಸುವಂತಾಗಬೇಕೆಂದರು. ಅಧ್ಯಕ್ಷ ಶ್ರೀ ಪೈಗಳು ಉಡುಪಿ ನಗರ ಸಭೆಯ ಆರ್ಥಿಕ ಪರಿಸ್ಥಿತಿಯನ್ನೂ, ಉಡುಪಿಯ ಆವಶ್ಯಕತೆಗಳನ್ನೂ, ಬೇಳೆ ಕಟ್ಟಡ ನಿರ್ಮಾಣದ ಕಾರಂತರ ಸಲಹೆಯನ್ನು ಅನುಮೋದಿಸಿ ಭಾಷಣವಿತ್ತರು. ಶ್ರೀ. ಕೆ. ಎಸ್. ಹರಿದಾಸ ಭಟ್ಟರು ಆಭಾರಮನ್ನಿಸಿದರು.

ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್— ಕ್ರಮತಿ ಪಥದಲ್ಲಿ ಮುನ್ನಡೆಯುತ್ತಿರುವ ಉಡುಪಿಯ ಈ ಬೇಂಕಿಂಗ್ ಸಂಸ್ಥೆಗೆರೂ 10ರ 50ಸಾವಿರ ಬಿ. ಕ್ಲಾಸ್ ಟಿಡಿಸಿನರಿ ಪಾಲುಗಳ ಮೂಲಕ ರೂ 5 ಲಕ್ಷದ ಹೆಚ್ಚಿನ ಪಾಲು ಭಂಡವಾಳವನ್ನು ಎತ್ತಿಬಿಸಿ ಸ್ವಾತಿ ದೊರೆತಿರುವುದು, ಈ ಹಣವು ಬೇಂಕಿಂಗ್ ಸಂಸ್ಥೆಯ ಮೂಲ ಭಂಡವಾಳವನ್ನು ಸುಭದ್ರವಾಗಿರಿಸಿರುವುದಕ್ಕೆ ಉಪಯೋಗಿಸಲಾಗುವುದು. ಬೇಂಕಿನ ಈಗಿನ ತೆತ್ತ ಪಾಲು ಭಂಡವಾಳವು ನೂರು ರೂಪ್ಯಾಗಳ 2 ಸಾವಿರ ಎ. ಕ್ಲಾಸ್ ಟಿಡಿಸನರಿ ಪಾಲುಗಳ ಮತ್ತು ಪತ್ತು ರೂಪ್ಯಾಗಳ 30 ಸಾವಿರ ಬಿ. ಕ್ಲಾಸ್ ಟಿಡಿಸನರಿ ಪಾಲುಗಳ ರೂ. 5 ಲಕ್ಷವಾಗಿದೆ.

ಸಂತಾಪ ಸೂಚಕ ಸಭೆ—ಮಂಗಳೂರಿನ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದ ಪೆಂಕಪ್ಪ ಪೂಂಜ ಸಭಾ ಸದನದಲ್ಲಿ ತಾ. 24ರಂದು ಸಂಜೆ ಶ್ರೀ ಬಿ. ಎಸ್. ಭಾಸ್ಕರ ರೈಯವರ ನಿಧನದ ಬಗ್ಗೆ ಸಂತಾಪ ಸೂಚಕ ಸಭೆಯೊಂದು ಎಸ್. ಆರ್. ಎಸ್. ಹೋರ್ಮ್ ಪಿ. ಬಿ. ಎಸೋಸಿಯೇಶನ್ ಮತ್ತು ಯೂನಿಯನ್ ವತಿಯಿಂದ ಮೂಡಿ ಜಿಲ್ಲಾ ಬೋರ್ಡು ಅಧ್ಯಕ್ಷ ಶ್ರೀ ಬಿ. ಮಂಜಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದವರಂಕರಾಳ್ಳರಮೂನಂದ ಹೆಗ್ಡೆ, ಎಸ್. ಎಂ. ಆಡ್ಯಂತಾಯ, ಕೆ. ಆರ್. ಶೆಟ್ಟಿ, ಪಿ. ಎಸ್. ತಿಮ್ಮಪ್ಪ ಶೆಟ್ಟಿ, ಡಾ. ಕೆ. ಟಿ. ಶೆಟ್ಟಿರೇ ಮೊದಲಾದವರು ಮೃತರ ಕಾರ್ಯದಕ್ಷತೆಯನ್ನು ಕೊಂಡಾಡಿ ಅವರ ಆತ್ಮಕ್ಕೆ ಶಾಂತಿಯನ್ನು ಕೋರಿದರು. ಸಂತಾಪ ಸೂಚಕ ನಿರ್ಣಯವು ಸ್ವೀಕರಿಸಲ್ಪಟ್ಟಿ ಮೃತರ ಕುಟುಂಬಕ್ಕೆ ಕಳುಹಿಸುವರೆ ನಿಶ್ಚಯಿಸಲಾಯಿತು.

ಕಡಿಯಾಳಿ ಹಾ. ಎ. ಶಾಲೆಯ— ಮಕ್ಕಳ ಕೂಟದ ಸಂಯುಕ್ತ ವಾರ್ಷಿಕ ಸಭೆಯು ಉದ್ಘಾಟನೆಯು ಉಡುಪಿ ನಗರಸಭೆಯ ಉಪಾಧ್ಯಕ್ಷ ಶ್ರೀ ಪಿ. ರಂಗನಾಥ ಶೆಣೈಯವರಿಂದ ಇತ್ತೀಚೆಗೆ ನೆರವೇರಿತು. ಇದೇ ಸಂದರ್ಭದಲ್ಲಿ ಶಾಲೆಯ ಹಳೆಯ ವಿದ್ಯಾರ್ಥಿ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಎಸ್. ಗೋಪೀಚಂದ ರಾವ್ ಇವರು ಪಠ್ಯಕ್ರಮ ರವೀಂದ್ರನಾಥರ ಭಾವಚಿತ್ರವನ್ನು ಅನಾವರಣ ಮಾಡಿದರು. ಮಕ್ಕಳು ಸ್ವಾತಂತ್ರ್ಯಸಂಗ್ರಾಮದ ವಿಭಿನ್ನ ನಾಯಕರ ಬಗ್ಗೆ ಭಾಷಣವನ್ನು ಮಾಡಿದರು. ಮನರಂಜನೆಯ ಕಾರ್ಯಕ್ರಮವನ್ನೂ ಪ್ರದರ್ಶಿಸಿದರು. ಮುಖ್ಯೋಪಾಧ್ಯಾಯ ಶ್ರೀ ವಿ. ಗುರುರಾಜ ಭಟ್ಟರು ಆರಂಭದಲ್ಲಿ ಸ್ವಾಗತಭಾಷಣವನ್ನು ಮಾಡಿ ಅತಿಥಿಗಳ ಪರಿಚಯವನ್ನು ನೂಡಿಕೊಟ್ಟರು.

ಪಾಸಗಿ ಶಾಲೆಗಳ ಗೆಂಡಾಂತರ ನಿವಾರಣೆಗೆ ಆರೋಗ್ಯ ಸಚಿವರ ಪ್ರಯತ್ನ— ಕುಂದಾಪುರಗಿರಿ, ಕಳೆದ ತಾಂಗಳು 18—8—61ರಲ್ಲು ದ. ಕ. ಜಿಲ್ಲಾ ಖಾಸಗಿ ಶಾಲಾ ಮೆನೇಜರರ ಸುತ್ತು ಆಧ್ಯಾಪಕರ ಸಂಘಗಳ ಸಂಯುಕ್ತ ಶಿಷ್ಟ ಮಂಡಳವು ಬೆಂಗಳೂರಿನಲ್ಲಿ ಮಾನ್ಯ ವಿದ್ಯಾ ಮಂತ್ರಿಗಳನ್ನೂ, ಕಾನೂನು ಮಂತ್ರಿಗಳನ್ನೂ ಏಕ ಕಾಲದಲ್ಲಿ ಭೇಟಿಯಾಗಿ ನಿವೇದಿಸಿಕೊಂಡ ವಿಚಾರ ಈ ಗಾಗಲೇ ಪ್ರಕಟವಾಗಿದೆ.

ಮತ್ತೆಯಲ್ಲದೆ, ಈ ನಿಯೋಗವು ಮಾನ್ಯ ಆರೋಗ್ಯ ಮಂತ್ರಿ ಡಾ. ಕೆ. ಕೆ. ಹೆಗ್ಡೆಯವರನ್ನು ಭೇಟಿ ಮಾಡಿ ಮೆನೇಜರರಿಗೆ ಹಾಗೂ ಅಧ್ಯಾಪಕರಿಗೆ ಒದಗಿದ ಗಂಡಾಂತರಗಳನ್ನು ನಿವೇದಿಸಿಕೊಂಡಾಗ ಮಾನ್ಯ ಆರೋಗ್ಯ ಮಂತ್ರಿಗಳು ಈ ಕುರಿತು ತನ್ನ ಹಾರ್ದಿಕ ಅನುಕಂಪವನ್ನು ತೋರಿಸಿದ್ದು ಮಾತ್ರವಲ್ಲದೆ ಸದ್ರಿ ಶಿಷ್ಟ ಮಂಡಳವು ಬೆಂಗಳೂರನ್ನು ತಲಪುವ ಮೊದಲೇ ತಾನು ಈ ವಿಚಾರವನ್ನು ವಿದ್ಯಾ ಮಂತ್ರಿಗಳ ಗಮನಕ್ಕೆ ಬರಹ ಮೂಲಕ ತರಿಸಿರುತ್ತೆವಾಗಿಯೂ, ಮುಂದಕ್ಕೂ ಈ ಕುರಿತು ತನ್ನ ಸಂಪೂರ್ಣ ನೆರವನ್ನು ಕೊಡುವುದಾಗಿಯೂ ಭರವಸೆಯಿತ್ತಿರುವರು. ಹಾಗೆಯೇ ಸದ್ರಿ ಶಿಷ್ಟ ಮಂಡಳವು ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಯಸ್. ನಿಜಲಿಂಗಪ್ಪ, ಎಂ. ಎಲ್. ಎ. ಯವರನ್ನೂ, ಉಪಾಧ್ಯಕ್ಷ ಡಾ. ನಾಗಪ್ಪ ಅಳ್ವ, ಎಂ. ಎಲ್. ಎ ಯವರನ್ನು ಭೇಟಿಯಾಗಿ ಮನವಿಮಾಡಿಕೊಂಡಲ್ಲಿ, ಅವರು ಕೊಡಾ ಈ ಕುರಿತು ನ್ಯಾಯವನ್ನು ದೊರಕಿಸಿ ಕೊಡುವುದಾಗಿ ಆಶ್ವಾಸನೆಯನ್ನಿತ್ತಿರುವರು. ಅದರಿಂದ ಜಿಲ್ಲೆಯ ನೂರಾರು ಮೆನೇಜರರೂ ಸಾವಿರಾರು ಅಧ್ಯಾಪಕರೂ ಈ ವಿಷಯದಲ್ಲಿ ಸಮಾಧಾನ ಪಡಬಹುದೆಂದು ದ. ಕ. ಜಿಲ್ಲಾ ಖಾಸಗಿ ಪ್ರಾಥಮಿಕ ಶಾಲಾ ಮೆನೇಜರರ ಸಂಘದ ಕಾರ್ಯದರ್ಶಿ ಶ್ರೀ ಕುರುಕಾಲು ಗಣಪಯ್ಯ ಶೆಟ್ಟರು ತಿಳಿಸುತ್ತಾರೆ

ಕನ್ನಡ ಸಂಘದ ಉದ್ಘಾಟನೆ— ಇದೇ ತಾ. 24ರಂದು ಮಂಗಳೂರು ಗವರ್ನ್‌ಮೆಂಟ್ ಕಾಲೇಜಿನ ಸಭಾ ಸದನದಲ್ಲಿ ಕನ್ನಡ ನುಡಿ, ಸಾಹಿತ್ಯ, ಸಂಸ್ಕೃತಿಗಳ ಏಳಿಗೆಯನ್ನೇ ಧ್ಯೇಯವಾಗಿಟ್ಟುಕೊಂಡು ಸ್ಥಾಪಿತವಾಗಿರುವ ಕನ್ನಡ ಸಂಘವನ್ನು ಪ್ರಸಿದ್ಧ ಕವಿ ಶ್ರೀ ಕಯ್ಯಾರ ಕಿಞ್ಞಣ್ಣ ರೈಯವರು ಉದ್ಘಾಟಿಸಿದರು. ಸಂಘದ ಅಧ್ಯಕ್ಷ ಶ್ರೀ ತೆಕ್ಕೆಂಜ ಗೋಪಾಲಕೃಷ್ಣ ಭಟ್ಟರು ಸ್ವಾಗತಿಸಿದರು. ಕೋಶಾಧಿಕಾರಿ ಶ್ರೀ ಸಂತೋಷ ಕುಮಾರ್ ಗುಲ್ವಾಡಿಯವರು ಸಂದೇಶಗಳನ್ನು ಓದಿದರು. ಉದ್ಘಾಟಕ ಶ್ರೀ ರೈಗಳು ಜಿಲ್ಲೆಯಲ್ಲಿ ಸಾಹಿತ್ಯ ಬೆಳೆದು ಬಂದ ಬಗೆಯನ್ನೂ, ಸಾಹಿತ್ಯ ಸಂಘಗಳ ಹೊಣೆಯನ್ನೂ, ರಚನಾತ್ಮಕ ಕಾರ್ಯದ ಅವಶ್ಯಕತೆಯನ್ನೂ ವಿವರಿಸಿದರು ಸಮಾರಂಭದ ಅಂಗವಾಗಿ ಜಿಲ್ಲೆಯ ಪ್ರಸಿದ್ಧ ಯಕ್ಷಗಾನ ಕಲಾಗಾರರ ಕೂಡುವಿಕೆಯಿಂದ ಯಕ್ಷಗಾನ ಕಥಾ ಕಾಲಕ್ಷೇಪ ನಡೆಯಿತು. ಕಾರ್ಯದರ್ಶಿ ಎ. ಬಾಲಕೃಷ್ಣ ಶೆಟ್ಟಿ ಕೊಳಲಿ ಇವರು ಕೃತಜ್ಞತೆಗಳನ್ನರ್ಪಿಸಿದರು.

ಎಲ್. ಎಲ್. ಎ. ಲೈಬ್ರೆರಿ—ಇದರ ಉಡುಪಿ ಸಲಹಾ ಸಮಿತಿ ಸಭೆಯು ಹಿಂದಿನ ಅಧ್ಯಕ್ಷ ಡಾ. ಪಿ. ವಿ. ವ್ಯಾಸರಾಯರ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ಜರಗಿ, ಶ್ರೀ ಟಿ. ಎ. ವಾಸುದೇವನಾರವರು ಅಧ್ಯಕ್ಷರಾಗಿ ಆರಿಸಲ್ಪಟ್ಟರೆಂದೂ, ಸಭೆಯು ಹಲವು ವಿಷಯಗಳು ಚರ್ಚಿಸಲ್ಪಟ್ಟು ಅಂಗೀಕೃತವಾದವೆಂದೂ, ಕಮಿಟಿಯ ಕನ್ವೀನರಾದ ಲೈಬ್ರೇರಿಯನರು ತಿಳಿಸುತ್ತಾರೆ.

ಸವಣೂರು— ಸ್ಥಳೀಯ ಬೋರ್ಡ್ ಎ. ಶಾಲೆಯ ಶಾಲಾ ಅಭಿವೃದ್ಧಿ ಸಮಿತಿ ಚುನಾವಣೆಯು ತಾ. 24ರಂದು ಜರಗಿ, ಶ್ರೀ ಸವಣೂರು ಗುತ್ತು ಎಸ್. ವೆಂಕಪ್ಪ ರೈಯವರು ಅಧ್ಯಕ್ಷರಾಗಿ, ಎ. ಎಸ್. ಶೀನಪ್ಪ ರೈಯವರು ಉಪಾಧ್ಯಕ್ಷರಾಗಿ, ಮತ್ತಿತರರು ಸದಸ್ಯರಾಗಿ ಆರಿಸಲ್ಪಟ್ಟರು.

ತಾ. 21ರಂದು ಶ್ರೀ ಸ್ವಾಮಿ ನಿತ್ಯಾನಂದರು ಸಮೀಪಸ್ಥರಾದ ಪ್ರಯುಕ್ತ ಸಭೆ, ಭಜನಾ ಸೇವೆಯು ಸವಣೂರು ಗುತ್ತು ಶ್ರೀ ಎಸ್. ವೆಂಕಪ್ಪ ರೈಯವರ ಅಧ್ಯಕ್ಷತೆಯಲ್ಲಿ ಜರಗಿತು. ಈ ಸಂದರ್ಭದಲ್ಲಿ ಸ್ವಾಮಿಜಿಯ ಅದ್ಭುತ ಪವಾಡಗಳ ಕುರಿತು ಶ್ರೀಗಳಾದ ಪಿ. ಗಂಗಾಧರ, ಎ. ಎಸ್. ಶೀನಪ್ಪ ರೈ, ಡಿ. ಕಿಟ್ಟಣ್ಣ ರೈ, ಕೆ. ಶೀನಪ್ಪ ಮೊದಲಾದವರು ಭಾಷಣವಿತ್ತರು. ಸ್ವಾಮಿಜಿಯ ಸ್ಮಾರಕಾರ್ಥವಾಗಿ, ಭಜನಾ ಮಂದಿರವೊಂದನ್ನು ಕಟ್ಟಿಸಬೇಕೆಂದೂ ನಿರ್ಣಯಿಸಲಾಯಿತು.

ಕಾಂಗ್ರೆಸ್ ಟಿಕೇಟಿನ ಜಿಲ್ಲೆಯ ಅಭ್ಯರ್ಥಿಗಳು—ಮುಂಬರುವ ಮಹಾಚುನಾವಣೆಯಲ್ಲಿ ದ. ಕ. ಜಿಲ್ಲೆಯಲ್ಲಿ ಕಾಂಗ್ರೆಸ್ ವತಿಯಿಂದ ಸ್ಪರ್ಧಿಸ ಬಯಸುವವರ ಕೊನೆಯ ಪಟ್ಟಿಯನ್ನು ಎಂ. ಪಿ. ಸಿ. ಪಿ. ಪ್ರಕಟಿಸಿದೆ. ವಿವರಗಳು ಹೀಗಿವೆ.

ಲೋಕಸಭೆ

ಮಂಗಳೂರು—(ಉತ್ತರ) 1. ಶ್ರೀ ಯು. ಶ್ರೀನಿವಾಸ ಮಲ್ಯ, 2. ಶ್ರೀ ಬಿ. ಮಂಜಯ್ಯ ಹೆಗ್ಡೆ, 3. ಶ್ರೀ ಬಿ. ಗಂಗಾಧರ ದಾಸ್.

ಮಂಗಳೂರು (ದಕ್ಷಿಣ) 1. ಶ್ರೀ ಕೆ. ಸೂರ್ಯನಾರಾಯಣ ಅಡಿಗ, 2. ಶ್ರೀ ಕೆ. ಆರ್. ಆಚಾರ್, 3. ಶ್ರೀ ಎ. ರಂಕರ ಆಳ್ವ 4. ಡಾ|ಕೆ. ಮಂಜುನಾಥ ರೈ, 5. ಶ್ರೀ ಬಿ. ಬಿ. ಶೆಟ್ಟಿ,

ವಿಧಾನ ಸಭೆ

ಮಂಗಳೂರು 1. (1) ಶ್ರೀ ಬಿ. ಸೈಯಂತಿ ಬಾಳಿಗ. (2) ಶ್ರೀ ಮಹೇಲ್ ಶ್ರೀನಿವಾಸ ನಾಯಕ್, (3) ಶ್ರೀಮತಿ ಬಳ್ಳೇದಿಯ ಅಲ್ಲುಳಕ್ಕರ್, (4) ಶ್ರೀ ಜೆ. ಎ. ಬ್ರಿಟೋ.

ಮಂಗಳೂರು 2. (1) ಶ್ರೀ ಬಿ. ರಾಜೀವ ಭಂಡಾರಿ, (2) ಶ್ರೀ ಬಿ. ಎಂ. ಇದಿನಬ್ಬ.

ವಾಣಿಮಂಗಳೂರು (1) ಶ್ರೀ ಬಿ. ರಾಜೀವ ಭಂಡಾರಿ, (2) ಶ್ರೀ ಎ. ಶ್ರೀಧರ.

ಪುತ್ತೂರು (ಜನರಲ್) (1) ಶ್ರೀ ಕೆ. ವೆಂಕಟ್ರಮಣ ಗೌಡ, (2) ಶ್ರೀ ಕುಂಬ್ರ ಜತ್ತಪ್ಪ ರೈ, 3. ಶ್ರೀ ವಿಟ್ಟಲದಾಸ ಶೆಟ್ಟಿ.

ಪುತ್ತೂರು—(ಶಾಡ್ಯೂಲ್ಡ್ ಕಾಸ್ಟ್) 1 ಶ್ರೀ ಸುಬ್ಬಯ್ಯ ನಾಯಕ್, 2. ಶ್ರೀ ರಂಗ ನಾಯಕ್, 3. ಶ್ರೀ ಕೆ. ಪೆಂಕಪ್ಪ, 4. ಶ್ರೀ ಐತಪ್ಪ ನಾಯಕ್, 5. ಶ್ರೀಮತಿ ಪದ್ಮಾವತಿ.

ಬೆಳ್ತಂಗಡಿ— 1. ಶ್ರೀ ಬಂಟ್ವಾಳ ನಾರಾಯಣ ನಾಯಕ್ ಮತ್ತು 2. ಶ್ರೀ ಪಂಜೆ ಸುಬ್ರಾಯ.

ಸುರತ್ಕಲ್— 1. ಶ್ರೀ ದೂಮ್ಪ ಕೆ 2. ಡಾ| ನಾಗಪ್ಪ ಅಳ್ವ, 3. ಶ್ರೀ ಜೆ. ಎ. ಬ್ರಿಟ್ಟೊ, 4. ಶ್ರೀ ಎಸ್. ಕೆ. ಅಮೀನ್, 5. ಶ್ರೀ ಬಿ. ಗಂಗಾಧರ ದಾಸ್.

ಕಾಪು— 1. ಶ್ರೀ ಟಿ. ಎ. ಪೈ, 2. ಶ್ರೀ ಎಸ್. ಎಕ್ಸ್. ಡಿ. ಪಿಂಟೋ, 3 ಶ್ರೀ ಎ. ರಾಮಣ್ಣ, 4. ಎ. ನಾರಾಯಣ ಹೆಗ್ಡೆ.

ಉಡುಪಿ— 1. ಶ್ರೀ ಮಧ್ವರಾಜ್, ಮಲ್ಪೆ.

ಬ್ರಹ್ಮಾವರ— 1. ಶ್ರೀ ಜಗಜ್ಜೀವನ ದಾಸ್ ಶೆಟ್ಟಿ, 2. ಶ್ರೀ ಸೂರಪ್ಪ ಶೆಟ್ಟಿ, ಕೊಳ್ಕೆಬೈಲು. 3. ಶ್ರೀ ಕೆ. ಲಕ್ಷ್ಮೀನಾರಾಯಣ ಹೊಳ್ಳ, 4. ಶ್ರೀ ಎ. ನಾರಾಯಣ ಬೆಗ್ಡೆ.

ಕುಂದಾಪುರ— 1. ಶ್ರೀ ಎಸ್. ಎಸ್. ಕೊಳ್ಕೆಬೈಲು, 2 ಶ್ರೀ ಕೆ. ಸೂರಪ್ಪ ಶೆಟ್ಟಿ, 3. ಶ್ರೀ ಎನ್. ಎಸ್. ಪರಮೇಶ್ವರಯ್ಯ.

ಬೈಂದೂರು— 1. ಶ್ರೀ ಎದ್ದಳೆ ಮಂಜಯ್ಯ ಶೆಟ್ಟಿ, 2. ಶ್ರೀ ಎ. ಜಿ. ಕೊಡ್ಗಿ.

ಕಾರ್ಕಳ— 1 ಡಾ| ಕೆ. ಕೆ. ಹೆಗ್ಡೆ 2. ಶ್ರೀ ಎಂ. ಹರಿಶ್ಚಂದ್ರ, 3. ಶ್ರೀ ಎಸ್. ಧರ್ಮಸಾಮ್ರಾಜ್ಯ, 4. ಶ್ರೀ ಬಿ. ಬಿ. ಶೆಟ್ಟಿ, 5. ಶ್ರೀ ಕೆ. ಪಿ. ಸಚ್ಚಿದಾನಂದ.

ಮೂಡಬಿದ್ರೆ—(ಶಾಡ್ಯೂಲ್ಡ್ ಸ್ಥಾನ) 1. ಶ್ರೀ ಮಂಜಪ್ಪ ಉಳ್ಳಾಲ್, 2. ಶ್ರೀ ಯು. ಗೋಪಾಲಕೃಷ್ಣ, 3. ಶ್ರೀ ಕೆ. ಸೀತಾರಾಮ ಪಡಕಣ್ಣಾಯ.

ತಿದ್ದುಪಡಿ

ಇದೇ ತಿಂಗಳ ಅಂತ್ಯಕ್ಕೆ ಕೊನೆಗೊಳ್ಳುವ ನವಯುಗದ ವರ್ಷವು 40 ಆಗಿರುತ್ತದೆ. ಆದರೆ ತಾ. 18—5—61 ರಿಂದ ಎದುರು ಪುಟದಲ್ಲಿ ಸಂಪುಟ 41 ಎಂತ ತಪ್ಪಾಗಿ ಬೀಳುತ್ತ ಬಂದಿದೆ ಅಲ್ಲದೆ ತಾ. 18—5—61ರ ಸಂಚಿಕೆ 36ರ ಬದಲಿಗೆ 35 ಎಂತಲೂ ತಪ್ಪಾಗಿ ಬಿದ್ದು ಕೊನೆತನಕ ಅದೇ ನಂಬ್ರ ಮುಂದುವರಿಸಲ್ಪಟ್ಟಿದೆ. ಹೀಗಾಗಿ ವರ್ಷವಲ್ಲಿ 51 ಸಂಚಿಕೆ ಬದಲಿಗೆ 50 ಆಗಿ ಒಂದು ಸಂಚಿಕೆ ಕಡಿಮೆ ತೋರುವಂತಾದುದಕ್ಕೆ ವಿಷಾದಿಸುತ್ತೇವೆ. —ಮೆನೇಜರ್.

ಪುತ್ತೂರು ಡಿ. ಮು. ಕೋರ್ಟಿನಲ್ಲಿ

R.E.A. 288/1961 in O.S. 190/58

ಶಾಂತ ದೇವಿ —ಅರ್ಜಿದಾರಳು

ಮತ್ತು

ಬಿ. ಪಾತುಮಾ ಕೂಡ —ಎದ್ರಿರು.

ಎದ್ರಿರು 8 ಕೈಜಯ ಸೇರಾಜಿ ಇದ್ದು ಕುಂಞ ಬ್ಯಾರಿ ಹೆಂಡ್ತಿ 9 ಮರಿಯಂಮ ಅಬ್ದುಲ್ ರಹಿಮಾನ್ ಬ್ಯಾರಿ ಹೆಂಡ್ತಿ 10 ಬೀಬಿ ಆಮರ್ದಕುಟ್ಟಿ ಬ್ಯಾರಿ ಹೆಂಡ್ತಿ. ಇ ಮೈರೆ ಮಮ್ಮದಿ ಬ್ಯಾರಿ ಮಕ್ಕಳು, 8ನೇ ಎದ್ರಿ ಬರಿಟ್ಟಾಳ ತಾಲೂಕು ಪೇರುವಾಯ ಗ್ರಾಮದ ಸೇರಿಗೆ ಎಂಬಲ್ಲಿಯೂ, 9ನೇ ಎದ್ರಿಯು ಕಾಸರಗೋಡು ತಾಲೂಕು ಮುಳಿಂಜ ಗ್ರಾಮದಲ್ಲಿಯೂ 10ನೇ ಎದ್ರಿಯು ಕಲೆಂಗಳ ಗ್ರಾಮದಲ್ಲಿಯೂ ಬಿರುವುದಾಗಿದೆ.

ಸದ್ರಿ ಅರ್ಜಿದಾರಳು ಮೃತ ಮಮ್ಮದಿ ಬ್ಯಾರಿಯ ಮೇಲೆ ಪಡೆದ ಮೇಲ್ಕಂಡ ಡಿಕ್ರಿಯನ್ನು ಕಾಸರಗೋಡು ಮುನ್ಸಿಫ್ ಕೋರ್ಟಿಗೆ ಟ್ರಾನ್ಸ್‌ಫರ್ ಮಾಡಬೇಕೆಂತ ಮಾಡಿದ ಮೇಲಿನ ಅರ್ಜಿಯು ನಿಂಬ ಹಾಜ್ರಾತಿ ಬಗ್ಗೆ ತಾ.16—9—1961ಕ್ಕೆ ವ್ಯಾಜ್ಯದಲ್ಲಿರುವುದರಿಂದ ಆ ದಿನ ಬೆಳಿಗ್ಗೆ 11 ಗಂಟೆಗೆ ಹಾಜ್ರಾಗಿ ಉದಾಸರಿಸಿಕೊಳ್ಳತಕ್ಕದ್ದೆಂತಲೂ ತಪ್ಪಿದಲ್ಲಿ ಏಕಪಕ್ಷವಾಗಿ ತೀರ್ಮಾನಿಸಲಾಗುವುದೆಂತಲೂ, ಕೋರ್ಟು ಹುಕ್ಮಂ ಪ್ರಕಾರ ಈ ಮೂಲ್ಕ ತಿಳಿಸೋಣಾಗ್ಯತೆ.

(*Sd*) N. Subramanyam,
ಅರ್ಜಿದಾರಳ ಕಡೆ ವಕೀಲರು

ಪೊತ್ತಾಂ ಪುತ್ತೂರು, ತಾ. 2/ 8—1961

ವಿಚಿತ್ರ ಕಥೆ:

ಅದೃಷ್ಟವು ಆತನ ಕೈ ಹಿಡಿಯಿತು

ಐವತ್ತು ಡಾಲರುಗಳನ್ನು ಹಿಡಿದುಕೊಂಡು ಬ್ಯೂನಸ್ ಐರಿಸ್‌ಗೆ ಪಾದಾರ್ಪಣ ಮಾಡಿದ ಆರಿ ಹತ್ತು ವರ್ಷಗಳಲ್ಲಿ ಐವತ್ತು ಕೋಟಿ ಡಾಲರ್‌ಗಳಿಗೊಡೆಯನಾದ ರೋಮಾಂಚಕಾರಿ ಕಥೆಯಿದು.

ಅರಿಸ್ಟಾಟಲ್—ಸೊಕ್ರಾಟಿಸ್— ಹೋಮರ್‌ರಂತೆ ಒನಾಸಿಸನ ಜೀವನ ಕಥೆ ತನ್ನ ಪ್ರತಿಭೆ ಮತ್ತು ಕಠೋರ ಪರಿಶ್ರಮಗಳಿಂದ ತನ್ನ ಹೆಸರನ್ನು ಚಿರಸ್ಥಾಯಿಗೊಳಿಸಿದ ಒಬ್ಬ ಬದವನ ಚರಿತ್ರೆ. ಸಾಲವಾಗಿ ಸಡೆದ ಐವತ್ತು ಡಾಲರ್ ಮತ್ತು ಹದಿನಾರು ವರ್ಷ ವಯಸ್ಸುಗಳನ್ನುಳಿದರೆ, ಆತನ ಸಂಪತ್ತಿಯೇನೂ ಇರಲಿಲ್ಲ. ಜೀವನದ ವಿಶೇಷ ಅನುಭವವಾಗಲೀ ವ್ಯಾಪಾರ ವಹಿವಾಟಿನ ಚತುರತೆಯಾಗಲಿ ಆತನನ್ನು ಸೋಂಕಿರಲಿಲ್ಲ. ಆದರೂ ಒಂಬತ್ತು ಜೀವಗಳು ತಮ್ಮ ಜೀವನಕ್ಕಾಗಿ ಇವನನ್ನೇ ಹೊಂದಿಕೊಂಡಿದ್ದರು; ಇವನೇ ಅವರ ಜೀವನ-ಮರಣಗಳ ಕೇಂದ್ರವಾಗಿದ್ದನು. ಐವತ್ತು ಡಾಲರುಗಳನ್ನು ಹಿಡಿದುಕೊಂಡು ಜೀವನ ಸಂಘರ್ಷಕ್ಕೆ ಇಳಿದ ಈ ಹುಡುಗ ಎಂಟೊಂಬತ್ತು ವರ್ಷಗಳಲ್ಲಿಯೇ ಲಕ್ಷಾಧಿಪತಿಯಾದನು. ಆಸಕ್ತಿ, ಪ್ರತಿಭೆ ಮತ್ತು ಪ್ರತಿನಿತ್ಯ ೨೧ ತಾಸುಗಳ ದುಡಿಮೆಗಳ ರೋಮಾಂಚನಕಾರಿ ಕಥೆಯೇ ಈ ರಹಸ್ಯವನ್ನು ಭೇದಿಸುತ್ತದೆ.

ಅದೃಷ್ಟಶಾಲಿಯಾದವನ ಮೇಲೆ ಮಾತ್ರ ಲಕ್ಷ್ಮಿಯ ಕೃಪಾಕಟಾಕ್ಷ ಬೀಳುವುದೆನ್ನುವರು. ಆದರೆ ಪ್ರತಿಭಾ ಸಂಪನ್ನನಾದವನನ್ನೂ ಅಹೋರಾತ್ರಿಗಳನ್ನು ಏಕ ಸಮವಾಗಿ ಮಾಡುವ ಪರಿಶ್ರಮಶೀಲನನ್ನೂ ಆಕೆ ಮೆಚ್ಚಿಯೇ ಮೆಚ್ಚುತ್ತಾಳೆ. ಆದರೆ, ಈ ರೀತಿ ಮೂರು ರೀತಿಯಿಂದಲೂ ಲಕ್ಷ್ಮಿಯನ್ನು ಒಲಿಸಿಕೊಳ್ಳುವವರು ಬಹು ವಿರಳ.

ಸ್ವರ್ನಾದಲ್ಲಿ ಸಾಕಷ್ಟು ಉಂಡು ತಿನ್ನಲಿದ್ದ ಕುಟುಂಬವೊಂದರಲ್ಲಿ ಒನಾಸಿಸ್ ಜನಿಸಿದನು. ಮನೆಯವರು ಈತನನ್ನು ಪ್ರೀತಿಯಿಂದ 'ಅರಾ' ಎನ್ನುತಿದ್ದರು. ಈತನಿಗೆ ಹದಿನೈದು ವರ್ಷ ಪ್ರಾಯವಾದಾಗ ತುರ್ಕರ ಆಕ್ರಮಣಕ್ಕೆ ಸಿಲುಕಿ ಈ ಪರಿವಾರ ಮನೆಯಿದು ಹೋಯಿತು. ತಂದೆಯು ನೆರೆಮನೆಗೆ ತಳ್ಳಲ್ಪಟ್ಟರೆ, ಇತರ ಸಂಬಂಧಿಕರನ್ನು ನಾಲ್ಕು ರಸ್ತೆ ಕೂದುವಲ್ಲಿ ಕೊಂದು ತೂಗುಹಾಕಿದರು. ವಿದೇಶೀರಾಯಭಾರಿ ಕಚೇರಿಯ ಸಹಾಯದಿಂದ 'ಆರಿಯು ಅದು ಹೇಗೊ ತಪ್ಪಿಸಿ ಓಡಿಹೋದನು.

ಗ್ರೀಸನ್ನು ತಲಪಿದ ನಂತರ ತನ್ನ ತಂದೆ ಮತ್ತು ಬದುಕುಳಿದ ತನ್ನ ಕೌಟುಂಬಿಕರನ್ನು ಜೀವಂತ ಉಳಿಸಿ ತರುವುದಕ್ಕಾಗಿ ಪ್ರಯತ್ನಿಸಿಸಫಲನಾದನು. ಆರಿಯ ತಂದೆಯೊಬ್ಬನೇ ಆ ಹದಿನಾರು ಪುರುಷ ಸ್ತ್ರೀಯರ ಕುಟುಂಬದ ದುಡಿಯುವ ಸದಸ್ಯನಾಗಿದ್ದನು. ತುರ್ಕರ ಆಕ್ರಮಣಕ್ಕೆ ಮೊದಲು ಈ ಕುಟುಂಬವು ಹೊಗೆಸೊಪ್ಪಿನ ವ್ಯಾಪಾರವನ್ನು ಮಾಡುತಿತ್ತು; ಮಾತ್ರವಲ್ಲ ಶ್ರೀಮಂತವೂ ಆಗಿತ್ತು.

ಬಡತನದ ಕಾರಣದಿಂದ ತರುಣನಾಗಿದ್ದ ಆರಿಯನ್ನು ಮುಂದೆನೂಡಿ ಅದೃಷ್ಟದೊಡನೆ ಜುಜಾಡಲು ನಿಶ್ಚಯಿಸಿದರು. ಆತನನ್ನು ದಕ್ಷಿಣ ಅಮೇರಿಕೆಗೆ ಕಳಿಸುವ ಸಲುವಾಗಿ ಹಣವನ್ನು ಕೂಡಿಸಿದರು. ಬ್ಯೂನಸ್ ಐರಿಸ್ ನಗರವನ್ನು ಹೊಕ್ಕಾಗ ಆರಿಯ ವಯಸ್ಸು ೧೬ ಆತನ ಕೈಯಲಿದ್ದುದು ೫೦ ಡಾಲರ್.

ಪ್ರಾರಂಭದಲ್ಲಿಯೇ ಅದೃಷ್ಟವು ಆತನೊಡನೆ ಕಣ್ಣುಮುಚ್ಚಾಲೆ ಆಡತೊಡಗಿತು. ಹಡಗದಲ್ಲಿ ನಾವಿಕನ ನೌಕರಿಗಾಗಿ ಪ್ರಾರ್ಥನಾಪತ್ರವನ್ನು ಹಾಕಿದನು. ಆದರೆ, ಆತನಿಗೆ ನೌಕರಿ ಸಿಗಲಿಲ್ಲ. ಒಂದು ವೇಳೆ ಆತನಿಗಂದು ಕೆಲಸ ದೊರೆಯುತಿದ್ದರೆ, ಒಬ್ಬ ನಾವಿಕನಾಗುತಿದ್ದ; ಆದರೆ, ಲಕ್ಷಾಧಿಪತಿಯಾಗುವ ಭಾಗ್ಯಸೂರ್ಯನು ಮುಳುಗಿಯೇ ಹೋಗುತಿದ್ದ.

ಕೊನೆಗೆ, ಒಂದು ಚಿಕ್ಕ ಕೋಣೆಯನ್ನು ಅಗ್ಗದ ದರದಲ್ಲಿ ಬಾಡಿಗೆಗೆ ಗೊತ್ತುಮಾಡಿ, 'ಸ್ವಿಚ್ ಬೋರ್ಡ್" ಪ್ರಕ್ರಿಯೆಯ ಶಿಕ್ಷಣವನ್ನು ಪಡೆಯತೊಡಗಿದ. ಭಾಷೆಯು ತೀವ್ರ ಕಠಿನವಾಗಿದ್ದರೂ ಇಪ್ಪತ್ತೇ ದಿನಗಳಲ್ಲಿ ಈ ಪ್ರಶಿಕ್ಷಣವನ್ನು ಪಡೆದು ರಾತ್ರಿಯ ಡ್ಯೂಟಿಗೂ ಹೋಗತೊಡಗಿದನು. ಇಪ್ಪತ್ತನಾಲ್ಕು ತಾಸುಗಳಲ್ಲಿ ಮೂರು ತಾಸು ಮಾತ್ರ ನಿದ್ರೆ ಮಾಡಿ ಉಳಿದ ಸಮಯವನ್ನು ನೌಕರಿಗಾಗಿ ವಿನಿಯೋಗಿಸಿದನು. ಆತನು ರಾತ್ರಿ ಹಗಲು ಎರಡೂ ಪಾಳಿಗಳಲ್ಲಿ ಕೆಲಸಕ್ಕೆ ಹೋಗತೊಡಗಿದನು. ಇದರ ನಡುವೆ ತನ್ನ ಪೈಕೈಕ ವ್ಯವಸಾಯವನ್ನು ಪುನಃಸ್ಥಾಪಿಸುವುದರಲ್ಲಿ ನಿಮಗ್ನನಾದನು.

ತನ್ನ ಪುಟ್ಟ ಕೋಣೆಯನ್ನೇ ಕಾರ್ಯಾಲಯವನ್ನಾಗಿ ಮಾಡಿಕೊಂಡು ತಂಬಾಕಿನ ವ್ಯವಸಾಯವನ್ನು ಪ್ರಾರಂಭಿಸಿದನು. ಎರಡೇ ವರ್ಷಗಳಲ್ಲಿ ಆತನು ಎರಡು ಸಾವಿರ ಪೌಂಡುಗಳನ್ನು ಸಂಪಾದಿಸಿ ರಾತ್ರೆಯ ಪಾಳಿಯಿಂದ ಬಿಡುಗಡೆ ಹೊಂದಿದನು. ಮೂರು ವರ್ಷಗಳಲ್ಲಿ ಆತನ ಸಂಪತ್ತು ಹತ್ತು ಸಾವಿರ ಪೌಂಡುಗಳಿಗೇರಿತು.

೧೯೩೮ ಆರಿಯ ಜೀವನದಲ್ಲಿ ವಿಶಿಷ್ಟ ವರ್ಷ ಈ ಹೊತ್ತಿನಲ್ಲಿ ಯುವಕನು ತನ್ನ ವ್ಯಯಸಾಯದಲ್ಲಿ ಪಾರಂಗತನಾದನು. ಅದೇ ವರ್ಷ ಗ್ರೀಕ ಸರಕಾರವು ಆತನ ಹೆಗಲ ಮೇಲೆ ಅರ್ಜೆಂಟಿನಾ ಗ್ರೀಕ ವ್ಯಾಪಾರದ ಜವಾಬ್ದಾರಿಯನ್ನು ಹೊರಿಸಿತು. ಇದನ್ನು ಈತ ಯಶಸ್ವಿಯಾಗಿ ನಿರ್ವಸಿದನು. ಫಲಸ್ವರೂಪವಾಗಿ, ಇಪ್ಪತ್ತೆರಡು ವರ್ಷ ಪ್ರಾಯದಲ್ಲಿಯೇ ಈತ ಬ್ಯೂನಸ್ ಐರಿಸ್‌ನಲ್ಲಿನ ಗ್ರೀಕ ರಾಯಭಾರಿಯ ಅಧಿಕಾರಿಯಾಗಿ ನೇಮಿಸಲ್ಪಟ್ಟನು.

ಇಪ್ಪತ್ತೈದು ವರ್ಷ ಪ್ರಾಯದಲ್ಲಿಯೇ ಈ ಯುವಕನು ಲಕ್ಷಾಧಿಪತಿಗಳ ಸಾಲಿನಲ್ಲಿ ಗಣನೆಯಾಗ ತೊಡಗಿದನು. ಸತತ ಪರಿಶ್ರಮ, ಅಧ್ಯವಸಾಯ ಉಚಿತ ವ್ಯವಸಾಯಗಳಿಂದ ಆರಿಯು ತನ್ನ ಸಂಪತ್ತನ್ನು ಬೆಳೆಸುತ್ತ ಬಂದನು. ೧೯೩೧ರಲ್ಲಿ ಇವನು ಹೆಡಗಿನ ವ್ಯವಸಾಯದಲ್ಲಿ ಹಣತೊಡಗಿಸಿದನು. ಮಂದಿಯ ಪ್ರಭಾವ ವಿಶ್ವ ವ್ಯಾಪಾರದ ಮೇಲೆ ಬಿದ್ದಾಗ ಕವಡೆಗಳಲ್ಲಿ ಆರು ಸಾವಿರನು ಹೊರುವ ಹಡಗಗಳನ್ನು ಕೊಂಡುಕೊಂಡನು. ಯುದ್ಧ ಕಾಲದಲ್ಲಿ ಹಡಗು ವ್ಯವಸಾಯದಲ್ಲಿ ಒಂದು ಕೋಟಿ ರೂಪಾಯಿಗಳನು ಆರಿಯು ಸಂಪಾದಿಸಿದನು. ಆತನ ಗಮನ ಎಣ್ಣೆ ಒಯ್ಯುವ ಹಡಗುಗಳತ್ತ ಸಂಯಿತು. ವಿಶಾಲಕಾಯ ತೈಲವಾಹೀ ಹಡಗಗಳ ನಿರ್ಮಾಣದಲ್ಲಿ ಆರಿ ಪ್ರತಿಷ್ಠಾನಕ್ಕೆ ಮಹತ್ವಪೂರ್ಣ ಸ್ಥಾನವಿದೆ.

ಆತ ಹಡಗುಗಳಲ್ಲಿಯೇ ತೃಪ್ತನಾಗಲಿಲ್ಲ. ಮುಂದಿದ ಹತ್ತು ವರ್ಷಗಳಲ್ಲಿ ಅನೇಕ ದೊಡ್ಡ ದೊಡ್ಡ ಪ್ರತಿಷ್ಠಾನಗಳನ್ನು ಕೊಂದುಕೊಂಡನು. ಬಡತನದೊಡನೆ ಕೋರಾಡುವ ತನ್ನ ಅಧ್ಯವಸಾಯದಿಂದಾಗಿ ಆರಿಯು ಅರ್ಜೆಂಟಿನಾದ ಅತಿ ದೊಡ್ಡ ಬೇಂಕ್ ಆದ ಮೌಂಟ್ ಕಾರ್ಲ್‌ನ್ನು ಕೂದ ಕೊಂಡುಕೊಳ್ಳುವಷ್ಟು ಹಣವನ್ನು ಸಂಪಾದಿಸಿದನು.

ಆರಿಗೆ ವ್ಯವಸಾಯದಲ್ಲಿ ಮಾತ್ರ ಆಸಕ್ತಿಯಿಲ್ಲ. ಆಟ ಓಟಗಳಲ್ಲಿ ಸಾಹಿತ್ಯ ಕಲೆಗಳಲ್ಲಿ ಸಾಕಷ್ಟು ಅಭಿರುಚಿಯುಳ್ಳವನೆತ ಗ್ರೀಕ್, ಸ್ಪೇನಿಶ್, ಫ್ರೆಂಚ್ ಮತ್ತು ಇಂಗ್ಲಿಷ್ ಭಾಷೆಯಲ್ಲಿ ನಿರಾತಂಕವಾಗಿ ಮಾತಾಡಬಲ್ಲವನೆತ.

ಹೆಟ್ಟಿನ ಲಕ್ಷಾಧಿಪತಿಗಳಲ್ಲಿ, ಮುಖ್ಯವಾಗಿ ಅಮೆರಿಕೆಯ ಶ್ರೀಮಂತರಲ್ಲಿ ಒಂದು ದೊಡ್ಡ ಅವಗುಣವಿರುವುದು. ಜೂಜಾಡುವುದು ಇಲ್ಲವೇ ಸಟ್ಟಾ ಕಟ್ಟುವುದು—ಈ ದುರ್ಗುಣ ಆದರೆ, ಆರಿಯು ಮರವಿನಲ್ಲಾದರೂ ಇತ್ತಕಡೆ ಮನಸ್ಸಿತ್ತಿಲ್ಲ. "ಈ ಕಾರ್ಯದಲ್ಲಿ ಅದೃಷ್ಟ ನನ್ನ ಸಹಾಯಕ್ಕೆ ಬರಲಾರದೆಂದು ನನಗೆ ಗೊತ್ತು,, ಎನ್ನುತ್ತಾನೆ ಆರಿ. ಈ ಹೇಳಿಕೆಯಲ್ಲಿ ಅತಿಶಯೋಕ್ತಿಯಾದರೂ ಇಲ್ಲ. ಕಠಿನ ಪರಿಶ್ರಮದಿಂದ ಗಳಿಸಿದ ಹಣವನ್ನು ಜೂಜು—ಸಟ್ಟಾಗಳಲ್ಲಿ ಹಾಕಲು ಯಾರು ತಾನೇ ಸಿದ್ಧರಿದ್ದಾರೆ?

ಅಮೆರಿಕದ ರಾಜ್ಯಾಂಗ ಕಾರ್ಯದರ್ಶಿ ಡೀನ್ ರಸ್ಕ್

ನವೀನ ಕಾದಂಬರಿ ಹೊಸ ಪುಸ್ತಕ

ಮೋಹದ ಮಹಾಜಾಲ

ಅದ್ಭುತ ಸಾಹಸ-ಶೋಧದ ಕಾದಂಬರಿ

ಬರೆದವರು. ವೀರಪ್ಪ ಯೆಗಟಿ, ಬಿ. ಎ., ಎಲ್‌ಎಲ್. ಬಿ. ವಕೀಲ, ಹಾವೇರಿ

ಈ ಕಾದಂಬರಿಯಲ್ಲಿ ಸತ್ಯಾಸತ್ಯಗಳ ತಾರತಮ್ಯವೂ, ಸನ್ಮಾರ್ಗ ದುರ್ಮಾರ್ಗಗಳ ಪರಿಣಾಮಗಳೂ ಪಾತ್ರಗಳ ಪ್ರತ್ಯಕ್ಷ ವರ್ತನೆಗಳ ಮೂಲಕ ಚಿತ್ರಿಸಲ್ಪಟ್ಟಿವೆ. ಮನುಷ್ಯನಿಗೆ ಸಮಾಜದ ವ್ಯವಹಾರದಲ್ಲಿ ಎದುರಾಗುವ ಬಿಕ್ಕಟ್ಟಿನ ಪ್ರಸಂಗಗಳು ಹೇಗೆ ದೈವ ಕೃಪೆಯಿಂದ ಹಾಗೂ ಸಭ್ಯ ವರ್ತನೆಯಿಂದ ಪರಿಹಾರವಾಗುವವೆಂಬುದು ಕಥಾರಹಸ್ಯದ ಮೂಲಕ ವ್ಯಕ್ತಮಾಡಲ್ಪಟ್ಟಿವೆ. ಮನುಷ್ಯ ಸ್ವಭಾವದ ವಿವಿಧ ಮನೋವೃತ್ತಿಗಳು ಆಳವಾಗಿ ವರ್ಣಿಸಲ್ಪಟ್ಟಿವೆ. ಪ್ರಸಂಗಾನುಸಾರವಾಗಿ ನೀತಿ ತತ್ವ ಬೋಧೆಯು ಮನೋವೇದ್ಯವಾಗುವಂತೆ ವಿವರಿಸಲ್ಪಟ್ಟಿವೆ. ರಸವತ್ತಾದ ಕಥಾಭಾಗವು ಮನೋಹರವಾದ ಶೈಲಿಯಲ್ಲಿ ರೂಪಿಸಲ್ಪಟ್ಟಿರುವುದರಿಂದ ಓದುಗರು ಅದನ್ನು ಓದಲು ಪ್ರಾರಂಭಿಸಿದರೆ ಪೂರ್ತಿಗೊಳಿಸುವ ವರೆಗೆ ಬಿಡುವಂತಿಲ್ಲ.

ಇದರಲ್ಲಿ ವರ್ಣಿತವಾದ ಅದ್ಭುತ ಸಾಹಸ, ಅಪರಾಧ ಶೋಧಗಳು ಓದುಗರಿಗೆ ಆಶ್ಚರ್ಯ, ಕುತೂಹಲಗಳನ್ನುಂಟುಮಾಡುವವು. ಈ ವರೆಗೆ ರಚಿತವಾದ ಕಾದಂಬರಿಗಳಲ್ಲಿ ಇದು ಶ್ರೇಷ್ಠವಾದದು.

ಬಿಳಿ ಕಾಗದ. ಬೆಲೆ: ರೂ. 1—12—0 (1·75)

ಪ್ರತಿಗಳಿಗೆ— ನವಯುಗ ಪ್ರೆಸ್, ಉಡುಪಿ.

ಅಥವಾ ನವಭಾರತ ಪುಸ್ತಕ ಭಂಡಾರ, ಉಡುಪಿ.

ಚಂದಾದಾರರಲ್ಲಿ ವಿನಂತಿ

ಇದೇ ಅಗೋಸ್ತು ತಿಂಗಳಾಂತ್ಯಕ್ಕೆ "ನವಯುಗ"ದ ೪ನೆಯ ವರ್ಷವು ಅಂತ್ಯವಾಗಿ ಸಪ್ಟಂಬರ ಆದಿಯಿಂದ ೫ನೆಯ ಹೊಸ ವರ್ಷಾರಂಭವಾಗುತ್ತದೆ. ಈ ಅವಧಿಗೆ ಚಂದಾ ಅವಧಿ ಮುಗಿಯುವವರೂ ಚಂದಾ ಹಣ ಬಾಕಿ ಇರುವವರೂ ದಯವಮಾಡಿ ತಮ್ಮ ಬಾಕಿಯನ್ನು ಬೇಗನೇ ಕಳುಹಿಸಿಕೊಟ್ಟು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥಿಸುತ್ತೇವೆ.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ.ನ.

ಲಘು ಹರಟೆ

(೪ನೇ ಪುಟದಿಂದ)

ಸ್ವಾತಂತ್ರ್ಯ ಬಂದಿರುವಂತೆಯೇ ಅವರ ನಾಲಿಗೆಗೂ ಕೇವಲ ಹದಿನೈದು ವರ್ಷಗಳ ಹಿಂದೆ ಸ್ವಾತಂತ್ರ್ಯ ಲಭಿಸಿತು. ಸ್ವಾತಂತ್ರ್ಯದ ಹೊಸ ಹುರುಪಿನಲ್ಲಿ ಅದು ಮಳೆಗಾಲದ ಜರಿಯಂತೆ ಭೋರ್ಗರೆದು ಅಪ್ಪಳಿಸಿ ಕಾಣಿದಾಡಿ ಮುಂದುವರಿದರೆ ಅದು ಸಹಜ. ಇಂಗ್ಲೆಂಡ್ ಅಮೆರಿಕ ಮೊದಲಾದ ಪಾಶ್ಚಾತ್ಯರ ನಾಲಿಗೆಯು ಅದೆಂದೋ ಸ್ವತಂತ್ರವಾಗಿತ್ತು. ಎಂತಲೇ ಅದು ವೃದ್ಧನಂತೆ ಮಿತವಾಗಿ ಚಲಿಸುತ್ತಿದೆ; ರಶ್ಮಿ-ಜೀನೆಗಳಲ್ಲಿ ಅದು ಕಠಿನ ಬಂಧನಕ್ಕೊಳಗಾಗಿದೆ. ಇದೇ ರೀತಿಯಲ್ಲಿ ಒಂದೊಂದು ದೇಶದ ನಾಲಿಗೆ ಒಂದೊಂದು ತೆರನಾಗಿದೆ.

ಮನುಷ್ಯನಿಗೆ ಒಂದೇ ನಾಲಗೆಯಿದೆ. ವೈಯ್ಯಾಕರಣರು ತಾಲು ಎಂಬ ಎರಡನೆಯದನ್ನು ಸೃಷ್ಟಿ ಮಾಡಿದರೂ ಅದು ಬಾಲವಿಲ್ಲದ ಮಂಗನಂತೆ, ಪೊಲೆಯಿಲ್ಲದ ತಾಯಿಯಂತೆ ನಿರರ್ಥಕ. ಅದು ನಮ್ಮ ಲಜ್ಜೆಯಂತೆ ಇಲ್ಲವೇ ಸ್ವತಂತ್ರವಾಗಿ ಕಾರ್ಯಪ್ರವೃತ್ತವಾಗುವುದು ತೋರುವುದಿಲ್ಲ. ಏನೋ ಕೆಲಪೊಂದು ಅಕ್ಷರಗಳನ್ನು ಉಚ್ಚರಿಸಿದ ಮಾತ್ರಕ್ಕೆ ಅದನ್ನು ನಾಲಿಗೆಯೆನ್ನುವುದಾದರೆ ಕಂಠ-ಮೂರ್ಧಾಗಳನ್ನೂ ನಾಲಿಗೆಯೆನ್ನಬೇಕಾದೀತು. ಇನ್ನು ಹಾವುಗಳ ನಾಲಿಗೆ ಸೀಳಾಗಿದೆಯೂದರೂ ಅದರಲ್ಲಿ ವ್ರಣಗಳು ಏಳದಿರುವುದರಿಂದ ಎರಡು ನಾಲಿಗೆಗಳೇ ಆವಾಗಿವೆ ಮಹಾಶೇಷನಿಗೆ ನೂರೋ ನಾವಿರವೋ ನಾಲಿಗೆಗಳಿವೆ. ಆದರೆ, ಮನುಷ್ಯ ಶೇಷನಿಗೆ ಆ ಸೌಲಭ್ಯ ಇದುವರೆಗೆ ದೊರೆತಿಲ್ಲ. ಆದರೂ ತನ್ನ ಬುದ್ಧಿವಂತಿಕೆ-ಚತುರತೆಗಳನ್ನು ಉಪಯೋಗಿಸಿ ಅತ ಈ ಕೊರತೆಯನ್ನೂ ನೀಗಿಸಿಕೊಳ್ಳಬಲ್ಲ. "ಬೆಲ್ಲದಂತೆ ಮಾತನಾಡಿ ಎಲ್ಲರನ್ನೂ ಮರುಳು ಮಾಡಿ, ತನ್ನ ಇಷ್ಟಾರ್ಥ ಸಾಧನೆ ಮಾಡಿಕೊಳ್ಳುವುದು ತಪ್ಪಲ್ಲ. "ಜಿಹ್ವಾಗ್ರೇ ಮಧು ಮತ್ತಮಾ, ಅಲ್ಲವೆ? ಪ್ರಶಂಸೆ ಹೊಗಳಿಕೆಗೆ ಮರುಳಾಗದವರು ಯಾರು? ಹೊಲತಿಯರ ಜಿಹ್ವಾಗ್ರದಿಂದ ಮಧುಮತ್ತವಾದ ಗಾಯನ ಹೊರಬಂದುದರಿಂದಲೇ ಹಡಪ್ಪಂಪ್ರ ಸರ್ವಾಭರಣಗಳನ್ನು ಅವರಿಗೀಯಲು ತಯಾರಾದನು. ಸಭೆ—ಸಮ್ಮೇಳನಗಳಲ್ಲಿ ಈ ಕಾರಣದಿಂದಲೇ ಕೈಚಪ್ಪಳೆಯು ಸುರಿಮಳೆಯನ್ನು ಭಾಷಣ ಕರ್ತೃ ಸುರಿಸಬಲ್ಲನು ಎನೆಂಬ್ಲಿ—ಪಾರ್ಲಿಮೆಂಟ್‌ಗಳಲ್ಲಿ ಮಂತ್ರಿಗಳ ಉದ್ಗಾರವು ಅತಿ ಅದ್ಭುತವಾಗುವುದು. ಸರಕಾರಿ ಪಕ್ಷದವರಿಗೆ ಅದು ಮಧುಮತ್ತ ಆಗಿ ಕರ್ಣಕಠೋರವಾಗಿ ಶೇಮ್ ಶೇಮ್ ಎಂದು ಬೊಬ್ಬಿಟ್ಟು ಮೇಜು ಕುರ್ಚಿಗಳನ್ನು ಬಡಿಯುವ, ಈ ಮತ್ತತೆಯು ಮಾತ್ರ ಅಧಿಕವಾಯಿತೆಂದರೆ, ಅವನ್ನು ಮುರಿಯುವ, ಚಪ್ಪಲಿಗಳನ್ನು ತಪ್ಪಿಸಿ ಎಸೆಯುವಂತೆಯೂ ಮಾಡುವ ಪ್ರೇರಣೆಯೊಳಗುವುದು. ನಾಲಿಗೆಯ ದೆಸೆಯಿಂದಾಗಿಯೇ ಪೂರ್ವ ಪಾಕಿಸ್ತಾನ ವಿಧಾನ ಸಭೆಯ ಅಧ್ಯಕ್ಷರೊಬ್ಬರು ಪ್ರಜಾಸತ್ತೆಯೆಂದು ಆರ್ಭಟಿಸಿ ಪೈಗಂಬರ ವಾಸಿಯಾಗಬೇಕಾಯಿತೆಂಬುದನ್ನು ಮರೆಯಬಾರದು.

ಹೀಗೆಯೇ ಜಿಹ್ವಾ ಮೂನೆ ನಾಲಿಗೆಯ ಬಗ್ಗೆ ಬರೆಯುವುದಾದರೆ ಅದು ಮಹಾಭಾರತಕ್ಕಿಂತಲೂ ದೊಡ್ಡ ಇತಿಹಾಸವಾಗುವುದು. ಅದು ಅಕ್ಷಯ—ಅಮರವಾಗುವುದು. ನಾಲಿಗೆಯು ಕಾರ್ಯಪ್ರವೃತ್ತವಾಗುವುದ ಕ್ಕೂ ಮನುಷ್ಯ ಶರೀರದ ಭಿನ್ನ ಭಿನ್ನ ಅಂಗ-ಅವಯವಗಳಿಗೂ ನಿಕಟ ಸಂಬಂಧವಿದೆ. ನಾಟಕ-ಸಿನೆಮಾಗಳಲ್ಲಿ ಇದು ದೃಗ್ಗೋಚರವಾಗದಿರಬಹುದು. ಆದರೆ, ಜೀವನ ನಾಟಕವಾದರೂ ಆಡಿಸುವವರಲ್ಲಿ ಮಹದಂತರವಿರುವುದರಿಂದ, ಇದು ನಾಟಕವಾದರೂ ನಾಟಕಕ್ಕಿಂತ ಭಿನ್ನವಾದುದು. ಆದುದರಿಂದ ಮನುಷ್ಯನು ಮಾತಾಡುತಿದ್ದಂತೆಯೇ ದಶ ರಸಗಳಲ್ಲಿ ಯಾವುದಾದರೊಂದು ಇಲ್ಲವೆ ಹೆಚ್ಚು ರಸಗಳನ್ನು ಆನುಭವಿಸಿಕೊಳ್ಳಬಲ್ಲನು; ಬೇರೆಯವರಿಗೆ ಉಣಿಸಬಲ್ಲನು. "ನೀನು ಕಪ್ಪು, ನಿಂದ ಯಶೋದೆಯರು ಬಿಳಿ, ಅವರು ನಿನ್ನನ್ನು ಕೊಂಡುಕೊಂಡರು, ನಿನ್ನ ತಂದೆ ತಾಯ್ಗಳಲ್ಲ. ನಿನ್ನ ಹೆತ್ತವರು ಯಾರು?" ಎಂದು ಬಲರಾಮನ ನಾಲಿಗೆ ಅವನಲ್ಲೂ ಗೊಲ್ಲರಲ್ಲೂ ಭೀಭತ್ಸ ತಸ್ಮಾತ್ ಹಾಸ್ಯ ರಸಗಳನ್ನು ಉದಯಿಸಿದ್ದರೆ, ಕೃಷ್ಣನಲ್ಲಿ ಅದ್ಭುತ ಮತ್ತು ಕರುಣಾ ರಸವನ್ನು ಹುಟ್ಟಿಸಿತು. ಕೃಷ್ಣನು ಯಶೋದೆಗೆ ಈ ವಿಷಯ ತಿಳಿಸಿದಾಗ ಆಕೆಯಲ್ಲಿ ಶೃಂಗಾರ—ಹಾಸ್ಯ ರಸಗಳನ್ನು ಏಕ ಕಾಲದಲ್ಲಿ ಅನುಭವಕ್ಕೆ ತಂದಿತು. ಸೂರ್ಯನಿಗೆ ಬಿಸಿಲು ಒಂದೇ ಆದರೂ ಅದು "ಪರ್ವತ ಶಿಖರಗಳಲ್ಲಿ ಮಾಣಿಕ್ಯದವಾಗಿ ಶಹಧಾನ್ ಎಂದು ಕೂಗಾಡುವಂತೆ ಮಾಡಿದರೆ, ವಿರೋಧೀಪಕ್ಷದವರಿಗದು ವಿಷಮತ್ತ ಆಗಿ ಕರ್ಣಕಠೋರವಾಗಿ ಶೇಮ್ ಶೇಮ್ ಎಂದು ಬೊಬ್ಬಿಟ್ಟು ಮೇಜು ಕುರ್ಚಿಗಳನ್ನು ಬಡಿಯುವ, ಈ ಮತ್ತತೆಯು ಮಾತ್ರ ಅಧಿಕವಾಯಿತೆಂದರೆ, ಅವನ್ನು ಮುರಿಯುವ, ಚಪ್ಪಲಿಗಳನ್ನು ತಪ್ಪಿಸಿ ಎಸೆಯುವಂತೆಯೂ ಮಾಡುವ ಪ್ರೇರಣೆಯೊಳಗುವುದು. ನಾಲಿಗೆಯ ದೆಸೆಯಿಂದಾಗಿಯೇ ಪೂರ್ವ ಪಾಕಿಸ್ತಾನ ವಿಧಾನ ಸಭೆಯ ಅಧ್ಯಕ್ಷರೊಬ್ಬರು ಪ್ರಜಾಸತ್ತೆಯೆಂದು ಆರ್ಭಟಿಸಿ ಪೈಗಂಬರ ವಾಸಿಯಾಗಬೇಕಾಯಿತೆಂಬುದನ್ನು ಮರೆಯಬಾರದು.

ಹೀಗೆಯೇ ಜಿಹ್ವಾ ಮೂನೆ ನಾಲಿಗೆಯ ಬಗ್ಗೆ ಬರೆಯುವುದಾದರೆ ಅದು ಮಹಾಭಾರತಕ್ಕಿಂತಲೂ ದೊಡ್ಡ ಇತಿಹಾಸವಾಗುವುದು. ಅದು ಅಕ್ಷಯ—ಅಮರವಾಗುವುದು. ನಾಲಿಗೆಯು ಕಾರ್ಯಪ್ರವೃತ್ತವಾಗುವುದ ಕ್ಕೂ ಮನುಷ್ಯ ಶರೀರದ ಭಿನ್ನ ಭಿನ್ನ ಅಂಗ-ಅವಯವಗಳಿಗೂ ನಿಕಟ ಸಂಬಂಧವಿದೆ. ನಾಟಕ-ಸಿನೆಮಾಗಳಲ್ಲಿ ಇದು ದೃಗ್ಗೋಚರವಾಗದಿರಬಹುದು. ಆದರೆ, ಜೀವನ ನಾಟಕವಾದರೂ ಆಡಿಸುವವರಲ್ಲಿ ಮಹದಂತರವಿರುವುದರಿಂದ, ಇದು ನಾಟಕವಾದರೂ ನಾಟಕಕ್ಕಿಂತ ಭಿನ್ನವಾದುದು. ಆದುದರಿಂದ ಮನುಷ್ಯನು ಮಾತಾಡುತಿದ್ದಂತೆಯೇ ದಶ ರಸಗಳಲ್ಲಿ ಯಾವುದಾದರೊಂದು ಇಲ್ಲವೆ ಹೆಚ್ಚು ರಸಗಳನ್ನು ಆನುಭವಿಸಿಕೊಳ್ಳಬಲ್ಲನು; ಬೇರೆಯವರಿಗೆ ಉಣಿಸಬಲ್ಲನು. "ನೀನು ಕಪ್ಪು, ನಿಂದ ಯಶೋದೆಯರು ಬಿಳಿ, ಅವರು ನಿನ್ನನ್ನು ಕೊಂಡುಕೊಂಡರು, ನಿನ್ನ ತಂದೆ ತಾಯ್ಗಳಲ್ಲ. ನಿನ್ನ ಹೆತ್ತವರು ಯಾರು?" ಎಂದು ಬಲರಾಮನ ನಾಲಿಗೆ ಅವನಲ್ಲೂ ಗೊಲ್ಲರಲ್ಲೂ ಭೀಭತ್ಸ ತಸ್ಮಾತ್ ಹಾಸ್ಯ ರಸಗಳನ್ನು ಉದಯಿಸಿದ್ದರೆ, ಕೃಷ್ಣನಲ್ಲಿ ಅದ್ಭುತ ಮತ್ತು ಕರುಣಾ ರಸವನ್ನು ಹುಟ್ಟಿಸಿತು. ಕೃಷ್ಣನು ಯಶೋದೆಗೆ ಈ ವಿಷಯ ತಿಳಿಸಿದಾಗ ಆಕೆಯಲ್ಲಿ ಶೃಂಗಾರ—ಹಾಸ್ಯ ರಸಗಳನ್ನು ಏಕ ಕಾಲದಲ್ಲಿ ಅನುಭವಕ್ಕೆ ತಂದಿತು. ಸೂರ್ಯನಿಗೆ ಬಿಸಿಲು ಒಂದೇ ಆದರೂ ಅದು "ಪರ್ವತ ಶಿಖರಗಳಲ್ಲಿ ಮಾಣಿಕ್ಯದ ಎಳವಿಸಿಲಂತೆ, ದಿಕ್ಕುಂಭಿ ಕುಂಭ ಸ್ಥಳದಲ್ಲಿ ಸಿಂಧೂರದಂತೆ, ಅಮರ ನದಿಯಲ್ಲಿ ಆರಕ್ತ ನೀರೇಜ ಪತ್ರಾವಲಿಯಂತೆ ಆಬ್ಧಿಯಲ್ಲಿ ವಿದ್ರುಮ ಸಮುದಯದಂತೆ" ಹೆಬ್ಬುವಂತೆ ಒಂದು ನಾಲಿಗೆಯಿಂದ ಹೊರಬಿದ್ದು ನುಡಿ ಒಬ್ಬೊಬ್ಬರಲ್ಲಿ ಒಂದೊಂದು ರೀತಿಯ ಪರಿಣಾಮ ಮಾಡಬಹುದು; ಮಾತ್ರವಲ್ಲ, ಕಾಳಿಯನನ್ನು ಮರ್ದಿಸಿ ಮರಳಿ ಬಂದ ಕೃಷ್ಣನನ್ನು "ಪ್ರತಿಮಲ್ಲರ್ ಗಿರಿ ಕಲ್ಪನೆಂದು ಇತರರೆಲ್ಲರ್ ಬಾಲನೆಂದು ಅಂಗನಾತತಿ ಪುಷ್ಪಾಯುಧನೆಂದು ಗೋಪ ನಿವಹಂ ಸಾಮಾನ್ಯನೆಂದು ಆ ಕುಲಾಕೃತಿ ಕಂಸಂ ಲಯ ಕಾಲನೆಂದು ದಿವಿಜರ್ ವಿಶ್ವಾತ್ಮನೆಂದೀಕ್ಷಿಸಿದಂತೆ" ನಾಲಿಗೆಯಿಂದ ಹೊರಬಂದ ಮಾತು ಅಮೃತ ಮಯವಾಗಿ, ವಿಷಮಯವಾಗಿ, ತಿಲಾಂಮಾಜಲಿಮಯವಾಗಿ, ಆರಾಮಯವಾಗಿ, ವಿನ ಹಣ್ಣಾಗಿ ಹಾಗಲ ಕಾಯಿಯಾಗಿ, ಬೇವಾಗಿ ಬೆಲ್ಲವಾಗಿ ಒಬ್ಬೊಬ್ಬರಿಗೆ ಒಂದೊಂದು ತೆರವಾಗಿ ಅನಿಸಬಹುದು.

ಕಸಿಗೆ ಬಾಲವು ಭೂಷಣ; ಮತ್ತು ಅಲಂಕಾರ. ಬಾಲವಿಲ್ಲವಾದರೆ, ಕೇವಲ ಸ್ವಭಾವದಿಂದ ನರರು-ವಾನರರಲ್ಲಿ ವ್ಯತ್ಯಾಸ ಕಾಣುವುದು ಕಷ್ಟ ಸಾಧ್ಯ. ಹಾಗೆಯೇ ನರವಿಲ್ಲದ ನಾಲಿಗೆಯು ನರಸಿಗೆ ಭೂಷಣ. ಅದಿಲ್ಲವಾದರೆ, ನರನ ಹಿರಿಮೆಯನ್ನೂ ಗರಿಮೆಯನ್ನೂ ಚರಿಮೆಯನ್ನೂ ಕೇಳುವವರು ಯಾರು? ಹಾಡಿದ್ದನ್ನೇ ಹಾಡುವುದಕ್ಕಾದರೂ ಮೊನಚಾದ ನಾಲಿಗೆಯೊಂದು ಬೇಕಲ್ಲಾ! ಎಂತಲೇ ನಾಲಿಗೆಯು ವೇದಳಿಗಿಂತಲೂ ಅಗ್ರಗಣ್ಯವಾದುದು. ಕಿವಿಯಿಲ್ಲವಾದರೆ ಕಣ್ಣು, ಕಣ್ಣಿಲ್ಲವಾದರೆ ಕಿವಿ ಎರಡೂ ಇಲ್ಲವಾದರೆ ಚರ್ಮ ಅವುಗಳ ಕೆಲಸವನ್ನು ಮಾಡಬಹುದು. ಮೂಗೊಂದಿರುವುದರಿಂದಲೇ ನಗರಸಭೆಗಳ ಮೇಲೆ ಸಾಕೆಂಬಷ್ಟು ಮೂರುಗಳು ಬರುತ್ತಿವೆಯೊದುದರಿಂದ, ಮೂಗನ್ನೇ ಕೊಡಬಾರದೆಂದು ಅವರು ಬಹುಮತದಿಂದ ರಚಾಯಿಸಿ ಸೃಷ್ಟಿಕರ್ತನನ್ನು ಪ್ರಾರ್ಥಿಸಬಹುದು. ನಾಲಿಗೆಯ ಕೆಲಸವನ್ನು ಮತ್ತಾವ ಅಂಗವೂ ಮಾಡಲಾರದು. ಅದರ ಕೆಲಸವನ್ನು ಅದೇ ಮಾಡಬೇಕು. ಎಂತಲೇ ಪಂಚೇಂದ್ರಿಯಗಳಲ್ಲಿ "ನಯನಂ ಪ್ರಧಾನಂ, ಅಲ್ಲ, "ಜಿಹ್ವಾ ಪ್ರಧಾನಾ,, ಎಂದು ನಿಮ್ಮ ಮೆದುಳಿಗೆ ನಿಲುಕದೆ ಹೋಗಲಾರದು. ನಾಲಿಗೆಯೊಂದಿರುವುದರಿಂದಲೇ ಅದರ ಬಲದಿಂದಲೇ ಬದುಕುವುದು ಇಂದು ಸಾಧ್ಯ. ಪರಮೋಶಿಯಿಂದ ಇದರ ಕೀರ್ತಿ ಬಾಯಿಗೆ ಹೋಗುವುದೂ ಇದೆ ದೇಹದೊಳಗೆ ಆತ್ಮವಿರುವುದಾದರೂ ದೇಹ-ಆತ್ಮಗಳು ಬೇರೆ ಬೇರೆ. ಮೂಢಮತಿಗಳು ದೇಹವನ್ನೇ ಆತ್ಮನೆಂದು ತಿಳಿದು ಮಣ್ಣುಮುಕ್ಕುವರೆಂದು ಗೀತೆ ಹೇಳುವುದಿಲ್ಲವೆ? ಹಾಗೆಯೇ ಬಾಯಿಯೊಳಗೆ ನಾಲಿಗೆಯಿರುವುದಾದರೂ ಅವು ಅಭೇದವಲ್ಲ. ಇವು ಒಂದೇ ಎಂದು ತಿಳಿದವನು ಮಂಡಿತಕ್ಕೂ ನೋಸ ಹೋಗುತ್ತಾನೆ. ಆದುದರಿಂದಲೇ "ಬಾಯಿ ಬಲ,, ಮುಖ್ಯವಲ್ಲ; ನಾಲಿಗೆಯ ಬಲವೇ ಪ್ರಧಾನ.

ನಾಲಿಗೆಯ ಪ್ರಾಧಾನ್ಯವನ್ನು ಭಾರತದಲ್ಲಿ ಮನ್ನಿಸಲಾಗಿದೆ. ಎಂತಲೇ ವಾಕ್ ಸ್ವಾತಂತ್ರ್ಯವನ್ನು ನಮ್ಮ ಸಂವಿಧಾನವು ಸಾರ್ವತ್ರಿಕವಾಗಿ ಕೊಟ್ಟು ವಾಗಿಂದ್ರಿಯದ ಘನತೆಯನ್ನು ಉದ್ಘೋಷಿಸಿದೆ. ಈ ಸದವಕಾಶದ ಸದುಪಯೋಗವನ್ನು ಭಾರತೀಯರು ಸಾಕಷ್ಟು ಮಾಡಿಕೊಳ್ಳುತ್ತಾರೆ. ಚುನಾವಣೆಗಳ ಕಾಲದಲ್ಲಿ ಲಂಗುಲಗಾಮಿಲ್ಲದೆ ಇದುವರೆಗೆ ಜಾರಾಡಿ, ತನ್ನ ಚಪಲತೆಯನ್ನು ಪೂರೈಸುವ ಅವಕಾಶ ನಾಲಿಗೆಗೆ ಇನ್ನು ಮುಂದೆ ತುಸು ಕಡಿಮೆಯಾಗುವ ನಿರೀಕ್ಷೆಯಿದೆ. ಎಲ್ಲ ರಾಜಕೀಯ ಪಕ್ಷಗಳು ಸಾಮಾನ್ಯ ನೈತಿಕ ನಿಯಮಾವಳಿಯೊಂದನ್ನು ನಿರ್ಮಿಸತೊಡಗಿದುದರಿಂದ ಹೀಗಾಗುವುದು. ಆದೇನೇ ಇದ್ದರೂ ಎಡೆದಷ್ಟು ಸಮಯ ನಾಲಿಗೆಯ ಕಾರಭಾರ ನಡೆಸುವುದು ತಪ್ಪಲ್ಲ. ಒಂದು ದಿನ ಅದನ್ನೂ ಬಂಧನಕ್ಕೆ ತರುಕುವವರೂ ಬರುವರೆಂಬ ಭೀತಿಯಿರುವುದರಿಂದ ಸ್ವಾತಂತ್ರ್ಯವಿರುವಾಗಲೇ ಚಪಲತೆಯನ್ನು ಪೂರೈಸಿಗೊಂಡು ತೃಪ್ತಿಯ ನಿಟ್ಟುಸುರು ಬಿಡುವುದು ಅನ್ಯಾಯ ಹೇಗಾದೀತು?

"ಪಂಚೇಂದ್ರಿಯಾಣಾಂ ಜಿಹ್ವಾ ಪ್ರಧಾನಾ,,— ಎಂಬುದು ಪ್ರಜಾಪ್ರಭುತ್ವದಲ್ಲಿ ನರರಕ್ಕೆ ಇನ್ನೂರರಷ್ಟು ಸತ್ಯ ಈ ಸತ್ಯಾನುಭವ ಮಾಡಿಕೊಳ್ಳದಿರುವವರಾದರೂ ಯಾರಿದ್ದಾರೆ?

—ಗೋರಾ.



ಉಡುಪಿ ಡಿ. ಮು. ಕೋರ್ಟಿನಲ್ಲಿ

O. S. No. 186/1961

ದಿ. ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್, ಉಡುಪಿ — ವಾದಿ

ಮತ್ತು

1 N. ಸಾದು ಶೆಟ್ಟಿ, ಮಣ್ಣು ಶೆಟ್ರ ಮಗ, 2. ನೇತ್ರಾವತಿ ಬಾಯಿ—ಶೆಟ್ರ ಪ್ರತಿವಾದಿಯ ಹೆಂಡ್ತಿ— ಮೂಡುತೋಟ್ಟು ಗ್ರಾಮದ ಕಲ್ಯಾಣಪುರ— ಪ್ರತಿವಾದಿರು.

ಇದರೊಳಗೆ

ಸದರಿ ಪ್ರತಿವಾದಿರಿಗೆ—

ಪ್ರತಿವಾದಿರು ವಾದಿ ಬೇಂಕಿಗೆ ತಾರೀಖು 3.8.1960ರಲ್ಲು ರೂಪಾಯಿ 1000.00ಕ್ಕೆ ಬರೆಕೊಟ್ಟ ನಿಮೊಂದ್ ನೋಟಿನ ಆಸಲು ಬಾಕಿ ವಡ್ಡಿ ಕೂಡಾ ರೂಪಾಯಿ 665.75 ಕ್ಕೆ ವಾದಿಯ ಪ್ರತಿವಾದಿರ ಮೇಲೆ ಮಾಡಿದ ಸದರಿ ವ್ಯಾಜ್ಯವು ತಾರೀಖು 8-9-1961ಕ್ಕೆ ಕಡಿಯ ಬಗ್ಗೆ ಇಟ್ಟಿದೆ. ಆ ದಿವಸ ಸದರಿ ಪ್ರತಿವಾದಿರು ಸ್ವತಹಾ ಯಾ ವಕೀಲರ ಮುಖಾಂತ್ರ ಕೋರ್ಟಿಗೆ ಹಾಜರಾಗಿ ಉಡಪಸರ ದಯಿದ್ರೆ ಅವರ ಗೈರ್‌ಹಾಜರಿಯಿಂದ ಸದರಿ ವ್ಯಾಜ್ಯವು ತೀರ್ಮಾನಿಸಲ್ಪಡುವದೆಂದು ಸದರಿ ಪ್ರತಿವಾದಿರಿಗೆ ಈ ಮೂಲಕ ತಿಳಿಯಪಡಿಸೋಣವಾಗಿದೆ.

M. Damodar Kamath,
Advocate for Plff.

ತಾರೀಖು 24—8—1961.

ನಡೆದುಬಂದ ದಾರಿ

ತೀರ್ಥಪ್ರಾಶನದಿಂದ ಆರೋಗ್ಯ ಭಾಗ್ಯ

ತೀರ್ಥ ಪ್ರಾಶನವು ಧಾರ್ಮಿಕಾಚರಣೆಯಲ್ಲಿ ಅಗ್ರಗಣ್ಯವಾಗಿದೆ. ಇದು ಕೇವಲ ಅಂಧಾನುಕರಣೆಯಲ್ಲ; ಆರೋಗ್ಯ ಸೂತ್ರಗಳಿಗೆ ಅನುಗುಣವಾಗಿಯೇ ಅಂದಿನಿಂದ ಇಂದಿನ ವರೆಗೂ ಈ ಆಚರಣೆಯು ನಡೆದು ಬರುತ್ತಿದೆ.

ಶ್ರೀ ಕೆ. ಅಚ್ಯುತ ಶ್ರೀನಿವಾಸ ಪೈ.

ದೇವಮಂದಿರಗಳಲ್ಲಿ ಮನೆ ಮತಗಳಲ್ಲಿ ಮುಕ್ತಿಗೆ ಸೋಪಾನವಾದ ದೇವಪೂಜೆ ಸದ್ಭಕ್ತಿಯಿಂದ ಕಾಯಾ ವಾಚಾ ಮನಸಾ ಆಚರಿಸಿ ತೀರ್ಥಪ್ರಸಾದ ಸ್ವೀಕರಿಸುವದು ಧರ್ಮಾನುಯಾಯಿಗಳ ಪ್ರಥಮ ಕರ್ತವ್ಯ, ಇದೇ ಶಾಶ್ವತವಾದದ್ದು. ಪುನರಪಿ ಜನನಂ, ಪುನರಪಿ ಮರಣಂ' ಎಂದಿರುವುದರಿಂದ ಮಾನವ ಜನ್ಮವನ್ನು ಸಾರ್ಥಕ ಮಾಡಿದರೆ, ಸದ್ಗತಿ, ಮುಕ್ತಿ ಒದಗಬಹುದು. ಜ್ಞಾನಿಯಾದ ಮಾನವನು ಇಹದಲ್ಲಿಯ ಸುಖಕ್ಕಿಂತ ಪರದಲ್ಲಿಯ ಶಾಂತಿಗಾಗಿ ಸಾಧಿಸುವರೇ ಬದುಕಬೇಕು ಬಾಳಬೇಕು. ತೀರ್ಥಪ್ರಾಶನದಿಂದ ಇಹದಲ್ಲಿ ಆರೋಗ್ಯಪರದಲ್ಲಿ ಮೋಕ್ಷವನ್ನೂ ಪಡೆಯಬಹುದು.

ತೀರ್ಥಪ್ರಾಶನೆಯಿಂದ ಅನ್ನಪಚನಕ್ಕೆ ಅನುಕೂಲವಾದ ಪಿತ್ತರಸವೂ ಉದ್ರೇಕವಾಗುವುದು. ತುಳಸಿ ಇದರಲ್ಲಿ ಪ್ರಾಧಾನ್ಯವಾಗಿರುವುದರಿಂದ ಜ್ವರನಾಶಕ, ಕ್ರಿಮಿನಾಶಕ, ವಾಂತಿ ಪತಿಬಂಧಕ ಗುಣ ವಿಶೇಷ ತೀರ್ಥಕ್ಕೆ ಇದೆ ತುಳಸಿಯನ್ನು ಮನೆಯ ವಠಾರದಲ್ಲಿ ನಡುವುದರಿಂದ ಹವೆಯು ಶುದ್ಧವಾಗುವುದಲ್ಲದೇ ನಮಗೆ ಅತಿ ಅಗತ್ಯವಾದ "ಒಕ್ಸಿಜನ್" ವಾಯುವು ಈ ಉತ್ತಮೋತ್ತಮ ಪ್ರಧಾನ ಶಾಲಿ ವನಸ್ಪತಿಯಿಂದ ವಿಪುಲವಾಗಿ ದೊರೆಯುತ್ತದೆ. ಧಾರ್ಮಿಕ ಸಂಪ್ರದಾಯಗಳು ಅಂಧಶ್ರದ್ಧೆಗಳಲ್ಲ! ಆರೋಗ್ಯ ಪ್ರವರ್ಧಕ, ರೋಗ ಪ್ರತಿಬಂಧಕ, ಪಾರಮಾರ್ಥಿಕ ಸಾಧಕಗಳಾಗಿರುತ್ತವೆ.

ಶಾಲಿಗ್ರಾಮಕ್ಕೆ ಶ್ರೀಗಂಧ ಶೇದಿ ತುಳಸಿಯಿಂದ ಪೂಜಿಸಿ ತಾಮ್ರದ ಪಾತ್ರೆಯಲ್ಲಿ ಶಂಖೋದಕದಿಂದ ಅಭಿಷೇಕ ಮಾಡುತ್ತಾರೆ. ಆ ಅಭಿಷೇಕ ಜನ್ಯವೇ ತೀರ್ಥ. ಜಲವು ಪ್ರಾಣಧಾರಣೆಗೆ ಸರ್ವರಿಗೂ ಅತ್ಯವಶ್ಯಕವಾದ ವೇಯ, ಇದು ಯೋಗವಾಹಿಯೂ ಆಗಿದೆ. ಮನುಷ್ಯರಿಗೂ, ಪ್ರಾಣಿಗಳಿಗೂ, ಮೃಗಪಕ್ಷಿಗಳಿಗೂ ಅತಿ ಅವಶ್ಯವಾದುದು.

"ವಾಸೀಯಂ ಶ್ರಮ ನಾಶನಂ ಕ್ಲಮ ಹರಂ ಮೂರ್ಛಾಸಿಪಾಸಾಹರಂ ತಂದ್ರಾ ಛರ್ದಿ ವಿಬಂಧ ಹೈಧ್ಯಲಕರಂ ಸಿದ್ರಾಹರಂತರ್ಪಣಂ ಹೃದ್ಯಂ ಗುಪ್ತರಸಂ ಹ್ಯಜೀರ್ಣ ಶಮಕಂ ನಿತ್ಯಂ ಹಿತಂ ಶೀತಲಂ ಲಿಪ್ಸಿಚ್ಛಂಗರಸ ಕಾರಣಂ ನಿಗದಿತಂ ಪೀಯೂ ಷವಜ್ಜೀವನಂ" (ಭಾ.ಪ್ರ).

"ಜೀವನಂ ತರ್ಪಣಂ ಹೃದ್ಯಂ ಹ್ಲಾದಿ ಬುದ್ಧಿ ಪ್ರಬೋಧನಂ | ತನ್ವ್ಯಕ್ತರಸಂ ವೃಷ್ಯಂ ಶೀತಲಂಪ್ಯಾಮೃತೋಪಮಂ ॥ (ವಾ ಸೂ. ಸ್ಥಾ.)

'ಪಾನೀಯಂ ಶೀತಲಂ ಹೃದ್ಯಂಹಂತಿ ಪಿತ್ತವಿಷ ಭ್ರಮಾನ್।
ದಾಹಾಜೀರ್ಣ ಶ್ರಮಚ್ಛರ್ದಿಮದ ಮೂರ್ಛಾಮದಾತ್ಯಯಾನ್ ॥
(ಮ. ನಿ.)

ಮೊದಲಾಗಿ ಪ್ರಾಮುಖ್ಯ ಗ್ರಂಥಗಳಲ್ಲಿ ಜಲದ ಪ್ರಾಮುಖ್ಯತೆ ಮತ್ತದರ ಗುಣ ವಿಶೇಷತೆ ಉಲ್ಲೇಖಿಸಲ್ಪಟ್ಟಿವೆ.

"ಆಪೋವಾ ಇದಂ ಸರ್ವಂ" "ಆಪೋವಿಶ್ವಸ್ಯ ಭೇಷಜೀಃ" ಎಂಬುದಾಗಿ ಕೊಂಡಾಡಲ್ಪಟ್ಟಿದೆ.

ತೀರ್ಥದಲ್ಲಿ ಶ್ರೀಗಂಧ ಚಂದನ ಉಪಯೋಗಿಸಲ್ಪಡುವುದರಿಂದ ಮೇಲ್ಮುಖವಾದ ಜಂತು (ಹೊಟ್ಟೆ ಹುಳುವಿನ) ಪ್ರಬಲತೆಯನ್ನು ಅಮೂಲಾಗ್ರವಾಗಿ ನಾಶ ಮಾಡುವ ಸಾಮರ್ಥ್ಯ, ಶಕ್ತಿ ಚಂದನಕ್ಕಿದೆ ಎಂಬುದರಿಂದ ತೀರ್ಥ ಪ್ರಾಶನದ ಆವಶ್ಯಕತೆ ಆಹಾರ ಪಾನೀಯಗಳಿಗಿಂತ ಸಾವಿರ ಪಾಲು ಹೆಚ್ಚಿಗಿದೆ.

'ಚಂದನಂ ಶೀತಲಂ ರೂಕ್ಷಂ ತಿಕ್ತ ಮೂಷ್ಣಾದನಂ ಲಘು।
ಹೃದ್ಯಂ ವರ್ಣ್ಯಂ ವಿಷ ಶ್ಲೇಷ್ಮ ತೃಷ್ಣಾ ಪಿತ್ತಾಸ್ರದಾಹಜಿತ್"

ನಾಲಿಗ್ರಾಮವೆಂಬುದು ಗಂಡಕೀ ನದಿಯಲ್ಲಿ ಸಿಗತಕ್ಕ ಪಾಷಾಣ ವಿಶೇಷ. ಇವುಗಳಲ್ಲಿ ಸುವರ್ಣಾಂಶವಿರುವುದಾಗಿ ವಿಜ್ಞಾನಿಗಳಿಂದ ಶೋಧಿಸಲಾಗಿದೆ. ಈ ಸುವರ್ಣ ಅಂಶವು ತೀರ್ಥದಲ್ಲಿ ಸೇರುವುದರಿಂದ ಅಮೃತದ ಸೇವನೆಯೊಡಂತೇ. ಪಂಚಾಮೃತದಲ್ಲಿ ಪೈತ, ಸಕ್ಕರೆ, ಜೇನುತುಪ್ಪ, ಹಸುವಿನ ಹಾಲು, ಮೊಸರುಗಳಿರುವುದರಿಂದ ಸರ್ವ ತರದ 'ವಿಟಿಮಿನ್' ಗಳು ಸೇರಿಕೊಂಡಿರುತ್ತವೆ.

"ಸುವರ್ಣಂ ಶೀತಲಂ ವೃಷ್ಯಂಬಲ್ಯಂ ಗುರುರಸಾಯನಂ। ಕಾಂತಿಪ್ರದಂವಿಷೋನ್ಮಾದ ತ್ರಿದೋಷಜ್ವರ ಶೋಷಜಿತ್ ॥
ಕಷಾಯಂ ತಿಕ್ತಮಧುರಂ ಸುವರ್ಣಂ ಗುರುಲೇಖನಂ.

ಎಂದು ಹಲವು ಆಯುರ್ವೇದೀಯ ಸಂಗ್ರಹಗ್ರಂಥಗಳಲ್ಲಿ ಹಲವೆಡೆಗಳಲ್ಲಿ ಉಲ್ಲೇಖಿಸಲ್ಪಟ್ಟಿದೆ— ಸುವರ್ಣದ ಮಹತ್ವ. ಸುವರ್ಣವು ಪೈದ್ಯ 'ಹಾರ್ಟಿಟೊನಿಕ್" ಎಂದು ವಿಶದೀಕರಿಸಲ್ಪಟ್ಟಿರುವುದರಿಂದ ತೀರ್ಥಪ್ರಾಶನದಿಂದ ಸೌಭಾಗ್ಯವೆಂಬ ಆರೋಗ್ಯ ಲಭಿಸುವುದರಲ್ಲಿ ತಿಲಮಾತ್ರ ಸಂಶಯವಿಲ್ಲ. ಹೀಗೆ ಶಾಲಿಗ್ರಾಮದಲ್ಲಿ ಸುವರ್ಣ ಅಂಶವಿರುವುದರಿಂದ ತೀರ್ಥಕ್ಕೆ ಅತ್ಯುಪಯುಕ್ತವಾದ ಪಾಷಾಣ ವಿಶೇಷವದು.

ಇನ್ನು ಖಿದ ಶಂಖೋದಕ ವಿಷಯ ಹೇಳುವುದಾದರೆ "ಶಂಖೋಜಕಟುಕಃ ಪಾಕೇ ಕಷಾಯೋ ವ ಧುರೋ ಲಘುಃ। ಚಕ್ಷುಷ್ಯೋ ಲೇಖನಃ ಪಕ್ತಿಶೂಲ ವಿತ್ತ ವಿನಾಶನಃ| ಶಂಖೋ.....ಪಿತ್ತ ಕಫಾಸ್ರಜೀತ್" ಎಂಬುದಾಗಿ ಶಂಖದ ವಿಶೇಷ ಗುಣಗಾನ ಮಾಡಲಾಗಿದೆ. ಆಯುರ್ವೇದೀಯ ಯೋಗಗಳಲ್ಲಿ ಶಂಖಭಸ್ಮ ವನ್ನೈರಿ ಅಜೀರ್ಣ ಹೋಗಲಾಡಿಸುವ ಪ್ರಭಾವ ಶಂಖಕ್ಕೆ ಹೇರಳವಿದೆ. ಭಕ್ತಿಯೇ ಮುಕ್ತಿಗೆ ಸೋಪಾನ. ಅಂಥ ಭಕ್ತಿಯಿಂದ ಭಗವಂತನನ್ನು ನಿತ್ಯ ಪೂಜಿಸಿ ತೀರ್ಥ ಪ್ರಾಶನದಿಂದ ಆರೋಗ್ಯಲಾಭ ಪಡೆದು, ಧರ್ಮಾನುಷ್ಠಾನದಿಂದ ಇಹದ ಜೀವನ ಸುಖಮಯವಾಗಿರಿಸಿ ಪರದಲ್ಲಿ ಮೋಕ್ಷ-ಶಾಶ್ವತ ಸುಖವೇ ಮುಖ್ಯ ಮಾನವನ ಗುರಿಯಾಗಿರಲಿ.

ಅಮೃತ ಬಿಂದು

ದ್ವೇಷಿಸುವದು ಸುಲಭದ ದಾರಿಯೇನೋ ಹೌದು; ಆದರೆ ಪ್ರೀತಿಸುವದು ಆರೋಗ್ಯದ ದಾರಿ!

o o o

ಜ್ಞಾನ, ಅನುಭವ ಹೆಚ್ಚುತ್ತಾ ಹೋದಂತೆ ಮನುಷ್ಯನ ನಿರ್ಬಲತೆಯ ಅರಿವಾಗಿ ಮನುಷ್ಯನು ನಮ್ರನಾಗುತ್ತಾನೆ.

o o o

ಒಬ್ಬ ಕೀರ್ತಿವಂತನ ಹಿನ್ನೆಲೆಯಲ್ಲಿ ಕೀರ್ತಿಗಾಗಿ ಆಶಿಸದ ಹಲವು ನಿಸ್ವಾರ್ಥಿ ದುಡಿಮೆಗಾರರಿರುವರೆಂಬುದನ್ನು ಮರೆಯಬಾರದು.

o o o

ಭಯಂಕರ ಬಿರುಗಾಳಿ, ಸಮುದ್ರ ತೆರೆಗಳಾದರೂ ಪಟ್ಟನಾವಿಕನಿಗೆ ಸಹಾಯಕವಾಗಿಯೇ ಪರಿಣಮಿಸುತ್ತದೆ.

o o o

ನಾವು ಏನು ಮಾಡಬಲ್ಲೆವೆಂಬ ಹೆಗ್ಗಳಿಕೆಯ ಅಳತೆ ಕೋಲಿನಿಂದ ನಮ್ಮನ್ನು ನಾವು ಅಳೆದರೆ ನಾವು ಏನು ಮಾಡಿದ್ದೇವೆಂಬುದರ ಅಳತೆ ಕೋಲಿನಿಂದ ಇತರರು ನಮ್ಮನ್ನು ಅಳೆಯುತ್ತಾರೆ.

o o o

ಮೇಲೇರಿದ ಗಂಡಸು ತನ್ನ ಪ್ರಯತ್ನದಿಂದಲೇ ಮೇಲೇರಿದೆನೆಂದು ಹೆಮ್ಮೆ ಪಡುವಾಗ ಆತನ ಹೆಂಡತಿ ಹಿನ್ನೆಲೆಯಲ್ಲಿ ನಿಂತು ನಗುತ್ತಾಳೆ. ಉತ್ತಮ ಹೆಂಡತಿಯೇ ಗಂಡಸಿನ ಮೇಲ್ಮೆಗೆ ಅಡಿಪಾಯ!

o o o

ಸಾವು ಎಲ್ಲರಿಗೂ ಬರುತ್ತದೆ. ಆದರೆ ನಾವು ಬರುವ ಮುನ್ನ ಸಾಧಿಸಿದ ಸಾಧನೆಯು ಸಾವನ್ನು ಜಯಿಸಿ ಅಚಾಂದ್ರಾರ್ಕವಾಗಿ ನಿಲ್ಲುತ್ತದೆ.

o o o

ಆತುರದಿಂದ ಗೆಳೆತನ ಕಟ್ಟಿಕೊಂಡವರು ನಿಧಾನವಾಗಿ ದುಃಖಪಡಬೇಕಾಗುತ್ತದೆ.

o o o

ಮೆಚ್ಚುಗೆಯೆಂಬುದು ಕ್ಷಣಕಾಲದ ಹುಚ್ಚು. ಪರಿಚಯ ಹೆಚ್ಚಾದಂತೆ ಮೆಚ್ಚುಗೆ ಮಾಯವಾಗುತ್ತದೆ.

o o o

ನಿರ್ಬಲತೆ ಯೊ ದುಷ್ಟಟಗಳಿಲ್ಲದ ಮನುಷ್ಯರು ಎಲ್ಲರಿಗೂ ಭಯಂಕರ. ಏಕೆಂದರೆ ಅವರನ್ನು ಯೆಲ್ಲರೂ ತಮಗಾಗಿ ಉಪಯೋಗಿಸಿಕೊಳ್ಳಲಾರರು.

o o o

ಕುದುರೆ ಮುಪ್ಪತ್ತು ದೊರೆತಿದೆಯೆಂದು ಸಾಯುವ ವರೆಗೆ ಸವಾರಿಮಾಡಬಾರದು.

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ, ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಹೊಸ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.

ಬೆಲೆ ರೂ. 1-4-0 (1=25).

ಮನೆಯೆಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್.ಐ.ಎಮ್ ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ— ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ— ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ. ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.

ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ

ಸಿ. ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0=25 N.P ಸೇರಿಸಿ ಮನಿಆರ್ಡರು ಮಾಡಿದರೆ ಪುಸ್ತಕಗಳಿಸಲಾಗುವುದು.

ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ನಮಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಯಮನ ನೆರಳು

(೨ನೇ ಪುಟದಿಂದ)

"ವಿಷದ ಶೋಧನೆಯನ್ನು ಡಾಕ್ಟರ್ ರಣಜಿತ್‌ಸಿಂಹ ಜೌಹಾನರೂ, ಮುಖ ನಾಳದ ಶೋಧನೆಯನ್ನು ರಾಮಸಿಂಹನೂ ಮಾಡಿದ್ದರು." ಎಂದರು ಜಯಂತ್.

"ರಾಜಕುಮಾರ ರಾಮಪ್ರಸಾದ್ ಸಿಂಹರ ಕೊಲೆ ಹೇಗಾಯ್ತು? ಎಂದರು ದೀಕ್ಷಿತ್.

"ಮಾಯಾವತಿಯ ಖಾಲಿ ಕೋಣೆಯಲ್ಲಿ ರಾಮಸಿಂಹನು ಮೊದಲೇ ಅಡಗಿಕೊಂಡಿದ್ದನು. ಡ್ರೈವರನೊಡನೆ ತಾನುಪರದೇಶಿ ಎಂದೂ ಬಂಗಲೆ ಮತ್ತು ತೋಟವನ್ನು ಸಂಪೂರ್ಣವಾಗಿ ಪರೀಕ್ಷಿಸಿ ಇಂತಹ ತೋಟವನ್ನು ತಾನೂ ಕಟ್ಟಿಸಬೇಕ್ಷಿಸುವುದಾಗಿಯೂ ತಿಳಿಸಿದ್ದನು. ಡ್ರೈವರನಿಗೆ ತನ್ನ ಪಕೇಟಿನಿಂದ ಐದು ರೂಪಾಯಿ ತೆಗೆದು ಬಹುಮಾನವಿತ್ತಿದ್ದನು. ಸ್ವಲ್ಪ ಸಮಯದ ವರೆಗೆ ಅವನ ಕೈಯಲ್ಲೇ ಇದ್ದುದರಿಂದ, ಡ್ರೈವರನು ಪಕೇಟನ್ನು ಸರಿಯಾಗಿ ಕಂಡಿದ್ದನು. ಅದುದರಿಂದಲೇ ಕಸಗುಡಿಸುವವನ ಹೇಳಿಕೆ ಬರೆದು ತೆಗೆದುಕೊಳ್ಳುತ್ತಿರುವಾಗ ನಾಕೇಟನ ಸದ್ದಿ ಕೇಳಿ ಅದನ್ನು ಕಾಣಲು ಅವನು ಉತ್ಕಂಟಿತನಾಗಿದ್ದನು."

"ಓರ್ವ ಮಿಲಿಟರಿ ಆಫೀಸರನ ಕೋಣೆಯ ಎದುರುಗಡೆ ನಮಗೆ ಶವ ಸಿಕ್ಕಿತ್ತು. ಆ ಕೋಣೆಯಲ್ಲಿದ್ದವನೇ ರಾಮಸಿಂಹನೆಂದು ನನಗೆ ನಂತರ ತಿಳಿಯಿತು. ತನಿಖೆಯ ಸಮಯದಲ್ಲವನು ವೇಷ ಬದಲಿಸಿ ಅಲ್ಲೇ ಇದ್ದನು. ಅವನ 'ಪರ್ಸ್' ನಿಜವಾಗಿಯೂ ಬಿಸಾಡಿಹೋಗಿತ್ತು; ರಹಸ್ಯ ಪತ್ತೆಯಾಗುವ ಭಯದಿಂದ ಅವನು ಅದನ್ನು ಹಿಂದೆ ಪಡೆಯಲು ಆತುರನಾಗಿದ್ದನು. ಅವನು ನೌಕರನೊಡನೆ ಹೋಗಿ ಪಾಕೇಟು ಸೆಳೆದುಕೊಂಡು ಅವನ ಕೊಲೆ ಮಾಡಿದ್ದನು, ಅಷ್ಟರಲ್ಲಿ ಡ್ರೈವರನು ಬಂದುದನ್ನು ಕಂಡು ಅವನನ್ನು ಬೇರೊಂದು ಕಡೆ ಕರೆದುಕೊಂಡು ಹೋಗಿ ಅವನನ್ನೂ ಮುಗಿಸಿಬಿಟ್ಟನು. ಕಾವಲು ತಪ್ಪಿಸಿದ ನಂತರ ಗಡ್ಡ ಮೀಸೆ ತೆಗೆದು ಬೇರಾವ ವೇಷದಲ್ಲೋ ಅವನು ಹೊರಟು ಹೋದನು.

"ಹಾಗಾದರೆ ಬರೇ ಪಾಕೇಟಿಗಾಗಿ ಅಮಾರ್ವರ ಕೊಲೆಯಾಯ್ತೇನು?" ಎಂದರು ಶರ್ಮಾಜೀ.

"ಹೌದು! ಇದೆಲ್ಲವೂ ಶ್ರೀ ದಾಮೋದರರ ತನಿಖಿಸರ್ಶ್ರಮಗಳಿಂದಲೇ ಸಾಧ್ಯವಾಯ್ತು. 'ಯಮಪುರಿ'ಯ ಹೆಚ್ಚಿನ ಚಲನವಲನಗಳನ್ನು ನವಲೇಂದ್ರನು ಕಂಡುಹಿಡಿದು ನನಗೆ ಹೇಳಿದನು. ಒಂದು ವೇಳೆ ನನ್ನನ್ನು ಮತ್ತು ಮಾಯಾವತಿಯನ್ನು ಆ ದಿವಸ ನವಲೇಂದ್ರನು ಕರೆದುಕೊಂಡು ಬಾರದೆ, ಅಲ್ಲೇ ಇರುತ್ತಿದ್ದರೆ, ನಿಮ್ಮನ್ನು ಸ್ವಲ್ಪವೂ ಭಯವಿಲ್ಲದೆ ಸುರಕ್ಷಿತವಾಗಿ ಕರೆದುಕೊಂಡು ಬರುತಿದ್ದನು." ಎಂದರು ಜಯಂತ್.

ಸುಪ್ರಭಾತವಾಗುವ ಸಮಯವಾದುದರಿಂದ ಪೋಲೀಸ್ ಅಧಿಕಾರಿಗಳು ಹೊರಟುಹೋದರು. ಪ್ರಾಣದಾಸರಿಗೆ ಅಲ್ಲೇ ನಿಲ್ಲುವ ವ್ಯವಸ್ಥೆ ಮಾಡಲಾಯ್ತು.

೨೨

ದಲಿತಸಿಂಹ ಯಾನೆ ಡಾಕ್ಟರ್ ರಣಜೀತರು ತೋಟದಿಂದ ಓಡಿ ಹೋಗಿರಲಿಲ್ಲ. ಸುರಕ್ಷಿತ ಸ್ಥಾನವೊಂದರಲ್ಲಿ ಅಡಗಿಕುಳಿತಿದ್ದರು. ಜಮುನಾ ಪ್ರಸಾದನು ದಾಮೋದರ ಸ್ವರೂಪರಾದಗಲೂ ಅವರು ಅಲ್ಲೇ ಇದ್ದರು. ರಾತ್ರಿಯ ಶಾಂತ ವಾತಾವರಣದಲ್ಲಿ ಜಯಂತರು ಪೋಲೀಸರಿಗೆ 'ರಹಸ್ಯೋದ್ಘಾಟನೆ'ಯ ಕಥೆ ಹೇಳುತ್ತಿರುವಾಗಲೂ ಅವರಲ್ಲೇ ಇದ್ದು ಕೇಳುತಿದ್ದರು. ಈ ವಿಷಯವೆಲ್ಲವನ್ನೂ ಬಯಲಿಗೆಳೆದವರು ದಾಮೋದರ ಸ್ವರೂಪರೆಂದ ಜಯಂತರು ಹೇಳಿದಾಗ ರಣಜೀತರು ಉದ್ರೇಕದಿಂದ ಬೆಂಕಿಯ ಮುದ್ದೆಯಾಗಿದ್ದರು. ಡಾಕ್ಟರ್ ರಣಜೀತರು ಸಾಧಾರಣ ಮೂವತ್ತು ವರ್ಷಗಳಿಂದ ತಾನು ಮಾಡಿದ ಎಲ್ಲಾ ಕೆಲಸಗಳನ್ನು ಡೈರಿಯಲ್ಲಿ ಬರೆದಿಡುತಿದ್ದರು. ಇತ್ತೀಚೆಗೆ ಕೆಲವು ದಿವಸಗಳಿಂದ ಅವರ ಡೈರಿ ಬಿಸಾಡಿ ಹೋಗಿತ್ತು; ಹುಡುಕುವಾಗಲೂ ಸಿಕ್ಕಿರಲಿಲ್ಲ. ಎಲ್ಲಿಯೋ ಮರೆತು ಇಟ್ಟಿರಬೇಕು. ಸಮಯ ಸಿಕ್ಕಿದಾಗ ಹುಡುಕಬೇಕೆಂದು ಅವರು ಭಾವಿಸಿಕೊಂಡಿದ್ದರು. ಆದರಿವತ್ತು ತನ್ನ ಡೈರಿಯ ಅಪಹರಣದ ಮೂಲಕವೇ ತನ್ನ ಎಲ್ಲಾ ಕುತ್ಸಿತ್ಯಗಳು ಇವರಿಗೆ ಗೊತ್ತಾದುವು ಎಂದವರಿಗೆ ಈ ಸಮಯದಲ್ಲಿ ತಿಳಿಯಿತು. ಡೈರಿಯ ಅಪಹರಣವನ್ನು ದಾಮೋದರ ಸ್ವರೂಪರು ಮಾಡಿರುವರೆಂದು ಅವರು ನಿಶ್ಚಯಿಸಿಕೊಂಡರು.

ದುಃಖ ಪಶ್ಚಾತ್ತಾಪಗಳಿಂದಾಗಿ ಅವರು ತಲೆಗೆ ಕೈಕೊಟ್ಟು ಕುಳಿತು ಬಿಟ್ಟರು. ಅನಂತರ ದಾಮೋದರರ ಜೀವ ತೆಗೆಯುತ್ತೇನೆ ಎಂದು ಪಣತೊಟ್ಟರು ರಾಮಸಿಂಹನ ದಸ್ತಗಿರಿಯ ಬಗ್ಗೆ ಅವರಿಗೆ ದುಃಖವಾಗಲಿಲ್ಲ. ನನ್ನ ಉಜ್ವಲ ಆದರ್ಶವನ್ನು ಸುಟ್ಟವನೇ ಅವನು ಎಂದು ಕೊಂಡರು. ಪೋಲೀಸರು ನನಗೇನೂ ಮಾಡಲಾರರು, ಜಯಂತನೂ ಏನೂ ಮಾಡಲಾರ? ಎಂದುಕೊಂಡರು. 'ಯಮಪುರಿ'ಯು ಅವರ ವಶದಲ್ಲಿರುತಿದ್ದರೆ, ಪ್ರಪಂಚದ ಸರ್ವಶ್ರೇಷ್ಠ ವಿಜ್ಞಾನಿಗಳಲ್ಲೊಬ್ಬರಾಗಿ ಮೆರೆಯುತ್ತೇನೆಂಬ ಭರವಸೆ ಅವರಿಗಿತ್ತು. ಚಿಂತಾಗ್ರಸ್ಥರಾಗಿ ಮಹೇಂದ್ರಗಡದ ಅರಣ್ಯ ದಾಟಿಬಂದಾಗ ಅಲ್ಲಿ ಅವರ ಕಾರು ನಿಂತಿತ್ತು. ಅದರಲ್ಲಿ ಕುಳಿತು ಯಮಪುರಿಗೆ ಬಂದರು. ಈಗಲೂ 'ಯಮಪುರಿ'ಯಲ್ಲಿ ಸ್ವತಃ ರಾಮಸಿಂಹನು ಕಾಣದ ಮತ್ತು ರಣಜೀತರ ವಿನಃ ಇನ್ನಾರಿಗೂ ತಿಳಿಯದ ಅನೇಕ ಸ್ಥಾನಗಳಿದ್ದುವು. 'ಅಲ್ಲಿಯ ಕೆಲವು ನೆಲಮಾಳಿಗೆಯಲ್ಲಿ ಅವರು ವರ್ಷಗಟ್ಟಲೆ ಸುರಕ್ಷಿತರಾಗಿದ್ದು ತನ್ನ ಕಾರ್ಯ ಮಾಡಬಹುದು.

ಅವರು ನೇರವಾಗಿ ತನ್ನ ಪ್ರಯೋಗಶಾಲೆಯನ್ನು ಹೊಕ್ಕರು. ಅಲ್ಲಿಗೆ ಅವರು ಯಾರನ್ನೂ ಯಾವಾಗಲೂ ಕರೆದುಕೊಂಡು ಹೋಗುವುದಿಲ್ಲ. ರಾಮಸಿಂಹನಿಗೂ ಪ್ರಯೋಗ ಶಾಲೆಯ ಬಗ್ಗೆ ಏನೊಂದೂ ತಿಳಿದಿರಲಿಲ್ಲ.

ಸಂಯೋಗವಶದಿಂದ ಅವರಿಂದು ಫಲಕದಾರಿಯನ್ನು 'ಯಮಪುರಿ'ಯಲ್ಲೇ ಬಿಟ್ಟುಹೋಗಿದ್ದರು. ಅವರಿಗಿಂದು ಅಸಫಲವಾಗುವ ಅಂಜಿಕೆಯೇ ಇದ್ದಿಲ್ಲ. ಮಾಯಾವತಿಯನ್ನು ಕರೆದುಕೊಂಡು ಬಂದ ಕೂಡಲೇ ಅವಳನ್ನು 'ವಾಯುಯಾನ'ದಿಂದ ಬೇರಾವ ಸ್ಥಳಕ್ಕಾದರೂ ಫಲಕದಾರಿ ಕೊಂಡುಹೋಗುವಂತೆ ನಿಶ್ಚಯಿಸಿದ್ದರು. ಈ ಸ್ಥಿತಿಯಲ್ಲಿ ಜಯಂತ ಮುಂತಾದವರಿಗೆ ಕೆಲವು ದಿನ ಅವಳ ಪತ್ತೆಯಾಗುವುದಿಲ್ಲ; ಅಷ್ಟರಲ್ಲಿ ಯಾವ ರೀತಿಯಲ್ಲಾದರೂ ಅವಳನ್ನು ಒಲಿಸಿ ಫಲಕದಾರಿಯೊಡನೆ ವಿವಾಹಕ್ಕೆ ಸಮ್ಮತಿಸುವಂತೆ ಮಾಡುವ ಕಾರ್ಯವನ್ನು ಅವರಿಗೇ ಒಪ್ಪಿಸಲಾಗಿತ್ತು.

ಡಾಕ್ಟರ್ ರಣಜೀತರು.

"ಧೈರ್ಯಗೆಡಬೇಡ ನಾಳೆ ಜಯಂತನೂ ನನ್ನ ಮತ್ತು ನಿನ್ನ ದಸ್ತಗಿರಿಗಾಗಿ 'ಯಮಪುರಿ'ಯ ಆಕ್ರಮಣ ಮಾಡುತ್ತಾನೆಂಬುದು ನಿಶ್ಚಯ. ನಾಳೆ ಈ ಭವನವನ್ನು ವಾಸ್ತವ 'ಯಮಪುರಿ'ಯನ್ನಾಗಿರಿಸಬೇಕು. ಸೋತರೆ ಸತ್ತಂತೆಯೇ ಸರಿ!" ಎಂದು ತಮ್ಮ ರಕ್ಷಣೆಯ ವಿಚಾರ ವಿವರಿಸ ತೊಡಗಿದರು.

"ಪ್ರಯೋಗ ಶಾಲೆಯ ಮೇಲಿನ ಮಾರ್ಗದಲ್ಲಿಯೇ ಅವರನ್ನು ತಡೆಯಬೇಕು. ಮೇಲಿನ ಭಾಗದ ನಾಲ್ಕು ಸುತ್ತಲೂ 'ಸ್ಟೆನ್‌ಗನ್' ಇಡು. ಅಲ್ಲಿ ಇಬ್ಬರಿಬ್ಬರು ಇರಲಿ, ಪೊಲೀಸರೆಲ್ಲಾ ನಮ್ಮ ಸುತ್ತಿನಲ್ಲಿ ಬಂದ ಕೂಡಲೇ ಫಾಯರ್ ಮಾಡಲಿ ಅವರು ಹೆದರಿ ಹಿಂದಿರುಗುವಾಗ ಎಡ ಬಲದಿಂದ ಫಾಯರ್ ಮಾಡ ತೊಡಗಿದರೆ ಒಬ್ಬನೂ ಬಾಕಿ ಉಳಿಯುವುದಿಲ್ಲ; ಉಳಿಯಬಾರದು. ನಮ್ಮ ರಹಸ್ಯವು ಇವರಿಗೆ ಮಾತ್ರ ತಿಳಿದಿದೆ. ಇವರೆಲ್ಲರೂ ಕೊಲ್ಲಲ್ಪಟ್ಟರೆ ಅದು ಗುಪ್ತವಾಗಿರುತ್ತದೆ. "ನೀನು ಹೆಬ್ಬಾಗಿಲಿನ ಹತ್ತಿರ ಇರು. ಹಾಗೂ ಅವರು ಬಂದೊಡನೆ ನನಗೆ ಸೂಚನೆ ಕೊಡು." ಎಂದರವರು

"ಅಪ್ಪಣೆ" ಎಂದುತ್ತರವಿತ್ತ ಫಲಕದಾರಿ.

"ಮತ್ತು ಹಾಂ, ಕುಂಜರವೇಟರಿ ಸುರಂಗಗಳಲ್ಲಿ ಒಂದೊಂದು ಡೈನಮೇಟ್ ಇಟ್ಟು ಬಿಡು. ಅವರೆಲ್ಲಿಯೂದರೂ ಆ ಮಾರ್ಗವಾಗಿ ಬಂದರೆ ಕೂಡಿಗಳ ಮೂಲಕ ಡೈನಮೇಟ್ ಒಡೆಯಲಿ, ಅಲ್ಲಿಗೂ ಒಬ್ಬಿಬ್ಬರನ್ನು ನಿಯಂತ್ರಿಸು. ಎಂಟು ಜನರನ್ನು ನಿನ್ನ ಕಮಾಂಡಿನಲ್ಲಿಡು. ಒಂದು ವೇಳೆ ಶೋಧಾಡುವ ಸಂದರ್ಭ ಬಂದರೆ ನಮ್ಮ ಜನರನ್ನು ಸುರಕ್ಷಿತವಾಗಿಟ್ಟು ಹೋಗಾಡು. ಹಾಲ್‌ನ ಮುಂದುಗಡೆ ಇರುವ ಗಿಡದಾನಿಯನ್ನು ಕುಂಜರವೇಟರಿಯತ್ತ ಹೋಗುವ ಮಾರ್ಗದಲ್ಲಿಡ. ಯಾವ ಗಿಡದಾನಿ ಎಂದ ಗೊತ್ತಿದೆ ತಾನೆ?"

"ಅದೇ ಮೂಲೆಗೆ ತಪ್ಪಿಸುವ ಗ್ಯಾಸ್ ಬಿಡುವ...."ಫಲಕದಾರಿಯನ್ನು ತಡೆದು —"ಶಹಬಾಸ್ ಹಾಗಿರಬೇಕು. ಅದರೆ ಮಲಗುವ ಮೊದಲು ಈ ವ್ಯವಸ್ಥೆಯನ್ನು ಮಾಡಿಬಿಡು ."ಏಕೆಂದರೆ ಅವರು ನಾಳೆ ರಾತ್ರಿ ಬರುವ ಬದಲು ಇಂದು ರಾತ್ರಿ ಬಂದರೂ ಬರಬಹುದು."

"ಸರಿ ಸಾರ್" ಎಂದು ಫಲಕದಾರಿ ಹೊರಟು ಹೋದನು. ಸೋತು ಹೋದ ಡಾಕ್ಟರರು ಶಯನ ಗೃಹದತ್ತ ತೆರಳಿದರು. ಇತ್ತ ಫಲಕದಾರಿಯು ತನಗೆ ದೊರೆತ ಆದೇಶದಂತೆ ಕೆಲಸ ಮಾಡಿದನು.

ಎಲ್ಲರೂ ಸ್ನಾನ ಮಾಡಿ ಫಲಹಾರ ಮಾಡಲು ಹೊರಟು ಹೋದರು. ಫಲಹಾರದ ನಂತರ ಫಲಕದಾರಿಯು ರಾತ್ರಿ ಹೋರಾಟ ನಡೆವರೆ ಜಾಗರಣೆ ಮಾಡಲು ಕಷ್ಟವಾಗಬಹುದೆಂದು ಮಲಗಲು ಹೋದನು.

ಇತ್ತ ಮಧ್ಯಾಹ್ನ ಎಚ್ಚತ್ತ ಜಯಂತರು ದಾಮೋದರರನ್ನು ಕರೆತರಲು ನವಲೇಂದ್ರನನ್ನು ಕಳುಹಿಸಿದರು. ಅವರೀರ್ವರೂ ಬಂದ ನಂತರ ಅವರನ್ನು ಕುಳ್ಳಿರಿಸಿ—"ಡಾಕ್ಟರ್ ರಣಜೀತ್ ಸಿಂಹ ಜೌಹಾನರು ಓಡಿಹೋಗುವ ಸಂಭವವಿದೆ. ಅವರೀರ್ವರೂ ನಮ್ಮ ಕೈಗೆ ಇನ್ನೂ ಸಿಕ್ಕಿಲ್ಲ. ಫಲಕದಾರಿಯೂ ದಸ್ತಗಿರಿಯಾಗಲಿಲ್ಲ" ಅವರಿಬ್ಬರೂ ಕೂಡಿ ಮುನಃ ಏನಾದರೂ ಉತ್ಪಾತ ಮಾಡಬಹುದು. ಅವರನ್ನು ಸೆರೆಹಿಡಿಯಲೇ ಬೇಕು. ನವಲ್ ನೀನು ಶರ್ಮಾರಲ್ಲಿಗೆ ಹೋಗಿ ಅವರು ತಮ್ಮ ಜನರೊಡನೆ 'ಯಮಪುರಿ'ಯಿಂದ ಒಂದು ಮೈಲು ದೂರದಲ್ಲಿ ನಾಲ್ಕು ಗಂಟೆ ಇಪ್ಪತ್ತೈದು ನಿಮಿಷಕ್ಕೆ ನಮ್ಮ ಪ್ರತೀಕ್ಷೆ ಮಾಡುವಂತೆ ತಿಳಿಸು" ಎಂದರು.

ನವಲೇಂದ್ರನು ಹೋದ ನಂತರ ಜಯಂತರು ದಾಮೋದರರೊಡನೆ—'ಯಮಪುರಿ'ಯು ವಾಸ್ತವವಾಗಿಯೂ 'ಯಮಪುರಿ'ಯೆ ಆಗಿದೆ. ಅಲ್ಲಿ ಏನೇನು ಮಾಡಬೇಕೆಂದು ನಾವು ಮೊದಲೇ ನಿಶ್ಚಯಿಸಿಕೊಳ್ಳಬೇಕು. ಅಲ್ಲಿ 'ಯಮನ-ನೆರಳಿನ' ಭಯವಿದೆ, ನಾನು ಲೋಹದ ಎಂಟು ಕವಚ ಮತ್ತು ಮುಖವಾಡ ತಯಾರಿಸಿದ್ದೇನೆ. ನಾಲ್ಕು ನಮಗೆ ಬೇಕು. ನಾಲ್ಕು ಶರ್ಮಾರಿಗೆ ಕೊಡುವ. ರಾತ್ರಿಯಾಗುವುದರಿಂದ ಎಲ್ಲರೂ ಶಕ್ತಿಶಾಲಿ ಟಾರ್ಚನ್ನು ತೆಗೆದುಕೊಳ್ಳುವುದು ಅತ್ಯಗತ್ಯ. ಯಾವ ಕೋಣೆಗೂ ಕಾಲಿಡಬಾರದು. ಅಗತ್ಯವಿದ್ದರೆ ಮಾತ್ರ ಸುರಂಗದೆಡೆಗೆ ಹೋಗಬೇಕು. ಆದರೆ ತುಂಬಾ ಸಾವಧಾನವಾಗಿರಬೇಕು. ಕುಂಜವೇಟರಿಯತ್ತ ಹೋಗಲೇಬಾರದು" ಎಂದರು.

ಜಯಂತರ ಮಾತನ್ನು ದಾಮೋದರರು ಸರಿಯಾಗಿ ತಿಳಿದುಕೊಂಡರು. ಅನಂತರ ಅವರು ಹೊರಟು ಹೋದರು. ನ.

Tel: 'BLUEYAGAR'. —— ಚಿನ್ನ ಮತ್ತು ವಜ್ರಗಳ ಆಧುನಿಕ ತವರುಮನೆ —— Phone: 374.

ಕೆ.ಆರ್.ಕೆ.ಶೇಟ್ ಡಯಮಂಡ್ ಮಾರ್ಟ್

ಸ್ಥಾಪನೆ:1919] ಚಿನ್ನ ಮತ್ತು ವಜ್ರದ ವ್ಯಾಪಾರಿಗಳು,(ಗವರ್ನ್‌ಮೆಂಟ್ ಕಾಲೇಜ್ ಎದುರುಗಡೆ)ಮಂಗಳೂರು. ಮಾಲಿಕ:ಕೆ.ಕೆ.ಆರ್.ಶೇಟ್

NAVAYUGA WEEKLY, UDIPI.
REGD. NO.BG. 176
31-8-1961
LICENSE NO. 31
Licensed to Post without Prepayment

ಯಂಕಾಲದ ನಾಲ್ಕು ಗಂಟೆಯ ಹೊತ್ತಿಗೆ ಜಯಂತರು ಮೊಯೂವತಿಯ ರಕ್ಷಣೆಯ ವ್ಯವಸ್ಥೆ ಮಾಡಿ ಪ್ರಾಣದಾಸ, ದಾಮೋದರ, ನಿವಲೇಂದ್ರರೊಡನೆ 'ಯಮಪುರಿ' ಯತ್ತ ಹೊರಟರು.

ನಾಲ್ಕು ಮುಕ್ಕಾಲು ಗಂಟೆಗೆ 'ಯಮಪುರಿ'ಯ ಒಂದು ಮೈಲು ದೂರದಲ್ಲಿ ಕೇಪ್ಟನ್ ಶರ್ಮಾ, ಡಿ. ಎಸ್. ಪಿ. ತ್ರಿಸಿಂಹ, ಇನ್ಸ್‌ಪೆಕ್ಟರ್ ಪ್ರಧಾನ್ ಮತ್ತು ದೀಕ್ಷಿತ್; ಇನ್ನೂರು ಪೋಲೀಸರ ದಳದೊಂದಿಗೆ ಕಾಯುತ್ತ ನಿಂತಿದ್ದರು.

ಜಯಂತರು ನಾಲ್ಕು ಕವಚ ಮತ್ತು ಮುಖವಾಡವನ್ನು ಶರ್ಮಾರಿಗಿತ್ತು ಅದರ ಉಪಯೋಗವನ್ನು ತಿಳಿಸಿದರು. ಅಲ್ಲಿಂದ ಅವರು ನಡೆದುಕೊಂಡೇ 'ಯಮಪುರಿ'ಯನ್ನು ಮುಟ್ಟಿ ಒಬ್ಬೊಬ್ಬರೇ ಒಳ ಹೊಕ್ಕರು. ನೂರೈವತ್ತು ಪೋಲೀಸರು ಹೊರಗಿನಿಂದ 'ಯಮಪುರಿ'ಯನ್ನು ಮುತ್ತಿದರು. ಹಾಗೂ ಇವರು ಐವತ್ತು ಪೋಲೀಸರನ್ನು ತಮ್ಮ ಸಂಗಡ ತೆಗೆದುಕೊಂಡರು.

ವಾಸ್ತವದಲ್ಲಿ ಫಲಕದಾರಿ ಮುಂತಾದವರು, ಜಯಂತರಿಂದು ಬರುವರೆಂದು ಎಣಿಸಿದ್ದೇ ಇಲ್ಲ! ಬಂದರೂ ಇಷ್ಟು ಬೇಗ ಬರುವರೆಂದು ಅವರು ಭಾವಿಸಿರಲಿಲ್ಲ. ಆದುದರಿಂದ 'ಸ್ಟೆನ್‌ಗನ್'ನ ಹತ್ತಿರ ಎಂಟು ಮಂದಿ ಉಪಸ್ಥಿತರಿರಲಿಲ್ಲ.

ಫಲಕದಾರಿಯು ಹೋಟಲದ ಸುದ್ದಿ ಕೇಳಿ ಹೆದರಿ ಡಾಕ್ಟರರಿಗೆ ಸೂಚನೆಯಿತ್ತನು. ಅವರು ತಮ್ಮ ಮುಂದಾಲೋಚನೆ ಇಲ್ಲದ ಕಾರ್ಯಕ್ಕಾಗಿ ಪಶ್ಚಾತ್ತಾಪ ಪಟ್ಟರು ಈಗ ಗೆಲ್ಲುವ ಸಂಭವವಿರಲಿಲ್ಲ. ಅಷ್ಟರಲ್ಲಿ ಫಲಕದಾರಿಗೆ ಒಂದು ಉಪಾಯ ಹೊಳೆಯಿತು. ಅವನು ಒಟ್ಟನನ್ನು 'ಸ್ಟೆನ್‌ಗನ್' ಸಮೇತ ಮರದಲ್ಲಿ ಕುಳ್ಳಿರ ಹೇಳಿದನು ಆದರೆ ಪೋಲೀಸರ ಸಂಖ್ಯೆ ನೋಡಿ ಅವನ ಸಾಹಸ ಹಿಮ್ಮೆಟ್ಟಿತು

ಫಲಕದಾರಿಯು ನಿರುಪಾಯನಾಗಿ ಕೆಲವರನ್ನು ಮರ ಹತ್ತಿಸಿದನು. ಕೆಲವರು ಸುರಕ್ಷಿತ ಸ್ಥಾನದಲ್ಲಿ ಅಡಗಿ ಸಮಯ ಪ್ರತೀಕ್ಷೆ ಮಾಡ ತೊಡಗಿದರು. ಮರದಲ್ಲಿದ್ದವರು ಬಂದೂಕಿನ ಮಳೆ ಸುರಿಸಹತ್ತಿದ್ದರು.

ಜಯಂತರು ಶರ್ಮಾರಿಗೇನೇನೋ ಹೇಳಿ ತನ್ನ ಸಿಪಾಯಿಗಳನ್ನು ಬೇರೆಬೇರೆ ಕರೆದುಕೊಂಡು ಹೋಗುವಂತೆ ಮಾಡಿ, ನಾಲ್ವರು ಮಿತ್ರರೊಡನೆ ಮತ್ತೊಂದೊಡೆಗೆ ಹೋಗಿದ್ದರು. ಅವರಿಗೆ ಕೆಲವರು ಮರದ ಮೇಲಿದ್ದಾರೆಂದು ತಿಳಿಯಿತು. ಅವರು ಹಿಂದೆ ಸರಿಯ ತೊಡಗಿದರು ಅನಂತರ ದಾಮೋದರರಿಗೇನೋ ತಿಳಿಸಿದರು. ಅವರು ಒಂದು ಮರವನ್ನೇರಿ ತಾನು ಕಂಡುದುದನ್ನು ಜಯಂತರಿಗೆ ತಿಳಿಸಿದರು.

ಜಯಂತರು ಪುನಃ ಏನೋ ಸೂಚನೆಯಿತ್ತುದರಿಂದ ನಾಲ್ವರು ಬೇರೆ ಬೇರೆಯಾಗಿ ಮರಗಳ ಸಂದಿನಲ್ಲಿ ಅವಿತು ನಿಂತು ಸ್ವಯಂ ಗುಂಡು ಹಾರಿಸ ತೊಡಗಿದರು. ಆದರೆ ಅವರು ಗೋಲಿಯ ರೇಂಜಲ್‌ನಿಂದ ದೂರವೇ ಇದ್ದರು. ಸ್ವಲ್ಪ ಸಮಯದ ನಂತರ ಇಬ್ಬರು ದರೋಡೆಕೋರರು ಮರದಿಂದ ಕೆಳಗೆ ಬಿದ್ದರು. ಈ ದೃಶ್ಯವನ್ನು ನೋಡಿ ಉಳಿದವರು ಹೆದರಿ ಕೆಳಗಿಳಿದು ಓಡ ತೊಡಗಿದರು. ಇವರು ದರೋಡೆಕೋರರ ಬೆನ್ನಟ್ಟ ತೊಡಗಿದರು. ಮುಂದಿನಿಂದ ಓಡುತ್ತಿದ್ದವರು ಸ್ವಲ್ಪ ಮುಂದೆ ಹೋಗಿ ನಿಂತು ಹಿಂದೆ ನೋಡಿದರು. ಯಾರೂ ಕಾಣಲಿಲ್ಲ. ಅವರೆಲ್ಲಿಯೋ ಬೇರೆ ಮಾರ್ಗವಾಗಿ ಹೋದರೆಂದು ದರೋಡೆಕೋರರು ಕಲ್ಪಿಸಿಕೊಂಡರು. ಮರದ ಅಡ್ಡದಿಂದಲೇ ಅವರನ್ನು ಹಿಂಬಾಲಿಸುತಿದ್ದಾರೆ ಎಂದ ಅವರಿಗೆ ತಿಳಿಯಲೇ ಇಲ್ಲ.

ಈಗ ಡಾಕ್ಟರರಿಗೆ ಇವರನ್ನು ಸೋಲಿಸುವುದು ಕಷ್ಟವಲ್ಲ ಎಂದು ತೋರಿತು ಎರಡೂ ಕಡೆಯವರೂ 'ಫಾಯರ್' ಮಾಡಲು ಪ್ರಾರಂಭಿಸಿದರು. ಬಂದೂಕಿನ ಶಬ್ದ ಕೇಳಿ ಶರ್ಮಾ ಇತ್ಯಾದಿಯವರು ಅತ್ತ ಓಡಿ ಬಂದರು. ಅವರೆಲ್ಲರನ್ನು ಕಾಣುತ್ತಲೇ ಶತ್ರುಗಳು ಕಂಗಾಲಾದರು. ಮರಗಳ ಎಡೆಯಿಂದ ಪೊಲೀಸರ ಮೇಲೆ ಗುಂಡಿನ ಮಳೆ ಸುರಿಸ ತೊಡಗಿದರು. ಏಳೆಂಟು ಜನ ಪೊಲೀಸರು ಗಾಯಗೊಂಡರು. ಅತ್ತ ಕಡೆಯಿಂದ ಗುಂಡು ಹಾರುವುದು ಸ್ವಲ್ಪ ಕಡಮೆಯಾಯ್ತು ಆದನ್ನು ಕಂಡು ಜಯಂತರು ಮರದ ಹಿಂದಿನಿಂದ ಹೋಗಿ ಅಲ್ಲಿದ್ದವರನ್ನು ಬಂಧಿಸಿದರು. ಅಲ್ಲಿ ಆರು ಮಂದಿ ಇದ್ದಿದ್ದರು. ಹಾಗೂ ಹಲವಾರು ಹೆಣಗಳು. ಬಿದ್ದಿದ್ದುವು. ಆದರೆ ಅಲ್ಲಿ ಡಾಕ್ಟರ್ ಮತ್ತು ಫಲಕದಾರಿ ಕಾಣಲಿಲ್ಲ. ಜಯಂತರು ಅವರನ್ನು ಹುಡುಕು ತೊಡಗುವಷ್ಟರಲ್ಲಿಯೇ ಎಲ್ಲಿಯೋ ಮೋಟರ್ ಸ್ಟಾರ್ಟ್ ಮಾಡಿದ ಶಬ್ದ ಕೇಳಿಬಂತು. ಜಯಂತರು ಶಬ್ದ ಕೇಳಿದತ್ತ ಧಾವಿಸಿದರು. ಆದರೆ ಅವರಲ್ಲಿ ಮುಟ್ಟುವಷ್ಟರಲ್ಲಿ ವಿಮಾನವೊಂದು ಭೂಮಿಯಿಂದ ಮೇಲಕ್ಕೇರಿತ್ತು. ಜಯಂತರು ವಿಮಾನಕ್ಕೆ ನಿಶಾನೆ ಹೊಡೆದರೂ ಪ್ರಯೋಜನವಾಗಲಿಲ್ಲ. ವಿಮಾನ ಮೇಲಕ್ಕೇರುವ ಸಮಯದಲ್ಲಿಯೇ ಒಂದು ಸ್ವರ ಕೇಳಿಬಂತು.

—"ಜಯಂತ್‌ಜೀ, ರಣಜೀತನನ್ನು ದಸ್ತಗಿರಿ ಮಾಡುವುದಷ್ಟು ಸುಲಭವಲ್ಲ ಹೆದರಬೇಡಿ, ಪುನಃ ಖಂಡಿತವಾಗಿಯೂ ಹಿಂತಿರುಗುತ್ತೇನೆ.

"ಅಂದರೆ ಡಾಕ್ಟರ್ ರಣಜೀತ್ ವಿಮಾನ ಮೂಲಕ ಓಡಿಹೋದ?" ಎಂದರು ಕೇಪ್ಟನ್.

"ಹೂಂ, ಅವರೊಂದಿಗೆ ಫಲಕದಾರಿಯೂ ಇದ್ದ!" ಎಂದುತ್ತರವಿತ್ತರು. ಜಯಂತ್.

ಇತರ ದರೋಡೆಕೋರರ ಬಂಧನದ ನಂತರ 'ಯಮಪುರಿ'ಗೆ ಪೋಲೀಸರು ಬೀಗ ಹಾಕಿದರು.

ದರೋಡೆಕೋರರ ಮೇಲೆ ಮೊಕದ್ದಮೆ ನಡೆದು ಅವರಿಗೆ ಉಚಿತ ಶಿಕ್ಷೆಯಾಯ್ತು.

ಭೂಗರ್ಭ ವಿಶೇಷಜ್ಞರು ರಾಣಿಯ ಇಲಾಖೆಯನ್ನು ಪರಿಶೀಲಿಸಿ ಅದರಲ್ಲಿ ಯಾವೊಂದೂ 'ವಜ್ರದ ಖನಿ'ಯೂ ಇಲ್ಲವೆಂದು ಅಭಿಪ್ರಾಯಪಟ್ಟರು. ಆದರೆ ಈ ಒಂದು ಸುಳ್ಳು ಮಾತಿಗಾಗಿಯೇ ಹಲವಾರು ಕೊಲೆಗಳು ಮಾಡಲ್ಪಟ್ಟುವು.

ರಾಣಿಯ ಎಲ್ಲಾ ಚರಾಚರ ಸೊತ್ತಿಗೆ ಮೊಯೂವತಿಯು ಅಧಿಕಾರಿಣಿಯಾದಳು. ತನ್ನಲ್ಲಿರುವ ಅವಳ ಪ್ರೀತಿಯನ್ನರಿತು ಹಾಗೂ ಪ್ರಾಣದಾಸ ಮುಂತಾದವರ ಅನುಮೋದನೆಯಿಂದ ಜಯಂತರು ಮೊಯೂವತಿಯನ್ನು ಪತ್ನಿಯಾಗಿ ಸ್ವೀಕರಿಸಿದರು.

ಮೊಯೂವತಿ ಜಯಂತರ ಮದುವೆಯ ಕೆಲವೇ ದಿನಗಳಲ್ಲಿ ದಾಮೋದರ್ ಮತ್ತು ಹರ್ಷವತಿಯರ ಲಗ್ನವು ಜರಗಿತು. ಮೊಯೂವತಿಯು ತನ್ನ ತಾಯಿ ಕೊಂಡುಕೊಂಡ ಹೊಸ ಇಲಾಖೆಯನ್ನು ದಾಮೋದರರಿಗೆ ಅವರ ವಿವಾಹದ ಸಮಾರಂಭದಲ್ಲಿ ಉಡುಗೊರೆಯಾಗಿ ಕೊಟ್ಟಳು.

(ಸಮಾಪ್ತ.)

5 ರೂ. ಮಾತ್ರ

- ನೀವಿನ್ನೂ ಸಿಂಡಿಕೇಟ್ ಬೇಂಕಿನಲ್ಲಿ ಒಂದು
- ಸೇವಿಂಗ್ಸ್ ಬೇಂಕ್ ಖಾತೆಯನ್ನು ತೆರೆದಿಲ್ಲವೆ?
- ಹಾಗಾದರೆ ಇನ್ನು ತಡಮಾಡಬೇಡಿರಿ.
- ಕೇವಲ ಐದು ರೂಪಾಯಿಗಳಿಂದ ನೀವು
- ಸೇವಿಂಗ್ಸ್ ಬೇಂಕ್ ಲೆಕ್ಕವನ್ನು ಪ್ರಾರಂಭಿಸಬಹುದು.
- ನಿಮಗೆ ಸಾಧ್ಯವಿದ್ದಷ್ಟನ್ನು—25 ನಯೆ ಪೈಸೆಯಷ್ಟನ್ನು
- ಸಹಾ ನೀವು ನಿಮ್ಮ ಲೆಕ್ಕಕ್ಕೆ ಕೂಡಿಸುತ್ತಾ ಹೋಗಬಹುದು.
- ಸಿಂಡಿಕೇಟ್ ಬೇಂಕಿನ ಚೆಕ್ ಮತ್ತು ಪಾಸ್ ಪುಸ್ತಕಗಳಿರುವುದು
- ನಿಮ್ಮ ಗೌರವದ ಸೊತ್ತುಗಳಾಗುವುವು.
- ಮತ್ರವಲ್ಲ, ನಿಮ್ಮ ಹಣಕ್ಕೆ ಯೋಗ್ಯ ಬಡ್ಡಿಯನ್ನೂ
- (ಅರು ತಿಂಗಳಿಗೊಮ್ಮೆ ಸಾ. ಶೇಕಡಾ 3ರಷ್ಟು) ಗಳಿಸಬಹುದು.

ಇಂದೇ ನಿಮಗೆ ಸಮೀಪವಿರುವ ನಮ್ಮ ಶಾಖೆಯೊಂದನ್ನು ದಯಮಾಡಿ ಸಂದರ್ಶಿಸಿರಿ.

ಆಗಾಗ ಉಳಿಸಲು
ನಿಶ್ಚಿತವಾಗಿ ವ್ಯಯಿಸಲು
ಬಡ್ಡಿಯನು ಗಳಿಸಲು

ಸೇವಿಂಗ್ಸ್ ಬೇಂಕ್

ಸಿಂಡಿಕೇಟ್ ಬೇಂಕ್

ಏ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಕೃಷ್ಣನ ಬಾಲಲೀಲೆ

ಭೂಭಾರ ಹರಣಕ್ಕಾಗಿ ವಿಷ್ಣುವು ಕೃಷ್ಣಾವತಾರಿಯಾಗಿ ಭೂಮಿಗಿಳಿದನೆಂದು ಪುರಾಣಗಳು ಸಾರುತ್ತಿವೆ. ಈ ಕೃಷ್ಣನ ಬಾಲಲೀಲೆ ಎಷ್ಟು ಸ್ವಾಭಾವಿಕವಾಗಿತ್ತು ಎಂಬುದನ್ನು ನಮ್ಮ ಸಾಹಿತ್ಯ ವಿವರಿಸುತ್ತದೆ. ಕನ್ನಡದ ಪ್ರಾಢಕವಿ ರುದ್ರ ಭಟ್ಟನು ತನ್ನ ಜಗನ್ನಾಥ ವಿಜಯದಲ್ಲಿ ವರ್ಣಿಸಿದ ಕೆಲವೊಂದು ಘಟನೆಗಳನ್ನು ಇಲ್ಲಿ ಕೊಡಲಾಗಿದೆ.

ಒಮ್ಮೆ ಘನ ಕುಚಿಯೊದ ಗೋಪಿ ಹಾಲ್ಗಡೆಯ, ಮನೆಗೆಲಸಕ್ಕೆ ಹೋದಳು ಆ ಸಮಯವರಿತು ಕೃಷ್ಣ ಗೆಜ್ಜೆಯ ಧ್ವನಿನಳು ಹೊಮ್ಮದಂತೆ ಬಂದು ಎಡಗೈಯಲ್ಲಿ ಬೆಣ್ಣೆಯನ್ನು ತೋಡಿ ತಿನ್ನುತಿದ್ದನು. ಕೆಲಸ ಮುಗಿಸಿ ಮರಳಿದ ಗೋಪಿ ಇದನ್ನು ಕಂಡು ಎಲೆಲೆ, ನಿನ್ನ ಕಳ್ಳತನವನ್ನು ಕಂಡೆವು ಎಂದಾಗ, ಕಡೆ ಬಾಯಲ್ಲಿ ಬೆಣ್ಣೆಯನ್ನುಳುರುಕಿಸಿ ಆತ ಓಡಿಹೋದನು.

ಒಂದು ದಿನ ಹಾಲ್ಗುಡಿಯಲ್ಲೊಲ್ಲದೆ ಆಡಲು ಓಡುತ್ತಿದ್ದ ಕೃಷ್ಣನನ್ನು ಪುಸಲಾಯಿಸಿ, ಯಶೋದೆಯು "ಶಕಟವಿಮರ್ದನಾ, ಬಲರಾಮ ಬಾರದ ಮುನ್ನ ನಮ್ಮ ಹೇಮಘಂಟೆಕೆ ಘೆಣಿಲ್ ಎಂಬ ನಂದಿನಿಯ ಹಾಲನ್ನು ಕುಡಿ; ನಿನ್ನ ತಲೆಕೂದಲು ಬೆಳೆಯುವುದು" ಎಂದು ನಂಬಿಸಿದಳು. ಆಗ ಆತ ಹಾಲ್ಗುಡಿದು, "ಅಮ್ಮಾ ಕೊಂಡಿಕೆ ಎನಿತುದ್ದ ಮಾಡುದು?" ಎಂದು ಬೆಸಗೊಂಡು ಯಶೋದೆಗೆ ನಗುತಂದನು.

ಆಗಾಗ, ರಾತ್ರಿಯ ಹೊತ್ತು, ಸುಷುಪ್ತಿಯಲ್ಲಿರುವಾಗ, ವನಜಟ ಇತ್ತ ಬನ್ನಿ, ಉನ್ನತ ಪೀಠದಲ್ಲಿ ಕುಳ್ಳಿರಿ. ಮಹೇಂದ್ರ, ಎದ್ದೇಳು ಎದ್ದೇಳು. ದೇವತೆಗಳು ಒಳಗೆ ಬರುವುದಕ್ಕೆ ತಡೆಮಾಡಬೇಡ" ಎಂದು ಮುಂತಾಗಿ ಕನವರಿಸುತಿದ್ದನು.

ಇನ್ನೊಂದು ದಿನ ಏನೇನು ಮಾಡಿದರೂ ತನ್ನ ಹಟ ಬಿಡದ ಕೃಷ್ಣನನ್ನು ಸಮಾಧಾನ ಪಡಿಸುವುದಕ್ಕಾಗಿ ಯಶೋಧೆ ಕಥೆಯನ್ನು ಹೇಳತೊಡಗಿದಳು. "ರಘುಜನೆಂಬವ ಸಕಾಂತನಾಗಿ ತಂದೆಯ ಮಾತಿನಂತೆ ವನವಾಸ ಮಾಡಿದನು. ಆ ರಾಮನ ಸತಿಯನ್ನು ದಶಶಿರನು ಕದ್ದೊಯ್ದನು" ಎಂದಳು. ಕಥೆಯ ಒಂದೊಂದು ಶಬ್ದಕ್ಕೆ ಹುಂಗುಡುತಿದ್ದ ಕೃಷ್ಣ ದಶಶಿರನ ಹೆಸರು ಕೇಳಿದೊಡನೆಯೇ ಹುಂ ಎನ್ನದೆ ಕೋಪದಿಂದ ಹೊಂಕೃತಿಯನ್ನು ಗೆಯ್ದು ಬೊಂಡುಗಚ್ಚಿ ಕಿಸುಗಣ್ಣುಗಳನ್ನು ಬಿಟ್ಟನು.

ಒಂದು ಬಾರಿ ಬಲರಾಮನು ಹರಿಯು ಮಣ್ಣು ತಿಂದ ಎಂಬ ದೂರನ್ನು ಯಶೋದೆಗೆ ಹೇಳಲು, ಆಕೆ ಮತ್ತು ಕೃಷ್ಣರ ನಡುವೆ ವಿವಾದ ನಡೆಯಿತು. "ಹರಿ ನೀನು ಮಣ್ಣಿಂದೆ" ಎಂದು ಕೇಳಿದ ಆಕೆಗೆ, 'ತಿನ್ನೆನು ಜನನಿ ಎಮ್ಮ ಅಗ್ರಜ ಪುಸಿದನು." ಎಂಬ ಉತ್ತರ ದೊರೆಯಿತು. "ತೋರು ಬಾಯನ್ನು" ಎಂದು ಆಕೆ ಹೇಳಲು ನೋಡೆಂದು ತೆರೆದನು. ಆದರೊಳಗೆ ಏಳು ಸಮುದ್ರಗಳು, ಏಳು ಕುಲಾಚಲಗಳು, ಸಪ್ತದ್ವೀಪಗಳು ಕೂಡಿದ ಹದಿನಾಲ್ಕು ಲೋಕಗಳನ್ನು ಕಂಡು ಆಕೆ ಅಚ್ಚರಿಪಟ್ಟು ಅನನನ್ನು ಮುಚ್ಚುಎಂದು ವಿಭ್ರಾಂತಿಯಾದಳು.

Edited Printed & Published by K. H. Shetty, at the Navayuga Press, Udipi, S. India.

KANNADA — NAVAYUGA — WEEKLY

ಸಂಪುಟ ೪೧ ಸಂಚಿಕೆ ೧ | ಉಡುಪಿ 7—9—1961 ಗುರುವಾರ | Vol.

ತಟಸ್ಥ ರಾಷ್ಟ್ರಗಳ ಸಮ್ಮೇಳನ

ವಿಶ್ವದಲ್ಲಿ ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ದ್ವೇಷದಿಂದ, ಮುಖ್ಯವಾಗಿ ಪಾಶ್ಚಾತ್ಯ ಮತ್ತು ಪೌರ್ವಾತ್ಯ ಮಹಾ ರಾಷ್ಟ್ರಗಳಲ್ಲಿ ಪ್ರತಿಯೊಂದು ಪ್ರಶ್ನೆಯ ಬಗ್ಗೆಯೂ ಭಿನ್ನಾಭಿಪ್ರಾಯವು ಹೆಚ್ಚುತ್ತ ಹೋಗುತ್ತಿರುವುದರಿಂದ ತಟಸ್ಥ ರಾಷ್ಟ್ರಗಳು ವಿವಂಚನೆಗೊಳಗಾಗಿವೆ. ಪಶ್ಚಿಮ ಮತ್ತು ಪೂರ್ವ ಜರ್ಮನಿಯ ನಡುವಣ ಸರ್ವ ವ್ಯವಹಾರಗಳಿಗೂ ಪ್ರತಿಬಂಧಕವು ಹೇರಲ್ಪಟ್ಟ ಕಾರಣ ಪಶ್ಚಿಮ ಜರ್ಮನಿಯು ಕ್ರುದ್ಧಗೊಂಡಿದೆ. ತನ್ನ ಅಧೀನವಿರುವ ಪೂರ್ವ ಜರ್ಮನಿಯನ್ನು ತನಗೆ ಬೇಕಾದಂತೆ ಕುಣಿಸುತ್ತ ಸೋವಿಯತ್ ರಶ್ಯವು ಶಾಂತಿ-ಸಮಾಧಾನಗಳ ಸೋಗನ್ನು ಹಾಕುತ್ತ ಅಲ್ಲಿ ಅಶಾಂತಿಯೇ ವ್ಯಾಪಿಸುವಂತಹ ಕಾರ್ಯಕ್ರಮಗಳಿಗೆ ತೊಡಗಿದೆಯೆನ್ನಬಹುದು. ಜರ್ಮನಿಯ ಪ್ರಶ್ನೆಯನ್ನು ಶಾಂತ ವಿಧಾನಗಳಿಂದಲೇ ಉತ್ತರಿಸುವ ಅವಕಾಶಗಳು ಕೊನೆಗೊಂಡಿಲ್ಲವಾದರೂ ಪ್ರಾರಂಭವಾದ ಮಾತುಕತೆಗಳು ಭಿನ್ನಾಭಿಪ್ರಾಯದಲ್ಲಿಯೇ ಪರ್ಯವಸಾನಹೊಂದುತ್ತಿರುವುದು ಖೇದದಾಯಕವಾಗಿದೆ. ಇದೇ ಸಮಸ್ಯೆ ಗಂಭೀರವಾಗುತ್ತ ನಡೆದರೆ, ಮೊದಲನೆ ಯುದ್ಧಗಳಿಗೆ ಕಾರಣವಾದ ಜರ್ಮನಿಯೇ ಭಾವಿಸಮುಕ್ಕೂ ನಾಂದಿಯಾಗಬಹುದು. ಇದಕ್ಕಾಗಿ ಜರ್ಮನಿಯ ಬಗ್ಗೆ ಯಾವುದೇ ಒಂದು ಸೂಕ್ತ ಉಭಯಸಮ್ಮತ ಒಡಂಬಡಿಕೆಯಾಗುವುದರಿಂದ ಮಾತ್ರ ಯುದ್ಧಭಯ ನಿವಾರಣೆಯಾದೀತು.

ಯುಗೊಸ್ಲಾವಿಯಾದ ಅಧ್ಯಕ್ಷ ಮಾರ್ಶಲ್ ಟಿಟೋ ತನ್ನನ್ನು ಶುದ್ಧ ಸಾಮ್ಯವಾದಿಯೆಂದು ಕರೆದುಕೊಂಡರೂ ಅವರು ರಶ್ಯದ ಕೈಗೊಂಬೆಯಾಗಿಲ್ಲ. ವಿಶ್ವದಲ್ಲಿ ಸಮರಸದ ಭಾವನೆಯುಂಟಾಗಬೇಕು; ಕಹಿಮನಸ್ಸು ದೂರಗೊಳ್ಳಬೇಕೆಂದು ಬಯಸುವ ಟಿಟೊ ಇದರ ಸಾಧನೆಯಲ್ಲಿ ಯಾವುದೇ ಬಣಗಳಿಗೆ ಸೇರದ ತಟಸ್ಥ ರಾಷ್ಟ್ರಗಳು ಆಡಬೇಕಾದ ಪಾತ್ರ ಮಹತ್ವದ್ದು ಎಂದು ಭಾವಿಸಿ ಈ ಸಂಬಂಧ ಅಲಿಪ್ತ ರಾಷ್ಟ್ರಗಳ ಧುರೀಣರನ್ನು ಒಟ್ಟು ಸೇರಿಸಿದ್ದಾರೆ. ಈ ಸಂಖ್ಯೆಯಲ್ಲಿ ಅರ್ಧಾಂಶದಷ್ಟು ರಾಷ್ಟ್ರಗಳು ಸ್ವತಂತ್ರವಾಗಿ ಇನ್ನೂ ಹತ್ತು ವರ್ಷಗಳು ಕಳೆಯಲಿಲ್ಲ ಎನ್ನುವಂತಿದ್ದರೂ ಸಂಯುಕ್ತ ರಾಷ್ಟ್ರಸಂಘದಲ್ಲಿ ಇವು ಸ್ಥಾನವನ್ನು ಗಳಿಸಿರುವುದರಿಂದ ಉದ್ದೇಶ ಸಾಧನೆಗೆ ನೆರವು ನೀಡಬಹುದೆಂಬ ಆಶೆಯನ್ನವರು ಇಟ್ಟುಕೊಂಡಿದ್ದಾರೆ. ಇದೇ ಮೊದಲನೆ ತಾರೀಕಿನಿಂದ ಪ್ರಾರಂಭವಾದ ಈ ತಟಸ್ಥ ರಾಷ್ಟ್ರಗಳ ಮಹಾ ಸಮ್ಮೇಳನವು ವಸಾಹತುವಾದ—ವರ್ಣವಾದ, ರಾಜಕೀಯ ಉದ್ದೇಶಗಳಿಗೆ ಹೊರತಾಗಿ ಪಾಶ್ಚಾತ್ಯ ಪೌರ್ವಾತ್ಯ ರಾಷ್ಟ್ರಗಳ ನಡುವೆ ಆರ್ಥಿಕ ಸಹಕಾರ ನಿಶ್ಶಸ್ತ್ರ ಸಮ್ಮೇಳನ ಮತ್ತು ಅಣುಶಕ್ತಿ ಪ್ರಯೋಗ ನಿರ್ಮೂಲನ ಮೊದಲಾದ ಸಾಮಾನ್ಯ ವಿಷಯಗಳನ್ನು ಕುರಿತು ಚರ್ಚಿಸಿತು. ಇವಲ್ಲದೆ ಬರ್ಲಿನ್ ಮತ್ತು ಜರ್ಮನಿಗಳ, ಪ್ರಶ್ನೆ, ಅಂಗೋಲ, ಕಾಂಗೊ, ಬಿಜಾರ್ಟಗಳ ಸಮಸ್ಯೆಗಳನ್ನೂ ಇಲ್ಲಿ ಎತ್ತಿಕೊಳ್ಳಲಾಯಿತು. ಎಲ್ಲವುಗಿಂತ ಹೆಚ್ಚಾಗಿ ಸಂಯುಕ್ತ ರಾಷ್ಟ್ರ ಸಂಘದ ಸುಧಾರಣೆ ಹಾಗೂ ಪುನಾರಚನೆಯ ಸಂಬಂಧದಲ್ಲಿ ವಿಮರ್ಶೆ ಮಾಡಲಾಯಿತು.

ಈಜಿಪ್ತದ ಕರ್ನೆಲ್ ನಸ್ಸೇರ್, ಘಾನಾದ ಕ್ವಾಮೆ ನುಕ್ರೂಮಾ, ಬರ್ಮಾದ ಯು-ನೂ, ಇಂಡೋನೇಶ್ಯದ ಸುಕರ್ಣ, ಹಾಗೂ ಭಾರತದ ಜವಾಹರಲಾಲ ನೆಹರು—ಇವರು ಈ ಸಮ್ಮೇಳನದಲ್ಲಿ ಭಾಗವಹಿಸಿದ ಮುಖ್ಯ ನಾಯಕರು. ಹಿಂದೊಮ್ಮೆ ಆಫ್ರೇಸ್ಯಾ ರಾಷ್ಟ್ರಗಳ ಬಾಡುಂಗ್ ಸಮ್ಮೇಳನದಂತೆಯೇ ಹೆಚ್ಚಾಗಿ ಆಫ್ರೇಸ್ಯಾದ ರಾಷ್ಟ್ರಗಳ ನಾಯಕರೇ ಇರುವ ಬಲ್ಗ್ರೇಡ್ ಪರಿಷತ್ತಿನಲ್ಲೂ ಪಂಡಿತ ನೆಹರುರವರು ಅಮೂಲ್ಯ ಹಾಗೂ ಮಹತ್ವದ ಪಾತ್ರ ವಹಿಸುವರೆಂದು ಭಾವಿಸಲಾಗುತ್ತಿದೆ. ಇವರು ಈ ಸಮ್ಮೇಳನವನ್ನು ಉದ್ದೇಶಿಸಿ ಮಾಡಿದ ಭಾಷಣವು ಇತಿಹಾಸ ಪ್ರಸಿದ್ಧವಾಗುವುದೆಂದು ಭಾವಿಸಲಾಗಿದೆ. 'ಹಿರಿಯ ರಾಷ್ಟ್ರಗಳಲ್ಲಿ ಯಾವುದೇ ರೀತಿಯಿಂದ ಒಡಂಬಡಿಕೆ ಸಾಧಿಸಲು ಸಹಾಯಕವಾಗುವ ಮಾತುಕತೆ ಪ್ರಾರಂಭವಾಗುವಂತೆ ಮಾಡುವುದೇ ಇಂದಿನ ಪರಮಾವಶ್ಯಕತೆ' ಯೆಂದು ಒತ್ತಿ ಹೇಳಿ, ಈ ಪ್ರಯತ್ನವನ್ನು ಮಾಡಿ ಯಶಸ್ವಿಯಾಗುವ ರಾಷ್ಟ್ರವು ಕೀರ್ತಿಶಾಲಿಯಾಗುವುದು ಎಂದು ನೆಹರು ಕರೆಯಿತ್ತರು. ರಶ್ಯವು ಅಣವಿಕ ವಿಸ್ಫೋಟವನ್ನು ಮರಳಿ ಪ್ರಾರಂಭಿಸುವುದಾಗಿ ಮಾಡಿದ ಘೋಷಣೆಯಿಂದ ನೊಂದ ನೆಹರು "ಇದರಿಂದ ಯುದ್ಧವು ಮತ್ತಷ್ಟು ಸಮೀಪಕ್ಕೆ ಬಂದಂತಾಗಿದೆ. ನಿಶ್ಶಸ್ತ್ರೀಕರಣವೊಂದೇ ಇದನ್ನು ಸಮಾಧಾನಕರವಾಗಿ ಸಾಧಿಸುವ ಏಕಮಾತ್ರ ಉಪಾಯ. ಮಾನವೀಯ ಇತಿಹಾಸದ ಈ ವಿಪನ್ನಾವಸ್ಥೆಯ ಸಂಧಿಕಾಲದಲ್ಲಿ ಶಾಂತಿ ಸ್ಥಾಪನೆಗಾಗಿ ಒಡಂಬಡಿಕೆಯಾಗಬೇಕಾದುದು ಅನಿವಾರ್ಯವಿದೆ' ಎಂದು ಕಳಕಳಿಯಿಂದ ನುಡಿದರು. ಸಮ್ಮೇಳನದ ಕುರಿತು ಮಾತಾಡುತ್ತಾ, 'ಶಾಂತಿಸ್ಥಾಪನೆಯ ಉದ್ದೇಶದಿಂದ ಯಾರಿಗೂ ಯಾವುದೇ ತರದ ಆದೇಶವನ್ನು ನೀಡುವುದು ತರವಲ್ಲ; ಇದರಿಂದ ಯಾರದಾದರೂ ಮನನೊಂದು ನಮ್ಮ ಉದ್ದೇಶ ಸಾಧನೆಯಲ್ಲಿ ಭಂಗವಾಗಬಹುದು. ...ವು ಪ್ರತಿನಿಧೀಕರಿಸ... ಖ್ಯಾಕ ಜನತೆಯ ... ಯೇನಿದೆಯೆಂಬುದನ... ರಾಷ್ಟ್ರಗಳಿಗೆ ತಿಳಿ... ಕಳಿಯ ಅಪೇಕ್ಷೆಯ... ಡುವ. ಇಷ್ಟರಿಂದ... ಯಾದೀತೆನ್ನಬಾರದ... ಅನಿಷ್ಟ ಪ್ರಸಂಗಗಳ... ದ್ದೇಶ ಭಂಗವಾಗು... ಹುದು" ಎಂದು ... ಬಲ್ಗ್ರೇಡ್ ಸಮ್ಮೇ... ಯಲ್ಲಿ ಮುಂದುವ...

ಒಕ್ಕಲಿಗರ ಸಂಘ ಸುವರ್ಣೋತ್ಸವ ಆಚರಣಾ ಸಮಾರಂಭ ಮತ್ತು ದಕ್ಷಿಣ ಭಾರತ ಒಕ್ಕಲಿಗರ ಪರಿಷತ್ತು

ಮೈಸೂರು ಸರಕಾರದ ಮಹಾರಾಜ ಶ್ರೀ ಜಯಚಾಮರಾಜ ವೊಡೆಯರ್ ಬಹದ್ದೂರ್ ಅವರು ತಾರೀಕು 20—9—1961 ರಂದು ಸುವರ್ಣೋತ್ಸವವನ್ನು ಉದ್ಘಾಟಿಸಲು ದಯವಿಟ್ಟು ಒಪ್ಪಿರುವರೆಂದು ತಿಳಿಸಲು ಅತ್ಯಾನಂದ ಪಡುತ್ತೇವೆ. ಮಹಾರಾಣಿ ತ್ರಿಪುರ ಸುಂದರಮ್ಮಣಿ ಅವರು 'ಕಲ್ಯಾಣ ಮಂಟಪ'ದ ಶಂಕುಸ್ಥಾಪನೆಮಾಡಲು ಸಮ್ಮತಿಸಿರುವರು. ರಾಜಕುಮಾರಿ ಗಾಯತ್ರಿ ದೇವಿ ಅವರು ಒಕ್ಕಲಿಗರ ವಿದ್ಯಾರ್ಥಿನಿ ಭವನದ ಅಸ್ತಿವಾರ ಕಾರ್ಯ ನೆರವೇರಿಸುವರು.

ಆದುದರಿಂದ ನಮ್ಮ ಸಮಾಜದ ಜನರೆಲ್ಲರೂ (ಸ್ತ್ರೀಪುರುಷರು) ಬರೇ ಎರಡು ರೂಪಾಯಿ ಪ್ರತಿನಿಧಿ ಶುಲ್ಕ ಕಳುಹಿಸಿ ಈ ಎರಡೂ ದಿನಗಳ ಸಮಾರಂಭಗಳಲ್ಲಿ

ತಾರಾಸಿಂ...

ಪಂಜಾಬಿ ಸು... ಮುಂದಿಟ್ಟ ಸ್ವಾತಂ... ಶನ ವ್ರತಾರಂಭ ಮ... ರೀಣ ಮಾಸ್ಟರ್ ತ... ಷ್ಟು ನಿಶ್ಶಕ್ತರಾಗಿದ್ದಾ... ರ ಮಾನಸಿಕ ಬಲವು... ಗಿದೆ; ಪ್ರಾರಂಭದಲ್ಲಿ ... ಬೇಡಿಕೆಯನ್ನು ... ಹೊರತು ಉಪವಾಸ... ತನ್ನ ನಿರ್ಧಾರದಲ್ಲಿ ... ಯೂ ಆಗದೆಂದು, ... ಹೊಂದಿದರೂ ಈ ಸ... ವರಿಯುವುದೆಂದು ... ಗರು ಈಗೀಗ ತು... ಬಂದಂತೆ ತೋರುವು... ರವು ಪಂಜಾಬ ವಿ... ಯಾವುದೇ ರಾಜ್ಯ... ಪ್ರತಿಕೂಲಾಭಿ... ದಂತೆ ದೃಢವಾಗಿಯೆ... ಕಾಲಿ ಧುರೀಣರು ಎ... ನಿಶ್ಚಯವಾಗಿ ಮಾತ... ನೆಹರುಗಳ ಸಮಾಧಾ... ದ ಅಕಾಲಿಗಳು ನ... ಸುಭಾವನ್ನು ಈಗಲೇ... ಸುಣಾ ಬೇಡಿಕೆಯ... ಕೊಂಡರೆ ಸಾಕು ಎ... ದರು. ಅದೂ ಅಸಫ... ಡು ಈಗ ಹೊಸದೊ... ಬಿ.ಸಿದಾರೆ. ತಾರಾ...

ಳ ಕೊಗಿತು.
ಾ ಗಾಢಾಲಿಂ
ತು, ಮಲಗಿದ್ದ
ನವಮನ್ವಂ
ತು. ಹಕ್ಕಿಗ
ತು. ಮೂಡ
ಕಾಣಿಸಿತು.
ಎದ್ದು ಕು

—ಚಿನ್ನಿ ಬಾ
ಹತ್ತಿರದಲ್ಲೇ
ಲ್ಲ ಅಸ್ತವ್ಯಸ್ತ
ನ ಮಲಗಿದ್ದ
—ಮುಖದಲ್ಲಿ
ಣ್ಣಗಳೂ ತುಟಿ
ಗೆ.
ಬೇಕು'—ಎಂ

ನಿಮ್ಮಂತೆ
ಕೊಯ್ದರೆ,
ನಾವೂ ನಿ
ಮಾಡುತ್ತೇವೆ.
ಡೋದಿಲ್ಲ—

ಳ್ಳುತಿದ್ದ—ಕ
ಹರೆಯದ
ಳಾಡುತ್ತಿರುವ
ಂ.
ಂ:—
—ಗೊತ್ತೇ ಇ
ಆ ತೋಟ
ಲ್ಲಾ— ಮೇಲು
ರಿ ಡೋಲೇ
ಕ. ಧನಿಗಳ
ಕು—ಎಂದು
ಅಂಗಿ ಹಾಕಿ
ಮಾಮೂ
ಆದರೆ ಒಗೆ
ಬೂನು ಎರ
ಅಭ್ಯಾಸದಿಂ
ಸಲಿಲ್ಲ. ಅದ

ನೆ."
ಗಿಟ್ಟ ಅಂಗ
ಾಗ್ಗಿ' ಹೆಣ್ಣು
ಯೆಂದು

ಅಷ್ಟೇ ಪ್ರೇಮ 'ಬೊಗ್ಗಿ'ಯ ಮೇಲೆ ಮುದರನಿಗೆ. ಬಹುಶಃ ಹಸಿವಾಗಿರಬೇಕು—ನಿನ್ನೆ ಅನ್ನ ಹಾಕಿಲ್ಲವೋ ಏನೋ—ಎಂದುಕೊಂಡು ಒಳಗೆ ಅನ್ನದ ಮಡಿಕೆಗೆ ಕೈ ಹಾಕಿ ನೋಡಿದ—ತಂಗಳನ್ನ ಉಳಿದಿತ್ತು. ಕೈಯಲ್ಲೇ ಸ್ವಲ್ಪ ತೆಗೆದುಕೊಂಡು ಬಂದು, ಹೊರಗೆ ಇದ್ದ ಮರದ ಪಾತ್ರೆಯಲ್ಲಿ ಇಕ್ಕಿದ; ಕೈಯನ್ನು ಹೆಗಲಿನ ಬೈರಾಸಿನಲ್ಲೇ ಒರಸಿಕೊಂಡ!

"ಬಾ....ನೌ....ಬಾ...."

—ಧನಿಗಳ ಮನೆಯ ಟಾಮಿ ಸ್ವಾಗತನಾದದೊಡನೆ ಬಂದು,ಎದುರ್ಗೊಂಡು, ಬಾಲ ಅಲ್ಲಾಡಿಸ ತೊಡಗಿದ-ಪರಿಚಯ ವ್ಯಕ್ತಪಡಿಸುತ್ತಾ.

"ಅಯ್ಯ!....ಓ ಅಯ್ಯ....!"

—ಎಂದು ವಿನೀತ ಭಾವದಿಂದಲೇ ಕೂಗಿ, ಕರೆದ.

"ಏನೋ ಮುದರ, ಇವತ್ತು ಅಮಾವಾಸ್ಯೆಯಲ್ಲವೇನೋ? ಇವತ್ತು ಗದ್ದೆ ಕೆಲಸ ಇಲ್ಲ. ಹೋಗು", ನಾಳೆಬಾ—ನಿನ್ನ ಪೇಟೆಗೆ ಹೋಗುವ ಕೆಲಸಗಳಿದ್ದರೆ ಪೂರೈಸಿಕೊಂಡು!'

—ಎಂದು ಧನಿಗಳು ಮುಸುಕಿನೊಳಗಿನಿಂದಲೇ, ಅರ್ಧ ಮುಖ ತೋರಿಸಿ, ಅಂದರು. ಮುದರನ ಮುಖದಲ್ಲಾವ ಭಾವವೂ ವ್ಯಕ್ತವಾಗಲಿಲ್ಲ. ಮುಂದೇನು ಮಾಡುವುದು? ಮನೆಗೇ ಹೋದರಾಯ್ತೆಂದುಕೊಂಡ. ಅಷ್ಟರಲ್ಲಿ—

"ಅದಾರು ಮುದರನೋ? ಯಾವ ಕಡೆ ಹೊರಟೆ? ನಿನ್ನ ಹತ್ರ ಸ್ವಲ್ಪ ಕೆಲಸವಿತ್ತು. ನಿನ್ನ ಕೇರಿ ಕಡೆಗೇ ಬರಬೇಕೆಂದಿದ್ದೆ.ನಿಮಗೆ ಹರಿಜನರಿಗೆದರಖಾಸ್ತು ಮಾಡಿಸಬೇಕೆಂದು ತಹಶೀಲ್ದಾರರ ಹತ್ರ ಕುಂ ಬಂದಿದ್ರೆ—ನೀವು ಆ ಬಗ್ಗೆ ಅರ್ಜಿಯೇ ಹಾಕಿಲ್ಲವಂತೆ! ಯಾಕೆ?"—ಎಂದು ಯಾರೋ ಹೊಸಬರೊಬ್ಬರು, ಕುಳಿತುಕೊಂಡು, ಮಾತಾಡುತ್ತಿದ್ದರು.

"ಏನೋ ಅಯ್ಯ!—ಅದೆಲ್ಲಾ ನನಗೆ ಗೊತ್ತಿಲ್ಲ."

ಆಗ ಧನಿಗಳೇ ಅಂದರು; "ಅದೆಲ್ಲಾ ಗ್ರಾಮ ಸೇವಕರೇ, ಅವರಿಗೇನು ಗೊತ್ತುಂಟು? ನೀವು ದರಖಾಸ್ತು ಮಾಡಿಕೊಟ್ಟರೂ, ಅವರೇನು ಮಾಡಬಲ್ಲರು? ನೀವು ಸ್ವಾಮಿ. ಹೊಸ ಗೊಬ್ಬರ ಹಾಕಿಲಿ. 'ಕೃಷಿತೋ ನಾಸ್ತಿ ದುರ್ಭಿಕ್ಷಂ' ಅಲ್ವೇ? ಆ ಮೇಲೆ ನಿಮ್ಮ ಕೂಲಿ ಯಾರಿಗೆ ಬೇಕು ಹೆಬ್ಬಾರರೇ?"

ಹೊಸಬರ ಮಾತು ನಿಜವೆನಿಸಿತು—ಮುದರನಿಗೆ. ತಾನೂ ದರಖಾಸ್ತುವೊಂದನ್ನು ಮಾಡಿಕೊಂಡು, ಅದರಲ್ಲಿ ಕೃಷಿ ಮಾಡಿದ್ರೆ—ಕಾಯಿಪಲ್ಯ ಬೆಳಸಿದ್ರೆ—ಅಲ್ಪ ಸ್ವಲ್ಪ ರಾಗಿ-ಭತ್ತ ಬೆಳಸಿದ್ರೆ—ಒಳ್ಳೆಯ ವಾಯು ಪಸಂದಾದ ಜಾಗವಾಗಬಹುದು!

"ಅದು ನಿಜ ಅಯ್ಯ—ನೀವು ಹೇಳಿದ್ದು. ನನಗೂ ಒಂದು ಇದ್ರೆ ಒಳ್ಳೇದಿತ್ತು ಅನ್ನಿಸ್ತದೆ. ಅದಕ್ಕೆ ಏನೇನೆಲ್ಲಾ ಬೇಕೋ--ಒಂದು ಗೊತ್ತಿಲ್ಲ—ಅಯ್ಯ!"

"ನಿನಗೆ ಮನಸ್ಸಿದ್ರೆ ಅದೊಂದು ಕಷ್ಟದ ಕೆಲಸವಲ್ಲ ಮುದರ! ಸಂಜೆ ನನ್ನಲ್ಲಿ ಬಾ—ನಾನು ಬರೆದು ಕೊಡ್ತೇನೆ...."

—ಎಂದು ಆ ಹೊಸಬರು ಅಂದಾಗ ಅಂಗೈಯಲ್ಲೇ ಸ್ವರ್ಗ ಕಂಡಂತಾಯ್ತು ಮುದರನಿಗೆ. ಅವರಿಗೆ ಕೈಮುಗಿದು, ಮನೆಗೆ ಹೊರಟ. 'ನಾವೂ ಮಾಡ್ತೇವೆ.... ಮಾಡ್ತೇವೆ"—ಎನ್ನುತ್ತಿದ್ದ ಪಿಜಿನನ ಕನಸನ್ನು ನೆನಸು ಮಾಡಬಹುದು! ಅಲೋಚಿಸುತ್ತಾ ನಡೆದನು.

ಪಿಜಿನ ಎದ್ದು ಕುಳಿತಿದ್ದ—ಪುಸ್ತಕದ ಚೀಲವೊಂದು ಬಂದು ಕುಳಿತಿತ್ತು—ತೊಡೆಯ ಮೇಲೆ, ಅಪ್ಪನನ್ನು ಕಂಡ ಕೂಡ್ಲೇ ಎದ್ದು ನಿಂತನು.

"ಅಪ್ಪ, ಇಂದೇಕೆ ಸೂರ್ಯ ಮೂಡಲಿಲ್ಲ?"

"ಏನೋ ಗೊತ್ತಿಲ್ಲ—ಏಕೋ?"

"ಬೆಳಗಾಗಿ ಹೊತ್ತು ಸುಮಾರಾಯ್ತು! ಏನಪ್ಪಾ—ಸೂರ್ಯನಿಗೆ ಎಲಿಯಾದ್ರೂ ಮರೆತೇ ಹೋಯ್ತೋ ಮೂಡಲಿಕ್ಕೆ"

—ಎಂದಾಗ ಮುದರ ಮನಸ್ಸಿನಲ್ಲೇ ನಗುತ್ತಾ, ಮುದರ ಹೊರ ಬಂದು, ಆಕಾಶಕ್ಕೆ ನೋಡಿದ. ಮೂಡಣ ದಿಸೆ ಮಬ್ಬಾಗಿತ್ತು. ಮೂಡಿದ್ದರೂ ಸೂರ್ಯ ಕಾಣದಂತೆ ಮೋಡಗಳು ಆಡ್ಡಾಗಿದ್ದವು.

ಂಂ ಂಂ

ಇಂದು ದೀಪಾವಳಿ!

ಉಳಿದವರಂತೆ, ಧನಲಕ್ಷ್ಮಿಪೂಜೆ, ಗೋಪೂಜೆ ಮಾಡದಿದ್ದರೂ, ಹರಿಜನರಲ್ಲೂ ದೀಪಾವಳಿಯ ಸಂಭ್ರಮವಿತ್ತು! ಇಂದು ಚಿನ್ನಿ ಬೇಗನೆ ಎದ್ದಿದ್ದಳು!

ಅಂಗಳದ ಮೂಲೆಯಲ್ಲಿ, ಹಿಂದಿನ ದಿನವೇ ನೀರು ತುಂಬಿಸಿಟ್ಟಿದ್ದ—ಪಣ್ಣಿನ ಗುಡಾಣಕ್ಕೆ ಬೆಂಕಿ ಹಚ್ಚಿದಳು. ನೀರು ಬಿಸಿಯಾದೊಡನೆ, ದೀಪ ಹಿಡಿದುಕೊಂಡು ಒಳಗೆ ಬಂದಳು.

ಮುದರನಿನ್ನೂ ಎದ್ದಿಲ್ಲ. ಭವಿಷ್ಯತ್ತಿನ ಹೊಂಗನಸುಗಳಲ್ಲಿ ತೇಲುತ್ತಿದ್ದನೋ ಏನೋ! ಚಿನ್ನಿ—ಪಿಜಿನನ ಕಡೆ ನೋಡಿದಳು! ಅವನು ಅಪ್ಪನನ್ನು ಭದ್ರವಾಗಿ ಅ

UDIPI.

Founder:

Late Sri A. B. Shetty

Former Minister for Public Health, Govt. of Madras & Govt. of Mysore.

ನವಯುಗ

ರಾಷ್ಟ್ರೀಯ ವಾರಪತ್ರಿಕೆ

ಉಡುಪಿ

ಗೌರವ ಸಂಪಾದಕರು:
ಎಸ್. ಗೋವಿಂದ ರಾವ್,
ವಿದ್ವಾನ್.
ಬಿ. ಶಾಮರಾಯ ಶೆಟ್ಟಿ,
ಬಿ. ಎ., ಎಲ್. ಟಿ.

ಸಂಚಾಲಕ ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ.

○

ಜಾಹಿರಾತು ದರಗಳು:

ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-50

ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3-50

ಚಂದಾ:

ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

41 ವರ್ಷಗಳ ಭದ್ರ ಹಾಗೂ ಸಮರ್ಥ ಬೇಂಕಿಂಗ್ ಸೇವೆ.

ದಿ. ಪಾಂಗಾಳ ನಾಯಕ್ ಬೇಂಕ್ ಲಿ.

ನಮ್ಮ 3 ವರ್ಷ ವ್ಯಾದೆಯ ಕೇಶ್ ಸರ್ಟಿಫಿಕೇಟುಗಳಲ್ಲಿ ಠೇವಣಿ

"ಈ ಲೋಟೆ ನಾನು ಕೊಂಡುಹೋಗೋ ಕಿಲ್ಲ. ಉಹುಂ" ಅಂದಳು ಹುಡುಗಿ.

"ಇದಕ್ಕೇನಾಗಿದೇ?" ಕೇಳಿದಳು ತಾಯಿ.

"ಈ ಹಿತ್ತಾಳೆ ಲೋಟೆ ನೋಡಿದರೆ ಶಾಲೇಲಿ ಎಲ್ರೂ ನೆಗಾಡ್ತಾರೆ." ಎಂಬ ಮಗಳ ಉತ್ತರ ಕೇಳಿ ತಾಯಿಗೆ ಸಿಟ್ಟು ಬಂತು

"ಭಾರೀ ದೊಡ್ಡಸ್ತಿಕೆ ಇವಳಿಗೆ. ಸ್ಟೀನ್‌ಲೆಸ್ಸೇ ಆಗ್ಬೇಕಾ?" ಎಂದು ಗರ್ಜಿಸಿದಳು.

"ಹೋಗ್ಲೀ. ಪ್ಲಾಸ್ಟಿಕ್ ವಾಟರ್ ಬ್ಯಾಗು ತರ್ಸಿಕೊಡು!" ಮಗಳು ಸರಿಗೆ ಸರೀ ಜವಾಬಿತ್ತಳು.

"ದೊಡ್ಡ ದೊರೇ ಮಗಳು ನೀನು. ನಿನ್ನ ಅಪ್ಪ ಕೂಡಾ ಅಲುಮಿನಿ ಟಿಪಿನ್ ಬಾಕ್ಸೇ ಹಿಡಿದುಕೊಂಡು ಆಫೀಸಿಗೆ ಹೋಗ್ತಾರೆ. ಇಷ್ಟು ಸಣ್ಣ ಪೋರಿ ನಿನಗೆ ಇಷ್ಟು ದೊಡ್ಡಸ್ತಿಕೆ ಬಂತೆ? ಪ್ಲಾಸ್ಟಿಕ್ ಬ್ಯಾಗು ಎರಡು ತಿಂಗಳಿಗೂ ಬರೊದಿಲ್ಲ. ಎರಡೆರಡು ತಿಂಗಳಿಗೊಂದು ಪ್ಲಾಸ್ಟಿಕ್ ವಾಟರ್ ಬ್ಯಾಗು ತೆಗೆದುಕೊಳ್ಳಲಿಕ್ಕೆ ನಮ್ಮಿಂದಾದೀತೆ?"

"ಶಾಲೇಲಿ ಎಲ್ಲಾ ಹುಡುಗರೂ ಅದನ್ನೇ ತರ್ತಾರಮ್ಮಾ—" ಎಂದು ಮಗಳು ಅಳಲಾರಂಭಿಸಿದಳು. ಕೊನೆಗೆ ನೀರೇ ಬೇಡ ನನಗೆ ಎಂದು ಹಟಹಿಡಿದು ಶಾಲೆಗೆ ಹೋಗಿಬಿಟ್ಟಳು. ಮಗಳು ನೀರು ಕುಡಿಯದೆ ಶಾಲೆಯಲ್ಲಿ ಕಷ್ಟಪಡುತ್ತಾಳೇನೋ ಎಂದು ಹೊಟ್ಟೆ ಸುಡುತ್ತಾ ನಿಟ್ಟುಸಿರು ಬಿಡುತ್ತಾಳೆ ತಾಯಿ.

ಒಟ್ಟಾರೆ ಮಗಳ ಶಾಲೆಯ ನೀರಿನ ಸಮಸ್ಯೆಗೆ ತಂದೆ ಐದಾರು ರೂಪಾಯಿ ಖರ್ಚು ಮಾಡಬೇಕು.

ಒಂದು ಊರಿನಲ್ಲಿ ಇಂತಹ ನೀರಿನ ಕಲಹವಾದರೆ ಇನ್ನೊಂದೂರಿನಲ್ಲಿ ಇಂತಹುದೇ ಇನ್ನೊಂದು. ಒಂದು ಮನೆಯಲ್ಲಿ ಒಬ್ಬ ಹುಡುಗ ತನಗೆ ಇಂತಹ ಪೆನ್ನೇ ಆಗಬೇಕು; ಅದಕ್ಕೆ ಫಳಫಳಿಸುವ ಇಂತಹ ಕ್ಲಿಪ್ಪೇ ಇರಬೇಕು ಎಂದು ಹಟ ಹಿಡಿಯುತ್ತಾನೆ. ನಾಲ್ಕು ನಾಲ್ಕು ದಿನಗಳಿಗೊಂದು ನೋಟು ಪುಸ್ತಕ ಮುಗಿಸಿ ಮತ್ತೆ ಹೊಸ ನೋಟು ಪುಸ್ತಕವೇ ತನಗಾಗಬೇಕೆಂದು ಹೆತ್ತವರನ್ನು ಕಾಡುವ ಹುಡುಗರಿದ್ದಾರೆ. ಒಟ್ಟಾರೆ ಹುಡುಗರ ಬಯಕೆಗಳನ್ನು ಸೂಕ್ಷ್ಮವಾಗಿ ನೋಡಿದರೆ, ಅದು ಇನ್ನೊಬ್ಬನ ಹಾಗಿನದೇ ತನಗಾಗಬೇಕು ಎಂಬ ಬಗೆಯ ಕೋರಿಕೆಗಳಾಗಿಯೇ ಕಾಣಿಸುತ್ತವೆ. ವಾರಕ್ಕೊಮ್ಮೆ ಹೊಸತನ್ನು ಬಯಸುತ್ತಾ ಹೋಯಿತು. ಯಾರೋ ಕೆಲವು ಶ್ರೀಮಂತ ಹುಡುಗರು ಶ್ರೀಕ್ಷ್ಮವಾದ ಬ್ಯಾಗು, ಬೆಲೆ ಬಾಳುವ ಪೆನ್ನು ಷೋಕಾದ ನೀಟಾದ ಉಡುಗೆ ತೊಡುಗೆಗಳಿಂದ, ಒಳ್ಳೇ ಸ್ಟೈಲಾಗಿ ಶಾಲೆಯಲ್ಲಿ ಕಾಣಿಸುವುದರಿಂದ,ಅವರ ಆಬಾಹ್ಯಾಡಂಬರಗಳ ಪ್ರಭಾವ ಇತರ ಹುಡುಗ,ಹುಡುಗಿಯರ ಮನದಲ್ಲಿಯೂ ಕೆಲಸಮಾಡಿ, ತಂದೆ ತಾಯಿಗಳನ್ನು ಪೀಡಿಸಿ ಕಾಡಿಸಿ ತಾವೂ ಆಡಂಬರಿಗಳಾಗುತ್ತಾರೆ. ತಮ್ಮ ಮಕ್ಕಳು ನಾಲ್ಕು ಮಕ್ಕಳ ಜತೆಯಲ್ಲಿ ಸರಿಸಮಾನರಾಗಿ ಕಾಣಿಸಬೇಕಲ್ಲಾ ಅಂದುಕೊಂಡು ತಂದೆ ತಾಯಂದಿರು ತಾವು ಕಷ್ಟಪಟ್ಟಾದರೂ ಮಕ್ಕಳನ್ನು ಆಡಂಬರ ಜೀವಿಗಳನ್ನಾಗಿ ಮಾಡಿಯೇ ಬಿಡುತ್ತಾರೆ. ಆದರಿಂದ ಬಾಲ್ಯದಲ್ಲೇ ಆ ಮಕ್ಕಳ ಮನಸ್ಸಿನಲ್ಲಿ ತಾವು ಹೆಚ್ಚಿನವರು ಎಂಬ ಭಾವನೆ ತುಂಬಿ ಹೋಗುತ್ತದೆ. ತಂದೆ ತಾಯಿಗಳಿಗಿಂತಲೂ ಹೆಚ್ಚಿನವರೆಂದು ತಲೆ ತಿರುಗಿ ಹೋಗುವುದೂ ಅತಿಶಯವೇನಲ್ಲ.

ಮೂವತ್ತು ವರ್ಷಗಳ ಹಿಂದೆ ಹೀಗಿರಲಿಲ್ಲ. ಮೊದಲು ಪೆನ್ಸಿಲಿನಿಂದ ಬರೆದ ಪುಸ್ತಕದಲ್ಲಿಯೇ, ಮತ್ತೊಮ್ಮೆ ಅಡ್ಡಗೆರೆ ಹಾಕಿ ಶಾಯಿಯಿಂದಲೂ ಬರೆದು ಪಳಗುವುದನ್ನು ಉಪಾಧ್ಯಾಯರು ಒಪ್ಪುತ್ತಿದ್ದರು. ಈಗಲೂ ಹಾಗೆ ಬರೆಯಬೇಕೆಂದು ಹೇಳುವುದಲ್ಲ; ಅದು ಶುದ್ಧ ಅನಾಗರಿಕತೆ ಎಂಬುದನ್ನು ಒಪ್ಪೋಣ. ಅನಾಗರಿಕತೆಯಿಂದ ನಾಗರಿಕತೆಗೆ ಏರುವುದು ಒಳ್ಳೆಯ ಅಭಿವೃದ್ಧಿ ಎನ್ನಲು ಸಂದೇಹವೇ ಇಲ್ಲ. ನಮ್ಮ ದೇಶವು ಎಲ್ಲಾ ವಿಧದಲ್ಲಿಯೂ ಅಭಿವೃದ್ಧಿ ಹೊಂದುವಾಗ ಶಾಲೋಪಯೋಗೀ ವಸ್ತುಗಳಲ್ಲಿಯೂ, ಕ್ರಮಗಳಲ್ಲಿಯೂ ಉತ್ತಮವಾಗುತ್ತಾ ಬರಬೇಕಾದುದು ಅವಶ್ಯವೇ. ಉಡುಗೆ ತೊಡುಗೆಗಳಲ್ಲಿಯೂ ಅಭಿವೃದ್ಧಿ ಬರಬೇಕು ನಿಜವೇ. ಆದರೆ ಅದೆಷ್ಟವಾದ, ನಮ್ಮ ದೇಶದ ಸರಾಸರಿ ಆರ್ಥಿಕ ಪರಿಸ್ಥಿತಿಗೆ ಅಳವಟ್ಟ ರೀತಿಯಲ್ಲಿರಬೇಕೇ ಹೊರತು ಪಾಂಡಿತ್ಯವಲ್ಲ. ಪಾಂಡಿತ್ಯವು ಜ್ಞಾನಾರ್ಜನೆಗೆ ಸಹಕಾರಿಯಾಗಿರಬೇಕಾದುದು. ಹಾಗೆ ಆದು ಸಹಕಾರಿಯಾಗಿ ಪರಿಣಮಿಸಬೇಕಾದರೆ ಅದನ್ನು ಪಡೆಯುವ ರೀತಿ, ತನ್ನ ತಾನರಿತುಕೊಳ್ಳುವ ದಾರಿಯನ್ನು ಹೊಂದಿಕೊಂಡೇ ಸಾಗಬೇಕು. ಹಾಗಿಲ್ಲದೆ, ಅಂತರದಲ್ಲಿ ಸಾಗುವಂತೆ, ಕೃತಕ ಆಡಂಬರಗಳಿಗೆ ಪ್ರೋತ್ಸಾಹವೀಯುತ್ತಾ ಹೋಗುವುದರಿಂದಲೇ, ತನ್ನ ತಾನರಿಯುವುದಕ್ಕೆ ಬದಲಾಗಿ, ಇನ್ನೊಬ್ಬರ ಬಾಹ್ಯ ರೀತಿಗಳನ್ನು ನೋಡುತ್ತಾ ಅವರಂತಾಗಲು ಹೆಣಗುವುದರಲ್ಲೇ ಮಕ್ಕಳ ವಿದ್ಯೆಯೂ, ವಿದ್ಯಾನಂತರದ ಜೀವನವೂ ಸಾಗುತ್ತದೆ.

ಇಂತಹ, ಆತ್ಮವಂಚಕವೆನಿಸುವ ಕೃತಕ ಜೀವನದ ಬಹಳ ಕಷ್ಟನಷ್ಟಗಳನ್ನು ದಯಪಾಲಿಸುವಂತಹುದು. ಅಂಥವರಿಗೆ ಒಳಗೂ ಸುಖವಿಲ್ಲ, ಹೊರಗೂ ಸುಖವಿಲ್ಲ. ಮನಸ್ಸಿನಲ್ಲಿ ಸದಾ ಕಾಲವೂ ಅತೃಪ್ತಿಯೇ. ಸದಾ ಅತೃಪ್ತನಾಗಿರುವವನು, ಕಳ್ಳತನ, ಮೋಸ, ವಂಚನೆ, ಆತ್ಮಹತ್ಯೆ ಮೊದಲಾದ ಪಾತಕಗಳಲ್ಲಿ ಪರಿಣಾಮ ಪಡೆಯುತ್ತಾನೆ.

[ಈಗಿನವರಿಗೆ ವಿದ್ಯೆ ಕಲಿಯಬೇಕೆಂಬುದು ಜ್ಞಾನಕ್ಕಾಗಿಯಲ್ಲ ಯಾವುದೋ ಒಂದು ಉದ್ಯೋಗಕ್ಕಾಗಿ ವಿದ್ಯಾಜಂನೆಗೆ ಪ್ರವೇಶ ಮಾಡುವಾಗಲೇ ಹಣ, ಪ್ರತಿಫಲದ ಯೋಚನೆಗಳೇ ಜನತೆಯ ಮನಸ್ಸಿನಲ್ಲಿ ತಿರುಗಾಡುತ್ತಿರುತ್ತವೆ. ವಿದ್ಯೆಗೆ ತಾಗುವ ಖರ್ಚು ಕೂಡಾ ಬಡ—ನಡುವಣ ಕುಟುಂಬದವರಿಂದ ನಾನಾ ರೀತಿಯಲ್ಲಿ ಕಷ್ಟೋದ್ಗಾರಗಳನ್ನು ತೆಗೆಯಿಸುತ್ತದೆ. ಆ ಉದ್ಗಾರಗಳು ವಿದ್ಯಾರ್ಥಿಗಳ ಮನದಲ್ಲಿಯೂ ವಿಚಿತ್ರ ಪರಿಣಾಮಗಳನ್ನು ಮಾಡಿ, ಫೇಲಾದರೆ ತಮ್ಮ ಜೀವನವೇ ಮುಳುಗಿ ಹೋದಂತೆ ಭಾವಿಸಿಕೊಳ್ಳುತ್ತಾರೆ. ಕೆಲವು ಹುಡುಗರು ಹೇಳದೆ ಕೇಳದೆ ಓಡುವುದೂ, ಮತ್ತೆ ಕೆಲವರು ಮರಣಕ್ಕೆ ಶರಣಾಗುವುದೂ ಕಾಣುತ್ತೇವೆ. ಇಂತಹ

ಸ್ಥಾಪನೆ: 1924

ದಿ ಕರ್ಣಾಟಕ ಬೇಂಕ್ ಲಿಮಿಟೆಡ್

(ಶೆಡ್ಯೂಲ್ಡ್ ಬೇಂಕ್)

ರಿಜಿಸ್ಟರ್ಡ್ & ಹೆಡ್ ಆಫೀಸು: ಡೊಂಗರಕೇರಿ, ಮಂಗಳೂರು—3.

ಈ ಕೆಳಗಿನ ಏರಿಸಿದ ಬಡ್ಡಿದರಗಳಲ್ಲಿ ಠೇವಣಾತಿಗಳನ್ನು ಸ್ವೀಕರಿಸಲಾಗುವುದು.

ಒಂದರಿಂದ ಎರಡು ತಿಂಗಳುಗಳ ವರೆಗೆ .... ಸಾ|| ಸೇಕಡಾ 3-75 ನ.ಪೈಸೆ

ರಾಷ್ಟ್ರೀಯ ವಾರಪತ್ರಿಕೆ. ಬೆಲೆ: 13 ನ.ಪೈಸೆ

ನವಯುಗ

KANNADA — NAVAYUGA — WEEKLY

ಸಂಪುಟ ೪೧ ಸಂಚಿಕೆ ೧ | ಉಡುಪಿ 7—9—1961 ಗುರುವಾರ | Vol. 41 · No. 1

ನಿಮ್ಮ ಯಾವತ್ತೂ
ಮುದ್ರಣ ಕೆಲಸಗಳಿಗೆ
ದಯಮಾಡಿ ವಿಚಾರಿಸಿರಿ:
ನವಯುಗ ಪ್ರೆಸ್,
ಉಡುಪಿ

ವಿದ್ಯಾರ್ಥಿಗಳಿಗೆ
ಮತ್ತು ವಯಸ್ಕರಿಗೆ
ಅತ್ಯುಪಯೋಗೀ ಪುಸ್ತಕ
ಸುಲಭದಲ್ಲಿ ಇಂಗ್ಲಿಷ್
ನವಭಾರತ ಪುಸ್ತಕ ಭಂಡಾರ
ಉಡುಪಿ

ತಟಸ್ಥ ರಾಷ್ಟ್ರಗಳ ಸಮ್ಮೇಳನ

ವಿಶ್ವದಲ್ಲಿ ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ತ್ವೇಷದಿಂದ, ಮುಖ್ಯವಾಗಿ ಪಾಶ್ಚಾತ್ಯ ಮತ್ತು ಪೌರ್ವಾತ್ಯ ಮಹಾ ರಾಷ್ಟ್ರಗಳಲ್ಲಿ ಪ್ರತಿಯೊಂದು ಪ್ರಶ್ನೆಯ ಬಗ್ಗೆಯೂ ಭಿನ್ನಾಭಿಪ್ರಾಯವು ಹೆಚ್ಚುತ್ತ ಹೋಗುತ್ತಿರುವುದರಿಂದ ತಟಸ್ಥ ರಾಷ್ಟ್ರಗಳು ವಿಪಂಚನೆಗೊಳಗಾಗಿವೆ. ಪಶ್ಚಿಮ ಮತ್ತು ಪೂರ್ವ ಜರ್ಮನಿಯ ನಡುವಣ ಸರ್ವ ವ್ಯವಹಾರಗಳಿಗೂ ಪ್ರತಿಬಂಧಕವು ಹೇರಲ್ಪಟ್ಟ ಕಾರಣ ಪಶ್ಚಿಮ ಜರ್ಮನಿಯು ಕ್ರುದ್ಧಗೊಂಡಿದೆ. ತನ್ನ ಅಧೀನವಿರುವ ಪೂರ್ವ ಜರ್ಮನಿಯನ್ನು ತನಗೆ ಬೇಕಾದಂತೆ ಕುಣಿಸುತ್ತ ಸೋವಿಯತ್ ರಶ್ಯವು ಶಾಂತಿ-ಸಮಾಧಾನಗಳ ಸೋಗನ್ನು ಹಾಕುತ್ತ ಅಲ್ಲಿ ಅತಾಂತಯೇ ವ್ಯಾಪಿಸುವಂತಹ ಕಾರ್ಯಕ್ರಮಗಳಿಗೆ ತೊಡಗಿದೆಯೆನ್ನಬಹುದು. ಜರ್ಮನಿಯ ಪ್ರಶ್ನೆಯನ್ನು ಶಾಂತ ವಿಧಾನಗಳಿಂದಲೇ ಉತ್ತರಿಸುವ ಅವಕಾಶಗಳು ಕೊನೆಗೊಂಡಿಲ್ಲವಾದರೂ ಪ್ರಾರಂಭವಾದ ಮಾತುಕತೆಗಳು ಭಿನ್ನಾಭಿಪ್ರಾಯದಲ್ಲಿಯೇ ಪರ್ಯವಸಾನಗೊಂದುತ್ತಿರುವುದು ಖೇದದಾಯಕವಾಗಿದೆ. ಇದೇ ಸಮಸ್ಯೆ ಗಂಭೀರವಾಗುತ್ತ ಸಾಗಿದರೆ, ಮೊದಲನೆ ಯುದ್ಧಗಳಿಗೆ ಕಾರಣವಾದ ಜರ್ಮನಿಯೇ ಭಾವಿಸಮರಕ್ಕೂ ನಾಂದಿಯಾಗಬಹುದು. ಇದಕ್ಕಾಗಿ ಜರ್ಮನಿಯ ಬಗ್ಗೆ ಯಾವುದೇ ಒಂದು ಸೂಕ್ತ ಉಭಯಸಮ್ಮತ ಒಡಂಬಡಿಕೆಯಾಗುವುದರಿಂದ ಮಾತ್ರ ಯುದ್ಧಭಯ ನಿವಾರಣೆಯಾದೀತು.

ಯುಗೊಸ್ಲಾವಿಯಾದ ಅಧ್ಯಕ್ಷ ಮಾರ್ಶಲ್ ಟಿಟೋ ತನ್ನನ್ನು ಶುದ್ಧ ಸಾಮ್ಯವಾದಿಯೆಂದು ಕರೆದುಕೊಂಡರೂ ಅವರು ರಶ್ಯದ ಕೈಗೊಂಬೆಯಾಗಿಲ್ಲ. ವಿಶ್ವದಲ್ಲಿ ಸಮರಸದ ಭಾವನೆಯುಂಟಾಗಬೇಕು; ಕಹಿಮನಸ್ಸು ದೂರಗೊಳ್ಳಬೇಕೆಂದು ಬಯಸುವ ಟಿಟೋ ಇದರ ಸಾಧನೆಯಲ್ಲಿ ಯಾವುದೇ ಬಣಗಳಿಗೆ ಸೇರದ ತಟಸ್ಥ ರಾಷ್ಟ್ರಗಳು ಅಡಬೇಕಾದ ಆಟ ಬಹಳವಿದೆಯೆನ್ನುತ್ತಾರೆ. ತಟಸ್ಥರಾಷ್ಟ್ರಗಳ ಸಮ್ಮೇಳನವೊಂದನ್ನು ಕರೆದು ಪ್ರಚಲಿತ ಜಾಗತಿಕ ಸ್ಥಿತಿಗತಿಗಳ ಮೇಲೆ ಚರ್ಚಿಸಿ, ಅವನ್ನು ಉನ್ನತಗೊಳಿಸುವಲ್ಲಿ ಯಾವ ಪಾತ್ರವನ್ನು ಹೇಗೆ ವಹಿಸಬೇಕು ಎಂದು ನಿರ್ಧರಿಸುವ ಉದ್ದೇಶದಿಂದ ಬಲ್ಗ್ರೇಡಿನಲ್ಲಿ ೨೪ ತಟಸ್ಥ ರಾಷ್ಟ್ರಗಳ ಧುರೀಣರನ್ನು ಒಟ್ಟು ಸೇರಿಸಿದ್ದಾರೆ. ಈ ಸಂಖ್ಯೆಯಲ್ಲಿ ಅರ್ಧಾಂಶದಷ್ಟು ರಾಷ್ಟ್ರಗಳು ಸ್ವತಂತ್ರವಾಗಿ ಇನ್ನೂ ಹೆಸ್ತುವರ್ಷಗಳು ಕಳೆಯಲಿಲ್ಲ ಎನ್ನುವಂತಿದ್ದರೂ ಸಂಯುಕ್ತ ರಾಷ್ಟ್ರಸಂಘದಲ್ಲಿ ಇವು ಸ್ಥಾನವನ್ನು ಗಳಿಸಿರುವುದರಿಂದ ಉದ್ದೇಶ ಸಾಧನೆಗೆ ನೆರವು ನೀಡಬಹುದೆಂಬ ಆಶೆಯನ್ನವರು ಇಟ್ಟುಕೊಂಡಿದ್ದಾರೆ. ಇದೇ ಮೊದಲನೆ ತಾರೀಕಿನಿಂದ ಪ್ರಾರಂಭವಾದ ಈ ತಟಸ್ಥ ರಾಷ್ಟ್ರಗಳ ಮಹಾ ಸಮ್ಮೇಳನವು ವಸಾಹತುವಾದ—ವರ್ಣವಾದ, ರಾಜಕೀಯ ಉದ್ದೇಶಗಳಿಗೆ ಹೊರತಾಗಿ ಪಾಶ್ಚಾತ್ಯ ಪೌರ್ವಾತ್ಯ ರಾಷ್ಟ್ರಗಳ ನಡುವೆ ಆರ್ಥಿಕ ಸಹಕಾರ ವಿಶ್ವ ಸಮ್ಮೇಳನ ಮತ್ತು ಅಣುಶಕ್ತಿ ಪ್ರಯೋಗ ನಿರ್ಮೂಲನ ಮೊದಲಾದ ಸಾಮಾನ್ಯ ವಿಷಯಗಳನ್ನು ಕುರಿತು ಚರ್ಚಿಸಿತು. ಇವಲ್ಲದೆ ಬರ್ಲಿನ್ ಮತ್ತು ಜರ್ಮನಿಗಳ, ಪ್ರಶ್ನೆ, ಅಂಗೋಲ, ಕಾಂಗೊ, ಬಿಜಾರ್ಟಗಳ ಸಮಸ್ಯೆಗಳನ್ನೂ ಇಲ್ಲಿ ಎತ್ತಿಕೊಳ್ಳಲಾಯಿತು. ಎಲ್ಲವುಗಿಂತ ಹೆಚ್ಚಾಗಿ ಸಂಯುಕ್ತ ರಾಷ್ಟ್ರ ಸಂಘದ ಸುಧಾರಣೆ ಹಾಗೂ ಸುನಾರಚನೆಯ ಸಂಬಂಧದಲ್ಲಿ ವಿಮರ್ಶೆ ಮಾಡಲಾಯಿತು.

ಈಜಿಪ್ತದ ಕರ್ನೆಲ್ ನಸ್ಸೇರ್, ಘಾನಾದ ಕ್ವಾಮೆ ನುಕ್ರೂಮಾ, ಬರ್ಮಾದ ಯು.ನೂ, ಇಂಡೋನೇಶ್ಯದ ಸುಕರ್ಣ, ಹಾಗೂ ಭಾರತದ ಜವಾಹರಲಾಲ ನೆಹರು—ಇವರು ಈ ಸಮ್ಮೇಳನದಲ್ಲಿ ಭಾಗವಹಿಸಿದ ಮುಖ್ಯ ನಾಯಕರು. ಹಿಂದೊಮ್ಮೆ ಆಫ್ರೇಸ್ಯಾ ರಾಷ್ಟ್ರಗಳ ಬಾಡುಂಗ್ ಸಮ್ಮೇಳನದಂತೆಯೇ ಹೆಚ್ಚಾಗಿ ಆಫ್ರೇಸ್ಯಾದ ರಾಷ್ಟ್ರಗಳ ನಾಯಕರೇ ಇರುವ ಬಲ್ಗ್ರೇಡ್ ಪರಿಷತ್ತಿನಲ್ಲೂ ಪಂಡಿತ ನೆಹರುರವರು ಆ ಮೂಲ್ಯ ಹಾಗೂ ಮಹತ್ವದ ಪಾತ್ರ ವಹಿಸುವರೆಂದು ಭಾವಿಸಲಾಗುತ್ತಿದೆ. ಇವರು ಈ ಸಮ್ಮೇಳನವನ್ನು ಉದ್ದೇಶಿಸಿ ಮಾಡಿದ ಭಾಷಣವು ಇತಿಹಾಸ ಪ್ರಸಿದ್ಧವಾಗುವುದೆಂದು ಭಾವಿಸಲಾಗಿದೆ. 'ಹಿರಿಯ ರಾಷ್ಟ್ರಗಳಲ್ಲಿ ಯಾವುದೇ ರೀತಿಯಿಂದ ಒಡಂಬಡಿಕೆ ಸಾಧಿಸಲು ಸಹಾಯಕವಾಗುವ ಮಾತುಕತೆ ಪ್ರಾರಂಭವಾಗುವಂತೆ ಮಾಡುವುದೇ ಇಂದಿನ ಸರಮಾವಶ್ಯಕತೆ' ಯೆಂದು ಒತ್ತಿ ಹೇಳಿ, ಈ ಪ್ರಯತ್ನವನ್ನು ಮಾಡಿ ಯಶಸ್ವಿಯಾಗುವ ರಾಷ್ಟ್ರವು ಕೀರ್ತಿಶಾಲಿಯಾಗುವುದು ಎಂದು ನೆಹರು ಕರೆಯಿತ್ತರು. ರಶ್ಯವು ಅಣವಿಕ ವಿಸ್ಫೋಟವನ್ನು ಮರಳಿ ಪ್ರಾರಂಭಿಸುತ್ತಿದಾಗಿ ಮಾಡಿದ ಘೋಷಣೆಯಿಂದ ನೊಂದ ನೆಹರು "ಇದರಿಂದ ಯುದ್ಧವು ಮತ್ತಷ್ಟು ಸವಿಾಪಕ್ಕೆ ಬಂದಂತಾಗಿದೆ. ನಿಶ್ಶಸ್ತ್ರೀಕರಣಪ್ರೊಂದೇ ಇದನ್ನು ಸಮಾಧಾನಕರವಾಗಿ ಸಾಧಿಸುವ ಏಕಮಾತ್ರ ಉಪಾಯ. ಮಾನವೀಯ ಇತಿಹಾಸದ ಈ ವಿಷಮಾವಸ್ಥೆಯ ಸಂಧಿಕಾಲದಲ್ಲಿ ಶಾಂತಿಸ್ಥಾಪನೆಗಾಗಿ ಒಡಂಬಡಿಕೆಯಾಗಬೇಕಾದುದು ಅನಿವಾರ್ಯವಿದೆ' ಎಂದು ಕಳಕಳಿಯಿಂದ ನುಡಿದರು. ಸಮ್ಮೇಳನದ ಕುರಿತು ಮಾತಾಡುತ್ತಾ, 'ಶಾಂತಿಸ್ಥಾಪನೆಯ ಉದ್ದೇಶದಿಂದ ಯಾರಿಗೂ ಹಾನಿವುದೇ ತರದ ಆದೇಶವನ್ನು ನೀಡುವುದು ತರವಲ್ಲ; ಇದರಿಂದ ಯಾರದಾದರೂ ಮನನೊಂದು ನಮ್ಮ ಉದ್ದೇಶ ಸಾಧನೆಯಲ್ಲಿ ಭಂಗವಾಗಬಹುದು. ಆದುದರಿಂದ ನಾವು ಪ್ರತಿನಿಧೀಕರಿಸುವ ವಿಶ್ವದ ಬಹು ಸಂಖ್ಯಾಕ ಜನತೆಯ ಹೃದಯದ ಕಾಮನೆಯೇನಿದೆಯೆಂಬುದನ್ನು ಮಾತ್ರ ಮಹಾ ರಾಷ್ಟ್ರಗಳಿಗೆ ತಿಳಿಸುವ. ನಮ್ಮ ಕಳಕಳಿಯ ಅಪೇಕ್ಷೆಯನ್ನು ಅವರ ಮುಂದಿಡುವ. ಇಷ್ಟರಿಂದಲೇ ಕಾರ್ಯಸಾಧನೆಯಾದೀತೆನ್ನಬಾರದಾದರೂ ಆದೇಶವಿತ್ತು ಅನಿಷ್ಟ ಪ್ರಸಂಗಗಳೆದ್ದು, ತನ್ಮೂಲಕ ಉದ್ದೇಶ ಭಂಗವಾಗುವುದನ್ನು ತಡೆಯಬಹುದು" ಎಂದು ಅಭಿಪ್ರಾಯಪಟ್ಟರು. ಬಲ್ಗ್ರೇಡ್ ಸಮ್ಮೇಳನವು ಈ ದಿಸೆಯಲ್ಲಿ ಮುಂದುವರಿಯಿತೆನ್ನಬಹುದು.

ಒಕ್ಕಲಿಗರ ಸಂಘ ಸುವರ್ಣೋತ್ಸವ ಆಚರಣಾ ಸಮಾರಂಭ ಮತ್ತು ದಕ್ಷಿಣ ಭಾರತ ಒಕ್ಕಲಿಗರ ಪರಿಷತ್ತು

ಮೈಸೂರು ಸರಕಾರದ ಮಹಾರಾಜ ಶ್ರೀ ಜಯಚಾಮರಾಜ ವೊಡೆಯರ್ ಬಹದ್ದೂರ್ ಅವರು ತಾರೀಕು 20—9—1961 ರಂದು ಸುವರ್ಣೋತ್ಸವವನ್ನು ಉದ್ಘಾಟಿಸಲು ದಯವಿಟ್ಟು ಒಪ್ಪಿರುವರೆಂದು ತಿಳಿಸಲು ಅತ್ಯಾನಂದ ಪಡುತ್ತೇವೆ. ಮಹಾರಾಣಿ ತ್ರಿಪುರ ಸುಂದರಮ್ಮಣಿ ಅವರು 'ಕಲ್ಯಾಣ ಮಂಟಪ'ದ ರಂಕುಸ್ಥಾಪನೆಮಾಡಲು ಸಮ್ಮತಿಸಿರುವರು. ರಾಜಕುಮಾರಿ ಗಾಯತ್ರಿ ದೇವಿ ಅವರು ಒಕ್ಕಲಿಗರ ವಿದ್ಯಾರ್ಥಿನಿ ಭವನದ ಅಸ್ತಿವಾರ ಕಾರ್ಯ ನೆರವೇರಿಸುವರು.

ಆದುದರಿಂದ ನಮ್ಮ ಸಮಾಜದ ಜನರೆಲ್ಲರೂ (ಸ್ತ್ರೀಪುರುಷರು) ಬರೇ ಎರಡು ರೂಪಾಯಿ ಪ್ರತಿನಿಧಿ ರುಲ್ಕ ಕಳುಹಿಸಿ ಈ ಎರಡೂ ದಿನಗಳ ಸಮಾರಂಭಗಳಲ್ಲಿ ಸಹಭಾಗಿಗಳಾಗಬೇಕಾಗಿ ವಿನಂತಿಸುತ್ತೇವೆ.

ಊಟ ಮತ್ತು ವಸತಿ ಸೌಕರ್ಯಗಳ ವ್ಯವಸ್ಥೆ ಮಾಡಲಾಗುವುದು. ಹೆಚ್ಚಿನ ವಿವರಗಳಿಗೆ ಪ್ರಚಾರ ಸಮಿತಿಯ ಅಧ್ಯಕ್ಷರಿಗೆ ಬರೆಯಿರಿ.

Chairman, Publicity Committee,
Vokkaligara Sangha Golden Jubilee Celebrations,
Visveswarapura, BANGALORE-4.

ತಾರಾಸಿಂಗರ ಘೋಷಣೆ

ಪಂಜಾಬಿ ಸುಬಾದ ಬೇಡಿಕೆಯನ್ನು ಮುಂದಿಟ್ಟು ಸ್ವಾತಂತ್ರ್ಯದಿನದಂದು ಅನಶನ ವ್ರತಾರಂಭ ಮಾಡಿದ ಅಕಾಲಿ ಧುರೀಣ ಮಾಸ್ಟರ್ ತಾರಾಸಿಂಗರು ಬಹಳಷ್ಟು ನಿಶ್ಶಕ್ತರಾಗಿದ್ದಾರೆ; ಅಂತೆಯೇ ಅವರ ಮಾನಸಿಕ ಬಲವೂ ಬಹು ನಿಶ್ಶಕ್ತವಾಗಿದೆ; ಪ್ರಾರಂಭದಲ್ಲಿ ಪಂಜಾಬ ಸುಬಾದ ಬೇಡಿಕೆಯನ್ನು ಮನ್ನಿಸದ ಹೊರತು ಉಪವಾಸ ಕೊನೆಗೊಳಿಸೆನೆಂದು ತನ್ನ ನಿರ್ಧಾರದಲ್ಲಿ ಯಾವ ಪರಿವರ್ತನೆಯೂ ಆಗದೆಂದು, ತಾನು ಅವಸಾನ ಹೊಂದಿದರೂ ಈ ಸತ್ಯಾಗ್ರಹ ಮುಂದುವರಿಯುವುದೆಂದು ಗುಡುಗಿದ ತಾರಾಸಿಂಗರು ಈಗೀಗ ತುಳು ಮೃದುವಾಗುತ್ತ ಬಂದಂತೆ ತೋರುವುದು ಕೇಂದ್ರ ಸರಕಾರವು ಪಂಜಾಬ ವಿಭಜನೆ ಮಾತ್ರವಲ್ಲ. ಯಾವುದೇ ರಾಜ್ಯವಿಭಜನೆಗೆ ತಳೆದಿದ್ದ ಪ್ರತಿಕೂಲಾಭಿಪ್ರಾಯವು ವಜ್ರದಂತೆ ದೃಢವಾಗಿಯೇ ನಿಂತುದರಿಂದ ಅಕಾಲಿ ಧುರೀಣರು ಎದೆಗೆಟ್ಟರೆನ್ನಬಹುದು. ನಿಶ್ಚಿತವಾಗಿ ಮಾತುಕತೆಗೆ ತಯಾರಾದ ನೆಹರುಗಳ ಸಮಾಧಾನದಿಂದ ತೃಪ್ತರಾಗದ ಅಕಾಲಿಗಳು ನೊಂದರು, ಪಂಜಾಬಿ ಸುಬಾವನ್ನು ಈಗಲೇ ಕೊಡಬೇಕಾಗಿಲ್ಲ; ಸುಬಾ ಬೇಡಿಕೆಯ ತತ್ವವನ್ನು ಒಪ್ಪಿಕೊಂಡರೆ ಸಾಕು ಎಂಬ ಆಲಾಪವೆಬ್ಬಿಸಿದರು. ಆದೂ ಅಸಫಲವಾದುದನ್ನು ಕಂಡು ಈಗ ಹೊಸದೊಂದು ರಾಗವನ್ನೇ ಎಬ್ಬಿಸಿದ್ದಾರೆ, ತಾರಾಸಿಂಗರು.

ಪಂಜಾಬಿ ಸುಬಾದ ಬೇಡಿಕೆಯ ಈ ಪ್ರಶ್ನೆಯನ್ನು ಒಂದು ಪಂಚಾಯತಿಗೆ ಬಿಟ್ಟುಕೊಡುವುದಕ್ಕೆ ಸರ್ಕಾರವೊಪ್ಪಿದರೆ, ತಾನು ಅನಶನ ವ್ರತವನ್ನು ಕೊನೆಗೊಳಿಸುವುದಾಗಿ ತಾರಾಸಿಂಗರು ಹೇಳಿದ್ದಾರೆ.

(ಮುಂದೆ ಪುಟ ನೋಡಿರಿ)

ಮೂಡಿ ಬಂದ ಸೂರ್ಯ

ಶ್ರೀ ನಾಗರಾಜ, "ಹಿಂದೀರತ್ನ", ಉಜಿರೆ.

ಕೊ ಕ್ಕೋ ಕೋ.....

— ಎಂದನಂತೆ ಕೋಳಿ ಕೂಗಿತು. ರಾತ್ರೆಯಲ್ಲಿ ನಿದ್ರಾದೇವಿಯ ಗಾಢಾಲಿಂಗನದಲ್ಲಿ ಇಹವನ್ನೇ ಮರೆತು, ಮಲಗಿದ್ದ ಮೂನವರನ್ನು ಎಚ್ಚರಿಸುವ ನವಮನ್ವಂತರದ ಹರಿಕಾರನಂತೆ ಕೂಗಿತು. ಹಕ್ಕಿಗಳ ಚಿಲಿಪಿಲಿ ಆರಂಭವಾಯಿತು. ಮೂಡಣ ದಿಸೆಯಲ್ಲಿ ಮುಂಬೆಳಗು ಕಾಣಿಸಿತು. ಮುದರ ಕಣ್ಣು ತಿಕ್ಕುತ್ತಾ, ಎದ್ದು ಕುಳಿತ.

— ಕಷ್ಟೆರೆದು ನೋಡಿದ—ಜೆನ್ನಿ ಬಾಯ್ತೆರೆದು ಅಂಗಾತಳಾಗಿ ಹತ್ತಿರನಲ್ಲೇ ಮಲಗಿದ್ದಾಳೆ. ವಸ್ತ್ರವೆಲ್ಲ ಅಸ್ತವ್ಯಸ್ತವಾಗಿದೆ. ಅವಳಾಚೆ ಪಿಜಿನ ಮಲಗಿದ್ದ. ಎಂಟು ವರುಷದ ಎಳೆಯ—ಮುಖದಲ್ಲಿ ಕಿರುನಗೆ ಮೂಡಿತ್ತು. ಕಣ್ಣುಗಳೂ ತುಟಿಗಳೂ ಚಲಿಸುತಿದ್ದವು ಮೆಲ್ಲಗೆ.

'ಕನಸು ಕಾಣುತ್ತಿದ್ದಿರಬೇಕು'—ಎಂದುಕೊಂಡ ಮುದರ.

"ನಾವೂ ಮಾಡ್ತೇನೆ, ನಿಮ್ಮಂತೆಯೇ. ಒಂದು ಗೇರುಹಣ್ಣು ಕೊಯ್ದರೆ, ಇಷ್ಟೆಲ್ಲ ಜೋರು! ನೋಡಿ, ನಾವೂ ನಿಮ್ಮ ಹಾಗೆಯೇ ಹಿತ್ತಲು ಮಾಡುತ್ತೇನೆ. ಗೇರು ಮರ ನೆಡ್ತೇವೆ ಬಿಡೋದಿಲ್ಲ—ನಾವೂ ಮಾಡ್ತೇವೆ....."

—ಹುಡುಗ ಒದರಿಕೊಳ್ಳುತಿದ್ದ—ಕನಸಿನಲ್ಲೇ ಯಾರೋ ತನ್ನ ಹರೆಯದ ಸಂಗಾತಿಗಾಗಿ ಹಾಡನ, ಬಡಗಳಾಡುತ್ತಿರುವ ಕನಸು ಕಾಣುತ್ತಿದ್ದಿರಬೇಕು.

ಮುದರನಿಗೆ ನಗು ಬಂತು:—

"ನಾವು ಮಾಡೋದು—ಗೊತ್ತೇ ಇದೆ. ನಮ್ಮಿಂದೇನಾಗುತ್ತದೆ! ಆ ತೋಟ ಅಸ್ತಿ, ಭೂಮಿ, ಬದುಕೆಲ್ಲಾ— ಮೇಲು ಜಾತಿಯವರಿಗೆ. ನಮಗೆ ಬರಿ ಡೋಲೇ ಗತಿ!'

—ಎಂದು ಎದ್ದು ನಿಂತ. ಧನಿಗಳ ಗದ್ದೆ ಉಳಲು ಹೋಗಬೇಕು—ಎಂದು ನೆನಪಾಯ್ತು. ಕಳೆಯ ಅಂಗಿ ಹಾಕಿಕೊಂಡ. ಕೊಳಕು-ಬೆವರಿನ ಮೂಮೂಲು ವಾಸನೆ ಬರುತ್ತಿತ್ತು. ಅದರಿ ಒಗೆಯಲು ಪುರುಸೊತ್ತು, ಸಾಬೂನು ಎರಡೂ ಇರಲಿಲ್ಲ! ಸ್ವತಿನಿತ್ಯದ ಅಭ್ಯಾಸದಿಂದ ಅವನಿಗದು ವಾಸನೆಯೆನಿಸಲಿಲ್ಲ. ಅದನ್ನೇ ತೊಟ್ಟುಕೊಂಡ.

"ಜೆನ್ನೀ—ನಾನು ಬರ್ತೇನೆ."

—ಎಂದು, ಕಾಲು ಹೊರಗಿಟ್ಟ ಅಂಗಳಕ್ಕೆ. ಅಲ್ಲೇ ಮಲಗಿದ್ದ 'ಜೊಗ್ಗಿ' ಹೆಣ್ಣುನಾಯಿ 'ಕುಂಯಿ ! ಕುಂಯಿ' ಯೆಂದು ಕಾಲಿಗಡ್ಡ ಕಟ್ಟಿತು.

ಜೆನ್ನಿಯೆಂದರೆ ಎಷ್ಟು ಪ್ರೇಮವೊ—ಅಷ್ಟೇ ಪ್ರೇಮ 'ಜೊಗ್ಗಿ'ಯ ಮೇಲೆ ಮುದರನಿಗೆ. ಬಹುಶಃ ಹಸಿವಾಗಿರಬೇಕು—ನಿನ್ನೆ ಅನ್ನ ಹಾಕಿಲ್ಲವೋ ಏನೋ—ಎಂದುಕೊಂಡು ಒಳಗೆ ಅನ್ನದ ಮಡಿಕೆಗೆ ಕೈ ಹಾಕಿ ನೋಡಿದ—ತಂಗಳನ್ನು ಉಳಿದಿತ್ತು. ಕೈಯಲ್ಲೇ ಸ್ವಲ್ಪ ತೆಗೆದುಕೊಂಡು ಬಂದು, ಹೊರಗೆ ಇದ್ದ ಮರದ ಪಾತ್ರೆಯಲ್ಲಿ ಇಕ್ಕಿದ; ಕೈಯನ್ನು ಹೆಗಲಿನ ಬೈರಾಸಿನಲ್ಲೇ ಒರಸಿಕೊಂಡ!

"ಬಾ ...ನಾ ...ಬಾ...."

—ಧನಿಗಳ ಮನೆಯ ಟಾಮಿ ಸ್ವಾಗತನಾದದೊಡನೆ ಬಂದು,ಎದುರ್ಗೊಂಡು, ಬಾಲ ಅಲ್ಲಾಡಿಸ ತೊಡಗಿದ-ಪರಿಚಯ ವ್ಯಕ್ತಪಡಿಸುತ್ತಾ.

"ಅಯ್ಯ!....ಓ ಅಯ್ಯ....!"

—ಎಂದು ವಿನೀತ ಭಾವದಿಂದಲೇ ಕೂಗಿ, ಕರೆದ.

"ಏನೋ ಮುದರ, ಇವತ್ತು ಅಮಾವಾಸ್ಯೆಯಲ್ಲವೇನೋ? ಇವತ್ತು ಗದ್ದೆ ಕೆಲಸ ಇಲ್ಲ. ಹೋಗು", ನಾಳೆಬಾ—ನಿನ್ನ ಮೇಟಿಗೆ ಹೋಗುವ ಕೆಲಸಗಳಿದ್ದರೆ ಪೂರೈಸಿಕೊಂಡು.!'

—ಎಂದು ಧನಿಗಳು ಮುಸುಕಿನೊಳಗಿನಿಂದಲೇ, ಅರ್ಧ ಮುಖ ತೋರಿಸಿ, ಅಂದರು. ಮುದರನ ಮುಖದಲ್ಲಾವ ಭಾವವೂ ವ್ಯಕ್ತವಾಗಲಿಲ್ಲ. ಮುಂದೇನು ಮಾಡುವುದು? ಮನಗೇ ಹೋದರಾಯ್ತೆಂದುಕೊಂಡ. ಅಷ್ಟರಲ್ಲಿ—

"ಅದಾರು ಮುದರನೋ? ಯಾವ ಕಡೆ ಹೊರಟೆ? ನಿನ್ನ ಹತ್ರ ಸ್ವಲ್ಪ ಕೆಲಸವಿತ್ತು. ನಿನ್ನ ಕೇರಿ ಕಡೆಗೇ ಬರಬೇಕೆಂದಿದ್ದೆ ನಿಮಗೆ ಹರಿಜನರಿಗೆದರಖಾಸ್ತು ಮಾಡಿಸಬೇಕೆಂದು ತಹಶೀಲ್ದಾರರ ಹತ್ರ ಕುಂಬಂದಿದ್ರೆ—ನೀವು ಆ ಬಗ್ಗೆ ಅರ್ಜಿಯೇ ಹಾಕಿಲ್ಲವಂತೆ! ಯಾಕೆ?"—ಎಂದು ಯಾರೋ ಹೊಸಬರೊಬ್ಬರು, ಕುಳಿತುಕೊಂಡು, ಮಾತಾಡುತ್ತಿದ್ದರು.

"ಏನೋ ಅಯ್ಯ!—ಅದೆಲ್ಲಾ ನನಗೆ ಗೊತ್ತಿಲ್ಲ."

ಆಗ ಧನಿಗಳೇ ಅಂದರು: "ಅದೆಲ್ಲಾ ಗ್ರಾಮ ಸೇವಕರೇ, ಅವರಿಗೇನು ಗೊತ್ತುಂಟು? ನೀವು ದರಖಾಸ್ತು ಮಾಡಿಕೊಟ್ಟರೂ, ಅವರೇನು ಮಾಡಬಲ್ಲರು? ನೀವು ಕೊಡೋದೊಂದು ಜೋಳು ಗುಡ್ಡೆ! ಅಲ್ಲಿ ಕೂತು ಅವರು ತಿನ್ನೋದೇನನ್ನು? ನಮ್ಮಲ್ಲಿದ್ದರೆ, ಕೂಲಿ, ನಾಲಿ ಮಾಡಲು ಸಾಧ್ಯ!"

"ಅದರಲ್ಲಿ ಅವರು ಕೃಷಿ ಮಾಡಲಿ ಸ್ವಾಮಿ. ಹೊಸ ಗೊಬ್ಬರ ಹಾಕಲಿ. 'ಕೃಷಿತೋ ನಾಸ್ತಿ ದುರ್ಭಿಕ್ಷಂ' ಅಲ್ವೇ? ಆ ಮೇಲೆ ನಿಮ್ಮ ಕೂಲಿ ಯಾರಿಗೆ ಬೇಕು ಹೆಬ್ಬಾರರೇ?"

ಹೊಸಬರ ಮಾತು ನಿಜವೆನಿಸಿತು—ಮುದರನಿಗೆ. ತಾನೂ ದರಖಾಸ್ತುವೊಂದನ್ನು ಮಾಡಿಕೊಂಡು, ಅದರಲ್ಲಿ ಕೃಷಿ ಮಾಡಿದ್ರೆ—ಕಾಯಿಪಲ್ಯ ಬೆಳೆಸಿದ್ರೆ—ಅಲ್ಪಸ್ವಲ್ಪ ರಾಗಿ-ಭತ್ತ ಬೆಳೆಸಿದ್ರೆ—ಒಳ್ಳೆಯ ವಾಯು ಪಸಂದಾದ ಜಾಗವಾಗಬಹುದು.!

"ಅದು ನಿಜ ಅಯ್ಯ—ನೀವು ಹೇಳಿದ್ದು. ನನಗೂ ಒಂದು ಇದ್ರೆ ಒಳ್ಳೇದಿತ್ತು ಅನ್ನಿಸ್ತದೆ. ಅದಕ್ಕೆ ಏನೇನೆಲ್ಲಾ ಬೇಕೋ--ಒಂದು ಗೊತ್ತಿಲ್ಲ—ಅಯ್ಯ!"

"ನಿನಗೆ ಮನಸ್ಸಿದ್ರೆ ಅದೊಂದು ಕಷ್ಟದ ಕೆಲಸವಲ್ಲ ಮುದರ! ಸಂಜೆ ನನ್ನಲ್ಲಿ ಬಾ—ನಾನು ಬರೆದು ಕೊಡ್ತೇನೆ...."

—ಎಂದು ಆ ಹೊಸಬರು ಅಂದಾಗ ಅಂಗೈಯಲ್ಲೇ ಸ್ವರ್ಗ ಕಂಡಂತಾಯ್ತು ಮುದರನಿಗೆ ಅವರಿಗೆ ಕೈಮುಗಿದು, ಮನೆಗೆ ಹೊರಟ. 'ನಾವೂ ಮಾಡ್ತೇವೆ.... ಮಾಡ್ತೇವೆ"—ಎನ್ನುತ್ತಿದ್ದ ಪಿಜಿನನ ಕನಸನ್ನು ನೆನಸು ಮಾಡಬಹುದು! ಅಲೋಚಿಸುತ್ತಾ ನಡೆದನು.

ಪಿಜಿನ ಎದ್ದು ಕುಳಿತಿದ್ದ—ಶುಸ್ತಕದ ಚೀಲವೊಂದು ಬಂದು ಕುಳಿತಿತ್ತು—ತೊಟೆಯ ಮೇಲೆ, ಅಪ್ಪನನ್ನು ಕಂಡ ಕೂಡ್ಲೇ ಎದ್ದು ನಿಂತನು

"ಅಪ್ಪ, ಇಂದೇಕೆ ಸೂರ್ಯ ಮೂಡಲಿಲ್ಲ?"

"ಏನೋ ಗೊತ್ತಿಲ್ಲ—ಏಕೋ?"

"ಬೆಳಗಾಗಿ ಹೊತ್ತು ಸುವೂರಾಯ್ತು! ಏನಪ್ಪಾ—ಸೂರ್ಯನಿಗೆ ಎಲಿಯಾದ್ರೂ ಮರೆತೇ ಹೋಯ್ತೋ ಮೂಡಲಿಕ್ಕೆ"

—ಎಂದಾಗ ಮುದರ ಮನಸ್ಸಿನಲ್ಲೇ ನಗುತ್ತಾ, ಮುದರ ಹೊರ ಬಂದು, ಆಕಾಶಕ್ಕೆ ನೋಡಿದ. ಮೂಡಣ ದಿಸೆ ಸುಬ್ಬಾಗಿತ್ತು. ಮೂಡಿದ್ದರೂ ಸೂರ್ಯ ಕಾಣದಂತೆ ಮೋಡಗಳು ಅಡ್ಡಾಗಿದ್ದವು.

೦೦ ೦೦

ಇಂದು ದೀಪಾವಳಿ!

ಉಳಿದವರಂತೆ, ಧನಲಕ್ಷ್ಮಿಪೂಜೆ, ಗೋಪೂಜೆ ಮಾಡದಿದ್ದರೂ, ಹರಿಜನರಲ್ಲೂ ದೀಪಾವಳಿಯ ಸಂಭ್ರಮವಿತ್ತು! ಇಂದು ಜೆನ್ನಿ ಬೇಗನೆ ಎದ್ದಿದ್ದಳು!

ಅಂಗಳದ ಮೂಲೆಯಲ್ಲಿ, ಹಿಂದಿನ ದಿನವೇ ನೀರು ತುಂಬಿಸಿಟ್ಟಿದ್ದ—ಪುಣ್ಣೆನ ಗುಡಾಣಕ್ಕೆ ಬೆಂಕಿ ಹೆಚ್ಚೆದಳು ನೀರು ಬಿಸಿಯಾದೊಡನೆ, ದೀಪ ಹಿಡಿದುಕೊಂಡು ಒಳಗೆ ಬಂದಳು.

ಮುದರನಿನ್ನೂ ಎದ್ದಿಲ್ಲ. ಭವಿಷ್ಯತ್ತಿನ ಹೊಂಗನಸುಗಳಲ್ಲಿ ತೇಲುತ್ತಿದ್ದನೋ ಏನೋ! ಜೆನ್ನಿ—ಪಿಜಿನನ ಕಡೆ ನೋಡಿದಳು! ಅವನು ಅಪ್ಪನನ್ನು ಭದ್ರವಾಗಿ ಅಪ್ಪಿಕೊಂಡಿದ್ದ ಅಪ್ಪನೆಲ್ಲಿ ಓಡಿ ಹೋಗುತ್ತಾನೋ—ಎಂಬ ಹೆದರಿಕೆಯಿಂದಲೋ ಎಂಬಂತೆ.

"ಏ...ಏಳೋ—ಏಳೋ—"

—ಎಂದಳು. ಅದರೆ ಏಳುವ ಸೂಚನೆಯಲ್ಲಿ! ಎಣ್ಣೆ ಹೆಚ್ಚಬೇಕು. ಬಳಿಕ ವಿಯ ಬೇಕು. ಬೆಳಗಾಗುವುದರೊಳಗೆ ದೋಸೆ ತಿಂದಾಗಬೇಕು! ಮತ್ತೆ ಯಾಗ! ಮುದರನ ಕೈ ಹಿಡಿದು ಅಲುಗಾ

(೧೧ನೆಯ ಪುಟ ನೋಡಿರಿ)

41 ವರ್ಷಗಳ ಭದ್ರ ಹಾಗೂ ಸಮರ್ಥ ಬೇಂಕಿಂಗ್ ಸೇವೆ.

ದಿ. ಪಾಂಗಾಳ ನಾಯಕ್ ಬೇಂಕ್ ಲಿ.

ನಮ್ಮ 3 ವರ್ಷ ವ್ಯಾದೆಯ ಕೇಶ್ ಸರ್ಟಿಫಿಕೇಟುಗಳಲ್ಲಿ ರೇವಣೆ ಮಾಡಿರಿ: ಬಡ್ಡಿ ಸೇಕಡಾ 5ರಂತೆ: ರೂ. 87—00 3 ವರ್ಷಗಳ ಅಂತ್ಯದಲ್ಲಿ ಬಡ್ಡಿ ಕೂಡಿ ರೂ. 100—00 ಒದಗಿಸುವುದು.

ಕರೆ, ಚಿಕ್ಕ ವ್ಯಾದೆ, ನಿರಖು ರೇವಣಾತಿಗಳ ಮೇಲೆ ಆಕರ್ಷಣೀಯ ಶರ್ತಗಳು: ಬಡ್ಡಿ ಸೇಕಡಾ 5¼ರಂ ವರೆಗೆ.

ತಾ 1—4—1961ರಿಂದ ಸೇವಿಂಗ್ಸ್ ಬೇಂಕ್ ಖಾತೆಗಳ ಮೇಲೆ ಬಡ್ಡಿ ಸೇಕಡಾ 3ರಂತೆ.

THE PANGAL NAYAK BANK LTD.

Estd: 1920

ESTD 1921 ಸ್ಥಾಪನೆ

NAVAYUGA
KANNADA WEEKLY,
UDIPI.

founder:

Late Sri A. B. Shetty

Former Minister for Public Health, Govt. of Madras & Govt of Mysore.

ನವಯುಗ

ರಾಷ್ಟ್ರೀಯ ವಾರಪತ್ರಿಕೆ

ಉಡುಪಿ

ಗೌರವ ಸಂಪಾದಕರು:
ಎಸ್. ಗೋವಿಂದ ರಾವ್, ವಿದ್ವಾನ್.
ಬಿ. ಶಾಮರಾಯ ಶೆಟ್ಟಿ, ಬಿ. ಎ., ಎಲ್. ಟಿ.

ಸಂಚಾಲಕ ಸಂಪಾದಕರು,
ಕೆ. ಹೊನ್ನಗ್ಯ ಶೆಟ್ಟಿ.

ಜಾಹಿರಾತು ದರಗಳು:
ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-50
ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3-50

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ನಿಂಡಿ ಕೇಟರ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಕೆಡುಕನ್ನುಂಟುಮಾಡುವ ಕೃತಕ ಜೀವನ

ಶ್ರೀ ಎಂ. ರಂಗ ರಾವ್, ಮದ್ರಾಸು.

"ಈ ಲೋಟೆ ನಾನು ಕೊಂಡುಹೋಗೋ ಕಿಲ್ಲ. ಉಹುಂ" ಅಂದಳು ಹುಡುಗಿ.

"ಇದಕ್ಕೇನಾಗಿದೇ?" ಕೇಳಿದಳು ತಾಯಿ.

"ಈ ಹಿತ್ತಾಳೆ ಲೋಟೆ ನೋಡಿದರೆ ಶಾಲೇಲಿ ಎಲ್ರೂ ನಗಾಡ್ತಾರೆ." ಎಂಬ ಮಗಳ ಉತ್ತರ ಕೇಳಿ ತಾಯಿಗೆ ಸಿಟ್ಟು ಬಂತು

"ಭಾರೀ ದೊಡ್ಡಸ್ತಿಕೆ ಇವಳಿಗೆ. ಸ್ಟೀನ್‌ಲೆಸ್ಸೇ ಆಗ್ಬೇಕಾ?" ಎಂದು ಗರ್ಜಿಸಿದಳು.

"ಹೋಗ್ಲೀ. ಪ್ಲಾಸ್ಟಿಕ್ ವಾಟರ್ ಬ್ಯಾಗು ತಗ್ಸಿಕೊಡು!" ಮಗಳು ಸರಿಗೆ ಸರೀ ಜವಾಬಿತ್ತಳು.

"ದೊಡ್ಡ ದೊರೇ ಮಗಳು ನೀನು. ನಿನ್ನ ಅಪ್ಪ ಕೂಡಾ ಅಲುಮಿನಿ ಟಿಫಿನ್ ಬಾಕ್ಸೇ ಹಿಡಿದುಕೊಂಡು ಆಫೀಸಿಗೆ ಹೋಗ್ತಾರೆ. ಇಷ್ಟು ಸಣ್ಣ ಪೋರಿ ನಿನಗೆ ಇಷ್ಟು ದೊಡ್ಡಸ್ತಿಕೆ ಬಂತೆ? ಪ್ಲಾಸ್ಟಿಕ್ ಬ್ಯಾಗು ಎರಡು ತಿಂಗಳಿಗೂ ಬರೊದಿಲ್ಲ. ಎರಡೆರಡು ತಿಂಗಳಿಗೊಂದು ಪ್ಲಾಸ್ಟಿಕ್ ವಾಟರ್ ಬ್ಯಾಗು ತೆಗೆದುಕೊಳ್ಳಲಿಕ್ಕೆ ನಮ್ಮಿಂದಾದೀತೆ?"

"ಶಾಲೇಲಿ ಎಲ್ಲಾ ಹುಡುಗರೂ ಅದನ್ನೇ ತರ್ತಾರಮ್ಮಾ—" ಎಂದು ಮಗಳು ಅಳಲಾರಂಭಿಸಿದಳು. ಕೊನೆಗೆ ನೀರೇ ಬೇಡ ನನಗೆ ಎಂದು ಹಟಹಿಡಿದು ಶಾಲೆಗೆ ಹೋಗಿಬಿಟ್ಟಳು. ಮಗಳು ನೀರು ಕುಡಿಯದೆ ಶಾಲೆಯಲ್ಲಿ ಕಷ್ಟಪಡುತ್ತಾಳೇನೋ ಎಂದು ಹೊಟ್ಟೆ ಸುಡುತ್ತಾ ನಿಟ್ಟುಸಿರು ಬಿಡುತ್ತಾಳೆ ತಾಯಿ.

ಒಟ್ಟಾರೆ ಮಗಳ ಶಾಲೆಯ ನೀರಿನ ಸಮಸ್ಯೆಗೆ ತಂದೆ ಐದಾರು ರೂಪಾಯಿ ಖರ್ಚು ಮಾಡಬೇಕು.

ಒಂದು ಊರಿನಲ್ಲಿ ಇಂತಹ ನೀರಿನ ಕಲಹವಾದರೆ ಇನ್ನೊಂದೂರಿನಲ್ಲಿ ಇಂತಹುದೇ ಇನ್ನೊಂದು. ಒಂದು ಮನೆಯಲ್ಲಿ ಒಬ್ಬ ಹುಡುಗ ತನಗೆ ಇಂತಹ ಪೆನ್ನೇ ಆಗಬೇಕು; ಅದಕ್ಕೆ ಫಳಫಳಿಸುವ ಇಂತಹ ಕ್ಲಿಪ್ಪೇ ಇರಬೇಕು ಎಂದು ಹಟ ಹಿಡಿಯುತ್ತಾನೆ. ನಾಲ್ಕು ನಾಲ್ಕು ದಿನಗಳಿಗೊಂದು ನೋಟು ಪುಸ್ತಕ ಮುಗಿಸಿ ಮತ್ತೆ ಹೊಸ ನೋಟು ಪುಸ್ತಕವೇ ತನಗಾಗಬೇಕೆಂದು ಹೆತ್ತವರನ್ನು ಕಾಡುವ ಹುಡುಗರಿದ್ದಾರೆ. ಒಟ್ಟಾರೆ ಹುಡುಗರ ಬಯಕೆಗಳನ್ನು ಸೂಕ್ಷ್ಮವಾಗಿ ನೋಡಿದರೆ, ಅದು ಇನ್ನೊಬ್ಬನ ಹಾಗಿನದೇ ತನಗಾಗಬೇಕು ಎಂಬ ಬಗೆಯ ಕೋರಿಕೆಗಳಾಗಿಯೇ ಕಾಣಿಸುತ್ತವೆ. ವಾರಕ್ಕೊಮ್ಮೆ ಹೊಸನೆನೆನ್ನು ಬಯಸುತ್ತಾರೆ. ಅಂಗಿಬಟ್ಟೆಗಳು ತುಸು ಹರಿದರೆ, ಅದು ಹೊಲಿದುಕೊಟ್ಟರೆ ಅವರಿಗಾಗದು ಅದನ್ನು ನೋಡಿದರೆ ಬೇರೆ ಹುಡುಗರು ನಗಾಡುತ್ತಾರಂತೆ. ನಿಜಕ್ಕೂ ನಗಾಡದಿದ್ದರೂ ಅವರಿಗೆ ಹಾಗೆ ಅನಿಸುತ್ತದೆ.

ಒಟ್ಟಾರೆ ಜತೆ ಹುಡುಗರ ಮುಂದೆ ತಾವು ಕಡಮೆಯವರಾಗಬಾರದು ಎಂಬ ಒತ್ತಡ ಆ ಹುಡುಗ ಹುಡುಗಿಯರ ಮನಸ್ಸನ್ನು ಚಿವುಟುತ್ತಾ ಇರುತ್ತದೆಂದಾಯಿತು. ಯಾರೋ ಕೆಲವು ಶ್ರೀಮಂತ ಹುಡುಗರು ಶ್ರೇಷ್ಠವಾದ ಬ್ಯಾಗು, ಬೆಲೆ ಬಾಳುವ ಪೆನ್ನು ಹೊರಕಾದ ನೀಟಾದ ಉಡುಗೆ ತೊಡುಗೆಗಳಿಂದ, ಒಳ್ಳೇ ಸ್ಟೈಲಾಗಿ ಶಾಲೆಯಲ್ಲಿ ಕಾಣಿಸುವುದರಿಂದ, ಅವರ ಆಬಾಹ್ಯಾಡಂಬರಗಳ ಪ್ರಭಾವ ಇತರ ಹುಡುಗ ಹುಡುಗಿಯರ ಮನದಲ್ಲಿಯೂ ಕೆಲಸಮಾಡಿ, ತಂದೆ ತಾಯಿಗಳನ್ನು ಪೀಡಿಸಿ ಕಾಡಿಸಿ ತಾವೂ ಆಡಂಬರಿಗಳಾಗುತ್ತಾರೆ. ತಮ್ಮ ಮಕ್ಕಳು ನಾಲ್ಕು ಮಕ್ಕಳ ಜತೆಯಲ್ಲಿ ಸರಿಸಮಾನರಾಗಿ ಕಾಣಿಸಬೇಕಲ್ಲಾ ಅಂದುಕೊಂಡು ತಂದೆ ತಾಯಂದಿರು ತಾವು ಕಷ್ಟಪಟ್ಟಾದರೂ ಮಕ್ಕಳನ್ನು ಆಡಂಬರ ಜೀವಿಗಳನ್ನಾಗಿ ಮಾಡಿಯೇ ಬಿಡುತ್ತಾರೆ. ಆದರಿಂದ ಬಾಲ್ಯದಲ್ಲೇ ಆ ಮಕ್ಕಳ ಮನಸ್ಸಿನಲ್ಲಿ ತಾವು ಹೆಚ್ಚಿನವರು ಎಂಬ ಭಾವನೆ ತುಂಬಿ ಹೋಗುತ್ತದೆ. ತಂದೆ ತಾಯಿಗಳಿಗಿಂತಲೂ ಹೆಚ್ಚಿನವರೆಂದು ತಲೆ ತಿರುಗಿ ಹೋಗುವುದೂ ಅತಿಶಯವೇನಲ್ಲ.

ಮೂವತ್ತು ವರ್ಷಗಳ ಹಿಂದೆ ಹೀಗಿರಲಿಲ್ಲ. ಮೊದಲು ಪೆನ್ಸಿಲಿನಿಂದ ಬರೆದ ಪುಸ್ತಕವಲ್ಲಿಯೇ, ಮತ್ತೊಮ್ಮೆ ಅಡ್ಡಗೆರೆ ಹಾಕಿ ಶಾಯಿಯಿಂದಲೂ ಬರೆದು ಪಳಗುವುದನ್ನು ಉಪಾಧ್ಯಾಯರು ಒತ್ತುತ್ತಿದ್ದರು. ಈಗಲೂ ಹಾಗೆ ಬರೆಯಬೇಕೆಂದು ಹೇಳುವುದಲ್ಲ; ಅದು ಶುದ್ಧ ಅನಾಗರಿಕತೆ ಎಂಬುದನ್ನು ಒಪ್ಪೋಣ. ಅನಾಗರಿಕತೆಯಿಂದ ನಾಗರಿಕತೆಗೆ ಏರುವುದು ಒಳ್ಳೆಯ ಅಭಿವೃದ್ಧಿ ಎನ್ನಲು ಸಂದೇಹವೇ ಇಲ್ಲ. ನಮ್ಮ ದೇಶವು ಎಲ್ಲಾ ವಿಧದಲ್ಲಿಯೂ ಅಭಿವೃದ್ಧಿ ಹೊಂದುವಾಗ ಶಾಲೋಪಯೋಗೀ ವಸ್ತುಗಳಲ್ಲಿಯೂ, ಕ್ರಮಗಳಲ್ಲಿಯೂ ಉತ್ತಮವಾಗುತ್ತಾ ಬರಬೇಕಾದುದು ಅವಶ್ಯವೇ. ಉಡುಗೆ ತೊಡುಗೆಗಳಲ್ಲಿಯೂ ಅಭಿವೃದ್ಧಿ ಬರಬೇಕು ನಿಜವೇ. ಆದರೆ ಅವಕಾಶವಾದ, ನಮ್ಮ ದೇಶದ ಸರಾಸರಿ ಆರ್ಥಿಕ ಪರಿಸ್ಥಿತಿಗೆ ಅಳವಟ್ಟ ರೀತಿಯಲ್ಲಿರಬೇಕೇ ಹೊರತು, ಅದನ್ನು ಮೀರಿಕೊಂಡು ಹೋಗಬಾರದು.

"ತನ್ನ ತಾನರಿತುಕೊಳ್ಳುವುದೇ ನಿಜವಾದ ಜ್ಞಾನ" ಉಳಿದುದು ಆತ್ಮವಂಚನೆ. ವಿದ್ಯೆಯೆಂದರೆ ಜ್ಞಾನಾರ್ಜನೆಯೇ ಹೊರತು ಪಾಂಡಿತ್ಯವಲ್ಲ. ಪಾಂಡಿತ್ಯವು ಜ್ಞಾನಾರ್ಜನೆಗೆ ಸಹಕಾರಿಯಾಗಿರಬೇಕಾದುದು. ಹಾಗೆ ಅದು ಸಹಕಾರಿಯಾಗಿ ಪರಿಣಮಿಸಬೇಕಾದರೆ ಅದನ್ನು ಪಡೆಯುವ ರೀತಿ, ತನ್ನ ತಾನರಿತುಕೊಳ್ಳುವ ದಾರಿಯನ್ನು ಹೊಂದಿಕೊಂಡೇ ಸಾಗಬೇಕು. ಹಾಗಿಲ್ಲದೆ, ಅಂತರದಲ್ಲಿ ಸಾಗುವಂತೆ, ಕೃತಕ ಆಡಂಬರಗಳಿಗೆ ಪ್ರೋತ್ಸಾಹವೀಯುತ್ತಾ ಹೋಗುವುದರಿಂದಲೇ, ತನ್ನ ತಾನರಿಯುವುದಕ್ಕೆ ಬದಲಾಗಿ, ಇನ್ನೊಬ್ಬರ ಬಾಹ್ಯ ರೀತಿಗಳನ್ನು ನೋಡುತ್ತಾ ಅವರಂತಾಗಲು ಹಣಗುವುದರಲ್ಲೇ ಮಕ್ಕಳ ವಿದ್ಯೆಯೂ, ಪಿದ್ಯಾನಂತರದ ಜೀವನವೂ ಸಾಗುತ್ತದೆ.

ಇಂತಹ, ಆತ್ಮವಂಚಕವೆನಿಸುವ ಕೃತಕ ಜೀವನದ ಬಹಳ ಕಷ್ಟನಷ್ಟಗಳನ್ನು ದಯಪಾಲಿಸುವಂತಹುದು. ಅಂಥವರಿಗೆ ಒಳಗೂ ಸುಖವಿಲ್ಲ, ಹೊರಗೂ ಸುಖವಿಲ್ಲ. ಮನಸ್ಸಿನಲ್ಲಿ ಸದಾ ಕಾಲವೂ ಅತೃಪ್ತಿಯೇ. ಸದಾ ಅತೃಪ್ತನಾಗಿರುವವನು, ಕಳ್ಳತನ, ಮೋಸ, ವಂಚನೆ, ಆತ್ಮಹತ್ಯವೊದಲಾದ ಪಾತಕಗಳಲ್ಲಿ ಪರಿಣಾಮ ಪಡೆಯುತ್ತಾನೆ.

[ಈಗಿನವರಿಗೆ ವಿದ್ಯೆ ಕಲಿಯಬೇಕೆಂಬುದು ಜ್ಞಾನಕ್ಕಾಗಿಯಲ್ಲ ಯಾವುದೋ ಒಂದು ಉದ್ಯೋಗಕ್ಕಾಗಿ ವಿದ್ಯಾಮಂದಿರಕ್ಕೆ ಪ್ರವೇಶ ಮಾಡುವಾಗಲೇ ಹಣ, ಪ್ರತಿಭೆಲದ ಯೋಚನೆಗಳೇ ಜನತೆಯ ಮನಸ್ಸಿನಲ್ಲಿ ತಿರುಗಾಡುತ್ತಿರುತ್ತವೆ. ವಿದ್ಯೆಗೆ ತಾಗುವ ಖರ್ಚು ಕೂಡಾ ಬಡ—ನಡುವಣ ಕುಟುಂಬದವರಿಂದ ನಾನಾ ರೀತಿಯಲ್ಲಿ ಕಷ್ಟೋದ್ಗಾರಗಳನ್ನು ತೆಗೆಯಿಸುತ್ತದೆ. ಆ ಉದ್ಗಾರಗಳು ವಿದ್ಯಾರ್ಥಿಗಳ ಮನದಲ್ಲಿಯೂ ವಿಚಿತ್ರ ಪರಿಣಾಮಗಳನ್ನು ಮಾಡಿ, ಭೇಲಾದರೆ ತಮ್ಮ ಜೀವನವೇ ಮುಳುಗಿ ಹೋದಂತೆ ಭಾವಿಸಿಕೊಳ್ಳುತ್ತಾರೆ. ಕೆಲವು ಹುಡುಗರು ಹೇಳದೆ ಕೇಳದೆ ಓಡುವುದೂ, ಮತ್ತೆ ಕೆಲವರು ಮರಣಕ್ಕೆ ಶರಣಾಗುವುದೂ ಕಾಣುತ್ತೇವೆ. ಇಂತಹ ಭೀಕರ ಪರಿಣಾಮಕಾರಿಯಾದ ಒಂದು ಪದ್ಧತಿ ಶ್ರೇಯಸ್ಕರವೆಂದು ಯಾರು ತಾನೇ ಹೇಳಿಯಾರು? ಎಲ್ಲಾ ವಿದ್ಯಾರ್ಥಿಗಳೂ ಎಲ್ಲದರಲ್ಲೂ ಬುದ್ಧಿವಂತರಾಗುವುದುಂಟೆ? ಹಾಗೆಯೇ ಎಲ್ಲದರಲ್ಲಿಯೂ ದಡ್ಡರಾಗುತ್ತಾರೆಯೇ? ಯಾವುದೋ ಒಂದರಲ್ಲಿ ಬುದ್ಧಿವಂತರಾದವರಿಗೆ ಭವಿಷ್ಯದ ನಂಬಿಗೆಯೇ ಇಲ್ಲವೆ? ಇದೆಲ್ಲಾ ಯೋಚನೆ ಮಾಡತಕ್ಕ ವಿಷಯವಲ್ಲವೆ?]

ಹಿಂದಿನ ಕಾಲದ ವಿದ್ಯಾಭ್ಯಾಸ ಕ್ರಮದಲ್ಲಿ ಈ ಬಗೆಯ ಆಕೃಷ್ಟಿ, ಆತ್ಮವಂಚನೆಗಳಿಗೆ ಎಡೆಯಿರಲಿಲ್ಲ. ಅಂತೆಯೇ ಕೃತ್ರಿಮತೆಯೂ ತಲೆ ಹಾಕಲಿಲ್ಲ. ಗುರುಕುಲದ ವಿದ್ಯೆಯಲ್ಲದೆ, ಕುಲವಿದ್ಯೆಯೊಂದು ಪ್ರತ್ಯೇಕವೇ ಇತ್ತು. ಗುರುಕುಲದಲ್ಲಾದರೂ ಶಿಷ್ಯರು ಗುರುಗಳ ಎಲ್ಲಾ ಕಾರ್ಯಗಳನ್ನೂ ಮಾಡುತ್ತಾ, ವಿಧೇಯತೆಯಿಂದ ವಿದ್ಯೆ ಕಲಿಯುತ್ತಿದ್ದರು. ವಿದ್ಯಾರ್ಥಿಗಳಲ್ಲಿ ಬಡವ ಬಲ್ಲಿದರೆಂಬ ಭೇದವಿರಲಿಲ್ಲ. ವಿದ್ಯಾರ್ಥಿಗಳೆಲ್ಲಾ ಒಂದೇ ರೀತಿಯ ಉಡುಗೆಗಳಿಂದಿರ ಬೇಕಾಗಿತ್ತು. ಅದು ಮಧ್ಯಮ ತರಗತಿಯದಾಗಿಯೇ ಇದ್ದಿರಬೇಕು. ರಾಜಕುಮಾರನಾದರೂ ಆ ಬಗೆಯ ನಿಯಮಗಳನ್ನು ಅವಮಾನವೆಂದು ಭಾವಿಸಲಿಲ್ಲ. ಬಡ ದ್ರೋಣನೂ, ದ್ರುಪದನೂ, ಕುಚೇಲನೂ, ಕೃಷ್ಣನೂ ಒಂದೇ ಮಟ್ಟದಲ್ಲಿ ಗುರುಕುಲದಲ್ಲಿ ಕಲಿತವರಲ್ಲವೆ?

ಆಗ ಗುರುವಿಗೆ ಸಂಬಳವೂ ಇರಲಿಲ್ಲ. ಕಾಣಿಕೆ ಮಾತ್ರವಿತ್ತು. ಕೊಡುವವರು ಕೊಟ್ಟರು, ಇಲ್ಲದವರಿಲ್ಲ. ಅದು ಅವರವರ ಶಕ್ತ್ಯನುಸಾರವಾಗಿತ್ತು. ಆ ಕಾಲದ ಗುರುಶಿಷ್ಯರೊಳಗೆ ದುಡ್ಡಿನ ವ್ಯವಹಾರವಿಲ್ಲದ್ದರಿಂದ, ಭಕ್ತಿವಾತ್ಸಲ್ಯಗಳಿದ್ದುವು. ಆದರೆ ಗುರುವಿಗೆ ಊರೊಳಗೆ ಗೌರವವಿತ್ತು. ಗುರುಗೃಹದಲ್ಲಾಗುವ ಸಮಾರಂಭಗಳಿಗೆ ಊರವರ ಸಹಕಾರವು ಬೇಕಾದಷ್ಟಿತ್ತು. ಈಗ ಅದೆಲ್ಲಾ ವ್ಯತ್ಯಾಸವಾಗಿದೆ. ಉಪಾಧ್ಯಾಯರಿಗೂ ಹುಡುಗರಿಗೂ ಸಂಬಳ ನಿಶ್ಚಯವಾಗಿದೆ. ಪಾಠ ಪುಸ್ತಕಗಳಲ್ಲಿ ಸ್ಪರ್ಧೆಯೂ, ವ್ಯಾಪಾರೀ ಲಾಭವೂ ತಾಂಡವಿಸುತ್ತಿದೆ. ವಿದ್ಯೆ ಎಷ್ಟು ದೊಡ್ಡದೋ ಹಣ ಅದಕ್ಕಿಂತ ದೊಡ್ಡದಾಗಿದೆ.

ಹೀಗೆ ಸಂಬಳ ನಿಶ್ಚಯವಾದುದರಿಂದ ಉಪಾಧ್ಯಾಯರ ಘನತೆ ತಗ್ಗಿತ್ತು. ಊರವರ ಆದರವೂ ಹೋಯಿತು. ಹುಡುಗರು ಅತಿರೇಕ ಜ್ಞಾನಿಗಳಾಗಿ ಮೊಸ್ತರರನ್ನು ಏಗ ತಾಳಿಮಾಡುವ ಕಾಲಬಂತು. ಅರ್ಥಾತ್ ಗುರುಭಕ್ತಿ ಅಳಿದು, ಗುರುಗಳೇ ವಿದ್ಯಾರ್ಥಿಗಳ ಮೇಲೆ ಭಯಪಡಬೇಕಾದ ಅವಸ್ಥೆ ಬಂದಿದೆಯೆಂದರೆ ಅತಿಶಯೋಕ್ತಿಯಲ್ಲ.

(೧೦ನೇ ಪುಟ ನೋಡಿರಿ)

ಸ್ಥಾಪನೆ: 1924

ದಿ ಕರ್ಣಾಟಕ ಬೇಂಕ್ ಲಿಮಿಟೆಡ್

(ಶೆಡ್ಯೂಲ್ಡ್ ಬೇಂಕ್)

ರಿಜಿಸ್ಟರ್ಡ್ & ಹೆಡ್ ಆಫೀಸು: ಡೊಂಗರಕೇರಿ, ಮಂಗಳೂರು—3.

ಈ ಕೆಳಗಿನ ಏರಿಸಿದ ಬಡ್ಡಿದರಗಳಲ್ಲಿ ಠೇವಣಾತಿಗಳನ್ನು ಸ್ವೀಕರಿಸಲಾಗುವುದು.

ಒಂದರಿಂದ ಎರಡು ತಿಂಗಳುಗಳ ವರೆಗೆ	.... ಸಾ|| ಸೇಕಡಾ	3-75	ನ.ಪೈಸೆ
ಮೂರರಿಂದ ಐದು ತಿಂಗಳುಗಳ ವರೆಗೆ	.... ,,	4-25	,,
ಆರು ತಿಂಗಳುಗಳಿಂದ 12 ತಿಂಗಳುಗಳ ವರೆಗೆ....	,,	4-50	,,
12 ತಿಂಗಳು ಮಿಕ್ಕೆ 24 ತಿಂಗಳುಗಳ ವರೆಗೆ	,,	4-75	,,
24 ತಿಂಗಳು ಮಿಕ್ಕೆ 48 ತಿಂಗಳುಗಳ ವರೆಗೆ	,,	5-00	,,
48 ತಿಂಗಳುಗಳಿಗೆ ಮಿಕ್ಕೆ	,,	5-25	,,

ಸೇವಿಂಗ್ಸ್ ಬ್ಯಾಂಕ್ ಬಡ್ಡಿ ದರವನ್ನು
ಸಾ. ಸೇಕಡ 2½% ರಿಂದ 3¼%ಗೆ ಏರಿಸಲಾಗಿದೆ.

THE KARNATAKA BANK LIMITED.

ಯೋಜನೆಯು ಹೇಗೆ ರೂಪುಗೊಂಡಿತು?

ತೃತೀಯ ಯೋಜನೆಯನ್ನು ಸಿದ್ಧಗೊಳಿಸುವ ಕಾರ್ಯ ೧೯೫೮ರ ಕೊನೆಯ ಹೊತ್ತಿಗೆ ಆರಂಭವಾಯಿತು.

೧೯೬೦ರ ಜುಲೈ ತಿಂಗಳಲ್ಲಿ ಯೋಜನೆಯ ಕರಡು ಪ್ರಕಟವಾಗುವ ತನಕ ನಡೆದ ಕಾರ್ಯವನ್ನು ಮೊದಲನೆಯ ಹಂತದ ಕಾರ್ಯ ಎನ್ನಬಹುದು. ಕಾರ್ಯಕಾರಿ ತಂಡಗಳು ತಯಾರಿಸಿದ್ದ ವರದಿಗಳನ್ನು ಆಧಾರವಾಗಿಟ್ಟುಕೊಂಡು ಕರಡನ್ನು ಸಿದ್ಧಗೊಳಿಸುವ ಈ ಕಾರ್ಯವನ್ನು ಮಾಡಲಾಯಿತು. ಈ ಕರಡಿಗೆ ೧೯೬೦ರ ಆಗಸ್ಟ್ ತಿಂಗಳಲ್ಲಿ ಪಾರ್ಲಿಮೆಂಟ್ ತನ್ನ ಸಾಮಾನ್ಯ ಒಪ್ಪಿಗೆಯನ್ನು ನೀಡಿತು.

ಹೀಗೆ ತಯಾರಾದ ಕರಡು ಯೋಜನೆಯನ್ನು ನಾಡಿನ ಆದ್ಯಂತ ಚರ್ಚಿಸಿದ ಮೇಲೆ ರಾಜ್ಯ ಮಟ್ಟದ ಯೋಜನೆಗಳ ತಯಾರಾದುವು. ರಾಜ್ಯಗಳ ಮುಖ್ಯಮಂತ್ರಿಗಳು ತಮ್ಮ ತಮ್ಮ ರಾಜ್ಯದ ಕರಡು ಯೋಜನೆಗಳನ್ನು ೧೯೬೦ರ ಸೆಪ್ಟೆಂಬರ್‌ನಿಂದ ನವೆಂಬರ್ ತನಕ ಚರ್ಚಿಸಿದರು.

೧೯೬೧ರ ಜನವರಿಯಲ್ಲಿ ರಾಷ್ಟ್ರೀಯ ಅಭಿವೃದ್ಧಿ ಪರಿಷತ್ತು ತೃತೀಯ ಯೋಜನೆಯ ಒಟ್ಟು ವ್ಯಾಪ್ತಿ ಹಾಗೂ ಗಾತ್ರದ ಬಗ್ಗೆ ತನ್ನ ಶಿಫಾರಸುಗಳನ್ನು ಮುಂದಿಟ್ಟಿತು. ತೃತೀಯ ಯೋಜನೆಗಾಗಿ ಸಂಪನ್ಮೂಲಗಳನ್ನು ಆದಷ್ಟು ಮಟ್ಟಿಗೆ ಸಂಘಟಿಸುವ ಬಗ್ಗೆ ಕೈಗೊಳ್ಳಬೇಕಾದ ಕ್ರಮಗಳನ್ನು ಮತ್ತು ಉಳಿತಾಯ ವಿಧಾನಗಳನ್ನು ಸೂಚಿಸುವ ಸಲುವಾಗಿ ಸಮಿತಿಯೊಂದನ್ನು ರಚಿಸಬೇಕೆಂದೂ ಪರಿಷತ್ತು ಸಲಹೆ ಮಾಡಿತು. ಮತ್ತು ಮೇ ೨೧ ಮತ್ತು ಜೂನ್ ೧೧ರಂದು ತೃತೀಯ ಯೋಜನೆಗೆ ಸಂಬಂಧಪಟ್ಟಂತೆ ಕರಡು ವರದಿಗೆ ಕೊನೆಯದಾಗಿ ತನ್ನ ಸಾಮಾನ್ಯ ಅಂಗೀಕಾರವನ್ನು ಪರಿಷತ್ತು ನೀಡಿತು.

ತೃತೀಯ ಯೋಜನೆಯ ಧ್ಯೇಯಗಳು ಮತ್ತು ಯೋಜನೆಯಲ್ಲಿ ಯಾವ ಯಾವ ವಿಷಯಗಳಿಗೆ ಹೆಚ್ಚು ಗಮನ ನೀಡಬೇಕೆಂಬುದನ್ನು ನಿಡು ಪಾರ್ಲಿಮೆಂಟರಿ ಸಮಿತಿಗಳು ೧೯೬೦ರ ನವೆಂಬರ್ ತಿಂಗಳಲ್ಲಿ ಚರ್ಚಿಸಿದುವು. ಯೋಜನೆಗೆ ಸಂಬಂಧಿಸಿದಂತೆ ಬೇರೆ ಬೇರೆ ರಾಜಕೀಯ ಪಕ್ಷಗಳು ಆಗಿಂದಾಗ್ಗೆ ವ್ಯಕ್ತಪಡಿಸುತ್ತಿದ್ದ ಅಭಿಪ್ರಾಯಗಳನ್ನು ಪಾರ್ಲಿಮೆಂಟ್ ಸದಸ್ಯರಿರುವ ಸಮಿತಿಗಳು ಪರಿಶೀಲಿಸಿವೆ. ಈ ಸಮಿತಿಯ ಸಭೆಗಳಿಗೆ ಪ್ರಧಾನಿಗಳು ಅಧ್ಯಕ್ಷತೆ ವಹಿಸಿದ್ದಾರೆ ಯೋಜನಾ ಆಯೋಗಕ್ಕೆ ಸೇರಿ ಕೊಂಡಿರುವ ಪಾರ್ಲಿಮೆಂಟ್ ಸದಸ್ಯರ ಅನೌಪಚಾರಿಕ ಸಲಹಾ ಸಮಿತಿ ಕೂಡ ಹಲವು ಹಂತಗಳಲ್ಲಿ ಯೋಜನೆಯನ್ನು ವಿಮರ್ಶಿಸಿದೆ.

ಯೋಜನೆಯನ್ನು ಸಿದ್ಧಗೊಳಿಸುವ ಕಾರ್ಯದಲ್ಲಿ ಪ್ರಮುಖ ಸಾರ್ವಜನಿಕರು ವಿದ್ವಾಂಸರು, ಔದ್ಯೋಗಿಕ ಸಂಘ ಸಂಸ್ಥೆಗಳು, ಕೈಗಾರಿಕಾ ಹಾಗೂ ಕಾರ್ಮಿಕ ಸಂಘ ಸಂಸ್ಥೆಗಳು ಮತ್ತು ಸ್ವತಂತ್ರ ಆರ್ಥಿಕ ತಜ್ಞರು ತಮ್ಮ ಅಭಿಪ್ರಾಯಗಳನ್ನು ಮುಂದಿಟ್ಟು ಈ ಎಲ್ಲಾ ಅಂಶಗಳನ್ನು ಗಮನಕ್ಕೆ ತೆಗೆದುಕೊಂಡು ಯೋಜನೆ ಸಿದ್ಧವಾಗಲು ನೆರವಾಗಿದ್ದಾರೆ. ತಮ್ಮ ಸಮಯವನ್ನೂ ಅನುಭವಗಳನ್ನೂ ಇದಕ್ಕಾಗಿ ಅವರು ವಿನಿಯೋಗಿಸಿದ್ದಾರೆ. ಯೋಜನಾ ಆಯೋಗಕ್ಕೆ ಆರ್ಥಿಕ ತಜ್ಞರ, ವಿಜ್ಞಾನಿಗಳ ತಂಡಗಳು ತಮ್ಮ ಸಲಹೆ ನೀಡಿವೆಯಲ್ಲದೆ ಭೂಸುಧಾರಣೆಗಳು, ಬೇಸಾಯ ಶಿಕ್ಷಣ, ಆರೋಗ್ಯ ಮತ್ತು ವಸತಿ ಕಾರ್ಯಯೋಜನೆಗಳಿಗೆ ಸಂಬಂಧಪಟ್ಟಂತೆಯೂ ಬೇರೆ ಬೇರೆ ತಂಡಗಳು ತಮ್ಮ ವರದಿಗಳನ್ನು ಸಲ್ಲಿಸಿ ಯೋಜನೆ ಸಿದ್ಧವಾಗಲು ನೆರವು ನೀಡಿದುವು.

ಯೋಜನೆಗಳ ಕಾರ್ಯ ಪ್ರಗತಿಯನ್ನು ಆಗಿಂದಾಗ್ಗೆ ಪರಿಶೀಲಿಸಿ ನೋಡಲಿರುವ ಸಂಸ್ಥೆ, ಸಂಶೋಧನಾ ಕಾರ್ಯಕ್ರಮಗಳ ಸಮಿತಿ, ಯೋಜನಾ ಕಾರ್ಯಗಳಬಗ್ಗೆ ಇರುವ ಸಮಿತಿ, ಕೇಂದ್ರಅಂಕಿ ಅಂಶಗಳ ಸಂಸ್ಥೆ, ಭಾರತೀಯ ಅಂಕಿ ಅಂಶಗಳ ಸಂಸ್ಥೆ, ಮತ್ತು ಸಂಶೋಧನಾ ಕಾರ್ಯಗಳಲ್ಲಿ ತೊಡಗಿರುವ ಇತರ ಸಂಸ್ಥೆಗಳೂ ತಾವು ನಡೆಸಿರುವ ಅಧ್ಯಯನದ ಪ್ರಯೋಜನವನ್ನು ಯೋಜನಾ ಆಯೋಗದ ಮುಂದಿಟ್ಟು ಅದರ ಕಾರ್ಯದಲ್ಲಿ ನೆರವಾಗಿವೆ.

ಜಿಲ್ಲಾ, ಬ್ಲಾಕ್ ಮತ್ತು ಗ್ರಾಮದ ಮಟ್ಟದಲ್ಲಿ ಅದರಲ್ಲೂ ಮುಖ್ಯವಾಗಿ ಬೇಸಾಯಾಭಿವೃದ್ಧಿ, ಸಹಕಾರ, ಶಿಕ್ಷಣ ಮತ್ತು ಗ್ರಾಮಾಂತರ ಕೈಗಾರಿಕೆಗಳಿಗೆ ಸಂಬಂಧಪಟ್ಟಂತೆ ಯೋಜನೆಗಳನ್ನು ತಯಾರಿಸುವ ಪ್ರಯತ್ನ ಕೂಡ ನಡೆದಿದೆ. ರಾಜ್ಯಗಳ ಹಾಗೂ ರಾಷ್ಟ್ರೀಯ ಮಟ್ಟದ ಯೋಜನೆಗಳನ್ನು ಸಿದ್ಧಗೊಳಿಸುವ ಕಾರ್ಯದ ಅಂಗವಾಗಿಯೇ ಈ ಪ್ರಯತ್ನ ನಡೆದಿದೆ ಎನ್ನಬಹುದು. ಗ್ರಾಮಾಂತರ ಹಾಗೂ ಜಿಲ್ಲಾ ಮಟ್ಟದ ಯೋಜನೆಗಳು ಪಂಚಾಯತಿ ರಾಜ್ಯ ಯಶಸ್ವಿಯಾಗಲು ಬಹಳ ಮುಖ್ಯವಾಗಿವೆ. ಪ್ರತಿಯೊಂದು ಪ್ರದೇಶದ ಜನರನ್ನು ಯೋಜನೆಯ ಯಶಸ್ಸಿಗೆ ಜವಾಬ್ದಾರಿಯುತರನ್ನಾಗಿ ಮಾಡುವ ಮತ್ತು ತಮ್ಮ ಅಭಿವೃದ್ಧಿ ಯೋಜನೆಗಳನ್ನು ತಾವೇ ನಿರ್ವಹಿಸುವಂತೆ ಮಾಡುವ ಈ ಪಂಚಾಯತ್ ರಾಜ್ಯ ಪದ್ಧತಿ ರಾಷ್ಟ್ರೀಯ ಯೋಜನೆಯ ಪ್ರಥಮ ಸೋಪಾನವಾಗಿದೆ.

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು. ರಾಘವೇಂದ್ರ ಆಚಾರ್ಯ, ಎಂ.ಎ.)

ಸಾಮಾನ್ಯ ರೋಗಗಳು
(ಡಾ. ಕೆ.ಎಲ್. ಐತಾಳ, ಎಂ.ಬಿ.ಬಿ.ಎಸ್ ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.

ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—ನವಭಾರತ ಪುಸ್ತಕ ಭಂಡಾರ, ಉಡುಪಿ.

ಪ್ರಾಥಮಿಕ ಶಾಲೆಗಳ ನಡುವೆ ಸ್ಪರ್ಧೆ

ಉತ್ತಮ ಪ್ರಾಥಮಿಕ ಶಾಲೆಗಳಿಗೆ ಪಾರಿತೋಷಕ ಮತ್ತು ಯೋಗ್ಯತಾ ಪತ್ರಿಕೆಗಳನ್ನು ನೀಡುವ ಉದ್ದೇಶದಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದು ಸ್ಪರ್ಧೆಯು ನೆರವೇರುವುದು. ಜಿಲ್ಲೆಯ ಎಲ್ಲ ಪ್ರಾಥಮಿಕ ಶಾಲೆಗಳೂ ಇದರಲ್ಲಿ ಭಾಗವಹಿಸಲು ಅರ್ಹವಾಗಿವೆ ಸ್ಪರ್ಧೆಯಲ್ಲಿ ಈ ಕೆಳಗಿನ ವಿಷಯಗಳನ್ನು ಮುಖ್ಯವಾಗಿ ಗಮನಿಸಲಾಗುವುದು.

೧. ಉತ್ತಮ ರೀತಿಯ ಸಾಕಷ್ಟು ಸ್ಥಳಾವಕಾಶವಿರುವ ಶಾಲಾ ಭವನ. ೨. ನಿರ್ಮಲವಾಗಿಟ್ಟ ಆವರಣ. ೩. ಒಳ್ಳೆಯ ತೋಟ ಮತ್ತು ಕುಡಿಯುವ ನೀರಿನ ವ್ಯವಸ್ಥೆ. ೪. ಪರ್ಯಾಪ್ತ ಸಲಕರಣೆಗಳು (ನಕ್ಷೆಇತ್ಯಾದಿಗಳಲ್ಲಿ ಉಪಾಧ್ಯಾಯರ ರಚನೆಗಳಿಗೆ ಪ್ರಾಶಸ್ತ್ಯ). ೫. ಮಕ್ಕಳ ಪುಸ್ತಕಗಳಿಂದ ಕೂಡಿದ ಒಳ್ಳೆಯ ಪುಸ್ತಕಾಲಯ ೬. ೨ ಎಕ್ರೆಗಳಾದರೂ ಇರುವ ಉತ್ತಮ ಆಟದ ಬಯಲು. ೭. ಸರಕಾರದ ಸಹಾಯವಿಲ್ಲದೆ ಇರುವುದಕ್ಕೆ ಪ್ರಾಶಸ್ತ್ಯವಿರುವಂತೆ, ಬಡ ಮತ್ತು ಅಗತ್ಯವಿರುವ ಮಕ್ಕಳಿಗೆ ಸಾರ್ವಜನಿಕ ಸಹಕಾರದಿಂದ ಮಧ್ಯಾಹ್ನದ ಭೋಜನ ವ್ಯವಸ್ಥೆ. ೮. ಕೆಳಗಿನವುಗಳಲ್ಲಿ ಹೆಚ್ಚಿನ ಪಾಠೇತರ ಚಟುವಟಿಕೆಗಳು. ಅ. ಬಾಲವೀರ ದಳ ಮತ್ತು ರೆಡ್‌ಕ್ರಾಸ್ ಚಟುವಟಿಕೆಗಳು. ಆ ವರ್ಗ ಮತ್ತು ಶಾಲಾ ಪ್ರವಾಸಗಳು. ಇ. ಹಸ್ತಲಿಖಿತ ಪತ್ರಿಕೆಗಳು. ಈ. ಸಾಹಿತ್ಯಿಕ ಚಟುವಟಿಕೆಗಳು ಮತ್ತು ಚರ್ಚಾ ಸಭೆಗಳು. ಉ. ಶಾಲಾ ಪಾರ್ಲಿಮೆಂಟ್. ಊ. ಆಟಗಳಲ್ಲಿ ಸ್ಪರ್ಧೆಗಳು ಋ. ಶಾಲಾ ದಿನ ಅಥವಾ ಪಾಲಕರ ದಿನ. ಋ. ಸಾಮಾಜಿಕ ಸೇವೆ ಮತ್ತು ಇಂತಹ ಇತರ ಚಟುವಟಿಕೆಗಳು. ೨. ರಾಷ್ಟ್ರೀಯ ಮತ್ತಿತರ ಪರ್ವದಿನಗಳ ಆಚರಣೆ. ೯ ಕ್ರಮಬದ್ಧವಾದ ಸಮರ್ಥ ಅಧ್ಯಾಪನ ೧೦. ಪೂರ್ಣ ಹಾಯರ್ ಎಲಿಮೆಂಟರಿ ಶಾಲೆಗಳಲ್ಲಿ) ಎಂಟನೆ ತರಗತಿಯ ಸರಕಾರಿ ಪರೀಕ್ಷೆಯ ಪರಿಣಾಮ ೧೧. ಅಧ್ಯಾಪಕರು ಹೆತ್ತವರು ಮತ್ತು ಸಾರ್ವಜನಿಕರಲ್ಲಿ ಮಧುರ ಸಂಬಂಧ. ೧೨ ಖಡ್ಡಾಯ ಶಿಕ್ಷಣ ಪ್ರದೇಶಗಳಲ್ಲಿ ನೂರಕ್ಕೆ ನೂರರಷ್ಟು (ಶಾಲೆಯ ಕೇಂದ್ರದಿಂದ ಒಂದು ಮೈಲು ತ್ರಿಜ್ಯದೊಳಗೆ) ಮತ್ತು ಕಾನೂನಿನ ವತ್ತಾಯವಿಲ್ಲದೆ ನೂರಕ್ಕೆ ಎಂಬತ್ತರಷ್ಟು ಉಪಸ್ಥಿತಿ.

ಸ್ಪರ್ಧೆಯಲ್ಲಿ ಭಾಗವಹಿಸುವ ಶಾಲೆಗಳ ಪ್ರಧಾನರು ತಮ್ಮ ಪ್ರವೇಶಗಳನ್ನು ಸಂಬಂಧಿಸಿದ ಡಿಪ್ಯುಟಿ ಇನ್ಸ್ಪೆಕ್ಟರರಿಗೆ ತಾ. ೧೫—೩—೬೨ರ ಒಳಗೆ ಮುಟ್ಟುವಂತೆ ಕಳಿಸ ಬೇಕು. ಡಿಪ್ಯುಟಿ ಇನ್ಸ್ಪೆಕ್ಟರರು ತಮ್ಮ ಸಿಫಾರಸಿನೊಂದಿಗೆ ಮಾರ್ಚಿ ೨೫ ೧೯೬೨ರ ಒಳಗೆ ಜಿಲ್ಲಾ ವಿದ್ಯಾಧಿಕಾರಿಗಳಿಗೆ ಅವನ್ನು ಕಳಿಸುವರು. ದಿನವೊಂದರ ತಲಪಿದ ಪ್ರವೇಶಗಳನ್ನು ಗಣನೆಗೆ ತರಲಾಗುವುದಿಲ್ಲ.

ಸ್ಪರ್ಧೆಗೆ ಬರುವ ಪ್ರವೇಶಗಳಲ್ಲಿ ಕೆಳಗಿನ ವಿವರಗಳಿರಬೇಕು: ೧. ಶಾಲೆಯ ಹೆಸರು. ೨. ಸ್ಥಾಪನಾವರ್ಷ. ೩. ೧—೩—೬೨ರಲ್ಲಿರುವಂತೆ ಮಕ್ಕಳ ಸಂಖ್ಯೆ ೪. ೧—೩—೬೨ರಲ್ಲಿರುವಂತೆ ಅಧ್ಯಾಪಕರ ಸಂಖ್ಯೆ ೫. ಮುಖ್ಯೋಪಾಧ್ಯಾಯರ ಹೆಸರು. ೬. ಒಡೆಯರ ಹೆಸರು. ೭ ಮೇಲೆ ಹೇಳಿದ ೧೨ ವೈಶಿಷ್ಟ್ಯಗಳಲ್ಲಿ ಸಾಧ್ಯವಿದ್ದಲ್ಲೆಲ್ಲ ಸಂಖ್ಯೆಗಳೊಂದಿಗೆ ಗೂಡಿದ ಸತ್ಯನಿರೂಪಣೆ.

ಜಿಲ್ಲಾ ವಿದ್ಯಾಧಿಕಾರಿಗಳು ಅಧ್ಯಕ್ಷರಾಗಿ ಸಹಾಯಕ ವಿದ್ಯಾಧಿಕಾರಿಗಳು ಕಾರ್ಯದರ್ಶಿಯಾಗಿ ಇತರ ಮೂವರು ಸದಸ್ಯರಾಗಿರುವ ಸಮಿತಿಯೊಂದು ಈ ಪ್ರವೇಶಗಳನ್ನು ಜಿಲ್ಲಾ ಮಟ್ಟದಲ್ಲಿ ಪರಿಶೀಲಿಸುವುದು. ೧೯೬೧-೬೨ರಲ್ಲಿ ಗಳಿಸಿದ ಪ್ರಗತಿಯನ್ನೇ ಮುಖ್ಯವಾಗಿ ಗಣನೆಗೆ ತೆಗೆದುಕೊಳ್ಳಲಾಗುವುದು.

ಕೆಲವು (ಸುಮಾರು ೧೨) ಪಾರಿತೋಷಕಗಳಲ್ಲದೆ 'ಉತ್ತಮ'ವೆಂದು ಸಮಿತಿಯು ಅಭಿಪ್ರಾಯಪಡುವ ಎಲ್ಲ ಶಾಲೆಗಳಿಗೆ ಪ್ರಶಸ್ತಿ ಪತ್ರಗಳನ್ನು ನೀಡಲಾಗುವುದು. ಸ್ಪರ್ಧಾ ಸಂಬಂಧದ ಹೆಚ್ಚಿನ ವಿವರಗಳು ಮುಂದಿಕ್ಕೆ ತಿಳಿಸಲ್ಪಡುವುವು. ಸ್ಪರ್ಧೆಯ ಪರಿಣಾಮವನ್ನು ೧೯೬೨ರ ಎಪ್ರಿಲ್‌ನಲ್ಲಿ ಬಹಿರಂಗಗೊಳಿಸಲಾಗುವುದು. ಈ ತಿಂಗಳಾಂತ್ಯದಲ್ಲಿ ಜಿಲ್ಲೆಯ ಕೇಂದ್ರ ಸ್ಥಳವೊಂದರಲ್ಲಿ ಏರ್ಪಡಿಸುವ ವಿಶೇಷ ಸಮಾರಂಭವೊಂದರಲ್ಲಿ ರಾಜ್ಯದ ಉಚ್ಚ ಪದಾಧಿಕಾರಿಗಳನ್ನು ಈ ಬಹುಮಾನ ಮತ್ತು ಪ್ರಶಸ್ತಿ ಪತ್ರವಿತರಣೆಯನ್ನು ಮಾಡುವಂತೆ ಕೇಳಿಕೊಳ್ಳಲಾಗುವುದು.

ವಿಶ್ವಕವಿ ಟಾಗೋರರ ಪುಣ್ಯಸ್ಮರಣೆಗಾಗಿ
ಅವರ ಶತಮಾನೋತ್ಸವದ ಸುಸಂದರ್ಭದಲ್ಲಿ
ಪ್ರಕಟಿವಾದ ಕಿರುಗಾಣಿಕೆಗಳು

ಚಿತ್ರಾಂಗದೆ

ಬೆಲೆ: ೬೦ ನ. ಪೈಸೆ.
(ಶ್ರೀ ಕೆ. ಕೆ. ಶೆಟ್ಟಿ, ಎಂ. ಎಲ್. ಸಿ. ಅವರಿಂದ ಅನುವಾದಿತ)

ರವೀಂದ್ರನಾಥರ ಕಿರುಗತೆಗಳು

ಬೆಲೆ: ೯೦ ನ. ಪೈಸೆ.
(ಶ್ರೀ ಹನುಮಂತರಾವ್ ಮೊಂಜರೇಕರ, ಕಾರವಾರ ಅವರಿಂದ ಅನುವಾದಿತ)

ಪ್ರಕಾಶಕರು:
ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ನವಯುಗ ಪ್ರೆಸ್, ಉಡುಪಿ.

ಚುನಾವಣೆ-ಪ್ರತಿನಿಧಿ-ನಾಯಕ

ಚುನಾವಣೆಗಳು ಸಮೀಪಿಸಿದುವು. ಎಲ್ಲ ಪಕ್ಷಗಳೂ ತಮ್ಮ ದೃಢತೆಯನ್ನು ಸಾರ ತೊಡಗುತ್ತಿವೆ. ಮೆರವಣಿಗೆ—ಸಭೆ—ಭಿತ್ತಿಪತ್ರಗಳ ಬಿರುಗಾಳಿ ಬೀಸ ತೊಡಗಿದೆ. ತಮ್ಮವರನ್ನು ಪ್ರಶಂಸಿಸಿ ಇತರರನ್ನು ಛೀಮಾರಿ ಹಾಕುವ ಪ್ರಯೂಸ ನಡೆಯುತ್ತದೆ. ಜನತಂತ್ರದ ಹೆಸರಿನಲ್ಲಿ ಪ್ರತಿಯೊಬ್ಬನೂ ಮತಯಾಚಕನಾಗುತ್ತಾನೆ; ಇಡಿಯ ಪ್ರಪಂಚದಲ್ಲಿ ನಡೆಯುವುದೇ ಇದು; ಅಗಲೇ ನಮಗರಿವಾಗುತ್ತದೆ—ಮತಪೊಂದಿದೆಯೆಂದು!

ಜನತಂತ್ರ ಎಂದರೆ ಜನತೆಯ ತಂತ್ರ, ಜನತೆಯ ರಾಜ್ಯ. ನಮ್ಮೂರಾಜ್ಯವೆಂತಹುದು? ಜನತಂತ್ರ ಪದವು ಎಲ್ಲಿ ಹುಟ್ಟಿತು? ಇದರಲ್ಲಿ ಸತ್ಯವಿದೆಯೆ? ಅಥವಾ ಮಿಥ್ಯೆ ಮಾತ್ರವೆ? ಇಂದಿನ ಪ್ರಸಂಚದ ಗುಂಗನ್ನು ತುಸು ನೋಡುವ. ಇದು ಜನತಂತ್ರಾತ್ಮಕ ರಾಷ್ಟ್ರಗಳ ಪ್ರಪಂಚವಾಗಿದೆ.

ಇಂದಿನ ಪ್ರಜಾತಂತ್ರವು ಗ್ರೀಸಿನಲ್ಲಿ ಹಿಂದಿನ ಕಾಲದಲ್ಲಿ ಇತ್ತೆಂದು ತಿಳಿಯುತ್ತದೆ. ಕ್ರಿಸ್ತಪೂರ್ವ ಮೊದಲು ಅದು ಸಂಸ್ಕೃತಿ ಮತ್ತು ನಾಗರಿಕತೆಗಳ ಮುಖ್ಯ ಕೇಂದ್ರವಾಗಿತ್ತು. ಇಡಿಯ ಯುರೋಪಿನ ಮೇಲಿದು ಪ್ರಭಾವ ಬೀರಿತ್ತು. ಇಂದಿನ ಪ್ರಜಾತಂತ್ರ ನಮಗೆ ಸಂಪೂರ್ಣ ವಿದೇಶಿಯೆಂದು ಹೇಳುತ್ತಾರೆ. ಪುರಾಣ ಕಾಲದಲ್ಲಿ ನಮ್ಮಲ್ಲೂ ಒಂದು ರೀತಿಯ ಪ್ರಜಾಪ್ರಭುತ್ವವಿದ್ದರೂ ಅದು ಐತಿಹಾಸಿಕ ಕಾಲದಲ್ಲಿ ನಿರ್ನಾಮ ಹೊಂದಿತ್ತು. ಆ ಕಾಲದಲ್ಲಿ ಗ್ರೀಸ್ ಒಂದು ನಗರ—ರಾಜ್ಯವಾಗಿತ್ತು. ಈ ನಗರವಾದರೂ ಇಂದಿನಂತೆ ಸಾಲವಿರಲಿಲ್ಲ. ವಿಸ್ತಾರದಲ್ಲಿಯೂ ಜನಸಂಖ್ಯೆಯಲ್ಲಿಯೂ ಇದು ಬಹುಕಿರಿದಾಗಿತ್ತು. ಆದುದರಿಂದಲೇ ಅಲ್ಲಿನ ವಿಚಾರಕರು ರಾಜ್ಯಪರಿಪಾಲನೆಯಲ್ಲಿ ಪ್ರಜೆಗಳ ನೇರ ಕೈಯಿರ ಬೇಕೆಂದು ವಾದಿಸತೊಡಗಿದರು. ಮಹತ್ವಪೂರ್ಣ ವಿಷಯಗಳು, ಕಾನೂನು ನಿಯಮಗಳು, ಯುದ್ಧ-ಶಾಂತಿ ಮೊದಲಾದ ಸಂದರ್ಭಗಳಲ್ಲಿ ಎಲ್ಲರೂ ಒಂದಾಗಿ ಅಭಿಪ್ರಾಯವೀಯುತಿದ್ದರು. ಬಹುಮತದ ನಿರ್ಣಯವೆಯುತಿತ್ತು. ಜನತೆಯು ಆರಿಸಿದ ಕೆಲವು ಅಧಿಕಾರಿಗಳು ನಿತ್ಯ ಆಡಳಿತೆ ನಡೆಸುತಿದ್ದರು. ಅಂದಿನ ಜನರೂ ಹೊಟ್ಟೆಪಾಡಿಗಾಗಿ ದುಡಿಯಬೇಕಿತ್ತು; ಆದುದರಿಂದಲೇ ಇದು ಅನಿವಾರ್ಯವಾಗಿತ್ತು.

ಆ ಕಾಲದಲ್ಲಿ ಇದು ಸಂಭವವೆನಿಸುತಿತ್ತು. ಆದರೆ, ಗ್ರೀಸ್ ಪತನವಾಗಿ ಯುರೋಪಿನಲ್ಲಿ ಸಾಮ್ರಾಜ್ಯ ಸ್ಥಾಪನೆಯಾಯಿತು. ರಾಜ್ಯಗಳಲ್ಲಿ ರಾಜರು-ಸಾಮ್ರಾಟರು ಇರುತಿದ್ದರು. ಇವರು ಜನತೆಯಿಂದ ತಿರಸ್ಕರಿಸಲ್ಪಡುತಿದ್ದರು; ಬಹುದಿನದ ಹೋರಾಟದ ಅನಂತರ ಅಧಿಕಾರ ಪ್ರಜೆಗಳ ಕೈಸೇರಿತು. ಗ್ರೀಸಿನ ಹಳೆಯ ಪ್ರಜಾಸತ್ತೆಯ ನೆನಪು ಆಗ ಜನರಿಗಾಗಿತ್ತಿತ್ತು. ಆದರೆ, ರಾಜ್ಯದ ಜನರೆಲ್ಲರೂ ಏಕತ್ರರಾಗಿ ಚರ್ಚೆ ನಡೆಸುವುದು ಮಾತ್ರ ಅಸಂಭವವೆನಿಸಿತ್ತು. ಆದುದರಿಂದ ಬಹುವಿಚಾರ ನಡೆಸಿ 'ಪ್ರತಿನಿಧಿ' ಎಂಬ ಪ್ರಾಣಿಯನ್ನು ರೂಪಿಸಿದರು. ತಮ್ಮ ಪ್ರತಿನಿಧಿಗಳ ಮೂಲಕ ಚರ್ಚೆ ನಡೆಸುವ ವ್ಯವಸ್ಥೆ ಅಂದಿನಿಂದ ಆರಂಭವಾಯಿತು. ಆದರೆ, ಮಹತ್ವದ ಘಟನೆಗಳು ಆಗಾಗ ಬರುತ್ತಿರುವುದರಿಂದ ಅಂತಹ ಎಲ್ಲ ಸಂದರ್ಭಗಳಲ್ಲೂ ಪ್ರತಿನಿಧಿ ಆಯ್ಕೆಯು ನಡೆಯ ಬೇಕಾಗಿತ್ತು. ಆದರೆ, ಇದು ಅಸಾಧ್ಯವಾಗಿ ಪರಿಣಮಿಸಿದುದರಿಂದ ಚುನಾವಣೆಗಳ ಕಾಲವೊಂದನ್ನು ನಿರ್ಧರಿಸಿದರು ಇದರಿಂದಾಗಿ ನಿರ್ಧರಿತ ವರ್ಷಗಳ ಕಾಲ ಈ ನಾಗರಿಕರ ಚುನಾಯಿತ ಪ್ರತಿನಿಧಿಯು ತಾನು ಪ್ರತಿನಿಧೀಕರಿಸುವ ಜನತೆಯ ಪರವಾಗಿ ವಾದಿಸುವುದು—ಪ್ರಾರಂಭವಾಯಿತು.

ಪ್ರಾರಂಭಕಾಲದಲ್ಲಿ ಪ್ರತಿನಿಧಿಯು ನಾಗರಿಕರ ಪ್ರತಿನಿಧಿ ಮಾತ್ರವಾಗಿದ್ದನು. ನಾಯಕನಲ್ಲ, ಶಿಕ್ಷಕನಲ್ಲ. ನಾಗರಿಕರ ಅಭಿಪ್ರಾಯವೇನೆಂದು ಅವನು ತಿಳಿಯುತಿದ್ದನು; ಅದಕ್ಕನುಸಾರವಾಗಿ ವಾದಿಸುತಿದ್ದನು. ಇಲ್ಲಿ ಸ್ವಂತ ಅಭಿಪ್ರಾಯಗಳಿಗೆ ಅವಕಾಶವೇ ಇರಲಿಲ್ಲ. ಇದರಿಂದಾಗಿ ಸರಕಾರದಲ್ಲಿ ಪ್ರತಿನಿಧಿಯು ತನ್ನ ಅಭಿಪ್ರಾಯವನ್ನು ನೀಡುತ್ತಿರಲಿಲ್ಲ; ಆತನು ನಾಗರಿಕರ ಪ್ರತಿನಿಧಿ ಮಾತ್ರ ತನಗೆ ಜನತೆಯ ಅಭಿಮತ ಯಾವುದೇ ಒಂದು ವಿಷಯದ ಬಗ್ಗೆ ತಿಳಿಯದಿದ್ದರೆ, ಅಥವಾ ಸಂದೇಹ ಹುಟ್ಟಿದರೆ, ಮೊದಲಿಗೆ ಆತ ಅದನ್ನು ತಿಳಿದು ಮತ್ತೆ ಸರಕಾರದ ಮುಂದಿಡ ಬೇಕಾಗಿತ್ತು. ವೈಯಕ್ತಿಕ ವಿಚಾರಗಳನ್ನು ಆತ ಪ್ರಕಟಿಸಿ, ಜನಮತವನ್ನು ದಬ್ಬುವಂತಿರಲಿಲ್ಲ.

ಮೊದಲು ಹೀಗಿದ್ದ ಪ್ರಜಾಪ್ರಭುತ್ವ ಇಂದು ಯಾವ ರೀತಿಗಿದಿದೆಯೆಂದು ನಮಗೆಲ್ಲ ಗೊತ್ತು. ಅಂದಿನ ಪ್ರತಿನಿಧಿ ಇಂದು ನಾಯಕನಾಗಿದ್ದಾನೆ. ಕಾನೂನಿನ ಸಮಾಯವಿಲ್ಲದೆ ಆತ ಹಾರಿಕೆಯಲ್ಲಿಯೇ ಲೀಡರ್ ಆಗಿದ್ದಾನೆ ತನ್ನ ಸೇವಕ-ಪ್ರತಿನಿಧಿಯೆಂದು ಅವನಿಗೆ ವೇತನ-ಭತ್ತೆಗಳನ್ನು ಜನತೆಕೊಟ್ಟುತ್ತದೆ. ಆದರೆ ತನ್ನ ಅನ್ನದಾತ-ಜನತೆಯ ಮೇಲೆ ಪ್ರತಿನಿಧಿ ಪ್ರಾಣಿ ತನ್ನ ಅಧಿಕಾರ-ಉಪದೇಶಗಳನ್ನು ಜನತೆಯ ಮುಂದೆ ಕೇವಲ ಪಕ್ಷಗಳು ಮಾತ್ರ ನಿಂತುವು. ಚುನಾವಣೆಗಾಗಿ ಮಾತ್ರ ಇವು ಮುಂದೆ ಬಂದುವು—ಮನುಷ್ಯನು ಪಕ್ಷದ ದೃಷ್ಟಿಗೆ ಅಗೋಚರ—ಕೇವಲ ಚುನಾವಣೆ ಮತಗಳು ಅದಕ್ಕೆ ಗೋಚರ. ಜನತೆಯ ಅಭಿಪ್ರಾಯವನ್ನು ತಿಳಿದು ಅದರಂತೆ ನಡೆಯುವುದು ಬಿಟ್ಟು, ತಮ್ಮ ಕಾರ್ಯಕ್ರಮವನ್ನೇ ಜನತೆ ಸ್ವೀಕರಿಸಬೇಕೆಂಬ ಪ್ರಥೆ ಪ್ರಾರಂಭವಾಯ್ತು.

ಈ ಎರಡು ವಿಷಗತಿಗಳು ಜನತಂತ್ರದ ಆತ್ಮವನ್ನೂ ಶರೀರವನ್ನೂ ನಾಶಗೊಳಿಸಿದುವು. ಗ್ರೀಸದ ಆ ಜನತಂತ್ರವೆಲ್ಲಿ? ಇಂದಿನ ನಮ್ಮ ಗಣತಂತ್ರವೆಲ್ಲಿ? ಅಲ್ಲಿ ನಾಗರಿಕರು ನೇರವಾಗಿ ಸರಕಾರ ನಡೆಸುತಿದ್ದರು. ನಮ್ಮಲ್ಲಿ ನಾಲ್ಕಾರು ವರ್ಷಗಳಿಗೊಂದು ಬಾರಿ ನಾಲ್ಕಾರು ಪಕ್ಷಗಳು ಮತಯಾಚಿಸಲು ಸಿದ್ಧತೆ ಮಾಡುತ್ತವೆ. ಯಾರು ಯಾವ ವಿಭಾಗದ ಪ್ರತಿನಿಧಿತ್ವ ವಹಿಸಬಹುದು ಎಂಬ ಚರ್ಚೆ ರಾಜಕೀಯ ಧುರೀಣರಲ್ಲಿಯೇ ನಡೆಯುತ್ತವೆ. ಇವರು ನಿಲ್ಲಿಸಿದವರಿಗೆ ಮತದಾನ ಮಾಡುವುದು ಮಾತ್ರ ಜನತೆಯ ಕರ್ತವ್ಯ; ತಮ್ಮ ಅಭಿಪ್ರಾಯ ವೀಯುವ, ವಿಕಲ್ಪವೇ ಇಲ್ಲದ ಸ್ವಾಧೀನವೆಂದರೆ ಪೋಟು!

ಪಕ್ಷಗಳು ಚುನಾಯಿಸಿದವರಲ್ಲಿ ಯಾರಾದರೊಬ್ಬನಿಗೆ ಮತವಿತ್ತು ನಾಗರಿಕ ಚುನಾಯಿಸಬಲ್ಲನು. ಗೆದ್ದನಂತರ ಚುನಾವಣೆಗೆ ನಿಂತವನು ಪ್ರತಿನಿಧಿತ್ವ ಮಾಡುವರು. ಪರಿಸ್ಥಿತಿವಶದಿಂದಾಗಿ ಆತ ತನ್ನ ಪಕ್ಷದ ದಾಸ; ಅದರ ಆದೇಶ ಪಾಲಕ, ಪ್ರತಿನಿಧಿ. ಇದು ಪ್ರಜಾಪ್ರಭುತ್ವವೇ? ಜನತೆಯ ರಾಜನೀತಿ ಆಸಕ್ತಿಯನ್ನು ಪಕ್ಷದ ಧುರೀಣರು ಅಡಗಿಸುವುದೆ? ಜನತೆಯ ಆಶಯವನ್ನು ಧುರೀಣರು ಮನ್ನಿಸಬೇಕೆ? ಇದು ಸರ್ವಾಧಿಕಾರವನ್ನು ಜನತೆಯ ಮೇಲೆ ಹೇರುವುದಲ್ಲವೆ? ಹಿಂದೆ ರಾಜನೊಬ್ಬನ ಸರ್ವಾಧಿಕಾರವಿದ್ದರೆ, ಇಂದು ಕೆಲವು ಧುರೀಣರ ಅಧಿಕಾರ ನಡೆಯುತ್ತಿದೆ. ಇದು ಪ್ರಜಾಪ್ರಭುತ್ವವೆ? ಪಕ್ಷಪ್ರಭುತ್ವವೆ?

ಇಡಿಯ ಪ್ರಪಂಚದಲ್ಲಿ ರಾಜಕೀಯ ಪಕ್ಷಗಳು ಮುರಿದು ಹೋಗಬೇಕು; ಇಲ್ಲವೇ ಜನತೆಯು ತನ್ನ ಪ್ರತಿನಿಧಿ ಮಾತ್ರ ಆಗಬಲ್ಲವನನ್ನು ಆರಿಸಬೇಕು ಆತ ತನ್ನ ಪ್ರತಿನಿಧಿತ್ವವನ್ನು ಮಾಡಲು ತಪ್ಪಿದನೆಂದರೆ ಹಿಂದೆ ಕರೆಸುವ ಅಧಿಕಾರಬೇಕು ಎಂದು ಜನತೆ ಬಯಸುವುದು ಅಸಂಭವಲ್ಲ. ಇವುಗಳಲ್ಲಿ ಕೊನೆಯದು ಅವ್ಯಾವಹಾರಿಕವಾದರೆ ಮೊದಲಿನದು ಅಸಂಭವ. ಪಕ್ಷಗಳೇ ಇಲ್ಲದೆ ಹೋದರೆ ಸರಕಾರ ರಚನೆ ಹೇಗಾಗಬೇಕು?

ಇದಕ್ಕೆ ಇರುವ ಉಪಾಯವೇನು? ಜನತಂತ್ರವನ್ನು ಸತ್ಯ ಮಾಡಲು ಪ್ರತಿನಿಧಿ ನಾಯಕನಾಗಬಾರದು; ಜನತೆಯ ಶಿಕ್ಷಕನಾಗಬಾರದು. ಆತನು ಜನ ಸೇವಕನಾಗಬೇಕು; ಜನತೆಯೇ ಆತನಿಗೆ ಶಿಕ್ಷಕ—ನಾಯಕ ಜನಮತವನ್ನು ತಿಳಿದ, ಅದರಂತೆ ಆತ ನಡೆಯಬೇಕು. ಆತನು ವ್ಯಕ್ತಿಗತ ಪ್ರತಿಷ್ಠೆಯನ್ನು ಬದಿಗಿಟ್ಟು ಜನತಾ ಪ್ರತಿಷ್ಠೆಯನ್ನು ಮೆರೆಸಬೇಕು. ಪಕ್ಷ—ಹಿತಾಕಾಂಕ್ಷೆ ಜನಮತ ಪ್ರಕಟನೆಗಾಗಿ ಅಡ್ಡ ಬರಬಾರದು.

A NEW BOOK WITHIN THE REACH OF EVERYBODY

"LETTER WRITING MADE EASY"

(75 EVERY DAY LETTERS)

(Written by An Experienced Teacher.)

Useful to one and all, the teacher, the student and the layman.

Price: Rs. 1 = 25. (Postage extra)

If Rs.1=50 is sent by M O.one copy will be sent by B.P.

Copies can be had from the Publishers:

Navayuga Enterprise Ltd. Udipi.

and also from:

M/s Indian Industrials & Agencies, Mangalore-1.

M/s Navabharat Book Depot, Udipi.

ನವಯುಗ

ವರುಷ ೪೧	ಉಡುಪಿ ೭-೯-'೩೧	ವಾರ ೧

ಆಹಾರ ಸ್ವಾವಲಂಬನ

೧೯೭೦—೭೧ರಲ್ಲಿ ಭಾರತದ ಆಹಾರ ಧಾನ್ಯಗಳ ಉತ್ಪಾದನೆಯು ಸುಮಾರು ೮ ಕೋಟಿ ಟನ್ನುಗಳಾಗಿದ್ದು ಇಷ್ಟು ವರ್ಷಗಳಲ್ಲಿ ಇದು ಅತಿ ಹೆಚ್ಚಿನದಿರುತ್ತದೆ. ಹಾಗಿದ್ದರೂ ನಾವು ಗೋಧಿ ಮತ್ತು ಅಕ್ಕಿ ಮೊದಲಾದುವುಗಳನ್ನು ಇನ್ನೂ ಪರ ದೇಶಗಳಿಂದ ಆಯಾತ ಮಾಡಿಕೊಳ್ಳುತ್ತೇವೆ. ಮುಂದಿನ ಇಪ್ಪತ್ತು ವರ್ಷಗಳಲ್ಲಿ ನಮ್ಮ ಜನಸಂಖ್ಯೆಯು ಈಗಿನಗಿಂತ ಸೇಕಡಾ ಐವತ್ತರಷ್ಟು ಹೆಚ್ಚುವ ನಿರೀಕ್ಷೆಯಿರುವುದರಿಂದ, ಆಗ ನಾವು ಆಹಾರ ಸ್ವಾವಲಂಬನೆಯನ್ನು ಸಾಧಿಸಬೇಕಾದರೆ, ಸುಮಾರು ೧೬ ಕೋಟಿ ಟನ್ನುಗಳಷ್ಟು ಧಾನ್ಯಗಳನ್ನು ಬೆಳೆಸಬೇಕಾಗುತ್ತದೆ. ನಮ್ಮ ಈಗಿನ ಉತ್ಪಾದನೆಯು ಪ್ರಮಾಣದಲ್ಲಿ ಕಡಿಮೆಯೆನ್ನುವಂತಿಲ್ಲವಾದರೂ ಈ ಧಾನ್ಯಗಳಲ್ಲಿ ಕೆಲವಂಶ ಪಶು—ಪ್ರಾಣಿಗಳ ಪಾಲನೆಗೆ ವಿನಿಯೋಗವಾಗುವುದರಿಂದ ಮಾನವೋಪಯೋಗಕ್ಕೆ ಧಾನ್ಯಗಳ ಕೊರತೆಯೆನಿಸುವುದು. ಪಶು ಸಂಪತ್ತನ್ನು ಅಭಿವೃದ್ಧಿಗೊಳಿಸಬೇಕಾದರೆ,ಅವಕ್ಕೆ ಈಗ ದೊರೆಯುವುದಕ್ಕಿಂತ ಉತ್ತಮ ಆಹಾರವನ್ನೊದಗಿಸುವುದು ಅವಶ್ಯವಿದೆ. ಇದೇ ಸಂಗತಿ ಮನುಷ್ಯ ಸಮುದಾಯಕ್ಕೂ ಅನ್ವಯಿಸುತ್ತದೆ.

ಇಂದು ಹೆಚ್ಚಿನ ಭಾರತೀಯರ ಆಹಾರಾಭ್ಯಾಸವನ್ನು ಗಮನಿಸಿದರೆ, ಅದು ಶಕ್ತಿದಾಯಕ ಆಹಾರಾಂಶಗಳಿಂದ ಮಾತ್ರ ಕೂಡಿಕೊಂಡಿರುವುದು ಅನುಭವಕ್ಕೆ ಬಾರದಿರದು. ಪೌಷ್ಟಿಕ ಆಹಾರಗಳಾದ ಹಾಲು ಮತ್ತದರ ಉತ್ಪನ್ನಗಳು, ಹಣ್ಣುಹಂಪಲುಗಳು ಮೊದಲಾದ ಸಸಾರಜನಕಯುಕ್ತ ವಸ್ತುಗಳನ್ನು ಬಳಸಿಕೊಳ್ಳುವವರು ವಿರಳ. ಇದಕ್ಕಾಗಿ ಸಮತೂಕದ ಆಹಾರವನ್ನು ಸೇವಿಸುವ ಅಭ್ಯಾಸವನ್ನು ಜನತೆಯಲ್ಲಿ ಮೂಡಿಸಬೇಕಾಗಿದೆ. ಇದರಿಂದ ದೇಶದ ಆಹಾರ ಸಮಸ್ಯೆಯು ಪರಿಹಾರಕ್ಕೊಂದು ಸುಗಮ ಮಾರ್ಗವೇರ್ಪಡುವುದಲ್ಲದೆ ಜನತೆಯ ಶಾರೀರಿಕ ಬಲವೂ ವೃದ್ಧಿಯಾಗುವುದು. ಇದಕ್ಕಾಗಿಯೇ ತೃತೀಯ ಪಂಚವಾರ್ಷಿಕ ಯೋಜನೆಯಲ್ಲಿ ಮಿಶ್ರ ವ್ಯವಸಾಯಕ್ಕೆ ಪ್ರಾಧಾನ್ಯವನ್ನು ನೀಡಲಾಗಿದೆ. ವ್ಯವಸಾಯ ಕ್ಷೇತ್ರಕ್ಕೆ ಸಂಬಂಧಿಸಿದ ಪ್ರತಿ ವಿಭಾಗದಲ್ಲೂ ತ್ವರಿತಗತಿಯ ಸಾಧನೆ ನಡೆಯಬೇಕು. ಇದಕ್ಕೆ ಅನುಕೂಲವಾದ ಪ್ರಚಾರ ಕಾರ್ಯಗಳು ಏರ್ಪಡಬೇಕು. ಮೊದಲಿನ ಯೋಜನಾವಧಿಗಳಲ್ಲಿ ಹಲವಾರು ಬಗೆಯಾಗಿ ಸಂಶೋಧನೆ ನಡೆದು, ಕಬ್ಬು, ಚಾ, ಸೆಣಬು, ಸೆಲಕಡಲೆ, ಅಡಿಕೆ ಮೊದಲಾದ ಹಣತರುವ ಬೆಳೆಗಳ ಬಗ್ಗೆ ವಿಶೇಷ ಗಮನವನ್ನು ಹರಿಸಲಾಯಿತು. ಇವುಗಳಲ್ಲಿ ಉತ್ತಮ ಬೀಜ—ಗೊಬ್ಬರ—ವ್ಯವಸಾಯ ಕ್ರಮ—ಆರೈಕೆ ಮೊದಲಾದುವುಗಳ ಬಗ್ಗೆ ವಿಶೇಷ ಗಮನ ಹರಿಯಿತು. ಆಹಾರ ಧಾನ್ಯಗಳು ಇಲ್ಲವೇ ಆಹಾರ ವಸ್ತುಗಳ ಕಡೆಗೆ ಆಗಿಹೆಚ್ಚಿನ ಲಕ್ಷ್ಯ ಹರಿಯಲಿಲ್ಲ. ಅದರೂಭಾರತದ ವಿವಿಧೆಡೆಗಳಲ್ಲಿ ಪ್ರಯೋಗ ನಡೆಸಿಸುಮಾರು ೩೦೦ ವಿಧದ ಧಾನ್ಯಗಳ ಬೀಜಗಳನ್ನು ಸಂಶೋಧಿಸಲಾಗಿದೆ. ಅದರೆ, ಇವುಗಳ ಉಪಯೋಗದಿಂದ ಹೆಚ್ಚಿನ ಪ್ರಯೋಜನ ಬಂದಿದೆಯೆಂದು ಹೇಳುವಂತಿಲ್ಲ. ಹೀಗಾದುದಕ್ಕೆ ಕಾರಣವನ್ನೂ ನಾವು ದೂರ ಹುಡುಕಬೇಕಾಗಿಲ್ಲ. ಭೂಮಿಯ ಗುಣ, ಹವಾಗುಣ, ಬೇಡಿಕೆ ಮೊದಲಾದ ನೈಸರ್ಗಿಕ ಪರಿಸ್ಥಿತಿಗಳಿಗೆ ಸೊಂದಿಕೊಂಡು ಬೇರೆ ಬೇರೆ ಜಾತಿಯ ಬೀಜಗಳಿಂದ ಲಾಭದಾಯಕವಾಗಿ ವ್ಯವಸಾಯ ಮಾಡಬಹುದು. ಸರಕಾರದ ವ್ಯವಸಾಯ ವಿಭಾಗವು ಆಯಾ ಊರಲ್ಲಿ ಬೆಳೆಯಬಲ್ಲ, ಬೇಡಿಕೆಯಿರುವ ಧಾನ್ಯಗಳ ಬೀಜಗಳನ್ನೇ ಒದಗಿಸಬೇಕು. ಹೀಗಾದಲ್ಲಿ ಆಹಾರೋತ್ಪಾದನೆಯಲ್ಲಿ ಹೆಚ್ಚಿಳವನ್ನು ಸಾಧಿಸುವುದು ಕಠಿನವೆನಿಸಲಾರದು.

ಧಾನ್ಯರೂಪದ ಆಹಾರ ವಸ್ತುವಿನೊಡನೆ ಹಾಲು, ಮೊಸರು, ತುಪ್ಪ, ಹಣ್ಣುಹಂಪಲು ಮೊದಲಾದ ಸಸಾರಜನಕ ಅಧಿಕವಿರುವ ಆಹಾರಗಳನ್ನೂ ಸೇವಿಸುವ ಪರಿಪಾಠ ನಮ್ಮಲ್ಲಿ ಬೆಳೆಯಬೇಕು. ಇಂದು ನಮ್ಮಲ್ಲಿ ಈ ವಸ್ತುವನ್ನು 'ಶ್ರೀಮಂತ'ರು ಮಾತ್ರ ಸೇವಿಸುವರು ಎಂಬ ಅಭಿಪ್ರಾಯವಿರುವುದು. ಹಣ್ಣು ಮೊದಲಾದುವು ತೀವ್ರ ತೇಜಿಯಾಗಿರುವುದೇ ಇದಕ್ಕೆ ಕಾರಣವೆನ್ನಬಹುದು. ಅದರೂ ನಮ್ಮಲ್ಲಿ ಅದನ್ನು ಬಳಸಿಕೊಳ್ಳುವ ಆಸಕ್ತಿ ಹುಟ್ಟುವಂತಹ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು. ಈ ಸಂಬಂಧದಲ್ಲಿಯೂ ಸಂಶೋಧನೆಗಳು ನಡೆದು, ಇವು ಜನಸಾಮಾನ್ಯರಿಗೂ ನಿಲುಕುವ ವಸ್ತುಗಳಾಗಬೇಕು. ಇದಕ್ಕಾಗಿ ಈ ವಿಭಾಗದಲ್ಲೂ ಮುಖ್ಯವಾಗಿ ಹಣ್ಣುಹಂಪಲುಗಳಿಗೆ ಮೂಲ ಕಾರಣವಾದ ತೋಟಗಾರಿಕೆಯತ್ತ ಜನಮನವನ್ನು ಸೆಳೆದು ಅವರಲ್ಲಿಯೂ ಸತ್ ಪ್ರವೃತ್ತಿಯುಂಟಾಗುವಂತೆ ಮಾಡುವುದು ಅಪೇಕ್ಷಣೀಯ. ಹೀಗೆ ನಮ್ಮ ಆಹಾರಾಭ್ಯಾಸ ಕ್ರಮದಲ್ಲಿ ತುಸು ಪರಿವರ್ತನೆ ಮಾಡಿಕೊಳ್ಳುವುದರಿಂದ ಆಹಾರ ಸ್ವಾವಲಂಬನಾ ಪಥದಲ್ಲಿ ಒಂದು ಮೈಲು ಮುಂದೆ ಸಾಗಿದಂತಾಗುವುದು; ಹೀಗಾದಲ್ಲಿ ಮುಂದಿನ ೨೦ ವರ್ಷಗಳಲ್ಲಿ ನಾವು ಖಂಡಿತಕ್ಕೂ ಆಹಾರ ಸ್ವಾವಲಂಬಿಗಳಾಗುವೆವು.

ಭಟ್ಟಾಚಾರ್ಯರ ವಿಚಾರಣೆ

ಪಾಕಿಸ್ತಾನ ಭಾರತದ ಪೂರ್ವ ಸೀಮೆಯನ್ನು ಸೂರಿ ತನ್ನ ದೇಶದಲ್ಲಿ ಸಂಚರಿಸುತಿದ್ದರೆಂಬ ಆರೋಪದಿಂದ ಪಾಕಿಸ್ತಾನವು ಭಾರತೀಯ ಸೇನೆಯ ಮುಖ್ಯ ಅಧಿಕಾರಿಗಳಲ್ಲಿ ಒಬ್ಬರಾದ ಭಟ್ಟಾಚಾರ್ಯರನ್ನು ಸೆರೆ ಹಿಡಿದು ಅವರನ್ನು ಡಂಡಿನ ನ್ಯಾಯಾಲಯದ ಮುಂದೆ ವಿಚಾರಣೆಗೆ ಗುರಿಪಡಿಸಿದೆ. ಈ ವರ್ಷದ ಎಪ್ರಿಲ್ ತಾಲ್ಕುರಂದು ಅವರು ಪಾಕ್ ಭೂಭಾಗದಲ್ಲಿ ತಿರುಗಾಡುತಿದ್ದರೆಂಬುದೇ ಇವರ ಮೇಲಿನ ಆರೋಪ. ಭಾರತ ಮತ್ತು ಪೂರ್ವ ಪಾಕಿಸ್ತಾನಗಳ ನಡುವಣ ಗಡಿಯ ನಿಷ್ಕರ್ಷೆಯೇ ಸಂಪೂರ್ಣವಾಗಿ ಆಗದೆ ಉಳಿದಾಗ, ಭಟ್ಟಾಚಾರ್ಯರು ಖಂಡಿತಕ್ಕೂ ಸಿಮೋಲ್ಲಂಘನೆಯನ್ನು ಮಾಡಿದ್ದಾರೆನ್ನುವುದು ಕಷ್ಟ. ಪ್ರಜಾಸತ್ತಾತ್ಮಕವಾಗಿ, ಮುಕ್ತನ್ಯಾಯಾಲಯದಲ್ಲಿ ಅವರ ವಿಚಾರಣೆಯಾಗುವಂತೆಯೂ ಇಲ್ಲ. ತನ್ನ ಸೀಮೆಯೊಳಗೆ ಅವರಿದ್ದರೆಂಬುದನ್ನು ಸಾಧಿಸಲು ಪಾಕಿಸ್ತಾನವು ತನಗೆ ಅನುಕೂಲವಾದ ನಕ್ಷೆಯನ್ನು ತರಬಹುದು. ಹಾಗೆಯೇ ಪ್ರತಿಪಕ್ಷದವರಿಗೂ ಭಾರತದಿಂದ ನಕ್ಷೆ ತರುವ ಅವಕಾಶವನ್ನು ಒದಗಿಸಲಾರರು. ಪೂರ್ವ ಪಾಕಿಸ್ತಾನದಲ್ಲಿರುವ ಭಾರತೀಯ ಸರಕಾರದ ಪ್ರತಿನಿಧಿಗೆ ಭಟ್ಟಾಚಾರ್ಯರನ್ನು ಕಾಣಲು ಅವಕಾಶ ಕೊಡದುದು, ಭಾರತದ ಬಗ್ಗೆ ಪಾಕಿಸ್ತಾನ ಮೂಗುಮುರಿಯುತ್ತಿರುವುದು ಜಗತ್ತಿಗೇನೇ ಗೊತ್ತು. ಹಾಗಿರುವಾಗ ಗುಪ್ತವಾಗಿಯೇ ಕಾರ್ಯಸ್ಥಾನ ನಡೆಸಿಬಿಡಬೇಕೆಂಬ ಹಂಬಲ ಅದಕ್ಕಿರುವಂತೆ ತೋರುತ್ತದೆ. ಅದರೆ, ಇದು ನ್ಯಾಯವಲ್ಲ. ನಾಗರಿಕ ಜಗತ್ತಿನಲ್ಲಿ ತಲೆಯೆತ್ತ ಬಯಸುವ ಪಾಕಿಸ್ತಾನದಲ್ಲಿ ಭಟ್ಟಾಚಾರ್ಯರಿಗೆ ತಾವು ಬಯಸುವ ವಕೀಲರನ್ನು ಭಾರತದಿಂದ ತನ್ನ ರಕ್ಷಣೆಗಾಗಿ ತರಿಸಿಕೊಳ್ಳುವ ಅವಕಾಶವನ್ನಾದರೂ ಮಿಲಿಟರಿ ನ್ಯಾಯಾಲಯ ಕೊಡಬೇಕು. ಇದರಿಂದ ಉಭಯತರಿಗೂ ಕ್ಷೇಮವಿದೆ.

ಜಗತ್ಪರ್ಯಟನೆ

ಕಡಿದಾಳ ಮಂಜಪ್ಪ

ಸ್ವಯಂ ಗ್ರಾಮೋಧಿಸತಿಗಳಾಗಿದ್ದರೂ ಮೈಸೂರು ನಾಮಕ ಕರ್ನಾಟಕದ ಕಂದಾಯ ಮಂತ್ರಿ ಕಡಿದಾಳ ಮಂಜಪ್ಪನವರು ಭೂಸುಧಾರಣೆಯನ್ನು ತರುವುದರಲ್ಲಿ ತುಂಬ ಮುತುವರ್ಜಿ ವಹಿಸುತಿದ್ದಾರೆ. "ವೈಜ್ಞಾನಿಕ ತಳಹದಿಯ ಮೇಲೆ ಪ್ರಜಾಪ್ರಭುತ್ವದ ರೀತಿನೀತಿಗಳಿಂದ ರಾಜ್ಯಕ್ಕೆ ಅನುಸಾರವಾಗಿ ಸಮಾಜ ವಾದವನ್ನು ತರಬೇಕೆಂಬುದು ನಮ್ಮ ದೃಢ ಸಂಕಲ್ಪ. ಸಾಮಾಜಿಕ ನ್ಯಾಯ, ಸಮಾನ ಅವಕಾಶಗಳನ್ನು ದೊರಕಿಸಿ ಸಮಾಜದಲ್ಲಿರುವ ಏರುವೇರುಗಳನ್ನು ತೊಡೆದು ಹಾಕುವುದೇ ಸಮಾಜ ವಾದದ ಗುರಿ" ಎಂದು ಹೇಳಿ ಇದರ ಸಾಧನೆಗೆ ಭೂಸುಧಾರಣೆ ಅವಶ್ಯಕವೆಂದವರು ವಿಧಾನ ಸಭೆಯಲ್ಲಿ ಕಾನೂನಿನ ಭಾಷೆಯಲ್ಲಿ ಆಡಿದರು. ಸರಕಾರದ ಸಮಾನ ನ್ಯಾಯ ಮತ್ತು ಸಮಾನಾವಕಾಶದ ರೀತಿನೀತಿಗಳನ್ನು ಪ್ರತ್ಯಕ್ಷ ಕಂಡವಂಗೆ ಇದೇ ಸಮಾಧಿ ವಾದವಾಗಿ ಕಂಡರೆ ಬೆಕ್ಕಸಬೆರಗಾಗಲಾರದು.

ಪಂಡಿತ ನೆಹರು

ಬೇಸಗೆಯಲ್ಲಿ ಹೊಳೆಯುವ ಸೂರ್ಯನಿಗೂ ಮೋಡಗಳು ಕವಿದು ಆತನ ಪ್ರಕಾಶವನ್ನು ಮರೆಮಾಡಿಸುವ ವ್ಯರ್ಥ ಸಾಹಸ ಮಾಡುತ್ತವೆ. ಕೆಲವೊಮ್ಮೆ ಈ ಸಾಹಸಿಗಳು ಬಿರುಗಾಳಿಗೆ ಸಿಕ್ಕಾ ಅಸ್ತವ್ಯಸ್ತವಾಗುವರು. ಭಾರತದ ಬಗ್ಗೆ ಚಿಂತಿಸುವ ಅದ್ವಿತೀಯ ಭಾರತೀಯ ಪ್ರಧಾನಿ ನೆಹರುರವರ ಸರಕಾರದ ಮೇಲೆಯೂ ಅವಿಶ್ವಾಸ ಗೊತ್ತುವಳಿಯನ್ನು ತಂದವರ ಧೈರ್ಯವನ್ನು ಕೊಂಡಾಡ ಬೇಕು! ಕೇವಲ ಐದು ಮತಗಳನ್ನು ಮಾತ್ರ ಪಡೆದುದರಿಂದ ಇದನ್ನು ಮಂಡಿಸುವ ಅವಕಾಶವೂ ಸಮಾಜವಾದಿಗಳಿಗೆ ಒದಗಲಿಲ್ಲ. ಗೊತ್ತುವಳಿ ಮುಂಡಿಡಲು ೫೦ ಮತಗಳು ಬೇಕಾಗಿತ್ತು. ಸೂರ್ಯನಾದರೇನು, ಚಂದ್ರನಾದರೇನು, ಮೋಡಕ್ಕೆ ಅಡ್ಡ ಹಾಯುವುದಷ್ಟೇ ಕೆಲಸ. ಅದರಿಂದ ಸೂರ್ಯಚಂದ್ರರು ದಿಗಿಲುಗೊಳ್ಳುವುದಿಲ್ಲ. ಮೋಡಕ್ಕಿಂತ ಅವರು ಅದೆಷ್ಟೋ ಎತ್ತರದಲ್ಲಿರುತ್ತಾರೆ.

ಮುರಾರ್ಜಿ ದೇಸಾಯಿ

ಮದ್ಯಪಾನ ಪ್ರತಿಬಂಧವನ್ನು ರಾಜ್ಯ ಸರ್ವತ್ರ ವ್ಯವಹೃತಗೊಳಿಸಬೇಕಾದರೆ, ಕೇಂದ್ರ ಸರಕಾರವು ಅಬಕಾರಿ ಸುಂಕದಲ್ಲಿ ಕಡಿಮೆ ಬಿನ್ನದನ್ನು ತುಂಬಿಕೊಡಬೇಕೆಂದು ಕೆಲವು ರಾಜ್ಯಗಳು ಕೇಳುತ್ತಿವೆ. ಕೇಂದ್ರ ಅರ್ಥಮಂತ್ರಿ ಮುರಾರ್ಜಿದೇಸಾಯರು ವಿಶಿಷ್ಟ ವ್ಯಕ್ತಿ. ಅವರು ಆದಾಯವನ್ನು ಕಡಿಮೆಯಾಗಿ ಬೆಚ್ಚುವನ್ನು ಅಧಿಕವಾಗಿ ತೋರಿಸಿ, ಕೊರತೆಯ ಮುಂಗಡ ಪತ್ರವನ್ನು ಸಾದರಪಡಿಸಿ ವರ್ಷಾಂತ್ಯದಲ್ಲಿ ಉಳಿತಾಯ ತೋರಿಸಬಲ್ಲ ನಿಪುಣರು ಮದ್ಯಪಾನ ನಿರೋಧದಿಂದ ಜನರು ಮದ್ಯದ ಬದಲು ಇತರ ವಸ್ತುಗಳಿಗಾಗಿ ಹಣ ವ್ಯಯಿಸುವುದರಿಂದ ಮೈಸೂರ ಕರದ ಮೂಲಕ ರಾಜ್ಯಸರಕಾರದ ಆಯ ಹೆಚ್ಚುವುದು ಎಂಬ ಸಿದ್ಧಾಂತ ಅವರದು. ಎಷ್ಟು ಹಣವಿದ್ದರೂ ಸಾಲದಾಗಿರುವ ಕಾಲದಲ್ಲಿ ಈ ಸಿದ್ಧಾಂತ ಸುಳ್ಳಾಗುವುದು ಸಾಧ್ಯವೆ?

ಜಯಪ್ರಕಾಶ

ಕಾರ್ಯ ಸಾಧಿಸಲಾರದವನು ಬಾಯಿ ಬಡಿಕುತ್ತ ಇರುವುದು ಸ್ವಾಭಾವಿಕ. ಪಂಜಾಬಿ ಸುಬಾ ಬೇಡುವ ತಾರಾಸಿಂಗರೂ ಈಗ ಈ ಸಾಲಿಗೆ ಸೇರಿದಂತಾಗಿದ್ದಾರೆ. ತಮ್ಮ ಬೇಡಿಕೆಯನ್ನು ಸಂಯುಕ್ತ ರಾಷ್ಟ್ರ ಸಂಘಕ್ಕೆ ಒಯ್ಯಬೇಕೆಂದು ವಿಚಿತ್ರ ಉನ್ಮತ್ತತೆಯನ್ನು ಪ್ರದರ್ಶಿಸಿದ ಸಿಂಗರು ಮರುದಿನವೇ ತನ್ನ ನಿರ್ಧಾರವನ್ನು ಬದಲಿಸಿದರು. ರಾಜಕೀಯ ಬೇಡವೆಂದರೂ ಅದೇ ಬಂದು ಮುತ್ತು ಕೊಡುವ ಜಯಪ್ರಕಾಶರಿಗೆ ಈ ವಿನಾದವನ್ನೊಪ್ಪಿಸುವುದಾದರೆ, ತಾನು ಉಪವಾಸ ನಿಲ್ಲಿಸುವೆನೆನ್ನುತ್ತಾರೆ ಇವರು ನಿಸ್ಪೃಹಪಾತಿ ಜಯಪ್ರಕಾಶರು ತಾರಾಸಿಂಗರ ಬಯಕೆಯನ್ನು ಒಪ್ಪುವುದೇ ಅನಿರ್ಧಾರವಿರುವಾಗ, ಭಾರತ ಸರಕಾರ ಬಾಯಿ ಮುಚ್ಚಿಕೊಂಡಿರುವುದು ಅನ್ಯಾಯವಲ್ಲ.

ನಮ್ಮ ಮಾದರಿತನ

ಪಶ್ಚಿಮ ಘಟ್ಟದ ಮೇಲಿನ ಮತ್ತು ಕೆಳಗಿನ ಭೂ ಭಾಗವನ್ನು ಜೋಡಿಸುವ ಘಾಟಿ ರಸ್ತೆಗಳು ಈ ಮಳೆಗಾಲದಲ್ಲಿ ಕುಸಿದು ಬಿದ್ದಿರುವುದು ಎಲ್ಲರಿಗೂ ಗೊತ್ತು.

ವಿನಂತಿ

ಚಂದಾಹಣ ಬಾಕಿ ಇರುವ ನಮ್ಮ ಚಂದಾದಾರರಿಗೆಲ್ಲಾ ಈ ಮೊದಲೇ ಕಾರ್ಡು ಬರೆದಿರುತ್ತೇವೆ. ಅದರಂತೆ ಕೆಲವರು ಈಗಾಗಲೇ ಚಂದಾಹಣವನ್ನು ಪಾವತಿ ಮಾಡಿರುತ್ತಾರೆ. ಇನ್ನೂ ಪಾವತಿ ಮಾಡದವರು ದಯಮಾಡಿ ಅದಷ್ಟು ತ್ವರ್ಯ ಕಳುಹಿಸಿಕೊಡುವಂತೆ ಬಿನ್ನವಿಸುತ್ತೇವೆ. ವಿ. ಪಿ. ಮಾಡಿದರೆ 75 ನಯೇಪೈಸೆಯಷ್ಟು ಹೆಚ್ಚಿಗೆ ಬೀಳುವುದರಿಂದ ಎಲ್ಲರೂ ಮುಂದಾಗಿ ಮನಿಯಾರ್ಡರು ಮಾಡುವಂತೆ, ಇಲ್ಲವೇ ಸಿಂಡಿಕೇಟ್ ಬ್ಯಾಂಕಿನಲ್ಲಿ ಕಟ್ಟುವಂತೆ ಅಪೇಕ್ಷಿಸುತ್ತೇವೆ. ಅಂತೂ ಚಂದಾ ಬಾರದಿದ್ದರೆ ಕ್ರಮಶಃ ವಿ. ಪಿ. ಮಾಡುತ್ತೇವೆ.

—ಮೆನೇಜರ್.

ಆದರೆ, ಅವುಗಳ ರಿಪೇರಿಯ ಸಂಬಂಧದಲ್ಲಿ ಸಾರಿಗೆ ಸಂಪರ್ಕ ಶಾಖೆಯೇನೂ ಹೆಚ್ಚಿನ ಎಚ್ಚರಿಕೆ ವಹಿಸಿದಂತಿಲ್ಲ ಮುಂದಿನ ತಿಂಗಳು ಮಂಗಳೂರು—ಕುಂದಾಪುರ-ಕಾರವಾರಗಳಿಗೆ ಕಬ್ಬಿಣದ ಅದುರು ಬಯ್ಯಲು ಹೆಡಗ ಬಂದಾಗಲೇ ಸರಕಾರ ಜೀವವಾಯಿತೆಂದರೆ ಆಗ ವಿದೇಶಗಳಿಗೂ ನಮ್ಮ ಮಾದಂತನದ ಅರಿವಾಗುವುದು. ಅದುವರೆಗೆ ಖನಿಜಾಭಿವೃದ್ಧಿ ಮಂಡಳಿಯ ಲಾರಿಗಳಿಗೆ ರಜೆ ಕೊಟ್ಟು ಅವುಗಳ ಕೆಲಸಗಾರರಿಗೆ ವೇತನ ಸಹಿತ ವಿರಾಮವನ್ನಿತ್ತು ತೃಪ್ತಿಪಟ್ಟರೆ ಹೇಗೆ? ಹೇರಿದ ಭಾರವಾದ ಕರ ತೆರಲು ಜನತೆ ಉತ್ಸುಕವಿರುವಾಗ ಸರಕಾರಕ್ಕೆ ಹಣದ ಅಭಾವವಿರಲಾರದು.

ಆದರ್ಶಕ್ಕೆ ಆಯುಷ್ಯದಂಡ

ಮಗುವಿನ ಶರೀರವಿದ್ದ ಮಾತ್ರಕ್ಕೆ ಅದು ಮಗುವೆನಿಸಲಾರದು; ಅದರಲ್ಲಿ ಮಗು ಸಹಜ ಪ್ರಕೃತಿಯಿರಬೇಕು. ಅದುದರಿಂದಲೇ ಮಣ್ಣಿನ ಗೊಂಬೆಯೆಂದೂ ಮಗುವಿನ ಸಮ್ಮಾನಗಳಿಸಲಾರದು. ಶಾಲೆಯೆಂದಕ್ಷಣ ಮಕ್ಕಳ ಸಂಖ್ಯೆಗನುವಾಗಿ ಅಧ್ಯಾಪಕರೂ ಇರಬೇಕು. ಅಧ್ಯಾಪಕರಿಲ್ಲದ ಶಾಲೆ ಶಾಲೆಯೇ? ಆಪೆರೆ, ನಮ್ಮ ಮೈಸೂರು ರೂಪದ ಕರ್ನಾಟಕದ ವಿದ್ಯಾ ಇಲಾಖೆಯ ಮಂತ್ರಿ ಅಣ್ಣಾರಾವ್ ಗುಣಮುಖೆಯವರು "ಹೆಚ್ಚಿನ ಶಿಕ್ಷಕರನ್ನು ಒದಗಿಸುವುದಕ್ಕೆ ಹಣ ತೀರಿ ಹೋಗಿತ್ತು" ಎಂದು ಹಣಕ್ಕೂ ಶಿಕ್ಷಣಕ್ಕೂ ಗಂಟು ಹಾಕಿದ್ದಾರೆ. ಶಿಕ್ಷಕರ ನೇಮಕ ಮಾಡದೆ ಮಕ್ಕಳನ್ನು ಶಾಲೆಗೆ ಹಾಕಿಸಿಕೊಂಡರೆಅದರಿಂದ ಮಕ್ಕಳ ಶಾರೀರಿಕ ನೈತಿಕ, ಭೌತಿಕ ಗುಣಗಳು ನಷ್ಟವಾಗುವುದು ಖಂಡಿತವಿರುವಾಗ, ಈ ಖಡ್ಡಾಯ ಶಿಕ್ಷಣದ ಯೋಜನೆಗೆ ಕೈ ಹಾಕುವ ಆಗತ್ಯವಾದರೂ ಏನಿತ್ತು? ಆದರ್ಶದ ಹೆಸರಿನಲ್ಲಿ ಆಯುಷ್ಯ ಕೊಳೆಯಿಸುವುದು ಸರಿಯಲ್ಲ.

ಕೆ. ಎಮ್. ಮುನ್ಶಿ

ಗವರ್ನರ ಪದವಿಯಿಂದ ಹೊರಬಂದ ನಂತರ ಕೆ. ಎಂ. ಮುನ್ಶಿಯವರ ಕ್ಷೇತ್ರವೇ ಬೇರೆಯಾಗಿದೆ. ಕೇಂದ್ರರಲ್ಲಿ ಆಹಾರ ಮಂತ್ರಿಯಾಗಿದ್ದ ಇವರು ಅಂದು ಅಸ್ಪಷ್ಟ ಕಾಂಗ್ರೆಸಿಗರಿದ್ದರು. ಈಗ ಅಷ್ಟೇ ಸ್ವತಂತ್ರ ಪಕ್ಷದವರು. ಸಂಸ್ಕೃತ ಸಾಹಿತ್ಯ ಪ್ರಚಾರದಲ್ಲಿ ಕೈಹಾಕಿದೆ ಇವರು ಅದರಿಂದಲೇ ತೃಪ್ತಿಪಡಬಹುದಿತ್ತು. ಆದರೆ, ರಾಜಕೀಯದ ಗಾಳಿ ಸೋಂಕಿದವರು ಸುಮ್ಮನಿರಲಿಯುವುದುಂಟೆ? ಮುಂದಿನ ಸಾರ್ವತ್ರಿಕ ಚುನಾವಣೆಗಳಲ್ಲಿ ಗಣನೀಯ ಪ್ರಮಾಣದಲ್ಲಿ ತಮ್ಮ ಸ್ವತಂತ್ರ ಪಕ್ಷವು ಸ್ಪರ್ಧಿಸುವುದು ಎಂದವರು ಸಾರಿದ್ದಾರೆ. ಸ್ವತಂತ್ರ ಪಕ್ಷದ ಸದಸ್ಯರೂ ಸ್ವತಂತ್ರರಾಗಿ ಸ್ಪರ್ಧಿಸುವ ಅವಕಾಶ ಬಂದಿರಲಿ. ಅಧಿಕಾರವೆಂಬುದು ಎಂತಹವನಿಗೂ ಮಾದಕತೆಯನ್ನು ಬೀರಿ ಬಿಡಬಲ್ಲುದು.

ಅಲ್ಲಲ್ಲಿಯ ಸುದ್ದಿಸಾರ

ಸ್ವೀಕಾರ— ವಾಚನೀಯವಾಗಿ, ಸಂಗ್ರಾಹ್ಯವಾಗಿರುವ 'ಜನಜೀವನ' ಎಂಬ ಉಡುಪಿ ನಗರ ಸಭೆಯ ರಜತೋತ್ಸವ ಸಂಚಿಕೆಯನ್ನು ಆತ್ಮಾರದಿಂದ ಸ್ವೀಕರಿಸಿದ್ದೇವೆ. ಸುಮಾರು 150 ಪುಟಗಳಿರುವ ಕ್ರೌನ್ ¼ ಆಕಾರದ ಅಕರ್ಷಣೀಯವಾದ ಈ ಆಂಗ್ಲ ಕನ್ನಡದ ಸಂಚಿಕೆಯ ಬೆಲೆ ಬರೇ ರೂ. 1-50 ಮಾತ್ರ ಆಗಿದೆ.

"ಗೆಳಿಸಿ. ಉಳಿಸಿ, ದೇಶ ಬೆಳೆಸಿ"

ಉಡುಪಿಯ ಮಹಾತ್ಮಾ ಗಾಂಧೀ ಮೆಮೋರಿಯಲ್ ಕಾಲೇಜಿನ ಅರ್ಥಶಾಸ್ತ್ರ ಮತ್ತು ಇತಿಹಾಸ ಸಂಘದ ಉದ್ಘಾಟನಾ ಭಾಷಣವನ್ನು ಮಾಡುತ್ತಾ ರಾಜ್ಯದ ರಾಷ್ಟ್ರೀಯ ಉಳಿತಾಯ ಯೋಜನಾಧಿಕಾರಿಗಳಾದ ಶ್ರೀ ಕೆ. ಮಹಮ್ಮದ್ ಬ್ಯಾರಿಯವರು "ಭಾರತದ ಜನತೆಯು ಬಡತನವನ್ನು ನೀಗಿಸಲು, ರಾಷ್ಟ್ರೀಯ ವರಮಾನವನ್ನು ಹೆಚ್ಚಿಸಿ, ದೇಶದ, ಕೈಚ್ಚಾ ಮೂಲಗಳನ್ನು ವ್ಯವಸ್ಥಿತ ರೀತಿಯಲ್ಲಿ ಹಂಚಿ, ಸ್ವಾತಂತ್ರ್ಯದ ಮೊದಲು ಗಾಂಧೀಜಿಯವರು ಬಯಸಿದ ಸುಖೀ ರಾಜ್ಯವನ್ನು ನೆಲೆಗೊಳಿಸಲು ಯೋಜನೆಯೊಂದೇ ಸಮರ್ಪಕವಾಗಿರುವ ಮಾರ್ಗ, ಯೋಜನೆಯಿಂದಲ್ಲದೆ ಶಿಸ್ತುಬದ್ಧವಾಗಿ ನಡೆಯುವುದು ಸಾಧ್ಯವಿಲ್ಲ. ನಾವು ನಮ್ಮ ಶಾಲೆಗಳ ಕರ್ತವ್ಯವನ್ನು ನಿರ್ವಹಿಸದೆ ಇದ್ದರೆ, ದೇಶದ ಸಂರಕ್ಷಣಾಕಾರ್ಯದಲ್ಲಿ ನಾವು ವಿಫಲರಾದಂತಾಗಿ ನಾವು ಗಳಿಸಿಕೊಂಡ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವುದು ಶಕ್ಯವಲ್ಲ. ಈ ಎಲ್ಲ ಉದ್ದೇಶಗಳನ್ನು ಮುಂದಿರಿಸಿಕೊಂಡು ಯೋಜನಾ ಆಯೋಗದವರು ತಯಾರಿಸಿದ ಪಂಚವಾರ್ಷಿಕ ಯೋಜನೆಗಳನ್ನು ಸಫಲಗೊಳಿಸುವುದರಲ್ಲಿ, ಅದಕ್ಕಾಗಿ ಧನಸಹಾಯವನ್ನಿತ್ತು ಸಾಧ್ಯವಾದಷ್ಟು ಮಟ್ಟಿಗೆ ಸ್ವಾವಲಂಬನೆಯನ್ನು ಪಡೆಯುವುದರಲ್ಲಿ, ನಮ್ಮೆಲ್ಲರ ಕರ್ತವ್ಯದ ಸಾಲಿದೆ.

ಇಂಥ ಬ್ರಹತ್ಯೋಜನೆಗಳನ್ನು ರೂಪಿಸುವುದರಲ್ಲಿ ತೆರಿಗೆಯ ಹಣ ಸಾಕಾಗುವುದೂ ಇಲ್ಲ. ಇವೆಲ್ಲ ಕಾರಣಗಳಿಂದಾಗಿ ಪ್ರತಿಯೊಬ್ಬ ಭಾರತೀಯನೂ ಯೋಜನೆಗೆ ಸಹಕರಿಸುವುದು ತನ್ನ ಆದ್ಯ ಕರ್ತವ್ಯವೆಂದು ಭಾವಿಸಿ, ತನಗೆ ಸಾಧ್ಯವಾದಷ್ಟನ್ನು ಉಳಿಸಿ ರಾಷ್ಟ್ರೀಯ ಉಳಿತಾಯ ಖಾತೆಗೆ ಸೇರಿಸುವುದು ಅಗತ್ಯವಾಗಿದೆ. ಎಲ್ಲ ವಿದ್ಯಾರ್ಥಿ ವಿದ್ಯಾರ್ಥಿನಿಯರ ಗಮನ ಇವರತ್ತ ಹರಿದಲ್ಲಿ ಮಾತ್ರ ಇದು ಸಾಧ್ಯ" ಎಂದು ರಾಷ್ಟ್ರಕ್ಕಾಗಿ ದುಡಿಯುವರೇ ಕರೆಯಿತ್ತರು. ಸಮಾರಂಭದ ಅಧ್ಯಕ್ಷತೆಯನ್ನು ಪ್ರಿನ್ಸಿಪಾಲ್ ಶ್ರೀ ಸುಂದರ ರಾಯರು ವಹಿಸಿದ್ದರು. ಪ್ರಾರಂಭದಲ್ಲಿ ಸೊಫೊರ್ ಕು. ಶಿ. ಹರಿದಾಸ ಭಟ್ಟರು ಅಧಿತಿಗಳನ್ನು ಸ್ವಾಗತಿಸಿದರು. ಕಾರ್ಯದರ್ಶಿ ಶ್ರೀ ಸುಬ್ರಾಯ ಭಟ್ಟರು ಧನ್ಯವಾದ ಸಮರ್ಪಿಸಿದರು.

ಉದ್ಘಾಟನಾ ಸಮಾರಂಭ— ಎಂ. ಜಿ. ಎಂ. ಕಾಲೇಜಿನ ಭಾಷಾ ಸಂಘದ ಉದ್ಘಾಟನಾ ಸಮಾರಂಭವು ಶ್ರೀ ತೆಕ್ಕಟ್ಟೆ ಗೋಪಾಲಕೃಷ್ಣ ಭಟ್ಟರಿಂದ ಕಳೆದ ತಾ. 30ರಂದು ಪ್ರಿನ್ಸಿಪಾಲ್ ಶ್ರೀ ಎಚ್. ನಂದರಾಯರ ಅಧ್ಯಕ್ಷತೆಯಲ್ಲಿ ನೆರವೇರಿತು. ಉಪಾಧ್ಯಕ್ಷ ಶ್ರೀ. ಎಸ್. ಕೆ. ಶ್ರೀಪತಿ ಅಚಾರ್ಯರು ಅತಿಥಿಗಳ ಪರಿಚಯಮಾಡಿ, ಸ್ವಾಗತಭಾಷಣ ಮಾಡಿದರು. ವಿದ್ಯಾರ್ಥಿಗಳು ಉತ್ತಮ ಪುಸ್ತಕಗಳನ್ನೋದಿ ಜ್ಞಾನಾಭಿವೃದ್ಧಿ ಮಾಡಿಕೊಳ್ಳಬೇಕೆಂಬುತ್ಪಾದಿಯಾಗಿ ಉದ್ಘಾಟಕರು ಹೇಳಿದರು. ಅಧ್ಯಕ್ಷರ ಭಾಷಣದನಂತರ ಕಾರ್ಯದರ್ಶಿ ಶ್ರೀ. ಬಿ. ಪದ್ಮನಾಭ ಭಟ್ಟರು ಧನ್ಯವಾದವನಿತ್ತರು.

ಉಡುಪಿ ಶ್ರೀ ಪೂರ್ಣಪ್ರಜ್ಞಾ ಕಾಲೇಜಿನ ಯೂನಿಯನಿನ ಉದ್ಘಾಟನಾ ಸಮಾರಂಭವು ಶ್ರೀ. ಸಿ. ನಾರಾಯಣರಾಯರಿಂದ ಪ್ರಿನ್ಸಿಪಾಲ್ ಶ್ರೀ. ವಿ. ಎಮ್. ಇನಾಮ್‌ದಾರ್ ಅವರ ಅಧ್ಯಕ್ಷತೆಯಲ್ಲಿ ಕಳೆದ ತಾ. 30ರಂದು ಜರಗಿತು. ಉದ್ಘಾಟಕರು ತಮ್ಮ ಭಾಷಣದಲ್ಲಿ ಇಂದು ಸೃಜ್ಞಾತ್ಮಕ ಸಮಸ್ಯೆಗಿಂತಲೂ ಮೂಸಾ ವೀಯತೆಗಳ ವಿಚಾರ ಪ್ರಾಮುಖ್ಯವಾದುದೆಂತಲೂ, ವಿಜ್ಞಾನದಂತೆ ಆರ್ಟ್ಸಿಗೂ ಪ್ರಾಮುಖ್ಯತೆಯನ್ನೀಯ ಬೇಕೆಂದೂ ಹೇಳಿದರು. ಅಧ್ಯಕ್ಷರ ಭಾಷಣದ ಬಳಿಕ ಶ್ರೀ ಪಿ. ಪದ್ಮನಾಭ ಭಟ್ಟರು ಧನ್ಯವಾದವನ್ನಿತ್ತರು.

ಬಹುಮಾನ ವಿತರಣಾ ಸಮಾರಂಭ—ಉಡುಪಿ ಡಿವಿಜನಿನ ರೈಸ್ ಇನ್ಸ್ಟಿಟ್ಯೂಸ್ ಕೋಪೊರೇಶನಿನ 'ಜೀವನ ಕೃಷ್ಣಾ' ಹೊಸ ಕಟ್ಟಡದಲ್ಲಿ ಕಳೆದ ವರ್ಷ ಏರ್ಪಡಿಸಿದ್ದ ಫೀಲ್ಡ್ ಆಫೀಸರುಗಳಿಗಿನ ವಿವಾಹ ವ್ಯವಹಾರ ಸ್ಪರ್ಧೆಯ ಬಹುಮಾನ ವಿತರಣಾ ಸಮಾರಂಭವು ಕಳೆದ ತಾ. 28ರಂದು ಎಡಿಶನಲ್ ಜೋನಲ್ ಮೆನೇಜರ್ ಶ್ರೀ ಜಿ. ಎಚ್. ಥಾಕೂರ್ ಅವರಿಂದ ಶ್ರೀ ವೆಂಕಟಾಚಲಂರ ಅಧ್ಯಕ್ಷತೆಯಲ್ಲಿ ನೆರವೇರಿತು. ಉಡುಪಿಯ ಸೀನಿಯರ್ ಡಿವಿಜನಲ್ ಮೆನೇಜರ್ ಶ್ರೀ ಟಿ. ಆರ್. ಎ. ಪೈಗಳು, ಸ್ವಾಗತ ಭಾಷಣ ಮಾಡಿ, ಸ್ಪರ್ಧೆಯಲ್ಲಿ ಗೆದ್ದವರ ಪರಿಚಯ ಮಾಡಿದರು. ಶ್ರೀ ಥಾಕೂರರು ಶ್ರೀಗಳಾದ ಎಂ. ಡಿ. ಲೋಧಿ ಬೆಳಗಾಮ್ ಶಾಬೆ, ಬಿ. ನಾರಾಯಣ ರಾವ್ ಚಿಕಮಗಳೂರು, ಎಮ್. ಆರ್. ಸಿಂಗ್ರ ಅಯ್ಯಂಗಾರ್ ಬಳ್ಳಾರಿ, ಇವರಿಗೆ ಕ್ರಮವಾಗಿ ಪ್ರಥಮ, ದ್ವಿತೀಯ, ತೃತೀಯ ಬಹುಮಾನ ಸಡಕಗಳನ್ನು ಹಂಚಿ, ಜಾಲಿ ವರ್ಷದಲ್ಲಿ ಇನ್ನಷ್ಟು ವಿಮಾ ವ್ಯವಹಾರ ಹೆಚ್ಚಿಲೆಂದರು. ಅಧ್ಯಕ್ಷರ ಭಾಷಣವಾದ ಮೇಲೆ, ಅಸಿಸ್ಟಾಂಟ್ ಡಿವಿಜನಲ್ ಮೆನೇಜರ್ ಶ್ರೀ ವೆಂಕಟಸುಬ್ಬಯ್ಯನವರು ಕೃತಜ್ಞತೆಗಳನ್ನರ್ಪಿಸಿದರು.

ಲಾ ಕಾಲೇಜ್ ಯೂನಿಯನ್ ಉದ್ಘಾಟನೆ—ಉಡುಪಿ ಲಾ ಕಾಲೇಜಿನ ಯೂನಿಯನ್ ಉದ್ಘಾಟನಾ ಸಮಾರಂಭವು ಕಳೆದ ತಾ. 26ರಂದು ಜಿಲ್ಲಾ ಹಾಗೂ ಸೆಶನ್ಸ್ ನ್ಯಾಯಾಧೀಶರಾದ ಶ್ರೀ ಪಿ. ಸಿ. ರಾವ್ ಚಂದ್ರಯ್ಯನ ಅವರಿಂದ ನೆರವೇರಿಸಲ್ಪಟ್ಟಿತು. ಶ್ರೀ ಎಲ್. ಜಿ. ಸುವಾರಿಸರು ಸ್ವಾಗತಿಸಿದರು. ಎಕಡೆಮಿ ರಿಜಿಸ್ಟ್ರಾರ್ ಡಾ. ಟಿ ಎಂ. ಎ ಪೈಯವರು ಪರಿಚಯ ಭಾಷಣಮಾಡಿದರು. ಉದ್ಘಾಟಕರು ಜಿನ್ನಾಗಿ ಶ್ರಮ ಮತ್ತು ಆಸಕ್ತಿಯಿಂದ ಅಭ್ಯಾಸ ನಡೆಸಿದರೆ ಮಾತ್ರ ಕಾನೂನಿನಲ್ಲಿ ನಿಷ್ಣಾತೆಗಳಿಸಲು ಸಾಧ್ಯವೆಂದುಸುಂತಾಗಿ ಹೇಳಿದರು. ಶ್ರೀ ಎ. ಎಸ್. ಎಸ್. ಹೆಬ್ಬಾರರು ಧನ್ಯವಾದಗಳನ್ನರ್ಪಿಸಿದರು.

ಬಿಲ್ಲವ ಸಮಾಜ ಸೇವಾ ಸಂಘ—ಮುಲ್ಕಿಯ ಈ ಸೇವಾ ಸಂಘದಲ್ಲಿ ಶ್ರೀ. ನಾರಾಯಣ ಗುರುಸ್ವಾಮಿಯವರ ಸೂರನಿಳನಿ ಜನ್ಮದಿನಾಚರಣೆಯು ಶ್ರೀ. ಕೆ. ಪಿಟ್ಟಪ್ಪರವರ ಅಧ್ಯಕ್ಷತೆಯಲ್ಲಿ ನೆರವೇರಿತು ಶ್ರೀ ಎನ್ ಟಿ. ಸುವರ್ಣರು ಸ್ವಾಗತಿಸಿದ ಬಳಿಕ ಶ್ರೀ. ಪೂವಯ್ಯ ಮಾಸ್ತರರು ಸಂದೇಶಗಳನ್ನೋದಿದರು. ಶ್ರೀ. ಪದ್ಮಶೇಖರ್ ಡಾ. ರಾಯಪ್ಪ ಕಾಮತ್ ಮೊದಲಾದವರು ಉಪನ್ಯಾಸಮಾಡಿದರು. ಶ್ರೀ ಕೆ. ಸೋಮಪ್ಪ ಸುವರ್ಣರು ಧನ್ಯವಾದಗಳನ್ನರ್ಪಿಸಿದರು. ಅಂತ್ಯದಲ್ಲಿ ಮನೋರಂಜನಾ ಕಾರ್ಯಕ್ರಮಗಳು ನೆರವೇರಿದವು.

ಸಂತಾಪ ಸೂಚನೆ—ಕಳೆದ ತಾ. 27ರಂದು ಶ್ರೀ ಜಿ. ಸೋಮಶೇಖರ ರಾಯರ ಅಧ್ಯಕ್ಷತೆಯಲ್ಲಿ ದ. ಕ. ಜಿಲ್ಲಾ ಶ್ಯಾಟ್ಸ್ ಆಸ್ಸಿಸಿಯೆಶನ್ ಸಭೆ ಜರಗಿದಾಗ ಸ್ವಾಗತ ಕಮಿಟಿಯ ರಾಗಿದ್ದ ಶ್ರೀ ಬಿ. ಎಸ್. ಭಾಸ್ಕರ ರೈಗಳ ನಿಧನಕ್ಕೆ ಸಂತಾಪ ಸೂಚಿಸುವ ನಿರ್ಣಯವಾಯಿತು. ಶ್ರೀಗಳಾದ ಎಸ್. ಮುಕುಂದ ರಾವ್ ಎಮ್. ಎಲ್. ಸಿ., ಶ್ರೀ ಎಸ್. ಎಸ್. ಎಂತಾಳ್, ಸಿಟ್ಟಿಲ್ ಕಾಮತ್, ಎ. ನಾರಾಯಣ ಹೆಗ್ಡೆ, ಡಾಕ್ಟರ್ ಮೊದಲಾದವರು ಮೃತರ ಗುಣಗಾನ ಮಾಡಿದರು. ದಿವಂಗತರ ಭೃತ್ಯಚಿತ್ರದ ಅನಾವರಣ ಮಾಡಬೇಕೆಂದೂ, ತರಾಯಿಸಲಾಯಿತು

ಸ್ವತಂತ್ರ ಪಕ್ಷದ ಮಹಾಸಭೆ—ದ. ಕ. ಜಿಲ್ಲಾ ಸ್ವತಂತ್ರ ಪಕ್ಷದ ಮಹಾ ಸಭೆಯು ಶ್ರೀ ಜಿ. ಎಸ್. ಲೋಬೋ ಪ್ರಭು ಇವರ ಅಧ್ಯಕ್ಷತೆಯಲ್ಲಿ ಇದೇ ತಾ. 3ರಂದು ಜರಗಿ, ಬೆಳ್ಳೆಯ ಲೋಕಸಭಾ ದಕ್ಷಿಣ ಕ್ಷೇತ್ರದ ಎಲ್ಲಾ ಮತದಾರ ಕ್ಷೇತ್ರಗಳಿಗೂ ಉತ್ತರದ ಹರಿಜನ ಕಾಡಿಟ್ಟು ಮತದಾರ ಕ್ಷೇತ್ರ ಮೂಡಬಿದ್ರಿಗೂ, ಹುರಿಯಾಳುಗಳ ನಿರ್ಧಾರದ ಪಟ್ಟಿಯಂತೆ, ಚುನಾವಣಾ ಕಾರ್ಯಗಳ ಯೋಜನೆಯನ್ನು ಮಂಜೂರು ಮಾಡಲಾಯಿತು. ಮಿಕ್ಕುಳಿದ ಉತ್ತರದ ಮತದಾರ ಕ್ಷೇತ್ರದ ಲಾರ್ಜಿಗಳನ್ನು ಇತರ ರಾಜಕೀಯ ಪಕ್ಷಗಳೊಂದಿಗೆ ವಿಚಾರ ವಿನಿಮಯ ಮಾಡಿ ನಿರ್ಧರಿಸಬೇಕೆಂದಾಯಿತು, ಶ್ರೀ ಕೆ. ಬಿ. ಜಿನರಾಜ ಹೆಗ್ಡೆ, ಡಾ| ಎಮ್. ಎಸ್. ಹೆಗ್ಡೆ, ಶ್ರೀಗಳಾದ ವಾಸುದೇವ ಪೈ, ಬಿ. ತಿಮ್ಮಪ್ಪ ಶೆಟ್ಟಿ, ಉಗ್ಗಪ್ಪ ಶೆಟ್ಟಿ, ಬೈಲೂರು ವಾಸುದೇವ ರಾವ್, ಎಚ್. ನಾಗಪ್ಪ, ಗೋಪಾಲ ಸಾಲಿಯಾನ್ ಮೊದಲಾದವರು ಪಕ್ಷದ ಉದ್ದೇಶ ಸಾಧನೆಯ ಕುರಿತು ಸಲಹೆಗಳನ್ನಿತ್ತರು.

ಹೆಡು ತೋನ್ಸೆ— ಅಡ್ಡ ಬೆಂಗ್ರೆಯಲ್ಲಿ ಕಳೆದ ತಾ. 30ರಂದು ಶ್ರೀ ಟಿ. ಎಸ್. ಸುಲೇಮಾನ್ ಸಾಹೇಬರು ಹೊಸತಾಗಿ ಸರಕಾರದಿಂದ ಏರ್ಪಡಿಸಲಾದ ಎಲಿಮೆಂಟರಿ ಶಾಲೆಯ ಉದ್ಘಾಟನೆಯನ್ನು ಶ್ರೀ ಟಿ. ಗೋವಿಂದ ಉಡುಪರ ಅಧ್ಯಕ್ಷತೆಯಲ್ಲಿ ನೆರವೇರಿಸುತ್ತಾ ಈ ಶಾಲೆಯ ಆವಶ್ಯಕತೆಯನ್ನೂ, ಇದು ಮುಂದಕ್ಕೆ ಹಾಯರ್ ಎಲಿಮೆಂಟರಿಯಾಗುವಂತೆ ಜನರು ಮಾಡಬೇಕಾದ ಪ್ರಯತ್ನವನ್ನೂ ವಿವರಿಸಿದರು. ಅಧ್ಯಕ್ಷರ ಭಾಷಣವಾದ ಮೇಲೆ ಮಕ್ಕಳಿಗೆ ಸಿಹಿ ತಿಂಡಿ ವಿತರಣೆಯಾಗಿ, ಅಧ್ಯಾಪಕ ಶ್ರೀ ಕೆ. ಸೆಟ್ಟರು ಧನ್ಯವಾದವನಿತ್ತರು.

ತಲ್ಲೂರು— ಸ್ಥಳೀಯ ಸೇವಾ ಸಹಕಾರಿ ಸಂಘದ ವರ್ಷಾವಧಿ ಮಹಾ ಸಭೆಯು ಕಳೆದ ತಾ. 27ರಂದು ಶ್ರೀ ಟಿ. ನಾರಾಯಣ ಕಾಮತರ ಅಧ್ಯಕ್ಷತೆಯಲ್ಲಿ ಜರಗಿ 61-62 ನೇ ಆಡಳಿತಾ ಸಮಿತಿಗೆ ಶ್ರೀಗಳಾದ ಟಿ. ನಾರಾಯಣ ಕಾಮತ್, ಟಿ. ರಾಮಕೃಷ್ಣ ಪ್ರಭು, ಟಿ. ಎಡ್ವಿನ್ ಮೆಂಡೋನ್ಸ್, ಟಿ. ಡಿ. ರಾಜೀವ ಸೆಟ್ಟಿ, ಮೇಲ್ಮನೆ ಅಣ್ಣಪ್ಪ ಸೆಟ್ಟಿ ಇವರು ಅವಿರೋಧವಾಗಿ ಆಯ್ಕೆಯಾಗಿದ್ದರು. ಶ್ರೀ ಬಿ. ಸುಬ್ಬಣ್ಣ ಶೆಟ್ಟಿ, ಶ್ರೀ ಕೆ. ಪಿ. ಶೀನಪ್ಪ ಶೆಟ್ಟಿ, ಮೊದಲಾದವರು ಸಮಯೋಚಿತ ಭಾಷಣಗಳನ್ನಿತ್ತರು.

ದ. ಕ. ಜಿಲ್ಲಾ ಸ್ಪೆಶಲ್ ಅಸಿಸ್ಟೆಂಟ್ ಕಮಿಶನರರ ಕೋರ್ಟಿನಲ್ಲಿ

Old O. P. ನಂಬ್ರ 138/1961

ರಾಮಯ್ಯ ನ್ಯಾಳ —ಅರ್ಜಿದಾರ.

1. ಸೀನ ಸೆಟ್ಟಿ 2. ಹರಿಮಾಧವ ಪ್ರಭು 3. ಫ್ರಾನ್ಸಿಸ್ ಡಿಸೋಜ —ಎದ್ರಿರು

ಅರ್ಜಿದಾರನಿಂದ ಎದ್ರಿರಿಗೆ ಶಾಶ್ವತ ಸಂರಕ್ಷಕ್ಕೆ ಸಲತಕ್ಕ ಗೇಣಿಯನ್ನು ಮೇಲ್ಕಂಡ ಅರ್ಜಿಯಲ್ಲಿ ಕೋರ್ಟು ಡಿಪೊಜಿಟು ಮಾಡಿರುತ್ತಾನೆ. ಸದ್ರಿ ಅರ್ಜಿಯು ಉದ್ರಿ ಪೊಕ್ಕಾಮಿನಲ್ಲಿ ತಾ. 25—9—61ಕ್ಕೆ ಇಟ್ಟಿದೆ. ಸದ್ರಿ ಅರ್ಜಿಯ 2ನೇ ಎದ್ರಿ ಎಲ್ಲೂರು ಗ್ರಾಮದ ಮೂಡಿಯೂರು ಮೂಹಿದ ಪ್ರಭುಗಳ ಮಗ ಹರಿಮಾಧವ ಪ್ರಭುಗಳು ಸದ್ರಿ ಅರ್ಜಿ ಕುರಿತು ಯೇನಾದರೂ ಆಕ್ಷೇಪಣೆ ಇದ್ದರೆ ಸದ್ರಿ ಕೋರ್ಟಿನಲ್ಲಿ ತಾ. 25—9—61ನೆ ಬೆಳಿಗ್ಗೆ 11 ಗಂಟೆಗೆ ಉದ್ರಿ ಪೊಕ್ಕಾಮಿನಲ್ಲಿ ಹಾಜರಾಗಿ ಜಾಹೀರುಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ಸದ್ರಿಯವರ ಗೈರುಹಾಜರಿಯಲ್ಲಿ ತೀರ್ಮಾನಿಸಲಾದೀತು.

K. I. Aithal
Vakil for Pitilioner

ಉದ್ರಿ, 29—8—61.

ಕಾರ್ಕಳ ಡಿ. ಮು. ಕೋರ್ಟನಲ್ಲಿ.

O. S. 346/1961-

ಚಂದ್ರಮತಿಅಮ್ಮ —ವಾದಿಳು.

1. ತಿಮ್ಮಯ್ಯ ಶೆಟ್ಟಿ. 2. ಕೃಷ್ಣ ಶೆಟ್ಟಿ. —ಪ್ರತಿವಾದಿರು.

1. ತಿಮ್ಮಯ್ಯ ಶೆಟ್ಟಿ, ಗೋಪಿ ಶೆಟ್ಟಿರ ಮಗ, ಕಾರ್ಕಳ ತಾಲ್ಲೂ ಮುಡಾರು ಗ್ರಾಮದ ಹೊಳೆ ದಡ್ಡು ಬಳಿಯರುನವ.

1ನೇ ಪ್ರತಿವಾದಿ ಆದ ನಿಮಗೆ ಈ ನೂಟಿಸ ತಿಳಿಸುವದೇನಂದ್ರೆ:—

ನೀವು ಮತ್ತು 2ನೇ ಪ್ರತಿವಾದಿ ಕೂಡಾ ವಾದಿಳವಳಿಗೆ ಚಾಲಗೇಣಿ ಹೆಕ್ಕಿಸಿಂದ ಆನುಭವಿಸಿಬರುವ ಆಸ್ತಿಯ ಬಾಬ್ತು ನಿಮ್ಮಿಂದ ಬರತಕ್ಕ ಚಾಲಗೇಣಿ ಗೇಣಿ ಬಾಕಿ ಬಡ್ಡಿ ಕೂಡಾ ರೂ. 516—46ಕ್ಕೆ ವಾದಿಳು ನಿಮ್ಮ ಮೇಲೆ ದಾಕ್ಲು ಮಾಡಿದ ಸದ್ರಿ ದಾವೆಯು ತಾರೀಕು 18—9—1961ಕ್ಕೆ ನಿಮಗೆ ಆಕ್ಕೇರ ನೋಟೀಸಿನ ಬಗ್ಗೆ ಇಟ್ಟಿದೆ. ಆಕ್ಷೇಪ ಇದ್ರೆ ಸದ್ರಿ ದಿನ ಬೆಳಿಗ್ಗೆ 10 ಘಂಟೆಗೆ ಮೇಲ್ಕಂಡ ಕೋರ್ಟು ಮುಂದೆ ನೀವು ಹಾಜ್ರಾಗಿ ಉದಾಹರಣೆ ಕೊಡತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರ ಹಾಜ್ರಿಯಲ್ಲಿ ದಾವಾ ತೀರ್ಮಾನವಾಗುವದು ಎಂತ ಕೋರ್ಟ್‌ದ ಹುಕ್ಮಂ ಪ್ರಕಾರ ತಿಳಿಸಿಯದೆ

K. V. Kamath
Advocate for Plaintiff.

Karkal, 3—9—1961.

ಸುಲಭ ದರದಲ್ಲಿ ಶಾಲೆಗಳಿಗೆ ಬೇಕಾಗುವ

ಯಾವತ್ತೂ ಫಾರ್ಮುಗಳೂ ಹಾಜರಿ ರಿಜಿಸ್ಟ್ರಿಗಳೂ ಸಿಗುತ್ತವೆ

ನವಯುಗ ಪ್ರೆಸ್ ಉಡುಪಿ.

ಪುಸ್ತಕ ವಿಮರ್ಶೆ

[ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿ ವಿನಂತಿ.— ಸಂ. ನ.

ಅಧ್ಯಾತ್ಮ ಪ್ರೇರಣೆಯಿಂದ ಕರ್ತವ್ಯದೆಡೆಗೆ—ಲೇಖಕ ಹಾಗೂ ಸಂಪಾದಕರು: ಶ್ರೀ ಉ. ಲಕ್ಷ್ಮೀನಾರಾಯಣ ಕೆಣಿ. ಪ್ರಕಾಶಕರು: ಗ್ರಾಮಸೇವಾ ಪ್ರತಿಷ್ಠಾನ, ಮಣಿಪಾಲ, ದ. ಕ. ಪುಟಗಳು: ೧೮೨. ಬೆಲೆ: ೨—೫೦.

ಉಡುಪಿಯ ಬೇಂಕಿಂಗ್, ಗೃಹೋದ್ಯಮ ಹಾಗೂ ಚಿಕ್ಕ ಪುಟ್ಟ ಕೈಕಾರಿಕೆಗಳು ಮತ್ತು ಶಿಕ್ಷಣದಕ್ಷೇತ್ರಗಳಲ್ಲಿ ದ್ರುತಗತಿಯ ಪ್ರಗತಿಯನ್ನು ಪಡೆಯುವುದಕ್ಕೆ ಮೂಲಕಾರಣ ಪುರುಷರಾದ ದಿವಂಗತ ಉಪೇಂದ್ರ ಅನಂತ ಪೈಯವರಿಂದ ಒಂದಲ್ಲ ಒಂದು ರೀತಿಯಿಂದ ಉಪಕೃತರಾಗಿದವರು ಉಡುಪಿಯ ಪರಿಸರದಲ್ಲಿರಲಾರರು. ಭಗವದ್ಗೀತೆಯ "ಕಮಣ್ಯೇವಾಧಿಕಾರಸ್ತೇ" ಎಂಬುದನ್ನು ನಂಬಿ ಕರ್ಮಧುರಂಧರರಾಗಿ, ಕರ್ಮಯೋಗಿಗಳಾಗಿ ತನ್ನ ಕರ್ತವ್ಯವೆಂದು ಜನಸೇವೆಗೆ ಅನುಕೂಲವಾಗುವ ಹತ್ತು ಕಾರ್ಯಕ್ರಮಗಳನ್ನು ರೂಪಿಸಿ ಅವನ್ನು ತನ್ನ ಬಂಧುಬಾಂಧವರ—ಇಷ್ಟ-ಮಿತ್ರರ ಸಲಹೆ ಸಹಕಾರಗಳಿಂದ ಕಾರ್ಯರೂಪಕ್ಕೆ ತಂದರು. "ನಹಿ ಕಶ್ಚಿತ್ ಕ್ಷಣಮಪಿ ಜಾತು ತಿಷ್ಠತ್ಯಕರ್ಮಕೃತ್" ಎಂಬಂತೆ ಕೊನೆಯುಸಿರೆಳೆಯುವವರೆಗೂ ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಅವರು ಆಸಕ್ತರಾಗಿದ್ದರು. "ನಹಿ ಕಲ್ಯಾಣಕೃತ್ ಕಶ್ಚಿದ್ದುರ್ಗತಿಂ ತಾತ ಗಚ್ಛತಿ" ಎಂಬಂತೆ ಸರ್ವಜನ ಕಲ್ಯಾಣಕ್ಕಾಗಿ ದುಡಿಯುತ್ತ ತಮ್ಮ ಬಾಳನ್ನು ಹಸನು ಮಾಡಿಕೊಂಡ ಇವರು "ನೈನಂ ಛಿಂದಂತಿ ಶಸ್ತ್ರಾಣಿ ನೈನಂ ದಹತಿ ಪಾವಕಃ | ನ ಚೈನಂ ಕ್ಲೇದಯಂತ್ಯೋ ಪೋ ನಶೋಷಯತಿ ಮಾರುತಃ ||" ಎಂಬ ಆತ್ಮದ ಅವಿನಾಶತೆಯನ್ನೂ ಅರಿತುಕೊಂಡಿದ್ದರು. ಅವರ ಭೌತಿಕ ರೂಪವಿಂದು ಇಹದಲ್ಲುಳಿದಿಲ್ಲವಾದರೂ ಅವರ ಅವಿನಾಶಿಯಾದ 'ಆತ್ಮ'ದ ಪ್ರೇರಣೆ—ಕರ್ತವ್ಯಪಾಲನೆಯಭಾವ—ಇಂದಿಗೂ ಹಲವರಿಗೆ ಮಾರ್ಗದರ್ಶಕವಾಗಿ ನಿಂತಿದೆ, ಮುಂದಕ್ಕೂ ನಿಲ್ಲುತ್ತದೆ.

ಇಂತಹ ಆಧ್ಯಾತ್ಮಿಕ ಪ್ರೇರಣೆಯಿಂದ ಕರ್ತವ್ಯದ ಕಡೆಗೆ ಮನಸ್ಸು ಹರಿಸಿದ ದಿವಂಗತರ ಭವ್ಯ ಜೀವನ ತತ್ವಗಳ ಮೇಲೆ ಬೀರಿದ ಸಂಯುಕ್ತ ಪ್ರಕಾಶವೆನಿಸುವ ಈ ಪುಸ್ತಕದಲ್ಲಿ ಮೂರು ಅಧ್ಯಾಯಗಳಿವೆ. ಮೊದಲನೆಯದರಲ್ಲಿ ಪೈ ಮನೆತನ—ಮಣಿಪಾಲದ ಚರಿತ್ರೆ, ಪೈಯವರ ಕಾರ್ಯರಂಗಗಳ ಸೂಕ್ಷ್ಮ ಪರಿಚಯವಿದ್ದರೆ, ಎರಡನೆಯದರಲ್ಲಿ ಪೈಯವರ ಪರಿಚಯವಿರುವವರ, ಅವರಿಂದ ಉಪಕೃತರಾದವರ ಸ್ವಅನುಭವ ಮತ್ತು ವಿವಿಧ ದೃಷ್ಟಿಗಳಿಂದ ಪರಿಪಕ್ವವಾದ ಲೇಖನ ಮಾಲೆಯಿದೆ. ಇದರಿಂದ ಪೈ ಜೀವನದ ನಾಲ್ಕೂ ನಿಟ್ಟಿನ ಪರಿಚಯವಾಗುವುದು. ಕೊನೆಯ ಅಧ್ಯಾಯದಲ್ಲಿ ಉಪೇಂದ್ರ ಅನಂತ ಪೈಯವರು ಕರ್ತವ್ಯದೆಡೆಗೆ ಹರಿದ ಬಗೆ, ಅವರ ಉದಾರ ಗುಣ ಸ್ವಭಾವಗಳು ಕರ್ಮಯೋಗದಲ್ಲಿ ಅವರಿಗಿರುವ ಆಸಕ್ತಿ—ನಿಷ್ಠೆ ಮತ್ತದರ ಆಚರಣೆಗಳನ್ನು ಲೇಖಕ ಶ್ರೀ ಕೆಣಿಯವರು ವಿವರಿಸಿದ್ದಾರೆ. ಜೀವನ ಚರಿತ್ರೆಯನ್ನು ವಿವರಿಸುವ ಗ್ರಂಥಗಳಲ್ಲಿ ಇದು ಈ ಹೆಚ್ಚಿನ ಕಾರಣದಿಂದಲೇ ವಿಶಿಷ್ಟ ಪೂರ್ಣವಾಗಿದೆ. ಪುಸ್ತಕದಲ್ಲಿ ದಿ| ಪೈಯವರ ಜೀವನಕ್ಕೆ ಸಂಬಂಧಿಸಿದ ಹಲವಾರು ಚಿತ್ರಗಳು ವಿಷಯ ಗ್ರಹಣಕ್ಕೆ ಸಹಕಾರಿಯಾಗಿವೆ. ಉತ್ತಮವಾದ ಕಾಗದ, ರಕ್ಷಾಪತ್ರ ಮತ್ತು ಮುದ್ರಣಗಳು ಇದನ್ನು ಓದಲೇಬೇಕೆಂಬ ಕರ್ತವ್ಯದತ್ತ ಕಂಡವನ ಮನಸ್ಸನ್ನು ಹರಿಸಲು ಸಮರ್ಥವಾಗಿವೆ.

ದಿ|| ಉಪೇಂದ್ರ ಅನಂತ ಪೈಯವರ ಜೀವನದಿಂದ ನಾವು ಕಲಿಯಬಹುದಾದ—ಕಲಿಯಲೇ ಬೇಕಾದ ಹಲವಾರು ವಿಷಯಗಳಿವೆ. ಆಚರಣೆಯಿಲ್ಲದ ಬರಿಯ ಉಪದೇಶ ಸಲ್ಲದು—ಎಂಬುದೇ ಇವುಗಳಲ್ಲಿ ಅಮೂಲ್ಯವಾದುದು. ಕನ್ನಡದ ಜನಕ್ಕೆ ಇಂತಹ ಸತ್ಪ್ರೇರಣೆ ನೀಡಬಲ್ಲ ಈ ಪುಟ್ಟ ಆದರೂ ಅಮೂಲ್ಯ ಗ್ರಂಥನನ್ನು ಸಂಗ್ರಹಿಸಿದ ಶ್ರೀ ಕೆಣಿಯವರೂ ಪ್ರಕಾಶಕರೂ ಖಂಡಿತಕ್ಕೂ ಅಭಿನಂದನಾರ್ಹರು. ಕನ್ನಡಿಗರು ಈ ಪ್ರಕಟಣೆಯಿಂದ ಪರ್ಯಾಪ್ತ ಲಾಭ ಅವಶ್ಯಪಡೆದುಕೊಳ್ಳಬೇಕು.

—ಗೋರಾ.

ಗೋಪೀನಾಥ್ ಕಥಾಸ್ಪರ್ಧೆ

ಹಿಂದಿನಂತೆಯೇ ಈ ವರ್ಷವೂ ತುಮಕೂರಿನ ಶ್ರೀ ನರಸಿಂಹ ಇನ್‌ಸ್ಟಿಟ್ಯೂಟಿನ ಪ್ರಿನ್ಸಿಪಾಲರಾದ ಶ್ರೀ ಹೆಚ್. ಸತ್ಯಮೂರ್ತಿಯವರು ತಮ್ಮ ಸಹೋದರ ದಿ|ಹೆಚ್. ಗೋಪೀನಾಥ್‌ರವರ ಸ್ಮರಣಾರ್ಥವಾಗಿ ಕನ್ನಡ ಕಥಾಸ್ಪರ್ಧೆ ಏರ್ಪಡಿಸಿದ್ದಾರೆ. ಕನ್ನಡ ಬರಹಗಾರರೆಲ್ಲರೂ ಈ ಸ್ಪರ್ಧೆಯಲ್ಲಿ ಭಾಗವಹಿಸಬಹುದು. ಈ ಕೆಳಗಿನಂತೆ ಬಹುಮಾನ ಕೊಡಲಾಗುವುದು.

ಪ್ರಥಮ ಬಹುಮಾನ ರೂ. ೨೫—೦೦
ದ್ವಿತೀಯ ,, ರೂ ೧೫—೦೦
ತೃತೀಯ ,, ರೂ. ೧೦—೦೦

ಸ್ಪರ್ಧೆಗೆ ಕಳಿಸಲಾಗುವ ಕತೆಯು ಯಾವುದರ ಭಾಷಾಂತರವೂ ಆಗಿರಕೂಡದು. ಮತ್ತು ಈ ಮುಂಚೆ ಎಲ್ಲೂ ಪ್ರಕಟವಾಗಿರಕೂಡದು. ಕತೆಯನ್ನು ಕಾಗದದ ಒಂದೇ ಭಾಗದಲ್ಲಿ ಬರೆಯಬೇಕಲ್ಲದ ಕತೆಗಾರರ ಹೆಸರು ವಿಳಾಸವನ್ನು ಪ್ರತ್ಯೇಕವಾಗಿ ಬರೆದು ಕಳಿಸಬೇಕು. ಬಹುಮಾನಕ್ಕೆ ಯೋಗ್ಯವೆಂದು ತ್ರಿಮೂರ್ತಿಗಳ ಸಮಿತಿಯಲ್ಲಿ ನಿರ್ಧಾರವಾಗುವುದೇ ಅಭ್ಯರ್ಥಿರು ತೀರ್ಮಾನ. ಬಹುಮಾನಿತ ಕಥೆಗಳನ್ನು "ವಿಜಯವಾಣಿ" ದಸರಾ ಸಂಚಿಕೆಯಲ್ಲಿ ಪ್ರಕಟಿಸಲಾಗುತ್ತೆ. ಸ್ಪರ್ಧೆಗೆ ಪ್ರವೇಶಧನವಿಲ್ಲ. ಕತೆ ಸಾವಿರ ಪದಗಳಿಗೆ ಮೀರಿರಕೂಡದು. ಕತೆಗಳನ್ನು ಸೆಪ್ಟೆಂಬರ್ ೨೫ ರೊಳಗಾಗಿ ಕೆಳಗಿನ ವಿಳಾಸಕ್ಕೆ ಕಳಿಸಿಬೇಕು.

ಸಂಪಾದಕ: ವಿಜಯವಾಣಿ
ಕನ್ನಡ ವಾರಪತ್ರಿಕೆ ತುಮಕೂರು

• ನಗೆ ಹನಿ •

ಮೂರ್ಖರು ಯಾರು?

ಇಬ್ಬರು ಮಿತ್ರರಿದ್ದರು ಅವರೊಂದು ದಿನ ಸರಕ್ಕರ ಭೆಟ್ಟಿಯಾದರು. ಆ ಮಾತು ಈಮಾತಿನಿಂದ ತೊಡಗಿ ತಮ್ಮ ಅಳಿಯನ ಗುಣನಡತೆಗಳ ವಿಮರ್ಶೆಗೆ ತೊಡಗಿದರು. ಮೊದಲಿನವನೆಂದ: "ನೋಡಯ್ಯ, ನನ್ನ ವನ ಪೆದ್ದತನವನ್ನು! ಮೊನ್ನೆ ಒಂದು ದಿನ ಆತನ ಕೈಯಲ್ಲಿ ಹಣಕೊಟ್ಟು ಬಾಡಿಗೆಗೆ ಕಾರನ್ನು ತರುವಂತೆ ಹೇಳಿದೆ. ಆತ ಟೇಕ್ಸಿ ಸ್ಟಾಂಡಿಗೆ ಹೋಗಿ ಹಾಗೆಯೇ ಬರಿಗೈಯ್ಯಲ್ಲಿ ಮರಳಿ ಬಂದ. ಇಂತಹವನನ್ನು ಕಟ್ಟಿಕೊಂಡು ಮಾಡುವುದಾದರೂ ಏನು?

ಆಗ ಎರಡನೆಯವನು ತನ್ನ ನೌಕರನ ಗುಣಗಾನ ಮಾಡಿದನು: "ನಿನ್ನವನು ಪೇಟೆಸುತ್ತಿಯಾದರೂ ಬಂದ. ಆದರೆ, ನನ್ನವ ಶುದ್ಧ ಸೋಮಾರಿ. ಇಟ್ಟ ಹೆಜ್ಜೆಯನ್ನು ಮತ್ತೆ ತೆಗೆಯಲಾರ."

"ಏಕೆ? ಏನಾಯಿತು?"

ಮೊದಲಿನವನು ಕುತೂಹಲದಿಂದ ಪ್ರಶ್ನಿಸಿದ

"ನೋಡು, ನಿನ್ನೆದಿನ ಆತನನ್ನು ಕರೆದು, ಕ್ಲಬ್ಬಿಗೆ ಹೋಗಿ ನಾನು ಇದ್ದೇನೆಯೋ ಇಲ್ಲವೋ ಎಂದು ನೋಡಿ ಬರುವಂತೆ ಹೇಳಿದೆ. ಆದರೆ, ಆತ ಕಂಬಿಕೀಳದೆ ಮಿಣ ಮಿಣನೆ ಕಣ್ಣು ಬಿಟ್ಟ. ಈ ರೀತಿಯ ನಿರುಪಯೋಗಿಯನ್ನು ಇಟ್ಟುಕೊಂಡರೆ ಪ್ರಯೋಜನವಾದರೂ ಏನು?"—ಎರಡನೆಯವ ವ್ಯಸನ ತೋರ್ಪಡಿಸಿದ.

ಅದೇ ಸಮಯದಲ್ಲಿ ಈ ಮಿತ್ರರ ಸೇವಕರಿಬ್ಬರೂ ರಸ್ತೆಯ ಇನ್ನೊಂದು ಪಕ್ಕದ ಚೌಕದಲ್ಲಿ ಒಬ್ಬರನ್ನೊಬ್ಬರು ಸಂಧಿಸಿದರು ತಂತಮ್ಮ ಯಜಮಾನರ ಸಂಬಂಧದಲ್ಲಿ ಅವರಲ್ಲಿ ಮಾತುಕತೆ ನಡೆಯಿತು. ಮೊದಲಿನವನ ಸೇವಕನೆಂದ—"ನೋಡಣ್ಣ, ನಮ್ಮ ಯಜಮಾನ ಶುದ್ಧ ಮೂರ್ಖ ಮೊನ್ನೆ ಮೊನ್ನೆ ಒಂದು ದಿನ ರೂಪಾಯಿ ನೋಟು ಕೊಟ್ಟು ಬಾಡಿಗೆಗೆ ಕಾರು ತೆಗೆದುಕೊಂಡು ಬರಲು ಹೇಳಿದರು. "ಯಾವ ಬಣ್ಣದ ಕಾರಾಗಬೇಕೆಂದು ಹೇಳುವುದು ಬೇಡವೆ? ಬರಿಗೈಯಲ್ಲಿ ಬಂದರೆ ಮತ್ತೆ ನಿಂದೆಗಳು ಬೇರೆ!"

ಆಗ ಎರಡನೆಯವನೆಂದ "ನನ್ನವರ ಕಥೆ ಕೇಳು. ಅವರಿಗೆ ನನ್ನಿಂದ ಕೆಲಸ ಮಾಡಿಸಿದಷ್ಟು ತೃಪ್ತಿಯಿಲ್ಲ. ಒಂದು ನಿಮಿಷ ಸುಮ್ಮನೆ ಕೂತುಕೊಳ್ಳಬಿಡುವುದಿಲ್ಲ. ನಿನ್ನೆದಿನ ನನ್ನನ್ನು ಕರೆಯ, ಕ್ಲಬ್ಬಿಗೆ ಹೋಗಿ ನಾನು ಇದ್ದೇನೆಯೋ ಇಲ್ಲವೋ ಎಂದು ನೋಡಿ ಬರಲು ಹೇಳಿದರು. ಮನೆಯಲ್ಲಿ ಫೋನಿನ ಬಳಿಯಲ್ಲಿ ಕುಳಿತಿದ್ದಾರೆ, ಕ್ಲಬ್ಬಿಗೆ ಫೋನು ಮಾಡಿ ಕೇಳಿ ತಿಳಿದುಕೊಳ್ಳಬಾರದೆ?

o o o

ವಿಚಿತ್ರ ಕಾಯಿಲೆ

ಡಾಕ್ಟರೊಬ್ಬರು ರೋಗಿಯನ್ನು ಪರೀಕ್ಷಿಸುತ್ತ ಆತನನ್ನು ಕೇಳಿದರು: "ನಿಮಗೇನು ಶಾರೀರಿಕ ತೊಂದರೆ?"

ರೋಗಿ—ಮತ್ತೇನಲ್ಲ ಸ್ವಾಮಿ, ಉಂಡನಂತರ ಹಸಿವೆಯೇ ಆಗುತ್ತಿಲ್ಲ. ಅದೇ ಕೆಂದು ಅರಿಯೆ.....

ಸುಭಾಷಿತಗಳು

ಈ ಭೂಲೋಕದಲ್ಲಿ ಮೂರು ವಸ್ತುಗಳು ಅನರ್ಘ್ಯವಾದುವುಗಳು. ೧. ಉದಕ. ೨. ಅನ್ನ ೩. ಸುಭಾಷಿತಗಳು. ಆದರೆ ಮಂಕುಬುದ್ಧಿಯವರು ವಜ್ರ ವೈಢೂರ್ಯಗಳೇ ಅಮೂಲ್ಯವಾದ ವಸ್ತುಗಳೆಂದು ಭಾವಿಸುವರು. ಆದಿಶಕ್ತಿಗೂ ಜ್ಞಾನಕ್ಕೂ ಇರುವ ಸಂಬಂಧ ಬಹಳ ಚಿಕ್ಕದು. ಮಂತ್ರಿಯನ್ನು ಆತನ ರಾಜ್ಯದಲ್ಲಿ ಸೂತ್ರ ಮನ್ನಿಸುವರು; ಆದರೆ ಪಂಡಿತನನ್ನು ಎಲ್ಲಾ ಎಡೆಗಳಲ್ಲಿ ಮನ್ನಿಸುವುದು ರೂಢಿ. ಕರ್ಮಗಳನ್ನು ನಿಷ್ಠಾಮಗುಣದಿಂದ ಮಾಡುವುದೇ ಜ್ಞಾನಿಯ, ಸುಲಕ್ಷಣವು. ಮಾಡಿದ ಕೆಲಸಗಳನ್ನು ಸಂಪೂರ್ಣವಾಗಿಯೂ, ಯೋಗ್ಯ ರೀತಿಯಲ್ಲಿಯೂ ನೆರವೇರಿಸುವುದು ಜ್ಞಾನಿಯ ಉದ್ದೇಶವು. ನಿಷ್ಕಾಮಕರ್ಮಯೋಗದಲ್ಲಿ ಪರೋಪಕಾರವೇ ಬಲವತ್ತರವಾದ ಚಿಹ್ನೆಯು ಚಂದನ ವೃಕ್ಷಗಳಿಂದ ಹಲವಾರು ಜನರಿಗೆ ಉಪಯೋಗವು ಲಭಿಸುವುದು. ಆದರೆ ಆ ಮರಗಳು ಇರುವ ಅರಣ್ಯಕ್ಕೆ ಅವುಗಳಿಂದ ಯಾವ ಉಪಕಾರವೂ ದೊರಕುವುದಿಲ್ಲ. ನೀತಿಯನ್ನು ಉಪದೇಶಿಸುವುದು ಕಷ್ಟವಲ್ಲ. ಆ ಉಪದೇಶದಂತೆ ವರ್ತಿಸುವುದು ಮಾತ್ರ ಬಹಳ ಕಷ್ಟವಾಗಿನೆ—ಮನೋವಾಕ್ಕಾಯಗಳಲ್ಲಿ ಏಕ ರೀತಿಯಲ್ಲಿ ನಡೆವವರಿಗೆ ಮಾತ್ರ ಧರ್ಮದ ಸಾರವು ಅರಿವಾಗುವುದು. ಅಂತಹ ಸತ್ಪುರುಷರಲ್ಲಿ ಶ್ರೀ ರಾಮಕೃಷ್ಣ ಪರಮಹಂಸರು, ಸ್ವಾಮಿವಿವೇಕಾನಂದರು, ರಾಜಾರಾಮ ಮೋಹನ ರಾಯ್‌ರವರು ಬಾಲಗಂಗಾಧರ ತಿಲಕರು ಮಹಾತ್ಮಾ ಗಾಂಧಿಯವರು ಮತ್ತು ಗೋಪಾಲಕೃಷ್ಣ ಗೋಖಲೆಯವರು ಕೆಲವರೆಂದರೆ ಅತಿಶಯೋಕ್ತಿಯಾಗದು. ಪ್ರಬಲವಾದ ಚಿತ್ತವುಳ್ಳ ಮಾನವರನ್ನು ಕವಿಗಳು ಕುಸುಮಮಾಲಿಕೆಗೆ ಹೋಲಿಸಿರುವರು ಇಂತಹ ಪುಣ್ಯ ಪುರುಷರು ಉತ್ತಮರ ಕಂಠದ ಮೇಲೂ, ಶಿರದ ಮೇಲೂ ಶೋಭಿಸುವರು. ಏಕಾಂಗಿಯಾಗಿ ಧ್ಯಾನಮಾಡುವ ಕೆಲವು ಪ್ರಬಲ ಜ್ಞಾನಿಗಳು ಕಾಡಿನಲ್ಲಿರುವ ಪುಷ್ಪಗಳಂತೆ ಜನಸಮುದಾಯಕ್ಕೆ ಉಪಯುಕ್ತವಾಗದೇ ಕ್ರಮೇಣ ಬಾಡಿಹೋಗುವ ಸಂಭವವೂ ಇದೆ. ಧನವಿದ್ವಾಗ ದಾನಮಾಡಿ, ಅಧಿಕಾರವಿದ್ವಾಗ ಸಹನೆಯನ್ನು ತೋರಿಸಿ, ದುಃಖಿತರನ್ನು ದುಃಖದಿಂದ ಪಾರುಮಾಡಿ, ನಡತೆಯಲ್ಲಿ ನಮ್ರತೆಯನ್ನು ಜೋಡಿಸಿ, ಬಾಳುವ ಮಾನವರೇ ಶ್ರೇಷ್ಠವರ್ಗದವರು. ಕಲ್ಪತರುವಿನಿಂದ ಶೋಕ ನಿವಾರಣ, ಬೆಳದಿಂಗಳಿನಿಂದ ಉಷ್ಣತೆಯ ನಿವಾರಣ, ಪುಣ್ಯತೀರ್ಥಗಳಲ್ಲಿ ಸ್ನಾನಮಾಡಿ ಶರೀರದ ಕೊಳೆಯ ನಿವಾರಣ-ಭಕ್ತಿಯಿದ್ದರೆ ಪಾಪ ನಿವಾರಣವಾಗುವುದು ವಾಡಿಕೆಯ ಮಾತು. ಜ್ಞಾನಿಯೂ, ಧರ್ಮಾತ್ಮನೂ ಆಗಿರುವ ಮಾನವನು ದುಃಖಗಳು ಬಂದೊದಗುವಾಗ ಧೈರ್ಯ ಕುಂದಲಾರನು. ಕರ್ಮಗಳಿವು ಉರಿದಂತೆಯೇ ಹೆಚ್ಚೆಚ್ಚು ಸುವಾಸನೆಯನ್ನು ಬೀರುವುದು. ಸದಾಚಾರಿಯು ಇತರರ ಟೀಕೆಯಲ್ಲಿಯೇ ತನ್ನ ಕಾಲವನ್ನೆಲ್ಲಾ ಕಳೆಯಲಾರನು—ಆತನು ಇತರರಲ್ಲಿರುವ ಸದ್ಗುಣಗಳನ್ನು ಮಾತ್ರ ಪ್ರಕಾಶಕ್ಕೆ ತರುವನು. ಚಂದ್ರಸಲ್ಲಿ ಕಳಂಕವಿದ್ದರೂ ಚಂದ್ರಿಕೆಯು ನಿರ್ಮಲವಾಗಿರುವಂತೆ ಉಪದೇಶಕನಲ್ಲಿ ದೋಷಗಳಿದ್ದರೂ, ಆತನ ಸುಭಾಷಿತಗಳು ಸ್ವಚ್ಛವಾಗಿದ್ದರೆ ಆತನು ಲೋಕೋಪಕಾರಿಯೆನಿಸಬಹುದು.

—ಶ್ರೀ ಎಂ. ಬಿ. ಶಂಕರ ರಾವ್.

ಸತ್ಯಾಗ್ರಹ ಕೀ ಜಯ್

ಶ್ರೀ ಹಾ| ಚಂದ್ರಶೇಖರ ಚಡಗ, ಸಾಂಡೇಶ್ವರ.

ಇದು ಸತ್ಯಾಗ್ರಹ ಚಳವಳಗಳ ಯುಗ ದಿನ ಬೆಳಗಾದರೆ, ಅರ್ಥಾತ್ ಬೆಳಿಗ್ಗೆ ಗಂಟೆ ಎಂಟಾದರೆ (ಏಕೆಂದರೆ ಈಗನವೆಲ್ಲಾ ಏಳುವುದು ಬೆಳಿಗ್ಗೆ ಗಂಟೆ ಎಂಟಾದ ಮೇಲೆಯೇ!) ಚಳವಳಗಳದೇ ಸುದ್ದಿ. ಗಂಟೆ ಎಂಟಾದೊಡನೆ, ಪೇಪರ್ ಮಾರುವ ಹುಡುಗ ಬಂದು "ಸಾರ್, ಪೇಪರ್" ಎಂದು ಕೂಗಿದಾಗ, "ಅಯ್ಯೋ, ಹಾಳು ಬೆಳಗಾಯ್ತಲ್ಲ" ಎಂದು ನೂರು ದೇವರಿಗೆ ಸಾವಿರ ಶಪಿಸಿ ಹಾಸಿಗೆಯಿಂದೆದ್ದು ಬಂದು ಪೇಪರು ತೆಗೆದುಕೊಂಡು, ಪುನಃ ಹಾಸಿಗೆಯಲ್ಲೇ ಕುಳಿತು, ಆಗಾಗಲೇ ಆಕೆ ತಂದಿತ್ತ ಬೆಡ್ ಕಾಫಿಯನ್ನು ನಿಧಾನವಾಗಿ ಹೀರುತ್ತಾ, ಪೇಪರಿನ ದಪ್ಪ ಅಕ್ಷರಗಳುಳ್ಳ ಸಾಲಿನ ಕಡೆಗೆ ದೃಷ್ಟಿ ಹಾಯಿಸಿದರೆ, ಅದರಲ್ಲಿ ಚಳವಳ, ಸತ್ಯಾಗ್ರಹಗಳದೇ ಸುದ್ದಿ.

ಈ ಚಳವಳಗಳ ಗಾಳಿ ಇತ್ತೀಚೆಗೆ ನಮ್ಮೂರಿಗೆ ಕೂಡಾ ಸೋಂಕಿದೆ. ನಮ್ಮೂರ ಮರಿಕಸಿ ಯಾನೆ ಕವಿಯೆಂದು ಹೇಳಿಸಿಕೊಳ್ಳುವ ರಾಜುವಿಗೆ, ವಾರಕ್ಕೊಂದಾವರ್ತಿಯಾದರೂ ಭಾರತ್ ಬ್ಲೇಡಿಗೆ ಒಂದಾಣೆ ತೆರಲು ಅಸಾಧ್ಯವಾದಾಗ, ಭಾರತ್ ಕಟ್ಟಿಂಗ್ ಸೆಲೂನಿನ ಚಂದ್ರುವು, ಹಳೆ ಬಾಕಿ ತೀರಿಸದೆ ನಿನ್ನ ಕ್ಷೌರ ಅಥವಾ ಗಡ್ಡ ಬೋಳಿಸುವಿಕೆ—ಯಾವುದನ್ನೂ ಮಾಡಲಿಕ್ಕಿಲ್ಲ"ವೆಂದು ತಾನೂ ಸತ್ಯಾಗ್ರಹ ಹೂಡಿದಾಗ, ರಾಜುವು ನೀಳವಾದ ಗಡ್ಡವನ್ನೇ ಇಟ್ಟುಬಿಟ್ಟನು." ಏನೋ ಕವಿ ಶ್ರೇಷ್ಠಾ, ಗಡ್ಡ ಬಿಟ್ಟು ಬಿಟ್ಟಿಯಲ್ಲೋ!?" ಎಂದವನನ್ನು ಕೇಳಿದರೆ, "ಲೋ, ಪ್ರಾಣಿ ನನ್ನ ಸತ್ಯಾಗ್ರಹದ ಸುದ್ದಿ ನಿನಗೆ ಗೊತ್ತಿಲ್ಲವೇ? ಕಾಸರಗೋಡುಕರ್ನಾಟಕಕ್ಕೆ ಸೇರುವ ತನಕ ನಾನು ಗಡ್ಡ ಬೋಳಿಸಿಕೊಳ್ಳುವುದಿಲ್ಲ" ಎಂದು ಘಂಟಾ ಘೋಷವಾಗಿ ಉತ್ತರಿಸುತ್ತಾನೆ. ಇನ್ನು ಅದೇ ಕವಿಯೊಡನೆ ಸಿನೇಮಾಕ್ಕೆ ಹೋಗೋಣವೇ ಅಂದರೆ, "ನಾನು ಪರ ಭಾಷೆಗಳಾದ ತಮಿಳು, ಯಾ ಹಿಂದೀ ಚಿತ್ರಗಳನ್ನು ನೋಡೋದಿಲ್ಲ' ಎಂದು ತನ್ನ [ಅ] ಸಾಧಾರಣ ಕನ್ನಡ ಪ್ರೇಮವನ್ನು ವ್ಯಕ್ತಪಡಿಸುತ್ತಾನೆ. ಅಸ್ಪಿತಪ್ಪಿ ನಮ್ಮೂರ ಥಿಯೇಟರಿನಲ್ಲಿ ಕನ್ನಡ ಸಿನೇಮಾವೇನಾದರೂ ಬಂದಾಗ ಅವನೊಡನೆ ಸಿನೇಮಾಕ್ಕೆ ಬರುವಿಯಾ? ಎಂದು ಕೇಳಿದರೆ ಆತ ತಲೆನೋವಿನ ನೆವನಹೂಡಿ ತಪ್ಪಿಸಿ ಕೊಳ್ಳುತ್ತಾನೆ.

ಇತ್ತೀಚೆಗೆ ನಮ್ಮ ಮಿತ ಭಾಷಿ ಕೂಡಾ ಒಂದು ಚಳವಳ ಆರಂಭಿಸಿದ್ದಾನೆ. ಓಹೋ, ಹಾಳು ಮರೆವು. ನಿಮಗೆ ನಮ್ಮ ಮಿತ ಭಾಷಿಯ ಪರಿಚಯ ಮಾಡಿ ಕೊಟ್ಟಿದ್ದೇನೋ ಇಲ್ಲವೋ ಎಂದು ನನಗೆ ನೆನಪಿಲ್ಲ. ಅದಿರಲಿ, ಅಂತೂ ಒಂದೇ ಮಾತಿನಲ್ಲಿ ನಮ್ಮ ಮಿತ ಭಾಷಿಯ ಪರಿಚಯ ಮಾಡಿ ಕೊಡುವುದಾದರೆ, ನಮ್ಮ ಮಿತ ಭಾಷಿ ಬಹಳ ಹಿತವಾಗಿ, ಮಿತವಾಗಿ ಮಾತನಾಡಿ ಆ ವಿಚಾರನ್ನು I mean ಬರುದನ್ನು ಗಳಿಸಿದ್ದಾನೆ. ಆತ ದಿನದಲ್ಲಿ 24 ಗಂಟೆ ಮಾತ್ರ ಮಾತನಾಡಿ ಉಳಿದ ಸಮಯವನ್ನು ಗ್ರಂಥಾಧ್ಯಯನ, ಸೂಲುವಿಕೆ ಮೊದಲಾದ ಶ್ರೇಷ್ಠ ಕಾರ್ಯಗಳಲ್ಲಿ ವಿನಿಯೋಗಿಸುವ ವ್ಯಕ್ತಿ. ಅವನು ಕೂಡಾ ಇತ್ತೀಚೆಗೆ ಒಂದು ಚಳವಳ ಕೈಕೊಂಡಿದ್ದಾನೆ. ಅದರ ಸಂಕ್ಷಿಪ್ತ ಪರಿಚಯವನ್ನು ನಾನು ನಿಮಗೆ ಕೊಡ ಬಯಸುತ್ತೇನೆ.

ಂಂ ಂಂ ಂಂ

"ಅಲ್ಲಾ, ಒಂದು ಲೆಕ್ಕ ಹೇಳ್ತೇನೆ.... ..." ನಾರ್ಣಪ್ಪಯ್ಯನವರು ತಮ್ಮ ಮೂಮೂಲು ಪಲ್ಲವಿ ಹಾಡಿ ನೇರಾಗಿ ವಿಷಯಕ್ಕೆ ಬರುವಷ್ಟರಲ್ಲೇ, ನಮ್ಮ ಮಿತ ಭಾಷಿ, "ದಮ್ಮಯ್ಯ ಸಾಹುಕಾರರೇ, ನೀವೇನು ಬೇಕಾದರೂ ಹೇಳಿ, ಕೇಳಿ. ಆದರೆ ಲೆಕ್ಕ ಮಾತ್ರ ಹೇಳಬೇಡಿ. ಏಕೆಂದರೆ ನನಗೆ ಲೆಕ್ಕದ ಮೇಲೆ ಎಷ್ಟು ಪ್ರೀತಿ ಅಂದರೆ ನಾನು ಶಾಲೆಯಲ್ಲಿ ಯಾವುದೇ ಸಾರಿ ಲೆಕ್ಕದಲ್ಲಿ ಸೊನ್ನೆಗಿಂತ ಕಡಿಮೆ ಮಾರ್ಕು ಪಡೆದವನೇ ಅಲ್ಲ'. ಎಂದು ಮೂವತ್ತೆರಡು ಹಲ್ಲುಗಳನ್ನು ಕಿರಿದು ಹೇಳಿದಾಗ ಸಾಹುಕಾರರು ಪಿಳಿ ಪಿಳಿ ಕಣ್ಣು ಬಿಡತೊಡಗಿದರಂತೆ.

ಒಂದೂವರೆ ಗಂಟೆಯ ವರೆಗೆ ದೇಶಸೇವೆಯೆಂದರೇನು? ದೇಶಭಕ್ತಿಯೆಂದರೇನು, ಸ್ವಾತಂತ್ರ್ಯವೆಂದರೇನು ಎಂದು ಹೇಳಿ ಸ್ವಾತಂತ್ರ್ಯಕ್ಕಾಗಿ ತಾನು ಸಲ್ಲಿಸಿದ ಸೇವೆಗಳನ್ನೆಲ್ಲಾ ವಿಸ್ತಾರವಾಗಿ ವಿವರಿಸಿ ನಮ್ಮ ದೇ. ಭ. ಶ್ಯಾಮಣ್ಣನು ಅಗಲೇ ತಲೆನೋವಿನಿಂದಾಗಿ ಅನಾಸಿನ್ ಕೊಳ್ಳಲು ಕಾಸೇನಾದರೂ ಉಳಿದಿದೆಯೇ ಎಂದು ಕಿಸೆಯೊಳಗೆ ಕೈಹಾಕಿ ಹುಡುಕುತ್ತಿದ್ದ ಮಿತಭಾಷಿಯೊಡನೆ ಕಡೆಗೊಮ್ಮೆ ವಾಡಿಕೆಯಂತೆ, "ಹೋಗಿಬರುತ್ತೇನೆ" ಎಂದಾಗ,

"ಅ್ಹಾಂ! ಇನ್ನು ನೀವು ಹೋಗಿ ಪುನಃ ಬರುವುದುಂಟೇ? ಬಂದರೂ ಭಾಷಣ ಕೂಡುವುದಿಲ್ಲವಷ್ಟೆ!" ಎನ್ನುತ್ತ ತಾನೂ ಬೇಗ ಬೇಗನೆ ಅಲ್ಲಿಂದ ಕಾಲ್ಕಿತ್ತನು.

ಮಾತನಾಡುವಾಗ ನಿಮಿಷಕ್ಕೊಮ್ಮೆ "ಗೊತ್ತಾಯಿತೋ, ಇಲ್ಲವೋ?" ಎಂದು ಹೇಳುವ ಅಭ್ಯಾಸವನ್ನಿರಿಸಿಕೊಂಡಿದ್ದ ದಾಸಪ್ಪಯ್ಯನವರು ಒಮ್ಮೆ ಮಾತನಾಡುತ್ತಾ ಮಾತನಾಡುತ್ತಾ ಮಿತಭಾಷಿಯೊಡನೆ "ಗೊತ್ತಾಯಿತೋ ಇಲ್ಲವೋ" ಎಂದು ಹೇಳಿ ಮತ್ತೇನೋ ಹೇಳಬೇಕು ಅನ್ನುವಷ್ಟರಲ್ಲಿ ನಮ್ಮ ಮಿತಭಾಷಿ, "ಇಲ್ಲ ಸ್ವಾಮಿ"ವೆಂದಾಗ ದಾಸಪ್ಪಯ್ಯನಿಗೆ ಏನೊಂದೂ ಅರ್ಥವಾಗದೆ ತಬ್ಬಿಬ್ಬಾದರು. ಕೊನೆಗೆ ಮಿತಭಾಷಿಯೊಡನೆ "ಏನು?" ಎಂದು ಕೇಳಿದಾಗ, "ಸ್ವಾಮಿ, ಎರಡು ವಾರದ ಹಿಂದೆ ನಮ್ಮ ಮಗ ವೆಂಕಟರಾಮ ನನಗೆ ಸಿಕ್ಕಿದ್ದನು. ಅವನೊಡನೆ ನಾನು, "ಏನೋ ವೆಂಕಟರಾಮೂ, ಈಗೇನು ಮಾಡುತ್ತಿರುವಿ?" ಎಂದು ಕೇಳಿದಾಗ, ಆತ. "ಮಲೇರಿಯೊಸಿಸೋಧಕ ಇಲಾಖೆಗೆ ಸೇರಿಬಿಟ್ಟಿದ್ದೇನೆ ಕಣೋ" ಎಂದನು. ನಿಮ್ಮಯ ಹಾಗೂ ಸಂತೋಷಭರಿತನಾದ ನಾನು. "ಹೌದೇನೂ, ಇಲಾಖೆಯಲ್ಲಿ ಯಾವ ಕೆಲಸವೋ ನಿನಗೆ, Salary ಎಷ್ಟು ಸಿಗುತ್ತೆ" ಎಂದು ಕೇಳಿದೆ. ಇದಕ್ಕೆ ಆತ, "Salary ಎನು ಬಂತೋ? ಮಲೇರಿಯಾ ನಿರೋಧಕ ಇಲಾಖೇಲಿ ಕೆಲಸ ಅಂದರೆ ಮನೆಯ ಜಗಲಿಯಲ್ಲಿ ಹಾಯಾಗಿ ಕುಳಿತು ನೊಣ, ನುಸಿ, ನುತ್ತು ಸೊಳ್ಳೆಗಳನ್ನು ಕೊಲ್ಲುವುದು." ಎಂದು ಹೇಳಿದ್ದನು ಆದರೆ ನೀವು ಮಾತ್ರ ಅವನಿಗೆ L I C.ಯಲ್ಲಿ ಸಿಂಗಳಿಗೆ 135 ರೂಪಾಯಿ ಸಂಬಳ ಬರುವ ಕೆಲಸ ಇದೆ ಅಂದಿರಿ. ಅದೇ ನನಗೆ ಅರ್ಥವಾಗಲಿಲ್ಲ" ಎಂದು ಮಿತಭಾಷಿ ಹೇಳಿಯೇ ಬಿಟ್ಟ.

ಹೀಗೆ ಏನೊಂದೂ ಅರ್ಥವನ್ನು ಕೊಡದೆ ಬರಿದೆ ಸಾಂಪ್ರದಾಯಿಕವಾಗಿ ಮಾತಿನಲ್ಲಿ ಬೆಳೆಸಲ್ಪಡುವ ಈ ಶಬ್ದಗಳ ಮೇಲೆ ಮಿತಭಾಷಿ ತನ್ನ ಸಿಟ್ಟನ್ನು ತೋರಿಸತೊಡಗಿದ್ದಾನೆ.

ಇದನ್ನೇ ಆತ "ಭಾಷಾ ಶುದ್ಧೀಕರಣ ಸತ್ಯಾಗ್ರಹ" ಎನ್ನುವ ಮಾರುದ್ದದ ಹೆಸರಿನಿಂದ ಕರೆಯತೊಡಗಿದ್ದಾನೆ. ಅವನ ಈ ಚಳವಳದ ಫಲವಾಗಿ ಹಲವರು ಅವನಿಗೆ ದೂರದಿಂದಲೇ ನಮಸ್ಕಾರ ಮಾಡಹತ್ತಿದ್ದಾರೆ ಇದರಿಂದ ನಮ್ಮ ಮಿತಭಾಷಿಗೆ ಮಾತನಾಡಲಿಕ್ಕೆ ಜನರ ಕೊರತೆಯುಂಟಾದರೂ ಎಷ್ಟೋ ಜನರಿಗೆ ಕಾಫಿ ಕುಡಿಯುವ ಪ್ರಮೇಯವೇ ತಪ್ಪತೊಡಗಿದೆ. (ಏಕೆಂದರೆ ಕಾಫಿ ಕುಡಿಯುತ್ತೇನೆ ಎನ್ನುವ ಆಶ್ವಾಸನವನ್ನು ಪಡೆಯದೆ ಆತನ ಮಾತನ್ನು ಕೇಳಲು ಯಾರೂ ತಯಾರಿಲ್ಲವೆನ್ನಿ!) ಮೊನ್ನೆ ನಮ್ಮ ಮಿತಭಾಷಿ ಸಿಕ್ಕಿದಾಗ, "ಏನೋ ಭಾವಿ, (ಅರ್ಥಾತ್ ನಿ.ಭಾ)ನಿನ್ನ ಸತ್ಯಾಗ್ರಹ ಹೇಗಿದೆ?" ಎಂದು ಕೇಳಿದಾಗ "ನನಗೆ ಮಾತ್ರವಲ್ಲ ತನಗೂ ಹಿಂದೀ ಬರುತ್ತದೆ ಎಂದು ತೋರಿಸಲೆಂದೋ ಏನೋ, "ಸತ್ಯಾಗ್ರಹ ಕೀ ಜಯ್" ಎಂದು ಕೂಗಿ ಹೇಳಿದನು.

ಅಮೆರಿಕೆಯ ದ್ವಿತೀಯ ಗಗನ ಯಾತ್ರಿ ಶ್ರೀ ಗ್ರಿಸನ್‌ರು ಅಂತರಿಕ್ಷ ಯಾತ್ರೆ ಮಾಡಿ ಮರಳಿದಾಗ ಕೆಲವು ನಿಮಿಷ ಅಟ್ಲಾಂಟಿಕ್ ಸಾಗರದಲ್ಲಿ ಕಳೆದರು.

ಕೊರ್ಪೊರೇಶನ್ ಬೇಂಕ್

ಕೇವಣಾತಿಗಳ ಮೇಲಿನ ಸಾಲಿಯಾನ್ ಕೇಕಡಾ ಬಡ್ಡಿ ದರಗಳು:

3	ಸೇವಿಂಗ್ಸ್ ಬೇಂಕ್ ಖಾತೆ
3½ ಯಿಂದ 5½	ಕಾಯಂ (ವಿವಿಧಾವಧಿಗಳಿಗೆ)
5¼	ವಜ್ರೋತ್ಸವ
5	ಕ್ಯುಮುಲೇಟಿವ್

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ಸ್ಥಾಪನೆ: 1906)

ರಿಜಿಸ್ಟರ್ಡ್ ಆಫೀಸು: ಉಡುಪಿ | ಆಡಳಿತ ಆಫೀಸು: ಮಂಗಳೂರು

ಜೀವನದ ವಿವಿಧ ಘಟನೆಗಳನ್ನು ಹೃದಯ ಸ್ಪರ್ಶಿಯಾಗಿ ಚಿತ್ರಿಸುವ ಕಥಾಸಂಗ್ರಹ

ಮದುವೆ ಸೀರೆ

ಮದುವೆ ಕಾಲದಲ್ಲಿ ವಧೂವರರಿಗೆ ಉಡುಗೊರೆಯಾಗಿ ಕೊಡಲಿಕ್ಕೂ ಯೋಗ್ಯವಾದ ಪುಸ್ತಕ.

ಬೆಲೆ: ರೂಪಾಯಿ ಒಂದು.

ರೂ. 1-25 ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು

ನವಭಾರತ ಪುಸ್ತಕ ಭಂಡಾರ, ಉಡುಪಿ.

ಕೆಡುಕನ್ನುಂಟುಮಾಡುವ ಕೃತಕ ಜೀವನ

(೩ನೇ ಪುಟದಿಂದ)

ಹಾಗೆಯೇ ಈಗ ಕುಲವೃತ್ತಿಗಳೂ ಕುಲವೃತ್ತಿಗಳಾಗಿ ಉಳಿದಿಲ್ಲ. ಅದು ಎಲ್ಲಾ ಕುಲದವರೊಳಗೂ ಹಂಚಿಹೋಯಿತು. ಈಗ ಅಗಸರಲ್ಲದವರೂ ಅಗಸ ರಂಗಡಿ ನಡೆಸುತ್ತಾರೆ. ಹೀಗೆ ಕಾಲ ಬದಲಾವಣೆಯೊದುದನ್ನು ತಪ್ಪಿಸಲು ಸಾಧ್ಯವಿಲ್ಲವೆಂಬುದು ನಿಜ. ತಪ್ಪಿಸಲೆತ್ನಿಸುವುದು ಒಳ್ಳೆಯದೂ ಅಲ್ಲ. ಎಲ್ಲಿ ನೋಡಿದರೂ ವಿಜ್ಞಾನವು ವಿಜೃಂಭಿಸಿದೆ. ವಿದೇಶಗಳ ಸಂಪರ್ಕ ಹೆಚ್ಚಿದೆ. ಯಾರಿಗೆ ಯಾರೂ ದೂರವೆಂಬ ಮಾತೇ ಈಗಿಲ್ಲ.

ನಿಜವೇ. ಸಹಜವೇ. ಹೊಸತನ್ನು ಬಯಸುವುದು ಮಾನವರ ಸ್ವಭಾವವೇ ಹೌದು. ಈ ಬಯಕೆಯೇ ಉತ್ತರೋತ್ತರ ಸಂಸ್ಕೃತಿಗೂ ಆ ಮೂಲಕವಾಗುವ ಕಾಲ ವ್ಯತ್ಯಾಸಕ್ಕೂ ಬುನಾದಿ ಮನುಷ್ಯ ಮಾತ್ರರಿಗಷ್ಟೇ ಇರುವ ಇಂತಹ ಹೊಸ ಬಯಕೆಯೇ ಇತರ ಪ್ರಾಣಿಗಳಿಗೂ ಮಾನವರಿಗೂ ಇರುವ ವ್ಯತ್ಯಾಸ. ಹೊಸ ಬಯಕೆ ನಿಜಕ್ಕೂ ಸ್ವಾಗತಾರ್ಹವಾದುದೇ. ಅದಿಲ್ಲದಿದ್ದರೆ ನಮಗೆ ಜೀವನದಲ್ಲಿ ವಿಕಾಸತೆಯೇನಿದೆ? ದಿನಾ ತಪ್ಪದ ಉದಯಾಸ್ತ, ಊಟ-ನಿದ್ರೆ, ಅದೇ ಸೂರ್ಯ, ಅದೇ ಗಂಳಿ, ಅದೇ ಮಳೆ, ಸಾವಿರಾರು ವರುಷಗಳಿಂದಲೂ ಅದೇ ಅದೇ. ಆ ಮೂಲಭೂತಗಳಲ್ಲಿ ಹೊಸತನ್ನು ಅರಸಿ ಅಳವಡಿಸಿಕೊಳ್ಳುವುದರಲ್ಲಿಯೇ ಇಂದಿನ ತನಕವೂ ಮಾನವತಾ ವಿಕಾಸವು ಅರಳಿಕೊಂಡು ಬಂದಿದೆ; ಮುಂದೆಯೂ ಹೀಗೆಯೇ ಬರಲಿದೆ.

ಆದರೆ ಒಂದ ದೇಶವು ಇನ್ನೊಂದಕ್ಕಿಂತ ಹಿಂದೆ ಮುಂದೆ ಆಗುವಾಗಲೇ ಸ್ಪರ್ಧಾ ಭಾವನೆಯುಂಟಾಗಿ ಕೃತಕತೆಯನ್ನು ಹೊದೆದುಕೊಳ್ಳುವ ಬುದ್ಧಿ ಬರುತ್ತದೆ. ಹಾಗಾಗದಂತೆ ಆತ್ಮ ಸಂಯಮವನ್ನು ಪಹಿಸಿಕೊಳ್ಳುವ ಅಭ್ಯಾಸ ನಮಗಾಗಬೇಕು. ನಮ್ಮ ತನದ ನಿಜವಾದ ಜ್ಞಾನ ನಮಗಿರಬೇಕು.

ಆದುದರಿಂದ ಎಲ್ಲಾ ದೇಶದ ಅಭಿವೃದ್ಧಿಯೊಂದಿಗೆ ನಾವೂ ಅಭಿವೃದ್ಧಿಯನ್ನು ಹೊಂದುವಾಗ, ಎಷ್ಟೋ ವ್ಯತ್ಯಾಸಗಳು ನಮ್ಮೊಳಗೂ ಉಂಟಾಗಬೇಕಾದ್ದು ಅಗತ್ಯವೆ. ಹಾಗೆಂದ ಮಾತ್ರಕ್ಕೆ ಇನ್ನೊಬ್ಬರ ಹಾಗೆ ಆಗಬೇಕೆಂದು ನಾವು ನಮ್ಮತನವನ್ನು ಮರೆತು. ಅಂತರದಲ್ಲಿ ನಡೆಯುವಂತಾಗಬಾರದು. ನಮ್ಮ ವಾಸ್ತವ ದಾರಿಯನ್ನು ಬಿಟ್ಟುಬಿಡದೆ, ನಮ್ಮ ಸರಾಸರಿ ಆರ್ಥಿಕ ತಳಹದಿಯ ಮಟ್ಟದಲ್ಲಿಯೇ ನಾವು ಅಭಿವೃದ್ಧಿಗೇರಬೇಕೆಂಬುದೇ ವಾಂಛನೀಯವಾದುದು.

ಪಲ್ಯಾ ಬೇಂಕಿನ ಪ್ರಕರಣ

ಕೇರಳದ ಆರ್ಥಿಕ ಕ್ಷೇತ್ರದಲ್ಲಿ ಮಹತ್ವದ ಸ್ಥಿತ್ಯಂತರಗಳಿಗೆ ಕಾರಣವಾದ ಪಲ್ಯಾ ಸೆಂಟ್ರಲ್ ಬೇಂಕ್‌ನ ವ್ಯವಹಾರ ರಹಸ್ಯಗಳು ಈಗಿಗ ಹೊರಬರತೊಡಗಿವೆ ರಿಜರ್ವ್ ಬೇಂಕಿನ ಆದೇಶಕ್ಕನುಗುಣವಾಗಿ, ಈ ಬೇಂಕು ಈಗ ಲಿಕ್ವಿಡೇಶನ್‌ನಲ್ಲಿ ಇದ್ದು ಅದರ ಲಿಕ್ವಿಡೇಟರರು ಬೇಂಕಿಂಗ್ ಕಂಪೆನಿಗಳ ಕಾನೂನಿನನ್ವಯ ಒಂದು ವರದಿಯನ್ನು ಸಲ್ಲಿಸಿದ್ದಾರೆ. ಈ ವರದಿಯಲ್ಲಿ ವಿವರಿಸಲ್ಪಟ್ಟ ಕಾರಣಗಳಿಗೆ ಕಾರಣೀಭೂತರಾದ ಬೇಂಕಿನ ಡೈರೆಕ್ಟರರಿಗೆ ಕೇರಳದ ಉಚ್ಚ ನ್ಯಾಯಾಲಯವು ನೋಟೀಸನ್ನು ಕೊಡಲು ಆದೇಶಿಸಿದೆ. ಬೇಂಕಿನ ಡೈರೆಕ್ಟರರಲ್ಲಿ ಮಧ್ಯಾವಧಿಯಲ್ಲಿ ಒಬ್ಬರು ಮೃತರಾಗಿರುವರೆಂದು ವರದಿಯಾಗಿದ್ದು ಅವರನ್ನುಳಿದ ಎಲ್ಲ ಡೈರೆಕ್ಟರರು ಮತ್ತು ಲೆಕ್ಕಪತ್ರ ಪರಿಶೋಧಕರನ್ನು ಪ್ರತ್ಯಕ್ಷವಾಗಿ ವಿಚಾರಣೆಗೆ ಗುರಿಪಡಿಸಲಾಗುವುದು.

ಬೇಂಕಿನ ವ್ಯವಹಾರವನ್ನು ಹೆಚ್ಚಾಗಿ ಮುಖ್ಯವಾದ ಹುದ್ದೆಗಳಲ್ಲಿ ನೇಮಿತರಾದ ಡೈರೆಕ್ಟರರ ಸಂಬಂಧಿಕರ ಸಹಾಯದಿಂದಲೇ ನಡೆಸಲಾಗುತ್ತಿತ್ತು; ಇದರಿಂದ ಬೇಂಕಿನ ವಹಿವಾಟು 'ಡೈರೆಕ್ಟರರ ಕುಟುಂಬದ ಸಂಸ್ಥೆ' ಎಂಬಂತೆ ನಡೆದಿದೆ. ಎಂದು ಗಂಭೀರವಾಗಿ ಲಿಕ್ವಿಡೇಟರರು ಬರೆದಿದ್ದಾರೆ. ಡೈರೆಕ್ಟರರು ಮತ್ತು ಲೆಕ್ಕಪತ್ರ ಪರಿಶೀಲಕರ ಕುಂದು ಕೊರತೆಗಳಿಂದ ಬೇಂಕು ಲಕ್ಷಾಂತರ ರೂಪಾಯಿಗಳ ನಷ್ಟಕ್ಕೆ ಗುರಿಯಾಗಿದೆ, ಬಂಡವಳದಿಂದ ಡಿವಿಡೆಂಡ್ ತೆತ್ತುದು, ಲಾಭವಿಲ್ಲದೇನೇ ಕರಗಳನ್ನು ತೆತ್ತುದು, ಡೈರೆಕ್ಟರರು ಮತ್ತಿತರರಿಗೆ ನೀಡಿದ ವಸೂಲಾಗಲಾರದೆಂದು ಭಾವಿಸಲಾದ ಸಾಲಗಳು —ಮೊದಲಾದ ಬಾಬುಗಳಲ್ಲಿ ಈ ಲೋಪದೋಷಗಳು ಎದ್ದು ತೋರುತ್ತವೆ.

೧೯೩೬ರಿಂದ ೧೯೫೮ರ ವರೆಗೆ ಬೇಂಕಿನ ವ್ಯವಹಾರವು ಲಾಭಕರವಾಗಿ ನಡೆದಿಲ್ಲ. ಲೆಕ್ಕಪತ್ರಗಳ ಆಧಾರದಿಂದ ತುಂಬ ನಷ್ಟವಾಗಿದೆ ಹಾಗಿದ್ದರೂ ಈ ಅವಧಿಯಲ್ಲಿ ಒಟ್ಟು ಸುಮಾರು ೨೦ ಲಕ್ಷ ರೂಪಾಯಿಗಳ ಡಿವಿಡೆಂಡ್ ನೀಡಲಾಗಿದೆ. ಈ ಮೊತ್ತವು ಲಾಭಾಂಶದಿಂದ ಕೊಡಲಾಗಿಲ್ಲ ಬದಲು ಬಂಡವಳದಿಂದ ಇದಕ್ಕೆ ಬೇಕಾದ ಹಣವನ್ನು ಪೂರೈಸಲಾಗಿದೆ. ಇದು ಬೇಂಕಿಂಗ್ ಸಂಸ್ಥೆಗೆ ಆದ ನಷ್ಟ. ಬೇಂಕು ವಾಸ್ತವವಾಗಿ ಲಾಭ ಗಳಿಸಿಲ್ಲವಾದರೂ ಲಾಭಾಂಶವನ್ನು ತೋರಿಸುವುದಕ್ಕೋಸ್ಕರ ಲೆಕ್ಕಪತ್ರಗಳನ್ನು ದುರುಪಯೋಗಪಡಿಸಿದೆ. ಕಂಪೆನಿಯ ಸ್ಪಷ್ಟ ಚಿತ್ರವನ್ನು ರೂಪಿಸುತ್ತಿದ್ದರೆ, ಅದಾಯ ತೆರಿಗೆ ತೆರಬೇಕಾದ ಪ್ರಮೇಯವೇ ಇರುತ್ತಿರಲಿಲ್ಲ. ಇದರಿಂದಾಗಿ ೨೧-೨೧ ಲಕ್ಷ ರೂಪಾಯಿಗಳ ಹಾನಿಯು ಬೇಂಕಿಗೆ ತಟ್ಟಿದೆ.

ಪಲ್ಯಾ ಸೆಂಟ್ರಲ್ ಬೇಂಕ್ ಇಡಿಯ ಕೇರಳದಲ್ಲಿನ ದೊಡ್ಡ ಬೇಂಕುಗಳಲ್ಲಿ ಒಂದಾಗಿತ್ತು. ಇದರ ವ್ಯವಹಾರಗಳಿಗೆ ತಡೆಯಾಜ್ಞೆಯನ್ನು ರಿಜರ್ವ್ ಬೇಂಕ್ ಇತ್ತೊಡನೆಯೇ ಇಡಿಯ ಕೇರಳದಲ್ಲಿ ಮಾತ್ರವಲ್ಲ, ಭಾರತದ ಬೇಂಕಿಂಗ್ ವ್ಯವಸಾಯದಲ್ಲಿಯೇ ಒಂದು ವಿಚಿತ್ರ ಘಟನೆ ನಡೆದಂತಾಗಿತ್ತು. ಈ ಬೇಂಕನ್ನು ಪುನರುಜ್ಜೀವಿಸಬೇಕೆಂದು ಹಲವರು ಮಾಡಿದ ಪ್ರಯತ್ನಗಳೆಲ್ಲವೂ ನಿಷ್ಫಲವಾದುವು. ಸಾರ್ವಜನಿಕ ಹಿತದೃಷ್ಟಿಯಿಂದ, ದೇಶದ ಆರ್ಥಿಕ ಪರಿಸ್ಥಿತಿಯನ್ನು ಸಮತೋಲದಲ್ಲಿಟ್ಟುಕೊಳ್ಳುವುದಕ್ಕೆ ದುರ್ಬಲ ಬೇಂಕುಗಳನ್ನು ಕೊನೆಗೊಳಿಸುವ, ಇತರ ಬೇಂಕುಗಳೊಡನೆ ವಿಲೀನಗೊಳಿಸುವ ಅಥವಾ ತನ್ನ ಬಂಡವಳವನ್ನು ಹೆಚ್ಚಿಸಿ ಸಬಲವಾಗುವಂತೆ ಮಾಡುವ ಆದೇಶಗಳನ್ನು ರಿಜರ್ವ್ ಬೇಂಕು ನೀಡುವುದು. ಇತ್ತೀಚೆಗೆ ಈ ಕಡೆಗೆ ತೀವ್ರವಾಗಿ ದೃಷ್ಟಿ ಹರಿದಿದ್ದು, ಹಲವಾರು ಬೇಂಕುಗಳ ವಿಲೀನಕಾರ್ಯವು ನಡೆಯುತ್ತಿದೆ. ಹಾಗೆಯೇ ಕೆಲವೊಂದು ಬೇಂಕುಗಳ ಬಂಡವಳ ಹೆಚ್ಚಿಸಲು ಅನುಮತಿ ನೀಡಿದೆ.

ಆರ್ಥಿಕವಾಗಿ ದುರ್ಬಲವೆಂದು ಸಿದ್ಧವಾದ ಪಲ್ಯಾ ಸೆಂಟ್ರಲ್ ಬೇಂಕನ್ನು ಕೊನೆಗೊಳಿಸಲು ಆದೇಶವಿತ್ತಿದ್ದರೆ, ಕೆಥೋಲಿಕ್ ಬೇಂಕ್ ಮೊದಲಾದ ಹಲವಾರು ಬೇಂಕುಗಳು ಇತರ ಸಬಲ ಬೇಂಕಿಂಗ್ ಕಂಪೆನಿಗಳಲ್ಲಿ ವಿಲೀನಗೊಳ್ಳುವ ಹಾಗೆಯೇ ಪಾಂಗಾಳ ನಾಯರ್ ಬೇಂಕ್ ಮೊದಲಾದ ಬೆರಳ ಸಂಖ್ಯೆಯ ಬೇಂಕ್‌ಗಳಿಗೆ ಬಂಡವಳ ಹೆಚ್ಚಿಸುವ ಆದೇಶವು ರಿಜರ್ವ್ ಬೇಂಕಿನಿಂದ ಬಂದಿದೆ. ಡೈರೆಕ್ಟರರಿಗೂ ಸಂಸ್ಥೆಗಳಿಗೂ ಇರುವ ಘನಿಷ್ಠ ಸಂಬಂಧವು ಎಷ್ಟು ಎಂಬುದಕ್ಕೆ ಮಾತ್ರವಲ್ಲ, ಒಂದು ಸಂಸ್ಥೆಯ ಕಾರ್ಯಭಾರವನ್ನು ನಿರ್ವಹಿಸುವಲ್ಲಿ ಡೈರೆಕ್ಟರರು ಅದೆಷ್ಟು ಎಚ್ಚರಿಕೆಯಿಂದಿರಬೇಕೆಂಬುದಕ್ಕೆ ಪಲ್ಯಾ ಸೆಂಟ್ರಲ್ ಬೇಂಕಿನ ಪ್ರಕರಣವೇ ನಿದರ್ಶನ. ಪಾಲುದಾರರಿಗೆ ಸಾರ್ವಜನಿಕರಿಗೆ ನಾನಾಪರಿಯಾಗಿ ವಂಚನೆ ನಡೆಯುವುದರಲ್ಲಿ ಪಲ್ಯಾ ಬೇಂಕಿನ ಮೆನೇಜಿಂಗ್ ಡೈರೆಕ್ಟರರನ್ನು ಕೂಡಿ ಎಂಟು ಜನ ಡೈರೆಕ್ಟರರು ಮತ್ತು ಆಡಿಟರರು ಎಷ್ಟು ಮಟ್ಟಿಗೆ ಕಾರಣರೆಂದು ವಿಚಾರಿಸಲು ಕೇರಳದ ಉಚ್ಚ ನ್ಯಾಯಾಲಯವು ನೋಟೀಸನ್ನು ಕೊಟ್ಟಿದೆ. ಇದು ಮೂರು ವಾರಗಳೊಳಗೆ ಮರಳಿ ಬೇಕಾಗಿದ್ದು, ಪ್ರಾರಂಭಿಕ ವಿಚಾರಣೆಯು ಸಪ್ತಂಬರ ೧೯ರಂದು ನಡೆಯಲಿರುವುದು.

ಈ ಘಟನೆಯಿಂದ ಭಾರತದ ಬೇಂಕಿಂಗ್ ಕ್ಷೇತ್ರದಲ್ಲಿರಬಹುದಾದ ಎಲ್ಲ ವಿಧದ ಕುಂದು ಕೊರತೆಗಳು ದೂರವಾಗಿ, ಅದು ಸಾರ್ವಜನಿಕರಿಗೆ ಯೋಗ್ಯ ರೀತಿಯಲ್ಲಿ ಸೇವೆ ಸಲ್ಲಿಸುವಲ್ಲಿ ಸಮರ್ಥವಾಗುವುದೆಂದು ಆಶಿಸಬಹುದು.

ಅರಳು—ಮರಳು

ಮಂಗಳೂರಿನ ಮುಗುದೆ ಬರುವೆಯೊಮನೆಗೆ?
ಮಡದಿಯೊಗಲು ಮೆಚ್ಚಿ ಬಡವನೆಡೆಗೆ,
ಮಾಡಿ ಮನೆಯ ನಿವಾಸವಿರಬಹುದು ನಿನಗೆ;
ಮುರುಳು ಜೋಂಪದಿ ಸರಿಯ ಸಂಭ್ರಮಕ್ಕೆ?

ಹಾಯಿಸದ ಸವಿಮೆದ್ದು ಬಳೆದಾಳೆ ನೀನು
ಕುಚ್ಚಲೊಗರಿನ ತುತ್ತು ಸಲುವುದೇನು?
ಹಾಲು ಬೀರಿನ ಸಾನ ಪೀಯೂಷವಲ್ಲಿ
ಬಾವಿನೀರಲ್ಲದೇನಿರುವುದಿಲ್ಲಿ?

ಅಧಿಕಾರದಂತಸ್ತಿನಭ್ಯಾಸದಾಕೆ
ಒಲವಿನಂತಃಕರಣದಿಂಬು ಸಾಕೆ?
ನೀನು ಜನಜಂಗುಳಿಯೊಳಿಹೆಗುಂಗಿನಲ್ಲಿ
ನಾನು ಇರುವುದು ದಿಲ್ಲಿಯಲ್ಲ ಹಳ್ಳಿ.

ಸಾಹುಕಾರರ ಮಗಳು ನೀನು ಸಿರಿಯರಳು
ಸಾಹಿತಿಯ ಮಗ ನಾನು ಅರಿಯ ಮರಳು.

ನನ್ನ ನಿನ್ನೆಡೆ ಹರಿವ ಹೊಳೆ ಹೊಯ್ಲು ಬಹಳ
ದೋಣಿ ನಡೆಸುವ ಯೋಗ ಬಹಳ ವಿರಳ.

ಇರಲಿಂದಿಗಿದೆ ನಮ್ಮ ಜನರಿಗಾನಂದ
ನಾಳೆ ಬರುವುದು ಮನದ ಬಡುಕಿಗಂದ.

ಕಾಲಪುರುಷನ ಕಾಲು ಯಾರು ಕಟ್ಟುವನು?
ರಾಮದೂತರು ಸಂಕ ಬಲಿಯರೇನು?

—ಸಾಗರ್

In the Court of the Special Asst. Commissioner (Tenancy) Mangalore.

O. P. No. 603/1961

Between

Monu Shetty —Petitioner.

and

Chandu Pujary —Respondent.

To

The Respondent Sri Chandu Pujary, S/o Thennaya Pujary, residing at Padu Kotnapady in Kallamundkur Village of Karkal Taluk.—

Take notice that the above application filed by Monu Shetty against you for eviction is posted to 20—9—1961 at 10 A. M. at Karkal Camp. If you fail to appear on that day, you will be set exparte, and orders deemed fit will be passed.

(By order of Court)

N. M. Adyanthaya

Advocate for Petitioner

Karkal, 31—8—1961.

'ನಚಿಕೇತ'ರು ಬರೆದ ಭಾವಪೂರ್ಣ ಕಾದಂಬರಿ

ಭಾವಾರ್ಚನೆ

ಸುಮಧುರ ಗಂಭೀರ ಪರಿಣಾಮವನ್ನುಂಟುಮಾಡುವ
ಸರಳ ಶೈಲಿಯ ನೂತನ ಕಾದಂಬರಿ.

ಆಕರ್ಷಕ ಮುಖಪತ್ರ. ಬಿಳಿ ಕಾಗದ.

120 ಪುಟಗಳು. ಒಂದೂಕಾಲು ರೂಪಾಯಿ ಬೆಲೆ.

ಒಂದೂವರೆ ರೂಪಾಯಿ ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು

ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.

ಮಾರಾಟಗಾರರು: ನವಭಾರತ ಬುಕ್ ಡಿಪೊ, ಉಡುಪಿ.

ಶ್ರೀ ಎ. ಬಿ. ಶೆಟ್ರ
ಸ್ಮಾರಕ ನಿಧಿಗೆ
ಸಹಾಯ ಮಾಡಿರಿ

ಮೂಡಿ ಬಂದ ಸೂರ್ಯ

(೨ನೇ ಪುಟದಿಂದ)

ಡಿಸಿದಳು! ಸ್ವಲ್ಪ ಸೀಗೆ ತಗೊಂಡ', ಹೊರಟಳು.

ಮುದರ ಎದ್ದ—'ಆ....'ಯೆಂದು ಬಾಯಾಕಳಿಸುತ್ತಾ.

ಜೆನ್ನಿ ತಂದಿಟ್ಟ—ಎಣ್ಣೆಯ ಬಟ್ಟಲನ್ನು ನೋಡಿದ. ಕೂಡಲೇ ಜೆನ್ನಿಯೇಕೆ ಬೇಗನೆ ಎಚ್ಚರಿಸಿದಳೆಂದು ಅರ್ಥವಾಯ್ತು! ಪಿಜಿನನ ಕಡೆ ದಿಟ್ಟಿಸಿದ— ಅವನೂ ಎದ್ದಿರಲಿಲ್ಲ.

"ಏಳೋ—ಪಿಜಿನ! ಎಣ್ಣೆ ಹಚ್ಚಿಕೊಳ್ಳುವ"

—ಎಂದು ಎಬ್ಬಿಸಿ, ಎಣ್ಣೆ ಹಚ್ಚಿದ, ತಾನೂ ಹಚ್ಚಿಕೊಂಡ; ಮೊದಲು ಛಳಿಯೆನಿಸಿದರೂ-ತಿಕ್ಕಿಕೊಂಡ ಹಾಗೆಯೇ-ಮೈ ಬಿಸಿಯಾಗ ತೊಡಗಿತು. ಬಲು ಉತ್ಸಾಹವೆನಿಸಿತು. ಅಂಗಳಕ್ಕೆ ಇಳಿದ. ಮಗನ ಜೊತೆಗೆ ಕುಣಿಯೋಣವೆನಿಸಿತು. ಬ'ಲೇ ಲೇ ಲೇ ಗಾ.....ಓ ಲೇ ಲೇ ಗಾ ಎಂದು ಭರದಿಂದ ಹೆಜ್ಜೆಹಾಕತೊಡಗಿದ. ಪಿಜಿನನ ಕಾಲುಗಳೂ, ಹಿಂದಾಗಲಿಲ್ಲ. ಮುದರ ಒಳಗೆ ಹೋಗಿ, ದುಡಿ ತಂದ.

"ಸಾಕು. ಸಾಕು. ಮಿಂದುಕೊಂಡು ಬನ್ನೀಗ"

—ಎಂದು, ಜೆನ್ನಿಯೆಚ್ಚರಿಸದಿರುತ್ತಿದ್ದರೆ, ಇನ್ನೆಷ್ಟು ಹೊತ್ತು ಕುಣಿಯುತ್ತಿದ್ದರೋ. ಒಳಗಿಂದ 'ಚುಂಯಿ' ಎಂಬ ದೋಸೆಯ ಸದ್ದು ಕೇಳಿಸಿತು. ಇನ್ನು ತಡಮಾಡಬಾರದೆಂದು, ಹಿಂದಿನ ದಿನ ತಂದ ಲಕ್ಸನ ಬಿಲ್ಲೆಯನ್ನು ತಗೊಂಡು, ಹೊರಟ.

"ಅಪ್ಪಾ, ಇವೆಲ್ಲಿಂದ? ಭಾರಿ ಪರಿಮಳ. ಅಹಹ!"

—ಎಂದ ಪಿಜಿನ-ಸಾಬೂನನ್ನು ಮೂಸುತ್ತಾ.

'ಎಷ್ಟು ಮಂದಿಗೆ—ನಮ್ಮವರಿಗೆ ಈ ಭಾಗ್ಯವಿದೆ? ಉಳಿದವರೆಲ್ಲಾ ಇಂದಿಗೂ-ತಮ್ಮ ಹಳೆಯ ಹಾವಿಯಲ್ಲೇ ನಡೆಯುತ್ತಿದ್ದಾರೆ ಇಂದಿಗೂ ಕುಡಿತ, ಕಡಿತ, ಬಟ್ಟೆಲ್ಲ. ನಾನೊಬ್ಬ ಹೀಗಿರುವುದು ಸರಿಯೋ!'

—ಅನ್ನಿಸಿತು ಬಿಸಿ ಬಿಸಿ ನೀರು ಒರಸಿಕೊಂಡು, ಮನೆಯೊಳಗೆ ನಡೆದರು.

ಆಗಲೇ ಜೆನ್ನಿಯ ಉಪಾಹಾರದ ಏರ್ಪಾಡು ನಡೆದಿತ್ತು. ಇಬ್ಬರೂ ದೋಸೆ ತಿಂದರು ಆಹ! ಏನು ರುಚಿ! ಈ ದೀಪಾವಳಿಯ ದೋಸೆಯ ರುಚಿ ಬೇರೆ ದಿನದ ದೋಸೆಗಳಿಗೇಕಿಲ್ಲವೋ ದೇವರೇ ಬಲ್ಲ—ಅನಿಸಿತು ಮುದರನಿಗೆ.

"ಅಪ್ಪ—ನಮ್ಮ ಬೀರನಿಗೆ ಒಂದು ದೋಸೆ ಕೊಡಬೇಕಿತ್ತು! ಪಾಪ! ಅವನ ಅಪ್ಪ—ಗಟ್ಟಿಕ್ಕೆ ಹೋದವ ಬರಲೇ ಇಲ್ಲವಂತೆ! ಮನೆಯಲ್ಲಿ ಅಕ್ಕಿ ಇಲ್ಲ! ಅದ್ದರಿಂದ ದೋಸೆಯೂ ಇಲ್ಲ—ಗೀಸೆಯೂ ಇಲ್ಲ! —ಎಂದು ಅಜ್ಜಿ ಹೆದರಿಸಿದಳಂತೆ!"

—'ಎಷ್ಟು ಮಂದಿಗೆ ನಮ್ಮವರಿಗೆ ಈ ಭಾಗ್ಯವಿದೆ!-ಎಂಬ ಪ್ರಶ್ನೆ ಪುನಃ ಸುಳಿಯಿತು.

ಮುದರ ಡರ್ರೆಂದು ತೇಗುತ್ತ ಎದ್ದು ನಿಂತು—ಕೈ ತೊಳೆದುಕೊಂಡು ಬಂದ! ಹೊಟ್ಟೆಯ ಮೇಲೆ ಕೈಯಾಡಿಸುತ್ತಾ ಹೊರಗೆ ನೋಡಿದ. ಮುಂಬೆಳಗು ಮೂಡಿತ್ತು. ಸೂರ್ಯ ಮೂಡಬೇಕಷ್ಟೆ!

"ಹಿತ್ತಲು ಕಡೆ ಹೋಗುವ—ಬಾ ಪಿಜಿನ!"

—ಎಂದು ಕತ್ತಿ ಹಿಡಿದು ಹೊರಟ! ಬೆಳಗಿನ ತಂಗಾಳಿ ತಂಪಾಗಿ ಬೀಸುತಿತ್ತು—ಮೈಮನಗಳ ಆಲಸ್ಯವನ್ನು ಹೊಡೆದೋಡಿಸುತ್ತಾ— ಹೊಸದುತ್ಸಾಹವನ್ನು ತುಂಬುತ್ತಾ, ಬಳಿಯ ಗಿಡಬಳ್ಳಿಗಳೆಲ್ಲಾ ಹಾಯೂಗಿ,—ಅಲ್ಲಾಡುತ್ತಿದ್ದವು. ನೆಟ್ಟ ತೆಂಗಿನ ಮರಗಿಡಗಳು ಗಾಳಿಗೆ ತಲೆಯೊಡ್ಡಿ, ಇನ್ನೂ ಮೇಲೆ ಬರುತ್ತೇವೆ-ಎನ್ನುತ್ತಿದ್ದವು. ಪಪ್ಪಾಯಿಯ ಗಿಡಗಳಲ್ಲಿ ಹಿರಿಕಿರಿದಾದ ಕಾಯಿಗಳು ತೊನೆದಾಡುತ್ತಿದ್ದವು. ಕಸಿ ಮಾವಿನ ಗಿಡ, ಅನನಾಸಿನ ಗಿಡ, ಗೇರುಮರಗಳು ಮಂಗಿಯ ನಾಡಕ್ಕೆ ತಲೆಯಾಡಿಸುವ ಹಾವಿನಂತೆ, ತಲೆದೂಗುತ್ತಿದ್ದವು. ಹಿತ್ತಲಲ್ಲಿ ಯಾವುದೋ ಹಕ್ಕಿ 'ಟಿಟೀ ಟೀ' ಎಂದು 'ಬಾ ಇಲ್ಲಿ'ಯೆನ್ನುತ್ತಿರುವಂತೆ ಕೂಗುತ್ತಿತ್ತು.

ಮುದರನ ಹೃದಯ ತುಂಬಿಬಂತು.

'ಆರು ವರ್ಷಗಳ ಹಿಂದೆ ಇದೊಂದೂ ಇರಲಿಲ್ಲ! ಉಳಿದವರಂತೆ, ತಾನೂ ಒಂದ. ಹರಕು ಗುಡಿಸಲಲ್ಲಿದ್ದೆ! ನಾನೂ ಕುಡಿದು - ಕುಣಿದಾಡುತ್ತಿದ್ದೆ - ಸಿಕ್ಕಿದ್ದೆಲ್ಲಾ ಹಾಳುಗೈದು! ಈಗ.....! ಇದೆಲ್ಲಾ ಆಗ್ರಾಮಸೇವಕರಲ್ಲದಿದ್ದರೆ ಆಗುತ್ತಿತ್ತೆ? ಅವರೇ ನನ್ನನ್ನು ಕರೆಸಿ, ಅರ್ಜಿ ಹಾಕಿಸಿ, ಬೇಕು ಬೇಕಾದ ಗಿಡ, ಗೊಬ್ಬರಗಳನ್ನು ಕೊಡಿಸಿ ಇಷ್ಟಕ್ಕೆಲ್ಲಾ ಕಾರಣರಾದರು! ನಾನವರ ಋಣ ಹೇಗೆ ತೀರಿಸಲಿ! ಅವರಿಗೆ ಕಳೆದ ವರ್ಷ ಅವರೂರಿಗೆ ಉತ್ತರ ಕರ್ನಾಟಕಕ್ಕೆ ವರ್ಗವಾಯ್ತಂತೆ! ಎಲ್ಲಾದರೂ ಸರಿ. ದೇವರವರನ್ನು ಚೆನ್ನಾಗಿಟ್ಟಿರಲಿ!.....'

—ಇನ್ನೂ ಏನೇನು ಆಲೋಚಿಸುತ್ತಿದ್ದನೋ—ಏನೋ — ಅದರೆ ಪಿಜಿನನ ಪ್ರಶ್ನೆಯಿಂದ ತಪೋಭಂಗವುಂಟಾಯ್ತು!

'ಅಪ್ಪಾ, ಇಂದೇಕೆ ಸೂರ್ಯ ಮೂಡುದಿಲ್ಲ?"

—ಮುದರ ನೋಡಿದ. ಮೂಡುದಿಕ್ಕು ಶುಭ್ರವಾಗಿದೆ.

"ಈಗ ಮೂಡುತ್ತಾನೆ. ನೋಡು, ಆಕಾಶ ಸ್ವಚ್ಛವಾಗಿದೆ. ಮೋಡಗಳೊಂದೂ ಇಲ್ಲ. ನೋಡೀಗ ಮೂಡುತ್ತಾನೆ ಸೂರ್ಯ. ಸಸುಯ ಬರಲಿ' !

ಅವರು ಕಾದಿದ್ದರು. ಜಗತ್ತೇ ಕಾದಿತ್ತು—ಚರಾಚರಗಳಿಗೆಲ್ಲ ನವಚೈತನ್ಯದಾತನವನ್ನು ಉಣಿಸಬಲ್ಲ ದಿವಾಕರನ ಆಗಮನವನ್ನು ಕಾದಿತ್ತು. ವಿಹಗವೃಂದ ಸ್ವಾಗತ ಗೀತವನ್ನು ಆಗಲೇ ಹಾಡಿಯಾಗಿತ್ತು. ಮೂಡಣ ದಿಶಾವನಿತೆ ಆಗಲೇ ರಕ್ತ ಮಸ್ಪಗಳ, ಕೆನ್ನೀರ ರಂಗೋಲಿಯೆರಚಿ, ಪಾರಿ ಮಾಡಿಯಾಗಿತ್ತು. ನೋಡ ನೋಡುತ್ತಿದ್ದಂತೆ, ಅದೋ—

ಬಂದ. ಮೇಲೆ ಮೇಲೆ ಬಂದ ಸೂರ್ಯ ಮೂಡಿ ಬಂದ.

ದಿ ವಿಜಯ ಬೇಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬೇಂಕ್. ಸ್ಥಾಪನೆ: 1931

ರಿಜಿಸ್ಟರ್ಡ್ ಆಫೀಸು:

ವಿಜಯ ಬೇಂಕ್ ಬಿಲ್ಡಿಂಗ್, ಲೈಟ್ ಹೌಸ್ ಹಿಲ್ ರೋಡ್,

ಮಂಗಳೂರು-3, ಸೌತ್ ಕೆನರಾ.

ಕಾಯಂ ಠೇವಣಾತಿ ಬಡ್ಡಿ ದರವನ್ನು ಶೇಕಡ 5½ರ ವರೆಗೆ ಹೆಚ್ಚಿಸಲಾಗಿದೆ.

ಏಳು ದಿವಸದ ನೋಟೀಸಿನಲ್ಲಿ ಕೇಳಿದಾಗ್ಯೆ ಹಿಂದೆ ಸಡೆಯುವ ಡಿಪೋಸಿಟುಗಳನ್ನು (Call Deposits) ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸೋಣಾಗುತ್ತದೆ.

ಹೆಚ್ಚಿನ ಸೂಚಿತಿಗೆ ನಮ್ಮ ಶಾಖೆಗಳಲ್ಲಿ ದಯಮಾಡಿ ವಿಚಾರಿಸಿರಿ.

ಭಾರತದಲ್ಲಿ ವೈಜ್ಞಾನಿಕ ಪ್ರಗತಿ

ಸಣ್ಣ ನದಿಯಿಂದ ವಿದ್ಯುಚ್ಛಕ್ತಿ

ಹಿಮಾಚ್ಛಾದಿತ ಬೆಟ್ಟ ಗುಡ್ಡಗಳ ಪ್ರದೇಶಗಳಲ್ಲಿ ಹರಿಯುವ ಸಣ್ಣ ಸಣ್ಣ ಹೊಳೆಗಳನ್ನು ವಿದ್ಯುಚ್ಛಕ್ತಿಯ ತಯಾರಿಕೆಗೆ ಉಪಯೋಗಿಸಿಕೊಳ್ಳುವ ವಿಚಾರದಲ್ಲಿ ಪ್ರಗತಿ ಸಾಧ್ಯವಾಗಿದೆ. ದ್ವಿತೀಯ ಯೋಜನೆಯ ಕಾಲದಲ್ಲಿ ಹಿಮಾಚಲ ಪ್ರದೇಶದ ಚೈಲಾ ಎಂಬಲ್ಲಿ ಇಂತಹ ಯಶಸ್ವೀ ಪ್ರಯೋಗ ನಡೆಯಿತು ಸಿಮ್ಲಾದಿಂದ ೧೮ ಮೈಲಿ ದೂರದಲ್ಲಿರುವ ಹಿರಿಗಂಗಾ ಹೊಳೆಯನ್ನು ಇದಕ್ಕಾಗಿ ಉಪಯೋಗಿಸಿಕೊಳ್ಳಲಾಯಿತು. ಪ್ರಯೋಗ ರೂಪದಲ್ಲಿ ಹೀಗೆ ಸ್ಥಾಪಿತವಾದ ವಿದ್ಯುತ್ ತಯಾರಿಕಾ ಕೇಂದ್ರ ಇದೀಗ ಸುತ್ತುಮುತ್ತಲಿನ ಗ್ರಾಮಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುತ್ತಿದೆ.

ಇಂತಹ ವಿದ್ಯುತ್ ಕೇಂದ್ರಗಳಲ್ಲಿ ವಿದ್ಯುಚ್ಛಕ್ತಿ ತಯಾರಿಕೆಗಾಗಿ ಮೈಕ್ರೋ ಅಥವಾ ಹೈಡಲ್ ಸೆಟ್‌ಗಳೆಂಬ ಚಿಕ್ಕ ಚಿಕ್ಕ ವಿದ್ಯುತ್ ತಯಾರಿಕಾ ಸಾಧನಗಳನ್ನು ಉಪಯೋಗಿಸಲಾಗುತ್ತದೆ. ಈ ಸೆಟ್‌ಗಳಿಗೆ ಬೇಕಾಗುವ ನೀರಿನ ಪರಮಾವಧಿ ಎತ್ತರ ೩೫ ಅಡಿ ಮಾತ್ರ. ನೀರಿನ ಪೂರೈಕೆ ಮಾತ್ರ ಸಮರ್ಪಕವಾಗಿರಬೇಕು.

ಈ ವಿದ್ಯುತ್ ತಯಾರಿ ಕಾಕೇಂದ್ರಗಳ ಮೇಲ್ವಿಚಾರಣೆಗೆ ಸಿಬ್ಬಂದಿಯಾಗಿ ಅವಶ್ಯಕತೆಯೂ ಇಲ್ಲ. ನಿರಂತರ ಸರಬರಾಜು ನೋಡಿಕೊಳ್ಳಲು ಜೂನಿಯರ್ ಲೈನ್ ಸಿಬ್ಬಂದಿ ಸಾಕು.

ಮಾಲ್ಟೆಡ್ ಹಾಲಿನ ಪುಡಿ

ಒಳ್ಳೆ ಪುಷ್ಟಿಕರವಾದ ಮತ್ತು ಸ್ವಾದಿಷ್ಟವಾದ ಮಾಲ್ಟೆಡ್ ಹಾಲಿನ ಪುಡಿ ತಯಾರಿಸುವ ಹೊಸ ವಿಧಾನವೊಂದನ್ನು ಮೈಸೂರಿನಲ್ಲಿರುವ ಆಹಾರ ವಿಜ್ಞಾನ ಸಂಸ್ಥೆಯಲ್ಲಿ ಕಂಡುಹಿಡಿಯಲಾಗಿದೆ. ಈ ಹೊಸ ವಿಧಾನದ ಪ್ರಕಾರ ಹಸನಾದ ಹಾಲು ಮತ್ತು 'ಮಾಲ್ಟ್ ಲಿಕರ್' ಇವುಗಳನ್ನು ಉಪಯೋಗಿಸುವ ಬದಲು 'ಮಾಲ್ಟ್' ಸಾರ ಮತ್ತು ಹಾಲಿನ ಪುಡಿಯನ್ನು ಪುಡಿಯ ರೂಪದಲ್ಲಿಯೇ ಮೂಲವಸ್ತುವಾಗಿ ಉಪಯೋಗಿಸಿಕೊಳ್ಳಲಾಗುವುದು. ಮಾಲ್ಟೆಡ್ ಹಾಲಿನ ಪುಡಿಯನು ಉಪಯೋಗಿಸುವ ಇತರ ವಸ್ತುಗಳಾದ ರಾಗಿ, ಜೋಳ, ಬಾರ್ಲಿ, ಗೋಧಿ ಮತ್ತು ಹಾಲುಗಳು ಸುಲಭವಾಗಿ ಸಿಗುವ ವಸ್ತುಗಳಾಗಿವೆ. ಭಾರತದಲ್ಲಿ ಇತ್ತೀಚೆಗೆ 'ಮಾಲ್ಟ್' ಉತ್ಪನ್ನಗಳ ಬೇಡಿಕೆ ಹೆಚ್ಚಾಗಿದೆ. ಇದನ್ನು ಬಹು ನುಟ್ಟಿಗೆ ಆಯೂತದ ಮೂಲಕ ಪೂರೈಸಿಕೊಳ್ಳಲಾಗುತ್ತಿದೆ.

ಸಾಂಸರ್ಗಿಕ ರೋಗಗಳ ಬಗ್ಗೆ ಸಂಶೋಧನೆ

ಕಾಲರಾ, ಕ್ಷಯ, ಕುಷ್ಟರೋಗ, ಕಣ್ಣುಬೇನೆ ಪೋಲಿಯೋ, ಫೈಲೇರಿಯಾ ಇತ್ಯಾದಿ ಸಾಂಸರ್ಗಿಕ ರೋಗಗಳ ಬಗ್ಗೆ ಸಂಶೋಧನಾ ಕಾರ್ಯವನ್ನು ಸಂಘಟಿಸಲು ಪ್ರಥಮ ಗಮನ ಕೊಡಬೇಕೆಂದು ಭಾರತೀಯ ವೈದ್ಯಕೀಯ ಸಂಶೋಧನಾಪರಿಷತ್ತು ನಿರ್ಧರಿಸಿದೆ.

ನಂಜಿನ ಸಂಬಂಧವಾದ ರೋಗಗಳ ಬಗ್ಗೆ ಸಂಶೋಧನೆಗಳ ವ್ಯಾಪ್ತಿಯನ್ನಂತೂ ಇತ್ತೀಚೆಗೆ ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್ತು ತುಂಬಾ ಹೆಚ್ಚಿಸಿದೆ.

ಮುಂಬಯಿಯಲ್ಲಿರುವ ಪೋಲಿಯೋ ಮೈಲಿಟಿಸ್ ಸಂಶೋಧನಾ ಸಂಸ್ಥೆಯು ಈ ರೋಗಕ್ಕೆ ಸಂಬಂಧಪಟ್ಟಂತೆ ಹಲವು ಮುಖ್ಯವಾದ ಸಂಶೋಧನೆಯನ್ನು ಕೈಗೊಂಡಿರುವ ಜೊತೆಗೆ ಪೋಲಿಯೋ ಚಿಕಿತ್ಸೆಯಲ್ಲಿ ಅನೇಕರಿಗೆ ತರಬೇತಿಯನ್ನು ನೀಡಿದೆ.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ.ನ.

Tel: 'BLUEYAGAR'. —— ಚಿನ್ನ ಮತ್ತು ವಜ್ರಗಳ ಆಧುನಿಕ ತವರುಮನೆ —— Phone: 374.

ಕೆ.ಆರ್.ಕೆ.ಶೇಟ್ರ್ ಡಯಮಂಡ್ ಮಾರ್ಟ್ರ್

ಸ್ಥಾಪನೆ:1919] ಚಿನ್ನ ಮತ್ತು ವಜ್ರದ ವ್ಯಾಪಾರಿಗಳು,(ಗವರ್ನ್‌ಮೆಂಟ್ ಕಾಲೇಜ್ ಎದುರುಗಡೆ)ಮಂಗಳೂರು. ಮಾ.ಶ:ಕೆ.ಕೆ ಆರ್.ಶೇಟ್

NAVAYUGA, UDIPI.
REGD. NO.BG. 176

7—9—1961

LICENSE NO. 31
Licensed to Post without Prepayment

ಭಾರತ ದರ್ಶನ

ಸಣ್ಣ ಪ್ರಮಾಣದ ಕೈಗಾರಿಕೆಗಳು ಅಧಿಕ ಸಂಖ್ಯೆಯ ಜನರಿಗೆ ಉದ್ಯೋಗಾವಕಾಶವನ್ನು ಒದಗಿಸುವುದೇ ಅಲ್ಲದೆ ದೇಶದ ಆರ್ಥಿಕ ವ್ಯವಸ್ಥೆಯನ್ನು ವಿಶಾಲಗೊಳಿಸಲು ಹಾಗೂ ವಿಕೇಂದ್ರೀಕರಿಸಲು ನೆರವಾಗುವುವು. ದ್ವಿತೀಯ ಪಂಚವಾರ್ಷಿಕ ಯೋಜನಾವಧಿಯಲ್ಲಿ ಸಣ್ಣ ಪ್ರಮಾಣದ ಕೈಗಾರಿಕೆಗಳ ಬೆಳವಣಿಗೆ ಮೆಚ್ಚುವ ರೀತಿಯಲ್ಲಿತ್ತು. ಹೊಲಿಗೆ ಯಂತ್ರಗಳು, ವಿದ್ಯುತ್ ಬೀಸಣಿಗೆಗಳು, ಬೈಸಿಕಲ್‌ಗಳು, ಕಟ್ಟಡಗಳ ನಿರ್ಮಾಪಕರಿಗೆ ಅಗತ್ಯವಾದ ಕಬ್ಬಿಣದ ಸಾಮಾನುಗಳು ಮುಂತಾದ ಸಣ್ಣ ಪ್ರಮಾಣದ ಕೈಗಾರಿಕೆಗಳು ಶೇ. ೨೫ ರಿಂದ ೫೦ ರ ವರೆಗೆ ಉತ್ಪಾದನೆಯನ್ನು ಹೆಚ್ಚಿಸಿದವು. ಕೈಗಾರಿಕಾ ಪ್ರದೇಶಗಳ ಸ್ಥಾಪನೆಯು ಹೊಸ ಪ್ರದೇಶಗಳಲ್ಲಿ ಕೈಗಾರಿಕಾಭಿವೃದ್ಧಿಗೆ ಉತ್ತೇಜನವಿತ್ತಿದೆ.

ದೆಹಲಿಯ ಓಖ್ಲಾ ಕೈಗಾರಿಕಾ ಪ್ರದೇಶದಲ್ಲಿರುವ ಒಂದು ವರ್ಕ್‌ಷಾಪಿನಲ್ಲಿ ಮಹಿಳಾ ಕೆಲಸಗಾರರು ರೇಡಿಯೋವನ್ನು ಜೋಡಿಸುತ್ತಿರುವುದನ್ನು ಮೊದಲನೆಯ ಚಿತ್ರದಲ್ಲಿ ಕಾಣಬಹುದು.

ದೆಹಲಿಯ ಓಖ್ಲಾ ಕೈಗಾರಿಕಾ ಪ್ರದೇಶದಲ್ಲಿರುವ ಒಂದು ರೇಡಿಯೋ ವರ್ಕ್‌ಷಾಪನ್ನು ಎರಡನೆಯ ಚಿತ್ರದಲ್ಲಿ ಕಾಣಬಹುದು.

ಮೂರನೆಯ ಚಿತ್ರವು ದೆಹಲಿಯ ಓಖ್ಲಾದಲ್ಲಿರುವ ಕೈಗಾರಿಕಾ ಪ್ರದೇಶದಲ್ಲಿ ತಯಾರಾದ ಸಂಗೀತ ವಾದ್ಯಗಳನ್ನು ತೋರಿಸುತ್ತದೆ.

ಯಾರ ಆಯ್ಕೆ ಮಾಡಬೇಕು?

ಮುಂದಿನ ಚುನಾವಣೆಗಳಲ್ಲಿ ಕಾಂಗ್ರೆಸ್ ಟಿಕೇಟನ ಮೂಲಕ ಸ್ಪರ್ಧಿಸಲು ಬಯಸುವವರ ಅಪೇಕ್ಷಾ ಪತ್ರಗಳು ಪ್ರದೇಶ ಕಾಂಗ್ರೆಸ್ ಸಮಿತಿಯ ಕೈ ಸೇರಿವೆ. ಎಂದಿನಂತೆ ಈ ಸಲವಾದರೂ ಒಂದು ಸ್ಥಾನಕ್ಕೆ ಸರಾಸರಿ ನಾಲ್ಕು ಅಪೇಕ್ಷಾ ಪತ್ರಗಳು ಬಂದಿರುವುದು ಹೆಚ್ಚಿನ ಆಲೋಚನೆಗೆ ಕಾರಣವಾಗಿದೆ. ಯಾರನ್ನು ಹಿಡಿಯಬೇಕು, ಯಾರನ್ನು ಬಿಡಬೇಕು ಎಂಬ ಒಂದು ಪ್ರಶ್ನೆ ಮಾತ್ರವಲ್ಲ, ಹೊಸ ಮುಖಗಳಿಗೆ ಅವಕಾಶ ಕಲ್ಪಿಸಬೇಕು ಎಂಬ ಇನ್ನೊಂದು ವಾದವನ್ನೂ ಅವರು ಮನ್ನಿಸಬೇಕಾಗಿದೆ. ಸದ್ಯ ಸ್ಥಾನಾಪನ್ನರಾದವರಲ್ಲಿ ಅತ್ಯಧಿಕ ಸಂಖ್ಯೆಯಷ್ಟು ಪ್ರತಿನಿಧಿಗಳು ಮರಳಿ ತಮ್ಮ ಉಮೇದ್ವಾರಿಕೆಯನ್ನು ಮುಂದೆ ತಂದುದರಿಂದ ಮತ್ತಷ್ಟು ಪ್ರಶ್ನೆ ಜಟಿಲವಾಗಿದೆ.

ಕಾಂಗ್ರೆಸ್ ಸಂಸ್ಥೆಯ ಹಿತಾಕಾಂಕ್ಷೆಯಿಂದ ಕೆಲವೊಂದು ಮಾತುಗಳನ್ನು ಬರೆಯಬಹುದು. ಪ್ರಚಲಿತ ಸದಸ್ಯರು ತಮ್ಮ ಮತದಾರ ಕ್ಷೇತ್ರಕ್ಕೆ ಯಾವ ವಿಧದಲ್ಲಿ ಸೇವೆ ಸಲ್ಲಿಸಿರುವರೆಂಬುದನ್ನು ನಿರೀಕ್ಷಕರು ಕೂಲಂಕುಷವಾಗಿ ಪರಿಶೀಲನೆ ನಡೆಸಬೇಕು. ಹಾಗೆಯೇ ಹೊಸತಾಗಿ ಅಪೇಕ್ಷಾ ಪತ್ರಗಳನ್ನು ಸಲ್ಲಿಸಿದವರು ಮತದಾರ ಸಂಘಿದೊಡನೆ ಇಟ್ಟುಕೊಂಡ ಸಂಬಂಧವನ್ನು ಪ್ರತ್ಯಕ್ಷವಾಗಿ ಪರಿಶೀಲಿಸಬೇಕು. ಆಗ, ಈಗ ಲಂಬರಿಸ್ಟಿರುವ ಅಪೇಕ್ಷಾ ಪತ್ರಗಳ ಸಂಖ್ಯೆ ಅರ್ಧದಷ್ಟಾದರೂ ಕಡಿಮೆಯಾಗುವುದು ಖಂಡಿತ. ಸದ್ಯದ ಸದಸ್ಯರಾಗಿರುವ ಹಿರಿಯರು ಹೊಸ ರಕ್ತವು ಕಾಂಗ್ರೆಸ್‌ನಲ್ಲಿ ಹರಿಯುವಂತೆ ಮಾಡಿ, ಕಾಂಗ್ರೆಸ್‌ನ ಸೀಳಿಗೆಯನ್ನು ಮುಂದುವರಿಸಲು ಅನುಕೂಲವಾಗುವಂತೆ ಸಮರ್ಥ ಯುವಕರಿಗೆ ಸ್ಥಾನಗಳನ್ನು ಸ್ವೇಚ್ಛೆಯಿಂದಲೇ ಬಿಟ್ಟುಕೊಡುವಂತೆ ಮಾಡಬೇಕು. ಉಮೇದ್ವಾರಿಗಳು ಅನುಸರಿಸುವ ಕಾಂಗ್ರೆಸ್ ನೀತಿ, ಅವರ ಚಾರಿತ್ರ್ಯಶುದ್ಧಿ ಮೊದಲಾದುವನ್ನೂ ಗಮನಿಸಹೊರಟರೆ, ಬೇಕಾಗಿರುವಷ್ಟೂ ಸಂಖ್ಯೆಯ ಅಪೇಕ್ಷಾ ಪತ್ರಗಳು ಎದುರು ನಿಲ್ಲುವಂತಿಲ್ಲ. ಆಗ ಸಮರ್ಥ ಕಾಂಗ್ರೆಸಿಗರಿಂದ ಅಪೇಕ್ಷಾ ಪತ್ರಗಳನ್ನು ಹಾಕಿಸಿಯಾದರೂ ಯೋಗ್ಯ ಹುದ್ದರಿಗಳನ್ನೇ ಕಾಂಗ್ರೆಸ್ಸು ನಿಲ್ಲಿಸಬೇಕು ಯಾರಾದರೊಬ್ಬನಿಗೆ ಯಾವುದಾದರೊಂದು ಕಾರಣದಿಂದ ಟಿಕೇಟನ್ನು ಕೊಟ್ಟು ಕಾಂಗ್ರೆಸ್ಸಿಗೆ ನಿಮ್ಮ ಅಮೂಲ್ಯ ಮತದಾನ ಮಾಡಿ' ಎನ್ನುವುದಕ್ಕಿಂತ ಸರ್ವ ರೀತಿಯಲ್ಲೂ ಸಮರ್ಥನಾದವನನ್ನು ಮುಂದೆ ತಂದು 'ಕಾಂಗ್ರೆಸಿಗನಾದ ಇಂತಹನಿಗೆ ನಿಮ್ಮ ಮತ ಕೊಡಿರಿ" ಎನ್ನುವುದು ಅಭಿಮಾನಾಸ್ಪದ. ಆದರೆ, ಇದಕ್ಕೆ ನಿಷ್ಪಕ್ಷಪಾತ ತನದ ವರ್ತನೆಯ ಅವಶ್ಯಕತೆಯಿದೆ. ಪ್ರಾದೇಶಿಕ ಕಾಂಗ್ರೆಸ್ಸು ಹಾಗೂ ಚುನಾವಣಾ ಸಮಿತಿಗಳು ಈ ಕಡೆಗೆ ಗಮನ ಹರಿಸುವ ಅವಶ್ಯಕತೆಯಿದೆ.

(೧ನೇ ಪುಟದಿಂದ)

ಈಗ ಉಪವಾಸ ಕೊನೆಗೊಳಿಸಲು ಯಾವುದಾದರೊಂದು ಮಾರ್ಗ ಕಂಡರೆ ನಾಕು ಎನಿಸುತ್ತಿದೆ ಅವರಿಗೆ. ಸಮುದ್ರದಲ್ಲಿ ಮುಳುಗುವವನು ಹುಲ್ಲು ಕಡ್ಡಿಯಾದರೂ ಆಧಾರಬೇಕೆನ್ನುವಂತೆ ತಾರಾಸಿಂಗರ ಈ ಉದ್ಗಾರವಿದೆ. ಪಂಜಾಯತಿಯನ್ನು ನಿಷ್ಪಕ್ಷಪಾತಿಗಳಾದ ಶ್ರೀ ಜಯಪ್ರಕಾಶ ನಾರಾಯಣರ ನೇತೃತ್ವದಲ್ಲಿರಬೇಕೆಂದೂ ಇವರು ಬಯಸುತ್ತಾರೆ. ಕೇಂದ್ರ ಸರಕಾರವು ಇಂತಹ ವಾದಗಳಿಗೆ ಎಡೆ ಕೊಡಬಾರದು. ಕಳೆದ ವರ್ಷ ಕೇಂದ್ರ ಸರ್ಕಾರಿ ನೌಕರರ ಸಾರ್ವತ್ರಿಕ ಸಂಪಿನ ವೇಳೆ ಧರಿಸಿದ್ದ ದೃಢ ಧೋರಣೆಗೇನೇ ಬಂಧಿತವಾಗಿ ತಾರಾಸಿಂಗರ ಯಾವ ಶರ್ತಕ್ಕೂ ಒಳಗಾಗಬಾರದು. ಅವರು ತಾನಾಗಿಯೇ ಪ್ರಾರಂಭಿಸಿದ ಉಪವಾಸವನ್ನು ತಾನಾಗಿಯೇ ಕೊನೆಗೊಳಿಸಬೇಕು. ಇದರಲ್ಲಿ ಯಾರೊಬ್ಬರಾದರೂ ಮಧ್ಯಸ್ಥಿಕೆ ವಹಿಸುವ ಅವಶ್ಯಕತೆಯಿಲ್ಲ. ಕೇಂದ್ರವು ಈ ಸಂಬಂಧದಲ್ಲಿ ಅನುಸರಿಸುವ ಕಾರ್ಯವಿಧಾನವು ಭವಿಷ್ಯದ ಮೇಲೆ ಪ್ರಭಾವ ಬೀರುವುದೆಂಬುದನ್ನು ಮರೆಯಬಾರದು.

"ಅತ್ಯುತ್ತಮ ಬ್ಯಾಂಕಿಂಗ್ ಸೇವೆ"

- ಸಿಗ್ನಿ
- ಕ್ಯುಮುಲೇಟಿವ್
- ಇನ್ವೆಸ್ಟರ್ಸ್ ಏಜನ್ಸಿ
- ಲಕ್ಷ್ಮೀ ಮತ್ತು ಸಿಂಡಿಕೇಟ್ ಬ್ಯಾಂಕ್ ಕೇಶ್ ಸರ್ಟಿಫಿಕೇಟುಗಳು
- ಭದ್ರತಾ ಕೋಶಗಳು
- ವಿದ್ಯಾರ್ಥಿಗಳಿಗೆ ಮತ್ತು ಧರ್ಮ ಸಂಘ — ಸಂಸ್ಥೆಗಳಿಗೆ ವಿಶೇಷ ಸೌಕರ್ಯಗಳು

ಇನ್ನಿತರ ಎಲ್ಲಾ ವಿಧದ ಬ್ಯಾಂಕಿಂಗ್ ಸೇವೆಗಳು

ದಕ್ಷಿಣ ಭಾರತದಾದ್ಯಂತ ಹಬ್ಬಿರುವ 141 ಶಾಖೆಗಳು

ಸಿಂಡಿಕೇಟ್ ಬ್ಯಾಂಕ್

ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸ್: ಮುಕುಂದ ನಿವಾಸ, ಉಡುಪಿ, (ಮೈಸೂರು ರಾಜ್ಯ)
ಸ್ಥಾಪನೆ: 1925.

Edited Printed & Published by K. H. Shetty, at the Navayuga Press, Udipi, S. India.

ರಾಷ್ಟ್ರೀಯ ವಾರಪತ್ರಿಕೆ. ಬೆಲೆ: 13 ನ.ಪೈಸೆ

ನವಯುಗ

KANNADA — NAVAYUGA — WEEKLY

ಸಂಪುಟ ೪೧ ಸಂಚಿಕೆ ೨ | ಉಡುಪಿ 14—9—1961 ಗುರುವಾರ | Vol. 41 No. 2

ನಿಮ್ಮ ಯಾವತ್ತೂ ಮುದ್ರಣ ಕೆಲಸಗಳಿಗೆ ದಯಮಾಡಿ ವಿಚಾರಿಸಿರಿ:

ನವಯುಗ ಪ್ರೆಸ್, ಉಡುಪಿ

ವಿದ್ಯಾರ್ಥಿಗಳಿಗೆ ಮತ್ತು ವಯಸ್ಕರಿಗೆ ಆತ್ಯುಪಯೋಗೀ ಪುಸ್ತಕ ಸುಲಭದಲ್ಲಿ ಇಂಗ್ಲಿಷ್

ನವಭಾರತ ಪುಸ್ತಕ ಭಂಡಾರ ಉಡುಪಿ

ಪೂರ್ವ ಪ್ರಾಥಮಿಕ ಶಿಕ್ಷಣ

ಎಂ. ಎಲ್. ಎ. ಆದೊಡನೆಯೇ ಒಬ್ಬ ರಾಜ್ಯದ ಮಂತ್ರಿಯೊಗಲು ಅರ್ಹತೆಯನ್ನು ಪಡೆಯಬಹುದು; ಆದರೆ, ಮಂತ್ರಿ ಪದದ ನಿರ್ವಹಣೆ ಸಮರ್ಪಕವಾಗಿ ಸಾಗಬೇಕೆಂದಿದ್ದರೆ, ರಾಜ್ಯದ ಸ್ಥಿತಿಗತಿಗಳ ಬಗ್ಗೆ ಕಳಕಳಿ ಬೇಕು, ಅರಿತುಕೊಳ್ಳುವ ಮನೋವೈಶಾಲ್ಯ ಬೇಕು; ಅರಿತುಕೊಂಡುದನ್ನು ಕಾರ್ಯರೂಪಕ್ಕೆಳಿಸುವ ಎದೆಗಾರಿಕೆ ಬೇಕು. ಮದ್ರಾಸದ ಅರ್ಥಾಗೂ ಶಿಕ್ಷಣ ಶಾಖೆಗಳ ಮಂತ್ರಿ ಶ್ರೀ ಸುಬ್ರಹ್ಮಣ್ಯರು ಇಂತಹ ವಿಶಾಲ ಮನಸ್ಸು, ಉದಾರ ಭಾವನೆ ಮತ್ತು ಕರ್ತವ್ಯನಿಷ್ಠೆ ಜತೆಗೆ ಸಮರ್ಥತೆಗೆ ಹೆಸರಾದ ಮಂತ್ರಿ. ಯಾವ ಗುಲ್ಲುಗೊಂದಲಗಳಿಗೆ ಆಸ್ಪದವೀಯದೆ ನಿರಾತಂಕವಾಗಿ ಮದ್ರಾಸವು ಅಭಿವೃದ್ಧಿಗೊಳ್ಳುತ್ತಿರುವುದಕ್ಕೆ ಖಾತೆಯಿಲ್ಲದ ಮುಖ್ಯಮಂತ್ರಿ ಕಾಮರಾಜರಂತೆಯೇ ಬಹು ಶಾಖಾ ಮಂತ್ರಿ ಸುಬ್ರಹ್ಮಣ್ಯರೂ ಕಾರಣರಾಗಿದ್ದಾರೆ!

ಇತ್ತೀಚೆಗಿನ ತಿಂಗಳುಗಳಲ್ಲಿ ವಿದೇಶಗಳು ಶಿಕ್ಷಣ ಕ್ಷೇತ್ರದಲ್ಲಿ ಸಾಧಿಸಿರುವ ಅದ್ಭುತ ಸಾಧನೆಯನ್ನು ಕಂಡು, ಅದೇ ರೀತಿಯ ಸಾಧನೆಯನ್ನು ಭಾರತದಲ್ಲಿಯೂ ಸಫಲಗೊಳಿಸುವ ಸಾಧ್ಯಾಸಾಧ್ಯತೆಯನ್ನು ಅವರು ವಿವೇಚಿಸುತಿದ್ದಾರೆ. ಮೂರನೆಯ ಯೋಜನಾವಧಿಯಲ್ಲಿ ಐರಿಂದಗಿಗ ವರ್ಷದ ಎಲ್ಲ ಮಕ್ಕಳಿಗೂ ಉಚಿತ ಹಾಗೂ ಅನಿವಾರ್ಯ ಶಿಕ್ಷಣವನ್ನು ನೀಡುವ ಉದ್ದೇಶವಿರುವ ಭಾರತಕ್ಕೆ ಇವರ ಅನುಭವದ ಪ್ರಯೋಜನ ದೊರೆಯುವುದರಲ್ಲಿ ಸಂದೇಹವಿಲ್ಲ. ನಮ್ಮ ದೇಶದ ಮಕ್ಕಳು ವಿದೇಶಗಳ ಹುಡುಗರಂಗಿಂತಯೂವುದೇ ವಿಷಯದಲ್ಲಿ ಹಿಂದುಳಿದಿಲ್ಲವೆಂಬುದು ಖಂಡಿತವೇ. ಸರ್ ವಿಶ್ವೇಶ್ವರಯ್ಯರಂತಹ ಇಂಜನಿಯರರು, ನೆಹರುಗಳಂತಹ ರಾಜಕಾರಣ ಮುತ್ಸದ್ಧಿಗಳು, ಗಾಂಧೀಜಿಯಂತಹ ಮಹಾತ್ಮರು, ಅರವಿಂದರಂತಹ ಯೋಗಿಗಳು ನಮ್ಮ ದೇಶದವರೇ ಅಲ್ಲವೆ? ಆದರೆ, ವಿದೇಶಗಳಲ್ಲಿ; ಮುಖ್ಯವಾಗಿ ಸಮೃದ್ಧವಾದ ಪಾಶ್ಚಾತ್ಯ ದೇಶಗಳಲ್ಲಿ ಮಕ್ಕಳ ಮನೋವಿಕಾಸದತ್ತ ವಿಶೇಷ ಗಮನವೀಯಲಾಗುತ್ತಿರುವುದರಿಂದ, ಅಂತಹ ವಿಪಾರ್ಯಾಯ ನಮ್ಮ ದೇಶದಲ್ಲಿ ನಡೆಯುತ್ತಿಲ್ಲವೆಂಬುದರಿಂದ ನಮ್ಮಲ್ಲಿ ಮೇಧಾವಿಗಳ ಸಂಖ್ಯೆ ಬೆರಳೆಣಿಕೆಯಷ್ಟು ಎಂದರೆ ನಾಚಿಗೆ ಪಡಬೇಕಾಗಿಲ್ಲ.

ಸರ್ವ ಸಾಮಾನ್ಯವಾಗಿ, ನಮ್ಮ ದೇಶದ ಬಹು ಸಂಖ್ಯಾಕರು ಬಡವರು. ಮೈ ಮುರಿದು ಕೈ ಕೆಸರು ಮಾಡಿಕೊಂಡರೆ ಮಾತ್ರ ದಿನದ ಊಟ ಗಳಿಸುವ]ಅವಕಾಶವುಳ್ಳವರು. ಇಂತಹ ಹೆತ್ತವರು ತಮ್ಮ ಮಕ್ಕಳ ಆರೈಕೆ, ರಕ್ಷಣೆ, ಪಾಲನೆಯ ಕಡೆಗೆ ಎಷ್ಟರ ಮಟ್ಟಿಗೆ ಗಮನವಿತ್ತಾರು ಎಂಬುದನ್ನು ಕಂಡು ಅರಿತುಕೊಳ್ಳುವುದಕ್ಕಿಂತ ಊಹಿಸಿ ತಿಳಿಯುವುದೇ ಶ್ರೇಯಸ್ಕರ. ಹಾಲು ಬಿಟ್ಟ ಎರಡು ವರ್ಷಗಳಿಗೆ ಮೇಲ್ಪಟ್ಟ ಏಳು ವರ್ಷಗಳಿಗೆ ಮೀರದ ಮಕ್ಕಳನ್ನು ನರ್ಸರಿ ಶಾಲೆಗಳಿಗೆ ಕಳಿಸುವ ಅನುಕೂಲ ನಮ್ಮ ದೇಶದಲ್ಲೂ ಕೆಲವೆಡೆ ಇವೆ. ಆದರೆ, ಇಂತಹ ಬಾಲವಾಟಿಕೆಗಳ ಸಂಖ್ಯೆಯು ಇಡಿಯ ಭಾರತದಲ್ಲಿ ಇನ್ನೂರನ್ನೂ ಮುಟ್ಟಿಲ್ಲವೆನ್ನುವಾಗ ಇಪ್ಪುಗಳಿಂದ ಸದ್ಯ ಲಭಿಸುವ ಪ್ರಯೋಜನವೆಷ್ಟು ಮಕ್ಕಳಿಗೆ ಎಂದು ಬೇರೆ ಹೇಳಬೇಕಾಗಿಲ್ಲ ಸಾಮಾನ್ಯವಾಗಿ ಈ ರೀತಿಯ ಬಾಲವಾಟಿಕೆಗಳು ದೊಡ್ಡ ದೊಡ್ಡ ನಗರಗಳಲ್ಲಿ ಮಾತ್ರವಿರುತ್ತವೆ; ಅಲ್ಲಿ ತಗಲುವ ವೆಚ್ಚವಾದರೂ ವಿಪರೀತ. ಶ್ರೀಮಂತರ ಮಕ್ಕಳು ಮಾತ್ರ ಇಲ್ಲಿ ಇರುವುದುಸಾಧ್ಯ. ಲಕ್ಷಾಂತರ ಮಕ್ಕಳಿಗೆ ಲಭ್ಯವಾಗದ ಈ ಸೌಲಭ್ಯವನ್ನು ವಿಸ್ತೃತಗೊಳಿಸುವುದು ಮಕ್ಕಳ ಬೌದ್ಧಿಕ ಅಭಿವೃದ್ಧಿಗೆ ಅತ್ಯವಶ್ಯವೆಂಬುದನ್ನು ಯಾರಾದರೂ ಒಪ್ಪಲೇಬೇಕು. ಖಡ್ಡಾದು ಶಿಕ್ಷಣದ ಯೋಜನೆಯು ನಮ್ಮ ಸಂವಿಧಾನದಲ್ಲಿ ಅಡಕವಾಗಿದೆಯೇನೋ ನಿಜವೇ. ಆದರೆ, ಮಾನಸಿಕ ವಿಕಾಸವಾಗದ ಮಗುವನ್ನು ಸಾಕ್ಷರಗೊಳಿಸುವುದು ಅದನ್ನು ಮುಂದಿನ ಆದರ್ಶ ನಾಗರಿಕನಾಗುವುದಂತೆ ತರಬೇತಿಗೊಳಿಸುವುದು ಬಹು ಕಷ್ಟಸಾಧ್ಯ. ಇಂದು ಅನಿವಾರ್ಯ ಶಿಕ್ಷಣದ ಕಾಯದೆಯನ್ವಯ ಶಾಲೆಗೆಬರುವ ಮಕ್ಕಳನ್ನು ಪರಿಶೀಲಿಸಿದರೆ, ಅವರ ಮನಸ್ಸು ಏನೇನೂ ಬೆಳೆದು ಬಂದಿಲ್ಲ, ಅದು ಸಂಕುಚಿತ ಮಾತ್ರವಲ್ಲ, ಅನುತ್ಸಾಹಿ, ಅಸಮರ್ಥವಾಗಿದೆಯೆಂಬುದರ ಮನವರಿಕೆಯಾಗದಿರದು. ಇಂತಹ ಮಗು, ಕಲಿಸಿದ ವಿದ್ಯೆಯನ್ನು ಗ್ರಹಿಸುವುದಾದರೂ ಹೇಗೆ? ಅದು ಗ್ರಹಿಸುವಂತೆ ಬೋಧನೆ ನೀಡುವುದು ಎಷ್ಟರ ಮಟ್ಟಿಗೆ ಪ್ರಯೋಗಾರ್ಹವಾಗಿದೆ?

ಈ ಗಂಭೀರ ಸಮಸ್ಯೆಯನ್ನು ವಿವೇಚಿಸಬೇಕು. ಹೆತ್ತವರು ತಮ್ಮ ದುಡಿತದ ಅನಾರೋಗ್ಯದ ಅಥವಾ ಮತ್ತಾವುದೇ ಕಾರಣಗಳಿಂದ ಮಗುವಿನ ಮಾನಸಿಕ ವಿಕಾಸದತ್ತ ಗಮನ ಹರಿಸಲು ಅಸಾಧ್ಯರಿರುವಾಗ, ಅವರನ್ನು ಬಾಲವಾಟಿಕೆಗಳಿಗೆ ಸೇರಿಸಲು ಅನುಕೂಲವಾಗುವಂತೆ ಕಡಿಮೆ ಪಕ್ಷ ತಾಲೂಕು ಕೇಂದ್ರ ಸ್ಥಳಗಳಲ್ಲಿಯಾದರೂ ಒಂದೊಂದು ಬಾಲವಾಟಿಕೆಗಳನ್ನು ಸರಕಾರ ತೆರೆಯಬೇಕು. ಇದಕ್ಕೆ ಬೇಕಾದ ಅಧ್ಯಾಪಕರನ್ನಾದರೂ ಸಾಮಾನ್ಯ ತರಬೇತಿ ಶಾಲೆಗಳಲ್ಲಿಯೇ ತರಬೇತಿಗೊಳಿಸುವ ವ್ಯವಸ್ಥೆ ಮಾಡಿದರೆ. ವೆಚ್ಚವು ಕಡಿಮೆ ಬರುವುದು. ಅಮೆರಿಕೆ—ರಶ್ಯಗಳಲ್ಲಿರುವರತೆ ೩—೫ ವರ್ಷಗಳ ಯೋಜನೆ ಸದ್ಯ ಭಾರತದಲ್ಲಿ ಅವ್ಯವಹಾರ್ಯವೆಂಬಂತಿದ್ದರೂ ಖಡ್ಡಾಯ ಶಿಕ್ಷಣವು ಒನೆ ವರ್ಷದಿಂದ ಪ್ರಾರಂಭವಾಗುವುದರಿಂದ ಇದಕ್ಕೆ ಮೊದಲಿನ ಒಂದು ವರ್ಷವಾದರೂ ಎಲ್ಲ ಮಕ್ಕಳೂ ಒಂದು ಸೇರಿ ತಮ್ಮ ಬುದ್ಧಿ ವಿಕಾಸವನ್ನು ಮಾಡಿಕೊಳ್ಳುವ ಅವಕಾಶ ಕಲ್ಪಿಸಿ ಕೊಡುವುದು ಅಪೇಕ್ಷಣೀಯವಿದೆ. ಆರ್ಥಿಕಾನುಕೂಲತೆ ಹೆಚ್ಚಿದಂತೆ ಇದನ್ನು ವಿಸ್ತರಿಸುತ್ತ ಹೋಗಬಹುದು ಇಂತಹ ಪೂರ್ವ ಪ್ರಾಥಮಿಕ ಶಿಕ್ಷಣವು ಮಾನಸಿಕ ವಿಕಾಸಕ್ಕೆ, ಪರಸ್ಪರ ಸ್ನೇಹ ಸಂವರ್ಧನೆಗೆ, ಸಹಕಾರ ಭಾವನೆಗೆ ಪ್ರೇರಕವಾಗುವುದರಿಂದ ಎಲ್ಲ ರಾಜ್ಯ ಸರಕಾರಗಳೂ ಇದರ ಸಾಧ್ಯಾಸಾಧ್ಯತೆಯನ್ನು ತಜ್ಞರಿಂದ ಪರಿಶೀಲಿಸಬೇಕು ನರ್ಸರಿ ಶಾಲೆಗಳನ್ನು ಸಾಮಾನ್ಯವಾಗಿ ಖಾಸಗಿ ಕ್ಷೇತ್ರಗಳಲ್ಲಿಯೇ ಇರಗೊಡುವುದು ಇದುವರೆಗಿನ ನೀತಿಯಾದರೂ ಸರಕಾರವೇ ತನ್ನ ನೇತೃತ್ವದಲ್ಲಿ ಇವನ್ನು ಸ್ಥಾಪಿಸಿ ನಡೆಸಿಕೊಂಡು ಬರಬೇಕು. ಆರ್ಥಿಕ ಅನುಕೂಲತೆಯಿದ್ದವರಿಂದ ಶುಲ್ಕ ಪಡೆಯಬಹುದಾದರೂ ಅನಾನುಕೂಲವಂತರಿಗೆ ವಿನಾಯತಿಯು ಅವಶ್ಯ ಸಿಗಬೇಕು.

ಭಾರತದ ರಾಜ್ಯಗಳಿಗೆ ಹಲವು ಸಂವರ್ಧಗಳಲ್ಲಿ ಮಾದರಿಯಾಗಿ ನಿಂತ ಮದ್ರಾಸವು ಈ ವಿಷಯದತ್ತ ತೀವ್ರ ಗಮನ ಹರಿಸುತ್ತಿರುವಂತೆಯೇ ನಮ್ಮ ಕರ್ನಾಟಕದ ಸರಕಾರವೂ ಈ ಸೂಚನೆಯನ್ನು ಗ್ರಹಿಸುವ ಉದಾರತೆ ತೋರಿಸಬೇಕು. ರಾಜ್ಯ ಸರಕಾರವು ಪ್ರಾಥಮಿಕ ಶಿಕ್ಷಣಕ್ಕೆ ಸುರಿಯುವ ಕೋಟ್ಯಂತರ ರೂಪಾಯಿಗಳು ಸಫಲವಾಗುವಂತೆ ಈ ಯೋಜನೆಯನ್ನೂ ಕಾರ್ಯರೂಪಕ್ಕೆ ತರಬೇಕು.

ಸೋವಿಯತ್ ಯಾತ್ರೆ

ಕೊನೆಗೂ ಪ್ರಧಾನ ಮಂತ್ರಿ ನೆಹರು ೫೫ ತಟಸ್ಥ ರಾಷ್ಟ್ರಸಮ್ಮೇಳನದ ಆಶಯವನ್ನು ರಶ್ಯನ್ ಪ್ರಧಾನಿ ಕ್ರುಶ್ಚೇವರತ್ತ ಒಯ್ಯಲು ಒಪ್ಪಿದರು. ನೆಹರುರವರ ರಶ್ಯನ್ ಯಾತ್ರೆಯಿಂದಾಗಿ ವಿಶ್ವದ ಕಲುಷಿತ ವಾತಾವರಣವು ಸ್ವಲ್ಪ ಮಟ್ಟಿಗೆ ದೂರವಾಗುವ ಸಲ್ಲಕ್ಷಣಗಳು ಗೋಚರವಾಗತೊಡಗಿವೆ. ಭಾರತದಂತೆಯೇ ರಶ್ಯವೂ ವಿಶ್ವಶಾಂತಿಯು ಸ್ಥಾಪಿತವಾಗಬೇಕೆಂದು ಬಯಸುತ್ತದೆ. ನಿಶ್ಶಸ್ತ್ರೀಕರಣ, ಅಂತರಾಷ್ಟ್ರೀಯ ಸಮಸ್ಯೆಗಳ ಸಂಬಂಧದಲ್ಲಿ ಉಭಯ ನಾಯಕರಲ್ಲಿ ಭಿನ್ನಾಭಿಪ್ರಾಯ ವಿಲ್ಲವಾದರೂ ಎಲ್ಲರೂ ನಿರೀಕ್ಷಿಸಿರುವಂತೆ ಅಣ್ವಸ್ತ್ರ ಪ್ರಯೋಗದ ಸಂಬಂಧದಲ್ಲಿ ಮಾತ್ರ ತೀವ್ರ ಭಿನ್ನಾಭಿಪ್ರಾಯವಿದೆ.

ಪ್ರಧಾನಿ ನೆಹರೂ ಶಾಂತಿಯ ಕೈವಾರಿಯಾಗಿ ಕ್ರುಶ್ಚೇವರೊಡನೆ ಅಣುಶಸ್ತ್ರ ಪ್ರಯೋಗದ ಪುನರಾರಂಭದ ಕುರಿತು ಬಹು ದೀರ್ಘವಾಗಿ ಮಾತಾಡಿದರು. ತನ್ನ ಹಾಗೂ ತಟಸ್ಥ ರಾಷ್ಟ್ರಗಳ ಮನಸ್ಸು ರಶ್ಯದ ಈ ಉಪಕ್ರಮದಿಂದ ಎಷ್ಟು ನೊಂದಿದೆಯೆಂಬುದನ್ನು ತಮ್ಮ ಮುಖ ಮುದ್ರೆ ಸ್ವರಭಾರಗಳಿಂದ ಕ್ರುಶ್ಚೇವರ ಹೃದಯಕ್ಕೆ ಮುಟ್ಟಿಸಿದರು. ಆದರೆ, ರಶ್ಯನ್ ಪ್ರಧಾನಿಯು ಪರ್ವತದಂತೆ ತನ್ನ ನಿರ್ಧಾರಕ್ಕೆ ಅಂಟಿಕುಳಿತು, ಭಾರತೀಯ ಪ್ರಧಾನಿಯ ಮನಸ್ಸಿಗೆ ನೆಮ್ಮದಿ ತರಲಿಲ್ಲ. ಇದೊಂದು ಮಹಾ ಪ್ರಶ್ನೆಯೊಂದನ್ನುಳಿದರೆ, ಉಳಿದೆಲ್ಲ ಸಮಾಲೋಚನೆಗಳು ಸಮೀಚೀನವಾಗಿ ನಡೆದುವೆನ್ನಬಹುದು.

ಜಾಗತಿಕ ಶಾಂತಿಯಲ್ಲೆದ್ದ ಕಿಡಿಗಳನು ನಂದಿಸುವುದು ಅಗತ್ಯವೆಂದು ಕ್ರುಶ್ಚೇವರು ಒಪ್ಪಿದರು. ಇದಕ್ಕಾಗಿ ಅಮೆರಿಕೆಯ ಎಳೆಹರೆಯದ ಅಧ್ಯಕ್ಷ ಕೆನ್ನೆಡಿಯವರೊಡನೆ ಸಮಾಲೋಚನೆ ನಡೆಸಲು ತಾನು ಸಿದ್ಧನಿರುವೆನೆಂದವರು ಭರವಸೆಯಿತ್ತರು. ಆದರೆ, ಕೆನ್ನೆಡಿಯವರ ಹೃದಯದಲ್ಲಿ ಮಾತ್ರ ಸಮಸ್ಯೆಗಳನ್ನು ಬಗೆಹರಿಸುವ ಬಗ್ಗೆ ಕಳಕಳಿಯಿರ ಬೇಕಾದುದು ಅವಶ್ಯವೆಂದವರು ತಿಳಿಸಿದರು. ಇದೇ ರೀತಿಯ ಉತ್ತರವನ್ನು ಅಮೆರಿಕೆಯ ಕೆನ್ನೆಡಿಯವರೂ ಹೇಳಬಹುದು. ಇಲ್ಲಿ ಎದ್ದು ತೋರುವ ಪ್ರಶ್ನೆಯೆಂದರೆ, ಎಲ್ಲರೂ ಮಾತನಲ್ಲಿಯೇ ಶಾಂತಿ ಸ್ಥಾಪನೆಗೆ ದುಡಿಯುತ್ತಿದ್ದು, ಇದರಲ್ಲಿ ನಿಷ್ಠೆ ಮತ್ತು ಕರ್ಮಠತೆಯನ್ನು ಹೇಗೆ ತರಬಹುದು? ಯಾವುದೇ ಒಂದು ಕಾರ್ಯವನ್ನು ತ್ರಿಕರಣ ಪೂರ್ವಕವಾಗಿ ಮಾಡದೆ ಹೋದಲ್ಲಿ ಅದು ಸಫಲವೆನಿಸದು. ಮನೋವಾಕ್ಯಾಯಗಳಿಂದ ಶಾಂತಿಯನ್ನು ಬಯಸುವ ನೆಹರು ಈ ಮಾತಿನ ಮಲ್ಲರನ್ನೂ ತನ್ನಂ

(ಅನೇ ಪುಟ ನೋಡಿರಿ)

ಎರಡು ಎಟ್ಲಾಸುಗಳು

"ಉಪ್ಪಾಡಿ"

ಆ ರಾತ್ರಿ ಊಟ ಮಾಡಿ ತನ್ನ ಹಾಸಿಗೆಯಲ್ಲಿ ಬಿದ್ದುಕೊಂಡ ಮುರಲಿ ಬಹು ಹೊತ್ತಿನ ತನಕ ಬಿಕ್ಕಳಿಸುತಿದ್ದ. ಕಣ್ಣೀರು ದಿಂಬನ್ನು ಒದ್ದೆಯಾಗಿಸಿತ್ತು. ಆದಿನ ಶಾಲೆಯಲ್ಲಿ ನಡೆದ ಘಟನೆಯನ್ನು ನೆನೆ ನೆನೆಸುತ್ತಾ ಆತನ ಅಳು ಇಮ್ಮಡಿ—ಮುಮ್ಮಡಿಸುತಿತ್ತು. ಕೊರಳ ನೆರೆ ಬಿಗಿದು ಬರುತಿತ್ತು....

"ಅವಳು....ಅವಳು, ನನ್ನ...."

ಆತನ ಅಳುವಿನ ದನಿ ಕೊಂಚ ಜಾಸ್ತಿಯೇ ಆಯಿತು. ಕಣ್ಣೀರಿನ ಪ್ರವಾಹವೂ ಸ್ವಲ್ಪ ವೇಗವಾಯಿತು.

ಆ ದಿನ ಆತ ಶಾಲೆಯಲ್ಲಿ ಎಲ್ಲರ ಗಮನಕ್ಕೂ ಬಂದ ವಿದ್ಯಾರ್ಥಿಯಾಗಿದ್ದ. ಹಾಗೆಲ್ಲಾ ಆದೀತೆಂದು ಆತ ಊಹಿಸಿಯೂ ಇರಲಿಲ್ಲ; ಆದರೆ ಆಗಿಹೋಗಿತ್ತು!

ಮುರಲಿ ಐದನೆಯ ತರಗತಿಯ ಓದುವಿದ್ದ. ವಾಚನದಲ್ಲಿಯಾಗಲೀ ಇತರ ಚಟುವಟಿಕೆಗಳಲ್ಲಿಯಾಗಲೀ ಆತನೇನೂ ಅಂತಹ ಜಾಣಾಕ್ಷನಾಗಿರಲಿಲ್ಲ. ಹಾಗೆಂದು ಹೆಡ್ಡನೂ ಅಲ್ಲ.

ಸಂಜೆ ಕೊನೆಯ ಪೀರಿಯಡ್ ಹೊಡೆದಾಗ ಎಲ್ಲರೂ ಆಟದ ಬಯಲಿಗೆ ಹೋಗುತಿದ್ದರು. ಆದರೆ ಎಲ್ಲಿಯೋ ಮಾವಿನ ಮರ ಹತ್ತಿ ಬಿದ್ದು ಕಾಲು ಗಾಯಪಡಿಸಿಕೊಂಡಿದ್ದುದರಿಂದ ಆಟದ ಮಾಸ್ತರರಿಂದ ರಿಯಾಯತಿ ಪಡೆದು ಮುರಲಿ ತರಗತಿಯಲ್ಲೇ ಉಳಿದುಕೊಂಡಿದ್ದ. ಎಲ್ಲರೂ ಆಟಕ್ಕೆ ಹೋಗಿದ್ದುದರಿಂದ ಶಾಲೆ ನೀರವವಾಗಿತ್ತು. ಮುರಲಿ ಕೆಲವು ನಿಮಿಷ ತರಗತಿಯಲ್ಲೇ ಕುಳಿತು ತನ್ನ ಕನ್ನಡ ಪುಸ್ತಕವನ್ನು ತಿರುವಿಹಾಕ ತೊಡಗಿದ.

ವಿಶೇಷ ಕೆಲಸವಿಲ್ಲದಿರುವಾಗ ಮನಸ್ಸು ಕಲ್ಪನೆಗೆ ಎಡೆ ಕೊಡುತ್ತದೆ. 'ಮುರಲಿ ಆ ಪುಸ್ತಕದಲ್ಲಿರುವ ಚಿತ್ರಗಳನ್ನು ಒಂದೊಂದಾಗಿ ವಿಮರ್ಶಿಸತೊಡಗಿದ.

ಶಂಕರಾಚಾರ್ಯರ ಚಿತ್ರ; ಕಿಸೆಯಿಂದ ಬಣ್ಣದ ಪೆನ್ಸಿಲನ್ನು ತೆಗೆದು ಶಂಕರಾಚಾರ್ಯರಿಗೆ ಗಾಂಧೀ ಟೋಪಿಯನ್ನು ಬರೆಯತೊಡಗಿದ. ಮುಂದೆ, ಗಾಂಧೀಜಿಯವರ ಚಿತ್ರ; ಬರಿ ಮೈಯ ಗಾಂಧಿಯವರಿಗೆ ಗೆರೆ ಗೆರೆಯ ಅಂಗಿ ತೊಡಿಸಿದ. ಆ ಮೇಲ್ಮುಖಾಸ್ಸಿ ಲಕ್ಷ್ಮೀ ಬಾಯಿಯ ಕುದುರೆ ಸವಾರಿಯ ಚಿತ್ರ; ಅವಳಿಗೆ ಗಡ್ಡ ಮೀಸೆ ಹಚ್ಚಿದ!

ಆದರೆ ಕೆಲ ಹೊತ್ತಿನಲ್ಲೇ ಈ ವೃತ್ತಿಯಲ್ಲೂ ಆತನಿಗೆ ಬೇಸರ ಬಂತು. ಪುಸ್ತಕ ಪೆನ್ಸಿಲನ್ನು ಚೀಲಕ್ಕೆ ತುರುಕಿಸಿ ಬದಿಗಿಸೆದು ಎದ್ದು ನಿಂತ. ಕಾಲನ್ನು ಕುಂಟುತ್ತಾ ವಾಚನಾಲಯದ ಕಡೆಗೆ ಹೆಜ್ಜೆ ಹಾಕಿದ.

ಆ ವೇಳೆ ವಾಚನಾಲಯದಲ್ಲಿ ಯಾರೂ ಇದ್ದಿಲ್ಲ. ವಾಚನಾಲಯಕ್ಕೆ ಕಸ್ತೂರಿ, ಪ್ರಪಂಚ, ಪ್ರಕಾಶ, ನವಯುಗ—ಮುಂತಾದ ಪತ್ರಿಕೆಗಳು ಹಲವು ಬರುತಿದ್ದುವು. ಅದೆಲ್ಲ ಓದಿ ಅರ್ಥಮಾಡಿಕೊಳ್ಳುವ ಶಕ್ತಿ ಮುರಲಿಗಿದ್ದಿಲ್ಲ. ಏನೋ ಎಂಟನೆಯ ತರಗತಿಯವರೂ ಏಳನೆಯ ತರಗತಿಯಲ್ಲಿ ಕೆಲವರೂ ಓದುವರು. ಇತರರು ಅಲ್ಲಿ ಹೋಗಿ ಚಿತ್ರ ನೋಡಿಕೊಂಬರುವರು. ಮುರಲಿ ಆ ತಿಂಗಳ ಕಸ್ತೂರಿಯನ್ನು ತಿರುವಿ ಹಾಕತೊಡಗಿದ. ಬಹಳ ಆಕರ್ಷಣೀಯ ಚಿತ್ರಗಳು ಅದರಲ್ಲಿದ್ದುವು. ಚಂದಮಾಮ ಪತ್ರಿಕೆಯೂ ಬಳಿಯಲ್ಲೇ ಬಿದ್ದಿತ್ತು.

ಮುರಲಿ ಸುತ್ತಲೂ ನೋಡಿದ; ನಿರ್ಜನ, ನಿಶ್ಶಬ್ದ!

ಆತನ ಮನಸ್ಸು ಹೇಗೆ ಹೇಗೋ ಸುತ್ತಿ ಸುಳಿದು ಕೆಲಸಮಾಡ ತೊಡಗಿತು.

ದಿವಸದಲ್ಲಿ ಕೆಲವು ಕಾಲ ವಿಷಗಳಿಗೆ ಬರುವುದು ಎನ್ನುವರು. ಪ್ರಾಯಃ ಆಗಲೇ ವಿಷಗಳಿಗೆ ಬಂದಿರಬೇಕು. ಅಂತಲೇ ಆತನ ಮನಸ್ಸಾ ತಾಳ ತಪ್ಪಿತ್ತು.

ಕಸ್ತೂರಿಯನ್ನೂ ಚಂದಮಾಮವನ್ನು ಕೈಗೆತ್ತಿಕೊಂಡು ಸಣ್ಣಗೆ ಸುರುಳಿ ಮಾಡಿಕೊಂಡು ವಾಚನಾಲಯದಿಂದ ತನ್ನ ತರಗತಿಯತ್ತ ವೇಗವಾಗಿ ಸಂದು ಹೋದ.

ಆತ ಸಂದು ಹೋಗುತಿದ್ದುದನ್ನು ಪಕ್ಕದಲ್ಲಿರುವ ಆಫೀಸು ರೂಮಿನಿಂದ ಹೆಡ್ಮಾಸ್ಟರ್ ನೋಡುತಿದ್ದರೂ ಪತ್ರಿಕೆಗಳನ್ನು ಸಾಕಷ್ಟು ಅಡಗಿಸಿಟ್ಟುಕೊಂಡಿದ್ದುದರಿಂದ ಅವರಿಗೆ ಘಟನೆಯನ್ನು ಊಹಿಸಲಾಗಲಿಲ್ಲ.

ತರಗತಿಗೆ ಹೋಗುತ್ತಲೇ ಮುರಲಿ ಪತ್ರಿಕೆಯನ್ನು ಮತ್ತೊಮ್ಮೆ ಬಿಡಿಸಿ ನೋಡಿಕೊಂಡ.

ವರ್ಣ ರಂಜಿತವಾದ, ಸುಂದರವಾದ ಚಿತ್ರಗಳು. ಆದರೂ ಬಹುಕಾಲ ಅದನ್ನು ನೋಡುತ್ತಿರುವ ಸಾಹಸ ಅವನಿಗಿಲ್ಲ. ಎದೆ ಡವಗುಟ್ಟುತಿತ್ತು.

ಅವನ್ನು ಲಪಟಾಯಿಸುವ ಹಂಚಿಕೆ ಅವನಲ್ಲಿತ್ತು. ಆದರೆ ಧೈರ್ಯವಿರಲಿಲ್ಲ. ಮನಸ್ಸು ಬುದ್ಧಿಗಳ ಅನಿಶ್ಚಿತ ತಾಕಲಾಟದಲ್ಲಿ ಕೆಲಹೊತ್ತು ಕಳೆದ "ಇದನ್ನು ಕೊಂಡೊಯ್ದರೆ ಏನೇನು ತೊಂದರೆಗಳೋ!" ಎಂಬ ಅಳುಕಿನಿಂದ ಕತ್ತರಿಸುತಿದ್ದರೂ, "ನಾನೇ ಕೊಂಡೊಯ್ದೆನೆಂದು ಯಾರಿಗೆ ಹೇಗೆ ತಿಳಿಯ ಬೇಕು" ಎಂಬ ಉಹಾಪೋಹಗಳ ಮೇಲೆ ಅರಮನೆಯನ್ನು ಕಟ್ಟುತ್ತಿರುವಾಗಲೇ ಢಂ ಢಣ ಢಣ ಢಣಣಣಣ!" ಎಂದು ಶಾಲೆಯ ಕೊನೆಯ ಗಂಟೆ ಬಾರಿಸಿತು. ಗಾಬರಿಯಾಗಿ ಮುರಲಿ ಪತ್ರಿಕೆಗಳನ್ನು ಸುರುಳಿ ಸುತ್ತಿ ತನ್ನ ಚೀಲದೊಳಕ್ಕೆ ತುಂಬಿದ.

ಅಗಲೇ ಆಟಕ್ಕೆ ಹೋಗಿದ್ದ ಗೆಳೆಯರೆಲ್ಲ ಮರಳಿ ಬಂದರು. ಆದರೆ ಮುರಲಿ ಗೆಳೆಯರನ್ನೆಲ್ಲ ಬಿಟ್ಟು ಎಲ್ಲರಿಗಿಂತ ಮುಂದಾಗಿ ಮನೆಯ ದಾರಿ ಹಿಡಿದಿದ್ದ.

ಸಂಜೆ ವಾಚನಾಲಯದ ಪುಸ್ತಕಗಳನ್ನೆಲ್ಲ ಆಫೀಸಿಗೆ ತರಲೋಸುಗ ಹೋದ ಉಪಾಧ್ಯಾಯರಿಗೆ ಎರಡು ಪುಸ್ತಕ ಕಾಣೆಯಾದ ಸಂಗತಿ ತಿಳಿದು ಬಂತು. ಅದನ್ನು ಕೇಳಿದ ಹೆಡ್ಮಾಸ್ಟರರಿಗೆ ವಿಷಯವೆಲ್ಲವೂ ತಿಳಿದು ಹೋಯಿತು.

ವಿಮಲಾ ಮುರಲಿಯ ಅಕ್ಕ ಎಂಟನೆಯ ತರಗತಿಯಲ್ಲಿ ಓದುತಿದ್ದಳು ಅಮ್ಮನ ಸೆರಗನ್ನು ಮರೆಹೋಗಿ ಅವಳಿಂದ ತಂದೆಗೆ ಹೇಳಿಸಿ ಹಾಗೂ ಹೀಗೂ ಹೊಸದಾಗಿ ಒಂದು "ತಾಜಮಹಲ್ ಎಟ್ಲಾಸನ್ನು" ತರಿಸಿಕೊಂಡಿದ್ದಳು. ಅದರಲ್ಲಿ ತರತರದ ಭೂಪಟಗಳು ವರ್ಣರಂಜಿತವಾದ ಹಾಳೆಗಳು! ಭಾರತದ ಬಗೆ ಬಗೆಯ ನಕಾಶೆಗಳು. ಆ ಪುಸ್ತಕ ಆಕೆಗೊಂದು ಹೆಮ್ಮೆಯ ವಸ್ತುವಾಗಿತ್ತು. ಅದನ್ನು ತಂದು ಕೊಟ್ಟ ದಿನ ರಂಗರಾಯರು, "ಇಕೊ ವಿಮಲ! ಜೋಕೆಯಿಂದ ಇಟ್ಟುಕೋ, ಎಲ್ಲಿಯಾದರೂ ಹಾಳು ಮಾಡಿಕೊಂಡೀಯೇ...." ಎಂದು ಎಚ್ಚರಿಕೆ ಕೊಟ್ಟಿದ್ದರು. ಪುಸ್ತಕ ಕೈಗೆ ಬಂದ ಉತ್ಸಾಹ ತನ್ನನ್ನಾವರಿಸಿದ್ದರೂ ಆಕೆಯನ್ನು ತಂದೆಯ ಈ ಮಾತು ಕೊಂಚ ಮಟ್ಟಿಗೆ ನಡುಗಿಸಿತ್ತು. "ಹೂಂ" ಎಂದು ಅಳುಕುತ್ತಲೇ ಹೇಳಿದ್ದಳು.

"ಅಕ್ಕಾ! ನಿನ್ನ ಎಟ್ಲಾಸ್ ಸ್ವಲ್ಪ ಚಿತ್ರ ನೋಡಿ ಕೊಡುವೆ, ಕೊಡಕ್ಕ."

"ಬೇಡ ಮುರಲಿ, ಎಲ್ಲಾದರೂ ಹಾಳಾದರೆ ತಂದೆ ಕೊಂದೇ ಹಾಕಿಯಾರು" ಎಂದು ತಮ್ಮನ ಬೆನ್ನು ಸವರುತ್ತಾ ಹೇಳಿ ಏನೇನೋ ಮಾತಿನಲ್ಲಿ ತಮ್ಮನ ಪ್ರಶ್ನೆಯನ್ನು ಎಲ್ಲೆಲ್ಲಿಗೋ ಹಾರಿಸಿಬಿಟ್ಟಳು ವಿಮಲೆ.

ಆದರೆ ಇಂದು ಮುರಲಿಯ ಸರದಿ. ಕಸ್ತೂರಿಯ ಮುಖಪತ್ರವನ್ನು ಹರಿದು ಆ ಚಿತ್ರವನ್ನು ವಿಮಲೆಯ ಒಳಿಗೊಯ್ದು "ಇಗೋ, ನೋಡು!" ಎಂದು ದೂರದಿಂದಲೇ ಎತ್ತಿ ತೋರಿಸಿದ ಆತ.

ವಿಮಲೆ, "ನೋಡುವ, ನೋಡುವ" ಎನ್ನುತ್ತಾ ಎದ್ದಳು. "ಊಹೂಂ! ನೀನು ಎಟ್ಲಾಸ್ ತೋರಿಸಲಿಲ್ಲವೇಕೆ?" ಎನ್ನುತ್ತಾ ಹಿಂದೆ ಸರಿದ ಮುರಲಿ. ಆದರೆ ವಿಮಲೆ ಮುಂದೆ ಹೋಗಿ ಬಲಾತ್ಕಾರವಾಗಿ ಕಸಿದುಕೊಂಡು ನೋಡಿದಳು.

(೧೧ನೇ ಪುಟ ನೋಡಿರಿ)

ESTD. 1921 ಸ್ಥಾಪನೆ

NAVAYUGA
KANNADA WEEKLY, UDIPI.

Founder:
Late Sri A. B. Shetty
Former Minister for Public Health, Govt. of Madras & Govt. of Mysore.

ನವಯುಗ
ರಾಷ್ಟ್ರೀಯ ವಾರಪತ್ರಿಕೆ
ಉಡುಪಿ

ಗೌರವ ಸಂಪಾದಕರು:
ಎಸ್. ಗೋಪೀಚಂದ ರಾವ್, ವಿದ್ವಾನ್.
ಬಿ. ಶಾಮರಾಯ ಶೆಟ್ಟಿ, ಬಿ. ಎ., ಎಲ್. ಟಿ.

ಸಂಚಾಲಕ ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ.

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-50
ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3 50

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಸ್ಥಾಪನೆ: 1924

ದಿ ಕರ್ಣಾಟಕ ಬೇಂಕ್ ಲಿಮಿಟೆಡ್

(ಶೆಡ್ಯೂಲ್ಡ್ ಬೇಂಕ್)

ರಿಜಿಸ್ಟರ್ಡ್ & ಹೆಡ್ ಆಫೀಸು: ಡೊಂಗರಕೇರಿ, ಮಂಗಳೂರು-3.

ಈ ಕೆಳಗಿನ ಏರಿಸಿದ ಬಡ್ಡಿದರಗಳಲ್ಲಿ ಠೇವಣಾತಿಗಳನ್ನು ಸ್ವೀಕರಿಸಲಾಗುವುದು.

ಒಂದರಿಂದ ಎರಡು ತಿಂಗಳುಗಳ ವರೆಗೆ	....	ಸಾ|| ಸೇಕಡಾ 3-75	ನ.ಪೈಸೆ
ಮೂರರಿಂದ ಐದು ತಿಂಗಳುಗಳ ವರೆಗೆ	....	,, 4-25	,,
ಆರು ತಿಂಗಳುಗಳಿಂದ 12 ತಿಂಗಳುಗಳ ವರೆಗೆ	....	,, 4-50	,,
12 ತಿಂಗಳು ಮಿಕ್ಕಿ 24 ತಿಂಗಳುಗಳ ವರೆಗೆ	....	,, 4-75	,,
24 ತಿಂಗಳು ಮಿಕ್ಕಿ 48 ತಿಂಗಳುಗಳ ವರೆಗೆ	....	,, 5·00	,,
48 ತಿಂಗಳುಗಳಿಗೆ ಮಿಕ್ಕಿ	....	,, 5-25	,,

ಸೇವಿಂಗ್ಸ್ ಬ್ಯಾಂಕ್ ಬಡ್ಡಿ ದರವನ್ನು
ಸಾ. ಸೇಕಡ 2½% ರಿಂದ 3¼%ಗೆ ಏರಿಸಲಾಗಿದೆ.

THE KARNATAKA BANK LIMITED.

PHONE 203 ESTD 1926
FOUNDATION STONE
Engraved
MARBLE TABLETS
(GOLD FILLED & LEAD FILLED)
DONE AT
Crown RUBBER STAMP CO.
BALMATTA ROAD, MANGALORE

ಜಾಗತಿಕ ನಾಯಕರ ಭೆಟ್ಟಿಯಾಗುವುದೆ?

ಇತಿಹಾಸ ಪ್ರಸಿದ್ಧ ಬಲ್ಗ್ರೇಡ್ ಸಮ್ಮೇಳನವು ನಿರೀಕ್ಷಿಸಿದಂತೆ ಐದು ದಿನಗಳ ವರೆಗೆ ನಡೆದು, ಸಪ್ತಂಬರ ಐದರಂದು ಮುಕ್ತಾಯಗೊಂಡಿತು. ಪೂರ್ವ ಮತ್ತು ಪಶ್ಚಿಮ ಮಹಾರಾಷ್ಟ್ರಗಳ ನಡವೆ ದಿನದಿಂದ ದಿನಕ್ಕೆ ವಿದ್ವೇಷ ಬೆಳೆಯುತಿದ್ದು, ಜಾಗತಿಕ ಶಾಂತಿಗೆ ಬಂಗವಾಗುವುದೆಂಬ ಭೀತಿಯಿಂದ ಅದನ್ನು ತಪ್ಪಿಸುವಲ್ಲಿ ಯಾವ ಪಂಗಡಕ್ಕೂ ಸೇರದ ರಾಷ್ಟ್ರಗಳು ಯಾವ ಪಾತ್ರವನ್ನು ವಹಿಸಬಹುದು ಎಂಬುದನ್ನು ಈ ಸಮ್ಮೇಳನವು ಕೂಲಂಕಷವಾಗಿ ಚರ್ಚಿಸಿತು ಭಾರತದ ಪ್ರಧಾನಿ ಪಂಡಿತ ನೆಹರುಗಳು ನಿರೀಕ್ಷಿಸಿದಂತೆ ಈ ಪರಿಷತ್ತಿನಲ್ಲಿ ಮಹತ್ವಪೂರ್ಣ ಪಾತ್ರ ವಹಿಸಿದ್ದಾರೆ ಎಂಬುದು ನಿಸ್ಸಂಶಯ ವಿಶ್ವಶಾಂತಿಯ ಬಗ್ಗೆ ಅವರಿಗಿರುವಷ್ಟು ಕಳಕಳಿ ಇತರರಿಗಿಲ್ಲವೆನ್ನಲಾಗದಿದ್ದರೂ ಅದನ್ನು ಅವರಷ್ಟು ಪ್ರಭಾವಿಯಾಗಿ ವ್ಯಕ್ತಪಡಿಸಲು ಅವರು ಮಾತ್ರ ಸಮರ್ಥರು ಎಂಬುದಕ್ಕೀಗ ಮತ್ತೊಂದು ನಿದರ್ಶನ ಸಿಕ್ಕಂತಾಗಿದೆ

ಜಾಗತಿಕ ಬಿಕ್ಕಟ್ಟು ಮತ್ತದರಿಂದಾಗಿ ಉದ್ಭವಿಸಿದ ತ್ವೇಷ, ಪ್ರಚ್ಛನ್ನ ಸಮರ ಸಿದ್ಧತೆಗಳ ಕೋಲಾಹಲವನ್ನು ಕ್ಷಣ ತಡಮಿಲ್ಲದೆ ತಡೆಯದೆ ಹೋದರೆ, ಮೂರನೆಯ ಮಹಾ ಸಂಗ್ರಾಮಕ್ಕೆ ಪ್ರಾಂದಿಯೂ ಗಬಹುದೆಂಬ ಭಯವು ತಟಸ್ಥ ರಾಷ್ಟ್ರಗಳಲ್ಲಿ ಮಾತ್ರವಲ್ಲ, ಎರಡೂ ಪಂಗಡಗಳಿಗೆ ಸೇರಿದವರಲ್ಲಿಯೂ ಮನೆ ಮಾಡಿದೆ ಅತ್ತ ರಶ್ಯವು ಅಣ್ವಸ್ತ್ರ ಪ್ರಯೋಗವನ್ನು ಪ್ರಾರಂಭಿಸುವುದಾಗಿ ಘೋಷಿಸಿದ ಬೆನ್ನಲ್ಲೇ ಈ ಸಂಬಂಧದಲ್ಲಿ ಅಮೆರಿಕೆಯೂ ತನ್ನ ನಿಲುಮೆಯೇನೆಂದು ಹೇಳಿ, ತಾನೂ ಪ್ರಯೋಗ ಕಾರ್ಯಗಳನ್ನು ಮರಳಿ ತೊಡಗಲು ನಿಶ್ಚಯಿಸಿದೆ. ಫ್ರಾನ್ಸು ಯೂ ಒಸ್ಪಂದಕ್ಕೂ ತಲೆಬಾಗದೆ ಆಫ್ರಿಕೆಯ ವಿಶಾಲ ಮರುಸ್ಥಳದಲ್ಲಿ ಅವ್ಯಾತಹವಾಗಿ ಅಣ್ವಸ್ತ್ರಗಳ ಪ್ರಯೋಗವನ್ನು ಮಾಡುತ್ತ ಬರುತ್ತಿದೆ. ಹೀಗೆ ಆದರೆ ಅಣ್ವಸ್ತ್ರಗಳ ಇಂದಿನ ಯುಗದಲ್ಲಿ ಜಾಗತಿಕ ಶಾಂತಿಯು ಕನ್ನಡಿಯೊಳಗಿನ ಗಂಟು —ಗಗನ ಕುಸುಮವೆನ್ನುವುದರಲ್ಲಿ ಅತಿಶಯವೇನಿದೆ?

ಈ ಕಾರಣದಿಂದಲೇ ಬಲ್ಗ್ರೇಡ್ ಸಮ್ಮೇಳನದಲ್ಲಿ ಕೆಲವೊಂದು ವಿಷಯಗಳ ಕುರಿತು ವಿಪುಲ ಚರ್ಚೆಯು ನಡೆಯಿತು ನಿಶ್ಶಸ್ತ್ರೀಕರಣವನ್ನು ಕೆಲವೊಂದು ಅಂಕೆಗನುಗುಣವಾಗಿ ಸಾಧಿಸಬೇಕು, ಅಣ್ವಸ್ತ್ರ ಸ್ಫೋಟನ ಕಾರ್ಯದಿಂದ ಜಾಗತಿಕ ತ್ವೇಷಾಗ್ನಿಗೆ ತುಪ್ಪವೆರೆದಂತಾಗುವುದರಿಂದ ರಶ್ಯ—ಅಮೆರಿಕೆಗಳು ಈ ನಿಟ್ಟಿನಲ್ಲಿ ಮುಂದಡಿಯಿಡದಂತೆ ಕೇಳಿಕೊಳ್ಳಬೇಕು, ಶಾಂತಿಯುತ ಸಹ ಜೀವನದ ತತ್ವಗಳ ಅನುಷ್ಠಾನದಿಂದಲೇ ವಿಶ್ವಶಾಂತಿಯನ್ನು ಸ್ಥಾಪಿಸಬೇಕು, ಜಾಗತಿಕ ನಿಶ್ಶಸ್ತ್ರೀಕರಣದ ಪ್ರಶ್ನೆಯನ್ನು ಪರ್ಯಾಲೋಚಿಸಲು ಅಥವಾ ಅದನ್ನು ಸಾಧಿಸಲು ಜಾಗತಿಕ ಸಂಘದ ನಾಮಾನ್ಯಾಧಿವೇಶನವನ್ನು ಕರೆಯ ಬೇಕು; ಜನರಾಜೀನಕ್ಕೆ ಸಂಯುಕ್ತ ರಾಷ್ಟ್ರ ಸಂಘದಲ್ಲಿ ಸ್ಥಾನವನ್ನು ಕೊಡಬೇಕು ಎಂದು ಮುಂತಾದ ಹಲವಾರು ನಿರ್ಧಾರಗಳಾದುವು

ಪೂರ್ವ ಮತ್ತು ಪಶ್ಚಿಮಗಳ ನಡುವೆ ಸಂಬಂಧವನ್ನು ಬೆಳೆಸುವಂತೆ, ವೈಮನಸ್ಯವನ್ನು ದೂರ ಮಾಡುವಂತೆ ತಟಸ್ಥ ರಾಷ್ಟ್ರಗಳು ಪ್ರಯತ್ನಿಸುವವಾದರೂ ಅವುಗಳು ತಮ್ಮದೇ ಆದ ಪಂಗಡವನ್ನು ಕಟ್ಟಿಕೊಳ್ಳುವುದಿಲ್ಲ ಅವು ಸ್ವತಂತ್ರವಾಗಿ ಉದ್ದೇಶಸಾಧಿಸಲು ಮುಡಿದಿರ್ತುವೆ. ಇಂದಿನ ಜಾಗತಿಕ ಸಮಸ್ಯೆಯ ಪರಿಹಾರಕ್ಕೆ ಅಮೆರಿಕಯ ಅಧ್ಯಕ್ಷ ಕೆನ್ನೆಡಿ ಹಾಗೂ ರಶ್ಯದ ಪ್ರಧಾನಿ ಕ್ರುಶ್ಚೇವರು ಆದಷ್ಟು ಶೀಘ್ರವಾಗಿ ಪರಸ್ಪರ ಭೆಟ್ಟಿಯಾಗುವಂತೆ ಪ್ರಯತ್ನ ನಡೆಸುವ ಅವಶ್ಯಕತೆಗೆ ಸಮ್ಮೇಳನ ವಿಶೇಷ ಬಲವಿತ್ತಿತ್ತು. ಶಾಂತಿ ರಕ್ಷಣೆಯಲ್ಲಿ ತಟಸ್ಥರಾಷ್ಟ್ರಗಳು ಗಣನೀಯ ಪಾತ್ರ ವಹಿಸುತ್ತವೆ, ಜಾಗತಿಕ ಸಮಸ್ಯೆಗಳ ಪರಿಹಾರ ಸಾಧನಗಳನ್ನು ಅರಸುವಲ್ಲಿ ಇವುಗಳ ಸ್ಥಾನ ಮಹತ್ವದಿದೆ ಜಗತ್ತು ಇಂದು ಎರಡು ಹೋಳುಗಳಾಗಿ ಒಡೆದಿರುವುದಕ್ಕೆ ಪರಸ್ಪರ ಆಕ್ರಮಣದ ಹೆದರಿಕೆಯೇ ಕಾರಣವಾದುದರಿಂದ, ಆಕ್ರಮಣ ಒಪ್ಪಂದ ಮಾಡಿಕೊಳ್ಳುವುದೇ ಇವುಗಳ ನಡುವಣ ಬಿರುಕನ್ನು ಬೆಸೆಯಲು ಇರುವ ಏಕಮಾತ್ರ ಸಾಧನವೆಂದು ಈ ಸಮ್ಮೇಳನದ ಅಭಿಪ್ರಾಯವಿದೆ. ಸ್ವಾತಂತ್ರ್ಯವನ್ನು ಪಡೆಯಲು ಹೋರಾಡುತ್ತಿರುವ ವಸಾಹತುಗಳ ಬಗ್ಗೆ ಅನುಕಂಪವನ್ನು ತೋರಿಸಿ ಪಕ್ಷವಿದೂರಣಕ್ಕೆ ವಸಂಹತು ಸ್ವಾತಂತ್ರ್ಯವು ಸಹಾಯಕವಾಗುವುದು; ಆದುದರಿಂದ ಇನ್ನೂ ವಸಾಹತುವಾದದ ಕಪಿಮುಷ್ಟಿಯಲ್ಲಿರುವ ರಾಷ್ಟ್ರಗಳು ಶೀಘ್ರ ಸ್ವತಂತ್ರವಾಗಬೇಕಂಬುದನ್ನು ವಿಶೇಷ ರೂಪವಾಗಿ ಪ್ರತಿಪಾದಿಸಿದೆ



ಚಿತ್ತರಂಜನ ಕಾರಖಾನೆಯಲ್ಲಿ ತಯಾರಾಗುತ್ತಿರುವ ವಿದ್ಯುತ್ ರೇಲ್ವೆ ಗಾಡಿಯ ಚಿತ್ರ

ಜಾಗತಿಕ ಪಕ್ಷ ನಾಯಕ ಕೆನ್ನೆಡಿ ಮತ್ತು ಕ್ರುಶ್ಚೇವರ ಭೆಟ್ಟಿಯಾಗುವಂತೆ ಮನವೊಲಿಸಲು ಎರಡೆರಡು ನಾಯಕರಿರುವ ಪ್ರತಿನಿಧಿ ಮಂಡಳವನ್ನು ಸಮ್ಮೇಳನವು ಕಳಿಸಲು ನಿರ್ಧರಿಸಿತು ಇದರಂತೆ, ಇಂಡೋನೇಶ್ಯದ ಅಧ್ಯಕ್ಷ ಸುಕರ್ಣ ಮತ್ತು ಮಾಲಿಯ ಅಧ್ಯಕ್ಷ ಕೀತರ ನಿಯೋಗವು ಅಮೇರಿಕೆಗೆ ತೆರಳುವುದು ಈ ನಿಯೋಗವನ್ನು ಸ್ವಾಗತಿಸಲು ಅಧ್ಯಕ್ಷ ಕೆನ್ನೆಡಿಯವರು ಉತ್ಸುಕತೆಯನ್ನು ತೋರಿಸಿದ್ದಾರೆ (ಮೋಸ್ಕೋ ಸಂದರ್ಶನ ಮಾಡುತ್ತಿರುವ) ಭಾರತದ ಪ್ರಧಾನಿ ನೆಹರು ಮತ್ತು ಘಾನಾದ ಅಧ್ಯಕ್ಷ ನುಕ್ರುಮಾರವರಿರುವ ನಿಯೋಗವು ರಶ್ಯಕ್ಕೆ ತೆರಳಲಿರುವುದೆಂದು ಗೊತ್ತಾಗಿದೆ ಆದರೆ, ಪ್ರಧಾನಿ ನೆಹರವರ ಸಂಚಾರ ಕಾರ್ಯಕ್ರಮವು ಸುಮಾರು ಮೂರು ತಿಂಗಳುಗಳಿಗೆ ಮೊದಲೇ ನಿರ್ಧಾರಿತವಾಗಿದ್ದುದರಿಂದ ತಾವೇ ಬಾರಿ ನಿಯೋಗದ ಸದಸ್ಯನಾಗಿ ಹೋಗುವುದನ್ನು ನೆಹರು ಬೆಂಬಲಿಸಲಿಲ್ಲ ನುಕ್ರುಮಾ ಮಾಸ್ಕೋವಿಗೆ ತೆರಳಿದರೆ, ಅದು ಅವರ ವೈಯಕ್ತಿಗತ ವಿಚಾರವೆಂದು ನೆಹರು ಅಂದಿದ್ದಾರೆ. ರಶ್ಯವಾದರೂ ತನ್ನತ್ತ ಬರಬಹುದಾದ ಇಂತಹ ನಿಯೋಗವನ್ನು ಸ್ವಾಗತಿಸಲು ಹಿಂದು ಮುಂದು ನೋಡಲಾರದೆ.

ತಟಸ್ಥ ರಾಷ್ಟ್ರಗಳ ಸಮ್ಮೇಳನದ ಫಲಶ್ರುತಿ ತಿಳಿದು ಬರಲು ಕೆಲಕಾಲ ಬೇಕಾಗಬಹುದಾದರೂ ಅದು ಆಶಾದಾಯಕವಾಗಿ ಹೊರಬೀಳುವುದೆಂದು ನಿರೀಕ್ಷಿಸಬಹುದು.

ಎನ್ನ ತಾಯ್ನಾಡು!

ಎನ್ನ ಪೆತ್ತಿಹ ನಾಡು ।
ಅನ್ನ ನಿತ್ತಿಹ ನಾಡು ।
ಎನ್ನದಿದು ತಾಯ್ನಾಡು ।
ಎನ್ನ ಕಂನಾಡು ॥ ೧ ॥

ಕಂನಾಡ ಹಸಿ ಹಸಿರು ।
ಎನ್ನ ಜೀವನದುಸಿರು ।
ಕಂನಾಡ ಸಿರಿ ನೆಲವು ।
ಎನ್ನ ತಾಯೊಲವು ॥ ೨ ॥

ಕೆರೆಯು ತಿಳಿ ನೀರಲ್ಲಿ ।
ಬಿರಿದ ತಾವರೆಯಲ್ಲಿ ।
ನಿಶೆಯ ಶಶಿಯಿಂದೊಗೆದ ।
ಜೊನ್ನ ಕಡಲಲ್ಲಿ ॥ ೩ ॥

ಹರಿವ ತೊರೆ ಸೊರೆಯಲ್ಲಿ ।
ಮೆರೆವ ತೆರೆ ಮೊರೆವಲ್ಲಿ ।
ಮಲಗಿರುವಳೆನ್ನ ತಾಯ್
ಸಿರಿಯ ನೆರೆಯಲ್ಲಿ ॥ ೪ ॥

ಶ್ರೀಗಂಧ ಕೊರಡು ಶ್ರೀ
ದೇವನಡಿದಾವರೆಗೆ ।
ಈ ದೇಹವೆನ್ನ ತಾಯ್ ।
ಪಾದ ಸೇವನೆಗೆ ॥ ೫ ॥

ಕನ್ನಡಕೆ ನಾ ಶರಣ ।
ಕನ್ನಡವೆ ಮಮ ಹರಣ ।
ಕನ್ನಡದ ರಜದ ಕಣ ।
ವೆನ್ನ ಆಭರಣ ॥ ೬ ॥

—ರಮಾನಂದ ಬನಾರಿ,
ದೇಲಂಪಾಡಿ (ಕಾಸ್ರಗೋಡು ತಾಲೂಕು)

41 ವರ್ಷಗಳ ಭದ್ರ ಹಾಗೂ ಸಮರ್ಥ ಬೇಂಕಿಂಗ್ ಸೇವೆ.

ದಿ. ಪಾಂಗಾಳ ನಾಯಕ್ ಬೇಂಕ್ ಲಿ.

ನಮ್ಮ 3 ವರ್ಷ ವ್ಯಾದೆಯ ಕೇಶ್ ಸರ್ಟಿಫಿಕೇಟುಗಳಲ್ಲಿ ರೇವಣಿ ಮಾಡಿರಿ ಎಡ್ಡಿ ಸೇಕಡಾ 5ರಂತೆ ರೂ 87—00 3 ವರ್ಷಗಳ ಅಂತ್ಯದಲ್ಲಿ ಬಡ್ಡಿ ಕೂಡಿ ರೂ 100—00 ಒದಗಿಸುವುದು.

ಕರೆ, ಚಿಕ್ಕ ವ್ಯಾದೆ, ನಿರಖು ರೇವಣಾತಿಗಳ ಮೇಲೆ ಆಕರ್ಷಣೀಯ ಶರ್ತಗಳು: ಬಡ್ಡಿ ಸೇಕಡಾ 5½ರ ವರೆಗ

ತಾ 1—4—1961ರಿಂದ ಸೇವಿಂಗ್ಸ್ ಬೇಂಕ್ ಖಾತೆಗಳ ಮೇಲೆ ಬಡ್ಡಿ ಸೇಕಡಾ 3ರಂತೆ

THE PANGAL NAYAK BANK LTD.
Estd. 1920

ಅಮೃತಾಂಜನ
ಎಲ್ಲಾ ನೋವುಗಳಿಗೆ ಸಿದ್ಧೌಷಧ
ಎಲ್ಲಾ ತರದ ಸಿಡಿತ ಮತ್ತು ನೋವುಗಳಿಗೆ
50 ವರ್ಷ ಪ್ರಾಯದ
ಪಾಕೆಟ್ ಡಾಕ್ಟರ್
ಅಮೃತಾಂಜನ ಲಿ. ಬೊಂಬಾಯಿ-ಮದ್ರಾಸು-ಕಲ್ಕತ್ತಾ

ವಿನಂತಿ

ಚಂದಾಹಣ ಬಾಕಿ ಇರುವ ನಮ್ಮ ಚಂದಾದಾರರಿಗೆಲ್ಲಾ ಈ ಮೊದಲೇ ಕಾರ್ಡು ಬರೆದಿರುತ್ತೇವೆ. ಆದರಂತೆ ಕೆಲವರು ಈಗಾಗಲೇ ಚಂದಾಹಣವನ್ನು ಪಾವತಿ ಮಾಡಿರುತ್ತಾರೆ ಇನ್ನೂ ಪಾವತಿ ಮಾಡದವರು ದಯಮಾಡಿ ಅದಷ್ಟು ತ್ವರ್ಯ ಕಳುಹಿಸಿಕೊಡುವಂತೆ ಒನ್ನವಿಸುತ್ತೇವೆ ವಿ ಪಿ. ಮಾಡಿದರೆ 75 ನಯೇಪೈಸೆಯಷ್ಟು ಹೆಚ್ಚಿಗೆ ಬಿಳುವುದರಿಂದ ಎಲ್ಲರೂ ಮುಂದಾಗಿ ಮನಿಯಾರ್ಡರು ಮಾಡುವಂತೆ, ಇಲ್ಲವೇ ಸಿಂಡಿಕೇಟ್ ಬ್ಯಾಂಕಿನಲ್ಲಿ ಕಟ್ಟುವಂತೆ ಅಪೇಕ್ಷಿಸುತ್ತೇವೆ ಅಂತೂ ಚಂದಾ ಬಾರದಿದ್ದರೆ ಕ್ರಮಶಃ ವಿ ಪಿ ಮಾಡುತ್ತೇವೆ

—ಮೆನೇಜರ್

ವಿಶ್ವಕೀರ್ತಿ ಸರ್. ಎಂ. ವಿ.

ಹೆಸರಿಗೆ ತಕ್ಕ ಹಾಗೆ ರೂಪವಿರುವುದು ಜೀವನದಲ್ಲಿ ಸಾಮಾನ್ಯವಾಗಿ ಕೊಂಚ ವಿರಳವೇ! ಬಂಗಲೆಯ ಬೋರ್ಡು ಫ್ಯಾಷನ್ನಿನಂತೆ 'ಉದಾರ ವಿಲ್ಲಾ' ಅಂತ ಮಟ ಮಟ ವ ಧ್ಯಾಹ್ನ ಒಬ್ಬ ಬಡಪಾಯಿ ಬಂದರೆ ಆ ಬಂಗಲೆಯಿಂದ ಒಂದು ಹಿಡಿ ಅಕ್ಕಿ ಸಿಗುವುದಿಲ್ಲ. 'ಚಕ್ರವರ್ತಿ' ಅಂತಲೂ ಕೆಲವರ ಹೆಸರು. ಆದರೆ ಎರಡು ಹೊತ್ತು ಊಟವೂ, ವೈತುಂಬ ಬಟ್ಟೆಯೂ, ಎಷ್ಟೋ ಸಲ ದುರ್ಲಭ! 'ಸಂಪತ್ತು' ಅಂತಲೂ ಮುದ್ದು ಮಾಡ್ದಾಗಿ ಕೇಳಿರುತ್ತೀರಿ. ಮಹಾರಾಯನನ್ನು ನೋಡಿದರೋ, ನಿಮಗೆ ಕಾಣುವುದೆಲ್ಲಾ ವೈ ಕೈ ಸಾಲವೇ! ಇದೇ ಜೀವನದ ಒಂದು ವೈಶಿಷ್ಟ್ಯ ಕ್ರೂರ ವೈಶಿಷ್ಟ್ಯ. ಆದರೆ ಒಂದು ಮಹಾನ್ ವ್ಯಕ್ತಿಯಲ್ಲಿ ಮೂರ್ತ ದೇವರು ಹೆಸರಿಗೆ ತಕ್ಕ ಹಾಗೆ 'ರೂಪ' ದಯಪಾಲಿಸಿದ್ದಾನೆ ಆ ವ್ಯಕ್ತಿಯು ವಿಶ್ವಕ್ಕೇ ಈಶ್ವರ ಸಮಾನ ಒಂದು ಮಾದರಿ ಒಂದು ಜ್ಯೋತಿ

ಅವರ ನೇತೃತ್ವವೇ—ಅದು ಅಸಾಧಾರಣ ಎಂಜಿನಿಯರಿಂಗೆ?—ದಿಗ್ಭ್ರಮೆಗೊಳಿಸುವ ಅಪ್ರತಿಮ ಸಾಧನೆ—ಮುಟ್ಟದ್ದೆಲ್ಲಾ ಚಿನ್ನವೇ! ನವ ದಂಪತಿಗಳನ್ನು—ನವದಂಪತಿಗಳೇ ಏಕೆ?—ಸ್ವಾಯುಶಃ ಎಲ್ಲರನ್ನು—ವೈ ಮರೆಸುವ ಬೃಂದಾವನದ ಕೃಷ್ಣರಾಜ ಸಾಗರವನ್ನು ಕಂಡು ಯೂರುನಲಿದಿಲ್ಲ? ಇದರ ದೂರದರ್ಶಿ ಯೂರು? ಅಧಿಕಾರದಲ್ಲೋ ವಿಶ್ವೇಶ್ವರಯ್ಯನವರ ದರ್ಪ ಮನೆಮಾತು! ದೇಶದ ಯೋಜನೆಗಳಿಗೋ—ಅವರು ಪೂಜ್ಯ ಪಿತಾಮಹರು! ಕೈಗಾರಿಕೆ-ವಾಣಿಜ್ಯ ಕ್ಷೇತ್ರಗಳಿಗೋ—ನಿರ್ಮಾಣದ ಅಧ್ಯಕ್ಷರು—ಧೈರ್ಯದ ಧುರೀಣರು—ಬದ್ರಾವತಿಯನ್ನು ಉಳಿಸಿದವರು! ವಿದ್ಯೆಯಲ್ಲೋ ವಾಚಸ್ಪತಿ, ಅರ್ಥಶಾಸ್ತ್ರವಂತೂ ಕರತಲಾಮಲಕ, ಗಂಭೀರತೆಯೋ ಗಜಗಾಮ್ಭೀರ್ಯ! ದೇಶಾಭಿಮಾನದೋ—ಅಗ್ರಗಾಮಿಯ ಉಜ್ವಲತೆ! ಹೀಗೆ ಭಾರತದ ರತ್ನ ಸರ್. ಎಂ. ವಿ.ರವರು ಸುರಿತ ಅಷ್ಟಾವಧಾನಿಗಳು.

"ಶತಮಾನಂ ಭವತಿ ಶತೇಂದ್ರುಃ ಆಯುಷ್ಯೇ ವೇಂದ್ರಿಯೇ ವ್ರತಿ ತಿಷ್ಠತ್" ಅನ್ನುವ ಆಶೀರ್ವಾದದ ಮಂತ್ರವನ್ನು ಜೀವನದಲ್ಲಿ ನಮ್ಮ ಎದುರಿಗೆ ಸಾಧಿಸಿದ ಮೂರ್ತಿ.

ಕ್ಯಾಟ್ರೆಯೊದ ಗೋವಿಗೆ ಕೋಟಿ ವರಹ ಬೆಲೆ' ಆದರೆ ತುಂಬು ಶತಮಾನವನ್ನು ಕಂಡು ನಮ್ಮ ಕಣ್ಣುಂದಿರುವ ಸರ್ ಎಂ ವಿಗೆ ಕೋಟಿ ವರಹ ಬೆಲೆ' ಅಂತ ಘೋಷಿಸಿದರೆ ಉತ್ಪ್ರೇಕ್ಷೆಯೆ? ಅದು ಸತ್ಯಾಂಶ. ಈ ವಾಕ್ಯಗಳು ಈ ಸರಣಿಗಳು ಹುಚ್ಚು ಹೊಳೆಯ ಹರತಗಳಲ್ಲ! ತುಂಬು ಸಾಗರದ ಶಾಂತಿ ನೋಡಿ ನಲಿದ ಹೃದಯದ ತಂತಿ—ವೀಣೆಯ ವಾಣಿ!

೧೮೬೧ನೇ ಸೆಪ್ಟೆಂಬರ್ ೧೫ನೇ ತಾರೀಕು ಭಾರತದ ಗಂಧದ ಬೀಡಿನ, ಕನ್ನಡನಾಡಿನ ಚರಿತ್ರೆಯಲ್ಲಿ ಒಂದು ಮಹಾ ಸುದಿನ, ಅಂದೇ ಜನನವಾದದ್ದು—ಮಂದೆ ರಾರಾಜಿಸುವ ರತ್ನ—ಭಾರತದ ರತ್ನ ಮೋಕ್ಷಗುಂಡಂ ವಿಶ್ವೇಶ್ವರಯ್ಯ—ಭಾರತದ ಯುಗ ಪುರುಷ.

೧೮೮೩ನೇ ಇಸವಿಯಲ್ಲಿ ಮುಂಬಯಿ ವಿಶ್ವವಿದ್ಯಾಲಯದಲ್ಲಿ, ವಿಶ್ವೇಶ್ವರಯ್ಯನವರು 'ಸಿವಿಲ್ ಎಂಜಿನಿಯರಿಂಗ್' ಪದವೀಧರರಾದದ್ದು. ಆಳರಲ್ಲಿ ಮುಂಬಯಿ ಸರಕಾರವನ್ನು ಸೇರಿ ೧೯೦೮ರ ವರೆಗೂ ಸೇವೆ ಸಲ್ಲಿಸಿದರು. ೮ ವರ್ಷ ಹೈದರಾಬಾದಿನ ನೈಜಾಮರ ಸರಕಾರಕ್ಕೆ ಸಲಹಾಧಿಕಾರಿಗಳಾದರು. ೧೯೦೯ರಿಂದ ೧೯೧೮ರ ವರೆಗೆ ಮೈಸೂರು ಸರಕಾರಕ್ಕೆ ಚೀಫ್, ಇಂಜನೀಯರ್ ಮತ್ತು ಕಾರ್ಯದರ್ಶಿಗಳಾಗಿದ್ದರು. ೧೯೧೧ರಲ್ಲಿ ಸಿ. ಐ. ಈ. ಪ್ರಶಸ್ತಿಯೂ ೧೯೧೫ರಲ್ಲಿ ಕೆ. ಸಿ. ಐ ಈ. ಪ್ರಶಸ್ತಿಯೂ ಬಂದವು. ೧೯೧೨ ರಿಂದ ೧೯೧೯ನೇಜೂನ್ ವರೆಗೆ ಏಳು ವರ್ಷಗಳ ಕಾಲ ಮೈಸೂರಿನ ದಿವಾನ್'ರಾಗಿ, ನಾಡಿಗೆ ಸಂಪತ್ತನ್ನು ಮತ್ತು ಅಪಾರಗೌರವವನ್ನು ತಂದರು ಭದ್ರಾವತಿ ಕಾರ್ಖಾನೆ, ಮೈಸೂರು ವಿಶ್ವವಿದ್ಯಾನಿಲಯ, ಕೃಷ್ಣರಾಜ ಸಾಗರದ ಅಣೆಕಟ್ಟು—ಇನ್ನೂ ಎಷ್ಟೋ ಮಹಾನ್ ಕಾರ್ಯಗಳು ಇವರ ಹಸ್ತದಿಂದಲೇ ಆರಂಭವಾದವು. ೧೯೨೧ರಲ್ಲಿ ಟೆಕ್ನಲಾಜಿಕಲ್ ಮತ್ತು ವಿದ್ಯಾಭ್ಯಾಸದ ಸಮಿತಿಗೆ ಅಧ್ಯಕ್ಷರಾಗಿದ್ದರು. ೧೯೨೨ರಿಂದ ೧೯೨೫ರ ವರೆಗೆ ಭಾರತ ಸರಕಾರದ ನಾನಾ ಸಮಿತಿಗಳು ಇವರ ಸೇವೆಯನ್ನು ಪಡೆದವು ೧೯೪೬-೪೭ರಲ್ಲಿ ಸರ್ವ ಭಾರತ ಉತ್ಪಾದಕರ ಸಂಸ್ಥೆಯ ನೇತೃತ್ವವನ್ನು ವಹಿಸಿ, ಯೂರೋಪ್, ಅಮೆರಿಕಾ, ಕೆನಡಾ—ವಿದೇಶಗಳಿಗೆ ಭೇಟಿಕೊಟ್ಟು, ಸ್ವದೇಶದಲ್ಲಿ ಕೈಗಾರಿಕೆ ಅಭಿವೃದ್ಧಿ ಯೋಜನೆಗಳಿಗೆ ಸ್ಫೂರ್ತಿಯಿತ್ತರು.

ವಿದ್ಯಾಕ್ಷೇತ್ರದಲ್ಲಂತೂ ಸರಸ್ವತಿ ಸುಪುತ್ರರು. ಒಂದಲ್ಲ, ಎರಡಲ್ಲ, ಏಳು ವಿಶ್ವವಿದ್ಯಾಲಯಗಳು D. Sc LLD D LITT. ಇತ್ಯಾದಿ ಪ್ರಶಸ್ತಿಗಳನ್ನು ಕೊಟ್ಟು ಸರ್ ಎಂ. ವಿರನ್ನು ಗೌರವಿಸಿವೆ— (ಕಲ್ಕತ್ತಾ, ಮುಂಬಯಿ, ಕಾಶಿ, ಪಾಟ್ನಾ, ಅಲಹಾಬಾದ್, ಮೈಸೂರು, ಆಂಧ್ರ)

ಸರ್. ಎಂ. ವಿ ರವರ ಗ್ರಂಥಗಳು "Reconstructing India" "Planned Economy for India" ಮತ್ತು "Memoirs of my working Life'

ಶತಮಾನದಿಂದ ಶರೀರವು ಕೊಂಚ ಕುಗ್ಗಿದ್ದರೂ ಸರ್ ಎಂ. ವಿ ರವರ ಸಿಂಹನಾದವಾಗಲೀ ದೇಹೋತ್ಸಾಹವಾಗಲೀ ಕ

ಕಲ್ಯಾಣಿಯಲ್ಲಿನ ವೃತ್ತಿಪರ ತರಬೇತಿ ಕೇಂದ್ರಕ್ಕೆ ಸೇಪಡೆ ಹೊಂದಿದ ಕರ್ಮಚಾರಿ

ಸಿಟ್ಟನ್ನು ಮರ್ದಿಸುವ ಬಗೆ ಹೇಗೆ?

ಕೀರ್ತಿಯುತ ಶ್ರೀ ವಿದ್ಯಾರಣ್ಯ ಸ್ವಾಮಿಜಿಯವರು ತನ್ನ "ಜೀವನ್ಮುಕ್ತಿ ಪ್ರಕರಣ"ವೆಂಬ ಭಾಷ್ಯದಲ್ಲಿ ತನ್ನ ಶಿಷ್ಯರ ಮಂಡಲಿಗೆ ಈ ರೀತಿಯ ಉಪದೇಶವನ್ನು

ರೋಷನಿಷತ್ತಿನ ಶ್ರೇಷ್ಠ ಶೃದ್ಧೆಯೊಗಲೀ ಲೇಶ ಮಾತ್ರವೂ ಬಗ್ಗಿಲ್ಲ. ನಮ್ಮ ಕಣ್ಣೆದುರಿಗೆ ಕಾಣುತ್ತಿರುವ ದೃಶ್ಯವಿದು. "Plan The Work And Work The Plan" ಇದೇ ಇವರ ವಾಣಿ ಇದೇ ಇವರ ಸಂದೇಶ. ಪ್ಲೇಟೋ, ಗಯಟೆ, ಸಾಕ್ರಟೀಸ್ ಯೂರ ಗ್ರಂಥಗಳನ್ನೇ ಓದಿ ಶಂಕರ ರಾಮಕೃಷ್ಣ ಪರಮಹಂಸ, ವಿವೇಕಾನಂದ ಗಾಂಧೀಜಿ ಯೂರ ಆಶೀರ್ವಾದ ವಾಣಿಯನ್ನು ಕೇಳಿ ಎಲ್ಲರ ಜೀವನದಲ್ಲೂ ಒಂದನವ ಹುರುಪ ಒಂದು ಉತ್ಸಾಹವೂಡುತ್ತದೆ. ಈ ಶ್ರೇಣಿಗೆ ಸೇರಿದವರು ಸರ್ ಎಂ. ವಿ.

ಹೆತ್ತ ಮಾತೆಯ ಕನ್ನಡನಾಡಿಗೆ ಇತ್ತ ಭಾರತಕ್ಕೆ ಏಕೆ! ಇಡೀ ವಿಶ್ವಕ್ಕೆ ಕೀರ್ತಿತಂದ ಮೂರ್ತಿಗಳು ಸರ್ ಎಂ. ವಿ. ಇವರಲ್ಲವೇ ನಿಜವಾಗಿಯೂ ರಾರಾಜಿಸುವ ರತ್ನಜ್ಯೋತಿ?

ಸರ್ ಎಂ ವಿ ರವರಿಗೆ ದೇವರು ಇನ್ನೂ ಅತಿಶಯವಾಗಿ ಆಯುಃಆರೋಗ್ಯವನ್ನು ಕರುಣಿಸಿ ಇವರ ದೇಶ ಸೇವೆ ಇನ್ನೂ ಅತಿಶಯವಾಗಿ ನಡೆಯಲಿ.

ಕೊಟ್ಟಿದ್ದರು.

ನಿಮ್ಮಲ್ಲಿ ಸಿಟ್ಟು ಉದಿಸಿದಾಗ ನೀವು ನಿಮ್ಮ ಚಿತ್ತವನ್ನು ಕುರಿತು ಈ ತರಹದ ಭಾಷಣವನ್ನು ಮಾಡಿದರೆ ಉತ್ತಮ — "ಎಲೇ ಮನಸ್ಸೆ! ನಿನ್ನನ್ನು ದೂಷಣಮಾಡುವವರಿಗೆ ನೀನು ದೂಷಿಸ ಬೇಡ. ಅದರ ಬದಲಿಗೆ ನಿನ್ನಲ್ಲಿ ಉದಿಸಿದ ಸಿಟ್ಟಿನ ಮೇಲೆ ನೀನು ಸಿಟ್ಟನ್ನು ತೋರಿಸು. ಸಿಟ್ಟಿನಿಂದ ಮಾನವನಿಗೆ ಕೇಡು ಉಂಟಾಗುವುದು ನಿಶ್ಚಯವು ಸಿಟ್ಟಿನಿಂದ ಮಾನವನ ನಿತ್ಯಕರ್ಮಗಳು ಹಾಳಾಗುವವು ಆತನ ಧನವು ನಾಶವಾಗಬಹುದು. ಆತನ ಶಾಂತಿಯು ಭಗ್ನವಾಗುವುದು. ಆತನು ಮುಕ್ತಿಮಾರ್ಗವನ್ನು ಎಂದೂ ಸೇರನು. ಕ್ರೋಧವು ಅರು ವೈರಿಗಳಲ್ಲಿ ಅತಿ ದುಷ್ಟ ವೈರಿಯೆಂಬುದು ನಿರ್ವಿವಾದದ ಸಂಗತಿಯು. ಸಿಟ್ಟಿನಿಂದ ಮಾನವನ ಚಿತ್ತವು ಕಲಂಕಗೊಳ್ಳುವುದು ಕ್ರೋಧರಹಿತನಾಗದೆ ಶಾಂತಿಯು ಎಂದೂ ಲಭಿಸದು ಕೋಪದ ಆವೇಶದಿಂದ ಮಾನವನ ನಾಲಗೆಯಿಂದ ಹಲವಾರು ಕೆಟ್ಟಮಾತುಗಳು ಹೊರಸೂಸುವವು

ಆತನು ಇನ್ನೊಬ್ಬನನ್ನು ಹಿಂಸಿಸಲೂ ಸಿದ್ಧನಾಗಬಹುದು ಆತನಲ್ಲಿರುವ ಯಶಸ್ಸು ಕ್ಷೀಣವಾಗುವುದು ಆತನ ಮನೋಬಲವು ಕುಗ್ಗುವುದು. ಸಿಟ್ಟನ್ನು ಸಂಪೂರ್ಣವಾಗಿ ತ್ಯಜಿಸದೆ ಜ್ಞಾನವನ್ನು ಸಂಪಾದಿಸಲು ಸಾಧ್ಯವಿಲ್ಲ. ಜ್ಞಾನವು ಲಭಿಸದಿದ್ದಲ್ಲಿ ಮೋಕ್ಷಸಾಧನೆಗೆ ಅಡಿಗಟ್ಟಿಲ್ಲ.

ವಿನಾಕಾರಣವಾಗಿ ಕೆಲವು ದುಷ್ಟರು ತಮ್ಮ ದುರ್ಗುಣ ಭಾವದಿಂದ ನಮ್ಮಲ್ಲಿ ಸಿಟ್ಟನ್ನು ಹುಟ್ಟಿಸಬಹುದು. ಅಂತಹ ಸಿಟ್ಟಿಗೆ ಸಾಕಷ್ಟು ಆಧಾರವೂ ಇರಬಹುದು. ಆದರೆ, ಸಿಟ್ಟಿಗೆ ಕಾರಣಭೂತರಾದ ನಮ್ಮ ವೈರಿಗಳನ್ನು ಸಿಟ್ಟಿನಿಂದಲೇ ಎದುರಿಸುವ ಬದಲು, ಅವರು ನಿಮ್ಮ ತಪ್ಪುಗಳನ್ನು ತೋರಿಸಿದ ಮಹಾತ್ಮರೆಂದೇ ಭಾವಿಸಿದರೆ ಅದರಿಂದ ಮಿಗಿಲಾದ ತಾಳ್ಮೆಯಿಲ್ಲ. ಆ ಸಹನಾಶಕ್ತಿಯಿಂದ ವೈರಾಗ್ಯವು ಜನಿಸಿ, ಮಾನವನ ಚಿತ್ತವು ಶುದ್ಧವಾಗಿ ಬೆಳಗುವುದು. ಈ ಗುಣಕ್ಕೆ ನೈಜ ತ್ಯಾಗವೆನ್ನುವರು"

—ಶ್ರೀ ಎಂ ಬಿ ಶಂಕರ ರಾವ್

ಕೊರ್ಪೊರೇಶನ್ ಬೇಂಕ್

ರೇವಣಾತಿಗಳ ಮೇಲಿನ ಸಾಲಿಯಾನ್ ಶೇಕಡಾ ಬಡ್ಡಿ ದರಗಳು

3	ಸೇವಿಂಗ್ಸ್ ಬೇಂಕ್ ಖಾತೆ
3½ ಯಿಂದ 5½	ಕಾಯಂ (ವಿವಿಧಾವಧಿಗಳಿಗೆ)
5½	ವಜ್ರೋತ್ಸವ
5	ಕ್ಯುಮುಲೇಟಿವ್

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ಸ್ಥಾಪನೆ: 1906)

ರಿಜಿಸ್ಟರ್ಡ್ ಆಫೀಸು. ಉಡುಪಿ | ಆಡಳಿತ ಆಫೀಸು ಮಂಗಳೂರು

ಆದಿಮ ಜಾತಿ ಜನರ ಯೋಗಕ್ಷೇಮ

ಭಾರತದಲ್ಲಿ ದೇಶದಲ್ಲಿ ಒಟ್ಟು ೨ ಕೋಟಿ ೨೫ ಲಕ್ಷ ಜನ ಆದಿಮ ಜಾತಿಯವರಿದ್ದಾರೆ. ಹಿಂದೆ 'ಅಪರಾಧಿ' ಬುಡ ಕಟ್ಟಿನ ಜನರು ಎಂಬುದಾಗಿ ಕರೆಯಲ್ಪಡುತ್ತಿದ್ದ ವಿಮೋಚಿತ ಜಾತಿ (ಡಿನೋಟಿಫೈಡ್) ಜನರ ಸಂಖ್ಯೆ ೪೦ ಲಕ್ಷದಷ್ಟಿದೆ.

ಈ ಗಿರಿಜನರ ಸ್ಥಿತಿಗತಿಗಳನ್ನು ಉತ್ತಮಗೊಳಿಸಿ ಅವರು ಸಹ ಸಮಾಜದ ಇತರ ವರ್ಗಗಳೊಂದಿಗೆ ಸಮಾನ ಮಟ್ಟಕ್ಕೆ ಬರಲು ಸಾಧ್ಯವಾಗುವಂತೆ ಅವರಿಗೆ ರಾಜ್ಯಾಂಗದಲ್ಲಿ ವಿಶೇಷ ರಕ್ಷಣೆಗಳನ್ನು ಒದಗಿಸಲಾಗಿದೆ. ಶಾಸನ ಸಭೆಗಳಲ್ಲಿ ಕೆಲವು ಸ್ಥಾನಗಳನ್ನು ಮೀಸಲಾಗಿಡುವುದು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಹುದ್ದೆಗಳು ಮತ್ತು ಸೇವಾ ವಿಭಾಗಗಳಿಗೆ ಗಿರಿಜನ ಅಭ್ಯರ್ಥಿಗಳನ್ನು ನೇಮಿಸಿಕೊಳ್ಳುವುದು, ಅನುಸೂಚಿತ ಹಾಗೂ ಇತರ ಗಿರಿಜನ ಪ್ರದೇಶಗಳ ಆಡಳಿತ ಈ ವಿಶೇಷ ರಕ್ಷಣೆಗಳನ್ನು ಎಷ್ಟರ ಮಟ್ಟಿಗೆ ಕಾರ್ಯರೂಪಕ್ಕೆ ತರಲಾಗಿದೆ ಎಂಬುದನ್ನು ಪರಿಶೀಲಿಸುವುದಕ್ಕಾಗಿ ವಿಶೇಷ ಅಧಿಕಾರಿಯ ನೇಮಕ, ಅನುಸೂಚಿತ ಪ್ರದೇಶಗಳ ಆಡಳಿತ ಮತ್ತು ಗಿರಿಜನರ ಯೋಗಕ್ಷೇಮವನ್ನು ಕುರಿತು ವರದಿ ಸಿದ್ಧಪಡಿಸುವುದಕ್ಕಾಗಿ ಮಂಡಲಿಯೊಂದರ ನೇಮಕ— ಈ ಮುಂತಾದ ವಿಶೇಷ ರಕ್ಷಣೆಗಳನ್ನು ರಾಜ್ಯಾಂಗದಲ್ಲಿ ನಮೂದಿಸಲಾಗಿದೆ.

ದ್ವಿತೀಯ ಪಂಚವಾರ್ಷಿಕ ಯೋಜನಾವಧಿಯಲ್ಲಿ ಆದಿಮ ಜಾತಿಯವರ ಯೋಗಕ್ಷೇಮಕ್ಕಾಗಿ ೪೩ ಕೋಟಿ ರೂ.ಗಳನ್ನೂ, ವಿಮೋಚಿತ ಜಾತಿಯವರ ಯೋಗಕ್ಷೇಮಕ್ಕಾಗಿ ೩ ಕೋಟಿ ರೂ.ಗಳನ್ನೂ ಮೀಸಲಿಡಲಾಯಿತು. ಅದೇ ಪ್ರಥಮ ಯೋಜನಾವಧಿಯಲ್ಲಿ ಆದಿಮ ಜಾತಿಯವರ ಯೋಗಕ್ಷೇಮಕ್ಕಾಗಿ ೨೦ ಕೋಟಿ ರೂ.ಗಳನ್ನೂ ವಿಮೋಚಿತ ಜಾತಿಯವರ ಯೋಗಕ್ಷೇಮಕ್ಕಾಗಿ ೧೧ ಕೋಟಿ ರೂ.ಗಳನ್ನೂ ಮೀಸಲಿಡಲಾಗಿತ್ತು.

ಕೇಂದ್ರ ಸರ್ಕಾರದ ಕಾರ್ಯಕ್ರಮಗಳು ಆದಿಮ ಜಾತಿಯ ಜನರ ಉನ್ನತಿ, ಉತ್ಕರ್ಷಕ್ಕೆ ಸಂಬಂಧಪಟ್ಟ ವಿಶೇಷ ಮಹತ್ವದ ಕಾರ್ಯ ಯೋಜನೆಗಳಾಗಿವೆ ಆದಿಮ ಜಾತಿ ಜನರ ಅಭಿವೃದ್ಧಿ ಬ್ಲಾಕ್‌ಗಳು, ಸಾಗುವಳಿದಾರರ ಪುನರ್ವಸತಿ, ಗಿರಿಜನರು ತಮ್ಮ ವ್ಯವಸಾಯ ಹಾಗೂ ಕುಟುಂಬ ಉಪಯೋಗಕ್ಕಾಗಿ ಅಪೇಕ್ಷಿಸುವ ಅಗತ್ಯದ ವಸ್ತುಗಳನ್ನು ಮಾರಾಟಮಾಡುವುದಕ್ಕಾಗಿ ಅರಣ್ಯ ಸಹಕಾರ ಸಂಸ್ಥೆಗಳು ಮತ್ತು ನಿರ್ದಿಷ್ಟೋದ್ದೇಶದ ಸಹಕಾರ ಸಂಸ್ಥೆಗಳ ಸ್ಥಾಪನೆ—ಮುಂತಾದವುಗಳಿಗೆ ಈ ಕಾರ್ಯ ಯೋಜನೆಗಳು ಸಂಬಂಧಪಡುತ್ತವೆ.

ವ್ಯವಸಾಯ, ಸಹಕಾರ, ನೀರಾವರಿ, ಸಣ್ಣ ಕೈಗಾರಿಕೆಗಳು, ಸಂಚಾರ ಸಂಪರ್ಕ, ಶಿಕ್ಷಣ, ಆರೋಗ್ಯ, ವಸತಿ ನಿರ್ಮಾಣ ಮತ್ತು ಗ್ರಾಮಾಂತರ ಪ್ರದೇಶಗಳಿಗೆ ಕುಡಿಯುವ ನೀರಿನ ಪೂರೈಕೆ ಈ ಮುಂತಾದ ಕ್ಷೇತ್ರಗಳಲ್ಲಿ ಆದಿಮ ಜಾತಿ ಜನರಿಗೆ ಕಳೆದ ಒಂದು ದಶಕದಲ್ಲಿ ಹೆಚ್ಚು ಪ್ರಯೋಜನ ದೊರೆತಿದೆ. ಅವರಿಗೆ ಸೌಕರ್ಯಗಳನ್ನು ಒದಗಿಸಿಕೊಡಲಾಗಿದೆ.

ಆದಿಮ ಜಾತಿ ಜನರ ಯೋಗಕ್ಷೇಮ ಸಂಬಂಧವಾದ ಕಾರ್ಯಕ್ರಮಗಳನ್ನು ಮುಖ್ಯವಾಗಿ ರಾಜ್ಯ ಸರ್ಕಾರಗಳೇ ಕಾರ್ಯರೂಪಕ್ಕೆ ತರುತ್ತವೆ. ಆದರೆ ಇದೇ ಕಾರ್ಯದಲ್ಲಿ ನಿರತರಾಗಿರುವ ಸ್ವಯಂಸೇವಾ ಸಂಘ ಸಂಸ್ಥೆಗಳಿಗೂ ಧಾರಾಳವಾಗಿ ಸಹಾಯ ಧನವನ್ನು ಕೊಡಲಾಗುತ್ತಿದೆ ಅಖಿಲ ಭಾರತ ಪ್ರಾಮುಖ್ಯಪಡೆದಿರುವ ಎಂಟು ಸರ್ಕಾರೇತರ ಸಂಘ ಸಂಸ್ಥೆಗಳಿಗೆ ಭಾರತ ಸರ್ಕಾರವು ಸಹಾಯ ಧನವನ್ನು ಕೊಟ್ಟಿದೆ.

ತೃತೀಯ ಪಂಚವಾರ್ಷಿಕ ಯೋಜನಾವಧಿಯಲ್ಲಿ ಆದಿಮ ಜಾತಿಯವರ ಯೋಗಕ್ಷೇಮ ಕಾರ್ಯ ಯೋಜನೆಗಳಿಗಾಗಿ ೬೦ ಕೋಟಿ ರೂ.ಗಳನ್ನು ವಿಮೋಚಿತ ಜಾತಿ ಜನರ ಯೋಗಕ್ಷೇಮ ಕಾರ್ಯ ಯೋಜನೆಗಳಿಗಾಗಿ ೪ ಕೋಟಿ ರೂ.ಗಳನ್ನು ಮೀಸಲಿಡಲು ಉದ್ದೇಶಿಸಲಾಗಿದೆ.

ತೃತೀಯ ಯೋಜನೆಯಲ್ಲಿ ಆದಿಮ ಜಾತಿಯ ಜನರ ಹಿತರಕ್ಷಣಾ ಕಾರ್ಯಕ್ರಮಗಳನ್ನು ಸುಧಾರಿಸುವ ಬಗ್ಗೆ ಅವಕಾಶ ಕಲ್ಪಿಸಲಾಗಿದೆ. ಅದರಲ್ಲಿಯೂ ವಿಶೇಷವಾಗಿ ಹೊಸ ಕೈಗಾರಿಕಾಭಿವೃದ್ಧಿ ಪ್ರದೇಶಗಳಲ್ಲಿ ಆದಿಮ ಜಾತಿಯವರ ಹಿತಾಸಕ್ತಿಗಳನ್ನು ಕಾಪಾಡುವುದಕ್ಕಾಗಿ ಸ್ಥಾಪಿಸಿರುವ ಆಡಳಿತವನ್ನು ಬಲಪಡಿಸುವುದು ಮತ್ತು ಪುನರ್ವ್ಯವಸ್ಥೆಗೊಳಿಸುವುದು, ಆದಿಮ ಜಾತಿ ಜನರಿರುವ ಪ್ರದೇಶಗಳಲ್ಲಿ ವಿವಿಧ ಮಟ್ಟಗಳಲ್ಲಿ ಕೆಲಸಮಾಡುತ್ತಿರುವ ಸಿಬ್ಬಂದಿಗೆ ತರಬೇತಿ ನೀಡುವುದು, ಆದಿಮ ಜಾತಿ ಜನರ ಸಮಸ್ಯೆಗಳನ್ನು ವಿಧಿವತ್ತಾಗಿ ಅಧ್ಯಯನ ಮಾಡುವುದು ಮತ್ತು ಈ ಜನರ ಹಿತರಕ್ಷಣಾ ಕಾರ್ಯದಲ್ಲಿ ತೊಡಗಿರುವ ಸ್ವಯಂಸೇವಾ ಸಂಘ ಸಂಸ್ಥೆಗಳಿಗೆ ಸಾಕಷ್ಟು ನೆರವು ನೀಡುವುದು-ಇವುಗಳಿಗೆ ಸಂಬಂಧಪಟ್ಟ ಕಾರ್ಯಕ್ರಮಗಳಿಗೆ ಅವಕಾಶ ಕಲ್ಪಿಸಲಾಗಿದೆ.

ಯೋಜನಾವಧಿಯಲ್ಲಿ ೩೦೦ ಆದಿಮ ಜಾತಿ ಜನರ ಬ್ಲಾಕ್‌ಗಳನ್ನು ಸ್ಥಾಪಿಸಲು ಅವಕಾಶ ಒದಗಿಸಲಾಗಿದೆ ಆದಿಮ ಜಾತಿ ಜನರ ಸ್ಥಿತಿಗಳಿಗೆ ಅನುಗುಣವಾಗಿರುವಂತೆ ಈ ಬ್ಲಾಕ್‌ಗಳನ್ನು ಸ್ಥಾಪಿಸವುದು. ಈ ಬ್ಲಾಕ್‌ಗಳಲ್ಲಿ ಅಭಿವೃದ್ಧಿ ಕಾರ್ಯ ಯೋಜನೆಗಳ ಅನುಕೂಲ ನೋಡಿಕೊಂಡು ಕಾರ್ಯರೂಪಕ್ಕೆ ತರಲು ಸಾಧ್ಯವಾಗುವಂತೆ ಯೋಜನೆಯಲ್ಲಿ ಅವಕಾಶ ಕಲ್ಪಿಸಲಾಗಿದೆ.

ಆದಿಮ ಜಾತಿ ಜನರ ಹಿತರಕ್ಷಣೆಗಾಗಿ ಒದಗಿಸುವ ಹಣದಲ್ಲಿ ಶೇ. ೬೦ರಷ್ಟನ್ನು ಆರ್ಥಿಕಾಭಿವೃದ್ಧಿ ಕಾರ್ಯಗಳಿಗಾಗಿ ಯೂ ಶೇ. ೨೫ರಷ್ಟನ್ನು ಸಂಚಾರ ಸಂಪರ್ಕಗಳಿಗಾಗಿಯೂ ಉಳಿದ ೧೫ರಷ್ಟನ್ನು ಸಾಮಾಜಿಕ ಸೇವೆಗಳಿಗಾಗಿಯೂ ವಿನಿಯೋಗಿಸಬೇಕೆಂದು ಯೋಜನೆಯಲ್ಲಿ ಸೂಚಿಸಲಾಗಿದೆ.

ದಿ ವಿಜಯಾ ಬೇಂಕ್ ಲಿಮಿಟೆಡ್, ಕಾಪು.

ಏಲಂ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದವರು ನಮ್ಮ ಬೇಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆಕೊಂಡ ಸಾಲವನ್ನು ಮರುಪಾವತಿ ಮಾಡುವರೆ ರಜಿಸ್ಟ್ರಿ ನೋಟೀಸುಗಳ ಮೂಲಕ ಕೇಳಿಕೊಂಡಾಗ್ಯೂ ಅಸ್ಲು, ಪ, ಬಡ್ಡಿಯನ್ನು ಈ ತನಕವೂ ಬಾಕಿಮಾಡಿಕೊಂಡಿರುವುದರಿಂದಲೂ, ಇನ್ನು ಕೆಲವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸುಗಳು ಕಾರಣಾಂತರಗಳಿಂದ ವಾಪಾಸು ಬಂದಿರುವುದರಿಂದಲೂ, ಸದ್ರಿಯವರು ಈಡಿಟ್ಟ ನಗಗಳನ್ನು ಇದೇ ಬರುವ ತಾರೀಕು 4—10—1961ನೇ ಬುಧವಾರ ಮಧ್ಯಾಹ್ನ ಗಂಟೆ 4ಕ್ಕೆ ಸರಿಯಾಗಿ ಯಾ, ಬ್ಯಾಂಕಿಗೆ ಯುಕ್ತ ಕಂಡ ಇತರ ಯಾವುದೇ ದಿನಗಳಲ್ಲಿ ಪುನಃ ನೋಟೀಸು ಕೊಡದೆನೇ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು ತಿಳಿದಿರಲಿ.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	30—6—1961ರ ವರೆಗಿನ ಬಡ್ಡಿ ಕೂಡಾ.
926/59	ರಾಮಯ್ಯ ಆಚಾರಿ, ಸೇಶ ಆಚಾರಿಯವರ ಮಗ, ಉಳಿಯಾರ ಗೋಳಿಗ್ರಾಮ, ಪೋಸ್ಟು ಉಳಿಯಾರಗೋಳಿ	15=59
931/59	ಶಾಂತರಾಮ ಸೆಟ್ಟಿ, ನಂದ್ಯಪ್ಪ ಸೆಟ್ಟಿ ಮಗ, ಸ್ವಾಮಿಲ್‌ತೋಟ, ಬಡಗುಮನೆ, ಪಡುಗ್ರಾಮ, ಪೋಸ್ಟು ಕಾಪು.	111=62
118/60	ಜಗನ್ನಾಥ ಸೆಟ್ಟಿ, ದೇಜಪ್ಪ ಸೆಟ್ರು ಮಗ ಬಗ್ಗೆಡಿಗುತ್ತು, ಬಡಗ್ರಾಮ, ಪೋಸ್ಟು ಬಡ.	46=47
230/60	ನಂದು ಸೆಟ್ಟಿ, ದಾಸು ಸೆಟ್ರು ಅಳಿಯ ಬಟ್ಟಸ್ಥಾನ, ಕರಂದಾಡಿ ಮಟಪಾಡಿ ಗ್ರಾಮ, ಪೋಸ್ಟು ಕಾಪು.	37=30
236/60	ಬೋಜ ಸೆಟ್ಟಿ, ದೂಜ ಸೆಟ್ರು ಅಳಿಯ ಪಣಿಯೂರು ಗ್ರಾಮ ಪೋಸ್ಟು ಪಣಿಯೂರು	28=50
245/60	ಕಾಳು ಪೂಜಾರಿ, ಅಣ್ಣು ಪೂಜಾರಿಯವರ ಮಗ ಬೈಲಮನೆ, ಮಲ್ಲಾರು ಗ್ರಾಮ, ಪೋಸ್ಟು ಮಲ್ಲಾರು.	39=96
436/60	ಅಣ್ಣಪ್ಪ ಪೂಜಾರಿ, ಚಿಂಗ ಪೂಜಾರಿಯವರ ಅಳಿಯ, ಮಂಚಿ ಮಾರು ಮಲ್ಲಾರು ಗ್ರಾಮ, ಪೋಸ್ಟು ಮಲ್ಲಾರು.	220=32
723/60	ಎಮ್. ಅಂತಯ್ಯ, ಡ್ರೈವರ್, ಮಣಿಪುರ ಗ್ರಾಮ, ಪೋಸ್ಟು ಮಣಿಪುರ.	97=35
391/61	ಚಿತ್ತು ಸೆಟ್ಟಿ, ಶೇನ ಸೆಟ್ರು ಅಳಿಯ ಮಲ್ಲಾರು ಕಂಡಿಗುತ್ತು, ಪೋಸ್ಟು ಮಲ್ಲಾರು	80=65

Office of the Bank
Kaup
9—9—1961

ಬಿ. ಬಾಸ್ಕರ ಸೆಟ್ಟಿ
ಏಜಂಟ್

ಲಿಂಗ ಪರಿವರ್ತನೆಯ ರಹಸ್ಯ

ಕೆಲದಿನಗಳಿಗೆ ಮೊದಲು ವರ್ತಮಾನ ಪತ್ರಿಕೆಗಳಲ್ಲಿ ಒಂದು ಸುದ್ದಿ ಪ್ರಕಟವಾಗಿತ್ತು. ಮಧ್ಯ ಪ್ರದೇಶದ ದೇವಾಸ್‌ದ ಬಳಿಯ ಟೀಕರೀಖುರ್ದ್ ಎಂಬ ಹಳ್ಳಿಯಲ್ಲಿ ಒಂದು ಹೇಂಟೆಯು ಹೆಂಜವಾಯ್ತು ಎಂಬುದೇ ಇದರ ಮುಖ್ಯ ಸಾರಾಂಶವಿತ್ತು. ಈ ಹೇಂಟೆಯು ಮೊದಲು ಹತ್ತು ಮೊಟ್ಟೆಗಳನ್ನಿಟ್ಟಿತ್ತೆಂದೂ ಆಮೇಲೆ ತನಗೆತಾನೇ ಹುಂಜವಾಯಿತೆಂದೂ ಹೇಳಲಾಗಿದೆ. ಇಂತಹ ಹೃದಯಸ್ಪರ್ಶಿ ಕುತೂಹಲಕಾರಕ ವರ್ತಮಾನದಲ್ಲಿ ಪ್ರಕೃತಿಯ ಚಮತ್ಕಾರವಿರುವುದರಿಂದ ಅದನ್ನು ವಿಶ್ಲೇಷಿಸಲು ಇಂದೋರಿಗೆ ಆ ಹುಂಜವನ್ನು ಕಳಿಸಲಾಯಿತೆಂದೂ ತಿಳಿಯುತ್ತದೆ.

ಲಿಂಗ ಪರಿವರ್ತನೆಯ ಘಟನೆ ಮಾನವರಲ್ಲಿ ಆಗುತ್ತಿರುವುದು ಆಗಾಗ ಕೇಳಿ ಬರುತ್ತಿದೆ. ಆದರೆ, ಪ್ರಾಣಿಗಳಲ್ಲಿ ಈ ರೀತಿಯ ಲಿಂಗ ಪರಿವರ್ತನೆಯಾದ ವರ್ತಮಾನ ಬೆಳಕಿಗೆ ಬಂದುದು ಇದೇ ಮೊದಲನೆಯದು.

ಕೆಲವು ವರ್ಷಗಳಿಗೆ ಮೊದಲು ಒಬ್ಬಾಕೆ ತರುಣಿ ತರುಣನಾದ ರೋಮಾಂಚಕ ಕಥೆ ಪತ್ರಿಕೆಯೊಂದರಲ್ಲಿ ಪ್ರಕಾಶಿತವಾಗಿತ್ತು. ಹುಡುಗಿ ಹೋಗಿ ಹುಡುಗನಾಗುವುದು ಇಲ್ಲವೇ ಹುಡುಗನು ಹುಡುಗಿಯಾಗಿ ರೂಪಾಂತರಗೊಳ್ಳುವುದು ಇಂದು ಅಷ್ಟೊಂದು ಸೋಜಿಗವೆನ್ನುವಂತಿಲ್ಲ. ನಮ್ಮ ದೇಶದಲ್ಲಿ ಲಿಂಗ ಪರಿವರ್ತನೆಯು ಹಳೆಯ ಕಾಲದಲ್ಲೂ ಇತ್ತು; ಇಂದಿಗೂ ಇದೆ. ಇದೇನು ವಿಚಿತ್ರವೆನ್ನುವವರೂ ಇದ್ದಾರೆ. ಶಾಪ ಮತ್ತು ವರದಾನಗಳೆ ಒಪ್ಪವನ್ನು ಈ ಘಟನೆಗೆ ಕೊಡುತಿದ್ದರು. ಶಿಖಂಡಿಯ ಕಥೆ ಮಹಾಭಾರತದಲ್ಲಿ ಸುಪ್ರಸಿದ್ಧವಿದೆ. ಈತನಿಲ್ಲದಿದ್ದರೆ, ಭೀಷ್ಮರನ್ನು ಹಿಮ್ಮೆಟ್ಟಿಸುವುದು ಸಾಧ್ಯವಿತ್ತೆ? ಮಹಾಬಲಶಾಲಿ ಅಸಹಾಯ ಶೂರ ಅದ್ವಿತೀಯ ಜಗದೇಕ ವೀರ ಅರ್ಜುನನು ಕೂಡ ಹೆಣ್ಣಾಗಲಿಲ್ಲವೆ? ವೇಷ ಹಾಕುವುದರಲ್ಲಿ ಅರ್ಜುನ ಚತುರನಿದ್ದನು ಎನ್ನುವವರೂ ಇರಬಹುದು. ಆದರೆ, ಅರ್ಜುನನು ಬೃಹನ್ನಳೆಯೆಂಬ ರೂಪದಲ್ಲಿ ವಿರಾಟರಾಜನಲ್ಲಿ ಒಂದು ವರ್ಷವಿದ್ದನು. ಈ ಅವಧಿಯಲ್ಲಿ ಸ್ವಯಂ ರಾಜನಾಗಲಿ, ಇತರ ಯಾರೇ ಆಗಲಿ, ಆತ ಅರ್ಜುನನೆಂಬುದಂಕೂ ಇಂಬಲಿ, ಪುರುಷನೆಂಬುದನ್ನೂ ತಿಳಿದುಕೊಳ್ಳಲು ಶಕ್ತರಾಗಲಿಲ್ಲ. ನೃತ್ಯ—ಸಂಗೀತ ಕಲಿಸುತ್ತಿದ್ದ ಬೃಹನ್ನಳೆ ಹೆಂಗಸೇ ಆಗಿದ್ದನೆಂಬುದಕ್ಕೆ ಬೇರೇನು ಪ್ರಮಾಣ ಬೇಕು?

ಪ್ರಾಗೈತಿಹಾಸಿಕ ಪುರಾಣೇತಿಹಾಸ ಮತ್ತು ಅರ್ವಾಚೀನ ಕಾಲಗಳಲ್ಲಿ ಇಂತಹ ಅನೇಕ ಉದಾಹರಣೆಗಳು ನಮಗೆ ದೊರೆಯುತ್ತವೆ. ಶಾರೀರಿಕ ಪರಿವರ್ತನೆಯ ಇದಕ್ಕೆ ಕಾರಣವಿರಬೇಕು. ಕೆಲವರು ಸ್ತ್ರೀಯರು ತಮ್ಮ ವಿಶೇಷ ಸ್ಟೈಲ್ ಲೇಪ್' ಮಾಡಿಸುತ್ತಿರುವುದೂ ಪುರುಷರು ಸೆನೆದ ಬೆಕ್ಕಿನಂತೆ ಬಮಕುತ್ತಿರುವುದೂ ಅವರೂಸವಲ್ಲ.

ಯಾರಾದರೊಬ್ಬ ಪುರುಷೋಚಿತ ಕಾರ್ಯಗಳನ್ನೆಸಗದೆ ಸ್ತ್ರೀಯೋಚಿತ ಕಾರ್ಯ ಮಾಡುವುದಾದರೆ ಅವನನ್ನು ಏನೆನ್ನಬೇಕು? ಧೈರ್ಯ, ಸಾಹಸ, ಕರ್ಮಠತೆ, ಕ್ರಿಯಾಶೀಲತೆಗಳು ಪುರುಷಕೃತ್ಯಗಳಿಂದ ತೋರಿಬರಬೇಕು; ಕತ್ತಲೆಯಲ್ಲಿ ಹೊರಗಿಣಿಕಲಾರದ ಮಹಾಶಯ, ನಾ

(ಲಸೇ ಪುಟ ನೋಡಿರಿ)

ನವಯುಗ

ವರುಷ ೪೧	ಉಡುಪಿ ೧೪-೯-೬೧	ವಾರ ೨

ವ್ಯರ್ಥ ಗುಲ್ಲು

ಪೋರ್ಚುಗೀಸ ಆಳರಸರಷ್ಟು ಸಂಯುಕ್ತ ರಾಷ್ಟ್ರ ಸಂಘದ ಆಶಯಾನುಸಾರಿಗಿದವರು ಯಾರೂ ಇರಲಾರರು. ಅಂಗೋಲಾದಲ್ಲಿ ರಕ್ತದ ಕಾಲುವೆಯು ಹರಿದು ಅಲ್ಲಿನ ನಾಗರಿಕರು ಅಮಾನುಷವಾಗಿ ಕಾಣಲ್ಪಟ್ಟಾಗ ಸಂಯುಕ್ತ ರಾಷ್ಟ್ರ ಸಂಘವು ಅದನ್ನು ಗಂಭೀರ ಸಮಸ್ಯೆಗಳ ಸಾಲಿಗೆ ಸೇರಿಸಿ ಪರಿಶೀಲನೆಗೆ ಅವಕಾಶ ಕೊಡಬೇಕೆಂದು ಕೇಳಿಕೊಂಡಾಗ ಅದನ್ನು ತಿರಸ್ಕರಿಸಿದ ಪೋರ್ಚುಗಲ್ ಇದೀಗ ತಾನೇ ಭದ್ರತಾ ಮಂಡಳದ ಮರೆ ಹೋಗುವ ವಿಲಕ್ಷಣ ಸನ್ನಿವೇಶವೊದಗಿದೆ. ಜಾಗತಿಕ ಪ್ರಾತಿನಿಧಿಕ ಸಂಸ್ಥೆಯಾದ ಸಂಯುಕ್ತ ರಾಷ್ಟ್ರ ಸಂಘದ ಹಲವಾರು ನಿಯಮಗಳನ್ನು ಉಲ್ಲಂಘಿಸಿ, ಅದರ ಕಾರ್ಯಕ್ರಮಗಳಿಗೆ ಒಪ್ಪಿಗೆಯನ್ನು ಸೂಚಿಸದೆ, ತನ್ನ ಹಿಡಿದ ದಾರಿಯಲ್ಲೇ ಮುಂದುವರಿದು ತನ್ನ ಕುರುಡು ನೀತಿಯನ್ನೇ ಎತ್ತಿಹಿಡಿಯುವ ದುಶ್ಚಾಳಿಯು ಪೋರ್ಚುಗಲ್ಲಿನದು. ಅದರ ವರ್ತನೆಯು ವಿಚಿತ್ರವೆನಿಸುವುದು ಮಾತ್ರವಲ್ಲ; ಸಂಯುಕ್ತ ರಾಷ್ಟ್ರ ಸಂಘದ ಉದ್ದೇಶಗಳಿಗೂ ವಿರುದ್ಧವಿರುತ್ತದೆ.

ಅಂಗೋಲದ ಪರಿಶೀಲನೆಗೆ ಅವಕಾಶವನ್ನು ಕೊಡದೆ, ವರ್ಷಕ್ಕೊಂದು ಬಾರಿ ತನ್ನ ವಸಾಹತುಗಳ ಸಂಬಂಧದಲ್ಲಿ ವರದಿಯನ್ನು ಒಪ್ಪಿಸದೆ, ಸಂಯುಕ್ತ ರಾಷ್ಟ್ರ ಸಂಘದ ಆದೇಶಗಳನ್ನು ಮನ್ನಿಸದ ಪೋರ್ಚುಗಲ್ ಈಗ ಭದ್ರತಾ ಮಂಡಳಕ್ಕೆ ಒಂದು ದೂರನ್ನಿತ್ತು, ತನ್ನದಾದ (?) ಗೋವೆಯ ಮೇಲೆ ಆಕ್ರಮಣ ಮಾಡುವ ಬೆದರಿಕೆಯನ್ನು ಭಾರತವು ಹಾಕುತ್ತಿದೆ ಎಂದು ಹುಯ್ಯಲಿಟ್ಟಿದೆ. ಇತ್ತೀಚೆಗೆ ಭಾರತದ ಪ್ರಧಾನಿ ಪಂಡಿತ ನೆಹರು ಗೋವೆಯ ಸಂಬಂಧದಲ್ಲಿ ಲೋಕಸಭೆಯಲ್ಲಿತ್ತ ಹೇಳಿಕೆಯೇ ಅದರ ಈ ವರ್ತನೆಗೆ ಕಾರಣವಾಗಿದೆಯಲ್ಲದೆ ಬೇರಾವ ಅಂತಹ ಘಟನೆಯು ನಡೆಯಲಿಲ್ಲ. ಪ್ರಧಾನಿ ನೆಹರು ತನ್ನ ಭಾಷಣದಲ್ಲಿ ಗೋವೆಯ ಮೇಲೆ ಯುದ್ಧ ಹೊಡುವ ಪ್ರಸ್ತಾಪವನ್ನೇ ಮಾಡಲಿಲ್ಲ. "ಗೋವೆಯೊಳಗಿನ ಅಶಾಂತಿ ಹೆಚ್ಚಾಗಿ, ಭಾರತಕ್ಕೆ ಅದರಿಂದ ವಿಪತ್ತು ಬಂದೊದಗುವಂತಿದ್ದರೆ, ಆಗ ಭಾರತವು ಅದನ್ನು ನೋಡುತ್ತ ಸುಮ್ಮನಿರುವುದು ಸಾಧ್ಯವಿಲ್ಲ; ಭಾರತವು ಗೋವೆಗೆ ಶಸ್ತ್ರಾಸ್ತ್ರಗಳನ್ನು ಕಳಿಸಿಯೇ ತೀರಬೇಕಾಗುವುದು. ಅಂತಹ ದಿನ ಅತಿ ಸಿಕಟದಲ್ಲಿಯೇ ಬರಬಹುದು". ಎಂದವರು ಹೇಳಿದ್ದರು. ಇದರಲ್ಲಿ ಯಾರ ಮೇಲಾದರೂ ಆಕ್ರಮಣದ ಬೆದರಿಕೆಯಿಲ್ಲ. ಗೋವೆಯನ್ನತ್ತ ತನ್ನದೆನ್ನುವ ಪೋರ್ಚುಗಲಿನ ವಾದವಾದರೂ ಹುರುಳಿಲ್ಲದ್ದು, ತಿಳಿಗೇಡಿತನದ್ದು. ಅದು ಭಾರತದ ಒಂದು ಭಾಗ—ಸದ್ಯ ಪೋರ್ಚುಗೀಸ ವಸಾಹತು ಎಂಬುದು ಹಾಲಿನಷ್ಟು ತಿಳಿಯಾಗಿರುವಾಗ, ಅದನ್ನು ಮುಚ್ಚಿಡಲು ಪೋರ್ಚುಗಲು ಪ್ರಯಾಸವೆಷ್ಟುಪಟ್ಟರೂ ಅದು ವ್ಯರ್ಥವೆಂಬುದು ಮಿಂದಿತ್ತ. ಸತ್ಯಕ್ಕೆ ಮುಕ್ಕು ಹಿಡಿದಂತೆ ಕಾಣಬಹುದು ಅಷ್ಟೆ; ಸೂರ್ಯನನ್ನು ಮೋಡ ಆಡಗಿಸಲು ಪ್ರಯತ್ನ ಪಡುವಂತೆ ಪೋರ್ಚುಗಲ್ ತನ್ನ ಕುರುಡುವಾದವನ್ನು ಸಮರ್ಥಿಸಲು ಬಹು ಜಾಣತನದಿಂದ ಜಾಲನೇಯುತ್ತಿದೆ. ಆದರೆ, ಅದರಿಂದ ಲಾಭ ದೊರೆಯಲಾರದು. ಈಗಾಗಲೇ ಮಾನವೀಯ ದ್ರಷ್ಟಾರರ ದೃಷ್ಟಿಯಲ್ಲಿ ಅಮಾನವೀಯತೆಯನ್ನು ಪ್ರದರ್ಶಿಸುತ್ತ ವಸಾಹತುಗಳಿಗೆಲ್ಲ ಸ್ವಾತಂತ್ರ್ಯ ಕೊಡಬೇಕೆನ್ನುವುದನ್ನು ಉಲ್ಲಂಘಿಸುತ್ತ ಸಾಗುತ್ತಿರುವ ಪೋರ್ಚುಗಲ್‌ನ ಭ್ರಮೆ ಸದ್ಯದಲ್ಲಿಯೇ ನಿರಸನವಾಗದಿರದು.

ಭಾರತವಾದರೂ ಗೋವೆಯ ಅಗುಹೋಗುಗಳತ್ತ ತೀವ್ರ ದೃಷ್ಟಿಯನ್ನಿಟ್ಟು ಕೊಳ್ಳುವುದು ಅತ್ಯವಶ್ಯವಾಗಿದೆ. ಅಲ್ಲಿ ನಡೆಯ ಬಹುದಾದ ಯಾವುದೇ ಘಟನೆಯು ಭಾರತದ ಮೇಲೆ ಬೀರುವಷ್ಟು ಪರಿಣಾಮ ಪ್ರಭಾವವನ್ನು ಪೋರ್ಚುಗಲಿನ ಮೇಲೆ ಬೀರುವುದಿಲ್ಲವೆಂಬುದನ್ನು ಯಾರೂ ಹೇಳಬಹುದು. ತನ್ನವರಾದ ಗೋಮಾಂತಕರು ನರಕದಲ್ಲಿ ತೊಳಲಾಡುತ್ತಿರುವಾಗ ಭಾರತವು ಅದನ್ನು ಕಂಡೂ ಸುಮ್ಮನಿರುವುದು ಸಾಧ್ಯವೆ? ಅಂತಹ ಪರಿಸ್ಥಿತಿಯಲ್ಲಿ ಭಾರತವು ಗೋಮಾಂತಕರಿಗೆ ಸಹಾಯ ಮಾಡುವುದು ಅನಿವಾರ್ಯ ಮತ್ತು ಅವಶ್ಯಕ. ತನ್ನ ಸಹೋದರರ ಕಷ್ಟ ದೂರ ಮಾಡುವುದು ಅದರ ಕರ್ತವ್ಯವಾಗಿದೆ. ಇದನ್ನು ಪೋರ್ಚುಗೀಸ ಆಳರಸರು ಒಪ್ಪದೆ, ಗೋವೆಯು ತನ್ನ ಸಾಮ್ರಾಜ್ಯದ ಒಂದು ಅಂಗವೆಂದು ವಾದಿಸುತ್ತ ಹೋಗುವುದು ನ್ಯಾಯಕ್ಕೆ ವಿರುದ್ಧವಾದುದು. ಈ ಸಂಬಂಧದಲ್ಲಿ ಇನ್ನೂ ಇನ್ನೂ ವಾದವನ್ನು ಬೆಳೆಯಗೊಡದೆ ಭಾರತದ ಅಂಗವಾದ ಗೋವೆಯಿಂದ ಅದು ಕಾಲ್ತೆಗೆದು ಅಲ್ಲಿ ಸ್ವಾತಂತ್ರ್ಯದ ಕಹಳೆಯನ್ನೂದ ಬಿಡುವುದು ಮುಂದಿನ ಗಂಡಾಂತರಗಳಿಂದ ಉಳಿಯಲು ಏಕಮಾತ್ರ ಸಾಧನ. ಎಲ್ಲರು ಒಪ್ಪಿದರೂ ಪೋರ್ಚುಗಲ್ ಮಾತ್ರ ಇದನ್ನು ಒಪ್ಪದೆ ವ್ಯರ್ಥಾಬಾಹ ಮಾಡಿದರೆ, ಅದು ಅದರ ಹೃದಯವನ್ನಷ್ಟೇ ಬಿಚ್ಚಿ ತೋರಿಸುತ್ತದೆ; ಅದರಿಂದ ಭಾರತದ ಸತ್ಯಕ್ಕೂ ಕೀರ್ತಿಗೂ ಚ್ಯುತಿ ತಟ್ಟಲಾರದು.

ಧ್ರುವ ಸಂಗಮ

ತಟಸ್ಥ ರಾಷ್ಟ್ರಗಳ ಸಮ್ಮೇಳನದ ಆಶಯ, ಪ್ರಧಾನಿ ನೆಹರು ಮತ್ತು ಕ್ರುಶ್ಚೇವರ ಭೆಟ್ಟಿ—ಕೆನ್ನೆಡಿಯವರ ಹಾರ್ದಿಕ ಸದಿಚ್ಛೆ—ಇವುಗಳಿಂದ ಕ್ರುಶ್ಚೇವ—ಕೆನ್ನೆಡಿಯವರು ಸುನಃ ಒಬ್ಬರನ್ನೊಬ್ಬರು ಕಂಡು ಜಾಗತಿಕ ತ್ವೇಷದ ಪರಿಸ್ಥಿತಿಯನ್ನು ನಿವಾರಿಸಿ, ಯುದ್ಧದ ಭಯವನ್ನು ದೂರಗೊಳಿಸಿ ಶಾಂತಿಯ ವಾತಾವರಣವನ್ನು ಸ್ಥಾಪಿಸುವ ಸಾಧ್ಯತೆ ಎದ್ದು ತೋರಿದೆ. ಪೂರ್ವ—ಪಶ್ಚಿಮ ನಾಯಕರು ಉತ್ತರ ದಕ್ಷಿಣ ಧ್ರುವಗಳಂತೆ ದೂರವಾಗಿಯೇ ಇದ್ದು, ಏಕ ಪಕ್ಷೀಯವಾಗಿ ತಮ್ಮ ನೀತಿ—ಧೋರಣೆಗಳನ್ನು ರೂಪಿಸುತ್ತ ಹೋಗುವುದರಿಂದ, ಜಾಗತಿಕ ಪರಿಸ್ಥಿತಿಯು ಕ್ಷೋಭೆಗೊಳ್ಳುವುದು. ಮಹಾ ನಾಯಕರು, ಜರ್ಮನಿಯ ಪ್ರಶ್ನೆಯು ಜಟಿಲವಾಗುತ್ತ ಬಂದುದರ ಬೆನ್ನಲ್ಲೇ ಉಭಯ ಮಹಾ ರಾಷ್ಟ್ರಗಳು ಅಣು ಸ್ಫೋಟದ ಪುನರ್ಸ್ಥಾಪನೆಯ ಘೋಷಣೆಯನ್ನೂ ಮಾಡಿ ಎಲ್ಲರ ಹೃದಯಗಳನ್ನೂ ನೋಯಿಸಿದರು. ಪ್ರಪಂಚದ ಸ್ಥಿತಿಯು ಬಹಳಷ್ಟು ಗಂಭೀರವಾಗಿರುವಾಗ, ಈ ಧುರೀಣರ ಭೆಟ್ಟಿ ಮತ್ತು ಬಿಚ್ಚು ಮನಸ್ಸಿನ ಮಾತುಕತೆಗಳು ಮಹತ್ವಪೂರ್ಣವಾಗಿವೆ. ಇವರಿಬ್ಬರ ಮಿಲನ ದಿನವನ್ನು ಜಗತ್ತಿಗೆ ಜಗತ್ತೇ ಕಣ್ಣಲ್ಲಿ ಎಣ್ಣೆ ಸುರಿದು ನೋಡುತ್ತಿದೆ. ಆದರೆ, ಈ ಸಂಬಂಧದಲ್ಲಿ ಈಗಾಗಲೇ ಸ್ಪಷ್ಟವಾಗಿ ಏನನ್ನೂ ಹೇಳುವುದು ಸಾಧ್ಯವಿಲ್ಲ. ಆದರೂ ಮೊದಲು ಅತಿ ದೂರವಿದ್ದ ಈ ನಾಯಕರು ಈಗ ತುಸು ಹತ್ತಿರಕ್ಕೆ ಬಂದಿದ್ದಾರೆನ್ನಬಹುದು. ಇದರ ಪರಿಣಾಮವಾಗಿ ಅವರ ಭೆಟ್ಟಿ ನಡೆಯುವುದು ಸಂಭವನೀಯವೆನಿಸಬಹುದು. ವಿಶ್ವಶಾಂತಿ ಬಯಸುವ ಇವರಾದರೂ ಅದರ ಸಾಧನೆಗೆ ಸಕ್ರಿಯಯೋಗ ನೀಡಲು ಹಿಂಜರಿಯಲಾರರೆನ್ನುವ ಆಶಯ ತಟಸ್ಥ ರಾಷ್ಟ್ರಗಳದ್ದಿದೆ.

ಭೂ ಸುಧಾರಣಾ ವಿಧೇಯಕ

ಕಾಂಗ್ರೆಸ್ಸು ಬಹು ವರ್ಷಗಳಿಂದ ಭರವಸೆ ನೀಡುತ್ತ ಬಂದಿರುವ ಭೂಸುಧಾರಣಾ ಸಂಬಂಧದ ವಿಧೇಯಕವನ್ನು ಕರ್ನಾಟಕದ ವಿಧಾನ ಸಭೆಯಲ್ಲಿ ಸುದೀರ್ಘವಾಗಿ ಚರ್ಚೆಗೆ ಎತ್ತಿಕೊಂಡಿದೆ. ಈಗಾಗಲೇ ವಿಧೇಯಕದ ೬೨ ಕಲಂಗಳು ಕೆಲವೊಂದು ತಿದ್ದುಪಡಿಗಳೊಂದಿಗೆ ಸ್ವೀಕೃತವಾದುವು. ಪರಿಶೀಲಕ ಸಮಿತಿಯು ಒಪ್ಪಿಸಿದ ವರದಿ, ಯೋಜನಾ ಮಂಡಳಿಯು ಮಾಡಿದ ಸಲಹೆ ಹಾಗೂ ಜನತೆಯ ಅಭಿಪ್ರಾಯಗಳನ್ನು ಸಂಗ್ರಹಿಸಿ ಕಂದಾಯ ಮಂತ್ರಿ ಕಡಿದಾಳ ಮಂಜಪ್ಪನವರು ಮೂಲ ವಿಧೇಯಕಕ್ಕೆ ಆವಶ್ಯಕತಿದ್ದುಪಡಿಗಳನ್ನು ಮಂಡಿಸಿದ್ದರು.

ಪರಮಾವಧಿ ಹಿಡುವಳಿ

ಸದ್ಯ, ಭೂವಿಧೇಯಕದನ್ವಯ ೨೭ ಸ್ಟೇಂಡರ್ಡ್ ಎಕ್ರೆಗಳಷ್ಟು ಭೂಮಿಯನ್ನು ಪರಮಾವಧಿ ಹಿಡುವಳಿಯನ್ನಾಗಿ ನಿರ್ಧರಿಸಿದೆ. ಆದರೆ, ಇನ್ನು ಮುಂದೆ ಕೊಳ್ಳುವ ಹಿಡುವಳಿಗೆ ೧೮ ಸ್ಟೇಂಡರ್ಡ್ ಎಕ್ರೆಗಳು ಪರಮಾವಧಿಮಿತಿಯಾಗುವುದು. ಈ ಮಿತಿಯಲ್ಲಿ ವಿನಾಯತಿಯನ್ನು ಕೊಡುವ ವಿಚಾರವನ್ನು ಮುಂದಕ್ಕೆ ಪರಿಶೀಲಿಸಲಾಗುವುದು.

ಕಂಪೆನಿಗಳು, ಸಂಘ ಮತ್ತು ಸಂಸ್ಥೆಗಳು ಹಾಗೂ ಧಾರ್ಮಿಕ ಸಂಸ್ಥೆಗಳು ತಮ್ಮ ಏಜಂಟರು, ಪ್ರತಿನಿಧಿಗಳು ಅಥವಾ ನೌಕರರ ಮೇಲ್ವಿಚಾರಣೆಯಲ್ಲಿ ಜಮೀನನ್ನು ಸಾಗುವಳಿ ಮಾಡುವುದನ್ನು ಕೂಡ ಸ್ವಂತ ಸಾಗುವಳಿಯೆಂದು ಪರಿಗಣಿಸಲಾಗುವುದು. ಆದರೆ, ಈ ರೀತಿಯ ಭೂ ಹಿಡುವಳಿಯ ಮೇಲೆ ಯಾವುದೇ ಮಿತಿಯನ್ನು ಹೇರಲಾಗುವುದಿಲ್ಲ. ಕಾಫಿ, ಏಲಕ್ಕಿ, ಮೊದಲಾದ ಕೆಲವು ತೋಟಗಳ ಮಟ್ಟಿಗೆ ಪರಮಾವಧಿ ಮಿತಿಯಲ್ಲಿ ವಿನಾಯತಿಯನ್ನು ಕೊಡಲಾಗಿದ್ದು ತೆಂಗು-ಅಡಿಕೆ ತೋಟಗಳಿಗೆ ವಿನಾಯತಿ ದೊರೆತಿಲ್ಲ. ಕಂಪೆನಿ, ಸಂಘಸಂಸ್ಥೆಗಳು ಹಾಗೂ ಧಾರ್ಮಿಕ ಸಂಸ್ಥೆಗಳು ಗೇಣಿಗೆ ಕೊಟ್ಟ ಭೂಮಿಯನ್ನು ಬಿಡಿಸಿಕೊಳ್ಳುವುದನ್ನು ಮಾತ್ರ ವಿಧೇಯಕವು ನಿಷೇಧಿಸುತ್ತದೆ.

ಬಿಡಿಸಿಕೊಳ್ಳಲಾದ ಭೂಮಿ

ಜಿಲ್ಲಾ ಸಮಿತಿಯು ವರದಿ ಪ್ರಕಟವಾದ ದಿನ (೧೦-೯-೬೭)ಕ್ಕೆ ಮೊದಲು ಆರು ವರ್ಷಗಳ ಕಾಲ ಗೇಣಿ ಮಾಡುತಿದ್ದ ರೈತನು ಆ ದಿನದಿಂದ ಈ ಕಾನೂನು ಜಾರಿಗೆ ಬರುವ ದಿನದೊಳಗೆ ತನ್ನ ಜಮೀನನ್ನು ಆದರ ಮಾಲಿಕನಿಗೆ ಬಿಟ್ಟು ಕೊಟ್ಟಿದ್ದರೆ, ಅಥವಾ ಮಾಲಿಕನು ಭೂಮಿಯನ್ನು ಬಿಡಿಸಿಕೊಂಡಿದ್ದರೆ, ಅದನ್ನು ಮರಳಿ ತನಗೆ ಕೊಡಿಸಬೇಕೆಂದು ಕಾನೂನು ಜಾರಿಗೆ ಬಂದ ಒಂದು ವರ್ಷದೊಳಗೆ ಗೇಣಿದಾರನು ನ್ಯಾಯ ಮಂಡಳಿಗೆ ಅರ್ಜಿಸಲ್ಲಿಸಬಹುದು.

ಗೇಣಿ ನಿರ್ಣಯ

ಈಗಿರುವ ವಿವಿಧ ಬಗೆಯ ಗೇಣಿಯ ಪ್ರಮಾಣವನ್ನು ಏಕ ರೂಪತೆಗೆ ತರುವಂತೆ ವ್ಯವಸ್ಥೆಯಾಗಿದೆ. ನೀರಾವರಿ ಜಮೀನಿಗೆ ಒಟ್ಟು ಉತ್ಪನ್ನದ ನಾಲ್ಕನೆಯ ಒಂದಂಶ ಮತ್ತು ಶುಷ್ಕಿ ಜಮೀನಿಗೆ ಒಟ್ಟು ಉತ್ಪನ್ನದ ಐದನೆಯ ಒಂದಂಶವನ್ನು ನ್ಯಾಯ ಗೇಣಿ ಎಂಬುದಾಗಿ ವಿಧೇಯಕವು ಹೇಳುತ್ತದೆ. ಯಾವುದೇ ಕಂಟ್ರಾಕ್ಟಿನ ಮೇಲೆ ಕೊಡುತ್ತಿರುವ ಗೇಣಿಯು ಈಗ ಸೂಚಿಸಿರುವ ಪರಮಾವಧಿ ಗೇಣಿಗಿಂತ ಕಡಿಮೆ ಇರುವುದಾದರೆ, ಮೊದಲಿನ ಗೇಣಿಗಿಂತ ಹೆಚ್ಚಿನದನ್ನು ಕೊಡಲು ಎಂದೂ ಬರುವುದಿಲ್ಲ.

ಭೂಮಿ ಸ್ವಾಧೀನಪಡಿಸುವುದು

ಮಾಲಿಕನು ವ್ಯವಸಾಯೇತರ ಕಾರ್ಯಗಳಿಗೋಸ್ಕರ ಗೇಣಿದಾರರಿಂದ ಮರಳಿ ಸ್ವಾಧೀನಪಡಿಸಿಕೊಳ್ಳಲು ಅರ್ಹನಾಗಿದ್ದಾನೆ. 'ವ್ಯವಸಾಯೇತರ' ಪದವು ವ್ಯಾಪಕಾರ್ಥದಲ್ಲಿ ಬಳಸಲ್ಪಟ್ಟಿದೆ.

ಗೇಣಿಗೆ ಕೊಡುವ ಅವಕಾಶ

ಸಣ್ಣ ಹಿಡುವಳಿದಾರರು ಮಾತ್ರವಲ್ಲ ವಿಧವೆಯರು ಅವಿವಾಹಿತೆಯರು, ಅಂಗವಿಕಲರು ತಮ್ಮ ಭೂಮಿಯನ್ನು ಗೇಣಿಗೆ ಕೊಡಬಹುದು. ಮಿಲಿಟರಿಯಲ್ಲಿರುವವರು ಆ ಕೆಲಸದಲ್ಲಿರುವಷ್ಟು ಸಮಯ ಭೂಮಿಯನ್ನು ಗೇಣಿಗೆ ಕೊಡಬಹುದು. ಆವರು ಆ ಕೆಲಸ ಬಿಟ್ಟು ಬರುವಾಗ, ಪರಮಾವಧಿ ಹಿಡುವಳಿಯಷ್ಟು ಜಮೀನನ್ನು ಗೇಣಿದಾರರಿಂದ ಬಿಡಿಸಿಕೊಳ್ಳಬಹುದು. ಭೂಮಾಲಕನಿಗೆ ಎರಡು ಮೂಲ ಹಿಡುವಳಿಗಿಂತ ಕಡಿಮೆ ಭೂಮಿಯಿದ್ದರೆ, ಅದರ ಅರ್ಧದಷ್ಟನ್ನೂ ವಶಪಡಿಸಿಕೊಳ್ಳಬಹುದು. ಆದರೆ ಭೂಮಾಲಕನಿಗೆ ಒಂದು ಸ್ಟ್ಯಾಂಡರ್ಡ್ ಎಕ್ರೆಯಷ್ಟೂ ಭೂಮಿಯಿಲ್ಲವಾದಲ್ಲಿ ಆತ ಗೇಣಿದಾರನಿಂದ ಸ್ವಲ್ಪವೂ ಭೂಮಿ ಬಿಡಿಸುವಂತಿಲ್ಲ. ಗೇಣಿದಾರರಿಂದ ಭೂಮಿಯನ್ನು ಮರಳಿ ಪಡೆಯುವಾಗ, ಸಂರಕ್ಷಿತ ಗೇಣಿದಾರನಿಗೆ ಕನಿಷ್ಠ ಒಂದು ಸ್ಟೇಂಡರ್ಡ್ ಎಕ್ರೆಯಷ್ಟನ್ನಾದರೂ ಭೂಮಿಯನ್ನು ಆತನಿಗೆ ಬಿಡಬೇಕು.

ಬಿಡಿಸಲು ಅವಕಾಶ.

ಎರಡು ವರ್ಷಗಳ ವರೆಗೆ ಗೇಣಿದಾರನು ಸಾಗುವಳಿ ಮಾಡಿದ್ದನೆ, ಅವನಿಂದ ಭೂಮಿಯನ್ನು ಮಾಲಿಕನು ಬಿಡಿಸಿಕೊಳ್ಳಬಹುದು.

ಭೂಮಿಯ ಮಾರಾಟ

ಭೂಮಾಲಿಕನು ತನ್ನ ಭೂಮಿಯನ್ನು ಮಾರುವುದಾದರೆ, ಅದರ ಗೇಣಿದಾರನಿಗೆ

[೭ನೇ ಪುಟಕ್ಕೆ]

ಅಲ್ಲಲ್ಲಿಯ ಸುದ್ದಿಸಾರ

ಮಂಗಳೂರಿನಲ್ಲಿ ಕಲಾಭವನ—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಲಲಿತ ಕಲೆಗಳ ಪ್ರಚಾರಕ ಸಂಘ ಸಂಸ್ಥೆಗಳ ಅಪೂರ್ವಗಳೂ ಹಲವಾರಿವೆ. ನಾಟಕ, ಸಂಗೀತ, ನೃತ್ಯ ಚಿತ್ರ ರಂಗಗಳಲ್ಲಿ ಇವು ತಮ್ಮ ಬಾಲಿಶ ಅಳಿಲ ಸೇವೆಯನ್ನು ಸಲ್ಲಿಸುತ್ತಿವೆ. ಜಿಲ್ಲಾ ಕೇಂದ್ರವಾದ ಮಂಗಳೂರಲ್ಲಿ ಶ್ರೀ ಕುದ್ಪಿಣಾಸುದೇವ ಶೆಣೈ ಮತ್ತು ಶ್ರೀ ಬಾಲ ಗೋಪಾಲರ ಕಾರ್ಯದರ್ಶಿತನದಲ್ಲಿ "ಕಲಾಭವನ" ಎಂಬ ಇನ್ನೊಂದು ಕಲಾ ಸಂಸ್ಥೆಯು ಕಲಾಕ್ಷೇತ್ರದಲ್ಲಿ ಬಹುಮುಖ ಸೇವೆಸಲ್ಲಿಸುವ ಉದ್ದೇಶಗಳಿಂದ ರೂಪುಗೊಂಡಿದ್ದು ಮುಂದಿನ ತಿಂಗಳಲ್ಲಿ ಇದು ಉದ್ಘಾಟಿತವಾಗುವ ನಿರೀಕ್ಷೆಯಿದೆ ನಟ ನಟಿಯರ ಹಿತ ಸಂಬಂಧವನ್ನು ರಕ್ಷಿಸುವದರೊಡನೆ ಉತ್ತಮ ನಟ ನಟಿಯರನ್ನು ತಯಾರಿಸುವುದು ಆಗಾಗ ಕಲಾ ಪ್ರದರ್ಶನಗಳನ್ನು ಏರ್ಪಡಿಸುವ ಗುರಿಯೂ ಭವನಕ್ಕೆ ಇದೆ. ಗುರುದೇವ ಟಾಗೋರರ "Sacrifice" ಎಂಬ ನಾಟಕವನ್ನು ಶ್ರೀ ಕುದ್ಪಿ ವಾಸುದೇವ ಶೆಣೈಯವರು "ವಿಸರ್ಜನೆ" ಎಂಬ ಹೆಸರಿನಿಂದ ಅನುವಾದಿಸಿದ್ದು ಭವನದ ಪ್ರಥಮ ಕಾಣಿಕೆಯಾಗಿ ಇದನ್ನು ಅಭಿನಯಿಸಲಿದ್ದಾರೆ. ಸ್ವಯಂ ನಟರೂ ನಾಟಕಕಾರರೂ ದಿಗ್ದರ್ಶಕರೂ ಆದ ಕುದ್ಪಿಯವರು ತನ್ನ ಅನುಭವೀ ಸಂಗಾತಿಗಳ ಸಹಾಯದಿಂದ ರಾಜ್ಯದ ಕಲಾ ಕ್ಷೇತ್ರದಲ್ಲಿ ಅಮೋಘ ಸೇವೆಸಲ್ಲಿಸಲಿ, ಮಹಾ ಜನರು ಭವನದ ಸದಸ್ಯರಾಗಿ ಅವರನ್ನು ಪ್ರೋತ್ಸಾಹಿಸಲಿ.

—ಸಂ. "ನವಯುಗ"

ಹಿಂದೀ ಪರೀಕ್ಷೆಗಳು—ಮೈಸೂರು ಹಿಂದೀ ಪ್ರಚಾರ ಪರಿಷತ್ತಿನ ಸಪ್ತಂಬರ ೯ರಿಂದ ಸ್ವಾರಂಭವಾಗ ಬೇಕಾಗಿದ್ದ ಪರೀಕ್ಷೆಗಳು ಸರಕಾರಿ ಪರೀಕ್ಷೆಗಳ ದೆಸೆಯಿಂದ ಸಪ್ತಂಬರ ೨೩, ೨೪ ಮತ್ತು ೨೫ರಂದು ನೆರವೇರಲಿರುವುವು. ನಮ್ಮ ಜಿಲ್ಲೆಯ ವಿದ್ಯಾರ್ಥಿಗಳ ಪ್ರವೇಶ ಪತ್ರವನ್ನು ಅಲ್ಲಿ ಊರಿನ ಪ್ರಚಾರಕರಿಗೆ ಕಳುಹಿಸಲಾಗಿದೆ, ವಿದ್ಯಾರ್ಥಿಗಳು ಅವನ್ನು ಪಡೆದು ಕೊಳ್ಳ ಬಹುದು ಎಂದು ಉಡುಪಿಯ ಹಿಂದೀ ಪ್ರಚಾರ ಪರಿಷತ್ತಿನ ಕಾರ್ಯದರ್ಶಿಯವರು ತಿಳಿಸುತ್ತಾರೆ.

ಎಮ್. ಜಿ. ಎಮ್ ಕಾಲೇಜಿನ—ಕೋಮರ್ಸ್ ಎಸೋಸಿಯೇಶನ ಉದ್ಘಾಟನಾಸಮಾರಂಭವು ತಾ. ೧೧ರಂದು ಸಿಂಡಿಕೇಟ್ ಬ್ಯಾಂಕಿನ ಮಂಗಳೂರು ಶಾಖೆಯ ಮೆನೇಜರ್ ಶ್ರೀ. ಎಚ್. ಡಿ. ಎಸ್. ಪೈಯಜರಿಂದ ಪ್ರಿನ್ಸಿಪಾಲ್ ಶ್ರೀ ಎಸ್. ಸುಂದರರಾಯರ ಅಧ್ಯಕ್ಷತೆಯಲ್ಲಿ ಜರಗಿತು ಉಪಾಧ್ಯಕ್ಷ ಶ್ರೀ. ಟಿ. ಕೃಷ್ಣರಾಯರು ಸ್ವಾಗತಿಸಿದರು. ಸಮಾರಂಭದ ಅಂತ್ಯದಲ್ಲಿ ಕಾರ್ಯದರ್ಶಿ ಶ್ರೀ. ಮೋಹನ ಹೆಬ್ಬಾರರು ವಂದನಾರ್ಪಣೆ ಮಾಡಿದರು.

ಶ್ರೀ. ಟಿ. ಜಿ. ಎಮ್. ಪೈಗಳ ನಿಧನ—ಸಿಂಡಿಕೇಟ್ ಬ್ಯಾಂಕಿನ ಡಿವಿಜನಲ್ ಮೆನೇಜರರಾಗಿದ್ದ ಶ್ರೀ ತೋನ್ಸೆ ಗೋಪಾಲ ಮುಕುಂದ ಪೈಗಳು ಇದೇ ತಾ. ೧೧ರಂದು ತಮ್ಮ ೫೬ನೇ ವರ್ಷದಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ದಿವಂಗತರು ಸರಳ, ಸಾಧು ಹಾಗೂ ನಿರಾಡಂಭರ ವ್ಯಕ್ತಿಗಳಾಗಿದ್ದರು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ನಿಷ್ಠೆಯಿಂದಲೂ, ಸ್ವಾವಲಂಬಿತೆಯಿಂದಲೂ, ಮಡಿದವರಾಗಿ, ಸತತ ಖಾದೀಧಾರಿಗಳಾಗಿದ್ದರು. ಇವರು, ಸಿಂಡಿಕೇಟ್ ಬ್ಯಾಂಕಿನಲ್ಲಿ ಏಜಂಟರಾಗಿ, ಸುಪರಿಂಟಿಂಡೆಂಟ್ ಆಫ್ ಎಡ್ವಾನ್ಸಸ್, ಚೀಫ್ ಇನ್ಸ್‌ಪೆಕ್ಟರ್, ಡಿವಿಜನಲ್ ಮೆನೇಜರ್, ಕೊನೆಯಲ್ಲಿ ಇನ್ಸ್‌ಪೆಕ್ಟರ್ ಏಜನ್ಸಿಸ ಡಿಪಾರ್ಟಮೆಂಟಿನ ಮುಖ್ಯಾಧಿಕಾರಿಗಳಾಗಿ ಉತ್ತಮ ಸೇವೆಸಲ್ಲಿಸಿ ಜನಪ್ರಿಯರಾಗಿದ್ದರು.

ಪರ್ಕಳೆ—ಶ್ರೀರಾಧದ ಭಜನಾ ಮಂಡಳಿಯ ತೃತೀಯ ಮಹಾ ಸಭೆಯು ತಾ. ೬-೨-೬೧ರಂದು ಶ್ರೀ. ಕೆ. ಮಂಜುನಾಥ ನಾಯಕ ಪರ್ಕಳೆ ಸಂಸ್ಥಾತ್ ಹಾಗೂ ಉಡುಪಿ ತಾಲೂಕು ಬೋರ್ಡ್‌ಮೆಂಬರ್ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಮಂಡಳಿಯ ಅಧ್ಯಕ್ಷರಿಂದ ಸ್ವಾಗತ ಭಾಷಣ, ಕಾರ್ಯದರ್ಶಿ ಯವರಿಂದ ವಾರ್ಷಿಕ ವರದಿ ವಾಚನವಾದ ಮೇಲೆ ೧೯೬೧-೬೨ನೇ ವರ್ಷದ ಕಾರ್ಯ ಕಾರಿಸಮಿತಿಗೆ ಶ್ರೀ. ಗಳಾದ ಪಿ ನಾರಾಯಣಶೆಟ್ಟಿಗಾರ ಅಧ್ಯಕ್ಷ ಪಿ ಗಣಪತಿ ಪ್ರಭು ಉಪಾಧ್ಯಕ್ಷ ಬಿ. ನಾರಾಯಣ ಶೆಟ್ಟಿ ಕೋಶಾಧಿಕಾರಿ ಎಸ್. ರಾಘವ ಶೆಟ್ಟಿಗಾರ ಪಿ. ರಾಮಚಂದ್ರಪ್ರಭು ಜೊತೆಕಾರ್ಯದರ್ಶಿ ಕೆ. ಆನಂದ ಶೆಟ್ಟಿ ಪೋಷಕ, ಪಿ. ಗುರುರಾಜ ಭಟ್, ರಾಮಣ್ಣ ಪ್ರಭು ಮತ್ತು ಪಿ. ಪಾಂಡುರಂಗ ನಾಯಕರನ್ನು ಸಂಚಾಲಕರನ್ನಾಗಿ ಆರಿಸಲಾಯ್ತು. ಸಭಿಕರ ಭಾಷಣದಲ್ಲಿ ಶ್ರೀ. ಕೆ. ಆನಂದ ಶೆಟ್ಟಿ ಯವರೂ, ಶ್ರೀ. ಪಿ. ಪಾಂಡುರಂಗ ನಾಯ್ಕರೂ, ಮುಖ್ಯ ಅಧಿಕಾರಿಗಳಾದ ಶ್ರೀ. ಎಚ್. ನಾಗಪ್ಪಶ್ಯಾನುಭೋಗರೂ, ಸಂದರ್ಭಕ್ಕನುಸಾರವಾಗಿ ಮಾತಾಡಿದರು. ಅಧ್ಯಕ್ಷರು ಭಜನಾ ಮಂಡಳಿಯ ಅನೇಕ ಚಟುವಟಿಕೆಗಳನ್ನು ಸಶಂಸಿಸಿ ಮಾತಾಡಿದರು ನಂತರ ಕಾರ್ಯದರ್ಶಿಯವರಿಂದ ಧನ್ಯವಾದ ಸಮರ್ಪಣೆಯಾಗಿ, ಭಜನಾ ಮಂಗಳೋತ್ಸವ ಪ್ರಸಾದ ವಿತರಣೆಯೊಂದಿಗೆ ಸಭೆಯು ಮುಕ್ತಾಯವಾಯ್ತು.

ಕಡಿರುದ್ಯಾವರ—ತಾ. ೬—೯—೬೧ ರಂದು ಕಾರ್ಕಳ ಸಬ್ ಡಿವಿಜನ್ನಿನ ಪೋಸ್ಟಲ್ ಇನ್ಸ್‌ಪೆಕ್ಟರ್, ಎಮ್. ಸೋಮಶೇಖರ ರಾವ್, ಅವರು, ಶ್ರೀ ಮಿತ್ರಬಾಗಿಲು ಪಂಚ್ಯಾತ್ ಪ್ರೇರ್‌ಮೇನ್‌ರವರ ಉದ್ಘಾಟನೆಯಂ ಮಾಲಕ, ಶ್ರೀ ಮುಂಡಾಜೆ ಬ್ರಾಂಚ್ ಪೋಸ್ಟ್ ಮಾಸ್ಟರ್, ನಾರಾಯಣ ಭಟ್ಟರ ಅಧ್ಯಕ್ಷತೆಯಲ್ಲಿ ಈ ಗ್ರಾಮದ ನೂರಾರು ವಂದಿಸೇರಿದ ಸಭೆಯಲ್ಲಿ, ಈ ಗ್ರಾಮಕ್ಕೆ ಅತಿ ಅಗತ್ಯವಿದ್ದ ಒಂದು ಬ್ರಾಂಚ್ ಪೋಸ್ಟ್ ಆಫೀಸನ್ನು ತೆರೆದರು. ಸಭಾ ಕಾರ್ಯಕ್ರಮಗಳೊಂದಿಗೆ ಈ ಅಂಚಿಮನೆಯ ಉದ್ಘಾಟನಾ ಸಮಾರಂಭವು ಯಶಸ್ವಿಯಾಗಿ ನೆರವೇರಿತು.

ಸಿಂಡಿಕೇಟ್-ಕೆಥೋಲಿಕ್—ಬ್ಯಾಂಕುಗಳ ಸಮ್ಮಿಲನ: ಸಮಾರಂಭವು ಇದೇ ತಾ. ೨೧ರಂದು ಮಂಗಳೂರಲ್ಲಿ ಕಸ್ತೂರ್‌ಬಾ ಮೆಡಿಕಲ್ ಕಾಲೇಜಿನ ಸಭಾಸದನದಲ್ಲಿ ಮಂಗಳೂರಿನ ಬಿಶೋಪ್ ರೈ. ರೆ. ಡಾ. ಆರ್. ಡಿಮೆಲ್ಲೋರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನೆರವೇರಿತು. ಸ್ಥಳೀಯ ಸಿಂಡಿಕೇಟ್ ಶಾಖಾ ಮೆನೇಜರ್ ಶ್ರೀ ಎಚ್. ಡಿ. ಎಸ್. ಪೈಯವರು ಸ್ವಾಗತಿಸಿದರು. ಕೆಥೋಲಿಕ್ ಬ್ಯಾಂಕಿನ ಅಧ್ಯಕ್ಷ ಶ್ರೀ ಎ. ಸಿ. ಸಲ್ಡಾನ್ಹರು ನೂಡಿದ ಸ್ವಾಸ್ತಿ ಭಾಷಣಕ್ಕೆ ಸಿಂಡಿಕೇಟ್ ಬೇಂಕಿನ ಮೆನೇಜಿಂಗ್ ಡೈರೆಕ್ಟರ್ ಡಾ. ಟಿ. ಮಾಧವ ಪೈಯವರು ಉತ್ತರವಿತ್ತರು. ಅಧ್ಯಕ್ಷರ ಭಾಷಣದಾನದ ಮೇಲೆ ಸಿಂಡಿಕೇಟ್ ಬ್ಯಾಂಕಿನ ಡಿ. ಚೀಫ್ ಆಫೀಸರ್ ಶ್ರೀ ಟಿ. ಎ. ಪೈಯವರು ವಂದನಾರ್ಪಣೆಮಾಡಿ ರೇವಣಾತಿದಾರರಿಗೂ ಸಿಬಂದಿಯವರಿಗೂ ಉತ್ಸಾಹಕರ ಭರವಸೆ ನೀಡಿದರು.

ಶ್ರೀ ಟಿ. ಎ. ಪೈಯವರು ಸ್ಪರ್ಧಿಸುವುದಿಲ್ಲ.— ಯಾವುದೇ ಜಾತೀಯ ಹಾಗೂ ವೈಯಕ್ತಿಕ ಭಾವನೆಗಳಿಗೆ ಅನ್ಯವಾದೆಯದೆ ದಕ್ಷಿಣ ಕನ್ನಡ ಜಿಲ್ಲೆಯಿಂದ ಯೋಗ್ಯರೂ ದಕ್ಷರೂ ಆದ ಪ್ರತಿನಿಧಿಗಳನ್ನು ಆರಿಸಲು ಅನುಕೂಲವಾಗುವಂತೆ, ಕಾಂಗ್ರೆಸ್ ಟಿಕೇಟಿಗಾಗಿ ಕಾಪು ಮತದಾರ ಕ್ಷೇತ್ರದಿಂದ ಎಸೆಂಬ್ಲಿ ಸ್ಥಾನಕ್ಕೆ ಅರ್ಜಿ ಸಲ್ಲಿಸಿದ್ದ ಜಿಲ್ಲಾ ಕಾಂಗ್ರೆಸ್ಸಿನ ಅಧ್ಯಕ್ಷ ಶ್ರೀ ಟಿ. ಎ. ಪೈಯವರು ತಮ್ಮ ಅರ್ಜಿಯನ್ನು ಹಿಂದಕ್ಕೆ ಪಡೆಕೊಳ್ಳುವುದಾಗಿಯೂ, ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲವಾಗಿಯೂ ಪ್ರಕಟಿಸಿದ್ದಾರೆ.

೧೪ ಪಟ್ಟಣ ಮೊಗವೀರ ಮಹಾಜನ ಸಭೆ— ಇವರು ಪಾನನಿರೋಧನನ್ನು ಜಯಶೀಲಗೊಳಿಸುವ ಜಾಗೂ ಸಮಾಜ ಸುಧಾರಣೆಯ ಪ್ರಯೋಜನವು ಸಂಘದ ಸದಸ್ಯರೆಲ್ಲರಿಗೆ ಸಿಗುವ ಮತ್ತು ಪಾನ ನಿರೋಧ ಜಿಲ್ಲೆಯಲ್ಲಿ ಸರಕಾರಕ್ಕೆ ಸಂಪೂರ್ಣ ಬೆಂಬಲ ನೀಯುವ ನಿರ್ಣಯವನ್ನು ಸಂಘದ ಅಧ್ಯಕ್ಷ ಶ್ರೀ ಎಮ್. ಕೃಷ್ಣಪ್ಪ ಸಾಹುಕಾರ್ ಮತ್ತು ಉಪಾಧ್ಯಕ್ಷ ಶ್ರೀ ಎಮ್. ಕೆ. ಕಾಂತಪ್ಪ ರವರ ಪ್ರಭಾವಶಾಲಿ ಮಾರ್ಗದರ್ಶನದಲ್ಲಿ ನಿರ್ಣಯಸಲಿದ್ದಾರೆ.

ಹೊಸ ಪತ್ರಿಕೆಗಳ ಉದ್ಘಾಟನೆ— ಮಂಗಳೂರಿನಿಂದ ಹೊಸತಾಗಿ ಆರಂಭವಾಗಿರುವ 'ಜ್ಞಾನ ಪ್ರಸಾರ' ಮಾಸಪತ್ರಿಕೆಯ ಉದ್ಘಾಟನೆಯು ಶ್ರೀ ಕೆ. ಕೆ. ಶೆಟ್ಟಿ ಎಂ. ಎಲ್. ಸಿ. ಇವರ ಅಧ್ಯಕ್ಷತೆಯಲ್ಲಿ ಎಡ್ವೊಕೇಟ್ ಶ್ರೀ ಎ. ಶಂಕರಾಳ್ವರಿಂದಲೂ, ಮುಸ್ಲಿಂ ಯಂಗ್ ಮೆನ್ಸ್ ಎಸೋಸಿಯೇಶನ್ ಇದರ ಆಶ್ರಯದಲ್ಲಿ 'ದಿವ್ಯವಾಣಿ' ಎಂಬ ಪಾಕ್ಷಿಕ ಪತ್ರಿಕೆಯ ಉದ್ಘಾಟನೆಯು ಸುರತ್ಕಲ್ ಇಂಜಿನಿಯರಿಂಗ್ ಕಾಲೇಜಿನ ಕೆಮಿಸ್ಟ್ರಿ ಪ್ರೊಫೆಸರ್ ಶ್ರೀ ಮೊಹಿದ್ದೀನ್ ಆರ್. ಗಜೇಂದ್ರಗಡ ಇವರ ಅಧ್ಯಕ್ಷತೆಯಲ್ಲಿ ಶ್ರೀ ಎಸ್. ಮುಕುಂದ ರಾವ್, ಎಮ್. ಎಲ್. ಸಿ. ಇವರಿಂದಲೂ ಇತ್ತೀಚೆಗೆ ಜರಗಿದವು.

ಗೌರವ ಮೆಜಿಸ್ಟ್ರೇಟರುಗಳ ನೇಮಕ—ಮೈಸೂರು ಸರಕಾರದವರು ರಾಜ್ಯದಾದ್ಯಂತ ತಾಲೂಕಿಗೊಬ್ಬರಂತೆ ಗೌರವ ಮೆಜಿಸ್ಟ್ರೇಟರ ನೇಮಕ ಮಾಡಿದ್ದು ದ. ಕ. ಜಿಲ್ಲೆಯಲ್ಲಿ ಈ ಮಹಾನಾಯರನ್ನು ಆಸ್ಥಾನಕ್ಕೆ ನೇಮಿಸಿರುವರು ಮಂಗಳೂರು ಶ್ರೀ. ಕೆ. ವಿಠ್ಠಲನಾಥ ಕಾಮತ್, ಉಡುಪಿ ಶ್ರೀ. ಬಿ. ಎಲ್. ವೆನ್. ರೈ, ಕುಂದಾಪುರ ಶ್ರೀ. ಪ್ರಭಾಕರ ಎಸ್. ತೋಳಾರ್, ಕಾರ್ಕಳ ಶ್ರೀ ಕೆ. ಸಿ. ಮುಕುಂದ ಪ್ರಭು, ಬೆಳ್ತಂಗಡಿ ಶ್ರೀ. ಬ್ರಹ್ಮಯ್ಯ ಮಲ್ಲ, ಬಂಟ್ವಾಳ ಡಾ. ಎಂ. ಎಸ್. ಹೆಗ್ಡೆ, ಪುತ್ತೂರು, ಶ್ರೀ. ಬಿ. ಪ್ರಭಾಕರರಾವ್.

[೬ನೇ ಪುಟದಿಂದ]

ಪ್ರಥಮ ಪಾಠಶಾಸ್ತ್ರವಿರುವುದೆ. ಆತನು ಕೊಂಡುಕೊಳ್ಳಲು ಸಿದ್ಧನಿದ್ದರೆ, ಜಮೀನಿನ ಬೆಲೆಯ ಬಗ್ಗೆ ವಿವಾದ ಉಂಟಾದರೆ, ನ್ಯಾಯಾಲಯ ನಿರ್ಧರಿಸಿದ ಹಣವನ್ನು ಗೇಣಿದಾರನು ನ್ಯಾಯಾಲಯದಲ್ಲಿ ಗೊತ್ತುಪಡಿಸಿದ ಅವಧಿಯಲ್ಲಿ ರೇವಣಿ ಇರಬೇಕು.

ಪರಿಹಾರ

ಚಿಕ್ಕ ಹಿಡುವಳಿದಾರರಿಗೆ ಒಟ್ಟು ಉತ್ಪನ್ನದಲ್ಲಿ ಕಂದಾಯಗಳೆದುಳಿಯುವ ಹಣದ ಇಪ್ಪತ್ತು ಪಾಲುಪನ್ನೂ ಉಳಿದವರಿಗೆ ಹದಿನೈದರಷ್ಟು ಪರಿಹಾರವು ದೊರೆಯುವುದು.

ಧಾರ್ಮಿಕ ಸಂಸ್ಥೆಗಳು

ಧಾರ್ಮಿಕ ಸಂಸ್ಥೆಗಳ ಆದಾಯದಲ್ಲಿ ಕಡಿಮೆಯಾಗದಂತೆ ಅವುಗಳಿಗೆ ಭೂಮಿಯಿಂದಇಮವರೆಗೆ ದೊರೆಯುತ್ತಿರುವಷ್ಟೇ ಹಣವನ್ನು ಸಹಾಯರೂಪವಾಗಿ ಸರಕಾರವೇ ನೀಡುವುದರಿಂದ, ಅವುಗಳಿಗೆ ವಿನಾಯಿತಿಯ ಪ್ರಶ್ನೆ ಅನ್ವಯಿಸುವುದಿಲ್ಲ. ಇದರಿಂದ ಅವುಗಳ ಆಯದಲ್ಲಿ ಯಾವ ವ್ಯತ್ಯಾಸವೂ ಆಗುವುದಿಲ್ಲ. ಅವುಗಳು ತಮ್ಮ ಕರ್ತವ್ಯಗಳನ್ನು ಮುಂದುವರಿಸಿಕೊಂಡು ಹೋಗಲು ಸಾಧ್ಯವಾಗುವುದು.

ನವಯುಗ ವಾರ ಪತ್ರಿಕೆಗೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ

ಜನತೆಯ ದೃಢ ವಿಶ್ವಾಸ

11ನೇ ಸೆಪ್ಟೆಂಬರ್, 1961ರಿಂದ

ದಿ ಟ್ರಿವೇಂಡ್ರಮ್ ಪರ್ಮನೆಂಟ್ ಬ್ಯಾಂಕ್ ಲಿಮಿಟೆಡ್

ಇದರ ಆರಿಸಿ ತೆಗೆದ ಮೂಲಗಳನ್ನು **ಕೆನರಾ ಬ್ಯಾಂಕ್** ಪಡೆಕೊಂಡಿದೆಯಲ್ಲದೆ, ಆ ಬ್ಯಾಂಕಿನ ಠೇವಣಾತಿದಾರರಿಗೆ ಆ ಬ್ಯಾಂಕ್ ಸಲ್ಲಿಸಬೇಕಾದ ಹಣಕಾಸಿನ ಸಂಪೂರ್ಣ ಹೊಣೆಗಾರಿಕೆಯನ್ನು ಸಹ ವಹಿಸಿಕೊಂಡಿರುತ್ತದೆ.

ಇದರ ಮೊದಲು ಈ ಕೆಳಗಿನ ಬ್ಯಾಂಕುಗಳು ಅಂದರೆ —

ಬ್ಯಾಂಕ್ ಆಫ್ ಕೇರಳಾ ಲಿಮಿಟೆಡ್, ಟ್ರಿವೇಂಡ್ರಮ್
ಸೀಸಿಯಾ ಮಿಡ್‌ಲ್ಯಾಂಡ್ ಬ್ಯಾಂಕ್ ಲಿಮಿಟೆಡ್, ಆಲಪ್ಪೆ'
ಜಿ. ರಘುನಾಥ್‌ಮಲ್ ಬ್ಯಾಂಕ್ ಲಿಮಿಟೆಡ್,
ಹೈದರಾಬಾದ್,

ಇವುಗಳು ಬ್ಯಾಂಕಿಂಗ್ ಕಂಪೆನಿಗಳ ಆಕ್ಟಿನ ಸೆಕ್ಷನ್ 45ರ ಅನ್ವಯ ಈಗಾಗಲೇ ಕೆನರಾ ಬ್ಯಾಂಕ್ ಲಿಮಿಟೆಡ್ ಇದರೊಂದಿಗೆ ಸಮಾವೇಶಗೊಂಡಿವೆ.

ಹೀಗೆ ನಮ್ಮ ದೇಶದ ಬೇಂಕಿಂಗ್ ಉದ್ದಿಮೆಯನ್ನು ಸ್ಥಿರಗೊಳಿಸಲು, ಅದೆಷ್ಟು ಚಿಕ್ಕ ರೀತಿಯಲ್ಲಾದರೂ, ಈ ಪಾತ್ರವನ್ನು ವಹಿಸಲು ಕೆನರಾ ಬ್ಯಾಂಕ್ ಸಂತೋಷಪಡುತ್ತದೆ. ಜನತೆಯ ದೃಢ ವಿಶ್ವಾಸ ಹಾಗೂ ನಿರಂತರ ಪ್ರೋತ್ಸಾಹ ಕೆನರಾ ಬ್ಯಾಂಕಿಗೆ ಈಯೆಲ್ಲಾ ಕಾರ್ಯ ಸಿದ್ಧಿಯನ್ನು ಸಾಧ್ಯಗೊಳಿಸಿವೆ.

ಈ ಸಂದರ್ಭದಲ್ಲಿ, ಕೆನರಾ ಬ್ಯಾಂಕ್ ತನ್ನ ಸಮಸ್ತ ಮಿತ್ರರನ್ನೂ, ಹಿತೈಷಿಗಳನ್ನೂ, ಪೋಷಕರನ್ನೂ, ಈ ದೃಢ ವಿಶ್ವಾಸಕ್ಕಾಗಿ ಮತ್ತು ಸತತ ಬೆಂಬಲಕ್ಕಾಗಿ ಅಭಿನಂದಿಸುತ್ತದೆ. ಸಮಾವೇಶಗೊಂಡ ಬ್ಯಾಂಕುಗಳ ಹೊಸ ಠೇವಣಿದಾರರನ್ನೂ, ಗ್ರಾಹಕರನ್ನೂ, ನೌಕರ ವರ್ಗದವರನ್ನೂ, ಸ್ವಾಗತಿಸಲು ಕೆನರಾ ಬ್ಯಾಂಕ್ ಅತ್ಯಾನಂದಪಡುತ್ತದೆ

ವಿಪುಲವಾದ ಮೂಲಗಳು, ಸತ್ಸಂಪ್ರದಾಯ ಮತ್ತು ಅನುಭವ ಸಂಪನ್ನತೆಯಿಂದ ಕೆನರಾ ಬ್ಯಾಂಕ್ ತನ್ನ ಹೊಸ ಗ್ರಾಹಕರಿಗೆ ದೇಶ ಮತ್ತು ವಿದೇಶಗಳೆರಡರ ವ್ಯಾಪಕ ಬ್ಯಾಂಕಿಂಗ್ ಸೇವೆಯನ್ನು ಸಲ್ಲಿಸುತ್ತದೆ.

ಕೆನರಾ ಬ್ಯಾಂಕ್ ಲಿಮಿಟೆಡ್

(ಸ್ಥಾಪನೆ: 1906)

—: ಈಗ 115 ಶಾಖೆಗಳ ವಿಶಾಲ ವ್ಯಾಪಕ :—

ಪುಸ್ತಕ ವಿಮರ್ಶೆ

[ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿ ವಿನಂತಿ —ಸಂ. ನ.]

ಶ್ರೀ ಆದಿ ಚುಂಚನಗಿರಿ:(ಜನಪದ ಗೀತೆಗಳು)ಸಂಪಾದಕರು: ಕ. ರಾ. ಕೃ. ಪ್ರಕಾಶಕರು: ಜನಪದ ಸಾಹಿತ್ಯ ಅಕಾಡೆಮಿ, ಮೈಸೂರು. ಸುಟಗಳು: ೩೨+೨೬೪. ಬೆಲೆ: ಸಾದಾಪ್ರತಿ ರೂ ೫=೦೦; ಉತ್ತಮಸ್ಥಿರೂ. ೫=೨೫.

ಕಾರ್ಯೂಸಾಧಕರೂ ಜನಪದ ಸಾಹಿತ್ಯ ಸಾಗರ ಸ್ನಾತರೂ ಉತ್ಸಾಹಿಗಳೂ ಆಗಿರುವ ಶ್ರೀ ಕ. ರಾ ಕೃ.ರವರು, ಅಂಬಿಗರಗಂಗ"ವೇ ಮೊದಲಾದ ಹಲವಾರು ಜನಪದ ಗೀತ ಸಂಗ್ರಹಗಳಿಂದ ಕನ್ನಡಿಗರ ಚಿರಪರಿಚಿತರಿದ್ದಾರೆ. ಅವರ ಜನಪದ ಕಥನ ಗೀತೆಗಳ"ಂತೆಯೇ "ಆದಿಚುಂಚನ ಗಿರಿ"ಯೂ ಒಂದು ಬೃಹತ್ ಸಂಗ್ರಹ. ಶ್ರೀಯುತರು ಜನಪದ ಸಾಹಿತ್ಯ ಸಂಗ್ರಹದಲ್ಲಿ ತಳೆದಿರುವ ಆಸಕ್ತಿ ಮತ್ತು ಶ್ರದ್ಧೆಗಳಿಗೊಂದು ಜ್ವಲಂತ ನಿದರ್ಶನ. ಆದಿಚುಂಚನಗಿರಿಯಲ್ಲಿ ನೆಲೆಸಿಂತ ಭೈರವನನ್ನು ಕುರಿತಾಗಿ ಆಸಾಪಾಸಿನ ಹಲವಾರು ಹಳ್ಳಿಗರು ಮುಕ್ತಕಂಠದಿಂದ ಹಾಡಿ ನಲಿದು ಸಂತಸದಾಳುವ ಮೂವತ್ತುನೂರು ಗೀತೆಗಳು, ಜತೆಯಲ್ಲಿ ಜನಪದ ಸಾಹಿತ್ಯವನ್ನು ಕುರಿತು ೨೧೦ ಪ್ರಬಂಧಗಳು ಹಾಗೂ ಗಿರಿಗೆ ಸಂಬಂಧಿಸಿದ ೧೫ ವರ್ಣರಂಜಿತ ಚಿತ್ರಗಳು ಒಂದಾಗಿ ಕನ್ನಡಿಗರ ಮುಂದೆ ಬಂದಿವೆ. ಶ್ರೀ ಆದಿಚುಂಚನ ಗಿರಿ ಮಂಡ್ಯ ಜಿಲ್ಲೆಯ ನಾಗಮಂಡಲ ತಾಲೂಕಿನಲ್ಲಿದೆ. ಇದು ಪ್ರಕೃತಿ ಮನೋರಮೆಯ ತವರೂರು ಎಂಬುದನ್ನು ನಾವು ತಿಳಿದುಕೊಂಡರೆ, ಅಂತಹ ನಿಸರ್ಗ ಸುಂದರಗಿರಿಯಲ್ಲಿ "ಅಲ್ಲವ ನಿಲ್ಲವ ಎಲ್ಲೆಲ್ಲಾ ಅವನೋ" ಆದ ಭೈರುವ ಭೂರಮೆಯ ಸೌಂದರ್ಯ ರಸಾಸ್ವಾದನೆಗಾಗಿ ಬಂದು ನಿಂತಿರೂ ಆಶ್ಚರ್ಯವಿಲ್ಲ.

ಇಲ್ಲಿ ಕಾಣುವ ಎಲ್ಲ ಗೀತೆಗಳಲ್ಲಿಯೂ ಶ್ರೀ ಆದಿಚುಂಚನ ಗಿರಿ ಕ್ಷೇತ್ರದ ಮಹಾತ್ಮೆಯನ್ನೂ ಅಲ್ಲಿ ನೆಲೆ ನಿಂತ ಆದಿ ಭೈರುವ ಸ್ವಾಮಿಯ ಅತಿಶಯ ಮಹಿಮೆಯನ್ನೂ ನಿರೂಪಿಸಲಾಗಿದೆ ಭಕ್ತರು ಮುಗ್ಧರಾಗಿ ಪರಮಾತ್ಮನನ್ನು ಪ್ರಾರ್ಥಿಸುತ್ತಾರೆ, ಆರ್ತರಾಗಿ ಹುಯ್ಯಲಿಡುತ್ತಾರೆ, ಭೈರುವ ತಮಗೊಲಿದನೆಂದು ಆನಂದ ತುಂದಿಲರಾಗುತ್ತಾರೆ; ಶ್ರದ್ಧಾವನತರಾಗುತ್ತಾರೆ. ಭೈರುವನಾದರೂ ಭಕ್ತರ ಭಕ್ತಿಯಿಂದ ತಲೆದೂಗುತ್ತಾನೆ.

ಪಾರ್ವತಿ ಮಾಡಿದ ಅಡಿಗೆ ಬೇವಿನ ವಿಷವಾದೊ ಕುರುಬತಿ ಮಾಳಿ ಅಟ್ಟಡಿಗೆ | ಭೈರಗೆ
ಹೆಚ್ಚಾಳ ಉಂಟು ಮನಸಿಗೆ ||

ಪರಮಾತ್ಮ ಭಕ್ತ ಜನರ ಭಕ್ತನು. ತನ್ನ ಭಕ್ತರ ಆಪತ್ತಿಯಲ್ಲಿ ಅವರನ್ನು ಸಂರಕ್ಷಿಸುವವನು. ಭಕ್ತ ಜನರು ಇತ್ತುದನ್ನು ಮನಸ್ಸಂತೋಷದೊಡನೆಸ್ವೀಕರಿಸಿತಿಂದು ತೇಗುವವನು. ಕುಚೇಲನಿತ್ತ ಹುಡಿಯುವಲಕ್ಕಿಯನ್ನೂ ಶಬರಿಯಿತ್ತ ಎಂಜಲು ಬುಗರಿಯನ್ನೂ ಸವಿದುಂಡ ಅತನಿಗೆ ಪಾರ್ವತಿ ಮಾಡಿದ ಅಡುಗೆಗಿಂತ ಕುರುಬತಿ ಮಾಡಿದ ಅಡುಗೆ ಮನಸಿಗೆ ಹೆಚ್ಚಳವೆನಿಸಿದರೆ ಆಶ್ಚರ್ಯವಿಲ್ಲ.

ಕೆರೆಯಲ್ಲಿ ಮಡಿ ಮಾಡಿಕೊಂಡು ಬಂದ ಭೈರುವನನ್ನು ಸ್ತುತಿಸುವ ಕೋಲಾಹಲವನ್ನು ನೋಡಿರಿ. ಭೈರುವ ಜೋಗಿ ದೇವ ಕಾವೇರಿಸ್ನಾನವ ಮಾಡ ಕಾವಿಕಾದಂಬ್ರ ಮಡಿನುಟ್ಟು ಬರುತಿದ್ದಾರೆ. ಅವರಿಗೆ ಕೂಡಲು ಮಂಚ ಹಾಕೆಂದು ಮಗಳಿಗೆ ತಾಯಿ ಹೇಳಿ,ಅತನನ್ನು ಸತ್ಕಾರಮಾಡಲು ಹೇಳುತ್ತಾಳೆ.

ಗದ್ದುಗೆ ವೇಲೆ ಕೂತರು ಗಂಗಾಧರ
ಎದ್ದು ಬಾರಮ್ಮ ಹೆಣ್ಣುನುಗಳೇ !
ಭೈರುವದೇವರ
ಮುದ್ದು ಪಾದವ ತೊಳೆಯಮ್ಮ ||

ಪಾದ ಪ್ರಕ್ಷಾಳನ ಮಾತ್ರ ಸಾಲದು; ವಿಭೂತಿ ಧರಿಸಿ ಮಲ್ಲಿಗೆ ಹೂವ ಮುಡಿಸಬೇಕು, ಗುರುವಿನ ಪದಕೆ ಶರಣೆನ್ನ ಬೇಕು—ಆತ್ಮ ಸಮರ್ಪಣಗೆಯ್ಯ ಬೇಕು. ಆಗತಾನೇ ಭಕ್ತಿಯ ಫಲಾಸ್ವಾದನೆ ಮಾಡ ಬಹುದು.

ಇದೇ ರೀತಿಯಲ್ಲಿ ಪ್ರತಿಗೀತೆಯೂ ಹೃದ್ಯವಾಗಿರುವುದರಿಂದ, ಇನ್ನೂ ಹಲವಾರು ಸನ್ನಿವೇಶಗಳ ಪರಿಚಯ ಮಾಡಿಕೊಡುವುದು ಅಗತ್ಯ ಆದರೆ, ಅವಕಾಶಾಭಾವದಿಂದ ದಿಗ್ದರ್ಶನ ರೂಪದಲ್ಲಿ ಮಾತ್ರ ವೇಲಿನ ಸನ್ನಿವೇಶಗಳನ್ನು ಎತ್ತಿ ತೋರಿಸಿದ್ದೇವೆ. ಭಕ್ತರ ಮನಸ್ಸಿನ ವಿಶುದ್ಧ ಭಾವ—ಮತ್ತದರ ಕೋಮಲತೆ, ಮೋಹನತೆ ಹಾಗೂ ಮುಗ್ಧತೆಗಳು ಪಾಠಕ—ಗಾಯಕರ ಕಣ್ಣುಗಳ ಸಮ್ಮುಖದಲ್ಲಿ ಭೈರುವನನ್ನು ತಂದು ನಿಲ್ಲಿಸುತ್ತವೆ. ಮುಗ್ಧ ಭಾವಕ್ಕೆ ಹೊಂದಿಕೊಳ್ಳುವ ಬೆಡಗು ಬನ್ನಾಣಗಳಿಂದ ದೂರವಾಗಿ ಸರಳ ಲಲಿತ ಹೃದ್ಯ ಶೈಲಿ, ಪ್ರಾಸಾನು ಪ್ರಾಸದ ಮೋಡಿ, ಲಯದ ಬೆಡಗು ಇವು ಗೀತೆಗೆ ವಿಶೇಷ ಮೆರಗನ್ನಿತ್ತಿವೆ. ಸಹೃದಯ ಹೃದಯಸ್ಪರ್ಶಿಯಾಗಿಸಿವೆ. ನಿರಾಡಂಬರ ಸುಂದರವಾದ ಜನಪದ ಗೀತೆಗಳ ಅತುಲ್ಯ ಶಕ್ತಿಯ ಪರಿಚಯವನ್ನು ಸಹೃದಯರಿಗೆ ಮಾಡಿಕೊಡುತ್ತವೆ.

ತೋರಿಕೆಯ ಮಟ್ಟಿಗೆ ಇಲ್ಲಿ ಸಂಗ್ರಹಿಸವಾಗಿರುವ ಎಲ್ಲ ಗೀತೆಗಳೂ ಆದಿ ಚುಂಚನಗಿರಿಯ ಭೈರುವನನ್ನು ಕುರಿತುದೇ ಆದರೂ, ವಾಸ್ತವಿಕವಾಗಿ, ನವವಿಧ ಭಕ್ತಿಯ ಗೀತೆಗಳೇ ಇವು. ಪರಮಾತ್ಮನನ್ನು ಹೇಗೆ ಕರೆದರೂ ಹಾಡಿದರೂ ಆತ ಸಂತೃಪ್ತನೆಂಬುದರಿಂದ ಭಕ್ತಿಭಾವದ ಹೊನಲನ್ನು ಹರಿಸುವ ಈ ಗೀತೆಗಳನ್ನು ಓದುವುದು ಸಂತೋಷ. ಹಾಡಿ ನಲಿಯುವುದು ಪರಮ ಸಂತೋಷ. ಗುಂಪುಕಟ್ಟಿ ಹಾಡಿ ಕುಣಿಯುವುದು ಬ್ರಹ್ಮಾನಂದ ಸದೃಶ. ಶ್ರೀ ಕ. ರಾ. ಕೃ.ರವರು ಇಂತಹ ಅವಕಾಶವನ್ನು ಕನ್ನಡಿಗರಿಗೆ ಮಾಡಿಕೊಟ್ಟಿದ್ದಾರೆ; ಅದರ ಸದುಪಯೋಗವನ್ನು ಮಾಡಿಕೊಳ್ಳಲು ನಾವು ಹಿಂಜರಿಯಬಾರದು.

ಗೀತೆಗಳೊಡನೆ ಜನಪದ ಸಾಹಿತ್ಯದಲ್ಲಿ ಆಸಕ್ತಿ ಕೆರಳಿಸುವ ಮುಖ್ಯವಾಗಿ 'ಜೇಶಂಪ"ರ ಲೇಖನಗಳು, ಕಠಿನ ಪದಾರ್ಥಗಳು ಪುಸ್ತಕದ ಉಪಯುಕ್ತತೆಯನ್ನು ಹೆಚ್ಚಿಸಿದ್ದರೆ, ಆದಿ ಚುಂಚನಗಿರಿಯ ರಮಣೀಯಕ ಚಿತ್ರಗಳು ಮನ ಚೇತೋಹಾರಿಗಳಾಗಿದ್ದು ಪುಸ್ತಕದ ಮಾಲ್ಯವನ್ನು ಹೆಚ್ಚಿಸಿವೆ. ಕ. ರಾ. ಕೃ. ಮತ್ತು ಜನಪದ ಸಾಹಿತ್ಯ ಅಕಾಡೆಮಿಯ ಸ್ತುತ್ಯ ಕಾರ್ಯಸಾಧನೆ ಇತೋಪ್ಯತಿಶಯವಾಗಿ ಬೆಳೆಯಬೇಕು; ಅದಕ್ಕೆ ಸೂಕ್ತ ಪ್ರೋತ್ಸಾಹ ಕನ್ನಡ ಜನತೆಯಿಂದ ಲಭಿಸುವಂತಾಗಬೇಕು.

—ಗೋರಾ.

(೧೦ನೇ ಪುಟದಿಂದ)

ತಾಗಿಸಿದರೆಂದರೆ, ಅದು ಬಹುದೊಡ್ಡ ಇಂದ್ರಜಾಲವೇ ಸರಿ.

ನಾಲ್ಕು ದಿನಗಳಲ್ಲಿ ಏಳು ಗಂಟೆಗಳ ಕಾಲ ಅಣ್ವಸ್ತ್ರ ಪ್ರಯೋಗ ಮತ್ತು ಅಂತರಾಷ್ಟ್ರೀಯ ಸಮಸ್ಯೆಗಳ ಕುರಿತು ಮಾತುಕತೆ ನಡೆದರೂ ಪ್ರಧಾನಿ ನೆಹರೂ ಹೃದಯಾಂತರಾಳದಿಂದ ಅಣ್ವಸ್ತ್ರ ಪ್ರಯೋಗ ಪ್ರತಿಬಂಧನವನ್ನು ಬೆಂಬಲಿಸಿದರೂ ಕ್ರುಶ್ಚೇವರು ಅಣ್ವಸ್ತ್ರ ಪ್ರಯೋಗ ಪುನರಾರಂಭದ ನಿರ್ಧಾರದಲ್ಲಿ ದೃಢವಾಗಿದ್ದರು—ಆದರೂ ಯುದ್ಧ ಪ್ರಾರಂಭವಾಗುವಂತಹ ಏಕ ಪಕ್ಷೀಯ ಕಾರ್ಯ ಕೈಗೊಳ್ಳಬಾರದು ಎಂದುದಕ್ಕೆ ತಲೆ ಬಾಡಿಸಿದರು.

• ನಗೆ ಹನಿ •

ಬರೆಯಲು ಮಾತ್ರ...

ಒಂದುದಿನ ಬರ್ನಾರ್ಡ್ ಶಹರು ತಮ್ಮೊಬ್ಬ ಚೀನೀ ಮಿತ್ರನೊಡನೆ ಹೇಳಿದರು, "ವೇಂಗ್, ನಾನು ಚೀನೀ ಭಾಷೆ ಬರೆಯುವುದನ್ನು ಕಲಿತುಕೊಂಡೆ".

ವೇಂಗನು ವಿಸ್ಮಯ ಚಕಿತನಾಗಿ ಹೇಳಿದನು: "ಎಲ್ಲಿ, ಚೀನಿಯಲ್ಲಿ ಬರೆದು ತೋರಿಸಿರಿ ನೋಡೋಣ".

ಶಹರು ಒಂದು ಪತ್ರದಲ್ಲಿ ನಾಲ್ಕಾರು ಅಡ್ಡತಿಡ್ಡ ಗೀಟುಗಳನ್ನು ಎಳೆದು 'ನೋಡು' ಎಂದರು. ಅವನ್ನು ಕಂಡು ವೇಂಗನಿಗೆ ನಗು ಬಂತು. ಅದರೂ ಅದನ್ನು ತಡೆದು ಹೇಳಿದನು: "ಸರಿ, ಈಗ ನೀವು ಬರೆದುದನ್ನು ಒಂದು ಬಾರಿ ಓದಿ ಹೇಳಿರಿ".

ಆಗ ಶಹರು ಗೊಳ್ಳೆಂದು ನಗುತ್ತ ಉತ್ತರಿಸಿದರು: "ಮಿತ್ರ, ನನಗೆ ಚೀನೀ ಭಾಷೆ ಬರೆಯಲು ಮಾತ್ರ ಗೊತ್ತು. ಓದಲೆಲ್ಲಿಂದ ಬರಬೇಕು?"

ಇಬ್ಬರು ಮಿತ್ರರೂ ಹೊಟ್ಟೆ ಹುಣ್ಣಾಗುವಷ್ಟು ನಕ್ಕರು.

ಅನುಭವದ ಪಾಠ

ಒಬ್ಬನು ತನ್ನ ಮಿತ್ರರೊಡನೆ ಪರಮಾತ್ಮನಲ್ಲಿ ಅಚಲ ವಿಶ್ವಾಸವಿದೆ ಎಂದು ಹೇಳಿ, ತಾನೊಂದು ಕೊಟ್ಟರೆ, ಆತ ಎರಡನ್ನು ಕೊಡುತ್ತಾನೆ ಎಂದು ತನ್ನ ಅನುಭವವನ್ನು ಹೇಳುತಿದ್ದನು. "ಕೆಲದಿನಗಳಿಗೆ ಮೊದಲು ನಾನು ಒಂದು ನಡೆಯದ ನಾಣ್ಯವನ್ನು ದಾನಮಾಡಿದೆನು. ಮರುದಿನ ನನಗೆ ಒಂದರ ಬದಲು ಎರಡು ಅಂತಹ ನಾಣ್ಯಗಳು ಸಿಕ್ಕುವು. ತನ್ನ ಕಸ್ಮೆಯನ್ನೊಬ್ಬನಿಗೆ ದಾನ ಮಾಡಿದೆ; ಕೆಲವೇ ತಿಂಗಳುಗಳೊಳಗೆ ಅವಳು ತನ್ನ ಪತಿಯೊಡಗೂಡಿ ನಮ್ಮಲ್ಲಿಯೇ ಖಾಯಂ ನೆಲೆ ನಿಲ್ಲಲು ಬಂದು ಕುಳಿತಳು."

ಬರೇ ಅವಸರ

ಒಬ್ಬ ಮನುಷ್ಯ ಸಿಟಿ ಬಸ್ಸು ಬಂದು ನಿಂತುದೇ ತಡ, ನುಗ್ಗಿ ನುಗ್ಗಿ ಒಳ ಹೋಗಲು ಪ್ರಯತ್ನಿಸುತಿದ್ದ. ಬಾಗಿಲ ಮುಂದೆ ನುಗ್ಗುತಿದ್ದ ಆತನನ್ನು ತಡೆದು ಕಂಡಕ್ಟರ ಹೇಳಿದ: "ತಡೆ"

ತಟಕ್ಕನೆ ಪ್ರವಾಸಿಯಿಂದ ಉತ್ತರ ಬಂತು: "ಹೆಣ್ಣೆರಡು ನಯೇ ಪೈಸೆ!"

ಕಟ್ಟಿಗೆ ತುಂಬಿಸಿದ್ದೇನೆ

ತಾಯಿ— ಸುಶೀಲಾ, ಅಡುಗೆ ಮನೆಯಲ್ಲಿ ಒಲೆ ಖಾಲಿ ಉರಿಯುತ್ತಿದೆ; ಏನಾದರೂ ಇಡು.

ಸುಶೀಲಾ— ಎಲ್ಲಮ್ಮಾ, ನಾನೀಗ ತಾನೇ ಕಟ್ಟಿಗೆ ತುಂಬಿಸಿಯೇ ಬಂದಿದ್ದೇನೆ.

ಅಪಥ್ಯವಾಯಿತು

ಡಾಕ್ಟರ್—ಸರಿ, ಇಂದು ನಿಮ್ಮ ತಂದೆಯ ಆರೋಗ್ಯ ಹೇಗಿದೆ?

ರಾಮು— ಡಾಕ್ಟರ್ ಜಿ, ತಮ್ಮ ಔಷಧದಿಂದಾಗಿ ನಿನ್ನೆ ಸಂಪೂರ್ಣ ರೋಗಗುಣವಾಗಿತ್ತು. ಗತಿಸಿದ ಆರೋಗ್ಯ ಮರಳಿತ್ತು. ಆದರೆ, ಇಂದು ಬೆಳಗ್ಗಿನಿಂದ ಮತ್ತೂ ಜೋರಾಗಿಬಿಟ್ಟಿದೆ.

ಡಾಕ್ಟರ್-ಹೌದೆ?, ಅದೇನು ಅಪಥ್ಯ ಮಾಡಿದಿರಿ?

ರಾಮು: ಸರ್, ಏನು, ಹೇಳಲಿತಾವೇ ಬಿಲ್ ಕಳಿಸಿ ಅಪಥ್ಯಮಾಡಿ ಬಿಟ್ಟಿರಿ.

ದಾನಶೂರ

ಅಮೆರಿಕೆಯ ಮಾಜಿ ಅಧ್ಯಕ್ಷ ಲಿಂಕನರ ಮೈತುಂಬ ಒಂದು ಬಾರಿ ಸಿಡುಬಿನ ಗುಳ್ಳೆಗಳೆದ್ದುವು. ಸ್ಪರ್ಶಭಯದಿಂದ ಯಾರೂ ಅವರ ಬಳಿ ಸುಳಿಯುತ್ತಿರಲಿಲ್ಲ. ಆಗ, ಅವರು ವಿನೋದಪೂರ್ಣರಾಗಿ ಅಂದರು: ಈಗ ಪರರಿಗೆ ಕೊಟ್ಟುಬಿಡುವ ನನ್ನ ಬಳಿಯಿದೆ; ಆದರೆ, ಅದನ್ನು ಕೊಂಡೊಯ್ಯಲು ಯಾರೂ ಬರುತ್ತಿಲ್ಲವಲ್ಲಾ!

(೨೫ನೇ ಪುಟದಿಂದ)

ಲ್ಕು ಹೆಜ್ಜೆ ನಡೆದೊಡನೆಯೇ ಎದೆ ನಡುಕವನ್ನನುಭವಿಸುವ ಮಹಾಪುರುಷ, ಇಂಜೆಕ್ಷನ್ನಿನ ಸೂಜಿ ಚುಚ್ಚಿದೊಡನೆಯೇ ಕಣ್ಣುಕತ್ತಲೆಗೆ ಗುರಿಯಾಗುವ ಗಂಡು ಮೊದಲಾದವರನ್ನು ಏನೆಂದು ಕರೆಯಬೇಕು? ಹಾಗೆಯೇ ಕೆಲವೊಂದು ಬಗೆಯ ಹೆಣ್ಣುಗಳಿರುತ್ತಾರೆ ಇವರನ್ನೂ ಹೇಗೆ ಅನ್ನಬೇಕು?

ಗಂಡಿರಲಿ ಹೆಣ್ಣಿರಲಿ ಅವರು ಇದ್ದಂತೆಯೇ ಇರಲಿ. ಯಾರು ಹೇಗಿಲ್ಲವೋ ಹಾಗೆ ಮಾತ್ರ ಎಂದಿಗೂ ಆಗಿ ಹೋಗದಿರಲಿ — ಎಂಬುದಿಷ್ಟೇ ಆಧುನಿಕ ಅಣುಯುಗದ ಜನಾಶಯ.

"ನಚಿಕೇತ"ರ
ಇನ್ನೊಂದು ನವೀನ ಕಾದಂಬರಿ—
ಯುಗ ಯಾತ್ರೆ
ಇದೀಗ ಪ್ರಕಟವಾಗಿದೆ.
ಬೆಲೆ ರೂ. 1-50 ನ. ಪೈಸೆ.
ಮೊದಲು ಪ್ರಕಟವಾದ ಕಾದಂಬರಿ—
ಭಾವಾರ್ಚನೆ
ಬೆಲೆ ರೂ. 1-25 ನ. ಪೈಸೆ.
ಪ್ರತಿಗಳು ಸಿಗುವ ಸ್ಥಳಗಳು:—
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.

ಕೋರ್ಟಿನ ಬಾಗಿಲ ಕಾದ ವಿನಾಯಕ

ದೇವರನ್ನೂ ಕದ್ದುಕೊಳ್ಳುವಷ್ಟು ಧೈರ್ಯಶಾಲಿಗಾದರೂ ಬಂದಿತ್ತು ಎಂದರೆ ಖಂಡಿತಕ್ಕೂ ನಂಬುವವರು ಇರಲಾರರು. ಆದರೆ, ಅಪಹೃತನಾದ ದೇವ ವಿನಾಯಕನೂ ನ್ಯಾಯಾಲಯದ ಬಾಗಿಲು ಕಾಯುವೇಕಾಗಿ ಬಂದ ಘಟನೆಯೊಂದು ಮದ್ರಾಸದಲ್ಲಿ ನಡೆಯಿತು. ಗಜ ಮುಖಗಣಪನು ನ್ಯಾಯಾಲಯದ ಮುಂದೆ ಕೆಲದಿವಸಗಳ ಮಟ್ಟಿಗೆ ಪೂಜೆ ಪುರಸ್ಕಾರಗಳಿಲ್ಲದೆ ಮೂಗು ಹಿಡಿದು ಕೂತುಕೊಳ್ಳ ಬೇಕಾಯಿತು.

ಶ್ರೀ ರಾಮನಿಕ್ಕಂ ಚೆಟ್ಟಿ ಎಂಬವರ ತಂದೆಯು ಹದಿನಾಲ್ಕು ವರ್ಷಗಳಿಗೆ ಮೊದಲು ಕೂವಮ್ ನದಿಯ ದಡದಲ್ಲಿ ವಿನಾಯಕ ಮಂದಿರವೊಂದನ್ನು ಕಟ್ಟಿಸಿ ಅದರಲ್ಲಿ ಇಪ್ಪತ್ತು ಅಂಗುಲ ಎತ್ತರದ ವಿನಾಯಕನ ಪ್ರತಿಮೆಯನ್ನು ಪ್ರತಿಷ್ಠಾಪಿಸಿದ್ದರು. ಕಳೆದ ವರ್ಷದ ವಿಪರೀತ ಮಳೆ — ನೆರೆಯ ಪರಿಣಾಮರೂಪವಾಗಿ ಕಟ್ಟಿಸಿದ್ದ ಮಂದಿರವು ಬಿದ್ದುಹೋಗಿತ್ತು; ಕೇವಲ ವಿನಾಯಕ ಪ್ರತಿಮೆ ಮಾತ್ರ ನದಿಯ ದಂಡೆಯಲ್ಲಿ ಉಳಿದಿತ್ತು. ಶ್ರೀ ರಾಮ ನಿಕ್ಕಂ ಚೆಟ್ಟಿಯವರು ಅದರ ಧರ್ಮಕರ್ತರಾಗಿದ್ದಾರೆ.

ಮೊನ್ನೆ ಆಗಸ್ಟ್ ೨೪ನೆಯ ದಿನ ಸಾಮಾನ್ಯ ಮಧ್ಯ ರಾತ್ರೆಯ ಸಮಯ ನಾಲ್ವರು ಒಂದು ರಿಕ್ಷವನ್ನು ಹಿಡಿದುಕೊಂಡು ನದೀ ತೀರಕ್ಕೆ ಬಂದರು. ಪೀಠದ ಮೇಲೆ ಮಂಡಿತವಾದ ವಿನಾಯಕ ಪ್ರತಿಮೆಯನ್ನು ಅಪಹರಿಸುವುದೇ ಅವರ ಉದ್ದೇಶವಿತ್ತು. ಅವರು ಪೀಠ ಸಹಿತ ಸುತ್ತಳಿಯನ್ನು ಕೆತ್ತು ರಿಕ್ಷದೊಳಗೆ ಇಟ್ಟರು. ಮೂರ್ತಿಯೂ ಪೀಠವೂ ಕಲ್ಲಿನವಾಗಿದ್ದುದರಿಂದ ಭಾರ ಹೆಚ್ಚಿತ್ತು. ರಿಕ್ಷಾ ಸ್ವಲ್ಪ ದೂರ ಗಮಿಸುವುದರಲ್ಲಿಯೇ ಭಾರದ ಕಾರಣದಿಂದ ಮುರಿಯಿತು. ಅಷ್ಟರಲ್ಲಿಯೇ ಮೂರ್ತಿಯನ್ನು ಕೆತ್ತುದ ತಿಳಿದ ಇಬ್ಬರು ಸ್ಥಳೀಯರು ಕೂಗಾಡಿದರು ಇದರಿಂದ ನೆರೆಹೊರೆಯ ಕೆಲವರು ಗುಂಪು ಸೇರಿದರು. ಕಳ್ಳತನ ಮಾಡಿದವರನ್ನೂ ರಿಕ್ಷವನ್ನೂ ತಡೆದರು. ದೇವಾಲಯದ ಧರ್ಮಕರ್ತ ಚೆಟ್ಟಿಯವರಿಗೆ ಜನ ಹೋಯಿತು. ಅವರು ಕೂಡಲೇ ಆಗಮಿಸಿದರು. ಪೋಲೀಸರಿಗೆ ಸುದ್ದಿಯನ್ನು ಮುಟ್ಟಿಸಿ ಅವರನ್ನು ಕರೆತರಲಾಯಿತು. ಆ ಪಾದಿತರನ್ನು ಬಂದ ಪೋಲೀಸರು ಬಂಧಿಸಿ ನ್ಯಾಯಾಲಯದ ಮುಂದೆ ಹಾಜರು ಪಡಿಸಿದರು.

ವಿಚಾರಣೆಯ ಸಮಯದಲ್ಲಿ ಇನ್ನೂ ಸ್ವಾರಸ್ಯದ ಸಂಗತಿ ತಿಳಿದು ಬಂತು. ಆ ಪಾದಿತರು ಮೂರ್ತಿಯ ಚೋರಿಗೆ ಸುಮ್ಮನೆ ಕೈಹಾಕಿರಲಿಲ್ಲ. ಇವರು ತಮ್ಮ ವರಾರದಲ್ಲಿಯೇ ಒಂದು ದೇವ ಮಂದಿರವನ್ನು ಕಟ್ಟುತ್ತಿರುವರಂತೆ. ಇದರಲ್ಲಿ ಸ್ಥಾಪನೆ ಮಾಡುವುದಕ್ಕೆ ಒಂದು ಮೂರ್ತಿಯ ಅವಶ್ಯಕತೆಯಿತ್ತು. ಅಪಾದಿತರ ಹಿರಿಯರು, ಕದ್ದ ಮೂರ್ತಿಯನ್ನು ಪ್ರತಿಷ್ಠಾಪಿಸುವುದು ಪರಮ ಪವಿತ್ರವೆಂದೂ ಶುಭವೆಂದೂ ಅಭಿಪ್ರಾಯ ಪಟ್ಟ ಮೇರೆಗೆ, ಹಿರಿಯರ ಮಾತನ್ನು ನಡೆಸಿಕೊಡಲು ನದೀ ತಟದ ಈ ಮೂರ್ತಿಯನ್ನು ಕದಿಯುವ ಸಾಹಸಕ್ಕೆ ಕೈಹಾಕಿದರೆಂದು ಧರ್ಮಕರ್ತರಿಗೆ ತಿಳಿಸಿದರಂತೆ. ಮಾಡಿಲ್ಲದ ವಿನಾಕನನ್ನು ಮಾಡಿನಡಿಯಲ್ಲಿ ಕರೆಕಂದು ಕೂಡಿಸುವ ಅವರ ಭಕ್ತಿಯಿಂದಾಗಿಯೇ ಅವರು ಅಪರಾಧ ಮಾಡಿದ್ದರಲ್ಲದೆ ಬೇರಾವ ಕಾರಣವೂ ಇರಲಿಲ್ಲ.

ಆದರೆ, ಕಳ್ಳತನ ಕಳ್ಳತನವೇ ಆದುದರಿಂದ ಅವರ ಅಪರಾಧ ಸಿದ್ಧವಾಯಿತು. ಈ ನಾಲ್ವರೂ ಭಕ್ತ ಮಹಾಶಯರು ಎಂಬುದರಿಂದ, ಮುಂದೆಕ್ಕೆ ಇಂತಹ ಚೋರತನ ಗೆಯ್ಯುವುದಿಲ್ಲವೆಂಬುದಕ್ಕೆ ತಲಾ ರೂಪಾಯಿ ನೂರರ ದೃಢಪತ್ರಗಳನ್ನು ಬರೆದು ಕೊಟ್ಟು ಅವರು ಬಿಡುಗಡೆ ಹೊಂದಿದರು. ವಿನಾಯಕನಿಗೆ ಮಾಡುಕಾಣುವ ಯೋಗ ಕೈಗೆ ಬಂದರೂ ಬಾಯಿಗೆ ಬರಲಿಲ್ಲ. ಅತ ಮರಳಿ ಸ್ವಸ್ಥಾನ ಸೇರ ಬೇಕೆಂದು ನ್ಯಾಯಾಧಿಪತಿಗಳ ಆಜ್ಞೆ ಹೊರಟಿದೆ. ಇಷ್ಟರಲ್ಲಿಯೇ ಮಳೆ—ಚಳಿ—ಬಿಸಿಲು ಗಳಿಂದ ಒಂದು ವರ್ಷ ನವೆದ ವಿನಾಯಕ ಇನ್ನೂ ಅಲ್ಲಿಯೇ ಪ್ರಾಕೃತಿಕ ಸಂಕಷ್ಟ ಪರಂಪರೆಯನ್ನನುಭವಿಸುತ್ತಾ ತನ್ನ ದಿನ ದೂಡಬೇಕಾಯಿತು.

ದೇವರಾದರೇನು? ದಿಂಡರಾದರೇನು? ವಿನಾಯಕನೇ ಆದರೇನು? ಜನಸಾಮಾನ್ಯರ ನಡುವೆ ಸಿಕ್ಕಿಕೊಂಡಲ್ಲಿ ಆತನೂ ಜನರ ಅಧೀನದಲ್ಲಿರ ಬೇಕು. ಪರಮಾತ್ಮ ಭಕ್ತ ಜನರು ಕರೆದಲ್ಲಿ ಒಂದು ಅವರ ಇಷ್ಟಾರ್ಥವನ್ನು ಪೂರೈಸುವನೆಂಬ ಖ್ಯಾತಿಯನ್ನು ಪಡೆದವನಲ್ಲವೇ?

ಸ್ವರ್ಗಲೋಕವೆಂಬುದೇ ಇಲ್ಲ!

"ಸ್ವರ್ಗ ಲೋಕ ಮರ್ತ್ಯ ಲೋಕವೆಂಬುದು ಬೇರಿಲ್ಲ ಕಾಣಿರೋ ಆಚಾರವೇ ಸ್ವರ್ಗ, ಅನಾಚಾರವೇ ನರಕ" ಎಂದು ಬಸವಣ್ಣನವರು ಅದೆಂದೋ ಸಾರಿದ್ದರೂ ಭೂಮಿಯಿಂದ ಮೇಲಿನ ಆಕಾಶದಲ್ಲಿ ಬಹು ಉನ್ನತದಲ್ಲಿ ಸ್ವರ್ಗ ಲೋಕವಿದೆಯೆಂಬ ನಂಬುಗೆಯನ್ನು ಹೆಚ್ಚಿನವರು ಬಿಟ್ಟುಕೊಟ್ಟಿಲ್ಲ. ಆದರೆ, ರಶ್ಯದ ಪ್ರಧಾನಿ ನಿಕಿಟಾ ಕ್ರುಶ್ಚೇವರು ಖಂಡತುಂಡವಾಗಿ ಹೇಳುತ್ತಾರೆ. ಭೂಮಿಯ ಮೇಲ್ಗಡೆ ಸ್ವರ್ಗ ವಿಲ್ಲವೆಂದು!

ಒಬ್ಬ ಸಂವಾದದಾತನು ಅವರನ್ನು ಪ್ರಶ್ನಿಸಿದನಂತೆ: "ಕಮ್ಯುನಿಸ್ಟರು ಪರಮಾತ್ಮನ ಅಸ್ತಿತ್ವದಲ್ಲಿ ಮತ್ತು ಮೃತ್ಯುಮುಖನಾದ ಬಳಿಕ ಸ್ವರ್ಗ—ನರಕಗಳ ಜೀವನವಿದೆಯೆಂಬುಗರಲ್ಲಿ ವಿಶ್ವಾಸವಿಡುವುದಿಲ್ಲ. ಸ್ವರ್ಗ ನರಕಗಳ ಬಗ್ಗೆ ನಂಬುಗೆಯಿರುವವರಿಗಿಂತ ಇಲ್ಲದವರೇ ಯುದ್ಧಕ್ಕೆ ಅಂಜಬೇಕು. ಅಲ್ಲವೆ?" ಎಂದು.

ಈ ಪ್ರಶ್ನೆಯನ್ನು ಕೇಳಿದ ಕ್ರುಶ್ಚೇವರು ಸ್ವರ್ಗ ಲೋಕವೇ ಇಲ್ಲ ಎಂದು ಸಾರಿದರು. "ಈ ಭೂಮಿಯನ್ನೇ ಸ್ವರ್ಗವಾಗಿಸಬಹುದು. ಭೂಮಿಯನ್ನು ಬಿಟ್ಟರೆ, ಬೇರೆ ಸ್ವರ್ಗವಿಲ್ಲ. ಮೇಜರ್ ಗಗಾರಿನರನ್ನು ನಾವು ಮೇಲೆ ಕಳಿಸಿ ಸ್ವರ್ಗವಿದೆಯೇ ಎಂದು ತಿಳಿದು ಬರಲು ಹೇಳಿದೆವು. ಅವರು ಅಲ್ಲಿ ಭಯಂಕರ ಅಂಧಕಾರವಿದೆ ಎಂಬ ಉತ್ತರ ತಂದರು. ಇದರ ಸತ್ಯಾಸತ್ಯತೆಯನ್ನರಿಯಲು ಮೇಜರ್ ತಿತೋವರನ್ನೂ ಮತ್ತೊಮ್ಮೆ ಕಳಿಸಿದೆವು. ಅವರೂ ಅಲ್ಲಿ ಸ್ವರ್ಗವಿಲ್ಲ ಎಂಬುದನ್ನು ಸಾರುವ ಚೀರಿಸಿದರು." ಎಂದು ಅವರು ತನ್ನ ನಿರ್ಧಾರವನ್ನು ಸುಸ್ಪಷ್ಟೀಕರಿಸಿದರು.

"ನನಗೆ ತುಂಬ ವಯಸ್ಸಾಯಿತು. ಹಲವಾರು ದೇಶಗಳನ್ನೂ ನಾನು ಕಂಡಿದ್ದೇನೆ. ಆದರೆ, ಸ್ವರ್ಗಕ್ಕೆ ಬೇಗನೆ ಹೋಗಲು ತಹತಹಪಡುವ ಯಾವೊಬ್ಬನನ್ನೂ ಕಾಣಲಿಲ್ಲ. ಪಾದ್ರಿಗಳಾಗಲಿ ಪೂಜಾರಿಗಳಿ ಪರಮಾತ್ಮನಿಗೂ ತಮಗೂ ಸಾಮಿಪ್ಯವಿದೆ, ಸ್ವರ್ಗದ ಬಗ್ಗೆ ತಮಗೆ ಹೆಚ್ಚು ತಿಳಿದಿದೆ ಎಂಬುದನ್ನು ನಾನು ಕಂಡಿಲ್ಲ ಸಾಮ್ರಾಜ್ಯವಾದಿಗಳು, ಸರ್ವಾಧಿಕಾರಿಗಳು, ಬಂಡವಳಶಾಯಿಗಳು, ವಸಾಹತುವಾದಿಗಳು, ಎಲ್ಲರೂ ಪರಮಾತ್ಮನಲ್ಲಿ ತಮಗೆ ವಿಶ್ವಾಸವಿದೆಯೆನ್ನುತ್ತಾರೆ. ಅವರು ಪರಮಾತ್ಮನಿಗಿಂತ ಸೈತಾನನಿಗೆ ನಿಕಟ ವರ್ತಿಗಳಾಗಿದ್ದರೂ ಸ್ವರ್ಗಕ್ಕೆ ಹೋಗಲು ಅವಸರ ಪಡುತ್ತಿಲ್ಲ ಸ್ವರ್ಗಕ್ಕೆ ಕಳಿಸುವ ಆಶ್ವಾಸನೆಯನ್ನು ಸೈತಾನನಿಗೆ ನಿಕಟವರ್ತಿಗಳಿಗೆ ಕಳಿಸುತ್ತಾರೆ, ಆದರೆ ತಾವು ಮಾತ್ರ ಈ ಜಗತ್ತಿನಲ್ಲಿ ಆದಷ್ಟು ಹೆಚ್ಚು ದಿನಗಳವರೆಗೆ ತಮ್ಮ ತಿರೋರಿಗಳನ್ನೂ ಬಂಗಾರ ಸಂಪತ್ತುಗಳಿಂದ ತುಂಬಿದ ಕಪಾಟವನ್ನೂ ಕಾಯುತ್ತ ಉಳಿಯಲು ಬಯಸುತ್ತಾರೆ. ಧರ್ಮ ಪರಾಯಣರಲ್ಲಿ ಕೂಡ ಸ್ವರ್ಗ ಸೋಪಾನವಡರುವ ಉತ್ಸಾಹವಿರುವ ಒಬ್ಬನನ್ನೂ ಕಂಡಿಲ್ಲ. ಪಾದ್ರಿಗಳಮಾತಿನ ಸತ್ಯತೆಯನ್ನರಿಯಲು ನಾನುಇರ್ವರನ್ನುಗಗನಯಾತ್ರೆ ಮಾಡಿಬರಲು ಕಳಿಸಿದೆನು; ಅವರಿಗೆ ಅಲ್ಲಿ ಸ್ವರ್ಗವಾಗಲಿ, ಇಂದ್ರನ ನಂದನವನವಾಗಲೀ ದೃಷ್ಟಿಗೋಚರವಾಗಲಿಲ್ಲ." ಎಂದರು ಶ್ರೀ ಕ್ರುಶ್ಚೇವರು.

"ಅಯ್ಯಾ ಎಂದಡೆ ಸ್ವರ್ಗ; ಎಲವೋ ಎಂದಡೆ ನರಕ" ಎಂದು ಬಸವ ಸ್ವಾಮಿ ೮೦೦ ವರ್ಷಗಳಿಗೆ ಮೊದಲೇ ಸಾರಿಲ್ಲವೆ? ಭೂಮಿಯನ್ನಾದರೂ ಸ್ವರ್ಗವನ್ನಾಗಿ ಪರಿವರ್ತಿಸ ಬಯಸುವ ಕ್ರುಶ್ಚೇವರು ತನ್ನಂತೆಯೇ ಪರರನ್ನೂ ಬಗೆದುಕೊಳ್ಳಬೇಕು ತನ್ನ ರಶ್ಯ ಸ್ವರ್ಗವೆನಿಸಿಸುವಂತೆಯೇ ಇಡಿಯ ವಿಶ್ವ ಸ್ವರ್ಗವಾಗಬೇಕು; ಅದಕ್ಕಾಗಿ ನಿಶ್ಶಸ್ತ್ರೀಕರಣ ಮತ್ತು ಅಣ್ವಸ್ತ್ರ ಪ್ರಯೋಗ ಪ್ರತಿಬಂಧವಾಗಬೇಕೆಂಬುದನ್ನು ಮರೆಯಬಾರದು.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರ ಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ.ನ.

ಈ ವಾರದಲ್ಲಿ ಹೊರಬೀಳಲಿದೆ

ನಿರಂಜನ ಅಶ್ವತ್ಥ ಅನಂತಮೂರ್ತಿ ಶ್ರೀಕಾಂತರೇ ಮೊದಲಾದ ಹನ್ನೆರಡು ಸುಪ್ರಸಿದ್ಧ ಕತೆಗಾರರ ಬರಹಗಂಳಿದ ಆಯ್ದು ಪ್ರಕಟಿಸಿದ
ರಸಪೂರ್ಣ ಕತೆಗಳ ಸಂಕಲನ

ನವಕಥಾಗುಚ್ಛ ಭಾಗ—೧

ಬೆಲೆ: ರೂ. ೧-೮೦ ಭಿ ಪುಟ: ೧೮೨

ಭಾಗ ೨ ಮುಂದಿನ ತಿಂಗಳಲ್ಲಿ ಹೊರಬೀಳುತ್ತದೆ.

ದಕ್ಷಿಣ ಭಾಷಾ ಪುಸ್ತಕ ಸಂಸ್ಥೆಯ ಅಧಿಕೃತ ಮಾರಾಟಗಾರರು

ಮೈಸೂರು ಪ್ರಾಂತ-ದ.ಕ ಜಿಲ್ಲೆ ಹೊರತಾಗಿ
ಉಷಾ ಸೆನ್ಸ್
ಹಳೇ ಪೋಸ್ಟಾಫೀಸ್ ರಸ್ತೆ
ಮೈಸೂರು.

ದ. ಕ. ಜಿಲ್ಲೆಗೆ ಮಾತ್ರ
ಯು ಆರ್. ಪೈಸ್ & ಸನ್ಸ್
ಸಿಂಡಿಕೇಟ್ ಬಿಲ್ಡಿಂಗ್ಸ್
ಪಂಪನಕಟ್ಟೆ — ಮಂಗಳೂರು

ವಿದ್ಯಾರ್ಥಿಗಳಿಗೆ
ಅತ್ಯುಪಯುಕ್ತ ಪುಸ್ತಕಗಳು

ಸುಲಭದಲ್ಲಿ ಇಂಗ್ಲಿಷ್
(ಆಂಗ್ಲ ಸ್ವಯಂಬೋಧಿನಿ)
ರೂ. 2-00.

ಸುಲಭದಲ್ಲಿ ಪತ್ರಲೇಖನ
Letter Writing Made Easy
ಆಂಗ್ಲ ಪತ್ರವ್ಯವಹಾರ ಬೋಧಿನಿ
ರೂ 1—25.

ಡಿ. ಕೆ. ಭಾರದ್ವಾಜರ
ಇಂಗ್ಲಿಷ್, ಇಂಗ್ಲಿಷ್-ಕನ್ನಡ
ಡಿಕ್ಷನರಿ

ಬೆಲೆ: ರೂ. ನಾಲ್ಕು.

ಐದು ರೂಪಾಯಿ ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ ಕಳಿಸಲಾಗುವುದು.
ವಿಚಾರಿಸಿರಿ:
ನವಭಾರತ ಪುಸ್ತಕ ಭಂಡಾರ,
ಉಡುಪಿ.

Tel: 'BLUEYAGAR'. — ಚಿನ್ನ ಮತ್ತು ವಜ್ರಗಳ ಆಧುನಿಕ ತವರುಮನೆ — Phone: 374.

ಕೆ.ಆರ್.ಕೆ.ಶೇಟ್ ಡಯಮಂಡ್ ಮಾರ್ಟ್

ಸ್ಥಾಪನೆ:1919] ಚಿನ್ನ ಮತ್ತು ವಜ್ರದ ವ್ಯಾಪಾರಿಗಳು,(ಗವರ್ನ್‌ಮೆಂಟ್ ಕಾಲೇಜ್ ಎದುರುಗಡೆ)ಮಂಗಳೂರು. ಮಾಲಿಕ:ಕೆ.ಕೆ ಆರ್.ಶೇಟ್

ಇಡಬೇಕು ವಿಶ್ವಾಸವಂ....

ಶ್ರೀ ಸಿ. ಎಸ್. ರಾವ್.

ಮನುಷ್ಯ ಸಂಘಜೀವಿ! ಒಬ್ಬಂಟಿಗನಾಗಿ ಬಾಳು ಸವೆಯಿಸಲಾರ. ಇತರರಲ್ಲಿ ವಿಶ್ವಾಸದಿಂದಿರಲೂ ಪ್ರಯತ್ನಿಸುತ್ತಾನೆ. ಶ್ವಾಸವಿರುವ ತನಕ, ಸರ್ವರಲ್ಲಿ ವಿಶ್ವಾಸ ಬೆಳಸಿಕೊಂಡನೆ, ಬೇಸರ ಬಾಳ ಪಥದಲ್ಲಿ ಮೂಡಲಾರದು.! ಪರಸ್ಪರ ಪರಿಚಿತರಲ್ಲಿ, ಶಾಶ್ವತವಾಗಿ ಸ್ನೇಹ, ನಂಬುಗೆ, ಆತ್ಮೀಯತೆ, ಅನುರಾಗ, ಒಲವು, ಒಯ್ಯಾರ, ಗುಪ್ತಕಾರ್ಯಾಲೋಚನೆ ಬೆಳೆಯುವುದು ಈ ವಿಶ್ವಾಸದ ಮಹಾತ್ಮೆಯಿಂದಲೇ ಎಂದರೆ ಅತಿಶಯೋಕ್ತಿಯೊಗಲಾರದು. ನಯ—ವಿನಯ ಭರಿತ ನುಡಿಯುವುದು, ಹೇಳಿದಕ್ಕೆ ಎದುರಾಡದೆ ಒಪ್ಪುವುದು, ಭಯ-ಭಕ್ತಿಯಿಂದ ನಮಸ್ಕರಿಸುವುದು. ನುಡಿದಂತೆ ನಡೆಯುವುದು, ವ್ಯಾಪಾರಿಕನಂತೆ ವರ್ತಿಸುವುದು, ಗೆಳೆಯರೆಂದೆನಿಸಿಕೊಂಡವರಲ್ಲಿ ಮುಚ್ಚು ಮರೆಯಿಲ್ಲದೆ 'ಇನ್ನ' ಗುಪ್ತ ಸಂಗತಿಗಳನ್ನು ತಿಳಿಸುವುದು—ಇವು ವಿಶ್ವಾಸ ಬೆಳಸುವ ಹೆದ್ದಾರಿಗಳು.

ಈ ವಿಶ್ವಾಸದ ಮಹಾಅಸ್ತ್ರ ವ್ಯಾಪಾರಿಗಳಲ್ಲಿ ತುಂಬಿದೆ. ಪರವೂರಿನಿಂದ ಪತ್ರ ಬೆಳಸುವವ. ಪತ್ರದ ಕೊನೆಯಲ್ಲಿ, ವಿಶ್ವಾಸವಿರಲಿ, ಎಂದು ಬರೆದು ಚಿರಸ್ನೇಹ ಬೆಳೆಸಲು ಬಯಸುತ್ತಾನೆ. ಈ ವಿಶ್ವಾಸದ ಮೇಲೆಯೇ ಸಾವಿರಾರು ರೂಪಾಯಿಯ ವ್ಯವಹಾರ ನಡೆಯುತ್ತದೆ. ವ್ಯಾಪಾರದಲ್ಲಿ "ಟೊಪ್ಪಿ ಹಾಕುವುದು" ಈ ವಿಶ್ವಾಸದಿಂದಲೇ! ನೂರಾರು ರೂಪಾಯಿ ಮೌಲ್ಯದ ಮಾಲು ತರಿಸಿ, ಅದು ಮಾರಿ ಹೋಗುವ ಮೊದಲೇ ಬಿಲ್ಲು ಬಾಬ್ತು ಹಣ ಚುಕ್ತಮಾಡಿ ಮೊದಲ ಬಾರಿ ನಂಬುಗಸ್ತ ವ್ಯಾಪಾರಿ ಎಂಬ ವಿಶ್ವಾಸ ಮೂಡಿಸುವುದು ರೂಢಿ! ಆ ನಂತರ, ದ್ವಿಗುಣಿತ ಮಾಲು ತರಿಸಿಕೊಂಡು ತಮ್ಮ ವಿಶ್ವಾಸ ಅಳಸಲು ಪ್ರಯತ್ನಿಸುತ್ತಾರೆ! ಮೊದಲ ಬಾರಿ ಪ್ರಾಮಾಣಿಕತೆಯಿಂದ ಕ್ಲಿಷ್ಟ ಸಮಯಕ್ಕೆ ಹಣ ಪಾವತಿಮಾಡಿದ ನಂಬುಗೆಯಿಂದ, ಹಿಂದು ಮುಂದು ಯೋಚಿಸದೆ ಸಾವಿರಾರು ರೂಪಾಯಿಯ ಮಾಲು ಕಳುಹಿಸಲೂ ಹಿಂಜರಿಯುವುದಿಲ್ಲ. ಬರಬೇಕಾಗಿದ್ದ ದಿನಕ್ಕೆ ಹಣ ಬಾರದೆ ಇರಲೂ, ಒಂದೆರಡು ದಿನ ವಿಳಂಬಿಸಿ ಪತ್ರ ಬರೆದರೆ, ಅದಕ್ಕುತ್ತರ ಒಂದು ಕಾರ್ಡು. 'ಮಾಲು ಹಾಗೆಯೇ ಉಳಿದಿದೆ—ಗಿರಾಕಿಯಿಲ್ಲ; 'ಮಾಲು' ಹೋದೊಡನೆ ಹಣ ಕಳುಹಿಸಿಕೊಡುತ್ತೇನೆ-ವಿಶ್ವಾಸವಿರಲಿ' ಎಂದು ಬರೆದು ಸಂದೇಹ ಚದುರಿಸಿಬಿಡುತ್ತಾರೆ. ಕೆಲವು ಸಮಯದ ಅನಂತರ ಪತ್ರ ಬರೆದರೆ, ಅದಕ್ಕೆ ಉತ್ತರ ಬರೆಯುವಂತಹ ಕೃಪೆಯಿಲ್ಲ! ವಿಶ್ವಾಸದ ಮಾತಿಲ್ಲ! ಬರಲಿರುವ ಹಣಕ್ಕಾಗಿ, ವಿಶ್ವಾಸಿಯ ಕಾಲು ಬುಡಕ್ಕೆ ಹೋಗಿ ವಿಚಾರಿಸಿದರೆ 'ಕೊಡುವಯ್ಯ—ನಾನೇನು ವಿಷತಿಂದು ಆತ್ಮಹತ್ಯೆ ಮಾಡಿಕೊಳ್ಳುವುದಿಲ್ಲ—ನನ್ನ ತಾಪತ್ರಯ ನನಗೆ! ಎಂದು ಗಡುಸಾಗಿ ನುಡಿಯುವರು. ತಮ್ಮ ಹಣ ಬರಬೇಕಾದರೆ ತಗ್ಗಿ ನಡೆಯಬೇಕು. ಎದುರು ಮಾತಾಡಿದರೆ ಹಣ ಬರುವುದು ಸಂದೇಹ ತಮ್ಮ ಮೇಲಿನ ವಿಶ್ವಾಸದಿಂದಲ್ಲವೇ ಮಾಲು ಕಳುಹಿಸಿದ್ದು ಎಂದರೆ, 'ವಿಶ್ವಾಸ ಎಲ್ಲೂ ಹೋಗೋಲ್ಲ, ನಿಮ್ಮ ಹಣ ಓಡಿ ಹೋಗೋದಿಲ್ಲ — ಅನುಕೂಲವಾದಾಗ ಕೊಡುತ್ತೇನೆ' ಎಂದಾಗ ವಿಶ್ವಾಸ ಎಲ್ಲಿ ಹೋಗುತ್ತೆ. ತಮ್ಮ ಸ್ವಾರ್ಥ ಸಾಧನೆಗಾಗಿ ಈ ವಿಶ್ವಾಸದ ಸೋಗೇ?

ಹೀಗೆ ಪತ್ರಿಕೆಯನ್ನು ಮಾರಲು 'ಏಜಂಟ್' ಎಂಬ ಬಿರುದನ್ನು ಪಡೆದು, ಪತ್ರಿಕೆ ತರಿಸಿ, ಒಂದು ಪ್ರತಿಯನು ಉಳಿಸದೆ, ಮಾರಾಟಮಾಡಿ, ಪ್ರಕಾಶಕರು ಬರುವಾಗ ತಲೆ ತಪ್ಪಿಸಿಕೊಂಡು, ವಿಶ್ವಾಸ ಮರೆಸಿಕೊಳ್ಳುವವರೂ ಇರುವರು!

ಹಣವಿರುವವರ ಒಳಿ, ಹಣ ಪಡೆಯಬಹುದು ಎಂದಾಶಿಸಿ ಗೆಳೆತನ ಬೆಳಸಿ ಹಣ ವಿಶ್ವಾಸಿಗಳಾಗುವವರ ಸ್ನೇಹಬಹಳಗಾಢವಾದುದು. ನೋಡುವವರಿಗೆ ಎರಡುಆತ್ಮದ ಒಂದೇ ಜೀವವೆಂದು ಪ್ರತೀತಿ ಹುಟ್ಟಿಸಿಬಿಡುವರು ಗೆಳೆಯನ ಬಿಡುವಿನ ಸಮಯವನ್ನುನೋಡಿಕೊಂಡು,ಅವನಿಗೆ,ಪ್ರಾಣಕ್ಕೆ ಪ್ರಾಣ ಕೊಡುವ ಸಖನೆಂದು, ಅವನ ನೆರಳಂತೆ ಹಿಂಬಾಲಿಸಿ, ಬಾಯಿ ಬಟಾಟೆಯ ಬೊದಾರ್ಯದ ನುಡಿಯಾಡಿ, ದೊರಕುವ 'ಬಿಟ್ಟಿ' ಕಾಫಿಯನ್ನು ಗಂಟಲೊಳಗೆ ತುರುಕಿಸಿಕೊಂಡು ವಿಶ್ವಾಸ ಉಳಿಸಿ ಕೊಳ್ಳುತ್ತಾರೆ. ಸಹಾಯಕನಾಗಿ ಬರುವವನನ್ನು ಯಾರು ಸನ್ಮಾನಿಸುವುದಿಲ್ಲ! ತನ್ನ ಗೆಳೆಯನ ಸಹಾನುಭೂತಿಯನ್ನು, ತಮ್ಮ ನೆಚ್ಚಿನ ಮಡದಿ ಮುಂದೆ ಕೊಚ್ಚಿಕೊಂಡು, ತನ್ನ ಭಾಗ್ಯಕ್ಕೆ ಬಂಗಾರ ಲೇಪನ ಹಚ್ಚಲು ಮುಂದಾಗುವರು. ಬಹುಶಃ ಹೋದ ಜನ್ಮದಲ್ಲಿ ತಾವಿಬ್ಬರು ಸಹೋದರರೋ, ಸತಿ - ಪತಿಯರೋ ಆಗಿದ್ದಿರ ಬೇಕೆಂದು ಭಾವಿಸುವರು. ಆದರೆ.. ....ಸ್ನೇಹ ಬೆಳೆಯುವುದೂ—ಮುರಿಯುವುದೂ ಈ ಹಣದಿಂದ!! ತನ್ನ ಅನುಪತ್ನಿಯ ಅನುತಾಪ ತೋರಿಸಿ, ಸಪ್ಪಗೆ ಮುಖಮಾಡಿ, ನಿಗದಿಯಾದ ದಿನ ಹೇಳಿ, ಆ ದಿನ ಖಂಡಿತ ಮರಳಿ ಕೊಡುವೆನೆಂದು ವಚನವಿತ್ತು, ಕಡ ಕೊಂಡು ಹೋಗುವರು. ಹಣದ ಮೌಲ್ಯ ಅತ್ಯಲ್ಪವಾದರೆ, ಹೇಳಿದ ದಿನ, ಇನ್ನೊಬ್ಬರಿಂದಲಾದರೂ ಸಾಲ ಕೇಳಿ ಹಿಡಕ್ಕೊಂಡು ಬಂದು ಸ್ವಾಮಿ, ನಿಮಗೆ ಇಂದು ಹಣ ಕೊಡಲಾಗುವುದೋ ಇಲ್ಲವೋ ಎಂದು ಬಹಳ ಕಳಕಳಿಯಲ್ಲಿದ್ದೆ. ಆದರೆ ದೇವರು ಸಹಾಯ ಮಾಡಿದ ನೋಡಿ. ಕೊಟ್ಟ ಮಾತು ತಪ್ಪಿದರೆ ಮನುಷ್ಯ ಕೆಟ್ಟವನಾಗುತ್ತಾನೆ; ತಮ್ಮ ವಿಶ್ವಾಸ ಕಳಕೊಳ್ಳಲೂ ನಾನು ತಯಾರಾಗಿಲ್ಲ ಎಂದು ರಾಗವಾಗಿ ಬುರುಡೆ ಬಿಡುತ್ತಾರೆ. ಗೆಳೆಯನ ಪ್ರಾಮಾಣಿಕತೆಗಾಗಿ ತಲೆದೂಗಿ 'ಇರಲಿ, ನಿಮಗೆ ಅನುಕೂಲವಾದಾಗ ಕೊಡಿ' ಎಂದು ಮರಳಿ ಕೊಟ್ಟರೆ, ಮರು ಮಾತಿಲ್ಲದೆ ಹಣ ಹಿಡಿದುಕೊಂಡು ಹೋದರೂ, ಎರಡೇ ದಿನದಲ್ಲಿ ಮರಳಿ ತಂದು ಕೊಟ್ಟು ಬಿಟ್ಟು ಋಣಮುಕ್ತರಾಗುವರು. ಈ ವಿಶ್ವಾಸದ ವಿಚಿತ್ರತೆ ದೊಡ್ಡ 'ಹೊಂದ' ತೆಗೆಯಲು ಎಂಬ ಅರಿವಾರಿಗೂ ಆಗುವುದಿಲ್ಲ! ಕೆಲವೇ ದಿನದಲ್ಲಿ, ತನ್ನ ಹೆಂಡತಿಗೋ, ಮಗುವಿಗೋ, ತಾಯಿಗೋ ಸಾಯಲು ತಯಾರಾದ ಅಜ್ಜಿಗೋ ಮದ್ದಿಗಾಗಿ ಸಾಲ ಕೇಳಿ ಶಕ್ತಿಮೀರಿ ಸಾಲಮಾಡಿ, ತಮ್ಮ ಮನತೃಪ್ತಿಗಾಗಿ ಸರ್ಜು ಮಾಡುವರು. ಆ ಸಾಲ ಬರಬೇಕಾದರೆ ಶತ ಪ್ರಯತ್ನ ಮಾಡಬೇಕು. 'ದಯವಿಟ್ಟು ಕೊಡಿರಿ" ಎಂದು ಅಂಗಲಾಚಬೇಕು. ಸ್ನೇಹಾಚಾರವನ್ನು ಬದಿಗಿಟ್ಟು, ಹಣ ಕೊಟ್ಟು ಬಿಡಿರಿ ಎಂದರೆ 'ನಿಮ್ಮ ಹಣ ತಿನ್ನುವುದಿಲ್ಲಯ್ಯ" ಎಂದು ಉಡಾಸಿ ಮಾತಾಡುವರು. ಇದು ಅತಿ ವಿಶ್ವಾಸದ ಮಹತ್ವ.

ಗಂಡ—ಹೆಂಡಿರಲ್ಲಿ, ಅನುರಾಗ—ವಿಶ್ವಾಸ ಬಹಳ ಪ್ರಾಮುಖ್ಯವಾದುದು ಪ್ರೇಮ.ದೆದರು ಅವಿಶ್ವಾಸದ ಪ್ರಶ್ನೆಯಿಲ್ಲ. ವಿ (we—ನಾವು) ಶ್ವಾಸ (ಶಾಶ್ವತವಾಗಿ ಉಳಿಯುವುದು) ಬಲು ಬೇಗನೆ ಬೆಳೆಯುವುದು—ಬೆಳೆಯಲೇಬೇಕು. ವಿಶ್ವಾಸವಿಲ್ಲದೆ ಇದ್ದರೆ ಊಟವಿರಲಾರದು ಊಟವಿದ್ದರೂ ಕಾರವೋ, ಉಸ್ಪೋ ಹೆಚ್ಚಾದ ಪರಿಣಾಮ ದೊರೆಯಬಹುದು ಸುಂದರ ಮುಖದ ಹೆಂಡತಿ ವಿಶ್ವಾಸದಿಂದ, ಆಲಂಕಾರ ಸಾಧನ, ಸೀರೆ—ಕುಸುಸ ಮೊದಲಾದ ಬಯಕೆಯನ್ನು ವ್ಯಕ್ತಪಡಿಸಿದಾಗ ವಿಶ್ವಾಸಿ ಗಂಡ, ಪರರಿಂದ ಸಾಲ ತೆಗೆದುಕೊಂಡು, ತನ್ನ ಹೆಂಡತಿಯ ಮನ ಮೆಚ್ಚಿಸಿ ವಿಶ್ವಾಸ ಉಳಿಸಿಕೊಳ್ಳದಿರುವುದಿಲ್ಲ.

ಹೆಂಡತಿ ಎಂಬವಳ ಉರಿಮುಖ ಕಾಣಲಾರದೆ, ಕೋಪದ ಸಿಡಿಮಿಡಿ ಕೇಳಲಾರದೆ, ಅವಳ ವಿಶ್ವಾಸದ ಉಳಿವಿಗಾಗಿ ಕಳ್ಳತನ, ಮೋಸ, ವಂಚನೆ ಮಾಡಿ, ತಮ್ಮ ಮರ್ಯಾದೆ ಕಳೆದುಕೊಂಡವರಿರುವಾಗ ಈ ವಿಶ್ವಾಸಕ್ಕೆ ಬೆಲೆ ಕಟ್ಟಲು ಅಸಾಧ್ಯ!

ತಂದೆ ಮಕ್ಕಳಲ್ಲಿ, ಆದರಲ್ಲೂ ಇಂದಿನ ನವನಾಗರಿಕತೆಗೆ ದಾಸರಾಗಿ 'ಮಜಾ' ಜೀವನಕ್ಕೆ ಕಾಲಿಟ್ಟವರು ತಮ್ಮ ತಂದೆಯನ್ನು ಕಾಣುವ ವಿಶ್ವಾಸವೇ ಬೇರೆ ತರಹದ್ದು. ತಂದೆ, ಎಂದರೆ, ಮಗ ಬಯಸಿದಾಗ, ಬಯಸಿದಷ್ಟನ್ನು ಬಾಯಿ ಮಾತಿನ ದಸ್ತತಿಗೆ ಹಣ ಒದಗಿಸುವ ಸೇವಿಂಗ್ಸ್ ಬೇಂಕು ಎಕೌಂಟು! ಧನಿಕ ತಂದೆಯ ಮಗನ ವಿಶ್ವಾಸ ಅತಿರೇಕವಾದುದು. ಒಮ್ಮೆ ಸಡಿಲಿಸಿ, ಮಗನಿಗೆ ಹಣವಿತ್ತಿತೋ, ಆ ನಂತರ ಅವನು ಹಲವು ಮಾರ್ಗದಿಂದ ಹಣ ಹೀರಿಕೊಳ್ಳುವನು.

ವಿಶ್ವಾಸದ ಮಾರಕಾಸ್ತ್ರ ಬಹಳ ಭಯಂಕರವಾದುದು. ಇದರ ಇರವನ್ನು ತಿಳಿಯದೆ ಮೋಸಹೋದವರು ಹಲವರು.

ಅತಿಯಾಗಿ ಯಾರಲ್ಲಿಯೂ ವಿಶ್ವಸವಿರಿಸಬೇಡಿರಿ.

ದ. ಕ. ಟೆನೆನ್ಸಿ ಸ್ಪೆಶಲ್ ಅಸಿಸ್ಟಾಂಟ್ ಕಮಿಶನರ ಕೋರ್ಟನಲ್ಲಿ

O. P. No. 606/1961.

ನಾರಾಯಣ ಭಟ್ಟ —ಅರ್ಜಿದಾರ.

ಕೊರಗ ಪೂಜಾರಿ ಪೂತಿ ಹೆಂಗ್ಸಿನ ಮಗ ಕಾರ್ಕಳ ತಾಲ್ಲುಕು ಸಾಣೂರು ಗ್ರಾಮ ಹಿತೀಶ ಎಂಬಲ್ಲಿರುವವ —ಎದ್ರಿ

ಸದ್ರಿ ಆದ ನಿಮಗೆ ಈ ಮೂಲಕ ತಿಳಿಸುವದೇನಂದ್ರೆ ನೀವು ಅರ್ಜಿದಾರನ ಬಳಿಗೆ ಚಾಲಗೇಣಿ ಪಕ್ತಿನಿಂದ ಅನುಭವಿಸಿ ಬರುವ ಸಾಣೂರು ಗ್ರಾಮದ ಅಸ್ತಿ ಕಳದ ವಿಕಾರಿ ಸಂ| ರದ ಮತ್ತು ಶಾವರಿ ಸಂ|ರದ ಗೇಣಿ ಕೂಡಾ ರೂಪಾಯಿ 955—50ನ್ನು ಕೊಡದೆ ಬಾಕಿಮಾಡಿಕೊಂಡಿರುವದ್ರಿಂದ ಸದ್ರಿ ಅಸ್ತಿ ಎನ್ಯೆರೆ ಸರುವಾಧಿಯನ್ನು ಸ್ವಾಧೀನತ ಕೇಳಿ ಅರ್ಜಿದಾರನು ದಾಕ್ಲು ಮಾಡಿದ ಸದ್ರಿ ಅರ್ಜಿಯು ತಾರೀಕು 20—9—1961ಕ್ಕೆ ಕಾರ್ಕಳ ಮೊಕ್ತಾಂಸಲ್ಲಿ ನಿಮ್ಮ ಹಾಜ್ರಾತಿ ಬಗ್ಗೆ ಇಟ್ಟಿದೆ. ಯದ್ದೆ ಅಕ್ಷೇಪ ಇದ್ದ ಸದ್ರಿ ದಿನ ಬೆಳಗ್ಗೆ 10 ಘಂಟೆಗೆ ಕಾರ್ಕಳ ಮೊಕ್ತಾಂಸಲ್ಲಿ ಸದ್ರಿ ಕೋರ್ಟು ಮುಂದೆ ನೀವು ಹಾಜ್ರಾಗಿ ಉದಾಹರಣೆ ಕೊಡತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರ ಹಾಜ್ರಿಯಲ್ಲಿ ಅರ್ಜಿ ತೀರ್ಮಾನವಾಗುವದು ಎಂತ ಕೋರ್ಟು ಹೈಂ ಪ್ರಕಾರ ತಿಳಿಸಿಯದೆ.

K. V. Kamath
Advocate for Petitioner.
Karkal, 7—9—61.

ವರ್ಗ—ಊಳಿಗ
ಮೊದಲಾದ ಯಾವತ್ತೂ ತರದ
ಎಕೌಂಟ್ ಪುಸ್ತಕಗಳು
ಶಾಲಾ ರಿಜಿಸ್ಟ್ರಿಗಳು,
ಫಾರ್ಮುಗಳು,
ದೊರೆಯುತ್ತವೆ.
ವಿಚಾರಿಸಿರಿ—
ನವಯುಗ ಪ್ರೆಸ್, ಉಡುಪಿ

ಎರಡು ಎಟ್ಲಾಸುಗಳು

(೨ನೇ ಪುಟದಿಂದ)

ಆ ಮುಖಪೃಷ್ಠದ ಮೇಲೆ ಬರೆದಿತ್ತು - "ಜುಲ್ಯಾ, 1961—ಕಸ್ತೂರಿ"

ಅದರ ಒಂದು ಮೂಲೆಯಲ್ಲಿ ಶಾಲೆಯ ಮೊಹರಿತ್ತು. ವಿಮಲೆಗೆ ಎಲ್ಲ ಹೊಳೆದು ಹೋಯಿತು.

'ಕೊಡು, ಕೊಡು' ಎಂದು ಸೀಡಿಸುತಿದ್ದ ಮುರಲಿಯೊಡನೆ, ವಿಮಲೆ ಗಂಭೀರಳಾಗಿ, "ಎಲ್ಲಿಂದ ಕದ್ದಿಯೋ ಇದನ್ನು?" ಎಂದು ಕೇಳಿದಳು. ಮುರಲಿ ಕೊಂಚ ಬೆರಗಾದ.

"ಶಾಲೆಯಿಂದ ತಗೊಂಡು ಬಂದಿಯಾ? ..... ಅಮ್ಮಾ!" ತಾಯಿಯನ್ನು ಕೂಗತೊಡಗಿದಳು ವಿಮಲಾ.

ಈಗ ಮಾತ್ರ ಮುರಲಿ ಸಂಪೂರ್ಣ ದಿಗಿಲು ಬಿದ್ದ. ಅಕ್ಕನಿಗೆ ಹೇಗೋ ತಿಳಿದು ಹೋಯಿತು. ಅಕ್ಕನಿಂದ ಅಮ್ಮ, ಅಮ್ಮನಿಂದ ಅಪ್ಪನಿಗೆ ತಿಳಿದುಹೋದರೆ..... ತನ್ನ ಗತಿ?

ಮುರಲಿಯನ್ನು ಕಾದ ಎಣ್ಣೆಯಲ್ಲಿ ಮುಳುಗಿಸಿ ಎತ್ತಿದಂತಾಯಿತು. ಆತನ ಬೊಗಸೆಗಣ್ಣುಗಳಲ್ಲಿ ನೀರು ತುಳುಕಾಡಿತು

"ಅಕ್ಕಾ .... ಹೇಳಬೇಡಕ್ಕ'—ಆತನ ಸ್ವರ ಗದ್ಗದವಾಗಿತ್ತು.

ವಿಮಲಾ ತಮ್ಮನ ಕಡೆ ನೋಡಿದಳು. ಆಕೆಗೂ ಕನಿಕರವೆನಿಸಿತು. 'ಹೋಗಲಿ ಬಿಡು ಮುರಲಿ' ಎನ್ನುತ್ತಾ ಆತನ ಕಣ್ಣಿನ ನೀರನ್ನು ತಾನೇ ಒರಸಿದಳು. 'ಸುಮ್ಮನಿರು ಮುರಲಿ. ಬಾ. ಎಟ್ಲಾಸು ತೋರಿಸುತ್ತೇನೆ ಬಾ' ಎಂದು ಸಂತೈಸತೊಡಗಿದಳು.

'ಅಕ್ಕಾ .... ಯಾರೊಡನೆಯೂ ಹೇಳುವುದಿಲ್ಲ ಅನ್ನು ...'

'ಇಲ್ಲ ಮುರಲಿ, ಯಾರೊಡನೆಯೂ ಹೇಳುವುದಿಲ್ಲ'

ಮಾರನೆಯ ದಿನ ಶಾಲೆಗೆ ಹೋಗಿ ಸ್ವಲ್ಪ ಹೊತ್ತಿನಲ್ಲೇ ಹೆಡ್ಮಾಸ್ಟರರ ಆಜ್ಞೆಯಂತೆ ಕ್ಲಾಸ್ ಲೀಡರ್ ಮುರಲಿಯ ಚೀಲವನ್ನು ಜಪ್ತಿ ಮಾಡಿದ. ಅದರಲ್ಲಿ ಹೊದಿಕೆಯ ಪಟ್ಟವನ್ನು ಕಳಚಿಕೊಂಡ ಕಸ್ತೂರಿಯೆದ್ದುದನ್ನು ಕಂಡು ಹಾಗೆಯೇ ಹೆಡ್ಮಾಸ್ಟರರಿಗೆ ತಿಳಿಸಿ ಬಂದ. ಹೆಡ್ಮಾಸ್ಟರರಿಂದ ಮುರಲಿಗೆ ಕರೆ ಬಂತು.

ಮುರಲಿಯ ಕೈಕಾಲು ಬಲವೇ ಉಡುಗಿ ಹೋಗಿತ್ತು. ತನ್ನ ಬಳಿ ಪುಸ್ತಕವಿರುವ ಸಂಗತಿಯನ್ನು ಹೆಡ್ಮಾಸ್ಟರರಿಗೆ ತಿಳಿಸಿದವರಾರಿರಬಹುದೆಂಬುದೇ ಹೊಳೆಯದ ವಿಚಾರವಾಗಿತ್ತು, ಆತನಿಗೆ.

ಅಬ್ಬಾ! ಅವಳೇ....ಅಗ್ನಿನದೇ ಕೆಲಸ ವಿದು!.....

ಮುರಲಿ ಆಫೀಸನ್ನು ಪ್ರವೇಶಿಸುತ್ತಲೇ ಹೆಡ್ಮಾಸ್ಟರ್ ಕಬಾಟದ ಎಡೆಯಲ್ಲಿದ್ದ ಎರಡು ಮೂರು ಬೆತ್ತಗಳಲ್ಲಿ ಒಂದನ್ನು ಆರಿಸಿ ತೆಗೆದರು. ಆದರೆ ಬೆತ್ತದ ಬಿಸಿಗೂ ಮೊದಲೇ ಮುರಲಿ ಕರಗಿ ಹೋಗಿದ್ದ. ಎಟನ ಕೈಯನ್ನು ತಿಕ್ಕಿಕೊಳ್ಳುತ್ತಾ ಬಿಕ್ಕಳಿಸುತಿದ್ದ.

"ನಿಂತಿರು ಆ ಮೂಲೆಯಲ್ಲಿ, ಕತ್ತೆ!"

ಕತ್ತೆ ಆಫೀಸಿನ ಮೂಲೆಯಲ್ಲಿ ನಿಂತಿತು.

ಒಂದೊಂದೇ ಬೆಲ್‌ಗಳು ಮುಗಿದು ಶಾಲಾ ಪ್ರಾರಂಭವಾಯಿತು ಆಗಲೇ ಹೆಡ್ಮಾಸ್ಟರ ಸೂಚನೆಯಂತೆ ಒಂದು ಅಪರಾಧೀ ಬೋರ್ಡು ತಯಾರಾಗಿತ್ತು.

ಒಂದು ಸ್ಲೇಟಿಗೆ ಹಗ್ಗ ಕಟ್ಟಿ ಅದನ್ನು ಮುರಲಿಯ ಕುತ್ತಿಗೆಗೆ ಸಿಕ್ಕಿಸಿದರು. ಸ್ಲೇಟಿನಲ್ಲಿ 'ನಾನು ಕಳ್ಳ. ವಾಚನಾಲಯದ ಪುಸ್ತಕಗಳನ್ನು ಕದ್ದಿದ್ದೇನೆ. ಯಾರೂ ನನ್ನಂತೆ ಕಳಬಾರದು" ಎಂದು ಬರೆದರು.

"ಹೋಗು ಎಲ್ಲ ಕ್ಲಾಸುಗಳಿಗೂ ಹೋಗಿ ತೋರಿಸಿ ಬಾ"—ಆಜ್ಞೆ ಪಾಲಿಸಲೇ ಬೇಕಿತ್ತು.

ಮತ್ತೊಮ್ಮೆ ಗದರಿಸಿಕೊಂಡು ಹೊರಟ ಮುರಲಿ. ಒಂದು, ಎರಡು, ಮೂರು—ಪ್ರತಿ ಕ್ಲಾಸಿನಲ್ಲೂ ಆ ಬರಿಹದ ಒಕ್ಕಣಿಯನ್ನು ತಾನೇ ಓದಿ ಹೇಳುವಾಗ ಕಣ್ಣೀರ ಕೋಡಿ ಹರಿಯುತ್ತಿತ್ತು ಆತನ ಕಣ್ಣುಗಳಿಂದ!

ಎಂಟನೆಯ ತರಗತಿ! ಅಲ್ಲಿ ವಿಮಲಾ ಕುಳಿತಿದ್ದಳು. ಆದರೆ ಅವಳತ್ತ ಮುಖ ತಿರುಗಿಸುವಷ್ಟು ತಾಳ್ಮೆಯೂ ಆತನಿಗೆ ಉಳಿದಿರಲಿಲ್ಲ.

ಅವಳೇ.....ಇದಕ್ಕೆಲ್ಲ ಅವಳೇ ಜಾಡಿ .....

ಕ್ಷಣ ಕ್ಷಣಕ್ಕೂ ಅಕ್ಕನ ಬಗ್ಗೆ ಅವನ ಕೋಪ ಏರುತಿತ್ತು. ತನ್ನ ಕಳ್ಳತನದ ವಿಚಾರ ಆಕೆಗೊಬ್ಬಳಿಗಲ್ಲದೆ ಬೇರಾರಿಗೂ ತಿಳಿದಿರಲಿಲ್ಲವೆಂಬುದೇ ಅವನ ನಂಬಿಗೆಯಾಗಿತ್ತು.

ಇಡಿ ದಿನ ಆತನ ತುಟಿ ಪಿಟ್ಟೆನ್ನಲಿಲ್ಲ. ತನ್ನ ಗೆಳೆಯರೊಡನೆಯೂ ಮಾತಿಲ್ಲ. ಅಕ್ಕನ ಮುಖವನ್ನಂತೂ ನೋಡಲೇ ಇಲ್ಲ. ಅವಳಾಗಿ ನುಡಿಸ ಬಂದರೂ ಒಡನೆಯೇ ಸಿಡುಕಿ ನುಡಿಯುವನು:—"ಹೋಗು, ನಿನ್ನೊಡನೆ ಏನೂ ಬೇಕಿಲ್ಲ!" ತಮ್ಮನ ಈ ಮಾತಿನಿಂದ ಮತ್ತಷ್ಟು ನೊಂದು ಹಾಗೆಯೇ ಹಿಂದಿರುಗುವಳು ವಿಮಲಾ.

ಆ ದಿನ ಹಾಗೆಯೇ ಜಾರಿತು; ಸಂಜೆಯಾಯಿತು. ಊಟದ ಶಾಸ್ತ್ರ ಮುಗಿಸಿ ಮಲಗಿದ ಮುರಲಿಗೆ ದಿನದ ಘಟನೆ ಮತ್ತೆ ಮರುಕಳಿಸಿತು.

ಆ ಸಾವಿರ ಕಣ್ಣುಗಳೆದುರು ತನಗಾದ ಅಪಮಾನ...ಆ ಹೆಡ್ಮಾಸ್ಟರರ ಬೆತ್ತದ ಛಡಿಯೇಟು ..ತಾನು ಎಂಟನೆಯ ತರಗತಿಗೆ ಹೋದಾಗ ಅಲ್ಲಿ ತನ್ನ ಅಕ್ಕ ತನ್ನನ್ನು ತೋರಿಸಿ ಗೆಳತಿಯರೊಡನೆ ಹಾಸ್ಯ ಮಾಡಿರಬಹುದು.....

ಸಾಪ! ಆ ಸಮಯ ವಿಮಲೆ ಬೆರಗಾಗಿ ನೊಂದ ದಿಟ್ಟಿಯಿಂದ ತಮ್ಮನನ್ನೀಕ್ಷಿಸುತಿದ್ದಳೆಂಬುದನ್ನು ಆತ ತಿಳಿದಿರಲಿಲ್ಲ; ಕಂಡಿರಲಿಲ್ಲ

ಈಗ ಅದೇ ನೆನಪು—ಮಿದುಳಿನಲ್ಲಿ ರಕ್ತ ಸಂಚಾರ ಭರದಿಂದ ಸಾಗಿದಂತೆ ಮುರಲಿಯ ಕಣ್ಣೀರು ಕೋಡಿ ಹರಿಯುತಿತ್ತು. ಗಟ್ಟಿಯಾಗಿಯೇ ಬಿಕ್ಕಳಿಸತೊಡಗಿದ.

ಪಕ್ಕದ ಕೋಣೆಯಲ್ಲಿ ವಿಮಲಾ ಮಲಗಿದ್ದಳು. ಆಕೆಗೂ ನಿದ್ರೆ ಬಂದಿರಲಿಲ್ಲ. ತಮ್ಮನ ಅಳುವಿನ ದನಿಯನ್ನು ಕೇಳಿ ಹಾಸಿಗೆಯಲ್ಲೇ ಎದ್ದು ಕುಳಿತು ಆಲಿಸಿದಳು.

ಹೌದು, ಮುರಲಿ ಅಳುತ್ತಿದ್ದಾನೆ. ಆ ದಿನದ ಘಟನೆಯನ್ನು ಅವಳೂ ನೆನಪಿಸಿಕೊಂಡಳು. ಅವಳ ಕಣ್ಣುಗಳಲ್ಲೂ ನೀರು ಒಂದೇ ಸವನೆ ಉದುರತೊಡಗಿತು.

ಮೆಲ್ಲನೆ ಅಲ್ಲಿಂದೆದ್ದು ತಮ್ಮನ ಕೋಣೆಗೆ ಹೋಗಿ ಆತನ ಹಾಸಿಗೆಯ ಮೇಲೆ ಕುಳಿತಳು. ಮುರಲಿಯ ಬೆನ್ನ ಮೇಲೆ ಕೈಯೊಡಿಸುತ್ತಾ "ಮುರಲೀ" ಎಂದು ಮೇಲು ದನಿಯಲ್ಲಿ ಕರೆದಳು.

ಮುರಲಿ ಕ್ಷಣ ಹೊತ್ತು ಅಕೆಯ ಮುಖವನ್ನು ದಿಟ್ಟಿಸಿ ನೋಡಿ ಮುಖ ತಿರುಗಿಸಿಕೊಂಡ. ಆತನ ಅಳು ಮತ್ತೂ ಮೇರೆ ಮೀರಿತು.

"ಮುರಲೀ...ಆದುದಾಯಿತು ... ಮಲಗು"

ವಿಮಲೆಗೆ ಆತನನ್ನು ಸಮಾಧಾನ ಪಡಿಸುವುದು ಅಸಾಧ್ಯವಾಗಿತ್ತು. ಸುಮ್ಮನೇ ಹೋಗಿ ಮಲಗಿಕೊಂಡಳು.

ಮುರಲಿಯ ಅಳು ಕ್ರಮೇಣ ಶಾಂತವಾಗತೊಡಗಿತು. ಆದರೆ ಅದರ ಸ್ಥಾನದಲ್ಲಿ ಮತ್ತೊಂದು ಭಾವ ಹೆಡೆಯಾಡುತಿತ್ತು.

ಅಕ್ಕ! ಎಂತಹ ಜಾಡಿಕೋರೆ ನೀನು! ಅಬ್ಬಾ! ನೀನು ಹೇಳದಿದ್ದರೆ ಹೀಗೆಲ್ಲಾ ಆಗುತಿತ್ತೇ? ನೀನೇ ಇಷ್ಟೆಲ್ಲಾ ತಂದೊಡ್ಡಿದೆ! ನಿನಗೂ ಮಾಡಿಸುತ್ತೇನೆ ನೋಡುತ್ತಿರು!

ಕಟಕಟನೆ ಹಲ್ಲು ಕಡಿದ ಮುರಲಿ! ಆತನ ಉದ್ವೇಗ ಮೇರೆ ಮೀರಿತ್ತು. ಹಾಸಿಗೆಯಲ್ಲಿ ಎದ್ದು ಕುಳಿತು ಯೋಚಿಸತೊಡಗಿದ—

ಅಕ್ಕನಿಗೀಗ ನಿದ್ರೆ ಬಂದಿರಬಹುದೆ....

ಮಾರನೆಯ ದಿನ ಸುಪ್ರಭಾತದಲ್ಲಿ ವಿಮಲಾ ಉತ್ಸಾಹದಿಂದಲೇ ಎದ್ದಳು. ಶಾಲಾರಂಭದ ದಿನಗಳಲ್ಲಿ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಪಾಠಗಳ ಕಡೆ ಎಂತಹ ಉತ್ಸಾಹವೆಂಬುದನ್ನು ವಿದ್ಯಾರ್ಥಿಗಳಾಗಿಯೇ ಅನುಭವಿಸಿ ತಿಳಿಯಬೇಕು! ಆ ದಿನ ಭಾರತದ ರಾಜಕೀಯ ಗಡಿ ವಿಭಾಗದ ನಕಾಶೆಯನ್ನು ಬಿಡಿಸಿ ತರ ಹೇಳಿದ್ದರು ಉಪಾಧ್ಯಾಯರು. ಹಿಂದಿನ ದಿನ ಸಂಜೆ ವಿಮಲಾ ಅರ್ಧಾಂಶ ಬರೆದು ಮುಗಿಸಿ ಮಲಗಿದ್ದಳು. ಅದನ್ನು ಪೂರ್ಣಗೊಳಿಸುವ ಆತುರದಲ್ಲೇ ಎದ್ದಳು, ಆ ಬೆಳಗಿನಲ್ಲಿ!

ಆದರೆ ತೆರೆದಿರಿಸಿದ್ದ ಎಟ್ಲಾಸ್ ಕಣ್ಮರೆಯಾಗಿತ್ತು!

ಇಡಿ ಮನೆಯನ್ನೇ ಅಡಿ ಮೇಲು ಮಾಡಿ ಹುಡುಕಾಡಿದಳು ಮುರಲಿಯನ್ನು ಕೇಳಿದಳು. ಊಹೂಂ ಸಿಗಲಿಲ್ಲ.

ಅಡಿಗೆ ಮನೆಗೆ ಹೋಗಿ ತಾಯಿಯನ್ನು ಕೇಳಿದಳು. ಆದರೆ ಎಟ್ಲಾಸ್ ಕಣ್ಮರೆಯಾಗಿತ್ತು.

ರಂಗ ರಾಯರು ಮೋಷಾಕನ್ನು ಧರಿಸಿ ಏನೋ ಅವಸರದ ಕೆಲಸಕ್ಕಾಗಿ ಹೊರಟಿದ್ದರು. ಎಟ್ಲಾಸ್ ಕಾಣೆಯಾದ ಸುದ್ದಿ ಅವರ ಕಿವಿಗೆ ತಲುಪಿದ್ದರೂ ಏನೂ ಹೇಳದೆ ಹೋಗಿಬಿಟ್ಟರು.

ವಿಮಲೆಗೆ ಆ ದಿನ ಜೀವ ಕಳೆಯೇ ಇದ್ದಿರಲಿಲ್ಲ. ಅವಳ ಆ ಮ್ಲಾನ ವದನವನ್ನು ನೋಡುತ್ತಲೇ ಮುರಲಿಯ ಮನಸ್ಸು ಏನೋ ಒಂದು ತರಹ ಹೊಡೆದಾಡುತಿತ್ತು. ಆದರೂ ತುಟಿ ಪಿಟ್ಟೆನ್ನದೆ ಸುಮ್ಮನಾಗಿದ್ದ.

ರಂಗರಾಯರು ಹಿಂತಿರುಗುವಾಗ ರಾತ್ರಿ ಎಂಟು ಗಂಟೆಯಾಗಿತ್ತು. ಇದಿ ದಿನ ಬಳಲಿ ಬಂದು ಜಾವಡಿಯಲ್ಲಿ ಕುಳಿತು ನಿಟ್ಟುಸಿರು ಬಿಟ್ಟರು. ಹೋದ ಕೆಲಸವಾಗದೆ ಅವರ ಮನಸ್ಸೂ ತಾಳ ತಪ್ಪಿತು. ಬಾಗಿಲ ಬಳಿ ಮುದುರಿ ಕುಳಿತ ವಿಮಲೆಯನ್ನು ಕಂಡಾಗ ಬೆಳಗಿನ ಎಟ್ಲಾಸಿನ ಹುಡುಕಾಟದ ನೆನಪಾಯಿತು. ಅವರಿಗೆ.

"ವಿಮಲಾ, ಎಲ್ಲಿ ನಿನ್ನ ಎಟ್ಲಾಸ್ ತಾ"

ವಿಮಲಾ ಮಿಡುಕಾಡಲಿಲ್ಲ. ಮತ್ತೊಮ್ಮೆ ಅದೇ ಪ್ರಶ್ನೆಬಿರುಸಿನಿಂದ ಬಂತು. ಆಗ ನಡುನಡುಗುತ್ತ ವಿಮಲಾ ತೊದಲಿದಳು—

"ಎಟ್ಲಾಸು ಕಾಣುವುದಿಲ್ಲ ಅಪ್ಪಾ"

ರಂಗರಾಯರು ತಟ್ಟನೆ ಎದ್ದರು. ಅಂಗಳವಿಳಿದು ಬೇಲಿಯ ಗಿಡದಿಂದೊಂದು ತೋರಣೆಯ ಕೋಲನ್ನು ಮುರಿದು ತಂದು "ರಫರಫ"ನೆ ನಾಲ್ಕಾರು ಬಾರಿ ಬೀಸಿದರು ಎಟನ ಹೊಡೆತಕ್ಕೆ ಚೀರಿ ವಿಮಲಾ ಒದ್ದಾಡಿದಳು. ಗಿರಿಜಾ ಅಡಿಗೆ ಮನೆಯಿಂದ ಧಾವಿಸಿ ಬಂದು ಗಂಡನ ಪೆಟ್ಟಿಗೆ ತನ್ನ ಮೈಯನ್ನೊಡ್ಡಿ, "ಕೊಲ್ಲವಿರಾ ಮಗುವನ್ನು? ಅ್ಯಾನು ದನ ಅಂತ ತಿಳಿದಿರಾ" ಎಂದಾಗಲೇ ರಂಗರಾಯರು ಕೊಲನ್ನು ಬಿಸುಟರು.

ಮುರಲಿ ಆ ರಾತ್ರಿ ಇಡಿ ತನ್ನ ಹಾಸಿಗೆಯಲ್ಲಿ ಹೊರಳುತ್ತಾ ಬಿಕ್ಕಳಿಸಿ ಅಳುತಿದ್ದದು ರಂಗರಾಯರಿಗೂ ಕೇಳಿಸುತ್ತಿತ್ತು, ವಿಮಲೆಗೂ ಕೇಳಿಸುತಿತ್ತು. ಪ್ರಾಯಶಃ ಆತ ಹಿಂದಿನ ರಾತ್ರಿಗಿಂತಲೂ ಹೆಚ್ಚಾಗಿ ಆ ರಾತ್ರಿ ಅತ್ತಿದ್ದ'

ಮಾರನೆಯ ದಿನ ವಿಮಲೆಯ ಮೈಮೇಲೆ ನಾಲ್ಕಾರು ಕಡೆ ಕರ್ರಗಿನ ಬಾಸಳುಗಳೆದ್ದಿದ್ದುದನ್ನು ಕಂಡು ರಂಗರಾಯರ ಕಣ್ಣೀಕ್ಷಿಗೊಡಿರಬೇಕು.ಅಂತೂ ಸಂಜೆ ಬರುವಾಗ ಅವರೊಂದು ಹೊಸ ಎಟ್ಲಾಸನ್ನು ತಂದಿದ್ದರು.

ಮುರಲಿಯೂ ಎಟ್ಲಾಸನ್ನು ಅಕ್ಕನ ಮಡಿಲಲ್ಲಿರಿಸಿ, "ಅಕ್ಕಾ! ಕ್ಷಮಿಸಬೇಕು ನನ್ನ!" ಎಂದು ಆಕೆಯನ್ನು ತಬ್ಬಿ ಹಿಡಿದು ಗೋಳೆಂದು ಗೋಗರೆದು ಅತ್ತ.

ವಿಮಲೆಯ ಕಣ್ಣಿಂದಲೂ ನೀರು ಸರಿಯುತಿತ್ತು.

ದಿ ವಿಜಯ ಬೇಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬೇಂಕ್. ಸ್ಥಾಪನೆ: 1931

ರಿಜಿಸ್ಟರ್ಡ್ ಆಫೀಸು:

ವಿಜಯ ಬೇಂಕ್ ಬಿಲ್ಡಿಂಗ್, ಲೈಟ್ ಹೌಸ್ ಹಿಲ್ ರೋಡ್,

ಮಂಗಳೂರು-3, ಸೌತ್ ಕೆನರಾ.

ಕಾಯಂ ಠೇವಣಾತಿ ಬಡ್ಡಿ ದರವನ್ನು ಶೇಕಡ ೫½ರ ವರೆಗೆ ಹೆಚ್ಚಿಸಲಾಗಿದೆ.

ಏಳು ದಿವಸದ ನೋಟೀಸಿನಲ್ಲಿ ಕೇಳಿದಾಗೆ ಹಿಂದೆ ಪಡೆಯುವ ಡಿಪೋಸಿಟುಗಳನ್ನು (Call Deposits) ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸೋಣಾಗುತ್ತದೆ.

ಹೆಚ್ಚಿನ ಮಾಹಿತಿಗೆ ನಮ್ಮ ಶಾಖೆಗಳಲ್ಲಿ ದಯಮಾಡಿ ವಿಚಾರಿಸಿರಿ.

ಇಡಬೇಕು ವಿಶ್ವಾಸಮಂ....

ಶ್ರೀ ಪಿ. ಎಸ್. ರಾವ್.

ಮನುಷ್ಯ ಸಂಘಜೀವಿ! ಒಬ್ಬಂಟಿಗನಾಗಿ ಬಾಳು ಸವೆಯಿಸಲಾರ. ಇತರರಲ್ಲಿ ವಿಶ್ವಾಸದಿಂದಿರಲೂ ಪ್ರಯತ್ನಿಸುತ್ತಾನೆ. ಶ್ವಾಸವಿರುವ ತನಕ, ಸರ್ವರಲ್ಲಿ ವಿಶ್ವಾಸ ಬೆಳಸಿಕೊಂಡಂತೆ, ಬೇಸರ ಬಾಳ ಪಥದಲ್ಲಿ ಮೂಡಲಾರದು.! ಪರಸ್ಪರ ಪರಿಚಿತರಲ್ಲಿ, ಶಾಶ್ವತವಾಗಿ ಸ್ನೇಹ, ನಂಬುಗೆ, ಆತ್ಮೀಯತೆ, ಅನುರಾಗ, ಒಲವು, ಒಯ್ಯಾರ, ಗುಪ್ತಕಾರ್ಯಾಲೋಚನೆ ಬೆಳೆಯುವುದು ಈ ವಿಶ್ವಾಸದ ಮಹಾತ್ಮೆಯಿಂದಲೇ ಎಂದರೆ ಅತಿಶಯೋಕ್ತಿಯೆಂಗಲಾರದು. ನಯ—ವಿನಯ ಭರಿತ ನುಡಿಯುವುದು, ಹೇಳಿದಕ್ಕೆ ಎದುರಾಡದೆ ಒಪ್ಪುವುದು, ಭಯ-ಭಕ್ತಿಯಿಂದ ನಮಸ್ಕರಿಸುವುದು. ನುಡಿದಂತೆ ನಡೆಯುವುದು, ಪ್ರಾಮಾಣಿಕನಂತೆ ವರ್ತಿಸುವುದು, ಗೆಳೆಯರೆಂದೆನಿಸಿಕೊಂಡವರಲ್ಲಿ ಮುಚ್ಚು ಮರೆಯಿಲ್ಲದೆ 'ತನ್ನ' ಗುಪ್ತ ಸಂಗತಿಗಳನ್ನು ತಿಳಿಸುವುದು—ಇವು ವಿಶ್ವಾಸ ಬೆಳಸುವ ಹೆದ್ದಾರಿಗಳು.

ಈ ವಿಶ್ವಾಸದ ಮಹಾಅಸ್ತ್ರ ವ್ಯಾಪಾರಿಗಳಲ್ಲಿ ತುಂಬಿದೆ. ಪರವೂರಿನಿಂದ ಪತ್ರ ಬೆಳಸುವವ. ಪತ್ರದ ಕೊನೆಯಲ್ಲಿ, ವಿಶ್ವಾಸವಿರಲಿ, ಎಂದು ಬರೆದು ಚಿರಸ್ನೇಹ ಬೆಳೆಸಲು ಬಯಸುತ್ತಾನೆ. ಈ ವಿಶ್ವಾಸದ ಮೇಲೆಯೇ ಸಾವಿರಾರು ರೂಪಾಯಿಯ ವ್ಯವಹಾರ ನಡೆಯುತ್ತದೆ. ವ್ಯಾಪಾರದಲ್ಲಿ "ಟೊಪ್ಪಿ ಹಾಕುವುದು" ಈ ವಿಶ್ವಾಸದಿಂದಲೇ! ನೂರಾರು ರೂಪಾಯಿ ಮೌಲ್ಯದ ಮಾಲು ತರಿಸಿ, ಅದು ಮಾರಿ ಹೋಗುವ ಮೊದಲೇ ಬಿಲ್ಲು ಬಾಟ್ಟು ಹಣ ಚುಕ್ತಮಾಡಿ ಮೊದಲ ಬಾರಿ ನಂಬುಗಸ್ತ ವ್ಯಾಪಾರಿ ಎಂಬ ವಿಶ್ವಾಸ ಮೂಡಿಸುವುದು ರೂಢಿ! ಆ ನಂತರ, ದ್ವಿಗುಣಿತ ಮಾಲು ತರಿಸಿಕೊಂಡು ತಮ್ಮ ವಿಶ್ವಾಸ ಅಳಸಲು ಪ್ರಯತ್ನಿಸುತ್ತಾರೆ! ಮೊದಲ ಬಾರಿ ಪ್ರಾಮಾಣಿಕತೆಯಿಂದ ಕ್ಲಪ್ತ ಸಮಯಕ್ಕೆ ಹಣ ಪಾವತಿಮಾಡಿದ ನಂಬುಗೆಯಿಂದ, ಹಿಂದು ಮುಂದು ಯೋಚಿಸದೆ ಸಾವಿರಾರು ರೂಪಾಯಿಯ ಮಾಲು ಕಳುಹಿಸಲೂ ಹಿಂಜರಿಯುವುದಿಲ್ಲ. ಬರಬೇಕಾಗಿದ್ದ ದಿನಕ್ಕೆ ಹಣ ಬಾರದೆ ಇರಲೂ, ಒಂದೆರಡು ದಿನ ವಿಳಂಬಿಸಿ ಪತ್ರ ಬರೆದರೆ, ಅದಕ್ಕುತ್ತರ ಒಂದು ಕಾರ್ಡು. 'ಮಾಲು ಹಾಗೆಯೇ ಉಳಿದಿದೆ—ಗಿರಾಕಿಯಿಲ್ಲ; 'ಮಾರಿ'ಹೋದೊಡನೆ ಹಣ ಕಳುಹಿಸಿಕೊಡುತ್ತೇನೆ-ವಿಶ್ವಾಸವಿರಲಿ' ಎಂದು ಬರೆದು ಸಂದೇಹ ಚದುರಿಸಿಬಿಡುತ್ತಾರೆ. ಕೆಲವು ಸಮಯದ ಅನಂತರ ಪತ್ರ ಬರೆದರೆ, ಅದಕ್ಕೆ ಉತ್ತರ ಬರೆಯುವಂತಹ ಕೃಪೆಯಿಲ್ಲ! ವಿಶ್ವಾಸದ ಮಾತಿಲ್ಲ! ಬರಲಿರುವ ಹಣಕ್ಕಾಗಿ, ವಿಶ್ವಾಸಿಯ ಕಾಲು ಬುಡಕ್ಕೆ ಹೋಗಿ ವಿಚಾರಿಸಿದರೆ 'ಕೊಡುವಯ್ಯ—ನಾನೇನು ವಿಷತಿಂದು ಆತ್ಮಹತ್ಯೆ ಮಾಡಿಕೊಳ್ಳುವುದಿಲ್ಲ—ನನ್ನ ತಾಪತ್ರಯ ನನಗೆ! ಎಂದು ಗಡುಸಾಗಿ ನುಡಿಯುವರು. ತಮ್ಮ ಹಣ ಬರಬೇಕಾದರೆ ತಗ್ಗಿ ನಡೆಯಬೇಕು. ಎದುರು ಮಾತಾಡಿದರೆ ಹಣ ಬರುವುದು ಸಂದೇಹ ತಮ್ಮ ಮೇಲಿನ ವಿಶ್ವಾಸದಿಂದಲ್ಲವೇ ಮಾಲು ಕಳುಹಿಸಿದ್ದು ಎಂದರೆ, 'ವಿಶ್ವಾಸ ಎಲ್ಲೂ ಹೋಗೋಲ್ಲ, ನಿಮ್ಮ ಹಣ ಓಡಿ ಹೋಗೋದಿಲ್ಲ — ಅನುಕೂಲವಾದಾಗ ಕೊಡುತ್ತೇನೆ' ಎಂದಾಗ ವಿಶ್ವಾಸ ಎಲ್ಲಿ ಹೋಗುತ್ತೆ. ತಮ್ಮ ಸ್ವಾರ್ಥ ಸಾಧನೆಗಾಗಿ ಈ ವಿಶ್ವಾಸದ ಸೋಗೇ?

ಹೀಗೆ ಪತ್ರಿಕೆಯನ್ನು ಮೂರಲು 'ಎಜಂಟ್' ಎಂಬ ಬಿರುದನ್ನು ಪಡೆದು, ಪತ್ರಿಕೆ ತರಿಸಿ, ಒಂದು ಪ್ರತಿಯು ಉಳಿಸದೆ, ಮೂಂಟಮಾಡಿ, ಪ್ರಕಾಶಕರು ಬರುವಾಗ ತಲೆ ತಪ್ಪಿಸಿಕೊಂಡು, ವಿಶ್ವಾಸ ಮರೆಸಿಕೊಳ್ಳುವವರೂ ಇರುವರು!

ಹಣವಿರುವವರ ಬಳಿ, ಹಣ ಪಡೆಯಬಹುದು ಎಂದಾತಿಸಿ ಗೆಳೆತನ ಬೆಳಸಿ ಹಣ ವಿಶ್ವಾಸಿಗಳಾಗುವವರ ಸ್ನೇಹಬಹಳಗಾಢವಾದುದು. ನೋಡುವವರಿಗೆ ಎರಡುಆತ್ಮದ ಒಂದೇ ಜೀವವೆಂದು ಪ್ರತೀತಿ ಹುಟ್ಟಿಸಿಬಿಡುವರು ಗೆಳೆಯನ ಬಿಡುವಿನ ಸಮಯವನ್ನುನೋಡಿಕೊಂಡು,ಅವನಿಗೆ,ಪ್ರಾಣಕ್ಕೆ ಪ್ರಾಣ ಕೊಡುವ ಸಖನೆಂದು, ಅವನ ನೆರಂತೆ ಹಿಂಬಾಲಿಸಿ, ಬಾಯಿ ಬಟಾಟೆಯ ಔದಾರ್ಯದ ನುಡಿಯಾಡಿ, ದೊರಕುವ 'ಬಿಟ್ಟಿ' ಕಾಫಿಯನ್ನು ಗಂಟಲೊಳಗೆ ತುರುಕಿಸಿಕೊಂಡು ವಿಶ್ವಾಸ ಉಳಿಸಿ ಕೊಳ್ಳುತ್ತಾರೆ. ಸಹಾಯಕನಾಗಿ ಬರುವವನನ್ನು ಯಾರು ಸನ್ಮಾನಿಸುವುದಿಲ್ಲ? ತನ್ನ ಗೆಳೆಯನ ಸಹಾನುಭೂತಿಯನ್ನು, ತಮ್ಮ ನೆಚ್ಚಿನ ಮಡದಿ ಮುಂದೆ ಕೊಚ್ಚಿಕೊಂಡು, ತನ್ನ ಭಾಗ್ಯಕ್ಕೆ ಬಂಗಾರ ಲೇಪನ ಹಚ್ಚಲು ಮುಂದಾಗುವರು. ಬಹುಶ: ಹೋದ ಜನ್ಮದಲ್ಲಿ ತಾವಿಬ್ಬರು ಸಹೋದರರೋ, ಸತಿ - ಪತಿಯರೋ ಆಗಿದ್ದಿರ ಬೇಕೆಂದು ಭಾವಿಸುವರು. ಆದರೆ.. ....ಸ್ನೇಹ ಬೆಳೆಯುವುದೂ—ಮುರಿಯುವುದೂ ಈ ಹಣದಿಂದ!! ತನ್ನ ಅನುಪತ್ಯದ ಅನುತಾಪ ತೋರಿಸಿ, ಸಪ್ಪಗೆ ಮುಖಮಾಡಿ, ನಿಗದಿಯಾದ ದಿನ ಹೇಳಿ, ಆ ದಿನ ಖಂಡಿತ ಮರಳಿ ಕೊಡುವೆನೆಂದು ವಚನವಿತ್ತು, ಕಡ ಕೊಂಡು ಹೋಗುವರು. ಹಣದ ಮೌಲ್ಯ ಅತ್ಯಲ್ಪವಾದರೆ, ಹೇಳಿದ ದಿನ, ಇನ್ನೊಬ್ಬರಿಂದಲಾದರೂ ಸಾಲ ಕೇಳಿ ಹಿಡಕ್ಕೊಂಡು ಬಂದು ಸ್ವಾಮಿ, ನಿಮಗೆ ಇಂದು ಹಣ ಕೊಡಲಾಗುವುದೋ ಇಲ್ಲವೋ ಎಂದು ಬಹಳ ಕಳಕಳಿಯಲ್ಲಿದ್ದೆ. ಆದರೆ ದೇವರು ಸಹಾಯ ಮಾಡಿದ ನೋಡಿ. ಕೊಟ್ಟ ಮಾತು ತಪ್ಪಿದರೆ ಮನುಷ್ಯ ಕೆಟ್ಟವನಾಗುತ್ತಾನೆ; ತಮ್ಮ ವಿಶ್ವಾಸ ಕಳಕೊಳ್ಳಲೂ ನಾನು ತಯಾರಾಗಿಲ್ಲ ಎಂದು ರಾಗವಾಗಿ ಬುರುಡೆ ಬಿಡುತ್ತಾರೆ. ಗೆಳೆಯನ ಪ್ರಾಮಾಣಿಕತೆಗಾಗಿ ತಲೆದೂಗಿ 'ಇರಲಿ, ನಿಮಗೆ ಅನುಕೂವಾದಾಗ ಕೊಡಿ' ಎಂದು ಮರಳಿ ಕೊಟ್ಟರೆ, ಮರು ಮಾತಿಲ್ಲದೆ ಹಣ ಹಿಡಿದುಕೊಂಡು ಹೋದರೂ, ಎರಡೇ ದಿನದಲ್ಲಿ ಮರಳಿ ತಂದು ಕೊಟ್ಟು ಬಿಟ್ಟು ಋಣಮುಕ್ತರಾಗುವರು. ಈ ವಿಶ್ವಾಸದ ವಿಚಿತ್ರತೆ ದೊಡ್ಡ 'ಹೊಂದ' ತೆಗೆಯಲು ಎಂಬ ಅರಿವಾರಿಗೂ ಆಗುವುದಿಲ್ಲ! ಕೆಲವೇ ದಿನದಲ್ಲಿ, ತನ್ನ ಹೆಂಡತಿಗೋ, ಮಗುವಿಗೋ, ತಾಯಿಗೋ ಸಾಯಲು ತಯಾರಾದ ಅಜ್ಜಿಗೋ ಮದ್ದಿಗಾಗಿ ಸಾಲ ಕೇಳಿ ಶಕ್ತಿಮೀರಿ ಸಾಲಮಾಡಿ, ತಮ್ಮ ಮನತೃಪ್ತಿಗಾಗಿ ಸರ್ಚು ಮಾಡುವರು. ಆ ಸಾಲ ಬರಬೇಕಾದರೆ ಶತ ಪ್ರಯತ್ನ ಮಾಡಬೇಕು. 'ದಯವಿಟ್ಟು ಕೊಡಿರಿ" ಎಂದು ಅಂಗಲಾಚಬೇಕು. ಸ್ನೇಹಾಚಾರವನ್ನು ಬದಿಗಿಟ್ಟು, ಹಣ ಕೊಟ್ಟು ಬಿಡಿರಿ ಎಂದರೆ 'ನಿಮ್ಮ ಹಣ ತಿನ್ನುವುದಿಲ್ಲಯ್ಯ" ಎಂದು ಉಡಾಪಿ ಮಾತಾಡುವರು. ಇದು ಅತಿ ವಿಶ್ವಾಸದ ಮಹತ್ವ.

ಗಂಡ—ಹೆಂಡಿರಲ್ಲಿ, ಅನುರಾಗ—ವಿಶ್ವಾಸ ಬಹಳ ಪ್ರಾಮುಖ್ಯವಾದುದು ಪ್ರೇಮದೆದರು ಅವಿಶ್ವಾಸದ ಪ್ರಶ್ನೆಯಿಲ್ಲ. ವಿ (wo—ನಾವು) ಶ್ವಾಸ (ಶಾಶ್ವತವಾಗಿ ಉಳಿಯುವುದು) ಬಲು ಬೇಗನೆ ಬೆಳೆಯುವುದು—ಬೆಳೆಯಲೇಬೇಕು. ವಿಶ್ವಾಸವಿಲ್ಲದೆ ಇದ್ದರೆ ಊಟವಿರಲಾರದು ಊಟವಿದ್ದರೂ, ಕಾರಪ್ಪೋ, ಸಿಹಿಪ್ಪೋ ಹೆಚ್ಚಾದ ಪರಿಣಾಮ ದೊರೆಯಬಹುದು. ಸುಂದರ ಮುಖದ ಹೆಂಡತಿ ವಿಶ್ವಾಸದಿಂದ, ಅಲಂಕಾರ ಸಾಧನ, ಸೀರೆ—ಕುಪ್ಪಸ ಮೊದಲಾದ ಬಯಕೆಯನ್ನು ವ್ಯಕ್ತಪಡಿಸಿದಾಗ ವಿಶ್ವಾಸಿ ಗಂಡ, ಪರರಿಂದ ಸಾಲ ತೆಗೆದುಕೊಂಡು, ತನ್ನ ಹೆಂಡತಿಯ ಮನ ಮೆಚ್ಚಿಸಿ ವಿಶ್ವಾಸ ಉಳಿಸಿಕೊಳ್ಳದಿರುವುದಿಲ್ಲ.

ಹೆಂಡತಿ ಎಂಬವಳ ಉರಿಮುಖ ಕಾಣಲಾರದೆ, ಕೋಪದ ಸಿಡಿಮಿಡಿ ಕೇಳಲಾರದೆ, ಅವಳ ವಿಶ್ವಾಸದ ಉಳಿವಿಗಾಗಿ ಕಳ್ಳತನ, ಮೋಸ, ವಂಚನೆ ಮಾಡಿ, ತಮ್ಮ ಮರ್ಯಾದೆ ಕಳೆದುಕೊಂಡವರಿಗಾಗ ಈ ವಿಶ್ವಾಸಕ್ಕೆ ಬೆಲೆ ಕಟ್ಟಲು ಅಸಾಧ್ಯ!

ತಂದೆ ಮಕ್ಕಳಲ್ಲಿ, ಅದರಲ್ಲೂ ಇಂದಿನ ನವನಾಗರಿಕತೆಗೆ ದಾಸರಾಗಿ 'ಮಜಾ' ಜೀವನಕ್ಕೆ ಕಾಲಿಟ್ಟವರು ತಮ್ಮ ತಂದೆಯನ್ನು ಕಾಣುವ ವಿಶ್ವಾಸವೇ ಬೇರೆ ತರಹದ್ದು. ತಂದೆ, ಎಂದರೆ, ಮಗ ಬಯಸಿದಾಗ, ಬಯಸಿದಷ್ಟನ್ನು ಬಾಯಿ ಮಾತಿನ ದಸ್ಕತಿಗೆ ಹಣ ಒದಗಿಸುವ ಸೇವಿಂಗ್ಸ್ ಬೇಂಕು ಎಕೌಂಟು! ಧನಿಕ ತಂದೆಯ ಮಗನ ವಿಶ್ವಾಸ ಅತಿರೇಕವಾದುದು. ಒಮ್ಮೆ ಸಡಿಲಿಸಿ, ಮಗನಿಗೆ ಹಣವಿತ್ತಿತೋ, ಆ ನಂತರ ಅವನು ಹಲವು ವಾಮಮಾರ್ಗದಿಂದ ಹಣ ಹೀರಿಕೊಳ್ಳುವನು.

ವಿಶ್ವಾಸದ ಮಾರಕಾಸ್ತ್ರ ಬಹಳ ಭಯಂಕರವಾದುದು. ಇದರ ಇರವನ್ನು ತಿಳಿಯದೆ ಮೋಸಹೋದವರು ಹಲವರು.

ಅತಿಯಾಗಿ ಯಾರಲ್ಲಿಯೂ ವಿಶ್ವಾಸವಿರಬೇಡಿರಿ.

ಡಿ. ಕೆ. ಟೆನೆನ್ಸಿ ಸ್ಪೆಶಲ್
ಅಸಿಸ್ಟಾಂಟ್ ಕಮಿಶನರ
ಕೋರ್ಟಿನಲ್ಲಿ

O. P. No. 606/1961.

ನಾರಾಯಣ ಭಟ್ಟ —ಅರ್ಜಿದಾರ.

ಕೊರಗ ಪೂಜಾರಿ ಪೂವತಿ ಹೆಂಗ್ಸನ ಮಗ ಕಾರ್ಕಳ ತಾಲ್ಲೂ ಸಾಣೂರು ಗ್ರಾಮ ಪತ್ರೆತಿ ಎಂಬಲ್ಲಿರುವವ —ಎದ್ರಿ

ಸದ್ರಿ ಆದ ನಿಮಗೆ ಈ ಮೂಲಕ ತಿಳಿಸುವದೇನೆಂದ್ರೆ ನೀವು ಅರ್ಜಿದಾರನ ಪಳಗೆ ಜಾಲಗೇಣಿ ಹತ್ತಿನಿಂದ ಅನುಭವಿಸಿ ಬರುವ ಸಾಣೂರು ಗ್ರಾಮದ ಅಸ್ತಿ ಕಳದ ವಿಕಾರಿ ಸಂ|ರದ ಮತ್ತು ಶಾವಾರಿ ಸಂ|ರದ ಗೇಣಿ ಕೂಡಾ ರೂಪ್ಯಾ 965—50ನ್ನು ಕೊಡದೆ ಬಾಕಿಮಾಡಿಕೊಂಡಿರುವದ್ರಿಂದ ಸದ್ರಿ ಅಸ್ತಿ ವಗೈರೆ ಸರುವಾಧಿಯನ್ನು ಸ್ವಾಧೀನತೆ ಕೇಳಿ ಅರ್ಜಿದಾರನು ದಾಖಲು ಮಾಡಿದ ಸದ್ರಿ ಅರ್ಜಿಯು ತಾರೀಕು 20—9—1961ಕ್ಕೆ ಕಾರ್ಕಳ ಮೊಕ್ಕಾಂನಲ್ಲಿ ನಿಮ್ಮ ಹಾಜ್ರಾತಿ ಬಗ್ಗೆ ಇಟ್ಟಿದೆ. ಯದ್ದಕ್ಕೆ ಆಕ್ಷೇಪ ಇದ್ರೆ ಸದ್ರಿ ದಿನ ಬೆಳಗ್ಗೆ 10 ಘಂಟೆಗೆ ಕಾರ್ಕಳ ಮೊಕ್ಕಾಂನಲ್ಲಿ ಸದ್ರಿ ಕೋರ್ಟು ಮುಂದೆ ನೀವು ಹಾಜ್ರಾಗಿ ಉದಾಹರಣೆ ಕೊಡತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರ ಹಾಜ್ರಿಯಲ್ಲಿ ಅರ್ಜಿ ತೀರ್ಮಾನವಾಗುವದು ಎಂತ ಕೋರ್ಟು ಹ್ಯುಂ ಪ್ರಕಾರ ತಿಳಿಸಿಯದೆ.

K. V. Kamath
Advocate for Petitioner.
Karkal, 7—9—61.

ಎಸ್.ಆರ್.
ಅತ್ಯುತ್ತಮ ಬೀಡಿಗಳು

ವರ್ಗ—ಊಳಿಗ
ಮೊದಲಾದ ಯಾವತ್ತೂ ತರದ
ಎಕೌಂಟ್ ಪುಸ್ತಕಗಳು
ಶಾಲಾ ರಿಜಿಸ್ಟ್ರಿಗಳು,
ಫಾರ್ಮುಗಳು,
ದೊರೆಯುತ್ತವೆ.
ವಿಚಾರಿಸಿರಿ—
ನವಯುಗ ಪ್ರೆಸ್, ಉಡುಪಿ

ಎರಡು ಎಟ್ಲಾಸುಗಳು

(೨ನೇ ಪುಟದಿಂದ)

ಆ ಮುಖಪೃಷ್ಠದ ಮೇಲೆ ಬರೆದಿತ್ತು - "ಜುಲ್ಯಾ, 1961—ಕಸ್ತೂರಿ"

ಅದರ ಒಂದು ಮೂಲೆಯಲ್ಲಿ ಶಾಲೆಯ ಮೊಹರಿತ್ತು. ವಿಮಲೆಗೆ ಎಲ್ಲ ಹೊಳೆದು ಹೋಯಿತು.

'ಕೊಡು, ಕೊಡು' ಎಂದು ಪೀಡಿಸುತಿದ್ದ ಮುರಲಿಯೊಡನೆ, ವಿಮಲೆ ಗಂಭೀರಳಾಗಿ, "ಎಲ್ಲಿಂದ ಕದ್ದಿಯೇ ಇದನ್ನು?" ಎಂದು ಕೇಳಿದಳು. ಮುರಲಿ ಕೊಂಚ ಬೆರಗಾದ.

"ಶಾಲೆಯಿಂದ ತಗೊಂಡು ಬಂದಿಯಾ? ..... ಅಮ್ಮಾ!" ತಾಯಿಯನ್ನು ಕೂಗತೊಡಗಿದಳು ವಿಮಲಾ.

ಈಗ ಮಾತ್ರ ಮುರಲಿ ಸಂಪೂರ್ಣ ದಿಗಿಲು ಬಿದ್ದ. ಅಕ್ಕನಿಗೆ ಹೇಗೋ ತಿಳಿದು ಹೋಯಿತು. ಅಕ್ಕನಿಂದ ಅಮ್ಮ, ಅಮ್ಮನಿಂದ ಅಪ್ಪನಿಗೆ ತಿಳಿದುಹೋದರೆ..... ತನ್ನ ಗತಿ?

ಮುರಲಿಯನ್ನು ಕಾದ ಎಣ್ಣೆಯಲ್ಲಿ ಮುಳುಗಿಸಿ ಎತ್ತಿದಂತಾಯಿತು, ಆತನ ಬೊಗಸೆಗಣ್ಣುಗಳಲ್ಲಿ ನೀರು ತುಳುಕಾಡಿತು.

"ಅಕ್ಕಾ .... ಹೇಳಬೇಡಕ್ಕ'—ಆತನ ಸ್ವರ ಗದ್ಗದವಾಗಿತ್ತು.

ವಿಮಲಾ ತಮ್ಮನ ಕಡೆ ನೋಡಿದಳು. ಆಕೆಗೂ ಕನಿಕರವೆನಿಸಿತು. 'ಹೋಗಲಿ ಬಿಡು ಮುರಲಿ' ಎನ್ನುತ್ತಾ ಆತನ ಕಣ್ಣಿನ ನೀರನ್ನು ತಾನೇ ಒರಸಿದಳು. 'ಸುಮ್ಮನಿರು ಮುರಲಿ. ಬಾ. ಎಟ್ಲಾಸು ತೋರಿಸುತ್ತೇನೆ ಬಾ' ಎಂದು ಸಂತೈಸತೊಡಗಿದಳು.

'ಅಕ್ಕಾ .... ಯಾರೊಡನೆಯೂ ಹೇಳುವುದಿಲ್ಲ ಅನ್ನು ... '

'ಇಲ್ಲ ಮುರಲಿ, ಯಾರೊಡನೆಯೂ ಹೇಳುವುದಿಲ್ಲ.'

ಮಾರನೆಯ ದಿನ ಶಾಲೆಗೆ ಹೋಗಿ ಸ್ವಲ್ಪ ಹೊತ್ತಿನಲ್ಲೇ ಹೆಡ್ಮಾಸ್ಟರರ ಆಜ್ಞೆಯಂತೆ ಕ್ಲಾಸ್ ಲೀಡರ್ ಮುರಲಿಯ ಚೀಲವನ್ನು ಜಪ್ತಿ ಮಾಡಿದ. ಅದರಲ್ಲಿ ಹೊದಿಕೆಯ ಪುಟವನ್ನು ಕಳಚಿಕೊಂಡ ಕಸ್ತೂರಿಯದ್ದುದನ್ನು ಕಂಡು ಹಾಗೆಯೇ ಹೆಡ್ಮಾಸ್ಟರಿಗೆ ತಿಳಿಸಿ ಬಂದ. ಹೆಡ್ಮಾಸ್ಟರರಿಂದ ಮುರಲಿಗೆ ಕರೆ ಬಂತು.

ಮುರಲಿಯ ಕೈಕಾಲು ಬಲವೇ ಉಡುಗಿ ಹೋಗಿತ್ತು ತನ್ನ ಬಳಿ ಪುಸ್ತಕವಿರುವ ಸಂಗತಿಯನ್ನು ಹೆಡ್ಮಾಸ್ಟರರಿಗೆ ತಿಳಿಸಿದವರಾರಿರಬಹುದೆಂಬುದೇ ಹೊಳೆಯದ ವಿಚಾರವಾಗಿತ್ತು, ಆತನಿಗೆ.

ಅಬ್ಬಾ! ಅವಳೇ....ಅಕ್ಕನದೇ ಕೆಲಸವಿದು!.....

ಮುರಲಿ ಆಫೀಸನ್ನು ಪ್ರವೇಶಿಸುತ್ತಲೇ ಹೆಡ್ಮಾಸ್ಟರ್ ಕಬಾಟದ ಎಡೆಯಲ್ಲಿದ್ದ ಎರಡು ಮೂರು ಬೆತ್ತಗಳಲ್ಲಿ ಒಂದನ್ನು ಆರಿಸಿ ತೆಗೆದರು. ಆದರೆ ಬೆತ್ತದ ಬಿಸಿಗೂ ಮೊದಲೇ ಮುರಲಿ ಕರಗಿ ಹೋಗಿದ್ದ. ಎಟನ ಕೈಯನ್ನು ತಿಕ್ಕಿಕೊಳ್ಳುತ್ತಾ ಬಿಕ್ಕಳಿಸುತಿದ್ದ.

"ನಿಂತಿರು ಆ ಮೂಲೆಯಲ್ಲಿ, ಕತ್ತೆ!"

ಕತ್ತೆ ಆಫೀಸಿನ ಮೂಲೆಯಲ್ಲಿ ನಿಂತಿತು.

ಒಂದೊಂದೇ ಬೆಲ್‌ಗಳು ಮುಗಿದು ಶಾಲಾ ಪ್ರಾರಂಭವಾಯಿತು ಆಗಲೇ ಹೆಡ್ಮಾಸ್ಟರ ಸೂಚನೆಯಂತೆ ಒಂದು ಅಪರಾಧೀ ಬೋರ್ಡು ತಯಾರಾಗಿತ್ತು.

ಒಂದು ಸ್ಲೇಟಿಗೆ ಹಗ್ಗ ಕಟ್ಟಿ ಅದನ್ನು ಮುರಲಿಯ ಕುತ್ತಿಗೆಗೆ ಸಿಕ್ಕಿಸಿದರು. ಸ್ಲೇಟಿನಲ್ಲಿ 'ನಾನು ಕಳ್ಳ. ವಾಚನಾಲಯದ ಪುಸ್ತಕಗಳನ್ನು ಕದ್ದಿದ್ದೇನೆ. ಯಾರೂ ನನ್ನಂತೆ ಕಳಬಾರದು" ಎಂದು ಬರೆದರು.

"ಹೋಗು ಎಲ್ಲ ಕ್ಲಾಸುಗಳಿಗೂ ಹೋಗಿ ತೋರಿಸಿ ಬಾ"—ಆಜ್ಞೆ ಪಾಲಿಸಲೇ ಬೇಕಿತ್ತು.

ಮತ್ತೊಮ್ಮೆ ಗದರಿಸಿಕೊಂಡು ಹೊರಟ ಮುರಲಿ. ಒಂದು, ಎರಡು, ಮೂರು —ಪ್ರತಿ ಕ್ಲಾಸಿನಲ್ಲೂ ಆ ಬರೆಹದ ಒಕ್ಕಣೆಯನ್ನು ತಾನೇ ಓದಿ ಹೇಳುವಾಗ ಕಣ್ಣೀರ ಕೋಡಿ ಹರಿಯುತ್ತಿತ್ತು ಆತನ ಕಣ್ಣುಗಳಿಂದ!

ಎಂಟನೆಯ ತರಗತಿ! ಅಲ್ಲಿ ವಿಮಲಾ ಕುಳಿತಿದ್ದಳು. ಆದರೆ ಅವಳತ್ತ ಮುಖ ತಿರುಗಿಸುವಷ್ಟು ತಾಳ್ಮೆಯೂ ಆತನಿಗೆ ಉಳಿದಿರಲಿಲ್ಲ.

ಅವಳೇ.....ಇದಕ್ಕೆಲ್ಲ ಅವಳದೇ ಚಾಡಿ.....

ಕ್ಷಣ ಕ್ಷಣಕ್ಕೂ ಅಕ್ಕನ ಬಗ್ಗೆ ಅವನ ಕೋಪ ಏರುತಿತ್ತು. ತನ್ನ ಕಳ್ಳತನದ ವಿಚಾರ ಆಕೆಗೊಬ್ಬಳಿಗಲ್ಲದೆ ಬೇರಾರಿಗೂ ತಿಳಿದಿರಲಿಲ್ಲವೆಂಬುದೇ ಅವನ ನಂಬುಗೆಯಾಗಿತ್ತು.

ಇಡಿ ದಿನ ಆತನ ತುಟಿ ಪಿಟ್ಟೆನ್ನಲಿಲ್ಲ. ತನ್ನ ಗೆಳೆಯರೊಡನೆಯೂ ಮಾತಿಲ್ಲ. ಅಕ್ಕನ ಮುಖವನ್ನಂತೂ ನೋಡಲೇ ಇಲ್ಲ. ಅವಳಾಗಿ ನುಡಿಸ ಬಂದರೂ ಒಡನೆಯೇ ಸಿಡುಕಿ ನುಡಿಯುವನು—"ಹೋಗು, ನಿನ್ನೊಡನೆ ಏನೂ ಬೇಕಿಲ್ಲ!" ತಮ್ಮನ ಈ ಮಾತಿನಿಂದ ಮತ್ತಷ್ಟು ನೊಂದು ಹಾಗೆಯೇ ಹಿಂದಿರುಗುವಳು ವಿಮಲಾ.

ಆ ದಿನ ಹಾಗೆಯೇ ಜಾರಿತು; ಸಂಜೆಯಾಯಿತು. ಊಟದ ಶಾಸ್ತ್ರ ಮುಗಿಸಿ ಮಲಗಿದ ಮುರಲಿಗೆ ದಿನದ ಘಟನೆ ಮತ್ತೆ ಮರುಕಳಿಸಿತು.

ಆ ಸಾವಿರ ಕಣ್ಣುಗಳೆದುರು ತನಗಾದ ಅಪಮಾನ...ಆ ಹೆಡ್ಮಾಸ್ಟರರ ಬೆತ್ತದ ಛಡಿಯೇಟು...ತಾನು ಎಂಟನೆಯ ತರಗತಿಗೆ ಹೋದಾಗ ಅಲ್ಲಿ ತನ್ನ ಅಕ್ಕ ತನ್ನನ್ನು ತೋರಿಸಿ ಗೆಳತಿಯರೊಡನೆ ಹಾಸ್ಯ ಮಾಡಿರಬಹುದು.....

ಪಾಪ! ಆ ಸಮಯ ವಿಮಲೆ ಬೆರಗಾಗಿ ನೊಂದ ದಿಟ್ಟಿಯಿಂದ ತಮ್ಮನನ್ನೇ ನೋಡುತಿದ್ದಳೆಂಬುದನ್ನು ಆತ ತಿಳಿದಿರಲಿಲ್ಲ; ಕಂಡಿರಲಿಲ್ಲ

ಈಗ ಅದೇ ನೆನಪು—ಮಿದುಳಿನಲ್ಲಿ ರಕ್ತ ಸಂಚಾರ ಭರದಿಂದ ಸಾಗಿದಂತೆ ಮುರಲಿಯ ಕಣ್ಣೀರು ಕೋಡಿ ಹರಿಯುತಿತ್ತು. ಗಟ್ಟಿಯಾಗಿಯೇ ಬಿಕ್ಕಳಿಸತೊಡಗಿದ.

ಪಕ್ಕದ ಕೋಣೆಯಲ್ಲಿ ವಿಮಲಾ ಮಲಗಿದ್ದಳು. ಆಕೆಗೂ ನಿದ್ರೆ ಬಂದಿರಲಿಲ್ಲ. ತಮ್ಮನ ಅಳುವಿನ ದನಿಯನ್ನು ಕೇಳಿ ಹಾಸಿಗೆಯಲ್ಲೇ ಎದ್ದು ಕುಳಿತು ಆಲಿಸಿದಳು.

ಹೌದು, ಮುರಲಿ ಅಳುತ್ತಿದ್ದಾನೆ. ಆ ದಿನದ ಘಟನೆಯನ್ನು ಅವಳೂ ನೆನಸಿಕೊಂಡಳು. ಅವಳ ಕಣ್ಣುಗಳಲ್ಲೂ ನೀರು ಒಂದೇ ಸವನೆ ಉದುರತೊಡಗಿತು.

ಮೆಲ್ಲನೆ ಅಲ್ಲಿಂದೆದ್ದು ತಮ್ಮನ ಕೋಣೆಗೆ ಹೋಗಿ ಆತನ ಹಾಸಿಗೆಯ ಮೇಲೆ ಕುಳಿತಳು. ಮುರಲಿಯ ಬೆನ್ನ ಮೇಲೆ ಕೈಯಾಡಿಸುತ್ತಾ "ಮುರಲೀ" ಎಂದು ಮೇಲು ದನಿಯಲ್ಲಿ ಕರೆದಳು.

ಮುರಲಿ ಕ್ಷಣ ಹೊತ್ತು ಅಕೆಯ ಮುಖವನ್ನು ದಿಟ್ಟಿಸಿ ನೋಡಿ ಮುಖ ತಿರುಗಿಸಿಕೊಂಡ. ಆತನ ಅಳು ಮತ್ತೂ ಮೇರೆ ಮೀರಿತು.

"ಮುರಲೀ...ಅದುದಾಯಿತು ... ಮಲಗು"

ವಿಮಲೆಗೆ ಆತನನ್ನು ಸಮಾಧಾನ ಪಡಿಸುವುದು ಅಸಾಧ್ಯವಾಗಿತ್ತು. ಪುನಃ ನೋಗಿ ಮಲಗಿಕೊಂಡಳು.

ಮುರಲಿಯ ಅಳು ಕ್ರಮೇಣ ಶಾಂತವಾಗತೊಡಗಿತು. ಆದರೆ ಅದರ ಸ್ಥಾನದಲ್ಲಿ ಮತ್ತೊಂದು ಭಾವ ಹೆಡೆಯಾಡುತಿತ್ತು.

ಅಕ್ಕ! ಎಂತಹ ಚಾಡಿಕೋರೆ ನೀನು! ಅಬ್ಬಾ! ನೀನು ಹೇಳದಿದ್ದರೆ ಹೀಗೆಲ್ಲಾ ಆಗುತಿತ್ತೇ? ನೀನೇ ಇಷ್ಟೆಲ್ಲಾ ತಂದೊಡ್ಡಿದೆ! ನಿನಗೂ ಮಾಡಿಸುತ್ತೇನೆ ನೋಡುತ್ತಿರು!

ಕಟಕಟೆನೆ ಹಲ್ಲುಕಡಿದ ಮುರಲಿ! ಆತನ ಉದ್ವೇಗ ವೇರೆ ಮೀರಿತ್ತು. ಹಾಸಿಗೆಯಲ್ಲಿ ಎದ್ದು ಕುಳಿತು ಯೋಚಿಸತೊಡಗಿದ—

ಅಕ್ಕನಿಗೀಗ ನಿದ್ರೆ ಬಂದಿರಬಹುದೆ....

ಮಾರನೆಯ ದಿನ ಸುಪ್ರಭಾತದಲ್ಲಿ ವಿಮಲಾ ಉತ್ಸಾಹದಿಂದಲೇ ಎದ್ದಳು. ಶಾಲಾರಂಭದ ದಿನಗಳಲ್ಲಿ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಪಾಠಗಳ ಕಡೆ ಎಂತಹ ಉತ್ಸಾಹವೆಂಬುದನ್ನು ವಿದ್ಯಾರ್ಥಿಗಳಾಗಿಯೇ ಅನುಭವಿಸಿ ತಿಳಿಯಬೇಕು! ಆ ದಿನ ಭಾರತದ ರಾಜಕೀಯ ಗಡಿ ವಿಭಾಗದ ನಕಾಶೆಯನ್ನು ಬಿಡಿಸಿ ತರ ಹೇಳಿದ್ದರು ಉಪಾಧ್ಯಾಯರು. ಹಿಂದಿನ ದಿನ ಸಂಜೆ ವಿಮಲಾ ಅರ್ಧಾಂಶ ಬರೆದು ಮುಗಿಸಿ ಮಲಗಿದ್ದಳು. ಅದನ್ನು ಪೂರ್ಣಗೊಳಿಸುವ ಆತುರದಲ್ಲೇ ಎದ್ದಳು, ಆ ಬೆಳಗಿನಲ್ಲಿ!

ಆದರೆ ತೆರೆದಿರಿಸಿದ್ದ ಎಟ್ಲಾಸ್ ಕಣ್ಮರೆಯಾಗಿತ್ತು!

ಇಡಿ ಮನೆಯನ್ನೇ ಅಡಿ ಮೇಲು ಮಾಡಿ ಹುಡುಕಾಡಿದಳು ಮುರಲಿಯನ್ನು ಕೇಳಿದಳು. ಊಹೂಂ ಸಿಗಲಿಲ್ಲ.

ಅಡಿಗೆ ಮನೆಗೆ ಹೋಗಿ ತಾಯಿಯನ್ನು ಕೇಳಿದಳು. ಆದರೆ ಎಟ್ಲಾಸ್ ಕಣ್ಮರೆಯಾಗಿತ್ತು.

ರಂಗರಾಯರು ನೋಷಾಕನ್ನು ಧರಿಸಿ ಏನೋ ಅವಸರದ ಕೆಲಸಕ್ಕಾಗಿ ಹೊರಟಿದ್ದರು. ಎಟ್ಲಾಸ್ ಕಾಣೆಯಾದ ಸುದ್ದಿ ಅವರ ಕಿವಿಗೆ ತಲುಪಿದ್ದರೂ ಏನೂ ಹೇಳದೆ ಹೋಗಿಬಿಟ್ಟರು.

ವಿಮಲೆಗೆ ಆ ದಿನ ಜೀವ ಕಳೆಯೇ ಇದ್ದಿರಲಿಲ್ಲ. ಅವಳ ಆ ಮ್ಲಾನ ವದನವನ್ನು ನೋಡುತ್ತಲೇ ಮುರಲಿಯ ಮನಸ್ಸು ಏನೋ ಒಂದು ತರಹ ಹೊಡೆದಾಡುತಿತ್ತು. ಆದರೂ ತುಟಿ ಪಿಟ್ಟೆನ್ನದೆ ಮೌನವಾಗಿದ್ದ.

ರಂಗರಾಯರು ಹಿಂತಿರುಗುವಾಗ ರಾತ್ರಿ ಎಂಟು ಗಂಟೆಯಾಗಿತ್ತು. ಇಡಿ ದಿನ ಬಳಲಿ ಬಂದು ಜಾವಡಿಯಲ್ಲಿ ಕುಳಿತು ನಿಟ್ಟುಸಿರು ಬಿಟ್ಟರು. ಹೋದ ಕೆಲಸವಾಗದೆ ಅವರ ಮನಸ್ಸೂ ತಾಳ ತಪ್ಪಿತು. ಬಾಗಿಲ ಬಳಿ ಮುದುರಿ ಕುಳಿತ ವಿಮಲೆಯನ್ನು ಕಂಡಾಗ ಬೆಳಗಿನ ಎಟ್ಲಾಸಿನ ಹುಡುಕಾಟದ ನೆನಪಾಯಿತು. ಅವರಿಗೆ.

"ವಿಮಲಾ, ಎಲ್ಲಿ ನಿನ್ನ ಎಟ್ಲಾಸ್ ತಾ"

ವಿಮಲಾ ಮಿಡುಕಾಡಲಿಲ್ಲ. ಪತ್ತೊಮ್ಮೆ ಅದೇ ಪ್ರಶ್ನೆ ಬಿರುಸಿನಿಂದ ಬಂತು. ಆಗ ನಡುನಡುಗುತ್ತ ವಿಮಲಾ ತೊದಲಿದಳು—

"ಎಟ್ಲಾಸು ಕಾಣುವುದಿಲ್ಲ ಅಪ್ಪಾ"

ರಂಗರಾಯರು ತಟ್ಟನೆ ಎದ್ದರು. ಅಂಗಳವಿಳಿದು ಬೇಲಿಯ ಗಿಡದಿಂದೊಂದು ತೋರಣೆಯ ಕೋಲನ್ನು ಮುರಿದು ತಂದು "ಠಪಠಪ"ನೆ ನಾಲ್ಕಾರು ಬಾರಿ ಬೀಸಿದರು ಎಟನ ಹೊಡೆತಕ್ಕೆ ಚೀರಿ ವಿಮಲಾ ಒದ್ದಾಡಿದಳು. ಗಿಂಜಾ ಅಡಿಗೆ ಮನೆಯಿಂದ ಧಾವಿಸಿ ಬಂದು ಗಂಡನ ಪೆಟ್ಟಿಗೆ ತನ್ನ ಮೈಯನ್ನೊಡ್ಡಿ, "ಕೊಲ್ಲವಿರಾ ಮಗುವನ್ನು? ಅ ೀನು ದನ ಅಂತ ತಿಳಿದಿರಾ" ಎಂದಾಗಲೇ ರಂಗರಾಯರು ಕೊಲನ್ನು ಬಿಸುಟರು.

ಮುರಲಿ ಆ ರಾತ್ರಿ ಇಡಿ ತನ್ನ ಹಾಸಿಗೆಯಲ್ಲಿ ಹೊರಳುತ್ತಾ ಬಿಕ್ಕಳಿಸಿ ಅಳುತಿದ್ದದು ರಂಗರಾಯರಿಗೂ ಕೇಳಿಸುತ್ತಿತ್ತು, ವಿಮಲೆಗೂ ಕೇಳಿಸುತಿತ್ತು. ಪ್ರಾಯಶಃ ಆತ ಹಿಂದಿನ ರಾತ್ರಿಗಿಂತಲೂ ಹೆಚ್ಚಾಗಿ ಆ ರಾತ್ರಿ ಅತ್ತಿದ್ದ'

ಮಾರನೆಯ ದಿನ ವಿಮಲೆಯ ಮೈಮೇಲೆ ನಾಲ್ಕಾರು ಕಡೆ ಕರ್ರಗಿನ ಬಾಸಳುಗಳೆದಿದ್ದುದನ್ನು ಕಂಡು ರಂಗರಾಯರ ಕಣ್ಣೂ ಹನಿಗೂಡಿರಬೇಕು. ಅಂತೂ ಸಂಜೆ ಬರುವಾಗ ಅವರೊಂದು ಹೊಸ ಎಟ್ಲಾಸನ್ನು ತಂದಿದ್ದರು.

ಮುರಲಿಯೂ ಎಟ್ಲಾಸನ್ನು ಅಕ್ಕನ ನುಡಿಲಲ್ಲಿರಿಸಿ, "ಅಕ್ಕಾ! ಕ್ಷಮಿಸುತ್ತಾ ನನ್ನ!" ಎಂದು ಅಕೆಯನ್ನು ತಬ್ಬಿ ಹಿಡಿದು ಗೋಳೆಂದು ಗೋಗರೆದು ಅತ್ತ.

ವಿಮಲೆಯ ಕಣ್ಣೆಂದಲೂ ನೀರು ಸರಿಯುತಿತ್ತು.

ದಿ ವಿಜಯ ಬೇಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬೇಂಕ್. ಸ್ಥಾಪನೆ: 1931

ರಿಜಿಸ್ಟರ್ಡ್ ಆಫೀಸು:

ವಿಜಯ ಬೇಂಕ್ ಬಿಲ್ಡಿಂಗ್, ಲೈಟ್ ಹೌಸ್ ಹಿಲ್ ರೋಡ್,

ಮಂಗಳೂರು-3, ಸೌತ್ ಕೆನರಾ.

ಕಾಯಂ ಠೇವಣಾತಿ ಬಡ್ಡಿ ದರವನ್ನು ಶೇಕಡ 5¼ರ ವರೆಗೆ ಹೆಚ್ಚಿಸಲಾಗಿದೆ.

ಏಳು ದಿವಸದ ನೋಟೀಸಿನಲ್ಲಿ ಕೇಳಿದಾಗ್ಯೆ ಹಿಂದೆ ಪಡೆಯುವ ಡಿಪೋಸಿಟುಗಳನ್ನು (Call Deposits) ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸೋಣಾಗುತ್ತದೆ.

ಹೆಚ್ಚಿನ ಮಾಹಿತಿಗೆ ನಮ್ಮ ಶಾಖೆಗಳಲ್ಲಿ ದಯವಾಡಿ ವಿಚಾರಿಸಿರಿ.

NAVAYUGA, UDIPI.
REGD. NO.BG. 176

14-9-1961

LICENSE NO. 31
Licensed to Post without Prepayment

ಭಾರತ ದರ್ಶನ

ನವದೆಹಲಿಯಲ್ಲಿ ಭಾರತದ ರಾಷ್ಟ್ರೀಯ ಪತ್ರಾಗಾರವಿದೆ. ಈ ಪತ್ರಾಗಾರದಲ್ಲಿ ಈಗ ಚಾಲ್ತಿಯಲ್ಲಿಲ್ಲದ ರಾಷ್ಟ್ರ ಮಹತ್ವದ ದಾಖಲೆ ಪತ್ರಗಳಿವೆ, ಇವನ್ನು ಒಂದರ ಪಕ್ಕದಲ್ಲಿ ಒಂದನ್ನು ಇಡುತ್ತಾ ಬಂದರೆ ೧೬ ಮೈಲುಗಳ ಉದ್ದದಷ್ಟು ಸ್ಥಳ ಬೇಕಾಗುವುದು. ಈ ದಾಖಲೆ ಪತ್ರಗಳು ಮತ್ತು ಹಸ್ತ ಪ್ರತಿಗಳು ೧೭ಶತಮಾನದಿಂದ ಈ ಚಿನ ಅವಧಿಗೆ ಸಂಬಂಧಪಡುತ್ತವೆ.

ಪ್ರಾಚೀನವಾದ ಈ ದಾಖಲೆ ಪತ್ರಗಳನ್ನು ಜೋಪಾನವಾಗಿ ಸಂರಕ್ಷಿಸಿಡುವ ಉದ್ದೇಶದಿಂದ ರಾಷ್ಟ್ರೀಯ ಪತ್ರಾಗಾರದಲ್ಲಿ ಅತ್ಯಾಧುನಿಕ ಉಪಕರಣಗಳನ್ನು ಬಳಸಲಾಗುತ್ತಿದೆ. ಈ ಉಪಕರಣಗಳಲ್ಲಿ ಸೂಕ್ಷ್ಮರೂಪದ ಚಿತ್ರಗಳನ್ನು ತಯಾರಿಸುವುದು, (ಮೈಕ್ರೋ—ಫಿಲ್ಮಿಂಗ್) ಮತ್ತು ಕ್ರಿಮಿಕೀಟಾದಿಗಳು ದಾಖಲೆ ಪತ್ರಗಳನ್ನು ತಿಂದು ಹಾಕುವುದನ್ನು ತಪ್ಪಿಸುವುದಕ್ಕಾಗಿ ಕೀಟ ನಾಶಕಗಳನ್ನು ಹೊಗೆಯ ರೂಪದಲ್ಲಿ ಬಳಸುವುದು ಫ್ಯೂಮಿಗೇಷನ್ ಇತ್ಯಾದಿಗಳಿವೆ.

ಮೊದಲನೆಯ ಚಿತ್ರದಲ್ಲಿ ನವದೆಹಲಿಯಲ್ಲಿರುವ ಭಾರತದ ರಾಷ್ಟ್ರೀಯ ಪತ್ರಾಗಾರದ ಭವನವನ್ನು ಕಾಣಬಹುದು.

ಎರಡನೆಯ ಚಿತ್ರದಲ್ಲಿ ಅತಿ ಪ್ರಾಚೀನ ಕಾಲದ ಭೋಜ ಪತ್ರಗಳನ್ನು ಕೆಡದಂತೆ ಮಾಡಲು ವಿಶೇಷ ವಿಧಾನವೊಂದನ್ನು ಬಳಸುತ್ತಿರುವುದನ್ನು ಕಾಣಬಹುದು.

ಕ್ರಿಮಿಕೀಟಗಳನ್ನು ನಾಶಪಡಿಸುವುದಕ್ಕಾಗಿ ಅರೆಯೊಂದರಲ್ಲಿ ದಾಖಲೆಪತ್ರಗಳನ್ನಿಟ್ಟು ಅವುಗಳ ಮೇಲೆ ವಿಷಮಾಂತ ಅನಿಲವೊಂದನ್ನು ಹಾಯಿಸಲು ಸಿದ್ಧಪಡಿಸುತ್ತಿರುವುದನ್ನು ಮೂರನೆಯ ಚಿತ್ರದಲ್ಲಿ ಕಾಣಬಹುದು.



ಇಲ್ಲವೆಂದರೆ ಪಾಪವಿಲ್ಲ

ಸ್ನೇಹಮಯಿಯೊಡ ತಾಯಿಯ ಮುಖದಿಂದ ಹೊರ ಬೀಳುವ 'ಇಲ್ಲ'ವೆಂಬ ಶಬ್ದವು ಮಗುವನ್ನು ಉಚಿತ ಮಾರ್ಗದಲ್ಲಿ ಮುಂದುವರಿಯಲು ಸಹಾಯ ಮಾಡುವುದು. ಮಗುವಿನ ಪ್ರತ್ಯೇಕ ಬೇಡಿಕೆಯನ್ನೂ ಪೂರೈಸುವುದು ಅದರ ಹಿತದೃಷ್ಟಿಯಿಂದಲೇ ಅಪಾಯಕರ.

ಅತ್ಯಧಿಕ ಪ್ರೀತಿ—ವಾತ್ಸಲ್ಯಗಳಿಂದ ನೀವು ನಿಮ್ಮ ಮಗುವಿನ ಎಲ್ಲ ಅಪೇಕ್ಷೆಗಳನ್ನೂ—ಅವುಗಳ ಉಚಿತಾನುಚಿತಗಗಳನ್ನು ಗಮನಿಸದೆ—ಪೂರೈಸಿಕೊಡುವ ಪರಿಪಾಟವನ್ನು ಹಾಕಿದಿರೆಂದರೆ, ನಿಮ್ಮ ಪ್ರೀತಿಯ ಮಗು ಒಂದು ಗಂಭೀರ ಸಮಸ್ಯೆಯನ್ನೇ ಮುಂದಿಟ್ಟಿತು ಎಂದು ತಿಳಿಯಿರಿ. ನೀವು, ನಾನು ಮೊದಲೇ ಎಚ್ಚರಿಕೆಯಿಂದಿರಬೇಕಿತ್ತು ಎಂದು ಪಶ್ಚಾತ್ತಾಪಪಡಬೇಕಾದೀತು.

ಒಬ್ಬಾಕೆಯಿದ್ದಳು. ಅವಳು ತನ್ನ ಮಕ್ಕಳ ಬಾಯಿಯಿಂದ ಏನಾದರೂ ಬೇಕೆಂಬ ನುಡಿ ಹೊರ ಬಿದ್ದುದೇ ತಡ, ಅವನ್ನು ಒದಗಿಸಿಕೊಡುತಿದ್ದಳು 'ಅಭಾವ' ವೆಂಬುದನ್ನೇ ಅವು ತಿಳಿಸಿರಲಿಲ್ಲ. ಅವುಗಳು ತಮ್ಮ ತಾಯಿ ಮುಖದಿಂದ 'ಇಲ್ಲ' ವೆಂಬುದನ್ನು ಕೇಳಲೇ ಇಲ್ಲ. ಇದರಿಂದಾಗಿ ಅವುಗಳ ಬೇಡಿಕೆ ಹನುಮಂತನ ಬಾಲದಂತೆ ದಿನದಿಂದ ದಿನಕ್ಕೆ ಬೆಳೆಯುತ್ತ ಹೋದುವು. ಮಾರ್ಗದಪಕ್ಕದಂಗಡಿಯಲ್ಲಿ ಒಂದು ಗೊಂಬೆ ನೋಡಿತು, ಬೇಕೆಂದು ನುಡಿದು ನಿಂತು ಬಿಟ್ಟಿತು. ಅದು ಕೈ ಸೇರಿದ ನಂತರವೇ, ಮುಂದಿನ ಹೆಜ್ಜೆಯಿಡಬೇಕು. ಹೀಗೆಯೇ ತಿಂಡಿಯಂಗಡಿಯೆದುರಲ್ಲಿ. ಹಲಬೊಮ್ಮೆ ಅಕೆಗೆ ನಾಚಿಗೆಯೆನಿಸುತಿತ್ತು. ಆದರೆ, ಏನನ್ನೂ ಮಾಡಲು ಅಕೆ ಅಸಮರ್ಥಳಾಗಿದ್ದಳು.

ಪ್ರಾರಂಭದಲ್ಲಿಯೇ ಮಕ್ಕಳ ಎಲ್ಲ ಬೇಡಿಕೆಗಳನ್ನೂ ಪೂರೈಸುವುದನ್ನು ಬಿಟ್ಟು, ಆವಶ್ಯಕ ಮತ್ತು ಉಚಿತವೆನಿಸಿದವುಗಳನ್ನು ಮಾತ್ರ ಒದಗಿಸಿಕೊಡುತಿದ್ದರೆ, ಇಂತಹ ವಿಷಮ ಪರಿಸ್ಥಿತಿ ಬರಲಾರದು. ಮಗುವು ಹಠ ಮಾಡಿದರೂ ಉಚಿತ ದಂಡನೆಯನ್ನು ವಿಧಿಸಿದೊಡರೂ ಅನುಚಿತವಾದುದನ್ನು ಕೇಳದಂತಹ ಅಭ್ಯಾಸವನ್ನು ಬಾಲ್ಯಾವಸ್ಥೆಯಲ್ಲೇ ಮಗುವಿನಲ್ಲಿ ತಾಯಿಯಾದವಳು ಮೂಡಿಸಬೇಕು. ಆಗ ಮಗುವಿನ ವರ್ತನೆ ಹಾಗೂ ಜೀವನವು ಕುಟುಂಬಕ್ಕೆ ವಿಷಮ ಸಮಸ್ಯೆಯೆನಿಸಲಾರದು. ಪೇಟೆಗೆ ಹೋಗುವಾಗ ಇಲ್ಲವೇ ಬರುವಾಗ ಮಗು ಚಿಂತೆಯಲ್ಲಿದ್ದರೆ ತಿಂಡಿತಿನಸುಗಳನ್ನೂ ಸಾಮಾನ್ಯವಾಗಿ ತೆಗೆದುಕೊಡಲೇಬಾರದು. ಪೇಟೆಯ ತಿಂಡಿತೀರ್ಥಗಳನ್ನು ಮಗುವಿಗೆ ಒದಗಿಸಲೇಬಾರದು. ಮನೆಯಲ್ಲೇ ಮಗುವಿಗೆ ರುಚಿಕರವಾದ, ಆರೋಗ್ಯಕರವಾದ ತಿಂಡಿತಿನಸುಗಳನ್ನು ಮಾಡಿಕೊಡುವುದರಿಂದ ಅದು ಮುಂದೆ ಬೀದಿಯ ತಿಂಡಿಗೆ ಮರುಳಾಗಲಾರದು; ಆರೋಗ್ಯವನ್ನೂ ಕೆಡಿಸಿಕೊಳ್ಳಲಾರದು.

ಮಗುವಿನ ಬೇಡಿಕೆಗೆ ಇಲ್ಲವೆನ್ನುವುದಕ್ಕೆ ತಾಯಿ ಮನಸ್ಸು ಒಪ್ಪದಿರಬಹುದು. ಆದರೆ, ಅದರ ಬೇಡಿಕೆಯೆಲ್ಲವನ್ನೂ ಪೂರ್ಣಗೊಳಿಸುವುದು ಪುಣ್ಯಕಾರ್ಯವೂ ಅಲ್ಲ, "ಇಲ್ಲ ಆಗದು" ಎನ್ನುವುದು ಪಾಪಕೃತ್ಯವೂ ಅಲ್ಲ. ಮೊದ ಮೊದಲಿಗೆ ತಾಯಿಯು ತುಸು ಸಂಕೋಚಪಡಬೇಕಾಗಿ ಬಂದರೂ ಭವಿಷ್ಯದಲ್ಲಿ ಅಕೆ ಉತ್ತಮ ಆದರ್ಶ ಮಾತೆಯೆನಿಸಿಕೊಳ್ಳಬಲ್ಲಳು. ತೊಟ್ಟಿಲು ತೂಗುವ ಕೈಯೆ ಸಾಮ್ರಾಜ್ಯವಾಳುವ ಕೈಯೆಂಬುದನ್ನು ಅಕೆ ಸ್ವಯಂ ಅನುಭವದಿಂದ ಕಂಡುಕೊಳ್ಳುವಳು. 'ತಾಯಿ ತೊಡೆಯೇ ಮೊದಲ ಶಾಲೆ' ಎಂಬ ಗಾದೆಯ ಸತ್ಯತೆಯನ್ನರಿತು, ಮಗುವಿನ ಇಚ್ಛಾಪೂರ್ತಿಯ ಸಂಬಂಧದಲ್ಲಿ ತಾಯಂದಿರು ಎಳವೆಯಲ್ಲೇ ಎಚ್ಚರಿರುವುದು ಅವರ, ಮಕ್ಕಳ ಮತ್ತು ದೇಶದ ದೃಷ್ಟಿಯಿಂದ ಹಿತಕರ.

ಹೆಚ್ಚು ಬಡ್ಡಿ ಸಹಾ.....

3%

ಸೇವಿಂಗ್ಸ್ ಬ್ಯಾಂಕ್ ಖಾತೆಯಲ್ಲಿನ
ಅನೇಕ ಅನುಕೂಲತೆಗಳ ಜೊತೆಗೆ
ಇತ್ತೀಚೆಗೆ ಬಡ್ಡಿಯ ದರವನ್ನು
ಸಹಾ ಹೆಚ್ಚಿಸಲಾಗಿದೆ.
ಈಗ ಸೇವಿಂಗ್ಸ್ ಬ್ಯಾಂಕ್ ಖಾತೆಯಲ್ಲಿ
ನೀವು ಸಾ. ಸೇ. ಮೂರರ ದರದಲ್ಲಿ
ಬಡ್ಡಿಯನ್ನು ಪಡೆಯುವಿರಿ.

ಸೇವಿಂಗ್ಸ್ ಬ್ಯಾಂಕ್ ಖಾತೆಯನ್ನು ತೆರೆಯಿರಿ.

ಸಿಂಡಿಕೇಟ್ ಬ್ಯಾಂಕ್

ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸ್: ಮುಕುಂದ ನಿವಾಸ, ಉಡುಪಿ, (ಮೈಸೂರು ರಾಜ್ಯ)
ಸ್ಥಾಪನೆ: 1925.

Edited Printed & Published by K. H. Shetty, at the Navayuga Press, Udipi, S. India.

ರಾಷ್ಟ್ರೀಯಕ್ಕೆವಾರಪತ್ರಿಕೆ. ಬೆಲೆ: 13 ನ.ಪೈಸೆ

ನವಯುಗ

KANNADA — NAVAYUGA — WEEKLY

ಸಂಪುಟ ೪೧ ಸಂಚಿಕೆ ೩ | ಉಡುಪಿ 21—9—1961 ಗುರುವಾರ | Vol. 41 No. 3

ನಿಮ್ಮ ಯಾವತ್ತೂ
ಮುದ್ರಣ ಕೆಲಸಗಳಿಗೆ
ದಯಮಾಡಿ ವಿಚಾರಿಸಿರಿ:
ನವಯುಗ ಪ್ರೆಸ್,
ಉಡುಪಿ

ವಿದ್ಯಾರ್ಥಿಗಳಿಗೆ
ಮತ್ತು ವಯಸ್ಕರಿಗೆ
ಅತ್ಯುಪಯೋಗೀ ಪುಸ್ತಕ
ಸುಲಭದಲ್ಲಿ ಇಂಗ್ಲಿಷ್
ನವಭಾರತ ಪುಸ್ತಕ ಭಂಡಾರ
ಉಡುಪಿ

ಕಟಾಂಗದಲ್ಲಿ ಭೀಕರತೆ ಕವಿದಿದೆ

ಕಾಂಗೊ ಒಕ್ಕೂಟದಿಂದ ಸಿಡಿದು ಹೋದ ಕಟಾಂಗದ ನೆಲವು ನೈಸರ್ಗಿಕ ಸಂಪತ್ತಿಯಾದ ತಾಮ್ರದ ಆದಿರಸಿಂದ ತಾಮ್ರವರ್ಣವಾಗಿದ್ದರೆ, ಅಲ್ಲಿನ ಅಧ್ಯಕ್ಷ ಶೋಂಬೆಯವರು ಅಗನ್ನು ರಕ್ತಮಯವನ್ನಾಗಿ ಮಾಡಲು ಮುಂದುವರಿದಿದ್ದಾರೆ. ಜಪಾನಿನ ಹಿರೋಷಿಮಾ ಮತ್ತು ನಾಗಸಾಕಿಗಳ ಮೇಲೆ ದ್ವಿತೀಯ ಜಾಗತಿಕ ಸಂಗ್ರಾಮದ ಮೇಳೆ ಎಸೆದ ಅಣುಬಾಂಬಿಗೆ ಅವಶ್ಯಕವಾದ ಯುರೇನಿಯಂ ಧಾತುವನ್ನು ಒದಗಿಸಿದ ಕೀರ್ತಿಯು ವಾಸ್ತವಿಕವಾಗಿ ಕಟಾಂಗಕ್ಕೆಸೇರಬೇಕಾದುದು. ಅಣುಯುಗದಲ್ಲಿ ಯುರೇನಿಯಂ ರಕ್ತನದಿಯನ್ನು ಹರಿಸಲು ನೆರವಾಗುವಂತೆ ಕಟಾಂಗದ ಪ್ರತಿಯಂಗುಲ ನೆಲವೂ ರಕ್ತರಂಜಿತವೆನಿಸುವ ನರಹತ್ಯೆಗೆ ನಾಂದಿಯಾಯುವ ದುರ್ಘಟನೆಗಳಿಗೆ ಶೋಂಬೇಕಾರಣರಾಗಿದ್ದಾರೆ.

ಕಾಂಗೊವಿಗೆಸ್ವಾತಂತ್ರ್ಯವನ್ನು ನೀಡುವ ಸಂದರ್ಭದಲ್ಲಿ ಬೆಲ್ಜಿಯನರಿಗೆ ಶೋಂಬೆಯಂತಹ ವ್ಯಕ್ತಿಯ ಅವಶ್ಯಕತೆಯಿತ್ತು. ತಮ್ಮ ಕೈಗೊಂಬೆಯಾಗಿ ಕಾಂಗೊವಿನ ಪ್ರಗತಿಗೆ ಕುಠಾರ ಪ್ರಾಯರಾದ ಶೋಂಬೆಯವರನ್ನು ಬೆಲ್ಜಿಯನ್ ಜನರು ವಿಶೇಷವಾಗಿ ಮನ್ನಿಸುವುದು ಹೆಚ್ಚಿನ ಮಾತೇನಲ್ಲ ಲಘುತ್ವದಿಂದ ಮಹತ್ವಿಕೆಯನ್ನು ಪಡೆಯಬೇಕು ಎಂಬ ಬೆಲ್ಜಿಯನ್ ಗಾದೆ ಮಾತಿನಲ್ಲಿ ವಿಶ್ವಾಸವಿಟ್ಟಿರುವ ಶೋಂಬೆಯವರ ಕಲ್ಪನೆಯೊಗ ಬುಡಮೇಲಾಗಿದೆಯೆನ್ನಬೇಕು. ಕಟಾಂಗ ಮತ್ತು ಕಾಂಗೊವಿನಲ್ಲಿ ಮೊದ ಮೊದಲು ಇವರ ಬಗ್ಗೆ ತುಸು ಅದರಾಭಿಮಾನಗಳು ಇದ್ದಿದ್ದರೆ, ಈಗ ಅವು ದೂರವಾಗುತ್ತ ಬರುತ್ತಿರುವುದೇ ಇದಕ್ಕೊಂದು ನಿದರ್ಶನ. ಇದರಿಂದಾಗಿಯೇ ಶೋಂಬೆಯವರು ನಾನಾ ಪ್ರಕಾರದ ಕಣ್ಣುಮುಚ್ಚಾಟೆಯ ಆಟವನ್ನು ಆಡತೊಡಗಿದ್ದಾರೆ. ಆವೆ ವಿಡಿಗಳಂತೆ ಅವರು ಒಮ್ಮೆ ಮಾಯವಾಗುತ್ತಾರೆ, ಮತ್ತೊಮ್ಮೆ ತಾನಿದ್ದೇನೆ ಎಂದು ಆರ್ಭಟಿಸುತ್ತಾರೆ. ಬೆಲ್ಜಿಯನ್ ಸೈನಿಕರ ವಜ್ರಕವಚ ತನಗಿದೆಯೆಂಬ ದೃಢನಂಬಿಕೆಯಿರುವಶೋಂಬೆಯವರ ಈ ಮಾಯಾ ಕ್ರೀಡೆಗೂ ಪೂರ್ಣವಿರಾಮ ಬೀಳುವ ದಿನ ಅತಿ ನಿಕಟದಲ್ಲಿದೆಯೆಂಬುದರಲ್ಲಿ ಸಂದೇಹವಿಲ್ಲ.

ನಂದುವ ದೀಪ ಹಿಗ್ಗುತ್ತಿರುವಂತೆ ಸಾಯಲಿರುವ ಸಿಂಹ ಗರ್ಜಿಸುವಂತೆ ಸೋಲಲಿರುವ ಶೋಂಬೆಯವರು ಸಂಯುಕ್ತ ರಾಷ್ಟ್ರ ಸಂಘಕ್ಕೆ ಎದುರಾಗಿ ಹೋರಾಡುವುದಾಗಿ ಘೋಷಿಸಿದ್ದಾರೆ; ಪಂಥಾಹ್ವಾನವಿತ್ತಿದ್ದಾರೆ ಮಾತ್ರವಲ್ಲ, ತಾನೇ ಕಟಾಂಗದ ಸೇನಾಧಿಪತ್ಯವನ್ನು—ಯುದ್ಧದ ನೇತೃತ್ವವನ್ನು ವಹಿಸುವುದಾಗಿ ಹೇಳಿದ್ದಾರೆ. ಕಂಟಾಗದಲ್ಲಿ ಬಂದಿಳಿದ ಸಂಯುಕ್ತ ರಾಷ್ಟ್ರಸಂಘದ ಸೇನೆಯನ್ನು ಹಿಂತೆಗೆಯುವುದಾದರೆ, ಮಾತ್ರ ಒಡಂಬಡಿಕೆಯನ್ನು ಮಾಡಿಕೊಳ್ಳಬಹುದು ಎಂದವರು ಸ್ಪಷ್ಟಪಡಿಸಿದ್ದಾರೆ. ಅವರೂ ಎಲಿಜಬೆಥ್‌ವಿಲೆಯಲ್ಲಿ ಸಂಯುಕ್ತ ರಾಷ್ಟ್ರ ಸಂಘ ಮತ್ತು ಕಟಾಂಗದ ನಾಯಕರ ನಡುವೆ ಭಯಾನಕ ಯುದ್ಧಾಗ್ನಿಯು ಭುಗಿಲೆನ್ನುತ್ತಿದೆ. ವಿಮಾನ ನಿಲ್ದಾಣಗಳು ಕೂಡ ಸುವ್ಯವಸ್ಥಿತವಾಗಿ ಉಳಿದಿಲ್ಲ. ಕಟಾಂಗವು ಬೆಲ್ಜಿಯನ್ ಸೈನಿಕರನ್ನು ತಮ್ಮ ಸಹಾಯಕ್ಕೆರಿಸಿಕೊಂಡಿದ್ದರೆ, ಅವರನ್ನು ಹೊರಗಟ್ಟಬೇಕೆಂದು ಸಂಯುಕ್ತ ರಾಷ್ಟ್ರ ಸಂಸ್ಥೆಯ ಆದೇಶವಿದೆ.

ಈ ನಡುವೆ ಕಾಂಗೋಲೀ ಪಾರ್ಲಿಮೆಂಟು ಸಭೆ ಸೇರಿ ಕಟಾಂಗದಲ್ಲಿ ಹೋರಾಡುತ್ತಿರುವ ಸಂ. ರಾ. ಸಂಘದ ಸೇನೆಯ ಸಹಾಯಾರ್ಥವಾಗಿ, ಕಾಂಗೋಲೀ ಸೇನೆಯನ್ನು ಕಳಿಸಬೇಕೆಂದು ಪ್ರಾರ್ಥಿಸಿಕೊಂಡಿತು. ಆದರೆ ಕಟಾಂಗದಲ್ಲಿ ಕಾಂಗೋಲೀ ಸೇನೆಯು ಯಾವುದೇ ಕಾರಣದಿಂದ ಪ್ರವೇಶಿಸುವುದು ಅನುಚಿತವೆಂಬುದರಿಂದ ಕಾಂಗೋ ಸರಕಾರವು ಇದಕ್ಕೆ ಒಪ್ಪಲಿಲ್ಲ. ಸಂ. ರಾ. ಸಂಘದ ಪ್ರಧಾನ ಕಾರ್ಯದರ್ಶಿ ಡಾಗ್ ಹೆಮ್ಮರ್‌ಶೀಲ್ಡರು ನ್ಯೂಯಾರ್ಕಿಗೆ ಹೊರಡಬೇಕಾಗಿದ್ದರೂ ಕಟಾಂಗದ ವಿಷಮ ಪರಿಸ್ಥಿತಿಯಿಂದಾಗಿ ನಿಯೋಜಿತ ಸಮಯದಲ್ಲಿ ಪ್ರಯಾಣ ಬೆಳೆಸಲಾಗಲಿಲ್ಲ.

ಕಾಂಗೋವಿನ ಪ್ರಶ್ನೆಯು ಆರಂಭದಲ್ಲಿ ಜಟಿಲವಾಗಿ ಕಂಡುಬಂದಿದ್ದರೂ, ಸಂಯುಕ್ತರಾಷ್ಟ್ರ ಸಂಘದ ಪ್ರವೇಶಾನಂತರ ಅದು ಸಾಧಾರಣ ಸ್ಥಿತಿಗಿಳಿಯುವುದೆಂಬ ಆಶಯವಿತ್ತು. ಕೆಲ ದಿನಗಳ ಮಟ್ಟಿಗಾದರೂ ಈ ಸಮಸ್ಯೆ ಸಂಧಾನ-ಶಾಂತ ವಿಧಾನದಲ್ಲಿಯೇ ಬಗೆಸರಿಯಬಹುದೆಂಬ ಆಶೆಯಿತ್ತು. ಆದರೆ, ಶೋಂಬೆಯವರ ದುರಾಗ್ರಹದಿಂದಾಗಿ, ಅವರನ್ನು ಪ್ರಚೋದಿಸಿ, ತಮ್ಮ ಆಶಯವನ್ನು ಪೂರೈಸಿಕೊಳ್ಳುವ ಬೆಲ್ಜಿಯನರಿಂದಾಗಿ ಈ ಪ್ರಶ್ನೆ ಮೊದಲಿಗಿಂತಲೂ ಜಟಿಲವಾಗುತ್ತ ಬರುತ್ತಿದೆ. ಕಟಾಂಗದ ಅಧ್ಯಕ್ಷ ಶೋಂಬೆಯವರು ತಮ್ಮ ನಿರ್ಧಾರವನ್ನು ಬದಲಾಯಿಸದೆ ಹೋದರೆ, ತನ್ನ ದೇಶದಲ್ಲಿ ಮಾತ್ರವಲ್ಲ, ಇಡಿಯ ಜಗತ್ತಿನಲ್ಲಿ ತನ್ನ ಹೆಸರಿಗೆ ಕಳಂಕ ಹಚ್ಚಿಸಿಕೊಳ್ಳುವರು ಅಪಹಾಸ್ಯಕ್ಕೆ ಈಡಾಗುವರು. ಸಮಸ್ಯೆಗಳನ್ನು ಬೆಳೆಸುತ್ತ ಹೋಗುವುದರಿಂದ ಪ್ರಶ್ನೆ ಬಗೆಹರಿಯುವುದಿಲ್ಲ; ಅದನ್ನು ಅಲ್ಲಿಂದಲ್ಲಿಯೇ ಕೊನೆಗಾಣಿಸುವುದರಿಂದ ಮಾತ್ರ ಶಾಂತಿಸ್ಥಾಪನೆಯೊಗಬಲ್ಲುದು. ಬರ್ಲಿನ್ ಪ್ರಶ್ನೆಯಂತಹ ಮಹಾ ಸಮಸ್ಯೆಯ ಕುರಿತು ಕೆನ್ನೆಡಿ—ಕ್ರುಶ್ಚೇವರು ಮಾತುಕತೆ ನಡೆಸಿ ಅದನ್ನು ಪರಿಹರಿಸಿಕೊಳ್ಳಲು ಸಿದ್ಧರಿದ್ದಾರೆನ್ನುವಾಗ, ಶೋಂಬೆಯವರು ಸಂ. ರಾ. ಸಂಘದ ವಿರುದ್ಧ ಹೊಡೆದ ಕಾಳಗದ ಪರಿಣಾಮ ಯಾವ ರೀತಿಯಲ್ಲಿ ಕೊನೆಗೊಂಡೀತು ಎಂಬುದನ್ನು ಊಹಿಸಿಕೊಳ್ಳಬಹುದು. ಆದರೂ ಕಾದಾಡುವುದಕ್ಕಿಂತ ಕೂಡಿಬಾಳುವುದು ಶ್ರೇಯಸ್ಕರವೆಂಬುದರಿಂದ ಶೋಂಬೆಯವರು ತನ್ನ ಇಂದ್ರಜಾಲ — ಮಹೇಂದ್ರಜಾಲಗಳಲ್ಲಿಟ್ಟಿರುವ ವಿಶ್ವಾಸವನ್ನು ಬಿಟ್ಟುಕೊಟ್ಟು ಕಾಂಗೋವಿನಲ್ಲಿ ಶಾಂತಿಯ ಪುನರ್‌ಸ್ಥಾಪನೆಯಾಗುವಂತೆ ಮಾಡುವುದು ಅಗತ್ಯವಿದೆ.

ಕಾಂಗೋವಿನ ಪರಿಸ್ಥಿತಿವಿಪನ್ನವಾಗುತ್ತಿದ್ದಂತೆಯೇ ಸಂ.ರಾ.ಸಂಘವುಅಲ್ಲಿಹೋರುತ್ತಿರುವ ನೀತಿಯುವಿರುದ್ಧ ಬ್ರಿಟನ್ನಿನಲ್ಲಿಭರದಿಂದ ಪ್ರಚಾರ ಕಾರ್ಯ ನಡೆಯತೊಡಗಿದೆ. ಶಾಂತಿಯಿಂದ ಸಮಸ್ಯೆ ಪರಿಹಾರಗೊಳ್ಳಬೇಕೆಂಬ ಕರೆಯು ಅಲ್ಲಿ ಪ್ರತಿಧ್ವನಿಸುತ್ತಿದೆಯಾದರೂ ಸಂಯುಕ್ತ ರಾಷ್ಟ್ರ ಸಂಘದ ಸೇನೆಯು ಬರ್ಬರತೆಯನ್ನು ತೋರಿಸುತ್ತಿದೆ ಎಂಬ ವಾರ್ತೆಯು ವರ್ಣರಂಜಿತವಾಗಿ ಅಲ್ಲಿ ಪ್ರಕಟಗೊಳ್ಳುತ್ತಿದೆ. ಪಾರ್ಲಿಮೆಂಟಿನ ಕೆಲವುಂದು ಸದಸ್ಯರು ಈ ಪ್ರಶ್ನೆಯ ಚರ್ಚೆ ನಡೆಸಲು ವಿಶೇಷಾಧಿವೇಶನ ಕರೆಯ ಬೇಕೆಂದು, ಇನ್ನು ಕೆಲವರು ಕಟಾಂಗದಲ್ಲಿ ನ ಸಂ. ರಾ. ಸಂಘದ ವರ್ತನೆಗೆ ಬ್ರಿಟನ್ನು ಸಹಮತವಿಲ್ಲವೆಂದು ತಿಳಿಸಬೇಕೆಂದು ಪ್ರಧಾನಿ ಮ್ಯಾಕ್‌ಮಿಲನರಿಗೆ ಪತ್ರಬರೆಯುತಿದ್ದಾರೆ. ಜರ್ಮನಿಯ ಪ್ರಶ್ನೆಗಿಂತಲೂ ಜಟಿಲವೆನಿಸುವ ಕಟಾಂಗದಲ್ಲಿ ಸಂಯುಕ್ತ ರಾಷ್ಟ್ರದ ಸತ್ವಪರೀಕ್ಷೆ ಮತ್ತೊಮ್ಮೆ ಆಗುತ್ತಿದೆಯೇ ಎಂಬ ಅನುಮಾನ ಬರಹತ್ತಿದೆ.

ಸಂಗೀತ ನಾಟಕ ಅಕಾಡೆಮಿ

ಭಾರತದ ಕಲಾಕ್ಷೇತ್ರದಲ್ಲಿ ಉತ್ತಮ ಕೃಷಿ ಮಾಡುವ ಸದುದ್ದೇಶದಿಂದ ಭಾರತ ಸರಕಾರವು ಮೂರು ಅಕಾಡೆಮಿಗಳನ್ನು ಸ್ಥಾಪಿಸಲು ನಿರ್ಧರಿಸಿತ್ತು. ಇದರಂತೆ ಮೊತ್ತಮೊದಲು ೧೯೫೨ರಲ್ಲಿ ಸಂಗೀತ ನಾಟಕ ಅಕಾಡೆಮಿಯು ರಚನೆಯಾಯಿತು. ಇದರ ನಂತರ, ಲಲಿತಕಲಾ ಅಕಾಡೆಮಿಮತ್ತು ಸಾಹಿತ್ಯ ಅಕಾಡೆಮಿಗಳೂ ರೂಪುಗೊಂಡುವು. ೧೯೫೨ರ ಮೇ ತಿಂಗಳ ೩೧ರಲ್ಲಿ ಸ್ಥಾಪಿತಗೊಂಡ ಸಂಗೀತ ನಾಟಕ ಅಕಾಡೆಮಿಯು ೧೯೫೫ರ ಜನವರಿ ತಿಂಗಳಿಂದ ಕಾರ್ಯಮಗ್ನವಾಯಿತು. ಮದ್ರಾಸ್ ಉಚ್ಚ ನ್ಯಾಯಾಲಯದ ನಿವೃತ್ತ ಪ್ರಧಾನ ನ್ಯಾಯಾಧೀಶರಾಗಿದ್ದ ಡಾ. ಪಿ. ಬಿ. ರಾಜಮನ್ನಾರರು ಈ ಅಕಾಡೆಮಿಯ ಕಾರ್ಯಕಾರಿ ಸಮಿತಿ ಮತ್ತು ಸಾಮಾನ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದರು. ಸುಶ್ರೀ ನಿರ್ಮಲಾ ಎಂಬವರು ಕಾರ್ಯದರ್ಶಿನಿಯಾಗಿದ್ದರು.

ಆದರೆ, ಇದೇ ತಾರೀಕು ೧೧ನೇ ದಿನಾಂಕದಿಂದ, ಈ ಅಕಾಡೆಮಿಯ ಸಂಚಾಲನಾ ವ್ಯವಸ್ಥೆಯಲ್ಲಿ ಪರಿವರ್ತನೆಯನ್ನು ಮಾಡಲಾಯಿತು. ಒಂದು ರಿಜಿಸ್ಟರ್ಡ್ ಸೊಸೈಟಿಯ ರೂಪದಲ್ಲಿ ಇದರ ಪುನರ್ಘಟನೆಯನ್ನು ಸಾಧಿಸಲಾಯಿತು. ಸದ್ಯ ೮ ಜನ ಸದಸ್ಯರಿರುವ ಒಂದು ಅಸ್ಥಾಯಿ ಕಾರ್ಯಕಾರಿ ಸಮಿತಿಯನ್ನು ರಚಿಸಿ, ಕರ್ನಾಟಕದ ರಾಜ್ಯಪಾಲ ಶ್ರೀ ಜಯಚಾಮರಾಜ ಒಡೆಯರರನ್ನು ಇದರ ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ. ನಿಯಮಿತ ಸಮಿತಿಯು ರೂಪಿಸಲ್ಪಡುವ ವರೆಗೆ ಈ ತಾತ್ಕಾಲಿಕ ಸಮಿತಿಯು ಅಸ್ತಿತ್ವದಲ್ಲಿರುವುದು. ಶ್ರೀ ಚಾಮರಾಜರ ನೇತೃತ್ವದಲ್ಲಿ ಪುನರ್ಘಟಿತವಾದ ಅಕಾಡೆಮಿ ತನ್ನ ಮೊದಲಿನ ದೋಷಗಳೆಲ್ಲವನ್ನೂ ದೂರಮಾಡಿ ಅಕಾಡೆಮಿಯು ಸ್ಥಾಪಿತವಾದ ಮಹೋದ್ದೇಶಗಳನ್ನು ಪೂರೈಸುವುದೆಂಬ ಆಶಯವನ್ನಿಟ್ಟುಕೊಳ್ಳಬಹುದು. ಮುಂದಿನ ವಾರದಲ್ಲಿ ಈ ಹೊಸ ಸೊಸೈಟಿಯ ಕಾರ್ಯಾಲಯವು ಹೆರೆಯಲ್ಪಡುವ ನಿರೀಕ್ಷೆಯಿದೆ.

ಅಕಾಡೆಮಿಯ ಪುನರ್ಘಟನೆಗೆಕಾರಣ ಯಾವುದೆಂದು ಸರಿಯಾಗಿ ತಿಳಿದುಬಂದಿಲ್ಲವಾದರೂ ಅಲ್ಲಿ ನಡೆದ ಆರ್ಥಿಕ ದುರುಪಯೋಗವೇ ಇದರ ಮೂಲವೆನ್ನಬಹುದು. ಮಾಜಿ ಕಾರ್ಯದರ್ಶಿನಿ ಸುಶ್ರೀ ನಿರ್ಮಲಾ ಮತ್ತು ಇನ್ನಿಬ್ಬರು ಪದಾಧಿಕಾರಿಗಳ ಮೇಲೆ ಆರ್ಥಿಕ ದುರುಪಯೋಗ ಸಂಬಂಧದಲ್ಲಿ ಹೂಡಿದ ದಾವೆಯು ದಿಲ್ಲಿಯ ಒಂದು ನ್ಯಾಯಾಲಯದಲ್ಲಿ ಇನ್ನೂ ನಿರಾಳೆಯಾಗಿಲ್ಲವೆಂಬುದನ್ನಿಲ್ಲಿ ಸ್ಮರಿಸಬಹುದು.

ಒರೆ ನೋಟದ ಜಾಲ

ಶ್ರೀಮತಿ ಯಶೋದಾ ಯನ್. ಜೆನ್ನಿ.

"ಅಬ್ಬ! ಎಂತಹ ಆಕರ್ಷಣೆ ಆ ನೋಟದಲ್ಲಿ..... ಏನು ವೈಯಾರ.... ಎಷ್ಟೊಂದು ನೋಹಕ ಸೌಂದರ್ಯ..... ಯೋಚಿಸಿದರೆ ರೋಮಾಂಚನವಾಗುತ್ತೆ!'

ಆ ಅಧ್ಯಾಪಕಿ ನಮ್ಮ ಶಾಲೆಗೆ ವರ್ಗವಾಗಿ ಬಂದು ನನ್ನ ತರಗತಿಯ ಪಕ್ಕದ ತರಗತಿಯಲ್ಲಿ ಕುಳಿತು ನನ್ನತ್ತ ನೋಡಿ ನಕ್ಕಾಗ.... ನಾನು ನನ್ನನ್ನೇ ಮರೆತು, ಸಭ್ಯತೆಯನ್ನೇ ಮರೆತು ಆಕೆಯನ್ನು, ಆ ಕೆಯ ಆ ಒರೆ ಕಣ್ಣೋಟವನ್ನು ಎವೆಯಿಕ್ಕದೆ ನೋಡಿದೆ. "ಏನು ಮಾಸ್ತರೇ? ಹೇಗೆ ನಿಮ್ಮ ಶಾಲೆ?" ಎಂದು ತಾನಾಗಿಯೇ ಮಾತನಾಡಿಸಿದ ಹೊಸ ಸ್ವರವನ್ನು ಅನಿರೀಕ್ಷಿತವಾಗಿ ಕೇಳಿದಾಗ ತಬ್ಬಿಬ್ಬಾಗಿ ಏನು ಹೇಳಲೂ ತೋರದೆ ಹೆಚ್ಚಾಗಿ ಹೋದೆ. ನನ್ನ ಅವಸ್ಥೆಯನ್ನು ನೋಡಿಯೋ ಏನೋ, ಆಕೆ ಪುನಃ ನಕ್ಕಳು.

ಅದೇಕೆ ಹೀಗಾಯಿತೋ.... ಸ್ಪಷ್ಟವಾದ ಕಾರಣವನ್ನು ಹೇಳುವಂತಿಲ್ಲ. ಅವಿವಾಹಿತ ಯುವಕನಾಗಿದ್ದ ನನ್ನನ್ನು ಯಾವವ ಹೆಣ್ಣೂ ಇಷ್ಟೊಂದು ಆಕರ್ಷಿಸಿರಲಿಲ್ಲವೆಂದರೆ ನಿಮಗೆ ನಗು ಬರಬಹುದೇನೋ! ಇಷ್ಟು ಮಾತ್ರ ನಿಜ. ನನ್ನಲ್ಲಿ ಹೆಣ್ಣಿನ ವಿಚಾರವಾಗಿ ಯಾವ ದೆಷ್ಟ ಭಾವನೆಗಳೂ, ಕೆಟ್ಟ ವಿಚಾರಗಳೂ ಸ್ವಲ್ಪವೂ ಇರಲಿಲ್ಲ. ಆದರೆ ನನ್ನ ಮನಸ್ಸಿನಲ್ಲಿ ಯಾರಿಗೂ ಹೇಳದೆ ಉಳಿದಿದ್ದ ಒಂದು ದೃಢ ನಿರ್ಧಾರ ನಿಶ್ಚಲವಾಗಿತ್ತು. 'ವಿದ್ಯಾವತಿಯಾದ ಬಾಳ ಗೆಳತಿಯನ್ನಾರಿಸಿ ಸಮರಸ ಜೀವನವನ್ನು ನಡೆಸಿ ಬಾಳು ಸ್ವರ್ಗವೆನ್ನುವಂತಾಗಬೇಕು' ಎಂಬುದು ನನ್ನಿಚ್ಛೆಯಾಗಿತ್ತು. ರಾಧಾ ವಿದ್ಯಾವತಿಯಷ್ಟೇ ಅಲ್ಲ, ರೂಪವತಿಯೂ ಆಗಿದ್ದಳು. ಊಹ್ಹೂ. ರೂಪಕ್ಕೂ ಮಿಗಿಲಾದ ಆಕರ್ಷಣೆ ಆ ನೋಟದಲ್ಲಿ ಅಥವಾ ನನಗೆ ಮಾತ್ರ ಹಾಗೆನಿಸಿತೇನೋ

ರಾಧಾ ನಮ್ಮ ಶಾಲೆಗೆ ಬಂದು ಒಂದು ತಿಂಗಳು ಕಳೆಯುವಷ್ಟರಲ್ಲಿ ನಾನು ತುಂಬ ಬದಲಾಗಿ ಹೋಗಿದ್ದೆ ಎಂಬುದರಲ್ಲಿ ಸಂಶಯವಿರಲಿಲ್ಲ. ವೇಷ ಭೂಷಣಗಳಲ್ಲಿ ಮೊದಲಿಲ್ಲದ ಆಸಕ್ತಿ, ಕನ್ನಡಿ ಇದಿರು ನಿಂತು 'ಕ್ರಾಪ್' ಬಾಚಿಕೊಳ್ಳಲು ಅರ್ಧತಾಸು ಸಮಯ, ಒಂದೇ ಮಾತಿನಲ್ಲಿ ಹೇಳುವುದಾದರೆ ಶೃಂಗಾರಪ್ರಿಯೆಯಾದ ರಾಧೆಯನ್ನು ಹೇಗಾದರೂ ಮೆಚ್ಚಿಸಿ ಬೇಗನೇ ಮದುವಣಿಗನಾಗಿ ಮೆರೆಯಬೇಕೆಂಬ ಹಂಬಲ ಬಲವಾಗಿತ್ತು.

ಆ ವಿಷಯವಾಗಿ ಯಾರೇ ಆಗಿರಲಿ, ಎಂತಹ ಅಡ್ಡಿಯನ್ನೇ ತಂದೊಡ್ಡಲಿ ನಾನಡಕ್ಕೆ ಕಿವಿಗೊಡಲು ಸಿದ್ಧನಿರಲಿಲ್ಲ. ನನಗಿದ್ದವರು ತಾಯಿಯೊಬ್ಬರೇ. ಆಕೆಯನ್ನೋ ಡಳೆಯ ಸಂಪ್ರದಾಯಸ್ಥೆ, ಅದರೆ ಮುದ್ದು ಮಗನ ಮನವಿಚ್ಛೆಗೆ ವಿರೋಧವಾಗಿ ನಡೆಯುವ ಶಕ್ತಿ ಆಕೆಗಿರಲಿಲ್ಲ. ಆದರೂ....ನಮಗಿಂತಸ್ವಲ್ಪ ಕೀಳ್ಜಾತಿಎನಿಸುವಂಥಳೆಯನ್ನು ಸೊಸೆಯಾಗಿತರಲುಒಪ್ಪುವುದು ಕುಸು ಪ್ರಯಾಸವೇ. ಏನೇ ಆದರೂ.... ನಾನು ನನ್ನ ನಿರ್ಧಾರವನ್ನು ಬದಲಿಸಲು ಸಿದ್ಧನಿರಲಿಲ್ಲ.

ನನ್ನ ನಡೆ, ನುಡಿಗಳಲ್ಲಾದ ಬದಲಾವಣೆಗಳನ್ನು ಸೂಕ್ಷ್ಮವಾಗಿ ಕಂಡುಕೊಂಡ ನನ್ನ ಸಹೋದ್ಯೋಗಿ ಗೆಳೆಯರೊಬ್ಬರು ನಗುತ್ತಾ ನುಡಿದರು.

"ಏನು ಇವರೇ.... ಬಹಳ ಬದಲಾಗಿದ್ದೀರಿ? ಸ್ವಲ್ಪ ಎಚ್ಚರವಾಗಿರಿ. ಬಲೆಯಲ್ಲಿ ಸಿಕ್ಕೀಬೇಡಿ." ನಾನು ಬೆಚ್ಚಿಬಿದ್ದೆ. ಏನು ಹಾಗೆಂದರೆ.... ನನ್ನ ಸವಿಗನಸನ್ನು ಕೆಡಿಸಲಿಚ್ಛಿಸಿದ ಆವರೊಡನೆ ಕಟುವಾಗಿ ಮಾತು ಮುಗಿಸುವ ಇಚ್ಛೆಯಾಯಿತು. ಆದರೂ ನನ್ನ ವಿವೇಕ ಅದನ್ನು ತಡೆಯಿತು. ಅಲ್ಲದೆ ನಾನು ರಾಧೆಯನ್ನು ಮದುವೆಯಾಗುವ ವಿಷಯ ಅವರಿಗೆ ತಿಳಿದಿರಲಿಲ್ಲ. ನಮ್ಮಲ್ಲಿ ಇನ್ನೂ ಒಬ್ಬಿಬ್ಬ ಹೊಣೆಗೇಡಿ ಅಧ್ಯಾಪಕ, ಅಧ್ಯಾಪಿಕೆಯರಿದ್ದಾರೆ. ಅವರ ನಡತೆಯ ವಿಷಯ ಬರೆಯಲೂ ನಾಚಿಕೆ ಎನಿಸುತ್ತೆ. ಸರಸ್ವತಿಯ ಮಂದಿರದಲ್ಲಿ ಪಶುಗಳಿಗಿಂತಲೂ ಕೀಳಾಗಿ ಬಾಳು ನಡೆಸುವ ಮಹಾನುಭಾವರು, ಅದೇ ದೃಷ್ಟಿಯಿಂದ ನಾನೂ ರಾಧೆಯನ್ನು ನೋಡುತ್ತೇನೆಂದೋ ಏನೋ....ಹೋಗಲಿ ಆವಿಚಾರ ಕೊಳೆತ ಹಣ್ಣು ಒಂದೇ ಸಾಕಾಗುತ್ತೆ ಒಳ್ಳೆಯ ಹಣ್ಣುಗಳನ್ನು ಕೆಡಿಸಲು, ಅಲ್ಲವೆ.

ಆದರೆ...ಒಂದು ವಿಷಯದಲ್ಲಿ ಮಾತ್ರ ನನಗೆ ತುಂಬ ಅಸಮಾಧಾನವಾಗಿತ್ತು. ಅಸಹ್ಯವೆನಿಸುತಿತ್ತು. ಬಿಡಿಸಲಾರದ ಸಮಸ್ಯೆಯಾಗಿತ್ತು. ರಾಧಾ ನನ್ನೊಬ್ಬನನ್ನೇ ಆಕರ್ಷಿಸಿರಲಿಲ್ಲ. ಒಬ್ಬಿಬ್ಬರು ಸದಾಚಾರ ಸಂಪನ್ನರನ್ನು ಬಿಟ್ಟರೆ ನಾಲ್ಕಾರು ಅವಿವೇಕಿ ಅಧ್ಯಾಪಕರೂ ಆಕೆಗಾಗಿ ಬಾಯಿ ಬಿಡುತ್ತಿದ್ದರು. ಅವಳನ್ನು ನೋಡಿದಾಗ ಅವರ ನಗ, ಮಾತುಗಾರಿಕೆ ಎಲ್ಲವೂ ಕೀಳ್ಮಟ್ಟದ್ದಾಗಿ ಕೇಳಲು ಅಸಹ್ಯವೆನಿಸುತಿತ್ತು. ಅದರಿಂದಾಗಿ ನನಗೆ ಸಿಟ್ಟು, ತಿರಸ್ಕಾರಗಳು ಉಕ್ಕೇರುತ್ತಿದ್ದವು. ಆದರೆ ....ಅಂತಹ ಜನಸಂಖ್ಯೆಯೇ ಹೆಚ್ಚಾಗಿರುವಾಗ ನಾನೇನು ಮಾಡಲು ಸಾಧ್ಯ.? ಆದರೆ...ರಾಧಾ....ತಿಳಿದೂ....ತಿಳಿದೂ ಅವರೆಲ್ಲರಲ್ಲೂ ಸಲಿಗೆಯಾಗಿದ್ದಾಳೆ. ಅಥವಾ ನನ್ನದೇ ದೃಷ್ಟಿದೋಷವೆನ್ನಲೇ? ಅಲ್ಲದೆ ಮದುವೆಯಾಗುವ ಮೊದಲೇ ನನ್ನ ಅಭಿಪ್ರಾಯಕ್ಕೆ ಸರಿಯಾಗಿ ನಡೆದುಕೊಂಡಿರಬೇಕೆಂದರೆ ಹೇಗೆ ಸಾಧ್ಯ? ಆ ದುಷ್ಟ ಜನರ ಕೆಟ್ಟ ವರ್ತನೆಯ ಅರ್ಥ ಅಕಗಾಗಿರಲಿಕ್ಕಿಲ್ಲ ಎಂದು ನಾನು ನನ್ನನ್ನೇ ಸಮಾಧಾನ ಪಡಿಸಿಕೊಂಡೆ. ಎಲ್ಲಾ ಸರಿ ಆದರೆ

ನನ್ನ ಭಾವನೆಗಳು ರಾಧೆಗರ್ಥವಾಗಿವೆಯೇ? ಅವಳು ಒಪ್ಪಿಯಾಳೇ?

ಯಾವ ಕೊರತೆಯೂ ನನ್ನಲ್ಲಿಲ್ಲ ಅಂದರೆ ನನ್ನನ್ನು ನಾನೇ ಹೊಗಳಿಕೊಂಡಂತಾಗಬಹುದು. ಮಾನವನಾಗಿ ಹುಟ್ಟಿದ ಮೇಲೆ ದೋಷಗಳು ಇದ್ದೇ ಇವೆ. ಆದರೆ ರಾಧೆಗೆ ಯೋಗ್ಯ ವರನಾಗಬಹುದಾದ ಯೋಗ್ಯತೆ ನನ್ನಲ್ಲಿತ್ತು ಎಂದು ನಾನು ಧೈರ್ಯವಾಗಿ ಹೇಳಬಲ್ಲೆ. ಅಷ್ಟೆ ಅಲ್ಲ. ಹಾಗಾದರೆ ಅದು ಅವಳ ಭಾಗ್ಯ ಎಂದು ಯಾರೂ ಹೇಳಬಹುದಾಗಿತ್ತು. ವಿದ್ಯಾವಂತ ಯೋಗ್ಯ ಯುವಕ ಬಡವರ ಹೆಣ್ಣಿಗೆ ತಾನಾಗಿ ಒಲಿದರೆ ಅದು ಅವಳ ಅದೃಷ್ಟವೆನ್ನಬಹುದಲ್ಲವೆ? ಏಕೆಂದರೆ ಹೆಣ್ಣಿಗಿಂತಲೂ ಹಣದ ಪ್ರಶ್ನೆಯೇ ಮುಖ್ಯವಾಗಿ ಮದುವೆಯನ್ನು ಇತ್ಯರ್ಥಗೊಳಿಸುವ ಈ ಕಾಲದಲ್ಲಿ ರಾಧಾಳನ್ನು ಯಾವ ಗೊಂದಲವೂ ಇಲ್ಲದೆ ನಾನಾಗಿ ಮದುವೆಯಾಗ ಬಯಸಿದರೆ ಅವಳಿಗೆ ಸಂತೋ

(೧೧ನೇ ಪುಟ ನೋಡಿರಿ)

ಪುತ್ತೂರು ಡಿ. ಮುಂ. ಕೋರ್ಟನಲ್ಲಿ
R. E. P. 192/61. O. S. 541/59.
ಶ್ರೀನಿವಾಸಯ್ಯ. —ಅರ್ಜಿದಾರ.

ಮೈದಿನ್ ಕುಞಿಬ್ಯಾರಿ ಕೂಡಾ—ಎದ್ರಿರು, ೩ನೇ ಎದ್ರಿ ಮುಮ್ಮುಂಞಾಬ್ಯಾರಿ ಅಬ್ದುಲ್ಲಾ ಬ್ಯಾರಿಯ ಮಗ, ಪುತ್ತೂರು ತಾಲೂಕು ಬೆಳ್ಳಾರೆ ಕಸಬಾ ಗ್ರಾಮದಲ್ಲಿ—ಇವರಿಗೆ ತಿಳಿಸುವುದೇನೆಂದರೆ:-

ದಿಕ್ಕಿಗೆ ಜವಾಬ್ದಾರಿ ಇರುವ ಆಸ್ತಿಯನ್ನು ಏಲಂ ಮಾಡುವರೆ ಅರ್ಜಿದಾರನು ದಾಖಲು ಮಾಡಿದ ಈ ಅಮಲ್ಜಾರಿಯು ತಾ. 25-9-61 ಕ್ಕೆ ಇರುವುದರಿಂದ ನಿಮಗೇನಾದರೂ ಆಕ್ಷೇಪಣೆ ಇದ್ದಲ್ಲಿ ಆ ದಿವಸ ಉದಯದಲ್ಲಿ ಕೋರ್ಟಿಗೆ ಬಂದು ತಪ್ಪಿದರೆ ನಿಮ್ಮ ಗೈರು ಹಾಜರಿಯಲ್ಲಿ ತೀರ್ಮಾನಿಸಲಾದೀತು.

ಬಿ. ಚಿದಾನಂದ ರಾವ್.
ಅರ್ಜಿದಾರನ ವಕೀಲ್

ಪುತ್ತೂರು 12—9—61



ಸ್ಥಾಪನೆ: 1924

ದಿ ಕರ್ಣಾಟಕ ಬೇಂಕ್ ಲಿಮಿಟೆಡ್

(ಶೆಡ್ಯೂಲ್ಡ್ ಬೇಂಕ್)

ರಿಜಿಸ್ಟರ್ಡ್ & ಹೆಡ್ ಆಫೀಸು: ಡೊಂಗರಕೇರಿ, ಮಂಗಳೂರು—3.

ಈ ಕೆಳಗಿನ ಏರಿಸಿದ ಬಡ್ಡಿದರಗಳಲ್ಲಿ ಠೇವಣಾತಿಗಳನ್ನು ಸ್ವೀಕರಿಸಲಾಗುವುದು.

ಒಂದರಿಂದ ಎರಡು ತಿಂಗಳುಗಳ ವರೆಗೆ	....	ಸಾ॥ ಸೇಕಡಾ 3-75	ನ.ವೈಸೆ
ಮೂರರಿಂದ ಐದು ತಿಂಗಳುಗಳ ವರೆಗೆ	....	,, 4-25	,,
ಆರು ತಿಂಗಳುಗಳಿಂದ 12 ತಿಂಗಳುಗಳ ವರೆಗೆ	....	,, 4-50	,,
12 ತಿಂಗಳು ಮಿಕ್ಕಿ 24 ತಿಂಗಳುಗಳ ವರೆಗೆ	....	,, 4-75	,,
24 ತಿಂಗಳು ಮಿಕ್ಕಿ 48 ತಿಂಗಳುಗಳ ವರೆಗೆ	....	,, 5-00	,,
48 ತಿಂಗಳುಗಳಿಗೆ ಮಿಕ್ಕಿ	....	,, 5-25	,,

ಸೇವಿಂಗ್ಸ್ ಬ್ಯಾಂಕ್ ಬಡ್ಡಿ ದರವನ್ನು ಸಾ. ಸೇಕಡ 2½% ರಿಂದ 3½%ಗೆ ಏರಿಸಲಾಗಿದೆ.

THE KARNATAKA BANK LIMITED.

ESTD. 1921 ಸ್ಥಾಪನೆ

NAVAYUGA
KANNADA WEEKLY,
UDIPI.

Founder:
Late Sri A. B. Shetty
Former Minister for Public Health, Govt. of Madras & Govt. of Mysore.

ನವಯುಗ
ರಾಷ್ಟ್ರೀಯ ವಾರಪತ್ರಿಕೆ
ಉಡುಪಿ

ಗೌರವ ಸಂಪಾದಕರು:
ಎಸ್. ಗೋವಿಂದ ರಾವ್, ವಿದ್ವಾನ್.
ಬಿ. ಶಾಮರಾಯ ಶೆಟ್ಟಿ, ಬಿ. ಎ., ಎಲ್.ಟಿ.

ಸಂಚಾಲಕ ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ.

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-50
ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3-50

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಹೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಸೂಚನೆ

"ನವಯುಗ"ದಲ್ಲಿ ಪ್ರಕಟಿಸಲಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ.ನ.

ಸರ್ವೋದಯ ಹಾಗೂ ಲೋಕ ಕಲ್ಯಾಣ

ಪರಿಪತಿ

ಮಹಾತ್ಮಾ ಗಾಂಧಿಯವರ ವಿಚಾರ ತತ್ವಗಳನ್ನು ಪ್ರತ್ಯಕ್ಷ ಆಚರಣೆಯಲ್ಲಿ ತರುವ ಬಗ್ಗೆ ಸರ್ವೋದಯದ ಚಳವಳಿ ಪ್ರಾರಂಭವಾಗಿದಯೆಂಬ ಸೈಜ ಅಬಿಪ್ರಾಯವನ್ನು ಯಾರೂ ಅಲ್ಲಗಳೆಯುವಂತಿಲ್ಲ. ಸರ್ವೋದಯದ ಆಚರಣೆ ಒಳಿತಿರಲಿ, ಕೆಡುಕಿರಲಿ, ಜನಸಾಮಾನ್ಯರಿಗೆಸ್ಪಯೋಜನವಿರಲಿ ಇಲ್ಲದಿರಲಿ—ಅದು ಗಾಂಧೀ ಮಾರ್ಗವೆಂಬುದಲ್ಲದೆ ಇನ್ನಾವುದನ್ನೂ ನಾವು ಅರಿಯೆವು. ಸರ್ವೋದಯದ ಮಹತ್ವ ಕಾಪಗಳು ಮಹಾತ್ಮಾ ಗಾಂಧಿಯವರಿಂದ ಬಂದಿವೆ. ಹೆಚ್ಚಾಗಿ ಗಾಂಧಿಯವರ ತತ್ವ-ವಿಚಾರಗಳೆಲ್ಲ ಕ್ರಾಂತಿಕಾರಕವೂ ಅಸಾಧಾರಣವೂ ಇದ್ದುವಲ್ಲದೆ ಅದನ್ನು ಕಾರ್ಯಕ್ರಮದಲ್ಲಿ ತಂದು ಆಚರಣೆಗೆ ಹಚ್ಚಲು ಕಠಿಣಪ್ರದವೂ, ಅನೇಕರಿಂದ ಅಸಮ್ಮತಿಗೊಂಡವೂ—ಹಲವು ಜನರಿಂದ ವಿರೋಧಗೊಂಡವೂ ಇದ್ದು, ಕೂನೆಯಲ್ಲಿ ಸತ್ತಿದ್ದ ಕಳೆ ತುಂಬಿ ಯಶಸ್ವಿ ಹೊಂದಿರುವವು ಇಂದು ಸರ್ವೋದಯವೂ ಅಂತಹದೇ ಆದ ಗಂಭೀರ ರಾಜಕೀಯ ಕ್ರಾಂತಿಯ ಮಟ್ಟದಲ್ಲಿ ಹಲವು ಅಸಮ್ಮತಿ ವಿರೋಧಗಳ ಮಧ್ಯೆ ಟೀಕೆಯನ್ನೂ ತಿರಸ್ಕಾರವನ್ನೂ ಎದುರಿಸಬೇಕಾಗಿದೆ ಬಹಳ ಜನರ ಮನದಲ್ಲಿ "ಸರ್ವೋದಯ"ವು ತನ್ನ ಪ್ರಭಾವವನ್ನು ಈಗಾಗಲೇ ಬೀರಿದೆಯಂಬುದು ಅನಂದದ ವಿಷಯ. ಆಚಾರ್ಯ ವಿನೋಬಾ ಬಾವೆ, ಹಾಗೂ ಶ್ರೀ ಜಯಪ್ರಕಾಶ ನಾರಾಯಣರು ಭಾರತದ ಬಯಲು ರಂಗದಲ್ಲಿ ಆಚರಣೆಗೆ ತರಲು ಎಲ್ಲರಿಗಿಂತ ಹೆಚ್ಚಾಗಿ ಶ್ರಮಿಸುತ್ತಿದ್ದಾರೆ

"ಭೂದಾನ—ಗ್ರಾಮದಾನ" ಚಳವಳಿಯು ಇತ್ತೀತ್ತಲಾಗಿನ ಗಾಂಧಿ ತತ್ವವಿಚಾರಗಳನ್ನೊಳಗೊಂಡ ರಾಷ್ಟ್ರನಿರ್ಮಾಣ ಕಾರ್ಯದಲ್ಲಿ ಹೊಸ ರೂಪರಂಗವನ್ನುಂಟುಮಾಡಿದೆ ಇದರಿಂದಾಗಿ ಆರ್ಥಿಕ ಕ್ರಾಂತಿಯದ್ದ ಸ್ಥಳದಲ್ಲಿ ಅತಿಕ್ರಮಣವನ್ನೆದುರಿಸಲು ವಿಶ್ವಕ್ಕೇ ಒಂದು ಚಮತ್ಕಾರದ ಪಾಠ ಲಭಿಸಿದೆ. ರಾಜಕಾರಣದ [ಲೋಕ ಶಕ್ತಿ] ಮೂಲಭೂತ ತತ್ವಗಳ ಬೇರು ಕಡಿಯುತ್ತಿದ್ದರೂ ವಿನೋಭಾ ಭಾವೆಯವರೊಬ್ಬ ರಾಜಕಾರಣಿಯೆಂದು ಯಾರೂ ಹೇಳುತ್ತಿಲ್ಲ. ಅವರೆ ಜಯಪ್ರಕಾಶರು ಸರ್ವೋದಯ ರಾಜಕಾರಣದ ರಾಯಭಾರಿತ್ವದಲ್ಲಿ ಮೇಧಾವಿಯೆನಿಸಿಕೊಂಡಿದ್ದಾರೆ ಅದಿಕಾರ ತತ್ವದ ರಾಜಕಾರಣತ್ವದಿಂದ ಅವರೆಷ್ಟು ದೂರ ಸರಿದಿದ್ದರೋ ಅಷ್ಟೇ ಸರ್ವೋದಯ ರಾಜಕಾರಣದಲ್ಲಿ ಪ್ರತಿಭಾಶಾಲಿಯಾಗಿ ಇಳಿದಿದ್ದಾರೆ. ಮೊದಲಿನಿಂದಲೂ ರಾಜಕಾರಣಿಗಳಾದ ಅವರು ಇಂದೂ ರಾಜಕಾರಣದಲ್ಲಿಎಲ್ಲರಲ್ಲಿಎತ್ತಿದಕೈ ಇಂದಿನದು ರಾಜಕಾರಣದ ಯುಗವಾದ್ದರಿಂದಲೂ, ಸರ್ವೋದಯದಲ್ಲಿ ಒಬ್ಬ ಪ್ರಭಾವಶಾಲೀ, ಸಮರ್ಥ ರಾಜಕಾರಣಿಯ ಅವಶ್ಯಕತೆಯಿದ್ದುದರಿಂದಲೂ, ಈ ಸಂದರ್ಭವು ಜಯಪ್ರಕಾಶರಿಗೆ ಅನೂಕೂಲವಾಯಿತು. ಶ್ರೀ ಜವಾಹರಲಾಲ ನೆಹರ ಗತಂತೆ ಇತ್ತಲಾಗಿ ಜಯಪ್ರಕಾಶರಿಗೂ ತಮ್ಮಗೇ ಅದ ಒಂದು ರಹಸ್ಯ ವ್ಯಕ್ತಿತ್ವ-ಹಾಗೂ ರಾಜಕಾರಣದ ಹೋರಾಟ ತಾಕಲಾಟಗಳಿಂದ ಮಹತ್ವದ ಸ್ಥಾನವಿದೆ ಯಾವ ಪ್ರಕಾರ ಶ್ರೀ ನೆಹರುರವರು ರಾಜಕಾರಣಿ ನಾಯಕರೆಲ್ಲರಿಗಿಂತ ಅಧಿಕವಾಗಿ ಯಾವದೊಂದು ಶಾಸ್ತ್ರಾನುಸರಣೆಯಿಲ್ಲದೆ ಸಮೂಜವಾದಿತ್ವವನ್ನು ಭಾರತದ ಜನತೆಯಲ್ಲಿ ಸಾರುತ್ತಿರುವರೋ, ಶ್ರೀ ಜಯಪ್ರಕಾಶರು ಸರ್ವೋದಯದ ಬಹಿರಂಗ ವ್ಯಾಖ್ಯಾನದಿಂದ ಜನತೆಯಲ್ಲಿ ಬಿಂಬಿಸುತ್ತಿದ್ದಾರೆ

ಕಳೆದ ಬಾರಿ ಆಂಧ್ರಪ್ರದೇಶದಲ್ಲಿ ನಡೆದ ಸರ್ವೋದಯದ ಗುರಿ ಅಖಿಲ ಭಾರತ ಸಮ್ಮೇಲನದಲ್ಲಿ ಜಟಿಲವಾದ ಸರ್ವೋದಯದ ಅರ್ಥವನ್ನು ವಿಸಧೀಕರಿಸಿ ಶ್ರೀ ಜಯಪ್ರಕಾಶ ನಾರಾಯಣರು—ಭಾರತ ಹಾಗೂ ವಿಶ್ವದ ಜನತಾವಾದದಲ್ಲಿ ಲೋಕ ಕಲ್ಯಾಣಕ್ಕಾಗಿ ಸರ್ವೋದಯ ಆಚಾರಣೆಯ ಅವಶ್ಯಕತೆಯನ್ನು ಸಾರಿರುವರು ಭಾರತದ ಸ್ವಾತಂತ್ರ್ಯ ರಕ್ಷಣೆ ಹಾಗೂ ಮುಖ್ಯ ಉದ್ದೇಶವಾದ ವಿಶ್ವ ಕಲ್ಯಾಣ ಕಾರ್ಯವು ಸರ್ವೋದಯದ ಗುರಿಯಾಗಿದೆ ಜಯಪ್ರಕಾಶರ ಮಾತುಗಾರಿಕೆಯಿಂದಾಗಿ ಶಹರ ಪಟ್ಟಣಗಳಿಂದ ದೇಶ ವಿದೇಶಗಳಲ್ಲಿ ರಭಸದಿಂದ ಸರ್ವೋದಯದ ತತ್ವಾಚರಣೆಗಳು— ಹುಟ್ಟುತ್ತಲಿದ್ದರೆ—ಹಳ್ಳಿ ಹಳ್ಳಿಗಳಲ್ಲಿ—ಪಾದಯಾತ್ರೆ—ಬೂಧಾನ ಗ್ರಾಮದಾನವೇ ಮೊದಲಾದ ಪ್ರತ್ಯಕ್ಷಾಚರಣಾ — ಸರ್ವೋದಯ ಕಾರ್ಯಕರ್ತರಿಂದ ಜನಸಾಮಾನ್ಯರೂ ಸರ್ವೋದಯದ ಆಚರಣೆಗೆ ಮುಂದೆ ಬರತೊಡಗಿದ್ದಾರೆ

ಅಂತೂ 'ಸರ್ವೋದಯವು' ರಾಜಕಾರಣದಲ್ಲಿಯ ಬೆದರಿಕೆ ತಿಕ್ಕಾಬಕ್ಕೆ ಹದರಿ—ಹಿಂಜರಿಯಲ ರನೆಂಬುದು ಪಂಡಿತ. ಸರ್ವೋದಯವು ಅಧಿಕಾರಯುಕ್ತ ರಾಜಕಾರಣಕ್ಕಿಳಿಯದಿದ್ದರೂ ಅದರ ಆಚರಣೆಯ ಅಸಮಾಧಾನಪಿಲ್ಲದೆ--ಪತಿತ ಗತಿಹೀನರಿಂದ ಹಿಡಿದು ಜನತೆಯನ್ನೆಲ್ಲ ಬಳಸಿಕೊಂಡು ಜನಹಿತಕ್ಕಾಗಿ ದೇಶಹಿತಕ್ಕಾಗಿ ದುಡಿಯುವ ರಾಜಕಾರಣಿ ಸಂಸ್ಥೆಯಾಗುವದು ಖಂಡಿತ ಇದು ರಾಜ್ಯಶಕ್ತಿಯ ಮೇಲಪ್ಪೆ ತನ್ನ ಪ್ರಭಾವವನ್ನು—ಬೀರದೆ—ಇಡಿ ಜನಶಕ್ತಿಯ ಮೇಲೆ ಬೀರುತ್ತ ಲೋಕ ಕಲ್ಯಾಣವನ್ನು ಕರಿತ—ಜನಸ್ವಾತಂತ್ರ್ಯದ ಹಕ್ಕು ಅಧಿಕಾರನ್ನು ಕುರಿತು ದುಡಿಯುವ ಸಂಸ್ಥೆಯಾಗಲಿದೆ

ಭಾರತೀಯ ಸಂಸ್ಕೃತಿಯ ಆಧಾರದ ಮೇಲೆ ನೆಯ್ದು—ತತ್ವವಿಚಾರಗಳನ್ನೊಳಗೊಂಡ ಈ ಸರ್ವೋದಯವು— ಲೋಕ ಹಿತಕ್ಕಾಗಿ ಜನಶಕ್ತಿಯನ್ನು ವೃದ್ಧಿಸಲು ಯೋಜಗಬೇಕೆಂಬುದೂ ತನ್ನದೇ ಆದ ತತ್ವ ವಿಚಾರಗಳನ್ನೊಳಗೊಂಡ ವೈಕ್ಷಿಕ ಆಚರಣೆಗಳಿಂದ ವಿಶ್ವದ ವಿವಿಧ ಭಾಗಗಳಲ್ಲಿ—ಆಚರಣಾ ಕಾರ್ಯ—ನಡೆಯುವೆಂಬುದೂ ಇದರ ಯೋಜನೆಯ ರೂಪವಾಗಿದೆ

ಸರ್ವೋದಯವೆಂದರೆ — ಸರ್ವರ ಉದಯ—ಜನತೆಯ ಸರ್ವಾಂಗೀಣ ಉನ್ನತಿ—ದೇಶ ವಿದೇಶಗಳಲ್ಲಿಯ ಜನತೆಯನ್ನು ಒಂದುಗೂಡಿಸಲು—"ಲೋಕಶಿಕ್ಷಣ" ಸಂಸ್ಥೆ ಸ್ಥಾಪಿಸುವದಾವಶ್ಯಕ—"ಲೋಕ ಶಿಕ್ಷಣ" ಸಂಸ್ಥೆಗಳಿಂದಲೇ ಜನತೋದ್ಧಾರ — ಸಾಧ್ಯ — ಅದೇ ಸರ್ವೋದಯದ ಗುರಿ—ಈ ಗುರಿಯನ್ನು ಮುಟ್ಟಲು—"ಶಾಂತಿಸೇನೆ"ಯ ನಿರ್ಮಾಣವಾಗಬೇಕು — ಲೋಕ ಶಿಕ್ಷಣಕ್ಕೆ "ಶಾಂತಿಸೇನೆಗಳನ್ನು ರಚಿಸಲೇ ಬೇಕು—ಶಾಂತಿಸೇನೆಯಿಂದ ಲೋಕಶಿಕ್ಷಣ ಸಾಧ್ಯ ಲೋಕಶಿಕ್ಷಣದಿಂದ ಜನಶಕ್ತಿಯ ಅಭಿವೃದ್ಧಿ — ಆದರಿಂದ ಗಿ — "ಸರ್ವೋದಯ"ದ ಪ್ರತ್ಯಕ್ಷಾಚರಣೆ--ರಾಷ್ಟ್ರನಿರ್ಮಾಣ ಕಾರ್ಯದಲ್ಲಿ ಪಂಚಾಯತ ರಾಜ್ಯಕ್ಕೆ ಪ್ರತಿಯೊಬ್ಬರೂ ಸಹಾಯಕಾರಿಗಳಾಗಬೇಕು.

ರಾಷ್ಟ್ರೀಯ ವಿಸ್ತರಣಾಯೋಜನೆಗಳು ಸರ್ವೋದಯದ ಒಂದು ಅಂಗವಾಗಿದ್ದು—ಅದು ಸರಕಾರದ ಅಧಿಕಾರದ ಮೇಲ್ಮಟ್ಟದಿಂದ ಪ್ರಾರಂಭವಾಗದೆ ಹಳ್ಳಿಯ ಕೂಲಿಕಾರರಿಂದ ಬಲಿತರ—ಪತಿತರ—ಅನಾಶ್ರಿತರಿಂದ ಪ್ರಾರಂಭವಾಗಿ ರಚರದ ದೊಡ್ಡ ದೊಡ್ಡ ಯೋಜನೆಗಳ ವರೆಗೆ ವಿಸ್ತರಿಸುತ್ತಿದೆ

ಸರ್ವೋದಯವೂ—ಗಾಂಧಿಯ ಸಂಸ್ಕೃತಿಯ ತಳಹದಿಯ ಮೇಲೆ ವಿಶ್ವಕಲ್ಯಾಣಕ್ಕಾಗಿ ದುಡಿಯುವ ಜನತಾ—ಸಮೂಹವಾಗಿದ್ದು— ವಿಶ್ವಶಾಂತಿ— ಜನಸ್ವತಂತ್ರತೆಯ ಮೂಲಭೂತ ಹಕ್ಕುಗಳ ರಕ್ಷಣೆಯ ಬಗ್ಗೆ ದುಡಿಯುತ್ತ—"ಜಯ ಭಾರತ" ಎನ್ನದೆ— "ಜೈ ಜಗತ್" ಅನ್ನುವ ಸಂಸ್ಥೆಯಾಗಿದೆ.

ಯಾವ ರೀತಿಯಲ್ಲಿ ಬ್ರಿಟಿಷ್‌ಸತ್ತೆ ನಡೆಯುವಂತಿಗೂ ಪ್ರಾರಂಭವಾದ ಇಂಡಿಯನ್ ನೇಶನಲ್ ಕಾಂಗ್ರೆಸ್ಸಿನ ಮಹಾತ್ಮಾ ಗಾಂಧಿಯವರ ಅಸಹಕಾರಿ ಚಳವಳಿಯಿಂದಾಗಿ ಸತ್ಯಾಗ್ರಹ ಪ್ರಾರಂಭವಾಗಿ ಭಾರತದ ಜನರೆಗೆ ಜನತಾ—ಸತ್ಯಾಗ್ರಹದಿಂದಾಗಿ ಸ್ವಾತಂತ್ರ್ಯ ದೊರೆತ್ತಿತ್ತೋ ಅದೇ ಪ್ರಕಾರ—ಜನ್ಯ ಸರ್ವತೋಮುಖ ಹಿತಕ್ಕಾಗಿ ದುಡಿಯುವ "ಸರ್ವೋದಯ" ತತ್ವದಿಂದ ಹಾಗಿ ಲೋಕ ಶಿಕ್ಷಣ ಲೋಕರಕ್ಷಣೆ ಜನತಾ ಜನಸ್ವಾತಂತ್ರ್ಯ ಲೋಕಸ್ವಾತಂತ್ರ್ಯ—ವಿಶ್ವಕಲ್ಯಾಣ ಸಾಧ್ಯವಾದೀತೆ?—

—(ಸಂಗ್ರಹಿಸಿದ್ದು)

ಪಶ್ಚಿಮ ಬರ್ಲಿನವಲ್ಲಿ ವಲಸೆಬಂದ ಪೂರ್ವ ಜರ್ಮನಿಯ ನಿರಾಶ್ರಿತರು

41 ವರ್ಷಗಳ ಭದ್ರ ಹಾಗೂ ಸಮರ್ಥ ಬೇಂಕಿಂಗ್ ಸೇವೆ

ದಿ. ಪಾಂಗಾಳ ನಾಯಕ್ ಬೇಂಕ್ ಲಿ.

ನಮ್ಮ 3 ವರ್ಷ ವ್ಯಾದೆಯ ಕೇಶ್ ಸರ್ಟಿಫಿಕೇಟುಗಳಲ್ಲಿ ರೇವಣೆ ಮಾಡಿದ ಬಡ್ಡಿ ಸೇಕಡಾ 5ರಂತೆ ರೂ 87—00 3 ವರ್ಷಗಳ ಅಂತ್ಯದಲ್ಲಿ ಬಡ್ಡಿ ಕೂಡಿ ರೂ 100—00 ಒದಗಿಸುವುದು.

ಕರೆ, ಚಿಕ್ಕ ವ್ಯಾದೆ, ನಿರಖು ರೇವಣಾತಿಗಳ ಮೇಲೆ ಆಕರ್ಷಣೀಯ ದರಗಳು ಬಡ್ಡಿ ಸೇಕಡಾ 5½ರ ವರೆಗೆ

ತಾ. 1—4—1961ರಿಂದ ಸೇವಿಂಗ್ಸ್ ಬೇಂಕ್ ಖಾತೆಗಳ ಮೇಲೆ ಬಡ್ಡಿ ಸೇಕಡಾ 3ರಂತೆ

THE PANGAL NAYAK BANK LTD.

Estd 1920

ಶ್ರೀ ಎ. ಬಿ. ಶೆಟ್ಟಿ ಸ್ಮಾರಕ ನಿಧಿಗೆ ಸಹಾಯ ಮಾಡಿರಿ

ಮನವೆಂಬ ಮರ್ಕಟ

ತಾನು, ತನ್ನದು, ತನಗಾಗಿ — ಈ 'ತನ್ನ' ತನದ ಹೋರಾಟದಿಂದಾಗಿ ಮಾನವ ವ್ಯಕ್ತಿಗಿಂತಲೂ ಕಡೆಯೂಗುತ್ತಿರುವುದು! ಕಲ್ಪನೆಯ ಕಾಡಿನಲ್ಲಿ, ಕಣ್ಣಿಗೆ ಆಕರ್ಷಕ, ಸ್ಪರ್ಶಕ್ಕೆ ಸುಖ, ಮನಸ್ಸಿಗೆ ಉಲ್ಲಾಸವಾಗಿ ಕಂಡು ಬಂದಂತಹದನ್ನು ತನಗಾಗಿ ಪಡೆಯಬಯಸಿದವರಾರು? ಉಸಿರಾಡುವ ಪ್ರತಿಯೋರ್ವನೂ, ಬೈರಾಗಿಯಂತೆ, ಎಲೆ ಬದುಕ ಬಯಸದೆ, ತುಂಬು ಜೀವನದ ತೃಪ್ತಿಯ ಸುಖ ಪಡೆಯಬೇಕು, ಸಿರಿಯ ಸುಪ್ತತ್ತಿಗೆಯಲ್ಲಿ ಲೀಲಾ—ವಿಲಾಸದಿಂದ ಮೆರೆಯಬೇಕು, ತನ್ನ ಸಂತೋಷ ಸ್ವರ್ಗವನ್ನು ಕಂಡು, ಕಣ್ಣಿರುವವರು ಬೆಕ್ಕಸ ಬೆರಗಾಗಿ ಬಾಯಿ ಬಿಡುವಂತಾಬೇಕೆಂದು ಕನಸು ಕಾಣುವುದು ಸ್ವಭಾವಿಕ!

ಬಯಕೆಯ ಬಲೆಯಲ್ಲಿ ಬಿದ್ದು, ಆಸೆಯ ಗೋಪುರ ಕಟ್ಟುತ್ತ, ಕರ್ತವ್ಯದ ಕಟ್ಟಲೆಯನ್ನು ತೊರೆದು, ಕೈಕಟ್ಟಿ ಕುಳಿತುಕೊಂಡು 'ಬೇಕೆಂದು' ಬಾಯಿ ತೆರೆದು ಕುಳಿತರೆ ಸುಖ ಪಡೆಯಲು ಸಾಧ್ಯವಾದೀತೆ?

ಬಯಸಿದ ಫಲಕ್ಕಾಗಿ, ಸುಲಭವಾಗಿ ಬಯಕೆ ಫಲಿಸದಿದ್ದರೆ, ನ್ಯಾಯ—ನೀತಿ—ನಿಯಮಗಳನ್ನು ತೊರೆಯಲು ಹಿಂಜಾರುವುದಿಲ್ಲ. ದುರಾಸೆಯಿಂದಲೇ, ಈ ಜುಗಾರಿ, ಸಟ್ಟ, ಇಸ್ಪೀಟ್ ಆಟಗಳು ಬೆಳೆದಿವೆ! ಕಳ್ಳತನ, ಮೋಸ, ವಂಚನೆ, ಕೊಲೆ ನಡೆದಿವೆ

ಆಸೆಯೇ ಅನಾಚಾರಕ್ಕೆ ಹೆದ್ದಾರಿ! ಪರರ ನಡೆ, ನುಡಿ, ಮಾತು-ಮಮತೆ, ಸುಖ-ಸಂತೋಷ, ವಿಲಾಸ—ವೈಭವ ಕಂಡು, ನನ್ನಂತೆಯೇ, ಅಲ್ಪ ವಿದ್ಯೆ ಕಲಿತ ಒಬ್ಬ ಕ್ಷುಲ್ಲಕ ಮನುಷ್ಯ, ತನಗಿಂತಲೂ ಸಿರಿ—ಸಂಪತ್ತಿನಿಂದ ಮೆರೆಯುತ್ತಿರುವಾಗ, ತಾನೇಕೆ ಅವನ ಸರಿಸಾಟಿಯಾಗ ಬಾರದು! ಯಾವ ಅರಿಯದ ಕರ್ಮಕ್ಕಾಗಿ ಈ ರೀತಿ ಪಾಡು ಪಾಡುತ್ತಿರಬೇಕು ಅವನಿಗಿಂತಲೂ ತಾನೊಂದು ಪಟ್ಟು ಮೇಲೇರ ಬಾರದೇಕೆ ಎಂದು ಬಹುಸಿ ಹಣಗಾಡಲು ಮುಂದಾಗಿ ಹುಚ್ಚನಂತಾಗುತ್ತಾನೆ. ದೊರಕದ ಫಲಕ್ಕೆ, ದೇವರಿಗೆ ಶರಣು ಹೋಗುವುದ ರೂಢಿ! ಆಸೆಯ ಅಂಧತೆಯಲ್ಲಿ ಭಕ್ತಿಯ ಭಾವ ಪ್ರದರ್ಶಿಸಿ, ತನ್ನ ಬಯಕೆ ಫಲಪ್ರದವಾದರೆ, ಸೇಕಡಾ ಒಂದು ಪಾಲು 'ಸೇವೆ' ಮಾಡಿಸುತ್ತೇನೆ ಎಂದು ಹರಕೆಯನ್ನು ಹೊತ್ತುಕೊಂಡು ಹೊಂಚು ಹಾಕುವರು! ತನ್ನ ಸ್ವಾರ್ಥ ಸಾಧನೆಗಾಗಿ ದೇವರಿಗೆ ಲಂಚದ ಆಸೆ!

ನಂಬಿದ ಭಕ್ತನನ್ನು ಉದ್ಧರಿಸುತ್ತಾನೆ ಕಾಣದ ಕೈಯಿಂದ ಅಭಯ ನೀಡುತ್ತಾನೆ ಅಗೋಚರವಾಗಿ ಸಿರಿಯನ್ನು ಹೊತ್ತು ತಂದು ಮನೆ ತುಂಬಿಸಿ ಮಾಯವಾಗುತ್ತಾನೆ ಎಂಬ ಹಿರಿಯೋಕ್ತಿಯಿದೆ! ನಿಷ್ಠೆಯಿಂದ ನಂಬಿ ಬಂದವನಿಗೆ ಸಹಾಯ ಮಾಡಿದ ಹಲವಾರು ಕತೆಗಳು ಬಳಕೆಯಲ್ಲಿದ್ದು, ನೊಂದವನಿಗೆ ನಿಜತೆಯನ್ನು ಸಾರುತ್ತಿದೆ! ಇಂತಹ ನಿದರ್ಶನಗಳಿಲ್ಲದಿದ್ದರೆ, ತಲೆ ತಲಾಂತರದಿಂದಹಿರಿದು ಬರದಿರುತಿದ್ದಿದ್ದರೆ, ಈ 'ದೇವರು' ಎಂಬುದನ್ನು ಆಧುನಿಕ ಯುಗದ ವಿಜ್ಞಾನಿಗಳು, ಸುಜ್ಞಾನಿಗಳು, ಅತಿ ಜ್ಞಾನಿಗಳು ಖಂಡಿತ ಮರೆತುಬಿಡುತ್ತಿದ್ದರು!

ನವನಾಗರಿಕತೆಯ ನಾಮಧಾರಿಯಾಗಿ ಇಂದಿನ ಜನಾಂಗ ಬೆಳೆಯುತ್ತಿದೆ! ನವ ನವೀನ ಸುಖದ ಸುಪ್ರತ್ತಿಗೆಗಳ ಸೃಷ್ಟಿಯಾಗುತ್ತಿದೆ! ಮಾನವನ ಮನೋಮಟ್ಟ ದಿನದಿಂದ ದಿನಕ್ಕೆ ವಿಚಿತ್ರವಾಗಿ ಬದಲಾಗುತ್ತಿದೆ! 'ದೇವರಿಲ್ಲ' ಎಂದು ಧೈರ್ಯೋಕ್ತಿ ನುಡಿಯುವವರು ಹೆಚ್ಚುತ್ತಿರುವರು!

ಸೊಬಗಿನ ವೈಭವಕ್ಕಾಗಿ, ತಮ್ಮ ಜೀವನ ಮಟ್ಟವನ್ನು ಬದಲಾಯಿಸಿಕೊಂಡವರು, ವಿದ್ಯಾರ್ಜನೆಯಿಂದ ಬುದ್ಧಿವಂತನಾಗಿ, ನೈಪುಣ್ಯದಿಂದಸಂಪದಭಿವೃದ್ಧಿಯನ್ನು ಪಡೆಯುವುದನ್ನು ಬಿಟ್ಟು ಇಂದು ವಾಮಮಾರ್ಗದಿಂದ, ಬೆವರು ಸುರಿಸದೆ, ತಲೆ ಉಪಯೋಗಿಸದೆ, ಅನಾಯಾಸವಾಗಿ ಹಣಗಳಿಸಿ ಸುಖಪಡೆಯಲು ಪೇಚಾಡುತ್ತಿರುವರು. ಕೈ ಕೆಸರಾಗದೆ ಬಾಯಿ ಮೊಸರಾಗಬೇಕು! ಪರರ ಸೊತ್ತಾಗಿ ಭದ್ರವಾಗಿರುವಂತಹ ಹಣವನ್ನು ಯಾವ ರೀತಿಯಿಂದ, ಮೋಸದ ವೇಷ ಧರಿಸಿಕೊಂಡು ಹಾರಿಸಬಹುದು ಎಂದು ಮಾರ್ಗಾನ್ವೇಷಣ ಮಾಡುತ್ತಿರುವರು.

ಮನುಷ್ಯ 'ಸುಖಜೀವಿಯಾಗುವುದು ಕೊನೆಯುಸಿರು ಎಳೆದ ನಂತರ! ಅದರ ಮೊದಲು ಎಲ್ಲವೂ ಬರಿಯ ಕಲ್ಪನೆ! ಈ ಪ್ರಪಂಚ ಜೀವಿಯ ಬಾಳು ನಾಲ್ಕು ದಿನದ್ದು! ತನ್ನ ಹುಳುಕು, ತಳಕು, ಬೆಳಕುಗಳನ್ನು ಅರಿತು, ಸರಿಯಾಗಿ ಎಚ್ಚೆತ್ತು ಕಣ್ಣು ತೆರೆಯುವುದರೊಳಗೆ ಎಲ್ಲ ಆಟವೂ ಮುಗಿದು ಹೋಗಿರುತ್ತದೆ!

ನವೀನತೆಗೆ ದಾಸಂಗಾದವರಲ್ಲಿ ಪ್ರಾಮಾಣಿಕತನದ ಲವಲೇಶವೂ ಕಾಣಲಾರೆವು! ಹೆಜ್ಜೆ ಹೆಜ್ಜೆಗೆ ಮೋಸದ ಪ್ರತಿಬಿಂಬ ಕಂಡು ಬರುತ್ತಿದೆ. ತನಗೆ 'ಬೇಕು' ಎಂದು ಕಂಡು ಬಂದುದನ್ನು ಬಾಯಿ ಮುಚ್ಚಿ ಪಡೆಯ ಬೇಕಲ್ಲದೆ, ಕಂಡು ಬಂದಂತಹ ಮೋಸವನ್ನು ಪ್ರತಿಭಟಿಸಲು ಎಡೆಯಿಲ್ಲ.

ಸತ್ಯವಂತರಾಗಿ, ಪ್ರಾಮಾಣಿಕರಾಗಿರಬಯಸುವರೂ ಬಯಸುತ್ತಾರೆ ಚಿಕ್ಕ ಮಕ್ಕಳಿಗೆ ಹಿರಿಯರು ! ಸತ್ಯವಂತರಾಗಿರಿ ಎಂದು ಬೋಧಿಸುತ್ತಾರೆ! ಉಪಾಧ್ಯಾಯರು ಪ್ರಾಮಾಣಿಕನಾದರೆ ಪರಮಾತ್ಮನ ಪ್ರೀತ್ಯಾದರಗಳನ್ನು ಪಡೆಯ ಬಹುದು ಎಂದು ಉಪದೇಶಿಸುತ್ತಾರೆ! ಬೋಧಿಸುವವರು ಮಾರ್ಗದರ್ಶಕರಾಗದಿದ್ದರೇನು ಪ್ರಯೋಜನ! ಮಕ್ಕಳ ಮುಂದೆಯೇ, ಹೆತ್ತವರಾಗಿಲೀ ಉಪಾಧ್ಯಾಯರಾಗಲೀ, ಅಪ್ರಾಮಾಣಿಕರಾಗಿ ನಡೆದರೆ ಏನನ್ನು ಸಾಧಿಸಿದಂತಾಗುತ್ತದೆ. ಹುಡುಗನಿಗೆ 'ಸಿಗರೇಟು ಸೇದಬೇಡ ಎಂದು ಪ್ರತಿಭಟಿಸುವ ತಂದೆ, ತಾನೂ ಆ ದುಃಶ್ಚಟವನ್ನು ಬಿಟ್ಟಿರಬೇಕು. ಎಡಬಿಡದೆ ಸಿಗರೇಟನ್ನು ಸೇವಿಸುತ್ತಿದ್ದರೆ, 'ತಾನೇಕೆ ಅವನಂತೆ ಸಿಗರೇಟು ಸೇದಬಾರದು' ಎಂದು ಮೂಡಿ ಬರುವಂತಹ ಉದ್ರೇಕ, ಹಿರಿಯರಕಣ್ಣುತಪ್ಪಿಸಿ, ಹೊಗೆ ಬಿಡಲು ಪ್ರೋತ್ಸಾಹಿಸುತ್ತದೆ

ನಮಗೆ 'ಬೇಕು' ಎಂದು ಕಂಡು ಬಂದುದನ್ನು ಹೋರಾಟ- ಮಾಡಿಯಾದರೂ ಪಡೆದುಕೊಳ್ಳಲು ಆಶಿಸುತ್ತೇವೆ ಈ ಹೋರಾಟವನ್ನು ಇಂದು, ಮನೆಯಲ್ಲಿಯೂ ಹೊರ ಪ್ರಪಂಚದಲ್ಲಿ ಕಾಣಬಹುದು ತನ್ನ ಬಯಕೆಯನ್ನು ತೀರಿಸದಿದ್ದರೆ, ತನಗೆ ಬೇಕಾದುದನ್ನು ಮರು ಮಾತಾಡದೆ ತಂದು ಕೊಡದಿದ್ದರೆ, ಗಂಡನ ಮುಂದೆ ಹೆಂಡತಿಯ ಅನ್ನ ಸತ್ಯಾಗ್ರಹ! ಧರ್ಮಕ್ಕೆ ತಕ್ಕುದಾಗಿ ಸಂಬಳದಲ್ಲಿ ಹೆಚ್ಚಳವಾಗದಿದ್ದರೆ ಸತ್ಯಾಗ್ರಹ! ನ್ಯಾಯ ದೊರೆಯಲಿಲ್ಲ ಎಂದು ಸತ್ಯಾಗ್ರಹ ಖಂಡನೆ! ಚಿಕ್ಕಮಗು, ತನಗೆತಂಡಿ ದೊರೆಯದಿದ್ದಾಗ, ಅತ್ತು ಕರೆದುರಂಪಾಟ ಮಾಡುವಂತೆ ಜನತೆ ಗೋಗರೆಯುತ್ತಿರುವರು.

ದುಡಿತದ ಪ್ರತಿಫಲದ ಬಹುಭಾಗ ನ್ಯಾಯವಾಗಿ ಖರ್ಚಾಗುತ್ತಿದೆಯೇ? ಎಷ್ಟಿಷ್ಟೂರಿ ಕೈಗೆ ಬಂದರೂ, ತೃಪ್ತಿಯೂ ದೀತೆ?

ಇಂದಿನವರ ಖರ್ಚು ವಿಶೇಷ! ನವನಾಗರಿಕತೆಗೆ ತಕ್ಕಂತೆ ಬದಲಾವಣೆಗಳೂ ನಡೆಯಬೇಡವೆ? ಹೊಟ್ಟೆಗೆ ಸರಿಯಾಗಿ ಆಹಾರವಿಲ್ಲದಿದ್ದರೂ ಚಿಂತಿಲ್ಲ, ಬಲು ಆಧುನಿಕ ಮಾದರಿಯ ಬೆಲೆ ಬಾಳುವ ವಸ್ತ್ರ, ಮೈಮೇಲೆ ಮೆರೆಯುತ್ತಿರಬೇಕು! ತಪ್ಪದೆ ಮನೋರಂಜಕಸಿನೇಮಾ ನೋಡುತ್ತಿರಬೇಕು! ಕೈಯಲ್ಲಿ ಸಿಗರೇಟು ಹೊಗೆಯಾಡುತ್ತಿರಬೇಕು! ಗಂಟೆಗೆರಡು ಬಾರಿ ಕಾಫಿ ಚಾ ಹೊಟ್ಟೆಯೊಳಗೆ ಸೇರು

[ಕೀಳೆ ಪುಟ ನೋಡಿರಿ]

ಭಾರತೀಯ ಶಿಶು ಕಲ್ಯಾಣ ಪರಿಷತ್ತು ಆರಿಸಿದ ಮೂವರು ಮಕ್ಕಳ ಪ್ರಯೋಗವೊಂದು ಈಚೆಗೆ ನಾರ್ವೆಗೆ ತೆರಳಿತು ಮಕ್ಕಳಿಗೆ ಸಂಬಂಧಿಸಿದ ಅಂತರ ರಾಷ್ಟ್ರೀಯ ಗ್ರೀಷ್ಮಗ್ರಾಮದ ನಾರ್ವೆ ಸಂಸ್ಥೆಯು ಆಸ್ಲೋದಲ್ಲಿ ವ್ಯವಸ್ಥೆಗೊಳಿಸಿದ್ದ ಬೇಸಿಗೆಯ ಶಿಬಿರವೊಂದರಲ್ಲಿ ಭಾಗವಹಿಸುವುದೇ ; ಪುಟಾಣಿರಾಯಭಾರಿಗಳ, ಪ್ರವಾಸದ ಉದ್ದೇಶ. 11—12 ವರ್ಷಗಳ ವಯೋವರ್ಗದಲ್ಲಿರುವ ಈ ಮಕ್ಕಳಾರೆಂದರೆ: ಕುಮಾರಿ ಮಂಜುಗುಪ್ತ, ಕುಮಾರ ವಿನೋದ ಭಾಟ್ನಗರ, ಮತ್ತು ಕುಮಾರ ಸುಂದರ ಕೃಷ್ಣನ್ ಶಿಬಿರವು 1961ರ ಜೂಲೈ 28ರ ವರೆಗೆ ಜರಿಯಿತು

ಮೂರು ಮಕ್ಕಳೂ ನಾರ್ವೆಗೆ ತೆರಳುವ ಸೂರ್ವದಲ್ಲಿ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿದ್ದರು ಮಕ್ಕಳು ಪ್ರಧಾನಿಗಳೊಂದಿಗೆ ಇರುವುದನ್ನು ಈ ಚಿತ್ರದಲ್ಲಿ ಕಾಣಬಹುದು.

ಕೊರ್ಪೊರೇಶನ್ ಬೇಂಕ್

ರೇವಣಾತಿಗಳ ಮೇಲಿನ ಸಾಲಿಯಾನ್ ಶೇಕಡಾ ಬಡ್ಡಿ ದರಗಳು:

3	ಸೇವಿಂಗ್ಸ್ ಬೇಂಕ್ ಖಾತೆ
3 ರಿಂದ 5½	ಕಾಯಂ (ವಿವಿಧಾವಧಿಗಳಿಗೆ)
5½	ವಜ್ರೋತ್ಸವ
5	ಕ್ಯುಮುಲೇಟಿವ್

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ಸ್ಥಾಪನೆ: 1906)

ರಿಜಿಸ್ಟರ್ಡ್ ಆಫೀಸು ಉಡುಪಿ | ಆಡಳಿತ ಆಫೀಸು ಮಂಗಳೂರು

ಮಂಗಳೂರು ಬಂದರದ ಯೋಜನೆ

ರಾಷ್ಟ್ರೀಯ ಬಂದರು ಬೋರ್ಡಿನ ಸಭೆಯೊಂದು ಸದ್ಯದಲ್ಲಿಯೇ ಕೊಚ್ಚಿಯಲ್ಲಿ ನಡೆಯಲಿರುವುದು. ಈ ಸಭೆಯಲ್ಲಿ ಕರ್ನಾಟಕ ಸರಕಾರವು ಮಂಗಳೂರು ಬಂದರದ ಅಭಿವೃದ್ಧಿಯ ಯೋಜನೆಯನ್ನು ಪೂರ್ಣರೂಪದಲ್ಲಿ ೧೯೬೬ರ ಒಳಗೆ ಕಾರ್ಯರೂಪಕ್ಕೆ ತರಬೇಕೆಂದು ನತ್ತಾಯ ಪಡಿಸುವುದಾಗಿ ತಿಳಿಯುತ್ತದೆ. ಇದಕ್ಕಾಗಿ ಮೂರನೆಯ ಯೋಜನೆಯಲ್ಲಿ ಹದಿಮೂರು ಕೋಟಿ ರೂಪಾಯಿಗಳನ್ನು ತೆಗೆದಿಡಬೇಕೆಂದೂ ಅದು ಕೇಳಿಕೊಳ್ಳುವುದು.

ಅಭಿವೃದ್ಧಿ ಮಂಡಳದ ಸಭೆಯಲ್ಲಿ ಚರ್ಚಿಸಲು ತಯಾರಿಸಿದ ಒಂದು ಜ್ಞಾಪತ್ರದಲ್ಲಿ ಸದ್ಯ ಮಂಗಳೂರು ಬಂದರದ ಅಭಿವೃದ್ಧಿಗೆ ತೆಗೆದಿಟ್ಟಿದ ರೂ. ಐದು ಕೋಟಿಗಳು ಏನೇನೂ ಸಾಲದೆಂದೂ ಇದೇ ನಡಿಗೆಯಲ್ಲಿ ಅಭಿವೃದ್ಧಿಯನ್ನು ಸಾಧಿಸುವುದಾದರೆ, ನಾಲ್ಕನೆಯ ಯೋಜನಾಂತ್ಯದಲ್ಲಿಯಾದರೂ ಬಂದರದ ಸುಧಾರಣೆ ಪೂರ್ಣವಾಗಲಾರದೆಂದೂ ಕಾಣಿಸಲಾಗಿದೆ. ರಾಜ್ಯ ಸರಕಾರವು ಕೈಗೊಂಡ ತಾಂತ್ರಿಕ ಅಧ್ಯಯನಗಳು ಯಶಸ್ವಿಯಾಗಿ ಕಂಡುಬಂದಿರುವುದರಿಂದ, ಮಂಗಳೂರು ಬಂದರದ ಅಭಿವೃದ್ಧಿ ಕಾರ್ಯವನ್ನು ತತ್‌ಕ್ಷಣ ಕೈಗೆತ್ತಿಕೊಳ್ಳುವುದು ಮತ್ತು ಅದಕ್ಕೆ ೧೩ ಕೋಟಿ ರೂಪಾಯಿಗಳನ್ನು ವಿನಿಯೋಗಿಸುವುದು ಅತ್ಯಗತ್ಯ; ಮತ್ತು ಹೀಗೆ ಮಾಡಲು ಯಾವ ವಿಘ್ನವೂ ಇರುವುದಿಲ್ಲ. ಆದುದರಿಂದ ಇಡಿಯ ಯೋಜನೆಯನ್ನು ಮೂರನೆಯ ಯೋಜನೆಯಲ್ಲಿಯೇ ಕಾರ್ಯರೂಪಕ್ಕೆ ತರಬೇಕು ಎಂದು ಆ ಜ್ಞಾಪತ್ರದಲ್ಲಿ ಹೇಳಲಾಗಿದೆ.

ಇದರೊಂದಿಗೆ ಕಾಸರ-ಮಂಗಳೂರು ರೇಲ್ವೆ ಜೋಡಣೆಯ ಕುರಿತಾಗಿಯೂ ರಾಜ್ಯ ಸರಕಾರವು ಪ್ರಸ್ತಾಪ ಮಾಡಿದೆ. ಮೂರನೆಯ ಯೋಜನೆಯಲ್ಲಿ ಈ ರೈಲ್ವೆ ದಾರಿಯನ್ನು ಸೇರಿಸಿಕೊಳ್ಳಲಾಗಿದೆಯೇ ಇಲ್ಲವೇ ಎಂಬುದು ಇನ್ನೂ ಖಚಿತವಾಲ್ಲದಿರುವಾಗ ಈ ಬಗ್ಗೆ ಅತಿ ಒತ್ತಾಸೆ ಮಾಡುವುದು ಅಗತ್ಯ.

ಕೇಂದ್ರ ಸರಕಾರದ ಸಾರಿಗೆ ಮಂತ್ರಿಶಾಖೆಯ ಅಭಿಪ್ರಾಯ ಇದಕ್ಕಿಂತ ಭಿನ್ನವಾಗಿದೆ. ತಾಂತ್ರಿಕ ಅಧ್ಯಯನದ ಪರಿಣಾಮಗಳನ್ನು ಆಲ್ಲಿ ಈಗ ಕೆಲವು ತಜ್ಞರು ಗಂಭೀರವಾಗಿ ಅಭ್ಯಾಸಮಾಡುತಿದ್ದಾರೆ. ಅನಂತರವೇ ಮಂಗಳೂರು ಅಭಿವೃದ್ಧಿಯೋಜನೆಯ ಪೂರ್ಣ ರೂಪವನ್ನೂ ಅದಕ್ಕೆ ಬರಬಹುದಾದ ವೆಚ್ಚವನ್ನೂ ಅಂದಾಜು ಮಾಡಿ ಮಂಜೂರು ಮಾಡಬೇಕಾಗಿದೆ. ಟೆಂಡರುಗಳನ್ನು ಕರೆಯುವುದು—ಕಾರ್ಯಾರಂಭಮಾಡುವುದು ಎಲ್ಲವೂ ಅನಂತರವೇ ಸಾಧ್ಯ. ಹಾಗಿರುವಾಗ ಸದ್ಯ ತೆಗೆದಿರಿಸಿದ ಐದುಕೋಟಿ ರೂಪಾಯಿಗಳು ಸಾಕಾಗಬಹುದೆಂದೂ ಒಂದು ವೇಳೆ ಇದು ಕಡಿಮೆಯೆನಿಸಿದರೆ, ಆಗ ಯೋಜನಾ ಆಯೋಗದೊಡನೆ ಹೆಚ್ಚಿನ ಹಣವನ್ನು ಕೇಳಬಹುದೆಂದೂ ಸಾರಿಗೆ ಮಂತ್ರಿ ಶಾಖೆ ಹೇಳುತ್ತದೆ.

ಮಂಗಳೂರು-ಹಾಸನ ರೇಲ್ವೆದಾರಿಯನ್ನು ಮೂರನೆಯ ಯೋಜನೆಯಲ್ಲಿ ಸೇರಿಸಬೇಕು ಎಂಬ ವಿಚಾರವು ರೇಲ್ವೆ ಬೋರ್ಡಿನ ಪರಿಶೀಲನೆಯಲ್ಲಿದೆಯೆಂದು ಗೊತ್ತಾಗಿದೆ.

ಮೂರನೆಯ ಯೋಜನೆಯಲ್ಲಿ ಸಣ್ಣ ಬಂದರಗಳ ಅಭಿವೃದ್ಧಿಕಾರ್ಯಕ್ಕಾಗಿ ೧೦.೬ ಕೋಟಿ ರೂಪಾಯಿಗಳ ಅಂದಾಜನ್ನು ಮಾಡಲಾಗಿದ್ದರೂ ತೆಗೆದಿರಿಸಿದ ಹಣ ಕೇವಲ ೬.೫ ಕೋಟಿ ರೂಪಾಯಿಗಳು. ಈ ಹಣದಿಂದಲೇ ಕೇರಳದ ನೀಂದಕಾರ ಬಂದರವನ್ನು ಮಧ್ಯಮ ವರ್ಗಕ್ಕೆ ತರಬೇಕು. ಈಗ ಭಾರತದಲ್ಲಿ ೬೦ ಲಕ್ಷ ಟನ್ ಸಾಗಾಟ ಮಾಡುವ ಸುಮಾರು ೧೫೦ ಚಿಕ್ಕ ಬಂದರುಗಳಿವೆ. ಯೋಜನಾಂತ್ಯದಲ್ಲಿ ಇವುಗಳ ಸಾಗಾಟ ಶಕ್ತಿಯು ತೊಂಭತ್ತು ಲಕ್ಷ ಟನ್ನುಗಳಿಗೇರಬಹುದೆಂಬ ನಿರೀಕ್ಷೆಯಿದೆ.

ದೊಡ್ಡ ಬಂದರಗಳ ಸ್ಥಿತಿಯನ್ನು ಕೆಡದಂತೆ ನೋಡಿ, ಅಲ್ಲಿ ದೊರೆಯುವ ಸೌಲಭ್ಯಗಳನ್ನು ಹೆಚ್ಚಿಸುವುದು ತೃತೀಯ ಯೋಜನೆಯ ಗುರಿಯಿರುವುದು. ದ್ವಿತೀಯ ಯೋಜನಾವಧಿಯಲ್ಲಿ ಪ್ರಾರಂಭವಾದ ಕೆಲವು ಬಂದರುಗಳಲ್ಲಿ ಅನುಕೂಲತೆಯನ್ನು ಹೆಚ್ಚಿಸಿದರೆ, ಭಾರತದಲ್ಲಿ ೪೯೦ ಲಕ್ಷ ಟನ್ ಸಾಗಾಟ ಮಾಡುವ ಬಂದರುಗಳಾಗುವುವು. ಇದು ಈ ಯೋಜನಾಂತ್ಯದ ವರೆಗೆ ತೃಪ್ತಿಕರವಾಗಿ ಸೌಕರ್ಯಗಳನ್ನು ನೀಡಲು ಸಮರ್ಥವಾಗ ಬಹುದು.

ಈಗ ಕೇಂದ್ರ ಸರಕಾರದ ಆಡಳಿತೆಯಲ್ಲಿರುವ ಮೂರು ದೊಡ್ಡ ಬಂದರುಗಳಾದ ವಿಶಾಖಪಟ್ಟಣ, ಕೊಚ್ಚಿ ಮತ್ತು ಬಾಂಡ್ಲಗಳಿಗೆ ಪೋರ್ಟ್ ಟ್ರಸ್ಟ್‌ಗಳನ್ನು ರಚಿಸಲಾಗುವುದು. ಇದಕ್ಕಾಗಿ ಆವಶ್ಯಕ ವಿಧೇಯಕವನ್ನು ಭಾರತ ಸರಕಾರವು ತಯಾರಿಸುತ್ತಿದೆ.

ಸಂವಿಧಾನದ ೨೬೬ನೆಯ ಅನುಚ್ಛೇದದಂತೆ ಪೋರ್ಟ್ ಟ್ರಸ್ಟಿನಂತಹ ಸಂಸ್ಥೆಗಳಿಂದ ನಡೆಸಲ್ಪಡದೆ ಸರಕಾರವೇ ನೇರವಾಗಿ ಆಡಳಿತೆ ನಿರ್ವಹಿಸುವ ಬಂದರುಗಳ ಆಯವು ಸರಕಾರಕ್ಕೆ ಸೇರುತ್ತದೆ. ಆದುದರಿಂದ, ಈ ಆಯವನ್ನು ರಾಜ್ಯ ಇಲ್ಲವೇ ಕೇಂದ್ರಸರಕಾರವು ಶಾಸನ ಸಭೆ ಇಲ್ಲವೇ ಪಾರ್ಲಿಮೆಂಟಿನ ಅನುಮತಿಯಿಲ್ಲದೆ ಖರ್ಚುಮಾಡುವಂತಿಲ್ಲ. ರಾಜ್ಯ ಸರಕಾರಗಳು ಕೇಂದ್ರವನ್ನು ವಿನಂತಿಸಿಕೊಂಡು, ತಮ್ಮ ಅಂಕೆಯಲ್ಲಿರುವ ಸಣ್ಣ ಬಂದರಗಳಿಗೂ ಪ್ರತ್ಯೇಕ ಆಡಳಿತ ವ್ಯವಸ್ಥೆಯನ್ನು ಮಾಡಬೇಕೆಂದು ಕೇಳಿಕೊಂಡಿವೆ. ಆಂಧ್ರ ರಾಜ್ಯ ಸರಕಾರವು ತಾನು ಚಿಕ್ಕ ಬಂದರಗಳಿಗೂ ಪೋರ್ಟ್ ಟ್ರಸ್ಟ್‌ಗಳನ್ನು ಸ್ಥಾಪಿಸಲು ನಿರ್ಧರಿಸಿರುವುದಾಗಿ ತಿಳಿಸಿದೆ.

ರಾಜಭಾಷೆಯಲ್ಲಿ ತರಬೇತಿ

ಭಾರತೀಯ ಸಂವಿಧಾನದ ೩೫೧ನೆಯ ಅನುಚ್ಛೇದದಲ್ಲಿ ಭಾರತ ಸರಕಾರವು ಹಿಂದೀ ಭಾಷೆಯ ಪ್ರಚಾರ ಮತ್ತು ಅಭಿವೃದ್ಧಿಯತ್ತ ತೀವ್ರ ಗಮನ ಕೊಡಬೇಕಾಗುತ್ತದೆ. ಇದರಂತೆ ಕೇಂದ್ರ ಸರಕಾರದ ನೌಕರರಿಗೆ ಹಿಂದೀ ಭಾಷೆಯನ್ನು ಕಲಿಸುವ ಸಲುವಾಗಿ ಒಂದು ಯೋಜನೆಯನ್ನು ತಯಾರಿಸಿದ್ದಾರೆ. ಕೇಂದ್ರ ಗೃಹ ಖಾತೆಯವರು ಕೈಗೊಂಡ ಕಾರ್ಯಕ್ರಮಗಳಂತಾಗಿ ೧೯೬೬ರ ಹೊತ್ತಿಗೆ ಸರಕಾರದ ನೌಕರಿಯಲ್ಲಿರುವ ಅಹಿಂದೀ ಭಾಷಾಜ್ಞಾತರೆಲ್ಲರೂ ಹಿಂದಿಯನ್ನು ಕಲಿತುಕೊಳ್ಳುವರು. ಅನಂತರವೂ ಆವಶ್ಯಕತೆಯಿರುವಷ್ಟು ಸಮಯದ ವರೆಗೆ ಈ ವ್ಯವಸ್ಥೆಯು ಮುಂದುವರಿಯುವುದು. ಹಿಂದೀ ಟೈಪ್‌ರೈಟಿಂಗ್ ಮತ್ತು ಶೋರ್ಟ್‌ಹೇಂಡ್‌ಗಳಲ್ಲಿಯೂ ನಿಯೋಜಿತ ಅವಧಿಯೊಳಗೆ ತರಬೇತಿಯನ್ನು ಕೇಂದ್ರ ಸರಕಾರದ ಮಂತ್ರಿ ಶಾಖೆಗಳ ನೌಕರರಿಗೆ ನೀಡಲಾಗುವುದು. ಕೇಂದ್ರ ಸರಕಾರದ ಶಾಖೆಇಲ್ಲವೇ ಸ್ಥಳೀಯಕಾರ್ಯಾಲಯಗಳನೌಕರರು ೧೯೬೫—೬೪ರಿಂದತರಬೇತಿಯನ್ನು ಪಡೆಯಲು ಅರಂಭಿಸುವರು. ಮುಂದಿನ ಮೂರು ವರ್ಷಗಳಲ್ಲಿ ಈ ತರಬೇತಿದು ಕೆಲಸವು ಮುಗಿಯುವ ನಿರೀಕ್ಷೆಯಿದೆ. ಆ ಮೇಲೆ ಕೂಡ ಆವಶ್ಯಕತೆ ಕಾಣಿಸಿಕೊಂಡರೆ, ಈ ವರ್ಗಗಳನ್ನು ಮುಂದುವರಿಸಿಕೊಂಡು ಹೋಗಬೇಕಾಗುವುದು.

ಭಾಷಾ ಪ್ರಶ್ನೆಯಲ್ಲಿ ರಾಷ್ಟ್ರಪತಿಗಳು ಹೊರಪಡಿಸಿದ ತತ್ವಗಳಿಗನುಸಾರವಾಗಿ, ೪೫ ವರ್ಷ ಪ್ರಾಯಕ್ಕೆ ಮೀರಿದ ಎಲ್ಲ ನೌಕರರು, ಸಿ ನೇ ಗ್ರೇಡಿಗಿಂತ ಕೆಳವರ್ಗದ ನೌಕರರು ಮೊದಲಾದವರಿಗೆ ಹಿಂದೀ ಕಲಿಯಬೇಕೆಂಬುದರಿಂದ ವಿನಾಯಿತಿಯನ್ನು ಒದಗಿಸಲಾಗಿದೆ. ಧರ್ಮಾರ್ಥವಾಗಿ ತರ

(ಅನೇ ಪುಟ ನೋಡಿರಿ)



ನವಯುಗ

ವರುಷ ೪೧	ಉಡುಪಿ ೨೦-೯-೧೯೬೧	ವಾರ ೩

ಹೆಮ್ಮರ್‌ಶೀಲ್ಡ್

೫೬ ವರ್ಷದ ಡಾಗ್ ಹೆಮ್ಮರ್‌ಶೀಲ್ಡರು ಸಂಯುಕ್ತ ರಾಷ್ಟ್ರಸಂಸ್ಥೆಯ ಪ್ರಧಾನ ಕಾರ್ಯದರ್ಶಿಯಾಗಿಯೇ ವಿಮಾನ ಅಪಘಾತಕ್ಕೆ ತುತ್ತಾಗಿ ಮೃತ್ಯುಮುಖರಾದ ದುರ್ಮರಣಾಂತ ವಿಶ್ವದ ಪ್ರತ್ಯೇಕನಾಗರಿಕನನ್ನೂ ಅವಾಕ್ಕುಗೊಳಿಸಲೇಬೇಕು. ಕಟಾಂಗದ ಅಧ್ಯಕ್ಷ ಶೋಂಬೆಯವರೊಡನೆ ಕದನ ವಿರಾಮ ಸಂಬಂಧದ ಮಾತುಕತೆಗಾಗಿ "ಶಾಂತಿಯತ್ರೆ"ಯಲ್ಲಿ ತೊಡಗಿದ ಇವರು ಕೊನೆದಾರಿಯಲ್ಲಿಯೇ ದುರಂತಕ್ಕೀಡಾದುದು ಹಲವಾರು ಸಂದೇಹಗಳಿಗೆ ಎಡೆಯಿತ್ತಿದೆ. ಸ್ವೀಡನ್ನಿನಲ್ಲಿ ಹುಟ್ಟಿದ ಹೆಮ್ಮರ್‌ಶೀಲ್ಡರು ಅಧ್ಯಾಪಕರಾಗಿ ಸ್ವದೇಶದ ನಾಗರಿಕರನ್ನು ಕರಬೇಡಿಗೊಳಿಸಿದ್ದರೆ, ಮುಂದೆ ವಿಶ್ವವ್ಯಾಪಕರಾದ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಯಾಗಿ ವಿಶ್ವದ ಹಲವಾರು ಸಮಸ್ಯೆಗಳನ್ನು ಶಾಂತಿಯುತವಾಗಿ ಬಗೆಹರಿಸುವಲ್ಲಿ ಹೃತ್ಪೂರ್ವಕ ಸೇವೆ ಸಲ್ಲಿಸಿದ್ದಾರೆ.

ಪಾಶ್ಚಾತ್ಯ ರಾಷ್ಟ್ರಗಳ ಕೈಗೊಂಬೆಯೆಂಬ ಆರೋಪದ ಮೇಲೆ ೧೯೫೨ರಲ್ಲಿ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಯವರಾಗಿದ್ದ ಟ್ರಿಗ್ವಿಲೀಯವರು ರಾಜಿನಾಮೆಯಿತ್ತ ಬಳಿಕ ಈ ತೆರವಾದ ಸ್ಥಾನದಲ್ಲಿ ಆಜನ್ಮ ಬ್ರಹ್ಮಚಾರಿಗಳಾದ ಹೆಮ್ಮರ್ ಶೀಲ್ಡರು ಸೇಮಿತರಾದರು. ಕೋರಿಯಾದ ಯುದ್ಧ ವಿರಾಮ ಸಾಧನೆ, ಸುಯೆಜಕಾಲುವೆ ರಾಷ್ಟ್ರೀಕರಣದಿಂದುಂಟಾದ ಕ್ಷೋಭೆಯ ನಿವಾರಣೆ, ಹಂಗೆರಿಯಲ್ಲಿ ನಡೆದ ಮಾನುಷ್ಯ ಯಜ್ಞದ ಕೊನೆ ಹಾಗೂ ಇರಾನದ ಕ್ರಾಂತಿಯಿಂದ ಉದ್ಭೂತಗೊಂಡ ದುಸ್ಥಿತಿ ನಿವಾರಣೆ ಮೊದಲಾದ ವಿಶ್ವಸಂಸ್ಥೆಯ ಸಾಧನೆಗಳಿಗೆ ಕಾರಣ ಸುರುಷರಂದ ಹೆಮ್ಮರ್ ಶೀಲ್ಡರು ಅದೇ ಸಾಧನೆಗಾಗಿ ಕಾರ್ಯಮಗ್ನರಾಗುತ್ತಿರುವಾಗಲೇ ಅಕಾಲ ದುರಂತದಿಂದ ಮೃತ್ಯುಮುಖರಾದುದು ಇಡಿಯ ವಿಶ್ವಕ್ಕೆ ಉಂಟಾದ ನಷ್ಟ. ಕಾಂಗೋ ಸಮಸ್ಯೆಯು ದಿನದಿಂದ ದಿನಕ್ಕೆ ಜಟಿಲವಾಗುತ್ತ ಬರುತ್ತಿದ್ದಂತೆ ಇವರ ಮೇಲೆ ಹಲವು ಮುಖಗಳಿಂದ ಟೀಕಾಸ್ತ್ರಗಳು ಪ್ರಯೋಗಿಸಲ್ಪಟ್ಟವಾದರೂ ಅವುಗಳಿಂದ ನೊಂದುಕೊಳ್ಳದೆ, ತನ್ನ ಅಧಿಕಾರ ಸ್ಥಾನದ ಮಹತ್ವವನ್ನೂ ಗುರುತ್ವವನ್ನೂ ಅಳವಾಗಿ ಕಂಡುಕೊಂಡು, ಅದರ ಸಾಧನೆಗಾಗಿಯೇ ಜೀವನವನ್ನು ಮುಡುಪಾಗಿಟ್ಟ ಆದರ್ಶ ನಾಯಕ ಹೆಮ್ಮರ್‌ಶೀಲ್ಡರು ಇನ್ನಿಲ್ಲದಂತಾದುದು ಅವರ್ಣನೀಯ ಚಿಂತೆಗೆ ಕಾರಣವಾಗಿದೆ. ವಿಶ್ವಸಂಸ್ಥೆಯ ಉದ್ದೇಶಗಳನ್ನು ಮನಗಂಡು, ಅದರ ಯಶಸ್ವಿಗಾಗಿ, ಯಶಸ್ವೀ ಕಾರ್ಯಸಾಧನೆಗಾಗಿ ದುಡಿದು, ಕೀರ್ತಿಗಳಿಸಿದ ಕರ್ಮಯೋಗಿ ಹೆಮ್ಮರ್‌ಶೀಲ್ಡರ ಮರಣ ಮತ್ತು ಅದು ಘಟಿಸಿದ ವಿಧಾನ ಹಾಗೂ ಸಂಭವಿಸಿದ ಗಳಿಗೆಗಳು ವಿಶ್ವಸಂಸ್ಥೆಯ ಬುನಾದಿಯನ್ನೇ ಅಲುಗಾಡಿಸುವಷ್ಟು ಶಕ್ತಿಶಾಲಿಯೆನ್ನಬೇಕು. ರಶ್ಯ ಮತ್ತದರ ಸಮರ್ಥಕರು ಕೆಲವು ಸಮಯದಿಂದ ಡಾಗ್ ಹೆಮ್ಮರ್‌ಶೀಲ್ಡರ ಮೇಲೆ ನಾನಾ ಪ್ರಕಾರದ ಟೀಕೆಗಳನ್ನು ಸುರಿದಿದ್ದರೂ ಇವರ ಕಾರ್ಯದಕ್ಷತೆಯ ವಿಷಯದಲ್ಲಿ ಹೆಚ್ಚಿನ ಭಿನ್ನಾಭಿಪ್ರಾಯವಿರಲಿಲ್ಲ. ಕಾಂಗೋವಿನ ಸಮಸ್ಯೆಯು ಗೂಢಾತ್ಮೂಢತರವಂಬಂತಿದ್ದು, ಅದರಲ್ಲಿ ಪ್ರವೇಶಮಾಡಿ ಅದನ್ನು ಬಿಡಿಸುವುದರಲ್ಲಿಯೇ ತತ್ಪರತೆಯಿಂದ ಕಾರ್ಯಪ್ರವೃತ್ತರಾದ ಇವರ ನಿಧನದಿಂದ "ಕಾಂಗೋವಿನಲ್ಲಿ ಇನ್ನೂ ಕತ್ತಲೆಯು ವ್ಯಾಪಿಸಿದೆ; ಅಲ್ಲಿ ಏನೇನೋ ನಡೆಯುವ ಅವಕಾಶವಿನ್ನೂ ಇದೆ" ಎಂಬುದನ್ನು ಜಗತ್ತಿಗೆ ಸಾರಿ ಹೇಳುತ್ತದೆ.

ಡಾಗ್ ಹೆಮ್ಮರ್ ಶೀಲ್ಡರ ವ್ಯಕ್ತಿತ್ವ ಅನ್ಯಾದೃಶವಾದುದು; ಅವರ ಕಾರ್ಯದಕ್ಷತೆ ಅದ್ವಿತೀಯವಾದುದು. ಎಂತಲೇ ಪ್ರಬಲ ಟೀಕಾಸ್ತ್ರಗಳ ಬಾಯಿಗೆ ಅವರು ಗುರಿಯಾದರೂ ಶುತ್ತಾಗಲಿಲ್ಲ. ಇಂತಹ ಒಬ್ಬ ವಿಶ್ವಪ್ರತಿನಿಧಿಯು ನಿಧನಗೊಂಡ ಘಟನೆ ಕಟಾಂಗಕ್ಕೆ ಹಲಕಾರಕವಾಗಿದೆ ಎನ್ನೋಲಾದಲ್ಲಿದ್ದ ಕಟಾಂಗದ ಅಧ್ಯಕ್ಷ ಶೋಂಬೆಯವರನ್ನು ಕಾಣಲು ತನ್ನ ಹದಿನಾಲ್ಕು ಸಂಗಡಿಗರೊಡನೆ ತೆರಳಿದ ಇವರ ವಿಮಾನ ಎನ್‌ಡೋಲಾದ ನಿಲ್ದಾಣದ ಸಂಪರ್ಕ ಬೆಳೆಸಿತೆಂದೂ ಅದರೆ, ಅದು ಅಲ್ಲಿ ಇಳಿಯಲಿಲ್ಲವೆಂದೂ ಬದಲು ಎರಡು ಸುತ್ತು ಬಂದು ಮರಳಿತೆಂದೂ ಕೆಲವೇ ನಿಮಿಷಗಳಲ್ಲಿ ವಿಮಾನ ಅಪಘಾತಕ್ಕೆ ಗುರಿಯಾಯಿತೆಂದೂ ವರದಿಗಳು ಬಂದಿವೆ. ವಿಮಾನದ ಅವಶೇಷಗಳು ಎನ್‌ಡೋಲಾದಿಂದ ಕೇವಲ ಏಳೆಂಟು ಮೈಲುಗಳ ದೂರವಿದ್ದಿತೆಂದೂ ಗೊತ್ತಾಗಿದೆ. ಕಾಂಗೋದ ಭೂತಪೂರ್ವ ಅಧ್ಯಕ್ಷ ಪೆಟ್ರಿಸ್ ಲುಮುಂಬರ ಮರಣವು ವಾಸ್ತವಿಕ ಸಾವಾಗಿರದೆ ಶೋಂಬೆ ಮತ್ತವರ ಕೈವಾರಿಗಳ ಒಳಸಂಚಿತ ಪ್ರಕರಣವೆಂಬುದಕ್ಕೆ ಘುಷ್ಟಿ ದೊರೆಯುವಂತೆಯೇ ಈ ವಿಮಾನಾಪಘಾತದಲ್ಲಿ ಶೋಂಬೆಯವರ ಕೈವಾಡವಿದೆಯೇ ಎಂಬ ಬಲವಾದ ಸಂದೇಹಕ್ಕೆ ಎಡೆದೊರೆಯುತ್ತದೆ. ಈ ವಿಮಾನ ಅಪಘಾತದ ಕಾರಣವನ್ನು ಕಂಡುಹಿಡಿಯುವ ಪ್ರಯತ್ನಗಳು ಯಶಸ್ವಿಯಾದರೆ, ಆಗ ಅಪರಾಧಕ್ಕೆ ದೈವವೇ ಹೊಣೆಯೇ ಅಥವಾ ಯಾರಾದರೂ ಒಳತಂತ್ರಗಾರರು ಜವಾಬುದಾರರೇ ಎಂಬುದು ಗೊತ್ತಾಗುವುದು. ಡಾಗ್ ಹೆಮ್ಮರ್ ಶೀಲ್ಡರ ನಿಧನವು ನಿಗೂಢ ರಹಸ್ಯ ಎಂಬ ಸಂದೇಹ ಆಗತಾನೇ ನಿವಾರಣೆಯಾಗುವುದು ಸಾಧ್ಯ. ಮೂರನೆಯ ಜಾಗತಿಕ ಸಂಗ್ರಾಮದ ಹೊಗೆಯೇಳುತ್ತಿರುವಾಗ ವಾಲಿಯ ವಧೆಯ ಸಂಸ್ಮರಣೆ ಬರುತ್ತಿದೆ.

ಶಾಂತಿ ಸಾಧನೆಗಾಗಿ ಹೋರಾಡಿದ ಹೆಮ್ಮರ್ ಶೀಲ್ಡರ ಆತ್ಮವು ಚಿರಶಾಂತಿ ಪಡೆಯುವುದು ವಿಶ್ವನಾಗರಿಕರ ಸಹಾನುಭೂತಿ ಅವರ ಮೇಲೆ ಇರುವುದು ಎಂಬುದು ಹಾಲಿನಷ್ಟು ತಿಳಿಯಾಗಿದೆ; ಗಾಳಿಯಷ್ಟು ವ್ಯಾಪಕವಾಗಿದೆ

ಏಕಲಿಪಿಯ ಪ್ರಶ್ನೆ

ಇತ್ತೀಚೆಗೆ ನಡೆದ ವಿವಿಧ ರಾಜ್ಯಗಳ ಮುಖ್ಯ ಮಂತ್ರಿಗಳ ಸಮ್ಮೇಳನದಲ್ಲಿ ಸಾಮಾನ್ಯವಾಗಿ ಚರ್ಚಿಸಲ್ಪಟ್ಟ ವಿಷಯಗಳಲ್ಲಿ ಭಾರತೀಯ ಭಾಷೆಗಳೆಲ್ಲವಕ್ಕೆ ದೇವನಾಗರಿ ಲಿಪಿಯನ್ನು ಬಳಸಿಕೊಳ್ಳುವ ವಿಚಾರವೂ ಒಂದು. ಈ ಸಂಬಂಧದಲ್ಲಿ ಎಲ್ಲ ಮುಖ್ಯಮಂತ್ರಿವರ್ಯರೂ ಒಮ್ಮತಕ್ಕೆ ಬಂದಿರುವರೆಂದು ಅಂದು ವರದಿಯಾಗಿತ್ತು. ಏಕಲಿಪಿಯನ್ನು ಕಾರ್ಯಾನ್ವಿತಗೊಳಿಸುವ ಸಾಧ್ಯಾಸಾಧ್ಯತೆಯ ಪ್ರಶ್ನೆಯೇನೇ ಇರಲಿ, ಅದು ಎಷ್ಟು ವ್ಯವಹಾರ್ಯವೆಂಬುದನ್ನು ಮತ್ತು ಇದಕ್ಕೂ ಹೆಚ್ಚಾಗಿ ಆವಶ್ಯಕವೆಂಬುದನ್ನು ಮೊದಲಾಗಿ ಪರ್ಯಾಲೋಚಿಸಬೇಕು. ಉತ್ತರ ಭಾರತದ ಬೇರೆ ಬೇರೆ ಭಾಷೆಗಳ ವಿಷಯದಲ್ಲಿ ಏಕಲಿಪಿಯ ಬಳಕೆಯು ಸುಲಭಸಾಧ್ಯ ಹಾಗೂ ಸ್ವಲ್ಪಮಟ್ಟಿಗೆ ವ್ಯವಹಾರ್ಯವೆನಿಸಬಹುದು. ಪ್ರಧಾನಿ ನೆಹರುರವರು ತಮ್ಮ ಇತ್ತೀಚೆಗಿನ ಪತ್ರಿಕಾಪರಿಷತ್ತಿನಲ್ಲಿ ಹೇಳಿದಂತೆ, ದಕ್ಷಿಣ ಭಾರತದ ಭಾಷೆಗಳಿಗೆ ಈ ಲಿಪಿಯನ್ನು ಬಳಸುವುದು ಕಷ್ಟ ಸಾಧ್ಯ; ಮಾತ್ರವಲ್ಲ. ಅದು ಅನ್ಯವ್ಯಹಾರ್ಯ. ದೇವನಾಗರಿ ಲಿಪಿಯನ್ನು ಸಾಮಾನ್ಯ ಲಿಪಿಯಾಗಿ ಸ್ವೀಕರಿಸಬೇಕಾದ ಅಗತ್ಯವಾದರೂ ಏನು, ಮತ್ತು ಇದರ ಉಪಯೋಗದಿಂದ ಯಾವ ಮಹಾ ಸಾಧನೆ ಮಾಡಿದಂತಾಗುವುದು ಎಂಬುದು ಅಗೋಚರವಿದೆ. ರಾಷ್ಟ್ರೀಯ ಭಾವನೆಯು ಜಾಗ್ರತವಾಗುವುದು. ಅನಿವಾರ್ಯ ಮತ್ತು ಅತ್ಯವಶ್ಯ. ಅದರೂ ಬೇರೆ ಬೇರೆ ಲಿಪಿ ಮತ್ತು ಭಾಷೆಗಳ ನೈಜ ಸೌಂದರ್ಯವನ್ನು ಕೆಡಿಸುವ ಈ ಏಕ ಲಿಪಿಯ ಪ್ರಶ್ನೆಯನ್ನು ಮುಟ್ಟುವ ಮಾತ್ರವಲ್ಲ ಏಳಿಸುವ ಆವಶ್ಯಕತೆಯಿಲ್ಲ. ನಮ್ಮ ರಾಷ್ಟ್ರನಾಯಕರು ರಾಷ್ಟ್ರೀಯ ಐಕ್ಯ ಮತ್ತು ಅಭಿವೃದ್ಧಿಗಳ ಕಡೆಗೆ ವಿಶೇಷ ಗಮನವೀಯಬೇಕೇ ಹೊರತು, ಅನವಶ್ಯ ಮತ್ತು ಅಕಾಲಿಕವಾದ, ಭಿನ್ನಾಭಿಪ್ರಾಯಕ್ಕೆ—ರಾಷ್ಟ್ರೀಯ ಐಕ್ಯಭಂಗಕ್ಕೆ ಪ್ರೇರೇಪಣೆ ನೀಡಬಹುದಾದ ವಿವಾದಾಸ್ಪದ ವಿಷಯಗಳತ್ತ ಮನಸ್ಸನ್ನು ಹರಿಯಗೊಡಬಾರದು. ಕರ್ನಾಟಕ, ಕೇರಳ, ತಮಿಳುನಾಡು ಮತ್ತು ಆಂಧ್ರಗಳನ್ನೊಳಗೊಂಡ ಸಾರ್ವಭೌಮ ದ್ರಾವಿಡ ಸ್ಥಾನದ ಬೇಡಿಕೆಯ ಉರಿ ಏಳಿಸಿ, ಹಿಂದೀ ಭಾಷೆಯ ಬಗ್ಗೆ ಒಂದು ವಿಧದ ಅನಾಸ್ಥೆಗೆ ಎಡೆಗೊಡುವ ದ್ರಾವಿಡ ಮುನ್ನೇತ್ರ ಕಳಗಂನ ಪಿಸು ಧ್ವನಿಯು ಇನ್ನೂ ಗಟ್ಟಿಯಾಗಗೊಡುವುದರಿಂದ ರಾಷ್ಟ್ರದ ಸರ್ವತೋಮುಖ ಪ್ರಗತಿ ಕಾರ್ಯದಲ್ಲಿ ಅಡ್ಡಿ ಬರುವುದು ಅಂಡಿತ. ರಾಜಕಾರಣಗಳು ಎಲ್ಲವನ್ನೂ ಮುಟ್ಟದೆ ರಾಜಕಾರಣವನ್ನು ಮಾತ್ರ ಹಿಡಿಯಬೇಕು. ಹಾಗಿರುವಾಗ, ಏಕ ಲಿಪಿಯ ಬಗ್ಗೆ ರಾಜಕಾರಣಿಗಳು ಆತುರಪಡಬೇಕಾದ ಅಗತ್ಯವಿಲ್ಲವೆಂದೇ ತೋರುತ್ತದೆ.

ಓದುಗರ ಓಲೆಗಳು

(ಶ್ರೀ ಜಿ. ಬಿ. ಐತಳ್ಳಿ, ಎ.ಸಿ. ಟಿ. ಬಿ. ಉಡುಪಿ, ಅವರಿಂದ)

ಶ್ರೀ ಶಂಕರಾಚಾರ್ಯರ ಶಬ್ದಚಿತ್ರ

ಬೆಂಗಳೂರ ಆಕಾಶವಾಣಿ ಡೈರೆಕ್ಟರರಿಗೆ—

ವಿ/ವಿಗಳು—ತಾ. ೧೭-೯-೧೯೬೧ನೇ ದಿನ ಬಿತ್ತರಿಸಿದ 'ಶ್ರೀ ಶಂಕರಾಚಾರ್ಯ'ರ ಶಬ್ದಚಿತ್ರವನ್ನು ಕೇಳಿದೆನು. ಶ್ರೀ ಶಂಕರಾಚಾರ್ಯರ ಘನತೆಗೆ ತಕ್ಕಂತೆ ಅವರ ಶಬ್ದಚಿತ್ರವು ಇನ್ನೂ ಉಚ್ಚ ಮಟ್ಟದಲ್ಲಿರಬೇಕಾಗಿತ್ತು. ವಿಷಯದ ವಿವೇಚನೆಯು ಎಷ್ಟು ಮಹತ್ವದ್ದೋ ಅಷ್ಟೇ ಮಹತ್ವದ್ದು ಅದನ್ನು ಪ್ರದರ್ಶಿಸುವ ರೀತಿ ಇರಬೇಕು. ಕೇಳುವವರ ಭಾವನೆಗಳು ಚೇತರಿಸಿಕೊಳ್ಳಬೇಕು. ಉದಾಹರಣೆಗಾಗಿ—ಕಾಶಿ ವಿಶ್ವೇಶ್ವರ ಮಂದಿರದಲ್ಲಿ ಶ್ರೀ ಶಂಕರರು ಸ್ತುತಿಸುವುದನ್ನು ಆಕಾಶವಾಣಿಯು ಇನ್ನೂ ಒಳ್ಳೇ ರೀತಿಯಲ್ಲಿ ಪ್ರದರ್ಶಿಸಬೇಕಾಗಿತ್ತು. ಅಂತಹ ಸ್ತುತಿಗಳನ್ನು ಪ್ರದರ್ಶಿಸುವಾಗ್ಯೆ ಶ್ರೀ ಶಂಕರರ ಚೈತನ್ಯವಾಣಿಯ ಪ್ರತಿಬಿಂಬದ ಪ್ರದರ್ಶನವಾಗಬೇಕು. ಕನ್ನಡ ನಾಡಿನಲ್ಲಿ ಇಂಥ ಕಲಾವಿದರಿಲ್ಲವೇ? ಇನ್ನೂ ಪ್ರಾಮುಖ್ಯ 'ಭಜ ಗೋವಿಂದಂ' ಭಜಿಸುವಾಗ್ಯೆ ಇನ್ನೂ ಗಂಭೀರವಾಗಿ ಭಜಿಸಬೇಕು.

ಇನ್ನು ವಿಷಯದ ಬಗ್ಗೆ ಒಂದು ಮಾತು. ಶಬ್ದ ಚಿತ್ರದಲ್ಲಿ ಶ್ರೀ ಶಂಕರಾಚಾರ್ಯರ ಮತ್ತು ಶ್ರೀಮತಿ ಭಾರತಿ ಇವರಲ್ಲಿ ನಡೆದ ತರ್ಕದ ಸಂದರ್ಭ ಕಾಣಿಸಲೇ ಇಲ್ಲ. ಇದು ಶ್ರೀ ಶಂಕರಾಚಾರ್ಯರ ಜೀವನದಲ್ಲಿ ನಡೆದ ಒಂದು ಮಹತ್ವದ ಪ್ರಸಂಗವಲ್ಲವೇ? ಇದೇ ಸಂದರ್ಭದಲ್ಲಿ ಶ್ರೀ ಶಂಕರರು 'ಪರಕಾಯ' ಪ್ರವೇಶಮಾಡಿ ಲೌಕಿಕ ಅನುಭವ ಪಡೆಯಲಿಲ್ಲವೇ? 'ಪರಕಾಯಪ್ರವೇಶ' ಇದು ಇಂದಿನ ವಿಜ್ಞಾನಿಗಳಿಗೆ ನಿಲುಕದ ವಿಷಯವಾಗಿದ್ದು, ಅಥವಾ ಯಾವದಾದರೊಬ್ಬ ವಿಜ್ಞಾನಿ ಇದನ್ನು ಶೋಧಿಸಿರುವನೋ ಏನೋ ಅನ್ನುವುದನ್ನು, ಈ ಶಬ್ದ ಚಿತ್ರದ ನಿರ್ದೇಶಕರು ವಿಮರ್ಶಿಸಬೇಕಾಗಿತ್ತು. ಇದು ಅವಶ್ಯ, ಏಕೆಂದರೆ ಇತಿಹಾಸದ ಸಂಪುಟಗಳನ್ನು ಕಾಲಕಾಲಕ್ಕೆ ಎತ್ತಿ ತಮಗೆ ಕಂಡಂತೆ ತಮ್ಮ ಕಾಲದಲ್ಲಿ ಅದ ಪ್ರಗತಿ ಮತ್ತು ಶೋಧನೆ ಇವುಗಳ ಸಂಗಡ ಬರೆಗೆ ಹಚ್ಚಿ ತೋರಿಸಬೇಕು. ಆಕಾಶವಾಣಿಯವರು 'ಶ್ರೀ ಜಗದ್ಗುರು ಶಂಕರಾಚಾರ್ಯ' ಎಂಬ ಚಲಚಿತ್ರವನ್ನು ನೋಡಿಲ್ಲವೇ? ನೋಡಿದ್ದರೆ ಅವುಗಳಲ್ಲಿಯ ಸಂಗತಿಗಳನ್ನು ಶಬ್ದ ಚಿತ್ರವು ಅಳವಡಿಸಿಕೊಳ್ಳಬಾರದೇಕೆ? ಆಕಾಶವಾಣಿಯು ಬಿತ್ತರಿಸಿದ 'ಶ್ರೀ ಮಧ್ವಾಚಾರ್ಯ' ಮತ್ತು 'ಶ್ರೀ ಬಸವೇಶ್ವರ' ಇವರ ಶಬ್ದ ಚಿತ್ರಗಳನ್ನು ಕೇಳಿದ್ದೇನೆ. ಶ್ರೀ ಮಧ್ವಾಚಾರ್ಯರ ಶಬ್ದ ಚಿತ್ರವು ವಿಪರೀತ ಮಳೆಯಿದ್ದುದರಿಂದ ಸರಿಯಾಗಿ ಕೇಳಲಿಲ್ಲ. ನೀವು ಇನ್ನೊಮ್ಮೆ ಬಿತ್ತರಿಸಿದಾಗ ನಾನು ಅದನ್ನು ಕೇಳಿದ ಮೇಲೆ ನನ್ನ ಅಭಿಪ್ರಾಯ ವ್ಯಕ್ತಪಡಿಸಬಲ್ಲೆ. ನಾನು ಈಗ ಉಡುಪಿಯಲ್ಲಿಯೇ ಇರುವದರಿಂದ ನಾನು ಶ್ರೀ ಮಧ್ವಾಚಾರ್ಯರ ವಿಷಯವನ್ನು ಸಮಕ್ಷ ತಿಳಿದುಕೊಳ್ಳಲು ಪ್ರಯತ್ನಿಸುತ್ತಿದ್ದೇನೆ. ಇನ್ನು ಶ್ರೀ ಬಸವೇಶ್ವರ ಶಬ್ದ ಚಿತ್ರದ ವಿಷಯ:—ಪ್ರದರ್ಶನವು (Bread—casting) ಒಳ್ಳೇದಾಗಿತ್ತು. ಅವರ ಸರ್ವ ಸಾಮಾನ್ಯ ತತ್ವಗಳನ್ನು ವಿಮರ್ಶಿಸಿದರೂ, ಶ್ರೀ ಬಸವೇಶ್ವರರು ಅಂಂ ಸರ್ಪಗಳ ಹಿಂದೆಯೇ ಪ್ರತಿಪಾದಿಸಿ, ರೂಢಿಯಲ್ಲಿ ತಂದ ಸಮಷ್ಟಿ-ಸಿದ್ಧಾಂತದ ಬಗ್ಗೆ ಸಾಕಷ್ಟು ಗಮನ ಕೊಟ್ಟಿಲ್ಲ. ಅರ್ಥ ಶಾಸ್ತ್ರದಲ್ಲಿಯೇ ಒಂದು ಕ್ರಾಂತಿಕಾರಕ ವಿಚಾರವನ್ನು ಜನತೆಯ ಮುಂದಿಟ್ಟು, ಭಾರತೀಯರಿಗೆ ಒಳ್ಳೇ ಮಾರ್ಗದರ್ಶನ ಮಾಡಿದ್ದಾರೆ. ಭಾರತೀಯರು ಇಂದು ಆ ಸಿದ್ಧಾಂತದ ಬಗ್ಗೆ ಪರಕೀಯರಿಂದ ಪಾಠ ಕಲಿಯಲು ಆರಂಭಿಸಿದ್ದಾರೆ. ರಾಷ್ಟ್ರದ ಮುಖಂಡರು ನಮ್ಮ ನಾಡಿನಲ್ಲಿ ಆಗಿಹೋದ ಮಹಾಪುರುಷರ ಎಲ್ಲ ವಿಚಾರಗಳನ್ನು ತಿಳಿದುಕೊಂಡಿಲ್ಲ; ಅದರೆ ಇಂಥವುಗಳನ್ನು ತಿಳಿಸಿಕೊಡುವುದು ಆಕಾಶವಾಣಿಯ ಕಾರ್ಯಕ್ಷೇತ್ರವಾಗಿದೆ.

ಈ ವಿಚಾರಗಳನ್ನು ಪರಾಮರ್ಶಿಸಬೇಕು. ಇನ್ನು ಮುಂದೆ ಬಿತ್ತರಿಸಲ್ಪಡುವ ಶಬ್ದ ಚಿತ್ರಗಳ ವಿಷಯದಲ್ಲಿ ನನ್ನ ಮೇಲಿನ ಸೂಚನೆಗಳನ್ನು ಲಕ್ಷಕ್ಕೆ ತರಬೇಕಾಗಿ ವಿನಂತಿ. ಇದು ಸರಿ ಅಲ್ಲ ಅಂತಾ ಅನಿಸಿದರೆ, ಅದನ್ನು ನನಗೆ ತಿಳಿಸಬೇಕಾಗಿ ವಿನಂತಿ. ಈಗಾಗಲೇ ಬಿತ್ತರಿಸಿದ ಮೂರೂ ಶಬ್ದ ಚಿತ್ರಗಳನ್ನು ಮರಳಿ ಬಿತ್ತರಿಸಬೇಕಾಗಿ ಪ್ರಾರ್ಥನೆ—ಆಗ್ಗೆ ಶಬ್ದ ಚಿತ್ರಗಳಲ್ಲಿ ಸಮರ್ಪಕ ಬದಲಾವಣೆಗಳನ್ನು ಕಾಣಬಯಸುತ್ತೇನೆ.

ಕನ್ನಡ ನಾಡಿನಲ್ಲಿ ನಡೆದ ಆಕಾಶವಾಣಿಯ ಕಾರ್ಯಕ್ರಮಗಳು ಕನ್ನಡಿಗರಿಗೊಂದು ಹೆಮ್ಮೆಯ ಸಂಗತಿಗಳಾಗಬೇಕೆಂದು ಈ ಪತ್ರ ಬರೆದಿದೆ.

ಅಲ್ಲಲ್ಲಿಯ ಸುದ್ದಿಸಾರ

ಚುನಾವಣಾ ವೀಕ್ಷಕರ ಪ್ರವಾಸ— ಮೈಸೂರು ಪ್ರದೇಶ ಕಾಂಗ್ರೆಸು ಸಮಿತಿಯ ವೀಕ್ಷಕರಾದ ಶ್ರೀ ನಾರಾಯಣ ಚಿಟ್ಟಿಯವರು ದ. ಕ. ಜಿಲ್ಲೆಯಲ್ಲಿ ಜಿಲ್ಲಾ ಕಾಂಗ್ರೆಸು ಸಮಿತಿಯ ಅಧ್ಯಕ್ಷರೊಂದಿಗೆ ತಾ. 21ರಿಂದ 28ರ ವರೆಗೆ ಈ ಕೆಳಗಿನ ಸ್ಥಳಗಳಲ್ಲಿ ಸಂಚರಿಸಲಿರುವರು, ಅವರು ಸಂಚಾರದ ವೇಳೆ ಸ್ಥಳೀಯ ಕಾಂಗ್ರೆಸ್ ಕಾರ್ಯಕರ್ತರನ್ನು ಭೇಟಿಯಾಗಿ ವಿಚಾರ ವಿನಿಮಯ ಮಾಡಲಿರುವರು.

21—9—1961 ಮಂಗಳೂರು 1ನೇ ಮತದಾರ ಕ್ಷೇತ್ರ, ಜಿಲ್ಲಾ ಕಾಂಗ್ರೆಸ್ ಕಛೇರಿಯಲ್ಲಿ.

22—9—1961 ಬೈಂದೂರು ಮತ್ತು ಕುಂದಾಪುರ ಮತದಾರ ಕ್ಷೇತ್ರ, ಕುಂದಾಪುರದ ವಿಶ್ರಾಂತಿಗೃಹ ಕ್ಲಬ್ಬಿನಲ್ಲಿ.

23—9—1961 ಬ್ರಹ್ಮಾವರ ಮತ್ತು ಉಡುಪಿ ಮತದಾರ ಕ್ಷೇತ್ರ, ಉಡುಪಿ ತಾಲೂಕು ಕಾಂಗ್ರೆಸ್ ಕಛೇರಿಯಲ್ಲಿ.

24—9—1961 ಕಾಪು ಮತದಾರ ಕ್ಷೇತ್ರ ಪೂರ್ವಾಹ್ನ ಉಡುಪಿ ತಾಲೂಕು ಕಾಂಗ್ರೆಸ್ ಕಛೇರಿಯಲ್ಲಿ.

24—9—1961 ಅಪರಾಹ್ನ ಸುರತ್ಕಲ್ ಮತದಾರ ಕ್ಷೇತ್ರ, ಮೂಲ್ಕಿ ಕಾಂಗ್ರೆಸ್ ಕಛೇರಿಯಲ್ಲಿ.

25—9—61 ಕಾರ್ಕಳ ಮತ್ತು ಮೂಡಬಿದ್ರೆ ಮತದಾರ ಕ್ಷೇತ್ರ, ಕಾರ್ಕಳ ಸಿನೇಮಾ ಥಿಯೇಟರಿನಲ್ಲಿ.

26—9—61 ಪೂರ್ವಾಹ್ನ ಬೆಳ್ತಂಗಡಿ ಮತದಾರ ಕ್ಷೇತ್ರದ ಬೆಳ್ತಂಗಡಿ ಮತ್ತು ಕೊಕ್ಕಡ ಫಿರ್ಕಾ, ಬೆಳ್ತಂಗಡಿ ಕಾಂಗ್ರೆಸ್ ಆಫೀಸಿನಲ್ಲಿ.

26—9—1961 ಅಪರಾಹ್ನ—ಬೆಳ್ತಂಗಡಿ ಮತದಾರ ಕ್ಷೇತ್ರದ ಬಂಟ್ವಾಳ ಫಿರ್ಕಾ ಮತ್ತು ಪಾಣೆಮಂಗಳೂರು ಮತದಾರ ಕ್ಷೇತ್ರದ ಪಾಣೆಮಂಗಳೂರು ಫಿರ್ಕಾ, ಬಂಟ್ವಾಳ ಮಂಡಲ ಆಫೀಸಿನಲ್ಲಿ.

27—9—1961 ಮಂಗಳೂರು 2ನೇ ಮತದಾರ ಕ್ಷೇತ್ರ ಮತ್ತು ಪಾಣೆಮಂಗಳೂರು ಮತದಾರ ಕ್ಷೇತ್ರದ ಗುರುಪುರ ಫಿರ್ಕಾ, ಜಿಲ್ಲಾ ಕಾಂಗ್ರೆಸ್ ಕಛೇರಿಯಲ್ಲಿ.

28—9—1961 ಪುತ್ತೂರು 1ನೇ ಮತ್ತು ಪುತ್ತೂರು 2ನೇ, ಪುತ್ತೂರು ಕೋ-ಓಪರೇಟಿವ್ ಬ್ಯಾಂಕ್ ಹಾಲಿನಲ್ಲಿ

ಎಂ. ಜಿ. ಎಂ. ಕಾಲೇಜಿನ ಇತಿಹಾಸ ಮತ್ತು ಅರ್ಥಶಾಸ್ತ್ರ ಸಂಘದ ವತಿಯಿಂದ ಯೋಜನಾ ದಿನಾಚರಣೆಯು ಶ್ರೀ ಬಿ. ಯೋಗೀಶ್ವರ ಹೊಳ್ಳರ ಅಧ್ಯಕ್ಷತೆಯಲ್ಲಿ ತಾ. 13ರಂದು ನೆರವೇರಿತು. ಪ್ರಿನ್ಸಿಪಾಲ್ ಶ್ರೀ ಎಚ್. ಸುಂದರ ರಾಯರು ಸ್ವಾಗತಿಸಿದ ಮೇಲೆ ಶ್ರೀ ಕು. ಶಿ. ಹರಿದಾಸ ಭಟ್ಟರು ನಮ್ಮ ರಾಷ್ಟ್ರೀಯ ಪಂಚ ವಾರ್ಷಿಕ ಯೋಜನೆ ಎಂಬ ವಿಷಯವನ್ನು ಸಭೆಯ ಮುಂದಿಟ್ಟರು. ವಿದ್ಯಾರ್ಥಿಗಳಲ್ಲಿ ಶ್ರೀಗಳಾದ ಯು. ವಿಷ್ಣುಮೂರ್ತಿ ಆಚಾರ್ಯ, ಎಸ್. ಬಾಲಕೃಷ್ಣ ಪಾಂಗನ್ನಾಯ, ಕೆ ರಾಘವೇಂದ್ರ ರಾವ್, ಕೃಷ್ಣಮೂರ್ತಿ ಹೊಳ್ಳ, ಕು| ಕೆ. ಗೀತಾ ಪೈ, ಕು| ಎಫ್. ಎಮಿಲ್ಡಾ ಮಚಾದೊ ಇವರು ಯೋಜನೆಯ ಕುರಿತು ಪ್ರಬಂಧಗಳನ್ನು ವಾಚಿಸಿದರು. ಅಧ್ಯಕ್ಷರು ತೃತೀಯ ಪಂಚ ವಾರ್ಷಿಕ ಯೋಜನೆಯು ಜನರ ಸಮಸ್ಯೆಗಳ ನಿವಾರಣೆಗೆ ಸಹಾಯಕವಾಗಲೆಂದರು. ಶ್ರೀ ಕೆ. ಸುಬ್ರಾಯ ಭಟ್ಟರು ವಂದನಾರ್ಪಣೆಗೈದರು.

ಮಹಾಸಭೆ—ಉಡುಪಿಯ ಶ್ರೀ ಬ್ರಹ್ಮವೈದ್ಯಕೀಯ ಧೂಮಾವತಿಯಕ್ಷಗಾನ ಸಂಘದ ಮಹಾಸಭೆಯು ತಾ. 10—9—61ರಂದು ಜರಗಿ ಕಾರ್ಯಕಾರಿ ಸಮಿತಿಯ ಪುನರ್ಘಟನೆ ಮಾಡಲಾಯಿತು. ಶ್ರೀಗಳಾದ ಎ. ಮಾಧವ ಶೆಣೈ ಅಧ್ಯಕ್ಷ, ಎನ್. ಭೋಜಪ್ಪ ಸುವರ್ಣ, ಪ್ರಧಾನ ಕಾರ್ಯದರ್ಶಿ, ಜೆ. ಶಂಭು ಶೆಟ್ಟಿಗಾರ ಉಪಾಧ್ಯಕ್ಷ, ಎನ್. ಮುದ್ದು ಕೋಟ್ಯಾನ್ ಹಾಗೂ ಜಿ ಅಣ್ಣಯ್ಯ ಪಾಲನ್ ರವರು ಜೊತೆ ಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟರು ಕಾರ್ಯಕಾರಿ ಸಮಿತಿಗೆ ಉಳಿದ ಎಂಟುಜನರು ಚುನಾಯಿತರಾದರು. ಸಂಘದ ಕಾರ್ಯನಿರ್ವಹಣೆಯನ್ನು ವ್ಯಾಪಕವಾದ ದೃಷ್ಟಿಯಿಂದಲೂ, ಕಲಾತ್ಮಕವಾದ ಹಿತಚಿಂತನೆಯ ಧೃಷ್ಟಿಯಿಂದಲೂ ನಡೆಸಲು ಒಂದು ಯೋಜನಾಬದ್ಧವಾದ ಕಾರ್ಯಕ್ರಮ ನಿರೂಪಿಸಿ ಮುನ್ನಡೆಯಲು ನಿರ್ಧರಿಸಲಾಯಿತು.

ಶ್ರೀ ಟಿ ಎ. ಪೈಗಳಿಗೆ ಜನತೆಯ ಒತ್ತಾಯ—ಇದೇ ತಾ 15ರಂದು ಉಡುಪಿ ತಾಲೂಕು ಕಾಂಗ್ರೆಸ್ ಕಾರ್ಯಕರ್ತರ ಸಭೆಯೊಂದು ಶ್ರೀ ಬಾಳ್ಳಟ್ಟಿ ಜೀಡು ಕೃಷ್ಣಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿ ಶ್ರೀ ಟಿ. ಎ. ಪೈಗಳು ತಾಲೂ ಮತದಾರ ಕ್ಷೇತ್ರದಲ್ಲಿ ಮುಂದಿರುವ ಚುನಾವಣೆಯಲ್ಲಿ ಸ್ಪರ್ಧಿಸುವಂತೆ ಒತ್ತಾಯಪೂರ್ವಕ ಕೇಳಿಕೊಳ್ಳಲಾಯಿತು. ಅಧ್ಯಕ್ಷರು ಶ್ರೀ ಪೈಗಳಂತಹ ಯೋಗ್ಯ ಕಾರ್ಯಸಟು ಮುಂದಾಳುವು ಯೂವುದೇ ಅನಾನುಕೂಲ ಪರಿಸ್ಥಿತಿಗಳಿದ್ದರೂ ಚುನಾವಣೆಯಲ್ಲಿ ಸ್ಪರ್ಧಿಸಲೇಬೇಕೆಂದರು. ಡಾ. ಪಿ. ಜಿ. ಆಚಾರ್, ಶ್ರೀಗಳಾದ ಎಸ್. ಮಧ್ವರಾಜ್, ಶ್ರೀಪತಿ ಆಚಾರ್, ವೈ. ಲಕ್ಷ್ಮಿನಾರಾಯಣ ಶೆಟ್ಟಿ, ಎ. ಜಿ. ಅಲ್ಜಿ, ಮೊದಲಾದವರು ಇದನ್ನು ಬೆಂಬಲಿಸಿ ಮಾತಾಡಿದರು. ಕೊನೆಗೆ ಈ ಕುರಿತಾದ ನಿರ್ಣಯವನ್ನು ಮಾಡಿ ಶ್ರೀ ಪೈಗಳ ಆಫೀಸಿಗೆ ಸಭಿಕರಲ್ಲಿ ಹೆಚ್ಚಿನವರು ಹೋಗಿ, ಅವರನ್ನು ಕೇಳಿಕೊಂಡ ಮೇರೆಗೆ ಅವರು ತಮ್ಮ ಮೊದಲಿನ ಅಭಿಪ್ರಾಯವನ್ನು ಬದಲಾಯಿಸಿ, ಸ್ಪರ್ಧಿಸುವುದಾಗಿ ಹೇಳಿ ಜನತೆಯ ವಿಶ್ವಾಸಕ್ಕಾಗಿಕೃತಜ್ಞತೆಯನ್ನರ್ಪಿಸಿದರು. ಈ ಬಗ್ಗೆ ಶ್ರೀ ಪೈಗಳಿಗೆ ಶ್ರೀ ಶ್ರೀಪತಿ ಆಚಾರ್ಯರು ವಂದನಾರ್ಪಣೆ ಮಾಡಿದರು.

ಶ್ರೀ ಕೃಷ್ಣಾನಂದ ಹೆಗ್ಡೆಯವರ ನೇಮಕ— ಕಾರ್ಕಳ, ಅದಮಾರು ಮತ್ತು ಕೋಟೇಶ್ವರ ಬೋರ್ಡು ಹೈಸ್ಕೂಲುಗಳಲ್ಲಿ ಅಧ್ಯಾಪಕರಾಗಿ ಕೆಲಸ ಮಾಡಿದ್ದ ಕಟಪಾಡಿಯ ಶ್ರೀ. ಬಿ. ಕೃಷ್ಣಾನಂದ ಹೆಗ್ಡೆ ಬಿ. ಎ. ಬಿ. ಟಿ. ಯವರು ನವದೆಹಲಿಯಲ್ಲಿ ಆಕಾಶವಾಣಿ ಮಂತ್ರಿವಿಭಾಗದ ಜಾಹೀರಾತು ಮತ್ತು ಪ್ರಚಾರ ಶಾಖೆಯಲ್ಲಿ ಕನ್ನಡ ವಿಭಾಗದ ಸಹಸಂಪಾದಕರಾಗಿ ನೇಮಕಲ್ಪಟ್ಟಿದ್ದಾರೆ. ಇವರು ಉತ್ತಮ ಬರಹಗಾರರು ಭಾಷಾಂತರಕಾರರೂ ಆಗಿ ಈಗಾಗಲೇ ಪ್ರಸಿದ್ಧರಾಗಿದ್ದಾರೆ.

ದ ಕ. ಜಿಲ್ಲಾ ಕೃಷಿಕ ಸಂಘ ಇದೇ ತಾ. 7ರಂದು ಜಿಲ್ಲಾ ಕಾಂಗ್ರೆಸ್ ಕಛೇರಿಯಲ್ಲಿ ದ. ಕ. ಜಿಲ್ಲಾ ಗೇರು ಬೀಜ ಮತ್ತು ಕಾಫಿ ಕೆಲಸಗಾರರ ಸಂಘದ ಅಧ್ಯಕ್ಷ ಶ್ರೀ ಎ. ಶಂಕರಾಳ್ವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಕೃಷಿಕ ಸಂಘವನ್ನು ಸ್ಥಾಪಿಸುವ ವಿಚಾರದಲ್ಲಿ ಕಾರ್ಯಕರ್ತರ ಸಭೆಯೊಂದು ಜರಗಿತು ಜಿಲ್ಲೆಯಲ್ಲಿ ಕೃಷಿಕರನ್ನು ಸಂಘಟಿಸುವ ಬಗ್ಗೆ ಹದಿನೈದು ಜನರುಳ್ಳ ತಾತ್ಕಾಲಿಕ ಸಮಿತಿಯೊಂದನ್ನು ರಚಿಸಲಾಯಿತು. ಶ್ರೀ ಕಟ್ಟಮನೆ ಭಾಸ್ಕರ ಶೆಟ್ಟಿ ಮತ್ತು ಶ್ರೀ ಕೆ. ಉಮೇಂದ್ರ ಪ್ರಭು ನಕ್ರೇಲ್ ಇವರನ್ನು ಸಮಿತಿಯ ಸಂಚಾಲಕರನ್ನಾಗಿ ಆರಿಸಲಾಯಿತು.

ಧರ್ಮಾರ್ಥ ಅಕ್ಕಿ ವಿತರಣೆ— ಇದೇ ತಾ. 24ನೇ ಆದಿತ್ಯವಾರ ಮಧ್ಯಾಹ್ನ ಉಡುಪಿ ಪಾಂಗಾಳ ನಾಯಕ್ ಬೇಂಕ್ ವತಿಯಿಂದ ಶ್ರೀ ಪಾಂಗಾಳ ಉಪೇಂದ್ರ ಶ್ರೀನಿವಾಸ ನಾಯಕರು ವಾಡಿಕೆಯಂತೆ ಧರ್ಮಾರ್ಥ ಅಕ್ಕಿ ಮತ್ತು ಪೊಬಲಗನ್ನು ಹಂಚಲಿರುವರು.

ಸವಣೂರು— ಸ್ಥಳೀಯ ಸೇವಾ ಸಹಕಾರಿ ಸಂಘದ ಮಹಾಸಭೆಯು ತಾ. 9ರಂದು ಶ್ರೀ ಪಿ. ಡಿ. ಸಂಕಪ್ಪ ರೈಗಳ ಅಧ್ಯಕ್ಷತೆಯಲ್ಲಿ ಜರಗಿ ಚಾಲ್ತಿ ವರ್ಷದ ಆಡಳಿತ ಮಂಡಳಿಯ ಚುನಾವಣೆ, ವರದಿ ವಾಚನ, ಸಭಿಕರ ಮತ್ತು ಅಧ್ಯಕ್ಷರ ಭಾಷಣಗಳಾದುವು.

ಪೆಣೆಯೂರು-ಇಲ್ಲಿಯ ಬಡಗರಗುತ್ತು ಬಿ. ಶೀನ ಶೆಟ್ರು ಇದೇ ತಾ. 9ರಂದು ಉಡುಪಿ ಆಸ್ಪತ್ರೆಯಲ್ಲಿ ನಿಧನರಾದುದು ವಿಷಾದಕರವಿದೆ. ದಿವಂಗತರು 25 ವರ್ಷಕಾಲ ಉಪಾಧ್ಯಾಯರಾಗಿಯೂ 14 ವರ್ಷ ಪಂಚಾಯತ್ ಬೋರ್ಡ್ ಅಧ್ಯಕ್ಷರಾಗಿಯೂ ಜನಸೇವೆ ಸಲ್ಲಿಸಿ ಜನಪ್ರಿಯರಾಗಿದ್ದರು.

ವಿಜ್ಞಾಪನೆ

ಮುಂದಿನ ಚುನಾವಣೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ದಕ್ಷಿಣ ಭಾಗದ ಲೋಕ ಸಭಾ ಮತದಾರಕ್ಷೇತ್ರಕ್ಕೆ ಕಾಂಗ್ರೆಸ್‌ಹುರಿಯೊಳಾಗಿ ಅರ್ಜಿಹಾಕಿರುವ ಡಾ| ಕೆ. ಮಂಜುನಾಥ ರೈ, M.B.,B.S. F.R.C.S D.M.R. (Lond) ಇವರುಈ ಕೆಳಗಿನ ವಿಜ್ಞಾಪನೆ ಕಳಿಸಿದ್ದಾರೆ.

ಪುತ್ತೂರು ತಾಲೂಕಿನಲ್ಲಿ ಹುಟ್ಟಿ ಬೆಳೆದ ನಾನು, ಸ್ವಂತ ಉದ್ಯೋಗದ ನಿಮಿತ್ತ ವೈದ್ಯಕೀಯ ವೃತ್ತಿ ವಹಿಸಿ, ಕಳೆದ 13 ವರ್ಷಗಳಿಂದ ಸರಕಾರದ ವತಿಯಿಂದಲೂ ವೈಯಕ್ತಿಕ ನೆಲೆಯಲ್ಲಿಯೂ ನನ್ನಿಂದ ಸಾಧ್ಯವಾದಷ್ಟು ಸಾರ್ವಜನಿಕ ಸೇವೆಯನ್ನು ಪ್ರಮಾಣಿಕವಾಗಿ ಸಲ್ಲಿಸಿರುತ್ತೇನೆ. ಈ ಸಂದರ್ಭದಲ್ಲಿ ನಾನು ಜನಕ್ಷೇಮ ಸಾಧಕ ಹಲವು ಚಟುವಟಿಕೆಗಳಲ್ಲಿ ಕೆಲಸ ಮಾಡಿರುತ್ತೇನೆ.

ಮಂಗಳೂರಲ್ಲಿ ವಿದ್ಯಾರ್ಥಿಯಾಗಿರುವಾಗಲೆ ರಾಷ್ಟ್ರೀಯ ಮನೋಭಾವದಿಂದ ತರುಣ ಸಂಘಟನಾ ಕಾರ್ಯೋತ್ಸಾಹಿಯಾಗಿದ್ದ ನಾನು, ಸದಾ ರಾಷ್ಟ್ರೀಯ ಚಳವಳಿ ಮತ್ತು ಸಾರ್ವಜನಿಕ ಸೇವೆಯಲ್ಲಿ ಆಸಕ್ತನಾಗಿದ್ದೆ. ಸರಕಾರಿ ನೌಕರಿಯ ಇತಿಮಿತಿಯೊಳಗೆ ಸಾಧ್ಯವಾದ ಸಹಾಯ ಕೂಡಾ ಮಾಡಿದ್ದೆ. ಜಿಲ್ಲೆಯ ಹಿತ ಮತ್ತು ಅಭಿವೃದ್ಧಿ ಸಾಧಕ ಕಾರ್ಯಗಳಲ್ಲಿ, ಮುಖ್ಯವಾಗಿ ವೈದ್ಯಕೀಯ ಸವಲತ್ತನ್ನೊದಗಿಸಲು ನನ್ನ ಶಕ್ತ್ಯಾನುಸಾರ ಸಹಕಾರ ಮತ್ತು ಸಹಾಯವಿತ್ತಿದ್ದೇನೆ. ಸರಕಾರಿ ಉದ್ಯೋಗದಿಂದ ನಿವೃತ್ತಿಯಾದಾಗ, ನಾನು ಜಿಲ್ಲೆಯ ಸಾರ್ವಜನಿಕ ಕ್ಷೇತ್ರದಲ್ಲಿ ದುಡಿಯಬೇಕೆಂದು ನನ್ನ ಕೆಲಮಂದಿ ಮಿತ್ರರೂ, ಬಂಧುಗಳೂ ಒತ್ತಾಯಿಸಿದಾಗ ನಾನು ಅದಕ್ಕೆ ಸಮ್ಮತಿಸಿ, ನನ್ನ ಅಪರ ವಯಸ್ಸಿನಲ್ಲಿ, ನಾನು ಪಡೆದಿರುವ ಅನುಭವದಿಂದ ನನ್ನ ಜಿಲ್ಲೆಯ ಜನತೆಯ ಸೇವೆ ಮಾಡಲು ಸಂದರ್ಭ ಪಡೆಯುವ ನನ್ನ ಮನೋಭಾವದಿಂದ ಕಾಂಗ್ರೆಸ್ ಪಕ್ಷಕ್ಕೆ ಅರ್ಜಿ ಹಾಕಲು ಮುಂದೆ ಬಂದಿರುತ್ತೇನೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ಕೊಡಗಿನಲ್ಲೂ ನನಗೆ ಹಲವು ವಿಧದ ನಿಕಟ ಸಂಪರ್ಕವಿದೆ. ಅನೇಕ ಮಂದಿ ಬಂಧುಗಳೂ ಮಿತ್ರರೂ ಇದ್ದಾರೆ. ಈ ಎರಡು ಜಿಲ್ಲೆಗಳ ಸಮಸ್ಯೆಗಳ ಅರಿವು ಕೂಡ ನನಗೆ ಸಾಕಷ್ಟಿದೆ. ದೇವರ ದಯೆಯಿಂದ ನನಗೆ ಉತ್ತಮ ಆರೋಗ್ಯವೂ, ಜನಸೇವೆಯ ಉತ್ಸಾಹವೂ, ಅನುಕೂಲತೆಯೂ ಇದೆ. ಡಿಲ್ಲಿಯಲ್ಲಿಯೂ ದೇರದ ಹಲವು ರಾಜ್ಯಗಳಲ್ಲಿಯೂ ನನಗೆ ಸಾಕಷ್ಟು ಸಂಪರ್ಕವಿದೆ, ಹಲವು ಮಂದಿ ಕಾಂಗ್ರೆಸ್ ನಾಯಕರ ಪ್ರೀತಿ ಮತ್ತು ವಿಶ್ವಾಸ ಸಂಪಾದಿಸಿರುತ್ತೇನೆ. ಆದುದರಿಂದ ಪಾರ್ಲಿಮೆಂಟಿನಲ್ಲಿ ದಕ್ಷಿಣ ಕನ್ನಡ ಮತ್ತು ಕೊಡಗು ಜಿಲ್ಲೆಗಳ, ಮೈಸೂರು ರಾಜ್ಯ ಹಾಗೂ ದೇರದ ಹಿತದೃಷ್ಟಿಯಿಂದ ಹೆಚ್ಚಿನ ಕೆಲಸ ಮಾಡಲು ಸಾಧ್ಯವಾಗಬಹುದೆಂಬ ನಂಬಿಕೆಯಿಂದ, ನಾನು ಮೊದಲೆ ಕಾಂಗ್ರೆಸ್ ಪಕ್ಷಕ್ಕೆ ಸೇರಿ, ಕಾಂಗ್ರೆಸ್ ಹುರಿಯೊಳಾಗಿ ಅರ್ಜಿ ಹಾಕಿ, ತಮ್ಮೆಲ್ಲರ ನೆರವು ಪಡೆಯಲು ಈ ವಿನಂತಿಯನ್ನು ಕಳುಹಿಸಿರುತ್ತೇನೆ. ಪ್ರದೇಶ ಕಾಂಗ್ರೆಸ್ ಸಮಿತಿಯ ವೀಕ್ಷಕರು ತಮ್ಮ ಪ್ರದೇಶಕ್ಕೆ ಅಭಿಪ್ರಾಯ ಸಂಗ್ರಹಿಸಲು ಬರುವಾಗ ನನ್ನ ಉಮೇದ್ವಾರಿಕೆಯನ್ನು ದಯಮಾಡಿ ಪರ್ಯಾಲೋಚಿಸಬೇಕಾಗಿ ಕೇಳಿಕೊಳ್ಳುತ್ತೇನೆ.

ಇತೀ ತಮ್ಮ ಸೇವಾಭಿಲಾಷಿ,

ಕೆ. ಮಂಜುನಾಥ ರೈ.

ಕದ್ರಿ-ಬಿಜೈ, ಮಂಗಳೂರು.

ಸಾಧಕ ಮಂಜಪ್ಪ

ಸ್ವಯಂ ಭೂಮಾಲಿಕರಾಗಿದ್ದ ಕಡಿದಾಳ ಮಂಜಪ್ಪನವರು ಹಾವು ಸಾಯಂ ಬಾರದು; ಕೋಲು ಮುರಿಯಬಾರದು ಎಂಬ ನೀತಿಯನ್ನು ಅನುಸರಿಸಿಯೂದರೂ ಬಹು ದಿನಗಳಿಂದ ಜನತೆ ನಿರೀಕ್ಷಿಸುತ್ತಿದ್ದ ಭೂಸುಧಾರಣಾ ವಿಧೇಯಕವನ್ನು ವಿಧಾನ ಸಭೆಯಲ್ಲಿ ಮಂಜೂರುಮಾಡಿಸಿಯೇ ಬಿಟ್ಟರು ಸಾರ್ವತ್ರಿಕ ಚುನಾವಣೆಗಳು ಸಮೀಪಗತವಾಗುತ್ತಿರುವುದರಿಂದ ಕಾಂಗ್ರೆಸ್ಸು ಮುಂದಿನ ಬಾರಿಯೂ ಜಯಗಳಿಸಲು ಇದೊಂದು ರಾಮಬಾಣದಂತೆ ಎಂದು ಹೇಳಬಹುದು. ಎರಡು ಕೋಟಿ ಎಕ್ರೆ ಸಾಗುಭೂಮಿಯಿರುವ ಕರ್ನಾಟಕದಲ್ಲಿ ಒಟ್ಟು ೩೨ ಲಕ್ಷ ಎಕ್ರೆ ಜಮೀನು ಈ ವಿಧೇಯಕವು ಕಾನೂನಾದಾಗ ಗೇಣಿದಾರರ ಸ್ವಂತ ಸೊತ್ತಾಗುವ ನಿರೀಕ್ಷೆಯಿದೆ ಕಾಂಗ್ರೆಸ್ಸು ಸಾಧಿಸಿದ ಮಹಾಕಾರ್ಯಗಳಲ್ಲಿ ಈ ಭೂಸುಧಾರಣೆ ಮಹತ್ವಪೂರ್ಣವಾಗಿದೆ.

ನಷ್ಟಿಪ ರಾಯ್

ಸರಕಾರದ ಯಾವ ಖಾತೆ ಕೆಲಸ ನಿಲ್ಲಿಸಿದರೂ ಆರ್ಥಿಕ ನಷ್ಟ ಸಂಭವಿಸುತ್ತದೆ. ಆದರೆ, ಶಿಕ್ಷಣ ಖಾತೆಯಿಂದ ಆರ್ಥಿಕ ಲಾಭವಿಲ್ಲದೆ ಆದು ನಷ್ಟದ ಖಾತೆಯೇ ಆಗಿದೆಯೆಂಬುದರಿಂದ ಆ ವಿಭಾಗದತ್ತ ಸಕಾಲದಲ್ಲಿ ಗಮನ ಹರಿಸುವ ಪರಿಪಾಠವನ್ನು ಭಾರತದ ಯಾವ ರಾಜ್ಯಸರಕಾರವೂ ಇಟ್ಟುಕೊಂಡಿಲ್ಲ. ಪಶ್ಚಿಮ ಬಂಗಾಲದ ಮಾಧ್ಯಮಿಕ ಶಿಕ್ಷಕರು ವೇತನ ಹೆಚ್ಚಳವೇ ಮೊದಲಾದ ಬೇಡಿಕೆಗಳನ್ನು ಮುಂದಿಟ್ಟು ಕೆಲಸ ನಿಲ್ಲಿಸಿದರಂತೆ. ಕೊನೆಯ ಗಳಿಗೆಯಲ್ಲಿ ಮುಖ್ಯ ಮಂತ್ರಿ ಬಿ. ಸಿ. ರೈ ವೇತನ ಹೆಚ್ಚಳದ ಘೋಷಣೆ ಮಾಡಿದುದೂ ವ್ಯರ್ಥವಾಯಿತು. ನಿವೃತ್ತಿ ವೇತನ, ಪ್ರೊವಿಡೆಂಟ್ ಫಂಡ್ ಮತ್ತು ಫ್ರೀ ಇನ್ಶೂರೆನ್ಸ್‌ಗಳಿರುವ ತ್ರಿವಿಧ ಲಾಭಯೋಜನೆ ಅಧ್ಯಾಪಕರಿಗೆ ಅತ್ಯವಶ್ಯ. ಕರ್ನಾಟಕದ ಸರಕಾರವಾದರೂ ಇದನ್ನು ಶೀಘ್ರದಲ್ಲಿ ಕಾರ್ಯರೂಪಕ್ಕೆ ತರಲಿ. ಪರಿಶೀಲನೆಯಲ್ಲಿಯೇ ಬಹುಕಾಲ ಕಳೆಯದಿರಲಿ.

ಯೆಲ್ಲೂರು— ಸ್ಥಳೀಯ ಗ್ರಾಮ ಪಂಚಾಯತದ ವಾರ್ಷಿಕ ಅಧಿವೇಶನವು ಇತ್ತೀಚೆಗೆ ಬದಾ ಗ್ರಾಮ ಸಂಚಾಯತ ಅಧ್ಯಕ್ಷ ಶ್ರೀ ಕೃಷ್ಣ ರಾಯರ ಅಧ್ಯಕ್ಷತೆಯಲ್ಲಿ ನೆರವೇರಿತು. ಉಪಾಧ್ಯಕ್ಷ ಶ್ರೀ ಸಿದ್ಧಯ್ಯ ಹೆಗ್ಡೆಯವರು ವರದಿ ವಾಚನ ಮಾಡಿದರು. ಗ್ರಾಮ ಸೇವಕರು, ಗ್ರಾಮಸ್ಥರು ಸಂಚಾಯತುದೊಂದಿಗೆ ಬೇಗೆ ವರ್ತಿಸಬೇಕೆಂದು ವಿನಂತಿಸಿದರು, ಪಂಚಾಯತ, ಅಧ್ಯಕ್ಷ ಕೃಷ್ಣಮೂರ್ತಿ ರಾವ್, ಶ್ರೀ ಭೋಜ ಶೆಟ್ಟಿ, ತೋಮರ ಮೂಸರ್ ಮೊದಲಾದವರ ಭಾಷಣವಾದ ಮೇಲೆ ಅಧ್ಯಕ್ಷರ ಸನುಯೋಚಿತ ಭಾಷಣವಾಯಿತು.

ಸಕಲೇಶಪುರ— ಮಲೆನಾಡಿನಲ್ಲಿ ರುವ ಕೊಡಗಿನ ಮತ್ತು ದ. ಕನ್ನಡದ ಮತದಾರರು ಇತ್ತೀಚೆಗೆ ಶ್ರೀ ಎಸ್. ಆರ್. ರೈಗಳ ಅಧ್ಯಕ್ಷತೆಯಲ್ಲಿ ಸಭೆ ಸೇರಿ, ದಿವಂಗತ ಬಿ. ಎಸ್. ಭಾಸ್ಕರ ರೈಗಳ ನಿಧನಕ್ಕಾಗಿ ಸಂತಾಪ ಸೂಚಿಸಿದರು.

(ಜನೇ ಪುಟದಿಂದ)

ಬೇತಿ ನೀಡುವ ಸುವ್ಯವಸ್ಥೆಯಿರುವುದಲ್ಲದೆ, ನಿಯೋಜಿತ ಮಟ್ಟದಲ್ಲಿ ತೇರ್ಗಡೆ ಹೊಂದದೆ ಇದ್ದರೆ, ಯಾವ ತೊಂದರೆಯೂ ಆಗದಂತೆ ನೋಡಿಕೊಳ್ಳಲಾಗಿದೆ.

ಹಿಂದೀ ಭಾಷೆಯಲ್ಲಿ ತರಬೇತಿಯು ವ್ಯವಸ್ಥಿತ ರೀತಿಯಲ್ಲಿ ನಡೆದು ಬರುವುದಕ್ಕೆ ಅನುಕೂಲವಾಗುವಂತೆ ಪ್ರತಿಯೊಂದು ಮಂತ್ರಿ ಶಾಖೆಯೂ ಇತರ ವಿಭಾಗವೂ ಒಂದೊಂದು ಯೋಜನೆಯನ್ನು ರೂಪಿಸಿವೆ. ಆಫೀಸು ಸಮಯದಲ್ಲಿಯೇ ಈ ಬಗ್ಗೆ ಹಿಂದೀ ವರ್ಗಗಳನ್ನು ಗೃಹಾಖಾತೆ ಅಕ್ಟೋಬರ ತಿಂಗಳಿಂದ ಕೇಂದ್ರ ಗೃಹ ಮಂತ್ರಿ ಶಾಖೆಯು ಪ್ರಾರಂಭಿಸಿತ್ತು. ಈಗ ಒಟ್ಟು ನೂರ ಹದಿನೈದು ಇಂತಹ ತರಗತಿಗಳು ನಡೆಯುತ್ತಿದ್ದು, ಇವುಗಳಲ್ಲಿ ಪ್ರತಿವರ್ಷ ಸುಮಾರು ಆಂ ಸಾವಿರ ನೌಕರರು ತರಬೇತಿ ಪಡೆಯುತ್ತಿದ್ದಾರೆ. ಪರೀಕ್ಷಾದಿನಗಳ ಮಟ್ಟಿಗೆ ವಿಶೇಷ ಕೆಜುವಲ್ ರಜೆಯನ್ನೂ ಉತ್ತಮ ರೀತಿಯಲ್ಲಿ ಉತ್ತೀರ್ಣರಾಗುವವರಿಗೆ ನಗದಿ ಬಹುಮಾನವನ್ನೂ ಕೊಡಲಾಗುತ್ತಿದೆ. ನೌಕರರ ಸರ್ವಿಸ್ ಪುಸ್ತಕಗಳಲ್ಲಿ ಕೂಡ ಉತ್ತೀರ್ಣರಾದ ಸಂಬಂಧದ ವಿವರಗಳನ್ನು ಬರೆಯಲಾಗುತ್ತಿದೆ.

ಸರಕಾರವು ರೂಪಿಸಿದ ಯೋಜನೆಯಂತೆ ನೌಕರರು ಮೂರು ಕೋರ್ಸುಗಳಲ್ಲಿ ಯಾವುದಾದರೊಂದನ್ನು ಆರಿಸಬಹುದು ಪ್ರಬೋಧ, ಪ್ರವೀಣ ಮತ್ತು ಪ್ರಾಜ್ಞವೆಂಬುದು ಮೂರು ವರ್ಗಗಳು. ಪ್ರಬೋಧವು ಮೊದಲನೆಯದಾಗಿದ್ದು, ದಕ್ಷಿಣ ಭಾರತೀಯ ಇಲ್ಲವೆ ಇಂಗ್ಲಿಷ್ ಭಾಷೆಯನ್ನು ಆಡುವವರಿಗೆ ಹಿಂದಿಯ ಪ್ರಾರಂಭಿಕ ಪರಿಚಯವನ್ನು ಮಾಡಿಕೊಡುವುದು. ಮರಾಠಿ, ಗುಜರಾಥಿ, ಬಂಗಾಳಿ ಅಥವಾ ಇವಕ್ಕೆ ಸಮೀಪವಿರುವ ಭಾಷೆಯವರು ಮಧ್ಯಮ ಮಟ್ಟದ ಪ್ರವೀಣ ವರ್ಗಕ್ಕೆ ಸೇರಬಹುದು. ಮೆಟ್ರಿಕ್ಯುಲೇಶನ್ ಮಟ್ಟದ ಪ್ರಾಜ್ಞ ತರಗತಿಯಲ್ಲಿ ಉರ್ದು, ಕಾಶ್ಮೀರಿ, ಪುಷ್ತು ಮೊದಲಾದ ಭಾಷೆಗಳನ್ನಾಡುವವರು ಓದಬಹುದು. ರಾಜ ಭಾಷೆಯಾಗಿ ಹಿಂದಿಯನ್ನು ಸ್ವೀಕರಿಸಲು ತಕ್ಕ ಪೂರ್ವ ಸಿದ್ಧತೆ ಈಗಿಂದೀಗಲೇ ನಡೆದು ಬರುತ್ತಿದೆ.

ಜೀವನ

ಬಾಯೆದ್ದೆರೆದು ನಿಂದಿತ್ತು ಭೂತ
ಸಮ್ಮುಖದಿ ನಿಂತಿದ್ದ ಭೀತ
ಪೀತ ಮೋರೆಯ ಬಣ್ಣವಾಗಿತ್ತು ಶ್ವೇತ.
"ದೇವ ನೀದಯೆ ದೋರೆಯೊ?
ಮೃತ್ಯು ನೀಬೇಗ ಬಾರೆಯೊ?"
ಎಂದು ನಿನ್ನೆ ನುಡಿದವನೇ ಈತ!
ಕಂಪಿಸುವ ದೇಹ
ತೋರುವುದು ದೇಹದೊಳಗಣ ಮೋಹ.
"ಕೈಗೂಡುತಿರಲು ನಿನ್ನಿಚ್ಛೆ
ನಡುಗುತಿಹನಿನಗೇನು ಹುಚ್ಚೆ!"—
ಭೂತ ಕೇಳಿತ್ತು ಆ ಭೀತನನು.
"ದಮ್ಮಯ್ಯ ಓ ಎನ್ನ ದೇವಾ,
ನೀಡದಿರು ನೀನಿಷ್ಟು ಬೇಗ ಸಾವ!
ನಾಳೆಯೇ ಎನ್ನ ಮರಿಮಗನ ಮದುವೆ
ಅಂತಿರಲು ಇಂದೆನ್ನ ಸಾವೆ?" —
ಕೇಳಿದ್ದ ನಿಂತು ಆಜಬಗೀಸು.
ಹ್ಹಹ್ಹ ಹ್ಹ ಹ್ಹ ಹ್ಹಾ
ನಕ್ಕು ನುಡಿದಿತ್ತು ಆ ಮೃತ್ಯು ಭೂತ—
"ನಾಳೆ ಮರಿಮಗನ ಮದುವೆಯಂತೆ!
ಮುಗಿಯುತೇ ಇಷ್ಟರೊಳು ನಿನ್ನ ಕಂತೆ?
ಮರಿಮಗನ ಮಗನ ಕಾಣುವಿಚ್ಛೆಯುಂಟೆ?"
ಹೆಜ್ಜೆಹೆಜ್ಜೆಗೂ ಬಿಗಿಯುತಿದೆ ಮೋಹ-ಪಾಶ
ಅಂತಿರಲು ಹೋಗಬಯಸುವುದೇ ಶ್ವಾಸ?
ಬಾಳುವಾಗಿಳು ಮುಗಿಯುವುದೆಂದು-ಹೇಳು
ಸಾವಿನೊಡನೆ ಕದನ
ಇದುವೆ ಮನುಷ್ಯಜೀವನ!

—ಪಾ. ಚಂದ್ರಶೇಖರ ಚಡಗ.

• ನಗೆ ಹನಿ •

ನನಗೆ ಗೊತ್ತಿಲ್ಲ

ಒಬ್ಬ ಹುಚ್ಚ ಪತ್ರ ಬರೆಯುತಿದ್ದ. ಆ ಪತ್ರಿಯ ಡಾಕ್ಟರರಿದನ್ನು ಕಂಡು ಕೇಳಿದರು:

"ಯಾರಿಗೆ ಪತ್ರ ಬರೆಯುತ್ತಿದ್ದಿ?"

"ನನಗೆ"

"ನನಗೂ ತೋರಿಸು, ಏನು ಬರೆದಿರುವೆ?"

"ನಾನರಿಯೆ ಈಗಲೇ ಇದನ್ನು ಅಂಚೆಮನೆಗೆ ಒಯ್ಯಬೇಕು. ಅಂಚೆಮನೆಯನಿದನ್ನು ನನಗೆ ಮುಟ್ಟಿಸಿದೊಡನೆಯೇ ಅದನ್ನು ಓದುತ್ತೇನೆ. ಆಗಲೇ ಅದರಲ್ಲಿ ಏನಿದೆಯೆಂದು ನನಗೆ ಗೊತ್ತಾಗುವುದು.

ಸೂಕ್ತ ಸಲಹೆ

"ಏನು ಬರೆಯುತ್ತಿರುವಿ?"

"ಏನೂ ಇಲ್ಲ. ಒಬ್ಬ ಮಿತ್ರನಿಗೆ ಕಾಗದ ಬರೆಯುತ್ತಿದ್ದೇನೆ. ಆದರೆ ಏನು ಮಾಡುವ? ಅವನ ವಿಳಾಸ ಸಿಗಲಿಲ್ಲವಲ್ಲ?"

"ಅಯ್ಯೊ, ಅದಕ್ಕೇಕೆ ಚಿಂತೆ? ಹೇಗೂ ಪತ್ರಬರೆಯುವವನಿದ್ದಿ. ಅದರಲ್ಲಿಯೇ ಒಂದು ಗೀಟು ಸೇರಿಸಿ ಬಿಡು. ವಿಳಾಸವನ್ನು ಮರುಟಪಾಲಿನಲ್ಲೇ ಕಳಿಸಿಬಿಡಲಿ.

ಎರಡೂ ಬೇಡ!

"ಎನಯ್ಯೊ, ಕುಡಿಯಲು ಏನು ತರಲಿ? ಕಾಫೀ ಅಥವಾ ಹಾಲು?"

"ಓ, ಕಾಫೀ ತಯಾರಾಗುವವರೆಗೆ ಹಾಲೇ ಬರಲಿ."

ರೂಪಾಯಿಯನ್ನೇ ಕೊಡಿ.

ಮಗಳೊಬ್ಬಳು ತಂದೆಯೊಡನೆ ಕೇಳಿದಳು.

"ಅಪ್ಪಾ, ನನಗೊಂದಾಣಿ ಕೊಡಿ."

"ಏನು? ನಾಯಿಗಾದಂತೆ ಪ್ರಾಯವಾಯ್ತು; ಇನ್ನೂ ಒಂದಾಣಿ ಬೇಡುವುದನ್ನು ಬಿಡುವುದಿಲ್ಲ."

"ಹಾಗಾದರೆ ಅಪ್ಪಾ, ಒಂದಾಣಿ ಬೇಡ, ಒಂದು ರೂಪಾಯಿಯನ್ನೇ ಕೊಟ್ಟು ಬಿಡಿ.

ನಿಜವಾಗಿಯೂ ಹುಚ್ಚು

ಶಾಲೆಯಿಂದ ಓಡುತ್ತೋಡುತ್ತ ಬಂದ ಹುಡುಗನೊಬ್ಬ ತನ್ನ ಅಧ್ಯಾಪಕರ ಗುಣಗಾನ ಮಾಡುತ್ತಿದ್ದ ತಾಯಿಯೊಡನೆ.

"ಅಮ್ಮಾ, ನಮ್ಮ ಗುರುಗಳಿಗೆ ಏನೋ ಸ್ವಲ್ಪ ಹುಚ್ಚು ಹಿಡಿದಂತೆ ಕಾಣುತ್ತದೆ."

"ಹೌದೆ, ಏಕೆ?" ತಾಯಿ ವಿಸ್ಮಯದಿಂದ ಕೇಳಿದಳು.

"ನೋಡಮ್ಮ ನಿನ್ನೆ ಅವರು ಎರಡಕ್ಕೆ ಎರಡು ಸೇರಿಸಿದರೆ ನಾಲ್ಕು ಎಂದರು. ಇಂದು ಮೂರಕ್ಕೆ ಒಂದು ಕೂಡಿಸಿದರೆ ನಾಲ್ಕು ಎಂದರು. ಇನ್ನು ನಾಳೆ ಒಂದಕ್ಕೆ ಮೂರು ಕೂಡಿಸಿದರೆ ನಾಲ್ಕು ಎನ್ನುತ್ತಾರೋ ಏನೋ? ಪಾಪ, ಒಳ್ಳೆಯವರಮ್ಮ ಅವರಿಗೂ ಹುಚ್ಚು ಹಿಡಿಯಿತೆಂದರೆ....

ಎಂಟಾಣೆಯ ಅಂತರ

ಗಿರಾಕಿಯೊಬ್ಬ ಬಟ್ಟೆ ಅಂಗಡಿಯಲ್ಲಿ ಬಟ್ಟೆ ಪರೀಕ್ಷಿಸುತಿದ್ದ. ಎರಡು ಜಾತಿಯ ಬಟ್ಟೆಗಳು ಆತನಿಗೆ ಪಸಂದಾದುವು. ಅವುಗಳ ಬೆಲೆಯಲ್ಲಿ ಕೇವಲ ಎಂಟಾಣೆಯ ಅಂತರವಿತ್ತು. ಆತ ಸೂಕ್ಷ್ಮನಾಗಿ ಬಟ್ಟೆಗಳನ್ನು ಪರಿಶೀಲಿಸಿದ. ಆದರೂ ಅಂತರ ತಿಳಿಯಲಿಲ್ಲ. ನಿರುಪಾಯನಾಗಿ ಕೇಳಿದ.

"ಸ್ವಾಮಿ, ಈ ಎರಡು ಬಟ್ಟೆಗಳಲ್ಲಿ ಏನು ವ್ಯತ್ಯಾಸ?"

"ಅದೂ ತಿಳೀದಿಲ್ವೆ? ಎಂಟಾಣೆಯ ಅಂತರವಿದೆ!" ಅಂಗಡಿಗಾರ ತಟ್ಟನೆ ನುಡಿದು ಕೆರು ನಗೆ ನಕ್ಕ.

ನೀರು ಬತ್ತಿಹೋದರೆ?

"ಇಡಿಯ ಪ್ರಪಂಚದಲ್ಲಿ ಎಲ್ಲೆಲ್ಲೂ ನೀರೊಣಗಿಹೋದರೆ, ಜನರು ಹೇಗೆ ಬದುಕಿಯಾರು?" ಎಂಬ ಗಂಭೀರ ಸಮಸ್ಯೆಯನ್ನು ಯಾರೂ ಬಗೆಹರಿಸಲಿಲ್ಲ. ದೂರದಲ್ಲಿ ಕುಳಿತಿದ್ದ ಕಿಟ್ಟ ಎದ್ದು ನಿಂತು ಹೇಳಿದ—"ನೀರು ಖಾಲಿಯಾದರೇನೋ ಸೋಡಾ ಲೇಮನ್ ಇಲ್ವೆ?" ಎಲ್ಲರೂ ಗೊಳ್ಳೆಂದು ನಕ್ಕರು.

ಉಡುಪಿ. ಡಿ. ಮು. ಕೋರ್ಟ್‌ನಲ್ಲಿ

O. S. 194/1961

ಗೋಕುಲದಾಸ ಶ್ಯಾನುಬಾಗ ಕೂಡಾ—ವಾದಿರು

ಮತ್ತು

ಸುಬ್ಬಿ ಶೆಡ್ತಿ ಕೂಡಾ —ಪ್ರತಿವಾದಿರು

ಯವರೊಳಗೆ

6ನೇ ಪ್ರತಿವಾದಿ ಕೊರಗ ಶೆಟ್ಟಿ, ಗುಲ್ಲಿಶೆಡ್ತಿಳ ಮಗ ಉಡುಪಿ ತಾಲೂಕು ಮಲ್ಪಾರು ಗ್ರಾಮದಲ್ಲಿರುವವರು. ಇವರಿಗೆ ಈಮೂಲಕ ತಿಳಿಯಪಡಿಸುವುದೇನೆಂದ್ರೆ:-

ತಾ 8—9—1911ನೇ ರಿಜಿಸ್ಟ್ರಿ ನಿಂಬಮೂಲಗೇಣ ಚೀಟು ಪ್ರಕಾರ ಕಳೆದ ಮನ್ಮಥ ಸಂವತ್ಸರದ ಚಾಗಾಯ್ತು ತಾ. 3—12—58ರ ವರೆಗೆ ನಾದಿಯ ವ 80ರ 10ರ ವರೇಗಿನ ಪ್ರತಿವಾದಿರಿಗೆ ಸಹಾ ಬರಬೇಕಾದ ಮೂಲಗೇಣಿಯನ್ನು ಸಲ್ಲು ವರ್ಷದಿಂದ ಬರ ಮಾಡಿ ಕೊಳ್ಳುವದೆ ವಾದಿರು ದಾಕಲು ಮಾಡಿದ ಮೇಲ್ಕಂಡ ದಾವೆಯು ತಾರೀಖು. 28—9—1961ಕ್ಕೆ ಡಿಸ್ಟ್ರಿಬ್ಯೂಟ್ ಆಗುವುದರಿಂದ ಆ ಕುರಿತು ಉದಾಹರಿಸುವಂಥಾದಿದ್ದರೆ ಸದ್ರಿ ದಿವಸ ಪೂರ್ವಾಹ್ನ 11ಗಂಟೆಗೆ ಮೇಲ್ಕಂಡ ಕೋರ್ಟುಮುಂದೆ ಹಾಜ್ರಾಗಿ ಜ್ಯಾಬೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ದೆ ನಿಮ್ಮ ಸೈರು ಹಾಜರಿಯಿಂದ ಸಕಲಕ್ಕೆಲ್ಲವಾಗಿ ತೀರ್ಮಾನಿಸ್ಪಡುವುದು.

K. Ramakrishna Rao.
Vakil for Plaintiffs

Udipi Dated 18—9—1961

ಡಿ. ಕೆ. ಭಾರದ್ವಾಜರ
ಇಂಗ್ಲಿಷ್, ಇಂಗ್ಲಿಷ್-ಕನ್ನಡ

ಡಿಕ್ಷನರಿ

ಬೆಲೆ: ರೂ. ನಾಲ್ಕು.

ಐದು ರೂಪಾಯಿ ಮನಿಯರ್ಡರು ಮಾಡಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ ಕಳಿಸಲಾಗುವುದು.
ವಿಚಾರಿಸಿರಿ:
ನವಭಾರತ ಪುಸ್ತಕ ಭಂಡಾರ,
ಉಡುಪಿ.

ದಿ ವಿಜಯ ಬೇಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬೇಂಕ್. ಸ್ಥಾಪನೆ: 1931

ರಿಜಿಸ್ಟರ್ಡ್ ಆಫೀಸು:
ವಿಜಯ ಬೇಂಕ್ ಬಿಲ್ಡಿಂಗ್, ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು-3, ಸೌತ್ ಕೆನರಾ.

ಕಾಯಂ ಶೀವಣಾತಿ ಬಡ್ಡಿ ದರವನ್ನು ಶೇಕಡ 5½ರ ವರೆಗೆ ಹೆಚ್ಚಿಸಲಾಗಿದೆ.

ಏಳು ದಿವಸದ ನೋಟೀಸಿನಲ್ಲಿ ಕೇಳಿದಾಗ್ಯೆ ಹಿಂದೆ ಪಡೆಯುವ ಡಿಪೋಸಿಟುಗಳನ್ನು (Call Deposits) ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸೋಣಾಗುತ್ತದೆ.

ಹೆಚ್ಚಿನ ಮಾಹಿತಿಗೆ ನಮ್ಮ ಶಾಖೆಗಳಲ್ಲಿ ದಯಮಾಡಿ ವಿಚಾರಿಸಿರಿ.

ಹೊಸ ಪುಸ್ತಕ

ಅಮೇರಿಕದ ಆರು ಮಂದಿ
ಪ್ರಖ್ಯಾತ ಕಥೆಗಾರರ
ಆರು ಉತ್ತಮ ಕಥೆಗಳ
ಸುಂದರ ಕಥಾಸಂಕಲನ

ಅಮೆರಿಕದ ಆರು ಕತೆಗಳು

ಅಮೆರಿಕದ ಗ್ರಾಮಜೀವನದ ಸುಂದರ, ಸಜೀವ ಮತ್ತು ಮಾರ್ಮಿಕ ಚಿತ್ರಗಳನ್ನು ಒತ್ತಟ್ಟಿಗೆ ಪೋಣಿಸಿರುವುದು ಈ ಕಥಾಸಂಕಲನದ ವೈಶಿಷ್ಟ್ಯ

ಅನುವಾದಿಸಿದವರು:
ಕು. ಶಿ. ಹರಿದಾಸ ಭಟ್ಟ, ಎಂ.ಎ.

ಪ್ರಕಾಶಕರು:
ನವಯುಗ ಎಂಟರ್‌ಪ್ರೈಸ್ ಲಿ.

ಬೆಲೆ: ರೂ. 1=75; ಬಿಳಿ ಕಾಗದ!

ರೂ. 2ನ್ನು M.O. ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಾಗಿ ಕಳಿಸಬಹುದು

ವ್ಯಾಪಾರಿಗಳಿಗೆ ಥಾರಾಳ ಕಮಿಷನ್

ಪ್ರತಿಗಳು ಸಿಗುವ ಸ್ಥಳಗಳು:
ನವಯುಗ ಪ್ರೆಸ್ ಉಡುಪಿ.
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಮನವೆಂಬ ಮರ್ಕಟ

[ಆನೇ ಪುಟದಿಂದ]

ತ್ತಿರಬೇಕು! ಮನೆಯಲ್ಲಿ ಸರಿಯಾಗಿ ಸುಖ ದೊರೆಯಲಿಲ್ಲ ಎಂದು 'ಪಕೇಟು ಸ್ಪೀಯಾಕ್ಷಿ"ಯರಿಗೆ ಮೊರೆಹೋಗಬೇಕು! ಸಿಕ್ಕಿದ ಹಣವನ್ನು ಸಂಪೂರ್ಣ ಜುಗಾರಿ, ಇಸ್ಪೀಟು ಆಡಿ, ಸುರಿಯನ್ನು ಹೆಚ್ಚಿಸಬೇಕು!—ಹೀಗೆ ಹಣದ ದುರ್ವ್ಯಯವಾದರೂ ಚಿಂತಿಲ್ಲ— ಸಂಬಳ ಹೆಚ್ಚಾಗಲೇಬೇಕು!

ದುರ್ಮಾರ್ಗಕ್ಕೆಳಿದೆ:, ಸೆರೆ ಕುಡಿದು, ಮುಂದೆ ಜುಗಾರಿ, ಸಟ್ಟ, ಇಸ್ಪೀಟಿಗೆ ಹಣವಿಲ್ಲವೆಂದಾಗ ಮನೆಗೆ ಮೊರಿಯಂತೆ ಪ್ರವೇಶಿಸಿ, ಮಡದಿಯನ್ನು ಬಡಿದು, ಮಾಂಗಲ್ಯ ಸೂತ್ರವನ್ನೇ ಎಳೆದುಕೊಂಡು ಹೋಗುವವರು ಇರುವಾಗ, ಜನತೆಯ ಮನೋಮಟ್ಟ ಎಂತಹ ನಿಕೃಷ್ಟ ಸ್ಥಾನದಲ್ಲಿದೆ ಎಂದು ಊಹಿಸುವುದು ಅಸಾಧ್ಯ.

ಮೊಲಿಕನು ಹೇರಳ ಹಣ ಗಳಿಸಿ, ಬೆವರು ಸುರಿಸಿ, ದುಡಿಯುತ್ತಿರುವ ಶ್ರಮಜೀವಿಗಳಿಗೆ, ನಿಷ್ಠೆಯ ಬದುಕಿಗೆ ಸಾಕಾಗುವಷ್ಟು ಸಂಬಳ ಕೊಡುತ್ತಿಲ್ಲ-ಅಂತಹ ಮೊಲಿಕನು, ಹೆಚ್ಚಿಗೆ ಸಂಬಳದೊಂದಿಗೆ ಬೋನಸ್ಸು ಕೊಡಬೇಕು — ಇಲ್ಲದಿದ್ದರೆ ದುಡಿಯಬೇಡಿರಿ ಎಂದು ಬೋಧಿಸಿ, ಮೊಲಿಕನ ಎದುರು ಹುಲಿಯಂತೆ ಹೋರಾಡಲು ಸಿದ್ಧಿಸುವ ಸಕ್ಷ ಸಂಗಡಗಳಿವೆ. ಶ್ರಮಿಕರ ಶ್ರಮದಿಂದಲ್ಲವೆ—ಮೊಲಿಕ ಹಣ ಪಡೆಯುವುದು—ಇಂಥವರ ದಬ್ಬಾಳಿಕೆ ನಿಲ್ಲಬೇಡವೆ?

ಆದರೆ, ಹೋರಾಟದಿಂದ, ಹಟದಿಂದ ಪಡೆದ ಹಣ ಏನಾಗುತ್ತದೆ? ನಾಳೆ, ಬರಬಹುದಾದಂಥಹ ಕಾಯಿಲೆ — ಕಷ್ಟಕ್ಕೆ ಭದ್ರವಾಗಿ ಉಳಿಯುವುದೇ? ಮಡದಿ ಮಕ್ಕಳಿಗೆ, ಒಡವೆ-ವಸ್ತ್ರವಾಗಿ ಬರಬಹುದೆ? ಎಂದಿಗೂ ನ್ಯಾಯವಾಗಿ ಖರ್ಚಾಗಲಾರದು! ಮನ ಬಂದಂತೆ ಹಾಳಾಗಿ ಹರಿದು ಹೋಗುವುದು. ಹಣ ಸಂಪೂರ್ಣ ಕಾಲಿಯಾದ ನಂತರ ಎಚ್ಚರವಾಗಿ 'ಅಯ್ಯೋ.....ಉಳಿಸಬೇಕಿತ್ತು' ಎಂದು ಮರುಕದ ಪಶ್ಚಾತ್ತಾಪ ಪಡುವವರು ಹಲವರು.

'ಲಕ್ಷ್ಮಿ ಚಂಚಲೆ--ಯಾರ ಬಳಿಯಲ್ಲಿಯೂ ಸ್ಥಿರವಾಗಿ ನೆಲಸಲಾರಳು'—ಎಂದು ಕಳೆದುಹೋದ ಹಣಕ್ಕಾಗಿ ತೃಪ್ತಿಯ ಮೊತ್ತನ್ನು ಆಡುವರಲ್ಲದೆ, ತನ್ನ ಕ್ಷುಲ್ಲಕ ಮನೋಭಾವಕ್ಕಾಗಿ ಬೇಸರಪಟ್ಟು ಬಾಳುವೆಯನ್ನು ಬದಲಾಯಿಸಿದವರಿಲ್ಲ.

ಜನತೆ ಪ್ರಾಮಾಣಿಕರಾಗಬೇಕು! ನ್ಯಾಯ — ನೀತಿ ತುಂಬಿರಬೇಕು! ದೇವ ದೈವದಲ್ಲಿ ಭಕ್ತಿಯಿರಬೇಕು! ನಡೆ ನುಡಿಯಲ್ಲಿ ಗಂಭೀರವಿರಬೇಕು! ನಾಳಿನ ನೆನಪು ಸ್ಥಿರವಾಗಿರಬೇಕು! ಸ್ಥಿರತೆಯಿಂದಸ್ಥೈರ್ಯದಿಂದಿರುವವರುಭಯಂಕರ ಬಿರುಗಾಳಿಯನ್ನು ಕೆಚ್ಚೆದೆಯಿಂದ ಎದುರಿಸಬಹುದು! ಹುಚ್ಚು ಮನಸ್ಸು ಹರಿದಂತೆ ಬೆಳೆಯಲು ಬಿಡಬಾರದು! ಮನ ಬಂದಂತೆ ಆಸೆ ಪಡಬಾರದು.

—ಪಿ. ಎಸ್. ರಾವ್, ಮಂಗಳೂರು.

ನವಯುಗ ವಾರ ಪತ್ರಿಕೆಗೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ

ಶಾಂತಿವಾದಿಗೆ ಸೆರೆಮನೆ

ಅಲ್ಲ್ ರಸ್ಸೆಲ್ ಮತ್ತು ಅಣ್ವಸ್ತ್ರಗಳಲ್ಲಿ ಯಾರನ್ನು ಇಂಗ್ಲೆಂಡು ತ್ಯಜಿಸಬಲ್ಲುದು? ಕಾರ್ಲಾಯಿಲರು ಒಂದು ಬಾರಿ, "ಇಂಗ್ಲೆಂಡು ತನ್ನ ಸಾಮ್ರಾಜ್ಯವನ್ನು ಬಿಟ್ಟುಬಿಡಲು ಸಿದ್ಧವಿದೆ; ಆದರದು ಷೇಕ್ಸ್‌ಪಿಯರನನ್ನು ಎಂದಿಗೂ ಬಿಡಲಾರದು" ಎಂದು ಉದ್ಗರಿಸಿದ್ದರು.

ಹೆಚ್ಚುಮಟ್ಟಿಗೆ, ಇದೇ ರೀತಿಯ ಪ್ರಶ್ನೆ ಇನ್ನೊಂದು ರೀತಿಯಲ್ಲಿ ಇಂಗ್ಲೆಂಡಿನ ಮುಂದೆ ಸುನಃ ಎದ್ದು ತೋರುತ್ತಿದೆ. ಕಳೆದ ಒಂದು ತಿಂಗಳಿಂದ ಇಂಗ್ಲೆಂಡಿನಲ್ಲಿ ಮಾತ್ರವಲ್ಲ, ಸರ್ವಸಾಮಾನ್ಯ ಅದರ ಆಸುವಾಸಿನ ದೇಶಗಳಲ್ಲೂ ಬರ್ಟ್ರಾಂಡ್ ರಸ್ಸೆಲ್ಲರು ಹೂಡಿದ್ದ ಅಣ್ವಸ್ತ್ರ ವಿರೋಧೀ ಆಂದೋಲನ ಮತ್ತು ಪ್ರಸಿದ್ಧ ಕಲಾವಿದ ಗೋಯಾರಿಂದ ನಿರ್ಮಿಸಲ್ಪಟ್ಟ ಡ್ಯೂಕ್ ಆಫ್ ವೆಲ್ಲಿಂಗ್‌ಟನ್‌ರ ಚಿತ್ರದ ಅಪಹಾರ - ಗಳ ಸಂಬಂಧದಲ್ಲಿ ಅತಿ ತೀವ್ರವಾದ ಮೊಕದ್ದಮೆ ನಡೆಯುತ್ತದೆ.

ಕಲಾಕೃತಿಯೊಂದರ ಅಪಹಾರ ಮತ್ತು ದಾರ್ಶನಿಕ ವಿಚಾರಗಳ ಪ್ರಚಾರಗಳಲ್ಲಿ ಯಾವುದೇ ಪ್ರಕಾರದ ಬಾದರಾಯಣ ಸಂಬಂಧವೂ ಇರುವುದು ಅಸಾಧ್ಯ. ಆದರೂ ಇಂಗ್ಲೆಂಡಿನಲ್ಲಿ ಮಾತ್ರ ಒಂದು ಕುತೂಹಲಕಾರಕ ಘಟನೆ ನಡೆಯಿತು. ಅಪಹೃತವಾದ ಚಿತ್ರವನ್ನು ಮರಳಿಕೊಡಬೇಕಾದರೆ, ಒಂದು ಲಕ್ಷ ನಲ್ವತ್ತು ಸಾವಿರ ಪೌಂಡುಗಳನ್ನು ನೀಡ ಬೇಕೆಂದು ಮೊದಲು ಕೇಳಿದ್ದರೂ ಈ ಬೇಡಿಕೆಯನ್ನು ಕೇವಲ ಐವತ್ತು ಸಾವಿರ ಪೌಂಡುಗಳಿಗೆ ಇಳಿಸಲಾಗಿದೆಯೆಂದು ಈ ಪೊತ್ತವನ್ನು ಅಣ್ವಸ್ತ್ರ ಪ್ರತಿಬಂಧ ಆಂದೋಲನಕ್ಕೆ ವಿನಿಯೋಗಿಸಬೇಕೆಂದೂ ಟೆಲಿಫೋನ್ ಮೂಲಕ 'ರಾಯ್ಟರ್' ಕಾರ್ಯಾಲಯಕ್ಕೆ ಯಾರೋ ತಿಳಿಸಿದರಂತೆ!

ರಸ್ಸೆಲ್ ಮಹಾಶಯರು ಹೂಡಿದ್ದ ಈ ಆಂದೋಲನಕ್ಕೆ ಇಂಗ್ಲೆಂಡಿನ ಜನತೆಯು ಎಂತು ಮುಗ್ಧವಾಗಿಯೆಂದು ತಿಳಿಯುವುದಕ್ಕೆ 'ಇದೊಂದು ಜ್ವಲಂತ ನಿದರ್ಶನ ಇಲ್ಲವಾದರೆ, ಚಿತ್ರದ ಕಳವುಗಾರನಿಗೂ ಈ ಆಂದೋಲನಕ್ಕೂ ಪೂರ್ವಾಪರ ಸಂಬಂಧವಿಲ್ಲಿಯದು?

ಬರ್ಟ್ರೆಂಡ್ ರಸ್ಸೆಲ್ಲರು ಯುದ್ಧ ವಿರೋಧೀ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಿರುವುದು ಇದೇ ಮೊದಲಲ್ಲ. ಕಳೆದ ಅರ್ಧ ಶತಮಾನದಿಂದಲೂ ಅವರು ಇದರಲ್ಲಿ ನಿರತರಾಗಿರುವರು. ಪ್ರಥಮ ಲೋಕ ಯುದ್ಧದ ಸಂದರ್ಭದಲ್ಲಿ ಯುದ್ಧ ವಿರೋಧೀ ಚಟ ವಟಿಕೆಗಳಲ್ಲಿ ತೊಡಗಿದ್ದ ರಸ್ಸೆಲ್ಲರು ಕಾರಾಗೃಹವಾಸವನ್ನು ಅನುಭವಿಸಬೇಕಾಯಿತು. ಈಗ, ೪೫ ವರ್ಷಗಳ ನಂತರ, ವಿಶ್ವವು ಮೂರನೆಯ ಜಾಗತಿಕ ಸಂಗ್ರಾಮದತ್ತ ತೀವ್ರವಾಗಿ ಮುನ್ನುಗ್ಗುತ್ತಿರುವ ವಿಷಮ ಗಳಿಗೆಯಲ್ಲಿ ಈ ಶಾಂತಿವಾದಿ ರಸ್ಸೆಲ್ ಮರಳಿ ಜೇಲುವಾಸನೆಯನ್ನು ಹೋಗಬೇಕಾಯಿತು. ಇದೇಕೆ ಹೀಗೆ ಎಂದು ಯಾರಾದರೂ ಪ್ರಶ್ನಿಸಬಹುದು.

ರಸ್ಸೆಲ್ಲರು ಅಣ್ವಸ್ತ್ರಗಳಿಂದ ಮಾನವ ಜಾತಿಯು ನಷ್ಟವಾಗುವುದು ಎಂಬುದರ ಬಗ್ಗೆ ಚಿಂತಿತರಾಗಿದ್ದಾರೆಯೆ? ಪ್ರಾಯಃ ಇಲ್ಲವೆಂದೇ ಹೇಳಬಹುದು. ವಿನಾಶಲೀಲೆ ನಡೆದರೆ, ಅದನ್ನು ನೋಡಲು ಆಸಿ ವರ್ಷ ಪ್ರಾಯದ ರಸ್ಸೆಲರು ಉಳಿಯುವುದುಂಟೆ? ಐನ್‌ಸ್ಟೀನ್, ಎಚ್. ಜಿ. ವೆಲ್ಸ್ ಮೊದಲಾದ ಮಹಾತ್ಮರು ಸಂಹಾರಕಾಸ್ತ್ರಗಳ ವಿರುದ್ಧ ಹೋರಾಡುತ್ತ ಈ ಪ್ರಪಂಚವನ್ನು ಬಿಟ್ಟುಹೋಗಿದ್ದಾರೆ ಎಂಬುದನ್ನವರು ಸರಿಯಾಗಿ ಬಲ್ಲರು. ಈ ಲೋಕದ ಒಬ್ಬನೇ ಒಬ್ಬ ನಾಗರಿಕ ಅವರ ಕೂಗನ್ನು ಕಿವಿಯ ಮೇಲೆ ಹಾಕಿಕೊಳ್ಳಲಿಲ್ಲ.

ಶೋಂಬೆಯೊಡನೆ ಮಾತುಕತೆಗೆ ಲಿಯೋಪೋಲ್ಡ್ ವಿಲಿಯಿಂದ ಹೊರಟ ವಿಮಾನ ಅಪಘಾತದಲ್ಲಿ ಮೃತ್ಯುವಶರಾದ ಡೇಗ್ ಹೆಮರ್‌ಶೆಲ್.

ಆದುದರಿಂದ, ಭವಿಷ್ಯತ್ಕಾಲಕ್ಕೆಂತ ವರ್ತಮಾನ ಕಾಲದಲ್ಲಿಯೇ ಅಣುಯುದ್ಧಕ್ಕೆ ತೀವ್ರ ತಯಾರಿಯಾಗುತ್ತಿರುವುದನ್ನು ಕಂಡು, ಮಾನವ ಸಮಾಜದ ಮುಖಕ್ಕೆ ಕಲಂಕ ತಟ್ಟುತ್ತಿರುವುದನ್ನು ಈ ದಾರ್ಶನಿಕ ಕಣ್ಣಾರೆ ಕಂಡು ಮೂಕನಂತೆ ಸುಮ್ಮನಿರಲಾರದಾದರು.

ಪ್ರತಿಯೊಂದು ವಿಧದ ನೋವಿಗೂ ಎಸ್ಪಿರಿನ್ ಗುಳಿಗೆ ರಾಮಬಾಣವಾಗಿರುವ ಇಂತಹ ವಿಚಿತ್ರಯುಗದಲ್ಲಿ ರಸ್ಸೆಲರಂತಹ ದಾರ್ಶನಿಕರು ಜನ್ಮವೆತ್ತಿದುದು ದುರ್ದೈವ. ತಮ್ಮ ಶಾಂತಿವಾದಿ ವಿಚಾರಗಳಿಂದಾಗಿ ರಸ್ಸೆಲರು ಮೊತ್ತಮೊದಲು ಬಂದೀವಾಸವನ್ನು ಅನುಭವಿಸಲು ಸಿದ್ಧರಾದಾಗ, ನಮ್ಮ ದೇಶದಲ್ಲಿ ಮಹಾತ್ಮಾ ಗಾಂಧೀಯವರ ಸತ್ಯಾಗ್ರಹ-ಆಶ್ರಮವೂ ರಚನೆಯಾಗಿರಲಿಲ್ಲ. ತನ್ನ ಕ್ರಾಂತಿಕಾರಿ ವಿಚಾರಗಳಿಂದಾಗಿ ರಸ್ಸೆಲರನ್ನು ಧರ್ಮಮೂರ್ತಂಡರೂ ರಾಜನೀತಿ ಮಹಾರಥರೂ ಉರಿಮೋರೆಯಿಂದ ನೋಡುತ್ತಾರೆ. ಹಾಗಿದ್ದರೂ ಓರ್ವ ನಿಜವಾದ ಸತ್ಯಾಗ್ರಹಿಯಂತೆ ಅವರಿಂದೂ ತಮ್ಮ ವಿಚಾರಗಳಿಗೆ ದೃಢವಾಗಿ ಅಂಟಿಕೊಂಡಿದ್ದಾರೆ.

ಶಾಂತಿಭಂಗ ಮಾಡಲು ಪ್ರಯತ್ನಿಸಿದ ಆರೋಪವನ್ನು ಹೊರಿಸಿಬರ್ಟ್ರೆಂಡ್ ರಸ್ಸೆಲ್ಲರನ್ನು ನ್ಯಾಯಾಲಯವು ಸೆರೆಮನೆಗೆ ಅಟ್ಟಿತು ನಿಜ ಆದರೆ, ಮಹಾದಾರ್ಶನಿಕನು ತನ್ನ ವಿಚಾರ ಧಾರೆಯನ್ನು ಬದಲಾಯಿಸದೆ, ಬಿಡುಗಡೆ ಹೊಂದಿದ ನಂತರ ಮರಳಿ ತನ್ನ ನಿತ್ಯಪ್ರತಿಯ ಕಾರ್ಯದಲ್ಲಿ ತೊಡಗುವನೆಂಬುದೂ ಖಂಡಿತ.

ಕರ್ನಾಟಕ ಸಂಘ(ಉಡುಪಿ)ದ ಮೂರು ಪ್ರಕಟಣೆಗಳು

ಓದಲೇ ಬೇಕಾಗಿರುವ ನವೀನ ಪುಸ್ತಕಗಳು!

೧. ಚಂದ್ರಲೋಕಕ್ಕೆ ಪ್ರಯಾಣ

ಲೇಖಕರು: ಯು. ರಾಘವೇಂದ್ರ ಆಚಾರ್ಯ, ಎಂ. ಎ.

ಆಧುನಿಕ ಪ್ರಸಂಚದ ಮುಸುತ್ತರವಾದ ಆಂದೋಲನಗಳು, ಪ್ರಪಂಚವನ್ನೆಲ್ಲಾ ಅಲುಗಾಡಿಸುತ್ತಿರುವ ಆರ್ಥಿಕ, ರಾಜಕೀಯ ಚಳುವಳಿಗಳು, ಅವುಗಳ ಹಿಂದಿರುವ ತತ್ವಗಳು. ಅವುಗಳಿಗೆ ಮಾನವನ ಪ್ರತಿಕ್ರಿಯೆ ಇವನ್ನೆಲ್ಲಾ ಗಮನಿಸಿ ರಚಿಸಿರುವ, ನಮ್ಮಲ್ಲಿ ವಿಚಾರಶಕ್ತಿ ಬೆಳೆಯಲು ನೆರವಾಗುವ ವೈಜ್ಞಾನಿಕ ಗ್ರಂಥ.

೨. ಸಾಮಾನ್ಯ ರೋಗಗಳು

ಲೇಖಕರು: ಡಾ| ಕೆ. ಎಲ್. ಪಿತಾಳ, ಎಂ. ಬಿ. ಬಿ. ಎಸ್.
ಉಡುಪಿ ನಗರ ಸಭಾಧ್ಯಕ್ಷರು.

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಅತ್ಯುಪಯುಕ್ತ ಪುಸ್ತಕ.

೩. ಭೌತಿಕ ದರ್ಶನ

ಲೇಖಕರು: ಬಡೆಕ್ಕಿಲ ಕೃಷ್ಣ ಭಟ್ಟ, ಎಲ್‌ಎಲ್.ಬಿ.

ಸಜ್ಜನರ, ವಿದ್ವಜ್ಜನರ, ವಿಜ್ಞಾನಿಗಳ ಅಭಿಮತವನ್ನು ಸಂಗ್ರಹಿಸಿ ಬರೆದ ಭೌತಿಕ ದರ್ಶನದ ಸ್ಥೂಲ ಪರಿಚಯ.

ಪ್ರತಿಯೊಂದು ಪುಸ್ತಕದ ಬೆಲೆ ಬರೇ ಒಂದು ರೂಪಾಯಿ.

ರೂ. ೩=೫೫ನ್ನು ಮನಿಯಾರ್ಡರು ಮಾಡಿದರೆ ಮೂರೂ ಪುಸ್ತಕಗಳನ್ನು ಬುಕ್ ಪೋಸ್ಟಾನಿಂದ ಕಳಿಸಬಹುದು.

ಪುಸ್ತಕ ವ್ಯಾಪಾರಿಗಳಿಗೆ ವಿಶೇಷ ಸವಲತ್ತುಗಳಿವೆ.

ವಿಚಾರಿಸಿರಿ:

ನವಭಾರತ ಪುಸ್ತಕ ಭಂಡಾರ, ಉಡುಪಿ.

"ನಚಿಕೇತ"ರ

ಇನ್ನೊಂದು ನವೀನ ಕಾದಂಬರಿ—

ಋಣ ಯಾತ್ರೆ

ಇದೀಗ ಪ್ರಕಟವಾಗಿದೆ.
ಬೆಲೆ ರೂ. 1-50 ನ. ಪೈಸೆ.

ಮೊದಲು ಪ್ರಕಟವಾದ ಕಾದಂಬರಿ—

ಭಾವಾರ್ಚನೆ

ಬೆಲೆ ರೂ. 1-25 ನ. ಪೈಸೆ.

ಪ್ರತಿಗಳು ಸಿಗುವ ಸ್ಥಳಗಳು:—

ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.

ಉಲ್ಲಾಸಭರಿತ ಗ್ರಾಮ ಜೀವನ

ಗಣರಾಜ್ಯ ದಿನೋತ್ಸವ ಸಂತೋಷ ಸಮಾರಂಭಗಳು ಮುಗಿದಿವೆ. ಆದರೆ ಭಾರತದ ಮೂಲೆ ಮೂಲೆಗಳಿಂದ ರಾಜಧಾನಿ ದಿಲ್ಲಿಗೆ ಬಂದಿದ್ದ ಜಾನಪದ ಕಲಾವಿದರ ಮಧ್ವನಿಗಳ ಧ್ವನಿ, ಕೊಳಲು, ಒಲಗ ಮುಂತಾದ ವಾದ್ಯಗಳ ಸಂಗೀತ ಇನ್ನೂ ಮೊಳಗುತ್ತಿವೆ.

ಜಾನಪದ ನರ್ತಕ ನರ್ತಕಿಯರ ಉಲ್ಲಾಸ ಗ್ರಾಮ ನಿವಾಸಿಗಳ ಉತ್ಸಾಹ, ಅಪರಿಮಿತ ಅಭಿವ್ಯಕ್ತಿ ರಂಜಿಸಿತು ಅವರ ಬಗೆಬಗೆಯ ನರ್ತನಗಳು ಮನಮೋಹಕವಾಗಿದ್ದವು

ಈ ಕಲಾವಿದರು ನವದೆಹಲಿಯಲ್ಲಿ ತಂಗಿದ್ದು ಶಾಲ್ಕತೋರಾ ಉದ್ಯಾನಗಳಲ್ಲಿ. ಈ ಉದ್ಯಾನವು ಉಲ್ಲಾಸಭರಿತ, ವರ್ಣರಂಜಿತ ವಿಭಿರವಾಗಿ ವರ್ಷಾಚ್ಛಿತ್ತು.

ವರ್ಷವರ್ಷವೂ ನೂರಾರು ಜನ ಗ್ರಾಮವಾಸಿಗಳು— ರೈತರು, ಕುರುಬರು, ಬೆಸ್ತರು—ದೆಹಲಿಗೆ ಬಂದು ಗಣರಾಜ್ಯ ದಿನೋತ್ಸವ ಸಮಾರಂಭಗಳಲ್ಲಿ ಭಾಗವಹಿಸುತ್ತಿರುವರು ರಾಜ್ಯಗಳಲ್ಲಿ ನಡೆಯುವ ಸಮಾರಂಭಗಳಲ್ಲಿ ಬಾಗವಹಿಸುವ ವಿವಿಧ ಜಿಲ್ಲೆಗಳಿಗೆ ಸೇರಿದ ಜಾನಪದ ನರ್ತಕ ನರ್ತಕಿಯರು ತಮ್ಮ ತಮ್ಮ ಅಭಿನಯ ಪ್ರದರ್ಶನಗಳ ಆಧಾರದ ಮೇಲೆ ಆಯಲ್ಪಡುವರು. ಹೀಗೆ ಆಯಲ್ಪಟ್ಟ ಪ್ರತಿಭಾವಂತ ಕಲಾವಿದರು ರಾಷ್ಟ್ರೀಯ ಉತ್ಸವದಲ್ಲಿ ಭಾಗವಹಿಸುವರು

ಜಾನಪದ ನೃತ್ಯಗಳು ಜನ ಸಮುದಾಯದ ಜನಜೀವನದಲ್ಲಿ ಹಾಸುಹೊಕ್ಕಿವೆ ಅವು ಸಜೀವವಾಗಿಯೂ ಹಳ್ಳಿಯ ಜನಜೀವನವನ್ನು ಸಿರೂಪಿಸುತ್ತವೆ

ವರ್ಷದ ವಿವಿಧ ಋತುಮಾನಗಳು ವಿವಿಧ ದೇವತೆಯ ಸಿದ್ಧತಿಗಳೊಂದಿಗೆ ಹಾಗೂ ಜನತೆಯ ಅನುದಿನದ ಜೀವನದೊಂದಿಗೆ ಸಂಬಂಧ ಪಡೆದಿವೆ ಇವೇ ಜಾನಪದ ನೃತ್ಯಗಳು ಮುಖ್ಯ ವಸ್ತುವೂ ಆಗಿವೆ.

ಈ ವರ್ಷದ ಉತ್ಸವದ ವಿಶೇಷಾಂಶಗಳು

ಈ ವರ್ಷದ ಗಣರಾಜ್ಯ ದಿನೋತ್ಸವದ ಜಾನಪದ ನೃತ್ಯೋತ್ಸವದಲ್ಲಿ ಆಂಧ್ರಪ್ರದೇಶದ ಬಂಜಾರ ನರ್ತಕಿಯರು ಭಾಗ ವಹಿಸಿದ್ದರು. ಅವರ ನೃತ್ಯವನ್ನು ವೀಕ್ಷಿಸಿದ ಜನರು ಪುಳಕಿತರಾದರು

ಲಕ್ಷದ್ವೀಪದ ಜಾನಪದ ನರ್ತಕ ನರ್ತಕಿಯರು ವಿವಾಹಕ್ಕೆ ಸಂಬಂಧಪಟ್ಟ ಹಬ್ಬಜಾಗ ನೃತ್ಯವನ್ನೂ ಬಂಬೂ ನೃತ್ಯವನ್ನೂ ನೀಡಿದರು ರಂಜಿಸುವ ಝರಿ ಹಳ್ಳಿಯ ಓರಾನರು ಕರ್ಮ ಜಾಮರಾ ನೃತ್ಯವನ್ನು ಅಭಿನಯಿಸಿದರು. ಗುಜರಾತಿನ ಕಲಾವಿದರು ರಾಸ ನೃತ್ಯವನ್ನೂ ಅಭಿನಯಿಸಿದರು. ಹಿಮಾಚಲ ಪ್ರದೇಶದ ಕಲಾವಿದರ ಗೀತೆಗಳು ಮತ್ತು ನೃತ್ಯಗಳು ಗುದ್ದಗಾಡಿನ ಜನರ ಸರಳ ಗ್ರಾಮೀಣ ಜೀವನವನ್ನು ಪ್ರತಿಬಿಂಬಿಸಿದವು. ಮಧ್ಯಪ್ರದೇಶದ ಕಲಾವಿದರು ಮೆಟ್ಟುಗೋಲು ನೃತ್ಯವನ್ನು ಆತ್ಯಾಕರ್ಷಕ ರೀತಿಯಲ್ಲಿ ಪ್ರದರ್ಶಿಸಿದರು. ಪಂಜಾಬಿನ ಕಲಾವಿದರ ಝುಮ್ಮರ್ ನೃತ್ಯವೂ ಪಶ್ಚಿಮ ಬಂಗಾಳದ ಗುಡ್ಡನಾಡಿನ ಜನರ ವರ್ಣನೀಯ ಗಜನ್ ನೃತ್ಯವೂ ವೀಕ್ಷಕರನ್ನು ರಂಜಿಸಿದವು

ಕೊಡಗಿನ ಕಲಾವಿದರು

ಮೈಸೂರು ರಾಜ್ಯದ ಕೊಡಗಿನ ಕಲಾವಿದರು ಬಾಲಕಾಟೆ ನೃತ್ಯವನ್ನು ಪ್ರದರ್ಶಿಸಿ ಎಲ್ಲರ ಮೆಚ್ಚುಗೆಗೂ ಪಾತ್ರರಾದರು. ಪುರುಷರು ಕುಣೋವ ಎಂಬ ಕಪ್ಪು ಬಣ್ಣದ ನಿಲುವಂಗಿಯನ್ನೂ ಬಿಳಿಯ ರುಮಾಲನ್ನೂ ಧರಿಸಿದ್ದು ಎಲ್ಲರ ಗಮನವನ್ನೂ ಸೆಳೆದರು.

ಮಣಿಪುರದ ಪಂಗ್ ಚೋಲೊಂ ನೃತ್ಯ

ಮಣಿಪುರದಲ್ಲಿ ಸಂಗೀತ ಮತ್ತು ನೃತ್ಯ ಜನಜೀವನದಲ್ಲಿ ಹಾಸುಹೊಕ್ಕಿವೆ ಇಷ್ಟೇಅಲ್ಲದೆ ಮಣಿಪುರವು ಶಾಸ್ತ್ರೀಯ ನೃತ್ಯಪದ್ಧತಿಗಳಲ್ಲಿ ಒಂದಾಗಿದೆ. ಇದೇ ಮಣಿಪುರಿ ನೃತ್ಯ ಪದ್ಧತಿ. ಮಣಿಪುರದ ಅತ್ಯಂತ ಆಸಕ್ತಿಯುತ ನೃತ್ಯಗಳಲ್ಲಿ ಒಂದಾದ ಪಂಗ್ ಚೋಲೊಂ ನೃತ್ಯವನ್ನು ಈ ವರ್ಷದ ಉತ್ಸವದಲ್ಲಿ ಪ್ರದರ್ಶಿಸಲಾಯಿತು. ಮಣಿಪುರದ ಕಲಾವಿದರು ಅಭಿನಯಿಸಿದ ಇನ್ನೆರಡು ನೃತ್ಯಗಳೆಂದರೆ ಖಮಹೋನ್ ತೋಕೈ

ಮತ್ತು ಖ್ಯಾಗ್ರಿ ಹಂಗೇಲ್ ಚೋಂಗ್ಬಾ. ಮೊದಲನೆಯದು ಯುದ್ಧದಲ್ಲಿ ಶತ್ರುಗಳ ಮೇಲೆ ವಿಜಯಗಳಿಸಿದಾಗ ಅಭಿನಯಿಸುವ ನೃತ್ಯವಾಗಿದೆ. ಎರಡನೆಯದು ದೇವ ದೇವತೆಗಳಿಗೆ ಸಂಬಂಧಪಟ್ಟದ್ದಾಗಿದೆ.

ಮಹಾರಾಷ್ಟ್ರದ ಕಲಾವಿದರು ಸಮುದ್ರದ ಅಲೆಗಳ ಹೊಡೆತಕ್ಕೆ ಸಿಕ್ಕಿದ ದೋಣಿಗಳನ್ನು ರೂಪಿಸುವ ನೃತ್ಯವನ್ನು ಅಭಿನಯಿಸಿದರು

ಮೆಟ್ಟುಗೋಲಿನ ನರ್ತಕರು

ಮಧ್ಯಪ್ರದೇಶದ ಗೋಂಡಾ ನೃತ್ಯಗಳಲ್ಲಿ ಗಿರಿಜನರ ಸಂಸ್ಕೃತಿಯ ಪಾರಿಶುದ್ಧತೆ ಹಾಗೂ ಸ್ವಾಭಾವಿಕತೆ ಹಾಗೆಯೇ ಉಳಿದುಕೊಂಡು ಬಂದಿವೆ. ಈ ಸಂಪದ್ಭರಿತ ಗೊಂಡಾ ನೃತ್ಯಗಳಲ್ಲಿ ಮೆಟ್ಟುಗೋಲಿನ ನೃತ್ಯವು ಪ್ರಸಿದ್ಧವಾಗಿದೆ. ಪುರುಷರು ಕಾಡುಕೋಣದ ಕೊಂಬುಗಳನ್ನು ತಮ್ಮ ತಮ್ಮ ತಲೆಯಡಿಗೆಗಳಿಗೆ ಸಿಕ್ಕಿಸಿಕೊಂಡಿರುವರು ಅವರು ಹುಂಜದ ಪುಕ್ಕಗಳು ಮತ್ತು ಕವಡೆಗಳನ್ನು ಧರಿಸಿಕೊಂಡಿರುವರು. ಈ ವಿಚಿತ್ರ ತಲೆಯುಡಿಗೆ ಎಲ್ಲರ ಗಮನವನ್ನು ಸೆಳೆಯುದೇ ಇರವು.

ಕರ್ನಾಟಕದ 13ವರ್ಷ ಪ್ರಾಯದ ಅನಿ ಅಂಬಿಕೆಯನ್ನು ಅಮೆರಿಕೆಯ ಮಕ್ಕಳಿಗೆ ಉಡುಗೊರೆಯಾಗಿ ಶ್ರೀ ಜಯಚಾಮರಾಜರು ಕೊಟ್ಟಿದ್ದರು. ಆ ಅನೆಯ ಮೇಲೆ ಅಮೆರಿಕೆಯ ಒಬ್ಬ ಬಾಲಕನು ಸವಾರಿ ಮಾಡುತ್ತಿರುವುದನ್ನು ಇಲ್ಲಿ ನೋಡಬಹುದು

ಬಿಹಾರಿನ ಓರಾನರ ಕರ್ಮ ಓದುರ ನೃತ್ಯವನ್ನು ಸಾಧಾರಣವಾಗಿ ವಸಂತ ಕಾಲದಲ್ಲಿ ಅಭಿನಯಿಸಲಾಗುವುದು. ಮದ್ದಳೆಯ ಶಬ್ದವು ಸಮುದ್ರದ ಭೋರ್ಗರೆಯನ್ನು ಸೂಚಿಸುವುದೆಂದೂ ನರ್ತಕರ ಪಾದಗಳ ಸಪ್ಪಳವು ಸಮುದ್ರದ ಅಲೆಗಳ ಸಪ್ಪಳವನ್ನು ಸೂಚಿಸುವುದೆಂದೂ ಹೇಳಲಾಗುತ್ತಿದೆ.

ಗುಜರಾತಿನ ರಾಸ ನೃತ್ಯವು ಕೃಷ್ಣ ಐತಿಹ್ಯಕ್ಕೆ ಸಂಬಂಧಪಡುತ್ತದೆ. ಹಿಮಾಚಲ ಪ್ರದೇಶದ ನೃತ್ಯವು ಆ ರಾಜ್ಯದ ಜನ ಜೀವನವನ್ನು ಪ್ರತಿ ಬಿಂಬಿಸುತ್ತದೆ.

ಟಿಬೆಟ್ಟಿನ ಗಡಿಯಲ್ಲಿರುವ ಕಿನ್ನಾರ್ ಜಿಲ್ಲೆಯ ಪೂಹ್ ಗ್ರಾಮದ ನಾಟ್ಯತಂಡವು ಶಬ್ಬೂ, ಖಾರ್ ಮತ್ತು ಜೋಗಶಾನ್ ನೃತ್ಯಗಳನ್ನು ಪ್ರದರ್ಶಿಸಿತು. ಈ ನೃತ್ಯಗಳು ಆತ್ಯಾಕರ್ಷಕವಾಗಿದ್ದವು.

ಜಮ್ಮುವಿನ ಕುದ್ ನೃತ್ಯವು ಆ ಪ್ರಾಂತ್ಯದಲ್ಲೆಲ್ಲಾ ಅತ್ಯಂತ ಜನಪ್ರಿಯವಾಗಿದೆ ಎನ್ನಬಹುದು. ಸಾಮಾನ್ಯವಾಗಿ ಸುಗ್ಗಿಯ ಕಾಲದಲ್ಲಿ ಈ ನೃತ್ಯವನ್ನು ಅಭಿನಯಿಸಲಾಗುವುದು.

ಈಶಾನ್ಯ ಗಡಿ ಪ್ರದೇಶದ ಜನರ ನೃತ್ಯವು ಸಮರ ನೃತ್ಯವಾಗಿತ್ತು. ಈ ವರ್ಷ ಗಣರಾಜ್ಯ ದಿನೋತ್ಸವದಲ್ಲಿ ಅಭಿನಯಿಸಲಾದ ಆಡಿ (ಗಲ್ಲಾಂಗ್) ನೃತ್ಯವು ಸಾಧಾರಣವಾಗಿ ಯುದ್ಧ ನಡೆಯುವಾಗ ಅಭಿನಯಿಸಲ್ಪಡುವುದೆಂದು ಹೇಳಲಾಗುತ್ತಿದೆ.

ನಾಗಾ ನರ್ತಕರು

ನಾಗಾ ಜಾನಪದ ನರ್ತಕರು ವಿಚಿತ್ರ ತಲೆಯುಡುಪನ್ನೂ ಶಿಲಿ ಹಾಗೂ ಹಿಂಬಿನ ಪದಕಗಳನ್ನೂ ಹಿತ್ತಾಳೆ ಬಳೆಗಳನ್ನೂ ಆನೆಯದಂತದ ಬಳೆಗಳನ್ನೂ ಧರಿಸಿದ್ದರು. ಇವರ ಕೈಗಳಲ್ಲಿ ಉದ್ದನೆಯ ಭರ್ಜಿಗಳು ಝಳಪಿಸುತ್ತಿದ್ದವು

ಅಸ್ಸಾಂ ರಾಜ್ಯದ ಜಾನಪದ ಕಲಾವಿದರು ತಿವ ಪಾರ್ವತಿಯರಿಗೆ ನಿವೇದಿಸಲ್ಪಟ್ಟ "ದಂಡನಾಟ" ನಾಟಕದಿಂದ ಪ್ರೇರಿತವಾದ ಧಾದಯೂ ನಾಟಕವನ್ನು ಅಭಿನಯಿಸಿದರು

ಈ ರೀತಿಯಾಗಿ ಪ್ರತಿ ವರ್ಷವೂ ಜಾನಪದ ಕಲಾವಿದರ ತಂಡಗಳು ಗಣರಾಜ್ಯ ದಿನೋತ್ಸವ ಸಮಾರಂಭಗಳಲ್ಲಿ ಭಾಗವಹಿಸುತ್ತ ಈ ರಾಷ್ಟ್ರೀಯ ಉತ್ಸವದಲ್ಲಿ ಭಾರತೀಯ ಜನಜೀವನ ಮತ್ತು ಸಂಸ್ಕೃತಿಯನ್ನು ಮನಮೋಹಕ ನೃತ್ಯಗಳ ಮೂಲಕ ಪರಿಚಯ ಮಾಡಿಕೊಡುತ್ತಿರುವರು.

Tel 'BLUEYAGAR'. — ಚಿನ್ನ ಮತ್ತು ವಜ್ರಗಳ ಆಧುನಿಕ ತವರುಮನೆ — Phone: 374.

ಕೆ.ಆರ್.ಕೆ.ಶೇಟ್ ಡಯಮಂಡ್ ಮಾರ್ಟ್

ಸ್ಥಾಪನೆ 1919] ಚಿನ್ನ ಮತ್ತು ವಜ್ರದ ವ್ಯಾಪಾರಿಗಳು,(ಗವರ್ನ್‌ಮೆಂಟ್ ಕಾಲೇಜ್ ಎದುರುಗಡೆ)ಮಂಗಳೂರು. ಮಾಲಿಕ:ಕೆ.ಕೆ.ಆರ್.ಶೇಟ್

ಓರೆ ನೋಟದ ಜಾಲ

(೨ನೇ ಪುಟದಿಂದ)

ಷವಾಗಲೇ ಬೇಕು ಎಂದು ನನ್ನ ಅಭಿಪ್ರಾಯ, ದೃಢ ವಿಶ್ವಾಸ.

ನನ್ನ ಅಭಿಪ್ರಾಯವನ್ನು ನಾನು ಸ್ಪಷ್ಟವಾಗಿ ತಿಳಿಸದೆ ಇದ್ದರೂ ರಾಧೆಗೆ ಖಂಡಿತ ಗೊತ್ತಾಗಿರಬಹುದು, ನನ್ನ ಮಾತಿನಿಂದ, ನಡತೆಯಿಂದ ಸೂಕ್ಷ್ಮ ಪ್ರಕೃತಿಯ ಯಾವುದಾದರೂ ಹುಡುಗಿ ನನ್ನ ಮನಸ್ಸನ್ನು ಗೊತ್ತುಹಚ್ಚಬಹುದಾಗಿತ್ತು. ರಾಧೆ ಇದಕ್ಕೆ ಹೊರತಾಗಿರಲಿಕ್ಕಿಲ್ಲ ಎಂದು ನನ್ನ ಭಾವನೆ. ಆದರೂ ರಾಧಾ ತನ್ನ ಅಭಿಪ್ರಾಯವನ್ನೇನೂ ಹೊರಗೆಡಹಿರಲಿಲ್ಲ. ನನ್ನ ಮನಸ್ಸನ್ನು ತಿಳಿದೂ ತಿಳಿಯದಂತೆಯೇ ಇದ್ದಳು. ಇದರಿಂದ ನನಗೆ ತುಂಬ ಬೇಸರವಾಗಿತ್ತು.

ಆ ದಿನ ರಾಧಾ ಬರಲಿಲ್ಲ ಅಂಚೆಯಾಳು ರಾಧಾಳ ಹೆಸರಿಗೆ ಬಂದಿದ್ದ ಲಕೋಟೆಯೊಂದನ್ನು ನನ್ನ ಕೈಗಿತ್ತು ಹೋದ. ನಾನು ಅತ್ತಿತ್ತ ನೋಡಿದೆ. ಚಿಕ್ಕ ಮಕ್ಕಳ ಹೊರತು ಬೇರೆ ಯಾರೂ ಅಲ್ಲಿರಲಿಲ್ಲ. ಕುತೂಹಲ ತಡೆಯದಾಯ್ತು, ನಾಳೆ ನನ್ನವಳಾಗುವ ಹುಡುಗಿಗೆ ಬಂದ ಪತ್ರ, ಲಕೋಟೆ... ನನಗೆ ತಿಳಿದಂತೆ ಅವಳಿಗೆ ಸಂಬಂಧಿಕರು ಕಡಿಮೆ. ಪತ್ರ ಬರೆಯುವಂತಹ ಸಂಬಂಧಿಕರ ವಿಷಯವಾಗಿ ನನಗೇನೂ ತಿಳಿದಿರಲಿಲ್ಲ. ಓದಿ ನೋಡಬೇಕೆಂಬ ಹುಚ್ಚು ಹಂಬಲ, ಯಾರೂ ನೋಡಲಾರರೆಂಬ ಧೈರ್ಯ.... ಇವೆಲ್ಲ ಭಾವನೆಗಳು ಬಲವಾದಾಗ ಓದಬಾರದೆಂಬ ಸಭ್ಯತೆ ಹೇಗೆ ತಡೆದೀತು? ಎಂದೇ ಮೆಲ್ಲಮೆಲ್ಲನೆ ಕವರನ್ನೊಡೆದೆ. ನಾಳೆ ಹೇಗಾದರೂ ಮಾಡಿ ಅಂಟಿಸಿ ಹಿಂದಿರುಗಿಸಿದರಾಯ್ತು, ಅಥವಾ ನನ್ನ ಅಭಿಪ್ರಾಯವನ್ನು, ನನ್ನ ಮನಸ್ಸಿನ ಭಾವನೆಗಳನ್ನು ಸ್ಪಷ್ಟವಾಗಿ ತಿಳಿಸಿ ಅವಳನ್ನೊಲಿಸಿ ವಿವಾಹಕ್ಕೆ ದಿನ ನಿಶ್ಚಯಿಸಿ ಬಿಡುವುದು. ಅದೇ ಸರಿ. ಆಗ ಕವರನ್ನೊಡೆದ ತಪ್ಪನ್ನು ಆಕೆ ಕ್ಷಮಿಸದಿರಲಾರಳು ಎಂದುಕೊಂಡು ಕಾಗದವನ್ನು ಓದತೊಡಗಿದೆ.

ಒಲವಿನ ಗೆಳತಿಗೆ—

ನೀನು ಅಲ್ಲಿಗೆ ಹೋದ ಮೇಲೆ ನನ್ನನ್ನು ಪೂರ್ತಿಯಾಗಿ ಮರೆತಂತೆ ತೋರುತ್ತದೆ. ಇಲ್ಲವಾದರೆ ಈ ಎರಡು ತಿಂಗಳುಗಳ ಮಧ್ಯೆ ಒಮ್ಮೆಯಾದರೂ ಮುಖದರ್ಶನವೀಯುತ್ತಿರಲಿಲ್ಲವೇ? ನಾನು ನಿನ್ನನ್ನು ನಿನ್ನ ಆ ನೋಟವನ್ನು ಎಂದೆಂದೂ ಮರೆಯಲಾರೆ. ನೀನು ಬರುವ ವಾರ ರಜೆ ತೆಗೆದುಕೊಂಡು ಬಂದುಬಿಡು. ನನ್ನ ಮನೆದಿ ತವರೂರಿಗೆ ಹೋಗ್ತಾಳೆ, (ನನ್ನ ಒತ್ತಾಯದಿಂದ) ನಾನು ನಿನಗಾಗಿ ಈ ಸಮಯವನ್ನು ದೊರಕಿಸಿಕೊಂಡಿದ್ದೇನೆ ಜನರೇನೇ ಅನ್ನಲಿ, ನಿನ್ನನ್ನು ಮರೆಯಲಾರೆನಾನು ನಿನಗೇನೋ ಹೊಸ ಗೆಳತಿನ ದೊರೆತು ನನ್ನ ನೆನಪೇ ಮರೆತುಹೋಗಿರಬಹುದು. ನನ್ನಂತೆಯೇ ಎಷ್ಟು ಮಂದಿ ಆ ನಿನ್ನ ನೋಟದ ಬಲೆಯೊಳಗೆ ಸಿಲುಕಿ ವಿಲಿ ವಿಲಿ ಒದ್ದಾಡುತ್ತಿದ್ದಾರೋ....ಒಮ್ಮೆ ಬಲೆಯೊಳಗೆ ಬಿದ್ದರೆ ಮತ್ತೆ ತಪ್ಪಿಸಿಕೊಳ್ಳಲಾರರು. ನನ್ನನ್ನೇ ನೋಡು ನನ್ನ ಮಡದಿಗಿಂತ ಹೆಚ್ಚು ನಿನೇ ಆಗಿಹೋಗಿದ್ದಿಯಾ? ಸಿಟ್ಟುಮಾಡಬೇಡ ರಾಧಾ. ಖಂಡಿತ ಬಾ. ಹೊಸ ಗೆಳೆಯರ ಮಧ್ಯೆ ಹಳಬನನ್ನು ಮರೆತು ಬಿಡಬೇಡ. ಬೇರೆಲ್ಲ ನೀನು ಬಂದಾಗ.

ಇತೀ ನಿನ್ನೊಲುಮೆಯ ಗೆಳಯ.

"ಹೆ ಹ್ಹ ಹ್ಹಾ....ಹ ಹ್ಹಾ..."

ಬೆನ್ನ ಹಿಂದೆ ನಗುವ ಕರ್ಕಶ ಸ್ವರ ನನ್ನನ್ನು ಬಡಿದೆಬ್ಬಿಸಿತು. ನಾನು ಸ್ತಂಭಿತನಾಗಿ ಎವೆಯಿಕ್ಕದೆ ನೋಡಿದೆ. ಕೈಯಲ್ಲಿದ್ದ ಕಾಗದ ಕೆಳಗುರುಳಿತ್ತು. ನನ್ನ ಗೊಂದಲವನ್ನು ಗ್ರಹಿಸಿದ ನನ್ನ ಸಹೋದ್ಯೋಗಿ ಗೆಳೆಯರು ನಗು ನಿಲ್ಲಿಸಿ ನನ್ನ ಹೆಗಲ ಮೇಲೆ ಕೈಯಿಟ್ಟು ಸಿಧಾನವಾಗಿ ಮಾತು ಆರಂಭಿಸಿದರು.

"ಹೀಗಾದೀತೆಂದು ನಾನು ಮೊದಲೇ ಊಹಿಸಿ ಎಚ್ಚರವಿತ್ತಿದ್ದೆ. ಇವರೇ....ಆದರೆ ನಿಮಗೆ ನನ್ನಲ್ಲಿ ನಂಬಿಕೆಯೂಗಲಿಲ್ಲ. ಅಥವಾ ಆ ನೋಟವೂ ಸಮಯವೂ ಹಾಗೇ ಇತ್ತೇನೋ. ಆ ನೋಟ...ಆ ಓರೆ ನೋಟ...ಸದಾ ಕಾಲವೂ ಓರೆಯಾಗಿಯೇ ಇರುವ ನೋಟ...ಅದನ್ನು ನಂಬಿ

ಅಮೃತ ಬಿಂದು

ತನ್ನ ಕರ್ತವ್ಯವನ್ನು ಮನವಿಟ್ಟು ಮಾಡಿ ಮಾನವಾಗಿರುವದು ಲೋಕದ ವಿಷನಾಲಗೆಗೆ ಉತ್ತರ ಉತ್ತರ.

ಂ ಂ

ಚಿಂತೆಯೊಡನೆ ಹಾಸಿಗೆ ಸೇರುವವನು ಎದೆಯಲ್ಲಿ ಭಾರ ಹೇರಿಕೊಂಡು ನಿದ್ರಿಸಲೆಸಿದಂತೆ!

ಂ ಂ

ಮರೆವು ಮತ್ತು ನಿದ್ರೆ ಇವೆರಡು ಜಗತ್ತನ್ನು ಜಯಿಸುವದವಾಗಿ ಎದುರಿಸಲು ಮಾನವನಿಗಿರುವ ವಜ್ರ ಕವಚಗಳು.

ಂ ಂ

ತಿಳಿಗೇಡಿತನದಿಂದ ಆಗುವದಕ್ಕಿಂತ ಹೆಚ್ಚಿನ ಹಾನಿ ಸೋಮಾರಿತನದಿಂದಾಗುತ್ತದೆ.

ಂ ಂ

ದವ ಕೆಟ್ಟ ಸ್ವಾಮಿ ಈಕೆ ಅದರಿಂದಾಗಿ ಅಡಿಪ್ಪೋ ಜನರನ್ನು ಬಲೆಯೊಳಗೆ ಸೆಳೆದು ಬಾಳು ಕೆಡಿಸಿಕೊಂಡು ಸುಖ ಪಡುತ್ತಿದ್ದಾಳೆ. ನನಗೆ ಮೊದಲೇ ಎಲ್ಲಗೊತ್ತಿತ್ತು. ಅವಳ ವಿಚಾರ ಪೂರ್ತಿಗೊತ್ತು." ನಾನು ಮಾನವಾಗಿ ನಿಟ್ಟುಸಿರು ಬಿಟ್ಟೆ. ಮರುದಿನ ನನ್ನದಿರಿನ ಕುರ್ಚಿಯಲ್ಲಿ ಬಂದು ಕುಳಿತ ರಾಧಾ ನನ್ನತ್ತ ನೋಡಿ ನಸು ನಕ್ಕಳು. ಆದರದು ನನಗೆ ಆ ನೋಟ...ಆ ವಕ್ರ ನೋಟ.....ಅಸಹ್ಯವಾಗಿ ಕಂಡಿತು. ತಿರಸ್ಕಾರದಿಂದ ಮುಖ ತಿರುಗಿಸಿದೆ.....

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ, ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಹೊಸ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.

ಬೆಲೆ ರೂ. 1-4-0 (1=25).

ಮನೆಯೆಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್.ಐ.ಎಮ್ ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು.

ನಿಮ್ಮಿಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ— ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ— ವಿ। ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ. ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.

ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ

ವಿ. ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0=25 N P ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕಗಳಿಸಿಲಾಗುವುದು.

ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ನಮಗೆ ಬರೆಯಿರಿ

ನವಭಾರತ ಪುಸ್ತಕ ಭಂಡಾರ, ಉಡುಪಿ.

ಬೆಕ್ಕು ಮನೆ ಬಿಟ್ಟರೆ, ಇಲಿಗಳ ನೃತ್ಯಕ್ಕೆ ಅಂತ್ಯವಿರದು.

ಂ ಂ

ಆಗು ಹೋಗುಗಳನ್ನು, ಕಾರ್ಯ ಕಾರಣಗಳನ್ನು ಅರಿತುಕೊಳ್ಳುವ ಶಕ್ತಿ ಇರುವವನು ಮಾತ್ರ ಆನಂದದಿಂದಿರಬಲ್ಲನು

ಂ ಂ

ಬುದ್ಧಿವಂತನಾದವನು ತನ್ನ ಎಲ್ಲಾ ಮೊಟ್ಟೆಗಳನ್ನು ಒಂದೇ ಕುಕ್ಕೆಯಲ್ಲಿಟ್ಟಿರಲಾರನು.

ಂ ಂ

ನೋಡದೆ ಯಾವುದನ್ನೂ ಕುಡಿಯಬೇಡ, ಓದದೆ ಯಾವುದಕ್ಕೂ ಸಹಿ ಹಾಕಬೇಡ.

ಂ ಂ

ಕಳೆದ ವರ್ಷದ ಗೂಡಿನಲ್ಲಿ ಈ ವರ್ಷದ ಪಕ್ಷಿಗಾಗಿ ಹುಡುಕಾಡಬಾರದು.

ಂ ಂ

ಇಂದಿನ ಜಗತ್ತಿನಲ್ಲಿ ಮನುಷ್ಯನು ಒಂದೋ ನಡೆಯುವ ಪಾದರಕ್ಷೆಯಂತಿರಬೇಕು; ಇಲ್ಲವೇ ಬಡಿಯುವ ಸುತ್ತಿಗೆಯಂತಿರಬೇಕು.

ಂ ಂ

ಸೌಂದರ್ಯವು ಹೃದಯವನ್ನು ಗೆಲ್ಲುತ್ತದೆ. ಆದರೆ ಯೋಗ್ಯತೆಯು ಆತ್ಮವನ್ನು ಗೆಲ್ಲುತ್ತದೆ.

ಂ ಂ

ಯಾರನ್ನಾದರೂ ಮೇಲಕ್ಕೆತ್ತಬೇಕಾದರೆ ಎತ್ತುವವನು ಎತ್ತರದಲ್ಲಿರಬೇಕು.

ಂ ಂ

ಒಳ್ಳೆಯವನನ್ನು ಅನುಸರಿಸುವದು ತಪ್ಪಲ್ಲ; ಆದರೆ ಒಳ್ಳೆಯವನಂತೆ ತೋರುವ ಮೋಟಾ ನಾಣ್ಯವಾಗಬಾರದು.

ಂ ಂ

ನೀತಿಯು ಬೆಲೆ ತೆತ್ತು ಅನೆಯನ್ನೆ ಕೈಗೂಡಿಸಿದವನ ಶಾಂತಿಯು ತೊಲಗಿ ನಿರಾಸೆ ಬೆಳೆಯುವದು.

ಂ ಂ

ಸಿಟ್ಟು ಆವರಿಸಿದ ಮನುಷ್ಯನ ಬಾಯಿ ತೆರೆಯುತ್ತದೆ; ಆದರೆ ಕಣ್ಣು ಮುಚ್ಚುತ್ತದೆ!

ಂ ಂ

ಅಯೋಗ್ಯ ಮನುಷ್ಯನಿಗೆ ಗೌರವವಿತ್ತಷ್ಟೂ ಆತನ ತಲೆ ಸೆಟೆದು ಮೇಲೇರಿ ನಿಲ್ಲುತ್ತದೆ!

ಂ ಂ

ಇಲಿಗಳನ್ನೋಡಿಸಲೆಂದು ಮನೆಗೆ ಬೆಕ್ಕಿಯನ್ನು ಇಟ್ಟುಕೊಳ್ಳಬಾರದು.

ಂ ಂ

ಕಿಸೆಯಲ್ಲಿ ಚಿನ್ನವಿಲ್ಲದಿದ್ದರೂ ಚಿಂತೆಯಿಲ್ಲ; ನಾಲಗೆಯಲ್ಲಿ ಚಿನ್ನವಿರುವವ ಎಲ್ಲಿಯೂ ಸೋಲಲಾರ.

ಂ ಂ

ಹುಟ್ಟುಗುಣವೇ ಅಂಕುಡೊಂಕಾಗಿರುವವನಿಗೆ ಯಾವ ವಿದ್ಯೆಯೂ ಸರಿಯಾಗಿ ಬೀರದು.

ಂ ಂ

ಹೆಣ್ಣನ್ನು ಅನುಭೋಗಿಸುವ ಇಚ್ಛೆ ಇದ್ದರೆ ಹೂವನ್ನು ಕೊಯ್ಯಬೇಡ.

ಂ ಂ

ಸರಳ, ನೇರಸ್ವಭಾವದವರಿಗೆ ಪ್ರವೇಶವೇ ದೊರೆಯದಿದ್ದರೂ, ಹೊಗಳುಬಾಯಿರು ಸೊಂಪಾಕ್ಕೆ ಸ್ವಾಗತಿಸಲ್ಪಡುತ್ತಾರೆ!

NAVAYUGA, UDIPI.
REGD. NO.BG. 176

21-9-1961

LICENSE NO. 31
Licensed to Post without Prepayment

ಭಾರತ ದರ್ಶನ

ಈಚೆಗೆ ಆಕಾಶವಾಣಿಯವರು ದೆಹಲಿಯಲ್ಲಿ ಟೆಲಿವಿಜನ್ ಕಾರ್ಯಕ್ರಮಗಳ ಮೂಲಕ ರಾಸಾಯನ ವಿಜ್ಞಾನವನ್ನು ಕಲಿಸುವ ಒಂದು ಗೋಷ್ಠಿಯನ್ನು ವ್ಯವಸ್ಥೆ ಗೊಳಿಸಿದ್ದರು. ರಾಸಾಯನ ವಿಜ್ಞಾನವನ್ನು ಕಲಿಸುವ ವಿಚಾರದಲ್ಲಿ ಟೆಲಿವಿಜನ್ ಮಾಧ್ಯಮವನ್ನು ಎಷ್ಟರಮಟ್ಟಿಗೆ ಉಪಯೋಗಿಸಬಹುದಾಗಿದೆ ಎಂಬ ಸಮಸ್ಯೆಯ ಬಗ್ಗೆ ಈ ವಿಚಾರಗೋಷ್ಠಿಯಲ್ಲಿ ಚರ್ಚೆ ನಡೆಯಿತು. ಒಂದು ವಾರ ನಡೆದ ಈ ಗೋಷ್ಠಿಯಲ್ಲಿ ಟೆಲಿವಿಜನ್ ಅಧ್ಯಾಪಕರು ಮತ್ತು ಶಾಲಾ ತರಗತಿಗಳ ಅಧ್ಯಾಪಕರುಗಳು ಕಲೆತು ನಿಗದಿಮಾಡಿದ ಪಠ್ಯ ವಿಷಯೂವಳಿಯನ್ನು ಮುಗಿಸುವ ಬಗ್ಗೆ ತಮ್ಮ ತಮ್ಮ ಜಾಣ್ಮೆಯನ್ನು ಉಪಯೋಗಿಸಿದರು. ಟೆಲಿವಿಜನ್ ಅಧ್ಯಾಪಕರು ಮೂಲಜ್ಞಾನವನ್ನು ಅರುಹಿದರು. ತರಗತಿಯ ಅಧ್ಯಾಪಕರು ಮೂಲ ಕಲ್ಪನೆಗಳನ್ನು ಅಭಿವೃದ್ಧಿಪಡಿಸಿ ಅವನ್ನು ಸ್ಪಷ್ಟೀಕರಿಸಿದರು.

ಈ ವರ್ಷ ಆಗಸ್ಟ್ ತಿಂಗಳಲ್ಲಿ ಶಾಲೆಗಳಲ್ಲಿ ವಿಜ್ಞಾನದ ವಿಷಯಗಳನ್ನು ಕಲಿಸುವ ಹೊಸ ವ್ಯೂಹವನ್ನು ಜಾರಿಗೆ ತರುವ ಬಗ್ಗೆ ಈ ವಿಚಾರ ಗೋಷ್ಠಿಯು ಸೇರಿತ್ತು.

ಕೇಂದ್ರ ವಾರ್ತಾ ಮತ್ತು ಪ್ರಸಾರ ಮಂತ್ರಿಗಳಾದ ಡಾ|| ಬಿ. ವಿ. ಕೇಸ್ಕರ ಅವರು ವಿಚಾರ ಗೋಷ್ಠಿಯನ್ನು ಉದ್ಘಾಟಿಸುತ್ತಿರುವುದನ್ನು ಮೊದಲನೆಯ ಚಿತ್ರದಲ್ಲಿ ಕಾಣಬಹುದು.

ಎರಡನೆಯ ಚಿತ್ರದಲ್ಲಿ ರಾಸಾಯನ ವಿಜ್ಞಾನದ ಅಧ್ಯಾಪಕರೊಬ್ಬರು ಪ್ರಯೋಗ ನಡೆಸುತ್ತಿರುವುದನ್ನು ಟೆಲಿವಿಜನ್ ಯಂತ್ರದ ಮೂಲಕ ಪ್ರಸಾರ ಮಾಡುತ್ತಿರುವುದನ್ನು ಕಾಣಬಹುದು.

ಇನ್ನೊಂದು ಪ್ರಯೋಗದ ಸಮೀಪದ ದೃಶ್ಯವನ್ನು ಮೂರನೆಯ ಚಿತ್ರದಲ್ಲಿ ಕಾಣಬಹುದು.



ಆದರ್ಶ ನಾಗರಿಕ ತರಬೇತಿ

"ಅಮ್ಮಾ, ಅಮ್ಮಾ, ನಾನಿಂದು ಓಟದಲ್ಲಿ ಸತೀಶನನ್ನು ಸೋಲಿಸಿಬಿಟ್ಟೆ. ಅದೂ ಹೇಗೆ ಅಂತೀಯಾ, ಒಂದೇ ಒಂದ್ ಕ್ಷಣ ತಡವಾಗುತಿದ್ದರೆ, ಆತ ಗೆಲ್ಲುತಿದ್ದ" ಎಂದು ಅಂಗಳದಲ್ಲಿ ಓಡಿ ಜಗಲಿ ಹತ್ತಿ ಮನೆಯೊಳಗೆ ಮಗುವೊಂದು ಧಾವಿಸುತ್ತ ಬಂದಾಗ, ಅದರ ತಾಯಿಯ ವರ್ತನೆಯು ಮಗುವಿನ ಮೇಲೆ ವಿಪರೀತ ಪ್ರಭಾವ ಬೀರುವುದು. ಮಗು ತಾನು ದಾರಾಸಿಂಗ ಎಂದಾಗ ಹೌದು ಎಂದೊಪ್ಪಿಕೊಂಡರೆ ತೀರಿತು, ಬದಲಿಗೆ 'ಏನೋ, ಆ ಕೆಟ್ಟ ಹುಡುಗರೊಂದಿಗೆ ಆಡಬೇಡವೆಂದು ಎಷ್ಟು ಬಾರಿ ಅಂದಿದ್ದೇನೆ? ನೋಡು, ಓರಣವಾಗಿಟ್ಟ ನೆಲದಲ್ಲಿ ಧೂಳು ಮಾಡಿದೆ. ಇನ್ನು ಮುಂದೆ ಅವರೊಡನೆ ಬೆರೆತರೆ ಬೆನ್ನ ಚರ್ಮ ಸುಲಿದೇನು' ಎಂದು ಆತ ಗದರಿಸಿದರೆ, ಏನಾದೀತು?

ಧೂಳರಂಜಿತ ಪಾದಗಳ ಸ್ಪರ್ಶದಿಂದ ಒಂದಷ್ಟು ಧೂಳು ಮನೆಯ ನೆಲದಲ್ಲಾದರೆ, ತಾಯಿ ಇಷ್ಟೊಂದು ಗದರಿಸುವುದರಿಂದ ಮಗುವಿನ ಕೋಮಲ ಮನಸ್ಸಿನ ಮೇಲೆ ದುಷ್ಪರಿಣಾಮ ಬೀಳುವುದು. ತನ್ನ ಎಳೆಯ ಗೆಳೆಯರನ್ನು ತುಚ್ಛರೆಂದು ಉಲ್ಲೇಖಿಸಿ ತನ್ನನ್ನು ಬೈದ ತಾಯಿಯ ಮಾತಿನಲ್ಲಿ ವಿಶ್ವಾಸವಿಟ್ಟೆತೆಂದರೆ, ಆ ಸರಳ ಹೃದಯದಲ್ಲಿ ಎಂತಹ ಪ್ರಭಾವವಾದೀತು? ಸಿದ್ಧೋಷಿಯೂದ ಮಗುವಿನ ಹೃದಯದಲ್ಲಿ ತನ್ನ ಸ್ನೇಹಿತರು ಕೆಟ್ಟವರು ಎಂಬ ಆಡುವುದು ಒಳ್ಳೆಯದಲ್ಲವೆಂಬ ಭಾವನೆಯನ್ನು ತಾಯಿಯು ಮೂಡಿಸಿದಂತಾಗುವುದು.

ರಾಷ್ಟ್ರೀಯ ಏಕೀಕರಣದ ಪ್ರಶ್ನೆಯು ಗಂಭೀರ ಸಮಸ್ಯೆಯಾಗಿ ನಮ್ಮ ನಾಯಕರ ಮುಂದೆ ನಿಂತಿರುವಾಗ, ದೇಶದ ಭಾವೀ ನಾಗರಿಕರ ಮನಸ್ಸಿನಲ್ಲಿ ಭೇದಭಾವವನ್ನು ಉತ್ಪನ್ನಗೊಳಿಸುವುದು ಆದರ್ಶವಾತೆಯರಿಗೆ ಉಚಿತವೆನಿಸದು. ಯಾವುದೇ ವಿಧದ ಸಂಕುಚಿತ ಭೇದಭಾವಗಳ ಜಂಜಾಟದಲ್ಲಿ ಸಿಕ್ಕಿಬಿದ್ದು ದೇಶದ ಮುಂದಿನ ಹಿರಿಯ ನಾಗರಿಕರಾಗುವ ಇಂದಿನ ಎಳೆಯರಲ್ಲಿ ಭೇದಭಾವನೆಯನ್ನು ಹುಟ್ಟಿಸಿ ಐಕ್ಯಭಾವನೆಯ ವಿಘಟನೆಗೆ ಅವಕಾಶಗೊಡಬಾರದು.

ಶ್ರೀಮಂತ—ದರಿದ್ರ, ಜಾತಿ—ನೀತಿಗಳ ಕಡೆಗೆ ಹೆಚ್ಚು ಗಮನವೀಯದೆ, ತಮ್ಮ ಮಕ್ಕಳನ್ನು ಮಿತ್ರರೊಡನೆ ಸೇರಿಕೊಂಡಿರುವುದಕ್ಕೆ ಅವಕಾಶಕೊಡಬೇಕು ನಿಮ್ಮ ಹುಡುಗ ಕೆಟ್ಟವರ ಸಹವಾಸದಲ್ಲಿ ಬಿದ್ದನೆಂದು ಇಷ್ಟರಿಂದಲೇ ಅನ್ನಬಾರದು ಮಕ್ಕಳು ಪರಸ್ಪರ ಜಗಳಾಡುವಾಗ, ನೀವು ನಿಮ್ಮ ಮಗುವಿನ ಪಕ್ಷವನ್ನು ವಹಿಸಬೇಡಿರಿ. ನಿಷ್ಪಕ್ಷಪಾತ ನಿರ್ಣಯದಿಂದ ಮಗುವಿನ ಹೃದಯವು ತುಂಬ ಪ್ರಭಾವಿತಗೊಳ್ಳುವುದು.

ಮಗುವನ್ನು ಐಕ್ಯಭಾವದಿಂದ ಬಿಗಿಯಲು ಒಂದು ಉಪಾಯವಿದೆ. ಮಗುವಿಗೆ ತುಸು ಹೆಚ್ಚು ತಿಂಡಿತಿನಿಸುಗಳನ್ನು ಕೊಟ್ಟು, "ನಿನ್ನ ಸ್ನೇಹಿತರಿಗೂ ಹಂಚಿ ತಿನ್ನು" ಎಂದು ಹೇಳಿರಿ. ಇದರಿಂದ ಮಗುವಿನ ಎಳೆಯ ಮನಸ್ಸಿನಲ್ಲಿ ತನ್ನ ಒಡನಾಡಿಗಳ ಮೇಲೆ ಸದ್ಭಾವನೆಯೂ ಪ್ರೇಮವೂ ಹುಟ್ಟುವುದು ಸಾಧ್ಯ. ಭೇದಭಾವದ ಸೋಂಕು ದೂರ ಸರಿಯುವುದು ಖಂಡಿತ.

ಮಗುವಿನ ಮೃದು ಮನಸ್ಸು ಸಿರಿವಂತಿಕೆ—ದರಿದ್ರತೆಯನ್ನೂ ಜಾತಿ—ಮತಗಳನ್ನೂ ಸ್ಪರ್ಶಾಸ್ಪರ್ಶತೆಗಳನ್ನೂ ಸಾಂಪ್ರದಾಯಿಕ ಭೇದಗಳನ್ನೂ ಎಂದಿಗೂ ತಿಳಿದುಕೊಳ್ಳುವುದಿಲ್ಲ. ಆದುದರಿಂದ ತನ್ನ ಸಮಾನ ವಯಸ್ಕರೊಡನೆ ಅದು ಸೇರಿಕೊಂಡಿರಲುಆತುರಪಡುತ್ತಿರುವುದು ಸ್ವಾಭಾವಿಕ. ದೇಶದ ಐಕ್ಯಭಾವನೆಯನ್ನು ಬೆಳೆಸಲು ನೀವು ನಿಮ್ಮ ಶ್ರದ್ಧಾದಾನ ನೀಡಲು ಸಿದ್ಧರಿರುವುದಾದರೆ ಮಕ್ಕಳನ್ನು ಅವರ ಸ್ನೇಹಿತರೊಂದಿಗೆ ಕೂಡಿಕೊಂಡಿರಲು ಬಿಡಬೇಕು. ಎಳೆಯ ಅನಾಂಗದ ಹೃದಯದಲ್ಲಿ ಬೇರೆಯವರ ಕಡೆಗೆ ಪ್ರೀತಿ, ಆದರದ ಭಾವನೆಗಳು ಹುಟ್ಟುವಂತೆ ಅವಕಾಶ ಕಲ್ಪಿಸಿಕೊಡಬೇಕು ಇದರಿಂದ ನಿಮ್ಮ ಮಗು ಭೇದಭಾವ ವಿಮೂರನಾದ ರಾಷ್ಟ್ರನಾಗರಿಕನಾಗುವುದು.

ಸಿಂಡಿಕೇಟ್ ಬ್ಯಾಂಕಿನ

ಇತಿಹಾಸದಲ್ಲಿ

ಪ್ರಮುಖ ಅಧ್ಯಾಯಗಳು

ವಿಲೀನೀಕರಣ

1) ದಿ ಮಹಾರಾಷ್ಟ್ರ ಎಪೆಕ್ಸ್ ಬ್ಯಾಂಕ್ ಲಿ. ಉಡುಪಿ ತಾ. 1-12-1953
2) ದಿ ಸದರ್ನ್ ಇಂಡಿಯಾ ಎಪೆಕ್ಸ್ ಬ್ಯಾಂಕ್ ಲಿ. ಉಡುಪಿ ತಾ 1-12-1953
3) ದಿ ನಗರ್ಕಾರ್ಸ್ ಬ್ಯಾಂಕ್ ಲಿ. ಮಂಗಳೂರು ತಾ. 1-9-1959
4) ದಿ ಬ್ಯಾಂಕ್ ಆಫ್ ಮಂಗಳೂರು ಲಿ. ಮಂಗಳೂರು ತಾ. 3-10-1959
5) ದಿ ಆಸ್ಯಾಟಿಕ್ ಮರ್ಕೆಂಟ್ಯಾಲ್ ಬ್ಯಾಂಕ್ ಲಿ. ಕೊಚ್ಚಿನ್ ತಾ. 15-2-1960
6) ದಿ ಮೂಲ್ಕಿ ಬ್ಯಾಂಕ್ ಲಿ. ಮುಲ್ಕಿ ತಾ. 4-9-1961
7) ದಿ ಪೈಮನಿ ಬ್ಯಾಂಕ್ ಪ್ರೈವೇಟ್ ಲಿ. ಮಂಗಳೂರು ತಾ. 4-9-1961
8) ದಿ ಕೆಥೋಲಿಕ್ ಬ್ಯಾಂಕ್ ಲಿ. ಮಂಗಳೂರು ತಾ. 11-9-1961

ಸುವ್ಯವಸ್ಥಿತ ಮತ್ತು ಸುನಿಯಂತ್ರಿತವಾದ ಶಾಖಾ ಸಮುದಾಯದ ಮೂಲಕ ಅತ್ಯುತ್ತಮ ಬ್ಯಾಂಕಿಂಗ್ ಸೇವೆ

ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿ.

Edited Printed & Published by K. H. Shetty, at the Navayuga Press, Udipi, S. India.

ರಾಷ್ಟ್ರೀಯ ವಾರಪತ್ರಿಕೆ. ಬೆಲೆ: 13 ನ.ಪೈಸೆ

ನವಯುಗ

KANNADA — NAVAYUGA — WEEKLY

ಸಂಪುಟ ೪೧ ಸಂಚಿಕೆ ೪ | ಉಡುಪಿ 28--9—1961 ಗುರುವಾರ | Vol. 41 No. 4

ನಿಮ್ಮ ಯಾವತ್ತೂ
ಮುದ್ರಣ ಕೆಲಸಗಳಿಗೆ
ದಯಮಾಡಿ ವಿಚಾರಿಸಿರಿ:
ನವಯುಗ ಪ್ರೆಸ್,
ಉಡುಪಿ

ವಿದ್ಯಾರ್ಥಿಗಳಿಗೆ
ಮತ್ತು ವಯಸ್ಕರಿಗೆ
ಅತ್ಯುಪಯೋಗೀ ಪುಸ್ತಕ
ಸುಲಭದಲ್ಲಿ ಇಂಗ್ಲಿಷ್
ನವಭಾರತ ಪುಸ್ತಕ ಭಂಡಾರ
ಉಡುಪಿ

ವಿನಾಶದ ಗಳಿಗೆ ನಿಕಟವಾಗುತ್ತಿದೆ

ಪ್ರಧಾನ ಮಂತ್ರಿ ನೆಹರು ಹೇಳುವಂತೆ ಜಾಗತಿಕ ಪರಿಸ್ಥಿತಿ ಹಿಂದಿನ ವರ್ಷಗಳಿಗಿಂತ ಇಂದು ಬಹಳಷ್ಟು ತೊಡಕಿಗೆ ಸಿಕ್ಕಿಕೊಂಡಿದೆಯೆಂಬುದು ನಿರ್ವಿವಾದ. ವಿಶ್ವದ ಸಮ್ಮುಖದಲ್ಲಿರುವ ಹಲವಾರು ಸಮಸ್ಯೆಗಳಲ್ಲಿ ಯಾವುದಾದರೊಂದನ್ನು ಬಿಡಿಸಲು ಮುಂದುವರಿಯುವಾಗ ಉಳಿದವು ಎದುರು ಬಂದು ಆದನ್ನು ಮತ್ತಷ್ಟು ಜಟಿಲಗೊಳಿಸುತ್ತ ಬರುತ್ತಿರುವುದು ನಿನ್ನೆಮೊನ್ನೆಯ ಸಂಗತಿಯಲ್ಲ. ಅಮೆರಿಕ ಮತ್ತು ರಶ್ಯಗಳ ನಡುವಿರುವ ತೀವ್ರ ಭಿನ್ನಾಭಿಪ್ರಾಯಗಳು ಬಗೆಹರಿಯದೆ ಜಾಗತಿಕ ಶಾಂತಿ ಸ್ಥಾಪನೆಗೊಳ್ಳದು; ವಿಶ್ವದ ಯಾವುದೇ ಸಮಸ್ಯೆಯು ಪರಿಹಾರಗೊಳ್ಳದು ಎಂಬುದು ದಿಗಂತದಷ್ಟು ವ್ಯಾಪಕ ಸತ್ಯವಾಗಿದೆ. ಜರ್ಮನಿಯ ಪ್ರಶ್ನೆಯ ಹಿನ್ನೆಲೆಯಲ್ಲಿ ಉಭಯ ಮಹಾರಾಷ್ಟ್ರಗಳು ಅಣ್ವಸ್ತ್ರ ಪ್ರಯೋಗವನ್ನು ಸುನಶರಾರಂಭಿಸುವ ಘೋಷಣೆ ಮಾಡಿದರು; ಕಾಂಗೋದಲ್ಲಿ ಸಂಧಾನ ಕಾರ್ಯ ನಡೆದೇತೆಂದು ಭಾವಿಸುವಿದ್ದಂತೆಯೇ ಶಾಂತಿದೂತರಾಗಿ ತೆರಳಿದ ವಿಶ್ವ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಡಾಗ್ ಹೆಮ್ಮರ್ ಶೆಲ್ಡರ ಅಕಾಲ ಮೃತ್ಯುವಾಯಿತು—ಉರಿಯುವ ಗಾಯಕ್ಕೆ ಉಪ್ಪು ನೀರೆರಚುವಂತಹ ಈ ಘಟನೆಗಳು ಸಂಭವಿಸುವಾಗ ಬಲ್ಗ್ರೇಡ್ ಸಮ್ಮೇಳನದ ಸಾರ್ಥಕತೆಯ ಮಾತು ಬಹುದೂರವುಳಿಯತೆಂದೇ ಹೇಳಬೇಕು.

ಬಲ್ಗ್ರೇಡ್‌ನಲ್ಲಿ ಸೇರಿದ್ದ ತಟಸ್ಥರಾಷ್ಟ್ರಗಳ ಸಮ್ಮೇಳನದ ಗೊತ್ತುವಳಿಗಳು ಬಹುವಿರುವವಾದರೂ ನಿಶ್ಶಸ್ತ್ರೀಕರಣದ ಪ್ರಶ್ನೆಯೊಂದು ಅತಿ ಗಂಭೀರವಾಗಿದೆ. ಈ ಸಾಧನೆಯನ್ನು ಸಾಧಿಸದ ಹೊರತು ವಿಶ್ವ ದ್ವೇಷ ಶಮನವಾಗದು; ಶಾಂತಿಯೆಂಬುದು ನಿಘಂಟುವಿನ ಶಬ್ದವಾಗಿ ಮಾತ್ರ ಉಳಿದೀತು ಎಂಬುದನ್ನು ಎಲ್ಲರೂ ಬಲ್ಲರು. ಇಂತಹ ಕನಸಿನಲ್ಲಿಯೇ ಮುಂದಿಗೆಯನ್ನು ತಿಂದು ತೇಗಿ ನನಸಿನಲ್ಲಿ ತೃಪ್ತರಾಗುವುದು ಎಂದಿಗೂ ಸಾಧ್ಯವಿಲ್ಲ. ಇದು ಸಾಧಿಸದಿರುವುದರಿಂದಲೇ ಅಣ್ವಸ್ತ್ರ ಪ್ರಯೋಗ, ಶಸ್ತ್ರಾಸ್ತ್ರಗಳಸಂಗ್ರಹ, ಮಾರಕಾಸ್ತ್ರಗಳ ತಯಾರಿ— ಎಡೆಬಿಡದೆ ಜರಗುತ್ತ ವಾತಾವರಣವನ್ನು ಮತ್ತಷ್ಟು ಕಲುಷಿತಗೊಳಿಸುತ್ತಿವೆ. ಈ ಕಾರಣದಿಂದ ಇಂದು ಜಗತ್ತಿನ ನಾಯಕಮಣಿಗಳು ನಿಜವಾಗಿ ಶಾಂತಿಪ್ರಿಯರಿರುವುದಾದರೆ, ಮೊತ್ತಮೊದಲಿಗೆ ನಿಶ್ಚರ್ತನಾಗಿ ನಿಶ್ಶಸ್ತ್ರೀಕರಣ ಒಡಂಬಡಿಕೆಯನ್ನು ಮಾಡಿಕೊಳ್ಳಲು ಮುಂದಾಗಬೇಕು. ಆ ಬಗ್ಗೆ ಪ್ರಯತ್ನ ಮಾಡಬೇಕು; ಈ ದಾರಿಯಲ್ಲಿ ಎಡತಾಕುವ ಯಾವುದೇ ಕಂಟಕವನ್ನು ಕಿತ್ತು ದೂರ ಮಾಡಬೇಕು.

ಅಣ್ವಸ್ತ್ರ ಪ್ರಯೋಗವು ಜಗತ್ತಿಗೆ ದುಷ್ಪರಿಣಾಮಕಾರಿಯೆಂಬುದನ್ನು ತಿಳಿಯಪಡಿಸುವ ರಾಷ್ಟ್ರಪೊಂದಿರುವುದಾದರೆ, ಇಂದು ಜಪಾನ್ ಮಾತ್ರ. ದ್ವಿತೀಯ ಲೋಕ ಯುದ್ಧದ ಕೊನೆಯಲ್ಲಿ ಅಣುಬಾಂಬುಗಳ ಪತನದಿಂದ ಲಕ್ಷಾಂತರ ನಾಗರಿಕರನ್ನೆದು ಕಳೆದುಕೊಂಡುದು ಮಾತ್ರವಲ್ಲ, ಅದಕ್ಕಿಂತಲೂ ಹೆಚ್ಚು ನಾಗರಿಕರ ಜೀವನವು ನಿರುಪಯುಕ್ತವಾದುದನ್ನು ಅದು ಎಂದಿಗೂ ಮರೆಯುವಂತಿಲ್ಲ. ವಿಶಾಲವಾದ ಪ್ರಶಾಂತ ಸಾಗರದ ಅಗಾಧ ಜಲವನ್ನು ಅಶಾಂತಗೊಳಿಸುವ ಅಣ್ವಸ್ತ್ರ ಪ್ರಯೋಗಗಳ ವಿಕಿರಣದಿಂದಾಗಿ ಜಪಾನದ ಜನತೆಪಡುತ್ತಿರುವ ಬವಣೆಯನ್ನು ಯಾರೂ ಮರೆಯುವುದು ಸಾಧ್ಯವಿಲ್ಲ. ಅಣ್ವಸ್ತ್ರ ಪ್ರಯೋಗ ಪ್ರತಿಬಂಧದ ಬಗ್ಗೆ ಸಂಭಾವ್ಯವೆಂದೆನಿಸಿದ ಒಡಂಬಡಿಕೆಯನ್ನು ಅಸಾಧ್ಯವೆನ್ನುವ ದುಸ್ಥಿತಿ ಕಾಣಿಸಿಕೊಂಡಿದೆ; ಮಾತ್ರವಲ್ಲ, ಇದು ಹೀಗೆಯೇ ಮುಂದುವರಿಯುತೆಂದರೆ, ಎಲ್ಲಿ ಪರ್ಯವಸಾನಗೊಂಡೀತೆಂದು ಹೇಳುವಂತಿಲ್ಲ.

ಸಂಯುಕ್ತ ರಾಷ್ಟ್ರ ಸಂಸ್ಥೆಯ ಬ್ರಹತ್ ಸಭೆಯಿದೀಗ ನಡೆಯುತ್ತಿದೆ. ಸರ್ವಸಾಮಾನ್ಯವಾಗಿ ಯಾವ ಪಂಗದಕ್ಕೂ ಸೇರದೆ ಸ್ವತಂತ್ರ ತಟಸ್ಥ ರಾಷ್ಟ್ರಗಳು ಅಮೆರಿಕ ಮತ್ತು ರಶ್ಯಗಳ ಜಾಗತಿಕ ನೀತಿಯನ್ನು ಟೀಕಿಸಿದರೆ ವಿಶೇಷವೇನೂ ನಡೆದಂತಾಗಲಿಲ್ಲ. ಅಣ್ವಸ್ತ್ರ ಪ್ರಯೋಗಗಳ ಪುನರಾರಂಭವೆಂದರೆ, ಅಣ್ವಸ್ತ್ರ ನಿರ್ಮಾಣದಲ್ಲಿ ಸ್ಪರ್ಧಾಮನೋವೃತ್ತಿಯ ಪುನರುದಯವೆಂದು ಅರ್ಥ. ಇದು ಸಂಘಟಿಸಿದರೆ, ಮೂರನೆಯ ಲೋಕ ಸಮರ ಮತ್ತಷ್ಟು ನಿಕಟವಾದಂತೆ; ವಿಶ್ವಸಂಹಾರಕ್ಕೆ ಬಾಗಿಲು ತೆರೆದಿಟ್ಟಂತೆ; ಇದುವರೆಗಿನ ಸಕಲ ಪರಿಶ್ರಮಗಳೂ ಮಣ್ಣುಗೂಡಿದಂತೆ. ಆದುದರಿಂದ ವಿಶ್ವದ ಮುಂದಿರುವ ಏಕಮೇವ ಸಮಸ್ಯೆಯಾದ ಈ ಸ್ಪರ್ಧಾ ಮನೋವೃತ್ತಿಯನ್ನು ದೂರ ಮಾಡುವುದು; ಇದಕ್ಕಾಗಿ ನಿಶ್ಶಸ್ತ್ರೀಕರಣ ಒಡಂಬಡಿಕೆಯನ್ನು ಕರಾರು-ಶರತ್ತುಗಳಿಲ್ಲದೆ ಮಾಡಿಕೊಳ್ಳುವುದು ಅತ್ಯವಶ್ಯ. ಪ್ರಚಲಿತ ಸಂಯುಕ್ತರಾಷ್ಟ್ರದ ಬ್ರಹತ್ ಸಭೆಯು ಈ ಆಶಯವನ್ನು ಗಂಭೀರವಾಗಿ ಚರ್ಚಿಸಿ ಸಮಾಲೋಚಿಸಬೇಕು. ಈ ಸಂಬಂಧದಲ್ಲಿ ಕಟ್ಟುಸಿಟ್ಟಿನ ಗೊತ್ತುವಳಿಯನ್ನು ಸ್ವೀಕರಿಸಿ, ಅದನ್ನು ಅಕ್ಷರಶಃ ಪಾಲಿಸುವಂತೆ ನೋಡಿಕೊಳ್ಳಬೇಕು.

ಯೋಜನಾಭವನದಲ್ಲಿ ಪ್ರಧಾನಿ ನೆಹರು ಮೂರನೆಯ ಪಂಚವಾರ್ಷಿಕ ಯೋಜನೆಗೆ ಸಹಿ ಮಾಡುತ್ತಿರುವುದು.

ಪೋರ್ಚುಗಲ್ಲಿನ ಅಪಪ್ರಚಾರ

ಭಾರತದ ಅವಿಭಾಜ್ಯ ಅಂಗವಾದ ಗೋವೆಯ ಸಂಬಂಧದಲ್ಲಿ ವಿದೇಶಗಳಲ್ಲಿ ಪೋರ್ಚುಗಲ್ ಅಪಪ್ರಚಾರವನ್ನು ಬೇಕೆಂಬಷ್ಟು ರೀತಿಯಲ್ಲಿ ಮಾಡುತ್ತ ಬರುತ್ತಿದೆ; ಮತ್ತು ಅದುತನ್ನ ಉದ್ದೇಶದಲ್ಲಬಹಳಷ್ಟು ಸಫಲವಾಗಿದೆಯೆಂದು ಗೋವಾಂತಕರ ರಾಷ್ಟ್ರೀಯ ಕಾಂಗ್ರೆಸ್ಸಿನ ಅಧ್ಯಕ್ಷ ಡಾ। ಸುಂದರೀಕ ಗಾಯ್ತೊಂಡೆಯವರು ತನ್ಮಯುರೋಪ್, ಅಮೆರಿಕ ಮತ್ತು ಉತ್ತರ ಆಫ್ರಿಕದ ಸಂಚಾರಾವಧಿಯಲ್ಲಿ ಅನುಭವಪಡೆದಿದ್ದಾರೆ. ಗೋವೆಗೂ ಭಾರತಕ್ಕೂ ಏನೇನೂ ಸಂಬಂಧವಿಲ್ಲವೆಂಬ ರೀತಿಯ ಪ್ರಚಾರದಿಂದಾಗಿ ಹೆಚ್ಚಿನವರು ಅದು ಭಾರತದಿಂದ ಪೃಥಕ್ಕಾಗಿದೆಯೆಂದೇ ತಿಳಿದಿದ್ದಾರಂತೆ! ಭಾರತ ಸರಕಾರವು ಈ ವಿಷಯದಲ್ಲಿ ಮೌನವಾಗಿ ಉಳಿಯುತೆಂದರೆ, ಇದೇ ಊಹೆ ನಿಜವಾಗಲೂ ಬಹುದು!

ಕೆಲವು ದೇಶಗಳು ಪೋರ್ಚುಗಲ್ಲಿನ್ದ ಈ ವಿಧದ ಅಪಪ್ರಚಾರವನ್ನು ಸತ್ಯವೆಂದೇ ತಿಳಿದಿವೆ. ಅವು ಗೋವೆಯನ್ನು ಭಾರತದಿಂದ ಬೇರೆಯೆಂದೇ ತಿಳಿದುಕೊಂಡಿವೆ. ಅವರಿಗೆ ವಾಸ್ತವಿಕಾಂಶವನ್ನು ತಿಳಿಸುವ ಹೊಣೆ ಯಾರ ಮೇಲಿದೆ?

ಅನೇಕ ಗೋವಾಂತಕರು ಭಾರತೀಯ ಸಂಸ್ಕೃತಿಗೆ ಮಹತ್ವಪೂರ್ಣವಾದ ಕೊಡುಗೆಯಿತ್ತಿದ್ದಾರೆ. ಪ್ರಸಿದ್ಧ ಭಾರತೀಯ ಸಿನೇಕಲಾಗಾರರು, ಡಾಕ್ಟರರು ಮತ್ತು ವಿದ್ವಾಂಸರು ಗೋವಾಂತಕರಾಗಿದ್ದಾರೆ. ಸುವಿಖ್ಯಾತ ಭಾರತೀಯಗಾಯಿಕೆ ಲತಾಮಂಗೇಶಕರಳು ಗೋವೆಯವಳು ಅಲ್ಲವೆ?

ಗೋವೆಯಲ್ಲಿರುವವರು ಕಥೋಲಿಕರು ಎಂದು ಪೋರ್ಚುಗಲ್ಲಿನ ಪ್ರಚಾರ ವೈಖರಿಯಿದೆ ಆದರೆ, ಜನ ಸಂಖ್ಯೆಯ ಮೂರನೆ ಒಂದಂಶ ಮಾತ್ರ ಕೆಥೋಲಿಕರು ಎಂಬುದು ನಗ್ನ ಸತ್ಯ. ಉಳಿದವರೆಲ್ಲರೂ ವಿಶುದ್ಧ ಹಿಂದುಗಳು. ಇವರು ಭಾರತೀಯ ಸಮಾಜದೊಡನೆ ವೈವಾಹಿಕ ಸಂಬಂಧವನ್ನು ಬೆಳೆಸುತ್ತಾರೆ, ತಮ್ಮನ್ನು ಭಾರತೀಯರೆಂದು ತಿಳಿಯುತ್ತಾರೆ. ಇಡಿಯ ಗೋವೆಯಲ್ಲಿ ಕೇವಲ ಆರುನೂರು ಜನರು ತಮ್ಮನ್ನು ಪೋರ್ಚುಗೀಸ ವಂಶಜರೆಂದು ಕರೆದುಕೊಳ್ಳುತ್ತಾರೆ.

ಭಾಷಾ ವಿಷಯದಲ್ಲಿಯೂ ಗೋವೆಯೂ ಭಾರತೀಯವಿದೆ. ಪೋರ್ಚುಗೀಸ್ ಭಾಷೆಯನ್ನರಿಸಿರುವವರು ಅಲ್ಲಿ ಸಾವಿರಕ್ಕೆ ೧೪ ಮಂದಿ ಮಾತ್ರ. ಅಲ್ಲಿ ಒಟ್ಟು ೨೫೦ ಮರಾಠೀ ಶಾಲೆಗಳಿವೆ; ಇಂಗ್ಲಿಷ್ ಶಾಲೆಗಳು ಬಹುಸಂಖ್ಯೆಯಲ್ಲಿವೆ. ಈ ಯೆಲ್ಲ ಶಾಲೆಗಳು ಸಾರ್ವಜನಿಕ ವಂತಿಗೆಯಿಂದ ನಡೆಸಲ್ಪಡುತ್ತವೆ. ಸರಕಾರಿ ಪ್ರಾಥಮಿಕ ಶಾಲೆಗಳಲ್ಲಿ ಮಾತ್ರ ಪೋರ್ಚುಗೀಸ ಭಾಷೆಯನ್ನು ಕಲಿಸುತ್ತಾರೆ.

ಗೋವೆಯಲ್ಲಿ ಜನಮತ ಸಂಗ್ರಹ ನಡೆಯುವುದಾದರೆ, ಗೋವಾಂತಕರೆಲ್ಲರೂ 'ನಾವು ಭಾರತೀಯರು" ಎಂದು ಒಕ್ಕೊರಲಿನಿಂದ ಉದ್ಘೋಷಿಸಲು ಸಿದ್ಧರಿದ್ದಾರೆ. ಭಾರತ ಸರಕಾರದ ಗೋವಾ ಸಂಬಂಧಿ ನೀತಿಯು ಸ್ವಲ್ಪ ಮಟ್ಟಿಗೆ ಬದಲಾಗಿದ್ದರೂ, ಅದರ ಬಗ್ಗೆ ನಡೆಯುವ ಅಪಪ್ರಚಾರಕ್ಕೆ ಅಪ್ಪದ ಕೊಡಬಾರದು. ನ್ಯಾಯವಾದ ಮಾರ್ಗಗಳಿಂದ ಗೋವಾಂತಕರನ್ನು ಪೋರ್ಚುಗಲ್ಲಿನ ಕಪಿ ಮುಷ್ಟಿಯಿಂದ ಬಿಡಿಸುವತ್ತ ಹೆಚ್ಚಿನ ಆಸಕ್ತಿ ವಹಿಸ ಬೇಕಾಗುತ್ತದೆ.

ಆಶಾಗೋಪುರ.....?

ಶ್ರೀ ಎ. ರವಿಶಂಕರ

ಅಂದು ಆ ಊರಲ್ಲಿ ಭಾಷಣ. ಹೌದು ಜನರೆಲ್ಲರೂ ಬಂದು ನೆರೆದಿರುವರು. ಶೇಖರನೂ ಅವನ ತಾಯಿ ಗಂಗಮ್ಮನೂ ಸಂತೆಯಿಂದ ಹಿಂದಿರುಗಿದವರು ಅಲ್ಲೇ ನಿಂತರು. ನಿಜ ಧನಿಗಳೇ ಭಾಷಣಕ್ಕೆದ್ದರು. ಶೇಖರನಿಗಂತೂ ಆಶ್ಚರ್ಯ.

'ಅದೇನೋ ಶೇಖರ'

'ಇಲೆಕ್ಷನ್, ಅಂತಮ್ಮಾ. ನಮ್ಮ ರಾಯರು ಇಲೆಕ್ಷನಿಗೆ ಸ್ಪರ್ಧಿಸುವರಂತಮ್ಮಾ".

ಅಷ್ಟರಲ್ಲೇ ಶಂಕರರಾಯರ ಮಾತೂ ಪ್ರಾರಂಭವಾಯಿತು. ಅದೆಷ್ಟು ಹೊತ್ತು ಮಾತನಾಡಿದರೋ, ಆದರೆ ಶೇಖರನ ಮನಸ್ಸಿನಲ್ಲಿ ಅವರ ಕೊನೆಯ ಕೆಲವು ವಾಕ್ಯಗಳು ಅತನ ನೊಂದ ಬಾಳಲ್ಲಿ ಆಶಾಜ್ಯೋತಿ ಬೆಳಗಿದಂತಾಯಿತು.

ಅಮ್ಮಾ ಧೃತರಾಗಿ ಅವರಂದಿದ್ದರು, "ಜನ ಸೇವೆಯೇ ನನ್ನ ಗುರಿ. ನನ್ನ ಗ್ರಾಮದವರಿಗೆ ನನ್ನಿಂದಾದಷ್ಟು ಸಹಾಯ ಮಾಡುವೆ.

ಗಂಗಮ್ಮನಿಗೂ ರಾಯರ ಮಾತು ಕೇಳಿ ಆಶ್ಚರ್ಯವಾಯಿತು. ಶಂಕರರಾಯರ ಕೃಪೆಯಿಂದ ಇಂತಹ ಮನೆಯ ನುಡಿಗಳಿಗೂ ಸ್ಥಾನವಿದೆಯೋ?.....

"ಅಮ್ಮಾ, ನಿನ್ನ ಬಾಳು ನನಗಾಗಿ ಎಷ್ಟು ಕಷ್ಟವನ್ನನುಭವಿಸಬೇಕಾಯಿತು? ಈ ಕಷ್ಟವು ಬಹುಕಾಲ ಇರಲಾರದಮ್ಮ. ನಾನು ಪರೀಕ್ಷೆಯಲ್ಲಿ ಪಾಸಾಗಿ ಒಂದು ಉದ್ಯೋಗವನ್ನು ಸಂಪಾದಿಸುವೆ. ಅಮ್ಮಾ ರಾಯರು ಅಂದದ್ದು ನಿಜವೇನಮ್ಮಾ. ಬಡವರನ್ನು ಉದ್ಧರಿಸುವುದೇ ನನ್ನ ಧ್ಯೇಯ ತಾಯ್ನೊಡ ಮಕ್ಕಳು ಹೊಟ್ಟೆ ತುಂಬಾ ಉಂಡು ನಲಿದಾಡುವುದನ್ನು ಕಂಡು ಆನಂದ ಪಡಬೇಕೆಂಬುದೇ ನನ್ನ ಬಹುದಿನದ ಬಯಕೆ.".

ಶೇಖರನಿಗಿಂತಲೂ ಗಂಗೂಗೆ ರಾಯರ ಪರಿಚಯ ಹೆಚ್ಚು. ಬಹುಕಾಲದಿಂದ ರಾಯರ ಒಕ್ಕಲಾಗಿದ್ದವಳು. ಆದರೂ ಅವರ ಇಂದಿನ ಮಾತುಗಳಿಂದ ಆಕರ್ಷಿಸಲ್ಪಟ್ಟವಳಾಗಿ "ಹೌದೆಂದು", ದನಿಗೂಡಿಸಿದಳು.

ಮುನಾವಣೆಯ ದಿನವೂ ಬಂತು. ಗಂಗೂ ಮನೆಯ ಎದರು ಕಾರು ನಿಂತಿದೆ. ಶಂಕರರಾಯರು ಗಂಗೂನ ಓಟು ಕೊಡಲು ಕರೆತರುವಂತೆ ಕಾರು ಕಳುಹಿಸಿದ್ದರು. ಗಂಗೂಗಂತೂ ಬಹಳಾ ಆಶ್ಚರ್ಯ. ಎಂದೂ ತನ್ನನ್ನು ವಿಚಾರಿಸದ ಶಂಕರರಾಯರು ಈ ಕಾರು ಕಳುಹಿಸಿದರೇ....ಎಂದು ಅವಾಕ್ಕಾಗಿ ನಿಂತಾಗ ಶಂಕರರಾಯರ ಅಳಿಯ ಕಾರಿನಿಂದಿಳಿದು ಗಂಗೂನ ಕಾರಲ್ಲಿ ಕುಳಿತುಕೊಳ್ಳುವಂತೆ ಬಲವಂತಪಡಿಸಿದ.

ಮತಕಟ್ಟೆಯಿಂದ ಹಿಂತಿರುಗಿದ ಶೇಖರನು ತಾಯನ್ನು ಪ್ರಶ್ನಿಸಿದ, "ಮತ ಯಾರಿಗೆ ಕೊಟ್ಟೆ' 'ಶಂಕರರಾಯರಿಗೆ ಮಗೂ', ಗಂಗೂನ ಉತ್ತರ.

ಗಾಲಿಯು ತಿರುಗಿತು. ಪತ್ರಿಕೆಯನ್ನೋದುತ್ತಿರುವ ಶೇಖರನ ಗಮನವು ದಪ್ಪ ಅಕ್ಷರಗಳಲ್ಲಿ ಬರೆಯಲ್ಪಟ್ಟ ಎಸೆಂಬ್ಲಿಯ ವಿಚಾರದತ್ತ ಹರಿಯಿತು. ಓದುತ್ತಿದ್ದಂತೆ ಅತನ ಮುಖವು ಪ್ರಫುಲ್ಲಿತವಾಯಿತು. ಹೌದು ಎಮ್. ಎಲ್. ಎ. ಆದ ಶಂಕರರಾಯರು....ನಮ್ಮ ಒಡೆಯರು....ಮಂತ್ರಿಯೊದರು. ಸಂತಸದಿಂದ 'ಅಮ್ಮಾ" ಎಂದು ಕೂಗಿದ. ಹೊರಬಂದ ಗಂಗೂ ಮಗನ ಮುಖವನ್ನು ಕಂಡು ವಿಶೇಷವಿರಬೇಕೆಂದು ಊಹಿಸಿ, 'ಏನಪ್ಪಾ, ಶೇಖರ', ಎಂದಳು.

"ನೋಡಮ್ಮಾ ಶಂಕರರಾಯರು ಮಂತ್ರಿಯೊದರು. ನಿಜವಾಗ್ಲೂ ಇಮ್ಮ. ನಾನು ಅವರ ಸಹಾಯಪಡೆಯುವೆನು". ಅಂದ.

'ಆಗಲಿ ಶೇಖರ ನಿನ್ನ ಆಶಾಗೋಪುರವು ಕಳಚಿ ಬೀಳದಿರಲಿ' ಅಂದವಳು ಅಡುಗೆಯ ಸಿದ್ಧತೆಗೆ ತೊಡಗಿದಳು.

ಶೇಖರನು ಚೆನ್ನಾಗಿ ಅಭ್ಯಾಸಮಾಡಿದನು. ತನ್ಮಧ್ಯೆ ಮಂತ್ರಿ ಶಂಕರರಾಯರ ಅಳಿಯನಿಗೆ ಸರಕಾರದ ಅತಿ ದೊಡ್ಡ ಹುದ್ದೆ ಅನಾಯಾಸವಾಗಿ ದೊರಕಿದ ವರ್ತಮಾನವು ಶೇಖರನ ಆಶಾಗೋಪುರವನ್ನು ಮತ್ತು ಎತ್ತರಕ್ಕೆ ಬೆಳೆಯಿಸಿತು. ಪರೀಕ್ಷೆಯಲ್ಲಿ ಪಾಸಾದ ಶೇಖರನು ಆದ್ಯಪ್ಪ ಪರೀಕ್ಷೆಗಾಗಿ ಹೊರಟ. ಅಲ್ಲಿ ಇಲ್ಲಿ ವಿಚಾರಿಸಿ ಶಂಕರರಾಯರ ನಿವಾಸದ ಪತ್ತೆ ಹಚ್ಚಿದ ಅಂತೂ ಎರಡು ಮೂರು ದಿನಗಳ ಬಳಿಕ ಶಂಕರರಾಯರ ಭೇಟಿಯಾಯಿತು.

"ಯಾರಪ್ಪಾ, ನೀನು?' ಎಂಬ ಅವರ ಮೊದಲು ಪ್ರಶ್ನೆಯಿಂದಲೇ ಆತನ ಆಶಾಗೋಪುರವು ಕಳಚಿ ಬಿದ್ದಂತಾಯಿತು. ನಾಚಿಕೆಯಿಂದಲೂ ಕ್ರೋಧದಿಂದಲೂ ಕೂಡಿದವನಾಗಿ, "ನಾನು ಗಂಗೂನ ಮಗ, ಶೇಖರ, ನಿಮ್ಮ ಒಕ್ಕಲು....'ಓಹೋ, ಹಾಗೋ, ಏನು ಬಂದೆ....ಹಣಗಿಣವೇ ಕಿತ್ತೇ....?

"ಮುಂದಿನ ಜೀವನದ ಹೋರಾಟಕ್ಕಾಗಿ ನಿಮ್ಮಲ್ಲಿಗೆ ಬಂದಿರುವೆನು. ವಿದ್ಯಾಭ್ಯಾಸ ಮುಂದುವರಿಸುವುದು ಅಸಾಧ್ಯ. ಏನಾದರೂ, ಸಹಾಯಮಾಡಿ ಒಂದು ಉದ್ಯೋಗವನ್ನು ದೊರಕಿಸಿಕೊಡಬೇಕೆಂ"ದು ದೈನ್ಯದಿಂದ ವಿನಂತಿಕೊಂಡ.

"ಏನು? ನಿನ್ನ ಏಳ್ಗೆಗಾಗಿ ನಾನು ಪ್ರಯತ್ನಿಸ ಬೇಕೋ...ಶೇಖರ.... ನಾನು ಯಾರೆಂದು ತಿಳಿಯದೆ ಮಾತನಾಡುವಿಯೋ? ನಿನ್ನಂತಹ ವ್ಯಕ್ತಿಗೆ ಕೆಲಸಕ್ಕಾಗಿ ಅಲೆದರೆ ಜನ ನನ್ನ ಕಂಡು ನಕ್ಕಾರು. ನಾಲಗೆಬಿಗಿಹಿಡಿ. ನಡೆ...ಎಲ್ಲಾದರೂ ಕೂಲಿ ಗೀಲಿಮಾಡಿ ಹೊಟ್ಟೆ...ತೊಲಗಾಚೆ" ಎನ್ನುತ್ತಾ ಎದುರಿನ ಮೇಜನ್ನು ಗುದ್ದಿದರು.

ಶೇಖರನು ತನ್ನ ಕಿವಿಯನ್ನೇ ನಂಬದಾದ. ಶಂಕರರಾಯರ ಬಾಯಿಂದ ಈ ಮಾತುಗಳೇ? ಆತನ ಕಣ್ಣು ಮುಂದೆ ಹಿಂದೆ ಭಾಷಣ ಬಿಗಿಯುತ್ತಿದ್ದ ಶಂಕರರಾಯರ ಚಿತ್ರವು ಹಾದು ಹೋಯಿತು.

"ಅಂದು ನುಡಿದದ್ದೇನು? ಛೆ ನಿಮ್ಮ ಸದವಿಗೆ ಧಿಕ್ಕಾರ....ಬರೇ ಮತದಿಂದ ಜನರನ್ನು ಮರುಳುಮಾಡಿ, ಗುದ್ದಾಗಿ ವರಿದ ಬಳಿಕ ಮರೆಯ ಪಾಷಾಣ ಪ್ರಾಣಿಗಳು. ನಿಮ್ಮ ಬಂಧು ಬಳಗದವರಿಗಾಗಿ ಎಷ್ಟೋ ದೊಡ್ಡ ದೊಡ್ಡ ಹುದ್ದೆಗಳನ್ನು ಯೋಗ್ಯ ಬಡ ಜನರಿಂದ ಕಸಿದುಕೊಂಡಿರಿ. ನಿಮ್ಮ ಕಾರ್ಯ ಸಾಧನೆಗಾಗಿ ಸರಕಾರದಿಂದ ಎಷ್ಟೋ ಸವಲತ್ತುಗಳನ್ನು ಮೋಸದಿಂದ ಪಡೆದಿರಿ. ನಿಮ್ಮಂತಹ ವಂಚಕರ ಬಾಳ್ವೆಗೆ ಬೆಂಕಿ. ಮೋಸ.... ಪ್ರಪಂಚವೇ ಮೋಸ...."ಅನ್ನುತ್ತಾ ಅಲ್ಲಿಂದ ಹೊರಟೇ ಬಿಟ್ಟ. ಎಲ್ಲಿಗೆ...? ಒಂದೇ ಸಮನೆ ನಡೆಯುತ್ತಿದ್ದಾನೆ...ಸ್ವಾರ್ಥಿಗಳಿಂದ ವಂಚಕರಿಂದ ದೂರಕ್ಕೆ....ಬಹು ದೂರಕ್ಕೆ. ಜನರಿಂದ ಕಿಕ್ಕಿರಿದ ರಸ್ತೆಯನ್ನು ಹಾದು ಎಷ್ಟೋ ದೂರ ಬಂದಿದ್ದಾನೆ ಯಾರೋ ಬೊಬ್ಬಿಟ್ಟ ಸದ್ದು ಶೇಖರನನ್ನು ಬಾಹ್ಯ ಪ್ರಪಂಚಕ್ಕೆಳೆಯಿತು. ನೋಡುತ್ತಾನೆ. ಏನನ್ನು? ಜನರ ಗುಂಪು. ಅಸ್ಥಿಪಂಜರದಂತಿರುವ ದೇಹಗಳು ಅತ್ತಿಂದಿತ್ತ ಓಡಾಡುತಿದ್ದವು. ಪಕ್ಕದಲ್ಲೇ ತಲೆಯೊಡೆದು ಬಿದ್ದ ಅರೆ ಜೀವ ಮನುಷ್ಯ. ನೋಡಿದ ಕೂಡಲೇ ಶೇಖರನ ತಲೆ ತಿರುಗಲಾರಂಭಿಸಿತು ಅಷ್ಟರಲ್ಲೇ ಪೋಲೀಸರ ಆಗಮನವಾಯಿತು. ಮ್ಹಾಲಿಕ ಸುಬ್ಬರಾಯರನ್ನು ವಿಚಾರಿಸಿ ಹೊರಟು ಹೋದರು. ಕೆಲಸಮಾಡುತ್ತಿರುವಾಗ ಆಕಸ್ಮಾತ್ತಾಗಿ ತಲೆಗೆ ಪೆಟ್ಟಾಯಿತೆಂಬುದೇ ಸ್ಥಿರವಾಯಿತು. ಜನರೆಲ್ಲಾ ಚದುರಿದರು. ಶೇಖರನು ಅದಿನವೇ ಸುಬ್ಬರಾಯರನ್ನು ವಿಚಾರಿಸಿ ಭೇಟಿಯಾಗಿ ಕೂಲಿ ಕೆಲಸಕ್ಕೆ ಸೇರಿಕೊಂಡ. ನಡೆದ ದುರಂತದ ವಿಚಾರವನ್ನು ಇತರರಿಂದ ಕೇಳಿ ತಿಳಿದುಕೊಂಡ.

ಶೇಖರನ ಮನಸ್ಸಿಗೆ ನೆಮ್ಮದಿ ಇಲ್ಲದಾಯಿತು. ಎಂತಹ ಅನ್ಯಾಯ. ತನ್ನ ಕಷ್ಟವನ್ನು ಹೇಳಿ ಹೋದ ಬಡ ಜೀವಿಗೆ ಒಂದೂ ಆಯ್ತೆ! ಎಂದು ಚೀರಿದ ಶೇಖರ.

'ಏನು ಶೇಖರ್' ಏಕೆ ಅಳುತ್ತಿರುವೆ!.

(೭ನೇ ಪುಟ ನೋಡಿರಿ)

ಪುತ್ತೂರು ಡಿ. ಮುನ್ಸಿಫ್ ಕೋರ್ಟ್‌ನಲ್ಲಿ.

S. C. 226/61

ವೆಂಕಪ್ಪ ನ್ಯಾಕ —ವಾದಿ.

ಮತ್ತು

ಶಿವಪ್ಪ ನ್ಯಾಕ ಕೂಡಾ —ಪ್ರತಿವಾದಿರು.

ಸದ್ರಿ ವ್ಯಾಜ್ಯದ 2ನೇ ಪ್ರತಿವಾದಿ ಮೋಪಪ್ಪ ನ್ಯಾಕ ವಾಮನ ನ್ಯಾಕನ ಮಗ ಬೆಳ್ಳಂಗಡಿ ತಾಲೂಕು ಕಳಂಜ ಗ್ರಾಮದ ಪರಸು ಎಂಬಲ್ಲಿರುವವ. P. O. ಅರಸಿನಮಕ್ಕಿ. ಸದ್ರಿ ಎದುರಿಗೆ ಈ ಮೂಲಕ ತಿಳಿಸುವುದೇನೆಂದರೆ:—

ವಾದಿನಿಮ್ಮ ಮೇಲೆ ಕೂಡಾ ನಾಕ್ಷ್ಯ ಮೂಡಿದ ಮೇಲ್ಕಂಡ ವ್ಯಾಜ್ಯವು ತಮಗೆಗೆ ತಾರೀಕು 29-9-61ಕ್ಕೆ ಇಟ್ಟಿರುವುದರಿಂದ ನೀವು ಆ ದಿನ ಪೂರ್ವಾಪ್ಹ ಗಂಟೆ 11ಕ್ಕೆ ಮೇಲ್ಕಂಡ ಕೋರ್ಟು ಮುಂದೆ ಹಾಜರು ಆಗಿ ನಿಮ್ಮ ಉತ್ತರಾಪರಿಯನ್ನು ನಾಕ್ಷ್ಯ ಮೂದ ತಕ್ಕದ್ದು. ತಪ್ಪಿದರೆ ನಿಮ್ಮ ಗೈರು ಹಾಜ್ರಿಯಿಂದ ಸದ್ರಿ ವ್ಯಾಜ್ಯವನ್ನು ಏಕ ಪಕ್ಷವಾಗಿ ತೀರ್ಮಾನಿಸಲ್ಪಡುವುದು. (ಕೋರ್ಟ್ ಹುಕುಂ ಪ್ರಕಾರ)

B. Ishwara Bhat
ವಾದಿ ಕಡೆ ಎಡ್ವಕೇಟ್

ಪುತ್ತೂರು ತಾ. 16-9-61

41 ವರ್ಷಗಳ ಭದ್ರ ಹಾಗೂ ಸಮರ್ಥ ಬೇಂಕಿಂಗ್ ಸೇವೆ.

ದಿ. ಪಾಂಗಾಳ ನಾಯಕ್ ಬೇಂಕ್ ಲಿ.

ನಮ್ಮ 3 ವರ್ಷ ವ್ಯಾದೆಯ ಕೇಶ್ ಸರ್ಟಿಫಿಕೇಟುಗಳಲ್ಲಿ ಶೇವಣಿ ಮಾಡಿರಿ: ಬಡ್ಡಿ ಸೇಕಡಾ 5ರಂತೆ: ರೂ. 87—00 3 ವರ್ಷಗಳ ಅಂತ್ಯದಲ್ಲಿ ಬಡ್ಡಿ ಕೂಡಿ ರೂ. 100—00 ಬದಗಿಸುವುದು.

ಕರೆ, ಚಿಕ್ಕ ವ್ಯಾದೆ, ನಿರಖು ಶೇವಣಾತಿಗಳ ಮೇಲೆ ಆಕರ್ಷಣೀಯ ಶರತ್ತುಗಳು: ಬಡ್ಡಿ ಸೇಕಡಾ 5½ರ ವರೆಗೆ.

ತಾ. 1—4—1961ರಿಂದ ಸೇವಿಂಗ್ಸ್ ಬೇಂಕ್ ಖಾತೆಗಳ ಮೇಲೆ ಬಡ್ಡಿ ಸೇಕಡಾ 3ರಂತೆ.

THE PANGAL NAYAK BANK LTD.
Estd: 1920

ESTD. 1921 ಸ್ಥಾಪನೆ

NAVAYUGA
KANNADA WEEKLY,
UDIPI.

Founder:
Late Sri A. B. Shetty
Former Minister for Public Health, Govt. of Madras & Govt. of Mysore.

ನವಯುಗ
ರಾಷ್ಟ್ರೀಯ ವಾರಪತ್ರಿಕೆ
ಉಡುಪಿ

ಗೌರವ ಸಂಪಾದಕರು:
ಎಸ್. ಗೋಪೀಚಂದ ರಾವ್, ವಿದ್ವಾನ್.
ಬಿ. ಶಾಮರಾಯ ಶೆಟ್ಟಿ, ಬಿ. ಎ., ಎಲ್.ಟಿ.

ಸಂಚಾಲಕ ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ.

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-50
ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3-50

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ. 0-13

ಚಂದಾಯಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಪ್ರೇಮ ಸಾಧನೆಯಿಂದ ಪರಮಾತ್ಮನ ಪ್ರಾಪ್ತಿ

ಮೂಲ: ವಿಶ್ವಕವಿ ರವೀಂದ್ರನಾಥ ಟಾಗೋರ್.
ಅನುವಾದ: ಶ್ರೀ ಕೆ. ಎನ್. ಭಟ್, ಶಿರಾಡಿಪಾಲ್.

ಪಾಪವೆಂದರೆ, ಅದೊಂದು ಪ್ರತ್ಯೇಕವಾಗಿ ಆಚರಿಸಲ್ಪಡುವ ಕಾರ್ಯವಲ್ಲ. ಅದು ಒಂದು ಮಾನಸಿಕ ಅವಸ್ಥೆಯ ಅಥವಾ ವಿಚಾರಧಾರೆಯ ಪರಿಣಾಮ. ಭೋಗವೇ ಜೀವನದ ಧ್ಯೇಯ ಮತ್ತು ಜಗತ್ತಿನ ಸಮಸ್ತ ವಸ್ತುಗಳಲ್ಲಿಯೂ, ಯಾವುದೇ ದಿವ್ಯವಾದ ಸಮಾನತೆ ಇಲ್ಲ, ಪ್ರತಿಯೊಂದೂ ತನಗಾಗಿ ಜೀವಿಸಿಕೊಂಡಿದೆ ಎಂದು ತಿಳಿದುಕೊಳ್ಳುವುದು ಪಾಪ.

ನಾವು ಮನುಷ್ಯರೊಡನೆ, ಪ್ರೇಮ ಭಾವವನ್ನು ಇಡುವ ವರೆಗೆ ಮಾನವತೆಯನ್ನು ಪೂರ್ಣವಾಗಿ ಅರ್ಥ ಮಾಡಿಕೊಳ್ಳಲಾರೆವು, ಮನುಷ್ಯನ ಎಷ್ಟರ ಮಟ್ಟಿಗೆ ಶಕ್ತಿಯನ್ನು ಗಳಿಸಿದ್ದಾನೆ? ಎಂಬ ಮಾನದಂಡದಿಂದ, ಸಭ್ಯತೆಯನ್ನು ನೋಡುವುದಲ್ಲ; ಆದರೆ ಆತನು, ಪ್ರೇಮ ವಿಕಾಸಗೊಳಿಸುವ ಮಾರ್ಗದಲ್ಲಿ ಎಷ್ಟು ಮುಂದುವರಿದಿದ್ದಾನೆ? ಎಷ್ಟು ಕೆಲಸ ಮಾಡಿದ್ದಾನೆ? ಯಾವ ಯಾವ ಸಂಸ್ಥೆಗಳನ್ನು ಕಟ್ಟಿ ನಿಲ್ಲಿಸಿರುವನು? ಅವುಗಳಲ್ಲಿ ಯಾವ ರೀತಿಯ ವ್ಯವಸ್ಥೆ ಮಾಡಿರುವನು? ಎಂಬ ವಿಚಾರಗಳನ್ನು ತಿಳಿದು ನೋಡಬೇಕಾಗಿದೆ. ಎಲ್ಲದಕ್ಕಿಂತ ಮೊದಲ, ಮತ್ತು ಕೊನೆಯ ಪ್ರಶ್ನೆಯೆಂದರೆ, ಮನುಷ್ಯನು ಮತ್ತೊಬ್ಬ ಮನುಷ್ಯನನ್ನು ಕೇವಲ ಒಂದು ಯಂತ್ರವೆಂದು ಭಾವಿಸುವನೋ? ಅಥವಾ ಒಂದು ಜೀವಂತ ಆತ್ಮವೆಂದು ಭಾವಿಸುವನೋ? ಎಂಬುದೇ. ಮನುಷ್ಯನ ಮಹತ್ವವು ಕಡಿಮೆಯಾಗುತ್ತ ಬಂದಂದಿಗಿಂದ ಪ್ರಾಚೀನ ಸಭ್ಯತೆಯು ಶಿಥಿಲವಾಗುತ್ತ ಬಂದು ಮನುಷ್ಯನು ಕ್ರೂರನಾಗತೊಡಗಿದನು.

ಒಂದು ರಾಷ್ಟ್ರ ಅಥವಾ ಅಲ್ಲಿಯ ಜನ ಸಮುದಾಯವು ಮನುಷ್ಯನನ್ನು ತನ್ನ ಶಕ್ತಿ ಸಂಗ್ರಹದ ಉಪಕರಣ ಮಾತ್ರವೆಂದು ತಿಳಿಯಲಾರಂಭಿಸಿದಾಗ, ಆ ರಾಷ್ಟ್ರ ಅಥವಾ ಜನತೆ, ಮನುಷ್ಯನ ಮಹತ್ವದ ಮೇಲೆ ಕುಠಾರ ಪಾತ ಮಾಡಿದಂತಾಗುತ್ತದೆ. ಯಾವ ಸಭ್ಯತೆಯೂ ಇಂತಹ ಮನುಷ್ಯ ಭಕ್ಷಕ ರಾಕ್ಷಸೀ ಕೃತ್ಯಗಳ ಆಧಾರದ ಮೇಲೆ, ಉನ್ನತವಾಗಿ ಬಾಳಲಾರದು. ಈ ವ್ಯವಹಾರವು ಮನುಷ್ಯನೊಡನಿರುವಂತೆಯೇ ಪ್ರಕೃತಿಯೊಡನೆಯೂ ಇರುವುದು ಈ ಜಗತ್ತನ್ನು ನಾವು, ನಮ್ಮ ಅಪೇಕ್ಷೆಗಳ ಆವರಣದ ಮೂಲಕ ನೋಡುವಾಗ ಅದನ್ನು ಈ ಮೂಲಕ ಸಂಕೀರ್ಣಗೊಳಿಸಿದಂತಾಗುವುದು. ಹೀಗೆ ಮಾಡಿದ ಬಳಿಕ ನಾವು ವಾಸ್ತವಿಕ ಸತ್ಯವನ್ನೂ ನೋಡುವುದಿಲ್ಲ ಈ ಜಗತ್ತು ನಮ್ಮ ಆವಶ್ಯಕತೆಗಳನ್ನು ಪೂರ್ಣಗೊಳಿಸುವುದೆಂಬುದು ನಿಜವಾದರೂ, ನಮಗೂ ಜಗತ್ತಿಗೂ ಇರುವ ಸಂಬಂಧ ಜಗತ್ತಿನ ಬಂಧನಕ್ಕೆ ಒಳಪಟ್ಟಿರುವುದಲ್ಲ ನಮ್ಮ ಬಂಧನವು ಇದಕ್ಕಿಂತಲೂ ಆಳವಾಗಿರುವುದು. ನಮ್ಮ ಜಗತ್ತಿನೊಡನಿರುವ ಸಹವಾಸವು ಸಹಜವಾದುದು.

ನಮ್ಮ ಆತ್ಮವು ಜಗತ್ತಿನ ಬಗೆಗೆ ಆಕರ್ಷಿತವಾಗುವುದು. ಜೀವನದ ಕುರಿತು ನಮಗಿರುವ ಆಳವಾದ ಪ್ರೇಮವೇ ನಮ್ಮನ್ನು ಈ ಮಹಾ ವಿಶ್ವದೊಡನೆ ಆತ್ಮೀಯತೆಯನ್ನು ಹೊಂದುವ, ಪ್ರೇರಣೆಯನ್ನು ಕೊಡುತ್ತಿರುವುದು. ಈ ಸಂಬಂಧವು ಪ್ರೇಮದ ಸಂಬಂಧವಾಗಿದೆ. ನಾವು ಈ ಜಗತ್ತಿನಲ್ಲಿ ವಾಸಮಾಡುವವರಾಗಿದ್ದೇವೆ. ಇದರ ಅನೇಕ ಸೂತ್ರಗಳಿಂದ ನಾವು ಬಂಧಿಸಲ್ಪಟ್ಟಿರುವೆವು. ಈ ಸೂತ್ರಗಳಾದರೂ ಭೂಭಾಗದಿಂದ ಹಿಡಿದು, ನಕ್ಷತ್ರ ಲೋಕದ ವರೆಗೂ ವಿಸ್ತರಿಸಿರುವುವು. ಮನುಷ್ಯನು ತನ್ನ ಪ್ರಕೃತಿ ಜಗತ್ತಿನಿಂದ ಬೇರೆಯಾಗಿರುವುದನ್ನು ಕೋರ್ಪಡಿಸ್ಯುತ್ತ ತನ್ನ ಮಹತ್ವವನ್ನು ಎತ್ತಿ ತೋರಿಸುವ ವರ್ಥ ಪ್ರಯತ್ನ ಮಾಡುತ್ತಾನೆ. ಈ ಕಾರಣದಿಂದಲೇ ಮನುಷ್ಯನು ಕೆಲವು ವೇಳೆ, ಭೌತಿಕ ಜಗತ್ತಿನ ಕುರಿತು ಉದಾಸೀನ ಭಾವವನ್ನು ತೋರ್ಪಡಿಸತೊಡಗುತ್ತಾನೆ. ಆದರೆ, ಜ್ಞಾನವೃದ್ಧಿಯಾದಂತೆ, ಈ ಪ್ರತ್ಯೇಕತೆಯನ್ನು ಸ್ಥಿರವಾಗಿರಿಸುವುದು ಕಠಿಣವಾಗುವುದು. ಪ್ರತ್ಯೇಕಿಸುವ ಅಡ್ಡಗೋಡೆಗಳು ಆ ಬಳಿಕ ಒಂದೊಂದಾಗಿ ಬೀಳುತ್ತ ಹೋಗುತ್ತವೆ.

ಆತ್ಮಬೋಧದ ಮಾರ್ಗದಲ್ಲಿ ನಾವು ನಮ್ಮ ಅಹಂಕಾರ ರೂಪದ, ತಡೆಯನ್ನೊಡ್ಡುತ್ತ ಹೋದರೆ, ಒಂದಲ್ಲ ಒಂದು ದಿನ ಈ ಅಹಂಕಾರವು ಸತ್ಯದ ಮಹಾ ಚಕ್ರಕ್ಕೆ ಸಿಲುಕಿ ಹುಡಿ ಹುಡಿಯಾಗಿ ಹೋಗಬಹುದು—ನಮ್ಮ ಆತ್ಮವು ತನಗಿಂತ ಕಡಿಮೆ, ವಿಸ್ತಾರವಾಗಿರುವ, ಈ ಪ್ರಪಂಚದಲ್ಲಿ ವಾಸಿಸಲು ಇಷ್ಟ ಪಡಲಾರದು. ಯಾವ ವ್ಯಕ್ತಿಯೂ ಸದಾ ತನ್ನ ದಾಸ-ದಾಸಿಯರಿಂದ ಸುತ್ತುವರಿಯಲ್ಪಟ್ಟುಕೊಂಡೇ ಇರಲು ಅಪೇಕ್ಷಿಸುವುದಿಲ್ಲ. ಅರ್ಥಾತ್, ಆ ವ್ಯಕ್ತಿಯು, ಸ್ವತಂತ್ರ ವ್ಯಕ್ತಿಗಳೊಡನೆ ಸ್ವತಂತ್ರವಾಗಿ ಇರಲು ಅಪೇಕ್ಷಿಸುವಂತೆ ನಮ್ಮ ಆತ್ಮವೂ ತನ್ನಂತೆಯೇ ವಿಶಾಲವೂ, ಶಕ್ತಿಯುತವೂ ಸ್ವತಂತ್ರವೂ ಆಗಿರುವ ಶಕ್ತಿಗಳ ನಡುವೆ, ವಾಸಿಸಲು ಆಪೇಕ್ಷಿಸುವುದು.

ವಿಜ್ಞಾನದ ಹೊಸ ಹೆಜ್ಜೆಯ ತತ್ವವೂ ವಿಶ್ವದ ಅಖಂಡತೆ, ಮತ್ತು ಅದರೊಡನೆ ನಮ್ಮ ಆತ್ಮೀಯತೆಯ ಸತ್ಯವನ್ನು ಹೆಚ್ಚು ಹೆಚ್ಚಾಗಿ ವ್ಯಕ್ತಪಡಿಸುತ್ತ, ಮುಂದುವರಿಯುತ್ತಿರುವುದು. ಐಕ್ಯದ ಪೂರ್ಣತೆಯ ಈ ಅನುಭವವು ಕೇವಲ ತರ್ಕದಿಂದಲೇ ಮಾನ್ಯವಾಗಿದೆಯೆಂದೇನೂ ಇಲ್ಲ. ನಮ್ಮ ಆತ್ಮವು ವಿಶ್ವಾತ್ಮದ ಜ್ಯೋತಿಯಲ್ಲಿ ತನ್ನ ಸ್ವರೂಪದ ಪ್ರಕಾಶವನ್ನೂ ಕಾಣುವಾಗ ಅದು ಒಂದು ವ್ಯಾಪಕವಾದ ಪ್ರೇಮದಿಂದ ಮತ್ತು ಜ್ಯೋತಿರ್ಮಯವಾದ ಆನಂದದ ರೂಪದಿಂದ ಪ್ರಕಟವಾಗುವುದು.

ನಮ್ಮ ಆತ್ಮವು ಈ ಜಗತ್ತಿನಲ್ಲಿ ತನಗಿಂತ ಮಹಾನ್ ಆತ್ಮದ ಅನುಭವವನ್ನು ಅನುಭವಿಸುವುದು. ಅದರ ಅಮರತೆಯ ವಿಷಯದಲ್ಲಿ ಆಗ ಅದಕ್ಕೆ ಪೂರ್ಣ ವಿಶ್ವಾಸವುಂಟಾಗುವುದು. ಅದು ನಮ್ಮ ಅಹಂಕಾರದ ಕಾರಾಗೃಹದಲ್ಲಿ ನೂರಾರು ಸಲ ಸೇರಿ ಮೃತಾವಸ್ಥೆಯನ್ನು ಹೊಂದುವುದು. ಏತೆಂದರೆ, ಪ್ರತ್ಯೇಕತೆಯಲ್ಲಿ ಮೃತ್ಯುವು ಇರುವುದು. ಇದನ್ನು ಅಮರವನ್ನಾಗಿ ಮಾಡಲು ಸಾಧ್ಯವಿಲ್ಲ ಆದರೆ, ಯಾವಾಗ ಆತ್ಮವು ಸರ್ವ ಭೂತಗಳಲ್ಲಿಯೂ, ಆತ್ಮೀಯ ಭಾವದಿಂದ ವರ್ತಿಸುವುದೋ ಆಗ ಅದಕ್ಕೆಎಂದಿಗೂ ಮೃತ್ಯುವೆಂಬುದೇ ಇಲ್ಲ. ಮನುಷ್ಯನು, ಪ್ರಪಂಚದ ವಿಶ್ವಾತ್ಮನ ಜೀವನದ ಶ್ವಾಸೋಚ್ಛ್ವಾಸವನ್ನುತನ್ನ ಆತ್ಮದ ಶ್ವಾಸೋಚ್ಛ್ವಾಸದಲ್ಲಿ ಯಾವಾಗ ತಿಳಿದುಕೊಳ್ಳುನೋ ಆಗ ಸ್ವತಂತ್ರನಾಗುವನು. ಆಗ ಈ ಜಗದ್ರೂಪೀ ಮದುಮಗಳು—ಮತ್ತು ಪರಮಾತ್ಮ ರೂಪೀ ವರ, ಇವರೊಳಗೆ—ಪ್ರೇಮ ಲೀಲೆಯು ಪ್ರಾರಂಭವಾಗುವುದು ಆಗ ಈ ಪರಮಾತ್ಮ ರೂಪೀ ಆತ್ಮಕ್ಕೆ ಈ ದಿವ್ಯ ಪ್ರೇಮದ, ಭವ್ಯ ಸಮಾರೋಹಕ್ಕೆ—ಆರ್ಹನಾದ ನಾಯಕನೂ ಅಮರತೆಯ ಭೋಜನದ ಪ್ರತಿಷ್ಠಿತ ಅತಿಥಿಯೂ, ತಾನೇ ಆಗಿದ್ದೇನೆ! ಎಂಬ ಅನುಭವವಾಗುವುದು ಪ್ರೇಮದಿಂದಲೇ ಪ್ರೇಮದಲ್ಲಿಯೇ ಈ ಸೃಷ್ಟಿ, ಜನ್ಮ ನೆತ್ತುವುದು! ಎಂಬ ಋಷಿ ಪ್ರಣೀತವಾದ ಕವಿತೆಯ ಅರ್ಥ ಈಗ ಮಾತ್ರ ಅರ್ಥವಾಗಬಹುದು—ಪ್ರೇಮದಿಂದಲೇ ಇದರ ವ್ಯವಸ್ಥೆಯಾಗಿ ಪ್ರೇಮದಲ್ಲಿಯೇ ಕೊನೆಗಿದು ಲೀನವಾಗುವುದು.

ಪ್ರೇಮದಲ್ಲಿ ಜೀವನದ ಸರ್ವ ವಿರೋಧೀ ಶಕ್ತಿಗಳೂ ತಮ್ಮನ್ನು ತಾನೇ ನಿರ್ಬಂಧಿಸುತ್ತ ಎಲ್ಲವೂ ಒಂದಾಗಿ ಬಿಡುವುವು. ಏಕತ್ವ ಮತ್ತು ದ್ವಿತ್ವ ಇವುಗಳೊಳಗೆ ವಿರೋಧ ಭಾವವಿಲ್ಲದ ಒಂದೇ ಒಂದು ಕ್ಷೇತ್ರವೆಂದರೆ, ಅದು ಪ್ರೇಮದ ಕ್ಷೇತ್ರ.

ಗತಿಶೀಲವಾಗಿಯೂ, ವಿರಾಮಯುಕ್ತವಾಗಿಯೂ ಒಟ್ಟಿಗೇ ಇರುತ್ತಿರುವುದು, ಪ್ರೇಮ! ನಮ್ಮ ಹೃದಯವು ಪ್ರೇಮದ ಶೋಧದಲ್ಲಿ ಸದಾ ತೊಡಗಿರುವುದು, ಆದರೆ, ಪ್ರೇಮ ಪ್ರಾಪ್ತಿಯ ಬಳಿಕ ಅದು ವಿಶ್ರಾಂತಿಯಲ್ಲಿ ಲೀನವಾಗುವುದು. ನಮ್ಮ ಹೃದಯವೂ ವಿಶ್ರಾಂತಿಯೂ ಅಸೀಮದ ಗತಿಯ ಒಂದುರೂಪವಾಗಿ ಪ್ರೇಮದೊಡನೆ ಮಿಲನಹೊಂದುವುದು.

ಪ್ರೇಮದಲ್ಲಿ—ಲಾಭ—ಮತ್ತು ನಷ್ಟ ಸಮಭಾವದಿಂದಿರುತ್ತವೆ. ಪ್ರೇಮದ ದೃಷ್ಟಿಯಲ್ಲಿ ಆಯ ಮತ್ತು ವ್ಯಯ—ಇವೆರಡು ಲೆಕ್ಕಗಳೂ ಒಟ್ಟಿಗೇ ಬರೆಯಲ್ಪಟ್ಟು ಒಂದಾಗಿಯೇ ಕೂಡಿರುತ್ತವೆ. ಸೃಷ್ಟಿಯ ಈ ಆಶ್ಚರ್ಯಕರವಾದ ಉತ್ಸವದಲ್ಲಿ ಆತ್ಮದಾನದ ಈಶ್ವರೀಯ ಈ ಮಹಾ ಯಜ್ಞದಲ್ಲಿ ಪ್ರೇಮಿಗೆ ನಿರಂತರವಾಗಿ ಆತ್ಮಾಹುತಿಯನ್ನು ನೀಡಬೇಕಾಗುವುದು. ಆ ದಾನ ಪ್ರದಾನಗಳ ಸಮನ್ವಯವಿರುವ ಯ

(ಬೇರೆ ಪುಟ ನೋಡಿರಿ)

ಉಡುಪಿ ಡಿ. ಮು. ಕೋರ್ಟನಲ್ಲಿ

O P 41/1961

ಕಾಮಿಲ್ ಸಿರಿಲ್ ಲೂವಿಸ್ —ಅರ್ಜಿದಾರ

ಈ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿಸುವುದೇನೆಂದ್ರೆ:—

ತಾರೀಕು 27-12-1960ರಲ್ಲು ಕ್ರೊಪಿಟ್ (ಆರೇಬಿಯಾ)ನಲ್ಲಿ ಮೃತಪಟ್ಟ ಫ್ರೆಡ್ರಿಕ್ ಫಿಲಿಪ್ ಜೊನ್ ಲೂವಿಸರ ಉತ್ತರಾಧಿಕಾರಿ ಅವರ ತಂದೆ ಮೇರಿ ಹೇಳಿದ ಅರ್ಜಿದಾರರೆಂತಲೂ, ಸ್ಟೇಟ್ ಬೇಂಕ್ ಆಫ್ ಇಂಡಿಯೂ, ಉಡುಪಿ ಮತ್ತು ಕೆನರಾ ಬೇಂಕ್ ಲಿಮಿಟೆಡ್, ಫೋರ್ಟ್ ಬೊಂಬೇಯಲ್ಲಿ ಸದ್ರಿ ಮೃತಪಟ್ಟವರ ಹೆಸರಿನಲ್ಲಿರುವ ಸೇವಿಂಗ್ಸ್ ಬೇಂಕ್ ಎಕೌಂಟ್ ಮತ್ತು ಫಿಕ್ಸೆಡ್ ಡಿಪೊಸಿಟ್‌ನಲ್ಲಿರುವ ಮೊಬಲಗು ಮತ್ತು ಬಡ್ಡಿಗಳನ್ನು ವಸೂಲು ಮಾಡುವರೆ ಸದ್ರಿ ಅರ್ಜಿದಾರರಿಗೆ ಮೇಲಿನ ಕೋರ್ಟನವರು ಒಂದು ಸಕ್ಸೆಶನ್ ಸರ್ಟಿಫಿಕೇಟು ಕೊಡಬೇಕೆಂತಲೂ ಪ್ರಾರ್ಥಿಸಿ ಸಾಡಿದ ಮೇಲಿನ ಅರ್ಜಿಯನ್ನು ತಾ. 8-10-1961ಕ್ಕೆ ತನ್ನಗೆ ಇಟ್ಟಿರುತ್ತದೆ. ಸದ್ರಿ ಸರ್ಟಿಫಿಕೇಟನ್ನು ಅರ್ಜಿದಾರರಿಗೆ ಕೊಡುವರೆ ಆಕ್ಷೇಪವಿರುವವರು ಆ ದಿವಸ ಬೆಳಿಗ್ಗೆ 11 ಗಂಟೆಗೆ ಮೇಲಿನ ಕೋರ್ಟನಲ್ಲಿ ಸ್ವತಃ ಅಥವಾ ವಕೀಲರ ಮುಖಾಂತರ ಹಾಜರಾಗತಕ್ಕದ್ದು.

(By Order of Court)

P. R. Shenoy,
Advocate for Petitioner

Udipi 21—9—61

ಸ್ಥಾಪನೆ. 1924

ದಿ ಕರ್ಣಾಟಕ ಬೇಂಕ್ ಲಿಮಿಟೆಡ್

(ಶೆಡ್ಯೂಲ್ಡ್ ಬೇಂಕ್)

ರಿಜಿಸ್ಟರ್ಡ್ & ಹೆಡ್ ಆಫೀಸು: ಮಂಗಳೂರು—3.

ಈ ಕೆಳಗಿನ ಏರಿಸಿದ ಬಡ್ಡಿದರಗಳಲ್ಲಿ ರೇವಣಾತಿಗಳನ್ನು ಸ್ವೀಕರಿಸಲಾಗುವುದು.

ಒಂದರಿಂದ ಎರಡು ತಿಂಗಳುಗಳ ವರೆಗೆ	....	ಸಾ|| ಸೇಕಡಾ 3-75	ನ ಪೈಸೆ
ಮೂರರಿಂದ ಐದು ತಿಂಗಳುಗಳ ವರೆಗೆ	...	,, 4-25	,,
ಆರು ತಿಂಗಳುಗಳಿಂದ 12 ತಿಂಗಳುಗಳ ವರೆಗೆ	...	,, 4-50	,,
12 ತಿಂಗಳು ಮಿಕ್ಕಿ 24 ತಿಂಗಳುಗಳ ವರೆಗೆ	..	,, 4-75	,,
24 ತಿಂಗಳು ಮಿಕ್ಕಿ 48 ತಿಂಗಳುಗಳ ವರೆಗೆ	.	, 5-00	,,
48 ತಿಂಗಳುಗಳಿಗೆ ಮಿಕ್ಕಿ	....	,, 5-25	,,

ಸೇವಿಂಗ್ಸ್ ಬ್ಯಾಂಕ್ ಬಡ್ಡಿ ದರವನ್ನು
ಸಾ. ಸೇಕಡ 2½% ರಿಂದ 3½%ಗೆ ಏರಿಸಲಾಗಿದೆ.

THE KARNATAKA BANK LIMITED.



ನವಯುಗ

ವರುಷ ೪೧	ಉಡುಪಿ ೨೮-೯-೬೧	ವಾರ ೪

ವಲಯ ಮಂಡಳ ಸಭೆ

ಒಂದು ದಿನ ತಡವಾಗಿಯಾದರೂ ನವ ದೆಹಲಿಯಿಂದ ಹೊರಟುಬೆಂಗಳೂರಿಗೆ ಆಗಮಿಸಿ ಅಲ್ಲಿ ನಡೆದ ದಕ್ಷಿಣ ವಲಯ ಮಂಡಳದಸಭೆಯಲ್ಲಿ ಶ್ರೀ ಲಾಲಬಹದೂರ ಶಾಸ್ತ್ರಿಯವರು ಭಾಗವಹಿಸಿದರು. ಕರ್ನಾಟಕ ಮೊದಲು ಪಶ್ಚಿಮ ವಲಯಕ್ಕೆ ಸೇರಿದ್ದ ರಾಜ್ಯವಾಗಿದ್ದರೂ ದ್ವಿಭಾಷಾ ಮುಂಬಯಿ ರಾಜ್ಯ ವಿಭಜನೆಯಾದ ನಂತರ ಅದನ್ನು ದಕ್ಷಿಣ ವಲಯಕ್ಕೆ ಸಂಪೂರ್ಣವಾಗಿ ಸೇರಿಸಲಾಯಿತು. ಬೆಂಗಳೂರಿನಲ್ಲಿ ಮೊತ್ತಮೊದಲಿಗೆ ಜರಗಿದ ಈ ಸಭೆಯು ಕೆಲವೊಂದು ದೃಷ್ಟಿಯಿಂದ ಮಹತ್ವಪೂರ್ಣವಾದುದು. ದಕ್ಷಿಣ ವಲಯದ ಎಲ್ಲ ರಾಜ್ಯಗಳಿಗೂ ಕಾದಿಟ್ಟ ಸೋಲೀಸು ಪಡೆಯನ್ನು ರಚಿಸಲಾಗಿದೆಯೆಂಬ ಘೋಷಣೆಯು ಈ ಸಭೆಯಲ್ಲಿ ನಡೆಯಿತು ಈ ಎಲ್ಲ ರಾಜ್ಯಗಳಿಗೂ ಪ್ರಾದೇಶಿಕ ವಿದ್ಯುತ್ ಗ್ರಿಡ್ ಒಂದನ್ನು ಸ್ಥಾಪಿಸುವ ನಿರ್ಧಾರವಾಯಿತೆಂಬುದು ಕೂಡ ಶ್ಲಾಘನೀಯವಿದೆ.

ದಕ್ಷಿಣದ ರಾಜ್ಯಗಳಲ್ಲಿ ಕೆಲವೊಂದು ರೈಲುದಾರಿಗಳನ್ನು ಹಾಕಿಸಲು ತೃತೀಯ ಯೋಜನೆಯಲ್ಲಿ ಅವಕಾಶ ಕಲ್ಪಿಸಿಕೊಟ್ಟದ್ದು ಆ ಸಂಬಂಧದ ಸರ್ವಕಾರ್ಯಗಳು ಬೇಗನೇ ಪ್ರಾರಂಭವಾಗುವುದೆಂಬುದಾಗಿ ಕೇಂದ್ರ ಗೃಹಮಂತ್ರಿ ಶ್ರೀ ಶಾಸ್ತ್ರಿಯವರು ಹೇಳಿದ್ದಾರೆ ಶಾಸನ—ಮಂಗಳೂರು ರೇಲ್ವೆದಾರಿಯೂ ಇವುಗಳಲ್ಲಿ ಒಂದಾಗಿದೆ. ಹಾಗೆಯೇ ಬೆಂಗಳೂರು ಸೇಲಂ, ಮನಮದುರೆ—ವಿರುಧನಗರಗಳನಡುವೆ ರೇಲುದಾರಿಯೂ ಸೇರಿ ಒಟ್ಟು ೩೦೮ ಮೈಲು ಉದ್ದದ ಹೊಸ ರೈಲು ದಾರಿಯು ದಕ್ಷಿಣದ ನಾಲ್ಕು ರಾಜ್ಯಗಳಲ್ಲಿ ಆಗುವುದು. ಇದೊಂದು ಬಹು ಆಶಾದಾಯಕವಾದ ಸುದ್ದಿಯೆನ್ನಬಹುದು. ರಾಷ್ಟ್ರೀಯ ಐಕ್ಯದ ಕಡೆಗೆ ವಿಶೇಷ ಲಕ್ಷ್ಯ ಸೂರೈಸಬೇಕೆಂಬ ಕೇಂದ್ರ ಗೃಹಮಂತ್ರಿಗಳ ಮಾತು ಮಾರ್ಮಿಕವಾಗಿದೆ. ದಕ್ಷಿಣದ ಈ ರಾಜ್ಯಗಳಲ್ಲಿ ಭಾಷಾಸಮಸ್ಯೆಗಳು ಮಾತ್ರವಲ್ಲ, ಪ್ರತಿರಾಜ್ಯದಲ್ಲಿಯೂ ಭಾಷಾ ಅಲ್ಪ ಸಂಖ್ಯಾಕರ ಪ್ರಶ್ನೆಯು ಬಹುವಾಗಿ ಕಾಡುತ್ತಿದೆ. ಇದರಿಂದಾಗಿ ಪರಸ್ಪರ ಹೊಂದಾಣಿಕೆಯ ಮನೋಭಾವವು ಅತ್ಯವಶ್ಯವಾಗಿದೆ. ಆಂಧ್ರ—ಕರ್ನಾಟಕಗಳ ನಡುವೆ ಗೋದಾವರೀ ನದೀ ನೀರು ಮತ್ತು ಮದ್ರಾಸು ಕರ್ನಾಟಕಗಳ ಮಧ್ಯೆ ಇರುವ ಕಾವೇರಿ ನದೀ ನೀರಿನ ವಿವಾದಗಳು ಈ ರಾಜ್ಯಗಳ ಅಭಿವೃದ್ಧಿಗೆ ಹಾನಿಕಾರಕವಿರುತ್ತವೆಂಬುದನ್ನು ಯಾರೂ ಅಲ್ಲಗಳೆಯಲಾರರು ಶ್ರೀ ಶಾಸ್ತ್ರಿಗಳಾದರೂ ಎಲ್ಲ ವಿವಾದಗಳನ್ನೂ ಸೌಹಾರ್ದ ಭಾವನೆಯಿಂದ ಬಗೆಹರಿಸಿ ಸ್ನೇಹ ಪ್ರವೃತ್ತಿಯನ್ನು ಬೆಳೆಸಿಕೊಳ್ಳುವುದು ಅವರ್ಯವೆಂದು ಅಭಿಪ್ರಾಯವಿತ್ತರು. ಹಾಗೆಯೇ ಕರ್ನಾಟಕ—ಮಹಾರಾಷ್ಟ್ರಗಳ ನಡುವಣ ಗಡಿ ವಿವಾದವು ಕೂಡ ಇನ್ನೂ ಕೊನೆಗಾಣದೆ ಹಾಗೆಯೇ ಉಳಿದಿರುವಾಗ, ಮಹಾರಾಷ್ಟ್ರ ಸರಕಾರವು ತನ್ನ ಹಠ ಮಾರಿತನವನ್ನು ಬಿಟ್ಟುಗೊಡಲು ಸಿದ್ಧವಿರದುದರಿಂದ ಈ ವಿವಾದಗಳು ಇನ್ನೂ ಕೊನೆಯಾಗುವಂತಿಲ್ಲ. ಇದರಿಂದಾಗಿಯೇ ಸೀಮೂ ಪ್ರದೇಶದಲ್ಲಿ ಆಗಾಗ ಚಿಕ್ಕ ಪುಟ್ಟ ಗೊಂದಲಗಳು ನಡೆಯುತ್ತಿವೆ. ಇವನ್ನು ಸ್ವಲ್ಪ ಮಟ್ಟಿನ ಹೊಂದಾಣಿಕೆಯಿಂದ ಸಾಧಿಸಬಹುದೆಂದಿದ್ದರೂ, ಈ ಸೀಮೂ ನಿರ್ಣಯದ ಸಂಬಂಧದಲ್ಲಿ ಪ್ರತ್ಯೇಕವಾದ ವಿಧೇಯಕವೊಂದನ್ನು ತಯಾರಿಸುವತ್ತ ಆಲೋಚನೆ ಮಾಡುವಂತೆ ಮಹಾರಾಷ್ಟ್ರ ಸರಕಾರವು ಬಯಸುತ್ತಿರುವಂತೆ ತೋರುತ್ತದೆ. ನ್ಯಾಯವಾಗಿ ಮಹಾರಾಷ್ಟ್ರಕ್ಕೆ ಸೇರಬೇಕಾದ ಭಾಗಗಳು ಈಗ ಕರ್ನಾಟಕದಲ್ಲಿ ಜೆಚ್ಚಿರುವುದಿಲ್ಲ. ಕೆಲವೊಂದು ಚಿಕ್ಕ ಪುಟ್ಟ ಹೊಂದಾಣಿಕೆಯಿಂದ ಇವೆಲ್ಲವನ್ನು ತೀರ್ಮಾನಿಸಿಕೊಳ್ಳುವುದನ್ನು ಬಿಟ್ಟು ಪ್ರತ್ಯೇಕ ವಿಧೇಯಕ ರಚಿಸುವುದು ಉತ್ತಮವಲ್ಲವೆಂಬುದರಿಂದ ಈ ಸೀಮಾಪ್ರಶ್ನೆಯನ್ನು ಮಹಾರಾಷ್ಟ್ರ ಸರಕಾರವು ಪರ್ವತದಷ್ಟು ನೂಡುವುದು ಶೋಭನೀಯವಲ್ಲ. ಎರಡೂ ರಾಜ್ಯಗಳ ಇಬ್ಬರಿಬ್ಬರು ಪ್ರತಿನಿಧಿಗಳಿರುವ ಸೀಮಾ ಪರಿಶೀಲಕ ಸಮಿತಿಯು ಈಗ ತನ್ನ ಕಾರ್ಯದಲ್ಲಿ ಮಗ್ನವಾಗಿದೆಯಾದರೂ ಸಮಸ್ಯಾ ಪರಿಹಾರಕ್ಕೆ ಮಾರ್ಗ ತೋರಿಸುವ ಅಧಿಕಾರವಿದಕ್ಕಿಲ್ಲದಿರುವುದರಿಂದ ಅದು ಸಲ್ಲಿಸುವ ವರದಿಯು ಪುಸ್ತಕದಲ್ಲಿಯೇ ಉಳಿಯುವ ಅವಕಾಶ ಹೆಚ್ಚು ಹಾಗೆಯೇ ಕೇರಳ—ಕರ್ನಾಟಕದ ಸೀಮೆಯ ಪರಿಸ್ಥಿತಿಯೂ ದೂರವಾಗಲಾರದು ಎಲ್ಲ ರಾಜ್ಯಗಳೂ ಒಂದರೊಡನೊಂದು ಸಹಕರಿಸಿ ಸತ್ಯಾನುಭವ ಪಡೆದುಕೊಂಡರೆ ಮಾತ್ರ ಪ್ರಶ್ನೆಗಳು ಅವೆಷ್ಟು ಗಹನಗಂಭೀರವಿರಲಿ; ಬಗೆ ಹರಿಯುತ್ತವೆ. 'ಅವಕೊಡ ಇವಬಿಡ' ಎಂಬಂತೆ ಸಮಯ ಕಳೆಯುತ್ತ ಬಂದರೆ ಹಳೆಯ ರೋಗಿಯಂತೆ ಎಲ್ಲ ಸಮಸ್ಯೆಗಳೂ ಕೊಳೆಯ ತೊಡಗಿ ಬೇಗರ ತರಿಸುವುದು. ಆ ಮೇಲೆ ಅವುಗಳಿಗೆ ಲಕ್ಷ್ಯಸೂರೈಸುವುದಕ್ಕೆ ಯಾರಲ್ಲೂ ಅಸಕ್ತಿ ಉಳಿಯಲಾರದು

ಪ್ರಧಾನ ಕಾರ್ಯದರ್ಶಿ

ಯುಕ್ತರಾಷ್ಟ್ರ ಸಂಸ್ಥೆಯ ಪ್ರಧಾನ ಕಾರ್ಯದರ್ಶಿಯಾಗಿದ್ದ ಹೆಮ್ಮರ್‌ಶೆಲ್ಡರ ನಿಧನದಿಂದ ಶೂನ್ಯವಾದ ಸ್ಥಾನವನ್ನು ಪೂರ್ತಿಗೊಳಿಸಲು ಕೆಲವೊಂದು ಪ್ರಶ್ನೆಗಳು ತೊಡಕಾಗಿ ಪರಿಣಮಿಸಿವೆ. ಅದಕ್ಕೆ ಮುಖ್ಯವಾಗಿ ತಾತ್ಕಾಲಿಕವಾಗಿಯಾದರೂ ಯಾರನ್ನಾದರೂ ಆ ಹುದ್ದೆಗೇರಿಸುವ ಕಾರ್ಯವಿನ್ನೂ ಸಫಲವಾಗಿಲ್ಲ ಭಾರತದ ನರಸಿಂಹನ್, ಬರ್ಮಾದ ಥ್ಯಾನ್ಟ್ ಯವರ ಹೆಸರುಗಳೇಗ ಕೇಳಿ ಬರುತ್ತಿನೆಯಾದರೂ ಈ ಹೆಸರುಗಳು ಮಾನ್ಯವಾಗುವ ಲಕ್ಷಣಗಳು ಕಡಿಮೆಯೆಂದೇ ಹೇಳಬೇಕು. ರಶ್ಯವು ಈ ಮೊದಲೇ ಮಂಡಿಸಿದ್ದ ಸೂಚನೆಯಂತೆ ಪಾಶ್ಚಾತ್ಯ, ಪೌರ್ವಾತ್ಯ ಮತ್ತು ತಟಸ್ಥ ರಾಷ್ಟ್ರಗಳ ಬಣಗಳಿಗೆ ಪ್ರಾತಿನಿಧ್ಯ ಸಿಗುವಂತೆ ಮೂವರು ಪ್ರಧಾನ ಕಾರ್ಯದರ್ಶಿಯರ ನೇಮಕವಾಗಬೇಕೆಂಬ ವಾದವನ್ನೀಗ ಬಿಗಿಯಾಗಿ ಪ್ರತಿಪಾದಿಸಿದರೆ, ಅಮೆರಿಕೆಯು ಇದನ್ನು ಒಪ್ಪಲು ಸುತರಾಂ ಸಿದ್ಧವಿಲ್ಲ. ಪಾಶ್ಚಾತ್ಯ ಮತ್ತು ಪೌರ್ವಾತ್ಯ ರಾಷ್ಟ್ರಗಳ ವಿಶ್ವಾಸಕ್ಕೆ ಪಾತ್ರರಾದ, ಶಾಂತಿಯ ಸಂಬಂಧದಲ್ಲಿ ಬೇಕೆಂಬಷ್ಟು ಕಳಕಳಿ ತೋರಿಸುತ್ತಿರುವ ಭಾರತದ ಪ್ರಧಾನ ಮಂತ್ರಿಯಾದ ನೆಹರು ಆ ಸ್ಥಾನವನ್ನಲಂಕರಿಸಿದರೆ, ಸರ್ವ ಸಮರ್ಪಕವಾಗ ಬಹುದೆಂಬ ಊಹೆನಡೆಯುತ್ತಿದೆ. ಇದು ವಾಸ್ತವವೆಂದೂ ಹೇಳಬಹುದು. ಆದರೆ, ನೆಹರು ಭಾರತದಿಂದದೂರವುಳಿದುಲು ಒಪ್ಪುತ್ತಾರೆಯೆ, ಭಾರತೀಯರು ಅವರನ್ನು ಬಿಟ್ಟುಕೊಡಲು ಸಿದ್ಧರಿದ್ದಾರೆಯೇ ಎಂಬುದಿನ್ನು ವಿವೇಚನಾತ್ಮಕವಿದೆ. ಪ್ರಧಾನಿ ನೆಹರು ಆ ಹುದ್ದೆಗೆ ಯೋಗ್ಯರೂ ಸಮರ್ಥರೂ ಎಂಬುದರಲ್ಲಿ ಇಬ್ಬಗೆಯಿಲ್ಲವಾದರೂ ಅವರು ಆ ರಿಕ್ತ ಸ್ಥಾನವನ್ನು ಅಡರುವುದು ಮಾತ್ರ ಅಸಂಭವವೆಂದೇ ಹೇಳಬಹುದು. ಅವರಂತಹ ಮತ್ತೊಬ್ಬ ವ್ಯಕ್ತಿ ಇಡಿಯವಿಶ್ವದಲ್ಲಿಯೇ ದೊರೆಯಲಾರರು ಎಂಬುದರಿಂದ ಈ ಸಮಸ್ಯೆ ಮತ್ತಷ್ಟು ಗಂಭೀರವಾಗಿಯೇ ಉಳಿದಿದೆ

ಸಂಕ್ಷಿಪ್ತ ಸುದ್ದಿಗಳು

ಮಾಸ್ಟರ್ ತಾರಾಸಿಂಗ

ಪಂಜಾಬಿ ಸುಬಾಕ್ಕಾಗಿ ತಮ್ಮ ಪ್ರಾಣವನ್ನೇ ಬಲಿ ನೀಡುವಷ್ಟು ಮುಂದಾಗುತ್ತಾರೆಂದು ತಾರಾಸಿಂಗರ ಸಂಬಂಧದಲ್ಲಿ ಬೇರೆಯವರ ಮಾತು ದೂರವುಳಿಯಲಿ, ಸ್ವಯಂ ತಾರಾಸಿಂಗರೇ ನೊದಲು ಯೋಚಿಸಿರಲಿಲ್ಲ. ಕೊನೆಯ ಗಳಿಗೆಯ ವರೆಗೂ ಆಶಾದಾಯಕ ಉತ್ತರ ಪ್ರಧಾನಿ ನೆಹರುಗಳಿಂದ ಬಂದೀತೆಂದು ಕಾದ ನಿರಾಶರಾದ ಅವರು ಈಗ ತನ್ನ ಹರವನ್ನು ಬಲವಾಗಿ ನೆಮ್ಮಿ ಕೂತಿದ್ದಾರೆ. ಪಂಜಾಬಿ ಸುಬಾ ಬೇಡಿಕೆಯ ನ್ಯಾಯಾನ್ಯಾಯ ವಿವೇಚನೆಯೇನೇ ಇದ್ದರೂ ತಾರಾಸಿಂಗರ ಸಾಹಸ ಪ್ರಶಂಸನೀಯ. ಅವರನ್ನು ವಿರೋಧಿಸಿ ಉಪವಾಸ ಮಾಡುತ್ತಿರುವ ಸೂರ್ಯದೇವರ ಸಾಹಸ ಮತ್ತೂ ಶ್ಲಾಘನೀಯ. ಒಂದೆರಡು ದಿನಗಳಲ್ಲೇ ಈ ಸಂಬಂಧದಲ್ಲಿ ಒಡಂಬಡಿಕೆಯಾಗದೆ ಹೋದರೆ, ಮುಂದೆ ಪರಿಣಾಮ ನೆಟ್ಟಗಾಗದು ಎಂಬುದರಿಂದಲೇ ಒಡಂಬಡಿಕೆಯ ಮಾತುಕತೆಗಳು ಭರದಿಂದ ಸಾಗುತ್ತಿವೆ.

ಕೃಷ್ಣಮೆನನ್

ಭಾರತದಲ್ಲಿ ನೆಹರು ಇರುವಂತೆ ನೆಹರೂರಿಗೆ ಕೃಷ್ಣಮೆನನ್ ಇದ್ದಾರೆ. ಮೆನನ್ನರ ಬಗ್ಗೆ ಸಮಗ್ರ ಭಾರತದಲ್ಲಿ ಅನುಕೂಲಾಭಿಪ್ರಾಯವಿಲ್ಲವಾದರೂ ನೆಹರು ಅವರ ಬಗ್ಗೆ ತುಂಬ ವಿಶ್ವಾಸ ತೋರಿಸುತಿದ್ದಾರೆ. ಎಂತಲೇ ಅವರನ್ನೂ ಕೇಂದ್ರ ಮಂತ್ರಿ ಮಂಡಳದಲ್ಲಿ ಉಳಿದಿದ್ದಾರೆ. ಮುಂದಿನ ಸಾರ್ವತ್ರಿಕ ಚುನಾವಣೆಗಳಲ್ಲೂ ಹುರಿಯಾಳಾಗಿ ನಿಲ್ಲುತ್ತಾರೆ. ಭಾರತ ಸರಕಾರದ ನೀತಿಯನ್ನು ಅರಿತು ಅದರಂತೆ ನಡೆಯುವ ಎದೆಗಾರಿಕೆಯನ್ನು ಮೆನ್ನನರಿನ್ನೂ ತೋರಿಸುತ್ತಾರೆ. ಸಂಧಿ ಸಹಿತ—ಇಲ್ಲವೇ ರಹಿತ ನಿಶ್ಶಸ್ತ್ರೀಕರಣ ಹಾಗೂ ರಿಪಬ್ಲಿಕ್ ಚೀನಕ್ಕೆ ಸಂಯುಕ್ತ ಸಂಸ್ಥೆಯಲ್ಲಿ ಪ್ರಾತಿನಿಧ್ಯ ನೀಡುವ ಪ್ರಶ್ನೆಗಳನ್ನು ಮೆನನ್ನರು ಈ ಬಾರಿ ಮರಳಿ ಮುಂದೆ ತಂದಿದ್ದಾರೆ. ಅಮೆರಿಕೆಯೂ ಇದಕ್ಕೆ ಬೆಂಬಲ ಸೂಚಿಸುವಷ್ಟಾದರೂ ಉದಾರತೆ ಈ ಬಾರಿ ತೋರಿಸುತ್ತದೆ.

ಅಡೋಲಾ

ಸಂಯುಕ್ತರಾಷ್ಟ್ರ ಸಂಸ್ಥೆಯೆದುರು ಯುದ್ಧ ಸಾರಿದ್ದ ಕಟಾಂಗದ ಅಧ್ಯಕ್ಷ ಶೋಂಬೆಯವರು ಸಂಧಾನಕ್ಕೆ ಸಿದ್ಧರಾದುದರಿಂದ ಅಲ್ಲಿ ಯುದ್ಧವೇನೋ ಸ್ಥಗಿತಗೊಂಡಿದೆ. ಆದರೆ, ಕಾಂಗೋಲೀ ಪಾರ್ಲಿಮೆಂಟು ಈ ಘಟನೆಯಿಂದ ನೊಂದುಕೊಂಡಿದೆ. ಸಿಡಿದು ಹೋದ ಕಟಾಂಗವನ್ನು ಮರಳಿ ಕಾಂಗೋ ಒಕ್ಕೂಟದಲ್ಲಿ ಸೇರಿಸುವುದು ಅತ್ಯವಶ್ಯ. ಆದರೆ, ಈ ಕಾರ್ಯವನ್ನು ಸಾಧಿಸುವಷ್ಟು ಶಕ್ತಿ ಕಾಂಗೋಲೀ ಪಡೆಗಿಲ್ಲ. ಆದುದರಿಂದಲೇ ಸತ್ಯವನ್ನು ನೆಮ್ಮಿ ಸಂ. ರಾ. ಸೇನೆಯ ಸಹಾಯವನ್ನದು ಬೇಡಿತ್ತು. ಡಾಗ್ ಹೆಮ್ಮರ್ ಶೆಲ್ಡರ ಮೃತ್ಯುವಿನಿಂದಾಗಿ ಆಘಾತವೆನಿಸಿದರೂ ತನ್ನ ಕರ್ತವ್ಯವು ನಿರ್ವಹಣೆಯಲ್ಲಿ ಈ ಸೇನೆಯು ಹಿಂದುಳಿಯದು. ಪೆಟ್ರಿಸ್ ಲುಮುಂಬಾರ ಉತ್ತರಾಧಿಕಾರಿ ಅಡೋಲರು ಈ ಸಂಬಂಧದಲ್ಲಿ ಒಂದು ಪತ್ರ ಬರೆದು ತನ್ನ ಅಭಿಪ್ರಾಯವನ್ನು ಸಂ. ರಾ. ಪ್ರತಿನಿಧಿಗೆ ತಿಳಿಸಿದ್ದಾರೆ.

ಡೀನ್ ರಸ್ಕ್

ತಟಸ್ಥ ರಾಷ್ಟ್ರಸಮ್ಮೇಳನದ ಪ್ರತಿನಿಧಿಗಳಿಗೆ ಉತ್ತರಿಸಿದಂತೆ ರಶ್ಯ—ಅಮೆರಿಕೆಗಳ ವರಿಷ್ಠರು ಪರಸ್ಪರ ವಿಚಾರ ವಿನಿಮಯಕ್ಕೆತೊಡಗುವ ಪ್ರಾರಂಭಿಕ ಹಂತದಲ್ಲಿ ಬಂದಿದ್ದಾರೆ. ಸದ್ಯ ಸಂ. ರಾ. ದ ಸಾಮಾನ್ಯ ಸಭೆಯಲ್ಲಿ ಭಾಗವಹಿಸಲು ರಶ್ಯನ್ ವಿದೇಶ ಮಂತ್ರಿ ಗ್ರೋಮಿಕೋ ಬಂದಿರುವುದರಿಂದ ಅಮೇರಿಕೆಯ ರಾಜ್ಯಾಂಗ ಕಾರ್ಯದರ್ಶಿ ಡೀನ್ ರಸ್ಕರು ಅವರೊಂದಿಗೆ ಬರ್ಲಿನ್ ಪ್ರಶ್ನೆಯ ಪರಿಹಾರ ದಾರಿಯನ್ನು ಮುಖ್ಯವಾಗಿ ಚರ್ಚಿಸುವ ನಿರ್ಧಾರ ಮಾಡಿದ್ದಾರೆ. ಹೆಮ್ಮರ್ ಶೆಲ್ಡರ ನಿಧನದಿಂದ ತೆರವಾದ ಸ್ಥಾನ ಪೂರ್ತಿಮಾಡುವ ಸಂಬಂಧದಲ್ಲಿಯೂ ಈ ಮಾತುಕತೆಗಳು ಮುಂದುವರಿಯುವುವು. ಈ ವಿಚಾರ ವಿನಿಮಯವು ಆಶಾದಾಯಕವೆಂದು ಕಂಡುಬಂದರೆ, ಮುಂದೆ ಕ್ರುಶ್ಚೇವ-ಕೆನ್ನೆಡಿ ಭೆಟ್ಟಿಯೂ ನಡೆಯುವುದೆಂಬ ನಿರೀಕ್ಷೆಯಿದೆ

ಪುತ್ತೂರು ಡಿ. ಮು. ಕೋರ್ಟಿನಲ್ಲಿ
R. E. P. 251/1961, O S. 7/1957

ಸಣಪ್ಪ ಗೌಡ —ಅರ್ಜಿದಾರ.
ಗೋಪಾಲ—ಕುಂಞಾಂಣ ನ್ಯಾಳಸ ಮಗ —ಪುತ್ತೂರು ತಾಲೂಕು ಅಮರೆ ಸಡ್ಡೂರು ಗ್ರಾಮ —ಎದ್ರಿ,

ಸದ್ರಿ ಎದ್ರಿಗೆ ಕೋರ್ಟು ಹುಕುಂ ಪ್ರಕಾರ ಈ ಸೂಚನೆ ತಿಳಿಯಪಡಿಸುವುದೇನೆಂದರೆ—

ಮೇಲಿನ ಅಮಲ್ಜಾರಿಯಲ್ಲಿ ದಾಖಲು ಮಾಡಿದ ಯೋಲಂ ಇಸ್ತಿಹಾರಿನ ಶರತ್ತುಗಳನ್ನು ನಿರ್ಣಯಿಸುವ ಬಗ್ಗೆ ತಾ. 5—10—61ಕ್ಕೆ ಇಟ್ಟಿರುತ್ತದೆ ಆ ದಿವಸ ಈ ಕೋರ್ಟು ಮುಂದೆ ಹಾಜರಾಗಿ ಉದಹರಿಸತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಶಿಕ್ಷಾಮಾಡಿ ಯುಕ್ತಕಂತೆ ತೀರ್ಮಾನಿಸಲಾದೀತು.

(Sd.) M. Sadashiva Rao,
Vakil for petitioner.

ತಾ. 11—9—61.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖನಬಂಧುಗಳು ಸಡಕಾಗಿ ವಿನಂತಿ. —ಸಂ.ನ.

ಅಲ್ಲಲ್ಲಿಯ ಸುದ್ದಿಸಾರ

ಬೆಂಗಳೂರಿಗೆ ಶಾಲಾ ಮೇನೇಜರರ ದ್ವಿತೀಯ ನಿಯೋಗ

ಕುರುಕಾಲು:—ಕಳೆದ ಮೇ ತಿಂಗಳಲ್ಲಿ ಅನುಭೀಕ್ಷಿತವಾಗಿ ತಿದ್ದುಪಡಿಯಾದ ಸರಕಾರಿ ಹುಕುಮಿನಾಂದ ದ.ಕ.ಜಿಲ್ಲೆಯ ಖಾಸಗಿ ಶಾಲೆಗಳ ಭವಿಷ್ಯತ್ಕೆ ಗಂಡಾಂತರ ಒದಗಿದ ಕುರಿತು ಜಿಲ್ಲಾ ಶಾಲೆಗಳ ಮೆನೇಜರರ ಸಂಘದ ವತಿಯಿಂದ ಪ್ರಥಮ ನಿಯೋಗವು ಆಗೋಸ್ತು 13ರಲ್ಲಿ ಬೆಂಗಳೂರಲ್ಲಿ ವಿದ್ಯಾಮಂತ್ರಿಗಳನ್ನೂ ಕಾನೂನು ಮಂತ್ರಿಗಳನ್ನೂ, ಜತೆಯಲ್ಲಿ ಬೇಟಿಯಾಗಿ ಸಮರ್ಪಿಸಿದ ಮನವಿಗೆ ಅರಾದಾಯಕ ಆಶ್ವಾಸನೆ ದೊರಕಿ ಒಂದು ತಿಂಗಳು ದಾಟಿದರೂ, ಸರಕಾರದಿಂದ ಸಮಾಧಾನಕರವಾದ ಹುಕುಂ ದೊರೆಯದ ಕಾರಣದಿಂದಲೂ, ಮೂತ್ರವಲ್ಲದೆ ಮನವಿಯಲ್ಲಿರುವ ಮುಖ್ಯ ವಿಷಯಗಳಾದ ತಾ. 22-5-60ರ ನಂತರ ನೇಮಿಸ್ಪಟ್ಟ 346 ಅಧ್ಯಾಪಕರ ಸರ್ವಿಸನ್ನು ಉಳಿಸಿಕೊಳ್ಳುವ ವಿಚಾರದಲ್ಲಿಯೂ, ಮೈಂಟೆನೆನ್ಸು ಗ್ರೆಂಟಿನ ವಿಚಾರದಲ್ಲಿಯೂ, ಕೆಲವು ಮಟ್ಟಿಗೆ ಮಾತ್ರ ಸರಕಾರದಿಂದ ಸಹಾಯದ ತಿದ್ದುಪಡಿಯಾಗಲಿಕ್ಕಿದೆ ಎಂಬ ವಾರ್ತೆಯು ತಿಳಿದು ಬಂದ ಕಾರಣ, ಜಿಲ್ಲಾ ಸಂಘದ ಅಧ್ಯಕ್ಷರ ಅಭಿಮತದಂತೆ, ಸಂಘದ ಕಾರ್ಯಕರ್ತರಾದ, ಶ್ರೀಗಳಾದ ಕುರುಕಾಲು ಗಣಪಯ್ಯಶೆಟ್ಟಿ, ಬನ್ನಾಡಿ ಸುಬ್ಬಣ್ಣ ಹೆಗ್ಡೆ, ಹಿರೇಬೆಟ್ಟು ರಾಮಚಂದ್ರ ಹೆಗ್ಡೆ, ಕೂಡಾ ತ್ರಿಸದಸ್ಯ ದ್ವಿತೀಯ ನಿಯೋಗವು ತಾ. 15—9—61ರಲ್ಲಿ ಬೆಂಗಳೂರಿಗೆ ಹೋಯ್ತು.

ತಾ. 16—9—61ನೇ ಸೂರ್ಯಾಸ್ತ ಅರೋಗ್ಯ ಸಚಿವ ಡಾ. ಕೆ. ಕೆ. ಹೆಗ್ಡೆ, ವಿದ್ಯಾ ಸಚಿವ ಶ್ರೀಅಣ್ಣಾರಾವ್‌ಗಣಮುಖಿಯವರನ್ನು ಬೇಟಿಯಾಗಿ ಪರಿಸ್ಥಿತಿಯ ನಿವೇದನೆ ಮಾಡಿಲಾಯ್ತು. ಸದ್ರಿ 316 ಮಂದಿ ಅಧ್ಯಾಪಕರೂ ಸರ್ವಿಸಿನಲ್ಲಿರುವಂತಾಗಬೇಕೆಂದೂ, ಮೈಸೂರು ರಾಜ್ಯಕ್ಕೆ ಏಕರೂಪವಾದ ವಿದ್ಯಾನಿಯಮವು ಜಾರಿಗೆ ಬರುವ ದರೆಗೆ ಪ್ರಚಲಿತ ಪದ್ಧತಿಯ ಮೈಂಟೆನೆನ್ಸು ಗ್ರಾಂಟು ಕೊಡಬೇಕೆಂದೂ ಇನ್ನಿತರ ವಿಷಯಗಳೆಲ್ಲಯೂ ಖಾಸಗಿ ಶಾಲೆಗಳಿಗೆ ಒದಗಿದ ತೊಂದರೆಗಳನ್ನು ಪರಿಚಯಿಸಬೇಕೆಂದೂ ನಿವೇದಿಸಿಕೊಳ್ಳಲಾಯ್ತು.

ಮೂನ್ಯ ವಿದ್ಯಾ ಸಚಿವರು ಸಾವಧಾನವಾಗಿ ವಿಚಾರಿಸಿ ಕಳೆದ 5 ತಿಂಗಳಲಾಗಾಯ್ತು ಉದ್ಯೋಗದ ಭರವಸೆಯೂ, ಸಂಬಳವೂ ಇಲ್ಲದೆ ಕೆಲಸ ಮಾಡುತ್ತಿರುವ ಮೇಲ್ಮಂಡ ಅಧ್ಯಾಪಕರ ವಿಚಾರ, ಮೈಂಟೆನೆನ್ಸು ಗ್ರಾಂಟು ಕೊಡಿಸುವ ವಿಚಾರ ಮತ್ತು ವೃತ್ತಿ ಶಿಕ್ಷಕರ ಏರಿಕೆಯ ಸಂಬಳ, ಅಧ್ಯಾಪಕರಿಗೆ ಹಂಸ್ಪತ್ರೆ ವೇತನ, ಮುಖ್ಯೋಪಾಧ್ಯಾಯರ ಎಲಿವೆನ್ಸು, ಈ ಎಲ್ಲಾ ವಿಚಾರಗಳಲ್ಲಿಯೂ, ಈ ತಿಂಗಳ ಅಂತ್ಯದೊಳಗೆ ಸಮಾಧಾನಕರವಾದ ಹುಕುಮನ್ನು ಕೊಡುವುದಾಗಿ ಭರವಸೆಯನ್ನಿತ್ತರು.

ಪುತ್ತೂರು ಡಿ. ಮು. ಕೋರ್ಟಿನಲ್ಲಿ.

S. C. 256/1961.

P. ಕೇಶವ ಹೆಗ್ಡೆ —ವಾದಿ.

S. ಶೇಷಪ್ಪ ರೈ, ಬಂಟ್ವಾಳ ಸರ್ಕಲ್ ಕೋಪರೇಟಿವ್ ಸೊಸೈಟಿಗಳ ಸೀನಿಯರ್ ಇನ್ಸ್‌ಪೆಕ್ಟರ್, ಬಂಟ್ವಾಳ. —ಪ್ರತಿವಾದಿ.

ಸದ್ರಿ ಪ್ರತಿವಾದಿಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಸುವುದೇನೆಂದರೆ

ವಾದಿಯು ತನಗೆ ಬರಬೇಕಾಗಿದ್ದ ಬಾಕಿಗಳನ್ನು ವಸೂಲಿ ಕುರಿತು ನಿಮ್ಮ ಮೇಲೆ ದಾಕ್ಲು ಮಾಡಿದ ಮೇಲ್ಕಂಡ ವ್ಯಾಜ್ಯವು ತಾ ೦೬ ಕು 6—10—1961ಕ್ಕೆ ನಿಮ್ಮ ಹಾಜರಾತಿ ಬಗ್ಗೆ ಇಟ್ಟಿರುವುದರಿಂದ ಅದೆ ನಿಮ್ಮದೇನಾದರೂ ಆಕ್ಷೇಪಣೆಗಳಿದ್ದಿ ಸದ್ರಿ ದಿನ್ಸ ಮಜ್ಕೂರು ಕೋರ್ಟು ಮುಂದೆ ನೀವು ಸ್ವತಹ ವ ವಕೀಲರ ದ್ವಾರಾ ಹಾಜರಾಗಿ ಉತ್ತರಾಹರಿಸಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರು ಹಾಜರಿಯಿಂದ ತೀರ್ಮಾನಿಸಲಾದೀತು ಎಂತ ಈ ಮೂಲ್ಕ ತಿಳಿಸಿಯದೆ.

(*Sd.*) B. Ishwara Bhat
Advocate for plff.

ಪುತ್ತೂರು, 20—9—1961.

ಲೋಕ ಸೇವಾ ವೃಂದದ 'ಭಾವಾಂಜಲಿ'—

ತಾ. 10-9-61ರಂದು ಮಂಗಳೂರು ಗಣಿತ ಹೈಸ್ಕೂಲಿನಲ್ಲಿ ಲೋಕ ಸೇವಾ ವೃಂದದಿಂದ ಪ್ರಕಟಿತವಾದ 'ಭಾವಾಂಜಲಿ' ಎಂಬ ಆಧ್ಯಾತ್ಮಿಕ ಕವನ ಸಂಕಲನವನ್ನು ಮಂಗಳೂರು ಸರಕಾರಿ ಟ್ರೈನಿಂಗ್ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ಯೆಸ್. ಆರ್. ರೋಹಿಜೇಕರ್, ಇವರ ಅಧ್ಯಕ್ಷತೆಯಲ್ಲಿ, ಉಡುಪಿಯ ಪೂರ್ಣಪ್ರಜ್ಞಾ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ಸಿ. ಯಂ. ಇನಾಂದಾರ್, ಇವರು ಪ್ರಕಾಶಪಡಿಸಿದರು. ಸಂಸ್ಥೆಯ ಅಧ್ಯಕ್ಷ ಶ್ರೀ ಯಂ. ನಾರಾಯಣ ಭಟ್ಟರು ಲೋಕ ಸೇವಾ ವೃಂದದ ಧ್ಯೇಯ ನಿರೂಪಣೆ ಮಾಡಿದನಂತ್ರ, ಶ್ರೀ ಕೆ. ದಿನಕರ ಕಾಮತ್ರ, ಶ್ರೀ ಕೆ. ಪಿ. ಮಹಾಬಲೇಶ್ವರ ಭಟ್ಟ, ಶ್ರೀ ಸೋಮಪ್ಪ ಮೈಲಿ ಮತ್ತು ಶ್ರೀ ವಿ. ಹರೀಶ ಎಂಬವರಿಗೆ ಸಮಾರಂಭದ ಅಧ್ಯಕ್ಷರಿಂದ ಲೋಕ ಸೇವಾ ವೃಂದದ ವಿದ್ಯಾರ್ಥಿ ವೇತನಗಳನ್ನು ವಿತರಣೆ ಮಾಡಿಲಾಯಿತು. ಶ್ರೀ ಇನಾಂದಾರರು ಮತ್ತು ಶ್ರೀ ರೋಹಿಜೇಕರರು ತಮ್ಮ ರಸವತ್ತಾದ ಭಾಷಣಗಳಲ್ಲಿ ಅನುಕ್ರಮವಾಗಿ ಇಂದಿನ ಭಾರತದಲ್ಲಿ ಆಧ್ಯಾತ್ಮಿಕತೆಯ ಅವಶ್ಯಕತೆಯೇನೆಂಬುದನ್ನೂ, ವಿದೇಶಗಳಿಗೆ ಕೂಡಾ ಭಾರತದ ಆಧ್ಯಾತ್ಮಿಕ ಸಂದೇಶವೇನೆಂಬುದನ್ನೂ ವರ್ಣಿಸಿದರು. ರೇಡಿಯೋ ಕಲಾವಿದರಾದ ಶ್ರೀ ಬಿ. ಪಿ. ಬಾಳಿಗರು ಮತ್ತು ಸಂಸ್ಥೆಯ ಕೆಲ ಸದಸ್ಯರಿಂದ ಕವಿತಾ ಗಾಯನ ಮತ್ತು ಅಮೇರಿಕದ ಆಧ್ಯಾತ್ಮಿಕ ಪ್ರಗತಿಯ ಕುರಿತಾದ ಸ್ಲೈಡ್‌ಗಳ ಪ್ರದರ್ಶನ ಮತ್ತು ಧನ್ಯವಾದ ಸಮರ್ಪಣೆಯೊಂದಿಗೆ ಮೊದಲಿನ ಕಾರ್ಯಕ್ರಮ ಅಂತ್ಯವಾಯಿತು. ತದನಂತರ ಶ್ರೀ ಶಂಕರ ನಾರಾಯಣ ಸಾಮಗರಿಂದ, 'ಪಾದುಕಾಪಟ್ಟಾಭಿಷೇಕ' ಎಂಬ ಹರಿಕಥಾ ಕಾಲಕ್ಷೇಪವನ್ನು ಏರ್ಪಡಿಸಲ್ಪಟ್ಟು.

ಶ್ರೀ ಚಂದ್ರಶೇಖರ ಹೆಗ್ಡೆಯವರು ಜರ್ಮನಿಗೆ—

ದ. ಕ. ಜಿಲ್ಲಾ ಬೋರ್ಡಿನ ಮಾಜಿ ಅಧ್ಯಕ್ಷ ಶ್ರೀ ಬಿ. ಮಂಜಯ್ಯ ಹೆಗ್ಡೆಯವರ ಪುತ್ರ ಶ್ರೀ ವಿ.ಚಂದ್ರಶೇಖರ ಹೆಗ್ಡೆ, ಬಿ.ಎಸ್‌ಸಿ., ಡಿ.ಎಸ್ಸ್.ಐ.ಟಿ. ಇವರು ಹೆಚ್ಚಿನ ಜ್ಞಾನಸಂಗಕ್ಕಾಗಿ ಬೊಂಬಾಯಿಯಿಂದ ಇದೇ ತಾ. 19ರಂದು ಟಿ. ವಿ. ರೋಮಾದಲ್ಲಿ ಪಶ್ಚಿಮ ಜರ್ಮನಿಗೆ ಜಲಪ್ರಯಾಣ ಮಾಡಿದರು. ಅವರು ಪಶ್ಚಿಮ ಜರ್ಮನಿಯಲ್ಲಿ ಎರಡು ವರ್ಷ ಕಾಲ ಅಲ್ಲಿಯ ಪ್ರಸಿದ್ಧ ಕೈಗಾರಿಕಾ ಸಂಸ್ಥೆಯಲ್ಲಿ ರೇಡಿಯೋ ಸಂಪರ್ಕ ಇಂಜಿನಿಯರಿಂಗ್‌ನಲ್ಲಿ ವಿಶಿಷ್ಟ ತರಬೇತಿ ಪಡೆಯಲಿರುವರು. ಅವರಿಗೆ ಈ ಬಗ್ಗೆ ಅದೇ ಸಂಸ್ಥೆಯಿಂದ ವಿದ್ಯಾರ್ಥಿ ವೇತನ ಕೂಡಾ ದೊರೆಯುವುದು.

ನಿರುದ್ಯೋಗಿ ಶಿಕ್ಷಕರ ಸಂಘದ ಸ್ಥಾಪನೆ—

ಬೆಳಗಾಮ್ ಜಿಲ್ಲಾ ನೇಗಿನ ಹಾಳವಲ್ಲಿ ಇದೇ ತಾ 15ರಂದು ನೌಕರಿ ಇಲ್ಲದೆ 2-3 ವರ್ಷಗಳಿಂದ ನವೆಯುತ್ತಿರುವ ಕಾರೇಜು ಖಾಸಾದ ಪ್ರಾಥಮಿಕ ಶಿಕ್ಷಕರ ಹಿತಸಾಧನೆಗಾಗಿ ಡಾ ಹೆಗ್ಡೆಯವರ ಹಿರಿತನದಲ್ಲಿ ಬೆಳಗಾಮ್ ಜಿಲ್ಲಾ ನಿರುದ್ಯೋಗಿ ಶಿಕ್ಷಕರ ಸಂಘವನ್ನು ಸ್ಥಾಪಿಸಲಾಯಿತು. ತಾತ್ಕಾಲಿಕ ಕಾರ್ಯಕಾರಿ ಮಂಡಳಿಯನ್ನು ಆರಿಸಿದ ಮೇಲೆ ಮೈಸೂರು ಸರಕಾರಕ್ಕೂ, ಸಂಬಂಧಪಟ್ಟವರಿಗೂ ತಮ್ಮ ಸಂಕಷ್ಟಗಳನ್ನು ತಿಳಿಸಬೇಕೆಂದೂ ಸದ್ಯವೇ ಜಿಲ್ಲಾ ಸಮ್ಮೇಳನ ನಡೆಯಬೇಕೆಂದೂ ನಿರ್ಣಯಿಸಲಾಯಿತು.

ಕರ್ನಾಟಕ ಹಿಂದೂ ಮಹಾಸಭಾ ಸಮ್ಮೇಳನದ ಸ್ವಾಗತ ಸಮಿತಿಯ ಕೆಲ ಉಪಸಮಿತಿಗಳ ಸಭೆಯು—

ಇದೇ ತಾ. 24 ರಂದು ಪೆಂಟಿಲ್ಲೇಂಡ್ ಪೇಟೆಯಲ್ಲಿ ಜರಗಿ ಸಮ್ಮೇಳನದ ದಿನ, ಸ್ಥಳಗಳನ್ನು ಮುಂದಿನ ಸಭೆಯಲ್ಲಿ ನಿರ್ಣಯಿಸಬೇಕೆಂದಾಯಿತು. ಜಿಲ್ಲೆಯ ಎರಡು ಲೋಕಸಭಾ ಸ್ಥಾನಗಳಿಗೂ ಹುರಿಯಾಳುಗಳನ್ನು ನಿಲ್ಲಿಸಬೇಕೆಂದಾಯಿತು. ವಿಧಾನ ಸಭಾ ಸ್ಥಾನತಿರಿಗಳ ಸಂಖ್ಯೆ, ಅಂತಿಮ ನಿರ್ಧಾರವನ್ನು ಪ್ರಾಂತೀಯ ಮಹಾಸಭಾ ಕಾರ್ಯಕಾರಿ ಮತ್ತು ಚುನಾವಣಾ ಸಮಿತಿಯ ಸಭೆಯಲ್ಲಿ ಕೈಗೊಳ್ಳಬೇಕೆಂದಾಯಿತು.

ಎ. ಬಿ. ಶೆಟ್ಟಿ ಸ್ಮಾರಕ ವಿದ್ಯಾರ್ಥಿ ಭವನ—

ವಿದ್ಯಾರ್ಥಿಗಳು ತಮ್ಮ ಜೀವನದ ಮಾರ್ಗವನ್ನು ಹಿಡಿಯಲು ಇನ್ಟ್ರೂಟರನ್ನು ಅಂಗಲಾಚಿ ಬೇಡುವ ಕಡೆ ಹೋಗದೆ ತಮ್ಮ ಸ್ವಶಕ್ತಿಯಿಂದ ಸ್ವಾವಲಂಬಿಗಳಾಗಲು ಈ ಗಿಂದಿನ ಪ್ರಯತ್ನಿಸಬೇಕು. ದೊಡ್ಡವರ ಮಕ್ಕಳು, ಮೊಮ್ಮಕ್ಕಳೆಂದು ಹೇಳಿಕೊಂಡು ಕೆಲಸ ಗಿಟ್ಟಿಸಿಕೊಳ್ಳುವ ಕಾಲ ಸಂದು ಹೋಯಿತು. ಯೋಗ್ಯತೆಯ ಮೇಲೆ ದೆಕ್ಷತೆಯ ಮೇಲೆ ಜನರ ಅಭ್ಯುದಯ ಇಂದು ನಡೆಯುತ್ತಿದೆ. ಇಂತಹ ಕಾಲದಲ್ಲಿ ಸೈಪೋಟಿಗೆ ನಿಂತು ತಮ್ಮ ಯೋಗ್ಯತೆಗನುಸಾರವಾದ ಸ್ಥಾನಗಳನ್ನೂ ಹೊಂದಲು ವಿದ್ಯಾರ್ಥಿಗಳಾದ ನೀವು ಇಂದಿನಿಂದಲೇ ಪ್ರಯತ್ನಿಸಬೇಕೆಂದು ಶ್ರೀಮತಿ ಯಶೋಧರಾ ದಾಸಪ್ಪನವರು ವಾದಿವಿಲಾಸನೊಳಲ್ಲಾದ ಯಾದವಗಿರಿ ಬಡಾವಣೆಯಲ್ಲಿರುವ ಎ ಬಿ. ಶೆಟ್ಟಿ ಸ್ಮಾರಕ ವಿದ್ಯಾರ್ಥಿನಿಲಯದ ವಿದ್ಯಾರ್ಥಿ ಸಂಘದ ಆರಂಭ ಭಾಷಣ ಮಾಡುತ್ತಾ ವಿದ್ಯಾರ್ಥಿಗಳಿಗೆ ಹಿತವಚನವನ್ನಿತ್ತರು. ಶ್ರೀಮತಿಯವರು ತಮ್ಮ ಭಾಷಣವನ್ನು ಮುಂದುವರಿಸುತ್ತಾ ವಿದ್ಯಾರ್ಥಿಗಳು ತಮ್ಮ ಬಾಹ್ಯ ಆಡಂಬರದ ಕಡೆಗೆ ಹೆಚ್ಚು ಗಮನ ಕೊಟ್ಟು ಕೃತಕ ಜೀವನ ಸಾಗಿಸುವುದನ್ನೂ ಬಿಟ್ಟು ನಿಜತ್ವದ ಅರಿವು ಮಾಡಿಕೊಂಡು ಸತ್ಯದ ದಾರಿಯನ್ನು ಹಿಡಿದು ಮುಂದುವರಿಯಬೇಕು. ಮಗ ದೂರದ ಊರಿನಲ್ಲಿ ವಿದ್ಯಾರ್ಜನೆ ಮಾಡುತ್ತಾನೆಂದು ಕಷ್ಟಪಟ್ಟು ಸಂಪಾದಿಸಿದ ಹಣವನ್ನು ಪ್ರತಿ ತಿಂಗಳೂ ತಪ್ಪದೆ ಕಳುಹಿಸುತ್ತಿರುವ ಮಾತಾಪಿತೃಗಳನ್ನು ಮರೆಯದೆ ಅವರಲ್ಲಡಗಿರುವ ಆಸೆ ಆಕಾಂಕ್ಷೆಗಳಿಗೆ ರೋಷಪಾರದಂತಿರಬೇಕು. ಮನಸ್ಸಿನಲ್ಲಿ ಕನಸಿನ ರಾಜ್ಯವನ್ನು ಕಟ್ಟಲು ಹೋಗದೆ ಸಾತ್ವಿಕ ಜೀವನವನ್ನು ಸಾಗಿಸಿಯಶಸ್ಸನ್ನು ಗಳಿಸುವುದರಕಡೆ ಮನಸ್ಸು ಮಾಡಬೇಕೆಂದು ಹೇಳಿ ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳಿಗೆ ಸಕಲ ಸನ್ಮಂಗಳ ಉಂಟಾಗಲೆಂದು ಹಾರೈಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ವಿದ್ಯಾರ್ಥಿ ಸಂಘದ ಅಧ್ಯಕ್ಷ ಶ್ರೀ ಎಂ. ಎಸ್. ಶ್ರೀಕಂಠ ಅವರು ಮಾತನಾಡುತ್ತ ದೇಶದಲ್ಲಿ ನುಡಿದಂತೆ ನಡೆವ ಜನ ಹೆಚ್ಚಾದರೆ ದೇಶ ನಿರೀಕ್ಷಿಸಿದಕ್ಕಿಂತಲೂ ಮುನ್ನ ಪ್ರಗತಿಯನ್ನು ಹೊಂದುವುದೆಂದರು. ಕಾಂಗ್ರೆಸ್ ಸ್ವತಂತ್ರಪೂರ್ವ ತಯ್ಯಾರಿಸಿದ ಯೋಜನೆಯಲ್ಲಿ ಶೇಕಡಾ 50ರಷ್ಟನ್ನಾದರೂ ಜಾರಿಗೆ ತಂದಿದ್ದರೆ ಈವರೆಗೆ ನಾವು ಎಷ್ಟೋ ಪ್ರಗತಿಯನ್ನು ಸಾಧಿಸುತ್ತಿದ್ದೇವೆಂದರು. ಪ್ರಾರಂಭದಲ್ಲಿ ಪ್ರಾರ್ಥನೆಯಾದ ನಂತರ ನಿಲಯದ ಅಡಳಿತ ಮಂಡಳಿಯ ಕಾರ್ಯದರ್ಶಿ ಶ್ರೀ ಎ. ರಾಮಣ್ಣನವರು ಸ್ವಾಗತ ಭಾಷಣ ಮಾಡಿದರು ಕಾರ್ಯದರ್ಶಿ ಶ್ರೀ ವೈ. ಸಂಜೀವ ರೈಯವರು ಶುಭಸಂದೇಶಗಳನ್ನು ಓದಿದರು. ಉಪಾಧ್ಯಕ್ಷ ಶ್ರೀ ಹೆಚ್. ತಿಮ್ಮಪ್ಪ ಭಂಡಾರಿಯವರು ವಂದನೆಗಳನ್ನರ್ಪಿಸಿದರು.

ವಿಧಾಯ ಸತ್ಕಾರ—

ಮೈಸೂರು ಸ್ಟೇಟ್ ಇಲೆಕ್ಟ್ರಿಸಿಟಿ ಉಡುಪಿ ಆಫೀಸಿನಲ್ಲಿ ಜೂನಿಯರ್ ಇಂಜಿನಿಯರರಾಗಿದ್ದ ಮತ್ತು ಆಹುದ್ದೆಗೆ ರಾಜಿನಾಮೆಯಿತ್ತು ಕೇರೋಸ್ಕರ ಕಂಪನಿಗೆ ದೊಡ್ಡ ಹುದ್ದೆಯಲ್ಲಿ ಹೋಗುವ ಶ್ರೀ ಯು. ರಮೇಶ್ ಭಟ್ಟ ಮತ್ತು ಉಡುಪಿ ಇಲೆಕ್ಟ್ರಿಕಲ್ ಆಫೀಸಿನ ಮೇಸ್ತ್ರಿಯಾಗಿದ್ದು ಈಗ ಗಂಗೊಳ್ಳಿಗೆ ವರ್ಗಾಯಿಸಲ್ಪಟ್ಟ ಶ್ರೀ ಬಿ. ಬಸವರಾಜರನ್ನು ಬೀಳ್ಕೊಡುವ ಸಮಾರಂಭವು ತಾ. 25ರಲ್ಲಿ ಅಸಿಸ್ಟಾಂಟ್-ಇಲೆಕ್ಟ್ರಿಕಲ್ ಇಂಜಿನಿಯರ್ ಶ್ರೀ ಎಚ್. ಎಸ್. ನಾಯಕರವರ ಅಧ್ಯಕ್ಷತೆಯಲ್ಲಿ ಜರಗಿತು. ಲಘುಸುಪಾರದ ನಂತರ ನಡೆದ ಸಭೆಯಲ್ಲಿ ಶ್ರೀಗಳಾದ ಗೋಪಿನಾಥ ರಾವ್, ಶಿತಾಡಿ ವಿಠಿಯಂ, ಪಿಂಟೊ, ಕೃಷ್ಣಮೂರ್ತಿ, ಪಿ. ಎಸ್. ಮೂರ್ತಿಭಟ್ಟ, ವೀರಣ್ಣ, ಸಂಪತ್ ಕುಮಾರ್, ಗೋಪಿಂದ ನಾಯಕ್, ಪಿಟ್ಟಲ್ ಹೆಗ್ಡೆ-ಮೊದಲಾದವರು ಬೀಳ್ಕೊಡಲಿರುವವರ ಗುಣಗಾನಮಾಡಿ ಅವರ ಸೇವೆಯನ್ನು ಸ್ಮರಿಸಿದರು. ಅಧ್ಯಕ್ಷರ ಭಾಷಣದ ತರುವಾಯ ಶ್ರೀ ಸಿ. ಎಸ್. ಚಂದ್ರಶೇಖರಯ್ಯರು ಧನ್ಯವಾದ ಸಮರ್ಪಿಸಿದರು.

ಕುಲ್ಕುಂದ ಜಾನುವಾರು ಸಂತೆ—

ದ. ಕ. ಜಿಲ್ಲಾ ಪುತ್ತೂರು ತಾಲ್ಲುಕು ಸುಬ್ರಮಣ್ಯ ಗ್ರಾಮದ ಕುಲ್ಕುಂದದಲ್ಲಿ ವರ್ಷಂಪ್ರತಿ ಜರಗುವ ಜಾನುವಾರು ಸಂತೆಯು ಇದೇ 1961 ಇಸವಿ ನವಂಬರ್ ತಾ. 22ರಿಂದ ದಶಂಬರ 7ರ ವರೆಗೆ ಜರಗುವುದು. ಅಂದರೆ ಸಂತೆಯು ಕಾರ್ತಿಕ ಪೂರ್ಣಿಮೆಯ ದಿನ ಪ್ರಾರಂಭವಾಗಿ, ಕಾರ್ತಿಕ ಅಮಾವಾಸ್ಯೆಯ ದಿನದ ವರೆಗೆ, ಅಂದರೆ ಸುಬ್ರಮಣ್ಯ ದೀಪೋತ್ಸವದ ತನಕ ಜರಗುವುದು ಎಂದು ಪುತ್ತೂರು ಅಸಿಸ್ಟಾಂಟ್ ಕಮಿಶನರ್ ಶ್ರೀ ಮೀರ್ ಮಹಮೂದ್ ಅವರು ತಿಳಿಸುತ್ತಾರೆ.

ಎಂಟು ಪುಟಗಳು

ಕೆಲವೊಂದು ಅನಾನುಕೂಲತೆಗಳಿಂದಾಗಿ ಈ ವಾರಿಯ ಸಂಚಿಕೆಯಲ್ಲಿ ಬರೇ 8 ಪುಟಗಳನ್ನಷ್ಟೇ ಕೊಡುವಂತಾದುದಕ್ಕೆ ಬೇಸರಪಡುತ್ತೇವೆ. —ಮೆನೇಜರ್.

ದ. ಕ. ಸ್ಪೆಶಲ್ ಅಸಿಸ್ಟಾಂಟ್ ಕಮಿಶನರ ಕೋರ್ಟಿನಲ್ಲಿ. (ಟೆನೆನ್ಸಿ)

O. P. No. 567/1961

ನೇತ್ರಾವತಿ ಯೂನಿ ಭೂಗಿರೇತಿ ಸಜ —ಅರ್ಜಿದಾರರು

ಮತ್ತು

ಸಿದ್ದು ಸಟ್ಟಿ, ದೇಜಪ್ಪ ಸೆಟ್ರಿ ಅಳಿಯ ಕಾರ್ಕಳ ತಾಲ್ಲುಕ ಕಡಂಬಿ ಗ್ರಾಮದಲ್ಲಿರುವವನ-ಎದ್ರಿಯಾದ ನಿಮಗೆ ಈ ಮೂಲಕ ತಿಳಿಸುವುದೇನೆಂದ್ರೆ:—

ನೀವು ಅರ್ಜಿದಾರರೆಬಳಿಗೆ ಜಾಲಗೇಣಿಯ ಪಕ್ಕಿನಿಂದ ಅನುಭವಿಸಿ ಬರುವ ಕಡಂದರೆ ಗ್ರಾಮದ ಅಸಿ ಬಾಬ್ತು ನಿಮ್ಮಿಂದ ಬರತಕ್ಕ ತಾ. 31-3-1961ಕ್ಕೆ ಅಂತ್ಯವಾಗುವ ನಾಲ್ಕು ವರುಷಗಳ ಜಾಲ ಗೇಣಿ ಗೇಣಿ ಬಡ್ಡಿ ವೆಗ್ಗರೆ ರೂಪಾಯಿ 126-10ನ್ನು ನೀವು ವಸೂಲು ಕೊಡದೆ ಬಾಕಿವಾಡಿ ಕೊಂಡಿದ್ದರಿಂದ ಸದ್ರಿ ಆಸ್ತಿಯನ್ನು ಸ್ವಾಧೀನತೆ ಕೇಳಿ ಅರ್ಜಿದಾರರು ದ್ಯಾಕ್ಲು ಮಾಡಿದ ಸದ್ರಿ ಅರ್ಜಿಯು ತಾವೀಕು. 16-10-61ಕ್ಕೆ ನಿಮಗೆ ಆಕ್ಷೆರೆ ನೋಟೀಸಿನ ಬಗ್ಗೆ ಕಾರ್ಕಳ ಪೆಶ್ಕಾರ್ ಕೋರ್ಟಿನಲ್ಲಿ ಇಟ್ಟಿದೆ. ಆಕ್ಷೇಪ ಇದ್ರೆ ಸದ್ರಿ ದಿನ ಬೆಳಿಗ್ಗೆ 11ಘಂಟೆಗೆ ಕಾರ್ಕಳ ಪೆಶ್ಕಾರ್ ಕೋರ್ಟಿನಲ್ಲಿ ಸದ್ರಿ ಕೋರ್ಟು ಮುಂದೆ ಹಾಜ್ರಾಗಿ ಉದಹರಣೆ ಕೊಡತಕ್ಕದ್ದು ತಪ್ಪಿದರೆ ನಿಮ್ಮ ಗೈರು ಹಾಜ್ರಿಯಲ್ಲಿ ಅರ್ಜಿ ತೀರ್ಮಾನ ಆಗುವುದು ಎಂತ ಕೋರ್ಟು ಹುಕುಂ ಪ್ರಕಾರ ತಿಳ್ಸಿವೆ

K. V. Kamath
Advocate Petitioner.

Karkal25—9—61

ಕೊಪ್ಪೊರೇಶನ್ ಬೇಂಕ್

ಠೇವಣಾತಿಗಳ ಮೇಲಿನ ಸಾಲಿಯಾನ್ ಶೇಕಡಾ ಬಡ್ಡಿ ದರಗಳು:

3	ಸೇವಿಂಗ್ಸ್ ಬೇಂಕ್ ಖಾತೆ
3 ಯಿಂದ 5½	ಕಾಯಂ (ವಿವಿಧಾವಧಿಗಳಿಗೆ)
5½	ವಜ್ರೋತ್ಸವ
5	ಕ್ಯುಮುಲೇಟಿವ್

ದಿ. ಕೆನರಾ ಬೇಂಕಿಂಗ್ ಕೊಪ್ಪೊರೇಶನ್ ಲಿಮಿಟೆಡ್

(ಸ್ಥಾಪನೆ: 1906)

ರಿಜಿಸ್ಟರ್ಡ್ ಆಫೀಸು: ಉಡುಪಿ | ಅಡಳಿತ ಆಫೀಸು: ಮಂಗಳೂರು

ಪ್ರೇಮ ಸಾಧನೆಯಿಂದ ಪರಮಾತ್ಮನ ಪ್ರಾಪ್ತಿ

? (೩ನೇ ಪುಟದಿಂದ)

ಜ್ಞಾ ಪ್ರೇಮಯಜ್ಞವೇ ಆಗಿರುವುದು.

ಪ್ರೇಮದ ಒಂದು ಪಾರ್ಶ್ವದಲ್ಲಿ ವ್ಯಕ್ತಿಗತವಾದ ಅಸ್ತಿತ್ವವಿದೆ. ಇನ್ನೊಂದು ಪಾರ್ಶ್ವದಲ್ಲಿ ವ್ಯಕ್ತಿತ್ವಗತ ಯಾ ಭಾವನಾತ್ಮಕ ಅಸ್ತಿತ್ವವಿರುವುದು.

ಒಂದೆಡೆಯಿಂದ, "ನಾನು" ಎಂಬ ನಿಶ್ಚಿತವಾದ ಭಾವನೆ ಇದ್ದರೆ, ಮತ್ತೊಂದು ಕಡೆಯಿಂದ "ನಾನು ಅಲ್ಲ" ಎಂಬ ಭಾವನೆ ಇರುವುದು. ಆದರೆ ಈ ನಾನು ಎಂಬುದು, ಇಲ್ಲದಿದ್ದರೆ, ಪ್ರೇಮದ ಅಸ್ತಿತ್ವವೇ ಉಳಿಯಲಾರದು. ಕೇವಲ "ನಾನು" ಎಂಬ ಪ್ರಬಲವಾದ ಒಂದೇ ಭಾವನೆಯಲ್ಲಿಯೇ ಪ್ರೇಮವು ಹೇಗೆ ತಾನೆ ಉಳಿಯಬಲ್ಲುದು?

ಪ್ರೇಮದಲ್ಲಿ ಮೋಕ್ಷ—ಬಂಧನ, ಇವೆರಡೂ ಪರಸ್ಪರ ವಿರೋಧಿಗಳಾಗಿವೆ. ಏಕೆಂದರೆ, ಪ್ರೇಮವು ಇವೆರಡು ಸ್ಥಿತಿಗಳಿಗೂ ಚರಮಾಭ್ಯೇಯವಾಗಿದೆ. ಈಶ್ವರನು ಒಂದು ವೇಳೆ, ಸರ್ವಥಾ ಮುಕ್ತ ಭಾವನ್ನು ಇರಿಸುತ್ತಿದ್ದರೆ, ಸೃಷ್ಟಿಯ ನಿರ್ಮಾಣವೇ ಅಸಂಭವನಾಗುತ್ತಿತ್ತು. ಸೃಷ್ಟಿಯಲ್ಲಿ ಅಸೀಮವು ತನ್ನನ್ನು ಒಂದು ಸೀಮೆಯೊಳಗೆ ಬಂಧಿಸಿಕೊಂಡಿದೆ. ಪ್ರೇಮದಲ್ಲಿ ಸೀಮಿತ ಮತ್ತು ಅಸೀಮಿತ ಇವೆರಡೂ, ಒಂದಾಗಿ ಇರುವುವು.

ಇದೇ ರೀತಿ ನಾವು ಮುಕ್ತಿ ಮತ್ತು ಬಂಧನ, ಈ ವಿಷಯದ ಚರ್ಚೆ ಮಾಡಿದ್ದೇ ಆದರೆ, ಇದು ಕೇವಲ ಶಬ್ದಗಳ ಆಟವಾಗಿ, ತೋರುವುದು. ನಾವು ಅಪೇಕ್ಷಿಸುವುದು ಕೇವಲ ಮುಕ್ತಿಯನ್ನೇ ಅಲ್ಲ; ಬಂಧನವನ್ನೂ ಅಪೇಕ್ಷಿಸುತ್ತೇವೆ. ಸರ್ವ ವಿಷಯಗಳನ್ನರಿತು ಅವುಗಳ ಸೀಮೆಯನ್ನು ಸುಲಭವಾಗಿ ದಾಟಲು ಪ್ರೇಮವು ಅಪೇಕ್ಷಿಸುತ್ತಿರುವುದು; ಪ್ರೇಮಕ್ಕಿಂತ ಮಿಗಿಲಾದ ಮತ್ತಾವ ಸ್ವಾತಂತ್ರ್ಯವೂ ಇರಲಾರದು. ಪ್ರೇಮಕ್ಕಿಂತ ಬಲವಾದ ಬಂಧನವೂ ಇರಲಾರದು. ಪ್ರೇಮದ ಬಂಧನವೂ ಕೂಡ ಮೋಕ್ಷದಂತೆಯೇ ಯಶಸ್ವಿಯಾಗಿ ಉಜ್ವಲವಾಗಿರುವುದು.

ವೈಷ್ಣವ ಮತಾನುಯಾಯಿಗಳ ಅಭಿಪ್ರಾಯವು-"ಈಶ್ವರನು ಸ್ವಯಂ ಮನುಷ್ಯನ ರೂಪದಿಂದ ಬಂದಿಧಿಕೊಂಡಿರುವನು. ಇದರಲ್ಲೇ ಮಾನವನ ಯಶಸ್ಸು ಅಡಗಿದೆ. ಸೀಮಿತವಾದ ಜಗತ್ತಿನ ಅದ್ಭುತ ಸಂಗೀತ ಸ್ವರದ ಪ್ರತಿಯೊಂದು ಧ್ವನಿಯಲ್ಲಿಯೂ,ಅತನು ತನ್ನನ್ನು ಬಂಧಿಸಿಕೊಂಡಿರುವನು. ಆದುದರಿಂದಲೇ ಈ ಸುಂದರ ಸಂಗೀತದಲ್ಲಿ ಪ್ರೇಮವು ತುಂಬಿಕೊಂಡಿರುವುದು. ನಮ್ಮ ಹೃದಯವನ್ನು-ಮೋಹಿಸುವುದೇ ಸೌಂದರ್ಯದ ಪ್ರಯೋಜನ. ಈ ಸೌಂದರ್ಯವೇ ನಮಗೆ ಸಂಕೇತದ ಮೂಲಕ-"ಸೃಷ್ಟಿಯ ಅಂತಿಮ ಪ್ರಯೋಜನವು, ಪ್ರಭುಶಕ್ತಿಯ ಪ್ರದರ್ಶನ ಮಾತ್ರವಲ್ಲ, ಪ್ರತಿಯೊಂದು ವರ್ಣದಿಂದ, ಪ್ರತಿಯೊಂದು ಸಂಗೀತದಿಂದ ಮೂಡಿ ಬರುವ ಪ್ರತಿಯೊಂದು ಸುಂದರ ರೂಪವು ಪ್ರೇಮಸಂದೇಶವನ್ನು ತರುತ್ತಿರುವುದು. ನಾವು ಬೇಕಾದರೆ, ಇದನ್ನು ಉಪೇಕ್ಷಿಸುತ್ತಿರಬಹುದು. ಆದರೆ, ಸೃಷ್ಟಿಯ ಸೌಂದರ್ಯವು ನಮ್ಮ ಸ್ವಾತಂತ್ರ್ಯವನ್ನು ಪೂರ್ಣವಾಗಿ ಗೌರವಿಸುವುದು. ಯಾವದೇ ರೀತಿಯ ಬಂಧನವೆಂಬುದು ನಮ್ಮ ಮನಸ್ಸಿಗೆ ಇರುವುದಿಲ್ಲ ಅದು ನಮ್ಮಿಂದ ಪ್ರೇಮವನ್ನು ಅಪೇಕ್ಷಿಸುವುದು. ಪ್ರೇಮದಲ್ಲಿ ಬಂಧನವೆಂಬುದೇ ಇರಲಾರದು. ಈ ಬಂಧನದ ಪ್ರೇರಣೆಯು ಮನುಷ್ಯನಿಗೆ ಪ್ರಿಯ ಮಾತ್ರವಲ್ಲ; ಅನಂದದಾಯಕವೂ ಆಗಿರುವುದು.

ಸೃಷ್ಟಿಯಲ್ಲಿ ಸರ್ವತ್ರವಾಗಿ ಆನಂದವೇ ತುಂಬಿಕೊಂಡಿರುವುದು. ಪೃಥ್ವಿಯ ನಾಜೂಕಾದ ಹಸಿರು ಹುಲ್ಲಿನ ಮೇಲೆ-ನೀಲಾಕಾಶದ ಪವಿತ್ರತೆಯಲ್ಲಿ, ವಸಂತಕಾಲದ ಉನ್ಮತ್ತ ಭಾವದಲ್ಲಿ ಸೌಂದರ್ಯದಾನದಲ್ಲಿ ಹೇಮಂತಕಾಲದ ಕಠೋರತೆಯಲ್ಲಿ ತಪಸ್ಸಿನಲ್ಲಿ ಮನುಷ್ಯನ ಶರೀರದ ಅಲೌಕಿಕವಾದ ಸಮಾನತೆಯ ರೂಪದಲ್ಲಿ ಜೀವನದಲ್ಲಿ ಶಕ್ತಿಪ್ರಯೋಗಗಳಲ್ಲಿ ಜ್ಞಾನ ಸಾಧನೆಯಲ್ಲಿ ಪಾಪದೊಡನೆ ನಡೆಯುವ ಹೋರಾಟದಲ್ಲಿ ಪರೋಪಕಾರದಲ್ಲಿ ಮತ್ತು ಪ್ರಾಣತ್ಯಾಗದಲ್ಲಿ, ಹೀಗೆ ಆನಂದವು ಎಲ್ಲೆಲ್ಲಿಯೂ, ತುಂಬಿಕೊಂಡೇ ಇರುವುದು.

ಉಪಯೋಗ ವಾದದ ಎಲ್ಲಾ ಯುಕ್ತಿಗಳೂ ಇದರ ಮುಂದೆ, ನಿರರ್ಥಕ, ಮತ್ತು ಅತಿಶಯೋಕ್ತಿಯಂತೆ ಭಾಸವಾಗುತ್ತವೆ. ನಿಯಮಗಳ ಬಂಧನವೂ ಕೂಡ ಕೇವಲ ಪ್ರೇಮದ ಭಾಷೆಯ ಮೂಲಕ ಹೇಳಲ್ಪಡುವುದು. ಪ್ರೇಮ — ಮತ್ತು ನಿಯಮ, ಇವುಗಳ ಸಂಬಂಧವು ದೇಹ ಮತ್ತು ಆತ್ಮಗಳಿಗಿರುವ ಸಂಬಂಧದಂತಿರುವುದು. ನಾವು ನಮ್ಮ ಆತ್ಮಗತ ಸಂಬಂಧವನ್ನು ವಿಶ್ವದೊಡನೆ, ಮತ್ತು ವಿಶ್ವಾತ್ಮನ ಸಂಬಂಧವನ್ನು—ವಿರಾಟ್ ರೂಪೀ ಶಕ್ತಿಯೊಡನೆ, ಏಕೈಕವಾಗಿ ತಿಳಿದು, ಯಾವಾಗ ಇದರ ಅನುಭವ ಪಡೆಯುವೆವೋ ಆಗ ನಮಗೆ, ಸರ್ವತ್ರವೂ ಆನಂದವೇ ತುಂಬಿಕೊಂಡಿರುವುದು, ಭಾಸವಾಗುವುದು.

—(ಸಶೇಷ)

ದೊಣ್ಣೆ ಹಿಡಿದವನಿಗೆ ಕೋಣ

ದೇಶಭಕ್ತಿ ಮತ್ತು ದೇಶದ್ರೋಹಗಳ ನಡುವಿರುವ ಅಂತರವೇನು? ಹಾಗೆಯೇ ವಿದ್ರೋಹ ಮತ್ತು ಕ್ರಾಂತಿಗಳ ನಡುವೆ ಯಾವ ಭಿನ್ನತೆಯಿದೆ? ರಹಸ್ಯ ಬೇದಿಗೂ ಗುಪ್ತಚಾರರಿಗೂ ವ್ಯತ್ಯಾಸವೇನು? ಎಂಬ ಪ್ರಶ್ನೆಗಳು ಪ್ರಶ್ನೆಗಳಾಗಿಯೇ ಉಳಿಯುತ್ತವೆ.

ಅದೆಷ್ಟು ವಿವೇಚಿಸಿದರೂ ಅಂತರವೇನೆಂಬುದು ಹೊಳೆಯುವುದಿಲ್ಲ. ಹದಿನೈದು ತಿಂಗಳುಗಳಿಗೆ ಮೊದಲು ತುರ್ಕಿಯಲ್ಲಿ ಪ್ರಧಾನ ಮಂತ್ರಿಯಾಗಿದ್ದವರನ್ನು ಈಗ ಗಲ್ಲಿಗೇರಿಸಲಾಯಿತು. ದೇಶ ದ್ರೋಹದ ಆರೋಪವನ್ನವರು ಹೊರಬೇಕಾಯ್ತು. ಕಳೆದ ವರ್ಷ ಅವರು ಪರಮ ದೇಶಭಕ್ತರಾಗಿದ್ದರು; ಆದುದರಿಂದಲೇ ಅವರು ಪ್ರಧಾನ ಮಂತ್ರಿಯಾಗಿ ಉಳಿದಿದ್ದರು. ಈ ವರ್ಷ ದೊಡ್ಡ ದೇಶದ್ರೋಹಿಯಾದರು; ಎಂತಲೇ ಜೀವಕ್ಕೆ ಸಂಚಕಾರ ತಂದುಕೊಂಡರು. ಒಬ್ಬನೇ ವ್ಯಕ್ತಿ ಒಂದೇ ಪ್ರಕಾರವಾಗಿ ಕೆಲಸ ಮಾಡುತಿದ್ದರೂ ಅದು ಒಂದು ಬಾರಿ ದೇಶಪ್ರೇಮವಾಗುವುದು, ಮತ್ತೊಮ್ಮೆ ದೇಶದ್ರೋಹವಾಗುವುದು.

ತುರ್ಕಿಯ ಪ್ರಶ್ನೆಯನ್ನೇ ಎತ್ತಿಕೊಂಡರೆ, ಈಗಿನ ಆಡಳಿತಗಾರರು ಸೈನಿಕ ಕಾರ್ಯಕ್ರಮ ಸೋತು ಬಯೊರ್ ಮತ್ತು 'ಮೆಂಡೆರಿಸರು ಸಫಲರಾಗುತಿದ್ದರೆ, ಅವರು ಇವರನ್ನು ವಿದ್ರೋಹಿಗಳೆನ್ನುತಿದ್ದರು; ಆದರೆ, ಅವರು ಸೋತು ಹೋದುದರಿಂದ, ಇವರ ಕಾರ್ಯವನ್ನು ಕ್ರಾಂತಿಯೆಂದು ಕರೆದರು.

ಈಜಿಪ್ತದಲ್ಲಿದ್ದ ಅರಸ ಫರೂಕರ ವಿರುದ್ಧ ಜನರಲ್ ನಗೀಬರ ನೇತೃತ್ವದಲ್ಲಿ ನಡೆದ ವಿದ್ರೋಹ ಸಫಲವಾಯಿತು; ಆದುದರಿಂದಲೇ ಅದನ್ನು ಕ್ರಾಂತಿಯೆಂದು ಕರೆಯಲಾಯ್ತು. ಆದರೆ, ನಗೀಬರು ಇಂದು ಕಾಲನದಿಯಲ್ಲಿ ಮುಳುಗಿದ್ದಾರೆ, ಕ್ರಾಂತಿಯ ಅಗ್ರದೂತ ಗಮಾಲ್ ನಸ್ಸೇರರಾಗಿದ್ದಾರೆ. ಹಾಗಿರುವಾಗ ವಿದ್ರೋಹ ಮತ್ತು ಕ್ರಾಂತಿಗಳ ಅಂತರವನ್ನು ಗುರುತಿಸುವುದಾದರೂ ಹೇಗೆ?

ಸ್ವದೇಶಕ್ಕೆ ಸೂಚನೆಗಳನ್ನು ಏಕತ್ರಗೊಳಿಸುವ ಗುಪ್ತಚಾರಪ್ರಶಂಸಾರ್ಹನಾಗುತ್ತಾನೆ ಅತ ಶತ್ರು ದೇಶದಲ್ಲಿ ಬಂಧಿತನಾಗಿ ಪತ್ತೇದಾರಿಕೆ ಇಲ್ಲವೇ ಶತ್ರು ದೇಶ ಭೇದನದ ಆರೋಪದ ಮೇಲೆ ಅಪರಾಧಿಯೆನಿಸಿದರೆ, ಅತ ಉಗ್ರೋಗ್ರ ದಂಡನೆಗೆ ಒಳಗಾಗುತ್ತಾನೆ. ಒಬ್ಬ ವ್ಯಕ್ತಿ ಒಂದೇ ಕೆಲಸವನ್ನು ಮಾಡುತ್ತಿರುವನಾದರೂ ಒಂದೆಡೆ ಸಮೃದ್ಧತನಾಗುತ್ತಾನೆ, ಇನ್ನೊಂದೆಡೆ ತಿರಸ್ಕೃತನೆನಿಸುತ್ತಾನೆ.

ಸಫಲತೆಯ ಸೆರಗು ಹಿಡಿದವನು ಮಾಡಿದುದೆಲ್ಲವೂ ಸತ್ಯ, ಉಳಿದುವೆಲ್ಲ ಮಿಥ್ಯವೆಂಬ ಸಿದ್ಧಾಂತಕ್ಕೆ ಈ ಉದಾಹರಣೆಗಳಿಂದ ಬರಬಹುದು. ದ್ವಿತೀಯ ಮಹಾಯುದ್ಧದಲ್ಲಿ ದುರ್ಭಾಗ್ಯವಶದಿಂದ ಜರ್ಮನಿ ಮತ್ತು ಜಪಾನಗಳು ಗೆಲ್ಲುತಿದ್ದರೆ, ಹಿಟ್ಲರನು ವಿಷಪಾನ ಮಾಡಿ ಸಾಯುತ್ತಿರಲಿಲ್ಲ; (ಆತನಿಗೆ ಇದೇ ಒಳ್ಳೆಯದಾಯ್ತು. ಬದುಕಿದ್ದರೆ, ಜಪಾನದ ಪ್ರಧಾನ ಮಂತ್ರಿಯಂತೆ ಗಲ್ಲಿಗೆ ಗುರಿಯಾಗಬೇಕಾಗುತಿತ್ತು) ವಿಜೇತರು ವಿಜೇತರೊಡನೆ ಸ್ವೇಚ್ಛಾ ವ್ಯವಹಾರವನ್ನೂ ಮಾಡುತ್ತಿರಲಿಲ್ಲ; ಆಗ, ಪ್ರಾಯಃ ಇತಿಹಾಸವೇ ಬಾಡ ಮೇಲಾಗುತ್ತಿತ್ತು!

ಆದುದರಿಂದಲೇ ಯೇನಕೇನ ಪ್ರಕಾರೇಣ ಸಫಲರಾಗಿ, ವಿಜೇತರೆನಿಸಿಕೊಂಡವರು ಮಾಡುವ ಎಲ್ಲವನ್ನೂ ಪ್ರಪಂಚ ಸತ್ಯ, ನ್ಯಾಯ ಮತ್ತು ಉಚಿತವೆಂದು ಬಗೆಯುತ್ತದೆ; ಅವರೆದುರು ತಲೆ ತಗ್ಗಿಸುತ್ತದೆ. 'ಗೆದ್ದವರ ಸತ್ಯ' ಎಂದೋ 'ದೊಣ್ಣೆಹಿಡಿದವನಿಗೆ ಕೋಣ' ಎಂದೋ ಇದನ್ನು ಕರೆಯಬಹುದು. ಶಾಂತಿ ಮತ್ತು ನ್ಯಾಯಪ್ರಿಯ ಪ್ರಬುದ್ಧ ವಿಶ್ವಜನತೆಗೆ ಇದು ಅತ್ಯಂತ ವಿಚಾರಣೀಯ ಪ್ರಶ್ನೆಯಾಗಿ ನಿಂತಿದೆ.

ಪುತ್ತೂರು ಡಿ. ಮು. ಕೋರ್ಟಿನಲ್ಲಿ.

S. C. 123/61

ಸೋಮಪ್ಪ ಗೌಡ —ವಾದಿ.

ಮತ್ತು

1. ಸಣ್ಣಣ್ಣ ಗೌಡ, 2. ಶೀನಪ್ಪ ಗೌಡ, 3. ಐತ್ಪಪ್ಪ ಗೌಡ. —ಪ್ರತಿವಾದಿರು.

ಸದ್ರಿ ೩ನೇ ಪ್ರತಿವಾದಿಗೆ ಕೋರ್ಟಿನ ಹುಕುಂ ಪ್ರಕಾರ ಈ ಮೂಲಕ ತಿಳಿಯ ಪಡಿಸುವುದೇನೆಂದರೆ:

ವಾದಿಯು ನಿಮ್ಮ ಮೇಲೆ ನಾಕಲು ಮಾಡಿದ ದಾವೆಯು ತಾರೀಕು 30-9-61ಕ್ಕೆ ಇಟ್ಟಿರುವುದರಿಂದ ನೀವು ಆ ದಿವಸ ಪೂರ್ವಾಹ್ನ ಘಂಟೆ 11ಕ್ಕೆ ಮೇಲ್ಕಂಡ ಕೋರ್ಟು ಮುಂದೆ ಹಾಜ್ರಾಗಿ ಉದಾಸರಣೆಯನ್ನು ದಾಕಲು ಮಾಡ ತಕ್ಕದ್ದು. ತಪ್ಪಿದರೆ ನಿಮ್ಮ ಗೈರು ಹಾಜರಿಯಿಂದ ನಿಮ್ಮನ್ನು ಶಿಕ್ಷಾ ಮಾಡಿ, ಏಕಪಕ್ಷವಾಗಿ ತೀರ್ಮಾನಿಸಲಾಗುವುದು.

ಬಿ. ಟಿ. ರೈ

ವಾದಿ ಕಡೆ ವಕೀಲ್

ಪುತ್ತೂರು ತಾ. 8—9—61

ದಿ ವಿಜಯ ಬೇಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬೇಂಕ್. ಸ್ಥಾಪನೆ: 1931

ರಿಜಿಸ್ಟರ್ಡ್ ಆಫೀಸು:

ವಿಜಯ ಬೇಂಕ್ ಬಿಲ್ಡಿಂಗ್, ಲೈಟ್ ಹೌಸ್ ಹಿಲ್ ರೋಡ್,

ಮಂಗಳೂರು-3, ಸೌತ್ ಕೆನರಾ.

ಕಾಯಂ ಠೇವಣಾತಿ ಬಡ್ಡಿ ದರವನ್ನು ಶೇಕಡ 5½ರ ವರೆಗೆ ಹೆಚ್ಚಿಸಲಾಗಿದೆ.

ಏಳು ದಿವಸದ ನೋಟೀಸಿನಲ್ಲಿ ಕೇಳಿದಾಗ್ಯೆ ಹಿಂದೆ ಪಡೆಯುವ ಡಿಪೋಸಿಟುಗಳನ್ನು (Call Deposits) ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸೋಣಾಗುತ್ತದೆ.

ಹೆಚ್ಚಿನ ಮಾಹಿತಿಗೆ ನಮ್ಮ ಶಾಖೆಗಳಲ್ಲಿ ದಯಮಾಡಿ ವಿಚಾರಿಸಿರಿ.

ನವಯುಗ ವಾರ ಪತ್ರಿಕೆಗೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ

Tel: 'BLUEYAGAR'. —— ಚಿನ್ನ ಮತ್ತು ವಜ್ರಗಳ ಆಧುನಿಕ ತವರುಮನೆ —— Phone: 374.

ಕೆ.ಆರ್.ಕೆ.ಶೇಟ್ ಡಯಮಂಡ್ ಮಾರ್ಟ್

ಸ್ಥಾಪನೆ:1919] ಚಿನ್ನ ಮತ್ತು ವಜ್ರದ ವ್ಯಾಪಾರಿಗಳು,(ಗವರ್ನ್‌ಮೆಂಟ್ ಕಾಲೇಜ್ ಎದುರುಗಡೆ)ಮಂಗಳೂರು. ಮಾಲಿಕ:ಕೆ.ಕೆ.ಆರ್.ಶೇಟ್

ಆಶಾಗೋಪುರ....?

(೨ನೇ ಪುಟದಿಂದ)

ರಾಮೂನ ದನಿಯು ಅವನನ್ನೆಚ್ಚರಿಸಿತು.

'ರಾಮೂ, ಸಂಜೆ ಕೆಲಸ ಬಿಟ್ಟ ಕೂಡಲೇ ತಿರುಗಾದಲು ಹೋಗೊಣವೇ?"

'ಹುಂ' ಎಂದನು ರಾಮು.

ಅವೆಷ್ಟು ಬೇಗನೆ ಸಮಯವು ಕಳೆಯಿತೋ. ಕಾರ್ಖಾನೆಯ ಸಿಳ್ಳುಕೂಲಿಗಳ ಬಿಡುಗಡೆಯನ್ನು ಸಾರಿತು. ರಾಮೂ, ಶೇಖರ ಜತೆಯಲ್ಲೇ ಕಾಫಿ ಕುಡಿದು ನಿರ್ಜನವಾದ ಸ್ಥಳದತ್ತ ನಡೆದರು.

ಶೇಖರನೇ ಮಾತಿಗೆ ಪ್ರಾರಂಭಿಸಿದ, "ರಾಮೂ, ನೀವೆಲ್ಲರೂ ಇದ್ದಾಗಲೂ ಆ ವೆಂಕುನ ಕುರಿತು ಯೋಚಿಸದಿರುವುದು ಆಶ್ಚರ್ಯವೇ ಸರಿ'

"ಇಲ್ಲ ಶೇಖರ್ ಆ ವಿಚಾರವನ್ನು ಎತ್ತುವ ಎದೆಗಾರಿಕೆ ನಮ್ಮಲ್ಲಿಲ್ಲ. ಇಂತಹ ಎಷ್ಟೋ ಘಟನೆಗಳು ಈ ಹಿಂದೆ ನಡೆದು ಹೋಗಿವೆ. ನಿನಗೇನೋ ಇದು ವಿಚಿತ್ರವಾಗಿ ತೋರಬಹುದು. ಅಲ್ಲದೆ ಮ್ಯಾನೇಜರಿಗೆ ಮಂತ್ರಿಗಳ ಹಾಗೂ ಇತರ ದೊಡ್ಡ ದೊಡ್ಡ ಅಧಿಕಾರಿಗಳ ಪರಿಚಯವಿದೆ. ನಮ್ಮ ಆಟವು ಸಾಗದು"

"ನೋಡು, ರಾಮೂ. ಇವುಗಳನ್ನು ಕಂಡು ಕೈ ಸೆ ಸುಳಿತು ಕೊಳ್ಳುವುದಲ್ಲ ನಾನೆಲ್ಲರೂ ಒಂದಾಗಬೇಕು. ಮೊನ್ನೆ ಆ ವೆಂಕೂ... ನಾಳೆ ನೀನು... ಆ ಮೇಲೆ ನಾನು...ಈ ಹಿಂದೆ ಎಷ್ಟೋ....ರಾಮೂ! ರಾಮೂ!" ಆವೇಶದಿಂದ ಕೂಗಿದ ಶೇಖರ. 'ನಾವೆಲ್ಲರೂಒಂದಾಗಿ ಇದನ್ನು ಎದುರಿಸಲೇ ಬೇಕು"

"ಶೇಖರ್, ನೀನು ಸಹಾಯ ಮಾಡಿದರೆ ನಾನು ಎಲ್ಲರನ್ನೂಹುರಿದುಂಬಿಸುವೆ,'

ಶೇಖರ, ರಾಮೂನ ಸಿದ್ಧತೆಯು ಭರದಿಂದ ಸಾಗಿ ೨. ಇದಕ್ಕಾಗಿ ಒಂದೆರಡು ವಾರಗಳು ತಳೆದವು.

ಸುಬ್ಬರಾಯರು ಎಂದಿನಂತೆ ಕಾರ್ಖಾನೆಗೆ ಬರುವಾಗ ಕೆಲಸವು ನಡೆಯದೆ ಎಲ್ಲರೂ ಕುಳಿತುಕೊಂಡಿರುವುದನ್ನು ಕಂಡು ಹಿಂದಿನ ಕೆಲವು ಪ್ರಕರಣಗಳನ್ನು ಆಲೋಚಿಸಿ ಭೀತಿಗೊಂಡರು. ಅಂಜುತ್ತಂಜುತ್ತಲೇ ತನ್ನ ಆಫೀಸನ್ನು ಸೇರಿದರು. ಶೇಖರನು ಆಕ್ಷಣವೇ ಸುಬ್ಬರಾಯರನ್ನು ಕಂಡು ತನ್ನ ಅಭಿಪ್ರಾಯವನ್ನುತಿಳಿಸಿದ. ಸುಬ್ಬರಾಯರ ತಲೆಯ ಮೇಲೆ ಆಕಾಶವೇ ಕಳಚಿ ಬಿದ್ದಂತಾಯಿತು. ಆದರೂ ಧೈರ್ಯವನ್ನು ಕಂದುಕೊಂಡು ಹೊರಕ್ಕೆ ಬಂದರು. ಎಷ್ಟಾದರೂ ಮಾನವ ಪ್ರಾಣಿಯಲ್ಲವೆ? ಕೆಲಸಗಾರರನ್ನು ನೋಡುತ್ತಲೇ ಪುನಃ ಕಳವಳಕ್ಕೆ ಪ್ರಾರಂಭವಾಯಿತು. ಎಲ್ಲವನ್ನೂ ಈ ತನಕ ಕಠೋರ ಹೃದಯದಿಂದ ಎದುರಿಸಿದ ನಾನು ಈ ವಿಷಯ ಬಾರದ ಪೋಗಿಸಿಗೆ ಅಂಜಬೇಕೇ?. ..ಈ ಬಾರಿ ಹೋಕನನ್ನು ನನ್ನ ಕೈಯಾರೆ ಎಳೆದು ಕಂದಂತಾಯಿತೆ? ಈಗಂತೂ ಆತನನ್ನು ಕೆಲಸದಿಂದ ತೆಗೆದುಹಾಕುವುದು ಅಸಾಧ್ಯ. ಉಳಿದವರು ತಿರುಗಬೀಳಬಹುದು. ಅದೇಕೆ ನಾನು ಹೇಡಿಯೊದೆ ? ಇಲ್ಲ, ಇಲ್ಲ ಎಂದೂ ಇಲ್ಲ....

ನಿಮ್ಮ ಈ ಬೆದರಿಕೆಗೆ ನಾನು ಬೆದರಲಾರೆ. ಸೋಲೀಸರಿಂದ ಒಡೆತ ತಿನ್ನಬೇಕಾದೀತು. ಕಾರ್ಖಾನೆಯನ್ನು ಮುಚ್ಚಿ ಉಸವಾಸ ಸಾಯುವಂತೆ ಮಾಡುವೆನು. ಅನ್ನುತ್ತಾ ನೇರವಾಗಿ ಶಂಕರ ರಾಯರಲ್ಲಿಗೆ ಬಂದರು. ಶಂಕರ ರಾಯರೊಡನೆ ವಿಚಾರವನ್ನು ತಿಳಿಸಿದರು.

"ಸುಬ್ಬ ರಾಯರೇ, ಆದಷ್ಟು ಬೇಗ ನೀವು ಶೇಖರನನ್ನು ಕೆಲಸದಿಂದ ಹೊರಹಾಕಿ ಶೇಖರನು ಹೊರಹೋದ ಮೇಲೆ ಉಳಿದವರಿಗೆ ನಿಮ್ಮ ಬಿರುದ್ದ ಹೋಗುವ ಎದೆಗಾರಿಕೆ ಇರಲಾರದು. ನಿಮ್ಮ ಮೋಸ ಬಯಲಿಗೆ ಬೀಳದಂತೆ ನಾನಿರುವೆ" ಎಂದು ಸಮಾಧಾನ ಪಡಿಸಿದರು.

ಹಿಂದಿರುಗಿದ ಸುಬ್ಬ ರಾಯರು ಪೋಲೀಸರ ಸಹಾಯವನ್ನು ಪಡೆದು ಕಾರ್ಖಾನೆಯನ್ನು ಹೊಳ್ಳು ಶೇಖರನನ್ನು ವಜಾ ಮಾಡಿದುದಾಗಿ ತಿಳಿಸಿದರು. ನಿಂಚಿನಂತೆ ಎಲ್ಲರಿಗೂ ಈ ವಿಚಾರ ತಿಳಿಯಿತು. ಕೂಡಲೇ ಎಲ್ಲರೂ ಸುಬ್ಬ ರಾಯರತ್ತ ಧಾವಿಸಿದರು. ಪೋಲೀಸರು ಲಾಠೀಚಾರ್ಜು ಮಾಡಿದರು. ಕಾರ್ಮಿಕರನ್ನು ಹತೋಟಿಗೆ ತರಲು ಮುನ್ನುಗ್ಗಿದ ಶೇಖರನ ತಲೆಗೆ ಬಲವಾದ ಏಟು ಬಿತ್ತು. ಏಳಲು ಪ್ರಯತ್ನಿಸಿದ ಆತನನ್ನು ಮತ್ತೊಂದು ಏಟು ಭೂಮಿಗೊರಗಿಸಿತು. ಕಿಡಿಯಂತೆ ಕಾರ್ಮಿಕರು ಶೇಖರನತ್ತ ಓಡಿದರು. ಮೃತ್ಯುವಿನೊಡನೆ ಹೋರಾಡುತ್ತಿದ್ದ ಶೇಖರನು ಒನಪನ್ನು ಶಾಂತರಾಗುವಂತೆ ಕೇಳಿಕೊಂಡ. ಶೇಖರನನ್ನು ಹೊತ್ತು ಆಸ್ಪತ್ರೆಗೆ ತಂದರು. ಹೆಚ್ಚು ಸಮಯ ಬದುಕಲಾರನೆಂದು ವೈದ್ಯರು ತಿಳಿಸಿದರು. ಕೇಸಿನ ವಿಚಾರ ತಿಳಿಯಲು ವಕೀಲರನ್ನು ದೊರೆಯ ಕರೆಸಿದ್ದ ರಾಮೂ, ಕಿಟ್ಟು, ಈ ವಿಷಯವನ್ನು ತಿಳಿದು ಆಸ್ಪತ್ರೆಗೆ ಓಟ ಕಿತ್ತರು.

"ಶೇಖರ, ಕೇಸು ನಮ್ಮ ಪಾಲಿಗೆ ಅನುಕೂಲವಾಗುವಂತಹ ಇತರ ಎಷ್ಟೋ ಸುರಾಗೆಗಳನ್ನು ನಾವು ಸಂಗ್ರಹಿಸಿರುವೆವು. ಇದರಿಂದಾಗಿ ಸುಬ್ಬ ರಾಯರ ವಂಚನೆ, ಮೋಸ ಬಯಲಾಗುವುದೆಂದು" ವಕೀಲರು ಹೇಳಿರುವುದನ್ನು ತಿಳಿಸಿದರು.

"ಶೇಖರ್ ನಮ್ಮ ವಿಜಯವನ್ನು ಕಾಣುವ ಭಾಗ್ಯ ಮಾತ್ರ ನಿನಗಿಲ್ಲವಾಯಿತೇ" ಎಂದು ಮರುಗಿದರು.

ಶೇಖರನು ತೊದಲುತ್ತಾ "ಗೆಳೆಯರೇ, ಜಗತ್ತಿನ ಅನ್ಯಾಯವನು ಬಯಲಿಗೆಳೆಯು ಹಂಬಲ ನನಗಾಗಿತ್ತು. ಅದರಂತೆ ಪೂರ್ತಿಯಾಗಲಿಲ್ಲ. ಆದರೂ ಮುಂ

ಹದಿನಾಲ್ಕರ ಹರೆಯ

"ರಂಜನೆ" ಬೆಂಗಳೂರು

ಮಕ್ಕಳ ಜೀವನ ಕ್ರಮವನ್ನು ಗಮನಿಸುತ್ತಿದ್ದ ತಂದೆತಾಯಿಗಳು, ಸುಮಾರು ಹತ್ತು-ಹದಿನೈದು ವಯಸ್ಸಿನ ಮಧ್ಯಭಾಗದ ತಮ್ಮ ಮಕ್ಕಳ ಬಗ್ಗೆ ಹೀಗೆ ಯೋಚಿಸುವುದಿದೆ: "ನನ್ನ ಮಕ್ಕಳೇಕೆ ಈ ರೀತಿ ಆದರು? ನನ್ನ ಮಗುವೇಕೆ ಅದರ ಸಹಜವಾದ ಚುರುಕುತನವನ್ನು ಕಳೆದುಕೊಂಡಿತು? ಯಾವಾಗಲೂ ಮನೆ ಬಿಟ್ಟು ಇರುವಿದ್ದ ಈ ೧೦-೧೨ ವರುಷದ ಮಕ್ಕಳೇಕೆ ಹಗಲು ಮನೆಗಳಲ್ಲೇ ಇರುವುದಿಲ್ಲ?"

ದೆ ಇಟ್ಟಿ ಅಡಿಯನ್ನು ಹಿಂದಿಡಬೇಡಿ. ಆದರೆ... ಅಯ್ಯೋ....ನನ್ನ ತಾಯಿ....ಅವಳ ಕಷ್ಟದಲ್ಲಿ ಒದಗದವನಾದೆ. ನನಗಾಗಿ ಸರ್ವಸ್ವವನ್ನೂ ತ್ಯಾಗ ಮಾಡಿದ ಪುಣ್ಯರಮಣಿ ನಾನು ಇನ್ನು ಅವಳನ್ನು ಕಾಣಲಾರೆ. ನನ್ನ ಪೆಟ್ಟಿಗೆಯ ಲ್ಲಿರುವ ಡೈರಿಯಲ್ಲಿರುವ ನನ್ನ ತಾಯಿಯ ವಿಳಾಸವನ್ನು ಪತ್ತೆಹಚ್ಚಿ ಅವಳನ್ನು ನಿಮ್ಮ ತಾಯಿಯಂತೆ ಸಲಹಬೇಕೆಂಬ ಭಾವೆಯನ್ನು ಪಡಕೊಂಡು ಯಾರೂ ಕಾಣದ ಮೃತ್ಯುವನ್ನು ತಪ್ಪಿಕೊಂಡ.

ಶೇಖರನಿಗಿತ್ತ ತಮ್ಮ ಭಾವೆಯಂತೆ ಕಾರ್ಮಿಕರು ಗಂಗಾನ ಪೋಷಣೆಗೆ ತೊಡಗಿದರು. ಆದರೂ ಮಗನ ಮರಣದಿಂದ ನೊಂದ ಗಂಗಮ್ಮನೂ ಕಡೆಗೊಮ್ಮೆ ಹೊರಟೇಬಿಟ್ಟಳು ಎಲ್ಲಿಗೆ....ಮಗನಿದ್ದೆಡೆಗೆ.

ಇಂದು ಕಾರ್ಮಿಕರಿಗೆ ಸಂತಸದ ದಿನ ಎಲ್ಲರ ಮುಖದಲ್ಲಿ ಹುಮ್ಮಸ್ಸಿನ ಕಳೆಯು ಶೋಭಿಸುತ್ತಿದೆ. ಶೇಖರನ ಭವಿಷ್ಯವು ಸತ್ಯವಾಯಿತು. ಕಾರ್ಮಿಕರಿಗೆ ಜಯದೊರಕಿತು. ಆದರೆ ಅವರನ್ನು ಕಾಡುತ್ತಿರುವ ಚಿಂತೆ ಹೇಳಲಸಾಧ್ಯ. ಇವರ ಸಂತೋಷದಲ್ಲಿ ಭಾಗಿಗಳಾಗಲು ಶೇಖರನಾಗಲೀ ಆತನ ಪೂಜ್ಯ ಮಾತೆಯಾಗಲೀ ಇಲ್ಲದಿರುವುದೇ ಇದು ದೊಡ್ಡ ಬೇಸರ. ಈ ವಿಚಾರದಲ್ಲಿ ಮಾತ್ರ ಕಾರ್ಮಿಕರು ನಿರಾಶ್ಚರ್ಯರಾದರು

ಹುಟ್ಟಿದ ಎರಡು ದಶಕಗಳ ಮಧ್ಯ ವಯಸ್ಸಿನಲ್ಲಿ ಎಲ್ಲ ಹುಡುಗ ಮತ್ತು ಹುಡುಗಿಯರು ಪ್ರಾಥಾವಸ್ಥೆಗೆ ಹೆತ್ತುತ್ತಾರೆ. ಆ ಕಾಲದಲ್ಲಿ ದೇಹದಲ್ಲಿನ ಭೌತ ಬದಲಾವಣೆಗಳು ಮಾತ್ರವಲ್ಲ ಮನಸ್ಸು ಬುದ್ಧಿ ಹಾಗೂ ಜೈವಿಕ ಶಕ್ತಿ ಹಾಗೂ ಆತನ ಸಂಪೂರ್ಣ ವ್ಯಕ್ತಿತ್ವವೇ ಬದಲಾಗುವುದುಂಟು.

ಬಾಲ್ಯಾವಸ್ಥೆ ಕ್ರಮೇಣ ನಶಿಸಿ ಮಾಯವಾಗುವ ಆ ಯೌವನವನ್ನು ಹೋರಾಟ, ಗಲಿಬಿಲಿ, ಸಿಳ್ಳು ಸಿಕ್ಕಾದ ಭಾವನೆಗಳು, ಮನೋವಿಕಾರ, ಏಕಾಂತಪ್ರಿಯತೆ, ಹಾಗು ಸ್ವಶಕ್ತಿಯಅನುಮಾನ ಇವುಗಳಿಂದಲೇ ಪ್ರತಿಯೊಂದು ಗಂಡು ಹೆಣ್ಣು ಪಡೆಯುವುದಿರುತ್ತದೆ ತರುಣ ತರುಣಿಯರೆಲ್ಲರೂ ಆ ಕಾಲದಲ್ಲಿ ತಮ್ಮನಿಜ ಸ್ವರೂಪವನ್ನು ಕಂಡುಕೊಳ್ಳಲೇ ಬೇಕು. ಮಾಡುವ ಪ್ರತಿಯೊಂದು ಕೆಲಸದಲ್ಲಿ ತಮ್ಮ ಸಂಬಂಧವನ್ನೂ, ನಾಗರಿಕರಾಗಿ ತಮ್ಮ ಜೊತೆಯನ್ನೂ, ಜೈತನ್ಯ ಶಕ್ತಿ ಹಾಗೂ ಸೈತಿಕ ಬದ್ಧಸ್ಥಿತಿಯ ಬಗ್ಗೆ ಸಂಪೂರ್ಣ ತಿಳಿವಳಿಕೆಯನ್ನೂ ಅವರು ತಪ್ಪದೇ ಹೊಂದಬೇಕು. ಪ್ರತಿಯೊಬ್ಬರೂ ಪ್ರೀತಿಸುವ ಹಾಗೂ ಪ್ರತಿಸಲ್ಪಡುವ ಸಲಿಗೆಯನ್ನು ಖಂಡಿತ ಕಲಿಯಬೇಕು. ಕೆಲವು ವರುಷಗಳಲ್ಲೇ ಗಂಡು ಹೆಂಡಿರಾಗುವ ತಂದೆ-ತಾಯಿಯಂತಾಗುವ ಅವರಿಗೆ ಪ್ರಾಥಾವಸ್ಥೆಯಿಂದ ಹಿರಿಯರೆನಿಸಿಕೊಳ್ಳುವ ಈ ಅವಸ್ಥೆಗೆ ಬರಲು ವರ್ಷಗಳನೇಕ ಬೇಕಾಗುವುದಾದರೂ ಆ ವೇಳೆಗೆ ಪ್ರೌಢದ ಸ್ಥಾಯಿ ಸ್ಥಿತಿಗೆ ಬಂದಿರಬೇಕಾಗುವುದು.

ಯೌವನ ತನ್ನ ಛಾಯೆಯನ್ನು ಕ್ರಮೇಣ ಬೀರುವುದು. ೯-೧೨ರ ಯೌವನ ಪೂರ್ವದ ವರುಷಗಳಲ್ಲಿ ಮಗು ತನ್ನ ಸಹಜವಾದ ಸ್ವಲ್ಪ ಸೌಂದರ್ಯ ಹಾಗೂ ಚತುರತೆಯನ್ನು ಕಳೆದುಕೊಂಡು ಮನೆಯ ದೈನಂದಿನ ಕಾರ್ಯಕ್ರಮಗಳ ಬಗ್ಗೆ ಗೊಣಗುವುದು ನಿಬಂಧನೆಗಳನ್ನು ಪ್ರತಿಭಟಿಸುವುದು. ನೀತಿಗಳಿಗೆ ತಡೆಹಾಕಲು ಪ್ರಯತ್ನಿಸುವುದು. ಅವರ ಭಾವೆ ಹಾಗು ನಡತೆಗಳು ತಿರುಗುತ್ತವೆ. ಮನೆ ಕೆಲಸಗಳು ಸತ್ಪ ಪರೀಕ್ಷೆಯಂತೆ ತೋರುವುವು. ಎಲ್ಲ ವಿಧಗಳಲ್ಲಿಯೂ ಯೌವನಪೂರ್ವದ ಮಕ್ಕಳು ಹಾಗೂ ತಂದೆತಾಯಿಗಳಲ್ಲಿ ಬಿಸಿ ಚರ್ಚೆಯ ರಾಶಿ ಕಾಣುವುದು.

ಈ ಸಮಯದಲ್ಲಿ ಮಗು ಕಾಲದೊಡನೆ ಸ್ವಬಲವಾಗಿ ಕಾದಾಡುತ್ತಿರುವುದಿರುತ್ತದೆ. ಹಿಡಿದ ಕೆಲಸವನ್ನು ತಾನೇ ಮಾಡಬೇಕೆನ್ನುವ ಸ್ವಯಂ ಅಭಿಲಾಷೆ ಉತ್ಕಟವಾಗಿರುವುದು. ಆ ಸಮಯದಲ್ಲೇ ಹುಡುಗರು "ಗುಂಪುಗಳಿಗೆ ಸೇರುವ ಸಾಹಸ ಕಾರ್ಯಗಳಿಗೆ ಧೈರ್ಯದಿಂದ ತೊಡಗುವವರು. ಕಾಲ್ಪನಿಕ ಯೋಚನೆಗಳಲ್ಲಿ ತಲ್ಲೀನರಾಗಿರುವರು. ಮನೆಯ ಹೊರಗಿನ ಜೀವನದಲ್ಲಿ ರಹಸ್ಯವಾಗಿರುವವರೂ ಇರುತ್ತಾರೆ. ಈ ಕೆಲವು ಕಾಲದಲ್ಲಿ ಮಾತ್ರ ಗಂಡು ಮಕ್ಕಳು ಹೆಣ್ಣು ಮಕ್ಕಳೊಡನೆ ಸೇರಲಿಚ್ಛೆಪಡನಂದಿದ್ದು ತಮ್ಮ ತಮ್ಮ

NAVAYUGA, UDIPI.
REGD. NO.BG. 176

28-9-1961

LICENSE NO. 31
Licensed to Post without Prepayment

ಲ್ಲೇ ಒಟ್ಟಾಗಿರುತ್ತಾರೆ.

ಹುಡುಗಿಯರು ಆ ಅವಸ್ಥೆಯಲ್ಲಿ "ಶೂರ ಗಂಡು"ನಂತೆಯೂ ಇಲ್ಲದಿದ್ದರೆ "ಸುಟ್ಟ ಹೆಂಗಸು"ನಂತೆಯೂ ನಡೆಯುವವರಿದ್ದು, ಗಂಡು ಜಾತಿಯನ್ನೇ ಜರಿಯುವವರಿರುತ್ತಾರೆ. ಅಂತೆಯೇ ಯೌವನದ ಸಂಪೂರ್ಣ ಜವಾಬ್ದಾರಿ ಇನ್ನೂ ಬೆಳೆಯುತ್ತಿರುವ ಅರೆ ಪಕ್ವ ಮನಸ್ಸನ್ನು ಸರಿಯಾದ ದಾರಿಯಲ್ಲಿ ಹಾಗೂ ಪೂರ್ಣಹತೋಟಿಯಲ್ಲಿ ಇಡುವುದೇ ಆಗಿದೆ.

ತಾರುಣ್ಯ—ಲಿಂಗಗಳು ಪರಿಪಕ್ವತೆಯನ್ನು ಪಡೆಯುವ ಕಾಲ; ಜನನೇಂದ್ರಿಯಗಳಲ್ಲಿ ಹಾರ್ಮೋನ್‌ಗಳು ಬದಲಾವಣೆಗಳನ್ನು ತರುತ್ತವೆ. ಇದರಿಂದ ಪ್ರಭಾವಗೊಂಡು ದೇಹದ ಹೊರ ಭಾಗಗಳಲ್ಲೂ ಬದಲಾವಣೆಗಳಾಗುತ್ತವೆ. ಹುಡುಗರ ಮುಖದಲ್ಲಿ ಕೂದಲು ಬೆಳೆಯುವುದು, ಹಾಗೂ ಧ್ವನಿ ಮಾರ್ಪಾಡಾಗುವುದಾದರೆ, ಯೌವನವತಿಯರಾಗುವ ಹೆಣ್ಣು ಮಕ್ಕಳಲ್ಲಿ ಎದೆಯ ಉಬ್ಬುವಿಕೆ ಹಾಗೂ ಮುಖದ ಕಾಂತಿ ಹೆಚ್ಚುವುದು.

ತರುಣ-ತರುಣಿಯರು ಸ್ವಾತಂತ್ರ್ಯದಿಂದ ಪಾರತಂತ್ರ್ಯದತ್ತ ಬಹು ಬೇಗ ಚಲಿಸುತ್ತಾರೆ. ಒಂದು ದಿನ ಹೆದರಿಕೆಯಿದ್ದರೆ ಮುಂದಿನ ದಿನ ಹೆಚ್ಚಿನ ಧೈರವೆಸೆಯುಳ್ಳವರಾಗುತ್ತಾರೆ. ಅವರು ಸ್ಫೂರ್ತಿಯುತರಿದ್ದು ಅತಿ ಹೆಚ್ಚು ಸೂಕ್ಷ್ಮ ಗ್ರಾಹಿಗಳೂ, ತಮಗೆ ಬೇಕೇನೆಂಬುದನ್ನು ಸರಿಯಾಗಿ ತಿಳಿಯದವರೂ ಇರುತ್ತಾರೆ.

ಸುಮಾರು ೧೫—೧೬ರ ವೇಳೆಗೆ ಮತ್ತೂ ಬದಲಾವಣೆ ಹೊಂದುತ್ತಾರೆ. ಇನ್ನೂ ಅನಿಶ್ಚಿತ ಭಾವ ಪರವಶತೆ. ಭವಿಷ್ಯ ತಿಳಿಯಲಾಗದವರೂ, ಹಿರಿಯರಲ್ಲಿ ವಿಭಿನ್ನ ಅಭಿಪ್ರಾಯದವರೂ ಇರುತ್ತಾರೆ ಆದರೂ ಹಲವು ವಿಷಯಗಳಲ್ಲಿ ತಿಳಿವಳಿಕೆಯುಳ್ಳವರಾಗುತ್ತಾರೆ. ಬೇರೆಯವರಲ್ಲಿ ಅವಳ ಯೂ ಅವನ ಪ್ರೀತಿ, ಆಸೆ ಹೆಚ್ಚಿರುವುದಿದ್ದು ಮುಚ್ಚುಮರೆಯಿಲ್ಲದೇ ಅದನ್ನು ತಿಳಿಸುವವರಿರುತ್ತಾರೆ.

ಈ ಅವಸ್ಥೆಯಲ್ಲಿ ತಮ್ಮಹಿಂದಿನ ಮೂರು ವರ್ಷಗಳಲ್ಲಿ ತೋರದಿದ್ದ ಉತ್ತಮ ನಡತೆ ಹಾಗೂ ಜಾಗರೂಕತೆಗಳನ್ನು ತೋರುತ್ತಾರೆ. ಸ್ವಲ್ಪ ಹೊಣೆಗಾರರಾಗಲು ತಯಾರಿರುತ್ತಾರೆ. ಹೊಸ ಉತ್ಸಾಹ ಹಾಗೂ ವಿವಿಧ ರೀತಿಗಳಲ್ಲಿ, ಹೊಸ ಕೆಲಸಗಳಲ್ಲಿ ಮುನ್ನುಗ್ಗುತ್ತಾರೆ. ಆದರೂ ಆತ್ಮಸಂಧಾನ ಹಾಗೂ ಒಳ ನೋಟಗಳಲ್ಲಿ ಇನ್ನೂ ಬಾಲ್ಯಾವಸ್ಥೆಯಲ್ಲಿರುವವರಿದ್ದು ಹೊಸ ಸಮಸ್ಯೆಗಳನ್ನು ಬಿಡಿಸುವುದರಲ್ಲಿ ಬಾಲ ವಿಚಾರ-ಅಪರಿಪಕ್ವ ವಿಧಾನಗಳನ್ನೇ ಉಪಯೋಗಿಸುತ್ತಾರೆ. ಜಂಬ ಕೊಚ್ಚಿ, ಕೊಳ್ಳುವುದು, ಸಿಟಿಗೊಳ್ಳುವುದು ಕಾಣಬರುತ್ತದೆ. ಇಷ್ಟಾದರೂ ಇವೆಲ್ಲಾ ಯೌವನದ ಅಂತಸ್ಥಿನಲ್ಲಿ ನಡೆಯುತ್ತದೆ.

ಇವುಗಳೆಲ್ಲಾ, ಯುವಕ-ಯುವತಿ ತನ್ನ ಮನೋವಿಕಾರ, ಹಾಗೂ ತಂದೆ ತಾಯಿಗಳ ಹತೋಟಿ ಇವುಗಳ ಘರ್ಷಣೆಯನ್ನೆದುರಿಸಿ ಹೊರಬರುವುದಾಗಿದೆ. ಅವರ ಸಹಾಯವನ್ನು ಬೇಡದೆ ಅದನ್ನು ಪಡೆಯುವರು. ಕೆಲವೊಮ್ಮೆ ತಮ್ಮ ಉಪಾಧ್ಯಾಯರನ್ನಾಗಲೀ ಇಲ್ಲ ಮತ್ತೊಬ್ಬ ಯುವಕ ಯೂ ಯುವತಿಯನ್ನಾಗಲೀ ಮಾದರಿಯಾಗಿಟ್ಟುಕೊಂಡು ನಡೆಯುವರು. ಯೌವನದ ಎರಡನೇ ಹಂತದಲ್ಲಿ ಯುವಕ ಯೂ ಯುವತಿಯ ಪ್ರೀತಿ ಮತ್ತು ಬೇಕುಗಳು ಮನೆಯವರಿಂದ ಬೇರೆಯಾಗಲ್ಪಟ್ಟು ಹೊರಗಿನ ಯುವತಿ ಯೂ ಯುವಕರಲ್ಲಿ ನೆಡುವುದು. ಆ ರೀತಿ ಮನೆಯವರಿಂದ ಸ್ವಲ್ಪ ದೂರಾಗುವುದರ ಕಾರಣ, ಆ ತರುಣಾವಸ್ಥೆಯವರಲ್ಲಿ ಏಕಾಂತವಾಗಿರುವೆವೆಂಬ ಸ್ವಶಕ್ತಿಯುಳ್ಳವರಾದೆವೆಂಬ ಮನೋಭಾವ ಮೂಡಿ ಬರುತ್ತದೆ.

ಆ ಕಾಲದಲ್ಲಿ ಕೆಲವು ನಡತೆಗಳು ಎಲ್ಲ ಯುವಕ-ಯುವತಿಯರಲ್ಲೂ ಕಾಣಬಹುದು. ತರುಣರ ಮೀಸೆ, ಗಡ್ಡ ಹಾಗೂ ಮೈಕಟ್ಟುಗಳಲ್ಲಿ ಆತನ ಆಕರ್ಷಣೆಯನ್ನು ಕಾಣುವ ಯುವತಿ ಉತ್ತೇಜಿತಳಾಗುವುದಾದರೆ, ಅದೇ ಯುವಕ ಆಕೆಯ ಸುಂದರ ಮುಖ, ಉಬ್ಬಿದ ಎದೆ ಹಾಗೂ ಆಕೆಯ ನಡಿಗೆಯಲ್ಲಿ ಆಕರ್ಷಿತನಿರುತ್ತಾನೆ. ಒಂದೇ ಲಿಂಗದವರೂ ಅನನ್ಯ ಪ್ರೀತಿಯಲ್ಲೂ ತೊಡಗುವುದುಂಟು.

ಲೈಕ್ಯವಿಲ್ಲದಷ್ಟು ಪ್ರಯೋಗ ಹಾಗೂ ಅನುಭವಗಳಿಂದ ಅವರು ತಮ್ಮ ನಿಜವಾದ ಶಕ್ತಿ, ಮನೋಭಾವ ಸಾಮರ್ಥ್ಯ, ಬೇಕು-ಬೇಡ ಹಾಗೂ ಕೆಲಸಗಳನ್ನು ತಿಳಿದುಕೊಳ್ಳುವರಿರುತ್ತಾರೆ. ಕ್ರಮೇಣ ಅವರು ತಾವೇ ಯೋಜಿಸಿಕೊಂಡ ನೀತಿ-ನಿಯಮಗಳಿಗೆ ಹತ್ತಿಕೊಳ್ಳುತ್ತಾರೆ. ತಂದೆ ತಾಯಿಗಳ ಗುಣಗಳನ್ನು ಮಕ್ಕಳು ಯಾವನದ ನಂತರ ಪಡೆಯುತ್ತಾರೆ ಎಂಬುದು ಸಾಮಾನ್ಯವಾಗಿ ಜನರಲ್ಲಿರುವ ತಪ್ಪು ತಿಳಿವಳಿಕೆಯಾಗಿದೆ.

ಯುವಜನರು ತಮ್ಮ ಹಿರಿಯರು ತಮಗೆ ಒದಗಿಸಲಾಗದ ಸೌಲಭ್ಯವುಳ್ಳ ತಮ್ಮದೇ ಆದ ಒಂದು ಕಲ್ಪಿತ ರಾಜ್ಯವನ್ನು ರೂಪಿಸಿಕೊಳ್ಳುತ್ತಾರೆ ಅದನ್ನು ಕಂಡು ಹಿಡಿಯುವ ಆಶೆಯುಳ್ಳವರಾಗುತ್ತಾರೆ. ದೊಡ್ಡವರಿಗಿರುವ ವಿಶೇಷ ಹಕ್ಕುಗಳನ್ನು ಪಡೆಯಲು ಯೋಚಿಸುವರು. ಕೆಲವೊಮ್ಮೆ ಅದಕ್ಕಾಗಿ ಹಿರಿಯರಲ್ಲಿ ಬಲ ಪ್ರಯೋಗವನ್ನು ಮಾಡಲೂ ಮನಸ್ಸಿನವರಿರುತ್ತಾರೆ. ಆದರೂ ಪರಿಪಕ್ವತೆಯ ದಾರಿಯಲ್ಲಿ ಸಾಗಬೇಕಾದ ಹೆಚ್ಚಿನ ಅಂತರದಿಂದಾಗಿ ಅವರು ಹಿಂಜರಿಯಬೇಕಾಗುತ್ತದೆ. ಆಶಾವಾದ, ನಿರಾಶಾವಾದ ಅವರಲ್ಲಿ ಬದಲಾಗುತ್ತಿರುತ್ತದೆ. ಈ ಅಲೆದಾಟಗಳು ಅವರ ವ್ಯಕ್ತಿತ್ವ, ಭಾವನೆಗಳನ್ನು, ಅವರ ಸ್ವತಂತ್ರ ಪ್ರಿಯತೆಯನ್ನೂ ತೋರುತ್ತದೆ. ಒಮ್ಮೊಮ್ಮೆ ಅವರಲ್ಲಿ ಕಾಣಸಿಗುವ ವಿರಕ್ತಭಾವ, ಅದೃಷ್ಟಕ್ಕಾಗಿ ಕಾಯುವಿಕೆ, ಅವರಲ್ಲಿ ಏರ್ಪಡುವ ಮನೋಕ್ಷೋಭೆಗೆ ನಿದರ್ಶನಗಳಾಗಿವೆ.

ಪ್ರೀತಿಯುಳ್ಳ ಉದಾರ ತಂದೆ ತಾಯಿಗಳು, ವೇದನೆ-ಸಂಕಟ, ಕ್ಲೇಶ ಇವುಗಳಿಂದ ತಮ್ಮ ಮಕ್ಕಳು ದೂರವಿರಬೇಕೆಂದು ಬಯಸುತ್ತಾರೆ. ನಾವು ನಮ್ಮ ಮಕ್ಕಳ ಜೀವನದ ಅಡಚಣೆಗಳನ್ನು ಹಾಗೂ ಅವರ ಬೆಳವಣಿಗೆಯನ್ನು ತಡೆಯಲಾರೆವು. ಹೊಸ ಹೊಸ ಸಂತಾನಗಳಿಂದ ಜೀವನ ಬೇರಾಗುತ್ತದೆ—ಬದಲಿಸುತ್ತದೆ. ಜೀವನದಲ್ಲಿ ಪಾಠಗಳನ್ನು ಹೊಸ—ಹೊಸದಾಗಿ ಎಲ್ಲರಿಂದಲೂ ತಿಳಿದುಕೊಳ್ಳಬೇಕು. ಅಲ್ಲದೇ ಅವರ ಅನುಭವದಿಂದ ಹಾಗೂ ಅವರ ಇಚ್ಛೆಯಂತೆ ನಡೆಯ ಬೇಕು.

ನಾವೆಷ್ಟೇ ಎಚ್ಚರಿಕೆ ಹಾಗೂ ಸೂಕ್ಷ್ಮವಾಗಿದ್ದರೂ ಮುಂದಿನ ಜನಾಂಗಗಳಲ್ಲಿ ಘರ್ಷಣೆಗಳು ನಡದೇ ನಡೆಯುತ್ತವೆ. ಹೊಸ ಹೊಸ ಸಮಸ್ಯೆಗಳು ತಲೆದೋರುತ್ತಲೇ ಇರುತ್ತವೆ. ಸ್ವಪಂಚದ ಬುದ್ಧಿ ಬಲ—ತಲೆಯ ಬೆಲೆ ಹೆಚ್ಚುತ್ತಿದೆ. ಯೌವನಾವಸ್ಥೆ ಪೋಷಕರಿಗೂ ಹಾಗೂ ಮಕ್ಕಳಿಗೂ ಉತ್ತಮ ಪಾಠಗಳನ್ನು ಕಲಿಸಿಕೊಡುವುದು. ತಂದೆ ಯೂ ತಾಯಂದಿರು ತಮ್ಮ ಯೌವನಾವಸ್ಥೆಯಿಂದ ಇಂದಿನ ವರೆಗೆ ನಡತೆ, ಉಡುಪು, ನುಡಿ ಸಮೂಹದ ಸ್ಥಾನ—ಮಾನ, ಮನೋರಂಜನೆ ಹಾಗೂ ಭಾಷಾ ರೀತಿಗಳು ಬದಲಾವಣೆ ಹೊಂದಿವೆಯೆಂದು ತಿಳಿಯಲೇ ಬೇಕಾಗಿದೆ.

ಯೌವನಾವಸ್ಥೆ ಬಂದರೂ ಮಕ್ಕಳಿಗೆ ತಂದೆ—ತಾಯಿಗಳ ನೆರವು ಅಗತ್ಯ ಬೇಕಿದೆ. ಎಲ್ಲವಕ್ಕೂ ಹೆಚ್ಚಿನದಾಗಿ ತರುಣ ತರುಣಿಯರಿಗೆ "ತಮ್ಮ ತಂದೆ ತಾಯಿಗಳು ತಮ್ಮ ಉತ್ತಮ ನಡತೆಗಳಲ್ಲಿ ನಂಬಿಕೆಯನ್ನಿಟ್ಟಿದ್ದಾರೆ" ಎಂಬ ವಿಶ್ವಾಸ ಅತ್ಯಗತ್ಯ ಅಂತೆಯೇ ತಂದೆ ತಾಯಿಯರಿಗೆ ತಮ್ಮ ಯುವಕ ಮಕ್ಕಳ ಮೇಲಿನ ಹೊಣೆಗಾರಿಕೆ ಸಂಪೂರ್ಣ ಮುಗಿದಿರುವುದಿಲ್ಲ.

(ಆಧಾರದಿಂದ)

ಅಮೃತ ಬಿಂದು

ಗಡಿಬಿಡಿಯಿಂದ ದಾರಿತಪ್ಪಿ ಮಾಡಿದ ಕೆಲಸವನ್ನು ಹಲವು ಬಾರಿ ಮನಹ ಸುನಹ ಮಾಡಬೇಕಾಗುತ್ತದೆ.

ಂಂ ಂಂ

ಚಿಕ್ಕ ಮೀನನ್ನು ಗಾಳಕ್ಕೆ ಸಿಕ್ಕಿಸಿ ಕಳಕೊಳ್ಳಲು ಸಿದ್ಧನಾದರೆ ಮಾತ್ರ ದೊಡ್ಡ ಮೀನು ದೊರೆಯುವ ಸಾಧ್ಯತೆ.

ಂಂ ಂಂ

ಮಳೆಯ ಹೆದರಿಕೆಗಾಗಿ ನೀರಿನಲ್ಲಿ ಮುಳುಗಬಾರದು.

ಂಂ ಂಂ

ನಾವು ಎಲ್ಲಾ ವಿಷಯಗಳನ್ನು ಕಳೆದ.ಕೊಳ್ಳಬಹುದು. ಆದರೆ ಆಶೆಯೆಂಬುದು ನಾವು ಎಂದೂ ಕಳೆದು ಕೊಳ್ಳಲಾರದವಸ್ತು.

ಂಂ ಂಂ

ಕೆಟ್ಟವರೊಡನೆ ಸರಸವಾಡುವದಕ್ಕಿಂಥಾ ಒಳ್ಳೆಯವರೊಡನೆ ಗುದ್ದಾಡುವದು ಲೇಸು.

ಂಂ ಂಂ

ಕೆಟ್ಟದನ್ನು ಆಲೋಚಿಸುವವನಿಗೆ ಕೆಟ್ಟದ್ದೇ ಆಗುತ್ತದೆ. ಹೇಗೆ ಆಲೋಚಿಸುವೆಯೋ ಹಾಗೆಯೇ ಜೀವನ.

ಂಂ ಂಂ

ಜೀವನದ ನಿಜವಾದ ಅಂತಿಮವೆಂದರೆ ಅಂತಿಮವಿಲ್ಲದ ಜೀವನವನ್ನರಿಯುವದು.

ನೋಡಿ ಕಾಣಬಹುದು. ಚಿಂತಿಸಿ ಕಲ್ಪಿಸಬಹುದು. ಆದರೆ ಅನುಭವಿಸಿಯೇ ಅರಿಯಬೇಕು.

ಂಂ ಂಂ

ದೂರ ನೆಗೆಯಬೇಕಾದರೆ ಅನೇಕ ವೇಳೆ ಕೆಲವು ಹೆಜ್ಜೆಗಳನ್ನು ಹಿಂದಕ್ಕಿಡಬೇಕಾಗುತ್ತದೆ.

ಂಂ ಂಂ

ದೇವರನ್ನು ಬಿಟ್ಟ ಸಾವಿರ ಜನರೊಂದು ಕಡೆ ಇರಬಹುದಾದರೂ, ದೇವರೊಡನಿರುವ ಒಬ್ಬನದೇ ಬಹುಮತ!

ಂಂ ಂಂ

ಹೊಟ್ಟೆಬಾಕನು ತನ್ನ ಹಣದ ಚೀಲವನ್ನು ಹೊಟ್ಟೆಯೊಳಗೆ ಹಾಕುತ್ತಾನೆ. ಜಿಪುಣನು ತನ್ನ ಹೊಟ್ಟೆಯನ್ನು ಹಣದ ಚೀಲಕ್ಕೆ ಹಾಕುತ್ತಾನೆ.

"ಅತ್ಯುತ್ತಮ ಬ್ಯಾಂಕಿಂಗ್ ಸೇವೆ"

- ಪಿಗ್ಮಿ
- ಕ್ಯುಮುಲೇಟಿವ್
- ಇನ್ವೆಸ್ಟರ್ಸ್ ಏಜನ್ಸಿ
- ಲಕ್ಷ್ಮೀ ಮತ್ತು ಸಿಂಡಿಕೇಟ್ ಬ್ಯಾಂಕ್ ಕೇಶ್ ಸರ್ಟಿಫಿಕೇಟುಗಳು
- ಭದ್ರತಾ ಕೋಶಗಳು
- ವಿದ್ಯಾರ್ಥಿಗಳಿಗೆ ಮತ್ತು ಧರ್ಮ ಸಂಘ—ಸಂಸ್ಥೆಗಳಿಗೆ ವಿಶೇಷ ಸೌಕರ್ಯಗಳು

ಇನ್ನಿತರ ಎಲ್ಲಾ ವಿಧದ ಬ್ಯಾಂಕಿಂಗ್ ಸೇವೆಗಳು

ದಕ್ಷಿಣ ಭಾರತದಾದ್ಯಂತ ಹಬ್ಬಿರುವ 154ಕ್ಕೂ ಮಿಕ್ಕಿದ ಶಾಖೆಗಳು

ಸಿಂಡಿಕೇಟ್ ಬ್ಯಾಂಕ್

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್,
ರಿಜಿಸ್ಟರ್ಡ್ ಆಫೀಸು : ಮಲ್ಪೆಯಿಂದ ನಿವಾಸ ಉಡುಪಿ.

ಅಮೃತಾಂಜನ
ಎಲ್ಲಾ ನೋವುಗಳಿಗೆ
ಎಲ್ಲಾ ತರದ ಸಿಡಿತ ಮತ್ತು ನೋವುಗಳಿಗೆ
50 ವರ್ಷ ಪ್ರಾಯದ
ಕಾರ್ಲ್ಟನ್ ಕಾರ್ಪೊರೇಶನ್

Edited Printed & Published by K. H. Shetty, at the Navayuga Press, Udipi, S. India.

ರಾಷ್ಟ್ರೀಯ ವಾರಪತ್ರಿಕೆ. ಬೆಲೆ: 13 ನ.ಪೈಸೆ

ನವಯುಗ

KANNADA — NAVAYUGA — WEEKLY

ಸಂಪುಟ ೪೧ ಸಂಚಿಕೆ ೫ | ಉಡುಪಿ 5—10—1961 ಗುರುವಾರ | Vol. 41 No. 4

ನಿಮ್ಮ ಯಾವತ್ತೂ ಮುದ್ರಣ ಕೆಲಸಗಳಿಗೆ ದಯಮಾಡಿ ವಿಚಾರಿಸಿರಿ:

ನವಯುಗ ಪ್ರೆಸ್, ಉಡುಪಿ

ವಿದ್ಯಾರ್ಥಿಗಳಿಗೆ ಮತ್ತು ವಯಸ್ಕರಿಗೆ ಅತ್ಯುಪಯೋಗೀ ಪುಸ್ತಕ ಸುಲಭದಲ್ಲಿ ಇಂಗ್ಲಿಷ್

ನವಭಾರತ ಪುಸ್ತಕ ಭಂಡಾರ ಉಡುಪಿ

ರಾಷ್ಟ್ರೀಯ ಏಕತೆಯ ಸಮಸ್ಯೆ

ಸ್ವತಂತ್ರ ಭಾರತದ ಪ್ರಾಥಮಿಕ ಆವಶ್ಯಕತೆಗಳಲ್ಲಿ ರಾಷ್ಟ್ರೀಯ ಐಕ್ಯವು ಅಗ್ರಗಣ್ಯ ಸ್ಥಾನವನ್ನು ಪಡೆದಿದೆಯೆಂಬುದು ಸರ್ವಶ್ರುತವಿದೆ. ದೇಶದ ನಾಲ್ಕೂ ನಿಟ್ಟುಗಳಲ್ಲಿ ಆಕ್ರಮಣ ಭಯವು ವ್ಯಾಪಿಸಿರುವಾಗ ಇದರ ಮಹತ್ವಿಕೆ ಮತ್ತಷ್ಟು ಹೆಚ್ಚಿತೆನ್ನಬೇಕು. ಭಾರತದಂತಹ ಅತಿವಿಶಾಲವಾದ ಸ್ವತಂತ್ರವಾದ, ಬಹು ಭಾಷೆಗಳನ್ನು ಆಡುವವರು, ಬಹು ಆಚಾರ ಸಂಪ್ರದಾಯಗಳಿಗೆ ಸೇರಿದವರ ಒಂದು ದೇಶದಲ್ಲಿ ಐಕ್ಯ ಭಾವನೆಯನ್ನು ಮೂಡಿಸುವುದು ಎಣಿಸಿದಷ್ಟು ಸುಲಭವಲ್ಲ. ಕನ್ಯಾ ಕುಮಾರಿಯಿಂದ ಉತ್ತರದ ಹಿಮಾಚಲದ ವರೆಗಿನ ಸುವಿಸ್ತೃತ ಭೂಭಾಗವನ್ನು ರಾಜಕೀಯ ಏಕ ಸೂತ್ರದಿಂದ ಬಂಧಿಸಿರುವುದು ಮಹಾ ಸಾಹಸದ ಕಾರ್ಯವೇ ಹೌದು. ಎಲ್ಲರೂ ಒಪ್ಪುವಂತೆ ಇತಿಹಾಸದ ಯಾವ ಕಾಲದಲ್ಲಾದರೂ ಸಂಪೂರ್ಣ ಭಾರತವು ರಾಜಕೀಯ ಏಕ ಸೂತ್ರದಲ್ಲಿದ್ದುದು ಕಂಡು ಬರುವುದಿಲ್ಲ. ಎಂತಲೇ ನಮ್ಮ ಈ ಸಾಧನೆಗಾಗಿ ನಾವು ಅಭಿಮಾನಪಡಲೇಬೇಕು.

ರಾಷ್ಟ್ರದ ಭದ್ರತೆ, ಸಂರಕ್ಷಣೆ ಮತ್ತು ಉತ್ಥಾನಕಾರ್ಯಗಳು ರಾಜಕೀಯ ಏಕ ಸೂತ್ರತೆಯೊಂದರಿಂದಲೇ ಪರಿಣಾಮಕಾರಿಯಾಗುವುದೆಂದು ಯಾರೂ ತಿಳಿಯಬಾರದು. ವಿಭಿನ್ನ ಜಾತೀಯ ಕಲಹ, ಭಾಷೀಯ ಭಿನ್ನಾಭಿಪ್ರಾಯಗಳು ಆಂತರಿಕ ಶಕ್ತಿಯನ್ನು ಕುಂದಿಸುವುದಷ್ಟೇ ಅಲ್ಲ. ದೇಶದ ಅಂತಃ ಶಕ್ತಿಯ ಜೊತೆಗೆ ತನ್ನ ಸಂರಕ್ಷಣಾ ಶಕ್ತಿಯನ್ನೂ ಕಳೆದುಕೊಳ್ಳುವುದು. ಒಂದು ದೇಶದ ಇತಿಹಾಸವನ್ನು ನಾವು ಅವಲೋಕಿಸುವುದಾದರೆ, ಆಂತರಿಕ ಛಿದ್ರತೆಯಿಂದಲೇ ಅದರ ಪತನವಾಗುವುದೆಂಬ ಕಟು ಸತ್ಯವನ್ನು ನಾವು ಕಂಡುಕೊಳ್ಳುವೆವು. ಇದಕ್ಕಾಗಿ ರಾಜಕೀಯ ಐಕ್ಯ ಭಾವದಂತೆಯೇ ಮಾನಸಿಕ ಐಕ್ಯ ಭಾವನೆಯೂ ಅತ್ಯವಶ್ಯವಾಗಿದೆ. ಮಾತೃಭೂಮಿಯು ಸ್ವರ್ಗಕ್ಕಿಂತಲೂ ಮಿಗಿಲಾದುದು ಎಂಬ ವಾಕ್ಯ ವಾಸ್ತವಾಂಶವನ್ನು ಎತ್ತಿ ಹೇಳಿದೆ ಮಾತ್ರವಲ್ಲ, ಮಾತೃ ಭೂಮಿಗಾಗಿ ಜೀವ ಸವೆಸುವ ಕರ್ತವ್ಯವನ್ನೂ ಬೋಧಿಸುತ್ತದೆ.

ಒಂದು ದೇಶದ ಭದ್ರತೆಯು ಅಲ್ಲಿನ ಸಂರಕ್ಷಣಾ ಬಲವನ್ನು ಹೊಂದಿಕೊಂಡಿದೆ. ಜನಬಲವೂ ಒಂದು ಅತ್ಯಪೂರ್ವ ಬಲವಾಗಿದ್ದು ದೇಶದ ಪ್ರಶ್ನೆ ಬಂದಾಗ ಇದು ಒಂದಾಗಿ ಸ್ವದೇಶ ರಕ್ಷಣೆಗೆ ದುಡಿಯುವಂತಾಗಬೇಕು. ಶೋಮ್ ನಗರವನ್ನು ಟಾರ್ಕ್ವಿನ್ ಪಡೆಯು ಕಬಳಿಸ ಬಂದಾಗ, ಶೋಮನರ ಧೈರ್ಯ ಸಾಹಸಗಳಿಂದಲೇ ಅದರ ರಕ್ಷಣೆಯೂಯಿತು. ವಿಜಯ ನಗರದ ಸುದೃಢ ಪಡೆಯನ್ನು ಬಾಹಮನಿ ಸುಲ್ತಾನರು ಒಗ್ಗಟ್ಟಿನಿಂದ ಇದುರಿಸಿದ ಫಲವಾಗಿಯೇ ಅವರು ಗೆದ್ದುಕೊಂಡರು. ದೇಶದ ಸಮಸ್ತ ಜನತೆ ವ್ಯಕ್ತಿಗಿಂತ ಸಮಾಜ, ಸಮಾಜಕ್ಕಿಂತ ರಾಜ್ಯರಾಜ್ಯಕ್ಕಿಂತ ರಾಷ್ಟ್ರ ದೊಡ್ಡದೆಂದು ತಿಳಿದು ಭಾವೈಕ್ಯದಿಂದ ಬದುಕಬೇಕಾದ ಆವಶ್ಯಕತೆಯನ್ನು ಪ್ರತ್ಯೇಕ ಹೇಳಬೇಕಾಗಿಲ್ಲ.

ನಮ್ಮ ಭಾರತದಲ್ಲಿ ಅತ್ಯಮೂಲ್ಯವಾದ ಈ ಭಾವೈಕ್ಯವು ಹ್ರಾಸಗೊಂಡಿದೆಯೆಂಬುದು ಕಳಕಳಿಯನ್ನುಂಟುಮಾಡಿದೆ. ರಾಜಕೀಯ ರೀತಿ—ನೀತಿಗಳೇನೇ ಇರಲಿ, ನಮ್ಮ ರಾಷ್ಟ್ರದ ಪ್ರಶ್ನೆ ಬಂದಾಗ ಎಲ್ಲರೂ ಏಕ ಮತದಿಂದ ನಡೆದುಕೊಳ್ಳುವ ಪ್ರಾಮುಖ್ಯ ಇಂದೀಗ ಹೆಚ್ಚಿದೆ. ಇದನ್ನು ಮನಗಂಡ ನಮ್ಮ ಪ್ರಧಾನ ಮಂತ್ರಿ ನೆಹರು ಒಂದು ಭಾವೈಕ್ಯ ಸಂಪತ್ತನ್ನು ಕರೆದಿದ್ದರು. ಇದರಲ್ಲಿ ಕೇಂದ್ರದ ಕ್ಯಾಬಿನೆಟ್ ಮಂತ್ರಿವತ್ತು ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳಲ್ಲದೆ ಪ್ರಸಿದ್ಧ ಶಿಕ್ಷಣತಜ್ಞರೂ ರಾಜಕೀಯ ಪಕ್ಷಗಳ ಮುಖಂಡರೂ ಮತ್ತಿತರ ಸಮಾಲೋಚಕರೂ ಸೇರಿ ಒಟ್ಟು ಸುಮಾರು ೧೫೦ ಪ್ರತಿನಿಧಿಗಳು ಭಾಗವಹಿಸಿದ್ದರು. ಸರ್ವಸಾಮಾನ್ಯವಾಗಿ, ಈ ಪರಿಷತ್ತಿನಲ್ಲಿ ಸೇರಿದ್ದ ಎಲ್ಲ ಪ್ರತಿನಿಧಿಗಳೂ ದೇಶದ ಭದ್ರತೆ—ರಕ್ಷಣೆ ಅಭಿವೃದ್ಧಿಗಳಿಗೆ ಭಾರತೀಯರ ಭಾವೈಕ್ಯವಾಗುವುದು ಆವಶ್ಯವೆಂಬ ಅಭಿಪ್ರಾಯವನ್ನು ಮಂಡಿಟ್ಟರು. ಮಕ್ಕಳಿಗೆ ಕೊಡುವ ಶಿಕ್ಷಣವು ವ್ಯಾಪಕ ದೃಷ್ಟಿಕೋಣದಿಂದ ಕೂಡಿದ್ದು ಎಳೆಯಲ್ಲಿಯೇ ರಾಷ್ಟ್ರೀಯ ಭಾವನೆಯನ್ನು ಹುಟ್ಟಿಸುವಂತಿರಬೇಕು. ದೇಶದ ಕಡೆಗೆ ನಿಷ್ಠೆತೋರಿಸುವ ಪ್ರವೃತ್ತಿಯನ್ನು ವಿದ್ಯಾರ್ಥಿ ದಶೆಯಲ್ಲಿಯೇ ಮೂಡಿಸಬೇಕು ಎಂಬ ನಿರ್ಣಯವನ್ನು ಪರಿಷತ್ತು ಅನುಮೋದಿಸಿತು. ರಾಷ್ಟ್ರೀಯ ಐಕ್ಯವನ್ನು ಬಲಗೊಳಿಸಲು ೩೭ ಜನ ಸದಸ್ಯರಿರುವ ಒಂದು ಪರಿಷತ್ತನ್ನು ಸ್ಥಾಪಿಸುವ ಗೊತ್ತುವಳಿಯನ್ನೂ ಅದು ಸ್ವೀಕರಿಸಿತು. ಈ ಪರಿಷತ್ತಿನ ಅಧ್ಯಕ್ಷರು ಪ್ರಧಾನ ಮಂತ್ರಿ, ನೆಹರು ಆಗಿರುವರು. ಕೇಂದ್ರದ ಗೃಹಮಂತ್ರಿ, ರಾಜ್ಯಗಳ ಮುಖ್ಯಮಂತ್ರಿಗಳು, ಸಂಸದೀಯ ಪಕ್ಷಗಳ ನಾಯಕರು, ವಿಶ್ವವಿದ್ಯಾಲಯ ಸಹಾಯಧನಾಯೋಗದ ಅಧ್ಯಕ್ಷ, ಇನ್ನರು ವಿದ್ಯಾ ತಜ್ಞರು, ಭಾಷಾ ಅಲ್ಪಸಂಖ್ಯಾಕರು ಮತ್ತು ಪರಿಶಿಷ್ಟ ಜಾತಿ ಮತ್ತು ವರ್ಗಗಳ ಪ್ರತಿನಿಧಿಗಳು, ಇಂದಿರಾ ಗಾಂಧಿ, ಕಾಂಗ್ರೆಸ್ ಏಕತಾ ಸಮಿತಿಯ ಅಧ್ಯಕ್ಷ, ಮತ್ತಿತರ ಏಳ್ವರು ಪ್ರಮುಖ ವ್ಯಕ್ತಿಗಳು ಈ ಪರಿಷತ್ತಿನಲ್ಲಿರುವರು. ಸ್ಥಾಯಿ ಸಂಸ್ಥೆಯ ರೂಪದಲ್ಲಿರುವ ಈ ಪರಿಷತ್ತು ಸಮಯ ಸಮಯದಲ್ಲಿ ರಾಷ್ಟ್ರೀಯ ಐಕ್ಯಕ್ಕೆ ಸಂಬಂಧಿಸಿದ ವಿಷಯಗಳ ಮೇಲೆ ಸಿಂಹಾವಲೋಕನ ಮಾಡುವುದು ಮತ್ತು ಆ ಬಗ್ಗೆ ಸಲಹೆ ನೀಡುವುದು.

ಪರಿಷತ್ತಿನಲ್ಲಿ ಭಾಗವಹಿಸಿದ ಮಾಜಿ ವಿತ್ತ ಮಂತ್ರಿ ಹಾಗೂ ವಿಶ್ವವಿದ್ಯಾಲಯ ಸಹಾಯ ಧನಾಯೋಗದ ಅಧ್ಯಕ್ಷರಾದ ಶ್ರೀ ಸಿ. ದೇಶಮುಖರು ರಾಷ್ಟ್ರೀಯ ಐಕ್ಯ ಸಾಧನೆಯ ಬಗ್ಗೆ ಅತೀವ ಆಸಕ್ತಿಯನ್ನು ವ್ಯಕ್ತಪಡಿಸಿದರು. ಪಾಠಶಾಲೆಗಳಲ್ಲಿ ಕಲಿಯುವ ವಿದ್ಯಾರ್ಥಿಗಳಲ್ಲಿ ದೇಶಸೇವೆಯ ಕಡೆಗೆ ನಿಷ್ಠೆ ತೋರಿಸುವ ಮತ್ತು ಆತ್ಮಸಮರ್ಪಣೆ ಗೆಯ್ಯುವ ಪ್ರತಿಜ್ಞೆಯನ್ನು ಮಾಡಬೇಕೆಂದವರು ಪ್ರತಿಪಾದಿಸಿದರು. ಈ ಸಂಬಂಧದಲ್ಲಿ ಅವರೊಂದು ಗೊತ್ತುವಳಿಯನ್ನು ಮಂಡಿಸಿ ತಂದಿದ್ದು ಅದರಂತೆ ಭಾರತದ ಎಲ್ಲ ಶಾಲೆಗಳಲ್ಲಿ ಓದುವಾರಂಭವಾಗುವುದಕ್ಕೆ ಮೊದಲು ಪ್ರಾರ್ಥನೆಯುನಡೆಯಬೇಕು. ಪ್ರಾರ್ಥನೆಯಲ್ಲಿ ದೇಶಸೇವೆ. ವಿಶ್ವಶಾಂತಿಗಳ ಕಡೆಗೆ ನಿಷ್ಠೆ ಸಮರ್ಪಣ ಮಾಡುವ ಪ್ರತಿಜ್ಞೆ ಅಡಕವಾಗಿರಬೇಕು. ಈ ಪ್ರತಿಜ್ಞೆಯ ಸ್ವರೂಪವೀ ರೀತಿಯಿದೆ.

"ಇಂದು ಪ್ರಾತಃಕಾಲ, ಭಾರತೀಯ ಗಣತಂತ್ರದಲ್ಲಿ ಜನಿಸಿದ ನಾನು, ಸ್ವದೇಶಕ್ಕೆ ವಿಶ್ವಸ್ಥನಾಗಿ ನಡೆಯುವೆನು, ನನ್ನ ರಾಷ್ಟ್ರ ಮತ್ತು ಜನತೆಯ ಸೇವೆಗಾಗಿ ಆತ್ಮ ಸಮರ್ಪಣೆ ಮಾಡುವೆನು, ನನ್ನ ಪವಿತ್ರ ದೇಶದ ಸ್ವಾತಂತ್ರ್ಯ ರಕ್ಷಣೆ ಮಾಡುವೆನು ಮತ್ತು ಅದರ ಏಳಿಗೆಗಾಗಿ ಕಾರ್ಯಮಗ್ನನಾಗುವೆನು ಹಾಗೂ ವಿಶ್ವ ಶಾಂತಿ ಮತ್ತು ವಿಶ್ವಭ್ರಾತೃತ್ವ ಸ್ಥಾಪನೆಗಾಗಿ ಮೋರಾಡುವೆನು...ಎಂದು ಪ್ರತಿಜ್ಞೆ ಮಾಡುತ್ತೇನೆ."

ಪಕ್ಷಗಳ ಆಚರಣ ಪದ್ಧತಿ

ರಾಜಕೀಯ ಪಕ್ಷಗಳ ಆಚರಣ ಪದ್ಧತಿಯನ್ನು ರೂಪಿಸಲು ನೇಮಿಸಿದ ಉಪಸಮಿತಿಯೊಂದು ಅಂತಹ ಆಚರಣ ಪದ್ಧತಿಯ ಕರಡನ್ನು ತಯಾರಿಸಿತು. ಭಾವೈಕ್ಯ ಸಮ್ಮೇಳನದಲ್ಲಿ ಉಪಸ್ಥಿತರಿದ್ದ ಬೇರೆ ಬೇರೆ ರಾಜಕೀಯ ಪಕ್ಷಗಳ ನಾಯಕರು ಅವುಗಳಲ್ಲಿ ಆರು ನಿಯಮಗಳನ್ನು ತಾತ್ಕಾಲಿಕವಾಗಿ ಒಪ್ಪಿಕೊಂಡಿದ್ದಾರೆ. ಅವು ಈ ರೀತಿ ಇವೆ.

೧. ಬೇರೆ ಬೇರೆ ಜಾತಿ ಮತ್ತು ಸಮುದಾಯಗಳಲ್ಲಿ ಧಾರ್ಮಿಕ ಅಥವಾ ಭಾಷಿಕ ಸಂಗಡಗಳಲ್ಲಿ ವಾರಸ್ಪರಿಕ ತಿರಸ್ಕಾರ ಭಾವನೆ ಮೂಡಿಸುವ ಅಥವಾ ವಿರಸವುಂಟಾಗುವ ಯಾವುದೇ ಕೆಲಸವನ್ನು ಯಾವ ರಾಜಕೀಯ ಪಕ್ಷವೂ ಮಾಡಬಾರದು.

೨. ಯಾವುದೇ ಸಂಪ್ರದಾಯ, ಜಾತಿ, ಧರ್ಮ ಅಥವಾ ಭಾಷಾ ಸಂಬಂಧದ ವಿವಾದಗಳನ್ನು ದೂರೀಕರಿಸಲು ಒಡಂಬಡಿಕೆಯ ಮಾರ್ಗವನ್ನೂ ಮಧ್ಯಸ್ಥಿಕೆಯ ದಾರಿಯನ್ನೂ ಕೈಗೊಳ್ಳುವುದಕ್ಕೆ ಮೊದಲು ಜನತೆಯ ವಿಭಿನ್ನ ವರ್ಗಗಳ ನಡುವೆ ದ್ವೇಷಉತ್ಪನ್ನವಾಗುವ, ವಿರಸವುಂಟಾಗುವ, ಶಾಂತಿಭಂಗವಾಗುವ ಯಾವುದೇ ಆಂದೋಲನಾತ್ಮಕ ಮಾರ್ಗವನ್ನು ತುಳಿಯಬಾರದು.

೩. ಪ್ರತಿ ರಾಜಕೀಯ ಪಕ್ಷವು ಯಾವುದೇ ಸಂದರ್ಭದಲ್ಲಿ ಆಂದೋಲನ ನಡೆಸುವಾಗ, ಅದರಲ್ಲಿ ಹಿಂಸೆಗೆ ಯಾವ ರೀತಿಯಲ್ಲೂ ಪ್ರೋತ್ಸಾಹ ದೊರೆಯುವುದಿಲ್ಲ. ಯಾವ ಹಿಂಸಾತ್ಮಕ ಕಾರ್ಯವನ್ನೂ ನಡೆಸುವುದಿಲ್ಲವೆಂಬುದರ ಬಗ್ಗೆ ವಿಶ್ವಾಸವಿರಬೇಕು. ಒಂದು ವೇಳೆ ಅದೆಷ್ಟು ಪ್ರಯತ್ನಪಟ್ಟು ತಡೆದರೂ ಹಿಂಸಾಚರಣೆ ನಡೆಯಿತೆಂದರೆ, ಕೂಡಲೇ ಅದನ್ನು ವಿರೋಧಿಸಬೇಕು.

೪. ಒಂದು ರಾಜಕೀಯ ಪಕ್ಷವು ಏರ್ಪಡಿಸಿದ ಸಭೆ—ಮೆರವಣಿಗೆಗಳಿಗೆ ಮತ್ತೊಂದು ಪಕ್ಷವು ವಿಘ್ನಬಾಧೆಗಳನ್ನು ಒಡ್ಡಬಾರದು.

೫. ಕಾನೂನು ಮತ್ತು ಸುವ್ಯವಸ್ಥೆಗಳನ್ನು ಸಂರಕ್ಷಿಸಲು ಸರಕಾರವು ಕ್ರಮ ಕೈಗೊಳ್ಳುವಾಗ, ಅದು ನಾಗರಿಕ ಅಧಿಕಾರಗಳನ್ನು ಅನುಚಿತವಾಗಿ ಪ್ರತಿಬಂಧಿಸದಂತೆ ನೋಡಿಕೊಳ್ಳಬೇಕು. ರಾಜಕೀಯ ಪಕ್ಷಗಳ ಸಾಮಾನ್ಯ ಗತಿವಿಧಿಗಳಿಗೆ ಬಾಧೆಯನ್ನು ತಂದೊಡ್ಡಬಾರದು.

೬. ಮತ್ತೊಂದು ಪಕ್ಷದ ಜನರಿಗೆ ಹಾನಿಯನ್ನುಂಟುಮಾಡಲು ಅಥವಾ ತನ್ನ ಸ್ವಾರ್ಥದ ಪೂರ್ತಿಗಾಗಿ ಯಾವನೇ ವ್ಯಕ್ತಿಯು ತನ್ನ ರಾಜಕೀಯ ಪಕ್ಷವನ್ನು ಯಾವ ಮಟ್ಟದಲ್ಲಿಯೂ ಉಪಯೋಗಿಸಿಕೊಳ್ಳಬಾರದು.

ರಾಜ್ಯಮಟ್ಟದಲ್ಲಿ ರಾಜಕೀಯ ಪಕ್ಷಗಳು ಮೇಲೆ ಹೇಳಿದ ನೀತಿಯನ್ನು ವಿಸ್ತೃತವಾಗಿ ಅನುಸ್ಥಾನಕ್ಕೆತರಲನುಕೂಲವಾಗುವಂತೆ ಪ್ರಯತ್ನ ಪಡಬೇಕು ಎಂದು ಉಪ ಸಮಿತಿಯ ಅಭಿಪ್ರಾಯವಿದೆ. ಶ್ರೀ ಗುಲ್ಜಾರೀಲಾಲ ನಂದಾರ ಅಧ್ಯಕ್ಷತೆಯಲ್ಲಿದ್ದ ಈ ಉಪಸಮಿತಿಯಲ್ಲಿ ಆಜಯ ಘೋಷ, ಅಶೋಕ ಮೆಹತಾ, ಸಂಜೀವ ರೆಡ್ಡಿ ಮತ್ತು ಸಿ. ಸುಬ್ರಮಣ್ಯಂರವರು ಸದಸ್ಯರಾಗಿದ್ದರು

ಮಕ್ಕಳು ಮತ್ತು ಸದ್ಗುಣಸಂಪತ್ತು

ಶ್ರೀಮತಿ ಯಶೋದಾ ಯೆನ್. ಜೆನ್ನಿ.

ಬಸ್ಸ್ ಸ್ಟ್ಯಾಂಡಿನ ಮೂಲೆಯೊಂದರಲ್ಲಿ ಹುಚ್ಚಿಯೊಬ್ಬಳು ತಲೆಕೆರೆದುಕೊಳ್ಳುತ್ತಾ ಅಳುತ್ತಿದ್ದಳು. ಬಾಲಕರ ತಂದದೃಷ್ಟಿ ಅಕಸ್ಮಾತ್ತಾಗಿ ಅತ್ತ ಹರಿದಾಗ ಆಕೆಯ ದೇಹ ಭಯದಿಂದ ಕಂಪಿಸಿತು. ಮಕ್ಕಳಾದರೋ ತಂಡಿಯ ಗಾಳಿಯನ್ನೇ ಕಂದ ಕಾಗೆಗಳಿಗಿಂತಲೂ ಅಧಿಕವಾದ ಹರ್ಷಭರಿತರಾಗಿ ಅವಳತ್ತ ಓಡಿದರು. ಅದನ್ನು ನೋಡಿದ ಆಕೆ ಎದ್ದು ನಿಂತಳು. ಅಲ್ಲಿ ನಿಲ್ಲಿಸಿ ಮೆಲ್ಲನೆ ಮುಂದಡಿಯಿಟ್ಟಳು ಅದರೆ ಆ ತಂಡ ಅಷ್ಟಕ್ಕೇ ಸುಮ್ಮನಾಗಲಿಲ್ಲ. ಹತ್ತಿರವಿದ್ದ ಬೀದಿಯ ಕಲ್ಲುಗಳನ್ನು ಅವಸರವಸರವಾಗಿ ಹೆಕ್ಕಿಕೊಂಡು ಅವಳನ್ನು ಹಿಂಬಾಲಿಸಿ ಓಡ ತೊಡಗಿದರು. ಆಕೆ ಇನ್ನಷ್ಟು ಬೆದರಿ ಕಂಗಾಲಾಗಿ ಓಡುತ್ತಿದ್ದಳು. ಕೂಗುತ್ತಾ ಅಳುತ್ತಾ ಓಡಿದಳು. ಊಹ್ಹೂ...ಅದರೆ ಆ ಬಾಲಕರು ಕೆಚ್ಚೆದೆಯ ವೀರರಂತೆ ಕಲ್ಲುಗಳನ್ನು ಗುರಿಯಿಟ್ಟು ಎಸೆಯ ತೊಡಗಿದರು. ಪಾಪ! ಮೊದಲೇ ಆಹಾರ, ನಿದ್ದೆಗಳಿಲ್ಲದೆ ಕೃಶಗೊಂಡ ಆಕೆ ಮುಂದೆ ಓಡಲಾರದೆ ಸೋತು ಕುಳಿತು ಬಿಟ್ಟಳು. ಮುಖ ಮುಚ್ಚಿಕೊಂಡು ಅಳ ತೊಡಗಿದಳು. ನೋವು ಹದೆಯ ದಾ ದಾ ಗ ತಾ ನೂ ಬೈಯ್ಯಿಯನ್ನು ಚೆಲ್ಲತೊಡಗಿದಳು. ಇದರಿಂದ ಲಂತೂ ಮಕ್ಕಳ ಸಿಟ್ಟು ವಿಂತಿ ಮೀರಿತು ಅದರಿಂದಾಗಿ ಒಬ್ಬೊಬ್ಬರೇ ಬಿದ್ದ ನಾಲ್ಕೈದು ಕಲ್ಲಿನೇಟುಗಳಿಂದ ಗಾಯಗೊಂಡ ಆಕೆಯ ಮೈಯಲ್ಲಿ ರಕ್ತ ಸುರಿಯತೊಡಗಿತು. ಆಕೆ ಅಳುತ್ತಾ ಶಪಿಸುತ್ತಿದ್ದಳು. ಮಕ್ಕಳ ತಮಾಷೆಯಲ್ಲಿ ಪಾಲುಗೊಂಡ ದೊಡ್ಡವರೆನಿಸಿದ ಮನುಷ್ಯರು (!) ನಗುತ್ತಿದ್ದರು.

ಚರಂಡಿಯ ಪಕ್ಕದಲ್ಲಿ ನಾಯಿ ಮರಿಯೊಂದು ಅನಾಥವಾಗಿ ಬಿದ್ದುಕೊಂಡು ಆರ್ತನಾದ ಗೈಯುತಿತ್ತು. ಹುಟ್ಟಿ ಕೆಲವೇ ದಿನಗಳೊಳಗೆ ತಾಯಿಯನ್ನಗಲಿ ಹಸಿವು, ಬಾಯಾರಿಕೆಗಳಿಂದ ದಿಕ್ಕು ತೋಚದೆ ಕಂಗೆಟ್ಟು ಕುಂಯಿಗುಟ್ಟುತಿತ್ತು. ಶಾಲೆಗೆಂದು ಹೊರಟ ಮೋಲೀ ಮಕ್ಕಳಿಬರಿಗೆ ಅದನ್ನು ನೋಡಿ ನಗುಬಂತು. ಮೋಜೆನಿಸಿತು. ಶಾಲೆಗೆ ಹೊತ್ತಾಗುವುದೆಂಬುದನ್ನೂ ಲಕ್ಷಿಸದೆ ಅತ್ತ ಒಡಿ ನಾಯಿ ಮರಿಯನ್ನು ಕಾಲಿನಿಂದ ಚರಂಡಿಗೆ ದೂಡಿ ಅದರ ಬಿಳಿ ಬಣ್ಣ ಕಸ್ಸು ಕೆಸರಿನಿಂದ ಚಿತ್ರ ಬರೆದಂತಾದಾಗ ಹೆತ್ತು ಸಲ ಪ್ರಯತ್ನಿಸಿದರೂ ಆ ಕೆಸರಿನಿಂದ ಮೇಲೇಳದೆ ಗೋಳಿಡುವ ಸ್ಥಿತಿಯೊದಗಿದಾಗ ತಡೆಯಲಾರದ ನಗು ಬಂತವರಿಗೆ ದೂರದಲ್ಲಿ ಇದನ್ನು ನೋಡಿದ ಯಾರೋ ಒಬ್ಬ ಮಹಾತ್ಮ "ಯಾಕಪ್ಪಾ ಹಾಗ್ಮಾಡ್ತೀರಿ?" ಎಂದುದಕ್ಕೆ ಇನೊಬ್ಬ ಮಹಾತ್ಮ "ಮಕ್ಕಳ ಬುದ್ಧಿ! ಹೇಗಿದ್ದರೂ ಅದು ಸಾಯುವಂತಾದ್ದು, ಹೋಗಲಿ ಬಿಡಿ" ಎಂದು ಸಮಾಧಾನ ಹೇಳಿದ.

ಇನ್ನೊಂದು ಕಡೆಯಲ್ಲಿ ವೃದ್ಧ ಭಿಕ್ಷುಕನೊಬ್ಬ ಭಿಕ್ಷೆ ಕೇಳಿದ ಅಪರಾಧಕ್ಕೆ ಶ್ರೀಮಂತ ಮತ್ತನೊಬ್ಬ ತಮಾಷೆಗಾಗಿ ನಾಯಿಯನ್ನು ಕರೆದು 'ಹಿಡಿ' ಎಂದುಬಿಟ್ಟ. ದಂಟೆಯ ಅಧಾರದಿಂದ ನಡೆಯುವ ಆ ಅಶಕ್ತ ಮುದುಕ ಹೆದರಿ ಓಡಲೆತ್ನಿಸುವಷ್ಟರಲ್ಲೇ ಚಿನ್ನಾಗಿ ತಿಂದು ಕೊಬ್ಬಿದ ಆ ನಾಯಿ ಇದರಾಗಿ ಬೊಗಳಿತು. ಅತ ಬೆದರಿ ಅತ್ತಿತ್ತ ಹಾರುವ ಗಲಾಟೆಯಲ್ಲಿ ಬಿದ್ದುಬಿಟ್ಟ. ನಾಯಿಗೂ ಸಿಟ್ಟೇರಿತು. ಮೈಮೇಲೇರಿ ಕಚ್ಚಿಯೇ ಬಿಟ್ಟಿತು. ಹುಡುಗ ಕೇಕೇ ಹಾಕಿ ನಗುತ್ತಿದ್ದ. ಅವನ ತಾಯಿ ಇದನ್ನೆಲ್ಲಾ ನೂಳಗೆಯ ಮೇಲಿಂದಲೇ ನೋಡಿ ಅನ್ನುತ್ತಿದ್ದಳು—

"ದಂದ್ರ ಹಿಡಿದವ್ರು, ಹಾಗೇ ಆಗ್ಬೇಕು. ಎಷ್ಟೊತ್ತಿಗೆ ನೋಡಿದ್ರೂ ಭಿಕ್ಷೆ ಅಂತೆ ಭಿಕ್ಷೆ." ಅತ ನೋವಿನಿಂದ ಅಳುತ್ತಾ ಬೊಬ್ಬಿಡುತ್ತಿದ್ದ. ತಮಾಷೆ ನೋಡಲು ಜನರ ಗುಂಪು ಸೇರುತ್ತಲಿತ್ತು.

ಇವೇ ನಾಲದೇ? ನಾವು ಹೇಗೆ ಸಾಗುತ್ತಿದ್ದೇವೆ? ನಮ್ಮ ಮಕ್ಕಳಿಗೆ ಎಂತಹ ಸಾಹಸ ಕೃತ್ಯಗಳನ್ನು ಕಲಿಸುತ್ತಿದ್ದೇವೆ? ಅದಕ್ಕಾಗಿ ಎಂತಹ ಮಾರ್ಗದರ್ಶನವನ್ನಿತ್ತಿದ್ದೇವೆ? ಎಂಬುದನ್ನು ತಿಳಿದುಕೊಳ್ಳಬೇಕಾದರೆ ಇಂತಹ ಹಲವಾರು ಘಟನೆಗಳನ್ನು ಪ್ರತಿನಿತ್ಯವೂ ನೋಡುತ್ತಿರುವ ಸಂದರ್ಭಗಳೇ ಸಾಲವೇ? ಇದಕ್ಕಿಂತಲೂ ವಿಚಿತ್ರ ಮತ್ತು ವಿಷಾದದ ವಿಷಯವೆಂದರೆ ತಮ್ಮ ಮಕ್ಕಳ ಈ ರೀತಿಯ ಹಾಸ್ಯಪ್ರವೃತ್ತಿ (!)ಯನ್ನೂ, ಧೀರ ಮನೋವೃತ್ತಿ(!)ಯನ್ನೂ ನೋಡಿ ಸಂತೋಷದಿಂದ ನಗುವ ತಾಯಂದಿರು ಅರ್ಧಾಂಶಕ್ಕಿಂತಲೂ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆಂದರೆ ಮಕ್ಕಳಲ್ಲಿ ಶೀಲಸಂವರ್ಧನೆ ಯಾಗುವುದಾದರೂ ಹೇಗೆ? ಅವಿದ್ಯಾವಂತರು ಅಜ್ಞತೆಯಿಂದ ನಿರ್ಲಕ್ಷ್ಯರಾಗಿದ್ದರೆ ಶ್ರೀಮಂತರು ಹೃದಯ ಹೀನತೆಯಿಂದಾಗಿ ಅಲಕ್ಷ್ಯರಾಗುತ್ತಾರೆ. ಎಂದ ಮೇಲೆ ಬೆಳೆಯ ಗುಣ ಮೊಳಕೆಯಲ್ಲೇ ಎನ್ನುವುದು ನಿಜವಾದರೆ ಇಂತಹ ಮಕ್ಕಳು ಮುಂದೆ ಕಲಿತರೂ ಎಷ್ಟರ ಮಟ್ಟಿಗೆ ಒಳ್ಳೆಯ ಗುಣ, ನಡತೆಗಳನ್ನು ಕಲಿತುಕೊಂಡಾರು ಎಂಬುದನ್ನು ನೀವೇ ಊಹಿಸಿಕೊಳ್ಳಿ. ಮುಖ್ಯವಾಗಿ ಮನೆಯಲ್ಲಿ ಹೆತ್ತವರೂ, ಶಾಲೆಯಲ್ಲಿ ಶಿಕ್ಷಕರೂ ಈ ವಿಷಯವಾಗಿ ಸಾಕಷ್ಟು ಜಾಗ್ರತೆ ವಹಿಸದಿರುವುದೇ ಮಕ್ಕಳಲ್ಲಿ ದುರ್ಗುಣಗಳು ಬೆಳೆಯಲು ಕಾರಣವಾಗಿದೆ. ಹುಟ್ಟುವಾಗಲೇ ಯಾವ ಮಗುವೂ ಕೆಟ್ಟ ಗುಣವನ್ನು ಪಡೆದುಕೊಂಡು ಬರಲಾರದು, ಆದರೆ ವಾತಾವರಣ, ಶಿಕ್ಷಣ, ಸಹವಾಸಗಳಿಂದಲೇ ಮಕ್ಕಳಲ್ಲಿ ಒಳ್ಳೆಯ ಅಥವಾ ಕೆಟ್ಟ ಗುಣಗಳು ಬೆಳೆಯಲು ಕಾರಣವಾಗುವುವೆಂಬುದು ಎಲ್ಲರಿಗೂ ತಿಳಿದ ವಿಷಯವೇ. ಒರಿಯ ಓದು ಬರೆಹ ಕಲಿತ ಮಾತ್ರಕ್ಕೆ ಶಿಕ್ಷಣವನ್ನು ಪಡೆದನೆನ್ನುವಂತಿಲ್ಲ, ಅದಕ್ಕಿಂತಲೂ ಮುಖ್ಯವಾದ ಮನುಷ್ಯತ್ವವನ್ನು ಳಿಸಿಕೊಳ್ಳುವ ದಯೆ, ಸಹಾನುಭೂತಿ, ಪ್ರಾಮಾಣಿಕತನವನ್ನುಳಿಸಿ ಕೊಂಡರೇನೇ ಮುಂದೆಯೂ ಮಾನವನಾಗಿ ಬಾಳುವುದು ಸಾಧ್ಯವಿದೆ. ಆದರೆ ಅದಕ್ಕಾಗಿ ಪ್ರಯತ್ನಿಸುವವರ ಸಂಖ್ಯೆಯೇ ಕಡಿಮೆಯಾಗಿದೆ. ಮುಂದಿನ ಜನಾಂಗವಾದ ಇಂದಿನ ಮಕ್ಕಳಿಗೆ ಸರಿಯಾದ ಮಾರ್ಗದರ್ಶನ, ಶಿಕ್ಷಣ, ಆದರ್ಶ ನಡೆನುಡಿಗಳಿಂದ ಅವರು ಸದ್ಗುಣವಂತರಾಗಿ ಸದಾಚಾರ ಸಂಪನ್ನರಾಗಿ, ಯೋಗ್ಯ ಮಾನವರಾಗಿ ಬಾಳುವಂತೆ ಮಾಡಲು ಹೆತ್ತವರೂ ಉಪಾಧ್ಯಾಯರೂ ಹೆಚ್ಚಿನ ಹೊಣೆ ಹೊತ್ತ ಶಾಲಾ ಶಿಕ್ಷಕರೂ ಶ್ರಮ ವಹಿಸಿದರೇನೇ ಮುಂದಿನ ಜನಾಂಗವು ನಿಜವಾದ ಮಾನವ ಕುಲವಾಗಿ ಬೆಳಗೀತೆಂಬುದರಲ್ಲಿ ಸಂದೇಹವಿಲ್ಲ.

ಅಸ್ಥಮಾ ಪೀಡಿತರ ಗಮನಕ್ಕೆ

ಹಿಮಾಲಯದ ಪ್ರಸಿದ್ಧ ಅಸ್ಥಮಾ ನಿವಾರಕ ಮೂಲಿಕೆಯನ್ನು ದಿ. 23—10—61 ಹುಣ್ಣಿಮೆಯ ರಾತ್ರಿ ಹಾಲು ಮತ್ತು ಅಕ್ಕಿಯಿಂದ ತಯಾರಿಸಿದ ಖೀರಿನಲ್ಲಿ ತೆಗೆದುಕೊಳ್ಳುವುದರಿಂದ ಅಸ್ಥಮಾ, ಗೂರಲು, ಕೆಮ್ಮು, ಉಬ್ಬಸ, ಮೇಲುಸಿರು ಮತ್ತು ಶ್ವಾಸ ಕಟ್ಟುವಿಕೆ ಇವುಗಳು ನಿವಾರಿಸಲ್ಪಡುತ್ತವೆ. ಕೂಡಲೇ ಇಂಗ್ಲಿಷಿನಲ್ಲಿ ಬರೆಯಿರಿ:

Shri Mahatma Sidh Baba Sewa Ashram
P. O. Chitrakot. (Uttar Pradesh)

ESTD. 1921 ಸ್ಥಾಪನೆ

NAVAYUGA
KANNADA WEEKLY,
UDIPI.

Founder:
Late Sri A. B. Shetty
Former Minister for Public Health, Govt. of Madras & Govt. of Mysore.

ನವಯುಗ

ರಾಷ್ಟ್ರೀಯ ವಾರಪತ್ರಿಕೆ
ಉಡುಪಿ

ಗೌರವ ಸಂಪಾದಕರು:
ಎಸ್. ಗೋಪೀಚಂದ ರಾವ್, ವಿದ್ವಾನ್.
ಬಿ. ರಾಮರಾಯ ಶೆಟ್ಟಿ, ಬಿ. ಎ., ಎಲ್.ಟಿ.

ಸಂಚಾಲಕ ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ.

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-50
ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3 50

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಂಪಾದಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಅಸ್ಥಮಾ ರೋಗಿಗಳ ತಿಳುವಳಿಕೆಗೆ

ರಿಜಿಸ್ಟ್ರಿಯಾದ ಚಿತ್ರಕೋಟ್ ಅಸ್ಥಮಾ ನಿವಾರಕಬೂತಿಯನ್ನು ತಾ. 23-10-61ನೇ ಹುಣ್ಣಿಮೆ ರಾತ್ರಿ ಖೀರಿನೊಂದಿಗೆ ಸೇವಿಸುವುದರಿಂದ ಅಸ್ಥಮಾ, ನೇವಸ, ಕೆಮ್ಮು, ನೆಗಡಿ ನಿವಾರಣೆಯಾಗುತ್ತದೆ. ಕೂಡಲೇ ಹುಣ್ಣಿಮೆಯ ಮೊದಲೇ ಬರೆಯಿರಿ.

Manager, Shri Mahatma Naga Baba Auruvedashram,
P. O. Chitrakot U. P.

41 ವರ್ಷಗಳ ಭದ್ರ ಹಾಗೂ ಸಮರ್ಥ ಬೇಂಕಿಂಗ್ ಸೇವೆ.

ದಿ. ಪಾಂಗಾಳ ನಾಯಕ್ ಬೇಂಕ್ ಲಿ.

ನಮ್ಮ 3 ವರ್ಷ ವ್ಯಾದೆಯ ಕೇಶ್ ಸರ್ಟಿಫಿಕೇಟುಗಳಲ್ಲಿ ಠೇವಣಿ ಮಾಡಿರಿ: ಬಡ್ಡಿ ಸೇಕಡಾ 5ರಂತೆ: ರೂ. 87—00 3 ವರ್ಷಗಳ ಅಂತ್ಯದಲ್ಲಿ ಬಡ್ಡಿ ಕೂಡಿ ರೂ. 100—00 ಒದಗಿಸುವುದು.

ಕರೆ, ಚಿಕ್ಕ ವ್ಯಾದೆ, ನಿರಖು ಠೇವಣಾತಿಗಳ ಮೇಲೆ ಆಕರ್ಷಣೀಯ ದರಗಳು: ಬಡ್ಡಿ ಸೇಕಡಾ 5½ರ ವರೆಗೆ

ತಾ. 1—4—1961ರಿಂದ ಸೇವಿಂಗ್ಸ್ ಬೇಂಕ್ ಖಾತೆಗಳ ಮೇಲೆ ಬಡ್ಡಿ ಸೇಕಡಾ 3ರಂತೆ.

THE PANGAL NAYAK BANK LTD.
Estd: 1920

ದಿ ವಿಜಯ ಬೇಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬೇಂಕ್. ಸ್ಥಾಪನೆ: 1931

ರಿಜಿಸ್ಟರ್ಡ್ ಆಫೀಸು:
ವಿಜಯ ಬೇಂಕ್ ಬಿಲ್ಡಿಂಗ್, ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು-3, ಸೌತ್ ಕೆನರಾ.

ಕಾಯಂ ಠೇವಣಾತಿ ಬಡ್ಡಿ ದರವನ್ನು ಸೇಕಡ 5½ರ ವರೆಗೆ ಹೆಚ್ಚಿಸಲಾಗಿದೆ. ಏಳು ದಿವಸದ ನೋಟೀಸಿನಲ್ಲಿ ಕೇಳಿದಾಗ್ಯೆ ಹಿಂದೆ ಪಡೆಯುವ ಡಿಪೋಸಿಟುಗಳನ್ನು (Call Deposits) ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸೋಣಾಗುತ್ತದೆ.

ಹೆಚ್ಚಿನ ಮಾಹಿತಿಗೆ ನಮ್ಮ ಶಾಖೆಗಳಲ್ಲಿ ದಯವಾಡಿ ವಿಚಾರಿಸಿರಿ.

ಸತ್ಯ ಜ್ಞಾನದ ಕಾಮಧೇನು

ನಮ್ಮ ಹಿಂದಿನವರ ಮೂಲಕ ಸಂಚಿತವಾದ ಜ್ಞಾನ ಮತ್ತು ಸ್ಮೃತಿಗಳ ಸಮೂಹವೇ ನಮ್ಮ ಸಂಸ್ಕೃತಿ. ಇವುಗಳೊಡನೆ ನಾವು ಸಂಬಂಧವಿರಿಸಿಕೊಂಡರೆ ಮಾತ್ರ ನಾವದರ ವಾರಿಸುದಾರರಾಗುತ್ತೇವೆ. ಎಂದರೆ, ನಾವು ಸುಸಂಸ್ಕೃತರೆನಿಸಬೇಕಾದರೆ ಪುಸ್ತಕಪೋದುವುದಕ್ಕೆ ತೊಡಗಬೇಕು.

ಭಾಷಣ, ಸಿನೆಮಾ, ಚಿತ್ರ ಯಾವುದೂ ಪುಸ್ತಕದ ಸ್ಥಾನ ಪಡೆಯದು. ಪ್ರತಿಪಾದ್ಯ ವಸ್ತುವನ್ನು ಚಿತ್ರರೋಚಕಗೊಳಿಸಬಹುದು; ಆದರೆ ಸಂಪೂರ್ಣ ವಿಚಾರ ಅದರಿಂದ ವ್ಯಕ್ತವಾಗದು. ನೆರೆಯ ನೀರಿನಂತೆ ಭಾಷಣ ಸಿನೆಮಾಗಳು ಬರುತ್ತವೆ; ಹಾಗೇಯೇ ಸರಿಯುತ್ತವೆ. ಪುಸ್ತಕಗಳು ಮಾತ್ರ ಸ್ಥಾಯಿನಿಧಿ, ಅಜೀವನ ಮಿತ್ರ.

ವಿಶ್ವದ ಲಕ್ಷಾಂತರ ಜನರು ಈರ್ಷ್ಯಾರಹಿತರಾಗಿ ಈ ಮಿತ್ರಸುಖವನ್ನು ಪಡೆಯಬಹುದು. ಬಾಲ್ಜಕ್, ಡಿಕನ್ಸ್ ಟಾಲ್‌ಸ್ಟಾಯ್, ಗಯಟೆ ಮೊದಲಾದವರು ವಿಭಿನ್ನ ಸ್ವಕೃತಿಯ ಜನರನ್ನು ಒಂದು ಸೂತ್ರದಲ್ಲಿ ಬಂಧಿಸಿದ್ದಾರೆ. ನಾವು ಒಬ್ಬ ಜಪಾನೀಯನನ್ನು ರಶ್ಯನನ್ನು ತಿಳಿಯದಿರಬಹುದು ಆದರೆ, ನಮ್ಮ ಮಿತ್ರರಾದ ಶಾಕುಂತಲಾದ ಸರ್ವ ದಮನ, ಪಾರ್ ಎಂಡ್ ಪೀಸ್‌ನ ನತಾಶಾ, ಡೇವಿಡ್ ಕೊಪರ್‌ಫೀಲ್ಡಿನ ಮಿಕಾಬರ್ ಇವರು ಎಲ್ಲರ ಮಿತ್ರತ್ವವನ್ನೂ ಗಳಿಸಿದ್ದಾರೆ.

ನಮ್ಮನ್ನು ನಮ್ಮ ವ್ಯಕ್ತಿತ್ವದ ಮಿತಿಯಿಂದ ಹೊರಗೆ ಪುಸ್ತಕಗಳು ಒಯ್ಯುತ್ತವೆ. ನಾವು ನಮ್ಮನ್ನೇ ಸರಿಯಾಗಿ ತಿಳಿದುಕೊಳ್ಳದಿರುವಾಗ, ನಮ್ಮ ಅನುಭವವು ಅತಿ ಕಿರಿಯದೆಂದು ಬೇರೆ ಹೇಳಬೇಕಾಗಿಲ್ಲ. ಇನ್ನೊಬ್ಬರ ವ್ಯಕ್ತಿತ್ವದ ಎಲ್ಲೆ ಸೇರಲು ಪುಸ್ತಕಗಳು ರಾಜದ್ವಾರ. ಪುಸ್ತಕಗಳ ಸಹಾಯದಿಂದಲೇ ನಾವು ಈ ಪ್ರಪಂಚದಲ್ಲಿ ಉನ್ನತರಾಗಬಲ್ಲೆವು.

ರಜಾದಿನಗಳಲ್ಲಿ ಪರ್ವತದ ಸೋಪಾನಗಳಲ್ಲಿ ವಿವರಿಸುವುದು ಶರೀರಕ್ಕೆ ಲಾಭಪ್ರದವಾಗುವಂತೆ ಶ್ರೇಷ್ಠ ಪುಸ್ತಕಗಳ ಒಡನಾಟ ಮನಸ್ಸಿಗೆ ಹಿತಕಾರಿ. ಎತ್ತರ ಬೆಟ್ಟದಿಂದ ಇಳಿಯುವಾಗ, ನಾವು ಬಲಿಷ್ಠರಾಗುತ್ತೇವೆ. ನಮ್ಮ ಶ್ವಾಸಕೋಶಗಳು ಮೆದುಳು ನಿರ್ಮಲವಾಗುತ್ತವೆ ಜೀವನ ರಂಗದಲ್ಲಿ ವಿಪತ್ತುಗಳನ್ನು ಎದುರಿಸುವ ಸಿದ್ಧತೆಯಿಂದಲೇ ನಾವು ಕೆಳಗಿಳಿಯುತ್ತೇವೆ.

ಕಾಲದೇಶಗಳ ಎಲ್ಲೆಯನ್ನು ಮೀರಲು ಪುಸ್ತಕಗಳು ಏಕಮಾತ್ರ ಸಾಧನ. ಕಾಳಿದಾಸನ ಮೇಘದೂತಕಾವ್ಯವು ನಮ್ಮನ್ನು ಅಲಕಾಪುರಿಗೊಯ್ಯುವುದು ಮಾತ್ರವಲ್ಲ ಅದನ್ನೋದುವಾಗ ನಾವು ಸ್ವಯಂ ಮೇಘವನ್ನು ಹಿಂಬಾಲಿಸಿ ಹೋಗುವುದಕ್ಕಿಂತಲೂ ಹೆಚ್ಚಿನ ಅನುಭವ ಪಡೆಯುತ್ತೇವೆ. ಟಾಲ್‌ಸ್ಟಾಯ್‌ಯವರ ಕೃತಿಗಳು ರಶ್ಯನರ ಮನಸ್ಸನ್ನು ಅರಿತುಕೊಳ್ಳಲು ನೆರವಾಗುವುವು.

ಮಾನವರಲ್ಲಿ ಬಹು ಸಮತೆಯಿದೆ. ಹೋಮರನ ಕಾವ್ಯದ ರಾಜರು ಮತ್ತು ಇಂದಿನ ಸೇನಾಪತಿಗಳ ಭಾವನೆಯಲ್ಲಿ ವಿಶೇಷ ಅಂತರವಿಲ್ಲ. ಮಾನವ ಜಾತಿಯೊಂದೇ ಇಡಿ ಜಗತ್ತಿನಲ್ಲಿದೆ ಮಹಾ ಪುರುಷರಾದರೂ ನಮಗಿಂತ ಭಿನ್ನರಲ್ಲ. ನಮಗೂ ಅವರಿಗೂ ವಸ್ತುವಿನಲ್ಲಿ ಭಿನ್ನತೆಯಿಲ್ಲ; ಆದರೆ, ತಿಳಿದುಕೊಳ್ಳುವುದರಲ್ಲಿ ಮಾತ್ರ ಬಹಳ ಅಂತರವಿದೆ. ಮಹಾ ಪುರುಷರ ಜೀವನ ಚರಿತ್ರೆಗಳನ್ನು ಓದುವುದರಿಂದ ನಮಗೆ ಸಂತೋಷವಾಗುವುದಕ್ಕೆ ಕಾರಣವದೇ.

ಪರರನ್ನು ತಿಳಿಯುವುದಕ್ಕೆ ಮಾತ್ರ ಪುಸ್ತಕಪೋದುವುದಲ್ಲ. ದೈನಿಕ ಜೀವನದಲ್ಲಿ ನಾವು ಯಥಾರ್ಥ ರೂಪವನ್ನು ತಿಳಿದುಕೊಳ್ಳದಿರುವಷ್ಟೂ ಮುಂದುವರಿದಿದ್ದೇವೆ. ಡಿಕನ್ಸ್, ಬಾಲ್ಜಕ್‌ರಂತಹ ಕಾದಂಬರಿ ಬರೆಯಲು ಯೋಗ್ಯವಾದ ಜೀವನ ನಮ್ಮವರಲ್ಲಿ ಎಷ್ಟೋಜನರದ್ದಿರಬಹುದು. ಆದರೂ ನಾವವುಗಳಲ್ಲಿ ಆಸಕ್ತರಾಗುವುದಿಲ್ಲ. ಜೀವನವೇ ನಮಗೆ ಹೊರೆಯಾಗಿ ಕಾಣಿಸುವುದುಂಟು. ಆದರೆ, ಪರರ ಜೀವನ ಚರಿತ್ರೆಯೋದುವುದರಿಂದ ನಾವು ನಮ್ಮ ಜೀವನದ ಶಾಂತಿಗೆ ಭಂಗವೊಡ್ಡದೇನೇ ಅವರ ಸಂಕಷ್ಟಗಳಲ್ಲಿ ಭಾಗವಹಿಸಬಲ್ಲೆವು. ಅನೆ-ತಾಪ ಸೂಚಿಸಬಲ್ಲೆವು.

ಇತಿಹಾಸದ ಅಧ್ಯಯನದಿಂದ ಮನಸ್ಸು ಶಾಂತವಾಗುತ್ತದೆ; ಇಂದು ವಿವಾದಗ್ರಸ್ತವಾದ ದೊಡ್ಡ ದೊಡ್ಡ ಪ್ರಶ್ನೆಗಳು ನಾಳೆ ಅರ್ಥಹೀನವಾಗುವುದೆಂಬುದನ್ನು ನಮಗೆ ತಿಳಿಸುತ್ತವೆ. ವಸ್ತುಗಳ ತಾರತಮ್ಯ ಭಾವವು ನಮಗೆ ಇದರಿಂದ ಅರಿವಾಗುವುದು. ಒಂದು ಒಳ್ಳೆಯ ಪುಸ್ತಕಪೋದಿದನಂತರ ನಾವು ಪ್ರಾರಂಭದಲ್ಲಿದ್ದಂತೆ ಎಂದೂ ಇರಲಾರೆವು. ನಮ್ಮಲ್ಲಿ ಏನೋ ಒಂದು ಮಹಾನ್ ಪರಿವರ್ತನೆಯೊದುದು ಮನವರಿಕೆಯಾಗುವುದು.

ಒಬ್ಬ ಉತ್ತಮ ಯೋಗ್ಯ ಅಧ್ಯಾಪಕನಾಗಿದ್ದರೂ ಅತನಿಂದ ಪಾಠಪೋದಿಕೊಳ್ಳುವುದರಿಂದ ಮೆದುಳು ಪರಿಷ್ಕೃತವಾಗಲಾರದು. ಅಧ್ಯಾಪಕನ ಕರ್ತವ್ಯ ವಿದ್ಯಾರ್ಥಿಯ ಬೌದ್ಧಿಕ ರಂಗ ಮಂಚ ನಿರ್ಮಾಣ ಮಾಡುವುದು ಅದರ ಮೇಲೆ ಜ್ಞಾನದ ಇಟ್ಟಿಗೆಗಳನ್ನು ವಿದ್ಯಾರ್ಥಿಯು ಸ್ವಯಂ ಇರಿಸಿಕೊಳ್ಳಬೇಕು ಆದರೆ, ಸಂಪೂರ್ಣ ಜ್ಞಾನವನ್ನು ಯಾರೇ ಆಗಲೀ ಸ್ವಯಂ ಶೋಧಿಸಿಕೊಳ್ಳಲಾರ. ಆ ಜ್ಞಾನವನ್ನು ಒಟ್ಟು ಸೇರಿಸಲು ಮನುಷ್ಯನಿಗೆ ಸಾವಿರಾರು ವರ್ಷಗಳ ಕಾಲ ಬೇಕಾಗಿದೆ. ನಮ್ಮೆಲ್ಲ ಉಪಯುಕ್ತ ಮನನವು ಮಹಾಮಹಾವಿಚಾರಕರ ಚಿಂತನೆಯ ಮನನ ಮಾತ್ರ.

ಸ್ವಾಧ್ಯಾಯವು ನೆದುಳನ್ನು ಹೃಷ್ಟಪುಷ್ಟಗೊಳಿಸುವ ವ್ಯಾಯಾಮ ಮಾತ್ರವಲ್ಲ ತರುಣಾವಸ್ಥೆಯಲ್ಲಿರುವ ಮನಸ್ಸಿಗೆ ಸತ್ಯವು ಬಹಳ ಆಳದಲ್ಲಿ ಅಡಗಿಕೊಂಡಿದೆಯೆಂಬುದನ್ನದು ಹೇಳುತ್ತದೆ. ಅದು ಪಕ್ವವಾದ ಹಣ್ಣಿನಂತೆ ತನಗೆ ತಾನಾಗಿಯೇ ಜೋಳಿಗೆಗೆ ಬೀಳುವುದಿಲ್ಲವೆಂ

(೬ನೇ ಪುಟ ನೋಡಿರಿ)

ಭಾರತದಲ್ಲಿ ಹನ್ನೆರಡನೇ ಟಿ.ಬಿ.ಮುದ್ರೆ ಮಾರಾಟ ಚಳವಳಿ

(ಅಕ್ಟೋಬರ 2ರಿಂದ ಜನವರಿ 26ರ ವರೆಗೆ)

(ಟ್ಯೂಬರ್‌ಕ್ಯುಲೋಸಿಸ್ ಎಸೋಸಿಯೇಶನ್ ಆಫ್ ಇಂಡಿಯಾ, ನ್ಯೂ ಢಿಲ್ಲಿ, ಇವರಿಂದ ಪ್ರಾರಂಭಿಸಲ್ಪಟ್ಟದ್ದು)

ಈ ಕೆಳಗಿನದೇ 1961 ರ ಟಿ. ಬಿ. ಮುದ್ರೆಯಾಗಿದೆ.
(ಅಕ್ಟೋಬರ 2 ರಿಂದ ಮಾರಾಟಕ್ಕಿದೆ)

ಕ್ಷಯರೋಗದ ವಿರುದ್ಧ ಹೋರಾಡುವ ಈ ಯೋಗ್ಯ ಚಳವಳಿಕ್ಕೆ ಪ್ರೋತ್ಸಾಹ ಕೊಡುವುದಕ್ಕಾಗಿ ಟಿ. ಬಿ. ಮುದ್ರೆಗಳನ್ನು ಖರೀದಿಸಿ, ಅವುಗಳನ್ನು ಪತ್ರಗಳಿಗೂ, ಪಾರ್ಸಲುಗಳಿಗೂ ಅಂಟಿಸಿರಿ. ಈ ಚಳವಳಿವು ನಿಧಿಯನ್ನಷ್ಟೇ ಸಂಗ್ರಹಿಸುವುದಲ್ಲದೆ, ಕ್ಷಯರೋಗ ಮತ್ತು ಅದರ ನಿರೋಧದ ಕುರಿತು ಜ್ಞಾನ ಪ್ರಸಾರವನ್ನೂ ಮಾಡುತ್ತದೆ.

ನೆನಪಿನಲ್ಲಿಡಿರಿ—

ನೀವು ಕೊಡುವ ದೇಣಿಗೆಯು ಕ್ಷಯರೋಗದ ವಿರುದ್ಧವಾದ ಜನತಾ ಹೋರಾಟಕ್ಕೆ ನೇರ ಸಹಾಯವಾಗಿದೆ.

ಒಂದು ಟಿ. ಬಿ. ಮುದ್ರೆಯ ಬೆಲೆ ಹತ್ತು ನಯೇ ಪೈಸೆ ಮಾತ್ರ.

ಈ ಮುದ್ರೆಗಳು ರಾಜ್ಯದ ಕ್ಷಯರೋಗ ಸಂಘಗಳಲ್ಲಿಯೂ, ಅವುಗಳ ವಿವಿಧ ಶಾಖೆಗಳಲ್ಲಿಯೂ ದೊರೆಯುತ್ತವೆ.

ಈ ಸ್ಥಳದ ಉದಾರ ದಾತೃಗಳು:

ನವಯುಗ

ನವಯುಗ

ವರುಷ	ಉಡುಪಿ	ವಾರ
೪೧	೫-೧೦-೬೧	೫

ಉಪವಾಸಕ್ಕೆ ಕೊನೆ

ಸ್ವಾತಂತ್ರ್ಯ ದಿನೋತ್ಸವದ ಸುಮುಹೂರ್ತದಲ್ಲಿ "ಪಂಜಾಬೀ ಸುಬಾ ಇಲ್ಲವೇ ಮರಣ" ಎಂಬ ಸಂಕಲ್ಪವನ್ನು ಮಾಡಿ ಉಪವಾಸವನ್ನು ಆರಂಭಿಸಿದ್ದ ಅಕಾಲಿದಳದ ನೇತಾರ ಮಾಸ್ಟರ್ ತಾರಾ ಸಿಂಗರು ಗಾಂಧೀ ಜಯಂತಿಯ ಮುನ್ನಾದಿನ ಜೇನುತುಪ್ಪ ಬೆರಸಿದ ಹಣ್ಣಿನ ರಸವನ್ನು ಕುಡಿದು ತಮ್ಮ ಅನಶನ ವ್ರತಕ್ಕೆ ಪೂರ್ಣವಿರಾಮ ಹಾಕಿ ದೇಶದ ಮುಂದೆ ಕವಿದಿದ್ದ ಕುತೂಹಲಮಯ ವಾತಾವರಣವನ್ನು ಕೊನೆಗೊಳಿಸಿದರು. ಈ ಸುದ್ದಿಯನ್ನು ತಿಳಿದ ಹಾಗೂ ಕೇಳಿದ ಪ್ರತ್ಯೇಕ ಭಾರತೀಯನೂ ತೃಪ್ತಿಯ ನಿಟ್ಟುಸುರೊಂದನ್ನು ಬಿಡುವಂತಾಯಿತು. ರಾಷ್ಟ್ರದ ನಾಯಕರು ತಮ್ಮ ತಲೆಗೆ ತುಸು ವಿರಾಮವನ್ನು ಕೊಡುವಂತಾಯಿತು. ಈ ಕಾರಣದಿಂದ ಮಾಸ್ಟರ್ ತಾರಾಸಿಂಗರ ನಿರಾಹಾರವ್ರತಭಂಗವು ಅಶಾದಾಯಕವಾಗಿದೆ. ಇವರ ಬೇಡಿಕೆಯನ್ನು ಪ್ರತಿಭಟಿಸಿ ಉಪವಾಸವಾರಂಭಿಸಿದ್ದ ಸೂರ್ಯದೇವರು ಗಾಂಧೀಜಯಂತಿಯ ಸುದಿನದಂದು ತಮ್ಮ ಉಪವಾಸವನ್ನು ಕೊನೆಗೊಳಿಸುವುದಾಗಿ ಮೊದಲೇ ಸಾರಿದ್ದರು ಪ್ರಧಾನಿ ನೆಹರು ಎಷ್ಟುಮಾತ್ರಕ್ಕೂ ಪಂಜಾಬೀ ಸುಬಾವನ್ನು ನೀಡುವುದಿಲ್ಲವೆಂಬುದು ತನಗೆ ಮನವರಿಕೆಯಾದುದರಿಂದ ತಾನೀ ರೀತಿ ಮಾಡುವೆನೆಂದವರು ಅಂದಿದ್ದರು. ಕಾರಣವೇನೇ ಇರಲಿ, ಇಬ್ಬರೂ ಉಪವಾಸವನ್ನು ಅಂತ್ಯಗೊಳಿಸಿದರು ಎಂಬುದಿಷ್ಟೇ ಸಂತೋಷ ಎರಡು ಅಮೂಲ್ಯ ಜೀವಗಳು ಉಳಿಯುವಂತಾದುದು ಭಾರತದ ಸುಯೋಗ.

ಮಾಸ್ಟರ್ ತಾರಾಸಿಂಗರು ಮುಂದಿಟ್ಟ ಬೇಡಿಕೆಯಲ್ಲಿ ಅಗ್ರಗಣ್ಯವಾದುದು ಪಂಜಾಬೀ ಸುಬಾರಚನೆ. ಆದರೆ, ಈ ಸಂಬಂಧದಲ್ಲಿ ಭಾರತ ಸರಕಾರವು ತನ್ನ ಅಭಿಪ್ರಾಯಕ್ಕೆ ದೃಢವಾಗಿ ಅಂಟಿಕೊಂಡಿದ್ದುದರಿಂದ ತಾರಾಸಿಂಗರ ಆಶಯ ಪೂರ್ತಿಯಾಗಲಿಲ್ಲ.ಪ್ರಧಾನಿ ನೆಹರುರವರು ಪಂಜಾಬರಾಜ್ಯದಲ್ಲಿ ಸಿಖ್ಖರನ್ನು ಗಡಿಕಡಿಸಲಾಗುವುದು ಎಂಬ ಆರೋಪದ ವಿಚಾರಣೆ ನಡೆಸಲು ಎಂದೋ ಒಪ್ಪಿದ್ದರು; ಈ ಸಂಬಂಧದಲ್ಲಿ ಪರಿಶೀಲನೆ ನಡೆಸಲು ಉಚ್ಚಾಧಿಕಾರವುಳ್ಳ ಆಯೋಗವೊಂದನ್ನು ರಚಿಸುವುದಕ್ಕೂ ಸಮ್ಮತಿಸಿದ್ದರು. ಆದರೆ, ಈ ಆಯೋಗಕ್ಕೆ ಪಂಜಾಬೀ ಸುಬಾ ರಚನೆಯ ಪ್ರಶ್ನೆಯನ್ನೂ ಒಪ್ಪಿಸಬೇಕೆಂಬುದಕ್ಕೆ ಮಾತ್ರ ಅವರು ಅಸಮ್ಮತಿರಾಗಿದ್ದರು. ಹಾಗಿದ್ದರೂ ಆಯೋಗವು ಅಸಂಬಂಧದಲ್ಲಿ ಪರಿಶೀಲನೆ ನಡೆಸುವುದಾದರೆ, ಅದನ್ನು ಪ್ರತಿಭಟಿಸುವಂತಿಲ್ಲವೆಂದೂ ಅವರಂದಿದ್ದರು. ಸರಕಾರದ ಸ್ಪಷ್ಟವಾದ ಭರವಸೆ ಬಾರದೆ ಉಪವಾಸ ಹಿಂತೆಗೆಯೆನೆಂದೂ ಪಂಜಾಬಿ ಸುಬಾ ಇಲ್ಲವೇ ಮರಣಗಳಲ್ಲಿ ಒಂದನ್ನು ಗಳಿಸುವೆನೆಂದೂ ತಾರಾಸಿಂಗರು ಅಚಲರಾಗಿ ನಿಂತರು. ಆದರೆಈಗ ಅವೆಂಡರಲ್ಲಿ ಯಾವುದೂ ಇಲ್ಲದೆ ಅಹಾರ ಸೇವನೆಗೆ ತೊಡಗಿದುದು ಸೋಜಿಗವೆನಿಸುತ್ತದೆ. ಪಾಟಿಯಾಳದ ಮಹಾರಾಜರು ಹಾಗೂ ಮತ್ತಿತರರು ಈ ವಿವಾದವನ್ನು ಬಗೆ ಹರಿಸಲು ಅದೆಷ್ಟು ಪ್ರಯತ್ನ ನಡೆಸಿದರೂ, ಅದು ನಿರರ್ಥಕವೆಂಬಂತಾಗಿತ್ತು. ತಾರಾಸಿಂಗರ ಮನಸ್ಸಿನ ಮೇಲೆ ಪರಿಸ್ಥಿತಿಯ ನೈಜ ಚಿತ್ರವನ್ನು ಅಂಕಿತಗೊಳಿಸಿ, ಕೊನೆಯ ಗಳಿಗೆಯಲ್ಲಿ ಇವರು ಸಫಲರಾದುದು ಸುದೈವವೆನ್ನಬೇಕು. ಸರಕಾರವು ಯಾವ ಹೊಸ ಮಾತುಗಳನ್ನು ಹೇಳದೆ ತನ್ನ ನೀತಿಗೆ ಬಲವಾಗಿ ಅಂಟಿಕೊಂಡಿರುವುದೇ ತಾರಾಸಿಂಗರಿಗೆ ಹನ್ನೊಂದನೆಯ ತಾಸಿಗೆ ಸಮೂಧಾನಕರವೆಂದು ಕಂಡು ಬಂದುದು ಸಮೂಧಾನಕರವಲ್ಲವೆ? ಈ ಬಗ್ಗೆ ಮಧ್ಯಸ್ಥಿಕೆ ನಡೆಸಿದ ಮಹನೀಯರನ್ನು ಅವಶ್ಯ ಸ್ಮರಿಸಬೇಕು.

ಉಪವಾಸ ಕೊನೆಗೊಳಿಸಿದ ಮಹಾಶಯ ದ್ವಯರನ್ನು ಅಭಿನಂದಿಸುವುದರೊಡನೆ ರಾಜ್ಯದ ಪರಿಸ್ಥಿತಿಯನ್ನು ಕಾಯ್ದುಕೊಂಡ ಮುಖ್ಯಮಂತ್ರಿ ಪ್ರತಾಪ ಸಿಂಹ ಕೈರಾನ್ ಹಾಗೂ ಅವರ ಸಹಯೋಗಿಗಳನ್ನೂ ನೆನೆಯಬೇಕು. ಎಲ್ಲಕ್ಕಿಂತ ಮಿಗಿಲಾಗಿ ಭಾವೆಯ ಗೊಂದಲವನ್ನು ನೀಗಿಸಲು ರಾಜ್ಯ ವಿಭಜನೆಯುತಾರಕೋಪಾಯವಲ್ಲವೆಂಬ ಸತ್ಯ ತತ್ವಕ್ಕೆ ಅಂಟಿ, ಅದನ್ನು ಕೊನೆಯವರೆಗೂ ಎತ್ತಿ ಹಿಡಿದ ಪ್ರಧಾನಿ ನೆಹರುಗಳಿಗೆ ಕೃತಜ್ಞರಾಗಬೇಕು. ಕಳೆದ ವರ್ಷ ಕೇಂದ್ರ ಸರಕಾರಿ ನೌಕರರ ಸಂಘ ಮತ್ತು ಈ ಬಾರಿ ಪಂಜಾಬೀ ಸುಬಾದ ಬೇಡಿಕೆಗಳ ಸಂಬಂಧದಲ್ಲಿ ನಮ್ಮ ಭಾರತ ಸರಕಾರ ವಹಿಸಿದ ನೀತಿ ನಮ್ಮಲ್ಲಿ ಅನಾಮಯವನ್ನು ಪ್ರತಿಭಟಿಸುವ ಕೆಚ್ಚು ಇದೇ ಅಳಿದುಹೋಗಿಲ್ಲ ಎಂಬುದನ್ನು ಸಾರಿ ಹೇಳುತ್ತಿದೆ. ಸರಕಾರದ ದೃಢ ನಿಲುಮೆಯು ಹೀಗೆಯೇ ಉಳಿಯುವಂತಾಗಲಿ ಎಂದು ಈ ಸಂದರ್ಭದಲ್ಲಿ ಆಶಿಸಿದರೆ, ಅದು ಅನುಚಿತವೆನಿಸದು.

ಕ್ಷಯರೋಗ ಮುದ್ರೆ

ಮಹಾರೋಗವಾದ ಕ್ಷಯವನ್ನು ಪ್ರತಿಬಂಧಿಸುವುದಕ್ಕೆ ಸರಕಾರಿ ವಲಯಗಳಿಂದ ಮಾತ್ರ ಕಾರ್ಯ ನಡೆದರೆ ಸಾಲದು; ಖಾಸಗಿಯಾಗಿಯೂ ಅದು ನಡೆಯಬೇಕು. 'ಕ್ಷಯರೋಗ ಮುದ್ರಾಂದೋಲನ'ದ ಮೂಲಕ ಭಾರತದ ಟಿ. ಬಿ. ಸಂಸ್ಥೆಯು ಇದಕ್ಕಾಗಿ ನೆರವು ನೀಡುತ್ತದೆ. ರಾಷ್ಟ್ರಪಿತ ಗಾಂಧೀಜಿಯವರ ಜನ್ಮದಿನ ಅಕ್ಟೋಬರ ತಿಂಗಳ ತಾರೀಕಿನಿಂದ ರಾಷ್ಟ್ರೀಯ ಸಪ್ತದಿನ ಜನವರಿ ೨೬ರ ವರೆಗೆ ಈ ಸಂಸ್ಥೆಯು ಟಿ. ಬಿ. ಮುದ್ರೆಗಳನ್ನು ಮಾರಿ, ಹಣವನ್ನು ಸಂಗ್ರಹಿಸುತ್ತದೆ. ಹೀಗೆ ಸಂಗ್ರಹವಾದ ಹಣವನ್ನು ಕ್ಷಯರೋಗ ಪ್ರತಿಬಂಧಕ ಕಾರ್ಯಕ್ರಮಗಳಿಗೆ ಉಪಯೋಗಿಸುತ್ತದೆ. ಕ್ಷಯರೋಗ ಆಸ್ಪತ್ರೆಗಳಲ್ಲಿ ಹಾಸಿಗೆಗಳನ್ನು ಹೆಚ್ಚಿಸುವುದು, ಮನೆಮನೆಗೆ ಒದಗಿಸುವ ಪ್ರತಿಬಂಧಕ ಸೇವೆಯನ್ನು ವರ್ಧಿಸುವುದು ಮೊದಲಾದ ಹಲವಾರು ಉಪಯುಕ್ತ ಕಾರ್ಯಕ್ರಮಗಳನ್ನು ರಾಜ್ಯ ಟಿಬಿ ಸಂಸ್ಥೆಯು ಕೈಗೊಳ್ಳುವುದು. ಸಾರ್ವಜನಿಕರು, ಮುಖ್ಯವಾಗಿ, ವ್ಯಾಪಾರಸ್ಥರು, ವಿದ್ಯಾರ್ಥಿಗಳು, ರಾಜ್ಯ ಮತ್ತು ಕೇಂದ್ರ ಸರಕಾರಗಳು ಈ ಮುದ್ರಾಂದೋಲನದಲ್ಲಿ ತೀವ್ರ ಆಸಕ್ತಿ ವಹಿಸಿವೆ. ಹಾಗೆಯೇ ಈ ವರ್ಷವೂ ಹೆಚ್ಚಿನ ಆಸಕ್ತಿಯಿಂದ ಎಲ್ಲ ಭಾರತೀಯರೂ ಮುದ್ರೆಯನ್ನು ಪಡೆದೆ, ಮುದ್ರಾಂದೋಲನದಲ್ಲಿ ಸಕ್ರಿಯವಾಗಿ ಭಾಗವಹಿಸಬೇಕೆಂದು ಕೇಳಿಕೊಳ್ಳುತ್ತೇವೆ. ಈ ವರ್ಷದ ಮುದ್ರೆಯಲ್ಲಿ ಕುದುರೆಯ ಬೆನ್ನ ಮೇಲೆ ನರ್ತಕನಿರುವ ಜಾನಪದ ನರ್ತನದ ಚಿತ್ರವಿದೆ. ಒಂದು ಮುದ್ರೆಯ ಬೆಲೆ ಹತ್ತು ನಯೇ ಪೈಸೆ ಮಾತ್ರ. ಕೊಂಡುಕೊಳ್ಳುವ ಮುದ್ರೆಯು ಕ್ಷಯ ರೋಗ ಪ್ರತಿಬಂಧಕ ಕಾರ್ಯವನ್ನು ಬಿರುಸುಗೊಳಿಸುವುದರಿಂದ ಈ ಮಹಾ ಕಾರ್ಯದಲ್ಲಿ ಎಲ್ಲರೂ ಸಹಕಾರಿಯಾಗಲೇಬೇಕು.

ಜಗತ್ಪರ್ಯಟನೆ

ಪಂಡಿತ ನೆಹರು

ಹೋದಲ್ಲಿ ಬಂದಲ್ಲಿ ಮಾತ್ರವಲ್ಲ ನಿಂತಲ್ಲಿ ಕುಳಿತಲ್ಲಿ ಸುದ್ದಿ ಹುಟ್ಟಿಸುವ ಶಕ್ತಿ ಎಲ್ಲರಲ್ಲಿರುವುದಿಲ್ಲ. ಅಂತಹ ಉದಾತ್ತ ಆದರ್ಶವಾದ ಧ್ಯೇಯವಾದಿಗಳು ಮಾತ್ರ ಹೀಗೆ ಮಾಡಬಲ್ಲರು. ಪ್ರಧಾನಿ ನೆಹರು ಇಂತಹ ಕೆಲವೇ ಮಂದಿಯಲ್ಲಿ ಒಬ್ಬರಾಗಿದ್ದಾರೆ. ನವದೆಹಲಿಯಲ್ಲಿ ಸೇರಿದ್ದ ರಾಷ್ಟ್ರೀಯ ಐಕ್ಯ ಸಮ್ಮೇಳನದಲ್ಲಿ ನೆಹರುಗಳನ್ನೊಟ್ಟ ಭಾಷಣಕರ್ತರು ನೀಲಕಂಠನಿಗೆ ಹೋಲಿಸಿದರು ಸಮುದ್ರಮಥನದಿಂದ ಉದ್ಭವಿಸಿದ ಹಾಲಾಹಲವನ್ನು ಉಂಡು ಅದನ್ನು ಸಹಿಸಿ ಲೋಕಕಲ್ಯಾಣ ಮಾಡಿದ ನೀಲಕಂಠ. ಭಾರತದ ಹಿತಚಿಂತನೆಗಾಗಿ ನೆಹರು ಯಾವ ಕಾರ್ಯವನ್ನಾದರೂ ಮಾಡಲು ಸಿದ್ಧರು. ದೇಶವೇ ತನ್ನ ಮನೆ, ದೇಶಬಾಂಧವರೇ ತನ್ನ ಬಂಧುಬಳಗವೆನ್ನುವ ಉದಾತ್ತ ಚರಿತ್ರೆಯುಳ್ಳ ನೀಲಕಂಠ ಮಾತ್ರವಲ್ಲ ವಿಷ್ಣುವೂ ಹೌದು ಎಂಬುದನ್ನು ಈಗಾಗಲೇ ತೋರಿಸಿಕೊಟ್ಟಿದ್ದಾರೆ

ಗಮೂಲ್ ನಸ್ಸೇರ

ಅರಬ ಭೂಕರ ನಂತರ ಐಗುಪ್ತದಲ್ಲಿ ಪ್ರಭಾವಶಾಲೀ ನಾಯಕರಾಗಿ ಸುಯೇಜ ಕಾಲುವೆ ರಾಷ್ಟ್ರೀಕರಣದಂತಹ ಕ್ರಾಂತಿಕಾರಕ ಕಾರ್ಯ ಸಾಧಿಸಿದ ಗಮೂಲ್ ನಸ್ಸೇರರು ಇಂದೀಗ ದಿಙ್ಮೂಢರಾಗಿಹೋಗಿದ್ದಾರೆ. ೧೯೫೮ರಲ್ಲಿ ಸಿರಿಯಾ—ಐಗುಪ್ತಗಳ ಮಿಲನದಿಂದ ಇವರು ಸಂಯುಕ್ತ ಅರಬ ರಾಷ್ಟ್ರದ ಅಧ್ಯಕ್ಷರಾದರೂ ಇಂದು ಆ ಅಧ್ಯಕ್ಷ ಪದವಿಗೆ ಸಿರಿಯಾನರಿಂದ ಅಪಾಯ ಬಂದಿದೆ. ಸಿರಿಯದಲ್ಲಿ ಸೈನ್ಯವು ಬಂಡಾಯವೆದ್ದು ಐಗುಪ್ತದ ಸಂಬಂಧವನ್ನು ಅದು ಕಳೆದುಕೊಂಡಿದೆ ಮಾತ್ರವಲ್ಲ ತನ್ನ ರಾಷ್ಟ್ರತ್ವವನ್ನು ಮನ್ನಿಸುವಂತೆ ಎಲ್ಲರನ್ನೂ ಕೇಳಿಕೊಂಡಿದೆ. ಸಿರಿಯವನ್ನು ಸಿಡಿದುಹೋಗಲು ಬಿಡಲಾರೆನೆನ್ನುವ ನಸ್ಸೇರರ ಮುಂದಿನ ಕ್ರಮ ಯಾವುದೆಂದು ಗೊತ್ತಾಗಿಲ್ಲ. ಸಿರಿಯಾ ಬಂಡಾಯವನ್ನೆದುರಿಸುವಲ್ಲಿ ಇವರು ಗೆಲ್ಲುವಲೆಯೆಟ್ಟುಕೊಂಡಿದ್ದರೂ ಇಷ್ಟರಲ್ಲೇ ಸೋತುಹೋಗಿದ್ದಾರೆ.

ಪಾತ್ರದಾನಿಗಳು

ಬೇಡುವ ಕಾರ್ಯವೂ ಒಂದು ಕಲೆ. ಅದನ್ನು ಸರಿಯಾಗಿ ಅಭಿನಯಿಸಿದರೆ ಮಾತ್ರ ಬೇಡುವವ ಬದುಕಿಯಾನು. ಇಲ್ಲವಾದರೆ, ಉಪವಾಸ ಬಿದ್ದು ಸಾಯಬೇಕಾದೀತು. ಅತಿ ವೃಷ್ಟಿ ಸಂತ್ರಸ್ತರ ಪರಿಹಾರ ನಿಧಿಗಾಗಿ ಹಲವಾರು ವಿಧಾನಗಳಿಂದ ಈಗಾಗಲೇ ಧನಸಂಗ್ರಹವಾಗಿದೆ. ಅದರ ಸರಿಮಾಣವೇನೇ ಇರಲಿ, ಸಹಾಯಪಲ್ಲಿಸಬೇಕೆಂದಿದ್ದವರಿಗೆ ಆಗಲೇಕೊಡಬಹುದಿತ್ತು. ಸಿನೆಮಾ ಕಲಾವಿದರು ರಾಜ್ಯದ ವಿವಿಧ ನಗರಗಳಲ್ಲಿ ಸುತ್ತಾಡಿ ಈ ನಿಧಿಗೆ ಹಣ ಸಂಗ್ರಹಿಸುತ್ತಿರುವುದನ್ನೂ ಅದರ ಪ್ರಮಾಣವನ್ನೂ ಕಾಣುವಾಗ, ಅಭಿನಯ ಕುಶಲರು ಮಾತ್ರ ಬೇಡುವ ಕಾರ್ಯಕ್ಕೆಳಿಯಬೇಕೆನಿಸುತ್ತದೆ. ಇಲ್ಲವಾದರೆ, ಸಾವಿರಗಟ್ಟಲೆಯ ಸಂಗ್ರಹ ಹೇಗಾಗಬೇಕು? ನಯೇ ಪೈಸೆಯೆಸೆಯಲು ಹಿಂಜರಿವ ಕೋಮುಟಿಯೂ ಸೆರೆ ನಾಣ್ಯ ಸುರಿದನೆಂಬಾಗ, ಇದು ವಿಸ್ಮಯಕಾರಕವೆಂದೇ ಹೇಳಬೇಕು.

ಪ್ರಧಾನಿ ಮೈಕಮಿಲನ್

ಮುಖ ನೋಡಿ ಮಾತಾಡುವುದರಲ್ಲಿ ಬ್ರಿಟಿಷರು ಅಗ್ರಗಣ್ಯರು. ಪ್ರಧಾನಿ ಮೈಕಮಿಲನರಿಂದಕ್ಕೆ ಅಪವಾದವಾದರೆ? ಸಂಯುಕ್ತ ರಾಷ್ಟ್ರಸಂಸ್ಥೆಯೊಡನೆ ಕಾಂಗೋದಲ್ಲಿ ಕೆಲಸ ಮಾಡುತ್ತಿರುವ ಭಾರತೀಯ ಸೇನಾಪಡೆಯನ್ನು ಅವಮಾನಕಾರಕವಾಗಿ ನಿಂದಿಸಿದ ಅವರ ಸರಕಾರದ ಕೃತ್ಯವನ್ನು ಮೆರೆಯುವಂತಿಲ್ಲ. ಆದರೆ ಸ್ವಯಂ ಮೆಕಮಿಲನರು ಅವನ್ನು ಮರೆತು ಪ್ರಧಾನಿ ನೆಹರುವಿಗೆ ಒಂದು ಪತ್ರ ಬರೆದು, ಭಾರತೀಯ ಸೈನಿಕರು ಅಮಾನುಷರಾಗಿ ಕಾಂಗೋದಲ್ಲಿ ನಡೆದರೆಂಬ ವಾದಕ್ಕೆ ತನ್ನ ಸರಕಾರ ಬೆಂಬಲವಿತ್ತಿಲ್ಲ ಎಂದು ಹೇಳಿ ಬದಲು ಗೌರವವನ್ನೇ ತೋರಿಸಿದರು. ನವಂಬರ ಮೊದಲ ವಾರದಲ್ಲಿ ವಾಶಿಂಗ್‌ಟನ್ನಿಗೆ ಹೋಗುವಾಗ ಲಂಡನ್ನಿಗೂ ಭೆಟ್ಟಿಯಾಯಬೇಕೆಂಬ ಕೇಳಿಕೆಯೂ ಅದರೊಡನೆ ಇದೆ. ಉರಿಯುವ ಬೆಂಕಿಗೆ ತುಪ್ಪವೆರೆಯುವಷ್ಟು ಮೂರ್ಖರು ರಾಜಕಾರಣಿಗಳಲ್ಲ.

ಕಳೆದ ವಾರದಂತೆ ಈ ವಾರವೂ 8 ಪುಟಗಳ ನ್ಯೂಸ್ಪೇಪರ್‌ಕೊಡುವ ಪರಿಸ್ಥಿತಿಯೊದಗದಿದುದಕ್ಕಾಗಿ ವಿಷಾದಿಸುತ್ತೇವೆ.

—ಮೆನೇಜರ್ ನವಯುಗ

ದ ಕ. ಸ್ಪೆಶಲ್ ಅಸಿಸ್ಟಾಂಟ್ ಕಮಿಶನರ ಕೋರ್ಟ್‌ನಲ್ಲಿ (ಟೆನೆನ್ಸಿ)

O. P. No. 755/1961.

ಸ್ವಸ್ತಿ ಶ್ರೀ ದೇವೇಂದ್ರ ಕೀರ್ತಿ ಭಟ್ಟಾರಕಜೀಯ ಸ್ವಾಮಿರು ಯಿವರ ಜನರಲ್ ಪವರ್ ಆಫ್ ಎಟೋರ್ನಿಹೋಲ್ಡರ ಶ್ರೀ M D. ಅಧಿಕಾರಿ—ಅರ್ಜಿದಾರರು.

ಮತ್ತು

ಬಜ್ಜೆ ಸೇರಿಗಾರ, ಕರಿಯಣ್ಣ ಸೇರಿಗಾರನ ಅಳಿಯ ಕಾರ್ಕಳ ತಾಲ್ಲುಕು ವರಂಗ ಗ್ರಾಮದಲ್ಲಿರುವವ—ಎದ್ರಿ

ಸದ್ರಿ ಎದ್ರಿ ಆದ ನಮಗೆ ಈ ಮೂಲಕ ತಿಳಿಸುವದೇನಂದ್ರೆ ನೀವು ಅರ್ಜಿದಾರ ಮರವ ವಳಗೆ ಚಾಲಗೇಣಿ ಹಕ್ಕಿನಿಂದ ಅನುಭವಿಸಿ ಬರುವ ವರಂಗ ಗ್ರಾಮದ ಅಸ್ತಿ ಬಾಬ್ತು ನೀವೆ ಅರ್ಜಿದಾರ ಮರಕ್ಕೆ ಕೊಡತಕ್ಕ ಚಾಲಗೇಣಿ ರೂಪ್ಯಾ 206-50ನ್ನು ಕೊಡದೆ ಬಾಕಿ ಮಾಡಿಕೊಂಡದ್ದರಿಂದಲೂ ಆಸ್ತಿಯನ್ನು ಹಡಿಲು ಇಟ್ಟದ್ದರಿಂದಲೂ, ಸದ್ರಿ ಅಸ್ತಿ ವಗೈರೆ ಸ್ವಾಧೀನತೆ ಕೇಳಿ ಅರ್ಜಿದಾರರು ದಾಕ್ಲು ಮಾಡಿದ ಸದ್ರಿ ಅರ್ಜಿಯು ತಾ 16_10_61 ಕ್ಕೆ ಸದ್ರಿ ಕೋರ್ಟ್‌ನಲ್ಲಿ ಕಾರ್ಕಳ ಮೊಕ್ತೇಸರನಲ್ಲಿ ನಿಮ್ಮ ಹಾಜ್ರಿ ಬಗ್ಗೆ ಇತ್ತಿದೆ. ಆಕ್ಷೇಪಯದ್ರೆ ಸದ್ರಿದಿನ ಬೆಳಿಗ್ಗೆ 10 ಘಂಟೆಗೆ ಇಲಿ ಮೇಲ್ಕಂಡ ಕೋರ್ಟು ಮುಂದೆ ಹಾಜ್ರಾಗಿ ಆಕ್ಷೇಪಣೆಕೊಡತಕ್ಕದ್ದು ಎಂತ ಕೋರ್ಟ್ ಹುಕುಂ ಪ್ರಕಾರ ತಿಳಿಸಿಯದೆ.

K. V. Kamath,
Advocate for petitioner.
Karkal 2—10—1961.

ಅಲ್ಲಲ್ಲಿಯ ಸುದ್ದಿಸಾರ

ಡಾ| ಬಾಲಕೃಷ್ಣ ಹೆಗ್ಗಡೆ ಅವರು ಉಡುಪಿಯ ಹನುಮಾನ್ ಟ್ರಾನ್ಸ್‌ಪೋರ್ಟು ಕಂಪೆನಿಯ ಡೈರೆಕ್ಟರ್ ಶ್ರೀ ಕೆ. ಅನಂತ ಶೆಟ್ಟಿ ಪುತ್ರ ಡಾ| ಬಾಲಕೃಷ್ಣ ಹೆಗ್ಗಡೆ ಅವರು ಕಳೆದ ಐದು ವರ್ಷಗಳಿಂದ ಅಮೇರಿಕದಲ್ಲಿದ್ದು, ಉಚ್ಚ ವೈದ್ಯ ಶಿಕ್ಷಣವನ್ನು ಪಡೆದು, ಹೃದಯ ಕ್ರಿಯೆಗಳ, ಹಾಗೂ ಅದರ ಜೋಪಾಸನೆದ ಬಗ್ಗೆ, ಅನೇಕ ಸಂಶೋಧನೆಗಳನ್ನು ನಡೆಸಿ, ಉತ್ತಮ ಲೇಖನಗಳನ್ನು ಬರೆದು ಪ್ರಸಿದ್ಧಿಗಳಿಸಿ ಇದೇ ಕಳದ ಆಗೋಸ್ತು 23ಕ್ಕೆ ತನ್ನ ಹುಟ್ಟೂರಿಗೆ ಹಿಂತಿರುಗಿರುವರು. ಇವರ ವೈದ್ಯಶಕ್ತಿಗೆ ಮೆಚ್ಚಿ, ಅನೇಕ ಅಂತರರಾಷ್ಟ್ರೀಯ ವೈದ್ಯ ಸಂಸ್ಥೆಗಳು ಇವರ ಸೇವೆಯನ್ನು ಪಡೆಯುವುವೆಕ್ಕೋಸ್ಕರ ಇವರಿಗೆ ಕರೆಯನ್ನಿತ್ತಿವೆ. ಇವರು ಬಹು ಉತ್ತಮ ರೀತಿಯಲ್ಲಿ ತೇರ್ಗಡೆಹೊಂದಿ ದಕ್ಷಿಣ ಕೆಲಿಫೋರ್ನಿಯದ ವಿಶ್ವವಿದ್ಯಾನಿಲಯದ Master of Science ಎಂಬ ಪದವೀಧರರಾಗಿರುವರು ಇವರು ಹೃದ್ರೋಗಗಳ ರಹಸ್ಯದ ಕುರಿತು ಸಂಶೋಧನೆ ನಡೆಸಿ, ಉತ್ತಮ ಲೇಖನನನ್ನು ಬರೆದು American Heart Association ಸವರು ಕೊಟ್ಟ Oliver P Douglas ಸ್ಮಾರಕದ ಪಾರಿತೋಷಕವನ್ನು ಪಡೆದಿದ್ದಾರೆ. ಹೃದ್ರೋಗ ತಜ್ಞರಾದ ಡಾ| ಹೆಗ್ಗಡೆಯವರನ್ನು ಅಭಿನಂದಿಸುವದರೊಡನೆ ಅವರಿಂದ ನಾಡಿಗೆ ಉಚ್ಚ ಸೇವೆ ದೊರಕುವಂತಾಗಲೆಂದೂ ಹಾರೈಸುತ್ತೇವೆ.

ಸ್ವಾಗತ ಸತ್ಕಾರ—ತಾ. 27-9-61 ರಂದು ಶಿವಮಗ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿ ಡಾ. ಕೆ. ಆರ್. ವೆಂಕಟಕೃಷ್ಣನವರು ಕಾರ್ಡಿಯೋಲಜಿ ಕುರಿತು ಹೆಚ್ಚಿನ ವ್ಯಾಸಂಗಕ್ಕೆ ಅಮೇರಿಕಕ್ಕೆ ತೆರಳಿದ್ದು ಅಲ್ಲಿಯ ಕೆಲಿಫೊರ್ನಿಯಾ ಯುನಿವರ್ಸಿಟಿಯಲ್ಲಿ ಕಾರ್ಡಿಯೋಲಜಿ ಸಂಶೋಧನೆ ನಡೆಸಿ, ಅಲ್ಲಿಯ ಕಾರ್ಡಿಯೋಲಜಿಸ್ಟ್--ಎನೋಸಿಯೇಶನವರಿಂದ ವಿದ್ಯಾರ್ಥಿ ವೇತನ ಪಡೆದು ಹೃದ್ರೋಗ ತಜ್ಞರಾಗಿ ಇತ್ತೀಚೆಗೆ ಭಾರತಕ್ಕೆ ಮರಳಿರುವ ಡಾ| ಬಾಲಕೃಷ್ಣ ಹೆಗ್ಡೆ M. S. (U. S. A) ಹಾಗೂ ಪತ್ನಿಕೋದ್ಯಮದ ಕುರಿತು ಹೆಚ್ಚಿನ ಮಾಹಿತಿಯನ್ನು ಪಡೆದು ಬಂದಿರುವ ಅವರ ಪತ್ನಿ ಶ್ರೀಮತಿ ಮೃಣಾಲಿನಿ ಹೆಗ್ಡೆಯವರನ್ನು ಸ್ವಾಗತಿಸುವರೆ ಸಮಾರಂಭವನ್ನು ಸ್ಥಳೀಯ ಗುರುಗಳಾದ ಸಿ. ಕೆ. ಫಾ. ಎಚ್. ಗೊನ್ಸಾಲ್ವಿಸರ ಅಧ್ಯಕ್ಷತೆಯಲ್ಲಿ ಏರ್ಪಡಿಸಿದ್ದರು.

ಆಸ್ಪತ್ರೆಯ ಮೆಡಿಕಲ್ ಆಫೀಸರರು ಸ್ವಾಗತ ಭಾಷಣ ಮಾಡಿದ ಮೇಲೆ ಸಭಿಕರಲ್ಲಿ ಶ್ರೀಗಳವರ ಪಿ. ಎಸ್. ರಾವ್, ಎಲ್. ಮೆಂಡೊನ್ಸ್, ಬಿ. ಜಯರಾಮ ಶೆಟ್ಟಿಯವರು ಅತಿಥಿಗಳನ್ನು ಸ್ವಾಗತಿಸಿ, ಅಮೇರಿಕದಲ್ಲಿ ಅವರು ಪಡೆದ ಅನುಭವದ ಕುರಿತು ತಿಳಿಸಬೇಕೆಂದು ಕೋರಿದರು.

ಡಾ| ಹೆಗ್ಡೆಯವರು ಮಾತನಾಡುತ್ತಾ ಅಮೇರಿಕದ ಜನ ಜೀವನದಲ್ಲಿ ಕಾಣುವ ಕಾರ್ಯ ತತ್ಪರತೆ, ಅಲ್ಲಿರುವ ಆಹಾರ ಸಾಮಗ್ರಿಗಳ ಹೆಚ್ಚಳ, ಅಲ್ಲಿನ ಶಾಲೆಗಳ ಸ್ಥಿತಿ, ಆಸ್ಪತ್ರೆಗಳ ಕಾರ್ಯ ಇತ್ಯಾದಿಗಳ ಕುರಿತು ತಮ್ಮ ಅನುಭವಗಳನ್ನು ಸುರಸವಾಗಿತ್ತರು. ಅಲ್ಲದೆ ಶ್ರೀಮತಿ ಹೆಗ್ಡೆಯವರು ಪತ್ರಿಕೋದ್ಯಮದ ಕುರಿತು ಭಾಷಣ ಮಾಡಿದರು.

ಕೊನೆಯವಾಗಿ ಅಧ್ಯಕ್ಷರು ಹೃದ್ರೋಗದಲ್ಲಿ ಸಂಶೋಧನೆ ನಡೆಸಿದ ಡಾ| ಹೆಗ್ಡೆಯವರು ನಮ್ಮ ಜಿಲ್ಲೆಗೆ ಅಲ್ಲದೆ ಇಡೀ ಭಾರತಕ್ಕೆ ಹೆಮ್ಮೆಯೂಗಿರುವರು, ತನ್ನ ಅನುಭವದಿಂದ ಜಿಲ್ಲೆಯಲ್ಲಿ ಉಂಟಾಗುವ ಹೃದ್ರೋಗಗಳ ಚಿಕಿತ್ಸೆಯನ್ನು ಮಾಡಲು ಆಯುರಾರೋಗ್ಯ ಸಂಪತ್ತನ್ನು ಸರಮಾತ್ಮನು ಅನುಗ್ರಹಿಸಲೆಂದು ಕೋರಿ ನಮ್ಮ ಜಿಲ್ಲೆಯ ಕೇಂದ್ರಗಳೊಂದರಲ್ಲಿ ನೆಲಸುವಂತೆ ಆಶಿಸಿದರು.

ಡಾ| ಹೆಗ್ಡೆಯವರು ಕೆಲವು ಗ್ರಾಮೀಣ ಹೃದ್ರೋಗಿಗಳನ್ನು ಪರೀಕ್ಷಿಸಿ ತಕ್ಕ ಸಲಹೆಗಳನ್ನಿತ್ತರು. ಲಘೂಪಹಾರ, ಧನ್ಯವಾದ ಸಮರ್ಪಣೆಯೊಂದಿಗೆ ಸಭಾಂತ್ಯವಾಯಿತು ಆರಂಭದಲ್ಲಿ ಗ್ರೂಪ್ ಫೊಟೊ ತೆಗೆಯಲಾಗಿತ್ತು.

ಭಾಷಣ ಸಮಾರಂಭ-ಬೊಂಬಾಯಿಯ ಕರ್ನಾಟಕ ಧರ್ಮಾರ್ಥ ರಾತ್ರಿ ಪ್ರೌಢಶಾಲಾ ಹಳೇ ವಿದ್ಯಾರ್ಥಿ ಸಂಘವು ದಿನಾಂಕ 24—9—61ರಂದು ತಮ್ಮ ಶಾಲಾ ವಿದ್ಯಾರ್ಥಿಗಳಿಗಾಗಿ ಕನ್ನಡದ ಸುಪ್ರಸಿದ್ಧ ಸಾಹಿತಿ ಶ್ರೀ ಪಡುಕೋಣೆ ರಮಾನಂದ ರಾಯರಿಂದ 'ನನ್ನ ವಿದ್ಯಾರ್ಥಿ ಜೀವನದ ನೆನಪುಗಳು' ಎಂಬ ವಿಷಯದ ಕುರಿತು ಭಾಷಣವನ್ನೇರ್ಪಡಿಸಿತ್ತು. ಶ್ರೀ ಎಸ್.ಎಂ. ಶೆಟ್ಟಿ, ಶಿಮುಂಜೆ ಪರಾರಿಯವರು ಸ್ವಾಗತಿಸಿದರು. ಬಳಿಕ ಶ್ರೀ ಶೇಖರ ಇಡ್ಯ ಅವರು ಮೂನ್ಯ ಅತಿಥಿಗಳ ಪರಿಚಯವನ್ನು ಮಾಡಿಕೊಡುತ್ತಾ "ಕನ್ನಡದಲ್ಲಿ ತೀರಾ ಕಡಿಮೆಯಿರುವ ತಿಳಿಹಾಸ್ಯ ಸಾಹಿತ್ಯದಲ್ಲಿ ಶ್ರೀ ಪಡುಕೋಣೆಯವರು ಬರೆದ 'ಉಚ್ಚು ಬೆಳದಿಂಗಳ ಹೂಬಾಣಗಳು' ಒಂದು ಅಮೂಲ್ಯ ಕೃತಿ" ಎಂದುದಲ್ಲದೆ ಅಂತಹ ಅನೇಕ ಕೃತಿಗಳು ಅವರ ಲೇಖನಿಯಿಂದ ಹೊರಬೀಳಲಿ ಎಂದು ಹಾರೈಸಿದರು.

ಮೂನ್ಯ ಅತಿಥಿಯವರು, ಸುಮಾರು 50 ವರ್ಷಗಳ ಹಿಂದೆ ಪ್ರಚಲಿತವಿದ್ದ, ಗುರು-ಶಿಷ್ಯರ ಸಂಬಂಧ, ಶಿಕ್ಷಣದ ರೀತಿ-ಪದ್ಧತಿ, ವಿದ್ಯಾರ್ಥಿಗಳಿಗೀಯಲಾಗುತಿದ್ದ ಶಿಕ್ಷೆ-ಮುಂತಾದುವುಗಳನ್ನು ಮನೋರಂಜಕವಾಗಿ ವರ್ಣಿಸಿ ದುದಲ್ಲದೆ ಸಭಿಕರ ಸಂದೇಹಗಳಿಗೆ ಮಾರ್ಮಿಕವಾಗಿ ಉತ್ತರಿಸಿದರು. ಕೊನೆಗೆ ಸಂಘದ ಅಧ್ಯಕ್ಷ ಶ್ರೀ ಆರ್. ಎಸ್. ಮುಚ್ಚೂರ್ ಅವರು ಅತಿಥಿಯವರಿಗೆ ಪುಷ್ಪಹಾರ ಸಮರ್ಪಿಸಿ, ಸಮಾರೋಪ ಭಾಷಣಗೈದರು

ಸಂತಾಪ ಸೂಚಕ ಸಭೆ—ರಾಮರಾಜ್ಯ ಯಕ್ಷಗಾನ ಕಲಾ ಮಂಡಳಿ, ತಾಂಗಿದಗಡಿ, ಉಡುಪಿ ಇದರ ಆಶ್ರಯದಲ್ಲಿ ತಾ. 30—9—61ರಲ್ಲಿ ಪುತ್ತೂರು ಪಂಚಾಯತು ಅಧ್ಯಕ್ಷ ಶ್ರೀ ಕೆ. ಹನುಮಾಚಾರ್ಯರ ಅಧ್ಯಕ್ಷತೆಯಲ್ಲಿ, ಉಡುಪಿ ಯಕ್ಷಗಾನ ಕಲಾಮಂಡಳಿಯ ಉಪಾಧ್ಯಕ್ಷರೂ ಪ್ರಸಿದ್ಧಯಕ್ಷಗಾನ ಅರ್ಥದಾರಿಗಳೂ, ಶ್ರೀ ಪಂದುಬೆಟ್ಟು ಶೀನ ಶೆಟ್ಟರ ನಿಧನದ ಬಗ್ಗೆ ಸಂತಾಪ ಸೂಚಕ ಸಭೆ ಜರಗಿತು ಶ್ರೀ ಜನ್ನಿಬೆಟ್ಟು ಗೋಪಾಲ ಶೆಟ್ರು ಮೃತರ ಗುಣಗಾನವನ್ನು ಮಾಡಿ ಅವರ ಬಹುಮುಖವಾದ ಯಕ್ಷಗಾನ ಕಲಾ ಸೇವೆಯನ್ನು ಪ್ರಶಂಸಿಸಿದರು. ರಾಮರಾಜ್ಯ ಯಕ್ಷಗಾನ ಕಲಾ ಮಂಡಳಿಯ ಅಧ್ಯಕ್ಷರಾದ ಶ್ರೀ ಕೆ ರಾಮ ಶೆಟ್ಟಿಯವರು ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಿ ಮೃತರ ಯಕ್ಷಗಾನ ಕಲೆಯ ಪ್ರಾಧಿಮಿಯ ಕುರಿತು ಮಾತನಾಡಿದರು. ಅಧ್ಯಕ್ಷ ಶ್ರೀ ಕೆ. ಹನುಮಾಚಾರ್ಯರವರು ಶ್ರೀಯುತರ ವ್ಯಕ್ತಿತ್ವದ ಕುರಿತು ಮಾತನಾಡುತ್ತಾ ಶ್ರೀಯುತರ ನಿಧನದಿಂದ ಯಕ್ಷಗಾನ ಕಲೆಗೆ ತುಂಬಲಾರದ ನಷ್ಟವಾಗಿದೆ ಎಂದರು. ಮೌನ ಪ್ರಾರ್ಥನೆ ನಡೆದ ಬಳಿಕ ಮಂಡಳಿಯ ಕಾರ್ಯದರ್ಶಿ ಶ್ರೀ ಪಿ.ಸುಂದರ ಶೆಟ್ರು ಧನ್ಯವಾದವನ್ನು ಅರ್ಪಿಸಿದರು.

ಉದ್ಘಾಟನೆ— ಬುಣ್ಣಾರು ಹಾ. ಎ ಶಾಲಾ ಶಾಂತಿ ಸಮಾಜದ ಅಣಕ ಪಾರ್ಲಿಮೆಂಟಿನ ಅಧಿವೇಶನದ ಉದ್ಘಾಟನಾ ಕಾರ್ಯವು ತಾ. 26ರಂದು ಪರೀಕ್ಷಾಧಿಕಾರಿ ಶ್ರೀ ಬಿ. ಪಿಂಟೋ ಇವರಿಂದ ನೆರವೇರಿತು. ಕಾರ್ಯದರ್ಶಿ ಶ್ರೀ ಬಿ. ರಾಘವೇಂದ್ರರಾಯರು ಕಾರ್ಯಕಲಾಪಗಳನ್ನು ಸಭೆಯ ಮುಂದಿಟ್ಟರು ಮಂತ್ರಿಗಳು ಪ್ರಸ್ತಾವನೆಗಳನ್ನು ಸ್ವೀಕರಿಸಿದ ಬಳಿಕ ಮಧ್ಯಾಹ್ನದ ಗಂಟೆ ಊಟದ ವ್ಯವಸ್ಥೆ, ಸಮಾಜಕ್ಕೊಂದು ಬಾವಿಯ ಮತ್ತು ವಾಚನಾಲಯದ ಏರ್ಪಾಡು ಮೊದಲಾದ ಮಸೂದೆಗಳು ಮಂಡಿಸಲ್ಪಟ್ಟು ಬಹುಮತದಿಂದ ಮಂಜೂರಾದುವು.

ನಿರುದ್ಯೋಗಿ ಶಿಕ್ಷಕ—ಶಿಕ್ಷಕಿಯರ ಜಿಲ್ಲಾ ಸಮ್ಮೇಲನ:—ಬೆಳಗಾವಿ ಜಿಲ್ಲಾ ಪ್ರಾಥಮಿಕ ಟ್ರೇಂಡ್ ಶಿಕ್ಷಕ, ಶಿಕ್ಷಕಿಯರ ಸಮ್ಮೇಲನವನ್ನು ದಿ. 19-10-61 ನೇ ವಿಜಯ ದಶಮಿಯ ದಿನ ಬೈಲಹೊಂಗಲ ತಾಲೂಕಿನ ನೇಗಿನಹಾಳದಲ್ಲಿ ಕೂಡಿಸುವ ನಿರ್ಧಾರವಾಗಿದೆ. ಗೌರವ ಕಾರ್ಯದರ್ಶಿಗಳು "ಬೆಳಗಾವಿ ಜಿಲ್ಲಾ ನಿರುದ್ಯೋಗಿ ಶಿಕ್ಷಕರ ಸಂಘ" ಮು. ಪೋ. ನೇಗಿನಹಾಳ ಅವರಿಗೆ ಕೂಡಲೇ ಪತ್ರವ್ಯವಹಾರ ಮಾಡಿ ತಮ್ಮ ಪತ್ತೆ ಕೊಟ್ಟು ಸದಸ್ಯರಾಗುವಂತೆಯೂ, ತಮ್ಮ ನಾಕರಿ ಬೇಡಿಕೆಗಳನ್ನೂ, ತಮಗಾದ ಅನ್ಯಾಯವನ್ನೂ, ಘಟನಾವಳಿಗಳನ್ನೂ ಸಂಘದ ಮೂಲಕ ಸರಕಾರದ ಮುಂದಿಟ್ಟು ಪ್ರಯತ್ನಿಸಲು ಎಲ್ಲರೂ ಮುಂದೆ ಬರುವಂತೆಯೂ ಮನಃ ಪ್ರಾರ್ಥಿಸಿಕೊಳ್ಳುತ್ತೇವೆ.

ಕೃಷಿಕರ ಸಂಘದ ಉದ್ಘಾಟನೆ—ಇದೇ ತಾ 2ರಂದು ದ. ಕ. ಜಿಲ್ಲಾ ಕೃಷಿಕರ ಸಂಘದ ಉದ್ಘಾಟನಾ ಸಮಾರಂಭವು ಜಿಲ್ಲಾ ಕೋಂಗ್ರೆಸ್ ಕಮಿಟಿಯ ವರಾರದಲ್ಲಿ ಶ್ರೀ ಎ. ಶಂಕರಾಳ್ವರಿಂದ, ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ನೆರವೇರಿಸಲ್ಪಟ್ಟಿತು. ಶ್ರೀ ಕೆ. ಉಪೇಂದ್ರ ಪ್ರಭುಗಳು ಸ್ವಾಗತಿಸಿದ ಬಳಿಕ ಶ್ರೀ ಕಟ್ಟಿ ಮೂರು ಭಾಷಣರ ಸೆಟ್ಟರು ವರದಿಯನ್ನೋದಿದರು. ಶ್ರೀ ಶಂಕರಾಳ್ವರು ಕೃಷಿಕರ ಸಂಘಾಟನೆ ಕೃಷಿಕರು ಉತ್ಪಾದನೆಯನ್ನು ಹೆಚ್ಚಿಸುವ ಕುರಿತು ಮಾತನಾಡಿದರು. ಶ್ರೀಗಳಾದ ಬಿ.ಎಂ. ಇದಿನಬ್ಬ, ವಿಶ್ವನಾಥ ಆಳ್ವ, ಎಸ್. ಎನ್. ಹೊಳ್ಳ ಮೊದಲಾದವರು ಮಾತನಾಡಿದ ಮೇಲೆ ಅಡಿಗರು ದೇಶದ ಪ್ರಗತಿಗೆ ಕೃಷಿಯೇ ಪ್ರಧಾನವೆಂದೂ ಎಲ್ಲಾ ಕೃಷಿಕರೂ ಈ ಸಂಘಕ್ಕೆ ಸೇರಿ ದೇಶ ಕಲ್ಯಾಣ ಸಾಧಿಸಬೇಕೆಂದೂ ಹೇಳಿದರು. ಶ್ರೀ ನಾರಾಯಣರಾಯರು ಧನ್ಯವಾದಗಳನ್ನರ್ಪಿಸಿದರು. ಬಳಿಕ ಶ್ರೀ ಬಿ. ಮಂಜಯ್ಯ ಹೆಗ್ಡೆಯವರು ಅಧ್ಯಕ್ಷರಾಗಿರುವ ತಾಲ್ಕಾಲಿಕ ಸಮಿತಿಯೊಂದು ರಚಿಸಲ್ಪಟ್ಟಿತು.

ಶಂಕುಸ್ಥಾಪನಾ ಸಮಾರಂಭ—ಬುಣ್ಣಾರು ಹಾ. ಎ. ಶಾಲೆಗೆ ಅಮೆರಿಕದ ಫಿಲಿಪ್ ಮೂರ್ಕೋ ಎಟ್ಟರು ತನ್ನ ಧರ್ಮಪತ್ನಿಯ ಸ್ಮಾರಕಾರ್ಥವಾಗಿ ಕಟ್ಟಿಸಿ ಕೊಡುವ ಹೊಸ ಕಟ್ಟಡದ ಶಂಕುಸ್ಥಾಪನೆಯು ತಾ:26ರಲ್ಲಿ ಶ್ರೀ ಕೆ.ಕೆ.ಪೈಯವರಿಂದ ಶಾಲೆಗಳ ಪರೀಕ್ಷಾಧಿಕಾರಿ ಶ್ರೀ ಬಿ ಪಿಂಟೊ ಇವರ ಅಧ್ಯಕ್ಷತೆಯಲ್ಲಿ ನೆರವೇರಿಸಲ್ಪಟ್ಟಿತು. ಶ್ರೀ ಬಿ. ಶಂಕರ ಸೆಟ್ರು ಸ್ವಾಗತಿಸಿದರು.

ಗಾಂಧಿ ಜಯಂತಿ—ಎಂ. ಜಿ. ಎಂ. ಕಾಲೇಜಿನಲ್ಲಿ ಗಾಂಧಿ ಜಯಂತಿಯು ಯೂನಿಯನ್ ಅಧ್ಯಕ್ಷ, ಶ್ರೀ ಎನ್. ನಾರಾಯಣ ಬಲ್ಲಾಳರವರ ಅಧ್ಯಕ್ಷತೆಯಲ್ಲಿ ಜರಗಿತು.

ವಿದ್ಯಾರ್ಥಿನಿಯರಿಂದ ಪ್ರಾರ್ಥನೆಯೊಡನ ಬಳಿಕ, ವಿದ್ಯಾರ್ಥಿಗಳ ಪೈಕಿ ಶ್ರೀ ಕೆ. ದಿವಾಕರ ಹೆಗ್ಡೆ, ಸುಬ್ರಾಯ ಭಟ್ಟ ಮೊದಲಾದವರೂ ಅಧ್ಯಾಪಕರಲ್ಲಿ ಶ್ರೀ ಶ್ರೀಶ ಬಲ್ಲಾಳರೂ ಮಹಾತ್ಮರ, ಆದರ್ಶದ ಕುರಿತು ಮಾತಾಡಿದರು ಪ್ರಿನ್ಸಿಪಾಲರ ಭಾಷಣವಾದ ಬಳಿಕ ಅಧ್ಯಕ್ಷರು ಕಾಲೋಚಿತ ಭಾಷಣಗೈದರು ವಿದ್ಯಾರ್ಥಿನಿಯರಿಂದ ಸಂಗೀತವಾದ ಬಳಿಕ ಯೂನಿಯನ್ ಕಾರ್ಯದರ್ಶಿ ಶ್ರೀ ಪೆರೋಡಿ ವಿಶ್ವನಾಥ ಸೆಟ್ಟಿ ಇವರು ಧನ್ಯವಾದ ಸಮರ್ಪಣೆಗೈದರು.

ಗಾಂಧೀ ಜಯಂತಿ-ಇದೇ ತಾ. 2ರಂದು ಮಂಗಳೂರಿನ ಬಾಬುಗುಡ್ಡೆ ಹರಿಜನ ಹಿತಚಿಂತನಾ ಶಾಲಾ ವರಾರದಲ್ಲಿ ಗಾಂಧೀ ಜಯಂತಿ ಹಾಗೂ ನೈರ್ಮಲ್ಯ ದಿನಾಚರಣೆಯ ಉದ್ಘಾಟನೆಯನ್ನು ಶ್ರೀ ಕೆ. ಕೆ. ಶೆಟ್ಟಿ ಎಂ. ಎಲ್. ಸಿ. ಯವರು ನೆರವೇರಿಸುತ್ತಾ ಕಡಿಮೆ ಮಾತನಾಡಿ ಅಧಿಕ ಪಂಠ್ಯಮ ಮಾಡುವುದೇ ಗಾಂಧಿ ತತ್ವದ ಸಾರವೆಂದು ಹೇಳಿ ಮಹಾತ್ಮರ ಜೀವನದ ಧ್ಯೇಯಧೋರಣೆಗಳನ್ನು ವಿವರಿಸಿದರು ಬಳಿಕ ಶ್ರೀ. ಕೆ. ಆರ್, ಆಚಾರ್ ಎಂ. ಸಿ. ಯವರು ಮಹಾತ್ಮರ ಆದರ್ಶದಂತೆ ತ್ರಿಕರಣ ಪೂರ್ವಕವಾಗಿ ಎಲ್ಲರೂ ನಡೆಯ ಬೇಕೆಂದರು. ಅಧ್ಯಕ್ಷತೆ ವಹಿಸಿದ್ದ ಶ್ರೀ ಮಿಕೇಲ್ ಶ್ರೀನಿವಾಸ ನಾಯ್ಕರು ನಾವು ಸಕಾಲಿಕ ಭಾವನೆಯನ್ನು ಬಿಟ್ಟು ಎಲ್ಲರೊಡನೆ ಬೆರೆತು ನಡೆಯುವ ಅಭ್ಯಾಸ ಬೆಳೆಸಬೇಕೆಂದರು.

ಯೆಕ್ಷಗಾನ ಕಲಾಕ್ಷೇತ್ರ ಎಂಬುದಾಗಿ ಉಡುಪಿಯ ಶ್ರೀ ಬ್ರಹ್ಮ ವೈದ್ಯಕಳಲಾ ಘೂನೂಪತಿ ಯಕ್ಷಗಾನ ಸಂಘವು ಬದಲಾಯಿಸಲ್ಪಟ್ಟಿದೆ ಎಂದೂ, ಮೊದಲಿನ ಕಾರ್ಯವಾಹಿ ಸಮಿತಿಯಲ್ಲಿದ್ದವರೇ ಇದರಲ್ಲೂ ನೇಮಿತವಾಗಿದ್ದರೆಂದೂ ಸಂಬಂಧಪಟ್ಟವರು ತಿಳಿಸುತ್ತಾರೆ.

ಯೆಕ್ಷಗಾನ— ದೇಲಂಬಾಡಿ ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಕಲಾ ಮಂದಿರದಲ್ಲಿ ಕಳೆದ ತಾ. 30ರಂದು ಶ್ರೀ ಕೀರಿಕ್ಕಾಡು ಮೂಸ್ಟರ್ ವಿಸ್ಟು ಭಟ್ಟರ ಅಧ್ಯಕ್ಷತೆಯಲ್ಲಿ ಯಕ್ಷಗಾನ ಕಾಲಕ್ಷೇಪವೊಂದು ನೆರವೇರಿತು.

ರಾಜ್ಯದ ರಾಜಕೀಯ

(ಶ್ರೀ ಎ. ರಾಮಣ್ಣ)

ರಾಜ್ಯದಲ್ಲೀಗ ರಾಜಕೀಯ ಚಟುವಟಿಕೆಗಳು ಬಿರುಸಾಗುತ್ತಲಿವೆ. ರಾಜಕೀಯ ಪಕ್ಷಗಳು ತಮ್ಮ ಚಟುವಟಿಕೆಗಳನ್ನು ತೀವ್ರಗೊಳಿಸಲು ತೊಡಗಿವೆ. ಅನೇಕ ಪಕ್ಷಗಳ ಕಚೇರಿಗಳಲ್ಲಿ ರಾಶಿ ಬಿದ್ದಿದ್ದ ಕಸಕಡ್ಡಿಗಳು ಈಗ ಜಾಗಬಿಟ್ಟು ಕದಲುತ್ತಲಿವೆ. ಇದಕ್ಕೆ ಕಾರಣ ೧೯೬೨ರ ಮಹಾಚುನಾವಣೆ.

ಚುನಾವಣೆ ಬಂತು ಎಂದರೆ ಜನರಲ್ಲಿ, ಅದರಲ್ಲೂ ಪಕ್ಷಗಳಲ್ಲಿ ಹೊಸ ಹುರುಪು ಎದ್ದು ಕಾಣುತ್ತದೆ. ದೇಶದ ಪ್ರಬಲ ಪ್ರಮುಖ ಹಾಗೂ ಆಳುವ ಕಾಂಗ್ರೆಸ್ ಪಕ್ಷ ಸಹ ಹೀಗೆಯೇ ಇರುತ್ತದೆ. ಕಾಂಗ್ರೆಸ್ ಸಂಸ್ಥೆಯ ಅನೇಕ ಅಂಗ ಸಂಸ್ಥೆಗಳ ಕಾರ್ಯಾಲಯಗಳು ವರ್ಷಾನುಗಟ್ಟಲೆ ಬಾಗಿಲು ಹಾಕಿದ್ದರೂ ಈಗ ತೆರೆದಿವೆ. ಮಂಡಲ ಕಾಂಗ್ರೆಸ್ಸುಗಳಿಗೆ ಇಂದು ಡಿಮಾಂಡ್ ಹೆಚ್ಚಾಗಿದೆ ಅವು ಪದೇ ಪದೇ ಸಭೆ ಸೇರುತ್ತವೆ. ಉಮೇದ್ವಾರಿಗಳ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸುತ್ತಿವೆ.

ಪ್ರಬಲ ಸಂಸ್ಥೆಯೊದುದರಿಂದ ಕಾಂಗ್ರೆಸ್ ತತ್ವದಲ್ಲಿ ನಂಬುಗೆ ಇಲ್ಲದವರೂ ಕಾಂಗ್ರೆಸ್ ಟಿಕೇಟಿಗೆ ಅರ್ಜಿ ಹಾಕಿದ್ದಾರೆ. ಪಂಡಿತ್ ನೆಹರುರವರು ಕಾಂಗ್ರೆಸ್ ತತ್ವವನ್ನು ಒಪ್ಪಿಕೊಳ್ಳದೆ ಎಲ್ಲಾ ಪಕ್ಷಗಳಿಗೂ ಹಣ ಕೊಡುವವರಿಂದ ಕಾಂಗ್ರೆಸ್ ನಿಧಿಗೆ ಹಣವನ್ನೇ ಸಂಗ್ರಹಿಸುವುದಿಲ್ಲ ಎಂದು ಹೇಳುತಿದ್ದಾರೆ. ಕಾಂಗ್ರೆಸ್ಸಿನ ಸಕ್ರಿಯ ಸದಸ್ಯರಾಗಲು ಅರ್ಹತೆಯಿಲ್ಲದವರೂ ಫಾರ್ಮ್‌ಗಳಿಗೆ ಸಹಿ ಹಾಕಿ ಕಾಂಗ್ರೆಸ್ ಟಿಕೇಟಿಗೆ ಅರ್ಜಿ ಹಾಕಿದ್ದಾರೆ. ಸತತ ಪಾದಿಧಾರಿಗಳಲ್ಲದವರು, ವಿದೇಶಿ ಬಟ್ಟೆ ವ್ಯಾಪಾರಿಗಳು ಮದ್ಯನಿರೋಧ ನೀತಿಯನ್ನು ಪ್ರತ್ಯಕ್ಷ ಪರೋಕ್ಷ ವಿರೋಧಿಸುವವರೂ ಇದ್ದಾರೆ. ಇಂತಹರನ್ನು ತಳ್ಳಿ ಹಾಕುವ ಧೈರ್ಯ ಕಾಂಗ್ರೆಸ್ ಚುನಾವಣಾ ಸಮಿತಿಗಿದೆಯೆ? ಎಂಬುದನ್ನು ಕಾದು ನೋಡಬೇಕು

ಚುನಾವಣೆ ಫೆಬ್ರವರಿ ತಿಂಗಳಲ್ಲಿ ನಡೆಯುವುದಾದರೂ ಟಿಕೇಟನ ಬೇಟೆ ಆರಂಭವಾಗಿ ತಿಂಗಳುಗಳಾಯಿತು. ಮೊದಲು ಸೂಚನಾ ಪತ್ರಕ್ಕೆ ಸಹಿ ಹಾಕಲು ಪ್ರಯತ್ನ; ಅನಂತರ ಮಂಡಲ ಕಾಂಗ್ರೆಸ್ ಸದಸ್ಯರ ಅಭಿಪ್ರಾಯ ಕೊಡಿಸಲು, ಮುಂದೆ ಜಿಲ್ಲಾ ಕಾಂಗ್ರೆಸ್‌ನ ಮತ್ತು ಇದೆಲ್ಲಾ ಆದನಂತರ ಚುನಾವಣಾ ಸಮಿತಿಯ ಸದಸ್ಯರಲ್ಲಿ ಪ್ರಭಾವ ಬೀರಲು ಯತ್ನ. ಟಿಕೇಟು ಪಡೆಯುವನೆವದಲ್ಲಿ ಕಾಂಗ್ರೆಸ್ಸು ನಾಲ್ಕಾರು ಗುಂಪುಗಳಾಗಿ ಒಡೆಯುತ್ತದೋ ಎಂಬ ಭಯ ಈ ವಳ್ಳೆ ಕೆಲವು ಪ್ರಮುಖರ ಸ್ಟೇಟ್ ಬೇರೆ ನಡೆಯುತ್ತದೆ.

ಕಾಂಗ್ರೆಸ್ಸು ಮಾತ್ರವಲ್ಲ ಇತರ ಪಕ್ಷಗಳೂ ಚುನಾವಣಾರಂಗಕ್ಕೆ ಳಿಯಲು ಸಜ್ಜು ಮಾಡುತ್ತಿವೆ. ತಮ್ಮ ಕಛೇರಿಗಳ ಧ್ವಜವನ್ನು ಹೊಸದಾಗಿಸಿ ಹಾರಿಸುತ್ತಿವೆ. ಅಷ್ಟರಲ್ಲೇ ಉಮೇದ್ವಾರಿಗಳ ಆಯ್ಕೆಯ ಮಹಾ ಪ್ರಶ್ನೆ ಅಂತೂ ಇನ್ನು ಕೆಲತಿಂಗಳು ಈ ಗಲಾಟೆ ಎಲ್ಲೆಲ್ಲೂ ಇದೆಯೆನ್ನಬಹುದು.

ಹೊಲ್ಲೆಂಡಿನ ಉಡುಗೊರೆ

ಹೊಲ್ಲೆಂಡಿಗೆ ಹೋದವರು ಅಲ್ಲಿನ ಮರದ ಮೆಟ್ಟುಗಳನ್ನು ಯಾತ್ರೆಯ ನೆನಪಿಗಾಗಿ ಅವಶ್ಯ ತರುತ್ತಾರೆ. ಇವನ್ನು ಗದ್ದೆಗಳಲ್ಲಿ ಮೈದಾನುಗಳಲ್ಲಿ ಕೆಲಸ ಮಾಡುವ ರೈತರು ಮೂಲಿಗಳು, ಸಮುದ್ರ ದಂಡೆಯ ಮೀನುಗಾರರು ಅಲ್ಲಿ ಧರಿಸುತ್ತಾರೆ. ತೇವವಿರುವ ಮತ್ತು ಕೆಸರು ತುಂಬಿದ ನೆಲದಲ್ಲಿ ಕೆಲಸ ಮಾಡುವವರಿಗೆ ಇದು ಅವಶ್ಯವಾಗಿದೆ. ಅವರ ಪಾದಗಳನ್ನಿದು ಬೆಚ್ಚಗಿಡುವುದು. ಅಗತ್ಯ ಬಿದ್ದರೆ, ಇವನ್ನು ತೊಳೆಯಬಹುದು. ಧೂಳು ಅಥವಾ ಕೊಳೆಯು ಮರದ ಜೋಡಿಗೆ ಅಂಟುವುದಿಲ್ಲ. ರೈತನು ಗದ್ದೆಯಿಂದ ಮರಳಿ ಬಂದವನೇ ಇವನ್ನು ಹೊರಗಡೆಯೇ ಕಳಚಿ ಚಪ್ಪಲಿ ಮೆಟ್ಟಿ ತೊಡಗುತ್ತಾನೆ. ಅದರೂ ಗೃಹಿಣಿಯು ಮರದ ಬೂಟನ್ನು ಜಿನ್ನಾಗಿ ತೊಳೆದು ಇಡುತ್ತಾಳೆ.

ಮರದ ಜೋಡು ಕೇವಲ ಮೂರು ರೂಪಾಯಿಗಳಿಗೆ ಅಲ್ಲಿ ದೊರೆಯುತ್ತವೆ. ಚರ್ಮದವುಗಳಿಗೆ ೩೦ ರೂಪಾಯಿ ತಗಲುತ್ತದೆ. ಮರದವುಗಳಿಗೆ ರಿಪೇರಿಯು ಅಗತ್ಯವೂ ಇರುವುದಿಲ್ಲ. ಶಾಲೆಯ ಮಕ್ಕಳು ಬೂಟಿನ ಮೇಲ್ಬಾಗವನ್ನು ಸವೆದುಕೊಂಡರೆ, ಕಬ್ಬಿಣದ ಪಟ್ಟಿ ಜೋಡಿಸಬಹುದು. ಅದರ ಅಡಿಭಾಗ ಸವೆಯುವುದಿಲ್ಲ; ಸವೆಯುತೆಂದರೆ, ಅದರ ಆಯುಷ್ಯ ಮುಗಿಯಿತೆಂದೇ ಅರ್ಥ.

ರೈತ ಜನರು ಜೀವನಕ್ಕಾಗಿ ಮೊದಲು ಮರದ ಬೂಟುಗಳನ್ನು ಕೈಗಾರಿಕೆಯನ್ನಾಗಿ ಮಾಡುತ್ತಿದ್ದರು. ಎಲ್ಲ ಕೆಲಸಗಳೂ ಕೈಯಿಂದಲೇ ಆಗ ಆಗುತಿತ್ತು. ಆದರೆ, ಈಗ ಎಲ್ಲವೂ ಯಂತ್ರದ ಸಹಾಯದಿಂದ ನಡೆಯುತ್ತದೆ. ಉಳಿದ ಪುಟ್ಟ ಕೈಕೆಲಸಗಳನ್ನು ಅನಂತರ ಮಾಡುತ್ತಾರೆ. ಯಂತ್ರಗಳಲ್ಲಿ ತಯಾರಾದರೂ ಇವುಗಳಲ್ಲಿ ವೈವಿಧ್ಯಗಳಿವೆ. ಗಂಡಸರು, ಹೆಂಗಸರು ಮತ್ತು ಮಕ್ಕಳ ಬೂಟುಗಳಲ್ಲಿ ತುಂಬ ಅಂತರವಿದೆ. ಮೇಲಿನ ಹೊದಿಕೆ ಕೆಲವಕ್ಕಿದೆ, ಇನ್ನು ಕೆಲವಕ್ಕಿಲ್ಲ. ಅವುಗಳಲ್ಲಿ ಬೇರೆ ಬೇರೆ ರೀತಿಯ ಕಾರ್ಯಕೌಶಲಗಳು ನಡೆಯುತ್ತವೆ. ಹಳದಿ ಬಣ್ಣದ ಜೋಡೊಂದಿದೆ. ಇದರಲ್ಲಿ ವಿಭಿನ್ನ ರಂಗುಗಳಲ್ಲಿ ಹೂಗಳನ್ನು ಚಿತ್ರಿಸುತ್ತಾರೆ. ಮಹಿಳೆಯರು ಇದನ್ನು ಬಳಸುತ್ತಾರೆ. ಹುಡುಗರು ಕಪ್ಪು ಬಣ್ಣದ ಜೋಡುಗಳನ್ನು ಉಪಯೋಗಿಸುತ್ತಾರೆ.

ಪೊಪೆಲರ್ ಮತ್ತು ವಿಲ್ ಮರಗಳಿಂದ ಹೆಚ್ಚಾಗಿ ಜೋಡುಗಳು ತಯಾರಾಗುತ್ತವೆ. ಹೊಲ್ಲೆಂಡಿನ ಹವಾಮಾನದಲ್ಲಿ ಇವು ಸಮೃದ್ಧವಾಗಿ ಬೆಳೆಯುತ್ತವೆ. ಇವುಗಳ ಜೋಡು ಕೆಟ್ಟು ನಿರುಪಯೋಗಿಯಾಯಿತೆಂದರೆ, ಉರುವಲಿಗೆ ಉಪಯೋಗಿಸಬಹುದು. ದ್ವಿತೀಯ ಲೋಕ ಯುದ್ಧಾಂತ್ಯದಲ್ಲಿ ಹೊಲ್ಲೆಂಡಿನಲ್ಲಿ ೧೫೦ ಸಂಘಟಿತ ನಿರ್ಮಾತರು ಇದರ ಉದ್ಯೋಗ ಮಾಡುತಿದ್ದರು. ೬೫ ಸಾವಿರ ಜೋಡುಗಳು ಪ್ರತಿ ವರ್ಷ ತಯಾರಾಗುತಿದ್ದುವು. ಕಳೆದ ವರ್ಷ ಯಂತ್ರಗಳಿಂದ ೫೦ ಚಿಕ್ಕ ಕಾರಖಾನೆಗಳಲ್ಲಿ ಒಟ್ಟು ೫೦ ಲಕ್ಷ ಜೋಡುಗಳು ನಿರ್ಮಾಣಗೊಂಡುವು.

ಕೆಲವೊಂದು ಕಾರಖಾನೆಗಳು ಒಂದೊಂದು ವಾರ ಒಂದೊಂದು ವಿಧದ ಜೋಡುಗಳನ್ನು ತಯಾರಿಸುತ್ತವೆ. ಪ್ರತಿ ಜೋಡಿನಲ್ಲೂ ಕೈಕೆಲಸವಾಗಲೇಬೇಕು. ಆವುಗಳ ಹೊರಮೈಯ ಮೂದರಿ ಚಿತ್ರಗಳ ಪರಂಪರಾ ಪ್ರಾಪ್ತವಾದುದರಿಂದ ಡಿಸ್ಕಾನ್ ಬಿಡಿಸುವಲ್ಲಿಗೆ ಅವನ್ನು ಕಳಿಸುತ್ತಾರೆ. ಬೂಟಿಗೆ ಬೇಕಾದ ಮರವನ್ನು ಮೊದಲು ನೀರಿನಲ್ಲಿ ಮುಳುಗಿಸಿಡುತ್ತಾರೆ ಒಂದೊಂದು ವರ್ಷ ನೀರಿನಲ್ಲಿರುವುದರಿಂದ ಅವು ಮೃದುವಾಗಿ ಚರ್ಮದಂತೆಯೇ ಕತ್ತರಿಸಲು ಬರುತ್ತದೆ. ೧೫ ಅಂಗುಲದ ತುಂಡುಗಳನ್ನು ಇವುಗಳಿಂದ ಮತ್ತೆ ಮಾಡುತ್ತಾರೆ. ಇವುಗಳ ದಪ್ಪ ನಾಲ್ಕು ಅಂಗುಲವಿರುವುದು. ಮನುಷ್ಯನಂತಹ ಮೂರು ಕೈಗಳಿರುವ ಒಂದು ಯಂತ್ರದ ಅಡಿಯಲ್ಲಿದನ್ನು ಇಟ್ಟೊಡನೆಯೇ ಅದು ಜೋಡನ್ನು ತಯಾರಿಸುವುದು. ಆ ಮೇಲೆ ಇದರ ತುದಿಗಳನ್ನು ಕತ್ತರಿಸಿ, ಕೆತ್ತಿ ಸರಿಯಾದ ಆಕಾರಕ್ಕೆ ತರುತ್ತಾರೆ.

ಅನಂತರ ಕೈಕೆಲಸದ ಕರ್ಮಶಾಲೆಗೆ ಅದನ್ನುಒಯ್ದು ಉರುವಲಿನ ಬೆಂಕಿಯಲ್ಲಿಬಣಗಿಸುತ್ತಾರೆ. ೧೫೦ ಡಿಗ್ರಿ ಫೆರನ್ ಹೈಟ್ ಉಷ್ಣತೆ ಇದಕ್ಕೆ ಬೇಕಾಗುವುದು.

ಮರದ ಮೆಟ್ಟುಗಳ ಉಪಯೋಗವೀಗ ಕಡಿಮೆಯಾಗಿದೆಯಾದರೂ ಜನಸಂಖ್ಯೆಯ ಹೆಚ್ಚಳದಿಂದ ಹಾಗೂ ನಗರವಾಸಿಗಳ ಬೇಡಿಕೆಯಿಂದ ಇವುಗಳ ವ್ಯಾಪಾರ ಸ್ಥಿರವಾಗಿದೆ. ಜೀವನದಲ್ಲಿ ಎಂದೂ ಧರಿಸದಿರುವವರೂ ತೋಟಗಳಲ್ಲಿ ಕೆಲಸ ಮಾಡುವಾಗ ಇದನ್ನು ಹಾಕಿಕೊಳ್ಳುವರು. ಹೊಲ್ಲೆಂಡನ್ನು ಸಂದರ್ಶಿಸುವ ಪರದೇಶೀಯರೂ ಅಲ್ಲಿನ ಉಡುಗೊರೆಯೆಂದು ಇದನ್ನು ಕೊಂಡುತರುವರು.

ನೈಜ ಭಕ್ತಿಯೆಂದರೇನು?

ಪರ್ವತ ಶಿಖರದ ಮೇಲೆ ಕುಳಿತುಕೊಂಡು ಯಾರೋ ಒಬ್ಬ ರೈತನು ಪ್ರಾರ್ಥನೆ ಮಾಡುತಿದ್ದ—"ದೇವನೇ, ಬಾ. ನನ್ನಲ್ಲಿಗೆ ನೀನು ಬಂದರೆ, ನೀನು ನನ್ನ ಬಳಿಗೆ ಸಮಾಗಮಿಸುವ ಕೃಪೆದೋರಿದರೆ, ನಾನು ನಿನ್ನನ್ನು ಕೃತ್ಯಾಪರ್ವಕ ಸತ್ಕರಿಸುವೆನು. ನಿನ್ನ ಗಡ್ಡಗಳಿಂದ ನನ್ನನ್ನು ಕಟ್ಟುವೆನು. ನಿನ್ನ ತಲೆಯ ಕೂದಲುಗಳೆಡೆ ಅಡಗಿರುವ ಹೇನುಗಳನ್ನು ಕೀಳುವೆನು. ಮೈಗೆಲ್ಲ ಎಣ್ಣೆ ಸವರಿ ಅಭ್ಯಂಜನ ಮಾಡಿಸುವೆನು. ನನ್ನನ್ನೇ ನಾನು ನಿನಗೆ ಅರ್ಪಿಸಿ ಬಿಡುವೆನು. ನನ್ನ ಗಡ್ಡದಿಂದ ನಿನ್ನ ಪಾದ ಧೂಳಿಯನ್ನು ತೊಡೆಯುವೆನು. ನೀನು ಮಲಗ ಬಯಸುವಿಯೆಂದಾದರೆ, ಚಾಪೆ ಹಾಸಿಕೊಡುವೆನು. ನೀನು ಕಾಯಿಲೆಕಸಾರೆ ಬಿದ್ದಿಯೆಂದರೆ ಹಗಲಿರುಳು ಉಪಚಾರ ಮಾಡುತ್ತ ನಿನ್ನ ಬಳಿಯಿಂದ ಅಗಲದೆ ನಿಲ್ಲುವೆನು. ನನ್ನ ಪ್ರೀತಿಯ ದೇವರೇ, ನೀನು ನನ್ನ ಬಳಿಗೆ ಬಾ. ನಾನಿನ್ನ ದಾಸನಾಗಿ ಜೀವನವನ್ನು ಸಾರ್ಥಕಗೊಳಿಸುವೆನು"

ಇಷ್ಟು ಹೊತ್ತಿನಲ್ಲಿ ಹಜರತ್ ಮೂಸಾರು ಆಕಡೆಯಿಂದ ಸಾಗುತಿದ್ದರು. ಅವರು ರೈತನ ಕಳಕಳಿಯ ಪ್ರಾರ್ಥನೆಯನ್ನು ಕೇಳಿ ಅತನ ಬಳಿಗೆ ಬಂದು ರೈತನೊಡನೆ ಕೇಳಿದರು—"ತಮ್ಮಾ, ಎಂತಹ ಮೂರ್ಖನಯ್ಯ ನೀನು? ಯಾರೊಡನೆ ಮಾತಾಡಿಕೊಳ್ಳುತ್ತಿರುವೆ? ಯಾರು ಅಸ್ವಸ್ಥರಾದರು? ಯಾರ ಸೇವೆ ಮಾಡಬೇಕು? ಏನಿದು ಅಕಾಶ ಭಾಷಿತ?

ರೈತನು ಹೇಳಿದನು—"ನಾನು ಪರಮಾತ್ಮನೊಡನೆ ಮಾತಾಡುತ್ತಿದ್ದೆ. ಆತನ ಸೇವೆ ಮಾಡಲು ನಾನು ಬಯಸುತಿದ್ದೇನೆ"

ಮಹಾತ್ಮಾಮೂಸಾರಿಗೆ ನಗು ತಡೆಯಲಾಗಲಿಲ್ಲ. ಅವರು ರೈತನನ್ನು ಗೇಲಿಮಾಡತೊಡಗಿದರು. "ಅಯ್ಯೋ ಮೂರ್ಖ, ನೀನು ಮಹಾ ಪಾಪವೆಸಗುತ್ತಿರುವೆ. ದೇವರಿಗೆ ಎಲ್ಲಿಯಾದರೂ ಗಡ್ಡ ಬೆಳೆಯುವುದಿದೆಯೆ? ಆ ಶಕ್ತಿವಂತ ದಯಾಮಯನು ಕಾಯಿಲೆ ಬೀಳುವುದಿದೆಯೆ? ಅತನು ಅಶರೀರಿ, ಅಜನ್ಮ ಮತ್ತು ಸರ್ವವ್ಯಾಪಕನು. ಅತನಿಗೆ ಮನುಷ್ಯನಂತೆ ಸೇವೆ-ಸೇವಕರ ಅವಶ್ಯಕತೆಯೇನಿದೆ? ಇಂತಹ ಹೆಡ್ಡತನವನ್ನು ಮುಂದೆಂದೂ ಮಾಡಬೇಡ"

ಅಸಹಾಯ ಕೃಷಿಕ ಮೌನಿಯಾದನು. ಹಜರತ್ ಮೂಸಾರಂತಹ ಮಹಾ ಸನ್ಯಾಸಿಗಳ ಮುಂದೆ ಆ ಗಾವಿಲನು ಏನೆಂದು ನುಡಿಯಬೇಕು? ಆತನು ತನ್ನ ಮಾಡಿದ ತಪ್ಪಿಗಾಗಿ ಕ್ಷಮೆಯಾಚಿಸಿ. ಅಲ್ಲಿಂದ ಹೊರಟುಹೋದ. ಹಜರತರಿಗೂ ಒಬ್ಬ ಮಾನವನು ಪಾಪಗರ್ತದಲ್ಲಿ ಉರುಳುವುದನ್ನು ತಪ್ಪಿಸಿದೆನು ಎಂಬ ಅಹಂಕಾರವಾಯಿತು. ಅವರು ತೃಪ್ತಿಯಿಂದ ಮುಂದುವರಿದರು.

ಅದೇ ದಿನ ಮೂಸಾರು ಪ್ರಾರ್ಥನೆ ಮಾಡುತ್ತಿರುವಾಗ, ಅವರಿಗೊಂದು ಅಶರೀರವಾಣಿ ಕೇಳಿಸಿತು—"ಮೂಸಾ, ಮನುಷ್ಯರ ಮನಸ್ಸನ್ನು ನನ್ನಲ್ಲಿ ನಾಟಿಸುವುದಕ್ಕಾಗಿ ನಾನು ನಿನ್ನನ್ನು ಕಳಿಸಿದ್ದೇನೆ. ಅಲ್ಲದೆ, ನನ್ನಲ್ಲಿಂದ ಕೇಳುವುದಕ್ಕಲ್ಲ. ನನ್ನಲ್ಲಿ ಮನಸ್ಸಿಟ್ಟು ಭಕ್ತಿಮಾಡುತಿದ್ದ ರೈತನ ಮನಸ್ಸನ್ನು ನೀನು ಕೇಳಿಸಿ, ಪಾಪಕಾರ್ಯ ಮಾಡಿದೆ. ಮೂರ್ಖ ಮೂಸನೆ, ಭಾವವೇ ನೈಜ ಭಕ್ತಿಯೆಂಬುದನ್ನು ನೀನು ಇನ್ನೂ ಅರಿಯದಾದೆಯ?"

ಹಜರತ್ ಮೂಸರು ಲಜ್ಜೆ ಮತ್ತು ಪಾಪ ಭೀತಿಯಿಂದ ಗಡಗಡನೆ ನಡುಗಿದರು; ಪರಮಾತ್ಮನನ್ನು ಅನನ್ಯ ಭಾವದಿಂದ ಪ್ರಾರ್ಥಿಸ ತೊಡಗಿದರು.

ಮಾತಿನ ಮುತ್ತುಗಳು

ಚಿಕಿತ್ಸಕ ಬುದ್ಧಿಯನ್ನು ಕಳೆದುಕೊಂಡು ಬಿಟ್ಟರೆ ಬರೀ ಜ್ಞಾನದ್ದಲ್ಲದೆ ಜಗತ್ತಿನ ಪ್ರಗತಿಯೇ ಕುಂಠಿತವಾಗುತ್ತದೆ.

—ಲೋ. ಟಿಳಕರು.

ಂ ಂ

ನಮ್ಮ ತಪ್ಪುಗಳನ್ನು ಒಪ್ಪಿಕೊಳ್ಳುವದೆಂದರೆ ಒಂದು ಕಸಬರಿಗೆಯಿದ್ದಂತೆ. ಅದರಿಂದ ನಮ್ಮ ಮನೋಭೂಮಿಕೆಯು ಮೊದಲಿಗಿಂತಲೂ ಹೆಚ್ಚು ಶುದ್ಧವಾಗುವದು.

—ಮ. ಗಾಂಧಿ

ಂ ಂ

ಸೃಷ್ಟಿಯ ನಿರ್ಮಾಣವಾದಂದಿನಿಂದ ಜೀವರ ಕಣ್ಣೊಳಗಿಂದ ಹರಿದ ಕಣ್ಣೀರು ಎಲ್ಲ ಮಹಾಸಾಗರಗಳಿಗಿಂತಲೂ ಹೆಚ್ಚಾಗುವದ; ಪ್ರಪಂಚವು ಇಷ್ಟು ದುಃಖಮಯವಾಗಿದೆ.

—ಭಗವಾನ್ ಬುದ್ಧ

ಂ ಂ

ಸಂತಪ್ತ ಹೃದಯದ ಬೇಗೆಯನ್ನು ಶಾಂತಪಡಿಸುವ ಆತ್ಮೀಯತೆಯ ಒಂದು ದೃಷ್ಟಿಕ್ಷೇಪವು ಕುಬೇರನ ಸಂಪತ್ತಿಗಿಂತಲೂ ಹೆಚ್ಚು ಬೆಲೆಯುಳ್ಳದು.

—ಗಟೆ

ಂ ಂ

ಧ್ಯೇಯದ ಹುಚ್ಚು ನಿಮಗೆ ಹಿಡಿಯಲಿ. ಕೈಕೊಂಡ ಕಾರ್ಯದಹಚ್ಚುಹಿಡಿಯಲಿ, ಯಾಕಂದರೆ ಇಂತಹ ಧ್ಯೇಯಭ್ರಾಂತರು ಹೋದೆಡೆಗಳಲ್ಲೆಲ್ಲ ಬೆಳಕನ್ನು ಬೀರುವರು. ಹಾಗೆ ನೀನಾಗು! ಅಂದರೆ ಬೇಕಾದ ದೇಶಹಿತಕಾರ್ಯವನ್ನು ಕೈಕೊಂಡರೂ ಅದರಲ್ಲಿ ನಿನಗೆ ಯಶಸ್ಸು ಸಿದ್ಧವಾಗಿರುತ್ತದೆ.

—ಸಾನೆ ಗುರೂಜಿ

ಂ ಂ

ಆಪತ್ತುಗಳು ಅಭಿಶಾಪಗಳಲ್ಲ. ಉಜ್ವಲ ಭವಿಷ್ಯತ್ತಿನ ಸಂಕೇತಗಳು.

—ಶಾರ್

(೩ನೇ ಪುಟದಿಂದ)

ಬುದನ್ನು ತಿಳಿಸಿ ಹೇಳುತ್ತದೆ. ನಿಯೋಜಿತ ರೀತಿಯ ಪರಿಶ್ರಮದಿಂದ, ಏಕಾಗ್ರನಿಷ್ಠೆಯಿಂದ ಕಣಕಣವನ್ನು ಗಳಿಸಿ ಅದನ್ನು ಹೊಂದಿಸಿಕೊಳ್ಳ ಬೇಕೆಂಬುದು ಸಾರುತ್ತದೆ. ಮೆದುಳು ಸರಿಷ್ಕಾರಕ್ಕೆ ಶಾಲೆ ಕಾಲೇಜುಗಳ ಜತೆಗೆ ಪುಸ್ತಕಾಲಯಗಳೂ ಅತ್ಯವಶ್ಯವಾಗಿವೆ ನಿಜವನ್ನು ಹೇಳುವುದಾದರೆ, ಪುಸ್ತಕಾಲಯಗಳೇ ಸತ್ಯ ಜ್ಞಾನದ ಭಂಡಾರ. ಶಾಲೇಕಾಲೇಜುಗಳು ಈ ಭಂಡಾರದ ಬೀಗತೆಗೆಯುವ ಕೀಲಿಕೈಗಳು ಮಾತ್ರ.

(ಇಂಟ್ರಿ ಸೋರ್ಸ್ ಲೇಖನವೊಂದರ ಆಧಾರದಿಂದ)

ಕೊರ್ಪೊರೇಶನ್ ಬೇಂಕ್

ಶೇವಣಾತಿಗಳ ಮೇಲಿನ ಸಾಲಿಯಾನ್ ಶೇಕಡಾ ಬಡ್ಡಿ ದರಗಳು:

3	ಸೇವಿಂಗ್ಸ್ ಬೇಂಕ್ ಖಾತೆ
3 ಯಿಂದ 5½	ಕಾಯಂ (ವಿವಿಧಾವಧಿಗಳಿಗೆ)
5½	ಪಜೋಸ್ಸವ
5	ಕ್ಯುಮುಲೇಟಿವ್

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ಸ್ಥಾಪನೆ: 1906)

ರಿಜಿಸ್ಟರ್ಡ್ ಆಫೀಸು: ಉಡುಪಿ | ಆಡಳಿತ ಆಫೀಸು: ಮಂಗಳೂರು

ದಿಗಂತವ್ಯಾಪಿ ಅರ್ಜೆಂಟ್

ಶ್ರೀ ಎ. ರವಿಶಂಕರ, ಮಂಗಳೂರು

ಗಿರಿ ಸಿಕ್ಕಿಬೊಡನೆ ಅದೇನೋ ಮನುಷ್ಯ ಬದಲಾಗುತ್ತಾನೆ. ಗಿರಿ ಅಂದ ಕೂಡಲೇ ಗಾಬರಿಯಾಗಬೇಡಿ. ಪರ್ವತ ಅಲ್ಲ. ಮನೆ ಮೂತಾಗಿ ಅಧಿಕಾರವನ್ನು 'ಗಿರಿ' ಅಂತ ಅನ್ನುತ್ತಾರೆ. ಅಧ್ಯಕ್ಷಗಿರಿ, ಗುಮಾಸ್ತಗಿರಿ, ಮೇಸ್ಟ್ರಗಿರಿ ಇತ್ಯಾದಿ ಗಿರಿಗಿರಿಗಳು. ಗಿರಿಯ ಗರಗರ ತಿರುಗುವಿಕೆಗೆ ಮನುಷ್ಯ ಬೇಲೆನ್ಸ್ ತಪ್ಪುತ್ತಾನೆ. ಪತಿಯ ಗಿರಿಗೆ ಸತಿಯೂ ಸುತ್ತುವವಳೇ ಅನ್ನಿ. ಆದರೇನು? ಪಾಪ, ಮನೆಯಲ್ಲೇ. ಎಲ್ಲಾದರೇನು ಅವಳು ಅರ್ಧಾಂಗಿಯಲ್ಲವೇ? ಈ ಸ್ವಾತಂತ್ರ್ಯ ಯುಗದಲ್ಲಂತೂ ಪ್ರತ್ಯೇಕ ಹೇಳಬೇಕೇ? ಅರ್ಧಾಂಗಿ ಹೇಗೋ ಹಾಗೆ ಅರ್ಧಾಧಿಕಾರಿಣಿ ಅಂತ ಏಕಾಗಬಾರದು? ಆಫೀಸಿನಲ್ಲಿ ಟ್ರೆಮ್ ಆಗಿ ಕುಳಿತು (ಅಂದರೆ ಹಾಗಿದ್ದರೆ ಮಾತ್ರ ಆಫೀಸಿನ ಡಿಗ್ನಿಟಿ ಉಳಿಯುವುದಂತೆ) ಒಂದವರನ್ನು ಕುಳಿಸುಕೊಳ್ಳಲೂ ಹೇಳದೆ ಗಂಡ ಆಗಿ ಮೂತನಾದಿರುವ ಆಧುನಿಕ ಆಫೀಸರ್ ಅರ್ಧಾತ್ ಗಿರಿ ದೋಲ್ಡರ್ ಮನೆಯಲ್ಲಿ ಡಿಗ್ನಿಸೈಡ್ ಹಸ್‌ಬೆಂಡ್, ತನ್ನ ಅರ್ಧಾಧಿಕಾರಿಣಿ ಮೂದ ಅರ್ಧಾಂಗಿಯ ಇದಿರಲ್ಲಿ ಬೆಂಡ್ ಆಗಲೇಬೇಕು ಮೂಗು ಮುರಿದು ಕುಕ್ಕರಿಸಲೇಬೇಕು ಹೀಗಾಗಿ ಆಫೀಸಿನ ಕೆಳ ನೌಕರ ಎಲ್ಲಾದರೂ ಭೇಟಿಯಾಗಿ ಆಫೀಸರರ ಮನೆಗೆ ಅರ್ಜೆಂಟ್ ಟಪ್ಪಾಲಿನ ಡಿಸ್‌ಪೋಜಲ್‌ಗೆ ಹೋದಾಗ ಆಫೀಸರರ ದರ್ಶನ ಆಗಬೇಕಾದರೆ ಅರ್ಧಾಧಿಕಾರಿಣಿಯ ಪ್ರಾಪ್ಟ್ ಸಿಗಲೇಬೇಕು. ಅರ್ಧಾಧಿಕಾರಿಣಿಯ ಕೃಪಾಕಟಾಕ್ಷಕ್ಕೆ ಬಿದ್ದ ಕೆಳ ನೌಕರರೆಲ್ಲಾದರೂ ಇದ್ದರೆ 'ಎಬಿಲಿಟಿ' ಇಲ್ಲದಿದ್ದರೂ ಬೇಗನೇ ಪ್ರೊಮೋಶನ್ ಸಿಕ್ಕೇ ಬಿಡುತ್ತೆ.

ಆಫೀಸಿನವರೂ ಎಲ್ಲವೂ ಅರ್ಜೆಂಟೇ ಎಲ್ಲರೂ ಟ್ರೆಮ್ಮೇ. ಜವಾನರಿಂದ ಹಿಡಿದು ಪ್ರತಿಯೊಬ್ಬರೂ 'ಡಿಗ್ನಿಟಿ ಕೇಪ್ ಅಪ್" ಮಾಡುವವರೇ ಒಮ್ಮೆ ನನಗೊಂದು ಆಫೀಸಿಗೆ ಹೋಗುವ ಅವಕಾಶವೊದಗಿತ್ತು. ಹಣದ ವಹಿವಾಟು. ಹಣ ಅಂದರೆ ಅರ್ಜೆಂಟ್ ಅಂತ ಲೆಕ್ಕ. ಇಲೆಕ್ಷನ್ ಇಮೊಡಿಯೇಟಿಗಿಂತಲೂ ಹಣ ಇಮೊಡಿಯೇಟೇ ಇಮೊಡಿಯೇಟ್. ಇಲ್ಲದಿದ್ದರೆ ಹೆಸರಿನ ಎದುರು ಲೇಟ್ ಮಾರ್ಕ್ ಬೀಳುವ ಸಂದರ್ಭಗಳೂ ಇವೆ. ಇದು ಟ್ರೇಡ್ ಮಾರ್ಕಾಗಿ ಉಳಿದು ಲೇಟ್ ಶ್ರೀಮಾನ್ ಇಂತವರು, ಅಂತವರು ಅಂತ ಆದ ಮೇಲೂ ಪ್ರೊಮೋಶನ್, ಗ್ರೇಡೋಶನ್ನೂ, ಪೆನ್‌ಶನ್, ಗ್ರಿಚ್ಯುಶನ್ನೂ ಸಿಕ್ಕುವುದೂ ಇದೆ ಅನ್ನಿ.

ಆ ಆಫೀಸಿನಲ್ಲಿ ಬೇರೊಂದು ಖಾತೆಯಲ್ಲಿ ನನ್ನ ಸ್ನೇಹಿತರೊಬ್ಬರಿದ್ದಾರೆ. ಬಹಳ 'ಬೀಝೀ' ಮನುಷ್ಯ ನೋಡಿ. ಆದಿತ್ಯವಾರ ರಜೆ ಇದ್ದರೂ ಒಮ್ಮೊಮ್ಮೆ ಆದಿತ್ಯವಾರವೂ ಆಫೀಸಿನಲ್ಲಿ ಅವರನ್ನು ಭೇಟಿಯಾಗಬಹುದು. ನಾನೂ ಅವರನ್ನು ಆದಿತ್ಯವಾರವೇ ಭೇಟಿಯಾಗಲು ಹೊರಟೆ ಶನಿ ಶನೀಂತ ಆಫೀಸಿನ ಹಿರಿಯ ಅಧಿಕಾರಿ ಮುಖದರ್ಶನವಾಯಿತು. ಅವರೂ 'ಬೀಝಿ'ನೆ. ಅರ್ಜೆಂಟಾಗಿಯೇ ನನ್ನ ಕೆಲಸದ ವಿಚಾರ ತಿಳಿಸಿದೆ 'ನಾಳೆ ಬನ್ನಿ ಅವೀತು' ಅಂದರು. ಅಲ್ಲಿಂದಲೇ ಕಾಲ್ಕಿತ್ತೆ.

ಮರುದಿನ ಮುಂಜಾನೆ ಸ್ನೇಹಿತರ ಭೇಟಿಗಾಗಿ ಪುನಃ ಬಂದೆ. ಸ್ನೇಹಿತರು ನನ್ನನ್ನು ಸ್ವಾಗತಿಸಿದರು. ಹೋಟೇಲಿನ ಕಾಫಿಯನ್ನು ತರಿಸಿಕೊಟ್ಟರು. ಕಾಫಿ ಕುಡಿದಾದ ಮೇಲೆಯೇ ನನ್ನ ಸಂದರ್ಶನದ ವಿಚಾರ ತಿಳಿಸಿದೆ ಎಲ್ಲಾದರೂ ಮೊದಲೇ ನನ್ನ 'ಪ್ರೊಗ್ರಾಂ"ನ್ನು ತಿಳಿಸಿದರೆ ಆ ಕಾಫಿಯೂ ನನ್ನ ಪಾಲಿಗೆ ಬಾರದೆ ಹೋದೀತೆಂದು ತಿಳಿದು ಮೊದಲೇ ನನ್ನ 'ಪ್ಲೇನೆನ್ನು' ಬಹಳ 'ಕೇರ್‌ಫುಲ್' ಆಗಿ ಹೇಳಿದ್ದೆ. ನಾಪ ಅವರೂ ಅರ್ಜೆಂಟಾಗಿ ಸಂಬಂಧಪಟ್ಟ ಗುಮಾಸ್ತರನ್ನು ಇಮೊಡಿಯೇಟ್ ಕಂಡು ಮಾತನಾಡಿದರು. ಅಲ್ಲೇ ಸ್ವಲ್ಪ ಸ್ವಲ್ಪ ಪರಿಚಯವಿರುವ ಇನ್ನೊಬ್ಬ ಗುಮಾಸ್ತರು ನನ್ನ ಕಣ್ಣಿಗೆ ಬಿದ್ದರು. ಅಂದರೆ ಕಾಣಸಿಕ್ಕಿದರೂಂತ ಡಿಗ್ನಿಟಿ ಕಾಪಾಡುವ ಗಲಾಟೆಯಲ್ಲಿ ಟ್ರೆಮ್ ಆಗಿ ಕುಳಿತು ನನ್ನನ್ನು ಕಂಡೂ ಕಾಣದಂತೆ ನಟಿಸಿ ಗೀಚುತ್ತಿರುವುದನ್ನು ಕಂಡು ಬೇಸರಪಟ್ಟ ನಾನು ಅಲ್ಲೇ ಕುರ್ಚಿಗೆ ಅಂಟಿದೆ.

'ಅಕ್ಕೀರೇ" ಎಂಬ ಸೀಟಿನ ಸದ್ದು ನನ್ನನ್ನು ಬಲಕ್ಕೆ ತಿರುಗಿಸಿತು. ಅಲ್ಲೊಬ್ಬ ಗುಮಾಸ್ತರು ಓರ್ವ ಅಧ್ಯಾಪಿಕೆಯನ್ನು ಗದರಿಸುತ್ತಿರುವುದು ನನ್ನ ಗಮನಕ್ಕೆ ಬಂತು.

"ಎನಮ್ಮಾ, ಪೆಟರ್‌ನಿಟಿ ಲೀವ್ ಗೆ ಅರ್ಜಿ ಹಾಕಿದೆ ಕೂಡಲೇ ರಜೆ ಸೇಂಕ್ಷನ್ ಆಗ್ಲಿಕ್ಕೆ ನಿಮ್ಮ ಮನೆಯೇ ಇದು" ಅಂತ ಟ್ರೆಮ್ ಆಗಿ ತಲೆ ಕೆಳಗೆ ಹಾಕಿಯೇ ಉತ್ತರಿಸಿದ. ಟಪ್ಪನೆ ಉಸುರಿದಳು ಆ ಯುವತಿ, "ಎಸ್ರೀ, ಪೆಟರ್‌ನಿಟಿ ಲೀವ್ ಅಪ್ಲಿಕೇಶನ್ ಕೊಟ್ಟು ಸಮಯವೆಷ್ಟೋ ಆಯಿತು!! ನನ್ನ ಮಗು ಈಗ ಪುಟ್ಟ ಹೆಜ್ಜೆ ಇಟ್ಟು ನಡೆಯಲು ಅಭ್ಯಾಸ ಮಾಡುತ್ತಿದೆ. ಮತ್ತೂ ಒದ್ದೋಡಾ ಇದೀರಾ?"

ನಗು ತಡೆಯಲಾರದೆ ಗಟ್ಟಿಯಾಗಿ ನಕ್ಕು ಬಿಟ್ಟೆ ನಾನು. ಗುಮಾಸ್ತ ಕತ್ತೆತ್ತಿ ನನ್ನನ್ನು ನೋಡಿಯೇ ಬಿಟ್ಟ. ಪಾಪ ಮುಖದ ಬಣ್ಣ ಬದಲಾಗಿತ್ತು.

ಅಷ್ಟರಲ್ಲೇ ನನ್ನ ಸ್ನೇಹಿತರು ಬಂದು "ಇನ್ನೊಂದೆರಡು ಗಂಟೆಗಳಲ್ಲಾಗಬಹುದು. ಅಷ್ಟರ ತನಕ ಕುಳಿತುಕೊಳ್ಳಿ" ಅಂದರು. ಯಾವುದೋ ಆಫೀಸಿನ ಬೇಸರಿಗಾಗಿ ಕುಮಾರಿಗುಮಾಸ್ತೆಯೊಬ್ಬರು ನನ್ನ ಅಲ್ಪ ಪರಿಚಿತ ಸ್ನೇಹಿತನ ಸಮೀಪಕ್ಕೆ ಬಂದರು. ಗೀಚುತ್ತಿದ್ದ ಸ್ನೇಹಿತ ಬುರುಡೆ ಹಾರಿಸಲು ಪ್ರಾರಂಭಿಸಿಯೇ ಬಿಟ್ಟ. ಅರ್ಧತಾಸು ಕಳೆದರೂ ಇವರ ಒಫೀಸಿಯಲ್ ಟಾಕ್ ಮುಗಿಯಲೇ ಇಲ್ಲ. ಮೆಲ್ಲನೆ ಕುರ್ಚಿಯಿಂದೆದ್ದು ಅತನ ಎದುರಿಗೆ ನಿಂತು. "ನಮಸ್ಕಾರ, ಮಿಸ್ಟರ್, ಬಹಳ ಬೀಝೀಂತ ಕಾಣುತ್ತೆ. ಆಫೀಸ್ ವರ್ಕೇ ಹಾಗೇ. ಮುಗಿಯುವುದೇ ಇಲ್ಲ. ಡಿಸ್ಟರ್ಬ್ ಆಯ್ತೂಂತ ಕಾಣ್ತಾದೆ. ಕ್ಷಮಿಸಿ ಅಂದೆ." ತನ್ನಳ್ಳೆ ಕುಮಾರಿಯವರೂ ಕಣ್ಮರೆಯಾಗಿದ್ದರು. "ಹಾಗೇನಿಲ್ಲ. ನನ್ನ ಪೆನ್ನೊಂದು ಕೆಟ್ಟೋಗಿತ್ತು. ರಿಪೇರಿ ಮಾಡ್ತಿದೆ ಅಷ್ಟೆ." ಅಂದರು

ಇಷ್ಟೆಲ್ಲಾ ಮುಗಿದರೂ ನನ್ನ ಕೆಲಸ ಮುಗಿಯಲೇ ಇಲ್ಲ. ನೇರವಾಗಿ ಅಧಿಕಾರಿಯನ್ನೇ ಭೇಟಿಯಾಗಿ ಅವರಿಂದ 'ಅರ್ಜೆಂಟ್' ಎಂಬ ಪತ್ರವನ್ನು ಪಡೆದು ಇನ್ನೋರ್ವ ಗುಮಾಸ್ತರ ಭೇಟಿಗಾಗಿ ಹೋದೆ.

"ಏನಯ್ಯಾ ಇಷ್ಟು ಅರ್ಜೆಂಟ್. ಏಳಂಟು 'ಜೆಕ್ಕು'ಗಳನ್ನು ಬರೆಯಲು ಸಾಧ್ಯವೇ? ನಾಳೆ ಬನ್ನಿ' ಅಂದರು.

"ನನಗೆ ಅರ್ಜೆಂಟ್ ಬೇಕಿತ್ತು. ಇಮೊಡಿಯೇಟ್ ಕೊಟ್ಟರೆ ತುಂಬ 'ಥ್ಯಾಂಕ್ಸ್" ಅಂದೆ. 'ಹಾಗಾದರೆ. ನಿಲ್ಲಿ' ಎಂಬ ಆಜ್ಞೆಯನ್ನು ಕೊಟ್ಟರು. ಕುಳಿತು ಕೊಳ್ಳಲು ಕುರ್ಚಿ ಅಲ್ಲೆಲ್ಲೂ ಇಲ್ಲದ ಕಾರಣ ನಿಂತೇ ಇದ್ದೆ ನಾನು.

"ನಿಲ್ಲಿ ಅಂದರೆ ನಿಂತುಕೊಂಡೇ ಇರೀ ಅಂತಲ್ಲ. ಕುಳಿತುಕೊಳ್ಳಬಹುದು ಅಂತ ಅಧ್ಯಾಪಕರು ಮಕ್ಕಳಿಗೆ ಅರ್ಥ ಸ್ಪಷ್ಟಪಡಿಸುವಂತೆ 'ಕ್ರೇಮ್' 'ಕಲ್ಲರ್'ನಿಂದ ಕಂಗೊಳಿಸುವ ತನ್ನ ಅಳಿದು ಉಳಿದ ಕೆಲವೇ ಹೆಲ್ಲುಗಳನ್ನು ಪ್ರದರ್ಶನಕ್ಕಿಟ್ಟರು.

"ಮಕ್ಕಳಿಗೆ ಪಾಠ ಹೇಳಿ ಹೇಳಿ ಅಭ್ಯಾಸವಾಗಿದೆ. ನಿಮ್ಮ ಮೂತು ನಿಮಗಿಂತಲೂ ಚೆನ್ನಾಗಿ ನನಗೆ ಅರ್ಥವಾಗಿದೆ" ಅಂತ ಹೇಳಬೇಕೆಂಬುದಾಗಿ ನಿಶ್ಚಯಿಸಿದೆ. ಆದರೆ ನನಗೆ ಅರ್ಜೆಂಟ್ 'ಚೆಕ್' ಬೇಕಾದ ಕಾರಣ ಇಮಿಡಿಯೇಟ್ ಆ ಮಾತನ್ನು ಹಿಂತೆಗೆದು ಜಾತಕ ಪಕ್ಷಿಯಂತೆ ಚೆಕ್ಕನ್ನು ನಿರೀಕ್ಷಿಸುತ್ತಾ ನಿಂತೆ ಅಂತೂ ನಿಧಾನವಾಗಿಯೇ ಚೆಕ್ ನನ್ನ ಕೈ ಸೇರಿತು. ಸ್ನೇಹಿತರಿಗೆ ನಮಸ್ಕಾರ ತಿಳಿಸಿ ಟ್ರೆಮ್ ಆಗಿ ಅರ್ಜೆಂಟ್ ಹೊರಟೇಬಿಟ್ಟೆ.

ಸ್ಥಾಪನೆ: 1924

ದಿ ಕರ್ಣಾಟಕ ಬೇಂಕ್ ಲಿಮಿಟೆಡ್

(ಶೆಡ್ಯೂಲ್ಡ್ ಬೇಂಕ್)

ರಿಜಿಸ್ಟರ್ಡ್ & ಹೆಡ್ ಆಫೀಸು: ಡೊಂಗರಕೇರಿ, ಮಂಗಳೂರು—3.

ಈ ಕೆಳಗಿನ ಏರಿಸಿದ ಬಡ್ಡಿದರಗಳಲ್ಲಿ ಠೇವಣಾತಿಗಳನ್ನು ಸ್ವೀಕರಿಸಲಾಗುವುದು-

ಒಂದರಿಂದ ಎರಡು ತಿಂಗಳುಗಳ ವರೆಗೆ	....	ಸಾ|| ಸೇಕಡಾ 3-75	ನ.ಪೈಸೆ
ಮೂರರಿಂದ ಐದು ತಿಂಗಳುಗಳ ವರೆಗೆ	....	,, 4-25	,,
ಆರು ತಿಂಗಳುಗಳಿಂದ 12 ತಿಂಗಳುಗಳ ವರೆಗೆ	....	,, 4-50	,,
12 ತಿಂಗಳು ಮಿಕ್ಕಿ 24 ತಿಂಗಳುಗಳ ವರೆಗೆ	....	,, 4-75	,,
24 ತಿಂಗಳು ಮಿಕ್ಕಿ 48 ತಿಂಗಳುಗಳ ವರೆಗೆ	....	,, 5·00	,,
48 ತಿಂಗಳುಗಳಿಗೆ ಮಿಕ್ಕಿ	....	,, 5-25	,,

ಸೇವಿಂಗ್ಸ್ ಬ್ಯಾಂಕ್ ಬಡ್ಡಿ ದರವನ್ನು ಸಾ. ಸೇಕಡ 2½% ರಿಂದ 3½%ಗೆ ಏರಿಸಲಾಗಿದೆ.

THE KARNATAKA BANK LIMITED.

ನವಯುಗ ವಾರ ಪತ್ರಿಕೆಗೆ ಚಂದಾದಾರರಾಗಿ ಪ್ರೋತ್ಸಾಹಿಸಿ



Tel: 'BLUEYAGAR'. —— ಚಿನ್ನ ಮತ್ತು ವಜ್ರಗಳ ಆಧುನಿಕ ತವರುಮನೆ —— Phone: 374.

ಕೆ.ಆರ್.ಕೆ.ಶೇಟ್ ಡಯಮಂಡ್ ಮಾರ್ಟ್

ಸ್ಥಾಪನೆ:1919] ಚಿನ್ನ ಮತ್ತು ವಜ್ರದ ವ್ಯಾಪಾರಿಗಳು,(ಗವರ್ನ್‌ಮೆಂಟ್ ಕಾಲೇಜ್ ಎದುರುಗಡೆ)ಮಂಗಳೂರು. ಮಾಲಿಕ:ಕೆ.ಕೆ.ಆರ್.ಶೇಟ್

NAVAYUGA, UDIPI.
REGD. NO.BG. 176

5-10-1961

LICENSE NO. 31
Licensed to Post without Prepayment

ಓದುಗರ ಓಲೆಗಳು:

ಅಳಿಯ ಸಂತಾನ ಸುಧಾರಣೆ

ಆಧುನಿಕ ವಾತಾವರಣದ ಸರಕಾರದಲ್ಲಿರುವ ಅಳಿಯ ಕಟ್ಟನವರಿಗೂ—ಇತರ ಮತದವರಿಗೂ-ಅಳಿಯ ಸಂತಾನವೆಂಬುದು ನೇಗಿನ ಮುಳ್ಳಿನಂತೆ ಕಾಣುವುದರಿಂದ ಅದನ್ನು ಸರಿಮಾಡಲಿಕ್ಕೆ ಹೊರಡುವ ಮಸೂದೆಗಳು-ಸುಧಾರಣೆ ಮಾಡುವ ಬದಲು ನಾಶಮಾಡುವ ದಾರಿಯಲ್ಲಿದೆ-ಎಂದು ಹೇಳಬಹುದು—ಈ ಸುಧಾರಣೆಗಳಿಂದ ಹಲವು ಮೆಂಬರರಿಗೆ ಅನ್ಯಾಯವಾಗುತ್ತದೆ. ಆದರೆ ಸರಕಾರಕ್ಕೆ ನ್ಯಾಯವಾಗಿ ಸುಧಾರಣೆ ಮಾಡಬೇಕೆಂದು ಇಚ್ಛೆಯಿದ್ದರೆ-ತುಳು ಜನರ ಜೀವನಾದಾರವಾದ ಕಟ್ಟನ್ನು ಬದಲಾವಣೆ ಮಾಡಬೇಕಾದರೆ-ಸಾವಿರಾರು ಕುಟುಂಬಗಳು ಇರುವ ತುಳುನಾಡಿನ ಹಳ್ಳಿಗರಲ್ಲಿ ಭೂಮಿಯ ವಾರೀಸುದಾರರಾದ ಹೆಂಗಸರೊಡನೆ ಅವರಿಗೆ ತಿಳಿಯುವ ತುಳು ಭಾಷೆಯಲ್ಲಿ ಮಸೂದೆಗಳನ್ನು ವಿವರಿಸಿ ಅವರ ಹೇಳಿಕೆ ಪಡದು ಸರ್ವಸಮ್ಮತಿಯಿಂದ ಬಿಲ್ ತಯಾರಿಸಬೇಕು—

ಈಗಿನ ಸರ್ವಾಧಿಕಾರ ಪದ್ಧತಿಯಲ್ಲಿ ಹಳ್ಳಿಯ ಉದ್ಧಾರ ಡಿಲ್ಲಿಯಲ್ಲಿ, ಮಂಗಳೂರಿನ ವಿಚಾರ ಬೆಂಗಳೂರಲ್ಲಿ ಎಂಬಂತೆ ಅಳಿಯಕಟ್ಟಿನ ಆರೇಳು ಜನರನ್ನು ಬೆಂಗಳೂರಿಗೆ ಕರೆದು ಅವರ ಅನುಮತಿಯಂತೆ ತಯಾರಿಸುವ ಮಸೂದೆಯು ಸರ್ವ ಸಮ್ಮತವಾದ ಮಸೂದೆಯಾಗಲಾರದು.

ಸರಕಾರವು ಜನರ ಮೂಲಭೂತವಾದ ಹಕ್ಕುಗಳಿಗೆ ದಕ್ಕೆಬಾರದಂತೆ ಶಾಸನಗಳನ್ನು ರಚಿಸಬೇಕು. ಸರ್ವ ಜನರಿಗೂ ಮತ, ಧರ್ಮ ಆಚಾರ ವ್ಯವಹಾರ ಆಹಾರ ಪಾನೀಯ ಪದ್ಧತಿ ಕಟ್ಟು-ಕಟ್ಟಳೆಗಳಿಗೆ ಪೂರ್ಣ ಸ್ವಾತಂತ್ರ್ಯವಿರಬೇಕು. ಹಳ್ಳಿಯ ಜನರ ಸ್ವತಂತ್ರವನ್ನು ನಾಶಮಾಡುವ ಈ ಮಸೂದೆಗಳಿಂದ ಏನೂ ತಿಳುವಳಿಕೆಯಿಲ್ಲದ ಹಳ್ಳಿಯ ರೈತರನ್ನು ಕೋರ್ಟು ಕಚೇರಿ ವಕೀಲರುಗಳ ಬಲೆಗೆ ಹಾಕಿ ಜೀವಂತ ಕೊಲೆ ಮಾಡಬಾರದು. ಅವರಿಗೆ ಅದೂ ಅಲ್ಲ ಇದೂ ಇಲ್ಲವೆಂಬ ಪಾಠ ಕಲಿಸಬಾರದು—

ಸರಕಾರವು ಅಳಿಯ ಸಂತಾನವನ್ನು ನಾಶಮಾಡಬಾರದು.

ಆದರೆ ಅಳಿಯ ಸಂತಾನಿಗರಿಗೆ ಈ ಕಟ್ಟು ಬೇಡವಾದರೆ ಎಲ್ಲಾ ಮೆಂಬರರು ಮಸೂದೆಗೆ ಬೆಂಬಲ ಕೊಡುವುದಾದರೆ ದಾರಿಯಲ್ಲಿರುವ ನೇಗಿನ ಮುಳ್ಳನ್ನು ತೆಗೆದು ಯಾರಿಗೂ ಅನ್ಯಾಯವಾಗದಂತೆ ಕಾನೂನು ತಯಾರಿಸಬೇಕು ಅದರಲ್ಲಿ,

1. ಈ ಮೊದಲು ಮದ್ರಾಸು ಅಳಿಯ ಸಂತಾನ ಬಿಲ್ ಪ್ರಕಾರ ಅಗಿರುವ ಅರ್ಧಾಂಶ ಕವರು ಪಾಲು ಅರ್ಧಾಂಶ ತಲೆವಾರು ಪಾಲ. ಎಂಬುದನ್ನು ರದ್ದುಮಾಡಬೇಕು.

2. ಅಳಿಯ ಸಂತಾನದ ಭೂಮಿಯು ಸಮಷ್ಟಿ ಹಕ್ಕಿನದಾಗಿರುವುದರಿಂದ ಸಂತತಿ ಎಂದರೆ ಜೀವಂತವಿರುವ ಎಲ್ಲಾ ಗಂಡು ಹೆಣ್ಣು ಮೆಂಬರರು—ಮತ್ತು ಗಂಡು ಮೆಂಬರರ ಮಕ್ಕಳು ಹೆಣ್ಣು ಮೆಂಬರರ ಮಕ್ಕಳು ಸಂತತಿ ಎಂಬದಾಗಿ ತಿದ್ದಬೇಕು—ಮೇಲಿನ ಎಲ್ಲಾ ಮೆಂಬರರಿಗೂ ಸಮಷ್ಟಿ ಸರಿಸಮಾನ ತಲೆವಾರು ಪಾಲು ಮಾಡುವಂತೆಯೂ ಮತ್ತು ಅವರವರ ಪಾಲಿನ ಆಸ್ತಿಯು ಅವರ ಸ್ವಾರ್ಜಿತವೆಂದು ವಿಧಿಸಬೇಕು.

ಈ ರೀತಿ ಕಾನೂನು ಮಾಡಿದರೆ ಹಿಂದೂ ಕೋಡು ಜಾರಿಮಾಡಲಿಕ್ಕೆ ಯಾವ ಆತಂಕವೂ ಇರಲಾರದು—

ಅಗ ನಿರಪರಾಧಿ ಹಳ್ಳಿಗರಿಗೆ ಕೋರ್ಟು ಕಚೇರಿಗಳ ಸಹವಾಸ ತಪ್ಪಿ ಸುಖವಾಗಿರಬಹುದು.

ಅಳಿಯ ಸಂತಾನದ ಕಟ್ಟು ಅಚ್ಚಳಿಯದ ಗುಟ್ಟು ಎಂಬ ಕನ್ನಡ ಗಾದೆಯು ರಟ್ಟಾಗುವುದು—ಎಂದು ಈ ಮೂಲಕ ವಿಜ್ಞಾಪಿಸುವ.

—ಎನ್. ಎ. ಶೀನಪ್ಪ ಹೆಗಡೆ,
ಪೊಳಲಿ, ದ. ಕ.

ಗಡಿಯಾರದ ಕಥೆ

ಬಹಳ ಹಿಂದಿನ ಕಾಲದ ಜನರು ಸೂರ್ಯ, ಚಂದ್ರ ಮತ್ತು ನಕ್ಷತ್ರಗಳ ಸಹಾಯದಿಂದಲೇ ಸಮಯವನ್ನು ತಿಳಿಯುತಿದ್ದರು. ಆದರೆ, ಆಕಾಶದಲ್ಲಿ ಮೋಡಗಳು ಕವಿದಿರ.ವಾಗ, ಹೊತ್ತನ್ನು ಗೊತ್ತು ಮಾಡುವುದು ಅಸಂಭವವೆನಿಸುತಿತ್ತು. ಇದಕ್ಕಾಗಿ ಜನರು ಇತರ ಉಪಾಯಗಳನ್ನು ಆರಿಸತೊಡಗಿದರು. ಅಡಿಯಲ್ಲಿ ಒಂದು ಚಿಕ್ಕ ತೂತಿರುವ ದೊಡ್ಡ ಗುಡಾಣದಲ್ಲಿ ನೀರನ್ನು ತುಂಬಿಸುತಿದ್ದರು. ತೂತಿನಿಂದ ಸಂಪೂರ್ಣವಾಗಿ ನೀರು ಇಳಿದು ಹೋದಾಗ ಸಮಯವನ್ನು ಅರಿತುಕೊಳ್ಳುತಿದ್ದರು. ಯೂನಾನ್, ರೋಮ್ ಮತ್ತು ಬೆಬಿಲೋನ್‌ಗಳಲ್ಲಿ ಇಂತಹ ಜಲಗಡಿಯಾರಗಳು ಉಪಯೋಗದಲ್ಲಿದ್ದುವು.ಇದರಲ್ಲಿತೊಂದರೆಯೂ ಇತ್ತು. ಆಗಾಗ ನೀರನ್ನು ಹೊಯ್ಯುತ್ತಿರಬೇಕಾಗುವುದು. ಮಾತ್ರವಲ್ಲ, ತೂತಿನಲ್ಲಿ ಕಸಕಡ್ಡಿಗಳು ನಿಂತು ಅದು ಮುಚ್ಚಿ ಹೋಗುವುದೂ ಇತ್ತು. ಚೀನಾ ದೇಶದಲ್ಲಿ ನಾಲ್ಕು ಗುಡಾಣಗಳುಳ್ಳ ಜಲಗಡಿಯಾರವಿತ್ತು. ಒಂದರ ಮೇಲೊಂದು ಇರುವಂತೆ ಜೋಡಿಸಲ್ಪಟ್ಟ ಇದರಲ್ಲಿ ನಾಲ್ಕರ ನೀರೂ ಸುರಿದ ಮೇಲೆ ಎರಡನೆ ಬಾರಿ ನೀರು ತುಂಬಿದರೆ ಸಾಕಾಗುತಿತ್ತು.

ಹಿಂದಿನ ಕಾಲದಲ್ಲಿ ಇನ್ನೂ ಹಲವು ವಿಧದ ಗಡಿಯಾರಗಳಿದ್ದುವು. ಮಳಲ ಗಡಿಯಾರ ಇವುಗಳಲ್ಲಿ ಒಂದು.ಎರಡು ಗೊಲಾಕಾರದ ಪಾತ್ರೆಗಳನ್ನು ಜೋಡಿಸಿ ಇದನ್ನು ತಯಾರಿಸುತಿದ್ದರು ಎಡೂ ಪಾತ್ರೆಗಳು ಒಟ್ಟು ಸೇರುವಲ್ಲಿ ಅಗಲಕಿರಿದಾದ ಬಿರುಕಿರುತಿತ್ತು. ಮೇಲಿನ ಪಾತ್ರೆಯಲ್ಲಿ ಹಗುರ ಹೈಗೆಯನ್ನು ತುಂಬಿಸುತಿದ್ದರು ಆ ಮಳಲು ಒಂದು ಘಂಟೆಯಲ್ಲಿ ಸಂಪೂರ್ಣ ಸುರಿದು ಕೆಳಗಿನ ಮಡಕೆಯಲ್ಲಿ ತುಂಬುತಿತ್ತು. ಆಗ ಕೆಳಗಿನ ಪಾತ್ರೆಯನ್ನು ಮೇಲೆ ಮಾಡಿಡಬೇಕಾಗುತಿತ್ತು. ಪ್ರತಿ ತಾಸಿಗೊಮ್ಮೆ ಪಾತ್ರೆಗಳ ಸ್ಥಾನವನ್ನು ಬದಲಿಸುವ ಅಗತ್ಯ ಇದಕ್ಕಿತ್ತು. ಕಾಲಕ್ರಮದಲ್ಲಿ ಬಡೆಯುವ ಗಡಿಯಾರದ ಶೋಧನೆಯಾಯಿತು. ಒಂದು ಸರಿಗೆಯ ಒಂದು ತುದಿಯಲ್ಲಿ ಯಾವುದಾದರೂ ಗಟ್ಟಿ ವಸ್ತುವನ್ನು ಕಟ್ಟಿತಿದ್ದರ. ಆ ವಸ್ತು ಮೆಲ್ಲ ಮೆಲ್ಲನೆ ಕೆಳಗಡೆಗೆ ಜಾರುತ್ತ ಬಂದು ಗಡಿಯಾರದ ಚಕ್ರ ಮತ್ತು ಮುಳ್ಳುಗಳನ್ನು ತಿರುಗಿಸುತಿತ್ತು.

ಒಂದು ತಂತಿಯ ತುದಿಯಲ್ಲಿ ಕಟ್ಟಿದ ವಸ್ತುವನ್ನು ಕಂಪಿಸುವಾಗ ಒಂದೇ ಗತಿಯಲ್ಲಿ ಅದು ಅತ್ತಿತ್ತ ಕಂಪಿಸುತ್ತದೆಯೆಂಬುದನ್ನು ಗೆಲಿಲಿಯೋ ಕಂಡುಹಿಡಿದನು. ಈತತ್ವದಆಧಾರದಮೇಲೆ ಅಧುನಿಕ ಗಡಿಯಾರಗಳು ತಯಾರಾಗತೊಡಗಿದವು. ಇದಾದ ನಂತರ 'ಸ್ಪ್ರಿಂಗ್ ವಾಚ್'ನ ಸಂಶೋಧನೆಯಾಯಿತು. ಇಂದು ಈ ವಿಧದ ಗಡಿಯಾರಗಳು ವಿಶ್ವದಲ್ಲಿ ಅಧಿಕಾಧಿಕವಾಗಿ ಪ್ರಚಾರವಾಗುತ್ತಿವೆ.

ಅಮೃತ ಬಿಂದು

ಜಗತ್ತು ಭಗವಂತನ ನೈಸರ್ಗಿಕ ಕಲಾಕೃತಿಯಾಗಿ ಇಂದಿಲ್ಲ; ಏಕೆಂದರೆ ಮನುಷ್ಯನು ಪ್ರಕೃತಿಯ ಮೇಲೂ ಎಲ್ಲೆಡೆ ತನ್ನ ಕಸಿಬೇಸ್ಕೆ ನಡೆಸಿದ್ದಾನೆ.

ಂ ಂ ಂ

ಮನುಷ್ಯನ ಮೆದುಳಿನಿಂದ ಅಂದರೆ ಹೊರುಕು ಬುದ್ಧಿಯಿಂದ ಮಹಾತ್ಮನಾಗುವದಿಲ್ಲ; ಅದರೊಡನೆ ಹೃದಯ ಬೆರೆಯಬೇಕು.

ಂ ಂ ಂ

ಸ್ವರ್ಗದ ಸುಂದರ ದೃಶ್ಯ ಮರೆಯಾಗುವಂತೆ ಸ್ವಾರ್ಥತೆಯು ಮನುಷ್ಯನ ತಲೆಯ ಮೇಲೆ ದಪ್ಪ ಪದರದ ಮಾಡನ್ನು ರಚಿಸುತ್ತದೆ.

ಂ ಂ ಂ

ದಿನವಹಿ ಮಾಡುವ ಚಿಕ್ಕ ತಪ್ಪುಗಳ ಅಳತೆ ಕೋಲಿನಿಂದ ಜಗತ್ತು ಮನುಷ್ಯನನ್ನು ಅಳೆಯುತ್ತದೆ. ಆತನು ಜೀವನಪೂರ್ಣ ಸಾಧಿಸಿದ ದೊಡ್ಡ ಹಿತವನ್ನು ಅದು ಲೆಕ್ಕಿಸುವದಿಲ್ಲ.

ಂ ಂ ಂ

ಕರ್ಮನಿರತೆಯು ಅದೃಷ್ಟವೆಂಬ ತಾಯಿಯ ಪ್ರೀತಿಯ ಮಗಳು ತಾಯಿಯಿಂದ ಆಕೆಯ ಯತ್ನಕ್ಕೆ ದೊರೆಯಲಾರದುದು ಯಾವುದೂ ಇಲ್ಲ.

ಂ ಂ ಂ

ಹೃದಯ ಕೈಂಥಾ ಎತ್ತರ ಸ್ಥಳದಲ್ಲಿ ಕಣ್ಣನ್ನು ದೇವರು ಇರಿಸಿದ್ದಾನೆ. ನಂಬುವದಕ್ಕೆಂಥಾ ಮೊದಲು ಕಣ್ಣಾರೆ ಪರಾಂಬರಿಸಬೇಕೆಂದು.

ಂ ಂ ಂ

ದೈವೀದತ್ತವಾದ ತನ್ನ ಕರ್ತವ್ಯವನ್ನು ಅದಕ್ಕನುಗುಣ ಹೆಂಗಸು ನಿರ್ವಹಿಸಿದರೆ ಸಮಾಜ ಸುಧಾರಣಾ ಆಂದೋಲನದ ಆವಶ್ಯಕತೆ ಇಲ್ಲ.

ಂ ಂ ಂ

ಜೀವನವೆಂಬ ಬೆಟ್ಟದ, ಕಷ್ಟ ನಿಷ್ಠುರಗಳೆಂಬ ದೊರಗು ಬದಿಯಲ್ಲೆ ಅದನ್ನೆದುರಿಸಿ ಬೈಸಿದ ಮಾನವ ದೇವತೆಗಳ ಪವಿತ್ರ ಗುಡಿಸಲುಗಳು ಕಂಗೊಳಿಸುತ್ತವೆ.

ಂ ಂ ಂ

ಸತ್ಯವೆಂಬುದು ಮಗುವಿನ ಪ್ರಥಮ ಪಾಠವಾಗಬೇಕು. ಮಾನವತೆಯ ಅಂತಿಮ ಗುರಿಯೂ ಆಗಬೇಕು.

ಗಡಿನಾಡ ಮತ್ತು ಹೊರನಾಡ ಕನ್ನಡಿಗರ ಹಿತಚಿಂತನೆಗಾಗಿ ಹೋರಾಡುವ ಬೆಳಗಾವಿಯ ಏಕೈಕ ಮಾಸಪತ್ರಿಕೆ—

ಶಾರದಾ

ಈ ದಿನವೇ ಚಂದಾ ಹಣ ಕಳುಹಿಸಿರಿ.

ತರುಣ ಬರೆಹಗಾರರಿಗೆ ಪ್ರಥಮ ಪ್ರಾಶಸ್ತ್ಯ ನೀಡುವ 'ಶಾರದಾ' ಪ್ರತಿ ತಿಂಗಳೂ ಕತೆ, ಕವನ, ಪತ್ತೇದಾರಿ ಕಾದಂಬರಿ, ಸಾಮಾಜಿಕ ಕಾದಂಬರಿ, ಚಲಚ್ಚಿತ್ರ ಕತೆಗಳು, ವಿಚಾರಪೂರಿತ ಪೈಕ್ಷಣಿಕ ಲೇಖನಗಳು, ಮಕ್ಕಳ ಹಾಗೂ ಮಹಿಳಾವಿಭಾಗ, ರಾಜಕೀಯ-ಸಾಹಿತ್ಯಿಕ ಲೇಖನಗಳೊಂದಿಗೆ ತ್ರಿವರ್ಣರಂಜಿತ ಮುಖಪುಟದೊಂದಿಗೆ ಪ್ರಕಟವಾಗುವದು.

ಚಂದಾದಾರರಿಗೆ ವರ್ಣರಂಜಿತ ಕ್ಯಾಲೆಂಡರ ಮತ್ತು 'ಬಣ್ಣದ ಹೆಣ್ಣು' ಎಂಬ ಕಾದಂಬರಿ ಉಚಿತ ಸಿಗುತ್ತವೆ.

ವಾರ್ಷಿಕ ಚಂದಾ ೪ ರೂ. ಮಾತ್ರ.

ಕರ್ನಾಟಕದ ಎಲ್ಲಾ ಊರುಗಳಲ್ಲಿಯೂ ವಿಶ್ವಾಸಾರ್ಹ ಕವಿಗಳನ್ನಿಸಿ ಮೇಲೆ 'ಶಾರದಾ' ಮಾರಲು ಏಜಂಟರು ಬೇಕಾಗಿದ್ದಾರೆ. ಮಾದರಿ ಪ್ರತಿ, ಏಜನ್ಸಿ ನಿಯಮಗಳಿಗಾಗಿ ೧ ರೂ. M. O. ಮಾಡಿರಿ.

ಸಂಚಾಲಕರು: 'ಶಾರದಾ' ಮಾಸಪತ್ರಿಕೆ,
ಶಹಪೂರ—ಬೆಳಗಾವಿ.

ಸಿಂಡಿಕೇಟ್ ಬ್ಯಾಂಕಿನ

ಇತಿಹಾಸದಲ್ಲಿ

ಪ್ರಮುಖ ಅಧ್ಯಾಯಗಳು

ವಿಲೀನೀಕರಣ

1) ದಿ ಮಹಾರಾಷ್ಟ್ರ ಎವೆಕ್ಸ್ ಬ್ಯಾಂಕ್ ಲಿ. ಉಡುಪಿ ತಾ. 1-12-1953
2) ದಿ ಸದರ್ನ್ ಇಂಡಿಯಾ ಎಪೆಕ್ಸ್ ಬ್ಯಾಂಕ್ ಲಿ. ಉಡುಪಿ ತಾ 1-12-1953
3) ದಿ ನಗರ್‌ಕಾರ್ಸ್ ಬ್ಯಾಂಕ್ ಲಿ. ಮಂಗಳೂರು ತಾ 1-9-1959
4) ದಿ ಬ್ಯಾಂಕ್ ಆಫ್ ಮಂಗಳೂರು ಲಿ. ಮಂಗಳೂರು ತಾ. 3 10-1959
5) ದಿ ಆಸ್ಯಾಟಿಕ್ ಮರ್ಕೆಂಟ್ರೈಲ್ ಬ್ಯಾಂಕ್ ಲಿ. ಕೊಚ್ಚಿನ್ ತಾ. 15-2-1960
6) ದಿ ಮೂಲ್ಕಿ ಬ್ಯಾಂಕ್ ಲಿ. ಮುಲ್ಕಿ ತಾ. 4-9-1961
7) ದಿ ಪೈಮನಿ ಬ್ಯಾಂಕ್ ಪ್ರೈವೇಟ್ ಲಿ. ಮಂಗಳೂರು ತಾ. 4-9-1961
8) ದಿ ಕೆಥೋಲಿಕ್ ಬ್ಯಾಂಕ್ ಲಿ. ಮಂಗಳೂರು ತಾ. 11-9-1961

ಸುವ್ಯವಸ್ಥಿತ ಮತ್ತು ಸುನಿಯಂತ್ರಿತವಾದ ಶಾಖಾ ಸಮುದಾಯದ ಮೂಲಕ ಅತ್ಯುತ್ತಮ ಬ್ಯಾಂಕಿಂಗ್ ಸೇವೆ

ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿ.

Edited Printed & Published by K. H. Shetty, at the Navayuga Press, Udipi, S. India.

ರಾಷ್ಟ್ರೀಯ ವಾರಪತ್ರಿಕೆ. ಬೆಲೆ: 13 ನ.ಪೈಸೆ

ನವಯುಗ

KANNADA — NAVAYUGA — WEEKLY

ಸಂಪುಟ ೪೧ ಸಂಚಿಕೆ ೬ | ಉಡುಪಿ 12—10—1961 ಗುರುವಾರ | Vol. 41 No. 6

ನಿಮ್ಮ ಯಾವತ್ತೂ
ಮುದ್ರಣ ಕೆಲಸಗಳಿಗೆ
ಸಲಹೆಮಾಡಿ ವಿಚಾರಿಸಿರಿ:
ನವಯುಗ ಪ್ರೆಸ್,
ಉಡುಪಿ

ವಿದ್ಯಾರ್ಥಿಗಳಿಗೆ
ಮತ್ತು ವಯಸ್ಕರಿಗೆ
ಅತ್ಯುಪಯೋಗೀ ಪುಸ್ತಕ
ಸುಲಭದಲ್ಲಿ ಇಂಗ್ಲಿಷ್
ನವಭಾರತ ಪುಸ್ತಕ ಭಂಡಾರ
ಉಡುಪಿ

ಭಾರತದ ಸಮಗ್ರತೆಯ ರಕ್ಷಣೆ

ಭಾಷಾವಾರು ಪ್ರಾಂತ್ಯರಚನೆಯಿಂದಾಗಿ ದೇಶದ ಐಕ್ಯಕ್ಕೆ ಭದ್ರವಾಗುವುದು; ಆಡಳಿತೆಯು ಸುಸೂತ್ರವಾಗುವುದು ಎಂದು ಕಾಂಗ್ರೆಸ್ಸು ತಿಳಿದಿದ್ದ ಕಾಲವೊಂದಿತ್ತು. ಆದರೆ, ಇಂದು ಅದು ಈ ತತ್ವವನ್ನು ಒಪ್ಪುವುದಿಲ್ಲ. ರಾಜ್ಯಗಳನ್ನು ಭಾಷಾವಾರಾಗಿ ವಿಭಜಿಸುವುದು ಸಮಸ್ಯೆಗೆ ಪರಿಹಾರವಲ್ಲ, ಹೊಸ ಸಮಸ್ಯೆಗಳಿಗೆ ಮುಕ್ತ ದ್ವಾರವೆಂದು ಅದು ಇತ್ತೀಚೆಗಿನ ಕೆಲವು ವರ್ಷಗಳಿಂದ ಕಂಡುಕೊಂಡಿದೆ. ಇದು ಎಷ್ಟರ ಮಟ್ಟಿಗೆ ವಾಸ್ತವವೆಂಬುದನ್ನು ಊಹಿಸಿ ತಿಳಿದುಕೊಳ್ಳುವುದೇ ಮೇಲು. ಪಂಜಾಬಿ ಸುಬಾದ ಬೇಡಿಕೆಯನ್ನು ಖಂಡತುಂಡವಾಗಿ ವಿರೋಧಿಸಿದವರು ಕಾಂಗ್ರೆಸ್ ನಾಯಕರು. ಗುರುಮುಖಿ ಭಾಷೆಯ ಮೇಲೆ ತಾರಾಸಿಂಗರಿಗೂ ಅವರ ಅನುಯಾಯಿಗಳಿಗೂ ಗೌರವವಿದುವುದು ಸ್ವಾಭಾವಿಕ; ಆದರೆ ಪಂಜಾಬ ರಾಜ್ಯದ ವಿಭಜನೆ ಮಾತ್ರ ಆಗಬಾರದು ಎಂಬ ಹಠ ಅವರದು. ಈ ನಿಲುಮೆಗೆ ಅವರು ಸ್ಥಿರವಾಗಿ ಅಂಟಿಕೊಳ್ಳಲು ತೊಡಗಿದುದು ಇದೇ ಮೊದಲನೆಯ ಬಾರಿ.

ಇದಕ್ಕೂ ಹೆಚ್ಚಾಗಿ ದಕ್ಷಿಣದಲ್ಲಿ ದ್ರಾವಿಡ ಸ್ಥಾನವನ್ನು ಬೇಡುವ ಎದೆಗಾರಿಕೆಯನ್ನು ಮಾಡಿದವರಿದ್ದಾರೆ. ಭಾರತದ ಒಕ್ಕೂಟದಿಂದ ಪ್ರತ್ಯೇಕವಾಗಿ ಆಂಧ್ರ, ತಮಿಳುನಾಡು, ಕೇರಳ ಮತ್ತು ಕರ್ನಾಟಕಗಳು, ದ್ರಾವಿಡ ಭಾಷಾ ಪ್ರದೇಶಗಳಾದುದರಿಂದ, ಸೇರಿ ಈ ಹೊಸದೊಂದು ಸ್ಥಾನವೇರ್ಪಡಬೇಕೆಂದು. ರಾಮಸ್ವಾಮಿ ನಾಯ್ಕರ ದ್ರಾವಿಡಕಳಗಂ ವಾದಿಸುತ್ತಿದೆ. ಈ ವಾದಕ್ಕೆ ತಮಿಳುನಾಡಿನಲ್ಲೇ ಬೆಂಬಲ ಇಲ್ಲವೆಂಬಾಗ ಉಳಿದ ರಾಜ್ಯಗಳಲ್ಲಿ ಏನೇನೂ ಇಲ್ಲವೆಂದು ಪ್ರತ್ಯೇಕ ಹೇಳಬೇಕಾಗಿಲ್ಲ. ಆದರೆ, ಇಂತಹ ವಾದವನ್ನು ಮುಂದೂಡುವವರೂ ಇರುವುದರಿಂದ, ಇದು ಜನತೆಯಲ್ಲಿ ಒಕ್ಕೂಟದ ಬಗ್ಗೆ ಭಿನ್ನಾಭಿಪ್ರಾಯ ಹುಟ್ಟಿಸುವುದು ಇಂದಲ್ಲವಾದರೂ ಮುಂದೊಂದು ದಿನ ಖಂಡತವಾದ ಸಾಧ್ಯವೆನಿಸಬಹುದು. ಪ್ರಧಾನಿ ನೆಹರು ಇತ್ತೀಚೆಗೆ ಮಧುರೆಯಲ್ಲಿ ಭಾರತದವು ಭಜನೆಯನ್ನು ನಾವು ಸಹಿಸಲಾರೆವು ಎಂದು ಗುಡುಗಿದ್ದಾರೆ. ಈ ಗುಡುಗನ್ನು ಕೇಳಿ ಸಭೆಯಲ್ಲಿದ್ದವರೂ ಹರ್ಷೋದ್ಗಾರವನ್ನು ಮಾಡಿದೆ. ಆದರೆ, ಹೀಗೆಂದ ಮಾತ್ರಕ್ಕೆ ವಿಭಜನೆಯ ವಾದವನ್ನು ಇಲ್ಲವೆಂಬಂತೆ ಮಾಡಿದಂತಾಗಲಿಲ್ಲ

ಭಾರತಕ್ಕೆ ಸ್ವಾತಂತ್ರ್ಯದೊರೆಯು ಬೇಕಾದರೆ, ಅದು ಹೊತ್ತಮೊದಲಿಗೆ ವಿಭಜನೆಗೊಳ್ಳಬೇಕಾಯಿತು. ಹತ್ತರಲ್ಲೊಂದು ಪಾಲು ಬೇರೆಯಾಗಿ ಪಾಕಿಸ್ತಾನವು ರೂಪುಗೊಳ್ಳ ಬೇಕಾಯಿತು. ಪಾಕಿಸ್ತಾನದ ಬೇಡಿಕೆಯೂದರೂ ಕೊನೆಯುಗಳಿಗೆಯಲ್ಲೇನುಂದ್ರೆ ಬಂದಿತ್ತೆಂಬುದನ್ನು ಮರೆಯುವಂತಿಲ್ಲ. ಅಖಂಡವಾದ ಭಾರತವನ್ನು ವಿಭಜಿಸಿಯೇ ಕಂಬಕೀಳುವುದರಿಂದ ಒಂದಲ್ಲ ಒಂದು ದಿನ ತಮ್ಮ ಇಷ್ಟಾರ್ಥ ಫಲಿಸೀತು ಎಂಬ ಆಶೆ ಬ್ರಿಟನ್ನಿಗಿದ್ದಿರ ಬಹುದು. ಆದರೆ, ಸ್ವಾತಂತ್ರ್ಯ ಲಭಿಸುವುದೆಂಬ ಉತ್ಸಾಹದಿಂದ ಅಂದು ಇದರ ಬಗ್ಗೆ ವಿಶೇಷ ಚಿಂತಿಸದೆ ನಮ್ಮ ನಾಯಕರು ಇದಕ್ಕೆ ಒಪ್ಪಿಗೆಯಿತ್ತರು. ಆದರೆ, ಮುಂದೆ ಭಾರತವು ಇದರ ದುಷ್ಪರಿಣಾಮಗಳನ್ನು ಅನುಭವಿಸಬೇಕಾಯಿತೆಂಬುದನ್ನು ನಾವು ಮರೆಯಲಾರೆವು.

ನಮ್ಮ ಇತಿಹಾಸದಿಂದ ನಾವು ಪಾಠ ಕಲಿತುಕೊಳ್ಳುವುದು ಅವ್ಯ ಕರ್ತವ್ಯ. ಗತಕಾಲದ ಚರಿತ್ರೆಯು ಪಕ್ಷಪಾತಪೂರ್ಣವಾಗಿ ರಚಿತವಾಗಿದೆಯೆಂಬ ವಾದದಲ್ಲಿ ಬಕ್ವಂಶ ಹುರುಳಿದೆ. ಅದನ್ನು ನಿಷ್ಪಕ್ಷಪಾತ ದೃಷ್ಟಿಯಿಂದ ಪರಿಶೀಲಿಸುವ ಮತ್ತು ಪುನಾರಚಿಸುವ ಅಗತ್ಯವೂ ಇದೆ. ಆದರೆ, ಇತಿಹಾಸ ಬರೆಯುವುದೆಂದರೆ, ಅದ್ಭುತ ರಮ್ಯ ಭಯಂಕರ ಪತ್ತೇದಾರಿಕತೆ ಬರೆಯುವುದಲ್ಲ. ಇದ್ದುದನ್ನು ಇದ್ದಂತೆ ತಿಳಿದುಕೊಂಡು, ಅದನ್ನು ಕೂಲಂಕಷವಾಗಿ ಪರಾಮರ್ಶಿಸಿ, ಸತ್ಯಶೋಧನೆ ಮಾಡಿ ಅನಂತರ ಬರಹರೂಪಕ್ಕೆಳಿಸಬೇಕು. ಇದು ಬಹು ಪ್ರಯಾಸತಮವಾದ ಕಾರ್ಯ. ಆದರೆ, ನಮಗೆ ತಿಳಿದಿರುವ, ನಮ್ಮ ಕಣ್ಣಮುಂದೆ ಘಟಿಸಿರುವ ಘಟನೆಗಳಿಂದಾದರೂ ನಾವು ಅವಶ್ಯ ಪಾಠ ಕಲಿಯ ಬೇಕು. ಭಾರತವು ಹಿಂದಿನ ಕಾಲದಲ್ಲಿ ವಿಭಿನ್ನ ರಾಜ ವಂಶಜರಲ್ಲಿ ಹಂಚಿ ಹೋಗಿರ ಬಹುದು; ವಿಭಿನ್ನ ಆಡಳಿತೆಗಾರರ ಆಡಳಿತೆಯಲ್ಲಿ ಇದ್ದಿರ ಬಹುದು; ಆದರೆ, ನಮ್ಮ ಪೂರ್ವಜರಾದರೂ ಅಖಂಡ ಭಾರತದ ಸ್ವಪ್ನವನ್ನೇ ಕಂಡಿದ್ದರು.

ಗಂಗೇಚ ಯಮುನೇ ಚೈವ
ಗೋದಾವರೀ ಸರಸ್ವತಿ ||
ನರ್ಮದೇ ಸಿಂಧುಕಾವೇರೀ
ಜಲೇಸ್ಮಿನ್ ಸನ್ನಿಧಿಂ ಕುರು ||

ಎಂದು ಉತ್ತರ ದಕ್ಷಿಣ ಭಾರತಗಳ, ಆರ್ಯಾವ್ರಾವಿಡ ಪ್ರದೇಶಗಳ ನದಿಗಳನ್ನು ಏಕ ಭಾವನೆಯಿಂದ ನೋಡುವ ಉದಾರತೆ ನಮ್ಮ ಹಿರಿಯರಲ್ಲಿತ್ತು.

ಭಾರತದ ಏಕತೆಯನ್ನು ಸ್ಥಾಪಿಸಲು ನಮ್ಮ ಹಿಂದಿನವರು ನಾನಾ ಪ್ರಯತ್ನ ಮಾಡಿದ್ದಾರೆ. ಅದು ಕುಲಾಚಲಗಳ ಕಟ್ಟ ನೆಯನ್ನವರು ಮಾಡಿದ್ದು, ಅವನ್ನೂ ಅವರು ಇಡಿಯಭಾರತದಲ್ಲಿಹಂಚಿಹಾಕಿದ್ದಾರೆ:

ಮಹೇಂದ್ರೋ ಮಲಯಃ ಸಹ್ಯ
ಶಕ್ತಿ ಮಾನೃಕ್ಷ ಪರ್ವತಃ
ವಿಂಧ್ಯಶ್ಚ ಪಾರಿಯಾತ್ರಶ್ಚ
ಸಪ್ತೈತೇ ಕುಲ ಪರ್ವತಾಃ ||

ಹೀಗೆಯೇ ಏಳು ತೀರ್ಥಕ್ಷೇತ್ರಗಳೂ ಭಾರತದ ನೂಲೆ ಮೂಲೆಗೆ ಹರಡಿವೆ:

ಅಯೋಧ್ಯಾ ಮಥುರಾ ಮಾಯಾ
ಕಾಶೀ ಕಾಂಚೀ ಅವಂತಿಕಾ
ಪುರೀ ದ್ವಾರಾವತೀ ಚೈವ
ಸಪ್ತೈತಾ ಮೋಕ್ಷದಾಯಕಃ ||

ಇಂತಹ ಆದರ್ಶ ಸ್ವಪ್ನವನ್ನು ಕಟ್ಟಿಕೊಂಡಿದ್ದು ಆ ಸೇತು ಹಿಮಾಚಲದ ವರೆಗಿನ ಪೂರ್ವ ಪಶ್ಚಿಮ ಸಮುದ್ರಗಳ ನಡುವಣ ಭೂಭಾಗ ಒಂದೇ-ಭಾರತ ಎಂದವರು ಭಾವಿಸಿದ್ದರು. ಈ ಭಾವನೆಯಿಂದಾಗಿ ಜಗದ್ವಿಖ್ಯಾತವಾದ ಭಾರತೀಯ ಸಂಸ್ಕೃತಿ ನಿರೆಬಾಡಿತು.- ಭಾರತದ ಐಕ್ಯ ರಕ್ಷಣೆಯನ್ನು ಮಾಡಿಕೊಳ್ಳಲು ನಮ್ಮ ಹಿಂದಿನವರು ಧಾರ್ಮಿಕ ಭಾವನೆಯನ್ನು ಜಾಗ್ರತಗೊಳಿಸಿರಬಹುದು; ಆದರೂ ಅದರ ಬಲದಿಂದಲೇ ಅಖಂಡ ಭಾರತ ಏಕ ಸಂಸ್ಕೃತಿಯನ್ನುಳಿಸಿಕೊಂಡು ಬಂದಿದೆ. ಇದು ಇಂದಿಗೂ ನಮ್ಮ ಜೀವನದಲ್ಲಿ ತೋರಿ ಬರುತ್ತಿದೆ. ಹಾಗಿರುವಾಗ, ಇಂದೆಂದೂ ಇಲ್ಲವೆಂಬಂತೆ ಒಂದು ಆಯತ ಸೂತ್ರದಲ್ಲಿ ಬಂದಿರುವ ಭಾರತವನ್ನು ವಿಭಜಿಸುವ ವಾದವು ಅಸಹನೀಯ ಮಾತ್ರವಲ್ಲ; ಅಂತಹ ವಾದವು ತಲೆಯೆತ್ತದಂತಹ ಉಗ್ರಕಾರ್ಯಕ್ರಮವನ್ನು ಕೈಗೊಳ್ಳಬೇಕು.

ಜಾತೀಯತೆ-ಭಾಷೀಯತೆ, ಪ್ರಾದೇಶಿಕತೆಗಳ ಭೇದಭಾವಗಳನ್ನು ತಲೆಯೆತ್ತದಂತೆ ಮಾಡಿ ಭಾರತೀಯತೆಯ ದಿವ್ಯ ಜ್ಯೋತಿಯನ್ನು ಪ್ರತಿಯೊಬ್ಬರ ಹೃದಯದಲ್ಲಿ ಬೆಳಗಿಸುವ ಮಹಾ ಕಾರ್ಯವಿಂದು ಚಿಂತನೀಯವಿದೆ. ಇದನ್ನು ಮಾತಿನಿಂದ ಸಾಧಿಸಲಾರೆವು, ಉದ್ವೇಗ, ಉಗ್ರತೆಗಳಿಂದ ಇವು ಕೈಗೂಡಲಾರವು. ಪ್ರಶಾಂತ ಮನಸ್ಸಿನಿಂದ ನಿಷ್ಕಲ್ಮಶ ಹೃದಯದಿಂದ ಉದಾರ ನೀತಿಯಿಂದ ಸದ್ವಿವೇಕದಿಂದ ಮಾತ್ರ ಸಾಧ್ಯ. ಭಾರತೀಯರು ಒಂದೇ ಎಂಬ ಭಾವನೆಯು ನಮ್ಮಲ್ಲಿ ಉದಿಸಿದರೆ, ಪ್ರತ್ಯೇಕ ರಾಜ್ಯದ ಬೇಡಿಕೆಯು ಮಾಡಲಾರದು. 'ಉದಾರ ಚರಿತಾನಾಂ ವಸುಧೈವ ಕುಟುಂಬಕಂ' ಎಂಬುದರಿಂದ ಉದಾರ ಚರಿತರಾಗುವ ಪಣವನ್ನು ನಾವು ತೊಡಬೇಕು. ಭಾವೈಕ್ಯ ಸಮ್ಮೇಳನದ ಗೊತ್ತುವಳಿಗಳು ಈ ಮಹೋದ್ದೇಶ ಸಾಧನೆಗೆ ಸಹಾಯಕವೆನಿಸಬಹುದು; ಆದರೂ ಈ ವಿಷಯದಲ್ಲಿ ಮತಿಗಿಂತ ಕೃತಿ ಹೆಚ್ಚಾಗಬೇಕಾದುದು ಅನಿವಾರ್ಯ. ನಮ್ಮ ನಾಯಕರು ಈ ದಿಸೆಯಲ್ಲಿ ಉತ್ಸಾಹದಿಂದ ಕಾರ್ಯಪ್ರವೃತ್ತರಾಗುವರೆಂದು ಹಾರೈಸಬಹುದು.

ಜಾತೀಯತೆಯ ದೂರೀಕರಣ

ಜಾತೀಯತೆಯು ವಿನಷ್ಟವಾಗಬೇಕೆಂಬ ವಾದವು ದಿನ ದಿನಕ್ಕೆ ಜೋರಾಗುತ್ತ ಬರುತ್ತಿದೆ; ಆದರೆ, ಅದು ನಷ್ಟಗೊಳ್ಳುವ ಬದಲು ಮತ್ತಷ್ಟು ದೃಢಗೊಳ್ಳುತ್ತಿದೆಯೆಂದು ಅನುಭವ ಸಾರುತ್ತದೆ. ನಾಗಪುರದಲ್ಲಿ ಕಳೆದ ವರ್ಷ ನಡೆದ ಗಲಭೆಯು ಅಕ್ಷಮ್ಯವೆಂಬಂತಾಗಿದ್ದರೆ, ಇದೀಗ ಅಲೀಗಢ ವಿಶ್ವವಿದ್ಯಾಲಯದಲ್ಲಿ ಎದ್ದಿರುವ ರೌದ್ರ ಸ್ವರೂಪ ಇದಕ್ಕೂ ಮಿಗಿಲಾದುದು. ಕಾಲೇಜಿನ 'ವಿದ್ಯಾರ್ಥಿ ಸದ'ಕ್ಕಾಗಿ ನಡೆದ ಚುನಾವಣೆಯಲ್ಲಿ ಹಿಂದು ವಿದ್ಯಾರ್ಥಿಗಳು ಹೊರತಳ್ಳಲ್ಪಟ್ಟಿದ್ದರಿಂದ ಈ ದೊಂಬಿಯೆದ್ದಿತೆಂದು ತಿಳಿಯುತ್ತದೆ. ಇದರಿಂದಾಗಿಯೇ ಈ ಗಲಭೆಯು ಜಾತೀಯ ಸ್ವರೂಪವನ್ನು ಸಡೆಯಿತು.

ಜಾತಿಯೆಂಬುದು ನಮ್ಮ ರಕ್ತದಲ್ಲಿ ಸೇರಿಕೊಂಡಿದೆ. ಅದನ್ನು ದೂರೀಕರಿಸುವುದು ಅಸಾಮಾನ್ಯ ಕೆಲಸ. ಶತಮಾನಗಳಿಂದ ಸಂಪ್ರದಾಯವಾಗಿ ನಡೆದು ಬಂದ ಜಾತೀಯ ಮನೋಭಾವನೆ ಹೇಳಿ ಹೆಸರಿಲ್ಲದಂತೆ ದೂರ ಪೋಡುವುದಕ್ಕೆ ಪರಿಣಾಮಕಾರೀ ಪ್ರಭಾವಕಾರೀ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು. ಹುಟ್ಟಿದ ಮಗುವಿಗೆ ತನ್ನ ಜಾತಿಯ ಅರಿವಿರುವುದಿಲ್ಲ. ಸ್ಪರ್ಶಾಸ್ಪರ್ಶತೆಗಳ ಜ್ಞಾನವಿರುವುದಿಲ್ಲ. ಆದರೆ, ಅದು ಬೆಳೆದು ಬಂದಂತೆ, ತನ್ನ ಹೆತ್ತವರಿಂದಲೂ ಸರೆಕೊರೆಯವರಿಂದಲೂ ಇವೆಲ್ಲವನ್ನೂ ಕಲಿತು ಕೊಳ್ಳುತ್ತದೆ.

ಜಾತೀಯ ವಾದವನ್ನು ಸಮಗ್ರತೆಗೆ ಆತಂಕಕಾರಿಯೆಂದು ತಿಳಿಯುವ ನಮ್ಮ ಸರಕಾರವೇ ಪರೋಕ್ಷವಾಗಿ ಜಾತೀಯ ವಾದವನ್ನು ಬೆಂಬಲಿಸುತ್ತಿದೆ. ಯೋಗ್ಯತೆಯನ್ನು ಕಡೆಗಣಿಸಿ, ಜಾತೀಯ ವಾದದ ತಳಹದಿಯ ಮೇಲೆ ಹಿಂದುಳಿದವರನ್ನು ವರ್ಗೀಕರಿಸುವ ನೀತಿಯನ್ನು ನಮ್ಮ ರಾಜ್ಯ ಸರಕಾರಗಳು ಬಿಟ್ಟು ಬಿಡದೆ, ವಿದ್ಯಾ ಸಂಸ್ಥೆಗಳಿಗೆ ಸೇರುವಾಗ, ನೌಕರಿಗೆ ಅಪೇಕ್ಷಾಪತ್ರ ರವಾನಿಸುವಾಗ, ಜಾತಿ ಮತಗಳ ಹಪರನ್ನು ಕೇಳುವುದನ್ನು ನಿಲ್ಲಿಸದೆ ಇಂತಹ ಮನೋಭಾವನೆ ಮಾಯವಾಗುವುದು ಸಾಧ್ಯವಿಲ್ಲ. ಅಗ್ರಗಣ್ಯ ನಾಯಕವರ್ಗ

(ಅಸೇ ಪುಟ ನೋಡಿರಿ)

ಕಾದಂಬರಿಯ ಕಿತಾಪತಿ

ಸಾಗರ್

ಕಾಫಿ ಕುಡಿದು ಕಡ್ಡಿ ಗೀರುತ್ತಲೇ ತಟ್ಟನೆ ಮಿದುಳಿನ ಮೂಲೆಯಲ್ಲಿ ಮಿಂಚಿತೊಂದು ಕಥಾವಸ್ತು. ಅಂತರಂಗದ ಆ ಗುಹೋಗುಗಳನ್ನು ಈಕ್ಷಣ ಮಾತ್ರದಿಂದಲೇ ಅರಿತುಕೊಂಡು ತನ್ನ ಕರ್ತವ್ಯವನ್ನು ನಿರ್ವಹಿಸಲು ಸಿದ್ಧರಾಗಿ ಬಳಿಯಲ್ಲೇ ಕುಳಿತಿದ್ದ ನನ್ನ ಖಾಸಗಿ ಕಾರಕೂನನ, ಬಾಯಿಯಿಂದ ಬೀಳಬಹುದಾದ ಮುಕ್ತಾಕ್ಷರಗಳನ್ನು ಬರೆದುಕೊಳ್ಳಿಲು ಕಾಯುತ್ತಲಿದ್ದರು. ಭಾವದ ಆಳದಿಂದೆದ್ದು, ಕಲ್ಪನೆಯ ಏಣಿಯನ್ನೇರಿ, ಭಾಷೆಯ ಬಾಹುಲ್ಯದಿಂದ ವ್ಯಕ್ತ ಸ್ವರೂಪವನ್ನು ಹೊಂದಲಿರುವ ಅದೊಂದು ಕ್ಷಕಿರಣವನ್ನು ಪೃಥಕ್ಕರಣದ ಭೂತಗನ್ನಡಿಯಲ್ಲಿ ಅವಲೋಕಿಸಿದಾಗ ಅಪೂರ್ವ ದರ್ಶನದ ಚಿತ್ರ ಕಣ್ಣಿನಲ್ಲಿ ಕಟ್ಟಿದಂತಾಗಿ ಅದೇ ಮತ್ತೆ ಎದುರುಗಡೆಯಲ್ಲಿ, ದೇವರಂತೆ ನಿಂತಿದ್ದ ನೀಲ್ಗನ್ನಡಿಯಲ್ಲಿ ಪ್ರತಿಫಲಿಸಿತೋ ಎಂಬಂತೆ ತಾತ್ಕಾಲಿಕವಾಗಿ ಭಾಸವಾಯಿತು. ಬಗಬರುತ್ತಾ ಕಾದಂಬರಿಯ ವಿರಾಟ್‌ರೂಪ ಹಿನ್ನೆಲೆಗೆ ಸರಿದು, ಕೃತಿಕಾರನ ಅಸ್ತಿತ್ವ ಮುಂದೆ ಬಂದು ನನ್ನ ಗಮನವನ್ನು ಸೆಳೆಯಿತು.

ನಾನು ಕನ್ನಡಿಯಲ್ಲಿ ನನ್ನನ್ನು ಕಾಣುತಿದ್ದುದು ಅದೇನೂ ಹೊಸತಲ್ಲ. ಆದರೆ—'ನಾನು' ಅಂದರೆ 'ಏನು?' ಅನ್ನೋದನ್ನು ಈತನಕ ಅಷ್ಟಾಗಿ ಕಂಡುಕೊಂಡಿದ್ದಿಲ್ಲ. ಅದ್ವೈತದ ಆ 'ಅಹಂ ಬ್ರಹ್ಮೋಸ್ಮಿ'ಯ ಅರ್ಥ ಈಗಮಾತ್ರ ಸ್ಪಷ್ಟವಾಗಿಯೇ ಆಯಿತು. ಬುದ್ಧಿ-ಭಾವಗಳ ವಿದ್ವದ್ ಮಿಲನದಿಂದ ಮೂರ್ತಿಮತ್ತಾಗಿಸಿ, ಅಭೂತಪೂರ್ವ, ಅನಾಮಾನ್ಯ ಗುಣಗಳನ್ನೊಳಗೊಂಡು ಸೃಷ್ಟಿಸಲ್ಪಡುವ ಕ್ರಾಂತಿಕಾರಕ, ಕಾದಂಬರಿಯಿಂದ ಕನ್ನಡದ ಸಾಹಿತ್ಯ ಶರವೆಯನ್ನು up-to-date ಆಗಿ, ಅಲಂಕರಿಸಲಿರುವ ನಾನು ಅಭಿನವ ಬ್ರಹ್ಮನಲ್ಲದೆ ಮತ್ತೇನು? ಪ್ರಶ್ನೆಯಲ್ಲಿಯೇ ಖಚಿತಾರ್ಥದ ಉತ್ತರ ಉದಿಸಿ ನೆತ್ತಿಯ ಮೇಲೆ ಆಗಲೇ ಬಂದಿತ್ತಾದ್ದರಿಂದ ವಾರಪತ್ರಿಕೆಯೊಂದು ನನ್ನ ಕುಶಲ ಕರ್ಮವನ್ನು ಧಾರಾವಾಹಿಯಾಗಿ ಪ್ರಕಟಿಸುವುದರಲ್ಲಿ ಸಂದೇಹವಿರಲಿಲ್ಲ.

ಹೆಸ್ತಪ್ರತಿಯನ್ನು ಓದಿದ ಸಂಪಾದಕರು ಕುಪಿಗೊಂಡು, ತಾವೇ ಒಂದು ಚಿಕ್ಕದಾದರೂ ಅರ್ಥಗರ್ಭಿತವಾದ ಟಿಪ್ಪಣಿಯನ್ನು ಬರೆಯದಿರಲಾರರು. ಕಥೆಯ ಪರವಾಗಿ ಪ್ರಶಂಸಿಸುತ್ತಾ— "ಇದೊಂದು ಕಾದಂಬರಿ ಕ್ಷೇತ್ರದಲ್ಲಿ ಇಟ್ಟ ಹೊಸ ಹೆಜ್ಜೆ. ಹಳೆಯ ದಾರಿಯಲ್ಲಿ ನಡೆಯಲಾರದೆ, ನವ್ಯ ಮಾರ್ಗವನ್ನು ಶೋಧಿಸಲಾರದೆ, ತೊಳಲಾಡುತ್ತಿರುವ ಬರಹಗಾರರಿಗೆ ಶ್ರೀಯುತರ ಪ್ರಯತ್ನ ಕೈಕಂಬವಾಗಿ ಪರಿಹಾರವನ್ನು ಸೂಚಿಸುವುದರಲ್ಲಿ ಸಂಶಯವಿಲ್ಲ. ಕನ್ನಡ ಸಾಹಿತ್ಯಲೋಕದಲ್ಲಿ ಹಿಂದೆ ಎಂದೂ ಕಾಣದ. ಪರಭಾಷಾಕಲೆಗೂ ಮಾದರಿಯಾಗಬಲ್ಲ, ಅತ್ಯಾಧುನಿಕ, ಅತ್ಯುತ್ಕೃಷ್ಟ, ಸ್ವತಂತ್ರ— unique ಅಂದರೆ ಏಕಮೇವಾದ್ವಿತೀಯ ನಿರ್ಮಾಣವೆನ್ನದೆ ನಿರ್ವಾಹವಿಲ್ಲ." ಎಂಬುದಾಗಿ ಲೆಕ್ಕಣಿಸದಿರುವರೇ?

ಸಂಪಾದಕರ ಟಿಪ್ಪಣಿಯ ಔಚಿತ್ಯವನ್ನು ಕಾದಂಬರಿಯ ಅವಗಾಹನೆಯ ಮೂಲಕ ಮನಗಂಡು ಪ್ರಕಾಶಕರ ತಂಡವೇ ಬಂದು ನನ್ನ ಮನೆಯ ಮುಂದೆ 'ಕ್ಯೂ' ನಿಂತಾಗ ನನ್ನ ಅಯ್ಕೆಗೆ ಪಾತ್ರರಾದ ಪ್ರಕಾಶಕರು ತಮ್ಮ ಮೂಲೆಯ ಮುಂದಿನ ಮುತ್ತಾಗಿ ನನ್ನ ಚೊಚ್ಚಲ ಮಗುವನ್ನು ಬೆಳಕಿಗೆ ತರುವ ಸುಹೂರ್ತದಲ್ಲಿ, ತಮ್ಮ ಕರ್ತವ್ಯವಾದ ಮೊದಲ ಮೊತನ್ನು ತೊದಲಮಾತೆಂಬ ನಮ್ರತೆಯ ಗಿಲೀಟಿನೊಡನೆ ಓದುಗ ಸಾರ್ವಜನಿಕರೊಡನೆ ನಿವೇದಿಸಿಕೊಂಡು, ಪ್ರಕಾಶಕರ ಮೊಣೆಯ ಕಣಿಗಣ್ಣ ದೃಷ್ಟಿಯಿಂದ, ಕಾದಂಬರಿಕಾರನ ವ್ಯಕ್ತಿ ಚರಿತ್ರೆಯನ್ನು ಸಂಕ್ಷಿಪ್ತವಾಗಿ ಸೂಚಿಸದಿದ್ದರೆ ಅನ್ಯಾಯವಾಗುತ್ತದೆನ್ನುವ-ವಾದಕ್ಕೆ ತೆಕ್ಕೆಬಿದು, ಅನುಕ್ರಮವಾಗಿ ಕವಿಚರಿತ್ರೆಯ ಭಾಗವನ್ನು ಆಕ್ರಮಿಸಿಯಾದ ಅನಂತರ "ಲೇಖಕರು ತಮ್ಮ ಹೆಸರಿಗೆ ತಕ್ಕಂತೆ ಶರಧಿ ಸದೃಶರೇ ಸರಿ. ಅವರ ಪ್ರತಿಭೆಯ ಪ್ರಾಂಶಿ ಅಗಾಧವಾದುದು. ಪುರಾತನವಾದುದನ್ನು ಆರಗಿಸಿಕೊಂಡು ವಿನೂತನವಾದುದನ್ನು ನಿರ್ಮಿಸುವ ಕ್ರಿಯಾಶಕ್ತಿ ಇವರಲ್ಲಿ ಶಿವಶೈಲದಷ್ಟಿದೆ ..... ನವನವೋದಿತ ಸಾಹಿತಿಗಳಾದ ಶ್ರೀ....ರ ಕಾದಂಬರಿಯನ್ನು ಪ್ರಕಟಿಸುವ ಸುಯೋಗ ಸಿದ್ಧಿಸಿದ್ದು ನಮ್ಮ ಮೂಲೆಯ ಅತೀವ ಭಾಗ್ಯ. ಎಂದು ನಿರ್ವಿಕಾರ ಬುದ್ಧಿಯಿಂದ ತನ್ನ ನುಡಿಗೆ ಕಳಶವಿಟ್ಟುಕೊಂಡಾರು.

ನಾಡಿನ ಉದ್ದ ಅಗಲಗಳಿಂದ ಪತ್ರಿಕಾ ಕರ್ತರೂ, ವಿಮರ್ಶಕರೂ, ರಸಿಕರೂ ತಮ್ಮ ಶಕ್ತಿಮೀರಿ ಮುಕ್ತಕಂಠದಿಂದ ಅಲ್ಲಲ್ಲಿ ಕಾದಂಬರಿಯ ಭಾಗಗಳನ್ನು ಉದ್ಧರಿಸಿ "ಇಲ್ಲಿ ಹೀಗೆ ವರ್ಣಿಸಿರುವುದು ಅಪ್ರತಿಮವಾಗಿದೆ, ಅಲ್ಲಿ ಹಾಗೆ ಚಿತ್ರಿಸಿರುವುದು ಮಾರ್ಮಿಕವಾಗಿದೆ" ಎಂದು ಅಭಿಪ್ರಾಯಪಡುವಾಗ ಒಬ್ಬರು "ಲೇಖಕರ ವಿಚಾರ ಸರಣಿ ವೀರ್ಯವತ್ತಾಗಿದ್ದುದು, ಪ್ರತಿಪಾದನಾವೈಖರಿ ವಿದ್ವತ್ಪೂರ್ಣವಾದುದು, ರಚನಾಕೌಶಲ ವೈವಿಧ್ಯಯುತವಾದುದು" ಎಂದು ವಿಶದಪಡಿಸಿದರೆ ಇನ್ನೊಬ್ಬರು "ಕತೆಯ ಓಟದಲ್ಲಿ ಖಡಿತವಿದೆ, ಸಂಭಾಷಣೆಯಲ್ಲಿ ಸಮತೋಲನವಿದೆ, ಭಾವಪ್ರದರ್ಶನದಲ್ಲಿ ಮುಗ್ಧತೆಯಿದೆ, ವಾಸ್ತವಿಕತೆಯ ನಿವೇದನೆಯಲ್ಲಿ ವಿಶಾಲ ಅಭ್ಯಾಯತೆಯಿದೆ, ಪ್ರಚುರತೆಯಿದೆ, ಪ್ರಾಮಾಣಿಕತನವಿದೆ" ಎಂಬಹಾಗೆ ನಿರ್ಣಯಿಸುತ್ತಾರೆ. 'ಕಥಾವಸ್ತುವಿಗೆ ನಿಕಟವರ್ತಿಯಾಗಿದ್ದರೂ ಕಥೆಯ ಅನುಸರಿಸಬಹುದಾದ ದಾರಿಯಾಗಲೀ, ಕಥೆಯ ಕೊನೆಯಾಗಲೀ ಓದುಗರ ಪೂರ್ವ ನಿರ್ಧಾರಕ್ಕೆ ನಿಲುಕದಂತೆ ಕಥೆಯ ಆದ್ಯಂತವು ಒಂದು ನೂತನ ವಿಧಾನದಿಂದ ಪ್ರಾರಂಭದ ಸನ್ನಿವೇಶದಲ್ಲಿಯೇ ಸೂಚ್ಯವಾಗಿದ್ದು ಅದರ ಅರಿವು ಅಂತ್ಯದಲ್ಲಿ ಮಾತ್ರವೇ ಪಾಠಕರಿಗೆ ಗೋಚರಿಸುವಂತೆ ಕುದುರಿಸಿದ 'ಕತೃಗಾರರ ಯುಕ್ತಿಯುಕ್ತ ಚಾತುರ್ಯಕ್ಕೆ ಯಾರಾದರೂ ತಲೆದೂಗಲೇ ಬೇಕು. ಓಜೋಪೂರ್ಣ ಕಥಾವಸ್ತು, ತೇಜೋಪೂರ್ಣ ನಿರೂಪಣೆ, ಕಲಾಪೂರ್ಣ ಬಂಧ, ನೈಪುಣ್ಯಯುತ ಸಂವಿಧಾನ, ವಿಚಾರ ಪ್ರಚೋದಕವಿವೇಚನೆ, ಅಗಮ್ಯರಮ್ಯ ವರ್ಣನೆ, ನಿರರ್ಗಳ ಪ್ರತಿಪಾದನೆ, ನಿಭೀತ ಧೋರಣೆ, ಸಮೃದ್ಧ ಭಾಷಾಸೌಲಭ್ಯ, ಅಪಾರ ಅನುಭವ, ಅಗಾಧ ಭಾವ, ಆದರ್ಶ ಅಶಾವಾದ, ಆಧುನಿಕ ಮನೋಧರ್ಮ; ಕುವೆಂಪುರವರ ಪ್ರೌಢ ಕಾವ್ಯ ಶೈಲಿ, ತ. ರಾ. ಸು.ರವರ ಚಾರಿತ್ರಿಕ ವೀರ ಶೈಲಿ, ಆ. ನ. ಕೃ.ರವರ ಸಾಮಾಜಿಕ ಸರಸ ಶೈಲಿ, ಕಾರಂತರ ಜಾನಪದ ಸಹಜ ಶೈಲಿ, ಬೀಚಿಯವರ ಹಾಸ್ಯ ಚತುರ ಶೈಲಿ ಮೊದಲಾದ ಅತ್ಯುತ್ತಮ ಶೈಲಿಗಳ ಸೂತ್ರ ಸಮನ್ವಯದಿಂದ ಸೃಜಿಸಿದ, ಸಂಕೀರ್ಣ, ಸಾಮ್ಯಾತೀತ, ಸುಂದರ ಸುಗಮ ಶೈಲಿಯೇ ಮುಂತಾದ ಸುಸಂಸ್ಕೃತ, ವಿಶಿಷ್ಟ, ಶ್ರೇಷ್ಠ ಗುಣಗಳಿಂದ ಕೂಡಿ, ಜೀವ—ನಿಸರ್ಗ, ಜೀವ-ಸಮಾಜ, ಜೀವ-ಅಂತರಂಗ, ಜೀವ-ದೈವಗಳೊಳಗಿನ ಸಂಬಂಧಗಳ ಮೂಲ ಶಕ್ತಿಯಿಂದ ಚೇತನಗೊಂಡು, ಸೂಚ್ಯಪಾಕ್ಯ, ಸಂದೇಹಗಳ ಮೂಲಕ 'ಸತ್ಯಂ, ಸುಂದರಂ, ಶಿವಂ" ಎಂಬ ಕಾಯವನ್ನು ತಳೆದು ಜನಿಸಿ ಬಂದ ಶ್ರೀಯುತರ ಕಾದಂಬರಿ, ಕಥಾಪ್ರಪಂಚದಲ್ಲಿ ಏಕ್ರಮವನ್ನು ಸ್ಥಾಪಿಸಿ, ಅಮೋಘ, ಅನುಪಮ, ಅಚ್ಯುತವಾದ ವಿಶ್ವರವನ್ನು ಆರ್ಜಿಸುತ್ತದೆ ಎಂದರೆ ಅದು ಕೇವಲ ನಗ್ನ ಸತ್ಯ" ಅನ್ನೋದನ್ನು ಒಬ್ಬಾತ ವಿಮರ್ಶಕರು, ಮೆಚ್ಚಿಕೆಯ ಪರಾಕಾಷ್ಠತೆಯೊಡನೆ ಸಾರುವುದಲ್ಲದೆ "ಸಂಪ್ರದಾಯ ಶರಣರಾಗಿ ಯಾವುದೋ ಒಂದು ತತ್ವದ—ಪ್ರೀತ್ಯರ್ಥ ತಮ್ಮ ಈಚಾರ್ಯ ಶಕ್ತಿಯನ್ನು ಮೀಸಲಾಗಿರಿಸಲಿಕ್ಕೂ ಮನಮೂಡದೆ ನಿರಂಕುಶ, ಸ್ವೇಚ್ಛಾಚಾರದಿಂದ ಪ್ರಕೃತಿ ವಿರುದ್ಧವಾದ ತರ್ಕವನ್ನು ಎತ್ತಿಹಿಡಿಯಲು ತಮ್ಮ ಸ್ವಾತಂತ್ರ್ಯವನ್ನು ದುರುಪಯೋಗಗೊಳಿಸಲಿಕ್ಕೂ ಅಸಕ್ತರಾಗದೆ, ಜಾಗೃತ ಸ್ವಚ್ಛಂದ ಕಲಾಪ್ರವೃತ್ತಿಯಿಂದ, ಇಷ್ಟು ಎಳೆಯ ವಯಸ್ಸಿನಲ್ಲಿ, ಇಂತಹ ಮಹೋನ್ನತ ಕೃತಿರತ್ನವನ್ನು

(೧೧ನೇ ಪುಟ ನೋಡಿರಿ)

41 ವರ್ಷಗಳ ಭದ್ರ ಹಾಗೂ ಸಮರ್ಥ ಬೇಂಕಿಂಗ್ ಸೇವೆ.

ದಿ. ಪಾಂಗಾಳ ನಾಯಕ್ ಬೇಂಕ್ ಲಿ.

ನಮ್ಮ 3 ವರ್ಷ ವ್ಯಾದೆಯ ಕೇಲ್ ಸರ್ಟಿಫಿಕೇಟುಗಳಲ್ಲಿ ಠೇವಣಿ ಮಾಡಿರಿ: ಬಡ್ಡಿ ಸೇಕಡಾ 5ರಂತೆ: ರೂ. 87—00 3 ವರ್ಷಗಳ ಅಂತ್ಯದಲ್ಲಿ ಬಡ್ಡಿ ಕೂಡಿ ರೂ. 100—00 ಒದಗಿಸುವುದು.

ಕರೆ, ಚಿಕ್ಕ ವ್ಯಾದೆ, ನಿರಖು ಠೇವಣಾತಿಗಳ ಮೇಲೆ ಆಕರ್ಷಣೀಯ ಶರ್ತಗಳು: ಬಡ್ಡಿ ಸೇಕಡಾ 5½ರ ವರೆಗೆ.

ತಾ. 1—4—1961ರಿಂದ ಸೇವಿಂಗ್ಸ್ ಬೇಂಕ್ ಖಾತೆಗಳ ಮೇಲೆ ಬಡ್ಡಿ ಸೇಕಡಾ 3ರಂತೆ.

THE PANGAL NAYAK BANK LTD.
Estd: 1920

ESTD. 1921 ಸ್ಥಾಪನೆ

NAVAYUGA
KANNADA WEEKLY,
UDIPI.

Founder:
Late Sri A. B. Shetty
Former Minister for Public Health, Govt. of Madras & Govt. of Mysore.

ನವಯುಗ
ರಾಷ್ಟ್ರೀಯ ವಾರಪತ್ರಿಕೆ
ಉಡುಪಿ

ಗೌರವ ಸಂಪಾದಕರು:
ಎಸ್. ಗೋಪೀಚಂದ ರಾವ್, ವಿದ್ವಾನ್.
ಬಿ. ಶಾಮರಾಯ ಶೆಟ್ಟಿ, ಬಿ. ಎ., ಎಲ್.ಟಿ.

ಸಂಚಾಲಕ ಸಂಪಾದಕರು:
ಕೆ. ಹೊನ್ನಗ್ಯ ಶೆಟ್ಟಿ.

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-50
ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3-50

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಮಂಡಿ ಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ರವೀಂದ್ರವಾಣಿ— ಲೇಖಾಂಕ ೧೯— ವಿಶ್ವಕವಿ ರವೀಂದ್ರನಾಥ ಟಾಗೋರ್.

ಪ್ರೇಮಸಾಧನೆಯಿಂದ ಪರಮಾತ್ಮನ ಪ್ರಾಪ್ತಿ

ಅನುವಾದಕರು: ಕೆ. ಎನ್. ಭಟ್, ಶಿರಾಡಿಪಾಲ್.

ಜೀವಾತ್ಮ ಮತ್ತು ಪರಮಾತ್ಮ ಇವು ಯಾವ ರೀತಿಯಿಂದ ಒಟ್ಟಿಟ್ಟಿಗೇ ಇರುತ್ತವೆ? ಎಂಬ ಗಹನವಾದ ಸಮಸ್ಯೆಯನ್ನು ನಾವೀಗ ವಿಚಾರಮಾಡಲಿರುವೆವು. ಈ ಸಹವಾಸದ ಮೂಲದಲ್ಲಿಯೇ ಅಲೌಕಿಕವಾದ ಸಮಸ್ಯೆಇದೆ. ಅದೇ ಕಾರ್ಯಶೀಲವಾಗಿದೆ. ಈ ಸಮಸ್ಯೆಯ ಸುತ್ತಲೂ ದೃಷ್ಟಿ ಬೀರಿ, ನೋಡಿ ತಿಳಿದುಕೊಳ್ಳಲು, ನಾವು ಅಸಮರ್ಥರಾಗಿರುತ್ತೇವೆ. ನಾವು ಸ್ವಯಂ ಈ ಸಮಸ್ಯಾ ವೃತ್ತದ ಒಳಗೆ ನಿಂತುಕೊಂಡಿರುವುದರಿಂದ, ದೊರಗಿನಿಂದ, ಇದರ ಮಹತ್ವ—ಹಾಗೂ ಸ್ಥಿತಿಗತಿಗಳನ್ನು ಗುರುತಿಸಲಾರದಾಗಿದ್ದೇವೆ.

ಈ ಸಮಸ್ಯೆಯು ಕೇವಲ ತರ್ಕಕ್ಕಾಗಿಯೇ ಇರುವುದು. ವಸ್ತುತಃ ಇದು ನಮ್ಮ ಜೀವನದಲ್ಲಿ ಯಾವ ಕಷ್ಟವನ್ನೂತಂದೊಲಾರದು. ತರ್ಕದ ಭಾಷೆಯಲ್ಲಿ ಹೇಳುವುದಾದರೆ, "ಎರಡು ಬಿಂದುಗಳ ಮಧ್ಯಸ್ಥಾನದ ದೂರವು, ಬೇಕಾದರೆ ಅದು ಬಹಳ ಅಲ್ಪವೇ ಇರಲಿ, ಅದನ್ನು ಅಸೀಮಿತವೆಂದು ಹೇಳುವುದು ಸರಿಯಾಗಬಹುದು" ಆದರೆ ಇದನ್ನೂ ಅಸೀಮಿತರೂಪದಿಂದ ವಿಭಕ್ತಗೊಳಿಸಬಹುದು. ಆದರೆ ನಾವು ಈ ಅಸೀಮದ ಪ್ರಾಂತವನ್ನು ಪ್ರತಿ ಹೆಜ್ಜೆ ಹೆಜ್ಜೆಗೆ ಹಾರಿ, ದಾಟುತ್ತ ಮುನ್ನಡೆಯುತ್ತೇವೆ. ಮತ್ತು ಪ್ರತಿಕ್ಷಣದಲ್ಲಿ ಅನಾದಿ ಮತ್ತು ಅನಂತದ ಭೇಟಿ ಮಾಡುತ್ತೇವೆ. ಈ ಕಾರಣದಿಂದ ನಮ್ಮ ದಾರ್ಶನಿಕರು, "ಸೀಮಿತವೆಂದರೆ ಅದೊಂದು ಎಲ್ಲೆಗೊಳಪಟ್ಟ ವಸ್ತುವೇ ಅಲ್ಲ; ಹಾಗೆ ಕಾಣುತ್ತಿರುವ, ಅದರ ಸೀಮಿತ ರೂಪವು ಮಾಯೆಯಾಗಿರುವುದು, ಮಾತ್ರವಲ್ಲ ಭ್ರಾಂತಿಯೂ ಆಗಿದೆ" ಎಂಬ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿರುವರು. ವಾಸ್ತವಿಕತೆಯು ಅಸೀಮದಲ್ಲೇ ಇರುವುದು ಹೊರತು, ಇದು ಮಾಯೆಯಾಗಿದೆ. ನೋಡುವಾಗ ಸೀಮಿತವೆಂದು ತೋರುತ್ತಿರುವುದು ವಾಸ್ತವವಲ್ಲ. ಆದರೆ 'ಮಾಯೆ' ಎಂಬುದು ಒಂದೇ ಹೆಸರಾಗಿದೆ, ಇದರಿಂದ ಬೇರೆ ಯಾವ ಸ್ವರೂಪದ ಜ್ಞಾನವೂ ಆಗಲಾರದು, ಹೀಗಿರುವುದರಿಂದ, ಆತ್ಮ—ಪರಮಾತ್ಮ ಅಂದರೆ ಸೀಮಿತ ಮತ್ತು ಅಸೀಮಿತ. ಇವು ಯಾವ ರೀತಿಯಿಂದ ಸಹವಾಸದಲ್ಲಿ ಜೊತೆಯಾಗಿಯೇ ಇರುವುವು? ಎಂಬ ಈ ಸಮಸ್ಯೆಯು ಒಂದು ದೊಡ್ಡ ಸಮಸ್ಯೆಯಾಗಿಯೇ ಉಳಿಯುವುದು.

ಈ ಜಗತ್ತು ದ್ವಂದ್ವಮಯವಾಗಿದೆ. ಅರ್ಥಾತ್ ಎರಡು ವಿರೋಧೀ ವಸ್ತುಗಳ ಹೆಸರು ಜೊತೆಯಾಗಿಯೇ ಬರುವುದು. ರಾಗ—ವಿರಾಗ--ವಿಧಾನ—ನಿಷೇಧ. ಧನ ಶಕ್ತಿ ಋಣಶಕ್ತಿ ಮೊದಲಾದ ಈ ಪರಸ್ಪರ ವಿರೋಧೀ ಶಬ್ದಗಳು ಒಟ್ಟಿಗೇ ಉಪಯೋಗಿಸಲ್ಪಡುತ್ತಿವೆ. ಅವರೆ ಇವುಗಳಿಂದಲೇ ವಸ್ತು ಸ್ಥಿತಿಯ ವಿವರಣೆ, ಬರುವುದಿಲ್ಲ; ಸಮರ್ಪಕವಾಗುವುದಿಲ್ಲ. ಇದರಿಂದ ತಿಳಿದು ಬರುವುದೇನೆಂದರೆ—'ಈ ಜಗತ್ತು ಪರಸ್ಪರ ವಿರೋಧೀ ದ್ವಂದ್ವಶಕ್ತಿಗಳಿಂದ ಕೂಡಿದ್ದು ಇವುಗಳ ಕಾರ್ಯ ಚಟುವಟಿಕೆಗಳ ಒಂದು-ಮಧ್ಯಸ್ಥಿಕೆಯ ಕೇಂದ್ರವಾಗಿದೆ. ಈ ವಿರೋಧೀ ಶಕ್ತಿಗಳು ವಿಘಾತನ ಎಡಬಲ ಕೈಗಳಂತೆ, ಪೂರ್ಣಸಮ ಭಾವದಿಂದ, ತನ್ನ ಕೆಲಸವನ್ನು ಮಾಡುತ್ತಿವೆ. ಆದರೆ, ಇವು ಮಾಡುತ್ತಿರುವ ಕೆಲಸವೂ ಪ್ರತ್ಯೇಕವಾಗಿಯೇ ಇದೆ.

ನಮ್ಮ ಕಣ್ಣುಗಳೆರಡೂ ಪರಸ್ಪರ ಸಮ ಭಾವದಿಂದಿರುವ ಪ್ರತಿಜ್ಞೆ ಮಾಡಿವೆ. ಇದರಿಂದಾಗಿ ಅವೆರಡೂ ಕೂಡಿಯೇ ತಮ್ಮ ಕಾರ್ಯವನ್ನು ನಿರ್ವಹಿಸುತ್ತಿವೆ. ಇದೇ ರೀತಿ ಭೌತಿಕ ಜಗತ್ತಿನ ಶಕ್ತಿಗಳಿಗೂ ಕೂಡ ಒಂದು ರೀತಿಯ ಅಖಂಡವಾದ ನಿರಂತರವಾದ ಸಂಬಂಧವಿರುವುದು. ಈ ಸಂಬಂಧ ಶೀತ ಉಷ್ಣ ಪ್ರಕಾಶ ಅಂಧಕಾರ, ವಿಶ್ರಾಂತಿ, ಚಲನೆ, ಮೊದಲಾದುವುಗಳ ಮೂಲಕ ಇರುವುದು. ಈ ಕಾರ್ಯದಿಂದಲೇ ಈ ಪರಸ್ಪರ ವಿರೋಧೀ ಶಕ್ತಿಗಳು ಪ್ರತಿಕೂಲವಾಗಿ ನಿಲ್ಲುವ ಬದಲು, ಅನುಕೂಲವಾಗಿ ಪರಿವರ್ತನೆಗೊಳ್ಳುತ್ತಿವೆ. ಒಂದು ವೇಳೆ ಈ ಸೃಷ್ಟಿಯಲ್ಲಿ ಅವ್ಯವಸ್ಥೆ ಮತ್ತು ಸಂಘರ್ಷವೇ ಇರುತ್ತಿರುವುದಾಗಿದ್ದರೆ, ಈ ಪರಸ್ಪರ ವಿರೋಧಿಶಕ್ತಿಗಳು, ಒಂದನ್ನೊಂದು ಸೋಲಿಸಿ, ಅಪಮಾನಗೊಳಿಸಲು, ಎದ್ದು ನಿಂತಿವೆ! ಎಂಬುದನ್ನು ನಾವು ಒಪ್ಪಿಕೊಳ್ಳಬಹುದಾಗಿತ್ತು. ಆದರೆ ಇದು ಹೀಗಿರುವುದಿಲ್ಲ. ವಿಶ್ವದಲ್ಲಿ ಅರಾಜಕತೆಯ ರಾಜ್ಯವು ಇನ್ನೂ ತಲೆಯೆತ್ತಿರುವುದಿಲ್ಲ; ಎಂಬುದು ನೆನಪಿಡಬೇಕಾದ ವಿಚಾರವಾಗಿದೆ, ಇಲ್ಲಿ ಹುಚ್ಚು ಹುಚ್ಚಾಗಿ ವರ್ತಿಸುವ, ಯಾ, ಅಸ್ಥಿತ್ವ ಕಾಲದ ವರೆಗೆ, ಪಥ ಭ್ರಷ್ಟವಾಗಿ ವರ್ತಿಸುವ ಅಥವಾ ಉದ್ಧಟತನದಿಂದ ಉಪದ್ರವ ಕೊಡುವ, ಅಂಥ ಯಾವ ಶಕ್ತಿಯೂ, ಇಲ್ಲ. ಪ್ರತಿಯೊಂದು ಶಕ್ತಿಯೂ ತನ್ನ ಎಲ್ಲೆಯೊಳಗೇ ಸಂಚರಿಸುತ್ತ ತನ್ನ ನಿಶ್ಚಿತ ಕೇಂದ್ರಕ್ಕೆ ಬಂದು—ತಲಪುವುದು.

ಸಮುದ್ರದಲ್ಲಿ ಅಲೆಗಳೇಳುತ್ತವೆ. ಪ್ರತಿಯೊಂದು ಅಲೆಯೂ, ಇತರ ಶಕ್ತಿಗಳೆಲ್ಲವನ್ನೂ ಸೋಲಿಸುವುದೋ ಎಂಬಂತೆ ಅತಿ ಎತ್ತರಕ್ಕೆ ಏಳುತ್ತಿರುತ್ತದೆ. ಆದರೆ ಅದೂ ಕೂಡ ಅದರ ನಿಶ್ಚಿತವಾದ ಒಂದು ಎಲ್ಲೆಯ ವರೆಗೆ ಮಾತ್ರವೇ ಹೋಗುವುದು. ಕೊನೆಗೆ ಅದು, ಸಮುದ್ರದ ನೀರಿನಲ್ಲೆ ವಿಶ್ರಾಂತಿಯನ್ನು ಪಡೆಯುವುದು. ಅಂದರೆ, ತರಂಗಗಳ ಕಾರ್ಯವು ಸಮುದ್ರದಿಂದ ಎದ್ದು ಸಮುದ್ರಕ್ಕೆ ಮರಳುವುದೇ ಆಗಿದೆ. ಈ ಅಲೆಗಳ ಏರುವಿಕೆ ಮತ್ತು ಇಳಿಯುವಿಕೆಯು ನಿರ್ದಿಷ್ಟವಾದ ಒಂದು ತಾಳಲಯದಂತೆ, ನಡೆಯುತ್ತಿರುವುದರಿಂದ ಅದರಲ್ಲಿ ಸೌಂದರ್ಯವು ತುಂಬಿ ಬರುವುದು.

ವಸ್ತುತಃ ಈ ಅಲೆಗಳ ಏರುವಿಕೆ, ಮತ್ತು ಇಳಿಯುವಿಕೆಯ ಕಂಪನವು ಯಾವುದಾದರೂ ಭಗ್ನ ಶರೀರದ ಅಸ್ವಾಭಾವಿಕತೆಗೆ ಹೋಲಿಸುವಂತಿಲ್ಲ. ಇದರಲ್ಲಿ ತಾಳ ಬದ್ಧವಾದ ಅಲೌಕಿಕ ಆನಂದವಿದೆ. ನೃತ್ಯದ ಪದ ಸಂಚಾಲನಗಳಲ್ಲಿ ಯಾವ ರೀತಿ, ತಾಳ ಬದ್ಧತೆ ಇರುವುದೋ ಅಲೆಗಳಲ್ಲೂ ಅದೇ ರೀತಿ ಇರುವುದು. ಈ ತಾಳ ಬದ್ಧತೆಯು ವಿಕ್ಷಿಪ್ತ ಚೇಷ್ಟೆಗಳಲ್ಲಿ ಕಂಡುಬರಲಾರದು. ಹೀಗಾಗುತ್ತಿರಲು, ಇದರ ಮೂಲದಲ್ಲಿ ಯಾವುದೋ ಆಧಾರಭೂತವಾದ, ಐಕ್ಯವಿದೆ, ಎಂದು ಒಪ್ಪಿಕೊಳ್ಳಬೇಕಾಗುವುದು.

ಐಕ್ಯದ ಈ ಸಿದ್ಧಾಂತವೇ ರಹಸ್ಯವು

(೧೦ನೇ ಪುಟ ನೋಡಿರಿ)

ಟಿ. ಬಿ. ಮುದ್ರೆಗಳನ್ನು ಪಡಕೊಳ್ಳಿರಿ ಮತ್ತು ಟಿ. ಬಿ. ಯಿಂದ ನರಳುವವರಿಗೆ ಸಹಾಯ ಮಾಡಿರಿ. ನಿಮ್ಮ ದೈನಂದಿನ ಕಾಗದ ಪತ್ರಗಳಿಗೆ ಈ ಮುದ್ರೆಗಳನ್ನು ಉಪಯೋಗಿಸಿರಿ. ಇದು ಅವನ್ನು ಕಳುಹಿಸುವವರಿಗೂ, ಅವನ್ನು ಪಡೆಯುವವರಿಗೂ ಸಂತೋಷವನ್ನುಂಟುಮಾಡುತ್ತದೆ. ಮೈಸೂರು ರಾಜ್ಯದಲ್ಲಿ ಟಿ. ಬಿ. ಮುದ್ರೆಗಳು ಈ ಕೆಳಗಿನ ವಿಳಾಸಗಳಲ್ಲಿ ದೊರೆಯುತ್ತವೆ.

1. ಗೌರವ ಕಾರ್ಯದರ್ಶಿ, ಮೈಸೂರು ರಾಜ್ಯ ಕ್ಷಯರೋಗ ಸಮಿತಿ, ಲೇಡಿ ವಿಲ್ಲಿಂಗ್‌ಡನ್ ಟಿ. ಬಿ. ಕ್ಲಿನಿಕ್ ಮತ್ತು ಡಿಸ್ಪೆನ್ಸರಿ, ಕೆಂಪೇ ಗೌಡ ರೋಡ್, ಬೆಂಗಳೂರು ಸಿಟಿ.

2. ಮಹಿಳಾ ಮಂಡಲ ಮತ್ತು ಶ್ರೀ ಬಸವೇಶ್ವರ ದೇವಸ್ಥಾನ, ಪಂಚ್ ಕಮಿಟಿ, ಕಲ್ಯಾಣಿ, ಗ್ರೈನ್ ಮರ್ಚೆಂಟ್ಸ್ ಎಸೋಸಿಯೇಶನ್ ಮತ್ತು ಭಾರತ ಸಮಾಜ, ಬೀದರ.

3. ದೈವಜ್ಞ ವೆಲ್‌ಫೇರ್ ಸೆಂಟರ್, ಶ್ರೀ ಲಕ್ಷ್ಮೀನಾರಾಯಣ ಟೆಂಪಲ್ ಕಂಪೌಂಡ್, ಬಸವನಗುಡಿ—ಮಂಗಳೂರು.

4. ಗೌರವ ಕಾರ್ಯದರ್ಶಿ, ದ. ಕ. ಜಿಲ್ಲಾ ಕ್ಷಯರೋಗ ಸಮಿತಿ, ಗವರ್ನಮೆಂಟ್ ವೆನ್‌ಲೊಕ್ ಆಸ್ಪತ್ರೆ. ಮಂಗಳೂರು.

5. ಶ್ರೀ ಎಲ್. ಎಸ್. ಕಾಮತ್, ಒರ್ಗನೈಜರ್, ಭಾರತ್ ಸೇವಕ್ ಸಮಾಜ್, ಕೆನರಾ ಕಾಲೇಜ್, ಕುಮಟಾ.

6. ಅಧ್ಯಕ್ಷರುಗಳು— ಮಹಿಳಾ ಸಮಾಜ, ಕಾರವಾರ್, ಅಂಕೋಲಾ, ಕುಮಟಾ, ಗೋಕರ್ಣ, ಹೊನ್ನಾವರ, ಸಿದ್ಧಾಪುರ, ಹಳಿಯಾಳ್, ಸೂಪಾ ಮತ್ತು ಎಲ್ಲಾಪುರ.

ಹನ್ನೆರಡನೇ ಕ್ಷಯರೋಗ ಮೊಹರು ಮಾರಾಟ ಚಳವಳಿ

(ದಿ ಟ್ಯೂಬರ್‌ಕ್ಯೂಲೋಸಿಸ್ ಎಸೋಸಿಯೇಶನ್ ಆಫ್ ಇಂಡಿಯಾ, ನ್ಯೂ ಢಿಲ್ಲಿ ಇವರಿಂದ ಪ್ರಾರಂಭಿಸಲ್ಪಟ್ಟಿದ್ದು)

Space kindly donated by: **STEEL BROTHERS & Co. LTD., CALCUTTA.**

ನಿರ್ಮಲದ ಕುಶಲ ಕಲೆಗಳು

ಆಂಧ್ರ ಪ್ರದೇಶದ ವಾರಂಗಲ್ ಜಿಲ್ಲೆಗೆ ಸೇರಿದ ನಿರ್ಮಲ್ ಎಂಬ ಹೆಸರಿನ ಗ್ರಾಮ ನೋಡುವುದಕ್ಕೆ ಒಂದು ಕೈಗಾರಿಕಾ ಕೇಂದ್ರವಾಗಿರುವ ಗ್ರಾಮ ಎಂಬ ಭಾವನೆಯೇ ಉಂಟಾಗುವುದಿಲ್ಲ. ಸುತ್ತಲೂ ಬೆಟ್ಟಗಳು ಮತ್ತು ಅರಣ್ಯಗಳಿಂದ ಕೂಡಿರುವ ಈ ಗ್ರಾಮ ಒಂದು ಸಣ್ಣ ಗ್ರಾಮವಾದರೂ ಅದರ ಕೀರ್ತಿ ಬಹಳ ದೊಡ್ಡದು ಕಾರಣ ಇಷ್ಟೆ; ಅದು ಕುಶಲ ಕಲಾವಿದರ ಶೌರೂರಾಗಿದೆ ಈ ಕುಶಲ ಕಲಾವಿದರು ತಯಾರಿಸುವ ಗೊಂಬೆಗಳು, ಆಟದ ಸಾಮಾನುಗಳು ಮತ್ತು ಇತರ ಕಲಾತ್ಮಕ ವಸ್ತುಗಳು ಕಲಾಭಿಮಾನಿಗಳನ್ನು ಮುಗ್ಧಗೊಳಿಸುತ್ತವೆ.

ಈ ಗ್ರಾಮ ಬಹಳ ಹಿಂದಿನ ಕಾಲದಿಂದಲೂ ತುಂಬಾ ಪ್ರಸಿದ್ಧಿ ಪಡೆದಿದೆ. ಇದರ ಹೆಸರು ಕೂಡ ವಾರಂಗಲ್ಲಿನ ಕಾಕತೀಯ ರಾಜವಂಶಕ್ಕೆ ಸೇರಿದ ನಿಮ್ಮ ನಾಯಕನ ಹೆಸರಿನಿಂದ ಉದ್ಭವಿತವಾದುದು ಎಂದೂ ಹೇಳಲಾಗಿದೆ. ಆಗಿನ ಕಾಲದಲ್ಲಿ ಈ ಗ್ರಾಮದ ಹಿರಿಯ ಕುಶಲ ಕಲಾವಿದರು ಕೆಲವು ಮೂಲಿಕೆಗಳ ರಸದಿಂದ 'ಚಿನ್ನ'ವನ್ನೂ ತಯಾರಿಸುತ್ತಿದ್ದರು ಮತ್ತು ಈ 'ಚಿನ್ನ'ವು ನಿಜವಾದ ಚಿನ್ನದಂತೆಯೇ ಇರುತ್ತಿತ್ತು ಎಂದೂ ಹೇಳಲಾಗಿದೆ, ಅಷ್ಟೇ ಅಲ್ಲ ಕೆಲವು ಕಲ್ಲುಗಳಿಂದ ಮತ್ತು ಗೋಂದುಗಳಿಂದ ತಮಗೆ ಬೇಕಾದ ಬಣ್ಣಗಳನ್ನೂ ಅವರು ತಯಾರಿಸುತ್ತಿದ್ದರು.

ನಿರ್ಮಲ್ ಗ್ರಾಮದಲ್ಲಿ ಆಟದ ಸಾಮಾನುಗಳನ್ನು ತಯಾರಿಸುವ ಕೈಗಾರಿಕೆ ಆರಂಭವಾದುದು ಮಾತ್ರ ವಾರಂಗಲ್ಲಿನ ಮೆಲಮರ ಕಾಲದಲ್ಲಿ ಎಂದು ಹೇಳಬಹುದು. ಚಿತ್ರಕಲೆಯಲ್ಲಿ ಪ್ರಸಿದ್ಧರೆನಿಸಿದ್ದ 'ಜೀಂಗಾ'ರು ಎಂಬ ಒಂದು ಕೋಮಿನವರು ಈ ಕೈಗಾರಿಕೆಯನ್ನು ಆರಂಭಿಸಿದರು. ಇವರು ಬರೆಯುತ್ತಿದ್ದ ಚಿತ್ರಗಳಲ್ಲಿ ಸಾಮಾನ್ಯವಾಗಿ ಪುರಾಣ ಕಥೆಗಳ ದೃಶ್ಯಗಳನ್ನೇ ಹೆಚ್ಚಾಗಿ ಬಳಸುತ್ತಿದ್ದುದು ಕಂಡು ಬರುತ್ತದೆ. ರಾಮಾಯಣ ಮತ್ತು ಮಹಾಭಾರತ ಇವು ಅವರಿಗೆ ಬೇಕಾದ ಸ್ಫೂರ್ತಿಯನ್ನು ನೀಡುತ್ತಿದ್ದವು.

ಗ್ರಾಮದ ಸುತ್ತಲೂ ಇರುವ ಅರಣ್ಯಗಳಲ್ಲಿ ಆಟದ ಸಾಮಾನುಗಳ ತಯಾರಿಕೆಗೆ ಬೇಕಾಗುವ ಹದುರವಾದ ಮರ ಹೇರಳವಾಗಿ ಸಿಗುವುದೂ ಈ ಕೈಗಾರಿಕೆಯ ಬೆಳೆಯಲು ಒಂದು ಒಳ್ಳೆಯ ಅವಕಾಶವನ್ನು ಕಲ್ಪಿಸಿತು ಎಂದು ಹೇಳಬಹುದು. ಅಲ್ಲದೆ, ಈ ಪ್ರದೇಶದ ಶ್ರೀಮಂತರು ಕೈಗಾರಿಕೆಯ ಬೆಳವಣಿಗೆಗೆ ನೀಡಿದ ಪ್ರೋತ್ಸಾಹ ಕೂಡ ಗಮನಾರ್ಹ.

ಈ ಕೈಗಾರಿಕೆಗೆ ೧೫೦ ವರ್ಷಗಳಷ್ಟು ಹಿಂದೆ ಒಂದು ವಾಣಿಜ್ಯ ಸ್ವರೂಪ ಕೊಟ್ಟವರೆಂದರೆ ಸೋಮಯ್ಯಮತ್ತು ಲಿಂಬಯ್ಯ ಎಂಬವರು. ಜನ ಅವರ ಹೆಸರನ್ನು ಇಂದಿಗೂ ನೆನಸುತ್ತಾರೆ.

ಆಟದ ಸಾಮಾನುಗಳನ್ನು ತಯಾರಿಸುವುದಕ್ಕಷ್ಟೇ ಅಂದು ಸೀಮಿತವಾಗಿದ್ದ ಕೈಗಾರಿಕೆ ಮುಂದೆ ವಿವಿಧ ಗುಣವನ್ನು ಪಡೆಯಿತು. ಮರದ ತಟ್ಟೆಗಳು, ಸುಂದರವಾದ ಪೆಟ್ಟಿಗೆಗಳು, ಗೋಡೆಯ ಮೇಲೆ ಅಲಂಕಾರಕ್ಕೆ ನೇತು ಹಾಕುವ ಕುಶಲ ಕಲಾ ವಸ್ತುಗಳು, ಇವೇ ಮೊದಲಾದ ವಿವಿಧ ವಸ್ತುಗಳೂ ತಯಾರಾಗತೊಡಗಿವೆ. ಹೀಗೆ ವಸ್ತುಗಳ ವೈವಿಧ್ಯ ಹೆಚ್ಚಿದ ಹಾಗೆ ತೇಗದ ಮರ ಕೂಡ ಬಳಕೆಗೆ ಬಂದಿದೆ. ಇಂದು ಅಲ್ಲಿ ತಯಾರಾಗುತ್ತಿರುವ ವಸ್ತುಗಳ ಪೈಕಿ ಕುರ್ಚಿ, ಮೇಜು ಇತ್ಯಾದಿಗಳೂ ಟೇಬಲ್ ಲ್ಯಾಂಪುಗಳೂ, ಪಾತ್ರೆಗಳೂ, ಸಿಗರೇಟ್ ಮತ್ತು ಟ್ರಂಕೆಟ್ ಬಾಕ್ಸ್‌ಗಳೂ ಸೇರಿವೆ.

ವಸ್ತುಗಳ ತಯಾರಿಕೆಯ ಸ್ಥೂಲ್ಯ ಪರಿಚಯ ಹೀಗಿದೆ: ತೇಗದ ಮರವನ್ನು ಕುಶಲ ಕಲಾವಿದರು ತಮಗೆ ಬೇಕಾದ ಒಂದು ಆಕಾರಕ್ಕೆ ಮೊದಲು ಕತ್ತರಿಸಿಕೊಳ್ಳುತ್ತಾರೆ. ಅನಂತರ ಲೇತಿನ ಸಹಾಯದಿಂದ ಅದಕ್ಕೆ ಒಂದು 'ಫಿನಿಷ್' ಅಥವಾ ಒಂದು ಸರಿಪೂರ್ಣತೆ ಕೊಡುತ್ತಾರೆ. ಹೊರಮೈಯನ್ನು ನಯವಾಗಿ ಮಾಡಲು ಅನಂತರ ಅದಕ್ಕೆ 'ಸೈಟ್ರೋಸ್ ಸೆಲ್ಯುಲೋಸ್' ಕಾಂಪೌಂಡಿನ ಒಂದು ಪದರ ಹೆಚ್ಚುತ್ತಾರೆ. ಅನಂತರ ಡ್ಯೂಕೋ ಸ್ಪ್ರೇಯಿಂಗ್ ಪ್ರಯೋಗದ ಮೂಲಕ ಅವುಗಳಿಗೆ ಬಣ್ಣ ಹೆಚ್ಚುತ್ತಾರೆ. ಅದರ ಮೇಲೆ ಬಗೆಬಗೆಯ ಅಲಂಕಾರ ವಿನ್ಯಾಸಗಳನ್ನು ಇಳಿಸುತ್ತಾರೆ. ಟ್ರೇಸಿಂಗ್ ವಿಧಾನದ ಮೂಲಕ ಹೀಗೆ ಇಳಿಸುವ ವಿನ್ಯಾಸಗಳನ್ನು ಅನುಸರಿಸಿ ಚಿತ್ರಬಿಡಿಸುತ್ತಾರೆ. ಕೆಲವು ಕಡೆ ಚಿನ್ನದ ಹೊಳಪು ಬೇಕಾದರೆ ರಾಸಾಯನಿಕ ಚಿನ್ನವನ್ನು ಆ ಪ್ರದೇಶಕ್ಕೆ 'ಸ್ಪ್ರೇ' ಮಾಡುತ್ತಾರೆ.

ಹೀಗೆ ನಿರ್ಮಲ್ ಗ್ರಾಮದ ಈ ಮರದ ಸಾಮಾನುಗಳ ಕೈಗಾರಿಕೆ ಇಂದು ದೇಶದಾದ್ಯಂತ ಪ್ರಖ್ಯಾತಿ ಪಡೆಯುವುದರ ಜೊತೆಗೆ ವಿದೇಶೀ ಮಾರುಕಟ್ಟೆಯನ್ನೂ ಪಡೆಯುತ್ತಿದೆ. ಸುಮಾರು ೩ ಲಕ್ಷ ರೂಪಾಯಿಯ ಮೌಲ್ಯದಷ್ಟು ವಸ್ತುಗಳನ್ನು ಈ ಗ್ರಾಮ ಮಾರಾಟ ಮಾಡುತ್ತದೆ ಈ ಗ್ರಾಮದಲ್ಲಿ ತಯಾರಾಗುವ ವಸ್ತುಗಳಿಗೆ ಅಮೇರಿಕ ಮತ್ತು ಬ್ರಿಟನ್‌ಗಳಲ್ಲಂತೂ ಉತ್ತಮ ಮಾರುಕಟ್ಟೆ ಇದೆ.

ಹೊಸ ಹೊಸ ಚಿತ್ರವಿನ್ಯಾಸಗಳ ಕಡೆಗೆ ದೃಷ್ಟಿ ಹೊರಳಿಸುತ್ತಿರುವ ನಿರ್ಮಲ್ ಗ್ರಾಮದ ಕುಶಲ ಕಲಾವಿದರು ಈಗ ತಾವು ತಯಾರಿಸುವ ವಸ್ತುಗಳಲ್ಲಿ ಅಜಂತಾ ಗುಹೆಗಳಲ್ಲಿನ ಚಿತ್ರಗಳನ್ನೂ ಮೊಗಲರ ಸಂಪ್ರದಾಯದ ಸುಂದರ ಚಿತ್ರಗಳನ್ನೂ ಶುದ್ಧ ಭಾರತೀಯ ಸಂಪ್ರದಾಯದ ವಿನ್ಯಾಸಗಳನ್ನೂ ಬಿಡಿಸುತ್ತಿದ್ದಾರೆ.

ದಕ್ಷಿಣ ಭಾರತದ ಸುಪ್ರಸಿದ್ಧ ಕಂಚಿನ ವಿಗ್ರಹಗಳು ಮತ್ತು ಲೇವಾಕ್ಷಿ ದೇವಸ್ಥಾನದ ಸುಂದರ ಭಿತ್ತಿ ಚಿತ್ರಗಳೂ ಈಗ ನಿರ್ಮಲ್ ಗ್ರಾಮದ ಕುಶಲ ಕಲಾವಿದರಿಗೆ ಸ್ಫೂರ್ತಿ ನೀಡುತ್ತಿವೆ.

ಕಳೆದ ಒಂದು ದಶಕದಲ್ಲಿ ಆಂಧ್ರ ಪ್ರದೇಶ ಸರಕಾರವು ಈ ಗ್ರಾಮದ ಕುಶಲ ಕಲೆಗಳಿಗೆ ವಿಶೇಷ ರೀತಿಯ ಉತ್ತೇಜನ ನೀಡಲು ಶ್ರಮಿಸಿದೆ. ಹೊಸ ಹೊಸ ವಿಧಾನಗಳ ಕಡೆಗೆ ಮತ್ತು ಉಪಕರಣಗಳ ಕಡೆಗೆ ಕಲಾವಿದರ ಗಮನವನ್ನೂ ಸೆಳೆದು ಅವರ ಕಲಾಭ್ಯಾಸವನ್ನು ಹೆಚ್ಚು ಆಧುನಿಕಗೊಳಿಸುವ ಪ್ರಯತ್ನ ನಡೆದಿದೆ.

ಇಲ್ಲಿಯ ಕೈಗಾರಿಕೆಯ ವಿಸ್ತೃತ ಕಾರ್ಯ ಇದೀಗ ನಡೆಯುತ್ತಿದೆ. ಮಾರುಕಟ್ಟೆಯ ಅಂದಾಜು ತೆಗೆಯಲು ನಡೆದಿರುವ ಪ್ರಯತ್ನದ ಫಲವಾಗಿ ನಿರ್ಮಲ್ ಗ್ರಾಮದಲ್ಲಿ ತಯಾರಾಗುವ ವಸ್ತುಗಳು ಹೇಗೆ ಮಧ್ಯಮ ವರ್ಗದ ಜನರ ಮೆಚ್ಚುಗೆಗೂ ಪಾತ್ರವಾಗಿವೆ ಎಂಬುದು ಸ್ಪಷ್ಟಪಡುತ್ತದೆ.

ಕುಶಲ ಕಲಾವಿದರು ರೂಢಿಸಿಕೊಳ್ಳುತ್ತಿರುವ ಹೊಸ ಹೊಸ ವಿನ್ಯಾಸಗಳು ತುಂಬಾ ಸರಳವಾಗಿದ್ದು ತುಂಬಾ ಆಕರ್ಷಣೀಯವೂ ಆಗುತ್ತಿರುವುದು ಕಂಡುಬರುತ್ತಿದೆ. ವಸ್ತುಗಳನ್ನು ಕೊಳ್ಳುವ ಗಿರಾಕಿಗಳು ಈ ಪರಿವರ್ತನೆಯನ್ನು ತುಂಬಾ ಮೆಚ್ಚಿಕೊಳ್ಳುತ್ತಿದ್ದಾರೆ.



ಅಗಸ್ಟ್ ತಿಂಗಳಲ್ಲಿ ಹಾರಿಸಿದ ಆಕಾಶಬಾಣ ಎಕ್ಸ್‌ಪ್ಲೋರರ್ ೧೨.

(೧೫ ನೇ ಪುಟ ದಿಂದ)

ಳೆಸಿಸಿಕೊಳ್ಳುವವರೂ ಈ ಜಾತೀಯವಾದದಿಂದ ಲಾಭ ಗಳಿಸಿಕೊಳ್ಳುವುದನ್ನು ಹೇಯವೆಂದು ತಿಳಿಯುವುದಿಲ್ಲ. ಚುನಾವಣೆಯಲ್ಲಿ ಗೆಲ್ಲಲು ಕೆಲವು ಹುರಿಯಾಳುಗಳು ಇದನ್ನೇ ಯಷ್ಟಿಯನ್ನಾಗಿಸಿಕೊಳ್ಳುವುದುಂಟು. ರಾಜಕೀಯಕ್ಕಿಳಿದ ಯಾರೊಬ್ಬನಾದರೂ ಸರ್ವಜ್ಞನಾಗುವ ಸಾಧ್ಯತೆಯು ಬೆಳೆದಿರುವ ಇಂದಿನ ನಮ್ಮ ಭಾರತದಲ್ಲಿ ಈ ಜಾತೀಯವಾದದ ಅನುಕೂಲತೆಗಳಿಗೂ ಇಂತಹ ಸರ್ವಜ್ಞರೇ ಕಾರಣೀಭೂತರು ಎನ್ನಬಹುದು. 'ಜಾತ್ಯತೀತ ರಾಷ್ಟ್ರ'ವೆಂಬ ಹೆಸರಿನಿಂದ ಕರೆದುಕೊಂಡರೆ ಸಾಲದು, ಇಲ್ಲಿ ನಿಜವಾಗಿಯೂ ರಾಷ್ಟ್ರೀಯ ವಲಯದಲ್ಲಿ ಜಾತಿಯ ಪ್ರಶ್ನೆಯು ಯಾವ ಕಾರಣಕ್ಕಾದರೂ ಏಳಬಾರದು. ಆಗ ಜನತೆಯೂ ಆ ಬಗ್ಗೆ ವಿಶೇಷ ಲಕ್ಷ್ಯಹರಿಸದು.

ಕ್ಷೀರಸಾಗರ ಛಟ್ಟನೆಂದು ಹೆಸರಿಟ್ಟುಕೊಂಡೂ ಮಜ್ಜಿಗೆಯನ್ನು ಬೇಡ ಹೋಗುವಂತೆ, 'ಜಾತ್ಯತೀತ ರಾಷ್ಟ್ರ'ವೆಂದು ಭಾರತಕ್ಕೆ ಅಂಕಿತನಾಮವಿರಿಸಿ, ಜಾತಿಯ ಪ್ರಶ್ನೆಯಿಂದಲೇ ನಮ್ಮ ಕಾರ್ಯಕಲಾಪಗಳು ನಡೆಯುವುದು ಸರಿಯಾದ ರೀತಿಯಲ್ಲ; ನೀತಿಯಂತೂ ಅಲ್ಲವೇ ಅಲ್ಲ. ಕೇಂದ್ರ ಸರಕಾರವು ಇತ್ತ ಅವಶ್ಯ ಗಮನ ಹರಿಸಬೇಕು; ಸಂವಿಧಾನದಲ್ಲಿ ರಾಜ್ಯ ಸರಕಾರಗಳಿಗೆ ಇತ್ತಿರುವ ವಿಶೇಷ ಅಧಿಕಾರ (ಹಿಂದುಳಿದವರನ್ನು ವರ್ಗೀಕರಿಸುವ)ವನ್ನು ಕಸಿದು ಕೊಂಡಾದರೂ ಈ ಜಾತೀಯತೆಗೆ ಅವು ಪುರಸ್ಕಾರ ನೀಡದಂತೆ ಎಚ್ಚರಿಕೆ ವಹಿಸಬೇಕು. ಜಾತೀಯ ಸಂಘ ಸಂಸ್ಥೆಗಳ ಮೇಲೆ ವಿಶೇಷ ದೃಷ್ಟಿಯನ್ನಿಟ್ಟುಕೊಳ್ಳಬೇಕು ಜಾತೀಯ ಪಕ್ಷಗಳನ್ನು ಬಹಿಷ್ಕರಿಸುವ ಯೋಜನೆ ಮಾಡುವುದರೊಡನೆ ಜಾತಿಯ ಭೂತ ನಿವಾರಣೆಯ ಬಗೆಗೂ ಸರ್ಯಾಲೋಚಿಸಬೇಕು.

ಸ್ಥಾಪನೆ: 1924

ದಿ ಕರ್ನಾಟಕ ಬೇಂಕ್ ಲಿಮಿಟೆಡ್

(ಶೆಡ್ಯೂಲ್ಡ್ ಬೇಂಕ್)

ರಿಜಿಸ್ಟರ್ಡ್ & ಹೆಡ್ ಆಫೀಸು: ಡೊಂಗರಕೇರಿ, ಮಂಗಳೂರು—3.

ಈ ಕೆಳಗಿನ ವಿರಿಸಿದ ಬಡ್ಡಿದರಗಳಲ್ಲಿ ರೇವಣಾತಿಗಳನ್ನು ಸ್ವೀಕರಿಸಲಾಗುವುದು.

ಒಂದರಿಂದ ಎರಡು ತಿಂಗಳುಗಳ ವರೆಗೆ	....	ಸಾ|| ಸೇಕಡಾ 3-75	ನ ವೈಸೆ
ಮೂರರಿಂದ ಐದು ತಿಂಗಳುಗಳ ವರೆಗೆ	....	,, 4-25	,,
ಆರು ತಿಂಗಳುಗಳಿಂದ 12 ತಿಂಗಳುಗಳ ವರೆಗೆ	....	,, 4-50	,,
12 ತಿಂಗಳು ಮಿಕ್ಕಿ 24 ತಿಂಗಳುಗಳ ವರೆಗೆ	....	,, 4-75	,,
24 ತಿಂಗಳು ಮಿಕ್ಕಿ 48 ತಿಂಗಳುಗಳ ವರೆಗೆ	....	,, 5-00	,,
48 ತಿಂಗಳುಗಳಿಗೆ ಮಿಕ್ಕಿ	....	,, 5-25	,,

ಸೇವಿಂಗ್ಸ್ ಬ್ಯಾಂಕ್ ಬಡ್ಡಿ ದರವನ್ನು

ಸಾ. ಸೇಕಡ 2½% ರಿಂದ 3½%ಗೆ ಏರಿಸಲಾಗಿದೆ.

THE KARNATAKA BANK LIMITED.

ಕಾಂಗ್ರೆಸ್‌ನ ಚುನಾವಣಾ ಘೋಷಣೆ

ಸಪ್ತಂಬರ ತಿಂಗಳ ದಿನಾಂಕ ೧೯ರಂದು ಕಾಂಗ್ರೆಸ್ಸು ಅರು ಸಾವಿರ ಪದಗಳುಳ್ಳ ೧೬ ಪುಟಗಳ ತನ್ನ ‘ಚುನಾವಣಾ ಕರಡು ಘೋಷಣೆಯನ್ನು ಭಾರತದ ಜನತೆಯ ಎದುರಿಗೆ ಸಾದರ ಪಡಿಸಿದೆ. ಭಾರತದ ರಾಷ್ಟ್ರೀಯ ಸಂಘಟನೆಯನ್ನು ಭದ್ರವಾಗಿಡಲು, ಜಾತ್ಯತೀತ ಹಾಗೂ ಭದ್ರ ಸರಕಾರಕ್ಕಾಗಿ ಬರಲಿರುವ ಫೆಬ್ರವರಿಯ ಮಹಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಪ್ರಚಂಡ ಜಯಗಳಿಸಲು ಈ ಚುನಾವಣಾ ಘೋಷಣೆ ಕರೆಯಿತ್ತಿದೆ ೫೦ ಅಂಶಗಳನ್ನೊಳಗೊಂಡ ಈ ಘೋಷಣಾ ಪತ್ರ ಭಾವನಗರದ ಕಾಂಗ್ರೆಸ್ ಮಹಾಧಿವೇಶನದ ನಿರ್ಣಯಗಳ ಮೇಲೆ ರೂಪುಗೊಂಡಿದೆ. ಆವಶ್ಯಕ ವಸ್ತುಗಳ ಬೆಲೆಗಳ ಸ್ಥಿರೀಕರಣ ಮಾಡುವ ಆಹಾರಧಾನ್ಯಗಳನ್ನು ಬೆಳೆವ ರೈತನಿಗೆ ನ್ಯಾಯಪೂರ್ಣ ಆದಾಯ ಬರುವಂತೆ ಮಾಡಲಾಗುವುದೆಂಬ ಆಶ್ವಾಸನ ನೀಡಲಾಗಿದೆ. ತೃತೀಯ ಪಂಚವಾರ್ಷಿಕ ಯೋಜನೆಯ ಅವಧಿಯೊಳಗೆ ಭಾರತದ ಪ್ರತಿಯೊಂದು ಗ್ರಾಮದಲ್ಲಿಯೂ ಕುಡಿಯುವ ನೀರಿನ ವ್ಯವಸ್ಥೆ, ಒಂದು ಪ್ರಾಥಮಿಕ ಶಾಲೆ ಹಾಗೂ ಹೊರಗಿನಿಂದ ಅಲ್ಲಿಗೆ ಬರಲು ಒಂದು ರಸ್ತೆಗಳ ವ್ಯವಸ್ಥೆ ಮಾಡಲು ಕಾಂಗ್ರೆಸ್ ಬದ್ಧ ಕಂಕಣವಾಗಿದೆ.

ಪಾಕಿಸ್ತಾನ ಹಾಗೂ ಚೀನಗಳ ಆಕ್ರಮಿಸಿರುವ ಭಾರತದ ಭೂಭಾಗಗಳಿಂದ ಆಕ್ರಮಣವನ್ನು ತೆರವುಮಾಡಿಸಲು ಶಾಂತಿಯುತ ಕ್ರಮಗಳನ್ನು ಕೈಗೊಳ್ಳುವುದು ಭಾರತದ ನೀತಿಯೆಂದು ಘೋಷಿಸಲಾಗಿದೆ ವಸಾಹತು ಶಾಹಿ ನೀತಿಯ ಖಂಡನೆ ಮಾಡಲಾಗಿದೆ. ಭಾರತದ ಅಂಗವಾದ ಗೋವೆಯನ್ನು ಭಾರತದೊಂದಿಗೆ ಸೇರಿಸಿಕೊಳ್ಳಲು ಸಂಕಲ್ಪಿಸಲಾಗಿದೆ

ಮಧುರೆಯಲ್ಲಿ ಸೇರಿದ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಸಭೆಯಲ್ಲಿ ಅಂಗೀಕಾರವಾಗಿರುವ ಈ ಕರಡು ಘೋಷಣೆಯ ಇತರ ಮುಖ್ಯ ಅಂಶಗಳ ಸಾರಾಂಶ ಈ ರೀತಿಯಿದೆ.

ತೆರಿಗೆ ನೀತಿ

ಆದಾಯಗಳ ಅಂತರವನ್ನು ಕುಗ್ಗಿಸುವ ಹಾಗೂ ಅಭಿವೃದ್ಧಿ ಕಾರ್ಯಕ್ಕೆ ಬೇಕಾಗುವ ಸಂಪನ್ಮೂಲಗಳನ್ನು ವೃದ್ಧಿಗೊಳಿಸುವಂತಹ ತೆರಿಗೆ ನೀತಿಯನ್ನು ಈ ಘೋಷಣಾ ಪತ್ರವು ಪ್ರತಿಪಾದಿಸುತ್ತದೆ. ನಗರಗಳಲ್ಲಿರುವ ಜನರ ಆದಾಯಕ್ಕೆ ಮಿತಿಹಾಕುವ ಪ್ರಶ್ನೆಯನ್ನು ಭೂಪರಿಮಿತಿ ಅಥವಾ ಗ್ರಾಮೀಣ ಆದಾಯಗಳ ಪರಿಮಿತಿಯಂತೆಯೇ ಪರಿಗಣಿಸಲಾಗುವುದಿಲ್ಲವೆಂದು ಹೇಳಲಾಗಿದೆ.

ಶಿಕ್ಷಣದ ವಿಸ್ತರಣೆ

ವ್ಯಾಪಂಗ ಯೋಜನೆದ ವ್ಯಾಪಕ ಯೋಜನೆ, ಅರ್ಹ ವಿದ್ಯಾರ್ಥಿಗಳಿಗೆ ಉಚ್ಚ ಶಿಕ್ಷಣಕ್ಕೆ ಸಾಲ ಸೌಲಭ್ಯಗಳನ್ನು ನೀಡುವುದನ್ನು ಉದ್ದೇಶಿಸಲಾಗಿದೆ. ವಿದೇಶ ವ್ಯವಹಾರಗಳ ಬಗೆಗೆ ರಾಷ್ಟ್ರದ ಸಮಗ್ರತೆ ಹಾಗೂ ಸ್ವಾತಂತ್ರ್ಯದ ಸಂರಕ್ಷಣೆಗೆ ಆದ್ಯಪ್ರಾಶಸ್ತ್ಯ ನೀಡಲಾಗಿದೆ. ಚೀನಾ ಹಾಗೂ ಪಾಕಿಸ್ತಾನಗಳ ಆಕ್ರಮಣ ವಿಮೋಚನೆಗಾಗಿ ಶಾಂತಿಯುತ ಪ್ರಯತ್ನವನ್ನು ಉಲ್ಲೇಖಿಸಲಾಗಿದೆ. ಗೋವೆಯ ಬಿಡುಗಡೆ, ಅಲ್ಜೀರಿಯದ ಹೋರಾಟಕ್ಕೆ ಬೆಂಬಲ ಇತ್ಯಾದಿ ಹೇಳಲಾಗಿದೆ

ಪೂರ್ಣ ನಿಶ್ಶಸ್ತ್ರೀಕರಣ

ಘಟ್ಟವಾಗಿಯೂದರೂ ಪೂರ್ಣ ನಿಶ್ಶಸ್ತ್ರೀಕರಣ ಸಾಧಿಸಲು ಸ್ಥಿರ ಪ್ರಯತ್ನ ನಡೆಯಬೇಕು, ಪರಮಾಣು ಅಸ್ತ್ರ ಪರೀಕ್ಷೆಗಳಿಸುನಾರಾರಂಭ ಇಂದಿನ ಮತ್ತು ಮುಂದಿನ ಪೀಳಿಗೆಗಳಿಗೆ ಹಾನಿಕರ; ಜಗತ್ತಿನ ಶಾಂತಿಗೆ ಮಾರಕ, ಸಂಘರ್ಷಕ್ಕೆ ಪೂರಕ; ಆದಕಾರಣ ಸರ್ವಥಾ ವರ್ಜ್ಯ ಎಂದು ಘೋಷಣೆಯು ಅಭಿಪ್ರಾಯಪಡುತ್ತದೆ.

ಉದ್ಯಮ ಧೋರಣೆ

೧೯೫೮ರ ಸರಕಾರದ ಉದ್ಯಮ ನೀತಿ ಘೋಷಣೆಯ ಪುನರುಚ್ಚಾರ ಮಾಡಿದ್ದು ಸರಕಾರಿ ಉದ್ಯಮ ಕ್ಷೇತ್ರದ ವಿಸ್ತರಣೆಯ ಕಡೆಗೆ ವಿಶೇಷ ಗಮನಕೊಡುವುದಾದರೂ ಖಾಸಗಿ ಹಾಗೂ ಸರಕಾರೀ ಕ್ಷೇತ್ರಗಳಲ್ಲಿ ಸಹಕಾರ ಬೇಕೆಂಬುದನ್ನು ಘೋಷಣೆಯಲ್ಲಿ ಒತ್ತಿ ಹೇಳಲಾಗಿದೆ.

ಪಾನನಿರೋಧ ನೀತಿಯನ್ನು ಮುಂದುವರಿಸುವ ಹಾಗೂ ಅದಕ್ಕೆ ಹೆಚ್ಚು ಉತ್ತೇಜನ ನೀಡುವ ಕ್ರಮವನ್ನು ಉಲ್ಲೇಖಿಸಲಾಗಿದೆ.

ಕುಟುಂಬ ಯೋಜನೆ ಹಾಗೂ ಸಂತಾನ ನಿಯಮಕ್ಕೆ ಪ್ರಾಶಸ್ತ್ಯನೀಡಿದೆ ಜನರ ಜೀವನ ಮಟ್ಟ ಏರಿಸಲು ಕಷ್ಟವೆಂದೂ ಹೇಳಲಾಗಿದೆ

ಆರ್ಥಿಕ ಪ್ರಗತಿ ಅಂತ್ಯತಃ ಶ್ರಮಿಕರ ದಕ್ಷತೆಯನ್ನೇ ಅವಲಂಬಿಸಿದೆ. ಕಾರ್ಮಿಕರ ಶಿಕ್ಷಣ ಯೋಗ ಕ್ಷೇಮಕ್ಕೆ ಮತ್ತು ಕ್ರಮಶಃ ಉದ್ಯಮಗಳ ವ್ಯವಸ್ಥಾಪನವಲ್ಲಿ ಅವರನ್ನು ಸೇರಿಸಿಕೊಳ್ಳಲು ಪ್ರಾಶಸ್ತ್ಯ ಅಗತ್ಯವೆಂದು ತಿಳಿಸಲಾಗಿದೆ.

ಭೋಗ ವಸ್ತುಗಳ ಮತ್ತು ಅಗತ್ಯವಲ್ಲದ ವಸ್ತುಗಳ ಉತ್ಪಾದನೆಯನ್ನು ಹೆಚ್ಚಿಸದೆ ಉಳಿತಾಯದ ಪ್ರವೃತ್ತಿಗೆ ಪುಟಕೊಟ್ಟರೆ ಮಾತ್ರ ರಾಷ್ಟ್ರೀಯ ಆದಾಯ ಹೆಚ್ಚುವುದು ಎಂದದರಲ್ಲಿ ಉಲ್ಲೇಖಿಸಲಾಗಿದೆ.

ಹಿಂದುಳಿದವರ ಕಲ್ಯಾಣ

ಆರ್ಥಿಕವಾಗಿ ಹಾಗೂ ಶೈಕ್ಷಣಿಕವಾಗಿ ಹಿಂದುಳಿದವರಿಗೆ ವಿಶೇಷ ಗಮನವನ್ನೂ ನಿರುದ್ಯೋಗ ನಿವಾರಣೆಗಾಗಿ ಇತರ ಉದ್ಯೋಗಗಳೊಡನೆ ಗ್ರಾಮೋದ್ಯೋಗಗಳಿಗೆ ಪ್ರೋತ್ಸಾಹದ ಕ್ರಮವನ್ನೂ ನಿಯೋಜಿಸಬೇಕು ಉದ್ಯೋಗಗಳ ಸ್ಥಾಪನೆಯ ಸಂದರ್ಭಗಳಲ್ಲಿ ಹಿಂದುಳಿದ ಪ್ರದೇಶಗಳನ್ನು ಗಮನದಲ್ಲಿ ಇರಿಸಿಕೊಳ್ಳಬೇಕು ಎಂದು ಘೋಷಣೆಯು ಸಾರುತ್ತದೆ.

ಸಹಕಾರ ಬೇಸಾಯದ ವಿಷಯದಲ್ಲಿ ಕಾಂಗ್ರೆಸ್ಸಿನ ನೀತಿಯನ್ನು ಇದರಲ್ಲಿ ದೃಢಪಡಿಸಲಾಗಿದೆ.

ಕೃಷಿ ಧೋರಣೆ

ಕೃಷಿ ಕ್ಷೇತ್ರದ ಸುಧಾರಣೆಗಳ ವೇಗ ಅನ್ವಯ ಹಾಗೂ ಆಹಾರೋತ್ಪನ್ನ ಪ್ರಮಾಣವನ್ನು ಹೆಚ್ಚಿಸುವ ಅಗತ್ಯವನ್ನು ಘೋಷಣೆಯಲ್ಲಿ ಒತ್ತಿ ಹೇಳಲಾಗಿದೆ. ಆಧುನಿಕ ಕೃಷಿ ಪದ್ಧತಿಯನ್ನು ರೂಢಿಗೆ ತರಬೇಕೆಂದೂ ವಿವರಿಸಲಾಗಿದೆ.

ಸ್ವಾತಂತ್ರ್ಯಾನಂತರದ ರಾಜಕೀಯ, ಸಾಮಾಜಿಕ, ಆರ್ಥಿಕ ಪ್ರಗತಿಯನ್ನು ಘೋಷಣಾಪತ್ರ ವಿಮರ್ಶಿಸಿದೆ. ಜಾತಿವಾದ ಕಂದಾಚಾರದ ಪದ್ಧತಿಗಳನ್ನು ತೊರೆಯಲು ಕರೆ ಕೊಡಲಾಗಿದೆ.

ಪಂಚಾಯತ ರಾಜ್ಯ

ಹಳ್ಳಿಗಳ ಜನರಿಗೆ ಅಧಿಕಾರ ವಿಕೇಂದ್ರೀಕರಣ ಮಾಡಿಕೊಡುವ ಪಂಚಾಯತ ರಾಜ್ಯದ ಚಳವಳಿಯ ಅಗಾಧ ಅವಕಾಶಗಳನ್ನು ಒತ್ತಿ ಹೇಳಿ ಕಾಂಗ್ರೆಸ್ ಹಿಂದೆಯೂ ಮುಂದೆಯೂ ಸಂಧಾತೀತ ಲೌಕಿಕ ಸ್ವರೂಪದ ಭಾರತದ ನಿರ್ಮಾಣಕ್ಕೆ ಒದ್ದೆವೆಂದು ಸಾರಲಾಗಿದೆ.

(‘ಕಾಂಗ್ರೆಸ್ ಸಂದೇಶ’ದ ಕೃಪೆಯಿಂದ)

ಕಾಶ್ಮೀರದ ಮರದ ಕೆತ್ತನೆ ಕೆಲಸಗಾರನೊಬ್ಬನು ತಾನು ತಯಾರಿಸಿದ ವಸ್ತುಗಳೊಂದಿಗೆ ಇರುವುದನ್ನೂ, ಹಿಂಭಾಗದಲ್ಲಿ ಆಕ್ರೋಡು ಮರದಿಂದ ತಯಾರಿಸಿದ ಪರದೆಯೊಂದನ್ನೂ ಚಿತ್ರದಲ್ಲಿ ಕಾಣಬಹುದು.

ಕೊಪ್ಪೊರೇಶನ್ ಬೇಂಕ್

ರೇವಣಾತಿಗಳ ಮೇಲಿನ ಸಾಲಿಯೊನ್ ಶೇಕಡಾ ಬಡ್ಡಿ ದರಗಳು

3	ಸೇವಿಂಗ್ಸ್ ಬೇಂಕ್ ಖಾತೆ
3 ಯಿಂದ 5¼	ಕಾಯಂ (ವಿವಿಧಾವಧಿಗಳಿಗೆ)
5¼	ವಜ್ರೋತ್ಸವ
5	ಕ್ಯುಮುಲೇಟಿವ್

ದಿ. ಕೆನರಾ ಬೇಂಕಿಂಗ್ ಕೊಪ್ಪೊರೇಶನ್ ಲಿಮಿಟೆಡ್

(ಸ್ಥಾಪನೆ: 1906)

ರಿಜಿಸ್ಟರ್ಡ್ ಆಫೀಸು: ಉಡುಪಿ | ಆಡಳಿತ ಆಫೀಸು ಮಂಗಳೂರು

ಕಾರ್ಕಳ ಡಿ. ಮು. ಕೋರ್ಟಿನಲ್ಲಿ.

O S No 349/1961.

ಕಾಶ್ಮೀರ ಸಿಂಡೋ —ವಾದಿ

ಕೊರಗ ಪೂಜಾರಿ ಓಬಯ್ಯ ಪೂಜಾರಿ ಅಳಿಯ ಕಾರ್ಕಳ ತಾಲೂಕು ಪಾಲ್ಪಾಡಿ ಗ್ರಾಮದ ನಾಪಟ್ಟು ಯೆಂಬಲ್ಲಿರುವವ—ಪ್ರತಿವಾದಿ

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ವಾದಿಗೆ ಪ್ರತಿವಾದಿಯು ಬರಕೊಟ್ಟ ಡಿಮಾಂಡು ಪ್ರಾಮಿಸರಿ ನೋಟಿನ ಮೇರೆಗೆ ಬಾಕಿ ಅಸಲು ಬಡ್ಡಿ ಖರ್ಚು ಬರಕೊಡುವರೆ ವಾದಿಯು ಮಾಡಿದ ಸದ್ರಿ ದಾವೆಯು ತಾ. 21-10-1961ಕ್ಕೆ ಆಯ್ಕೆರು ತನ್ನ ಒಕ್ಕೆ ಇಟ್ಟಿರುವುದರಿಂದ ಸದ್ರಿ ದಾವೆಯಲ್ಲಿ ನೀವು ಉದಾಹರಿಸುವುದಿದ್ದರೆ ಸದ್ರಿ ದಿನ ಬೆಗಲು 10 ಘಂಟೆಗೆ ಮೇಲ್ಕಾಣಿಸಿದ ಕೋರ್ಟು ಮುಂದೆ ಹಾಜ್ರಾಗಿ ಉದಾಹರಿಸತಕ್ಕದ್ದು; ತಪ್ಪಿದರೆ ನಿಮ್ಮ ಗೈರುಹಾಜ್ರಿಯಿಂದ ಸದ್ರಿ ದಾವೆಯ ವಾದಿಯ ಗುಣಕ್ಕೆ ತೀರ್ಮಾನಿಸಲ್ಪಡುವುದು ಎಂಬ ಸಂಗ್ತಿ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಸೋಣಾಗಿಯದೆ.

L. Pereira,

ವಾದಿಯ ಎಟ್ಟೊರ್ನೇಟ್.

ಕಾರ್ಕಳ, ತಾ. 9-10-1961.

ನವಯುಗ ವಾರ ಪತ್ರಿಕೆಗೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ

ನವಯುಗ

ವರುಷ ೪೧	ಉಡುಪಿ ೧೨-೧೦-೬೧	ವಾರ ೬

ತುಟಿ ಮೀರಿದ ಮಾತು

ಬೆಂಗಳೂರಿನಲ್ಲಿ ನಡೆದ ರಾಜ್ಯ ಮಹಿಳಾ ಪರಿಷತ್ತು ಇತರ ಸಾಮಾನ್ಯ ಪರಿಷತ್ತುಗಳ ಮಾದರಿಯಲ್ಲಿಯೇ ನಡೆಯಿತಾದರೂ ಸ್ತ್ರೀಯರು ಪುರುಷರಿಗಿಂತ ಯಾವುದರಲ್ಲೂ ಕಡಿಮೆಯಿಲ್ಲವೆಂದು ಶ್ರೀಮತಿ ಪ್ರಮೀಳಾಎಂಬವರು ಮಾತನಾಡಿದರೆಂಬ ವರದಿ ಬಂದಿದೆ. ತೃತೀಯ ಪಂಚವಾರ್ಷಿಕ ಯೋಜನೆಯಲ್ಲಿ ಮಹಿಳೆಯರು ನರ್ಸ್, ಶಿಕ್ಷಕಿಯರು ಮಾತ್ರ ಆಗಿ ಭಾರಿ ಭಾರಿ ಹುದ್ದೆಗಳನ್ನು ಪುರುಷರಿಗೆ ಬಿಟ್ಟುಕೊಡುವುದು ಅನ್ಯಾಯವೆಂದು ಅವರು ವಾದಿಸಿ ಜಗತ್ತು ಪುರುಷ ಪಕ್ಷಪಾತಿಯೆಂದು ಆರೋಪಿಸಿದಾಗ ಸಭಿಕರು ಮಾತ್ರವಲ್ಲ, ವರದಿಯೋದುವ ಪಾಠಕರೂ ಚಕಿತರಾಗಬೇಕು.

ಮಹಿಳೆಯರು ಯಾವುದೇ ರೀತಿಯಲ್ಲಿ ಪುರುಷರಿಗಿಂತ ಕೀಳಲ್ಲವೆಂದು ಪ್ರಪಂಚದ ಆದಿಯಲ್ಲೇ ಸಿದ್ಧವಾಗಿದೆ. ಅದೇ ತರದ ಉಚ್ಚ ಭಾವನೆಯು ಇಂದಿನವರೆಗೂ ಉಳಿದು ಬಂದಿದೆ; ಮುಂದೆಯೂ ಉಳಿಯುತ್ತದೆ. ಆದರೆ, ಮಕ್ಕಳನ್ನು ಹೆತ್ತು ಅವರನ್ನು ದೊಡ್ಡವರನ್ನಾಗಿಗಿ ಮಾಡುವ ಹೊಣೆಗಾರಿಕೆಯು ಮಹಿಳೆಯರ ಪಾಲಿನ ಮಹಾ ಪದವಿ- ಸೃಷ್ಟಿಯ ವಿಧಿಯಿದು. ಸ್ವಭಾವ ಸಿದ್ಧವಾಗಿ ಮಕ್ಕಳ ಮನಸ್ಸನ್ನು ಪರಿಚಯ ಮಾಡಿಕೊಳ್ಳುವ ಶಕ್ತಿ ಅವರಲ್ಲಿದೆಯೆಂತಲೇ ಅವರು ಪ್ರಾಥಮಿಕ ಶಿಕ್ಷಕಿಯರಾಗಲು ಸಮರ್ಥರು; ಹಾಗೆಯೇದಯಾಪೂರ್ವ ಅಂತಃಕರಣವುಳ್ಳವರು ಅವರಾದುದರಿಂದ ರೋಗಿಯು ಉಪಚಾರಕಾರ್ಯ ಅವರಿಂದ ಉಚ್ಚ ರೀತಿಯಲ್ಲಿ ಆಗಬಹುದು— ಎಂಬಅಭಿಪ್ರಾಯ ವ್ಯಕ್ತವಾಗಿದ್ದರೆ ಅದು ತಪ್ಪಲ್ಲ. ಇಷ್ಟರಿಂದಲೇ ಉದ್ರಿಕ್ತಗೊಂಡು ಆವೇಶಯುತವಾಗಿ ಮಾತನಾಡುವುದರಿಂದ ಸ್ವಯಂ ಮಹಿಳೆಯರ ಉದ್ಧಾರವಾಗುವುದಿಲ್ಲ. ಭೌತಿಕವಾಗಿ ಅಬಲೆಯರಾದ ಮಹಿಳೆಯರು ಬೌದ್ಧಿಕವಾಗಿ ಅಬಲೆಯರೆಂದು ಯಾರೂ ಒಬ್ಬ ವಿವೇಕಿಯೂ ಅನ್ನಲಾರನು. ಪುರಾಣ ಕಾಲದ ವೀರ ಮಹಿಳೆಯರನ್ನು ಬಿಟ್ಟರೂ ಇತಿಹಾಸಾವಧಿಯ ಕೆಚ್ಚೆದೆಯ ರಮಣಿಯರನ್ನು ಯಾರೂ ಮರೆಯಲಾರರು. ಆವಶ್ಯಕ ಶಿಕ್ಷಣ, ಅನುಭವಗಳನ್ನು ಗಳಿಸಿದ ಮಹಿಳೆಯರಿಗೆ ಉನ್ನತ ಪದವಿಯು ಸಿಕ್ಕೇ ಸಿಕ್ಕುವುದು. ಆದರೆ, ನಮ್ಮ ಮಹಿಳೆಯರಲ್ಲಿ ಉನ್ನತ ಪದವಿಗೆ ತಕ್ಕಷ್ಟು ವಿದ್ಯಾರ್ಹತೆ ಪಡೆದವರು ಎಷ್ಟು ಮಂದಿ, ಇವರಲ್ಲಿ ಉನ್ನತ ಪದವಿಯನ್ನು ಬಯಸುವವರೆಷ್ಟು, ಬಯಸುವವರಲ್ಲಿಯೂ ಸ್ವೀಕರಿಸುವವರೆಷ್ಟು, ಇವರಲ್ಲಿಯೂ ಪದವಿಯನ್ನು ಹಸನಾಗಿ ನಿರ್ವಹಿಸುವವರೆಷ್ಟು ಎಂಬ ಪ್ರಶ್ನೆಗಳನ್ನೆ ಉತ್ತರಿಸಿದ್ದರೆ, ಶ್ರೀಮತಿ ಪ್ರಮೀಳೆಯವರು ಉದ್ರಿಕ್ತರಾಗುವ ಸಂದರ್ಭ ಬರುತ್ತಿರಲಿಲ್ಲ. ಭಾರತದಲ್ಲಿ ಮಹಿಳಾ ಶಿಕ್ಷಣದತ್ತ ತೀವ್ರ ಗಮನವಿಡೀಗ ತಾನೇ ಹರಿಯ ತೊಡಗಿದ. ಆದರೂ ಪ್ರಾಥಮಿಕ ಮಾಧ್ಯಮಿಕ ಹಂತಗಳಲ್ಲಿಯೇ ಶಿಕ್ಷಣವನ್ನು ಶಿಲಾರ್ಪಣಗೊಳಿಸುವವರ ಸಂಖ್ಯೆಯೇ ಹೆಚ್ಚು. ಮಹಿಳೆಯರೇ ಉನ್ನತ ಪದವಿಗಳನ್ನು ಪಡೆಯಲು ಮುಂದೆ ಬರಬೇಕು; ಅವರನ್ನು ಬೇರೆಯವರ ಮುಂದೆ ದೂಡುವುದಲ್ಲ. ಯೋಗ್ಯತೆ—ಸಾಮರ್ಥ್ಯಗಳಿರುವಲ್ಲಿ ಪದವಿಗಳು ತಾನಾಗಿಯೇ ಅರಿಸಿಕೊಂಡು ಬರುತ್ತವೆ. ಸುಗಂಧ ಭರಿತವಾದ ಹೂವು ತಾನಾಗಿ ಮುಡಿಗೇರ ಬೇಕೆಂದು ಅರಸಿಕೊಂಡು ಬರುವುದಿಲ್ಲ ಅದನ್ನು ಮುಡಿವ ಮಹಿಳೆಯೇ ಅದನ್ನು ಅರಸಿಕೊಂಡು ಹೋಗ ಬೇಕಾಗುತ್ತದೆ. ಮಹಿಳೆಯರಾದರೂ ಹಿಂಜರಿಯದೆ ಸಮರ್ಥರೀತಿಯಿಂದ ದುಡಿಯುವವರಿದ್ದಾರೆ. ಶ್ರೀಮತಿ ಇಂದಿರಾ ಗಾಂಧಿಯವರು ಕಾಂಗ್ರೆಸ್ ಅಧ್ಯಕ್ಷರಾಗಲಿಲ್ಲವೆ? ಶ್ರೀಮತಿ ಸುಚೇತ ಕೃಪಲಾನಿಯವರು ಕಾಂಗ್ರೆಸ್‌ಕಾರ್ಯದರ್ಶಿನಿಯಾಗಲ್ಲಿಲ್ಲವೇ? ವಿಜಯಲಕ್ಷ್ಮಿ ಪಂಡಿತ್ ರಾಯಭಾರಿಯಾಗಿ ಸೇವೆಸಲ್ಲಿಸುತಿದ್ದಾರೆ. ಪದ್ಮಜಾ ನಾಯ್ಡು, ಸರೋಜಿನಿ ಸೇವಿಯವರು ಇಡಿಯ ವಿಶ್ವದಲ್ಲಿ ಕೀರ್ತಿ ಗಳಿಸಿದ್ದಾರೆ. ಇವರು ಪುರುಷರಲ್ಲವಷ್ಟೆ? ಪ್ರಧಾನ ಮಂತ್ರಿ ಪದವನ್ನೂ ನಿರ್ವಹಿಸುವ ಶಕ್ತಿಯಿದೆಯೆಂದು ಸಿಂಹಳ ಲೋಕಕ್ಕೆ ಸಾರಿ ಹೇಳಿದೆ.

ಮಹಿಳೆಯರ ಸಂಖ್ಯೆಗನುವಾದ ಪ್ರಮಾಣದಲ್ಲಿ ಹುದ್ದೆಗಳಲ್ಲಿ ಅವರು ವಿರಾಜಿಸುತ್ತಿಲ್ಲವೆಂಬುದು ಒಪ್ಪತಕ್ಕ ಮಾತೇ. ಆದರೆ, ಇದಕ್ಕಾಗಿ ಪುರುಷರೊಡನೆ ಪೈಪೋಟಿ ನಿಲ್ಲುವುದಾಗಲಿ, ಅವರನ್ನು ಕಡಿಮೆ ಮಾಡುವುದಾಗಲಿ ಅಗತ್ಯವಿಲ್ಲ.. ತಮಗೆ ಪದವಿಯಿಲ್ಲವೆಂದು ಕೊರಗಿದರೂ ಪ್ರಯೋಜನವಿಲ್ಲ. ಮಹಿಳೆಯರ ಪ್ರಾಪ್ತತ್ತು ಮಹಿಳೆಯರಿಗೆ ಸರಿಯಾದ ಬೋಧನೆ ಕೊಡಬೇಕು; 'ಉದ್ಧರೇದಾತ್ಮನಾತ್ಮಾನಂ ನಾತ್ಮಾನಾಮವಸಾದಯೇತ್' ಎಂಬ ಗೀತಾ ವಾಕ್ಯವನ್ನೆವರು ಸರಿಯಾಗಿ ಅರ್ಥಮಾಡಿಕೊಳ್ಳಬೇಕು. ಅದಿಲ್ಲದೆ ಮನೋವಿಕಾರದಿಂದ ವರ್ತಿಸಿದಾಗ ಉದುರುವ ಉದ್ಗಾರ 'ತುಟಿ ಮೀರಿದುದು' ಎಂದು ಹೇಳಲೇಬೇಕಾಗುತ್ತದೆ.

ಆಯ್ಕೆಯ ಪ್ರಶ್ನೆ

ಚುನಾವಣೆಗಳು ಸಮೀಪವಾಗುತ್ತಬಂದಂತೆ ರಾಜಕೀಯ ಕ್ಷೇತ್ರದ ಪ್ರಕ್ಷುಬ್ಧತೆಯು ಹೆಚ್ಚುತ್ತ ಬರುತ್ತಿದೆ. ದೇಶದ ಹಿರಿಯ ರಾಜಕೀಯ ಪಕ್ಷವಾದ ಕಾಂಗ್ರೆಸ್ಸು ತನ್ನ ಹುರಿಯೊಳುಗಳನ್ನು ಅರಿಸಲಾಗ ಜಾಗರೂಕತೆ ವಹಿಸಬೇಕು ಎಂದು ನಿರ್ಧರಿಸಲಾಗಿತ್ತು. ಆದರೆ, ಇತ್ತೀಚೆಗೆ ಅಲ್ಲಲ್ಲಿ ಈಸಂಬಂಧದಲ್ಲಿ. ನಡೆದ ಘಟನೆಗಳಿಂದ ಜಾಗರೂಕತೆಗೆ ಬದಲಾಗಿ ಅಜಾಗರೂಕತೆಯೇ ಹೆಚ್ಚಾಗಿದೆಯೆಂಬ ಸಂದೇಹಕ್ಕೆ ಆಸ್ಪದವಿದೆ. ಕಾಂಗ್ರೆಸ್ ಟಿಕೇಟುಗಳಿಗಾಗಿ ಅರ್ಜಿ ಸಲ್ಲಿಸಿದವರು, ಇವರಲ್ಲಿ ಜಿಲ್ಲಾ ಕಾಂಗ್ರೆಸ್ಸು ಸಿಫಾರಸು ಮಾಡಿದವರು—ಈ ಸಿಫಾರಸಿಗೆ ಪ್ರತಿಯಾಗಿ ಸಿಫಾರಸುಗಳು—ಎಂದು ಮೊದಲಾಗಿ ಹೋರಾಟಕ್ಕೆ ಕಾಂಗ್ರೆಸ್ಸಿನ ಒಳಗೆ ಅಸ್ಪದ ಒದಗಿ ಬಂದಿದೆ. ಯಾರು ಯಾರು ಅರ್ಜಿ ಸಲ್ಲಿಸಿದ್ದಾರೆ. ಯಾರು ಯಾರನ್ನು ಯಾರು ಸಿಫಾರಸು ಮಾಡಿದ್ದಾರೆ ಎಂದು ಮೊದಲಾದ ವಿವರಗಳು—ಈ ಸಂಬಂಧದ ಪ-ಪ್ರತಿವಾದಗಳು ನಿಶ್ಶಪ್ರತಿಯೆಂಬಂತೆ ನಡೆಯತೊಡಗಿವೆ. ಕಾಂಗ್ರೆಸ್ಸಿನ ಮಟ್ಟಿಗೆ ಅಂತಿಮ ಪಟ್ಟಿಯನ್ನು ಕೇಂದ್ರ ಚುನಾವಣಾ ಸಮಿತಿಯು ಮಾಡುವುದರಿಂದ ಯೋಗ್ಯನಾದ ಹುರಿಯೊಳನ್ನು ಆರಿಸಲು ಅನುಕೂಲವಾಗುವಂತೆ ನಡೆಯುವ ಯಾವತ್ತೂ ಶಿಫಾರಸುಗಳು ಗುಪ್ತವಾಗಿಯೇ ಇರಬೇಕು ಎನ್ನಿಸುತ್ತದೆ. ಇದರಿಂದ ಪರೀಕ್ಷೆಗೆ ಬರೆದು ಬಂದ ವಿದ್ಯಾರ್ಥಿ ಫಲಿತಾಂಶದ ನಿರೀಕ್ಷೆಯಲ್ಲಿರುವಂತೆ ಅರ್ಜಿದಾರನು ಕುತೂಹಲದಿಂದಿರುತ್ತಾನೆ. ರಹಸ್ಯವು ರಹಸ್ಯವಾಗಿಯೇ ಉಳಿದು ಅಂತಿಮ ನಿರ್ಣಯಕ್ಕಾತ ತಲೆಬಾಗಿಯೇ ಬಾಗುತ್ತಾನೆ. ಇದನ್ನೂ ಬಿಟ್ಟು ಈ ಬಾರಿಯಂತೆ ನಡೆದರೆ, ಧಾರವಾಡ ಜಿಲ್ಲೆಯಲ್ಲಿ ಮಾತ್ರವಲ್ಲ ಎಲ್ಲ ಕಾಂಗ್ರೆಸ್ ಕಚೇರಿಗಳೂ ಪಾಲುಗೊಳ್ಳುವುದು ಖಂಡಿತ. ಮುಂದಾದರೂ ಇತ್ತ ಲಕ್ಷ್ಯ ಹರಿಸಬೇಕು.

ಜಗತ್ಪರ್ಯಟನೆ

ಪ್ರಧಾನಿ ನೆಹರು

ಹಳೆಯ ಮಾತುಗಳೂ ಹೊಸತಾಗುವುದಿದೆ. ಭಾರತದ ಪ್ರತಿಯೊಂದು ಘಟನೆಯ ಬಗ್ಗೆ ಆಳವಾದ ಚಿಂತನೆ ನಡೆಸುವ ನೆಹರುರವರಿಗೆ ಗೀತೆಯ ನಿಷ್ಕಾಮ ಕರ್ಮದ ಅರ್ಥದಲ್ಲಿ ಯಥಾರ್ಥತೆಯಿದೆಯೆನಿಸಿದೆ. ಶಕ್ತಿಮೀರಿದ ಪ್ರಯತ್ನದಿಂದ ಕೊಟ್ಟ ಶಿಕ್ಷಣ ಮತ್ತು ತರಬೇತಿಯ ಪ್ರಯೋಜನವೇಕೆ ಸಿಗಲಿಲ್ಲ? ನಮ್ಮಲ್ಲಿರುವ ಕುಂದುಕೊರತೆಗಳಾವುವು ಎಂಬ ಅವರ ಪ್ರಶ್ನೆಗೆ "ಕರ್ಮಣ್ಯೇವಾಧಿಕಾರಸ್ತೇ ಮಾಫಲೇಷು ಕದಾಚನ" ಎಂಬ ಗೀತೋಪದೇಶವೇ ಸಮಾಧಾನ ತಂದುಕೊಡುತ್ತಿದೆ.

ಯೋಜಕ ನೆಂದಾ

ಗುಲ್ಜಾರೀಲಾಲನಂದಾರು ಯೋಜನೆಯನ್ನೇನೋ ಯಶಸ್ವಿಯಾಗಿ ರೂಪಿಸಬಲ್ಲರು. ಆದರೆ, ಅದರ ಪರಿಣಾಮಕಂಡು ಅವರೇ ನಿರ್ಜೀವರಾಗುವರು. ಉದ್ಯಮಗಳನ್ನು ಹೆಚ್ಚಿಸಿ ನಿರುದ್ಯೋಗ ಸಮಸ್ಯೆಯನ್ನು ಹೋಗಲಾಡಿಸಬಹುದೆಂದವರು ಯೋಜಿಸಿದ್ದರು. ಉದ್ಯಮಗಳೂ ಬೆಳೆದಿವೆ; ಉದ್ಯೋಗಗಳೂ ಹೆಚ್ಚಿವೆ. ಆದರೆ, ನಿರುದ್ಯೋಗಿಗಳ ಸಂಖ್ಯೆದಿನದಿನಕ್ಕೆ ಹೆಚ್ಚುತ್ತಿದೆ; ರೂಪಿಸಿದ ಯೋಜನೆ ನಿರೀಕ್ಷಿತ ಪರಿಣಾಮ ಕೊಡುವುದಿಲ್ಲ ಎಂಬ ಚಿಂತೆ ಅವರಿಗೆ.ನಮ್ಮ ಅಂಕೆ ಸಂಖ್ಯೆಗಳೆಲ್ಲಾ ತಲೆಕೆಳಗಾಗುತ್ತಿರುವುದೇ ನಂದಾರ ತಲೆಕೆಡಲು ಮುಖ್ಯ ಕಾರಣ ವಾಗಿದೆ

ನೀರೋಗಿ ಕರಮರಕರ

ಕೇಂದ್ರದ ಆರೋಗ್ಯ ಮಂತ್ರಿ ದ. ಪ. ಕರಮರಕರರು ಡಾಕ್ಟರರಲ್ಲವಾದರೂ ಆರೋಗ್ಯ ಮಂತ್ರಿ ಶಾಖೆಯನ್ನು ಪ್ರಧಾನಿಗಳಿಗೆ ತೃಪ್ತಿತರುವಂತೆ ನಡೆಸಿಕೊಂಡು ಬಂದಿರುತ್ತಾರೆ. ತೃತೀಯ ಪಂಚವಾರ್ಷಿಕ ಯೋಜನೆಯ ಪ್ರಚಾರದ ಬಗ್ಗೆ ಉಪನ್ಯಾಸಮಾಲೆಯನ್ನಾರಂಭಿಸಬೇಕು ಎಂದವರು ಇತ್ತೀಚಿಗಿನ ತಮ್ಮ ಸಂಚಾರವಧಿಯಲ್ಲಿ ಕೇಳಿಕೊಂಡಿದ್ದಾರೆ.ತನ್ನ ಮತದಾರಕ್ಷೇತ್ರದಿಂದ ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಟಿಕೇಟು ಪಡೆಯಲು ಅರ್ಜಿ ಹಾಕಿದ್ದರೂ ಜಿಲ್ಲಾ ಕಾಂಗ್ರೆಸ್ಸು ಅವರನ್ನು ಸಿಫಾರಸು ಮಾಡಲಿಲ್ಲ. ಹೀಗಿದ್ದರೂ ಇನ್ನೊಂದುಸಂಗಡದವರಪಟ್ಟಿಯಲ್ಲಿ ಇವರ ಹೆಸರಿದೆಯೆಂಬುದೇ ಸಂತೋಷ. ವ್ಯಕ್ತಿ ಹಿರಿಯನಾಗಿದ್ದರೆ ಸಾಲದು, ಆತನ ಬುದ್ಧಿಯೂ ಹಿರಿಯದಾಗಿರ ಬೇಕಾಗುತ್ತದೆ.

ವಿತ್ತಪ ದೇಸಾಯಿ

ಮುಂಬಯಿ ರಾಜ್ಯದ ಮುಖ್ಯ ಮಂತ್ರಿ ಪದವಿಯನ್ನು ನಿರ್ವಹಿಸುವುದರಲ್ಲಿ ಅಯಶಸ್ವಿಯಾದರೂ ಕೇಂದ್ರದವಿತ್ತ ಮಂತ್ರಿ ಶಾಖೆಯನ್ನು ಹೊಂದಿಸಿಕೊಂಡು ಹೋಗುವಲ್ಲಿ ಮೊರಾರ್ಜಿ ದೇಸಾಯಿಯವರು ಛಲೆಯನ್ನಿಸಿಕೊಂಡಿದ್ದಾರೆ. ತೃತೀಯ ಪಂಚವಾರ್ಷಿಕ ಯೋಜನೆಯನ್ನು ಯಶಸ್ವಿಯಾಗಿ ಪ್ರಾರಂಭಿಸಲು ಬೇಕಾಗುವ ಹಣವನ್ನು ಕೂಡ ಹಾಕುವ ಉದ್ದೇಶದಿಂದ ವಿದೇಶ ಯಾತ್ರೆಮಾಡಿ ಈಗ ತಾನೇ ಇವರು ಸ್ವದೇಶಕ್ಕಾಗಮಿಸಿರುವರು. ಮುಖ್ಯವಾಗಿ ಕೆನ್ನಡಿ ಸರಕಾರ ಭಾರತಕ್ಕೆ ಅನುಕೂಲ ಅಭಿಪ್ರಾಯದಿಂದಿದೆ ಎಂತಲೇ ಅದರ ದೇಣಿಗೆಯು ಎಂದಿನಂತೆ ಬ್ರಹತ್ಪರಿಮಾಣದಲ್ಲಿರುವುದು.

ಧ್ರುವ ಪ್ರಣಯಿಗಳು

ಡಾಗ್ ಹೆಮ್ಮರ್ ಶೆಲ್ಡರ ಮೃತ್ಯುವಿನಿಂದ ತೆರವಾದ ಹುದ್ದೆಗೆ ಅವರಂತಹ ಮತ್ತೊಬ್ಬ ವ್ಯಕ್ತಿಯನ್ನು ಆರಿಸುವುದು ಅಸಾಧ್ಯವಿದೆ. ಆದರೂ ಖಾಲಿಬಿದ್ದಿರುವ ಸ್ಥಾನವನ್ನು ಪೂರ್ತಿಮಾಡಿಕೊಳ್ಳುವುದು ಸಾಧ್ಯವಿಲ್ಲದಿಲ್ಲ. ರಶ್ಯನ್- ಅಮೆರಿಕನ್ ಧುರೀಣರಲ್ಲಿ ತಾತ್ಕಾಲಿಕ ಪ್ರಧಾನ ಕಾರ್ಯದರ್ಶಿಯೊಬ್ಬನನ್ನು ಆರಿಸುವ ಬಗ್ಗೆ ಸಾಮಾನ್ಯ ಒಮ್ಮತವಾಗಿದೆಯೆಂಬುದು ನಿರಾಶಾಂಧಕಾರದಲ್ಲಿ ಆಶೆಯ ಜ್ಯೋತಿಯನ್ನು ಮಿಂಚಿಸುತ್ತಿದೆ. ಆದರೆ, ಇನ್ನು ಆರಿಸ ಬೇಕಾದ ವ್ಯಕ್ತಿಯಾರಾಗಬೇಕೆಂಬ ಬಗ್ಗೆ ವಿವಾದಕ್ಕೆಡೆ ಯಾಗದಿದ್ದರೆ, ಅದೇ ಸಂತೋಷ. ರಶ್ಯನ್ ಮೂವರು ಪ್ರಧಾನ ಕಾರ್ಯದರ್ಶಿಗಳ ಯೋಜನೆಯನ್ನು ತ್ಯಜಿಸುವಂತೆಮಾಡಿದ್ದರ ಶ್ರೇಯಸ್ಸು ಭಾರತ ನಿಯೋಗದ ನಾಯಕ ಶ್ರೀ ವಿ. ಕೆ. ಕೃಷ್ಣ ಮೆನನ್ನರಿಗೆ ಸಲ್ಲಬೇಕಾಗಿದೆ ಎಂದು ವಿಶ್ವ ಸಂಸ್ಥೆ ವಲಯಗಳು ಅಭಿಪ್ರಾಯಪಟ್ಟಿವೆ.

ಸಂತ್ಯಪ್ತ ಜತ್ತಿ

ಕರ್ನಾಟಕದ ಮುಖ್ಯ ಮಂತ್ರಿ ಬಿ.ಡಿ. ಜತ್ತಿಯವರು ಆಕಾರದಲ್ಲಿ ಕುಳ್ಳರಾದರೂ ಇದೇ ಅವರಿಗೆ ಆ ಪದವಿಯನ್ನು ನಿರ್ವಹಿಸುವುದರಲ್ಲಿ ಸಹಾಯಕವಾಯ್ತು. ವಿಶಾಲವಾದ ಕರ್ನಾಟಕವು ಭಾರತದ ವಿಸ್ತೀರ್ಣದ ಸೇ. ೬||ರಷ್ಟಿದೆ; ಜನ ಸಂಖ್ಯೆಯು ೫||ಯಷ್ಟಿದೆ; ನಮ್ಮ ರಾಜ್ಯದ ಆದಾಯದ ಪಾಲು ೪|| ಆಗುತ್ತದೆ. ಆದರೆ, ಯೋಜನೆಯಲ್ಲಿ ನಮ್ಮ ಪಾಲಿಗೆ ಸೇ. ೨||ದೊರೆತಿದೆ. ಈ ವೈಷಮ್ಯವೇಕೆ? ಹಾಸಿಗೆ ಇದ್ದಷ್ಟು ಕಾಲು ಚಾಚ ಬೇಕೆಂಬುದು ಜತ್ತಿಯವರ ಇಚ್ಛೆ. ನಮ್ಮ ರಾಜ್ಯದ ಹೆಸರು ಇನ್ನೂ "ಮೈಸೂರು" ಎಂದಿದ್ದು ಯೋಜನೆಯಲ್ಲಿ ಹಳೆಯ ಮೈಸೂರಿನ ವಿಸ್ತೀರ್ಣ ಜನಸಂಖ್ಯೆ, ರಾಷ್ಟ್ರದಾಯಗಳಿಗನುಸಾರವಾಗಿಯೇ ಪಾಲು ದೊರೆತಿದೆ. ನಮ್ಮ ಭಾವನೆ ಕರ್ನಾಟಕವೆನ್ನುವಷ್ಟು ವಿಶಾಲವಾಗದಿದ್ದರೆ, ನಮ್ಮ ಬಗ್ಗೆ ಯಾರೂ ಉದಾರವಾಗಿ ವರ್ತಿಸುವುದಿಲ್ಲ. ರಾಜ್ಯದ ಸ್ಥಿತಿಗನುಗುಣವಾದ ಬೇಡಿಕೆ ಮುಂದಿಟ್ಟು ವತ್ತಾಯ ಪಡಿಸದಿದ್ದರೆ, ಕೇಂದ್ರ ಸರಕಾರವೂ ಕೊಡುವುದಿಲ್ಲ. ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸದಿದ್ದರೆ, ಕರ್ನಾಟಕದ ಲೆಕ್ಕಾಚಾರ ಹೇಗಿದ್ದೀತು?

ಅಲ್ಲಲ್ಲಿಯ ಸುದ್ದಿಸಾರ

ಮಹಾ ನವಮಿ ಉತ್ಸವ—ಮಂಗಳೂರು ಕುದ್ರೋಳಿಯಲ್ಲಿರುವ ಶ್ರೀ ಗೋಕರ್ಣನಾಥ ಕ್ಷೇತ್ರದಲ್ಲಿ ವರ್ಷಂಪ್ರತಿ ಆಚರಿಸಲ್ಪಡುವ ಮಹಾನವಮಿ ಉತ್ಸವವು ಇದೇ ತಾ. 10ರಿಂದ ತಾ. 18ರ ವರೆಗೆ ಜರಗಲಿರುವುದು. ಈ ಪುಣ್ಯ ದಿನಗಳಲ್ಲಿ ನಡೆಯುವ ಎಲ್ಲಾ ಪೂಜೆ ಮತ್ತು ಉತ್ಸವಗಳಿಗೂ, ತಾ. 15ರಂದು ಮಧ್ಯಾಹ್ನ ಜರಗುವ ಶಾರದಾ ಪ್ರತಿಷ್ಠೆಗೂ, ತಾ. 19ನೇ ರಾತ್ರೆ 10 ಗಂಟೆಗೆ ನಡೆಯುವ ಶಾರದಾ ವಿಸರ್ಜನಾ ಸಮಾರಂಭಕ್ಕೂ ಎಲ್ಲರೂ ಚಿತ್ತೈಸಿ ದೇವತಾ ಕಾರ್ಯಗಳು ಸಾಂಗವಾಗಿ ನೆರವೇರುವಂತೆ ಸಹಕರಿಸಬೇಕೆಂದೂ ಆಡಳಿತಾ ಮಂಡಳಿಯವರು ವಿನಂತಿಸುತ್ತಾರೆ.

ಸತ್ಕಾರ ಸಮಾರಂಭ—ಅಮೆರಿಕದಿಂದ ಹಿಂತಿರುಗಿ ಬಂದಿರುವ ಪೈಲ್ರೋಗ ತಜ್ಞರಾದ ಡಾ. ಬಾಲಕೃಷ್ಣ ಹೆಗ್ಡೆ M. S. ಅವರನ್ನು ಸತ್ಕರಿಸಲು ಉಡುಪಿಯ ಹನುಮಾನ್ ಟ್ರಾನ್ಸ್‌ಪೋರ್ಟ್ ಕಂಪೆನಿಯಲ್ಲಿ ಶ್ರೀ ಯು. ಎಸ್. ನಾಯಕ್, ಎಮ್. ಎಲ್. ಎ ರವರ ಅಧ್ಯಕ್ಷತೆಯಲ್ಲಿ ಸಮಾರಂಭವೊಂದು ತಾ. 2 ರಂದು ಜರಗಿತು. ಶ್ರೀ ಪಿ. ಆರ್. ನಾಯಕರು ಆತಿಥಿ ಡಾ. ಹೆಗ್ಡೆಯವರ ಪರಿಚಯವನ್ನೂ ಅಮೇರಿಕದಲ್ಲಿ ಪತ್ರಿಕೋದ್ಯಮ ಪದವಿಯನ್ನು ಪಡೆದುಬಂದಿರುವ ಡಾ. ಹೆಗ್ಡೆಯವರ ಪತ್ನಿ ಶ್ರೀಮತಿ ನೃಣಾಲಿನಿ ಹೆಗ್ಡೆಯವರ ಪರಿಚಯವನ್ನೂ ಮಾಡಿದರು. ಡಾ. ಹೆಗ್ಡೆಯವರು ಅಮೇರಿಕದ ಜನಜೀವನದ ಮತ್ತು ವಿದೇಶಾನುಭವವನ್ನು ವಿವರಿಸಿದರು. ಡಾ. ಬಿ. ಬಿ. ಶೆಟ್ಟರು ಮಾತನಾಡಿ ಡಾ. ಹೆಗ್ಡೆಯವರಿಂದ ಸ್ವದೇಶಕ್ಕೂ, ಪರನಾಡಿಗೂ ವಿಶೇಷವಾಗಿ ಲಾಭ ದೊರೆಯುವಂತಾಗಲೆಂದರು. ಅಧ್ಯಕ್ಷ ಶ್ರೀ ನಾಯ್ಕರು ಡಾ. ಹೆಗ್ಡೆಯವರ ಭವಿಷ್ಯ ಉಜ್ವಲವಾಗಲೆಂದರು. ಶ್ರೀ ಬಿ. ಆರ್. ಹೆಗ್ಡೆಯವರು ಕೃತಜ್ಞತೆಗಳನ್ನರ್ಪಿಸಿದರು.

ವಿದಾಯ ಸತ್ಕಾರ—ಕೇಂದ್ರಸರಕಾರದ ಆಕಾಶವಾಣಿ ಮಂತ್ರಿ ಶಾಖೆಯಲ್ಲಿ ಸಹಸಂಪಾದಕರಾಗಿ ಹೊಸ ದಿಲ್ಲಿಗೆ ಹೋಗಲಿರುವ ಶ್ರೀ ಬಿ. ಕೃಷ್ಣಾನಂದ ಹೆಗ್ಡೆಯವರನ್ನು ಬೀಳ್ಕೊಡುವ ಸಮಾರಂಭವು ತಾ. 3ರಂದು ಕೋಟೇಶ್ವರ ಬೋರ್ಡ್ ಪ್ರೈಮರಿಸ್ಕೂಲಿನಲ್ಲಿ ಶ್ರೀ ಎ. ಶ್ರೀನಿವಾಸ್ ಆಚಾರ್ಯರ ಅಧ್ಯಕ್ಷತೆಯಲ್ಲಿ ನೆರವೇರಿತು. ಶ್ರೀಗಳಾದ ಬಿ. ಎಲ್. ಪತ್ತಾರ, ಚಂದಯ್ಯ ಸುವರ್ಣ, ಕೃಷ್ಣ ಉಡುಸ, ಸಾರ್ಯನಾರಾಯಣ ಐತಾಳ ಮೊದಲಾದವರು ಮಾತನಾಡಿ ಶ್ರೀ ಹೆಗ್ಡೆಯವರಿಗೆ ಶುಭಕೋರಿದರು. ಶ್ರೀ ಬಿ. ನಾರಾಯಣ ಶೆಟ್ಟರು ಧನ್ಯವಾದಿಸಿದರು.

ಯಕ್ಷಗಾನ ಕಲಾಕ್ಷೇತ್ರ—ಉಡುಪಿಯ ಈ ಕಲಾಕ್ಷೇತ್ರದಲ್ಲಿ ಗಾಂಧೀ ಜಯಂತಿಯು ತಾ 2ರಂದು ಶ್ರೀ ಬೈಕಾಡಿ ವೆಂಕಟಕೃಷ್ಣಯ್ಯನವರ ನೇತೃತ್ವದಲ್ಲಿ ಜರಗಿತು. ಕಾರ್ಯಕ್ರಮದ ಅಂಗವಾಗಿ ೧೮ಕ್ಕಾವತಿ ಕಲ್ಯಾಣ ಎಂಬ ಯಕ್ಷಗಾನ ಕೂಟವು ನೆರವೇರಿತು.

ಬೀಳ್ಕೊಡುವ ಸಮಾರಂಭ—ಕೊರ್ಗಿ ಬೋರ್ಡ್ ಎಲಿಮೆಂಟರಿ ಶಾಲಾ ಮುಖ್ಯೋಪಾಧ್ಯಾಯ ಶ್ರೀ ಎಚ್. ಮಹಾಲಿಂಗ ಶೆಟ್ಟಿ ನಿವೃತ್ತರಾಗುವ ಕಾರಣ ಅವರಿಗೆ ವಿದಾಯ ಸತ್ಕಾರ ಕೂಟವು ತಾ. 3ರಂದು ಶ್ರೀ ವಿ. ನಾರಾಯಣ ಶೆಟ್ಟಿ ಅಧ್ಯಕ್ಷತೆಯಲ್ಲಿ ನೆರವೇರಿತು. ಶ್ರೀ ಕೊರ್ಗಿ ಸದಾಶಿವ ಹೆಗ್ಡೆಯವರು ಮತ್ತು ಅಧ್ಯಕ್ಷರ ಭಾಷಣಗಳಾದುವು. ಸಮಾರಂಭಕ್ಕೆ ಶ್ರೀಗಳಾದ ಕೊರ್ಗಿ ನಾಗಪ್ಪ ಭಂಡಾರಿ, ವಿಠಲ ಹೆಗ್ಡೆ ಕೊಳ್ಕೆಬೈಲ್, ಕೃಷ್ಣಯ್ಯ ಶೆಟ್ಟಿ ಹೊಸಮರ, ಚಂದ್ರಶೇಖರ ಭಂಡಾರಿ, ಸುಂದರ ಶೆಟ್ಟಿ ಕೊರ್ಗಿ, ಬಾಲಕೃಷ್ಣ ಹೆಗ್ಡೆ, ಎಚ್. ರವಿರಾಜ ಶೆಟ್ಟಿ ಮೊದಲಾದವರು ಸಹಕರಿಸಿರುತ್ತಾರೆ.

ಚರ್ಚಾಗೋಷ್ಠಿ—ಮಂಗಳೂರಿನ ರಾಮಕೃಷ್ಣ ವಿದ್ಯಾಧಿಗಳ ಭವನದ ವೆಂಕಪ್ಪ ಪೂಂಜಾ ಸಭಾಸದನದಲ್ಲಿ ಎಡ್ವೋಕೇಟ್ ಶ್ರೀ ಕಾಂತಪ್ಪ ಪೂಂಜಾರ ಅಧ್ಯಕ್ಷತೆಯಲ್ಲಿ ಯೂಥಿಯನ್ನನ ವತಿಯಿಂದ ಚರ್ಚಾಗೋಷ್ಠಿಯೊಂದು ಜರಗಿತು. ಶ್ರೀ ರಘುರಾಮ ರೈಗಳು ಭಾಷಾವಾರು ಸ್ವಾಂತರಚನೆ, ದೇಶದ ಏಳಿಗೆಗೆ ಅಗತ್ಯ ಎಂದು ಮಂಡಿಸಿದ ರಂಗವನ್ನು ಶ್ರೀ ಸೀತಾರಾಮ ಶೆಟ್ಟರು ವಿರೋಧಿಸಿದರು. ಸಿಸಯದ ಪರವಾಗಿ ಶ್ರೀಗಳಾದ ಚಂದ್ರಶೇಖರ ಹೆಗ್ಡೆ, ರಮಾಕಾಂತ ಶೆಟ್ಟಿ, ನಿತ್ಯಾನಂದ ಶೆಟ್ಟಿ, ಸದಾಶಿವ ಶೆಟ್ಟಿ ಇವರೂ ವಿರೋಧವಾಗಿ ಶ್ರೀಗಳಾದ ಶಶಿಧರ ಶೆಟ್ಟಿ, ರತ್ನಾಕರ ಶೆಟ್ಟಿ, ಶ್ರೀಧರ ಶೆಟ್ಟಿ, ಸುಧಾಕರ ಶೆಟ್ಟಿ ಪುರಂದರ ರೈ ಇವರೂ ಮಾತನಾಡಿದರು. ಭವನದ ಸುಪರಿಂಟೆಂಡೆಂಟರಾದ ಶ್ರೀ ಪಿ. ಎಸ್. ತಿಮ್ಮಪ್ಪ ಶೆಟ್ಟರ ಭಾಷಣದ ನಂತರ ಠರಾವನ್ನು ಮತಕ್ಕೆಹಾಕಲಾಗಿ ಅದು ಬಿದ್ದುಹೋಯಿತು. ಬಳಿಕ ಅಧ್ಯಕ್ಷರ ಭಾಷಣವಾಗಿ ಧನ್ಯವಾದದೊಂದಿಗೆ ಸಭೆ ಕೊನೆಗೊಂಡಿತು.

ಟೆಲಿಫೋನ್ ಉದ್ಘಾಟನೆ—ಮೂಳೂರು, ಉಚ್ಚಿಲ ಸಬ್‌ಪೋಸ್ಟ್ ಆಫೀಸಿನಲ್ಲಿ ಹೊಸತಾಗಿ ಅಳವಡಿಸಲ್ಪಟ್ಟ ಟೆಲಿಫೋನ್ ಕೋಲ್ ಆಫೀಸ್ ಇವೆ ತಾ. 5ರಂದು ಕಾಪಿನ ಡಾ. ಎಂ. ಬಾಲಕೃಷ್ಣ ಶೆಟ್ಟಿ ಅಧ್ಯಕ್ಷತೆಯಲ್ಲಿ ಶ್ರೀ ಎಕ್ಸ್. ಎಕ್ಸ್. ಡಿ. ಪಿಂಟೊ ಎಂ. ಎಲ್. ಎ. ಆವರಿಂದ ಉದ್ಘಾಟಿಸಲ್ಪಟ್ಟಿತು. ಮೂಳೂರು ಪಂಚಾಯತ್ ಅಧ್ಯಕ್ಷ ಶ್ರೀ ಎಂ. ಬೋಜ ಹೆಗ್ಡೆಯವರು ಸ್ವಾಗತ ಭಾಷಣ ಮಾಡುತ್ತ ಟೆಲಿಫೋನಿನಂತೆ ಟೆಲಿಗ್ರಾಮ್ ಅನುಕೂಲತೆಯನ್ನೂ ಒದಗಿಸಿಕೊಡುವಂತೆ ವಿನಂತಿಸಿ ಕೊಂಡರು. ಶ್ರೀ ಪಿಂಟೋರವರು ಟೆಲಿಫೋನ್ ಉದ್ಘಾಟನೆನೊಡಿ ಬೆಂಗಳೂರಿನಲ್ಲಿರುವ ಪಿ. ಎಮ್. ಜಿ. ಯವರೊಡನೆ ಟೆಲಿಫೋನ್ ಮೂಲಕ ಮಾತಾಡಿ ಮೂಳೂರು ಪಂಚಾಯತದ ಕೃತಜ್ಞತೆಯನ್ನರ್ಪಿಸಿದರು. ಅನಂತರ ಪಂಚವಾರ್ಷಿಕ ಯೋಜನೆಯ ಮೂಲಕ ಪಲ್ಲಿಗಳ ಅಭಿವೃದ್ಧಿ ಕಡೆಗೆ ಸರಕಾರದವರು ಹೆಚ್ಚು ನಿಗಾ ಕೊಡುತ್ತಿರುವುದರಿಂದ ಪಲ್ಲಿಯವರು ಕೂಡಾ ತಮ್ಮ ತಮ್ಮ ಕ್ಷೇತ್ರಗಳ ಅಭಿವೃದ್ಧಿಗಾಗಿ ಸರಕಾರದ ಸವಲತ್ತುಗಳ ಸದುಪಯೋಗ ಮಾಡಿಕೊಳ್ಳಬೇಕೆಂದೂ ಕಾಪು ಕ್ಷೇತ್ರದ ಅಭಿವೃದ್ಧಿ ಕಾರ್ಯಗಳ ಬಗ್ಗೆ ಹಿಂದಿನಂತೆ ಮುಂದೆಯೂ ತನ್ನಿಂದಾದ ಸೇವೆ ಸಲ್ಲಿಸಲಿರುವೆನೆಂದರು. ಶ್ರೀ ಜಯರಾಮ ಹೆಗ್ಡೆಯವರು ಸಂದೇಶಗಳನ್ನು ಓದಿದ ಬಳಿಕ ಶ್ರೀ ಕಾಪು ಮಂಜುನಾಥಶೆಟ್ಟಿ ಮತ್ತು ಶ್ರೀಉಚ್ಚಿಲ ಸರ್ವಪ್ಪಯ್ಯನವರು ಸಂದರ್ಭೋಚಿತ ಭಾಷಣಮಾಡಿದರು. ಸಭಾಧ್ಯಕ್ಷ ಡಾ| ಸೆಟ್ಟರು ಇನ್ನೊಂದು ಶೀಘ್ರದಲ್ಲಿ ಟೆಲಿಫೋನ್ ವ್ಯವಸ್ಥೆ ಸವಲತ್ತು ದೊರೆಯುವಂತಾದುದಕ್ಕೆ ಪಂಚಾಯತು ಬೋರ್ಡಿನ ಪ್ರಯತ್ನವೇ ಮುಖ್ಯ ಕಾರಣವೆಂದೂ, ಇದೇ ರೀತಿ ಜನಹಿತ ಕಾರ್ಯಗಳನ್ನು ಮೂಳೂರು ಪಂಚಾಯತದವರು ಹೆಚ್ಚು ಹೆಚ್ಚಾಗಿ ಮಾಡಿ ಆದರ್ಶಪ್ರಾಯವಾಗಲೆಂದೂ, ಶ್ರೀ ಪಿಂಟೋರವರು ಕಾಪು ಕ್ಷೇತ್ರದ ಅಭಿವೃದ್ಧಿಗಾಗಿ ಮಾಡಿರುವ ಕೆಲಸಗಳನ್ನು ವಿವರಿಸಿ ಭಾಷಣ ಮಾಡಿದರು. ಶ್ರೀ ಚಂದ್ರಶೇಖರ ಹೆಗ್ಡೆಯವರು ಧನ್ಯವಾದಗಳನ್ನರ್ಪಿಸಿದರು.

ಉಚ್ಚ ಶಿಕ್ಷಣಕ್ಕಾಗಿ ಲಂಡನಿಗೆ—ಪುತ್ತೂರಿನ ನಿವೃತ್ತ ತಹಶೀಲ್ದಾರ್ ಶ್ರೀ ಕೆ. ವೆಂಕಪ್ಪಸವರ ಪುತ್ರ ಶ್ರೀ ಕೆ. ರಾಮದಾಸ ನಾಯಕರು ತಾಂತ್ರಿಕ ಉಚ್ಚ ಶಿಕ್ಷಣಕ್ಕಾಗಿ ಸರಕಾರಿ ವಿದ್ಯಾರ್ಥಿ ವೇತನ ಪಡೆದು ತಾ. 22-9-61ರಂದು ಬೊಂಬಾಯಿಯಿಂದ ಪಡಗನ್ನೇರಿ ಲಂಡನಿಗೆ ತೆರಳಿರುವರು. ಸದ್ರಿಯವರು ಕೊಯಂಬತ್ತೂರು ಇಂಜಿನಿಯರಿಂಗ್ ಕಾಲೇಜಿನಲ್ಲಿ B. E. M. Tech ಪದವಿ ಪಡೆದು ಮುಂಬಾಯಿಯಲ್ಲಿ ಪೋಸ್ಟ್ಗ್ರಾಜ್ಯುಯೇಟ್ ಕೋರ್ಸನ್ನು ಮುಗಿಸಿ, ಕೊಲ್ಲಾಪುರದ ಪೊಲಿಟೆಕ್ನಿಕಿನಲ್ಲಿ ಲೆಕ್ಚರರಾಗಿ ಕೆಲಸ ಮಾಡಿದ್ದರು. ಸದ್ರಿಯವರು ದಕ್ಷಿಣ ಕನ್ನಡ ಜಿಲ್ಲಾ ಗಿರಿಜನರ ಸಂಗಡಕ್ಕೆ ನೇರಿದ ಮಂತ್ರಿ ಸಮಾಜದವರಲ್ಲಿ ಮೊದಲನೇ ಬಾರಿ ಪದವಿ (ಡಿಗ್ರಿ) ಪಡೆದವರಾಗಿರುತ್ತಾರೆ. ಸದ್ರಿಯವರಿಗೆ ದ. ಕ. ಜಿಲ್ಲಾ ಮರಾಠಿ ಸಮಾಜ ಸೇವಾ ಸಂಘದವರು ತಾ. 8-9-61ರಂದು ಸತ್ಕಾರಕೂಟವೇರ್ಪಡಿಸಿ ಸನ್ಮಾನಿಸಿದ್ದರೆಲ್ಲದೆ, ಸಂಘದ ಅಧ್ಯಕ್ಷ ಶ್ರೀ ಕೆ. ಅಣ್ಣಯ್ಯ ನಾಯಕರು, ಅವರಿಗೆ ಶ್ರೇಯಸ್ಸನ್ನು ಕೋರಿ ವಿಧಾಯವನ್ನು ಬಯಸಿದ್ದರು.

ಜಿಲ್ಲಾ ಯುವಕ ಕಾಂಗ್ರೆಸ್ ಚುನಾವಣೆ—ತಾ. 1ರಂದು ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ಬಿ. ನಾರಾಯಣ ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ಕಟ್ಟಾಡಿ ಯುವಕ ಕಾಂಗ್ರೆಸಿನ ಸ್ಥಾನಾಂ ಕಾರ್ಯದರ್ಶಿ ಶ್ರೀ ಎಂ. ರಾಮಚಂದ್ರರಾಯರು ಜಿಲ್ಲಾ ಯುವಕ ಕಾಂಗ್ರೆಸಿನ ಜತೆ ಕಾರ್ಯದರ್ಶಿಯಾಗಿ ಅವಿರೋಧವಾಗಿ ಆರಿಸಲ್ಪಟ್ಟರು. ಸಂಘಟಕ ಶ್ರೀ ರಾಮರಾಜ ಕಣಿಯವರು ಜುಗಾವಣೆಯನ್ನು ಜರಗಿಸಿದರು.

ನಿಟ್ಟೆ—ಬಜ್ಪಾಡಿ ಕ್ಷೇತ್ರದಲ್ಲಿ ಕಳೆದ ತಾ. 30ರಂದು ಶ್ರೀ ಶೀನಪ್ಪ ಶೆಟ್ಟಿ, ಬಿ. ಡಿ. ಪೊ. ಅವರ ಅಧ್ಯಕ್ಷತೆಯಲ್ಲಿ ಸಭೆ ಮತ್ತು ಮಕ್ಕಳ ಚಟುವಟಿಕೆ ಕೂಟ ನೆರವೇರಿತು. ಶ್ರೀಮತಿ ರಾಮಚಂದ್ರ ಪ್ರಭುಗಳ ಸ್ವಾಗತ ಭಾಷಣವಾದ ಮೇಲೆ ಮಕ್ಕಳ ಮನೋರಂಜನಾ ಕಾರ್ಯಕ್ರಮಗಳಾದುವು. ಶ್ರೀ. ಪಿ. ಎಸ್. ತಿಮ್ಮಪ್ಪ ಶೆಟ್ಟಿ ಸಂಸ್ಥೆಯ ಏಳಿಗೆಯ ಕುರಿತು ಮಾತನಾಡಿ ಇಬ್ಬರು ಹೆಮ್ಮಕ್ಕಳಿಗೆ ಬೆಳ್ಳಿಯ ಪದಕಗಳನ್ನರ್ಪಿಸಿದರು. ಬಳಿಕ ಶ್ರೀ ಎಂ. ಗೋಪಿನಾಥರು ಮತ್ತು ಅವರ ಪತ್ನಿ ಶ್ರೀಮತಿ ಆಶಾಲತರು ಬಾಲವಾಡಿ ಸಂಸ್ಥೆಗೆ ರೂ. 101/- ಸಹಾಯ ಧನವಿತ್ತರು. ಅಧ್ಯಕ್ಷರ ಭಾಷಣ ಧನ್ಯವಾದದೊಂದಿಗೆ ಸಭಾಕೃತ್ಯವಾಯಿತು.

ಸಾರ್ವಜನಿಕ ಸಭೆ—ಕೇಂದ್ರದ ಆರೋಗ್ಯ ಮಂತ್ರಿ ಡಿ. ಪಿ. ಕರಮರಿಕರರು ಇದೇ ತಾ. 10ನೇ ಬೆಳಿಗ್ಗೆ ಉಡುಪಿ ರಾಮಕೃಷ್ಣ ಥಿಯೇಟರಿನಲ್ಲಿ ಏರ್ಪಡಿಸಲಾದ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡಿದರು. ೧೧ಮೂರನೇ ಸಂಚಾರ್ಷಿಕ ಯೋಜನೆಯು ಜಯಪ್ರದವಾಗುವಂತೆ ಜನತೆಯು ಸಹಕರಿಸಬೇಕು, ರಾಜಕೀಯದಲ್ಲಿ ಪರಸ್ಪರ ದ್ವೇಷಾಸೂಯೆ ಸಲ್ಲದು, ಸರಕಾರವಾದರೂ ನಿಷ್ಠಿನ ಉನ್ನತಿಗಾಗಿ ಜನತೆಯ ಆಶೆ ಆಕಾಂಕ್ಷೆಗಳನ್ನು ಪರಿಶೀಲಿಸಿ ಕಾರ್ಯವಹಿಸಬೇಕು, ಕೇಂದ್ರ ಸರಕಾರವು ತೃತೀಯ ಪಂಚವಾರ್ಷಿಕ ಯೋಜನೆಯಲ್ಲಿ ಮಂಗಳೂರು ಬಂದರದ ಅಭಿವೃದ್ಧಿಗಾಗಿ ೧೨ ಕೋಟಿ ರೂಪಾಯಿಗಳನ್ನು ವ್ಯಯಿಸುವುದು; ರಾಷ್ಟ್ರೀಯ ಪೆಟ್ರೋಲಿಯ ರಿಫೈನರಿಗಾಗಿ ಈಗಾಗಲೇ ಲಕ್ಷಾಂತರ ರೂಪಾಯಿ ವ್ಯಯವಾಗಿದ್ದು ಮೂರನೆಯ ಯೋಜನೆಯಲ್ಲಿ ಮತ್ತಷ್ಟು ಖರ್ಚು ತಗಲುವುದು; ನಮ್ಮ ರಾಜ್ಯದಲ್ಲಿ ಅರಣ್ಯಸಂಪತ್ತು ಅಪಾರವಾಗಿದ್ದು ಅದನ್ನು ನಮ್ಮ ಅಧಿಕಾರಿಗಳು ಸೂಕ್ತವಾಗಿ ಉಪಯೋಗಿಸುವತ್ತ ಲಕ್ಷ್ಯ ಹರಿಸಬೇಕು ಎಂದು ಅವರು ಹೇಳಿ, ಜನತೆ ತನ್ನ ಕರ್ತವ್ಯವನ್ನರಿತು ದುಡಿಯಬೇಕು, ಧಾರ್ಮಿಕ ಕ್ಷೇತ್ರಗಳಿಗಿದ್ದ ಉಡುಪಿಯಂ ಇಂದು ಆಧುನಿಕ ಶಿಲ್ಪಿ ಡಾ. ಮೂಧವ ಪೈಗಳ ಮೇಧಾಶಕ್ತಿಯಿಂದ ವಿದ್ಯಾಕೇಂದ್ರವಾಗಿ ಬೆಳೆದುಬಂದು ದೇಶದ ದೃಷ್ಟಿಯನ್ನು ಸೆಳೆಯುವಂತಾಗಿದೆ, ಕೆಲವೇ ವರ್ಷಗಳಲ್ಲಿ ಇಲ್ಲಿ ವಿಶ್ವವಿದ್ಯಾಲಯವಾಗುವುದು ಎಂದು ಹೇಳಿದರು. ಸಭಾಧ್ಯಕ್ಷತೆ ವಹಿಸಿದ್ದ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶ್ರೀ ಟಿ. ಎ. ಪೈಗಳು ಪಂಚವಾರ್ಷಿಕ ಯೋಜನೆಯ ಸಾಫಲ್ಯಕ್ಕಾಗಿ ಎಲ್ಲರೂ ದುಡಿಯಬೇಕೆಂದರು. ಅರಂಭದಲ್ಲಿ ಡಾ. ಟಿ. ಎಂ. ಎ. ಪೈಯವರು ಮಂತ್ರಿ ಕರಮರಿಕರ ಪರಿಚಯ ಮಾಡಿಕೊಟ್ಟರು. ನಗರ ಸಭಾಧ್ಯಕ್ಷ ಡಾ. ಕೆ. ಎಲ್. ಐತಾಳರು ಸ್ವಾಗತಭಾಷಣ ಮಾಡಿ ಉಡುಪಿಯ ಹಿಂದಿನ ಮತ್ತು ಇಂದಿನ ಮಹತ್ವಗಳನ್ನು ಪ್ರಸ್ತಾಪಿಸಿ, ಆಸೆಕಾಲು ಪ್ರತಿಬಂಧ ಮತ್ತು ನೀರಿನ ಸರಬರಾಜು ಯೋಜನೆಗೆ ಸರಕಾರದ ಸಹಕಾರವನ್ನು ಕೋರಿದರು. ಅಂತ್ಯದಲ್ಲಿ ತಾಲೂಕು ಬೋರ್ಡ್ ಅಧ್ಯಕ್ಷ ಶ್ರೀ ಎಂ. ಮಧ್ವರಾಜರು ಧನ್ಯವಾದಗಳನ್ನರ್ಪಿಸಿದರು.

ಬಳಿಕ ಮಂತ್ರಿಗಳು ಮಣಿಪಾಲಕ್ಕೆ ತೆರಳಿ ಕಸ್ತೂರ್ಬಾ ಮೆಡಿಕಲ್ ಕಾಲೇಜು, ಕಸ್ತೂರ್ಬಾ ಜನರಲ್ ಆಸ್ಪತ್ರೆಗಳನ್ನು ಸಂದರ್ಶಿಸಿ ಅಲ್ಲಿಯ ಅಸಾಮಾನ್ಯ ಸಾಧನೆಗಳನ್ನು ಪರಿಶೀಲಿಸಿ ಮೆಚ್ಚಗೆಯನ್ನು ವ್ಯಕ್ತಪಡಿಸಿದರು.

ಉಡುಪಿ ಹಿಂದೀ ಪ್ರಚಾರ ಪರಿಷತ್ತಿನ—ಸದ್ಯದ ವಾರ್ಷಿಕ ಮಹಾಧಿವೇಶನವು ತಾ. 2ರಂದು ಅಧ್ಯಕ್ಷ ಶ್ರೀ ಎ. ವರದರಾಜ ಬಲ್ಲಾಳರ ಅಧ್ಯಕ್ಷತೆಯಲ್ಲಿ ಜರಗಿತು. 1960—61ನೆ ವರ್ಷಕ್ಕೆ ಸಂಬಂಧಿಸಿದ ಆಯ—ವ್ಯಯ, ಜಮಾ—ಖರ್ಚು ಮತ್ತು ಸಾಲ—ಮೂಲಗಳ ಪರಿಶೋಧಿತ ರಿಕ್ತ ಪತ್ರಗಳನ್ನೂ ವಾರ್ಷಿಕ ವರದಿಯನ್ನೂ ಅಧಿವೇಶನವು ಸ್ವೀಕರಿಸಿತು. ಮುಂದಿನ ವರ್ಷಕ್ಕೆ ಶ್ರೀಗಳಾದ ಎ. ವರದರಾಜ ಬಲ್ಲಾಳ, ಬಿ. ಎಸ್. ರಾಮರಾವ್, ಎಸ್. ಗೋಪಿ ಚಂದರಾವ್ ಪಿ. ರಾಜಗೋಪಾಲ ಆಚಾರ್ಯ, ಬಿ. ಎಲ್. ಆಚಾರ್ಯ, ಸಿ. ಆರ್. ತಂತ್ರಿ, ಪಿ. ಪದ್ಮನಾಭ ಆಚಾರ್ಯ, ಪಾ| ಚಂದ್ರಶೇಖರ ಚಡಗ, ಕೆ. ವಿ. ಆಚಾರ್ಯ ಮತ್ತು ಎಸ್. ವಿ. ಶೆಟ್ಟಿ ಗಾರರಿಂದ ಕೂಡಿದ ಕಾರ್ಯಕಾರೀ ಸಮಿತಿಯನ್ನು ಅವಿರೋಧವಾಗಿ ಆರಿಸಿತು.

ಉಡುಪಿ ಡಿ. ಮುನ್ಸ೿ ಕೋರ್ಟಿನಲ್ಲಿ

ಕ್ರಮ ನಂಬ್ರ 273/61.

ಅಂಬಾರು ಶ್ರೀ ಲಕ್ಷ್ಮೀನಾರಾಯಣದೇವರ ಮರ ಟ್ರಸ್ಟಿ ಎ. ಲಕ್ಷ್ಮೀನಾರಾಯಣ ಆಚಾರ್ —ವಾದಿರು

ಮತ್ತು

ಪರೀಕ ಯೋಜನಗಂಧಿ ಹೆಗ್ಗಡ್ತಿ ಸಿದ್ದು ಯಾನೆ ರಾಮಕ್ಕ ಹೆಗ್ಗಡ್ತಿ ಮಗಳು ಉಡುಪಿ ತಾಲೂಕು ಆತ್ರಾಡಿ ಗ್ರಾಮದ ಪರೀಕ —ಪ್ರತಿವಾದಿರು

ಇವರೊಳಗೆ

ಪ್ರತಿ ವಾದಿಳಿಗೆ ತಿಳಿಯಪಡಿಸುವುದೇನೆಂದರೆ ವಾದಿ ದೇವರ ಭಂಡಾರಕ್ಕೆ ಪ್ರತಿವಾದಿಳಿಂದ ಬಹಾ ಕಳೆದ ಶಾವರಿ ಸಂಗಿರದ ಅಮೃತಪಡಿ ವಸೂಲಿಗೆ ವಾದಿರು ಮಾಡಿದ ಮೇಲಿನ ದಾವೆಯು ತಾ. 4-11-61ಕ್ಕೆ ಪ್ರತಿವಾದಿಳ ಹಾಜರಾತಿ ಬಗ್ಗೆ ಲಿಸ್ಟ್ ಆಗಿರುವುದರಿಂದ ಆ ದಾವೆಯಲ್ಲಿ ಉಡಾವರಿಸುವುದಿದ್ದರೆ ಆ ತಾರೀಕು ಹಗಲು ಗಂಟೆ 11ಕ್ಕೆ ಈ ಕೋರ್ಟು ಮುಂದೆ ಹಾಜರಾಗಿ ಜಾಹೀರು ಮಾಡಿ ಕೊಳ್ಳುವುದು.

Y. C. S. Hegde.
Advocate for pltt
Udipi ತಾ. 10—10—61

HOMES & ESTATES PRIVATE LIMITED
Registered Office R. M Karnad Building
UDIPI.
NOTICE
Notice having been received that our Share certificates relating to 10 shares Nos. 706 to 715 of Rs. 50/- each standing in the name of Sri. A. Bacha Marakala, nephew of Guruva Marakala, Merchant, Hungercutta is lost, duplicate will be issued if no objections are received by us on or before 10—11—1961.
Udipi,
10—10—1961.
M. R. Karnad,
Managing Director.

ಜೀವನದ ವಿವಿಧ ಘಟನೆಗಳನ್ನು ಹೃದಯಸ್ಪರ್ಶಿಯಾಗಿ ಚಿತ್ರಿಸುವ ಕಥಾಸಂಗ್ರಹ
ಮದುವೆ ಸೀರೆ
ಮದುವೆ ಕಾಲದಲ್ಲಿ ವಧೂವರರಿಗೆ ಉಡುಗೊರೆಯಾಗಿ ಕೊಡಲಿಕ್ಕೂ ಯೋಗ್ಯವಾದ ಪುಸ್ತಕ.
ಬೆಲೆ: ರೂಪಾಯಿ ಒಂದು.
ರೂ. 1-25 ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು
ನವಭಾರತ ಪುಸ್ತಕ ಭಂಡಾರ, ಉಡುಪಿ.

ಲೋಕ ಕಲ್ಯಾಣಕಾರಿಕೆ ದುರ್ಗಾ ಮಾತೆ

ಸೇತುರಾಮನಿಂದ ಬದರೀನಾಥರೆ ನಡುವಣ ಅಖಂಡವಾದ ಭಾರತವರ್ಷದಲ್ಲಿ ನಾರಿಯ ಮಹತ್ವವನ್ನು ಪರಿಗಣಿಸುತಿದ್ದರೆಂಬುದಕ್ಕೆ "ದುರ್ಗಾ ಪೂಜೆ"ಯೊಂದು ಜ್ವಲಂತ ನಿದರ್ಶನ ನಮ್ಮ ಸಂಸ್ಕೃತಿಯಲ್ಲಿ ನಾರಿಯು ಅಬಲೆಯೆಂದು ಉಲ್ಲೇಖಿಸಿರಬಹುದು; ಆದರೂ ಆಕೆಯಲ್ಲಿರುವ ಅದ್ಭುತ ಶಕ್ತಿಯನ್ನು ಮಾತ್ರ ಎಂದಿಗೂ ಕಡೆಗಣಿಸಿರುವುದಿಲ್ಲ. "ಅಹಲ್ಯಾ ದ್ರೌಪದೀ ಸೀತಾ ತಾರಾ ಮಂಡೋದರೀ ತಥಾ। ಪಂಚ ಕನ್ಯಾ ಸ್ಮರೇನ್ನಿತ್ಯಂ ಮಹಾ ಪಾತಕ ನಾಶನಂ" ಎಂದು ನಮ್ಮ ಪೂರ್ವಜರು ಸ್ತ್ರೀಯರು ಪುರುಷರಷ್ಟೇ ಸ್ಮರಣಾರ್ಹರೆಂದು ಉದ್ಘೋಷಿಸಿದೆ. ಸಂದರ್ಭವೊದಗಿದಾಗ, ನಾರಿಯು ತನ್ನ ಅನುಪಮ ಕರ್ತೃತ್ವವನ್ನೂ ಸಾಮರ್ಥ್ಯವನ್ನೂ ತೋರಿಸಬಲ್ಲಳು. ಈ ಕಾರಣದಿಂದಲೇ ದುರ್ಗಾ ಪೂಜೆಯನ್ನು ಎಲ್ಲ ಭಾರತೀಯರು ಶ್ರದ್ಧಾಭಕ್ತಿಗಳಿಂದ ಮಾಡುತ್ತಾರೆ.

ಮಹಿಷಾಸುರನ ಅತ್ಯಾಚಾರ ಮತ್ತು ನೃಶಂಸತೆಗಳಿಂದ ಪೀಡಿತವಾದ ಜನತೆ 'ತ್ರಾಹಿ ಭಗವನ್' ಎಂದು ಬೊಬ್ಬಿಡಲು ಬ್ರಹ್ಮ ವಿಷ್ಣು ಮಹೇಶ್ವರರು ತಂತಮ್ಮ ಅಂಶಗಳಿಂದ ಒಬ್ಬಾಕೆ ಅಷ್ಟ ಭುಜೆಯಾದ ದೇವಿಯನ್ನು ಸೃಷ್ಟಿಸಿದರು. ಮಹಿಷಾಸುರನ ವಧೆ ಮಾಡುವಂತೆ ಆಕೆಗೆ ಆದೇಶವಿತ್ತರು. ಈಕೆ ಮತ್ತು ಆ ರಾಕ್ಷಸರ ನಡುವೆ ಒಂಬತ್ತು ದಿನಗಳ ವರೆಗೆ ಪ್ರಚಂಡ ಕಾಳಗವಾಯಿತು. ಹತ್ತನೆಯದಿನ ದೇವಿಯು ದಾನವನನ್ನು ಸಂಹಾರಗೆಯ್ದಳು. ಆಗಲೇ ಅತ್ಯಾಚಾರ ಮತ್ತು ನೃಶಂಸತೆಗಳ ಹುಟ್ಟಡಗಿಸಿ ವಿವೇಕ ಸ್ಥಾಪನೆ ಮಾಡುವ ಮಹಾಶಕ್ತಿ ದುರ್ಗೆಯನ್ನು ಒಂಬತ್ತು ದಿನಗಳ ವರೆಗೆ ಆರಾಧಿಸುವ ಪದ್ಧತಿ ಭಾರತದಲ್ಲಿ ಪ್ರಾರಂಭವಾಯಿತು. ಇದನ್ನೇ 'ನವರಾತ್ರಿ' ಎಂಬ ಹೆಸರಿನಿಂದ ಕರೆಯಲಾಗುತ್ತಿದೆ.

ಬಂಗಾಳದ ದುರ್ಗಾಪೂಜೆ ಮತ್ತು ಅನ್ಯ ಸಾರ್ವಜನಿಕ ಸಾಂಸ್ಕೃತಿಕ ಕಾರ್ಯಕ್ರಮ, ಗುಜರಾತಿನ 'ಗರ್ಬಾ ನೃತ್ಯ' ಮತ್ತು ಮಹಾರಾಷ್ಟ್ರದ 'ಕಲಶಪರ್ವ' ನವರಾತ್ರಿದ ಆಕರ್ಷಣೆಗಳು. ಕರ್ನಾಟಕಕ್ಕಂತೂ ಈ ದಿನಗಳು ನಾಡಹಬ್ಬದ ಹರಿದಿನಗಳು. ಮಹಿಷಾಸುರ ಮರ್ದನ ಮಾಡಿದ ರಂಗಸ್ಥಳವೇ ಕರ್ನಾಟಕವೆಂದು ಹೇಳಲಾಗುತ್ತಿದೆ. ಈ ಕಾರಣದಿಂದ ಎಲ್ಲಿಲ್ಲದ ಉತ್ಸಾಹದಿಂದ ಈ ಪರ್ವದಿನಗಳನ್ನು ಇಲ್ಲಿ ಆಚರಿಸುತ್ತಿದ್ದೇವೆ. ನವರಾತ್ರದ ಒಂಬತ್ತು ದಿನಗಳಲ್ಲಿ ಜನಮನದಲ್ಲಿ ಚೇತನ, ಸ್ಫೂರ್ತಿ, ಮತ್ತು ಉತ್ಸಾಹದ ಅಸಮಮ ಧಾರೆಯು ಪ್ರವಹಿಸತೊಡಗುತ್ತದೆ. ಇದನ್ನು ಗಮನಿಸಿ, ದುರ್ಗಾದೇವಿಯನ್ನು ಚೇತನ ಪ್ರದಾಯಿನಿಯೆಂದು ಹೆಸರಿಸಿದರೆ ಅತ್ಯುಕ್ತಿಯಾಗದು.

ಭಾರತದ ಪ್ರಾಚೀನ ತಮ ಪರಂಪರೆಗಳಲ್ಲಿ ಶಕ್ತಿಯ ಉಪಾಸನೆಯೊಂದು ಶಕ್ತಿಯ ಉಪಾಸನೆ ಮಾಡುವುದರಿಂದ, ಜನತೆಯ ಹೃದಯದಲ್ಲಿ ವೀರ್ಯ ಮತ್ತು ಶೌರ್ಯದ ಭಾವನೆಗಳು ಜಾಗ್ರತವಾಗುವುವು. ನಿರ್ಬಲರಾದವರಲ್ಲಿ ಆತ್ಮ ವಿಶ್ವಾಸವು ಪ್ರಾದುರ್ಭವಿಸಿ ಅವರು ಶತ್ರುಗಳಿಗೆ ಪ್ರತೀಕಾರವೆಸಗುವ ಶಕ್ತಿ ಪಡೆಯುವರು. ಈ ಉದ್ದೇಶಗಳಿಂದ ದೇವಿಯ ರೂಪದಲ್ಲಿ ಶಕ್ತಿಯ ಉಪಾಸನೆ ಮಾಡುವ ಕ್ರಮವು ನಮ್ಮ ದೇಶದಲ್ಲಿ ಪ್ರಾರಂಭವಾಯಿತು. ಪಾಲನೆ ಪೋಷಣೆ ಮಾಡುವ ಜಗಜ್ಜನನಿ, ಸಂಪತ್ತನ್ನು ಕರುಣಿಸುವ ಲಕ್ಷ್ಮಿ, ವಿದ್ಯಾದಾಯಿನಿ ಸರಸ್ವತಿ, ಸಂಹಾರಕರ್ತೆ ಕಾಳಿ ಮೊದಲಾದ ಬೇರೆ ಬೇರೆ ರೂಪಗಳಿಂದ ನವರಾತ್ರ ಕಾಲದಲ್ಲಿ ಶಕ್ತಿಯ ಉಪಾಸನೆ ನಡೆಯುತ್ತದೆ. ತ್ರಿಮೂರ್ತಿಗಳ ಅಂಶಗಳಿಂದ ಈ ದುರ್ಗೆಯ ಉತ್ಪತ್ತಿಯಾದುದರಿಂದ ಅವರಾಣಿಯರಾದ ಕಾಳಿ, ಲಕ್ಷ್ಮಿ ಮತ್ತು ಸರಸ್ವತಿಯರು ದುರ್ಗೆಯಲ್ಲಿ ಅಭೇದ ರೂಪದಲ್ಲಿರುವರೆಂದು ತಿಳಿದು, ಆಕೆಯನ್ನು ಮಹಾಕಾಳಿ, ಮಹಾಲಕ್ಷ್ಮಿ ಮಹಾ ಸರಸ್ವತಿಯೆಂದು ಹಾಡುತ್ತಾರೆ.

ನವರಾತ್ರದಲ್ಲಿ ಪೂಜೆಗೊಳ್ಳುವ ದೇವಿ ದುರ್ಗೆಯಲ್ಲಿ ಸದ್ಗುಣಗಳನ್ನೇಕವಿಸಿ, ಕೆಡುಕುಗಳನ್ನು ನಾಶಮಾಡಿ ಒಳಿತುಗಳನ್ನು ಬೆಳಗಿಸಿ ಕಲ್ಯಾಣವೆಸಗುವ ಅತಿ ತೇಜಸ್ವಿನಿಯೂಕೆ. ಸಾಮರ್ಥ್ಯ ಸಂಪನ್ನಕಲ್ಯಾಣಕಾರೀ ಸುಂದರ ನಾರಿಯ ಪ್ರತೀಕವಾಕೆ. ಜನಮಾನಸದಲ್ಲಿ ಓಜಸ್ಸು, ಉತ್ಸಾಹಗಳ ಪ್ರೇರಿಕೆಯಾಕೆ. ಸಹಯೋಗಭಾವನ್ನು ಜಾಗೃತಗೊಳಿಸುವವಳಾಕೆ ಇಂತಹ ಆದರ್ಶನಾರಿಯ ಸಮ್ಮಾನಾರ್ಥವಾಗಿಯೇ ಭಾರತೀಯ ನಾರೀ ಸಮಾಜವು ನವರಾತ್ರ ಪರ್ವವನ್ನು ಅತ್ಯಧಿಕ ಶ್ರದ್ಧೆ ಮತ್ತು ಉತ್ಸಾಹದಿಂದ ಆಚರಿಸುತ್ತದೆ.

ಲೋಕಕಲ್ಯಾಣಕಾರಿಕೆಯಾದ ದುರ್ಗೆಯು ತನ್ನ ಭಕ್ತರ ಅಜ್ಞಾನಾಂಧಕಾರವನ್ನು ದೂರಕರಿಸಿ ಹರಸಲಿ.

ತಿಲಕರ ಗುರು ನೌರೋಜಿ

ಶ್ರೀ ಎಸ್. ಎಮ್. ಶೆಟ್ಟಿ ಶಿವಮಂಜೆ ಹರಾರಿ.

ಲೋಕಮಾನ್ಯ ತಿಲಕರು ಯುವಕರಾಗಿದ್ದಾಗ, ಅವರು ದಾದಾಭಾಯೀ ನೌರೋಜಿಯವರೊಡನಿದ್ದುಕೊಂಡು ವಕಾಲತು ಅಭ್ಯಸಿಸುತ್ತಿದ್ದರು. ಯಾವುದೋ ಒಂದು ಕೇಸಿನ ಕೆಲಸದಿಂದಾಗಿ ಅವರೀರ್ವರೂ ಲಂಡನ್ನಿಗೆ ಹೋಗ ಬೇಕಾಗಿ ಬಂತು. ಅಲ್ಲಿ ಅವರು ಅತಿವ್ಯಯದಿಂದ ತಪ್ಪಿಸಿ ಕೊಳ್ಳಲಿಕ್ಕಾಗಿ ನಗರದ ಹೊರಗಿದ್ದ ರೂಮೊಂದರಲ್ಲಿ ಇರತೊಡಗಿದರು.

ದಾದಾಭಾಯಿಯವರು ಮಹಾನ್ ಉತ್ಸಾಹೀ ಅಂತೆಯೇ ನಿಯಮಪಾಲಕ ಯುವಕರಾಗಿದ್ದರು. ಮುಂಜಾನೆ ಅವರು ಬಹು ಬೇಗನೆ ಎದ್ದು ಸ್ನಾನ ಕರ್ಮಾದಿಗಳನ್ನು ತೀರಿಸಿ, ತಮ್ಮ ಕಾರ್ಯದಲ್ಲಿ ಮಗ್ನರಾಗಿರುತ್ತಿದ್ದರು. ಆದರೆ ತಿಲಕರಿಗೆ ಸೂರ್ಯನು ಮೇಲೇರುವ ಮುಂಚೆ ಎದ್ದು ಅಭ್ಯಾಸವೇ ಇರಲಿಲ್ಲ. ಒಂದು ದಿವಸ ಅಕಸ್ಮಾತ್ತಾಗಿ ಅವರಿಗೆ ಬೇಗನೆ ಎಚ್ಚರಿಕೆಯಾಯ್ತು. ನೋಡುವಾಗ ದಾದಾಭಾಯಿಯವರು ತಿಲಕರ ಬೂಟ್ಸಿಗೆ ಪಾಲಿಶ್ ಮಾಡುತಿದ್ದರು.

ತಿಲಕರು ಬೆಚ್ಚಿಬಿದ್ದು ದಿಗ್ಗನೆ ಎದ್ದು ಒಂದೇ ಜಿಗಿತ ಹಾರಿ ಅವರ ಕೈಯಲ್ಲಿದ್ದ ಬೂಟ್ಸನ್ನು ಸೆಳೆದು ಕೊಂಡರು.—"ಇದೇನು ನನ್ನ ಗುರುಗಳಾಗಿ ಇದೇನು ಮಾಡುತ್ತಿರುವಿರಿ?"

'ನಾನು ನನ್ನ ಬೂಟ್ಸನ್ನು ಪಾಲಿಶ್ ಮಾಡುವಾಗ, ನಿನ್ನ ಬೂಟ್ಸಿಗೂ ಪಾಲಿಶ್ ಮಾಡಿದೆ. ಅದೇನು ಮಹಾ ವಿಷಯ? ಅಲ್ಲಾ, ನನ್ನ ನಿನ್ನಲ್ಲಿ ಏನಾದರೂ ಭೇದವಿದೆಯೆ?' ಎಂದು ಶಾಂತಿಯಿಂದ ನುಡಿದರು ನೌರೋಜಿ

'ಇವತ್ತು ನೌಕರ ಬರಲಿಲ್ಲವೆ? ನೀವೇಕೆ ಕೆಲಸ ಮಾಡುತ್ತಿರುವಿರಿ?' ಎಂದು ಸಂಕೋಚದಿಂದ ನುಡಿದರು ತಿಲಕ್

'ಇವತ್ತೇನು, ಇಲ್ಲಿಗೆ ಯಾವಾಗಲೂ ನೌಕರನು ಬಂದಿಲ್ಲ. ನಾನೇ ಮುಂಜಾನೆ ತುಸು ಬೇಗ ಎದ್ದು ಕಸಗುಡಿಸುವ, ಬಟ್ಟೆಗೆ ಬ್ರೈಶ್ ಹಾಕುವ, ಬೂಟ್ಸಿಗೆ ಪಾಲಿಶ್ ಹಾಕುವ ಕೆಲಸ ಮಾಡುತ್ತೇನೆ. ನೀನು ಸಂಕೋಚಪಡಬೇಡ!' ಎಂದರು ಭಾರತದ ಹಿರ್ವ ಸ್ವಾತಂತ್ರ್ಯ, ಸೇನಾನಿ 'ದಾದಾಭಾಯೀ ನೌರೋಜಿ.

ಕಣಿ

ಕಣಿಯ ಹೇಳಲು ಬಂದೆ ಕೇಳಣ್ಣ,
ಜನದೇಳ್ಗೆಯುಪಾಯವ ತಿಳಿಯಣ್ಣ,...

|| ೧ ||

ಜೆಟ್ಟು ವಿಮಾನದಿ ಚಲಿಸಣ್ಣ,
ಬೆಟ್ಟ ಕೈಲಾಸವನೇರಣ್ಣ,
ದಿಟ್ಟತನದಿ ಚಂದ್ರಲೋಕವ ಸುತ್ತುತ,
ಸೃಷ್ಟಿ ವೈಚಿತ್ರ್ಯವ ನೀಸಾರಣ್ಣ

|| ೨ ||

ತಂತ್ರವಿಜ್ಞಾನವ ಕಲಿಯಣ್ಣ,
ಯಂತ್ರದ ಭೇದವನರಿಯಣ್ಣ,
ನವಗ್ರಹ ಹುಟ್ಟುಸಾವುಗಳ ನರಿತು ನೀ,
ಸೃಷ್ಟಿಕರ್ತನಿಗೆ ಕೈತೋರಣ್ಣ.

|| ೩ ||

ಲೋಕಶಿಕ್ಷಣವನರಿಯಣ್ಣ,
ಲೋಕಶಕ್ತಿಯನು ಗಳಿಸಣ್ಣ,
ಲೋಕಕಲ್ಯಾಣದ ಶಾಂತಿಸಂದೇಶವ
"ಸರ್ವೋದಯ"ಕಾಗಿ ಸಾರಣ್ಣ.

|| ೪ ||

ಧುಮುಕುವ ನೀರನು ತಡೆಯಣ್ಣ,
ಸುಳಿಯುವ ಗಾಳಿಯ ಹಿಡಿಯಣ್ಣ,
ಬೆಳಗುವ ಸೂರ್ಯನ ಉರಿಯಸಂಗ್ರಹಿಸುತ
ವಸ್ತುಸ್ಥಿತಿಯನು ನೀ ತಿಳಿಯಣ್ಣ

|| ೫ ||

ನೆಲದೊಳು ಖನಿಜವ ಹುಡುಕಣ್ಣ,
ನೀರಲಿ ಮುತ್ತನು ಅರಸಣ್ಣ,
ಪಂಚಭೂತಗಳ ಗೌಪ್ಯಶಕ್ತಿಯನು
ವಿಶ್ವಶಾಂತಿಗಾಗಿ ಉಪಯೋಗಿಸಣ್ಣ.

|| ೬ ||

ಪಂಚತತ್ವವನು ತಿಳಿಯಣ್ಣ, ಗ್ರಾಮ-
ಸಂಚಾಯತಗಳನು ರಚಿಸಣ್ಣ,
ಕೋರ್ಟುಕಚೇರಿಯ ತ್ಯಜಿಸುತ,
ಗ್ರಾಮರಾಜ್ಯವನು ಸಾರಣ್ಣ.

|| ೭ ||

ಆತ್ಮಪರಿಶೋಧನೆ ಯರಿಯಣ್ಣ, ಪರ-
ಮಾತ್ಮನಲಿ ಭಕ್ತಿಯಿರಿಸಣ್ಣ,
ಅನಂತ ವಿಶ್ವದ ವಿಶಾಲ ಜನತೆಯ
ಸರ್ವಾಂಗೀಣ ಉನ್ನತಿ ಬಯಸಣ್ಣ.

— ಸಿರಿಪತಿ.

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು. ರಾಘವೇಂದ್ರ ಆಚಾರ್ಯ, ಎಂ.ಎ.)

ಸಾಮಾನ್ಯ ರೋಗಗಳು
(ಡಾ. ಕೆ.ಎಲ್. ಐತಾಳ, ಎಂ.ಬಿ.ಬಿ.ಎಸ್)
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.

ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ, ಉಡುಪಿ.



ಅಮೆರಿಕದಲ್ಲಿ ಭಾರತದ ಹೊಸ ರಾಯಭಾರಿಯಾಗಿ ನೇಮಕಗೊಂಡಿರುವ ಶ್ರೀ ಬಿ. ಕೆ. ನೆಹರೂರವರು ಸೆಪ್ಟಂಬರ್ ೨೧ರಂದು ಅಧ್ಯಕ್ಷ ಕೆನೆಡಿಯವರನ್ನು ವಾಷಿಂಗ್ಟನ್‌ನ ಶ್ವೇತ ಭವನದಲ್ಲಿ ಭೇಟಿಮಾಡಿ ತಮ್ಮ ಪರಿಚಯ ಪತ್ರಗಳನ್ನು ಅರ್ಪಿಸಿದಾಗ ತೆಗೆದ ಚಿತ್ರ.

ಸುಲಭ ದರದಲ್ಲಿ
ಶಾಲೆಗಳಿಗೆ ಬೇಕಾಗುವ
ಯಾವತ್ತೂ ಫಾರ್ಮುಗಳೂ
ಹಾಜರಿ ರಿಜಿಸ್ಟ್ರಿಗಳೂ ಸಿಗುತ್ತವೆ
ನವಯುಗ ಪ್ರೆಸ್ ಉಡುಪಿ.

ಪುಸ್ತಕ ವಿಮರ್ಶೆ

[ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿ ವಿನಂತಿ. —ಸಂ. ನ.]

ರಾಮಾಯಣ ಕಥಾಸಾರ ಮಾಲಿಕೆ: ಬರೆದವರು: ಶ್ರೀ ಎಂ. ಬಿ. ಶಂಕರರಾವ್, ಬಿ. ಎ., ಐ. ಎ. ಎಸ್. (ರಿಟಾಯರ್ಡ್) ಪ್ರಕಾಶಕರು: ಕಲ್ಯಾಣ ಪ್ರೆಸ್, ಉಡುಪಿ. ಪುಟಗಳು: ೧೫೯. ಬೆಲೆ: ೧= ೫೦.

ಆದಿಕವಿ ವಾಲ್ಮೀಕಿಯ ಮಹಾಕಾವ್ಯ "ರಾಮಾಯಣ"ವು ಭಾರತೀಯರ ಗೌರವಾದರಗಳಿಗೆ ಪಾತ್ರವಾಗಿದೆ. ಕನ್ನಡದ ಉದ್ಧಾಮಕವಿ ಕುಮಾರವ್ಯಾಸನು "ತಣಿಕೆದನು ಫಣಿರಾಯ ರಾಮಾಯಣದ ಕವಿಗಳ ಭಾರದಲಿ ತಿಂತಿಣಿಯ ರಘುವರ ಚರಿತೆಯಲಿ ಕಾಲಿಡಲು ತೆರಪಿಲ್ಲ" ಎಂದು ಮಹಾ ಭಾರತದ ಕಥಾ ರಚನೆಗೆ ತೊಡಗಿದರೂ ರಾಮಾಯಣದ ಮಾಲ್ಯ ಕಡಿಮೆಯಾಗಿಲ್ಲ. ಉತ್ತರ ಭಾರತದಲ್ಲಿ ತುಲಸೀ ರಾಮಾಯಣದ ಪ್ರತಿಗಳಷ್ಟು ಬೇರಾವುದೇ ಗ್ರಂಥವು ಆಜ್ಞಾಗುವುದಿಲ್ಲವೆಂಬಾಗ ಆ ಗ್ರಂಥದ ಬಗ್ಗೆ ಜನಾನುರಾಗವೆಷ್ಟಿದೆಯೆಂಬುದರ ಅರಿವಾಗುವುದು. ಕನ್ನಡದಲ್ಲಿ ರಾಮಾಯಣದ ಕಥೆಗಳು ಕೆಲವಿರುವುವಾದರೂ ಅವು ಇಂದಿನ ಜನರ ಭಾಷೆಯಲ್ಲಿಲ್ಲ. ನಾಗಚಂದ್ರನ ರಾಮಚಂದ್ರ ಚರಿತ ಪುರಾಣ, ನರಹರಿಯ ತೊರವೆ ರಾಮಾಯಣ, ಕುಮುದೇಂದುವಿನ ಕುಮುದೇಂದು ರಾಮಾಯಣ-ಮೊದಲಾದುವು ಉಚ್ಚಮಟ್ಟದ ಸಾಹಿತ್ಯ ಭಾಷೆಯಲ್ಲಿ ಬರೆಯಲ್ಪಟ್ಟಿದ್ದು, ಅವಿಂದಿನ ಜನರ ಕೈಗೆ ನಿಲುಕುವುದು ತುಸು ಕಷ್ಟ. ಇದರಿಂದಾಗಿಯೇ ಈಗ ತಿಳಿಯಾದ ಭಾಷೆಯಲ್ಲಿ ಇಂದಿನ ಜನಸಾಮಾನ್ಯರಿಗೆ ಅರ್ಥವಾಗುವಂತೆ ಸರಳಾಂದಸ್ಸಿನಲ್ಲಿ ರಾಮಕಥೆಯನ್ನು ಬರೆದು ಶ್ರೀ ಶಂಕರ ರಾಯರು ಕನ್ನಡಿಗರ ಕೃತಜ್ಞತೆಗೆ ಪಾತ್ರರಾಗಿದ್ದಾರೆ.

ರಾಮಾಯಣದ ಹಿರಿಮೆ ರಾಮನ ವನವಾಸ, ದಶಕಂಠ ರಾವಣನ ಸಂಹಾರದಲ್ಲಿಲ್ಲ. ತಂದೆ-ಮಕ್ಕಳ ಸಂಬಂಧ, ಅಣ್ಣ ತಮ್ಮಂದಿರ ಬಂಧುಭಾವ, ಗಂಡ-ಹೆಂಡರ ಕರ್ತವ್ಯ-ಇವೇ ಮೊದಲಾದ ಗಾರ್ಹಸ್ಥ ಜೀವನದ ಕ್ಷುಕಿರಣದಲ್ಲಿ ಅಡಗಿದೆ ಈ ಹೆಚ್ಚುಗಾರಿಕೆ ರಾಮಾಯಣವು ಮತ್ತಾವುದರ ಕಥೆಯೂ ಆಗಿರದೆ ಮಾನವ ಸಹಜವಾದ ಒಂದು ಕೌಟುಂಬಿಕ ಜೀವನದ ಸಹಜ ದರ್ಶನದ ಕಥೆಯಾಗಿದೆ. ಪರಮಾತ್ಮನೇ ಅವತಾರ ಪಡೆದು, ಮಾನವ ರೂಪದಲ್ಲಿ ಜನಿಸಿದನೆಂದು ರಾಮಾಯಣ ಹೇಳುತ್ತದೆ. ಮಾನವನೇ ತನ್ನ ಅನುಪಮವಾದ ಗುಣಗಳಿದ ಪರಮಾತ್ಮ ಪದವಿಗೇರಿದನೆನ್ನುವ ವಿಮರ್ಶಕರೂ ಇದ್ದಾರೆ. ಅದೇನೇ ಇದ್ದರೂ ಚರ್ಚೆಯ ವಿಷಯವನ್ನುಳಿದರೆ, ರಾಮಕಥೆ ಕಥೆ ಮಾತ್ರವಲ್ಲ, ಸಾಂಸಾರಿಕ ಧರ್ಮಶಾಸ್ತ್ರವೂ ಹೌದು. ಈ ದೃಷ್ಟಿಯಿಂದ ರಾಮಾಯಣದ ಪ್ರಸಾರ ಕನ್ನಡಿಗರ ಮನೆ ಮನೆಯಲ್ಲೂ ಆಗಬೇಕು. ಇದಕ್ಕೆ ತಕ್ಕುದಾದ ಜಾಣವಿ ಛಂದಸ್ಸಿನಲ್ಲಿ ಈ ಕಥಾಮಾಲಿಕೆ ಹೊರಬಿದ್ದಿದೆ.

ಮದ್ರಾಸ ಸರಕಾರದ ಉನ್ನತ ಪದವಿಯಿಂದ ನಿವೃತ್ತಿ ಪಡೆದ ಶ್ರೀ ಶಂಕರರಾಯರು ವಾಲ್ಮೀಕಿ ರಾಮಾಯಣದ ಕಥೆಯನ್ನು ಸರಳಗನ್ನಡದಲ್ಲಿ ಬರೆದಿದ್ದಾರೆ. ಮೂಲಕಥೆಯಲ್ಲಿ ಯಾವ ಪರಿವರ್ತನೆಯನ್ನೂ ಮಾಡದೆ, ಇದ್ದಕ್ಕಿದ್ದಂತೆ ನಮ್ಮ ಮುಂದೆ ಇಟ್ಟಿದ್ದಾರೆ. ಪದ್ಯಗಳ ಶೈಲಿಯೂ ದರೂ ಬಹು ಲಲಿತವಿದೆ. ರಾಮ ಲಕ್ಷ್ಮಣ ಸೀತೆಯರು ಪಂಚವಟಿಯಲ್ಲಿ ದಿನಯಾಪನೆ ಮಾಡಿದ ರೀತಿ ತಿಳಿಸುವ ಈ ಪದ್ಯವನ್ನು ನೋಡಿರಿ.

ತಿಳಿನೀರಕೊಳದಿ ಮಜ್ಜನವನ್ನುಮಾಡಿ
ಬೆಳಕಿರುವ ನೆಲದಲ್ಲಿ ನಲಿನಲಿದು ಓಡಿ
ಬಳಿಯಿರುವ ಚೂತಫಲರಸವ ಹೀರಿದರು
ಅಳಿವಿಲ್ಲವಿಪಿನದಲಿ ಎಂದು ಸಾರಿದರು।

ಪದಗಳು ಒಂದರ ಹಿಂದೊಂದೆಂಬಂತೆ ಸಹಜವಾಗಿ ನಲಿನಲಿದು ಮುಂದೆ ಬಂದುದನ್ನು ನಾವಿಲ್ಲಿ ಕಾಣಬಹುದು. ಸೀತೆ ಅಗ್ನಿ ಪರೀಕ್ಷೆ ಸಂಬಂಧದಲ್ಲಿ ಕವಿಗಳ ವರ್ಣನೆ ನೋಡಿರಿ:

ಧರಿಸಿದ್ದ ಪೂಮಾಲೆ ಬಾಡಲಿಲ್ಲವದು
ವರ ಅಗ್ನಿದೇವ ಪ್ರಸಾದ ದಿಂದಿಹುದು
ಧರಿಸಿದ್ದ ವಸ್ತ್ರಗಳು ಶೋಭಾಯಮಾನ
ದುರಿತವಿಲ್ಲವು ಮಾಯನಾದುದಪಮಾನ ॥

ಛಂದಸ್ಸಿಗೆ ಹೊಂದಿಕೊಡು, ಆದ್ಯಂತ ಪ್ರಾಸಗಳೂ ವಿರತಿಯೂ ಅನುಕೂಲವಾಗಿ ಬಂದಿರುವುದನ್ನು ನಾವು ಗಮನಿಸಬಹುದು. 'ರಾಮಾಯಣ ಕಥಾ ಮಾಲಿಕೆ"—ಪ್ರತಿ ಮನೆಯಲ್ಲೂ ನಲಿದಾಡಬೇಕು; ಪ್ರತಿ ನಾಲಿಗೆಯಲ್ಲೂ ಕುಣಿದಾಡಬೇಕು. ಇಂತಹ ಅವಕಾಶವೊದಗಿ ಬಂದರೆ ಲೇಖಕ ಪ್ರಕಾಶಕರ ಶ್ರಮ ಸಾರ್ಥಕವಾಗುವುದು.

ಲಘುಪರಿಚಯ

ನವೋದಯ—ಸುರತ್ಕಲ್ಲಿನ ವಿದ್ಯಾದಾಯಿನೀ ಹೈಸ್ಕೂಲಿನ ವಿದ್ಯಾರ್ಥಿ ಸರಕಾರದಿಂದ ಪ್ರಕಾಶಿತವಾದ ಈ ವಾರ್ಷಿಕ ಪತ್ರಿಕೆಯಲ್ಲಿ ವಿದ್ಯಾರ್ಥಿ ಬಂಧುಗಳ ಅನೇಕ ಕವನ, ಲೇಖನ, ಮತ್ತು ಕಥೆಗಳಿವೆ. ಕನ್ನಡದ ಕವಿಗಳಲ್ಲಿ ಒಂಭತ್ತು ಜನರ ಪರಿಚಯ ನೀಡುವ 'ನವರತ್ನಮಾಲಿಕೆ', ಕನ್ನಡ ಸಾಹಿತ್ಯ ಸಮ್ಮೇಳನ', 'ಜೀವನ ನೌಕೆ' ಮೊದಲಾದ ಕೆಲವು ಕವಿತೆಗಳು ನಮ್ಮ ಎಳೆಯರಲ್ಲಿ ಕವಿತ್ವದ ಸೆಲೆಯಿದೆ; ಅವಕಾಶ ದೊರೆತಾಗ ಅದು ಹೊರ ಚಿಮ್ಮತ್ತದೆಯೆಂಬುದನ್ನು ಮನವರಿಕೆ ಮಾಡಿಕೊಡುತ್ತವೆ, 'ಮಂಜುಪೂಂಜರ ಪಾದ್ದನ'ವು ಜಾನಪದ ಸಾಹಿತ್ಯ ಸಕ್ತಿಪ್ರಜೋದಕವಿದೆ. ಸಂಚಿಕೆಯ ಕನ್ನಡ ವಿಭಾಗವು ಸಂಗ್ರಾಹ್ಯವಿರುವುದು ಸಂತೋಷ. ಇಂಗ್ಲಿಷ್ ಮತ್ತು ಹಿಂದೀ ವಿಭಾಗಗಳೂ ತೃಪ್ತಿಕರವಿವೆ ಒಟ್ಟಿನಲ್ಲಿ ವಿದ್ಯಾರ್ಥಿ ಪತ್ರಿಕೆಯ ಉದ್ದೇಶ ಸಫಲಗೊಂಡಿದೆ ಅವರ ಶ್ರಮಪರಿಚಯದಿಂದ ತೃಪ್ತಿಯ ಮಂದಹಾಸ ಮೂಡುತ್ತದೆ.

ಬಾಲವಾಣಿ— ಇಂಗ್ಲಿಷ್ ಮತ್ತು ಕನ್ನಡ ವಿಭಾಗಗಳಿಗೆ ಸಮಾನ ಪ್ರಾಶಸ್ತ್ಯವಿತ್ತು ಮಂಗಳೂರಿನ ಗಣಪತಿ ಹೈಸ್ಕೂಲಿನ ಈ ಶಾಲಾ ಪತ್ರಿಕೆಯನ್ನು ಸ್ವಾಗತಿಸುತ್ತೇವೆ. ಕನ್ನಡ ವಿಭಾಗದಲ್ಲಿ ಪ್ರಕಟವಾದ ಲೇಖಾದಿಗಳಿಗಿಂತಲೂ ಇಂಗ್ಲಿಷ್ ವಿಭಾಗದವು ಬಹು ಮನೋಹರವಾಗಿವೆ. ಲೇಖನಗಳು ಚಿಕ್ಕವಾಗಿರುವುದು ಇಲ್ಲಿ ನಾವು ಕಾಣುವ ವೈಶಿಷ್ಟ್ಯ 'The Little Detective'ನಂತಹ ಒಂದೆರಡು ಲೇಖಗಳು ಮೂರನೆಯ ಫಾರ್ಮಿನ ವಿದ್ಯಾರ್ಥಿಗಳಿಂದ ಬರೆಯಲ್ಪಟ್ಟವೆಂಬುದು ಅಭಿಮಾನದ ಸಂಗತಿ. ಜಿಲ್ಲೆಯ ಹಳೆಯ ಹೈಸ್ಕೂಲುಗಳಲ್ಲಿ ಅಗ್ರಗಣ್ಯವಾದ ಗಣಪತಿ ಹೈಸ್ಕೂಲು ಹಿಂದಿನಿಂದಲೂ ಉನ್ನತ ಶಿಕ್ಷಣಸ್ತರವನ್ನಿರಿಸಿಕೊಂಡಿದೆ ಎಂಬುದು ಸಂತೋಷ. ಮುಂದಿನ ವರ್ಷ 'ಕನ್ನಡದ ವಿಭಾಗ'ವನ್ನೂ ಇನ್ನಷ್ಟು ಹಸನಗೊಳಿಸುವರೆಂದು ನಂಬಿ, ವಿದ್ಯಾರ್ಥಿಗಳ ಪ್ರಯತ್ನವು ಸಫಲವಾಗಲೆಂದು ಹಾರೈಸುತ್ತೇವೆ.

ಕುಸುಮಾವಲಿ: ಬಾಲಬಂಧು ಶ್ರೀ ಮು. ಗೋಪಾಲಕೃಷ್ಣ ನಾಯಕ್ ಅವರು ತಮ್ಮ ಬಾಲೋಚಿತ ಉತ್ಸಾಹದಿಂದ ಬರೆದ ಏಳು ಕಿರುಗವನಗಳನ್ನು "ಕುಸುಮಾವಲಿ" ಯೆಂಬ ಈ ಎಳೆಯ ಹೊತ್ತಗೆಯಲ್ಲಿ ಸಂಗ್ರಹಿಸಿದ್ದಾರೆ. "ಸಂಜೆಗತ್ತಲು" ಎಂಬುದು ಅರ್ಥವತ್ತಾದ ಉತ್ತಮ ಕವಿತೆ. ಶ್ರೀ ನಾಯಕರಲ್ಲಿ ಕವಿತೆ ಬರೆಯುವ ಶಕ್ತಿಯಿದೆ. ಅದು ಪ್ರವರ್ಧಮಾನವಾಗಲೆಂದು ಹಾರೈಕೆ. ಪುಸ್ತಕದ ಪ್ರಕಾಶಕರು ಬ್ರಹ್ಮಾವರದ "ಮಿತ್ರ ಮಂಡಲ" ಯವರು. ಬೆಲೆ: ೧೦ ನ. ಪೈಸೆ. —ಗೋರಾ.

ಲೈಬ್ರೆರಿಗಳಿಗೆ ಉತ್ತಮ ಪುಸ್ತಕಗಳು

ಅಣೆಕಲ್ಲು	ಸಂಕಲನ (ಭಾಗ ೧)	0 = 75
ಪೆದ್ದಂ ಕತೆಗಳು	ವಿ. ಜಿ. ಭಟ್ಟ	1 = 00
ನಾವು ನಮ್ಮವರು	ಸಂಕಲನ	1 = 50
ಬಾಣಭಟ್ಟನ ಆತ್ಮಕಥೆ	(ಕೃಷ್ಣಮೂರ್ತಿ)	3 = 50
ಚೆಲುವಿನ ನಿಲುವು	ವಿ. ಕೃ. ಗೋಕಾಕ	1 = 80
ಎಂಬತ್ತು ದಿನಗಳಲ್ಲಿ ಪ್ರಪಂಚ ಪ್ರವಾಸ	ಅನು: ಬಿ. ಕೆ. ಸುಬ್ಬಲಕ್ಷ್ಮಿ	1 = 00
ರೂಪಾ-ಸಂಕಲನ	ಸರೋಜಿನಿ ಮಹಿಷಿ	1 = 00
ಸಸ್ಯವಿಜ್ಞಾನಿಗಳ ಕತೆಗಳು	ಎಂ. ಎಸ್. ಎಸ್. ರಾವ್	1 = 75
ಅನ್ನಪೂರ್ಣಾ	ನಿರಂಜನ	1 = 00
ಹುಚ್ಚು ಹುರುಳು	Bichi	1 = 00
ವಾಸ-ಪುಣ್ಯ	ಈಶ್ವರ ಚಂದ್ರ ಚಿಂತಾಮಣಿ	1 = 50
ಕನ್ನಡಸಾಹಿತ್ಯ ಮತ್ತು ರಾಜಾಶ್ರಯ	ಡಿ. ಎನ್. ರಾಮ	0 = 62
ಶ್ರೀಕಾಂತ	ಶರತ್	9 = 00
ಹೇಮಂತ	ಪ್ರಿಯದರ್ಶಿ	4 = 00
ಕರಿಚರ್ಮ	ಸೇವನಮಿರಾಜಮಲ್ಲ	2 = 50
ಶಕುಂತಲಾ	ನಾ. ಸೀ. ಘಡಕೆ	2 = 75
ವಿಧಿ ವಿಲಾಸ	ಕಪಸ್ತಿನಿ	3 = 00
ದೇವದಾಸ	ಶರತ್	1 = 50
ಅರಗಿನ ಮನೆ	ಶರತ್	4 = 00
ಹತ್ತು ಹೆಜೆಯ ಹಾವು	ಧಾ. ನಿಂ. ಬೆಳಗಲಿ	1 = 50
ಶ್ಯಾಮನ ತಾಯಿ	ಸಾನೇ ಗುರೂಜಿ	2 = 50
ಆಕಾಂಕ್ಷೆ	ನವಗಿರಿನಂದ	1 = 50
ಈಬುವಿಈಬಾಳು	ಹ. ವೆಂ. ರಾಮಸ್ವಾಮಿ	1 = 50
ಚಂದ್ರಹಾರ	ಪ್ರೇಮಚಂದ	2 = 25
ಪತಿವ್ರತೆಯ ಪ್ರಭಾವ	ಕೌ. ಬಂಡಾಚಾರ್ಯ	1 = 25
ಪೋಡತಿ	ಶರತ್	3 = 00
ಆಶ್ರಮವಾಸಿ	ಬ. ಕಟ್ಟೀಮನಿ	1 = 50
ಅಪರುದ್ಧರು	ನವಗಿರಿನಂದ	1 = 50
ಸಂಧ್ಯಾನಿಕರು	ಗೋ. ಮೂ. ದೇಸಾಯಿ	1 = 50
ಬ್ರಹ್ಮಚರ್ಯವೇ ಜೀವನ	ಸ್ವಾಮಿಶಿವಾನಂದರು	3 = 00
ಕನ್ನಡ ಸಾಹಿತ್ಯ ಸಮ್ಮೇಳನದ ಕಥೆ	ಸುರೇಂದ್ರದಾಸಿ	1 = 50
ಜೀವನ ಪಾಠಗಳು	ವಿ. ಕೃ. ಗೋಕಾಕ	1 = 25
ಚಿದಂಬರಲೀಲಾಮೃತ	ಚಿದಂಬರ	4 = 00
ಸಜೀವಿಗಳ ಸಮಸ್ಯೆಗಳು	ಎಮ್. ಎಸ್. ಎಸ್. ರಾವ್	1 = 0
ಕೈಗನ್ನಡಿ	ಕಲಮದಾಸಿ	1 = 50
ಜ್ಯೋತಿರ್ಗನ್ನಡಿ	ರತ್ನಕಾಂತ	2 = 50
ಆದಿ ಚುಂಚನಗಿರಿ (	ಕ ರಾ. ಕೃ	0 = 00
ಔತಣ	ಪರ್ವತವಾಣಿ	0 = 50
ತಾರಾಸಖಿ	ಸಿ. ಪಿ. ಕೆ.	1 = 25
ಜನಪದ ಗೀತೆಗಳು	ಚಂದ್ರಶೇಖರ	1 = 50
ಅವರ ನೆನೆದೇವು	ಜಿ.ಶಂ. ಪರಮಶಿವಯ್ಯ	1 = 25
ಕರುಳಿನ ಸೆಳೆತ	ಸಿ. ಅಂಶಿಪ್ಪ	0 = 75
ಸೋಲುತಂದ ಸ್ವಯಂವರ	ಪರಮಶಿವಯ್ಯ	0 = 50
ಸುಲಭ ಪ್ರಶ್ನಾಪದ್ಧತಿ	ಕೇಶವ ಶರ್ಮ	1 = 50
ನಮ್ಮ ನೂತನ ರಾಜ್ಯ ಘಟನೆ		0 = 60
ಲಲಿತ ಪ್ರಬಂಧಗಳು	ಹುಯಿಲ ಗೋಳ	0 = 60
ಆಕಾಶ ಬುಟ್ಟಿ	ಚಿನ್ನವೀರ ಕಣವಿ	1 = 50
ಭಾರತೀಯ ಸಂಸ್ಕೃತಿಯ ಹಿರಿಮೆ	ದೇಶಪಾಂಡೆ	2 = 00
ಆಕಸ್ಮಿಕ ಧನಯೋಗ	ಎನ್. ಕೆ. ಜೋಗಳೇಕರ	1 = 50
ಸಾಹಿತ್ಯ ಶೈಲಿ	ಬ. ಹ. ಶ್ರೀಧರ	1 = 25
ಗುರುಕೃಪೆ	ಎಸ್. ವಿ ಕೋನೇರಿಪುರ	0 = 50
ನರಭಕ್ಷಕಗಳು	ಜೆ. ಎಚ್. ಪೀಟರ್‌ಸನ್	0 = 80
ಸನ್ಯಾಸಿದಿಟ್ಟ	ಸಿಂಪಿ ಲಿಂಗಣ್ಣ	0 = 75
ಹುಚ್ಚರ ರಾಜ್ಯ	ಶಿವಕುಮಾರ	0 = 75
ಬಾಲ ತಪಸ್ವಿ (ಏಕಾಂಕ)	ಉಳುವೀಶ	0 = 37
ಅಳಬೇಕೋ ನಗಬೇಕೋ	ಹೊಸಮನಿ	0 = 37
ನೌಕರಿಯ ಹುಚ್ಚು (ನಾಟಕ)	ಶಂ. ಗು. ಬಿಂಗಾದರ	0 = 37
ಸಿವಳ್ಳಿ ಸಿಂಗ್ಲೀಕ	ರಾಮಸ್ವಾಮಿ	0 = 75
ಹಕ್ಕಿಯ ಹಾಡು	ಸುರೇಶ ಹೊಸಪೆಟ್ಟಿ	0 = 25
ಕಾಂಚನ ಮೃಗ	ಷಾಂ. ದ. ಶಹಾಣೆ	3 = 00
ಗುರುಕುಲ	ಕೃಷ್ಣ ಪಾಟೀಲ	1 = 00
ಹುಚ್ಚು ಪ್ರಣಯ	ಅನು. ಹ. ರಾ. ಕಿದಿಯೂರು	0 = 60
ಭೀಮಕಾಯ	ಎಸ್. ಎಲ್. ಭೈರಪ್ಪ	2 = 50
ಆಳುಕಾಳು	ಅಷ್ಟಾವಕ್ರ	1 = 00
ಸಂಸಾರ ಸುಖ	ಲಿಯೋಟಾಲ್ ಸ್ಟಾಯ್	1 = 25

ಕೆಟಲಾಗಿಗೆ ಬರೆಯಿರಿ;
ನವಭಾರತ ಪುಸ್ತಕ ಭಂಡಾರ, ಉಡುಪಿ.

ಅಧಕ ನಸೇರರ ಧರ್ಮಸಂಕಟ

ಶಿಷ್ಟ ಸ

ಮೂರೂವರೆ ವರ್ಷಗಳಿಗೆ ಮೊದಲು ಐಗುಪ್ತ ಮತ್ತು ಸಿರಿಯಾಗಳು ಒಂದುಗೂಡಿ ಸಂಯುಕ್ತ ಅರಬ ರಾಷ್ಟ್ರವೆಂಬ ಹೆಸರನ್ನು ಪಡೆದಾಗ ವಿಚ್ಛಿನ್ನವಾದ ಅರಬ ರಾಷ್ಟ್ರಗಳು ಸಂಮ್ಮಿಲನಗೊಂಡು ತಮ್ಮ ಆಶೋತ್ತರಗಳನ್ನು ಯಶಸ್ವಿಯಾಗಿ ಪೂರೈಸಿಯಾವು ಎಂಬ ಆಶೆಯನ್ನು ಕಟ್ಟಿಕೊಂಡಿದ್ದರು. ಅದರ ಬೆನ್ನ ಹಿಂದೆಯೇ ಜೋರ್ಡಾನ್ ಸಾದಿ ಅರೆಬಿಯಾಗಳ ಒಕ್ಕೂಟದ ಮಾತು ಕೇಳಿ ಬರುತಿತ್ತಾದರೂ ಅದು ಅಸ್ಪರಲ್ಲೇ ಪರ್ಯವಸಾನಗೊಂಡಿತು. ಆದರೆ, ಈಗ ಸಿರಿಯಾವು ಸಂಯುಕ್ತ ಅರಬ ರಾಷ್ಟ್ರದ ಸಂಬಂಧವನ್ನು ಕಡಿದೊಗೆದು ಪ್ರತ್ಯೇಕ ಸಾರ್ವಭೌಮಾಧಿಕಾರವಿರುವ ರಾಷ್ಟ್ರವೆಂದು ಘೋಷಿಸಿರುವುದರಿಂದ ಅಧ್ಯಕ್ಷ ನಸ್ಸೇರರು ಮೂತ್ರವಲ್ಲ, ಎಲ್ಲರೂ ಎಚ್ಚರಿಕೆಯಿಂದಿರ ಬೇಕಾಗುತ್ತದೆ

ಐಗುಪ್ತ ಮತ್ತು ಸಿರಿಯಾಗಳ ನಡುವೆ ಬಹು ದೂರವಿರುವುದಾದರೂ ಅವೆರಡೂ ಅರಬರಲ್ಲಿ ಒಗ್ಗಟ್ಟನ್ನು ಸಂಸ್ಥಾಪಿಸುವ ಸದುದ್ದೇಶವನ್ನಿಟ್ಟುಕೊಂಡು ಒಂದಾಗಿದ್ದುವು. ಆದರೆ, ಇವೆರಡರ ನಡುವಣ ಆಡಳಿತಾತ್ಮಕ ನೀತಿಯಲ್ಲಿ ತೀವ್ರ ಭಿನ್ನಾಭಿಪ್ರಾಯವೆದ್ದುದರಿಂದ ಅಲ್ಲಿ ಸೈನಿಕ ಬಂಡಾಯವಾಯಿತೆಂದು ಗೊತ್ತಾಗುತ್ತದೆ. ಸಿರಿಯಾದ ಅಧಿಕಾರ ಕ್ಷೇತ್ರವನ್ನು ಮಿತಗೊಳಿಸಿದುದು ಮೂತ್ರವಲ್ಲ ಅಧ್ಯಕ್ಷ ನಸ್ಸೇರರ ರಾಷ್ಟ್ರೀಕರಣ ನೀತಿಯಿಂದಾಗಿ, ಸಿರಿಯನರು ನೊಂದಿರುವರೆಂದೂ ಇದೇ ಅಲ್ಲಿನ ಕ್ರಾಂತಿಗೆ ಕಾರಣವಾಯಿತೆಂದೂ ಹೇಳಲಾಗುತ್ತಿದೆ. ಇದನ್ನು ಸಂಪೂರ್ಣವಾಗಿ ಅಲ್ಲಗಳೆಯುವುದು ಸಾಧ್ಯವಿಲ್ಲ. ಒಂದಾಗುವ ಸಮಯದಲ್ಲಿ ಉಭಯ ರಾಷ್ಟ್ರಗಳ ನಡುವೆ ಯಾವ ವಿಧದ ಒಡಂಬಡಿಕೆಯಾಗಿದೆಯೋ ಅದರ ಬಗ್ಗೆ ಸಿರಿಯಾದವರಾದ ಒಕ್ಕೂಟದ ಉಪಾಧ್ಯಕ್ಷ ಅಬ್ದುಲ್ ಹಹೀದ್ ಸಿರಾಜ್ ಮತ್ತು ನಸ್ಸೇರರ ನಡುವೆ ವಿವಾದ ಹುಟ್ಟಿಕೊಂಡಿತು. ಈ ಕಾರಣದಿಂದಲೇ ಅವರು ಕೆಲವು ತಿಂಗಳ ಹಿಂದೆ ರಾಜಿನಾಮೆ ಕೊಟ್ಟು ಹೊರಬಂದರು. ಇವರ ಬೆಂಬಲವು ಬಂಡಾಯಕ್ಕಿದಿರ ಬಹುದಾದರೂ ಸದ್ಯ ಅವರೇ ಸೆರೆಮನೆಯಲ್ಲಿ ಕೊಳೆಯುವಂತಾಗಿದೆ.

ಪ್ರತ್ಯೇಕತಾವಾದಿಗಳಾದ ಬಲಪಕ್ಷದವರು ಹೂಡಿದ ಬಂಡಾಯನೇ ನಡೆದ ದುರ್ಘಟನೆಗೆ ಕಾರಣ. ಉಪಾಧ್ಯಕ್ಷ ಸಿರಾಜರು ನಸ್ಸೇರರ ಪ್ರಬಲ ಸಮರ್ಥಕರಾಗಿದ್ದರೇನೋ ಹೌದು. ಅವರ ನಡುವೆ ವಿರಸವುಂಟಾಗಲು ಮಹಾ ಪ್ರಶ್ನೆಯೊಂದೇ ಎದ್ದಿರಬೇಕು. ಸಂಯುಕ್ತ ಅರಬ ರಾಷ್ಟ್ರದ ಆಡಳಿತ ವ್ಯವಸ್ಥೆಯನ್ನು ಹುನರ್ಘಟಿಸುವಾಗ, ಸಿರಿಯಾದಲ್ಲಿನ ಆಡಳಿತ ಮಂದಲಿಯನ್ನು ರದ್ದುಗೊಳಿಸಿದುದರಿಂದ ಉದ್ರೇಕಿತರಾಗಿಯೇ ಬಲಪಕ್ಷೀಯರ ಒತ್ತಡದಿಂದ ಈ ಕ್ರಾಂತಿಯಾಯಿತು ಎನ್ನಬಹುದು. ಸಿರಾಜರ ಮೇಲೆ ಇರಬೇಕಾದಷ್ಟು ಅಭಿಮಾನ ಸಿರಿಯನ್ ಜನಾಂಗ ಕೈಲ್ಲ. ಉಭಯ ಭಾಗಗಳ ಸಂಬಂಧವನ್ನು ಬೆಳೆಸಲು ಇವರು ನಿರುಪಯುಕ್ತರು ಎಂಬ ತಿಳುವಳಿಕೆ ನಸ್ಸೇರರಿಗೆ ಬಂದ ನಂತರವೇ ಇವರ ನಡುವೆ ವಿವಾದವೆದ್ದಿತೆಂಬುದು ನಿಜವೇ. ಆದುದರಿಂದಲೇ ಇವರಿಂದು ಕೈದಿಯಾಗಿ ಉಳಿದಿದ್ದಾರೆ.

ಸಿರಿಯಾದ ವ್ಯಾಪಾರಾಯಿಕ ಉತ್ಪನ್ನ, ಆರ್ಥಿಕ ಸ್ಥಿತಿಗತಿಗಳನ್ನು ಐಗುಪ್ತದೊಡನೆ ಹೋಲಿಸುವಾಗ ತೃಪ್ತಿಕರ ನಿರುವುದಿಲ್ಲ. ಅರಬರ ಐಕ್ಯಕ್ಕೆ ಎಲ್ಲರೂ ಬೆಂಬಲ ನೀಡುವರಾದರೂ ಅಧ್ಯಕ್ಷ ನಸ್ಸೇರರು ಸೀರಿಯನರ ಒಲವನ್ನು ಗಳಿಸಲು ಕ್ಷೇಮಕರವಾದ ಮಾರ್ಗವನ್ನು ಕಂಡುಹಿಡಿಯಲಿಲ್ಲ. ಇದಕ್ಕೂ ಮಿಗಿಲಾಗಿ, ನಸ್ಸೇರರ ರಾಷ್ಟ್ರೀಕರಣ ನೀತಿಯಿಂದಾಗಿ ಸಿರಿಯಾದ ಹೆಚ್ಚಿನ ಮಧ್ಯಮ ವರ್ಗದ ವ್ಯಾಪಾರಸ್ತರೂ ಉದ್ಯಮಿಗಳೂ ಆಘಾತಕ್ಕೆ ಗುರಿಯಾಗಿದ್ದಾರೆ. ಇವರಿಗೆ ಪ್ರೋತ್ಸಾಹವನ್ನು ನೀಡಲು ಸಮಾಜವಾದ ಪುರಸ್ಕರ್ತರಾದ ಬಾಥ್ ಪಕ್ಷದವರು ಮುಂದೆ ಬಂದರು. ಸಂಯುಕ್ತ ಅರಬರಾಷ್ಟ್ರದಲ್ಲಿ ನಸ್ಸೇರರ ರಾಷ್ಟ್ರೀಯ ಯೂನಿಯನ್ ಪಕ್ಷವನ್ನುಳಿದ ಎಲ್ಲವನ್ನೂ ನ್ಯಾಯ ಬಾಹಿರಗೊಳಿಸುವ ಇರಾದೆಯಿಂದ ಬಾಥ್ ಪಕ್ಷದವರುರೊಚ್ಚಿಗೆದ್ದಿರುವರು. ಇವರಿಗೆ ಪೋಲೀಸು ವಿಭಾಗದಲ್ಲಿಯೂ ಆಡಳಿತೆ ವರ್ಗದಲ್ಲಿಯೂ ಸಾಕಷ್ಟು ಬೆಂಬಲಿಗರು ಇರುವರೆಂಬ ವಾರ್ತೆ ದಟ್ಟವಾಗಿ ಹರಡಿದೆ.

ತನ್ನ ಕಿವಿಯನ್ನೇ ನಂಬದ ಅಧ್ಯಕ್ಷ ನಸ್ಸೇರರು ಸಿರಿಯಾವನ್ನು ಬಿಟ್ಟುಕೊಡುವುದಕ್ಕೆ ಸಿದ್ಧರಿಲ್ಲ. ಏಕೆಂದರೆ, ಒಕ್ಕೂಟವನ್ನು ರಚಿಸಿಕೊಂಡ ನಂತರವೇ ಅರಬ ರಾಷ್ಟ್ರಗಳ ನಾಯಕಮಣಿಗಳ ಸಾಲಿಗೆ ಸೇರಿದವರು ಇವರು. ಆದರೆ, ಸಿಡಿದು ಹೋಗಲು ಬಯಸುವ ಅದನ್ನು ಕಟ್ಟಿಕೊಳ್ಳುವೆನೆಂಬ ಆತ್ಮವಿಶ್ವಾಸವೂ ಅವರಲ್ಲಿಂದು ಮರೆಯಾಗ ತೊಡಗಿದೆ. ಮೊತ್ತಮೊದಲಿಗೆ ಬಂಡಾಯವನ್ನು ತಡೆಯಲು ಸೇನೆಯನ್ನವರು ಕಳಿಸಿದರೂ ಮುಂದೆ ಸೇನಾಶಾರ್ಯಕ್ರಮವನ್ನು ಬಿಟ್ಟುಕೊಟ್ಟರು. ಸಿರಿಯ ದೊಡನೆ ರಕ್ತ ಹರಿಸದೆ ಸಂಧಾನಕ್ಕೆ ತೊಡಗಲು ಅವರು ನಿರ್ಧರಿಸಿ, ತಮ್ಮ ಮುಕ್ಷದ್ಧಿತನವನ್ನು ಪ್ರದರ್ಶಿಸಿದ್ದಾರೆ.

ಮೊಹೌನ್ ಕುಸ್ಟರಿಯವರು ಇಂದು ಸಿರಿಯಾದ ಪ್ರಧಾನ ಮಂತ್ರಿಯಾಗಿದ್ದಾರೆ. ಅವರು ಹೆಚ್ಚಿನ ರಾಷ್ಟ್ರಗಳಿಗೆ ಪತ್ರ ಬರೆದು ತಮ್ಮ ಹೊಸ ಸರಕಾರವನ್ನು ಮನ್ನಿಸುವಂತೆ ಕೇಳಿಕೊಂಡಿದ್ದಾರೆ. ಜೋರ್ಡಾನ ಮತ್ತು ಟರ್ಕಿಗಳು ತಮ್ಮ ಸರಕಾರಗಳ ಮಾನ್ಯತೆಯನ್ನಿದಕ್ಕೆ ನೀಡಿವೆ. ಮೊದಲು ತನಗೆ ದೊರೆತಿದ್ದ ಸಂಯುಕ್ತ ರಾಷ್ಟ್ರ ಸಂಘದ ಸದಸ್ಯತ್ವಕ್ಕೂ ಸಿರಿಯಾ ಅರ್ಜಿ ಸಲ್ಲಿಸಿದೆ.

ಸಿಡಿದು ಬಂದ ಸಿರಿಯಾಕ್ಕೆ ಮನ್ನಣೆಯೀಯ ಬೇಕಾದರೆ ಬಹುವಿಚಾರ ಮಾಡಬೇಕಾಗಿದೆ. ಸಂಯುಕ್ತ ಅರಬ ರಾಷ್ಟ್ರದಿಂದ ಅದು ಶಾಶ್ವತವಾಗಿಯೇ ಹೊರನಿಲ್ಲುವುದೇ ನಿಲ್ಲುವುದಾದರೆ, ಅದೀಗ ಅನುಸರಿಸಿದ ಕ್ರಮ ಸರಿಯೇ ಎಂಬ ವಿಚಾರಗಳು ವಿಚಾರಾರ್ಹವಾಗಿದೆ. ಅಧ್ಯಕ್ಷ ನಸ್ಸೇರರೂ ಸಿರಿಯಾದ ಕ್ರಾಂತಿಯ ಮುಖಂಡರೂ ಈ ಸಂಬಂಧದಲ್ಲಿ ಒಂದು ತೀರ್ಮಾನಕ್ಕೆ ತೀವ್ರವಾಗಿ ಬರಬೇಕಾಗಿದೆ. ನಸ್ಸೇರರು ಶಾಂತಿಯಿಂದಾಗದಿದ್ದರೆ, ಸೈನಿಕ ಬಲದಿಂದಾದರೂ ಒಕ್ಕೂಟವನ್ನು ಉಳಿಸಿಕೊಳ್ಳುವುದಾದರೆ, ಸಿರಿಯಾಕ್ಕೆ ಮನ್ನಣೆಯೊಯುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಸುಯೇಜ ಕಾಲುವೆಯ ರಾಷ್ಟ್ರೀಕರಣ ಕಾರ್ಯದಲ್ಲಿಯೂ ಯಶಸ್ವಿಯಾದ ನಸ್ಸೇರರು ಈಗ ಸಫಲರಾಗುವರೆಂದು ಖಂಡಿತವಾಗಿ ಹೇಳುವಂತಿಲ್ಲ. ಇಂತಹ ಘಟನೆಯಿಂದ ಉಳಿದ ರಾಷ್ಟ್ರಗಳು ಅವಶ್ಯ ಪಾಠ ಕಲಿಯಬೇಕು.

(೨ನೇ ಪುಟದಿಂದ)

ಯವಾದ ಈ ಪ್ರಕೃತಿಯ ಮಹಾ ರಹಸ್ಯವಾಗಿದೆ. ದ್ವೈತದ ಮಹತ್ವವೂ ನಮ್ಮ ಮನಸ್ಸಿನಲ್ಲಿ ಒಂದು ಬಗೆಯ ಸಂಶಯವನ್ನು ಹುಟ್ಟಿಸುವುದು ಆದರೆ—

ಇದಕ್ಕೆ ನಿಜವಾದ ಐಕ್ಯ ಭಾವನೆಯಲ್ಲಿಯೇ ಸಮಾಧಾನ ಲಭಿಸುವುದು. ನಾವು ಯಾವಾಗ ಈ ದ್ವಿತ್ವ ಅರ್ಥಾತ್ ಎರಡರಲ್ಲೂ ಸಮಾನಭಾವವನ್ನು ಕಾಣುವೆವೋ ಆಗ ಸತ್ಯವು ಅತ್ರಗಳ ದ್ವಿತ್ವಗಳಲ್ಲಿ ಅಲ್ಲ; ಏಕೈಕದಲ್ಲಿರುವುದು ಎಂಬುದನ್ನು ತಿಳಿದುಕೊಳ್ಳುತ್ತೇವೆ. ಆಗ ನಾವು— "ಸ್ವಯಂ ಸಮಸ್ಯೆಯಾಗಿರುವ ಏಕೈಕವನ್ನು ಅಥವಾ ಓರ್ವನನ್ನು ಅನೇಕ ರೂಪಗಳಿಂದ ಕಾಣುತ್ತೇವೆ" ಎಂದು ಹೇಳುವೆವು. (ಸಶೇಷ)

ಉಡುಪಿ ಡಿ. ಮು. ಕೋರ್ಟಿನಲ್ಲಿ.
O. P No. 26/59 R. I. A. 585/61

1. Mrs. ಕಲಾವತಿ V. ತಿಮ್ಮಪ್ಪ ಶೆಟ್ರ ವಿಧವೆ, 2. ಸುನಿಲ್ ಕುಮಾರ್, 3. ಬೇಬಿ, 1ನೇ ಅರ್ಜಿದಾರಳ ಮೈನರ ಮಕ್ಕಳು. ಕಾಸ್ರಗೋಡು ತಾಲೂಕು ಎನಮಕಾಜೆ ಗ್ರಾಮದ. 4. ಅಕ್ಕಯ್ಯ ಹೆಗ್ಗಡ್ತಿ. B. ಶ್ಯಾಮರಾಯ ಶೆಟ್ರ ಹೆಂಡತಿ ಶಿವಳ್ಳಿ ಗ್ರಾಮದ ಮಣಿಪಾಳ ದಲ್ಲಿರುವವಳು. —ಅರ್ಜಿದಾರರು.

ಮೇಲಿನ O. P. 26/59 ರಲ್ಲಿ ಅರ್ಜಿದಾರರೆ ಹೈಕೆ 1ನೇ ಅರ್ಜಿದಾರಳಿಗೆ ಕೊಡೋಣಾದ ಸಕ್ಸೆಶನ್ ಸರ್ಟಿಫಿಕೇಟು ಮೇಲಿನ R. I. A. 585/61 ನೇ ಅರ್ಜಿಯಲ್ಲಿ ಕಾಪ್ತದಬಾಬ್ತು Director Of Public Instruction, of Mysore ಯವರಿಂದ ಬರತಕ್ಕ ರೂಪ್ಯಾ 2000/-ನ್ನು ಕೂಡ್ಸಿ ಸದ್ರಿ ಸರ್ಟಿಫಿಕೇಟು extend ಮಾಡಿಸಬೇಕಾಗಿ ಅರ್ಜಿದಾರರು ಕೊಟ್ಟ ಮೇಲಿನ ಅರ್ಜಿಯು ತಾ. 25-10-61ಕ್ಕೆ ಮೈತನ ಅಪ್ಪೀರು ವಾಸ್ತವ್ಯಕ್ಕೆ ನೋಟೀಸು ಬಗ್ಗೆ ಯಿಡೋಣಾಗಿಯುದೆ ಆಕ್ಷೇಪ ಹೇಳತಕ್ಕವರು ಯಿದ್ರಿ ಸದ್ರಿ ದಿವಸ ಮೇಲ್ಕಂಡ ಕೋರ್ಟು ಮುಂದೆ ಹಗಲು 10ಗಂಟೆಗೆ ಹಾಜ್ರಾಗಿ ಜ್ಯಾಹೀರು ಮಾಡದಿದ್ದಲ್ಲಿ ಅವರ ಗೈರು ಹಾಜ್ರಿಯಲ್ಲಿ ಸದ್ರಿ ಅರ್ಜಿ ತೀರ್ಮಾನ ಮಾಡಲ್ಪಡುವುದು ಎಂಬ ಸಂಗ್ತಿ ಈ ಮೂಲಕ ಯಾವತ್ತು ಜನರಿಗೆ ತಿಳಿಸೋಣಾಗಿಯುದೆ.

B. Jaganath Hegde
Advocate for petitioner
Udipi 4—10—61

ದಿ ವಿಜಯ ಬೇಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬೇಂಕ್. ಸ್ಥಾಪನೆ: 1931

ರಿಜಿಸ್ಟರ್ಡ್ ಆಫೀಸು:
ವಿಜಯ ಬೇಂಕ್ ಬಿಲ್ಡಿಂಗ್, ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು-3, ಸೌತ್ ಕೆನರಾ.

ಕಾಯಂ ಠೇವಣಾತಿ ಬಡ್ಡಿ ದರವನ್ನು ಶೇಕಡ 5½ರ ವರೆಗೆ ಹೆಚ್ಚಿಸಲಾಗಿದೆ.

ಏಳು ದಿವಸದ ನೋಟೀಸಿನಲ್ಲಿ ಕೇಳಿದಾಗ್ಯೆ ಹಿಂದೆ ಪಡೆಯುವ ಡಿಪೋಸಿಟುಗಳನ್ನು (Call Deposits) ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸೋಣಾಗುತ್ತದೆ.

ಹೆಚ್ಚಿನ ಮಾಹಿತಿಗೆ ನಮ್ಮ ಶಾಖೆಗಳಲ್ಲಿ ದಯಮಾಡಿ ವಿಚಾರಿಸಿರಿ.

IN THE COURT OF
THE MUNSIFF OF
KASARAGOD

R. E. P. No. 203/1961
(S. C. 180/1959 of Sub Court
S. Kanara.)

Between

M/s Vithalji & Co.
—Petitioners

and

Kunhammad (D2) son of Abbas Beary, Cloth Merchant, Puttur, Residing in Mogral Village, Kasargod Taluk —Respondent

To

The respondent.

This is to inform you that the above execution petition for sale of your immoveable properties stands posted to 13—10—1961 before this Court at 11 A. M.

(Sd) P. V. K. Nambudiri,
Advocate, for petitioners.
Kasargod 29—9—1961

Tel: 'BLUEYAGAR'. —— ಚಿನ್ನ ಮತ್ತು ವಜ್ರಗಳ ಆಧುನಿಕ ತವರುಮನೆ —— Phone: 374.

ಕೆ.ಆರ್.ಕೆ.ಶೇಟ್ ಡಯಮಂಡ್ ಮಾರ್ಟ್

ಸ್ಥಾಪನೆ:1919] ಚಿನ್ನ ಮತ್ತು ವಜ್ರದ ವ್ಯಾಪಾರಿಗಳು,(ಗವರ್ನ್‌ಮೆಂಟ್ ಕಾಲೇಜ್ ಎದುರುಗಡೆ)ಮಂಗಳೂರು. ಮಾಲಿಕ:ಕೆ.ಕೆ.ಆರ್.ಶೇಟ್

ಕಾದಂಬರಿಯ ಕಿತಾಪತಿ

(೨ನೇ ಪುಟದಿಂದ)

ಕಡೆದ ಶ್ರೀ....ರು ಕನ್ನಡ ಕಾದಂಬರೀ ಸಾಮ್ರಾಟ ಸಿಂಹಾಸನವನ್ನು ಸದ್ಯದಲ್ಲಿಯೇ ಅಲಂಕರಿಸುವುವಾದರೆ ಅದು ನಮ್ಮೆಲ್ಲರ ಅಜ್ಞಾ ಪುಣ್ಯವೆಂದೇ ತಿಳಿಯಬೇಕು" ಎಂಬಂತೆ ಸಂತಸದ ಅಬ್ಬರದೊಡನೆ ರಸಿಕತೆಯನ್ನೂ ಬೆರೆಸಿ ಕೃತಜ್ಞತೆಯನ್ನು ಸ್ರಚುರಪಡಿಸುತ್ತಾರೆ ಎಂದಾಗ, ಜನಮನ್ನಣೆಯ ನನ್ನ ಕಾದಂಬರಿಗೆ ರಾಷ್ಟ್ರಾಧ್ಯಕ್ಷರ ಪ್ರಶಸ್ತಿ ಪ್ರಾಪ್ತವಾಗದಿದ್ದರೆ ಅದಿದ್ದು ಏನು ಪ್ರಯೋಜನ?

ಅಳುವವರ ಕುತೂಹಲವನ್ನೂ ಕೆರಳಿಸಿದ ಕಾದಂಬರಿ ಆಳಿಸಿಕೊಳ್ಳುವವರ ಮತಿಯ ಪರಿಧಿಯಿಂದ ಹೊರಗುಳಿಯಲು ಸರ್ವಥಾ ಅಸಾಧ್ಯ. ಬಡವ-ಬಲ್ಲಿದ, ಬಾಲ-ವೃದ್ಧ ಎಂಬ ತಾರತಮ್ಯವಿಲ್ಲದೆ ಸತ್ತು ಸ್ವರ್ಗದಲ್ಲಿರುವ ತಮ್ಮ ಹಿರಿಯರ ತಪ್ಪಿಗಾಗಿ, ಶ್ರಾದ್ಧದ ದಿನವೂ ಪುವಚಿಸಬೇಕಾದ ಕಥಾನಕವನ್ನು ಹೆಂಗಸರಂತೂ ತಪ್ಪದೆ ಬಾಯಿಪಾಠ ಮಾಡುವರು. ಅವರಲ್ಲಿ ಅವಿವಾಹಿತರೂ ಇರಬಹುದು. ಅವಿವಾಹಿತರಲ್ಲಿ ಸುಂದರಿಯರೂ ಇರಬಹುದು ಸುಂದರಿಯರಲ್ಲಿ ಶ್ರೀಮಂತರೂ ಇರಬಹುದು. ಶ್ರೀಮಂತರಲ್ಲಿ ನನ್ನ ಕಾದಂಬರಿಯನ್ನು ಅರ್ಥಮಾಡಿಕೊಂಡವರಿದ್ದು ಅದನ್ನು ಮೆಚ್ಚಿದವರೂ ಇರಬಹುದು. ಮೆಚ್ಚಿದವರಲ್ಲಿ ಮೂರುಹೋದವರೂ ಇದ್ದು ಅವರಲ್ಲಿ ಒಬ್ಬಾಕೆಯಾದರೂ ನನ್ನ ಸಾಹಿತ್ಯ ಸೇವಾಸಕ್ತಿಯಿಂದ ಅಧಾರ್ತ್ ನನ್ನ ಪ್ರೇಮ ಪೂಜಾಸಕ್ತಿಯಿಂದ, ತನ್ನನ್ನು ಮುಡುವಾಗಿಸಿಕೊಳ್ಳಲು ಕಾತರಗೊಂಡವಳಿರಲಾರಳೇ? ಅವಳಿಗೊಂದು 'ಕಿಂಗ್ಸ್‌ವೇ ಕಸ್ಟಮ್' ಕಾರೂ ಇರಬಹುದು. ಇರಬಹುದೆಂದೇನು? ಇದ್ದೇ ಇರುತ್ತದೆ. ಆದರೆ ಆ ಕಾರಿನಲ್ಲಿ ನಾಗರಿಕ ಶ್ರೀಮಂತಿಕೆಯ ಲಕ್ಷಣವಾಗಿ ಒಂದು ಅಲ್ಸೇಶನ್ ನಾಯಿಯೂ ಇದ್ದರೆ? ಇದ್ದರೇನು? ಅದನ್ನು ಯಾರಿಗಾದರೂ ಸಿನೆಮಾ ತಾರೆಯರಿಗೆ ಮಾರಿದರಾಯಿತು. ಅಂದಹಾಗೆ ಸಿನಿಮಾ ತಾರೆಯರೂ ನನ್ನ ಕಾದಂಬರಿಯನ್ನು ಓದಬಹುದು. ಬರೇ ತಾರೆಯರೆಂದೇನು? ತಯಾರಕರೂ ಓದಿದಿರಲಾರರು. ತತ್ಪರಿಣಾಮವಾಗಿ, ತಮ್ಮ ಅಂತರ್‌ರಾಷ್ಟ್ರೀಯ ಖ್ಯಾತಿಯ ಚಿತ್ರವನ್ನು ತಯಾರಿಸುವ ಹೆಬ್ಬಯಕೆಯು ಕೈಗೂಡುವ ಕಾಲ ಕೂಡಿಬಂದಿತೆಂದು. ಕಳೆದು ಹೋದ ಆತ್ಮವಿಶ್ವಾಸವನ್ನು ಮರಳಿ ಪಡೆದು, ನನ್ನ ಕಾದಂಬರಿಯ ಕಥೆಯನ್ನು ಚಿತ್ರಕಥೆಗೆ ಹೊಂದಿಸಿಕೊಳ್ಳುವರೆ, ನನ್ನ ಅನುಮತಿಗಾಗಿ ಬಂದು, ನೋಡಿ, ಚಿತ್ರದ ನಾಯಕ ಪಟ್ಟವನ್ನೂ ನನಗೇ ಒಪ್ಪಿಸುವುದಲ್ಲದೆ, ಸಂಭಾಷಣೆ, ಹಾಡುಗಳನ್ನು ರಚಿಸುವುದರೊಂದಿಗೆ, ದಿಗ್ದರ್ಶನದ ಭಾರವನ್ನೂ ನನಗೇ ಹೊರಿಸಿದಾಗ ನಟನಟಿಯರನ್ನು ಆರಿಸುವ ಅವಕಾಶವೂ ನನ್ನದಾಗುತ್ತದೆ. ಆ ನನ್ನ ಕಾರ್‌ವಾಲಿ ಕನ್ಯಾಮಣಿಗೆ ನನ್ನೊಡನೆ ನಾಯಕಿಯಾಗಿ ನಟಿಸಲು ವಿಧಿಸಬಹುದು. ಆದರೆ, ತಾನೂ ಹೇಗೂ ನಟಿಯಾಗುವುದರಿಂದ ತನ್ನ ನಾಯಿಯನ್ನು ಮಾರುವ ಅಗತ್ಯವಿಲ್ಲವೆಂದು ಅವಾಂತರಕ್ಕಿಳಿದರೆ? ಆ ನಾಯಿಯನ್ನಂತೂ ಕಂಡರೆ ನನಗೆ ಆಗೋದಿಲ್ಲ. ಆದುದರಿಂದ ಆಕೆಯನ್ನು ಚಿತ್ರರಂಗಕ್ಕೆ ಎಳೆಯುವ ಯೋಜನೆಯೇ ಬೇಡ. ನಾಯಕಿಯ ಪಾತ್ರಕ್ಕೆ ಬೇರೆ ಯಾರನ್ನಾದರೂ ಚುನಾಯಿಸಿದರಾಯಿತು, ನಟಿಯರಿಗೇನು ಬರಗಾಲವೇ? ಲೇಖಕ, ನಾಯಕ, ದಿಗ್ದರ್ಶಕನಾದ ನಾನು ಮುಂದೆ ನಿರ್ಮಾಪಕನಾಗಿ ಖ್ಯಾತಿಗೊಂಡು ಚಲಚಿತ್ರ ಕಲೆಯ ಪರವಾಗಿ ಸಂಸ್ಥೆಯವರಿಂದ ರಾಜ್ಯಸಭೆಯಲ್ಲಿ ಪ್ರತಿನಿಧೀಕರಿಸಲ್ಪಡಲು ಸಾವಕಾಶವಾಗಿ ಉಪಮಂತ್ರಿ, ಮಂತ್ರಿಪದವಿಯನ್ನೇರಿ ಕೊನೆಗೆ ಪ್ರಧಾನ ಮಂತ್ರಿ ಪೀಠವನ್ನೂ ಶೃಂಗರಿಸುತ್ತೇನೆ.

ಸ್ವಾಭಾವಿಕವಾಗಿ ಸುಶೀಲನೂ ಸದ್ವಿವೇಕಿಯೂ ಆಗಿರುವ ನಾನು, ಕರಗತವಾದ ರಾಜ್ಯ ಸೂತ್ರವನ್ನು ಸಮರ್ಥ ರೀತಿಯಿಂದ ಚಲಾಯಿಸಿ ದೇಶವನ್ನು ಕವಿದು ಕಬಳಿಸುತ್ತಿರುವ ದುರ್ಭಿಕ್ಷೆ, ದುರ್ನೀತಿ, ದುರ್ಭೀತಿ, ದುರಾಚಾರ, ದುರಾಡಳತೆಗಳನ್ನು ಗಲ್ಲಿಗೇರಿಸಿ, ಅಕ್ಕಲ್ಪ ಕಾಲಾವಧಿಯಲ್ಲೇ, ನಾಡಿನ ನೂಲೆ ಮೂಲೆ, ಗಲ್ಲಗಲ್ಲಿಗಳಲ್ಲೂ ಸುಕ್ಷೇಮ, ಸಮೃದ್ಧಿ, ಸುವಿಚಾರ, ಸಂಯಮ ಶೀಲ, ಶಾಂತಿ, ಸಿರಿಗಳು ಕುಣಿದು ಕುಪ್ಪಳಿಸುವಂತೆ ಮಾಡುತ್ತೇನೆ. ನನ್ನ ರಾಜ್ಯಾಡಳಿತೆಯದಕ್ಷತೆಯನ್ನು ಪ್ರಜಾಕೋಟಿ ಒಕ್ಕೊರಲಿನಿಂದ ದಮ್ಮುಕಟ್ಟಿ ಹೊಗಳಲು ಬಾರಿಸಿ ಬೊಬ್ಬಿಡಲು ದಿಗಂತದ ಕೋಂಕ್ರೀಟ್ ಬಿರಿದು, ಆಕಾಶದ ಟೆರೇಸ್ ಎದ್ದು, ನಾರದನ ನಿದ್ದೆ ಸರಿದು, ರಂಭೆಯ ಸೋಲೋ ಡಾನ್ಸ್, ಸೋಮರಸ ಡಿಸ್ಪೆನ್ಸ್‌ಗಳಿಂದ ಮಂಕಾದ ಪುರಂದರನ ಕಿವಿತಮ್ಮಟೆ ಹರಿಯಲು ಕಕ್ಕಾಬಿಕ್ಕಿಯಾದ ಆತನು ತನ್ನ ಸ್ವರ್ಗ ಸಾಮ್ರಾಜ್ಯದ ಪ್ರತಿನಿಧಿಯನ್ನು ಉಳಿಸುವುದಕ್ಕಾಗಿ "ನಿನ್ನ ಊರಿನ ವೈಭವವನ್ನು ಸ್ವಲ್ಪ ಕಡಿಮೆ ಮಾಡಬೇಕು" ಎಂದು ವಿನಂತಿಸಿಕೊಳ್ಳುವ . ಸಂಧಾನಕ್ಕಾಗಿ ಗೇಟು ಬಾಗಿಲಿದಲ್ಲಿ ಚೀಟಿಕೊಟ್ಟು ನನ್ನೆಡೆಗೆ ಒಂದಾಗಿ, ಇಲ್ಲಿರುವ ಅಮೂಲ್ಯವನ್ನು ವಿಶೇಷಗಳಲ್ಲಿ ಕೆಲವನ್ನು ಅಲ್ಲಿಗೆ ಕಳುಹಿಸಿ ಕೊಡಬಹುದು. ಆದರೆ, ಅದಕ್ಕೆ ಪ್ರತಿಯಾಗಿ ಚಂದ್ರಲೋಕವನ್ನು ನನ್ನ ವಶಕ್ಕೆ ಒಪ್ಪಿಸಬೇಕಾದೆ. ಅನಿವಾರ್ಯ" ಎಂಬ ನನ್ನ ಶರತ್ತನ್ನು ಆತನ ಮುಂದಿರಿಸುತ್ತೇನೆ. ಗತ್ಯಂತರವಿಲ್ಲದೆ ಇಂದ್ರನು ನನ್ನ ನಿಬಂಧನೆಗೆ ಸಮ್ಮತಿಸಬೇಕಾಗುತ್ತದೆ. ನೀಡಿದ ಮಾತಿಯಂತೆ ನಡೆದುಕೊಳ್ಳಲು ಕಾರಂತರ ಕೆಲವು ಕಾದಂಬರಿಗಳು, ಬೇಂದ್ರೆಯವರ ಸ್ವಲ್ಪ ಕವಿತೆಗಳು; ರಫಿ, ಲತಾ, ಮೊದಲಾದವರ ರೆಕಾರ್ಡುಗಳು, ರಾಷ್ಟ್ರಾಧ್ಯಕ್ಷರ ರಿಪಾರ್ಡುಗಳು; ಉತ್ತರ ಭಾರತದ ಕೆಲವು ಫಿಲ್ಮುಗಳು, ದಕ್ಷಿಣ ಭಾರತದ ಇಸ್ಮಾರ್ಗಳು; ಕಾಶ್ಮೀರದ ಶಾಲುಗಳು, ಅಮೃತಸರದ ಮಲುಗಳು; ಬೊಂಬಾಯಿಯ ದರ್ಜಿಗಳು, ಮದ್ರಾಸಿನ ಮಜೀಗಳು ಮಂಗಳೂರಿನ ಹಂಚುಗಳು, ಮೈಸೂರಿನ ಸಂಚುಗಳು; ಉಡುಪಿಯ ಇಡ್ಲಿಗಳು; ಗೋವೆಯ ಬಾಟ್ಲಿಗಳು; ತಾತಾರವರ ಬ್ಯಾಲೆಟ್‌ಗಳು, ಚುನಾವಣೆಯ ಪೇಂಪ್ಲೆಟ್‌ಗಳು; ಬೀಚಿಯವರ ಚಟಾಕಿಗಳು; ಶಿವರಾಮಿಯ ಪಟಾಕಿಗಳು ನಮ್ಮ ಕೈಬಿಟ್ಟು ಹೋಗಬೇಕಾಗುತ್ತದೆ. ಆದರೆ, ಸಹಸ್ರಾಕ್ಷನು ಚಂದ್ರಲೋಕವನ್ನು ವಿಕಾರ್ದ ಮೂಲಕ ದಸ್ತತು ಹಾಕಿ, ನನ್ನ ಸರಕಾರಕ್ಕೆ ಬಿಟ್ಟು ಕೊಡುವುದಿಲ್ಲವೇ? ಚಂದ್ರಗ್ರಹ ನನ್ನ ಭಾರತೀಯರ ವಸಾಹತುವಾದನಂತರ ರಶ್ಯಾ ಅಮೇರಿಕದವರಿಗೆ ಕರಟ ಕೋಲಿನ ಗ್ರಹಚಾರ ತಪ್ಪಿದ್ದಲ್ಲ.

ನನ್ನ ಸ್ವಾಮ್ರಾಜ್ಯದ ಶ್ರೇಯೋಭಿವೃದ್ಧಿಗೆ ತತ್ಪರಿಸಿ ಪರಾಕ್ರಮಿಯರು ನಮ್ಮೊಂದಿಗೆ ಸ್ನೇಹ ಸಂಧಿಗಾಗಿ ಮುಂದೆ ಬಂದು ಪ್ರಧಾನಮಂತ್ರಿಯಾದ ನನ್ನೊಡನೆ ಬಿನ್ನವಿಸಿಕೊಳ್ಳುತ್ತಾರೆ. ಅವರ ಆಮಂತ್ರಣವನ್ನು ಅಂಗೀಕರಿಸಿ, ಅವರ ದೇಶದಲ್ಲಿ ವಿಮಾನದಿಂದ ಇಳಿಯುತ್ತಲೇ, ಹೆಂಗಸರೂ ಮಕ್ಕಳೂ ಮುದುಕರೂ ಯುವಕರೂ ಹಾರ ತುರಾಯಿಗಳಿಂದ ಗೌರವಿಸಿ, ಜಯಘೋಷಗಳಿಂದ ಹರ್ಷಿಸಿ, ಸಂಭ್ರಮದ ಸ್ವಾಗತವನ್ನಿತ್ತು ಸತ್ಕರಿಸಿ, ನನ್ನನ್ನು ಕೀರ್ತಿಯ ಶಿಖರಕ್ಕೆ ಪೂರ್ತಿಯಾಗಿ ಒಯ್ದು ಪುರಸ್ಕರಿಸುವಾಗ, ರಾಜಕಾರಣಿಗಳು, ಕವಿಗಳು, ಯೋಗಿಗಳು, ವಾಗ್ಮಿಗಳು, ಬಾತ್ಮೀದಾರರು ಅವ್ಯಾಹತವಾಗಿ ಧನ್ಯ ಭಾವದಿಂದ ಶ್ಲಾಘಿಸುವಾಗ, ಕಿಕ್ಕಿರಿದ ಜನಸಂದಣಿಯ ಮುಂದೆ ಎತ್ತರದ ಗದ್ದುಗೆಯ ಮೇಲೆ ಧ್ವನಿವರ್ಧಕಗಳಲ್ಲಿ ಸತ್ಯ, ಸಂಸ್ಕೃತಿ, ಸ್ನೇಹ, ಸಂತುಷ್ಟಿ, ವಿಶ್ವ ಬಂಧುತ್ವ, ಲೋಕಶಾಂತಿಗಳ ಅಮರ ಸಂದೇಶವನ್ನು ಸಾರುತ್ತೇನೆ. ಅವರ ದೇಶದಿಂದ ಹಿಂದಿರುಗಿ, ಅಂತಾರಾಷ್ಟ್ರೀಯ ಸೌಹಾರ್ದದ ಗಂಟನ್ನು ತಾಯ್ನಾಡಿಗೆ ತಂದು ಬಿಚ್ಚುತ್ತೇನೆ. ನಮ್ಮವರಿಗೆ ಆಗ ನನ್ನ ಮಹತ್ವಿಕೆಯ ಮೇಯ ಇನ್ನಷ್ಟು ಸ್ಪಷ್ಟವಾಗಿ ರುಜುವಾತು ಆಗುತ್ತದೆ.

ರಾಜ್ಯಭಾರ ಯೋಜನೆಯ ಮುಂದಿನ ಅಂಗವಾಗಿ, ನಾವು ಈಗಲೇ ಸಂವಾದಿಸಿಕೊಂಡ ಚಂದ್ರಲೋಕವು ನಿವಾಸಯೋಗ್ಯವಾಗುವಂತೆ ಮಾಡಲು, ಅಲ್ಲಿಗೆ ತಜ್ಞರಾದ ವಿಜ್ಞಾನಿಗಳನ್ನೂ, ಯಂತ್ರಜ್ಞರನ್ನೂ ವೈದ್ಯರನ್ನೂ ಮುಂಚಿತವಾಗಿ ಕಳುಹಿಸಿ ಕೊಡುತ್ತೇನೆ. ಅಲ್ಲಿ ವಾಸಿಸಲು ಅರ್ಹರಾದವರನ್ನು ಕಲೆಹಾಕಿ, ಪಂಡಿತರು, ಲೇಖಕರು, ಯಾಂತ್ರಿಕರು, ತಾಂತ್ರಿಕರು, ದಾರ್ಶನಿಕರು, ಕೃಷಿಕರು, ಶಿಲ್ಪಿಕರು, ವರ್ತಕರು, ನರ್ತಕರು, ಗಾಯಕರು, ವಿದೂಷಕರು, ನಟರು, ಭಟರು, ದಸ, ಕರು ಮೊದಲಾದವರನ್ನೆಲ್ಲಾ ಕೂಡಿಕೊಂಡು, ಒಂದು ವಿಶಿಷ್ಟವಾದ ವಿಮಾನದಿಂದ ಹೊರಟು, ಚಂದ್ರಲೋಕಾಧಿಪತ್ಯವನ್ನು ಸುಲಗ್ನದಲ್ಲಿ ಉದ್ಘಾಟಿಸಲು, ಪ್ರಯಾಣ ಬೆಳೆಸಲಿಕ್ಕಾಗಿ ಸಕಲ ಸಿದ್ಧತೆಗಳನ್ನೂ ಮಾಡುತ್ತೇನೆ

ಇಷ್ಟೆಲ್ಲಾ ಆಗುವಾಗ, ಕಾದಂಬರಿಯನ್ನೋದಿದಂದಿನಿಂದ ಕತ್ತಲಿಡೀ ಕಣ್ಣಾಮುಚ್ಚಲೂ ಕೂಡದೆ, ಹಗಲುಗನಸನ್ನು

ಅಸ್ಥಮಾ ಪೀಡಿತರ ಗಮನಕ್ಕೆ

ಓನಾಲಯದ ಪ್ರಸಿದ್ಧ ಅಸ್ಥಮಾ ನಿವಾರಕ ಮೂಲಿಕೆಯನ್ನು ದಿ. 23—10—61 ಹುಣ್ಣಿಮೆಯ ರಾತ್ರಿ ಹಾಲು ಮತ್ತು ಅಕ್ಕಿಯಿಂದ ತಯಾರಿಸಿದ ಖೀರಿನಲ್ಲಿ ತೆಗೆದು ಕೊಳ್ಳುವುದರಿಂದ ಅಸ್ಥಮಾ, ಗೂರಲು, ಕೆಮ್ಮು, ಉಬ್ಬಸ, ಮೇಲುಸಿರು ಮತ್ತು ಶ್ವಾಸ ಕಟ್ಟುವಿಕೆ ಇವುಗಳು ನಿವಾರಿಸಲ್ಪಡುತ್ತವೆ. ಕೂಡಲೇ ಇಂಗ್ಲಿಷಿನಲ್ಲಿ ಬರೆಯಿರಿ:

Shri Mahatma Sidh Baba Sewa Ashram
P. O. Chitrakot. (Uttar Pradesh)

ಗಡಿನಾಡ ಮತ್ತು ಹೊರನಾಡ ಕನ್ನಡಿಗರ ಹಿತಚಿಂತನೆಗಾಗಿ ಹೋರಾಡುವ ಬೆಳಗಾವಿಯ ಏಕೈಕ ಮಾಸಪತ್ರಿಕೆ—

ಶಾರದಾ

ಈ ದಿವಸೇ ಚಂದಾ ಹಣ ಕಳುಹಿಸಿರಿ.

ತರುಣ ಬರೆದಗಾರರಿಗೆ ಪ್ರಥಮ ಪ್ರಾಶಸ್ತ್ಯ ನೀಡುವ 'ಶಾರದಾ' ಪ್ರತಿ ತಿಂಗಳೂ ಕತೆ, ಕವನ, ಪತ್ತೇದಾರಿ ಕಾದಂಬರಿ, ಸಾಮಾಜಿಕ ಕಾದಂಬರಿ, ಚಲಚ್ಚಿತ್ರ ಕತೆಗಳು, ವಿಚಾರಪೂರಿತ ಶೈಕ್ಷಣಿಕ ಲೇಖನಗಳು, ಮಕ್ಕಳ ಹಾಗೂ ಮಹಿಳಾವಿಭಾಗ, ರಾಜಕೀಯ—ಸಾಹಿತ್ಯಿಕ ಲೇಖನಗಳೊಂದಿಗೆ ತ್ರಿವರ್ಣರಂಜಿತ ಮುಖಪುಟದೊಂದಿಗೆ ಪ್ರಕಟವಾಗುವುದು.

ಚಂದಾದಾರರಿಗೆ ವರ್ಣರಂಜಿತ ಕ್ಯಾಲೆಂಡರ ಮತ್ತು 'ಬಣ್ಣದ ಹೆಜ್ಜೆ' ಎಂಬ ಕಾದಂಬರಿ ಉಚಿತ ಸಿಗುತ್ತವೆ.

ವಾರ್ಷಿಕ ಚಂದಾ ೪ ರೂ. ಮಾತ್ರ.

ಕರ್ನಾಟಕದ ಎಲ್ಲ ಊರುಗಳಲ್ಲಿಯೂ ವಿಪುಲವಾದ ಕಮಿಶನ್ನಿನ ಮೇಲೆ 'ಶಾರದಾ' ಮಾರಲು ಏಜಂಟರು ಬೇಕಾಗಿದ್ದಾರೆ. ಮಾದರಿ ಪ್ರತಿ, ಏಜನ್ಸಿ ನಿಯಮಗಳಿಗಾಗಿ ೧ ರೂ. M. O. ಮಾಡಿರಿ.

ಸಂಚಾಲಕರು: 'ಶಾರದಾ' ಮಾಸಪತ್ರಿಕೆ,
ರಹಿಮಾಪುರ—ಬೆಳಗಾವಿ.

NAVAYUGA, UDIPI.
REGD. NO.BG. 176

ication Committee
shanamurthipuram
12-10-1961

LICENSE NO. 31
Licensed to Post without Prepayment

ಕಾಣುತ್ತಾ ಕೊನೆಯ ನಿರ್ಧಾರಕ್ಕೆ ಬಂದ ಆ ನನ್ನ ಕಾರು ಯಜಮಾನಿ ಮೋಹಿನಿ, ತನ್ನ ಮನಸ್ಸಿನ ಅಂತಃಪುರಕ್ಕೆಬೀಗಹಾಕಿ ತಲೆಯ ಮೇಲೆ ಕೈಹೊತ್ತು ಕೂತರಲ ಸಾಧ್ಯವೇ? ನನ್ನ ವ್ಯಕ್ತಿತ್ವದ ಮಹಿಮೆಗೆ ತನ್ನ ತ್ರಿಕರಣಗಳನ್ನೂ ನೋಕಾ, ಅಂತರಂಗವನ್ನೆಲ್ಲಾ ವ್ಯಾಪಿಸಿ ಉಕ್ಕಿಬಂದ ಆ ಶಾವೇಶವನ್ನು ಹತ್ತಿಕ್ಕಲಾರದೆ, ವ್ಯಾವಹಾರಿಕವಾದ ಸಾಧ್ಯಾಸಾಧ್ಯತೆಯ ಸಮಸ್ತವನ್ನೂ ಮರೆತು "ನನ್ನನ್ನು ತಮ್ಮ ಚರಣದಾಸಿಯಾಗಿ ಸ್ವೀಕರಿಸಿ ಉದ್ಧರಿಸಬೇಕು ಮಹಾ ಪ್ರಭೂ' ಎಂಬಂತೆ ಬೇಡಿಕೊಳ್ಳಲು, ಹೊರಡುವ ಹಿಂದಿನ ದಿನ ರಾತ್ರಿಯೊದರೂ ನನ್ನ ನಿವಾಸ ಗೃಹಕ್ಕೆ ತನ್ನ ಕಾರನ್ನೇರಿ, ತೊಂಬತ್ತು ಮೈಲುಗಳ ವೇಗದಲ್ಲಿ ಬರದಿರಲಾರಳು. ಮತಿಮಿರಿದ ವೇಗದಿಂದ ಡ್ರೈವ್‌ಮಾಡಿಕೊಂಡು ಬರುವಾಗ accident ಆದರೆ? ಛೆ! ಎಂತಹ ಅನಿಷ್ಟ ಕಲ್ಪನೆ? ಆಕೆ ನನ್ನ ಕಂಪೌಂಡಿನ ಎದುರುಗಡೆ ಕಾರನ್ನು ನಿಲ್ಲಿಸಿ ಗೇಟುದಾಟಿ-ಅಂದದಾಗೆ ಕಾರಿನಲ್ಲಿ ಆಕೆಯ ನಾಯಿಯೂ ಬಂದಿದ್ದು ಅದೂ ಗೇಟುದಾಟಿ ಛಿ! ಛಿ ಏನು ಅಭಾಸ ಊಹನೆ? ಅಥಯೇವ ಆ ಪ್ರಾಣಿ ಒಳಗೆ ಬರಲು ಹವಣಿಸಿದರೆ ಘೋರಸಿದ್ದಾನಲ್ಲಾ,? ಅಲ್ಲಿ ಅದನ್ನು ತಡೆಹಿಡಿಯಲಿಕ್ಕೆ ಆಕೆ ತನ್ನ ವ್ಯವಸ್ಥೆ ತಪ್ಪಿದ ಸೀರೆಯ ಅವಸ್ಥೆಯನ್ನು ಲಕ್ಷಿಸದೆ ನನ್ನ ಮಹಡಿಯ ಮೆಟ್ಟಲುಗಳನ್ನು ಹತ್ತುವ ಅವಸರದಲ್ಲಿ, ಸೆರಗು ಕಾಲಿನಡಿಗೆ ಸಿಕ್ಕಿ, ಜಾರಿಬಿದ್ದು ಕೈಕಾಲು ಮುರಿದು ಕೊಂಡರೇನುಗತಿ? ಇಲ್ಲ ಇಲ್ಲ! ಹಾಗಾಗುವುದು ಅಸಂಭವನೀಯ; ಅನ್ಯಾಯ ಒಡಿಬಂದ ಭರದಲ್ಲಿ ನನ್ನ ಹವಾನಿಯಂತ್ರಿತ ಕೊಠಡಿಯ ಗ್ರೋಜ್ರೇಜ್ ಬಾಗಿಲನ್ನು ದಡೀರನೆ ತೆರೆದು ಏನುತ್ತಾ ಹರ್ಷಾತಿರೇಕದಿಂದ ದಿಗ್ಭ್ರಾಂತಳಾಗಿ, ಅರೆಕ್ಷಣ ಗರ-ಡಗಂಬದಂತೆ ಅಲ್ಲೇ ನಿಂತು, ರೆಪ್ಪೆ ಹಾಯಿಸದೆ ನನ್ನನ್ನೇ ನೋಡುತ್ತಿರಲು ನಾನು ನನ್ನ ಗೌರಗಂಭೀರ ಸಮ್ಯಕ್ ವದನವನ್ನು ಸಾವಕಾಶವಾಗಿ ರಾಜಠೀವಿಯಿಂದ ಅತ್ತ ಸರಿಸಿ ನೋಡಿದರೆ? ನೋಡಿದರೆ!!?

"ಯಾಯ್ ರಾಮ್! ಕೃಷ್ಣರಾವ್?"

"ಏನ್ ಸಾರ್?"

"ಕಾಫೀ—"

"ಕಥೆ?"

"ಕತೆ ಕೈಲಾಸ. ಮೊದಲು ಕಾಫಿ ತನ್ನಿ"

"ಯಾಕೆ ಸಾರ್ ಏನಾಯ್ತು?"

"ನನ್ ಜನ್ಮ ಸಾರ್ಥಕ ಆಯ್ತು. ಆಲ್ರೀ ನನ್ ಕಥಾನಾಯಕಿಯ ಜಾಗದಲ್ಲಿ ಈ ಕಸಬರಿಕೆ ಯಾಕೆ ಬಂದು ನಿಂತಿದ್ದಾಳ

ಭಾವೈಕ್ಯ ಹೇತು-ಶಿಕ್ಷಣ

ಪ್ರಧಾನ ಮಂತ್ರಿ ನೆಹರು ಕರೆದ ಭಾವೈಕ್ಯ ಸಮ್ಮೇಳನದಲ್ಲಿ ರಾಷ್ಟ್ರೀಯ ಐಕ್ಯದ ಪ್ರಶ್ನೆಯ ಬಗ್ಗೆ ಬಹು ದೀರ್ಘವಾದ ಗಂಭೀರ ಚರ್ಚೆಯು ನಡೆಯಿತು. ಇದರಲ್ಲಿ ಭಾಗವಹಿಸಿದ ಎಲ್ಲರೂ ಶಿಕ್ಷಣಕ್ಷೇತ್ರದಲ್ಲಿಯೇ ಐಕ್ಯ ಮನೋಭಾವನೆಯನ್ನು ಹುಟ್ಟಿಸಲು ತೊಡಗುವುದರ ಅವಶ್ಯಕತೆಯನ್ನು ಪ್ರತಿವಾದಿಸಿ ಅದನ್ನು ಬೆಂಬಲಿಸಿದರು ಭಾಷಾ ಅಲ್ಪ ಸಂಖ್ಯಾಕರಿಗೆ ಅವರ ಮಾತೃಭಾಷೆಯಲ್ಲಿ ಪ್ರಾಥಮಿಕ ಶಿಕ್ಷಣವನ್ನು ಕೊಡಬೇಕು; ಮಾಧ್ಯಮಿಕ ಶಿಕ್ಷಣವು ರಾಜ್ಯಭಾಷೆಯಲ್ಲಿರಬೇಕು; ವಿಶ್ವವಿದ್ಯಾಲಯದ ಶಿಕ್ಷಣಮಾಧ್ಯಮವು ಪ್ರಾದೇಶಿಕ ಭಾಷೆಯೊಗುವುದು ಅಪೇಕ್ಷಣೀಯ. ಆದರೂ ಮುಂದೆ ಅನುಕೂಲ ಅವಕಾಶ ಬಂದಾಗ ಅದರಲ್ಲಿ ಹಿಂದಿಗೂ ಅವಕಾಶವಿರಬೇಕು. ಇಂಗ್ಲಿಷ್ ಭಾಷೆಯನ್ನೂ ಉಳಿಸಿಕೊಳ್ಳಬೇಕು ಎಂಬ ಅಭಿಪ್ರಾಯವು ಇಲ್ಲಿ ವ್ಯಕ್ತಪಟ್ಟಿತು.

ಇಡಿಯ ಭಾರತದಲ್ಲಿ ವಿದ್ಯಾನೀತಿಯು ಒಂದೇ ಕ್ರಮದಲ್ಲಿರಬೇಕು. ವಿಶ್ವವಿದ್ಯಾಲಯಗಳು ಹೊರಗಿನ ರಾಜ್ಯಗಳ ವಿದ್ಯಾರ್ಥಿಗಳನ್ನು ಆಕರ್ಷಿಸಲು ಅವರಿಗೆ ವಿಶೇಷ ಪ್ರವೇಶಾನುಕೂಲತೆ, ಭಾತ್ರವೃತ್ತಿಗಳ ಸೌಕರ್ಯವನ್ನು ಒದಗಿಸಿದರೆ, ಪರಸ್ಪರ ಸ್ನೇಹ ಸೌಹಾರ್ದಗಳು ಬೆಳೆಯಲು ಅನುಕೂಲವಾಗುವುದು. ರಾಷ್ಟ್ರೀಯ ಐಕ್ಯ ಸಾಧನೆಗೆ ಶಿಕ್ಷಣ ಪ್ರಣಾಳಿಯನ್ನು ಪುನರ್ಘಟಿಸಬೇಕು, ಶಿಕ್ಷಣದ ಮಟ್ಟದಲ್ಲಿ ಉನ್ನತಿಯಾಗಬೇಕು; ಶಿಸ್ತು, ಸಹನೆ, ಜವಾಬ್ದಾರಿತನಗಳೆಡೆಗೆ ಗಮನ ಅಧಿಕವಾಗಬೇಕು; ನಮ್ಮ ಕಿರಿಯವರು ಉತ್ತಮ ನಾಗರಿಕರಾಗುವಂತೆ ಅವರಲ್ಲಿ ರಾಷ್ಟ್ರೀಯ ಭಾವನೆಯನ್ನು ಬೆಳೆಸಬೇಕು. ವಿದ್ಯಾರ್ಥಿಗಳಲ್ಲಿ ಅಸಹನೆ, ಅರಾಷ್ಟ್ರೀಯತೆ, ಅಶಿಸ್ತುಗಳು ತಲೆದೋರದಂತೆ ಅಧ್ಯಾಪಕರು ನೋಡಿಕೊಳ್ಳಬೇಕು. ಇದಕ್ಕಾಗಿ ಉತ್ತೇಜನ ದೊರೆಯಬೇಕು. ಎಂಬ ಅಭಿಪ್ರಾಯವು ಸಮ್ಮೇಳನದಲ್ಲಿ ಹೊರಸಟ್ಟಿತು.

ನಮ್ಮ ಹಿಂದಿನ ಭವ್ಯವಾದ ಇತಿಹಾಸ ಸಂಸ್ಕೃತಿಯನ್ನು ಸರಿಯಾಗಿ ಕಲಿಸಿ, ಪ್ರಜಲಿತ ಪರಿಸ್ಥಿತಿಯನ್ನು ವಿವರಿಸಿ, ಆಶಾಮಯವಾದ ಭವಿಷ್ಯವನ್ನು ಕಟ್ಟಿಕೊಳ್ಳುವಂತೆ ವೃತ್ತಿಪರ ಮತ್ತು ಆಡಳಿತಾತ್ಮಕ ಶಿಕ್ಷಣಗಳಲ್ಲಿ ಐಕ್ಯವಿಷಯಗಳ ಸಮನ್ವಯವಿರಬೇಕು. ನಾವೆಲ್ಲರೂ ಒಂದು ಎಂಬ ಭಾವನೆಯನ್ನು ಹುಟ್ಟಿಸುವುದೇ ಶಿಕ್ಷಣದ ಗುರಿಯಾಗಬೇಕು ಶಾಲೆಗಳಲ್ಲಿ ಕಾರ್ಯಪ್ರಾರಂಭವಾಗುವುದಕ್ಕೆ ಮೊದಲು ರಾಷ್ಟ್ರಗೀತೆಯನ್ನು ಸಾಮೂಹಿಕವಾಗಿ ಹಾಡಬೇಕು ಇದರಿಂದ ರಾಷ್ಟ್ರದ ಕಡೆಗೆ ಗೌರವ ಭಾವನೆ ಬೆಳೆಯಲು ಅನುಕೂಲವಾಗುವುದು—ಎಂದು ಸಮ್ಮೇಳನವು ಅಭಿಪ್ರಾಯ ಪಟ್ಟಿತು.

ಪಠ್ಯ ಪುಸ್ತಕಗಳು ರಾಜ್ಯಮಟ್ಟದಲ್ಲಿ ಬರೆಯಲ್ಪಡುವ ಬದಲು ರಾಷ್ಟ್ರಮಟ್ಟದಲ್ಲಿ ಲಿಖಿಸಲ್ಪಡಬೇಕು. ಅವು ರಾಜ್ಯಭಾಷೆಗಳಲ್ಲಿ ಬರೆಯಲ್ಪಟ್ಟರೆ, ಉಳಿದೆಲ್ಲ ಭಾಷೆಗಳಲ್ಲಿ ಅವನ್ನು ಅನುವಾದ ಮಾಡುವ ಇಲ್ಲವೇ ರೂಪಾಂತರಿಸುವ ವ್ಯವಸ್ಥೆಯಿರಬೇಕು. ಅಂತಾ ರಾಜ್ಯ ಪಠ್ಯಪುಸ್ತಕಗಳನ್ನು ತಯಾರಿಸಲು ಶಿಕ್ಷಣತಜ್ಞರ ಅನುಭವವನ್ನು ಅವಶ್ಯ ತಿಳಿದುಕೊಳ್ಳಬೇಕು. ಬೇರೆ ಬೇರೆ ರಾಜ್ಯಗಳಲ್ಲಿ ನಿರ್ಧಾರಿತವಾದ ಪುಸ್ತಕಗಳ ವಿಮರ್ಶೆ, ಅವುಗಳಲ್ಲಿನ ಲೋಸದೋಷಗಳು, ಸುಧಾರಣೆಯ ಅಂಶಗಳು ಮೊದಲಾದುವನ್ನು ಅರಿತುಕೊಳ್ಳಬೇಕು. ಇದಕ್ಕಾಗಿ ತಯಾರಿಸುವ ಸಮಿತಿಯಲ್ಲಿ ಖ್ಯಾತ ಬರಹಗಾರರಿಗೂ ಸ್ಥಾನಕೊಡಬೇಕು. ಇಂತಹ ರಾಷ್ಟ್ರೀಯ ಮಟ್ಟದ ಪಠ್ಯಪುಸ್ತಕ ತಯಾರಿಸುವ ಹೊಣೆಯನ್ನು ಕೇಂದ್ರ ಸಂಸ್ಥೆಯೊಂದಕ್ಕೆ ಬಿಟ್ಟುಕೊಡಬೇಕು. ಎಂದು ಮುಂತಾಗಿ ಭಾವೈಕ್ಯ ಸಮ್ಮೇಳನದ ಅಭಿಪ್ರಾಯವಿದೆ.

ಕೇಂದ್ರ ಸರಕಾರದ ತ್ರಿಭಾಷಾ ಸೂತ್ರವನ್ನು ಈ ಪರಿಷತ್ತು ಸ್ವೀಕರಿಸಿತು ಹಿಂದೀ ಭಾಷೆಯ ಪ್ರಚಾರವನ್ನು ತೀವ್ರಗೊಳಿಸುವುದಕ್ಕಾಗಿ ದಕ್ಷಿಣ ಭಾರತೀಯರ ಸದ್ಭಾವನೆಯನ್ನು ಗಳಿಸಬೇಕಾದುದರಿಂದ ಉತ್ತರ ಭಾರತದ ರಾಜ್ಯಗಳಲ್ಲಿ ಹಿಂದೀತರ ಇನ್ನೊಂದು ಭಾಷೆಯನ್ನು ಕಲಿಯಬೇಕೆಂದೂ ಈ ಭಾಷೆ ದಕ್ಷಿಣ ಭಾರತದ ಭಾಷೆಯಾಗಿರುವುದು ಅಪೇಕ್ಷಣೀಯವೆಂದೂ ರಾಜ್ಯ ಮುಖ್ಯಮಂತ್ರಿಗಳ ಅಭಿಪ್ರಾಯವನ್ನು ಪರಿಷತ್ತು ಸಮ್ಮತಿಸಿತು. ಅಂತಾರಾಜ್ಯ ವ್ಯವಹಾರಗಳಿಗೆ ಹಿಂದಿಯನ್ನು ಬಳಸಿಕೊಳ್ಳುವ ಬಗ್ಗೆ ತೀವ್ರ ಕ್ರಮ ಕೈಗೊಳ್ಳುವುದಕ್ಕೆ ಒಪ್ಪಿಗೆಯನ್ನು ಸೂಚಿಸಿತು.

ಹೀಗೆ, ಶಿಕ್ಷಣದಿಂದ ಭಾವೈಕ್ಯವನ್ನು ಸಾಧಿಸುವ ಪ್ರಯತ್ನ ನಡೆಸಬೇಕೆಂದೂ, ಇದನ್ನು ತೀವ್ರವಾಗಿ ವ್ಯವಹೃತಗೊಳಿಸಬೇಕೆಂದೂ ರಾಷ್ಟ್ರೀಯ ಐಕ್ಯ ಸಮ್ಮೇಳನವು ಒಮ್ಮತದಿಂದ ನಿರ್ಧರಿಸಿತು.

ಲ್ರೀ? ಅದೂ ಸಾಲ್ದೂಂತ, ಸಾವಿರಬಾರಿ ಬೇಡಾಂದ್ರೂ,ಅತನ್ನಗತಿಕೆಟ್ಟcountry ನಾಯಿಯನ್ನೂ ಜೊತೆಗೆ ಕರ್ಕೊಂಡು ಬಂದು ದರ್ಶನ ಕೊಡಿಸ್ತಾ ಇದ್ದಾಳಲ್ರೀ? ನೋಡ್ರೀ" ಎಂದು ಯಾರನ್ನು ನಾನು ನನ್ನ ಆತ್ಮಕಥೆಯ ನಾಯಕಿಯನ್ನಾಗಿಯೂ ಚಂದ್ರಿಲೋಕದ ಪ್ರಧಾನ ಸಚಿವಳನ್ನಾಗಿ ಮಾಡ ಬೇಕೆಂದು ಬಗೆದು, ಯಾವಾಕೆಯ ಆಗಮನವನ್ನು ನಿರೀಕ್ಷಿಸುತ್ತಿದ್ದೆನೋ ಆಕೆಯ ಬದಲಾಗಿ ನನ್ನ ಕೋಣೆಯ ಕಸವನ್ನು ಗುಡಿಸಲು ಬಂದು ಬಾಗಿಲಲ್ಲಿ ಕಾದು ನಿಂತಿದ್ದ ಕೆಲಸದವಳನ್ನೂ ಆಕೆಯ ಕಸಬರಿಕೆಯನ್ನೂ ಜೊಲ್ಲು ಸೂಸುತ್ತಾ, ಆಘ್ರಾಣಿಸುತ್ತಿದ್ದ ನಾಯಿಯನ್ನೂ ನನ್ನ ಬಾಸಗಿ ಕಾರಕೂನ ಕೃಷ್ಣರಾಯರಿಗೆ ತೋರಿಸಿದೆ. ಸೂಕ್ಷ್ಮಮತಿಗಳಾದ ಅವರು ಮರುಮಾತನಾಡದೆ ತಕ್ಷಣ ಕಾಫಿ ತರಲು ಎದ್ದು ಹೋದರು.

ಅಸ್ಥಮಾ ರೋಗಿಗಳ ತಿಳುವಳಿಕೆಗೆ

ರಿಜಿಸ್ಟ್ರಿಯಾದ ಚಿತ್ರಕೋಟ್ ಅಸ್ಥಮಾ ನಿವಾರಕಔಷಧಿಯನ್ನು ತಾ. 28-10-61ನೇ ಹುಣ್ಣಿಮೆ ರಾತ್ರಿ ಬೆಲೆಯೊಂದಿಗೆ ಸೇವಿಸುವುದರಿಂದ ಅಸ್ಥಮಾ, ನೇವಸ, ಕೆಮ್ಮು, ನೆಗಡಿ ನಿವಾರಣೆಯಾಗುತ್ತದೆ. ಕೂಡಲೇ ಹುಣ್ಣಿಮೆಯ ಮೊದಲೇ ಬರೆಯಿರಿ.

Manager, Shri Mahatma Naga Baba Ayuruvedashram,
P. O. Chitrakot U. P.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ

ಮಂಗಳೂರು:
ಕಂಕನಾಡಿ
ಕುಲಶೇಖರ
ಕೆಥೋಲಿಕ್ ಸೆಂಟರ್
ಬಂದರ
ಮೈದಾನ್ ರೋಡ್
ರಥಬೀದಿ
ಹಂಪನಕಟ್ಟೆ
ಉಡುಪಿ:
ಕೆಥೋಲಿಕ್ ಸೆಂಟರ್
ರಥಬೀದಿ
ಟೋಕಲಾ ಆಫೀಸ್
ಕಾರ್ಕಳ
ಕುಂದಾಪುರ.
ಮೈನ್ ರೋಡ್
ಗಂಗೆಕಟ್ಟೆ
ಬ್ರಹ್ಮಾವರ
ಉಪ್ಪಿನಂಗಡಿ
ಕಡೇಕಾರ್
ಕಲ್ಯಾಣಪುರ
ಕಾಪು
ಕಿನ್ನಿಗೋಳಿ:
ಕೆಥೋಲಿಕ್ ಸೆಂಟರ್
ಮೈನ್ ರೋಡ್
ಕೆಮ್ಮಣ್ಣು
ಗುರುಪುರ
ಗಂಗೊಳ್ಳಿ
ನಿಟ್ಟೆ
ಪಡುಬಿದ್ರಿ
ಫಲಿಮಾರು
ಪಾಣೆಮಂಗಳೂರು
ಪುತ್ತೂರು
ಪೆರ್ಡೂರು
ಬಜ್ಪೆ
ಬಂಟ್ವಾಳ
ಬಸ್ರೂರು
ಬಾರ್ಕೂರು
ಬೆಳ್ತಂಗಡಿ
ಬೈಂದೂರು
ಬೈಲೂರು
ಮಣಿಪಾಲ
ಮಲ್ಪೆ
ಮೂಡುಬಿದ್ರಿ
ಮೂಲ್ಕಿ:
ಲಾನ್ಸಾಡು
ಕೋಟೇಕಾರ
ವಿಟ್ಲ
ಸಾಲಿಗ್ರಾಮ
ಸುರತ್ಕಲ್
ಸುಳ್ಯ
ಶಂಕರನಾರಾಯಣ
ತಿರ್ವ
ಹೆಬ್ರಿ

48 ಶಾಖೆಗಳು

ಸಿಂಡಿಕೇಟ್ ಬ್ಯಾಂಕ್

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್" ಲಿಮಿಟೆಡ್

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ.ನ.

ಅಮೃತಾಂಜನ
ಎಲ್ಲಾ ತರದ ಸಿಡಿತ ಮತ್ತು ನೋವುಗಳಿಗೆ
ಹಂಪರ್ಷ ಪ್ರಾಯದ

Edited Printed & Published by K. H. Shetty, at the Navayuga Press, Udipi, S. India.

ರಾಷ್ಟ್ರೀಯ ವಾರಪತ್ರಿಕೆ. ಬೆಲೆ: 13 ನ.ಪೈಸೆ

ನವಯುಗ

KANNADA — NAVAYUGA — WEEKLY

ಸಂಪುಟ ೪೧ ಸಂಚಿಕೆ ೭ | ಉಡುಪಿ 19—10—1961 ಗುರುವಾರ | Vol. 41 No. 7

ನಿಮ್ಮ ಯಾವತ್ತೂ
ಮುದ್ರಣ ಕೆಲಸಗಳಿಗೆ
ದಯಮಾಡಿ ವಿಚಾರಿಸಿರಿ:
ನವಯುಗ ಪ್ರೆಸ್,
ಉಡುಪಿ

ವಿದ್ಯಾರ್ಥಿಗಳಿಗೆ
ಮತ್ತು ವಯಸ್ಕರಿಗೆ
ಅತ್ಯುಪಯೋಗೀ ಪುಸ್ತಕ
ಸುಲಭದಲ್ಲಿ ಇಂಗ್ಲಿಷ್
(ಆಂಗ್ಲ ಸ್ವಯಂಬೋಧಿನಿ)
ನವಭಾರತ ಪುಸ್ತಕ ಭಂಡಾರ
ಉಡುಪಿ

ರಾಷ್ಟ್ರೀಯ ಐಕ್ಯ ಮತ್ತು ಏಕಲಿಪಿಯ ಪ್ರಶ್ನೆ

ಶ್ರೀ ಕೋ. ಚನ್ನಬಸಪ್ಪ

ಕಳೆದ ಮೂರು ತಿಂಗಳಿಂದ ರಾಷ್ಟ್ರೀಯ ಐಕ್ಯದ ಮಾತು ಎಂದಿಗಿಂತಲೂ ಗಟ್ಟಿಯಾಗಿ ಕೇಳಿಬರುತ್ತಿದೆ.

ರಾಷ್ಟ್ರೀಯ ಐಕ್ಯತಾ ಸಮ್ಮೇಳನದಲ್ಲಿ ಪಾಲ್ಗೊಂಡ ಮಹಾ ಮುತ್ಸದ್ದಿಗಳೆಲ್ಲರೂ ಜಾತೀಯತೆ, ಪ್ರಾಂತೀಯತೆ, ಭಾಷೀಯತೆ (?) ಎಂಬ ಸಂಕುಚಿತತೆಯನ್ನು ಖಂಡಿಸಿ ಮಾತನಾಡಿದುದನ್ನು ನೋಡಿದರೆ, ನಮ್ಮ ರಾಷ್ಟ್ರಕ್ಕೆ ಗಂಡಾಂತರ ಬಂದಿರುವುದು ಜಾತಿ, ಪ್ರಾಂತ, ಭಾಷೆಯ ದೆಸೆಯಿಂದಲೇ ಎಂದು ನಾವು ನಿರ್ದಿಷ್ಟವಾಗಿ ಗುರುತಿಸಬಹುದು.

ರಾಷ್ಟ್ರೀಯ ಐಕ್ಯತಾ ಸಮ್ಮೇಳನದ ಹಿನ್ನೆಲೆ ಹೀಗಿದೆ: ೧೯೫೩ರಲ್ಲಿ ಆಂಧ್ರ ಪ್ರಾಂತ ನಿರ್ಮಾಣವಾಯಿತು. ಅದು ನಿರ್ಮಾಣವಾದ ಮೇಲೆ ದೇಶದಲ್ಲೆಲ್ಲ ಭಾಷಾವಾರ ಪ್ರಾಂತರಚನೆಗಾಗಿ ಹೋರಾಟವೇ ನಡೆಯಬೇಕಾಯಿತು. ಜನರ ಭಾವೋದ್ವೇಗಗಳನ್ನು ಕೆರಳಿಸಿ, ಅವರನ್ನು ರೊಚ್ಚಿಗೆಬ್ಬಿಸಿ,ಬೇಕೋ ಬೇಡವೋ ಎಂಬಂತೆ 'ತೇಪೆಕೆಲಸ' ಮಾಡಿದರು. ಯಾವುದನ್ನು ಯಾರ ಒತ್ತಾಯ, ಬೆದರಿಕೆ, ಉಪವಾಸ, ಮುಷ್ಕರ, ಸತ್ಯಾಗ್ರಹ, ಮುಲಾಜು ಇಲ್ಲದೆ ಸ್ವತಂತ್ರವಾಗಿ ಮಾಡಬಿಡಬಹುದಾಗಿತ್ತೊ ಅದನ್ನು ರಾದ್ಧಾಂತ ಮಾಡಿ ಅರೆಮನಸ್ಸಿನಿಂದ ಅರ್ಧಂಬರ್ಧ ಮಾಡಿದರು!

ಅದರಿಂದ ಮಹಾರಾಷ್ಟ್ರಕ್ಕೂ ಗುಜರಾತಿಗೂ ಹೊಟ್ಟೆಯಲ್ಲಿ ಬೆಂಕಿಬಿತ್ತು. ಎಲ್ಲರಿಗೂ ಸಿಕ್ಕ ಪ್ರಾಂತ ಅವರಿಗೆ ಸಿಗಲಿಲ್ಲ ಎಂದಮೇಲೆ ಅವರಿಗೆ ಬೆಂಕಿ ಬೀಳದೆ ಬಿಟ್ಟೀತೆ? ಅದಕ್ಕೂ ಹೋರಾಟ! ಸತ್ಯಾಗ್ರಹ! ಗುಂಡಿನ ಸುರಿಮಳೆ! ಸಾವು! ನೋವು! ನೂರಿನ್ನೂರು ಜನರು ಸತ್ತಮೇಲೆ, ೧೦-೧೫ ಉಪಚುನಾವಣೆಗಳಲ್ಲಿ ಕಾಂಗ್ರೆಸ್ಸು ನುಣ್ಣಗೆ ಸೋತುಹೋದಮೇಲೆ ಆಗಲೂ ಬೇಕೋ ಬೇಡವೋ ಎಂದು ಮಹಾರಾಷ್ಟ್ರ ಗುಜರಾತುಗಳನ್ನು ರಚಿಸಿದರು!

ಆದರೆ ಕಟ್ಟಿಹೋದ ಮನಸ್ಸನ್ನು ಭೂಪಟದಲ್ಲಿ ಗೆರೆ ಎಳೆದು ರಾಷ್ಟ್ರನಿರ್ಮಾಣ ಮಾಡಿದಂತೆ ಸರಿಪಡಿಸಲು ಸಾಧ್ಯವಿಲ್ಲ. ನೋವಾದ ಮನಸ್ಸಿನ ಗಾಯ ಹಾಗೆಯೇ ಉಳಿಯಿತು.

ಅದಾದ ಮೇಲೆ ನಾಗಾನೆಲ ನಿರ್ಮಾಣವಾಯಿತು!

ಈಗ 'ಪಂಜಾಬಿ ಸುಬಾ' ಬೇಕೆಂದು ದೊಡ್ಡ ಹೆಯಿಲೆದ್ದಿದೆ. ಅದನ್ನು ವಿರೋಧಿಸದೆ, ಎಲ್ಲಕಡೆಯೂ ಮಾಡಿದಂತೆ, ಮಾಡುವಾಗಲೇ ಮಾಡಿದ್ದರೆ ಶೀಖರಿಗೆ ಸಂಕಟವೂ ಇರುತ್ತಿರಲಿಲ್ಲ. ದೇಶ ಏನಾಗಿ ಹೋದೀತೋ ಎಂಬ ಹೆದರಿಕೆ ದೆಹಲಿಯ ದೇವಗಣಕ್ಕೂ ಇರುತ್ತಿರಲಿಲ್ಲ. ಆದರೆ ನ್ಯಾಯವಾದುದನ್ನು ಮಾಡುವುದರಲ್ಲಿ ನಮ್ಮ ಆಳರಸರು ಎಂದೂ ದೊಡ್ಡ ಮನಸ್ಸು ತೋರಿಸಿಲ್ಲ. ಸ್ವಾಭಿಮಾನಿಗಳಾದ ಶೀಖರು ತಮ್ಮ ಪಿಡ್ಗನ್ನು ಹಿಂದು ನಿಂತಮೇಲೆ ದಿಗಿಲುಬಿತ್ತು!!

ಆಗ ರಾಷ್ಟ್ರೀಯ ಐಕ್ಯ ಸಮ್ಮೇಳನದ ಕೂಗು ಎದ್ದಿತು. ಮಾಸ್ಟರ್ ತಾರಾ ಸಿಂಗ್ ಉಪವಾಸ ಕೈಗೊಳ್ಳುವುದಕ್ಕೆ ಮುಂಚೆ ಮೂರೇ ದಿನ ಮೊದಲು ಇದರ ಮೊದಲ ಹೆಜ್ಜೆ ಕೈಕೊಂಡರು!

ಭಾಷವಾರ ಪ್ರಾಂತರಚನೆಯೇ ದೇಶಕ್ಕೆ ಗಂಡಾತರಕಾರಿ ಎಂಬಂಥ ಧೋರಣೆಯಲ್ಲಿ ಈ ಸಮ್ಮೇಳನ ಪ್ರಾರಂಭಿಸಿತು! ಹಿಂದೆ ಭಾಷವಾರ ಪ್ರಾಂತ ತಳಹದಿಯ ಮೇಲೆಯೇ ಕಾಂಗ್ರೆಸ್ ಸಂಸ್ಥೆ ಸ್ವಾತಂತ್ರ್ಯ ಸಂಗ್ರಾಮ ನಡೆಸಿತು. ಯಶಸ್ವಿಯಾಗಿಯೂ ನಡೆಸಿತು. ಆಗ ದೇಶದಲ್ಲಿ ಈಗಿರುವುದಕ್ಕಿಂತ ಪ್ರಬಲ ವಿರುದ್ಧ ಶಕ್ತಿಗಳಿದ್ದರೂ, ರಾಷ್ಟ್ರೀಯ ಐಕ್ಯ ಮಾತ್ರ ಇದಕ್ಕಿಂತ ಭದ್ರವಾಗಿತ್ತು! ಭಾಷಾವಾರ ಪ್ರಾಂತ ತತ್ವವೇ ಈ ಐಕ್ಯಕ್ಕೆ ಕಾರಣವಾಗಿದ್ದರೆ ಆಗ ರಾಷ್ಟ್ರೀಯ ಐಕ್ಯ ಮೂಡುತ್ತಲೇ ಇರಲಿಲ್ಲ!

ಹಾಗಾದರೆ ಈಗ ರಾಷ್ಟ್ರದಲ್ಲಿ ಐಕ್ಯಭಾವ ಏಕೆ ಕುಗ್ಗಿತು? ಅದಕ್ಕೆ ಕಾರಣ ಹಲವಾರು. ಒಂದು: ಕಾಂಗ್ರೆಸ್ ಸಂಸ್ಥೆಯಲ್ಲಿ ಒಗ್ಗಟ್ಟು ತಪ್ಪಿತು. ಎರಡು: ಆಳುವ ನಾಯಕರಲ್ಲಿ ಪ್ರಾಮಾಣಿಕತೆ ಹೋಯಿತು. ಮೂರು: ಮುಂದಾಳುಗಳಲ್ಲಿ ಸ್ವಾರ್ಥ, ಸ್ವಜನ ಪಕ್ಷಪಾತ, ಆಡಂಬರ ಪ್ರಿಯತೆ....ಹೆಚ್ಚಾಯಿತು. ತತ್ಪರಿಣಾಮವಾಗಿ ಜನರಿಗೆ ಆಳುವ ಪಕ್ಷದಲ್ಲಿ, ಅದರ ನಾಯಕರಲ್ಲಿ ವಿಶ್ವಾಸ ಕಡಿಮೆಯಾಯಿತು. 'ಹೆಚ್ಚು ಮುಂಡೆಯ ಮದುವೆಯಲ್ಲಿ ಉಂಡವನೆ ಜಾಣ' ಎಂಬಂತೆ ಎಲ್ಲರೂ ತಮತಮಗೆ ಅನುಕೂಲವಾದಾಗ, ಬೇಕುಬೇಕಾದಷ್ಟು ಅನುಕೂಲತೆಗಳನ್ನು ಲಾಭಗಳನ್ನು ಬಾಚಿಬಾಚಿ ಎಳೆದುಹಾಕಿಕೊಳ್ಳತೊಡಗಿದರು! ಶೀಘ್ರ ಮತ್ತು ಸುಲಭ ಸರಿಮಾರ್ಗಕ್ಕೆ ಕಡೆಗೆ ಎಲ್ಲರೂ ಲಕ್ಷ್ಯ ಹೋಯಿತು! ರಾಷ್ಟ್ರದ ಗತಿ ಏನಾದರೂ ಯಾರಿಗೂ ಲಕ್ಷ್ಯ ಇಲ್ಲ! ರಾಷ್ಟ್ರೀಯ ಅನೈಕ್ಯತೆಗೆ ಕಾರಣ ಈ ಮುಖ್ಯಾಂಶಗಳು.

ಈ ಕಠೋರ ಸತ್ಯವನ್ನು ಒಪ್ಪಿಕೊಂಡು ಅದನ್ನು ಶರರಂತೆ ಎದುರಿಸಲಾರದೆ, 'ಸೂಳೆಯ ಪಾಪ ಸನ್ಯಾಸಿಗೆ' ಎಂಬಂತೆ, ಈ ಅಪ್ರಾಮಾಣಿಕ, ನಕಲಿ ನಾಯಕರ ಪಾಪವನ್ನು, ಭಾಷಾವಾರ ಪ್ರಾಂತದ ಸನ್ಯಾಸಿಯ ಸೆರಗಿಗೆ ತುಂಬುವುದು ಅತ್ಯ ವಂಚನೆಯಲ್ಲದೆ ಮತ್ತೇನು?

ಇನ್ನು ಜಾತೀಯತೆಯ ವಿಚಾರ! ಜಾತೀಯತೆ ನಮ್ಮ ದೇಶದಲ್ಲಿ ಈಗಿರುವಷ್ಟು ಹಿಂದೆ ಯಾವಾಗಲೂ ಇರಲಿಲ್ಲವೆಂದು ಧಾರಾಳವಾಗಿ ಹೇಳಬಹುದು. ಈಗಿರುವಂತೆಯೇ ಹಿಂದೆಯೂ ಜಾತಿ, ಮತ,ಕಾಲ,ಪಂಥಗಳು ಇದ್ದುವು.ಈಗಿರು ಪುನಕ್ಕಿಂತಲೂ ಕಟ್ಟು ನಿಟ್ಟಾದ ಆಚಾರಗಳು ಆಗ ಜಾರಿಯಲ್ಲಿದ್ದುವು. ಒಬ್ಬರ ಮನೆಯಲ್ಲಿ ಇನ್ನೊಬ್ಬರು ಉಣುತ್ತಿರಲಿಲ್ಲ. ಗಂಡು ಹೆಣ್ಣು ಕೊಡುಕೊಳ್ಳುವುದು ಇರಲಿಲ್ಲ.

ಇಷ್ಟೆಲ್ಲ ಭಿನ್ನತೆ ವೈವಿಧ್ಯ ಇದ್ದರೂ ವಿವಿಧ ಜಾತಿಯವರಲ್ಲಿ ವೈಷಮ್ಯ ಈಗಿರುವಷ್ಟು ಇರಲಿಲ್ಲ. ಮನೆಯಲ್ಲಿ ಹೊಕ್ಕು, ಉಂಡು ಬಳಕೆ ಮಾಡದಿದ್ದರೂ ಮನದಲ್ಲಿ ಪ್ರೇಮ ವಿಶ್ವಾಸ ಅದರ ಉಳಿದಿತ್ತು. ಆದರೆ ಈಗ ಎಲ್ಲರೂ ಎಲ್ಲರ ಮನೆಯಲ್ಲಿ ಹೊಕ್ಕು, ಉಂಡು ಬಳಕೆ ಮಾಡುತ್ತೇವೆ! ಆದರೆ ಮನಸ್ಸು ಮಾತ್ರ ಬೇರೆಬೇರೆಯಾಗಿದೆ! ಆಗ ಮನೆಯಲ್ಲಿ ಕೂಡದಿದ್ದರೂ ಮನದಲ್ಲಿ ಕೂಡಿದ್ದೆವು.ಈಗ ಮನೆಯಲ್ಲಿ ಕೂಡುತ್ತೇವೆ; ಮನದಲ್ಲಿ ದೂರವಾಗಿರುತ್ತೇವೆ!

ಅದಕ್ಕೆ ಮುಖ್ಯ ಕಾರಣ ನಮ್ಮನಮ್ಮ ಜಾತಿಯಲ್ಲ. ವೈದಿಕರು ವೈಷ್ಣವರನ್ನು ಈಗ ದ್ವೇಷಿಸುವುದು ಶಿವವಿಷ್ಣುವಿಗಿಂತ ದೊಡ್ಡವನೆಂಬ ಕಾರಣದಿಂದಲ್ಲ. ಅದಕ್ಕೆ ಕಾರಣ: ಈ ವೈಷ್ಣವ ಎಲ್ಲ ಸರ್ಕಾರೀ ಅಧಿಕಾರಗಳನ್ನು ಬಹು ಮಂತ್ರಿ ಪದವಿಗಳನ್ನು, ಕಾಲೇಜುಗಳಲ್ಲಿ ಸೀಟುಗಳನ್ನು ಲಸಟಾಯಿಸಿಕೊಂಡು ಬಿಡುತ್ತಿದ್ದಾರೆಯೇ ಎಂದು ಹೊಟ್ಟೆಯಲ್ಲಿ ಉರಿ ಏಳುತ್ತದೆ! ಇದೇ ಎಲ್ಲ ಜಾತಿ ದ್ವೇಷಕ್ಕೂ ಮೂಲ ಕಾರಣ!

ಇದೇ ಮೂಲಕಾರಣದಿಂದಲೇ ಕೇರಳದಲ್ಲಿ ರ್‍ಯಾಥೋಲಿಕ್ ಕ್ರೈಸ್ತರಿಗೂ ನಾಯರ್ ಜನಾಂಗದವರಿಗೂ ಎಜವಾಕುಲದವರಿಗೂ ಒಬ್ಬರಿಗೆ ಕತ್ತು ಒಬ್ಬರು ಹಗಲೇ ಕೊಯ್ಯುವಷ್ಟು ಜಾತಿ ವೈಷಮ್ಯ ಬೆಳೆದಿತ್ತು. ಕಾಂಗ್ರೆಸ್ ಪ್ರಸವಾ ಪಕ್ಷಗಳಲ್ಲೂ ಇದೇ ರಾಕ್ಷಸೀ ಕುಣಿತವೆ! ಆಗ ಈ ವೈಷಮ್ಯವಿಲ್ಲದೆ, ಪ್ರಜಾ ಸೇವೆಯ ಸದುದ್ದೇಶವಿದ್ದ ಕಮ್ಯುನಿಸ್ಟ್ ಪಕ್ಷಕ್ಕೆ ಬೆಂಬಲ ಸಿಕ್ಕಿತು. ಅದು ಅಧಿಕಾರಕ್ಕೆ ಬಂದ ಮೇಲೆ ಯಾವ ಜಾತಿ ಮತ ಪಂಥದ ಹಂಗು ಹೆದರಿಕೆ ಇಲ್ಲದೆ ಕೆಲಸ ಮಾಡತೊಡಗಿತು! ಕೇರಳ ವೈಶ್ಯಕೆಗೆ ಮಸೂದೆ ಭೂ-ಸುಧಾರಣಾ ಮಸೂದೆಗಳನ್ನು ಎದೆಗಾರಿಕೆಯಿಂದ ಮುಂದೆ ತಂದರು.

ಆಗ ಕ್ರೈಸ್ತಿಯನ್ನರಿಗೂ ಹೊಡೆತ ಬಿತ್ತು. ನಾಯರ್‌ಕುಲದವರಿಗೂ ಏಟು ಬಿತ್ತು. ಎಜವಾ ಜಾತಿಯವರಿಗೂ ಪ್ರಾಧಾನ್ಯ ಹೋಯಿತು! ಆಗ ಮುಸ್ಲಿಂ ಲೀಗ್ ಭೂತದ ಸಹಾಯಕ್ಕೆ ಕೈ ಚಾಚಿದರು! ಸತ್ತ ಲೀಗಿಗೆ ಕಾಂಗ್ರೆಸ್ಸೇ ಅಲ್ಲಿ ಸಂಜೀವಿನಿ ಮೂಲಿಕೆ ಕೊಟ್ಟು ಜೀವಂತ ಮಾಡಿತು!

ಅಲ್ಲಿಂದ ಇಲ್ಲಿಯ ವರೆಗೆ ದೇಶದಲ್ಲೆಲ್ಲ ಮುಸ್ಲಿಂ ಲೀಗ್ ಮತ್ತೆ ತಲೆಎತ್ತಿದೆ! ಕೇರಳದಲ್ಲಿ ನ್ಯಾಯೊಂಗದಲ್ಲೂ ಮುಸ್ಲಿಂರಿಗೆ ತಮ್ಮ ತಮ್ಮ ಪ್ರಜಾ ಪ್ರಾಬಲ್ಯಕ್ಕೆ ಅನುಗುಣವಾಗಿ ಪ್ರಾತಿನಿಧ್ಯ ಕೊಡಬೇಕೆಂದು ಈಗ ಕಾಂಗ್ರೆಸ್ ಮುಸ್ಲಿಮರೇ ಹುಯಿಲೆಬ್ಬಿಸಿದ್ದಾರೆ. ಉತ್ತರ ಪ್ರದೇಶದಲ್ಲಿ ಲಂ ಸ್ಥಳಗಳಿಗೆ ಅವರು ಪ್ರತಿಸ್ಪರ್ಧಿಸುತ್ತಾರೆ! ದೇಹಲಿಯಲ್ಲಿ ಮುಸ್ಲಿಂ ಕನ್‌ವೆನ್‌ಷನ್ ನಡೆಯಿತು! ಅದಕ್ಕೆ ರಾಷ್ಟ್ರದ ನಾಯಕರೆಲ್ಲ ಹರಸಿ ಆಶೀರ್ವಾದ ಮಾಡಿದರು!

ಒಂದೇ ಒಂದು ರಾಜ್ಯದಲ್ಲಿ ರಾಜಕೀಯ ಕಾರಣಗಳಿಂದ ಜಾತೀಯ ಸಂಸ್ಥೆ ಮುಸ್ಲಿಂ ಲೀಗ್ ಮನರ್‌ನ್ಯವಸ್ಥೆಗೊಳಿಸಿದ್ದರಿಂದ ದೇಶದಲ್ಲೆಲ್ಲ ಹಿಂದೂ ಮಹಾಸಭೆ, ಜನಸಂಘ, ಆರ್. ಎಸ್. ಎಸ್. ತಮ್ಮ ಕಾರ್ಯ ಚಟುವಟಿಕೆಗಳನ್ನು ತ್ವರಿತಗೊಳಿಸಿದವು! ಹೀಗೆ ಜಾತೀಯತೆಗೆ ಚಾಲನೆ ಸಿಕ್ಕಿದ್ದರೆ ಅದಕ್ಕೆ ಕಾರಣ ಯಾರು? ಯಾವುದು?

ಇನ್ನು ಭಾಷೀಯತೆ(?)ಯ ವಿಚಾರ. ಹಿಂದೆಯೂ ನಮ್ಮ ದೇಶದಲ್ಲಿ ಈಗಿರುವಷ್ಟೇ ಭಾಷೆಗಳಿದ್ದವು. ಆದರೆ ಈ ವಿವಿಧ ಭಾಷೆಗಳು ನಮ್ಮನ್ನು ಅನೈಕ್ಯದ ಕಡೆಗೆ ಕೊಂಡೊಯ್ದಿರಲಿಲ್ಲ. ಕೇರಳದ ಶಂಕರರು ಭರತ ಖಂಡವನೆಲ್ಲ ಗೆದ್ದರು! ತಮಿಳುನಾಡಿನ ರಾಮಾನುಜಾಚಾರ್ಯರು, ಕರ್ನಾಟಕದಲ್ಲಿ ತಮ್ಮ ಆಚಾರ್ಯ ಪೀಠವನ್ನು ಸ್ಥಾಪಿಸಿದರು! ಮಧ್ವಾಚಾರ್ಯರಿಗೆ ದೇಶದಲ್ಲೆಲ್ಲ ಗೌರವ ಸಿಕ್ಕಿತು! ಕರ್ನಾಟಕದ ಬಸವಣ್ಣನವರಂ ಅನುಭವ ಮಂಟಪಕ್ಕೆ ತಮಿಳು, ಆಂಧ್ರ, ಮಹಾರಾಷ್ಟ್ರ, ಗುಜರಾತ, ಕಾಶ್ಮೀರದಿಂದಲೂ ಜನ ಬಂದು ಸೇರುತ್ತಿದ್ದರು. ಈಗ ನಾವು ಯಾವ ಜಾತಿ ಮತ್ತು ಭಾಷೆಗಳು ರಾ

(೧೨ನೇ ಪುಟ ನೋಡಿರಿ)

ದೈವ ಬಗೆದ ದ್ರೋಹ

ಕೆ. ಭದ್ರಿನಾಥ್

ನುಣ್ಪೊಗರನ್ನು ಹೊತ್ತು ಗಾಳಿ ಮಂದವಾಗಿ ಬೀಡುತ್ತಿತ್ತು. ಮನೆಯ ಎದುರಿನ ಹೂದೋಟದಲ್ಲಿದ್ದ ಮಲ್ಲಿಗೆಯ ಪೊದೆಗಳು ಮೂಡಿಬಹ ಬಾಲಸೂರ್ಯನಿಗೆ ಬಾಗಿನವಿಸುವಂತೆ ಆಗೊಮ್ಮೆ ಈಗೊಮ್ಮೆ ಉಯ್ಯಾಲೆಯಾಡುತ್ತಿದ್ದುವು. ವಸಂತ ದಿನ ಮಣಿಯ ಹೊಂಗಿರಣಗಳು ಹೆಚ್ಚಹಸುರಿನ ಪೊದೆಗಳ ಬರಲಾದ ನೆತ್ತಿಯ ಮೇಲೆ ಬಿದ್ದು ಬಂಗಾರದ ಒಪ್ಪಕೊಟ್ಟಂತೆ ತಾಣುತ್ತಿದ್ದುವು. ಮನೆಯ ಮಾಡಿನ ಮೇಲೆ ಬಿದ್ದ ಸ್ವರ್ಣ ಕಿರಣಪುಂಜ ಮಾಡಿಗೆ ತನ್ನದೇ ಆದ ಒಂದು ಅಪೂರ್ವ ಕಾಂತಿಯನ್ನು ಕೊಟ್ಟಿತ್ತು.

ಒಳಗೆ ಸುದೇಶ್ ಮತ್ತು ಅರುಣರ ಮಾತುಕತೆ ನಿರಾತಂಕವಾಗಿ ಸಾಗಿತ್ತು. ಮಾತಿನ ಜಾಡು ಯಾವುದೋ ಒಂದು ಅವ್ಯಕ್ತ ಸಧನನನ್ನು ಹಿಡಿದುಸಾಗುತ್ತಿತ್ತು. ಅರುಣನ ಮನಸ್ಸು ಸಂತಸಗೊಂಡಿರಲಿಲ್ಲ. ತಮ್ಮ ಬಾಳಿನಲ್ಲಿ ಮುಂದಾಗುವ ಮಹಾ ಪರಿವರ್ತನೆಗಾಗಿ ಅವನ ಮನಸ್ಸು ತೊಸೆಯುತ್ತಿತ್ತು. ಹೃದಯವನ್ನು ಕೀಟವೊಂದು ಆಗಾಗ ಕಡಿದಂತಾಗುತ್ತಿತ್ತು. ಸುದೇಶ್‌ಳ ಮನಸ್ಸಿನಲ್ಲೂ ಆ ಭಾವನೆ ಪ್ರತಿಫಲಿಸದಿರಲಿಲ್ಲ. ಆದರೆ ಮುಂದಿರುವ ಸಂಭ್ರಮದಿಂದ ಅವಳ ಮನಸ್ಸು ಉಲ್ಲಸಿತವಾಗಿತ್ತು. ಒಂದು ಬದಿಯಲ್ಲಿ ಹಿಂದಿನ ಮಧುರ ಬಾಂಧವ್ಯದ ಸಿಹಿನೆನಪುಗಳು ಆಕೆಯನ್ನು ಸೆಳೆಯುತ್ತಿದ್ದರೆ, ಇನ್ನೊಂದಡೆಯಲ್ಲಿ ಮುಂದಿನ ಬಾಳಿನಲ್ಲಾಗುವ ಘೋರ ಬದಲಾವಣೆ ನಿರುತ್ಸಾಹಗೊಳಿಸುತ್ತಿತ್ತು. ದೇಹದಲ್ಲಾಗುವ ಎರಡು ಮಹಾಶಕ್ತಿಗಳ ನೆಳೆತ ಆಕೆಯ ಮನಸ್ಸನ್ನು ಅಸ್ತವ್ಯಸ್ತಗೊಳಿಸುತ್ತಿತ್ತು.

ದಿನದ ಮಾತು ನಡೆದೇ ಇತ್ತು. ಮೂಕನಡೆಯ ಬೇಕಿತ್ತು. ಮದುವೆಯ ಮನೆಯಲ್ಲಿ ಮಸಣಶಾಂತಿಯ ರಾಜ್ಯಭಾರ ಅವರಿಗೆ ಬೇಕಿರಲಿಲ್ಲ. ಹೆತ್ತು-ಹೊತ್ತು ತಂದೆ-ತಾಯಿಯೊಗಿ ಸಲಹಿದ ಪ್ರೀತಿಯ ತಂದೆಯ ಮನಸ್ಸನ್ನು ನೋಯಿಸುವುದು ಆಕೆಗೆ ಬೇಕಾಗಿರಲಿಲ್ಲ

ಅರುಣಗಾದರೂ ಅಷ್ಟೆ; ಅನಾಥನಾದ ಆತನನ್ನು ಹಳ್ಳಿ ತಿಪ್ಪೆಯಿಂದ ಎತ್ತಿತಂದು ಮಗನಂತೆ ಮೋಸಿಸಿದ ಪೂಜ್ಯ ರಾಮದಾಸಜೀಯವರ ಋಣವನ್ನು ಆತ ಸಲ್ಲಿಸುವಂತಿರಲಿಲ್ಲ. ತನ್ನ ಅಜನ್ಮ ಸುಖವನ್ನು ಅದಕ್ಕೆ ಬಲಿಯಾಗಿ ಅರ್ಪಿಸಲು ಆತ ಎಂದೋ ಮನನಮಾಡಿದ್ದ. ಇಂದು ಆತನ ಸತ್ವ ಪರೀಕ್ಷೆಯ ಕಾಲ ಒದಗಿ ಬಂದಿತ್ತು. ಅದಕ್ಕಾಗಿ ಆತ ಸಿದ್ಧನಾಗ ಬೇಕಿತ್ತು.

ಸುದೇಶ್ - ಅರುಣರ ಲಗ್ನ ನಿಶ್ಚಯವಾಗಿತ್ತು. ಆ ಮನೆಗೆ ಕಾಲಿಟ್ಟಿಂದಿನಿಂದ ಅರುಣ್ ಸುದೇಶ್‌ಳನ್ನು ತನ್ನ ಒಡ ಹುಟ್ಟಿದ ತಂಗಿಯಂತೆ ಪ್ರೀತಿಸುತ್ತಿದ್ದ ಸುದೇಶ್‌ಳಾದರೋ ಮುಂಬಾಯಿಯಂತಹ ದೊಡ್ಡ ಶಹರಿನಲ್ಲಿ ಶ್ರೀಮಂತ ಪುತ್ರಿಯಾಗಿ ಜನಿಸಿ, ಬೆಳೆದ ಹುಡುಗಿ. ಆಧುನಿಕ ನಾಗರಿಕತೆಯ ಥಳಕು ಎಲ್ಲರನ್ನು ಮರುಳು ಗೊಳಿಸಿದಂತೆ ಆಕೆಯ ಕಣ್ಣನ್ನು ಕೋರೈಸಲಿಲ್ಲ! ಜೀವದ ಮಹಾ ಖನಿಯಲ್ಲಡಗಿದ್ದ ಅನರ್ಘ್ಯ ರತ್ನವನ್ನರಸುವುದರಲ್ಲಿ ಆಕೆ ತೊಡಗಿದ್ದಳು. ಶ್ರೀಮಂತ ತಂದೆಗೆ ಒಬ್ಬಳೇ ಒಬ್ಬ ಪುತ್ರಿಯಾಗಿ ಬೆಳೆದಿದ್ದಾಕೆಗೆ ಅಂದು ಒಬ್ಬ ಅಣ್ಣ ದೊರಕಿದಾಗ ಎಂದೂ ಸಟ್ಟರದ ಸಂತೋಷಗೊಂಡಿದ್ದಳು'

ಆದರೆ ಇಂದು ಅವರ ಕಳಂಕರಹಿತ ಭವ್ಯ ಬಾಂಧವ್ಯದ ಸೌಧ ಪರಿವರ್ತಿಸುವುದರಲ್ಲಿತ್ತು.

ಬೆಳಗ್ಗಿಂದ ಒಂದೇ ಸವನೆ ಕಿರುಚುತ್ತಿದ್ದ ಬಾನುಲಿಯನ್ನು ಸುಮ್ಮನಾಗಿಸಿ ಮೌನವಾಗಿದ್ದರವರು. ಎಂದಿನ ಇಸ್ಪಿಟ್ ಆಟ, ಚೆಸ್, ಮಾತುಕತೆ, ಹಾಸ್ಯ ಯಾವುದೂ ಇಂದು ಬೇಡವಾಗಿತ್ತು.

ಅಂದಿನ ವರೆಗೆ ಅರುಣ್—ಸುದೇಶ್ ಒಟ್ಟೊಟ್ಟಿಗೆ, ನಿಸ್ಸಂಕೋಚವಾಗಿ ಜಾಪಾಟಿ, ದಾದರ್, ಮೇರಿನ್‌ಡ್ರೈವ್ ತಿರುಗಿ ಬರುತ್ತಿದ್ದವರಿಗೆ ಈಗ ಒಬ್ಬರ ಮುಖವನ್ನೊಬ್ಬರು ನೋಡುವುದಕ್ಕೂ ನಾಚಿಕೆಯಾಗುತ್ತಿತ್ತು.

'ರಾಣಿ' ಅರುಣ್ ಸುದೇಶ್‌ಳನ್ನು ಹಾಸ್ಯಕ್ಕಾಗಿ ಕರೆಯುತ್ತಿದ್ದ ಹೆಸರು. ಆದರಿಂದು ಆ ಹಾಸ್ಯದ ಮಾತು ನಿಜವಾಗುತ್ತಾ ಬರುತ್ತಿದೆ. ಸುದೇಶ್ ಆತನ ವಾಸ್ತವ ಜೀವನದ ಅಜನ್ಮ ರಾಣಿಯಾಗಿ ಬಂಧಿತವಾಗುವ ಕಾಲ ಬಂದಿದೆ.

"ಓ....." ಅರುಣ್ ನನ್ನು ನಾನಿನ್ನು ಹೆಸರಿಡಿದು ಕೂಗುವಂತಿಲ್ಲ, ಸುದೇಶ್ ಸ್ವಲ್ಪ ಬಿಗುವಾಗಿಯೇ ಯೋಚಿಸುತ್ತಿದ್ದಳು.

"ಸುದೇಶ್, ನಮ್ಮಿ ಮೌನದಿಂದ ನಿನಗೆ ಬೇಸರವಾಯಿತೇ?"—ಅರುಣ್‌ನೇ ಮೌನ ಮುರಿದ. ಆತನಾಡಿದ ಶಬ್ದ ಶಬ್ದಗಳಲ್ಲಿ ಹೊರಹುಟ್ಟಿತ್ತು ಮೂಕಯಾತನೆ. ದುಃಖವೇ ಮೂರ್ತಿವೆತ್ತು ಒಂದಂತಿತ್ತು ಆ ಮಾತು—ತನ್ನ ತಪ್ಪನ್ನೊಪ್ಪಿಕೊಳ್ಳುವ ರಾಗವಿತ್ತು ಅದರಲ್ಲಿ.

"ಇಲ್ಲ, ಹಾಗೇ ನಿಲ್ಲ.....ಇಂದು ಎಂದೂ ಇಲ್ಲದ ತಡೆಯುಂಟಾಗಿದೆ"—ಲಜ್ಜಿತಳಾಗಿ ಉತ್ತರಿಸಿದಳು ಆ ಮುಗ್ಧ ಮನೋಹರ ವದನೆ.

ಪುನಃ ಹಿಂದಿನಂತೆ ಮೌನ ಕವಿಯಿತು.

೦೦ ೦೦

ಮರುದಿನ ಪ್ರಾತಃಕಾಲ. ಮುಂಬಾಯಿ ಶಹರು ಗೊಂದು ಗಲಾಟೆಗಳಿಂದ ವಿರಹಿತವಾಗಿ ನಿಂತಿತ್ತು—'ಖಾರ್'. ಮುಂಬಾಯಿಗೂ ಖಾರ್ ಪೇಟೆಗೂ ಸುಮಾರು ೧೩ ಮೈಲಿನ ಅಂತರ. ಖಾರ್ ಮುಂಬಾಯಿಯಷ್ಟು ದೊಡ್ಡ ಪೇಟೆಯಲ್ಲದಿದ್ದರೂ ತನ್ನದೇ ಆದ ಒಂದು ರೀತಿಯ ಶಾಂತಿಯಿಂದ, ಪ್ರಕೃತಿದತ್ತವಾದ ಬೆಡಗಿನಿಂದ ಪ್ರತ್ಯೇಕವಾಗಿ ಶೋಭಿಸುತ್ತಿತ್ತು.

ಬಳ್ಳಿಗಳಿಂದ ಆವೃತವಾದ ಹಾಲುಗಲ್ಲಿನ ಆಸನವೊಂದರಲ್ಲಿ ಅರುಣ್ ಚಿಂತಾಕ್ರಾಂತನಾಗಿ ಮಂಡಿಸಿದ್ದ. ಪ್ರಾತಃಕಾಲದ ಕುಳಿರ್ಗಾಳಿ ಕೋಪಗೊಂಡ ಕೆಂಡ-ಸೂರ್ಯನನ್ನು ಸಂತೈಸುವಂತೆ, ಆಗತಾನೆ ಅರಳುತ್ತಿದ್ದ ಹೂಗಳ ಸೌರಭವನ್ನು ಹೊತ್ತು ಹಿತವಾಗಿ ಬೀಸುತ್ತಿತ್ತು.

ಇತ್ತ ಅರುಣ್‌ನ ಯೋಚನಾಲಹರಿ ಮುಂದೆ ಮುಂದೆ ಸಾಗುತ್ತಿತ್ತು.

ಲಗ್ನ ನಿಶ್ಚಯವಾದಾಗ ಆತನೊಮ್ಮೆ ತನ್ನ ದುಃಖವನ್ನು ನೆಚ್ಚಿನ ಕಾಲೇಜು ಪ್ರಾಧ್ಯಾಪಕರೆದುರು ತೋಡಿಕೊಂಡಿದ್ದ. ಈ ಬಗೆಯ ಲಗ್ನಕ್ಕಾಗಿ ಅವರು ಮನದಲ್ಲಿ ಮರುಗಿದರೂ, ಸಂತೋಷದ ಸೋಗು ಹಾಕಿ ಆತನನ್ನು ಸಮಾಧಾನ ಪಡಿಸಿದ್ದರು

ಆದರೆ, ಇಂದು.....ಮಾಮೆಯ ದಿನ. ಆಗಲೇ ಮನೆಯಲ್ಲಿ ಸಂಭ್ರಮ, ಸ

(೧೧ನೇ ಪುಟ ನೋಡಿರಿ)

ಗದಿನಾಡ ಮತ್ತು ಹೊರನಾಡ ಕನ್ನಡಿಗರ ಹಿತಚಿಂತನೆಗಾಗಿ ಹೋರಾಡುವ ಬೆಳಗಾವಿಯ ಏಕೈಕ ಮಾಸಪತ್ರಿಕೆ—

ಶಾರದಾ

ಈ ದಿನವೇ ಚಂದಾ ಹಣ ಕಳುಹಿಸಿರಿ.

ತರುಣ ಬರೆಹಗಾರರಿಗೆ ಪ್ರಥಮ ಪ್ರಾಶಸ್ತ್ಯ ನೀಡುವ 'ಶಾರದಾ' ಪ್ರತಿ ತಿಂಗಳೂ ಕತೆ, ಕವನ, ಪತ್ತೇದಾರಿ ಕಾದಂಬರಿ, ಸಾಮಾಜಿಕ ಕಾದಂಬರಿ, ಚಲಚ್ಚಿತ್ರ ಕತೆಗಳು, ವಿಚಾರಪೂರಿತ ಶೈಕ್ಷಣಿಕ ಲೇಖನಗಳು, ಮಕ್ಕಳ ಹಾಗೂ ಮಹಿಳಾವಿಭಾಗ, ರಾಜಕೀಯ-ಸಾಹಿತ್ಯಿಕ ಲೇಖನಗಳೊಂದಿಗೆ ತ್ರಿವರ್ಣರಂಜಿತ ಮುಖಪುಟದೊಂದಿಗೆ ಪ್ರಕಟವಾಗುವದು.

ಚಂದಾದಾರರಿಗೆ ವರ್ಣರಂಜಿತ ಕ್ಯಾಲೆಂಡರ ಮತ್ತು 'ಬಣ್ಣದ ಹೆಣ್ಣು' ಎಂಬ ಕಾದಂಬರಿ ಉಚಿತ ಸಿಗುತ್ತವೆ.

ವಾರ್ಷಿಕ ಚಂದಾ ೪ ರೂ ಮಾತ್ರ.

ಕರ್ನಾಟಕದ ಎಲ್ಲಾ ಊರುಗಳಲ್ಲಿಯೂ ವಿಪುಲವಾದ ಕಮಿಶನ್ನಿನ ಮೇಲೆ 'ಶಾರದಾ' ಮಾರಲು ಏಜಂಟರು ಬೇಕಾಗಿದ್ದಾರೆ. ಮಾದರಿ ಪ್ರತಿ, ಏಜನ್ಸಿ ನಿಯಮಗಳಿಗಾಗಿ ೧ ರೂ. M O. ಮಾಡಿರಿ.

ಸಂಚಾಲಕರು: 'ಶಾರದಾ' ಮಾಸಪತ್ರಿಕೆ, ರಹಮಾನ್—ಬೆಳಗಾವಿ

ಸ್ಥಾಪನೆ: 1924

ದಿ ಕರ್ನಾಟಕ ಬೇಂಕ್ ಲಿಮಿಟೆಡ್

(ಶೆಡ್ಯೂಲ್ಡ್ ಬೇಂಕ್)

ರಿಜಿಸ್ಟರ್ಡ್ & ಹೆಡ್ ಆಫೀಸು: ಡೊಂಗರಕೇರಿ, ಮಂಗಳೂರು—3.

ಈ ಕೆಳಗಿನ ಏರಿಸಿದ ಬಡ್ಡಿದರಗಳಲ್ಲಿ ಠೇವಣಾತಿಗಳನ್ನು ಸ್ವೀಕರಿಸಲಾಗುವುದು-

ಒಂದರಿಂದ ಎರಡು ತಿಂಗಳುಗಳ ವರೆಗೆ	....	ಸಾ॥ ಸೇಕಡಾ 3-75	ನ.ಪೈಸೆ
ಮೂರರಿಂದ ಐದು ತಿಂಗಳುಗಳ ವರೆಗೆ	....	,, 4-25	,,
ಆರು ತಿಂಗಳುಗಳಿಂದ 12 ತಿಂಗಳುಗಳ ವರೆಗೆ	....	,, 4-50	,,
12 ತಿಂಗಳು ಮಿಕ್ಕಿ 24 ತಿಂಗಳುಗಳ ವರೆಗೆ	....	,, 4-75	,,
24 ತಿಂಗಳು ಮಿಕ್ಕಿ 48 ತಿಂಗಳುಗಳ ವರೆಗೆ	....	,, 5-00	,,
48 ತಿಂಗಳುಗಳಿಗೆ ಮಿಕ್ಕಿ	....	,, 5-25	,,

ಸೇವಿಂಗ್ಸ್ ಬ್ಯಾಂಕ್ ಬಡ್ಡಿ ದರವನ್ನು ಸಾ. ಸೇಕಡ 2½% ರಿಂದ 3¼%ಗೆ ಏರಿಸಲಾಗಿದೆ.

THE KARNATAKA BANK LIMITED.

ESTD. 1921 ಸ್ಥಾಪನೆ

NAVAYUGA
KANNADA WEEKLY,
UDIPI.

Founder:
Late Sri A. B. Shetty
Former Minister for Public Health, Govt. of Madras & Govt. of Mysore.

ನವಯುಗ

ರಾಷ್ಟ್ರೀಯ ವಾರಪತ್ರಿಕೆ
ಉಡುಪಿ

ಗೌರವ ಸಂಪಾದಕರು:
ಎಸ್. ಗೋಪೀಚಂದ ರಾವ್, ವಿದ್ವಾನ್.
ಬಿ ರಾಮರಾಯ ಶೆಟ್ಟಿ, ಬಿ. ಎ., ಎಲ್.ಟಿ.

ಸಂಚಾಲಕ ಸಂಪಾದಕರು:
ಕೆ. ಹೊನ್ನಗ್ಯ ಶೆಟ್ಟಿ.

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-50
ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ 3 50

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಪ್ರತಿ ರೂ 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.



ರವೀಂದ್ರವಾಣಿ— ಲೇಖಾಂಕ ೨೦ – ವಿಶ್ವಕವಿ ರವೀಂದ್ರನಾಥ ಟಾಗೋರ್

ಪ್ರೇಮ ಸಾಧನೆಯಿಂದ ಪರಮಾತ್ಮನ ಪ್ರಾಪ್ತಿ

ಅನುವಾದಕರು. ಕೆ ಎನ್ ಭಟ್, ಶಿರಾಡಿಪಾಲ್.

ನಮ್ಮ ಆನಂದಮಯ ಕುತೂಹಲ ಪೂರ್ಣವಾದ ರಹಸ್ಯದ ಮೂಲಕ್ಕೆ ವಿವಿಧತೆಯಿಂದ ಕೂಡಿದ ಏಕೈಕದತ್ತಿರುವುದನ್ನು ತಿಳಿದು, ಹರ್ಷಭರಿತರಾಗದೆ ಇರುವ ಕೆಲವರು ಇರುತ್ತಾರೆ ಈ ನಿಯಮವೇ ಕೊನೆಯ ಸಂಶೋಧನೆಯೆಂದು ಭಾವಿಸುವುದು, ಇದಕ್ಕೆ ಕಾರಣವಾಗಿದೆ. ಮತ್ತು ಈ ನಿರ್ಧಾರಕ್ಕೆ ಬಂದರೂ ವಿಶೇಷವಾದ ಆತ್ಮೀಕ ಸಂತೋಷದ ಅನುಭವ ಆಗದಿದ್ದರೆ, ಅವರು ನಿರಾಶರಾಗಿ ಹೋಗುವರು. ಈ ನಿರಾಶೆಯು ಅಸೀಮ ಭಾವನೆಯಿಂದ ಆಹ್ಲಾದಗೊಳ್ಳುವ ಶಕ್ತಿಯನ್ನು ಮೃತವ್ಯಾಯವನ್ನಾಗಿ ಮಾಡಿಬಿಡುವುದು.

ಅತ್ಯಂತ ಸುಂದರವಾದ ರಸಮಯವಾದ, ಕವಿತೆಯನ್ನು ನಾವು ಕೆದಕಿ, ಬಿಡಿಸಿ ಬೇರೆ ಬೇರೆ ಮಾಡಿ ನೋಡಿದ್ದೇ ಆದರೆ, ಆಗ ಅದು ಕೆಲವು ಅಸಂಗತವಾದ ಶಬ್ದಗಳ ಸಮೂಹವೆಂದು ತೋರಬಹುದು ಆದರೆ, ಆ ಕವಿತೆಯ ರಸಾಸ್ವಾದನೆ ಬಲ್ಲವನು ಹಾಗೆ ಭಾವಿಸುವುದಿಲ್ಲ. ಆತನು ಆ ಶಬ್ದಗಳನ್ನು ಒಂದು ಹಾರವಾಗಿ ಪೋಣಿಸುವ ಆ ಕವಿತಾ ಸೂತ್ರದ ಮಹತ್ವವನ್ನು ತಿಳಿದಿರುತ್ತಾನೆ. ಈ ಸೂತ್ರವೆಂದರೆ ಅಸಂಗತವಾಗದೆ ಚ್ಯುತಿ ಇಲ್ಲದ ಒಂದು ವ್ಯವಸ್ಥೆಯಾಗಿರುವುದು ಕವಿತೆಯಲ್ಲಿ ಮೂಡಿ ಬಂದ ವಿಚಾರಗಳ ವಿಕಾಸಕ್ಕೆ ಸಂಗೀತದ ಮೂಲಕ್ಕೆ ಚಲನಶಕ್ತಿ ದೊರೆತು ಅದು ಸಾಕಾರರೂಪ ಹೊಂದುವ ವ್ಯವಸ್ಥೆಯು ಬಹು ಸುಂದರವಾಗಿ ಆಗುತ್ತಿರುತ್ತದೆ ಅದರೆ ಈ ವ್ಯವಸ್ಥೆಗೂ ಒಂದು ಮೇರೆ ಇರುವುದು ಭಾಷೆಯನ್ನು ಅಭ್ಯಾಸ ಮಾಡುವ ನಾವು ಶಬ್ದಗಳ ವ್ಯವಸ್ಥೆಯನ್ನು ತಿಳಿದುಕೊಳ್ಳಬಲ್ಲೆವು, ಈ ಶಬ್ದ ಜ್ಞಾನವೂ ಮಹತ್ವಪೂರ್ಣವಾದುದಾಗಿದೆ. ನಾವು ಕೇವಲ ಭಾಷೆಯನ್ನು ಮಾತ್ರ ಕಲಿತೆ., ಆ ಭಾಷೆಯ ಸ್ವರೂಪದ ಕುರಿತಾಗಿ ಮಾತ್ರ ಆಶ್ಚರ್ಯಪಡುತ್ತ ಶಬ್ದಜ್ಞಾನವನ್ನು ಮಾಡಿಕೊಳ್ಳದಿದ್ದರೆ. ಆ ಭಾಷೆಯ ಮೂಲಕ, ಆ ಬಾಷಾ ಸಾಹಿತ್ಯದ ವರೆಗೆ ತಲುಪಲಾರೆವು. ಆದರೆ, ಶಬ್ದಜ್ಞಾನ, ವ್ಯವಸ್ಥೆ ಮತ್ತು ವ್ಯಾಕರಣ, ಇನೇ ಸಾಹಿತ್ಯವಾಗಲಾರವು.

ಸಾಹಿತ್ಯವು ವ್ಯಾಕರಣ ಸಿದ್ಧಾಂತಗಳನ್ನು ಅವಶ್ಯವಾಗಿ ಪುಷ್ಟೀಕರಿಸುವುದು ಆದರೆ ಇದು ಸ್ವತಂತ್ರವಾದುದಾಗಿದೆ ಮತ್ತು ಆನಂದವ ಯವಾಗಿದೆ ಕವಿತೆಯ ಸೌಂದರ್ಯವು ಅದರ ಛಂದಸ್ಸನ್ನು ಹೊಂದಿಕೊಂಡೂ ಇರುವುದು. ಹಾಗೆಂದ ಮಾತ್ರಕ್ಕೆ ಛಂದಸ್ಸು ಮಾತ್ರವೇ ಅದರ ಸೌಂದರ್ಯವರ್ಧಕವಲ್ಲ, ರಸವೂ ಕೂಡ ಮುಖ್ಯವಾದುದಾಗಿದೆ.

ವ್ಯವಸ್ಥೆ ಎಂಬದರ ಕಾರ್ಯವು ರೆಕ್ಕೆಗಳ ಕಾರ್ಯದಂತೆ ಆಗಿರಬೇಕು., ಅಂದರೆ, ಸ್ವಯಂ ಭಾರವಾಗುವ ಪರಿಸ್ಥಿತಿಯಲ್ಲಿ, ಹಾರುವ, ಮತ್ತು ಆ ಭಾರವನ್ನು ಕಡಿಮೆ ಮಾಡಲು ಸಹಾಯಕವಾಗುವಂತಿರಬೇಕು. ಕವಿತೆಯ ಸ್ವರೂಪವೂ ಕೂಡ ಅದರ ವ್ಯವಸ್ಥೆಯನ್ನು ಹೊಂದಿಕೊಂಡಿರುವುದು. ಆದರೆ ಅದರ ಸೌಂದರ್ಯವು ರಸವನ್ನೇ ಹೊಂದಿಕೊಂಡಿದೆ. ವ್ಯವಸ್ಥೆಯು ಸ್ವಾತಂತ್ರ್ಯದ ಪ್ರಭುವೆ ಬೆಟ್ಟಲಾದರೆ, ಸೌಂದರ್ಯವು ಕೊನೆಯ ಮೆಟ್ಟಲಾಗಿರುವುದು. ಸೌಂದರ್ಯದಲ್ಲಿ ಒಂದು ಎಲ್ಲೆಯೊಳಗಿನ-ಮತ್ತು ಹೊರಗಿನ, ವಸ್ತುಗಳೊಡನೆ, ಸಮಾನತೆ—ಸ್ಥಾಪಿತವಾಗುವುದು. ವ್ಯವಸ್ಥೆ ಮತ್ತು ಸ್ವಾತಂತ್ರ್ಯ ಇವೆರಡೂ, ಒಂದೇ ಕ್ಷೇತ್ರವಾದ ಸೌಂದರ್ಯದಲ್ಲಿ ಕೇಂದ್ರೀಕರಿಸಿ ಇರುತ್ತವೆ.

ಪ್ರಪಂಚರೂಪದ ಕವಿತೆಯಲ್ಲಿಯೂ, ಇದರ ಸ್ವರಪ್ರವಾಹಗಳ ಸಂಶೋಧನೆ, ವಿಸ್ತಾರ, ಸಂಕೋಚ ಮತ್ತು ವಿಶ್ರಾಂತಿ ಮೊದಲಾದ ಸ್ಥಿತಿಗತಿಗಳ ತೂಕ, ಚೆಲ್ಲಿವ ತ್ತು ಇದರ ಆಕಾರ ಪ್ರಕಾರ, ಚಾರಿತ್ರ್ಯ ಹಾಗೂ ಅಂತರಿಕ ಜ್ಞಾನ ಇವುಗಳ ಪ್ರಾಪ್ತಿಯು ನಮ್ಮ ಮನಸ್ಸಿಗೆ ಬಹು ದೊಡ್ಡ ಪ್ರಾಪ್ತಿಯಾಗಿರುವುದು. ಆದರೆ ನಮ್ಮ ಮನಸ್ಸಿಗೆ ದೊರೆತ ಈ ಪ್ರಾಪ್ತಿಯಿಂದಲೇ ನಾವು ಸಂತೋಷಪಡಲಾರೆವು. ಇದೊಂದು ದೈವ್ಯೇ ನಿಲ್ದಾಣವಾಗಿರುವುದು. ಈ ನಿಲ್ದಾಣದ ಪ್ಲಾಟ್‌ಫಾರ್ಮನ್ನು ನಾವು ಮನೆ, ಎಂದು ಹೇಳಲಾರೆವು ಜಗತ್ತಿನ ಉದ್ಭವವು ಆನಂದದಿಂದಲೇ ಆಗುವುದು, ಎಂಬುದನ್ನು ತಿಳಿದುಕೊಳ್ಳಬಲ್ಲವನು ಮಾತ್ರ ಇದರ ಅಂತಿಮ ಸತ್ಯವನ್ನು ತಿಳಿದುಕೊಳ್ಳಬಲ್ಲನು.

ಈ ವೇಳೆಯ ವಿಚಾರ ವಿಮರ್ಶೆಯಿಂದ ನನಗೆ, ಪ್ರಕೃತಿಯೊಡನೆ ಇರುವ ಮನುಷ್ಯನ ಹೃದಯದ ಸಂಬಂಧವು ಎಷ್ಟು ರಹಸ್ಯಪೂರ್ಣವಾದ ಸಂಬಂಧವಾಗಿದೆ? ಎಂಬ ವಿಚಾರ ಹೊಳೆಯಿತು. ಕಾರ್ಯವ್ಯವಹಾರದ ಈ ಜಗತ್ತಿನಿಂದ ಹೊರಗೆ, ಪ್ರಕೃತಿಯು ಏಕಸ್ವರೂಪದಿಂದಿರುವುದು. ಆದರೆ, ಭಿನ್ನ ಭಿನ್ನವಾದ ಹೃದಯ-ಕ್ಷೇತ್ರಗಳಲ್ಲಿ ಇದರ ರೂಪವೇ ಬದಲಾಗುವುದು

ಪುಷ್ಪವು ಬಹು ಸುಂದರವಾಗಿ ಕಾಣುತ್ತಿದ್ದರೂ ಅದಕ್ಕೂ ಒಂದು ನಿರ್ದಿಷ್ಟವಾದ ಕಾರ್ಯವಿದ್ದು ಅದನ್ನು ಮಾಡಬೇಕಾಗುತ್ತದೆ. ಅದರ ರೂಪ, ಬಣ್ಣ, ಇವುಗಳೆಲ್ಲವೂ ಅದರ ಕಾರ್ಯಸಾಧನೆಗೆ ಸಹಾಯಕವಾಗಿವೆ ಪುಷ್ಪಕ್ಕೆ ಸಲವನ್ನು ಸೃಷ್ಟಿಸಬೇಕಾಗಿದೆ. ಅದು ಈ ಸೃಷ್ಟಿಯನ್ನು ಮಾಡದಿದ್ದರೆ ಅದರ ಜನಿಸವೇ ನಾಶವಾಗಿ ಹೋಗಿ ಈ ಭೂಮಿಯು ಫಲಪುಷ್ಪರಹಿತವಾದ ಬಂಜರು ಭೂಮಿಯಾಗಿ ಹೋಗಬಹುದು. ಪುಷ್ಪದ ಸೌಗಂಧವು ಜೇನುನೊಣಗಳಿಗಾಗಿ, ಬೀಜ ವಪನಕ್ಕಾಗಿ ಇರುವುದು. ಪುಷ್ಪದಲ್ಲಿ ಬೀಜ ಇರುವುದು. ಮತ್ತು ಫಲಬಿಡುವ ಸಮಯ ಬಂದೊಡನೆಯೇ ಪುಷ್ಪದ ಎಸಳುಗಳು ಬಾಡಿ ಹೋಗುತ್ತವೆ ಸುಗಂಧವು ಅದನ್ನು ಬಿಟ್ಟು ಹೊರಟು ಹೋಗುವುದು. ಪುಷ್ಪಕ್ಕೆ ಸಿಂಗರಿಸಿಕೊಳ್ಳಲು ಸಮಯವೇ ಇರುವುದಿಲ್ಲ. ಅದು ಇದಕ್ಕಿಂತಲೂ ಉಪಯೋಗಕರವಾದ ಕಾರ್ಯದಲ್ಲಿ ತೊಡಗಿರುವುದು. ಪ್ರಕೃತಿಯಲ್ಲಿ ಪ್ರಾಯಃ ಉಪಯೋಗದ ದೃಷ್ಟಿಯಿಂದಲೇ ಎಲ್ಲಾ ಕಾರ್ಯಗಳೂ ನಡೆಯುತ್ತಿರುತ್ತವೆ. ಮೊಗ್ಗು ತರಳಿ ಪುಷ್ಪವಾಗುವುದ, ಪುಷ್ಪವು ಫಲವಾಗುವುದು. ಫಲದಿಂದ ಬೀಜ ಉಂಟಾಗುವುದು. ಆ ಬೀಜದಿಂದ ಪುನಃ ಹೊಸ ಸಸಿ ಹುಟ್ಟುವುದು ಇದು ಈ ರೀತಿ ಒಂದು ಸಂಕಲೆಯಂತಿರುವುದು.

ಆದರೆ ಪುಷ್ಪವು ಯಾವಾಗ ಮನುಷ್ಯನ ಹೃದಯವನ್ನು ಮೋಹಿಸುತ್ತದೋ ಆಗ ಅದರ ಉಪಯೋಗಮಯವಾದ ಜೀವನವು ವಿಲಾಸೀ ಜೀವನದತ್ತ ಪರಿವರ್ತನೆಗೊಳ್ಳುವುದು ಅಸೀಮದ ಕಾರ್ಯ ವ್ಯಗ್ರತೆಯಿಂದಿರುತ್ತಿದ್ದ ಪುಷ್ಪವು ಈಗ ಸೌಂದರ್ಯ ಮತ್ತು ಶಾಂತಿಯ ಮೂರ್ತಿಯಾಗಿ ಪರಿವರ್ತನೆಯಾಗುವುದ ವಿಜ್ಞಾನದ ದೃಷ್ಟಿ ಕೋನವು ಬೇರೆಯೇ ಆಗಿದೆ. "ಪುಷ್ಪವು ಅದರ ಹೊರಗಿನ ಯಾವ ರೂಪದಿಂದ ಕಾಣುತ್ತಿರುವುದೋ ಆ ರೂಪದ ಹೊರತು, ಪುಷ್ಪದ ಉದ್ದೇಶವು ಮತ್ತೇನೂ ಆಗಿಲ್ಲ ಪುಷ್ಪದಲ್ಲಿ ಸೌಂದರ್ಯ ಹಾಗೂ ಶಾಂತಿಯನ್ನು ಅಪೇಕ್ಷಿಸುತ್ತಿರುವುದು, ಇದು ಕೇವಲ ಮನುಷ್ಯ ಹೃದಯದ ಶಕ್ತಿದೇ ಆದ ವಿಲಾಸೀ ಕಲ್ಪನೆಗಳ ಸೃಷ್ಟಿಯಾಗಿದೆ" ಎಂದು ವಿಜ್ಞಾನವು ಅಭಿಪ್ರಾಯ ಪಡುವುದು

(ಸಶೇಷ)

ಆಗಸ್ಟ್ ಮಧ್ಯದಲ್ಲಿ ಅಮೆರಿಕನ್ ಉಪಾಧ್ಯಕ್ಷ ಶ್ರೀ ಜಾನ್ಸನರು ಪಶ್ಚಿಮ ಜರ್ಮನಿಯ ನಿರಾಶ್ರಿತ ಶಿಬಿರಕ್ಕೆ ಸಂದರ್ಶನವಿತ್ತಾಗ ತೆಗೆದ ಚಿತ್ರವಿದು.

ಕೊರ್ಪೊರೇಶನ್ ಬೇಂಕ್

ರೇವಣಾತಿಗಳ ಮೇಲಿನ ಸಾಲಿಯಾನ್ ಶೇಕಡಾ ಬಡ್ಡಿ ದರಗಳು:

3	ಸೇವಿಂಗ್ಸ್ ಬೇಂಕ್ ಖಾತೆ
3 ಯಿಂದ 5¼	ಕಾಯಂ (ವಿವಿಧಾವಧಿಗಳಿಗೆ)
5¼	ವಜ್ರೋತ್ಸವ
5	ಕ್ಯುಮುಲೇಟಿವ್

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ಸ್ಥಾಪನೆ: 1906)

ರಿಜಿಸ್ಟರ್ಡ್ ಆಫೀಸು: ಉಡುಪಿ | ಆಡಳಿತ ಆಫೀಸು ಮಂಗಳೂರು

ಉಡುಪಿ ಕರ್ನಾಟಕ ಸಂಘದ ಒಂದೊಂದು ರೂಪಾಯಿ ಬೆಲೆಯ ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ

(ಯು.ರಾಘವೇಂದ್ರ ಆಚಾರ್ಯ, ಎಂ.ಎ.)

ಸಾಮಾನ್ಯ ರೋಗಗಳು

(ಡಾ. ಕೆ.ಎಲ್.ಎತಾಳ, ಎಂ ಬಿ ಬಿ.ಎಸ್ ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಪುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ

ಒಡೆಕ್ಕಲ ಕೃಷ್ಣ ಭಟ್ಟ ಎಲ್. ಎಲ್. ಬಿ.

ಉಡುಪಿಯಲ್ಲಿ ಪ್ರತಿಗಳುಸಿಗುವ ಸ್ಥಳ— ನವಭಾರತ ಪುಸ್ತಕ ಭಂಡಾರ, ಉಡುಪಿ

ಸಂಭಾವಿತರು! ಯಾರಿವರು?

"ರಂಜನೆ", ಬೆಂಗಳೂರು.

"ಜಗತ್ತಿನಲ್ಲಿ ಬಹು ಸಂಭಾವಿತರೆನ್ನಬಹುದಾದ ಜನತೆಯನ್ನು ಹುಡುಕಿ ತೆಗೆಯುವುದು ಬಹು ಕಷ್ಟ, ಇಲ್ಲವೇ ಇಲ್ಲವೆನ್ನಬಹುದಾದಷ್ಟು ಕಡಮೆ ಇರುವ ಈ ಜಾತಿಯ ಅಲ್ಪ ಸಂಖ್ಯಾಕರ ಉಳಿಗಾಲ ಬಹು ಕಷ್ಟ"

—ಎಂದು ಒಬ್ಬ ದಿಟ್ಟ ಹಿರಿಯ ಜನರೆದುರಿಗೆ ಹೇಳಬೇಕಾಗಿ ಬಂದಾಗ ಜನತೆಯ ಪ್ರತಿಕ್ರಿಯೆಯನ್ನೆದುರಿಸುವ ಧೈರ್ಯದಿಂದಲೇ ಬಂದಿದ್ದ, ಅಂತೆಯೇ ಬರ್ಝಿರತನಾದ.

ಸಂಭಾವಿತರ ಲಕ್ಷಣಗಳನ್ನು ಲೆಕ್ಕವಿಲ್ಲದಷ್ಟು ತತ್ವಶಾಸ್ತ್ರಜ್ಞರು, ಕವಿಗಳು, ಕಾದಂಬರಿಕಾರರು ಬಣ್ಣಿಸಿದ್ದರೂ, ನೀತಿಶಾಸ್ತ್ರಜ್ಞರು ಸಂಭಾವಿತರಾಗಲು—ಎನಿಸಿಕೊಳ್ಳಲು ಸಾಕಷ್ಟು ಮೂಲ ತತ್ವಗಳ ಅಡಿಗಲ್ಲನ್ನು ಹಾಕಿಕೊಟ್ಟಿದ್ದರೂ, ಮನಶಾಸ್ತ್ರಜ್ಞರು ಸಭ್ಯತೆಯ-ಕುಲೀನತೆಯ ಆಳದಲ್ಲಿ ಹೊಕ್ಕು ಹೇಳಿ ಕೇಳಿ ವಿಮರ್ಶಿಸಿ ತಲೆ ಕೆಡಿಸಿಕೊಂಡಿದ್ದರೂ, ಮಾನವ ಆದಿ ಮಾನವ ನಾಗರಿಕತೆಯ ಪ್ರಾರಂಭ ಕಾಲದಲ್ಲಿ ಬೆಳೆಸಿಕೊಂಡು ಬಂದಿದ್ದಷ್ಟು ಈ ಜಾತಿಯನ್ನು ಉಳಿಸಿ ಕೊಂಡಿಲ್ಲ. ಕಾರಣ ಆತನು ಬೆಳೆಯುತ್ತಿರುವ ವಾತಾವರಣವೇ ಇದ್ದರೂ ಇರಬಹುದಾದರೂ, ಜಗತ್ತಿನ ಎಲ್ಲ ವಿಷಯ ವಿಚಾರಗಳಲ್ಲಿಯೂ ವಿಜ್ಞಾನದ ಪ್ರಭುತ್ವ ಸಾಧಿಸ ಹೊರಟು ಅತೀ ಗುಂಗುರು—ಗುಂಗುರಾದ ಸುಕ್ಕಲು ಸುಳ್ಳುಲಾಗುತ್ತಿರುವ ಮೆದುಳು, ಎಲ್ಲರಲ್ಲೂ ಇದರ ಬಗ್ಗೆ ಪ್ರಭುತ್ವ ಸಾಧಿಸುತ್ತಿಲ್ಲ.

ಆಂಗ್ಲ ಕವಿ ಗೋಲ್ಡ್‌ಸ್ಮಿತ್ತನ ಪ್ರಕಾರ ಯಾವ ವಿಧವಾದ ಪಕ್ಷಪಾತ ವಿಲ್ಲದೇ ಎಲ್ಲರನ್ನು ಪ್ರೀತಿಸುವವನೂ, ಒಂದೇ ದೃಷ್ಟಿಯಲ್ಲಿ ನೋಡುವವನೂ "ಜಗತ್ತಿನ ಪ್ರಜೆಯೂ" ಸರಿಯಾದ ಸಂಭಾವಿತ

'ಯಾರಿಗೂ ಯಾವ ವಿಧದಲ್ಲೂ ಯಾವ ಕಾಲದಲ್ಲೂ ನೋವನ್ನು ಕೊಡದಿರುವವರಿಗೆ ಸಂಭಾವಿತರೆನ್ನಬಹುದು'.

— ಜಾನ್ ಹೆನ್ರಿ ನ್ಯೂಮನ್ನನ ಈ ವಿವರಣೆ ಭಾರತೀಯರಿಗೆ ಹೊಸದೇನಲ್ಲ.

ಉಪನಿಷತ್ತುಗಳು, ವಚನಗಳು, ಸುಭಾಷಿತಗಳು, ನೀತಿ ಬೋಧಕ ಸಾಹಿತ್ಯ ಇವುಗಳಲ್ಲಿ ಲೆಕ್ಕವಿಲ್ಲದಷ್ಟು ರೀತಿಯ ಸಂಭಾವಿತರ ವಿವರಣೆಗಳನ್ನು ಕಾಣಬಹುದಾಗಿದೆ.

ತನ್ನ ಬಣ್ಣಿಸ ಬೇಡ
ಪರರ ಹಳಿಯಲು ಬೇಡ
ಕುಳ್ಳಿರ್ದ ಸಭೆಯೊಳಗೆ
ಕುತ್ಸಿತವು ಬೇಡ
ಒಳ್ಳೆಯವ ನಾನೆಂದು ಬಲು
ಹೆಮ್ಮೆ ಬೇಡ
....

—ಮುಂತಾದ ಲೆಕ್ಕವಿಲ್ಲದಷ್ಟು ನೀತಿಸಾರಗಳು ಸಂಭಾವಿತರ ಮೂಲ ಗುಣಗಳನ್ನು ಹೊಂದಿರುವ ಪ್ರಾಥಮಿಕ ಬೋಧನೆಗಳಾಗಿವೆ.

ಸಂಭಾವಿತರ ತನ್ನ ಸುತ್ತಮುತ್ತಲಿನ ಜನತೆಯ ಅಭಿವೃದ್ಧಿಯ, ಸ್ವತಂತ್ರತೆಯ ಹಾದಿಯ ಲ್ಲಿರುವ ಅಡ್ಡಿ ಆತಂಕಗಳನ್ನು ತೆಗೆದು ಹಾಕುವುದರಲ್ಲಿ, ಸಂದಿಗ್ಧ ಪರಿಸ್ಥಿತಿಯಲ್ಲಿ ಸಹಾಯ ಮಾಡುವುದರಲ್ಲಿ ತಮ್ಮ ಸಮಯವನ್ನು ಕಳೆಯುವರಲ್ಲದೇ ಎಲ್ಲರೊಡನೆ ಹೊಂದಿಕೆಯಿಂದ. ಏಕ ರೀತಿಯಿಂದ ಹೋಗುವವರಿದ್ದು ಹೆಸರಿಗಾಗಿ ಮುಂದೆ ಬರುವವರಿರುವುದಿಲ್ಲ.

ವಿಶ್ರಾಂತಿ ಬಯಸಿದ, ಆಯಾಸಗೊಂಡ ದೇಹಕ್ಕೆ 'ಈಸೀ ಚೇರ್'ನಂತೆಯೂ ಹೊರಗಿನ ಚಳಿ—ಥಂಡಿಗೆ ಹೊಂದಿಕೊಳ್ಳಲಾಗದ ದೇಹಕ್ಕೆ ಬೆಂಕಿಯ ಶಾಖದುತೆಯೂ ಸಂಭಾವಿತರು ಸಾಮಾನ್ಯ ಜೀವನದಲ್ಲಿ ಅನುಕೂಲ ಅಥವಾ ಉಪಯುಕ್ತತೆಯ ಲಾಭವನ್ನು ಕೊಡುತ್ತಾರೆ.

ಸರಿಯಾದ ಗುಣಗಳುಳ್ಳ ಸಂಭಾವಿತ ಬಹಳ ಜಾಗರೂಕತೆಯಿಂದ ತಾನು ಸೇರಿದ ಜನರ ಮನಸ್ಸಿನಲ್ಲಿ ಆಗಬಹುದಾದ ಅತೀ ಸಣ್ಣ ಮನಕ್ಷೋಭೆಯನ್ನೇ ಆಗಲಿ ಕಲಹವನ್ನೇ ಆಗಲಿ ಉಂಟು ಮಾಡುವ ಕಾರ್ಯಗಳಿಂದ ದೂರವಿರುತ್ತಾನೆ. ಅಭಿಪ್ರಾಯಗಳ ತಿಕ್ಕಾಟ, ಸಂಘರ್ಷಣೆಗೊಳಗಾದ ಸಂವೇದನೆ, ಎಲ್ಲ ವಿಧದ ನಿರ್ಭಂಧಗಳು, ಅನುಮಾನ, ನಿರಾಶೆ, ಇವುಗಳೆಲ್ಲದರಿಂದ ದೂರ ಮಾಡಿ ಎಲ್ಲರಲ್ಲೂ ಸಲಿಗೆಯ, ನೆಮ್ಮದಿಯ, ಸಂತಸದ ಭಾವನೆಗಳನ್ನು ಉಂಟುಮಾಡಿ ಸ್ವಗೃಹದ ವಾತಾವರಣವನ್ನು ಕಲ್ಪಿಸಿ ಕೊಡುವರು.

ಜತೆಗಾರರೆಲ್ಲರಲ್ಲೂ ಆತನ ದೃಷ್ಟಿಯ ಮೂಲವಿರುತ್ತದೆ. ಆತ ಹೇಡಿ ಹಾಗೂ ನಾಚಿಕೆ ಪಡುವವರಲ್ಲಿ ಮೃದುವಾಗಿಯೂ, ದೂರವಿರುವವರಲ್ಲಿ ನಮ್ರನಾಗಿಯೂ, ಮೂರ್ಖ ಹಾಗೂ ಅನರ್ಥಕರಲ್ಲಿ ಕ್ಷಮಾಶೀಲನಾಗಿಯೂ ಇರುತ್ತಾನೆ ಆತ ಯಾರೊಡನೆ ಮಾತಾಡುತ್ತಿರುವೆ ಎಂಬುದನ್ನು ತಿಳಿದಿದ್ದು ಅಕಾಲಿಕ ಉಲ್ಲೇಖಗಳಿಗಾಗಲಿ, ಮನಸ್ಸು ಕಹಿಬರಿಸುವ ವಿಷಯಗಳಿಗಾಗಲಿ ಎಳೆಯುವ ಕೆಲಸ-ಕಾರ್ಯದಲ್ಲಿ ಎಚ್ಚರವಿರುತ್ತಾನೆ. ಸಂಭಾಷಣೆಗಳಲ್ಲಿ ಆತ ಯಾವಾಗಲೂ ಪ್ರಮುಖನಿರುವುದಿಲ್ಲ, ಹಾಗೂ ಬೇಸರ ಬರಿಸುವನಿರುವುದಿಲ್ಲ. ಆತ ಸಹಾಯಮಾಡುವಾಗ ಬಹಳ ಹೆಗುರವಾಗಿ ತಿಳಿಯುವವನಿದ್ದು, ಇತರರು ಆತನಿಗೆ ಸಹಾಯ ಮಾಡಿದಾಗ ಸಣ್ಣದನ್ನೂ ಅತಿ ಹಿರಿದರಂತೆ ಬಣ್ಣಿಸಿ ನಮ್ರನಾಗಿ ಸ್ವೀಕರಿಸುವವನಿರುತ್ತಾನೆ ತನ್ನ ವಿಷಯವಾಗಿ ಬಹಳವಾಗಿ ಒತ್ತಾಯಪಡಿಸದ ಹೊರತು ಆತ ಏನನ್ನೂ ಹೇಳುವವನಿರುವುದಿಲ್ಲ. ನಿಂದೆ, ಚಾಡಿ, ಅಥವಾ ಹಂಟೆಗಳಿಗೆ ಕಿವಿಗೊಡದವನಿದ್ದು ಆತನನ್ನು ಆರೋಪಿಸಿದವರನ್ನು, ಹಳಿಯುವವರನ್ನು ಒಳ್ಳೆಯ ದೃಷ್ಟಿಯಲ್ಲಿನೋಡುವವನಿದ್ದು ಅವರಲ್ಲಿ ಒಳ್ಳೆಯ ಅಭಿಪ್ರಾಯವನ್ನು ಹೊಂದಿದವನಿದ್ದು ಅವರ ಆ ಕಾರ್ಯ

(ನೇ ಪುಟ ನೋಡಿರಿ)

ಕ್ಷಯ ರೋಗದ ಕುರಿತು ನಿಮಗೇನು ತಿಳಿದಿದೆ?

1. ಕ್ಷಯ ರೋಗದ ಕಾರಣಗಳೇನು?	1 ಒಂದು ಕ್ರಿಮಿಯೇ ಕ್ಷಯ ರೋಗಕ್ಕೆ ಕಾರಣವಾಗಿದೆ.
2. ಕ್ಷಯ ರೋಗವು ಅಂಟಿಕೊಳ್ಳಲು ಸಾಧ್ಯವಿದೆಯೆ?	2 ಕ್ಷಯ ರೋಗವು ಅಂಟಿಕೊಳ್ಳುತ್ತದೆ.
3. ಕ್ಷಯ ರೋಗವು ನಿಮ್ಮ ಹತ್ತವರಿಂದ ನಿಮಗೆ ವಂಶಪಾರಂಪರ್ಯವಾಗಿ ಬರುವುದೆ?	3. ಕ್ಷಯ ರೋಗವು ನಿಮ್ಮ ಹತ್ತವರಿಂದ ವಂಶಪಾರಂಪರ್ಯವಾಗಿ ಬರಲಾರದು.
4. ಅಸೌಖ್ಯವೆಂದು ತಿಳಿಯದೆಯೇ ನಿಮಗೆ ಕ್ಷಯ ರೋಗ ತಗಲಬಹುದೆ?	4. ಅಸೌಖ್ಯವೆಂದು ತಿಳಿಯದೆನೇ ನಿಮಗೆ ಕ್ಷಯ ರೋಗ ತಗಲುತ್ತದೆ.
5 ನಿಮಗೆ ಕ್ಷಯ ರೋಗ ತಗಲಿದೆಯೇ ಇಲ್ಲವೇ ಎಂಬುದನ್ನು ಡಾಕ್ಟರರು ಹೇಗೆ ಹೇಳುತ್ತಾರೆ?	5 ನಿಮಗೆ ಕ್ಷಯ ರೋಗ ತಗಲಿದ್ದರೆ ಎಕ್ಸ್‌ರೇ ಮತ್ತು ಇತರ ಪರೀಕ್ಷೆಗಳಿಂದ ಡಾಕ್ಟರರು ಹೇಳುತ್ತಾರೆ.
6. ಕ್ಷಯ ರೋಗವನ್ನು ಗುಣಮಾಡಬಹುದೆ?	6- ಸಾಮಾನ್ಯವಾಗಿ, ಬೇಗನೆ ಕಂಡುಹಿಡಿಯಲ್ಪಟ್ಟರೆ ಮತ್ತು ಸರಿಯಾದ ಚಿಕಿತ್ಸೆ ನಡೆಸಿದರೆ ಕ್ಷಯ ರೋಗವನ್ನು ಗುಣಪಡಿಸಬಹುದು.
7. ರೋಗಿಗಳನ್ನು ಅವರವರ ಮನೆಗಳಲ್ಲಿಯೇ ಚಿಕಿತ್ಸೆಗೊಳಿಸಬಹುದೆ?	7 ಹೌದು. ಹಾಗೆ ಮಾಡಬಹುದು, ಮತ್ತು ಹಾಗೆ ಮಾಡುತ್ತಲೇ ಇದೆ. ಆದನ್ನು ಗೃಹ ಚಿಕಿತ್ಸೆ ಎನ್ನುತ್ತಾರೆ. ಗೃಹ ಚಿಕಿತ್ಸೆಯು ಒಂದು ಕ್ಷಯ ಆಸ್ಪತ್ರೆಯ ಸಹಾಯದಿಂದ ನಡೆಸಲ್ಪಡಬೇಕು.

ಹೆಚ್ಚಿನ ಸಲಹೆಗಾಗಿ ನಿಮ್ಮ ವೈದ್ಯರನ್ನು ವಿಚಾರಿಸಿರಿ. ಒಂದು ಟಿ. ಬಿ. ಆಸ್ಪತ್ರೆಯು ಯೋಗ್ಯ ಸಲಹೆ ಪಡೆಯಲು ನಿಮಗೆ ಅತ್ಯುತ್ತಮ ಸ್ಥಳವಾಗಿದೆ.

ಟಿ. ಬಿ. ಮುದ್ರೆಗಳನ್ನು ಕೊಂಡುಕೊಂಡು ಕ್ಷಯರೋಗ ನಿರೋಧ ಹೋರಾಟಕ್ಕೆ ಸಹಾಯ ಮಾಡಿರಿ.

ಒಂದು ಟಿ.ಬಿ. ಮುದ್ರೆಯ ಕ್ರಯ ಹತ್ತು ನಯೇ ಪೈಸೆ ಮಾತ್ರ.

ಮುದ್ರೆಗಳು ಸಿಗುವ ಸ್ಥಳಗಳು:— (1) ಗೌರವ ಕಾರ್ಯದರ್ಶಿ, ಮೈಸೂರು ರಾಜ್ಯ ಕ್ಷಯ ರೋಗ ಸಮಿತಿ, ಗವರ್ನಮೆಂಟ್ ಟಿ ಬಿ. ಸೆನಿಟೋರಿಯಂ, ಹಿಲ್ಸ್ ಮದ್ರಾಸ್ ರೋಡ್, ಬೆಂಗಳೂರು—8. (2) ಮಹಿಳಾ ಮಂಡಲ ಮತ್ತು ಶ್ರೀ ಬಸವೇಶ್ವರ ದೇವಸ್ಥಾನ, ಪಂಜಾ ಕಮಿಟಿ, ಕಲ್ಯಾಣಿ ಗ್ರೈನ್ ಮರ್ಚಂಟ್ಸ್, ಎಸೋಸಿಯೇಶನ್ ಮತ್ತು ಭಾರತ ಸೇವಾಶ್ರಮ, ಬೀದರ. (3) ಶ್ರೀ ಜೈನಜ್ಞ ವೆಲ್‌ಫೇರ್ ಸೆಂಟರ್, ಶ್ರೀ ಲಕ್ಷ್ಮೀನಾರಾಯಣ ಟೆಂಪಲ್ ಕಂಪೌಂಡು, ಬಸವನಗುಡಿ (4) ಗೌರವ ಕಾರ್ಯದರ್ಶಿ ದ. ಕ. ಜಿಲ್ಲಾ ಕ್ಷಯರೋಗ ಸಮಿತಿ, ಗವರ್ನಮೆಂಟ್ ವೆನ್‌ಲಾಕ್ ಹಾಸ್ಪಿಟಲ್, ಮಂಗಳೂರು. (5) ಶ್ರೀ ಎಲ್. ಎಸ್. ಕಾಮತ್, ಆರ್ಗನೈಜರ್, ಭಾರತ ಸೇವಕ ಸಮಾಜ, ಕೆನರಾ ಕಾಲೇಜು, ಕುಮಟಾ (6) ಅಧ್ಯಕ್ಷರು ಗಳು— ಮಹಿಳಾ ಸಮಾಜ, ಕಾರ್ವಾರ, ಅಂಕೋಲಾ, ಕುಮಟಾ, ಗೋಕರ್ಣ, ಹೊನ್ನಾವರ, ಸಿದ್ದಾಪುರ, ಯಲ್ಲಾಪುರ, ಸೂಪ ಮತ್ತು ಯಲ್ಲಾಪುರ.

ಹನ್ನೆರಡನೇ ಕ್ಷಯ ರೋಗ ಮೊಹರು ಮಾರಾಟ ಚಳವಳಿ.
(ದಿ ಟ್ಯೂಬರ್‌ಕ್ಯೂಲೋಸಿಸ್ ಎಸೋಸಿಯೇಶನ್ ಆಫ್ ಇಂಡಿಯಾ, ನ್ಯೂ ಢಿಲ್ಲಿ ಇವರಿಂದ ಪ್ರಾರಂಭಿಸಲ್ಪಟ್ಟಿದ್ದು)

Space kindly donated by: **JYOTI LIMITED, BARODA.**

ನೆಹರೂ ಮತ್ತು ಹಿಂದೀ ಭಾಷೆ

ಪ್ರಧಾನ ಮಂತ್ರಿ ನೆಹರು ರಶ್ಯಕ್ಕೆ ಹೋದಾಗ, ಅಲ್ಲಿನ ರಾಜಕೀಯ ನೇತಾರರೊಡನೆ ವಿಚಾರ ವಿನಿಮಯ ಮಾಡುತ್ತಿರುವಾಗ ದುಭಾಷಿಗಳು ಬೇಕಾದರಂತೆ. ಅಲ್ಲಿನ ರಾಜನೀತಾರರು ಭಾರತದ ಪ್ರಧಾನ ಮಂತ್ರಿಯೊಡನೆ ಇಂಗ್ಲಿಷಿನಲ್ಲಿ ಮಾತಾಡುವುದು ಸರಿಯಲ್ಲವೆಂದು ತಿಳಿದುದೇ ಇದಕ್ಕೆ ಕಾರಣ.

ತಮ್ಮ ದೇಶದ ಪ್ರತಿಷ್ಠೆಗಾಗಿ ರಶ್ಯನ್ ನಾಯಕರು ಇಂಗ್ಲಿಷ್ ರಾಜ್ಯ ಧುರೀಣರೊಡನೆಯೂ ಇಂಗ್ಲಿಷ್ ಭಾಷೆಯನ್ನಾಡುವುದಿಲ್ಲ. ಸರ್ವತ್ರ ಇಂಗ್ಲಿಷ್ ಬಳಸುವ ಸಂಪ್ರದಾಯ ಅಲ್ಲಿಲ್ಲ. ರಶ್ಯದಲ್ಲಿ ಜನರು ರಶ್ಯನ್ ಭಾಷೆಯನ್ನೇ ಏಕೆ ಬಳಸಬಾರದು? ಅದಷ್ಟೂ ದರಿದ್ರವೆ? ಅದರಲ್ಲಿ ಜ್ಞಾನ ವಿಜ್ಞಾನಗಳಿಲ್ಲವೆ? ಆಯಾ ದೇಶಕ್ಕೆ ಬಂದು ಆಯಾ ದೇಶಭಾಷೆಯನ್ನೇ ಆಡಬೇಕೆಂಬ ಅಂತಾರಾಷ್ಟ್ರೀಯ ನಿಯಮ ಬಂದರೆ, ರಶ್ಯ ಅದಕ್ಕೂ ಸಿದ್ಧವಿದೆ. ಇಂಗ್ಲೆಂಡಿಗೆ ಹೋಗಿ ರಶ್ಯನ್ ನಾಯಕರು ಆಂಗ್ಲ ಭಾಷೆಯನ್ನೇ ಬಳಸುವರು. ಸರ್ವತ್ರ ಇಂಗ್ಲಿಷ್ ಭಾಷೆ ಬಳಸುವುದು ಸಾಮ್ರಾಜ್ಯವಾದಿ ದೇಶಗಳಿಗೆ ಅಸಹ್ಯ. ಇದು ಮಾನಸಿಕ ಗುಲಾಮತೆಯ ದ್ಯೋತಕವೆಂದವು ತಿಳಿಯುತ್ತವೆ.

ಮಾರ್ಶಲ್ ಸ್ಟಾಲಿನ್ನರು ತಮಗೆ ವಿಜಯಲಕ್ಷ್ಮಿ ಪಂಡಿತರು ಇಂಗ್ಲಿಷಿನಲ್ಲಿ ಬರೆದುಕೊಟ್ಟ ಪ್ರಶಸ್ತಿಪತ್ರವನ್ನು ಈ ಕಾರಣದಿಂದಲೇ ತಿರಸ್ಕರಿಸಿದ್ದರು. ಮುಂದೆ ಇದನ್ನು ಹಿಂದೀ ಭಾಷೆಯಲ್ಲಿ ಬರೆದುಕೊಡಬೇಕಾಯಿತು. ಇಂಗ್ಲೆಂಡ್ ಮತ್ತು ಅಮೆರಿಕೆಗಳ ಪತ್ರಗಳನ್ನು ಆಂಗ್ಲ ಭಾಷೆಯಲ್ಲಿಯೇ ರಶ್ಯ ಸ್ವೀಕರಿಸುತ್ತದೆ.

ಅಲ್ಲಿನ ಹಿಂದೀ ತನಗೆ ಅರ್ಥವಾಗಲಿಲ್ಲವೆಂದು ನೆಹರು ಉದ್ಗರಿಸಿದರು. ಸಂಸ್ಕೃತನಿಷ್ಠವಾದ ಹಿಂದಿಯಲ್ಲಿ ದುಭಾಷಿಗಳು ಮಾತಾಡಿದರು. ನೆಹರೂ ಹಿಂದೀ ಸಾಮಾನ್ಯ ಸಾಧಾರಣವಾದುದು. ಎಂದರೆ, ಎರಡು ಬಗೆಯ ಹಿಂದೀ ಭಾಷೆಯುದೆಯಿಂದ ಹಾಗಾಯಿತು. ಒಂದು ಸಾಧಾರಣ ಸಭೆಗಳಲ್ಲಿ ಮಾತಾಡುವ ವ್ಯಾವಹಾರಿಕ ಹಿಂದೀ, ಮತ್ತೊಂದು ರಾಜಕೀಯ ಕಾರ್ಯಕ್ಕೆ ಒದಗುವ ಸಂಸದೀಯ ಹಿಂದೀ. ಸಾಧಾರಣ ಭಾಷೆಯು ಓದುಬರಹಗಳಲ್ಲದೇ ನೇ ಬರುವುದು. ನಿರಕ್ಷರರಿದ್ದರೂ ವ್ಯಾವಹಾರಿಕಭಾಷೆ ಅವರಿಗೆ ಗೊತ್ತಿದೆ. ನೆಹರುರವರ ಹಿಂದಿಯನ್ನೂ ಅವರು ಅರ್ಥವಿಸಿಕೊಳ್ಳಬಲ್ಲರು. ಯಾವುದಾದರೂ ರಾಜನೀತಿ-ಅರ್ಥಶಾಸ್ತ್ರದ ಪುಸ್ತಕಗಳನ್ನು ಹರಡಿದರೆ, ಅವರು ತಮಗಿದರ ಅರಿವಾಗುವುದಿಲ್ಲವೆಂದು ಹೇಳುತ್ತಾರೆ. ಈ ಶಾಸ್ತ್ರಗಳಲ್ಲಿ ಬಳಸಲ್ಪಡುವ ಪದಗಳು ವ್ಯವಹಾರದಲ್ಲಿ ಅವರಿಗೇಕೆ? ಇಂಗ್ಲಿಷ್ ದೇಶಗಳಲ್ಲಿ ಕೂಡ ಸಾಮಾನ್ಯ ಜನರು ಇಂತಹ ಭಾಷೆಯನ್ನು ಅರಿತುಕೊಳ್ಳಲಾರರು. ಇದನ್ನು ಓದಿಕಲಿತುಕೊಳ್ಳಬೇಕು.

ರಶ್ಯದಲ್ಲಿರುವ ಹಿಂದೀ ಯಾವ ವರ್ಗಕ್ಕೆ ಸೇರಿದುದು? ಅಲ್ಲಿ ರಾಜಕಾರಣಕ್ಕಾಗಿಯೇ ಹಿಂದಿಯನ್ನು ಕಲಿಯುತ್ತಾರೆ. ಆದುದರಿಂದ ಅದು ಬೀದಿಯ ಹಿಂದಿ ಅದಾಗಲಾರದು. ಹಿಂದಿಗೂ ತನ್ನ ಪರಂಪರೆಯಿದೆ; ರೂಪವಿದೆ, ಪದ್ಧತಿಯಿದೆ. ಸರಕಾರವಾದರೂ ನಿರ್ಮಿತಗೊಂಡ ರೂಪದಲ್ಲಿ ಹಿಂದಿಯನ್ನು ಸ್ವೀಕರಿಸಿದೆ; ಕಾರ್ಯದಲ್ಲಿ ತೊಡಗಿಸುವ ನಿರ್ಧಾರ ಮಾಡಿದೆ. ಹಿಂದಿಯನ್ನು ನಿರ್ಮಾಣಮಾಡಿ ಕಲಿಯುವುದು ಸರಕಾರದ ಹೊಣೆಗಾರಿಕೆಯಲ್ಲ; ಹಿಂದಿಯ ಗಂಭೀರ ವಿಷಯಕ ಪುಸ್ತಕಗಳಲ್ಲಿರುವ ಭಾಷೆಯನ್ನೇ ರಶ್ಯನ್ ಜನರು ಕಲಿಯುವರು ಅದೇ ನಿಜವಾದ ಹಿಂದಿ.

ಪ್ರಧಾನ ಮಂತ್ರಿ ನೆಹರು ಈ ಭಾಷೆಯನ್ನು ಅರ್ಥಮಾಡಿಕೊಳ್ಳದಿದ್ದರೆ, ನೆಹರುರವರ ಹಿಂದಿಯನ್ನು ಅವರು ಹೇಗೆ ಮತ್ತು ಏಕೆ ಕಲಿತಾರು? 'ಭಾರತದ ಪ್ರಧಾನ ಮಂತ್ರಿಗಳಿಗೆ ತಮ್ಮ ದೇಶ ಭಾಷೆ ಬರುವುದಿಲ್ಲ' ಎಂದು ಮುಂತಾಗಿ ಅವರೇಕೆ ತಿಳಿಯಬಾರದು? ಅಥವಾ "ತಮ್ಮ ದೇಶ ಭಾಷೆಯನ್ನಿವರು ಕಲಿತುಕೊಳ್ಳಬೇಕು; ಇಲ್ಲವಾದರೆ, ವ್ಯವಹಾರದಲ್ಲಿ ತೊಂದರೆಗೆ ಅವಕಾಶವಿದೆ" ಎಂದೇಕೆ ಉದ್ಗರಿಸಬಾರದು?

ನೆಹರು ಎನ್ನುವಂತೆ ಅವರ ಹಿಂದಿಯನ್ನು ಯಾರೇ ಅಗಲಿ ಕಲಿತರೆಂದರೆ, ಭಾರತದ ಪ್ರಧಾನ ಮಂತ್ರಿಯ ಸ್ಥಾನದಲ್ಲಿ ಬೇರೆ ಯಾರಾದರೂ ಬಂದರೆ, ಅವರು 'ರಶ್ಯದಲ್ಲಿ ಬೀದಿಯ ಹಿಂದಿ ಪ್ರಚಾರದಲ್ಲಿದೆ; ಅದರಿಂದ ಭಾವಗಳು ಸ್ಪಷ್ಟಪಡುವುದಿಲ್ಲ.' ಎಂದರೆಂದರೆ, ಆಗ ರಶ್ಯನರು ಪುನಃ ಸಂಸ್ಕೃತನಿಷ್ಠ ಹಿಂದಿಯನ್ನು ಕಲಿಯುಬೇಕೆ? ರಶ್ಯನರು ಭಾರತದ ಆಜ್ಞೆಯಂತೆ ನಡೆಯುವುದಿಲ್ಲ. ಅವರು ಯಾರೊಬ್ಬರ ಅಥವಾ ಬೀದಿಯಲ್ಲಿ ಮಾತಾಡಿಕೊಳ್ಳುವ ಹಿಂದಿಯನ್ನು ಕಲಿಯಲಾರರು. ಹಿಂದಿಗೂ ಅಪಾರ ಸಾಹಿತ್ಯವಿದೆ; ಈ ಸಾಹಿತ್ಯಕ ಹಿಂದೀ ಭಾಷೆಯನ್ನು ರಶ್ಯನರೆಂದೇನು, ಅಹಿಂದೀ ಭಾಷಿಗಳೆಲ್ಲರೂ ಕಲಿಯುವರು; ಅದನ್ನು ವ್ಯವಹಾರದಲ್ಲಿ ತೊಡಗಿಸುವರು. ಈ ಹಿಂದೀ ಉನ್ನತಸ್ಥಾನದಲ್ಲಿರುವ ಯಾರಾದರೂ ಅರ್ಥವಿಸಿಕೊಳ್ಳುವಲ್ಲಿ ಅಸಮರ್ಥರಾದರೆ, ಯಾರದು ದೋಷ?

ಕರ್ನಾಟಕದ ಗಡಿತಂಟೆಗಳು

ನವಂಬರ ಮೊದಲನೆ ದಿನಾಂಕ ಬಂದಿತೆಂದರೆ, ಕರ್ನಾಟಕ ರಾಜ್ಯೋದಯವಾಗಿ ಐದು ವರ್ಷಗಳು ಸಂದಂತಾಗುವುದು. ಐದು ವರ್ಷದ ಅವಧಿಯಲ್ಲಿ ಸುಮಾರು ಅರು ಸಾವಿರ ಕೋಟಿ ರೂಪಾಯಿಗಳ ಯೋಜನೆಯನ್ನು ಮುಗಿಸುವ ಶಕ್ತಿ ನಮ್ಮ ರಾಜ್ಯ–ಕೇಂದ್ರ ಸರಕಾರಗಳಿಗಿದ್ದರೂ ದಕ್ಷಿಣದ, ಮುಖ್ಯವಾಗಿ ಕರ್ನಾಟಕದ ಗಡಿಯ ಪ್ರಶ್ನೆಯನ್ನು ಬಗೆಹರಿಸುವಲ್ಲಿ ಅಸಮರ್ಥವಾದುವು ಎಂಬುದು ಖೇದಜನಕ. ಆಂಧ್ರ ಮತ್ತು ಕರ್ನಾಟಕ ರಾಜ್ಯಗಳ ಗಡಿ ಪ್ರಶ್ನೆಯಲ್ಲಿ ಏನೋ ಒಂದು ಚೂರು ಸಮಾಧಾನಕ್ಕೆ ಬಂದಿದ್ದರೂ ಉಳಿದ ಎಲ್ಲ ಸಮಸ್ಯೆಗಳು ನುತ್ತಷ್ಟು ಜಟಿಲವಾಗುತ್ತಿವೆ. ಸದ್ಯ ಮಹಾರಾಷ್ಟ್ರ–ಕರ್ನಾಟಕಗಳ ಗಡಿ ಸಮಸ್ಯೆಗಳನ್ನು ಅಧ್ಯಯನ ಮಾಡಿ ವರದಿಯೊಪ್ಪಿಸಲು ಸಮಿತಿಯೊಂದು ನೇಮಕವಾಗಿದೆಯಾದರೂ ಅದರ ಕಾರ್ಯಪರಿಮಿತಿಯಲ್ಲಿ ಹೊಂದಾಣಿಕೆ ಮಾಡುವುದು ಸೇರುವುದಿಲ್ಲವಾದುದರಿಂದ, ಮಹಾರಾಷ್ಟ್ರ ಸರಕಾರವು ತನ್ನ ವಾದವನ್ನು ಬಿಟ್ಟುಕೊಡಲು ಸಿದ್ಧವಿಲ್ಲವಾದುದರಿಂದ ಅದರಿಂದ ಆಶಾದಾಯಕ ಪರಿಣಾಮವೇನೂ ಆಗಲಾರದು.

ಮುಖ್ಯಮಂತ್ರಿ ಜತ್ತಿಯವರು ತನ್ನ ಸರಕಾರದ ಕಡೆಯಿಂದ ಈ ಗಡಿ ಸಮಿತಿಗೊಂದು ಮನವಿ ಮಾಡಿಕೊಂಡಿದ್ದು, ಅದರಲ್ಲಿ ರಾಜ್ಯದ ಎಲ್ಲ ಗಡಿ ಪ್ರಶ್ನೆಯನ್ನೂ ಏಕಕಾಲದಲ್ಲಿ ಏಕಸೂತ್ರದನ್ವಯ ಬಿಡಿಸಬೇಕೆಂದಿದ್ದಾರೆ. ಇವರು ಪ್ರತಿಪಾದಿಸಿದ ಅಂಶಗಳು ಈ ರೀತಿಯಿರುತ್ತವೆ.

೧. ಸಣ್ಣ ಸುಟ್ಟ ಹೊಂದಾಣಿಕೆಗಳನ್ನು ಮಾತ್ರ ಸರಕಾರವು ಒಪ್ಪುವುದು ಅದು ನಿಷ್ಪನ್ನವಾಗುವ ವರೆಗೆ ಈಗಿನ ಗಡಿಗಳನ್ನೇ ಒಪ್ಪಿಕೊಳ್ಳಬೇಕು.

೨. ಗಡಿಯ ಎರಡೂ ಕಡೆ ಹತ್ತು ಮೈಲು ಪ್ರದೇಶದ ವಿಸ್ತಾರವನ್ನಷ್ಟೇ ಗಡಿ ಪ್ರದೇಶವೆಂದು ತಿಳಿದು ಅದರ ಬಗ್ಗೆ ಮಾತ್ರ ಪರಿಶೀಲನೆ ನಡೆಯಬೇಕು.

೩. ನೂರಕ್ಕೆ ಐಂಬತ್ತು ಕನ್ನಡ ಮಾತಾಡುವವರಿರುವ ಹಳ್ಳಿಗಳನ್ನು ಕರ್ನಾಟಕಕ್ಕೆ ಸೇರಿಸಬೇಕು.

೪. ಇದಕ್ಕಿಂತ ಕಡಿಮೆ ಪ್ರಮಾಣದಲ್ಲಿ ಕನ್ನಡ ಮಾತಾಡುವ ಜನರಿದ್ದರೆ, ಆ ಹಳ್ಳಿಯನ್ನು ಅದು ಈಗ ಇರುವ ರಾಜ್ಯದಲ್ಲೇ ಉಳಿಯಗೊಡಬೇಕು.

೫. ನೀರಾವರಿ ಯೋಜನೆಯಿರುವ ಪ್ರದೇಶಗಳನ್ನು ಆಯಾ ಯೋಜನೆಗೆ ಸಂಬಂಧಿಸಿರುವ ರಾಜ್ಯಕ್ಕೆ ಸೇರಿಸಬೇಕು.

೬. ಪಟ್ಟಣಗಳನ್ನು ಸುತ್ತಮುತ್ತಲಿನ ಗ್ರಾಮಾಂತರ ಪ್ರದೇಶದ ಜನರು ಮಾತಾಡುವ ಭಾಷೆಯನ್ನು ನೋಡಿಕೊಂಡು ಯಾವ ರಾಜ್ಯಕ್ಕೆ ಸೇರಿಸಬೇಕೆಂದು ನಿರ್ಧರಿಸಬೇಕು.

ಕರ್ನಾಟಕ ಸರಕಾರವು ಈ ಅಂಶಗಳನ್ನು ಮಹಾರಾಷ್ಟ್ರದೊಡನಿರುವ ಗಡಿತಂಟೆಯ ಸಂಬಂಧದಲ್ಲಿ ಹೇಳಿದೆಯಾದರೂ, ಅದು ಹೇಳುವ ಏಕಸೂತ್ರದಂತೆ ಎಲ್ಲ ರಾಜ್ಯಗಳೊಡನಿರುವ ತಂಟೆಗೂ ಅನ್ವಯಿಸಬೇಕಾಗುವುದು. ಇದರಿಂದಾಗಿ ಕೆಲವೆಡೆ ತೊಂದರೆಗಳು ಎದ್ದುತೋರುವುದು ಖಂಡಿತ.

ಎಲ್ಲ ರಾಜ್ಯಗಳಿಗಿಂತ ಹೆಚ್ಚಾಗಿ ಹಂಚಾಗಿ ಹೋಗಿದ್ದ ರಾಜ್ಯ ಕರ್ನಾಟಕ; ಅದು ಈಗಲೂ ಹಂಚಿಯೇ ಇದೆ. ದಕ್ಷಿಣದಲ್ಲಿ ಕಾಸರಗೋಡು ತಾಲೂಕಿನ ಉತ್ತರ ಭಾಗದಲ್ಲಿ ಕನ್ನಡ ಹಾಗೂ ತುಳು ಭಾಷೆಯನ್ನಾಡುವರು ೧೧೦ ಸಾವಿರ ಜನರು ಅನಂತಪುರ ಜಿಲ್ಲೆಯ ಮಡಕಶಿರ ತಾಲೂಕು ಮತ್ತು ಕಲ್ಯಾಣಮಗಿ ತಾಲೂಕಿನ ಪಶ್ಚಿಮ ಭಾಗದಲ್ಲಿ ೧೨೦ ಸಾವಿರ ಕನ್ನಡಿಗರಿದ್ದಾರೆ. ನೀಲಗಿರಿ ಜಿಲ್ಲೆಯ ಉತ್ತರ ಪ್ರದೇಶದಲ್ಲಿ ೧೧೦ ಸಾವಿರ ಜನರೂ

(ಆನೇ ಪುಟ ನೋಡಿ)



ನಿಮ್ಮ
ಕನಸುಗಳಿಗೆ
ಸಹಾಯ ಅವಶ್ಯಕ

ಉಳಿತಾಯ—ಕ್ರಮವಾದ
ಉಳಿತಾಯವೇ ಕನಸನ್ನು
ನನಸಾಗಿ ಪರಿವರ್ತಿಸಲು
ಒಳಿತಾದ ಮಾರ್ಗ

ನಿಮ್ಮ ಹಣವನ್ನು ಕೆನರಾ ಬ್ಯಾಂಕಿನಲ್ಲಿ ಉಳಿಸಿ
ಫಿಕ್ಸೆಡ್ ಡಿಪಾಸಿಟ್ ಮೇಲೆ ಶೇ 5ರವರೆಗೆ
ಸೇವಿಂಗ್ಸ್ ಖಾತೆಯ ಮೇಲೆ ಶೇ. 3ರವರೆಗೆ
ಬಡ್ಡಿ ಸಂಪಾದಿಸಿರಿ

ಕ್ಯಾಷ್ ಸರ್ಟಿಫಿಕೇಟ್ ಮತ್ತು ಕ್ಯುಮುಲೇಟಿವ್ ಡಿಪಾಜಿಟ್‌ಗಳ
ಮೇಲೆ ಆಕರ್ಷಕ ಬಡ್ಡಿ ಸಂಪಾದಿಸಿರಿ
ನಿಮ್ಮ ಕನಸುಗಳು ನನಸಾಗಲು ನಮ್ಮ
ಸಹಾಯವನ್ನು ಪಡೆಯಿರಿ.

ಕೆನರಾ ಬ್ಯಾಂಕ್ ಲಿಮಿಟೆಡ್
ಸ್ಥಾಪನೆ: 1906)
— ನಿಮ್ಮ ಸೇವೆಯಲ್ಲಿ 115ಕ್ಕೂ ಮಿಗಿ ಶಾಖೆಗಳು —

ನವಯುಗ

ವರುಷ	ಉಡುಪಿ	ವಾರ
೪೧	೧೯-೧೦-'೬೧	೭

ಯೋಜನೆಯ ಪ್ರಚಾರ

ಭಾರತದ ಸರ್ವಾಂಗೀಣ ಅಭಿವೃದ್ಧಿಗಾಗಿ ಭಾರತ ಸರಕಾರವು ಪಂಚವಾರ್ಷಿಕ ಯೋಜನೆಗಳನ್ನು ರೂಪಿಸಿದೆಯೆಂಬುದು ನಿಜವಾದರೂ ಇದರ ಸಂದೇಶವನ್ನು ಸಮಸ್ತ ಭಾರತೀಯರು ಅರಿತುಕೊಂಡಿದ್ದಾರೆ ಎಂದು ಹೇಳುವಂತಿಲ್ಲ. ಯೋಜನೆಯು ಕಾರ್ಯಗತವಾಗುತ್ತಿದೆಯೆಂಬುದರ ಪರಿಜ್ಞಾನವಿಲ್ಲದ ಭಾರತೀಯರು ಬಹಳ ಸಂಖ್ಯೆಯಲ್ಲಿದ್ದಾರೆ; ಯೋಜನೆಗೂ ತಮಗೂ ಏನೇನೂ ಸಂಬಂಧವಿಲ್ಲವೆಂದು ತಿಳಿಯುವವರಿಗೂ ನಮ್ಮಲ್ಲಿ ಕೊರತೆಯಿಲ್ಲ. ದೇಶದಲ್ಲಿ ಅಭಿವೃದ್ಧಿ ಯೋಜನೆಗಳು ಸಫಲಗೊಳ್ಳುತ್ತ ಹೋದಂತೆ ತಮ್ಮ ಉತ್ಪನ್ನದಲ್ಲಿ ಹೆಚ್ಚುವರಿಯೂಗುತ್ತ ನಡೆಯುತೆಂಬುದು ಹೆಚ್ಚಿನವರ ಅನುಭವಕ್ಕೆ ಬರುತ್ತಿಲ್ಲ. ಕಾವು ದುಡಿಯುತ್ತೇವೆ; ಗಳಿಸುತ್ತೇವೆ; ಇದರಲ್ಲಿ ಸರಕಾರದ—ಯೋಜನೆಯ ಅಂಶವೆಲ್ಲಿಯದೆಂಬ ಕುಹಕಿಗಳೂ ಇಲ್ಲದಿಲ್ಲ. ಮುಖ್ಯವಾಗಿ ದೇಶವನ್ನು ಉನ್ನತೀಕರಿಸಲು ಅರ್ಥಿಕವಾಗಿ ಪುನಾರಚಿಸಲು ನಮ್ಮ ನಾಯಕರು ಅಹೋರಾತ್ರಿ ಶ್ರಮಿಸುತಿದ್ದಾರೆ ಎಂಬ ಸತ್ಯಸ್ಥಿತಿ ಅಧಿಕ ಸಂಖ್ಯಾಕ ಭಾರತೀಯರಿಗೆ ನಿಲುಕದ ವಿಷಯ. ಯೋಜನೆಯು ಯಶಸ್ಸು ಜನತೆಯ ಸಹಕಾರ, ಸಹಯೋಗ, ಮತ್ತು ಸಹಾನುಭೂತಿಯನ್ನು ಅವಲಂಬಿಸಿದೆಯೆನ್ನುವುದಾದರೆ, ನಮ್ಮ ಯೋಜನೆಗಳು ಇವನ್ನು ಇನ್ನೂ ಗಳಿಸಿಲ್ಲ. ಇದಕ್ಕೆ ಯೋಜನೆಯ ಬಗ್ಗೆ ಸಾಕಷ್ಟು ಪ್ರಚಾರಕಾರ್ಯ ನಡೆಯದಿರುವುದೇ ಕಾರಣ. ಎಂದಿನ ವರೆಗೆ ಒಂದು ರಾಷ್ಟ್ರದ ಯೋಜನೆ ತನ್ನ ಯೋಜನೆಯೆಂದು ಜನತೆ ತಿಳಿಯುವುದಿಲ್ಲವೋ ಅಂದಿನ ವರೆಗೆ, ಅದು ಯಶಸ್ವಿಯೂಗಲಾರದು. ಯೋಜನೆಯ ಬಗ್ಗೆ ಜನತೆಯಲ್ಲಿ ವಿಶ್ವಾಸ ಮೂಡಬೇಕು; ಯೋಜನೆಯ ತಿರುಳನ್ನು—ಫಲವನ್ನು ಜನತೆಗೆ ತಿಳಿಸಿ ಹೇಳಬೇಕು.

ಭಾರತ ಸರಕಾರವಾದರೂ ಯೋಜನಾ ಪ್ರಚಾರವನ್ನು ಮಾಡುವುದಾಗಿ ಉದ್ದೇಶಿಸಿ ಕೆಲವೊಂದು ಕ್ರಮಗಳನ್ನು ಕೈಗೊಂಡಿದೆ. ಯೋಜನೆಯ ರೂಪರೇಷೆ, ಪ್ರಗತಿ ಮತ್ತು ಸ್ಥಳಗಳನ್ನು ವಿವರಿಸುವ ಹಲವಾರು ಕಿರುಹೊತ್ತಿಗೆಗಳನ್ನು ಪ್ರಕಟಿಸುತ್ತಿದೆ; ಛಾಯಾ ಚಿತ್ರಗಳನ್ನು ಬೆಳಕಿಗೆ ತರುತ್ತಿದೆ. ಹೆಚ್ಚಿದ ಹೊತ್ತಿಗೆಗಳು ಆಂಗ್ಲ ಭಾಷೆಯಲ್ಲಿದ್ದರೂ ಕೆಲವೊಂದು ಪ್ರಾದೇಶಿಕ ಭಾಷೆಗಳಲ್ಲಿವೆ. ಯೋಜನಾ ಪ್ರಚಾರ ಸಾಧನೆಗಳಾದ ಇಂತಹ ಪುಸ್ತಕಗಳು ಪ್ರಾದೇಶಿಕ ಭಾಷೆಗಳಲ್ಲಿ ಬರೆಯಲ್ಪಡಬೇಕು; ಅವನ್ನು ಧರ್ಮಾರ್ಥವಾಗಿ ವಾಚನಾಲಯ-ಪುಸ್ತಕಾಲಯ, ಶಾಲೆ-ಕಾಲೇಜುಗಳಿಗೆ ಒದಗಿಸಬೇಕು. ಸಾಕ್ಷರವಾದ ಜನತೆಯಲ್ಲಿ ನಗರ-ಪಟ್ಟಣಗಳಲ್ಲಿ ಈ ರೀತಿಯ ಕ್ರಮಗಳಿಂದ ಪ್ರಚಾರವು ಯಶಸ್ವಿಯೂಗಬಹುದು. ಆದರೆ, ಇದಕ್ಕೂ ಮುಖ್ಯವಾಗಿ ಪ್ರಚಾರ ಸಾಧನವನ್ನಾಗಿ ರೇಡಿಯೋ ಹಾಗೂ ಚಲಚ್ಚಿತ್ರಗಳನ್ನು ಬಳಸಿಕೊಳ್ಳುವುದು ಉತ್ತಮ. ಯೋಜನಾ ತಜ್ಞರು ಪ್ರಾದೇಶಿಕಭಾಷೆಯಲ್ಲಿ ಪ್ರತಿದಿನವೂ ಕಾರ್ಯಗತವಾದ ಯೋಜನೆಯಿಂದ ಉಂಟಾದ ಲಾಭಾಂಶಗಳ ವಿವರಗಳನ್ನು ನೀಡುವ ವ್ಯವಸ್ಥೆಯನ್ನು ಮಾಡಬೇಕು. ಚಲಚ್ಚಿತ್ರಗಳ ಮಾಧ್ಯಮವು ಇದಕ್ಕೂ ಮಿಗಿಲಾದುದು. ಇವು ಜನತೆಯ ಚಿತ್ತವನ್ನು ಆಕರ್ಷಿಸುತ್ತಿರುವುವು. ಭಾರತ ಸರಕಾರದ ಫಿಲ್ಮ್ ಡಿವಿಜನ್ ವಿಭಾಗವು ಸಮಾಚಾರ ಸಂಬಂಧಿ ಚಿತ್ರಗಳನ್ನು ತೆಗೆದು ಚುಟುಕಿನಲ್ಲಿ ಅದನ್ನು ಪ್ರಚಾರ ಮಾಡುವಂತೆ, ಯೋಜನಾ ಮಂತ್ರಿ ಶಾಖೆಯು ಪ್ರತಿಯೊಂದು 'ಯೋಜನೆ' (Project)ಯ ೧೦—೧೫ ನಿಮಿಷ ಕಾಲದ ಚಲಚ್ಚಿತ್ರಗಳನ್ನು ತಯಾರಿಸಬೇಕು. ಇವನ್ನು ದೇಶದ ಎಲ್ಲ ಸಿನೆಮಾ ಮಂದಿರಗಳಲ್ಲಿಯೂ ಖಡ್ಡಾಯವಾಗಿ ಪ್ರದರ್ಶಿಸುವಂತೆ ಮಾಡಬೇಕು. ಸಿನೆಮಾ ಥಿಯೇಟರುಗಳಿಲ್ಲದ ಹಳ್ಳಿಗಳಲ್ಲಿ ಪ್ರತಿಯೊಂದಕ್ಕೂ ತಿಂಗಳಿಗೆರಡು ಬಾರಿಯಾದರೂ ತೆರಳಿ, ಅಲ್ಲಿ ಇವುಗಳ ಪ್ರದರ್ಶನದ ಏರ್ಪಾಡು ಮಾಡಬೇಕು. ಅಲ್ಲದೆ, ಚಿತ್ರ ಪ್ರದರ್ಶನದ ದಿನವನ್ನು ಮೊದಲೇ ಗೊತ್ತುಪಡಿಸಿ ಅವನ್ನು ಹಳ್ಳಿಯಲ್ಲಿ ಪ್ರಚಾರ ಮಾಡಬೇಕು. ಇದರಿಂದ ಎಲ್ಲ ಹಳ್ಳಿಗರೂ ಇದನ್ನು ವೀಕ್ಷಿಸುವ ಅವಕಾಶವೊದಗುವುದು. ಯೋಜನೆಯ ಬಗ್ಗೆ ಅನಕ್ಷರಸ್ಥರ ಸದ್ಭಾವನೆಯನ್ನು ಗಳಿಸುವುದು ಈ ಮಾರ್ಗದಿಂದ ಮಾತ್ರ ಸಾಧ್ಯ.

ಪ್ರಧಾನ ಮಂತ್ರಿ ನೆಹರುಗಳು ಬಾಕ್ರ, ನಂಗಲ್, ಹಿರಾಕುಡ್, ತುಂಗಭದ್ರಾ ಮೊದಲಾದ ಯೋಜನಾ ಸ್ಥಳಗಳೇ ಆಧುನಿಕ ಭಾರತದ ತೀರ್ಥಕ್ಷೇತ್ರಗಳು ಎಂದೊಮ್ಮೆ ಅಂದಿದ್ದರು. ಸಾಹಿತ್ಯಕಾರರು ಇವನ್ನು ಸಂದರ್ಶಿಸಿ ತಮ್ಮ ಕೃತಿಗಳ ಮೂಲಕ ಇವುಗಳ ಪ್ರಚಾರ ಮಾಡಬೇಕು ಎಂದಿದ್ದಾರೆ. ಇದಕ್ಕಾಗಿಯೇ ಯೋಜನಾ ಪ್ರಚಾರಕ್ಕೆ ಸಾಹಿತ್ಯಕರನ್ನು ಬಳಸಿಕೊಳ್ಳುವ ಹಂಚಿಕೆಯೊಂದು ಇತ್ತೀಚೆಗೆ ನಡೆಯಿತು. ಇದೇ ರೀತಿಯಲ್ಲಿ ಭಾರತೀಯ ಸಂಸ್ಕೃತಿಯನ್ನು ಇಂದಿಗೂ ಉಳಿಸಿಕೊಡುವಲ್ಲಿ ಮಹತ್ವದ ಪಾತ್ರ ವಹಿಸಿದ ಮತ್ತು ವಹಿಸುತ್ತಿರುವ ಕೀರ್ತನಾಕಾರ ಹರಿದಾಸರನ್ನೂ ಇದಕ್ಕೆ ಉಪಯೋಗಿಸಿಕೊಳ್ಳುವುದು ಸಾಧ್ಯ. ನಗರ-ಹಳ್ಳಿಯೆನ್ನದೆ ಸರ್ವಸ್ಥಾನ ಗಮನಿಗಳಾದ ಇವರಿಂದ ನಮ್ಮ ಯೋಜನಾ ಪ್ರಚಾರ ಬಹಳವಾಗಿ ಆದೀತು. ಅಮೆರಿಕೆಯ ಸ್ವಾತಂತ್ರ್ಯ ಸಂಗ್ರಾಮ, ಫ್ರೆಂಚ್ಸಿನ ಮಹಾ ವಿಪ್ಲವ, ಮತ್ತೆ ನಮ್ಮ ಬಂಧವಿನೋಚನೆಯಲ್ಲಿ ಸಾಹಿತ್ಯವೆಸಗಿದ ಅನುಪಮ ಕಾರ್ಯವನ್ನು ನಾವು ಮರೆಯುವಂತಿಲ್ಲ. ಆದುದರಿಂದ ಕೋಟ್ಯಂತರ ರೂಪಾಯಿ ವೆಚ್ಚದ ನಮ್ಮ ಯೋಜನೆಯು ಸಫಲದಾಯಕವಾಗುವುದು ಅತ್ಯವಶ್ಯವೆಂಬುದರಿಂದ ಅನಕ್ಷರಸ್ಥ ಭಾರತೀಯರ ಸದ್ಭಾವನೆಯನ್ನೂ ನಾವು ಇದಕ್ಕಾಗಿ ಗಳಿಸುವುದು ಅನಿವಾರ್ಯವೆಂಬುದರಿಂದ ಅದರ ಸುಯೋಗ್ಯ ಪ್ರಚಾರ ಸಾಧನಗಳತ್ತ ದೃಷ್ಟಿಹರಿಸುವುದು. ಅವನ್ನು ಕೃತಕಾರ್ಯಗೊಳಿಸುವುದು ಅಗತ್ಯ.

ಜಗತ್ಪರ್ಯಟನ

ಜವಾಹರಲಾಲ

ದೊಡ್ಡವರು ದೊಡ್ಡವರಂತೆ ನಟಿಸುವುದಿಲ್ಲ; ಆದರೂ ಅವರ ದೊಡ್ಡಸ್ತಿಕೆ ಬೆಳಕಿಗೆ ಬರುತ್ತದೆ. ತುಂಬಿದ ಕೊಡ ತುಳುಕುವುದಿಲ್ಲ; ಆದರೂ ಅದು ಸೊಂಟದಲ್ಲೋ ಕಲೆಯಲ್ಲೋ ನಿಂತ ಗಂಭೀರತೆಯಿಂದಲೇ ತುಂಬಿದ ಬಗೆ ಮನವರಿಕೆಯಾಗುತ್ತದೆ. ಪ್ರಧಾನ ಮಂತ್ರಿ ನೆಹರು ಪೂರ್ಣ ತುಂಬಿದ ಕೊಡ. ಅವರೆಂದೂ ತುಳುಕುವುದಿಲ್ಲ; ಅವರಿರುವಲ್ಲಿ ತುಣುಕಾದರೂ ಗುಲ್ಲು ಇಲ್ಲ. ಅವರ ಶ್ರೇಷ್ಠ ವ್ಯಕ್ತಿತ್ವ, ಆಳವಾದ ಜ್ಞಾನ, ಅದ್ವಿತೀಯವಾದ ಮುತ್ಸದ್ಧಿತನಗಳೇ ಇದಕ್ಕೆ ಕಾರಣ. ಮೆಕ್ಸಿಕೋವಿಗೆ ತನ್ನ ಜನ್ಮದಿನದ ಅತ್ತ ಇತ್ತದಲ್ಲಿ ತೆರಳಲಿರುವ ಇವರು ಮೊದಲು ಲಂಡನ್ನಿನಲ್ಲಿ ಮೈಕಮಿಲನರನ್ನೂ ವಾಶಿಂಗ್‌ಟನ್—ಲಾಸ್ ಎಂಜಲಿಸ್‌ಗಳಲ್ಲಿ ಕೆನ್ನೆಡಿಯವರನ್ನೂ ಭೆಟ್ಟಿಯಾಗುವರು. ಜಾಗತಿಕ ಸಮಸ್ಯೆಗಳ ಕುರಿತಾಗಿ ಕೆನ್ನೆಡಿಯವರ ಕಳ್ಳ ಮನೆಯಲ್ಲಿ ೧೦ ದಿನ ಇವರು ಅವರೊಡನೆ ಚರ್ಚಿಸುವರು

ಆಚಾರ್ಯಕೃಪಲಾನಿ

ಆಚಾರ್ಯಕೃಪಾಲಾನಿ ಯಾವುದೇ ಪಕ್ಷದಲ್ಲಿರಲಿ, ಪಕ್ಷಾತೀತರಾಗಿರಲಿ ಅವರು ಭಾರತದ ಪಾರ್ಲಿಮೆಂಟನಲ್ಲಿ ಅವಶ್ಯಬೇಕು. ಎಂತಲೇ ಕಳೆದ ಬಾರಿ ಅವರಿದುರು ಕಾಂಗ್ರೆಸ್ಸು ತನ್ನ ಹುರಿಯಾಳುವನ್ನು ನಿಲ್ಲಿಸಲಿಲ್ಲ. ಕೃಪಲಾನಿಯವರು ಕಮ್ಯುನಿಸ್ಟೇತರ ಬಲ ಪಕ್ಷಗಳ ಬೆಂಬಲಪಡೆದು ಉತ್ತರ ಮುಂಬಯಿ ಕ್ಷೇತ್ರದಿಂದ ಭಾರತದ ಸಂರಕ್ಷಣಾ ಮಂತ್ರಿ ಮೆನನ್ನರಿಗೆದುರಾಗಿ ಸ್ಪರ್ಧಿಸುವ ತಮ್ಮ ನಿರ್ಧಾರವನ್ನೇಗ ಹೊರಗೆಡಹುವ್ದಾರೆ ಮೆನನ್ನರು ಕಮುನಿಸ್ಟ್ ಪರರೆಂಬುದರಿಂದ, ಅವರು ಕಾಂಗ್ರೆಸಿನಲ್ಲಿದ್ದು ಅದನ್ನು ಕೆಡಿಸುವವರಾದುದರಿಂದ ಅವರನ್ನು ಸೋಲಿಸಿ ಕಾಂಗ್ರೆಸ್ಸನ್ನುಳಿಸುವುದೇ ತನ್ನ ಉದ್ದೇಶವೆಂದು ಆಚಾರ್ಯರು ಹೇಳಿದ್ದಾರೆ. ಮೆನನ್ನರಾಗಲಿ ಕೃಪಾಲಿನಿಯಾಗಲೀ ಇಬ್ಬರೂ ಗೆಲ್ಲುವುದು ಅಸಂಭವ. ಮುಂಬಯಿಯ ಮತದಾರರು ಯಾರನ್ನು ಅರಿಸುವರು ಎಂಬುದು ಕುತೂಹಲದಾಯಕವಿದೆ. ಇದರಿಂದ ಸತ್ಯಸ್ಫೋಟವಾಗಲಿದೆ.

ಬಿ. ಡಿ. ಜತ್ತಿ

ಮುಖ್ಯ ಮಂತ್ರಿ ಜತ್ತಿಯವರು ಪ್ರಾದೇಶಿಕ ಕಾಂಗ್ರೆಸ್ಸಿನೊಂದಿಗೆ ಒಡಂಬಡಿಕೆ ಮಾಡಿಕೊಂಡರು; ತನ್ನ ಮಂತ್ರಿ ಮಂಡಳಿಯನ್ನು ವಿಸ್ತರಿಸಿದರು; ಸಮಸ್ಯೆ ಭಿನ್ನಾಭಿಪ್ರಾಯ ಬಗೆ ಹರಿಯಿತು; ಕಾಂಗ್ರೆಸ್ಸಿನಲ್ಲಿ ಐಕ್ಯ ಮೂಡಿತು ಎಂದು ಕೊಂಡರು. ಆದರೆ, ಚುನಾವಣೆಗಳು ಹತ್ತಿರವಾದಂತೆ ಈ ತೊಡಕು ಮತ್ತೂ ಹೆಚ್ಚಿದಂತೆ ಭಾಸವಾಗ ತೊಡಗಿದೆ. ತನ್ನ ಮಂತ್ರಿ ಮಂಡಳಿಗೆ ಬೆಂಬಲವಿತ್ತಿದ್ದ ಪ್ರಚಲಿತ ಸದಸ್ಯರಿಗೆ ಜಿಲ್ಲಾ ಕಾಂಗ್ರೆಸ್ಸುಗಳು ಉದ್ದೇಶಪೂರ್ವಕವಾಗಿ ಮುಂದಿನ ಚುನಾವಣೆಯಲ್ಲಿ ಟಿಕೇಟು ಕೊಡುವಂತೆ ಸಿಫಾರಸು ಮಾಡಿಲ್ಲವೆಂದು ಅವರು ಗಂಭೀರವಾಗಿ ಆರೋಪ ಹೊರಿಸಿದ್ದಾರೆ. ಜಿಲ್ಲಾ ಕಾಂಗ್ರೆಸ್ಸುಗಳು ಕಾಂಗ್ರೆಸಿಗರ ಪ್ರತಿನಿಧಿತ್ವ ಮಾಡುವುದಾದರೆ, ಅವುಗಳು ನಿರ್ವಿಕಾರ ದೃಷ್ಟಿಯಿಂದಲೇ ಸಿಫಾರಸು ಮಾಡಬೇಕು; ಕಾಂಗ್ರೆಸ್ ಸಂಸ್ಥೆಯ ಮೇಲೆ ಮುಖ್ಯ ಮಂತ್ರಿಯವರ ಆರೋಪ ಪ್ರಜಾಪ್ರಭುತ್ವದ ಕಳವನ್ನೆ ಶೋಧಿಸ ಹೊರಟಿವೆ.

ತ್ರಿಮೂರ್ತಿ ಯೋಜನೆ

ಸ್ಥಾನವೊಂದು ತೆರವಾಯಿತೆಂದರೆ, ನೂರಾರು ಅರ್ಜಿಗಳು ಮುಂದೆ ಬರುತ್ತವೆ. ಸಿಲೆಕ್ಷನ್ ಕಮಿಟಿಯು ಯಾವಸೊಬ್ಬನಿಗೆ ಈ ಸ್ಥಾನವನ್ನು ತುಂಬುವ ಇಂಗಿತವೆಯಿಲ್ಲವೆಂದಾದರೆ, ಮೊಂಡುವಾದವೊಂದನ್ನು ಮುಂದಿಡುತ್ತಾರೆ. ನಿದ್ರಿಸಿದವರನ್ನು ನುಡಿಸಬಹುದು; ಗ್ರಹ ಬಡೆದವರನ್ನು ನುಡಿಸಬಹುದು ಆದರೆ, ಸಿರಿಗರದಿಂದ ಕಿವುಡರಂತೆ ವರ್ತಿಸುವವರನ್ನೆಂದಿಗೂ ನುಡಿಸಲರಿಯದು. ರಶ್ಯ ಮತ್ತು ಅಮೆರಿಕೆಗಳ ನಡುವೆ ಸಂಯುಕ್ತ ರಾಷ್ಟ್ರ ಸಂಘದ ಪ್ರಧಾನ ಕಾರ್ಯದರ್ಶಿಯೊಂದಾಗಬೇಕೆಂಬ ವಿಷಯದಲ್ಲಿ ತೀವ್ರ ಭಿನ್ನಾಭಿಪ್ರಾಯೆದ್ದುದೂ ಇದೇ ಕಾರಣದಿಂದ. ಆದರೆ, ಸುಗ್ರಹವಶದಿಂದ ಸದ್ಯ ತಾತ್ಕಾಲಿಕವಾಗಿ ಬ್ರಹ್ಮದೇಶದ ಶ್ರೀ ಯು. ಥಾಂಟರನ್ನು ನೇಮಿಸಲು ಎರಡೂ ರಾಷ್ಟ್ರಗಳು ಸಮ್ಮತಿಸಿವೆಯೆಂದು ತಿಳಿಯುತ್ತದೆ. ಇದರಿಂದ ರಶ್ಯವು ಮುಂದಿಟ್ಟಿದ್ದ ತ್ರಿಮೂರ್ತಿ ಯೋಜನೆಯನ್ನು ಅದು ಹಿಂತೆಗೆದುಕೊಂಡಿತೆಂದು ತಿಳಿಯಬಹುದು. ಹಾಗಿದ್ದರೂ ಈ 'ತ್ರಿಮೂರ್ತಿ' ಯೋಜನೆಯನ್ನು ಉಪಕಾರ್ಯದರ್ಶಿತನಕ್ಕೆ ಅನ್ವಯಿಸಬೇಕೇ ಎಂಬುದು ಇನ್ನೂ ವಿದಿತವಿಲ್ಲ. ಮೂವರನ್ನು ಈ ಸ್ಥಾನಕ್ಕೆ ನೇಮಿಸುವುದು, ಅದರಲ್ಲಿ ಪಾಶ್ಚಾತ್ಯ, ತಟಸ್ಥ ಮತ್ತು ಪೌರ್ವಾತ್ಯ ಬಣಗಳಿಗೊಂದರಂತೆ ಸ್ಥಾನವಿತ್ತು ನಿಷೇಧಾಧಿಕಾರವೀಯುವುದು ರಶ್ಯದ ಯೋಜನೆ. ಸ್ಥಾನ ಹೊಂದುವ ರೀತಿಯೇನೇ ಇರಲಿ, ನಿಷೇಧಾಧಿಕಾರದ ಪರಿಣಾಮ ನೆಟ್ಟಗಾಗಲಾರದು. ಸಂ. ರಾ. ಸಂಘವಿಂದು ನಿಭೀತಿಯಿಂದ ಜಾಗತಿಕ ವಾಣಿಗೆ ಕಿವಿಗೊಡದಿರುವುದಕ್ಕೆ ಚತುರ್ಮಹಾ ರಾಷ್ಟ್ರಗಳಲ್ಲಿರುವ ಪ್ರತಿಷೇಧಾಧಿಕಾರವೇ ಕಾರಣವಾಗಿರುವಾಗ, ಮರಳಿ ಇನ್ನೊಂದು ವರ್ಗಕ್ಕೆ ಇಂತಹ ಅಧಿಕಾರ ಕೊಡುವುದರಿಂದ ಕರ್ಮಾಣ್ಯಕ್ಕೆ ಭಂಗಕಾರಣವೆನಿಸುವುದು. ಆದುದರಿಂದ ಇದು ಸರ್ವಥಾ ಸಲ್ಲದೆಂದು ಹೇಳಲೇಬೇಕಾಗುತ್ತದೆ.

ವಿನಂತಿ

ಚಂದಾಹಣ ಬಾಕಿ ಇರುವ ನಮ್ಮ ಚಂದಾದಾರರಿಗೆಲ್ಲಾ ಈ ಮೊದಲೇ ಕಾರ್ಡು ಬರೆದಿರುತ್ತೇವೆ. ಅದರಂತೆ ಕೆಲವರು ಈಗಾಗಲೇ ಚಂದಾಹಣವನ್ನು ಪಾವತಿ ಮಾಡಿರುತ್ತಾರೆ. ಇನ್ನೂ ಪಾವತಿ ಮಾಡದವರು ದಯಮಾಡಿ ಅವಶ್ಯ ಕರ್ಯ ಕಳುಹಿಸಿಕೊಡುವಂತೆ ವಿನ್ನವಿಸುತ್ತೇವೆ. ವಿ. ಪಿ. ಮಾಡಿದರೆ 75 ನಯೇಪೈಸೆಯಷ್ಟು ಹೆಚ್ಚಿಗೆ ಬೀಳುವುದರಿಂದ ಎಲ್ಲರೂ ಮುಂದಾಗಿ ಮನಿಯಾರ್ಡರು ಮಾಡುವಂತೆ, ಇಲ್ಲವೇ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಕಟ್ಟುವಂತೆ ಅಪೇಕ್ಷಿಸುತ್ತೇವೆ. ಅಂತೂ ಚಂದಾ ಬಾರದಿದ್ದರೆ ಕ್ರಮಶಃ ವಿ. ಪಿ. ಮಾಡುತ್ತೇವೆ.

—ಮೆನೇಜರ್.

ಅಲ್ಲಲ್ಲಿಯ ಸುದ್ದಿಸಾರ

ವಾರ್ಷಿಕ ಮಹಾಸಭೆ—ನಿಡಂಬೂರು ಪಂಚಾಯತಕ್ಕೆ ಸೇರಿದ ಕುತ್ಯಾಡಿ, ಕಡೇಕಾರ, ಕಿದಿಯೂರು, ಅಂಬಲ್ಪಾಡಿ ಮತ್ತು ಮೂಡನಡಂಬೂರು ಗ್ರಾಮಗಳ ಸ್ವಾಭಿಮಾನದಾರರ ವಾರ್ಷಿಕ ಮಹಾಸಭೆಯು ತಾ. 8—10—1961ರಂದು ಕಡೇಕಾರ ಬೋರ್ಡು ಶಾಲೆಯಲ್ಲಿ ಶ್ರೀ ಎಂ. ಮಧ್ವರಾಜ, ಪ್ರೆಸಿಡೆಂಟ್ ಉಡುಪಿ ತಾಲೂಕು ಬೋರ್ಡ್, ಇವರ ಅಧ್ಯಕ್ಷತೆಯಲ್ಲಿ ಜರಗಿತು. ಪಂಚಾಯತ ಚೇರಮೇನ ಶ್ರೀ ಕೆ. ಶಾಮ ಶೆಟ್ಟಿ ಸಭಾಧ್ಯಕ್ಷರಿಗೆ ಹೂಮಾಲೆಯನ್ನು ಅರ್ಪಿಸಿದ ಬಳಿಕ ಪಂಚಾಯತ ಸದಸ್ಯ ಡಾ. ಕೆ ಆರ್. ಭಾಗವತರು ಸ್ವಾಗತ ಭಾಷಣ ಮಾಡಿದರು. ಪಂಚಾಯತ ಸೆಕ್ರೆಟರಿಯವರಿಂದ ವರದಿ ವಾಚನವಾದ ಮೇಲೆ ಇನ್ನು ಮುಂದೆ ಪಂಚಾಯತ ಕ್ಷೇತ್ರದಲ್ಲಿ ಆಗ ಬೇಕಾಗಿರುವ ಸುಧಾರಣೆಗಳ ಕುರಿತು ಸಭಿಕರಲ್ಲಿ ಶ್ರೀಗಳಾದ ಆನಂದ ಗಾಣಿಗ, ಕೆ ಶ್ರೀನಿವಾಸರಾವ್, ಕೆ. ಭೋಜ ಪೂಜಾರಿ, ಕೆ. ಸದಾನಂದ ಶೆಟ್ಟಿ, ಚಂದ್ರಕಾಂತ ಆಚಾರ್ಯ, ಕೆ. ಶಂಕರರಾವ್, ಅಣ್ಣಪ್ಪ ಭಂಡಾರಿ, ಲೋಕನಾಥ ಇವರು ಮಾತಾಡಿದರು. ಪಂಚಾಯತ್ ಸೆಕ್ರೆಟರಿಯವರು ಸುಧಾರಣೆಗಳಾಗಿ ಬೇಕಾಗಿರುವ ಕಡೆಗಳನ್ನು ವಿವರಿಸಿ ಪಂಚಾಯತ್ ನಿವಾಸಿಕರ ಸಹಕಾರವೂ, ತಾಲೂಕು ಬೋರ್ಡಿನ ನೆರವೂ ಪ್ರತಿಯೊಂದು ಕೆಲಸಕ್ಕೆ ಅವಶ್ಯವಿರುವುದಾಗಿ ತಿಳಿಸಿ ಅಂತಹ ಸಹಕಾರವನ್ನು ಕೊಡುವಂತೆ ಕೇಳಿಕೊಂಡರು. ಅಧ್ಯಕ್ಷರು ತನ್ನ ಸಮಾರೋಪ ಭಾಷಣದಲ್ಲಿ ಉಡುಪಿ ತಾಲೂಕಿನ ಮುಂದುವರಿದ ಪಂಚಾಯತುಗಳಲ್ಲಿ ಇದು ಒಂದಾಗಿದೆ, ಪಂಚಾಯತುಗಳಿಗಿರುವ ಅರ್ಧಿಕ ಬಿಕ್ಕಟ್ಟು ತಾಲೂಕು ಬೋರ್ಡಿಗೂ ಇದೆ ಯೊದರೂ ರೈತರ ಆತ್ಮಗತವಾದ ಕೇಳಿಕೆಯಂತೆ ನೀರಾವರಿ ತೋಡಿನ ರಿಪೇರಿಯ ಬಗ್ಗೆ ಮಣ್ಣಿಗೆಯಾದ ರಸ್ತೆ, ಮತ್ತು ಕನರ್ಾಡಿಯಿಂದ ಹೊಳೆಬದಿಗೆ ಹೋಗುವ ರಸ್ತೆಗಳ ರಚನೆಯಲ್ಲಿ ಸಹಕಾರ ಕೊಡುವದಾಗಿ ಹೇಳಿ ಈ ಪಂಚಾಯತದ ಸ್ವಾಭಿಕರಾದ ದಿ. ಎನ್. ರಾಜಗೋಪಾಲ ಕೃಷ್ಣರಾಯರಿಗೆ ಗೌರವ ಸಲ್ಲಿಸಿ, ಅವರ ದಾರಿ ದೀಪದ ಬೆಳಕಿನಲ್ಲಿ ಈ ಪಂಚಾಯತು ಪ್ರಗತಿಪಥದಲ್ಲಿ ಸಾಗುತ್ತಿರುವುದಕ್ಕೆ ಸಂತೋಷ ವ್ಯಕ್ತಪಡಿಸಿದರು. ಕಾರ್ಯದರ್ಶಿಯವರು ವಂದನಾರ್ಪಣೆ ಗೈದರು

ಶಂಕುಸ್ಥಾಪನೆ—ಮಂಗಳೂರು ತಾಲೂಕು ಉಳೆಪಾಡಿ ಗ್ರಾಮದ ಸರಕಾರಿ ಪ್ರೈಮರಿ ಶಾಲಾ ಕಟ್ಟಡದ ಶಂಕುಸ್ಥಾಪನೆಯನ್ನು ತಾ. 12ರಂದು ಎಡ್ವೋಕೇಟ್ ಡಿ. ಮೋಹನರಾಯರು ಮುಂಡ್ಕೂರು ಪಂಚಾಯತ್ ಅಧ್ಯಕ್ಷ ಶ್ರೀ ಶಿವಣ್ಣ ಶೆಟ್ಟಿ ಅಧ್ಯಕ್ಷತೆಯಲ್ಲಿ ನೆರವೇರಿಸಿದರು. ಕಾರ್ಯದರ್ಶಿ ಶ್ರೀ ರಾಮ ವಿ. ಶೆಟ್ಟರು ವರದಿಯನ್ನೋದಿದರು. ಸ್ಥಳೀಯ ಪಂಚಾಯತ್ ಅಧ್ಯಕ್ಷ ಶ್ರೀ ಬಿ. ಶೀನ ಶೆಟ್ಟಿ ಧ್ವಜರೋಹಣ ಮಾಡಿದರು. ಡಾ. ಸಂಜೀವ ನಾಥ್ ಶ್ರೀಗಳಾದ ಭಾಸ್ಕರ ಶೆಟ್ಟಿ, ಹೊನ್ನ ಸಾಮಬಾರ್, ಎಮ್. ವೆಂಕಣ್ಣ ಶೆಟ್ಟಿ, ಮರಿಯಣ್ಣ ಪಾಯಸ್ ಮೊದಲಾದವರು ಭಾಷಣ ಮಾಡಿದರು. ವಿದ್ಯಾರ್ಥಿಗಳಿಂದ ವಿವಿಧ ವಿನೋದಾವಳಿಗಳಾದವು. ಶಾಲಾ ಸಮಿತಿಯ ಅಧ್ಯಕ್ಷ ಶ್ರೀ ಯು. ಕೆ. ಎಲ್ಲಪ್ಪ ಶೆಟ್ಟಿ ಧನ್ಯವಾದಗಳನ್ನರ್ಪಿಸಿದರು.

ಹೊಸ ಅಂಚೆ ಕಚೇರಿ—ಮೂಲ್ಕಿ ಸರ್ಕಲ್ ದಿವಿಜನ್ನಿಗೆ ಸೇರಿದ ಉಡುಪಿ ತಾಲೂಕು ಮಾಬುರುನಲ್ಲಿರುವ ಶ್ರೀರಾಮ ಪಾ ಎ. ಶಾಲೆಯಲ್ಲಿ ತಾ. 7ರಂದು ಪೋಸ್ಟಲ್ ಇನ್ಸ್‌ಪೆಕ್ಟರ್ ಶ್ರೀ ಕೆ. ನಾನೋಜಿ ರಾಯರು ಮಜೂರು ಬ್ರಾಂಚ್ ಪೋಸ್ಟ್ ಆಫೀಸನ್ನು ಉದ್ಘಾಟಿಸಿದರು. ಶಾಲಾ ಟೀಚರ್ ಮೆನೇಜರ್ ಶ್ರೀ ಟಿ. ಕೃಷ್ಣಯ್ಯ ಶೆಟ್ಟಿ ಬ್ರಾಂಚ್ ಪೋಸ್ಟ್ ಮಾಸ್ಟರರಾಗಿ ನೇಮಿಸಲ್ಪಟ್ಟರು.

ಯಕ್ಷಗಾನ ಕಲಾಕ್ಷೇತ್ರ—ಉಡುಪಿಯ ಈ ಕಲಾಕ್ಷೇತ್ರದಲ್ಲಿ ತಾ. 14ರಂದು ಪುತ್ತೂರು ಶ್ರೀ ಎನ್. ಕೊರಗ ಶೆಟ್ಟಿ ನಿವಾಸದಲ್ಲಿ ಶಿವಪುರ ಸೂರ್ಯಾಣ್ಣ ಶೆಟ್ಟಿ ಹಿರಿತನದಲ್ಲಿ ಯಕ್ಷಗಾನ ಕಾಲಕ್ಷೇಪವೊಂದು ವಿಜೃಂಭಣೆಯಿಂದ ನೆರವೇರಿತು.

ಪುಸ್ತಕನಿಧಿ ಸೇವೆಯ ಉದ್ಘಾಟನೆ—ಕೆನರಾ ಬ್ಯಾಂಕ್ ಜುಬಿಲೀ ಎಜ್ಯುಕೇಶನ್ ಸಂಘದಿಂದ ನಡೆಸಲ್ಪಡುವ ಪುಸ್ತಕ ನಿಧಿಯ ಸೇವೆಯನ್ನು ಇದೇ ತಾ. 15ರಂದು ಮಂಗಳೂರಿನ ರೈಟ್ ಹೌಸ್ ಹಿಲ್ಸಸ್ಲ್ಲಿರುವ ಕೆನರಾ ಬ್ಯಾಂಕಿನ ವರಾಂಡದಲ್ಲಿ ಜಸ್ಟೀಸ್ ಶ್ರೀ ಎ ನಾರಾಯಣ ಪೈಯವರ ಅಧ್ಯಕ್ಷತೆಯಲ್ಲಿ ಸುರತ್ಕಲ್ ಕರ್ನಾಟಕ ರೀಜಿನಲ್ ಇಂಜಿನಿಯರಿಂಗ್ ಕಾಲೇಜಿನ ಪ್ರಿನ್ಸಿಪಾಲ್ ಡಾ. ಎ. ಎಸ್. ಅಡ್ಯೆಯವರು ಉದ್ಘಾಟಿಸಿದರು, ಉಪಾಹಾರ ಸತ್ಕಾರವಾದ ಮೇಲೆ ಘಂಡಿನ ಆಡಳಿತ ಸಮಿತಿಯ ಸದಸ್ಯ ಜಾಗೂ ಕೆನರಾ ಬ್ಯಾಂಕಿನ ಡೈರೆಕ್ಟರೊದ ಶ್ರೀ ಜೀನಾಭಾಯಿ ದೇವಿದಾಸ್‌ರು ಸ್ವಾಗತಭಾಷಣ ಮಾಡಿದರು. ಡಾ. ಅಡ್ಯೆಯವರು ಉದ್ಘಾಟನಾ ಭಾಷಣದಲ್ಲಿ ಬ್ಯಾಂಕಿನ ಸ್ಥಾಪಕ ಶ್ರೀ ಅಮ್ಮೆಂಬಳ ಸುಬ್ರಾಯ ಪೈಯವರು ಬ್ಯಾಂಕಿನೊಂದಿಗೆ ವಿದ್ಯಾಸಂಸ್ಥೆಗಳನ್ನೂ ಸ್ಥಾಪಿಸಿ ವಿದ್ಯಾದಾನಕ್ಕೆ ಸಹಾಯ ಮಾಡಿದರು. ಇಂದು ಬೆಲೆಯುಳ್ಳ ತಾಂತ್ರಿಕ ಪುಸ್ತಕಗಳನ್ನು ಪ್ರತಿ ವಿದ್ಯಾರ್ಥಿ ಕೊಂಡುಕೊಳ್ಳುವುದು ಕಷ್ಟತರವಾದದ್ದು. ಈ ತೆರದ ಪುಸ್ತಕ ನಿಧಿಯ ಸೇವೆ ವಿದ್ಯಾರ್ಥಿಗಳಿಗೆ ದೊರಕುವಂತಾದ್ದು ಅತ್ಯಂತ ಸಹಕಾರಿಯಾಗಿದೆ ಎಂದಿತ್ಯಾದಿಯಾಗಿ ಹೇಳಿದರು. ಅಧ್ಯಕ್ಷ ಜಸ್ಟೀಸ್ ಪೈಯವರು ದೇಶದ ಭವಿಷ್ಯವು ಇಂದಿನ ತರುಣ ವಿದ್ಯಾರ್ಥಿಗಳನ್ನು ಹೊಂದಿಕೊಂಡಿದೆ ನಮ್ಮಲ್ಲಿ ಪ್ರತಿಭಾವಂತರು ವಿಶೇಷವಾಗಿ ಬಡವರಿದ್ದಾರೆ ಕಂಡು ಬರುತ್ತಾರೆ, ಅಂತವರಿಗೆ ಈ ಸೇವೆಯ ಲಾಭ ದೊರೆಯುವಂತಾದ್ದು ಸಂತೋಷ. ಸರಕಾರವು ಶಿಕ್ಷಣಕ್ಕೆ ಸಾಕಷ್ಟು ಸೌಲಭ್ಯವನ್ನು ಒದಗಿಸಿದದ್ದರೆ ನಮ್ಮ ಯೋಜನೆಗಳಿಂದ ಪ್ರಯೋಜನವಾಗದು ಎಂದರು. ಅಂತ್ಯದಲ್ಲಿ ಬೈರೆಕ್ಟರ್ ಶ್ರೀ ಕೆ. ಪಿ. ಜಿ. ಪ್ರಭುಗಳು ಧನ್ಯವಾದಗಳನ್ನರ್ಪಿಸಿದರು.

ಸ್ವತಂತ್ರ ಪಕ್ಷದ— ಕಾರ್ಯಕಾರೀ ಸಮಿತಿಯ ಸಭೆಯು ತಾ. 7—10—61 ರಂದು ಶ್ರೀ ಜಿ ಎಮ್. ಲೋಬೋ ಪ್ರಭುಗಳ ಅಧ್ಯಕ್ಷತೆಯಲ್ಲಿ ಅವರ ಬಾವಟೆಗುಡ್ಡೆ ಬಂಗ್ಲೆಯಲ್ಲಿ ಜರಗಿತು. ಅಧ್ಯಕ್ಷರು ಕರ್ನಾಟಕ ಪ್ರಾಂತೀಯ ಸ್ವತಂತ್ರ ಪಕ್ಷದ ಸಮಿತಿಯಿಂದ ಈ ವರೆಗೆ ಬಂದ ಅರ್ಜಿಗಳಲ್ಲಿ ಈ ಕೆಳಗಿನವರನ್ನು ಚುನಾಯಿಸಿದ್ದಾರಾಗಿ ತಿಳಿಸಿದರು.

ಲೋಕಸಭೆಯ ದಕ್ಷಿಣ ವಿಭಾಗ ಕ್ಷೇತ್ರಕ್ಕೆ—ಶ್ರೀ ಜಿ ಎಮ್. ಲೋಬೊ ಪ್ರಭು, ವಿಧಾನ ಸಭೆಯ ಬೆಳ್ತಂಗಡಿ ಮತದಾರ ಕ್ಷೇತ್ರಕ್ಕೆ ಶ್ರೀ ಕೆ. ಬಿ. ಜೆನ್‌ರಾಜ್ ಹೆಗ್ಡೆ, ಪುತ್ತೂರು, ವಿಟ್ಲ, ಉಪ್ಪಿನಂಗಡಿ, ರೆಸಿನ್ಯೂ ಮತದಾರ ಕ್ಷೇತ್ರಗಳಲ್ಲಿ ಜನರಲ್ ಸೀಟಿಗೆ ಶ್ರೀ ಕೆ. ಉಗ್ರಪ್ಪ ಶೆಟ್ಟಿ, ಪಾಣೆ ಮಂಗಳೂರು ಮತದಾರ ಕ್ಷೇತ್ರಕ್ಕೆ ಡಾ ಕೆ. ಸದಾಶಿವ ಹೆಗ್ಡೆ, ಮಂಗಳೂರು 1ನೇ ಮತದಾರ ಕ್ಷೇತ್ರಕ್ಕೆ ಶ್ರೀಮತಿ ಲೋರಾ ಪ್ಯಾಸ್ ಮಂಗಳೂರು 2ನೇ ಮತದಾರ ಕ್ಷೇತ್ರಕ್ಕೆ ಶ್ರೀ ಯು. ಎ. ನಾಗಪ್ಪ, ಬಾಕಿ ಉಳಿದ ಎಲ್ಲಾ ಮತದಾರ ಕ್ಷೇತ್ರಗಳ ಅರ್ಜಿಗಳು ಪರಿಶೀಲನಾ ನಂತರ ಪ್ರಕಟಿಸಲಾಗುವುದು.

ಮಣಿಪಾಲದಲ್ಲಿ ಮಂತ್ರಿಕರವರ ಕರೆ— ಕೇಂದ್ರದ ಆರೋಗ್ಯ ಸಚಿವರಾದ ಶ್ರೀ ಡಿ ಸಿ. ಕರಮರೆಕರರು ಇದೇ ತಾ. 10ರಂದು ಕಸ್ತೂರ್ಬಾ ಜನರಲ್ ಆಸ್ಪತ್ರೆಯಲ್ಲಿ ಮೆಡಿಕಲ್ ಎಸಿಸ್ಟಾಂಟ್ ಎಂಡ್ ಮೆಡಿಕಲ್ ಟೆಕ್ನೊಲೋಜಿಸ್ಟ್ ಕೋರ್ಸನ್ನು ಉದ್ಘಾಟಿಸಿ ಡಾ. ಟಿ. ಎಂ. ಎ. ಪೈಯವರ ದೂರದರ್ಶಿತ್ವ ಮತ್ತು ಸಂದರ್ಭೋಚಿತ ನವ ಯೋಜನೆಯನ್ನು ಪ್ರಶಂಸಿಸಿದರು. ಎಲ್ಲಾರು ಜ್ಞಾತಿಯ ಪ್ರಸಿದ್ಧ ಶಸ್ತ್ರ ಚಿಕಿತ್ಸಕರಾದ ಡಾ. ಟಿ. ಫೋಮಸ್ ಮತ್ತವರ ಪತ್ನಿ ಡಾ. ಎಲಿಜಬೆತ್ ಫೋಮಸ್ ಎಂ. ಡಿ. ಇವರನ್ನು ಬರಮಾಡಿಸಿ ಅವರ ಮೂಲಕ ಜನತೆಗೆ ಸೇವೆ ಒದಗಿಸಲು ಕೈಕೊಂಡ ಪ್ರಯತ್ನ ಶ್ಲಾಘನೀಯ. ಆಸ್ಪತ್ರೆಗಳು ಇಂತಹ ಶಾಂತ ವಾತಾವರಣದಲ್ಲಿರುವುದು ಒಳ್ಳೆಯದೆಂದರು. ರಕ್ತದಾನ ಚಳವಳದ ಪ್ರಸ್ತಾಪ ಮಾಡುತ್ತಾ ಉಚಿತ ರಕ್ತದಾನದ ಅಭ್ಯಾಸ ನಮ್ಮಲ್ಲಿ ಬೆಳೆಯಬೇಕೆಂದರು ಡಾ. ಫೋಮಸರಿಂದ ನಡೆಸಲಾಗುವ ಫಸ್ಟ್ ಕಾರ್ಡಿಯಾಕ್ ಒಪರೇಶನಿಗೆ ಅಗತ್ಯವಿರುವ ಸಲಕರಣೆಗಳಿಗಾಗಿ ರೂ. 10 ಸಾವಿರದ ಸಾಂಕೇತಿಕ ಸಹಾಯ ನೀಡುವುದಾಗಿ ಹೇಳಿದರು. ಅಂತ್ಯದಲ್ಲಿ ಡಾ. ಎಲಿಜಬೆತ್ ಫೋಮಸರು ಆಭಾರ ಮನ್ನಿಸಿದರು.

ಸ್ಮಾರಕ ಸಮಿತಿ ರಚನೆ—ಶ್ರೀ ಸದ್ಗುರು ನಿತ್ಯಾನಂದ ಸ್ವಾಮಿಯವರ ಸ್ಮಾರಕಾರ್ಥವಾಗಿ ಸಮಾರು ಭಜನಾ ಮಂಡಳಿಯ ಕಟ್ಟಡವನ್ನು ಪುನರ್ನೋಟು ಎಂಬಲ್ಲಿ ರಚಿಸಲ್ಪಟ್ಟ ಶ್ರೀ ಎಸ್. ವೆಂಕಪ್ಪ ರೈಯವರ ಅಧ್ಯಕ್ಷತೆಯಲ್ಲಿ ಸ್ಮಾರಕ ಸಮಿತಿಯನ್ನು ತಾ. 11 ರಂದು ರಚಿಸಲಾಯಿತು. ಈ ಸಮಿತಿಗೆ ಶ್ರೀಗಳಾದ ಟಿ ಡಿ. ಸಂಕಪ್ಪ ರೈ ಅಧ್ಯಕ್ಷ, ಬಿ. ಶ್ರೀಧರ ರೈ ಕಾರ್ಯದರ್ಶಿ, ಬಿ. ಕಿಟ್ಟಣ್ಣ ರೈ ಮತ್ತು ಎಂ ದೇರಣ್ಣ ಗೌಡರು ಕೋಶಾಧಿಕಾರಿಗಳು. ವೈ. ಎಸ್. ತಮ್ಮಣ್ಣ, ಗೋಪಾಲಕೃಷ್ಣ ಕುಂಜುತ್ತಾಯ, ಡಿ. ರಾಮಯ್ಯರೈ ಡಿ. ನಾರಾಯಣ ಶೆಟ್ಟಿ, ಎಂ. ನಾರಾಯಣ, ಚಂದ್ರ ನಾರಾಯಣ ಆಚಾರಿ ಮೊದಲಾದವರು ಸದಸ್ಯರಾಗಿ ಆರಿಸಲ್ಪಟ್ಟರು. ಕಟ್ಟಡದ ಪಂಚಾಗ ಮತ್ತು ಎಲ್ಲಾ ಕಲ್ಲಿನ ಕೆಲಸಗಳನ್ನು ಶ್ರೀ ಎಸ್. ವೆಂಕಪ್ಪ ರೈಯವರು ಉದಾರವಾಗಿ ಮಾಡಿಕೊಡುವುದಾಗಿ ವಾಗ್ದಾನ ವಿತ್ತರು.

ಕಡಿಯೊಳಿ ಹಾ. ಎ. ಶಾಲೆ— ಮತ್ತು ಅದರ ಹಳೆಯ ವಿದ್ಯಾರ್ಥಿ ಸಂಘದ ಸಂಯುಕ್ತ ಆಶ್ರಯದಲ್ಲಿ ತಾ. 15ರಂದು ಸಾಡಪಟ್ಟದ ಕಾರ್ಯಕ್ರಮವು ಸಿಂಡಿಕೇಟ್ ಬೇಂಕಿನ ದಿವಿಜನಲ್ ಮೆನೇಜರ್ ಶ್ರೀ ಎ. ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೆ. ಶ್ರೀಪತಿ ಉಪಾಧ್ಯರು ಸ್ವಾಗತಿಸಿ ಅಧ್ಯಕ್ಷರ ಪರಿಚಯ ಮಾಡಿಕೊಟ್ಟರು. ಹಳೆ ವಿದ್ಯಾರ್ಥಿಸಂಘವು ನಡೆಸಿಕೊಂಡು ಬರುತ್ತಿರುವ ಹಿಂದೀ ವಿಭಾಗದ ವರದಿಯನ್ನು ಪ್ರಧಾನ ಕಾರ್ಯದರ್ಶಿ ಶ್ರೀ ಎಸ್. ಗೋಪಿಚಂದ ರಾವ್ ಇವರು ಸಾದರ ಪಡಿಸಿದರು. ಶ್ರೀ ವಿ. ಗುರುರಾಜ ಭಟ್ಟರು ಸಂದೇಶಗಳನ್ನು ಓದಿದರು. ಅನಂತರ, ಪೈಸೂರು ಹಿಂದೀ ಪ್ರಚಾರ ಸಂಪತ್ತಿನ ಪ್ರಧಾನ ಮತ್ತು ಮಧ್ಯಮ ಮತ್ತು ಪರೀಕ್ಷೆಗಳಲ್ಲಿ ಉತ್ತೀರ್ಣರಾದ 75 ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರಗಳನ್ನೂ ವಿಶೇಷ ಯೋಗ್ಯತೆ ಗಳಿಸಿ ಶೇಗಡೆ ಹೊಂದಿದ ನಾಲ್ವರಿಗೆ ಪಾರಿತೋಷಕಗಳನ್ನೂ ವಿತರಿಸಲಾಯಿತು. ಅಧ್ಯಕ್ಷರು ನಾಡಿದಬ್ಬದ ಪೈಶಿಷ್ಟ್ಯ ಮತ್ತು ವಿಶೇಷತೆಗಳನ್ನೂ ಹಿಂದೀ ಭಾಷೆಯ ಉಪಯುಕ್ತತೆಯನ್ನೂ ವಿವರಿಸಿ ಮಾತನಾಡಿದರು. ಶಾಲೆಯ ಮತ್ತು ಹಿಂದೀ ವಿಭಾಗದ ಮಕ್ಕಳಿಂದ ವಿವಿಧ ವಿನೋದಾವಳಿಗಳು, ಅಧಿಕಾರಕಾ ರಕ್ಷಕಾ ಎಂಬ ಹಿಂದೀ ಮತ್ತು ಮೋಟಾ ಪೈಸವೆಂಬ ಕನ್ನಡ ಏಕಾಂಕಗಳು ಅಭಿನಯಿಸಲ್ಪಟ್ಟವು. ಉತ್ತಮ ಅಭಿನಯ ತೋರಿಸಿದವರಿಗೆ ಶ್ರೀ ಕೆ. ಪ್ರಭಾಕರ ಪೈಯವರು ಬಹುಮಾನಗಳನ್ನು ಹಂಚಿದರು.

ಬೇಲಾಡಿ ಪ್ರಾಥಮಿಕ ಶಾಲೆ— ಯಲ್ಲಿ ಸಾಹಿತ್ಯ ಮತ್ತು ಸಾಂಸ್ಕೃತಿಕೋತ್ಸವದ ಅಂಗವಾಗಿ ಸಾಹಿತ್ಯ ಸಭೆಯೊಂದು ತಾ. 16ರಂದು ಶ್ರೀ ಕೆ. ಎಸ್. ಪದ್ಮನಾಭ ಆಚಾರ್ಯರ ಅಧ್ಯಕ್ಷತೆಯಲ್ಲಿ ನೆರವೇರಿತು. ಶ್ರೀ ಎಸ್. ಗೋಪಿಚಂದ ರಾವ್ ಇವರು 'ಸಾಹಿತ್ಯ ಮತ್ತು ಸಮಾಜ'ವೆಂಬ ವಿಷಯದ ಮೇಲೆ ಲಲಿತವಾಗಿ ಉಪನ್ಯಾಸ ಮಾಡಿದರು ಅಧ್ಯಕ್ಷರು 'ಸಾಹಿತ್ಯಾಭ್ಯಾಸದ ಪ್ರಯೋಜನಗಳು, ಎಂಬುದರ ಕುರಿತಾಗಿ ಮಾತಾಡಿದರು. ಶ್ರೀ ಎ. ಎಂ. ಶೆಟ್ಟಿಗಾರರ ಕಾವ್ಯ ವಾಚನ ಮತ್ತು ಶ್ರೀ ಆಂಬಾತನಯರ 'ಭೂಕೈಲಾಸ'ವೆಂಬ ಹರಿಕಥೆಗಳೂ ನಡೆದುವು. ಪ್ರಾರಂಭದಲ್ಲಿ ಶಾಲೆಯ ಮುಖ್ಯೋಪಾಧ್ಯಾಯ ಶ್ರೀ ಶಂಕರ ನಾರಾಯಣ ಭಟ್ಟರು ಸ್ವಾಗತಿಸಿದರು; ಕೊನೆಯಲ್ಲಿ ಸಾಹಿತ್ಯ ಕಾರ್ಯದರ್ಶಿ ಶ್ರೀ ವಿಟ್ಠಲ ಶೆಟ್ಟರು ಧನ್ಯವಾದಗಳನ್ನು ಅರ್ಪಿಸಿದರು.

ಇಲ್ಲಿ ತಾ 15ರಿಂದ 18ರ ವರೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳು ಕ್ರಮವತ್ತಾಗಿ ನಡೆದುವು. ತಾ. 18ರಂದು ಶಾರದಾ ಪೂಜೆಯ ಮಂಗಳೋತ್ಸವವು ಜರಗಿತು. ಪ್ರತಿ ದಿನವೂ ರಾತ್ರಿಯ ಸಾಹಿತ್ಯ ಸಭೆಯಲ್ಲಿ ಅನೇಕ ಮಹನೀಯರು ಭಾಗವಹಿಸಿದ್ದರು.

ಅನಾವರಣ—ಉದ್ಘಾಟನಾ ಸಮಾರಂಭಗಳು—ಉಡುಪಿಯ ವಿಕ್ಟೋರಿಯಾ ಜುಬಿಲೀ ಯೂನಿಯನ್ ಕ್ಲಬ್ ಮತ್ತು ಉಡುಪಿಯ ಲಯನ್ಸ್ ಕ್ಲಬ್ಬಿನ ಸಂಯುಕ್ತ ಸಮಾರಂಭದಲ್ಲಿ ಇದೇ ತಾ. 17ರಂದು ಮೈಸೂರು ಹೈ ಕೋರ್ಟಿನ ಜಡ್ಜರಾದ ಜಸ್ಟೀಸ್ ಎ. ನಾರಾಯಣ ಪೈಯವರು, ಕೊಚ್ಚಿಕಾರ್ ಬ್ರದರ್ಸರು ದಾನನಾಗಿತ್ತ ದಿ. ಕೊಚ್ಚಿಕಾರ್ ಪದ್ಮನಾಭ ಪೈಯವರ ತೈಲ ಚಿತ್ರದ ಅನಾವರಣವನ್ನೂ, ಶ್ರೀ ಎನ್. ವಿ. ಕಾಮತರು ಸಂಪಾದಿಸಿ, ಪ್ರಕಟಿಸಿದ ಡಾ. ಯು. ಸುಂದರರಾಮ ಪೈಯವರ ಸ್ಮಾರಕ ಸಂಚಿಕೆಯ ಉದ್ಘಾಟನೆಯನ್ನೂ ಡಾ. ಟಿ. ಎಂ ಎ. ಪೈಯವರ ಅಧ್ಯಕ್ಷತೆಯಲ್ಲಿ ನೆರವೇರಿಸಿದರು ಲಯನ್ ಪ್ರೆಸಿಡೆಂಟ್ ಕೆ. ಎಸ್. ಕಾಮತರು ಲಯನ್ಸ್ ಧರ್ಮ ಸಿದ್ಧಾಂತವನ್ನು ಓದಿದರು. ಲಯನ್ ಶ್ರೀ ಟಿ. ಎ. ಪೈಯವರು ಸ್ವಾಗತ ಭಾಷಣ ಮಾಡುತ್ತಾ ದಿವಂಗತ ಕೊಚ್ಚಿಕಾರ್ ಪದ್ಮನಾಭಪೈಗಳ ಮತ್ತು ಡಾ. ಯು ಸುಂದರರಾಮ್ ಪೈಗಳ ಜೀವನಾದರ್ಶ, ಅವರು ಉಡುಪಿಗೆ ಸಲ್ಲಿಸಿದ ಸೇವೆ ಮೊದಲಾದುವನ್ನು ಪ್ರಸ್ತಾಪಿಸಿದರು. ಅಧ್ಯಕ್ಷ ಡಾ. ಟಿ. ಎಂ. ಎ. ಪೈಯವರು ದಿವಂಗತರಾದ ಪೈದ್ವಯರ ಉನ್ನತ ಜೀವನ, ಪ್ರಾಮಾಣಿಕ ವ್ಯಕ್ತಿತ್ವ, ಉಡುಪಿಯ ಬೆಳವಣಿಗೆಗೆ ಅವರ ಅವರ ಅಂಶದಾನ ಮೊದಲಾದುವನ್ನು ವಿವರಿಸಿ ಕ್ಲಬ್ಬುಗಳು ಏರ್ಪಡಿಸಿದ ಈ ಸಮಾರಂಭವು ಶ್ಲಾಘನೀಯವೆಂದರು ಜಸ್ಟೀಸ್ ಎ. ನಾರಾಯಣ ಪೈಯವರು ದಿವಂಗತ ಪೈಗಳಿಬ್ಬರ ಪೂರ್ವಸ್ಮರಣೆಯನ್ನು ಪ್ರಸ್ತಾಪಿಸಿ ಅವರ ಗುಣನಡತೆಗಳನ್ನು ವಿವರಿಸಿ ತಮಗೀಗೌರವ ಸ್ಥಾನ ಕೊಟ್ಟದ್ದಕ್ಕಾಗಿ ಸಂತೋಷ ವ್ಯಕ್ತಪಡಿಸಿದರು. ಅಧ್ಯಕ್ಷರ ಸಮಾರೋಪ ಭಾಷಣದ ಬಳಿಕ ಡಾ. ಸಿ. ಆರ್. ನಾಯಕರು ಧನ್ಯವಾದಗಳನ್ನರ್ಪಿಸಿದರು.

ನಿಜಲಿಂಗಪ್ಪ

ಚುನಾವಣೆಗಳು ಹತ್ತಿರವಾದಂತೆ ಕರ್ನಾಟಕದಲ್ಲಿ ಜತ್ತಿ-ನಿಜಲಿಂಗಪ್ಪ ಸಂಗಡಗಳೂ ಬಲವಾಗತೊಡಗಿವೆ. ಕುರುಕ್ಷೇತ್ರದ ಯುದ್ಧಕ್ಕೆ ಮೊದಲು ಕೌರವ ಪಾಂಡವರು ತಂತಮ್ಮ ಬಲಸಂಘಟನೆಗೆ ಟೊಂಕಕಟ್ಟಿದಂತೆ ಭಾಸವಾಗುತ್ತಿದೆ. ಪ್ರಾದೇಶಿಕ ಕಾಂಗ್ರೆಸ್ಸಿನ ಅಡಿಯಲ್ಲಿರುವ ಜಿಲ್ಲಾ ಕಾಂಗ್ರೆಸ್‌ಗಳೂ ಜತ್ತಿ ಪಕ್ಷಕ್ಕೆ ಬೆಂಬಲ ನೀಡುವವರಿಗೆ ಟಿಕೇಟು ನೀಡಲು ನಿರಾಕರಿಸಿವೆಯೆಂದು ಆರೋಪವೆದ್ದಿದೆ ಚುನಾವಣಾ ಉಪಸಮಿತಿಯಲ್ಲಿ ಜತ್ತಿಯವರ ಮೇಲುಗೈ ಇರುವುದೆಂದು ಹೇಳಲಾಗುತ್ತಿದೆ; ಇದಕ್ಕಾಗಿ ಕೆಳಗಿನಿಂದಲೇ ಹೆಸರು ಕಳಿಸದಿರುವ ಹಂಚಿಕೆಯಿದೆಯೆಂದು ಅನ್ನಲಾಗುತ್ತಿದೆ. ಅದೇನೇ ಇದ್ದರೂ ಕೇಂದ್ರ ಚುನಾವಣಾ ಸಮಿತಿಯ ನಿರ್ಣಯವೇ ಮೌಲ್ಯವಾದುದರಿಂದ, ಅಲ್ಲಿ ಯಾರ ಕೈ ವಾಡವಿದೆಯೆಂಬುದರ ಸಂಚಿನ್ನೂ ಸ್ಫೋಟವಾಗಿಲ್ಲ ಜನತಾ ಸೇವೆ ಸಲ್ಲಿಸುವಲ್ಲಿಯೂ ಉಮೇದ್ವಾರರ ಸಂಖ್ಯೆ-ಅದಕ್ಕಾಗಿ ನಡೆಯುವ ತಾಕಲಾಟವು ಏನನ್ನು ಸೂಚಿಸುತ್ತದೆ?

ವಿದ್ಯಾರ್ಥಿಗಳಿಗೆ ಅತ್ಯುಪಯುಕ್ತ ಪುಸ್ತಕಗಳು

ಸುಲಭದಲ್ಲಿ ಇಂಗ್ಲಿಷ್
(ಆಂಗ್ಲ ಸ್ವಯಂಬೋಧಿನಿ)
ರೂ. 2-00.

ಸುಲಭದಲ್ಲಿ ಪತ್ರಲೇಖನ
Letter Writing Made Easy
ಆಂಗ್ಲ ಪತ್ರವ್ಯವಹಾರ ಬೋಧಿನಿ
ರೂ

ಪುಸ್ತಕ ವಿಮರ್ಶೆ

[ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿ ವಿನಂತಿ. —ಸಂ. ನ.]

ಋಣಯಾತ್ರೆ:— ಬರೆದವರು: "ನಚಿಕೇತ", ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ. ಪುಟಗಳು: ೧೨೪. ಬೆಲೆ: ರೂ. ೧—೫೦.

ಸ್ನೇಹಸ್ಮೃತಿ, ಭಾವಾರ್ಚನೆಗಳೆಂಬ ಕಾದಂಬರಿಗಳಿಂದ ಕನ್ನಡಿಗರಿಗೆ ಪರಿಚಿತರಾದ 'ನಚಿಕೇತ'ರ ಮತ್ತೊಂದು ಕಾದಂಬರಿಯಿದು. ಒಬ್ಬ ಸಾಮಾನ್ಯ ವ್ಯಕ್ತಿಯು ಒಂದು 'ಸಂಸಾರ'ವನ್ನು ಕಾಣುವ ದೃಷ್ಟಿಯನ್ನು ಇಲ್ಲಿ ನಿರೂಪಿಸಲಾಗಿದೆ. ಮೊದಲು ಶ್ರೀಮಂತರಾಗಿದ್ದ ಹೈಮಳ ತಂದೆ ಜೂಜಿನಲ್ಲಿ ಎಲ್ಲವನ್ನೂ ಕಳೆದುಕೊಂಡು ದರಿದ್ರರಾಗುತ್ತಾರೆ. ಹೈಮಾ ಅಧ್ಯಾಪಿಕೆಯಾಗಿ ದುಡಿದು ಗಳಿಸುತ್ತಾಳೆ. ಮುಂದೆ ಯೌವನ ಸಹಜವಾದ ಗುಣ ಭಾವದಿಂದ ಕಾಲೇಜ್ ಹುಡುಗನೊಬ್ಬನ ಪ್ರೇಮಪಾಶಕ್ಕೆ ಬಿದ್ದು ಎಲ್ಲವನ್ನೂ ಕಳೆದುಕೊಳ್ಳುತ್ತಾಳೆ; ದೇಹವನ್ನೂ ಬಿಡುತ್ತಾಳೆ. ಆಕೆಯ ತಂದೆ ಮೊದಲೇ ಪುಸ್ತಕದ ಹುಚ್ಚ. ಈಗ ಪೂರಾ ಹುಚ್ಚನಾಗಿಬಿಟ್ಟ. ಇವರ ಜೀವನವನ್ನು ತಾಗಿ ನೋಡುವ "ನಾನು" (ಕಾದಂಬರಿಯ) ಆತನೊಡನೆ ಆಶ್ಚರ್ಯಕರವಾಗಿಯೇ ಪರಿಚಿತನಾಗುತ್ತಾನೆ: ಜನ್ಮಾಂತರದ ಸ್ನೇಹಿತನಂತಿರುತ್ತಾನೆ. ಕೊನೆಯಲ್ಲಿ ಪೂರ್ವಪುಣ್ಯಾರ್ಜಿತದ ಕರ್ಮಫಲದಿಂದ ಆತಮಿಳು ನಾಡಿನ 'ಹುಚ್ಚ' ಕನ್ನಡ ನಾಡಿಗೆ ಬಂದು 'ನಾನು' ಉಳಿಕೊಂಡ ಹೋಟಲ ಬಾಗಿಲಲ್ಲೇ ಸತ್ತು ಆತನಿಂದಲೇ ಅಂತ್ಯಸಂಸ್ಕಾರ ಪಡೆಯುತ್ತಾನೆ. ಇದೇ ಋಣಯಾತ್ರೆ.

ಕಾದಂಬರಿಯ ಕಥಾವಸ್ತು ಸಾಮಾನ್ಯವೆಂಬಂತಿದ್ದರೂ ಅದನ್ನು ಬಳಸಿಕೊಂಡ ತಂತ್ರ ವೈಶಿಷ್ಟ್ಯಪೂರ್ಣವಾಗಿದೆ. ನಮ್ಮ ಹಿರಿಯರು ಜನ್ಮಾಂತರ ಸಂಚಿತ ಫಲಾಫಲಗಳಿವೆಯೆಂದು ಅನ್ನುತಿದ್ದು, ಅದರ ಪುಷ್ಟಿಯನ್ನಿದು ಮಾಡುತ್ತದೆ. ಇಲ್ಲವಾದರೆ, ಎಲ್ಲೋ ಯೂರೋಪ ಒಬ್ಬ ಹಳೆಯ ಮುದುಕನು ಮದ್ರಾಸಿನಲ್ಲಿ ಓದಬಂದ ಹದಿನೆಂಟರ ಅಪರಿಚಿತ ತರುಣನೊಡನೆ ಸ್ನೇಹ ಬೆಳೆಸುವುದುಂಟೆ? ಇದೇ ಋಣ ಸಂಬಂಧ! ಮುದುಕನ ಆಶಯ ವೇನಿತ್ತು, ಹೈಮಳ ಅಂತರ್ಯವೇನಿತ್ತು, ಅವು ಅಸಫಲಗೊಂಡುದೇಕೆ ಎಂಬ ವಾಚಕರಲ್ಲಿ ಹುಟ್ಟಬಹುದಾದ ಪ್ರಶ್ನೆಗಳಿಗೆ ಸೂಕ್ಷ್ಮವಾದ ಉತ್ತರವು ಕಾದಂಬರಿಯಲ್ಲಿದೆ. "ಪಡೆದಷ್ಟಲ್ಲದೆ ಬರ್ಕುಮೆ?" ಇದೇ "ಋಣಯಾತ್ರೆ"ಯ ಸಂದೇಶ.

ಭಾವಪೂರ್ಣವಾದರೂ ಸರಳ ಶೈಲಿ, ತೃಪ್ತಿಕರವಾದ ಪಾತ್ರಪರಿಪೋಷಣೆ, ಉತ್ತಮವಾದ ಹಾಲು ಕಾಗದದಲ್ಲಿ ಅಂದವಾದ ಮುದ್ರಣ— ಇವು ಅಂತರಂಗ—ಬಹಿರಂಗ ಆಕರ್ಷಣೆಗೆ ಕಾರಣವಾಗಿವೆ. ಶ್ರೀ 'ನಚಿಕೇತ'ರ ಭಾವ ಸೂಕ್ಷ್ಮವನ್ನರಿತುಕೊಳ್ಳಲು ವಾಚಕರು ಪ್ರಯತ್ನಪಟ್ಟರೆ, ಇಷ್ಟಾರ್ಥ ಕೈಗೂಡುವುದು ಖಂಡಿತ.

ಎಳೆಯರ ಗೆಳೆಯ:— (ಮಕ್ಕಳ ಚಿತ್ರಯುಕ್ತ ಕವಿತಾ ಸಂಕಲನ). ಬರೆದವರು: ಶ್ರೀ ರಮಾನಂದ ಬನಾರಿ. ಪ್ರಕಾಶಕರು: ಪ್ರಾಥಮಿಕ ಶಿಕ್ಷಕರ ಭಾರತೀ ಸಾಹಿತ್ಯ ಭಂಡಾರ, (ಯರನಾಳ) ಬಿಜಾಪುರ. ಪುಟಗಳು: ೨೪. ಬೆಲೆ: ರೂ. ೦—೫೦.

ಕರ್ನಾಟಕದ ದಕ್ಷಿಣ ಗಡಿನಾಡು ಕಾಸರಗೋಡು ತಾಲೂಕಿನವರಾದ ಶ್ರೀ ಬನಾರಿಯವರು ತಾವು ಬರೆದಿದ್ದ ೧೭ ಗೀತೆಗಳನ್ನು ಈ ಸಂಗ್ರಹದಲ್ಲಿ ಎಳೆಯರಿಗಾಗಿ ಪ್ರಕಾಶಿಸಿದ್ದಾರೆ. ಹುಣ್ಣಿಮೆ ಚಂದಿರ, ಬಾ ಕೋಗಿಲೆ ಬಾ ಮೊದಲಾದ ನಾಲ್ಕಾರು ಗೀತೆಗಳು ಮಕ್ಕಳ ಭಾವ—ಕಲ್ಪನೆಗಳನ್ನು ವಿಕಸಿಸಲು ನೆರವಾಗುತ್ತವೆ. ತೋಳೆಪೂ ಕುರಿಮರಿಯೂ, ಕಾಗೆಯೂ ಹೊಜೆಯೂ ಹಳೆಯ ಕಥೆಗಳಾಗಿದ್ದು ನೀತಿಬೋಧಕವಿವೆ. ಗಾಂಧಿ ಮತ್ತು ನೆಹರುಗಳ ವ್ಯಕ್ತಿತ್ವ ವಿಶೇಷವನ್ನು ತಿಳಿಸುವ ಎರಡು ಪದ್ಯಗಳು ಪ್ರೌಢವಾಗಿವೆ. ಪ್ರತಿ ಗೀತೆಯಲ್ಲೂ ದ್ರಾಕ್ಷಾಪಾಕ ಮತ್ತು ಸರಳ ಶೈಲಿಗಳು ಎದ್ದುತೋರುತ್ತವೆ. ಒಂದೆರಡೆಡೆ (ಉದಾ: ಪುಟ ೯ರಲ್ಲಿ 'ಹಂಗೆ ಕ್ರೂರತ್ವವ') ಇದಕ್ಕೆ ಅಪವಾದವಿರುವುದಾದರೂ ಅದು ಅಗಣ್ಯ. ಕಾಸರಗೋಡಿನ ಸಹಾಯಕ ವಿದ್ಯಾಧಿಕಾರಿ ಶ್ರೀ ಸಂಜೀವ ಐಲರು ಮುನ್ನುಡಿಯಲ್ಲಿ ಸೂಚಿಸಿದಂತೆ ಶಿಶು ಸಾಹಿತ್ಯ ರಚನೆಯಲ್ಲಿ ಪದಲಾಲಿತ್ಯ, ಸುಲಭ ನೆಲೆಗಳಿಗೆ ಪ್ರಾಶಸ್ತ್ಯವಿತ್ತು ಅರ್ಥಗ್ರಹಣವು ಮಧುರವಾಗಿ ಹಾಡುವಾಗಲೇ ಆಗುವಂತಿರಬೇಕು. ಶ್ರೀ ಬನಾರಿಯವರು ಈ ದಿಸೆಯಲ್ಲಿ ಪರಿಶ್ರಮಪಟ್ಟು ಅತ್ಯುತ್ತಮ ಕೃತಿಗಳನ್ನು ಬರೆದು ಅಭಾವದಿಂದ ತುಂಬಿರುವ ಶಿಶು ಸಾಹಿತ್ಯವನ್ನು ಸಮೃದ್ಧಗೊಳಿಸುವಂತಾಗಲಿ. ಈ ಪುಸ್ತಕದ ಮುದ್ರಣ-ನಿರ್ಮಾಣ ಉತ್ತಮವಾಗಿದೆ.

ಬಲಿದಾನ:— (ಮಕ್ಕಳ ಕಥಾಸಂಕಲನ) ಅನುವಾದಕರು: ಬಾಬಾನಂದ. ಪ್ರಕಾಶಕರು: ಬಾಬು ಚಳ್ಳಮರದ, ವೀರಾಸುರ ರೋಡ, ಹುಬ್ಬಳ್ಳಿ. ಪುಟಗಳು: ೨೮. ಬೆಲೆ: ರೂ. ೦-೩೦.

ಭಾರತ ಹಾಗೂ ವಿದೇಶಗಳ ನೀತಿಯುಕ್ತವಾದ ಹನ್ನೆರಡು ಕಥೆಗಳನ್ನು ಸಂಕ್ಷಿಪ್ತ ರೂಪದಲ್ಲಿ ಈ ಕಿರು ಹೊತ್ತಿಗೆಯಲ್ಲಿ ಪ್ರಕಾಶಿಸಲಾಗಿದೆ. ಬಲಿದಾನ, ತಾಯಿಯ ಹೃದಯ, ಭಾಗ್ಯವಾನ, ವಿಚಿತ್ರ ಕಳ್ಳ, ಲೋಕಾಪವಾದ ಇವು ಉತ್ತಮ ಕಥೆಗಳು. "ಗೌತಮಿಯ ಮಗು" ಎಂಬುದು "ಕಿಸಾ ಗೋತಮಿ"ಯ ಸಾರಾಂಶದಂತಿದ್ದರೂ ತುಸು ವಿವರಣೆ ಬೇಕೆನಿಸುತ್ತದೆ. ಹಾಗೆಯೇ 'ನಾನು ಒಂದು ವಿಷಯನ್ನೂ ಕೊಂಡಿಲ್ಲ'ವೆಂಬುದನ್ನು ಕಿರಿದಾಗಿಸಬಹುದಿತ್ತು. ಇಂತಹ ಸುಟ್ಟ ಲೋಪದೋಷಗಳನ್ನು ಕಡೆಗಣಿಸಬಹುದಾದರೂ ಮಕ್ಕಳ ಕಥೆಗಳಿಗೆ ಮುಖ್ಯವಾದ ಕನ್ನಡಕ್ಕೆ ಹೊಂದಿಕೊಳ್ಳುವ ಸರಳ ಭಾಷೆಯನ್ನು ಬಳಸುವುದು ಅಗತ್ಯವಿತ್ತು. ಕಾಗದ, ಮುದ್ರಣದತ್ತ ತುಸು ಲಕ್ಷ್ಯಹರಿಸಿದ್ದರೆ, ಪುಸ್ತಕದ ಆಕರ್ಷಣೆ ಹೆಚ್ಚುತಿತ್ತು. ಕೊನೆಯಲ್ಲಿ ಬರೆದ "ನನ್ನ ಮಾತು" ಒಂದು ಕಥೆಯಲ್ಲ, ಕೋರಿಕೆಯೆಂದು ಓದಿದ ನಂತರವೇ ತಿಳಿಯುವುದು. ಮುಖಪತ್ರದ ಮೂರು ಪುಟಗಳಲ್ಲಿ ಜಾಹೀರಾತುಗಳು ತುಂಬಿವೆ

ವಿಕಾಸ: (ಸಚಿತ್ರ ಕನ್ನಡ ವಾರ ಪತ್ರಿಕೆ) ಸಂಪಾದಕರು: ಶ್ರೀ ಯು. ವ್ಯಾಸರಾವ್. ವಾರ್ಷಿಕ ಚಂದಾ: ರೂ. ೬-೦೦ ಬಿಡಿ ಸಂಚಿ ಕೆರೂ. ೦-೧೦

ಅನುಭವಿ ಪತ್ರಿಕೋದ್ಯಮಿಗಳಾದ ಶ್ರೀ ವ್ಯಾಸರಾಯರು ಮರಳಿ ಪತ್ರಿಕಾರಂಗಕ್ಕಿಳಿದು 'ವಿಕಾಸ' ವನ್ನು ಪ್ರಕಟಿಸುವ ಯೋಚನೆ ಮಾಡಿದುದು ಸಾಗತಾರ್ಹವಿದೆ. ಜನಹಿತವನ್ನೇ ತನ್ನ ಗುರಿಯಾಗಿಟ್ಟುಕೊಂಡು, ಜನರ ನೇರ ಸಂಪರ್ಕದೊಂದಿಗೆ ಪತ್ರಿಕೋದ್ಯಮದ ಉನ್ನತ ಪರಂಪರೆಯನ್ನು ಸಾಧಿಸುವ ಅದ್ವಿತೀಯ ಗುರಿಯಿಟ್ಟುಕೊಂಡು, ಮಾನವೀಯತೆಯ ಮೇಲೆ ಅಚಲ ವಿಶ್ವಾಸವಿರುವ ತನಕ ನಿರ್ಭೀತ ನಿಷ್ಪಕ್ಷಪಾತ ಲೇಖನಿ ಎಂದಿಗೂ ಮಸಿಯಲಾರದು' ಎಂಬ ಆದರ್ಶ ಘೋಷಣೆಯೊಂದಿಗೆ ತಾ.೧೧ರಂದುಪ್ರಪ್ರಥಮವಾಗಿ ವಿಕಾಸ ಪ್ರಕಾಶಗೊಂಡಿದೆ. ಇವರು ಕಟ್ಟಿಕೊಂಡಿರುವ ಗೆಳೆಯರ ಬಳಗದ ನೆರವಿನಿಂದ ಕನ್ನಡಿಗರ ಸಹಕಾರದಿಂದ ಜನಮನ ವಿಕಾಸ ಮಾಡುವಲ್ಲಿ 'ವಿಕಾಸ'ವು ಸಫಲವಾಗಲಿ ಎಂದು ಹಾರೈಸಿ, ಇದನ್ನು ಸ್ವಾಗತಿಸುತ್ತೇವೆ.

ತೆಂಗಿನ ಬುಲ್ಲೆಟಿನ್— ಎರ್ನಾಕುಳಂನ ಭಾರತದ ಕೇಂದ್ರ ತೆಂಗಿನ ಕಮಿಟಿಯಿಂದ ಪ್ರಕಾಶಗೊಳ್ಳುವ ಈ ಬುಲ್ಲೆಟಿನ್‌ನ ಸ್ವಾತಂತ್ರ್ಯ ದಿನ ವಿಶೇಷ ಸಂಚಿಕೆಯು ಎಂದಿನಂತೆ ಸಂಗ್ರಾಹ್ಯವಿದೆ. ತೆಂಗಿನ ಕೃಷಿಯನ್ನು ಉತ್ತಮಗೊಳಿಸಲು ಮತ್ತು ಕೈಗೆ ಬಂದ ಉತ್ಪತ್ತಿಯನ್ನು ಲಾಭಕರವಾಗಿ ಬಳಸಲು ಹಲವಾರು ಉಪಾಯಗಳು ಈ ಸಂಚಿಕೆಯ ಲೇಖಗಳಲ್ಲಿ ವ್ಯಕ್ತಪಟ್ಟಿದೆ. ವರ್ಣರಂಜಿತ ಮುಖಪತ್ರ ಹಾಗೂ ತೆಂಗಿನ ಕೃಷಿಗೆ ಸಂಬಂಧಿಸಿದ ಒಳಚಿತ್ರಗಳಿಂದ ಸಂಚಿಕೆಯು ಆತ್ಯಾಕರ್ಷಕವಿದೆ. —ಗೋರಾ.

ಪ್ರಣಯ ಮಾದರಿಯಿಂದ ವಿಭಿನ್ನವಾಗಿ,
ಸಮಾಜದ ಸಮಸ್ಯಾನಿರೂಪಣೆ ವಸ್ತುವಾಗಿ,
ಬೆಳಕು ಕಂಡ ನಿತ್ಯನೂತನ ಕಥೆಗಳು!

ಇಂದೇ ನಿಮ್ಮ ಪ್ರತಿಯನ್ನು ಕಾಯ್ದಿರಿಸಿರಿ.

ಕಥಾ ಕೌಮುದಿ

(ಹದಿಮೂರು ವಿಶಿಷ್ಟ ಕಥೆಗಳ ಸಂಕಲನ)

ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

ಬೆಲೆ: ರೂ. ೧—೮—೦ (1=50)

ರೂ. 1=75 ಮುನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಕಳಿಸಬಹುದು.

ಸಿಗುವ ಸ್ಥಳ:
ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.
ನವಭಾರತ ಪುಸ್ತಕ ಭಂಡಾರ ಉಡುಪಿ.
(ನಿಮ್ಮೂರ ಪುಸ್ತಕ ವ್ಯಾಪಾರಿಗಳ್ಳಿಯೂ ವಿಚಾರಿಸಿರಿ)

ಕರ್ನಾಟಕದ ಗಡಿತಂಟೆಗಳು

(ಜನೇ ಪುಟದಿಂದ)

ಕೊಯಮುತ್ತೂರು, ಸೇಲಂ ಜಿಲ್ಲೆಗಳ ಗಡಿಯಲ್ಲಿ ಸುಮಾರು ೩೫೦ ಸಾವಿರ ಜನರೂ ಕರ್ನೂಲು ಜಿಲ್ಲೆಯ ಆಲೂರು ರಾಯದುರ್ಗಗಳಲ್ಲಿ ೧೫೦ ಸಾವಿರ ಮಂದಿಯೂ ಕನ್ನಡ ಮಾತಾಡುತ್ತಾರೆ. ಹೀಗೆ, ಸದ್ಯ ಹೊರನಾಡಿನಲ್ಲಿ ಬವಣೆಯುಣ್ಣುವ ಕನ್ನಡಿಗರ ಸಂಖ್ಯೆ ಸುಮಾರು ೮ ಲಕ್ಷದಷ್ಟಿದೆ. ಎಂದರೆ ಉತ್ತರ ಕನ್ನಡ ಜಿಲ್ಲೆಯ ಜನಸಂಖ್ಯೆಗಿಂತಲೂ ಹೆಚ್ಚು!

ಇನ್ನೊಂದು ಜನರು ಕಳೆದ ಐದು ವರ್ಷಗಳಲ್ಲಿ ಪರಭಾಷಾ ರಾಜ್ಯದಲ್ಲಿನವೆದು ಕಣ್ಣೀರ ಕಡಲಲ್ಲಿ ನನೆಯುತ್ತಿರುವುದು ಕರ್ನಾಟಕ ರಾಜ್ಯಕ್ಕೆ ಭೂಷಣವಲ್ಲ. ಅನ್ಯಾಯದಿಂದ ಬೇರೆ ಭಾಷೆಯವರನ್ನು ನಾವು ನಮ್ಮಲ್ಲಿ ಎಳೆದು ತರಬೇಕಾಗಿಲ್ಲ. ನಮ್ಮ ಬಂಧುಗಳ ಅನಿಷ್ಟಬಂಧನವನ್ನು ಬಿಡಿಸುವುದು ನಮ್ಮ ಸರಕಾರದ ಕರ್ತವ್ಯ. ಪ್ರತಿಯೊಂದನ್ನೂ ಪರ್ಯಾಲೋಚನೆಯಲ್ಲೇ ಪರ್ಯವಸಾನಗೊಳಿಸುವ ನೀತಿಯಿಂದ ಜನತೆಯನ್ನು ಐದು ವರ್ಷಗಳ ಕಾಲ ವಂಚಿಸಿದುದಾಯಿತು. ಇನ್ನೂ ಅದೆಷ್ಟು ವರ್ಷಗಳ ವರೆಗೆಂದು ತಾಳಿರಬೇಕು? ಬಿಡುಗಡೆಯ ನಿರೀಕ್ಷೆಯಲ್ಲಿಯೇ ಬಂಧನದ ಬಿಗಿತ ಬಿಗಿಯಾಗುವುದನ್ನು ಈಗಾಗಲೇ ಕಾಣುತ್ತಿರುವಾಗ ಆ ತಾಳ್ಮೆಗಾದರೂ ಮಿತಿಯಿದ್ದೇ ಇರಬೇಕಾಗುತ್ತದೆ.

ಮಹಾರಾಷ್ಟ್ರದವರು ಗಡಿಯಲ್ಲಿ ನಡೆಸಿದ ಪುಂಡಾಟಿಕೆಗಳ ಪರಿಣಾಮವಾಗಿ ಅಲ್ಲೊಂದು ನಿರುಪಯುಕ್ತ ಕಾಲ ವಿಲಂಬ ಮಾಡುವ ಸಮಿತಿಯೊಂದು ರಚನೆಯಾಯಿತು. ಉಳಿದ ಪ್ರಶ್ನೆಗಳನ್ನೂ ಪ್ರಶ್ನಾರ್ಥಕವಾಗಿಯೆ ಉಳಿದಿವೆ. ಇತ್ತೀಚೆಗೆ ಬೆಂಗಳೂರಲ್ಲಿ ಕೇಂದ್ರ ಗೃಹ ಮಂತ್ರಿಗಳು ಸೌಹಾರ್ದಮಯ ವಾತಾವರಣದ್ದು ಮಹಾರಾಷ್ಟ್ರ ಮತ್ತು ಕರ್ನಾಟಕ ರಾಜ್ಯಗಳು ನಮ್ಮ ಗಡಿತಂಟೆಗಳನ್ನು ಬಗೆಹರಿಸ ಬೇಕೆಂದು ಅಂದಿದ್ದಾರೆ. ಉಳಿದ ಯಾವ ಸಮಸ್ಯೆಗಳೂ ಇಲ್ಲವೆಂದೇ ಅವರು ತಿಳಿದಿರಲೂ ಬಹುದು. ಅಥವಾ ಪುಂಡಾಟಿಕೆಗೆ ತೊಡಗಿದ್ದ ತಿಳಿಗೇಡಿ ಮರಾಠಿಗರನ್ನು ಕುರಿತು ಅವರು ಹೀಗೆ ಮಡಿದಿರಲೂ ಸಾಕು. ಅದೇನೇ ಇದ್ದರೂ ರಾಜ್ಯ ಸರಕಾರ ಕೇಂದ್ರ ಸರಕಾರಕ್ಕೆ ತನ್ನ ನಿಲುವನ್ನು ಸ್ಪಷ್ಟವಾಗಿ ತಿಳಿಸಬೇಕು. ಜಲಮಂತ್ರವನ್ನು ಜಪಿಸುತ್ತ ಜಲಸ್ತಂಭನ ಮಾಡಿದರೆ, ಅಲ್ಲಿಂದ ಹೊರಬರುವಷ್ಟರಲ್ಲಿ ಹೊರನಾಡ ಕನ್ನಡಿಗರೆಲ್ಲರೂ ತಮ್ಮ ಕನ್ನಡ ತನವನ್ನು ಕಳೆದು ಕೊಳ್ಳುವುದು ಖಂಡಿತ.

—ಗೋ. ರಾ.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ.ನ.

ಹಿರಿಯ ಸರಸ್ವತೀ ಮಂದಿರ

ಮುನ್ನೂರ ಇಪ್ಪತ್ತೈದು ವರ್ಷಗಳ ಹಿಂದಿನ ಮಾತು. ಮೆಸಚುಸೆಟ್ಸ್ ವಸಾಹತಿನ ಜನರು ತಾ. ೨೮—೧೦—೧೬೫೫ ರಲ್ಲಿ ಒಂದು ಕಾಲೇಜನ್ನು ತೆರೆಯಲು ೪೦೦ ಪೌಂಡುಗಳನ್ನು ಒಂದುಗೂಡಿಸುವ ನಿರ್ಧಾರ ಮಾಡಿದ್ದರು. ಇಂಗ್ಲಿಷ್ ಮತ್ತು ಅಮೆರಿಕನ್ ಇಂಡಿಯನ್‌ರ ಮಕ್ಕಳಿಗೆ ಜ್ಞಾನದೊಡನೆ ಧಾರ್ಮಿಕ ಶಿಕ್ಷಣವನ್ನೂ ನೀಡಬೇಕು ಎಂಬುದು ಅವರ ಉದ್ದೇಶವಾಗಿತ್ತು.

ಜಾನ್ ಹಾರ್ವರ್ಡ್ ಎಂಬ ಮಹನೀಯರು ಈ ಕಾಲೇಜಿಗೆ ಮೊತ್ತಮೊದಲಾಗಿ ಹಂಚಿಗೆ ನೀಡಿದರು. ಆದುದರಿಂದ ಕಾಲೇಜಿಗೂ ಇವರ ಹೆಸರು ಬಂತು. ಬೋಸ್ಟನ್ ನಗರದಿಂದ ೧೦ ಮೈಲು ದೂರದಲ್ಲಿ ಚಾರ್ಲ್ಸ್ ನದೀ ತೀರದಲ್ಲಿ ಇವರ ಆಸ್ತಿ ಪಾಸ್ತಿಗಳು ಹಾಗೂ ಪುಸ್ತಕಾಲಯ ವಿದ್ದುವು. ಈ ಪುಸ್ತಕ ಭಂಡಾರದಲ್ಲಿ ಮುನ್ನೂರು ಹೊತ್ತಿಗೆಗಳಿದ್ದುವು. ಹಾರ್ವರ್ಡ್‌ರು ಈ ಲೈಬ್ರೆರಿಯನ್ನೂ ತನ್ನ ಅರ್ಧ ಆಸ್ತಿಯನ್ನೂ ಈ ಕಾಲೇಜಿನ ಹೆಸರಲ್ಲಿ ಬರೆದು ಬಿಟ್ಟರು. ಅಂದಿನಿಂದ ಬೆಳೆದು ಬರುತ್ತ ಹಾರ್ವರ್ಡ್ ಕಾಲೇಜು ಇಂದಿಗೆ ಅಮೆರಿಕೆಯ ಹಿರಿಯ ವಿಶ್ವವಿದ್ಯಾಲಯಗಳಲ್ಲಿ ಒಂದಾಗಿದೆ

ಹಾರ್ವರ್ಡ್ ಕಾಲೇಜು ವಿಶ್ವವಿದ್ಯಾಲಯದ ರೂಪ ಪಡೆದುದು. ೧೭೮೦ರಲ್ಲಿ. ದೇಶಾಭಿವೃದ್ಧಿಗೊಂಡಂತೆಯೇ ಇದೂ ಬೆಳೆಯಿತು. 'ಡಾಕ್ಟರೇಟ್ ಆಫ್ ಲಾ' ಪದವಿಯ ಪ್ರಥಮ ಸನ್ಮಾನವನ್ನು ಪಡೆದವನು ಅಮೆರಿಕೆಯ ಪ್ರಥಮ ಅಧ್ಯಕ್ಷ ಜಾರ್ಜ್‌ವಾಶಿಂಗ್‌ಟನ್. ೧೭೭೭ರಲ್ಲಿ ಈ ಪದವೀದಾನವು ನಡೆಯಿತು.

ವಿಶ್ವವಿದ್ಯಾಲಯದ ಮೆಡಿಕಲ್‌ಸ್ಕೂಲ್ ೧೭೮೨ರಲ್ಲಿ ಪ್ರಾರಂಭವಾಯ್ತು. ೧೮೧೯ರಲ್ಲಿ ಧಾರ್ಮಿಕ ವಿಷಯಗಳಲ್ಲಿ ಶಿಕ್ಷಣ ನೀಡಲು ಡಿವೈನಿಟಿ ಸ್ಕೂಲುಗಳು ತೊಡಗಿದುವು ವಿಜ್ಞಾನದ ವಿವಿಧ ವಿಷಯಗಳ ವಿಭಾಗವು ೧೮೫೫ರಲ್ಲಿ ಉದ್ಘಾಟಿತವಾದುವು, ಸ್ತ್ರೀ ಶಿಕ್ಷಣಕ್ಕಾಗಿ ಇದೇ ರೀತಿಯ ರೈಡ್ಕ್ಲಿಫ್ ಕಾಲೇಜನ್ನು ೧೮೭೯ರಲ್ಲಿ ತೆರೆಯಲಾಯ್ತು. ಅನಂತರದ ಇತರ ಸ್ನಾತಕೋತ್ತರ ವಿದ್ಯಾಲಯ ಮತ್ತು ವಿಭಾಗಗಳನ್ನು ಶಾಶ್ವತಗೊಳಿಸಲಾಯ್ತು. ಇಂದು ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿ ೧೦ ವಿಭಾಗಗಳಿವೆ.

ಅಮೆರಿಕೆಯಲ್ಲಿ ಉಚ್ಚ ಶಿಕ್ಷಣ ನೀಡುತ್ತಿರುವ ಸಂಸ್ಥೆಗಳಲ್ಲಿ ಹಾರ್ವರ್ಡ್ ವಿಶ್ವವಿದ್ಯಾಲಯವು ಅತಿ ಪ್ರಾಚೀನವಾಗಿದೆ. ಈ ವಿದ್ಯಾಲಯವು ಅಮೆರಿಕೆಯ ರಾಜನೀತಿ ಮತ್ತು ಶಿಕ್ಷಣ ವ್ಯವಸ್ಥೆಯ ಮೇಲೆ ಗಂಭೀರವಾದ ಪ್ರಭಾವ ಬೀರಿದೆ. ಅಮೆರಿಕೆಯ ಅಧ್ಯಕ್ಷರುಗಳಾಗಿದ್ದ ಜಾನ್ ಆಡಮ್ಸ್, ಜಾನ್ ಕ್ವಿನ್ಸಿ, ರೆಡರ್ ಫೋಡ್ ಬಿ. ಹೆಜ್. ಥಿಯೋಡೋರ್ ರೂಜ್‌ವೆಲ್ಟ್, ಫ್ರೇಂಕ್‌ಲಿನ್ ಡಿ. ರೂಜ್‌ವೆಲ್ಟ್ ಮತ್ತು ಈಗಿನ ಅಧ್ಯಕ್ಷ ಜಾನ್ ಎಫ್. ಕೆನ್ನೆಡಿಯವರು ಇಲ್ಲಿನ ವಿದ್ಯಾರ್ಥಿಗಳಾಗಿದ್ದರು.

ಅಧ್ಯಕ್ಷ ಕೆನ್ನೆಡಿಯರ ಮಂತ್ರಿಮಂಡಳದ ಹತ್ತರಲ್ಲಿ ನಾಲ್ವರು ಸದಸ್ಯರು ಹಾರ್ವರ್ಡ್, ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಾಗಿದ್ದಾರೆ. ಇಲ್ಲಿನ ಹೆಚ್ಚಿನ ಪ್ರೊಫೆಸರ್ ಮತ್ತು ಸ್ನಾತಕರು ಅಧ್ಯಕ್ಷರ ಸಹಾಯಕರಾಗಿ ಅಥವಾ ಮುಖ್ಯ ಸಲಹೆಗಾರರಾಗಿ ದುಡಿಯುತ್ತಾರೆ. ಭಾರತದಲ್ಲಿರುವ ಅಮೆರಿಕೆಯ ರಾಯಭಾರಿ ಜಾನ್‌ಗೇಲ್‌ಬ್ರೈಥ್‌ರವರೂ ಈ ವಿದ್ಯಾಲಯದಲ್ಲಿ ಕಲಿಸುತ್ತಿದ್ದಾರೆ.

ಸಾಹಿತ್ಯ ಕ್ಷೇತ್ರದಲ್ಲಿ ಹೆಸರಾಂತ ವಿದ್ಯಾರ್ಥಿಗಳೂ ಹಾರ್ವರ್ಡ್ ವಿಶ್ವವಿದ್ಯಾಲಯದಿಂದ ಹೊರಬಂದಿದ್ದಾರೆ. ರಾಲ್ಫ್ ವಾಲ್ಡೋ ಎಮರ್ಸನ್, ಹೆನ್ರಿ ಡೇವಿಡ್ ಥೋರೊ, ಹೆನ್ರಿ ಲೋಂಗ್ ಫೆಲೊ, ಎಡ್ವಿನ್ ಎ. ರೋಬಿನ್‌ಸನ್. ರಾಬರ್ಟ್ ಫ್ರೋಸ್ಟ್, ಟಿ. ಎಸ್ ಈಲಿಯಟ್ ಮತ್ತು ಜೋನ್ ಉಸ್‌ಪೈಸರ್‌ರವರು ಇಂತಹ ಖ್ಯಾತನಾಮಿ ಸಾಹಿತ್ಯಕರಲ್ಲಿ ಅಗ್ರಗಣ್ಯರು.

ಯುಜೀನ್ ಓನೀಲ್, ಥೋರ್ನ್‌ಟನ್ ಬಟ್ಲರ್ ಮೊದಲಾದ ನಾಟಕಕಾರರು ಹಾರ್ವರ್ಡ್ ವಿಶ್ವವಿದ್ಯಾಲಯದ ನಾಟ್ಯ ಶಿಕ್ಷಣ ಶಾಲೆಯಲ್ಲಿ ಪ್ರತಿಕ್ಷಣವನ್ನು ಪಡೆದಿದ್ದರು. ಅಮೆರಿಕೆಯ ಸರ್ವೋಚ್ಚ ನ್ಯಾಯಾಲಯದ ಹೆಚ್ಚಿನ ನ್ಯಾಯಾಧೀಶರು, ನೋಬೆಲ್ ಪಾರಿತೋಷಕ ವಿಜೇತರು, ಪ್ರಸಿದ್ಧ ವೈಜ್ಞಾನಿಕರು, ಕೂಟ ನೀತಿಜ್ಞರು ಮತ್ತು ಶಿಕ್ಷಣ ಶಾಸ್ತ್ರಿಗಳು ಹಾರ್ವರ್ಡ್ ವಿಶ್ವವಿದ್ಯಾಲಯದಿಂದ ಸ್ನಾತಕ ಪರೀಕ್ಷೆಯನ್ನು ಪಾಸು ಮಾಡಿಕೊಂಡಿದ್ದಾರೆ

ಆದರೆ, ಈ ವಿಶ್ವವಿದ್ಯಾಲಯದ ಶ್ರೇಷ್ಠತೆ ಅಲ್ಲಿ ಕಲಿಯುತ್ತಿರುವ ೧೨ ಸಾವಿರ ವಿದ್ಯಾರ್ಥಿಗಳು, ೪,೪೦೦ ಅಧ್ಯಾಪಕರು ಮತ್ತು ಇಲ್ಲಿ ಕಲಿತುಹೋದ ಅನೇಕ ಮಹಾ ವ್ಯಕ್ತಿಗಳಿಂದ ಬಂದಿಲ್ಲ. ಪ್ರಸಂಚದ ಪುಸ್ತಕಾಲಯಗಳಲ್ಲಿ ಇಲ್ಲಿನದು ಅತಿ ದೊಡ್ಡದಾಗಿ ೬೫ ಲಕ್ಷ ಪುಸ್ತಕಗಳಿಂದ ಕೂಡಿದೆಯೆಂಬುದರಿಂದಲೂ ಇದು ಹೆಸರು ಪಡೆದಿಲ್ಲ. ಅಲ್ಲಿ ನೀಡಲಾಗುತ್ತಿರುವ ಶಿಕ್ಷಣವೇ ಇದಕ್ಕೆ ಕೀರ್ತಿಯನ್ನು ತಂದುಕೊಟ್ಟಿದೆ.

ಹಾರ್ವರ್ಡ್‌ನಲ್ಲಿ ನೀಡುವ ವಿದ್ಯೆಯಲ್ಲಿ ವ್ಯಕ್ತಿಗೆ ವಿಶೇಷ ಮಹತ್ವವನ್ನು ನೀಡಲಾಗುತ್ತಿದೆ. ಬಾಹ್ಯ ವೀಕ್ಷಣೆಯಿಂದಲೇ ಅತನನ್ನು ಗುರುತಿಸುವುದಿಲ್ಲ. ಸಾಮಾನ್ಯ ಶಿಕ್ಷಣವನ್ನು ವಿಶೇಷ ರೂಪದಿಂದ ಇಲ್ಲಿ ಕೊಡುತ್ತಾರೆ. "ಇಲ್ಲಿ ವಕೀಲ, ಡಾಕ್ಟರ್, ಶಿಕ್ಷಕ ಹಾಗೂ ವ್ಯವಸಾಯಮಾಡುವಂತೆ ಶಿಕ್ಷಣ ನೀಡುವುದಿಲ್ಲ. ಸಂಪೂರ್ಣ ಮಾನವನಾಗಲು ಯೋಗ್ಯವಾದ ಕಂಬೇತಿ ನೀಡಲಾಗುತ್ತಿದೆ. ಎಂಬುದು ಯಥಾರ್ಥವಿದೆ.

ಹಾರ್ವರ್ಡ್ ವಿಶ್ವವಿದ್ಯಾಲಯವು ಶತಮಾನಗಳಿಂದ ಸತ್ಯ ಶೋಧನೆಯ ಉದ್ದೇಶವನ್ನು ಸಾಧಿಸುತ್ತಿದೆ. ಇಲ್ಲಿ ಸತ್ಯ ವನ್ನು ದೊರೆಯುವುದಿಲ್ಲ; ಸತ್ಯ ಶೋಧನೆ ಮಾತ್ರ ಇಲ್ಲಿದೆ.

—"ಅಮೆರಿಕನ್ ರಿಪೋರ್ಟರ್"

ಪಾಟಿಯಾಳದಲ್ಲಿರುವ ರಾಷ್ಟ್ರೀಯ ಆಟಿಟಿಟಗಳ ಸಂಸ್ಥೆಯ ಪುನರ್ಘಟಿತ ಆಡಳಿತ ಸಮಿತಿಯ ಪ್ರಥಮ ಸಭೆ ಜರಗಿದಾಗ ತೆಗೆದ ಚಿತ್ರವಿದು

ಸಂಭಾವಿತರು ಯಾರಿವರು?

(ಇದೇ ಪುಟದಿಂದ)

ದಲ್ಲಿ ಸದುದ್ದೇಶವನ್ನು ಕಂಡುಕೊಳ್ಳುವವನಿರುವನು.

ಅತ ತನ್ನ ಚರ್ಚೆ, ವಿವಾದಗಳಲ್ಲಿಂದೂ ಕೇಳು ಭಾವನೆಯಿಂದಿರುವುದಿಲ್ಲ. ಯಾವಾಗಲೂ ಸರಿಯಲ್ಲದ — ಧರ್ಮವಲ್ಲದ ಲಾಭವನ್ನು ತೆಗೆದುಕೊಳ್ಳುವವನಲ್ಲ. ಎಂದೂ ವ್ಯಕ್ತಿಗಳನ್ನು ತಪ್ಪು ತಿಳಿದುಕೊಳ್ಳುವವನಲ್ಲ. ವಿವಾದದಲ್ಲಿ ತೀಕ್ಷ್ಣವಾದ ಭಾಷೆ ಮಾತುಗಳನ್ನಾಡುವವನಲ್ಲ. ಎದುರಿಗೆ ಹೇಳಲಾಗದ ಕಟ್ಟಿದ್ದನ್ನು ಮೆಲ್ಲಗೆ ನುಸುಳಿಸುವವನಿರುವುದಿಲ್ಲ. ಮುಂದೆ ಎಂದಾದರೂ ಸ್ನೇಹಿತರಾಗುವರೊ? ಏನೋ? ಎಂಬ ದೂರದೃಷ್ಟಿ ಹೊಂದಿರುವರಿದ್ದು ಅವನೆಂದೂ ವೈರಿಗಳೊಂದಿಗೆ ಹಗೆತನವನ್ನು ಬೆಳೆಸುವವನಲ್ಲ

ಮುಖಭಂಗ, ಅವಮಾರ್ಯದೆ ಹಾಗೂ ಚುಚ್ಚು ನುಡಿಗಳನ್ನು ಅತ ಒಳ್ಳೆಯ ದೃಷ್ಟಿಯಿಂದ ನೋಡುವವನೂ. ಗಾಯ ಮಾಡಿದಾತನನ್ನು ಪ್ರತಿಯಾಗಿ ಹಿಂಸಿಸುವದನ್ನು ಮರೆಯುವವನೂ, ಹಗೆ ತೀರಿಸಿಕೊಳ್ಳುವ ವಿಚಾರದಲ್ಲಿ ಸಂಪೂರ್ಣ ಜಡತೆಯಿಂದಿರುವವನೂ ಇದ್ದಾನೆ.

ಅತ ಬಸು ನಿಧಾನಿ, ಕಷ್ಟ ಸಹಿಷ್ಣು, ತ್ಯಾಗ ಶೀಲ, ತಪ್ಪಿಸಿಕೊಳ್ಳಲಾಗದ ನೋವು, ಸರಿಪಡಿಸಲಾಗದ ವಿಯೋಗ, ವಿಧಿಯ ಕೊನೆ ಹಂತವಾದ ಮರಣ ಇವುಗಳಿಗೆ ಸಂತೋಷದಿಂದ ಸಂಯಮದಿಂದ ತಲೆ ಬಾಗುತ್ತಾನೆ.

ವಿವಾದಗಳಲ್ಲಿ ಅತನ ಮಾತು-ಕೃತಿ ಮೊಂಡಾದ ಶಸ್ತ್ರಾಂತರದೆ ಮೊನಚಾಗಿದ್ದು ಚರ್ಚೆಯ ಅಂಶಗಳಿಗೆ ಪ್ರಾಮುಖ್ಯ ಕೊಟ್ಟು ಸಣ್ಣ ಸಣ್ಣ ಕ್ಷುಲ್ಲಕ ನುಡಿಗಳಿಗೆ ಗಮನವೀಯದೆ—ಶಕ್ತಿಯನ್ನು ಅಪರಲ್ಲಿ ವ್ಯರ್ಥಮಾಡದೇ, ತನ್ನ ಅಭಿಪ್ರಾಯ ಸರಿಯೇ ಇರಲಿ, ತಪ್ಪೇ ಇರಲಿ ಸರಿಯೊಗಿ ಸರಳವಾಗಿ ಸ್ವಲ್ಪದರಲ್ಲಿ ಅರ್ಥವಾಗುವಂತೆ ಹೇಳಲು ಶಕ್ತನಿದ್ದು ತನ್ನ ನಿಲುವಿನ ಬಗೆ ಇತರರಿಂದ ಬರುವ ಸಕಲ ಅಭಿಪ್ರಾಯಗಳನ್ನು ಕೂಲಂಕಷವಾಗಿ ಯೋಚಿಸುವವನಿರುತ್ತಾನೆ.

ಒಳ್ಳೆಯವರೆನಿಸಿಕೊಳ್ಳಲು ಬೇಕಾದ ಈ ಎಲ್ಲ ಮೂಲ ನಡತೆಗಳು ಎಲ್ಲ ಮನುಷ್ಯನಲ್ಲೂ ಸಿಗುವುದು ಕಷ್ಟ.

ಮಾತಾಡುತ್ತಿರುವಾಗ ಆ ಸ್ಥಳದಲ್ಲಿರುವ ಮೂರನೆಯವರ ವಿಷಯ ಎಂದಾಗ ಎಂದೂ ಅತನ ಬಗ್ಗೆ ಒಳ್ಳೆಯವರು ಕೆಟ್ಟ ಮಾತಾಡಬಾರದು. ಅವರ ಸ್ವಾನತೆಗಳ ಸ್ಥಿತಿ ಎತ್ತಿ ಆಡಬಾರದು. ಅತನ ಗೌರವ—ಹೆಸರನ್ನು ಕೆಳಗಿಳಿಸುವ ಸಣ್ಣ ಸಣ್ಣ ಮಾತುಗಳಾಡ ಬಾರದು.

ಕೊನೆಯದಾಗಿ, ಮಾನವನಿಗಾಗಿಯೇ ದೇವರು ಕೊಟ್ಟ ಪ್ರತಿಭೆ—ಕಷ್ಟಗಳನ್ನು ಸುಲಭವಾಗಿ ತೆಗೆದುಕೊಳ್ಳುವ ಶ್ರೇಷ್ಠ ಗುಣ ಎಲ್ಲರಿಗೂ ದೊರಕುವಂತಹುದಲ್ಲ.

ಲೆಕ್ಕವಿಲ್ಲದಷ್ಟು 'ಒಳ್ಳೆಯವ'ರಿಗೆ ಪ್ರಕೃತಿ ಸಹಜವಾಗಿ ಬಂದ ಉತ್ತಮ ಗುಣ ನಡತೆಗಿಂತಲೂ ಬೆಳೆಸಿಕೊಂಡ, ಔಪಚಾರಿಕ, ಕಂಡುಹಿಡಿಯಲಾಗದ ಕೃತ್ರಿಮ ನಡತೆಗಳೇ ಆ ಬಿರುದನ್ನು ಕೊಟ್ಟಿರುವುದಾಗಿದೆ.

(ಆಧಾರದಿಂದ)

ಪುತ್ತೂರು ಡಿ. ಮು. ಕೋರ್ಟಿನಲ್ಲಿ

O. S. No. 90/1961

ಲಿಂಗಪ್ಪ ವಗೈರೆರು —ವಾದಿರು.

ಮಂಜಪ್ಪ ಪೂಜಾರಿ ವಗೈರೆರು —ಪ್ರತಿವಾದಿರು.

12ನೇ ಪ್ರತಿವಾದಿ ದಾರಿಜ ಕುಂಞಕ್ಕಿ ಮಗಳು. ಪುತ್ತೂರು ತಾಲೂಕು ಕುದ್ಮಾಲು ಗ್ರಾಮದ ಬರೆಕಾಡಿ.

37ನೇ ಪ್ರತಿವಾದಿ ನಾರಾಯಣ ಉಮ್ಮಕ್ಕಿ ಮಗ. ಹಾಸನ ಜಿಲ್ಲಾ ಮಂಜ್ರಾಲಾಪೌ ತಾಲೂಕು ಕಲ್ಲಹಳ್ಳಿಯಲ್ಲಿ.

40ನೇ ಪ್ರತಿವಾದಿ ಗುಡ್ಡಪ್ಪ. 41ನೆ ಪ್ರತಿವಾದಿ ಬಾಲಕ್ಕ. 12ನೆ ಪ್ರತಿವಾದಿ ಗಿರಿಜ. ಗಗ್ಗಮ್ಮನ ಮಕ್ಕಳು. ಪುತ್ತೂರು ತಾಲೂಕು ಮುರುಳ್ಳ ಗ್ರಾಮದ ಅಲೆಕ್ಕಾಡಿ.

—ಇವರಿಗೆ ತಿಳಿಸುವುದೇನೆಂದರೆ

ಕುಟುಂಬದ ಆಸ್ತಿಯಲ್ಲಿ ತಮಗೆ ಸಿಕ್ಕತಾದ ಹಿಸೆಯ ಆಸ್ತಿಯನ್ನು ಸ್ವಾಧೀನಪಡಿಸಬೇಕೆಂತ ವಗೈರೆ ವಾದಿರು ಮಾಡಿದ ದಾವೆಯು ತಾ. 7—11—61ಕ್ಕೆ ಇರುವುದರಿಂದ ನಿಮಗೇನಾದರೂ ಅಕ್ಷೇಪಣೆ ಇದ್ದ ಆ ದಿವಸ ಉದಯಸಿಸಿಕೊಳ್ಳತಕ್ಕದ್ದು. ತಪ್ಪಿದರೆ ನಿಮ್ಮ ಗೈರು ಹಾಜರಿಯಲ್ಲಿ ತೀರ್ಮಾನಿಸಿದೀತು.

B Chidananda Rao
Vakil for plaintiff.

ಪುತ್ತೂರು, ತಾ. 5—10—61

ಕೂಡಿದೆಯೆಂಬುದರಿಂದಲೂ ಇದು ಹೆಸರು ಪಡೆದಿಲ್ಲ. ಅಲ್ಲಿ ನೀಡಲಾಗುತ್ತಿರುವ ಶಿಕ್ಷಣವೇ ಇದಕ್ಕೆ ಕೀರ್ತಿಯನ್ನು ತಂದುಕೊಟ್ಟಿದೆ.

ಪುತ್ತೂರು. ಡಿ. ಮು. ಕೋರ್ಟಿನಲ್ಲಿ

O. S. 56/61

ಬಿ. ರಮಾನಾಥ ಪೈ. —ವಾದಿ.

ಬಿ. ರಾಘವೇಂದ್ರ ಪೈ ವಗೈರೆರು:-ಪ್ರತಿವಾದಿರು

2ನೇ ಪ್ರತಿವಾದಿ ಬಿ. ಮುಕುಂದ ಪೈ- ಕೃಷ್ಣ ಪೈಗಳ ಮಗ ಇಂಜಿನಿಯರ್, ಭಲ್ಯ ದಾಯಸ್ಥರ ಜಿಲ್ಲೆ ಮಾಳ್ಪ ದೇಶ:-ಇವರಿಗೆ ತಿಳಿಸುವುದೆನೆಂದ್ರೆ

ವಾದಿಯು ರಿಕ್ಲೇಶನ್ ಮತ್ತು ಇಂಜಿಕ್ಷನ್ ವಗೈರೆ ನಿವೃತ್ತಿಗಳ ಬಗ್ಗೆ ದಾಕಲು ಮಾಡಿದ ಈ ದಾವೆಯು ತಾ. 23-10-61 ಕ್ಕೆ ಇರುವುದರಿಂದ ನಿಮಗೇನಾದರೂ ಅಕ್ಷೇಪಣೆ ಇದ್ದಲ್ಲಿ ಆ ದಿವಸ ಉದಯಸಿಸಿಕೊಳ್ಳತಕ್ಕದ್ದು ತಪ್ಪಿದರೆ ನಿಮ್ಮ ಗೈರು ಹಾಜರಿಯಲ್ಲಿ ತೀರ್ಮಾನಿಸಲಾದೀತು.

ಬಿ. ಚಿದಾನಂದರಾವ್
ವಾದಿಯ ವಕೀಲ

ಪುತ್ತೂರು, ತಾ 6-10-61

ಪ್ರಾಥಮಿಕ ಶಿಕ್ಷಣದ ಪ್ರಗತಿ

"……ಎಲ್ಲಿಯೂ ವಿದ್ಯಾಭ್ಯಾಸವೇ ಮೂಲಾಧಾರವಾಗಿದೆಯೊಡುದರಿಂದ ಅದರ ಪ್ರಗತಿಗೆ ಯಾವ ರೀತಿಯಲ್ಲೂ ಧಕ್ಕೆಯುಂಟಾಗಬಾರದು ಎಂಬ ಅಭಿಪ್ರಾಯಕ್ಕೆ ನಾನು ಬಂದಿದ್ದೇನೆ. ಇದು ನನ್ನ ದೃಢ ನಂಬಿಕೆಯೂ ಹೌದು. ಆದುದರಿಂದ ಈ ವಿಚಾರದಲ್ಲಿ ಅವಶ್ಯಕ ಸಿದ್ಧತೆಗಳಿಗೆ ನಾವು ಕೈಹಾಕಬೇಕು... ವಿದ್ಯಾಭ್ಯಾಸದ ವಿಸ್ತರಣೆಗೆ ನಮ್ಮ ಕೈಲಾದ ಪ್ರಯತ್ನ ನಡೆಸಬೇಕು ಮತ್ತು ನಾಡಿಗೆ ಕೊಟ್ಟಿರುವ ಭರವಸೆಯನ್ನು ನಾವು ಈಡೇರಿಸಿ ಕೊಡಬೇಕು".

—ಜವಾಹರಲಾಲ್ ನೆಹರೂ.

ಕಡ್ಡಾಯ ಶಿಕ್ಷಣ ಯೋಜನೆ ಪ್ರಕಾರ 6ರಿಂದ 11 ವರ್ಷ ವಯಸ್ಸಿನ 496 ಲಕ್ಷ ಜನ ಮಕ್ಕಳಿಗೆ 1965ರ ಹೊತ್ತಿಗೆ ಪ್ರಾಥಮಿಕ ವಿದ್ಯಾಭ್ಯಾಸ ದೊರಕುತ್ತದೆ.

14 ವರ್ಷ ವಯಸ್ಸಿನ ಮಿತಿಗೊಳಪಟ್ಟಿರುವ ಮಕ್ಕಳಿಗೆ ಕಡ್ಡಾಯವಾಗಿ ವಿದ್ಯಾಭ್ಯಾಸ ಒದಗಿಸುವಂತೆ ಭಾರತದ ರಾಜ್ಯಾಂಗವು ಸೂಚಿಸಿದೆ. ಈ ಸೂಚನೆಯ ಆಧಾರದ ಮೇಲೆ ಜಾರಿಗೆ ಬಂದಿರುವ ಯೋಜನೆಯನ್ನು ಜಾರಿಗೆ ತರಲು ಅದನ್ನು ಎರಡು ಘಟ್ಟಗಳಾಗಿ ವಿಂಗಡಿಸಿಕೊಳ್ಳಲಾಗಿದೆ.

6 ಮತ್ತು 11 ವರ್ಷ ವಯಸ್ಸಿನ ಅಂತರದಲ್ಲಿರುವ ಮಕ್ಕಳಿಗೆ ಉಚಿತ ವಿದ್ಯಾಭ್ಯಾಸವನ್ನು ಒದಗಿಸುವ ಕಾರ್ಯಕ್ಕೆ ಪ್ರಥಮ ಗಮನವನ್ನು ಕೊಡಲಾಗುವುದು. 1966ರ ನಂತರ 11 ಮತ್ತು 14 ವರ್ಷ ವಯಸ್ಸಿನ ಅಂತರದಲ್ಲಿರುವ ಮಕ್ಕಳಿಗೂ ಈ ರೀತಿಯ ಕಡ್ಡಾಯ ಶಿಕ್ಷಣ ದೊರಕುವಂತೆ ಮಾಡಲಾಗುವುದು.

153 ಲಕ್ಷದಷ್ಟು ಹೆಚ್ಚು ಜನ ಮಕ್ಕಳಿಗೆ ಶಾಲೆಗಳಿಗೆ ಸೇರಿಸುವ ಕಾರ್ಯ ಈಗ ನಡೆಯುವುದಲ್ಲದೆ ಪ್ರಾಥಮಿಕ ಶಿಕ್ಷಣವನ್ನು ಒದಗಿಸುವುದಕ್ಕಾಗೆಂದೇ 200 ಕೋಟಿ ರೂ ಗಳನ್ನು ವೆಚ್ಚ ಮಾಡಲಾಗುವುದು. ಪ್ರಥಮ ಯೋಜನೆಯ ಕಾಲದಲ್ಲಿ ಕೇವಲ 85 ಕೋಟಿ ರೂ.ಗಳನ್ನೂ ದ್ವಿತೀಯ ಯೋಜನೆ ಕಾಲದಲ್ಲಿ ಕೇವಲ 92 ಕೋಟಿ ರೂ.ಗಳನ್ನೂ ಪ್ರಾಥಮಿಕ ವಿದ್ಯಾಭ್ಯಾಸಕ್ಕೆಂದು ಒದಗಿಸಲಾಗಿತ್ತು ಎಂಬುದನ್ನು ಈ ಸಂದರ್ಭದಲ್ಲಿ ನೆನಪಿಗೆ ತಂದುಕೊಳ್ಳಬಹುದಾಗಿದೆ.

6 ಮತ್ತು 11 ವರ್ಷ ವಯಸ್ಸಿನ ಅಂತರದ ಮಕ್ಕಳಿಗೆ ಒದಗಿಸಲಾಗುವ ಶಿಕ್ಷಣಕ್ಕೆ ವಿನಿಯೋಗಿಸುವ ಹಣದ ಪ್ರಮಾಣ ಶಿಕ್ಷಣದ ಇತರ ಎಲ್ಲಾ ಬಾಬುಗಳಿಗಿಂತ ಹೆಚ್ಚಿದೆ.

ಹೆಚ್ಚು ಹೆಚ್ಚು ಮಕ್ಕಳನ್ನು ಶಾಲೆಗಳಿಗೆ ಆಕರ್ಷಿಸುವ ಸರ್ಕಾರದ ಪ್ರಯತ್ನ ಸ್ವಾತಂತ್ರ್ಯ ಪ್ರಾಪ್ತಿಯ ತರುವಾಯ ಕ್ರಮೇಣ ಹೆಚ್ಚು ಹೆಚ್ಚು ಫಲಕಾರಿಯಾಗುತ್ತಿದೆ. ಪ್ರಥಮ ಸಂಜವಾರ್ಷಿಕ ಯೋಜನೆಯ ಆರಂಭಕಾಲದಲ್ಲಿ ಪ್ರಾಥಮಿಕ ಶಾಲೆಗಳಿಗೆ ಹೋಗುತ್ತಿದ್ದ ವಿದ್ಯಾರ್ಥಿಗಳ ಸಂಖ್ಯೆ 191 ಲಕ್ಷದಷ್ಟಿತ್ತು. ಯೋಜನೆಯ ಅವಧಿಯ ಕೊನೆ ಹೊತ್ತಿಗೆ ಈ ಸಂಖ್ಯೆ 245 ಲಕ್ಷದಷ್ಟಾಯಿತು. ದ್ವಿತೀಯ ಯೋಜನೆಯ ಕೊನೆ ಹೊತ್ತಿಗೆ ಶಾಲಾ ಮಕ್ಕಳ ಸಂಖ್ಯೆ 343 ಲಕ್ಷದಷ್ಟಿತ್ತು. ಈ ಸಂಖ್ಯೆ ಈ ವರ್ಗಕ್ಕೆ ಸೇರಿದ ಒಟ್ಟು ಮಕ್ಕಳ ಸಂಖ್ಯೆಯಲ್ಲಿ ಶೇ. 61 ರಷ್ಟು ಎಂದು ಅಂದಾಜು ಮಾಡಲಾಗಿದೆ.

ಶಿಕ್ಷಕರ ತರಬೇತಿ ಕಾರ್ಯಕ್ರಮ

ಕಡ್ಡಾಯ ಶಿಕ್ಷಣ ಯೋಜನೆಯನ್ನು ಶೀಘ್ರವಾಗಿ ಕಾರ್ಯಗತ ಮಾಡುವ ದೃಷ್ಟಿಯಿಂದ ಪ್ರತಿವರ್ಷ 150,000 ಜನ ಪ್ರಾಥಮಿಕ ಶಾಲಾ ಉಪಾಧ್ಯಾಯರನ್ನು ಸಿದ್ಧಗೊಳಿಸಲಾಗುತ್ತದೆ. ದ್ವಿತೀಯ ಯೋಜನೆಯ ಕೊನೆಯ ಎರಡು ವರ್ಷಗಳ ಅವಧಿಯಲ್ಲಿ ಶಿಕ್ಷಕರ ತರಬೇತಿ ಕಾರ್ಯಕ್ರಮಗಳನ್ನು ತ್ವರಿತವಾಗಿ ಕೈಗೊಳ್ಳಲು ರಾಜ್ಯ ಸರಕಾರಗಳಿಗೆ ಕೇಂದ್ರ ಸರ್ಕಾರವು ನೂರಕ್ಕೆ ನೂರು ಪಾಲು ನೆರವು ನೀಡಿದೆ.

1950ರಲ್ಲಿ ಪ್ರಾಥಮಿಕ ಶಾಲೆಗಳಿಗೆ ಹೋಗುತ್ತಿದ್ದ ಮಕ್ಕಳ ಸಂಖ್ಯೆ 210,000 ಈ ಸಂಖ್ಯೆ ತೃತೀಯ ಯೋಜನೆಯ ಕೊನೆಯ ಹೊತ್ತಿಗೆ ಅಂದರೆ 1965ರ ಹೊತ್ತಿಗೆ ಸುಮಾರು ಎರಡುಪಟ್ಟು ಹೆಚ್ಚಿರುತ್ತದೆ. ಈಗಿನ ಅಂದಾಜಿನ ಪ್ರಕಾರ 415, ಸಾವಿರ ಜನ ಮಕ್ಕಳು ಹೊತ್ತಿಗೆ ಪ್ರಾಥಮಿಕ ಶಾಲೆಗಳಿಗೆ ಹೋಗುತ್ತಿರುತ್ತಾರೆ. ಶಾಲೆಗಳಿಲ್ಲದ ಗ್ರಾಮಗಳಿಗೆಲ್ಲಾ ಶಾಲೆಗಳನ್ನು ಒದಗಿಸುವಂತೆ ರಾಜ್ಯ ಸರ್ಕಾರಗಳಿಗೆ ಕೇಂದ್ರ ಸರ್ಕಾರ ಸೂಚಿಸಿದೆ.

ಬಾಲಿಕೆಯರ ವಿದ್ಯಾಭ್ಯಾಸ

ಶಾಲೆಗಳಿಗೆ ಹೋಗುವ ಬಾಲಕರ ಸಂಖ್ಯೆಗೂ ಬಾಲಕಿಯರ ಸಂಖ್ಯೆಗೂ ಮಧ್ಯೆ ಇರುವ ಅಂತರವನ್ನು ಕಡಿಮೆ ಮಾಡಲು ಬಾಲಕಿಯರ ವಿದ್ಯಾಭ್ಯಾಸಕ್ಕೆ ವಿಶೇಷ ಗಮನವನ್ನು ಹಲವು ರೀತಿಯಲ್ಲಿ ಕೊಡಲಾಗುತ್ತಿದೆ ಮಹಿಳಾ ಶಿಕ್ಷಕಿಯರಿಗೆ ವಾಸಕ್ಕೆ ಮನೆಗಳನ್ನು ಒದಗಿಸುವುದು, ಗ್ರಾಮಾಂತರ ಪ್ರದೇಶಗಳಲ್ಲಿ ಕೆಲಸ ಮಾಡುತ್ತಿರುವ ಶಿಕ್ಷಕಿಯರಿಗೆ ವಿಶೇಷ ಅಲೌವೆನ್ಸ್ ಕೊಡುವುದು, ತರಬೇತಿ ಪಡೆಯುವ ಮಹಿಳಾ ಶಿಕ್ಷಕಿಯರಿಗೆ 'ಸ್ಟೈಪೆಂಡ್' ಕೊಡುವುದು, ಹಾಜರಿ ಬಹುಮಾನಗಳನ್ನೂ ವಿದ್ಯಾರ್ಥಿವೇತನಗಳನ್ನೂ ಕೊಡುವುದು ಇತ್ಯಾದಿ ಹಲವಾರು ಕ್ರಮಗಳನ್ನು ತೆಗೆದುಕೊಳ್ಳಲಾಗತ್ತಿದೆ. ಬಾಲಿಕೆಯರ ವಿದ್ಯಾಭ್ಯಾಸ ಸೌಕರ್ಯಗಳನ್ನು ವಿಸ್ತರಿಸುವುದಕ್ಕಾಗಿಯೇ ಒಟ್ಟು ವೆಚ್ಚದಲ್ಲಿ ಶೇ. ೪ರಷ್ಟನ್ನು ಒದಗಿಸಲಾಗಿದೆ.

ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯಗೊಳಿಸುವ ದೃಷ್ಟಿಯಿಂದಲೇ ಶಾಲೆಗಳಲ್ಲಿ ವಿದ್ಯಾರ್ಥಿಗಳ ಹಾಜರಿಯನ್ನು ಕಡ್ಡಾಯಗೊಳಿಸುವುದಕ್ಕಾಗಿ ಕೇಂದ್ರ ಶಿಕ್ಷಣ ಮಂತ್ರಿ ಶಾಖೆ ಮೊದರಿ ಶಾಸನವನ್ನೂ ಸಿದ್ಧಗೊಳಿಸಿದೆ. ೧೯೬೦ರ ದೆಹಲಿ ಪ್ರಾಥಮಿಕ ಶಿಕ್ಷಣ ಶಾಸನ ಈ ಮೊದರಿ ಶಾಸನದ ಆಧಾರದ ಮೇಲೆಯೇ ತಯಾರಿಸಲ್ಪಟ್ಟಿದೆ.

ಆಂಧ್ರ ಪ್ರದೇಶ ಮಧ್ಯ ಪ್ರದೇಶ, ಮೈಸೂರು ಮತ್ತು ಪಂಜಾಬ್ ಈ ರಾಜ್ಯಗಳಲ್ಲಿ ಶಾಸನಗಳು ಜಾರಿಯಲ್ಲಿವೆ.

ನಸ್ಸೇರರ ಪ್ರಭಾವ ಕುಂಠಿತವಾಗುತ್ತಿದೆಯೆ?

ಸಂಯುಕ್ತ ಅರಬ ರಾಷ್ಟ್ರದ ಮೂಲಭೂತ ಕಲ್ಪನೆಗಳಿಗೆ ಸ್ಥಿರರೂಪವು ಬರುವುದು; ಶ್ರೀ ನಸ್ಸೇರರ ನಾಯಕತ್ವದಲ್ಲಿ ಅರಬ ದೇಶಗಳು ತಟಸ್ಥ ರಾಷ್ಟ್ರಗಳ ಶಕ್ತಿ ಸಂವರ್ಧನೆಯಲ್ಲಿ ಸಕ್ರಿಯಾಯಕವಾಗುವುವು ಎಂಬ ಆಶೆ ಎಲ್ಲರಲ್ಲಿತ್ತು. ಆದರೆ, ಸಿರಿಯಾದ ರಾಜಕೀಯ ಪಟ ಪರಿವರ್ತನೆಯಿಂದ ಸೂತ್ರಸಂಚಾಲನೆಯ ದಿಕ್ಕೇ ಬದಲಾಯಿತು. ಕೈರೊ ಮತ್ತು ದಮಾಸ್ಕಸ್ ರೇಡಿಯೋಗಳಿಂದ ಬಿತ್ತರಿಸಲ್ಪಟ್ಟ ವಾರ್ತೆಗಳಂತೆ ಐಗುಪ್ತ ಮತ್ತು ಸಿರಿಯಾಗಳ ನಾಯಕರು ಪರಸ್ಪರ ಆರೋಪ-ಪ್ರತ್ಯಾರೋಪಗಳಲ್ಲಿ ನಿಮಗ್ನರಾಗಿದ್ದಾರೆ. ಮಾತ್ರವಲ್ಲ, ನಸ್ಸೇರರ ಪ್ರತಿದ್ವಂದ್ವಿಯಾಗಿ ಸಿರಿಯಾದಲ್ಲಿ ಬೆಳೆದ ಶ್ರೀ ಮಾಮೂನ್ ಕುಜಬಾರಿಯವರ ಪ್ರಭಾವ ಕ್ಷೇತ್ರವು ಸೀಮಿತವಿರುವುದಿಲ್ಲವೆಂದು ಗೊತ್ತಾಗುತ್ತದೆ.

ಇರಾಣ, ತುರ್ಕಿ, ಜೋರ್ಡಾನ್‌ಗಳು ಪ್ರಾರಂಭದಲ್ಲಿಯೇ ಇವರ ಸರಕಾರಕ್ಕೆ ಮನ್ನಣೆಯನ್ನಿತ್ತುದರಿಂದ ದೇಶದ ಹೊರಗೆ ಸಿರಿಯಾದ ಸ್ವತಂತ್ರ ಪ್ರಶಾಸನ ಸೂತ್ರಕ್ಕೆ ಸ್ವಾಗತವಿದೆಯೆಂಬುದು ಮಂದಟ್ಟಾಗುವುದು. ಅಲ್ಲಿನ ಕಮ್ಯುನಿಸ್ಟ್ ಪಕ್ಷವು ಸರಕಾರವನ್ನು ಸಮರ್ಥಿಸಿ ಪಟ ಪರಿವರ್ತನೆಯನ್ನು ಚಿರಸ್ಥಾಯಿಗೊಳಿಸುವಲ್ಲಿ ವಾಮ ಪಂಥೀಯರು ಹಿಂದುಳಿಯಲಾರರೆಂದು ತಿಳಿಯುವುದು. ಡಾ| ಕುಜಬಾರಿಯವರಿಗೆ ಸುತ್ತಮುತ್ತ ಶುಭ ಸಂದೇಶಗಳು, ವಿಶೇಷ ಅನುರಕ್ತಿಯು ಕಂಡು ಬಂದರೆ, ಅದು ಅವರ ಲೋಕಪ್ರಿಯತೆಯ ದ್ಯೋತಕವೆನ್ನುವಂತಿಲ್ಲ; ಬದಲಿಗೆ, ನಸ್ಸೇರರ ವಿರುದ್ಧವಿರುವ ರೋಷ ಪ್ರದರ್ಶನ ಮಾತ್ರ. ಸಿರಿಯಾದಲ್ಲಿನ ಕಮ್ಯುನಿಸ್ಟ್ ಪ್ರಭಾವವನ್ನು ಹೋಗಲಾಡಿಸಲು ನಸ್ಸೇರರು ಉಗ್ರಕ್ರಮ ಕೈಗೊಂಡುದಕ್ಕೆ ಪ್ರತೀಕಾರವೆಸಗುವಭಿಲಾಷೆಯಿಂದ ಅವರೀಗ ಕುಜಬಾರಿಯವರನ್ನು ಸಮರ್ಥಿಸುತ್ತಿದ್ದಾರೆಂಬುದು ನಿಜಕ್ಕೂ ಸತ್ಯ.

ಡಾ| ಕುಜಬಾರಿಯವರು ಸಿರಿಯಾದ ರಾಜಕೀಯ ಕ್ಷೇತ್ರದಲ್ಲಿ ಹೆಸರಾಂತ ವ್ಯಕ್ತಿ. ೧೯೫೦ರಿಂದ ಇಲರೆ ಮಧ್ಯಾವಧಿಯಲ್ಲಿ ಇವರು ಹಲವು ಬಾರಿ ಮಂತ್ರಿಪದವಿಗಡರಿದ್ದರು. ಸಿರಿಯಾ ಸಂಸತ್ತಿನ ಅಧ್ಯಕ್ಷರೂ ಸಿರಿಯಾ ಗಣ ತಂತ್ರದ ಉಪಾಧ್ಯಕ್ಷರೂ ಆಗಿದ್ದರು. ಅರಬ ಮುಕ್ತಿ ದಳದ ಅಧ್ಯಕ್ಷರೂ ಇವರಾಗಿದ್ದರು. ಕಾನೂನು ವಿಷಯದಲ್ಲಿ ಇವರಿಗೆ ಅಸಕ್ತಿ ಅಧಿಕ. ಈ ವಿಷಯದ ಮೇಲೆ ಅವರು ಅರಬಿ ಭಾಷೆಯಲ್ಲಿ ಅನೇಕ ಪುಸ್ತಕಗಳನ್ನು ಬರೆದಿದ್ದಾರೆ. ಸಿರಿಯಾದಲ್ಲಿ ಸಾರ್ವತ್ರಿಕ ಚುನಾವಣೆಗಳನ್ನು ನಡೆಸಿ, ಗಣತಂತ್ರ ವ್ಯವಸ್ಥೆಯನ್ನು ಶಾಶ್ವತಗೊಳಿಸುವುದು ಎಂಬ ಆಶ್ವಾಸನೆಯನ್ನವರು ಸೀರಿಯನರಿಗೆ ಇತ್ತಿದ್ದಾರೆ ಡಾ| ಕುಜಬಾರಿ ಮತ್ತವರ ಸಮರ್ಥಕರ ಕೈವಾಡವಿರುವ ವರೆಗೆ ನಸ್ಸೇರರ ವಿರುದ್ಧ ಪ್ರಚಾರ ಕಾರ್ಯ ನಡೆಯುವುದು ಖಂಡಿತ.

ಶ್ರೀ ನಸ್ಸೇರರ ಪ್ರೇರಣೆಯಿಂದಾಗಿ ಸಿರಿಯಾದಲ್ಲಿ ಹಲವಾರು ಸುಧಾರಣೆಗಳಾದುವು. ಇದರಿಂದಾಗಿ ಅಲ್ಲಿನ ಉಚ್ಚವರ್ಗದ ಜನರಲ್ಲಿ ಅಸಂತೋಷವೆದ್ದಿದೆ. ಇದಕ್ಕೆ ಕಾರಣವಿಲ್ಲವೆಂದಲ್ಲ. ಏಕೆಂದರೆ, ಈ ಸುಧಾರಣೆಗಳಿಂದ ಜನತೆಯ ಕಡೆಗೆ ಉನ್ಮುಖದೃಷ್ಟಿವಾತ ಮಾಡಿದಂತಾಗಿದೆ. ಅಧ್ಯಕ್ಷ ನಸ್ಸೇರರು ಸಿರಿಯಾದ ಇಚ್ಛೆಗೆ ವಿರುದ್ಧವಾಗಿ ಅದನ್ನು ತನ್ನಧಿಯಿರಿಸಿಕೊಳ್ಳುವ ಇರಾದೆ ವ್ಯಕ್ತಪಡಿಸುತ್ತಿಲ್ಲ. ಆದುದರಿಂದ ಹೊಸತಾದ ವ್ಯವಸ್ಥೆಯಿಂದ ಜನತೆಯ ಕಡೆಗೆ ಹಿಂದಿನಂತೆ ಗಮನವೀಯದೆ ಹೋದರೆ, ಒಂದೆಡೆ ಕಮ್ಯುನಿಸ್ಟ್ ಪಕ್ಷದ ಬಲವು ಹೆಚ್ಚುವುದು; ಇನ್ನೊಂದೆಡೆ ಹೊಸ ವ್ಯವಸ್ಥೆಯಿಂದ ಉಚ್ಚ ವರ್ಗೀಯರ ಸಮರ್ಥಕರ ಪ್ರಭಾವವು ಕುಂಠಿತವಾಗುವುದು. ದೊರೆತಿರುವ ವಾರ್ತೆಗಳಂತೆ ಡಾ| ಕುಜಬಾರಿಯವರ ಮಾರ್ಗವು ಸಂಪೂರ್ಣ ನಿಷ್ಕಂಟಕವಾಗುವಲ್ಲವೆಂಬುದು ಮನವರಿಕೆಯಾಗುವುದು.

41 ವರ್ಷಗಳ ಭದ್ರ ಹಾಗೂ ಸಮರ್ಥ ಬೇಂಕಿಂಗ್ ಸೇವೆ.

ದಿ. ಪಾಂಗಾಳ ನಾಯಕ್ ಬೇಂಕ್ ಲಿ.

ನಮ್ಮ 3 ವರ್ಷ ವ್ಯಾದೆಯ ಕೇಶ್ ಸರ್ಟಿಫಿಕೇಟುಗಳಲ್ಲಿ ಶೇವಣಿ ಮಾಡಿರಿ: ಬಡ್ಡಿ ಸೇಕಡಾ 5ರಂತೆ: ರೂ. 87—00 3 ವರ್ಷಗಳ ಅಂತ್ಯದಲ್ಲಿ ಬಡ್ಡಿ ಕೂಡಿ ರೂ. 100—00 ಒದಗಿಸುವುದು.

ಕರೆ, ಚಿಕ್ಕ ವ್ಯಾದೆ, ನಿರಖು ಶೇವಣಾತಿಗಳ ಮೇಲೆ ಆಕರ್ಷಣೀಯ ಶರ್ತಗಳು: ಬಡ್ಡಿ ಸೇಕಡಾ 5½ರ ವರೆಗೆ.

ತಾ. 1—4—1961ರಿಂದ ಸೇವಿಂಗ್ಸ್ ಬೇಂಕ್ ಖಾತೆಗಳ ಮೇಲೆ ಬಡ್ಡಿ ಸೇಕಡಾ 3ರಂತೆ.

THE PANGAL NAYAK BANK LTD.
Estd: 1920

ವರ್ಗ—ಊಳಿಗ
ಮೊದಲಾದ ಯಾವತ್ತೂ ತರದ
ಎಕೌಂಟ್ ಪುಸ್ತಕಗಳು
ಶಾಲಾ ರಿಜಿಸ್ಟ್ರಿಗಳು,
ಫಾರ್ಮುಗಳು,
ದೊರೆಯುತ್ತವೆ.
ವಿಚಾರಿಸಿರಿ—
ನವಯುಗ ಪ್ರೆಸ್, ಉಡುಪಿ

ದೈವ ಬಗೆದ ದ್ರೋಹ

(೨ನೇ ಪುಟದಿಂದ)

ಡಗರ ಪ್ರಾರಂಭವಾಗಿತ್ತು. ವಧುವಿನ ಶೃಂಗಾರಕ್ಕೆ ಆಣಿಯಾಗಿತ್ತು. ಆತನಿಗೆ ಕರೆ ಬರುವುದು ತಡವಾಗಲಿಲ್ಲ. ಮುಂದಾಗುವ ವಿಚಾರಗಳನ್ನು ಮನಸ್ಸೇ ಸೂಚಿಸುವಂತೆ ಆತನ ಮನಸ್ಸು ಯಾವುದೋ ಕರುಣ ಕಥೆಯನ್ನು ತೋಡಿಕೊಳ್ಳುವಂತೆ ಭಾಸವಾಗುತ್ತಿತ್ತು—ತನ್ನದೇ ಆದ ಒಂದು ವ್ಯೂಹದಲ್ಲಿ ಸುತ್ತುತ್ತಿತ್ತು.

ಮದುವೆಯ ಮುಹೂರ್ತ ಸಮೀಪಿಸುತ್ತಿತ್ತು. ವಧೂವರರು ಹಸೆಯ ಮೇಲೆ ಮಂಡಿಸಿದ್ದರು ವಧುವಿನ ಶೃಂಗಾರದಲ್ಲಿ ಸುದೇಶ್ ಬಹು ರಮಣೀಯವಾಗಿ ಶೋಭಿಸುತ್ತಿದ್ದಳು. ಅರುಣನ ಮುಖ ವೇಕೊಸಪ್ಪಗಾಗಿತ್ತು, ಮನದಲ್ಲಿ ಉಲ್ಲಾಸ ತುಂಬಲು ಆತ ಮಾಡಿದ ಪ್ರಯತ್ನ ಬಾರಿ ಬಾರಿಗೂ ವಿಫಲವಾಗುತ್ತಿತ್ತು.

ಪುರೋಹಿತರ ಮಂತ್ರ, ವಾದ್ಯಗಳ ಘೋಷ ಒಂದೇ ಸವನೆ ನಡೆಯುತ್ತಿತ್ತು. ಲಗ್ನದ ಸಮಯ ಸಮೀಪಿಸುತ್ತಿತ್ತು.

ಅಷ್ಟರಲ್ಲಿ, "ಹೋ ಹೋ!" ಎಂಬ ಆರ್ತನಾದದೊಡನೆ ಜನ ಸಮೂಹ ಒಂದು ದಿಕ್ಕಿಗೆ ಧಾವಿಸಿತು. ಲಗ್ನ ಜಪ್ಪರಕ್ಕೆ ಬೆಂಕಿ ಹಿಡಿದಿತ್ತು. ಅಗ್ನಿ ನಾರಾಯಣನ ಕೆನ್ನಾಲಿಗೆ ದೀರ್ಘವಾಗಿ ಚಾಚಿತ್ತು. ಪ್ರಳಯಾಗ್ನಿಯಂತೆ ಕೆಡಿಗಳ ಸಮೂಹವನ್ನು ಕಾರುತ್ತಾ ಬೆಂಕಿ ಉರಿಯುವ ದೃಶ್ಯ ಭಯಾನಕವಾಗಿತ್ತು.

ವಧೂವರರ ಕಡೆ ಗಮನ ಹರಿಸುವವರಾರೂ ಇರಲಿಲ್ಲ ಸುದೇಶ್, ಅರುಣ್ ಮಂಕುಕವಿದಂತೆ ಕುಳಿತ್ತಿದ್ದರು. ಬೆಂಕಿಯ ಉರಿಯ ಕಡೆ ಲಕ್ಷವಿರಲಿಲ್ಲವೆನಿಗೆ.

ಒಂದು ಗಳಿಗೆಯ ಹಿಂದೆ ಸಂತೋಷದ ಬೀಡಾಗಿದ್ದ ಆ ತಾಣ, ಈಗ ದುಃಖ ಕಳವಳಗಳ ಸಾಮ್ರಾಜ್ಯವಾಗಿ ಪರಿವರ್ತಿಸಿತು.

ಹತ್ತಿರವಿದ್ದ ಪುರೋಹಿತರು ಯಾವಾಗಲೋ ಮಾಯವಾಗಿದ್ದರು. ಬೆಂಕಿಯ ದೊಡ್ಡ ಕೆಂಡವೊಂದು ವಧುವಿನ ಮೇಲೆ ಬಿದ್ದಾಗಲೇ ಎಚ್ಚರ! "ಅಯ್ಯೋ" ಎಂದು ಕೆರುಚಿದ ಆಕೆಯ ಸ್ವರ ಬಹಳ ಭೀಕರವಾಗಿತ್ತು. ಹತ್ತಿರವಿದ್ದ ಅರುಣ್ ನಿದ್ದೆಯಿಂದ ಎಚ್ಚೆತ್ತವನಂತೆ ಆಕೆಯನ್ನು ಹಿಡಿದೆಳೆದು ಗರಬಡಿದವನಂತೆ ಹುಚ್ಚಾಪಟ್ಟೆ ತೆವಳುತ್ತಿದ್ದ. ಏಳಲು ಮಾಡಿದ ಆಪನ ಪ್ರಯತ್ನ ನಿಷ್ಫಲಕವಾಗ ತ್ತಿತ್ತು.

ಸುದೇಶ್‌ಳ ಬಟ್ಟೆಗೆ ಬೆಂಕಿ ಹಿಡಿದು ಧಗಧಗನೆ ಉರಿಯುತ್ತಿತ್ತು. ಜನರೆಲ್ಲಾ ಆ ಕಡೆಗೆ ಧಾವಿಸಿ ಬಂದು ಬೆಂಕಿಯನ್ನು ನೊಂದಿಸಿದರು. ಕಾಲ ಮಿಂಚಿಹೋಗಿತ್ತು. ಕೆಂಡದಂತೆ ಆಕೆಯ ಮುಖ ಕಪ್ಪಿಟ್ಟಿತ್ತು. ಚರ್ಮ ಸುಟ್ಟು ಅಲ್ಲಲ್ಲಿ ಜೋಲುತ್ತಿತ್ತು. ಆಕೆಗೆ ಎಚ್ಚರವಿದ್ದಂತಿರಲಿಲ್ಲ. ಕಾಡಲೇ ಆಕೆಯನ್ನು ಆಸ್ಪತ್ರೆಗೆ ಒಯ್ಯಲಾಯಿತು.

ಮುಂಬಾಯಿಯ ದೊಡ್ಡ ಆಸ್ಪತ್ರೆಯಿಂದ ನರ್ಜನರನ್ನು ಕರೆಸಲಾಯಿತು. ಸುಮಾರು ಒಂದು ಗಂಟೆಯಕಾಲ ಮಾನವನಿಗೂ ಮೃತ್ಯುವಿಗೂ ಭೀಕರ ಯುದ್ಧ ಜರುಗಿತು. ಮನುಷ್ಯನ ಆಟ ದೈವದ ಮುಂದೆ ನಡೆದಂತೆ ಕಾಣಲಿಲ್ಲ. ಮಿನಿಟು ಮಿನಿಟಿಗೂ ನಾಡಿಯ ಬಡಿತ ಕಡಿಮೆಯಾಗುತ್ತಿತ್ತು. ಕೊನೆಗೊಮ್ಮೆ ಕರಿಣ ಮನಸ್ಕರಾಗಿ ಡಾಕ್ಟರು ಉದ್ದವಾದ ಸೂಜಿಯ ಒಂದು ಇಂಜೆಕ್ಷನನ್ನು ಚುಚ್ಚಿದರು.

ಡಾಕ್ಟರರ ಸತತ ಪ್ರಯತ್ನದ ಫಲವೊ ಎಂಬಂತೆ ಸುದೇಶ್ ಸ್ವಲ್ಪ ಚೇತರಿಸಿಕೊಂಡಳು. ಆಕೆಯ ತುಟಿ ಅಲುಗುತ್ತಿತ್ತು. ಮಾತು ತೊದಲಾಗಿ ಹೊರ ಬರುತ್ತಿತ್ತು. ಅರುಣ್.. ...ಅ... ..

ಅರುಣನ ಅನ್ವೇಷಣೆಗಾರಂಭವಾಯಿತು. ಆ ತನಕ ಅವನ ಜ್ಞಾನವೇ ಜನರಿಗಿದ್ದಂತೆ ತೋರಲಿಲ್ಲ. ಆತ ಮನೆಯಲ್ಲೇ ಉಳಿದಿದ್ದ.

ಕಾರು ಕಳುಹಿಸಿ ಆತನನ್ನು ಕರೆತಂದು ಒಳಾಯಿತು. ಅರುಣ್‌ನನ್ನು ಕಂಡ ಸುದೇಶಳ ಕಂಣಂಚಿನಲ್ಲಿ ಒಂದು ಹನಿ ಕಂಬನಿ ಮಿಂಚಿತು. ಮುಖಕ್ಕೊಂದು ಅಪೂರ್ವ ಪ್ರಭೆ ಬಂದಂತಾಯಿತು.

ಸುದೇಶ್ ಎತ್ತಲಾಗದ ತನ್ನ ಕೈಯನ್ನೆತ್ತಿ ಬಹು ಪ್ರಯಾಸದಿಂದ, ಆತನ ಕೈಯಲ್ಲಿಟ್ಟು, ಆತನ ಕಿವಿಯಲ್ಲೇನೋ ಉಸುರಿದಳು. ಆತನ ಮುಖಕಳೆಗುಂದಿತು; ದೇಹ ಒಂದು ಕಡೆಗೆ ವಾಲಿತು. ಆತನಿಗೆ ಮೂರ್ಛೆ ತಪ್ಪಿತ್ತು.

ಸುದೇಶ್‌ಳ ಪ್ರಾಣ ಪಕ್ಷಿ ಹಾರಿಹೋಯಿತು. ಬಂಧಿತವಾಗಿದ್ದ ಆಕೆಯ ಆತ್ಮ ಬಿಡುಗಡೆ ಹೊಂದಿ ಎಲ್ಲೋ ಲೀನವಾಯಿತು.

ಅರುಣನಿಗೆ ಎಚ್ಚರವಾದಾಗ ಸಂಜೆ ಗಂಟೆ ಆರುವರೆಯಾಗಿತ್ತು ಆತನನ್ನೂ ಸುದೇಶ್‌ಳ ಶವವನ್ನು ಮನೆಗೆ ತಾಗಿಸಲಾಗಿತ್ತು. ಹಾಸಿಗೆಯ ಮೇಲೆ ಪವಡಿಸಿದ್ದ ಆತನ ಮನಸ್ಸಿಗೆ ಮಂಕು ಕವಿದಿತ್ತು.

ಆರೋಗ್ಯವರ್ಧಕ ತೈಲಾಭ್ಯಂಗ

ಶ್ರೀ ಕೆ. ಅಚ್ಯುತ ಶ್ರೀನಿವಾಸ ಪೈ, ಉಡುಪಿ.

ಪ್ರಾಚೀನ ಕಾಲದಿಂದಲೂ ತೈಲಾಭ್ಯಂಗವು ಆರೋಗ್ಯವರ್ಧಕ, ಪ್ರವರ್ಧಕ ವಿಧಿಯಾಗಿರುತ್ತದೆ. ಮಹತ್ತಾದ ತೈಲಾಭ್ಯಂಗದಿಂದ ಶರೀರಾವಯವಗಳು ಸ್ನಿಗ್ಧ, ಶಕ್ತಿಯುತವಾಗುವವು. ಸ್ನಿಗ್ಧ ಧಾತುಘಟಕಗಳು ಕಾರ್ಯಕ್ಷಮತೆಯು ಹೆಚ್ಚುವದು. ಶರೀರವು ದೃಢಪುಷ್ಟನಾಗುವದು. ತಾರುಣ್ಯವು ಉಳಿಯುವದು. ಚರ್ಮ ಕಾಂತಿಯು ಕಳೆಗುಂದದೆ ಉಳಿಯುವದು.

ವ್ಯಾಯಾಮ ಮಾಡದವರಿಗೆ ತೈಲಾಭ್ಯಂಗವೇ ವ್ಯಾಯಾಮವಾಗುವದು.

ಶರೀರದ ಎಲ್ಲಾ ಭಾಗಗಳಿಗೆ ಯೋಗೇಶ್ವರ ತೈಲ, ಧನ್ವಂತರಿ ತೈಲ, ಶತಾವರಿ ತೈಲ, ಇಪ್ಪೆ ತೈಲ, ಮರ್ದನ ಮಾಡುವುದರಿಂದ ಶರೀರ ಪುಷ್ಟಿ, ತಾರುಣ್ಯ ರಕ್ಷಣೆ ಸ್ವಚ್ಛವಾದ ದೃಷ್ಟಿ, ಶಾಂತ ನಿದ್ರೆ, ದೇಹಾಯಾಸ ಪರಿಹಾರವಾಗಿ, ವಾತ ವಿಕಾರಗಳು ಶಮನವಾಗಿ ಆಯುಷ್ಯ ವೃದ್ಧಿಯಾಗುವುದರಲ್ಲಿ ಸಂಶಯವಿಲ್ಲ.

ತೇಜಸ್ವಿಯಾದ ಚರ್ಮ ಹೊಂದಬೇಕಾದರೆ ಚರ್ಮವ್ಯಾಧಿಗಳನ್ನು ಹೋಗಲಾಡಿಸಬೇಕಾದರೆ ತೈಲಾಭ್ಯಂಗವನ್ನು ಅಗತ್ಯವಾದ ನಿತ್ಯದ ವಿಧಿಯನ್ನಾಗಿರಿಸಬೇಕಾಗಿ ಆಯುರ್ವೇದ ವಿದಿಸಿರುತ್ತದೆ.

'ಶರೀರಮಾದ್ಯಂಖಲು ಧರ್ಮಸಾಧನಂ' ಎಂದಿರುವುದರಿಂದ ಧರ್ಮಾಚರಣೆಗೆ ಶರೀರದ ಆರೋಗ್ಯವೇ ಮುಖ್ಯವಾಗಿರುತ್ತದೆ. ಅಭ್ಯಂಗಮಾಚರೇ ನಿತ್ಯ ಸಜರಾಶ್ರಮ ವಾತಹಾ ।

ದೃಷ್ಟಿ ಪ್ರಸಾದ ಸುಷ್ಟ್ವಾಯಾಃ ಸ್ವಪ್ನ ಸುತ್ಪ್ರಕ್ಷ್ವ ಧಾರ್ಢ್ಯಕೃತ್ ॥ (ವಾಗ್ಭಟ)

ಶರೀರ ಧಾತುಗಳ ಯೋಗ್ಯ ಪ್ರವೂಣದಲ್ಲಿ ಉತ್ಪತ್ತಿ ವೃದ್ಧಿಗಳಾಗುವದು. ಪ್ರತಿಯೊಂದು ಅವಯವಗಳ ಧಾತು ಘಟಕಗಳ ಸ್ವಚ್ಛತೆ, ನಿರ್ಮಲತೆ, ಸಾಕಷ್ಟು ವಿಶ್ರಾಂತಿ ಮತ್ತು ಮಿತವಾದ ವ್ಯಯ ಇವುಗಳಿಂದ ಆರೋಗ್ಯ ಅಬಾಧಿತವಾಗಿ ಚಿರಕಾಲ ಉಳಿಯುವುದು. ಆಯುರ್ವೇದ ಮತ್ತು ಆರೋಗ್ಯ ಶಾಸ್ತ್ರದ ನಿಯಮಗಳನ್ನು ತಾತ್ವಿಕವಾಗಿ ವಿಚಾರ ಮಾಡಿ ನೋಡಿದರೆ ಮೇಲಿನ ನಾಲ್ಕು ತತ್ವಗಳಿಗೂ ತ್ರಿದೋಷ ಸಿದ್ಧಾಂತಕ್ಕೂ ಅನುಸಾರವಾಗಿಯೇ ಅವೆಲ್ಲ ಹೊಂದಿಕೊಂಡಿರುವವು. ಆರೋಗ್ಯ ಸಂರಕ್ಷಕ ನಿಯಮಗಳನ್ನು (1) ಆಹಾರ (2) ನಿದ್ರೆ (3) ಬ್ರಹ್ಮಚರ್ಯ (4) ಸ್ವಚ್ಛತೆ ಯೆಂದು ಹೇಳಲಾಗಿದೆ. ಶಾರೀರ ಸ್ವಚ್ಛತೆ ಆಯುರ್ವೇದದಲ್ಲಿ ಶೌಚ ವಿಧಿ ಎಂದು ಹೇಳುವರು.

ಶಾಂತಿನಿದ್ರೆಗೆ ಸ್ಮರಣೆ ಹೆಚ್ಚಿಸಲಿಕ್ಕೆ, ಪಿತ್ತಶಮನಕ್ಕೆ, ವಾಸಿಬಾಧಕ ಹೋಗಲಾಡಿಸಲಿಕ್ಕೆ, ಕೇಶವೃದ್ಧಿಗೆ, ದೃಷ್ಟಿದೋಷ ಪರಿಹಾರಕ್ಕೆ, ಪಾಶ್ಚಾತ್ಯಮತ್ಯರಿಂದಲೂ ಕೊಂಡಾಡಲ್ಪಟ್ಟ ದಿವ್ಯ ತೈಲಗಳಲ್ಲಿ ಬ್ರಾಹ್ಮಿಭೃಂಗ, ಭೃಂಗಾಮಲಕ, ತ್ರಿಫಲಾದಿ ತೈಲ, ನುಂಡಿಷ್ಟಾದಿ ಮತ್ತು ಶ್ರೇಷ್ಠ ಹಿಮನಾಗರ ತೈಲಗಳೇ ರತ್ನಪ್ರಾಯವಾಗಿವೆ.

ವಾತವಿಕಾರಗಳನ್ನು ತೈಲಗಳ ಮರ್ದನದಿಂದಲೇ ಸಂಪೂರ್ಣವಾಗಿ ಗುಣಪಡಿಸಬಹುದು. ಪ್ರೊ| ಕೆ.ವಿ. ಅಯ್ಯರ್, ಪ್ರೊ| ಎಮ್. ವಿ. ಕೃಷ್ಣ ರಾವ್ ಮೊದಲಾದ ಸ್ನಾಯು ಬಲ ಸಂವರ್ಧಕರು ತೈಲಾಭ್ಯಂಗದಿಂದಲೇ ಆಯುರಾರೋಗ್ಯ. ಪಡೆಯಬಹುದಾಗಿ ಹೇಳಿರುತ್ತಾರೆ. ತೈಲಗಳಲ್ಲಿ ಉಪಯೋಗಿಸಲ್ಪಡುವ ಬ್ರಾಹ್ಮಿ, ಭೃಂಗ, ಆಮಲಕ ತ್ರಿಫಲ ಮೊದಲಾದ ಗಿಡಮೂಲಿಕೆಗಳಲ್ಲಿ 'ವಿಟಮಿನ್', 'ಕ್ಲೋರೊಫಿಲ್' ಪುಷ್ಕಳವಾಗಿ ಸಿಗುವುದಾಗಿ ವಿಜ್ಞಾನಿಗಳು ಶೋಧಿಸಿದ್ದಾರೆ. 'ಇಂಜೆಕ್ಷನ್'ಗಳಿಂದ ಗುಣವಾಗದ ಎಷ್ಟೋ 'ವಾತರೋಗಗಳು' ತೈಲಾಭ್ಯಂಗದಿಂದಲೇ ಗುಣವಾದ ನಿದರ್ಶನ ಸಲವಾರು ಇವೆ.

ಹೊಟ್ಟೆಗೆ ತೆಗೆದುಕೊಳ್ಳುವ ಪೌಷ್ಟಿಕ ಆಹಾರದಷ್ಟೇ ಪೌಷ್ಟಿಕತೆ ತೈಲಾಭ್ಯಂಗದಲ್ಲಿದೆ ಎಂದು ಸಂಶೋಧನೆಗಳಿಂದ ತಿಳಿಯಲಾಗಿದೆ ಚರ್ಮರಂಧ್ರಗಳ ಮೂಲಕ ತೈಲಾಭ್ಯಂಗದಿಂದ ದೇಹದಾರ್ಢ್ಯತೆಯನ್ನು ಹೊಂದಬಹುದು. ತೈಲಾಭ್ಯಂಗದಿಂದಲೇ ಆರೋಗ್ಯವೃದ್ಧಿ ಆರೋಗ್ಯವೃದ್ಧಿಯೇ ತೈಲಭ್ಯಂಗ್ಯದಿಂದ!

ಅಸ್ಥಮಾ ರೋಗಿಗಳ ತಿಳುವಳಿಕೆಗೆ

ರಿಜಿಸ್ಟ್ರಿಯಾದ ಚಿತ್ರಕೋಟ್ ಅಸ್ತಮಾ ನಿವಾರಕಔಷಧಿಯನ್ನು ತಾ. 23-10-61ನೇ ಹುಣ್ಣಿಮೆ ರಾತ್ರಿ ಬೀರನೊಂದಿಗೆ ಸೇವಿಸುವುದರಿಂದ ಅಸ್ತಮಾ, ನೇವಸ, ಕೆಮ್ಮು, ನೆಗಡಿ ನಿವಾರಣೆಯಾಗುತ್ತದೆ. ಕೂಡಲೇ ಹುಣ್ಣಿಮೆಯ ಮೊದಲೇ ಬರೆಯಿರಿ.

Manager, Shri Mahatma Naga Baba Ayuruvedashram,
P. O. Chitrakot U. P.

ದಿ ವಿಜಯ ಬೇಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬೇಂಕ್. ಸ್ಥಾಪನೆ: 1931

ರಿಜಿಸ್ಟರ್ಡ್ ಆಫೀಸು.
ವಿಜಯ ಬೇಂಕ್ ಬಿಲ್ಡಿಂಗ್, ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು-3, ಸೌತ್ ಕೆನರಾ.

ಕಾಯಂ ಠೇವಣಾತಿ ಬಡ್ಡಿ ದರವನ್ನು ಶೇಕಡ 5½ರ ದರೆಗೆ ಹೆಚ್ಚಿಸಲಾಗಿದೆ
ಏಳು ದಿವಸದ ನೋಟೀಸಿನಲ್ಲಿ ಕೇಳಿದಾಗ್ಯೆ ಹಿಂದೆ ಪಡೆಯುವ ಡಿಪೋಸಿಟುಗಳನ್ನು (Call Deposits) ಆಕರ್ಷಕ ಒಡ್ಡಿ ದರದಲ್ಲಿ ಸ್ವೀಕರಿಸೋಣಾಗುತ್ತದೆ.

ಹೆಚ್ಚಿನ ಮಾಹಿತಿಗೆ ನಮ್ಮ ಶಾಖೆಗಳಲ್ಲಿ ದಯವಾಗಿ ವಿಚಾರಿಸಿರಿ.

Tel: 'BLUEYAGAR'. — ಚಿನ್ನ ಮತ್ತು ವಜ್ರಗಳ ಆಧುನಿಕ ತವರುಮನೆ — Phone: 374.

ಕೆ.ಆರ್.ಕೆ.ಶೇಟ್ ಡಯಮಂಡ್ ಮಾರ್ಟ್

ಸ್ಥಾಪನೆ:1919] ಚಿನ್ನ ಮತ್ತು ವಜ್ರದ ವ್ಯಾಪಾರಿಗಳು,(ಗವರ್ನಮೆಂಟ್ ಕಾಲೇಜ್ ಎದುರುಗಡೆ)ಮಂಗಳೂರು. ಮಾಲಿಕ:ಕೆ.ಕೆ.ಆರ್ ಶೇಟ್

NAVAYUGA, UDIPI.
REGD. NO.BG. 176

19-10-1961

LICENSE NO. 31
Licensed to Post without Prepayment

ರಾಷ್ಟ್ರೀಯ ಐಕ್ಯ ಮತ್ತು ಏಕಲಿಪಿಯ ಪ್ರಶ್ನೆ

(ನಿನ್ನೆ ಹುಟದಿಂದ)

ಷ್ಟ್ರೀಯ ಐಕ್ಯತೆಗೆ ಅಡ್ಡಿಯಾಗಿವೆ ಎಂದು ಬೊಬ್ಬೆ ಹಾಕುತ್ತಿದ್ದೇವೆಯೋ ಅದೇ ಹಿಂದೆ ನಮ್ಮ ನಮ್ಮ ಶಕ್ತಿ, ಸಂಘಟನೆ, ಐಕ್ಯದ ಸಾಧನೆಗಳಾಗಿದ್ದವು. ಆಗ್ಯೂ ಈಗ್ಯೂ ಇರುವ ವ್ಯತ್ಯಾಸ ಈಗ ಆಗಿಕ್ಕಿಂತ ಹೆಚ್ಚು ಎಂದಲ್ಲ. ಆದರೆ ಆ ಭಾಷೆಯ ಮತ್ತು ಜಾತಿಯ ಹೆಸರಿನಲ್ಲಿ ನಾವು ಅಪ್ರಾಮಾಣಿಕತೆಯಿಂದ ರಾಜಕೀಯ ರಂಗದಲ್ಲಿ ನಡೆದುಕೊಳ್ಳುತ್ತಿದ್ದೇವೆ. ರಾಜಕೀಯ ಅಧಿಕಾರ ಗ್ರಹಣದ ದುರಾಸೆಯೇ ಈ ಯಾವ ವಿಯುದ್ಧಕ್ಕೆ ಮೂಲ ಕಾರಣ. ಈಗಿರುವ ಭಾಷೆಗಳೆಲ್ಲವೂ ಹಿಂದೆಯೂ ಇದ್ದರೂ ನಾವೆಲ್ಲ ಒಂದೆಂಬ ಭಾವನೆಯೇ ಇತ್ತು. ಈಗ ಅಧಿಕಾರೀ ಭಾಷೆ ಒಂದೇ ಎಂದು ಸಂವಿಧಾನದಲ್ಲೇ ರಿಯಾಯಿಸಿದ್ದರೂ, ಮನದಲ್ಲಿ ಐಕ್ಯತೆ ಬಂದಿಲ್ಲ

ಇದಕ್ಕೆ ಕಾರಣ ವಿವಿಧ ಭಾಷೆಗಳಲ್ಲ ತಮ್ಮ ಭಾಷೆಯೇ ಇತರ ಪ್ರಾಂತಗಳಲ್ಲೂ ಆಗ್ರಪೂಜೆಗೊಂಬ ಬೇಕು ಎಂಬ ಅಶ್ವಮೇಧಯಾಗ ಮಾಡಲು ಹೊರಟ ಸಾಮ್ರಾಜ್ಯವಾದಿಗಳಿಂದ ಹಿಂದೀ ಭಾಷೆಯು ಕೂಡಲೇ ಅಧಿಕಾರೀ ಭಾಷೆ ಮತ್ತು ರಾಷ್ಟ್ರಭಾಷೆ ಆಗಬೇಕೆಂದು ಅವಸರಪಡಿಸುವ ಉತ್ತರದವರಿಂದಲೇ ದೇಶಕ್ಕೆ ದೊಡ್ಡ ಗಂಡಾಂತರ ಬಂದಿದೆ. ಇದೇ ಅಸಲು ಸತ್ಯ. ಇದನ್ನು ಒಪ್ಪಿಕೊಳ್ಳಲಾರದವರು ಹೇಡಿಗಳಿರಬೇಕು ಇಲ್ಲವೇ ಆತ್ಮವಂಚಕರಿರಬೇಕು!

ರಾಷ್ಟ್ರೀಯ ಐಕ್ಯ ಸರ್ವೋಚ್ಚವು, ಈ ಪ್ರದೋಷಗಳ ಪರಿಹಾರಕ್ಕೆ ದೃಷ್ಟಿಯಾಗಿದೆ! ಅಲ್ಲಿ ನೆರೆದ ಮಹಾ ವಿಬುಧರು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಘನ ಪಂತರು, ಮಹಾ ವಿದ್ವಾಂಸರು, ಎಂಬುದರಲ್ಲಿ ಸಂಶಯವಿಲ. ಆದರೆ ಅವರೆಲ್ಲರೂ ಭಾಷಾವಾರ ಪ್ರಾಂತ ರಚನೆಯ ವಿರೋಧಿಗಳು! ಅವರೆಲ್ಲರೂ ಮೃತ್ಯ ಬಾಷಾ ಶಿಕ್ಷಣ ಮಾಧ್ಯಮದ ಶತ್ರುಗಳು! ರಾಷ್ಟ್ರೀಯ ಐಕ್ಯ ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ಬಾಲಬಡಕರಾಗಿದ್ದ ಪ್ರತಿಗಾಮಿ ಶಕ್ತಿಗಳ ಬೆಂಬಲಕೊಡುವುದು ಯಾವ ದುರ್ದೈವವೋ! ಎಂಥ ವಿಪರ್ಯಾಸವೋ ದೇವರೇ ಬಲ್ಲ

ವಿದ್ಯಾಭ್ಯಾಸ ಕ್ರಮದಲ್ಲಿ ಬದಲಾವಣೆ ಆಗಬೇಕು ಈ ಮಾತಿನಲ್ಲಿ ಎಲ್ಲರಿಗೂ ನಂಬಿಕೆಯಿದೆ ಆದರೆ, ಏಕಲಿಪಿಯಿಂದ ರಾಷ್ಟ್ರೀಯ ಐಕ್ಯ ಭಾವನೆ ಬೆಳೆಸುತ್ತೇವೆಂಬುದು ವಿಚಿತ್ರವಾಗಿ ತೋರುತ್ತದೆ ಹಿಂದೆ ವಿವಿಧ ಭಾಷೆಗಳಿದ್ದುವು. ವಿವಿಧ ಲಿಪಿಗಳೂ ಇದ್ದುವು. ಆದರೂ ಐಕ್ಯವಿತ್ತು ಈಗ ಯುರೋಪಿನಲ್ಲಿ ಬಹುಮಟ್ಟಿಗೆ ರೋಮನ್ ಲಿಪಿಯೇಯಿದೆ ಆದರೆ ಅಲ್ಲಿ ಐಕ್ಯ ಏನಾದರೂ ಇದಯೇ?

ಒಂದು ಲಿಪಿ ಹುಟ್ಟುವುದಕ್ಕೆ ಅನೇಕ ಸಹಸ್ರ ವರ್ಷಾಗಳಾದರೂ ಆಗಿರಬೇಕು ಮಾತೇ ಬಾರದ ಕಾಲದಿಂದ ಮನುಷ್ಯ ಮಾತು ಕಲಿಯುವ ವರೆಗ ಅವನು ಎಷ್ಟೋ ಕಷ್ಟ ದುಃಖ ಸಂಕಟವನ್ನು ಅನುಭವಿಸಿರಬೇಡ? ಹಾಗೆಯೇ ಮಾತು ಒಂದ ಮೇಲೆ ಈ ಲಿಪಿ ಹುಟ್ಟಲು ಮನುಷ್ಯ ಎಷ್ಟು ಕಷ್ಟಪಟ್ಟಿರಬೇಡ? ಎಷ್ಟು ಸಹಸ್ರ ವರ್ಷ ಮನುಷ್ಯ ತೊಂದರೆಗೆ ಈಡಾಗಿರಬೆ ಡ?

ಸಹಸ್ರಾರು ವರ್ಷಗಳ ಕಷ್ಟದಿಂದ ಸೃಷ್ಟಿಸಿದ ಈ ಲಿಪಿ ಸಂಜ್ಞೆಯನ್ನು ಬಿಟ್ಟು ಬಿಡುವುದು ಸೂಕ್ತವೇ? ಅದರಿಂದ ಭಿನ್ನತೆ ತೊಡೆಯುತ್ತದೆಯೆ? ಬರೀಲಿಪಿಯನ್ನು ಕಲಿತವೂತ್ರಕ್ಕೆ ಭಾಷೆ ಬಂತೆಂದು ಭ್ರಮಿಸಬಾರದು. ಲಿಪಿಯನ್ನು ಕಲಿಯುವುದು ಸುಲಭ ಆದರೆ ಭಾಷೆ ಬರುವುದು ಕಷ್ಟ. ಬೆಂಗಾಲಿ, ತಮಿಳು ಹೆಲಗೆಗಳನ್ನು ಲಿಪಿ ಕಲಿತು ಓದಬಹುದು ಆದರೆ ಬೆಂಗಾಲಿ, ತಮಿಳು ಭಾಷೆ ಲಿಪಿ ಬಂದ ಕೂಡಲೇ ಬರುವುದಿಲ್ಲ! ಎಂದ ಮೇಲೆ ಏಕ ಲಿಪಿಯಿಂದ ಐಕ್ಯ ಭಾವನೆ ಭದ್ರವಾಯಿತೆ?

ಈ ಭಾಷೆ ಮತ್ತು ಲಿಪಿಯ ವಿಚಾರ ಐಕ್ಯ ಭಾವನೆಗೆ ಹೇಗೆ ಸಹಾಯವಾಗುತ್ತದೆ? ಒಬ್ಬರ ಮಾತು ಇನ್ನೊಬ್ಬರಿಗೆ ತಿಳಿಯುವುದರಿಂದ ಒಬ್ಬರಿಗೊಬ್ಬರು ಹತ್ತಿರ ಬರುತ್ತಾರೆ ಆದರಿಂದ ಐಕ್ಯಕ್ಕೆ ದಾರಿಯಾಗಬಹುದು. ಆದರೆ ಆಡುವ ಮಾತಿಗೂ, ಕಲಿಯುವ ಭಾಷೆಗೂ ವ್ಯತ್ಯಾಸವಿದೆ ಭಾಷೆಗಳು ಉಪಯೋಗ ಎರಡು ರೀತಿಯಲ್ಲಿ ಆಗುತ್ತದೆ. ಒಂದು ಲೋಕೋಪಯೋಗ, ಇನ್ನೊಂದು ಭಾಷೋಪಯೋಗ. ಲೋಕೋಪಯೋಗಕ್ಕೆ ಆಡುವ ಮಾತು ಬಂದರೆ ಸಾಕು. ಮುಂಬಯಿ, ಅಲಹಾಬಾದ, ದೆಹಲಿಗೆ ಹೋಗುವ ನಮ್ಮ ವರ್ತಕರಿಗೆ ಹಿಂದೀ ಬೇಕೇ ಬೇಕು! ಲೋಕೋಪಯೋಗಕ್ಕೆ ಭಾಷಾಜ್ಞಾನ ಬೇಕು. ಆದರೆ ಸಾಹಿತ್ಯಾಭ್ಯಾಸ ಮಾಡುವಾಗ ಭಾಷೆಯ ಭಾಷೋಪಯೋಗವಾಗುತ್ತದೆ! ಭಾಷೆಯ ಭಾಷೋಪಯೋಗಕ್ಕೆ ಲಿಪಿಯ ಜ್ಞಾನ ಆಗಬೇಕಾಗಿಯೂ ಬೇಕು! ಕನ್ನಡವನ್ನು ದೇವನಾಗರಿಯಲ್ಲಿ ಬರೆದರೆ ಉತ್ತರದವರಿಗ ನಮ್ಮ ಮೇಲೆ ಅಕ್ಕರೆ ಉಕ್ಕಿ ಬಂದೀತೆಂದು ಭ್ರಮಿಸುವುದು ಮರುಳರು ನಾವಾಗಬಾರದು

ಜಾತೀಯತೆಗೆ ಪರಿಹಾರ ಹುಡುಕುವುದು ಸಹಸ್ರವಂಬ ರಾಕ್ಷಸನಿಗೂ ಸಾಧ್ಯವಾಗದ ಬೃಹತ್ ಸಮಸ್ಯೆ! ಅದು ರಾಜಕೀಯ ರಂಗದಲ್ಲಿ ರಾಜಕೀಯ ಮುಖಂಡರಿಂದ ಮಾತ್ರ ಖಂಡಿತವಾಗಿಯೂ ಸಾಧ್ಯವಾಗಲಾರದು. ಜನರ ಮನದ ಪರಿವರ್ತನೆ ಆಗದ ಹೊರತು ಈ ಎಲ್ಲ ರೀತಿ ಕೆಲಸಕ್ಕೆ ತೊಡಗಿದರೆ ಯಾವ ಯಶಸ್ಸೂ ದೊರೆಯಲಾರದು. ಇದು ಸ್ವತಃ ಸಿದ್ಧವಾದ ಮಾತು. ಈ ಸತ್ಯವನ್ನು ಆರಿತು ಅದಕ್ಕೆ ಅನುಗುಣವಾದ ರೀತಿಯಲ್ಲಿ ನಮ್ಮ ಸಮಸ್ಯೆಯನ್ನು ಪರಿಗಣಿಸಿಕೊಳ್ಳಬೇಕು. ಇದಕ್ಕೆ ಮನದ ಪರಿವರ್ತನೆಯೇ ದಾರಿ!

(ಪ್ರಜಾಮತದ ಕೃಪೆಯಿಂದ.)

ಅಮೃತ ಬಿಂದು

ಬಟ್ಟೆ ಉಡುವುದು ಮನುಷ್ಯನಿಗೆ ಅಗತ್ಯ. ಆದರೆ ಮೋಷಾಕೇ ಅತನ ಆತ್ಮವಾಗಬಾರದು.

o o

ಮೋಡ ಮುಸುಕಿದ್ದರೂ ಮೋಡದ ಹಿನ್ನೆಲೆಯಲ್ಲಿ ಸೂರ್ಯನಿದ್ದಾನೆಂಬುದನ್ನು ಮರೆಯಲಾಗದು.

o o

ನೀತಿಯಲ್ಲಿ ಸತ್ಯತೆ ಇದೆ, ಆರಸಿನದಲ್ಲಿ ದ್ವೇಶವಿದೆ, ಹಸುರಿನಲ್ಲಿ ವಿರಹವಿದೆ, ಕೆಂಪಿನಲ್ಲಿ ಕಾರುಣ್ಯವಿದೆ, ಬಿಳಿಯದರಲ್ಲಿ ಪ್ರೇಮವಿದೆ, ಕಪ್ಪಿನಲ್ಲಿ ಮೃತ್ಯುವಿದೆ.

o o

ಬಂಡವಳ ವಾದವು ಶಕ್ತರಿಂದ ಅಶಕ್ತರ ಶೋಷಣೆಯಾದರೆ ಸಮತಾವಾದವು ಅಶಕ್ತರಿಂದ ಶಕ್ತರ ಶೋಷಣೆಯಾಗಿದೆ.

o o

ನಿನ್ನ ಒಳ್ಳೆ ಹೆಸರಿನ ಬಗ್ಗೆ ಗಮನವಿರುವದಾದರೆ ಒಳ್ಳೆಯವರೊಡನೆ ಗೆಳೆತನ ಮಾಡಬೇಕು. ಇಲ್ಲದಿದ್ದರೆ ಏಕಾಂಗಿಯಾಗಿರುವದು ಉತ್ತಮ

o o

ಬಡವನಿಗೆ ಯಾವಾಗಲೂ ಔತಣ ದೊರೆಯುವದಿಲ್ಲ. ಶ್ರೀಮಂತನಿಗೆ ಯಾವಾಗಲೂ ದೊರೆಯುವ ಔತಣವನ್ನು ಅರಗಿಸಿಕೊಳ್ಳಲಾಗುವದಿಲ್ಲ

o o

ಈ ಜಗತ್ತು ಮಹಾತಕ್ಕಡಿಯಂತೆ

ಭಾರತ ನೇಪಾಳದಲ್ಲಿ 1951-53 ರ ತನಕ ಅಮೇರಿಕೆಯ ರಾಯಭಾರಿಯಾಗಿ ಸೇವೆಸಲ್ಲಿಸಿದ್ದು ಈಗ ಅಮೇರಿಕೆಯ ರಾಜ್ಯಾಂಗ ಉಪ ಕಾರ್ಯದರ್ಶಿಯಾಗಿರುವ ಶ್ರೀ ಚೆಸ್ಟರ್ ಬೌಲ್ಸ್.

ಒಂದೆಡೆ ಸೌಂದರ್ಯವಾದರೆ ಇನ್ನೊಂದೆಡೆ ಕುರೂಪ. ಒಂದೆಡೆ ತೃಪ್ತಿ ಇದ್ದರೆ ಇನ್ನೊಂದೆಡೆ ಅತೃಪ್ತಿ.

o o

ಚುಚ್ಚುವ ಮುಳ್ಳಿರುವ ಗಿಡದಲ್ಲಿ ಆಗಾಗ್ಯೆ ಅತಿ ಸುಂದರ ಹೂ ಅರಳುವದುಂಟು

o o

ಜೋರಾಗಿ ಕೂಗುವ ಗಾಡಿಯ ಚಕ್ರಕ್ಕೆ ಶೀಘ್ರವಾಗಿ ಎಣ್ಣೆ ಸವರಲ್ಪಡುತ್ತದೆ.

o o

ಮೊಲದ ಜೊತೆಯಲ್ಲಿ ಆಟವೂ ನಾಯಿಯ ಸಂಗಡ ಓಟವೂ ಬೇಕೆಂಬಂತಿರಬಾರದು

o o

ತನ್ನಿಂದ ತಾನು ಮೋಸ ಹೋದಷ್ಟು ಯಾವ ಮನುಷ್ಯನೂ ಇನ್ನೊಬ್ಬರಿಂದ ಮೋಸಹೋಗಿಲ್ಲ.

o o

ಕೇಳುವ ಕಿವಿ ಪೆಟ್ರೋಲ್ ಬೆಂಕಿಯಂತೆ ಚುರುಕಿರಬೇಕು, ಆಡುವ ನಾಲಗೆ ಹರಳೆಣ್ಣೆ ದೀಪದಂತೆ ನಿಧಾನವಿರಬೇಕು. ಬರುವ ಸಿಟ್ಟು ನೀರುಬಿದ್ದ ಬೆಂಕಿಯಂತಿರಬೇಕು

o o

ಮನುಷ್ಯನ ಯೋಗ್ಯತೆಯನ್ನು ಅತನ ಕೆಲಸದಿಂದ ಅಳೆಯಬೇಕಲ್ಲದೆ ಅತನ ಬಾಯಿಯ ವೇದಾಂತದಿಂದಲ್ಲ.

o o

ಅಚಲವಿಶ್ವಾಸ ಮತ್ತು ಕರ್ತವ್ಯ ದಕ್ಷತೆ ಇವೆರಡು ಎಂದೂ ಸೋಲಿಸಲ್ಪಡಲಾರದ ಯೋಧರು

ರೇವಣಾತಿಗಳ ಮೇಲೆ ಅಧಿಕ ಬಡ್ಡಿ

ಸೇವಿಂಗ್ಸ್ ಖಾತೆ	ಅಖಿಲ ಭಾರತ ಇಂಟರ್-ಬ್ಯಾಂಕ್ ಒಪ್ಪಂದದ ಮೇರೆಗೆ ಸೇವಿಂಗ್, ಖಾತೆಯ ಮೇಲಿನ ಬಡ್ಡಿಯ ದರವನ್ನು 3% ಕ್ಕೆ ಏರಿಸಲಾಗಿದೆ ಎಂದು ತಿಳಿಸಲು ನಮಗೆ ತುಂಬಾ ಸಂತೋಷವಾಗುತ್ತಿದೆ.
3 %	
ಕಾಯಂ ಠೇವಣಾತಿ	ಅಂತೆಯೇ ಕಾಯಂ ರೇವಣಾತಿಗಳ ಮೇಲೆ ಅತ್ಯಾಕರ್ಷಕ ಬಡ್ಡಿಯನ್ನು ನೀಡಲಾಗುವುದು—5 ವರುಷ ಅವಧಿಗೆ $5\frac{1}{4}$% ವರೆಗೆ.
$5\frac{1}{4}$%	ಹೆಚ್ಚಿನ ವಿವರಗಳಿಗೆ ನಿಮಗೆ ಸಮೀಪವಿರುವ ನಮ್ಮ ಶಾಖೆಗಳಲ್ಲೊಂದರಲ್ಲಿ ವಿಚಾರಿಸಿರಿ

ಸಿಂಡಿಕೇಟ್ ಬೇಂಕ್

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್,
ರಿಜಿಸ್ಟರ್ಡ್ ಆಫೀಸು 'ಮುಕುಂದ ನಿವಾಸ, ಉಡುಪಿ'
ಸ್ಥಾಪನೆ: 1925

ಡಿ. ಕೆ. ಭಾರದ್ವಾಜರ
ಇಂಗ್ಲಿಷ್, ಇಂಗ್ಲಿಷ್-ಕನ್ನಡ
ಡಿಕ್ಷನೆರಿ
ಬೆಲೆ: ರೂ ನಾಲ್ಕು
ಐದು ರೂಪಾಯಿ ಮನಿಯೊರ್ಡರ ಮಾಡಿದರೆ ಒಂದು ಪ್ರತಿಯನ್ನು ಬುಕ ಪೋಸ್ಟಿನಿಂದ ಕಳಿಸಲಾಗುವುದು.
ವಿಚಾರಿಸಿರಿ:
ನವಭಾರತ ಪುಸ್ತಕ ಭಂಡಾರ
ಉಡುಪಿ

Edited Printed & Published by K. H. Shetty, at the Navayuga Press, Udipi, S. India.

ರಾಷ್ಟ್ರೀಯ ವಾರಪತ್ರಿಕೆ. ಬೆಲೆ: 13 ನ.ಪೈಸೆ

ನವಯುಗ

KANNADA — NAVAYUGA — WEEKLY

ಸಂಪುಟ ೪೧ ಸಂಚಿಕೆ ೮ | ಉಡುಪಿ 26—10—1961 ಗುರುವಾರ | Vol. 41 No. 8

ನಿಮ್ಮ ಯಾವತ್ತೂ ಮುದ್ರಣ ಕೆಲಸಗಳಿಗೆ ದಯಮಾಡಿ ವಿಚಾರಿಸಿರಿ:

ನವಯುಗ ಪ್ರೆಸ್, ಉಡುಪಿ

ವಿದ್ಯಾರ್ಥಿಗಳಿಗೆ ಮತ್ತು ವಯಸ್ಕರಿಗೆ ಅತ್ಯುಪಯೋಗೀ ಪುಸ್ತಕ

ಸುಲಭದಲ್ಲಿ ಇಂಗ್ಲಿಷ್ (ಆಂಗ್ಲ ಸ್ವಯಂಬೋಧಿನಿ)

ನವಭಾರತ ಪುಸ್ತಕ ಭಂಡಾರ ಉಡುಪಿ

ಪೋರ್ಚುಗೀಸ ವಸಾಹತು ವಿವೇಚನೆ

ಸಂಯುಕ್ತ ರಾಷ್ಟ್ರ ಸಂಘದ ಸದಸ್ಯ ರಾಷ್ಟ್ರವಾದ ಪೋರ್ಚುಗಲ್ ತನ್ನ ವಸಾಹತುಗಳ ಸಂಬಂಧದ ಪರಿಪೂರ್ಣ ವಿವರಣೆಯನ್ನು ನೀಡಬೇಕಾಗಿದ್ದರೂ ಸಂಘದ ಆದೇಶವನ್ನದು ವಿರುತ್ತಲೇ ಮುನ್ನಡೆದಿದೆ. ಇಷ್ಟರಿಂದಲೇ ಶೃಷ್ಟವಾಗದ ಅಲ್ಲಿನ ಸಾಲಜಾರ ಸರಕಾರವು ತನ್ನ ವಸಾಹತುಗಳನ್ನು ಸೈನಿಕ ರಾಣಿಯನ್ನಾಗಿ ಮಾಡಿಕೊಂಡು ಅಲ್ಲಿ ರಕ್ತದ ಕಾಲುವೆಯನ್ನು ಹರಿಸುವ ಹೆವಣಿಕೆ ಮಾಡುತ್ತಿದೆ. ಅದು ಇಂತಹ ಕೃತ್ಯಗಳಿಂದ ಸಂಯುಕ್ತ ರಾಷ್ಟ್ರ ಸಂಘದ ಅಪಮಾನ ಮಾಡಿತನ್ನ ಬಡಾಯಿ ಕೊಚ್ಚಿಕೊಳ್ಳುತ್ತಿದೆ ಇದಕ್ಕೆ ಬೆಂಬಲವೆಂಬಂತೆ ಕೆಲವೊಂದು ಮಹಾ ರಾಷ್ಟ್ರಗಳೂ ಅದರ ಹಿಂದೆ ನಿಂತುಕೊಂಡಿರುವುದು ಈ ಪ್ರಶ್ನೆಯ ಪರಿಹಾರ ಮಾರ್ಗದಲ್ಲಿರುವ ಬಹುದೊಡ್ಡ ಕಂಟಕನೆನಿಸಿದೆ.

ಪೋರ್ಚುಗಲ್ಲಿನ ವಸಾಹತುಗಳ ಸಮಸ್ಯೆಗಳನ್ನು ಪರ್ಯಾಲೋಚಿಸುವ ಬಗ್ಗೆ ನವದೆಹಲಿಯಲ್ಲಿ ಅಂತಾರಾಷ್ಟ್ರೀಯ ಗೋಷ್ಠಿಯೊಂದು ಸಮಾವೇಶಗೊಂಡಿತ್ತು. ಪ್ರಜಾಧಿಕಾರದ ಈ ಇಪ್ಪತ್ತನೆಯ ಶತಮಾನದಲ್ಲಿಯೂ ವಸಾಹತುವಾದಕ್ಕೆ ಅಪ್ರತ್ಯಕ್ಷವಾಗಿ ಪ್ರೋತ್ಸಾಹ ನೀಡುವ 'ನಾಟೋ' ಒಡಂಬಡಿಕೆಯ ರಾಷ್ಟ್ರಗಳನ್ನು ಈ ಸಮ್ಮೇಳನವು ಕಟುವಾಗಿ ಟೀಕಿಸಿತು. ತನ್ನ ಮಿಲಿಟರಿ ಸ್ವರೂಪದ ಅಡಳಿತೆಯಿಂದಾಗಿ ಪೋರ್ಚುಗಲ್‌ನಲ್ಲಿರುವ ಸಾಲಜಾರರ ಸರಕಾರವು ಸಾಲ ತೆಗೆದು ದಿವಾಳಿ ತೆಗೆದಿದೆಯೆಂದೂ ನಾಟೋ ರಾಷ್ಟ್ರಗಳು ಅದಕ್ಕೆ ಅತ್ಯಧಿಕ ಪ್ರಮಾಣದಲ್ಲಿ ಆರ್ಥಿಕ ಹಾಗೂ ಸೈನಿಕ ಸಹಾಯವನ್ನು ಸಲ್ಲಿಸುತ್ತಿರುವುದರಿಂದಲೇ ಅದಿನ್ನೂ ಉಸಿರು ಹಿಡಿದಿದೆಯೆಂದೂ ಗೋಷ್ಠಿಯಲ್ಲಿ ಪ್ರಸ್ತಾಪ ಬಂದಿತ್ತು. ಈ ಬಲದಿಂದಾಗಿಯೇ ಅದು ತನ್ನ ವಸಾಹತುವಾದಕ್ಕೆ ಮತ್ತಷ್ಟು ಬಲವಾಗಿ ಅಂಟಿಕೊಳ್ಳುವಂತಾಗಿದೆಯೆಂಬುದು ಎಲ್ಲರಿಗೂ ತಿಳಿದಿರುವ ರಹಸ್ಯ.

ಭಾರತೀಯ ಶಾಸನ ವಿಭಾಗದ ಮಂತ್ರಿ ಶ್ರೀ ಅಶೋಕಸೇನರು ಹೇಳುವಂತೆ ಪೋರ್ಚುಗಲ್ಲು ಕಳೆದ ಕೆಲವು ವರ್ಷಗಳಿಂದಲೂ ಅಪೇಕ್ಷಿತ ವರದಿಯೊಪ್ಪಿಸದೆ ೧೦೦ ಸದಸ್ಯರಿರುವ ಯುಕ್ತರಾಷ್ಟ್ರ ಸಂಘವನ್ನು ಸಾರ್ವಜನಿಕವಾಗಿ ಅವಕ್ಷೇಳನ ಮಾಡುತ್ತಿದೆ. ಏನೇ ಇದ್ದರೂ ಅದು ತಕ್ಕ ವಿವರಣೆಗಳನ್ನು ಒಪ್ಪಿಸಲೇ ಬೇಕು. ಇದಕ್ಕೆ ತಪ್ಪಿತೆಂದರೆ ಸಂಘವಾದರೂ ಅದರ ಮೇಲೆ ಯುಕ್ತ ಕ್ರಮ ಕೈಗೊಳ್ಳಲೇ ಬೇಕು. ಮಾನವನ ಅಧಿಕಾರ, ಅಂತಾರಾಷ್ಟ್ರೀಯ ಶಾಂತಿ ಮತ್ತು ಸ್ಥಿರತೆ ಹಾಗೂ ಸಮಾಜಘಾತುಕವೆನಿಸುವ ವಸಾಹತುವಾದವನ್ನು 'ಅಂತರಿಕ ವಿಷಯ'ವೆಂದು ತಿಳಿದುಕೊಳ್ಳುವುದು ಸರ್ವಥಾ ಅಶಕ್ಯ.

ಆತ್ಮನಿರ್ಣಯದ ಆಧಾರದ ಮೇಲೆ ತನ್ನ ವಸಾಹತುಗಳ ನಡುವೆ ಮಾತುಕತೆಗೆ ಪೋರ್ಚುಗಲ್ಲು ತೊಡಗುವಂತೆ ಆದೇಶ ನೀಡುವ ಒಂದು ಗೊತ್ತುವಳಿಯನ್ನು ಆಫ್ರೋಏಶ್ಯಾ ರಾಷ್ಟ್ರಗಳು ಸಂ. ರಾ. ಸಂಘದ ಮುಂದೆ ತರಬೇಕು; ಒಂದು ವೇಳೆ ಪೋರ್ಚುಗಲ್ ಇದನ್ನು ನಿರ್ಲಕ್ಷ್ಯಿಸಿದರೆ, ಆಗ ಸಾಮೂಹಿಕ ಕಾರ್ಯಕ್ರಮ ಕೈಗೊಳ್ಳಬೇಕು ಎಂಬ ಸೂಚನೆಯೂ ಈ ಗೋಷ್ಠಿಯಲ್ಲಿ ಮುಂದೆ ಬಂತು. ಪ್ರಧಾನ ಮಂತ್ರಿ ನೆಹರುರವರು ಗೋವೆಯನ್ನು ಸೈನಿಕ ರಾಣಿಯನ್ನಾಗಿಡಲು ಪರದೇಶೀಯರಿಗೆ ಅವ್ವದಕೊಡುವುದಿಲ್ಲವೆಂದೂ, ಅದನ್ನು ಭಾರತದಲ್ಲಿ ಸೇರಿಸಿಕೊಳ್ಳಲು ಸೈನಿಕ ಕಾರ್ಯಾಚರಣೆಯನ್ನು ಕೈಗೊಳ್ಳುವ ವಿಚಾರವನ್ನು ಬಿಟ್ಟು ಕೊಡುವುದಿಲ್ಲವೆಂದೂ ಸ್ಪಷ್ಟವಾಗಿ ಉಚ್ಚರಿಸಿದ್ದು ಎಲ್ಲರ ಶ್ಲಾಘನೆಗೆ ಪಾತ್ರವಾಗಿದೆ ರೊಡೇಸಿಯಾದ ನಾಯಕ ಶ್ರೀ ಕೇಂಡಿಯವರು ನೆಹರೂರವರ ಉದ್ಗಾರವನ್ನು ಸ್ವಾಗತಿಸಿ, ಕ್ರಾಂತಿಗೆ ಗಾಂಧಿಯವರು ಸೂಚಿಸಿದ ಅಹಿಂಸಾ ಮಾರ್ಗವು ಸರ್ವೋತ್ತಮ ಸಾಧನವೆಂದು ಒಪ್ಪಿ, ಆಫ್ರಿಕೆಯಲ್ಲಿ ಬ್ರಿಟನ್ನು ವಿಫಲಗೊಂಡಿದೆಯೆಂದೂ ಅಂಗೋಲಾದಲ್ಲಾದ ನರಮೇಧಕ್ಕೆ ಅದು ಪ್ರತ್ಯಕ್ಷ ಹೊಣೆಗಾರವಿದೆಯೆಂದೂ ಪೋರ್ಚುಗಲ್ ಸಮುದ್ರಾಧಿಕಾರವಿರುವಲ್ಲಿ ಬ್ರಿಟಿಷ ರಣನೌಕೆಗಳ ಸಂಚಾರವನ್ನು ಜನತೆಯು ಪ್ರತಿಭಟಿಸಿದರೂ ಪ್ರಧಾನಿ ಮೈಕಮಿಲನರಿಂದನ್ನು ಗಮನಿಸದೆ ಜನಮತವನ್ನು ಹತ್ತಿಕ್ಕುವ ಸಾಹಸ ಮಾಡುತ್ತಿದ್ದಾರೆಂದೂ ಆರೋಪಿಸಿದರು.

ಪೋರ್ಚುಗಲ್ಲಿನಂತಹ ಒಂದು ಚಿಕ್ಕ ದೇಶ ಆಫ್ರಿಕೆಯಲ್ಲಿ ಅತ್ಯಾಚಾರವೆಸಗುವುದಕ್ಕೆ ನಾಟೋ ರಾಷ್ಟ್ರಗಳ ಸಹಾಯವೇ ಬಲವಿತ್ತಿದೆ; ನಾಗರಿಕತೆಯ ತುತ್ತತುದಿಯನ್ನಡರಿದ ಈ ರಾಷ್ಟ್ರಗಳು ನಿರಪರಾಧಿಗಳನ್ನು ಸಾಮೂಹಿಕವಾಗಿ ಕೊಲೆಗೆಯ್ಯುತ್ತಿರುವುದು ಲಾಂಛನಾಸ್ಪದ. ಗೋವೆ, ಅಂಗೋಲಾಗಳ ಸಮಸ್ಯೆ ಒಂದೇ. ನಾಗರಿಕ ಸಾಮಾಧಾರಿಗಳಾದವನ್ನೆ ಪ್ರಶಾಸಕರನ್ನು ಸಾಮೂಹಿಕವಾಗಿ ದಾರಿಗೆ ತರಬೇಕು; ಪ್ರತಿಪ್ರತ್ಯೇಕ ಕಾರ್ಯಾಚರಣೆ ಅನಪೇಕ್ಷಣೀಯ ಹಾಗೂ ಅನಗತ್ಯ.

ಪೋರ್ಚುಗಲ್ಲಿಗೆ ಸಹಾಯ ಮಾಡುವ ನಾಗರಿಕ ಜನರು ಅನಾಗರಿಕರಗಿಂತಲೂ ಕೆಟ್ಟವರು. ಅವರು ತಮ್ಮ ಸಹಚರರಾದ ಮಾನವರನ್ನು ವಧಿಸುವ ಕಲೆಯನ್ನು ಕಲಿಸುತ್ತಿದ್ದಾರೆ. ಇದರಿಂದಾಗಿ ಯಾವುದೇ ರೀತಿಯಿಂದ ವಸಾಹತುವಾದವನ್ನು ಮುರಿದು ಹಾಕುವುದು; ಮಾನವರ ಸಹಜ ಅಧಿಕಾರವನ್ನು ಪುನಃ ಸ್ಥಾಪಿಸುವುದು ಆದ್ಯ ಕರ್ತವ್ಯವೆಂಬುದರಿಂದ ಈ ಸಂಬಂಧದಲ್ಲಿ ಆಫ್ರೋಏಶ್ಯಾದ ರಾಷ್ಟ್ರಗಳು ಕೂಡಿಕೊಂಡು ಕಾರ್ಯೋನ್ಮುಖವಾಗಬೇಕೆಂದೂ ಭಾರತವು ಇದಕ್ಕೆ ಮಾರ್ಗದರ್ಶನ ನೀಡಬೇಕೆಂದೂ ಗೋಷ್ಠಿಯಲ್ಲಿ ಭಾಗವಹಿಸಿದ ಅನೇಕರು ಅಭಿಪ್ರಾಯಪಟ್ಟರು.

ಭಾರತದಲ್ಲಿರುವ ಪೋರ್ಚುಗೀಸ ವಸಾಹತು ಗೋವೆಯಲ್ಲಿ ಕೆಲವು ಸಾವಿರ ಗೋಮಾಂತಕರು ಜೇಲುಗಳಲ್ಲಿ ಕೊಳೆಯುತ್ತಿದ್ದಾರೆ. ೧೯೫೮ರ ವರೆಗೆ ಸುಮಾರು ೧೦ ಸಾವಿರ ಗೋಮಾಂತಕರನ್ನು ಸೆರೆ ಹಿಡಿದುದು ಮಾತ್ರವಲ್ಲ, ನೂರಾರು ಜನರ ಮೇಲೆ ಸೈನಿಕ ನ್ಯಾಯಾಲಯದಲ್ಲಿ ಕಟ್ಟಿ ಹೊರಿಸಿ, ಸುಮಾರು ೮೮ ವರ್ಷಗಳ ವರೆಗಿನ ವಿಭಿನ್ನ ಶಿಕ್ಷೆಯನ್ನು ವಿಧಿಸಲಾಗಿದೆ. ೧೪ ಗೋಮಾಂತಕರನ್ನೂ ಇಬ್ಬರು ಇತರರನ್ನೂ ಅಂಗೋಲಾ, ಕೇಪ್‌ವರ್ಡ್ ಮತ್ತು ಪೋರ್ಚುಗಲ್ಲಿಗೆ ಒಯ್ಯಲಾಗಿದೆ. ಇಂತಹ ಕ್ರೂರಾಚರಣೆಗೆ ಕಾರಣವಿಲ್ಲದಿಲ್ಲ. ೧೯೫೭ರಲ್ಲಿ ನಡೆದ ಗೋವಾ ವಿಮೋಚನಾ ಚಳುವಳಿಗೆ ಭಾರತ ಸರಕಾರವು ಮೂಕಪ್ರೇಕ್ಷಕರ ರೀತಿಯ ಪ್ರೋತ್ಸಾಹವನ್ನು ಕೊಡಲಿಲ್ಲ. ಇದರಿಂದಾಗಿ, ತಮ್ಮನ್ನು ಕೇಳುವವರೇ ಇಲ್ಲವೆಂಬ ಬಾವನೆ ಸಾಲಜಾರರ ದೊರೆಯ ಮನಸ್ಸಿನಲ್ಲಿ ದೃಢವಾಗಿ ಬೇರು ಬಿಟ್ಟಿದೆ; ಗೋವೆಯಲ್ಲಿ ಮಾತ್ರವಲ್ಲ ತನ್ನ ಉಳಿದ ವಸಾಹತುಗಳಲ್ಲಿಯೂ ದಮನ ಕಾರ್ಯವನ್ನು ಅದು ತೀವ್ರಗೊಳಿಸಿದೆ. ಸದ್ಯಕ್ಕೆ ತುಸು ಪರಿವರ್ತನೆಗೊಂಡ ಭಾರತದ ನೀತಿ ಹಾಗೂ ಅಂತಾರಾಷ್ಟ್ರೀಯ ಗೋಷ್ಠಿಯ ಪ್ರಭಾವವು ಪೋರ್ಚುಗಲ್ಲಿನ ಮೇಲೆ ಬೀಳದುಳಿಯದು. ತನ್ನ ಮರ್ದನ ನೀತಿಯು ಮುಂದೆ ಸಫಲದಾಯಕವಾಗದೆಂಬ ಸತ್ಯ ಅದಕ್ಕೆ ಹೊಳೆಯದಿರದು. ಆದರೂ ಅವ್ಯಕ್ತವಾಗಿ ಇಂತಹ ಉಪನಿವೇಶ ನೀತಿಯನ್ನು ಬೆಂಬಲಿಸುವ ಸೈನಿಕ ಬಲ ಮಾತ್ರವಿರುವ, ನೈತಿಕ ಬಲ ಪತಿತಗೊಂಡಿರುವ ರಾಷ್ಟ್ರಗಳ ಸಹಾಯಹಸ್ತವಿರುವಾಗ, ಪೋರ್ಚುಗಾಲದ ನಿಲುಮೆ ಸುಲಭದಲ್ಲಿ ಬದಲಾಗುವುದೆಂಬುದು ನಿರೀಕ್ಷೆಗೆ ಮೀರಿದುದು.

ಹಾಗಿದ್ದರೂ ಸಂಯುಕ್ತರಾಷ್ಟ್ರ ಸಂಘದ ನೆರವಿನಿಂದ ವಸಾಹತುಗಳೆಲ್ಲವು ಸ್ವಾತಂತ್ರ್ಯಗಳಿಸುವಂತೆ ಆಫ್ರೋಏಶ್ಯಾ ರಾಷ್ಟ್ರಗಳು ಒಮ್ಮನದಿಂದ ಶ್ರಮಿಸಿದರೆ ಆ ನಿರೀಕ್ಷಿತ ಸುದಿನವು ಬಹುದೂರ ಉಳಿಯಲಾರದು.

ಕಾಂಗ್ರೆಸ್ ಪಕ್ಷದ ಸ್ಪರ್ಧಾಳುಗಳು

ಚುನಾವಣೆಗಳು ಸಮೀಪಿಸುತ್ತಿರುವಂತೆ ಕಾಂಗ್ರೆಸ್ಸಿನ ಟಿಕೇಟುಗಳನ್ನು ಯಾರು ಯಾರಿಗೆ ನೀಡಬೇಕು ಎಂಬುದರ ಬಗ್ಗೆ ತರ್ಕ—ವಿತರ್ಕಗಳು ಬೃಹತ್ ಪ್ರಮಾಣದಲ್ಲಿ ನಡೆಯತೊಡಗಿದೆ. ಫೆಬ್ರವರಿ ತಿಂಗಳಲ್ಲಿ ಸಾರ್ವತ್ರಿಕ ಚುನಾವಣೆಗಳು ನಡೆಯಲಿದ್ದುದರಿಂದ ನವಂಬರ ಅಂತ್ಯದೊಳಗಾದರೂ ಕೇಂದ್ರ ಚುನಾವಣಾ ಸಮಿತಿಯು ಕಾಂಗ್ರೆಸ್ಸಿನ ವತಿಯಿಂದ ಸ್ಪರ್ಧಿಸುವವರ ಪಟ್ಟಿಯನ್ನು ಬಹಿರಂಗ ಗೊಳಿಸುವುದಕ್ಕೆ ಯೋಚಿಸುತ್ತಿದೆ.

ಒಡಿಸ್ಸ ಮತ್ತು ಕೇರಳಗಳಲ್ಲಿ ವಿಧಾನ ಸಭಾಸದರ ಅವಧಿಯು ಮುಗಿಯದಿರುವುದರಿಂದ ಈ ಬಾರಿ ಅಲ್ಲಿ ವಿಧಾನ ಸಭೆಗೆ ಚುನಾವಣೆಗಳು ನಡೆಯದೆ ಕೇವಲ ಲೋಕ ಸಭೆಗೆ ಮಾತ್ರ ಸದಸ್ಯರನ್ನು ಆರಿಸಲಾಗುವುದು. ಆಗ ಭಾರತದಲ್ಲಿ (೪೪ರ ರಾಜ್ಯಗಳಲ್ಲಿ) ಒಟ್ಟು ೨೯೬೮ ವಿಧಾನ ಸಭಾ ಸದಸ್ಯರನ್ನೂ ೪೯೭ ಲೋಕಸಭಾ ಸದಸ್ಯರನ್ನೂ ಈ ಬಾರಿ ಆರಿಸಬೇಕಾಗುವುದು.

ಕಾಂಗ್ರೆಸ್ ಚುನಾವಣಾ ಸಮಿತಿಯ (ಕೇಂದ್ರ) ಸಭೆಯು ನವಂಬರ ೨೦ಕ್ಕೆ ಪ್ರಾರಂಭವಾಗುವುದು. ಪ್ರಾದೇಶಿಕ ಕಾಂಗ್ರೆಸ್ಸಿನ ಚುನಾವಣಾ ಸಮಿತಿಯಿಂದ ಒಮ್ಮತವಾಗಿ ಸಿಫಾರಸು ಮಾಡಲ್ಪಟ್ಟ ಪೂರ್ಣಯಾದಿಯು ಕೇವಲ ೫ ರಾಜ್ಯಗಳಿಂದ ಬಂದಿದೆಯೆಂದೂ ಇನ್ನೈದು ರಾಜ್ಯಗಳಿಂದ ಅಂಶಿಕಯಾದಿ ತಲಪಿದೆಯೆಂದೂ ತಿಳಿಯುತ್ತದೆ. ಯಾದಿಯನ್ನು ರಚಿಸುವಲ್ಲಿ ಕಾಂಗ್ರೆಸ್ಸಿನೊಳಗೆ ತೀವ್ರವಾದ ಘನ್ನ ಭಿಪ್ರಾಯ, ಬಿರುಕುಗಳು ಎದ್ದುದ ಈ ಬಾರಿಯ ಒಂದು ವೈಶಿಷ್ಟ್ಯ. ಈ ಪಟ್ಟಿಯನ್ನು ತಯಾರಿಸುವಲ್ಲಿಯೇ ವೈಪರೀತ್ಯಗಳು ಬಹಳಷ್ಟು ನಡೆದಿದೆಯೆಂಬುದನ್ನು ಅಲ್ಲಗಳೆಯುವಂತಿಲ್ಲ.

ಸಾಮಾನ್ಯವಾಗಿ ಎಲ್ಲ ರಾಜ್ಯಗಳ ಪಟ್ಟಿಯಲ್ಲೂ ತೀವ್ರವಾದ ಮತಭೇದವಿದೆ.

(೧೨ನೇ ಪುಟ ನೋಡಿರಿ)

ಸಂತಾನ ಫಲ!

ಶ್ರೀ "ಕು. ಗೋ."

ಕಾರ್ಯಾಲಯವನ್ನು ಬಿಟ್ಟೊಡನೆಯೇ ನೀದ ಮನೆಗೆ ಹೋಗುವ ಅಭ್ಯಾಸವನ್ನದು. ಅದು ಬಿಟ್ಟು ಸಿಕ್ಕಿದ ನಾಲ್ಕಾರು ಅಧಿಕಪ್ರಸಂಗಿ ಗೆಳೆಯರೊಡನೆ ಸೇರಿಕೊಂಡು ಹರಟೆಹೊಡೆಯುತ್ತಾ ಬೀದಿ ಬೀದಿ ಸುತ್ತಿ ಸಿಕ್ಕಿದ ಹೋಟೆಲುಗಳಿಗೆಲ್ಲಾ ನುಗ್ಗಿ ಬರುವ ಸದ್ಬುದ್ಧಿ ನನಗೆ ಬಂದಿರಲಿಲ್ಲ ಅಭೀಸು ಬಿಟ್ಟರೆ ಮನೆಯಲ್ಲಲ್ಲದೆ ಬೇರೆ ಯಾವ ಕಡೆಯೂ ನನಗೆ ಅಂಥ ಕೆಲಸಗಳೂ ಇರುವುದಿಲ್ಲ. ನನ್ನ ಮನೆಗೂ ಕಾರ್ಯಾಲಯಕ್ಕೂ ಇರುವಂಥ ದೂರ ಕೇವಲ ಐದು ಮೈಲು. ಈ ಐದು ಮೈಲುಗಳಲ್ಲಿ ಒಂದೂವರೆ ಮೈಲುಗಳ ವರೆಗೆ ನಾನು ಕಡ್ಡಾಯವಾಗಿ ನಡೆಯಲೇ ಬೇಕಾಗಿತ್ತು, ಮನೆಯಿಂದ. ಸಂಜೆ ಐದೂಕಾಲು ಘಂಟೆಗೆ ಪೆಟ್ಟನ್ನು ಕಿಸೆಗೆ ಸೇರಿಸಿ ಐದೂವರೆಯ ಸಿಟಿ ಬಸ್ಸಿನಲ್ಲಿ ಕುಳಿತರೆ ಐದೂಮುಕ್ಕಾಲಿಗೆ ಬಸ್ಸಿನಿಂದಿಳಿದು ಆರೂಕಾಲು ಘಂಟೆಯಾಗುವಷ್ಟರಲ್ಲಿ ಗೂಡನ್ನು ಸೇರಿಕೊಳ್ಳುವ ಅಭ್ಯಾಸವಾಗಿ ಹೋಗಿತ್ತು ನನಗೆ.

ಎಂದಿನಂತೆಯೇ ಅಂದು ಕೂಡಾ ಬಸ್ಸಿನಿಂದಿಳಿದವನೇ ಮನೆಯ ಕಡೆಗೆ ಹೆಜ್ಜೆಗಳನ್ನಿಡಲಾರಂಭಿಸಿದೆ. ಸ್ವಲ್ಪ ದೂರ ಹೋಗುತ್ತಲೇ ಹತ್ತಾರು ಜನಗಳ ಸಣ್ಣ ಗುಂಪೊಂದು ಕಣ್ಣಿಗೆ ಬಿತ್ತು. ಎಲ್ಲೋ ಮಿನಿನ ಕುಕ್ಕೆ ಬಂದಿರಬಹುದೆಂದು ಊಹಿಸಿದೆ. ಏಕೆಂದರೆ ಪ್ರತಿನಿತ್ಯ ಸಂಜೆ ಅಲ್ಲಿಗೆ ಕರಾವಳಿಯಿಂದ ಮಿನಿನ ಹೆಡಿಗೆಗಳು ಬರುವುದು ಸರ್ವೇಸಾಮಾನ್ಯ. ಹೆಂಗಸರು ಮಿನಿನ ಹೆಡಿಗೆಯನ್ನು ಹೊತ್ತುತಂದು ಅಲ್ಲಿ ಇಳಿಸಿದರೆ ಸಾಕು, ಊರು, ಹಳ್ಳಿಯ ಜನಗಳೆಲ್ಲಾ ಬೆಲ್ಲಕ್ಕೆ ನೊಣ ಮುತ್ತಿದಂತೆ, ಹಿಂಡಕ್ಕೆ ಕಾಗೆ ಮುತ್ತಿದಂತೆ ಮುತ್ತುತ್ತಾರೆ. ಅಲ್ಲಿಯ ಜನಗಳ ಗಲಾಟೆಯೂ ನಾಯಿಗಳ ಜಗಳದ ಹಾಗೆ ಇರುತ್ತದೆ. ಆದರೆ ನಾನು ಊಹಿಸಿದಂತೆ ಆ ಗುಂಪಿನ ಮಧ್ಯೆ ಮಿನಿನ ಕುಕ್ಕೆ ಇರಲಿಲ್ಲ. ಅದರೂ ಅವರೆಲ್ಲಾ ಯಾವುದೋ ಒಂದು ವಿಚಾರವನ್ನು ತಮ್ಮ ತಲೆಯೊಳಕ್ಕೆ ಬಿಟ್ಟು ಕಂಗಾಲಾದವರಂತೆ ಕಂಡು ಬಂತು. ಒಮ್ಮೊಮ್ಮೆ 'ಛೆ, ಛೆ, ಅನ್ಯಾಯ ಅನ್ಯಾಯ', 'ಹೀಗಾಗಬಾರದಿತ್ತು', 'ಇದನ್ನು ಯಾರೂ ನಂಬಲಿಕ್ಕೆಲ್ಲ', 'ಅಲ್ಲ ಅದಕ್ಕೇನಾಗಿತ್ತು ಹಾಗೆ ಮಾಡಲು', 'ಜಗಳವೇನಾದರೂ ಆಗಿರಬಹುದೇ?'— ಎಂಬಿತ್ಯಾದಿ ಶಬ್ದಾವಳಿಗಳು ಒಂದರ ಹಿಂದೊಂದು ಹೊರಬಂದುವು. ಮುಖಗಳೆಲ್ಲಾ ಪೆಚ್ಚಾಗಿದ್ದುವು. ಕಣ್ಣುಗಳು ಆಶ್ಚರ್ಯವನ್ನು ಸೂಚಿಸುತಿದ್ದುವು. ಅಂತೂ ನನಗೆ ಅವರ ಸಮಸ್ಯೆಯ ತಲೆಬುಡ ಒಂದೂ ಅರ್ಥವಾಗಲಿಲ್ಲ. ಯಾರೊಡನೆಯಾದರೂ ಕೇಳಿದರೆ ಏನಾದರೂ ತಿಳಿದುಕೊಂಡಾರು ಎಂಬ ಆ ಸಾಹಸವನ್ನು ಮಾಡಲಿಲ್ಲ. ಆದರೆ ನನಗೆ ಬೇಕಾದ ವ್ಯಕ್ತಿ ಸಿಕ್ಕಿತು ಅಲ್ಲಿ. ಗೆಳೆಯ ಶಂಕರ ಕೂಡಾ ಆ ಗುಂಪಿನಲ್ಲಿ ನಿಂತು ಬಾಯಗಲಿಸಿ, ಕಣ್ಣುಬಿಟ್ಟು, ಕಿವಿನಿಮಿರಿಸಿ ಅಲ್ಲಿಯ ಜನಗಳ ಮಾತುಗಳನ್ನು ಕೇಳುತಿದ್ದ. ಅವನ ತಂಗಿಯ ಚುಂಗನ್ನು ಹಿಡಿದೆಳೆದು ಸ್ವಲ್ಪ ದೂರಕ್ಕೆ ಕರೆದುಕೊಂಡು ಹೋಗಿ 'ಏನಯ್ಯ ಸಮಾಚಾರ? ಯಾಕೆಲ್ಲಾ ಇಷ್ಟು ಜನ ಇಲ್ಲಿ ನಿಂತಿದ್ದಾರೆ?' ಎಂದು ಕೇಳಿದೆ.

"ನಿನಗೆ ಗೊತ್ತೇ ಇಲ್ವೇನು ಮಾಂಯಾ?" ಎಂದು ನನಗೇ ಮರುಪ್ರಶ್ನೆ ಹಾಕಿದ.

"ಗೊತ್ತಿದ್ದರೆ ನಿನ್ನ ಹತ್ತಿರ ಯಾಕೆ ಕೇಳಲಿ?"

"ಹೋಗಲಿ ಬಿಡು. ರಾಮರಾಯರ ಹೆಂಡತಿ ಸತ್ತು ಹೋದರಂತೆ" ಎಂದ.

ನನಗೆ ಈ ಮಾರ್ತೆ ಕೇಳಿ ಅಷ್ಟೇನೂ ಆಶ್ಚರ್ಯವಾಗಲಿಲ್ಲ. ಹುಟ್ಟು ಸಾವು ಲೋಕದಲ್ಲಿ ಇದ್ದದ್ದೇ. ಆಕೆಗೂ ಆಯುಸ್ಸು ಮುಗಿದಿರಬೇಕು, ಸತ್ತಳು.

"ಅದಕ್ಕೆ ನೀವೆಲ್ಲಾ ತಲೆ ಕೆಡಿಸಿಕೊಳ್ಳಬೇಕಾದ ಪ್ರಮೇಯವೇನು?" ಎಂದು ಕೇಳಿದೆ.

"ತಲೆ ಕೆಡಿಸಿಕೊಳ್ಳುವುದಾ? ನೀನೇ ನಾದರೂ ಆಕೆಯನ್ನು ನೋಡಿದ್ದರೆ ತಲೆ ತಲೆ ಹೊಡೆದುಕೊಳ್ಳುತಿದ್ದೆ."

"ಅಂದರೆ?"

"ಅಂಥಾ ಹೆಂಗಸು ಇನ್ನು ಬೇಕೂಂದರೆ ಸಿಕ್ಕಿಯಾರೇ! ಹೆಣ್ಣೆಂದರೆ ಚೆನ್ನದಂಥಾ ಹೆಣ್ಣು. ರಾಮರಾಯರಿಗೆ ಅಂಥಾ ಹೆಂಡತಿ ಇನ್ನು ಯಾವ ಜನ್ಮದಲ್ಲೂ ಸಿಕ್ಕಲಿಕ್ಕಿಲ್ಲ."

"ಆದ್ದರಿ, ಸತ್ತದ್ದು ಹೇಗೆ? ವಯಸ್ಸಾಗಿತ್ತೇ? ಖಾಯಿಲೆ ಏನಾದರೂ ಇತ್ತೇ?'

"ವಯಸ್ಸೂ ಇಲ್ಲ, ಖಾಯಿಲೆಯೂ ಇಲ್ಲ, ಮಣ್ಣೂ ಇಲ್ಲ. ಹೆಚ್ಚೆಂದರೆ ಇಪ್ಪತ್ತೈದು ವರ್ಷವಾಗಿರಬಹುದು. ಏನು ಗುಣ, ಏನು ನಡತೆ, ಏನು ಮಾತು, ಏನು ರೂಪು! ಯಾವುದಾದರೂ ಮದುವೆ ಮುಂಜಿಗಳ ಸಭೆಗೆ ಆಕೆ ಬಂದರೆ ಸಾಕು ಅಲ್ಲಿಯ ಕಳೆಯೇ ಕಳೆ. ಆ ಮುಖದಲ್ಲಿ ಕಾಠಿಣ್ಯದ ಅಥವಾ ದುಃಖ ಕೋಪಗಳ ಛಾಯೆಯೇ ಇಲ್ಲ. ಯಾವಾಗ ನೋಡಿದರೂ ಮುಗುಳ್ನಗು. ಮಕ್ಕಳು ಮುದುಕರಲ್ಲಿ ತುಂಬ ದಯೆ. ಆಕೆಯನ್ನು ಕಂಡರೆ ಯಾವ ಹೆಂಗಸೂ ಮಾತನಾಡಿದೆ, ತಲೆಯ ಮೇಲೆ ಕೈಯಿಟ್ಟು, ಆಶೀರ್ವದಿಸದೆ ಹೋಗುತ್ತಿರಲಿಲ್ಲ. ಆದರೆ ಏನು ಮಾಡಲಿಕ್ಕಾಗುತ್ತೆ? ಆಕೆಗೆ ಅದರಲ್ಲೇ ವೈತ್ಯ ಬರೆದಿತ್ತೋ ಏನೋ?'

"'ಅದರಲ್ಲೇ' ಅಂದರೆ?"

'ಬಾವಿಗೆ ಬಿದ್ದು ಪ್ರಾಣಹತ್ಯೆ ಮಾಡಿಕೊಂಡದ್ದು ಆಕೆ" ಎಂದ ಶಂಕರ.

ರಾಮರಾಯರೆಂಬ ವ್ಯಕ್ತಿ ಇದ್ದಾರೆಂದೂ, ಅವರಿಗೆ ಅನುರೂಪಳೂ ಗುಣಸಂಪನ್ನೆಯೂ ಆದ ಹೆಂಡತಿ ಇದ್ದಾರೆಂದೂ, ಆ ಹೆಂಡತಿ ಯಾವುದೋ ಕಾರಣದಿಂದ ಬಾವಿಗೆ ಬಿದ್ದು ಸತ್ತರೆಂದೂ ಅದಕ್ಕಾಗಿ ಈ ಜನಗಳು ಶೋಕಿಸುತ್ತಿದ್ದಾರೆಂದೂ— ಇಷ್ಟು ವಿಷಯಗಳು ಶಂಕರನ ಮಾತಿನಿಂದ ನನಗೆ ಅರ್ಥವಾಯ್ತು. ರಾಮರಾಯರೆಂದರೆ ಯಾರೋ ಸ್ವಲ್ಪ ದೊಡ್ಡ ವ್ಯಕ್ತಿಯಾಗಿರಬೇಕು, ಬೇಕಾದಷ್ಟು ಆಸ್ತಿಪಾಸ್ತಿ ಮನೆಮಠಗಳಿರುವ ಶ್ರೀಮಂತ ವ್ಯಕ್ತಿಯಾಗಿರಬೇಕ, ಗಂಡನೆಂಡತಿ ಚೆನ್ನಾಗಿದ್ದಿರಬೇಕು, ಹೀಗಿದ್ದೂ ಆ ಹೆಂಡತಿ ಬಾವಿಗೆ ಹಾರಿ ಪ್ರಾಣ ಬಿಟ್ಟಿದ್ದರಿಂದ ಈ ಜನಗಳಿಗೆಲ್ಲಾ ಆಶ್ಚರ್ಯವಾಗಿರಬೇಕೆಂದು ಊಹಿಸಿದೆ ನಾನು. ಹಾಗಲ್ಲದೆ ಯಾವು

(೧೧ನೇ ಪುಟ ನೋಡಿರಿ)

ದ. ಕ. ಸ್ಪೆಶಲ್ ಅಸಿಸ್ಟಾಂಟ್ ಕಮಿಶನರ ಕೋರ್ಟ್‌ನಲ್ಲಿ (ಟೆನೆನ್ಸಿ)

O. P. No. 1199/1961

ಬಾಬು ಯಾನೆ ನಾರಾಯಣ —ಅರ್ಜಿದಾರ

ಶ್ರೀನಿವಾಸ. ನಾರಾಯಣನವರ ಮಗ. ಕಾರ್ಕಳ ತಾಲೂಕು ಮುದ್ರಾಡಿ ಗ್ರಾಮದ ಗೋಳಿಕಟ್ಟೆ ಯೆಂಬಲ್ಲಿರುವವ —ಎದ್ರಿ

ಸದ್ರಿ ಎದ್ರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ:

ನೀವು ಅರ್ಜಿದಾರನ ಮಗಳ ಜಾಲಗೇಣಿ ಹತ್ತಿನಿಂದ ಅನುಭವಿಸಿ ಬರುವ ಮುದ್ರಾಡಿ ಗ್ರಾಮದ ಆಸ್ತಿ ಬಾಬ್ತು ನೀವು ಅರ್ಜಿದಾರನಿಗೆ ಕಳೆದ ರಾವಣಿ ಸಂಗರದ ಮಾಸ ಬ. ೩೦ರ ವ್ಯಾವೆಗೆ ಕೊಡತಕ್ಕ ಜಾಲಗೇಣಿಯನ್ನು ಬಾಕಿ ಮಾಡಿ ಕೊಂಡಿರುವುದರಿಂದಲೂ ಆಸ್ತಿಯನ್ನು ಸಾಗುವಳಿ ಮಾಡದೆ ಬಿಟ್ಟಿದ್ದರಿಂದಲೂ ಸದ್ರಿ ಆಸ್ತಿ ವಗೈರೆ ಸ್ವಾಧೀನ ಕೇಳಿ ಅರ್ಜಿದಾರನು ದಾಖಲು ಮಾಡಿದ ಸದ್ರಿ ಅರ್ಜಿಯು ತಾರೀಕು 6-11-61 ಕ್ಕೆ ಸದ್ರಿ ಕೋರ್ಟ್‌ನಲ್ಲಿ ಕಾರ್ಕಳ ಪೊಲ್ಕಾಂನಲ್ಲಿ ನಿಮ್ಮ ಹಾಜ್ರಿ ಬಗ್ಗೆ ಇಟ್ಟಿದೆ. ಆಕ್ಷೇಪಣೆ ಇದ್ದೆ ಸದ್ರಿ ದಿನ 10ಗಂಟೆಗೆ ಮೇಲ್ಕಂಡ ಕೋರ್ಟ್‌ನಲ್ಲಿ ಹಾಜ್ರಾಗಿ ಉದಾಹರಣೆ ಕೊಡತಕ್ಕದ್ದು ತಪ್ಪಿದ್ರೆ ನಿಮ್ಮ ಗೈರು ಹಾಜ್ರಿಯಲ್ಲಿ ಅರ್ಜಿ ತೀರ್ಮಾನವಾಗುವುದು ಎಂತ ಕೋರ್ಟ್ ಹುಕುಂ ಈ ಮೂಲಕ ತಿಳಿಸಿಯದೆ.

K. V. Kamath

Advocate for Petitioner

Karkal, 18—10—61.

ಸ್ಥಾಪನೆ: 1924

ದಿ ಕರ್ಣಾಟಕ ಬೇಂಕ್ ಲಿಮಿಟೆಡ್

(ಶೆಡ್ಯೂಲ್ಡ್ ಬೇಂಕ್)

ರಿಜಿಸ್ಟರ್ಡ್ & ಹೆಡ್ ಆಫೀಸು: ಡೊಂಗರಕೇರಿ, ಮಂಗಳೂರು—3.

ಈ ಕೆಳಗಿನ ಏರಿಸಿದ ಬಡ್ಡಿದರಗಳಲ್ಲಿ ಠೇವಣಾತಿಗಳನ್ನು ಸ್ವೀಕರಿಸಲಾಗುವುದು.

ಒಂದರಿಂದ ಎರಡು ತಿಂಗಳುಗಳ ವರೆಗೆ	....	ಸಾ॥ ಸೇಕಡಾ 3-75	ನ.ಪೈಸೆ
ಮೂರರಿಂದ ಐದು ತಿಂಗಳುಗಳ ವರೆಗೆ	....	,, 4-25	,,
ಆರು ತಿಂಗಳುಗಳಿಂದ 12 ತಿಂಗಳುಗಳ ವರೆಗೆ	....	,, 4-50	,,
12 ತಿಂಗಳು ಮಿಕ್ಕೆ 24 ತಿಂಗಳುಗಳ ವರೆಗೆ	....	,, 4-75	,,
24 ತಿಂಗಳು ಮಿಕ್ಕೆ 48 ತಿಂಗಳುಗಳ ವರೆಗೆ	....	,, 5-00	,,
48 ತಿಂಗಳುಗಳಿಗೆ ಮಿಕ್ಕಿ	....	,, 5-25	,,

ಸೇವಿಂಗ್ಸ್ ಬ್ಯಾಂಕ್ ಬಡ್ಡಿ ದರವನ್ನು ಸಾ. ಸೇಕಡ 2½% ರಿಂದ 3¼%ಗೆ ಏರಿಸಲಾಗಿದೆ.

THE KARNATAKA BANK LIMITED.

ESTD. 1921 ಸ್ಥಾಪನೆ

NAVAYUGA

KANNADA WEEKLY, UDIPI.

Founder:

Late Sri A. B. Shetty

Former Minister for Public Health, Govt. of Madras & Govt. of Mysore.

ನವಯುಗ

ರಾಷ್ಟ್ರೀಯ ವಾರಪತ್ರಿಕೆ

ಉಡುಪಿ

ಗೌರವ ಸಂಪಾದಕರು:
ಎಸ್. ಗೋಪೀಚಂದ ರಾವ್, ವಿದ್ವಾನ್.
ಬಿ. ರಾಮರಾಯ ಶೆಟ್ಟಿ, ಬಿ. ಎ., ಎಲ್.ಟಿ.

ಸಂಚಾಲಕ ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ.

ಚಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-50
ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3-50

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ. 0-13

ಚಂದಾಹಣವನ್ನಾಗಲೀ ಚಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ನಾವು ಜೀವಿಸುವುದು ಏಕೆ?

ಆಲ್ಬರ್ಟ್ ಐನ್‌ಸ್ಟೀನ್

ಶಕ್ತಿಯನ್ನೂ ಸಮಗ್ರ ಮಾನವ ಜೀವನವನ್ನೂ ತುಚ್ಛವೆಂದು ಹೀಳುವವನು ನಿರ್ಭಾಗ್ಯನು ಮಾತ್ರವಲ್ಲ, ಆತನು ಜೀವಿಸಿಕೊಂಡಿರುವುದಕ್ಕೇನೇ ಅಯೋಗ್ಯನು ಒಂದೆರ್ಪ್ಪ ಕಾಲಕ್ಕಾಗಿಯೇ ನಾವು ಈ ಭೂಮಿಗೆ ಬಂದಿಳಿದಿದ್ದೇವೆ ಯಾಕೆ ಬಂದಿದ್ದೇವೆ, ಯಾವ ಉದ್ದೇಶ ನಮ್ಮದಿದೆ ಎಂಬುದು ಯಾರಿಗೂ ತಿಳಿಯದು. ಈ ಪ್ರಶ್ನೆಯನ್ನು ಗಂಭೀರವಾಗಿ ಪರ್ಯಾಲೋಚಿಸದೆ ಹೋದರೂ ವ್ಯಾವಹಾರಿಕ ದೃಷ್ಟಿಯಿಂದ ನಮ್ಮ ಜೀವನವ ಮಾನವ ಸಮಾಜಕ್ಕಾಗಿದೆಯೆಂದು ನನಗನಿಸ್ತ್ತದೆ ನಮ್ಮ ಶಾಂತಿಯ ಮೂಲವಾದ ಮುಗುಳ್ನಗುವಿಗಾಗಿ ನಾವು ಜೀವಿಸಿದ್ದೇವೆ. ವ್ಯಕ್ತಿಗತ ಪರಿಚಯವಿಲ್ಲದೆ ಹೋದರೂ ಸಹಸ್ರಾರು ನಂನಾರಿಯರು ನಮ್ಮ ದೃಢ ಪ್ರೇಮ ಬಂಧನದಿಂದ ಬಂಧಿತರಾಗಿದ್ದಾರೆ, ಇವರಿಗಾಗಿ ನಾವು ಬದುಕಿದ್ದೇವೆ

ನನ್ನ ಆಂತರಿಕ ಮತ್ತು ಬಾಹ್ಯವಿಕಾಸವು ಅಸಂಖ್ಯಾತ ಜೀವಿತ—ಮೃತ ಮನುಷ್ಯರ ಪರಿಶ್ರಮ ಫಲವೆಂದು ಪ್ರತಿನಿತ್ಯ ಹಲವಾರು ಬಾರಿ ನೆನಕೆಯಾಗುತ್ತದೆ ನಾನು ಈ ವ್ಯಕ್ತಿಗಳಿಂದ ಸತ್ಫಲಗಳನ್ನು ಗಳಿಸಿದಂತೆಯೇ ನಾನೂ ಬೇರೆಯವರಿಗಾಗಿ ಸುಫಲಗಳನ್ನು ನೀಡಬೇಕು

ನನಗೆ ಸಾದಾ ಮತ್ತು ಸರಳ ಜೀವನವೆಂದರೆ ಇಷ್ಟ ನನಗಾಗಿ ಆವಶ್ಯಕತೆಗಿಂತ ಹೆಚ್ಚು ಬೇರೆಯವರನ್ನು ನೋಯಿಸಿದೆನೆಂಬುದನ್ನು ನೆನೆದೊಡನೆಯೇ ನನಗೆ ದುಃಖವಾಗುತ್ತದೆ ವರ್ಗಗತ ಪೃಥಕತ್ವವು ಅವಿಚಾರವೆಂದು ನನ್ನ ಮತ ಇದರ ಅಂತಿಮ ಪರಿಣಾಮವು ಶಾರೀರಿಕ ಬಲ ಪ್ರಯೋಗದಲ್ಲಿಯಾಗುತ್ತದೆ ಸರಳಜೀವನವೇ ಪ್ರತ್ಯೇಕ ವ್ಯಕ್ತಿಗೆ ಸುಖಸ್ಕಾಯವಾಗಿದೆ

ದಾರ್ಶನಿಕ ದೃಷ್ಟಿಯಿಂದ, 'ಮನುಷ್ಯ ಮಾತ್ರನ ಸ್ವಾತಂತ್ರ್ಯ'ದಲ್ಲಿ ನನಗೆ ವಿಶ್ವಾಸವಿಲ್ಲ "ಮನುಷ್ಯ ತನ್ನ ಇಚ್ಛಾನುಸಾರ ಕಲಸಮಾಡುತ್ತಾನೆ, ಆದರೆ, ಆತ ಯಾವಾಗ ಹೇಗೆ ಯಾವ ಇಚ್ಛೆಯನ್ನು ಪೂರ್ತಿಗೊಳಿಸುವನು ಎಂದು ತಿಳಿಯುವುದು ಆತನ ಶಕ್ತಿಗೂ ಅಧಿಕಾರಕ್ಕೂ ಮೀರಿದುದು" ಎಂದು ಶೋಪೆನ್ ಹಾವರನು ಹೇಳುತ್ತಾನೆ

ಸಾಮಾನ್ಯವಾಗಿ, ತನ್ನ ಹಾಗೂ ವಿಶ್ವದ ಅಸ್ತಿತ್ವದ ರಹಸ್ಯ ಅಥವಾ ಜೀವನದ ಉದ್ದೇಶಗಳ ಸಂಶೋಧನೆಯು ನಿರರ್ಥಕ ಆದರೂ, ಪ್ರತಿಯೊಬ್ಬನೂ ತನ್ನ ವ್ಯವಹಾರ ಮತ್ತು ವಿಚಾರಗಳನ್ನು ಪ್ರಭಾವಿತಗೊಳಿಸುವ ಒಂದಲ್ಲ ಒಂದು ಆದರ್ಶವನ್ನಿಟ್ಟುಕೊಳ್ಳುತ್ತಾನೆ. ಶಾರೀರಿಕ ಸುಖ ಮತ್ತು ವಿಶ್ರಾಂತಿಯೇ ಜೀವನದ ಏಕಮಾತ್ರ ಲಕ್ಷ್ಯವೆಂದು ತಿಳಿಯಲ್ಪಡಬಾರದು ನನಗೆ ಜೀವನ ಪಥವನ್ನು ತೋರಿಸಿದ, ನಿರಂತರ ನನ್ನ ಜೀವನವನ್ನು ಮುಂದುವರಿಸುವಲ್ಲಿ ಸಹಾಯಕವಾದ, ನನಗೆ ಸಾಹಸ ಮತ್ತು ಪ್ರೇರಣೆಗಳನ್ನು ನೀಡಿದವುಗಳೆಂದರೆ, ಸತ್ಯ, ಸೌಂದರ್ಯ ಮತ್ತು ಮಹಾನತೆಗಳು

ಕಲೆ ಮತ್ತು ವಿಜ್ಞಾನ ಕ್ಷೇತ್ರದಲ್ಲಿ ಅದೃಶ್ಯದ ಅನುಸಂಧಾನದಿಂದ ವಿಮುಖನಾದ ಜೀವನ ನನಗೆ ನಿಸ್ಸಾರವೆಂದೆನಿಸುತ್ತದೆ. ಧನ, ಸಂಪತ್ತಿ, ವಸ್ತು ಜಗತ್ತುಗಳ ಸಾಫಲ್ಯ ಮತ್ತು ವಿಲಾಸ ಸಂಬಂಧಿ ಸಾಮಾನ್ಯ ಉದ್ದೇಶಗಳು ತಿರಸ್ಕಾರ್ಯವೆನೆ

ವ್ಯಕ್ತಿತ್ವದಲ್ಲಿ ಎರಡು ಪರಸ್ಪರ ವಿರೋಧೀಭಾವ ದಾರೆಗಳ ಅಸ್ತಿತ್ವವಿರುವುದರ ಅನುಭವ ನನಗಾಗುತ್ತಿದೆ ಮೊದಲನೆಯದು ನ್ಯಾಯತ್ವಪಾಲನೆ ಮತ್ತು ಹೊಣೆಗಾರಿಕೆಯ ನಿರ್ವಾಹ, ಎರಡನೆಯದು ಮನುಷ್ಯನ ಸಾಹಜಿಕ ಪ್ರಯೋಜನದೋದದ ಅಬವ ಈ ಯೆಲ್ಲ ಬಂದನಗಳಿದ್ದರೂ ಒಂದು ವಿಚ್ಛಿನ್ನ ಮತ್ತು ನಿಸ್ಸಂಗ ವ್ಯಕ್ತಿತ್ವದ ಅಸ್ತಿತ್ವವನ್ನು ನಾನು ಸದಾ ಮಾಡಿಕೊಳ್ಳುತ್ತ ಬಂದಿದ್ದೇನೆ

ನಾನು ಗಣತಂತ್ರದಲ್ಲಿ ವಿಶ್ವಾಸವಿಟ್ಟಿದ್ದೇನೆ ಪ್ರತಿಯೊಬ್ಬನಿಗೂ ಸಂವ್ಯಾಸ ದೊರೆಯಬೇಕು, ಆದರೂ, ಯಾರೊಬ್ಬನಿಗೂ 'ಪೂಜನೀಯ'ನೆಂದು ವಿಶೇಷಣ ಹಚ್ಚಬಾರದು ಹೀಗೆ ಮಾಡಿದರೆ, ಅದನ್ನು ವಿಧಿಯ ವಿಡಂಬನೆಯೆನ್ನಬೇಕಾಗುವುದ ನನ್ನ ನಿಕಟವರ್ತಿಗಳಿಂದ ನನಗೆ ಅಧಿಕಾರಾಧಿಕ ಸಮ್ಮಾನ ಲಭಿಸಿದೆ, ನನ್ನ ಕೃತಿತ್ವದ ಪುರಸ್ಕಾರ ರೂಪದಲ್ಲಿ ಈ ಹೊಗಳಿಕೆ ಸಿಕ್ಕಿದೆಯೆಂದು ನಾನು ತಿಳಿಯುವುದಿಲ್ಲ ನಾನು ಅವಿರತ ಪರಿಶ್ರಮದಿಂದ ಯುಗಾಂತರಕಾರೀ ಸತ್ಯಗಳನ್ನು ಕಂಡುಕೊಂಡಿದ್ದು ಇವನ್ನು ತಿಳಿದುಕೊಳ್ಳವಲ್ಲಿ ಬಹು ಸಂಖ್ಯೆಯ ಜನರು ಆಗ್ರಹ ಪಡುತ್ತಿದ್ದರು ನನ್ನ ಪ್ರಶಂಸೆಯೂ ದರೂ ವಿಶ್ವಕೀರ್ತಿಯೂ ದರೂ ಇದೇ ಕಾರಣದಿಂದ ಜನಿಸಿದುವು.

ಗೂಢ ಮತ್ತು ಜಟಿಲಕಾರ್ಯಗಳ ಸಫಲತೆಗಾಗಿ ವಿಚಾರ ಮತ್ತು ಕರ್ಮಗಳನ್ನು ಯಾರೊಬ್ಬರಿಂದ ಕಾರ್ಯಗತಗೊಳಿಸಲಾರರು ಆದರೆ, ಪರಿಚಾಲಿತಗೊಂಡ ಜನರಿಗೆ ತಮ್ಮ ನಾಯಕನನ್ನು ಅರಿಸುವಲ್ಲಿ ಸಂಪೂರ್ಣ ಸ್ವಾತಂತ್ರ್ಯವಿರಬೇಕು ಏಕ ನಾಯಕವಾದವು ಖಂಡಿತಕ್ಕೂ ಪತಿತಗೊಳ್ಳುವರು ಪ್ರತಿಭಾಶಾಲಿ ಪ್ರಶಾಸಕನ ನಂತರವೇ ಕಠೋರ ಶಾಸಕನು ಆವಿರ್ಭವಿಸುವನು—ಇದು ನಿಯಮ. ಇದರಿಂದಾಗಿಯೇ ಇಟಲಿ, ರಶ್ಯಗಳ ರಾಜಕೀಯ ಪರಿಸ್ಥಿತಿ ನನ್ನನ್ನು ವಿರೋಧಿಸುತ್ತೇನೆ. ಯುರೋಪಿನ ಪ್ರಜಾಸತ್ತೆಯಲ್ಲಿ ಜನತೆಗೆ ಅಸ್ಥೆಯಿಂದು ಕಡಿಮೆಯಾಗಿದೆ ಅಲ್ಲಿಯ ಉನ್ನತ ಅಧಿಕಾರ ವರ್ಗವು ನಿಕನಾಯಕವಾದವನ್ನು ಬೆಂಬಲಿಸುವಂತಿರುವುದೇ ಇದಕ್ಕಾಕಾರಣವಾಗಿದೆ ನಿರ್ವಾಚನ ಮಂಡಲದಲ್ಲಿ ಜನ ಸ್ವತಂತ್ರ ಮತ್ತು ಮೌಲಿಕ ವಿಚಾರಗಳಿಗೆ ಅಸ್ಪದವಿಲ್ಲ

ಗಣತಂತ್ರದಲ್ಲಿ ಯಾವ ದೋಷವೂ ಇಲ್ಲ ಮನುಷ್ಯ ಜೀವನ ನೌಕೆಯನ್ನು ಒಚ್ಚುವುದಕ್ಕೆ ರಾಷ್ಟ್ರಕ್ಕಿಂತ ವೈಯಕ್ತಿಕ ಸೃಜನಾಶಕ್ತಿ, ಜಾಗ್ರತೆ ಮತ್ತು ಮಹಾನತೆಗಳು ಅತಿ ಉಪಯುಕ್ತವಾಗಿದೆ. ಸಾಮರಿಕ ಅಸ್ತ್ರ ಶಸ್ತ್ರಗಳ ಪ್ರತಿದ್ವಂದ್ವತೆಯಂದರೆ ನನಗಾಗದು ಯಾರಾದರೂ ರಣಬೇರಿಯ ತಾಳಕ್ಕೆ ಸರಿಯಾಗಿ ನಡೆಯ ತೊಡಗಿದನೆಂದರೆ ನನಗೆ ಜುಗುಪ್ಸೆ ಬರುವುದು. ಯುದ್ಧವು ಅತಿ ನಿಷ್ಕೃಷ್ಟವಾದುದು, ಆದುದರಿಂದದು ಅತಿ ಶೀಘ್ರದಲ್ಲಿ ದೂರವಾಗಬೇಕು ನನ್ನ ಶರೀರವನ್ನು ಯಾರಾದರೂ ಕತ್ತರಿಸಿ ಹೋಳಾಗಿಸಲಿ, ಆದರೆ, ಯುದ್ಧಂತಹ ಘೃಣಾಸ್ಪದ ಕಾರ್ಯಕ್ಕೆ ಕೈಹಾಕದಿರಲಿ, ಅದಕ್ಕೆ ಅಂಟಿಕೊಳ್ಳದಿರಲಿ

ಇವೆಲ್ಲವೂ ಅಮಾನವೀಯ ವಿಚಾರಗಳಂತಿದ್ದರೂ ಮಾನವ ಸಮಾಜದ ವಿಕಾಸದಲ್ಲಿ ನನಗೆ ವಿಶ್ವಾಸವಿದೆ ರಾಜಕೀಯಕ ಮತ್ತು ವ್ಯಾಪಾರಿಕ ಸ್ವಾರ್ಥಲೋಲುಪರು ಜನಸಾಮಾನ್ಯರ ನಿರ್ಮಲ ಬುದ್ಧಿಯನ್ನು ವಿದ್ಯಾಲಯ ಹಾಗೂ ವರ್ತಮಾನ ಪತ್ರಿಕೆಗಳಮಾಧ್ಯಮದಿಂದ ನಿರಂತರ ಕಲುಷಿತಗೊಳಿಸದಿದ್ದರೆ, ಯುದ್ಧಮಾಬಶಪವು ವಿಲುಪ್ತವಾಗುವುದು ಎಂದು ನನ್ನ ಅಭಿಪ್ರಾಯ

ಪರಮಾತ್ಮನ ಭೂತಿಯೇ ಮನುಷ್ಯನಿಗೆ ಶ್ರೇಷ್ಠವಾದುದು ಇದರಲ್ಲಿಯೇ ಶಿಲ್ಪ, ಕಲೆ ಮತ್ತು ವಿಜ್ಞಾನದ ಬೀಜವಡಗಿದೆ. ಈ ರಹಸ್ಯಾನುಭೂತಿಯಿಂದ ಅಭೂತರಾಗದಿರುವವರು ಮೃಗವ್ರಾಯರು ರಹಸ್ಯವೇ ಧರ್ಮದ ಮೂಲ ವಿಶ್ವಾಸ ಮತ್ತು ಮನುಷ್ಯರ ಅಂತಸ್ಸ ಚೇತನ ಹಾಗೂ ಉಜ್ವಲತಮ ಸೌಂದರ್ಯದ ವಿಕಾಸಾನುಭೂತಿಯೇ ಅಸ್ತ್ರವಾಗಿ ಧರ್ಮಿಕ ಮನೋವೃತ್ತಿಯಾಗಿದೆ ಇದನ್ನು ಒಪ್ಪುವವರಲ್ಲಿ ನಾನು ನಿಷ್ಠಾವಂತ ಧಾರ್ಮಿಕನಿದ್ದೇನೆ ತಾನು ನಿರ್ಮಿಸಿದ ಜೀವಜಂತುಗಳನ್ನು ದಂಡಿಸುವ ಇಲ್ಲವೆ ಪುರಸ್ಕರಿಸುವ ದೇವರಲ್ಲಿ ನನಗೆ ವಿಶ್ವಾಸವಿಲ್ಲ, ಆತನ ಕಲ್ಪನೆಯನ್ನೂ ನಾನು ಮಾಡಲಾರೆ ದೇಹಾಂತವಾದ ಒಳಕವೂ ಜೀವಜಂತುಗಳು ಜೀವಂತವಿರುವುದರಲ್ಲೂ ನನ್ನ ನಂಬುಗೆಯಿಲ್ಲ. ಈ ಅವೈಜ್ಞಾನಿಕ ವಿಶ್ವಾಸವನ್ನು ದುರ್ಬಲಚಿತ್ತವಿರುವ ಮನುಷ್ಯರು ಹರಡಿಸಿದ್ದಾರೆ.

ಅನಂತ ಜೀವನ ಜಿಜ್ಞಾಸೆ, ಸೃಷ್ಟಿಯ ಮೂಲ ಸ್ರೋತ ಮತ್ತು ವಿಶ್ವವ್ಯಾಪಿ ಅಖಂಡ ಚೇತನದಂತಹ ಗೂಢ ಸತ್ಯವನ್ನು ನಾನು ಎಳ್ಳಷ್ಟಾದರೂ ಗಳಿಸಿರುವುದಾದರೆ, ನನ್ನ ಜೀವನವನ್ನು ಸಫಲವೆಂದು ಭಾವಿಸೆನ.



ಸಮುದ್ರ ತಳದಲ್ಲಿ ಆಕಾಶಬಾಣಗಳನ್ನು ಹಾರಿಸಲು ಅನುಕೂಲವಾದ ಉಪಕರಣಗಳು

41 ವರ್ಷಗಳ ಭದ್ರ ಹಾಗೂ ಸಮರ್ಥ ಬೇಂಕಿಂಗ್ ಸೇವೆ

ದಿ. ಪಾಂಗಾಳ ನಾಯಕ್ ಬೇಂಕ್ ಲಿ.

ನಮ್ಮ 3 ವರ್ಷ ವ್ಯಾದೆಯ ಕೇಶ್ ಸರ್ಟಿಫಿಕೇಟುಗಳಲ್ಲಿ ರೇವಣೆ ಮಾಡಿದರೆ ಒಡ್ಡಿ ಸೇಕಡಾ 5ರಂತೆ ರೂ 87—00 3 ವರ್ಷಗಳ ಅಂತ್ಯದಲ್ಲಿ ಬಡ್ಡಿ ಕೂಡಿ ರೂ 100 -00 ಬರುವುದು

ಕರೆ, ಚಿಕ್ಕ ವ್ಯಾದೆ, ಸಿರಖು ರೇವಣಾತಿಗಳ ಮೇಲೆ ಆಕರ್ಷಣೀಯ ಶರ್ತಗಳು ಬಡ್ಡಿ ಸೇಕಡಾ 5½ರ ವರೆಗೆ

ತಾ 1—4—1961ರಿಂದ ಸೇವಿಂಗ್ಸ್ ಬೇಂಕ್ ಖಾತೆಗಳ ಮೇಲೆ ಬಡ್ಡಿ ಸೇಕಡಾ 3ರಂತೆ

THE PANGAL NAYAK BANK LTD.

Estd: 1920

ದುರ್ಬಲ ವರ್ಗಗಳ ಹಿತಸಾಧನೆ

ಸ್ವಯಂಪೂರ್ಣವಾದ ಗ್ರಾಮಗಳಲ್ಲಿ ಸಾಂಪ್ರದಾಯಿಕ ಜೀವನವನ್ನು ನಡೆಸಿಕೊಂಡು ಬರುತಿದ್ದ ಭೂಮಿಯನ್ನು ಪಡೆದುಕೊಂಡಿರುವ ಮತ್ತು ಒಕ್ಕಲುತನದ ಕೂಲಿನಾಲೆಗಳನ್ನು ಮಾಡಿಕೊಂಡಿರುವ ಜನರು ಹಳ್ಳಿಯಲ್ಲಿ ಪರಸ್ಪರ ಹೊಂದಾಣಿಕೆಯಿಂದ ಬಾಳುತಿದ್ದರು ಆದರೆ, ಹಳೆಯ ಸಂಪ್ರದಾಯಗಳು ದೂರವಾಗಿರುವ ಇಂದಿನ ದಿನಗಳಲ್ಲಿ ಇಂತಹರ ಆರ್ಥಿಕ ಮಟ್ಟ ಬಹು ಹೀನ ಸ್ಥಿತಿಗೆ ಇಳಿದಿದೆ. ವ್ಯಾಪಾರಿಕ ಬೆಳೆಗಳ ಅಭಿವೃದ್ಧಿಯಾದಂತೆ, ಭೂಸುಧಾರಣೆಯು ವ್ಯವಹೃತವಾದಂತೆ ಭೂಮೂಲಿಕರನ್ನು ತಮ್ಮ ಜೀವನಕ್ಕೆ ಹೊಂದಿಕೊಂಡಿದ್ದ ರೈತಜನರು ತಮ್ಮ ಕಾಲುಗಳ ಮೇಲೆಯೇ ನಿಲ್ಲಬೇಕಾಗಿದೆ. ಭೂಸುಧಾರಣೆಯಿಂದ ಸಿಡಿದು ಹೋಗಬಹುದಾದ ಭೂಮಿಯಿಂದಾಗಿ ಕೃಷಿಯ ಕೂಲಿಗಾರರು ಉದ್ವಿಗ್ನರಾಗಬೇಕಾದ ಪ್ರಸಂಗ ಬಂದೇ ಬರುತ್ತದೆ. ನಮ್ಮ ಜನಸಂಖ್ಯೆಯಲ್ಲಿ ನೂರಕ್ಕೆ ಸುಮಾರು ೭೫ರಷ್ಟು ಕೃಷಿಯ ಕ್ಷೇತ್ರವನ್ನೇ ಜೀವನ ನಿರ್ವಾಹಕ್ಕಾಗಿ ಕೊಂದಿಕೊಂಡಿರುವುದರಿಂದ, ಇವರ ಜೀವನಾಧ್ಯಯನವೇ ಭಾರತೀಯ ಜೀವನದ ಮೇಲೆ ಬೀರಬಲ್ಲ ಪ್ರತಿಕಿರಣವಾಗಬಲ್ಲುದು. ಇದಕ್ಕಾಗಿ ಗ್ರಾಮೀಣ ಜನತೆಯ ಸ್ಥಿತಿಗತಿಗಳನ್ನು ಅರಿತುಕೊಂಡು ಅವರ ಆರ್ಥಿಕ ಪ್ರಗತಿಯನ್ನು ಹೇಗೆ ಸಾಧಿಸಬಹುದು ಎಂದು ತಿಳಿಸಲು ಭಾರತ ಸರಕಾರವು ಶ್ರೀ ಜಯಪ್ರಕಾಶನಾರಾಯಣ ಸಮಿತಿಯನ್ನು ನೇಮಿಸಿತ್ತು. ಈ ಸಮಿತಿಯ ವರದಿಯಿಂದ ರೈತ ಜನರ ಆರ್ಥಿಕ ಸ್ಥಿತಿಗತಿಗಳು ಹಿಂದಿಗಿಂತ ನಿಸ್ಸೃಷ್ಟವಿನೆಯೆಂಬುದರ ಮನವರಿಕೆಯಾಗುವುದು.

ಸಮಾಜದ ದುರ್ಬಲ ವರ್ಗಗಳ ಉನ್ನತಿಯನ್ನು ಸಮಾಜದ ವಿಕಾಸ ಯೋಜನೆ ಮತ್ತು ಸಂಚಾಯತ ರಾಜ್ಯಗಳ ಮೂಲಕ ಹೇಗೆ ಸಾಧಿಸ ಬಹುದು ಎಂದು ಸಲಹೆ ಮಾಡುವುದೂ ಈ ಸಮಿತಿಯ ಕರ್ತವ್ಯವಿತ್ತು. ಜಯಪ್ರಕಾಶ ಸಮಿತಿಯು ನಡೆಸಿದ ಅಧ್ಯಯನದಿಂದ ಭಾರತದ ಗ್ರಾಮಾಂತರ ಪ್ರದೇಶದ ನಗ್ನ ಚಿತ್ರವು ಬಯಲಿಗೆ ಬರುವಂತಾಯಿತು. ಗ್ರಾಮೀಣ ಜನಸಂಖ್ಯೆಯಲ್ಲಿ ನೂರಕ್ಕೆ ೮೦ರಷ್ಟು ವಾರ್ಷಿಕ ರೂ.೧೦೦ ಕ್ಕಿಂತ ಕಡಿಮೆಗಳಿಸುತ್ತದೆ; ಸೇಕಡಾ ೫೦ರಷ್ಟು ರೂ. ೫೦ಕ್ಕಿಂತ ಕಡಿಮೆ ಸಂಪಾದಿಸುತ್ತದೆ. ಸೇಕಡಾ ೧೦ರಷ್ಟು ರೂ. ೨೫ನ್ನೂ ಸಂಪಾದಿಸುವುದಿಲ್ಲ! ಇದಕ್ಕಾಗಿ ಕಡಿಮೆ ಆದಾಯವಿರುವವರ ಸಲುವಾಗಿ ಪೂರಕ ಉದ್ಯೋಗಗಳನ್ನು ಒದಗಿಸಿ ಕೊಟ್ಟು ಅವರಗಳಿಕೆ ಹೆಚ್ಚುವಂತೆ ಮಾಡಬೇಕು. ಪರಿಶಿಷ್ಟ ವರ್ಗ ಮತ್ತು ಗುಡ್ಡಕಾಡುಗಳ ಜನಾಂಗದವರು ಕೊನೆಯ ಸಾಲಿನಲ್ಲೇ ಸೇರುತ್ತಾರೆ.

ಸಮಾಜವಿಕಾಸ ಯೋಜನೆಯು ಮೊದಮೊದಲು ಇಡಿಯಗ್ರಾಮದ ಆರೋಗ್ಯ ಶಿಕ್ಷಣ, ಉದ್ದಿಮೆ ಮತ್ತು ಕೃಷಿ ಮೊದಲಾದ ಸರ್ವತೋಮುಖ ಅಭಿವೃದ್ಧಿ ಯೋಜನೆಯನ್ನೇ ತನ್ನ ಗುರಿಯನ್ನಾಗಿಟ್ಟುಕೊಂಡಿದ್ದಿತ್ತು. ಆದರೆ, ಇತ್ತೀಚಿಗಿನ ಕೆಲವು ವರ್ಷಗಳಿಂದ ಈ ಉದ್ದೇಶದಲ್ಲಿ ಮಹತ್ವಪೂರ್ಣ ಬದಲಾವಣೆಯಾಗಿ, ಕೃಷಿ ವ್ಯವಸಾಯದತ್ತ ವಿಶೇಷ ಗಮನ ಹರಿಸತೊಡಗಿದೆ. ಈ ಕಾರಣದಿಂದ ಭೂಮಿಯಿರುವ ಮೂಲಿಕರೇ ಇಂತಹ ಯೋಜನೆಯ ಲಾಭವನ್ನು ಹೆಚ್ಚಾಗಿ ಸಡೆಯುವಂತಾಗಿದೆ; ಇದರಿಂದ ಗ್ರಾಮದ ದುರ್ಬಲ ವರ್ಗಗಳ ಉನ್ನತಿಗೆ ಯಾವ ಸಹಾಯವೂ ಲಭಿಸಿದಂತಾಗಲಿಲ್ಲ ಸಮಾಜ ವಿಕಾಸ ಯೋಜನೆಯ ಅರ್ಥ ಸಂಕುಚಿತಗೊಂಡುದರಿಂದಲೇ ಲಕ್ಷ್ಯಾಂತರ ಹಳ್ಳಿಗರ ಜೀವನ ಮಟ್ಟ ಏರದೇ ಉಳಿಯಿತೆಂಬುದು ಈಗ ನಡೆದ ಅಧ್ಯಯನದಿಂದ ಗೊತ್ತಾಗುವುದು.

ಈ ವಿಮರ್ಶೆಯು ದೋಷದೂರವಾದುದಲ್ಲ. ಕೃಷಿಗೆ ನೀಡಿದ ಪ್ರಾಧಾನ್ಯವನ್ನು ತಪ್ಪೆಂದು ಹೇಳುವಂತಿಲ್ಲ. ದೇಶದಲ್ಲಿ ಆಹಾರದ ಅಭಾವನ್ನು ತುಂಬಿಕೊಳ್ಳುವುದುನಮ್ಮ ಆದ್ಯ ಕರ್ತವ್ಯವೆಂಬುದರಿಂದ ಒಕ್ಕಲುತನಕ್ಕೆ ಪ್ರಾಶಸ್ತ್ಯ ನೀಡಿದುದು ನ್ಯಾಯವೇ ಇದರಿಂದಭೂಮೂಲಿಕರ ಹಿತವೂತ್ರಸಾಧಿಸಿದಂತಾಯ್ತು; ದುರ್ಬಲ ಜನಾಂಗದವರಿಗೇನೂ ಪ್ರಯೋಜನವಾಗಲಿಲ್ಲ ಎಂಬ ವಾದವಾದರೂ ನಿರ್ದುಷ್ಟವಾದುದಲ್ಲ ಒಂದು ಬೆಳೆ ಬೆಳೆವಲ್ಲಿ ಹೆಚ್ಚು ಬೆಳೆ ಬೆಳೆಯಿತೆಂದರೆ, ಅಲ್ಲಿ ಉದ್ಯೋಗಾವಕಾಶ ಹೆಚ್ಚುವುದು ಸ್ವಾಭಾವಿಕ. ಹೆಚ್ಚಿನ ನಮ್ಮ ರಾಜ್ಯಗಳಲ್ಲಿ ಹಳ್ಳಿಗರಿಗೆ ಇಡಿಯ ವರ್ಷ ಉದ್ಯೋಗ ದೊರಕುವುದಿಲ್ಲ; ಈ ಕಾರಣದಿಂದಲೇ ಅವರಲ್ಲಿ ಬಡತನ ತಲೆದೋರುವುದು ಎಂಬದು ಒಪ್ಪತಕ್ಕ ಮಾತು. ಇದಕ್ಕಾಗಿ ವಿಶಾಲ ರೂಪದ ಪರಿಹಾರ ಕಾರ್ಯವೇರ್ಪಡಬೇಕು; ಆದರೆ, ಇವು ಬರಗಾಲ ಕಾಮಗಿರಿಯಂತಾಗಬಾರದು

ಕುಟೀರೋದ್ಯೋಗಗಳಿಗೆ ಪ್ರೋತ್ಸಾಹವನ್ನಿತ್ತು ಅದರಿಂದ ಅವ್ಯಕ್ತ ಶಕ್ತಿಯು ಬೆಳಗುವ ಅವಕಾಶವಿತ್ತು ತನ್ಮೂಲಕ ಅವರ ಆದಾಯ ಹೆಚ್ಚುವಂತೆ ಮಾಡಬೇಕೆಂಬುದು ಅಂಶತಃ ಒಪ್ಪತಕ್ಕುದೇ. ಆದರೆ, ಇಂತಹ ಉದ್ಯೋಗಗಳಲ್ಲಿ ಅವರು ಗಳಿಸಿರುವ ಕೌಶಲ್ಯವು ಅಪೂರ್ಣವಾಗಿದ್ದರೆ ಪ್ರಯೋಜನವಾದರೂ ಏನು? ಮಾರುಕಟ್ಟೆಯಲ್ಲಿ ಕುಶಲತೆಯಿಂದ ನಿರ್ಮಾಣಗೊಂಡವುಗಳಿಗೆ ಮಾತ್ರ ಬೇಡಿಕೆಯಿರುವುದಲ್ಲವೆ? ಗ್ರಾಮ ಸಹಕಾರಿ ಸಂಘಗಳು ಇತ್ತ ತೀವ್ರ ಗಮನವೀಯ ಬೇಕಾಗುತ್ತದೆ. ವಿಕೇಂದ್ರೀಕರಣವಲ್ಲಿ ಆಸಕ್ತರಾದ ಜಯಪ್ರಕಾಶರು ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿಯ ಕಾರ್ಯವನ್ನು ಉದ್ಯಮಿಗಳ ಕೈಗೆಕೊಡದೆ ಪಂಚಾಯತುಗಳ ಕೈಗೆ ಒಪ್ಪಿಸಬೇಕೆಂದೂ ಇವು ಅವರಿಗೆ ಪೂರ್ಣಕಾಲದ ಉದ್ಯೋಗವನ್ನು ಒದಗಿಸಿಕೊಡಬೇಕೆಂದೂ ಹೇಳುತ್ತಾರೆ ಆದರೆ, ಚಿಕ್ಕ ಪೋರನ ತಲೆಯ ಮೇಲೆ ಮಣ ಭಾರವಿಟ್ಟಂತಾಗುವುದರಿಂದ, ಇದು ಸಾಧ್ಯವೆನಿಸುವುದು ಸಂದೇಹಾಸ್ಪದ. ಈ ಸಂಬಂಧದಲ್ಲಿ ಇನ್ನಿತರ ವ್ಯವಸ್ಥೆ ನಡೆದು ತನ್ಮೂಲಕ ಎಲ್ಲ ಗ್ರಾಮಸ್ಥರಿಗೂ ಪೂರ್ಣಾವಧಿಯ ಉದ್ಯೋಗ ದೊರೆಯಬೇಕು.

ಶಿಕ್ಷಣ ಮತ್ತು ಆರೋಗ್ಯಗಳ ಕಡೆಗೆ ಹಳ್ಳಿಗಳಲ್ಲಿ ಹರಿಯಬೇಕಾದಷ್ಟು ಗಮನವನ್ನೂ ಹರಿದಿಲ್ಲ; ಕೆಲವು ರಾಜ್ಯಗಳಲ್ಲಿ ಖಡ್ಡಾಯ ಶಿಕ್ಷಣದ ಗಾಳಿ ಬೀಸತೊಡಗಿದೆಯೊದರೂ ಇಷ್ಟರಿಂದಲೇ ನಾವು ತೃಪ್ತಿಪಟ್ಟುಕೊಳ್ಳುವಂತಿಲ್ಲ. ಹಿಂದೆ ಹಳ್ಳಿಯ ಸರ್ವಾಂಗೀಣ ಅಭಿವೃದ್ಧಿಗಾಗಿ ರಚಿತವಾದ ಸಮಾಜ ವಿಕಾಸಯೋಜನೆಯ ಸಮಾಜದ ವಿಕಾಸ ಹೇತುಗಳನ್ನೇ ಸಾಧಿಸಿಕೊಂಡು ಬರುವಂತಾಗಬೇಕು ಶಿಕ್ಷಣವನ್ನು ನೀಡುವ ಬಗೆಯೊದರೂ ಹೇಗೆ, ಆರೋಗ್ಯ ಸೌಕರ್ಯಗಳನ್ನು ಒದಗಿಸುವುದು ಹೇಗೆ ಎಂಬ ಪ್ರಶ್ನೆ ಯಕ್ಷ ಪ್ರಶ್ನೆಗೂ ಮಿಗಿಲಾದುದು. ಕೇಂದ್ರ ಸರಕಾರ ಈ ಮಹಾ ಪ್ರಶ್ನೆಗೆ ಸಮರ್ಪಕವಾದ ಉತ್ತರ ವರಸಬೇಕಾಗಿದೆ.

— ಗೋರಾ.



ಭಾರತ ಸರಕಾರದ ಅಣುಶಕ್ತಿ ಆಯೋಗದ ಅಧ್ಯಕ್ಷ ಡಾ| ಹೋಮಿ ಭಾಭಾರಿಗೆ ಇಟಲಿಯ ಪಪೋಡಾ ವಿಶ್ವವಿದ್ಯಾಲಯವು ಭೌತಶಾಸ್ತ್ರದ ಅಬ್ಬಿವೃದ್ಧಿಗೆ ಅನೇಕ ಸಂತೋಷನ ಕ್ಷೇತ್ರಗಳಲ್ಲಿ ಪ್ರಯುಕ್ತಕಾಗಿ ಸುಪತ್ತದ ಸೇವೆ ಸಲ್ಲಿಸಿದ್ದಕ್ಕಾಗಿ ಗೌರವ ಡಾಕ್ಟರೇಟ ಪದವಿಯನ್ನು ಕೊಟ್ಟಿದೆಯೆಂದು ತಿಳಿದು ಬಂದಿದೆ.

ಕರ್ನಾಟಕ ಸಂಘ(ಉಡುಪಿ)ದ ಮೂರು ಪ್ರಕಟಣೆಗಳು

ಓದಲೇ ಬೇಕಾಗಿರುವ ನವೀನ ಪುಸ್ತಕಗಳು!

೧. ಚಂದ್ರಲೋಕಕ್ಕೆ ಪ್ರಯಾಣ

ಲೇಖಕರು: ಯು. ರಾಘವೇಂದ್ರ ಆಚಾರ್ಯ, ಎಂ. ಎ.

ಅಧುನಿಕ ಪ್ರಪಂಚದ ನುಸುತ್ತರಿವಾದ ಆಂದೋಲನಗಳು, ಪ್ರಪಂಚವನ್ನೆಲ್ಲಾ ಅಲುಗಾಡಿಸುತ್ತಿರುವ ಆರ್ಥಿಕ, ರಾಜಕೀಯ ಚಳುವಳಿಗಳು, ಅವುಗಳ ಹಿಂದಿರುವ ತತ್ವಗಳು. ಅವುಗಳಿಗೆ ಮಾನವನ ಪ್ರತಿಕ್ರಿಯೆ ಇವನ್ನೆಲ್ಲಾ ಗಮನಿಸಿ ರಚಿಸಿರುವ, ನಮ್ಮಲ್ಲಿ ವಿಚಾರಶಕ್ತಿ ಬೆಳೆಯಲು ನೆರವಾಗುವ ವೈಜ್ಞಾನಿಕ ಗ್ರಂಥ.

೨. ಸಾಮಾನ್ಯ ರೋಗಗಳು

ಲೇಖಕರು: ಡಾ| ಕೆ. ಎಲ್. ಐತಾಳ, ಎಂ. ಬಿ. ಬಿ. ಎಸ್.
ಉಡುಪಿ ನಗರ ಸಭಾಧ್ಯಕ್ಷರು.

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಅತ್ಯುಪಯುಕ್ತ ಪುಸ್ತಕ.

೩. ಭೌತಿಕ ದರ್ಶನ

ಲೇಖಕರು. ಬಡೆಕ್ಕಿಲ ಕೃಷ್ಣ ಭಟ್ಟ, ಎಲ್‌ಎಲ್ ಬಿ.

ಸಜ್ಜನರ, ವಿದ್ವಜ್ಜನರ, ವಿಜ್ಞಾನಿಗಳ ಅಭಿಮತವನ್ನು ಸಂಗ್ರಹಿಸಿ ಬರೆದ ಭೌತಿಕ ದರ್ಶನದ ಸ್ಥೂಲ ಪರಿಚಯ.

ಪ್ರತಿಯೊಂದು ಪುಸ್ತಕದ ಬೆಲೆ ಬರೇ ಒಂದು ರೂಪಾಯಿ.

ರೂ. ೩=೫೦ನ್ನು ಮನಿಯಾರ್ಡರು ಮಾಡಿದರೆ ಮೂರೂ ಪುಸ್ತಕಗಳನ್ನು ಬುಕ್ ಪೋಸ್ಟಿನಿಂದ ಕಳಿಸಬಹುದು.

ಪುಸ್ತಕ ವ್ಯಾಪಾರಿಗಳಿಗೆ ವಿಶೇಷ ಸವಲತ್ತುಗಳಿವೆ.

ವಿಚಾರಿಸಿರಿ:
ನವಭಾರತ ಪುಸ್ತಕ ಭಂಡಾರ, ಉಡುಪಿ.

ಕೊರ್ಪೊರೇಶನ್ ಬೇಂಕ್

ಶೇವಣಾತಿಗಳ ಮೇಲಿನ ಸಾಲಿಯಾನ್ ಶೇಕಡಾ ಬಡ್ಡಿ ದರಗಳು:

3	ಸೇವಿಂಗ್ಸ್ ಬೇಂಕ್ ಖಾತೆ
3 ಯಿಂದ 5¼	ಕಾಯಂ (ವಿವಿಧಾವಧಿಗಳಿಗೆ)
5¼	ವಜ್ರೋತ್ಸವ
5	ಕ್ಯುಮುಲೇಟಿವ್

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ಸ್ಥಾಪನೆ: 1906)

ರಿಜಿಸ್ಟರ್ಡ್ ಆಫೀಸು: ಉಡುಪಿ | ಅಡಳಿತ ಆಫೀಸು: ಮಂಗಳೂರು

ಪಿ. ಎಚ್‌ಡಿ. ಗೆ ಯೋಗ್ಯ ವಿಷಯವಿದು!

ಪ್ರೇತಾತ್ಮಗಳು ಶುಭಕಾರ್ಯಗಳನ್ನೂ ಮಾಡಬಲ್ಲವು, ಅಶುಭ ಕಾರ್ಯಗಳನ್ನೂ ಮಾಡಲು ಸಮರ್ಥವಾಗಿರುವುವು. ತಮ್ಮ ಇಚ್ಛಾನುಸಾರ ಅವು ಯಾವುದೇ ಒಂದು ವಸ್ತುವನ್ನು ಚಲಿಸುತ್ತವೆ. ಅವು ಪ್ರಭಾವ ಬೀರುವ ವಸ್ತುಗಳ ಇಚ್ಛಾಶಕ್ತಿಯನ್ನು ಹೊಂದಿಕೊಂಡು ಆತ್ಮಗಳು ಕೆಲಸಗೆಯ್ಯುತ್ತವೆ. ಪ್ರಭಾವಿತ ವಸ್ತುವಿನಲ್ಲಿ ಇಚ್ಛಾಶಕ್ತಿಯು ಅಧಿಕವಿದ್ದರೆ, ಆ ಯುಗಳ ಮೇಲೆ ಆತ್ಮದ ಪ್ರಭಾವ ನಡೆಯುವುದಿಲ್ಲ. ಆತ್ಮಗಳು ಯಾವುದೇ ನಿರ್ದಿಷ್ಟ ರೂಪದಲ್ಲಿಲ್ಲವಾದರೂ ಬೇಕಾದ ಆಕಾರವನ್ನು ಪಡೆಯಬಲ್ಲುವು ಒಬ್ಬ ಕಾಲೇಜ್ ಅಧ್ಯಾಪಕರು ತಮ್ಮ ಅನುಭವವನ್ನು ಹೀಗೆ ಹೇಳುತ್ತಾರೆ.

"ನಾನು ನನ್ನ ಗಡಿಯೂರಕ್ಕೆ ಕೀಲಿ ಕೊಟ್ಟ ಅದು ಕೆಟ್ಟಿಲ್ಲವೆಂದು ಖಾತ್ರಿ ಮಾಡಿಕೊಂಡೆ. ಕೆಲವು ಸಮಯದಿಂದ ಅದು ಸಮಯವನ್ನು ತೋರಿಸುತ್ತಿರಲಿಲ್ಲ ಕೆಲವೇ ಕ್ಷಣದಲ್ಲಿ ನನ್ನೆದುರು ಒಂದು ಹಿಡಿಸೂಡಿ ಮತ್ತೊಂದು ಬುಟ್ಟಿ ಅತ್ಯಂತ ವೇಗದಿಂದ ಓಡಿ ಬರುವುದು ತೋರಿತು. ನಾನು ಮನೆಯಿಂದ ಧಾವಿಸಿ ಹೊರಗೋಡಿದೆ ಮತ್ತೆ ಮಧ್ಯಾಹ್ನದ ಊಟದ ವೇಳೆಗೆ ಮರಳಿ ಬರುತ್ತಿದ್ದೆ. ಮಾರ್ಗದಲ್ಲಿ ಒಂದು ಅಭೂತಪೂರ್ವ ದೃಶ್ಯ ಕಂಡಿತು. ಗದ್ದೆಯಲ್ಲಿಟ್ಟಿದ್ದ ನೇಗಿಲು, ಹುಲ್ಲು ಕೊಯ್ಯುವ ಕತ್ತಿ ತಾವಾಗಿಯೇ ಅತ್ತಿತ್ತ ಚಲಿಸುತಿದ್ದವು ಬಹು ಹೊತ್ತಿನವರೆಗಿದು ನಡೆಯುತಿತ್ತು." ತಾನು ಸ್ವಪ್ನಾವಸ್ಥೆಯಲ್ಲಿಲ್ಲವೆಂದು ಆತ ಗ್ಯಾರಂಟಿ ಮಾಡಿಕೊಂಡ ಪ್ರಾಧ್ಯಾಪಕರು ಓಡಿ ಹೋಗಿ, ತನ್ನ ಕೆಲವು ಸ್ನೇಹಿತರನ್ನು ಕರದು ತಂದರು ಎಲ್ಲರೂ ವಿಸ್ಮಯದಿಂದ ಇದನ್ನು ಕಂಡರು ಕೊನೆಗೆ ನ್ಯೂಬಲೆ ನಗರದ ಅಧಿಕಾರಿಗಳಿಗೆ ಈ ಸುದ್ದಿಯನ್ನು ಮುಟ್ಟಿಸಿದರು ಅಲ್ಲಿನ ಮೇಯರರು ತಾನೇ ಈ ದೃಶ್ಯವನ್ನು ಕಾಣುವೆನೆಂದು, ಕೆಲವೊಂದು ನಗರ ಪಾಲಿಕೆಯ ಸದಸ್ಯರೊಡನೆ ಘಟನಾ ಸ್ಥಳಕ್ಕೆ ಬಂದು ಮುಟ್ಟಿದರು ಕೆಲವರೊಡನೆ ಕೇಳಿದರು: "ಅಲ್ಲಿ ಏನಾಗುತ್ತಿದೆ?" ಒಬ್ಬಾತ ಅವರಿಗೆ "ಸ್ವಾಮಿ, ಬಹು ಆಶ್ಚರ್ಯಜನಕ ಸಂಗತಿ" ಎಂದು ನಡೆಯುತ್ತಿರುವುದನ್ನೆಲ್ಲಾ ವಿವರಿಸಿದ ಮೇಯರರು 'ಪ್ರೇತಾತ್ಮ'ದಲ್ಲಿ ವಿಶ್ವಾಸವಿಡುವವರಲ್ಲ. ಎಂತಲೇ ಅವರೆಂದರು: "ಈ ಗ್ರಾಮದ ಜನರು ನಾಕಸ್ಟು ತಿಳುವಳಿಕೆಯುಳ್ಳವರು; ಪಾಷಂಡಿಗಳಲ್ಲವೆಂದು ನಾನು ತಿಳಿದಿದ್ದೆ. ಆದರೆ, ಇವರು ಇದು ವರೆಗೂ ಜೀವನದಲ್ಲಿ ಏನೊಂದೂ ಉನ್ನತಿಯನ್ನು ಗಳಿಸದ ಮೂರ್ಖರೆಂಬ ಸತ್ಯಾಂಶವನ್ನಿಂದು ಕಂಡುಕೊಂಡೆ". "ಅಂಗೈ ನೋಡಲು ಕನ್ನಡಿಯೇಕೆ? ಸ್ವತಃ ಸಮೂಗಮಿಸಿದ್ದೀರಿ, ನೀವೇ ಹೋಗಿ ನೋಡಿರಿ" ಎಂದರು ಗ್ರಾಮಸ್ಥರು ಮೇಯರರು ೧೫ ಬಾರಿ ಆ ಘಟನೆ ನಡೆದಲ್ಲಿಗೆ ಹೋಗಿ ನೋಡಿದಾಗ, ಆಶ್ಚರ್ಯದಿಂದ ಮರಳಿ ಬರುವಂತಾಗಿತ್ತು. ಆದರೆ, ಒಂದು ಬಾರಿ ಅವರುಟ್ಟಿದ್ದ ಬಟ್ಟೆ ತನಗೆ ತಾನಾಗಿಯೇ ಉರಿದುಕೊಂಡಿತು!

ಆ ಮೇಯರರಿಗೊಬ್ಬ ಸುದ್ದಿಗಾರನಿದ್ದ. ಈ ಮೇಲಿನ ಘಟನಾ ಸ್ಥಳಕ್ಕೆ ಅವರು ಹೋದ ನಂತರ ಆ ಮಗನನ್ನು ಯಾವುದೋ ಒಂದು ಶಕ್ತಿ ಕಾಡತೊಡಗಿತು ಆ ಹುಡುಗ ಬಹು ಬುದ್ಧಿವಂತ. ಒಂದು ದಿನ ಒಂದು ವಿಚಿತ್ರ ಘಟನೆ ನಡೆಯಿತು. ಈ ಹುಡುಗ ಹೋಟೇಲಿನ ಮಾಲಿಕನೊಡನೆ ಏನನ್ನೋ ಮಾತಾಡಿಕೊಳ್ಳುತಿದ್ದ, ಆಗ ಆತನು ಗಟ್ಟಿಯಾಗಿ ಚೀರಿ, ನನಗೆ ನಾಯಿಯೊಂದು ಕಡಿಯುತ್ತಿದೆ ಎಂದು ಅರಚಿದ ಅಲ್ಲಿದ್ದವರೆಲ್ಲರೂ ನೋಡಿದರು. ನಾಯಿಯೆಲ್ಲೂ ದೃಷ್ಟಿಗೋಚರವಾಗಲಿಲ್ಲ ಆತನು ಹೆದರಿ ಹೋಗಿದ್ದಾನೆಂದು ಎಲ್ಲರೂ ಅಂದರು. ಆದರೆ, ತೊಟ್ಟ ಪಾಯಜಾಮವನ್ನು ಎತ್ತಿ ನೋಡಿದಾಗ, ಅದು ಹರಿದಿತ್ತು ಮಾತ್ರವಲ್ಲ ಕಾಲಲ್ಲಿ ನಾಯಿಹಲ್ಲಿನ ಗುರುತುಗಳು ಸ್ಪಷ್ಟವಾಗಿ ಗೋಚರಿಸುತಿದ್ದುವು! ವಿಚಾರಿಸಿದಾಗ, ತಾನು ಗದ್ದೆಗೆ ಹೋದಾಗ, ಯಾರೋ ತನ್ನ ಮೇಲೆ ಕಲ್ಲೆಸೆಯುವಂತೆ ಭಾಸವಾಗುತ್ತಿದೆಯೆಂದೂ ಅವನು ವಿವರಿಸಿದ. ಇದೇ ಮಾತನ್ನು ಅಲ್ಲಿಯ ಕೆಲವು ಮಜೂರರೂ ಹೇಳುತ್ತಾರೆ. ಈ ಹುಡುಗ ಊಟ ಮಾಡಲು ಕುಳಿತಾಗ, ಬಟ್ಟಲು ನರ್ತಿಸತೊಡಗುತ್ತದೆ ಈತನು ಪ್ರಸಿದ್ಧ ವೈಜ್ಞಾನಿಕ ಡಾ। ಜೆಕ್ಸ್ ಬ್ರೊವಿನಲ್ಲಿ ಮನೋವೈಜ್ಞಾನಿಕ ಚಿಕಿತ್ಸೆಗೆ ಗುರಿಯಾದ "ಹುಡುಗನು ನಡೆದಿದ್ದೆಲ್ಲಾ ಘಟನೆಯನ್ನು ಕೇಳಿದ್ದ, ನೋಡಿದ್ದ. ನೋಡಿದ್ದುದು ಆಶ್ಚರ್ಯಜನಕವಿತ್ತು" ಎಂದು ಆ ಡಾಕ್ಟರರು ಹೇಳಿದರು. ಅಲ್ಲದೇ, ಅವರೂ ಒಂದು ವಿಚಿತ್ರ ಅನುಭವವನ್ನು ಪಡೆದರು ಅವರು ಹುಡುಗನ ಮನೆಯಿಂದ ಹೊರಬರುತಿದ್ದರು. ಅಷ್ಟರಲ್ಲೇ ಯಾವುದೋ ಅದೃಶ್ಯ ಶಕ್ತಿಯೊಂದು ಅವರ ತಲೆಯ ಮೇಲೆ ಬಲವಾಗಿ ಕೈಯಿಟ್ಟು ಕೆಳಗೂತ್ತಲು ಪ್ರಯತ್ನಿಸುತ್ತಿರುವಂತೆ ಭಾಸವಾಯಿತು. ಅವರು ಕೆಳಗುರುಳಿಯೇ ಬಿದ್ದರು. ಎದ್ದು ನೋಡುವಾಗ, ಕುದುರೆಯಿಲ್ಲದ ಗಾಡಿಯೊಂದು ಬಹು ವೇಗದಿಂದ ಓಡುತ್ತಿರುವುದು ಕಾಣಿತು. ಇವೆಲ್ಲ ಘಟನೆಗಳು ಕೇವಲ ಕಲ್ಪಿತವಲ್ಲ. ವಿದೇಶೀಯ ವಿದ್ವಾಂಸರೇಕರವನ್ನು ಕಣ್ಣಾರೆ ಕಂಡಿದ್ದಾರೆ; ಅನ ಭವಿಸಿದ್ದಾರೆ ಇಂತಹ ಘಟನೆಗಳು ನಮ್ಮ ದೇಶದಲ್ಲಿಯೂ ಬೇಕೆಂಬಷ್ಟು ನಡೆಯುತ್ತಿರುತ್ತವೆ ಆದರೆ, ಭಾರತೀಯ ವಿದ್ವಾಂಸರು ಮತ್ತು ಮನೋವೈಜ್ಞಾನಿಕರು ಇವನ್ನು ಏನೋ ಪರಮೋಶಿಯೆಂದು ತಾತ್ಸಾರದಿಂದ ಭ್ರಮೆಯೆಂದು ವಿಭ್ರಮೆಯಿಂದ ಉದ್ಗರಿಸಿ ಸುಮ್ಮಗಾಗುತ್ತಾರೆ.

ಯಾರೊಬ್ಬನಾದರೂ ಇಂತಹ ಘಟನೆಗಳ ಸತ್ಯತೆಯ ಸಂಬಂಧದಲ್ಲಿ ಎಳ್ಳಷ್ಟೂ ವಿವೇಚನೆ ನಡೆಸಲಿಲ್ಲವೆಂಬುದು ಖೇದದ ಸಂಗತಿ ಕಲಕತ್ತೆಯ ಒಂದು ವರ್ತಮಾನ ಪತ್ರಿಕೆ 'ಎಡ್ವಾನ್ಸ್'ನಲ್ಲಿ ೧೯೫೯ನೆಯ ಜುಲಾಯಿ ೨೧ರ ಸಂಚಿಕೆಯಲ್ಲಿ ರೋಚಕ ಘಟನೆಯೊಂದರ ವರದಿಯಿತ್ತು. ಆ ಘಟನೆಯಿದು. "ಪಂಜಾಬದ ಫಿರೋಜಪುರವೆಂಬಲ್ಲಿ ಒಂದು ಬ್ರಾಹ್ಮಣ ಕುಟುಂಬ ಬಹಳ ಕಷ್ಟದಲ್ಲಿ ಬಿದ್ದಿದೆ. ಅವನ ಹುಡುಗ ಬಾವಿಯಿಂದ ನೀರು ತರಲು ಹೋಗಿದ್ದ ಪರಮೋಶಿಯಿಂದ ಕೈಯ ಹಗ್ಗ ತುಂಡಾಗಿ, ಕೊಡವಾನ ಬಾವಿಗೆ ಬಿತ್ತು. ಅಲ್ಲಿಯೇ ಒಂದು ಮನೆಯಿತ್ತು ಅದರಲ್ಲಿ ಒಬ್ಬಾಕೆ ಅತಿ ಸುಂದರಿಯುವತಿ ಕುಳಿತಿದ್ದಳು ಆಕೆ ಹುಡುಗನನ್ನು ಕರೆದು ಹೇಳಿದಳು. ನೀನು ಇಲ್ಲಿ ಬಂದು ಕೊಡವಾನ ತೆಗೆಯಲು ಗರುಡ ಪಾತಾಳ ತೆಗೆದುಕೊಂಡು ಹೋಗು ಎಂದು. ಹುಡುಗ ಅಲ್ಲಿ ಹೋದ. ಮನೆಯೊಳಗೆ ಒಂದಕ್ಕಿಂತ ಒಂದು ಸುಂದರವಾದ ಹಲವು ಕುರ್ಚಿಗಳು ಒರಣವಾಗಿ ಇಡಲ್ಪಟ್ಟಿದ್ದುವು ಆ ಯುವತಿಯೆಂದಳು "ನೀನು ಇಲ್ಲಿಯೇ ಕುಳಿತುಕೋ ಹಣ್ಣುತಿಂದು ಚಹ ಕುಡಿ. ನನ್ನನ್ನು ವಿವಾಹವಾಗು" ಹುಡುಗನು ಯುವಕನಾಗಿದ್ದ; ಯುವತಿಯಾದರೂ ಸುಂದರಿ ಕೊನೆಗೆ, ಹುಡುಗನು ಸಂತೋಷದಿಂದ ಈ ಸೂಚನೆಗೆ ಸಮ್ಮತಿಯಿತ್ತ. ಆಗ ಯುವತಿ ಹೇಳಿದಳು "ನಿನಗೆ ಆರು ತಿಂಗಳ ಅವಧಿ ಕೊಡುತ್ತೇನೆ. ಈಸಮಯದೊಳಗೆ ನಿನ್ನತಾಯ್ತಂದೆಯರನ್ನು ಈವಿವಾಹಕ್ಕೆ ಒಪ್ಪಿಸು "ಹುಡುಗನು ಅದಕ್ಕೆ ಒಪ್ಪಿ ಆ ಮನೆಯಿಂದ ಹೊರಗೆ ಬರುತ್ತಿರುವಂತೆಯೇ ಆಕೆ ಮರಳಿ ಎಚ್ಚರಿಸಿದಳು. "ನನ್ನನ್ನು ಮದುವೆಯಾಗಲಿಲ್ಲವೆಂದರೆ, ನಿನ್ನ ಗತಿ ನಟ್ಟಿಗಿರದು."

ಹುಡುಗ ಮನೆಗೆ ಮರಳಿದ. ತಾಯ್ತಂದೆಯರಿಗೆ ನಡೆದ ಕಥೆಯನ್ನು ತಿಳಿಸಿದ. ತಂದೆಯೆಂದ. "ನೀನು ಹೊಳ್ಳ ಮನೆಯಲ್ಲಿ ಜನಸಿವಾಸವೇ ಇಲ್ಲ ಆ ಮನೆಯಲ್ಲಿ ಬಹು ವರ್ಷಗಳಿಗೆ ನೊದಲು ಬಂಗಾಲೀ ಹುಡುಗೆಯೊಬ್ಬಳು ಸತ್ತಿದ್ದಳು." ಹುಡುಗನ ತಂದೆ ತನ್ನ ಸ್ನೇಹಿತರೊಂದಿಗೆ ಆ ಮನೆಗೆ ಹೋದ. ಅಲ್ಲಿ ಯಾರೊಬ್ಬರೂ ಇರಲಿಲ್ಲ ಇಡಿಯ ಮನೆಯು ಶೂನ್ಯವಾಗಿ ತೋರಿಬರುತಿತ್ತು ಆರು ತಿಂಗಳುಗಳು ಗತಿಸಿದುವು. ಆ ಹುಡುಗನಿಗೆ ಮೇಲೆ ಹೇಳಿದ ಬಂಗಾಳಿ ಯುವತಿ ಮರಳಿ ಗೋಚರಿಸಿದಳು. "ಆರು ತಿಂಗಳುಗಳ ಅವಧಿ ಮುಗಿದಿನೆ; ನೀನು ನನ್ನನ್ನು ಮದುವೆಯಾಗಲಿಲ್ಲ ಆದುದರಿಂದ ಕೊಂದುಬಿಡ ತ್ತೇನೆ" ಎಂದು ಕೆಹೆದರಿಸಿದಳು ಈಗ ಆ ಬ್ರಾಹ್ಮಣ ಪರಿವಾರ ಚಿಂತೆಗೀಡಾಗಿದೆ.

ಇದೇ ಮೂದರಿಯ ಘಟನೆಗಳು ಪ್ರತಿಯೊಂದೆಡೆಯೂ ನಡೆಯುತ್ತಿರುತ್ತವೆ ಪ್ರತಿಯೊಬ್ಬನನ್ನೂ ಚಕಿತಗೊಳಿಸುತ್ತವೆ. ಆದರೂ ಯಾರೊಬ್ಬರೂ ಇದರತ್ತ ಗಮನ

(ಅನೇ ಪುಟ ನೋಡಿರಿ)

ನಿಮ್ಮ ಪತ್ನಿ

ಆಸ್ತಿ ಪಾಸ್ತಿಗಳ ಆಡಳಿತ ನಿರ್ವಹಿಸಬಲ್ಲರೇ ?

ನಿಮ್ಮ ಪತ್ನಿ ಉತ್ತಮ ಗೃಹಿಣಿ ಮತ್ತು ಸಮರ್ಥ ಕುಟುಂಬ ಪೋಷಕಿಯಾಗಿರಬಹುದು ಆದರೆ.....

ನೀವು ಬಿಟ್ಟಿಗಲಿದ ಆಸ್ತಿಪಾಸ್ತಿಗಳ, ಉಯಿಲುಗಳ, ವಿನಿಯೋಗಗಳ, ಆಡಳಿತ ನಡೆಸಲು ಬೇಕಾದ ತಿಳುವಳಿಕೆ ಮತ್ತು ಅನುಭವ ಅವರಿಗೆ ಇರಲಾರದು

ಈ ಹೊರೆಯನ್ನು ಕೆನರಾ ಬ್ಯಾಂಕಿನ ತಜ್ಞ ಪರಿಪಾಲನೆಗೆ ಒಪ್ಪಿಸಿದರೆ ನಿಮ್ಮ ಮಡದಿ ಮಕ್ಕಳ ಭವಿಷ್ಯವು ಸುರಕ್ಷಿತವಾಗುವುದು.

ಕೆನರಾ ಬ್ಯಾಂಕನ್ನು ನಿಮ್ಮ ಎಕ್ಸ್‌ಕ್ಯೂಟರ್ ಮತ್ತು ಟ್ರಸ್ಟಿಯಾಗಿ ನೇಮಿಸಿರಿ

ವಿವರಗಳಿಗೆ ನಿಮ್ಮ ಸಮೀಪವಿರುವ ನಮ್ಮ ಶಾಖಾ ಮ್ಯಾನೇಜರರನ್ನು ವಿಚಾರಿಸಿರಿ

ಕೆನರಾ ಬ್ಯಾಂಕ್ ಲಿಮಿಟೆಡ್

(ಸ್ಥಾಪನೆ. 1906)

ನವಯುಗ

ವರುಷ ೪೧	ಉಡುಪಿ ೨೬-೧೦-'೬೧	ವಾರ ೮

ಬಲವಾದ ಬಿರುಕು

ನಾಲ್ಕು ವರ್ಷಗಳ ಆಂತರಿಕ ಕಚ್ಚಾಟಗಳನಂತರ; ಕರ್ನಾಟಕದ ಕಾಂಗ್ರೆಸ್ಸ್ ಪಕ್ಷದಲ್ಲಿ ಕಳೆದ ಫೆಬ್ರವರಿಯಲ್ಲಿ ಒಂದು ಸಮರಸದ ವಾತಾವರಣ ಹುಟ್ಟಿತ್ತು. ಕಾಂಗ್ರೆಸ್ ಅಧ್ಯಕ್ಷ ಶ್ರೀ ಸಂಜೀವ ರೆಡ್ಡಿ ಹಾಗೂ ಮತ್ತಿತರರ ಪರಿಶ್ರಮದಿಂದಾಗಿ ಶ್ರೀಗಳಾದ ನಿಜಲಿಂಗಪ್ಪ ಮತ್ತು ಬಿ. ಡಿ. ಜತ್ತಿಯವರು ಒಂದಾಗಿ ರಾಜ್ಯೋನ್ನತಿಗೆ ದುಡಿಯುವ ವಿಚಾರದಿಂದ, ಭಿನ್ನಾಭಿಪ್ರಾಯವನ್ನು ಬದಿಗಿಡುವ ಯೋಜನೆ ಮಾಡಿದರು. ತತ್ಪರಿಣಾಮವಾಗಿ ರಾಜ್ಯದ ಮಂತ್ರಿಮಂಡಳದಲ್ಲಿ ನಿಜಲಿಂಗಪ್ಪನವರ ಗುಂಪಿನವರೆಂದು ಹೇಳಲಾದ ಕೆಲವರನ್ನು ಸೇರಿಸಿಕೊಳ್ಳಲಾಯಿತು. ನಾಯಕದ್ವಯರ ನಡುವೆ ಒಮ್ಮತವಾಗುವಂತೆ ವಿಧಿಸಲಾದ ಶರ್ತಗಳು ಏನೇ ಇರಲಿ, ನಾಮರಳ್ಯ ಕೂಡಿಬಂದಿತು; ರಾಜ್ಯದಲ್ಲಿ ದ್ವಿಮುಖವಾಗಿ ಹರಿಯುತಿದ್ದ ನಾಯಕತ್ವ ಒಂದಾಯಿತು; ಇದರಿಂದ ರಾಜ್ಯದ ಉನ್ನತಿಯು ತೀವ್ರವಾಗಿ, ಅಡಳಿತೆಯಲ್ಲಿ ಕಸುವು ಹೆಚ್ಚಿ ಜನತೆಗೆ ಸುಭಿಕ್ಷೆ ಲಭಿಸೀತು; ಕಾಂಗ್ರೆಸ್ಸಿನ ಕುಂದುತಿದ್ದ ಪ್ರತಿಷ್ಠೆ ಮರಳಿ ಹೆಚ್ಚೀತು ಎಂದು ಮುಂತಾದ ಸ್ವರ್ಣ ಸ್ವಪ್ನಗಳನ್ನು ಕಾಂಗ್ರೆಸ್ ಹಿತೈಷಿಗಳು ಇಟ್ಟುಕೊಂಡಿದ್ದರು. ಆದರೆ, ಸದ್ಯ ಅದೆಲ್ಲವೂ ನದಿದ ನಾಟಕವೆಂಬುದು ಬಯಲಾಗಿದೆ; ಕಾಂಗ್ರೆಸ್ ಶಕ್ತಿಯು ಇಮ್ಮೊಗವಾಗಿ ಹರಿಯುವ ತನ್ನ ಸಹಜ ಸ್ವಭಾವವನ್ನು ಬಿಟ್ಟು ಕೊಟ್ಟಿಲ್ಲವೆಂದು ತಿಳಿದು ನಿಜವಾದ ಕಾಂಗ್ರೆಸಿಗರು ವಿಸಂಚನೆಗೀಡಾಗಿದ್ದಾರೆ; ಮತ್ತು ಇದು ರಾಜ್ಯ ಕಲ್ಯಾಣಕ್ಕೆ ಹೇತುವಾಗಲಾರದು ಎಂದು ಅವರು ನೊಂದು ಕೊಂಡಿದ್ದಾರೆ.

ಮೂರನೆಯ ಸಾರ್ವತ್ರಿಕ ಚುನಾವಣೆಗಳಲ್ಲಿ ಯಾರು ಯಾರಿಗೆ ಕಾಂಗ್ರೆಸ್ ಟಿಕೇಟು ಕೊಡಬೇಕು ಎಂಬ ವಿಷಯದಲ್ಲಿ ಉಭಯ ನಾಯಕರ ನಡುವೆ ತೀವ್ರಭಿನ್ನಾಭಿಪ್ರಾಯ ವಿದೆ. ಮುಖ್ಯ ಮಂತ್ರಿ ಜತ್ತಿಯವರು ಇತ್ತೀಚೆಗೆ ಒಂದು ಹೇಳಿಕೆ ಕೊಡುತ್ತ ತನ್ನ ಮಂತ್ರಿಮಂಡಳವನ್ನು ಸಮರ್ಥಿಸುತ್ತ ಬಂದು ಅದಕ್ಕೆ ಬೆಂಬಲವಿತ್ತ ಹಲವಾರು ಪ್ರಚಲಿತ ಸದಸ್ಯರಿಗೆ 'ಬೇಕಂಟೇ' ಕಾಂಗ್ರೆಸ್ ಟಿಕೇಟುಗಳನ್ನು ಕೊಡುವ ಸಿಫಾರಸು ಮಾಡಲಿಲ್ಲ ಎಂದು ಆರೋಪಿಸಿದರು. ಶ್ರೀ ಜತ್ತಿಯವರು ಪ್ರಾದೇಶಿಕ ಕಾಂಗ್ರೆಸ್ಸಿನ ಘಟಕಗಳಾದ ಜಿಲ್ಲಾ ಕಾಂಗ್ರೆಸ್ಸಿನ ಮೇಲೆ ಹೊರಿಸಿದ ಈ ಆರೋಪ ಅತಿ ಗಂಭೀರವಾದುದು. ಕಾಂಗ್ರೆಸ್ ನೀತಿಯನ್ನು ಒಪ್ಪಿ, ಸೇವೆಯ ಮೂಲಕ ಜನ ಸಂಪರ್ಕವನ್ನು ಗಳಿಸಿದ ಸಮರ್ಥರಿಗೆ ಮಾತ್ರ ಕಾಂಗ್ರೆಸ್ ಟಿಕೇಟುಗಳನ್ನು ನೀಡಬೇಕೆಂಬುದನ್ನು ನಾವು ಒಪ್ಪಿಕೊಳ್ಳುವುದಾದರೆ, ಜತ್ತಿಯವರ ಆರೋಪದ ಪ್ರಮಾಣವು ತುಸು ಕಡಿಮೆಯಾಗಬಹುದು. ಕಾಂಗ್ರೆಸ್ಸಿನಲ್ಲಿ ಹೊಸ ಮುಖಗಳಿಗೆ ಪ್ರಾಶಸ್ತ್ಯ ನೀಡುವ ಉದ್ದೇಶದಿಂದ, ಸದ್ಯ ಸದಸ್ಯತನ ಪಡೆದಿರುವವರಲ್ಲಿ ಅರ್ಜಿಸಲ್ಲಿಸಿದ ಪ್ರತಿಯೊಬ್ಬರಿಗೂ ಟಿಕೇಟುಗಳನ್ನು ನೀಡಲಾಗುವುದಿಲ್ಲ; ಅದು ಸಾಧ್ಯವೂ ಇಲ್ಲ. ಆದರೂ, ಸಮರ್ಥರೂ ಯೋಗ್ಯರೂ ಸೇವಾದುರಂಧರರೂ ಆದವರನ್ನು ಬಿಟ್ಟು ಬಿಡುವುದು ಸದ್ವಿವೇಕದ ಲಕ್ಷಣವಲ್ಲ. ಮಾನ್ಯ ಮುಖ್ಯ ಮಂತ್ರಿಗಳು ತನ್ನ ಯಾವ ಹಿಂಬಾಲಕರಿಗೆ ಅನ್ಯಾಯ ಮಾಡಲಾಗಿದೆಯೆಂದು ಬಹಿರಂಗಗೊಳಿಸದೆ ಇದ್ದರೂ ಅವರ ಹೇಳಿಕೆಯಿಂದ ಕಾಂಗ್ರೆಸ್ಸಿನಲ್ಲಿನ ಒಳಗುಂಪುಗಳು ಪೂಯುವಾಗಿಲ್ಲ; ಚುನಾವಣೆಯ ಈ ಸಂಧಿಕಾಲದಲ್ಲಿ ಪರಸ್ಪರ ಹೋರಾಡುತ್ತಲೇ ಇವೆ ಎಂಬುದರಲ್ಲಿ ಸತ್ಯಾಂಶವಿದೆಯೆಂಬುದು ಮನವರಿಕೆಯಾಗುವುದು.

ನಿಜಲಿಂಗಪ್ಪನವರು ಈ ಹೇಳಿಕೆಯನ್ನು ಬುದ್ಧಿಮತ್ತೆಯಿಂದಲೇ ಅಲ್ಲಗಳೆದರು. ಮುಖ್ಯ ಮಂತ್ರಿಗಳ ಆರೋಪದಲ್ಲಿ ಸತ್ಯಾಂಶವಿಲ್ಲವೆಂದೂ ಅವರ ಬೆಂಬಲಿಗರು ಯಾರೆಂದು ತಾನರಿಯೆನೆಂದೂ ಅವರು ನಿರ್ಭೀತಿಯಿಂದ ಹಾಲುಹಸುಳೆಯಂತೆ ಆಡಿದರು; ತಮ್ಮ ಜವಾಬುದಾರಿಕೆಯನ್ನು ಕೈತೊಳೆದುಕೊಳ್ಳುವ ಯತ್ನ ಮಾಡಿದರು. ಆದರೆ, ರಾಜ್ಯದ ಕಾಂಗ್ರೆಸ್ಸಿನ ಆಗುಹೋಗುಗಳನ್ನು ತಿಳಿದ ಜನತೆಯ ಮುಂದೆ ಅವರು ಹೂಡಿದ ಕಪಟ ನಾಟಕವಿದೆಂದು ಯಾರೂ ಅನ್ನಬಹುದು. ತಾನು ನಿಷ್ಪಕ್ಷಪಾತಿಯೆಂಬುದನ್ನು ಅವರು ಡಣಾಡಂಗುರವಾಗಿ ಸಾರುವ ಉದ್ದೇಶದಿಂದ ಅಥವಾ ಕಾಂಗ್ರೆಸ್ಸಿನ ಆಂತರಿಕ ಹುಳುಕನ್ನು ವ್ಯಕ್ತವಾಗಿಸಬಾರದೆಂಬ ಮನೀಷೆಯಿಂದ ಅವರು ಹೀಗೆ ನುಡಿದಿರಲೂ ಬಹುದು. ಸದ್ಯ, ಚುನಾವಣಾ ಸಮಿತಿಯ ಮುಂದೆ ಸ್ಪರ್ಧಾರ್ಥಿಗಳ ನಾಮಪತ್ರಗಳು ಹಾಗೂ ನೀರೀಕ್ಷಕರ ವರದಿಗಳು ಮುಂದೆ ಬರತೊಡಗಿವೆ. ಇವುಗಳನ್ನು ಸರಿಯಾಗಿ ಅಭ್ಯಸಿಸಿ ನವಂಬರ ಮೊದಲ ವಾರದಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳ ಆಯ್ಕೆಯ ಪ್ರಾದೇಶಿಕ ಯಾದಿಯು ಪ್ರಕಟಗೊಳ್ಳಬಹುದು. ಆದರೂ ಈ ಚುನಾವಣಾ ಸಮಿತಿಯಲ್ಲಿ ಕೂಡ ಇಬ್ಬಣಗಳಿವೆಯೆಂದು ಕೇಳಿ ಬರುತ್ತಿದೆ. ಹೀಗಾದರೆ, ತಯಾರಾಗುವ ಯಾದಿಯು ಒಮ್ಮತವಾಗುವುದು ಬಲುಕಷ್ಟ. ಈಗಾಗಲೇ ಅಸಂತುಷ್ಟರಾದ ಜತ್ತಿಯವರ ಸಂತಾಪ ಆಗ ಮತ್ತಷ್ಟು ಬೆಳೆಯಲಿದೆ. ಸಮರ್ಥ ಯೋಗ್ಯ ಹುರಿಯಾಳುಗಳನ್ನೇ ತಾನು ಆರಿಸುವೆನೆಂದು ಪ್ರಾದೇಶಿಕ ಕಾಂಗ್ರೆಸ್ ಅಧ್ಯಕ್ಷರು ಭರವಸೆ ಇತ್ತಿದ್ದಾರೆ ನಿಜ. ಈ ಸಮರ್ಥತೆಯನ್ನೂ ಯೋಗ್ಯತೆಯನ್ನೂ ಅಳೆಯುವ ಅಳತೆಗೋಲುಗಳೇ ಭಿನ್ನಭಿನ್ನವಾದ ಪಕ್ಷದಲ್ಲಿ ಗತಿಯೇನು? ಅಧಿ ಇರದಾಹದಿಂದಲೇ ಕಾಂಗ್ರೆಸ್ಸಿನೊಳಗೆ ಬಳ್ಳುಟಿಯೆದ್ದಿದೆ; ಅದು ಸಮೂಹಾನಗೊಳ್ಳುವ ಚಿಹ್ನೆಗಳು ಕಾಣುವುದಿಲ್ಲ. ತಮ್ಮ ತಮ್ಮೊಳಗಿನ ಈ ಕಾದಾಟವನ್ನು ನಡೆಯಗೊಡದೆ ಕಾಂಗ್ರೆಸ್ಸಿನ ಏಕತೆಯನ್ನೂ ಭವಿಷ್ಯವನ್ನೂ ಅವರು ಉಳಿಸುವಂತೆ ಮನಸ್ಸು ಮಾಡಿ ರಾಜ್ಯವನ್ನು ಭದ್ರವಾಗಿಡಲು ಪ್ರಯತ್ನಿಸುವುದು ಅತ್ಯವಶ್ಯ. ಇಬ್ಬರ ನ್ಯಾಯದಿಂದಾಗಿ ಕಾಂಗ್ರೆಸ್ಸು ಮತ್ತು ರಾಜ್ಯ ಅಧಃಪತನಗೊಳ್ಳುವುದು ಎಂದಿಗೂ ಸರಿಯಲ್ಲ.

ಕೇರಳದಲ್ಲಿ ಕೆಡುಕು

ಕೇರಳದಲ್ಲಿರುವ ಸಂಯುಕ್ತ ಸರಕಾರದಲ್ಲಿ ದಿನದಿಂದ ದಿನಕ್ಕೆ ಒಡಕು ಹೆಚ್ಚುತ್ತಿರುವುದು ಕಂಡು ಬರುತ್ತದೆ. ಅಲ್ಲಿ ಕಮ್ಯುನಿಸ್ಟರನ್ನು ಸದೆ ಬಡೆಯುವ ಉದ್ದೇಶದಿಂದ ಚುನಾವಣೆಯಲ್ಲಿ ಒಡಂಬಡಿಕೆ ಮಾಡಿಕೊಂಡಿದ್ದರೂ ಪರಿಣಾಮದಲ್ಲಿ ಕಾಂಗ್ರೆಸ್ಸು ನಿಚ್ಚಳ ಬಹುಮತವನ್ನು ಪಡೆದಿತ್ತು; ಮತ್ತದುವೇ ಮಂತ್ರಿ ಮಂಡಳಿಯನ್ನು ರಚಿಸಬಲ್ಲುದಾಗಿತ್ತು. ಆದರೂ ಸಂಯುಕ್ತರಂಗದ ಒಡಂಬಡಿಕೆಯಿಂದಾಗಿ ಅಲ್ಲಿ ಸಮ್ಮಿಶ್ರ ಸಚಿವ ಸಂಘಟನೆವೇ ನಿರ್ಮಾಣವಾಯ್ತು. ಪ್ರಸವಾ ಪಕ್ಷದ ಶ್ರೀ ಪಟ್ಟಂಥಾನು ಪಿಳ್ಳೆಯವರು ಮುಖ್ಯ ಮಂತ್ರಿಯಾದರು. ಕೇರಳದ ವಿಧಾನ ಸಭೆಯಲ್ಲಿ ಬೆರಳೆಣಿಕೆಯಷ್ಟು ಸದಸ್ಯರ ಬಲದಿಂದ ಸುಮಾರು ೯ ತಿಂಗಳಗಳ ವರೆಗೆ ಸರಕಾರ ರಚಿಸಿದ ಬುದ್ಧಿವಂತ ಪಿಳ್ಳೆಯವರು ಈಗ ಬೋನಿನೊಳಗೆ ಸಿಕ್ಕಿ ಬಿದ್ದ ಇಲಿಯಂತಾಗಿದ್ದಾರೆ. ಮಂತ್ರಿಮಂಡಳಿಯಲ್ಲಿ ಬಿರುಕುಗಳು ಎದ್ದದನ್ನು ಹೋಗಲಾಡಿಸಲು ಶ್ರೀ ಥಾನು ಪಿಳ್ಳೆಯವರು ಮುಖ್ಯ ಮಂತ್ರಿಗಿದ್ದ ಹಲವಾರು ಅಧಿಕಾರಗಳನ್ನೂ ತ್ಯಾಗಮಾಡಿದರು. ಇದರಿಂದ ಸಮ್ಮಿಶ್ರ ಸರಕಾರ ಪೂರ್ಣಾವಧಿಯ ವರೆಗೆ ಮುಂದುವರಿಯುವುದೆಂಬ ಆಸೆಯಿತ್ತು. ಆದರೆ, ಇತ್ತೀಚೆಗೆ ಶ್ರೀಪಿಳ್ಳೆಯವರು ಭಾರವಾದ ಮನಸ್ಸಿನಿಂದ ನೊಂದ ಹೃದಯದಿಂದ ಸಂಪುಟ ಮುಂದುವರೆಯುವುದರಲ್ಲಿ ಸಂದೇಹ ವ್ಯಕ್ತ ಪಡಿಸಿದ್ದಾರೆ. ಕಾಂಗ್ರೆಸ್ ಮಂತ್ರಿಗಳು ಒಡಬಂಡಿಕೆಯನ್ನು ಮುರಿದು ಹಾಕುವಂತಹ ಹೇಳಿಕೆಗಳನ್ನು ಕೊಡುತಿದ್ದಾರೆಂದವರು ದುಃಖದಿಂದ ನುಡಿದಿದ್ದಾರೆ. ಆದರೆ ಕಾಂಗ್ರೆಸ್ ನಾಯಕ ಶ್ರೀ ಆರ್. ಶಂಕರರು ಅಂತಹ ಯಾವುದೇ ಹೇಳಿಕೆಗಳನ್ನಿತ್ತಿಲ್ಲವೆಂದೂ ಥಾನು ಪಿಳ್ಳೆಯವರ ನಾಯಕತ್ವದಲ್ಲಿರುವ ಈ ಸರಕಾರ ಕೊನೆಯ ವರೆಗೂ ಉಳಿಯಬೇಕೆಂಬದೇ ನಮ್ಮ ಹಾರೈಕೆಯೆಂದೂ ಅಂದಿದ್ದಾರೆ. ಇಂದು ಕಾಂಗ್ರೆಸ್ಸು ಸ್ವತಂತ್ರವಾಗಿ ಅಧಿಕಾರ ನಡೆಸಲು ಬಯಸುತ್ತಿರಲಿಕ್ಕಿಲ್ಲ. ಆದರೂ ಪ್ರಸವಾ ಪಕ್ಷದ ಪ್ರಭಾವವನ್ನು ಕಡಿಮೆಮಾಡಬೇಕೆಂಬ ಉದ್ದೇಶ ಕೇರಳ ಕಾಂಗ್ರೆಸ್ಸಿನದು ಇರಬಹುದು. ರಾಜನೀತಿಯಲ್ಲಿ ಧರ್ಮನೀತಿಗೆ ಪ್ರಾಶಸ್ತ್ಯ ಕೊಡುವ ಕಾಲ ಸತ್ಯಯುಗ ಮಾತ್ರ. ಹಾಗಿರುವಾಗ ಕೇರಳ ಕಾಂಗ್ರೆಸ್ಸಿನ ಧೋರಣೆ ಹಾಗೂ ಥಾನು ಪಿಳ್ಳೆಯವರ ನಿಲಾಶೆಗಳಿಗೆ ನಿಕಟ ಸಂಬಂಧವಿದ್ದೇ ಇದೆ. ಅದರೂ ಇದು ಶೋಭಾದಾಯಕವೇ ಎಂದು ಜನತೆ ಮಾತ್ರ ನಿರ್ಧರಿಸಬೇಕು.

ಅಲ್ಲಲ್ಲಿಯ ಸುದ್ದಿಸಾರ

ದಿ| ಎ. ಬಿ. ಶೆಟ್ಟಿ ಸ್ಮಾರಕ ನಿಧಿ— ಮುಂಬಯಿಯಲ್ಲಿ ತಯಾರಿಸಿದ ದಿ| ಎ. ಬಿ. ಶೆಟ್ಟಿ ತಿಲಾ ಪ್ರತಿಮೆಯನ್ನು ಮಂಗಳೂರಿಗೆ ತರಿಸಲಾಗಿದೆ. ಪ್ರತಿಮೆಯ ಕೆಲಸವು ಅತ್ಯುತ್ತಮವಾಗಿರುತ್ತದೆ. ಇದರ ಅನಾವರಣ ಸಮಾರಂಭ ಕಾರ್ಯವನ್ನು ನೆರವೇರಿಸಲಿಕ್ಕೆ ಮದ್ರಾಸಿನ ಡಾ| ಲಕ್ಷ್ಮಣ ಸ್ವಾಮಿ ಮುದಲಿಯರವರನ್ನು ಮಂಗಳೂರಿಗೆ ಬರಮಾಡುವ ಪ್ರಯತ್ನ ನಡೆಯುತ್ತಿದೆ ಸ್ಮಾರಕ ನಿಧಿಗೆ ಸಹಾಯ ಮಾಡಲಿಕ್ಕೆ ಇಚ್ಛೆಯುಳ್ಳವರು ದಯಮಾಡಿ ಕೂಡಲೇ ತಮ್ಮ ಧನ ಸಹಾಯವನ್ನು ಕಳುಹಿಸಬೇಕಾಗಿ ಕಮಿಟಿಯವರು ಅಪೇಕ್ಷಿಸುತ್ತಾರೆ ಎಂದು ಅಧ್ಯಕ್ಷ ಶ್ರೀ ಕೆ. ಟಿ. ಆಳ್ವರು ತಿಳಿಸುತ್ತಾರೆ.

ಮುಂಬಯಿಯ ದಕ್ಷಿಣ ಬ್ರಾಹ್ಮಣರ ಸಂಘದಲ್ಲಿ— ದಿನಾಂಕ 8-10-61 ರಂದು ಸಂಗೀತ ವಿಶಾರದೆ ಕುಮಾರಿ ವಿಠಾಬಾಯಿ. ರಾವ್ ಇವರಿಂದ ಹಿಂದುಸ್ಥಾನಿ ಸಂಗೀತ ಕಚೇರಿಯು ಭುಜಂಗ ರಾವ್ ಹಾಲಿನಲ್ಲಿ ಶ್ರೀ ಗೋಖಲೆಯವರ ಅಧ್ಯಕ್ಷತೆಯಲ್ಲಿ ಜರಗಿತು.

ದಿನಾಂಕ 19—10—1961 ರಂದು ದಸರೆ ಮಹೋತ್ಸವವು ಗೀತಾಗೋವಿಂದ ಹಾಲಿನಲ್ಲಿ ಶ್ರೀ ಭುಜಂಗರಾಯರ ಅಧ್ಯಕ್ಷತೆಯಲ್ಲಿ ಜರುಗಿಸಲ್ಪಟ್ಟಿತು. ಪ್ರಾರ್ಥನೆಯಾದ ಬಳಿಕ ಕುಮಾರಿ ಯು ಬಿ. ವಿ. ಸರೋಜಾ ಇವರಿಂತರ ನೃತ್ಯ, ಕೃಷ್ಣರಾಜ್ ಮತ್ತು ಪ್ರಕಾಶ್‌ರವರಿಂದ ಹಾಸ್ಯ, ಶ್ರೀ ಎ. ಶ್ರೀಪತಿ ಉಡುಪರಿಂದ ಭಾಷಣ ನಡೆಯಿತು. ನಂತರ ಮನರಂಜನ ಕಾರ್ಯಕ್ರಮಗಳಾದುವು.

ಸಂಘದ ಉಪಾಧ್ಯಕ್ಷೆ ಡಾ| ಲಲಿತಾ ರಾಯರು ಧನ್ಯವಾದಗಳನ್ನರ್ಪಿಸಿದರು.

ಅಖಿಲ ಮೈಸೂರು ಕ್ರೀಡೋತ್ಸವ— ಈ ಬಾರಿಯ ದಸರಾ ಮಹೋತ್ಸವದ ಅಂಗವಾಗಿ ಮೈಸೂರಿನ ಯುವರಾಜಾ ಕೋಲೇಜಿನ ಕ್ರೀಡಾಂಗಣದಲ್ಲಿ ನಡೆದ ಅಖಿ

ಬೆಳಕಿನ ಹಬ್ಬ— ದೀಪಾವಳಿ ಬರುತಿದೆ
ನವೋತ್ಸಾಹ, ನವಸಂತಸ ತರುತಿದೆ.

ನವಯುಗ
ದೀಪಾವಳಿ ವಿಶೇಷ ಸಂಚಿಕೆ

ವಿವಿಧ ಬರಹಗಾರರ ವಿವಿಧ ಲೇಖನ, ಕವನ, ಕತೆ, ಹರಟೆ ಇತ್ಯಾದಿಗಳಿಂದೊಡಗೂಡಿ ವಿಶಿಷ್ಟ ರೀತಿಯಲ್ಲಿ ಪ್ರಕಟವಾಗುವುದು.

ಜಾಹೀರಾತಿಗೆ ಉತ್ತಮ ಮಾಧ್ಯಮವಾದ ಈ ವಿಶೇಷ ಸಂಚಿಕೆಗೆ ಜಾಹೀರಾತುದಾರರು ತಮ್ಮ ಜಾಹೀರಾತುಗಳನ್ನಿತ್ತು ಸಹಕರಿಸುವಂತೆ ವಿನಂತಿ

ಮೆನೇಜರ್, ನವಯುಗ, ಉಡುಪಿ.

Read and Advertise in
NAVAYUGA DEEPAVALI SPECIAL ISSUE

ಲ ಮೈಸೂರು ಆಟೋಟಗಳ ಕ್ರೀಡೋತ್ಸವದಲ್ಲಿ ನಮ್ಮ ಜಿಲ್ಲೆಯ ಈ ಕೆಳಗಿನವರು ಬಹುಮಾನಿತರಾದವರು. ಈ ಸ್ಪರ್ಧೆಯು ತಾ. 17, 18ರಂದು ಮೈಸೂರಿನಲ್ಲಿ ನಡೆದು ಕೊನೆಯ ದಿನದಂದು ಪ್ರಾರಂಭದ ಮುಖ್ಯಮಂತ್ರಿ ಶ್ರೀ ಬಿ. ಡಿ. ಜತ್ತಿಯವರು ಬಹುಮಾನ ವಿತರಣೆ ಗೈದರು. ಸ್ಪರ್ಧೆಗಳಲ್ಲಿ ಮೈಸೂರು, ಬೆಂಗಳೂರು, ಬೆಳಗಾಮ್ ಮತ್ತು ಗುಲ್ಬರ್ಗ—ಈ ನಾಲ್ಕು ಡಿವಿಜನುಗಳ ಸುಮಾರು 700 ಮಂದಿ ಭಾಗವಹಿಸಿದ್ದರು.

ಸಾರ್ವಜನಿಕ ವಿಭಾಗದಲ್ಲಿ ಮಂಗಳೂರಿನ ಬಾಲ ಮಾರುತಿ ವ್ಯಾಯಾಮ ಮಂಡಳಿಯವರು ಸ್ಪಾಂಕ್ಯದ ಕಬಡಿ ನಿರ್ಣಾಯಕ ಪಂದ್ಯಾಟವನ್ನು ಬೆಂಗಳೂರಿನ ಎದುರು ಅಡಿ ಗೆದ್ದರಲ್ಲದೆ, ಶ್ರೀಮಾನ್ ಮೈಸೂರು ಸ್ಪರ್ಧೆಯಲ್ಲಿ ಶ್ರೀ ನಾರಾಯಣ ಸುತ್ತುನ್ನರವರು ಪ್ರಥಮ ಸ್ಥಾನವನ್ನು ಗಳಿಸಿದರು.

ಈಜಾಟ ಸ್ಪರ್ಧೆಗಳಲ್ಲಿ ಶಾಲಾ ವಿಭಾಗದಲ್ಲಿ ವಿಟ್ಲ ಹೈಸ್ಕೂಲಿನ ವಿದ್ಯಾರ್ಥಿ ಶ್ರೀ ಸುಬ್ರಹ್ಮಣ್ಯ ಭಟ್ಟರು 100 ಮೀಟರ್ ಈಜುವುದರಲ್ಲಿ II ಸ್ಥಾನವನ್ನು, ಅದೇ ದೂರವನ್ನು ಅಂಗಾತ ಈಜುವುದರಲ್ಲಿ III ಸ್ಥಾನವನ್ನು, ಅದೇ ಶಾಲೆಯ ಶ್ರೀ ವಿಶ್ವೇಶ್ವರ ಶರ್ಮರು 100 ಮೀಟರ್ ಈಜುವುದರಲ್ಲಿ III ಸ್ಥಾನವನ್ನು ಪಡೆದರು.

ಸಾರ್ವಜನಿಕ ಪುರುಷರ ವಿಭಾಗದಲ್ಲಿ ವಿಟ್ಲದ ಶ್ರೀ ಪುರುಷೋತ್ತಮ ಎಂಬವರು 100 ಮೀಟರ್ ಈಜುವುದರಲ್ಲಿ III ಸ್ಥಾನ. ಸಾರ್ವಜನಿಕ ಮಹಿಳಾ ವಿಭಾಗದಲ್ಲಿ ವಿಟ್ಲ ಹೈಸ್ಕೂಲಿನ ವಿದ್ಯಾರ್ಥಿನಿಯರಾದ ಕುಮಾರಿ ಕಾವೇರಿ ಮತ್ತು ಕುಮಾರಿ ಭೆನಾನಿ ಇವರು ಕ್ರಮವಾಗಿ 100 ಮೀಟರ್ ಈಜುವುದು ಮತ್ತು 50 ಮೀಟರ್ ಅಂಗಾತ ಈಜುವುದರಲ್ಲಿ ದ್ವಿತೀಯ ಮತ್ತು ತೃತೀಯ ಸ್ಥಾನ.

ಪುರುಷರ ಡೈವಿಂಗ್ ವಿಭಾಗದಲ್ಲಿ ಮಂಗಳೂರಿನ ಕಸ್ತೂರ್‌ಬಾ ಮೆಡಿಕಲ್ ಕಾಲೇಜಿನ ಶ್ರೀ ಎಸ್. ಎಸ್. ವಾಗ್ಲೇ ಎಂಬವರು II ಸ್ಥಾನ

ಪುರುಷರ ಕಾಲೇಜ್ ವಿಭಾಗದ ಆಟೋಟಗಳ ಸ್ಪರ್ಧೆಯಲ್ಲಿ ಸುತ್ತೂರಿನ ಸೈಂಟ್ ಫಿಲೊಮಿನಾ ಕಾಲೇಜಿನ ಶ್ರೀ ಎಗ್. ಎಂ. ಗಣಪತಿ ಎಂಬವರು 400 ಮೀಟರ್ ಓಟದಲ್ಲಿ II ಸ್ಥಾನ

ಪುರುಷರ ಸಾರ್ವಜನಿಕ ವಿಭಾಗದಲ್ಲಿ ಮಂಗಳೂರಿನ ಪದವು ಹೈಸ್ಕೂಲಿನ ಶ್ರೀ ಶ್ರೀಧರ ಅಳ್ವರವರು ಹೈ ಜಂಪ್‌ನಲ್ಲಿ II ಸ್ಥಾನ ಹೈಸ್ಕೂಲ್ ವಿದ್ಯಾರ್ಥಿಗಳ ವಿಭಾಗದಲ್ಲಿ ಪದವು ಹೈಸ್ಕೂಲಿನ ಶ್ರೀ ಶ್ರೀಧರ ಅಳ್ವರವರು ಲೋಂಗ್ ಜಂಪ್‌ನಲ್ಲಿ ಮತ್ತು ಹೈಜಂಪ್‌ನಲ್ಲಿ ಪ್ರಥಮಸ್ಥಾನ. ಈ ಸಂದರ್ಭದಲ್ಲಿ ಅವರು ಹೈ ಜಂಪಿನಲ್ಲಿ 6 ಅಡಿ ಎತ್ತರವನ್ನು ಹಾರಿ ಅಖಿಲ ಭಾರತ ದಾಖಲೆಯನ್ನು ಸ್ಥಾಪಿಸಿದರು.

ಹೈಸ್ಕೂಲ್ ವಿದ್ಯಾರ್ಥಿಗಳ ವಿಭಾಗದಲ್ಲಿ ಮಲ್ಪೆಯ ಸರಕಾರೀ ಫಿಶರೀಸ್ ಹೈಸ್ಕೂಲಿನ ಶ್ರೀ ಪಿಶ್ವನಾಥ ಎಂಬವರು 1500 ಮೀಟರ್ ಮತ್ತು 400 ಮೀಟರ್ ಓಟಗಳಲ್ಲಿ III ಸ್ಥಾನ

ಹೈಸ್ಕೂಲಾ ವಿದ್ಯಾರ್ಥಿನಿಯರ ವಿಭಾಗದಲ್ಲಿ ಮಲ್ಪೆಯ ಫಿಶರೀಸ್ ಹೈಸ್ಕೂಲಿನ ಕುಮಾರಿ ಜಯಂತಿಯವರು 75 ಮೀಟರ್ ಸ್ಪ್ರಿಂಗ್ ಮತ್ತು ಶೋಟ್‌ಪುಟ್‌ನಲ್ಲಿ II ಸ್ಥಾನ. ಕೊನೆಯದಾಗಿ ಕೋಲೇಜುಗಳ ಪುರುಷರ ವಿಭಾಗದಲ್ಲಿ ಮಂಗಳೂರಿನ ಮೆಡಿಕಲ್ ಕಾಲೇಜಿನ ಶ್ರೀ ಪಿ. ಪಿ. ನಾಯಕರವರು ಶೋಟ್‌ಪುಟ್‌ನಲ್ಲಿ II ಸ್ಥಾನವನ್ನು ಪಡೆದರು.

ಯಕ್ಷಗಾನ ವಿಚಾರಗೋಷ್ಠಿ—ಉಡುಪಿ ಯಕ್ಷಗಾನ ಕಲಾ ಕ್ಷೇತ್ರದವರು ಎಂದು ಹಬ್ಬದ ಸಲುವಾಗಿ ಯಕ್ಷಗಾನ ಗೋಷ್ಠಿಯನ್ನು ಇದೇ ತಾ. 18ರಂದು ಉಡುಪಿ ಶ್ರೀ ಪರಿಷದ್ಭವನ ಕಲಾಮಂದಿರದಲ್ಲಿ, ಶ್ರೀ ಎ. ಜಿ. ಅಲ್ಲೆಯವರ ಹಿರಿತನದಲ್ಲಿ ನಿರ್ವಹಿಸಿದರು. ಶ್ರೀ ಯು. ಬಿ. ಬಿ. ಅಡಿಗರು ಸ್ವಾಗತಿಸಿದರು. ಶ್ರೀ ಎ. ಸೂರ್ಯನಾರಾಯಣ ಶೆಟ್ಟಿಯವರು ಸಂಘದ ವರದಿಯನ್ನು ವಿವರಿಸಿದರು. ಶ್ರೀ ಕೆ. ಎಸ್. ಕಾಮತರು ಗೋಷ್ಠಿಯ ಉದ್ಘಾಟನೆ ಮಾಡಿ, ಯಕ್ಷಗಾನ ಕಲೆಯ ಬೆಳವಣಿಗೆಯ ಅವಶ್ಯಕತೆಯನ್ನು ಪ್ರತಿಪಾದಿಸಿದರು. ಶ್ರೀಗಳಾದ ಪೊಲ್ಯ ದೇಜ ಶೆಟ್ಟಿ, ಯು. ಮಂಜುನಾಥ ಮಯ್ಯಸ್ತ ಇವರು ಯಕ್ಷಗಾನ ಕಲೆಯ ಕುರಿತು ಮಾತನಾಡಿದರು. ಅಧ್ಯಕ್ಷರು ಹಳ್ಳಿಗಳಲ್ಲಿ ಬೆಳೆದುಬಂದ ಯಕ್ಷಗಾನ ಕಲೆಯನ್ನು ಉಳಿಸಿ ಬೆಳೆಸಬೇಕಾದ ಕಲಾಭಿಮಾನಿಗಳ ಕರ್ತವ್ಯವನ್ನು ವಿವರಿಸಿದರು. ಶ್ರೀ ಎಸ್. ಎಸ್. ಬಲ್ಲಾಳರು ಧನ್ಯವಾದ ಅರ್ಪಣೆಯನ್ನು ಮಾಡಿದ ಬಳಿಕ ..ರಾಜಸೂಯ ಯಾಗ ಪೆಂಬ ಯಕ್ಷಗಾನ ಕೂಟ ಯಶಸ್ವಿಯಾಗಿ ಜರಗಿತು.

ಮರುದಿನ ಸಂಘದ ಕಾರ್ಯಾಲಯದಲ್ಲಿ ಶ್ರೀ ಕೆ ಮಂಜುನಾಥ ನ್ಯಾಕರ ನೇತೃತ್ವದಲ್ಲಿ ಶಾರದಾ ಪೂಜೆಯು ಜರಗಿ, ಯಕ್ಷಗಾನ ಕಲಾವಿದ ಶ್ರೀ ಶಿವಪುರ ಸೂರ್ಯಣ್ಣ ಶೆಟ್ಟರನ್ನು ಗೌರವಿಸಲಾಯಿತು. ರಾತ್ರಿ ಶ್ರೀ ಓ. ಮೂಗಾನಾಥ ಶೆಣೈಯವರ ಅಧ್ಯಕ್ಷತೆಯಲ್ಲಿ ಮಂಡಾವರದ ಯಕ್ಷಗಾನ ಗೋಷ್ಠಿಯಲ್ಲಿ ಶ್ರೀ ಬನ್ನಂಜೆ ಗೋವಿಂದಾಚಾರ್ಯರು ಭಾಷಣವಿತ್ತರು. ಅಧ್ಯಕ್ಷರ ಭಾಷಣದ ನಂತರ ಶ್ರೀ ಭೋಜಪ್ಪನವರು ವಂದಿಸಿದರು. ಯಕ್ಷಗಾನ ಕಲಾಕ್ಷೇತ್ರದ ಕಲಾವಿದರಿಂದ ಯಕ್ಷಗಾನ ಬಯಲಾಟ ನಡೆಯಿತು. ಶ್ರೀ ಮಾರಪ್ಪ ಸುವರ್ಣರು ಕೃತಜ್ಞತೆಗಳನ್ನರ್ಪಿಸಿದರು.

ಕನ್ನಡ ಸಾಹಿತ್ಯ ಸಂಘ—ರಂಗಂಪೇಟೆಯ ಈ ಸಂಘದ ವತಿಯಿಂದ ತಾ 14 ರಿಂದ 16ರ ವರೆಗೆ ನಾಡ ಹಬ್ಬವು ಜರಗಿತು. ಶ್ರೀ ರಾಘವೇಂದ್ರರಾಯರು ಧ್ವಜಾರೋಹಣ ಮಾಡಿದರು. ಶ್ರೀ ಎಸ್. ವಿ ರಂಗಣ್ಣನವರು ಪಂಪ, ಕುಮಾರವ್ಯಾಸರ ಕಾವ್ಯೋದ್ದೇಶದ ಕುರಿತು ಭಾಷಣವಿತ್ತರು. ಮರುದಿನ ಶ್ರೀ ಬೀ ಚಿ ಶ್ರೀ ತಿರುಮಲೆ ತಾತಾಚಾರ್ಯ ಶರ್ಮ ಇವರ ಭಾಷಣವು, ಕೊನೆಯ ದಿನ ಶ್ರೀ ಎಸ್. ವಿ ರಂಗಣ್ಣರವರ ಅಧ್ಯಕ್ಷತೆಯಲ್ಲಿ ಶ್ರೀ ತಿ ತಾ ಶರ್ಮರವರ ಭಾಷಣವು ನಡೆಯಿತು ಮೂರು ದಿನ ನಾಟಕ ಪ್ರದರ್ಶನ ವಿವಿಧ ವಿನೋದಾವಳಿಗಳಿದ್ದುವು.

ಧರ್ಮಸ್ಥಳ—ನಾಡಪಲ್ಲ ಸಮಿತಿಯ ವತಿಯಿಂದ ತಾ. 16ರಿಂದ 18ರ ವರೆಗೆ ದೆಸರಾ ಮಹೋತ್ಸವವು ವಿಜೃಂಭಣೆಯಿಂದ ನೆರವೇರಿತು ಶ್ರೀ ಡಿ ರತ್ನವರ್ಮ ಹೆಗ್ಗಡೆ ಎಂ ಎಲ್ ಎ ಅವರು ಉತ್ಸವವನ್ನು ಉದ್ಘಾಟಿಸಿದರು ಶ್ರೀ ಎಂ- ಲಕ್ಷ್ಮೀನಾರಾಯಣ ಅಳ್ವರು ಸಭಾಧ್ಯಕ್ಷತೆ ವಹಿಸಿದ್ದರು ಈ ಸಭೆಯಲ್ಲಿ ಶ್ರೀ ರಘುಚಂದ್ರ ಮಾಸ್ತರ್ ಶ್ರೀ ಕೃಷ್ಣ ಸ್ವಾಮಿ ನಾಯ್ಡು ಇವರು ಭಾಷಣವಿತ್ತರು. ಮರುದಿನದ ಸಭೆಯ ಅಧ್ಯಕ್ಷತೆಯನ್ನು ಕೆ. ಸೂರ್ಯನಾರಾಯಣ ರಾಯರು ವಹಿಸಿದ್ದರು. ಶ್ರೀ ಕೆ ಶಂಕರನಾರಾಯಣರಾಯರು ಭಾಷಣವಿತ್ತರು. ಮೂರನೇ ದಿನ ಕೆ. ಸುಬ್ರಾಯ ಶರ್ಮರು ಅಧ್ಯಕ್ಷತೆ ವಹಿಸಿದ್ದ ಸಭೆಯಲ್ಲಿ ಶ್ರೀಗಳಾದ ಪಿ ಕೆ. ನಾರಾಯಣ, ರಾಮಯ್ಯ ಶೆಟ್ಟಿ, ಕುಳ್ಳಡೆ ಕೃಷ್ಣ ಭಟ್ಟ ಇವರು ಭಾಷಣವಿತ್ತರು, ಮೂರು ದಿನ ಸಮಿತಿಯ ಅಧ್ಯಕ್ಷ ಶ್ರೀ ಡಿ ಕೃಷ್ಣಬೋಳ ಮಿನ್ನಾಯರು ಸ್ವಾಗತವನ್ನೂ, ಸಂಚಾಲಕ ರಾಮಣ್ಣ ಶೆಟ್ಟರು ಧನ್ಯವಾದವನ್ನೂ ಮಾಡಿದರು. ಅಲ್ಲದೆ, ವಿವಿಧ ಕಲಾಕಾರರಿಂದ ಸಂಗೀತ, ಕೊಳಲು, ನೃತ್ಯ, ನಾಟಕ, ಯಕ್ಷಗಾನ ಮೊದಲಾದ ಮನರಂಜನೆಯ ಕಾರ್ಯಕ್ರಮಗಳೂ ನೆರವೇರಿದುವು.

ಶಿವಮೊಗ್ಗ— ಗವರ್ನಮೆಂಟ್ ಮೆಡಿಕಲ್ ಸ್ಕೂಲ್ ಎಸೋಸಿಯೇಶನ್ ಚುನಾವಣೆಯು ತಾ. 13ರಂದು ನಡೆದು ಕಾರ್ಯಸಮಿತಿ ಶ್ರೀ ಕಂದಾಳರ ರತ್ನಾಕರ ಶೆಟ್ಟಿ ಕಾರ್ಯದರ್ಶಿಯಾಗಿ ಶ್ರೀಮತಿ ಎಸ್. ಡಿ. ಸುಲೋಚನಾ ಶ್ರೀ ಎಸ್. ಕಾರ್ಯಪ್ಪ, ಶ್ರೀ ವಿ. ಡಿ ಗೋಪಿನಾಥ ಇವರು ವಿದ್ಯಾರ್ಥಿ ಪ್ರತಿನಿಧಿಗಳಾಗಿ ಆರಿಸಲ್ಪಟ್ಟರು.

ವಿಜಯದಶಮಿ ಸಮಾರಂಭ— ವಿದ್ಯಾ ಇಲಾಖೆಯ ವತಿಯಿಂದ ಉಡುಪಿಯಲ್ಲಿ ಶ್ರೀ ಪಿ. ಎನ್. ಕೃಷ್ಣಮೂರ್ತಿ ರಾಯರ ಅಧ್ಯಕ್ಷತೆಯಲ್ಲಿ ಕಡಿಯಾಳಿ ಶಾಲೆಯ ಮುಖ್ಯಮೆದಾನ್ ಕಲಾಮಂದಿರದಲ್ಲಿ ನಡೆಯಿತು. ಶ್ರೀ ವಿ ಗುರುರಾಜ ಭಟ್ಟರು ಸ್ವಾಗತಿಸಿದ ಬಳಿಕ ಶ್ರೀ ಎಸ್. ಗೋವಿಂದ ರಾವ್ ಇವರು ನಾಡಹಬ್ಬದ ವಿಶೇಷತೆಗಳನ್ನು ವಿವರಿಸಿದರು. ವಿವಿಧ ಸ್ಪರ್ಧೆಗಳಲ್ಲಿ ಜಯಶೀಲರಾದವರಿಗೆ ಬಹುಮಾನ ವಿತರಣೆ ಮಾಡಿದ ನಂತರ ಅಧ್ಯಕ್ಷರು ವಿದ್ಯಾದಶಮಿಯ ಕುರಿತು ಮಾತನಾಡಿದರು ಶಾಲೆಗಳ ಡಿಪ್ಯುಟಿ ಇನ್ಸ್‌ಪೆಕ್ಟರ್ ಶ್ರೀ ವೈ. ಗೋಪಾಲರು ಧನ್ಯವಾದಾರ್ಪಣೆ ಮಾಡಿದ ಮೇಲೆ ವಿವಿಧ ಸ್ಥಾಥಮಿಕ ಶಾಲೆಗಳ ವಿದ್ಯಾರ್ಥಿಗಳಿಂದ ವಿನೋದಾವಳಿಗಳು ನಡೆದುವು.

ಕಡಿಯೊರು— ಹಾ. ಎ. ಶಾಲೆಯಲ್ಲಿ ನವರಾತ್ರಿ ಮತ್ತು ವಿಜಯದಶಮಿಯ ಕಾರ್ಯಕ್ರಮಗಳು ತಾ. 10ರಿಂದ 19ರ ವರೆಗೆ ನಡೆದುವು ಶ್ರೀ ಕೆ. ಭೋಜ ಪೂಜಾರಿ ಮತ್ತು ಶ್ರೀ ಕೆ. ತಮ್ಮಯ್ಯ ಶೆಟ್ಟಿಗಾರರು ಶ್ರೀ ದೇವಿ ಕಲಾ ಕಾಣಿಕೆಯನ್ನು ಮಾಡಿದರು. ತಾ. 15ರಂದು ಶಾರದಾಪೂಜಾ ಸಮಾರಂಭವು ಶ್ರೀ ಕೆ ವಿಟ್ಟಪ್ಪನವರ ಅಧ್ಯಕ್ಷತೆಯಲ್ಲಿ ಜರಗಿತು. ತಾ. 19ರಂದು ಶ್ರೀ ಲಕ್ಷ್ಮೀಜನಾರ್ಧನ ಯಕ್ಷಗಾನ ಕಲಾಮಂಡಳಿಯವರು 'ಕರ್ಣಾರ್ಜುನಕಾಳಗ'ವನ್ನು ಪ್ರದರ್ಶಿಸಿದರು.

ನಿಧನ—ಉಡುಪಿ ಬೋರ್ಡ್ ಹೈಸ್ಕೂಲಿನ ಸಂಸ್ಕೃತ ಪಂಡಿತರಾಗಿದ್ದ ಶ್ರೀ ಕೆ. ಎ. ದೇವದಾಸರು ಕೆಲವೇ ದಿನಗಳ ಅನಾರೋಗ್ಯದಿಂದ ಇದೇ ತಾ. 23ರಂದು ಕಂಕನಾಡಿ ಆಸ್ಪತ್ರೆಯಲ್ಲಿ ನಿಧನರಾದುದು ವಿಷಾದಕರವಾದೆ. ದಿವಂಗತರು ಬಹು ಭಾಷಾ ಪಂಡಿತರಲ್ಲದೆ ಲೇಖಕರಾಗಿ, ಗ್ರಂಥಕರ್ತರಾಗಿ, ಭಾಷಣಗಾರರಾಗಿ, ನಯವಿನಯ ಶೀಲರಾಗಿ, ಜನಪ್ರಿಯರಾಗಿದ್ದರು. ಜ್ಯೋತಿಷ್ಯ, ವೈದ್ಯಕೀಯದಲ್ಲಿಯೂ ಸಂಕಷ್ಟ ಅನುಭವವುಳ್ಳವರಾಗಿದ್ದರು.

ಸಂತಾಪ ಸೂಚಕ ಸಭೆ— ಉಡುಪಿ ಬೋರ್ಡ್ ಹೈಸ್ಕೂಲಿನ ಸಂಸ್ಕೃತ ಪಂಡಿತರಾಗಿದ್ದ ಶ್ರೀ ಕೆ. ಎ. ದೇವದಾಸರು ನಿಧನರಾದ ಪ್ರಯುಕ್ತ ಉಡುಪಿಯ ಹಿಂದೀ ಪ್ರಚಾರ ಪರಿಷತ್ತಿನಲ್ಲಿ ತಾ. 24ರಂದು ಸಂತಾಪ ಸೂಚಕ ಸಭೆಯೊಂದು ಜರಗಿತು. ಪರಿಷತ್ತಿನ ಹಿತೈಷಿಗಳಾದ ದಿವಂಗತರ ಬಗ್ಗೆ ಪ್ರಧಾನ ಕಾರ್ಯದರ್ಶಿ ಎಸ್. ಗೋಪೀಚಂದ ರಾವ್, ಪಿ ರಾಜಗೋಪಾಲ ಆಚಾರ್, ಯು. ಪಿ. ರಾಘವೇಂದ್ರ ರಾವ್ ಮತ್ತು ಕೆ ದಾಮೋದರ ಐತಾಳರು ಮಾತಾಡಿ ಅವರ ಸದ್ಗುಣ, ನಿರಹಂಕಾರ, ಸರಳ ಜೀವನ ಹಾಗೂ ಸಾಹಿತ್ಯ ಸೇವೆಗಳನ್ನು ಕೊಂಡಾಡಿದರು ಅಧ್ಯಕ್ಷತೆ ವಹಿಸಿದ ಶ್ರೀ ಪಿ. ಹರಿದಾಸ ಆಚಾರ್ಯರು ಮಂಡಿಸಿದ್ದ ಸಂತಾಪಸೂಚಕ ಗೊತ್ತುವಳಿಯನ್ನು ಸ್ವೀಕರಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಿಲಾಯಿತು

ಶಿವಮೊಗ್ಗ— ಇದೇ ತಾ 16ರಿಂದ ನಾಲ್ಕು ದಿನ ಸ್ಥಳೀಯ ಕಲಾರಾಧನ ಸಂಘದ ವತಿಯಿಂದ ಸ್ಥಳೀಯ ನಿತ್ಯಾನಂದ ಸದನದಲ್ಲಿ ದಸರಾ ಮಹೋತ್ಸವವು ಶ್ರೀ ಶಾರದಾ ಪೂಜೆ, ಭಜನೆ, ಸಂಗೀತ, ಭಾಷಣ, ಇತ್ಯಾದಿ ಕಾರ್ಯಕ್ರಮಗಳೊಂದಿಗೆ ವಿಜೃಂಭಣೆಯಿಂದ ಜರಗಿತು ಮನೋರಂಜನಾ ಕಾರ್ಯಕ್ರಮದ ಅಂಗವಾಗಿ ತಾ. 17ರಂದು ಬಾಲಿಕೆಯರಿಂದ ((ಶ್ರೀ ಕೃಷ್ಣ ಪಾರಿಜಾತ', ತಾ. 18ರಂದು ಬೆಳ್ಳಂಗಡಿಯ ಕಲಾವಿದರಿಂದ ((ವಿಷಕನ್ಯೆ' ನಾಟಕಗಳೂ, ತಾ. 19ರಂದು ಬಿ ಶಂಕರ ರಾವ್ ಮತ್ತು ಬಿ ಪ್ರೇಮಾಕುಮಾರಿಯವರ ಸುಶ್ರಾವ್ಯ ಸಂಗೀತ ಮತ್ತು ಬಾಲಕರಿಂದ ((ಗರ್ವಭಂಗ" ನಾಟಕವೂ ಜರಗಿತು.

ಸುಬ್ರಹ್ಮಣ್ಯ— ತಾ. 15-10-61ರಲ್ಲಿ ಶ್ರೀ ವಾಣಿಶ್ವರೀ ಸಂಗೀತ ಪಾಠಶಾಲೆಯಲ್ಲಿ ಶ್ರೀ ರಾಮಕೃಷ್ಣ ಭಟ್ಟರ ಅಧ್ಯಕ್ಷತೆಯಲ್ಲಿ ಶ್ರೀ ಶಾರದಾ ಪೂಜಾ ಮಹೋತ್ಸವವು ವಿಜೃಂಭಣೆಯಿಂದ ಜರಗಿತು ಅಕಾಂಕ್ಷ ಸಂಗೀತ ಪಾಠಶಾಲೆಯ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಂದ ಸಂಗೀತ ಕಚೇರಿಯೂ ಪತ್ತೂರಿನ ವೆಂಕಟಸ್ವ ಮತ್ತು ಪಾರ್ಟಿಯವರಿಂದ ಸೆಕ್ಸೋಫೋನ್ ಕಚೇರಿಯೂ ನಡೆಯಿತು.

ಬೀಳ್ಕೊಡುವ ಸಮಾರಂಭ—ಉಡುಪಿ ಸ್ಟೇಟ್ ಇರಿಗೇಶನ್ ಬೋರ್ಡ್ ಆಫೀಸಿನಲ್ಲಿ ಓವರ್‌ಸೀಯರ್ ಆಗಿದ್ದ ಶ್ರೀ ಸಂಜೀವ್ ಕುಮಾರರು ಮೈಸೂರಿಗೆ ವರ್ಗಾಯಿಸಲ್ಪಟ್ಟ ನಿಮಿತ್ತ ಇದೇ ತಾ. 12ರಂದು ಆ. ಇಂಜಿನಿಯರ್ ಶ್ರೀ ಎ.ಎ. ಎಸ್ ನ್ಯಾಕರ ಅಧ್ಯಕ್ಷತೆಯಲ್ಲಿ ಬೀಳ್ಕೊಡುವ ಸಮಾರಂಭ ಜರಗಿ, ಹಲವರ ಭಾಷಣಗಳಾದುವು.

ಜಗತ್ಪರ್ಯಟನ

ಸುದ್ದಿಗಾರ ನೆಹರು

ಪ್ರಧಾನಿ ನೆಹರು ಇನ್ನಲ್ಲಿ ಸುದ್ದಿಗಳಿಗೇನೂ ಕಡಿಮೆಯಿಲ್ಲ. ಕೆಲವೊಮ್ಮೆ ಅವರು ಅಂದ ಒಂದು ಚಿಕ್ಕ ಮಾತೇ ದೊಡ್ಡ ವಿಷಯವಾಗುವುದೂ ಇದೆ. ಇತ್ತೀಚೆಗೆ ಅವರು ಪತ್ರಿಕಾ ಪ್ರತಿನಿಧಿಗಳೊಂದಿಗೆ ಮಾತಾಡುತ್ತ ಭಾರತವು ಟ್ರಾಂಬೆಯ ಅಣು ಶಕ್ತಿ ಕೇಂದ್ರದಲ್ಲಿ ಇನ್ನೆರಡು ವರ್ಷಗಳೊಳಗೆ ಅಣ್ವಸ್ತ್ರಗಳನ್ನು ತಯಾರಿಸಬಲ್ಲುದು; ಆದರೆ, ನಮಗೆ ಅಣ್ವಸ್ತ್ರಗಳ ಉತ್ಪಾದನೆ ಬೇಕಾಗಿಲ್ಲ ಎಂದು ಅಂದರು. ಈ ವತ-ಮಾನವನ್ನು ಲಂಡನ್ನಿನ ಮೆಂಚೆಸ್ಟರ್ ಗಾರ್ಡಿಯನ್ 'ಭಾರತವು ಬಯಸಿದರೆ ಅಣ್ವಸ್ತ್ರ ತಯಾರಿಸಬಹುದು' ಎಂದು ಮುಖಪುಟದಲ್ಲಿ ಶಿರೋನಾಮೆಯಿತ್ತು ಪ್ರಕಟಿಸಿದೆ. ಹೀಗೆ ಅಣ ಶಕ್ತಿ ಹೊಂದುವ ರಾಷ್ಟ್ರಗಳಲ್ಲಿ ಭಾರತವು ಐದನೆಯದಾಗುವುದೆಂದೂ ಏಶ್ಯದಲ್ಲಿ ಮೊದಲನೆಯದಾಗುವುದೆಂದೂ ಅದು ವರದಿ ಮಾಡಿದೆ.

ಕೃಷ್ಣಮೆನನ್

ಶ್ರೀ ಕೃಷ್ಣಮೆನನ್ನರು ಭಾರತದ ಸಂರಕ್ಷಣೆಯನ್ನು ಮಾಡುವಲ್ಲಿ ಅಪ್ಪೊಂದು ಯಶಸ್ವಿಯಾಗಿರಲಾರರು ಆದರೆ, ಭಾರತದ ಎದೇಶ ನೀತಿಯನ್ನು ಸರಿಯಾಗಿ ಅರ್ಥಮಾಡಿಕೊಂಡು ಅದನ್ನು ಪ್ರತಿಪಾದಿಸುವಲ್ಲಿ ಸಂಪೂರ್ಣ ಯಶಸ್ವೀಯಾಗಿದ್ದಾರೆ, ನೆಹರುರವರಿಗೆ ಇವರು ಅತಿ ಪ್ರಿಯರಾಗುವುದಕ್ಕಿರುವ ಏಕಮಾತ್ರ ಕಾರಣವೆಂದರೂ ಇದೇ ರಶ್ಯ ಸ್ನೇಹಿಸಗೊಳಿಸುವೆನೆಂದು ಬೆದರಿಸಿದ ಪೆಗಬುನ್ ಬಾಂಬನ್ನು ತಡೆಹಿಡಿಯ ಬೇಕೆಂದು ನಾರ್ವೆ—ಸ್ವೀಡನ್ ಮೊದಲಾದ ಸಪ್ತರಾಷ್ಟ್ರಗಳು ಸಂ. ರಾ. ಸಂಘದಲ್ಲಿ ಗೊತ್ತುವಳಿತಂದರೆ, ನಿಶ್ಶಸ್ತ್ರೀಕರಣದ ಬಗ್ಗೆ ಒಡಂಬಡಿಕೆಯಾಗುವವರೆಗೆ ಅಣ್ವಸ್ತ್ರ ಪ್ರಯೋಗಗಳನ್ನು ನಿರ್ಬಂಧಿಸುವುದೆ ಮಹಾರಾಷ್ಟ್ರಗಳನ್ನು ಕೇಳಿಕೊಳ್ಳುವ ಗೊತ್ತುವಳಿಯನ್ನು ಭಾರತದ ಪರವಾಗಿ ಶ್ರೀ ಮೆನನ್ನರು ಮಂಡಿಸಿದ್ದಾರೆ. ವ್ಯಾಪಕ ಧರ್ಮವಿರುವ ಈ ಗೊತ್ತುವಳಿ ಸ್ವೀಕಾರವಾಗುವುದು ಮಾತ್ರ ಅಮೆರಿಕ-ಬ್ರಿಟನ್‌ಗಳಿಗೆ ಬೇಕಾಗಿದೆಯೇ ಎಂದು ನೋಡಬೇಕಾಗಿದೆ.

ಮುರಾರ್ಜಿಭಾಯಿ

ಮುರಾರ್ಜಿ ದೇಸಾಯಿಯವರು ಇತ್ತೀಚೆಗೆ ನೆಹರುರವರ ಪ್ರಭಾವಕ್ಕೆ ಬಲವಾಗಿ ಬಿದ್ದಂತಾಗಿದ್ದಾರೆ. ಗೋವೆಯ ಸಂಬಂಧದಲ್ಲಿ, ಪೋರ್ಚುಗೀಸ ವಸಾಹತುಗಳ ಸಂಬಂಧದ ವಿಚಾರ ಸಂಕೀರಣದಲ್ಲಿ ಇದು ಸುಸ್ಪಷ್ಟವಾಗಿದೆ. ಗೋವೆಯನ್ನು ವಶಪಡಿಸಲು ಭಾರತದೊಡನಿರುವ ಪೋಲೀಸು ಪಡೆಯೇ ಸಾಕು; ಆದರೆ, ಲಿಸಾಬಾರೂ ಪಟ್ಟಾದ ಹೋರಾಟವೇ ಗೋವೆಯ ವಿಮೋಚನೆಗೆ ತಾರಕೋಪಾಯವೆಂದಿದ್ದಾರೆ ಅವರು. ಭಾರತವು ಜಾಗತಿಕ ಬಿಕ್ಕಟ್ಟನ್ನು ಸ್ನೇಹಮಯ ಶಾಂತಿಯುಕ್ತ ವಾತಾವರಣದಲ್ಲಿ ಬಗೆಹರಿಸಬೇಕೆಂದೂ ಹೇಳಿ ಗೋವೆಯ ಮೇಲೆ ಆಕ್ರಮಣ ಮಾಡುವುದು ಸರಿಯೆನಿಸದಂದೂ ಅವರು ಅಭಿಪ್ರಾಯಕ್ಕೆ ಬಂದಿದ್ದಾರೆ. ಗೋವೆಯು ಗಂಡಾಂತರಕಾರಿಯಾಗಿ ಪರಿಣಮಿಸುವುದರಿಂದ ಭಾರತದ ಅಸ್ತಿತ್ವ ಮತ್ತು ಸ್ವಾತಂತ್ರ್ಯಗಳಿಗೆ ವಿಘ್ನ ಬಂದೂದಗುವುದೆಂದೂ ಅವರು ನುಡಿದಿದ್ದಾರೆ.

ಕಿಣಿಣ ರೈ ಅವರ ಪುನರ್ನವ

ಇಣಿಲ

ಪ್ರಕಾಶಕರು: ಕವಿತಾ ಕುಟೀರ, ಪೆರಡಾಲ. ಸುಟಗಳು: ೬೦ ಬೆಲೆ. ರೂ. ೨—೦೦.

ಕರ್ನಾಟಕದ ಗಡಿನಾಡಿನಲ್ಲಿದ್ದು ಉದ್ಧಾಮ ಕವಿಗಳೆಂದು ಖ್ಯಾತರಾದ ಶ್ರೀ ಕೈಯವರು ಕಳೆದ ಹತ್ತು ವರ್ಷಗಳಲ್ಲಿ ಬರೆದಿದ್ದ ೨೨ ಗೀತೆಗಳನ್ನು 'ಪುನರ್ನವ' ವಾಗಿ ಸಂಗ್ರಹಿಸಿ ಕನ್ನಡಿಗರ ಕೈಗಳಿಗೊಪ್ಪಿಸಿದ್ದಾರೆ ಕರ್ನಾಟಕದ ಅಂಗವಾದ ಕಾಸರಗೋಡು ಅನ್ಯಾಯವಾಗಿ ಕೇರಳ ಕ್ಕೆ ಹೋದುದರಿಂದ ನೊಂದ ಕವಿ ಹೃದಯ ಕನ್ನಡಿಗರಿಗೆ ಪುನರ್ನವವಾಗಿ ಕರೆಯೊಯುತ್ತಿದೆ

ಕಷ್ಟಕಂಟಕದ ಬಾಳದಾರಿಯಲಿ
ಧೈರ್ಯದಂಡ ಹಿಡಿ—ನಡಗು,
ಬೇನೆಬೇಗುದಿಯೋ ನಾವುಸಂಕಟವೊ
ತಲೆಯನೆತ್ತಿನದೆ – ಕಡೆಗು ||

("ಹೆಣತೆ ಹಚ್ಚು" ಪದ್ಯ ೯)

"ಪುನರ್ನವ"ದ ಪ್ರತಿಯೊಂದು ಕವಿತೆಯಲ್ಲಿಯೂ ಕವಿಗಳ ರಾಷ್ಟ್ರಪ್ರೇಮ, ಐಕ್ಯಭಾವನೆ, ಕನ್ನಡದ ಹೆಚ್ಚಳ, ಸಹಜ ಭಾರತೀಯನಾದ ನೇಗಿಲಯೋಗಿಗಳ ಪರಿಚಯ ನಮಗಾಗುತ್ತದೆ.

"ಪುನರ್ನವ"ವೆಂಬ ಆರಂಭದ ಕವಿತೆ ಕವಿಗಳ ರಾಷ್ಟ್ರಪ್ರೇಮಕ್ಕೊಂದು ಜ್ವಲಂತ ನಿದರ್ಶನ. ಭಾರತೀಯನ ಪರಂಪರೆ ಭವ್ಯವಾದುದು, "ಶ್ರೀರಾಮ ಶ್ರೀಕೃಷ್ಣ ಬುದ್ಧ ಮಧ್ವಂ ಬಸವ ಜಿನ ಶಂಕರಂ ಗಾಂಧಿ ಘೋಷ"ರಿಂದ ಬಂದುದು, "ನಮಗೆ ಇದೆ ಭಾರತದಿ ಸುಟ್ಟಿ ಬಂದ ಭಾಗ್ಯಂ" ಇಂತಹ ಮಣ್ಯ ಯೊರಿದೆ? ಕವಿ ಕೈಲಾಸ ಬಯಸುವುದಿಲ್ಲ; ವೈಕುಂಠವೂ ವರ್ಜ್ಯ, ಮೋಕ್ಷ ದೀಕ್ಷೆಗಳು ತ್ಯಾಜ್ಯ; ಹುಟ್ಟೂರ ದೊಳು ಮಾತ್ರ ಭೋಗ್ಯ. ಆದುದರಿಂದಲೇ ಪ್ರಾರ್ಥಿಸುತ್ತಾರೆ:

ಸಸ್ಯ ಶ್ಯಾಮಲೆ ದೇವಿ, ಹರನೆನ್ನ
ನೀನೋವಿ,
ಮರುಹುಟ್ಟು ಬಂದರೂ ನಿನ್ನುದರದಿ
ಇದೆ ದುಡಿತವೆನಗಿರಲಿ—ನೇಗಿಲನ
ಹಿಡಿತದಲಿ
ಬಲಗೊಟ್ಟು ಬದುಕಿಸ್ಯ, ನೀನೆ
ದಯದಿ ||

ಭಾರತದ ಉದ್ಧಾರ ಕಾರ್ಯ ನೇಗಿಲ ಹಿಡಿವ ಕರ್ಮ ಯೋಗಿಗಳಿಂದಲೇ ಆಗಬೇಕು; ಈ ಕಾರ್ಯದಲ್ಲಿ ಎಲ್ಲರೂ ಪಾಲುಗೊಳ್ಳಬೇಕು.

ಕವಿಯ ದೃಷ್ಟಿ ವಿಶಾಲವಾದುದು, "ನಮ್ಮ ದೇವರು" ಎಂಬುದರಲ್ಲಿದು ಸ್ಪಷ್ಟವಾಗುತ್ತದೆ. ಮಾನವನಲ್ಲಿ ಸಂಕುಚಿತ ಪ್ರವೃತ್ತಿ ದೂರ ಹರಿದು ವಿಕಸಿತ ಮನೋವೃತ್ತಿ ಬೆಳೆಯಬೇಕು, ಅದನ್ನು ಸಾಧಿಸಿಕೊಂಡಂದೇ ಆತನಿಗೆ ಭಗವದ್ದರ್ಶನ-

ದುಡಿತವೇ ನಮ್ಮ ದೇವರು, ಲೋಕ
ದೇವಕುಲ,
ಬೆವರೆ ಹೂ ಹಣ್ಣುಕಾಯ್, ಕಣ್ಣೀರೆ
ತೀರ್ಥಂ;
ಎಮ್ಮೊಂದಿಗರ ಬಾಳ ಗಾವು ನೋವಿನ
ಗೋಳ—
ನುಂಡಿಹೆವು ಸಮಪಾಲ — ನಮಗ
ದುವೆ ಮೋಕ್ಷಂ ||

"ಹೆರಕೆ" ಎಂಬ ಕವನದಲ್ಲಿ ಕವಿ 'ತಾಯ್ನಾಡ ತೋಟದಲಿ ಹೂಚಿಗುರು ಹೆಚ್ಚಿಸುವ ಗೊಬ್ಬರದ ಪುಡಿ' ಯೊಗುವ ಭಾಗ್ಯವನ್ನು ಬೇಡಿಕೊಳ್ಳುತ್ತಾರೆ. ಮನುಷ್ಯರು ಭೂಮಿಗೆ ಉಪ್ಪು (ಗೊಬ್ಬರ) ಇದ್ದ ಹಾಗೆ ಎಂಬ ಗಾದೆಯಿದೆ. ದೇವಸೂಜೆಯ ಬಯಸುವ ತುಳಸಿಯೊಗುವುದಕ್ಕಿಂತ ಇದೇ ಹೆಚ್ಚಿನದು. ದೇಶದ ಉನ್ನತಿ ತುಳಸಿಯಿಂದಾಗದು; ಗೊಬ್ಬರದ ಪುಡಿಯಿಂದಾಗುವುದು ಎಂಬುದನ್ನು ಪ್ರತಿಪಾದಿಸುತ್ತಾರೆ. ಆದುದರಿಂದ ಲೇ ವೈಕುಂಠದಲ್ಲಿ ಜನನ ಬೇಡ, ದೇವತ್ವ ಅನಗತ್ಯ, ತಾಯ್ನಾಡಿನಲ್ಲಿಕ್ರಿಮಿಕೀಟವಾಗಿ ಜನಿಸುವುದು ಅದೆಷ್ಟೋ ಸುಖ!

ಸ್ವತಂತ್ರ ಭಾರತದ ಅಧಿಕಾರ ಲಂಪಟರ ಚಿತ್ರ 'ರಾಷ್ಟ್ರಾನಟ'ದಲ್ಲಿದೆ

ಕೆರಳು ಕಲ್ಪನೆಗಳನು
ಮರಳು ಜಲ್ಪನೆಗಳನು
ಸ್ವಾತಂತ್ರ್ಯ ಸುಖವೆಂದು ತಿಳಿಯ
ಲುಂಟೆ?

ಬಿಳಿಜನರ ಪೀರದಲಿ
ಕರಿಜನರು ಕುಳಿತಲ್ಲಿ
ಬಿಡುಗಡೆಯು ಒಂತೊಂದು ಹಿಗ್ಗ
ಲುಂಟೆ?

ನಮ್ಮ ಇಂದಿನ ಪ್ರಶಾಸನದ ಪ್ರಣಾಳಿಕೆಯಿದರಿಂದ ಭಿನ್ನವೇನು?

ಭಾರತದ ಅವಿಭಾಜ್ಯ ಅಂಗ ಗೋವೆಯ ಸ್ವಾಧೀನತೆ, ಸ್ವತಂತ್ರ ಭಾರತದ ಸರ್ವತೋಮುಖ ಅಭಿವೃದ್ಧಿ ಇದಕ್ಕಾಗಿ ಸಮಾಜ ಪಡಬೇಕಾದ ಪ್ರಯಾಸ ಮೊದಲಾದುವುಗಳೊಂದಿಗೆ 'ಕರೋಪನಿಷತ್'ನ 'ಚಿರಪ್ರಶ್ನೆ' ಮತ್ತು 'ಋಗ್ವೇದ'ದ 'ಮರುದ್ಭಿರಗ್ನೆ ಆಗಹಿ' ಎಂಬ ಕವನಗಳೂ ಇಲ್ಲಿ ಸಂಗ್ರಹವಾಗಿವೆ ಗಡಿನಾಡ ಕನ್ನಡದ ನೆಲದಲ್ಲಿ ಅನ್ಯಬಾಷಾ ಪ್ರದೇಶಗಳಿಗೆ ಹೋದ ಭಾಗದ ರಾಷ್ಟ್ರೀಯ ಭಾವನೆಯಿಂದ ಕೂಡಿದ ಕನ್ನಡಿಗ ಅವಶ್ಯ ಹಾಡಿಯೇ ಹಾಡುತ್ತಾನೆ: "ಕನ್ನಡಂ ಕನ್ನಡಂ ಕನ್ನಡಧ್ವಾನವ-" ಹಾಗೆಯೇ

'ಕಳೆದ ಕಾಲವ ನೆನೆದು ಕಳವಳಿಸಿ
ಫಲವಿಲ್ಲ,
ಬಿದ್ದ ಹಣ್ಣೆಂದಿಗೂ ಮರಳಿ ಮರಕೆಲ್ಲ;
ಸುದಿನ ಸೂರ್ಯೋದಯವ ಕಾಂಬನೆಂ
ಬುಗೆಯೊಂದು,
ಬಗೆಯರಳಿರುವುದಿಂದು— ಬಾಳ್ವೆಹಿರಿ
ದೆಂದು"

ಆದರೂ 'ಭಾವೈಕ್ಯದಿ ಜೀವೈಕ್ಯದಿ ಮಂಗಳ ಮಸಗಿರಲಿ'ಎಂಬ ಅಮರ ಭಾರತ ವಾಕ್ಯ ಹೃದಯೊಂತರಾಳದಿಂದ ತಾನೇ ತಾನಾಗಿ ಹೊಮ್ಮುತ್ತದೆ.

ಕವಿತೆಯಲ್ಲಿ ಬಳಸಿದ ಛಂದಸ್ಸು ಸ್ವಚ್ಛಂಧವಾದುದೇ ಹೆಚ್ಚು. ಭಾಷೆಯು ಬಿಗತ, ನಿರೂಪಣಾಕ್ರಮದ ವೈಖರಿ ಪ್ರೌಢವಾಗಿದೆ, ಪ್ರಗಲ್ಭವಾಗಿದೆ, ಉತ್ತೇಜಕವಿದೆ. ಕವಿ ಸಹೃದಯರು 'ಪುನರ್ನವ'ದಲ್ಲಿ ಸ್ವಾಧ್ಯಾಯ ಏಳಲಾದರೆ ಅವರನ್ನೂ, 'ಪುನರ್ನವ'ರಾಗಿಸುವಂತಹ ಶಕ್ತಿ ಅಲ್ಲಿ ಪ್ರಯುಕ್ತವಾದ ಅಮೃತಮಯೂ ಭಾಷೆಗಿದೆ ಪುಸ್ತಕದ ಮುದ್ರಣ, ಕಾಗದ, ರಕ್ಷಾಪತ್ರವೆಲ್ಲವೂ ಆಕರ್ಷಕವಿವೆ. ಸಂಗ್ರಾಹ್ಯ ಪುಸ್ತಕಗಳಲ್ಲಿ 'ಪುನರ್ನವ'ವೂ ಒಂದಾಗಿದೆ

— ಗೋರಾ.



ಅಂತರಿಕ್ಷ ಯಾತ್ರೆಗಳ ಭದ್ರತೆಗಾಗಿ ಗಾಳಿ, ಆಹಾರಗಳನ್ನು ಸಂಗ್ರಹಿಸಬಲ್ಲ ಉಕ್ಕಿನಿಂದ ತಯಾರಿಸಿದ ಸಾಧನವಿದು

(ಹಿನೇ ಸುಟದಿಂದ)

ಕೊಡುವುದಿಲ್ಲ. ಈ ಪ್ರೇತಾತ್ಮಗಳ ಸಂಬಂಧದಲ್ಲಿ ಯಾರೊಬ್ಬರೂ ಸಂಶೋಧನೆ ನಡೆಸುವುದಿಲ್ಲ ಯಾರಾದರೂ ಪಿ. ಎಚ್ ಡಿ. ಪಡೆಯಲು ತಕ್ಕುದಾದ ಅಥವಾ ಅದಕ್ಕೂ ಮಿಗಿಲಾದ ಸಂಶೋಧನಾ ವಿಷಯವಿದು ಪಿ ಎಚ್ ಡಿ. ಪಡೆಯುವುದಕ್ಕಾದರೂ ಈ ಪ್ರೇತಾತ್ಮಗಳ ಸಂಬಂಧದ ಸಂಶೋಧನಾತ್ಮಕ ಅಭ್ಯಾಸ ನಡೆಯಬಾರದೆ?

ನವೀನ ಕಾದಂಬರಿ ಹೊಸ ಪುಸ್ತಕ

ಮೋಹದ ಮಹಾಜಾಲ

ಅದ್ಭುತ ಸಾಹಸ-ಶೋಧದ ಕಾದಂಬರಿ

ಬರೆದವರು. ವೀರಪ್ಪ ಯಗಟಿ, ಬಿ. ಎ., ಎಲ್‌ಎಲ್. ಬಿ. ವಕೀಲ, ಹಾವೇರಿ

ಈ ಕಾದಂಬರಿಯಲ್ಲಿ ಸತ್ಯಾಸತ್ಯಗಳ ತಾರತಮ್ಯವೂ, ಸನ್ಮಾರ್ಗ ದುರ್ಮಾರ್ಗಗಳ ಪರಿಣಾಮಗಳೂ ಪಾತ್ರಗಳ ಪ್ರತ್ಯಕ್ಷ ವರ್ತನೆಗಳ ಮೂಲಕ ಚಿತ್ರಿಸಲ್ಪಟ್ಟಿವೆ. ಮನುಷ್ಯನಿಗೆ ಸಮಾಜದ ವ್ಯವಹಾರದಲ್ಲಿ ಎದುರಾಗುವ ಬಿಕ್ಕಟ್ಟಿನ ಪ್ರಸಂಗಗಳು ಹೇಗೆ ದೈವ ಕೃಪೆಯಿಂದ ಹಾಗೂ ಸಭ್ಯ ವರ್ತನೆಯಿಂದ ಪರಿಹಾರವಾಗುವವೆಂಬುದು ಕಥಾರಹಸ್ಯದ ಮೂಲಕ ವ್ಯಕ್ತಮಾಡಲ್ಪಟ್ಟಿವೆ. ಮನುಷ್ಯ ಸ್ವಭಾವದ ವಿವಿಧ ಮನೋವೃತ್ತಿಗಳು ಆಳವಾಗಿ ವರ್ಣಿಸಲ್ಪಟ್ಟಿವೆ. ಪ್ರಸಂಗಾನುಸಾರವಾಗಿ ನೀತಿ ತತ್ವ ಬೋಧೆಯು ಮನೋವೇದ್ಯವಾಗುವಂತೆ ವಿವರಿಸಲ್ಪಟ್ಟಿದೆ ರಸವತ್ತಾದ ಕಥಾಭಾಗವು ಮನೋಹರವಾದ ಶೈಲಿಯಲ್ಲಿ ರೂಪಿಸಲ್ಪಟ್ಟಿರುವುದರಿಂದ ಓದುಗರು ಅದನ್ನು ಓದಲು ಪ್ರಾರಂಭಿಸಿದರೆ ಪೂರ್ತಿಗೊಳಿಸುವ ವರೆಗೆ ಬಿಡುವಂತಿಲ್ಲ.

ಇದರಲ್ಲಿ ವರ್ಣಿತವಾದ ಅದ್ಭುತ ಸಾಹಸ, ಅಪರಾಧ ಶೋಧಗಳು ಓದುಗರಿಗೆ ಆಶ್ಚರ್ಯ, ಕುತೂಹಲಗಳನ್ನುಂಟುಮಾಡುವವು. ಈ ವರೆಗೆ ರಚಿತವಾದ ಕಾದಂಬರಿಗಳಲ್ಲಿ ಇದು ಶ್ರೇಷ್ಠವಾದದು.

ಬಿಳಿ ಕಾಗದ. ಬೆಲೆ: ರೂ. 1—12—0 (1-75)

ಪ್ರತಿಗಳಿಗೆ— ನವಯುಗ ಪ್ರೆಸ್. ಉಡುಪಿ.
ಅಥವಾ ನವಭಾರತ ಪುಸ್ತಕ ಭಂಡಾರ, ಉಡುಪಿ.

"ನಚಿಕೇತ"ರ
ಇನ್ನೊಂದು ನವೀನ ಕಾದಂಬರಿ—

ಋಣ ಯಾತ್ರೆ

ಇದೀಗ ಪ್ರಕಟವಾಗಿದೆ
ಬೆಲೆ ರೂ. 1-50 ನ. ಪೈಸೆ.

ಮೊದಲು ಪ್ರಕಟವಾದ ಕಾದಂಬರಿ-

ಭಾವಾರ್ಚನೆ

ಬೆಲೆ ರೂ 1-25 ನ. ಪೈಸೆ.

ಪ್ರತಿಗಳು ಸಿಗುವ ಸ್ಥಳಗಳು:-
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.

ಭಾರತೀಯ ಪೋಲೀಸು ಪಡೆ

ನೂರು ವರ್ಷಗಳಿಗೆ ಮೊದಲು ಭಾರತೀಯ ಪೋಲೀಸು ಪಡೆಯು ಜನ್ಮ ಪಡೆದಿತ್ತು. ಜೀವನದಲ್ಲಿ ನೂರು ವರ್ಷವೆಂಬುದು ಸಾಮಾನ್ಯವೆನ್ನುವಂತಿಲ್ಲ ಆಂಗ್ಲೇಯರ ಸಾಮ್ರಾಜ್ಯದಲ್ಲಿ ನಿರ್ಮಿತವಾದ ನಮ್ಮ ಪೋಲೀಸು ಪಡೆಯಂದು ಸ್ವತಂತ್ರ ಭಾರತದ ಸೇವೆಯನ್ನು ಸಲ್ಲಿಸುತ್ತಿದೆ. ಜನತೆಯ ಮೇಲೆ ಅಧಿಕಾರ ಜಮಾಯಿಸುವುದನ್ನು ಬಿಟ್ಟುಕೊಟ್ಟು ಅದರ ಸೇವೆ ಮಾಡುವುದನ್ನೇ ತನ್ನ ಉದ್ದೇಶವೆಂದು ಬಗೆದಿದೆ. ಆದರೆ, ಇಂದಿಗೂ ಜನತೆ ಪೋಲೀಸರನ್ನು ಉಪೇಕ್ಷೆಯಿಂದ ನೋಡುತ್ತಿರುವುದು ಕಂಡುಬರುತ್ತದೆ. ಜನತೆಯ ಸಹಾನುಭೂತಿಯೊಗಲೀ ನಾಯಕರ ಸಹಾಯವಾಗಲೀ ಪೋಲೀಸರಿಗೆ ದೊರೆಯುತ್ತಿಲ್ಲ. ತಮ್ಮದೇ ದೇಶದಲ್ಲಿ ಪೋಲೀಸರು ವಿದೇಶೀಯರಂತೆ ಇರಬೇಕಾಗಿದೆ. ಕಾರ್ಯವಶದಿಂದ ಪೋಲೀಸು ಸಿಪಾಯಿಯೊಬ್ಬನು ಹಳ್ಳಿಯೊಂದಕ್ಕೆ ಹೋದರೆ, ಅಲ್ಲಿ ಆತನಿಗೆ ಅನ್ನಾಹಾರ ದೊರೆಯುವುದೂ ಕಷ್ಟವೆಂಬ ಸ್ಥಿತಿ ಕೆಲವೆಡೆಯಿದೆ ಆತನು ಸೂರೊಬ್ಬನಲ್ಲಾದರೂ ಉಳಿದುಕೊಂಡನೆಂದರೆ, ಮತ್ತೆ ಆತನು ವಶೀಲಿಗೆ ಸಿಲುಕಿದನೆಂಬ ಆರೋಪ ಬಂದೇ ಬರುತ್ತದೆ. ಸರಕಾರವಾದರೂ ಈ ಪೋಲೀಸು ವಿಭಾಗದ ನೌಕರರನ್ನು ಸುದೃಷ್ಟಿಯಿಂದ ನೋಡುತ್ತಿಲ್ಲ.

ಒಂದು ರಾಷ್ಟ್ರಕ್ಕೆ ಶಿಕ್ಷಣ ನೀಡುವ ಶಿಕ್ಷಕರು ಮತ್ತು ರಕ್ಷಣೆ ನೀಡುವ ರಕ್ಷಕರು ಎರಡು ಶ್ವಾಸಕೋಶಗಳಂತಿದ್ದಾರೆ. ಆದರೆ, ರಾಜ್ಯ ಸರಕಾರಕ್ಕೆ ಸೇರಿದ ಈ ಎರಡೂ ವಿಭಾಗಗಳೂ ಕೊಳಚೆಯಿಂದ ತುಂಬಿವೆ; ಶ್ವಾಸಕೋಶಗಳಿಗೆ ಕ್ಷಯರೋಗವಂಟಿದೆ. ಅಮೂಲ್ಯವಾದ ಈ ಕಾರ್ಯಾಂಗವನ್ನು ಸಮರ್ಪಕವಾಗಿ ಸುದೃಷ್ಟಿಯಿಂದ ನೋಡುವ ಹೃದಯವಿಲ್ಲದಿರುವಾಗ, ಅಂತಹ ಹೃದಯ ಹೀನ ಸರಕಾರಗಳಿಂದ ಬಯಸಿ ಪಡೆಯಬೇಕಾದುದಾದರೂ ಏನಿದೆ? ಸರಕಾರವೇ ಕೈ ಬಿಟ್ಟ ಈ ಎರಡು ವಿಭಾಗಗಳನ್ನು ಜನತೆಯೂ ಕೈಬಿಟ್ಟರೆ ಅದರಲ್ಲಿ ತಪ್ಪು ಯಾರದು?

ಪೋಲೀಸರ ಕೆಲಸ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ನೆರೆಯೇರಲಿ, ಬೆಂಕಿ ಬೀಳಲಿ; ದಂಗೆಯೇಳಲಿ, ಜಾತ್ರೆ ಜರಗಲಿ ಅಲ್ಲಿ ಪೋಲೀಸಿನವರು ಬೇಕೇ ಬೇಕು. ಇತ್ತೀಚೆಗಂತೂ ರಾಜಕೀಯ ಚುನಾವಣೆಗಳಲ್ಲಿ ಮಾತ್ರವಲ್ಲ ವಿಶ್ವವಿದ್ಯಾಲಯ ಚುನಾವಣೆಗಳಲ್ಲಿಯೂ ಇವರ ಸಹಾಯ ಹಸ್ತ ಅಗತ್ಯವೆನಿಸಿದೆ. ಹೀಗಿದ್ದರೂ ಇವರ ಮೇಲೆ ಬೀರುವ ದೃಷ್ಟಿ ಮಾತ್ರ ಕುರೋದ್ಯ ಪೂರ್ಣವಾದುದು. ಸಿಪಾಯಿ, ನ್ಯಾಯಾಧೀಶ, ವಕೀಲ, ಒವರ್‌ಸೀರ್, ಸಿವಿಲ್ ಸರ್ಜನ್—ಇವರೆಲ್ಲರ ಕಾರ್ಯವನ್ನು ಮಾಡುವ ಜಾಣ್ಮೆ ಪೋಲೀಸಿನವನಲ್ಲದ್ದರೆ ಮಾತ್ರ ಆತ ಅಪರಾಧಿಯ ಪ್ರಥಮ ಸೂಚನೆಯನ್ನು ಬರೆಯಬಲ್ಲ. ಇವೆಲ್ಲವನ್ನೂ ಮಾಡುವ ಸೇವಕನು ಉಪವಾಸ ಸಾಯಲಿ, ಅನಾರೋಗ್ಯಕ್ಕೆ ತುತ್ತಾಗಲಿ, ಬಡತನದಿಂದ ಸರಳುತ್ತಿರಲಿ ಯಾರೊಬ್ಬರೂ ಆತನ ಗೋಜಿಗೆ ಹೋಗುವುದಿಲ್ಲ; ಇದು ನಾಚಿಗೇಡು ಕೆಲವೊಂದು ರಾಜ್ಯಸರಕಾರಗಳು ಪೋಲೀಸರ ವಿರಸ್ಥಿತಿಯನ್ನು ಸುಧಾರಿಸಲು 'ಪೋಲೀಸ್ ಆಯೋಗ'ವನ್ನು ನೇಮಿಸಿರುತ್ತವೆ ಈ ಆಯೋಗಗಳು ಪೋಲೀಸರ ಕಷ್ಟಗಳನ್ನು ದೂರೀಕರಿಸುವಲ್ಲಿ ನೆರವು ನೀಡಿಯೂವೆಂದು ಹಾರೈಸಬಹುದು.

ಪೋಲೀಸರು ಲಂಚ ಸ್ವೀಕರಿಸುವರು ಎಂಬ ಆರೋಪವಿಂದು ಸರ್ವಸಾಮಾನ್ಯವಾದುದು. ವಾಸ್ತವಿಕ ಈ ದೋಷವೇ ಮಹಾ ದೋಷವಾಗಿ, ಜನತೆಯಲ್ಲಿ ಇವರ ಮೇಲೆ ಅನಾದರ ತಾಳುವುದಕ್ಕೆ ಉತ್ತೇಜಕವಾಯಿತು ಆದರೆ, ನಿಜ ಹೇಳುವುದಾದರೆ, ಅನ್ಯ ಸರಕಾರೀ ವಿಭಾಗಗಳಲ್ಲಿ ಇವಕ್ಕಿಂತಲೂ ಹೆಚ್ಚು ಲಂಚದ ಪ್ರಭಾವವಿದೆ. ಸಮಾಜದ ಬಡ ಜನತೆಯಿಂದ ಮಾತ್ರ ಪೋಲೀಸರಿಗೆ ಲಂಚ ದೊರೆಯುವುದರಿಂದಲೇ ಇವರು ಅಪಕೀರ್ತಿಗಳಿರುವಂತಾಗಿದೆ. ಆಡಳಿತೆಯಲ್ಲಿ ಸುಧಾರಣೆ ಮಾಡುವುದು ನಮ್ಮ ಉದ್ದೇಶವೆಂದಿದ್ದರೆ, ಪೋಲೀಸು ವಿಭಾಗದಲ್ಲಿ ಮಾತ್ರವಲ್ಲ ಎಲ್ಲೆಲ್ಲಿಯೂ ಲಂಚ ನಿರ್ಮೂಲನ ಮಾಡಬೇಕಾದುದು ಅಗತ್ಯ.

ಪೋಲೀಸು ಪಡೆಗೆ ಭರತಿ ಮಾಡಿ ಕೊಳ್ಳುವಾಗ, ಈಗೀಗ ಉತ್ತಮ ನೀತಿಯನ್ನೂ ಉಚಿತ ಶಿಕ್ಷಣ ಪ್ರಣಾಳಿಯನ್ನೂ ಅನುಸರಿಸಲಾಗುತ್ತಿದೆ. ಆದರೆ, ಇಷ್ಟರಿಂದಲೇ ಪೋಲೀಸರ ಸ್ಥಿತಿ ನೆಟ್ಟಗಾಗಲಾರದು. ಸಿಪಾಯಿಗಳ ವೇತನದಲ್ಲಿ ಹೆಚ್ಚಳ ಹಾಗೂ ಅವರ ಸೇವಾ ನಿಯಮಗಳಲ್ಲಿ ಸುಧಾರಣೆಯಾಗುವುದು ಅತ್ಯಗತ್ಯ. ಅವರ ಮಕ್ಕಳಿಗಾಗಿ ಕಲ್ಯಾಣ ಯೋಜನೆಗಳು ರೂಪಿತವಾಗಬೇಕು; ಉಚಿತ ಶಿಕ್ಷಣದ ಸೌಲಭ್ಯ ದೊರೆಯಬೇಕು; ಅಗ ಮಾತ್ರ ವಿಶ್ವಾಸ ಪಾತ್ರ ಕರ್ತವ್ಯ ನಿಷ್ಠ ಪೋಲೀಸು ಪಡೆಯನಿರ್ಮಾಣವಾದೀತು. ಇದನ್ನು ಸಾಧಿಸುವುದೇ ನಮ್ಮ ಧ್ಯೇಯವಾಗಿರಬೇಕು.

ಪೋಲೀಸು ಸಿಪಾಯಿಗಳ ಮೇಲೆ ಹೊರಿಸುವ ಇನ್ನೊಂದು ಆರೋಪವಿದೆ. ಅವರು ಸಾಮಾನ್ಯವಾಗಿ ಶಾಸನ ನಡೆಸುವ ಪಕ್ಷದ ಕಡೆಗೆ ಒಲಿದಿರುತ್ತಾರೆ; ಪಕ್ಷಪಾತನಡೆಸುತ್ತಾರೆ ಎಂದು. ಇದು ತುಸುವಷ್ಟಿಗೆ ನಿಜವೇ, ಆದರೆ, ಪೋಲೀಸು ವಿಭಾಗದ ಉನ್ನತ ಅಧಿಕಾರಿಯೊದರೂ ಮಂತ್ರಿಮಹೋದಯರ ಪರಿವಾರವನ್ನು ಉದ್ರೇಕಗೊಳಿಸುವ ಮನಸ್ಸು ಮಾಡುವುದುಂಟೆ? ಹಾಗಿರುವಾಗ ಪಾಪ, ಪೋಲೀಸರ ಮಾತೇನು? ಸ್ವಯಂ ಅಧಿಕಾರಿಗಳು ನಿಷ್ಪಕ್ಷಪಾತಿಗಳೂ ಸೇವಾತತ್ಪರರೂ ಆಗದ ಕೊರತೆ ಅವರಲ್ಲಿ ನ್ಯಾಯಶೀಲತೆಗೆ ಸಮ್ಮಾನ ದೊರೆಯದಿದ್ದರೆ ಸಾಮಾನ್ಯ ಸಿಪಾಯಿಗಳಲ್ಲಿ ಅಂತಹ ಗುಣಗಳು ಬರುವುದು ಸುಲಭ ಸಾಧ್ಯವಲ್ಲ.

ಇಷ್ಟರಿಗೆ ಪೋಲೀಸು ಕಾಯದೆಯನ್ನು ರದ್ದುಗೊಳಿಸಿ, ನಮ್ಮ ಸಂವಿಧಾನದಲ್ಲಿ ಪ್ರತಿಯೋರ್ವ ನಾಗರಿಕನಿಗೂ ದೊರೆತಿರುವ ಮೌಲಿಕ ಅಧಿಕಾರಗಳನ್ನು ಆಧರಿಸಿ ಹೊಸತಾದ ಪೋಲೀಸು ಕಾಯದೆಯನ್ನು ತಯಾರಿಸುವುದು ಅಗತ್ಯ. ವಿದೇಶೀಯರ ಆಳಿಕೆಯಲ್ಲಿ ರಚಿತವಾದ ನಮ್ಮ ದೇಶದ ಪೋಲೀಸು ಕಾಯದೆಯ ಉದ್ದೇಶವು ಗುಲಾಮಗಿರಿಯನ್ನು ಶಾಶ್ವತಗೊಳಿಸುವುದು ಮತ್ತು ದೇಶಭಕ್ತರನ್ನು ಚೇಲಿಗಟ್ಟುವುದಿತ್ತು. ಸ್ವತಂತ್ರ ರಾಷ್ಟ್ರವೊಂದರಲ್ಲಿ ಈ ರೀತಿಯ ಪೋಲೀಸ್ ಕಾಯದೆ ವ್ಯವಹಾರದಲ್ಲಿರುವುದು ನ್ಯಾಯಸಮ್ಮತವಲ್ಲ. ಸ್ವತಂತ್ರ ಭಾರತದಲ್ಲಿ ಪೋಲೀಸರು ಸರಕಾರದವರಾಗಿರದೆ 'ಜನತೆಯ ಪೋಲೀಸ್'ರಾಗಬೇಕು.

ಇಷ್ಟರ ಪೋಲೀಸು ಕಾಯದೆಯಲ್ಲಿ ಸ್ವತಂತ್ರರಾಷ್ಟ್ರವೊಂದಕ್ಕೆ ಅಗೌರವ ಕಾರಕನಾದ ಅಂಶಗಳನ್ನು ಕಿತ್ತುಹಾಕಿ, ಪೋಲೀಸರೂ ದೇಶಾಭಿವೃದ್ಧಿಯಲ್ಲಿ ಇತರರಂತೆಯೇ ಪಾಲುಗೊಳ್ಳುವುದಕ್ಕೆ ಅನುಕೂಲವಾದ ಹೊಸ ಸೇವಾ ನಿಯಮಗಳನ್ನು ಸಿಫಾರಸು ಮಾಡುವುದಕ್ಕೆ ಉಚ್ಚಮಟ್ಟದ ಆಯೋಗವು ಈ ಶತಮಾನೋತ್ಸವದ ಸವಿನೆನಪಿಗಾಗಿ ನೇಮಕವಾಗಲಿ. ಭಾರತೀಯ ಸೇನೆಯಂತೆಯೇ ಭಾರತೀಯ ಪೋಲೀಸು ಪಡೆಯು ಕೂಡಾ ರಾಜ್ಯ ಸರಕಾರಗಳ ಅಧೀನದಲ್ಲಿರುವುದಕ್ಕಿಂತ ಕೇಂದ್ರದಡಿಯಿರುವುದೂ ಒಳ್ಳೆಯದಾಗಲಾರದೆ?

ಡಿ. ಕೆ. ಭಾರದ್ವಾಜರ
ಇಂಗ್ಲಿಷ್, ಇಂಗ್ಲಿಷ್-ಕನ್ನಡ
ಡಿಕ್ಷನೆರಿ
ಬೆಲೆ: ರೂ. ನಾಲ್ಕು.
ಐದು ರೂಪಾಯಿ ಮನಿಯೊರ್ಡರು ಮಾಡಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ ಕಳಿಸಲಾಗುವುದು.
ವಿಚಾರಿಸಿರಿ:
ನವಭಾರತ ಪುಸ್ತಕ ಭಂಡಾರ
ಉಡುಪಿ.

ವಿಶ್ವಕವಿ ಟಾಗೋರರ ಪುಣ್ಯಸ್ಮರಣೆಗಾಗಿ
ಅವರ ಶತಮಾನೋತ್ಸವದ ಸುಸಂದರ್ಭದಲ್ಲಿ
ಪ್ರಕಟವಾದ ಕಿರುಗಾಣಿಕೆಗಳು
ಚಿತ್ರಾಂಗದೆ
ಬೆಲೆ: ೬೦ ನ. ಪೈಸೆ.
(ಶ್ರೀ ಕೆ. ಕೆ. ಶೆಟ್ಟಿ, ಎಂ. ಎಲ್. ಸಿ. ಅವರಿಂದ ಅನುವಾದಿತ)
ರವೀಂದ್ರನಾಥರ ಕಿರುಗತೆಗಳು
ಬೆಲೆ. ೯೦ ನ. ಪೈಸೆ.
(ಶ್ರೀ ಹನುಮಂತರಾವ್ ಮಾಂಜರೇಕರ, ಕಾರವಾರ ಅವರಿಂದ ಅನುವಾದಿತ)
ಪ್ರಕಾಶಕರು:
ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ನವಯುಗ ಪ್ರೆಸ್, ಉಡುಪಿ.

ದಿ ವಿಜಯ ಬೇಂಕ್ ಲಿಮಿಟೆಡ್
ಶೆಡ್ಯೂಲ್ಡ್ ಬೇಂಕ್. ಸ್ಥಾಪನೆ: 1931
ರಿಜಿಸ್ಟರ್ಡ್ ಆಫೀಸು:
ವಿಜಯ ಬೇಂಕ್ ಬಿಲ್ಡಿಂಗ್, ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು-3, ಸೌತ್ ಕೆನರಾ
ಕಾಯಂ ರೇವಣಾತಿ ಬಡ್ಡಿ ದರವನ್ನು ಶೇಕಡ 5½ರ ವರೆಗೆ ಹೆಚ್ಚಿಸಲಾಗಿದೆ
ಏಳು ದಿವಸದ ನೋಟೀಸಿನಲ್ಲಿ ಕೇಳಿದಾಗ್ಯೆ ಹಿಂದೆ ನಡೆಯುವ ಡಿಪೋಸಿಟುಗಳನ್ನು (Call Deposits) ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸೋಣಾಗುತ್ತದೆ.
ಹೆಚ್ಚಿನ ಮಾಹಿತಿಗೆ ನಮ್ಮ ಶಾಖೆಗಳಲ್ಲಿ ದಯವಿಟ್ಟು ವಿಚಾರಿಸಿರಿ.

Tel: 'BLUEYAGAR'. —— ಚಿನ್ನ ಮತ್ತು ವಜ್ರಗಳ ಆಧುನಿಕ ತವರುಮನೆ —— Phone: 374.
ಕೆ.ಆರ್.ಕೆ.ಶೇಟ್ ಡಯಮಂಡ್ ಮಾರ್ಟ್
ಸ್ಥಾಪನೆ:1919] ಚಿನ್ನ ಮತ್ತು ವಜ್ರದ ವ್ಯಾಪಾರಿಗಳು,(ಗವರ್ನ್‌ಮೆಂಟ್ ಕಾಲೇಜ್ ಎದುರುಗಡೆ)ಮಂಗಳೂರು. ಮಾಲಿಕ:ಕೆ.ಕೆ.ಆರ್.ಶೇಟ್

ರವೀಂದ್ರವಾಣಿ—ಲೇಖಾಂಕ ೨೧—ವಿಶ್ವಕವಿ ರವೀಂದ್ರನಾಥ ಟಾಗೋರ್

ಪ್ರೇಮ ಸಾಧನೆಯಿಂದ ಪರಮಾತ್ಮನ ಪ್ರಾಪ್ತಿ

ಅನುವಾದಕರು: ಕೆ. ಎನ್. ಭಟ್, ಶಿರಾಡಿಪಾಲ್.

ವಿಜ್ಞಾನದ ದೃಷ್ಟಿಕೋನದ ಹೀಗಿದ್ದರೂ, ನಮ್ಮ ಮನಸ್ಸು—ನಾವು ತಪ್ಪು ಮಾಡುತ್ತಿಲ್ಲವೆಂಬುದಕ್ಕೆ ಸಾಕ್ಷಿಯಾಗಿ ನಿಂತಿರುವುದು ಪುಷ್ಪವು ಪ್ರಕೃತಿಯ ಕ್ಷೇತ್ರದಲ್ಲಿ ತನ್ನ ಉಪಯೋಗದ ಕುರಿತು, ಪ್ರಮಾಣಪತ್ರವನ್ನು ತೆಗೆದುಕೊಂಡೇ ಪ್ರವೇಶಿಸಿರುವುದು ಈ ಪರಿಚಯ ಪತ್ರದಲ್ಲಿ ಅದರ ಸೌಂದರ್ಯದ ಗುಣಗಾನವೇ ಇರುವುದು. ಈ ಪುಷ್ಪವು ಒಂದು ಕಡೆ ದಾಸನಾಗಿ ಪ್ರವೇಶಿಸುವುದಾದರೆ, ಮತ್ತೊಂದು ಕಡೆ ಸ್ವತಂತ್ರರೂಪದಿಂದ ಪ್ರವೇಶಿಸುವುದು. ಇವುಗಳಲ್ಲಿ ನಾವು ಒಂದು ಮಾತ್ರ—ಸತ್ಯ—ಮತ್ತೊಂದು ಅಸತ್ಯ, ಎಂದು ಒಪ್ಪಿಕೊಳ್ಳಲಾರೆವು. ಇವರ ಈ ಎರಡು ರೂಪಗಳೂ ಸತ್ಯವಾಗಿವೆ. ಹೂವು ತನ್ನ ವಂಶ ವೃದ್ಧಿಗಾಗಿ ಫಲವನ್ನು ಸೃಷ್ಟಿಸುವುದು. ಇದು ಅದರ ಬಾಹ್ಯ ಸತ್ಯವಾಗಿರುವುದು ಆದರೆ ಆಂತರಿಕ ಸತ್ಯವು—"ಆನಂದಾ ದ್ಯೇವ ಸರ್ವಾಣಿ ಭೂತಾನಿ ಜಾಯಂತೆ"ಅಂದರೆ, ಆನಂದದಿಂದಲೇ ಸರ್ವವೂ ಸೃಷ್ಟಿಯಾಗುವುದು. ಎಂಬುದೇ ಆಗಿದೆ.

ಹೂವಿನ ಕಾರ್ಯವು ಕೇವಲ ಪ್ರಕೃತಿಯ ಆವಶ್ಯಕತೆಗಳನ್ನಷ್ಟೇ ಸೂರ್ತಿಗೊಳಿಸುವುದಾಗಿಲ್ಲ, ಮನುಷ್ಯನ ಮನಸ್ಸಿನ ಆವಶ್ಯಕತೆಗಳನ್ನು ಪೂರ್ಣಗೊಳಿಸುವುದೂ ಅದರ ಕರ್ತವ್ಯವಾಗಿದೆ. ಪ್ರಕೃತಿಯ ಪ್ರಯೋಗಶಾಲೆಯಲ್ಲಿ ಇದು—ನೌಕರನಂತೆ ಕೆಲಸ ಮಾಡುವುದು.. ನಿಶ್ಚಿತವಾದ ಸಮಯದಲ್ಲಿ ನಿಶ್ಚಿತವಾದ ತನ್ನ ಕಾರ್ಯವನ್ನು, ಇದು ಮಾಡುತ್ತಿರುವುದು ರಾವಣನ ಸ್ವರ್ಣನಗರಿಯಲ್ಲಿ ಸಿಲುಕಿದ್ದ ಸೀತಾ ದೇವಿಗೆ ಜನಮಂಚನ ಮೂಲಕ ತರಲ್ಪಟ್ಟ ಉಂಗುರವು ಹೇಗೆ ದೂತನಾಗಿ ಬಂದಿದ್ದಿತೋ ಅದೇ ರೀತಿಯಿಂದ, ಇದು ಮನುಷ್ಯನ ಹೃದಯದಲ್ಲಿ ಮಹಾ ದೇವತೆಯ ದೂತನಂತೆ, ಬಂದು— ಪ್ರವೇಶಿಸುವುದು. ಉಂಗುರವನ್ನು ನೋಡಿದ ಕೂಡಲೇ ಸೀತಾದೇವಿಗೆ—ತನ್ನ ಹೃದಯ ದೇವತೆಯು ತನ್ನನ್ನು ಮರೆತಿಲ್ಲ! ತನ್ನನ್ನೂ ಬಿಡಿಸಿಕೊಂಡು ಹೋಗಲು ಅವರು ಶೀಘ್ರವಾಗಿ ಬರುತ್ತಾರೆ! ಎಂಬ ವಿಶ್ವಾಸ ಹೇಗೆ ಉಂಟಾಗಿದ್ದಿತೋ, ಹಾಗೆಯೇ ಈ ಪುಷ್ಪವೂ ನಮ್ಮ ಮಹಾ ಪ್ರೇಮಿಯ ದಿವ್ಯ ಸಂದೇಶವನ್ನು ತೆಗೆದುಕೊಂಡು, ನಮ್ಮೆದುರಿಗೆ ಬರುವುದು. ಧನವೈಭವದಿಂದ ತುಂಬಿದ ಈ ಮಾಯಾ ಪ್ರಪಂಚವು, ರಾವಣನ ಸ್ವರ್ಣನಗರಿಯಂತಿರುವುದು. ಇದರೊಳಗೆ ನಾವು ಕಣ್ಣುಕಟ್ಟಿ ಬಿಟ್ಟ ಕೈದಿಗಳಂತೆ ಇರುತ್ತೇವೆ. ಇದರ ಜಗಮಗಿಸುವ ರೂಪ, ಮತ್ತು ಭೋಗ ವಿಲಾಸಾದಿಗಳು ನಮ್ಮನ್ನು ಇದರ ಸೊಸೆಯಂತೆ ಇರಬೇಕೆನ್ನುವ— ಅಭಿಲಾಷೆಯನ್ನು ಹುಟ್ಟಿಸುತ್ತವೆ. ಈ ಮಧ್ಯೆ ಪುಷ್ಪವೆ, ನಮ್ಮ ಪ್ರೇಮಿಯ ಸಂದೇಶವನ್ನು ತೆಗೆದುಕೊಂಡು ಒಂದು, ನಮ್ಮ ಕಿವಿಗಳಲ್ಲಿ ಮೆಲ್ಲಗೆ ಹೇಳುವುದೇನೆಂದರೆ—"ನಾನು ಬಂದಿದ್ದೇನೆ; ನನ್ನನ್ನು ಅವರು ಕಳುಹಿಸಿರುವರು. ಯಾರ ಆತ್ಮವು ಪ್ರೇಮಪೂರ್ಣವಾಗಿ ಇರುವುದೋ—ಆ ಸೌಂದರ್ಯ ದೇವತೆಯ ದೂತನಾಗಿ ನಾನು ಬಂದಿದ್ದೇನೆ!— ಆ ದೇವತೆಯು ನಿಮ್ಮನ್ನು ಮರೆತಿಲ್ಲ. ನಿಮ್ಮನ್ನು ಕರೆದುಕೊಂಡು ಹೋಗಲು ಅದು ಬೇಗನೆ ಬರುವುದು. ಈ ಸ್ವರ್ಣನಗರಿಯ ಮಾಯಾ ಜಾಲವು ಈ ರೀತಿಯಿಂದ ನಿಮ್ಮನ್ನು ಬಹು ಕಾಲ ಬಂಧನದಲ್ಲಿ ಇರಿಸಲಾರದು."

ಪುಷ್ಪವು ಹೀಗೆ ಹೇಳುತ್ತಿರುವಾಗ ನಾವು ಜಾಗೃತಾವಸ್ಥೆಯಲ್ಲಿ ಇದ್ದುದೇ ಆದರೆ, ಆಗ ನಾವು—"ನೀನು ನಮ್ಮ ಪ್ರೇಮ ಪ್ರಭುವಿನ ದೂತನೇ ಆಹುದು,ಎಂದು ನಾವು ವಿಶ್ವಾಸಪಡುವುದು ಹೇಗೆ?" ಎಂದು ಕೇಳಬಹುದು ಆಗ ಅದು—"ನೋಡಿ ನನ್ನಲ್ಲಿ ಯಾವ ರೂಪ-ಬಣ್ಣ, ಬಹು ಸುಂದರವಾಗಿ ಇರುವುದೋ ಇದೇ ನಿಮ್ಮ ಪ್ರಭುವಿನ ಗುರುತಾಗಿರುವುದು." ಎಂಬ ಉತ್ತರ— ಕೂಡುವುದು.

ನಿಜವಾಗಿಯೂ ಪುಷ್ಪವು ಬಹು ಸುಂದರವಾಗಿರುವುದು ನಿಶ್ಚಯವಾಗಿಯೂ ಇದು ನಮ್ಮ ಪ್ರೇಮಿಯ ಗುರುತಾಗಿದೆ— ಎಂದು ಭಾವಿಸಿದಾಗ ನಮ್ಮ ಸಂಶಯಗಳೆಲ್ಲ ದೂರವಾಗುತ್ತವೆ. ಈ ಮಧುರ ಸ್ಮೃತಿಯ ಸ್ಪರ್ಶವು ನಮ್ಮನ್ನು ದಿವ್ಯವಾದ— ಪ್ರೇಮದಿಂದ — ಆನಂದಗೊಳಿಸುವುದು ·ಈ ಮಾಯಾ ಸ್ವರ್ಣನಗರಿಯಲ್ಲಿ ನಮಗೆ ಯಾವ ಆಕರ್ಷಣೆಯೂ ಇಲ್ಲ. ನಾವು ಪ್ರತ್ಯೇಕವಾಗಿರುವ ಪ್ರಪಂಚದ ಆಕ್ಷಗಳಾಗಿ ಇರುತ್ತೇವೆ. ನಮ್ಮ ತನ್ನ ಮನೆಯು, ಈ ಮಾಯಾ ಸ್ವರ್ಣನಗರಿಯಿಂದ—ದೂರವಾಗಿ ಬಹು ದೂರವಾಗಿರುವುದು, ಎಂದು ನಮಗೆ ಚೆನ್ನಾಗಿ ಅನುಭವವಾಗತೊಡಗುವುದು.

ಪುಷ್ಪವು ದುಂಬಿಗಳಿಗೆ ಬಣ್ಣ ಮತ್ತು ಸುಗಂಧವನ್ನು ನೀಡುತ್ತಿರುವುದು. ಆದರೆ ಮನುಷ್ಯನ ಹೃದಯಕ್ಕೆ ಇದು, ಸೌಂದರ್ಯ ಹಗೂ ಆನಂದವಾಗಿ ಪರಿಣಮಿಸುವುದು. ವಿವಿಧ ಬಣ್ಣಗಳಿಂದ ಒರೆದ ಪ್ರೇಮಪತ್ರದಂತೆ, ಪುಷ್ಪವು ನಮ್ಮ ಪ್ರೇಮಿಯ ವಿವಿಧ ವರ್ಣಗಳಿಂದ ಕೂಡಿದ ಪ್ರೇಮಪತ್ರದೊಡನೆ ನಮ್ಮ ಬಳಿಗೆ ಬಂದು ಅರಳುವುದು.

ಬಾಹ್ಯ ದೃಷ್ಟಿಯಿಂದ ನಮ್ಮ ಪ್ರಕೃತಿಯು ಕಾರ್ಯ ವ್ಯವಹಾರ ವ್ಯಾಕುಲತೆಯಿಂದ ಕೂಡಿದ್ದರೂ, ಅದರ ಹೃದಯದೊಳಗೆ ಏಕಾಂತವಿರುವುದು. ಇಲ್ಲಿ ವಿಶ್ರಾಂತಿಯ ರಾಜ್ಯವಿರುವುದು ಆ[illegible]ತಿಯೊಂದು ಕಾರ್ಯವೂ ಉಪಯೋಗ[illegible] ದೃಷ್ಟಿಯಿಂದಲೇ ಅಲ್ಲ: ಸ್ವತಂತ್ರವಾದ[illegible]ಚ್ಛೆಯಿಂದಲೇ ನಡೆಯುತ್ತದೆ ಈ [illegible]ಕಾಂತನಲ್ಲಿ ಪ್ರಯೋಗ ಶಾಲೆಯ ಅ[illegible] ಉತ್ಸವದ ದೀಪ ಜ್ಯೋತಿಯಂತೆ, ಪ[illegible]ರ್ತನೆಯಾಗುವುದು. ಯಂತ್ರಗಳ ಗ[illegible] ಬಡಾಟವು ಇಲ್ಲಿ ಸಂಗೀತವಾಗಿ ಪರಿವ[illegible]ಸುವುದು. ಪ್ರಕೃತಿಯು ಬಾಹ್ಯರೂಪ[illegible]ಲ್ಲಿ ಕಾರ್ಯ ಮತ್ತು ಕಾರಣಗಳ ಸರ[illegible]ಯು, ಒಂದು ಕರ್ಕಶವಾಗಿ— ಖಣ [illegible]ನ್ನುತ್ತಿರುವುದು ಆದರೆ ಮನುಷ್ಯನ [illegible]ದಯದಲ್ಲಿ ಈ ಖಣ ಖಣಾಟವು ಸಿತಾ[illegible]ದ ತಂತಿಗಳಿಂದ ಹೊರಹೊಮ್ಮುತ್ತಿರುವ ದಿವ್[illegible]ನಾದದಂತೆ ಪರಿವರ್ತಿಸುವುದು.

ಪ್ರಕೃತಿಯು ಈ ಪರಿಯಿಂದ ಬಹ[illegible]ಸಲ ವಿವಿಧ ರೂಪಗಳಿಂದ ಪ್ರಕಟವಾ[illegible]ತ್ತಿರುವುದು ಇದು ನಿಜವಾಗಿಯೂ [illegible]ರ್ಯಕರವಾದ ವಿಚಾರವಾಗಿದೆ ಈ [illegible]ಪಗಳಲ್ಲಿ ಒಂದು ಬಂಧನವೂ—[illegible]ತ್ತೊಂದು ಸ್ವತಂತ್ರ ಪ್ರಕೃತಿಯ [illegible]ದೇ ಕಾರ್ಯದಲ್ಲಿ ಇಬ್ಬಗೆಯ ಪ್ರ[illegible] ಒಂದು ಉಪಯೋಗದ ದೃಷ್ಟಿಯುಳ್ಳದ[illegible] ಮತ್ತೊಂದು ಆನಂದದ ದೃಷ್ಟಿಯಿಂದ[illegible]ವುದು. ಇದು ಹೇಗೆ ಕಾಣುವುದೆಂ[illegible] ಒಂದು ರೂಪದಿಂದ ಈ ಪ್ರಕೃತಿಯ [illegible]ಶ್ಯಮದ ಸಾಕಾರ ಮೂರ್ತಿಯಾದರೆ, [illegible]ತ್ತೊಂದು ರೂಪದಿಂದ ವಿಶ್ರಾಂ[illegible] ಮೂರ್ತಿಯಾಗಿ ಕಾಣಿಸುವುದು. ಆ[illegible] ಅದು ಹೊರಗಿನಿಂದ ನೋಡುವಾಗ [illegible]ನೇಕ ಬಂಧನಗಳಿಂದ ಬಂಧಿಸಲ್ಪಟ್ಟ[illegible]ದಾಗಿ ಕಾಣಿಸುವುದು. ಆದರೆ, [illegible] ಹೃದಯವು ಮುಕ್ತ ಸೌಂದರ್ಯಪೂ[illegible]ವಾಗಿರುವುದು!

(ಸಲೇ[illegible]

ಪ. ಜರ್ಮನಿಯ ಬಗ್ಗೆ ದೃಢ ನಿಲುವೆಯನ್ನು ಟೆಲಿವಿಜನ್ ಪ್ರಸಾರಮಾಡುತ್ತಿರ[illegible] ಅಧ್ಯಕ್ಷ ಜಾನ್ ಕೆನ್ನೆಡಿ.

ವರ್ಗ—ಊಳಿಗ
ಮೊದಲಾದ ಯಾವತ್ತೂ ತರದ
ಎಕೌಂಟ್ ಪುಸ್ತಕಗಳು
ಶಾಲಾ ರಿಜಿಸ್ಟ್ರಿಗಳು,
ಫಾರ್ಮುಗಳು,
ದೊರೆಯುತ್ತವೆ.
ವಿಚಾರಿಸಿರಿ—
ನವಯುಗ ಪ್ರೆಸ್, ಉಡುಪಿ

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗ[illegible] ಲೇಖನಗಳನ್ನು ಆಮಂತ್ರಿಸಲ[illegible]ದೆ. ಇವು ಚಿಕ್ಕದಿರ ಬೇಕ[illegible] ಕಾಗದದ ಒಂದೇ ಮಗ್ಗುಲಿನ[illegible] ಬೇಕು. ಲೇಖಕಬಂಧುಗಳು [illegible] ಕಾರ್ಯಕ್ಕಾಗಿ ವಿನಂತಿ —ಸಂ

ಸಂತಾನ ಫಲ!

(೨ನೇ ಪುಟದಿಂದ)

ದರೂ ದಾಸಯ್ಯನ ಹೆಂಡತಿ ಬಾವಿಗೆ ಬಿದ್ದರೆ ಇಷ್ಟೆಲ್ಲಾ ಮಹತ್ವ ಕೊಡುತ್ತಿ ಲ್ಲ ಅವರು. ಅದು ಹೇಗೆಯೇ ಇರಲಿ ಗೂ ಸ್ವಲ್ಪ ಆ ವಿಚಾರವನ್ನು ಕೆದಕಿ ದುಕೊಳ್ಳಬೇಕೆಂಬ ಮನಸ್ಸಾಯ್ತು. ೂ ಕಾರಣವಿಲ್ಲದೆ ಒಂದು ಹೆಣ್ಣು ಬಾ ಹಾರಿಯೊಳೇ? ಏನಾದರೂ ಕಾರಣ ಲೇಬೇಕೆಂದು ಶಂಕರನೊಡನೆ ಕೇ ಸಿ.

"ಅವರು ಗಂಡಹೆಂಡತಿ ಹೇಗಿದ್ದರು?"

"ಹೇಗಿದ್ದರು ಅಂದರೆ?"

"ಸ್ನೇಹವಾಗಿದ್ದರೋ ಅಥವಾ ಹು ನಾಯಿಗಳಂತೆ ಕಚ್ಚಾಡುತಿದ್ದರೋ ದು ಕೇಳಿದೆ.'

"ಅಯ್ಯೋ, ಅದೇನು ಕೇಳೀಯಾ! ರೆಯವರು ಆ ದಾಂಪತ್ಯ ತ್ಯ, ಆ ದಂಪತಿಗಳನ್ನು ನೋಡಿ ಯಬೇಕು. ಗಂಡ ಹೆಂಡತಿ ಅಂ ಅವರೇ ಸರಿ! ಗಂಡನನ್ನು ಬಿಟ್ಟು ಡ್ತಿ ಇರುತ್ತಿರಲಿಲ್ಲ, ಹೆಂಡತಿಯನ್ನು ತ್ಯ ಗಂಡ ಇರುತ್ತಿರಲಿಲ್ಲ. ನೋಡಿದವ ಲ್ಲಾ ಅವರನ್ನು ಕಂಡು ಸಂತೋಷ ಗುತ್ತಿತ್ತು. 'ಇವರು ಇನ್ನೂ ನೂರು ಲ ಸುಖವಾಗಿ ಬದುಕಲಿ'ವ್ವಾ, ಎಂದು ಹುತಿದ್ದರು ಗೊತ್ತಾ!'

"ಅನ್ಯೋನ್ಯವಾಗಿದ್ದಿರಬಹುದು ಆದ ಯಾವುದೋ ಕಾರಣದಿಂದ ಏನಾ ಮಾತು ಆಂದಿರಬಹುದು. "ದರಿಂ ಬೇಸರಗೊಂಡು ಆಕೆ ಆ ಕೆಲಸ ಮಾಡಿ ಹುದು.,,

"ನಿನಗೊಂದು ಹುಚ್ಚು. ಅಂಥ ವ್ಯ ಯೇ ಅಲ್ಲ ರಾಮರಾಯರು. ಇವತ್ತಿನ ಒಂದು ಆಳಗೂ ಕೂಡ ಅವರು ಬೈ ದ್ದಲ್ಲ. ಅಂಥವರಲ್ಲಿ ಹೆಂಡತಿಗೆ ಬೈವಾ ಸೀ? ಅವರಿಗೆ ಯಾವುದಕ್ಕೆ ತಾನೇ ಮೆ ಇತ್ತು, ಆರೋಗ್ಯವೇ? ಐಶ್ವ ರ್ಯವೇ? ಅದೊಂದು ಕಾರಣವೂ ಅಲ್ಲ.

"ಆಕೆಯೇ ಹೋಗಿ ಬಿಟ್ಟದ್ದೋ, ಅ ಲ್ಲ ಬೇಗೆ ಯಾರಾದರೂ....."

"ಆಕೆಯೇ ಹೋಗಿ ಬಿದ್ದು ಆತ್ಮಹತ್ಯೆ ಮಾಡಿಕೊಂಡದ್ದ. ಒಂದು ಕಾಗದ ಬೇ ರೆ ಬರೆದಿಟ್ಟಿದ್ದರಂತೆ. 'ನನ್ನ ಸಾವಿಗೆ ನಾ ನೇ ಕಾರಣ, ಇದಕ್ಕೆ ಯಾರೂ ಜವಾಬು ದಾರರಲ್ಲ" ಎಂದು .

"ಅಂದು ಮನೆಯಲ್ಲಿ ಯಾರಿಲ್ಲಾ ಇ ದ್ದರಂತೆ?"

"ನೋಡು, ನಡೆದದ್ದು ಹೀಗೆ. ಅಂ ದು ಗಂಡ ಯಾವುದೋ ನಾಟಕಕ್ಕೆ ಹೊ ರಟಿರಂತೆ ಅವರೊಡನೆ ಆಕೆಯೂ ಗೇಟಿ ನ ವರೆಗೆ ಹೋಗಿ ಅವರನ್ನು ಬೀಳ್ಕೊಟ್ಟು ಬಂದು ಮಕ್ಕಳಿಗೆಲ್ಲಾ ಹಾಲು ಕೊಟ್ಟು ಮಲಗಿಸಿದರಂತೆ. ಆಕೆಯ ತಮ್ಮ ಕೂ ಡಾ ಅಲ್ಲೇ ಇದ್ದ. ಆತ ತನ್ನ ರೂಮಿನಲ್ಲಿ ಮಲಗಿದ್ದನಂತೆ. ರಾಮರಾಯರು ನಾಟ ಕ ನೋಡಲು ಬೇಸರವಾಗಿ ಅರ್ಧದಲ್ಲೇ ಎದ್ದು ಮನೆಗೆ ವಾಪಸು ಬಂದರಂತೆ. ಆ ಗ ರಾತ್ರಿ ಹನ್ನೆರಡೂವರೆ ಘಂಟೆ ಇದ್ದಿರ ಬಹುದು. ಹೆಂಡತಿಯನ್ನು ಕರೆದರಂತೆ ಬಾಗಿಲು ತೆರೆಯಲು, ಎಷ್ಟು ಕರೆದರೂ ಮಾತಿಲ್ಲ. ಬಾಗಿಲನ್ನು ತಟ್ಟಿದಾಗ ಬೀಗ ಕೈಗೆ ಸಿಕ್ಕಿತು. ಭಾವ ಸೈದುನನನ್ನು ಕ ರೆದರು. ಆತ ಆಕಡೆಯ ಬಾಗಿಲು ತೆಗೆದು ಕಣ್ಣುಜ್ಜುತ್ತಾ ಹೊರಗೆ ಬಂದ. ಅವನೊ ಡನೆ ಕೇಳಿದರೆ ಏನೂ ಗೊತ್ತಿಲ್ಲ ಎಂದ. ಬೀಗ ಮುರಿದು ಒಳಗೆ ಹೋದರು. ಮ ಕ್ಕಳೆಲ್ಲಾ ಮಲಗಿದ್ದುವು. ಬೀಗದ ಕೈ ಗೊಂಚಲೂ ಅಲ್ಲೇ ಇತ್ತು. ಆದರೆ ಆಕೆ ಇರಲಿಲ್ಲ. ಎಷ್ಟು ಕೂಗಿದರೂ ಓಗೊಳ್ಳ ಲಿಲ್ಲ. ಮನೆಯಲ್ಲೆಲ್ಲಾ ಹುಡುಕಿದರು. ಅಷ್ಟರಲ್ಲಿ ಆ ಕಾಗದ ಸಿಕ್ಕಿತು. ಓದಿದವ ರೇ ಬಾವಿಯ ಕಡೆಗೆ ಓಡಿದರು ತುಂಬಾ ಆಳದ ಬಾವಿ ಅದು. ಮೇಲಿದ್ದ ಒಂದು ಹಲಗೆ ಕೆಳಗೆ ಬಿದ್ದಿತ್ತಂತೆ. ಟಾರ್ಚ್ ಲೈಟ್ ಹಾಕಿ ನೋಡಿದರು. ಗುಳುಗುಳಿ ನೆ ನೀರಿನ ಗುಳ್ಳೆಗಳು ಮೇಲೆ ಬರುತಿದ್ದು ವಂತೆ. ಬೊಬ್ಬೆ ಹಾಕಿದರು. ಆಕ್ಕಪಕ್ಕದ ವರೆಲ್ಲಾ ಸೇರಿ ಕೆಲವರು ಬಾವಿಗಿಳಿದು ಜೀವವನ್ನು ಮೇಲೆ ತಂದರು. ಆ ಮೇಲೆ ನೋಡುವುದೇನನ್ನು— ಹೆಣ ವಾಗಿ ಬಿಟ್ಟಿತ್ತು. ಆ ಮೇಲಿನ ಕತೆ ಗೊತ್ತೇ ಉಂಟಲ್ಲಾ?'

ನನಗೂ ಕತೆ ಕೇಳಿ ಎದೆ ಕರಗಿತು; ಯಾವ ಕಷ್ಟವೂ ಇಲ್ಲದಿದ್ದರೆ ಆಕೆ ಪ್ರಾ ಣಪತ್ಯೆ ಮಾಡಿಕೊಳ್ಳುವ ಅಗತ್ಯವಾದ ರೂ ಏನಿತ್ತು? ಅಲ್ಲದೆ ಗಂಡನೂ ಚೆಕ್ಕ ನಯಸ್ಸಿನ ಯೋಗ್ಯ ವ್ಯಕ್ತಿ.

ಶಂಕರನೊಡನೆ ಕೇಳಿದೆ— ಆಕೆಗೆ ಮ ಕ್ಕಳೆಷ್ಟಿವೆ?—ಎಂದು.

"ಎಂಟು ಮಕ್ಕಳು. "ಈಗ ಎಂಟು ತಿಂಗಳ ಗರ್ಭಿಣಿ.,,

"ಎಲ್ಲಾ ಮಕ್ಕಳೂ ಇವೆಯೇ?,,

"ಎಲ್ಲಾ ಮಕ್ಕಳೂ ದಂತದಲ್ಲಿ ಕಡೆದ ಹಾಗಿವೆ,, ಎಂದ.

"ಅವರಿಗೆ ಮದುವೆಯಾಗಿ ಎಷ್ಟು ವ ರ್ಷವಾಗಿತ್ತು?,,

"ಹೆಚ್ಚಲ್ಲಯ್ಯ, ಎಂಟೊಂಭತ್ತು ವ ರ್ಷವಾಗಿರಬಹುದು.,

ನನಗೆ ಕಾರಣ ತಿಳಿಯಿತು, ಇಪ್ಪತ್ತೈ ದು ವರ್ಷದ ಹೆಣ್ಣು, ಮದುವೆಯಾಗಿ ಒಂಬತ್ತು ವರ್ಷವಾಯ್ತು. ಎಂಟು ಮ ಕ್ಕಳು. ಒಂಬತ್ತನೇ ಮಗು ಗರ್ಭದಲ್ಲಿದೆ. ಎಷ್ಟು ಐಶ್ವರ್ಯ ವಿದ್ದ ರೇನು ಫಲ ಪ್ರತಿ ವರ್ಷವೂ ಮಕ್ಕಳನ್ನು ಹೆರುವುದೇ ಕೆಲಸ ವಾಗಿರುವಾಗ ಸಂತೋಷ ವಾಗಿರಲು ಸ ಮಯವಾದರೂ ಎಲ್ಲಿ? ಒಂದು ಹೆರಿಗೆ ಯಿಂದ ಸುಧಾರಿಸಿಕೊಳ್ಳುವ ಸಮಯಕ್ಕೆ ಮತ್ತೊಂದು ಹೆರಿಗೆ! ಇನ್ನು ಚಿಕ್ಕವಯಸ್ಸಿ ನಲ್ಲೇ ಇಷ್ಟು ಮಕ್ಕಳಾದರೆ ಇನ್ನು ಮುಂ ದೆ ಹೇಗೆ? ಗಂಡ ಹೆಂಡತಿಯರ ಪ್ರೇಮ ಕ್ಕು ಒಂದು ಮಿತಿಬೇಕು. ಅದು ಅತಿಯಾ ದರೆ ಆಗುವ ಅನರ್ಥ ಇಂಥದೇ. ಈ ಬಾ ಳಿನ ಜಂಜಾಟವೇ ಬೇಡ, ಸದಾ ನೋ ವುಣ್ಣುತ್ತಾ ನರಳುವ ವ್ಯಾಪಾರವೇ ಬೇಡ ವೆಂದು ಯೋಚಿಸಿ ಆ ಹೆಣ್ಣು ತನ್ನ ಕಷ್ಟ ವನ್ನು ಅಂತ್ಯಗೊಳಿಸಿರಬೇಕು—ಬಾವಿಗೆ ಬಿದ್ದು.

"ಇದು ಸಂತಾನ ಫಲ ಶಂಕರಾ, ಮ ತ್ತೇನೂ ಅಲ್ಲ" ಎಂದೆ.

"ಅಹುದೋ ಏನೋ!" ಎನ್ನುತ್ತಾ ತಲೆ ತುರಿಸುತ್ತಾ ಶಂಕರ ತೆರಳಿದ.

ನಾನೂ ಮನೆಯ ಕಡೆ ತುಂಬ ನೊಂ ದವನಂತೆ ತೆರಳಿದೆ.

ಕ. ಸ್ಪೆಶಲ್ ಅಸಿಸ್ಟಂಟ್ ಕಮಿ ಷನರ ಕೋರ್ಟನಲ್ಲಿ (ಟೆನೆನ್ಸಿ)

O. P. No. 1070/1961

ಸ ಪೂಜಾರಿ ---- ಅರ್ಜಿದಾರ

ಸರ್ಸಿ ಹಾಂಡ್ರಿ 2. ಬಚ್ಚ ಹಾಂಡ —ಎದ್ರಿಯರು

ಮೇಲಿನ 2ನೇ ಎದ್ರಿಗೆ ಈ ಮೂಲಕ ತಿಳಿ ಸುವುದೇನೆಂದ್ರೆ:

ನೀವು ಅರ್ಜಿದಾರನ ಬಳಿಗೆ ಚಾಲಗೇಣ ದಿಂದ ಅನುಭವಿಸಿ ಬರುವ ಮುದ್ರಾಡಿ ಪ್ರದ ಅಸ್ತಿ ಬಾಬ್ತು ನೀವು ಅರ್ಜಿದಾರ ಳಿದ 60ರಿಂದ 61ಇಸನಿಯ ಬಾಬ್ತು ಹಕ್ಕ ಚಾಲಗೇಣಯನ್ನು ಬಾಕಿ ಮಾ ಡಿದಿರುವುದರಿಂದ ಸದ್ರಿ ಅಸ್ತಿ ಸ್ವಾಧೀನ ಅರ್ಜಿದಾರನು ದಾಕ್ಲು ಮಾಡಿದ ಸದ್ರಿ ಕಾರ್ಯವು ತಾರೀಕು 27-11-61ಕ್ಕೆ ಸದ್ರಿ ಕೋರ್ಟನಲ್ಲಿ ಕಾರ್ಯಕ್ಕೆ ಮೊಕ್ಕಾಂನಲ್ಲಿ ನಿಮ್ಮ ಬಗ್ಗೆ ಇಟ್ಟಿಯದೆ. ಆಕ್ಷೇಪ ಇದ್ರೆ ಸ ದಿನ ಬೆಳಗ್ಗೆ 10ಗಂಟೆಗೆ ಮೇಲ್ಕಂಡ ಕೋರ್ಟು ಮುಂದೆ ಹಾಜ್ರಾಗಿ ಉದಾಹರಣೆ ಕೊಡಬೇಕ್ದು. ತಪ್ಪಿದರೆ ನಿಮ್ಮ ಗೈರು ಹಾ ಜರ್ಲಿ ಅರ್ಜಿತೀರ್ಮಾನವಾಗುವುದು ಎಂತ ಮೂಲಕ ತಿಳಿಸಿಯದೆ.

Sd/- Raghurama Shetty,
Advocate for Petitioner
Karkal 18--10—1961

ಮನೆಯೆಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್.ಐ.ಎಮ್ ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆ ಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ. ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.

ಬೆಲೆ: ರೂ. ಎರಡು ಉತ್ತಮ ಪ್ರತಿ: ರೂ. ಎರಡೂವರೆ

ವಿ. ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0=25 N P ಸೇರಿಸಿ ಮನಿಆರ್ಡರು ಮಾಡಿದರೆ ಪುಸ್ತಕಗಳಿಸಲಾಗುವುದು

ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ನಮಗೆ ಬರೆಯಿರಿ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ, ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಹೊಸ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು, ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.

ಬೆಲೆ ರೂ 1-4-0 (1=25).

ನವಭಾರತ ಪುಸ್ತಕ ಭಂಡಾರ, ಉಡುಪಿ.

ಗಡಿನಾಡ ಮತ್ತು ಹೊರನಾಡ ಕನ್ನಡಿಗರ ಹಿತಚಿಂತನೆಗಾಗಿ ಹೊರಾಡುವ ಬೆಳಗಾವಿಯ ಏಕೈಕ ಮಾಸಪತ್ರಿಕೆ—

ಶಾರದಾ

ಈ ದಿನವೇ ಚಂದಾ ಹಣ ಕಳುಹಿಸಿರಿ.

ತರುಣ ಬರೆಹಗಾರರಿಗೆ ಪ್ರಥಮ ಪ್ರಾಶಸ್ತ್ಯ ನೀಡುವ 'ಶಾರದಾ' ಪ್ರತಿ ತಿಂಗಳೂ ಕತೆ, ಕವನ, ಪತ್ತೇದಾರಿ ಕಾದಂಬರಿ, ಸಾಮಾಜಿಕ ಕಾದಂಬರಿ, ಚಲಚ್ಚಿತ್ರ ಕತೆಗಳು, ವಿಚಾರಪೂರಿತ ಶೈಕ್ಷಣಿಕ ಲೇಖನಗಳು, ಮಕ್ಕಳ ಹಾಗೂ ಮಹಿಳಾವಿಭಾಗ, ರಾಜಕೀಯ-ಸಾಹಿತ್ಯಿಕ ಲೇಖನಗಳೊಂದಿಗೆ ತ್ರಿವರ್ಣಾಂಕಿತ ಮುಖಪುಟದೊಂದಿಗೆ ಪ್ರಕಟವಾಗುವದು.

ಚಂದಾದಾರರಿಗೆ ನವರಂಗಿತ ಕ್ಯಾಲೆಂಡ ಮತ್ತು 'ಬಣ್ಣದ ಹೆಣ್ಣು' ಎಂಬ ಕಾದಂಬರಿ ಉಚಿತ ಸಿಗುತ್ತವೆ.

ವಾರ್ಷಿಕ ಚಂದಾ ಆ ರೂ. ಮಾತ್ರ.

ಕರ್ನಾಟಕದ ಎಲ್ಲಾ ಊರುಗಳಲ್ಲಿಯೂ ವಿಶಾಲವಾದ ಕಮಿಶನ್ನಿನ ಮೇರೆ 'ಶಾರದಾ' ಮಾರಲು ಏಜಂಟರು ಬೇಕಾಗಿದ್ದಾರೆ. ಮಾದರಿ ಪ್ರತಿ, ಏಜನ್ಸಿ ನಿಯಮಗಳಿಗಾಗಿ ೧ ರೂ. M. O ಮಾಡಿರಿ.

ಸಂಚಾಲಕರು: 'ಶಾರದಾ' ಮಾಸಪತ್ರಿಕೆ, ಶಹಪೂರ—ಬೆಳಗಾವಿ.

ಎಲ್ಲಾತರದ ಸಿದಿತ ಮತ್ತು ನೋಟ್ಬುಗಳ ಸ್ಟಾಂಪ್ಸ್ ಮಷ್ ಪ್ರಾಯವ

NAVAYUGA, UDIPI.
REGD. NO. BG. 176

26-10-1961

LICENSE NO. 31
Licensed to Post without Prepaymer

ಕರ್ಮಯೋಗಿಯ ಭಾವ

ಶ್ರೀ ಎಂ. ಬಿ. ಶಂಕರ ರಾವ್, ಐ ಎ ಎಸ್ (ನಿವೃತ್ತ)

ಕರ್ಮಯೋಗದಲ್ಲಿ ಭಕ್ತಿಯೋಗವೂ, ಜ್ಞಾನಯೋಗವೂ ಕೂಡಿ ಇವೆ. ಕರ್ಮಯೋಗದಲ್ಲಿ ಭಕ್ತಿಯೋಗವನ್ನು ಸೇರಿಸಿದ ಜ್ಞಾನಿಯು "ನಿಮಿತ್ತ ಭಾವಕನು" ಎನಿಸಲ್ಪಡುತ್ತಾನೆ. ಜಗತ್ತಿನಲ್ಲಿ ನಡೆವ ಯಾವತ್ತು ಕಾರ್ಯಕಲಾಪಗಳು ಪರಮಾತ್ಮನ ಪ್ರೇರೇಪಣೆಯಿಂದಲೇ ಉಂಟಾಗಿ ಮಾನವನು ಬರೆ ಪರಮಾತ್ಮನ ಕೈಯಲ್ಲಿರುವ ಶಸ್ತ್ರದಂತಿರುವನು. ಕರ್ಮ ಸಾಧನದಿಂದಲೆ ಮಾನವ ಜನ್ಮವು ಸಫಲವಾಗಿ ಭಕ್ತಿ ಮತ್ತು ಜ್ಞಾನದ ಬಲದಿಂದ ಮಾನವನು ಕರ್ಮದಿಂದ ಕಾಲಕ್ರಮೇಣ ಮುಕ್ತನಾಗುವನು. ಕರ್ಮಯೋಗಿಯು ಭಕ್ತಿಯನ್ನೇ ತನ್ನ ಅದರ್ಶಭಾವವಾಗಿ ಇಟ್ಟುಕೊಂಡಾಗ ಪ್ರಕೃತಿಯೇ ತನ್ನ ಯಾವತ್ತೇ ಕರ್ಮಗಳನ್ನು ಮುಂದುವರಿಸಿ ಬಿಡುವುದು ಎಂಬುದಾಗಿ ನಿರ್ಧರಿಸಿ ತಾನು ಮಾಡುವ ಯಾವತ್ತು ಕರ್ಮಗಳ ಫಲಗಳನ್ನು ಪರಮಾತ್ಮನಿಗ ಒಪ್ಪಿಸಿ ನಿಷ್ಕಾಮ ಬುದ್ಧಿಯಿಂದ ಮನೋಶಾಂತಿಯನ್ನು ಗಳಿಸಲು ಅರ್ಹನಾಗುವನು. ಸ್ವಾರ್ಥವನ್ನು ಬಿಟ್ಟು ಬಿಟ್ಟು ಪರೋಪಕಾರಿಯಾಗಿ ಬಾಳಿ ಜೀವನ ಪಥದಲ್ಲಿ ಶ್ರೇಯಸ್ಸನ್ನು ಪಡಕೊಂಡ ಮಾನವನು ನೈಜಕರ್ಮಯೋಗಿಯು. ಆತನಲ್ಲಿ ಫಲಾಪೇಕ್ಷೆ ಕಿಂಚಿತ್ತಾದರೂ ಇರುವುದಿಲ್ಲ ಆತನು ನಿರಹಂಕಾರಿಯು ಮತ್ತು ಸಾತ್ವಿಕ ಗುಣದವನು. ತಾನು ಮಾಡುವ ಯಾವತ್ತು ಕರ್ಮಗಳೂ ಪರಮೇಶ್ವರನ ಅಪೇಕ್ಷೆಯನ್ನು ಅನುಸರಿಸಿ ಮುಂದುವರಿವುವು ಎಂದು ಭಾವಿಸುವನು. ಪರಮಾತ್ಮನ ಕಲೆಯನ್ನು ಎಲ್ಲಾ ವಸ್ತುಗಳಲ್ಲಿ ಕಂಡು ಸಂತೋಷ ಪಡುವನು. ಆಡಂಬರದ ಜೀವನಕ್ಕೆ ಹೇಸುವನು. ಇಂದ್ರಿಯಗಳನ್ನು ಅದಷ್ಟು ಮಟ್ಟಿಗೆ ನಿಗ್ರಹಿಸಲು ಯತ್ನಪಡುವನು. ಮಾಡುವ ಯಾವತ್ತೂ ಕೆಲಸಗಳನ್ನು ಪರಮಾತ್ಮನಿಗೇನೇ ಒಪ್ಪಿಸುವನು. ಆತನಿಗೆ ಧನದ ಆಶೆಯು ಕಡಿಮೆ. ಜನರ ಪ್ರೇಮವೇ ಆತನ ಮುಖ್ಯ ಧ್ಯೇಯವಾಗುವುದು

ನೈಜಕರ್ಮಯೋಗಿಯು ಕೂಲಿಯವನು ಮಾಡುವ ಕೆಲಸವನ್ನು ಕೂಡ ತಾನೇ ಮಾಡುವನು. ಈ ಗುಣದ ಭಾವದಿಂದ ಆತನಲ್ಲಿ ಅಹಂಕಾರವು ಹುಟ್ಟುವುದೇ ಇಲ್ಲ. ನಮ್ರತೆಯು ಆತನಲ್ಲಿ ಸ್ಥಿರವಾಗಿ ನೆಲಸುವುದು. ದಾನದಲ್ಲಿ ಶೂರತನವನ್ನು ಕಂಡುಹಿಡಿದು ಉದಾರಿಯಾಗುವನು. ಜನಸಾಮಾನ್ಯರ ಸುಖದುಃಖಗಳಲ್ಲಿ ಸಹಭಾಗಿಯಾಗುವನು ಸಮಾಜಕಲ್ಯಾಣಕ್ಕಾಗಿ ತನು ಮನ ಧನಗಳನ್ನು ಅರ್ಪಿಸುವನು. ಸ್ವಾರ್ಥವನ್ನು ತ್ಯಾಗಬುದ್ಧಿಯಿಂದ ದಹಿಸಿ ಬಿಟ್ಟು ಕಷ್ಟದಿಂದ ಪೇಚಾಡುವವರ ಸೇವೆಗೆ ತನ್ನ ಮನಸ್ಸನ್ನು ಸೆಳೆಯುವನು.

ಮೇಲೆ ವಿವರಿಸಿದ ಕರ್ಮಯೋಗಿಯು ಭಕ್ತಿಯೋಗದ ಸಾಧಕನಿಂದಲೂ ಮಿಗಿಲಾದವನೆಂಬುದರಲ್ಲಿ ಸಂದೇಹವಿಲ್ಲ—ಕರ್ಮಯೋಗಿಯಲ್ಲಿ ಭಕ್ತಿಯು ಅಡಕವಾಗಿವುದರಿಂದ, ಕೇಂದ್ರ ಚುನಾವಣಾ ಸಮಿತಿಯ ಇದನ್ನು ಪರಿಪೂರ್ಣವಾಗಿ ಅಭ್ಯಸಿಸಿಯೇ ಕೊನೆಯ ಚಟ್ಟಿಯನ್ನು ನಿರ್ಮಿಸಬೇಕಾಗುವುದು. ಇದಕ್ಕೆ ತುಸು ಅಧಿಕ ಕಾಲಾವಕಾಶ ಬೇಕಾದರೂ ಬೇಕಾಗಬಹುದು. ಇಷ್ಟು ಮಾತ್ರವಲ್ಲದೆ ಕೇಂದ್ರ ಚುನಾವಣಾ ಸಮಿತಿಯು ಇನ್ನೂ ಒಂದು ವಿಷಯದಲ್ಲಿ ನಿರ್ದಿಷ್ಟ ನಿರ್ಧಾರಕ್ಕೆ ಬರಬೇಕಾಗಿದೆ. ವಿಧಾನಸಭೆ ಮತ್ತು ಲೋಕ ಸಭೆಯ ಎಲ್ಲ ಸ್ಥಾನಗಳಿಗೂ ತನ್ನ ಪಕ್ಷದ ಪ್ರತಿನಿಧಿಗಳನ್ನು ನಿಲ್ಲಿಸಬೇಕೆ, ಅಥವಾ ಕೆಲವೊಂದನ್ನು ಬಿಟ್ಟುಕೊಟ್ಟು ಅಲ್ಲಿ ಸ್ವತಂತ್ರನಾಯಕರು ಅರಿಸಿ ಬರುವಂತೆ ಅವಕಾಶ ಕಲ್ಪಿಸಿಕೊಡ ಬೇಕೇ ಎಂಬ ವಿಚಾರ ನಿಶ್ಚಯಿಸಬೇಕಾಗಿಲ್ಲ.

ಪ್ರಧಾನಿ ನೆಹರುರವರು ನವಂಬರ ಮೊದಲಿನ ವಾರದಿಂದ ಇಂಗ್ಲೆಂಡ್, ಅಮೆರಿಕಾ ಮತ್ತು ಮೆಕ್ಸಿಕೊಗಳ ಸಂಚಾರಕ್ಕೆ ಹೊರಡುವುದರಿಂದ, ಅವರು ಯಾತ್ರೆ ಮುಗಿಸಿ ಬಂದ ನಂತರ ಅಂದರೆ, ತಾರೀಕು ೧೯ರ ಮೇಲೆ ಮಾತ್ರ ಅವರಿಗೆ ಈ ಕಡೆಗೆ ಗಮನಹರಿಸಲು ಬಿಡುವು ದೊರೆತೀತು. ನೆಹರುರವರ ಅನುಪಸ್ಥಿತಿಯಲ್ಲಿ ಯಾವುದೇ ಅಂತಿಮ ತೀರ್ಮಾನವಾಗುವುದು ಸಾಧ್ಯವಿಲ್ಲ; ಭಿನ್ನಾಭಿಪ್ರಾಯಗಳು ಬಗೆಹರಿಯುವುದಂತೂ ಅಸಂಭವ. ನಮ್ಮ ಕರ್ನಾಟಕ ರಾಜ್ಯವೇನೂ ಇದಕ್ಕೆ ಹೊರತಾಗಿ ಉಳಿಯದು.

ಮೊದಲಿನೆರಡು ಚುನಾವಣೆಗಳಿಗಿಂತ ಈ ಬಾರಿ ಸ್ಪರ್ಧಾಳುಗಳನ್ನು ಆರಿಸುವ ಪ್ರಶ್ನೆ ಜಟಿಲವಾಗತೊಡಗಿದೆ. ರಾಜಕೀಯದಲ್ಲಿ ಪ್ರವೇಶ ಮಾಡಿದ ಅನುಕೂಲವಂತರೆಲ್ಲರೂ ಇಂದು ಜನಪ್ರತಿನಿಧಿಗಳಾಗುವ ಉತ್ಸಾಹ ತೋರಿಸುತಿದ್ದಾರೆ ಇಂತಹ ಸಾವಿರಾರು ಉತ್ಸಾಹಿಗಳಲ್ಲಿ ಯಾರನ್ನು ಆರಿಸಬೇಕು, ಯಾರನ್ನು ಬಿಡಬೇಕು ಎಂಬುದು ಗಹನವಾದ ಪ್ರಶ್ನೆ—ಈ ಪ್ರಶ್ನೆಗೆ ಅಂತ್ಯದಲ್ಲಿ ದೊರೆಯುವ ಉತ್ತರ ಮುಂದಿತಕ್ಕೂ ಸಮಾಧಾನಕರವಿರಲಾರದು

ಉಡುಪಿ ಕಿರಿಯರ ಪ್ರಪಂಚದ ನಾನಾ ಬಗೆಯ ಪುಸ್ತಕಗಳು

1 ಸ್ವತಂತ್ರ ಜೀವನೋಪಾಯ	0	4
2 ಸಂಶಯ ಪಿಶಾಚಿ	0	10
3 ನಾಡ ಕತೆಗಳು	0	4
4 ಕುಶಲವ	0	8
5 ಕಾವ್ಯ ಸಾಮ್ರಾಜ್ಯ	1	8
6 ಮಧುವನ	3	0
7 ಮುಂದಿನ ದೇವರು	0	4
8 ವ್ಯಭಿಚಾರಿಣಿ ಯಾರು	1	0
9 ಹೆಂಡ್ತಿ ಗಂಡನಾದರೆ	0	4
10 ಪುರುಷ ಪಥ	0	4
11 ಸನ್ಯಾಸಿಯ ಸೋಗಿನಲ್ಲಿ	0	12
12 ನಂದಾದೀಪ	0	14
13 ದೇಶಭಕ್ತ	1	4
14 ಪ್ರೇಮ ವಿಜಯ	1	0
15 ರಂಗಭೂಮಿ	0	10
16 ಸೇನಾಪಥ	0	8
17 ನಾರೀ ಹೃದಯ	1	8
18 ಭಾರತೀಯ ಕತೆಗಳು	1	12
19 ಪ್ರಕಾಶ	2	8
20 ಮೂರು ಪ್ರಯಸನಗಳು	1	4
21 ನಗೆ ನೋಟಿಗಳು	1	4
22 ಅನ್ನದೇವರು ಮತ್ತಿತರ ಕತೆಗಳು	1	0
23 ಭಾರತದಲ್ಲಿ ಜಾತಿಭೇದ	1	0
24 ವಿಷ್ಣುವಿನ ದಶಾವತಾರಗಳು ಅರ್ಥಾತ್ ದಶಾವತಾರಗಳು	0	12
25 ಆಕಾಶ ಗಂಗೆ	1	12
26 ಸ್ವಾತಂತ್ರ್ಯವೀರ ಸಾವರಕರರು	1	4
27 ಜೀವನ ಸಂಗ್ರಾಮ	1	8
28 ಕದಂಬ	1	4
29 ಕವಿತಾಕಾಮಿನಿ	2	0
30 ಸ್ವರಾಜ್ಯ ವಿಜಯ	0	8
31 ಸಪ್ತಸಾಗರ	0	12
32 ಜವಿಸಾನ್ದಾರ	1	8
33 ಬಾಳಿನ ಬೆಡಗು	1	4
34 ಲೋಕಾಮುದ್ರೆ	1	0
35 ಮದುವೆ ಸೀರೆ	1	0

ಅಸೂರ್ವ ಸಂದರ್ಭ !

ರೂ.36-0-0ಯ ಈ ಎಲ್ಲಾ ಪುಸ್ತಕಗಳನ್ನು ಒಮ್ಮೆಯೇ ತರಿಸಿಕೊಂಡರೆ ರೂ.30-0-0ಕ್ಕೆ ಕೊಡಲಾಗುವುದು.

ಬರೆಯಿರಿ:—
ನವಭಾರತ ಪುಸ್ತಕ ಭಂಡಾರ, ಉಡುಪಿ

ಕಾಂಗ್ರೆಸ್ ಪಕ್ಷದ ಸ್ಪರ್ಧಾಳುಗಳು

(೧ನೇ ಪುಟದಿಂದ)

ಅಮೆರಿಕೆಯ ಕೃಷಿ ವಿಭಾಗದ ಮಂತ್ರಿ ಶ್ರೀ ಫ್ರೀಮನ್. ಪ್ರವೃತ್ತಿಯಲ್ಲಿ ವಕೀಲರಾದ ಇವರೂ ಕೆನ್ನೆಡಿ ಮಂತ್ರಿಮಂಡಳದಲ್ಲಿ ಸೇರುವುದಕ್ಕೆ ಮೊದಲು ಮೂರು ಬಾರಿ ಮಿನೆಸೊಟಾ ರಾಜ್ಯದ ರಾಜ್ಯಪಾಲರಾಗಿದ್ದರು. ಈಗ ಸರ ಸ್ಟ್ರಾಯದ ಫ್ರೀಮನ್ ಕೆನ್ನೆಡಿಯವರ ಪ್ರಿಯರಾಗಿದ್ದಾರೆ.

ದೆ—ಆತನು ಸದಾ ಕಾಲವೂ ಜ್ಞಾನಿಯೂ ಗಿಯೇ ಬೆಳಗುವನು. ಜ್ಞಾನವು ವಿಕಾಸವಾಗದೆ ನಿಷ್ಕಾಮ ಕರ್ಮಯೋಗಿಯೂ ಗುವದು ಕಷ್ಟ—ಇದುದರಿಂದಲೆ ಮುಂದಾಗಿ ಜ್ಞಾನವನ್ನು ಅಭಿವೃದ್ಧಿ, ಅನಂತರ ಭಕ್ತಿಯೋಗವನ್ನು ತನಗೆ ಲಭಿಸಿದ ಜ್ಞಾನಭಂಡಾರದಲ್ಲಿ ತೂಗಿಸಿ ಕರ್ಮಸಾಧಕನಾದರೆ, ಅಂತಹ ಪುಣ್ಯ ಪುರುಷನು ನೈಜ ಕರ್ಮಯೋಗಿಯಾಗಿ ಲೋಕಾನುರಾಗಕ್ಕೆ ಪಾತ್ರನಾಗುವನು. ಕರ್ಮಯೋಗಿಗಳೇ ಲೋಕೋದ್ಧಾರಕ್ಕೆ ಕಾರಣಭೂತರು.

"ಅತ್ಯುತ್ತಮ ಬ್ಯಾಂಕಿಂಗ್ ಸೇವೆ"

- ಪಿಗ್ಮಿ
- ಕ್ಯುಮಲೇಟಿವ್
- ಇನ್ವೆಸ್ಟರ್ಸ್ ಎಜನ್ಸಿ
- ಲಕ್ಷ್ಮೀ ಮತ್ತು ಸಿಂಡಿಕೇಟ್ ಬ್ಯಾಂಕ್ ಕೇಶ್ ಸರ್ಟಿಫಿಕೇಟುಗಳು
- ಭದ್ರತಾ ಕೋಶಗಳು
- ವಿದ್ಯಾರ್ಥಿಗಳಿಗೆ ಮತ್ತು ಧರ್ಮ ಸಂಘ — ಸಂಸ್ಥೆಗಳಿಗೆ ವಿಶೇಷ ಸೌಕರ್ಯಗಳು

ಇನ್ನಿತರ ಎಲ್ಲಾ ವಿಧದ ಬ್ಯಾಂಕಿಂಗ್ ಸೇವೆಗಳು

ದಕ್ಷಿಣ ಭಾರತದಾದ್ಯಂತ ಹಬ್ಬಿರುವ 154ಕ್ಕೂ ಮಿಕ್ಕಿದ ಶಾಖೆಗಳು

ಸಿಂಡಿಕೇಟ್ ಬ್ಯಾಂಕ್

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್,

ರಿಜಿಸ್ಟರ್ಡ್ ಆಫೀಸ್ : ಮುಕುಂದ ನಿವಾಸ, ಉಡುಪಿ (ಮೈಸೂರು ರಾಜ್ಯ)

ಸ್ಥಾಪನೆ: 1925

ಮಂಗಳೂರು ಅಸಿಸ್ಟಾಂಟ್ ಕಮಿಶನರ (ಟೆನೆನ್ಸಿ) ಕೋರ್ಟಿನಲ್ಲಿ

O. P. No. 1072/61.

ಸಾದನ್ಮ ಶೆಟ್ಟಿ — ಅರ್ಜಿದಾರಳು

ಮತ್ತು

ಕರುಪಸ್ವಾಮಿ ಗೌಂಡರ ಗಣಪತಿ ಗೌಂಡರರ ಮಗ ಕಾರ್ಕಳ ತಾಲ್ಲೂಕು ಕುಚ್ಚೂರು ಗ್ರಾಮದಲ್ಲಿರುವವ Post Hebri— ಎದ್ರಿ

ಈ ಮೂಲಕ ಸದ್ರಿ ಎದ್ರಿಗೆ ತಿಳಿಸುವುದೇನೆಂದ್ರೆ

ನಿಮ್ಮ ಸ್ವಾಧೀನವಿರುವ ಆಸ್ತಿ ಸ್ವಾಧೀನತೆ ವಗೈರೆ ನಿವೃತ್ತಿ ಕೇಳಿ ಅರ್ಜಿದಾರಳು ದಾಕ್ಲು ಮಾಡಿದ ಮೇಲಿನ ಅರ್ಜಿ ತಾ 27-11-6 ಕ್ಕೆ ನಿಮ್ಮ ಹಾಜರಾತಿ ಬಗ್ಗೆ ಇಟ್ಟಿದೆ. ಸದ್ರಿ ದಿನ ಬೆಳಿಗ್ಗೆ ನೀವು ಸ್ವತಹಾ ಯಾ ವಕೀಲರ ದ್ವಾರಾ ಮೇಲ್ಕಂಡ ಕೋರ್ಟು ಕಾರ್ಕಳ ಕೇಂಪಿನಲ್ಲಿ ಬೆಳಿಗ್ಗೆ 11ಗಂಟೆಗೆ ಸ್ವತಹಾ ಯಾ ವಕೀಲರ ದ್ವಾರಾ ಹಾಜರಾಗಿ ಉದ್ದರಿಸತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮ ಗೈರುಹಾಜರಿ ಸಂಬಂಧ ಸದ್ರಿ ಅರ್ಜಿ ಯೇಕ ಪಕ್ಷವಾಗಿ ತೀರ್ಮಾನಿಸಲಾದೀತು ಎಂತ ಈ ಮೂಲಕ ತಿಳಿಸಲಾಗುತ್ತದೆ.

By Order of the Court.

N. M Adyanthaya
Advocate for petitioner

Karkal, 18—10—1961

Edited Printed & Published by K. H. Shetty, at the Navayuga Press, Udipi, S. India.

ಯಮ್ಮ ಯಾವತ್ತೂ
ದ್ರಣ ಕೆಲಸಗಳಿಗೆ
ಯಮಾಡಿ ವಿಚಾರಿಸಿರಿ:
ನವಯುಗ ಪ್ರೆಸ್,
ಉಡುಪಿ

ರಾಷ್ಟ್ರೀಯ ವಾರಪತ್ರಿಕೆ. ಬೆಲೆ: 13 ನ.ಪೈಸೆ

ನವಯುಗ

KANNADA — NAVAYUGA — WEEKLY

ವಿದ್ಯಾರ್ಥಿಗಳಿಗೆ
ಮತ್ತು ವಯಸ್ಕರಿಗೆ
ಅತ್ಯುಪಯೋಗೀ ಪುಸ್ತಕ
ಸುಲಭದಲ್ಲಿ ಇಂಗ್ಲಿಷ್
(ಆಂಗ್ಲ ಸ್ವಯಂಬೋಧಿನಿ)
ನವಭಾರತ ಪುಸ್ತಕ ಭಂಡಾರ
ಉಡುಪಿ

ಸಂಪುಟ ೪೧ ಸಂಚಿಕೆ ೯ | ಉಡುಪಿ 2—11—1961 ಗುರುವಾರ | Vol. 41 No. 9

ಯಕ್ಷಪ್ರಶ್ನೆ

ಭಾರತದ ವಿವಿಧ ರಾಜ್ಯಗಳ ರಾಜ್ಯಪಾಲರ ಸಮ್ಮೇಳನವೊಂದು ನವದೆಹಲಿಯಲ್ಲಿ ನಡೆಯಿತು. ಆದರಲ್ಲಿ ಕರ್ನಾಟಕದ ರಾಜ್ಯಪಾಲ ಶ್ರೀ ಜಯಚಾಮರಾಜ ಒಡೆಯರನ್ನು ಉಳಿದು ಮತ್ತೆಲ್ಲ ರಾಜ್ಯಪಾಲರು ಭಾಗವಹಿಸಿದ್ದರು. ಮೊನ್ನೆ ಸೆಪ್ತಂಬರ ತಿಂಗಳಲ್ಲಿ ನಡೆದಿದ್ದ ಭಾವೈಕ್ಯ ಸಮ್ಮೇಳನಾ ನಂತರದ ಈ ರಾಜ್ಯಪಾಲ ಸಮ್ಮೇಳನವು ಭಾರತದ ಇತಿಹಾಸದಲ್ಲಿ ಅತಿ ಪ್ರಮುಖವಾದುದೆಂದು ಹೇಳಬಹುದು. ದೇಶದಲ್ಲಿ ದಿನದಿಂದ ದಿನಕ್ಕೆ ಶಿಥಿಲವಾಗುತ್ತಿರುವ ಐಕ್ಯ ಭಾವನೆಯನ್ನು ಪುನಸ್ಸ್ಥಾಪಿಸುವುದು ನಮ್ಮ ಆದ್ಯ ಕರ್ತವ್ಯವೆಂಬುದರಿಂದ, ರಾಜ್ಯಗಳ ಹೊಣೆಗಾರಿಕೆಯನ್ನು ಹೊತ್ತಿರುವ ರಾಜ್ಯಪಾಲರುಗಳು ಈ ಸಂಬಂಧದಲ್ಲಿ ಪರ್ಯಾಪ್ತಪ್ರಮಾಣದ ತಿಳುವಳಿಕೆಯನ್ನು ಗಳಿಸಿ ಅವನ್ನು ಕಾರ್ಯಾನ್ವಿತಗೊಳಿಸುವುದು ಅಪೇಕ್ಷಣೀಯವಿದೆ. ಆಳುವ ಪಕ್ಷದಲ್ಲೇ ಬಿರುಕು ಕಂದಕಗಳಿದ್ದಿರುವ ಕರ್ನಾಟಕದಲ್ಲಂತೂ ಪೊತ್ತಪೊದಲಿಗೆ ಆಳುವ ಕಾಂಗ್ರೆಸಿಗರಲ್ಲಿ ಭಾವೈಕ್ಯವಾಗಬೇಕು ಎಂಬುದನ್ನು ಶತಧಾ ಸ್ಮರಿಸಿಕೊಳ್ಳಬೇಕು.

ಅಧಿಕಾರಾರೂಢರಾಗಿರುವವರು ತಮ್ಮ ಪ್ರಭುತ್ವ ಮತ್ತು ಅಧಿಕಾರಗಳ ಉಪಯೋಗವನ್ನು ನ್ಯಾಯಪೂರ್ವಕವಾಗಿ ಮತ್ತು ನಿಸ್ವಾರ್ಥ ಭಾವನೆಯಿಂದ ಮಾಡಬೇಕು; ಜನತೆಯ ಮುಂದೆ ಅತಿ ಸುಲಭರಾಗಿ, ಸಾಮಾನ್ಯ ನಾಗರಿಕ ಮತ್ತು ಅಧಿಕಾರಿಗಳ ನಡುವೆ ಈಗಿರುವ ಅಂತರವನ್ನು ದೂರೀಕರಿಸಬೇಕು — ಉಪರಾಷ್ಟ್ರಪತಿ ಡಾ|ರಾಧಾಕೃಷ್ಣನ್ನರ ಇಂಗಿತವಿದು. ಆದರೆ, ಇಂದು ಸತ್ತಾರೂಢರಾದವರು ಗರುಡಾರೂಢರಂತೆ ಭೂಮಿಯಿಂದ—ಮಾನವ ಲೋಕದಿಂದ ಅನ್ಯಾಯದ ಬಲದಿಂದ ಆಕಾಶದಲ್ಲಿ ಭೂಮಿಸುತ್ತಿದ್ದಾರೆಂಬುದು ಅಲ್ಲಗಳೆಯುವ ಮಾತಲ್ಲ. ತಮ್ಮ ಸಂಚಾರಾವಧಿಯಲ್ಲಿ ಜನತೆಯ ಸೇವಕರೆಂದು ಹೇಳಿಕೊಳ್ಳುವ ಮಂತ್ರಿ ಮಹಾಶಯರು ರಾಜಧಾನಿಯ ಸಿಂಹಾಸನವನ್ನು ಸ್ಪರ್ಶಿಸಿದೊಡನೆಯೇ ಸ್ವಾಮಿಗಳಾಗುತ್ತಿರುವುದು ಅನುಭವವೇದ್ಯ. ಮಾತಿಗೂ ಕೃತಿಗೂ ಆಕಾಶಪಾತಾಳಗಳ ಅಂತರವಿದೆ. ಈ ಅಂತರವನ್ನು ಕಡಿಮೆಗೊಳಿಸುವ ರಾಕೆಟ್ ನಿರ್ಮಾಣವಾದೀತೆ?

ಒಳ್ಳೆಯ ಜನತಾ ಪ್ರಭುತ್ವ ಮತ್ತು ಜನತಾ ಕಲ್ಯಾಣಕಾರಕ ಪ್ರಶ್ನೆಗಳನ್ನು ಉಪರಾಷ್ಟ್ರಪತಿಗಳು ವಿವೇಚಿಸಿದರು. ಪ್ರಜಾಪ್ರಭುತ್ವ ಲೋಕಕಲ್ಯಾಣಗಳ ಹೆಸರಿನಲ್ಲಿ ಪ್ರಜೆಗಳ ಮೇಲೆ ಹೊರಿಸುತ್ತಿರುವ ದಬ್ಬಾಳಿಕೆಯಂತಹ ನೀತಿಯಿಂದ, ಜನತೆಯು ಹಿತರಕ್ಷಣೆ ಮಾಡಬೇಕಾದ ನಮ್ಮ ಪ್ರಜಾಸರ್ಕಾರಗಳು ಜನಹಿತವನ್ನು ಕಡೆಗಣಿಸಿ ವೈಯಕ್ತಿಕ ಪ್ರತಿಷ್ಠೆಯತ್ತ ವಿಶೇಷ ಗಮನವಿತ್ತಿವೆಯೆಂದು ವಿಶಾದದಿಂದನ್ನಬೇಕಾಗಿದೆ. ದೇಶದಲ್ಲಿ ಏಕತೆಯ ಸ್ಥಾಪನೆಯಾಗಬೇಕು; ಜಾತೀಯತೆಯು ಅಳಿಯಬೇಕು ಎಂದು ನಾವು ಬಯಸುತ್ತಿರುವಂತೆಯೇ ಜಬ್ಬಲಪುರ ನಾಗಪುರ ಮತ್ತು ಅಲೀಘಡಗಳಲ್ಲಿ ಜಾತೀಯ ಗೊಂದಲ ನಡೆಯಿತು; ವಿಭಿನ್ನತೆಯು ಅಂಕುರಿಸಿತು. ಆಸ್ಸಾಮದಲ್ಲಿ ಭಾಷಾವಿವಾದ ಉಲ್ಬಣಾವಸ್ಥೆಗೇರಿ ಶಾಂತಿಭಂಗವಾಯಿತು; ಪ್ರತ್ಯೇಕತೆಯ ಮನೋಭಾವ ಪ್ರಕಟವಾಯಿತು. ಪಂಜಾಬದಲ್ಲಿ ರಾಜ್ಯವಿಭಜನೆಯ ಕುತಂತ್ರ ನಡೆಯಿತು; ಜಾತೀಯತೆ, ಭಾಷೀಯತೆ, ಪ್ರತ್ಯೇಕತೆಯ ಧಾವಗಳು ಮುಸ್ಪರಿಗೊಂಡು ಏಕತೆಯನ್ನು ಕೆದಕಿ ನೋಡಿತು. ಇದಕ್ಕೆ ಯಾರು ಹೊಣೆಗಾರರು? ಜನತೆಯೆ? ಸರಕಾರವೆ? ಅಧಿಕಾರಿವರ್ಗವೆ? ಇದೊಂದು ಯಕ್ಷಪ್ರಶ್ನೆಯೆಂದೆನಿಸುತ್ತದೆ.

ರಾಷ್ಟ್ರೀಯ ಐಕ್ಯಸಾಧನೆಗೆ ಶಿಕ್ಷಣವನ್ನೇ ಮಾಧ್ಯಮವಾಗಿಟ್ಟುಕೊಳ್ಳಬೇಕು ಎಂಬುದು ಈಗ ಸರ್ವಮಾನ್ಯ ವಿಚಾರ. ಭಾರತವೆಂಬುದೊಂದು ಮಹಾ ನಾಗರ. ಇಲ್ಲಿ ನಾನಾ ಭಾಷೆಯ, ಹಲವಾರು ಧರ್ಮದ ಮತ್ತು ಬಗೆ ಬಗೆಯ ಜೀವನಪದ್ಧತಿಯ ಎಳ ಕೋಟಿ ಜನರಿದ್ದಾರೆ. ಇವರೆಲ್ಲರಲ್ಲಿರಬಹುದಾದ ಸಂಪ್ರದಾಯ ಪರತೆಯನ್ನು, ವಿಭಿನ್ನತೆಯನ್ನು ಹೋಗಲಾಡಿಸಲು ಶಿಕ್ಷಣವೊಂದಲ್ಲದೆ ಅನ್ಯ ಮಾರ್ಗವೊಂದಿರಲಾರದು. ಭಾರತವನ್ನು ಲೋಕತಂತ್ರಾತ್ಮಕವಾಗಿ ಮುನ್ನಡೆಸುವುದು ನಮ್ಮ ಗುರಿಯೆನುದರಿಂದ, ಸಂಪ್ರದಾಯತನವನ್ನು ಬಿಟ್ಟುಕೊಡಬೇಕು; ಕೂಡಿ ಬದುಕುವ ಮನೋವೃತ್ತಿ ನಮ್ಮಲ್ಲಿ ಬೆಳೆಯಬೇಕು; ಜಾತಿವಾದವನ್ನು ಕಿತ್ತೊಗೆಯಬೇಕು. ಸಂವಿಧಾನದಲ್ಲಿ ರಾಜ್ಯ ಸರಕಾರಗಳಿಗಿತ್ತಿರುವ ಹಿಂದುಳಿದ ವರ್ಗವನ್ನು ನಿರ್ಧರಿಸುವ ಅಧಿಕಾರದ ಅನುಚ್ಛೇದದಲ್ಲಿ ಜಾತಿಯನ್ನು ಅನುಲಕ್ಷಿಸಿ ಇಂತಹ ವರ್ಗವನ್ನು ನಿರ್ಣಯಿಸಲು ಅವಕಾಶ ದೊರೆಯದಂತೆ ಸ್ಪಷ್ಟವಾದ ಉಲ್ಲೇಖವಿರುವಂತೆ ತಿದ್ದುಪಡಿ ಮಾಡಲೇ ಬೇಕು. ಆ ಅನುಚ್ಛೇದದ ದುರುಪಯೋಗಮಾಡಿ ರಾಜ್ಯ ಸರಕಾರಗಳೇ ಜಾತೀಯತೆಯನ್ನು ಪುರಸ್ಕರಿಸಿ, ನಾಗರಿಕರಲ್ಲಿ ಭಿನ್ನತೆಯು ಹುಟ್ಟುವಂತೆ ಮಾಡುವಂತಾಗಬಾರದು

ವಿದ್ಯಾರ್ಥಿಗಳಲ್ಲಿ ಇಂದು ಯೋಗ್ಯತೆಗೆ ಪುರಸ್ಕಾರ ದೊರೆಯದೆ ಜಾತೀಯತೆ, ಪ್ರಾಂತೀಯತೆ, ವಶೀಲಿ, ರುಶುವತ್ತುಗಳಿಗೆ ಮನ್ನಣೆಯಿರುವುದನ್ನು ಕಂಡು ತೀವ್ರ ಅಶಾಂತಿಯು ವ್ಯಾಪಿಸಿದೆ. ಇವರಲ್ಲಿ ಜನಿಸಿದ ಅಶಾಂತತೆಗೆ ಇನ್ನಿತರ ಕಾರಣಗಳಿರಬಹುದಾದರೂ ಅವು ಕ್ಷುಲ್ಲಕವಾದುವುಗಳು. ಆದರೆ ನಮ್ಮ ನಾಯಕರೆಲ್ಲರೂ ಶಿಕ್ಷಕರ ತಲೆಯ ಮೇಲೆ ಈ ಅಶಾಂತತೆಯ ಹೇತುವಿನ ಭಾರವನ್ನು ಹೊತ್ತು ಹಾಕುತ್ತಾರೆ ಅಧ್ಯಾಪಕರು ತಮ್ಮ ವಿದ್ಯಾರ್ಥಿಗಳನ್ನು ಆಕರ್ಷಿಸಬೇಕು; ತಮ್ಮ ಪ್ರವಚನ-ನಡತೆಗಳಿಂದ ಅವರನ್ನು ಗುಣಾರೂಪವಾಗಿ ಪ್ರಭಾವಿತಗೊಳಿಸಬೇಕು; ಸಂಪ್ರದಾಯವಾದಿಗಳೂ ಜಾತೀಯವಾದಿಗಳೂ ಆಗಬಾರದು ಎಂಬ ಉಪದೇಶ ಅವರಿಗೆ ದೊರೆಯುತ್ತದೆ. ಇದು ನ್ಯಾಯೋಚಿತವೇ. ಆದರೆ, ಶಿಕ್ಷಣ ವಿಭಾಗದಾದರೂ ತನ್ನ ನಿಯಮ-ಕಾಯದೆಗಳಲ್ಲಿ ಇಂತಹ ಸಂಕುಚಿತ ಪ್ರವೃತ್ತಿಗಳಿಗೆ ಅವಕಾಶ ಕೊಡಬಾರದು. ಆದರೆ, ಇಂದು ನಾವು ಇದಕ್ಕೆ ವ್ಯತಿರಿಕ್ತವಾದುದನ್ನೇ ಕಾಣುತಿದ್ದೇವೆ.

ಪಠ್ಯ ಪುಸ್ತಕಗಳು ಉತ್ತಮವಿರಬೇಕು; ಇದರಿಂದ ಅಪೇಕ್ಷಿತ ಇಷ್ಟಾರ್ಥ ಸಿದ್ಧಿಯಾದೀತು ಎಂಬ ಆಶಯ ವ್ಯಕ್ತಪಡಿಸುವವರಿದ್ದಾರೆ—ಪಾಠ್ಯ ಪುಸ್ತಕಗಳನ್ನು ಗೊತ್ತುಮಾಡುವ ಸರಕಾರ ನಿಯುಕ್ತಮಂಡಳವು ನಿಷ್ಪಕ್ಷಪಾತತನದಿಂದ ಕಾರ್ಯವೆಸಗಿದರೆ, ಈ ಸಮಸ್ಯೆ ಸುಲಭದಲ್ಲಿ ಬಗೆಹರಿಯುವುದು. ಆದರೆ, ಇಂತಹ ಸಮಿತಿಗಳೂ ಜಾತೀಯತೆ-ಲಂಚರುಶುವತ್ತುಗಳಿಂದ ಪ್ರಭಾವಿತವಾಗುತ್ತಿರುವುದರಿಂದ ಯಾರನ್ನು ದೂರಿ ಏನು ಪ್ರಯೋಜನ? ಬೇಲಿಯೇ ಹೊಲವನ್ನು ಮೇದರೆ, ಭೂಪಾಲಕರೇ ಪ್ರಜೆಗಳನ್ನು ದಂಡಿಸಹತ್ತಿದರೆ, ಹರನೇ ಕೊಲ್ಲುತ್ತಿರುವಂತೆ. ಇಂತಹ ಎಳ ಕೋಟಿ ಭಾರತೀಯ ನಾಗರಿಕರನ್ನು ಯಾವ 'ಪರ'ತಾನೇ ಕಾಯಬಲ್ಲನು?

ಸಮಸ್ಯೆಗೊಂದು ಕೊನೆ

ಭಾಷಾ ಸಂಬಂಧದಲ್ಲಿ ಎದ್ದಿರುವ ಜಟಿಲ ಸಮಸ್ಯೆಯನ್ನು ಸರಳಗೊಳಿಸಲು ತ್ರಿಭಾಷಾ ಸೂತ್ರವನ್ನು ಸರ್ವತ್ರ ಭಾರತದಲ್ಲಿ ವ್ಯವಹರಿಸುವ ಅಗತ್ಯತೆಯನ್ನು ಸಪ್ತಂಬರ ತಿಂಗಳಲ್ಲಿ ನಡೆದ ಭಾವೈಕ್ಯ ಸಮ್ಮೇಳನವು ಒತ್ತಿ ಹೇಳಿದೆ. ಸಂಸತ್ತಿನ ಸದಸ್ಯರೂ ಹಿಂದಿಯ ಕಡು ಸಮರ್ಥಕರೂ ಆದ ಸೇಠ್ ಗೋವಿಂದದಾಸರು ಈ ಮೂರು ಭಾಷೆಗಳನ್ನು ಅನಿವಾರ್ಯವೆಂದು ಕಾರ್ಯಾನ್ವಿತಗೊಳಿಸದೆ ಭಾಷಾ ಪ್ರಶ್ನೆಯು ಬಗೆ ಹರಿಯುವುದಿಲ್ಲವೆಂದು ಹೇಳುತ್ತಾರೆ. ಆಹಿಂದೀ ಭಾಷಾ ಪ್ರದೇಶದ ನಾಗರಿಕನು ಹಿಂದಿಯನ್ನೂ ಹಿಂದೀ ಭಾಷಾ ಪ್ರದೇಶದವನು ಅನ್ಯ ಪ್ರಾಂತೀಯ ಭಾಷೆಯೊಂದನ್ನೂ ಅವಶ್ಯ ಕಲಿತುಕೊಳ್ಳಬೇಕು ಹಿಂದೀ ಭಾಷೆಯು ವಿಕಾಸ ಸಂಬಂಧದಲ್ಲಿ ಇನ್ನೂ ಇನ್ನೂ ಕಟಿತ್ವವನ್ನು ಬೆಳೆಸಬಾರದು. ಇದಕ್ಕಾಗಿ ಆಹಿಂದೀ ಭಾಷಾ ಪ್ರದೇಶದಲ್ಲಿ ಈ ಭಾಷೆಯನ್ನು ಜನಪ್ರಿಯಗೊಳಿಸುವ ಹೊಣೆಗಾರಿಕೆಯನ್ನು ಆ ಪ್ರದೇಶದ ಜನರ ಕೈಗೇನೇ ಒಪ್ಪಿಸಬೇಕು ಎನ್ನುತ್ತಾರೆ ಗೋವಿಂದದಾಸರು.

"ಉತ್ತರ ಪ್ರದೇಶ, ಬಿಹಾರ, ರಾಜಸ್ಥಾನ ಮತ್ತು ಮಧ್ಯ ಪ್ರದೇಶಗಳ ಸರಕಾರಗಳು ತಮ್ಮ ರಾಜ್ಯದಲ್ಲಿ ಸರಕಾರಿ ವ್ಯವಹಾರದಲ್ಲಿ ಹಿಂದಿಯನ್ನು ಇನ್ನೂ ಉಪಯೋಗಿಸುತ್ತಿಲ್ಲ. ಈ ನಾಲ್ಕು ಹಿಂದೀ ಭಾಷಾ ರಾಜ್ಯಗಳಲ್ಲಿ ಹಿಂದಿಯ ಪ್ರಗತಿ ಮತ್ತು ವಿಕಾಸಗಳ ಕಡೆಗೆ ವಿಶೇಷ ಗಮನ ಪೂರೈಸಲಾಗುತ್ತಿಲ್ಲ ಮತ್ತು ಹೆಚ್ಚಿನ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿಲ್ಲ.

"ದಕ್ಷಿಣ ಭಾರತದಲ್ಲಿ ಹಿಂದೀ ಭಾಷೆಗೆ ವಿರೋಧವಿದೆಯೆಂದು ಮುಂತಾಗಿ ಶುಂಬ ಹೇಳಲಾಗುತ್ತದೆ. ಆದರೆ, ಆಂಧ್ರ ಪ್ರದೇಶ, ಕೇರಳ ಮತ್ತು ಕರ್ನಾಟಕಗಳಲ್ಲಿ ಇಂತಹ ವಿರೋಧ ತೋರಿ ಬರುವುದಿಲ್ಲವೆಂದು ನನ್ನ ಅನುಭವದಿಂದ ನುಡಿಯಬಲ್ಲೆ. ಆದರೆ, ಮದ್ರಾಸದಲ್ಲಿ ಮಾತ್ರ ತುಸು ವಿರೋಧಭಾವನೆಯಿದೆ. ಇಲ್ಲಿಯೂ ಹಿಂದೀ ಶಿಕ್ಷಕರ ಸಂಖ್ಯೆ ಬೆಳೆಯುತ್ತ ಬರುತ್ತಿದೆಯೆಂಬುದು ನಿಜ. ಇಡಿಯ ಭಾರತದಲ್ಲಿ ಬಂಗಾಲ ಮತ್ತು ಮದ್ರಾಸರಾಜ್ಯಗಳಲ್ಲಿ ಮಾತ್ರ ಹಿಂದಿಯ ಬಗ್ಗೆ ಸದ್ಭಾವನೆಯಿಲ್ಲ. ಮದ್ರಾಸದ ನಾಗರಿಕರ ವರ್ತನೆಯ ಬಗ್ಗೆ ಆಶ್ಚರ್ಯವೆನಿಸುವುದಿಲ್ಲ; ಆದರೆ, ಬಂಗಾಲದ ಜನರೇಕೆ ಹೀಗೆಸಗುವರೆಂಬುದು ಅರ್ಥವಾಗುತ್ತಿಲ್ಲ. ರಾಜಾರಾಮ ಮೋಹನರಾಯ್ ಮತ್ತು ಸುಭಾಷಚಂದ್ರ ಭೋಸರಂತಹ ನಾಯಕಮಣಿಗಳು ಇಲ್ಲಿಯವರು. ಅವರು ಭಾರತದ ರಾಷ್ಟ್ರಭಾಷೆ

(ಅನೇ ಪುಟ ನೋಡಿರಿ)

ಅವಳ ಭಾವಚಿತ್ರ

ಶ್ರೀ ಪಿ. ಎಸ್. ರಾವ್, ಮಂಗಳೂರು.

"ಹಲೋ.... ಹಲೋ.... ಶಶಿಕಲಾ!"

"ಹೌದು.... ನಾನೇ? ಯಾರು ಮಾತಾಡುತ್ತಿರುವುದು?"

"ನಾನೇ.... ಸುಪ್ರೀತ! ಸ್ವರದ ಗುರುತು ಹತ್ತಲಿಲ್ಲವೆ?"

"ಏನು ವಿಶೇಷ!"

"ಏನೇ ನಿನ್ನ ಅವಸ್ಥೆ? ಹೊಲಸು ಹೊರಾವರಣದಿಂದ ನಿನ್ನ ಭಾವಚಿತ್ರ ಪತ್ರಿಕೆಯಲ್ಲಿ ಪ್ರಚಾರವಾಗಬೇಕಿತ್ತೇ? ಹೀಗೇಕಾಯಿತು?"

"ಬಳಿ ಬಂದ ಬಕಪಕ್ಷಿಯ ಹುಲಿಮುಖವನ್ನು ಗುರುತಿಸದೆ, ನಿಜ ಮಾನವನೆಂದು ಸತ್ಕರಿಸಿ, ಸರಸದ ಸುಧಾರಸ ಹರಿಸಿ, ಸೌಜನ್ಯಶೀಲನೆಂದು ಅದರಿಸಿದರೆ, ಬಿಕನಾಸಿ ಗಂಡುಗಳು ಹೆಣ್ಣಿಗೆ ಕೊಡುವ ಅಭಿಮಾನವಿದು—ಸುಪ್ರೀತ."

"ಅಂದರೆ!!"

"ನನ್ನ ಅವಸ್ಥೆಯ ಅಂತರ್ಯವನ್ನು ಅರಿಯುವ ಕುತೂಹಲವಿದ್ದರೆ, ಪೋಸಿನಲ್ಲಿ ಮಾತುಕತೆ ಬೇಡ. ಇತ್ತ ಬಾ."

"ರೈಟೊ"

ಸಿನೇಮಾರಂಗದಲ್ಲಿ ಸಹೋದ್ಯೋಗಿಯಾಗಿ ನಾಲ್ಕೈದು ಚಿತ್ರದಲ್ಲಿ ದುಡಿದು, ತಾರೆಯ ಹಂತವೇರಿದ ಸುಪ್ರೀತಳನ್ನು ನಿರೀಕ್ಷಿಸುತ್ತಾ ಹೊರ ಬಾಗಿಲಲ್ಲೇ ಕಾದು ನಿಂತಳು ಶಶಿಕಲಾ!

ಹುಣ್ಣಿಮೆಯ ಚಂದ್ರನಂತೆ ವದನಾರವಿಂದದಿಂದ ನಗುವಿನ ಹೊನಲನ್ನೇ ಹರಿಸುತ್ತಾದ್ದ ಶಶಿಕಲಾಳ ಮುಖ ಬಾಡಿ ಬರಿದಾಗಿತ್ತು. ಗುಪ್ತ ಚಿಂತೆ ಆಕೆಯನ್ನು ನಾಲ್ದೆಸೆಯಿಂದಲೂ ಕಾಡಿತ್ತಿತ್ತು.

'ಒಲಿದ ಹೆಣ್ಣನ್ನು, ಮನಬಂದಂತೆ ಕುಣಿಸಬಹುದು ಎಂದು ಅದಾವನೇ ಸಾಹಿತಿ ನಡುರಾತ್ರಿಯಲ್ಲಿ ನಿದ್ದೆಗೆಟ್ಟು ಬರೆದ ಸಾಹಿತ್ಯದಲ್ಲಿ ಸೇರಿಸಿಕೊಂಡಿದ್ದ. ಒಲಿದ ಶಶಿಕಲಾಳು 'ಅರೆನಗ್ನಳಾಗಿ, ಸೆರಗು ಇಲ್ಲದೆ, ಮಂಚದಲ್ಲಿ ಮಲಗಿ, ಮೋಹನನತ್ತ ಮುಗುಳುನಗುವಿನೊಂದಿಗೆ, ಕುಡಿಗಣ್ಣಿ ಕಡೆ ನೋಟ ಬೀರುವ ಮೋಹಕ ಚಿತ್ರವೊಂದು ಸಿನೇಮಾ ಸುದ್ದಿಸಾರ ಪತ್ರಿಕೆಯಲ್ಲಿ ಪ್ರಕಟವಾಗಿ, ಚಿತ್ರಪ್ರೇಮಿಗಳ ಕೈಸೇರಿತ್ತು! ಪ್ರತಿ ತಿಂಗಳಂತೂ ಸಾವಿರಗಟ್ಟಲೆ ಮಾರಿ ಹೋಗಿತ್ತು! ನೋರೆಯ ಮಿರ.ಗು ನೋಡಿ, ಮಾರುಹೊಗುವವರ ಸಂಖ್ಯೆ ಅತ್ಯಧಿಕವಲ್ಲವೆ! ಪತ್ರಿಕಾ ಮಾರಾಟಗಾರರಂತೂ ಅದೇ ಚಿತ್ರವನ್ನು ತಮ್ಮ ಅಂಗಡಿಯ ಬಾಗಿಲಿಗೆ ಸಾಲಾಗಿ ನೇತುಹಾಕಿ, ತಮ್ಮ ವ್ಯಾಪಾರ ನಡೆಸಿದ್ದರು. ಸುಂದರಾಂಗನೆಯ ಅರೆನಗ್ನ ಶರೀರದಲ್ಲಿ ಇಣಿಕಿ ಕಾಣುವ ಸೌಂದರ್ಯವನ್ನು ಹೀರಲು ಬಯಸದ ಚಿತ್ರ ಪ್ರೇಮಿಗಳಿರುವರೇ?

ಮುಗುಳು ನಗುವಿನಿಂದ ಬಂದ ಸುಪ್ರೀತನನ್ನು ಸ್ವಾಗತಿಸಿ, ತನ್ನ 'ಹಾಸಿಗೆ ಕೋಣೆ'ಗೆ ಕರತಂದಳು—ಶಶಿಕಲಾ! ಹಲವಾರು ಪ್ರೇಕ್ಷಕರನ್ನು ತನ್ನ ನಟನಾ ಕೌಶಲ್ಯದಿಂದ ದಂಗುಬಡಿಸಿ, ಶ್ರೇಷ್ಠಕಲಾವಿದೆ ಎಂದೆನಿಸಿದ ಶಶಿಕಲಾಳ ಗುಪ್ತ ಜೀವನದ ಗುಟ್ಟೆನರಿವಿಗಾಗಿ ಸುಪ್ರೀತ ಹಾತೊರೆದು ಹಕ್ಕಿಯಂತೆ ಹಾರಿ ಬಂದಿದ್ದಳು.

ಪೀಠಿಕೆಯ ಮಾತು ಮುಗಿದ ನಂತರ;'

'ಸ್ವತಂತ್ರಳಾಗಿ ಬಾಳ ಬಯಸಿದ ಹೆಣ್ಣು, ಹಲವು, ಬಾರಿ, ಗಂಡುಕಲ್ಲಿಗೆ ತಾಗಿ ಎಡವಬೇಕಾಗುತ್ತದೆ. ಆದರೆ, ಇಂತಹ ಭಾವಚಿತ್ರ ತೆಗೆಯಲು ನೀನು ಎಡೆ ಮಾಡಿಕೊಡಬಾರದಿತ್ತು."

ಒಂದೇ ಹಾದಿಯಲ್ಲಿ ನಡೆಯುತ್ತಿರುವ ಹೆಣ್ಣು, ತನ್ನ ಗೆಳತಿಗೆ ಬುದ್ಧಿಯ ಬೋಧನೆ ಕೊಟ್ಟಳು.

"ಹುಚ್ಚು ಮನಸ್ಸು ಹರಿದಂತೆ ನಡೆಯುವವರಿಗೆ, ಜ್ಞಾನೋದಯವಾಗುವುದು ಕೆಟ್ಟ ಮೇಲಲ್ಲವೆ?"

"ಯಾರವನು—ಗಂಡು ಮೂರ್ಖ!

'ಅವನೊಬ್ಬ— ಪ್ರಿಯಕರ! ಹುಟ್ಟಿದ್ದು ಶ್ರೀಮಂತರ ಕುಲದಲ್ಲಿ, ಬೆಳೆದದ್ದು ಸುಗುಣಿಗಳ ನಡುವಿನಲ್ಲಿ—ಅಂತ ಮನ್ಮಥ ಬಂದು, ಯಾವ್ವನದ ಹೆಣ್ಣನ ಮುಂದೆ, ತನ್ನ ವೈಭವ ಪ್ರದರ್ಶಿಸಿದರೆ ಯಾವ ಹೆಣ್ಣು ಕಣ್ಣು ಮುಚ್ಚಲು ಪ್ರಯತ್ನಿಸುವಳು?"

"ನಡೆದದ್ದಾದರೂ ಏನೆಂದು ಸೇಳಬಾರದೆ?"

"ನನ್ನ ದುರವಸ್ಥೆಯನ್ನುಯಾರು ತಿಳಿಯದಿರಬೇಕೆಂದು ಬಯಸಿದೆ. ಆದರೆ ಎಲ್ಲವೂ ಬಟ್ಟ ಬಯಲಾಯಿತು"

"ಏನಾಯಿತು ತಿಳಿಸೇ!"

"ಹೂಂ. ನನ್ನ 'ಅಪ್ಪನ ಮಗಳು' ಚಿತ್ರಾಭಿನಯನವನ್ನು ಹೊಗಳಿ, ನನ್ನ ಬೇಟಿಯನ್ನಪೇಕ್ಷಿಸಿ, ಭಾವ ಚಿತ್ರದೊಂದಿಗೆ ಓರ್ವ ಯುವಕನ ಪತ್ರ ಬಂದಿತ್ತು. ಅವನ ದುಂಡು ಮುಖ ನನ್ನ ದಂಗು ಬಡಿಸಿತ್ತು. ನನ್ನನ್ನು ತುಂಬಾ ಹೊಗಳಿ ಪತ್ರ ಬರೆದವನ ಅಭಿಲಾಷೆಗೆ, ಆಮಂತ್ರಣವಿತ್ತೆ."

'ಸರ್ವಾಂಗ ಸುಂದರಾಲಂಕಾರದಿಂದ ಆಗಮಿಸಿದ ತರುಣನನ್ನು ಕಂಡೇ ನಾನು ಮಂತ್ರಮುಗ್ಧಳಾದೆ. ಹಾಗೂ, ನನ್ನನ್ನು ವಂಚಿಸಲಿಕ್ಕಾಗಿ, ಹರಡಿದ ನಂಬಿಕೆಯ ಬಲೆಯಲ್ಲಿ ಅನಾಯಾಸವಾಗಿ ಸಿಲುಕಿಕೊಂಡೆ ಲಕ್ಷಾಧಿಪತಿಯನ್ನು ಪತಿಯೂಗಿ ಬಯಸದ ಹೆಣ್ಣು ಈ ಪ್ರಪಂಚದಲ್ಲೇ ಇರಲಾರಳು'

'ಅಂದಿನಿಂದ ಅವನು ಹೆಚ್ಚಾಗಿ ನನ್ನ ಬಳಿಯೇ ಇರುತ್ತಿದ್ದ. ಸ್ಟುಡಿಯೋ ಕೆಲಸ ಮುಗಿದೊಡನೆಯೇ ಅವನ ಬಳಿಗೆ ಹಾರಿ ಬರುತ್ತಿದ್ದೆ. ಅವನೂ ನನಗಾಗಿ ಬದುಕಿರುವವನು ಎಂದು ಸಂಪೂರ್ಣ ನಂಬಿದ್ದೆ

'ನಾವಿಬ್ಬರೂ ವಿವಾಹವಾಗಿ, ಸುಖದ ಸೌಧಕಟ್ಟಬೇಕೆಂದು, ಸಾವಲ್ಲದೆ ನಾವು ಬೇರಾಗ ಬಾರದೆಂದು, ಯಾವ ನೆರಹುಳದ ಅಡ್ಡಿ ಆತಂಕಗಳಿಗೆ ತಲೆಬಾಗಬಾರದೆಂದು ಶ್ರೀ ಮಹಾ ಗಣಪತಿ ದೇವರ ಪಟದ ಮುಂದೆ, ಕೈ ಮೇಲೆ ಕೈಯಿರಿಸಿ ಭಾಷೆ ಸ್ವೀಕಾರ ಮಾಡಿಕೊಂಡಿದ್ದೆವು. ಮೊದಲ ದರ್ಶನದಿನವೇ ನಾವು ಪತಿ—ಪತಿಗಳ ಆಸೆತೀರಿಸಿಕೊಂಡಿದ್ದೆವು

'ಕಳೆದ ಆರು ತಿಂಗಳಿಂದ ಜತೆ ಹಕ್ಕಿಗಳಂತೆ ಅನ್ಯೋನ್ಯರಾಗಿದ್ದೆವು. ಅಯ್ಯೋ! ಕಳೆದ ದಿನಗಳನ್ನು ನೆನೆಯುವಾಗ ಮೈ ನವಿರೇಳುತ್ತದೆ. ಗಂಡು—ಹೆಣ್ಣು ಒಂದಾಗಿ ಒಮ್ಮತದಿಂದ ಬಾಳಿದರೆ ಎಷ್ಟು ಆನಂದ! ದಿನಕಳೆದುದುದರ ಅರಿವಿದೆಯೆ? ಹಸಿವಿನ ಭಯವಿದೆಯೆ? ಆದರೆ....ಇಂದಿನ ಈ ದುರ್ಘಟನೆ ನೆನೆಯುವಾಗ ಕಣ್ಣಲ್ಲಿ ನೀರಿಳಿಯುತ್ತದೆ—ಸುಪ್ರೀತ!.

'ನಮ್ಮ ಸರಸದ ಸಂಭ್ರಮದ ಸಂದರ್ಭದಲ್ಲಿ 'ಪ್ರಾಣಿ' ನನ್ನ ಹಲವಾರು ಭಾವಚಿತ್ರವನ್ನು, ನಾನಾ ಭಂಗಿಯಲ್ಲಿ ಹಿಡಿದಿರಿಸಿಕೊಂಡಿರುವನು. ಮೆಚ್ಚಿದವನ ಎದುರಿನಲ್ಲಿ ಹುಚ್ಚಿಯಂತೆ ವರ್ತಿಸಿ, ಸ್ತ್ರೀ ಸಹಜವಾದ ಲಜ್ಜೆ—ನಾಚಿಕೆಗಳನ್ನು ತೊರೆದಿರುವೆನು. ಎಷ್ಟಾದರೂ ಕೈಹಿಡಿದು ಕುಣಿಸಾಡುವವನು ಎಂಬ ಧೈರ್ಯವಲ್ಲವ?

'ಒಂದೆರಡು ತಿಂಗಳಿಂದ, ನನ್ನಲ್ಲಿ ... ವುದನ್ನು ತನ್ನಷ್ಟಕ್ಕೆ ತಡೆಹಿಡಿದ. ಕಾರಣವೇನೆಂದು ಪ್ರಿಯಕರನನ್ನು ಪ್ರಶ್ನಿಸಿದೆ. 'ನಾನು ಯಾವುದೋ ಸರ ಗಂಡಿನೊಂದಿಗೆ ಸರಸವಾಡುತ್ತಾ, ಕಾರಿನಲ್ಲಿ ಅಡ್ಡಾಡುತ್ತಿರುವುದನ್ನು ಕಂಡಿದ್ದೆನೆಂದು ಸುಳ್ಳು ಹೊರಿಸಿರುವನು. ನನ್ನ ಹೇಳಿಕೊಂಡರೂ ಕಿವಿಗೊಡಲಿಲ್ಲ. ಬಹುಶಃ ನನಗಿಂತಲೂ ಶ್ರೀಮಂತ ಹೆಣ್ಣನ್ನು ತನ್ನ ಬಳಿಗೆಳೆದು ಕೊಂಡಿರುವುದು—ಮಾರಿ!"

'ಒಮ್ಮೆ, ನನ್ನಲ್ಲಿಗೆ, ಹೆಣ್ಣನ ಕಣ್ಣಿನ ನೋಡಲು ಅಸಹ್ಯವಾದ ನನ್ನದೇ ಒಂದು ಚಿತ್ರವನ್ನು ಹಿಡಿದುಕೊಂಡು ಬಂದ. 'ಶಶಿ! ನನಗೆ ಒಂದು ಸಾವಿರ ಕೊಡ ಎಂದ. 'ನನ್ನಲ್ಲಿಲ್ಲ' ಎಂದೆ. ಆ ಚಿತ್ರ ತೋರಿಸುತ್ತಾ, 'ನೀನು ನಾನು ಕೇ...

(ಇನೇ ಪುಟ ನೋಡಿರಿ)

ಅಮೃತಾಂಜನ
ಎಲ್ಲಾ ನೋವುಗಳಿಗೆ ಸಿದ್ಧೌಷಧ
ಎಲ್ಲಾಕಡೆ ಸಿಡಿಮದ್ದು ನೋವುಗಳಿಗೆ
50 ವರ್ಷ ಪ್ರಾಯದ
ಪಾರ್ಲಾ ಲಾಂಛನ
ಅಮೃತಾಂಜನ ಲಿ ಮೊಬಾಯಿ ಮಹಾನಗರ

ಸ್ಥಾಪನೆ: 1924

ದಿ ಕರ್ಣಾಟಕ ಬೇಂಕ್ ಲಿಮಿಟೆಡ್

(ಶೆಡ್ಯೂಲ್ಡ್ ಬೇಂಕ್)

ರಿಜಿಸ್ಟರ್ಡ್ & ಹೆಡ್ ಆಫೀಸು: ಡೊಂಗರಕೇರಿ, ಮಂಗಳೂರು—3.

ಈ ಕೆಳಗಿನ ಏರಿಸಿದ ಬಡ್ಡಿದರಗಳಲ್ಲಿ ಠೇವಣಾತಿಗಳನ್ನು ಸ್ವೀಕರಿಸಲಾಗುವುದು.

ಒಂದರಿಂದ ಎರಡು ತಿಂಗಳುಗಳ ವರೆಗೆ	....	ಸಾ|| ಸೇಕಡಾ 3-75	ನ.ಪೈಸೆ
ಮೂರರಿಂದ ಐದು ತಿಂಗಳುಗಳ ವರೆಗೆ	....	,, 4-25	,,
ಆರು ತಿಂಗಳುಗಳಿಂದ 12 ತಿಂಗಳುಗಳ ವರೆಗೆ....		,, 4-50	,,
12 ತಿಂಗಳು ಮಿಕ್ಕೆ 24 ತಿಂಗಳುಗಳ ವರೆಗೆ		,, 4-75	,,
24 ತಿಂಗಳು ಮಿಕ್ಕೆ 48 ತಿಂಗಳುಗಳ ವರೆಗೆ		,, 5·00	,,
48 ತಿಂಗಳುಗಳಿಗೆ ಮಿಕ್ಕೆ	....	,, 5-25	,,

ಸೇವಿಂಗ್ಸ್ ಬ್ಯಾಂಕ್ ಬಡ್ಡಿ ದರವನ್ನು ಸಾ. ಸೇಕಡ 2½% ರಿಂದ 3¼%ಗೆ ಏರಿಸಲಾಗಿದೆ.

THE KARNATAKA BANK LIMITED.

ESTD. 1921 ಸ್ಥಾಪನೆ

NAVAYUGA
KANNADA WEEKLY,
UDIPI.

Founder:

Late Sri A. B. Shetty

Former Minister for Public Health, Govt. of Madras & Govt. of Mysore.

ನವಯುಗ
ರಾಷ್ಟ್ರೀಯ ವಾರಪತ್ರಿಕೆ
ಉಡುಪಿ

ಗೌರವ ಸಂಪಾದಕರು:
ಎಸ್. ಗೋಪೀಚಂದ ರಾವ್, ವಿದ್ವಾನ್.
ಬಿ. ಶಾಮರಾಯ ಶೆಟ್ಟಿ, ಬಿ. ಎ., ಎಲ್.ಟಿ.

ಸಂಚಾಲಕ ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ.

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-50
ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3 50

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ನಿಯಮಕೇಟ್ಟು ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಕ್ರುಶ್ಚೇವರಲ್ಲಿ ಲೋಕಪ್ರಾರ್ಥನೆ

ರಶ್ಯವು ಇತ್ತೀಚೆಗೆ ಸ್ಫೋಟಗೊಳಿಸಿದ ಒಂದು ಬಹು ದೊಡ್ಡ ಬಾಂಬಿನ ಪರಿಣಾಮವಾಗಿ ಸಿಡಿದ ವಿಕಿರಣಗಳು ದಿಗ್ದೇಶಗಳಲ್ಲಿ ಹರಡಲು ಆರಂಭವಾಗಿವೆ- ಜಪಾನ, ಐಸ್‌ಲೇಂಡ್ ಹಾಗೂ ಗ್ರೀನ್‌ಲೇಂಡ್ ಮೊದಲಾದ ನಿಕಟವರ್ತಿ ದೇಶಗಳಲ್ಲಿ ಮಾತ್ರವಲ್ಲ, ನಮ್ಮ ದೇಶದ ಬಂಗಾಳದಲ್ಲೂ ಇದು ವ್ಯಾಪಿಸತೊಡಗಿದೆಯೆಂದು ಗೊತ್ತಾಗಿದೆ ಬಾಂಬು ಸ್ಫೋಟನದ ಪರಿಣಾಮವಾಗಿ, ಅಣುವಿಕಿರಣದಲ್ಲಿ ಅತಿ ಹೆಚ್ಚಿನ ಪಾಲು ಆಕಾಶದಲ್ಲಿ ಮೇಲಕ್ಕೇರಿದೆಯೆಂದೂ ಉಳಿದ ಅಲ್ಪಾಂಶ ಮಾತ್ರ ಭೂಪ್ರದೇಶದಲ್ಲಿ ವಿಹರಿಸುತ್ತಿದೆಯೆಂದೂ ವರದಿಗಳು ಬಂದಿವೆ. ಹೀಗೆ ಒಂದು ಬಾಂಬಿನ ಪ್ರಭಾವವು ವಿಶ್ವದ ನಾಗರಿಕರ ಮನಸ್ಸನ್ನು ನೋಯಿಸುತ್ತಿರುವಂತೆಯೇ ೫೦ ಮೆಗಟನ್ ಶಕ್ತಿಯ ಒಂದು ಬ್ರಹತ್ ಅಣುಬಾಂಬನ್ನು ತಾನು ಸಿಡಿಸುವುದಾಗಿ ರಶ್ಯ ಸಾರಿದ್ದು, ಇದರಿಂದ ಎಲ್ಲರೂ ಕಳವಳಕ್ಕೀಡಾಗಿದ್ದಾರೆ.

ಸಂಯುಕ್ತ ರಾಷ್ಟ್ರ ಸಂಘದ ಬ್ರಹತ್ಸಭೆಯಲ್ಲಿ ರಶ್ಯದ ಘೋಷಣೆಯ ಬಗ್ಗೆ ಸುದೀರ್ಘ ಚರ್ಚೆ ನಡೆಯಿತು. ಹೆಚ್ಚಿನ ಸದಸ್ಯ ರಾಷ್ಟ್ರಗಳು ಈ ಅತ್ಯದ್ಭುತ ಪ್ರಳಯಕಾರಿ ಬಾಂಬಿನ ಸ್ಫೋಟವನ್ನು ಪ್ರತಿಭಟಿಸಿದರು ತತ್ಪರಿಣಾಮವಾಗಿ, ಕೆನೆಡ, ಡೆನ್‌ಮಾರ್ಕ್, ಜಪಾನ್, ಪಾಕಿಸ್ತಾನ ಮೊದಲಾದ ೮ ರಾಷ್ಟ್ರಗಳು ಈ ಬಾಂಬಿನ ಸ್ಫೋಟವನ್ನು ತಡೆಹಿಡಿಯುವಂತೆ ರಶ್ಯವನ್ನು ಪ್ರಾರ್ಥಿಸಿಕೊಳ್ಳುವ ಒಂದು ಗೊತ್ತುವಳಿಯನ್ನು ಮಂಡಿಸಿದುವು.

ಆದರೆ, ಭಾರತವು ಮಾತ್ರ ಮತ್ತೊಂದು ಗೊತ್ತುವಳಿಯನ್ನು ತಯಾರಿಸಿತ್ತು. ನಿಶ್ಶಸ್ತ್ರೀಕರಣ ಒಡಂಬಡಿಕೆಯಾಗುವವರೆಗೆ ಯಾವುದೇ ವಿಧದ ಅಣ್ವಸ್ತ್ರಗಳನ್ನು ಸಿಡಿಸುವುದನ್ನು ಇದು ನಿಷೇಧಿಸುತ್ತದೆ. ಇದಕ್ಕೆ ಸ್ವೀಡನ್ ಮೊದಲಾದಕೆಲವೊಂದು ರಾಷ್ಟ್ರಗಳ ಬೆಂಬಲವೂ ಇದ್ದಿತ್ತು. ಆದರೂ ಪಾಶ್ಚಾತ್ಯ ಬಣಗಳಿಗೆ ಇಂತಹ ನಿಷೇಧ ಹೇರುವ ಪ್ರಸ್ತಾಪ ಬೇಡವಾದುದರಿಂದ ಈ ನಿರ್ಣಯಕ್ಕೆ ಹೆಚ್ಚಿನ ಬಲ ದೊರೆಯಲಿಲ್ಲ

ಈ ಕಾರಣದಿಂದಾಗಿ, ೫೦ ಮೆಗಟನ್ ಶಕ್ತಿಶಾಲಿ ಅಣುಬಾಂಬಿನ ಪರೀಕ್ಷಣೆಯನ್ನು ತ್ಯಜಿಸಬೇಕೆಂಬ ನಿರ್ಣಯವನ್ನು ಬ್ರಹತ್ಸಭೆಯು ೮೭ ವಿರುದ್ಧ ೧೧ ಮತಗಳಿಂದ ಸ್ವೀಕರಿಸಿತು ಮಂಗೋಲಿಯಾ, ಕ್ಯೂಬಾ ಹಾಗೂ ರಶ್ಯನ್ ಬೆಂಬಲಿಗ ೧೧ ರಾಷ್ಟ್ರಗಳು ಈ ವಿರೋಧವನ್ನು ವ್ಯಕ್ತಪಡಿಸಿದುವು ಮಾಲಿ ಫೆಡರೇಷನ್ ಮತದಾನವನ್ನೇ ಮಾಡಲಿಲ್ಲ ದಾಹೋಮಿ, ಮೋರಕ್ಕೋ, ನಿಕಾರಗುವ ಅ ಮತ್ತು ಸೋಮಾಲಿಯಾಗಳು ಸಭೆಯಲ್ಲಿಯೇ ಉಪಸ್ಥಿತರಿರಲಿಲ್ಲ. ಈ ನಿರ್ಣಯವು ಸಂಕ್ಷಿಪ್ತವಾಗಿದ್ದು ಹೀಗಿದೆ: "ಅಣವಿಕ ಶಸ್ತ್ರ ಪರೀಕ್ಷಣಗಳನ್ನು ತಡೆಯುವ ವಿಚಾರದಲ್ಲಿ ಚರ್ಚೆ ನಡೆಸುತ್ತಿರುವ ಸಂಯುಕ್ತ ರಾಷ್ಟ್ರಸಂಘದ ಈ ಬ್ರಹತ್ಸಭೆಯು ಈ ತಿಂಗಳ ಕೊನೆಗೆ ಮೊದಲು ಒಂದು ೫೦ ಮೆಗಟನ್ ಬಾಂಬನ್ನು ವಿಸ್ಫೋಟಿಸುವ ತನ್ನ ಇರಾದೆಯನ್ನು ತ್ಯಜಿಸಬೇಕೆಂದು ರಶ್ಯನ್ ಸರಕಾರವನ್ನು ಗಂಭೀರತಾ ಪೂರ್ವಕವಾಗಿ ಕೇಳಿಕೊಳ್ಳುತ್ತದೆ"

ರಶ್ಯನ್ ಪ್ರತಿನಿಧಿ ಸಂಸ್ಕ್ರಿನ್‌ರವರು ಈ ಗೊತ್ತುವಳಿಯನ್ನು ವಿರೋಧಿಸಿದರು "ಹಡಗಿನಲ್ಲಿ ತೂತುಗಳ ಮೂಲಕ ನುಗ್ಗಿದ ನೀರನ್ನು ಹಂಪಿನ ಮೂಲಕ ತೆಗೆಯಬೇಕು, ಅದಂಲ್ಲಿರುವ ಛಿದ್ರಗಳನ್ನು ಹಾಗೆಯೇ ಇರಗೊಡಿಸಬೇಕೆಂದು ಈ ಗೊತ್ತುವಳಿ ಹೇಳುವಂತಿದೆ ಪಾಶ್ಚಾತ್ಯ ದೇಶಗಳು ಏಕಪಕ್ಷೀಯ ಸೈನಿಕ ಲಾಭ ಪಡೆಯಬೇಕೆಂಬ ಉದ್ದೇಶನೇ ಈ ಗೊತ್ತುವಳಿಯದು. ಅಣವಿಕ ಸಮರವಾಯಿತೆಂದರೆ, ಕೋಟ್ಯಂತರ ಜನರು ಸಾಯುವರು, ನಾಗರಿಕತೆಯ ಬಹುಭಾಗ ನಾಶ ಸಮವಾಗುವುದು. ವಿಸ್ಫೋಟದ ವಿಕಿರಣದಿಂದಾಗುವ ಪ್ರಭಾವ ಊಹನಾತೀತ" ಎಂದವರು ವರ್ಣಿಸಿದರು.

ವಿಶ್ವಸಂಸ್ಥೆಯು ರಶ್ಯದ ಕಾಲು ಹಿಡಿದು ಬೇಡಿತು— "ಮೆಗಟನ್ ಬಾಂಬ್ ಸ್ಫೋಟವನ್ನು ಬಿಟ್ಟುಕೊಡಿರಿ!"

ಮಂಗಳೂರು ಸ್ಪೆಶಲ್ ಅಸಿಸ್ಟಾಂಟ್ ಕಮಿಶನರ ಕೋರ್ಟ್‌ನಲ್ಲಿ
(ಕ್ಯಾಂಪ್ ಉಡ್ಪಿ)
O. P 598/61

ಅಕ್ಕಂಮ ಹೆಗಡ್ತಿ —ಅರ್ಜಿದಾರಳು
ಮತ್ತು
ಉಂಮರ್ ಸಾಹೇಬ —ಎದ್ರಿ
ಇವರೊಳಗೆ

ಎದ್ರಿ— ಉಂಮರ್ ಸಾಹೇಬ—ನ್ಯಾರ್ಮ ಅದಂ ಸಾಹೇಬರ ಮಗ—ಶಿರ್ವ ಗ್ರಾಮ ಉಡ್ಪಿತಾಲ್ಲು

ಎದ್ರಿಗೆ ತಿಳಿಯಪಡಿಸುವುದೇನೆಂದರೆ —

ಅರ್ಜಿದಾರರಿಗೆ ಎದ್ರಿಯಿಂದ ಕಳೆದ ಶಾವರಿ ಸಂಬಂಧಕ್ಕೆ ಬಹಾ ಚಾಲಗೇಣಿ ಗೇಣಿ ಬಾಕಿಯಿರುವುದರಿಂದ ಆ ಕುರಿತು ಗೇಣಿಗೆ ಕಾರಣವಾದ ಆಸ್ತಿ ಸ್ವಾಧೀನತೆ ಕೇಳಿ ಅರ್ಜಿದಾರರು ದಾಖ್ಲು ಮಾಡಿದ ಮೇಲಿನ ಅರ್ಜಿಯು ತಾ 14—11—61ಕ್ಕೆ ಎದ್ರಿಯ ಹಾಜರಾತಿಗೆಯಿಟ್ಟಿರುವುದರಿಂದ ಸದ್ರಿ ಅರ್ಜಿಯ ಉದಾಹರಿಸುವುದಿದ್ದರೆ ಮೇಲಿನ ತಾರೀಕು ಹಗಲು ಗಂಟೆ 10ಕ್ಕೆ ಈ ಕೋರ್ಟು ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳಬೇಕಾದ್ದು.

By Order of Court.
Y C S· Hegde,
Advocate for Petitioner
Udipi, 29—10—1961.

ಮಂಗಳೂರು ಸ್ಪೆಶಲ್ ಅಸಿಸ್ಟಾಂಟ್ ಕಮಿಶನರ ಕೋರ್ಟ್‌ನಲ್ಲಿ
ಕ್ಯಾಂಪ್ ಉಡ್ಪಿ
O P 597/61

ಅಕ್ಕಂಮ ಹೆಗಡ್ತಿ —ಅರ್ಜಿದಾರಳು
ಮತ್ತು
1. ಉಂಮರ್ ಸಾಹೇಬ 2 ಆಮಿನಾಬಿ —ನ್ಯಾರ್ಮ ಅದಂ ಸಾಹೇಬರ ಮಕ್ಕಳು—ಉಡ್ಪಿ ತಾಲ್ಲು ಶಿರ್ವ ಗ್ರಾಮದಲ್ಲಿರುವವರು —ಎದ್ರಿರು.

1ನೇ ಎದ್ರಿಗೆ ತಿಳಿಯಪಡಿಸುವುದೇನೆಂದರೆ

ಅರ್ಜಿದಾರರಿಗೆ ಎದ್ರಿಯಿಂದ ಕಳೆದ ಶಾವರಿಯ ರಕ್ಕೆ ಬಹಾಚಾಲಗೇಣಿ ಗೇಣಿ ಬಾಕಿಯಿರುವುದರಿಂದ ಆ ಕುರಿತು ಗೇಣಿಗೆ ಕಾರಣವಾದ ಆಸ್ತಿ ಸ್ವಾಧೀನತೆ ಕೇಳಿ ಅರ್ಜಿದಾರರು ದಾಖ್ಲುಮಾಡಿದ ಮೇಲಿನ ಅರ್ಜಿಯು ತಾ 14—11 61ಕ್ಕೆ ತಪ್ಪಿಗೆ ಇಟ್ಟಿರುವುದರಿಂದ ಸದ್ರಿ ಅರ್ಜಿಯಲ್ಲಿ ಉದಾಹರಿಸುವುದಿದ್ದರೆ ಮೇಲಿನ ತಾರೀಕು ಹಗಲು ಗಂಟೆ10ಕ್ಕೆ ಈ ಕೋರ್ಟು ಮುಂದೆ ಹಾಜರಾಗಿ ಜಾಹೀರುಮಾಡಿಕೊಳ್ಳಬೇಕಾದ್ದು.

(By Order of Court)
Y C· S Hegde,
Advocate for Petitioner.
Udipi, ತಾ. 29—10—61.

ದೀಪಾವಳಿ ಹಬ್ಬದ ಸಮಯದಲ್ಲಿ ಕಯರೋಗದಿಂದ ನರಳುವವರ ಕುರಿತು ಯೋಚಿಸಿರಿ.



ದೀಪಾವಳಿಯ ಸಂತೋಷದ ದಿನಗಳು ತಿರುಗಿ ಬಂದಿವೆ— ಸಂತೋಷ ಮತ್ತು ಹೆಚ್ಚಿನ ಸದಾಶಯ ನಾಗೂ ಎಲ್ಲೆಲ್ಲಿಯೂ ಹರ್ಷವೇ ತುಂಬಿದೆ ಆದರೆ ಒಬ್ಬ ಕ್ಷಯರೋಗಿಗೆ, ವರ್ಧಿಸುತ್ತಿರುವ ಮತ್ತು ಅವನು ಅನುಭವಿಸುತ್ತಿರುವ ಮತ್ತು ಅವನನ್ನು ಕಾಡುತ್ತಿರುವ ಕೊರಗಿನ ವೇದನೆ ಯಾರಿಗೆ ತಿಳಿದಿದೆ? ಇದು ಆನಂದಿಸುವ ಸಮಯವಲ್ಲ ಎಂತಲೇ ಅವನ ಸಲುವಾಗಿ ಈ ಟಿ ಬಿ ಮುದ್ರೆ ಚಳವಳವನ್ನು ಉಪಕ್ರಮಿಸಿದ್ದಾಗಿದೆ.

ಟಿ ಬಿ ಮುದ್ರೆಗಳನ್ನು ಪಡಕೊಂಡು ನಿಮ್ಮ ಗ್ರೀಟಿಂಗ್ ಕಾರ್ಡುಗಳಿಗೆ, ಪಾರಿತೋಷಕ ಪಾರ್ಸೆಲುಗಳಿಗೆ ಮತ್ತು ಸಾಮಾನ್ಯ ಪತ್ರಗಳಿಗೆ ಅಂಟಿಸಿರಿ. ಈ ಉತ್ತಮ ಕಾರ್ಯವು ಕ್ಷಯರೋಗಿಗಳಿಗೆ ಸಂತೋಷವನ್ನುಂಟುಮಾಡುತ್ತದೆ ಒಂದು ಟಿ ಬಿ ಮುದ್ರೆಯ ಬೆಲೆ ಹತ್ತು ನಯೇಪೈಸೆ ಮಾತ್ರ ಅವುಗಳು ನಿಮ್ಮ ರಾಜ್ಯದ ಟಿ ಬಿ ಸಂಘ ಮತ್ತು ಅದರ ವಿವಿಧ ಏಜನ್ಸಿಗಳಲ್ಲಿ ಮಾರಾಟಕ್ಕೆ ದೊರೆಯುತ್ತವೆ.

ಹನ್ನೆರಡನೇ ಕಯರೋಗ ಮೊಹರು ಮಾರಾಟ ಚಳವಳ

(ನವದೆಹಲಿಯಲ್ಲಿರುವ ಭಾರತದ ಕ್ಷಯರೋಗ ಸಂಘದಿಂದ ಪ್ರಾರಂಭಿಸಲ್ಪಟ್ಟಿದ್ದು)

(2ನೇ ಅಕ್ಟೋಬರದಿಂದ 26 ನೇ ಜನವರಿ ತನಕ)

ಈ ಸ್ಥಳದ ದಾತೃಗಳು.

Bombay Dyeing and Manufacturing Co, Ltd.,
Bombay.

ನವಯುಗ

ವರುಷ ೪೧	ಉಡುಪಿ ೨-೧೧-'೬೧	ವಾರ ೯

ಉಪೇಕ್ಷೆ—ಕುಚೇಷ್ಟೆ

ಜಾಗತಿಕ ಮನವಿಯು ತನ್ನ ಕಾಲ ಬುಡದಲ್ಲಿ ಬಂದು ಬಿದ್ದಾಗಲೂ ಅದನ್ನು ಎಡಗಾಲಿಂದೊದ್ದು ರಶ್ಯದ ಪ್ರಧಾನಿ ಶ್ರೀ ನಿಕಿಟಾ ಕ್ರುಶ್ಚೇವರು ತಮ್ಮ ಗತ್ತುಗಾರಿಕೆಯನ್ನು ತೋರಿಸಿಯೇ ಬಿಟ್ಟರು. ಪ್ರಳಯಕಾರಿಯಾದ ೫೦ ಮೆಗಟಾನ್ ಶಕ್ತಿ ಭರಿತ ಅಣುಬಾಂಬನ್ನು ಸ್ಫೋಟಿಸಿಯೇ ತೀರಿದರು. ಅಣ್ವಸ್ತ್ರ ಸ್ಫೋಟನ ಕಾರ್ಯ—ಸಾಹಸಗಳಿಗಾಗಿ ಅವರ ಕಿರೀಟದಲ್ಲಿ ನವಿಲು ಗರಿಯೊಂದು ಏರಬೇಕಾದುದು ನ್ಯಾಯವಾದರೂ ಸದ್ಯ ಜಗತ್ತಿನ ಪ್ರಾತಿನಿಧಿಕ ಸಂಸ್ಥೆ ಸಂಯುಕ್ತ ರಾಷ್ಟ್ರ ಸಂಘದ ಕಳಕಳಿಯ ವಿನಂತಿಯನ್ನು ಮನ್ನಿಸದೆ ಜಗನ್ನಿಂದ್ಯರಾಗುವಂತಾಯಿತು. ಇದು ಅವರಂತಹ ಮುತ್ಸದ್ದಿಗೆ ಕೀರ್ತಿ ತರುವಂತಹುದಲ್ಲ. ೧೯೪೫ರಲ್ಲಿ ಸುಮಾರು ಒಂದೂಕಾಲು ಲಕ್ಷ ನಾಗರಿಕರು ಅಸುದೊರೆಯುವಂತೆ ಜಪಾನದ ಮೇಲೆ ಅಮೆರಿಕೆಯು ಹೊತ್ತು ಹಾಕಿದ ಬಾಂಬಿನ ಶಕ್ತಿಗಿಂತ ೨,೫೦೦ ಪಾಲು ದೊಡ್ಡದೆಂದೂ ನ್ಯಿತೀಯ ಮಹಾಯುದ್ಧದಲ್ಲಿ ಮಿತ್ರರಾಷ್ಟ್ರಗಳು ಜರ್ಮನಿ ಹಾಗೂ ಜರ್ಮನರು ಆಕ್ರಮಿಸಿದ ಪ್ರದೇಶಗಳ ಮೇಲೆ ಎಸೆದ ಬಾಂಬುಗಳ ಒಟ್ಟು ಶಕ್ತಿಗಿಂತ ೨೫ಸಲ ಹೆಚ್ಚಿರುವುದೆಂದೂ ಗೊತ್ತಾಗುತ್ತದೆ. ಇಷ್ಟರಿಂದಲೇ ಈ ಅತ್ಯಧಿಕ ಶಕ್ತಿಯ ಬಾಂಬಿನ ಶಕ್ತಿ ಮತ್ತು ಅದರ ಪರಿಣಾಮಗಳನ್ನು ಊಹಿಸಿ ತಿಳಿದುಕೊಳ್ಳಬಹುದು.

ಒಂದುಬಾರಿ ತಡೆಹಿಡಿದಿದ್ದ ಅಣ್ವಸ್ತ್ರ ಪ್ರಯೋಗವನ್ನು ಪುನಃ ತೊಡಗಿದ್ದ ರಶ್ಯವು ಒಂದಕ್ಕಿಂತ ಒಂದು ಬಗಿಯೂದ ಶಕ್ತಿಯುತವಾದ ಬಾಂಬುಗಳನ್ನು ಸ್ಫೋಟಗೊಳಿಸುತ್ತ ಬಂದಿತ್ತು. ಅಕ್ಟೋಬರ್೧೭ ರಂದು ಕ್ರುಶ್ಚೇವರು ತಾಸಿಂ ರಂದು ೫೦ ಮೆಗಟನ್ ಶಕ್ತಿಯ ಬಾಂಬನ್ನು ಸ್ಫೋಟಗೊಳಿಸುವೆನೆಂದೂ ತಾನೀಗ ತೊಡಗಿರುವ ಅಣ್ವಸ್ತ್ರ ಪ್ರಯೋಗ ಮಾಲೆಯಲ್ಲಿ ಅದು ಕೊನೆಯದಾಗುವುದೆಂದೂ ಸಾರಿದ್ದುದನ್ನು ನೆನಪಿಸಿಕೊಳ್ಳಬೇಕು. ಅವರ ಈ ಪೇಳಿಕೆಯಿಂದ ಕಂಗಾಲಾದ ಜಗತ್ತಿನ ರಾಷ್ಟ್ರಗಳು ಒಂದಾಗಿ ಸಂಯುಕ್ತ ರಾಷ್ಟ್ರ ಸಂಘದ ಮೂಲಕ ಬಿನ್ನವಿಸಿದುವು. ಆದರೆ, ಕ್ರುಶ್ಚೇವರ ಬಿಗಿ.ಮಾನದಿಂದ ಕೂಡಿದ ಮನಸ್ಸಿಗೆ ಇದು ಸರಿಯೆನಿಸಲಿಲ್ಲ. ಸ್ವಯಂ ಕ್ರುಶ್ಚೇವರೇನೂ ಈ ಬಾಂಬು ಸ್ಫೋಟನದ ಅನಾಹುತಗಳನ್ನು ಅರಿಯದವರಲ್ಲ. ಸೋವಿಯತ್ ಕಮ್ಯುನಿಸ್ಟ್ ಪಾರ್ಟಿಯ ಕಾಂಗ್ರೆಸ್‌ನಲ್ಲಿ ವಿಶ್ವಸಂಘದ ಈ ವಿನಂತಿಯನ್ನು ಖಂಡಿಸಿದ್ದರು. ಅಲ್ಲದೆ, ಅದನ್ನು ವಿವೇಕಹೀನವೆಂದು ಉದ್ಗರಿಸಿದ್ದರು. "ಬಾಂಬುಸ್ಫೋಟನದಿಂದ ಉಂಟಾಗಬಹುದಾದ ವಿಕಿರಣ ಪ್ರಕ್ರಿಯೆಯಿಂದಾಗುವ ಅನಾಹುತಗಳ ಪರಿಚಯವನ್ನು ನಾವು ಅರಿಯದವರಲ್ಲ; ನಮಗೂ ಮಕ್ಕಳು, ಮೊಮ್ಮಕ್ಕಳು ಮತ್ತು ಮರಿಮಕ್ಕಳೂ ಇದ್ದಾರೆ. ನಾವೂ ಅವರ ಇಂದಿನ ಮತ್ತು ಮುಂದಿನ ಬಗ್ಗೆ ಚಿಂತಿಸಬೇಕಾಗಿದೆ. ನಮ್ಮ ವೈಜ್ಞಾನಿಕರು ಸ್ಫೋಟನದಿಂದ ಉಂಟಾಗುವ ಅನಾಹುತಗಳನ್ನು ಆದನ್ನು ಕಡಿಮೆಯಾಗಿಸುವರೆಂದು ನಾನು ಹೇಳಬಯಸುತ್ತೇನೆ" ಎಂದವರು ಅಂದಿದ್ದರು. ಅಂದರೆ, ತನ್ನ ಪ್ರಯೋಗ ಮಾಲಿಕೆಯನ್ನು ಕಾರ್ಯರೂಪಕ್ಕೆ ತಂದೇ ತೀರಬೇಕೆಂಬ ಅವರ ಹಠವೂರಿತನವೇ ಅವರ ಈ ಮೂರನೆಯ ವರ್ತನೆಗೆ ಕಾರಣವೆನ್ನಬಹುದು.

ಕೆಲವು ದಿನಗಳಿಗೆ ಮೊದಲು ರಶ್ಯವು ೩೦ ಮೆಗಟನ್ ಶಕ್ತಿಯ ಬಾಂಬನ್ನು ಸ್ಫೋಟಿಸಿತ್ತೆಂಬುದನ್ನೂ ಅದರ ಅಣು ವಿಕಿರಣವು ಅಸುವಾಸಿಸ ಹಲವಾರು ದೇಶಗಳಲ್ಲಿ ಹರಡಿದೆಯೆಂದೂ ವರದಿಗಳು ಬಂದಿವೆ. ಹಾಗಿರುವಾಗ ಈ ಸ್ಫೋಟಿಸಿದ ಮಹಾ ಶಕ್ತಿಯುತ ಬಾಂಬಿನ ವಿಕಿರಣ ಪ್ರತಿಕ್ರಿಯೆಯು ಮತ್ತಷ್ಟು ವಿಶಾಲವಾಗಿ ಆಗುವುದು ಎಂಬುದು ನಿಶ್ಚಯ. ಇದರಿಂದ ರಶ್ಯವನ್ನು ಮುಂದಿಟ್ಟುಕೊಂಡು ನಿಶ್ಶಸ್ತ್ರೀಕರಣದ ಪ್ರಶ್ನೆಯ ಬಗ್ಗೆ ವಿಚಾರ ಮಾಡುವುದೂ ಅಸಾಧ್ಯವೆಂಬಂತಾಗಿದೆ. ೧೧೩ ರಾಷ್ಟ್ರಗಳ ಏಕತೆಯ ಬೇಡಿಕೆಯೊಂದನ್ನು ಮನ್ನಿಸಲಾರದ ರಶ್ಯದ ಕಟು ನೀತಿಯಿಂದ ಅವೆಲ್ಲವೂ ನೊಂದು ಕೊಂಡಿವೆಯೆಂಬುದು ಸಹಜ. ಯುದ್ಧದ ಭೀತಿಯನ್ನು ಬಿಟ್ಟುಕೊಟ್ಟು ಶಾಂತಿಯ ಸ್ಥಾಪನೆಗೆ ಸಹಾಯಕವಾಗುವಂತಹ ಕಾರ್ಯಕಲಾಪಗಳಲ್ಲಿ ತೊಡಗುವ ಅಪೇಕ್ಷೆ ಅನೇಕರಿಗಿರುವಾಗ ರಶ್ಯವು ಅನುಸರಿಸಿದ ನೀತಿಯನ್ನು ಯಾರೊಬ್ಬನೂ ಮೆಚ್ಚಲಾರ. ರಶ್ಯವೀಗ ಅತ್ಯದ್ಭುತ ಶಕ್ತಿಯ ಅಣು ಬಾಂಬನ್ನು ವಿಸ್ಫೋಟಿಸಿ ವಾತಾವರಣವನ್ನು ಕೆಡಿಸಿದ್ದು ಮಾತ್ರವಲ್ಲ, ಜಾಗತಿಕ ವಾತಾವರಣವನ್ನೂ ಕೆಡಿಸಿದ ವಿಶ್ವಸಂಸ್ಥೆಗೆ ಅಪಮಾನ ಮಾಡಿದೆ; ಇದಕ್ಕಿಂತ ದೊಡ್ಡ ದುರದೃಷ್ಟ ಮತ್ತಾವುದಿದೆ? ಅಮೆರಿಕೆಯು ಕೂಡಾ ಭೂಗರ್ಭದಡಿಯಲ್ಲಿ ಬಾಂಬು ಸ್ಫೋಟನ ಮಾಡಿದ ವರದಿ ಬಂದಿದೆ. ಪೂರ್ವ ಪಶ್ಚಿಮ ನಾಯಕ ರಾಷ್ಟ್ರಗಳ ಅಂತರ್ಯವೇನೆಂಬುದು ಸರಿಯಾಗಿ ಅರ್ಥಮಾಡಕೊಳ್ಳುವ ಸಮರ್ಥರಾರು?

ಕೆನ್ನೆಡಿ—ನೆಹರು ಭೆಟ್ಟಿ

ಭಾರತದ ಪ್ರಧಾನಿ ನೆಹರು ಅಮೆರಿಕೆಯನ್ನು ಸಂದರ್ಶಿಸುವ ಕಾರ್ಯಕ್ರಮವಿಟ್ಟುಕೊಂಡು ನವಂಬರ ೫ರಂದು ವಾಶಿಂಗ್‌ಟನ್ನಿಗೆ ಹೋಗುವರು. ತಾ. ೧೧ರ ತನಕ ಅವರು ಅಲ್ಲಿ ಉಳಿದು ಮುಂದೆ ಮೆಕ್ಸಿಕೋವಿಗೆ ತೆರಳುವರು. ವಾಶಿಂಗ್‌ಟನ್ನಿನಲ್ಲಿ ಅವರು ಅಧ್ಯಕ್ಷ ಕೆನ್ನೆಡಿಯವರೊಡನೆ ಭೆಟ್ಟಿಯಾಗಿ ಜಾಗತಿಕ ರಾಜಕಾರಣದ ಬಗ್ಗೆ ಮಾತಾಡಿಕೊಳ್ಳುವರೆಂದು ತಿಳಿದು ಬಂದಿದೆ. ಮಾತ್ರವಲ್ಲ, ಇತ್ತೀಚೆಗೆ ಸಂಯುಕ್ತ ರಾಷ್ಟ್ರ ಸಂಘದಲ್ಲಿ ಭಾರತದ ಪ್ರತಿನಿಧಿಯಾಗಿ ಭಾಗ ವಹಿಸಿದ ಶ್ರೀ ಕೃಷ್ಣಮೆನನ್ನರು ಮಾಡಿದ ಭಾಷಣದಿಂದಾಗಿ ಭಾರತವು ಕಮ್ಯುನಿಸ್ಟ್ ಪರವಾಗಿದೆಯೆಂಬ ದುರಭಿಪ್ರಾಯ ಅಲ್ಲಿ ಮೂಡಿದಂತಿದ್ದು ಈ ಸಂಬಂಧದಲ್ಲಿ ನೆಹರು ಭಾರತದ ದೃಢವಾದ ಧೋರಣೆಯನ್ನು ತಿಳಿಯಪಡಿಸುವರೆಂದು ನಂಬಬಹುದು.

ಜಗತ್ಪರ್ಯಟನ

ತಾರಾಸಿಂಗ

ಪಂಜಾಬಿ ಸುಭಾದ ಬೇಡಿಕೆಯನ್ನು ಮುಂದಿಟ್ಟು ೪೭ ದಿನಗಳ ಆಮರಣ ಉಪವಾಸ ಮಾಡಿ ಮುಗಿಸಿದ ಮಾಸ್ಟರ್ ತಾರಾಸಿಂಗರು ಪ್ರಧಾನಿ ನೆಹರುರವರನ್ನು ಭೆಟ್ಟಿಯಾಯಿದುದು ಸಾಮಾನ್ಯವಿಷಯವಲ್ಲ. ಸಿಕ್ಖರ ಮೇಲೆ ಅನ್ಯಾಯವಾಗಿದೆಯೆಂಬ ಆಪಾದನೆಯನ್ನು ವಿಚಾರಿಸಲು ಉಚ್ಚಾಧಿಕಾರವಿರುವ ಆಯೋಗವೊಂದನ್ನು ನೇಮಿಸಲು ಸರಕಾರ ಸಮ್ಮತಿಸಿದ್ದರೂ, ಆ ದಿನ್ನೂ ಕಾರ್ಯಗತವಾಗಲಿಲ್ಲ. ಸಿಹಿಯೂ ಅಲ್ಲದ ಕಹಿಯೂ ಅಲ್ಲದ ವಾತಾವರಣದಲ್ಲಿ ನಡೆದ ನೆಹರೂ—ಸಿಂಗರ ಭೇಟ್ಟಿಯು ಸರಿಣಾಮವಾಗಿ ಇಂದು ನಾಳೆಯಲ್ಲೇ ಆಯೋಗದ ರಚನೆಯಾಗಬಹುದು. ಪಂಜಾಬಿ ಸುಭಾವನ್ನೂ ಪಡೆಯದೆ ಮೃತ್ಯುವನ್ನೂ ಅಪ್ಪದೆ ಉಳಿದ ತಾರಾಸಿಂಗರಿಗೆ ಸದ್ಯ ಇದೊಂದೇ ಸಾಂತ್ವನ.

ಬರ್ಟ್ರಾಂಡ್ ರಸ್ಸೆಲ್

ಅಣ್ವಸ್ತ್ರಗಳನ್ನು ಮೊದಲಿನಿಂದಲೂ ಪ್ರತಿಭಟಿಸಿ, ಅದಕ್ಕಾಗಿಯೇ ಇತ್ತೀಚೆಗೆ ಜೇಲುವಾಸವನ್ನುಂಡ ಬ್ರಿಟಿಷ್ ದಾರ್ಶನಿಕ ಬರ್ಟ್ರಾಂಡ್ ರಸ್ಸೆಲ್ಲರು ಅಣುಯುದ್ಧವು ಅತಿ ನಿಕಟವಾಗುತ್ತಿದೆಯೆನ್ನುತ್ತಾರೆ. ರಶ್ಯವು ಈಗಾಗಲೇ ಪ್ರಳಯಕಾರಿ ಅಸ್ತ್ರ ಸ್ಫೋಟನ ಮಾಡಲು ತಹತಹಿಸುತ್ತಿದೆ; ಅಮೆರಿಕೆಯಲ್ಲಿಯೂ ಇಂತಹ ಅಣ್ವಸ್ತ್ರ ಸಮರಕ್ಕೆ ವಾತಾವರಣವು ಅನುಕೂಲವಾಗಿ ಪರಿವರ್ತನೆಗೊಳ್ಳುತ್ತ ನಡೆದಿದೆಯೆಂದು ಹೇಳಿ, ಇನ್ನು ಒಂದು ವರ್ಷ ನಾವು ಜೀವಂತವುಳಿದರೆ, ನಮ್ಮ ಪುಣ್ಯವೆನ್ನುತ್ತಾರೆ ಇವರು. ಭಾರತದಲ್ಲಿ ಅಷ್ಟ ಗ್ರಹಯೋಗದ ಅನಾಹುತಗಳ ಬಗ್ಗೆ ಲೆಕ್ಕ ಹಾಕುತ್ತಿರುವ ಗಣಿತಜ್ಞರು ಶ್ರೀ ರಸ್ಸೆಲ್ಲರ ಈ ಉದ್ಗಾರವನ್ನೂ ಅದರ ಸತ್ಯಾಸತ್ಯತೆಯನ್ನೂ ವಿವೇಚಿಸ ಬೇಕು.

ರಾಜೇಂದ್ರ ಪ್ರಸಾದ

ಅನಾರೋಗ್ಯದ ನಿಮಿತ್ತ ಅಧಿಕಾರವನ್ನು ಉಪರಾಷ್ಟ್ರಪತಿ ಡಾ। ರಾಧಾಕೃಷ್ಣನ್ನರ ಕೈಗಳಿಗೊಪ್ಪಿಸಿದ ರಾಷ್ಟ್ರಪತಿ ಪ್ರಸಾದರು ಕ್ರಮವಾಗಿ ಗುಣಮುಖರಾಗುತಿದ್ದಾರೆ. ಮುಂದಿನ ಸಾರ್ವತ್ರಿಕ ಚುನಾವಣಾನಂತರ ರಾಜಕಾರಣದಿಂದ ನಿವೃತ್ತರಾಗಲಿರುವ ಪ್ರಸಾದರು ತಮ್ಮ ಕಾಲಾವಧಿಯಲ್ಲಿ ಕೊನೆಯದಾಗಿ ನಡೆದ ರಾಜ್ಯಪಾಲರ ಸಮ್ಮೇಲನದಲ್ಲಿ ಅಗಮಿಸಿ ಅಲ್ಲಿ ಕೆಲಕಾಲ ಉಪಸ್ಥಿತರಿದ್ದರು. ಅನಾರೋಗ್ಯವನ್ನು ಸಹಿಸಿಕೊಂಡು ಅವರಿಗೆ ನಾಲ್ಕು ಮಾತುಗಳನ್ನು ಹೇಳಿದರು. ಆಡಳಿತ—ಪ್ರೇಮಗಳೆರಡರಲ್ಲೂ ಡಾ। ಪ್ರಸಾದರನು ಎತ್ತಿದ ಕೈ. ಹಾಗೆಂದೇ ಅವರು ಭಾರತೀಯರೆಲ್ಲರ ಆದರಾಭಿಮಾನಗಳಿಗೆ ಪಾತ್ರರಾಗಿದ್ದಾರೆ. ರಾಜ್ಯಪಾಲರುಗಳು ಪ್ರತ್ಯೇಕವಾಗಿ ಅವರನ್ನು ಕಂಡು, ಪ್ರೇಮದ ಪ್ರತೀಕವೆಂದು ತಮ್ಮ ಅಂಕಿತವಿರುವ ಬೆಳ್ಳಿಯ ಬಟ್ಟಲನ್ನು ಒಪ್ಪಿಸಿದರು. ರಾಜಪಾಲ—ರಾಷ್ಟ್ರಪತಿಗಳ ನಡುವೆ ಸುಮಧುರ ಸಂಬಂಧವಿರಿಸಿಕೊಂಡವರಲ್ಲಿ ಡಾ. ಪ್ರಸಾದರು ಅಗ್ರಗಣ್ಯರು.

ನಿಕೀಟಾ ಕ್ರುಶ್ಚೇವ

ಕ್ರುಶ್ಚೇವರ ನಾಯಕತ್ವದಲ್ಲಿ ಸೋವಿಯತ್ತು ಹೊಸ ಗತ್ತುಗಾರಿಕೆಯನ್ನು ಪ್ರದರ್ಶಿಸುತ್ತಿದೆ. ಕೆಲವು ವರ್ಷಗಳ ಹಿಂದೆ ಸ್ಟೆಲಿನ್ನರನ್ನೂ ಅವರ ಅನುಯಾಯಿಗಳನ್ನೂ ನಿಂದಿಸದೆ ಬಡೆಯುತಿದ್ದ ಕ್ರುಶ್ಚೇವರೀಗ ಹೊಸಂಗಾಗವೊಂದನ್ನು ತೆಗೆದಿದ್ದಾರೆ. ಜೀವಂತವಿದ್ದಾಗಿನ ಹಗೆಯನ್ನು ಆತನ ಹೆಣದ ಮೇಲೆ ತೀರಿಸಿಕೊಳ್ಳುವ ಹವ್ಯಾಸ ವಿಚಿತ್ರವಾಗಿ ಕಾಣುತ್ತದೆ. ೩೦ ವರ್ಷದ ತನ್ನ ಆಳಿಕೆಯಲ್ಲಿ ಜೀವಾಂತ ಶಿಕ್ಷೆ ಮತ್ತು ಕೊಲೆಗಳಿಗೆ ಸ್ಟಾಲಿನ್ನರೇ ಕಾರಣವೆಂದು ಉದ್ಗರಿಸುವ ಇವರು ಇದಕ್ಕೆ ರವದ ಪೆಟ್ಟಿಗೆಯನ್ನು ಲೆನಿನ್ನರ ಪೆಟ್ಟಿಗೆಯ ಸ್ಪರ್ಶಮಾತ್ರವಾಗದಂತೆ ಬೇರೆಡೆ ಒಯ್ಯುವುದು ಅಪೇಕ್ಷಣೀಯವೆಂಬ ಅಭಿಪ್ರಾಯಕ್ಕೆ ಬಂದಿದ್ದಾರೆ.

ಅಸಫ್ ಅಲಿ

ಗೋವೆಯನ್ನು ಅಂತಿರುವವರು ಶ್ರೀಮತಿ ಅರುಣ ಅಸಫ್ ಅಲಿಯವರನ್ನೂ ತಿಳಿದಿದ್ದಾರೆ. ಗೋವೆ—ದಮನದೀವಿಗಳ ರಾಷ್ಟ್ರೀಯಾಂದೋಲನ ಸಮಿತಿಯ ಅಧ್ಯಕ್ಷೆಯಿವರು. ಗೋವೆಯಿಂದ ಪೋರ್ಚುಗೀಸರನ್ನು ಹೊಡೆದೋಡಿಸಿ, ಉದನ್ನು ಭಾರತದೊಡನೆ ಸೇರಿಸ ಬೇಕೆಂಬ ಇರಾದೆಯಿಂದ ಅಲ್ಲಿರುವ ಸರಕಾರದ ವಿರುದ್ಧ ಭಾರತದ ಗಡಿಗೆ ಹೊಂದಿಕೊಂಡಿರುವ ಗೋವೆಯ ಒಂದಲ್ಪ ಭಾಗವನ್ನು ಆಕ್ರಮಿಸಿ ಅಲ್ಲಿ ಪ್ರತಿ ಸರಕಾರವನ್ನು ಸ್ಥಾಪಿಸಲು ಇವರು ಉತ್ಸಾಹ ಪ್ರದರ್ಶಿಸುತ್ತಾರೆ. ಗೋವಾಂತಕರ ವಿಮೋಚನೆಯಲ್ಲಿ ಉತ್ಸಾಹಕರಾದ ಎಲ್ಲ ಗೋವಾ ರಾಷ್ಟ್ರೀಯರು ತಮಗೆ ಸಹಕಾರ ನೀಡಬೇಕೆಂದು ಕೇಳಿದ್ದಾರೆ. ಗೋವಾಂತಕರಿಗೆ ಘಟನಾತ್ಮಕವಾಗಿ ಚಳುವಳಿ ಹೂಡುವ ಅಧಿಕಾರವನ್ನು ಕಿತ್ತುಕೊಳ್ಳಲಾಗಿದೆಯೆಂದೂ ಅವರ ಸ್ಥಿತಿಗತಿಗಳು ಗೋವೆಯೊಳಗೆ ತೀರ ಶೋಚನೀಯವಾಗಿದೆಯೆಂದೂ ಹೇಳಿ ಅವರು ಇದಕ್ಕೆ ನ್ಯಾಟೋರಾಷ್ಟ್ರಗಳ ಸಹಾಯವೇ ಕಾರಣವೆಂದು ಪುನರುಚ್ಚರಿಸಿದ್ದಾರೆ.

ಭಾರತದ ಆರ್ಥಿಕಾಭಿವೃದ್ಧಿಯಲ್ಲಿ ತೀವ್ರ ಆಸಕ್ತಿ ತಳೆದಿರುವ ಅಮೆರಿಕೆಯ ಬಗ್ಗೆ ಯಾವ ಪೂರ್ವ ಪಕ್ಷವೂ ಇಲ್ಲದೆ ಸಮರಸದ ಬಾಳುವೆ ಬಾಳಬೇಕೆಂದೇ ನಮ್ಮ ಇಚ್ಛೆಯಲ್ಲದೆ ಬೇರೆಯಲ್ಲವೆಂದಿವರು ತಿಳಿಸಿ ಹೇಳಬಹುದು. ಹಾಗೆಯೇ ಯಾವುದೇ ನಿಯಂತ್ರಣಕ್ಕೊಳಪಡದ ಅಣ್ವಸ್ತ್ರ ಪ್ರತಿಬಂಧವು ಅಮೆರಿಕೆಗೆ ಮಾತ್ರವಲ್ಲ, ತಟಸ್ಥ ರಾಷ್ಟ್ರಗಳಿಗೂ ಗಂಡಾಂತರಕಾರಿಯೆಂಬುದನ್ನು ಕೆನ್ನೆಡಿ ಸ್ಪಷ್ಟವಾಗಿ ತಿಳಿಸುವ ನಿರೀಕ್ಷೆಯಿದೆ. ೧೯೫೫ರ ನಂತರ ಮನಃ ಮೊತ್ತಮೊದಲಿಗೆ ಭೆಟ್ಟಿಯಾಗುವ ಈ ಜಾಗತಿಕ ನಾಯಕರ ಸಂದರ್ಶನದಿಂದ ಉಭಯ ರಾಷ್ಟ್ರಗಳ ನಡುವಿರಬಹುದಾದ ಭಿನ್ನಾಭಿಪ್ರಾಯಗಳು ತೊಲಗಿ ಸುಮಧುರ ಸಂಬಂಧ ಮುಂದುವರಿಯುವುದೆಂದು ನಂಬಬಹುದು.

ಮುಲ್ಕಿ—ಮಿತ್ರಪಟ್ಟಣ ಮೊಗವೀರ ಧರ್ಮಾರ್ಥ ರಾತ್ರಿ ಶಾಲೆಯಲ್ಲಿ ತಾ. 16ರಂದು ದಸರಾ ಮಹೋತ್ಸವವು ಮುಖ್ಯೋಪಾಧ್ಯಾಯರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ಜರಗಿತು

ಅಲ್ಲಲ್ಲಿಯ ಸುದ್ದಿಸಾರ

ವಿದೇಶ ಪ್ರಯಾಣ—ಕಾಮರ್ಸಿನಲ್ಲಿ ಎಂ. ಎಂ. ಮುತ್ತಯ್ಯ ಚೆಟ್ಟಿಯಾರರ ಪದವಿಯನ್ನು ಪಡೆದು ಬಿ. ಕೋಮ್ ಪದವಿಯನ್ನೂ ಮತ್ತು ನಾಸಿಕದಲ್ಲಿ ಸ್ಟೇಟ್ ಬೇಂಕ್ ಆಫ್ ಇಂಡಿಯಾದ ಪಬಂಟರಾದ ಉಡುಪಿಯ ಶ್ರೀಮತಿ ಮತ್ತು ಶ್ರೀಯುತ ರೋಕಿ ಫೆರ್ನಾಂಡಿಸರ ಪುತ್ರ ಶ್ರೀ ಎಲ್. ಎ. ಡಿ. ಫೆರ್ನಾಂಡಿಸರು ಮೆಕೆನೈಜೀಶನ್ ಆಫ್ ಫೊರಿನ್ ಎಕ್ಸ್‌ಚೇಂಜ್‌ನಲ್ಲಿ ಹೆಚ್ಚಿನ ತರಬೇತಿಗಾಗಿ ಲಂಡನ್ ಮತ್ತು ರೋಮ್‌ಗೆ ಪ್ರತಿನಿಧಿಯಾಗಿ ಪ್ರಯಾಣಿಸಿ ತರಳಿದ್ದಾರೆ. ಅವರ ಭಾವೀ ಜೀವನ ಸರ್ವಜಯ ಪ್ರದವಾಗಲೆಂದು ಹಾರೈಸುತ್ತೇವೆ.

ಕೆಲಸದ ಭದ್ರತೆ ಇಲ್ಲದಿದ್ದ ಅಧ್ಯಾಪಕರಿಗೆ ರಕ್ಷಣೆಯ ಹುಕುಂ.

ಕುರುಕಾಲು— 1920ನೇ ಮದ್ರಾಸು ಪ್ರಾಥಮಿಕ ವಿದ್ಯಾಮಸೂದೆಯ ನಿಬಂಧನೆಗಳಲ್ಲಿ ಮೈಸೂರು ಸರಕಾರವು ಕಳೆದ ತಾ. 19—5—61ರಲ್ಲು ಕೆಲವು ತಿದ್ದುಪಡಿಗಳನ್ನು ಮಾಡಿದ ಹುಕುಮನ್ನು ದೆಸೆಯಿಂದಾಗಿ ದ. ಕ. ಜಿಲ್ಲಾ ಖಾಸಗಿ ಶಾಲೆಗಳಲ್ಲಿ ತಾ. 22—5—60ರ ನಂತ್ರ ಕೆಲಸಕ್ಕೆ ಸೇರಿದ 316 ಮಂದಿ ಅಧ್ಯಾಪಕರು ತಮ್ಮ ಕೆಲಸವನ್ನು ಕಳಕೊಂಡು ನಿರುದ್ಯೋಗಿಯೂಗಲಿಕ್ಕಿದ್ದರು. ಮಾತ್ರವಲ್ಲದೆ ಸರಕಾರದ ಸದ್ರಿ ತಿದ್ದುಪಡಿ ಹುಕುಮಿನ ದೆಸೆಯಿಂದ ಖಾಸಗಿ ಶಾಲೆಗಳ ಆಸ್ತಿತ್ವಕ್ಕೆನೇ ಗಂಡಾಂತರ ಒದಗಿದ ಕಾರಣ ದ. ಕ. ಜಿಲ್ಲಾ ಮೆನೇಜರರ ಸಂಘವು ಕಳೆದ ಮೇ ತಿಂಗಳ ಲಾಗಾಯ್ತು ಆಗಾಗ್ಗೆ ಸಭೆಗಳನ್ನು ಜರಗಿಸಿ ಅನಿರೀಕ್ಷಿತವಾಗಿ ಮಾಡಿದ ಸದ್ರಿ ತಿದ್ದುಪಡಿಗಳ ಬಗ್ಗೆ ಬಲವಾದ ಅಕ್ಷೇಪಗಳನ್ನು ಸರಕಾರಕ್ಕೆ ಬರೆಕೊಂಡದ್ದಲ್ಲದೆ ಈ ಕುರಿತು ಎರಡು ಸಲ ಬೆಂಗಳೂರಿಗೆ ನಿಯೋಗ ಹೋಗಿ ಮಂತ್ರಿಗಳನ್ನೂ, ಇಲಾಖಾಧಿಕಾರಿಗಳನ್ನೂ ಭೇಟಿಯಾಗಿ ಮನವಿಗಳನ್ನು ಮಾಡಿಕೊಂಡ ಪರಿಣಾಮವಾಗಿ ಪ್ರಕೃತ ಸರಕಾರದಿಂದ ಹೊರಟ ತಾ. 21—10—61 ನೇ ನಂಬ. E. D 225/61ನೇ ಹುಕುಮಿನ ಮೇರೆಗೆ ,,ಹೊಸ ತಿದ್ದುಪಡಿಯ ಮೊದಲು ಇದ್ದ ರೂಲು 4ರಲ್ಲಿ ಸೂಚಿಸಿದಂತೆ ಪಳೆಯ ನಂ.ಸರಿ ಹಾಜರಿಯನ್ನು ಅನುಸರಿಸಿ ತಾ. 22—5—61ರ ವರೆಗೆ ಕೆಲಸದಲ್ಲಿದ್ದ ಅಧ್ಯಾಪಕರ ಮುಂದಿನ ಸರ್ವಿಸಿಗೆ ಬಾಧಕವಾಗತಕ್ಕದ್ದಲ್ಲ' ಎಂದು ಬದಲಾವಣೆಯನ್ನು ಮಾಡಿರುತ್ತಾರೆ. ಆದರೆ ಮೈಂಟೆನೆನ್ಸ್ ಗ್ರಾಂಟಿನ ಇತರ ವಿಚಾರಗಳಲ್ಲಿ ಯಾವ ತರದ ಸ್ಪಷ್ಟವಾದ ಹುಕುಂ ಈ ವರೆಗೆ ದೊರೆಯದಿರುವ ಕಾರಣ ಆ ಕುರಿತು ಸದ್ಯದಲ್ಲೇ ಜಿಲ್ಲಾ ಸಂಘದ ಆಡಳಿತ ಮಂಡಳಿಯ ಮೀಟಿಂಗ್ ಜರಗಿ ಆಲೋಚಿಸಲಿಕ್ಕಿದೆ. ಮುಖ್ಯವಾಗಿ ನಿಯೋಗದವರ ಮನವಿಗಳ ಕುರಿತು ಆರೋಗ್ಯ ಮಂತ್ರಿ ಡಾ| ಕೆ. ಕೆ. ಹೆಗ್ಗಡೆಯವರು ತೋರಿದ ಔದಾರ್ಯ, ಮಾಡಿದ ಪ್ರಯತ್ನಗಳು ಚಿರಸ್ಮರಣೀಯವಾಗಿವೆ ಎಂಬುದಾಗಿ ದ. ಕ. ಜಿಲ್ಲಾ ಖಾಸಗಿ ಪ್ರಾಥಮಿಕ ಶಾಲಾ ಮೆನೇಜರರ ಸಂಘದ ಕಾರ್ಯದರ್ಶಿ ಕುರುಕಾಲು ಗಣಪಯ್ಯ ಶೆಟ್ಟಿ ತಿಳಿಸುತ್ತಾರೆ.

ಬೆಳಗಾವಿ ಜಿಲ್ಲಾ ನಿರುದ್ಯೋಗೀ ಶಿಕ್ಷಕರ ಸಮ್ಮೇಲನ—ನೇಗಿನಹಾಳ—ದಿನಾಂಕ 19-10-61ರಂದು ಶ್ರೀ ಕಾಜಲಗಿ ವಕೀಲರು ಎಸ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು. ಶ್ರೀ ಪಾಟೀಲ ವಕೀಲರು ಸ್ವಾಗತವನ್ನು ಕೋರಿದ ಬಳಿಕ ಸಂಘದ ವರದಿ, ಸಂದೇಶಗಳು, ಸದಸ್ಯರ ಯೂದಿಗಳು ಮುಂತಾಗಿ ಓದಿ ಹೇಳಲಾಯಿತು. ಗಣ್ಯವ್ಯಕ್ತಿಗಳು, ಜಿಲ್ಲೆಯ 5 ತಾಲೂಕುಗಳಿಂದ ಪ್ರತಿನಿಧಿಗಳೂ, ಶಿಕ್ಷಕ ಮಂಡಳಿಗಳ ಹಿರಿಯರೂ, ಸಾವಿರಾರು ಬಂಧು ಭಗಿನಿಯರೂ ಆಗಮಿಸಿದ್ದರು. ಇದೇ ಬರುವ ನವಂಬರ ಆಸ್ಟ್ರೀಯೊಳಗೆ ಎಲ್ಲಾ ನಿರುದ್ಯೋಗೀ ಪ್ರಾಥಮಿಕ ಶಿಕ್ಷಕ—ಶಿಕ್ಷಕಿಯರಿಗೆ ಅವರ ಇಂಟರ್ವ್ಯೂ, ವಯಸ್ಸು, ಗುಣಗಳನ್ನು ನೋಡದೆ ನೌಕರಿ ಕೊಡಿಸಬೇಕು ಇಲ್ಲವಾದರೆ ಶಾಂತಿಯುತ ಸತ್ಯಾಗ್ರಹ, ರಿಟರ್ಆರ್ಡರ ಇತ್ಯಾದಿ ಮಾರ್ಗಗಳಿಂದ ನಾಲ್ಕೂ ಜಿಲ್ಲೆಗಳಲ್ಲಿ ಕೈಸು ಬದ್ಧವಾದ ಕೃಷಿಯನ್ನು ಕೈಕೊಳ್ಳಲಾಗುವದು ಎಂದು ಮುಖ್ಯ ಠರಾವು ಆಯಿತು ಅಧ್ಯಕ್ಷ ಶ್ರೀ ಕೌಜಲಗಿಯವರೂ, ಶ್ರೀ ಮೆಣಶಿನಕಾಯಿಯವರೂ ಶ್ರೀ ಬೆಳವಡಿ ಮೊದಲಾದ ಮುಂದಾಳುಗಳೂ ಶಿಕ್ಷಕರ ಬೇಡಿಕೆಗಳನ್ನು ಮನ್ನಿಸಿ ತಾವು ಮನಃಪೂರ್ವಕ ಪ್ರಯತ್ನಿಸುವದಾಗಿ ಭರವಸೆಯಿತ್ತರು. ಇನ್ನೂ ಕೆಲವು ಠರಾವು, ಭಾಷಣಗಳಾಗಿ ಸಭೆಯು ಮುಕ್ತಾಯಗೊಂಡಿತು.

ಆರೋಗ್ಯ ಕೇಂದ್ರದ ಪ್ರಾರಂಭೋತ್ಸವ—ಆಚಿಕಾನ ಪ್ರಾಥಮಿಕ ಆರೋಗ್ಯ ಕೇಂದ್ರದ ಆರಂಭೋತ್ಸವವು ಸ್ಥಳೀಯ ಗ್ರಾಮ ಪಾಂಚಾಯಿತಿಯಲ್ಲಿ ಕಾರ್ಕಳ ತಾ. ಬೋರ್ಡ್ ಅಧ್ಯಕ್ಷ ಶ್ರೀ ಎಸ್. ಮೋಹನದಾಸ ಅಡ್ಯಂತಾಯರ ಅಧ್ಯಕ್ಷತೆಯಲ್ಲಿ ಕಳೆದ ತಾ. 26 ರಂದು ಜರಗಿತು. ಡಾ| ಯು. ಕೃಷ್ಣನವರು ಸ್ವಾಗತ ಭಾಷಣಗೂಡಿದರು ಶ್ರೀ ಕೆ. ಗೋಪಾಲ ಶೆಟ್ಟರು ವರದಿಯನ್ನೂ, ಸಂದೇಶಗಳನ್ನೂ ಹಿಡಿದರು. ತಾ. ಬೋರ್ಡು ಸದಸ್ಯ ಶ್ರೀ ಬಿ ವೆಂಕಟೇಶ ಭಟ್ಟರು ಉದ್ಘಾಟಿಸುತ್ತಾ ಚಿಕಿತ್ಸೆಗಿಂತ ನಿರೋಧವೇ ಉತ್ತಮವೆಂದಿದ್ದು, ಆರೋಗ್ಯದ ಸಾಲಿಳ್ಳಿಗಳನ್ನು ಸಕಲರೂ ಪಡೆಯುವಂತಾಗಿತೆಂದರು ಜಿಲ್ಲಾ ಆರೋಗ್ಯಾಧಿಕಾರಿ ಶ್ರೀ ಎಚ್ ಎಸ್ ನಾಯ್ಕರು, ಸರಕಾರದ ನೋಟಿಸ, ಕಾರ್ಯಕ್ರಮ, ಸಾರ್ವಜನಿಕರ ಕರ್ತವ್ಯಗಳನ್ನು ವಿವರಿಸಿದರು. ಸಭಿಕರಲ್ಲಿ ಶ್ರೀಗಳಾದ ಎಂ. ಡಿ ಅಧಿಕಾರಿ, ಹೆಬ್ರಿ ಭುಜಂಗ ಬಲ್ಲಾಳ, ಕೆ. ದೇವದಾಸ ಕಾಮತರು ಮಾತನಾಡಿ ಕೇಂದ್ರವನ್ನು ಹರಸಿದರು. ಸಭಾಧ್ಯಕ್ಷರು ಭಾಷಣ ಧನ್ಯವಾದ ಸಮರ್ಪಣೆಯೊಂದಿಗೆ ಸಮರೋಚಿತ ಸಮಾಪ್ತಿಯಾಯಿತು.

ಫಾರ್ಮಸಿ ಫೋರಮ್— ತಾ. 12—10—61ರಂದು ಜಿಲ್ಲಾ ಕೃಷಿ ಅಧಿಕಾರಿಗಳ ಆಫೀಸಿನಲ್ಲಿ ಫೋರಮ್ ಅಧ್ಯಕ್ಷ ಶ್ರೀ ಪಿ.ಎಸ್. ತಿಮ್ಮಪ್ಪ ಶೆಟ್ಟಿ ನೇತೃತ್ವದಲ್ಲಿ ಸಭೆಯೊಂದು ಜರಗಿತು. ಜಿಲ್ಲಾ ಕೃಷಿ ಅಧಿಕಾರಿಗಳು ಈ ತಿಂಗಳ ಮತ್ತು ಬರುವ ತಿಂಗಳ ಒಳಗೆ ತಾಲೂಕು ಮತ್ತು ಜಿಲ್ಲಾ ಫೋರಮ್‌ಗಳ ಸಮಿತಿಗಳನ್ನು ಜರಗಿಸುವ ವಿಷಯ ಹಾಜರಿತ್ತ ಕೃಷಿ ವಿಸ್ತರಣಾಧಿಕಾರಿಗಳಿಗೆ ಸಲಹೆಯನ್ನಿತ್ತರು. ತರುವಾಯ ಅಧ್ಯಕ್ಷರು ಬೆಂಗಳೂರು ಫಾರ್ಮಸಿ ಫೋರಮ್ ಕಾರ್ಯಕಾರಿ ಸಮಿತಿಯ ಠರಾವುಗಳ ಮೇಲೆ ಮಾತನಾಡುತ್ತಾ ಜಿಲ್ಲೆಗೆ ಒಂದು ಕೃಷಿಶಾಲೆ ಏರ್ಪಡಿಸುವ ಸರಕಾರದಿಂದ 200 ಎಕ್ರೆ ಸ್ಥಳ ಕೃಷಿ ಬಗ್ಗೆ ಫೋರಮ್ ಪಡೆಯುವ, ಜಿಲ್ಲಾ ಫೋರಮ್ ಕಟ್ಟಡಕ್ಕೆ ಸ್ಥಳ ಪಡೆಯುವ ವಿಷಯ ಮತ್ತು ಪ್ರತೀ ತಾಲೂಕಿಗೆ 350 ಸಕ್ರಿಯ ಸದಸ್ಯರು, 300 ಆರ್ಡಿನರಿ ಮೆಂಬರರನ್ನು ಈ ವರ್ಷದಲ್ಲಿ ನೇಮಿಸುವರೆ ಕೃಷಿವಿಸ್ತರಣಾಧಿಕಾರಿಗಳಿಗೆ ಸಲಹೆಯಿತ್ತರು. ಪ್ರತೀ ತಾಲೂಕಿನಲ್ಲಿ ಈ ತಿಂಗಳಿಂದ ಬರುವ ತಿಂಗಳ 15ರ ಒಳಗೆ ತಾಲೂಕು ಸಮಿತಿಗಳನ್ನು ನಡೆಸಬೇಕೆಂತಲೂ ಮತ್ತು ನವಂಬರ 19ನೇ ದಿನ ಮಂಗಳೂರು ಡಿಸ್ಟ್ರಿಕ್ಟ್ ಎನ್ರಿಕಲ್ಚರಲ್ ಆಫೀಸರವರ ಆಫೀಸಿನಲ್ಲಿ ಜಿಲ್ಲಾ ಕೃಷಿಕರ ಸಂಘತ್ತು ನಡೆಸಬೇಕೆಂತಲೂ ನಿರ್ಣಯವಾಯ್ತು.

ಸೀತಾನದಿ ಜಾನುವಾರು ಜಾತ್ರೆ

ಕಾರ್ಕಳ ತಾಲೂಕು ಸೋಮೇಶ್ವರದ ಬಳಿ ಅಂದರ ಭಾಟಿ ಬಂದರಿಂದ 3ಮೈಲು ಕೆಳಗೆ ಸೀತಾನದಿ ಎಂಬಲ್ಲಿ ತಾ. 18-12-1961 ರಿಂದ 4—1—1962ರ ವರೆಗೆ ಜಾನುವಾರು ಜಾತ್ರೆ ಈ ಹಿಂದಿನ ವರ್ಷಗಳಂತೆ ಅತಿ ವಿಜೃಂಭಣೆಯಿಂದ ಜರಗುವುದು

ಉತ್ತಮ ತರದ ಜಾನುವಾರುಗಳ ಮಾಲಿಕರನ್ನು ಪ್ರೋತ್ಸಹಿಸುವುದಕ್ಕಾಗಿ, ಉತ್ತಮವಾದ ಪುಗಳೆಂದು ಪರಿಗಣಿಸಲ್ಪಡುವ ಜಾನುವಾರುಗಳ ದೂಡಲಿಕರಿಗೆ ಬಹುಮಾನಗಳನ್ನು ಕೊಡಲಾಗುವುದು

ಈ ಜಾತ್ರೆಗೆ ಉತ್ತರ ಕನ್ನಡ, ಮೈಸೂರಿನ ಮತ್ತಿತರ ಪ್ರದೇಶಗಳಿಂದ ಉತ್ತಮ ತರದ ಜಾನುವಾರುಗಳನ್ನು ಕಳುಹಿಸಿ, ಎಲ್ಲರೂ ಇದನ್ನು ಯಶಸ್ವಿಗೊಳಿಸಬೇಕಾಗಿ ಸರಕಾರದ ಪರವಾಗಿ ಅಪೇಕ್ಷಿಸುತ್ತೇನೆ ಎಂದು ಕುಂದಾಪುರದ ಅಸಿಸ್ಟಾಂಟು ಕಮಿಶನರ್, ಶ್ರೀ ಕೆ. ಸಿ. ಮೋನಪ್ಪ, ಅವರು ತಿಳಿಸುತ್ತಾರೆ.

ಉತ್ತಮ ಕುಮ್ರಿ ಬೆಳೆ—ಕನಕ ಮಜಲು ರಿಜರ್ವ್ ಫಾರೆಸ್ಟ್‌ನಲ್ಲಿ 1961ನೇ ಸುಗುರ ಜಾತಿಯ ಮರ ಬೆಳೆಸುವ ಸೋಶ್ಯಲ್ ಫಾರೆಸ್ಟ್ ಸ್ಥಳದಲ್ಲಿ ಕುಮ್ರಿ ಬೆಳೆಸುವರೆ ಕೈತ ಬಾಂಧವರಿಗೆ ಬಿಟ್ಟುಕೊಟ್ಟ ಸುಮಾರು 160 ಎಕ್ರೆ ಸ್ಥಳದಲ್ಲಿ ಸಾಧಾರಣ ಮೂರು ಸಾವಿರ ಮುಡಿ ಭತ್ತ ಸಿಕ್ಕಬಹುದೆಂದೂ ಕನಿಷ್ಠದಲ್ಲಿ 3000ರಿಂದ 4500ರ ವರೆಗೆ ಭತ್ತ ಇರಬಹುದೆಂದೂ ಊಹಿಸಲಾಗಿದೆ.

ಬ್ರಹ್ಮಾವರ— ಸ್ಥಳೀಯ ಕರ್ನಾಟಕ ಸಂಘದಲ್ಲಿ ನಾಡಿನಬ್ಬನ ಪ್ರಿನ್ಸಿಪಾಲ್ ಶ್ರೀ ವಿ. ಎಂ. ಇನಾಂದಾರರ ಅಧ್ಯಕ್ಷತೆಯಲ್ಲಿ ವಿಜಯದಶಮಿಯಂದು ವಿಜೃಂಭಣೆಯಿಂದ ಜರಗಿತು. ಅದೇ ಸಮಯದಲ್ಲಿ ಸಂಘವು ಪ್ರಕಟಿಸಿದ ,,ನಮ್ಮ ಅಜಮರು" ಎಂಬ ಗ್ರಂಥವನ್ನು ಶ್ರೀ ತೆಕ್ಕಟ್ಟೆ ಗೋಪಾಲಕೃಷ್ಣ ಭಟ್ಟರು ಉದ್ಘಾಟಿಸಿದರು. ಕಾರ್ಕಳದ ಕಲಾವಿದ ಶ್ರೀ ಆರ್. ಗೋಪಾಲ ಬ್ಯಾನರುಗಳಿಗೆ ಉಡುಗೊರೆಯಿತ್ತು ಸನ್ಮಾನಿಸಲಾಯಿತು.

ಹೊಂಗಾರೆಕಟ್ಟೆ—ಸ್ಥಳೀಯ ಕರ್ನಾಟಕ ಸಂಘದ ವಾರ್ಷಿಕೋತ್ಸವ ಮತ್ತು ನಾಡ ಹಬ್ಬವು ಮಂಗಳೂರು ಮಾಜಿ ನಗರ ಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು ಸ್ವಾಗತ, ವರದಿ ವಾಚನ, ಬಹುಮಾನ ವಿತರಣೆಗಳಾದ ಬಳಿಕ, ಶ್ರೀ ವೆಂಕಟದಾಸ ಅಡಿಗರು ಚಿತ್ರ ಕಲಾವಿದರಾದ ಶ್ರೀ ಬಿ. ಪಿ. ಬ್ಯಾರಿಯವರ ಚಿತ್ರ ಪ್ರದರ್ಶನವನ್ನು ಉದ್ಘಾಟಿಸಿದರು ಶ್ರೀ ಬ್ಯಾರಿಯವರಿಗೆ ಉಡುಗೊರೆಯಿತ್ತು ಸನ್ಮಾನವೀಯಲಾಯಿತು. ಅಧ್ಯಕ್ಷರು ಸಂಘವು ಸರ್ವಾಂಗ ಸುಂದರವಾಗಿ ಪ್ರಕಟಿಸಿದ ,,ಚೇತನಾ"ವೆಂಬ ನೆನೆಹೊತ್ತಿಗೆಯನ್ನು ಉದ್ಘಾಟಿಸಿದರು. ಬಳಿಕ ಕಾವ್ಯವಾಚನ, ಅಧ್ಯಕ್ಷರ ಭಾಷಣ, ಸಂಗೀತ ಕಾರ್ಯಕ್ರಮಗಳು ನೆರವೇರಿದುವು.

ಬಸ್ರೂರು- ಭಾರತ ವಾಚನಾಲಯದಲ್ಲಿ ತಾ. 15ರಿಂದ 18ರ ವರೆಗೆ ಮಹಾನೀಯರೇಕರ ನೆರವಿನಿಂದ ಶಾರದಾ ಪೂಜೆಯು ವಿಜೃಂಭಣೆಯಿಂದ ನೆರವೇರಿತು.

ಬಸ್ರೂರಿನ ರಾಷ್ಟ್ರಭಾಷಾ ಪ್ರಚಾರಿಣಿ ಸಮಿತಿಯ ನೇತೃತ್ವದಲ್ಲಿ ಹಿಂದೀ ಪ್ರವೀಣ ಪ್ರತ್ರ ವಿತರಣೋತ್ಸವವು ತಾ. 19ರಂದು ಶ್ರೀ ಬಳ್ಳೂರು ಸುಬ್ರಾಯ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ಅಧ್ಯಕ್ಷ ಶ್ರೀ ಬಿ ಪರಮೇಶ್ವರ ಅಡಿಗರು ಸ್ವಾಗತಿಸಿದ ಬಳಿಕ ಶ್ರೀಗಳಾದ ಶುಂಠಿ ಶ್ರೀನಿವಾಸ ಪ್ರಭು, ಕೆ. ಎಲ್. ಎನ್. ಮಧ್ವಸ್ಥ, ರಮಾನಾಥ ನಾಯಕರು ಹಿಂದೀ ಭಾಷೆಯ ಪ್ರಚಾರದ ಆವಶ್ಯಕತೆಯನ್ನು ವಿವರಿಸಿದರು. ಅಧ್ಯಕ್ಷರ ಭಾಷಣ ನಂತರ ಕಾರ್ಯದರ್ಶಿ ಶ್ರೀ ಮಂಜುನಾಥ ಪಡಿಯಾರರು ವಂದನಾರ್ಪಣೆಗೈದ್ದರು.

ಸುರತ್ಕಲ್—ಅಗ್ನಿಸಕರಿ ಹಾ. ಎ. ಶಾಲಾ ವಾರ್ಷಿಕೋತ್ಸವ ಮತ್ತು ದೆಸರಾ ಸಮಾರಂಭಗಳು ಇದೇ ತಾ. 15ರಂದು ಫೀಲ್ಡ್ ಆಫೀಸರ್ ಶ್ರೀ ಟಿ ರಾಮಾಂಜನೇಯ ಅಧ್ಯಕ್ಷತೆಯಲ್ಲಿ ಜರಗಿತು ಮುಖ್ಯೋಪಾಧ್ಯಾಯರಿಂದ ವರದಿವಾಚನ, ಶ್ರೀ ಎಸ್. ರಾಮಮೂರ್ತಿಯವರಿಂದ ಶಾಲಾ ಆಧಾನಂದನ, ಸಭಾಧ್ಯಕ್ಷರಿಂದ ಪಾರಿತೋಷಕ ವಿತರಣೆ, ,,ಉದಯ" ಪತ್ರಿಕೆಯ ಉದ್ಘಾಟನೆ ಜರಗಿತು. ದಾ|ಮೊಂಡಾಂಜ ಬಾಗಲ್ ಕೋಟೆ. ಶ್ರೀ ಆಚ್ಯುತ ಆಚಾರ್ಯ ಇವರ ಭಾಷಣಗಳಾದುವು ಬಳಿಕ ವಿವಿಧ ವಿನೋದಾವಳಿಗಳು ನಡೆದುವು. ತಾ. 14ರಂದು ಬಳಿಕ ವಿದ್ಯಾರ್ಥಿ ದಿನಾಚರಣೆಯ ಅಂಗವಾಗಿ ನಾಟಕ ಪ್ರದರ್ಶನ ಜರಗಿತು.

ಮೊಗವೀರ ವೈದ್ಯಸ್ವಾಸಕ ಮಂಡಳಿ— ಮುಂಬಾಯಿಯ ಈ ಮಂಡಳಿಯ 58ನೇ ವಾರ್ಷಿಕೋತ್ಸವ ಮತ್ತು ಮೊಗವೀರ ಸೈಟ್ ಹೈಸ್ಕೂಲಿನ ಪಾರಿತೋಷಕ ವಿತರಣಾ ಸಮಾರಂಭಗಳು ಕಳೆದ ತಾ. 29ರಂದು ಸರ್. ಕಾವಸ್ಜಿ ಜಹಾಂಗೀರ್ ಸಾರ್ವಜನಿಕ ಸಭಾಸದನದಲ್ಲಿ. ದ. ಕ. ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಶ್ರೀ ಟಿ ಅನಂತ ಪೈಯವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು. ಮಂಡಳಿಯ ಅಧ್ಯಕ್ಷರು ಸ್ವಾಗತಿಸಿದ ಬಳಿಕ ಸಭಿಕರ ಭಾಷಣಗಳಾದುವು. ಅಧ್ಯಕ್ಷ ಶ್ರೀ ಪೈಗಳು ಮತ್ತು ವೈದ್ಯಸಾಯವು ದೇಶದ ಸಂಪತ್ತಾಗಿದೆ. ಅದು ಜಾತೀಯ ಸೊತ್ತಲ್ಲ. ಮೊಗವೀರರು ಸಂಘಟಿತರಾಗಿ ಮಾದರಿ ಸಮಾಜರಚನೆಗಾಗಿ ಮುಂದೆ ಬಂದಿರುವುದು ಸಂತೋಷಕರ, ರಾಷ್ಟ್ರದ ಬದುಕಾದ ಕೃಷ್ಯವೈದ್ಯಸಾಯದ ಮೇಲೆ ಗಮನ ಕೊಡಿಯೆಂದು ಸಮ್ಮೆಲ್ಲರ ಕರ್ತವ್ಯವಾಗಿದೆ. ಮುಂಬಾಯಿಯಲ್ಲಿ ಮೊಗವೀರರು ಸಾಮಾಜಿಕವಾಗಿಯೂ, ಶೈಕ್ಷಣಿಕವಾಗಿಯೂ ಕೆಲಸಮಾಡುತ್ತಿರುವುದು ಆದರ್ಶನೀಯವಾಗಿದೆ ಎಂದು ಮುಂತಾಗಿ ಹೇಳಿ ಮಂಡಳಿಗೆ ಉತ್ತಮ ಭವಿಷ್ಯವಿದೆ ಎಂದರು. ಕೊನೆಗೆ ವಿವಿಧ ವಿನೋದಾವಳಿಗಳಾದುವು.

ಸುಳ್ಯ— ಇಲ್ಲಿಗೆ ಸಮೀಪದ ಹಾದಿಕಲ್ಲು ಸರಕಾರೀ ಕಾಫಿಸಲ್ಲಿ ಇತ್ತೀಚೆಗೆ ಸುಮಾರು 5 ತಿಂಗಳು ಬ್ರಾಯದ ಗಂಡು ಆನೆಮರಿಯೊಂದು ನೆರೆನೀರಿನಲ್ಲಿ ಉರುಳಿಕೊಂಡು ಬರುವಾಗ ಅದನ್ನು ಹಿಡಿಯಲಾಯಿತು ಎನ್ನಲಾಗಿದೆ. ಸಮ್ಮಂಧಪಟ್ಟ ಅಧಿಕಾರಿಗಳು ಅದನ್ನು ಸುಳ್ಯ ಪೆಟ್ಟಿಸರಿಗೆ ಆಂಬುಲೆನ್ಸಿನಲ್ಲಿರಿಸಿ ಹೋಗಿಸುತ್ತಿರುವರೆಂದು ತಿಳಿದುಬಂದಿದೆ.

ಅಸ್ತಮಾ ರೋಗಿಗಳ ತಿಳುವಳಿಕೆಗೆ

ರಜಿಸ್ಟ್ರಿಯಾದ ಚಿತ್ರಕೋಟ್ ಅಸ್ತಮಾ ಔಷಧಾಲಯದಲ್ಲಿ ತಾ. 22-11-61ನೇ ಹುಣ್ಣಿಮೆ ರಾತ್ರಿ ಬೀರಿನೊಂದಿಗೆ ಸೇವಿಸುವುದರಿಂದ ಅಸ್ತಮಾ, ನೇವಸ, ಕೆಮ್ಮು, ನೆಗಡಿ ನಿವಾರಣೆಯಾಗುತ್ತದೆ. ಕೂಡಲೇ ಸುಣ್ಣಿಯ ಮೊದಲೇ ಬರೆಯಿರಿ.

Manager, Shri Mahatma Naga Baba Ayuruvedashram,
P. O. Chitrakot U. P.

ಸಂಬಿಕೆಗೆ SR ಅರ್ಹತೆ
ಉತ್ಕೃಷ್ಟದ ಬೀಡಿಗಳಲ್ಲಿ
ನಿರೀಕ್ಷಿಸಬೇಕು ಗುಣಗಳನ್ನು ಅಪೇಕ್ಷಿಸುವಿರೋ
ಅವೆಲ್ಲಾ
ಎಸ್.ಆರ್.
ಬೀಡಿಗಳಲ್ಲಿ ಇರುವವು ಎಂದು ಖಚಿತವಾಗಿ
ಹೇಳುತ್ತೇವೆ.
ಎಲ್ಲಾ ಕಡೆಗಳಲ್ಲಿಯೂ ದೊರಕುತ್ತವೆ.
S.R. Beedi Works UDIPI S.K.

ದುರಾತ್ಮಗಳ ದುಷ್ಪ್ರಭಾವ

ಪ್ರೇತಾತ್ಮಗಳಲ್ಲಿಯೂ ಇತರೆರವುಂಟು. ಶುಭ ಆತ್ಮಗಳು ಶುಭಕಾರ್ಯಗಳನ್ನೂ ದುರಾತ್ಮಗಳು ದುಷ್ಕಾರ್ಯಗಳನ್ನೂ ಮಾಡುತ್ತವೆ. ಕೆಲಪೊಮ್ಮೆ ಮಾನವನು ಈ ದುರಾತ್ಮಗಳ ಉಪದ್ರವಕ್ಕೆ ಬಲಿಯಾಗುತ್ತಾನೆ. ಇಂತಹ ಉಪದ್ರವವನ್ನು ಆತನು ತಾನಾಗಿಯೇ ಕೊಂಡುಕೊಳ್ಳುತ್ತಾನೆ. ಸ್ವಪ್ನ ಮಾತ್ರವಾದ ಹಲವಾರು ದೃಶ್ಯಗಳನ್ನು ಸಾವು ಸತ್ಯವೆಂದೇ ಬಗೆಯುತ್ತೇನೆ. ಇಂತಹ ದುರಾತ್ಮಗಳ ಉತ್ಪಾತಗಳ ಸತ್ಯಾಸತ್ಯತೆಯನ್ನು ಕಂಡರಿಯ ಬೇಕಾದರೆ, ಬೇರೆ ಬೇರೆಡೆಯ ಬೇರೆ ಬೇರೆಯವರ ಅನುಭವಗಳನ್ನು ಅಧ್ಯಯನ ಮಾಡಬೇಕು.

ಒಂದು ಉತ್ತಮ ಕುಟುಂಬದ ಒಬ್ಬಾಕೆ ಹುಡುಗಿಯು ತನ್ನ ತಾಯಿಬಳಿ ಬಂದೆಂದಳು; "ನಾನು ಆ ಕೋಣೆಯಲ್ಲಿ ಮಲಗಲಾರೆ." ಅದೃಷ್ಟವಶದಿಂದ, ಆ ಮನೆಗೊಬ್ಬ ಅತಿಥಿಯೂ ಬಂದಿದ್ದ. ಹುಡುಗಿಗೆ ಹೆದರಿಕೆಯ ಅನುಭವವಾಗುತಿದ್ದ ಮತ್ತು ನಾನಾ ರೀತಿಯ ದೃಶ್ಯಗಳು ಗೋಚರಿಸುತಿದ್ದ ಆ ಕೋಣೆಯಲ್ಲಿ ಹೊಸತಾಗಿ ಬಂದಿದ್ದ ಅತಿಥಿಯನ್ನು ಮಲಗಿಸಲಾಯಿತು. ಆತ ಇಪ್ಪತ್ತು ದಿನಗಳ ತನಕ ಅಲ್ಲಿ ಉಳಿದುಕೊಂಡ; ಯಾವುದೇ ಅನ್ಯ ದೃಶ್ಯಗಳನ್ನು ಕಂಡಿರಲಿಲ್ಲ ಆದರೆ, ಹಾನೆಯ ದಿನ ಆ ಹುಡುಗಿಗೆ ತೋರಿ ಬಂದಿದ್ದ ದೃಶ್ಯಗಳೇ ಈತನಿಗೂ ಕಾಣ ತೊಡಗಿದುವು.] ಆ ರಾತ್ರಿಯ ಹೊತ್ತೇನೋ ಆತ ನಿದ್ರಿಸಿದ; ಪ್ರಾತಃಕಾಲವಾಗುತ್ತಲೇ ಅಲ್ಲಿಂದ ಕಂಬಿಕಿತ್ತ. ಒಂದು ದಿನ ಕುಟುಂಬದವರೆಲ್ಲರೂ ಊಟ ಮಾಡಲು ಕುಳಿತಿದ್ದರು. ಮೇಲಿನ ಅಟ್ಟದಿಂದ ಯಾರೋ ಇಳಿದು ಬರುವ ಸದ್ದು ಕೇಳಿಸಿತು, ಧ್ವನಿಯಿಂದ ಒಬ್ಬ ಭಾರಿಯ ದೊಡ್ಡಾಳು ಮೇಲಿನಿಂದ ಕಳಗಿಳಿಯುತ್ತಿರುವಂತೆ ಭಾಸವಾಗುತ್ತಿತ್ತು. ಇಳಿದ ಆತ ಭೋಜನಾಲಯವನ್ನೂ ಪ್ರವೇಶಿಸಿದ ಆತನಲ್ಲಿ ಬರುತ್ತಲೇ ಮನೆಯಿಡಿ ವಾಸನೆ ಹರಡಿತು. ಆದರೆ, ಅಲ್ಲಿದ್ದ ಒಬ್ಬರಿಗಾದರೂ ಆತನು ದೃಷ್ಟಿಗೋಚರನಾಗಲಿಲ್ಲ.

ಇಂತಹ ಘಟನೆಗಳು ಹಲವೆಡೆ ಕಂಡು ಬರುತ್ತವೆ ಒಂದು ಬಾರಿ ಈ ಕುಟುಂಬದವರು ತನ್ನ ಸ್ನೇಹಿತ ಪರಿವಾರವೊಂದನ್ನು ಭೋಜನಕ್ಕೆ ಆಮಂತ್ರಿಸಿದ್ದರು. ಭೋಜನಾರಂಭವಾಗುತ್ತಲೇ ಆ ದುರಾತ್ಮ ಪುನಃ ಬಂದಿತು. ಉತ್ಪಾತಗಳನ್ನು ಎಬ್ಬಿಸಿತು. ಇದರಿಂದ ನೊಂದ ಕುಟುಂಬವು ಮನೆಯನ್ನು ಬಿಡುವ ಹವಣಿಕೆಯಲ್ಲಿತ್ತು. ಒಂದು ದಿನ ಅಲ್ಲಿನ ವಯೋವೃದ್ಧನೊಬ್ಬನು ಆ ಪ್ರೇತಾತ್ಮದೊಡನೆ "ನೀನು ಯಾರು? ಯಾಕೆ ಬರುತಿದ್ದಿ? ನಮ್ಮಿಂದ ಆಗಬಹುದಾದ ಏನಾದರೂ ಕಾರ್ಯವಿದ್ದರೆ, ದಯವಿಟ್ಟು ತಿಳಿಸು" ಎಂದು ಹೇಳಿದ. ಆದರೆ, ಯಾವ ಉತ್ತರವೂ ಬರಲಿಲ್ಲ. ಅದುವರೆಗಾದುರಾತ್ಮವು ಮನೆಯ ಒಂದೇ ಕೋಣೆಯಲ್ಲಿ ಕಾಲಿಡುತಿತ್ತು; ಆದರೆ, ಈಗ ಇಡಿ ಮನೆಯಲ್ಲಿ ಆದರ ಸಂಚಾರವಾಯ್ತು. ದುರ್ವಾಸನೆಯನ್ನು ಪಸರಿಸಿತಿತ್ತು ಆ ಮನೆಯ ಬಗ್ಗೆ ಒಂದು ಕಥೆಯೂ ಪ್ರಬಲಿತವಾಯ್ತು: "ಬಹಳ ದಪ್ಪಗಾದ ಒಬ್ಬ ಅಲ್ಲಿದ್ದ; ಆತ ಸತ್ತ ಒಂದು ದಿನದ ನಂತರ ಹೆಣವನ್ನು ತೆಗೆಯಲಾಯಿತು. ಇದರಿಂದ ವಾಸನೆ ಹರಡಿತ್ತು." ಇಷ್ಟು ವರ್ಷಗಳ ನಂತರವೂ ಆ ದುರ್ಗಂಧ ಏಕೆ ಉಳಿಯಿತು? ಇದು ಮಾತ್ರ ರಹಸ್ಯವೇ.

ಮನೋವೈಜ್ಞಾನಿಕ ಸುಸ್ತಳವೊಂದರಲ್ಲಿ ದುರಾತ್ಮಗಳ ಉತ್ಪಾತದ ಇನ್ನೊಂದು ಘಟನೆಯು ಉಲ್ಲೇಖವಿದೆ. ಈ ಹೊತ್ತಗೆಯಲ್ಲಿ "ಮಿ. ಹೆರಿವಾರ್ಡ್ ಕೈರಿಂಟನ್‌ರು ಭೂತಗಳನ್ನು ಹೇಗೆ ಓಡಿಸಿದರು" ಎಂಬ ಲೇಖನವಿದೆ. ಮಿ. ಹೆರಿವಾರ್ಡರು ಸ್ಕಾಕ್‌ಟನ್‌ನಲ್ಲಿ ಭಾಷಣ ಮಾಡಲು ಹೋಗಿದ್ದರು. ಅಲ್ಲಿ ಅವರ ಬಳಿಗೊಬ್ಬಾಕೆ ಮಹಿಳೆ ಬಂದು, "ನನಗೊಂದು ಅವ್ಯಕ್ತ ಧ್ವನಿ ಕೇಳುತ್ತದೆ; ಹೆದರಿಕೆಯಾಗುತ್ತದೆ. ಈ ಸ್ವರವು ತನ್ನ ಮೃತ ಪತಿದೇವರದಂತೆ ಭಾಸವಾಗುತ್ತಿದೆ ಆದರೆ, ಅವರು ತೀರಿಹೋಗಿ ಬಹು ವರ್ಷವಾಯಿತು. ಒಮ್ಮೊಮ್ಮೆ ಆ ಧ್ವನಿ ಅಪರಿಮಿತ ಪ್ರೇಮವನ್ನೂ ಇನ್ನು ಕೆಲಪೊಮ್ಮೆ ಅತ್ಯಧಿಕ ನೀರಸತೆಯನ್ನೂ ಸ್ಪರ್ಶಿಸುತ್ತದೆ. ನನ್ನ ಎಲ್ಲ ಕೆಲಸಗಳಲ್ಲಿ ಅದು ಭಂಗವನ್ನೊಡ್ಡಿ, ನನ್ನ ಮೇಲೆ ಪ್ರಭುತ್ವ ಹೇರುತ್ತಿರುವಂತೆ ಭಾಸವಾಗುತ್ತದೆ. ರಾತ್ರೆ ನನಗೆ ನಿದ್ರೆ ಬರುತ್ತಿಲ್ಲ; ಏಕೆಂದರೆ, ಆಗ ಧ್ವನಿಯು ಕೀಟಲೆ ಮತ್ತಷ್ಟು ಬಲವಾಗುತ್ತದೆ."

ಪರಿಶೀಲಿಸಿದಾಗ, ಇದು ಸತ್ಯವೆಂದು ಹೆರಿವಾರ್ಡರು ಕಂಡುಕೊಂಡರು. ಪರಲೋಕ ವಿದ್ಯೆಯ ಜ್ಞಾನ ಆಕೆಗಿರಲಿಲ್ಲ. ಆಕೆಯ ಸುತ್ತ ಪ್ರೇತಾತ್ಮವೊಂದು ಅವಶ್ಯ ಅಂಡಲೆಯುತ್ತಿದೆಯೆಂದು ಅವರಿಗೆ ತೋರಿತು. ಕುಳ್ಳ ಶರೀರ, ಕರಿಯ ಕೇಶ, ತಲೆಯೊಡದರೂ ಕಿರಿಯದೇ ಅದಕ್ಕಿತ್ತು. ಅದು ಆ ಮಹಿಳೆಯನ್ನು ಕಲಪೊಮ್ಮೆ ಉದಾರಿಯನ್ನಾಗಿಯೂ ಉಳಿದೊಮ್ಮೆ ಲೋಭಿಯನ್ನಾಗಿಯೂ ಮಾಡುತಿತ್ತು. ಕೆಲವು ದಿನಾನಂತರ ಒಂದು ರಾತ್ರೆ ತನ್ನನ್ನು ಯಾರೋ ಅಪ್ಪಿಕೊಂಡಂತೆ ಭಾಸವಾಗುವುದೆಂದು ಆಕೆ ಮೊರೆಯಿಟ್ಟಳು. ಮುಂಜಾನೆ ಆಕೆಯ ಶರೀರವನ್ನು ಪರಿಶೀಲಿಸಿದಾಗ, ಹಲವೆಡೆ ಗಾಢಾಲಿಂಗನ-ರತಿ ಸುಖ ಸ್ವಾದಗೊಂಡಚಿಹ್ನೆಗಳುಕಂಡ.ಬಂದುವು. ಯಾರೋ ಅಜ್ಞಾತ ಅವ್ಯಕ್ತರೂಪಿಯೊಂದು ಆಕೆಯ ಶರೀರವನ್ನು ಆಲಿಂಗಿಸಿದ್ದರೆಂಬುದಕ್ಕೆ ಸಂದೇಹವುಳಿಯಲಿಲ್ಲ. ಆ ಆತ್ಮವು ಆಕೆಯ ಪತಿಯದಾಗುವುದು ಸಾಧ್ಯವಿಲ್ಲ. ಆತ ಸಜ್ಜನನೂ ಪತ್ನೀ ಪ್ರೇಮಿಯೂ ಆಗಿದ್ದನು. ಆದುದರಿಂದ ದುರಾತ್ಮನೆಂದು ಹೆರಿವಾರ್ಡರು ಖಂಡಿತ ಮಾಡಿಕೊಂಡರು ಆ ದುರಾತ್ಮಕ್ಕೆ ಮೊದಮೊದಲಿಗೆ ತಿಳಿಸಿ ಹೇಳಿದರು; ಹೊರಗೆ ಹೋಗುವಂತೆ, ಆ ಕೆಯನ್ನುಸ್ಪರ್ಶಿಸದಂತೆ ನೀತಿಯೊರೆದರು. ಆದರೆ, ಈ ವಿನಂತಿಯು ಆ ದುರಾತ್ಮದ ಮೇಲೆ ಯಾವ ಪರಿಣಾಮವನ್ನೂ ಬೀರಲಿಲ್ಲ. ಆ ಮೇಲೆ ಅವರು ಶುಭಾತ್ಮಗಳನ್ನು ಆಹ್ವಾನಿಸಿದರು. ಈ ಅತ್ಯಾಚಾರಿ ದುರಾತ್ಮವನ್ನು ಹೊರಗೆ ಕಳ್ತು ಹಿಡುಕಿ ದೂಡುವಂತೆ ಕೇಳಿಕೊಂಡರು. ಅಷ್ಟರಲ್ಲಿ ಬಹುಸಂಖ್ಯೆಯ ಆತ್ಮಗಳು ಬಂದುವು ಆ ಕುಳ್ಳ ಶರೀರಿಯನ್ನು ಕಟ್ಟಿಹಿಡಿದ, ಹೊರಗೆ ದಬ್ಬಿ ಬಿಟ್ಟುವು.

ಹೀಗಾದ ನಂತರ, ಆ ಮಹಿಳೆಗೆ ಯಾವ ಉತ್ಪಾತದ ಅನುಭವವೂ ಆಗಲಿಲ್ಲ ಅಂದರೆ, ಆ ದುರಾತ್ಮವು ಮತ್ತೆ ಆಕೆಯ ಸಮೀಪ ಸುಳಿಯುಲಿಲ್ಲ. ಇದರಿಂದ ಭೂತ-ಪ್ರೇತಗಳನ್ನು ಓಡಿಸುವ ಸರಳವಾದ ವಿಧಾನವೊಂದು ತಿಳಿಯುತ್ತದೆ. ಪ್ರೇತಾತ್ಮವೆಸಗುವ ಅನಪೇಕ್ಷಿತ ಕಾರ್ಯದಿಂದಲೇ ಅದು ಒಳ್ಳೆಯದೋ ಕೆಟ್ಟದೋ ಎಂದು ತಿಳಿಯುವುದು. ದುರಾತ್ಮವಾಗಿದ್ದರೆ ಅದಕ್ಕೆ ತಿಳಿಹೇಳಬೇಕು; ಆಗದು ಕಿವಿಗೆ ಕೊಡದಂತೆ ವರ್ತಿಸಿದರೆ, ಶುಭಾತ್ಮಗಳನ್ನು ಕರೆದು ಈ ದುರಾತ್ಮದ ಕಾಟ ನೀಗಿಸುವಂತೆ ಮಾಡಬೇಕು. ನಮ್ಮತ್ತಕಡೆಯ ಮಾತೃಗಾರರು ಮಾಡುವ ಕೆಲಸವಾದರೂ ಇದೇ ಅಲ್ಲವೆ?

ಅಮೃತ ಬಿಂದು

ಸಂದೇಹವುದ್ಭವಿಸುವಲ್ಲಿ ಪ್ರೇಮವು ಪ್ರಾಣಾರ್ಪಣ ಮಾಡಲಾರದು.

೦೦ ೦೦

ಪರೀಕ್ಷೆಯೆಂದರೆ ಅಂಜಬಾರದು. ಅಗ್ನಿ ಪರೀಕ್ಷೆಗಳಿಂದಲೇ ಮಾನವ ರೂಪೀಸುವರ್ಣವು ಕುಂದಣವಾಗುವುದು.

೦೦ ೦೦

ಜೀವನವೆಂಬುದೊಂದು ವ್ಯಾಪಾರ. ಇದರಲ್ಲಿ ಸತ್ಯಮಾದ ಬಂಡವಳವನ್ನು ತೊಡಗಿಸಿದರೆ, ಲಾಭಬಹಳಷ್ಟು ಸಿಕ್ಕಿಯೇ ಸಿಕ್ಕುವುದು.

೦೦ ೦೦

ಮಾನವನನ್ನು ಧರಾತಳದಿಂದ ಆಕಾಶದತ್ತ ಒಯ್ಯಬಲ್ಲ ವಿಮಾನವೇ ಶಿಕ್ಷಣ.

೦೦ ೦೦

ಬಡವರ ರಕ್ಷಣೆ ಮಾಡುವ ಸಮಾಜವೇ ನಿಜವಾದ ಉತ್ತಮ ಸಮಾಜ.

೦ ೦ ೦

ಕಠಿನತೆಗಳು ಎಡತಾಕಿದುವೆಂದು ಆತ್ಮವಿಶ್ವಾಸವನ್ನು ಎಂದಿಗೂ ಬಿಟ್ಟುಗೊಡಬಾರದು

೦ ೦ ೦

ಆವಶ್ಯಕವೆಂದು ತೋರುವ ಎಲ್ಲ ಕಾರ್ಯಗಳನ್ನೂ ನಮ್ಮದೆಂದೇ ಪ್ರಾರಂಭಿಸಿಕೊನೆಮುಟ್ಟಿಸಬೇಕು.

41 ವರ್ಷಗಳ ಭದ್ರ ಹಾಗೂ ಸಮರ್ಥ ಬೇಂಕಿಂಗ್ ಸೇವೆ.

ದಿ. ಪಾಂಗಾಳ ನಾಯಕ್ ಬೇಂಕ್ ಲಿ.

ನಮ್ಮ 3 ವರ್ಷ ವ್ಯಾದೆಯ ಕೇಶ್ ಸರ್ಟಿಫಿಕೇಟುಗಳಲ್ಲಿ ಶೇವಣಿ ಮಾಡಿರಿ. ಬಡ್ಡಿ ಸೇಕಡಾ 5ರಂತೆ: ರೂ. 87--00 3 ವರ್ಷಗಳ ಅಂತ್ಯದಲ್ಲಿ ಬಡ್ಡಿ ಕೂಡಿ ರೂ. 100—00 ಒದಗಿಸುವುದು.

ಕರೆ, ಚಿಕ್ಕ ವ್ಯಾದೆ, ನಿರಖು ರೇವಣಾತಿಗಳ ಮೇಲೆ ಆಕರ್ಷಣೀಯ ಶರ್ತಗಳು: ಬಡ್ಡಿ ಸೇಕಡಾ 5¼ರ ವರೆಗೆ.

ತಾ. 1—4—1961ರಿಂದ ಸೇವಿಂಗ್ಸ್ ಬೇಂಕ್ ಖಾತೆಗಳ ಮೇಲೆ ಬಡ್ಡಿ ಸೇಕಡಾ 3ರಂತೆ.

THE PANGAL NAYAK BANK LTD.
Estd: 1920

ಕೊಪ್ಪೊರೇಶನ್ ಬೇಂಕ್
ರೇವಣಾತಿಗಳ ಮೇಲಿನ ಸಾಲಿಯಾನ್ ಶೇಕಡಾ ಬಡ್ಡಿ ದರಗಳು:

3	ಸೇವಿಂಗ್ಸ್ ಬೇಂಕ್ ಖಾತೆ
3 ಯಿಂದ 5¼	ಕಾಯಂ (ವಿವಿಧಾವಧಿಗಳಿಗೆ)
5¼	ವಜ್ರೋತ್ಸವ
5	ಕ್ಯುಮುಲೇಟಿವ್

ದಿ. ಕೆನರಾ ಬೇಂಕಿಂಗ್ ಕೊಪ್ಪೊರೇಶನ್ ಲಿಮಿಟೆಡ್
(ಸ್ಥಾಪನೆ: 1906)
ರಿಜಿಸ್ಟರ್ಡ್ ಆಫೀಸು: ಉಡುಪಿ | ಆಡಳಿತ ಆಫೀಸು: ಮಂಗಳೂರು

Tel: 'BLUEYAGAR'. —— ಚಿನ್ನ ಮತ್ತು ವಜ್ರಗಳ ಆಧುನಿಕ ತವರುಮನೆ —— Phone: 374.

ಕೆ.ಆರ್.ಕೆ.ಶೇಟ್ ಡಯಮಂಡ್ ಮಾರ್ಟ್

ಸ್ಥಾಪನೆ:1919] ಚಿನ್ನ ಮತ್ತು ವಜ್ರದ ವ್ಯಾಪಾರಿಗಳು,(ಗವರ್ನ್‌ಮೆಂಟ್ ಕಾಲೇಜ್ ಎದುರುಗಡೆ)ಮಂಗಳೂರು. ಮಾಲಿಕ:ಕೆ.ಕೆ.ಆರ್.ಶೇಟ್

ವಲ್ಲಭಿಯ ಸಾಂಸ್ಕೃತಿಕ ಕೇಂದ್ರ

ಇತಿಹಾಸದ ಮಧ್ಯಾವಧಿಯಲ್ಲಿ ಸೌರಾಷ್ಟ್ರದ ವಲ್ಲಭೀ ನಗರವು ಪಶ್ಚಿಮ ಭಾರತದ ರಾಜನೀತಿ ಹಾಗೂ ಸಾಹಿತ್ಯ ಮತ್ತು ಸಂಸ್ಕೃತಿಯ ದೊಡ್ಡ ಕೇಂದ್ರವಾಗಿತ್ತು. ಮೈತ್ರಕ ರಾಜರ ಕಾಲದಲ್ಲಿ ಇಲ್ಲಿ ಸಂಸ್ಕೃತ ಭಾಷೆಯ ಸಾಹಿತ್ಯವು ಉನ್ನತಿಗೊಂಡಿತ್ತು. ಸಂಸ್ಕೃತದ ಪ್ರಥಮ ವ್ಯಾಕರಣ-ಮಹಾ ಕಾವ್ಯ 'ಭಟ್ಟಿಕಾವ್ಯ' ಅಥವಾ 'ರಾವಣ ವಧ'ವು ಇಲ್ಲಿಯೇ ರಚಿತವಾಯ್ತು (ಕ್ರಿ ಶ. ೫೦೦-೬೫೦). ಹೇಮಚಂದ್ರನ 'ದ್ವ್ಯಾಶ್ರಯ'ಕ್ಕೆ ಇದು ಪೂರ್ವವರ್ತಿಯಾಯಿತು. ಮಹಾಕಾವ್ಯದ ಮಾಧ್ಯಮದಿಂದ ವ್ಯಾಕರಣವನ್ನು ಪ್ರತಿಪಾದಿಸುವ ನೂತನ ಪರಂಪರೆಯೊಂದು ಪ್ರಾರಂಭವಾಯಿತು. ಪಾಣಿನಿಯ ವ್ಯಾಕರಣವು ನಾರಕೇಳ ವಾಕದಂತಿದ್ದು ಎಲ್ಲರಿಗೂ ಬೋಧ್ಯವಾಗದಿರಲು ಭಟ್ಟಿಯು ವಲ್ಲಭಿಯ ರಾಜಕುಮಾರ ಶ್ರೀಧರ ಸೇನನಿಗೆ ಕಾವ್ಯದ್ವಾರಾ ವ್ಯಾಕರಣದ ನಿಯಮಗಳನ್ನು ಸುಬೋಧವಾಗಿ ವಿವರಿಸುವ ಪ್ರಯತ್ನ ಮಾಡಿ ಸಫಲನಾದನು.

ವಲ್ಲಭಿಯ ಉತ್ಕೀರ್ಣ ಲೇಖಗಳಿಂದ ಸಂಸ್ಕೃತ ಗದ್ಯಕಾವ್ಯಗಳ ಪ್ರೌಢ ಶೈಲಿಯ ಪರಿಚಯವಾಗುವುದು. ಜೂನಾಗಡದಲ್ಲಿ ದೊರೆತ ಅಶೋಕ, ರುದ್ರದಮನ ಮತ್ತು ಸಾಮ್ರಾಟ ಸಮುದ್ರಗುಪ್ತರ ಶಿಲಾಲೇಖಗಳಲ್ಲಿ ಪ್ರಾಕೃತ ಮತ್ತು ಸಂಸ್ಕೃತ ಗದ್ಯದ ಪ್ರಾಚೀನ ರೂಪವು ವಿದ್ಯಮಾನವಿದೆ.

ವಲ್ಲಭಿಯು ಬ್ರಾಹ್ಮಣ, ಬೌದ್ಧ ಮತ್ತು ಜೈನಧರ್ಮಗಳ ಪ್ರವೇಣಿಯಾಗಿತ್ತು. ಚೀನೀಯಾತ್ರಿಕ ಹ್ಯುಎನ್‌ತ್ಸಾಂಗನ ಹೇಳಿಕೆಯಂತೆ ಆತನ ಸಂಚಾರಾವಧಿಯಲ್ಲಿ ಇಲ್ಲಿನ ಬೌದ್ಧ ಸಂಘಾರಾಮಗಳಲ್ಲಿ ಆರು ಸಾವಿರ ಭಿಕ್ಷುಗಳು ಅಧ್ಯಯನ ನಿರತರಾಗಿದ್ದರು. ಚೀನದ ಶ್ರೇಷ್ಠ ವಿದ್ಯಾಪೀಠಗಳಿಗೆ ಹೋಲಿಕೆಯಿರುವ ದಕ್ಷಿಣ ಬಿಹಾರದ ನಳಂದಾ ಮತ್ತು ಪಶ್ಚಿಮದ ವಲ್ಲಭಿಗಳು ಅತ್ಯಂತ ಕೀರ್ತಿಶಾಲಿ ಪೀಠಗಳಾಗಿವೆ. ಬೌದ್ಧ ದರ್ಶನದ ಜ್ಞಾನಪಿಪಾಸೆಯಿಂದ ದೂರ ದೂರದ ಜಿಜ್ಞಾಸುಗಳು ಈ ವಿದ್ಯಾಕೇಂದ್ರಗಳಿಗೆ ಬರುತಿದ್ದರು.

ಕಾಶ್ಮೀರದವನಾದ ಶ್ರೀ ಹರ್ಷನ ನೈಷಧಕ್ಕೆ ಮೊತ್ತ ಮೊದಲಿನ ಟೀಕೆ ಲಿಖಿತವಾದುದು ಗುಜರಾತಿನಲ್ಲಿ. ಈ ಗ್ರಂಥದ ಗಿಳಿಬರಲ್ಲಿ ಬರೆದ ಪಾಂಡುಲಿಪಿಯೊಂದು ಪಾಟನದಲ್ಲಿಯೂ ಗುಜರಾತಲ್ಲಿ ಬರೆದ ಮತ್ತೊಂದು ಜೈಸಲ್‌ಮೇರಿನಲ್ಲಿಯೂ ಸುರಕ್ಷಿತವಿವೆ. ಇವುಗಳ ಮೇಲೆ ವಿದ್ಯಾಧರ ಮತ್ತು ಚಂಡೂ ಪಂಡಿತರು ಟೀಕೆ ಬರೆದಿದ್ದಾರೆ.

ಸಹ್ಯಾದ್ರಿಯ ಉತ್ತರ ಭಾಗದಲ್ಲಿ ನೈಷಧವನ್ನು ಪ್ರಚಾರ ಮಾಡಿದವರಲ್ಲಿ ಶ್ರೀಹರ್ಷನ ವಂಶದವನಾದ ಹರಿಹರನು ಅಗ್ರಗಣ್ಯನು. ಗ್ರಂಥದ ಪ್ರತಿಯೊಂದನ್ನು ಇಲ್ಲಿಗೆ ತಂದವನೂ ಆತನೇ! ಈ ಪ್ರತಿ ಅಥವಾ ಇದರ ಆಧಾರದಿಂದ ಬರೆದ ಅನ್ಯ ಪ್ರತಿಯೊಂದು ಬೀಸಲದೇವ ರಾಜಕೀಯ ಪುಸ್ತಕಾಲಯದಲ್ಲಿ ಇಡಲಾಗಿತ್ತು.

ಹರಿಹರನು ಸಂಪನ್ನನಾಗಿದ್ದನು. ಇವನು ಗೌಡದೇಶ, ಪೂರ್ವ ಭಾರತದಿಂದ ೫೦ ಒಂಟೆ, ೨೦೦ ಕುದುರೆ ಮತ್ತು ೫೦೦ ಬಂಧು-ಬಾಂಧವರಿಂದೊಡಗೂಡಿ ಗುಜರಾತಕ್ಕೆ ಬಂದನು; ರಾಜವೀರಧವಲನೂ ಮಂತ್ರಿ ವಸ್ತುಪಾಲನೂ ಈತನಿಗೆ ಅಭಿನಂದನೆ ಸಲ್ಲಿಸಿದರು. ಹರಿಹರನು 'ಶ್ರುತಿಧರ, ಕವಿ ಮತ್ತು ಪ್ರಗಲ್ಭ ಪಂಡಿತನಿದ್ದನು. ಒಂದು ಬಾರಿ ಕೇಳಿದ ಶ್ಲೋಕವನ್ನು ತತ್‌ಕ್ಷಣ ಕಂಠಪಾಠ ಹೇಳುವ ಅದ್ಭುತ ಶಕ್ತಿ ಅವನಲ್ಲಿತ್ತು. ನೈಷಧದ ಶ್ಲೋಕಗಳನ್ನು ಸರಳವಾಗಿ ಪ್ರಭಾವ ಶಾಲಿಯಾಗಿ ಹೇಳುತಿದ್ದನು. ಒಂದು ದಿನ ವಸ್ತುಪಾಲನು ಆ ಕಾವ್ಯ ಮತ್ತದರ ರಚಯಿತನ ಹೆಸರು ಕೇಳಿದನು. 'ಶ್ರೀ ಹರ್ಷನ ನೈಷಧ'ವೆಂಬ ಉತ್ತರ ಬಂತು. ಮಂತ್ರಿಯು ಗ್ರಂಥದ ಹಸ್ತಪ್ರತಿಯನ್ನು ಬಯಸಲು ಹರಿಹರನು ಕೊಟ್ಟುಬಿಟ್ಟನು ಆದರೆ, ಒಂದು ಶರ್ತ ಹಾಕಿದನು. ಇದು ದುರ್ಲಭ ಪಾಂಡುಲಿಪಿ. ಇಂದು ಸಾಯಂಕಾಲ ಕೊಡುತಿದ್ದೇನೆ; ನಾಳೆ ಪ್ರಾತಃಕಾಲ ಮರಳಿ ಕೊಂಡೊಯ್ಯುವೆ" ಮಂತ್ರಿಯದನ್ನು ಸ್ವೀಕರಿಸಿದನು.

ಕಾವ್ಯ ಸಾಹಿತ್ಯ ಪ್ರೇಮಿಯೂದ ವಸ್ತುಪಾಲ ರಾತಾರಾತ್ರಿಯೇ ಅದರ ಪ್ರತಿ ತೆಗೆಯಿಸುವ ವ್ಯವಸ್ಥೆ ಮಾಡಿದನು. ಅದನ್ನು ಪುಸ್ತಕಾಲಯದಲ್ಲಿ ಇಟ್ಟನು. ಮುಂಜಾನೆ ಹರಿಹರನು ಪಾಂಡುಲಿಪಿಕೊಂಡೊಯ್ಯಲು ಬಂದಾಗ ವಸ್ತುಪಾಲನೆಂದನು— ಈ ಕಾವ್ಯ ನಮ್ಮ ಭಂಡಾರದಲ್ಲಿರ ಬೇಕು ಬಹು ಪ್ರಯಾಸಾನಂತರ ನೌಕರರು ನೈಷಧದ ಪ್ರತಿಯನ್ನು ತಂದರು. ಹರಿಹರ ಚಕಿತನಾದನು ಒಂದು ಕ್ಷಣ ಮಂತ್ರಿ ಮುಖವನ್ನು ನೋಡಿ ಹೇಳಿದನು—"ಇದೆಲ್ಲವೂ ತಮ್ಮ ಕಾರ್ಯ ಕುಶಲತೆ!"

ಹದಿಮೂರನೆಯ ಶತಮಾನದಲ್ಲಾದ ಸಾಂಸ್ಕೃತಿಕ ಸುನಾಮಿಯಲ್ಲಿ ವಸ್ತುಪಾಲ ಮತ್ತವನ ಸಾಹಿತ್ಯಿಕ ಮಂಡಳಿಯ ಕೈವಾಡ ತುಂಬಿದೆ. ಸಾಹಿತ್ಯ ಸಾಧನೆ ಮತ್ತು ಸಾಹಿತ್ಯಕಾರರ ಸಂವರ್ಧನೆಯಲ್ಲಿ ವಸ್ತುಪಾಲ ಅದ್ವಿತೀಯನಾಗಿದ್ದ 'ಲಘು ಭೋಜರಾಜ'ನೆಂಬ ಹೆಸರಿನಿಂದ ಪ್ರಖ್ಯಾತನಾಗಿದ್ದನು. ಪಾಟನ, ಖಂಬಾತ ಮತ್ತು ಭೃಗು ಕಚ್ಛದಲ್ಲಿ ಮೂರು ವಿಶಾಲ ಪುಸ್ತಕಾಲಯಗಳನ್ನು ಇವನು ಸ್ಥಾಪಿಸಿದನು. ದುರ್ಲಭ ಪುಸ್ತಕಗಳೂ ಇಲ್ಲಿದ್ದುವು. ಪ್ರಥಮ ಕೋಶ, ವಸ್ತುಪಾಲ ಚರಿತ, ಸುರತನ ಪ್ರಬಂಧ ಸಂಗ್ರಹ ಮೊದಲಾದ ಗ್ರಂಥಗಳಲ್ಲಿ ಈತನ ದಾನವೀರತೆ ಮತ್ತು ಸಾಹಿತ್ಯ ಪ್ರೇಮದ ಅನೇಕ ಸುಂದರ ಕಥೆಗಳು ಬರೆಯಲ್ಪಟ್ಟಿವೆ

ಆಬುವಿನ ಪ್ರಸಿದ್ಧ ವಸ್ತುಪಾಲ—ತೇಜಪಾಲ ಮಂದಿರಗಳ ನಿರ್ಮಾತನಾದ ವಸ್ತುಪಾಲನು ಆ ಸಮಯದ ಶ್ರೇಷ್ಠ ರಾಜನೀತಿಜ್ಞನಾಗಿದ್ದನು. ಆದರೂ ಸಾಹಿತ್ಯ ಪ್ರೇಮಿಯಾಗಿದ್ದು ಕೆಲವೊಮ್ಮೆ ಹಳೆಯ ಗ್ರಂಥಗಳ ಪ್ರತಿಗಳನ್ನು ತಾನೇ ತೆಗೆಯುತಿದ್ದನು. ಉದಯ ಪ್ರಭನ ಧರ್ಮಾಭ್ಯುದಯ ಕಾವ್ಯದ ಆತನು ತೆಗೆದ ಪ್ರತಿಯು ಇಂದಿಗೂ ಖಂಭಾತದ ಜೈನ ಭಂಡಾರದಲ್ಲಿ ಸುರಕ್ಷಿತವಾಗಿದೆ.

ಈ ಕಾವ್ಯ ಪ್ರೇಮದಿಂದಾಗಿಯೇ ವಸ್ತುಪಾಲನಿಗೆ 'ಕವಿ ಚಕ್ರವರ್ತಿ,' 'ಸರಸ್ವತೀ ಕಂಠಾಭರಣ', 'ಸರಸ್ವತೀವರದ ಪುತ್ರ' ಮೊದಲಾದ ವಿಶೇಷಣಗಳು ಬಂದಿವೆ. 'ವಸಂತಪಾಲ'ವೆಂಬುದು ಈತನ ಸಾಹಿತ್ಯಿಕ ನಾಮಧೇಯ ಮೃತ್ಯುಶಯ್ಯೆಯಲ್ಲಿದ್ದಾಗಲೇ ಇವನು ನೂರಾರು ಭಕ್ತಿಪೂರ್ಣ ಶ್ಲೋಕವನ್ನು ಬರೆದಿದ್ದಾನೆ 'ನ ಕೃತಂ ಸುಕೃತಂ ಕಿಂಚಿತ್' (ನಾನೊಂದೂ ಒಳ್ಳೆಯ ಕೆಲಸ ಮಾಡಲಿಲ್ಲ) ಎಂದೀತ ಒಂದು ಶ್ಲೋಕದಲ್ಲಿಂದಿದ್ದಾನೆ.

ವೇಣೀಕೃಪಾಣ ಅಮರಚಂದ್ರನು ಇಲ್ಲಿನ ಮತ್ತೊಬ್ಬ ಮಹಾ ಕವಿ, ಬಾಲರಾಮಾಯಣ ಮತ್ತು ಕಾವ್ಯಕಲ್ಪಲತಾಗಳು ಈತನ ಹೆಸರಾಂತ ಕೃತಿಗಳು. ಈತನು ಬಹು ಮುಖೀ ಪ್ರತಿಭೆಯುಳ್ಳವನು. ಇವನನ್ನು ಎಲ್ಲ ರಾಜರೂ ಕೊಂಡಾಡುತ್ತಿದ್ದರು. ಬೇರೆ ಬೇರೆ ರಾಜರಲ್ಲಿ ಸಮ್ಮಾನಿತನಾದ ಅಮರ ಚಂದ್ರನನ್ನು ಬೀಸಲದೇವನು ಕರೆದು ಗೌರವಿಸಿದನು. ಸಭಾ ಪ್ರವೇಶಮಾಡುತ್ತಿರುವಂತೆಯೇ ಕವಿಯು ಎರಡು ಶ್ಲೋಕಗಳಿಂದ ರಾಜನನ್ನು ಸ್ತುತಿಸಿದನು. ಅನಂತರ ರಾಜಪಂಡಿತರು ಸಮಸ್ಯಾ ಪೂರಣ ಮಾಡುವಂತೆ ಈತನನ್ನು ಕೇಳಿಕೊಂಡರು. ಈತನು ಎಡೆಬಿಡದೆ ೧೦೮ ಸಮಸ್ಯೆಗಳನ್ನು ಪೂರ್ಣಮಾಡಿದನು. ಸಂಧ್ಯಾಕಾಲದ ವರೆಗೂ ಚಮತ್ಕಾರ ಪ್ರದರ್ಶನ ನಡೆಯಿತು. ರಾಜಸಭೆಯ ವಿಸ್ಮಿತವಾಯಿತು. ತೃಪ್ತನಾದ ಬೀಸಲ ದೇವನು ಈತನನ್ನು 'ಕವಿ ಪ್ರವರ' ಎಂಬ ಬಿರುದಿತ್ತು ಗೌರವಿಸಿದನು.

ಕಾಲಿದಾಸನನ್ನು ದೀಪಶಿಖಾ ಕಾಲಿದಾಸ ಮತ್ತು ಹರ್ಷನನ್ನು ಆನಂಗ ಹರ್ಷನೆಂದು ಕರೆಯುವಂತೆಯೇ ಅಮರ ಚಂದ್ರನನ್ನು ವೇಣೀಕೃಪಾಣನೆನ್ನುತ್ತಾರೆ ಒಂದು ಶ್ಲೋಕದಲ್ಲಿ ಆತನು ಯುವತಿಯ ವೇಣಿಯನ್ನು ಕಾಮನ ಕೃಪಾಣಕ್ಕೆ ಹೋಲಿಸಿರುವನು. ಇದು ಬಹಳ ಪ್ರಸಿದ್ಧವಾದುದರಿಂದಲೇ ಕವಿಗೆ 'ವೇಣೀಕೃಪಾಣ'ವೆಂಬ ಉಪನಾಮ ಬಂದಿತು.

ದಿ ವಿಜಯ ಬೇಂಕ್ ಲಿಮಿಟೆಡ್

ಪೆಡ್ಯೂಲ್ಡ್ ಬೇಂಕ್. ಸ್ಥಾಪನೆ: 1931

ರಿಜಿಸ್ಟರ್ಡ್ ಆಫೀಸು:
ವಿಜಯ ಬೇಂಕ್ ಬಿಲ್ಡಿಂಗ್, ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು -3, ಸೌತ್ ಕೆನರಾ.

ಕಾಯಂ ಠೇವಣಾತಿ ಬಡ್ಡಿ ದರವನ್ನು ಶೇಕಡ ೫½ ರ ವರೆಗೆ ಹೆಚ್ಚಿಸಲಾಗಿದೆ. ಏಳು ದಿವಸದ ನೋಟೀಸಿನಲ್ಲಿ ಕೇಳಿದಾಗ್ಯೆ ಸಿಂದೆ ಪಡೆಯುವ ಡಿಪೋಸಿಟುಗಳನ್ನು (Call Deposits) ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸೋಣಾಗುತ್ತದೆ.

ಹೆಚ್ಚಿನ ಮಾಹಿತಿಗೆ ನಮ್ಮ ಶಾಖೆಗಳಲ್ಲಿ ದಯಮಾಡಿ ವಿಚಾರಿಸಿರಿ.

ಅವಳ ಭಾವಚಿತ್ರ

(೨ನೇ ಪುಟದಿಂದ)

ನ್ನು ಕೊಡದಿದ್ದರೆ, ಈ ಭಾವಚಿತ್ರವನ್ನು ಪತ್ರಿಕೆಯಲ್ಲಿ ಪ್ರಕಟಿಸುತ್ತೇನೆ' ಎಂದು ಬೆದರಿಸಿದ. ಹೆಣ್ಣಿಗೆ ಮಾನ ಮುಖ್ಯ; ಅದು ಗಂಡುಗಳ ಕೈಯಲ್ಲಿ ಸಿಕ್ಕಿ, ಕಳೆದು ಹೋದರೆ, ಮುಂದೆ ತಲೆ ಎತ್ತಿ ಬಾಳಲು ಅಸಾಧ್ಯವೆಂದು ಬೆದರಿ, ಅವನಿಂದ ಆ ಚಿತ್ರ ಪಡೆದು ಸಾವಿರ ಸುರಿದೆ.'

'ಆ ನಂತರ ಇದೇ ರೀತಿ, ನಾಲ್ಕುಚಿತ್ರಗಳಿಗಾಗಿ, ಬಾಯಿ ಮುಚ್ಚಿ ಹಣ ತೆತ್ತು ಕಳುಹಿಸಿದೆ.

'ಕಳೆದ ವಾರ, ಇಂದು ಪ್ರಕಟವಾಗಿರುವ ಚಿತ್ರ ಹಿಡಿದುಕೊಂಡು ಬಂದು, ಹತ್ತು ಸಾವಿರ ಕೊಡದಿದ್ದರೆ ಎಂದು ಮಾರ ಕಾಸ್ತ್ರ ಹಾರಿಸಿದ. ಇವನಿಗೆ ತಲೆದೂಗ ಬಾರದೆಂದು ಸ್ಥಿರವಾಗಿ ನಿಂತು, ಮನಬಂದಂತೆ ಬೈದು ಹೊರ ಕಳುಹಿಸಿದೆ. ಆದರ ಪ್ರತಿಫಲವಿದು,'

ಸುಸ್ಮಿತ ಚಿತ್ರದ ಗೊಂಬೆಯಂತೆ ಬಾಯಿ ಮುಚ್ಚಿ ಕೇಳುತ್ತಿದ್ದಳು. ಒರಿಯರ ಮಾತು ಕೇಳದೆ, ಮನಬಂದ ಮಾರ್ಗದಲ್ಲಿ ಸಂಚರಿಸಲು ಹೆಣ್ಣು ಮುಂದಾದರೆ ಎಂಥೆಂಥ ಕಷ್ಟವನ್ನು ಅನುಭವಿಸಬೇಕಾಗುತ್ತದೆ ಎಂಬ ಭಯದ ಕಲ್ಪನೆ ಅವಳಲ್ಲಿ ಮೂಡಿತ್ತು.

'ಛೆ! ನಮ್ಮ ಸಮಾಜದಲ್ಲಿ ಇಂಥಹ ಅಲ್ಪ ಗಂಡುಗಳು ತುಂಬಿರುವರಲ್ಲ—ಶಶಿ! ನಮ್ಮ ರಕ್ತವನ್ನೇ ಹೀರಿ, ನಮ್ಮ ಮಧುರ ಮಧುವನ್ನು ಕುಡಿದು, ನಮ್ಮ ಬಾಳ್ವೆಗೆ ಮಲಿನ ಹುಚ್ಚುತ್ತಾರಲ್ಲ! ಅನಂತರ ಮೂರ್ಖ ಪಶುಗಳನ್ನು 'ಪತಿದೇವಾ' ಎಂದು ಹೆಣ್ಣು ಪೂಜಿಸಬೇಕು."

'ಹೂಂ. ನಮ್ಮ ದೆಡ್ಡತನಕ್ಕಾಗಿ, ನಾವು ಯಾರನ್ನು ಬರೆದು ಪ್ರಯೋಜನವಿಲ್ಲ—ಸುಸ್ಮಿತ! ನಾನು ಹೆಡ್ಡಳಂತೆ ವರ್ತಿಸಿದು ಮೊದಲ ತಪ್ಪು. ಅವನ ಮೊದಲ ಪತ್ರ ಕೈಸೇರಿದಾಗ, ಅವನ್ನು ನಿರ್ಲಕ್ಷಿಸಿ, ಅವನ ಭಾವಚಿತ್ರಕ್ಕೆ ಬೆಲೆ ಕೊಡದೆ ಕಿವಿದು ಕಸದ ಬುಟ್ಟಿಗೋ, ಬೆಲೆಗೆ ಎಸೆದಿದ್ದರೆ, ಯಾವ ಅನಾಹುತವೂ ನಡೆಯುತ್ತಿರಲಿಲ್ಲ. ನಾನು ಇಡಲಿರುವ ಹೆಜ್ಜೆಯ ವಿಚಾರವಾಗಿ, ನನ್ನ ರಕ್ಷಕರನ್ನು ಒಂದೆ. ಮಾತು ಕೇಳುತ್ತಿದ್ದರೆ ಈ ಪಾಡು ಪಡಲಿರುತ್ತಿರಲಿಲ್ಲ. ಪ್ರಾಯ ಬಂದಿದೆ, ಬುದ್ಧಿ ಬಲಿತಿದೆ, ಯೌವನ ತುಂಬಿ ತುಳುಕುತ್ತಿದೆ ಎಂದು ಹೆಮ್ಮೆಯಿಂದ ಹಿಡಿದ ಹಾದಿಯಿಂದ ಹೀಗಾಯಿತು. ಸಲಿಗೆ ಕೊಟ್ಟರೆ ನಾಯಿ ಸಟ್ಟುಗ ನೆಕ್ಕುವಂತೆ, ಈ ಗಂಡುಗಳು ಹೆಣ್ಣನ್ನು ಗೌರವಿಸುತ್ತಿರುವರು.'

'ಇನ್ನು, ನಾವು ಜಾಗೃತರಾಗಿರಬೇಕು.'

'ಇದರ ಸೇಡು ತೀರಿಸದಿರುವೆನೆಂದು ಭಾವಿಸಿದೆಯೋ"

'ಅಧಿಕ ಪ್ರಸಂಗಕ್ಕೆ ಕೈಹಾಕಬೇಡ—ಶಶಿ!'

'ನನ್ನ ಭಾವಚಿತ್ರ ಪ್ರಕಟಿಸಿದವನನ್ನು ಸದೆಬಡಿಯದಿರಬಾರದು.'

'ಒಂಟಿ ಹೆಣ್ಣಿನಿಂದ ಏನನ್ನು ಸಾಧಿಸಲು ಸಾಧ್ಯವಿದೆ?"

'ಅದನ್ನು ನೋಡುತ್ತೀರು? ಅವನು ಅದೇ ಪತ್ರಿಕೆಯಲ್ಲಿ ನನ್ನ ಕ್ಷಮೆ ಕೇಳುವಂತೆ ಪ್ರಕಟಿಸದಿದ್ದರೆ ನಾನು ಶಶಿಯಲ್ಲ."

ನೆಲಬಿಟ್ಟು ಹಾರುವ ಹೆಣ್ಣಿನೊಡನೆ ವಾದಿಸಿ ಪ್ರಯೋಜನವಿಲ್ಲವೆಂದು ನೆನೆದ ಸುಸ್ಮಿತ, ಜಾಗೃತಯಾಗಿರಲು ಕಿಳಿಸಿ ಹೊರಟಳು.

NAVAYUGA, UDIPI.
REGD. NO.BG. 176

2-11-1961

LICENSE NO. 31
Licensed to Post without Prepayment

ರವೀಂದ್ರವಾಣಿ—ಲೇಖಾಂಕ ೨೨ – ವಿಶ್ವಕವಿ ರವೀಂದ್ರನಾಥ ಟಾಗೋರ್

ಪ್ರೇಮ ಸಾಧನೆಯಿಂದ ಪರಮಾತ್ಮನ ಪ್ರಾಪ್ತಿ

ಅನುವಾದಕರು: ಕೆ. ಎನ್. ಭಟ್, ಶಿರಾಡಿಸಾಲ್.

ನಮ್ಮ ಋಷಿಶ್ರೇಷ್ಠರು, – "ಆನಂದದಿಂದಲೇ ಎಲ್ಲಾ ಬೀಜಗಳ ಉತ್ಪತ್ತಿಯೂ ಆಗುವುದು. ಮತ್ತೆ ವಿಕಾಸ ಹೊಂದಿ ಕೊನೆಗೆ ಆನಂದದಲ್ಲಿಯೇ ವಿಲೀನವಾಗುವುವು." ಎಂದು ಹೇಳಿರುವರು. ಇದರ ಅಭಿಪ್ರಾಯವು – ನಮ್ಮ ಋಷಿವರರಿಗೆ, ಪ್ರಕೃತಿ ನಿಯಮಗಳ ಜ್ಞಾನವಿರಲಿಲ್ಲ; ಅಥವಾ ಅವರು ಕಾಲ್ಪನಿಕ ವಿಚಾರಗಳ ವಿಲಾಸದಲ್ಲಿ ಮುಳುಗಿ ಹೋಗಿದ್ದರು. ಅಥವಾ ಅವರಿಗೆ ವಸ್ತು ಸ್ಥಿತಿಯ ಜ್ಞಾನವೇ ಇರಲಿಲ್ಲ ಎಂದು ಭಾವಿಸಲಾಗದು. ಪ್ರಾಕೃತಿಕ ಕಠೋರ ನಿಯಮಗಳ ಪೂರ್ಣ ಜ್ಞಾನವು ಅವರಿಗೆ ಇದ್ದಿತು. ಈ ಕಾರಣದಿಂದಲೇ ಅವರು—'ಅಗ್ನಿಯು ಈ ನಿಯಮಗಳಿಂದ ಕಟ್ಟಲ್ಪಟ್ಟಿರುವುದರಿಂದಲೇ ಪ್ರಜ್ವಲಿಸುತ್ತಿದೆ. ಸೂರ್ಯನೂ ಈ ನಿಯಮಗಳಿಗೆ ಒಳಗಾಗಿಯೇ ಬೆಳಗುತ್ತಿದ್ದಾನೆ. ವಾಯು, ಅಗ್ನಿ ಕೊನೆಗೆ ಮೃತ್ಯುವೂ ಕೂಡ. ಈ ಕಠೋರ ನಿಯಮಗಳಿಗೊಳಪಟ್ಟು ಕರ್ತವ್ಯ ಕರ್ಮನಿರತವಾಗಿರುತ್ತವೆ." ಎಂದು ಹೇಳಿರುವರು. ಈ ಕಠೋರವಾದ ಅನುಶಾಸನದ ರೀತಿಯು, ನಮ್ಮ ಋಷಿವರರಿಗೆ ಪೂರ್ಣವಾಗಿ ತಿಳಿದಿತ್ತು. ಆದರೂ ಅವರ ಕವಿ ಹೃದಯವು, ಹರ್ಷದಿಂದ 'ಆನಂದದಿಂದಲೇ ಜೀವಿಗಳ ಉತ್ಪತ್ತಿ ಅದರಿಂದಲೇ ವಿಕಾಸ, ಅಂತ್ಯದಲ್ಲಿ ಲಯರಲ್ಲೇ ಅವು ಲೀನವಾಗಿ ಹೋಗುತ್ತವೆ." ಎಂಬರ್ಥದ ಕವಿತೆಯನ್ನು ಹಾಡಿತು.

"ಆನಂದರೂಪಮೃತಮ್ ಯದ್ವಿಭಾತಿ." ಅರ್ಥಾತ್, ಆನಂದ ರೂಪದ ಮೂಲಕವೇ ಆ ಅಮರ ಶಕ್ತಿಯು ತನ್ನನ್ನು ಪ್ರಕಟಿಸಿಕೊಳ್ಳುವುದು. ಈ ಶಕ್ತಿಯ ಪೂರ್ಣ ಆನಂದವೇ ಸೃಷ್ಟಿಯ ರೂಪದಿಂದ ಪ್ರಕಟಿಗೊಳ್ಳುವುದು ಆಯಾ ರೂಪ, ನಿಯಮಗಳ ವ್ಯವಸ್ಥೆಯಂತೆ, ತನ್ನನ್ನು ಅನುಭವಮಾಡಿಕೊಳ್ಳುವಿಕೆಯೇ ಆನಂದದ ಪೂರ್ಣತೆಯ ಸ್ವಭಾವವಾಗಿದೆ. ರೂಪ ಹೀನವಾದ ವಸ್ತುವಿನಲ್ಲಿ, ಆನಂದವನ್ನುಂಟುಮಾಡುವುದಕ್ಕಾಗಿಯೇ ರಚನೆಗಳಾಗುವುವು. ಗಾಯಕನ ಆನಂದವು ಸಂಗೀತ ರೂಪದಿಂದ ಪ್ರಕಟಿಗೊಳ್ಳುವುದು. ಮನುಷ್ಯನು ವಿಧಾತನ ಪದವಿಯನ್ನು ಹೊಂದಲು ಸಮರ್ಥನಾಗುತ್ತಾನೆ. ಅರ್ಥಾತ್, ಆ ಆನಂದವು ಮನುಷ್ಯನಿಗೆ ಸೃಷ್ಟಿ ಕರ್ತನ ಪದವಿಯನ್ನು ಕೊಡುವುದು.

ಈ ಆನಂದದ ಇನ್ನೊಂದು ಹೆಸರು ಪ್ರೇಮವಾಗಿದೆ. ಸ್ವಭಾವದಿಂದಲೇ ಇದು ದ್ವಿತಮಯವಾಗಿದೆ. ಪ್ರತಿಯೊಬ್ಬ ಕಲಾಗಾರನೂ, ಗೀತವನ್ನು ಹಾಡುತ್ತಿರುವಗಾಯಕನೂ. ಶ್ರೋತಾ ಅಂದರೆ ಕೇಳುವವನೂ ಆಗುವನು. ಶ್ರೋತೃಗಳಲ್ಲಿ ಈ ಅಂಶ ವಿಶೇಷವಾಗಿರುವುದು. ಪ್ರೇಮಿಯು ತನ್ನ ಪ್ರಿಯ ವಸ್ತುವಿನಲ್ಲಿ ತನ್ನ ರೂಪದ ಛಾಯೆಯನ್ನೇ ಕಾಣುತ್ತಾನೆ ತನ್ನಪ್ರಿಯ ವಸ್ತುವಿನ ವಿಯೋಗದ ಕಲ್ಪನೆಯೂಕೂಡ ವಿಯೋಗದ ಬಳಿಕದ ಮಧುರ ಮಿಲನದ ಕಲ್ಪನೆಯಿಂದ ಆನಂದದ ಕೃತಿಯೂಗಿ ಆನಂದಮಯವಾಗುವುದು.

'ಅಮೃತಮ್,—ಅಮೃತ' ಆನಂದ ಇವು ದ್ವಿರೂಪವೂ ಆಗಿವೆ. ನಮ್ಮ ಆತ್ಮವು ತನ್ನನ್ನು ಎರಡು ರೂಪಗಳಿಂದ ವಿಭಾಗಿಸಿಕೊಳ್ಳುವುದು ಅದರೆ, ಈ ವಿಭಾಗಗಳು ಬೇರೆಯೂವುದೂ ಆಗಿರದೆ, ಪ್ರೇಮಿ ಮತ್ತು ಪ್ರಿಯ, ಎಂಬ ಇವರೆಡೇ ಆಗಿವೆ. ಇವುಗಳ ಬೇರ್ಪಡುವಿಕೆಯೇ ವಿಯೋಗವಾಗಿದೆ. ಈ ವಿಯೋಗವೇ ಜಗತ್ತಿನಲ್ಲಿ ವಾಸ್ತವಿಕವಾಗಿರುತ್ತಿದ್ದರೆ, ಕೇವಲ ದುಃಖ ಮತ್ತು—ಪಾಪದ ರಾಜ್ಯವೇ ಈ ಜಗತ್ತಿನಲ್ಲಿ ಉಳಿಯಬಹುದಿತ್ತು. ದುಃಖದಿಂದ ಆನಂದವೂ, ಪಾಪದಿಂದ ಪವಿತ್ರತೆಯೂ, ಹುಟ್ಟಿಲಾರವು. ಈ ಭಿನ್ನತೆಯನ್ನು ಏಕ ರೂಪದಲ್ಲಿ ಪರಿವರ್ತಿಸಲು, ಮತ್ತಲ್ಲಿ ಯಾವ ಸಾಧನ, ಸಾಮಗ್ರಿಯೂ ಇಲ್ಲ. ಭಾಷೆ, ಭಾವ, ಹೃದಯದ ಸಹಾನುಭೂತಿ, ಹಾಗೂ ಅತ್ಮೀಯತೆ, ಇವುಗಳಿಗೆ ಮಹತ್ವವೇ ಇಲ್ಲ; ಹೀಗಾಗಿದ್ದರೆ—ದೌರ್ಭಾಗ್ಯವೆನ್ನಬೇಕಾಗಿತ್ತು. ಆದರೆ ಸೌಭಾಗ್ಯ ವಶಾತ್, ಇದು ಹಾಗೆ ಆಗಿಲ್! ವಿಯೋಗವು ಕರಿಣ ಸತ್ಯ ಮಾತ್ರವಾಗಿರದೆ ದ್ರವಿತ ಅವಸ್ಥೆಯಲ್ಲಿಯೇ ಇರುವುದು. ವಿಯುಕ್ತ ವಸ್ತುಗಳು ತಮ್ಮ ರೂಪವನ್ನು ಬದಲಾಯಿಸುತ್ತ ಇರುತ್ತವೆ. ಒಂದು ಮತ್ತೊಂದರೊಡನೆ, ಸರಿಸಮಾನವೆಂಬಂತೆ ಇರುತ್ತವೆ. ಪರಮಾಣುವು ತನ್ನ ಸೀಮೆಯ ಬಂಧನವನ್ನು ಕಿತ್ತೊಗೆದು ಹೊಸ ವಿಶ್ರಾಣವನ್ನು ಸಿದ್ಧಪಡಿಸುತ್ತಿರುತ್ತದೆ. ಮತ್ತು ಜೀವನದ ಪರಿಭಾಷೆಯು—ದಿನದಿನಕ್ಕೆ ಅನಿಶ್ಚಿತವಾಗುತ್ತ ಹೋಗುವುದು.

ನಮ್ಮ ಆತ್ಮವು ವಿಶ್ವಾತ್ಮನಿಂದ ವಿಯೋಗ ಹೊಂದಿದ್ದರೂ, ಈ ವಿಯೋಗವು ಪ್ರೇಮದ ವಿಯೋಗವಾಗಿರುವುದು ಆದುದರಿಂದ ನಮ್ಮ ಆತ್ಮದಲ್ಲಿ—ಅಸತ್ಯ-ಕಷ್ಟ ಮತ್ತು ಪಾಪ, ಇವುಗಳ ಮೇಲೆ—ವಿಜಯ ಲಾಭ ಪಡೆಯುವ, ಶಕ್ತಿ ಇರುವುದು. ಮತ್ತು ಈ ಶಕ್ತಿಯು, ಇವುಗಳನ್ನು ಹೊಸ ಶಕ್ತಿ ಮತ್ತು ಸೌಂದರ್ಯ ಪೂರ್ಣ ರೂಪಗಳಲ್ಲಿ ಪರಿವರ್ತಿಸುತ್ತಲಿರುವುದು.

ಗಾಯಕನು ತನ್ನ ಆನಂದವನ್ನು ಗೀತದಲ್ಲಿ ಪರಿವರ್ತನೆಗೊಳಿಸುತ್ತಾನೆ, ಮತ್ತು ಈ ಪರಿಯಿಂದ ತನ್ನ ಆನಂದಕ್ಕೆ ಪ್ರತ್ಯಕ್ಷ ರೂಪವನ್ನು ಕೊಡುತ್ತಾನೆ. ಶ್ರೋತಾ ಅಂದರೆ ಕೇಳುವವನು ಮತ್ತೆ ಆ ಗೀತವನ್ನು ಅದರ ಮೂಲ ರೂಪವಾದ ಆನಂದಕ್ಕೆ ಪರಿವರ್ತಿಸುವನು. ಆನಂದದಿಂದಲೇ ಆ ಗೀತೆಯ ಉದಯವಾಯಿತು. ಆನಂದದಿಂದಲೇ ಅದು ವಿಕಾಸ ಹೊಂದಿತು. ಮತ್ತು ಆನಂದದಲ್ಲಿಯೇ ಅದು ಸೇರಿ ಹೋಯಿತು ಹೀಗಾಗುವಾಗ ಗಾಯಕ, ಹಾಗೂ ಶ್ರೋತೃ, ಇವರೊಳಗೆ, ಏಕರಸೋತ್ಪಾದನೆಯೊಗಿ ಏಕಾತ್ಮ ಭಾವ ಸ್ಥಾಪಿತವಾಗುವುದು.

ಅಸೀಮ ಆನಂದವೂ ಕೂಡ ಇದೇ ರೀತಿಯಿಂದ ತನ್ನನ್ನು ಅನೇಕ ರೂಪಗಳಲ್ಲಿ ಅನೇಕ ನಿಯಮಗಳ ಮಾಧ್ಯಮದಿಂದ — ಅಂದರೆ— ಈ ಮಾಧ್ಯಮದ ಮೂಲಕ, ಪ್ರಕಟೀಕರಿಸುವುದು. ಮತ್ತು ನಾವು ಆಯಾ ರೂಪಗಳನ್ನು ಮತ್ತೆ ಮತ್ತೆ ನಮ್ಮ ಆನಂದದಲ್ಲಿ ಪರಿವರ್ತನೆಗೊಳಿಸುತ್ತೇವೆ. ಮತ್ತು ಆ ನಿಯಮಗಳನ್ನು ಪ್ರೀತಿಯಿಂದ ಪ್ರೇಮವನ್ನಾಗಿಯೇ ಪರಿವರ್ತಿಸುತ್ತ ಖಂಡ ಖಂಡವಾದ ಒಂದು ಸೂತ್ರವನ್ನು ಮತ್ತೆ ಜೋಡಿಸಿ, ಅಖಂಡವನ್ನಾಗಿ ಮಾಡುತ್ತೇವೆ. ಈ ಪರಿಯಿಂದ ಈ ಸಂಕಲೆಯ ಅರ್ಥಾತ್, ಸಂಬಂಧವು ಜೋಡಿಸಲ್ಪಡುವುದು.

(ಸಶೇಷ)

(೨ನೇ ಪುಟದಿಂದ)

ಯೋಗಲು ಸಮರ್ಥ ಭಾಷೆ ಹಿಂದಿಯೇ ಎಂದು ಉದ್ಘೋಷಿಸಿದವರು. ದಕ್ಷಿಣ ಭಾರತದ ಕೆಲವೊಂದು ಭಾಗವನ್ನುಳಿದರೆ, ಇಡಿಯ ಭಾರತದಲ್ಲಿ ಹಿಂದಿಯನ್ನು ಅರ್ಥವಿಸಿಕೊಳ್ಳುತ್ತಾರೆ."—

ಸೇಠ್ ಗೋವಿಂದ ದಾಸರ ಉಪರುಕ್ತ ಕಥನ ವಾಸ್ತವವಾದುದು ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯಂತೆ ಬ್ರಹತ್ ಹಿಂದೀ ಪ್ರಚಾರಕಸಂಸ್ಥೆಯು ದಕ್ಷಿಣದ ಮೂರು ರಾಜ್ಯಗಳಲ್ಲಿ ತನ್ನ ಪ್ರಭುತ್ವವನ್ನು ಜಮಾಯಿಸಿದ್ದರೂ ತನ್ನ ಸ್ವಂತ ರಾಜ್ಯದಲ್ಲದು ಅಷ್ಟೊಂದು ಯಶಸ್ವಿಯಾಗಿ ಕೆಲಸ ನಿರ್ವಹಿಸಲಿಲ್ಲವೆಂದೇ ಹೇಳಬೇಕಾಗುತ್ತದೆ. ಪ್ರತ್ಯೇಕ ದ್ರವಿಡ ಸ್ಥಾನದ ಬೇಡಿಕೆಯನ್ನು ಮುಂದಿಟ್ಟು ಹಿಂದೀ ಭಾಷೆಯನ್ನು ಪ್ರತಿಭಟಿಸುವ ದ್ರಾವಿಡ ಮುನ್ನೇತ್ರ ಕಜಗಂಗೆ ಸ್ವಯಂ ಸರಕಾರವೇ ಅಂಜುತ್ತದೆ. ಈ ಕಾರಣದಿಂದ ಅಲ್ಲಿ ಹಿಂದಿಯು ಖಡ್ಗಾಯ ವಿಷಯವೆಂದು ಇನ್ನೂ ಗೊತ್ತುಮಾಡಿಲ್ಲ. ಪ್ರತ್ಯೇಕತೆಯ ಭಾವ ಕೆರಳಿಸುವ ಕಜಗಂಪ್ರತಾಪವನ್ನು ಇಳಿಸುವುದರಿಂದ ಏಕತೆಯ ಭಾವ, ಹಿಂದಿಯ ಕಡೆಗೆ ಸದ್ಭಾವಗಳು ಏಕಕಾಲದಲ್ಲಿ ಮೂಡಿಯೂವು.

ಕೋರ್ಟು ನೋಟೀಸು

ಉಡುಪಿ ಸಬೋರ್ಡಿನೇಟ್ ಜಡ್ಜರ ಕೋರ್ಟಿನಲ್ಲಿ

O. S. No 1/1961.

ಹೇಮಚಂದ್ರ —ವಾದಿ

ಮತ್ತು

ಕೆ. ಸಂಜೀವಯ್ಯ ಕೂಡಾ 6 ಜನರು —ಪ್ರತಿವಾದಿಗಳು

5ನೇ ಪ್ರತಿವಾದಿ—ವಸಂತ ಎನ್. ಕಂಭದಕೋಣೆ ನಾಗಪ್ಪಯ್ಯ ಯನ್. ಕಂಭದಕೋಣೆ ಇವರ ಮಗ, ಆಭರಣಗಳ ವ್ಯಾಪಾರಸ್ಥ, ಮಂಗಳೂರು ಜುಮ್ಮೆಲ್ಲರ ಮಾರ್ಕೆಟ್, ಗಾಮದೇವಿ, ಗ್ರೆಂಟ್‌ರೋಡ್, ಮುಂಬಯಿ-7 ಇವರಿಗೆ—

ಮೇಲ್ಕಾಣಿಸಿದ ಕೋರ್ಟಿನಲ್ಲಿ ವಾದಿಯು ಕೈಪಿಕಿನಲ್ಲಿ ಕಾಣಿಸಿದ ಬಿ. ಶೆಡ್ಯೂಲ್ ಸ್ಥಿರಸ್ಥಿತಿಗಳ ಜವಾಬ್ದಾರಿ ಮೇಲೆ ತನಗೆ ಬರತಕ್ಕ ಹಣಗಳ ಕುರಿತು, ನಿಮ್ಮ ಉಜುರು ಶಿಫಾರಿತ್ತಿಯನ್ನು ಕೇಳಿರುತ್ತಾನೆ. ಈ ಕುರಿತು ನಿಮ್ಮದೇನಾದರೂ ಆಕ್ಷೇಪಣೆಗಳಿದ್ದರೆ ಸರಿ ವ್ಯಾಜ್ಯದಲ್ಲಿ ಇದೇ ಬರುವ ನವಂಬರ 27 (22-11-1961)ನೇ ತಾರೀಕಿಗೆ ಬೆಳಿಗ್ಗೆ 11 ಗಂಟೆಗೆ ಸರಿಯಾಗಿ ನೀವು ಯಾ ನಿಮ್ಮ ವಕೀಲರು ಹಾಜರಿದ್ದು ದಾಖಲು ಮಾಡಬೇಕು. ಇಷ್ಟಕ್ಕೆ ನೀವು ತಪ್ಪಿದರೆ ನಿಮ್ಮ ಮೇರೆ ಎಕ್ಸ್‌ಪಾರ್ಟ್ ದಿಕ್ರಿಪಡೆಯಲು ಗುವುದು-ತಿಳಿದಿರಿ.

(ಕೋರ್ಟ್ ಹುಕುಮಿನ ಪ್ರಕಾರ)

(ಸಹಿ) ಬಿ. ಯೋಗೀಶ್ವರ ಹೊಳ್ಳ

ವಾದಿಯ ಕಡೆ ಎಡ್ವೋಕೇಟ್

ಮೊಕ್ಕಾಂ, ಉಡುಪಿ, 27-10-61.

PHONE 203 ESTD 1926

FOUNDATION STONE
Engraved
MARBLE TABLETS
(GOLD FILLED & LEAD FILLED)
DONE AT
Crown RUBBER STAMP CO.
BALMATTA ROAD, MANGALORE.

ಮೊದಲ ಹೆಜ್ಜೆ

ಒಂದು ಸೇವಿಂಗ್ಸ್ ಬ್ಯಾಂಕ್ ಖಾತೆಯನ್ನು ತೆರೆಯಲು ನೀವಿಡುವ ಮೊದಲ ಹೆಜ್ಜೆ—ನಿಮ್ಮ ಪ್ರಥಮ ಪ್ರಯತ್ನ ಅತ್ಯಂತ ಪ್ರಾಮುಖ್ಯವಾದುದು. ಯಾಕೆಂದರೆ ಅದು ನಿಮಗೆ ಆರ್ಥಿಕ ಸುಸ್ಥಿರತೆ, ಸಾಮಾಜಿಕ ಯಶಸ್ಸುಗಳಿಗೆ ಹೊಸ ಅವಕಾಶಗಳನ್ನು ಒದಗಿಸಿಕೊಟ್ಟು ಭವಿಷ್ಯತ್ತಿನ ಸುಖದತ್ತ ನಿಮ್ಮನ್ನು ಮುನ್ನಡೆಸುವುದು.

ಒಂದು ಸೇವಿಂಗ್ಸ್ ಬ್ಯಾಂಕ್ ಖಾತೆಯನ್ನು ತೆರೆಯಿರಿ.

ಸಿಂಡಿಕೇಟ್ ಬ್ಯಾಂಕ್

ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸ್: ಮುಕುಂದ ನಿವಾಸ, ಉಡುಪಿ, (ಮೈಸೂರು ರಾಜ್ಯ)

ಸ್ಥಾಪನೆ: ೧೯೩೫

Edited Printed & Published by K. H. Shetty, at the Navayuga Press, Udipi, S. India.

ನವಯುಗ

ದೀಪಾವಳಿ ಸಂಚಿಕೆ

೧೯೬೧

ಬೆಲೆ: ೨೦ ನ. ಪೈಸೆ

NAVAYUGA
DEEPAVALI
SPECIAL
1961

ದೀಪಾವಳಿಯ ಶುಭಾಶಯಗಳು.

ದಿ ಪಾಂಗಾಳ ನಾಯಕ್ ಬ್ಯಾಂಕ್ ಲಿ.,

ನಮ್ಮ 3 ವರ್ಷ ವ್ಯಾದೆಯ ಕ್ಯಾಶ್ ಸರ್ಟಿಫಿಕೇಟುಗಳಲ್ಲಿ ಠೇವಣಿ ಮಾಡಿರಿ;
ಬಡ್ಡಿ ಶೇಕಡ 5 ರಂತೆ;
ರೂ. 87 - 00, 3 ವರ್ಷಗಳ ಅಂತ್ಯದಲ್ಲಿ
ಬಡ್ಡಿ ಕೂಡಿ ರೂ. 100-00 ಒದಗಿಸುವುದು.

ಕರೆ, ಚಿಕ್ಕ ವ್ಯಾದೆ, ನಿರಖು ಠೇವಣಾತಿಗಳ ಮೇಲೆ ಆಕರ್ಷಣೀಯ ಶರ್ತಗಳು: ಬಡ್ಡಿ ಶೇಕಡ 5½ರ ವರೆಗೆ.
ತಾ. 1—4—1961 ರಿಂದ ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಬಡ್ಡಿ ಶೇಕಡ 3ರಂತೆ.

THE PANGAL NAYAK BANK LTD.

ESTD. 1920

(Regd. Office: UDIPI, S. KANARA)

ಹಬ್ಬಗಳ ರಾಜ ದೀಪಾವಳಿ!
ಫರ್ನಿಚರುಗಳ ರಾಜ ಖೀರಾ!!

ಪಂಚ್ಯಾತುಗಳಿಗೆ ಮತ್ತು ಮನೆಗಳಿಗೆ ಅತ್ಯನುಕೂಲವಾದ

ಖೀರಾ ರವರ 'ಪೊಪುಲರ್'

65" × 33" × 19"

ನಡುತರದ ಕಪಾಟುಗಳು ನಮ್ಮ ವೈಶಿಷ್ಟ್ಯ.

ವಿವಿಧ ರೀತಿಯ ಕಪಾಟು, ಮೇಜು, ಕುರ್ಚಿ, ಮಂಚ ವಗೈರೆ ಎಲ್ಲಾ ತರದ ಉಕ್ಕಿನ ಫರ್ನಿಚರು.

ಅತ್ಯಾಧುನಿಕ ಕಟ್ಟಡಗಳಿಗೆ ಬೇಕಾಗುವ ಉಕ್ಕಿನ ಕಿಟಕಿ, ಬಾಗಿಲು, ಕಿಟಕಿ ಗ್ರಿಲ್
ಕಂಪೌಂಡ್ ಗೇಟ್ ಇತ್ಯಾದಿ, ಇತ್ಯಾದಿ.

ದ್ವಿಮುಖ ಉಪಯೋಗೀ — ಸೋಫಾ—ಬೆಡ್ —

ಹೆಚ್ಚಿನ ವಿವರಗಳಿಗೆ—

ಶಾಸ್ತ್ರಿ ಎಂಡ್ ಕಂಪೆನಿ

ಹಂಪನಕಟ್ಟೆ, ಮಂಗಳೂರು-1.

ESTD. 1921 ಸ್ಥಾಪನೆ

NAVAYUGA
KANNADA WEEKLY, UDIPI.

Founder:
Late Sri A. B. Shetty
Former Minister for Public Health, Govt. of Madras & Govt. of Mysore.

ನವಯುಗ
ರಾಷ್ಟ್ರೀಯ ವಾರಪತ್ರಿಕೆ
ಉಡುಪಿ

ಗೌರವ ಸಂಪಾದಕರು:
ಎಸ್. ಗೋಪೀಚಂದ ರಾವ್,
ವಿದ್ವಾನ್.
ಬಿ. ಶಾಮರಾಯ ಶೆಟ್ಟಿ,
ಬಿ. ಎ., ಎಲ್.ಟಿ.

ಸಂಚಾಲಕ ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ.

O

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-50
ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3-50

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

O

1962ನೇ ಜನವರಿ 26
ನವಯುಗದ
ಪ್ರಜಾರಾಜ್ಯ
ವಿಶೇಷಾಂಕ

ಎಂದಿಗಿಂತಲೂ ಮಿಗಿಲಾದ ರೀತಿಯಲ್ಲಿ ಸಚಿತ್ರವಾಗಿಯೂ ಆಕರ್ಷಣೀಯವಾಗಿಯೂ ಪ್ರಕಟವಾಗಲಿದೆ.

ಸಂಘ, ಸಂಸ್ಥೆಗಳ ಸಂಕ್ಷಿಪ್ತ ಪರಿಚಯವನ್ನು ಕೊಡಲಾಗುವುದು.

ಜಾಹೀರಾತು ದರಗಳಿಗೂ ಹೆಚ್ಚಿನ ವಿವರಗಳಿಗೂ ಬರೆಯಿರಿ.

ಮೆನೇಜರ್,
ನವಯುಗ, ಉಡುಪಿ

ನ ವ ಯು ಗ

ದೀಪಾವಳಿ ಸಂಚಿಕೆ 1961

VOL 41 No. 10
ಸಂಪುಟ ೪೧ ಸಚಿಕೆ ೧೦

ದೀಪಾವಳಿಯ ಅಮರ ಸಂದೇಶ

ದೀಪಮಾಲಿಕೆಯನ್ನು ಹಚ್ಚಿ ಪ್ರಬುದ್ಧಿಯು ಅಂಧಕಾರವನ್ನು ಕಡಿಮೆಯಾಗಿಸಿ ಪ್ರಕೃತಿಯ ಸೌಂದರ್ಯಾಸ್ವಾದನೆ ಮಾಡಿ ಸಂತಸದಾಳುವ ದೀಪಾವಳಿಯು ಹಬ್ಬ ಬಂದಿದೆ. ಬಡವಬಲ್ಲಿದರೆನ್ನದೆ ಪಂಡಿತಪಾಮರರೆನ್ನದೆ ಸಮಸ್ತ ಭಾರತೀಯರು ಆಚರಿಸುವ ಅದ್ವಿತೀಯ ಪರ್ವದಿನವಿದು. ದೀಪಾವಳಿಯ ಹಬ್ಬದ ದಿನ ಉಂಡುತಿಂದು ನಲಿದಾಡಿದರೆ ಮಾತ್ರವಾಲದು; ಈ ದಿನ ಮಾನವಕೋಟಿಗೆ ನೀಡುವ ಅಮರ ಸಂದೇಶವನ್ನು ಕೇಳಿ, ಅದನ್ನು ಅರಿತುಕೊಂಡು, ಅದು ತೋರಿಸುವ ಮಾರ್ಗದಲ್ಲಿ ಮುನ್ನಡೆಯಬೇಕು; ಮಾನವತೆಯ ದಾರಿಯಲ್ಲಿ ನಾಗಿ, ಬದುಕನ್ನು ಸಾರ್ಥಕಗೊಳಿಸಬೇಕು. ದೀಪಾವಳಿಯ ಪ್ರತಿಯೊಂದು ದೀಪವೂ ನಮ್ಮ ಹೃದಯದಲ್ಲಿ ತುಂಬಿರುವ ಅಂಧ ತಮಸ್ಸನ್ನು ದೂರವೋಡಿಸಿ, ನವ ಪ್ರಕಾಶವನ್ನು ಬೀರಬೇಕು; ಈ ಪ್ರಕಾಶದ ಬಲದಿಂದ ನಾವು ಪಶುತ್ವದಿಂದ ಮಾನವತೆಯತ್ತ ಭ್ರಮಿಸುವಂತಾಗಬೇಕು.

ಇಂದು ನಮ್ಮ ಆಚರಣೆಯ ಹಬ್ಬಗಳು ಬಾಹ್ಯಾಡಂಬರಪೂರ್ಣವಾಗಿವೆಯೆಂದು ವಿಷಾದದಿಂದೆನ್ನಬೇಕಾಗಿದೆ. ಮಾನವನ ಪ್ರಕೃತಿ—ಪ್ರವೃತ್ತಿಗಳೆರಡೂ ಬಹಿರಾಡಂಬರಗಳಿಗೆ ಮನ್ನಣೆಯೊಯ ತೊಡಗಿದುದರಿಂದ ಹೀಗಾಯಿತೆಂಬುದು ನಿಜ. ಆದರೆ, ನಮ್ಮ ಕಣ್ಣಿಗೆ ತೋರುವುದೇ ಸತ್ಯ. ಉಳಿದುದೆಲ್ಲ ಮಿಥ್ಯವೆನ್ನುವುದು ಸಾಧುವಲ್ಲ ಅಂತಃಕರಣಪೂರ್ವಕವಾಗಿ ನಾವು ವಿವೇಚಿಸುವುದಾದರೆ, ನಮ್ಮ ಪೂರ್ವಜರು ಯುಕ್ತಿಯುಕ್ತವಾಗಿಯೇ ಸರ್ವದಿನಗಳನ್ನು ಆಚರಿಸುತ್ತಿದ್ದರೆಂಬುದು ತಿಳಿಯುತ್ತದೆ. ಹಲವಾರು ಸಾವಿರ ವರ್ಷಗಳಿಂದಲೂ ಅನಿಚ್ಛಿನ್ನವಾಗಿ ನಡೆದು ಬಂದು ನಮ್ಮ ಸಂಸ್ಕೃತಿಯ ಅಂಗವಾಗಿ ಪರಿಣಮಿಸಿದ ದೀಪಾವಳಿ ಮಾನವನ ಹೃನ್ಮಂದಿರದಲ್ಲಿ ಪ್ರಕಾಶ ಬೀರಬೇಕು. ಆತನು ಸನ್ಮಾರ್ಗದಲ್ಲಿ ನಡೆಯಬೇಕು; ತಪ್ಪಿದ ದಾರಿಯನ್ನು ಜ್ಞಾನಜ್ಯೋತಿಯ ಬೆಳಕಿನಲ್ಲಿ ಅರಿತುಕೊಂಡು ಸರಿಗೊಳಿಸಬೇಕು.

ಈ ವರ್ಷದ ದೀಪಾವಳಿಯ ದಿನಗಳು ಕುಂಬ ವಿಕ್ಷೋಭಕಾರಕ ಸಮಯದಲ್ಲಿ ಬಂದಿವೆ ವಿಶ್ವದ ಸನ್ನಿವೇಶಗಳು ಕ್ಷಣದಿಂದ ಕ್ಷಣಕ್ಕೆ ಬದಲಾಗುತ್ತಿವೆ. ರಕ್ಷ್ಯವು ಅಣ್ವಸ್ತ್ರ ಪರೀಕ್ಷೆಗಳಿಗೆ ತೊಡಗಿದ್ದುದು ಮೊತ್ತವಲ್ಲ, ಅದು ಅತ್ಯದ್ಭುತ ಶಕ್ತಿಯುತ ಬಾಂಬನ್ನು ಪರೀಕ್ಷಿಸಿ, ಮಯಾ ಸಾಹಸವೆಸಗಿದೆಯೆಂದು ಹೆಮ್ಮೆಪಡುತ್ತಿದೆ. ಜಗತ್ತಿನ ಜನತೆಯ ಕರುಣಾರ್ದ್ರ ಮೊರೆಯನ್ನೂ ಕೇಳದ ರೂಕ್ಷ ರಾಕ್ಷಸನಂತೆ ಅದು ತನ್ನ ನಿಲುಮೆಯನ್ನು ನಿಶ್ಚಯಿಸಿಕೊಂಡು ವಿಶ್ವನಾಶಕವೆನಿಸಿದ ಅಣ್ವಸ್ತ್ರಾವಳಿಕೆಯನ್ನು ತಯಾರಿಸುತ್ತ ಬಂದಿದೆ. ಇದರಿಂದಾಗಿ ಉಳಿದ ಮಹಾರಾಷ್ಟ್ರಗಳೂ ಸುಮ್ಮನುಳಿಯಲು ಹಿಂದೆ ಮುಂದೆ ನೋಡುತ್ತಿವೆ. ಹೀಗೆಯೇ ಪರಸ್ಪರಾರ್ಥ ಸ್ಪೋಟನೆಗಳು ನಿರಂತರ ನಡೆಯುವುದು ತಾಮಸ ಪ್ರವೃತ್ತಿಯ ದ್ಯೋತಕ; ಮಾನವತೆಯ ಅವಹೇಳನ, ಪಶುತ್ವದ ಪ್ರತೀಕ. ಭಾರತೀಯರು ಆಚರಿಸುವ ದೀಪಾವಳಿಯು ಇಂತಹ ತಾಮಸಕಾರ್ಯ ಪ್ರವೃತ್ತರ ಹೃದಯಗಳಲ್ಲಿ ಸಾತ್ವಿಕ ಭಾವನೆಯುದಿಸುವಂತೆ ಮಾಡಲಿ; ದೀಪಾವಳಿಯ ಸುಸಂದರ್ಭದಲ್ಲೇ ಅಮೆರಿಕೆಯಲ್ಲಿ ಅಧ್ಯಕ್ಷ ಕೆನ್ನೆಡಿಯವರನ್ನು ಕಾಣುವ ಭಾರತೀಯ ಪ್ರಧಾನಿ ನೆಹರು ಅವರಲ್ಲಿ ಸದ್ಭಾವನೆ ಮೂಡುವಂತೆಯಗುವುದರಲ್ಲಿ ಸಫಲರಾಗಲಿ; ವಿಶ್ವದ ಶ್ವೇತ ರಮಸ ಕಾರ್ಯದಲ್ಲಿ ಮಹತ್ವದ ಪಾತ್ರ ವಹಿಸುತ್ತಿರುವ ನಮ್ಮ ನೆಹರು ಜಾಗತಿಕ ನಾಯಕರಲ್ಲಿ ಹುದುಗಿದ ತಪ್ಪು ತಿಳುವಳಿಕೆಯ ಕತ್ತಲೆಯನ್ನು ದೀಪಾವಳಿಯ ಪ್ರಕಾಶದಿಂದ ಬೆಳಗಿಸಲಿ; ಇದರಿಂದ ಮಾನವತೆಯ ಪ್ರತಿಷ್ಠಾಪನೆಯಾಗುವಂತಾಗಲಿ.

ನಮ್ಮ ದೇಶದಲ್ಲಾದರೂ ಪರಿಸ್ಥಿತಿ ಸಂತೋಷಜನಕವಿದೆಯೆನ್ನುವಂತಿಲ್ಲ, ಜಾತೀಯತೆ ಪ್ರಾಂತೀಯತೆ-ಭಾಷೀಯತೆಯ ಭಾವ ಅನೈಕ್ಯವನ್ನು ಹೆಚ್ಚಿಸಿ, ಅಶಾಂತಿಗೆ ಕಾರಣವೆನಿಸಿದೆ. ಬದಲಾಗುತ್ತಿರುವ ಪರಿಸ್ಥಿತಿಗೆ ಹೊಂದಿಕೊಂಡು ನಮ್ಮ ಸಂಸ್ಕೃತಿಗೆ ಕುಂದನ್ನು ತಂದುಕೊಳ್ಳದೆ, ಭಾರತೀಯತೆಯನ್ನು ಉಳಿಸಿ, ಅದನ್ನು ಬೆಳೆಸುತ್ತ ಬರುವುದು ನಮ್ಮೆಲ್ಲರ ಕರ್ತವ್ಯ ನಮ್ಮ ರಾಷ್ಟ್ರನಾಯಕರು ದೇಶದ ಹಿತವನ್ನು ಲಕ್ಷ್ಯನಲ್ಲಿಟ್ಟುಕೊಂಡು ಪ್ರವರ್ತಿಸುವ ಪ್ರತಿಯೊಂದು ಕಾರ್ಯದಲ್ಲೂ ಮನಃಪೂರ್ವಕವಾಗಿ ನಾವು ದುಡಿಯಬೇಕು; ನಮ್ಮಲ್ಲಿ ಹುದುಗಿರುವ ಸಂಕುಚಿತ, ಸ್ವಾರ್ಥ, ಮಂಚಕ, ದ್ವೇಷ, ಮತ್ಸರ ರೂಪದ ಕ್ರಿಮಿಗಳನ್ನು ತೊಡೆದು ದೇಶಸೇವೆಗೆ ವೇಷ ಸಜ್ಜಿಸುವ ದೀಕ್ಷೆಯನ್ನು ತೊಡಬೇಕು.

ಲಂಚ, ರುಶುವತ್ತು, ವಶೀಲಿ, ಮತ್ಸರ, ಜಾತೀಯತೆ, ಅನೈಕ್ಯ ಮೊದಲಾದುವು ನರಕಾಸುರನ ವಿರಾಟ್‌ರೂಪ. ಈ ಅಸುರನ ದಮನವನ್ನು ಸಾಧು ಪುರುಷ ನಾರಿಯರು ಒಂದಾಗಿ ಮಾಡಬೇಕು; ತಮ್ಮ ಬಲ, ಸಂಪತ್ತುಗಳಿಂದ ಕೊಬ್ಬಿದ ಬಲಿಚಕ್ರವರ್ತಿಗಳ ಸಂಖ್ಯೆಯೇನೂ ವಿರಳವಿಲ್ಲ. ಈ ಬಲಿಗಳನ್ನು ಉಪಾಯದಿಂದಲೇ ಗೆದ್ದು ಲೋಕ ಸುಭಿಕ್ಷೆ ಮಾಡುವ ವಾಮನಾವತಾರವಿಂದಾಗಬೇಕು. ಗೋವುಗಳ ಭಕ್ಷಣೆಯು ಒಂದೆಡೆ ನಡೆಯುತ್ತಿರುವಾಗ, ಅವುಗಳ ರಕ್ಷಣೆಯ ಪವಿತ್ರ ಕಾರ್ಯವಾಗಬೇಕು; ತುಳಸಿಯಂತಹ ನಿರುಪದ್ರವಿ—ಉಪಕಾರಿಗಳ ಸಮ್ಮಾನವಾಗಬೇಕು. ದೀಪಾವಳಿಯ ಈ ಶುಭ ದಿನಗಳು ನಮ್ಮೆಲ್ಲರನ್ನು ತಮಸ್ಸಿನಿಂದ ಜ್ಯೋತಿಯತ್ತ ಸಾಗುವಂತೆ ಪ್ರೇರೇಪಿಸಲಿ ತಾಮಸತೆಯಿಂದ ಸಾತ್ವಿಕತೆಯತ್ತ ಮುನ್ನಡೆಸಲಿ

ಕೃತಜ್ಞತೆಗಳು

ಈ ದೀಪಾವಳಿಯ ಸಂಚಿಕೆಯ ಪ್ರಕಾಶನ ಕಾರ್ಯದಲ್ಲಿ ಲೇಖನಗಳ ಲೇಖಕ ಮಹಾಶಯರು ಜಾಹೀರಾತುಗಳನ್ನು ತ್ತು ಸಹಕರಿಸಿ ಉದ್ದಿಮೆದಾರ ಬಂಧುಗಳು ಜೊಕ್ಕಾಗಿ ಮುದ್ರಣದ ಕಾರ್ಯದಲ್ಲಿ ಸಹಕರಿಸಿದಮುದ್ರಣಾಲಯದನೌಕರವರ್ಗಗಳಿಗೆ ನಮ್ಮ ಕೃತಜ್ಞತೆಗಳು. ಬೇರೆ ಬೇರೆ ರೀತಿಯಲ್ಲಿ ಸಹಕರಿಸಿದ ಪ್ರೊ| ಕು ಶಿ. ಹರಿದಾಸ ಭಟ್ಟ, ಶ್ರೀ ಎಸ್. ಎಂ. ಶೆಟ್ಟಿ ಶಿಮುಂಜೆ ಪರಾರಿ, ಮಣಿಪಾಲ ಪವರ್ ಪ್ರೆಸ್ಸಿನ ಶ್ರೀ ಬಿ. ಕೃಷ್ಣಯ್ಯ ಮತ್ತು ಪ್ರತಿಯೂ ಪ್ರಕಾಶನದ ಶ್ರೀ ಯು. ವ್ಯಾಸರಾವ್ ಇವರಿಗೆಲ್ಲಾ ನಮ್ಮ ಹಾರ್ದಿಕ ಕೃತಜ್ಞತೆಗಳು.

ಪುತ್ತೂರು ಡಿ. ಮು. ಕೋರ್ಟಿನಲ್ಲಿ
S. C. 299/1961.

ಪಂಸ ಬ್ಯಾರಿ —ವಾದಿ.
ಪರಮೇಶ್ವರ ಗೌಡ ವೆಂಕಪ್ಪ ಗೌಡರ ಮಗ್ಗ ಪುತ್ತೂರು ತಾಲೂಕು, ನಾಲ್ಕೂರು ಗ್ರಾಮದಲ್ಲಿ —ಪ್ರತಿವಾದಿ.
—ಪ್ರತಿವಾದಿಗೆ ತಿಳಿಸುವುದೇನೆಂದರೆ

ನಿಮ್ಮಿಂದ ವಾದಿಗೆ ಡಿ. ಪ್ರೊ. ನೋಟು ಪ್ರಕಾರ ಸರತ್ತಿ ಹಣದ ವಸೂಲಿಗೆ ವಾದಿಯು ದಾಕಲುಮಾಡಿದ ಈ ದಾವೆಯು ತಾ. 16—11—61ಕ್ಕೆ ಇರುವುದರಿಂದ ನಿಮಗೇನಾದರೂ ಆಕ್ಷೇಪಣೆ ಇದ್ದಲ್ಲಿ ಆ ದಿವಸ ಉದಯಸಿಕೊಳ್ಳತಕ್ಕದ್ದು. ತಪ್ಪಿದರೆ ನಿಮ್ಮ ಗೈರು ಹಾಜರ್ಯಲ್ಲಿ ತೀರ್ಮಾನಿಸಲಾದೀತು.

A Radhakrishna Gowda,
Advocate for Plaintiff
ಪುತ್ತೂರು, 28-10-61.

ಉಡ್ಪಿ ಡಿ. ಮು ಕೋರ್ಟಿನಲ್ಲಿ
R. E. P. 43/1961 O. S. 28/1953

ಪೂರ್ಟಿನ ಸಜ್ರತ್ ಕೂಡಾ —ಅರ್ಜಿದಾರರು
ಮತ್ತು
ನರಸಿಂಹ ಪಡಿಯಾರ ಕೂಡಾ —ಎದ್ರಿರು.
ಇವರೆಲ್ಲಿಗೆ

—ಉಡ್ಪಿ ತಾಲ್ಕು ಮೂಡುತೋನ್ಸೆ ಗ್ರಾಮದಲ್ಲಿರುವ ನರಸಿಂಹ ಪಡಿಯಾರ್ರ ಮಕ್ಕಳು 3ನೇ ಎದ್ರಿ ಶಾಂತಾರಾಮ ಪಡಿಯಾರ ಮತ್ತು 4ನೇ ಎದ್ರಿ ರಾಜರಾಮ ಪಡಿಯಾರರಿಗೆ ಸಹಾ

ಮೇಲ್ಕಂಡ ಅಪ್ಲಿಕೇಶನ್‌ಯಲ್ಲಿ ಅರ್ಜಿದಾರರು ಪ್ರ ದಿಕ್ರಿಯ ಸ್ವಿರಾಸ್ತಿಗಳ ಮೂಂಟದ ಬಗ್ಗೆ ಯೇಲಂ ಯಿಸ್ತಿದಾರು ದಾಕ್ಲು ಮಾಡಿರುತ್ತಾರೆ. ಸದ್ರಿ ಯಿಸ್ತಿದಾರಿನ ಕರ್ತಗಳನ್ನು ನಿರ್ಣಯ್ಸುವಿಕ್ಕೆ ಮೇಲಿನ ಅಪ್ಲಿಕೇಶನ್ ತಾ. 17—11—61ಕ್ಕೆ ಇಟ್ಟೇರಾಗಿಯದೆ ಎಂತ ಈ ಮೂಲ್ಕ ನಿಮಗೆ ತಿಳಿಸೋಣಾಗುತ್ತದೆ.

B. Vasudeva Rao,
Councel for Petitioners
Udipi, 1—11—61.

ಶಿಕ್ಷಣರಂಗದಲ್ಲಿ ಭಾವೈಕ್ಯದ ದಾಳಿ

ಕು. ಶಿ. ಹರಿದಾಸ ಭಟ್ಟ, ಎಂ ಎ.

'ಭಾವೈಕ್ಯ'ಎಂಬ ಪದಪುಂಜವು ಇತ್ತೀಚೆಗೆ ಚಲಾವಣೆಗೆ ಬಂದ ಹೊಸ ನಾಣ್ಯ. ನೆಹರೂ ಅವರ ಬಾಯಿಯಿಂದ ಹೊರಟ ಮೇಲೆ ನಾಡಿನ ಉದ್ದಗಲಕ್ಕೂ ಅದು ಹರಡಿಕೊಂಡಿದೆ 'ಐಕ್ಯ' ಎಂಬ ಪದದಿಂದ ಸಾಧ್ಯವಾಗದ ಯಾವುದೋ ಪುರುಷಾರ್ಥ 'ಭಾವೈಕ್ಯ'ದಿಂದ ಸಾಧ್ಯವೆಂದು ನಂಬಿದವರು ನಂಬಿದ್ದಾರೆ. ನಮ್ಮೊಳಗಿನ ಭೇದ ಭಾವನೆಗಳೆಲ್ಲ ಮರೆತು ಹೋಗಲು ನಮ್ಮ ಮನಸ್ಸು—ಹೃದಯ ಒಂದಾಗಬೇಕೆನ್ನುವುದು ಇದರ ಸ್ಥೂಲ ಕಲ್ಪನೆ ಇರಬೇಕು. ಎಲ್ಲ ಜನ ಒಂದೇ ರೀತಿ ಯೋಚಿಸಬೇಕು ಎಂದರೇನೆ ಕಷ್ಟವಾಗಿರುವಾಗ, ಎಲ್ಲರೂ ಒಂದೇ ಬಗೆಯಾಗಿ ಭಾವಿಸಬೇಕು ಎನ್ನುವುದು ಇನ್ನಷ್ಟು ಗಡುತರ. ಇದು ಯಾವ ಯಾಂತ್ರಿಕ ಸಂವಿಧಾನದಿಂದಲೂ ನಡೆಯಲಾರದ ಮನಸ್ಸಿನ ಕ್ರಿಯೆ. ಲಕ್ಷ ಕೋಟಿ ಜನರಲ್ಲಿ ಒಂದು ಮನೆಯೊಳಗಿನ ಜನರಂತೆ ನಿಕಟ ಪರಿಚಯ, ಬಾಂಧವ್ಯ, ಬಳಕೆ ಬೆಳೆದರೆ ಮಾತ್ರ ಸಾಧ್ಯವಾಗಬಹುದಾದ ವಿಷಯ. ಮನುಷ್ಯನ ರಾಗದ್ವೇಷಗಳಿಗೆ, ಮನಸ್ಸಿನ ಸಂವಾಕಕ್ಕೆ ಸಂಬಂಧಿಸಿದ ಒಂದು ವಿಷಯವನ್ನು ನಮಗೆ ಹಿತವಾದ ದಾರಿಗೆ ತಿರುಗಿಸುತ್ತೇವೆನ್ನುವುದು ಧಾಷ್ಟ್ಯವೇ ಸರಿ.

ಮೊನ್ನೆ ತಾನೇ ದಿಲ್ಲಿಯಲ್ಲಿ (ಎಲ್ಲ ಭಾವೈಕ್ಯವೂ ದಿಲ್ಲಿಯಲ್ಲಿ ಮಾತ್ರ ಉಗಮವಾಗುವುದೇನೋ!) ವಿಶ್ವವಿದ್ಯಾನಿಲಯದ ಕುಲಪತಿಗಳು ಸಭೆ ಸೇರಿ ಅಷ್ಟು ಸೂತ್ರಗಳುಳ್ಳ ಒಂದು ಯೋಜನೆಯ ರಂಗವಲ್ಲಿಯನ್ನು ಬರೆದಿಟ್ಟಿದ್ದಾರೆ. ಇದನ್ನಷ್ಟು ವಿಮರ್ಶಿಸುವುದು ಪ್ರಸ್ತುತ ಲೇಖನದ ಉದ್ದೇಶ.

(೧) ಪ್ರತಿ ವಿಶ್ವವಿದ್ಯಾಲಯವು ತನ್ನ ಕಾಲೇಜುಗಳಲ್ಲೂ ಹೋಸ್ಟೆಲುಗಳಲ್ಲೂ ಬೇರೆ ಪ್ರಾಂತದ ನಿರ್ದಿಷ್ಟ ಸಂಖ್ಯೆಯ ವಿದ್ಯಾರ್ಥಿಗಳಿಗೆ ಅವಕಾಶಕೊಡಬೇಕು. ಪ್ರತಿಯೊಂದು ರಾಜ್ಯದಲ್ಲಿಯೂ ಆ ರಾಜ್ಯದ ಭಾಷೆಯೇ ಮಾಧ್ಯಮವಾಗಬೇಕೆಂಬ ಒತ್ತಡ ಪ್ರಬಲವಾಗುತ್ತಿರುವ ವೇಳೆ, ಹಾಗಾಗಬೇಕೆನ್ನುವ ಕುಲಪತಿಗಳೂ ಹಾಜರಿರುವ ಸರ್ವೇಕ್ಷಣದಲ್ಲಿ ಈ ನಿರ್ಣಯಕ್ಕೆ ಯಾವ ಪ್ರಾಮಾಣಿಕ ಬೆಲೆಕಟ್ಟಬೇಕೋ ತಿಳಿಯೆವು. ಆಯಾ ರಾಜ್ಯದ ಮಾಧ್ಯಮವು ವಿಶ್ವವಿದ್ಯಾಲಯದ ಹಂತದಲ್ಲಿಯೂ ಪ್ರಚುರವಾದ ಮೇಲೆ ರಾಜ್ಯಗಳೊಳಗಿನ ಬೌದ್ಧಿಕ—ಮಾನಸಿಕ ಸಂಪರ್ಕವು ಇನ್ನಷ್ಟು ಜಟಿಲ ಸಮಸ್ಯೆಯಾಗುವುದರಲ್ಲಿ ಸಂದೇಹವೇನು?

ಮೊದಲ ಸೂತ್ರದ ಕೊನೆಯ ವಾಕ್ಯಕ್ಕೂ ಮೊದಲವಾಕ್ಯಕ್ಕೂ ಸಂಬಂಧವಿದ್ದಂತೆ ತೋರುವುದಿಲ್ಲ. ಉಪಾಧ್ಯಾಯರ ನೇಮಕದಲ್ಲಿ ಯಾವ ಪಕ್ಷಪಾತವೂ ಇರಕೂಡದು, ಕೇವಲ ಅರ್ಹತೆಯೊಂದೇ ನಿಷ್ಠಾಯಕ ತತ್ವವಾಗಿರಬೇಕು ಜಾತಿ-ಕುಲ-ಗೋತ್ರಗಳ ಪಕ್ಷಪಾತವಿಲ್ಲದೆ ಇಂದು ಯಾವ ವಿಶ್ವವಿದ್ಯಾಲಯದಲ್ಲಿಯೂ ನೇಮಕಗಳು ಆಗುತ್ತಿರುವಂತೆ ತೋರುವುದಿಲ್ಲ. ಇಂದು ಬೌದ್ಧಿಕ ಉನ್ನತಿ ಪರಿಶ್ರಮಕ್ಕೆ ಗೌರವ ಸಿಗದೆ ಇರುವ ಸ್ಥಳವು ಯಾವುದಾದರೂ ಇರುವುದಾದರೆ ಅದು—ನಮ್ಮ ವಿಶ್ವವಿದ್ಯಾಲಯವೆನ್ನದೆ ಗತ್ಯಂತರ ಏಲ್ಲ.

(೨) ಪಠ್ಯ ಪುಸ್ತಕಗಳನ್ನು ಒಂದು ಕೇಂದ್ರೀಯ ಮಂಡಳಿಯು ರಚಿಸಬೇಕು. ಇದು ಸರ್ಕಾರಿ ಮಂಡಳಿಯಾಗ ಕೂಡದು ಕೇಂದ್ರೀಯವಾದ ಒಂದು ಸ್ವತಂತ್ರ ಮಂಡಳಿಯ ಕಲ್ಪನೆ ಒಳ್ಳೇಯದಾಗಿದ್ದರೂ, ಸರ್ಕಾರದ ಹಸ್ತಾಕ್ಷೇಪವು ಮಂಡಳಿಯ ನೇಮಕದಲ್ಲಿಯೇ ತೋರಿ ಬರಲಿರುವುದರಿಂದ ಬೆಳೆಯ ಗುಣವನ್ನು ಮೊಳಕೆಯಲ್ಲೇ ಕಂಡು ಹಿಡಿಯಬಹುದು. ಪಠ್ಯಪುಸ್ತಕಗಳನ್ನು ರಚಿಸಿ, ನುರಿತ ಜನರ ಸೇವೆಯನ್ನು ಒಪ್ಪಿಕೊಳ್ಳುವ ಬುದ್ಧಿ ನಮ್ಮ ಸರ್ಕಾರಕ್ಕೆ ಬಂದೀತೇ? ಸರ್ಕಾರದ ಸಮಿತಿ, ಮಂಡಳಿ ಎಂದ ಕೂಡಲೆ ಮೇಲಿ ಹಚ್ಚುವ ಸದಸ್ಯರು ಕ್ಯೂ ನಿಲ್ಲುತ್ತಾರೆ. ಅವರದೇ ಮಂಡಳಿ ನಿರ್ಮಾಣವಾಗುತ್ತದೆ ನಮ್ಮ ರಾಜ್ಯದ ಕಥೆಯನ್ನೇ ಆರಿಸೋಣ. ಓದಲು ಅರ್ಹವಾದ ಎಷ್ಟು ಪುಸ್ತಕಗಳು ಮಕ್ಕಳ ಕೈಯಲ್ಲಿವೆ ಎಂದು ಲೆಕ್ಕ ಹಾಕೋಣ ಪಠ್ಯಪುಸ್ತಕಗಳ ಜರ್ಜೆ ಎಸಂಬ್ಲಿಯು ತನಕವೂ ಮುಟ್ಟುವ ಈ ಕಾಲದಲ್ಲಿ ಒಳ್ಳೆಯ ಪುಸ್ತಕಕ್ಕೆ ಮನ್ನಣೆ ಸಿಕ್ಕೀತೆ? ಬೆಂಗಳೂರು—ಮಂಗಳೂರು—ಮೈಸೂರು—ಧಾರವಾಡ—ಒಂದೊಂದೆಡೆ ಮಕ್ಕಳು ಒಂದೊಂದು ಪುಸ್ತಕ ಓದುವುದು ಈ ಪರಿವಾರದಿಂದ ಯಾವ ರೀತಿಯ ಐಕ್ಯ ಸಾಧನೆಯಾಗಬಹುದು?

೩) ರಾಜ್ಯಗಳ ಇತಿಹಾಸವನ್ನು ಬರೆಯುವಾಗ ಅಖಿಲ ಭಾರತೀಯ ದೃಷ್ಟಿಕೋನದಿಂದ ಬರೆಯತಕ್ಕುದು. ಅದರೆ ಐತಿಹಾಸಿಕ ಸತ್ಯವನ್ನು ಎಂದೂ ಕಡೆಗಣಿಸಲಾಗದು. 'ಅಖಿಲ ಭಾರತೀಯ ದೃಷ್ಟಿಕೋನ'ವುಳ್ಳ ಇತಿಹಾಸಜ್ಞರ ಸಂಖ್ಯೆ ಎಷ್ಟಿರಬಹುದು; ಅದು ಸಾಕೆ? ಅಂಥ ದೃಷ್ಟಿಕೋನ ಇರುವವರನ್ನು ಆರಿಸದೆ, ರಾಜ್ಯದ ಸಂಕುಚಿತ ವೈಭವಕ್ಕೆ ಬರಹಗಾರರು ಮನಸೋತರೆ ಹೇಗೆ? ಪುಲಿಕೇಶಿ—ಹರ್ಷ, ಪುಲಕೇಶಿ—ಪಲ್ಲವ ಇವರ ಕುರಿತು ಐತಿಹಾಸಿಕ ಸತ್ಯವನ್ನು ನುಡಿದರೆ—ಒಂದಲ್ಲ ಒಂದು ರಾಜ್ಯದ ಜನರ ಮನಸ್ಸನ್ನೋಯದಿದ್ದೀತೆ? 'ನಾವು ಸೋತವರು' ಎಂದೊಪ್ಪಿಕೊಳ್ಳುವ ಧೈರ್ಯ, ಔದಾರ್ಯ ಯಾರಲ್ಲಿದೆ? ಯಶಸ್ಸು, ಜಯ, ಸ್ಥಾನ, ಮಾನಗಳಿಗೆ ಎಲ್ಲರೂ ಹೊಡೆದಾಡುವ ಈ ಸ್ವಾರ್ಥಯುಗದಲ್ಲಿ ನಿಮ್ಮ ಹಿಂದಿನವರೂ ಸೋಲಬಾರದಲ್ಲಾ? ಅಥವಾ ಮುಸಲ್ಮಾನರದಾಳಿಯು ವಿಷಯ ಸತ್ಯವನ್ನು ಪಡಿದರೆ ಅವರ ವಂಶಜರಾದ ಇಂದಿನ ರಾಜಕೀಯ ಮಹಾರಥಿಗಳು ಹುಯಿಲೆಬ್ಬಿಸಿದರೆ?

೪) ವಿಶ್ವವಿದ್ಯಾಲಯಗಳಿಗೆ ಜಾತ್ಯತೀತ ಹೆಸರುಗಳಿದ್ದರೆ ಅದನ್ನು ತೊಡೆದು ಹಾಕಬೇಕು

—ಹೆಸರಿನಲ್ಲೇನಿದೆ? ಜಗಳವಾಡಬೇಕಾದದ್ದಿರಬಹುದು. ಆದರೆ ಭಾವೈಕ್ಯಕ್ಕೆ ನೆರವಾಗಲು ಏನಾದರೂ ಇದ್ದೀತೆ?

೫) ವಿದ್ಯಾರ್ಥಿ 'ಯೂನಿಯನ್' ಎಂಬ ಹೆಸರನ್ನು ತೆಗೆದು ಸಾಂಸ್ಕೃತಿಕ ಸಂಘ ಇತ್ಯಾದಿ ಹೆಸರುಗಳನ್ನಿಡಬೇಕು. 'ಯೂನಿಯನ್' ಎಂದರೆ 'ಐಕ್ಯ'. ವಿದ್ಯಾರ್ಥಿಗಳು ಒಟ್ಟು ಸೇರಿದರೆ ಕುಲಹಗಳಿಗೆ ಗಂಡಾಂತರ. ಆದುದರಿಂದ ಅಂಥ ಸಭೆಗಳಿಗೆ 'ಐಕ್ಯ'ವು ಒಂದು ಸೂತ್ರ. ಭಾವೈಕ್ಯದ ಪುರಸ್ಕರ್ತರು ತಮಗೆ ಪ್ರತಿಕೂಲವಾದ ಒಂದು ಐಕ್ಯವನ್ನು ತಳ್ಳಿಹಾಕಿರುವುದಕ್ಕೆ ಇದು ಒಂದು ಸಾಕ್ಷಿ.

೬) ಕೇಂದ್ರದ 'ಐಕ್ಯ' ವಿಶ್ವವಿದ್ಯಾಲಯಗಳಲ್ಲಿ ಒಂದೆರಡಾದರೂ ಇಷ್ಟೊಂದೇ ಭಾಷೆಯ ದಕ್ಷಿಣದಲ್ಲಿ ಸ್ಥಾಪಿತವಾಗಬೇಕಿತ್ತು. ಇನ್ನಾದರೂ ಆಗಬೇಕು

—ಇದು ನಿಜವಾಗಿ ಒಂದು ಒಳ್ಳೆಯ ಸೂಚನೆ ಆದ್ದರಿಂದ ಒಳ್ಳೆಯ ಸೂಚನೆಗಳ ಗತಿ ಇದಕ್ಕೂ ಆಗಬಹುದು. ಸೂಚನೆಗೇ ಹದಿನೈದು ವರ್ಷ ತಗಲಿದೆ, ಇದು ಕಾರ್ಯಗತವಾಗಬೇಕಾದರೆ ಎಷ್ಟು ದಿನಗಳು ಬೇಕೋ! ನಿಜವಾಗಿ ಜಾತ್ಯತೀತ ವಿಶ್ವವಿದ್ಯಾಲಯಗಳ ಬೇಡಿಕೆ ಇರುವುದು ಮೈಸೂರು — ಮದ್ರಾಸು — ಆಂಧ್ರ ಮುಂತಾದ ರಾಜ್ಯಗಳಲ್ಲಿ ಉತ್ತರದವರ ಎಷ್ಟೋ ವಿಶ್ವವಿದ್ಯಾಲಯಗಳನ್ನು ವಶಪಡಿಸಿಕೊಂಡ ಕೇಂದ್ರ ಸರಕಾರ ಇಷ್ಟು ದಿನವಾದರೂ ದಕ್ಷಿಣದ ಕಡೆ ಒಲವು ಹರಿಯದಿರುವುದು ವಿಚಿತ್ರವೂ ಸ್ವಾಭಾವಿಕವೂ ಆಗಿದೆ.

(೭) ವಿಶ್ವವಿದ್ಯಾಲಯಗಳು ಧಾರ್ಮಿಕ ಐಕ್ಯ, ಸಹನೆಗಳನ್ನು ವಿದ್ಯಾರ್ಥಿ ವರ್ಗದ ಮತ್ತು ಉಪಾಧ್ಯಾಯರಲ್ಲಿ ಹರಡಬೇಕು. ಇದು ನ್ಯಾಯವಾಗಿ ಧರ್ಮವು ಮಾಡಬೇಕಾದ ಕೆಲಸ. ಅಲ್ಲದೆ ವಿಶ್ವವಿದ್ಯಾಲಯಗಳಿಗೆ ಬರುವ ವಿದ್ಯಾರ್ಥಿಗಳಿಗೆ ಎಲ್ಲರು ಅಲ್ಲಿಗೆ ಪ್ರವೇಶಿಸಿದ ಉದ್ದೇಶದ ಅರಿವಿದ್ದರೆ ಮತೀಯ ಒಡಕಿಗೆ ಅವಕಾಶವಾದರೂ ಎಲ್ಲಿವೆ? ಪಠ್ಯಕ್ರಮ, ವಾರಕ್ರಮ ಉಪಾಧ್ಯಾಯ—ಅಧಿಕಾರಿ ವರ್ಗವು ತಮ್ಮ ತಮ್ಮೊಳಗೆ ಕಚ್ಚಾಡುತ್ತಿದ್ದರೆ ವಿದ್ಯಾರ್ಥಿಗಳಲ್ಲಿ ಯಾವ ಬಗೆಯ ಭಾವನೆ ಉಂಟಾಗಬೇಕು?

(೮) ಉತ್ತರ ಭಾರತದ ವಿಶ್ವವಿದ್ಯಾಲಯಗಳಲ್ಲಿ ದಕ್ಷಿಣದ ಭಾಷೆಗಳನ್ನು ಕಲಿಸಬೇಕು. ದಕ್ಷಿಣದವರು ಹಿಂದೀ ಕಲಿಯುತ್ತಿದ್ದಾರೆ; ಉತ್ತರದವರು ಇದೇ ರೀತಿ ನಮ್ಮ ಕನ್ನಡ-ತಮಿಳು ಕಲಿಯಬೇಕೆಂಬುದರಿಂದ ಅಲ್ಲಿನ ವಿಶ್ವವಿದ್ಯಾಲಯಗಳು ಕಾರ್ಯಸ್ಪೃವೃತ್ತವಾಗಬೇಕು. ಇದೂ ಒಂದು ಒಳ್ಳೆಯ ಸೂಚನೆ.

WITH
COMPLIMENTS
FROM

M/s. CHIKA LIMITED

Sales Office:

Mehta Chambers,
13, Mathew Road,
BOMBAY - 4.

ಹೆಣ್ಣಲ್ಲ, ಗಂಡು!

ಶ್ರೀ ಎಚ್. ರಾಮಕೃಷ್ಣ ಅಡಿಗ
ಶಂಕರನಾರಾಯಣ

ಪ್ರಭಾ ಅಲ್ಲಿ ಕುಳಿತುಕೊಳ್ಳಲಾರದೆ ಎದ್ದು ಹೊರಬಂದಳು.

ಸ್ವಲ್ಪ ಸಮಯದ ಹಿಂದೆ, ಶುಭ್ರಾಕಾಶದಲ್ಲಿ ಕಾರ್ಮೋಡ ಕವಿದು, ಕತ್ತಲೆಯ ಮುಸುಕಿನಲೂ ಚೆಲ್ಲಿತ್ತು. ಪ್ರಭಾಳ ಜೀವನಾಕಾಶದಲ್ಲಿಯೂ ಅರೆಗಳಿಗೆಯ ಹಿಂದೆ ಕಾಣದ ಕರೋರ ಸುಡಿಗಳ ಮೋಡವೂ ಕವಿದಿತ್ತು. ಆಕೆಗೆ ಏನು ಮಾಡುವುದೆಂದು ತಿಳಿಯಲಿಲ್ಲ. ಹಿಂದಿನ ದಿನಗಳಲ್ಲಾಗಿದ್ದರೆ ಆಕೆಗೆ ಸಲಹೆ ಕೇಳಲಿಕ್ಕಾದರೂ ಒಬ್ಬ ಮುದುಕ ದೊರೆತಿದ್ದ. ಆದರೆ ಈಗ ಇವಳನ್ನು ಬಿಟ್ಟು, ತಾನೊಬ್ಬನೇ ನಡೆದಿದ್ದ.....

ಆತ ತೀರಿಹೋಗಿ ಹತ್ತು ತಿಂಗಳು ಕಳೆದಿತ್ತು. ಇವಳು ಅವನನ್ನು ಸೇರಿದುದೂ ಹಾಗೇ, ಅನಿರೀಕ್ಷಿತವಾಗಿ. ಅವನು ಬರೇ ಮುದ್ದಳೆ ಬಡಿದು ಅಂಗಡಿಗಳೆದುರು, ಹಣ ಒಟ್ಟುಮಾಡಲು ತಿರುಗುತಿದ್ದ. ಇವಳು ಹಾರ್ಮೋನಿಯಂ ಹಿಡಿದು, ಜೀವನದ ಪೋಷಣೆಗಾಗಿ, ಹಾಡುತ್ತಾ ಹಣ ಗಳಿಸುತ್ತಿದ್ದಳು. ಅಂತೂ ಆಕಸ್ಮಾತ್ ಅವರಿಬ್ಬರ ಭೇಟಿಯಾಯ್ತು. ಪ್ರಭಾ ಮುಗ್ಧಳ ತಂದೆಯೊಬ್ಬನನ್ನು ಪಡೆದಳು. ಮುದುಕ ತನಗಿಲ್ಲದ ಮಗಳನ್ನು ಪಡೆದ. "ತಂದೆ-ಮಕ್ಕಳಿ"ಗಿಂತಲೂ ಮೆಚ್ಚಿಕೊಂಡು, ಕೂಡಿಕೊಂಡು, ಬೀದಿಬೀದಿ ಅಲೆದು, ಜೀವದಿಂದ ಬದುಕಿ ಉಳಿಯುವಂತಾಗಿದ್ದರು. ಆದರೆ ಆತನಿಂದಿಲ್ಲ. ಆಕೆ ಒಬ್ಬಳೇ ಆ ಕೋಣೆಯಲ್ಲಿ.....

ಆ ಕೋಣೆ.....ಮುಂಬಯಿಯ ಮೂಲೆ ಮೈಲು ದೂರದೊಂದು ಹಳ್ಳಿಯ ಒಂದು ಹೆಂಚಿನ ಕಟ್ಟಡದಲ್ಲಿ ಬಚ್ಚಲು ಕೊಟ್ಟಿಗೆಯ ಬಳಿ! ಸುತಿಯ ಕಾಟವಿದ್ದರೂ, ಬಾಡಿಗೆ ತುಸು ಕಮ್ಮಿಯಾದ್ದರಿಂದ ಪ್ರಭಾ ಅಜ್ಜನೊಡನೆ ಆರು ವರ್ಷ ಹೇಗೋ ಕಳೆದಿದ್ದಳು....ಅಲ್ಲಿ....

ಆದರೆ ಈಗ ಆ ಮನೆಯನ್ನು ಮುಳ್ಳಾನನೊಬ್ಬ ಕ್ರಯಕ್ಕೆ ಕೊಂಡಿದ್ದಾನೆ. ಹಿಂದೂ ಮೂಲೀಕನು, ಸುತ್ತುಮುತ್ತಲಿನ ಮುಸ್ಲಿಮರ ತೊಂದರೆಗಳನ್ನು ತಾಳಲಾರದೆ, ಮಾರಾಟ ಮಾಡಿದ್ದ. ಯಜಮಾನ ಯಾರಾದರೇನು ಪ್ರಭಾಳಿಗೆ? ಆದರೆ ಈಗಿನ ಯಜಮಾನ ತುಂಬುಹರೆಯದ ಯುವಕ. ಅದೂ ಮುಸಲ್ಮಾನ ಹೈಕ್ಷಪುಷ್ಟ ದೇಹದ ತರುಣ!....ತರುಣರಿಲ್ಲ ಜಗತ್ತಿನಲ್ಲಿ ಇಲ್ಲವೆ?...ಇದ್ದಾರೆ!....ಆದರೆ ಈ ತರುಣ ಅಂತಹವನಲ್ಲ....ವಿಶಿಷ್ಟ ರೀತಿ ಆತನದು. ಯಾಕೆಂದರೆ ಪ್ರಭಾಳ ಸ್ವಾಧೀನ ರೂಮಿನಿಂದ ಕೇಳಿಬಂದ ಮಾತು.... ಕಾಣಿಸಿದರೆ ಅವಳ ಮೈ ರೋಮಾಂಚನಗೊಳ್ಳುತ್ತದೆ...

"ಆ ಯುವಕ ಯಾರೊಡನೆಯೋ ಆನ್ನುತ್ತಿದ್ದ..." ನೋಡಿ....ಮನೆ ಕೊಳಕಾಗಿದ್ದರೆ ಏನು? ಆದರಲ್ಲಿ, ಎಲೆಯ ಮರೆಯ ಹೂವೊಂದಿದೆ...ಪುತ್ಥಳಿ ಚಿನ್ನದ ಗೊಂಬೆಯೊಂದಿದೆ...ಅವನು ಇವತು ರಾತ್ರಿ ಕಾರಿನಲ್ಲಿ ಕುಳಿತು ಕರೆದುಕೊಂಡು ಹೋಗ್ತೀನಿ...ಮುಂಬಯಿಯ ಬೀಚಿಗೆ..."

ಮುಂದೆ ಪ್ರಭಾ ಅಲ್ಲಿರಲಿಲ್ಲ...ಕುಳಿತುಕೊಳ್ಳಲಾರದೆ, ಕೆದರಿದ ಸಿಂಹಿಣಿಯಂತೆ ಎದ್ದು ಹೊರಬಂದಳು. ಕಾಸಿದ ಕಬ್ಬಿಣಕ್ಕೆ ಪೆಟ್ಟು ಬಿದ್ದಷ್ಟೂ ಅದು ಗಟ್ಟಿಯಾಗಿ, ಕೋಪಿಗೊಳ್ಳುವಂತೆ, ಅವಳ ಹೃದಯವೂ ಕಬ್ಬಿಣದ ಪರಿಯಿಂದ ನಿರ್ಮಿತವಾಗಿತ್ತು. ಅಂದರೆ ಯಾರಾದರೂ ಎಷ್ಟೊಂದು ಕಷ್ಟವನ್ನು ಸಹಿಸಿಕೊಳ್ಳಬಲ್ಲರು...ಅದೂ ಅವಳದು ಹೆಣ್ಣು ಹೃದಯ....

ಪ್ರಭಾಳ ಗಂಡ ಮಹಾಯುದ್ಧದ ನಿಮಿತ್ತ ಸೈನ್ಯ ಸೇರಿದ್ದ. ಹತ್ತು ವರ್ಷದಿಂದೀಚೆ, ಆತನ ಪತ್ರ ಬಂದಿಲ್ಲ! ಹಣ ಬರುತ್ತೆ ಬರುತ್ತೆ ಎಂದು ಕಾದುಕುಳಿತಿದ್ದ ಪ್ರಭಾಳ ಮೂಪ, ಒಂದು ದಿನ ಆಕೆಯನ್ನು ಮುಸ್ಲಿಮ್ ಯುವಕನಿಗೆ ಮಾರಲು ಮುಂದಾಗಿದ್ದರು...ಅವರದೂ ಬಡ ಸಂಸಾರ. ಈಗ ಒಂದು ತುತ್ತು ಊಟಕ್ಕಿದ್ದರೆ, ಇನ್ನೊಂದು ಹೊತ್ತಿಗೆ ಬರಿಗೈ. ಅಂತಹ ಜೀವನ ಅವರದು. ಹಾಗಿದ್ದಾಗ, ಮುಸ್ಲಿಮರ ನೂರು ರೂಪಾಯಿ ನೋಟ ಕಂತೆ ಕಂಡು, ಅವರು ಪ್ರಭಾಳಿಗೆ ಹೇಳಿದ್ದರು—'ನೀನು ತಂದೆ ಮನೆಗೆ ಹೋಗು. ನನ್ನ ಮಗ ತೀರಿದ್ದು ನಿಜ. ಈಗ ನಿನಗೆ ವೃದ್ಧ ಕೂಳು ಹಾಕಬೇಕಲ್ಲ ನಮಗೇ ಇಲ್ಲ... ಈ ಮನುಷ್ಯನ ಜೊತೆಗೆ ನಾಳೆ ನಾಡಿದು ಹೊರಡು. ಅವನಿಗೆ ಹಾಸನ ಊರು ಗೊತ್ತಿದೆ. ಕರೆದುಕೊಂಡು ಹೋಗುತ್ತಾನೆ...'

ಪ್ರಭಾ.... ತಂದೆ ತಾಯಿಯರಿಲ್ಲದ ಹೆಡ್ಡಗಿ. ನಾಕುತಂದೆಯೊಡರೂ ಇದ್ದಿದ್ದ. ಈಗ ಆತನೂ ಇಲ್ಲ. ಹಾಸನಕ್ಕೆ ಹೋಗಿ ಏನು ಮಾಡುವುದು? ಅದ್ದರಿಂದ ಆಕೆ ಪತಿವ್ರತೆಯಾಗಿರುವ ಹಂಬಲದಿಂದ, ಆ ರಾತ್ರಿಯೇ, ಶಿವನೊಗ್ಗದಿಂದ ಹೊರಡಬೇಕಾಯ್ತು, ಮುಂಬಯಿಗೆ.

ಏನೋ, ಅರಿತೋ, ಅರಿಯದೆಯೋ, ಮುಂಬಯಿಗೆ ಹೊರಟಿವಳಿಗೆ ಮುದುಕ ದಾರಿಯಲ್ಲಿ ದೊರೆತ. ಅವರಿಬ್ಬರೂ, ಆತ್ಮ ಒಂದು, ದೇಹವೆರಡು ಎಂಬಂತಾದರು.

ಈಗ....

ಈಗ ಅವಳ ಹೆಂಬಲದ ಮುಗಿತಾಯ ಕೈಡೆ ಬಂದಿದೆ. ಇಲ್ಲಿಯೂ ಮುಸ್ಲಿಮ್ ಯುವಕ ಬಂದು ಅವಳಿಗೆ ತೊಂದರೆ ಕೊಡತೊಡಗಿದ್ದಾನೆ. ಈಗ ಆಕೆಗೆ ಓಡಿ ಹೋಗುವಂತಿಲ್ಲ. ಕಾರಣ— ಹೊರಟರೆ ಮನೆಯವರಿಗೆಲ್ಲ ತಿಳಿಯುತ್ತೆ. ಇವಳು ಮೂರು ತಿಂಗಳ ಬಾಕಿ ಬಾಡಿಗೆ ಕೊಡದೆ ಓಡಿ ಹೋಗುತ್ತಿದ್ದಾಳೆಂದರೆ.... ಎಳೆದು ತಂದು ಕೋಣೆಗೆ ಹಾಕಿ, ಕಣ್ಣಲ್ಲಿ ರಕ್ತ ಇಲ್ಲದ ಜಾತಿಯ ಜನಗಳಿ ಮನೆಯಾರಿ ಇವಳಿಗೆ ಬಡಿಯಲೂ ಹಿಂಜರಿಯುವವರಲ್ಲವರು. ಅವನ್ನು ಆಕೆ ಅರಿತಿದ್ದಳು.

ಮುಂದೇನು?....ಮುಂದ ಆಕೆ ತನ್ನ ಮಾನರಕ್ಷಣೆಗಾಗಿ ಯಾರ ಮರೆಹೋಗಬೇಕಾಗಿದೆ... ಯಾರು ಅವಳನ್ನು ಅಕ್ಕ-ತಂಗಿಯ ದೃಷ್ಟಿಯಿಂದ ಕಂಡು ಕಾಪಾಡುವವರು? ಅಂತಹ ವ್ಯಕ್ತಿ ಆಕೆಗಿಂದು ತಿಳಿದಿದ್ದರೆ....

ಆಲೋಚಿಸಲೂ ಎಡೆಯಿರಲಿಲ್ಲ. 'ಹೊರಗೆ ಬಂದು ಕುಳಿತಿದ್ದುದನ್ನು ಕಂಡು ಆ ಯುವಕ ತನ್ನ ತೋಳನ್ನು ಹಿಡಿದು, ಎಳೆದೊಯ್ಯಲೂ ಬಹುದು. ತನ್ನ ವಿಷಯ ಸಂಶಯಪಡಲೂ ಬಹುದು." ಆದ್ದರಿಂದ ಆಕೆಯೆದ್ದು....ಪುನಃ... ಆ ಕಿರುಗೋಣೆಗೆ ನಡೆದಳು....

ಇನ್ನೊರು ಚದರಡಿ ವಿಸ್ತೀರ್ಣದ ಕೋಣೆ! ಅದೇ ಅವಳ ಬಚ್ಚಲು ಕೊಟ್ಟಿಗೆ, ಅಡಿಗೆಮನೆ, ಶಯ್ಯಾಗಾರ, ದೇವರ ಕೋಣೆ—ಎಲ್ಲವೂ. ಎಲ್ಲವನ್ನೂ ಆಕೆ ನೋಡಿ ನಕ್ಕಳು. ತಾನು....ಎಂತಹ ಸ್ಥಿತಿಯಲ್ಲಿರಬೇಕಾಗಿದ್ದವಳು.... ಈಗ ಎಂತಹ ಸ್ಥಿತಿಯಲ್ಲಿ ಬಾಳುತ್ತಿದ್ದೇನೆ. ಆದರೂ ಇಷ್ಟು ಕಠಿಣವಾದರೂ ಈ ಹೆಣ್ಣು ಜೀವ ಬದುಕಿ ಉಳಿದುದು ಆಕೆಗೆ ಹೆಮ್ಮೆಯ ವಿಷಯ.

ರಾತ್ರಿ ಹತ್ತು ಗಂಟೆಯ ಹೊತ್ತಿರಬಹುದು. ಮುಸ್ಲಿಮ್ ಯುವಕ ಮನೆಯಿಂದ ಹೊರಬಿದ್ದ... "ಈಗ ಬರ್ತೀನಿ... ಬೀಬೀ....ಬಾಗಿಲು ಹಾಕಿಕ್ಕೇಡೆ" ಎಂದು ಹೆರಿದುಹೋದ ಚಪ್ಪಲಿಯನ್ನು ಹಾಕಿಕೊಂಡು, ಸಟಸಟನೆ ಹೊರಟುಹೋದ. ಹೆಜ್ಜೆಯ ಸದ್ದಿಗೆ, ಹೆದರಿ ನಲಿಯುತಿತ್ತು ಹೃದಯ. ಪ್ರಭಾ, ಎಷ್ಟು ಹೆಲ್ಲು ಕಚ್ಚಿ, ದೃಢವಾಗಿರಬೇಕೆಂದು ಬಯಸಿದರೂ, ವಿಫಲಳಾಗಬೇಕಾಯ್ತು. ಆಗ ಅವಳಿಗೆ ಹೊಳೆದುದೊಂದು ವಿಷಯ. ಅವಳ ಜೀವ ರಕ್ಷಣೆಯ. ಮಾನರಕ್ಷಣೆಯ ದಾರಿ... ತಂದೆಮನೆಯಿಂದ ಆಕೆ ತಂದಿದ್ದ ಚೂರಿ. ಆಕೆ ಅದನ್ನು ತಾನು ಎಲ್ಲಿಗೆ ಹೋದರೂ ತೆಗೆದುಕೊಂಡು ಹೋಗುತ್ತಿದ್ದಳು...ಅದನ್ನು ಕಂಡ ಕೂಡಲೇ ಆಕೆಗೆ ತನಗೇ, ಆ ಚೂರಿಯ ಇರಿತ ದೊರೆತಂತಾಯ್ತು.

ಹೌದು. ಅದು ಅವಳ ಜೀವಮಾನದಲ್ಲಿ ಮರೆಯಲಾರದ ಘಟನೆ! ಏನೆಂದೂ ಮರೆಯಲಾರದ ಸುರಸ ಘಟನೆ!!

ಆಕೆಯ ಗಂಡ, ಸುಂದರ, ಅದನ್ನು ಅವಳಿಗೆ ಕೊಡುತ್ತಾ ಅಂದಿದ್ದ: "ಪ್ರಭಾ.... ನಾನು ನಾಳೆಯೇ ಸೈನ್ಯಕ್ಕೆ ಹೋಗ್ತೇನೆ. ಮುಂದೆ ಐಶ್ವರ್ಯವಂತನಾಗಿ, ನಾನೂ ನೀನೂ, ಸುಖವಾಗಿ, ಜೊತೆ ಹಕ್ಕಿಗಳಂತೆ, ಮನಬಂದಲ್ಲಿ ವಿಹರಿಸುವ. ಈಗ ನೋಡು. ನಮ್ಮ ಬಡ ಸಂಸಾರ. ನಿನಗೆ ಉತ್ತಮ ಸೀರೆಯೊಂದನ್ನು ತಂದೀಯುವಷ್ಟು ಶಕ್ತನಾಗಿಲ್ಲ ನಾನು. ನಿನಗೊಂದು ಚಿನ್ನದ ನೆಕಲೇಸ್‌ಕೊಂಡು ಬಂದು, ಹಾಕಿ, ಅಂದ ಚೆಂದಕಾಣಲು ನಾನು ಶಕ್ತನಿಲ್ಲ. ನಿನ್ನ ಚೆಂದ ಅಂದ, ಮಸಣದ ಹೂವಿನಂತೆ ಕಾಡಿನ ಬೆಳದಿಂಗಳಿನಂತೆ ವ್ಯರ್ಥವಾಗಿ ವ್ಯಯವಾಗುತ್ತಿದೆ. ನಿನ್ನ ನೀಳವಾದ ಮೂಗು, ಬಾಗಿದ ಕುಡಿಹುಬ್ಬು...ಕರಿಯ ಮಿಂಚುಗಣ್ಣುಗಳು....ಎಷ್ಟು ಸುಂದರವಾಗಿವೆ. ತನ್ನನ್ನು ಕಂಡ ಕಣ್ಣನ್ನು ನುತ್ತಾ ಮತ್ತೂ ತನ್ನತ್ತ ನೆಳೆಯುವ ಉದ್ದವಾದ ಕುಂಕುಮ! ಆ ಕುಂಕುಮವನ್ನೂ ಮೀರಿ ತಾನು ಕೆಂಪಾಗಿದ್ದೇನೆ ಎಂಬ ದೆಮ್ಮೆಯಿಂದ ನಲಿದಾಡುವ ತುಟಿ....ಥೂ....ಥೂ...."

ಎಂದು ನಗಾಡುತ್ತ ಆತ ಆ ಚೂರಿಯನ್ನು "ಇಗೊ...ನಿನ್ನ ಸೂನರಕ್ಷಣೆಗೆ! ನಾನು ಬರುವ ತನಕ ನೀನು ನನ್ನ ಬರವನ್ನು ಕಾಯುವ ನೆನಪಿಗಾಗಿ...." ಎಂದು ಕುಚ್ಚನಂತೆ ಕೊಟ್ಟು ಹೋಗಿದ್ದ....

ಅದೆಲ್ಲ ಈಗ ಆಕೆಗೆ ಕನಸಿನ ಗಂಟು! ಮುಗಿಲ ಮಲ್ಲಿಗೆ!

ಆತ ಇನ್ನು ತನಗೆ ದೊರೆಯುವುದಿಲ್ಲ. ಆ ಆಸೆಯ ಕಟ್ಟಡವನ್ನು ತಾನು ಕೆಡೆದು ರುಳಿಸಬೇಕಾಗಿದೆ. ಮೆದುಳಿಗೆ ಎರಗಿದ ಬಿರುಗಾಳಿಯಿಂದಾಗಿ ಆಕೆ ಏನೂ ಮಾಡದೆ ಕುಳಿತಳು.

"ರೀ....ನೀವು ಇಲ್ಲಿ ಬನ್ನಿ....ಹೊರಗ್ಬನ್ನಿ....ನನ್ನ ಮನೆಯಜಮಾನರಿಗೆ ಸಂಗೀತ ಕೇಳಬೇಕಾಗಿದೆಯಂತೆ ಇವತ್ತು. ಅವರಲ್ಲೊಂದು ಮದುವೆಯಿದೆಯಂತೆ.... ಬನ್ನಿ....ನಾನು ನಿಮ್ಮನ್ನು ಹೊಗಳಿ ಬಂದಿದ್ದೀನಿ...."

ಅವನ ಸುಳ್ಳು ಕಾರಣಗಳು ಆಕೆಗೆ ಬೇಕಾಗಿರಲಿಲ್ಲ ತನ್ನ ಹಾರ್ಮೋನಿಯಂ ಹಿಡಿದುಕೊಂಡು, ಚೂರಿಯನ್ನು ಸೊಂಟಕ್ಕೆ ಸಿಕ್ಕಿಸಿಕೊಂಡು ಹೊರಬಂದಳು. ಸ್ವಲ್ಪ ದೂರದ ರಸ್ತೆಯಲ್ಲಿ ಕರ್ಕಗಿನ ಕಾರೊಂದು ಬಂದು ನಿಂತಿತ್ತು. ಆಕೆ "ಕೊಂ....ಹೊ'ಗುವ...."ಎನ್ನುತ್ತಲೇ, ಆತನೆಂದ,—

"ಬನ್ನಿ....ಹಿಹಿಹಿ...ಕಾರು ತಂಗೊಂಡು ಬಂದಿದ್ದೀನಿ..." ಆದೂ ಆಕೆಗೆ ತಿಳಿದಿತ್ತು. ಆದ್ದರಿಂದ ಮಾತಾಡದೆ ಹೋಗಿ ಕುಳಿತಿದ್ದಳು. ಕ್ರೋಧದ ಉರಿ, ಉಸಿರೊಳಗಿನ ಬೆಂಕಿಯಂತೆ ಬುಸುಗುಡುತಿತ್ತು. ಮುಂದೇನು? ಮುಂದೇನು ಮಾಡಲಿ...ಇಂದು ಈತನ ಕೈಯಿಂದ ಪಾರಾಗುವ ಬಗೆಯೆಂತು....? ಪ್ರಶ್ನಾರ್ಥಕ ಚಿಹ್ನೆಯ ಮಹಾ ಮಹಾ ರೂಪಗಳು, ಆಕೆಯ ಎದುರು ಬರುತಿತ್ತೇ ವಿನಃ ಉತ್ತರದ ಸುಳಿವೂ ಎದ್ದು ಕಾಣುತ್ತಿರಲಿಲ್ಲ...

ನಾಗಾಲೋಟದಿಂದ ಓಡುವ ಕಾರನ್ನು ಆತ, ಹುಸ್ಸೇನ್ ನಿಲ್ಲಿಸಿದ ಅಗಲೇ ಸೊಂಟದ ಚೂರಿಯನ್ನು ತೆಗೆದು ಅವನ ಬೆನ್ನಿಗೆ ಹಾಕುವ ಎಂದು ಬಗೆದಿದ್ದ ಪ್ರಭಾಳಿಗೆ, ಅದು ತಪ್ಪೆಂದು ತೋರಿಬಂತು ಹಿಂದಿನಿಂದ ಚೂರಿಯಿಂದ ಕೊಲ್ಲುವುದು ತಪ್ಪು. ಅದೂ ಆತನಿಗೆ, ಮೊನ್ನೆ ಮೊನ್ನೆ ವಧುವಾಗಿ ಬಂದ ಹುಡುಗಿ, ಮನೇಲಿದ್ದಾಳೆ...ಆಕೆಯ ಸುಖಕ್ಕೆ ಮಣ್ಣೆರಚಲೋ...?

ಹುಸೇನ್ ಮೂತ್ರಶಂಕೆ ಮುಗಿಸಿ ಬಂದು ಕಾರಿನಲ್ಲಿ ಕುಳಿತ. ಯಜಮಾನರ ಸ್ವಂತದ ಕಾರು. ನೊನ್ನೆ ಮೊನ್ನೆ ಹೊಸತು ಕ್ರಯಕ್ಕೆ ಹಿಡಿದು ಕೊಂಡುದು. ಈಗ ಡ್ರೈವರ್ ಹುಸೇನನ ಕೈಯಲ್ಲಿ ಅವರ

(ಎಂನೇ ಮಟ ನೋಡಿರಿ)



ಮಿತಿಮೀರಿದ ಸೌಂದರ್ಯ

ಶ್ರೀಮತಿ ಸಿ. ಯಶೋದಾ ಯನ್ ಜೆನ್
ಹಿರಿಯಡ್ಕ

ಮನೆಯಲ್ಲಿ ಮದುವೆಯ ಸಿದ್ಧತೆ ಭರದಿಂದ ಸಾಗಿತ್ತು. ಬಡವರ ಗುಡಿಸಲಾದರೂ ಮದುವೆ ವೈಭವದಿಂದಲೇ ನಡೆಯಬೇಕೆಂದು ವರನ ಅಪೇಕ್ಷೆ. ವಧುವಿನ ಕಡೆಯವರೂ ಅದನ್ನು ಮೀರಲು ಸಿದ್ಧರಿರಲಿಲ್ಲ. ಏಕೆಂದರೆ ತಮ್ಮ ಅಚ್ಚುಮೆಚ್ಚಿನ ಕೊನೆಯ ಕನ್ಯೆ ಸುಂದರಿಯ ಮದುವೆಯನ್ನು ತಮ್ಮ ಶಕ್ತಿಮೀರಿ ಮಾಡಬೇಕೆಂಬುದೇ ಅವರದೂ ಅಪೇಕ್ಷೆಯಾಗಿತ್ತು. ಸಣ್ಣಗಡಿಸಲಿನ ಮುಂದೆ ದೊಡ್ಡ ಚಪ್ಪರ ಮೆರೆದಾಡಿತು. ಬೆಳಗಾಗುವಾಗಲೇ ಮಂಗಳ ವಾದ್ಯಗಳು ಮೊಳಗಲಾರಂಭಿಸಿದವು. ತಾಯಿ ಪಾರ್ವತಿಗೆ ಸುಂದರಿಯನ್ನು ಸಿಂಗರಿಸುವುದೊಂದೇ ಕೆಲಸವಾಯ್ತು. ಆದರೆ....ಒಂದೇ ಒಂದು ಕಳವಳ....ಆ ಸಂತೋಷ ಸಮಾರಂಭದಲ್ಲೂ ಒಳಗಿಂದೊಳಗೇ ಸಣ್ಣ ಕೊರಗು....ಹಿರಿಯ ಮಗಳು ಕಲ್ಯಾಣಿ ಉಳಿದೇ ಹೋದಳಲ್ಲ ಅವಳಿಗೆ ಮದುವೆಯಾಗುವ ಮೊದಲೇ ಸುಂದರಿಗೆ ಮದುವೆಯಾಗುವ ಸಂದರ್ಭ ಒದಗಿಬಂತಲ್ಲಾ ಎಂದು. ಆದರೆ...ಅದು ಕ್ಷಣಿಕ ಚಿಂತೆ. ಅದಕ್ಕೆ ತಕ್ಕ ಸಮಾಧಾನ ಬಳಿಗೆ ಮೊದಲಿನಿಂದಲೂ ಇತ್ತು. ಕಲ್ಯಾಣಿಯ ಹಣೆಯಬರಹ, ಇಲ್ಲವಾದರೆ ಆಕೆ ಕುರೂಪಿಯಾಗಿ ಯಾಕೆ ಹುಟ್ಟಬೇಕಾಗಿತ್ತು? ಸುಂದರಿ ಭಾಗ್ಯಶಾಲಿನಿ. ಆಕೆಗೆ ಮದುವೆಯ ಯೋಗ ಬೇಗನೆ ಒದಗಿತು. ಅದನ್ನು ಯಾರಿಂದ ತಪ್ಪಿಸಲು ಸಾಧ್ಯ. ಅಲ್ಲದೆ ಶುಭ ಕಾರ್ಯಕ್ಕೆ ವಿಘ್ನವನ್ನು ತರುವುದು ಒಳ್ಳೆಯದೇ? ಎಂದೇ ಆಕೆ ಸುಂದರಿಯನ್ನಾದರೆ ಮಾತ್ರ ಮದುವೆಯಗುತ್ತೇನೆಂದ ಸೀನನಿಗೆ ನಗುತ್ತಲೇ ಒಪ್ಪಿಗೆಸೂಚಿಸಿತ್ತಳು.

ಮದುವೆಯ ಗದ್ದಲ ಗಲಾಟೆಗಳಲ್ಲಿ ಕಲ್ಯಾಣಿಯನ್ನು ನೋಡಿದವರಿಲ್ಲ. ನೆರೆಮನೆಯ ಹೆಂಗಸರೂ ಸೀರೆ ಆಭರಣಗಳಿಂದ ಮೆರೆದಾಡುತ್ತಿದ್ದಾಗ ಕಲ್ಯಾಣಿ ಮಾತ್ರ ತೋಟದ ಮೂಲೆಯ ಮರದ ಕೆಳಗೆ ಅಳುತ್ತಾ ಕುಳಿತಿದ್ದಳು. ಕೆಲವರು ಆಕೆಯ ವಿಷಯವಾಗಿ ಕನಿಕರ ತೋರಿಸಿದರು; ಇನ್ನು ಕೆಲವರು ತಂಗಿಗೆ ಶುಭವಾದ್ದಕ್ಕೆ ಮತ್ಸರಪಡುವುದು ಸರಿಯಲ್ಲವೆಂದರು. ಮತ್ತೆ ಒಬ್ಬಿಬ್ಬರು ಇನ್ನು ಆಕೆಯ ಮದುವೆ ಅಸಾಧ್ಯವೆಂದೇ ತೀರ್ಮಾನಿಸಿದರು. ಸುಂದರಿ ಗೃಹಿಣಿಯಾಗಿ ಸೀನನ ಮನೆ ಸೇರಿದಳು. ಕಲ್ಯಾಣಿ ಅವಿವಾಹಿತೆಯಾಗಿ ಒಲೆಯ ಮೂಲೆಯಲ್ಲಿ ಕಣ್ಣೀರ್ಗರೆದಳು. ಮದುವೆಯಾಗಿ ಆರು ತಿಂಗಳುಗಳ ನಂತರ ಸೀನನಿಗೇಕೋ ಸುಂದರಿಯ ವರ್ತನೆ ದಿನೇ ದಿನೇ ಬದಲಾಗುತ್ತಿರುವುದು ತೋರಿಬಂತು. ಆಕೆ ಬೆಳಗ್ಗಿನಿಂದ ಸಂಜೆಯವರೆಗೆ ನೆರೆಮನೆಯ ಕಮಲಕ್ಕನ ಮನೆಯಲ್ಲಿ ಹರಟೆ ಹೊಡೆಯುತ್ತಿರುವುದೂ ಮನೆಕೆಲಸವನ್ನು ಮುದುಕಿ ತಾಯಿ ಶ್ರಮವಹಿಸಿ ಮಾಡುತ್ತಿರುವುದೂ ಸರಿತೋರಲಿಲ್ಲ. ಆದರೆ ಆ ವಿಷಯವಾಗಿ ಒಂದೆರಡು ಬಾರಿ ಮಡದಿಗೆ ಹೇಳಹೋದಾಗ ಆಕೆ ಅದಕ್ಕಾಗಿಯೇ ಜಗಳವಾಡಿ ಆ ರಾತ್ರಿ ಕಮಲಕ್ಕನ ಮನೆಯಲ್ಲೇ ಕುಳಿತು ಮರುದಿನವೂ ಅತ್ತು ಊರಲ್ಲೆಲ್ಲಾ ಗಂಡ ತನಗೆ ಹೊಡೆದನೆಂದು ಗಲಾಟೆಯೆಬ್ಬಿಸಿದಾಗ, ಸೀನ ಪತ್ನಿಗೆ ಬುದ್ಧಿ ಹೇಳುವ ಯೋಚನೆಯನ್ನೇ ನಿಲ್ಲಿಸಿಬಿಟ್ಟ. ಆದರೂ.... ಕಮಲಕ್ಕನ ಸ್ನೇಹ ಮಾಡಿದ ಸುಂದರಿಯ ವಿಷಯದಲ್ಲಿ ಅವನಿಗೆ ತುಂಬಾ ಕಳವಳವಾಗಿತ್ತು. ಆದರೆ.... ಮೊದಲೇ ಶಾಂತ ಸ್ವಭಾವಿ, ಅಲ್ಲದೆ ಮೆಚ್ಚಿ ಮದುವೆಯಾದ ಮಡದಿ ತನಗಿಂತ ಎಷ್ಟೋ ಪಾಲು ರೂಪವತಿ ಎಂಬ ಕಾರಣದಿಂದ ಆತ ದಾರಿಕಾಣದೆ ಏನೂ ಮಾಡಲಾರದೆ ಮೌನ ತಾಳಿದ.

ಅಂದು ಕತ್ತಲಾಗುವಾಗ ಕಮಲಕ್ಕನ ಮನೆಯಿದಿರಿನಿಂದಲೇ ಹೋಗುತ್ತಿದ್ದಾಗ ಸುಂದರಿಯ ಸ್ವರವನ್ನು ಆಕೆಯ ಮನೆಯೊಳಗಿಂದ ಕೇಳುತ್ತಿದ್ದುದನ್ನು ನೋಡಿ ಕ್ಷಣಕಾಲ ಸ್ತಬ್ಧನಾಗಿ ನಿಂತ.

"ಅಲ್ಲಾ ಸುಂದರೀ.... ನೀನೆಷ್ಟು ಸುಂದರಿಯೇ, ಅವನು ಅಷ್ಟೆ ಅಸಹ್ಯವಾಗಿದ್ದಾನೆ. ಇನ್ನು ಹಣವಾದರೂ ಇದೆಯೇ— ಹೆಂಡತೀನ ಕೆಲಸಕ್ಕೆ ಕಳುಹಿಸಿ ನಿನ್ನ ರೂಪ, ಬಣ್ಣ ಎಲ್ಲ ಹಾಳಾಗಿ ಹೋಗಲಿ ಅಂತ ಕಾಯ್ತಿದ್ದಾನೆ. ತನ್ನ ಸಂಪಾದನೆ ತನಗೇ ಊಟಕ್ಕೆ ಎಟಕುವುದಿಲ್ಲ" ಕಮಲಕ್ಕನ ವಾಕ್ಸರಣಿ ಮುಂದುವರಿಯುತ್ತಲೇ ಇತ್ತು. ಸೀನ ಅಲ್ಲಿ ನಿಲ್ಲಲಾರದೆ ವೇಗವಾಗಿ ಹೋಗಿಬಿಟ್ಟ. ಎಲ್ಲ ಹೆಂಗಸರೂ ಕೊಯ್ಯಲು ಹೋಗುವಾಗ, ಮೊದಲು ಚೆನ್ನಾಗಿ ಕೆಲಸ ಮಾಡುತ್ತಿದ್ದ ಸುಂದರಿ ಏಕೆ ಹೋಗಬಾರದೆಂದು ಹೇಳಿದುದಕ್ಕೆ ಎಂತಹ ಮಾತು! ಕಮಲಕ್ಕನ ಸ್ವಭಾವವನ್ನು ಚೆನ್ನಾಗಿ ಅರಿತ ಆತನಿಗೆ ಯೋಚನೆಯಿಂದ ತಾಯಿ ಬಡಿಸಿದ ಗಂಜಿಯೂ ರುಚಿಸಲಿಲ್ಲ. ಊಟ ಮುಗಿಸಿ ಕೈ ತೊಳೆಯುತ್ತಿರುವಾಗ ಸುಂದರಿ ಮನೆಯ ಮೆಟ್ಟಲೇರಿದಳು. ಮೊದಲೇ ಕಳವಳ ಗೊಂದ್ವಾತನಿಗೆ ಅವಳನ್ನು ನೋಡಿ ರೋಷ ಏರಿತು. ನಿಂತಲ್ಲಿಂದಲೇ ಗದರಿದ.

"ಸುಂದರೀ..."

"ಅ್ಹಾಂ...."

"ಇನ್ನು ಮುಂದೆ ನೀನು ಕಮಲಕ್ಕನಲ್ಲಿಗೆ ಹೋಗ ಬಾರದು. ಹೋದರೆ ಸೊಂಟ ಮುರಿತೇನೆ." ಸುಂದರಿ ಮೌನವಾಗಿ ನಿಂತಲ್ಲೇ ನಿಂತಿದ್ದಳು.

"ಏನನ್ತಿಯೊ? ನೀನಿನ್ನು ಇಲ್ಲೇ ಆಥವಾ ಅಲ್ಲೇ ಇರಬೇಕು ತಿಳೀತಾ."

"ಕಮಲಕ್ಕ ಒಳ್ಳೆ ಹೆಂಗಸು" ಮೌನವಾಗಿ ನಿಂತ ಗಂಡನ ವಿಷಯವಾಗಿ ಆದರವಿಲ್ಲದ ಆಕೆ, ಕಮಲಕ್ಕನ ಪರವಾಗಿ ವಾದಿಸಿದಳು.

ಏನೆಂದೆ? ಆಕೆ ಒಳ್ಳೆಯವಳು...ಹ್ಹೂಂ ತೊಲಗಾಚೆ....ಅಲ್ಲೇ ಇರು...ನಿನ್ನ ಬಣ್ಣ ನೋಡಿ ಕಟ್ಟಿ....ನಾಯಿ ಹಾಳಾಗಿ ಹೋಗು..." ಎಂದವನೇ ಒಳಗೆ ಬಂದು ಬಾಗಿಲು ಹಾಕಿ ಬಿಟ್ಟ.

ಮುದುಕಿ ತಾಯಿ ಮಗನಿಗೆ ಸಮಾಧಾನ ಹೇಳಲು ಹೋದಳು. ಆದರೆ ಬಹಳ ದಿನಗಳಿಂದ ಯೋಚನೆಯಿಂದ ಕಂಗೆಟ್ಟ ಆತನಿಗೆ ಅದನ್ನು ಕೇಳುವ ತಾಳ್ಮೆಯಿರಲಿಲ್ಲ.

ಕೆಲಸಮಾಡಿ ಸೋತು ಮಲಗಿದ ಆತನಿಗೆ ಕೂಡಲೇ ನಿದ್ದೆ ಬಂದುಬಿಟ್ಟಿತು. ಅದನ್ನು ತಿಳಿದ ತಾಯಿ ಹೆಣ್ಣು ಹೃದಯದಿಂದ ಸೊಸೆಗಾಗಿ ಬಾಗಿಲು ತೆರೆದು ಕರೆದಳು. "ಸುಂದರೀ....ಬಾ...ಇನ್ನು ಹಾಗೆ ಮಾಡಬೇಡ....ಬಾ...ಎಲ್ಲಿದ್ದೀ..."

ಆದರೆ ಎಷ್ಟು ಕರೆದರೂ ಸುಂದರಿ ಬರಲಿಲ್ಲ. ಬೆಳಗಾಗುವಾಗ ವಾರ್ತೆ ಕೇಳಿದ ಸೀನ ಬೆದರಿದ. ಕಮಲಕ್ಕನೂ ತನಗೇನೂ ತಿಳಿಯದೆಂದು ಹೇಳಿದಾಗ, ಆತನು ಕೂಗಿದ, ಸುತ್ತಲಿನ ಕೆರೆ, ಬಾವಿಗಳನ್ನೆಲ್ಲಾ ಹುಡುಕಿದುದಾಯಿತು ಆಕೆಯ ತವರೂರಿಗೂ ಜನ ಕಳುಹಿಸಿ ನೋಡಿದ. ಆದರೂ ಆಕೆಯ ಪತ್ತೆಯಾಗಲಿಲ್ಲ.

ಆದರೆ ಮರುದಿನ ವಾರ್ತೆ ಕಿವಿಯಿಂದ ಕಿವಿಗೆ, ಮನೆಯಿಂದ ಮನೆಗೆ ಹಬ್ಬ ತೊಡಗಿತು.

"ಸುಂದರಿ ಬೊಂಬಾಯಿಗೆ ಹೋಗಿದ್ದಾಳೆ. ಕಮಲಕ್ಕ ಹೇಳಿದ್ದು" ಸೀನ ಸುದ್ದಿಯನ್ನರಿತಾಗ ಪ್ರಾಣಕ್ಕೇನೂ ಅಪಾಯ ತಂದುಕೊಳ್ಳದೆ ತನ್ನನ್ನು ಇಷ್ಟಕ್ಕೇ ಬಿಟ್ಟು ಬಿಟ್ಟಳಲ್ಲ ಎಂದು ನಿಟ್ಟುಸಿರ್ಗರೆದ. ಆತನಿಗೆ ಮೊದಲೇ ಸಂಶಯವಿತ್ತು. ಹಳ್ಳಿಯ ನಾಲ್ಕಾರು ಹುಡುಗಿಯರನ್ನು ಬೊಂಬಾಯಿಗೆ ಕಳುಹಿಸಿ ಹಣ ಸಂಗ್ರಹಿಸಿದ ಕಮಲಕ್ಕ ಸುಂದರಿಗೂ ಆ ದಾರಿ ತೋರಿಸಿಯಾಳೇನೋ ಅದರೆ ಆತ ನಿರುಪಾಯನಾಗಿದ್ದ. ಸುಂದರಿ ಆತನ ಮಾತುಗಳನ್ನು ಕೇಳುತ್ತಲೇ ಇರಲಿಲ್ಲ.

ದಿನಗಳುರುಳಿದವು. ಕ್ರಮೇಣ ಸುಂದರಿ ಆ ಊರಲ್ಲಿ ಇದ್ದಳೆಂಬುದೇ ಮರವೆಯಾಗುತ್ತಾಬಂತು ಸೀನನಿಗೇನೋ ನೆನಪು ಸಿಹಿ ನೆನಪಲ್ಲ. ಕಹಿ ನೆನಪು. ತಾನು ಸುಂದರಿಯ ಬಣ್ಣಕ್ಕೆ ಮರುಳಾಗಿ ಕಲ್ಯಾಣಿಯನ್ನು ತಿರಸ್ಕರಿಸಿದುದೇ ತಪ್ಪಾಯ್ತೇನೊ ಅಂತ. ಅಷ್ಟರಲ್ಲಾಗಲೇ ಕಲ್ಯಾಣಿ ಒಂದು ಕಣ್ಣಿನ ಮನುಷ್ಯನೊಬ್ಬನೊಡನೆ ಮದುವೆಯಾಗಿ ಬಾಳುನಡೆಸಿದ್ದಾಳಂತೆ. ಒಂದು ವರ್ಷ ಉರುಳಿದಾಗ ಆ ಊರಿಗೆ ಬಂಚ ಥಳಕಿನ ಆ ವೈಯಾರಿಯನ್ನು ನೋಡಿ ಎಲ್ಲರೂ ಬೆರಗಾದರು. ಯಾರಾಕೆ? ಚೆನ್ನಾಗಿ ಸರೀಕ್ಷಿಸಿದ ಮೇಲೆ ಆಕೆ ಕಮಲಕ್ಕನ ಮನೆ ಸೇರಿದ ಮೇಲೆ ತಿಳಿಯಿತು ಸುಂದರಿ ಓ ಸುಂದರೀ ಹೇಗಾಗಿದ್ದಾಳೆ? ಆ ಸೀರೆ, ರವಕೆ, ಕೂದಲು, ಮುಖ ಬಣ್ಣ....ಎಲ್ಲವೂ ಹಳ್ಳಿಯ ಜನರಲ್ಲಿ ಕುತೂಹಲವನ್ನುಹುಟ್ಟಿಸುವಂತಹುದೇ. "ಸುಂದರೀ....ನಿಜಕ್ಕೂ ಈಗ ಹೇಗಾಗಿ ಬಿಟ್ಟೆಯೇ? ಹೀಗಾಗುವವಳನ್ನು ಸೀನ ಹೇಗೆಮಾಡಬೇಕೂಂತಿದ್ದ? ಅಯ್ಯೋ ರಾಣಿ ಹ್ಯಾಗೆಕಾಣ್ತೆಯೆ? ಕಮಲಕ್ಕನ ಟಿಕೆ ಮುರಿದು ಕೊಂಡಾಡಿದರು. ಸುಂದರಿ ಮುಗುಳ್ನಕ್ಕು ತನ್ನನ್ನು ತಾನೆ ನೋಡಿಕೊಂಡಳು.

ಸೀನ, ಸುಂದರಿ ತನ್ನ ಜೀವನದಲ್ಲಿ ಸುಳಿಯಲೇ ಇಲ್ಲ ಎಂದು ಕೊಂಡು ಆ ಕಹಿ ನೆನಪನ್ನು ಮರೆಯ ಬೇಕೆಂದು ಯತ್ನಿಸುತ್ತಿದ್ದಾಗ ಊರೆಲ್ಲನಲಿದಾಡುವ ಸುಂದರಿ ಉರಿಯುವ ಗಾಯಕ್ಕೆ ಉಪ್ಪು ಸೀನನ್ನೆ ರಚಿದಳು. ಕೆಲವು ದಿನಗಳಲ್ಲಿ ಸುಂದರಿ ಮೆರೆದಾಡಿ, ನಲಿದಾಡಿ ಮನೆಗೆ ಮುಂಬಯಿ ಸೇರಿದಾಗ ಸೀನ ಸಮಾಧಾನದ ನಿಟ್ಟುಸಿರ್ಗರೆದ.

ಆ ಮೇಲೆ ಮೂರು ವರ್ಷಗಳ ಬಳಿಕ ಸುಂದರಿಯ ಸುಳಿವಿಲ್ಲದಾಗ ಸೀನನಿಗೆ ತುಂಬ ಸಮಾಧಾನವಾಯಿತು. ಆತ ಮುದುಕಿ ಬೇಯಿಸಿದ ಗಂಜಿಯೂಟದಲ್ಲೇ ಮೃಷ್ಟಾನ್ನದ ಸವಿಕಂಡ. ಸೀನನ ಜೀವನ ನೆಮ್ಮದಿಯಿಂದ ಕಳೆಯತೊಡಗಿತು.

ಅಕಸ್ಮಾತ್ತಾಗಿ ಹಳ್ಳಿಯ ರಸ್ತೆಯ ಬದಿಯಲ್ಲಿ ಗಾಡಿಯೊಂದು ನಿಂತಾಗ ಅದರ ಸೀನನ ಮನೆಗೆ ಹತ್ತಿರವಾಗಿ ನಿಂತಾಗ ಊಟಕ್ಕೆ ಕುಳಿತ ಸೀನ ಹೊರಗಿಣಿಕಿದ. ಗಾಡಿಯಲ್ಲಿ ಥಳಕಿನ ಹೆಂಗಸರಿಬ್ಬರು ಕಾಣಿಸಿದುದನ್ನು ನೋಡಿದಾಗ ಒಮ್ಮೆಲೆ ಹೃದಯದಲ್ಲಾವುದೋ ಅವ್ಯಕ್ತ ನೋವು ಕಾಣಿಸಿತು ಅತ್ಯಾಶ್ಚರ್ಯವಾಯಿತು. ಆಗ ಮೆಲ್ಲನೆ ಅವರು ಒಂದು ಜೀವವನ್ನು ಕೆಳಗಿಳಿಸಿದರು.

"ಇದೇ ಏನು ನಿನ್ನ ಮನೆ? ನಾವಿನ್ನು ಹೋಗ್ತೇವೆ. ಗಾಡಿ ಬಿಡು" ಎಂದೊಡನೆ ಗಾಡಿ ತಿರುಗಿತು.

ನಡುಗುವ ಶರೀರದ ಎಲುಬು ಚರ್ಮ ಮಾತ್ರವಿದ್ದ ಕೊಳಕು ವಸ್ತ್ರದ ರೋಗಿ

"ಸೀನಪ್ಪನವರೇ....ನಿಮ್ಮ ಹೆಂಡತಿ ಸುಂದರಿಗೆ ಕಾಯಿಲೆ. ನಾವು ಪಾಪದವರು. ಇವಳಿಗಾಗಿ ಇಲ್ಲಿ ವರೆಗೆ ಬಂದೆವು" ಗಾಡಿ ಹೋಗುತ್ತಿರುವಾಗಲೇ ಆ ಸುಂದರಿಯರು ಕೂಗಿ ಹೇಳಿದರು. ಸೀನಪ್ಪನ ತಾಯಿ ಓಡಿಬಂದರು. ಸುಂದರಿ ಆಗಲೇ ನಡುಗುತ್ತಾ ಕೆಳಗೆ ಬಿದ್ದಿದ್ದ ಸೀನ ಕೈತೊಳೆದುಕೊಂಡು ನೆಟ್ಟಗೆ ಹೊರಟ.

"ಅಯ್ಯೋ....ಅಮ್ಮಾ ಅಯ್ಯೋ" ಸೀನ ಆ ದಾರಿಯಿಂದ ಹೋಗುವಾಗ ಸುಳಿಯಾಟವಿರಿತ್ತು. ಸೀನ ಅತ್ತ ತಿರುಗಲಿಲ್ಲ. ಕಲ್ಲು ಹೃದಯ ನನ್ನದಿರಲಿ, ಎನ್ನುತ್ತಾ ನಡೆದಿದ್ದ. ದುರ್ವಾಸನೆ ಮೂಗಿಗೆ ಹಿಡಿಯುತಿತ್ತು.

ರಾತ್ರಿಯೆಲ್ಲಾ ಎಲ್ಲೆಲ್ಲೋ ತಿರುಗಾಡಿ ಬೆಳಗಿನ ಜಾವಕ್ಕೆ ಸೀನ ಮನೆಯ ದಾರಿ ಹಿಡಿದ ಮನೆಯ ಸಮೀಪ ಕಾಗೆಗಳ ಕೂಗಾಟ ಕೇಳಿಸುತಿತ್ತು. ಸುಂದರಿಯ ನರಳಾಟ ನಿಂತಿತ್ತು. ದುರ್ವಾಸನೆ ಹೆಚ್ಚಿತ್ತು. ಕಾಗೆ, ನಾಯಿಗಳ ತಂಡವನ್ನೆಬಡಿಸಲು ಮುದುಕಿ ತಾಯಿ ಸಾಹಸಪಡುತ್ತಿದ್ದುದು ವ್ಯರ್ಥವಾಗುತ್ತಲಿತ್ತು. ಸೀನ ನಿಟ್ಟುಸಿರ್ಗರೆದು ತಟಸ್ಥನಾಗಿ ನಿಂತ.

ಅಮೃತಾಂಜನ
ಎಲ್ಲಾ ಮಾದರಿಯ ತಲೆನೋವಿಗೆ
ಎಲ್ಲಾತರದ ಸಿಡಿತ ಮತ್ತು ನೋವುಗಳಿಗೆ
50 ವರ್ಷ ಪ್ರಾಯದ
ಪ್ರಾಕೃತಿಕ ಔಷಧಾಲಯ

ನವಯುಗ ವಾರ ಪತ್ರಿಕೆಗೆ ಚಂದಾದಾರರಾಗಿ ಪ್ರೋತ್ಸಾಹಿಸಿ

ರವೀಂದ್ರವಾಣಿ—೨೩

ವಿಶ್ವಕವಿ ರವೀಂದ್ರನಾಥ ಟಾಗೋರ್

ಪ್ರೇಮಸಾಧನೆಯಿಂದ ಪರಮಾತ್ಮನ ಪ್ರಾಪ್ತಿ

ಅನುವಾದಕರು

ಶ್ರೀ ಕೆ. ಎನ್. ಭಟ್, ಶಿರಾಡಿಪಾಲ್

ಮನುಷ್ಯನ ಆತ್ಮವು ನಿಯಮಾನುಸಾರವಾಗಿ ಪ್ರೇಮ ನಿಯಂತ್ರಣದಿಂದ ಮುಕ್ತಿಯನ್ನು ಹೊಂದುತ್ತ ನೈತಿಕ ಬಲದಿಂದ ಆತ್ಮಿಕ ಧಾಂತಲದ ಕಡೆಗೆ ಯಾತ್ರೆ ಮಾಡುತ್ತಿರುವುದು ಬುದ್ಧಿಯು ಆತ್ಮ ಸಂಯಮ ಮತ್ತು ನಿಯಮಿತ ಜೀವನದ ಉಪದೇಶವನ್ನು ಕೊಟ್ಟಿತು. ಈ ಆದರ್ಶವು ನಿಯಮಗಳ ಪೂರ್ಣತೆಯ ಆದರ್ಶವಾಗಿತ್ತು. ಆದರೆ ನಿಯಮಗಳ ಈ ಬಂಧವೇ ನಮ್ಮ ಅಂತಿಮ ಧ್ಯೇಯವಾಗಿರಲು ಸಾಧ್ಯವಿಲ್ಲ ಈ ನಿಯಮ ರೂಪೀ ಬಂಧನಗಳ ಮೇಲೆ ಪೂರ್ಣ ಸ್ವಾಮಿತ್ವವನ್ನು ಸ್ಥಾಪಿಸಿ, ಸುನ್ನಡೆಯ ವ ಯೋಗ್ಯತೆ ನಮಗೆ ಪ್ರಾಪ್ತವಾಗುವುದು ಆ ಬಳಿಕ ನಾವು ಬ್ರಹ್ಮನ ಕಡೆಗೆ ಅಂದರೆ ಅಸೀಮ ಪ್ರೇಮ ಪುಂಜದ ಕಡೆಗೆ ಮುಂದುವರಿಯುತ್ತೇವೆ

ಬುದ್ಧನು ಇದನ್ನು "ಬ್ರಹ್ಮವಿಹಾರ" ಎಂದು ಕರೆದಿರುವನು ಅರ್ಥಾತ್ ಬ್ರಹ್ಮಲೋಕದಲ್ಲಿ ಸ್ಥಿರಗೊಳ್ಳಬೇಕಾದ ಆನಂದವೇ ಇದಾಗಿದೆ ಬುದ್ಧನ ಅಭಿಪ್ರಾಯದಂತೆ, ಯಾವ ಮನುಷ್ಯನು ಈ ಸ್ಥಿತಿಗೆ ತಲಪಲು ಆತುರನಾಗಿರುವನೋ ಅಂಥವನು 'ಯಾರಿಗೂ ದ್ವೇಷಮಾಡಬಾರದು. ದ್ವೇಷ ಮತ್ತು ಕ್ರೋಧ, ಇವುಗಳನ್ನು ಪೂರ್ಣವಾಗಿ ತ್ಯಜಿಸ ಬೇಕು. ಯಾರಿಗೂ ಕಷ್ಟಕೊಡಬಾರದು. ಇದು ಅತನ ಕರ್ತವ್ಯವಾಗಿರುವುದು ಈ ಪರಿಯಿಂದಿರುವ ಮನುಷ್ಯನ ಹೃದಯದಲ್ಲಿ—ತನ್ನ ಮಗುವಿನ ಮೇಲೆ ತಾಯಿಗೆ ಎಷ್ಟು ಪ್ರೇಮವಿರುವುದೋ ಅದೇ ರೀತಿ ಪ್ರತಿಯೊಂದು ಪ್ರಾಣಿ ಮಾತ್ರದಲ್ಲೂ ಪ್ರೇಮವು-ಅಸೀಮ ಪ್ರೇಮವಾಗಿರುವುದು. ಪತ್ತು ಈ ವ್ಯಕ್ತಿಯು ತನ್ನ ನಿದ್ರೆಯಲ್ಲಿಯೂ ಸಹ, ಅತನ ಹೃದಯವು ಸರ್ವರ ಕಲ್ಯಾಣಕಾರೀ ಭಾವನೆಗಳಿಂದ ತುಂಬಿಕೊಂಡಿರುವುದು

ಪ್ರೇಮದ ಅಭಾವವು ವಿದ್ವೇಷದಿಂದ ಕೂಡಿದ ಒಂದು ಅಂಶದ ರೂಪವಾಗಿರುವುದು ಏಕೆಂದರೆ, ಪ್ರೇಮವು ಚೇತನದ ಪೂರ್ಣರೂಪವಾಗಿದೆ ಅಸ್ತಿತ್ವವುಳ್ಳ ಪ್ರತಿಯೊಂದುವಸ್ತುವಿನ ಪ್ರಯೋಜನವೂ ಪ್ರೇಮದ ಮೂಲಕವೇ ಪೂರ್ಣವಾಗುವುದು. ಪ್ರೇಮವು ಕೇವಲ ಒಂದು ಭಾವನೆ ಮಾತ್ರವಾಗಿಲ್ಲ, ಇದು ಸತ್ಯವಾಗಿದೆ. ಮತ್ತು ಪ್ರತಿಯೊಂದು ವಸ್ತು ನಿರ್ಮಾಣದ ಮೂಲ ಸ್ರೋತವಾದ ಆನಂದವಾಗಿದೆ ಬ್ರಹ್ಮನಿಂದ ಉದ್ಭವವಾಗುವ ಪೂರ್ಣ ಚೇತನದ, ಸ್ವಚ್ಛ ಶ್ವೇತ ತೋರಣವೇ ಈ ಪ್ರೇಮವಾಗಿರುವುದು

ಈ "ಸರ್ವಾನು ಭೂತಃ' ಆಗಿರುವವನು ವ್ಯಾಪಕವಾದ ಅಸ್ತಿತ್ವದಿಂದ ಕೂಡಿ ಆಕಾಶದಲ್ಲಿಯೂ, ಹೃದಯಾಕಾಶದಲ್ಲಿಯೂ, ವಿದ್ಯಮಾನವಾಗಿರುವ ಈತನೇ

ಡಾ| ರವೀಂದ್ರನಾಥ ಟಾಗೋರ್

* * *

ಪ್ರೇಮಮಯನಾಗಿರುವನು. ಈತನೊಡನೆ ಏಕಾತ್ಮ ಭಾವವನ್ನು ಸ್ಥಾಪಿಸಲು ಇರುವ ಒಂದೇ ಒಂದು ಮಾರ್ಗವೆಂದರೆ ಅದೇ ಪ್ರೇಮವಾಗಿದೆ. ಒಂದು ವೇಳೆ—ಆಕಾಶವು ಈ ಪ್ರೇಮ—ಈ ಆನಂದದಿಂದ ಪೂರ್ಣವಾಗಿರುತ್ತಿರಲಿಲ್ಲವಾಗಿದ್ದಲ್ಲಿ ಯಾರು ಅನುಪ್ರಾಣಿತರಾಗುವರು? ಯಾರು ಗತಿಶೀಲರಾಗಿ ಇರಬಲ್ಲರು? ನಮ್ಮ ಚೇತನವನ್ನು ಪ್ರೇಮದ ಅತಿ ಉನ್ನತ ಮಟ್ಟಕ್ಕೇರಿಸಲು ಪ್ರಯತ್ನಿಸಿ, ವಿಶ್ವದಾದ್ಯಂತವಾಗಿ ಈ ಪ್ರೇಮವನ್ನು ವಿಸ್ತಾರಗೊಳಿಸಿ, ಪ್ರೇಮೋಪ್ತರಾಗಿಯೇ ನಾವು ಬ್ರಹ್ಮವಿಹಾರ, ಅಥವಾ ಅಸೀಮ ಆನಂದದಲ್ಲಿ ಏಕಾತ್ಮಭಾವವನ್ನು ಸ್ಥಾಪಿಸಿಕೊಳ್ಳಬಲ್ಲೆವು ಪ್ರೇಮವು ಸ್ವಯಂ ಅನಂತವಾದ ಕಾಣಿಕೆಯನ್ನೀಯುವುದು. ಆದರೆ ನಾವು ಈ ಕಾಣಿಕೆಗಳ ಮೂಲಕ ಪ್ರೇಮಭಾವವನ್ನು ಹೊಂದಲಂತಿದಾದರೆ ಈ ಕಾಣಿಕೆಗಳಿಗೆ ಅರ್ಥವಿಲ್ಲವೆಂಬಂತಾಗುತ್ತದೆ ಈ ಪ್ರೇಮಭಾವದ ಪ್ರೇಮೋಪಹಾರಗಳನ್ನು ಪಡೆಯಲು, ನಮ್ಮ ಹೃದಯವೂ ಪ್ರೇಮಪೂರ್ಣ ವಾಗಿರಬೇಕು ಪ್ರೇಮರಹಿತವಾದ ಹೃದಯದಿಂದ ಕಾಣಿಕೆಯನ್ನು ಪಡೆಯುವ-ತನು ಕೇವಲ ಕಾಣಿಕೆ ಕೊಡಲಿರುವ ಆ ವಸ್ತುವಿನ ಪ್ರಯೋಜನವನ್ನು ಮಾತ್ರ ಬಲ್ಲವನಾಗಿದ್ದು ಅದನ್ನು ಸ್ವೀಕರಿಸುತ್ತನೆ ಆದರೆ ಈ ಪ್ರಯೋಜನವು ಕ್ಷಣಿಕವಾಗಿದ್ದು ಏಕಪಕ್ಷೀಯವಾಗಿರುತ್ತದೆ ಇದು ನಮ್ಮ ಕ್ಷಣಿಕವಾದ ಇಚ್ಛೆಯನ್ನು ಮಾತ್ರ ತಂತಿಗೊಳಿಸಬಹುದು. ಇಚ್ಛಾಕಾಂಕ್ಷಿಯೊಂದ ಬಳಿಕ ಆ ವಸ್ತು ಕೇವಲ ಭಾವವಾದ ಹೊರೆಯಂತೆ ಭಾಸವಾಗುವುದು ಅದರೆ, ಒಂದು ಕಾಣಿಕೆಯನ್ನು ನಾವು ಪ್ರೇಮಭಾವದಿಂದ ಲೇ ಸ್ವೀಕರಿಸಿದ್ದಾದರೆ ಆಗ ನಮಗೆ ಆ ಕಾಣಿಕೆಯ ರೂಪದಿಂದ ದೊರೆತ ವಸ್ತುವು ಶಾಶ್ವತ ಉಪಯೋಗೀ ಯಾಗೂ ಬಹುಬೆಲೆಯುಳ್ಳದ್ದಾಗಿ ತೋರುವುದು ಕಾಣಿಕೆಯ ವಸ್ತು ಯಾವುದೇ ಇರಲಿ, ಆದರೆ ಉಪಯೋಗವು ಭಾವನೆಯಲ್ಲಿ ಹುದುಗಿಕೊಂಡಿರುವುದು ಅದು ಸ್ವಯಂಪೂರ್ಣವಾಗಿದೆಯೇ ಹೊರತು, ಬೇರೆ ವಸ್ತುವಿನ ಯಾ ಪ್ರಯೋಜನದ ಸಿದ್ಧಿಯ ಸಾಧನವಾದಾಗ ಅದು ಕಾಣಿಕೆಯಾಗಿ ಕಾಣಿಕೆಯ ವಸ್ತುವಾಗಿ ಉಳಿಯಲಾರದು.

ಪೂರ್ಣಾನಂದದ ಶ್ರೇಷ್ಠ ಕಾಣಿಕೆಯಂತಿರುವ ಈ ಜಗತ್ತನ್ನು ನಾವು ಯಾವ ರೀತಿಯಿಂದ ಒಪ್ಪಿಕೊಳ್ಳುತ್ತೇವೆ? ಎಂಬುದೇ ಈಗ ಪ್ರಶ್ನೆಯಾಗಿದೆ ನಾವು ನಮ್ಮ ಅಮರ ದೇವತೆಗಳನ್ನು ಸ್ಥಾಪಿಸುವ ನಮ್ಮ ಹೃದಯದಲ್ಲಿ ಇದಕ್ಕೆ ಸ್ಥಾನವನ್ನು ಕೊಡುತ್ತೇವೆಯೇ? ನಾವೂ ನ್ಯಾಯವಾಗಿ ನಾವು ವಿಶ್ವದ ಶಕ್ತಿಗಳನ್ನು ಉಪಯೋಗ ಮಾಡಿಕೊಂಡು, ಹೆಚ್ಚು ಹೆಚ್ಚಾಗಿ ಶಕ್ತಿಯನ್ನು ಸಂಗ್ರಹಿಸಲು ಆತುರದಿಂದ ಇರುತ್ತೇವೆ ವಿಶ್ವದ ಅನ್ವಯ ಸಂಬಂಧದಿಂದ ನಾವು ಯದಾಶಕ್ತಿಯಾಗಿ ಹೆಚ್ಚು ಹೆಚ್ಚಾಗಿ—ಶಕ್ತಿಯನ್ನು ಪಡೆಯಲು, ಸ್ಪರ್ಧಿಸುತ್ತ ಜೀವನ ನಡೆಸುತ್ತೇವೆ ಹಾಗಾದರೆ ಇದೇ ನಮ್ಮ ಜೀವನದ ಧ್ಯೇಯವಾಗಿರುವುದೇ? ನಮ್ಮ ಮನಸ್ಸು ಕೇವಲ ಜಗತ್ತಿನ ಉಪಭೋಗವನ್ನು ಪಡೆಯುವ ಚಿಂತೆಯಿಂದಲೇ ಕೂಡಿ ಇರುವುದು. ಇದರಿಂದಲೇ ನಾವು ಇದರ ನಿಜವಾದ ಬೆಲೆಯನ್ನು ಕಂಡುಕೊಳ್ಳಲಾರೆವು. ನಾವು ನಮ್ಮ ಭೋಗ ಮತ್ತು ವಿಲಾಸೀಭಾವನೆಗಳಿಂದ, ಈ ಬೆಲೆಯ ಮಹತ್ವವನ್ನು ಅಲ್ಪವೆಂದು ಪರಿಗಣಿಸುತ್ತೇವೆ. ಹಾಗೂ ಕಟ್ಟಕಡೆಗೆ ನಾವು ಇದನು ನಮ್ಮ ಇಷ್ಟಸೂರ್ತಿಯ ಸಾಧನ ಮಾತ್ರವೆಂದು ಒಗೆಯುತ್ತೇವೆ ಪುಸ್ತಕದ ಹಾಳೆಗಳನ್ನು ಕಿತ್ತು ಹರಿದು ಎಸೆಯುತ್ತ ಆನಂದಿತನಾಗುವ ಅಬೋಧ ಶಿಶುವಿನಂತೆ ನಾವು ಕೂಡ ಈ ಪ್ರಕೃತಿಯ ಸಂಪರ್ಕದೊಡನೆಯೇ ನಮ್ಮ ಜೀವನದ ಆನಂದ ವಿದೆಯೆಂದು ಭಾವಿಸುತ್ತೇವೆ ನಮಗೆ ತಿಳಿದಿರುವ ಇದರ ನಿಜವಾದ ಬೆಲೆಯೆಂದರೆ ಸುಸ್ತಕದ ಹಾಳೆಗಳನ್ನು ಹರಿದು ಹರಿದು ಆಟವಾಡುತ್ತಿರುವ ಬಾಲಕನಿಗಿರುವ ಪುಸ್ತಕ ಜ್ಞಾನದಂತೆಯೇ ಆಗಿರ ಬಹುದು ಅಂದರೆ. ಇದರ ನಿಜವಾದ ರಹಸ್ಯವು ನಮ್ಮ ಪಾಲಿಗೆ ಸುಚ್ಚಿಯೇ ಇರುವುದು.

ಮನುಷ್ಯನನ್ನೇ ಆಹಾರವಾಗಿ ಬೆಂಬಿಸುವ ನರಭಕ್ಷಕ ಜಾತೀಯ ಜನರು, ಮನುಷ್ಯನನ್ನೂ ತಮ್ಮ ಊಟದ ಸಾಮಗ್ರಿಯೆಂದೇ ಭಾವಿಸುತ್ತಾರೆ ಮನುಷ್ಯನಿಗೆ ಅವರು ಕೊಡುವ ಮಹತ್ವವು ಇತರ ಆಹಾರ ಪದಾರ್ಥಗಳಿಗೆ ಕೊಡುವಷ್ಟೇ ಆಗಿರುವುದು. ಇಂತಹ ಮನುಷ್ಯ ಭಕ್ಷಕ ದೇಶದಲ್ಲಿ ಸಂಸ್ಕೃತಿಯು ಎಂದೂ ಬೆಳಯಲಾರದು. ಏಕೆಂದರೆ ಇಲ್ಲಿ ಮನುಷ್ಯನು ಪಶುಗಳ ಸ್ಥಾನಕ್ಕೆ ಒಂದಿಳಿದಿರುತ್ತಾನೆ ತನ್ನ ಶ್ರೇಷ್ಠತ್ವವನ್ನು ಮರೆತಿರುತ್ತಾನೆ ಇನ್ನು ಬೇರೆ ರೀತಿಯಿಂದ ಮನುಷ್ಯನನ್ನು ಭಕ್ಷಿಸುವ ರೀತಿಯೂ ಕಂಡು ಬರುತ್ತಿರುವುದು ಇದೂ ಕೂಡ ಪೈಶಾಚಿಕ ಕೃತ್ಯಕ್ಕಿಂತ ಕಡಿಮೆಯೇನೂ ಅಲ್ಲ ಇದನ್ನು ಕಣ್ಣಾರೆ ಕಾಣ ಬೇಕಾದರೆ ಬಹಳ ದೂರಹೋಗಬೇಕಾಗಿಲ್ಲ. ಹತ್ತಿರದ ಸಭ್ಯವೆಂದು ಹೇಳಿಸಿ ಕೊಳ್ಳುತ್ತಿರುವ ದೇಶಗಳಲ್ಲಿಯೂ ಇದರ ಪರಿಚಯವಾಗಬಹುದು. ಕೆಲವು ಸಭ್ಯ ದೇಶಗಳಲ್ಲಿಯೂ ಕೂಡ ಮನುಷ್ಯನೆಂದರೆ ಕೇವಲ ಎಲುಬು ಮತ್ತು ಮಾಂಸದ ಗೂಡು! ಎಂದು ಭಾವಿಸಲಾಗುವುದು ಮತ್ತು ಸಂತೆಯಲ್ಲಿ ಶರೀರದ ಆಧಾರದ ಮೇಲಯೇ ಮನುಷ್ಯನಿಗೆ ಬೆಲೆಕಟ್ಟಿ ಮಾರಲ್ಪಡುವನು ಅಥವಾ ಕೆಗದುಕೊಳ್ಳಲ್ಪಡುವನು. ಅಂದರೆ ಒಂದು ಯಂತ್ರದಂತೆ. ಆತನಿಂದ ಉಪಯೋಗ ಹೊಂದುವ ದೃಷ್ಟಿ, ಮಾತ್ರ ಇಲ್ಲಿರುವುದು ಕಾಣುವಂತರು, ಹೆಚ್ಚು ಹೆಚ್ಚು ಹಣಗಳಿಸಲು ಯಂತ್ರಗಳನ್ನು ಕೊಂಡುಕೊಳ್ಳುವಂತೆ, ಮನುಷ್ಯನ ಉಪಯೋಗ ಹೆಚ್ಚು ಪ್ರಯೋಜನ ಪಡೆಯುವುದನ್ನು ಮಾತ್ರ ನೋಡಲಾಗುವುದು. ಈ ಪರಿ

ಅಸ್ಥಮಾ ರೋಗಿಗಳ ತಿಳುವಳಿಕೆಗೆ

ರಿಜಿಸ್ಟ್ರಿಯಾದ ಚಿತ್ರಕೋಟ್ ಅಸ್ಥಮಾ ಔಷಧಾಲಯದಲ್ಲಿ ತಾ 22-11-61ನೇ ಹುಣ್ಣಿಮೆ ರಾತ್ರಿ ಬೆಳಗಿನಿಂದಿಗೆ ಸೇವಿಸುವುದರಿಂದ ಅಸ್ಥಮಾ, ನೇವಸ, ಕೆಮ್ಮು, ನೆಗಡಿ ನಿವಾರಿಸಲ್ಪಡುವುದು ಕೂಡಲೇ ಹಣ್ಣು ಮೆಯ ಔಷಧಿಗೆ ಒರೆಯಿರಿ

Manager, Shri Mahatma Naga Baba Ayuruvedashram,
P. O Chitrakot U P

ಯ ನಮ್ಮ ಲೋಭ ಭೋಗೇಚ್ಛೆ ಮತ್ತು ಲೋಲುಪತೆ, ಇವುಗಳು ಮನುಷ್ಯನನ್ನು ನಿಕೃಷ್ಟವಾದ ಪಾತಾಳಕ್ಕೆನೂಕಿ ಬಿಡುತ್ತವೆ. ಇದು ಒಂದು ಅಸಾಮಾನ್ಯವಾದ ಆತ್ಮವಂಚನೆಯಾಗಿರುವುದು. ನಮ್ಮ ಭೋಗೇಚ್ಛೆಯು, ಮನುಷ್ಯನ ಆತ್ಮದ ಕಡೆ ನೋಡಲು ನಮ್ಮನ್ನು ಕುರುಡರನ್ನಾಗಿ ಮಾಡುವುದು. ನಮ್ಮ ಆತ್ಮಕ್ಕೆ ನಾವು ಈ ರೀತಿಯಿಂದ ಘೋರ ಅನ್ಯಾಯ ಮಾಡುತ್ತಿರುವುದರಿಂದ, ನಮ್ಮ ವಿವೇಕ, ಬುದ್ಧಿಯು ನಷ್ಟವಾಗಿ ಹೋಗುವುದು. ಮತ್ತು ನಾವು ಆತ್ಮಿಕ ಅವಘಾತದ ಮಗ್ಗದ ಮೇಲೆ ಕಾಲಿಡುತ್ತೇವೆ. ಈ ಸರಿಯ ಈ ಹತ್ಯೆಯು ನಮ್ಮ ಸಂಸ್ಕೃತಿ ರೂಪವಾದ ಶರೀರದ ಮೇಲೆ, ಅಳಿಸಿಹೋಗದ ಕಲೆಗಳನ್ನುಂಟು ಮಾಡುವುದು.

ನಗರಗಳಲ್ಲಿ ಪಾಪದ ದಾರಿಗಳನ್ನು ಅಂದರೆ ವೇಶ್ಯಾವ್ಯವಸಾಯ-ಶರಾಬು ಅಂಗಡಿ ಇತ್ಯಾದಿಗಳನ್ನು ಉತ್ಪಾದಿಸುವುದು ಇವುಗಳಿಗೆ ಉತ್ತರವೆಂಬಂತೆ,—ಪ್ರತಿ ಹಿಂಸೆಯ ಕಾನೂನುಗಳು ಜಾರಿಗೆ ಬರುತ್ತವೆ; ಕ್ರೂರವಾದ ಜೈಲುಗಳು ಸ್ಥಾಪಿತವಾಗುತ್ತವೆ. ಒಂದು ದೇಶದ ಮೂಲಕಮತ್ತೊಂದು ದೇಶವನ್ನು ಒಗ್ಗಿಸಿ ಗುಲಾಮಗಿರಿಯನ್ನು ಸ್ವೀಕರಿಸುವಂತೆ, ಮಾಡುವ ಯೋಜನೆಗಳು ತಯಾರಾಗುತ್ತವೆ. ಒಂದು ಜಾತಿಯವರು, ಮತ್ತೊಂದು ಜಾತಿಯವರನ್ನು ಸಂಘಟಿತರಾಗಿ ಶೋಷಣೆ ಮಾಡಿ ಬಿಡಲು ಉತ್ತೇಜನ ಕೊಡುವುದು; ಇದೂ ಕೂಡ ಭೋಗೇಚ್ಛೆಯೇ ಆಗಿದೆ ಅಲ್ಲದೆ, ಶೋಷಣೆ ಮಾಡಿದ ಅವರನ್ನು ಸದಾ ಅರಕ್ಷಿತರನ್ನಾಗಿ ಮಾಡಿ, ಸ್ವಶಾಸನ ಮಾಡಲು ಅಯೋಗ್ಯರನ್ನಾಗಿಮಾಡಿ ಬಿಡುವುದೂ ಈ ಇಚ್ಛೆಯ ಕಾರಣವೇ ಆಗಿದೆ.

ಮನುಷ್ಯನು ಬಹಳ ಉಪಯೋಗಿ ಶಕ್ತಿಯಾಗಿರುವನು ಎಂಬುದರಲ್ಲಿ—ಸಂದೇಹವಿಲ್ಲ ಏಕೆಂದರೆ ಅತನ ಶರೀರವು ಆಶ್ಚರ್ಯಕರವಾದ ಒಂದು ಯಂತ್ರದಂತಿರುವುದು. ಮತ್ತು ಅತನ ಮನಸ್ಸಿನಲ್ಲಿ ಅಲೌಕಿಕನಾದ ಯೋಗ್ಯತೆ ಇರುವುದು. ಆದರೆ ಅದರಲ್ಲಿ ಆತ್ಮವೂ ಇರುವುದು. ಇದನ್ನು ಪ್ರೇನುವೆಂದೂ ಹೇಳುವರು. ಇಂತಿರುವ ಮನುಷ್ಯನ ಮಹತ್ವವನ್ನು ನಾವು ಕೇವಲ ಉಪಯೋಗದ ದೃಷ್ಟಿಯಿಂದ ಮಾತ್ರ ಗುರುತಿಸಿದರೆ, ಆಗ ಈ ಮಹತ್ವದ ಒಂದು ಅಂಶ ಮಾತ್ರ ಗುರುತಿಸಿದಂತಾಗುವುದು, ಹೊರತು ನಾವು ಅದರ ಪೂರ್ಣ ಮಹತ್ವವನ್ನು—ತಿಳಿದುಕೊಳ್ಳಲಾರಿವು. ಇಂತಹ ಈ ಅಪೂರ್ಣಜ್ಞಾನವು ಮನುಷ್ಯರೊಡನೆ ಅನ್ಯಾಯ ಮಾಡುವ ಇಚ್ಛೆ ಹಾಗೂ ಸೌಲಭ್ಯಗಳನ್ನೊದಗಿಸುವುದು. ಮತ್ತು ನಾವು ನಮ್ಮ ಲಾಭಕ್ಕಾಗಿ ಇತರರನ್ನು ಶೋಷಣೆ ಮಾಡುತ್ತ ನಮ್ಮ ಈ ಕಾರ್ಯದ ಕುಶಲತೆಯ ಬಗೆಗೆ ಹೆಮ್ಮೆಪಡುತ್ತೇವೆ. ಇದು ಹೇಗೆಂದರೆ – ನಾವು ಸಂತೆಯಲ್ಲಿ ಒಂದು ವಸ್ತುವಿಗೆ ಎಷ್ಟು ಬೆಲೆಯನ್ನು ಕೊಟ್ಟಿರುವೆವೋ ಅದಕ್ಕಿಂತ ಹೆಚ್ಚಿಗೆ ಸಡೆದು ಈಗ ಲಾಭ ಹೊಂದುತ್ತಿದ್ದೇವೆ! ಎಂಬ ಈ ಹೆಮ್ಮೆಯಿಂದ ಕೂಡಿದ ನಮ್ಮ ಮಾನಸಿಕ ಸ್ಥಿತಿಯು, ನಾವು ಮನುಷ್ಯನ ಆತ್ಮದ ಕುಂತು ಅಸರಚಿತರಾಗಿರುವುದರಿಂದ ಉಂಟಾಗುವುದು. ಅಂದರೆ ಆತ್ಮವು ವನ್ಯನಿಂದ ಬೇರೆ, ಎಂಬ ಭಾವನೆಯಿಂದಲೇ ಹೀಗಾಗುವುದು. ಒಂದು ವೇಳೆ ನಾವು, ಪ್ರತಿಯೊಬ್ಬನ ಆತ್ಮವನ್ನು ನಮ್ಮ ಆತ್ಮದ ಒಂದು ಅಂಶವೆಂದು ತಿಳಿದುಕೊಂಡಿದ್ದೇ ಆದರೆ ಆಗ ಇತರರ ದುಃಖವೂ ನಮ್ಮ ದುಃಖವೇ ಆಗಿದೆ—ಎಂದು ತಿಳಿದುಕೊಳ್ಳಬಲ್ಲೆವು. ಮತ್ತು ಇತರರನ್ನು ನಿಕೃಷ್ಟವಾದ ಪರಿಸ್ಥಿತಿಗೆ ಒಯ್ಯುತ್ತಿರುವಾಗ ನಾವು ನಮ್ಮ ಮಹತ್ವವನ್ನೇ ಈಗ ಕುಗ್ಗಿಸುತ್ತಿದ್ದೇವೆ!, ಎಂಬ ಅನುಭವವನ್ನು ತಿಳಿದುಕೊಳ್ಳಬಲ್ಲವರಾಗುತ್ತೇವೆ.

ಒಂದು ಶರತ್ಕಾಲದ, ಸುಂದರವಾದ ಸಂಧ್ಯಾಕಾಲದಲ್ಲಿ ನಾನು ಒಂದು ದೋಣಿಯಲ್ಲಿ ಕುಳಿತು ಗಂಗಾನದಿಯ ಮೂಲಕ ಹೋಗುತ್ತಿದ್ದೆ ಸೂರ್ಯನು ಆಗ ತಾನೆ ಅಸ್ತಮಿಸುವುದರಲ್ಲಿದ್ದನು ಆಕಾಶವು ಪೂರ್ಣ ಸ್ವಚ್ಛವಾಗಿ, ಶಾಂತಿ, ಹಾಗೂ ಸೌಂದರ್ಯಗಳಿಂದ ತುಂಬಿ ತುಳುಕುವಂತಿತ್ತು. ಹರಡಿದಂತಿದ್ದ ಸೀರಿನ ಹಾಸಿಗೆಯ ಮೇಲೆ ಒಂದೇ ಒಂದಾದರೂ ನೀರ್ಗುಳ್ಳೆ ಇರಲಿಲ್ಲ. ಸೂರ್ಯಾಸ್ತಮಾನದ ಬದಲಾವಣೆಯಾಗುತ್ತಿರುವ ಎಲ್ಲಾ ವರ್ಣಗಳೂ, ಆ ಸ್ವಚ್ಛವಾದ ತಿಳಿನೀರಿನ ಮೇಲೆ ಪ್ರತಿಬಿಂಬಿಸಿದ್ದವು. ಮಳಲು ತುಂಬಿದ್ದ ಮೈದಾನವು ಮೈಲುಗಟ್ಲೆ ವಿಸ್ತಾರವಾಗಿದ್ದು ಅದನ್ನು ನೋಡುವಾಗ ಯಾವನಾದರೂ, ಸಮುದ್ರದ ದೈತ್ಯನು ಇಲ್ಲಿ ಬಂದು ಮಲಗಿರುವನೋ ಎಂಬಂತಿತ್ತು. ನಮ್ಮ ದೋಣಿಯು, ನದಿಯ ಘಾಟನ ಪಕ್ಕದಲ್ಲೇ ಮೆಲ್ಲ ಮೆಲ್ಲಗೆ ಹೋಗುತ್ತಿತ್ತು ಆಗ ಅನಿರೀಕ್ಷಿತವಾಗಿ ಒಂದು ಮೀನು ಅ ನೀರಿನ ಮೇಲಕ್ಕೆ ಜಂಗನೆ ನೆಗೆಯಿತು. ಆಗ ಅದರ ಮೈ ಮೇಲೆ ಸೂರ್ಯಾಸ್ತಮಾನದ ಸೊಬಗೆಲ್ಲವೂ ಒಮ್ಮೆಲೇ ಪ್ರತಿಬಿಂಬಿತವಾಗಿ ಅದು ಒಂದು ಸಲ ಝಗ್ಗನೆ ಶೋಭಿಸಿತು. ಜೀವನದ ಆನಂದದಿಂದ ಕೂಡಿರುವ ಮೌನವಾದ ಜಗತ್ತಿನ ಮುಂದೆ, ಆ ಮೀನು ಒಂದು ಚಣದೊಳಗಾಗಿ—ತನ್ನ ಸಪ್ತರಂಗೀ ವರ್ಣದಿಂದ ಶೋಭಿಸಿ, ಅದೃಶ್ಯವಾಯಿತು ಆ ಮೀನು ಯಾವ ರಹಸ್ಯಮಯವಾದ ಪ್ರಪಂಚದಿಂದ ನೃತ್ಯ ಮಾಡುತ್ತ ಬಂದಿದ್ದಿತೋ ಮತ್ತು ಅವಸಾನಸ್ತ್ರಿಯ ದಿನದ—ಸ್ವರದೊಡನೆ, ತನ್ನ ಸಂಗೀತವನ್ನೂ ಮಿಲನಗೊಳಿಸಿ, ಮರಳಿ—ಹೋಗಿದ್ದಿತ್ತೋ? ತಿಳಿಯದು. ಆದರೆ ಇದನ್ನು ನೋಡಿ ನನಗೆ—ಯಾವುದೋ ಅಜ್ಞಾತ ಪ್ರದೇಶದಿಂದ ಪ್ರೇಮಪೂರ್ಣ ಸ್ವಾಗತ ದೊರೆತಿತ್ತು! ಎಂಬಂತೆ ಭಾಸವಾಗ ತೊಡಗಿತು. ಹೃದಯ—ಸ್ಪರ್ಶಿಯಾದ ಈ ಘಟನೆಯಿಂದ ನನ್ನ ಹೃದಯದಲ್ಲಿ ಆನಂದ ತರಂಗಗಳೆದ್ದಂತೆ ಭಾಸವಾಯಿತು; ಆದರೆ ಅದೇ ವೇಳೆಯಲ್ಲಿ ನಾವಿಕನ ಮುಖದಿಂದ —"ಓಹ್! ಇದು ಎಷ್ಟು ದೊಡ್ಡ ಮೀನು!" ಎಂಬ ನುಡಿ ಹೊರಟಿತು. ಅಂದರೆ ಆ ಮೀನನ್ನು ನೋಡಿದೊತನೆಯೇ ಅತನು ಅದನ್ನು ಹಿಡಿದು ಮೇಲೋಗರ ಮಾಡಿ ಊಟ ಮಾಡುವ ಕಲ್ಪನೆ ಮಾಡಿದ್ದನು. ಅತನು ತನ್ನ ಹಸಿವೆಯ ದೃಷ್ಟಿಯಿಂದ ಮಾತ್ರ ಆ ಮೀನನ್ನು ನೋಡಬಲ್ಲವನಾಗಿದ್ದನು. ಈ ಕಾರಣದಿಂದ ಅತನಿಗೆ—ಆ ಮೀನಿನ ಸಹಜ ಸೌಂದರ್ಯದ ಅಕರ್ಷಣೆಯೇನೂ ಇರಲಿಲ್ಲ. ಆದರೆ ಪ್ರಭಾವವು ಅತನ ಮೇಲೆ ಆಗಲೂ ಸಾಧ್ಯವಿರಲಿಲ್ಲ. ಆದರ ಮನುಷ್ಯನಲ್ಲಿ ಪಶುದೃಷ್ಟಿ ಮಾತ್ರ ಇರುವುದಿಲ್ಲ. ಅವನಲ್ಲಿ ಸತ್ಯವನ್ನು ಕಂಡುಕೊಳ್ಳಬಲ್ಲ ಆತ್ಮೀಯ ದೃಷ್ಟಿಯೂ ಇರುವುದು. ಈ ದೃಷ್ಟಿಯೇ ಅತನ ಆತ್ಮಿಕ ಆನಂದಕ್ಕೆ ಕಾರಣವಾಗುವುದು. ಏಕೆಂದರೆ ತನ್ನ ಮತ್ತು ಸುತ್ತುಮುತ್ತಿನ ಸಮಸ್ತಗಳ ನಡುವೆ ಇರುವ ರಹಸ್ಯಮಯವಾದ ಮತ್ತು ಸುಂದರವಾದ ಸಮಾನತೆಯ ಅವಲೋಕನವನ್ನು ಈ ದೃಷ್ಟಿಯೇ ಮಾಡಿಸುವುದು.

ನಮ್ಮ ಭೋಗೇಚ್ಛೆಯು ನಮ್ಮ ದೃಷ್ಟಿಯ ಮೇಲೆ ಪರದೆಯನ್ನು ಹಾಕಿ ದೃಷ್ಟಿಯದರ್ಶನ ಶಕ್ತಿಯನ್ನು ಬಹಳ ಸಂಕುಚಿತಗೊಳಿಸುವುದು. ಮತ್ತು ನಮ್ಮ ವಿವೇಕ ಶಕ್ತಿಯನ್ನು ಬಹು ಸಂಕುಚಿತಗೊಳಿಸುತ್ತ ಪಾಪಮಯವಾದ ಭಾವನೆಯನ್ನು ಜಾಗೃತಗೊಳಿಸುವುದು. ವಿಷಮತೆ ಹಾಗೂ ಅಹಂಕಾರದಿಂದ ಕೂಡಿದ ವ್ಯಕ್ತಿತ್ವಕ್ಕೆ ಪ್ರೋತ್ಸಾಹ ಕೊಡುತ್ತ ನಮ್ಮನ ಮ್ಮೊಳಗೆ ಅಡ್ಡ ಗೋಡೆಗಳನ್ನು ನಿಲ್ಲಿಸುವ ಭಾವನೆಯೊಂದರೆ ಅದು ಇದೇ ಪಾಪಮಯವಾದ ಭಾವನೆಯಾಗಿರುವುದು.

—ಸಶೇಷ.

ಸಂಬಿಕೆಗೆ ಎಸ್.ಆರ್ ಅಹಂತೆ

ಅತ್ಯುತ್ತಮ ಬೀಡಿಗಳಲ್ಲಿ
ನೀವು ಏನೇನು ಗುಣಗಳನ್ನು ಅಪೇಕ್ಷಿಸುವಿರೋ
ಅವೆಲ್ಲಾ
ಎಸ್.ಆರ್.
ಬೀಡಿಗಳಲ್ಲಿ ಇರುವವು ಎಂದು ಖಚಿತವಾಗಿ
ಹೇಳುತ್ತೇವೆ.

ಎಲ್ಲಾ ಕಡೆಗಳಲ್ಲಿಯೂ ಪೂರೈಸುತ್ತವೆ.

S.R. Beedi Works UDIPI S.K.

ಅನುಭವವೇ ಅಮೃತ

ಶಾಸ್ತ್ರ ಸಂಸ್ಕಾರಯುಕ್ತನಾದ, ಜ್ಞಾನ ಸಂಪನ್ನನಾದ ವಿಖ್ಯಾತ ಕವಿಯು ಒಂದು ರಾಜ್ಯದಲ್ಲಿ ದರಿದ್ರನಾಗಿ ಅಲೆಯುತಿದ್ದರೆ, ಆ ರಾಜ್ಯದ ರಾಜನು ಮೂರ್ಖನೆನ್ನಬೇಕು; ಕವಿಯೊದರೋ ಸಂಪತ್ತಿಹೀನನಾಗಿಯೇ ಐಶ್ವರ್ಯವಂತನಾಗಬಲ್ಲ; ಆದರೆ, ರತ್ನಗಳ ಬೆಲೆಯಿಳಿಸಿದ ಅರಸನೇ ನಿಂದನೀಯನು.

—ಭರ್ತೃಹರಿ.

ಪ್ರಾಣಿ ಶಾಸ್ತ್ರದ ದೃಷ್ಟಿಯಿಂದ ನೋಡುವುದಾದರೆ, ಮನುಷ್ಯನು ಹಿಂಸ್ರ ಪಶುಗಳಲ್ಲಿ ಪ್ರಬಲತಮನಾಗುತ್ತಾನೆ; ಮತ್ತು ತನ್ನ ಇಚ್ಛೆಯಂತೆ ಆಚರಿಸಬಲ್ಲ ಏಕಮಾತ್ರ ಕ್ರೂರ ಪ್ರಾಣಿಯಾಗಿದ್ದಾನೆ.

— ವಿಲಿಯಂ ಜೇಮ್ಸ್.

ಸುಂದರ ದೃಶ್ಯವನ್ನು ಕಂಡು, ಮಧುರ ಶಬ್ದವನ್ನು ಕೇಳಿ ಮನುಷ್ಯನು ತನ್ನನ್ನು ತಾನೇ ಮರೆತು ಬಿಡುವುದಕ್ಕೆ ಆತನ ಸ್ಮೃತಿಯಲ್ಲಿ ಅಚಲವಾಗಿ ನಿಂತ ಪೂರ್ವಜನ್ಮದ ಪ್ರೇಮಾನುಭೂತಿಗಳು ಜಾಗ್ರತವಾಗಿ ಚೇತನ ಮನಸ್ಸಿನೊಡನೆ ಹೊಡೆದಾಡುವುದೇ ಕಾರಣ.

—ಕಾಲಿದಾಸ.

ಮಾನವ ಜೀವನದಲ್ಲಿ ಎರಡು ಮತ್ತು ಎರಡು ನಾಲ್ಕು ಎಂಬ ಗಣಿತದ ನಿಯಮ ಯಾವಾಗಲೂ ಅನ್ವಯವಾಗುವುದಿಲ್ಲ. ಕೆಲವೊಮ್ಮೆ ಅದು ಐದು ಆಗುವುದೂ ಇದೆ; ಮತ್ತೆ ಕೆಲವೊಮ್ಮೆ ಮೂರಾಗುವುದೂ ಉಂಟು. ಇನ್ನು ಅಡಿಷ್ಟೋ ಸಾರಿ ಪ್ರಶ್ನೆಗೆ ಉತ್ತರ ಕಂಡು ಹಿಡಿಯುವುದಕ್ಕೆ ಮೊದಲೇ ಕೈಯ ಸ್ಲೇಟು ಕೆಳಗುರುಳುವುದೂ ಇದೆ

—ವಿನ್‌ಸ್ಟನ್ ಚರ್ಚಿಲ್.

ಲೋಕದಲ್ಲಿ ಮೂರು ಬಗೆಯ ಸುಳ್ಳುಗಳಿರುವುವು; ಕೇವಲ ಸುಳ್ಳು, ಹೆಚ್ಚು ಹಸಿ ಸುಳ್ಳು, ಅಂಕೆಸಂಖ್ಯೆಗಳ ಸುಳ್ಳು.

—ಡಿಸ್ರೇಲಿ.

ಕೇವಲ ಸತ್ಯದ ಬಗೆಗೆ ಗಂಭೀರವಾಗಿ ಆಲೋಚನೆ ನಡೆಸುವ ಕೆಲವರಾದರೂ ಈ ಪ್ರಪಂಚದಲ್ಲಿದ್ದಾರೆ.

—ವಾಲ್ಟೇರ್.

ನಾವು ನಮ್ಮ ವಿಚಾರಗಳಲ್ಲಿಯೇ ಮಗ್ನರಾಗಿದ್ದಾಗ, ಪ್ರಾಯಃ ಸತ್ಯಾನುಶೀಲನೆಯನ್ನು ಮಾಡಲಾರಿವು.

—ಮಾರ್ಕ್ ಟ್ವೇನ್.

ಕ್ರಿಯಾತ್ಮಕ ರಾಜನೀತಿಯಲ್ಲಿ ಸತ್ಯವನ್ನು ಕಡೆಗಣಿಸುವುದು ಅಸಿವಾರ್ಯ.

--ಹೆನ್ರಿ ಎಡಮ್ಸ್.

ನಿರಾಶಾವಾದಿಯೆನಿಸುವುದರಿಂದ ಯಾವ ಲಾಭವೂ ಇಲ್ಲ; ಆದುದರಿಂದ ನಾನು ಆಶಾವಾದಿಯಾಗಿದ್ದೇನೆ.

— ಚರ್ಚಿಲ್.

ಪ್ರಾಚೀನಕಾಲ ಹಾಸಿಗೆಯಿಂದೆದ್ದೊಡನೆಯೇ ಮುಖ ತೊಳೆಯುವುದು, ನಾಲಿಗೆ ಸಫಾಯಿ ಮಾಡುವುದು ನನ್ನ ಆದ್ಯ ಕೆಲಸವಾಗಿದೆ.

—ಅಸ್ಕರ್ ಲೀವೆಂಟ್.

ಜನಮತ

ಹೋಟೆಲು ವ್ಯವಸಾಯ

ಭಾರತದಲ್ಲಿರುವ ಅನೇಕಾನೇಕ ವ್ಯಾಪಾರಗಳಲ್ಲಿ ಹೋಟೆಲ್ ವ್ಯಾಪಾರವು ಅತ್ಯಂತ, ಮಹತ್ವದ ಸ್ಥಾನ ಪಡೆದಿದೆ. ಭಾರತದಲ್ಲಿ ಇಂದು ಸುಮಾರು ಐದು ಲಕ್ಷ ಕ್ಕಿಂತಲೂ ಹೆಚ್ಚು ಸಣ್ಣ ದೊಡ್ಡ ಹೋಟೆಲುಗಳು ದೇಶದ ಮೂಲೆ ಮೂಲೆಗಳಲ್ಲಿ ಪಸರಿಸಿದ್ದು ಅಲ್ಲಲ್ಲಿಯ ಜನತೆಯ ಊಟ ಮತ್ತು ತಿನಸುಗಳ ಆವಶ್ಯಕತೆಗಳನ್ನು ಪೂರೈಸುತ್ತಿವೆ. ಈ ವ್ಯವಸಾಯದಲ್ಲಿ ಪ್ರತ್ಯಕ್ಷ ತೊಡಗಿದವರ ಸಂಖ್ಯೆ ಸುಮಾರು ಒಂದು ಕೋಟಿಗಿಂತಲೂ ಅಧಿಕವಿದ್ದು ಪ್ರತ್ಯಕ್ಷವಾಗಿ ಈ ವ್ಯಾಪಾರವನ್ನು ಅವಲಂಬಿಸಿ ಜೀವನ ಸಾಗಿಸುವವರ ಸಂಖ್ಯೆ ಅದಕ್ಕಿಂತಲೂ ಹೆಚ್ಚಿಗೆಯಿದೆ.

ಇಷ್ಟೊಂದು ವಿಶಾಲವಾದ ವ್ಯಾಪಾರವು ಮಾನವನ ಜೀವನಾವಶ್ಯಕತೆಯನ್ನು ಒದಗಿಸುತ್ತಿದ್ದರೂ, ಈ ವ್ಯಾಪಾರದ ಭವಿತವ್ಯವು ತೀರಾ ಅನಿಶ್ಚಿತವಾಗಿದೆ; ಅಂದಾಕಾರಮಯವಾಗಿದೆ. ಇದಕ್ಕೆ ಮೂಲ ಕಾರಣವೆಂದರೆ, ಈ ವ್ಯಾಪಾರದಲ್ಲಿ ತೊಡಗಿದ ಜನರಲ್ಲಿ ಸಂಘಟಣೆಯಿಲ್ಲ. ಈ ವ್ಯವಸಾಯದವರನ್ನು ಸರಕಾರವಾಗಲೀ ಸಾರ್ವಜನಿಕರಾಗಲೀ ಸಹಾನುಭೂತಿಯಿಂದ ನೋಡುತ್ತಿರುವುದಿಲ್ಲ.

ಎರಡನೆಯ ಜಾಗತಿಕ ಮಹಾ ಯುದ್ಧವು ನಡೆದಾಗ ಭಾರತದಲ್ಲಿಯ ಹೋಟೆಲ್ ವ್ಯವಸಾಯವನ್ನು ಆಗಿನ ಸರಕಾರವು ಅತ್ಯಾವಶ್ಯಕ ಸೇವೆಯೆಂದು ನಿರ್ಧರಿಸಿ ಆ ವ್ಯವಸಾಯಕ್ಕೆ ಬೇಕಾಗುವ, ಆಹಾರ, ಧಾನ್ಯ ಸಕ್ಕರೆ, ಹಾಲು ಮೊದಲಾದ ನಿಯಂತ್ರಿತ ಸರಕುಗಳನ್ನು ಯೋಗ್ಯ ಕ್ರಯದಲ್ಲಿ ಒದಗಿಸುವ ವ್ಯವಸ್ಥೆ ಮಾಡಿತ್ತು. ಸ್ವಾತಂತ್ರ್ಯದ ನಂತರ ಕೂಡಾ ಅದೇ ಧೋರಣೆಯನ್ನು ನಮ್ಮ ಸರಕಾರವು ಮುಂದುವರಿಸಿಕೊಂಡು ಬಂದಿತ್ತು.

ಆದರೆ ದಿನ ಕಳೆದಂತೆ, ಹೋಟೆಲು ವ್ಯಾಪಾರಕ್ಕೆ ಪೀಡೆಯ ದಿನಗಳು ಬರಲಾರಂಭಿಸಿದವು. ಒಂದರ ಹಿಂದೆ ಒಂದಾಗಿ ಹೋಟೆಲು ವ್ಯಾಪಾರದ ಮೇಲೆ ನಿರ್ಬಂಧಗಳನ್ನು ಹೊರಿಸಲಾಯಿತು. ಹೀಗಾಗಿ ಇಂದು ಹೋಟೆಲು ವ್ಯಾಪಾರದ ಮೇಲೆ 1) ಮುನಿಸಿಪಲ್ ಲೈಸನ್ಸ್ 2) ಪೋಲೀಸ್ ಲೈಸನ್ಸ್, 3) ಗುಮಾಸ್ತ ಕಾಯಿದೆ, 4) ಮಿಶ್ರಣ ಗ್ರಹಿಬಂಧಕ ಕಾಯಿದೆ 5) ಸೇಲ್ಸ್‌ಟಾಕ್ಸ್ 6) ಹೋಟೆಲಿನಲ್ಲಿ ಆಗುವ ಕಳವ ಮೇಲೆ ತೆರಿಗೆ 7) ಉತ್ಪನ್ನದ ಮೇಲಿನ ಕರ 8) ಫ್ರೊವಿಡೆಂಟ್ ಫಂಡ್ ಕಾಯಿದೆಗಳವೆ ಅಲ್ಲದೆ, ನಗರ ಸಭೆಯು ತಾನು ಒದಗಿಸುವ ನೀರಿಗಾಗಿ ಸಂಸಾರಿಗರಿಂದ ಪಡೆಯುವ ನರದ ಇನ್ನುಡಿ ದರವನ್ನು ಹೋಟೆಲಿನ ವ್ಯವಸಾಯಗಾರರ ಮೇಲೆ ಹೇರಲಾಗಿದೆ. ಈ ಎಲ್ಲಾ ಕರಕಂದಾಯಗಳನ್ನು, ಲಾಯಿಸನ್ಸ್‌ಗಳನ್ನು ತೆತ್ತು, ಹೋಟೆಲ್ ವ್ಯವಸಾಯಗಾರನು ತನ್ನ ವ್ಯಾಪಾರವನ್ನು ಸಾಗಿಸಿಕೊಂಡು ಹೋಗಬೇಕಾಗಿದೆ

ಯಾವುದೊಂದು ವ್ಯಾಪಾರವು ಸಂಘಟಿತವಾಗಿ ನಡೆಯಬೇಕಾದರೆ ಅದಕ್ಕೆ ಕೆಲವೊಂದು ನಿಯಮ ನಿಬಂಧನೆಗಳನ್ನು ಹಾಕಬೇಕಾಗುವುದು. ಆದರೆ ಹಾಗೆ ಮಾಡುವಾಗ ಅಂಥ ನಿಯಮ—ನಿಬಂಧನೆಗಳು ಆವ್ಯವಸಾಯಕ್ಕೆ ಪೋಷಕವಾಗುವಂಥ ವಿರಬೇಕು. ಆ ವ್ಯವಸಾಯದಲ್ಲಿ ತೊಡಗಿದ ಮೂಲಕ, ನೌಕರರಿಬ್ಬರಿಗೂ ಹಿತಕರವಾಗಿರಬೇಕು. ಹಾಗಿಲ್ಲದೆ ಹೋದರೆ ಅಂಥ ನಿಯಮ ನಿಬಂಧನೆಗಳಿಂದ ಆ ವ್ಯಾಪಾರವು ಪ್ರಗತಿಹೊಂದುವುದಕ್ಕೆ ಪ್ರತಿಯಾಗಿ ಕನಿಷ್ಟಾವಸ್ಥೆಗೆ ಇಳಿದುಹೋಗದಿರದು.

ಸರ್ವಸಾಮಾನ್ಯವಾಗಿ, ಪ್ರತಿ ಒಂದು ಕಾಯಿದೆ ಕಾನೂನು ಮಾಡುವಾಗ ಅದಕ್ಕೆ ಸಂಬಂಧಿಸಿದವರ ಅಭಿಪ್ರಾಯವನ್ನು ಕೇಳಿಕೊಳ್ಳುವುದು ಪ್ರಜಾತಂತ್ರ ರಾಜ್ಯದಲ್ಲಿಯ ಮಹತ್ವದ ಅಂಶ. ಆದರೆ ಇತ್ತೀಚೆಗೆ ಹೋಟೆಲು ವ್ಯಾಪಾರಕ್ಕೆ ಸಂಬಂಧಿಸಿರುವ ಕಾಯಿದೆ ಕಾನೂನುಗಳನ್ನು ಮಾಡುವಾಗ ಆ ತತ್ವವನ್ನು ಬದಿಗಿಟ್ಟು ಅಧಿಕಾರಪದದಲ್ಲಿ ಮಂತ್ರಿ ಮಂಡಳಿಗಳು ಈ ವ್ಯವಸಾಯದವರಾಗಾಗುವ ತೊಂದರೆಗಳನ್ನು ನೋಡಿಕೊಂಡೂ ಅತ್ತ ಕಣ್ಣೆತ್ತಿ ನೋಡದೆ ಕಾಯಿದೆಗಳನ್ನು ಮಾಡಿದುದು ನಿಜವಾಗಿಯೂ ಪ್ರಜಾತಂತ್ರ ರಾಜ್ಯದ ತತ್ವಕ್ಕೆ ಪ್ರತಿ ವಿರೋಧಕವಾಗಿದೆಯೆಂದು ಯಾರೂ ಹೇಳಲಿಕ್ಕೆ ಸಾಧ್ಯವಿದೆ.

ಹೋಟೆಲು ವ್ಯವಸಾಯದಾರರೂ ಭಾರತಿಯರೇ. ಅವರೇನೂ ಪರದೇಶಗಳಿಂದ ಭಾರತಕ್ಕೆ ಬಂದವರಲ್ಲ. ಇವರು ತಮ್ಮ ವ್ಯಾಪಾರವನ್ನು ಸಾಗಿಸಿಕೊಂಡು, ದೇಶದ ಸ್ವಾತಂತ್ರ್ಯ ಸಮರದಲ್ಲಿ, ತನು, ಮನ, ಧನದಿಂದ ಸಹಾಯ ಸಲ್ಲಿಸಿದ್ದಾರೆ. ತ್ಯಾಗದ ಸಮಯಬಂದಾಗ ಎಂದೂ ಹಿಂದೆ ಬಿದ್ದವರಲ್ಲ. ಸ್ವಾತಂತ್ರ್ಯದ ಹೋರಾಟದಲ್ಲಿ ಅನೇಕ ಹೋಟೆಲು ವ್ಯವಸಾಯಗಾರರು ಸೆರೆ ಮನೆಗೆ ಹೋದರು. ಇವರ ಅಂಗಡಿ ಖಾನಾವಳಿಗಳಂತೂ ಆಗ, ಸ್ವಾತಂತ್ರ್ಯದ ಹೋರಾಟದಲ್ಲಿ ತೊಡಗಿದವರಿಗೆ, ಅನ್ನನೀರು ಒದಗಿಸುವ ಕೇಂದ್ರಗಳಾಗಿದ್ದವು ಬೇಡಿದಾಗ ಇವರ ಬೊಕ್ಕಸತೆರೆದೇ ಇತ್ತು. ಇಷ್ಟೆಲ್ಲಾ ತ್ಯಾಗಮಾಡಿ ತಮ್ಮ ಪಾಲಿನ ಸೇವೆ ಮಾಡಿದರೂ ಸ್ವಾತಂತ್ರ್ಯದ ನಂತರದ ಕಾಲದಲ್ಲಿ ಇವರಿಗೆ ದೊರೆತುದೇನು? ಇವರಿಂದ ಸಹಾಯ ಪಡೆದು ಚಳವಳಿ ನಡೆಸಿದ ಕೆಲವರು, ಮಂತ್ರಿಗಳಾದರು, ಉಪಮಂತ್ರಿಗಳಾದರು. ಕೆಲವರು ವಿಧಾನ ಸಭೆ, ಲೋಕ ಸಭೆಗಳ ಸದಸ್ಯರಾದರು.

ಇನ್ನು ಕೆಲವು ಸರಕಾರಗಳಿಂದ ರಚಿಸಲ್ಪಟ್ಟ ಅನೇಕ ಸಮಿತಿ, ಉಪ ಸಮಿತಿಗಳಲ್ಲಿ ಅಧಿಕಾರ ಸ್ಥಾನ ಪಡೆದು ತಮ್ಮ ಹೊಟ್ಟೆಯನ್ನಷ್ಟೇ ಅಲ್ಲ ಜೇಬು ಕೂಡಾ ತುಂಬಿಸಿಕೊಳ್ಳಹತ್ತಿದರು. ಆದರೆ ಹೋಟೆಲು ವ್ಯವಸಾಯದವರ ಗತಿಯೇನು?

ಹೋಟೆಲು ವ್ಯವಸಾಯವು ಒಂದು ನಿಕೃಷ್ಟ ಉದ್ಯೋಗವೆಂಬ ಭಾವನೆ ಕೆಲವು ಜನ ನಿಷ್ಠರಲ್ಲಿ ಮೂಡಿದೆ. ಆದರೆ ಯಾವುದೊಂದು ಕಾರ್ಯಕ್ಕೆ ಹೆಣವು ಬೇಕಾದರೆ, ಎಲ್ಲಕ್ಕೂ ಮೊದಲು ನೆರವಿಗಾಗಿ ಬಾಯಿ ತೆರೆಯುವುದು ಈ ಹೋಟೆಲು ವ್ಯವಸಾಯಿಗಾರರ ಮುಂದೆ. ಅಂಥ ನೆರವನ್ನು ಪಡೆಯುತ್ತಿರುವುದರಿಂದ ದೊರೆಯುತ್ತಿರುವ ಪ್ರತಿಫಲವೆಂದರೆ ಉಪೇಕ್ಷೆ, ಟೀಕೆ, ನಿಂದೆ!! ಅದಕ್ಕೆ ಕೊಡಲಾಗುತ್ತಿರುವ ಕಾರಣವೆಂದರೆ; ಹೋಟೆಲ್ ವ್ಯವಸಾಯ, ತೀರ ನಿಕೃಷ್ಟ ವ್ಯವಸಾಯವೆಂಬುದು!!!

ಹೋಟೆಲು ವ್ಯವಸಾಯವು ನಿಕೃಷ್ಟ ವ್ಯಾಪಾರವೇ? ಈ ಪ್ರಶ್ನೆಯನ್ನೇ ನಾವು ಆಲೋಚಿಸುವ. ಸರಕಾರದ ಕಚೇರಿಗಳಲ್ಲೇ ಆಗಲಿ, ಸಾರ್ವಜನಿಕ ಉದ್ದಿಮೆಗಳಲ್ಲೇ ಆಗಲೀ, ಅಥವಾ ಖಾಸಗಿ ವ್ಯಾಪಾರದಲ್ಲಾಗಲೀ, ಯಾರಾದರೂ ಹೋಗಿ ಸೇರಿಕೊಳ್ಳಬಯಸಿದರೆ, ಅಂಥ ವ್ಯಕ್ತಿಗಳ ಶಿಕ್ಷಣ, ಅನುಭವ, ಜಾತಿ, ಕುಲ, ವಶೀಲಿ, ಇವೆಲ್ಲವೂ, ಬೇಕಾಗುತ್ತದೆ.

ಇವೆಲ್ಲವೂ ಇದ್ದವರೆಲ್ಲರಿಗೂ ಅಲ್ಲಿ ಕೆಲ್ಸಸಿಕ್ಕೀತೆಂಬ ಭರವಸೆಯೂ ಇಲ್ಲ ಇವು ಇದ್ದೂ ಮೇಲೆ ಲಂಚ, ರುಸುವತ್ತುಗಳು ಬೇಕಾಗುತ್ತವೆ. ಇವೆಲ್ಲವೂ ಇದ್ದು ವಶೀಲಿ ಇಲ್ಲದಿದ್ದರೆ ಏನೂ ಇಲ್ಲದಂತೆಯೇ ಎಂಬುದು ಸಾಮಾನ್ಯ ಜನರಿಗೆ ತಿಳಿದ ವಿಷಯ. ಹೀಗಿರುವಾಗ, ಸಮಾಜದಲ್ಲಿ ತೀರಾ ನಿಕೃಷ್ಟರು, ತಿನ್ನಾನ್ನಗತಿಕರು, ಯಾರೂ ನೋಡದವರು, ಎಲ್ಲರಿಂದಲೂ ತ್ಯಾಜ್ಯರಾದವರು ಇಂಥವರ ಗತಿಯೇನು? ನಮ್ಮ ದೇಶವು ಸ್ವತಂತ್ರವಾದರೂ ಇಂಥ ನಿರ್ಗತಿಕರಿಂದರೇ ತುಂಬಿದೆ. ಅವರಿಗೆ ಮತ್ತು ಅವರನ್ನು ಅವಲಂಬಿಸಿರುವ ಅವರ ಕುಟುಂಬದವರಿಗೆ, ಅನ್ನದ ಮಾರ್ಗವನ್ನು ಯಾವ ಸರಕಾರವಾದರೂ ಕಲ್ಪಿಸಿದೆಯೇ?

ಇಂದು ಹೋಟೆಲು ವ್ಯಾಪಾರವು ಅಸ್ತಿತ್ವದಲ್ಲಿರದಿದ್ದರೆ, ಇಂದ ಅನ್ನಾನ್ನ ಗತಿಕರ, ಗತಿಯೇನಾಗುತ್ತಿತ್ತು? ಇಂಥ ಅನಾಥರ ಕೈಹಿಡಿದು, ಅವರಿಗೆ ಅನ್ನ ವಸ್ತ್ರ, ವಸತಿಗಳನ್ನು, ಒದಗಿಸಿಕೊಟ್ಟು, ಮೇಲೆ ಅವರ ಕುಟುಂಬದ ಪೋಷಣೆಗೆ ಸಂಬಳದ ರೂಪದಲ್ಲಿ ಹಣವನ್ನು ಒದಗಿಸುವ ಈ ವ್ಯಾಪಾರವು ನಿಕೃಷ್ಟ ವ್ಯಾಪಾರವೆಂದು ಹೀನಾಯ ಮಾನವಾಗಿ ನೋಡುವುದು ಕ್ಷುದ್ರಮನೋವೃತ್ತಿಯ ದ್ಯೋತಕವಲ್ಲದೆ ಮತ್ತೇನು?

ಇವೆಲ್ಲವನ್ನೂ ಸಾಂಗೋಪಾಂಗವಾಗಿ ವಿಚಾರಮಾಡಬೇಕಾದರೆ ಅದಕ್ಕೆ ಸಾರಾಸಾರ ವಿಚಾರಶಕ್ತಿ ಬೇಕು ವಿಚಾರಶಕ್ತಿ, ಕೇವಲ ಯಾವುದೊಂದು ವ್ಯಕ್ತಿಯು ಒಂದು ಮಂತ್ರಿಪದದಲ್ಲಿಯೋ ಅಥವಾ ಯಾವುದೊಂದು ಅಧಿಕಾರ ಸ್ಥಾನದಲ್ಲಿಯೋ ಕುಳಿತರೆ ಬರಲಾರದು ಅದಕ್ಕೆ ಸುಸಂಸ್ಕೃತಿಯ ಹಿನ್ನೆಲೆ ಇರಬೇಕಾಗುವುದು. ಆ ಹಿನ್ನೆಲೆ ಇದ್ದರೆ ಮಾತ್ರ ಒಳಿತು—ಕೆಡುಕುಗಳನ್ನು ತಿಳಿದುಕೊಳ್ಳುವ ಶಕ್ತಿ ಬರುತ್ತದೆ.

ನಮ್ಮ ದೇಶದಲ್ಲಿ ನಗ್ನನೃತ್ಯವನ್ನಾಡುತ್ತಿರುವ ನಿರುದ್ಯೋಗ ನಿವಾರಣೆಯ ಕಾರ್ಯದಲ್ಲಿ ಸರಕಾರಕ್ಕೆಂತಲೂ ಮಾತ್ರವಲ್ಲ ಉಳಿದ ಯಾವುದೇ ಸುಸಂಘಟಿತ, ವ್ಯವಸಾಯಕ್ಕೆಂತಲೂ ಮೆಚ್ಚತಕ್ಕದ್ದೂ ಹೋಟೆಲು ವ್ಯವಸಾಯವು ಶ್ರೇಷ್ಟವಾದ ಕಾರ್ಯವನ್ನು ಮಾಡುತ್ತಿದೆ. ಆದರೂ ಈ ವ್ಯವಸಾಯಕ್ಕೆ ಬೆಲೆಯಿಲ್ಲವಾಗಿದೆ; ಮನ್ನಣೆಯಿಲ್ಲದಾಗಿದೆ. ಇದಕ್ಕೆ ಮುಖ್ಯ ಕಾರಣವೆಂದರೆ ಈ ವ್ಯವಸಾಯದಲ್ಲಿ ತೊಡಗಿದವರಲ್ಲಿ ಸಂಘಟಣೆಯಿಲ್ಲ. ಇವರಿಗೆ ಪ್ರಭಾವೀ ಮಾರ್ಗ ದರ್ಶನವಿಲ್ಲ; ವರ್ಚಸ್ವೀ ಮುಖಂಡತ್ವವಿಲ್ಲ ಅಂತೆಯೇ ಇಂದು ಈ ವ್ಯವಸಾಯದಲ್ಲಿ ತೊಡಗಿದವರು ಹತಪ್ರಭರಾಗಿದ್ದಾರೆ. ಈ ವ್ಯವಸಾಯದಲ್ಲಿ ತೊಡಗಿದವರು ಸಕಾಲದಲ್ಲಿ ಜಾಗ್ರತರಾಗಿ ತಮ್ಮ ಸಂಘಟನೆಯನ್ನು ಮಾಡಿಕೊಳ್ಳದೆಯಿದ್ದರೆ ಅವರ ಗತಿ ಇನ್ನೂ ಅಧೋಗತಿಗಿಳಿಯದೆ ಇರಲಾರದು. ಸಂಘಟನೆಯಲ್ಲಿ ಬಲವಿದೆ ಎಂಬುದನ್ನು ಮರೆಯದೆ, ಪ್ರತಿಯೊಬ್ಬ ಮೂಲಕರೂ, ಸಂಘಟಿತರಾಗಿ ಹೋರಾಡಲಿಕ್ಕೆ ಸಿದ್ಧರಾಗಬೇಕು ಇವರಲ್ಲಿ ಎಲ್ಲರ ಉನ್ನತಿಯು ನಿಶ್ಚಯ.

ಬರೆದವರು:
ಶ್ರೀ ಬೈಲೂರು ಗೋಪಾಲ ಶೆಟ್ಟಿ,
ಬೊಂಬಾಯಿ.

ದಕ್ಷಿಣ ಕನ್ನಡ ಜಿಲ್ಲಾ ಸ್ಪೆಶಲ್ ಅಸಿಸ್ಟೆಂಟ್ ಕಮಿಶನರ ಕೋರ್ಟಿನಲ್ಲಿ

O P ನಂಬ್ರ 557/61.

1. ಮಂಜಯ ಶೆಟ್ಟಿ— ಆನಂತ ಶೆಟ್ಟಿ ಅಳಿಯ 2. ಶಿವರಾಮ ಶೆಟ್ಟಿ -ಸೀತಪ್ಪ ಶೆಟ್ಟಿ ಅಳಿಯ, ಉಡ್ಪಿ ತಾಲೂಕು ಬೈಲಂಪಳ್ಳಿ ಗ್ರಾಮದಲ್ಲಿರುವವರು —ಅರ್ಜಿದಾರರು.

Vs

ವಾಸು ಮರಕಾಲ— ಮೋಂಟು ಮರಕಾಲ್ತಿ ಮಗ, ಉಡ್ಪಿ ತಾಲ್ಲು ಬೈಲಂಪಳ್ಳಿ ಗ್ರಾಮದಲ್ಲಿರುವವ —ಎದ್ರಿ.

ಅರ್ಜಿದಾರರು ಎದ್ರಿಯ ಮೇಲೆ ಜಾಲನೇಡ ಅಸ್ತಿ ಸ್ವಾಧೀನತೆ ಬಗ್ಗೆ ದಾಖಲುಮಾಡಿರುವ ಅರ್ಜಿಯು ಎದ್ರಿಗೆ ನೋಟೀಸಿನ ಬಗ್ಗೆ ತಾ. 15_11_61ಕ್ಕೆ ಇಟ್ಟಿರುತ್ತದೆ. ಅದ್ರಿಂದ ಸದ್ರಿ ತಾ. 15_11_61ನೇ ದಿನ್ನಬೆಳಿಗ್ಗೆ 11 ಗಂಟೆಗೆ ಸದ್ರಿ ಕೋರ್ಟಿನಲ್ಲಿ ಉಡ್ಪಿ ಮೊಕ್ತಾಮಿನಲ್ಲಿ ಹಾಜರಾಗಿ ಜಾಹೀರುಮಾಡಿಕೊಳ್ಳತಕ್ಕದ್ದು ತಪ್ಪಿದ್ರೆ ಎದ್ರಿಯ ಗೈರು ಹಾಜರಿಯಲ್ಲಿ ಸದ್ರಿ ಅರ್ಜಿಯನ್ನು ತೀರ್ಮಾನಿಸಲಾದೀತು.

K. L. Aithal.
Vakil for Petitioners

ಉಡ್ಪಿ, 25_10_61.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ ನ.

ಪಿಶಾಚಿಗಳ ಅಸ್ತಿತ್ವ

ಮೂಲ— "ನಾಚಿಕೇತ"

ಅನುವಾದ— "ವಿಶಾಖಾ"

ನಾವೆಲ್ಲರೂ ಒಂದೇ ಪ್ರಪಂಚದಲ್ಲಿ ಜೀವಿಸುತ್ತಿದ್ದರೂ ಈ ಪ್ರಪಂಚವು ಎಲ್ಲರಿಗೂ ಒಂದೇ ವಿಧವಾಗಿರುವುದಿಲ್ಲ. ಗೃಹನಕ್ಷತ್ರಾದಿಗಳು ತಮ್ಮನ್ನು ನಡೆಯಿಸುತ್ತವೆಂದು ಕೆಲವರು ನಂಬುತ್ತಾರೆ. ಅಂತಹವರಿಗೆ ಎಲ್ಲದಕ್ಕೂ ಜಾತಕಗಳೇ ಆಧಾರ. ಎಲ್ಲಾ ಬಗೆಯ ಒಳಿತು ಕೆಡುಕುಗಳಿಗೂ ಯಾವುದೋ ಒಂದು ಗ್ರಹದ ಮೇಲೆಯೇ ಅವರು ಜವಾಬುದಾರಿ ಹೊರಿಸಿಬಿಡುತ್ತಾರೆ. ಇನ್ನು ಕೆಲವರು ಬಗೆ ಬಗೆಯ ದೇವರುಗಳಿಗೆ ತಮ್ಮ ಜೀವನವನ್ನೇ ಸಮರ್ಪಿಸಿ ಅದೇ ನಂಬುಗೆಯಲ್ಲಿರುತ್ತಾರೆ. ಕೆಡುಕಾಗದಂತೆಯೂ ಬಂದ ಕೆಡುಕು ತೊಲಗಿಹೋಗುವಂತೆಯೂ ಇವರು ತಮ್ಮ ಇಷ್ಟದೇವತೆಯನ್ನು ಆರಾಧಿಸುತ್ತಾರೆ, ಅರ್ಚಿಸುತ್ತಾರೆ.

ಆದರೆ ಈ ಕಾಲದ ಮಾನವ ಸಮಾಜಕ್ಕೆ ಪ್ರತಿನಿಧಿಗಳಾಗಿದ್ದು ಸಾಮೂಹಿಕ ಕಾರ್ಯಕಲಾಪಗಳಲ್ಲಿ ಭಾಗವಹಿಸುತ್ತಾ ಸಮಾಜ ಸ್ವರೂಪವನ್ನು ಬಲಪಡಿಸುವವರೆಲ್ಲರಿಗೂ ಈ ಪ್ರಪಂಚವು ಭೌತಿಕಪ್ರಪಂಚವೇ ಸರಿ. ಅರ್ಥಾತ್ ಭೌತಿಕ ಸೂತ್ರಗಳಿಗೆ ಕಟ್ಟುಪಟ್ಟಿದೇ. ಈ ಪ್ರಪಂಚದಲ್ಲಿ ಶಾಸ್ತ್ರಸಮ್ಮತವಲ್ಲದ ನಿಯಮಗಳು ಆಮಲಾಗಲಾರವು. ಮನುಷ್ಯರ ಪ್ರವರ್ತನೆಗಳಿಗೂ, ಅವರಲ್ಲಿ ಉಂಟಾಗುವ ಪ್ರೇರಣೆಗಳಿಗೂ ಅವರವರೇ ಬಾಧ್ಯರು. ಸಮಾಜಕ್ಕೆ ಒಳ್ಳೆಯದಾದರೂ ಕೆಡುಕಾದರೂ ಅದಕ್ಕೆ ಪ್ರಕೃತಿಯೊಳಗಿನ ಭೌತಿಕ ಶಕ್ತಿಯ ಕಾರಣವಾಗಲೀ ಮಾನವರ ಕೃತಿಯ ಪರಿಣಾಮವಾಗಲೀ ಇರಲೇಬೇಕು. ಇದರಲ್ಲಿ ಗ್ರಹಗಳ ಅಥವಾ ದೇವತೆಗಳ ಕಾರ್ಯವಾವುದೂ ಇರಲು ಸಾಧ್ಯವಿರಲಾರದು. ಒಬ್ಬನು ಇನ್ನೊಬ್ಬನನ್ನು ಹತ್ಯ ಮಾಡಿದಾಗ, ಸತ್ತವನ ಜಾತಕದಲ್ಲಿ ಆ ಸಮಯಕ್ಕೆ ಅವನಿಗೆ ಬಲವಂತದ ಮರಣ ಬರೆದಿರುವುದನ್ನು ಜ್ಯೋತಿಶ್ಶಾಸ್ತ್ರವು ರುಜುಗೊಳಿಸಿದರೂ, ನ್ಯಾಯ ಶಾಖೆ ಹಂತಕನನ್ನು ಕ್ಷಮಿಸುವುದಿಲ್ಲ.

ಈ ಭೌತಿಕ ಪ್ರಪಂಚವನ್ನು ಕುರಿತು ಶಾಸ್ತ್ರಜ್ಞರು ಹೇಳುವುದೇ ಪರಮ ಪ್ರಮಾಣವೆನಿಸಿದೆ. ಅಂದರೆ ಶಾಸ್ತ್ರಜ್ಞರು ಸರ್ವಜ್ಞರೆಂದು ಅರ್ಥವಲ್ಲ; ಇರುವುದರೊಳಗೆ ಅವರ ಜ್ಞಾನ ಹೇತು ಬದ್ಧವಾದುದೆಂದು!

ತಿಕ್ಷೆಯ ವಿಧಾನದಲ್ಲಿಯೂ, ಮಾನವ ಸಮಾಜದ ರೀತಿ ನೀತಿಗಳಲ್ಲಿಯೂ ಬರಬರುತ್ತ ಕೆಲವು ಮೂರ್ಖಾಡುಗಳು ನಡೆಯುತ್ತಿರುವುದೆಂದರೆ, ಅದಕ್ಕೆ ಶಾಸ್ತ್ರವೇತ್ತರ ಪ್ರಯತ್ನಗಳೇ ಕಾರಣವೆನ್ನಬಹುದು. ಅಪರಾಧಿಗಳನ್ನು ಶಿಕ್ಷಿಸುವ ವಿಷಯದಲ್ಲಿಯೂ, ಇದ್ದವರು ಇಲ್ಲದವರಲ್ಲಿ ನಡೆದುಕೊಳ್ಳುವ ರೀತಿಯಲ್ಲಿಯೂ ಬರಬರುತ್ತ ಎಷ್ಟೋ ಅಭಿವೃದ್ಧಿ ಕಂಡು ಬರುತ್ತದೆ ಇದರಲ್ಲಿ ಮನೋವೈಜ್ಞಾನಿಕರ ಪ್ರಯತ್ನಗಳು ತುಂಬಾ ಇವೆ.

ಅನುಭೂತಿಗಳು:

ಆದರೆ ಈ ಪ್ರಪಂಚವು ಭೌತಿಕವಾದಿಗಳು ಊಹಿಸಿಕೊಳ್ಳುವಂತೆಯೇ ಇದೆಯೆ? —ಇಲ್ಲ. ಈ ಪ್ರಪಂಚದಲ್ಲಿ ಪ್ರತಿನಿತ್ಯವೂ ಅನೇಕ ಕಡೆಗಳಲ್ಲಿ ಜನರಿಗೆ ಆಶ್ಚರ್ಯವೆನಿಸುವ 'ಅಲೌಕಿಕ' ಅರ್ಥವಾಗದ ಅನುಭವಗಳು ಆಗುತ್ತಲೇ ಇವೆ. ಅಂಧವುಗಳಲ್ಲಿ ಕೆಲವನ್ನು ಇಲ್ಲಿ ನೋಡೋಣ. ಇಂತಹ ಅನುಭವ ಅಥವಾ ಅನುಭೂತಿಗಳನ್ನು ಕುರಿತು ನಾವು ಅವಲಂಬಿಸುವ ವೈಖರಿ ಮೂರು ವಿಧಗಳಲ್ಲಿ ಯಾವುದೋ ಒಂದಾಗಿರಬಹುದು.

೧. ಈ ಅಪ್ರತ್ಯಕ್ಷ ಅನುಭೂತಿಗಳನ್ನು ಒಮ್ಮೆಗೇ ನಿರಾಕರಿಸಿ ಬಿಡಬಹುದು. ಅನೇಕ ಮಂದಿ ಶಾಸ್ತ್ರ ದೃಷ್ಟಿಯುಳ್ಳವರೂ, ಭೌತಿಕವಾದಿಗಳೆಂದು ಹೇಳಿಕೊಳ್ಳುವವರೂ ಹೀಗೆಯೇ ಮಾಡುತ್ತಾರೆ.

೨. ಇಂತಹ ಅನುಭವಗಳು ಎಲ್ಲಿಯವರಿಗೆ ಉಂಟಾಯಿತೆಂದರೂ ಕುರುಡು ತನದಿಂದ ನಂಬಿ, ಶಾಸ್ತ್ರೀಯವಾದ ದೃಷ್ಟಿಯನ್ನೂ, ಭೌತಿಕ ವಾದದ ಮೂಲ ಸೂತ್ರಗಳನ್ನು ನಿರಾಕರಿಸಿ, ಮನಸ್ಸಿನೊಳಗೆ ಅಜ್ಞಾನಾಂಧಕಾರವನ್ನೇ ತುಂಬಿಸಿಕೊಳ್ಳಬಹುದು. ಇಂಥವರು ಪಾಮರರೊಳಗೆ ಅಸಂಖ್ಯಾಕರಿದ್ದಾರೆ.

೩. ಈ ವಿಚಿತ್ರ ಅನುಭವಗಳಲ್ಲಿ ಎಲ್ಲಿಯ ವರೆಗೆ ನಿಜವೆಂಬುದನ್ನು ಅರಯ್ದು ನೋಡಿ, ಅವುಗಳ ಆಧಾರದಿಂದ ಪ್ರಪಂಚವನ್ನು ಕುರಿತು ಉಂಟಾದ ಭಾವನೆಗಳನ್ನು ಎಲ್ಲಿಯ ವರೆಗೆ ವಿಸ್ತರಿಸಿಕೊಳ್ಳಬಹುದೆಂಬುದನ್ನು, ಶಾಸ್ತ್ರೀಯ ಭೌತಿಕ ದೃಷ್ಟಿಯಿಂದಲೇ ಆಲೋಚಿಸಬಹುದು.

ಈ ಮೂರರೊಳಗೆ, ಮೊದಲಿನವೆರಡು ಪದ್ಧತಿಗಳು ಸರಿಯಾದುವಲ್ಲವೆಂದೂ, ಮೂರನೆಯ ಪದ್ಧತಿ ಎಲ್ಲಾ ವಿಧದಲ್ಲೂ ಉತ್ತಮವಾದುದೆಂದೂ ನಂಬುವವರು ಎಲ್ಲಾ ದೇಶಗಳಲ್ಲಿಯೂ ಸ್ವಲ್ಪಮಟ್ಟಿಗಾದರೂ ಇದ್ದಾರೆ. ಇಂಥವರ ಪ್ರಯತ್ನಗಳ ಫಲವಾಗಿ, ಜೀವನವೆಂಬ ಗಹನ ವಿಷಯದ ಅಂತರಾರ್ಥವು ಮಾನವರಿಗೆ ಇನ್ನಿಷ್ಟು ಚೆನ್ನಾಗಿ ತಿಳಿದು ಬಂದೀತು. ಈ ಪ್ರಪಂಚದ ಅಂಚಿನಾಚೆಗೆ ಬೇರೊಂದು ಅದೃಶ್ಯ ಪ್ರಪಂಚವಿರುವುದೆಂದೂ, ಅದರ ಪ್ರಭಾವವು ಆಗಾಗ ನಮ್ಮಮೇಲೆ ಸಕ್ಷಾತ್ಕರಿಸುತ್ತಿರುವುದೆಂದೂ ಸ್ಪಷ್ಟವಾಗಿ ರುಜುವಾಯಿತೆಂದಾದರೆ, ಮಾನವರ ಸಾಮಾಜಿಕ ಕಾರ್ಯಕ್ಷೇತ್ರದಲ್ಲಿ ಕೆಲವು ಅಭಿವೃದ್ಧಿಕಾರಕವಾದ ಮೂರ್ಖಾಡುಗಳು ಬರಬಹುದು.

ಪ್ರಸ್ತುತ, ಮೇಲೆ ಸೂಚಿಸಲ್ಪಟ್ಟ ಆಶ್ಚರ್ಯಕರ ಅನುಭೂತಿಗಳನ್ನು ಕುರಿತು, ಸಂಶೋಧಕರು ಆಮೋದಿಸಿದ ವಿಷಯಗಳನ್ನು ತಿಳಿದುಕೊಳ್ಳೋಣ. ಇದರಲ್ಲಿ ತೋರಿಸುವ ಸಂಘಟನೆಗಳಂತಹುದೇ ಇದನ್ನೋದುವ ಕೆಲವರ ವಾಸ್ತವಾನುಭವಗಳಿಗೆ ಹೋಲಿಕೊಂಡಿದ್ದುದಾದರೆ, ಅವರು ತಮ್ಮ ಅನುಭವಗಳನ್ನು ಧೈರ್ಯದಿಂದ ನಂಬಿಕೊಳ್ಳಲು ಸಮರ್ಥರಾಗುತ್ತಾರೆ. ಉಳಿದವರಿಗೆ ಹೀಗೆಲ್ಲಾ ನಡೆಯುವುದೂ ಉಂಟೆಂಬ ವಿಷಯವಾದರೂ ತಿಳಿಯುತ್ತದೆ. ಅದೇ ಒಂದು ಅನುಭವ!

ಪಿಶಾಚಿಗಳು:

ಮೊತ್ತಮೊದಲು ಪಿಶಾಚಿಗಳನ್ನು ಕುರಿತು ನೋಡೋಣ. ಇವು ಎಲ್ಲಾ ದೇಶದ ಜಾನಪದ ಕಥೆಗಳಲ್ಲಿಯೂ ಇವೆ. ಆದರೆ ಅನೇಕರಿಗೆ ಇವು ಕಲ್ಪಿತಗಳು—ಅವಾಸ್ತವದವು. ಪಿಶಾಚಿಗಳನ್ನು ಕುರಿತು ಅನುಭವಿದ್ದವರಿಗೆ ಮಾತ್ರವೇ ಪಿಶಾಚಿಗಳು ಅಷ್ಟೋ ಇಷ್ಟೋ ವಾಸ್ತವವೆನಿಸುತ್ತವೆ. ಈ ಕಾಲದಲ್ಲಿ ಕೂಡಾ ಪಿಶಾಚಿಗಳ ತೊಂಪೆಗಳು ಎಲ್ಲಾ ದೇಶಗಳಲ್ಲಿಯೂ ಇವೆ. ಅವುಗಳನ್ನು ಕುರಿತು ವಾರ್ತೆಗಳು ಕೂಡಾ ಆಗಾಗ ಪತ್ರಿಕೆಗಳಲ್ಲಿ ಬರುವುದುಂಟು ಪಿಶಾಚಿಗಳ ಕೂಂಪೆಗಳಿಗೆ ಉಚ್ಚ-ನೀಚವೆಂಬ ಭೇದವೋ, ಮತ್ತಾವ ತಾರತಮ್ಯವೋ ಇಲ್ಲ. ಪಿಶಾಚಿಗಳು ದೊಡ್ಡವರ ಮನೆಗಳನ್ನೂ, ದರಿದ್ರರ ಮನೆಗಳನ್ನೂ, ವಿದ್ಯಾಧಿಕರ ಮನೆಗಳನ್ನೂ, ಪಾಮರರ ಮನೆಗಳನ್ನೂ ಅವರಿವರೆಂಬ ತಾರತಮ್ಯವಿಲ್ಲದೆ, ಎಲ್ಲಿ ಬೇಕಾದರಲ್ಲಿ ಆಶ್ರಯ ಪಡೆಯುತ್ತವೆ. ಇಂತಹ ಪಿಶಾಚಿಗಳ ಬಿಡದಿಯನ್ನು ಕುರಿತು ಅಂತರ್ಜಾತೀಯ ಅಧ್ಯಾತ್ಮಿಕ ಸಂಶೋಧನಾ ಸಂಸ್ಥೆಯವರು ಕೆಲವಾರು ವಿವರಗಳನ್ನು ಶೇಖರಿಸಿರುತ್ತಾರೆ. ಕ್ರಿ.ಶ. ೫೩೦ರಿಂದ ೧೯೫೫ರ ವರೆಗೆ ದೊರಕಿದ ವಿವರಗಳು, ದೆವ್ವ, ಭೂತ, ಪಿಶಾಚಿಗಳಿಗೆ ಸಂಬಂಧಿಸಿದ ವಿಷಯಗಳು ಒಂದು ಭಾರತದಷ್ಟು ದೊಡ್ಡ ಗ್ರಂಥವಾಯಿತು

ಪಿಶಾಚಿಗಳು ತಾವು ಆಶ್ರಯಿಸಿದ ಮನೆಗಳಲ್ಲಿ ಬಗೆ ಬಗೆಯ ಗಲಾಟೆ ಎಬ್ಬಿಸುತ್ತವೆ. ಬಾಗಿಲು, ಗೋಡೆ, ಮಾಡುಗಳ ಮೇಲೆ ಡೋಲು ಬಾರಿಸಿದಂತೆ ಮಾಡುತ್ತವೆ ವಸ್ತುಗಳನ್ನು ಇತ್ತಿಂದತ್ತ ಅತ್ತಿಂದತ್ತ ಬದಲಾಯಿಸುತ್ತವೆ. ಮಡಕೆ—ಕುಡಿಕೆಗಳನ್ನು ಆಟದ ವಸ್ತುಗಳಂತೆ ವಿನಿಯೋಗಿಸಿಕೊಳ್ಳುತ್ತವೆ. ಕಲ್ಲುಕಸಗಳನ್ನು ಬಿಸುಡುತ್ತವೆ. ಗಡಿಗೆಗಳನ್ನು ಒಡೆಯುತ್ತವೆ. ಒಮ್ಮೊಮ್ಮೆ ಅವು ಒಡೆಯದಂತೆ ಅತ್ಯಂತ ಜಾಗ್ರತೆ ವಹಿಸುತ್ತವೆ. ಒಬ್ಬಿಬ್ಬರು ಮನುಷ್ಯರ ಸಹಾಯವಿದ್ದರೂ ಕದಲಿಸಲಾಗದ ಬೀರು, ಮೇಜು ಮೊದಲಾದುವುಗಳನ್ನು ಅತಿ ಸುಲಭವಾಗಿ ಒಂದೆಡೆಯಿಂದ ಇನ್ನೊಂದೆಡೆಗೆ ಸೇರಿಸುತ್ತವೆ ಅವುಗಳಿಗೆ ಚೈತನ್ಯ ಶಕ್ತಿ ಹೆಚ್ಚಾಗಿಯೂ, 'ಬುದ್ಧಿ' ಶಕ್ತಿ ಕಡಮೆಯಾಗಿಯೂ ಇರುವಂತೆ ನಮಗೆ ಅನಿಸುತ್ತದೆ. ಏಕೆಂದರೆ ಅವು ಮಾಡುವ ಕೆಲಸಕ್ಕೆ ಒಂದು ಪ್ರಯೋಜನವಾಗಲೀ ಉದ್ದೇಶವಾಗಲೀ ಇರುವಂತೆ ಕಾಣುವುದಿಲ್ಲ. ಬರಿಯ ಕೋತಿ ಚೇಷ್ಟೆಗಳಂತೆ, ಒಮ್ಮೊಮ್ಮೆ ನಗು ಕೂಡ ಬರಿಸುತ್ತವೆ. ಆ ಪಿಶಾಚಿಗಳಿಗೆ ತಾವು ಮಾಡಬಲ್ಲ ಕೆಲಸಗಳನ್ನು ಈ ಲೋಕದವರಿಗೆ ತೋರಿಸಬೇಕೆಂದಿರುವ ಹಾಗೆ ನಮಗೆ ಕಾಣಿಸುತ್ತದೆ.

ವಸ್ತುಗಳನ್ನು ಬಿಸಾಡುವುದೂ, ಸಾಮಾನುಗಳನ್ನು ಅಟ್ಟಿಟ್ಟೆ ಕದಲಿಸುವುದೂ ಹಾಗಿರಲಿ, ಅವು ಅನೇಕ ಬಗೆಯ ಧ್ವನಿಗಳನ್ನು ಕೂಡಾ ಮಾಡುತ್ತವೆ. ಪಿಶಾಚಿಗಳಿರುವ ಮನೆಗಳಲ್ಲಿ ಕೇಳಿ ಬರುವ ಧ್ವನಿಗಳಲ್ಲಿ ಗೋಡೆಯ ಗಡಿಯಾರಕ್ಕೆ ಕೇ ಕೊಡುವಂಥ ಶಬ್ದ, ಯಂತ್ರದ ತಿರುಗಣಿ ತಿರುಗುವ ಶಬ್ದ, ಹಾಯಿ ಮರದ 'ಕಿರ ಕಿರಾ' ಶಬ್ದ ಇವು ಆಗಾಗ ಕೇಳ ಬರುತ್ತವೆಂದು ಬಹಳ ಮಂದಿ ಹೇಳುತ್ತಾರೆ ಇವೆಲ್ಲಾ ಒಂದೇ ವಿಧವಾದ ಧ್ವನಿಯಾಗಿರಬಹುದು. ಬೇರೆ ಬೇರೆ ಜನರು ಬೇರೆ ಬೇರೆಯಾಗಿ ವರ್ಣಿಸುತ್ತಿರಬಹುದು. ಸಾಧಾರಣವಾಗಿ ಇಂತಹ ಶಬ್ದಗಳು ಕೇಳಿದ ಸ್ಥಳದಲ್ಲಿ, ಪಿಶಾಚಿಗಳ 'ಪ್ರದರ್ಶನ'ಗಳು ಪ್ರಾರಂಭವಾಗುತ್ತವೆ.

ಕೆಲವರು ಮಾಡಿದ ವರ್ಣನೆಯಲ್ಲಿ ದೊಡ್ಡ ಪಕ್ಷಿಯೊಂದು ಹಾರುವಾಗ ಅದರ ರೆಕ್ಕೆಯ ಶಬ್ದದಂತೆ ಶಬ್ದವಾಯಿತಂತೆ. ಮನೆಯಲ್ಲಿ ಎಲೆಕ್ಟ್ರಿಕ್ ಬೆಲ್ ಇಲ್ಲದಿದ್ದಾಗಲೂ, ಎಲೆಕ್ಟ್ರಿಕ್ ಬೆಲ್ ಮೊಳಗಿದ ಶಬ್ದವಾಯಿತೆಂದು ಕೆಲವರು ಹೇಳುತ್ತಾರೆ. ನಿಜವಾಗಿಯೂ 'ಬೆಲ್' ಇರುವಲ್ಲಿ ಆ ಬೆಲ್ಲು ತನ್ನಂತಾನೆ ಮೊಳಗಿದ್ದುಂಟು ಆ ಬೆಲ್ಲನ್ನು 'ಡಿಸ್‌ಕನೆಕ್ಟ್' ಮಾಡಿ, ಮನೆಯೊಳಗಿದ್ದವರನ್ನು ಹತೋಟಿಯಲ್ಲಿಟ್ಟಾಗಲೂ ಕೂಡಾ ಬೆಲ್ ಮೊಳಗಿದ್ದು ಕೇಳಿಸಿದೆ

ಅಡಿಗಳ ಸಪ್ಪಳವೂ ಕೇಳಿಸುತ್ತದೆ. ಎಳೆಯ ಚಿಕ್ಕ ಮಕ್ಕಳ ಪದಧ್ವನಿಯಂತೆ ತಪ ತಪವೆಂದಿರಬಹುದು; ದೊಡ್ಡವರ ಅಡಿಯಂತೆ ದಬ ದಬವೆಂದಿರಲೂ ಬಹುದು. ಪ್ರಾಣಿಗಳ ನಡಿಗೆಯ ಸಪ್ಪಳದಂತೆಯೂ ಇರಬಹುದು. ಒಂದೊಂದು ಸಾರಿ ಕೈಗಾಲುಗಳು ಹಾರಾಡುವಂತೆಯೂ ಸಪ್ಪಳವಾಗುತ್ತದೆ. ಒಡಿಗೆಗಳು ನಿಧಾನವಾಗಿ ಎಡತಾಕುವಂತೆಯೂ ಶಬ್ದ ಕೇಳಿಸುತ್ತದೆ. ತಟ್ಟಿದ ಹಾಗೆ, ಹೊಡೆದ ಹಾಗೆ, ಗುದ್ದಿದ ಹಾಗೆ, ಪರಚುವ ಹಾಗೆ, ತಳ್ಳಿದ ಹಾಗೆ ನಾನಾ ವಿಧ ಸಪ್ಪಳವಾದ ಸಂದರ್ಭಗಳು ಅನೇಕವಿವೆ.

ಮಾನವರ ಕಂಠವನ್ನೇ ಹೋಲಿಕೊಂಡು ಗುಸುಗುಸಲಾಡುವುದೂ, 'ಛಾಚು' ಎನ್ನುವುದೂ, ಹೂಂಗುಡುವುದೂ 'ಬೇಂ', ಎಂದು ಅರಚುವುದೂ, ಹಂದಿಯಂತೆ ಗುರ್ರೆನುವುದೂ, ಇನ್ನೂ ಇತರ ಪ್ರಾಣಿಗಳಂತಹ ಶಬ್ದಗಳೂ ಸಿಳ್ಳುಗಳೂ ಅನೇಕ ಕೇಳಿಸುತ್ತವೆ. ಅಪೂರ್ವವಾದ ಮಾನವರ ಕಂಠಸ್ವರದಂತೆ ಒಂದಾದರೂ ಮಾತು ಸ್ಪಷ್ಟವಾಗಿ ಕೇಳಲೂಬಹುದು ಆದರೆ ಹೆಚ್ಚು ಭಾಗದ ಮಾತುಗಳು ಅಸ್ಪಷ್ಟವಾಗಿಯೇ ಇರುತ್ತವೆ.

ಕಣ್ಣಿಗೆ ಕಾಣಿಸುವ ರೂಪಗಳು

ಸ್ತ್ರೀ ಪುರುಷ ಮಾನವಾಕಾರಗಳು ಅಸ್ಪಷ್ಟವಾದ ಆಕೃತಿಗಳೂ, ನೆರಳಿನ ಹಾಗೂನ್ಮೆ ಕಂಡು ಮಾಯವಾದಂತಾಗಿಬಿಡುತ್ತವೆ. ಬೆಳ್ಳು, ಮೊಲ ಮೊದಲಾದ ಸಣ್ಣ ಸಣ್ಣ ಪ್ರಾಣಿಗಳೂ ಕಾಣಿಸುತ್ತವೆ. ಇನ್ನು ಸೃಷ್ಟಿಯಲ್ಲೆಲ್ಲೂ ಇಲ್ಲದ ವಿಚಿತ್ರ ಮೃಗಗಳು ವಿಲಕ್ಷಣವಾಗಿ ಕಾಣಿಸುವುದೂ ಉಂಟು. ಸ್ತ್ರೀಯೊಂದು ಪಿಶಾಚಿಗಳ ಕೊಂಪೆಯಲ್ಲಿಯೂ ವಸ್ತುಗಳು ಬಿಸುಡಲ್ಪಡುವುದು

(೧೫ನೇ ಪುಟ ನೋಡಿರಿ)

ಅಸ್ಥಮಾ ಪೀಡಿತರ ಗಮನಕ್ಕೆ

ಹಿಮಾಲಯದ ಪ್ರಸಿದ್ಧ ಅಸ್ಥಮಾ ನಿವಾರಕ ಮೂಲಿಕೆಯನ್ನು ದಿ. ೨೨—೧೧—೬ ಹುಣ್ಣಿಮೆಯ ರಾತ್ರಿ ಹಾಲು ಮತ್ತು ಅಂಯಿಂದ ತಯಾರಿಸಿದ ಬೀರಿನಲ್ಲಿ ತೆಗೆದುಕೊಳ್ಳುವುದರಿಂದ ಅಸ್ಥಮಾ, ಗೂರಲು, ಕೆಮ್ಮು, ಉಬ್ಬಸ, ಮೇಲುಸಿರು ಮತ್ತು ಶ್ವಾಸ ಕಟ್ಟುವಿಕೆ ಇವುಗಳು ನಿವಾರಣೆಯಾಗುತ್ತವೆ. ಕೂಡಲೇ ಇಂಗ್ಲಿಷಿನಲ್ಲಿ ಬರೆಯಿರಿ

Shri Mahatma Sidh Baba Sewa Ashram
P. O. Chitrakot. (Uttar Pradesh)

ಪಂಡಿತ ಜವಾಹರಲಾಲ ನೆಹರು

ಶ್ರೀ ಹಳೆನಾಡು ಸುಬ್ರಾಯ ಭಟ್ಟ, ಚೋನಾಳಿ.

೧೮೮೯ನೇ ನವಂಬರ ೧೪ರಂದು ಅಲ್ಲಾಹಬಾದಿನ 'ಆನಂದ ಭವನ'ದಲ್ಲಿ ನೆಹರೂರವರ ಜನನವಾಯಿತು. ಆಗರ್ಭ ಶ್ರೀಮಂತರೂ ಅಪ್ರತಿಮ ಮೇಧಾವಿಯೂ ಆದ ಪಂಡಿತ ಮೋತಿಲಾಲ್ ನೆಹರೂರವರೇ ಇವರ ತಂದೆ. ದೈವಭಕ್ತರೂ ಶೀಲ ಸಂಪನ್ನರೂ ಆದ ಸ್ವರೂಪ ರಾಣಿಯವರೇ ಇವರ ತಾಯಿ. ಜವಾಹರರು ಬಾಲ್ಯವನ್ನು ಸುಖವಾಗಿಯೇ ಕಳೆದರು. ಅವರಿಗೆ ಯಾವುದಕ್ಕೂ ಕಡಿಮೆಯಿರಲಿಲ್ಲ. ಪ್ರಾಪ್ತ ವಯಸ್ಕನಾದ ಮೇಲೆ ಜವಾಹರರಿಗೆ ಮೋತಿಲಾಲರು ವಿದ್ಯಾಭ್ಯಾಸದ ವ್ಯವಸ್ಥೆ ಮಾಡಿದರು. ಅವರನ್ನು ಶಾಲೆಗೆ ಕಳುಹಿಸದೆ ಮನೆಯಲ್ಲಿಯೇ ಉಪಾಧ್ಯಾಯರನ್ನಿಟ್ಟು ಮಾರ ಹೇಳಿಸಿದರು. ಅವರಿಗೆ ಅಂದು ನೆರೆತ ಉಪಾಧ್ಯಾಯರು ಅವರ ಮುಂದಿನ ವಿದ್ಯಾಸಂಪನ್ನತೆಗೂ ವಿಚಾರ ಪರತೆಗೂ ಸಹಾಯಕರಾದರು. ಓದುವುದರಲ್ಲಿ ಇರುವಷ್ಟೇ ಚುರುಕುತನವನ್ನು ಆಟಗಳಲ್ಲಿಯೂ ತೋರಿಸುತ್ತಿದ್ದರು. ಅವರಿಗೆ ಈಜುವುದು, ಕುದುರೆ ಸವಾರಿ ಇವುಗಳಲ್ಲಿ ಹೆಚ್ಚು ಆಸಕ್ತಿ ಇದ್ದಿತ್ತು.

ತಂದೆಯನ್ನು ಕಂಡರೆ ಅವರಿಗೆ ತುಂಬಾ ಭಯ. ಒಂದು ಬಾರಿ ತಂದೆಯ ಮೇಜಿನ ಮೇಲಿದ್ದ ಒಂದು ಪೌಂಟನ್ ಪೆನ್ನನ್ನು ಹೇಳದೆ ತೆಗೆದು ಕೊಂಡರು. ತಂದೆಯು ಕೇಳಿದಾಗ ತೆಗೆಯಲಿಲ್ಲವೆಂದು ಸುಳ್ಳು ಹೇಳಿದರು. ಆದರೆ ಕೊನೆಗೆ ನಿಜಾಂಶಗೊತ್ತಾಯಿತು. ಮೋತಿಲಾಲರಿಗೆ ಮಗನು ಸುಳ್ಳು ಹೇಳಿದುದನ್ನು ನೋಡಿ ಬಹಳ ಕೋಪ ಬಂತು. ಮಗನನ್ನು ಬಲವಾಗಿ ಹೊಡೆದರು. ಹೊಡೆತದಿಂದ ಜವಾಹರರ ಮೈಮೇಲೆ ಬಾಸುಂಡೆಗಳು ಬಂದವು. ಅವು ವಾಸಿಯಾಗಲು ಹಲವು ದಿನಗಳು ಬೇಕಾದುವು. ಅಂದಿನಿಂದ ಜವಾಹರರು ಎಂದೂ ಅಂತಹ ಕೆಲಸ ಮಾಡಲಿಲ್ಲ. ತಮಗೆ ಅದರಿಂದ ಬಹಳ ಒಳ್ಳೆಯದಾಯಿತೆಂದು ಅವರು ಹೇಳಿದ್ದಾರೆ.

ಜವಾಹರರಿಗೆ ಹದಿನಾಲ್ಕು ವಯಸ್ಸಿನ ಮೇಲೆ ಅವರನ್ನು ವಿದ್ಯಾಭ್ಯಾಸಕ್ಕಾಗಿ ಇಂಗ್ಲೆಂಡಿಗೆ ಕಳುಹಿಸಲು ಮೋತಿಲಾಲರು ನಿರ್ಧರಿಸಿದರು. ತಾವೇ ಜೊತೆಗೆ ಹೋಗಿ ಅವರನ್ನು ಇಂಗ್ಲೆಂಡಿನ ಹ್ಯಾರೊ ಶಾಲೆಗೆ ಸೇರಿಸಿದರು. ಬ್ರಿಟನ್ನಿನ ರಾಜಕುಮಾರನೊಡನೆ ಶಿಕ್ಷಣ ಹೊಂದುವ ಶಾಲೆಯದು. ಅಲ್ಲಿ ಅವರು ಎರಡು ವರ್ಷ ವ್ಯಾಸಂಗ ಮಾಡಿ ಮುಂದೆ ಆಕ್ಸ್‌ಫರ್ಡಿನಲ್ಲಿ ಮೂರು ವರ್ಷ ಓದಿ ವಿಜ್ಞಾನ ವಿಷಯಗಳಲ್ಲಿ ಪದವಿ ಪಡೆದರು. ಅನಂತರ ಕಾನೂನಿನ ವಿಷಯದಲ್ಲಿ ವ್ಯಾಸಂಗ ಮಾಡಿ ಬ್ಯಾರಿಸ್ಟರಾದರು. ಏಳು ವರ್ಷಗಳು ಅವರು ಇಂಗ್ಲೆಂಡಿನಲ್ಲಿದ್ದು ವ್ಯಾಸಂಗ ಮುಗಿಸಿಕೊಂಡು ಸ್ವದೇಶಕ್ಕೆ ಹಿಂದಿರುಗಿದರು.

ಇಂಗ್ಲೆಂಡಿನಿಂದ ಬಂದ ಮೇಲೆ ತಂದೆಯಂತೆ ವಕೀಲಿ ವೃತ್ತಿಯನ್ನು ಅವಲಂಭಿಸಿದರು. ಮೂರು ನಾಲ್ಕು ವರ್ಷಗಳು ಅವರು ವಕೀಲರಾಗಿ ಕೆಲಸ ಮಾಡಿದರು. ಆದರೆ ಅವರಿಗೆ ಆ ಜೀವನ ನೀರಸವಾಗಿ ಕಂಡು ಬಂದಿತು. ಸ್ವಲ್ಪ ಸ್ವಲ್ಪವಾಗಿ ಸಾಮಾಜಿಕ ಜೀವನಕ್ಕೆ ಇಳಿಯ ತೊಡಗಿದರು. ಇದೇ ಸಮಯದಲ್ಲೇ ಅವರಿಗೆ ಮಹಾತ್ಮ ಗಾಂಧಿಯವರ ಭೇಟಿಯಾಯಿತು. ಗಾಂಧೀಜಿಯ ವ್ಯಕ್ತಿತ್ವವು ನೆಹರೂರವರ ಮನವನ್ನು ಸೆಳೆಯಿತು. ಅವರು ಗಾಂಧೀಜಿಯ ಭಕ್ತರಾಗಿ ಕಾಂಗ್ರೆಸ್ಸನ್ನು ಸೇರಿದರು, ತಮ್ಮ ತಂದೆಯನ್ನು ಕೂಡಾ ಕಾಂಗ್ರೆಸ್ಸಿಗೆ ಎಳೆದು ತಂದರು.

ಮಹಾತ್ಮ ಗಾಂಧಿಯವರು ದಕ್ಷಿಣ ಆಫ್ರಿಕದಿಂದ ಬಂದು ಭಾರತದಲ್ಲಿ ತಮ್ಮ ನೂತನ ಪ್ರಯೋಗವನ್ನು ಆಚರಣೆಗೆ ತರುವುದರಲ್ಲಿದ್ದರು. ಅವರಿಗೆ ತಮ್ಮ ಬೆಂಬಲವಿತ್ತು ಗಾಂಧೀಜಿಯವರು ಆರಂಭಿಸಿದ ಅಸಹಕಾರ ಚಳುವಳಿಯಲ್ಲಿ ನೆಹರೂರವರು ದುಮುಕಿದರು.

ನೆಹರುರವರ ಪ್ರಭಾವದಿಂದ ಅವರ ತಂದೆ ಕೂಡಾ ಗಾಂಧಿಭಕ್ತರಾದರು. ತಂದೆ ಮಕ್ಕಳಿಬ್ಬರೂ ಗಾಂಧೀಜಿಯನ್ನು ಆತ್ಮೀಯ ಭಾವನೆಯಿಂದ ಕಾಣುತ್ತಾ ತಮ್ಮ ತನು-ಮನ-ಧನವನ್ನೆಲ್ಲಾ ದೇಶಹಿತಕ್ಕಾಗಿ ಅರ್ಪಿಸಲು ಮುಂದಾದರು.

೧೯೨೫ರಲ್ಲಿ ಜವಾಹರರ ಪತ್ನಿ ಕಮಲಾರವರ ದೇಹಸ್ಥಿತಿ ಕೆಟ್ಟ ಕಾರಣ ಚಿಕಿತ್ಸೆಗಾಗಿ ವೈದ್ಯ ಸಲಹೆ ಮೇಲೆ ಸ್ವಿಜರ್ಲೆಂಡಿಗೆ ಕರೆದುಕೊಂಡು ಹೋದರು. ಆ ಸಮಯದಲ್ಲಿಯೇ ಅವರು ಜರ್ಮನಿ, ಫ್ರಾನ್ಸ್ ಮೊದಲಾದ ಯುರೋಪಿನ ದೇಶಗಳಿಗೆ ಹೋಗಿ ನೋಡಿಕೊಂಡು ಬಂದರು. ದೇಶ ವಿದೇಶಗಳ ವಿದ್ಯಮಾನಗಳನ್ನು ಚೆನ್ನಾಗಿ ಅರಿತುಕೊಂಡರು.

ಭಾರತಕ್ಕೆ ಮರಳಿದ ಮೇಲೆ ೧೯೨೨ರ ಕಾಂಗ್ರೆಸ್ ಅಧಿವೇಶನಕ್ಕೆ ಜವಾಹರರೇ ಅಧ್ಯಕ್ಷರಾದರು. ಆಗ ಅವರಿಗೆ ನಲ್ವತ್ತು ವರ್ಷ ವಯಸ್ಸು. ಇಷ್ಟು ಚಿಕ್ಕ ವಯಸ್ಸಿನಲ್ಲಿ ಕಾಂಗ್ರೆಸ್ ಅಧ್ಯಕ್ಷತೆಗೆ ಬಂದವರು ಬಹಳ ಅಪರೂಪ. ಈ ಅಧಿವೇಶನದಲ್ಲಿಯೇ ಸಂಪೂರ್ಣ ಸ್ವಾತಂತ್ರ್ಯದ ನಿರ್ಣಯವಾಯಿತು. ೧೯೩೦ರಲ್ಲಿ ಪುನಃ ಕಾಂಗ್ರೆಸ್ಸು ಚಳುವಳಿಯಲ್ಲಿ ನೆಹರೂರವರ ಮನೆಯವರೆಲ್ಲ ಭಾಗ ವಹಿಸಿದರು. ಅವರ ತಂದೆ, ತಾಯಿ, ಪತ್ನಿ, ಸೋದರಿ ಎಲ್ಲರೂ ಜೈಲಿಗೆ ಹೋದರು. ಎಲ್ಲರಿಗಿಂತ ಮೊದಲೇ ಜವಾಹರರು ಜೈಲಿಗೆ ಹೋಗಿದ್ದರು.

ಜೈಲಿನಲ್ಲಿ ಪಂಡಿತ ಮೋತಿಲಾಲರ ದೇಹಸ್ಥಿತಿ ಕೆಟ್ಟ ಕಾರಣ ಸರಕಾರವು ಅವರನ್ನು ಬಿಡುಗಡೆಗೊಳಿಸಿತು. ಮೋತಿಲಾಲರು ಕೆಲವು ದಿನದಲ್ಲಿಯೇ ಇಹಲೋಕ ತ್ಯಜಿಸಿದರು. ಜವಾಹರರು ಆಗ ಬಿಡುಗಡೆಯಾದರೂ ಪುನಃ ೧೯೩೨ರಲ್ಲಿ ಬಂಧನಕ್ಕೊಳಗಾದರು.

ಆದರೆ ಅವರ ಪತ್ನಿ ಕಮಲಾರವರ ದೇಹಸ್ಥಿತಿ ಮರಳಿ ಕೆಟ್ಟ ಕಾರಣ ಅವರನ್ನು ಸ್ವಿಜರ್ಲೆಂಡಿಗೆ ಚಿಕಿತ್ಸೆಗಾಗಿ ಕಳುಹಿಸಬೇಕೆಂದು ನಿರ್ಧರಿಸಲಾಯಿತು. ಸರಕಾರವು ನೆಹರೂರವನ್ನು ಬಿಡುಗಡೆಗೊಳಿಸಿತು. ಜೈಲಿನಿಂದ ಹೊರಬಂದವರು ತಮ್ಮ ಪತ್ನಿಯನ್ನು ಯುರೋಪಿಗೆ ಕರೆದೊಯ್ದರು. ಆದರೆ ದುರ್ದೈವದಿಂದ ಅಲ್ಲಿ ಏನೂ ಪ್ರಯೋಜನವಾಗದೆ ಕಮಲಾರವರು ಪತಿಯನ್ನಗಲಿ ಪರಲೋಕಕ್ಕೆ ತೆರಳಿದರು. ನೆಹರೂರವರಿಗೆ ಅತೀವದುಃಖವಾಯಿತು. ಅಲ್ಲಿಂದ ವಾಪಾಸು ಬಂದಾಗ ಲಕ್ನೋ ಕಾಂಗ್ರೆಸ್ ಅಧಿವೇಶನಕ್ಕೆ ನೆಹರೂರವನ್ನೇ ಅಧ್ಯಕ್ಷರನ್ನಾಗಿ ಆರಿಸಲಾಗಿತ್ತು. ಮುಂದಿನ ಕಾಂಗ್ರೆಸ್ ಅಧಿವೇಶನದಲ್ಲೂ ಜವಾಹರರೇ ಅಧ್ಯಕ್ಷರಾದರು.

ಅವರ ಅಧ್ಯಕ್ಷ ಪಟ್ಟದಲ್ಲಿಯೇ ಕಾಂಗ್ರೆಸ್ ಮಹಾ ಚುನಾವಣೆಯಲ್ಲಿ ಭಾಗವಹಿಸಿತು. ನೆಹರೂರವರು ಚುನಾವಣೆಗಾಗಿ ಭಾರತದಲ್ಲಿ ಆ ಸೇತು ಹಿಮಾಚಲದ ವರೆಗೂ ಪ್ರವಾಸ ನಡೆಸಿದರು. ಲಕ್ಷಾಂತರ ಮಂದಿ ಅವರ ಭಾಷಣ ಕೇಳಲು ಬರುತ್ತಿದ್ದರು. ಚುನಾವಣೆಯಲ್ಲಿ ಕಾಂಗ್ರೆಸ್ ಗೆದ್ದು ಹಲವು ಪ್ರಾಂತಗಳಲ್ಲಿ ಮಂತ್ರಿಮಂಡಲಗಳು ರಚಿಸಿತು.

ಅಷ್ಟರಲ್ಲಿ ಎರಡನೇ ಮಹಾ ಯುದ್ಧ ಆರಂಭವಾಯಿತು. ಕಾಂಗ್ರೆಸ್ಸಿಗೂ ಸರಕಾರಕ್ಕೂ ಘರ್ಷಣೆ ತೊಡಗಿತು. ಕಾಂಗ್ರೆಸು ಮಂತ್ರಿ ಮಂಡಲ ಬಿಟ್ಟಿತು. ಅನಂತರ ೧೯೪೨ರಲ್ಲಿ "ಭಾರತದಿಂದ ತೊಲಗಿರಿ" ಚಳವಳಿಯನ್ನು ಮಹಾತ್ಮರ ಮುಂದಾಳುತನದಲ್ಲಿ ಆರಂಭಿಸಲಾಯಿತು. ಎಲ್ಲಾ ಮಂಡಲೊಡನೆ ನೆಹರೂರವರು ಕೂಡಾ ಬಂಧಿತರಾದರು. ಜೈಲಿನಲ್ಲಿ ಅವರು ಪುಸ್ತಕ ವ್ಯಾಸಂಗದಲ್ಲಿಯೂ ಪುಸ್ತಕ ಬರೆಯುವದರಲ್ಲಿಯೂ ಕಳೆಯುತ್ತಿದ್ದರು. ಜೈಲಿನಿಂದ ಬಿಡುಗಡೆ ಹೊಂದಿದ ಮೇಲೆ ೧೯೪೫ರಲ್ಲಿ ಕಾಂಗ್ರೆಸ್‌ನೊಡನೆ ಸರಕಾರ ಸಂಧಾನ ಪ್ರಾರಂಭಿಸಿತು. ಮಹಾ ಚುನಾವಣೆ ನಡೆಯಿತು. ನೆಹರೂರವರು ಪ್ರಾಂತ ಪ್ರಾಂತಗಳಲ್ಲಿ ತಿರುಗಿ ಬಿರುಸಾದ ಚುನಾವಣಾ ಪ್ರಚಾರ ಮಾಡಿದರು. ಅವರ ಸಲವಾಗಿ ಕಾಂಗ್ರೆಸ್ಸಿಗೆ ಅಮೋಘ ಜಯ ಲಭಿಸಿತು. ಕೇಂದ್ರ ಸರಕಾರವು ನೆಹರೂರವರ ಮುಖಂಡತ್ವದಲ್ಲಿ ಕಾಂಗ್ರೆಸಿನ ಕೈಗೆ ಬಂದಿತು. ೧೯೪೭ರಲ್ಲಿ ಭಾರತಕ್ಕೆ ಡೊಮಿನಿಯನ್ ಸ್ವಾತಂತ್ರ್ಯವನ್ನು ಕೊಡಲಾಯಿತು. ೧೯೫೦ರಲ್ಲಿ ಭಾರತ ಸಂಪೂರ್ಣ ಸ್ವತಂತ್ರವಾಗಿ ಪ್ರಜಾರಾಜ್ಯವಾಯಿತು. ನೆಹರೂರವರು ಅಂದಿನಿಂದ ಇಂದಿನ ವರೆಗೂ ಪ್ರಧಾನ ಮಂತ್ರಿಯಾಗಿದ್ದು ಆಡಳಿತ ಸೂತ್ರವನ್ನು ನಡೆಸುತ್ತಿದ್ದಾರೆ.

ಸ್ವಾತಂತ್ರ್ಯ ದೊರೆತ ಮೇಲೆ ಅವರ ವ್ಯಕ್ತಿತ್ವ ಇನ್ನೂ ಹೆಚ್ಚು ಶೋಭಿಸಲು ಸಂದರ್ಭ ದೊರೆತಿದೆ. ಅವರ ಅಂತಾರಾಷ್ಟ್ರೀಯ ಭಾವನೆಯು ಅವರನ್ನು ಜಗತ್ಪ್ರಸಿದ್ಧಿಗೆ ತಂದಿರುತ್ತದೆ. ಗಾಂಧೀಜಿಯವರ ಶಾಂತಿ ಮಾರ್ಗವು ಅವರ ವಿದೇಶಾಂಗ ನೀತಿಗೆ ಮೆರುಗು ಕೊಟ್ಟಿದೆ. ಪ್ರಪಂಚದ ದಲಿತ ವರ್ಗಗಳಿಗೆ ಅವರು ಕೊಡುತ್ತಿರುವ ಸಹಾಯ ಹೆಂಚಲಗಳು ಕೋಟ್ಯಾನುಕೋಟಿ ಜನರ ಹೃದಯವನ್ನು ಸೂರೆಗೊಂಡಿವೆ.

(೧೪ನೇ ಪುಟ ನೋಡಿರಿ)

ದಿವಂಗತ ಎ. ಬಿ. ಶೆಟ್ಟಿ ಸ್ಮಾರಕ ನಿಧಿ.

ಮುಂಬಾಯಿಯಲ್ಲಿ ತಯಾರಿಸಿ ತರಿಸಿದ ದಿವಂಗತ ಎ ಬಿ ಶೆಟ್ಟಿ ಪ್ರತಿಮೆಯ ಅನಾವರಣ ಸಮಾರಂಭವು ಮಂಗಳೂರು ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಬೇಗನೇ ಜರಗಲಿರುವುದು.

ಸ್ಮಾರಕದ ವಿವಿಧ ಉದ್ದೇಶ ಪೂರ್ತಿಗಾಗಿ ದ್ರವ್ಯ ಸಹಾಯದ ಅಗತ್ಯವಿರುವುದರಿಂದ ಸ್ಮಾರಕ ನಿಧಿಗೆ ಸಹಾಯ ಮಾಡಲಿಚ್ಛಿಸುವವರು, ತಮ್ಮ ಸಹಾಯಧನವನ್ನು ಆದಷ್ಟು ಬೇಗನೆ ಕಳುಹಿಸಿಕೊಟ್ಟು ಸಹಕರಿಸಬೇಕಾಗಿ ಅಪೇಕ್ಷಿಸುತ್ತೇವೆ

ಕೆ. ಟಿ ಅಳ್ವ, ಅಧ್ಯಕ್ಷ.

ಪಿ ಎಮ್. ಹೆಗ್ಡೆ, ಕೋಶಾಧಿಕಾರಿ.

ವಿ. ಸೂ. ಸಹಾಯಧನವನ್ನು ದಯವಿಟ್ಟು ಈ ಕೆಳಗಿನ ವಿಳಾಸಕ್ಕೆ ಕಳುಹಿಸಿರಿ.

Sri P M Heqde,
Kodialbail, Mangalore-3.

ನನ್ನನ್ನು ಉಳಿಸಿದ ಡಾಕ್ಟರ್ ಟಿ. ಮಾಧವ ಪೈ

• •

ಶ್ರೀ ಕೆ. ಹೊನ್ನಯ್ಯ ಶೆಟ್ಟಿ

ಉಡುಪಿಯನ್ನು ಆಧುನಿಕ ಮಾದರಿಯಲ್ಲಿ ಪುನಾರಚಿಸಿ ಇದರ ಕೀರ್ತಿಯನ್ನು ಇಡಿಯ ದೇಶದಲ್ಲಿ ಮಾತ್ರವಲ್ಲ ವಿದೇಶಗಳಲ್ಲಿಯೂ ಹಬ್ಬಿಸಿದ ಶ್ರೇಯಸ್ಸು, ಡಾ। ಮಾಧವ ಪೈ ಅವರಿಗೆ ಸೇರಬೇಕು. ಸಿಂಡಿಕೇಟ್ ಬೇಂಕಿನ ಚೆಯರ್ ಮೇನರೂ ಮೆನೇಜಿಂಗ್ ಡೈರೆಕ್ಟರರೂ ಆಗಿರುವ ಇವರು ತಾ. ೧-೧೧-೬೧ರಿಂದ ತನ್ನ ಮೆನೇಜಿಂಗ್ ಡೈರೆಕ್ಟರ್ ಹುದ್ದೆಗೆ ರಾಜಿನಾಮೆಯಿತ್ತು, ಮಣಿಪಾಲದಲ್ಲಿ ನೆಲಸಿ, ಅದನ್ನು ಮತ್ತಷ್ಟು ಉನ್ನತ ಸ್ಥಿತಿಗೆ ತರುವ ನಿರ್ಧಾರ ಮಾಡಿದ್ದಾರೆ. ಈಗಾಗಲೇ ಅಖಿಲ ಭಾರತ ಖ್ಯಾತವಾದ ಉಡುಪಿ—ಮಣಿಪಾಲಗಳ ಹೆಸರು ದಿಗ್ದಿಗಂತಗಳಲ್ಲಿ ಹರಡುವಂತೆ ಶ್ರಮಿಸುವ ನಿರ್ಧಾರ ಅವರದು. ವಿಶ್ವವಿದ್ಯಾಲಯದ ಮಾದರಿಯಲ್ಲಿ ಉಡುಪಿ—ಮಣಿಪಾಲಗಳ ಶೈಕ್ಷಣಿಕ ಸಂಸ್ಥೆಗಳನ್ನು ನಡೆಸಿಕೊಂಡು ಬರುವುದು, ಔದ್ಯಮಿಕ ರಂಗದಲ್ಲಿ ಈ ಸ್ಥಳವನ್ನು ಮುನ್ನಡೆಸುವುದು ಇವರ ಗುರಿ. ಈ ಉದ್ದೇಶದಿಂದ ನಿವೃತ್ತರಾದ ಸಂದರ್ಭದಲ್ಲಿಡಾ। ಪೈಗಳ ಕುರಿತು ನಾಲ್ಕು ಮಾತುಗಳನ್ನು ಬರೆಯುವುದು ಸಂದರ್ಭೋಚಿತವೆಂದು ತಿಳಿಯುತ್ತೇನೆ. ಡಾ। ಪೈಯವರ ಬಗ್ಗೆ ಈಗಾಗಲೇ ಹಲವಾರು ಜನರು ಬರೆದಿದ್ದಾರೆ. ಈಗ ಅವರ ಕಾರ್ಯಕ್ಷೇತ್ರ ವಿಶಾಲವಾಗಿದೆ; ಅವರು ಚಿರಪರಿಚಿತರಾಗಿದ್ದಾರೆ. ಆದರೂ ನನ್ನ ಅವರ ಪರಿಚಯದಿಂದ ಕಂಡುಕೊಂಡ ಕೆಲವು ಅನುಭವಗಳನ್ನು ಹೇಳಿದರೆ, ಅದು ಎಂದಿಗೂ ಅನುಚಿತವಾಗದು. ಅಪೂರ್ವ ಸಾಹಸಿ ಪೈಯವರ ಪರಿಚಯ ನನಗಾದುದು ಇಂದು ನಿನ್ನೆಯಲ್ಲ. ೧೯೩೫ರಲ್ಲಿ ವೈದ್ಯಕೀಯ ವೃತ್ತಿಯಲ್ಲಿ ತೊಡಗಿದ್ದ ಇವರನ್ನು ಸುಮಾರು ೧೯೩೭ರಲ್ಲಿ, ಪ್ರಸಿದ್ಧ ಪಿ. ಎ. ಪೈ ಬ್ರದರ್ಸ್‌ರ ಹಿರಿಯರಾಗಿದ್ದ ಮತ್ತು ನನ್ನ ಗೆಳೆಯರಾಗಿದ್ದ ಶ್ರೀ ಪಿ. ಎ. ಪೈ(ಈಗ ದಿವಂಗತ)ಯವರ ಮೂಲಕ ಒಂದು ಮೆಡಿಕಲ್ ಸರ್ಟಿಫಿಕೇಟನ್ನು ಪಡೆದುಕೊಳ್ಳಲು ಭೆಟ್ಟಿಮಾಡಿದ್ದೆ. ಅಂದು ಆದ ನಮ್ಮ ಪ್ರಥಮ ಭೇಟಿಯು ಪರಿಣಾಮಕಾರಿಯಾಗಿ ಬೆಳೆದು ಇಂದಿಗೆ ನಮ್ಮ ಸ್ನೇಹಾಚಾರದ ಬಳ್ಳಿಯು ದೃಢವಾಗಿ ಹಬ್ಬಿಕೊಂಡಿದೆ

ಹಿಂದಿನಿಂದಲೂ ನನ್ನನ್ನು ತಲೆಸಿಡಿತ ರೋಗವೊಂದು ಬಾಧಿಸುತ್ತಿತ್ತು. ಹೊಸತಾಗಿ ಪರಿಚಯವಾದ ಡಾ। ಪೈಯವರನ್ನು ನಾನು ಇದಕ್ಕಾಗಿ ಸಲಹೆ ಪಡೆಯಲು ಪದೇ ಪದೇ ಕಾಣುತಿದ್ದೆ. ಆಗ ಅವರು ಚಿಕಿತ್ಸೆಗಿಂತಲೂ ನಿರೋಧ ಕಾರ್ಯವೇ ಒಳ್ಳೆಯದೆಂದೂ ಈ ರೋಗವು ತಲೆದೋರುವುದಕ್ಕೆ ನಿದ್ರಾಭಂಗ, ಅಶಾಂತಿ ಮತ್ತು ಮಲಬದ್ಧತೆಗಳೇ ಕಾರಣವೆಂದೂ ಅದುದರಿಂದ ಇವುಗಳಿಂದ ದೂರವಿರಬೇಕೆಂದೂ ಸಲಹೆಯೊಯ್ಯುತಿದ್ದರು. ಆಗ ಅವಿವಾಹಿತನಾಗಿದ್ದ ನನ್ನನ್ನು ಮದುವೆಯೊಡೊಡನೆಯೇ ತಲೆಸಿಡಿತ ತಾನಾಗಿಯೇ ದೂರನಾಗುವುದೆಂದು ವಿನೋದವಾಡುತಿದ್ದರು. ಡಾ। ಪೈಯವರ ಬಳಿಗೆ ಹೋಗುವುದೆಂದರೆ, ಒಬ್ಬ ಪ್ರತಿಭಾ ಸಂಪನ್ನ ಗುರುವಿನ ಬಳಿಗೆ ಹೋದಂತೆ ಅವರು ಪ್ರತಿಸಲವೂ ಏನಾದರೊಂದು ಹೊಸ ವಿಚಾರವನ್ನು ತಿಳಿಸುತ್ತಲೇ ಇದ್ದರು. ಈ ವಿಚಾರ ನೈಪುಣಿಯಿಂದ ನಾನು ಆಕರ್ಷಿತನಾಗಿ ಮತ್ತೂ ಮತ್ತೂ ಅವರನ್ನು ಕಾಣಲು ಬಯಸುತ್ತಿದ್ದೆ. ಅವರು ವ್ಯಕ್ತಪಡಿಸಿದ ವಿಚಾರ ಧಾರೆಗಳಿಂದ ನಾನು ಸ್ಫೂರ್ತಿ ಪಡೆದಿದ್ದೇನೆ. ತಾರುಣ್ಯದಲ್ಲಿಯೇ ವಿವಾಹಿತನಾಗಬೇಕು, ಗಳಿಸಿ ಉಳಿಸುವ ಪ್ರವೃತ್ತಿ ಬೆಳೆಯಬೇಕು, ನಾಲ್ಕುಜನ ಸನ್ಮಿತ್ರರನ್ನು ಸಂಪಾದಿಸಬೇಕು, ಜೀವ ವಿಮೆಯಿಳಿಸ ಬೇಕು ಎಂದು ಅವರು ಹೇಳುತಿದ್ದರು.

ಮಣಿಪಾಲದ ಬೋಳು ಗುಡ್ಡೆಗೆ ನನ್ನನ್ನು ಅವರು ಆಗಾಗ ಕರೆದುಕೊಂಡು ಹೋಗುತಿದ್ದರು. ಆ ಮೊರಡಿಯ ಭೂಮಿಯನ್ನು ಮಾಣಿಕ್ಯದ ತವರನ್ನಾಗಿ ರೂಪಾಂತರಿಸಲು ಅವರು ಯೋಚಿಸಿದ್ದ ಹಲವಾರು ಯೋಜನೆಗಳನ್ನು ನನಗವರು ವಿವರಿಸಿ ಹೇಳುತಿದ್ದರು. ಆದರೆ, ಅವರು ಅಂದು ಯೋಚಿಸಿದ್ದ ಯೋಜನೆಗಳು ಇಂದು ಮಣಿಪಾಲದಲ್ಲಿ ಕಾಣುತ್ತಿಲ್ಲ; ಬದಲಿಗೆ ಅವುಗಳ ಬಹಳ ವಿರಾಟ್ ರೂಪವು ದೃಷ್ಟಿಗೋಚರವಾಗುತ್ತಿದೆ. ಅವರ ಕನಸಿನ ಸುವಿಸ್ತೃತ ರೂಪವಿಂದು ಅಲ್ಲಿ ನೆನೆಸಾಗಿದೆ. ಕಲ್ಲಿನ ಗುಡ್ಡೆ ಮಾಣಿಕ್ಯದ ಗಡ್ಡೆಯಾಗಿದೆ ಇದನ್ನು ದೈವೀಕೃಪೆಯೆನ್ನಲಿಮತ್ತೇನೆನ್ನ ಬೇಕು?

ಅಂದಿನಿಂದಲೂ ನಾವು ಪರಸ್ಪರರನ್ನು ಆಗಾಗ ಭೆಟ್ಟಿಯಾಗುತ್ತೇವೆ. ಉಭಯತರಲ್ಲಿ ಪರಸ್ಪರ ಪ್ರೀತಿಭಾವಗಳು ಬೆಳೆದು ಬಂದಿವೆ. ಉಡುಪಿಯಲ್ಲಿ ಸಾಹಿತ್ಯಿಕ ಕಾರ್ಯಕ್ರಮಗಳೊಂದೂ ನಡೆಯದ ಅಲಾಲದಲ್ಲಿ ನಾವು ಇಂತಹ ಕಾರ್ಯಕ್ರಮಗಳನ್ನು ಮಾಡಲು ಮುಂದೆ ಬಂದಾಗ, ಡಾ। ಪೈಯವರು ತಮ್ಮ ಮನಃಪೂರ್ವಕವಾದ ಸಹಾಯವನ್ನೂ, ಪ್ರೋತ್ಸಾಹವನ್ನೂ ತಪ್ಪದೆ ನೀಡುತಿದ್ದರು. ೧೯೩೫ರಲ್ಲಿ ದಿವಂಗತ ಎ. ಬಿ. ಶೆಟ್ಟಿರಿಂದ ಮುಂಬಯಿಯಲ್ಲಿ ಸ್ಥಾಪಿತವಾಗಿ ಅಲ್ಲೇ ೧೫ ವರ್ಷ ಕಾಲ ಪ್ರಕಟವಾಗುತ್ತಿದ್ದ 'ನವಯುಗ' ವಾರಪತ್ರಿಕೆಯನ್ನು ೧೯೩೬ರಲ್ಲಿ ಅದರ ಪ್ರಕಟಣಾ ಭಾರವನ್ನು ಸಂಪಾದಕರಾಗಿದ್ದ ಶ್ರೀ ಕೆ. ಕೆ. ಶೆಟ್ಟರು ವಹಿಸಿ ಉಡುಪಿಗೆ ಬಂದಾಗ, ನಾವು ಆ ಸಂಬಂಧದಲ್ಲಿ ಡಾ। ಪೈಯವರನ್ನು ಭೇಟಿಯಾದೆವು. ಆಗ ವಾರಪತ್ರಿಕೆಗಳೇ ಇಲ್ಲದಿದ್ದ ಉಡುಪಿಗೊಂದು ಪತ್ರಿಕೆ ಬೇಕುಎಂದುಇದನ್ನು ಸ್ವಾಗತಿಸಿ, ನಮ್ಮನ್ನು ಹುರಿದುಂಬಿಸಿ, ಅಂದಿನಿಂದ ಇಂದಿನ ವರೆಗೂ ಇವರು ತಮ್ಮ ಉದಾರ ಸಹಾಯವನ್ನು ನೀಡುತ್ತ ಬಂದಿದ್ದಾರೆ.

೧೯೩೬ನೇ ದಶಂಬರಾಂತ್ಯದಲ್ಲಿ ನಾನು ಕರಿಣ ಟ್ಯೂಬೋಯ್ಡ್ ಕಾಯಿಲೆಯಲ್ಲಿ ಬಿದ್ದೆ. ಆ ಗಾಗಲೇ ಚಿರಪರಿಚಿತರಾದ ಡಾ। ಪೈಯವರು ನನ್ನ ಚಿಕಿತ್ಸೆ ನಡೆಸುತಿದ್ದರು. ರಾತ್ರೆ ಹಗಲಾಗುವುದೇ ಕಷ್ಟವೆಂಬ ಗಂಭೀರ ಪರಿಸ್ಥಿತಿಯಲ್ಲಿ ನಾನು ೨—೩ ತಿಂಗಳುಗಳಕಾಲ ಹಾಸಿಗೆ ಹಿಡಿದಿದ್ದಾಗ ಅಲಸದೆ ದಿನಕ್ಕೆ ಎರಡು ಮೂರು ಬಾರಿ ಮನೆಗೆ ಬಂದು ನನ್ನನ್ನು ಕಂಡು ಹೋಗುತಿದ್ದ ಡಾಕ್ಟರರು ಪೈ. ಕರಿಣದ ಒಂದು ರಾತ್ರೆ ಕಾಯಿಲೆ ವಿಪರೀತಗೊಂಡರೆ, ತನಗೆ ಹೇಳಕಳಿಸಬೇಕೆಂದು ಅವರು ತಮ್ಮ ಸ್ವಂತ ಕಾರನ್ನೂ ಕಾಯಲು ಕಳುಹಿಸಿಕೊಟ್ಟಿದ್ದರು ಒಬ್ಬಾಕೆ ನರ್ಸನ್ನು ಶುಶ್ರೂಷೆಗಾಗಿ ನನ್ನ ಬಳಿಯೇ ಬಿಟ್ಟಿದ್ದರು. ಅವರು ದಿನವೂ ನನ್ನನ್ನು ನೋಡಲು ಬರುತಿದ್ದುದನ್ನು ಕಂಡ ಜನರು 'ಏನಪ್ಪಾ ಡಾ। ಪೈಯವರಿಗೆ ಹೊನ್ನಯ್ಯ ಶೆಟ್ಟರ ಮೇಲೆ ಇಷ್ಟೊಂದು ಪ್ರೀತಿ?' ಎಂದಿದ್ದರೆಂದೂ ಶ್ರೀಮಂತರು ಒಬ್ಬ ಸಾಮಾನ್ಯ ರೋಗಿಯ ಕುರಿತು ಇಷ್ಟು ಆಸ್ಥೆ ವಹಿಸಿದ್ದನ್ನು ಕಂಡು ಬೆರಗಾಗಿದ್ದರೆಂದೂ ಕೇಳಿದ್ದೇನೆ. ಕಾಂಚನಯುಗದಲ್ಲಿ ಇಂತಹ ಉದ್ಗಾರಗಳು ವಿಚಿತ್ರವೆನಿಸಲಾರವು. ಆದರೆ, ಡಾ। ಪೈಯವರ ಜಯದ ಮೂಲವೇ ಇಂತಹ ಪ್ರೇಮ ಸಂಬಂಧವೆಂದು ನಾನು ದೃಢವಾಗಿ ಹೇಳಬಲ್ಲೆ.

ಆ ಸಮಯದಲ್ಲಿ ಡಾ। ಪೈಯವರ ಡಿಸ್ಪೆನ್ಸರಿಯಲ್ಲಿ ಸಹಾಯಕ ಲೇಡಿ ಡಾಕ್ಟರರೊಬ್ಬರಿದ್ದರು. ನನ್ನ ಸಂಬಂಧವನ್ನು ಹೆಚ್ಚಿನ ಆಸಕ್ತಿ ವಹಿಸಿ ಬೇಕೆಂದವರು ಆ ಲೇಡಿ ಡಾಕ್ಟರರಿಗೆ ತಿಳಿಸಿದ್ದರು. ನಾನು ವಿಸ್ಮೃತಾವಸ್ಥೆಯಲ್ಲಿದ್ದ ಒಂದು ರಾತ್ರೆ ಅವರಿಗೆ ಜನ ಹೋದಾಗ ಅವರು 'ಜಟ್ಟಿ ಕಾ ತನ್ನಿ, ಕಾರು ತನ್ನಿ, ಎಂದರಂತೆ. ಮರುದಿನ ಈ ಸಂಗತಿ ಡಾ। ಪೈಯವರಿಗೆ ತಿಳಿದಾಗ, ಅವರು ತಮ್ಮ ಸಹಾಯಕರಿಗೆ 'ಇಷ್ಟೊಂದು ಸಮೀಪ (ಸುಮಾರು ಒಳ್ಳಾಂಗ್) ಹೋಗಲು ನಿಮಗೆ ನಾಕಸ್ಸು ಬೇಕಾಯಿತೆ? ಬಂದ ಜನ ಹಿಂದೆ ಹೋಗಿ ವಾಹನ ತರುವಷ್ಟರೊಳಗೆ ನಿಮಗೆ ರೋಗಿಯ ಬಳಿಗೆ ಹೋಗಬಹುದಿತ್ತು"ಎಂದು ನಿಷ್ಠುರದ ಮಾತಾಡಿದ್ದರೆಂದು ಆ ಮೇಲೆ ತಿಳಿದು ನನ್ನ ಮೇಲೆ ಅವರಿಟ್ಟಿದ್ದ ಅಭಿಮಾನವನ್ನು ಕಂಡು ಚಕಿತಗೊಂಡಿದ್ದೆ.

ಆ ಸಮಯದಲ್ಲಿ ವೃತ್ಯವಿನೋದಕ್ಕೆ ಹೋಗಾಟ ನಡೆಸುತಿದ್ದ ನನ್ನ ಸಹಾಯಕ್ಕೆ ಸಿದ್ಧ ಹಸ್ತರಾಗಿ ಬಂದು, ಯಮದೇವತೆಯಿಂದ ನನ್ನನ್ನು ಮರಳಿ ಈ ಭೂಲೋಕಕ್ಕೆ ತಂದವರು ಡಾ। ಪೈಯಂದು ಅಭಿಮಾನದಿಂದ ನಾನು ಹೇಳಬಯಸುತ್ತೇನೆ. ಅವರಿಂದಾಗಿಯೇನಾನೊಟ್ಟು ಜನವಾಗಿದ್ದೇನೆಂದು ಹೇಳಲುಯಾವಸಂಕೋಚವೂ ನನಗಿಲ್ಲ ೫-೬ ತಿಂಗಳ ನಂತರ ಒಂದು ದಿನ ತುಂಬಿದ ಹೃದಯದಿಂದ ಅವರ ಸೇವೆಗೆ ಕೃತಜ್ಞತೆ ಸೂಚಿಸಲು ಸಮಾರಂಭವೊಂದನ್ನು ಏರ್ಪಡಿಸಿ ಎರಡು ಕೃತಜ್ಞತೆಯ ಮಾತುಗಳನ್ನಾಡಿದೆ. ಆ ಸಂದರ್ಭದಲ್ಲಿ ಡಾ। ಪೈ; "ನಾನೇನೂ ಮಹತ್ವದ ಕೆಲಸ ಮಾಡಲಿಲ್ಲ. ಒಬ್ಬ ನೈಜ ವೈದ್ಯನ ನೀಡಬಲ್ಲ ಸೇವೆಯನ್ನಷ್ಟೇ ನಾನು ಸಲ್ಲಿಸಿದ್ದೇನೆ. ಈ ಸೇವೆಗೆ ದೈವಾನುಗ್ರಹ ದೊರೆಯಿತು; ಅಷ್ಟೆ" ಎಂದು ಹೇಳಿದ್ದರು. ಇದರಿಂದ ಪೈಯವರೆಷ್ಟು ನಿರಹಂಕಾರಿಯೆಂ

ಗೌಹಾತಿ ವಿಶ್ವವಿದ್ಯಾಲಯದ ವಿದ್ಯಾರ್ಥಿನಿಯರು ಅಂತರ್ ವಿಶ್ವವಿದ್ಯಾನಿಲಯ ಯುವಜನೋತ್ಸವವೊಂದರಲ್ಲಿ ಸಾಮೂಹಿಕ ನೃತ್ಯವನ್ನು ಪ್ರದರ್ಶಿಸುತ್ತಿದ್ದಾರೆ.

ಮುಖಪೃಷ್ಠ

ಬಲಿ ಮತ್ತು ವಾಮನರೂಪೀ ವಿಷ್ಣು

ಉತ್ತರ ಪ್ರದೇಶದ ಲಕ್ನೋದಲ್ಲಿರುವ ರಾಜ್ಯ ವಸ್ತು ಸಂಗ್ರಹಾಲಯವು ೧೮೬೫ರಲ್ಲಿ ಸ್ಥಾಪನೆಗೊಂಡಿತ್ತು. ಇಲ್ಲಿ ಪ್ರಾಚ್ಯ ವಸ್ತುಗಳು, ನಾಣ್ಯಗಳು, ಮೊದಲಾದುವುಗಳ ನಾನಾ ಸಂಗ್ರಹಗಳಿವೆ. ಸುಮಾರು ೧೫ನೆಯ ಶತಮಾನದಿಂದ ೧೬ನೆಯ ಶತಮಾನದ ಮಧ್ಯಾವಧಿಯ ವರೆಗಿನ ವರ್ಣ ಚಿತ್ರಗಳ ಸಂಗ್ರಹವೂ ಇಲ್ಲಿದೆ ಈ ಚಿತ್ರವು ೧೬ನೆಯ ಶತಮಾನದಲ್ಲಿ ರಚಿತವಾಗಿದ್ದು ಈ ಸಂಗ್ರಹಾಲಯದಲ್ಲಿರುವ ವರ್ಣ ಚಿತ್ರದ ಪ್ರತಿರೂಪವಿದೆ.

ಹರಿವಂಶ ಪುರಾಣವೆಂಬ ಪುರಾಣ ಗ್ರಂಥವು ಭಾರತೀಯರಿಗೆ ಪ್ರಿಯವಾಗಿದೆ ಇದು ೧೬ನೆಯ ಶತಮಾನದಲ್ಲಿ ಆಗಿನ ಮೊಗಲ ಅರಸರ ಉದಾರತೆಯಿಂದ ಪಾರಸಿ ಭಾಷೆಗೆ ಅನುವಾದಗೊಂಡಿತು. ಈ ಅನುವಾದದ ಹಸ್ತಪ್ರತಿಯಲ್ಲಿರುವ ಬಲಿ ಮತ್ತು ವಾಮನ ರೂಪೀ ವಿಷ್ಣು ಇವರ ನಡುವಿನ ಭೇಟಿಯೊಂದನ್ನು ಚಿತ್ರಿಸಿರುವುದನ್ನು ಇಲ್ಲಿ ನೋಡಬಹುದು. ಇದೇ ಬಗೆಯ ವಿವಿಧ ಕಲಾ ಚಿತ್ರಗಳು ಭಾರತದ ಬೇರೆ ಬೇರೆ ವಸ್ತು ಸಂಗ್ರಹಾಲಯಗಳಲ್ಲಿವೆ. ಭಾರತೀಯರ ಕಲಾರಾಧನೆಯು ಆಳ ನಮುಗಿದರಿಂದ ವ್ಯಕ್ತವಾಗುವುದಿಲ್ಲವೆ?



ಡಾ| ಟಿ ಮಾಧವ ಸೈ, ಎಂ. ಬಿ., ಬಿ. ಎಸ್.

ುದನ್ನು ನಾವು ತಿಳಿಯಬಹುದು. ಈ ಘ ನೆಯಿಂದ ನಮ್ಮ ನಡುವಣ ಪ್ರೀತಿ-ವಿ ಶ್ವಾಸಗಳು ಮತ್ತಷ್ಟು ಬಲವಾದುವು; ಬ ಾತು ಬೆಳೆದವು.

ನೊಂದಾರು ಬಾರಿ ನನ್ನನ್ನು ಸಂದರ್ಶಿ ದ್ದರೂ ಡಾ| ಸೈ ಆ ಬಗ್ಗೆ ಒಂದು ಚಿ ಹ್ನೆಯನ್ನೂ ಸ್ವೀಕರಿಸಲಿಲ್ಲ. ಸಾಮಾನ್ಯ ನರ ಬಗ್ಗೆ ಡಾ| ಸೈಯವರು ಅತಿ ಉ ದಾರತೆಯನ್ನು ತೋರುತ್ತಿದ್ದರೆಂಬುದಕ್ಕೆ ದೊಂದು ನಿದರ್ಶನ.

೧೯೩೫ರಲ್ಲಿ ಸಿಂಡಿಕೇಟ್ ಬೇಂಕು ಸ್ಥಾಪನೆಗೊಂಡಿತ್ತು. ಪ್ರಾರಂಭದಿಂದ ಯೂ ಫೌಂಡರ್-ಡೈರೆಕ್ಟರ್ ಆಗಿದ್ದ ಡಾ| ಸೈಯವರು ೧೯೩೯ರಲ್ಲಿ ಇದರ ಜೇಯರ್ ಮೇನ್ ಮತ್ತು ಮೆನೇಜಿಂಗ್ ಡೈರೆಕ್ಟರ ಾದರು. ಮುಂದೆ ವೃತ್ತಿಯಲ್ಲಿ ವೈದ್ಯರಾ ದ ಡಾ| ಸೈ ಬೇಂಕರ್ ಸೈಯೂದರು. ನಾಮನ ರೂಪದಲ್ಲಿದ್ದ ಸಿಂಡಿಕೇಟ್ ಬೇಂಕು ತ್ರಿವಿಕ್ರಮಾವತಾರಿಯಾಗಿ ಇಂ ದು ದಕ್ಷಿಣ ಭಾರತದ ತುಂಬ ತನ್ನ ಶಾಖೆ ಗಳನ್ನು ಹರಡಿಸಿ ಉತ್ತಮ ಹಾಗೂ ಸ ರ್ವ ರೀತಿಯ ಸಮರ್ಥ ಬೇಂಕಿಂಗ್ ಸೇವೆ ಯನ್ನು ಸಲ್ಲಿಸುತ್ತಿರುವುದಕ್ಕೆ ಡಾ| ಸೈಯ ವರ ಅನವರತ ಶ್ರದ್ಧಾಶಕ್ತಿಸಹಿತ ಸೇವೆ ಯೇ ಕಾರಣ ಇದೇ ಮುಂದಿನವರಿಗೆ ಮಾರ್ಗದರ್ಶನ ಗ್ರಾಮೀಣ ಜನತೆಯಲ್ಲಿ, ಯೂ ಬೇಂಕಿಂಗ್ ಅಭಿರುಚಿ ಹುಟ್ಟಿಸಬೇ ಕೆಂಬ ಉದ್ದೇಶವಿರುವ ಈ ಬೇಂಕು ಎಳ ವೆಯಲ್ಲಿಯೇ ಹಳ್ಳಿ ಹಳ್ಳಿಗಳಲ್ಲಿ ತನ್ನ ಶಾಖೆಗಳನ್ನು ತೆರೆದಿದೆ; ಇದಕ್ಕೆ ಡಾ| ಸೈ ಯವರ ದೂರಾಲೋಚನೆಯೇ ಕಾರಣ ಹೀಗಿಯೇ ವಿಮಾಸಂಸ್ಥೆ ಮತ್ತಿತರ ವಾಣಿ ಜ್ಯ ಸಂಸ್ಥೆಗಳ ಸ್ಥಾಪನೆ—ಬೆಳವಣಿಗೆಯ ಲ್ಲಿ ಡಾ| ಸೈಯವರ ಕೈವಾಡ ಸರ್ವಾ ಪ್ತ ಪ್ರಮಾಣದಲ್ಲಿ ಕಾರ್ಯನಿರತವಾಗಿದೆ.

ಇಂದು ಸರ್ವ ಸಮ್ಮತಿತವಾದ 'ಎಕೆ ಡಮಿ ಆಫ್ ಜನರಲ್ ಎಜುಕೇಶನ್' ಸಂ ಸ್ಥೆಯು ಪ್ರಾಥಮಿಕ-ಮಾಧ್ಯಮಿಕ ಶಾಲೆ ಗಳನ್ನೂ ಕಾಂತೇಜುಗಳನ್ನೂ ನಡೆಸಿಕೊಂ ಡು ಒರುತ್ತಿದೆ ಲಲಿತಕಲಾಶಾಲೆಯನ್ನೂ ಸ್ಥಾಪಿಸಿದೆ. ಈ ಸಂಸ್ಥೆಯ ಉದ್ದೇಶ ಮೊ ದಲು ಹೀಗಿರಲಿಲ್ಲ. ನಮ್ಮ ಜಿಲ್ಲೆಯಲ್ಲಿ ವಿದ್ಯಾಭ್ಯಾಸವನ್ನು ಅರ್ಥದಲ್ಲಿಯೇ ಕಾರ ಣಾಂತರಗಳಿಂದ ನಿಲ್ಲಿಸಿಬಿಡುವ ತರುಣ ರಿಗೆ ಅವರವರ ಅಭಿರುಚಿಗೆ ಸರಿಯಾಗಿ ಜೀವನೋಪಾಯದ ಒಂದಲ್ಲ ಒಂದು ಸೌ ಕರ್ಯವನ್ನು ಒದಗಿಸಬೇಕು ಎಂಬುದು ಡಾ| ಸೈಯವರ ಮನೀಷೆಯಾಗಿತ್ತು. ಆ ದರೆ, ಇಂದು ಆ ಉದ್ದೇಶದ ತಿರುವು ಮುರುವನ್ನು ನಾವು ಕಾಣುತ್ತೇವೆ ಕಲ್ಲಿ ನ ಗುಡ್ಡೆಯನ್ನು ಬೆಳ್ಳಿಯ ಗಡ್ಡೆಯನ್ನಾಗಿ ರೂಪಾಂತರಿಸಿದ ಡಾ| ಸೈಯವರಲ್ಲಿ ಜಾ ದೂ ವಿದ್ಯೆಯಿದೆಯೆಂದೇ ತಿಳಿಯಬೇಕಾ ಗುತ್ತದೆ. ಅವರು ಮುಟ್ಟಿದ್ದೆಲ್ಲ ಚಿನ್ನ ವೆಂಬಂತಾಗಿದೆ ಇದು ಅವರ ಸುಕೃತ ಫಲ ೧೯೪೪ರಲ್ಲಿ ಮಹಾತ್ಮಾ ಗಾಂಧೀ ಮೆಮೋರಿಯಲ್ ಕಾಲೇಜು ಸ್ಥಾಪನೆ ಯೂ ಯಿತು. ಮುಂದೆ ಮೆಡಿ ಕಲ್ ಕಾಲೇಜು ರೂಪಗೊಂಡಿತು. ಡಾ| ಸೈ ಕರ್ಮಚಾರಿಗಳು, ಸಾಹಸಿಗಳು, ದೂರಾಲೋಚಕರು, ಎಂಟೆದೆಯ ಬಂಟ ರು ಎಂಬುದು ಅಕ್ಷರಶಃ ನಿಜ, ಜನತೆಗೆ ಸರ ಳರೂ ನಿಗರ್ವಿಗಳೂ ಹೌದು.

ಜಾತಿ ಭೇದದ ಭಾವ ನಮ್ಮ ಸಮಾಜ ದಲ್ಲಿ ದೃಢವಾಗಿ ಬೇರೂರಿದ್ದ ಕಾಲದಲ್ಲಿ ನನ್ನ—ಅವರ ಪರಿಚಯವಾಗಿತ್ತು. ಆದ ರೆ, ನಮ್ಮಿಬ್ಬರ ವ್ಯವಹಾರವಲ್ಲಾಗಲೀ, ತಿಂಡಿ—ತೀರ್ಥಗಳಲ್ಲಾಗಲಿ ಈ ಭೇದ ಸೋಕಲಿಲ್ಲ. ಇಂದು ಕಟ್ಟುಕಟ್ಟಲೆಗಳು ಸುಧಾರಣೆಗೊಂಡಿವೆ ನಿಜ, ಆದರೆ, ಹುಟ್ಟಿ ನಿಂದಲೇ ಸುಧಾರಕರಾಗಿ ಬಂದವರು ಡಾ| ಸೈ ಎಂದು ಎದೆತಟ್ಟಿ ಹೇಳಬಹುದು ಈ ಪ್ರವೃತ್ತಿಯಿಂದಾಗಿಯೇ ಅವರು ಎಲ್ಲರ ಸಹಕಾರವನ್ನು ಪಡೆದಿದ್ದಾರೆ. ಎಂಜಿನಿಯ ರಿಂಗ್ ಕಾಲೇಜ್, ಲಾ ಕಾಲೇಜ್ ಮೊ ದಲಾದ ಶೈಕ್ಷಣಿಕ ಸಂಸ್ಥೆಗಳ ಸ್ಥಾಪನೆ ಹಾಗೂ ಮತ್ತಿತರ ಔದ್ಯಮಿಕ ಕ್ಷೇತ್ರಗ ಳಲ್ಲಿ ಅವರು ಜಯಶೀಲರಾಗಿದ್ದಾರೆ

ಯಾವುದೇ ಒಂದು ಹೊಸ ವಿಚಾರ ಹೊಳೆದೊಡನೆಯೇ ಅದನ್ನು ನಾಲ್ಕು ಜ ನರಿಗೆ ತಿಳಿಸಿ, ಆ ಸಂಬಂಧದಲ್ಲಿ ಚರ್ಚೆ ನಡೆಸುವ ಪ್ರವೃತ್ತಿ ಇವರದು ಈ ಚರ್ಚೆ ಮುಚ್ಚುಮರೆಯಿಲ್ಲದೆ ಬಿಚ್ಚು ಮನಸ್ಸಿ ನಿಂದ ನಡೆಯುತ್ತದೆ ನಿಷ್ಕಲ್ಮಶ ಮನ ಸ್ಸಿನ ಈ ಒಗೆಯ ಚರ್ಚೆ ಗಳಿಂದ ಡಾ| ಸೈಯವರಿಗೆ ತುಂಬ ತೃಪ್ತಿ ಲಭಿಸುವುದೆಂದು ನಾನು ತಿಳಿದಿದ್ದೇನೆ. ಯಾವುದೇ ಸಂದರ್ಭದಲ್ಲಿ ಬೇರೆಯವರ ನ್ನು ದ್ವೇಷಿಸುವುದು, ನಿಂದಿಸುವುದು ಇವ ರಿಗೆ ಒಗ್ಗದ ವಿಚಾರ. ಪರರಲ್ಲಿರುವ ಸ ದ್ಗುಣಗಳನ್ನು ಮೆಚ್ಚಿ ಸ್ವೀಕರಿಸುವುದು ಜೀವನದ ಯಶಸ್ವಿತೆಯ ಅಡಿಗಲ್ಲೆಂದು ಇವರು ನೇಳುವುದು ಸಹಜ. ಹೊಗಳಿಕೆ ತೆಗಳಿಕೆಗಳನ್ನು ಏಕಸಮವಾಗಿ ಕಾಣುವು ವುದು ಇವರ ವೈಶಿಷ್ಟ್ಯ.

ಕೊನೆಯದಾಗಿ ಒಂದು ಮಾತು ಪ್ರತಿ ಯೊಬ್ಬ ಮನುಷ್ಯನಲ್ಲಿಯೂ ಒಂದಲ್ಲ ಒಂ ದು ಬಗೆಯ ದೋಷವಿರಬಹುದು. ಪಂಚ ಗಜ್ಜಾಯದಲ್ಲಾ ಕಲ್ಲು ಕಂಡುಬರಬಹು ದು ನದೆಯುವವರು ಮಾತ್ರ ಎಡವಿಬೀ ಳುವುದುಂಟು ಕೆಲಸ ಮಾಡುವವನ ಮೇ ಲೆ ಮಾತ್ರ ಟೀಕೆ ಟಿಪ್ಪಣಿಗಳು ಹುಟ್ಟುತ್ತವೆ, ಮಾಡದಿರುವವ ನ ಮೇಲಲ್ಲ—ಇದು ಸ್ವಾಭಾವಿಕ, ಅಗ ಣ್ಯ. ಡಾ|ಸೈಯವರಿಂದ ಸ್ಫೂರ್ತಿಗೊಂಡ ಹಲವು ಇವರ ಮಾರ್ಗದಲ್ಲೇ ಮುನ್ನ ಡೆಯುತ್ತಿರುವುದನ್ನು ನಾವು ಕಾಣುತ್ತೇ ವೆ ಡಾ| ಸೈಯವರಿಂದ ಇಂದು ಸಾವಿ ರಾರು ಕುಟುಂಬಗಳ ಪೋಷಣೆ ನಡೆಯು ತ್ತಿದೆ. ಅವರೆಲ್ಲರೂ ಡಾ| ಸೈಯವರನ್ನು ನಿತ್ಯ ಸ್ಮರಿಸುತ್ತಾರೆ.

ಸಿಂಡಿಕೇಟ್ ಬೇಂಕಿನ ಮೆನೇಜಿಂಗ್ ಡೈರೆಕ್ಟರ್ ಪದವಿಯಿಂದ ನಿವೃತ್ತರಾದ ಡಾ| ಸೈ ತನ್ನಂತೆಯೇ ಸಮರ್ಥರನ್ನು ತರಬೇತಿಗೊಳಿಸಿದ್ದಾರೆ ಈಗ ಬೇಂಕಿನ ಡಿ| ಚೀಫ್ ಆಫೀಸರರಾಗಿರುವ, ಮುಂದೆ ಚೀಫ್ ಆಫೀಸರರಾಗುವ, 'ನವಯುಗ'ದ ಮೇಲೆ ಡಾ| ಸೈಯವರಂತೆಯೇ ವಿಶೇಷ ಗೌರವಾಭಿಮಾನವಿಟ್ಟಿರುವ ಶ್ರೀ ಟಿ ಎ ಸೈ ಯವರು ತನ್ನ ಮಾರ್ಗದರ್ಶಕರು ತೋರಿ ಸಿದ ದಾರಿಯಲ್ಲಿಯೇ ಮುನ್ನಡೆದು ಬೇಂ ಕಿನ ಅಭಿವೃದ್ಧಿ ಯನ್ನು ಸಾಧಿಸಲು ಸಮ ರ್ಥರಿದ್ದಾರೆ. ನಿವೃತ್ತರಾದ ಡಾ| ಸೈಯ ವರಿಗೂ ಉನ್ನತಪದವಿಗೇರುವ ಶ್ರೀ ಟಿ ಎ. ಸೈಯವರಿಗೂ ದೀಪಾವಳಿಯ ಈ ಸುಸಮಯದಲ್ಲಿ ಅವರ ಜೀವನವು ಶುಭ ಪ್ರದವಾಗಲೆಂದೂ ಅವರಿಂದ ಕನ್ನಡ ಜನ ಇನ್ನಷ್ಟು ಸ್ಫೂರ್ತಿ ಪಡೆಯುವಂತಾಗ ಲೆಂದೂ ಮನಸಾರೆ ಹಾರೈಸುತ್ತೇನೆ.

ಅದೃಷ್ಟಶಾಲಿ ಮಹಾಸಾಧಕ ಡಾ| ಟಿ ಮಾಧವ ಸೈಯವರ ಮಹತ್ವಾಧಿಸೆ ಗಳ ಕುರಿತಾದ ಬೃಹದಾಕಾರದ ಸಚಿತ್ರ ಗ್ರಂಥವೊಂದನ್ನು ಪ್ರಕಟಿಸುವ ಯೋಜ ನೆಯೊಂದು ನಮ್ಮ ಮುಂದಿದೆ.

—ಸಂಪಾದಕರು.

ಗಣರಾಜ್ಯ ದಿನೋತ್ಸವದ ವೇಳೆ ರಾಜಧಾನಿಯಲ್ಲಿ ಈ ವರ್ಷ ಮಹಾರಾಷ್ಟ್ರದ ವಿವಿಧ ಜಿಲ್ಲೆಗಳ ಸಂಗಡದವರು ತಮ್ಮ ಜೀವನಕ್ಕೆ ಸಂಬಂಧಿಸಿದ ಒಂದು ನೃತ್ಯವನ್ನು ಅಭಿನಯಿಸಿದರು

ನಮ್ಮ ಶುಭಾಶಯಗಳು

ಪ್ಲವ ಸಂವತ್ಸರದ ದೀಪಾವಳಿಯು ನಮ್ಮ ಪರಮ ಪ್ರೋತ್ಸಾಹಕರಾದ ಲೇಖಕರು, ಚಂದಾದಾರರು, ಜಾಹೀರಾತುದಾರರು, ಒಡಗೂಡಿ ಬಂಧು ಭಗಿನಿಯರು ಮತ್ತು ಅಭಿಮಾನಿಗಳಿಗೆ ಮಾತ್ರವಲ್ಲದೆ ಸಮಸ್ತ ವಿಶ್ವಕ್ಕೆ ಸಂತೋಷಪ್ರದವಾಗಲಿ; ನವಚೇತನ ನವಜೀವನದ ಸವಿಯನ್ನು ಅವರಿಗೆ ಉಣ್ಣಿಸಿ ಸದಾ ನೀರೋಗಿಗಳೂ ಸದಾಚಾರಿಗಳೂ ಮಾನವತಾವಾದಿಗಳೂ ಆಗುವಂತೆ ಮಾರ್ಗದರ್ಶನ ಮಾಡಲಿ ಎಂದು ಮನಸಾರೆ ಹಾರೈಸುತ್ತೇನೆ.

—'ನವಯುಗ'

ಜನಪ್ರಿಯ ಮುಂದಾಳು—
ಡಾ| ಯು. ಸುಂದರರಾಮ ಪೈ



ಪ್ರಸಿದ್ಧ ಚಿತ್ರಕಲಾವಿದ ಶ್ರೀ ಕೆ ವಾಸುದೇವ ನಾಯ್ಕರ ಪುತ್ರ ಮಾಸ್ಟರ್ ಸತೀಶ ನಾಯ್ಕರು ಚಿತ್ರಿಸಿದ ಡಿ| ಡಾ| ಪೈಗಳ ಪೆನ್ಸಿಲ್ ಚಿತ್ರದ ರೂಪರೇಖೆ.

●

"ಅವರೆಂದೂ ಜನಪ್ರಿಯತೆಯನ್ನರಸಿಕೊಂಡು ಹೋಗದವರಲ್ಲ ಆದರೂ ಜನಪ್ರಿಯತೆ ಅವರ ಬೆಂಬತ್ತಿ ಬಂದಿತು."

ಡಿವಂ| ಡಾ. ಸುಂದರರಾಮ ಪೈ ಅವರ ಜೀವನೇತಿಹಾಸವನ್ನು ವರ್ಣಿಸುವುದು ಈ ಲೇಖನದ ಉದ್ದೇಶವಲ್ಲ, ಅವರ ಧ್ಯೇಯಪೂರ್ಣ ಜೀವನದ ಮಹತ್ವವನ್ನು ತಿಳಿಸುವುದಷ್ಟೇ ನನ್ನ ಉದ್ದೇಶ

ಅವರು ಉದಾತ್ತವಾದ ಆದರೂ ಸರಳವಾದ ಬಾಳನ್ನು ಬಾಳಿದರು. ಎಲ್ಲರಿಗೂ ಅವರ ಮೇಲೆ ಪ್ರೀತಿ, ವಿಶ್ವಾಸ, ಆದರ, ಗೌರವ ಅವರ ವಿಚಾರಗಳೆಲ್ಲವೂ ಉದಾತ್ತವಾಗಿರುತಿದ್ದುವು, ಅವರು ಮಾಡಿದ ಕೆಲಸಗಳೆಲ್ಲವೂ ಋಜುವಾಗಿರುತಿದ್ದುವು; ಅವರ ಮಾತುಗಳು ಸತ್ಯಮಯವಾಗಿರುತಿದ್ದುವು ಅವರ ಜೀವನವನ್ನು ಪರ್ಯಾಲೋಚಿಸಿದರೆ ಅದರಲ್ಲಿ ಆಧ್ಯಾತ್ಮದ ಒಂದು ಔನ್ನತ್ಯವು ನಮಗೆ ಗೋಚರವಾಗುವುದು ಸ್ವಾಭಾವಿಕವಾಗಿ ಅವರದು ಹೂವಿನಂತೆ ಮೃದುವಾದ ಮನಸ್ಸು, ಯಾರನ್ನೂ ನೋಯಿಸಲೊಲ್ಲದ ಸ್ವಭಾವ, ಅದರೆ ಉಚಿತಸಂದರ್ಭಗಳಲ್ಲಿ ಅವರನ್ನು ಅಚಲರೂ, ನಿಸ್ಪೃಹರೂ ಯಾರೂ ಇರಲಿಲ್ಲವೆನ್ನಬಹುದಾಗಿತ್ತು. ಕುಸುಮದಂತೆ ಕೋಮಲ, ಅದರೂ ವಜ್ರಾದಪಿ ಕಠೋರ ಎಂಬ ಮಾತು ಅವರಿಗೆ ಅನ್ವಯವಾಗುವುದು. ಅವರೆಂದೂ ಜನಪ್ರಿಯತೆಯನ್ನರಸಿಕೊಂಡು ಹೋದವರಲ್ಲ ಅದರೇನು ಜನಪ್ರಿಯತೆ ಅವರನ್ನರಸಿಕೊಂಡು ಅವರ ಬಳಿ ಸಾರಿತು.

ತಾನು ಮುಂದಾಳಾಗಬೇಕೆಂದು ಅವರೆಂದೂ ಬಯಸಲಿಲ್ಲ. ಅದರೆ ಜನ ಅವರನ್ನು ಮುಂದಿಟ್ಟು ತಾವು ಹಿಂದಾಗಿ, ಅವರೊಡನೆ ಸೇರಿ ದುಡಿದರು. ಅವರ ನ್ಯಾಯ, ಅವರ ಸನ್ಮತಿ—ಇದರಿಂದ ಅವರಿಗೆ ಜನತೆ ಗೌರವ ಸಲಿಸುತಿತ್ತು. ಪ್ರತಿಯೊಬ್ಬನನ್ನೂ ಅವನ ಗುಣದ ಮೂಸದಿಂದಲ್ಲದ, ಅವನ ಇತರ ವರ್ಚಸ್ಸುಗಳ ಮೇಲಿಂದ ಅವರು ಅಳೆಯುತ್ತಿದ್ದಿಲ್ಲ. ಇತರರ ತಪ್ಪನ್ನು ಹುಡುಕಿ ತೋರಿಸಿ ಅವರನ್ನು ತಿದ್ದುವ ಕೆಲಸ ಅವರು ಮಾಡಲಿಲ್ಲ, ಬದಲು ತಾವೇ ಸರಿಯಾದ ದಾರಿಯಲ್ಲಿ ನಡೆದು ಮೇಲ್ಪಂಗ್ತಿಯಿಂದ ತಿದ್ದ ತಿಳಿಸಿದರು

ಅವರು ಸರ್ವದಾ ಸತ್ಯವನ್ನೇ ನುಡಿಯುವವರೆಂದು ಸಮಾಜ ಅವರನ್ನು ಗೌರವಿಸಲು ಕಲಿಯಿ



ಬರೆದವರು:
ಡಾ| ಪಿ ಆರ್ ನಾಯಕ್,
ಎಂ. ಬಿ. ಬಿ ಎಸ್.

●

ತು ಸರಳತೆ ಅವರ ಜೀವನದ ಮೂಲತತ್ವವಾಗಿತ್ತು ಮನುಷ್ಯನ ಸರಳತೆ ಎಷ್ಟು ಮಹೋನ್ನತ ವ್ಯಕ್ತಿತ್ವವನ್ನು ಒಬ್ಬನಿಗೆ ಸಂಪಾದಿಸಬಲ್ಲುದೆಂಬುದಕ್ಕೆ ಡಾ ಪೈ ಸಾಕ್ಷಿ ಬೇರೆಯವರ ಬಗ್ಗೆ ಅವರಿಗಿದ್ದ ಕರುಣೆ, ಸಂತಾಸ, ಅತಿಶಯ, ಅವರ್ಣನೀಯ

ಭಗವದ್ಗೀತೆಯ ಆದರ್ಶವನ್ನು ಅವರು ಪಾಲಿಸಲು ಯತ್ನಿಸಿದರು ಮಹಾತ್ಮನಾಗಬೇಕೆಂಬ ಆಸೆಯಿಂದ ದುಡಿಯಬೇಡ, ಮಹಾತ್ಮನ ಗುಣಗಳನ್ನು ಸಂಪಾದಿಸಲು ದುಡಿ.

* ಎಡ್ವೋಕೇಟ್ ಶ್ರೀ ಎನ್ ಪಿ, ಕಾಮತರು ಪ್ರಕಟಿಸಿದ 'Memoirs of Dr U Sunder Ram Pai ಎಂಬ ಸ್ಮಾರಕ ಸಂಚಿಕೆಯ ಲೇಖನದ ಅನುವಾದ.

(೧೧ನೇ ಪುಟದಿಂದ)

ನೆಹರೂರವರು ಮೇಧಾವಿಗಳು, ಉತ್ತಮ ಲೇಖಕರು; ವಿಚಾರಪರರು ಇವೆಲ್ಲಕ್ಕಿಂತ ಮಿಗಿಲಾಗಿ ಅವರು ನಿಸ್ವಾರ್ಥ ದೇಶ ಪ್ರೇಮಿಗಳು. ದೇಶೋದ್ಧಾರಕ್ಕಾಗಿ ಅವರು ಸರ್ವವನ್ನೂ ತ್ಯಾಗ ಮಾಡಿದವರು ಅವರ ಪ್ರಾಮಾಣಿಕತೆ; ನಿರ್ಭಯ ಮನೋಭಾವ, ಮಾನವ ಪ್ರೇಮ, ಅವರನ್ನು ಜಗದ್ವಂದ್ಯರನ್ನಾಗಿ ಮಾಡಿವೆ ಭಾರತಕ್ಕೆ ಇಂತ ಮಹಾ ಪುರುಷರ ಸೇವೆಯು ಇನ್ನೂ ಆಗಬೇಕಾಗಿದೆ ಎಪ್ಪತ್ತೈರಡು ವರ್ಷದ ಮುದುಕರು ಇಪ್ಪತ್ತೈರಡರ ಹರೆಯದ ಯುವಕರಂತೆ ದುಡಿಯುತ್ತಿರುವುದು ನಮ್ಮ ಭಾಗ್ಯವೇ ಸರಿ. ಇನ್ನೂ ಅನೇಕ ವರ್ಷಗಳ ಕಾಲ ಅವರು ಬದುಕಿ ನಮಗೆಲ್ಲ ಮಾರ್ಗದರ್ಶನವಿತ್ತು, ಭಾರತವೇ ಅಲ್ಲ, ಇಡಿ ವಿಶ್ವದ ಉನ್ನತಿಗೆ ದಾರಿ ಮಾಡಿಕೊಡಲೆಂದು ಶ್ರೀ ದೇವರನ್ನು ಪ್ರಾರ್ಥಿಸೋಣ

'ಇದುವೆ ಜಗದ ನೀತಿಯು'

ಕೆ ರಮೇಶ ಪೈ

●

ಬಾಲೆಯೊಂದು ರೋದಿಸುತ್ತ
ಬೀದಿಗುಂಟ ಸಾಗುತಿತ್ತು!
ಪಥಿಕವರ್ಗವದನು ಕಂಡು
ಕಾಣದಂತೆ ಸರಿಯುತಿತ್ತು!

ಬಾಲೆಯಿವಳ ರೋದನಕ್ಕೆ,
ಮೂಲವೇನು ಅರಿಯಲಿಕ್ಕೆ,
ಹುಳುವದೊಂದು ಬಾರದ!
ಕರುಣ ನಯನ ತೆರೆಯದು!

ಅದರದುವೆ ಬಾಲೆ ಮೊಗದೆ
ಒಸಗೆಯದನು ತೋರಿ ಸೊಗದೆ,
ಸಾಗೆ, ನೆರೆವರೆಲ್ಲ ಭರದೆ
ಯಿವಳ ಸುಖದೆ ದಾಯವಡೆಯೆ!

ಜಗತು ನಗುವರೊಡನೆ ಬೆರೆತು,
ಮರುಳ ಪಡುವರೊಡನೆ ಹೊರತು,
ಸುಖದ ನಾಲ ಹೀರಿತು!
ದುಃಖವಲ್ಲಿ ಬಿಟ್ಟಿತು!

With our heartiest
Deepavali Greetings
We wish you a
Happy and Prosperous New Year

P.V.S. Beedies Private Ltd.
Registered Office, KODIALBAIL
MANGALORE-3

"LETTER WRITING MADE EASY"
(75 EVERY DAY LETTERS)
(Written by An Experienced Teacher.)
Useful to one and all the teacher, the student and the layman
Price Rs 1=25 (Postage extra)
If Rs 1=50 is sent by M O one copy will be sent by B P.
Copies can be had from the Publishers:
Navayuga Enterprise Ltd Udipi
and also from:
M/s Indian Industrials & Agencies, Mangalore-1
M/s Navabharat Book Depot, Udipi.

ಪಿಶಾಚಿಗಳ ಅಸ್ತಿತ್ವ

(೧೦ನೇ ಪುಟದಿಂದ)

ವ್ಯಾಪಾರಣವಾದ ವಿಷಯ. ಮಾನವರು ನೋಡುತ್ತಿರುವ ಹಾಗೆಯೇ ಆ ಬಿಸುಡಾಟ ನಡೆಯುತ್ತದೆ. ಆದರೆ ಈ ಸಂಧರ್ಭದಲ್ಲಿ ಕೆಲವು ವಿಚಿತ್ರ ಸಂಘಟನೆಗಳನ್ನು ಗಮನಿಸಲಾಯಿತು. ಅವುಗಳನ್ನು ಅಭ್ಯಸಿಸಬೇಕಾದ ಆಗತ್ಯ ಪರೀಕ್ಷಿಗಾಯಿತು

ವಿಚಿತ್ರವೇನೆಂದರೆ, ಯಾವ ವಸ್ತುವೇ ಆಗಲಿ, ಅದು ಇದ್ದ ಸ್ಥಳದಿಂದ ಕದಲುವುದನ್ನು ಗಮನಿಸಿದವರು ಮಾತ್ರ ಕಾಣುವುದಿಲ್ಲ. ನಾವು ಗಮನಿಸುವುದರೊಳಗೆ ಅದು ದಾರಿಯಲ್ಲಾದರೂ ಬಿದ್ದಿರುತ್ತೆ, ಗಮ್ಯ ಸ್ಥಳದಲ್ಲಾದರೂ ಇರುತ್ತೆ.

ಇನ್ನೊಂದು ವಿಚಿತ್ರವೆಂದರೆ, ಹಾಗೆ ಕದಲಿದ ವಸ್ತುಗಳು ಬಿಸುಟಲ್ಪಟ್ಟ ವಸ್ತುಗಳಂತೆ ಕಾಣುವುದಿಲ್ಲ. ಬಿಸುಟಲ್ಪಟ್ಟ ವಸ್ತುಗಳಾದರೆ ಬಿದ್ದ ಜಾಗದಲ್ಲಿ ನೇರಾಗಿರಲಾರವು; ಒಂದು ಬದಿಗೆ ಬಾಗಿಯೋ, ಸ್ವಲ್ಪ ದೂರ ಹೊರಳಿಯೋ ಇರಬೇಕಷ್ಟೆ? ಆದರೆ ಪಿಶಾಚಿಗಳು ಕದಲಿಸಿದ ವಸ್ತುಗಳು ಒಂದೆಡೆಯಿಂದ ಇನ್ನೊಂದೆಡೆಗೆ ಸೇರಿದಾಗ ಯಾರೋ ಎತ್ತಿ ಬೇಕಂತ ಇಟ್ಟಹಾಗೆ ನೇರವಾಗಿರುತ್ತವೆ.

ಇಷ್ಟೇ ಅಲ್ಲದೆ, ಆ ವಸ್ತುಗಳು ಬಿಸುಟಲ್ಪಟ್ಟ ವಸ್ತುಗಳಂತೆ ವೇಗವಾಗಿ ಕದಲದೆ ನೆಮ್ಮದಿಯಾಗಿಯೇ ಚಲಿಸುತ್ತವೆ. ಒಮ್ಮೊಮ್ಮೆ ಅವು ನೇರಾಗಿ ಚಲಿಸದೆ ಸುಧ್ಯವರ್ಗದಲ್ಲಿ ಇನ್ನೊಂದು ದಿಕ್ಕಿಗೂ ಹೋಗುತ್ತವೆ.

ಆಗಾಗ ಎಲ್ಲಿಂದಲೋ ಯಾವಾಗಲೋ ವಸ್ತುಗಳು ಮನೆಯೊಳಗೆ ಬಂದು ಬೀಳುವುದೂ ಉಂಟು. ಸುತ್ತು ಮುತ್ತೂ ಎಲ್ಲೂ ಇಲ್ಲದ ಇಟ್ಟಿಗೆ, ಜಲ್ಲಿಕಲ್ಲು ಮೊದಲಾದುವು ಮಾಡಿನಿಂದಲೂ, ಗೋಡೆಯ ಕಡೆಯಿಂದಲೂ ಮನೆಯೊಳಗೆ ಬೀಳುತ್ತವೆ. ಇನ್ನೂ ವಿಚಿತ್ರವೇನೆಂದರೆ, ಹೀಗೆ ಬಿದ್ದ ವಸ್ತುಗಳನ್ನು ಮುಟ್ಟಿದರೆ ಬೆಚ್ಚಗಾಗಿ ನಮ್ಮ ಕೈಗೆ ಚುಚ್ಚಿಸುತ್ತದೆ!

ನಮ್ಮ ಈ ಸಾಧಾರಣ ಪ್ರಪಂಚದೊಳಗಿದ್ದು, ಪಿಶಾಚಿಗಳ ಅನುಭವ ಸ್ವಲ್ಪ ಕೂಡಾ ಇಲ್ಲದವನಿಗೆ ಈ ಮೇಲಿನ ವಿವರಗಳನ್ನು ಕೇಳಿದರೆ ಕಟ್ಟು ಕಥೆಗಳಂತೆ ಅಸಂಭವವೆನಿಸೀತು. ಹೀಗೆಲ್ಲಾ ಆಗಲಾರದು ಎಂದು ತೋರೀತು. ಆದರೆ ಇದು ಪ್ರಪಂಚದೊಳಗೆಲ್ಲಾ ಎಲ್ಲಾ ಕಾಲಗಳಲ್ಲಿಯೂ ನಡೆಯುವ ವಿಷಯವಾಗಿದೆ. ೧೪ ಶತಮಾನಗಳ ವರೆಗೆ ಇಂತಹ ಸಂಘಟನೆಗಳನ್ನು ಬೇರೆ ಬೇರೆ ವ್ಯಕ್ತಿಗಳು ನಮೂದಿಸಿಕೊಂಡಿದ್ದಾರೆ. ನಮಗೆ ಅಸಂಭವವೆಂದು ಕಾಣುವಂಥವು ಅವರಿಗೆ ಸ್ವಾನುಭವ ವಿಷಯ. ನವ ಗೆ ಚರಿತ್ರೆಯ, ರೂಪದಲ್ಲಿ ಕಾಣುವ ವಿಷಯಗಳಿರುವಷ್ಟು ಪ್ರಬಲವಾದ ಸಾಕ್ಷಿಗಳು ಈ ಪಿಶಾಚಿಗಳ ವಿಷಯದಲ್ಲಿಯೂ ಇರುತ್ತವೆ. ಚಾರಿತ್ರಿಕ ಸತ್ಯಕ್ಕೆ ಸ್ವಲ್ಪ ಎಡಬಲಗಳಲ್ಲಿರುವುದಾದರೂ ನಂಬತಕ್ಕ ವಿಷಯಗಳೇ ಇವು ಕೂಡಾ. ಹಾಗಿದ್ದರೂ ಪ್ರತ್ಯಕ್ಷ ಸಿದರ್ಶನವಿಲ್ಲದೆಂಬ ಅವಿಶ್ವಾಸದಿಂದ ಅವನ್ನು ನಂಬದೇ ಹೋದರೆ, ತಪ್ಪು ನಮ್ಮ ಗ್ರಹಣ ಶಕ್ತಿಯದೆಂದೇ ಹೇಳಬೇಕಾಗುತ್ತದೆ.

ಜನರಿಗೆ ಪಿಶಾಚಿಗಳ ಇರುವಿಕೆಯನ್ನು ಕುರಿತು ಸಂದೇಹ ಬರಲು ಇನ್ನೊಂದು ಕಾರಣವೇನೆಂದರೆ, ಕೆಲವು ತಾಮಸಿಗಳು ಸ್ವಾರ್ಥಕ್ಕಾಗಿಯೋ, ಇನ್ನೊಬ್ಬರನ್ನು ಪೀಡಿಸಲಿಕ್ಕಾಗಿಯೋ, ಲೋಕವನ್ನು ವಂಚಿಸಿ ಆನಂದಿಸಲಿಕ್ಕಾಗಿಯೋ ಪಿಶಾಚಿಗಳ ಉನಿಕೆ ಇಲ್ಲದ ಮನೆಗಳಲ್ಲಿ ಕೂಡಾ ಪಿಶಾಚಿಗಳ ವಿಜೃಂಭಣೆಯನ್ನು ಕೃತ್ರಿಮವಾಗಿ ಸೃಷ್ಟಿಮಾಡಿದ ಸಿದರ್ಶನಗಳೆಷ್ಟೋ ಇವೆ. ಅಂತಹ ವಂಚಕರು ಸಿಕ್ಕಿಯೂಬಿದ್ದಿದ್ದಾರೆ. ಇಂತಹ ವಂಚನೆಗಳೊಂದಿಗೆ ನಿಜಕ್ಕೂ ಪಿಶಾಚಿಗಳ ಕೊಂಪೆಗಳಿರುವುದೂ, ಅವುಗಳಲ್ಲಿ ನಿಜಕ್ಕೂ ಪಿಶಾಚಿಗಳ ವಿಜೃಂಭಣೆ ನಡೆಯುವುದೂ ಇದ್ದೇ ಇದೆ. ಇಂತಹ ಮನೆಗಳನ್ನೂ, ಸೈರಾಚಕ ಪ್ರದರ್ಶನಗಳನ್ನೂ ಪರೀಕ್ಷಿಸಿದವರು ಪಿಶಾಚಿಗಳನ್ನು ನಂಬಿದ್ದು ಮಾತ್ರವಲ್ಲದೆ, ಅವುಗಳ ಕೃತ್ಯಗಳನ್ನು ಕುರಿತು ಕೆಲವು ಸಂಗತಿಗಳನ್ನೂ ಗ್ರಹಿಸಿರುತ್ತಾರೆ.

ಆಧಾರ:

ಮುಖ್ಯವಾದುದೇನಂದರೆ, ಪಿಶಾಚಿಗಳ ಸ್ಥಾನಗಳಲ್ಲಿ ಆ ಪಿಶಾಚಿಯ ವಿಜೃಂಭಣೆಗೆ ಆಧಾರಭೂತವಾಗಿ ಕನಿಷ್ಠಪಕ್ಷ ಒಬ್ಬ ವ್ಯಕ್ತಿಯಾದರೂ ಇರಲೇಬೇಕು. ನಿರ್ಜನೀಯವಾದ ಮನೆಯಲ್ಲಿ ಪಿಶಾಚಿಗಳುಂಟೆನ್ನುವುದು ಕೇವಲ ಕಲ್ಪನೆಯೇ ಆಗಿರಬೇಕು. ಪಿಶಾಚಿಗಳು ತಮ್ಮ ಚಯೋಗಳಿಗೆ ಒಬ್ಬ ಸಜೀವ ವ್ಯಕ್ತಿಯನ್ನು ಆಧಾರವನ್ನಾಗಿಟ್ಟುಕೊಳ್ಳುತ್ತವೆನ್ನಲು ಸಂದೇಹವಿರುವಂತ ಯಾರಿಗೂ ಕಾಣಲಿಲ್ಲ. ಆ ವ್ಯಕ್ತಿಗಳು ಅದೇ ಯೌವನಕ್ಕೆ ಕಾಲಿಡುವ ತರುಣ ತರುಣಿಯರಾಗಿದ್ದಾರೆ.; ಬಹುಮಟ್ಟಿಗೆ ಬಾಲಿಕೆಯರಾಗಿದ್ದಾರೆ. ಸ್ವಾಧ್ಯಾಸ್ಯವನ್ನು ಪ್ರವೇಶಿಸುವ ವ್ಯಕ್ತಿಗಳು ಕೂಡಾ ಪಿಶಾಚಿಗಳಿಗೆ ಆಗಾಗ ಆಧಾರವಾಗುವುದನ್ನು ಗಮನಿಸಲಾಗಿದೆ. ತಮ್ಮನ್ನು ಪಿಶಾಚಿಗಳು ವಿನಿಯೋಗಿಸಿಕೊಳ್ಳುತ್ತವೆಂದು ಆ ವ್ಯಕ್ತಿಗಳಿಗೆ ತಿಳಿಯದೇ ಹೋಗಬಹುದು. ಅಥವಾ ಮೊದಲು ತಿಳಿಯದೇ ಹೋದರೂ ಕ್ರಮ ಕ್ರಮವಾಗಿ ತಿಳಿಯಲೂಬಹುದು.

ಕೆಲವು ಸಂದರ್ಭಗಳಲ್ಲಿ ಈ ಪಿಶಾಚಿಗಳ ಆಧಾರಗಳಾಗಿರುವ ಬಾಲ ಬಾಲಿಕೆಯರು, ಮನೆಯೊಳಗೆ ಯಾರ ಮೇಲೆಯೋ ಹೆಗೆ ತೊಟ್ಟುಕೊಂಡು, ಪೈಶಾಚಕ ಪ್ರದರ್ಶನಗಳ ದ್ವಾರಾ ತಮ್ಮೊಳಗೆ ತಾವೇ ಸಂತೃಪ್ತರಾಗುವುದೂ, ಹಗೆ ತೀರಿಸಿಕೊಳ್ಳುವುದೂ ಅನೇಕ ಉದಾಹರಣೆಗಳಿಂದ ಗೊತ್ತಾಗಿವೆ. ಇದನ್ನು ಗಮನಿಸಿದ ಪರಿಶೀಲಕರು ಪಿಶಾಚಿಗಳೆಂದು ಕೇವಲ ಭ್ರಮೆಯೆಂದೂ, ಯಾರೂ ಊಹಿಸಲಾರದ ವಿಧದಲ್ಲಿ ಆ ಹಗೆ ತುಂಬಿದ ಹೃದಯವುಳ್ಳವರು ಪೈಶಾಚಕ ಚಯೋಗಳನ್ನು ಮಾಡುತ್ತಿದ್ದಾರೆಂದೂ ಸಿದ್ಧಾಂತಮಾಡಿದರು.

ಆದರೆ ಆ ಸಿದ್ಧಾಂತವು ರುಜುವಾಗಲಿಲ್ಲ. ಏಕೆಂದರೆ ಒಬ್ಬಳು ಸಾಮಾನ್ಯ ಹುಡುಗಿ ಪರಿಶೀಲಕರೆಲ್ಲರ ಕಣ್ಣಿಗೂ ಮಣ್ಣೆರಚಿ ಮನೆಯೊಳಗೆಲ್ಲಾ – ಮಾಡಿನ ಮೇಲೆ ಕೂಡಾ ಒಂದೇ ಬಾರಿಗೆ ಓಡಾಡಿ ಸಪ್ಪಳ ಮಾಡಲಾರಳು; ಕುತ್ತುಮುತ್ತಲೆಲ್ಲೂ ಇಲ್ಲದ ವಸ್ತುಗಳನ್ನು ಮೇಲಿನಿಂದ ಕೆಳಕ್ಕೆಸೆಯಲಾರಳು; ಹಾನಿರುವ ಸ್ಥಳಕ್ಕೆ ದೂರವಾಗಿರುವ ಸ್ಥಳದಿಂದ ಮೊತ್ತಗಳನ್ನು ಹೊರಡಿಸಲಾರಳು; ಬೆಳ್ಳನ್ನೂ ಮೊಲವನ್ನೂ ಸೃಷ್ಟಿಸಲಾರಳು. ಹೀಗೆಲ್ಲಾ ಅನೇಕ ಪಿಶಾಚಿಗಳ ಮನೆಗಳಲ್ಲಿ ನಡೆದ ಸಂಘಟನೆಗಳನ್ನು ತಾತ್ಪರ್ಯಿಂದ ನೋಡಿದ ಮೇಲೆ, ಅಂತಹ ಕಾರ್ಯಗಳನ್ನು ಸಾಮಾನ್ಯ ಬಾಲ ಬಾಲಿಕೆಯರು, ತರುಣ ತರುಣಿಯರು ಸೃಷ್ಟಿಮಾಡಲಾರರೆಂಬುದು ಸ್ಪಷ್ಟವಾಗುತ್ತದೆ ಅವರಿಗೆ ಮನೆಯೊಳಗಾರ ಮೇಲೋ ಹಗೆ ಇದ್ದಿರಬಹುದು; ಪಿಶಾಚಿಗಳ ಕೃತ್ಯಗಳಿಂದ ಅವರ ಹಗೆ ತೀರಲೂಬಹುದು

ಈ ಕಾರಣಗಳಿಂದ ಒಂದೆಡೆ ಸಜೀವ ವ್ಯಕ್ತಿಯ ಜೀವ ಶಕ್ತಿಯೂ ಇನ್ನೊಂದೆಡೆ ಲೋಕಾಂತರ ಸಂಬಂಧಿಗಳಾದ ಪಿಶಾಚಿಗಳ ಶಕ್ತಿಯೂ ಕೂಡಿಕೊಂಡ ಹೊರತು ಪೈಶಾಚಕ ಸಂಘಟನೆಗಳಿಗೆ ಅವಕಾಶವಿಲ್ಲವೆಂದಾಯಿತು. ಈ ಪಿಶಾಚಿಗಳಿಗೆ ವಿಚಿತ್ರವಾದ ಪ್ರಕೃತಿಯೂ, ವ್ಯಕ್ತಿತ್ವವೂ, ಮಂಗಬುದ್ಧಿಯೂ ಇರುತ್ತವೆಂಬುದು ಸ್ಪಷ್ಟವಾಯಿತು. ಅವು ಅದೃಶ್ಯ ಶಕ್ತಿಗಳು.

ಪಿಶಾಚಿಗಳ ಗುಣ:

ಈ ಪಿಶಾಚಿಗಳು ಕೆಲವು ಮನೆಗಳನ್ನು ಆಶ್ರಯಿಸಿಕೊಂಡು ಏತಕ್ಕಾಗಿ ಗಲಾಟೆ ಮಾಡುತ್ತವೆ? ಕೇವಲ ತುಂಟತನವೇ ಅವುಗಳಿಗೆ ಅಂತಹ ಪ್ರೇರೇಪಣೆ ಕೊಡುತ್ತದೆಂದು ಕೆಲವರ ಮತ. ಕೆಲವರು ಅವುಗಳನ್ನು ದುಷ್ಟ ಜೀವಿಗಳೆಂದು ಪರಿಗಣಿಸುತ್ತಾರೆ. ನಮ್ಮ ಪೂರ್ವಿಕರು ಹೇಳಿದ ಜಾನಪದ ಕಥೆಗಳಲ್ಲಿ ಪಿಶಾಚಿಗಳು ದುರ್ಮಾರ್ಗ ಪ್ರವೃತ್ತಿಯುಳ್ಳವುಗಳಾಗಿಯೂ, ಮಾನವರಿಂದ ಸುಲಭವಾಗಿ ಮೋಸ ಹೋಗುವಂತಹವುಗಳಾಗಿಯೂ ಬಣ್ಣಿಸಲ್ಪಟ್ಟಿವೆ.

ಆದರೆ ಪ್ರತ್ಯಕ್ಷವಾಗಿ ಪಿಶಾಚ ಸ್ಥಾನಗಳಲ್ಲಿ ನಡೆಯುವ ಘಟನೆಗಳನ್ನು ನೋಡಿದ್ದಾದರೆ, ಪಿಶಾಚಗಳಲ್ಲಿ ದುರ್ಗುಣಗಳು ಕಾಣಿಸಲಾರವು. ಅವೇನೋ ವಸ್ತುಗಳನ್ನು ಒಡೆದು ಹಾಕುತ್ತವೆ; ಅವು ಬಿಸುಟ ವಸ್ತುಗಳು ಒಮ್ಮೊಮ್ಮೆ ಮನುಷ್ಯರಿಗೆ ತಗಲಿ ನೋಯಿಸುವುದೂ ಉಂಟು. ಅವು ಮಾನವರನ್ನು ಬಗೆ ಬಗೆಯಾಗಿ ಪೀಡಿಸುತ್ತವೆ. ಬೇರೆ ಬೇರೆ ಧಾನ್ಯಗಳನ್ನು ಒಂದಕ್ಕೊಂದು ಬೆರಸುವುದೂ, ಒಲೆಯಲ್ಲಿ ಅಶುದ್ಧ ಮಾಡುವುದೂ, ಹೀಗೆಲ್ಲೋ ಕೇಳಿದ್ದೇವೆ. ಆದರೆ ಅವುಗಳಿಂದ ಮನುಷ್ಯರಿಗೆ ತೀವ್ರವಾದ ಅಪಾಯವಾಗಲೀ, ನಿಜವಾದ ಪ್ರಮಾದವಾಗಲೀ ಉಂಟಾದ ನಿದರ್ಶನವು ಕಾಣಿಸದು. ಮೇಲಿನಿಂದ ದೊಡ್ಡ ದೊಡ್ಡ ಇಟ್ಟಿಗೆ ಕಲ್ಲು ಬಿದ್ದಾಗ ಅವು ಮನುಷ್ಯರ ಬದಿಯಲ್ಲೇ ಬೀಳುತ್ತವೆ ಹೊರತು ಮೇಲೆ ಬೀಳುವುದಿಲ್ಲ. ಒಡೆದು ಹೋಗುವ ವಸ್ತುಗಳು ಅಮ್ಮೊಂದು ಮುಖ್ಯವಾದುವಾಗಿರುವುದೂ ಇಲ್ಲ.

ನಿಜಕ್ಕೂ ಅಪಾಯಗೊಳಿಸಲಿಕ್ಕೂ, ಪ್ರಮಾದವನ್ನುಂಟು ಮಾಡಲಿಕ್ಕೂ ಪಿಶಾಚಿಗಳಿಗಿರುವ ಅವಕಾಶವನ್ನು ನಾವೊಮ್ಮೆ ಸ್ಮರಿಸಿಕೊಂಡುವಾದರೆ. ಅಂಥ ಅವಕಾಶಗಳನ್ನು ಅವು ಕೊಂಚಕೂಡ ಉಪಯೋಗಿಸಿ ಕೊಂಡದ್ದು ಕಾಣಿಸುವುದಿಲ್ಲ.

ಇದಕ್ಕೆ ವಿರುದ್ಧವಾಗಿ ಕೆಲವು ದಾಖಲೆಗಳು ಕಾಣಿಸಿದುವು. ಅವುಗಳನ್ನು ಶಾಸ್ತ್ರವೇತ್ತರು ಅನ್ವೇಷಣೆ ಮಾಡಿದರು. ಒಂದು ಪಿಶಾಚ ಭವನದಲ್ಲಿದ್ದ ಹುಡುಗಿ ಪಿಶಾಚಿಗಳು ತನ್ನ ಕೊರಳು ಹಿಸುಕುತ್ತಿವೆ ಎಂದಳಂತೆ. ಆ ಹುಡುಗಿಯನ್ನು ಡಾಕ್ಟರಿಗೆ ತೋರಿಸಿದಾಗ ಅವಳ ಕುತ್ತಿಗೆಯೊಳಗೆ ರೋಗವಿರುವುದೆಂದು ರುಜುವಾಯಿತು. ಇನ್ನೂ ಕೆಲವು ಸಂದರ್ಭಗಳಲ್ಲಿ ಮನುಷ್ಯರೇ ದುಸ್ಕೃತಗಳನ್ನು ಮಾಡಿ, ಅವುಗಳನ್ನು ಪಿಶಾಚಿಗಳಿಗೆ ಗಂಟುಹಾಕಿದರೆಂದು ರುಜುಮಾಡಲಾಯಿತು

ಒಂದೊಂದು ಸಾರಿ ಪಿಶಾಚಿಗಳ ಮನೆಯಲ್ಲಿ ತಟ್ಟೆಗಳಿಗೂ, ಬುಟ್ಟಿಗಳಿಗೂ, ಹಳೆಯ ವಸ್ತ್ರಗಳಿಗೂ ಬೆಂಕಿ ಹಿಡಿದುಬಿಡುವುದುಂಟು. ಆದರೆ ಮನುಷ್ಯರು ಹತ್ತಿರದಲ್ಲೇ ಇದ್ದೂ, ಬೆಂಕಿ ನಂದಿಸುವ ಅವಕಾಶವಿರುವಾಗಲೇ ಆ ಸಂಘಟನೆ ಜರುಗುತ್ತದೆಯೇ ಹೊರತು, ಎಲ್ಲರೂ ನಿದ್ರೆ ಮಾಡಿದ ಸಮಯದಲ್ಲಿ ಮಾಡಿಗೆ ಬೆಂಕಿ ಹೊತ್ತಿಕೊಂಡ. ಮನೆ ಸುಟ್ಟುಹೋದ ನಿದರ್ಶನಗಳಿಲ್ಲವೇ ಇಲ್ಲ. ಮಾನವರಲ್ಲಿ ಆ ಬಗೆಯ ದುರ್ಮಾರ್ಗಿಗಳಿರುವುದನ್ನು ನೋಡುತ್ತೇವೆಯೇ ಹೊರತು, ಪಿಶಾಚಗಳು ಅಂತಹ ಕೆಲಸಗಳಿಗೆ ಸಿದ್ಧವಾಗುತ್ತವೆನ್ನಲು ನಮಗೆ ತಿಳಿದ ಮಟ್ಟಿಗೆ ಯಾವ ರುಜುವೂ ಇಲ್ಲ. ಘೋರ ಕಾರ್ಯಮಗ್ನರಾದ ಮಾನವರಿಗೆ ಪಿಶಾಚಿಗಳ ಉದಾಹರಣೆ ಕೊಡುವುದರಲ್ಲಿ ಕೊಂಚ ಕೂಡ ಸತ್ಯವಿರುವುದಿಲ್ಲ.

ಇನ್ನೊಂದು ವಿಚಿತ್ರವೇನೆಂದರೆ ವಸ್ತುಗಳ ಕೊಂಪೆಗಳಲ್ಲಿ ವಾಸಮಾಡುವ ಬಾ

For Guaranteed Gold and Silverware

& All kinds of Precious Stones

VISIT Phone: 66

Sri Krishna Jewellery Mart

Ready-made Jewellery Dept.
Commission Agents,

TENKAPET, UDIPI, S. KANARA.

ಲ ಬಾಲಿಕೆಯರು ಪೈಶಾಚಿಕ ಪ್ರದರ್ಶನಗಳಿಗೆ ಬೇಗ ಬೇಗನೇ ಅಭ್ಯಾಸವಾಗಿ ಹೋಗುವುದನ್ನು ಎಷ್ಟೋ ನೂರು ಕೇಸುಗಳಲ್ಲಿ ಗಮನಿಸಲಾಯಿತು. ದೊಡ್ಡವರು ಭಯಪಟ್ಟರೂ ಯಾವ ಕಾರಣದಿಂದಲೋ ಚಿಕ್ಕವರು ಭಯಪಡುವುದಿಲ್ಲ. ಅವರಿಗೆ ಯಾವ ಅಪಾಯ ಕೂಡಾ ಉಂಟಾಗವುದಿಲ್ಲ.

ಮುಖ್ಯವಾಗಿ ಮನೆಯವರೆಲ್ಲಾ ಸ್ಥಿರಚಿತ್ತರಾಗಿರುವ ತಾಣದಲ್ಲಿಯೇ ಪಿಶಾಚಿಗಳು ಪ್ರದರ್ಶನಗಳನ್ನು ಸಾಗಿಸುತ್ತವೆಂದು ಕೆಲವರ ನಂಬುಗೆ. ಏನಾದರೂ ಈ ಪಿಶಾಚಿಗಳನ್ನು ಮನೆಗಳಿಗೆ ಗಂಟುಹಾಕುವುದಕ್ಕಿಂತಲೂ ಕುಟುಂಬಗಳಿಗೆ ಗಂಟುಹಾಕುವುದೇ ಉಚಿತವೆನಿಸುತ್ತದೆ. ಏಕೆಂದರೆ ಕೆಲವು ಕುಟುಂಬಗಳು ಮನೆ ಬದಲಾವಣೆ ಮಾಡಿದಾಗ ಪಿಶಾಚಿಗಳು ಕೂಡಾ ಅವುಗಳೊಂದಿಗೇ ಬದಲಾವಣೆಗೊಂಡು ಹೋಗಿವೆ.

ಒಟ್ಟಿನ ಮೇಲೆ ಪಿಶಾಚಿಗಳು ತಮ್ಮಂತಾವೇ ಆಗಲೀ, ಬೇರಾವುದೋ ಅಲೌಕಿಕ ಶಕ್ತಿಯ ಪ್ರೋದ್ಬಲದಿಂದಲೇ ಆಗಲಿ, ತಮ್ಮನ್ನು ಶಾಂತಿ ಪೂರ್ತಿ ಹಿಡಿತದಲ್ಲಿಟ್ಟುಕೊಂಡಿರುವಂತೆಯೇ ಕಾಣಿಸುತ್ತವೆ.

ಪ್ರದರ್ಶನಗಳೇಕೆ?

ಹಾಗಾದರೆ ಈ ಪಿಶಾಚ ಪ್ರದರ್ಶನಗಳೇಕೆ? ಇವುಗಳಿಂದ ಪ್ರಯೋಜನಗಳೇನು? ಸ್ವಪಂಚದೊಳಗೆ ಕೆಲವು ದೆವ್ವಗಳ ಕೊಂಪೆಗಳೇಕೆ? ಪಿಶಾಚಿಗಳು ಸ್ವತಂತ್ರ ಜೀವಿಗಳಾದರೆ, ಅವು ತಮ್ಮ ತೃಪ್ತಿಗಾಗಿ ಕೆಲವು ಮನೆಗಳನ್ನಾಶ್ರಯಿಸಿ, ಅವಕಾಶ ದೊರಕಿದಾಗಲೆಲ್ಲಾ ಜನತೆಯನ್ನು ಗಾಬರಿಪಡಿಸುತ್ತವೆಂದು ಹೇಳಬಹುದು. ಹೀಗಿ ಮಾಡದೆ ಅನೇಕ ಬಾಲಮುದುಡಿ ಸುಮ್ಮನಿರಬಾರದು? ಆಗಾಗ ಕೊಂಚ ಬಾಲವಾಡಿಸುವುದೇಕೆ?

ಈ ಪ್ರಶ್ನೆಗಳಿಗೆ ಕೆಲವರು ಕೊಡುವ ಸಮಾಧಾನವೇನೆಂದರೆ, "ನಾವು ನಿತ್ಯವೂ ನೋಡುವುದನ್ನೆ ಪ್ರಪಂಚವೆಂದುಕೊಂಡು ನಂಬಿ ಕುಳಿತಿರುವಾಗ, ಇನ್ನೊಂದು ಪ್ರಪಂಚವೂ ಇದೆ ಎಂಬುದೇ ಪೈಶಾಚಕ ಪ್ರದರ್ಶನದ ಅಂತರಾರ್ಥ"

ಇದು ನಿಜವಿದ್ದರೂ ಇರಬಹುದು. ಶಾಸ್ತ್ರವೇತ್ತರು ಆಧ್ಯಾತ್ಮಿಕ ಶಾಸ್ತ್ರಪರಿಶೋಧನೆ ಮಾಡಲು ಮೊತ್ತ ಮೊದಲು ಆಧಾರಭೂತವಾದುದು ಈ ಪಿಶಾಚಿಗಳ ಸಮಾಚಾರವೇ. ಈ ಲೇಖಕನಿಗೆ ತಿಳಿದಂತೆ ಒಬ್ಬ ಹಿರಿಯ ಗೃಹಸ್ಥ ತನ್ನ ಮಗಂದಿರನ್ನು "ನಾಸ್ತಿಕರು" ಎಂದು ಜರೆದಾಡುತಿದ್ದ ಆ ಗೃಹಸ್ಥ ಸತ್ತುಹೋದ ಮೇಲೆ ಆ ಮನೆಯಲ್ಲಿ ಪೈಶಾಚಕ ಪ್ರದರ್ಶನ ಪ್ರಾರಂಭವಾಯಿತು. ಅದೆಲ್ಲಾ ಅಕ್ಕಪಕ್ಕದವರ ಹೆಗಲೂಟವೆಂದು ಮೊದಮೊದಲು ತಿಳಿದರು. ಕಡೆಗೆ ಅದಲ್ಲವೆಂದು ನಿರ್ಧಾರಣೆಯಾಯಿತು. ಸತ್ತ ಮುದುಕನೇ ಮಕ್ಕಳ ನಾಸ್ತಿಕತ್ವನನ್ನು ಹೋಗಲಾಡಿಸಲು ಹಾಗೆಲ್ಲ ಮಾಡುತ್ತಾನೆಂದು ಮನೆಯವರು ಭಾವಿಸಿದರು ಅಂತಯೇ ಶಾಸ್ತ್ರವೇತ್ತರ ಊಹೆಗಳನ್ನು ಒಮ್ಮೆಗೇ ಹೊಡೆದು ಹಾಕಲಾಗುವುದಿಲ್ಲ. ಪಿಶಾಚಿಗಳ ಉದ್ದೇಶವು ನಮ್ಮ ನೆರೆಯಲ್ಲಿಯೇ ಬೇರೊಂದು ಪ್ರಪಂಚವಿರುವುದೆಂದು ನಮಗೆ ನೆನಪು ಮಾಡುವುದಾಗಿದ್ದರೂ ಇರಬಹುದು.

ಮಾನವನ ಸಹಜಧರ್ಮ - ನಗು

ಶ್ರೀ "ಗೋರಾ"

ಡಿಮೊಸ್ತೆನಿಸನೆಂಬವನೊಬ್ಬನಿದ್ದ; ಇವನು ಸಮುದ್ರ ಕಿನಾರೆಯಲ್ಲಿ ಕುಳಿತುಕೊಂಡು, ಸಾಗರದ ಅನಂತ ತರಂಗಗಳ ಮುಂದೆ ಭಾಷಣ ಬಿಗಿಯುತಿದ್ದ; ಇದರಿಂದಲೇ ಆತನು ಅಪೂರ್ವ ಆನಂದವನ್ನು ಅನುಭವಮಾಡಿಕೊಳ್ಳುತಿದ್ದನಂತೆ.

ಅಕ್ಕಪಕ್ಕದ ವ್ಯಕ್ತಿಗಳ ಮನಸ್ಸನ್ನು ಪರಿಕ್ರಮಿಸಿ, ತನ್ನ ಉದ್ಗಮ ಸ್ಥಾನವನ್ನು ಆನಂದವು ಪಡೆದಾಗಲೇ ವಾಸ್ತವಿಕವಾಗಿ ಅದು ಅಭಿವ್ಯಕ್ತಗೊಳ್ಳುವುದು. ಹಾಸ್ಯ ಎಂಬುದರಿಂದ ಕರ್ತೃವೂ ಶ್ರೋತೃವೂ ಪ್ರಸನ್ನರಾದರೆ ಮಾತ್ರ ಅದು ಉತ್ತಮ ಹಾಸ್ಯವೆಂಬ ಹೆಸರಿಗೆ ಯೋಗ್ಯವಾಗುವುದು. ಕೇಳಿಸಿದವನನ್ನೂ ಕೇಳುವವನನ್ನೂ ಸಂತೋಷ ಪಡಿಸುವ ಶಕ್ತಿಯಿರುವುದು ಕೇವಲ ಉತ್ತಮ ವರ್ಗದ ಹಾಸ್ಯಕ್ಕೆ ಮಾತ್ರ.

ಸಂಸ್ಕೃತದ ಒಬ್ಬಾಕೆ ಪ್ರಸಿದ್ಧಕವಯಿತ್ರಿ ವಿಜ್ಞಿಕೆಯೆಂಬವಳು ಪ್ರಶ್ನಿಸುತ್ತಾಳೆ: "ಸ್ಮಿತಂ ಕಿಮಮೃತಂ ಭವೇತ್" ಎಂದು. ಆಕೆಯ ಅಭಿಪ್ರಾಯದಂತೆ ಉತ್ತಮ ಹಾಸ್ಯ ಲಭಿಸಿತೆಂದರೆ, ಅಮೃತಪ್ರಾಪ್ತವಾದರೂ ಅದು ತ್ಯಾಜ್ಯ, ವರ್ಜ್ಯ. ಅಮೃತವಾದರೂ ನಗುವಿನ ಮುಂದೆ ತಲೆ ತಗ್ಗಿಸಲೇ ಬೇಕು. ನಗುವಿನ ಬಗ್ಗೆ ಶ್ರೀ ಡಿ. ವಿ. ಗುಂಡಪ್ಪನವರು ಘಂಟಾಘೋಷವಾಗಿ ಸಾರಿದ್ದಾರೆ

ನಗುವು ಸಹಜದ ಧರ್ಮ ನಗಿಸುವುದು ಪರಧರ್ಮ,
ನಗುವ ಕೇಳುತ ನಗುವುದತಿಶಯದ ಧರ್ಮ
ನಗುವ ನಗಿಸುವ ನಗಿಸಿ, ನಗುತ ಬಾಳುವ ವರವ
ಮಿಗೆ ನೀನು ಬೇಡಿಕೊಳ್ಳೊ—ಮಂಕುತಿಮ್ಮ||

ಪ್ರಾಣಿಗಳಲ್ಲಿ ಮಾನವನು ಮಾತ್ರ ನಗುವಿನ ಅನುಭವವನ್ನು ಮಾಡಿಕೊಳ್ಳಬಲ್ಲನೆಂದರೆ, ಅತಿಶಯೋಕ್ತಿಯಲ್ಲ. ಆದರೂ ಹಲವಾರು ಪಶು—ಪಕ್ಷಿಗಳ ಭಾವಭಂಗಿಯನ್ನು ಸೂಕ್ಷ್ಮವಾಗಿ ಅಭ್ಯಸಿಸಿದಾಗ, ಅವು ಕೂಡ ತಮ್ಮ ತಮ್ಮೊಳಗೆ ಆಟಕೂಟಗಳಲ್ಲಿ ನಗುವಿನ ಹೊನಲನ್ನು ಹರಿಸುತ್ತವೆಯೆಂದು ಗೊತ್ತಾಗಿದೆ. ಆದರೆ, ಪ್ರಾಣಿಶ್ರೇಷ್ಠನಾದ ಮಾನವನು ಅದರ ಅನುಭವವನ್ನು ವರ್ಣಿಸ್ತ ಪ್ರವೃತ್ತನಾದಲ್ಲಿ ಗಳಿಸಬಲ್ಲನೆಂಬುದು ನಿರ್ವಿವಾದ.

ಇಂದಿನ ಯುಗ ಆಧುನಿಕವಾದುದು. ದಿನ ದಿನ ಹಲವಾರು ವೈಜ್ಞಾನಿಕ ಸಂಶೋಧನೆಗಳು ನಡೆಯುತ್ತ ಹೋದಂತೆ ನಾವು ತಿಳಿದುಕೊಂಡು ಬಂದಿರುವ ಹಲವಾರು ವಿಷಯಗಳು ಹಳೆಯವಾಗುತ್ತ ಬರುತ್ತಿರುವುದು ಸ್ವಾಭಾವಿಕ. ಹಾಗೆಯೇ ಹಾಸ್ಯ—ವ್ಯಂಗ್ಯದ ಕ್ಷೇತ್ರದಲ್ಲಿಯೂ ದ್ರುತಗತಿಯಿಂದ ಪರಿವರ್ತನೆಯಾಗುತ್ತ ಬರುತ್ತಿದೆ. ನಿನ್ನೆಯ ವರೆಗೆ ನಗೆಯಾಟಕ್ಕೆ ಉಚಿತವಾಗಿದ್ದ ಒಂದು ವಿಷಯ ಇಂದು ಹಳೆಯದಾಗಿ ಬಿಡುತ್ತದೆ. ನಿನ್ನೆ ಕೇಳಿದ ಒಂದು ಮಾತಿನಿಂದ ಆಗ ಎಲ್ಲರೂ ನಕ್ಕಿದ್ದರೆ, ಇಂದು ಅ ಮಾತನ್ನೇ ಪುನರುಚ್ಚರಿಸಿದ ಮಾತ್ರಕ್ಕೆ ಅದು ಪೂರ್ವವತ್ ಪರಿಣಾಮವನ್ನು ಮಾಡಬೇಕಾಗಿಲ್ಲ; ಮಾಡುವುದೂ ಇಲ್ಲ. ಇಂದಿನ ದೇಶ-ಕಾಲಕ್ಕೊಪ್ಪುವಂತಹ ಚಾಟು ವಚನಗಳೇ ನಗೆಯ ಹೊಳೆ ಹರಿಸಬಲ್ಲವು. ಆದರೂ ಕೆಲವೊಂದು ಹಳೆಯ ಮಾತುಗಳು ತಮ್ಮ ಗುಣವನ್ನು ಕಳೆದುಕೊಳ್ಳದೆ ಇರುವುದೂ ಸಾಧ್ಯ. ಇವುಗಳ ಪ್ರಮಾಣ ಅತ್ಯಲ್ಪವೆಂದು ನೆನಪಿಡಬೇಕು. ಪ್ರತ್ಯುತ್ಪನ್ನ ಮತಿಯೂಗಲು, ಹಾಸ್ಯವಿನೋದಗಳನ್ನು ಅರಿತುಕೊಳ್ಳಲು, ಇಲ್ಲವೇ ಪರಿಹಾಸಕ್ಕೆ ಪರಿಹಾಸ ಮಾಡಲು ಬೇರೆ ಬೇರೆ ವಿಷಯಗಳ ಅಧ್ಯಯನವು ಸಹಕಾರಿಯಾಗುತ್ತದೆ.

ವಿನೋದನ ವಾಸ್ತವಿಕಾನಂದವನ್ನು ಪಡೆದುಕೊಳ್ಳಬೇಕಾದರೆ, ಮಾನವರಲ್ಲಿ ಒಂದು ಗುಣವಿರಬೇಕಾಗುತ್ತದೆ. ಅಹಂಕಾರಿಯಾದವನಿಗೆ ಹಾಸ್ಯರಸದ ಅನುಭವವೆಳ್ಳಷ್ಟೂ ಆಗಲಾರದೆ. ಹೃದಯಾಂತರಾಳದಲ್ಲಿ ಹುದುಗಿರುವ ಅಹಂಭಾವವು ಬೇರ್ಸಹಿತ ಕಿತ್ತು ಹಾಕದ ಹೊರತು ಆತನಲ್ಲಿ ವಿನೋದವನ್ನು ಅರ್ಥಮಾಡಿಕೊಳ್ಳುವ ಪ್ರವೃತ್ತಿ ಹುಟ್ಟಲಾರದು. ಜೀವನವೆಂದರೆ, ಏಕಾಕಿಯಾಗಿ ಆಲೆದಾಡುವುದಲ್ಲ; ಬದುಕುವುದಲ್ಲ. ಇತ್ತು ಜನರೊಡನೆ ಕೂಡಿಕೊಂಡು ದಿನಕಳೆಯುವುದೇ ನಿಜವಾದ ಜೀವನ. ಇದರಿಂದಲೇ ನಮ್ಮ ಬಾಳು ಸುಖದಾಯಕವಾಗುವುದು. ಹೀಗೆ ನಾವು ಇರಲು ಬಯಸುವುದಾದರೆ, ಹಾಸ್ಯ—ವಿನೋದಗಳು ನಮಗೆ ಅತಿ ಸಹಾಯಕವಾಗುವುವು. ನೀರಸವಾದ ಬದುಕಿಗೊಂದು ಅರ್ಥವನ್ನು ಕಲ್ಪಿಸುವಲ್ಲಿ ಇವು ನೆರವಾಗುವುವು.

ಅಮೃತ ಕೈ ನೇರಿದರೆ, ಬೊಗಸೆಯಲ್ಲಿ ತುಂಬಿಸಿ ಕುಡಿಯ ಬಹುದು; ಅದರಿಂದ ನಮಗೆ ಅಮರತ್ವ ಪ್ರಾಪ್ತವಾಗಬಹುದು; ಆದರೆ, ನಮ್ಮ ಜೀವನಕ್ಕೆ ಕೊನೆಯೆಂಬುದೇ ಇಲ್ಲವಾದಕಾರಣ ಸುಖವೆಂಬುದೂ ಇರಲಾರದು. ಎಳೆಯದಾಗಿರುವುದೇ ಸುಘರತಮವಾದುದರಿಂದ ಅಂತಹ ಆಜಂದ್ರಾರ್ಕ ಜೀವನದಲ್ಲಿ ಸುಖ ದೊರೆಯಲಾರದು; ಆದರೆ, ಸ್ಮಿತ ಇಲ್ಲವೇ ಶ್ರೇಷ್ಠತಮವಾದ ಹಾಸ್ಯವು ನಮಗೆ ದೊರೆಯಿತೆಂದರೆ, ನಮ್ಮ ಬದುಕು ಅದೆಷ್ಟೇ ಎಳೆಯದಿರಲಿ, ಅದರ ಮಧುರತೆ ಸಾವಿರ ಪಾಲಾಗುವುದು-ಜೀವನವು ಆನಂದಮಯವಾಗುವುದು; ಪೂರ್ಣ ವಿಕಸಿತವಾಗುವುದು.

ಹಾಗಿರುವಾಗ, ಅಮೃತದಿಂದ ಸಾಧಿಸಿಕೊಳ್ಳಬೇಕಾದುದಾದರೂ ಏನು ತಾನೇ ಉಳಿದಿದೆ?

....ಬಾರದಿದ್ದರು ಪುಣ್ಯ ಬೇಡ ಪಾಪ....

"ಸಾಗರ"

ಓಹೋ ದೀಪಾವಳಿ!
ಹಳತೆ ಇದೆ ಕಾವಲಿ
ಹಿಂದುಗಳ ಹಬ್ಬಕ್ಕೆ ಫಜನಿ ಚಾಳಿ.

ಎಲ್ಲು ಬೆಳಕಿನ ರೂಪ
ವರ್ಣಮಾಲೆಯ ಚಾಪ
ಪಾಯಿಖಾನೆಯ ಮೇಲು ಗೂಡುದೀಪ

ದುರುಸು ಬಾಣ ಪಟಾಕಿ
ಇರುವೆ ಆನೆ ಚಟಾಕಿ
ಬೊಕ್ಕುಬಾಯಿಯು ಜನರು ಸಿನಿಮ ಪೋಕಿ

ಅಲ್ಲಿ ಹೆಣ್ಣಿನ ಧಳಕು
ಇಲ್ಲಿ ಗಂಡು ಧಿಮಾಕು
ಮಧ್ಯೆ ಮಾರನ ಮಿಂಚುಗೈಚಲಾಕು.

ಲಕ್ಷಗಟ್ಟಲೆ ಜನರು
ಅದಕೆ ಬೆಳ್ಳಿಯ ತೇರು
ದೇಪ ಮಾನವರೊಳಗೆ ಹೊಸ ಖರಾರು.

ಬಲಿಗೆ ಹಾರ ತುರಾಯಿ
ಭೂತಗಳಿಗೆ ಸರಾಯಿ
ಸೂಳೆಯರ ಕೈಯ್ಯಲ್ಲು ಹಣ್ಣುಕಾಯಿ.

ಅಹಾ! ಪಾಯಸದೂಟ
ಮೇಲೆ ರಸಿಕರ ಕೂಟ
ಲಕ್ಷ್ಮಿಯಂತಃಪುರದಿ ಡೊಂಬರಾಟ.

"ಭವತು ಭಿಕ್ಷಾಂ ದೇಹಿ"
"ತೊಲಗು ದೇಶ ದ್ರೋಹಿ"
ಛಳರಿ! ದೊಡ್ಡಣ್ಣ ಖರೆ ಸತ್ಯಾಗ್ರಹಿ.

ಕೈಯ್ಯ ಚಾಚ್ಯುವ ಬಾಕ
ಹಲರ ಬಾಳಿನ ಅಣಕ
ಧರ್ಮ ಬಂಧುತ್ವದಲ್ಲಿದುವೆ ಗುಣಕ.

ಹೃದಯವಿಲ್ಲದ ದೀಪ
ದೀಪವಲ್ಲದು ಶಾಪ
ಬಾರದಿದ್ದರು ಪುಣ್ಯ ಬೇಡ ಪಾಪ.

ಉದಯೋನ್ಮುಖ ಲೇಖಕ ಶ್ರೀ. ಪಿ ಎನ್. ಹೆಬ್ಬಾರ ('ಸಿರಿಸತಿ')
ಅವರ ನವೀನ ಕೃತಿ—

ಕಪಾಳ ಮೋಕ್ಷ

(ಮುನ್ನುಡಿ— ಡಾ| ಟಿ. ಎಂ. ಎ. ಹೈ, ಎಂ. ಎ., ಬಿ.ಎಸ್.)

ಏಳು ಪ್ರಬಂಧ, ಎಂಟು ಸಣ್ಣ ಕತೆಗಳನ್ನೊಳಗೊಂಡ ಮೌಲಿಕ ಕೃತಿ. ನೈಜ ಘಟನೆಗಳ ಆಧಾರದ ಮೇಲೆ ನೆಯ್ದ ವರ್ಣನಾತ್ಮಕ ಪ್ರಬಂಧಗಳಾದರೂ ಸಣ್ಣ ಕತೆಯಿಷ್ಟೇ ಸ್ವಾರಸ್ಯಪೂರ್ಣವಾಗಿವೆ. ಕತೆಗಳಲ್ಲಿ ಕತೆಗಾರರ ಸಹಜ ಸುಂದರ ಶೈಲಿ, ಸಾಮಾಜಿಕ ನ್ಯಾಯ—ಅನ್ಯಾಯ ಯಾಗೂ ವಿಧಿವಿಲಾಸದ ಸುಳಿವು ಹೊಳವುಗಳನ್ನು ಕಾಣಬಹುದು.

180 ಪುಟಗಳು — ಬಿಳಿ ಕಾಗದ — ಬೆಲೆ ರೂ. 2=00

ರೂ. 2=25 ನ.ಪೈಸೆ ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಬಹುದು
ಪುಸ್ತಕ ವ್ಯಾಪಾರಿಗಳಿಗೆ ವಿಪುಲ ಕಮಿಶನ್!

ನವಭಾರತ ಪುಸ್ತಕ ಭಂಡಾರ, ಉಡುಪಿ.

ಸರಳ ಸುಲಭ ಶ್ರೇಷ್ಠವೈದ್ಯ — ಆಯುರ್ವೇದ —

ಶ್ರೀ ಕೆ. ಅಚ್ಯುತ ಶ್ರೀನಿವಾಸ ಪೈ,
ಉಡುಪಿ

ಪ್ರಾಚೀನ ಋಷಿಮಹರ್ಷಿಗಳು ಅವಿಶ್ರಾಂತ ಪರಿಶ್ರಮದಿಂದ ಪರಿಶೋಧಿಸಿ ಪ್ರಯೋಗಮಾಡಿ ಪ್ರಕೃತಿಜನ್ಯ ಗಿಡ ಮೂಲಿಕೆಗಳ ಔಷಧ ಪ್ರಯೋಗವೇ ಪರಮ ಶ್ರೇಷ್ಠವಾದುದೆಂದು ನಿರ್ಣಯಿಸಿದ್ದಾರೆ. ಪ್ರಕೃತದ ವಿಜ್ಞಾನಿಗಳು ಕೂಡಾ ಬೆಪ್ಪಾಗುವಂತಹ ಔಷಧ ಪ್ರಯೋಗಗಳನ್ನು ನಿಷ್ಕಾರ್ಣ ಪರೋಪಕಾರ ದೃಷ್ಟಿಯಿಂದ ಪ್ರಸಿದ್ಧ ಗ್ರಂಥಗಳಾದ ಆಯುರ್ವೇದ, ಅಷ್ಟಾಂಗ ಹೃದಯ, ಹಸನಿಗ್ರಹ, ಚರಕ ಸಂಹಿತಾ, ನಿಘಂಟು ರತ್ನಾಕರ, ಭೈಷಜ ರತ್ನಾವಳಿ, ಯೋಗ ರತ್ನಾಕರ ರಸಪ್ರಕಾಶ ಸುಧಾಕರ, ರಸ ರತ್ನ ಸಮುಚ್ಚಯ, ರಸ ಚಂದ್ರಾಂಶು, ರಸಾಯನ ಸಾರ ಸಂಗ್ರಹ, ವೃದ್ಧ ವೈದ್ಯ ಮೊದಲಾದ ದಿವ್ಯ ಗ್ರಂಥಗಳ ಮೂಲಕ ಪ್ರಸಾರ ಮಾಡಿದ್ದು ಭಾರತೀಯರ ಮಾತ್ರವಲ್ಲ ಪರಕೀಯರಿಂದಲೂ ತುಂಬ ಮೆಚ್ಚಿಗೆ ಗಳಿಸಿವೆ

ಭಾರತ ವರ್ಷದಲ್ಲಿ ಜನ್ಮವೆತ್ತಿದ ಭಾರತೀಯರು ಔಷಧೋಪಚಾರಗಳಿಗೆ ಯಾರನ್ನೂ ಆಶ್ರಯಿಸಲೇಬಾರದೆಂಬ ಉತ್ಕಟೇಚ್ಛೆಯಿಂದ ಈ ಸದ್ಗ್ರಂಥಗಳನ್ನು ಶ್ರಮ ವಹಿಸಿ ರಚಿಸಿದ್ದು ಅಭಿಮಾನ ಪಡತಕ್ಕದ್ದಾಗಿದೆ. ನಮ್ಮ ಆಚಾರ ವಿಚಾರ, ಆಹಾರ ವಿಹಾರಗಳಿಗೆ, ಹವಾಮಾನ, ನೂನ ಋತುಗಳಿಗೆ ಸರಿಯಾಗಿ, ತ್ರಿದೋಷ ಸಿದ್ಧಾಂತಕ್ಕನುಗುಣವಾಗಿ ಭದ್ರವಾಗಿ ಔಷಧ ಯೋಗಗಳನ್ನು ರಚಿಸಿರುತ್ತಾರೆ ಆಸವ, ಅರಿಷ್ಟ, ಲೇಹ, ಕಷಾಯ, ಲೇಪ, ವಟಿ, ಗುಟಿಕೆ, ರಸಾಯನ, ರಸಸ್ಯಯೋಗ ಎಲ್ಲವೂ ಈಗಿನ ಪರಕೀಯ ಔಷಧ ತಜ್ಞರು ಕೂಡಾಕೊಂಡಾಡುವಂಥವುಗಳಾಗಿವೆ.

ಬರೇ ಅಕಳಕರಿ ಜೇನಿನಲ್ಲಿ ತೇದಿ ನಾಲಗೆಗೆ ಕಿಕ್ಕಿದರೆ ಕರಿಣ ತರದ ಅಗ್ರ ಗುಣವಾಗುತ್ತದೆ.

ಜೇಷ್ಟ ಮಧು, ಹಿಪ್ಪಲಿ ಕಷಾಯದಿಂದ ಕೆಮ್ಮು ದಮ್ಮು ವಾಸಿಯಾಗುತ್ತದೆ.

ಸರ್ವ ತರದ ವಾಯು ದೂಷಿತರೋಗಗಳಿಗೆ ಧನ್ವಂತರಿ ಮಾತ್ರೆ ಅಮೃತಪ್ರಾಯ ವಾಗಿದೆ. ಗರ್ಭಿಣಿಯರು ಕೂಡಾ ನಿರ್ಭೀತಿಯಿಂದ ನಿತ್ಯ ಜೀರಿಗೆ ಕಷಾಯದಲ್ಲಿ ಸೇವಿಸಿದರೆ ಸುಖ ಪ್ರಸವ ಅಸಾಧ್ಯವಲ್ಲ.

ಬಜೆ ಉಪಯೋಗ ಬಾಲಗ್ರಹ ರೋಗಗಳಿಗೆ ರಾಮ ಬಾಣದಂತಿದೆ. ಎಲ್ಲೋಪೆಥಿಕ್ ಔಷಧಗಳಿಂದಲೂ ಗುಣ ಸಿಗದ ಈ ಮಕ್ಕಳ ಬಾಲಗ್ರಹಕ್ಕೆ, ಬೇವಿನ ಎಣ್ಣೆ, ಬಜೆಗಳ ಪ್ರಯೋಗ ತುಂಬಾ ಲಾಭದಾಯಕವಾಗಿದೆ.

ಕುರು, ಬಾವುಗಳು ಶಸ್ತ್ರಚಿಕಿತ್ಸೆ ಇಲ್ಲದೇನೇ ಒಡೆಯಬೇಕಾದರೆ ಮೂರ್ಮಾಣಿ ಮಾತ್ರೆ ಲೇಪದಿಂದ ಅಥವಾ ಪಲಾಶಿ ಚೂರ್ಣ ಲೇಪದಿಂದ ಅತ್ಯಲ್ಪ ಖರ್ಚಿನಿಂದ, ಒಡೆಯಬಹುದು.

ಒಡವರ ಕಷ್ಟೂರಿಯಂತಿರುವ ಬೆಳ್ಳುಳ್ಳಿಯ ಪ್ರಾಧಾನ್ಯತೆ ಅಷ್ಟಿಷ್ಟಲ್ಲ. ಹುಸ್ಪುಸ ವಿಕಾರಗಳಿಗೆ ಶೀಘ್ರ ಗುಣಕಾರಿಯೂ ಗಿದೆ.

ಉಷ್ಣತೆಯಿಂದ ಉದ್ಭವಿಸಿದ ಒಳ ಕಾಹಿಲೆಗಳಿಗೆ ಕುಂಟಲ ಚಿಗುರು, ಜೀರಿಗೆ ಹಾಕಿ ಕಷಾಯಮಾಡಿ 21 ದಿವಸ ಸೇವಿಸುವುದರಿಂದ ಸಂಪೂರ್ಣ ಚಟ ಸಹ ಗುಣವಾಗುತ್ತದೆ.

ಅಶ್ವಗಂಧಿಯ ಶ್ರೇಷ್ಠತೆ ಅಷ್ಟಿಷ್ಟಲ್ಲ. 'ಮದ್ದಿಲ್ಲದ ರೋಗಕ್ಕೆ ಹಿರೇಮದ್ದು' ಎಂದಿದ್ದಾರೆ ಪೂರ್ವಿಕರು

ಅಮೃತಬಳ್ಳಿ ಕಷಾಯ ಸರ್ವತರದ ಜ್ವರಗಳಿಗೆ 'ಸರ್ವ ಜ್ವರ ಕುಲಾಂತಕೃತ್' ಎಂಬ ಅಭಿಧಾನ ಪಡೆದಿರುತ್ತದೆ. 'ರಕ್ತದ ಒತ್ತಣ" ಇರುವವರು ತಲೆಗೆ ಬ್ರಾಹ್ಮಿ ಭೃಂಗ ತೈಲ, ಹಿಮಸಾಗರ ತೈಲ ಉಪಯೋಗಿಸಿ, 'ಅಶ್ವಗಂಧಿ' ರಸಾಯನ ಸೇವಿಸಿದರೆ ತುಂಬಾ ಗುಣ ಹೊಂದಬಹುದು. ವಾತ ರೋಗಿಗಳು, ಯೋಗರಾಜ ಗುಗ್ಗುಳ, ರಾಸ್ನಾದಿ ಕಷಾಯ, ಬಲಾರಿಷ್ಟ ಉಪಯೋಗಿಸಿ ಗುಣಲಾಭ ಪಡೆಯಬಹುದು.

"ಹನ್ತ್ಯಾಗ್ರಾನ್ ವಾತಜಾನ್ ರೋಗಾನ್ ಬಲ, ಪುಷ್ಟಿ, ಅಗ್ನಿವರ್ಧನ" ಎಂದು ಉಲ್ಲೇಖಿಸಿದ್ದಾರೆ.

ವಿಫಲವಾಗಿ ಅಲ್ಲಿ, ಇಲ್ಲಿ, ಎಲ್ಲೆಲ್ಲಿ ಬೆಳೆಯುವ ಅದುಸೋಗೆ, ವಸಾಕದ ಆಸವದಿಂದ ಸಿರಪ್‌ನಿಂದ, ಎಳೇ ಮಕ್ಕಳಿಂದ ಅಬಾಲ ವೃದ್ಧರ ವರೆಗೆ ಕೆಮ್ಮು, ಉಬ್ಬಸಗಳ ಉದ್ರೇಕದಿಂದ ಗುಣಹೊಂದಬಹುದು.

ಆಯುರ್ವೇದೀಯ ಔಷಧ ಚಿಕಿತ್ಸೆಯ ಪರಮ ಶ್ರೇಷ್ಠತೆಯನ್ನು ವಂಶಪಾರಂಪರ್ಯವಾಗಿ ಮನಗಂಡಿರುವ ಭಾರತೀಯರು ಪರಕೀಯರ ಔಷಧಗಳಾಗಿ ಕೋಟಿ ಗಟ್ಟಲೆ ವ್ಯಯಿಸಿ ದೇಶದ ಸಂಪತ್ತನ್ನು ಬರಿದು ಮಾಡುವದು ಲಜ್ಜಾಸ್ಪದ. ಮಧ್ಯಮ ವರ್ಗದವರಿಗಂತೂ ಅತ್ಯಲ್ಪ ಖರ್ಚಿನಿಂದ, ಅಲ್ಪ ಪರಿಶ್ರಮದಿಂದ ದೀರ್ಘ ಕಾಹಿಲೆಗಳನ್ನು ಗುಣಪಡಿಸುವ ಆಯುರ್ವೇದೀಯ ಔಷಧಗಳನ್ನು ತಜ್ಞ ವೈದ್ಯರ ಸಲಹೆಗಳಿಂದ ಪಡೆದು ನೆಮ್ಮದಿಯಿಂದ ಶಾಂತಿಯಿಂದಲೂ ಜೀವನ ಸಾಗಿಸ ಬಹುದಾದ ಏಕಮಾತ್ರ ಔಷಧ ಚಿಕಿತ್ಸೆಯೇ ಆಯುರ್ವೇದೀಯ ಚಿಕಿತ್ಸೆ!

ಬಾಳಿಗೆಷ್ಟು ಬಯಕೆ...?

ಶ್ರೀ ಕೆ. ಜೆ. ಶೆಟ್ಟಿ, ಕಡಂದಲೆ

ಬಾಳಿಗೆಷ್ಟು ಬಯಕೆ ದೇವ—
ಅಸೆಗಂತ್ಯವಿರುವುದೆ?
ಎಷ್ಟು ದೊರೆತರೇನು ಮನವು
ತೃಪ್ತಿಯಿಂದ ತಣಿವುದೆ? ॥ ೧ ॥

ಹಣಕೆ ತಂದೆ ತಾಯಿ ಇಲ್ಲ—
ಬೇಕು ನನಗೆ ನನ್ನದು!
ಲೋಭ ಮೋಹಕೆಲ್ಲಿ ಅಂತ್ಯ?
ಕಾಮ ಪ್ರೇಮ ತಣಿಯದೆ? ॥ ೨ ॥

ಎಷ್ಟು ಇದ್ದರೇನು ಇನ್ನು—
ಸಾಕು, ಎನ ವರುವರೆ?
ಆಗಸಕ್ಕೆ ನಿಚ್ಚಣಿಕೆಯ—
ನಿಟ್ಟು ಏರಿ ಉಳಿವರೆ? ॥ ೩ ॥

ಸಪ್ಪೆ ಉಣಲು ಬೇಕು ಉಪ್ಪು,
ಮತ್ತೆ ಸೊಪ್ಪು ದೊರೆತರೆ!—
ತುಪ್ಪದನ್ನದಾಸೆ ಹೆಚ್ಚಿ;
ಹಪ್ಪಳವೂ ಇದ್ದರೆ? ॥ ೪ ॥

ಅಂತೆ ನೂರು ಇದ್ದರಾಯ್ತೆ?
ಸಾವಿರವೂ ಲಭಿಸಲಿ!
ತೃಪ್ತಿ ಇಲ್ಲ—ಬೇಕು ಲಕ್ಷ—
ಕೋಟಿ, ಮಿಲಿಯಗಟ್ಟಲೆ! ॥ ೫ ॥

ಅವನ ವಂಚಿಸಲು ಇವನು—
ಹೊಂಚುತಿರುವ ದಿನ ದಿನ!
ಇವನ ಅಳವಿಗವನ ಆಸ—
ಇದುವೆ ಬಾಳ ಬಂಧನ! ॥ ೬ ॥

ತಪ್ಪುರೂಪು ದೊಪ್ಪು ಏನು?—
—ತಿಳಿದೆ ಮೂಲ್ಯ ಗಾಂಪನು,
ಬನ್ನಬಡಲು ಮತ್ತೆ ಅತ್ತು—
ಪೂರ್ವ ಕರ್ಮವೆನುವನು! ॥ ೭ ॥

ಬಂಧುಬಳಗವೆಲ್ಲಿ? ಕೂಗಿ—
ಉಳಿದರೆಲ್ಲ ಅಲ್ಲಿಯೆ.?
ಗೈದ ಕರ್ಮದೊಂದು ನಿಧಿಯು—
ಬಹುದು ಬೆನ್ನಹಿಂದೆಯೆ! ॥ ೮ ॥

ಅಯ್ಯೊ! ಬಾಳಿಗೆಷ್ಟು ಬಯಕೆ?
ಬಂದರೆಂತು ಒತ್ತಲೆ!
ಸಾವನಪ್ಪಿ ತೆರಳುವಾಗ,—
ಜೊತೆಯೊಳೇನು ಬಂತೆಲೆ? ॥ ೯ ॥

'ಇಂಗ್ಲಿಷ್ ಕಲಿಯಲಿಲ್ಲವಲ್ಲಾ' ಎಂದು ಚಿಂತಿಸಬೇಡಿರಿ!

ಅನ್ಯರ ಸಹಾಯವಿಲ್ಲದೆ ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಕಲಿಯಬಹುದಾದ ಆಂಗ್ಲ ಸ್ವಯಂಬೋಧಿನಿ ಪುಸ್ತಕವನ್ನು ಇಂದೇ ಕೊಂಡುಕೊಳ್ಳಿರಿ!

ಸುಲಭದಲ್ಲಿ ಇಂಗ್ಲಿಷ್

ENGLISH MADE EASY

ಸಾವಿರಾರು ಜನರು ಈ ಪುಸ್ತಕದಿಂದ ಸುಲಭವಾಗಿ ಇಂಗ್ಲಿಷನ್ನು ಕಲಿತುಕೊಂಡಿದ್ದಾರೆ.
ನೀವೂ ಪ್ರಯತ್ನಿಸಿ, ಇಂಗ್ಲಿಷ್ ಭಾಷೆ ಕಲಿಯಿರಿ! ವಿದ್ಯಾರ್ಥಿಗಳಿಗಂತೂ ಅತ್ಯುಪಯುಕ್ತ ಪುಸ್ತಕ.
ಹೊಸ ಮುದ್ರಣ—ಸಾದಾ ಪ್ರತಿ 2·00. ಉತ್ತಮ ಪ್ರತಿ 2:50.
ಪುಸ್ತಕದ ಬೆಲೆಯೊಂದಿಗೆ 25 ನ. ಪೈ. ಸೇರಿಸಿ ಮನಿಯೊರ್ಡರು ಮಾಡಿದರೆ ಪ್ರತಿಯೊಂದನ್ನು ಕಳಿಸಲಾಗುವುದು.
ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ದೊರೆಯದಿದ್ದರೆ ನನಗೆ ಬರೆಯಿರಿ.
ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕನ್ನಡ.

ಡಿ. ಕೆ. ಭಾರದ್ವಾಜರ
ಇಂಗ್ಲಿಷ್, ಇಂಗ್ಲಿಷ್-ಕನ್ನಡ
ಡಿಕ್ಷನೆರಿ
ಬೆಲೆ: ರೂ. ನಾಲ್ಕು.
ಐದು ರೂಪಾಯಿ ಮನಿಯೊರ್ಡರು ಮಾಡಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ ಕಳಿಸಲಾಗುವುದು.
ವಿಚಾರಿಸಿರಿ:
ನವಭಾರತ ಪುಸ್ತಕ ಭಂಡಾರ
ಉಡುಪಿ.

ಬಲ್ಲವರ ಮಾತು ಬಲು ಸೊಗಸು

ಸಂಗ್ರಹ ಶ್ರೀ ಎಸ್. ಎಂ. ಶೆಟ್ಟಿ, ಶಿಮುಂಜೆಪರಾರಿ

ಜಗತ್ತಿನಲ್ಲಿ ಎಷ್ಟೆಲ್ಲಾ ದೊಡ್ಡ ಕೆಲಸಗಳಾಗಿವೆಯೋ ಅವುಗಳೆಲ್ಲದರ ಹಿಂದೆ ನಾರಿಯ ಪಾತ್ರ ಗುಪ್ತವಾಗಿಯೂದರೂ ಅಡಗಿದೆ.

—ಲೇ ಮಾರ್ಟಿನ್.

ಹತ್ತರಲ್ಲಿ ಒಂಭತ್ತು ಮಂದಿಗೆ ತಮ್ಮ ಕೆಟ್ಟ ಅದೃಷ್ಟವನ್ನೇ ಆಲಿಂಗಿಸಬೇಕಾಗುತ್ತದೆ ಏಕೆಂದರೆ ಅವರು ಮೊದಲು ಕೆಲಸ, ಅನಂತರ ಮನೋರಂಜನೆ ಮಾಡುವುದರ ಬದಲು, ಮೊದಲು ಮನೋರಂಜನೆ ಮಾಡಿ ಅನಂತರ ಕೆಲಸ ಮಾಡುತ್ತಾರೆ

—ಟಿ. ಟಿ. ಮುಂಗರ್

ಒಳ್ಳೆಯ ಸ್ವಭಾವವು ಜೇನು ನೊಣದಂತೆ ಎಲ್ಲಾ ಹೂ ಗಿಡಗಳಿಂದ ಜೇನನ್ನು ಸಂಗ್ರಹಿಸುತ್ತದೆ. ಕೆಟ್ಟ ಸ್ವಭಾವವು ಹುಳದಂತೆ ಸುಂದರವಾದ ಹೂವನ್ನು ಕೂಡಾ ಕೊರೆದು ಹಾಳುಮಾಡಿ ನಿಷ್ಪ್ರಯೋಜನಗೊಳಿಸುತ್ತದೆ

—ಎಚ್ ಡಬ್ಲ್ಯೂ ಬೀಚರ್.

ನೀವು ನಿಮ್ಮ ದುಃಖದ ಸಂಗತಿಯನ್ನು ಇತರರಿಗೆ ಹೇಳಿದಾಗ, ಅದರಲ್ಲಿ ಅರವಂಶಿ ಒನರು ನಿಮ್ಮ ಮಾತಿಗೆ ಗಮನವನ್ನೇ ಕೊಡುವುದಿಲ್ಲ, ಇನ್ನು ಉಳಿದವರು ಒಳ್ಳೆಯದಾಂಯ್ತು. ಇವನಿಗೆ ಹಾಗೆಯೇ ಆಗಬೇಕಿತ್ತು ಅನ್ನುತ್ತಾರೆ.

—ಅಜ್ಞಾತ.

ತಿಳುವಳಿಕೆಯುಳ್ಳ ಮನುಷ್ಯನಲ್ಲಿ ಒಂದ ತಪ್ಪು ಒಂದು ಸಲಕ್ಕಿಂತ ಹೆಚ್ಚಿಗೆ ಯಾಗುವುದಿಲ್ಲ ಆದರೆ ಮೂರ್ಖನಲ್ಲಿ ಅದು ಬಾರಿ ಬಾರಿಯಾಗುತ್ತದೆ.

—ಅಜ್ಞಾತ

ಪ್ರಕೃತಿ ಪ್ರತಿಯೊಂದು ಪ್ರಾಣಿಗೂ ಆಹಾರ ಒದಗಿಸುತ್ತದೆ ಎಂಬುದು ನಿಜವಾದರೂ, ಯಾರಿಗೂ ಅದು ಕುಳಿತಲ್ಲಿಗೇ ತಂದು ಕೊಡುವುದಿಲ್ಲ ಎಂಬುದೂ ನಿಜ.

—ಜಿ ಜಿ ಹಾಲಾಯಿಂಡ್

ಆತ್ಮಪ್ರಶಂಸೆಗೆ ಆತ್ಮನಿರೀಕ್ಷಣೆಯೇ ಸರಿಯಾದ ಮದ್ದು

—ವರ್ಡ್ಸ್‌ವರ್ತ್

ಬಹಳ ಕೆಲಸಗಳನ್ನು ಬೇಗ ಮುಗಿಸುವ ಒಂದು ಸುಲಭ ಉಪಾಯವೆಂದರೆ, ಒಂದು ಬಾರಿ ಒಂದೇ ಕೆಲಸವನ್ನು ಮಾಡುವುದು

—ಸಿಸಿಲ್

ಸನ್ಯಾಸಿಗಳಾಗಿ ತಮ್ಮ ಜೀವನವನ್ನು ನಿಸ್ವಾರ್ಥವಾಗಿ ಕಳೆದ ಮಹಾತ್ಮರುಗಳು ಧನ್ಯವಾಗಿದೆ ಆದರೆ, ಜಗತ್ತಿನ ಎಲ್ಲಾ ವ್ಯಾಪಾರಗಳಲ್ಲೂ ಭಾಗವಹಿಸಿ ತನ್ನ ಜೀವನವನ್ನು ನಿಸ್ವಾರ್ಥವಾಗಿ ಕಳೆದ ಗೃಹಸ್ಥನು ಅವರಿಗಿಂತ ಲಕ್ಷ ಪಟ್ಟು ಧನ್ಯನಾಗಿದ್ದಾನೆ. —ಅಜ್ಞಾತ.

ಒಂದು ತಪ್ಪು ಮಾಡಿದ ಅನಂತರ ಅದನ್ನು ಸುಧಾರಿಸಿಕೊಳ್ಳದಿರುವುದು ಬಹು ದೊಡ್ಡ ತಪ್ಪು—ಕಾನ್‌ಫ್ಯೂಶಿಯಸ್.

ಭಾವುಕತೆ ಸ್ತ್ರೀಯರಿಗೆ ಮತ್ತು ಮಕ್ಕಳಿಗೆ ಮಾತ್ರ ಶೋಭೆಯೊಯುತ್ತದೆ.

—ನೆಪೊಲಿಯನ್

ಯಾರು ತನ್ನನ್ನು ಶಾಂತವಾಗಿರಿಸಿಕೊಳ್ಳಲಾರನೋ ಅವನೆಂದೂ ಒಳ್ಳೆಯ ಶಬ್ದಗಳನ್ನು ಆಡಲಾರನು.

— ಪ್ಲುಟಾರ್ಕ್

ಸಂತೋಷವಾಗಿದ್ದರೆ ಅತಿ ಕಠಿಣ ಮಾರ್ಗವನ್ನೂ ಸುಲಭವಾಗಿ ಕಳೆಯಬಹುದು ಆ ಸಮಯದಲ್ಲಿ ಭಾರವೂ ಹಗುರವಾಗಿರುತ್ತದೆ ಮನ ಮಸ್ತಕಗಳೆರಡೂ ಸರಿಯಾದ ದಿಶೆಯಲ್ಲಿ ಯೋಚಿಸಬಲ್ಲುವು —ಅಜ್ಞಾತ.

ಪ್ರಾಮಾಣಿಕತನ ಮತ್ತು ನೈತಿಕ ಸತ್ಯ ಇವೆರಡೂ ಜಗತ್ತಿನ ಸ್ವಾಭಾವಿಕ ಸೌಂದರ್ಯಗಳು. —ಅಜ್ಞಾತ

ಉದಾರ ವ್ಯಕ್ತಿಯು ಜೀವಿಸಿರುವಷ್ಟೂ ದಿನ ಆನಂದದಿಂದ ಜೀವಿಸುತ್ತಾನೆ, ಸೋಶುಹೋದ ಮನುಷ್ಯ ಜೀವಿಸಿರುವಷ್ಟೂ ದಿನ ದುಃಖಿಸುತ್ತಾನೆ —ಬಾತಿಮ್

ಗುಣಗಳ ಸಹಾಯದಿಂದ ಮುಂದುವರಿಯಬೇಕೇ ವಿನಃ ಬೇರೊಬ್ಬರ ಕೃಪೆಯಿಂದಲ್ಲ —ಅಜ್ಞಾತ

ನಾವು ಉಪದೇಶವನ್ನು ಒಂದು ಮಣದಷ್ಟು ಕೇಳುತ್ತೇವೆ ಒಂದು ಟನ್ನಿನಷ್ಟು ಕೊಡುತ್ತೇವೆ. ಆದರೆ, ಅರಿತುಕೊಳ್ಳುವುದು ಕಣದಷ್ಟು ಮಾತ್ರ —ಅಲ್ಲರ್

ನಿಜವಾದ ಪ್ರತಿಭೆಯಿದ್ದವನು ತನ್ನಿಂದ ತಾನೇ ಬೆಳಕಿಗೆ ಬರುತ್ತಾನೆ ಏಕೆಂದರೆ ಕಳ್ಳರಿಯೂ ತನ್ನ ಉಪಸ್ಥಿತಿಗಾಗಿ ಆಣೆಯಿಡಬೇಕಾದ ಅವಶ್ಯಕತೆಯಿಲ್ಲ

— ಅಜ್ಞಾತ

ಸತ್ಯದ ಇನ್ನೊಂದು ಹೆಸರು ವಿಜ್ಞಾನ ಎಂದು. —ಕೋಶೇ

ವಿಜ್ಞಾನವು ನಮ್ಮ ವಿಚಾರಗಳಿಗೆ ನವೀನತೆಯನ್ನೀಯುತ್ತದೆ ಮತ್ತು ದುರ್ಬಲ ವಿಚಾರಗಳನ್ನು ನಮ್ಮ ಮನದಿಂದ ಹೊಡೆದೋಡಿಸುತ್ತದೆ ಪ್ರಕೃತಿಯ ನಿಯಮಕ್ಕನುಸಾರವಾಗಿ ನಾವು ಜೀವನ ಮಾಡಲು ವಿಜ್ಞಾನವು ಶಕ್ತಿಶಾಲಿ ಆಧಾರವನ್ನೀಯುತ್ತದೆ —ಎಮರ್ಸನ್

ಅಭಿಮಾನ ಯಾ ಆಡಂಭರಕ್ಕಾಗಿ ಕೊಟ್ಟ ವಸ್ತು ದಾನ ಯಾ ಭಿಕ್ಷೆಯಾಗಬಹುದು ಆದರೆ ಉಪಹಾರ ಎಂದೂ ಆಗಲಾರದು - ಸೈನೇತಾ

ಯಾರು ತಾನು ತಿಳಿದು ಕೊಳ್ಳುತ್ತಾನೋ ಅವನು ಬೇರೆಯವರಿಗೆ ತಿಳಿಸಿ ಕೂಡಲು ಹೋಗುವುದಿಲ್ಲ

— ದಮ್ಮಪದ

ದೊಡ್ಡ ಕೆಲಸಗಳನ್ನು ನಾವು ಮಾಡಲು ಸಾಧ್ಯವಿಲ್ಲ, ಸಣ್ಣ ಕೆಲಸಗಳನ್ನು ನಾವು ಮಾಡಲಿಚ್ಛಿಸುವುದಿಲ್ಲ ಇವುಗಳ ಮಧ್ಯದಲ್ಲಿರುವ ಆಪಾಯವೆಂದರೆ ನಾವೇನನ್ನೂ ಮಾಡುವುದಿಲ್ಲ ಎಂಬುದು

—ಅಜ್ಞಾತ

ಪತಿತರ ಉದ್ಧಾರ ಮಾಡುವವರು ದೇವರೂ ಅಲ್ಲ, ಸಂತರೂ ಅಲ್ಲ. ಅವರು ಉದ್ಧಾರ ಮಾಡುವವರು ಜನತಾ ಜನಾರ್ಧನ —ಮಹಾತ್ಮ ಭಗವಾನದೀನ್

(ಹಿಂದಿಯಿಂದ)

ರಸಪೂರ್ಣ ಸಾಮಾಜಿಕ ಕಾದಂಬರಿ

ಶೀಘ್ರ

ಒಂದೂಕಾಲು ರೂ.

ಪ್ರಕಾಶಕರು.

ನವಯುಗ

ಎಂಟರ್‌ಪ್ರೈಸ್ ಲಿ

ಪ್ರತಿಗಳಿಗೆ ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ವಿಚಾರಿಸಿರಿ

ಗದಿನಾಡ ಮತ್ತು ಹೊರನಾಡ ಕನ್ನಡಿಗರ ಹಿತಚಿಂತನೆಗಾಗಿ ಹೊರಡಿಸಿ ಬೆಳಗಾವಿಯ ಏಕೈಕ ಮಾಸಪತ್ರಿಕೆ—

ಶಾರದಾ

ಈ ದಿನವೇ ಚಂದಾ ಹಣ ಕಳುಹಿಸಿರಿ

ತರುಣ ಬರೆಹಗಾರರಿಗೆ ಪ್ರಥಮ ಆದ್ಯತೆ ನೀಡುವ 'ಶಾರದಾ' ಪ್ರತಿ ತಿಂಗಳ ಕತೆ, ಕವನ, ಪತ್ತೇದಾರಿ ಕಾದಂಬರಿ ಸಾಮಾಜಿಕ ಕಾದಂಬರಿ ಚಲಚ್ಚಿತ್ರ ಕತೆಗಳು, ವಿಚಾರಪೂರಿತ ಶೈಕ್ಷಣಿಕ ಲೇಖನಗಳು, ಮಕ್ಕಳ ಹಾಗೂ ಮಹಿಳಾವಿಭಾಗ, ರಾಜಕೀಯ-ಸಾಹಿತ್ಯಿಕ ಲೇಖನಗಳೊಂದಿಗೆ ತ್ರಿವರ್ಣದಲ್ಲಿ ಮುಖಪುಟದೊಂದಿಗೆ ಪ್ರಕಟವಾಗುವುದು

ಚಂದಾದಾರರಿಗೆ ವರ್ಣರಂಜಿತ ಕ್ಯಾಲೆಂಡರ ಮತ್ತು 'ಬಣ್ಣದ ಹೆಣ್ಣು' ಎಂಬ ಕಾದಂಬರಿ ಉಚಿತ ಸಿಗುತ್ತವೆ

ವಾರ್ಷಿಕ ಚಂದಾ ೪ ರೂ ಮಾತ್ರ

ಕರ್ನಾಟಕದ ಎಲ್ಲ ಊರುಗಳಲ್ಲಿ ವಿಪುಲವಾದ ಕಮಿಶನ್ನಿನ ಮೇಲೆ 'ಶಾರದಾ' ಮಾರಲು ಏಜಂಟರು ಬೇಕಾಗಿದ್ದಾರೆ ದರಿ ಪ್ರತಿ, ಏಜನ್ಸಿ ನಿಯಮಗಳಿಗಾಗಿ ೧ ರೂ M O ಮಾಡಿರಿ.

ಸಂಚಾಲಕರು 'ಶಾರದಾ' ಮಾಸಪತ್ರಿಕೆ

ಶಹಪೂರ—ಬೆಳಗಾವಿ

ಹಿಂದುಗಳಲ್ಲಿ ಧರ್ಮದ ಕಲ್ಪನೆ

ಶ್ರೀ ಎಂ. ಬಿ ಶಂಕರ ರಾವ್,
ಐ. ಎ. ಎಸ್ (ನಿವೃತ್ತ)

ಹಿಂದುಗಳ ಅತಿ ಮಹತ್ವದ ಅಧ್ಯಾತ್ಮಿಕ ಧ್ಯೇಯವು 'ಮೋಕ್ಷ'ವು. ಜನನ, ಮರಣಗಳಿಂದ ಬಿಡುಗಡೆ ಹೊಂದಿ ಮನೋವಿಕಾರದಿಂದುಂಟಾಗುವ ಬಿರುಸುತನವನ್ನು ಛೇದಿಸಿ, ಪರಮಾತ್ಮನಲ್ಲಿ ಐಕ್ಯವನ್ನು ಹೊಂದುವುದೇ 'ಮೋಕ್ಷ'ವೆನ್ನಿಸುವುದು. ಈ ಅದ್ವಿತೀಯವಾದ ತತ್ವವು ಹಿಂದುಗಳ ನ್ಯಾಯಯುಕ್ತವಾದ ನೈತಿಕ ಧ್ಯೇಯವನ್ನು ಒತ್ತಿ ಹೇಳುತ್ತದೆ. ಮೋಕ್ಷವೆಂದರೆ 'ಶೂನ್ಯ' ಭಾವವೆಂದು ತಿಳಿಯುವುದು ತಪ್ಪು. ನೀತಿಯನ್ನು ಮುಂದಾಗಿಟ್ಟುಕೊಂಡು ಸಮಾಜಸೇವೆಯನ್ನುಮಾಡಿದಾಗ ಅದರಲ್ಲಿ ಕರ್ಮಯೋಗವು ಸಫಲಿಸಿ ಮಾನವನು 'ಮೋಕ್ಷ'ದ ಹೆದ್ದಾರಿಯನ್ನು ಕಂಡುಕೊಳ್ಳುವನು. 'ನೀತಿ'ಯನ್ನು ಬಿಟ್ಟಲ್ಲಿ ಮೋಕ್ಷಕ್ಕೆ ಎಡೆಯಿಲ್ಲವೆಂಬುದೇ ಹಿಂದೂಧರ್ಮದ ಕಲ್ಪನೆ. ಸ್ವಚ್ಛನಾದ ನಡೆತೆಯಿಲ್ಲದವನು, ಇಂದ್ರಿಯಗಳನ್ನು ತನ್ನ ಸ್ವಾಧೀನದಲ್ಲಿಟ್ಟುಕೊಳ್ಳುವ ಶಕ್ತಿಯಿಲ್ಲದವನು, ಚಿತ್ತವನ್ನು ಕೇಂದ್ರೀಕರಿಸಲಾಗದವನು, ಮತ್ತು ಸದಾಕಾಲ ಚಿಂತೆಯಲ್ಲಿಯೇ ಮುಳಗಿದವನು— ಈ ಗುಣಗಳುಳ್ಳವರಿಗೆ ಮೋಕ್ಷಸಾಧನೆವು ಅಸಾಧ್ಯ. 'ಧರ್ಮ"ವೆಂಬ ಮಾತಿಗೆ ಸಂಪನ್ನತೆಯ ಅರ್ಥವಿದೆ.

ಹಿಂದೂ ಧರ್ಮದಲ್ಲಿ ಅರ್ಥ, ಕಾಮ, ಧರ್ಮ, ಮತ್ತು ಮೋಕ್ಷವೆನ್ನುವ ನಾಲ್ಕು ಮುಖ್ಯವಾದ ಪಾಂಥೆಗಳಿವೆ. ಅರ್ಥವೆಂದರೆ ಆಸ್ತಿಪಾಸ್ತಿಗೆ ಸಂಬಂಧಿಸಿದುದು. ಕಾಮವೆಂದರೆ ಇಂದ್ರಿಯಗಳಿಗೂ ಮನಸ್ಸಿಗೂ ಕೂಡಿರುವ ಸಂಬಂಧವು. ಧರ್ಮವೆಂದರೆ ನೈತಿಕ ಕಲ್ಯಾಣವು. 'ಮೋಕ್ಷ'ದ ಧ್ಯೇಯದಲ್ಲಿ ಸಂಬುಗೆಯಿಲ್ಲದವರು ಕೂಡ ಧರ್ಮವು ಬಲವತ್ತರವಾದ ಗುಣ ಎಂಬುದಾಗಿ ತಿಳಿದಿರುವರು. ಧರ್ಮ ವಿರಹಿತ ಕರ್ಮಕ್ಕೆ ಯಾವತ್ತೂ ಬೆಲೆಯಿಲ್ಲವೆಂಬುದನ್ನು, ಸಾಮಾನ್ಯ ಎಲ್ಲಾ ಹಿಂದುಗಳು ಒಪ್ಪಿಕೊಂಡಿರುವರು. ಮೋಕ್ಷವು ಪರಮಾತ್ಮನಲ್ಲಿ ಐಕ್ಯವಾಗುವ ಸಂಭವವಾದರೆ, ಧರ್ಮವು ಪರಮಾತ್ಮನ ಸಾನಿಧ್ಯವನ್ನು ಇದೇ ಲೋಕದಲ್ಲಿ ಕಂಡು ಅನುಭವಿಸುವ ಸಾಧನವು.

ಧರ್ಮದ ಮಹತ್ತರವಾದ ಅಧಾರವು ವೇದಗಳು. ಧರ್ಮದ ನಾಲ್ಕು ಉಗಮ ಸ್ಥಾನಗಳನ್ನು ಮನುವು ದೃಢವಾಗಿ ಸ್ಫುಟಪಡಿಸಿದಾನೆ. 1. ವೇದಗಳು (ಶ್ರುತಿ) 2. ನೈತಿಕ ಸಂಹಿತೆ (ಸ್ಮೃತಿ) 3. ಶೀಲವಂತರ ಚರ್ಯೆ. ಮತ್ತು 4. ವ್ಯಕ್ತಿವೈಶಿಷ್ಟ್ಯ.

ವೇದಗಳಿಂದ ಪ್ರಕೃತಿಯ ಭಾವವನ್ನರಿತು ಉಪಯುಕ್ತವಿರುವ ಪ್ರಕೃತಿಯ ಎಲ್ಲಾ ಪೆಸೆಗಳಿಂದ ದೈವೀ ಕೃಪೆಯನ್ನು ಕಂಡು ತಿಳಿದು ಪರಮಾತ್ಮನ ಅಗಾಧವಾದ ಪ್ರೇಮಭಾವದ ಅಳವನ್ನು ಪರೀಕ್ಷಿಸಿ ಮಾನವನು ತನ್ನಲ್ಲಿರುವ ಮನೋವಿಕಾರಗಳನ್ನು ತೊಲಗಿಸಲು ಸಾಧ್ಯವಿದೆ. ವೇದಗಳಲ್ಲಿ ಮಾನವರ ನಡತೆಯ ವಿಚಾರಗಳು ವಿವರವಾಗದೇ ಇದ್ದರೂ ಸೃಷ್ಟಿಗಳಲ್ಲಿ ಧರ್ಮ ಸಂಸ್ಕಾರದ ವಿಧಾನಗಳು ವಿಶಾಲವಾಗಿ ಹೇಳಲ್ಪಟ್ಟಿವೆ.

ಕಾಲವು ಸರಿದು ನಾಗರಿಕತೆಯು ಮುಂದೊತ್ತಿ ಬಂದಂತೆ ಹಿಂದು ನಿಬಂಧಗಳು ಪ್ರಕಟಿಸಲ್ಪಟ್ಟವು. ಕಾಲಕ್ಕನುಸರಿಸಿ ಹೊಸ ಹೊಸ ಕಾನೂನುಗಳು ಏರ್ಪಡಿಸಲ್ಪಟ್ಟವು. ತನ್ನ ಜ್ಞಾನದ ಮತ್ತು ಅನುಭವದ ಬಲದಿಂದ ಮಾನವನು ತನ್ನ ಚಟುವಟಿಕೆಗಳಲ್ಲಿ ಹಲವಾರು ಬದಲಾವಣೆಗಳನ್ನು ಮಾಡುವ ಆವಶ್ಯಕತೆ ಬಂದೊದಗಿತು. ಅಂತೆಯೇ ಹಿಂದು ಸಮಾಜವು ಪ್ರಕಾಶಿತವಾಯಿತು.

ಪೂರ್ವಕಾಲದಲ್ಲಿ ಪ್ರತಿಯೊಂದು ಹೊಸ ಕಾನೂನನ್ನು ಜನರ ಮುಂದಿಡುವಾಗ 'ಧರ್ಮ'ವನ್ನು ಆಧರಿಸಿಕೊಂಡೇ ಗಮಿಸುತಿದ್ದರು. ಸಮಾಜ ಕಲ್ಯಾಣವನ್ನು ಗುರಿಯಾಗಿಟ್ಟುಕೊಂಡು ಹೊಸ ಕಾನೂನುಗಳು ಹೊರ ಬೀಳುತಿದ್ದವು. ಜನರ ಆರೋಗ್ಯಕ್ಕೂ, ಸಂಪತ್ತಿಗೂ ವಿರುದ್ಧವಾದ ಕಾನೂನುಗಳು ತ್ಯಾಜ್ಯವಾಗಿದ್ದವು. ಧರ್ಮ ವಿರಹಿತ ಕಾನೂನುಗಳು ನಾಗರಿಕತನವನ್ನು ಹಾಳುಮಾಡಬಹುದೆಂಬ ಹೆದರಿಕೆಯು ಕಾನೂನು ಸೃಷ್ಟಿಸುವವರಿಗೆ ಚೆನ್ನಾಗಿ ತಿಳಿದಿತ್ತು. ಸಮಾಜದ ಸುಖಕ್ಕೆ ಆಧಾರಭೂತವಾದ ಕಾನೂನುಗಳಿಂದಾಗಿ ಸಮಂಜಸವಾಗಿ ನಾಗರಿಕತೆಯು ಬೆಳವಣಿಗೆಯಾಗುತ್ತಾ ಮುಂದೊತ್ತಿ ಬಂತು.

ಭೌತಿಕ ಐಶ್ವರ್ಯವೇ ನಾಗರಿಕತೆಯ ಚಿಹ್ನೆಯೆಂದು ತಿಳಿಯುವವರು ಧರ್ಮದ ನೈತಿಕ ಭಾವವನ್ನು ಎಂದೂ ಗೋಚರಿಸರು. ಪಾರಮಾರ್ಥಿಕ ದೃಷ್ಟಿಯಿಂದ ಧರ್ಮಯುತವಾದ ನಾಗರಿಕತೆಯಿಂದ ಮಾತ್ರ ಸಮಾಜಕ್ಕೆ ನೈಜ ಕಲ್ಯಾಣವು ಲಭಿಸಬಹುದು

ಮಹಾಭಾರತ ಕಾವ್ಯವನ್ನು ಕೊನೆಗೊಳಿಸುವಾಗ ವ್ಯಾಸಮುನಿಗಳು ಈ ರೀತಿ ಘೋಷಣೆ ಮಾಡಿದ್ದಾರೆ. "ಕೈಗಳನ್ನು ಎತ್ತಿ ನಾನು ಘೋಷಣೆ ಮಾಡಿದರೂ, ಯಾರೂ ಕೇಳುವಂತೆ ಭಾಸವಾಗುವುದಿಲ್ಲ. ಧರ್ಮದಿಂದ ಮಾತ್ರ ಮಾನವನು ಕರ್ಮಯೋಗ ಬಲದಿಂದ ಭೌತಿಕ ಸಂಪತ್ತನ್ನು ಪಡೆಯಲು ಅರ್ಹನಾಗುವನು ಮತ್ತು ತನ್ನ ಚಿತ್ತದಲ್ಲಿ ಅಡಕವಾಗಿರುವ ಆಶೆಗಳನ್ನು ಸಾಧಿಸುವದಕ್ಕೆ ಶಕ್ತನಾಗುವನು. ಹೀಗಿದ್ದಾಗ ಧರ್ಮವನ್ನನುಸರಿಸಿ ಕರ್ಮಗಳನ್ನು ಮಾನವ ವರ್ಗವು ಏತಕ್ಕೆ ಮಾಡುವುದಿಲ್ಲ?"

ಕಾಲ ಮುಂದೊತ್ತಿದಂತೆ ಧರ್ಮಭಾವದಲ್ಲಿಯೂ ಕೂಡ ಕೆಲವು ವ್ಯತ್ಯಾಸಗಳು ಬರಲೇಬೇಕು. ಅಂತಹ ವ್ಯತ್ಯಾಸಗಳು ಮಾನವನ ಬುದ್ಧಿಯ ಪ್ರಕಾಶವನ್ನು ಬಲವತ್ತರಿಸುತ್ತವೆ—ಮಾತ್ರವಲ್ಲ ಲೋಕ ಶಾಂತಿಗೂ ಆಧಾರಭೂತವಾಗುತ್ತದೆ.

ಕವಿ-ಕವಿತೆ

ಶ್ರೀ ಚಂದ್ರಶೇಖರ ಚಡಗ,
ಪಾಂಡೇಶ್ವರ.

ತಾಂಬೂಲ ಚರ್ವಣದಿ ರಕ್ತವರ್ಣವನು
ತಾಳಿದಾ
ಪುಟಿಗಳೆರಡರ ಮಧ್ಯೆ ಕುಣಿಯುತಿಹ
ಗರೇಟಿಂ ಸುರು ಸುರುಳಿ ಹೊಗೆಯು
ಹೊರಗೆಡಹಿ
ಮತ್ತದನೇ ಕಂಡು
ಬಲುತೋಷಗೊಂಡು
ಕವಿಯನು ಏನೇನನೋ ಈ ಕವಿಯು
ತಾವನ ಗೀತೆಗಳಲೇನಿಹುದು ಸವಿಯು?
ಯಾವನದ ಕೆಚ್ಚು
ಪ್ರೇಮದಾ ಹುಚ್ಚು
ಈ ಕವಿಗೆ ಹೆಚ್ಚು.
ಪ್ರೇಮ ಪ್ರಣಯದ ವ್ಯಾಖ್ಯಾನ
ಕಾದುವೆ ಈತನ ಬರಹಗಳವನ
ಹೃದಯನಾ ಕೈಯಲ್ಲಿ ಕಾಸಿಲ್ಲ
ಹೃದರೂ ಕೀರುತಿಯ ಆಶೆ ಮಾಸಿಲ್ಲ.
ದಿನ ದಿನವೂ ಏನೇನೋ ಬರಿವನಂತೆ
ಷ್ಟಿವೂ ಬರಿಯ ಹುಚ್ಚು ಪ್ರೇಮದ
ಕಂತೆ
ಹುಟ್ಟಿ ಹೊರಿಯದ ಕವಿತೆ ಇವಗೇ
ಕಂತೆ?

ವಿಶ್ವಕವಿ ಟಾಗೋರರ ಪುಣ್ಯಸ್ಮರಣೆಗಾಗಿ
ಅವರ ಶತಮಾನೋತ್ಸವದ ಸುಸಂದರ್ಭದಲ್ಲಿ
ಪ್ರಕಟವಾದ ಕಿರುಗಾಣಿಕೆಗಳು

ಚಿತ್ರಾಂಗದೆ

ಬೆಲೆ. ೬೦ ನ. ಪೈಸೆ.
(ಶ್ರೀ ಕೆ. ಕೆ. ಶೆಟ್ಟಿ, ಎಂ. ಎಲ್. ಸಿ. ಅವರಿಂದ ಅನುವಾದಿತ)

ರವೀಂದ್ರನಾಥರ ಕಿರುಗತೆಗಳು

ಬೆಲೆ. ೯೦ ನ. ಪೈಸೆ.
(ಶ್ರೀ ಹನುಮಂತರಾವ್ ಮೊಂಜರೇಕರ, ಕಾರವಾರ ಅವರಿಂದ ಅನುವಾದಿತ)

ಪ್ರಕಾಶಕರು:
ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ನವಯುಗ ಪ್ರೆಸ್, ಉಡುಪಿ.

ನಮ್ಮ ದೇವರು

ಶ್ರೀ ಕಯ್ಯಾರ ಕಿಞ್ಞಣ್ಣ ರೈ

† † †

೧

ಧರ್ಮದೇವಾಲಯದಿ ಶತ್ರ ಘೆಂಟಾನಾದ
ಮೊಳಗುತಿದೆ; ಮೂಮೊಳಗು ದಿಗ್ದಿಗಂತ!
ಸಂಸಾರ ಸುಳ್ಳೆಂಬ, ಮೋಕ್ಷವೇ
ಮೇಲೆಂಬ,
ನರಕ ದೊರಕುವುದೆಂಬ—
ಶುದ್ಧವೇದಾಂತ!

೨

ವೇದಾಂತ! ನೀ ಪುಣ್ಯವಂತ, ದೇವರ
ದೂತ
ಹೋಗು ಮೋಕ್ಷಕೆ, ಪಾಪಜೀವನಂ
ಬೇಡ;
ವೈಕುಂಠವೋ ಮತ್ತು ಕೈಲಾಸವೋ
ಹತ್ತು,
ಬೋಧನೆಯ ಬಿಟ್ಟು ನೀ ಸಾಧನೆಯ
ಮಾಡ.

೩

ಯಾವ ಪಾಪವೊ ದೇವ ಶಾಪವೋ
ತಟ್ಟಿದರು.
ಶುದ್ಧನಾಗಿಯೆ ಬಂದೆ! ಭಾಗ್ಯದಿಂದೆ;
ಶುದ್ಧನಾಗಿಯೆ ಹೋಗು! ಚಿಂತನಂ
ಬೋಧನಂ
ಕಾಲಹರಣಂ—ನೋಡಬೇಡ ಹಿಂದೆ.

೪

ಯಾವ ಶಾಪದಿನಿಳಿದು ಬಂದಿಲ್ಲ, ನಾವೆಲ್ಲ
ದೇವದೂತರೆಯಲ್ಲ—ಶುದ್ಧರಲ್ಲ;
ಮಣ್ಣಿನೊಳೆ ಹುಟ್ಟಿ ಮಣ್ಣಿನ
ಮಕ್ಕಳಾಗಿಹೆವು,
ಕೆಸರಂಟಿಹುದು ನಮ್ಮ ಮೈಗೆ ಎಲ್ಲ!

೫

ಮಡಿತವೇ ನಮ್ಮ ದೇವರು; ಲೋಕ
ದೇವಕುಲ,
ಬೆವರೆ ಹೊ ಹಣ್ಣುಕಾಯ್, ಕಣ್ಣೀರೆ
ತೀರ್ಥಂ;
ಎಮ್ಮೊಂದಿಗರ ಬಾಳ ಸಾವು ನೋವಿನ
ಗೋಳ—
ನುಂಡಿಹೆವು ಸಮಪಾಲ—ನಮಗದುವೆ
ಮೋಕ್ಷಂ ॥

('ಪುನರ್ನವ'ದಿಂದ ಉದ್ಧೃತ)

ಹೆಣ್ಣಲ್ಲ, ಗಂಡು

(ಜನೇ ಪುಟದಿಂದ)

ಸ್ಟಿಯರಿಂಗ್ ಇದೆ, ಯುವಕ ಹುಸೇನನ ಕೈಯಲ್ಲಿದೆ, ತುಂಬು ಜೌವನದ ತರುಣನ ಕೈಯಲ್ಲಿದೆ! ನಾಗಾಲೋಟದ ವೇಗ ಕೇಳಬೇಕೇ? ಪ್ರಭಾಳಿಗೆ ಮುಂದಿನ ಜಗತ್ತು ಶೂನ್ಯವಾಗಿ ತೋರುತಿತ್ತು. ಅವಳು ಏನಾದರೂ ಮಾಡಿ ತಪ್ಪಿಸಿಕೊಳ್ಳಬಹುದೆಂದು ಬಗೆದಿದ್ದಳು. ಆದರೆ ಈಗ ಆ ದಾರಿ ಎಲ್ಲಿದೆ....ಯಾವ ಸರಿಯಲ್ಲಿಯೆಂದು ಆಕೆಗೆ ತೋರಲಿಲ್ಲ.

ಹತ್ತು, ಹನ್ನೆರಡು ವರ್ಷಗಳಿಂದ ಅವಳು ಕಾಪಾಡಿಕೊಂಡಿದ್ದ, ಹಿಂದೂ ಧರ್ಮದ ವಿನಾಶವಾಗುವ ಕಾಲ...ಪತಿವ್ರತೆಯ ಮಾನ ಭಂಗಕಾಲ...ಈಗ ಹೆಮ್ಮಾರಿಯಂತೆ ಎದುರು ಬಂದಿದೆ.

ಅವಳಿಗೆ ಏನು ಮಾಡುವುದೆಂದು ತೋರಲಿಲ್ಲ. ಮೈಯೆಲ್ಲ ಬೆವರಿತು! ರಕ್ತ ಸಂಚಾರವೆಲ್ಲ ನಿಂತಂತಾಯಿತು. ಆದರೂ ಎರಡು ಕೈಗಳನ್ನೂ ತಲೆಗಿಟ್ಟುಕೊಂಡು ಅಲೋಚಿಸುತ್ತಿದ್ದಳು....

"ಸಿಲ್ಲಿ...ನನಗೆ ಸ್ವಲ್ಪ ಕೆಳಗೆ ಹೋಗಬೇಕಾಗಿದೆ...." ಎಂದಳು. ಆತ ಕಾರು ನಿಲ್ಲಿಸಿದ. ನಿಲ್ಲಿಸದೆ ವಿಧಿಯಿರಲಿಲ್ಲ, ಬೇರೆ. ಯಾಕೆಂದರೆ, ಆಕೆ ಆ ಸಮಯದಲ್ಲಿ ಎಲ್ಲಾದರೂ ಕೂಗಿದ್ದರೆ ಮನೆಗಳಿಂದ ಜನರು ಎಚ್ಚತ್ತು ಓಡಿ ಬರುವಂತಿತ್ತು. ಆದ್ದರಿಂದ ನಿಲ್ಲಿಸಿದ.

ಇಳಿದು, ಪ್ರಭಾ ಚರಂಡಿಯತ್ತ ನಡೆದಳು. ಆದರೆ ಓಡುವಂತಿಲ್ಲ. ಎರಡು ಕಡೆಗೂ ಮನೆಗಳಿವೆ. ಕೂಡಲೇ ಆತ ಬಂದು ಎಳೆದುಕೊಂಡು ನಡೆದಾನು. ಆದ್ದರಿಂದ ಆಕೆ ಏನು ಮಾಡಲಿ... ಮುಂದೆ....

ಆಕೆಗೊಂದು ವಿಚಾರ ಹೊಳೆಯಿತು.

ಸುಮಾರು ಹಿಂದೆ, ಆಕೆ ಒಂದು ಅಂಗಡಿಯನ್ನು ಕಂಡು ಬಂದಿದ್ದಳು. "ನೋಡಿ....ನನಗೆ ಜೀವ ಹೋಗುವಷ್ಟು ಬಾಯಾರಿಕೆ ಯಾಗುತ್ತಿದೆ. ಅಲ್ಲಿಗೆ ಹೋಗಿ ಒಂದು ಸೋಡಾನಾದ್ರೂ ತಂದ್ಕೊಡಿ....ಅಯ್ಯೋ ಅಯ್ಯಯ್ಯೋ..." ಆಕೆ ಅಲ್ಲೇ ಬಿದ್ದು ಬಿದ್ದು ಹೊರಳಾಡ ತೊಡಗಿದಳು. ಮತ್ತೂ ಮತ್ತೂ....."ಸೋಡಾ ತನ್ನಿ... ಸೋಡಾ ಒಂದು ತನ್ನೀಂತ್ರಿ" ಎಂದು ಕೂಗಿ ಕೊಂಡಳು.

"ಹಾಗಾದರೆ ಕಾರಿನಲ್ಲಿ ಹೋಗಿ ಮಲಗಿಕೊಳ್ಳಿ...ನಾನೀಗ ತರ್ತೀನೆ" ಎಂದು ಹೇಳಿ, ಆತ ಸಂದೇಹ ಪಡುತ್ತ ಹೊರಟ. ತನ್ನ ಕಾರ್ಯ ಫಲವೀಯುವ ಭರವಸೆದು ಸಂತಸದಿಂದ, ಆಕೆ ಮತ್ತೂ ಹೊರಳಾಡಿದಳು. ಆತ, ಹುಸ್ಸೇನ್ ಹಿಂದೆ ನೋಡುತ್ತಾ ಹೆಜ್ಜೆ ಹಾಕುತ್ತಿದ್ದವ, ಓಡ ತೊಡಗಿದ ಅಂಗಡಿಯತ್ತ. ಸುಮಾರು ಹೊತ್ತಿನ ತನಕ ಓಟದ ಸದ್ದು ಕೇಳಿ ಬಂದು, ಕೊನೆಗೆ ಅದೂ ಕೇಳಿಸದಂತಾಯಿತು.

ಪ್ರಭಾ, ಎದ್ದು ನಿಂತಳು. ಇಪ್ಪತ್ತರ ಹರೆಯದ ತರುಣನಂತೆ ನಿಂತಳು. ಇನ್ನು ಅವಳಿಗಿದ್ದುದೊಂದೇ ದಾರಿ....ಓಡುವುದು ....ಒಂದು ಮೈಲು ದೂರದ ಮುಂಬಯಿಯ ಪೇಟೆಗೆ ಓಡುವುದು....ಸರಿ, ಎಣಿಸುತ್ತಲೇ ಆಕೆ ಓಡ ತೊಡಗಿದಳು...

ಓಡಿದಳು.....ಪ್ರಭಾ, ಉಸಿರುಕಟ್ಟಿ ಓಡ ತೊಡಗಿದಳು. ಪೆಟ್ಟು ಬಿದ್ದ ಕುದುರೆಯಂತೆ ನಾಗಾಲೋಟದಿಂದ ಓಡ ತೊಡಗಿದಳು. ಹಿಂದೂ ಸ್ತ್ರೀಯ ಮಾನ ರಕ್ಷಣೆಗಾಗಿ ಓಡ ತೊಡಗಿದ್ದಳು..."ಬೇಡುವವರು ಪತಿವ್ರತೆಯರಲ್ಲ....ಮೂರು ಕಾಸಿಗೂ ಒಪ್ಪುವ ಸ್ತ್ರೀಯರವರು...." ಎಂದು ಬೀಡಿ ಕಟ್ಟುವ ಹುಡುಗರ ಮಾತನ್ನು, ಹಳಿಯುವ ಉದ್ದೇಶದಿಂದ, ಭಿಕ್ಷುಕಿಗೂ ಮಾನವಂತೆಯಾಗಿ ಬಾಳುವ ದಾರಿಯಿದೆ ...ಹಂಬಲವಿದೆ...ಶಕ್ತಿಯಿದೆ .... ಎಂದು ನೆನೆ ನೆನೆದು ಓಡಿದಳು.....

ಕಛೇರಿಯ ಪೋಲೀಸ್, ಒಂದರ ಬಳಿಕ ಒಂದು....ಒಟ್ಟು ಹನ್ನೆರಡು ಗಂಟೆ ಬಡಿದ! ಮೆಟ್ಟಲೇರಿದವಳೇ...ಮೂರ್ಛೆ ಹೋಗಿ ಬಿದ್ದಳು...

ಮುಂದೆ ಪ್ರಭಾಳಿಗೆ ಎಚ್ಚರವಾಗುವಾಗ ಸುಮಾರು ಹೊತ್ತು ಕಳೆದಿರಬಹುದು. ಬೆಳಗಿನ ಸೂಚನೆಯಿಂದ, ಮನೆಯ ಕೆಲಸದ ಸದ್ದು, ಆಚೀಚಿಂದ ಕೇಳಿ ಬರುತಿತ್ತು.

ಅವಳು ಎದ್ದು ನಿಂತಳು....

ಅವಳೆದುರಿಗೆ ತುಸು ದೂರದಲ್ಲಿ ಒಂದು ಅಗಲವಾದ ಮೇಜು. ಅದರ ಹಿಂದೆ ಒಂದು ಕುರ್ಚಿ. ಅಲ್ಲಿ ನ್ಯಾಯವೇ ಮೂರ್ತಿವೆತ್ತಂತೆ ಕುಳಿತಿತ್ತು ಒಂದು ವ್ಯಕ್ತಿ. ಅವರ ತಲೆಯ ಮೇಲೆಯೇ "ಎಲೆಕ್ಟ್ರಿಕ್ ಲೈಟ್" ಕೂಗು ಹಾಕಲ್ಪಟ್ಟಿದ್ದುದರಿಂದ, ಆಕೆಗೆ ಅವನ ಮುಖ ಕಾಣುತ್ತಿರಲಿಲ್ಲ. ಅಂತೂ ಮಾಟವಾಗಿ ಬಾಚಿ ತಿದ್ದಿದ ಮುದ್ದು ಮುದ್ದಾದ ಮುಂಗುರುಳು ಕಾಣಿಸುತಿತ್ತು.

ಎದ್ದು, ಗೋಡೆಗೆ ಒರಗಿ ನಿಂತಳು.

ನುತ್ತೊನ್ಮೆ, ಚೇತರಿಸಿಕೊಂಡು ಸುತ್ತಲೂ ದೃಷ್ಟಿಹರಿಸಿದಳು. ಕಲ್ಲಿನ ಗೋಡೆಗೆ ಸುಣ್ಣ ಬಳಿದಿತ್ತು. ಕೋಣೆಯಲ್ಲಿ ಮೇಜು ಕುರ್ಚಿಯಲ್ಲದೆ ಬೇರೇನೂ ಇರಲಿಲ್ಲ. ಕಸ ಒಂದು ಚೂರೂ ಆಕೆಗೆ ಕಂಡು ಬರಲಿಲ್ಲ. ಅದಕ್ಕಾಗಿ, ಆ, ಅಂದದ ಕೋಣೆಯನ್ನು, ಮತ್ತೊನ್ಮೆ ಕಾಣಬಯಸುತ್ತೇನೆಂದು ಆ ಮುಖ ಬಲಬದಿಗೆ ತಿರುಗಿಸಿದಳು.

"ಏನಾಯ್ತು ನಿಮಗೆ... ಯಾಕೆ ಇಲ್ಲಿ ಬಂದು ಬಿದ್ದಿದ್ದೀರಿ...." ಮೇಜಿನ ಕಡೆಯಿಂದ, ಆ ವ್ಯಕ್ತಿಯ ಸ್ವರ ಹೊರಟು ಬರುತಿತ್ತು....

ಪ್ರಭಾ.... ಆ ಸೀಜನ ಹೇಯ ಕೃತ್ಯಗಳನ್ನು ಹೇಳುವುದೋ ಬೇಡವೋ ಎಂದು ಸಂದೇಹಪಟ್ಟು, ನಾಚಿ, ಸುಮ್ಮಗಾದಳು....

"ಇಲ್ಲ.... ಏನೂ ಸಂಕೋಚವಿಲ್ಲದೆ ಹೇಳಿ.... ನಾವೂ ನಿಮ್ಮ ಕಷ್ಟಗಳನ್ನು ದೂರಮಾಡಲಿಕ್ಕಾಗಿಯೇ ನೇಮಕಗೊಂಡವರು. ಮಾನಭಂಗಗೈದವರನ್ನು ಶಿಕ್ಷಿಸುವುದು ನಮ್ಮ ಕರ್ತವ್ಯ.... ಏನೂ ಸಂಕೋಚವಿಲ್ಲದೆ ಹೇಳಿ...."

ಪ್ರಭಾಳಿಗೆ ತನ್ನ ಕಥೆ ಹೇಳುವುದೇ ಹಿತವೆಂದು ತೋರಿತು. ಈ ಪೋಲೀಸ್ ಅಧಿಕಾರಿಗಳಿಗೆ, ತಮಗಿಂತಲೂ ಸಾಹಸಿ ಹೆಂಗುಸು ಜಗತ್ತಿನಲ್ಲಿದೆಯೆಂದು ಗೊತ್ತಾಗಲಿ.... ಅದಕ್ಕಾದರೂ ಹೇಳುವುದು ಚಿತವೆಂದು ತಿಳಿದಳು....

"ನಾನು ಇಲ್ಲಿಯವಳಲ್ಲ.... ನನ್ನ ತಂದೆ ತಾಯಿಗಳ ಮುಖವನ್ನೇ ನಾನು ಕಂಡಿಲ್ಲ. ಅವರಾದರೂ—ನಾನು ಹುಟ್ಟಿದೊಡನೆ ಕತ್ತನ್ನು ಹಿಸುಕಿ ಕೊಂದುಹಾಕುವಷ್ಟು ಧೈರ್ಯವಂತರಾಗಿರಲಿಲ್ಲ. ನನ್ನನ್ನು ಯಾರಿಗೋ ದತ್ತಕ್ಕೆಂದು ಕೊಟ್ಟರಂತೆ.

"ಆ ಮನುಷ್ಯನನ್ನೇ ನಾನು 'ಅಪ್ಪ' ನೆಂದು ಕರೆಯುತ್ತಿದ್ದೆ. ಮಾತ್ರವಲ್ಲ ಅವನೂ ಮಗಳಂತೆ ನನ್ನನ್ನು ಕಂಡುಕೊಂಡಿದ್ದ. ನನಗಾಗಿ ರಾಜವೈಭವವಿತ್ತು. ನಾನು ಸುಖದ ಸಾಗರದಲ್ಲಿ ಬಾಲ್ಯವನ್ನು ಕಳೆದೆ.

"ಹದಿನಾಲ್ಕು ವರ್ಷವಾಗುತ್ತಲೇ ನನಗೆ ಮದುವೆಗೆ ಗಂಡುಗಳು ಗೊತ್ತಾದುವು. ಆದರೆ ನಾನೇ ಅವುಗಳನ್ನೆಲ್ಲಾ ತಿರಸ್ಕರಿಸುತ್ತಿದ್ದೆ. ಅಂತೂ ಕೊನೆಗೊಮ್ಮೆ ನಾನೊಂದು "ವರ"ನನ್ನು ಮೆಚ್ಚಬೇಕಾಯ್ತು. ಆತನೂ ನನ್ನನ್ನು ಮನಸಾರೆ ಮೆಚ್ಚಿದ. ನಾವಿಬ್ಬರೂ ಕೈ ಮೇಲೆ ಕೈಯಿಟ್ಟು, ಗಂಡಹೆಂಡಿರಾದೆವು.

"ನಾನು ಬಯಸಿದ ಸುಖ, ನನಗಲ್ಲಿ ದೊರೆಯಲಿಲ್ಲ. ಅವರು ತುಂಬಾ ಬಡವರು. ಆದರೂ ಗಂಡನ ಜೊತೆಗೆ ನಾನು ನಲಿದಾಡುತ್ತಿದ್ದೆ. ಆಗ ನನ್ನ ಬಳಿಯಲ್ಲಿ ನಾನು ನಿರೀಕ್ಷಿಸದ ಕಾರ್ಪೋರೆಡವೊಂದು ಕವಿಯಿತು.

"ಆತ ತನ್ನ ಮನೆಯವರ ಜೀವವನ್ನು ಳಿಸಲೆಂದು, ಮನೆಬಿಟ್ಟು ಹೊರಟ. ಮರಣದೊಡನೆ ಡೊಂಬರಾಟವಾಡಲು, ಅರೆ ಮನಸ್ಸಿನಿಂದ ಹೊರಟ. ಆದರೆ ಮೊದಲು ಮೊದಲು ಅವರ ಪತ್ರ ಬಂದಿತ್ತು. "ನಾನು ಸೈನ್ಯಕ್ಕೆ ಸೇರಿದ್ದೇನೆ. ಊಟ, ವಸ್ತ್ರ ಕೊಟ್ಟು ನೂರು ರೂಪ್ಯಾ ಕೊಡುತ್ತಾರೆ..." ಎಂದು. ತಂದೆ ಮಗನಿಗೆ ಸ್ವಲ್ಪ ಹಣ ಕಳಿಸಿ ಕೊಡೆಂದು ಕಾಗದ ಹಾಕಿದರು. ಯುದ್ಧದ ಸಮಯವಾದ್ದರಿಂದ ಅಂಗಡಿಯತ್ತ ಹೋಗುವುದೇ ಕಷ್ಟವಾಗಿತ್ತು. ಆದರೆ ಅವರಿಂದ ಹಣ ಬರಲಿಲ್ಲ. ಜೊತೆಗೆ ಪತ್ರವೂ ಬರುವುದು ನಿಂತಿತು.

"ನಾನು ಅಲ್ಲೇ ಒಂದೆರಡು ವರ್ಷ ನಿಂತೆ. ಮನೆಗೆ, ಅಪ್ಪನ ಮನೆಗೆ ಬರಬೇಕೆಂದು ಹವಣಿಸುತ್ತಿರುವಾಗಲೇ, ಹಾಸನದಿಂದ ಕಾಗದ ಬಂತು. 'ಅವರು ತೀರಿಹೋಗಿದ್ದಾರೆ. ಹೊಲಗದ್ದೆ ಮನೆ ಸುಲಗಾರರಿಗಾಯ್ತೆಂದು. ನಾನು ಸಂಪೂರ್ಣ ನಿರಾಶಳಾಗಿ, ಮಾವನ ಮನೆಯಲ್ಲಿ ಉಳಿದೆ.

ಆಕಸ್ಮಾತ್ ನನಗೆ ಅಲ್ಲಿಂದ ಹೊರಬಿಳಬೇಕಾಗಿ ಬಂತು. ಮುಂಬಾಯಿಗೆ ಅಲ್ಲಿರಲಾರದೆ ಹೊಂಟುಬಂದೆ. ಇಂ ಭಿಕ್ಷುಕಳಾಗಿ ಜೀವನ ಕಳೆಯತೊಡಗಿದೆ ಆದರೆ ಮಾನವಂತಳಾಗಿ.

ಅದಕ್ಕೂ ಕಲ್ಲು ಹಾಕಲೆಂದು ಹುಸ್ಸೇನೆಂಬ ಡ್ರೈವರ್ ಮುಂದೆ ಬಂದ ಕಾಗ ಅವನಿಂದ ಸಾರಾಗಿ ಬಂದೆ. ಚೂರಿಯಿದ್ದರೂ ಆತನ ಮೈಗೆ ಗಾಯಮಾತ್ರ ಬಂದೆ. ಧರ್ಮಕ್ಕೆ ಬಂದ ಚ್ಯುತಿಯನ್ನು ಹೋಗಲಾಡಿಸಿಕೊಂಡು ಬಂದೆ!"

ಆಕೆ ಮಾತು ಮುಗಿಸಿದಳು.

ಮುಗಿಸುತ್ತಲೇ, ಕುರ್ಚಿಯಲ್ಲಿನ ಶಕ್ತಿ ಕೇಳಿತು. "ಯಾರು...ಕಪ್ಪಗಿಗಿಡ್ಡ ಹುಸೇನನೇ....ನಮ್ಮ ಡ್ರೈವರ್ ..." ಅವರು ಆಶ್ಚರ್ಯದಿಂದ ಹುಬ್ಬ ಹಾರಿಸಿದರು.

ಆಚೆ ಈಚೆ ನಿಂತ ಪೋಲೀಸರೂ ಹುಬ್ಬ ಹಾರಿಸಿ, ಆಶ್ಚರ್ಯ ಸೂಚಿಸಿದರು.

"ನೀನು...ಹೆಣ್ಣಲ್ಲ ಗಂಡು...ಗಂಡು. ಅಲ್ಲ...ಅವನಿಗಿಂತಲೂ ಅಪ್ರತಿಮ ಸಾಹಸ ಮಾಡಿ ತೋರಿಸಿದ್ದಿ ... ನಾನು .. ನೆಂದು...."

ಆ ಸ್ವರ ಮಹಾ ಮಹಾ ಅಪರಾಧ ಮಾಡಿದ ಅಪರಾಧಿಯ ಸ್ವರದಂತೆ ಸಡಗುತಿತ್ತು. ಆತ ಅಲ್ಲಿರಲಾರದೆ ಎದ್ದು ಪಕ್ಕದ ರೂಮಿಗೆ ಹೊರಟ.

ಏಕ ವಚನದ ಸಂಬೋಧನೆಯ ಅರ್ಥ ಅರಿಯದೆ, ಪ್ರಭಾ, ಅವನ ವಾಕ್ಯವನ್ನು ಉಚ್ಚರಿಸುತ್ತ ಮೇಜಿನ ಬಳಿ ಬಂದಳು.

ಹೆಣ್ಣಲ್ಲ ಗಂಡು...ಹೆಣ್ಣಲ್ಲ ಗಂಡ

ಮೇಜಿನ ಮೇಲೆ ಆತ ಬರೆದುಕೊಂಡಿದ್ದ ಕಾಗದ ಪತ್ರಗಳು ಬಿದ್ದಿದ್ದ ಯಾಗಿತ್ತು. ಅಲ್ಲದೆ ಅರ್ಥಕ್ಕೆ ಅಳವಡಿಸಿದ್ದ....

ಪ್ರಭಾ ಕಲ್ಲಿನಂತೆ ನಿಂತು ಆ ಕೋಣೆಯನ್ನೇ ನೋಡತೊಡಗಿದಳು...ಏನೋ ಒಂದು ರೀತಿಯಾಯ್ತವಳಿಗೆ.

ಅಲ್ಲಿ ನಿಲ್ಲಲಾರದೆ ಎದ್ದು ಹೊರಗೆ ಬಂದಳು. ಅವಳಿಗೆ ತಾನೆಲ್ಲಿದ್ದೇನೆ ಎಂದು ಅರಿವೇ ಆಗಿರಲಿಲ್ಲ. ಆ ವ್ಯಕ್ತಿ ತನ್ನ ಗಂಡನೇ ಆಗಿರಬಹುದೇ? ಅದೇ ಪ್ರಶ್ನೆ ಅವಳ ಮುಂದೆ ಭವ್ಯಾಕಾರವನ್ನು ತಾಳಿ ನಿಂತಿತ್ತು.

ಆಕೆ ಹೊರಬಂದಳು....

ನೀಲವಾದ ಆಕಾಶದಲ್ಲಿ ಸೂರ್ಯನ ಹಳದಿ ಕಿರಣಗಳು ಮನಬಂದತ್ತ ಚಲಿಸುತ್ತಿದ್ದುವು. ಗೂಡಿನಿಂದ ಹಕ್ಕಿಗಳು ಉತ್ಸಾಹದ ಭರದಲ್ಲಿ ಕೂಗುತ್ತಾ ಹಾರುತ್ತಿದ್ದವು. ನಿದ್ರಿಸಿದ ಜಗತ್ತು ಎಚ್ಚತ್ತು ಹೊಸ ಕಾರ್ಯವನ್ನು ಗೈವಂತೆ ತೋರುತ್ತಿತ್ತು.

ತಾನೂ ಅದರಲ್ಲಿ ಭಾಗಿಯಾಗುವೆನೆಂದು ಪ್ರಭಾ ಕನಸಿನಲ್ಲೂ ಎಣಿಸಿರಲಿಲ್ಲ. ಬಾನನ್ನೆ ತೆರೆದ ಕಣ್ಣುಗಳಿಂದ ಕಾಣುತ್ತಿದ್ದಳು.

"ಪ್ರಭಾ....ಪ್ರಭಾತದ ನೊಬಗನ್ನು ಕಾಣುತ್ತಿಯಾ..." ಹಿಂದಿನಿಂದ ಕೇಳಿಬರುತ್ತು, ಮಧುರ ನುಡಿ, ಆಕೆಗೆ!!.....

Tel: 'BLUEYAGAR'. —— ಚಿನ್ನ ಮತ್ತು ವಜ್ರಗಳ ಆಧುನಿಕ ತವರುಮನೆ —— Phone: 374.

ಕೆ.ಆರ್.ಕೆ.ಶೇಟ್ ಡಯಮಂಡ್ ಮಾರ್ಟ್

ಸ್ಥಾಪನೆ:1919] ಚಿನ್ನ ಮತ್ತು ವಜ್ರದ ವ್ಯಾಪಾರಿಗಳು,(ಗವರ್ನ್‌ಮೆಂಟ್ ಕಾಲೇಜ್ ಎದುರುಗಡೆ)ಮಂಗಳೂರು. ಮಾಲಿಕ:ಕೆ.ಕೆ.ಆರ್.ಶೇಟ್

ಬಲಿಯ ದಾನ

ಕೆ. ವಾಸುದೇವಾಚಾರ್ಯ, ಉಡುಪಿ.

|| ೧ ||

ಅಶ್ವಮೇಧಾಧ್ವರದ ತೋಷ ಪಾಂಡವರ ವಿಜಯಘೋಷ!
ದ್ವಿಜರಿಗಾಯ್ತು ಆಭರಣ ಕೊರೆಯು ಅಲಸ್ಯ ವೇಷಭೂಷ!
ಬರಿದುಕೈಯೊ, ಇದು ಬಿರಿದಕೈಯೊ ಎಂದವನು ಬಗೆಯಲಿಲ್ಲ.
ತೆರೆದ ಕೈಗೆಲ್ಲ ಸುರಿದನೆಲ್ಲ ಬಹುಮೂಲ್ಯ ಒಡವೆಯಿಲ್ಲ.

|| ೨ ||

ನೂರು ಸಾವಿರದ ಜನಕೆ ದಿನಕೆ ಧರ್ಮಜನು ಧರ್ಮವಿತ್ತ!
ಧರ್ಮಜನ ಧರ್ಮಕೆಣೆಯಿಲ್ಲವೆಂದು ಅನ್ವರ್ಥ ಬಿರುದು ಪೊತ್ತ!
ಅಲಕಾವತಿಯೆ ಸೂರೆಯಾಯ್ತು ಧರ್ಮಜನ ಧರ್ಮ ನಿಧಿಗೆ
ತೋರದಾಯ್ತು ಆ ದೂರ ತೀರ ಜನ ಹರುಷದಂಭುನಿಧಿಗೆ!

|| ೩ ||

ಜನಸ್ತೋಮವನು ಕಂಡು ಹಿಗ್ಗಿ ಉಬ್ಬಿದನು ಧರ್ಮಬದ್ಧ
ಕೊಡುವ ಕೈಯ ಹಿರಿತನದ ಭಾವದಭಿಮಾನ ಹೃದಯದುದ್ದ
ಮೂಲೋಕವನ್ನು ಮುಟ್ಟದೇನು ಈ ದಾನ ಕೀರ್ತಿ ಮಹಿಮೆ!
ನೋಟದಲ್ಲಿ 'ಧರ್ಮಜನ ಧರ್ಮ'ವೆಂಬೊಂದು ಹೆಮ್ಮೆ ಹಿರಿಮೆ!

|| ೪ ||

ಪಾಂಡವರ ಹಿರಿಯನಾ ಧರ್ಮರಾಯನಾದರೇನು ಬಂತು!
ತನ್ನದೆಂಬ ಕೀಳ್ತನದ ಭಾವ ಬಿಡಲಿಲ್ಲವವನ ನಿಂತು!
"ಎನಿತು ಜನರು ನಾನಿತ್ತುದನ್ನು ಪಡೆದು ತಣಿಯುತಿಹರು!
ಮನೆಕಟ್ಟಿ ಬಾಳಿ ಸೊಗಸಿನಿಂದ ಜೀವನವ ನಡೆಸುತಿಹರು!"

|| ೫ ||

ಎಂಬ ಗರ್ವದಿಂದವನ ಮನವು ಬಾನಗಲ ಹಾರುತಿತ್ತು
ಏನು ಸಮಯವೊ ಸಜ್ಯತನನ್ನು ದುರ್ಭಾವ ಕಾಡುತಿತ್ತು!
ಅರಳಿ ನಿಂತ ಜೆಲುಕುಸುಮವನ್ನು ಕೊರೆ ಕೊರೆವ ಕೀಟದಂತೆ
ಭುಜನಿಮಿರುತಿರುವ ಧರ್ಮಜನೆದೆಯಲ್ಲಿ ಹೆಮ್ಮೆಯೂಟವಂತೆ!

|| ೬ ||

ಕಂಡನಂಜನೆಯ ತನಯ ಧರ್ಮಜನ ಅಹಂಭಾವ ರೂಪ
ಪಡೆವ ಕೈಯಾಗಿ ಬಂದು ನುಡಿದನವನೊಂದು ಸಿಡಿಲರೂಪ
"ಏನು ದೊರೆಯೆ," ಕೊಡುಗೈಯ ಹೊರೆಗೆ ಬಲಿಗಾಗಿ ನೀನವನ!
ಅಂಭುನಿಧಿಯೆದುರಿನೊಂದು ಹನಿಯು ಬಲಿಯೆದುರು ನಿನ್ನದಾನ!

|| ೭ ||

ಎತ್ತಿದಂಥ ಕೈ ಹಾಗೆ ನಿಂತಿತ್ತು ಕೇಳಿಸಿದ ಸಿಡಿಲ ನುಡಿಗೆ
ಯಾರೊ ಇವನೆಂಬ ಹೇಯ ಭಾವ ಕವಿದೆದೆಯ ತಮದ ಗೆರೆಗೆ
ನೋಡಿದನು ಧರ್ಮ ಬಿಸುನೋಟದಿಂದ ಬಲದಭಾಗದೆಡೆಗೆ
ಎಂದಿನಂತೆ ನಸುನಗುತಲಿದ್ದ ಕೃಷ್ಣ ತನ್ನ ಕಡೆಗೆ

|| ೮ ||

ಒಡನೆ ಹೃದಯದಲಿ ಸಿಗ್ಗು ಲಜ್ಜೆ ಹಡೆಯೊಡಿದಂತೆ ಆಯ್ತು!
ಅಭಿಮಾನದಿಂದ ಬಿಸಿಯೇರಿದೆದೆಗೆ ನೀರೆರೆದ ರೀತಿ ಆಯ್ತು!
"ಏನು ಕೃಷ್ಣ ಇದು! ಲಕ್ಷ ಲಕ್ಷ ಜನ ಪಡೆದು ತಣಿಯರೇನು?
ಬೊಕ್ಕಸವನೆಲ್ಲ ನಿನ್ನೆದುರು ನಾನು ಬರಿಗೈದುದಲ್ಲವೇನು?"

|| ೯ ||

ಎಂದು ನುಡಿಯುತಿರಲೆಂದಿನಂತೆ ನಸು ನಗುತಲಿದ್ದ ಕೃಷ್ಣ!
ಯುಧಿಷ್ಠಿರನ ಮೊಗದ ಮೇಲೆಲ್ಲ ವಿವಿಧ ಭಾವ ವರ್ಣ!
ನಡೆದನಾಕ್ಷಣದಿ ಪಾತಾಳ ತಳದ ಸುತಳಪುರಿಗೆ ಧರ್ಮ
ಜತೆಗೆ ಕೃಷ್ಣ! ಆ ಬಲಿಯ ದಾನದಾ ಅಳವನಳೆವ ಮರ್ಮ!

|| ೧೦ ||

ಬಲಿಯ ಅರಮನೆಯ ಹೆಬ್ಬಾಗಿಲಲ್ಲಿ ಗನಾಧಾರಿಯೆನಿಸಿ
ಕಾಯುತಿದ್ದ ತೂಕಡಿಸಿ ಕುಳಿತು ವಿಷ್ಣು ನುಡಿಯ ನಡೆಸಿ
ಕೇಳಿದುದನೆಲ್ಲ ನೀಡಬಲ್ಲನವ ಬಾಗಿಲನು ಕಾಯಬಲ್ಲ!
ತಿಳಿದಿದ್ದು ಎಲ್ಲ ತಿಳಿಯದಂತೆ ನಟಿಸುತಿಹನು ಮಲ್ಲ!

|| ೧೧ ||

ಏನು ನಿದ್ದೆಯಿದು ಮಹಾ ವಿಷ್ಣುವಿಗೆ ಪರಾಶ್ರಯ ಭಕ್ತಿಯಲ್ಲ!
ಹೊರಗಣ್ಣು ಮುಚ್ಚಿ ಒಳಗಣ್ಣು ತೆರೆದು ನೋಡುವಂಥ ಯುಕ್ತಿಯಲ್ಲ!
ಅಸುರನಾದರೇನಾ ಸುರಿಯ ಭಾವ ತೊರೆಯಲೊಲಿಯಬಲ್ಲ!
ದೇವಾಂಶ ಜಾತನಿರಬಾರದೇಕೆ ಕಪಟಿಗೊಲಿಯಲೊಲ್ಲ!

|| ೧೨ ||

ಎಚ್ಚರಿಸುತಿದ್ದ ವಿಷ್ಣುವನು ಕೃಷ್ಣ ಕೈಹಿಡಿಯುತಿದ್ದ ನೆತ್ತಿ
ಒಂದೆಶಕ್ತಿ ಎರಡು ರೂಪದಲಿ ನಲಿದಾಡುವಂಥ ಯುಕ್ತಿ
ಕಟಿಬಿರಿದು ರಿಪ್ಪೆ ನಡುಗಿತ್ತು ವಿಷ್ಣು ಗುಂಗಿನಲ್ಲಿ ನುಡಿದ
"ಯಾರು ನೀವು ಯುಗ ಕಳೆದ ಮೇಲೆ ಬಂದಿಹಿರಿ ಭಿಕ್ಷೆಗೆಂದು"

|| ೧೩ ||

ನಸು ಬಿಗಿಯಿತಾಗ ಧರ್ಮಜನ ಹುಬ್ಬು ವಿಷ್ಣು ನುಡಿದ ನುಡಿಗೆ
ಶ್ರುತಿಪಡಿಸುತಿದ್ದ ಕೃಷ್ಣ ಪಾಂಡವನ ಬಿರುದುಗಳನು ಅವಗೆ.
ಶತ ಸಹಸ್ರರಿಗೆ ಧರ್ಮವೀಯುತಿಹ ಧರ್ಮರಾಯನೀತ
ಚಂದ್ರವಂಶಲಲಾಮ! ಚತುರ್ದಶ ಭುವನ ಖ್ಯಾತನೀತ!

|| ೧೪ ||

ಭಿಕ್ಷೆಗೆಂದು ಬಂದಿಲ್ಲ ಇವನು ಭಿಕ್ಷಾರ್ಥಿಗಳಿಗೆ ದಾತ!
ನಿತ್ಯ ಭೋಜನವನಿತ್ತು ಪುನೀತ ಪ್ರಜಾಪ್ರೀತಿ ಪಾತ್ರ!
ನುಡಿದ ವಿಷ್ಣು "ಯಾರೊ ಇರಬಹುದು ಆದರೊಂದು ಚಿತ್ರ!
ಕೇಳಿಲ್ಲ ಹಿಂದೆ ಅವನದೊಂದು ವಿಚಿತ್ರ ರಾಜ್ಯ ಸೂತ್ರ!

|| ೧೫ ||

ಆ ರಾಜ್ಯದಲ್ಲಿ ಕೈಕಾಲ್ಗಳಿಲ್ಲ ಪ್ರಜಾಬಂಧುಗಳಿಗೆ?
ವೃಷ್ಟಾನ್ನದಂತೆ ಭಿಕ್ಷಾನ್ನತಿಂದು ಸುಖಿಪ ಸೋಮಾರಿಗಳಿಗೆ?
ಭಿಕ್ಷೆಗಾಗಿ ಕ್ವರೆಮಾಡಲಿಲ್ಲ ಎನಿತು ದುರ್ಭಿಕ್ಷೆಯಿಲ್ಲ?
ಪ್ರಜೆಗಳಾ ಸ್ಥಿತಿಗೆ ಬರಲು ರಾಜನೊಳು ಎನಿತು ಚುರ್ಬಲತೆಯಿಲ್ಲ?

|| ೧೬ ||

ಎಂಥ ರಾಜ್ಯವದು! ಎಂಥ ಪ್ರಜೆಗಳವರೆಂಥ ರಾಜನವನು!
ರಾಜ್ಯ ಶಾಸ್ತ್ರದಾ ನ್ಯಾಯನೀತಿಯೇನೆಂದು ತಿಳಿಯದೇನು?
ಆವ ರಾಜ್ಯದಲಿ ಭಿಕ್ಷೆಯನು ವೃತ್ತಿಯೆಂದು ತಿಳಿಯೆ ಜನರು
ಆ ರಾಜ್ಯವನ್ನು ಕೊರೆದು ಕ್ಷೀಣಿಸುವ ದುಷ್ಟ ಶಕ್ತಿಯವರು!

|| ೧೭ ||

ಕೀರ್ತಿಗೆಂದು ಪಾತ್ರತೆಯ ಮರೆತು ದಾನ ನೀಡುವವನು
ಬರಗಾಲವೆಂಬ ಭೂತವನ್ನು ರಾಜ್ಯಕ್ಕೆ ಕರೆಯುವವನು!
ಯುಗಗಳಿಂದ ಕಾಯುತಿಹೆನಾರು ಬಂದಿಲ್ಲ ಭಿಕ್ಷುಕಿಲ್ಲ!
ತಮ್ಮ ಮಡಿನೆಯಿಂದನ್ನ ಗಳಿಸಿ ಸುಖಿಸುತಿಹರೆಲ್ಲರಿಲ್ಲ"

|| ೧೮ ||

ನುಡಿಯುತಿರೆ ವಿಷ್ಣು, ಧರ್ಮರಾಜ ಹೊರಳಿಸಿದ ದೃಷ್ಟಿ ಬಲಕೆ
ಎಂದಿನಂತೆ ನಸುನಗುತಲಿದ್ದ ಕೃಷ್ಣ ತನ್ನ ಕಡೆಗೆ!
ಆವಿಷೇಕಪೂರ್ಣ ಕಭಿಮಾನಕಾಗಿ ತಲೆ ತಗ್ಗಿಸಿದ ಧರ್ಮರಾಯ!
ಹೊಂಟಿತ್ತು ಕವಿದ ತಮದ ಹೊಗೆಯು ಬೆಳಗಿದನು ಕೌಂತೇಯ!

|| ೧೯ ||

ನಡೆದನಲ್ಲಿಂದ ವಿಷ್ಣುವಿಗೆ ನಮಿಸಿ ಹಸ್ತಿನಾವತಿಯಪುರಿಗೆ
ಜ್ಞಾನವೆಂಬ ಹೊಳೆಯಲ್ಲಿ ಮಿಂದು ತೆರಳಿದನು ರಾಜ್ಯಗುಡಿಗೆ
ಸಮಯ ಗತಿಯಿಂದೆ ಅಮೃತದಲ್ಲು ಕಹುರಸವು ತೋರಬಹುದು!
ಅಸುರನೆದೆಯಲ್ಲು ದೈವಿಕತೆರೂಪ ಮನೆಯ ಮಾಡಬಹುದು.

ದೀಪಾವಳಿಯ ಶುಭಾಶಯಗಳು!

ದಿ ವಿಜಯ ಬೇಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬೇಂಕ್. ಸ್ಥಾಪನೆ: 1931

ರಿಜಿಸ್ಟರ್ಡ್ ಆಫೀಸು:
ವಿಜಯ ಬೇಂಕ್ ಬಿಲ್ಡಿಂಗ್, ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು-3, ಸೌತ್ ಕೆನರಾ.

ಕಾಯಂ ಠೇವಣಾತಿ ಬಡ್ಡಿ ದರವನ್ನು ಶೇಕಡ 5½ರ ವರೆಗೆ ಹೆಚ್ಚಿಸಲಾಗಿದೆ.

ಏಳು ದಿವಸದ ನೋಟೀಸಿನಲ್ಲಿ ಕೇಳಿದಾಗ್ಯೆ ಹಿಂದೆ ಪಡೆಯುವ ಡಿಪೋಸಿಟುಗಳನ್ನು (Call Deposits) ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸೋಣಾಗುತ್ತದೆ.

ಹೆಚ್ಚಿನ ಮಾಹಿತಿಗೆ ನಮ್ಮ ಶಾಖೆಗಳಲ್ಲಿ ದಯವಾಡಿ ವಿಚಾರಿಸಿರಿ.

THE VIJAYA BANK LTD.

ಆಧುನಿಕ ಫ್ಯಾಷನ್ನಿನಲ್ಲಿ ಕಂಗೊಳಿಸಿರಿ

"ಮೈಸೂರು ಗೌರ್ನಮೆಂಟ್ ಸಿಲ್ಕ್ಸ್"

ನೂರಕ್ಕೆ ನೂರರಷ್ಟು ಶುದ್ಧವಾದ ಮೈಸೂರು ಗೌರ್ನಮೆಂಟ್ ಸಿಲ್ಕ್ ಸೀರೆಗಳು, ಜಾರ್ಜಿಟ್‌ಗಳು, ಕ್ರೇಪುಗಳು ಇವುಗಳನ್ನು ಧರಿಸಿರಿ. ಅವು ನಯವಾಗಿವೆ. ಅಷ್ಟೇ ಅಲ್ಲ—ನಯನಮನೋಹರ ಬಣ್ಣಬಣ್ಣಗಳಲ್ಲಿಯೂ ದೊರೆಯುತ್ತವೆ. ಬಾಳಿಕೆಗೂ ಹೆಸರಾಗಿವೆ.

ಆದ್ದರಿಂದಲೇ ಅವು ಜನಾದರಣೀಯವಾಗಿವೆ.

ಬೆಂಗಳೂರಿನ ಕೆಂಪೇಗೌಡ ರಸ್ತೆಯಲ್ಲಿರುವ ಅಲಂಕಾರ್ ಚಿತ್ರಮಂದಿರದ ಎದುರಿನಲ್ಲಿ ಹೊಸದಾಗಿ ಷೋ ರೂಮನ್ನು ತೆರೆಯಲಾಗಿದೆ.

ಮೈಸೂರು ಗೌರ್ನಮೆಂಟ್ ಸಿಲ್ಕ್ ವೀವಿಂಗ್ ಫ್ಯಾಕ್ಟರಿ, ಮೈಸೂರು.

ಶ್ರೀ ಅಂಬಾಳೋರವರ

ಆಫೀಸರ್ಸ್ ನಶ್ಯದ

ಒಂದೇ ಒಂದು ಚುಟಿಕೆಯು ಬಹು ಚಮತ್ಕಾರಕವಾಗಿ ಕೆಲಸಮಾಡುತ್ತೆ.

Just a pinch does all the trick

ವಿಜ್ಞಾನ ಶಾಸ್ತ್ರ ರೀತ್ಯ ಅಪ್ಪಟ ಮೂಲ ವಸ್ತುಗಳಿಂದ ತಯಾರಿಸಲ್ಪಡುವುದು.

ಶ್ರೀ ಅಂಬಾಳ್ ಅಂಡ್ ಕೊ.,
ಪಿ. ಬಿ. ನಂಬ್ರ 3, ಮದ್ರಾಸು-1.

ಎಂ. ಗಣಪಯ್ಯ & ಸನ್

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ, ಮಂಗಳೂರು.

ಇವರ 1876ರಿಂದಲೂ ಪ್ರಸಿದ್ಧಿ ಹೊಂದಿದ ಔಷಧಿಗಳು

ದೇಹಪುಷ್ಟಿ ಲೇಹ— (ಸುವರ್ಣ ಸಾಲಾಮಿಶ್ರಿ, ಕಲ್ಮದ ಮಿಶ್ರ) ಶರೀರದ ಉಸ್ಸತ್ತೆ, ಸೊಂಟನೋವು, ಕೈಕಾಲು ಬಚ್ಚುವುದು, ಒಳಜ್ವರ, ಅಶಕ್ತತೆ ಮಲಬದ್ಧತೆ ಇವುಗಳನ್ನೆಲ್ಲ ಹೋಗಲಾಡಿಸಿ, ಶಕ್ತಿಯನ್ನುಂಟುಮಾಡುವುದು.

ಪೌಂಡು 1ಕ್ಕೆ ರೂ. 7, ½ಪೌಂ. ರೂ. 4.

ಕಸ್ತೂರಿ ಮಿಶ್ರಣ ದಶಮೂಲ— ಇದು, ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅತ್ಯೋಷ್ಣ ಶಕ್ತಿವರ್ಧಕ ರಸಾಯನ. ರಕ್ತಧಾತುವು ಅಭಿವೃದ್ಧಿಯಾಗಿ ಬಾಣಂತಿಯರು ಪುಷ್ಟಿ ಹೊಂದುವರಲ್ಲದೆ ಶಿಶುವಿಗೂ ಧಾರಾಳವಾಗಿ ಹಾಲು ಸಿಗುವಂತೆ ಮಾಡುವುದು

24 ಔಂ. ಬಾ. ರೂ. 6—0—0 12ಔಂ ರೂ. 3—0—0. 8ಔಂ, 2—0—0

ಚವನ ಪ್ರಾಶ— ಬಂಗಾರ ಮಿಶ್ರ ಅತ್ಯಂತ ಶಕ್ತಿವರ್ಧಕ, ಕೆಮ್ಮು, ಉಬ್ಬಸ ಇವುಗಳ ಮೇಲೆ ದಿವ್ಯ ಔಷಧಿ. ರಾತ್ಲು 1ಕ್ಕೆ ರೂ 6—0—0, ½ರಾತ್ಲು ರೂ. 3—25

ಕಸ್ತೂರಿ ಮಿಶ್ರ ದಶಮೂಲಾರಿಷ್ಟ— ಅರುಚಿ, ವಾಂತಿ, ಅಜೀರ್ಣ, ಅಗ್ನಿಮಾಂದ್ಯ ಆಶಕ್ತಿ, ಕಫ, ಕೆಮ್ಮು, ದಮ್ಮು, ಕಾಮಲೆ, ವಾತ, ಒಳಜ್ವರ ಮೊದಲಾದುವುಗಳನ್ನು ಗುಣಪಡಿಸುವುದು. ಇದನ್ನು ಬಾಣಂತಿಯರು ಸಹ ಉಪಯೋಗಿಸಬಹುದು. 24ಔ ಬಾ. ರೂ. 4–50, 16 ಔಂ. ರೂ 3–25, 12ಔಂ. 2–50; 8ಔಂ. 1.75.

ಔಷಧಿ ಸಿಗುವ ಸ್ಥಳ.— (1) ನ್ಯೂ ಕೆನರಾ ಜನರಲ್ ಸ್ಟೋರ್ಸ್; ವಿಕ್ಟೋರಿಯಾ ಗಾರ್ಡನ್ ರೋಡ್, ಬ್ಯಾಕುಲ್ಲಾ ಮುಂಬೈ (2) ಶ್ರೀ ವೆಂಕಟೇಶ ಪ್ರೊವಿಜನ್ ಅಂಡ್ ಜನರಲ್ ಸ್ಟೋರ್ಸ್, ಶೇಷಾದ್ರಿಪುರಂ, ಬೆಂಗಳೂರು. (3) ಕೆನರಾ ಸ್ಟೋರ್ಸ್, ಮಡಿಕೇರಿ, (4) ಜ್ವರಾರಿ ಕಂಪೆನಿ, ಶಿವಮೊಗ್ಗಾ.

ಪೋಸ್ಟ್ ಮುಂಖಾಂತರ ಔಷಧಿ ಬೇಕಾದವರು ಔಷಧಿ ಕ್ರಯದ ಅರ್ಧಾಂಶ ಹಣವನ್ನು ಮನಿಯಾರ್ಡರ ಮೂಲಕ ರವಾನಿಸತಕ್ಕದ್ದು

ಎಲ್ಲರಿಗೂ ನಮ್ಮ ವಂದನೆಗಳು

* * * * * * * *

ನಮ್ಮೆಲ್ಲ

ಭಾಗೀದಾರರಿಗೂ, ಠೇವಣಾತಿದಾರರಿಗೂ, ಇನ್ನಿತರ ಗ್ರಾಹಕರಿಗೂ,
ಹಿತಚಿಂತಕರಿಗೂ — ಕೊನೆಯದಾಗಿ

ಎಲ್ಲರಿಗೂ

ದೀಪಾವಳಿಯ

ಈ ಶುಭ ಸಂದರ್ಭದಲ್ಲಿ

ನಮ್ಮ ಹಾರ್ದಿಕ ವಂದನೆಗಳು; ಶ್ರೇಯೋಭಿವೃದ್ಧಿಗಾಗಿ ಶುಭಾಶಯಗಳು !

॥ ಸರ್ವೇ ಜನಾಃ ಸುಖಿನೋ ಭವಂತು ॥

ದಿ

ಕೆನರಾ ಬೇಂಕಿಂಗ್ ಕೊರ್ಪೋರೇಶನ್ ಲಿಮಿಟೆಡ್

(ಸ್ಥಾಪನೆ: 1906)

ರಿಜಿಸ್ಟರ್ಡ್ ಆಫೀಸು:
ಉಡುಪಿ

||

ಆಡಳಿತ ಆಫೀಸು:
ಮಂಗಳೂರು

Visit and be satisfied.

Laxmi Jewelleries

Reliable & Genuine Gold Articles and Pure Silver Presentation Articles. All kinds of Fashionable Jewellery made to order.

Ideal Cloth Stores

Reliable house for all varieties of sarees and other pattern cloth.

Ideal Studio

Photography at its best. Enlargements and Oil Paintings a speciality.

Ideal Buildings, Ideal Square,

TENKAPET,

UDIPI.

ದೀಪಾವಳಿಯ ಹಾರ್ದಿಕ ಶುಭಾಶಯಗಳು !

•

ಸ್ಥಾಪನೆ: 1924

ದಿ ಕರ್ಣಾಟಕ ಬೇಂಕ್ ಲಿಮಿಟೆಡ್

(ಶೆಡ್ಯೂಲ್ಡ್ ಬೇಂಕ್)

ರಿಜಿಸ್ಟರ್ಡ್ & ಹೆಡ್ ಆಫೀಸು: ಡೊಂಗರಕೇರಿ, ಮಂಗಳೂರು—3.

ಈ ಕೆಳಗಿನ ಏರಿಸಿದ ಬಡ್ಡಿದರಗಳಲ್ಲಿ ಠೇವಣಾತಿಗಳನ್ನು
ಸ್ವೀಕರಿಸಲಾಗುವುದು.

ಒಂದರಿಂದ ಎರಡು ತಿಂಗಳುಗಳ ವರೆಗೆ	....	ಸಾ॥ ಸೇಕಡಾ 3-75	ನ.ಪೈಸೆ
ಮೂರರಿಂದ ಐದು ತಿಂಗಳುಗಳ ವರೆಗೆ	....	,, 4-25	,,
ಆರು ತಿಂಗಳುಗಳಿಂದ 12 ತಿಂಗಳುಗಳ ವರೆಗೆ	....	,, 4-50	,,
12 ತಿಂಗಳು ಮಿಕ್ಕಿ 24 ತಿಂಗಳುಗಳ ವರೆಗೆ	....	,, 4-75	,,
24 ತಿಂಗಳು ಮಿಕ್ಕಿ 48 ತಿಂಗಳುಗಳ ವರೆಗೆ	....	,, 5-00	,,
48 ತಿಂಗಳುಗಳಿಗೆ ಮಿಕ್ಕಿ	....	,, 5-25	,,

ಸೇವಿಂಗ್ಸ್ ಬ್ಯಾಂಕ್ ಬಡ್ಡಿ ದರವನ್ನು
ಸಾ. ಸೇಕಡ 2½% ರಿಂದ 3¼%ಗೆ ಏರಿಸಲಾಗಿದೆ.

THE KARNATAKA BANK LIMITED.

LICENCE No. 31
Licenced to Post without Prepayment

ತಮಸೋ ಮಾ ಜ್ಯೋತಿರ್ಗಮಯ...

ಕತ್ತಲೆಯಿಂದ ಪ್ರಕಾಶದೆಡೆಗೆ,
ಅಭಿವೃದ್ಧಿ—ಪ್ರಗತಿಗಳೆಡೆಗೆ
ಮುನ್ನಡೆಯಬೇಕೆಂಬುದರ
ಸಂಕೇತವಾದ

ದೀಪಾವಳಿಯು

ತುಂಬುಸಂಖ್ಯೆಯ ನಮ್ಮ
ಗ್ರಾಹಕರಿಗೆ, ಹಿತಚಿಂತಕರಿಗೆ
ಶುಭ—ಶ್ರೇಯಸ್ಸುಗಳನ್ನು,
ವ್ಯವಹಾರದಲ್ಲಿ ಸಮೃದ್ಧಿಯನ್ನು
ತರಲಿ.

ಶುಭಾಶಯಗಳೊಂದಿಗೆ:

ನಿಮ್ಮ

ಸಿಂಡಿಕೇಟ್ ಬೇಂಕ್

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್

Edited, Printed & Published by K H Shetty at the Navayuga Press Udipi, S. India.

ಮ್ಮ ಯಾವತ್ತೂ
ಕೃಣ ಕೆಲಸಗಳಿಗೆ
ಮಾಡಿ ವಿಚಾರಿಸಿರಿ:
ನವಯುಗ ಪ್ರೆಸ್,
ಉಡುಪಿ

ರಾಷ್ಟ್ರೀಯ ವಾರಪತ್ರಿಕೆ. ಬೆಲೆ: 13 ನ.ಪೈಸೆ

ನವಯುಗ

KANNADA — NAVAYUGA — WEEKLY

ವಿದ್ಯಾರ್ಥಿಗಳಿಗೆ
ಮತ್ತು ವಯಸ್ಕರಿಗೆ
ಅತ್ಯುಪಯೋಗೀ ಪುಸ್ತಕ
ಸುಲಭದಲ್ಲಿ ಇಂಗ್ಲಿಷ್
(ಆಂಗ್ಲ ಸ್ವಯಂಬೋಧಿನಿ)
ನವಭಾರತ ಪುಸ್ತಕ ಭಂಡಾರ
ಉಡುಪಿ

ಸಂಪುಟ ೪೧ ಸಂಚಿಕೆ ೧೧ | ಉಡುಪಿ 16—11—1961 ಗುರುವಾರ | Vol. 41 No. 11

ಶಾಂತಿದೂತನ ಶಾಂತಿ ಯಾತ್ರೆ



ಶ್ರೀ ನೆಹರು

ಪ್ರಪಂಚದ ಎಲ್ಲ ರಾಷ್ಟ್ರಗಳ ಮೆಚ್ಚು ಗೆಯನ್ನು ಪಡೆದ ಕೆಲವೇ ಜಾಗತಿಕ ಮುಖ್ಯ ವ್ಯಕ್ತಿಗಳ ಸಾಲಿನಲ್ಲಿ ಸೇರಿರುವ ಪಂಡಿತ ನೆಹರುರವರು ಇತಿಹಾಸ ಪ್ರಸಿದ್ಧ ಯಾತ್ರೆಯನ್ನು ಕೈಗೊಂಡಿದ್ದಾರೆ. ವಿಶ್ವದ ಪ್ರಮುಖ ರಾಷ್ಟ್ರಗಳ ನಡುವೆ ವಿರಸವು ಉಲ್ಬಣಿಸಿ ಮಟ್ಟವನ್ನು ಏರಿಕೊಂಡು ಶಾಂತಿಯು ಕದಡಿರುವ ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ನೆಹರು ಕೈಗೊಂಡುದು ಶಾಂತಿ ಯಾತ್ರೆಯೆಂದು ಹೇಳಬಹುದು. ರಶ್ಯ ದ ನಾಯಕರು ಎಡೆಬಿಡದೆ ಅಣ್ವಸ್ತ್ರಪ್ರಯೋಗಕೆಯನ್ನು ಪರೀಕ್ಷಾರ್ಥವಾಗಿ ಸ್ಫೋಟನ ಮಾಡಿಸುತ್ತ ಬಂದು ವಾತಾವರಣವನ್ನೇ ಉಷ್ಣಗೊಳಿಸುತ್ತಿರುವ ಈ ಸಮಯದಲ್ಲಿಯೇ ಅಮೆರಿಕ ಕೂಡ ಅಣ್ವಸ್ತ್ರಪ್ರಯೋಗಗಳನ್ನು ಮುಂದುವರಿಸುತ್ತಿದೆ. ಜಾಗತಿಕ ಶಾಂತಿಯ ಮೇಲೆ ಪ್ರಭಾವ ಹರಿಸಿ, ಲಯನ್ನು ಕೆಡಿಸುವ ಇಂತಹ ಅಣ್ವಸ್ತ್ರಪ್ರಯೋಗದ ಸಮಸ್ಯೆಯಲ್ಲದೆ ಬರ್ಲಿನ್ ನಗರದ ಸಂಬಂಧದಲ್ಲಿ ಪೂರ್ವ ಪಶ್ಚಿಮ ರಾಷ್ಟ್ರಗಳ ನಡುವಿರುವ ಭಿನ್ನಾಭಿಪ್ರಾಯ ಮತ್ತು ದ ರಾಷ್ಟ್ರಗಳಲ್ಲಿ ತ್ವರಿತ ಗತಿಯಲ್ಲಿ ಹರಡುತ್ತಿರುವ ಕಮ್ಯುನಿಜಂ ಪ್ರಭಾವಗಳು ದಕ್ಷಿಣ ವಿಯಟ್ ನಾಂ, ಲಾವೋಸ್ ಕಾಂಗೊ ಮೊದಲಾದೆಡೆ ಎದ್ದ ವಿಕ್ಷುಬ್ಧ ಪರಿಸ್ಥಿತಿಗಳು ಸಮಾಧಾನಕರವಾಗಿ ಬಗೆಹರಿಯಬೇಕೆಂಬ ಅಭಿಲಾಷೆಯೆಲ್ಲರಿಗಿದ್ದರೂ, ಅವುಗಳ ಪರಿಹಾರದಲ್ಲಿ ಯಾರೂ ಗಣನೀಯಾಮಕಾರಿಯೆನಿಸುವಷ್ಟು ಆಸಕ್ತಿಯನ್ನು ವಹಿಸುತ್ತಿಲ್ಲವೆಂಬುದು ಶೋಚನೀಯ. ಇಂತಹ ವೇಳೆ ಶಾಂತಿದೂತ ನೆಹರು ಬ್ರಿಟಿಷ ಪ್ರಧಾನಿ ಮ್ಯಾಕಮಿಲನ್ ಮತ್ತು ಅಮೆರಿಕನ್ ಅಧ್ಯಕ್ಷ ಕೆನ್ನೆಡಿಯವರನ್ನು ಭೆಟ್ಟಿಯಾಗಿ ಈಯೆಲ್ಲ ವಿಷಯದಲ್ಲಿ ಪ್ರತ್ಯಕ್ಷಾತಾಪನದಿಂದ ಮಾತುಕತೆ ನಡೆಸಿದುದರಿಂದ ವಾತಾವರಣ ತಿಳಿಗೊಳ್ಳಬಹುದೆಂಬ ನಿರೀಕ್ಷೆಯಿದೆ.

ಕಾಂಗೋವಿನಲ್ಲಿ ಭಾರತೀಯ ಸೇನೆಯು ಅನುಸರಿಸಿದ ನೀತಿ ಮತ್ತು ಕೈಗೊಂಡ ಕಾರ್ಯಕ್ರಮಗಳ ಕುರಿತಾಗಿ ಬ್ರಿಟನ್ನಿನಲ್ಲಿ ತೀವ್ರವಾದ ವಾಗ್ಬಾಣಗಳು ಸುರಿಯಲ್ಪಡಿತ್ತಿದ್ದುವು ಇದರಿಂದ, ಭಾರತದ ಕಡೆಗೆ ಬ್ರಿಟನ್ನವು ವಕ್ರದೃಷ್ಟಿಯಿಂದ ನೋಡುತ್ತಿರ ಬೇಕೆಂಬ ಸಂದೇಹಕ್ಕೆ ಆಸ್ಪದವಿದ್ದು, ಉಭಯ ರಾಷ್ಟ್ರಸ್ನೇಹಾಕಾಂಕ್ಷಿಗಳಿಗೆ ಬೇಸರವನ್ನು ತಂದೊಡ್ಡಿತ್ತು. ಆದರೆ, ಇಂತಹ ಅಸಮಾಧಾನವು ಪ್ರತ್ಯಕ್ಷತದರ್ಶನದಿಂದ ದೂರವಾಯ್ತೆಂದು ತಿಳಿಯಬಹುದು ಪ್ರಧಾನಿ ನೆಹರು ಭಾರತದ ನಿಲುಮೆಯ ಸಂಯುಕ್ತರಾಷ್ಟ್ರ ಸಂಘದ ಅಜ್ಞೆಗೆ ಎಂದಿಗೂ ವಿರುದ್ಧವಾಗಿಲ್ಲವೆಂಬುದನ್ನು ಶ್ರುತಪಡಿಸಿ, ಭಾರತದ ಕಡೆಗೆ ಮೈತ್ರಿಮಿಲನರಿಟ್ಟಿದ್ದ ದುರ್ಭಾವನೆಗಳನ್ನು ದೂರಮಾಡಿದರೆಂಬುದು ಸಮಾಧಾನದ ಸಂಗತಿಯಾಗಿದೆ.

ಪಂಡಿತ ನೆಹರು ಬರ್ಲಿನ್ ಕಟಕ್ಕ ರಾಷ್ಟ್ರಗಳ ಸಮ್ಮೇಳನದಿಂದ ಇತ್ತೀಚೆಗೆ ರಶ್ಯವನ್ನೂ ಸಂದರ್ಶಿಸಿ ಬಂದವರು. ಜರ್ಮನಿಯ ಪ್ರಶ್ನೆಯ ಬಗ್ಗೆ ಆಗ ಉಭಯ ರಾಷ್ಟ್ರನಾಯಕರ ನಡುವೆ ಬಿಚ್ಚುಮನಸ್ಸಿನ ಮಾತುಕತೆ ನಡೆದಿತ್ತು. ಈಗ ಅಮೆರಿಕೆಯಲ್ಲಿ ಅಧ್ಯಕ್ಷ ಕೆನ್ನೆಡಿಯವರನ್ನೂ ಭೆಟ್ಟಿಯಾದ ನೆಹರು ಮತ್ತೆ ಈ ಜಾಗತಿಕ ಸಮಸ್ಯೆಯ ಕುರಿತಾಗಿ ಮಾತಾಡಿದುದರಿಂದ ಸಮಸ್ಯೆ ಬಗೆಹರಿಯುವ ಮಾರ್ಗಗಳು ಒಂದಷ್ಟಾದರೂ ತಿಳಿಯೊದಾವೆಂದು ಊಹಿಸಬಹುದು. ಇತ್ತೀಚೆಗೆ ನಿಶ್ಶಸ್ತ್ರೀಕರಣದ ಗೊತ್ತುವಳಿಯ ಬಗ್ಗೆ ಸಂಯುಕ್ತರಾಷ್ಟ್ರಸಂಘದಲ್ಲಿ ಭಾರತವು ತಂದಿಸಿದ ಗೊತ್ತುವಳಿ ಮತ್ತು ಅದರ ಮೇಲೆ ಭಾರತೀಯ ಪ್ರತಿನಿಧಿಗಳು ಮಾಡಿದ ಭಾಷಣಗಳು ಕಮ್ಯುನಿಸ್ಟ್ ರಾಷ್ಟ್ರವನ್ನು ಬೆಂಬಲಿಸುವಂತಿತ್ತೆಂಬ ಆರೋಪವನ್ನು ಅಮೆರಿಕೆಯು ಹೊರಿಸಿತ್ತು. ಇದರಿಂದಾಗಿ, ಭಾರತ—ಅಮೆರಿಕೆಗಳ ಸ್ನೇಹ ಸಂಬಂಧಕ್ಕೆ ದಕ್ಕೆಯೊದಗೀತೆಂಬ ಭೀತಿಯೂ ಇತ್ತು. ನಮ್ಮ ದೇಶದ ಅಭಿವೃದ್ಧಿಯೋಜನೆಗಳಿಗಾಗಿ ರಶ್ಯಕ್ಕಿಂತಲೂ ಅಮೆರಿಕೆಯ ನೆರವನ್ನೇ ಹಾರೈಸುವ ಅಗತ್ಯ ಹೆಚ್ಚಿರುವುದರಿಂದ ಅದರೊಡನೆ ನಮ್ಮ ಕಟ್ಟೆಕೊಳ್ಳುವುದು ಎಂದಿಗೂ ಸಾಧ್ಯವಿಲ್ಲ. ಹಾಗಿರುವಾಗ, ಭಾರತದ ದೃಢ ಮತ್ತು ಸ್ವಿಷ್ಟನಿಲುಮೆಯೇನೆಂದು ಅಮೆರಿಕೆಗೆ ತಿಳಿಸಿ ಹೇಳುವುದು ಅನಿವಾರ್ಯವಾಗಿತ್ತು. ಭಾರತವು ಯಾವ ಬಣಗಳಿಗೂ ಸೇರದೆ, ತಟಸ್ಥವಾಗಿ, ನ್ಯಾಯ ಮತ್ತು ಲೋಕ ಕಲ್ಯಾಣದ ಪಕ್ಷವನ್ನು ನೆಮ್ಮ ಸರ್ವರ ಸಹಕಾರದಿಂದ ಅಭಿವೃದ್ಧಿ ಪಡದತ್ತ ಮುನ್ನಡೆಯುವ ರಾಷ್ಟ್ರ ಈ ಸತ್ಯವನ್ನು ಜಾನ್ ಕೆನ್ನೆಡಿಯವರಿಗೆ ಬಹಳ ಖಂಡಿತವಾಗಿ ತಿಳಿಯಪಡಿಸಿದ ನೆಹರು ಉಭಯ ತರ ನಡುವಿದ್ದ ವಿರಸ ಪ್ರಸಂಗವನ್ನು ಕಡಿಮೆ ಮಾಡಿದರೆನ್ನಬಹುದು. ಇದರಿಂದಾಗಿಯೇ ಲಿಂಕನ್—ರೂಜ್‌ವೆಲ್ಟರ ಸಾಲಿಗೆ ಇವರನ್ನು ಕೆನ್ನೆಡಿ ಸೇರಿಸಿ ಗೌರವಿಸಿದರು.

ನಿಶ್ಶಸ್ತ್ರೀಕರಣದ ಪ್ರಶ್ನೆ ಅತಿ ಗಂಭೀರವಾದುದು. ಇದನ್ನು ಹೇಗೆ ಸಾಧಿಸಬೇಕು ಎಂಬುದೊಂದು ಯಕ್ಷ ಪ್ರಶ್ನೆ. ಈ ಪ್ರಶ್ನೆಯ ಉತ್ತರವು ಹಲವಾರು ಮುಖವಾಗಿ ಹೊರ ಬರುತ್ತಿದೆ. ನಿಶ್ಶಸ್ತ್ರೀಕರಣವನ್ನು ಒಮ್ಮೆಲೇ ಎಲ್ಲರೂ ಸಾಧಿಸಬೇಕೆಂದುವಾದ ಮಾಡುವವರು ಕೆಲವರಿದ್ದಾರೆ. ಹಂತ ಹಂತವಾಗಿ ಇದನ್ನು ವ್ಯವಹೃತಗೊಳಿಸಬೇಕೆಂದು ಇನ್ನು ಕೆಲವರು ವಾದಿಸಿದರೆ, ಸರಿಯಾದ ನಿಯಂತ್ರಣವನ್ನು ಹೇರಿಯೇ ನಿಶ್ಶಸ್ತ್ರೀಕರಣವಾಗಬೇಕೆಂದು ಹೇಳುವವರು ಮತ್ತೆ ಕೆಲವರು. ಈ ಎಲ್ಲ ವಾದಗಳಲ್ಲಿ ಸ್ವಲ್ಪ ಸ್ವಲ್ಪ ತಥ್ಯಾಂಶವಿದೆಯೆಂಬುದು ನಿಜವಾದರೂ ಏಕ ಪಕ್ಷೀಯವಾಗಿ ಇದನ್ನು ಒಪ್ಪಿಕೊಳ್ಳಲು ಯಾರೊಬ್ಬರಿಗೂ ಮನಸ್ಸಿಲ್ಲ. ಅಮೆರಿಕೆಯಾಗಲಿ, ರಶ್ಯವಿರಲಿ ನಿಶ್ಶಸ್ತ್ರೀಕರಣವನ್ನು ಕೈಗೊಳ್ಳಲು ಉತ್ಸಾಹವನ್ನು ತೋರಿಸುತ್ತವೆ. ಭಾರತವು ಯಾವುದೇ ಶರತ್ತಿಲ್ಲದೆ ಇದು ಸಾಧಿತವಾಗಬೇಕೆಂದು ಬಯಸಿದರೆ, ಅಮೆರಿಕೆಯು ಇದನ್ನು ಒಪ್ಪುವುದಿಲ್ಲ ಉಭಯ ನಾಯಕರ ನಡುವೆ ಈ ಸಂಬಂಧದಲ್ಲಿ ಸವಿವರವಾದ ಮಾತುಕತೆ ನಡೆಯಿತು; ನಿಯಂತ್ರಣ ಹೇರಿದ ನಿಶ್ಶಸ್ತ್ರೀಕರಣ ಸಾಧಿಸುವ ಅವಶ್ಯಕತೆಯನ್ನಿವರು ಒಪ್ಪಿಕೊಂಡರು.

ಭಾರತಕ್ಕೆ ಅಮೆರಿಕೆಯು ನೀಡುವ ಸಹಾಯದ ರೂಪದಲ್ಲಿ ಯಾವ ಮಹತ್ವದ ಸ್ಥಿತ್ಯಂತರವೂ ನಡೆಯುವುದಿಲ್ಲ. ಆದರೂ ಮೂರನೆಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಸ್ಥಾಪಿಸಲಾಗುವ ಉಕ್ಕಿನ ಕಾರ್ಖಾನೆಗಳಲ್ಲಿ ಒಂದನ್ನು ಕಟ್ಟಲು ಅಮೆರಿಕನ್ ಸಹಾಯ ಲಭಿಸೀತೇ ಎಂಬುದರ ಬಗ್ಗೆ ವಿಚಾರ ವಿಮರ್ಶೆ ನಡೆದಿರಬೇಕು.

ಶ್ರೀ ಕೆನ್ನೆಡಿ

ಪೂರ್ವ ಪಶ್ಚಿಮ ರಾಷ್ಟ್ರಗಳು ಒಂದರಿಂದೊಂದು ದಿನದಿನಕ್ಕೆ ದೂರದೂರ ಸರಿಯಲು ಹವಣಿಸುತ್ತ ಅಣ್ವಸ್ತ್ರ ಕಾರ್ಯಮಗ್ನವಾಗುತ್ತಿರುವಾಗ, ಅವುಗಳನ್ನು ಹತ್ತಿರಕ್ಕೆ ಎಳೆಯುವ ಮಹಾ ಸಾಹಸಿ ಪಂಡಿತ ನೆಹರು. ಇವರಪ್ರಜಲಿತ ಯಾತ್ರೆಯ ಪರಿಣಾಮವಾಗಿ ಜಾಗತಿಕ ರಾಜಕಾರಣದ ಕೆಟ್ಟ ಆರೋಗ್ಯ ಪುನಃ ಲಭಿಸುವಂತಾಗಲಿ.

ವಿನಂತಿ

ಚಂದಾಹಣ ಬಾಕಿ ಇರುವ ನಮ್ಮ ಚಂದಾದಾರರಿಗೆಲ್ಲಾ ಈ ಮೊದಲೇ ಕಾರ್ಡು ಬರೆದಿರುತ್ತೇವೆ. ಅದರಂತೆ ಕೆಲವರು ಈಗಾಗಲೇ ಚಂದಾಹಣವನ್ನು ಪಾವತಿ ಮಾಡಿರುತ್ತಾರೆ ಇನ್ನೂ ಪಾವತಿ ಮಾಡದವರು ದಯಮಾಡಿ ಅದಷ್ಟು ಶೀಘ್ರ ಕಳುಹಿಸಿಕೊಡುವಂತೆ ವಿನ್ನವಿಸುತ್ತೇವೆ. ವಿ ಪಿ. ಮಾಡಿದರೆ 75 ನಯೇ ಪೈಸೆಯಷ್ಟು ಹೆಚ್ಚಿಗೆ ಬೀಳುವುದರಿಂದ ಎಲ್ಲರೂ ಮುಂದಾಗಿ ಮನಿಯಾರ್ಡರು ಮಾಡುವಂತೆ, ಇಲ್ಲವೇ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಕಟ್ಟುವಂತೆ ಅಪೇಕ್ಷಿಸುತ್ತೇವೆ ಅಂತೂ ಚಂದಾ ಬಾರದಿದ್ದರೆ ಕ್ರಮಶಃ ವಿ ಪಿ. ಮಾಡುತ್ತೇವೆ.

—ಮೆನೇಜರ್.

ಹಳೆ ಜೀವನ - ಹೊಸ ದೀಪಾವಳಿ

ಅನುವಾದಕ: ಶ್ರೀ ಎಸ್. ಎಂ. ಶೆಟ್ಟಿ, ಶಿಮುಂಜೆಸರಾರಿ.

ಎದುರುಗಡೆಯ ಮನೆಯು ಪ್ರಕಾಶಮಾನವಾಯ್ತು. ಮದುವೆಯಾಗಬಹುದು ಎಂದಂದುಕೊಂಡು ಬೀಡಿಯನ್ನು ಹಚ್ಚಿದೆ. ನನ್ನ ಕೊಠಡಿಯ ಅರ್ಧ ಭಾಗಕ್ಕೆ ಬೆಳಕು ಹರಡಿತು. ದಿನಂಪ್ರತಿ ಆ ಮನೆಯಲ್ಲಿ ಮದುವೆಯಿರುತ್ತಿದ್ದರೆ ರಾತ್ರಿಯನ್ನು ಅಂಧಕಾರಾದಲ್ಲಿ ಕಳೆಯಬೇಕಾಗುತ್ತಿದ್ದಿಲ್ಲ. ನನ್ನ ಯೋಚನೆಯನ್ನು ನೆನೆದು ನನಗೇ ನಗು ಬಂತು. ರಾತ್ರಿ ಮಲಗಿಯೇ ಕಳೆಯಲಿರುವಾಗ ದೀಪವಿದ್ದರೇನು—ಇಲ್ಲದಿದ್ದರೇನು? ಬೀಡಿ ನಂದಿಹೋಯ್ತು. ಬೆಂಕಿಯ ಕಡ್ಡಿಯೂ ಮುಗಿದಿತ್ತು. ಒಂದು ಪೂರ್ಣ ನಯೇ ಪೈಸೆಯ ಬೀಡಿಯನ್ನು ಎಸೆಯಲಂತೂ ಸಾಧ್ಯವೇ ಇಲ್ಲ. ನಂದಿದ ಬೀಡಿಯನ್ನು ಕಿಸೆಯಲ್ಲಿಟ್ಟುಕೊಂಡೆ, ಬಗಲ ಕೊಠಡಿಗಳೂ ಪ್ರಕಾಶಮಾನಗಳಾದುವು ಏಕೆ? ಹಾಂ, ನೆನಪಾಯಿತು; ಇಂದು ದೀಪಾವಳಿಯಲ್ಲವೇ? ಮನೆಗಳಂತೂ ಬೆಳಗಲೇ ಬೇಕು. ಉತ್ಸುಕತೆಯೊಡನೆ ಹೊರಗೆ ಬಂದೆ. ನೋಡಿದರೆ ನಡು ಮಧ್ಯಾಹ್ನವೆಂಬ ಕಾಣುತಿತ್ತು. ವಿದ್ಯುಚ್ಛಕ್ತಿಯ ಬಲ್ಬುಗಳಿಗೆ ಮತ್ತು ಹಣತೆಗಳಿಗೆ ಸ್ಪರ್ಧೆ ನಡೆಯುತ್ತಿತ್ತು. ಓಣಿಯಲ್ಲಿ ತುಂಬಾ ಜನಸಂದಣಿ ಇತ್ತು. ಕೆಲವೊಂದು ಜೋಡಿಗಳೂ ತಿರುಗುತ್ತಿದುವು. ಬೆಳಕು ನೋಡಲು ಹೋಗಬೇಕು ಎಂದೆಣಿಸಿತು. ನಾನೂ ಶ್ರೀಮಂತನಾಗಿರುತ್ತಿದ್ದರೆ ಕೂಲಿಂಗ್ ಗ್ಲಾಸ್ ಧರಿಸುತ್ತಿದ್ದೆ, ಮಧ್ಯಾಹ್ನದಂತೆ ಪ್ರಕಾಶ ಹರಡಿಲ್ಲವೇ?

ಪ್ಯಾಂಟಿನ ಹರಿದ ಕಿಸೆಯಿಂದ ಎರಡಾಣೆಯ ಬಿಲ್ಲೆಯೊಂದು ಕೆಳಗೆ ಬಿತ್ತು. ಮನೆಗಳನ್ನು ಬೆಳಗಿಸುವ ದೀಪಾವಳಿಯನ್ನು ನೋಡಲು ಓಣಿಯ ಮೂಲೆಯಲ್ಲಿ ಪನ್ವಾಡಿಯು (ಬೀಡಿಯಂಗಡಿಯವ) ತನ್ನ ಅಂಗಡಿಯನ್ನು ಶೃಂಗರಿಸಿದ್ದನು. ದೀಪಾವಳಿಯ ದಿನ ತನ್ನ ಅಂಗಡಿಯಲ್ಲಿಯೇ ಅವನು ಜುಗಾರಿ ಆಡಿಸುತ್ತಾನೆ. ನನಗೆ ಜುಗಾರಿಯಂತ ಹ ಆಟ ತಿಳಿಯದೆಂದು ಅತನಿಗೆ ನನ್ನ ಮೇಲೆ ಕನಿಕರ ಮತ್ತು ತಿರಸ್ಕಾರ. ಬೀಡಿಯನ್ನು ಹೊತ್ತಿಸುವ ಎಂದಂದಿತು ಮನಸ್ಸು.

ಅಂಗಡಿಯಲ್ಲಿ ಲಕ್ಷ್ಮೀ ಗಣೇಶರ ಮೂರ್ತಿಯನ್ನು ಶೃಂಗರಿಸಲಾಗಿತ್ತು. ಬೀಡಿ ಸಿಗರೇಟುಗಳ ಮಧ್ಯದಲ್ಲಿ ದೇವತೆಗಳ ಇಂದ್ರ ಸಭೆ ಜರಗಿತ್ತು. ಕಾಲ ಸಪ್ಪಳ ಕೇಳಿ ಫೋಟೊ ಭಾಯಿ ಪನ್ವಾಡಿಯು ಹಿಂತಿರುಗಿ ನೋಡಿದು ನಾನು ಮುಗುಳ್ನಗಲು ಪ್ರಯತ್ನಿಸಿದೆ

"ಲಕ್ಷ್ಮೀ ಪೂಜೆ ಮಾಡಲು ಬಂದಿಯೇನು? ಎಂದು ಕೇಳಿದ ಫೋಟೊ ಭಾಯಿ.

ಒಣಗಿದ ತುಟಿಗಳ ಮೇಲೆ ನಾಲಗೆಯಾಡಿಸಿ ನಕಾರಾತ್ಮಕವಾಗಿ ತಲೆಯಲ್ಲಾಡಿಸಿದೆ ಫೋಟೊಭಾಯಿ ನಗುತ್ತಾ—"ಎಂದಿನ ವರೆಗೆ ಲಕ್ಷ್ಮೀ ಪೂಜೆ ಮಾಡುವುದಿಲ್ಲವೋ ಅಂದಿನ ವರೆಗೆ ಹೀಗೆಯೇ ಇರುವಿ" ಎಂದು ಶಾಪವಿತ್ತ.

ಒಂದು ನಿಮಿಷ ಆಲೋಚಿಸಿದೆ. ಇನ್ನು ಬೀಡಿ ಹಚ್ಚುವುದು ಸರಿಯೇ, ಲಕ್ಷ್ಮೀಯಂತೂ ಸಿಟ್ಟಾಗಿದ್ದಾಳೆ ಗಣೇಶನೂ ಸಿಟ್ಟಾದರೆ.....ನನ್ನ ಏಕ ಮಾತ್ರ ಎರಡಾಣೆಯ ಪಾವಲಿಯನ್ನು ಅಂಗೈಯಲ್ಲಿ ಗಟ್ಟಿಯಾಗಿ ಹಿಡಿದುಕೊಂಡು ಮುಂದೆನಾಗಿದೆ.

ಸ್ವಲ್ಪ ಮುಂದೆ ನಡೆಯುತ್ತಲೇ ಪ್ರಕಾಶ ಮಾನವಾದ ಕೊಠಡಿಯ ಕಿಟಕಿಯ ಬಳಿ ಹುಡುಗಿಯೊಬ್ಬಳು ನಿಂತುದ್ದನ್ನು ಕಂಡೆ—ನನಗೆ ಭ್ರಮೆಯಾಯಿತು. ಆಭರಣಗಳ ಹೊರೆಯನ್ನೇ ಹೊತ್ತ ಆಕೆ ಲಕ್ಷ್ಮಿಯಾಗಿರಲ್ಲಿಕ್ಕಿಲ್ಲ ತಾನೇ? ಲಕ್ಷ್ಮಿಯು ಬಹಳ ಚಿಂತಿತಳಾಗಿದ್ದಳು, ಅತ್ತ ಪಟಾಕಿಗಳು ಘರ್ಜಿಸುತ್ತಿದ್ದುವು, ಇತ್ತ ನನ್ನ ಹೊಟ್ಟೆಯಲ್ಲಿ ಕಸಿವು ಘರ್ಜಿಸುತ್ತಿತ್ತು. ಅಷ್ಟರಲ್ಲೇ ಅತ್ತಲಿಂದ ಒಬ್ಬ ಹುಡುಗ ಬಂದ, ಅವನೂ ದೇವತೆಯಾಗಿರಬಹುದು, ಲಕ್ಷ್ಮೀಯ ಮುಖ ಅರಳಿತು. ನಾಲ್ಕೂಕಡೆ ದಿಟ್ಟಿಸಿ ಯಾರನ್ನೂ ಕಾಣದೆ (ನನ್ನನ್ನವರು ಮನುಷ್ಯರಲ್ಲಿ ಗಣಿಸಲಿಲ್ಲ) 'ಬರುವುದಿಲ್ಲವೇ' ಎಂದು ಸಿಳುಗುಟ್ಟಿದಳು.

ಹುಡುಗನ ಕಣ್ಣೂ ಅಗಲವಾಯ್ತು. ಬಾಯಿಯಲ್ಲಿ ನೀರೂರಿತು. "ಬರಲು ಮನಸ್ಸಿದೆ ಆದರೆಹೇಗೆ ಬರುವುದು? ನಿನ್ನ ತಂದೆ...."

ಹುಡುಗಿಯು ಮಧುಬಾಲಳಂತೆ ನಾಚುತ್ತಾ "ಮನೆಯಲ್ಲಿ ಯಾರೂ ಇಲ್ಲ" ಎಂದಳು. ತನ್ನ ಉತ್ಸುಕತೆಯನ್ನು ಹತ್ತಿಕ್ಕಿಕೊಂಡು ಹುಡುಗನು ಎಲ್ಲಿಗೆ ಹೋಗಿದ್ದಾರೆ? ಎಂದು ಪುನಃ ಕೇಳಿದನು.

ಇಂದು ದೀಪಾವಳಿಯಲ್ಲವೇ, ಪೂಜೆಗೆ ಹೋಗಿದ್ದಾರೆ" ಎಂದಳು. ಹುಡುಗನು ಉತ್ಸುಕತೆಯಿಂದ ಮನೆಯನ್ನು ಹೊಕ್ಕನು.

ನಾನು ನತ್ತು ನನ್ನ ಎರಡಾಣೆಯೊಡನೆ—" ನಡೆ ಮುಂದೆ ಇಂದು ದೀಪಾವಳಿಯಲ್ಲವೇ?" ಎಂದೆ. ಮೇಲ್ಗಡೆ ಲಕ್ಷ್ಮೀ ಗಣೇಶರ ಮಿಲನ ನಡೆಯುತಿತ್ತು. ದೀಪಾವಳಿಯಲ್ಲವೇ? ಎರಡಾಣೆಯನ್ನು ಹಿಡಿದಿಗ್ದುದರಿಂದ ಅಂಗೈ ಬೆವರಿತ್ತು. ಅಂಗೈಯನ್ನು ಪೇಂಟಿಗೆ ಒರೆಸಿ ಎರಡಾಣೆಯ ಬಿಲ್ಲೆಯನ್ನು ಅಂಗಿಯ ಮೇಲಿನ ಕಿಸೆಯಲ್ಲಿಟ್ಟೆ.

ಈಗ ಓಣಿಯನ್ನು ಬಿಟ್ಟು ಮಾರ್ಗಕ್ಕೆ ಬಂದೆ. ವಿಶಾಲವಾದ ಮಾರ್ಗ ಎತ್ತರವಾದ ಭವನಗಳು ಎಲ್ಲವೂ ಬೆಳಗುತ್ತಿದ್ದುವು. ಗಡಿಬಿಡಿಯೂ ತುಂಬಾ ಇತ್ತು. ಕಾರುಗಳ ಮತ್ತು ಮನುಷ್ಯರ ಗುಂಪುಗಳು ಕೂಡಾ ಬಹಳವಿದ್ದುವು. ಸಾಧ್ಯವಿದ್ದಷ್ಟು ಬೆಳಕಿನಿಂದ ತಪ್ಪಿಸಿಕೊಂಡು ಮುಂದುವರಿದೆ. ಯಾವಾಗಲೂಕತ್ತಲೆಯಲ್ಲಿರುವವರಿಗೆ ಬೆಳಕು ರುಚಿಸುವುದಿಲ್ಲ. ಅದು ದೀಪಾವಳಿಯ ಬೆಳಕಾದರೆ ಏನಂತೆ? ಭಯಂಕರವಾದ ಹಸಿವೆ ನನ್ನನ್ನು ಕಂಗಾಲು ಮಾಡಿತ್ತು. ಬೆಳಗಿನಿಂದ ಏನೂ ತಿಂದಿರಲಿಲ್ಲ. ಅಲ್ಲಾ, ಇರುವ ಎರಡಾಣೆಯಲ್ಲಿ ಏನು ತಿನ್ನಲು ಸಾಧ್ಯವಿದೆ.? ಹುರಿದ ಕಡಲೆ ತಿನ್ನಬಹುದಿತ್ತು. ಆದರೆ ದೀಪಾವಳಿಯ ದಿನದಂದು ಬಾಯಿ ಸಿಹಿಮಾಡುವುದು ಬೇಡವೇ? ಅಲ್ಲದೆ ಬೀಡಿ ಬೇಡವೇ? ಮಿಠಾಯಿ ಮತ್ತು ಬೀಡಿಗಳ ಯುದ್ಧದಲ್ಲಿ ಎರಡೂ ಸೋತುವು. ಚಹಾ ಗೆದ್ದಿತು. ಚಹಾದಿಂದ ಸ್ಫೂರ್ತಿಯೂ ಲಭಿಸುತ್ತದೆ, ಬಾಯಿಯೂ ಸಿಹಿಯಾಗುತ್ತದೆ.

ವಿಶಾಲ ಮಾರ್ಗದ ಬೀದಿಯಲ್ಲೊಂದು ಚಹಾದ ಅಂಗಡಿ ಕಂಡಿತು, ಅತ್ತ ಕೊರಟೆ. ಹೋಟೇಲಿನವನ ಮುಖವು ಮುಂದ ಹಾಕಿ ಬೀರುತ್ತಿತ್ತು. ಎಲ್ಲರೂ ಸಂತೋಷವಾಗಿದ್ದಾರೆ, ಆದರೆ ನಾನೇಕೆ ಚಿಂತಿತನಾಗಿದ್ದೇನೆ ಎಂದು ಮುಗುಳು ನಗಲು ಪ್ರಯತ್ನಿಸಿದೆ; ಆದರೆ ಮುಂಜಾವಿನಿಂದ ಏಕಾದಶಿಯ ವ್ರತ ಹಿಡಿದಿದ್ದ ಹೊಟ್ಟೆ ನಗಗೊಡಲಿಲ್ಲ. ಅಲ್ಲೇ ಕ್ಯಾಬೀನಿನೊಳಗೆ ಕೂತೆ.

ಮೂಣಿಯು ಕ್ಯಾಬೀನಿನ ಪರದೆಯನ್ನು ಇಳಿಬಿಟ್ಟು "ಹಾಂ ಸಾಬ್ ಅಪ್ಪಣೆಯಾಗಲಿ" ಎಂದ.

ಅಭಿಮಾನ ಪೂರ್ವಕವಾಗಿ, ಗಟ್ಟಿಯಾಗಿ, "ಒಂದು ಕಪ್ಪು ಚಹಾ" ಎಂದೆ.

ಮೂಣಿಯ ಮುಖ ಕಳಾಹೀನವಾಯ್ತು. 'ಬರೇ ಚಹಾ ಮಾತ್ರ' ಎಂದುದ್ದರಿಸಿದ ಆತ.

ಸ್ವಲ್ಪ ಆಲೋಚಿಸಿ ಅನಂತರ "ತೊಂದರೆಯಿಲ್ಲದ್ದಿದ್ದರೆ ಇಂದಿನ ಪತ್ರಿಕೆ ಮತ್ತು ಜಾಲೂ ನೂಚಿಸ್ ತೆಗೆದುಕೊಂಡು ಬಾ" ಎಂದೆ.

ಮೂಣಿ ಹೊರಟುಹೋದ ಅವನ ಕಾಲ ಸಪ್ಪಳದಿಂದಲೇ ಅವನಿಗೆ ಸಂತೊಷವಾಗಲಿಲ್ಲ. ಎಂದು ಊಹಿಸಿದೆ ನಾನು.

(೧೧ನೇ ಪುಟ ನೋಡಿರಿ)

41 ವರ್ಷಗಳ ಭದ್ರ ಹಾಗೂ ಸಮರ್ಥ ಬೇಂಕಿಂಗ್ ಸೇವೆ.

ದಿ. ಪಾಂಗಾಳ ನಾಯಕ್ ಬೇಂಕ್ ಲಿ.

ನಮ್ಮ 3 ವರ್ಷ ವ್ಯಾದೆಯ ಕೇಶ್ ಸರ್ಟಿಫಿಕೇಟುಗಳಲ್ಲಿ ಶೇವಣಿ ಮಾಡಿರಿ: ಬಡ್ಡಿ ಸೇಕಡಾ 5ರಂತೆ: ರೂ. 87—00 3 ವರ್ಷಗಳ ಅಂತ್ಯದಲ್ಲಿ ಬಡ್ಡಿ ಕೂಡಿ ರೂ. 100—00 ಒದಗಿಸುವುದು.

ಕರೆ, ಚಿಕ್ಕ ವ್ಯಾದೆ, ನಿರಖು ಶೇವಣಾತಿಗಳ ಮೇಲೆ ಆಕರ್ಷಣೀಯ ಶರ್ತಗಳು: ಬಡ್ಡಿ ಸೇಕಡಾ 5½ರ ವರೆಗೆ.

ತಾ. 1—4—1961ರಿಂದ ಸೇವಿಂಗ್ಸ್ ಬೇಂಕ್ ಖಾತೆಗಳ ಮೇಲೆ ಬಡ್ಡಿ ಸೇಕಡಾ 3ರಂತೆ.

THE PANGAL NAYAK BANK LTD.
Estd: 1920

ESTD. 1921 ಸ್ಥಾಪನೆ

NAVAYUGA
KANNADA WEEKLY,
UDIPI.

Founder:
Late Sri A. B. Shetty
Former Minister for Public Health, Govt. of Madras & Govt. of Mysore.

ನವಯುಗ
ರಾಷ್ಟ್ರೀಯ ವಾರಪತ್ರಿಕೆ
ಉಡುಪಿ

ಗೌರವ ಸಂಪಾದಕರು:
ಎಸ್. ಗೋಪೀಚಂದ ರಾವ್, ವಿದ್ವಾನ್.
ಬಿ. ಶಾಮರಾಯ ಶೆಟ್ಟಿ, ಬಿ. ಎ., ಎಲ್.ಟಿ.

ಸಂಚಾಲಕ ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ.

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-50
ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3-50

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಕೊಡಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

1962ನೇ ಜನವರಿ 26
ನವಯುಗದ
ಪ್ರಜಾರಾಜ್ಯ
ವಿಶೇಷಾಂಕ

ಎಂದಿಗಿಂತಲೂ ಮಿಗಿಲಾದ ರೀತಿಯಲ್ಲಿ ಸಚಿತ್ರವಾಗಿಯೂ ಆಕರ್ಷಣೀಯವಾಗಿಯೂ ಪ್ರಕಟವಾಗಲಿದೆ.

ಸಂಘ, ಸಂಸ್ಥೆಗಳ ಸಂಕ್ಷಿಪ್ತ ಪರಿಚಯವನ್ನು ಕೊಡಲಾಗುವುದು.

ಜಾಹೀರಾತು ದರಗಳನ್ನೂ ಪೆಟ್ಟಿಗೆ ವಿವರಗಳಿಗೂ ಬರೆಯಿರಿ.

ಮೆನೇಜರ್,
ನವಯುಗ, ಉಡುಪಿ

ದೀಪಗಳ ಹಬ್ಬ

ಶ್ರೀ ಎಸ್ ಗೋಪೀಚಂದ ರಾವ್, ವಿದ್ವಾನ್.

ವರ್ಷದಲ್ಲಿ ಒಂದು ಬಾರಿ ಮೂರು ದಿನಗಳ ದೀಪಾವಳಿ ಹಬ್ಬ ಬಂದೇ ಬರುವುದೆ ನರಕ ಚತುರ್ದಶಿ ಮೊದಲನೆಯ ದಿನವಾದರೆ, ಬಲೀಂದ್ರ ಪೂಜೆ ಎರಡನೆಯ ದಿನ, ಕೊನೆಯ ದಿನ ಗೋಪೂಜೆ. ದೀಪಾವಳಿಯು ನಿಜವಾಗಿ ಪ್ರಾರಂಭವಾಗುವುದು ಬಲಿ ಪೂಜೆಯ ದಿನ ಅಂದಿನಿಂದ ದೀಪಾರಾಧನೆಯು ಮುಂದಿನ ಒಂದು ತಿಂಗಳು ನಡೆಯುತ್ತ ಇರುತ್ತದೆ ಅಲ್ಲದೆ ಎರಡು ತಿಂಗಳ ಕಾಲವೂ ಈ ದೀಪಗಳ ಹಬ್ಬ ನಡೆಯುವುದಿದೆ ಭಾದ್ರಪದ—ಆಶ್ವಯುಜ ಮಾಸಗಳನ್ನು ಹಿಂದೂ ಶಾಸ್ತ್ರಗಳಲ್ಲಿ ದೀಪಾರಾಧನೆಯ ಪುಣ್ಯಕಾಲವೆಂದು ಭಾವಿಸುತ್ತಾರೆ

ಹಬ್ಬಗಳ ವ್ಯಾವಹಾರಿಕ ರೂಪಕ್ಕೂ ಲೌಕಿಕ ರೂಪಕ್ಕೂ ಆಧ್ಯಾತ್ಮಿಕ ಸಂಬಂಧವಿರುವುದು ಹೆಚ್ಚಾಗಿ ಹಿಂದೂ ದರ್ಮದ ಭರತೀಯ ಸಂಸ್ಕೃತಿಯ ವೈಶಿಷ್ಟ್ಯ ಶ್ರೀ ಕೃಷ್ಣನು ವರಾಹ ಅವತಾರದಲ್ಲಿ ತನ್ನ ಸಂಭೋಗದಿಂದ ಭೂದೇವಿಯ ಸುಗನಾಗಿ ಹುಟ್ಟಿದ ನರಕಾಸುರನನ್ನು ಕೊಂದ ಸುದಿನ ನರಕ ಚತುರ್ದಶಿ ಅಂದು ಸೂರ್ಯೋದಯಕ್ಕೆ ಮೊದಲು ಪ್ರತ್ಯೇಕ ಹಿಂದುವೂ ಮೈಗಲ್ಲ ಧಾರಾ ಎಣ್ಣೆ ಪೂಸಿ ಬಿಸಿನೀರು ಸ್ನಾನ ಮಾಡುತ್ತಾನೆ ನರಕಾಸುರನಿಗೆ ಭಗವಂತನಿತ್ತ ಮಾತನ್ನು ನಡೆಸಿಕೊಡುತ್ತಾನೆ. ಅವ ಅಮಾವಾಸ್ಯೆಯ ದಿನ ದುಷ್ಟ ರಾಕ್ಷಸ ಒಲಿಸಿ ಉಪದ್ರವಗಳಿಂದ ತನ್ನವರಾದ ದೇವತೆಗಳನ್ನು ರಕ್ಷಿಸಲು ಭಗವಂತನು ವಾಮನಾವತಾರದಿಂದ ಅವತರಿಸಿ ಬಲಿಯ ಗರ್ವವನ್ನು ಮೂರಡಿ ನೆಲದ ಬೇಡಿಕ್ಕಿನಿಂದ ಕೊನೆಗೊಳಿಸಿದ ಅವರ ದಿನ ಪಾತಾಳವನ್ನಿರುವ ಬಲಿಯನ್ನು ನೆನೆದು ಜನ ಪೂಜೆಯನ್ನು ಮಾಡಿ, ಭೂರನೆ ದಿನನ್ನು ದೀಪಗಳಿಂದ ಆರಾಧಿಸುವ ದಿನ ಗೋವರ್ಧನ ಗಿರಿಯನ್ನು ಶ್ರೀ ಕೃಷ್ಣನೆ ಗೋವುಗಳ ರಕ್ಷಣೆ ಮಾಡಿ, ಅವುಗಳ ಮಹತ್ವವನ್ನು ಲೋಕಕ್ಕೆ ತೋರಿಸಿಕೊಟ್ಟ ದಿನ ಒಲಿಪಾಡ್ಯ ಅಂದಿನಿಂದಲೇ ಮಹಾಕಾಳಿ, ಮಹಾ ಲಕ್ಷ್ಮಿ ಮಹಾ ಸರಸ್ವತಿಯರ ರೂಪವಾದ ಸರ್ವತೀರ್ಥ, ಸರ್ವದೇವತೆ, ಸರ್ವವೇದಗಳ ಆಧಾರ ಸ್ವರೂಪವೆಂದು ಸಮ್ಮಾನಿತವಾದ ತುಳಸಿ ಪೂಜೆಯ ಆರಂಭ ಮುಂದೆ ದೇಗುಲಗಳಲ್ಲಿ ದೀಪಾರಾಧನೆಯ ಮಹೋತ್ಸವ ನಡೆಯುವುದು.

ಸಂಪ್ರದಾಯಗಳನ್ನು ಲೌಕಿಕ ದೃಷ್ಟಿಯಿಂದ ವಿಮರ್ಶಿಸಿದರೆ, ಮಾನವನ ಸುಖ—ಸಮೃದ್ಧಿಗಳಿಗೆ ಈ ಹಬ್ಬಗಳು ಹೇತುಗಳಾಗಿವೆಯೆನ್ನ ಬೇಕು. ತೈಲಾಭ್ಯಂಜನದಿಂದ ಶರೀರದ ಆರೋಗ್ಯವು ದೃಢವಾಗುವುದು. ಸುಖ ನಿದ್ರೆಗಾಗಿ, ನಾನಾ ಬಗೆಯ ವಾತರೋಗನಿವಾರಣೆಗಾಗಿ ಅತ್ಯಾವಶ್ಯವೆಂದು ಆಯುರ್ವೇದ ಸಾರುತ್ತದೆ. ಪ್ರತಿ ನಿತ್ಯವೂ ಇಂತಹ ಸ್ನಾನಮಾಡುವುದು ಬಡವರಾದ ಭಾರತೀಯರಿಗೆ ಅಸಾಧ್ಯವಾದುದರಿಂದ ವರ್ಷಕ್ಕೊಂದು ಸಲವಾದರೂ ಆರೋಗ್ಯವರ್ಧಕ ತೈಲಾಭ್ಯಂಜನವನ್ನು ಮಾಡುವುದು ಅಪೇಕ್ಷಣೀಯವಲ್ಲವೆ?

ಬಲೀಂದ್ರನ ಹೆಸರಿನಲ್ಲಿ ಭೂಮಿಯನ್ನು ನಾವು ಪೂಜಿಸುತ್ತೇವೆ ಬೂಮಾತೆಯ ವರ ಬಲದಿಂದಲೇ ಭಾರತೀಯರು ವಾಗಿಕತೆಯ ತುತ್ತು ತಿಂದುಯನ್ನೇರಿದ್ದಾರೆ, ಆರ್ಯ ಸಂಸ್ಕೃತಿಯ ಸುರಚಿರ ಸಭ್ಯತೆಯದ್ಯೋತಕವೇ ಸೇ ಟ ವಿದ್ಯೆ 'ಕೋಟಿ ವಿದ್ಯಗಳಿಗಿಂತ ಮೇಟಿ ವಿದ್ಯೆಯೆ ಮೇಲು' ಎಂದು ಸರ್ವಜ್ಞ ಕವಿ ಅನ್ನಲಿಲ್ಲವೆ? ಇಂತಹ ಭೂಮಿಯನ್ನು ಆರಾಧಿಸಿ, ಅಧಿಕಾಧಿಕ ಸಸ್ಯಶ್ಯಾಮಲೆಯಾಗಿ ತಮ್ಮನ್ನು ಅನುಗ್ರಹಿಸಲೆಯೆಂದು ಪ್ರಾರ್ಥಿಸುವುದು ತಪ್ಪಲ್ಲ ನಮ್ಮಲ್ಲಿ ಹೊಸ ಸಲನ್ನು ಉಪಯೋಗಿಸುವುದಕ್ಕೆ ಮೊದಲು. ಭೂಮಿಗೆ ಹಾಕುವ (ಬಲೀಂದ್ರ ಪೂಜಾ ದಿನ ಭೂಮಿಗೆ ಅವಲಕ್ಕಿ—ತೆಂಗು ಹಾಕುತ್ತಾರೆ) ಸಂಪ್ರದಾಯವಿದೆ ತನಗೆ ಉಪಕೃತವಾದ ಭೂಮಿಯ ಉಪಕಾರವನ್ನು ಸ್ಮರಿಸಿ ತನ್ನ ಎಳೆಯ ಉಪಹಾರವನ್ನು ಆಕೆಗೆ ಅರ್ಪಿಸುವುದೇ ಇದರ ಸಂಕೇತ ಇದು ನಾಗರಿಕತೆಯ ಪರಾಕಾಷ್ಠೆಯೆನ್ನಲೇ ಬೇಕು

ಗೋಪೂಜೆಯ ಮಹತ್ವವನ್ನು ಬೇರೆ ಹೇಳಬೇಕಾಗಿಲ್ಲ ಕೃಷಿಯ ಕಾಯಕ್ಕೆ, ಹಾಲು ಮೊಸರುಗಳಿಗೆ ಭಾರತೀಯರು ಗೋವುಗಳನ್ನೇ ಹೊಂದಿಕೊಂಡಿದ್ದು, ಅವು ನಮ್ಮ ಜೀವನದ ಅವಿಭಾಜ್ಯ ಅಂಗವಿವಾಗಿ ಪರಿಣಮಿಸಿವುದನ್ನು ನಾವು ಕಾಣುತ್ತೇವೆ ಇಂತಹ ಗೋವುಗಳನ್ನು ನಣ ಮ್ಮ ಮಹಿಳೆಯರು ಪ್ರತಿ ನಿತ್ಯವೂ ನಮಸ್ಕರಿಸುವುದನ್ನು ನೆನಪಿಸಿದರೆ, ಸಾಮೂಹಿಕವಾಗಿ ಗೋಪೂಜೆ ನಡೆಯುವುದು. ತಪ್ಪೇನಿಲ್ಲ. ಹಾಗೆಯೇ ರೋಗನಾಶಕ ಶಕ್ತಿಯಿರುವ ತುಳಸಿಯನ್ನು ನೆನೆಯುವ ಸಂಪ್ರದಾಯ ನಡೆದುಬಂದಿದೆ ಧನ ಧಾನ್ಯ ಲಕ್ಷ್ಮಿಯ ಪೂಜೆಯೂ ನಡೆಯುತ್ತದೆ

ದೀಪಾವಳಿಯ ಆಧ್ಯಾತ್ಮಿಕಾರ್ಥವನ್ನೂ ನಾವು ತಿಳಿದುಕೊಳ್ಳಬೇಕು. ಆಶ್ವಯುಜ ಕಾರ್ತಿಕ ಮಾಸಗಳಲ್ಲಿ ಪ್ರಕೃತಿಯು ಪ್ರಶಾಂತವಾಗಿರುತ್ತದೆ ಚಳಿಗಾಲವು ಆಗ ತಾನೇ ಪ್ರಾರಂಭವಾಗುತ್ತದೆ ಇಂತಹ ವಾತಾವರಣದಲ್ಲಿ ದೀಪಗಳನ್ನು ಬೆಳಗಿಸಿ ಪ್ರಕೃತಿಯ ಶೀತವನ್ನು ಕಡಿಮೆಗೊಳಿಸುತ್ತೇವೆ; ನಿರಭ್ರವಾದ ಆಕಾಶದಲ್ಲಿ ಸಸ್ಯಶ್ಯಾಮಲೆಯಾದ ಭೂಮಿಯಲ್ಲಿ ಇಂತಹ ಸಪ್ತಾರ್ಚಿಯನ್ನು ಹಚ್ಚಿ, ಅದರಿಂದ ಬೆಳಕಿನಲ್ಲಿ ವಿಶ್ವದ ಅನುಪಮ ಸೌಂದರ್ಯವನ್ನು ಸವಿದು ಆನಂದ ಪರವಶರಾಗುತ್ತೇವೆ ವಿಶ್ವಕರ್ತನನ್ನು ವಂದಿಸುತ್ತೇವೆ

ದೀಪಾವಳಿಯ ಮೂಲವಾದ 'ಬಲಿ ಮರ್ದನ'ದಲ್ಲಿ ಅಂತರಾರ್ಥವೊಂದಿದೆ. ಬಲಿಯು ಅರ್ಥ ಮತ್ತು ಕಾಮಗಳ ಪ್ರತೀಕ ವಾವನನು ಧರ್ಮದ ದ್ಯೋತಕ. ಧರ್ಮವು ಅರ್ಥ—ಕಾಮಗಳ ಮೇಲೆ ವಿಜಯವನ್ನು ಸಂಪಾದಿಸಿ, ಮನುಷ್ಯನನ್ನು ಮೋಕ್ಷಕ್ಕೆ ಏರಿಸುವುದು ಎಂಬುದೇ ಇದರ ಸಂದೇಶ ಪ್ರತಿಯೊಬ್ಬ ಮಾನವನಲ್ಲಿ ಈ ಅಭಿಲಾಷೆಗಳು ನೆಲಸಿರುವುವಾದರೂ ಸುಗ್ಗಿಯ ಕಾಲವಾದ ದೀಪಾವಳಿಯ ವೇಳೆ ಇವು ಆತ್ಯಧಿಕವಾಗುವುವು ರೈತಜನರ ಕೈಯಲ್ಲಿ ಸಾಕಷ್ಟು ಹಣವು ಸಂಚರಿಸತೊಡಗಿ, ಅವರು ಅರ್ಥಾಂದರಾಗಿ ಕಾಮಾಂಧರಾಗಿ ವರ್ತಿಸುವ ಸಂಭವ ಹೆಚ್ಚು ಅಂತಹ ರಾಕ್ಷಸ ವೃತ್ತಿಯನ್ನು ದೂರಗೊಳಿಸಿ, ತಮ್ಮ ಹೃದಯದಲ್ಲಿ ಧರ್ಮದ ದೀಪವನ್ನು ಬೆಳಗಿಸಿಕೊಂಡು ಮೋಕ್ಷ ಸಾಧನೆಗೆ ತೊಡಗಬೇಕು ಎಂಬುದೇ ದೀಪಾವಳಿಯ ಆಧ್ಯಾತ್ಮಿಕ ಸಂದೇಶ.

ಈ ಸಂದೇಶವನ್ನು ನಾವು ಅರ್ಥಮಾಡಿಕೊಳ್ಳಬೇಕು ಮತ್ತದನ್ನು ಕಾರ್ಯಗತಗೊಳಿಸಬೇಕು.

ಮೋಹದ ಮಹಾಜಾಲ

ಅದ್ಭುತ ಸಾಹಸ—
ಅಪರಾಧ ಶೋಧನೆಯ
ಸಾಮಾಜಿಕ ಕಾದಂಬರಿ

ಬರೆದವರು – ವೀರಪ್ಪ ಯಗಟಿ, ಬಿ ಎ, ಎಲ್‌ಎಲ್ ಬಿ, ಹಾನೇರಿ

ನವಯುಗ ಎಂಟರ್‌ಪ್ರೈಸ್ ಲಿ ನ ಪ್ರಕಟಣೆ ಬೆಲೆ ರೂ 1-75

ಪ್ರತಿಗಳಿಗೆ ನವಯುಗ ಪ್ರೆಸ್, ಉಡುಪಿ, ಅಥವಾ ನವಭಾರತ ಪುಸ್ತಕ ಭಂಡಾರ ಉಡುಪಿ



ಮುಸ್ಲಿಂ ಲೀಗ್ ಸಿಡಿದು ಹೋಯಿತು

●

ಕೇರಳದಲ್ಲಿ ಸಂಯುಕ್ತ ಮಂತ್ರಿಮಂಡಳವನ್ನು ಸ್ಥಾಪಿಸಿದ ಕಾಂಗ್ರೆಸ್-ಪ್ರಸವಾ ಪಕ್ಷಗಳು ಜಾತೀಯ ಪಕ್ಷವೆಂಬ ಅಪವಾದ ಹೊರಿಸಿ ಚುನಾವಣೆಯ ವೇಳೆ ತಮ್ಮೊಡನೆ ಸೇರಿಸಿಕೊಂಡ ಮುಸ್ಲಿಂ ಲೀಗನ್ನು ಹೊರಗಿಟ್ಟರೂ ವಿಧಾನ ಸಭೆಯ ಅಧ್ಯಕ್ಷ ಸ್ಥಾನವನ್ನು ಇತ್ತಿದ್ದರು ದುರ್ದೈವ ವಶದಿಂದ ಆ ಸ್ಥಾನ ಮರಳಿ ತೆರವಾದಾಗ, ಮಹಮ್ಮದ ಕೋಯಾರು ಮುಸ್ಲಿಂ ಲೀಗಿನ ಸದಸ್ಯತನಕ್ಕೆ ರಾಜನಾಮೆಯಿತ್ತು ಸ್ವತಂತ್ರ ಸದಸ್ಯರೆಂದು ನಾಮಕರಣ ಮಾಡಿಕೊಳ್ಳಬೇಕಾಯ್ತು ಅದರೂ ತ್ರಿಪಕ್ಷೀಯರ ಸಹಕಾರ ಹಸ್ತ ಮಾತ್ರ ಏಕಪ್ರಕಾರವಾಗಿ ನಡೆಯುತಿತ್ತು. ಆದರೆ, ಸಾರ್ವತ್ರಿಕ ಚುನಾವಣೆಗಳು ಸಮೀಪಗತವಾಗುತ್ತಿರುವ ಈ ಸಮಯ ಅಲ್ಲಿ ಭಿನ್ನಾಭಿಪ್ರಾಯಗಳೆದ್ದುದು ಮರಳಿ ಗೊಂದಲಕ್ಕೆ ಕಾರಣವಾಗಿದೆ.

ಸಂಯುಕ್ತ ಸಚಿವ ಸಂಪುಟದ ರಚನೆಯ ಬೆನ್ನ ಹಿಂದೆಯೇ ಭಿನ್ನಾಭಿಪ್ರಾಯಗಳು ಹುಟ್ಟುವುದು ಸ್ವಾಭಾವಿಕ. ಜಾತೀಯ ಪಕ್ಷವಾದ ಲೀಗಿನೊಡನೆ ಸಂಧಾನ ಮಾತುಕತೆ ನಡೆಯುತ್ತಿರುವಾಗಲೇ ಅದನ್ನು ವಿರೋಧಿಸಿದವರು ಕೆಲವರಿದ್ದರು. ಆದರೆ, ದೇಶದ್ರೋಹಿಗಳಂತೆ ವರ್ತಿಸುತಿದ್ದ ಕಮ್ಯುನಿಸ್ಟರಿಗೆ ಮುಟ್ಟುಗೋಲು ಹಾಕಬೇಕೆಂಬ ಏಕಮಾತ್ರ ಕಾರಣದಿಂದ ತ್ರಿಪಕ್ಷೀಯರ ರಂಗ ರೂಪುಗೊಂಡಿತ್ತು. ಚುನಾವಣೆಗಳಲ್ಲಿ ವಿಭಿನ್ನ ಅಭಿಪ್ರಾಯಗಳನ್ನು ಪ್ರತಿಬಿಂಬಿಸುವ ಈ ಸಂಯುಕ್ತ ರಂಗದ ಪಕ್ಷಗಳಲ್ಲಿ ಒಮ್ಮತವಾಗುವಂತೆ ಸ್ಥಾನ ಹಂಚುವುದು ಸಾಧ್ಯವಾಗಲಿಲ್ಲ. ಈ ಕಾರಣದಿಂದ ಪ್ರಸವಾ ಪಕ್ಷದಲ್ಲಿಯೂ ತುಸು ಕಳವಳವೆದ್ದರೂ ಮಂತ್ರಿಮಂಡಳಿಯಲ್ಲಿ ಅದು ಪ್ರಾತಿನಿಧ್ಯವನ್ನು ಮಾತ್ರವಲ್ಲ ಮುಖ್ಯ ಮಂತ್ರಿಪದವನ್ನೂ ಗಳಿಸಿರುವುದರಿಂದ ಅಲ್ಲಿಂದಲ್ಲಿಗೆ ತೇಪೆ ಹಾಕುವ ಪ್ರಯತ್ನ ಪಡುತ್ತಿದೆ. ಆದರೆ, ಇದಾವುದರ ಹೆಂಗೂ ಇಲ್ಲದ ಲೀಗ್ ಸಿಡಿದುಹೋಗಿ, ಕಾಂಗ್ರೆಸ್ ಮತ್ತು ಪ್ರಸವಾ ಪಕ್ಷಗಳ ಎಲ್ಲ ಹುರಿಯಾಳುಗಳಿಗೂ ಲೋಕ ಸಭಾ ಚುನಾವಣೆಯಲ್ಲಿ ಪ್ರತ್ಯಕ್ಷ ಸಂಘರ್ಷಾವಸ್ಥೆ ನೀಡಬೇಕೆಂಬಷ್ಟು ಉದ್ರಿಕ್ತಗೊಂಡಿದೆ

ಜಾತೀಯ ಪಕ್ಷಗಳಿಗೆ ಬಹಿಷ್ಕಾರ ಹಾಕುವ ಬಗ್ಗೆ ವಿಚಾರ ವಿನಿಮಯ ನಡೆಯುತ್ತಿದೆಯೂದರೂ ಮುಸ್ಲಿಂ ಲೀಗ್—ಜನಸಂಘ, ಹಿಂದೂ ಮಹಾಸಭೆ ಮೊದಲಾದ ಕೆಲವೊಂದು ಪಕ್ಷಗಳಿಗೆ ಚುನಾವಣಾ ಆಯೋಗವು ಮನ್ನಣೆ ನೀಡಿದೆ. ಜಾತ್ಯತೀತ ರಾಷ್ಟ್ರವೊಂದರಲ್ಲಿ ಜಾತೀಯ ಪಕ್ಷವಿರುವುದೆಂದರೆ, ವಿಚಿತ್ರವಾದ ಒಂದು ಸಂಗತಿ. ಅದರಲ್ಲೂ ಅಲ್ಪ ಸಂಖ್ಯಾಕರಂದ ಮುಸ್ಲಿಮರು ಲೀಗನ್ನು ಕಟ್ಟಿಕೊಂಡು ಯಾವ ಪುರುಷಾರ್ಥವನ್ನು ಸಾಧಿಸಿಕೊಳ್ಳುವರೋ ಪರಮಾತ್ಮನೇಬಲ್ಲ ಸ್ವಯಂ ಕೇರಳದಲ್ಲಿಯೇ ಆಗಲಿ, ಎಲ್ಲ ಚುನಾವಣಾ ಕ್ಷೇತ್ರಗಳಲ್ಲೂ ತನ್ನ ಅಭ್ಯರ್ಥಿಯನ್ನು ನಿಲ್ಲಿಸುವುದು ಲೀಗಿಗೆ ಆಗದ ಕಾರ್ಯ ಎಂದಿಗಾದರೂ ವಿಧಾನ ಸಭೆಯಲ್ಲಿ ಬಹುಮತ ಪಡೆದೇನು ಎಂಬ ಆಶಯವನ್ನದು ಇಟ್ಟುಕೊಳ್ಳುವುದು ಖಂಡಿತಕ್ಕೂ ಅಸಾಧ್ಯ. ಹಾಗಿರುವಾಗ, ಪ್ರತ್ಯೇಕವಾಗಿ ಮುಸ್ಲಿಂ ಲೀಗ್ ಅಲ್ಲಿ ಏಕ ಅಸ್ತಿತ್ವದಲ್ಲಿರಬೇಕು? ಸಂಯುಕ್ತ ರಂಗದಿಂದ ಸಿಡಿದು ಹೋದ ಲೀಗಿನ ಮುಂದಿನ ಧ್ಯೇಯ—ಧೋರಣೆ ಮತ್ತು ಗುರಿಗಳು ಯಾವುವು? ಉದ್ರಿಕ್ತರು ವಿಚಾರದಿಂದ ದೂರವಿರುತ್ತಾರೆ.

ಡಿಲ್ಲಿಯ ಭಾಂಗಿ ವಸತಿಯಲ್ಲಿ ಹಿಂದೊಮ್ಮೆ ಸೂತ್ರಯಜ್ಞ ನಡೆದಾಗ ಗಾಂಧೀಜಿಯವರೂ ಅದರಲ್ಲಿ ಭಾಗ ವಹಿಸಿದ್ದರು ಚಿತ್ರದಲ್ಲಿ ನೆಹರೂ ಮುರಾರ್ಜಿಯವರನ್ನು ಈ ಯಜ್ಞ ನಡೆಯುತ್ತಿರುವುದನ್ನೂ ಕಾಣಬಹುದು.

ರಿಯಾಯಿತಿ ದರದಲ್ಲಿ—

ಉಡುಪಿ ಕಿರಿಯರ ಪ್ರಪಂಚದ ನಾನಾ ಬಗೆಯ ಪುಸ್ತಕಗಳು

1 ಸ್ವತಂತ್ರ ಜೀವನೋಪಾಯ	0	4
2 ಸಂಶಯ ಪಿಶಾಚಿ	0	10
3 ನಾಡ ಕತೆಗಳು	0	4
4 ಕುಶಲವ	0	8
5 ಕಾವ್ಯ ಸಾಮ್ರಾಜ್ಯ	1	8
6 ಮಧುವನ	8	0
7 ಮುಂದಿನ ದೇವರು	0	4
8 ವ್ಯಭಿಚಾರಿಣಿ ಯಾರು	1	0
9 ಹೆಂಡ್ತಿ ಗಂಡನಾದರೆ	0	4
10 ಪುರುಷ ಪಥ	0	4
11 ಸನ್ಯಾಸಿಯ ಸೋಗಿನಲ್ಲಿ	0	12
12 ನಂದಾದೀಪ	0	14
13 ದೇಶಭಕ್ತ	1	4
14 ಪ್ರೇಮ ವಿಜಯ	1	0
15 ರಂಗಭೂಮಿ	0	10
16 ಸೇವಾಪಥ	0	8
17 ನಾರೀ ಹೃದಯ	1	8
18 ಭಾರತೀಯ ಕತೆಗಳು	1	12
19 ಪ್ರಕಾಶ	2	8
20 ಮೂರು ಪ್ರಹಸನಗಳು	1	4
21 ನಗೆ ನೋಟಗಳು	1	4
22 ಅನ್ನದೇವರು ಮತ್ತಿತರ ಕತೆಗಳು	1	0
23 ಭಾರತದಲ್ಲಿ ಜಾತಿಭೇದ	1	0
24 ವಿಷ್ಣುವಿನ ದಶಾವತಾರಗಳು ಅರ್ಥಾತ್ ದಶಾವತಾರಗಳು	0	12
25 ಆಕಾಶ ಗಂಗೆ	1	12
26 ಸ್ವಾತಂತ್ರ್ಯವೀರ ಸಾವರಕರರು	1	4
27 ಜೀವನ ಸಂಗ್ರಾಮ	1	8
28 ಕದಂಬ	1	4
29 ಕವಿತಾಕಾಮಿನಿ	2	0
30 ಸ್ವರಾಜ್ಯ ವಿಜಯ	0	8
31 ಸಪ್ತಸಾಗರ	0	12
32 ಜಮೀನ್ದಾರ	1	8
33 ಬಾಳಿನ ಬೆಡಗು	1	4
34 ಲೋಪಾಮುದ್ರೆ	1	0
35 ಮದುವೆ ಸೀರೆ	1	0

ಅಪೂರ್ವ ಸಂದರ್ಭ !

ರೂ38 6 0ಯ ಈ ಎಲ್ಲಾ ಪುಸ್ತಕಗಳನ್ನು ಒಮ್ಮೆಯೇ ತರಿಸಿಕೊಂಡರೆ ರೂ 30-0-0ಕ್ಕೆ ಕೊಡಲಾಗುವುದು

ಬರೆಯಿರಿ:—

ನವಭಾರತ ಪುಸ್ತಕ ಭಂಡಾರ, ಉಡುಪಿ

ಅಮೃತ ಬಿಂದು

ಅಧಿಕಾರನೆಂಬುದು ದುಷ್ಟ ಕರಡಿಯಂತಿದ್ದರೂ ಚಿನ್ನದ ಕಡಿವಾಣವಿದ್ದರೆ ನಾಯಿಯಂತೆ ನಡೆಸಬಹುದು.

o o o

ಎಂದೂ ತಪ್ಪಿ ನಡೆಯದ ಉತ್ತಮ ಗಡಿಯಾರವನ್ನು ನೋಡಿ ಎಲ್ಲರೂ ತಮ್ಮ ತಮ್ಮ ಗಡಿಯಾರಗಳನ್ನು ಸರಿಪಡಿಸಿಕೊಳ್ಳುವಂತೆ ಉತ್ತಮ ಮನುಷ್ಯನನ್ನು ನೋಡಿ ನಮ್ಮನ್ನು ನಾವು ಸರಿಪಡಿಸಿಕೊಳ್ಳಬೇಕು.

o o o

ಅಧಿಕಾರಕ್ಕೆ ಗೌರವ ಕೊಡುವುದು ಹೇಗೆ ಜನರ ಕರ್ತವ್ಯವೋ ಅದೇ ರೀತಿ ಜನತೆಯ ಬಯಕೆಗೆ ಅಧಿಕಾರ ಬೆಲೆ ಕೊಡುವುದು ಅದರ ಕರ್ತವ್ಯ.

o o o

ಜ್ಞಾನಿಯ ಲೆಕ್ಕಣಿಕೆಯ ಶಾಯಿಯು ದೇಶವೀರನ ರಕ್ತಕ್ಕಿಂತಾ ಬೆಲೆಯುಳ್ಳದ್ದು.

o o o

ಪ್ರಾಣಿಯ ಬೆನ್ನಟ್ಟುವುದರಲ್ಲಿ ಮಾತ್ರ ಆನಂದಿತನಾಗಿ ಗುಂಡು ಹೊಡೆಯುದವನನ್ನು 'ಬೇಜಲರ್' (ಮದುವೆಯಾಗದವ) ಎನ್ನುತ್ತಾರೆ.

o o o

ಹೆಣಡ ಒಪ್ಪಂದ ಮೋಸದಲ್ಲಿ ಪರ್ಯವಸಾನವಾದರೆ ಪ್ರೇಮದ ಒಪ್ಪಂದ ನಿರಾಶೆಯಲ್ಲಿ ಪರ್ಯವಸಾನವಾಗುತ್ತದೆ

o o o

ಜಗತ್ತನ್ನು ಎದುರಿಸುವಾಗ ಏಕಾಂಗಿಯಾಗಿ ಎದುರಿಸಿದರೆ ಮಾತ್ರ ಜಯ. ಬಾಳ್ನಿಗೆ ಹೆಂಡತಿ, ಕುಟುಂಬವನ್ನು ಕಟ್ಟಿಕೊಂಡವರಾರೂ ವೀರ ಪೂಜೆ ಮಾಡಿಸಿಕೊಂಡ ಯೋಧರಾಗಲೀ, ಭಕ್ತಿಪೂಜೆ ಮಾಡಿಸಿಕೊಂಡ ಯತಿಗಳಾಗಲೀ ಆಗಿಲ್ಲ.

o o o

ಮುಳುಗುತ್ತಿರುವವನನ್ನು ರಕ್ಷಿಸಲು ಮದುವೆಯಾಗದವ ನೀರಿಗೆ ಹಾರಬಹುದು ಮದುವೆಯಾದವನು ಮುಳುಗಿದವನ ಶವ ಹೊರಲು ಕಾಯಬಹುದು!

o o o

ಬಿಸಿಲಿರುವಾಗ ನಿಮಗೆ ಕೊಡೆಯನ್ನು ಕೊಟ್ಟು ಮಳೆ ಬಂದಾಗ ಕೊಡೆ ಕಿತ್ತುಕೊಳ್ಳುವವನನ್ನೇ 'ಬೇಂಕರ್' ಎನ್ನಬಹುದು.

o o o

ಇರುವೆ, ಜೇನು ನೊಣಗಳು ಬಹುವಾಗಿ ದುಡಿದರೂ ಜೇನುನೊಣಕ್ಕೆ ಗೌರವ ಕೊಡುವುದು ಅದು ಸತತ ಕೆಲಸ ಮಾಡುವ ಕೀಟವೆಂದಲ್ಲ; ಅದು ಇತರರಿಗಾಗಿ ದುಡಿಯುವುದೆಂಬ ಕಾರಣಕ್ಕಾಗಿ!

ಪ್ರಕೃತಿಯು ಹೆಂಗಸಿಗೆ ಕೊಡುವ ಪ್ರಥಮ ಉಡುಗೊರೆಯೆಂದರೆ ಸೌಂದರ್ಯ. ಆಕೆಯಿಂದ ತೆಗೆದುಕೊಳ್ಳುವ ಪ್ರಥಮ ವಸ್ತುವೆಂದರೆ ಸೌಂದರ್ಯ.

ದಿ ವಿಜಯ ಬೇಂಕ್ ಲಿಮಿಟೆಡ್

ಪೆಡ್ಯೂಲ್ಡ್ ಬೇಂಕ್ ಸ್ಥಾಪನೆ. 1931

ರಿಜಿಸ್ಟರ್ಡ್ ಆಫೀಸು:

ವಿಜಯ ಬೇಂಕ್ ಬಿಲ್ಡಿಂಗ್, ಲೈಟ್ ಹೌಸ್ ಹಿಲ್ ರೋಡ್,

ಮಂಗಳೂರು 3, ಸೌತ್ ಕೆನರಾ.

ಕಾಯಂ ಠೇವಣಾತಿ ಬಡ್ಡಿ ದರವನ್ನು ಶೇಕಡ 5½ರ ವರೆಗೆ ಹೆಚ್ಚಿಸಲಾಗಿದೆ

ಏಳು ದಿವಸದ ನೋಟೀಸಿನಲ್ಲಿ ಕೇಳಿದಾಗ್ಯೆ ಹಿಂದೆ ಪಡೆಯುವ ಡಿಪೋಸಿಟುಗಳನ್ನು (Call Deposits) ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸೋಣಾಗುತ್ತದೆ

ಹೆಚ್ಚಿನ ಮಾಹಿತಿಗೆ ನಮ್ಮ ಶಾಖೆಗಳಲ್ಲಿ ದಯವಾಡಿ ವಿಚಾರಿಸಿರಿ

THE VIJAYA BANK LTD.

ನೂತನ ಸಮಾಜಕ್ಕೆ ಆಚಾರ ಸಂಹಿತೆ

ವೈಯಕ್ತಿಕ ಪ್ರತಿಸ್ಪರ್ಧೆಯನ್ನು ಆಧರಿಸಿಕೊಂಡಿರುವ ಅರ್ಥತಂತ್ರದ ಸ್ಥಾನವನ್ನು ನಿಯಂತ್ರಿತ ಸಹಕಾರಿ ಅರ್ಥ ತಂತ್ರವು ತೆಗೆದುಕೊಳ್ಳುವುದು ಮತ್ತು ಈ ಮೂಲ ಅರ್ಥತಂತ್ರಕ್ಕಾಗಿ ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಪೃಷ್ಠ ಭೂಮಿಯನ್ನು ನಿರ್ಮಿಸುವುದು ಅತ್ಯಗತ್ಯ. ವೇದಾಂತ ಮೂಲಕ ನೀತಿಶಾಸ್ತ್ರ ಮತ್ತು ಸಂಸ್ಕೃತಿಗಳು ನಿಶ್ಚಯವಾಗಿಯೂ ಈ ಪೃಷ್ಠಭೂಮಿಯ ಕಾರ್ಯವೆಸಗ ಬಲ್ಲವು.

ಕೆಲವು ವರ್ಷಗಳಿಗೆ ಮೊದಲಿದ್ದ ಹತ್ತೊಂಬತ್ತನೆಯ ಶತಮಾನದ ಅರ್ಥ ವ್ಯವಸ್ಥೆಯು ನಮ್ಮ ಸಂಪತ್ತಿನ ವೃದ್ಧಿಗೆ ನೆರವಾಗಿದೆಯೊದರೂ ಇಂದು ನಿರರ್ಥಕವೆಂದು ಎಲ್ಲರೂ ಬಲ್ಲರು. ವೈಯಕ್ತಿಕ ಪ್ರತಿಸ್ಪರ್ಧೆಯನ್ನು ಆಧರಿಸಿರುವ ಅರ್ಥವ್ಯವಸ್ಥೆಯು ಸಂಪತ್ತಿನ ವೃದ್ಧಿ—ಸಂಪನ್ನತೆಗಳನ್ನು ನೂಡಿತು: ಆದರೆ, ಈ ಅರ್ಥ ಸಂಪನ್ನತೆಯು ವಿತರಣೆ ಸರಿಯಾಗಿ ನಡೆಯಲಿಲ್ಲ. ಕೇಂದ್ರೀಕೃತ ವಿತರಣೆಯನ್ನು ಹೊಂದಿಕೊಂಡೇ ಈ ಸಂಪತ್ತಿನ ಯೂಯಿತು. ಇತರರ ಸಂಪನ್ನತೆಯನ್ನು ಗಳಿಸಲು ಒಂದು ದೇಶದಲ್ಲಿಯೇ ಕೆಲವರು ಕೋಟ್ಯಧೀಶರಾದಾಗ ಹಲವರು ದಟ್ಟ ದರಿದ್ರರಾಗಬೇಕಾಯಿತು. ಒಂದು ರಾಷ್ಟ್ರವು ಸಂಪತ್ಸಂಪನ್ನತೆಯ ಕಟ್ಟೆ ತುದಿಯನ್ನೇರುವಾಗ, ಅದು ಹಲವಾರು ದೇಶಗಳನ್ನು ದರಿದ್ರವಾಗಿಸಿ ಮೆಟ್ಟಿ ಬಿಡಲೇ ಬೇಕಾಗುತ್ತದೆ.

ಆದರೆ, ಇಂದಿನ ದೃಷ್ಟಿಕೋಣ ಪರಿವರ್ತನೆಗೊಂಡಿದೆ. ಸಮಾಜದ ಒಂದು ಅಂಗ ಇಲ್ಲವೇ ಪ್ರಪಂಚದ ಒಂದು ರಾಷ್ಟ್ರವು ಅಭಾಗ್ರಸ್ತವಾಗಿರುವುದೂ ದುಃಖವೆನಿಸುವುದೂ ಇಂದು ಲಜ್ಜಾಸ್ಪದವೆನಿಸಿದೆ. ಭೌತಿಕ ಸುಖವನ್ನು ಅಧಿಕಾಧಿಕವಾಗಿ ಪಡೆಯುವುದು ನೈತಿಕ ಸುಖವನ್ನು ಅನುಭವಿಸುವುದು ಇಂದು ಸಮಾಜದ ಪ್ರತಿ ವರ್ಗದ ಗುರಿಯೆನಿಸಿದೆ ವಿಷಮತೆಯೆಂಬುದು ಅನವಶ್ಯಮಾತ್ರವಲ್ಲ, ಅಸಹನೀಯವೂ ಹೌದು ವೈಯಕ್ತಿಕ ಭಾರ ಮತ್ತು ಸರಕಾರದ ಹಸ್ತಕ್ಷೇಪವಿಲ್ಲದಿರುವುದಿಂದು ಅರಾಜಕತೆಯ ಕುರುಹಾಗಿ ಮಾರ್ಪಟ್ಟಿದೆ ಇದು ವರೆಗೆ ವೈಯಕ್ತಿಕ ಜೀವನದ ಆಲಂಕ್ಯ ಪ್ರಾಕಾರವೆಂದು ತಿಳಿಯಲಾದ ಕ್ಷೇತ್ರಗಳನ್ನು ಅತಿಕ್ರಮಣ ಮತ್ತು ನಿಯಂತ್ರಣದ ಛೇಡಿಯಲ್ಲಿ ಬಂಧಿಸುವುದು ಸಮಾಜದ ಕೆಲಸವಾಗಿ ಇಂದು ಪರಿಣಮಿಸಿದೆ. ಸರ್ವ ಹಿತವೇ ರಾಷ್ಟ್ರೀಯ ಸರಕಾರಗಳ ಧ್ಯೇಯವೆನಿಸಿದೆ. ಆರ್ಥಿಕ ನಿಯಂತ್ರಣವನ್ನು ರಾಷ್ಟ್ರೀಯ ಸೀಮೆಯೊಳಗೆ ಇಟ್ಟುಕೊಳ್ಳಲಾರದೆಂಬಷ್ಟು ಪ್ರಕಂಡದ ಬೇರೆ ಬೇರೆ ರಾಷ್ಟ್ರಗಳು ಪರಸ್ಪರ ಅವಲಂಬಿಸಿಕೊಂಡಿವೆ. ಈ ವಿಚಾರವು ದಿನದಿಂದ ದಿನಕ್ಕೆ ಬಲವಾಗುತ್ತ ಬರುತ್ತಿದೆ.

ಆದರೆ ಒಂದು ವಿಚಾರವು ನಮ್ಮ ಅನುಭವಕ್ಕೆ ಬರುತ್ತದೆ. ನಿಯಂತ್ರಣವು ಅವಶ್ಯವಾಗಿಯೂ ಬೇಕು; ಪರಂತು, ವ್ಯಕ್ತಿಗತ ಸ್ವಾತಂತ್ರ್ಯ ಮತ್ತು ವೈಯಕ್ತಿಕ ಉಪಕ್ರಮಗಳನ್ನು ಮೆಟ್ಟಿ ಬಿಡದಂತೆ ನಿಯಂತ್ರಿತ ಅರ್ಥ ವ್ಯವಸ್ಥೆಯ ಸ್ವರೂಪವೇಪಾಡಬೇಕು. ಇಂತಹ ಸ್ವರೂಪವೇರ್ಪಟ್ಟರೆ ಮಾತ್ರ ಸ್ವಾತಂತ್ರ್ಯ ಮತ್ತು ಉಪಕ್ರಮಗಳಿಂದ ದೊರೆಯಬಹುದಾದ ಆನಂದವು ಉಳಿಯಬಹುದು

ಕೆಲವು ಜನರಿದು ಅಸಂಭವವೆಂದು ಹೇಳುತ್ತಾರೆ, ಆದರೆ, ಉಳಿದವರು ಸರ್ವಥಾ ಸಂಭವವೆನ್ನುತ್ತಾರೆ ಸಾಮಾಜಿಕ ನಿಯಂತ್ರಣ ಮತ್ತು ವೈಯಕ್ತಿಕ ಸ್ವಾತಂತ್ರ್ಯಗಳ ನಡುವೆ ಸಮರಸ ಸಾಮಂಜಸ್ಯವನ್ನು ನಿರ್ಮಿಸುವಂತಹ ರೀತಿಯಲ್ಲಿ ಅರ್ಥವ್ಯವಸ್ಥೆಯನ್ನು ಪುನಾರಚಿಸುವುದು ಸಾಧ್ಯವೆನ್ನುತ್ತಾರೆ ಇವರು.

ವಸ್ತುತಃ ವೈಯಕ್ತಿಕ ಉಪಕ್ರಮವು ಬಹು ಆನಂದದಾಯಕವಾದುದು. ಸಾಮಾಜಿಕ ಹಿತದ ದೃಷ್ಟಿಯಿಂದ ನಿಯಂತ್ರಣವಿರುವುದಾದರೂ, ಪೂರ್ಣರೂಪದಲ್ಲಲ್ಲವಾದರೂ ಅಂಶಿಕವಾಗಿ ವೈಯಕ್ತಿಕ ಉಪಕ್ರಮವು ಉಳಿಯುವಂತಹ ಹೊಸ ಅರ್ಥವ್ಯವಸ್ಥೆಯನ್ನು ರೂಪಿಸುವುದಿಂದು ಅಪೇಕ್ಷಣೀಯ.

ಇವುಗಳಲ್ಲಿ ಯಾವುದೇ ದೃಷ್ಟಿ ಕೋಣಗಳು ಕೊನೆಯಲ್ಲಿ ಅಸಮರ್ಪಕವೆಂದು ಸಿದ್ಧವಾಗುವುದಾದರೂ ನಿಯಂತ್ರಿತ ಅರ್ಥತಂತ್ರವು ಆಂತರಿಕ ನಿಯಂತ್ರಣವಾಗಿರದೆ ಬಾಹ್ಯನಿಯಂತ್ರಣವಾದುದರಿಂದ ಕಷ್ಟದ ಅನುಭವವಾಗುತ್ತದೆಂಬುದನ್ನು ಖಂಡಿತಕ್ಕೂ ಒಪ್ಪಿಕೊಳ್ಳ ಬೇಕು. ಬಾಹ್ಯ ನಿಯಂತ್ರಣವು ಕಷ್ಟಕಾರಿಯೆನಿಸುವುದಿಲ್ಲ ಮಾತ್ರವಲ್ಲ, ಸಂಪೂರ್ಣ ಪ್ರಭಾವಕಾರಿಯೂ ಆಗಿರುವುದಿಲ್ಲ.

ಅಮೆರಿಕೆಯಲ್ಲಿ ಭಾರತದ್ವಿಪ್ರಧಾನಿ ನೆಹರುಗಳ ಸ್ವಾಗತದ ವ್ಯವಸ್ಥೆಯನ್ನು ಅತ್ಯುತ್ತಮವಾಗಿ ವಿಭಾಡಿಸಿದ ರಾಯಭಾರಿ ಗೇಲ್ ಬ್ರೈಟ್.

ಆದುದರಿಂದ ಆಂತರಿಕ ನಿಯಮಗಳರಚಿಸಬಲ್ಲ ಬಾಹ್ಯನಿಯಂತ್ರಣದ ಅನಿವಾರ್ಯತೆಮತ್ತು ಸಂಭವನೀಯತೆಗಳಿಗೆ ಪುಷ್ಟಿನೀಡುವ ಒಂದು ಆಚಾರ ಸಂಹಿತೆಯು ಬೇಕೆನಿಸುತ್ತದೆ. ಇಂತಹ ಸಂಹಿತೆಯೊಂದಿದ್ದರೆ ಜಟಿಲ ಸರಕಾರಿ ನಿಯಂತ್ರಣವಿರುವಂತೆಯೇ ವೈಯಕ್ತಿಕ ಸ್ವಾತಂತ್ರ್ಯ ಮತ್ತು ಉಪಕ್ರಮಗಳ ಭಾವನೆಗಳು ಅಳಿದು ಹೋಗದಂತೆ ನೋಡಿಕೊಳ್ಳುವುವು.

ವೈಯಕ್ತಿಕ ಸ್ವಾತಂತ್ರ್ಯವನ್ನು ಹೆಳೆಯ ಮೂದರಿಯೆಂದು ಕರೆಸುವವರೂ ಕೆಲವರಿದ್ದಾರೆ. ಆದರೆ, ಈ ವರ್ಗಕ್ಕೆ ಸೇರಿದವರು ಕೂಡ ಆಂತರಿಕ ನಿಯಂತ್ರಣವು ಬಾಹ್ಯ ನಿಯಂತ್ರಣಕ್ಕಿಂತ ಪ್ರಭಾವಕಾರಿಯೆಂದು ಒಪ್ಪುತ್ತಾರೆ ನಿಷ್ಕೃಷ್ಟ ಮತ್ತು ದುಷ್ಟ ಜನರು ಬಾಹ್ಯ ನಿಯಂತ್ರಣವನ್ನು ದುರುಪಯೋಗಪಡಿಸುತ್ತಾರೆ ಇದನ್ನು ಹೇಗೆ ತಡೆಯಬಹುದು? ನಿಯಂತ್ರಿತ ಅರ್ಥವ್ಯವಸ್ಥೆಯ ಜಟಿಲ ಸಮಸ್ಯೆಯಿದು.

ಆದುದರಿಂದ ನಮ್ಮ ಮುಂದಿರುವ ಪ್ರಶ್ನೆಯಿದು. ಈ ಕೆಲಸವನ್ನು ಮಾಡಬಲ್ಲ ಯಾವುದಾದರೊಂದು ಆಚಾರ ಸಂಹಿತೆಯ ರಚನೆಯನ್ನು ಮಾಡಿ ಜನತೆಯೆಲ್ಲವೂ ಅದನ್ನು ಒಪ್ಪುವಂತೆ ಮಾಡಬಹುದೆ? ಸಮಷ್ಟಿ ಹಿತಕ್ಕಾಗಿ ವ್ಯಕ್ತಿಜೀವನದ ಮೇಲೆ ವ್ಯಾಪಕ ಮತ್ತು ಉಚಿತ ನಿಯಂತ್ರಣಕ್ಕೆ ಸಹಾಯವಾಗುವಂತೆ ಒಂದು ಧರ್ಮವನ್ನು ನಾವು ನಿರ್ಮಿಸಿ ಪ್ರಚಾರಮಾಡಬಲ್ಲೆವೆ? ಈ ಲೌಕಿಕ ಉಪದೇಶದ ಮೂ

(೮ನೇ ಪುಟ ನೋಡಿರಿ)

ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡಿನೊಡನೆ
(ರಿಜಿಸ್ಟರ್ಡ್ ಆಫೀಸ್: ಉಡುಪಿ)
ದಿ ಸೀಫಾಲ್ಸ್ ಬ್ಯಾಂಕ್ ಲಿಮಿಟೆಡಿನ
(ರಿಜಿಸ್ಟರ್ಡ್ ಆಫೀಸ್: ತೀರ್ಥಹಳ್ಳಿ)

ವಿಲೀನೀಕರಣ

ಭಾರತ ಸರಕಾರವು 1949ನೇ ಬ್ಯಾಂಕಿಂಗ್ ಕಂಪನಿಗಳ ಕಾಯಿದೆಯ 45 (7)ರ ಸೆಕ್ಷನಿನನ್ವಯ ಸಂಜೂರುಮಾಡಿದ ಯೋಜನೆಯನುಸರಿಸಿ ದಿ ಸೀಫಲ್ಸ್ ಬ್ಯಾಂಕ್ ಲಿಮಿಟೆಡ್, ರಿಜಿಸ್ಟರ್ಡ್ ಆಫೀಸು ತೀರ್ಥಹಳ್ಳಿ ಈ ಬ್ಯಾಂಕು ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್, ರಿಜಿಸ್ಟರ್ಡ್ ಆಫೀಸು ಉಡುಪಿ, ಈ ಬ್ಯಾಂಕಿನೊಡನೆ ಇದೇ 1961ನೇ ನವಂಬರ 14ರಂದು ವಿಲೀನಗೊಳ್ಳುವುದು. ದಿ ಸೀಫಾಲ್ಸ್ ಬ್ಯಾಂಕ್ ಲಿಮಿಟೆಡಿನ ಈ ಕೆಳಗೆ ಕಾಣಿಸಿದ ಎಲ್ಲಾ ಶಾಖೆಗಳು 1961ನೇ ನವಂಬರ 14ರಿಂದ ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡಿನ ಶಾಖೆಗಳಾಗಿ ಕಾರ್ಯನಿರ್ವಹಿಸುವುವು.

1 ತೀರ್ಥಹಳ್ಳಿ
2 ನೆಗರ
3 ಶಿವಮೊಗ್ಗ
4 ಶಿರಾಲ್ ಕೊಪ್ಪ
5 ಭದ್ರಾವತಿ

ಮೇಲೆ ಸೂಚಿಸಿದ ಯೋಜನೆಯ ನಿಬಂಧನೆಗಳಿಗನುಗುಣವಾಗಿ, ದಿ ಸೀಫಲ್ಸ್ ಬ್ಯಾಂಕ್ ಲಿಮಿಟೆಡಿನ ಎಲ್ಲಾ ಪ್ರಶಸ್ತಿತ ಶಾಖೆಗಳಲ್ಲಿನ ಠೇವಣಾತಿ ಖಾತೆಗಳನ್ನು ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡಿನ ಆಯಾಯ ಶಾಖೆಗಳಪುಸ್ತಕಗಳಿಗೆ 1961ನೇ ನವಂಬರ 14ರಿಂದ ವರ್ಗಾಯಿಸಿ ಮುಂದಕ್ಕೊಯ್ಯಲಾಗುವುದು.

ಮುಕುಂದ ನಿವಾಸ, ಉಡುಪಿ
ನವಂಬರ 7, 1961,
ಕಾರ್ತಿಕ 15, 1883.

ಟಿ. ಎ. ಪೈ
ಡಿ. ಚೀಫ್ ಆಫೀಸರ್

ಸಿಂಡಿಕೇಟ್ ಬ್ಯಾಂಕ್

"ನಚಿಕೇತ"ರ
ಇನ್ನೊಂದು ನವೀನ ಕಾದಂಬರಿ—

ಯುಗ ಯಾತ್ರೆ

ಇದೀಗ ಪ್ರಕಟವಾಗಿದೆ
ಬೆಲೆ ರೂ. 1-50 ನ. ಪೈಸೆ.

ಮೊದಲು ಪ್ರಕಟವಾದ ಕಾದಂಬರಿ

ಭಾವಾರ್ಚನೆ

ಬೆಲೆ ರೂ. 1-25 ನ. ಪೈಸೆ.

ಪ್ರತಿಗಳು ಸಿಗುವ ಸ್ಥಳಗಳು:—
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.

ಜಗತ್ಪರ್ಯಟನ

ನೆಹರು ಚಿರಾಯುವಾಗಲಿ

ಎಲ್ಲರ ಹೃದಯದಲ್ಲಿ ನೆಹರು ನೆಲಸಿದ್ದಾರೆ; ನೆಹರು ಹೃದಯದಲ್ಲಿ ಎಲ್ಲರೂ ಹುದುಗಿದ್ದಾರೆ ಸುವಿಶಾಲವೂ ಸುದೃಢವೂ ಆದ ನೆಹರೂ ಹೃದಯ ವಿಶ್ವಕಲ್ಯಾಣವನ್ನು ಬಯಸುತ್ತದೆ; ಆ ಬಗ್ಗೆ ಕಾರ್ಯ ತತ್ಪರವಾಗುತ್ತದೆ. ಕೆನ್ನೆಡಿಯಂತಹ ಸಂಪನ್ನರು ಕೂಡ ನೆಹರುವನ್ನು ಲಿಂಕನ್, ರೂಜವೆಲ್ಟರ ಸಾಲಿನಲ್ಲಿ ನಿಲ್ಲಿಸಿಕೊಂಡಿದ್ದಾರೆ. ವಿಶ್ವ ಹಿತಚಿಂತಕ, ಮಾನವತೆಯ ಕೈವಾರಿ ನೆಹರುವಿಗೆ ೭೨ವರ್ಷ ತುಂಬಿತು. ಅವರಿಗೆ ಬಹ್ವಾಯುಷ್ಯ ಉತ್ತಮ ಆರೋಗ್ಯ ಸೀಡಲಿ ಎಂಬಪ್ರಾರ್ಥನೆಯಲ್ಲಿ ೩೫ಕೋಟಿ ಕಂಠಗಳು ಒಂದಾಗುತ್ತವೆ.

ಸೃಷ್ಟಿಕರ್ತ ಕ್ರುಶ್ಚೇವ್

ಹಾವಿನಂತೆ ಹಗೆಸಾಧಿಸುವಲ್ಲಿ ಕಮ್ಯುನಿಸ್ಟರನ್ನು ಮೊದಲಾಗಿ ಗಣಿಸಿದರೆ, ಅವರ ಶ್ರೇಣಿಯಲ್ಲಿ ನಿಲ್ಲುವವರು ಮತ್ತೊಬ್ಬರಿಲ್ಲ. ಸ್ಟಾಲಿನರು—ಸೋವಿಯತ್ ರಶ್ಯದ ಆರಾಧ್ಯ ದೇವತೆಯಾಗಿದ್ದ ಕಾಲವೊಂದಿತ್ತು. ಆದರೆ ಈಗ ಅವರ ಹೆಣ-ಹಸರುಗಳು ಕೂಡ ಭೂತರೂಪ ಧರಿಸಿವೆ. ರಶ್ಯದಲ್ಲಿ ದೇವರೆನಿಸುವುದು-ಭೂಕವೆನಿಸುವುದು ಎರಡೂ ಬಹು ಬೇಗ-ಇಂದ್ರಜಾಲದಂತೆ ಲೆನಿನ್ನರ ಸಮಾಧಿಯ ಬಳಿಯಿದ್ದ ಸ್ಟಾಲಿನ್ನರ ಮೃತ ಶರೀರವನ್ನು ಬೇರೊಂದೆಡೆ ಸಾಗಿಸಿದುದು ಮಾತ್ರವಲ್ಲ ಸ್ಟಾಲಿನ್ನರ ಸ್ಮಾರಕವಾಗಿರುವ ನಗರಗಳ ಹೆಸರನ್ನೂ ಈಗ ಪರಿವರ್ತಿಸಲಾಗಿದೆ. ಇತಿಹಾಸದಲ್ಲಿಯೂ ಮತ್ತೊಬ್ಬ ದೇವಸದೃಶ ಸ್ಟಾಲಿನ್ನರ ಜನ್ಮವಾಗುವುದಿಲ್ಲವೆಂದು ಹೇಳುವಂತಿಲ್ಲ-ಕ್ರುಶ್ಚೇವರ ಸೃಷ್ಟಿಯಲ್ಲೇನೂ ಆದೀತು.

ಜಾನ್ ಕೆನ್ನೆಡಿ

ನಲ್ವತ್ತು ಮಾತ್ರ ದಾಟಿದ ಅಮೆರಿಕೆಯ ಅಧ್ಯಕ್ಷ ಜಾನ್ ಕೆನ್ನೆಡಿಯವರು ೭೦ ದಾಟಿದ ಭಾರತದ ಪ್ರಧಾನಿ ನೆಹರುವನ್ನು ತಂದೆಯಂತೆ ಕಂಡರು. ಆದರದಿಂದ ಸ್ವಾಗತಿಸಿ ಗೌರವಿಸಿದರು. ಹೃದಯ ಬಿಚ್ಚಿ ಮಾತಾಡಿದರು. ನಿಯಂತ್ರಣ ಹೇರಿದ ನಿಶ್ಶಸ್ತ್ರೀಕರಣವೇ ಇಂದಿನ ಆವಶ್ಯಕತೆಯೆಂದು ತಿಳಿಸಿ ಹೇಳಿದರು. ಕೆನ್ನೆಡಿಯವರ ಮಾತುಕತೆಯಿಂದ ನೆಹರೂ ಪ್ರಭಾವಿತರಾದರು- ಹೌದೆಂದಿದನ್ನು ಒಪ್ಪಿಯೇ ಹೇಳಿಕೆಯಿತ್ತರು ವಿಶ್ವದ ಹಲವಾರು ಸಮಸ್ಯೆಗಳ ಪರಿಹಾರಕ್ಕೆ ತಮ್ಮ ಸಲಹೆಯಿತ್ತರು. ಪ್ರಪಂಚದ ಹೆಚ್ಚಿನ ರಾಷ್ಟ್ರಗಳಲ್ಲಿ ಮುದುಕರೇ ಅಧಿಕಾರ ಸೂತ್ರ ಹಿಡಿದಿರುವಾಗ, ಅದನ್ನುಳಿಸುವ—ಅಳಿಸುವ ಶಕ್ತಿವಂತ ಅಮೆರಿಕೆಯ ಅಧ್ಯಕ್ಷರು ನಡುವಯಸ್ಸರು ಆದರೂ ರಾಜಕಾರಣದ ವಿಚಿತ್ರ ಹುಲಿ.

ಸುಲಭ ದರದಲ್ಲಿ
ಶಾಲೆಗಳಿಗೆ ಬೇಕಾಗುವ
ಯಾವತ್ತೂ ಫಾರ್ಮುಗಳೂ
ಹಾಜರಿ ರಿಜಿಸ್ಟ್ರಿಗಳೂ ಸಿಗುತ್ತವೆ
ನವಯುಗ ಪ್ರೆಸ್ ಉಡುಪಿ.

ಅಲ್ಲಲ್ಲಿಯ ಸುದ್ದಿಸಾರ

ಡಿ. ಡಿ. ಟಿ ಚುಮುಕಿಸುವಿಕೆ— ಉಡುಪಿ ಮುನ್ಸಿಪಲ್ ಸರಹದ್ದಿನಲ್ಲಿ ಇರತಕ್ಕ ಎಲ್ಲಾ ಮನೆಗಳಿಗೂ ಇತರ ಕಟ್ಟೋಣಗಳಿಗೂ ರಾಷ್ಟ್ರೀಯ ಮಲೇರಿಯಾ ನಿರ್ಮೂಲನಾ ಇಲಾಖೆಯವರು ಉಚಿತವಾಗಿ ಡಿ. ಡಿ. ಟಿಯನ್ನು ಚುಮುಕಿಸಲು ತಾರೀಕು 13—11—61ರಿಂದ 18—11—61ರ ವರೆಗೆ ಬರುತ್ತಾರೆ. ಆಗ ಪ್ರತಿಯೊಬ್ಬ ಮನೆಯವರೂ ಆ ಇಲಾಖೆಯ ಶಿಬಂದಿಯೊಡನೆ ಸಹಕರಿಸಿ ತಮ್ಮ ಮನೆ, ಕಟ್ಟೋಣಗಳಿಗೆ ಡಿ. ಡಿ. ಟಿಯನ್ನು ಚಿಮುಕಿಸಿಕೊಳ್ಳಬೇಕಾಗಿ ಅಪೇಕ್ಷೆ. ಯಾವುದಾದರೊಂದು ಮನೆ, ಯಾ ಕಟ್ಟೋಣ ಚಿಮ್ಮುವೋದದಲ್ಲಿ 17—11—61ರ ವರೆಗೆ ಮುನ್ಸಿಪಾಲಿಟಿ ಆಫೀಸಿಗೆ ತಿಳಿಸಿ 18—11—61ರಲ್ಲು ಡಿ.ಡಿ.ಟಿ. ಚಿಮುಕಿಸುವ ವಿಲೆವಾರಿ ಮಾಡಲಾಗುವುದು. ಈ ಕಾರ್ಯಕ್ರಮದಿಂದಾಗಿ ನೀವು ಸೊಳ್ಳೆ, ಅಕ್ಕಳೆ ಮುಂತಾದುವುಗಳ ಕಾಟದಿಂದ ವಿಮುಕ್ತರಾಗುವಿರಿ ಎಂದು ನಗರ ಸಭಾಧ್ಯಕ್ಷ ಡಾ. ಕೆ. ಯಲ್. ಐತಾಳರು ತಿಳಿಸುತ್ತಾರೆ.

ಬಂಟರ ಸಮಾಜ ಕಲ್ಯಾಣ ಸಮಿತಿ— ಬಂಟರ ಸಮಾಜದ ಕಲ್ಯಾಣ ಸಾಧನೆಗಾಗಿ ಇತ್ತೀಚೆಗೆ ಸ್ಥಾಪನೆಯಾದ ಈ ಸಮಿತಿಯ ಸರ್ವ ಸದಸ್ಯರ ಸಾಮಾನ್ಯ ಸಭೆಯೊಂದು ಉಡುಪಿ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ತಾ 6—11—61ರಲ್ಲಿ ವಕೀಲ್ ಶ್ರೀ ಬಿ ಶೀನಪ್ಪ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿ, ಸಮಿತಿಯ ನಿಯಮ ನಿಬಂಧನೆಗಳ್ಳನ್ನು ಧೀರ್ಘಚರ್ಚೆಗಳನ್ನು, ಮಂಜೂರು ಮಾಡಲಾಯಿತು. ಅಧ್ಯಕ್ಷ ಶ್ರೀ ಹೆಗ್ಡೆಯವರು ಸಂಘದ ಉದ್ದೇಶಗಳನ್ನು ಸಭೆಯ ಮುಂದಿಟ್ಟರು. ಡಾ. ಬಿ. ಬಿ ಶೆಟ್ಟರು ಘಟನೆಗಳನ್ನು ಬಿಡಿ ಹೇಳಿದರು. ಹೈಸ್ಕೂಲು, ಕಾಲೇಜು, ವಿದ್ಯಾರ್ಥಿ ಭವನಗಳ ಸ್ಥಾಪನೆ, ಸಮಾಜದ ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ಕೊಡುವುದು, ಲಲಿತಕಲೆ, ಸಂಗೀತ, ನೃತ್ಯ ಮತ್ತು ನಾಟಕ ಕಲೆಗಳಲ್ಲಿ ಆಸಕ್ತಿ ಹುಟ್ಟಿಸಿ ಪ್ರೋತ್ಸಾಹಿಸುವುದು ಲೈಬ್ರೆರಿ ಮತ್ತು ವಾಚನ ಮಂದಿರಗಳನ್ನು ಸ್ಥಾಪಿಸುವುದು, ಸಾಮಾಜಿಕರೊಳಗೆ ಪರಸ್ಪರ ಭಾವೈಕ್ಯತಾಗಿ ಕ್ಲಬ್ಬು ಮತ್ತು ಸಾಮಾಜಿಕ ಕೂಟಗಳನ್ನು ಏರ್ಪಡಿಸುವುದು ಮೊದಲಾದ ಬಂಟರ ಸಾಮಾಜಿಕ ಆರ್ಥಿಕ ಮತ್ತು ಶೈಕ್ಷಣಿಕ ಅಭಿವೃದ್ಧಿಯನ್ನು ಸಾಧಿಸುವುದೇ ಸಂಘದ ಗುರಿಯಾಗಿದೆ.

ಸಂಘದ ಆಡಳಿತ ಮಂಡಳಿಗೆ ಅಧ್ಯಕ್ಷರಾಗಿ ಶ್ರೀ ಬಿ. ಶೀನಪ್ಪ ಹೆಗ್ಡೆ, ಉಪಾಧ್ಯಕ್ಷರುಗಳಾಗಿ ಶ್ರೀಗಳಾದ ಬಿ. ಮೋನಪ್ಪ ಹೆಗ್ಡೆ ಡಾ. ಬಿ. ಬಿ. ಶೆಟ್ಟಿ, ಬಿ. ಕಾಳಪ್ಪ ಶೆಟ್ಟಿ, ಕೆ. ಅನಂತ ಶೆಟ್ಟಿ; ಜತೆಕಾರ್ಯದರ್ಶಿಗಳಾಗಿ ಎಡ್ವೋಕೇಟರುಗಳಾದ ಟಿ ಶಿವಾಜಿ ಶೆಟ್ಟಿ ಮತ್ತು ವೈ.ಸಿ.ಎಸ್ ಹೆಗ್ಡೆ ಕೋಶಾಧಿಕಾರಿಗಳಾಗಿ ಎಡ್ವೋಕೇಟರುಗಳಾದ ದೂಮಣ್ಣ ಹೆಗ್ಡೆ ಮತ್ತು ಕೆ. ವಿಶ್ವನಾಥ ಹೆಗ್ಡೆ ಇವರು ಆರಿಸಲ್ಪಟ್ಟರು. ಘಟನೆಗೆ ಸೂಚಿಸಲ್ಪಟ್ಟ ಕೆಲವೊಂದು ತಿದ್ದುಪಡಿಗಳು ಸ್ವೀಕಾರವಾದ ಬಳಿಕ ಬೆಲ್ಲಾ ಬಂಟರ ಯಾನೆ ನಾಡವರ ಸಂಘದ ಮಹಾ ಸಭೆಯನ್ನು ಉಡುಪಿಯಲ್ಲಿ ಜರಗಿಸುವ ವ್ಯವಸ್ಥೆ ಮಾಡಬೇಕೆಂದಾಯಿತು. ಡಾ. ಬಿ. ಬಿ. ಶೆಟ್ಟರು ಸಂದೇಶಗಳನ್ನೋದಿದರಲ್ಲದೆ ಅಂತ್ಯದಲ್ಲಿ ಕೃತಜ್ಞತೆಗಳನ್ನರ್ಪಿಸಿದರು.

ಯಕ್ಷಗಾನದ ರಾಗಲಕ್ಷಣ— ಎಂಬ ಕುರಿತು ಶ್ರೀ ಶಿವರಾಮ ಕಾರಂತರು ಉಡುಪಿ ಕರ್ಣಾಟಕ ಸಂಘದ ಆಶ್ರಯದಲ್ಲಿ ವಿಕ್ಟೋರಿಯ ಜುಬಿಲೀ ಯೂನಿಯನ್ ಕ್ಲಬ್ಬಿನಲ್ಲಿ ತಾ. 4—11—61ರಂದು ಧ್ವನಿಮುದ್ರಿಕೆಗಳ ಸಹಿತ ಉಪನ್ಯಾಸ ಮಾಡಿದರು. ಡಾ. ಕೆ ಎಲ್. ಐತಾಳರು ಸಭಾಧ್ಯಕ್ಷತೆ ವಹಿಸಿ, ಸ್ವಾಗತಿಸಿದ್ದರು. ಅಂತ್ಯದಲ್ಲಿ ಕರ್ಣಾಟಕ ಸಂಘದ ಕಾರ್ಯದರ್ಶಿ ಶ್ರೀ ಕು. ಶಿ. ಹರಿದಾಸ ಭಟ್ಟರು ಧನ್ಯವಾದವನ್ನರ್ಪಿಸಿದರು.

ಉಪಕೇಂದ್ರದ ಉದ್ಘಾಟನೆ- ತಾ. 6ರಂದು ಕುಂಜಾಲು ಕಟ್ಟೆ ಪ್ರಾಥಮಿಕ ಆರೋಗ್ಯ ಕೇಂದ್ರದ ಉಪಕೇಂದ್ರವು ನಾವೂರದಲ್ಲಿ ಬಂಟ್ವಾಳ ತಾಲೂಕು ಬೋರ್ಡ್ ಅಧ್ಯಕ್ಷ, ಶ್ರೀಮತಿ ಲೀಲಾವತಿ ಕೆ. ರೈಯವರ ಅಧ್ಯಕ್ಷತೆಯಲ್ಲಿ ಡಾ| ಬಿ. ಜಿ ಬಾಳಿಗರಿಂದ ಉದ್ಘಾಟಿಸಲ್ಪಟ್ಟಿತು. ಶ್ರೀ ಬಾಲಕೃಷ್ಣ ಶೆಟ್ಟಿಯವರಿಂದ ಸ್ವಾಗತ, ಶ್ರೀಗಳಾದ ಧರ್ಮಪಾಲ ಶೆಟ್ಟಿ, ಕೆ. ಇ. ಜಿನರಾಜ ಹೆಗ್ಡೆಯವರಿಂದ ಭಾಷಣಗಳಾದುವು. ಉದ್ಘಾಟಕ ಮತ್ತು ಅಧ್ಯಕ್ಷೆಯರು ಭಾಷಣವಿತ್ತದೇಕೆ ಪಂಚಾಯತ್ ಚೇರ್‌ಮೇನ್ ಶ್ರೀ ಆದಿರಾಜ ಅಜಿಲರು ಧನ್ಯವಾದವಿತ್ತರು. ನಾವೂರ ಉಪಕೇಂದ್ರದ ವೈದ್ಯಾಧಿಕಾರಿಗಳಾಗಿ ಡಾ| ಎಂ. ಎಸ್. ನಾರಾಯಣ ಮೂರ್ತಿಯವರು ಬಂದು ತ್ಪಾಕಾರ್ಯ ಕೈಗೊಂಡಿರುವರು.

ಡೋನ್ ಬೋಸ್ಕೊ ಹೋಲಿನ ಸಂಕುಸ್ಥಾಪನೆ— ಉಡುಪಿಯ ಡೋನ್ ಬೊಸ್ಕೊ ಕ್ಲಬ್ಬಿನ ವತಿಯಿಂದ ಕಟ್ಟಿಸಲಾಗುವ ಡೋನ್ ಬೊಸ್ಕೊ ಹೋಲಿನ ಶಂಕುಸ್ಥಾಪನಾ ಸಮಾರಂಭವು ಇದೇ ತಾ. 14ರಂದು ಕೇಂದ್ರ ಸರಕಾರದ ಗೃಹಶಾಖೆಯ ಉಪ ಸಚಿವೆ ಶ್ರೀಮತಿ ವಾಯೊಲೆಟ್ ಅಲ್ವ ಅವರು ಡಾ. ಟಿ ಎಂ. ಎ. ಪೈಗಳ ಅಧ್ಯಕ್ಷತೆಯಲ್ಲಿ ನೆರವೇರಿಸಲ್ಪಟ್ಟಿತು. ಶ್ರೀ. ಫಾ. ಎಸ್. ಡಿ. ಸೋಜರು ಸ್ವಾಗತಭಾಷಣ ಮಾಡಿದ ಮೇಲೆ, ಮಂಗಳೂರಿನ ಬಿಶೋಪರಾದ ಶ್ರೀ ರೆ. ಡಾ ಆರ್ ಡಿಮೆಲ್ಲೊ ಅವರು ಆಗಮಿಸಿದ್ದನ್ನು ಆಶೀರ್ವಚಿಸಿದರು. ಶ್ರೀಮತಿ ಆಲ್ವರ ಶಂಕುಸ್ಥಾಪನೆ ನೆರವೇರಿಸುತ್ತ ಜಾತೀಯತೆ, ಸಂಕುಚಿತತೆ ಮೊದಲಾದುವುಗಳನ್ನು ಬಿಟ್ಟು ರಾಷ್ಟ್ರಕಲ್ಯಾಣಕ್ಕಾಗಿ ದುಡಿಯಬೇಕೆಂದರು. ಅಧ್ಯಕ್ಷ ಡಾ ಪೈಗಳು ಇದನ್ನು ಸಮರ್ಥಿಸಿ ಮಾತನಾಡಿದರು. ಆ ಬಳಿಕ ನೃತ್ಯ ಸಂಗೀತ ಮೊದಲಾದ ಕಾರ್ಯಕ್ರಮಗಳು ನೆರವೇರಿದುವು. ಶ್ರೀ ಬಿ. ಎಸ್. ಲೂವಿಸರ ಆರಂಭದಲ್ಲಿ ವರದಿಯನ್ನೊಪ್ಪಿಸಿ, ಅಂತ್ಯದಲ್ಲಿ ಧನ್ಯವಾದವನ್ನರ್ಪಿಸಿದರು.

ನೆಹರು ಜನ್ಮದಿನಾಚರಣೆಯು— ಉಡುಪಿಯ ಮಹಿಳಾ ಸಮಾಜದವರಿಂದ ತಾ 14ರಂದು ಡಾ| ಯು. ಸುಂದರರಾಮ ಶೆಟ್ಟಿ ಸ್ಮಾರಕ ರಂಗ ಭೂಮಿಯಲ್ಲಿ ಶ್ರೀಮತಿ ಶರ್ಮಿಲಾ ಇನಾಂದಾರ್ ಇವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ಸ್ವಾಗತ, ವರದಿವಾಚನ, ಮಕ್ಕಳ ಭಾಷಣ, ಬಹುಮಾನ ವಿತರಣೆಗಳಾದ ಬಳಿಕ, ಕ. ಸಚಿವರಿ ಕೆ. ಜೆ. ತಂಕಮ್ಮ ಇವರ ಮತ್ತು ಅಧ್ಯಕ್ಷೆಯರ ಭಾಷಣಗಳಾದುವು ಜೊತೆಗೆ ಕ್ರೀಡೆ, ಸಂಗೀತ, ಹಾಸ್ಯ, ನಾಟಕಾದಿ ಮನರಂಜನೆಯ ಕಾರ್ಯಕ್ರಮಗಳು ಸುದೀರ್ಘವಾಗಿ ನೆರವೇರಿದುವು.

ಶ್ರೀ ಎ. ಬಿ. ಶೆಟ್ಟಿ ಸ್ಮಾರಕ ನಿಧಿಗೆ ಸಹಾಯಮಾಡಿರಿ

'ಇಂಗ್ಲಿಷ್ ಕಲಿಯಲಿಲ್ಲವಲ್ಲಾ' ಎಂದು ಚಿಂತಿಸಬೇಡಿರಿ!

ಅನ್ಯರ ಸಹಾಯವಿಲ್ಲದೆ ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಕಲಿಯಬಹುದಾದ ಆಂಗ್ಲ ಸ್ವಯಂಬೋಧಿನಿ ಪುಸ್ತಕವನ್ನು ಇಂದೇ ಕೊಂಡುಕೊಳ್ಳಿರಿ!

ENGLISH MADE EASY

ಸಾವಿರಾರು ಜನರು ಈ ಪುಸ್ತಕದಿಂದ ಸುಲಭವಾಗಿ ಇಂಗ್ಲಿಷನ್ನು ಕಲಿತುಕೊಂಡಿದ್ದಾ

ನೀವೂ ಪ್ರಯತ್ನಿಸಿ, ಇಂಗ್ಲಿಷ್ ಭಾಷೆ ಕಲಿಯಿರಿ! ವಿದ್ಯಾರ್ಥಿಗಳಿಗಂತೂ ಆತ್ಯಾವಶ್ಯಕ ಪುಸ್ತಕ.

ಹೊಸ ಮುದ್ರಣ—ಸಾದಾ ಪ್ರತಿ 2:00. ಉತ್ತಮ ಪ್ರತಿ 2:50.

ಪುಸ್ತಕದ ಬೆಲೆಯೊಂದಿಗೆ 25 ನ. ಪೈ. ಸೇರಿಸಿ ಮನಿಯಾರ್ಡರು ಮಾಡಿದರೆ ಪ್ರತಿಯೊಂದನ್ನು ಕಳಿಸಲಾಗುವು

ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ದೊರೆಯದಿದ್ದರೆ ನಮಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕನ್ನಡ.

ನವಯುಗ

ವರುಷ ೪೧	ಉಡುಪಿ ೧೬-೧೧-'೬೧	ವಾರ ೧೧

ಮಹಾ ಅಧ್ವರ್ಯು

ದ್ವಿತೀಯ ಲೋಕ ಯುದ್ಧಾನಂತರ ಸ್ವತಂತ್ರವಾದ ಅತಿ ದೊಡ್ಡ ರಾಷ್ಟ್ರ ಭಾರತವೆಂಬುದು ನಿರ್ವಿವಾದವಿರುವಂತೆಯೇ ಇದು ಜಗತ್ತಿಗೆ ಅತ್ಯುತ್ತಮ ನಾಯಕನೊಬ್ಬನನ್ನಿತ್ತಿದೆ ಎಂಬುದೂ ಅಷ್ಟೇ ಸತ್ಯ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧೀರ ಸೇನಾನಿಯಂತೆ ದುಡಿದ ಜವಾಹರಲಾಲ್ ನೆಹರು ಅಡಳಿತದ ಸೂತ್ರ ಸಂಚಾಲನೆಯಲ್ಲಿಯೂ ಸಿದ್ಧಹಸ್ತರೆಂಬುದು ಇದೀಗ ಸರ್ವವಿದಿತವಾಗಿದೆ. ಪರರಾಳಿಕೆಯಲ್ಲಿ ಶತಮಾನ ಕಾಲಾವಧಿ ನವೆದು ಬೆಂಡಾದ ಭಾರತವನ್ನು ಸಮೃದ್ಧಗೊಳಿಸುವ ಚಿಂತೆಯನ್ನು ಅಹರ್ನಿಶಿ ಮಾಡುತ್ತ, ಬಾಹ್ಯಕಂಡ ಕನಸಿನ ಭಾರತವನ್ನು ಕಟ್ಟುವ ಸಲುವಾಗಿ ತನ್ನ ಪ್ರಾಯ, ಶ್ರಮಗಳನ್ನು ಗಮನಿಸದೆ ಕಾರ್ಯತತ್ಪರರಾಗುತ್ತಿರುವ ನೆಹರು ಭಾರತೀಯರ ಪ್ರೇಮದ ಪುತ್ರರಾಗಿದ್ದಾರೆ ಮಾತ್ರವಲ್ಲ, ವಿಶ್ವದ ಜನತೆಯ ಕಣ್ಮಣಿಗಳೆನಿಸಿದ್ದಾರೆ.

ಭಾರತವೆಂದರೆ, ನೆಹರು ನೆಹರು ಎಂಬುದಿಂದ ಭಾರತದ ೪೩ ಕೋಟಿ ಕಂಠಗಳು ನೂತಾಡುತ್ತವೆ. ಅದ್ವಿತೀಯ ನಾಯಕಮಣಿ ನೆಹರು ವಿಶ್ವಗೌರವವನ್ನು ಗಳಿಸಿಕೊಂಡಿದ್ದಾರೆ. ಅವರು ಹೋದಲ್ಲಿ ಹೊಂದಲ್ಲಿ ಸುದ್ದಿಯ ವಿಷಯವಾಗುವಷ್ಟು ಮತ್ತೆಲ್ಲಿಯೂ ಆಗಲಾರದು. ೭೨ ವರ್ಷಗಳ ತಯಸ್ಸನ್ನು ಇದೀಗ ಮುಗಿಸಿ ೭೩ನೆಯ ಆರುಣೋದಯಕ್ಕೆ ಕಾಲಿಟ್ಟ ನೆಹರುಗಳ ಜನ್ಮದಿನವು ಮಕ್ಕಳ ದಿನವೆಂಬ ಹೆಸರಿನಿಂದ ಇಡಿಯ ಭಾರತದಲ್ಲಿ ಆಚರಿಸಲ್ಪಡುತ್ತಿದೆ. ನೆಹರು ಕಾಣುವ ಭಾರತದ ರಚನೆಯೊಳಗಿ, ಭಾರತವು ಸಂಪತ್ಸಮೃದ್ಧಿಯ ತುತ್ತತುದಿಗೇರುವ ದಿನವನ್ನು ನೋಡುವವರು, ಆ ದಿನವನ್ನು ಸಮೀಪಗತಗೊಳಿಸಲು ಮುಂದಿನ ನಾಗರಿಕರೆನಿಸುವ ಇಂದಿನ ಮಕ್ಕಳು. ಈ ಕಾರಣದಿಂದ ಪಂಡಿತ ನೆಹರು ಮಕ್ಕಳಿಗೆ ಅತಿ ಹತ್ತಿರದವರಾಗಿದ್ದಾರೆ ನೆಹರು ಜನ್ಮದಿನದಂದು ಮಕ್ಕಳೆಲ್ಲರೂ ಅತ್ಯಧಿಕ ಹರ್ಷದಿಂದ ಕೆಲಸಮಾಡುತ್ತಾರೆ ತಮ್ಮ ನೆಚ್ಚಿನ 'ಚಾಚಾ ನೆಹರುವಿನ' ಶ್ರೇಯಸ್ಸಿಗಾಗಿ, ಆಯುಃಆರೋಗ್ಯಗಳಿಗಾಗಿ ಭಗವಂತನಲ್ಲಿ ಮೊರೆಯಿಡುತ್ತಾರೆ. ಪಂಡಿತ ನೆಹರು ಕಾರ್ಯಕುಶಲರು, ಧೀರರು ಅದರೂ ಪ್ರಶಾಂತರು. ಸದಾ ತುಟಿಗಳೆಡೆ ಮಿನುಗುತ್ತಿರುವ ಕಿರು ನಗೆಯೊಂದು ಅದೆಷ್ಟು ಜನರನ್ನು ತನ್ನತ್ತ ಆಕರ್ಷಿಸುವುದಿಲ್ಲ? ಅವರನ್ನೂ ಎಳೆಯ ಹುಡುಗನ ಉತ್ಸಾಹದಿಂದ ದಿನದ ೨೪ ತಾಸೂ ಭಾರತದ ಒಳಿತನ್ನೇ ಹಂಬಲಿಸುತ್ತಾರೆ. ಅವರ ಹೃದಯದಲ್ಲಿ ೩೩ ಕೋಟಿ ಭಾರತೀಯರ ಪ್ರತಿಬಿಂಬವಿದೆ. ಭಾರತದ ಉದ್ದೇಶ ಕೈಗೂಡಲು, ಎಲ್ಲರೂ ಅವರಿಗೆ ಹೆಗಲು ಕೊಡ ಬೇಕಾಗಿದೆ.

ರಾಜಕೀಯವೆಂದರೆ ಕಣ್ಣಾಮುಚ್ಚಾಲೆಯಾಟ; ಚದುರಂಗದ ಮಣೆ ಎಂದು ತಿಳಿಯುತ್ತ ಚಾಣಾಕ್ಷರಾದ ಆಟಗಾರರು ತಮ್ಮ ಡಾಳದಿಂದ ವಿಶ್ವವಿಜೇತರೆನಿಸಲು ಹಂಬಲಿಸುತಿದ್ದಾಗ, ಇದರಲ್ಲಿಯೂ ಮಾನವತೆಗೆ ಆಸ್ಪದವಿದೆ; ಈ ಮಾನವತೆಯನ್ನೂ ರಾಜಕಾರಣದ ಮೂಲಸಿದ್ಧಾಂತವನ್ನಾಗಿ ಬಳಸಿಕೊಳ್ಳಬಹುದು ಮತ್ತು ಯಶಸ್ವಿಯಾಗಬಹುದು ಎಂದು ಜಗತ್ತಿಗೆ ತೋರಿಸಿಕೊಟ್ಟ ಜಗದ್ಗುರು ಜವಾಹರಲಾಲರು. ಅವರು ಸ್ವತಂತ್ರ ಭಾರತಕ್ಕಾಗಿ ರೂಪಿಸಿದ ಸ್ವತಂತ್ರ ವಿದೇಶ ನೀತಿಯು ಇಂತಹ ಮಾನವತೆಗೆ ಗೌರವನ್ನು ಕೊಡುವಂತಹುದು. ಸಹೋದರತೆ—ಸಮಾನತೆ—ಸಹ ಅಸ್ಥಿತ್ವದಡಿಯಲ್ಲಿ ಪರಸ್ಪರ ಸಹಕಾರ ಮನೋಭಾವದಿಂದ ಕೂಡಿ ನಡೆದರೆ ಮಾತ್ರ ರಾಜಕಾರಣವು ಸಹೋದರರ ಪ್ರೇಮದಿಂದ ಕೂಡಿ ವಿಶ್ವ ಕಲ್ಯಾಣವಾಗಬಹುದು ಎಂಬುದನ್ನು ಪ್ರತ್ಯಕ್ಷೀಕರಿಸಿದವರು ಪಂಡಿತ ನೆಹರು. ವಿಜ್ಞಾನದ ಭರಾಟೆಯಲ್ಲಿ ಜಗತ್ತು ಸಹಕಾರ ಬುದ್ಧಿಯಿಂದ ನಡೆಯದೆ ಹೋದರೆ ಸರ್ವನಾಶ ಖಂಡಿತ, ಸಹಜೀವನದಿಂದಲೇ ಇಂದಿನ ಜಗತ್ತು ಬದುಕಬಲ್ಲುದು ತಪ್ಪಿದರೆ, ನಮ್ಮ ಬದುಕೇ ವ್ಯರ್ಥ ಮತ್ತು ನಿರುಪಯುಕ್ತವಾಗುವುದೆಂದು ಸಾರಿದ ಭವಿಷ್ಯವಾದಿ ನೆಹರು. ತಮ್ಮ ಮೇಲ್ಮೆಯನ್ನು ಬಣ್ಣಿಸಿ ತಮ್ಮ ಶಕ್ತಿಯ ಅಮಲಿನಲ್ಲಿ ಕಂಗೆಟ್ಟು ಕುಳಿತುಕೊಳ್ಳುವುದಕ್ಕಿಂತ ಎಲ್ಲರೊಡನೆ ಕೂಡಿ ಬಾಳುವುದು ಮೇಲೆಂಬುದನ್ನು ಅವರು ತಮ್ಮ ಸೀತಿಯಿಂದ ಪ್ರದರ್ಶಿಸಿದ್ದಾರೆ. ಪರಸ್ಪರ ಶಕ್ತಿ ಕೇಂದ್ರೀಕರಣದಿಂದ ಜಾಗತಿಕ ಶಾಂತಿಯಲ್ಲಿ ಹುಟ್ಟಿದ ಬಿರುಕನ್ನು ಬೆಸೆಯುವುದಕ್ಕೆ ಅಹಿಂಸೆಯ ತತ್ವವನ್ನು ಒಪ್ಪಿಕೊಳ್ಳುವುದೇ ಉತ್ತಮೋತ್ಕೃಷ್ಟ ಮಾರ್ಗವೆಂದು ತೋರಿಸಿದವರು ಜವಾಹರಲಾಲರು.

ದ್ವಿತೀಯ ಜಾಗತಿಕ ಸಮರಾನಂತರ ಆಗ ಮಿತ್ರ ರಾಷ್ಟ್ರಗಳಾಗಿದ್ದ ರಶ್ಯ—ಅಮೆರಿಕೆಗಳು ವಿಶ್ವದ ಸಂಪನ್ನ ರಾಷ್ಟ್ರಗಳಾಗಿ ಮೆರೆದಾಡಿದುವು ತಮ್ಮ ತಮ್ಮ ವೈಜ್ಞಾನಿಕ ಪ್ರತಿಸ್ಪರ್ಧೆಯಿಂದಾಗಿ ಅವು ದಿನದಿಂದ ದಿನಕ್ಕೆ ದೂರ ದೂರ ಸೆಟೆಯುತ್ತ ಬಂದುವು. ಇದರಿಂದಾಗಿ, ಜಾಗತಿಕ ಸಮಸ್ಯೆಯು ಬಿಗಡಾಯಿಸುತ್ತಿರುವುದನ್ನು ಕಂಡು, ಉಭಯ ತರರಿಗೂ ಬೇಕಾದಂತೆ ಹೊಂದಿಕೊಂಡು ಬಾಳಿ ತನ್ನೊಳಕ ಕಲ್ಯಾಣ ಸಾಧನೆಯಾಗುವಂತೆ ಶ್ರಮಿಸಲು ತಟಸ್ಥ ಬಣವೊಂದನ್ನು ಕಟ್ಟಿ ಶಾಂತಿ ರಕ್ಷಣೆಯ ನೂತನ ಮಾರ್ಗವನ್ನು ಎಲ್ಲರಿಗೂ ತೋರಿಸಿಕೊಟ್ಟ ನೆಹರು ಸರ್ವ ಜನಾದರಣೀಯರಾಗಿದ್ದಾರೆಂಬುದು ನಿಸ್ಸಂದೇಹ. ತಟಸ್ಥ ರಾಷ್ಟ್ರಗಳ ನಾಯಕ ಮಣಿಗಳಲ್ಲಿ ಅಗ್ರಗಣ್ಯರಾಗಿ ರಶ್ಯ—ಅಮೆರಿಕೆಗಳ ಮೈಮನಸ್ಯದಿಂದ ಸರ್ವನಾಶವತ್ತ ಸಾಗುತ್ತಿರುವ ಜಗತ್ತನ್ನುಳಿಸುವಲ್ಲಿ ಇವರ ಕೃಷಿಯಾಡವೆಷ್ಟೆಂದು ಎಲ್ಲರೂ ಅರಿತಿದ್ದಾರೆ. ಕಸ್ತೂರಿಗೆ ಬಣ್ಣವಿಲ್ಲ, ಸುವರ್ಣಕ್ಕೆ ಪರಿಮಳವಿಲ್ಲ ಆದರೆ, ನೆಹರುಗಳಲ್ಲಿ ಬಣ್ಣವೂ ಇದೆ; ಪರಿಮಳವೂ ಇದೆ. ಈ ಕಾರಣದಿಂದಲೇ ಪ್ರತಿಯೊಂದು ಜಾಗತಿಕ ಪ್ರಶ್ನೆಯದ್ದಾಗಲೂ "ನೆಹರು ಏನನ್ನುತ್ತಾರೆ ಎಂದು ಎಲ್ಲರೂ ಕಿವಿನಿಮಿರಿಸಿ ಆಲಿಸ ತೊಡಗುತ್ತಾರೆ. ಇಂತಹ ವಿಶ್ವವಂದ್ಯರಾದ ನೆಹರು ಭಾರತದ ನಾಯಕನಾಗಿ ಅವಿಚ್ಛಿನ್ನವಾಗಿ ಕಳೆದ ೧೫ ವರ್ಷಗಳಲ್ಲಿ ಉಳಿದಿರುವುದು ಆಶ್ಚರ್ಯದ ಸಂಗತಿಯಲ್ಲ. ಪರಸ್ಪರ ಭೇಟ್ಟಿ—ಸೌಹಾರ್ದಮಯ ವಿಚಾರ ವಿನಿಮಯಗಳಿಂದ ಯಾವುದೇ ತರದ ಭಿನ್ನಭಿಪ್ರಾಯವನ್ನು ಬಗೆಹರಿಸಿಕೊಳ್ಳಲು ಸಾಧ್ಯವಿದೆಯೆಂದವರು ತೋರಿಸಿಕೊಟ್ಟಿದ್ದಾರೆ. ಮುಂದಕ್ಕೂ ಇದೇ ಮಾರ್ಗ ಉತ್ತಮ ವೆಂದವರು ತಿಳಿದಿದ್ದಾರೆ.

ಅಲೌಕಿಕ ವ್ಯಕ್ತಿತ್ವವಿರುವ ಮಾನವತಾವಾದಿ ನೆಹರುವನ್ನು ವಿಶ್ವರಾಜಕಾರಣಕ್ಕೆಳೆಯುವ ಆತುರ ಕೆಲವರಿಗೆ. ಆದರೆ, ಭಾರತೀಯರವರನ್ನು ಬಿಟ್ಟುಕೊಡಲಾರರು ಎಂಬ ಸರದೇಹ ಅವರಿಗೆ ಎಂತಲೇ ನೆಹರೂ ನಂತರ ಭಾರತಕ್ಕೆ ಯಾರು? ಎಂಬ ಪ್ರಶ್ನೆ ಆಗಾಗ ಕೆಲವರು ಎಬ್ಬಿಸುವುದುಂಟು. ಆದರೆ, ನೆಹರು ಈ ಬಗ್ಗೆ ಹೆಚ್ಚು ಚಿಂತಿಸುವುದಿಲ್ಲ. ೩೩ ಕೋಟಿ ಭಾರತೀಯರಲ್ಲಿ ತನಗಿಂತಲೂ ಹೆಚ್ಚಾಗಿ ಭಾರತದ ಹಿತಚಿಂತನೆ ಮಾಡುವವನೊಬ್ಬನು ಮುಂದೆ ಬಂದೇ ಬರುವನು ಎಂಬ ಅಚಲ ವಿಶ್ವಾಸ ಅವರಿಂದು ಭಾವೈಕ್ಯದಿಂದಲೇ ದೇಶದ ಕಲ್ಯಾಣ ಎಂಬ ಅಚಲ ಶ್ರದ್ಧೆ ಅವರದು. ನಮ್ಮ ಮನಮೆಚ್ಚಿಸುವ ಪ್ರಧಾನಿ ನೆಹರುಗಳ ಜನ್ಮದಿನದಿಂದ ನಾವು ಅವರ ಧ್ಯೇಯವಾದಿತನವನ್ನು ನಮ್ಮಲ್ಲೂ ಬೆಳೆಸುವ ದೃಢ ಪ್ರತಿಜ್ಞೆ ಮಾಡಬೇಕು. ನಮ್ಮ ನಾಯಕರಾಗಿ ಅಭಿವೃದ್ಧಿ ಯಜ್ಞದ ಅಧ್ವರ್ಯುಗಳಾಗಿ ನಿರಂತರ ಸೇವೆಸಲ್ಲಿಸುತ್ತಿರುವ ಇವರ ಆಶಯವನ್ನು ಅರ್ಥವಿಸಿ, ಅನೈಕ್ಯದಲ್ಲಿ ಐಕ್ಯವನ್ನು, ಪ್ರತ್ಯೇಕತೆಯಲ್ಲಿ ಏಕತೆಯನ್ನು ವಿಭಿನ್ನತೆಯಲ್ಲಿ ಅಖಂಡತೆಯನ್ನು ಪ್ರತಿಷ್ಠಾಪಿಸುವ ಭಾರತೀಯ ಸಂಸ್ಕೃತಿಯನ್ನು ಮುನ್ನಡೆಸುವ ಸಲುವಾಗಿ ಸ್ಥಿತಪ್ರಜ್ಞರಾಗಿ ದೀಕ್ಷೆ ತೊಡಬೇಕು. ನಮ್ಮ ನಾಯಕ ನೆಹರುವಿಗೆ ತೃಪ್ತಿಯಾಗುವಂತೆ ವ್ಯವಹರಿಸಬೇಕು

ಇಬ್ಬಣದ ನ್ಯಾಯ

ಈ ಮೊದಲೆಂದೂ ಇಲ್ಲದಷ್ಟು ಗೊಂದಲವು ಈ ಬಾರಿಯ ಕಾಂಗ್ರೆಸ್ ಪಕ್ಷದ ಹುರಿಯಾಳುಗಳನ್ನು ಸಾರ್ವತ್ರಿಕ ಚುನಾವಣೆಗಳಿಗೆ ನಿಲ್ಲಿಸುವ ಕುರಿತಾದ ವಾದ ವಿವಾದಗಳು ಏಕತೊಡಗಿದುದುಜನತೆಯಲ್ಲಿ ರಾಜಕೀಯದ ಕಡೆಗೆ ವಿಶೇಷ ಆಸ್ಥೆ ಹುಟ್ಟಿಸಿದೆಯೆಂಬುದನ್ನು ತೋರಿಸುವಂತಿದ್ದರೂ ಇದು ಎಷ್ಟೇಕ್ಷಣೀಯವೆನ್ನಲೇ ಬೇಕಾಗಿದೆ ರಾಜಕಾರಣವೇ ಸರ್ವಸ್ವವೆನ್ನುವ ಪರಿಸ್ಥಿತಿಯಾವುದೇ ಒಂದು ರಾಜ್ಯಕ್ಕೆ—ದೇಶಕ್ಕೆ ಗೌರವ ತರುವಂತಹುದಲ್ಲ. ಆದರೆ, ನಮ್ಮ ದೇಶದಲ್ಲಿ—ಮುಖ್ಯವಾಗಿ ನಮ್ಮರಾಜ್ಯದಲ್ಲಿ ನಡೆಯುತ್ತಿರುವ ಈ ರಾಜಕೀಯ ಹಗರಣವು ಎಂದಿಗೂ ಶ್ರೇಯಸ್ಕರವಲ್ಲ ಅಭ್ಯರ್ಥಿಗಳ ಆಯ್ಕೆ ನಿಷ್ಪಕ್ಷಪಾತತನದಲ್ಲಿ ನಡೆಯ ಬೇಕಾದುದು ಅತ್ಯಗತ್ಯವೆಂಬುದರಿಂದ ಈಗಾಗಲೇ ಜತ್ತಿ—ನಿಜಲಿಂಗಪ್ಪನವರ, ಅವರ ಬೆಂಬಲಿಗರ ತರ್ಕ ವಿತರ್ಕಗಳು, ವಾದ ವಿವಾದಗಳು ಹಾಗೂ ಆರೋಪ—ಪ್ರತ್ಯಾರೋಪಗಳು ಹೇಳಿಕೆ—ಮಾರ್ಲಾ—ಹೇಳಿಕೆಗಳು ರಾಜ್ಯದ ಕಾಂಗ್ರೆಸ್ಸಿನ ಆರೋಗ್ಯ ನೆಟ್ಟಗಿಲ್ಲವೆಂಬುದನ್ನು ಸಾರಿ ಸಾರಿ ಹೇಳುತ್ತವೆ. ಇಂತಹ ವಿಭಿನ್ನತೆ-ಪಕ್ಷದ ಬಲಸಂವರ್ಧನೆಯಾಗ ಬೇಕಾದ ಈ ಸಂಧಿಗ್ಧ ಪರಿಸ್ಥಿತಿಯಲ್ಲಿ ಒಡಕನ್ನು ಬೆಸೆಯುವ ಬದಲು ಅದನ್ನು ಮತ್ತಷ್ಟು ಹೆಚ್ಚಿಸುವುವೆಂಬುದು ನಿರ್ವಿವಾದ. ಹೀಗೆ ರಾಜ್ಯವನ್ನು ಉನ್ನತಿಯ ಸಧಕ್ಕೊಯ್ಯಬೇಕಾದವರು ಈ ರೀತಿಯಲ್ಲಿ ಜಗಳಕ್ಕೆ ಕೈತುರಿಸಿಕೊಂಡರೆ, ರಾಜ್ಯದ ಗತಿಯೇನು? ಕೋಣನೆರಡಂ ಹೋರೆಗಿತ್ತು ಮಿಗೆ ಮಿತ್ತೆಂದು ಕ್ಷೋಣಿಯೊಡುವ ಗಾದೆಯನ್ನು ನಿಜವೆಂಬುವ ಈ ಹವ್ಯಾಸ ಶೋಭಾಸ್ಪದವೆಂದು ಯಾವ ವಿವೇಕಿಯೂ ಹೇಳಲಾರನು. ನಮ್ಮ ನಾಯಕರು ತಮ್ಮ ವ್ಯಕ್ತಿಗತ ಪ್ರತಿಷ್ಠೆಯನ್ನುಳಿದು ಪಕ್ಷದ ಪ್ರತಿಷ್ಠೆಯನ್ನುಳಿಸಿಕೊಳ್ಳುವುದು ಮತ್ತು ಮುಖ್ಯವಾಗಿ ರಾಜ್ಯದ ಹಿತವನ್ನು ಗುರಿಯಾಗಿಟ್ಟುಕೊಳ್ಳುವುದು ಅತ್ಯವಶ್ಯವೆಂಬುದು ಅಪ್ರಿಯವೆನಿಸಬಹುದಾದರೂ ಚಿರಸತ್ಯ—ಅಪೇಕ್ಷಣೀಯ.

— : ಸೂಚನೆ : —

ಕೆಲವೊಂದು ಅನಾನುಕೂಲತೆಗಳಿಂದಾಗಿ ಬರುವ ವಾರದ ತಾ 23—11—1961ರ ಸಂಚಿಕೆಯನ್ನು ಇಲ್ಲಿಸಲಾಗಿದೆ. ವಾಚಕರು ಗಮನಿಸ ಬೇಕಾಗಿ ವಿನಂತಿ.

—ಮೆನೇಜರ್

ಮಂಗಳೂರು ಸ್ಪೆಶಲ್ ಅಸಿಸ್ಟಾಂಟ್ ಕಮಿಶನರ (ಟೆನೆನ್ಸಿ) ಇವರ ಕೋರ್ಟಿನಲ್ಲಿ

O. P. 1270/1961

ಅರ್ಜಿದಾರ, ಮೂವರ ಹುಸೆನ್‌ಸಾಹೇಬ್ ಮತ್ತು

ಎದ್ರಿರು 1 ಮಂಜ ಕೊಡಾ ಇವರೊಳಗೆ 1ನೇ ಎದ್ರಿ ಮಂಜ, ಮಂಜಿ ಹೆಂಗಸಿನ ಮಗ 2ನೇ ಎದ್ರಿ ಸಾಗಮ್ಮ ಯಾನೆ ಬಚ್ಚಿ ಹೆಂಗಸು 1ನೇ ಎದ್ರಿಯ ತಂಗಿ.

ಎದ್ರಿರು ಕುಂದಾಪುರ ತಾಲ್ಲೂ ಯಡ್ತರೆ ಗ್ರಾಮದ ಬೇಣದ ಹಿಲ್ಲಲ್ಲಿರುವವರು.

P. O Byndoor.

ಮೇಲಿನ ಅರ್ಜಿಯಲ್ಲಿ ಎದ್ರಿಗೆ ಈ ಮೂಲಕ ತಿಳಿಸುವದೇನೆಂದ್ರೆ—

ಅರ್ಜಿದಾರ ಎದ್ರಿರ ಮೇಲೆ, ತಾರೀಕು 28—7—'58ರ ಜಾಲಗೇಣಿ ಎದುಸುಂಕ ಆಧಾರದ ಮೇಲೆ ಎದ್ರಿರು ಅನುಭವಿಸಿಕೊಂಡು ಬರಿವ ಸ್ಥಳಗಳ ಜಾಲಗೇಣಿ ಗೇಣಿ ಬಾಕಿ ಮಾಡಿಕೊಂಡ ಕಾರಣದಿಂದ ಸ್ವಾಧೀನತೆ ಅಪೇಕ್ಷಿಸಿ ಹಾಕಿದ ಮೇಲಿನ ಅರ್ಜಿಯು ತಾ 30—11—61ಕ್ಕೆ ಮೇಲಿನ ಕೋರ್ಟಿನ ಕುಂದಾಪುರ ಕ್ಯಾಂಪಿನಲ್ಲಿ ತೆಗ್ದಿಗೆ ಇದೆ ಆಕ್ಷೇಪ ಇದ್ದರೆ ಸದ್ರಿ ದಿನ ಹಗಲು ಗಂಟೆ 11 ಕ್ಕೆ ಹಾಜ್ರ ಆಗತಕ್ಕದ್ದು ಎಂತ ಈ ಮೂಲಕ ತಿಳಿಸೋಣಾಗಿಯದೆ

(B O)

G. Kushala Hegde

Advocate for the Petitioner,

ಕುಂದಾಪುರ 18-11-61

ಸೀತಾನದಿ ಜಾನುವಾರು ಜಾತ್ರೆಯು— ಈ ಹೊಬಲು ಪ್ರಕಟವಾದಂತೆ ತಾ. 18—12—61ರಿಂದ 4—1—62ರ ವರೆಗೆ ನಡೆಯದೆ, ತಾ. 1—1—62ರ ವರೆಗೆ ಮಾತ್ರ ಜರಗುವುದೆಂದೂ, ಜಾತ್ರೆಯನ್ನು ಸರ್ವರೂ ಸಹಕರಿಸಿ ಯಶಸ್ವಿಗೊಳಿಸಬೇಕೆಂದೂ ಕುಂದಾಪುರ ಅಸಿಸ್ಟಾಂಟ್ ಕಮಿಶನರ ಶ್ರೀಕೆ. ಸಿ ಮೋನಯ್ಯ ಅವರು ಅಪೇಕ್ಷಿಸುತ್ತಾರೆ.

ನೂತನ ಸಮಾಜಕ್ಕೆ ಆಚಾರ ಸಂಹಿತೆ

(ಹಿನೇ ಸುಟದಿಂದ)

ಈಗಾಗಿಯೇ ಒಂದು ಹೊಸ ಧರ್ಮವು ಸ್ಥಾಪನೆಯಾಗಬೇಕು. ಇದು ಸಂಭವ ನೀಯವೆಂಬಂತೆ ಕಂಡುಬಂದರೂ ನಿಜ ವಾಗಿಯೂ ಸುಲಭದ ಕಾರ್ಯವಲ್ಲ.

ಧರ್ಮದ ಈ ಸ್ಥಾನವನ್ನು ವೇದಾಂತ ಗಳು ಪಡೆಯಬಲ್ಲವೆಂದು ನನ್ನ ವಿಶ್ವಾಸ. ವೇದಾಂತ ಧರ್ಮವೆಂಬುದು ಹೊಸತೂ ಅಲ್ಲ; ಅನ್ಯದೇಶೀಯವೂ ಅಲ್ಲ. ಮೂವತ್ತು ಕೋಟಿ ಮಾನವರಿಗೆ ಮಾರ್ಗದರ್ಶನ ಮಾಡುತ್ತಿರುವ ಒಂದು ಜೀವಂತ ಪ್ರಾಣವಂತ ಆಸ್ಥೆಯಾಗಿದೆ ಹಿಂದಿನ ಸಾವಿರಾರು ವರ್ಷಗಳಿಂದ ಇದು ಭಾರತೀಯರಿಗೆ ಮಾರ್ಗದರ್ಶನ ಮಾಡಿದೆ ಆದರೆ, ಈಗೀಗ ಮಾತ್ರ ಇದರ ಪ್ರಭಾವ ಸ್ಖಲಿತವಾಗ ತೊಡಗಿದೆ. ಆದುದರಿಂದ ಈ ವೇದಾಂತತತ್ವವನ್ನು ಆಚಾರ ಸಂಹಿತೆಯೊಂದು ಮರಳಿ ಸ್ವೀಕರಿಸಿ, ಆಧ್ಯಾತ್ಮಿಕತೆಯಲ್ಲಿ ಭಾರತೀಯರಲ್ಲಿ ಆಸ್ಥೆ ಹೆಚ್ಚಿದಾಗ ಹೊಸ ಸಮಾಜಕ್ಕೆ ತಕ್ಕ ಮನೋಧರ್ಮ ನಿರ್ಮಾಣವಾಗುವುದು ನಿಸ್ಸಂದೇಹ.

(ರಾಜಾಜೀಯವರ ರೇಖಾಚಿತ್ರದಿಂದ)

ಪುತ್ತೂರು ಡಿ. ಮು. ಕೋರ್ಟಿನಲ್ಲಿ

R. E. A. 414/61 R. E P. 306/61
O. S. 203/ 60

ಬಿತೀಜಂಮ —ವಾದಿ. ಅರ್ಜಿದಾರಳು,
ಲಿಂಗಂಮ ಕೂಡಾ—ಪ್ರತಿವಾದಿರು
—ಎದ್ರಿರು

1—2 -3—6ನೇ ಎದ್ರಿರು

1. ಲಿಂಗಂಮ ವೀರಪ್ಪ ನ್ಯಾಕರ ವಿಧವೆ.
2 ಸೀತು ಹೆಂಗ್ಸು. ವೀರಪ್ಪ ನ್ಯಾಕರ ವಿಧವೆ.
3. ರಾಮಂಣ ನ್ಯಾಕ. ವೀರಪ್ಪ ನ್ಯಾಕರ ಮಗ.
6, ಬೊಮ್ಮಕ್ಕೆ ವೀರಪ್ಪನ್ಯಾಕರ ಮಗಳು

ಯೆಲ್ಲರು ಕಡೇಶ್ವಾಲ್ಯ ಗ್ರಾಮದ ಬರೆಂಗ್ಯಾ ಎಂಬಲ್ಲಿರುವದು

P O. Kadeshwallya ಬೀಗೆ

ಮೇಲಿನ ಅರ್ಜಿದಾರಳು, ಯಿಸ್ತಿಹಾರಿನ ಶರತ್ತುಗಳನ್ನು ಸ್ವೀಕರಿಸಿ ಯೇಲಂಣ ಬಗ್ಗೆ ನಿರ್ಣಯಿಸುವರೆಯೂ, ಯೇಲಂ ಸಮಯ ಬಿಡ್ ಪರ್ಮಿಶನ್ ಕೊಡಿಸಬೇಕಂತಲೂ, ಅರ್ಜಿದಾರನು ಮಾಡಿದ ಅರ್ಜಿ ಸಹಾ, ತಾ. 24 — 11 — 61ಕ್ಕೆ ಯಿರುವದ್ರಿಂದ, ನಿಮಗೇನಾದರೂ, ಆಕ್ಷೇಪಣೆಗಳಿದ್ದರೆ ನೀವು ಅದಿನ ಬೆಳಿಗ್ಗೆ ಹಾಜರಾಗಿ ಉದಹರಿಸಿಕೊಳ್ಳಬಿದ್ದಲ್ಲಿ ನಿಮ್ಮನ್ನು ಶಿಕ್ಷಾಮಾಡಿ ತೀರ್ಮಾನಿಸಲಾದೀತೆಂತ ಈ ಮೂಲಕ ತಿಳಿಸಿಯದೆ.

By Order
B. Sripali Rao
Advocate for pets.

ಪುತ್ತೂರು 28—10—61

ವರ್ಗ—ಊಳಿಗ

ಮೊದಲಾದ ಯಾವತ್ತೂ ತರದ

ಎಕೌಂಟ್ ಪುಸ್ತಕಗಳು

ಶಾಲಾ ರಿಜಿಸ್ಟ್ರಿಗಳು,

ಫಾರ್ಮುಗಳು,

ದೊರೆಯುತ್ತವೆ.

ವಿಚಾರಿಸಿರಿ—

ನವಯುಗ ಪ್ರೆಸ್, ಉಡುಪಿ

ಜೇನುತುಪ್ಪದ ವೈದ್ಯಕೀಯ ಮಹತ್ವ

ಶ್ರೀ ಕೆ. ಅಚ್ಚುತ ಶ್ರೀನಿವಾಸ ಪೈ. ಉಡುಪಿ.

ಜೇನು ತುಪ್ಪವು ನಿಸರ್ಗ ಸಿದ್ಧವಾದ ಉತ್ಕೃಷ್ಟ ಪೌಷ್ಟಿಕವಾಗಿರುತ್ತದೆ. ಇದರ ಪ್ರಧಾನ ಕರಣದಲ್ಲಿ 'ಗ್ಲೂಕೋಸ್' 'ಫ್ರುಕ್ಟೋಸ್ ಎಸಿಡ್,' 'ವಿಟಮಿನ್ಸ್' 'ಸಾಲ್ಟ್ಸ್' ಮತ್ತು ಇಲಾಂಶ ವಿಪುಲವಾಗಿದೆ. ಇದರ ಪ್ರಾಶಸ್ತ್ಯವನ್ನರಿತೇ ವೈದ್ಯರು ಅನೇಕ ಅರಿಷ್ಟಗಳಲ್ಲಿ ಜೇನುತುಪ್ಪವನ್ನು ಉಪಯೋಗಿಸುತ್ತಾರೆ. ಇದರಿಂದ 'ಪೊಟೆಂಟಿಶನ್' ಆಗಿ 'ಈಕ್ಷ' ತಯಾರಾಗುತ್ತಿದೆ ಎಂದು ತಜ್ಞರ ಮತವಾಗಿದೆ

ಅನೇಕಾನೇಕ ರೋಗಗಳಲ್ಲಿ ಇದರ ಉಪಯೋಗದಿಂದ ಗುಣಲಾಭವಾಗುತ್ತದೆ. ಇದರೊಳಗಿನ ಮಧು ಶರ್ಕರೆಯಿಂದ ಹೃದಯದ ಸ್ನಾಯುಗಳ ಮೇಲೆ ಬಲಕಾರಕ ಪರಿಣಾಮವಾಗುತ್ತದೆ. ಹೃದಯ ದೌರ್ಬಲ್ಯದಲ್ಲಿ, ಮಂದವಾದ ಹೃತ್ಸ್ಪಂದನ, ನಾಡೀ ಸ್ಪಂದನಗಳಲ್ಲಿ ಜೇನುತುಪ್ಪದ ಉಪಯೋಗ ಹೆಚ್ಚಿಗೆ ಇದೆ 'ಟಾಯ್ಫಾಯಿಡ್' ನಿನೋನಿಯೂ, 'ಇನ್‌ಫ್ಲೂಯೆಂಜಾ' 'ಫ್ಲೂ' ಇತ್ಯಾದಿ ಜ್ವರಗಳಲ್ಲಿ ಕರಿಣ ಅವಸ್ಥೆಯಲ್ಲೂ ಜೇನುತುಪ್ಪ ತುಳಸಿ ರಸದೊಡನೆ ಕೊಟ್ಟಿದ್ದಾದರೆ ರೋಗಿಯ ಹೃದಯ ಕ್ರಿಯೆಯು ಸುಧಾರಿಸ ಹತ್ತುತ್ತದೆ. ಆಯುರ್ವೇದದಲ್ಲಿ ಯಂತೂ ಜೇನು ತುಪ್ಪವನ್ನು ಪ್ರತಿಯೊಂದು ಮಾತ್ರೆ, ಚೂರ್ಣಗಳ ಅನುಪಾನಕ್ಕೆ ಪ್ರಶಸ್ತವೆಂದು ಹೇಳಿದ್ದಾರೆ.

ಜೇನುತುಪ್ಪ ರೋಪಣಕಾರಿಯೂ ಆಗಿದೆ. ಹಳೇ ವ್ರಣಗಳಲ್ಲಿ ಇದರ ಉಪಯೋಗದಿಂದ ಶೀಘ್ರ ಗುಣ ಕಂಡುಬಂದಿರುತ್ತದೆ. ಇದು ಜಂತುನಾಶಕವಿದೆ. ಇದರ ಪಟ್ಟುಹಾಕುವುದರಿಂದ ವ್ರಣಗಳು ಶೀಘ್ರ ಮಾಯ್ದುಬರುವವು. ಬೆಂಕಿ, ಬಿಸಿ ನೀರಿನ ವ್ರಣಗಳನ್ನೂ ಗುಣಪಡಿಸುತ್ತದೆ. ಇದು ಯೋಗವಾಹಿಯಾಗಿರುತ್ತದೆ. ಜೇನುತುಪ್ಪ ಮತ್ತು ತುಪ್ಪ ವಿಷಮ ಪ್ರಮಾಣದಲ್ಲಿ ಕಲೆಸಿ ಸೇವಿಸಬೇಕು, ಹಳೇ ಜೇನುತುಪ್ಪವನ್ನೇ ಉಪಯೋಗಿಸಬೇಕು.

ನೇತ್ರವಿಕಾರಗಳಲ್ಲಿ 'ತ್ರಿಫಲಾ ಮಧು ಸರ್ಪಿ ಭ್ಯಾಂಸಿಶಿ ನೇತ್ರ ಬಲಾಯಚ' ರಾತ್ರೀ ಕಾಲದಲ್ಲಿ ಜೇನುತುಪ್ಪ ಮತ್ತು ತುಪ್ಪಗಳಲ್ಲಿ ತ್ರಿಫಲಾ ಚೂರ್ಣವನ್ನು ಸೇವಿಸುವುದರಿಂದ ಕಣ್ಣುಗಳಲ್ಲಿ ದೃಷ್ಟಿ, ಶುಭ್ರತೆಯುಂಟಾಗುತ್ತದೆ.

ರೆಪ್ಪೆಯ ರೋಗಗಳಲ್ಲಿ ಅಭಿಷ್ಯಂದಿ ಇತ್ಯಾದಿ ವಿಕಾರಗಳಲ್ಲಿ ಕಣ್ಣಿನಲ್ಲಿ ಜೇನುತುಪ್ಪವನ್ನು ಹಾಕಬೇಕು

ಕಣ್ಣಿಗೆ ಪರೆ ಬರೋಣ, ದೃಷ್ಟಿಮಾಂದ್ಯವಿದ್ದಲ್ಲಿ ಜೇನು ತುಪ್ಪದಲ್ಲಿ ಬಲಿತ ಅಳಲೇಕಾಯಿಯನ್ನು ತೇಯ್ದು ಅಂಜನ ಮಾಡಬೇಕು. ಜೇನು ತುಪ್ಪವು ಕರ್ಣರೋಗಗಳಲ್ಲಿ ಪ್ರಶಸ್ತವಾಗಿದೆ ಕಿವಿ ಹೊಡೆತ, ಶೂಲ, ಕರ್ಣಸ್ರಾವ ಮೊದಲಾದ ವಿಕಾರಗಳಲ್ಲಿ ನಾಲ್ಕು ಬಿಂದು ಜೇನು ತುಪ್ಪ, ಹಾಕಿ, ಯೋಗೇಶ್ವರ ತೈಲ, ಶೋಧನ ತೈಲ ಇಲ್ಲವೆ ತಿಲ ತೈಲ, ಕಿವಿಯಲ್ಲಿ ಹಾಕುವುದರಿಂದ ಕಿವಿಯ ಇನ್ನಿತರ ವಿಕಾರಗಳು ಗುಣವಾಗುವವು ಮುಖರೋಗ, ದಂತರೋಗಗಳಲ್ಲಿಯೂ, ಮುಖಪಾಕ, ಕ್ರಿಮಿದಂತ, ದಂತಶೂಲ ಇತ್ಯಾದಿಗಳಲ್ಲಿ ಜೇನು ತುಪ್ಪ ಉಪಯೋಗಿಸಿ ಗುಣಪಡೆಯ ಬಹುದು. ಗಲ್ಲ ಗ್ರಂಥಿಗಳಲ್ಲಿ, ಗಲ ಶುಂಡಿಯಲ್ಲುಪಯೋಗಿಸ ಬೇಕು. ಪುಷ್ಪವಿಕಾರಗಳಲ್ಲಿ ಪರಿಣಾಮಕಾರಿಯಾಗಿ ಉಪಯೋಗಿಸಬಹುದು. ಕಾಸ, ಶ್ವಾಸ ಪ್ಲೂರಿಸಿ ಇತ್ಯಾದಿ ವಿಕಾರಗಳಲ್ಲಿ ಕಾಸ ಕಾಷ್ಟರಸದೊಡನೆ ಕೊಡಬೇಕು. ದಷ್ಟ ಪುಷ್ಟ ಸ್ನಾಯುಗಳಿಗಾಗಿ ಜೇನುತುಪ್ಪ ಹಾಲಿನೊಂದಿಗೆ ನಿತ್ಯ ಸೇವಿಸಬೇಕು. ಶಕ್ತಿ ಹೆಚ್ಚುವುದರಲ್ಲಿ ಸಂಶಯವಿಲ್ಲ. ಜೇನೊಣಗಳನ್ನು ಗೂಡುಗಳನ್ನಿಟ್ಟು ಸಂಗ್ರಹಿಸಲ್ಪಟ್ಟ ಜೇನನ್ನು ವಿಕ್ರಯಿಸುವುದಾದಾಯವನ್ನೂ ಪಡೆಯಬಹುದು. ಮಧು ರಾಷ್ಟ್ರೀಯ ಸಂಪತ್ತಾಗಿದೆ ಜೇನು ವ್ಯವಸಾಯದಿಂದ ಸಾಂಪತ್ತಿಕ ಸ್ಥಿತಿಯನ್ನೂ ಸುಧಾರಿಸ ಬಹುದು.

ಬೊಂಬಾಯಿಯ ತಾತಾ ಸ್ಮಾರಕ ಕ್ಯಾನ್ಸರ್ ಚಿಕಿತ್ಸಾಲಯದಲ್ಲಿರುವ ಶಸ್ತ್ರಕ್ರಿಯೆ ನಡೆಸುವ ಕೋಣೆಯ ದೃಶ್ಯವಿದು.

ಹಂಬಲ

ಶ್ರೀಮತಿ ಸರೋಜಿನಿ ಮಹಿಷಿ, ಧಾರವಾಡ.

ಎಮ್ಮ ಹೃದಯದ ಒಲವು
ಎಮ್ಮ ಪ್ರೀತಿಯ ಮಗುವು
ಅನ್ಯರಿಗೆ ದೊಡ್ಡವಳು
ನಮಗಿನ್ನು ಮಗುವವಳು
ಅವಳ ಬಾಡುವೆಯ ಚಿಂತೆ
ಎಂದು ಬಿಡುವದೊ ಎಂದು
ಅವಳಿಗರಿವಾಗದೆಯೆ
ಒಳಗೊಳಗೆ ಕುದಿಯುತಿದೆ
ಸಮಯ ಬಂದಿಹುದೀಗ
ಎರೆದಿಹೆವು ಧಾರೆಯನು
ಅವ ಜನುಮದ ಫಲವೊ
ಮುತ್ತು ರತ್ನದ ಜೊತೆಯು
ಹರಿಯುರಿತ್ತಿಹ ಹರಕೆ
ಫಲವಾಗಿ ಮೂಡಿಹುದು
ವಿರಹದುರಿಯಿರುತಿರಲು
ಹೃದಯ ಹಗುರಾಗಿಹುದು
ಹಾಲುಂಡು ಬೆಳೆದ ಮಗು
ಜಗವನರಿಯದ ಹಸುಳೆ
ಎಳೆಯಳಿವಳನು ನಿಮ್ಮ
ಮಡಿಲಲ್ಲಿ ಇರಿಸುವೆವು
ಅತ್ತೆ ಮಾವರ ಮನವ
ಓಲೈಸಿ ನಡೆ ಮಗಳೆ
ಒತ್ತಿ ಮಾತಾಡದಲೆ
ವಿನಯದಿಂದಿರು ಮುಗುಳೆ,
ಗಿರಿಯರಲಿ ಬಲವಿರಲಿ,
ನೌಕರರಲಿ ಕ್ಷಮೆಯಿರಲಿ
ದೀನರಲಿ ದಯೆಯಿರಲಿ
ನಲವಿರಲಿ ಬಾಳಿನಲಿ.

ವಿಶ್ವಕವಿ ಟಾಗೋರರ ಪುಣ್ಯಸ್ಮರಣೆಗಾಗಿ
ಅವರ ಶತಮಾನೋತ್ಸವದ ಸುಸಂದರ್ಭದಲ್ಲಿ
ಪ್ರಕಟಿಸಾದ ಕಿರುಗಾಣಿಕೆಗಳು

ಚಿತ್ರಾಂಗದೆ

ಬೆಲೆ: ೬೦ ನ. ಪೈಸೆ.

(ಶ್ರೀ ಕೆ. ಕೆ. ಶೆಟ್ಟಿ, ಎಂ. ಎಲ್. ಸಿ. ಅವರಿಂದ ಅನುವಾದಿತ)

ರವೀಂದ್ರನಾಥರ ಕಿರುಗತೆಗಳು

ಬೆಲೆ ೯೦ ನ. ಪೈಸೆ.

(ಶ್ರೀ ಹನುಮಂತರಾವ್ ಮೊಂಜರೇಕರ, ಕಾರವಾರ ಅವರಿಂದ ಅನುವಾದಿತ)

ಪ್ರಕಾಶಕರು:
ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ನವಯುಗ ಪ್ರೆಸ್, ಉಡುಪಿ.

ನವಯುಗ ವಾರ ಪತ್ರಿಕೆಗೆ
ಚಂದಾದಾರರಾಗಿ ಪ್ರೋತ್ಸಾಹಿಸಿ

ರುಷ ಪ್ರಯತ್ನ

ಶ್ರೀ ಗೋಪಾಲ ಕೃಷ್ಣ ಭಟ್ಟ
ಶೇಡಿಮೂಲೆ

ಭಗೀರಥನು ತನ್ನ ಪ್ರಯತ್ನದಿಂದ ಸು ದಿಯನ್ನು ಧರೆಗಿಳಿಸಿ, ಧರಿತ್ರಿಯಲ್ಲಿ ಸ ಹರಿಯುವಂತೆ ಎಸಗಿದನು. ಅವನ ಥನೆಯ ಸಾಫಲ್ಯವು ಸರ್ವ ಕಾಲದ , ಸರ್ವ ಜನಾದರಣೀಯವಾಗಿ, ಅ ಕಾರ್ಯ ಶ್ರದ್ಧೆಯು ಎಲ್ಲರಲ್ಲಿಯೂ, ವಾಗುವಂತೆ ಶಿವನ ಜಡೆಯಿಂದಿಳಿದ ಗೆಗೆ 'ಭಾಗೀರಥೀ"ಎಂಬ ನಾಮಕರಣ ಯಿತು ಹರಿಶ್ಚಂದ್ರನು ಪ್ರಯತ್ನದಿಂ ಸತ್ಯವನ್ನು ಕಾಪಾಡಲು ಹೋರಾಡಿ ರ್ಯವಂತನಾಗಿರುವನು.

"ಅಧಿಷ್ಠಾನಂ ತಥಾಕರ್ತಾಕರಣಂ ಚ ಥಗ್ವಿಧಮ್। ವಿವಿಧಾಶ್ಚ ಪೃಥಕ್ ಚೇಷ್ಟಾ ದೈವಮ್ ಚೈವಾತ್ರ ಪಂಚಮ ॥" ಕಾರ್ಯಕ್ಷೇತ್ರ. ಕೆಲಸವನ್ನು ಡುವವ, ದುಡಿಯಲು ಉಪಯೋಗಿ ವಸ್ತು, ಹಲವು ತರದ ಯುಕ್ತಿ, ಐ ಯೋಗಿ ಇಷ್ಟದೇವತೆ ಇಷ್ಟು ಒಂದು ರ್ಯವು ನೆರವೇರಬೇಕಾ ಅಗತ್ಯ. ಜ್ಞಾನ, ಭಕ್ತಿ, ಕರ್ಮ, ಇ ಗಳ ಸಂಮಿಲನದಿಂದ ಬಾಳುವೆಯು ಭಾಗ್ಯವಾಗಬಹುದೆಂದು ಜ್ಞಾನಿಗಳಾದ ವಿಂದರು ಹೇಳಿರುವರು ಕವಿವರ ಬೇಂ ಯವರು ಇದನ್ನೇ ನನ್ನಲ್ಲಿ ಹೇಳಿರು ವರು

ಆತ್ಮ ವಿಶ್ವಾಸದಿಂದ ಆಳವಾಗಿ ಚಿಂತಿ ಏಕಮೇವ ದ್ವಿತೀಯವಾಗಿ ಆಯಾಸ ನ್ನು ಗಣಿಸದೆಯೇ ನಿಶ್ಚಯಿಸಿದ ಗುರಿ ಯನ್ನು ತಲಪುವಂತೆ ಜಾಗೃತನಾಗಿ ದು ಡಿಯಬೇಕು. ಆಗ ದೇವರು ನಮ್ಮ ಇ ಚ್ಛಾಶಕ್ತಿಗೆ ತಕ್ಕುದನ್ನೀಯುವನು.

"ಉದ್ಯಮಾ ಸಾಹಸಂ ಧೈರ್ಯಂ ಬು ದ್ಧಿಃ ಶಕ್ತಿಃ ಪರಾಕ್ರಮಃ ಷಡೆತೇಯತ್ರ ವರ್ತಂ ತೇತತ್ರದೇವ ಪ್ರಸೀದತಿ। ಎಂದು ಜ್ಞಾನಿಗಳು ಹೇಳಿರುವರು.

ಕಾರ್ಯನಿಷ್ಠೆ, ಸಾಹಸ, ಧೃಢತೆ, ದೇ ಶಕ್ತಿ, ಪರಾಕ್ರಮಗಳಿರುವವನಿಗೆ ಅರನೆ ಯವಾಗಿ ದೈವಸಹಾಯ ಮೊದಗುತ್ತದೆ.")

ನಮ್ಮ ಪ್ರಯತ್ನವು ನ್ಯಾಯ ಸಮ್ಮತ ವಾಗಿರಬೇಕು. ಸಮಾಜದ ಯಾರೊಬ್ಬನಿ ಗೂ, ಕೆಡುಕನ್ನುಂಟುಮಾಡದಿರಬೇಕು. ದರೆ ಮಾತ್ರ ನಮ್ಮ ಪ್ರಯತ್ನವು ಯಶ ಸ್ವಿಯಾದೀತು.

ರಾವಣನು ಮಹಾ ಜ್ಞಾನಿಯೂ, ಶಾ ಸ್ತ್ರವನ್ನು ಅರಿತವನೂ, ಪರಾಕ್ರಮಿ ಯೂ ಶಿವಭಕ್ತನೂ ಆಗಿದ್ದನು. ಆದರೆ ನು ಧರ್ಮಚ್ಯುತನಾಗಿ ತನ್ನನ್ನು ಕೆಡಿ ಸಿಕೊಂಡನು. ಮಹಾ ವೀರನೂ, ತ್ಯಾಗಿ ಯೂ ಆದ ಕರ್ಣನು ಮಹಾ ಭಾರತ ಯುದ್ಧದಲ್ಲಿ ವಿಜಯಿಯಾಗಲಿಲ್ಲ.

ಚಾಣಕ್ಯನು ಇರಾನಿನಲ್ಲಿ ತುರುಕರ ಹಾವಳಿಯನ್ನು ತಡೆಯಬೇಕಾದವನಾಗಿ ಭಾರ ತಕ್ಕೆ ಬಂದನು. ಅವನಲ್ಲಿ, ಜ್ಞಾನವೂ, ಧೃ ಢತೆಯೂ, ಪರಾಕ್ರಮವೂ ಉನ್ನತ ಸಾಹ ಸವೂ, ಕಷ್ಟಸಹಿಷ್ಣುತೆಯೂ, ಸತತ ಕ ರ್ತವ್ಯಪರತೆಯೂ ಇದ್ದುದರಿಂದಲೇ, ಚಂ ದ್ರಗುಪ್ತನ ಏಳಿಗೆಯನ್ನು ಸಾಧಿಸಿ, ನಂದ ರನ್ನು ತುರುಕರನ್ನೂ ಅಡಗಿಸಿ ಭೂಭಾ

ನಾಗಪುರ ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಯರು ಅಂತರ ವಿಶ್ವವಿದ್ಯಾನಿಲಯ ಯುವಜನೋತ್ಸವದಂದರಲ್ಲಿ ನೃತ್ಯ ವೊಂದನ್ನು ಪ್ರದರ್ಶಿಸುತ್ತಿದ್ದಾರೆ.

ರವನ್ನು ನಿಲ್ಲಿಸಿದನು. ಶಾಂತಿಯನ್ನು ನೆಲೆ ಗೊಳಿಸಿದನು. ಮಹಾತ್ಮಾ ಗಾಂಧಿಯವ ರು ಭಗವದ್ಗೀತೆಯ ಆಧಾರದಿಂದಲೇ, ಅಹಿಂಸೆಯ ಪಥದಲ್ಲಿ ನಡೆದು, ಭಾರತಕ್ಕೆ ಮಹಾ ಶಕ್ತಿ ಸಂಪನ್ನರಾದ, ಶಿಸ್ತಿನ ಆಗ ರವನ್ನಿಸಿದ, ಪ್ರವೀಣರಾದ ಬ್ರಿಟಿಷರನ್ನು ಸೋಲಿಸಿ ಸ್ವಾತಂತ್ರ್ಯವನ್ನು ತಂದುಕೊ ಟ್ಟರು.

ಡೆಮೊಸ್ಥನೆನು ಉಗ್ಗಡಿಸಿ ಮಾತಾಡು ವವನಾಗಿದ್ದನು. ಅವನು ಪ್ರಯತ್ನದಿಂ ದಲೇ ಉತ್ತಮ ಭಾಷಣಗಾರನಾಗಿ ಲೋ ಕದಲ್ಲಿ ಅದ್ವಿತೀಯ ಸ್ಥಾನವನ್ನು ಹೊಂದಿ ರುವನು. ಲಿಂಕನನು ಬಡಕುಟುಂಬದಲ್ಲಿ ಹುಟ್ಟಿ ಸಾಧನೆಯಿಂದ ಅಮೇರಿಕದ ಅ ಧ್ಯಕ್ಷ ಪದವಿಯನ್ನೇರಿದನು,

ಎಡಿಸನನು ಪ್ರಯತ್ನದಿಂದಲೇ ಜಗ ತ್ತಿನ ಮಹಾ ವಿಜ್ಞಾನಿಗಳ ಸಾಲಿನಲ್ಲಿ ಸೇ ರಿದನು. 'Imagination together with ambition and will do wary" ಇಷ್ಟು ಮಹಾತ್ಕಾರ್ಯಕ್ಕೆಬೇ ಕೆಂದು ಹೇಳಿರುವನು. ದೇವರಲ್ಲಿ ದೃಢ ನಂಬಿಕೆಯನ್ನು ಅವನು ಇಟ್ಟಿದ್ದನು.

"ಚಿತ್ತದಸುಭವ ಭಾವ ಸಂಬಾವನೆಗ
ಳೆಲ್ಲ ಭತ್ತವದನು ಕುಟ್ಟಿ
ವಿಚಾರಯುಕ್ತಿಗಳು ತತ್ವ ತಂಡುಲ
ದೊರೆಗುಂ

ವಿವೇಚಿತ ತತ್ವ ನಿತ್ಯ ಭೋಜನ ನಮಗೆ" ಎಂದು ಕರ್ನಾಟಕದ ಮಹಾ ಕವಿಗಳಾದ ಡಿ. ವಿ. ಜಿ.ಯವರು ಮಂಕು ತಿಮ್ಮನ ಕಗ್ಗದಲ್ಲಿ ಹೇಳುತ್ತಾರೆ.

ನಮ್ಮ ಕಲ್ಪನೆಗಳನ್ನು ನಿಜಪಡಿಸಲು ಪ್ರಯತ್ನಿಸಬೇಕು. ಆಗ ನಮ್ಮಲ್ಲಿ ಪ್ರಚಂ ಡ ಇಚ್ಛಾಶಕ್ತಿ ಇರಬೇಕು. ಇಚ್ಛಾಶಕ್ತಿ ಗೊಂದು ಗುರಿಬೇಕು. ಪ್ರಚಂಡ ಇಚ್ಛಾ ಶಕ್ತಿಯಿಂದ ಪ್ರಕೃತಿಯನ್ನು ಗೆಲ್ಲಬಹು ದೆಂದು ವೇದಾಂತ ಕೇಸರಿಯಾದ ವಿವೇ ಕಾನಂದರು ಉಪದೇಶಿಸಿರುವರು. ಕರ್ಮ ಯೋಗಿ ಶತಾಯು ವಿಶ್ವೇಶ್ವರಯ್ಯನವರು ಇಂದು ಲೋಕದಲ್ಲಿ ಮಹಾಕೀರ್ತಿ ಸಂಪ ನ್ನರಾಗಿ ಮೆರೆಯುವುದು ಸ್ಥೈರ್ಯ ಮತ್ತು ಇಚ್ಛಾಶಕ್ತಿಯಿಂದಲೇ ಮನಸ್ಸಿದ್ದಲ್ಲಿ ದಾರಿ' ಎಂಬಂತೆ ದೃಢ ಆತ್ಮ ವಿಶ್ವಾಸದಿಂ ದ ಅಸಹಾಯಕತೆಯಿಂದ ನಮ್ಮನ್ನು ನಾ ವು ಮೇಲೆತ್ತಬೇಕು. ಒರ್ವ ಬುದ್ಧಿವಂತ ನಾದ, ಉತ್ತಮ ಗುಣದ ವಿದ್ಯಾರ್ಥಿಗೆ ಹಣವಿಲ್ಲವಾದರೆ ದುಡಿತದಿಂದ ಹಣವ ನ್ನು ಗಳಿಸಿ ವಿದ್ಯಾಭ್ಯಾಸಮಾಡಬಹುದು

ಪ್ರಯತ್ನ ಮಾಡುತ್ತಿರುವಾಗ ಲೋಕ ವು ತೆಗಳಬಹುದು, ಹೊಗಳಬಹುದು. ಅ ದನ್ನು ಯಾವುದನ್ನು ಗಾಣಿಗೆ ತರದೆ, ಮುಂದುವರಿಯಬೇಕು. ಭಾರತದಲ್ಲಿ ಇಂ ದು ತತ್ವಗಳು ಮೂಲೆಪಾಲಾಗಿವೆ. ಹೊಸ ಸೃಷ್ಟಿಯು ನವ್ಯತೆಯು ನೆಲೆಗೊಳ್ಳದೆ, ಬಾಯಿಯಲ್ಲಿ ಮಾತ್ರವಿದೆಯಷ್ಟೆ! ಪ್ರತಿ ಯೊಬ್ಬ ಭಾರತದ ಪ್ರಜೆಯು ತನ್ನನ್ನು ಉದ್ಧರಿಸಿದರೆ, ಭಾರತದ ಶ್ರೇಯೋಭಿವ ದ್ಧಿಯಾದೀತು.

ಕರ್ನಾಟಕ ಸಂಘ(ಉಡುಪಿ)ದ ಮೂರು ಪ್ರಕಟಣೆಗಳು

ಓದಲೇ ಬೇಕಾಗಿರುವ ನವೀನ ಪುಸ್ತಕಗಳು!

೧. ಚಂದ್ರಲೋಕಕ್ಕೆ ಪ್ರಯಾಣ

ಲೇಖಕರು: ಶ್ರೀ. ರಾಘವೇಂದ್ರ ಆಚಾರ್ಯ, ಎಂ. ಎ.

ಆಧುನಿಕ ಪ್ರಪಂಚದ ಮಸತ್ತರವಾದ ಆಂದೋಲನಗಳು, ಪ್ರಪಂಚವನ್ನೆಲ್ಲಾ ಆಲುಗಾಡಿಸುತ್ತಿರುವ ಆರ್ಥಿಕ, ರಾಜಕೀಯ ಚಳುವಳಿಗಳು, ಅವುಗಳ ಹಿಂದಿರುವ ತತ್ವ ಗಳು, ಅವುಗಳಿಗೆ ಮಾನವನ ಪ್ರತಿಕ್ರಿಯೆ ಇವನ್ನೆಲ್ಲಾ ಗಮನಿಸಿ ರಚಿಸಿರುವ, ನಮ್ಮಲ್ಲಿ ವಿಚಾರಶಕ್ತಿ ಬೆಳೆಯಲು ನೆರವಾಗುವ ವೈಜ್ಞಾನಿಕ ಗ್ರಂಥ.

೨. ಸಾಮಾನ್ಯ ರೋಗಗಳು

ಲೇಖಕರು: ಡಾ| ಕೆ. ಎಲ್. ವಿಠಾಳ, ಎಂ. ಬಿ ಬಿ. ಎಸ್.
ಉಡುಪಿ ನಗರ ಸಭಾಧ್ಯಕ್ಷರು.

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಅತ್ಯುಪಯುಕ್ತ ಪುಸ್ತಕ.

೩. ಭೌತಿಕ ದರ್ಶನ

ಲೇಖಕರು: ಬಡೆಕ್ಕಿಲ ಕೃಷ್ಣ ಭಟ್ಟ, ಎಲ್ಎಲ್.ಬಿ

ಸಜ್ಜನರ, ವಿದ್ವಜ್ಜನರ, ವಿಜ್ಞಾನಿಗಳ ಅಭಿಮತವನ್ನು ಸಂಗ್ರಹಿಸಿ ಬರೆದ ಭೌತಿಕ ದರ್ಶನದ ಸ್ಥೂಲ ಪರಿಚಯ.

ಪ್ರತಿಯೊಂದು ಪುಸ್ತಕದ ಬೆಲೆ ಬರೇ ಒಂದು ರೂಪಾಯಿ.

ರೂ. ೩=೫೦ನ್ನು ಮನಿಯಾರ್ಡರು ಮಾಡಿದರೆ ಮೂರೂ ಪುಸ್ತಕಗಳನ್ನು ಬುಕ್ ಪೋಸ್ಟ್‌ನಿಂದ ಕಳಿಸಬಹುದು.

ಪುಸ್ತಕ ವ್ಯಾಪಾರಿಗಳಿಗೆ ವಿಶೇಷ ಸವಲತ್ತುಗಳಿವೆ.

ವಿಚಾರಿಸಿರಿ:
ನವಭಾರತ ಪುಸ್ತಕ ಭಂಡಾರ, ಉಡುಪಿ.

ಅನ್ಯರ ಸಹಾಯವಿಲ್ಲದೆ ಸ್ವತಂತ್ರವಾಗಿ ಇಂಗ್ಲಿಷ್ ಪತ್ರವ್ಯವಹಾರ ಮಾಡಲು ಉಪಯುಕ್ತ ಪುಸ್ತಕ

Letter Writing Made Easy

ಸುಲಭದಲ್ಲಿ ಪತ್ರಲೇಖನ

ವಿವಿಧ ಮಾದರಿಯ 75 ಇಂಗ್ಲಿಷ್ ಪತ್ರಗಳು.

ಬೆಲೆ: ರೂ. 1—75.

ಹೈಸ್ಕೂಲು ವಿದ್ಯಾರ್ಥಿಗಳಿಗೂ ಅಲ್ಪಸ್ವಲ್ಪ ಇಂಗ್ಲಿಷ್ ಮೊಹಿತಿಯುಳ್ಳ ವಯಸ್ಕರಿಗೂ ಅತ್ಯನುಕೂಲ ಕೈಪಿಡಿ.

ರೂ1-50 ಕಳಿಸಿದರೆ ೧ ಪ್ರತಿ ಬುಕ್ ಪೋಸ್ಟು ಮಾಡಬಹುದು.

ವಿಚಾರಿಸಿರಿ—

ನವಯುಗ ಪ್ರೆಸ್, ಉಡುಪಿ, ಅಥವಾ
ನವಭಾರತ ಬುಕ್ ಡಿಪೊ, ಉಡುಪಿ.

ಅಪೂರ್ವ ಸಂದರ್ಭ! ಅಲಭ್ಯ ಲಾಭ!! ತ್ವರೆ ಮಾಡಿರಿ!

ರಿಯಾಯತಿ ದರದಲ್ಲಿ ಅತಿ ಉಪಯುಕ್ತ ಪುಸ್ತಕಗಳ

ಈ ಕೆಳಗಿನ ಕಥೆ, ನಾಟಕ, ಕಾದಂಬರಿ ಮೊದಲಾದ ವಿಭಿನ್ನ ಪುಸ್ತಕಗಳಲ್ಲಿ ಒಂದೇ ಬಾರಿ ರೂ. 5/-ರ ಪುಸ್ತಕಗಳನ್ನು ಪಡೆದುಕೊಳ್ಳುವವರಿಗೆ 20%, ರೂ. 10ರ ಪುಸ್ತಕಗಳನ್ನು ತರಿಸಿಕೊಳ್ಳುವವರಿಗೆ 25% ರಿಯಾಯಿತಿ ಕೊಡುವುದಲ್ಲದೆ ಅಂಚೆವೆಚ್ಚ ನಾವೇ ವಹಿಸುವೆವು.

ರೂ. 34—9—0 ಬೆಲೆಯ ಈ ಎಲ್ಲಾ ಪುಸ್ತಕಗಳನ್ನು ಒಮ್ಮೆಯೇ ತರಿಸಿಕೊಳ್ಳುವವರಿಗೆ ಬರೇ ರೂ 23ಕ್ಕೆ ಕೊಡಲಾಗುವುದು. ರಿಯಾಯಿತಿಯು ನವಂಬ್ರ 15ರಿಂದ ದಶಂಬ್ರ 15ರ ತನಕ ಮಾತ್ರ.

ಕೆನರಾ ಕೊಲೆಜ್ ಬುಕ್ ಕಂಪೆನಿ, ಮಂಗಳೂರು-3.

೧೯೪೯ರ ಬಿರುದಾವಳಿ	ಎಂ. ವಿ. ಹೆಗ್ಡೆ	0	3
ಆ ಸುದ್ದಿ	,,	0	4
ಹೈದರಾಬಾದ್ ವಿಜಯ	,,	0	4
ನೆರೆಯಾಳು	ಕುಲಕರ್ಣಿ ಬಿಂದು ಮಾಧವ	0	7
ಗಾದೆಯ ಗಾಂಧಿ	ಎಂ. ವಿ. ಹೆಗ್ಡೆ	0	3
ಶಾಂತಿಯ ಮಡಿಲಲ್ಲಿ	ವ ಸು. ಭಟ್ಟ	0	3
ಬಲಿಪೀಠದಲ್ಲಿ	ಆರ್. ಕಲ್ಯಾಣಮ್ಮ	0	5
ಅಗಲಿದ ಅಕ್ಕ ಸರೋಜಿನಿ	ಎಂ. ವಿ. ಹೆಗ್ಡೆ	0	3
ನೆನ್ನೆ ಹೆಂಡತಿ	ಮಾಳಕೋಡ ನಾರಾಯಣ ಹೆಗ್ಡೆ	0	4
ಪುಣ್ಯ ಫಲ	ಗಿರಿಬಾಲೆ	0	3
ಸುಖದ ದಾರಿ	ಕೆ. ಎ. ದೇವದಾಸ	0	3
ಸುಕಾಂತ	ನಿ. ಚ. ಹಿತ್ತಲಮನಿ	0	4
ಪಂಚಮುಖಿ	ಬಿ. ಎಚ್. ಶ್ರೀಧರ	0	5
ಜಾತೀ ಭೂತಕ್ಕೆ ಬಲಿ	ಕೆ. ದೇವಕಿ	0	4
ಜನಸೇವೆಯ ಸೋಗಿನಲ್ಲಿ	ಶಿವರಾಮ ಶೆಟ್ಟಿ	0	4
ನಾ ಕಂಡ ಅವಳು (ಕತೆ)	ಶ್ರೀ ಎಂ. ಆಡಿಗ, ಶ್ರೀಪತಿ	0	4
ತ್ರಿವೇಣಿ (ಪ್ರಬಂಧ)	ವಿವಿಧ ಲೇಖಕರು	0	4
ನಿಲುವಂಗಿ (ಕತೆ)	ಎಸ್. ಸುಬ್ಬರಾಮಯ್ಯ, ಬಿ. ಎ. ಆನರ್ಸ್	0	5
ಬಾಡಿಗೆ ಮನೆ ಮತ್ತು ಮುಸುಕು (ನಾಟಕಗಳು)		0	3
ವರ್ತಮಾನ ಕಾಲದ ನಾಲ್ವರು ಮಹಾನುಭಾವರು	ಕು. ಶಿ.	0	5
ದೇವರ ನಾಮ ಮತ್ತು ಅದರ ಸಾಧನೆ	(ಬಾಸಟ ವಿನಾಯಕ ಶರ್ಮ)	0	4
ಎರಡು ಕತೆಗಳು (ಸಂಕಲನ)		0	3
ಸರಸ—ವಿರಸ (ವಿನೋದ ಚಿತ್ರಗಳು)	ಅ. ಗೌ. ಕೆನ್ನಿಗೋಳಿ	0	4
ಹೃದಯೇಶ್ವರಿ (ಕತೆ)	ಪ್ರೇಮಚಂದ್ರ	0	4
ವಿವಿಧ ವಿಷಯಕೋಶ ೧, ೨	ಟಿ. ಚಂದ್ರರಾಜ ಶೆಟ್ಟಿ	0	8
ನುಡಿ ಮುತ್ತುಗಳು ೧, ೨, ೩	ಎಂ. ವಿ. ಹೆಗ್ಡೆ	0	9
ಕುಲವಿಲ್ಲದ ಹೆಣ್ಣು (ಕಾದಂಬರಿ)	ಪಿ. ವೆಂಕೋಬಾಚಾರ್ಯ	1	8
ತವರುಮನೆಯಿಂದ (ಪತ್ರಗಳು)	ಸೌ. ಶಾರದಾ ದೇವಿ	0	4
ಭಾಗ್ಯ ಲಕ್ಷ್ಮಿ (ನಾಟಕ)	ಬೆಳ್ತಂಗಡಿ ಲಕ್ಷ್ಮಣಾಂಬ	1	0
ಯುಗವಾಣಿ (ಕವನಗಳು)	ಕು. ಶಿ. ಹರಿದಾಸ ಭಟ್	0	8
ಸ್ತ್ರೀಹೃದಯ (ಕತೆ)	ವಸಂತಿಬಾಯಿ ಪಡುಕೋಣೆ	0	4
ದ್ವೇಷ (ಕತೆ)	ಶ್ರೀನಿವಾಸಮೂರ್ತಿ ಗೊರೂರು	0	3
ಎರಡು ಏಕಾಂಕ ನಾಟಕಗಳು	ಎಸ್. ವೆಂಕಟರಾಜ	0	4
ಪ್ರಜಾಪ್ರಭುತ್ವವನ್ನು ಕುರಿತು	ಶಿವರಾಮ ಕಾರಂತ	0	8
ಕಲಾವಿದನ ದಿನಚರಿ (ಜೀವನ ವಿಮರ್ಶೆ)	ಎಸ್ಸೆಲ್	0	3
ಆಧುನಿಕ ಭಾರತ (ಪ್ರಹಸನಗಳು)	ಹುರುಳಿ ಭೀಮರಾವ್	0	4
ಕಾಲವೇ ಬದಲಾಗಿದೆ (ಕತೆ)	ಕು. ಶಿ. ಹರಿದಾಸ್ ಭಟ್	0	5
ಭಾರತದ ಸಾಹಿತ್ಯ ಮತ್ತು ಕಲೆಗಳು	ವಿಘ್ನೇಶ್ವರ ಶರ್ಮ	0	6
ಸ್ತ್ರೀ ಸ್ವಾತಂತ್ರ್ಯ ಬೇಕೆ? (ಪ್ರಬಂಧ)	ವೈದ್ಯ ವಿನಾಯಕರಾವ್	0	5
ಹೆಂಬಲ (ಕತೆ)	ಕೃಷ್ಣಮೂರ್ತಿ ಕಿತ್ತೂರ	0	3
ಭಾರತ ಚಿತ್ರದ ಅಂಚೆ ಚೀಟುಗಳು	ಟಿ. ಚಂದ್ರರಾಜ ಶೆಟ್ಟಿ	0	3
ಅಂತರಂಗದ ಕತೆಗಳು (ಕಥಾಸಂಕಲನ)		1	4
ತ್ರಿಶೂಲ (ನಾಟಕಗಳು)	ವಸುದೇವ ಭೂಪಾಲಂ	0	5
ಪ್ರೇಮ ಪ್ರವಾಹ (ಕಥಾಸಂಕಲನ)		0	8

ನವಭಾರತ ಪುಸ್ತಕ ಭಂಡಾರ, ಉಡುಪಿ.

ಪುಸ್ತಕ ಪುರಾಣ	ಕು. ಶಿ. ಹರಿದಾಸ ಭಟ್	0	
ಹಳ್ಳಿಯಲ್ಲಿ ನಡೆದ ನಾಟಕ	ಕೆ. ಎ. ದೇವದಾಸ	0	
ನೆರೆಯ ಗಾಂಧಾರ (ಪರಿಚಯ)	ಸುಬ್ರಾವ್ ಕೃಷ್ಣ ಹೆಗ್ಡೆ	0	
ಮಾಸಿನ ಯುಗದ ಮಜಾ ಸ್ವಭಾವ	ವಿಘ್ನೇಶ್ವರ ಶರ್ಮ	0	
ವಿಜ್ಞಾನದ ಬೆಳವಣಿಗೆ	ಟಿ. ಚಂದ್ರರಾಜ ಶೆಟ್ಟಿ	0	
ಡಾ. ಹರ್ಡೀಕರ (ಪರಿಚಯ)	ನಾಗೇಶ ರಾಮಚಂದ್ರ ದೇಸಾಯಿ	0	
ತೆಂಗಿನ ತವರು (ಜಿಲ್ಲಾ ಪರಿಚಯ)	ಯು. ನಾರಾಯಣ ಭಟ್	0	
ಪ್ರಾಯಶ್ಚಿತ್ತ (ನಾಟಕಗಳು)	ಎಂ ಗೋವಿಂದರ ವ್	0	
ಪ್ರಭಾ (ನೀಳ್ಗತೆ)	ಕು. ಪದ್ಮಾ	0	
ಶವಗಳ ನಾಗಾಟ (ಪತ್ತೇದಾರಿ)	ಸುಬ್ರಾವ್ ಕೃಷ್ಣ ಹೆಗ್ಡೆ	0	
ಸ್ವಪ್ನಲೋಕ (ಸ್ವಪ್ನಗಳ ಕುರಿತಾದ ವಿವರ)	ಕಾರ್ತಿಕೇಯ	0	
ಮನೆಯ ಹೊರಗಿನ ಮಹಾಜೀವಿಗಳು	ಕು. ಶಿ. ಹರಿದಾಸ ಭಟ್	0	
ಘಂಟಮಾರಾ (ಇಟಾಲಿಯನ್ ಕಾದಂಬರಿ)	,,	2	
ಮಾರ್ವಾಟ (ನಾಟಕ)	ಡಾ. ಕೃಷ್ಣ	0	
ಭಾರತದ ರಾಷ್ಟ್ರಗೀತೆ	ಚಂದ್ರರಾಜ ಶೆಟ್ಟಿ	0	
ಆದರ್ಶ ಆರೋಗ್ಯ ಖಾತೆ	ವಿನಾಯಕರಾವ್ ಬಾಸಟ	0	
ನಮ್ಮ ಬಹುದೊಡ್ಡ ಶತ್ರು (ಪ್ರಬಂಧ)	ಕೆ ಶಿವರಾಮ ಶೆಟ್ಟಿ	0	
ಚೌತಿ (ನಾಟಕಗಳು)		0	
ಕತ್ತು ಕೊಯ್ದವರಾರು (ಪತ್ತೇದಾರಿ)	ಕೆ. ಎಸ್. ರಾಮಕೃಷ್ಣ ಮೂರ್ತಿ	0	
ಕೈಲಾಸ (ಕತೆ)	ಟಿ. ಚಂದ್ರರಾಜ ಶೆಟ್ಟಿ	0	
ಸಮಾಜದ ಅಗ್ನಿಕುಂಡ (ನೀಳ್ಗತೆ)	ಪಡುಕೋಣೆ ವಸಂತಿಬಾಯಿ	0	
ಬೆಳ್ಳಿ ಹಬ್ಬ (ರಜತೋತ್ಸವ ಸಂಚಿಕೆ)		0	
ಉಷಾ (ಕಾದಂಬರಿ)	ಕು. ಪದ್ಮಾ	0	
ವಿಧಿ ಲೀಲೆ (ನೀಳ್ಗತೆಗಳು)	ಜಿ. ಮೈಲಾರ್ರಾವ್	0	
ಪರಮಾಣುಪ್ರಸಂಚ (ಲಲಿತಪ್ರಬಂಧಗಳು)	ಕೆ. ಗುರುರಾಜ ಉಡುಪ	0	
ನೀತಿ ವಿನೋದ ಕಥೆಗಳು	ವೀರಪ್ಪ ಯಗಟಿ	1	
ಸಾಹಸ ಭೀಮ ವಿಜಯ(ಯಕ್ಷಗಾನ)	ಕೆ. ಪಿ. ವೆಂಕಪ್ಪ ಶೆಟ್ಟಿ	0	
ಭಾರತದ ಗುರುಕುಲ (,,)	,,	0	
ಲತ್ತಪಗಡೆ (,,)	,,	0	
ಸೇವಾಪಥ (ನಾಟಕ)	ಸೇಟ್ ಗೋವಿಂದದಾಸ	0	
ಭರತೇಶ ದಿಗ್ವಿಜಯ (ಪ್ರಸಂಗ)	ಕೆ ಪಿ ವೆಂಕಪ್ಪ ಶೆಟ್ಟಿ	0	
ಮನೋಪದೇಶ (ಮನಾಜಿ ಶ್ಲೋಕ)	ವಿನಾಯಕರಾವ್ ಬಾಸಟ	0	
ಜೀವನ ಕಲೆ (ಬಾಳ ಕೈದೀವಿಗೆ)	ಗ. ನಾ. ಪಂಡಿತ	0	
ಪ್ರತಿಜ್ಞಾಸೂರ್ತಿ (ನಾಟಕ)	ಸುಬ್ರಾವ್ ಕೃಷ್ಣ ಹೆಗ್ಡೆ	1	
ಮಿತ ಸಂತತಿ (ಸಂತತಿ ಸಂಯಮನ)		0	
ಗುಪ್ತರೋಗ ನಿವಾರಣೆ (ಸ್ತ್ರೀಪುರುಷರ ಆರೋಗ್ಯ ರಕ್ಷಣೆಯ ಕೈಪಿಡಿ)		0	
ಸೌಂದರ್ಯ (ಕತಾಚಿತ್ರಗಳು)	ಪೈ. ರಾಮ ತಂತ್ರಿ	0	
ಸುಧಾ (ಕಾದಂಬರಿ)	ಬಿ. ಪದ್ಮಾ ಬಾಳಿಗ	0	
ವಸಂತಕಾಲ (ಲಲಿತ ಪ್ರಬಂಧಗಳು)	ಕೆ. ಗುರುರಾಜ ಉಡುಪ	0	
ನವೀನ ನಾಟಕಗಳು (ನಾಟಕ ಸಂಗ್ರಹ)		0	
ಪಲ್ಪ್ ಎಸ್. ಬಕ್ (ಜೀವನಚರಿತ್ರೆ)	ಯು. ನಾರಾಯಣಭಟ್	0	
ಶಿಲ್ಪಿ (ಐತಿಹಾಸಿಕ ನಾಟಕ)	ಹುಲಿಮನೆ ಕಾಳೆತಿಮ್ಮಪ್ಪ ಹೊಸಮನೆ	1	
ವಾಲಿ ಸುಗ್ರೀವ (ಯಕ್ಷಗಾನ)	ಕೆ ಪಿ. ವೆಂಕಪ್ಪ ಶೆಟ್ಟಿ	0	
ಪಂಚಾರತಿ (ನಾಟಕ ಸಂಗ್ರಹ)		0	

ಪುಸ್ತಕ ವ್ಯಾಪಾರಿಗಳಿಗೆ ಈ ಸೌಲಭ್ಯ ದೊರೆಯುವುದಿಲ್ಲ. ಈ ಸದವಕಾಶವನ್ನು ಕಳಕೊಳ್ಳಬೇಡಿರಿ.

ಹಳೆ ಜೀವನ—ಹೊಸ ದೀಪಾವಳಿ

(೨ನೇ ಪುಟದಿಂದ)

ಅವನ ಉದಾಸೀನತೆಯನ್ನು ನಾನೇ ನಿಸಲಿ ಕಿಸೆಗೆ ಕೈ ಹಾಕಿ ನೋಡಿ ಬೀಡಿ ಇತ್ತು. ಸಂತೋಷವಾಯ್ತು ನಿಕ, ಬೆಂಕಿಪೆಟ್ಟಿಗೆ ಮತ್ತು ಚಹಾ ಟ್ಟು ಮೂಣಿ ಹೊರಟು ಹೋದ. ಲು ಬೀಡಿ ಹೊತ್ತಿಸಿ ಎರಡು ದ ಗಟ್ಟಿಯಾಗಿ ಎಳೆದೆ. ಸ್ವಲ್ಪ ಸ್ಫೂರ್ತಿ ದೃಷ್ಟಿಕವನ್ನೆತ್ತಿದೆ. ಮೊದಲ ಪುಟ ಯೇ ಬರೆದಿತ್ತು. ಬಿಹಾರದಲ್ಲಿ ಬರ ದಿಂದ ಅನೇಕರ ಮೃತ್ಯುವಾಯಿತು ಮುಂದೆ ಓದಲಿಲ್ಲ.

ಹಸಿವೆಯಿಂದ ಸಾಯುವವರ ಸಮೂ ಮಂಬಾ ಹಳೆಯದು. ಓದಲಿಕ್ಕೇ ಸ್ಸು ಬರುವುದಿಲ್ಲ. ದೀಪಾವಳಿಯ ದಿ ಹಸಿವೆಯಿಂದ ಸತ್ತವರ ವಿಷಯ ನಾನೇಕೆ ಗಣಿಸಲಿ? ಈ ಹೊತ್ತು ದೀಪದ ದಿನವಲ್ಲವೇ? ತಲೆಯ ಭಾ ರವಾಯ್ತು. ಚಹಾವನ್ನು ಗುಟುಕ ಬಹಳ ಬಿಸಿ ಇತ್ತು. ತುಟಿ ಸುಟ್ಟ ಹೂ, ಸೂ.....ಮಗ ಎಷ್ಟು ಬಿಸಿ ತಂದಿದ್ದಾನೆ. ಸಣ್ಣದಾಗಿ ಒಂದು ಹೊಡೆದೆ. ಮನಸ್ಸಿನಲ್ಲಿ ಒಂದು ವಿ ಭಾವನೆ ಬಂತು. ನಾನು ಹಸಿವೆ ದ ಸತ್ತರೆ ನನ್ನ ಹೆಸರು ಕೂಡಾ ರಿನಲ್ಲಿ ಬರಬಹುದೇ? ಬಹಳ ಆ ಚಿಸಿದೆ, ಆದರೆ ಉತ್ತರ ದೊರೆಯ ಕಾಳ ಸತ್ತ. ನೀಲಿಯು ಸತ್ತಳು. ಯೂ ಸತ್ತ. ಎಷ್ಟು ಜನ ಸತ್ತ ಯಾರಿಗೆ ಗೊತ್ತು? ಆದರೆ ಅವರ ರು ಬರೆದಿಲ್ಲ!

ಮೂಣಿಯು ಪುನಃ ಬಂದು ಅಂಗೈ ತಿ ತ್ತು. ನನ್ನ ಧ್ಯಾನಭಂಗ ಮಾಡಿದ — ನಾದರೂ ರಾಯರೇ" ಎಂದ ಷ್ಟು ಸುಂದರವಾಗಿ ಮಾತಾಡುತ್ತಾ ಂದು ಅವನು—ಸ್ವಲ್ಪ ಹಣವಿದ್ದರೆ ಕೊಡು ಎಂದು ಕೇಳಲು ನ ನಸ್ಸಾ ದ. ಆದರೂ ಸುಮ್ಮನಿದ್ದೆ. ಮೂಣಿ ಕದಲಲಿಲ್ಲ. ತುಸು ಹೊತ್ತು ಗುಣಿ ಗಿಸಿ ತನ್ನ ಪ್ರಶ್ನೆಯನ್ನು ಪುನರು ದನು.

"ನನ್ನ ಏನು?" ಎಂದು ವಿಚಾರಿಸಿದೆ. ಮೂಣಿಯ ಕಣ್ಣುಗಳು ಮಿನುಗಿದುವು ಸ್ಪಷ್ಟ ಮಾಡಿ ರಾಯರೇ ಎಲ್ಲವೂ ಗಾಗಿದೆ' ಎಂದನಾತ. ಎಲ್ಲವೂ ಎಂ ತನ್ನು ಅವನು ಒತ್ತಿ ಹೇಳಿದ್ದ. ಸುಮ್ಮನಾದುದನ್ನು ಕಂಡು ಅವರಿ "ಅಮಲು ನೀರು ಮತ್ತು..."

ನು ಮುಖ ನೋಲಕ್ಕೆತ್ತಿ "ಶರಾ ಮತ್ತು ಹೆಣ್ಣು?" ಎಂದೆ. ಹಾಂ ತಲೆಯಾಡಿಸಿದ ಮೂಣಿ. ನಾನೂ ಅಭಿಮಾನವನ್ನು ಬಿಡದೆ ಇನ್ನಾವಾ ದರೂ ನೋಡುವ" ಎಂದೆ.

ಮೂಣಿಯು ಸಿಫಾರಸುಮಾಡತೊಡ "ಆದರೆ ಇವತ್ತು ಅವಶ್ಯವಾಗಿ ಏನಾ ಸರ್" ಎಂದ.

"ಇವತ್ತು ಏನಂಥ ವಿಶೇಷ?" ಎಂದೆ. ಇವತ್ತು ದೀಪಾವಳಿಯಲ್ಲವೇ?

ಹಾಂ, ಹಾಂ. ದೀಪಾವಳಿ. ಮೂಣಿಗೆ ಚೆನ್ನಾಗಿ ಗೊತ್ತು—ಹೆಣ್ಣು ಸುರಗಳಿಲ್ಲದ ದೀಪಾವಳಿ ಎಂಥಹ ದೀಪಾವಳಿ? ಮೂಣಿ ಯನ್ನು ಕ್ರೂರವಾಗಿ ದಿಟ್ಟಿಸಿ ಎರಡಾಣೆ ಪಾವಲಿಯನ್ನು ಮೇಜಿನ ಮೇಲಿಟ್ಟು ಸಿ ಳ್ಳು ಹೊಡೆಯುತ್ತಾ ಮುಂದೆ ಸಾಗಿದೆ. ನೋಟುಗಳ ಸರ ಸರ ರವ ಮತ್ತು ಮ ಧುರ ನಗು ಕರ್ಕಶವಾಗಿ ನನ್ನ ಕಿವಿ ಸೇ ರಿತು.

ಈಗ ನಾನು ವಿಶಾಲವಾದ ಮಾರ್ಗ ಕ್ಕೆ ಬಂದೆ ರಾತ್ರಿಯ ಹತ್ತು ಗಂಟೆ ಕಳೆ ದಿತ್ತು. ಲಕ್ಷ್ಮೀಯಭಕ್ತರುಮೈಮರೆತಿದ್ದ ರು. ದೀಪಾವಳಿಯ ಕೆಲವೊಂದು ದೃಶ್ಯಗ ಳನ್ನೂ ಕಂಡಿದ್ದೆ. ಪ್ರತಿ ವರುಷವೂ ನೋ ಡುತ್ತಿದ್ದೇನೆ ಹೆಣ್ಣು, ಜುಗಾರಿ, ಶರಾಬು ಇದೇ ಚಕ್ರತಿರುಗುತ್ತಿರುತ್ತದೆ. ನಾನು ವಿ ಶಾಲ ಮಾರ್ಗದಲ್ಲಿ ನಡೆಯುತ್ತಿದ್ದೆ. ಆದ ರೂ ಮಾರ್ಗವು ಕಿರಿದಾದಂತೆ ಹಾಗೂ ವಿಶಾಲ ಭವನಗಳು ಹಣ ಶರಾಬು ಮ ತ್ತು ಜುಗಾರಿಗಳ ಭಾರದಿಂದ ಕುಸಿದ್ದಿದಂ ತೆ ಕಾಣುತ್ತಿತ್ತು. ಪ್ರಖರವಾದ ಪ್ರಕಾಶ ದಲ್ಲಿ ತನ್ನನ್ನೇ ಮರೂಕೊಳ್ಳಲು ಸಿದ್ಧವಾ ಗಿ ನಿಂತಿದ್ದ ಹೆಣ್ಣುಗಳ ಮೈ ಪ್ರಕಾಶಿಸು ತ್ತಿತ್ತು. ಬೀಸುತ್ತಿರುವ ಹವೆಯಲ್ಲಿ ವಿಷ ಮಿಶ್ರಿತವಾಗಿದ್ದಂತೆ ನನಗೆ ಭಾಸವಾಯ್ತು ಇನ್ನೂ ಸ್ವಲ್ಪ ಹೊತ್ತು ನಾನಲ್ಲಿ ನಿಂತಿರು ತ್ತಿದ್ದರೆ ಉಸಿರುಗಟ್ಟಿ ಸಾಯುತಿದ್ದೆನೋ ಏನೋ?

ವಿಶಾಲವಾದ ಮಾರ್ಗವನ್ನುಳಿದು ಪಾರ್ಕಿ ಗೆ ಬಂದೆ. ದೀಪದ ಕಂಬದ ಕೆಳಗೆ ಓರ್ವ ಯುವತಿ ಭಿಕಾರಿಣಿ ಕುಳಿತಿದ್ದಳು. ಯಾ ರೋ ಶ್ರೀಮಂತನೊಬ್ಬ ಆ ಭಿಕಾರಿಣಿ ಮ ತ್ತವಳ ಮಗುವಿಗೆ ಒಂದು ರೂಪಾಯಿ ದಾನವಿತ್ತಿದ್ದಿರಬೇಕು. ನಾನು ಬೆಂಚಿನ ಮೇಲೆ ಹೋಗಿ ಕುಳಿತುಕೊಂಡೆ ಆ ಭಿ ಕಾರಿಣಿಯು ನನ್ನ ಹತ್ತಿರ ಬಂದಳು. ಅ ವಳು ಏನೋಂದೂಅನ್ನುವುದಕ್ಕೆ ಮುಂಚೆ ಯೇ "ಹಣ ಇಲ್ಲ" ಎಂದು ಬಿಟ್ಟೆ. ಭಿ ಕಾರಿಣಿಗೆ ನಿರಾಶೆಯಾಯಿತು. ಬೀಡಿ ಎ ಳೆಯುವ ಮನಸ್ಸಾಯಿತು. ಬೆಂಚಿನ ಸ್ವ ತ್ತುಮುತ್ತಲೂ ಬೀಡಿಯ ತುಂಡೆಲ್ಲಿಯೂ ದರೂ ದೂರಿಯುತ್ತದೆಯೇ ಎಂದು ಹು ಡುಕಾಡತೊಡಗಿದೆ ಬೀಡಿಯನ್ನು ಬಡ ವರು ಎಳೆಯುತ್ತಾರೆ, ಅಂದ ಬಳಿಕ ಅರ್ಧ ಬೀಡಿಯನ್ನು ಎಸೆಯಲು ಅವರು ಸಾಧ್ಯ ವಿಲ್ಲ—ಸಿಗರೇಟು ಸಿಗುವ ಸಂಭವವಿಲ್ಲ, ಯಾಕೆಂದರೆ ಶ್ರೀಮಂತರು ದೀಪಾವಳಿಯ ಶುಭದಿನದಂದು ಪಾರ್ಕಿಗೆ ಬಂದು ಅದರ ಲ್ಲೂ ಈ ಬೆಂಚಿನ ಮೇಲೆ ಏಕೆ ಕುಳಿತು ಕೊಳ್ಳುತ್ತಾರೆ? ಈ ಹೊತ್ತು ಶರಾಬು, ಹೆಣ್ಣುಗಳ ದಿನವಲ್ಲವೇ.

ಭಿಕಾರಿಣಿಯು ಪುನಃ ದೀಪದ ಕಂಬ ದಡಿಯಲ್ಲಿ ಹೋಗಿ ಕುಳಿತಳು. ನಾನು ಕ ಡೆಗಣ್ಣಿನಿಂದ ಭಿಕಾರಿಣಿಯನ್ನು ನೋಡು ತ್ತಿದ್ದೆ. ಭಿಕಾರಿಣಿಯು ಸುಂದರಳಾಗಿದ್ದ ಳು. ಅದರ ಮೇಲೆ ಪುನಃ ಯುವತಿ ಮಗುವು ಸುಂದರವಾಗಿತ್ತು.

ಎದುರಿನಿಂದ ಲಾಲಾಜಿಯುವರೊಬ್ಬ ರು ಹೋಗುತ್ತಿದ್ದರು ಭಿಕಾರಿಣಿಯನ್ನು ನೋಡಿ ಅಲ್ಲಿಯೇ ನಿಂತು ನಾಲ್ಕು ಬದಿ ಯನ್ನು ದಿಟ್ಟಿಸಿದರು ಭಿಕಾರಿಣಿಯು ಭಿ ಕ್ಷೆ ಬೇಡಿದಳು ಲಾಲಾಜಿಯುವರು ಮು ಗುಳ್ನಕ್ಕು "ಎಷ್ಟು ಬೇಕು" ಎಂದು ಕೇಳಿ ದರು.

ಬಡವರ ಮರ್ಯಾದೆಗೆ ಬೆಲೆ ಕಟ್ಟುವು ದು ಬಹು ಸುಲಭ ಭಿಕಾರಿಣಿಯು ಏನೂ ಹೇಳಲಿಲ್ಲ. ಲಾಲಾಜಿ ನಾಲಗೆಯಿಂದ ತುಟಿಯನ್ನು ನೇವರಿಸಿಕೊಂಡು "ಐದು ರೂಪಾಯಿಗೆ ಬರುತ್ತಿಯಾ" ಎಂದ

ಭಿಕಾರಿಣಿಯು ಕೇಳಿದ್ದು ಒಂದಾಣೆ ಆದರೆ ಐದು ರೂಪ್ಯಾ ಲಭಿಸುತಲಿತ್ತು. ನಿ ಜವಾಗಿಯೂ ಆಕೆ ಭಾಗ್ಯವತಿಯಾಗಿದ್ದಳು ಭಿಕಾರಿಣಿಯೆದ್ದು ನಾನು ಕುಳಿತ್ತಿದ್ದಲ್ಲಿಗೆ ಬಂದಳು. ಮೂರ್ಖ ಲಾಲಾಜಿ ಹೊರ ಟು ಹೋದ.

"ಯಾಕೆ ಹೋಗಲಿಲ್ಲ, ಭರ್ಜರಿಯಾಗಿ ದೀಪಾವಳಿ ಆಚರಿಸಬಹುದಿತ್ತು" ಎಂದೆ.

"ನಾನು ಭಿಕ್ಷೆ ಬೇಡುತ್ತೇನೆ ನನ್ನ ನ್ನು ಮಾರಿಕೊಳ್ಳುವುದಿಲ್ಲ." ಎಂದಳು ಆಕೆ

ಭಿಕಾರಿಣಿಯು ಮೌನವಾಗಿದ್ದಳು.

ಸ್ವಲ್ಪ ಸಂಕೋಚದೊಡನೆ ನಾನು "ನಾನು ಹಸಿದಿದ್ದೇನೆ ಸ್ವಲ್ಪ ಸಾಲ ಕೊ ಡುವಿಯಾ" ಎಂದೆ.

"ನಾನು ಅದೆಲ್ಲಾ ಮಾಡುವುದಿಲ್ಲ" ಎಂದಳಾಕೆ.

"ಹಸಿವೆಯಿಂದ ಸತ್ತರೆ ಸಹ ಅಲ್ಲ ವೇ?" ಎಂದು ಕಠೋರತೆಯಿಂದ ನುಡಿದೆ "ಮೂರ್ಖ ಪ್ರಾಣಿ, ಮರ್ಯಾದೆ ಜನರು ನಿನ್ನ ಅಸಹಾಯಕತೆ ನೋಡಿ ಭಿಕ್ಷೆ ಕೊ ಡುವುದಿಲ್ಲ. ನಿನ್ನ ಯೌವನಕ್ಕೆ ಬೆಲೆ ಕ ಟ್ಟುತ್ತಾರೆ." ಎಂದು ನಾನು ಪುನಃ ಅಂದೆ.

ಆಕೆ ಅಳ ತೊಡಗಿದಳು. ಏಕೋ? ಏನೋ?

"ಏಕೆ ಅಳುತ್ತಿರುವಿ ಅಳುವುದರಿಂದ ಏನಾಗುತ್ತದೆ? ನಗು, ಹೊಟ್ಟೆ ತುಂಬಾ ನಗು. ಎತ್ತರವಾದ ಭವನಗಳ ಹತ್ತಿರ ಹೋಗು. ಈ ಹೊತ್ತು ಹೆಣ್ಣುಗಳು ಕಡಿ ಮೆ ಬೀಳಬಹುದು ಒಳ್ಳೆಯ ಸುಸಂದರ್ಭ ಕಳೆದುಕೊಳ್ಳಬೇಡ."

ಪ್ರಾಯಶಃ ನನ್ನ ಮಾತು ಭಿಕಾರಿಣಿಗೆ ರುಚಿಸಲಿಲ್ಲ. ಕುಳಿತಲ್ಲಿಂದ ಎದ್ದು ಹಿಂದೆ ಕುಳಿತ್ತಿದ್ದ ದೀಪದ ಕಂಬದಡಿಯಲ್ಲಿ ಹೋಗಿ ತನ್ನ ಸೆರಗಿನಲ್ಲಿ ಮುಖ ಮುಚ್ಚಿ ಕುಳಿತುಕೊಂಡಳು. ಮಗು ಒಂದು ಬದಿಯಲ್ಲಿ ಬಿದ್ದುಕೊಂಡು ಅ ಳುತ್ತಿತ್ತು. ಮಗುವಿನ ಅಳುವಿನ ಶಬ್ದ ನನ್ನ ಕಿವಿಯನ್ನು ತುಂಬುತ್ತಲಿತ್ತು

ಪಾರ್ಕಿನ ನಾಲ್ಕು ಸುತ್ತಲೂ ಇದ್ದ ಕೊರಡಿಗಳು ಪ್ರಕಾಶಮಾನವಾಗಿದ್ದುವು. ಎಲ್ಲೆಡೆಗಳಲ್ಲಿಯೂ ಗಮ ಸಂತೋಷವು ಆವರಿಸಿತ್ತು. ತಿರುಕಿ ಮತ್ತು ನಾನು ಮ ಗು ದುಃಖಿತರಾಗಿದ್ದೆವು.

ಆಗಲೇ ಮಾರ್ಗದಲ್ಲಿ ಯಾರೋ ಬರು ತ್ತಿರುವ ಕಾಲಸಪ್ಪಳ ಕೆಳಸಿತು. ಕಣ್ಣೆತ್ತಿ ನೋಡಿದೆ. ಒಬ್ಬ ಗಂಡಸು ಒಬ್ಬಳು ಹೆಂ ಗಸು ಮತ್ತೊಂದು ಮಗು. ಹಾಂ, ಪ್ರಾ ಯಶಃ ಅವರು ದೀಪ+ಆವಳಿ ನೋಡಿ ಬ ರುತ್ತಿರಬೇಕು. ಮಗು ಮಗುವನ್ನು ನೋ ಡಿತು. ಭಿಕಾರಿಣಿಯ ಮಗು ಪುನಃ ಅಳ ಲು ಪ್ರಾರಂಭಿಸಿತು.

"ಮಮ್ಮಿ, ಮಗು ಅಳುತ್ತಿದೆ" ಎಂದು ಆಗಮಿಸಿದ ಮಗು ತನ್ನ ತಾಯಿ-ಗಂದಿತು

"ಅತ್ತರೆ ಅಳಲಿ ನಿನಗೇನು?" ಎಂದ ಗಂಡಸು.

"ಯಾಕೆ ಅಳುತ್ತದೆ? ಮಗು ಹರ ಮಾಡಿತು.

ಮಗು ಒಂದು ನಿಮಿಷ ಆಲೋಚಿಸಿ "ನವ್ಮ ಲಬುಲ (ಮಗು) ಹಸಿವೆಯಾ ದಾಗ ಮಾತ್ರ ಅಳುತ್ತದೆ. ಈ ಮಗುವಿಗೆ ಸಹ ಹಸಿವೆಯಾಗಿದೆ ಅಮ್ಮಾ? ಎಂದಿತು ಮಗು.

ಗಂಡಸು ಕೈ ಜೋಡಿಸಿ, "ಸರಿಯ

ಕೊರ್ಪೊರೇಶನ್ ಬೇಂಕ್

ರೇವಣಾತಿಗಳ ಮೇಲಿನ ಸಾಲಿಯಾನ್ ಶೇಕಡಾ ಬಡ್ಡಿ ದರಗಳು:

3	ಸೇವಿಂಗ್ಸ್ ಬೇಂಕ್ ಖಾತೆ
3 ಯಿಂದ 5¼	ಕಾಯಂ (ವಿವಿಧಾವಧಿಗಳಿಗೆ)
5¼	ವಜ್ರೋತ್ಸವ
5	ಕ್ಯುಮುಲೇಟಿವ್

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ಸ್ಥಾಪನೆ: 1906)

ರಿಜಿಸ್ಟರ್ಡ್ ಆಫೀಸು: ಉಡುಪಿ | ಲಡಳಿತ ಆಫೀಸು: ಮಂಗಳೂರು

PHONE 203 ESTD 1926

FOUNDATION STONE

Engraved MARBLE TABLETS (GOLD FILLED & LEAD FILLED)

HOME AT

Crown RUBBER STAMP CO.

BALMATTA ROAD, MANGALORE.

Tel: 'BLUEYAGAR'. — ಚಿನ್ನ ಮತ್ತು ವಜ್ರಗಳ ಅಧುನಿಕ ತವರುಮನೆ — Phone: 374.

ಕೆ.ಆರ್.ಕೆ.ಶೇಟ್ ಡಯಮಂಡ್ ಮಾರ್ಟ್

ಸ್ಥಾಪನೆ:1919] ಚಿನ್ನ ಮತ್ತು ವಜ್ರದ ವ್ಯಾಪಾರಿಗಳು,(ಗವರ್ನ್‌ಮೆಂಟ್ ಕಾಲೇಜ್ ಎದುರುಗಡೆ)ಮಂಗಳೂರು. ಮಾಲಿಕ:ಕೆ.ಕೆ.ಆರ್.ಶೇಟ್

NAVAYUGA, UDIPI.
REGD. NO.BG. 176
16-11-1961
LICENSE NO. 31
Licensed to Post without Prepayment

ಭಾರತ ದರ್ಶನ

ಅಂಡಮಾನ್ ನಿಕೋಬಾರ

ಬಲಗಡೆಯ ಚಿತ್ರವು ಪೂರ್ವ ಬಂಗಾಳದಿಂದ ಬಂದ ನಿರಾಶ್ರಿತರು ಅಂಡಮಾನ್ ದ್ವೀಪಗಳಲ್ಲಿನ ಗದ್ದೆಗಳಲ್ಲಿ ಕೆಲಸ ಮಾಡುತ್ತಿರುವುದನ್ನು ತೋರಿಸುತ್ತದೆ. ಕೆಳಭಾಗದ ಚಿತ್ರಗಳಲ್ಲಿ ಎಡಗಡೆಯ ಪೋರ್ಟ್ ಬ್ಲೇರ್‌ನಲ್ಲಿರುವ ವಿಂಕೋ ಬೆಂಕಿಪೆಟ್ಟಿಗೆ ಕಾರ್ಖಾನೆಯಲ್ಲಿ ಸರಿಯಾದ ಆಕಾರದಲ್ಲಿ ಬೆಂಕಿಕಡ್ಡಿಗಳನ್ನು ಕತ್ತರಿಸುವ ವಿಭಾಗವನ್ನೂ, ಬಲಗಡೆಯದು ಅಂಡಮಾನಿನ ನಿವಾಸಿಗಳು ಖಾರಿಯೊಂದರಲ್ಲಿ ಜಲಯಾನ ಮಾಡಲು ಉಪಯೋಗಿಸುವ ದೋಣಿಯೊಂದನ್ನು ತೋರಿಸುತ್ತದೆ.



(೨ನೇ ಪುಟದಿಂದ)

ಹಳೆ ಜೀವನ ಹೊಸ ದೀಪಾವಳಿ

ಪ್ಪಾ ಅದು ಹಸಿದಿದೆ. ಸರಿ ತಾನೇ? ಇನ್ನಾದರೂ ಹೋಗುವ ಎಂದ.

ಮಗು ಪುನಃ ಹಠಮಾಡಿತು— "ಅಮ್ಮಾ ಮಗುವಿಗೆ ಹಾಲಿಗೆ ಹಣಕೊಡು.

ಮುನ್ನೆ, ಈಗ ಮಾತ್ರ ಖಂಡಿತವಾಗಿಯೂ ನೀನು ಪೆಟ್ಟು ತಿನ್ನುವೆ, ಬರುತ್ತಿಯೋ? ಇಲ್ಲವೋ?" ಎಂದು, ಗದರಿಸಿದಳು ನಾರಿ.

ಮಗು ಅಳತೊಡಗಿತು. ಅಳುತ್ತಿರುವುದು ಮಗುವಲ್ಲ ಮಾನವತೆ ಪ್ರೀತಿ ಅಳುತ್ತದೆ ಎಂದು ನನಗನ್ನಿಸಿತು.

ಆ ಮನುಷ್ಯನು ಸಿಟ್ಟಿನಿಂದ 'ಇನ್ನು ನೀನೇ ಸಮಾಧಾನ ಮಾಡು, ಪ್ರೀತಿ ಮಾಡಿ ಮಾಡಿ ಕಲೆಯ ಮೇಲೇರಿದ್ದಾನೆ' ಎಂದು ಗರ್ಜಿಸಿದ.

ಹೆಂಗಸು ಏನೋ ಅಂದು ಕೊಂಡಳೆ ಮಗು ಅಳುತ್ತಲೇ ಇತ್ತು.

'ಏನಾದರೂ ಕೊಡು ಹೋಗಲಿ' ಎಂದ ಗಂಡಸು.

ಹೆಂಗಸು ಪರ್ಸಿನಿಂದ ಒಂದಾಣೆ ತೆಗೆದು ಮಗುವಿನ ಕೈಯಲ್ಲಿಟ್ಟು, 'ಹೋಗು ನೀನೇ ಕೊಟ್ಟು ಬಾ' ಎಂದಳು.

ಮಗುವಿನ ಮುಖದಲ್ಲಿ ನಗು ತೇಲಿ ಬಂತು, ಅಂಗಿಯಿಂದಲೇ ಕಣ್ಣೀರೊರಸಿ ಮಗು ತಿರುಕಿಯ ಮಗುವಿಗೆ ತನ್ನ ಗೊಂಬೆ ಮತ್ತು ಒಂದಾಣೆ ಕೊಟ್ಟು ಬಂದಿತು.

'ವಾಹ್"ಒಳ್ಳೆಯ ದಾನವೀರ ಕರ್ಣ. ಗೊಂಬೆ ಸಹ ಕೊಟ್ಟು ಬಂದ ಎಂದ ಆತ.

ಮೂವರೂ ಹೊರಟು ಹೋದರು.

ನಾನು ಈ ಮೊದಲು ಗಾಳಿಯಲ್ಲಿ ಅನುಭವಿಸಿದ್ದ ವಿಷತ್ವವೀಗ ಮಾಯವಾಗಿತ್ತು. ಈಗಿನ ಗಾಳಿಯಲ್ಲಿ ಅಶೆಯಿತ್ತು. ಉತ್ಸಾಹವಿತ್ತು. ನಾನು ಹೋಗಿ ತಿರುಕಿಯ ಮಗುವನೆತ್ತಿಕೊಂಡು— "ಮಗೂ ಮುಂದಿನ ದೀಪಾವಳಿಗಳು ಇಷ್ಟು ಅಂಧಕಾರಮಯವಾಗಿರಲಿಕ್ಕಿಲ್ಲ. ನಿನ್ನಂತಹ ಮತ್ತು ಮುನ್ನನಂತಹ ಸಾವಿರಾರು ಮಕ್ಕಳು ಕೂಡಿ ಮುಂದೆ ಆಚರಿಸುವ ದೀಪಾವಳಿ ಬರೇ ಮನೆಗಳನ್ನು ಮಾತ್ರವಲ್ಲ, ಮನಗಳನ್ನೂ ಬೆಳಗಿಸುವುದು. ನಿಮ್ಮ ದೀಪಾವಳಿಯಲ್ಲೇ ಶರಾಬು, ವೇಶ್ಯೆಗಳಿರಲಾರವು. ಇನ್ನೊಬ್ಬರ ದುಃಖ ಕಂಡು ಆ ದಿನ ನಿಮ್ಮ ಕಣ್ಣೀರು ಹೆಚ್ಚು ಬೇಕು, ಮಾಸನೆಯಲ್ಲ. ನೀನು ಬಹುದೊಡ್ಡ ಭಾಗ್ಯವಂತಂತಾಜಾ ಬೇಟಾ" ಎಂದೆ. ಮಗುವಿನ ಕೈಯಿಂದ ಕೆಳಗೆ ಬಿದ್ದ ಒಂದಾಣೆ ಹೆಕ್ಕಲು ನಾನು ಬಗ್ಗಿದೆ. 'ಇದೆಲ್ಲಾ ಆಶೆ, ಸ್ವಪ್ನ' ಅನೆಂದೂ ಪೂರ್ಣವಾಗವು' ಎಂದು ಮಗು ಅಂದಂತೆ ನನಗೆ ಭಾಸವಾಯಿತು.

ನಾನು ಮೆಲ್ಲಗೆ ಮಗುವಿನ ಗಲ್ಲಕ್ಕೆ ಹೊಡೆದು—"ಅಯ್ಯಾ ಹುಚ್ಚಾ, ಆಶೆ ಮತ್ತು ಸ್ವಪ್ನಗಳ ಆಧಾರದಿಂದಲೇ ಅಲ್ಲವೇ ನಾವಿಂದು ಜೀವಿಸುತ್ತಿರುವುದು. ಜಗತ್ತು ಮುನ್ನಡೆಯುತ್ತಿರುವುದು," ಎಂದೆ. ಮಗು ಮುಗುಳ್ನಗುತ್ತಿತ್ತು.

(ಸರಿತಾದಿಂ

ಸ್ಥಾಪನೆ: 1924

ದಿ ಕರ್ನಾಟಕ ಬೇಂಕ್ ಲಿಮಿಟೆಡ್

(ಶೆಡ್ಯೂಲ್ಡ್ ಬೇಂಕ್)

ರಿಜಿಸ್ಟರ್ಡ್ & ಹೆಡ್ ಆಫೀಸು: ಡೊಂಗರಕೇರಿ, ಮಂಗಳೂರು—3.

ಈ ಕೆಳಗಿನ ಏರಿಸಿದ ಬಡ್ಡಿದರಗಳಲ್ಲಿ ಶೇವಣಾತಿಗಳನ್ನು ಸ್ವೀಕರಿಸಲಾಗುವುದು.

ಒಂದರಿಂದ ಎರಡು ತಿಂಗಳುಗಳ ವರೆಗೆ	....	ಸಾ|| ಸೇಕಡಾ	3-75	ನ.ಪೈಸೆ
ಮೂರರಿಂದ ಐದು ತಿಂಗಳುಗಳ ವರೆಗೆ	....	,,	4-25	,,
ಆರು ತಿಂಗಳುಗಳಿಂದ 12 ತಿಂಗಳುಗಳ ವರೆಗೆ	....	,,	4-50	,,
12 ತಿಂಗಳು ಮಿಕ್ಕಿ 24 ತಿಂಗಳುಗಳ ವರೆಗೆ	....	,,	4-75	,,
24 ತಿಂಗಳು ಮಿಕ್ಕಿ 48 ತಿಂಗಳುಗಳ ವರೆಗೆ	....	,,	5-00	,,
48 ತಿಂಗಳುಗಳಿಗೆ ಮಿಕ್ಕಿ	....	,,	5-25	,,

ಸೇವಿಂಗ್ಸ್ ಬ್ಯಾಂಕ್ ಬಡ್ಡಿ ದರವನ್ನು ಸಾ. ಸೇಕಡ 2½% ರಿಂದ 3¼%ಗೆ ಏರಿಸಲಾಗಿದೆ.

THE KARNATAKA BANK LIMITED.

ಡಿ. ಕೆ. ಭಾರದ್ವಾಜರ

ಇಂಗ್ಲಿಷ್, ಇಂಗ್ಲಿಷ್-ಕನ್ನಡ

ಡಿಕ್ಷನೆರಿ

ಬೆಲೆ: ರೂ. ನಾಲ್ಕು.

ಐದು ರೂಪಾಯಿ ಮನಿಯಾರ್ಡರ್ ಮಾಡಿದರೆ ಒಂದು ಪ್ರತಿಯನ್ನು ಬುಪೋಸ್ಟಿನಿಂದ ಕಳಿಸಲಾಗುವುದು.

ವಿಚಾರಿಸಿರಿ:

ನವಭಾರತ ಪುಸ್ತಕ ಭಂಡಾರ
ಉಡುಪಿ.

Edited Printed & Published by K. H. Shetty, at the Navayuga Press, Udipi, S. India.

ಮ್ಮ ಯಾವತ್ತೂ
ದ್ರಣ ಕೆಲಸಗಳಿಗೆ
ಯವಾಡಿ ವಿಚಾರಿಸಿರಿ:
ನವಯುಗ ಪ್ರೆಸ್,
ಉಡುಪಿ

ರಾಷ್ಟ್ರೀಯ ವಾರಪತ್ರಿಕೆ.

ಬೆಲೆ: 13 ನ.ಪೈಸೆ

ನವಯುಗ

KANNADA — NAVAYUGA — WEEKLY

ವಿದ್ಯಾರ್ಥಿಗಳಿಗೆ
ಮತ್ತು ವಯಸ್ಕರಿಗೆ
ಅತ್ಯುಪಯೋಗೀ ಪುಸ್ತಕ
ಸುಲಭದಲ್ಲಿ ಇಂಗ್ಲಿಷ್
(ಆಂಗ್ಲ ಸ್ವಯಂಬೋಧಿನಿ)
ನವಭಾರತ ಪುಸ್ತಕ ಭಂಡಾರ
ಉಡುಪಿ

ಸಂಪುಟ ೪೧ ಸಂಚಿಕೆ ೧೨ | ಉಡುಪಿ 30—11—1961 ಗುರುವಾರ | Vol. 41 No. 12

ಪೋರ್ಚುಗೀಸರ ಗುಂಡು-ಭಾರತೀಯನ ಬಲಿ

ವಿಶ್ವಸಂಸ್ಥೆಯ ತಾನ್ಸು ಪಟವನ್ನು ವಿಂ, ತನ್ನ ವಸಾಹತುಗಳ ಸಂಬಂಧದ ವಿವ ರಣೆಯನ್ನು ನೀಡದೆ ಆ ಉಪನಿವೇಶಗಳ ನ್ನು ತನ್ನ ಸಾಮ್ರಾಜ್ಯದ ಸಾಗರೋತ್ತರ ಭಾಗವೆಂದು ವಾದಿಸುತ್ತಿರುವ ಪೋರ್ಚು ಗಲ್ಲು ಭಾರತಕ್ಕೆ ಕಟುವಾದ ದ್ರೋಹ ಬಗೆಯುತ್ತಿದೆ. ಗೋವೆ ಹಾಗೂ ಮತ್ತಿ ತರ ಚಿಕ್ಕ ಪುಟ್ಟ ಪ್ರದೇಶಗಳು ಪೋರ್ಚು ಗಲ್ಲಿನ ಕೈಗಳಿಗೆ ಶತಮಾನಗಳ ಹಿಂದೆ ಬಂದಿವೆಯೆಂಬುದು ನಿಜ. ಆದರೆ, ಅಲ್ಲಿ ರುವವರೆಲ್ಲರೂ ಭಾರತೀಯರೇ ವಿನಃ ಪೋರ್ಚುಗೀಸರಲ್ಲ. ಗೋವೆಯು ಭಾ ರತದ ಒಂದು ಅಂಗವಾಗಿದೆಯೇ ಹೊರ ತು ಅದೆಂದಿಗೂ ಸಾಗರೋತ್ತರ ಪ್ರದೇಶ ವಾಗಲಾರದು. ಭಾರತವು ಬ್ರಿಟಿಷರ ವ ಸಾಹತುವಾಗಿ ಅವರ ಅಧಿಕಾರದಡಿಯಲ್ಲಿ ಉಳಿದು ಮುಂದೆ ಸ್ವತಂತ್ರವಾದಂತೆ ಯೆಂ ದು ವರೆಗೆ ಗೋವೆಯು ಪೋರ್ಚುಗೀಸರ ಪ್ರಭುತ್ವದೊಡನೆ ಸಂಬಂಧವಿರಿಸಿಕೊಂಡಿ ದ್ದರೂ ಅದು ಭಾರತದ ಒಂದು ಭಾಗ ವೆಂಬುದು ಬೆಳಕಿನಷ್ಟು ತಿಳಿಯೂಗಿದೆ.

ಸೂರ್ಯೋದಯವನ್ನು ಕಂಡೂ ಕತ್ತ ಲೆಯೆಂದು ಭ್ರಮಿಸಿ ನಿದ್ರಿಸುತ್ತಿರುವಂತೆ ಸಾಲಜಾರ ಪ್ರಭು ತನ್ನ ಕಣ್ಮುಂದೆಯೇ ಬ್ರಿಟಿಷರು-ಫ್ರೆಂಚರು ಅಮೆರಿಕನರು ಅ ನುಸರಿಸಿದ ನ್ಯಾಯವಾದ ಉಚಿತವಾದ ಮತ್ತು ಗೌರವಪೂರ್ಣವಾದ ಮಾರ್ಗವ ನ್ನು ತೊರೆದು, ವಾಮಪಥಗಾಮಿಯಾಗಿ ಪ್ರಶ್ನೆಗೆ ಉತ್ತರವರಸುವುದರ ಬದಲು ಅ ದನ್ನು ಮತ್ತಷ್ಟು ಜಿಡುಕುಗೊಳಿಸುತ್ತ ಬ ರುತ್ತಿರುವುದು ಖಂಡನಾರ್ಹ ಮಾತ್ರವಲ್ಲ ಖೇದಾರ್ಹವೂ ಹೌದು. ಪೋರ್ಚುಗೀ ಸ್ರಭು ತನ್ನ ಈ ನಿಲುಮೆಯು ಮರಳಿ ನ ಮೇಲೆಯೇ ನಿಂತಿದೆಯೆಂಬುದನ್ನು ಸ ಮಯದಲ್ಲಿಯೇ ಅರಿತುಕೊಳ್ಳುವುದು ಖಂಡಿ ತ. ಇದಕ್ಕೆ ತಕ್ಕುದಾದ ಯೋಜನೆಯ ನ್ನು ಗೋವಾಂತಕರು ರೂಪಿಸಬೇಕು; ಭಾರತ ಸರಕಾರವು ಆವಶ್ಯಕ ಸಹಾಯ ವನ್ನೀಯಬೇಕು.

ಇತ್ತೀಚೆಗೆ ನಮ್ಮ ಪ್ರಧಾನ ಮಂತ್ರಿ ಮತ್ತು ಸಂರಕ್ಷಣ ಮಂತ್ರಿಗಳು ಗೋವೆ ಯ ಬಗ್ಗೆ ತುಂಬ ಮಾತಾಡಲು ತೊಡಗಿ ದ್ದಾರೆ. ಭಾರತವು ಬಯಸುವುದಾದರೆ ಗೋವೆಯನ್ನು ವಶಪಡಿಸಿಕೊಳ್ಳುವುದು ಕಷ್ಟದ ದೊಡ್ಡ ಕೆಲಸವಲ್ಲ; ಇದುವರೆಗೆ ಶಾಂತ ವಿಧಾನವನ್ನು ಅನುಸರಿಸಿರುವುದು ಸಜವಾದರೂ ಸೈನಿಕ ಕಾರ್ಯಾಚರಣೆ ಯನ್ನು ಕೈಗೊಳ್ಳಬೇಕಾಗಿಬಂದರೆ, ನಾವು ಹಿಂದೆ ಮುಂದೆ ನೋಡಲಾರೆವು ಎಂದು ಮುಂತಾದ ಅಬ್ಬರದ ಮಾತುಗಳನ್ನು ಆ ಡತೊಡಗಿದ್ದಾರೆ. ಕಮ್ಯುನಿಸ್ಟ್ ಚೀನದ ಆಕ್ರಮಣ ಸಂಬಂಧದಲ್ಲಿ ಕೂಡ ಮುಂದೆ ಆಕ್ರಮಣ ಮಾಡಗೊಡೆವು' ಎಂಬ ಇವರ ಗಂಡು ಪ್ರತಿಜ್ಞೆಯಿಂದು ಮಂದದು ಮಾತ್ರವಲ್ಲ ಮರಳಿ ೯ ಎಡೆಗಳಲ್ಲಿ ಹೊಸ ಧಾಳಿಗಳಾಗಿವೆಯೆಂ ಬುದನ್ನು ಈ ಮಹಾಶಯರೇ ತಿಳಿಸಿದ್ದಾರೆ. ಗೋವಾ ಸಂಬಂಧದ ಭಾರ ತದ ನೀತಿಯೂದರೂ ಇದಕ್ಕೆ ಅಸವಾದ ವಾಗಲಾರದು ಎಂಬುದಕ್ಕೆ ಸಾಕಷ್ಟು ಭ ರವಸೆಯಿಲ್ಲ.

ಗೋವೆಯನ್ನು ಭಾರತದಲ್ಲಿ ವಿಲೀನ ಗೊಳಿಸಲು ಭಾರತವು ಯಾವುದೇ ಕ್ರಮ ವನ್ನು ಕೈಗೊಳ್ಳಲು ಸ್ವತಂತ್ರವಿದೆ ಕಾಂ ಗೋವಿನಲ್ಲಿ ಏಕೀಕರಣವನ್ನು ಸಾಧಿಸಲು ಭಾರತವು ಸೈನ್ಯಪಡೆಯನ್ನು ಕಳಿಸುವುದು ಅನ್ಯಾಯವಲ್ಲದಿರುವಾಗ, ತನ್ನದಾದ ಗೋವೆಯನ್ನು ತನ್ನಲ್ಲಿ ವಿಲೀನೀಕರಿಸಿ ಏ ಕತೆಯನ್ನು ಸಾಧಿಸುವುದರಲ್ಲಿ ಆ ಸೇನೆ ಏಕೆ ಹಿಂದುಳಿಯ ಬೇಕು? ಅಂತಾರಾ ಷ್ಟ್ರೀಯ ನ್ಯಾಯವಾಗಲಿ ಕಾನೂನಾ ಗಲಿ, ಮಾನವಿಕ ನ್ಯಾಯವಾಗಲಿ ಭಾರತ ದ ಪಕ್ಷವನ್ನು ಬಿಟ್ಟುಹೋಗುವಂತಿಲ್ಲ. ಆದುದರಿಂದ ಈ ಸಂಬಂಧದಲ್ಲಿ ತನ್ನದೇಶ ದಲ್ಲಿರುವ ವಿದೇಶಿ ವಸಾಹತುಗ ಳನ್ನು ತನ್ನಲ್ಲಿ ಸೇರಿಸಿಕೊಳ್ಳಿ ಸುವಲ್ಲಿ ಭಾರತವೂ ಉಗ್ರ ಕಾರ್ಯ ಕೈ ಗೊಳ್ಳುವುದನ್ನು ಯಾರಿಂದಲೂ ತಡೆಯ ಲು ಅಸಾಧ್ಯವೆಂದ ಶ್ರೀ ಭಾಗ್ಲರ ಮಾ ತು ಯಥಾರ್ಥವಾದುದು. ಅಮೆರಿಕೆ, ಬ್ರಿ ಟನ್ ಮತ್ತು ಫ್ರಾನ್ಸ್‌ಗಳು ಗೋವೆಯ ಸಂಬಂಧದಲ್ಲಿ ಪೋರ್ಚುಗಲ್ಲಿಗೆ ಸಹಾಯ ವೀಯುತ್ತಿರುವರೆಂದು ಹೇಳಲಾಗುತ್ತಿದೆ. ಆದರೆ, ವಾಸ್ತವಿಕತೆ ಇದಕ್ಕೆ ವಿಪರೀತವಿ ದೆ. ತಾನು ವಸಾಹತುವಾದವನ್ನು ಸ್ಥಿರ ಗೊಳಿಸುವುದನ್ನು ಖಡಾಖಂಡಿತವಾಗಿ ಪ್ರತಿಭಟಿಸುವೆನೆಂದು ಅಮೆರಿಕೆಯು ಈ ಗಾಗಲೇ ಸ್ಪಷ್ಟಪಡಿಸಿದೆ. ಬ್ರಿಟನ್ನು ವ ಸಾಹತುಗಳಿಗೆ ಸ್ವಾತಂತ್ರ್ಯವೀಯುವ ಪ್ರಶ್ನೆಯನ್ನು ಸಹಾನುಭೂತಿಯಿಂದ ಪರಿ ಶೀಲಿಸುತ್ತಿದೆ. ಹಾಗಿರುವಾಗ ಇವನ್ನು ಸಾಮ್ರಾಜವಾದಿಗಳೆಂದು ಹೇಗೆ ಹೇಳೋ ಣ? ಆದರೆ, ಗೋವಾ ಹಾಗೂ ಮತ್ತಿತರ ಪೋರ್ಚುಗೀಸ ಉಪನಿವೇಶಗಳು ಇನ್ನೂ ನಿಂತಿರುವುದು ಆಶ್ಚರ್ಯವಲ್ಲವೆ?

ಇತ್ತ ಗೋವೆಯಲ್ಲಿ ಪೋರ್ಚುಗೀಸ ಅಧಿಕಾರಿಗಳು ತಮ್ಮ ಅನ್ಯಾಯ ಅತ್ಯಾ ಚಾರಗಳಿಂದ ಗೋವಾಂತಕರನ್ನು ದಬಾ ಯಿಸಲು ಹವಣಿಸಹತ್ತಿ ಆ ಬಗ್ಗೆ ಕಾ ರ್ಯನಿರತರಾಗಿದ್ದಾರೆ. ಭಾರತೀಯರ ನ್ನು ಉದ್ರಿಕ್ತಗೊಳಿಸಲು ತೊಡಗಿದ್ದಾರೆ. ಒಂದೆರಡು ತಿಂಗಳುಗಳಿಗೆ ಮೊದಲು ಭಾ ರತೀಯ ಹಡಗೊಂದರ ಮೇಲೆ ಲೂಟಿ ನಡೆದುದು ಗೋವೆಯ ಸಮೀಪದಲ್ಲಿ. ಇ ದರ ಪೂರ್ಣ ವಿವರಗಳನ್ನೂ ತಿಳಿದುಬಂ ದಿತ್ತವಾದರೂ ಭಾರತ ಸರಕಾರವು ಈ ವಿ ಷಯವನ್ನು ಗಂಭೀರವಾಗಿ ತಿಳಿದುಕೊಂ ಡಿರುವುದು ಅಗತ್ಯ. ಇದರ ಮೇಲೆ ಕಾರ ವಾರದಿಂದ ಎರಡು ಮೈಲು ಈಶಾನ್ಯ ಕ್ಕೆ (ಗೋವೆಯಿಂದ ೧೧ ಮೈಲು ದೂರದಲ್ಲಿ ರುವ 'ಅಂಜದೇವ' ದ್ವೀಪದ ಬಳಿಯಲ್ಲಿ ಪ್ರಯಾಣಿಕರ ಜಹಜು ಛಬರ್ವತಿಯ ಮೇಲೆ ನವಂಬರ ೧೭ನೆ ತಾರೀಕಿನಂದು ಗುಂಡಿನ ಹಾರಾಟ ನಡೆಯಿತು ಸುದೈವ ದಿಂದ ಈ ಗುಂಡು ಇಂಜಿನಿನ ಕೋಣೆಯ ಲ್ಲಿ ಸುಸುಳಿಹೋಯಿತು.

ಪೋರ್ಚುಗೀಸ ದ್ವೀಪದಿಂದ ಸಿಡಿದ ಗುಂಡಿಗೆ ಆಹುತಿಯಾದವನೆಂದರೆ ಅಸ ಹಾಯಕ ವಿಮಾನಗಾರ ರಾಜಾರಾಮ ಆ ತ್ಮಾರಾಮ ಕೋಳೆರೇಕರ್ ಎಂಬವನು. ಈತನು ತನ್ನಿಬ್ಬರು ಸಹಾಯಕರೊಡನೆ ಅಂಜದೇವ ದ್ವೀಪದತ್ತ ವಿಮಾನ ಹಿಡಿಯಲು ಹೊರಟನೆಂದೂ ರಾತ್ರಿಯ ಹನ್ನೊಂದು ಗಂಟೆಯ ಸಮಯದಲ್ಲಿ ನೌಕೆ ದ್ವೀಪ ತಟದಿಂದ ಎರಡು ಫರ್ಲಾಂಗು ದೂರವಿರು ವಾಗ, ಒಂದು ಗುಂಡು ಬಂದು ಧ್ವಜಕ್ಕೆ ತಾಗಿ ಸಮುದ್ರದಲ್ಲಿ ಬಿತ್ತೆಂದೂ, ಎರಡ ನೆಯ ನೌಕೆಯ ಅಗ್ರಭಾಗಕ್ಕೆ ತಾಗಿ ತೆಂದೂ ಮೂರನೆಯದು ಮಾತ್ರ ರಾಜ

(೧೨ನೇ ಪುಟ ನೋಡಿರಿ)

ದಿವಂಗತ ಎ. ಬಿ. ಶೆಟ್ಟಿ ಸ್ಮಾರಕ ನಿಧಿ

ದಿವಂಗತ ಎ ಬಿ ಶೆಟ್ಟಿ ಶಿಲಾಪ್ರತಿಮೆಯ
ಅನಾವರಣ ಸಮಾರಂಭವು

ಮಂಗಳೂರು ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ
ತಾ. 6—1—62ರಲ್ಲು ಜರಗಲಿರುವುದು

ಡಾಕ್ಟರ್ ಲಕ್ಷ್ಮಣ ಸ್ವಾಮಿ ಮುದಲಿಯವರು
ಸಮಾರಂಭವನ್ನು ಉದ್ಘಾಟಿಸುವರು.

ಸ್ಮಾರಕ ನಿಧಿಗೆ ಸಹಾಯ ಮಾಡಲಿಚ್ಛಿಸುವವರು, ತಮ್ಮ ಸಹಾಯಧನವನ್ನು ಬೇಗನೆ ಕಳುಹಿಸಿಕೊಟ್ಟು ಸಹಕರಿಸಬೇಕಾಗಿ ಅಪೇಕ್ಷಿಸುತ್ತೇವೆ.

ಕೆ. ಟಿ. ಆಳ್ವ, ಅಧ್ಯಕ್ಷ
ಪಿ. ಎಮ್. ಹೆಗ್ಡೆ, ಕೋಶಾಧಿಕಾರಿ.

ವಿ. ಸೂ. ಸಹಾಯ ಧನವನ್ನು ದಯವಿಟ್ಟು ಈ ಕೆಳಗಿನ ವಿಳಾಸಕ್ಕೆ ಕಳುಹಿಸಿರಿ.

Sri P. M. Hegde,
Kodialbail, Mangalore-3.

ಹೆಣ್ಣು ಬೇಡ ತೊಡಿಸಿದಳು

ಶ್ರೀ ಜಯವರ್ಮ, ಮಂಗಳೂರು

[ಆತನಿಗೆ ಪ್ರೀತಿ ಏನೆಂಬುದು ತಿಳಿದಿರಲಿಲ್ಲ. ಅಂಶೂ ಕಡೆಗೊಮ್ಮೆ ಪ್ರೀತಿಯ ತೊರೆ ಹರಿದು ನಿಂತಿತು]

ಸಬಿತಾ, ರೈಲು ಹತ್ತಿ ಕುಳಿತು, ತನ್ನ ರೈಲು ಪಯಣದ ಜೀವನದಲ್ಲಿ ಇದು ವರೆಗೆ ಕಂಡ ಹಲವು ವ್ಯಕ್ತಿಗಳ ಕುರಿತು ಆಲೋಚಿಸುತ್ತಿದ್ದಳು. ಹಲವಾರು ದುರದೃಷ್ಟ ಮನುಷ್ಯರ ಬಾಳ ಕತೆಯನ್ನು ಕೇಳಿ ಅವರ ಸುಖದುಃಖಗಳಲ್ಲಿ ಭಾಗಿಯಾಗಿದ್ದಳು. ಅದರೊಂದಿಗೆ ರೈಲಿನ ಬೇಸರವನ್ನು ಕಳೆದು ಕೊಂಡಿದ್ದಳು. ಅವರು ಕೊಟ್ಟ ಸಮಾಧದ ಚಿತ್ರಣ ಅವಳ ಪಾಲಿಗೆ ಮರೆಯದ ನೆನಪು.

ರೈಲು ಕಿವಿ ಬಿರಿಯುವಂತೆ ಸೀಟಿ ಹಾಕಿದಾಗ, ಒಬ್ಬ ಯುವಕ ಏರು ಉಸಿರು ಬಿಡುತ್ತಾ, ಬಂದು ದೊಪ್ಪನೆ ಕುಳಿತ. ಸಬಿತಾ ತಾತ್ಸಾರದಿಂದ ಆತನೆಡೆಗೆ ದೃಷ್ಟಿ ಬೀರಿದಳು. ಆ ನೋಟದಲ್ಲಿ, ರೈಲಿನ ಬೇಸರವನ್ನು ಕಳೆಯಲು ಸಹಾಯಕನಾಗಬಹುದೇ ಎಂಬ ಸೋಟವಿತ್ತು. ಆತನ ಕಣ್ಣುಗಳು ಕಣ್ಣೀರು ಹರಿಸುತ್ತವೆ ಎಂಬಂತಿತ್ತು. ಮುಖದಲ್ಲಿ ಮುಗ್ಧಭಾವ. ಅದರೊಂದಿಗೆ ಗಾಬರಿಯ ಚಿಹ್ನೆಯೂ ಇದ್ದಿತು. ತಿದ್ದಿ ತೀಡಿದ ಮೂಗು, ಸುಟ್ಟ ಬಾಯಿ, ದಪ್ಪವೂ ತೆಳುವೂ ಅಲ್ಲ ಎಂಬಂತಿರುವ ತುಟಿಗಳು, ಕೆದರಿದ ಕರುಳು ಕರುಳಾದ ಕೂದಲು, ಆತ ಹೇಳುವಂತಹ ದೃಢಕಾಯನೇನೂ ಆಗಿರಲಿಲ್ಲ. ಬಿಳಿಯ ಶರ್ಟು, ಬಿಳಿಯಾಗಿಯೇ ಇದ್ದರೂ, ಬೆವರಿನಲ್ಲಿ ಸಂಪೂರ್ಣ ಒದ್ದೆಯಾಗಿತ್ತು. ಜೋಕ್ಲೇಟ್ ಬಣ್ಣದ ಉಲನ್ ಪೇಂಟ್ ಆತನಿಗೆ ಉತ್ತಮವಾಗಿಯೇ ಒಪ್ಪುತ್ತಿತ್ತು ಸಿರಿವಂತನಾಗಿರಲೇ ಬೇಕು ಎಂದೆಣಿಸಿದಳು ಸಬಿತಾ. ಆತ ರೈಲು ಹೊರಡುವ ಸಮಯವನ್ನೇ ಕಾಯುತ್ತಿದ್ದಂತಿತ್ತು. ಮನಸ್ಸು ಬಹಳ ಉದ್ವೇಗಗೊಂಡಂತಿತ್ತು. ಮುಖದಲ್ಲಿ ಗಾಬರಿಯ ಭಾವವಿದ್ದರೂ, ದೃಢತೆಯಿತ್ತೆಂದು ವ್ಯಕ್ತವಾಗುತ್ತಿತ್ತು. ಆತ ತನ್ನ ಸುತ್ತಲಿನ ಪ್ರಪಂಚವನ್ನು ಪರೀಕ್ಷಿಸುವಂತೆ. ಒಮ್ಮೆ ಕಣ್ಣು ತಿರುಗಿಸಿದ. ಹೆಚ್ಚಿಗೆ ಯಾರೂ ಇರಲಿಲ್ಲ. ಗೌರವಯುತರೆಂದು ತೋರುತ್ತಿದ್ದ ಮಂದುಕರೊಬ್ಬರು ಕಣ್ಣುಕೂರುತ್ತಿದ್ದರು. ರೈಲು ಹೊರಟಾಗ ಆತ ಮೃದುನಾಗಿ ಉಸಿರು ಬಿಟ್ಟದುದು ಸಬಿತಾಗೆ ತಿಳಿಯಿತು. ಗಾಳಿ ಮೃದುವಾಗಿ ಬೀಸಿ ಬಂದಾಗ, ಆತನೆಡೆಯಿಂದ ಮೃದುವಾದ ಪರಿಮಳದೊಂದಿಗೆ ಬೆವರ ವಾಸನೆಯೂ ಮೂಗಿಗೆ ಬಂದು ಬಡಿಯುತ್ತಿತ್ತು. ಆತನದು ಆಕರ್ಷಕ ವ್ಯಕ್ತಿತ್ವ. ಸಬಿತಾ ಆಲೋಚಿಸುತ್ತಿದ್ದಳು. ಪದೇ ಪದೇ ನೋಡುತ್ತಿದ್ದಳು. ಆತನ ಕಣ್ಣುಗಳು ಕೊಂಚ ಹೊತ್ತಿನಲ್ಲಿ ಕೆಂಪಾಗಿದ್ದುವು. ಹಣೆಯ ನರಗಳು ಉಬ್ಬಿದ್ದುವು. ಕಣ್ಣೀರು ಇನ್ನೇನು ಹರಿಯುತ್ತಿದೆ ಎಂದೆಣಿಸಿದಳು ಅವಳು. ಸಿಜವಾಯಿತು ಅದು. ಅಂಗೈಯಲ್ಲಿ ಮುಖವಿಟ್ಟು ಅತ್ತೆಬಿಟ್ಟ. ಯಾಕಾಗಿ ಕೊರಗುತ್ತಾನೆ? ಸುಖಪಡುವ ಈ ಚಿಕ್ಕ ಪ್ರಾಯದಲ್ಲಿ ಈತನಿಗೇನು ಬಂತು ಸಂಕಟ? ಎಂದು ಕನಿಕರಿಸಿದಳು. ಆತನ ಪ್ರಾಯ ಇಪ್ಪತೈದರ ಮೇಲೆ ಸಂದಿರಲಿಕ್ಕಿಲ್ಲ. ತನಗಿಂತ ಏನು ಎರಡು ಮೂರು ವರ್ಷ ಚಿಕ್ಕವನಾಗಬಹುದೋ ಏನೋ ಎಂದೆಣಿಸಿದಳು. ರೈಲು ಮೈಲು ಮೈಲಾಗಿ ಹೋದ ಮೇಲೂ ಆತ ಅದೇ ಸ್ಥಿತಿಯಲ್ಲೇ ಕುಳಿತಿದ್ದ. ಹಲವು ಗಂಟೆಗಳ ಅನಂತರ ಆತ ಸೈರಣೆಗೆಬಂದಂತಿತ್ತು. ಅದರೂ ಕಣ್ಣೀರು ಯಾವ ಸಂಯಮಕ್ಕೂ ಬಗ್ಗುವಂತಿರಲಿಲ್ಲ. ದುಃಖದಿಂದ ಹೃದಯವೇ ಕಣ್ಣೀರ ರೂಪದಲ್ಲಿ ಹೊರಬರುತ್ತಿದೆಯೇನೋ ಎಂಬಂತೆ ಕಾಣುತ್ತಿತ್ತು. ಆತ ಒಮ್ಮೆ ಅವಳತ್ತ ನೋಡಿ ಕೇಳಲಾರದಷ್ಟು ಮೆಲ್ಲನೆ ಕೇಳಿದ "ಒಮ್ಮೆ ಪತ್ರಿಕೆ ನೋಡಲೇನೊ?" ಆತನಲ್ಲಿ ಮಾತಾಡುವ ಬಗೆಯನ್ನು ಯೋಚಿಸುತ್ತಿದ್ದಾಗ ಆತನೇ ಕೇಳಿದ್ದ. ಆತನ ದುಃಖಮಯೆ ಚರಿತ್ರೆಯನ್ನು ಕೇಳಿ ತಿಳಿದುಕೊಳ್ಳುವ ಆಶೆಯೂ ಇತ್ತು.

ಅವಳಿಗಿಂದು ದುಃಖಪೂರಿತ ಕತೆಯನ್ನು ಕೇಳುವುದರಲ್ಲಿ ಆಸಕ್ತಿ ಉಂಟಾಗುತ್ತಿತ್ತು. ಉತ್ಸಾಹ ಉಂಟಾಗಿತ್ತು. ನೂರಾರು ಸುಖಜೀವನದ ಕತೆಗಳಿಗಿಂತ, ಒಂದು ಕಷ್ಟಮಯ ಜೀವನವನ್ನು ನೋಡಿದರೆ ಹೆಚ್ಚು ಪರಿಣಾಮಕಾರಿ ಎಂದು ಅವಳು ಭಾವಿಸಿದ್ದಾಳೆ. ಪ್ರಪಂಚ ಹೇಗಿದೆ ಎಂಬುದನ್ನು ಇಂತಹ ಕೆಲವು ಜೀವನಗಳನ್ನು ನೋಡಿ ಅನುಭವಪಾಗಬಲ್ಲದು ಎಂದು ಅವಳಿಂದರಿತಿದ್ದಾಳೆ.

"ತೆಗದುಕೊಳ್ಳಿ. ಆದರೆ ನೀವೀಗ ಓದಿದರೂ ಅರ್ಥವಾಗುವ ಸ್ಥಿತಿಯಲ್ಲಿಲ್ಲ" ಎಂದು ಕನಿಕರದಿಂದ ಮಾತಿಗೆ ಆಡಿಹಾಕಿದಳು. ಆತ ಒಮ್ಮೆ ಪ್ರಯತ್ನಪೂರ್ವಕವಾಗಿ, ಆಕರ್ಷಕವಾಗಿ ನಕ್ಕು, "ನನ್ನನ್ನು ಬಹು ಬೇಗ ಕಂಡುಕೊಂಡು ಬಿಟ್ಟಿರಿ" ಎಂದ. "ಕಂಡುಕೊಳ್ಳುವ ರೀತಿಯಲ್ಲಿದ್ದೀರಿ" ಎಂದಳು ಮುಗುಳುನಕ್ಕು.

"ನೀವು ನನಗೆ ಅಪರಿಚಿತರಿದ್ದೀರಿ. ಆದರೆ ಪರಿಚಯ ಮಾಡಿಸಿ ಕೊಡಬೇಕೆಂದು ನನ್ನಿಚ್ಛೆ. ನಿಮ್ಮನ್ನು ಹೇಗೆ ಸಂಭೋಧಿಸಲಿ? "ಅಕ್ಕಾ" ಎನ್ನಲೇ? ಎಂದ, ಪ್ರಶ್ನಿಸುವಂತೆ.

ಹೃದಯವನ್ನೇ ಹಿಡಿದು ಅಲ್ಲಾಡಿಸಿದ್ದಂತಿತ್ತು ನುಡಿ. ಕಿವಿಯ ಬಳಿ ಕುತ್ತಾಂಬೂದಿ ನೀನು ತಮ್ಮನಿಲ್ಲದ ನಿರ್ಭಾಗ್ಯ ಹೆಣ್ಣು ಎಂಬಂತಿತ್ತು ಪ್ರಶ್ನೆ.

"ಹಾಗೇ ಅನ್ನಿ ನನಗೇನಂತೆ".....

ಎಂದಳು ಸಿಡಿದುಬಂದ ಕೋಪದಿಂದ.

"ಹಾಗೆ ಅನ್ನಬೇಡ ಅಕ್ಕಾ. ಅಕ್ಕತಂಗಿಯರಿಲ್ಲದ ನಿರ್ಭಾಗ್ಯ ನಾನು. ಪ್ರಪಂಚದ ಹೆಂಗಸರು ನನ್ನ ಮಾತೃ ಸ್ವರೂಪದು ಅಕ್ಕಾ"

"ಇದು ನಿಮ್ಮ ವಿಪರೀತ ಬುದ್ಧಿ"

"ಏಕವಚನದಲ್ಲಿ ಕರೆ ಅಕ್ಕಾ, ತಮ್ಮನಾಗ ಬಯಸುವ ಒಬ್ಬನನ್ನು ಸ್ವೀಕರಿಸಲಾರದ ಸ್ವಾರ್ಥಿಯೇ ನೀನು?"— ದೈನ್ಯತೆಯೇ ಮೂರ್ತಿವೆತ್ತಂತೆ ಕೇಳಿದ.

"ಒಬ್ಬ ಅಪರಿಚಿತ ಮನುಷ್ಯನನ್ನು ತಮ್ಮನನ್ನಾಗಿ ಸ್ವೀಕರಿಸುವಷ್ಟು ಹುಂಬಳೆ ನಾನು."

ಆತನ ಹುಟ್ಟುಬುದ್ಧಿಗಳನ್ನು ಬಿಡಿಸುವ ಉಪಾಯವನ್ನು ಹೂಡಿದಳು ಅವಳು.

"ಅದರೆ ಅಕ್ಕಾ....." ಆತ ಏನನ್ನೊ ಹೇಳಬೇಕೆಂದಿದ್ದ. ಅದನ್ನು ಅಲ್ಲಿಗೆ ನಿಲ್ಲಿಸಿದು ಹೇಳಿದ್ದ "ನಿಜ ಹೇಳಿದೆ ಅಕ್ಕಾ. ನಾನು ಲೋಕಕ್ಕೇನೆ ಅಪರಿಚಿತ. ನಾನು ಈ ಮಾನವ ಲೋಕಕ್ಕೇನೆ ಅಪರಿಚಿತ."

"ಉದ್ರೇಕಗೊಳ್ಳಬೇಡಿ. ಬರೇ ಮಾತಿಗಾಗಿ ಹೇಳಿದೆ. ತಮ್ಮನಾಗ ಬಯಸುವವನನ್ನು ದೂರ ಮಾಡುವಷ್ಟು ಹೃದಯಹೀನಳಲ್ಲ ನಾನು." ಎಂದಳು ಸಮಾಧಾನಗೊಂಡು.

"ದೂರ ಮಾಡುತ್ತಾರೆ ಅಕ್ಕಾ. ಹೆತ್ತತಂದೆ ತಾಯಿಗಳು ದೂರ ಮಾಡುತ್ತಾರೆ. ಕೈಹಿಡಿದ ಮಡದಿಯೇ ದೂರವಾಡಿಕೊಳ್ಳುತ್ತಾಳೆ. ಸಾಧ್ಯವಾದರೆ ಪ್ರಪಂಚವೇ ದೂರವಾಡಿಕೊಳ್ಳುತ್ತದೆ—ಬಲ್ಲೆಯಾ ನೀನು"

"ತುಂಬ ಅನುಭವವಂತನಂತೆ ಮಾತನಾಡುತ್ತಿದ್ದಿಯಲ್ಲಾ ನೀನು"

"ಹೂಂ. ಬಹಳ ಅನುಭವವಂತ ನಾನು. ಈ ಪ್ರಪಂಚದಲ್ಲಿ ಕಲಿಯುವಷ್ಟು ಕಲಿತು ಬಿಟ್ಟೆ. ಅನುಭವಿಸಿ ಬಿಟ್ಟೆ"

"ಜೀವನದಲ್ಲಿ ವೈರಾಗ್ಯ ಗೊಂಡಿರುವೆ ನೀನು"

(೧೧ನೇ ಪುಟ ನೋಡಿರಿ)

ಸ್ಥಾಪನೆ: 1924

ದಿ ಕರ್ಣಾಟಕ ಬೇಂಕ್ ಲಿಮಿಟೆಡ್

(ಶೆಡ್ಯೂಲ್ಡ್ ಬೇಂಕ್)

ರಿಜಿಸ್ಟರ್ಡ್ & ಹೆಡ್ ಆಫೀಸು: ಡೊಂಗರಕೇರಿ, ಮಂಗಳೂರು—3.

ಈ ಕೆಳಗಿನ ಏರಿಸಿದ ಬಡ್ಡಿದರಗಳಲ್ಲಿ ಠೇವಣಾತಿಗಳನ್ನು ಸ್ವೀಕರಿಸಲಾಗುವುದು.

ಒಂದರಿಂದ ಎರಡು ತಿಂಗಳುಗಳ ವರೆಗೆ	.... ಸಾ|| ಸೇಕಡಾ	3-75	ನ.ಪೈಸೆ
ಮೂರರಿಂದ ಐದು ತಿಂಗಳುಗಳ ವರೆಗೆ	.... ,,	4-25	,,
ಆರು ತಿಂಗಳುಗಳಿಂದ 12 ತಿಂಗಳುಗಳ ವರೆಗೆ ...	,,	4-50	,,
12 ತಿಂಗಳು ಮಿಕ್ಕೆ 24 ತಿಂಗಳುಗಳ ವರೆಗೆ	,,	4-75	,,
24 ತಿಂಗಳು ಮಿಕ್ಕೆ 48 ತಿಂಗಳುಗಳ ವರೆಗೆ	,,	5-00	,,
48 ತಿಂಗಳುಗಳಿಗೆ ಮಿಕ್ಕೆ	,,	5-25	,,

ಸೇವಿಂಗ್ಸ್ ಬ್ಯಾಂಕ್ ಬಡ್ಡಿ ದರವನ್ನು

ಸಾ. ಸೇಕಡ 2½% ರಿಂದ 3¼%ಗೆ ಏರಿಸಲಾಗಿದೆ.

THE KARNATAKA BANK LIMITED.

ESTD. 1921 ಸ್ಥಾಪನೆ

NAVAYUGA
KANNADA WEEKLY,
UDIPI.

Founder:

Late Sri A. B. Shetty

Former Minister for Public Health, Govt. of Madras & Govt. of Mysore.

ನವಯುಗ

ರಾಷ್ಟ್ರೀಯ ವಾರಪತ್ರಿಕೆ

ಉಡುಪಿ

ಗೌರವ ಸಂಪಾದಕರು:
ಎಸ್. ಗೋಪೀಚಂದ ರಾವ್, ವಿದ್ವಾನ್.
ಬಿ. ಶಾಮರಾಯ ಶೆಟ್ಟಿ, ಬಿ. ಎ., ಎಲ್.ಟಿ.

ಸಂಚಾಲಕ ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ.

○

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-50
ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3-50

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

○

1962ನೇ ಜನವರಿ 26

ನವಯುಗದ

ಪ್ರಜಾರಾಜ್ಯ

ವಿಶೇಷಾಂಕ

ಎಂದಿಗಿಂತಲೂ ಮಿಗಿಲಾದ ರೀತಿಯಲ್ಲಿ ಸಚಿತ್ರವಾಗಿಯೂ ಆಕರ್ಷಣೀಯವಾಗಿಯೂ ಪ್ರಕಟವಾಗಲಿದೆ.

ಸಂಘ, ಸಂಸ್ಥೆಗಳ ಸಂಕ್ಷಿಪ್ತ ಪರಿಚಯವನ್ನು ಕೊಡಲಾಗುವುದು.

ಜಾಹೀರಾತು ದರಗಳಿಗೂ ಹೆಚ್ಚಿನ ವಿವರಗಳಿಗೂ ಬರೆಯಿರಿ.

ಮೆನೇಜರ್,
ನವಯುಗ, ಉಡುಪಿ

ಮುಂಬೈಯಿಂದ ಸುಮಾರು ೫೦ ಮೈಲು ದೂರದಲ್ಲಿರುವ ವಜ್ರೇಶ್ವರಿ ಎಂಬ ಹಳ್ಳಿಯು ತನ್ನ ಬಿಸಿ ನೀರಿನ ಬುಗ್ಗೆಗಳಿಗಾಗಿ ಬಹು ಪ್ರಸಿದ್ಧವಿದೆ. ಇಲ್ಲಿ ಅನೇಕ ಪ್ರೇಕ್ಷಣೀಯ ಮಂದಿರಗಳಿವೆ. ಬಾಜೀರಾವ್ ಪೇಶ್ವೆಯ ಸಹೋದರನಾದ ಚಿಮಣಾಜಿ ಅಪ್ಪಾನು ತನ್ನ ದಂಡಯಾತ್ರೆಯಲ್ಲಿ ಪೋರ್ಚುಗೀಸರನ್ನು ಸೋಲಿಸಿದ ಸವಿನೆನಪಿಗಾಗಿ ಇಲ್ಲಿ ಕಟ್ಟಿಸಿದ ದುರ್ಗಮ ದುರ್ಗದೇವತೆ ವಜ್ರೇಶ್ವರಿಯ ದೇವಾಲಯದಿಂದಾಗಿ ಈ ಊರು ವಜ್ರೇಶ್ವರಿಯೆಂದು ಪ್ರಸಿದ್ಧವಾಯ್ತು.

ಈ ಬಿಸಿ ನೀರಿನ ಬುಗ್ಗೆಗಳ ಕುರಿತು ಹಿಂದೂ ಪುರಾಣಗಳಲ್ಲಿ ಉಲ್ಲೇಖವಿದೆ. ವಿಶ್ವಾಮಿತ್ರನು ಈ ಸ್ಥಳವನ್ನು ತನ್ನ ಯಜ್ಞಕ್ಕಾಗಿ ಆರಿಸಿಕೊಂಡು, ಇಲ್ಲಿಯೇ ಸರಸ್ವತಿ, ಉಮಾ, ರಮಾರನ್ನು ಆಹ್ವಾನಿಸಿದನಂತೆ. ಇದರಿಂದ ಅಸಂತೋಷಗೊಂಡ ಇಂದ್ರನು ಯಜ್ಞಕ್ಕಾಗಿ ನೆರೆದ ಬ್ರಾಹ್ಮಣರಿಗೆ ವಿವಿಧ ರೋಗಗಳು ಬರುವಂತೆ ಮಾಯೆಯನ್ನು ರಚಿಸಿದಾಗ ಮಹರ್ಷಿಯು ತನ್ನ ಶಕ್ತಿಯಿಂದ ವಿವಿಧ ಗಿಡಮೂಲಿಕೆಗಳ ಶಕ್ತಿಯುಳ್ಳ ಪಾಪನಾಶಕ ರೋಗ ನಿವಾರಕವೆನಿಸಿದ ಬಿಸಿ ನೀರಿನ ಬುಗ್ಗೆಗಳನ್ನು ನಿರ್ಮಿಸಿದನಂತೆ. ಕೂಡಿದ ರೋಗ ಪೀಡಿತ ಬ್ರಾಹ್ಮಣರು ಈ ಬುಗ್ಗೆಗಳಲ್ಲಿ ಮಿಂದು ಪಾಪಮುಕ್ತರಾಗಿ ಆತ್ಮಶುದ್ಧತವಾಗಿ ಯಜ್ಞವನ್ನು ಮುಗಿಸಿದರಂತೆ.

ಈ ಬಿಸಿ ನೀರಿನ ಬುಗ್ಗೆಯು ಇಂದಿಗೂ ಭಾರತದ ಮೂಲೆ ಮೂಲೆಗಳಿಂದ ಸಾವಿರಾರು ಮಂದಿಯನ್ನು ಆಕರ್ಷಿಸುತ್ತದೆ. ಹಿಂದು ಬಗೆಯ ನಿದುಳಿನ ರೋಗವನ್ನು ನಿವಾರಿಸುವ ಅದ್ಭುತ ಶಕ್ತಿಯು ಈ ನೀರಿನಲ್ಲಿದೆ ಎಂದೂ ಹೇಳಲಾಗುತ್ತಿದೆ. ಅದಕ್ಕಿಂತಲೂ ಹೆಚ್ಚಾಗಿ ಈ ರಮಣೀಯ ಪೂರ್ವದೇಶವು ನಾಲ್ಕೂ ಕಡೆಗಳಿಂದಲೂ ಎದ್ದುನಿಂತ ಸರ್ವತ ಶ್ರೇಣಿಗಳಿಂದ, ಹಚ್ಚಹಸುರಾಗಿ ಕಂಗೊಳಿಸುವ ಗಿಡಮರಗಳಿಂದ, ನಡುವಿನಲ್ಲಿ ಬಳಕುತ್ತಾ ಮುನ್ನಡೆಯುತ್ತಿರುವ ಪವಿತ್ರ ತಾನ್ಯಾ ನದಿಯಿಂದ ಕೂಡಿ ರಮಣೀಯವಾಗಿದೆ, ಪ್ರೇಕ್ಷಣೀಯವಾಗಿದೆ.

ವಿಸ್ಮೃತಿಯ ಸುಳಿವಿನಲ್ಲಿ ಅಡಕವಾಗಿದ್ದ ಈ ಕೆರೆಯ ಹೆಳ್ಳಿ ಕಳೆದ ಕೆಲವೊಂದು ವರ್ಷಗಳಿಂದ ಪುನಃ ಪ್ರಸಿದ್ಧಿಯನ್ನು ಮರಳಿಗಳಿಸಿತು. ಅದಕ್ಕೆ ಕಾರಣ ಅಲ್ಲಿಗೆ ಆಗಮಿಸಿದ ಒಬ್ಬ ಸಿದ್ಧ; ಆ ಹಳ್ಳಿಯ ಮುನ್ನಡೆಯನ್ನು ಸುಗಮವಾಗಿರಿಸಿದ ಕೀರ್ತಿ ಆ ಯೋಗಿಗೆ ಸಲ್ಲಿಬೇಕು. ಕಾಡು ಜನರ ಆವಾಸವಾಗಿದ್ದ ಈ ತಾಣ ಯಾತ್ರಿಕ ವೃಂದದ ಕೂಡುವಿಕೆಯಿಂದ ತೀರ್ಥ ಕ್ಷೇತ್ರವಾಗಿದೆ.

ಸ್ವಾಮಿ ನಿತ್ಯಾನಂದ ಎಂಬ ಈ ಸಿದ್ಧಪುರುಷ ಪ್ರಥಮ ಬಾರಿ ಬಂದುದು ಸುಮಾರು ೧೯೩೮ರಲ್ಲಿ ಯಾರೂ ಇಲ್ಲಿ ನೆಲೆನಿಂತುದು ೧೯೩೨ರಲ್ಲಿ. ಜನರು ಈ ಯೋಗಿಯನ್ನು ಮೊತ್ತಮೊದಲು ಕಂಡುದು ವಜ್ರೇಶ್ವರಿ ದೇವಾಲಯದ ಬದಿಗಿರುವ ಗುಡ್ಡದಂಚಿನಲ್ಲಿ. ಒಂದು ಲಂಗೋಟಿಯನ್ನುಟ್ಟಿದ್ದ ಆ ವ್ಯಕ್ತಿ ಅನಂತರ ದೇವಾಲಯದ ಬದಿಗಿದ್ದ ಸಣ್ಣ ಕೋಣೆಯಲ್ಲಿ ನೆಲೆ ನಿಲ್ಲಲು ವ್ಯಾರಂಭಿಸಿದರೂ ವಸ್ತ್ರವನ್ನಪೇಕ್ಷಿಸಲೇ ಇಲ್ಲ.

ಕೆಲ ಸಮಯ ಈ ಯೋಗಿಯು ವಜ್ರೇಶ್ವರಿಯಿಂದ ತುಸು ದೂರವಿರುವ ಅ

ನಾಸ್ತಿಕ ಯುಗದ ಆಸ್ತಿಕ ಸ್ವರೂಪ

ಶ್ರೀ ಸ್ವಾಮೀ ನಿತ್ಯಾನಂದರು

ಶ್ರೀ ಎಸ್. ಎಂ. ಶೆಟ್ಟಿ, ಶಿಮುಂಜೆ ಪರಾರಿ.

ಕ್ರೋಲಿಯ ಬಿಸಿ ನೀರಿನ ಬುಗ್ಗೆಗಳ ಬಳಿಯೇ ವಾಸಿಸಿದ್ದರು. ಅನಂತರ ಅವರು ೧೯೩೫ರಲ್ಲಿ ವಜ್ರೇಶ್ವರಿಯ ಒಂದಂಶವಾಗಿರುವ ಗಣೇಶಪುರಿಯತ್ತ ಸರಿದರು. ಗಣೇಶಪುರಿಗಾಗಮಿಸಿದ ನೇಲೆ ಒಂದೆರಡು ಸಲ ಮಾತ್ರ ಆ ಸ್ಥಳವನ್ನು ಬಿಟ್ಟು ದೂರ ತೀರಗಾಡಲು ಹೋಗಿರಬಹುದು ಅಷ್ಟೇ. ಗಣೇಶಪುರಿಯೇ ಅವರ ಆಶ್ರಮವಾಯ್ತು. ಅತಿ ಸ್ವಲ್ಪ ಸಮಯದಲ್ಲಿಯೇ ಅವರು ಹಳ್ಳಿಗರ "ಬಾಬಾ" ಆಗಿ ಬಿಟ್ಟರು.

ಸುಮಾರು ೩೦ ವರ್ಷಗಳ ಕಾಲ ನೆಲೆನಿಂತ ಈ ಮಹಾ ಯೋಗಿಯು ಆ ಭೂಭಾಗವನ್ನೇ ಬದಲಿಸಿ ಬಿಟ್ಟರು. ದಿನಾಂಕ ಲನೇ ಅಗಸ್ಟ್ ೧೯೬೧ರಂದು ಈ ಮಹಾ ಯೋಗಿಯು ಮಹಾ ಸಮಾಧಿಯನ್ನು ಸ್ವೀಕರಿಸಿದರು.

ಈ ಯೋಗಿಯು ಅದೆಷ್ಟು ಪುಟ್ಟದರು ಬೆಳೆದರು ಎಂಬುದು ಯಾರಿಗೂ ತಿಳಿಯದು. ಈ ಕುರಿತು ನಾನು ನಿತ್ಯಾನಂದರ ಶಿಷ್ಯರಾದ ಶ್ರೀ ಶ್ರೀ ಮುಕ್ತಾನಂದರಲ್ಲಿ ವಿಚಾರಿಸಿದಾಗ—ಅದೇನೂ ತಿಳಿಯದು. ಕೆಲವರು ಆ ಕುರಿತು ಸಂಶೋಧನೆ ನಡೆಸಿರುವರಾದರೂ ಅದೆಲ್ಲಾ ಊಹೆ ಮಾತ್ರ. ಅದು ಮೊತ್ತಮೊದಲು ಅವರು ಕಂಡುಬಂದುದು ಕೊಯಂಬತ್ತೂರಿನ ಒಂದು ಜೀನಸಿನ ಅಂಗಡಿಯೆದುರು. ಅವರು ಆಗಿನ್ನೂ ಚಿಕ್ಕ ಬಾಲಕರಾಗಿದ್ದರು. ಅದೇ ಪೇಟೆಯಲ್ಲಿ ಈಶ್ವರ ಐಯ್ಯರ್ ಎಂಬೊಬ್ಬ ಅಂತರ್ ದೃಷ್ಟಿಯುಳ್ಳ ವಕೀಲರಿದ್ದರು. ಅವರು ಈ ಬಾಲಕನನ್ನು ತನ್ನೊಡನೆ ಕರೆದುಕೊಂಡು ಹೋಗಿ ತನ್ನ ಮಗನಂತೇ ಸಲಹಿದರು. ದತ್ತ ಪಿತೃವಿನ ಅವಸಾನದ ನಂತರ ಶ್ರೀ ಶ್ರೀಯವರು ಹಿಮಾಲಯದತ್ತ ನಡೆದು ಸುಮಾರು ೬ ವರ್ಷಪರ್ಯಂತ ತಪವನ್ನಾಚರಿಸಿದರು ಎಂದು ಜನರನ್ನುತ್ತಾರೆ. ಹುಟ್ಟು ಸಿದ್ಧನಾದುದರಿಂದ ಬಾಬಾ ಅವರಿಗೆ ಯಾರೊಬ್ಬರ ಮಾರ್ಗದರ್ಶನದ ಅವಶ್ಯಕತೆ ಇರಲಿಲ್ಲ ಎಂದನ್ನುತ್ತಾರೆ ಸ್ವಾಮಿ ಮುಕ್ತಾನಂದರು. ಅದೇನೇ ಇರಲಿ, ಸಾಧಕರಿಗೆ ಮಾರ್ಗದರ್ಶನ ನೀಡಬಲ್ಲ ರೀತಿಯಲ್ಲಿ ಅವರು ನಡೆದುಕೊಂಡರು ಎಂಬುದು ನಿರ್ವಿವಾದ.

ಹಿಮಾಲಯದಿಂದ ಹೊರಬಿದ್ದ ಅವರು ಬಂಗಾಲ, ಬರ್ಮಾ, ಮಲಯಾ, ಸಿಲೋನ್ ಮುಂತಾದ ಕಡೆ ಮಾತ್ರವಲ್ಲ ಭಾರತದ ಮೂಲೆ ಮೂಲೆಯನ್ನು ಸಂಚರಿಸಿದರು ಯಾಕೆಂದರೆ ಅವರು ಆಗಾಗ್ಯೆ ತನ್ನ ಭಕ್ತರಿಗೆ ಅಲ್ಲಿಲ್ಲಿಯ ಜನಜೀವನದ ಕುರಿತು ತಿಳಿಸುತ್ತಿದ್ದರು.

ಭಾರತದ ಪುಣ್ಯ ಕ್ಷೇತ್ರಗಳಲ್ಲಿ ಒಂದೆನಿಸಿರುವ ಮಧ್ವಾಚಾರ್ಯ ಪೀಠವೆಂದು ಪ್ರಸಿದ್ಧವಾಗಿರುವ ದ. ಕನ್ನಡ ಜಿಲ್ಲೆಯ ಉಡುಪಿಯಲ್ಲಿದ್ದರು ಅನಂತರ ಕಾಣಿಸಿಕೊಂಡರು. ಇಲ್ಲಿ ಅವರು ಒಂದು ಬ್ರಾಹ್ಮಣ ಕುಟುಂಬದೊಡನೆ ಕೆಲಸಮಯವಿದ್ದರು. ಯಾವಾಗಲೂ ಒಂದು ಚಾಪೆಯಲ್ಲಿ ಮಲಗಿಕೊಂಡು ತನ್ನಷ್ಟಕ್ಕೆ ಸಗುವುದನ್ನೂ ಮಾತಾಡುವುದನ್ನೂ ಊರವರು ಅದಕ್ಕಿಂತಲೂ ಹೆಚ್ಚಾಗಿ ಶಾಲಾಮಕ್ಕಳು ಆಶ್ಚರ್ಯದಿಂದ ನೋಡುತ್ತಾ ನಿಲ್ಲುತ್ತಿದ್ದರಂತೆ. ಅವರು ಕೆಲಪೊಮ್ಮೆ ಮಕ್ಕಳನ್ನೆಲ್ಲಾ ಒಟ್ಟುಕೂಡಿಸಿ ತಿಂಡಿ ಹಂಚುತಿದ್ದರಂತೆ.

ಇದೇ ಸಮಯದಲ್ಲಿ ಅವರು ಇದ್ದಕ್ಕಿದ್ದಂತೆಯೇ ಇದ್ದಲ್ಲಿಂದ ಅದೃಶ್ಯವಾಗಿ ನೂರಾರು ಮೈಲುಗಳಾಚೆ ಕಾಣಿಸಿಕೊಳ್ಳುತ್ತಿದ್ದರು. ಆ ವೇಗವು ಮನೋವೇಗವನ್ನೂ ಮೀರಿಸುವಂತಿತ್ತು. ಅವರು ಹೆಚ್ಚಾಗಿ ಬಸ್ಸು ಟ್ರೈನುಗಳಲ್ಲಿ ಪ್ರಯಾಣಮಾಡಿದ್ದೇ ಇಲ್ಲ. ಎಂದಾದರೊಮ್ಮೆ ಮಾಡಿದಾಗಲೂ ಟಿಕೇಟು ತೆಗೆಯುವ ಗೋಜಿಗೆ ಹೋಗುತ್ತಿರಲಿಲ್ಲ. ಯಾರಾದರೊಬ್ಬ ಟಿಕೆಟ್ ಕಲೆಕ್ಟರ್ ಬಂದು ಟಿಕೆಟ್ ಕೇಳಿದರೆ ತನ್ನ ಲಂಗೋಟಿಯಿಂದಲೇ ಸಾವಿರಾರು ಟಿಕೇಟುಗಳನ್ನು ತೆಗೆದು ಅವನಿಗೆ ಕೊಡುತ್ತಿದ್ದರಂತೆ.

ಇಂತಹ ನೂರಾರು ಪವಾಡಗಳನ್ನವರು ಈ ಸಮಯದಲ್ಲಿ ತೋರಿಸಿದರು. ಅದನ್ನು ಕಣ್ಣಾರೆ ಕಂಡವರು ಕೆಲವರು ಇಂದಿಗೂ ಅದನ್ನು ಹೇಳಿದಾಗ ಮೈ ನವಿರೇಳುತ್ತದೆ. ಇದೇ ಸಮಯದಲ್ಲಿ ಜನರು ಬೆಲ್ಲಕ್ಕೆ ಮುತ್ತುವ ಇರುವೆಗಳಂತೆ ಅವರನ್ನು ಸುತ್ತುಗಟ್ಟಿತೊಡಗಿದರು. ಕೆಲವರು ಅತೀವಾದ ಕೇಳಲು ಬಂದರೆ, ಕೆಲವರು ತಮ್ಮ ಸಂಕಷ್ಟಗಳ ನಿವಾರಣೋಪಾಯಕ್ಕಾಗಿಯೇ ಬರುತಿದ್ದರು. ಮರದ ಮೇಲೆಯೇ ಹೆಚ್ಚಾಗಿರುತ್ತಿದ್ದ ಅವರು ಅಲ್ಲಿಂದಲೇ ಎಲೆಗಳನ್ನೆಸೆಯುತ್ತಿದ್ದರು. ಅದನ್ನು ಭಕ್ತಿಯಿಂದ ಸ್ವೀಕರಿಸಿದ ಸಾವಿರಾರು ಜನರ ಕಷ್ಟಗಳು ಮಾಯವಾಗಿವೆ.

ಈ ಸಮಯದಲ್ಲಿ ಅವರ ನರನರಗಳಲ್ಲಿ ಶಕ್ತಿಯ ಆವಗಾಹನೆ ಆಗುತ್ತಿತ್ತು. ಶಕ್ತಿಯು-ಜಗತ್‌ಶಕ್ತಿ-ಅದು ಜಾಗತಿಕ ಆಶ್ಚರ್ಯಗಳನ್ನು ನಿರ್ಮಿಸುತ್ತಿರುತ್ತದೆ. ಅದು ಮುಂದುವರಿದಾಗಲೇ ಸಿದ್ಧಿ ಅಥವಾ ದೇವ ಪ್ರಮುಖನಾದ ಶಿವನನ್ನು ಪಡೆಯಲು ಸಾಧ್ಯ. ಇದು ಸಾಧಕ ತನದ ಪರಮಾವಧಿ ಯಾ ಬ್ರಹ್ಮತತ್ವ. ಮಾನವನು ಮಹಾನತೆಯ ಆಗರ; ಆದರೆ ಇವನಲ್ಲಿ ಶಕ್ತಿಯ ಪ್ರವಾಹವಾಗದೆ ಸಂಸ್ಕಾರವಾಗುವುದಿಲ್ಲ. ಸಂಸ್ಕಾರವೇ ದಿವ್ಯ, ಇದುವೇ ಮಹಾನ್ ಪವಾಡಗಳ ಮೂಲ. ಎಡೆ ಎಡೆಗಳಲ್ಲಿ ವ್ಯಾಪಿಸಿರುವ ಶಕ್ತಿಯ ಕೇಂದ್ರ.

ಪ್ರತಿಯೊಬ್ಬ ಸಾಧಕನ ಶರೀರವು ಕೆಲವು ಸಮಯದ ವರೆಗೆ ಶಕ್ತಿಯ ಆಟದ ಬಯಲಾಗಿರುತ್ತದೆ. ಹಾಗೆಯೇ ಕೆಲವೊಂದು ಸಮಯ ಅವನ ಶರೀರ ಅದ್ಭುತ ಪವಾಡದ ಸ್ಥಳವೆಂದೆನಿಸುತ್ತದೆ. ಹಾಗೂ ಇದು ಪ್ರತಿಯೊಬ್ಬ ಸಾಧಕನ ಜೀವನದಲ್ಲಿ ಒರುತ್ತದೆ ಆದರೆ ಸ್ವಾಮಿ, ನಿತ್ಯಾನಂದರ ಶರೀರದ ಮೇಲೆ ಶಕ್ತಿಯ ಅತ್ಯಧಿಕ ಪವಾಡವು ತುಂಬಿದ್ದಾಗ ಅವರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿದ್ದರು. ಅನಂತರ ಅವರು ಐತಿಹಾಸಿಕ ಪ್ರಸಿದ್ಧ ಸ್ಥಳ ಕಾಂಞಂಗಾಡಿನಿಂದ ನಾಲ್ಕು ಮೈಲು ದೂರವಿರುವ ಪಟ್ಟಡವಿ "ಗುರು ಬನ"ದಲ್ಲಿ ಸುಮಾರು ಎರಡು ವರ್ಷಕಾಲವಿದ್ದು ಜನ್ಮ ಸಿದ್ಧತ್ವವನ್ನು ಧರಿಸಿದರು.

ಬಾಬಾ ಅವರು ಈ ಗುರುಬನಕ್ಕೆ ಬರುವ ಮೊದಲು ಈ ಸ್ಥಳದಲ್ಲಿ ವಿಷಯುಕ್ತ ಹಾವುಗಳೂ, ಗಿಡಮರಗಳೂ ಬಹಳ ಇದ್ದುವಂತೆ, ಅನಂತರ ಹಾವುಗಳು ಅಲ್ಲಿಂದ ಹೊರಟು ಹೋದುವೆಂದೂ ಗಿಡಮರಗಳು ನಾಶವಾದುವೆಂದೂ ಹೇಳಲಾಗುತ್ತದೆ. ಗುರುಬನಕ್ಕೆ ಬಹಳ ಹತ್ತಿರದಲ್ಲಿಯೇ ಹೊಸದುರ್ಗ ಎಂಬ ಕೆಲ್ಲೆ ಇದೆ. ಟಿಪ್ಪು ಸುಲ್ತಾನನ ಕಾಲಕ್ಕಿಂತಲೂ ಹಿಂದಿನ ರಾಜರು ಅದನ್ನು ಕಟ್ಟಿಸಿದರಂತೆ ಆ ದರಲ್ಲಿ ಸೈನಿಕರು ಅಡಗಿ ಕುಳಿತುಕೊಳ್ಳುವಂತೆ ನಿರ್ಮಿಸಿದ ಹಲವಾರು ಗುಹೆಗಳಿವೆ.

ಶತ್ರುಗಳು ಕೋಟೆಯನ್ನು ಮುತ್ತಿದಾಗ ಸೈನಿಕರು ಅವರ ಮಂದಿನಿಂದ ಸೀದು ಗುಹೆಯನ್ನು ಸೇರುತ್ತಿದ್ದರಂತೆ. ಸ್ವಾಭಾವಿಕವಾಗಿಯೇ ಶತ್ರುಗಳು ಅವರನ್ನು ಹಿಂಬಾಲಿಸಿ ಗುಹೆಯ ಹತ್ತಿರ ಬಂ

(ಂಂನೇ ಪುಟ ನೋಡಿರಿ)

41 ವರ್ಷಗಳ ಭದ್ರ ಹಾಗೂ ಸಮರ್ಥ ಬೇಂಕಿಂಗ್ ಸೇವೆ.

ದಿ. ಪಾಂಗಾಳ ನಾಯಕ್ ಬೇಂಕ್ ಲಿ.

ನಮ್ಮ 3 ವರ್ಷ ವ್ಯಾದೆಯ ಕೇರ್ ಸರ್ಟಿಫಿಕೇಟುಗಳಲ್ಲಿ ರೇವಣಿ ಮಾಡಿರಿ: ಬಡ್ಡಿ ಸೇಕಡಾ 5ರಂತೆ: ರೂ. 87—00 3 ವರ್ಷಗಳ ಅಂತ್ಯದಲ್ಲಿ ಬಡ್ಡಿ ಕೂಡಿ ರೂ. 100--00 ಒದಗಿಸುವುದು.

ಕರೆ, ಚಕ್ಕ ವ್ಯಾದೆ, ನಿರಖು ರೇವಣಾತಿಗಳ ಮೇಲೆ ಆಕರ್ಷಣೀಯ ಶರ್ತಗಳು: ಬಡ್ಡಿ ಸೇಕಡಾ ೩½ರ ವರೆಗೆ.

ತಾ 1—4—1961ರಿಂದ ಸೇವಿಂಗ್ಸ್ ಬೇಂಕ್ ಖಾತೆಗಳ ಮೇಲೆ ಬಡ್ಡಿ ಸೇಕಡಾ 3ರಂತೆ.

THE PANGAL NAYAK BANK LTD.

Estd: 1920



ರವೀಂದ್ರವಾಣಿ— ಲೇಖಾಂಕ ೨೫ - ವಿಶ್ವಕವಿ ರವೀಂದ್ರನಾಥ ಟಾಗೋರ್

ಕರ್ಮ ಸಾಧನೆಯಿಂದ ಪರಮಾತ್ಮನ ಪ್ರಾಪ್ತಿ

ಅನುವಾದಕರು ಕೆ. ಎನ್. ಭಟ್, ಶಿರಾಡಿಸಾಲ್.

ಸೂಚನೆ

ತಾ ೯-೧೧-೬೧ರ ಸಂಚಿಕೆಯಲ್ಲಿ ೨೩ನೆಯ ಲೇಖಾಂಕ ಪ್ರಕಟವಾಗಿದೆ. ೨೪ನೆಯ ಲೇಖಾಂಕವು ತಾ ೨೮-೯-೬೧ರ ಸಂಚಿಕೆಯಲ್ಲಿ ಪ್ರಕಟವಾಗಿತ್ತು. ಈಗ ೨೫ನೆಯ ಲೇಖಾಂಕವನ್ನು ಓದಿರಿ.

ಆನಂದವು ಸ್ವಯಂ ನಿಯಮಗಳ ರೂಪದಿಂದ ತನ್ನನ್ನು ಪ್ರಕಟಿಸಿಕೊಳ್ಳುವುದೆಂದು ಬಲ್ಲವರು ಮಾತ್ರ ಸರಿಯಾಗಿ ನಿಯಮ ಪಾಲನೆ ಮಾಡುವವರಾಗಿರುತ್ತಾರೆ. ಇಂಥವರಿಗೆ ನಿಯಮಗಳ ಬಂದನವು ಶಿಥಿಲವೆಂದು ತೋರುವ ಬದಲು, ಸ್ವಾತಂತ್ರ್ಯದ ಸಾಕಾರ ಮೂರ್ತಿಯಂತೆ ತೋರುವುದು ಮುಕ್ತ ಆತ್ಮಗಳು ಬಂಧನಗಳನ್ನು ಆನಂದದಿಂದ ಸ್ವೀಕರಿಸುತ್ತವೆ ನಿಯಮಗಳ ಬಂಧನದಿಂದ ನುಸುಳಿಕೊಳ್ಳಲು ಅವರು ಎಂದೂ ಅಪೇಕ್ಷಿಸುವುದಿಲ್ಲ ಏಕೆಂದರೆ, ಇಂತಹ ಆತ್ಮಗಳು (ಆತ್ಮವನ್ನು ಹೊಂದಿದವರು) ಬಂಧನದಲ್ಲಿಯೇ ಅಸೀಮ ಶಕ್ತಿಯನ್ನು ಸಾಕ್ಷಾತ್ಕರಿಸಿಕೊಳ್ಳುವರು ಈ ಅಸೀಮ ಶಕ್ತಿಯ ಆನಂದವೇ ನಿರ್ಮಾಣವಾಗಿದೆ

ವಿಚಾರ ಮಾಡಿ ನೋಡಿದರೆ, ನಿಯಮ ರೂಪೀ ಬಂಧನದ ಅಭಾವವಿದ್ದಲ್ಲೆಲ್ಲ ಸ್ವಚ್ಛಂದತೆಯೇ ತುಂಬಿಕೊಂಡಿದ್ದು ಅಲ್ಲಿ ಆತ್ಮ ಸ್ವಾತಂತ್ರ್ಯವು ನಷ್ಟವಾಗಿ ಹೋಗುವುದು, ಮತ್ತು ಆತ್ಮವು ಅಸೀಮ ಆನಂದದಿಂದ ವಿಯುಕ್ತವಾಗುವುದು,— ಮತ್ತು ಪಾಪಯುಕ್ತ ಸಂತಾಪದ ಅನುಭವ ಹೊಂದುವುದು ಭೋಗಾವೇಕ್ಷೆಗಳಿಗೆ ಒಳಪಟ್ಟು ನಿಯಮಗಳನ್ನು ಉಲ್ಲಂಘಿಸಿದ ಆತ್ಮವು ಕೊನೆಗೆ ತಾಯಿಯ ತೊಡೆಯಿಂದ ಅಗಲಿದ ಮಗುವಿನಂತೆ, ಆ ಮಗು ಕಿರಿಚಿಕೊಳ್ಳುವಂತೆ,— "ನನ್ನನ್ನು ಹಿಂಸಿಸಬೇಡ ತಾಯಿ! ನನ್ನನ್ನು ನಿನ್ನ ತೋಳುಗಳಿಂದ ಹಿಡಿದುಕೊ! ನಿನ್ನ ನಿಯಮಗಳಿಂದ ನನ್ನನ್ನು ಬಂಧಿಸು! ನಿಯಮವೆಂಬ ಸಂಕಲೆಯ ಆನಂದವೆಂಬ ವಣಿಗಳೊಡನೆ, ನನ್ನನ್ನೂ ಜೊತೆಗೂಡಿಸು! ಮತ್ತು ನನ್ನನ್ನು ಕಟ್ಟಿಣದಂತಹ, ಬಿಗಿಯಾದ ಕಠೋರವಾದ ಹಿಡಿತದಲ್ಲಿಟ್ಟು, ಆ ಮೂಲಕ ಪಾಪ ಪೂರ್ಣವಾದ ಜ್ವಾಲೆಗಳಿಂದ ಉಳಿಸು!" ಎಂಬುದಾಗಿ ಆಕ್ರಂದನಗೈಯ್ಯುವುದು.

ಕೆಲವರು ನಿಯಮ ಬಂಧನ ಯುಕ್ತವಾದ ಆನಂದವನ್ನು ವಿರೋಧಿಸುತ್ತ ಅನಿಯಮಿತವಾದ ಉನ್ಮಾದವನ್ನೇ ಆನಂದವೆಂದು ಭಾವಿಸುತ್ತಾರೆ. ಇದೇ ರೀತಿ ಕೆಲವರು ಕರ್ಮಕರ್ತವ್ಯ ಸಹಜವಾದ ಸ್ವಾತಂತ್ರ್ಯವನ್ನು ವಿರೋಧಿಸುತ್ತಾರೆ ಅವರ ವಿಚಾರದಲ್ಲಿ "ಕರ್ಮ ಕ್ಷೇತ್ರವು ಪಾರ್ಥಿವ ಜಗತ್ತೇ ಆಗಿರುವುದು; ಮತ್ತು ಇದರಿಂದ ಆತ್ಮವನ್ನು ಕರ್ಮಕ್ಕಾಗಿ ಬಂಧನಕ್ಕೊಳಪಡಿಸಬೇಕಾಗುವುದು," ಎಂಬುದೇ ಅವರ ವಿಚಾರವಾಗಿದೆ ಆದರೆ ನಾವು ನೆನಪಿನಲ್ಲಿಡಬೇಕಾದ ಅಂಶ ಯಾವುದೆಂದರೆ, ಆನಂದವು ನಿಯಮಗಳ ರೂಪದಿಂದ ತನ್ನನ್ನು ಪ್ರಕಟಿಸಿಕೊಳ್ಳುವಂತೆ, ಆತ್ಮವು ತನ್ನನ್ನು ಕರ್ಮಗಳ ರೂಪದಿಂದ ಪ್ರಕಟಿಸಿಕೊಳ್ಳುವುದು ಆನಂದವು ಪ್ರಕಾಶಿತವಾಗಲು, ಅದು ನಿಯಮಗಳ ಮೇಲೆಯೇ ಹೊಂದಿಕೊಂಡಿರುವುದರಿಂದ, ತನ್ನದೇ ರೂಪದಿಂದ ಪ್ರಕಾಶಿತವಾಗಲಾರದು. ಆದುದರಿಂದಲೇ ಅದು ಬಾಹ್ಯ ಕೃತಿಗಳ ಕರ್ಮಗಳ ಮೂಲಕ ಪ್ರಕಟವಾಗುವುದು. ಆತ್ಮವು ತನ್ನ ಸ್ವರೂಪದ ಅಜ್ಞಾದನಗಳಿಂದ ಮುಕ್ತವಾಗುತ್ತಲಿರುವುದು ಅದು ಅದರ ಸ್ವಭಾವವಾಗಿರುವುದು. ಹೀಗೆ ಅಗುತ್ತಿಲ್ಲದಿರುತ್ತಿದ್ದರೆ, ಆತ್ಮವು ಸ್ವತಂತ್ರ ರೂಪದಿಂದ ಯಾವ ಕರ್ಮದಲ್ಲಿಯೂ ಪ್ರವೃತ್ತವಾಗಲಾರದು

ಮನುಷ್ಯನು ಎಷ್ಟರ ಮಟ್ಟಿಗೆ, ಕರ್ಮದಲ್ಲಿ ಪ್ರವೃತ್ತನಾಗುವನೋ, ಮತ್ತು ತನ್ನ ಪ್ರಸುಪ್ತ ತತ್ವಗಳಿಗೆ, ಸ್ಪಷ್ಟತೆಯ ರೂಪವನ್ನು ಕೊಡುವನೋ ಅಷ್ಟು ಮಾತ್ರ; ಆತನು ದೂರದ ಭವಿಷ್ಯವನ್ನು ಹತ್ತಿರಕ್ಕೆ ತರಬಲ್ಲನು ಈ ಸ್ಪಷ್ಟೀಕರಣದಲ್ಲಿ ಮನುಷ್ಯನು ತನ್ನ ರೂಪವನ್ನೇ ಹೆಚ್ಚು ಹೆಚ್ಚಾಗಿಸ್ಪಷ್ಟಪಡಿಸುತ್ತ ಹೊಸಹೊಸ ಹೆಜ್ಜೆಗಳಿಂದ ನಷ್ಟ ಪ್ರವೃತ್ತಿಗಳಲ್ಲಿ ಪ್ರಕಟಗೊಳ್ಳುತ್ತಾನೆ ಈ ಸಾಕ್ಷಾತ್ಕಾರವು ಆತನ-ಕ್ಷಯವಾದ ಸ್ವಾತಂತ್ರ್ಯವನ್ನು ಪೂರ್ಣಗೊಳಿಸುವುದು

ಅಂಧಕಾರ, ಅದೃಶ್ಯರೂಪ, ಅಥವಾ ಅಸ್ಪಷ್ಟತೆಯಲ್ಲಿ ಸ್ವಾತಂತ್ರ್ಯವು ಇರಲಾರದು ಅದೃಶ್ಯತೆಗಿಂತ ಹೆಚ್ಚು ಭಯಾನಕವಾದ ಬಂಧನವೆ ಮತ್ತಾವುದಿದೆ? ಈ ಭಯಂಕರವಾದ ಅದೃಶ್ಯತೆಯ ಬಂಧನದಿಂದ ಬಿಡುಗಡೆ ಹೊಂದುವುದಕ್ಕಾಗಿಯೇ, ಬೀಜವು ಸಂಘರ್ಷರೂಪೀ ಪ್ರಯತ್ನದಿಂದ ಅಂಕುರರೂಪವನ್ನು ಧಾರಣೆ ಮಾಡುವುದು. ಮತ್ತು ಮೊಗ್ಗುಬಿರಿದು ಪುಷ್ಪದ ರೂಪದಿಂದ ಅರಳುವುದು. ನಮ್ಮ ಮನಸ್ಸಿನ ವಿಚಾರಗಳೂ, ಇದೇ ರೀತಿ, ಅಂಧಕಾರದಿಂದ ಬಿಡುಗಡೆ ಹೊಂದುವುದಕ್ಕಾಗಿ ಯಾವುದಾದರೂ ಬಾಹ್ಯರೂಪದಿಂದ ಪ್ರಕಟಿಗೊಳ್ಳುವ—ಸಂದರ್ಭವನ್ನು ಹುಡುಕುತ್ತ ಇರುತ್ತವೆ ನಮ್ಮ ಆತ್ಮವೂ ಕೂಡ, ಅಸ್ಪಷ್ಟತೆಯಿಂದ ಮುಕ್ತಿಹೊಂದಿ ಪ್ರಕಾಶಕ್ಕೆ ಬರುವುದಕ್ಕಾಗಿ, ಹೊಸ ಹೊಸ ಕರ್ಮಕ್ಷೇತ್ರಗಳನ್ನು ನಿರ್ಮಿಸುವುದು ಮತ್ತು ನಿತ್ಯವೂ ಹೊಸ ಹೊಸ ಕಾರ್ಯಗಳಲ್ಲಿ ಪ್ರವೃತ್ತವಾಗುವುದು. ಹೀಗೆ ಪ್ರವೃತ್ತವಾಗುವ ಕಾರ್ಯಗಳು, ಪಾರ್ಥಿವ ಆವಶ್ಯಕತೆಗಳನ್ನು ಪೂರ್ತಿಗೊಳಿಸಲಿ, ಯಾ ಪೂರ್ತಿ ಗೊಳಿಸದಿರಲಿ, ಇದನ್ನು ಅದು ಲಕ್ಷಿಸುವುದಿಲ್ಲ ಆತ್ಮವು ಅದೇಕೆ ಹಾಗೆ ಮಾಡುವುದು? ಸ್ವಾತಂತ್ರ್ಯವನ್ನು ಅಪೇಕ್ಷಿಸುವುದರಿಂದ ಅದು ಹಾಗೆ ಮಾಡುತ್ತಿರುವುದು ಮತ್ತು ಅದು ತನ್ನನ್ನು ಪ್ರಕಟಿಸಿಕೊಳ್ಳಲು ಅಪೇಕ್ಷಿಸುವುದು, ಮತ್ತು ತನ್ನನ್ನು ತಾನೇ ಅನುಭವ ಮಾಡಿಕೊಳ್ಳಲು ಇಚ್ಛಿಸುವುದು.

ಮನುಷ್ಯನು ದೊಡ್ಡ ಅರಣ್ಯವನ್ನು ಕಡಿದು ನಾಶಮಾಡಿ ಬಳಿಕ ಅದನ್ನು ಉಪವನದ ರೂಪಕ್ಕೆ ಪರಿವರ್ತಿಸಬಲ್ಲನು. ಕಾಡಿನ ಘೋರವಾದ ಕುರೂಪ ಒಳಗೆ ಅಡಗಿದ್ದ ಸೌಂದರ್ಯವನ್ನು ಈ ಪರಿಯಿಂದ ಆತನು ಉಪವನದ ರೂಪದ ಮೂಲಕ ಮುಕ್ತಗೊಳಿಸಬಲ್ಲನು, ಮುಕ್ತಗೊಳಿಸುತ್ತಾನೆ ಅದರೆ ಇದು ಆತನ ಆತ್ಮದ ಸೌಂದರ್ಯವೇ ಆಗಿರುವುದು. ಈ ಆತ್ಮದ ಸೌಂದರ್ಯರೂಪವನ್ನು ಹೀಗೆ ಯಾವುದಾದರೂ, ಒಂದು ರೀತಿಯ ಬಾಹ್ಯ ರೂಪದಿಂದ ಬಿಡುಗಡೆ ಮಾಡದ ಹೊರತು, ತನ್ನ ಒಳಗೇ ಅದನ್ನು ಪ್ರಕಟಿಸಲು ಅದಕ್ಕೆ ಸಾಧ್ಯವಿಲ್ಲ ಇದೇ ರೀತಿ—ಅದು ಸಮಾಜದ ಉನ್ನತ್ತ ಪ್ರವೃತ್ತಿಗಳ ನಡುವೆ, ನ್ಯಾಯವೆಂಬ ನಿಯಮದ ಬೀಜಾರೋಪಣೆ ಮಾಡುವುದು ಈ ಪರಿಸ್ಥಿತಿಯಲ್ಲಿ ಆತ್ಮವು ಕಲ್ಯಾಣಕಾರಿ ಭಾವನೆಗಳನ್ನು ಕುತ್ಸಿತ ಪಾಪಮಯ ಬಂಧನಗಳಿಂದ ಮುಕ್ತಗೊಳಿಸುವುದೂ ಸಹ— ಮನುಷ್ಯನ ಆತ್ಮದ ಕಲ್ಯಾಣವೇ ಆಗಿರುವುದು. ಬಾಹ್ಯ ಜಗತ್ತಿನಲ್ಲಿ ಇವುಗಳನ್ನು ಪ್ರಕಟಿಸದ ಹೊರತು, ಆತ್ಮವು ಮುಕ್ತಿಯ ಇಚ್ಛೆಯನ್ನು ಅಪೇಕ್ಷಿಸಲಾರದು. ಈ ರೀತಿ ಮನುಷ್ಯನು ತನ್ನ-ಕಲ್ಯಾಣ, ಶಕ್ತಿ, ಸೌಂದರ್ಯ ಹಾಗೂ ಆತ್ಮವನ್ನು ಮುಕ್ತಗೊಳಿಸುವುದರಲ್ಲಿ ಪ್ರತಿ ಕ್ಷಣವೂ ಮಗ್ನನಾಗಿರುತ್ತಾನೆ ಈ ಬಂಧನ ವಿಮೋಚನೆಯ ಕಾರ್ಯದಲ್ಲಿ ಮನುಷ್ಯನು, ಎಷ್ಟು ಸಫಲನಾಗುತ್ತಾನೋ, ಆತನ ವ್ಯಕ್ತಿತ್ವವೂ ಆದಕ್ಕೆ ತಕ್ಕಂತೆ, ಅಷ್ಟಷ್ಟೂ ವಿಶಾಲವಾಗುವುದು.

ಉಪನಿಷತ್ತುಗಳು— "ಮನುಷ್ಯನು ಕರ್ಮನಿರತನಾಗಿದ್ದುಕೊಂಡ, ಒಂದು ನೂರು ವರುಷ ಬಾಳುವ ಇಚ್ಛೆಯುಳ್ಳವನಾಗಬೇಕು," ಎಂದು ಹೇಳುತ್ತಿವೆ. ಆತ್ಮಾನಂದದ ಅನುಭೂತಿಯನ್ನು ಸಾಕ್ಷಾತ್ಕರಿಸಿಕೊಂಡ ಋಷಿವರರೇ ಈ ವಚನವನ್ನು ಹೇಳಿರುವರು ಆತ್ಮ ಬೋಧವನು ಹೊಂದಿದ ಮನುಷ್ಯರು ಕರ್ಮ ಬಂಧನವನ್ನು ಅಭಿಶಾಪವೆಂದು ಎಂದೂ ತಿಳಿಯಲಾರರು ಇವರು ಫಲ ಬಯಸುವ ಮೊದಲೇ ಉದುರಿ ಬೀಳುವ ನಿರ್ಬಲವಾದ ಮೊಗ್ಗಿನಂತೆ ಇರುವುದಿಲ್ಲ, ಹಾಗೂ ಕರ್ಮಸನ್ಯಾಸದ ಚರ್ಚೆಯನ್ನಿಸರು ಮಾಡಲಾರರು ಈ ಆತ್ಮ ಜ್ಞಾನಿಗಳು ಜೀವನದ ಕಾರ್ಯಗಳು ಸಫಲವಾಗುವ ತನಕವೂ ಕಾರ್ಯತತ್ಪರರಾಗಿಯೇ ಇರುತ್ತಾರೆ ಅವರು ತಮ್ಮ ಕಾರ್ಯಗಳಲ್ಲಿಯೇ ಮಗ್ನರಾಗಿದ್ದುಕೊಂಡು, ಅದಕ್ಕಾಗಿ ಪೂರ್ಣ ಶಕ್ತಿಯನ್ನು ವ್ಯಯಿಸುತ್ತ ತಮ್ಮ ಕಾರ್ಯ ಸಿದ್ಧಿಯಲ್ಲಿಯೇ ಆನಂದದ ಅನುಭವವನ್ನು ಹೊಂದುತ್ತಾರೆ. ಕಷ್ಟದುಃಖಗಳ ಪ್ರಭಾವದಿಂದಲೂ ಸಹ ಅವರು ವಿಚಲಿತರಾಗಲಾರರು, ಮತ್ತು ಅವರ ಹೃದಯವು ಭಾರವಾಗಿ ಅವರನ್ನೆಂದೂ ನಿಷ್ಕ್ರಿಯರನ್ನಾಗಿ ಮಾಡಲಾರದು ಜೀವನ

(೧೯ ಪುಟ ನೋಡಿರಿ)

ನಿಮ್ಮ
ಕನಸುಗಳಿಗೆ
ಸಹಾಯ ಅವಶ್ಯಕ



ಉಳಿತಾಯ—ಕ್ರಮವಾದ
ಉಳಿತಾಯವೇ ಕನಸನ್ನು
ನನಸಾಗಿ ಪರಿವರ್ತಿಸಲು
ಒಳಿತಾದ ಮಾರ್ಗ

ನಿಮ್ಮ ಹಣವನ್ನು ಕೆನರಾ ಬ್ಯಾಂಕಿನಲ್ಲಿ ಉಳಿಸಿ ಫಿಕ್ಸೆಡ್ ಡಿಪಾಸಿಟ್ ಮೇಲೆ ಶೇ. 5ರ ವರೆಗೆ ಸೇವಿಂಗ್ಸ್ ಖಾತೆಯ ಮೇಲೆ ಶೇ. 3ರ ವರೆಗೆ

ಬಡ್ಡಿ ಸಂಪಾದಿಸಿರಿ

ಕ್ಯಾಷ್ ಸರ್ಟಿಫಿಕೇಟ್ ಮತ್ತು ಕ್ಯುಮುಲೇಟಿವ್ ಡಿಪಾಜಿಟ್‌ಗಳ ಮೇಲೆ ಆಕರ್ಷಕ ಬಡ್ಡಿ ಸಂಪಾದಿಸಿರಿ

ನಿಮ್ಮ ಕನಸುಗಳು ನನಸಾಗಲು ನಮ್ಮ ಸಹಾಯವನ್ನು ಪಡೆಯಿರಿ.

ಕೆನರಾ ಬ್ಯಾಂಕ್ ಲಿಮಿಟೆಡ್

(ಸ್ಥಾಪನೆ 1906)

— ನಿಮ್ಮ ಸೇವೆಯಲ್ಲಿ 115ಕ್ಕೂ ಮೀರಿ ಶಾಖೆಗಳು —

ಸಮಗ್ರತೆಯ ಭಾವನೆಗೊಂದು ಆಹ್ವಾನ

ಉತ್ತರದ ಗಡಿಯಲ್ಲಿ ಮರಳಿ ಆಕ್ರಮಣ

ಪ್ರಧಾನ ಮಂತ್ರಿ ನೆಹರು ತಮ್ಮ ಇತಿಹಾಸ ಪ್ರಸಿದ್ಧ ವಿದೇಶಯಾತ್ರೆಯನ್ನು ಮುಗಿಸಿಕೊಂಡು ಸ್ವದೇಶಕ್ಕೆ ಬಂದವರೇ ಇಲ್ಲಿನ ಲೋಕ ಸಭೆಯಲ್ಲಿ ಮಹತ್ವದ ವಿಷಯವೊಂದನ್ನು ಪ್ರಸ್ತಾಪಿಸಿದರು. ಈಗಾಗಲೇ ಚೀನವು ಭಾರತದ ಉತ್ತರ ಸೀಮೆಯಲ್ಲಿ ಮಾಡಿದ ಆಕ್ರಮಣಗಳಲ್ಲದೆ ಮತ್ತೂ ಒಂಬತ್ತು ಕಡೆಗಳಲ್ಲಿ ಹೊಸತಾಗಿ ಆಕ್ರಮಣ ಮಾಡಿದೆ ಯೆಂಬುದನ್ನವರು ಹೊರಗೆಡಹಿದರು. ಟಿಬೇಟು ಮತ್ತು ಭಾರತದ ಗಡಿಯಲ್ಲಿ ನಡೆದ ಈ ಆಕ್ರಮಣಗಳಲ್ಲಿ ಆರು ಪೂರ್ವ ಭಾಗದಲ್ಲಿಯೂ ಮೂರು ಮಧ್ಯ ಭಾಗದಲ್ಲಿಯೂ ಆಗಿವೆ ಈ ಸಂಬಂಧದಲ್ಲಿ ಭಾರತ ಸರಕಾರವು ತನ್ನ ತೀವ್ರ ಪ್ರತಿಭಟನಾ ಪತ್ರವನ್ನು ಕಳಿಸಿದೆಯೆಂದೂ ಗಡಿ ಕಾವಲನ್ನು ಮತ್ತೂ ಬಲಪಡಿಸಲಾಗಿದೆಯೆಂದೂ ಪ್ರಧಾನಿ ನೆಹರುರವರು ಲೋಕ ಸಭೆಯಲ್ಲಿ ತಿಳಿಸಿ, ಭಾರತದ ಭೂಭಾಗವನ್ನು ಚೀನವು ಅಂಗುಲ ದಷ್ಟನ್ನಾದರೂ ಆಕ್ರಮಿಸದಂತೆ ಎಚ್ಚರಿಕೆ ವಹಿಸುವುದಾಗಿ ಭರವಸೆಯಿತ್ತರು.

ಭಾರತದ ಗಡಿಯನ್ನು ಮೀರಿ ಭಾರತೀಯ ಪ್ರದೇಶದಲ್ಲಿ ಆಕ್ರಮಣ ನಡೆಸಿದ ಚೀನವು ತಾನು ಪಾದಾರ್ಪಣ ಮಾಡಿದಲ್ಲಿ ಒಳ ರಸ್ತೆಗಳನ್ನು ಮಾಡಿದೆ. ಚೀನೀಯ ಸೈನಿಕರು ಒಳಗೆ ನುಗ್ಗಿದ್ದು, ಅವರು ಯಾವ ಪ್ರತಿಭಟನೆಯನ್ನೂ ಎದುರಿಸದೆ ಹೋದರೆ, ಮತ್ತೂ ಭಾರತದ ಭೂಭಾಗದಲ್ಲಿ ಮುಂದುವರಿಯುವುದು ಖಂಡಿತ. ೧೯೫೬ ರಲ್ಲಿ ಚೀನವು ಸಿದ್ಧಪಡಿಸಿದ ನಕಾಶೆಯಲ್ಲಿ ಭಾರತದ ಕೆಲವೊಂದು ಭಾಗ ಸೇರಿದ್ದು, ಅವುಗಳಲ್ಲಿ ಕಳೆದ ವರ್ಷ ಆಕ್ರಮಣ ನಡೆದಿತ್ತು ಆದರೆ, ಈ ವರ್ಷ ಇಂತಹ ಆಕ್ರಮಣಗಳು ಮತ್ತೂ ಮುಂದುವರಿದಿರುವುದರಿಂದ, ತನ್ನ ಕೃತ್ಯವನ್ನು ಸಮರ್ಥಿಸಿಕೊಳ್ಳಲು ಚೀನವು ನೆಪ್ಪೆಯನ್ನು ಮರಳಿ ತಿದ್ದುಪಡಿ ಮಾಡಲೂ ಬಹುದು. ಆದರೆ, ಭಾರತ ಸರಕಾರವು ಅದರ ೧೯೫೬ರ ನಕ್ಷೆಯನ್ನು ಸರಿಯೆಂದು ಒಪ್ಪಿಲ್ಲ ಲಡಕದ ಪ್ರದೇಶದಲ್ಲಿ ಮಾತ್ರ ಈ ಹೊಸ ಆಕ್ರಮಣಗಳು ನಡೆದಿವೆಯಲ್ಲದೆ ನೇಫಾ ಪ್ರದೇಶದಲ್ಲಿಲ್ಲವೆಂದು ನೆಹರು ಸ್ಪಷ್ಟಪಡಿಸಿದ್ದಾರೆ. ಆದರೆ, ನಾವು ಹಿಂದಿನ ಅನುಭವಗಳಿಂದ ಪಾಠ ಕಲಿಯಬಹುದಾದರೆ, ಈಗ ಕಳಿಸಿದ ಪ್ರತಿಭಟನಾ ಪತ್ರವು ಯಾವ ಪರಿಣಾಮವನ್ನೂ ಮಾಡಲಾರದೆಂದೇ ಹೇಳಬೇಕಾಗುತ್ತದೆ.

ಭಾರತದೊಡನೆ ಸ್ನೇಹ ಸಂಬಂಧವನ್ನೇ ಇರಿಸಿಕೊಳ್ಳಬೇಕೆನ್ನುವ ಚೀನದ ವಿಚಿತ್ರವರ್ತನೆಯು ಅರ್ಥಹೀನವಾದುದು ತಾನು ಮೊದಲು ಆಕ್ರಮಣಕಾರಿ ಆಕ್ರಮಿಸಿದ್ದ ೧೫,೦೦೦ ಚದರ ಮೈಲು ಭೂಭಾಗದಿಂದ ತನ್ನ ಸೈನಿಕ ರಾಶಿಯನ್ನು ಕೀಳದೆ ಮತ್ತೂ ಮುಂದುವರಿಸುವ ಆಕ್ರಮಣಪ್ರವೃತ್ತಿಯಿಂದ ಚೀನದ ಕಡೆಗೆ ದುರಭಿಪ್ರಾಯವು ಸ್ವಾಭಾವಿಕವಾಗಿಯೇ ಹುಟ್ಟುವುದು. ಸಹಅಸ್ತಿತ್ವದ ಪಂಚಶೀಲ ತತ್ವವನ್ನು ಉಚ್ಚರಿಸುತಿದ್ದಂತೆಯೇ ತನ್ನ ಕುಟಿಲ ಕಾರ್ಯಸ್ಥಾನವನ್ನು ಸಾಧಿಸಿದ ಕೆಂಪು ಚೀನವು ಭಾರತೀಯರ ವಿಶ್ವಾಸವನ್ನು ಇಟ್ಟುಕೊಳ್ಳುವುದು ಸರ್ವಥಾ ಅಸಾಧ್ಯ. ತನ್ನ ದಾರಿಯನ್ನು ಸುಗಮಗೊಳಿಸಲು ಭಾರತವು ಸೌಹಾರ್ದವಾತಾವರಣದಲ್ಲಿಯೇ ಸಮಸ್ಯೆ ಬಗೆ ಹರಿಸುವಲ್ಲಿ ಆಗ್ರಹತೊಟ್ಟಿಕೊಂಡಿದೆ. ಭಾರತವನ್ನು ನುಣ್ಣನೆಯ ಮಾತುಗಾರಿಕೆಯಿಂದ ಮರುಳುಗೊಳಿಸಬಹುದೆಂಬ ಚೀನದ ಹವಣಿಕೆ ಅವ್ಯವಹಾರ್ಯವಾದುದು. ಭಾರತದ ಮೇಲೆ ಇಂತಹ ಆಕ್ರಮಾಚರಣೆಸಗುವುದನ್ನು ಭಾರತೀಯರು ಕೊನೆಯ ವರೆಗೂ ಸಹಿಸಿ ಕೂತಿಕೊಂಡಿರುವುದು ಸಾಧ್ಯವಿಲ್ಲ. ಈ ಮೊದಲೂ ಈಗಲೂಹೆ ನಮ್ಮ ಪ್ರಧಾನಿ ಹಾಗೂ ಸಂರಕ್ಷಣಾ ಸಚಿವರು ಮುಂದೊಂದಂಗುಲವೂ ಆಕ್ರಮಣಕ್ಕೆ ಗುರಿಯಾಗದಂತೆ ಎಚ್ಚರಿಕೆ ವಹಿಸುವುದಾಗಿ ಉದ್ಘೋಷಿಸಿದರೇ ನೋ ನಿಜ. ಈ ಭರವಸೆಯು ಎಷ್ಟರ ಮಟ್ಟಿಗೆ ಕಾರ್ಯಾನ್ವಿತವಾಗುತ್ತದೆಯೆಂದು ನಂಬುವುದು ಪೂರ್ವಾನುಭವಗಳಿಂದ ಕಷ್ಟವಾದರೂ ಈ ಸಂಬಂಧದಲ್ಲಿ ನಮ್ಮ ಸರಕಾರಕ್ಕಿರುವ ಕಳಕಳಿಯು ಅವಿವಾಗುವುದು ಮಾತ್ರ ಖಂಡಿತ. ಸರಕಾರವು ಗಡಿಯ ಪ್ರದೇಶವನ್ನು ಎಚ್ಚರಿಕೆಯಿಂದ ಸಂರಕ್ಷಿಸಲು ಸೂಕ್ತ ಕಾರ್ಯವೆಸಗಬೆಯೆಂಬ ಪ್ರಧಾನರ ವಚನದಿಂದಲೇ ನಾವು ಸಮಾಧಾನಪಟ್ಟುಕೊಳ್ಳಬೇಕು. ಈ ಸಂಬಂಧದ ವಿವರಗಳನ್ನು ಗೋಪ್ಯವಾಗಿಟ್ಟುಕೊಳ್ಳಬೇಕಾದುದು ಅತ್ಯವಶ್ಯವೆಂಬುದರಿಂದ ಇಷ್ಟರಿಂದಲೇ ತೃಪ್ತರಾಗಬೇಕು

ಉತ್ತರ ಗಡಿಯಲ್ಲಿ ಚೀನೀ ಸೇನೆಯ ಆಕ್ರಮಣ ನಡೆದ ವಾರ್ತೆ ಹರಡಿದಂದಿನಿಂದಲೂ ಭಾರತದಲ್ಲಿ ಚೀನದ ಬಗ್ಗೆ ಇಟ್ಟಿದ್ದ ಸದಭಿಪ್ರಾಯವು ದುರಭಿಪ್ರಾಯವಾಗಿ ರೂಪಾಂತರಗೊಳ್ಳ ತೊಡಗಿದೆ. ಆಕ್ರಮಣಕಾರರನ್ನು ದೇಶದಿಂದ ಹೊರಗಟ್ಟಲು ಭಾರತಕ್ಕೆ ಭಾರತವೇ ಒಂದಾಗುವುದೆಂಬುದು ಸುವಿದಿತವಿದೆ. ತಾವು ಮಾಡುತ್ತಿರುವ ಅತ್ಯಾಚಾರಗಳ ಮೇಲೆ ಮಾಯದ ಬಲೆ ಬೀಸಲೆಂಬಂತೆ ಚೀನೀಯ ರಾಜಕೀಯ ವಲಯಗಳು ಪ್ರಧಾನಿ

(ಅನಂತರ ಪುಟ ನೋಡಿರಿ)

ಪುತ್ತೂರು ಡಿ. ಮುನ್ಸ೿ ಕೋರ್ಟಿನಲ್ಲಿ

S. C. No. 73/1961

ಕೃಷ್ಣ ಭಟ್ ——ವಾದಿ.

ಮತ್ತು

ಬೀ. ಪಾತುಮ್ಮ ಕೂಡಾ ——ಪ್ರತಿವಾದಿರು.

ಪ್ರತಿವಾದಿರು:

8 ಕೈಜಮ್ಮ, ಸೇರಾಜಿ ಯಿದ್ದು ಕುಂಞಾಬ್ಬಾರಿ ಹೆಂಡ್ತಿ ಬಂಟ್ವಾಳ ತಾಲೂಕು, ಪೆರುವಾಯಿ ಗ್ರಾಮದಲ್ಲಿ.

10. ಬೀಬಿ, ತಲಕಳ ಅಮ್ಮದ್ ಕುಟ್ಟಿ ಬ್ಯಾರಿ ಹೆಂಡ್ತಿ, ಕಾಸರಗೋಡು ತಾಲೂಕು ತಲಂಗಳ ಗ್ರಾಮದಲ್ಲಿ ——ಯವರಿಗೆ.

ನಿಮ್ಮ ತಂದೆ ಪ್ರಕೃತ ವ್ಯತಿಕಟ್ಟಿರುವ ಮುಮ್ಮದ ಬ್ಯಾರಿಗಳು ಸದಿ ವಾದಿಗೆ ಬರೆಕೊಟ್ಟ ದಿ. ಪ್ರೋ. ನೋಟಿನ ಅಸ್ಲು ಬಡ್ಡಿ ಹಣಗಳ ವಸೂಲಿ ಬಗ್ಗೆ ಸದ್ರಿ ವಾದಿಯು ನಿಮ್ಮ ಹೆಸರಿನ ಮೇಲೆ ಮಾಡಿದ ಮೇಲಿನ ದಾವೆಯು ನಿಮ್ಮ ಹಾಜ್ರಾತಿಗೆ ತಾ. 7-11-1961ಕ್ಕೆ ಕೈಗೆತ್ತಿಕೊಳ್ಳುತ್ತದೆ. ನಿಮಗೇನಾದರೂ ಆಕ್ಷೇಪಣೆಯಿದ್ದರೆ ಆ ದಿವಸ ಬೆಳಿಗ್ಗೆ ಗಂಟೆ 11ಕ್ಕೆ ಮೇಲ್ಕಂಡ ಕೋರ್ಟು ಮುಂದೆ ಹಾಜ್ರಾಗಿ ಉತ್ತರಿಸಿಕೊಳ್ಳತಕ್ಕದ್ದಿಂತಲೂ, ತಪ್ಪಿದರೆ ಏಕಪಕ್ಷವಾಗಿ ತೀರ್ಪೂನಿಸಲಾಗುವುದೆಂತಲೂ ಕೋರ್ಟು ಹುಕುಂ ಪ್ರಕಾರ ನಿಮಗೆ ಈ ಮೂಲಕ ತಿಳಿಸೋಣಾಗ್ಯದೆ.

(Sd.) K. T. Bhat,
Advocate for plff.

ಪುತ್ತೂರು, 28—11—1961

ಬಡ ಕ್ಷಯ ರೋಗಿಗಳ ಕುಟುಂಬ ರಕ್ಷಣೆ.

ಕುಟುಂಬ ರಕ್ಷಕರಿಗೆ ಕ್ಷಯ ರೋಗ ತಗಲಿದಾಗ ಅವರ ಕುಟುಂಬದ ದುರವಸ್ಥೆಯನ್ನು ಕಡಿಮೆ ಮಾಡುವುದಕ್ಕಾಗಿ ಏನಾದರೂ ಮಾಡಬೇಕು. ಸಾಮಾನ್ಯವಾಗಿ ಅಂತಹ ರೋಗಿಗಳು ವೈದ್ಯಕೀಯ ಸಲಹೆಗೆ ವಿರುದ್ಧವಾಗಿ ತಮ್ಮನ್ನು ಆವಲಂಬಿಸಿ ಕೊಂಡಿರುವವರ ಪೋಷಣೆಗಾಗಿ ಬಿಡುಗಡೆ ಹೊಂದಲ್ಪಡುತ್ತಾರೆ. ಅವರು ಹೊರಬಂದು ಶ್ರಮ ವಹಿಸಿ, ಕೆಲಸಮಾಡಿ, ಕರಗಿ, ಸೊರಗಿ, ಸೋಂಕಣೆಯನ್ನು ಹಬ್ಬಿಸಿ ಮತ್ತೂ ಕನಿಷ್ಟ ಪರಿಸ್ಥಿತಿಗೆ ಒಳಗಾಗುತ್ತಾರೆ. ಅಂತಹ ದುರದೃಷ್ಟವನ್ನು ಕಡೆಯುವುದಕ್ಕಾಗಿ ಸಮಾಜವು ಜಾಗ್ರತೆ ವಹಿಸಬೇಕು ಮತ್ತು ಈ ಕುಟುಂಬಗಳಿಗೆ ಸಹಾಯ ನೀಡಬೇಕು ಬೇರೆ ಇಡುವ ಪ್ರಯತ್ನ ಒಂದೇ ಸಾಲದು. ಆದುದರಿಂದ ಸ್ವಯಂ ಸ್ಫೂರ್ತಿಯಿಂದ ಮುಂದೆ ಬರುವ ಸಂಸ್ಥೆಗಳ ಮೂಲಕ ಸಹಕಾರಯುತ ಪ್ರಯತ್ನ ಮಾಡಬೇಕಾಗಿದೆ ನಿಮ್ಮ ಟಿ ಬಿ ಸಂಸ್ಥೆಗಳು ಸದಾ ಅವರಿಗೆ ಸಹಾಯ ಮಾಡಲು ಇಚ್ಛಿಸುತ್ತವೆ. ಆದರೆ ಅವುಗಳಿಗೆ ನಿಧಿ ಬೇಕಾಗಿದೆ. ಟಿ ಬಿ. ಮೊಹರುಗಳನ್ನು ಪಡೆಕೊಂಡು ನಿಮ್ಮ ಟಿ ಬಿ. ಸಂಸ್ಥೆಗಳಿಗೆ ಉದಾರ ಸಹಾಯ ಮಾಡಿರಿ.

ಒಂದು ಟಿ. ಬಿ. ಮೊಹರಿನ ಬೆಲೆ ಬರೇ ಹತ್ತು ನಯೆ ಪೈಸೆ ಮಾತ್ರ

ಇವುಗಳು ಮಾರಾಟಕ್ಕೆ ಸಿಗುವ ಸ್ಥಳಗಳು:—

(1) ಗೌರವ ಕಾರ್ಯದರ್ಶಿ, ಮೈಸೂರು ರಾಜ್ಯ ಕ್ಷಯ ರೋಗ ಸಮಿತಿ, ಗವರ್ನಮೆಂಟ್ ಟಿ. ಬಿ ಸೆನಿಟೋರಿಯಂ, ಓಲ್ಡ್ ಮದ್ರಾಸ್ ರೋಡ್, ಬೆಂಗಳೂರು-8: (2) ಮಹಿಳಾ ಮಂಡಲ ಮತ್ತು ಶ್ರೀ ಬಸವೇಶ್ವರ ಜೇನ್ಸ್ಸಾಸ, ಪಂಚ್ ಕವಿ ಟಿ, ಕಲ್ಕಾಣಿ ಕ್ರೈಸ್ ಮರ್ಚಂಟ್ಸ್ ಎಸೋಸಿಯೇಶನ್ ಮತ್ತು ಭಾರತ ಸಮಾಜ, ಬೀದರ. (3) ಫೈಪಜ್ಜ, ಸೆಲ್ಫೋರ್ ಸೆಂಟರ್, ಶ್ರೀ ಲಕ್ಷ್ಮೀನಾರಾಯಣ ಟೆಂಪಲ್ ಕಂಪೌಂಡು, ಬಸವನಗುಡಿ. (4) ಗೌರವ ಕಾರ್ಯದರ್ಶಿ ದ. ಕ. ಜಿಲ್ಲಾ ಕ್ಷಯ ರೋಗ ಸಮಿತಿ, ಗವರ್ನಮೆಂಟ್ ವೆನ್ಲಾಕ್ ಹಾಸ್ಪಿಟಲ್, ಮಂಗಳೂರು (5) ಶ್ರೀ ಎಲ್. ಎಸ್ ಕಾಮತ್, ಆರ್ಗನೈಜರ್, ಭಾರತ ಸೇವಕ ಸಮಾಜ, ಕೆನರಾ ಕಾಲೇಜು, ಕುಮಟಾ. (6) ಅಧ್ಯಕ್ಷರ ಗಳು—ಮಹಿಳಾ ಸಮಾಜ, ಕಾರ್ವಾರ, ಅಂಕೋಲಾ, ಕುಮಟಾ, ಗೋಕರ್ಣ, ಹೊನ್ನಾವರ, ಸಿದ್ದಾಪುರ, ಹಳಿಯಾಳ, ಸೂಪ ಮತ್ತು ಯೆಲ್ಲಾಪುರ

ಹನ್ನೆರಡನೇ ಕ್ಷಯ ರೋಗ ಮೊಹರು ಮಾರಾಟ ಚಳವಳಿ
(ದಿ ಟ್ಯೂಬರ್‌ಕ್ಯೂಲೋಸಿಸ್ ಎಸೋಸಿಯೇಶನ್ ಆಫ ಇಂಡಿಯಾ, ನ್ಯೂ ಢಿಲ್ಲಿ ಇವರಿಂದ ಪ್ರಾರಂಭಿಸಲ್ಪಟ್ಟಿದ್ದು)

ಈ ಸ್ಥಳದ ದಾತೃಗಳು:—

INDIAN ALUMINIUM CO. LTD., CALCUTTA.

ನವಯುಗ

ವರುಷ ೪೧	ಉಡುಪಿ ೩೦-೧೧-೬೧	ವಾರ ೧೨

ವಿಧಾನ ಸಭೆಗೆ ವಿದಾಯ

ಮೂರನೆಯ ಬಾರಿಗೆ ಸಾರ್ವತ್ರಿಕ ಚುನಾವಣೆಗಳು ನಡೆಯುವ ದಿನಗಳು ಸಮೀಪಿಸುತ್ತಿರುವಂತೆ ವಿವಿಧ ರಾಜ್ಯಗಳ ವಿಧಾನ ಸಭೆಗಳ ಅಂತಿಮ ಅಧಿವೇಶನಗಳೂ ನಡೆಯುತ್ತಿವೆ. ಕರ್ನಾಟಕದ ವಿಧಾನ ಸಭೆಯು ಅನಿರ್ಧಿಷ್ಟಾವಧಿಯ ವರೆಗೆ ಮುಂದುವರಿಯುವುದಕ್ಕೆ ಮೊದಲು ಉಪಸ್ಥಿತ ಸದಸ್ಯರ ಕೊನೆಯ ಅಧಿವೇಶನವಿದಾದುದರಿಂದ ಐದು ವರ್ಷಗಳ ಸುಂದರಾವಲೋಕನವನ್ನು ಮಾಡಿತು. ಇದು ಉಚಿತವಾದುದೇ ಎಂದು ಹೇಳಬೇಕು. ಈ ಐದು ವರ್ಷಗಳ ಅವಧಿಯಲ್ಲಿ ವಿಧಾನ ಸಭೆಯು ೩೮೫ ದಿನಗಳಷ್ಟು ಕಾಲ ಸಭೆ ಸೇರಿತ್ತು. ೧೩೮ ಕಾಯಿದೆಗಳನ್ನು ಸ್ವೀಕರಿಸಿತ್ತು. ಈ ಅಂಕೆಸಂಖ್ಯೆಗಳನ್ನು ನಾವು ಗಮನಿಸುವಾಗ, ವಿಧಾನ ಸಭೆಯು ಸಾಧಿಸಿದ ಕಾರ್ಯ ಕಡಿಮೆಯೆಂದೇನೂ ಹೇಳುವಂತಿಲ್ಲ

ಕಳೆದ ಐದು ವರ್ಷಗಳ ಪ್ರಾರಂಭದಲ್ಲಿ ಶ್ರೀ ನಿಜಲಿಂಗಪ್ಪನವರು ಸರಕಾರಿ ಪಕ್ಷ ಕಾಂಗ್ರೆಸ್ಸಿನ ನಾಯಕರಾಗಿ ಮುಖ್ಯ ಮಂತ್ರಿಯಾದರು; ಅವರೆ, ಒಂದು ವರ್ಷ ಕಳೆಯುವುದಕ್ಕೂ ಮೊದಲೇ ಅವರ ನಾಯಕತ್ವದಲ್ಲಿ ಅವಿಶ್ವಾಸ ಮೂಡಿಬಂದು ಶ್ರೀ ಬಿ. ಡಿ. ಜತ್ತಿಯವರಿಗೆ ಕಿರೀಟವಿಟ್ಟಿತು. ಮುಖ್ಯ ಮಂತ್ರಿಯಾಗಿ ಜತ್ತಿಯವರು ಬಹಳಷ್ಟು ಚಾಣಾಕ್ಷತೆಯಿಂದ ವರ್ತಿಸಿದ ಕಾರಣದಿಂದಾಗಿಯೇ ಅವರು ಕೊನೆಯ ವರೆಗೂ ಅಧಿಕಾರದಲ್ಲಿ ಉಳಿಯುವಂತಾಯಿತು. ಕೇಂದ್ರದ ವರಿಷ್ಠರ ಕೃಪಾಕಟಾಕ್ಷದ ಬಲದಿಂದಲೇ ಶ್ರೀ ಜತ್ತಿಯವರು ತಮ್ಮನ್ನು ಮಟ್ಟ ಮಲಗಿಸಲು ಪ್ರಯತ್ನಿಸಿದ ಬಿಜುಗಾಳಿ-ಸುಂಟರಗಾಳಿಗಳಿಗೆ ಗುರಿಯಾಗದೆ ತಲೆಯೆತ್ತಿ ಪರ್ವತದಂತೆಯೇ ಅಚಲರಾಗಿ ನಿಂತರು. ಈ ಸ್ಥಿತಿಯಿಂದಾಗಿಯೇ ಕೆಲವೊಂದು ಮಹತ್ವದ ವಿಧೇಯಕಗಳನ್ನು ವಿಧಾನಸಭೆಯು ಸ್ವೀಕರಿಸುವಂತಾಯ್ತು. ವಿಭಿನ್ನ ಕಾಯಿದೆಪದ್ಧತಿಯಿದ್ದ ಕರ್ನಾಟಕ ರಾಜ್ಯದಲ್ಲಿ ಏಕರೂಪತೆಯನ್ನು ತರುವ ಉದ್ದೇಶದಿಂದ ಹಲವಾರು ವಿಧೇಯಕಗಳು ಮಂಜೂರಾದುದು ಸಹಜವೇ. ತೃತೀಯ ಯೋಜನೆಯಲ್ಲಿ ಅಂತರ್ಗತವಾದ ಶೈಕ್ಷಣಿಕ ವಿಕಾಸ ಕಾರ್ಯಕ್ರಮಗಳ ಬಗ್ಗೆ ಖಡ್ಡಾಯಶಿಕ್ಷಣ ವಿಧೇಯಕದ ಅಂಗೀಕಾರ ರಾಷ್ಟ್ರದ ಆವಶ್ಯಕತೆಗಳಲ್ಲಿ ಒಂದಾಗಿತ್ತೆನ್ನಬಹುದು ಪಂಚಾಯತು ರಾಜ್ಯರಚನಾ ಸಂಬಂಧದ ವಿಧೇಯಕವು ನಮ್ಮ ರಾಜ್ಯದಲ್ಲಿ ಮೊತ್ತನೊದಲಿಗೆಂಬಂತೆ ಮಂಜೂರಾದುದು ಭೂಷಣಪ್ರಾಯವೆನ್ನಬೇಕು. ಮಹಾತ್ಮಾ ಗಾಂಧೀಜಿಯವರು ಕಾಣುತ್ತಿದ್ದ ರಾಮರಾಜ್ಯ ಅಥವಾ ವಿನೋಬಾಜಿಯವರ ಗ್ರಾಮರಾಜ್ಯದ ಕನಸು ನನಸಾಗುವ ಅವಕಾಶವು—ಇಲ್ಲಿ ದೊರೆಯುತ್ತಿರುವುದು ನಮ್ಮ ಸೌಭಾಗ್ಯವೆಂದೆನ್ನಬೇಕು. ಪಂಚಾಯತ ರಾಜ್ಯ ರಚನೆ ಮತ್ತದರ ಕಾರ್ಯಕ್ರಮಗಳಲ್ಲಿ ಕೆಲವೊಂದು ತೊಡಕುಗಳು ಅನುಭವಕ್ಕೆ ಬರುತ್ತಿವೆಯಾದರೂ ಇವು ಸರಿ ಹೊಂದುವುವು ಎಂದು ಆಶಿಸಬಹುದು. ಎಲ್ಲಕ್ಕೂ ಮುಖ್ಯವಾಗಿ, ರಾಜ್ಯದ ಎಲ್ಲೆಡೆಯೂ ಕೋಲಾಹಲವೇಳಲು ಕಾರಣವಾಗಿರುವ ಭೂಸುಧಾರಣಾ ಮಸೂದೆಯನ್ನು ಸ್ವೀಕರಿಸಿದ ಶ್ರೇಯಸ್ಸು ಪ್ರಚಲಿತ ವಿಧಾನ ಸಭೆಗೆ ಸೇರಬೇಕು. ಈ ಬಗ್ಗೆ ಕಂದಾಯ ಮಂತ್ರಿ ಶ್ರೀ ಕಡಿದಾಳ ಮಂಜಪ್ಪನವರೂ ಮುಖ್ಯ ಮಂತ್ರಿಯವರೂ ಅತೀವ ಮುತುವರ್ಜಿ ವಹಿಸಿದ ಕಾರಣದಿಂದಲೇ ಕೊನೆಯ ಗಳಿಗೆಯಲ್ಲಾದರೂ ಅದು ಮಂಜೂರಾಗಿ ರಾಷ್ಟ್ರಾಧ್ಯಕ್ಷರ ಸಹಿಯ ದಾರಿ ಕಾಣುವಂತಾಯಿತು. ಈ ಸಂಬಂಧದಲ್ಲಿ ಶ್ರಮಿಸಿದ ಪ್ರತಿಯೊಬ್ಬರೂ ಅಭಿನಂದನಾರ್ಹರು. ಈ ವಿಧೇಯಕದ ಬಗ್ಗೆ ಪ್ರತಿಕೂಲಾಭಿಪ್ರಾಯವೆಷ್ಟಿದ್ದರೂ ತಾನು ಜನತೆಗಿತ್ತ ಆಶ್ವಾಸನವನ್ನು ಪೂರೈಸಿಕೊಟ್ಟ ಶ್ರೇಯಸ್ಸು ಕರ್ನಾಟಕದ ಕಾಂಗ್ರೆಸ್ಸಿಗಿದೆ ಎಂದು ಧೈರ್ಯವಾಗಿ ಹೇಳಬಹುದು.

ಸಭಾನಾಯಕ ಜತ್ತಿಯವರು ಡೋಲಾಯಮಾನ ಪರಿಸ್ಥಿತಿಯಲ್ಲಿಯೇ ನಾಲ್ಕು ವರ್ಷಗಳ ಕಾಲ ತನ್ನ ಮುಖ್ಯ ಮಂತ್ರಿ ಪದವನ್ನು ನಿರ್ವಹಿಸಿದ್ದರೂ, ತನ್ನ ಕೈಮೀರಿ ಜನತೆಯ ಆಶೋತ್ತರಗಳ ಪೂರೈಕೆಗಾಗಿ ಶ್ರಮಿಸಿದ್ದಾರೆ. ಇವರ ಬೆಂಬಲಿಗರಾಗಿ ಇತರ ಸಚಿವ ಮಂತ್ರಿಗಳೂ ನಿಂತಿದ್ದಾರೆ. ಇವರೆಲ್ಲರೂ ಅಭಿನಂದನಾರ್ಹರು ವಿರೋಧೀ ಪಕ್ಷಗಳ ನೇತೃಗಳಾದ ಶ್ರೀ ಜೆ. ಬಿ. ಮಲ್ಲಾರಾಧ್ಯ, ಶ್ರೀ ಮಕ್ಕಣ್ಣಪ್ಪ ಶ್ರೀ ವಿ. ಶ್ರೀನಿವಾಸ ಶೆಟ್ಟಿ ಮೊದಲಾದವರು ತಮ್ಮ ಕರ್ತವ್ಯ ಪಾಲನೆಯನ್ನು ಉತ್ಸಾಹದಿಂದಲೇ ಮಾಡಿದ್ದಾರೆ. ಪಕ್ಷದ್ವಯಗಳ ನಡುವೆ ಚಕಮಕಿಯೆದ್ದ ಪ್ರಸಂಗಗಳು ಅನೇಕವಿದ್ದರೂ ಕೊನೆಯ ಗಳಿಗೆಯಲ್ಲಿ ಅವು ಸ್ನೇಹಮಯ ವಾತಾವರಣದಲ್ಲಿ ಪರ್ಯವಸಾನಗೊಂಡುದು ಅರ್ಥವತ್ತಾಗಿದೆ. ಸಭಾಧ್ಯಕ್ಷ ಶ್ರೀ ಕಂರಿಯವರ ಅನುಭವವು ಕರ್ನಾಟಕದ ವಿಧಾನಸಭೆಯ ಮೆರುಗನ್ನು ಹೆಚ್ಚಿಸಿದೆಯೆಂದು ನಿರ್ವಿವಾದವಾಗಿ ಹೇಳಬಹುದು. ಕೊನೆಯ ದಿನದಲ್ಲಿ ಉಭಯ ಪಕ್ಷದವರೂ ಹಿಂದಿನ ಕಹಿಯನುಭವವೆಲ್ಲವನ್ನೂ ಮರೆತುಬಿಟ್ಟು ನಿಷ್ಕಲಂಕ ಹೃದಯದಿಂದ ವಿಧಾನಸೌಧದಿಂದ ಹೊರಬಂದರೆಂಬಾಗ, ಅಲ್ಲಿ ನಡೆದಿದ್ದ ಚರ್ಚೆವಾದ ವಿವಾದಗಳೆಲ್ಲವೂ ವ್ಯಾವಹಾರಿಕವೆಂದು ಊಹಿಸಲು ಆಸ್ಪದವಿದೆ. ಅರ್ಥಮಂತ್ರಿ ಮರಿಯಪ್ಪನವರು ಈ ಬಾರಿ ಚುನಾವಣೆಗೆ ನಿಲ್ಲದಿರುವ ನಿರ್ಧಾರಮಾಡಿದುದರಿಂದ ಅವರು ಮುಂದಿನ ಬಾರಿ ವಿಧಾನಸಭೆಗೆ ಬರುವ ಪ್ರಮೇಯವೇ ಇಲ್ಲ ಅವರ ಅಳವಾದ ಜ್ಞಾನ, ಅನುಭವಗಳಿಂದ ಆರ್ಥಿಕವಾಗಿ ಮುಗ್ಗರಿಸಿದ್ದ ಕರ್ನಾಟಕದ ಬೆಂಗೋಲು ಬಲಗೊಳ್ಳುತ್ತ ನಡೆದಿದೆಯೆಂದು ಹೇಳಬಹುದು.

ಆದರೆ, ಒಂದು ಮಾತನ್ನು ಬರೆಯಲೇಬೇಕಾಗುತ್ತದೆ. ನಮ್ಮ ವಿಧಾನ ಸಭೆಯಲ್ಲಿ ಶಿಸ್ತನ್ನು ಕಾಯ್ದುಕೊಳ್ಳುವ ಸತ್ ಸಂಪ್ರದಾಯವನ್ನು ಹಾಕಿ ಕೊಡುವ ಪರಿಪಾಠವಿನ್ನೂ ಮೂಡಿ ಬಂದಿಲ್ಲ. ಈ ಸಂಬಂಧದಲ್ಲಿ ಅಧ್ಯಕ್ಷ ಕಂರಿಯವರು ಅದೆಷ್ಟು ಬಾರಿ ಹೇಳಿದ್ದರೂ ಅದು ಮೂರ್ಖನಿಗೆ ಬುದ್ಧಿ ಹೇಳಿದಂತಾಗಿದೆ. ಸಭಾ ಗೌರವವನ್ನುಳಿಸುವ ಪ್ರವೃತ್ತಿ ಬೆಳೆದುಬರಬೇಕು; ಆಗ ಮಾತ್ರವೇ ಮಾಡಿದ ಕೆಲಸವೆಲ್ಲವೂ ಸಾರ್ಥಕವಾಗಬಲ್ಲುದು. ಮುಂದೆ ಬರಲಿರುವ ಸದಸ್ಯರಾದರೂ ಈ ಅಮೂಲ್ಯವಾದ ಶಿಸ್ತಿನ ಬಗ್ಗೆ ಪರಿಪೂರ್ಣ ಆಸಕ್ತಿ ವಹಿಸುವರೆಂದು ನಿರೀಕ್ಷಿಸಿ, ನಿವೃತ್ತರಾಗಲಿರುವ ಪ್ರಚಲಿತ ವಿಧಾನ ಸಭಾ ಸದಸ್ಯರನ್ನು ಅಭಿನಂದಿಸುತ್ತೇವೆ.

ಎ. ಬಿ. ಶೆಟ್ಟರ ಸ್ಮಾರಕ

ಮದ್ರಾಸು ಮತ್ತು ಕರ್ನಾಟಕಗಳ ಮಂತ್ರಿವರ್ಯರಾಗಿ ಸಮಾಜ ಕಾರ್ಯಕರ್ತರಾಗಿ ನಾನಾ ಮುಖಗಳಿಂದ ದುಡಿದು ಪರಂಧಾಮವನ್ನು ಐದಿರುವ ಎ. ಬಿ. ಶೆಟ್ಟರ ಚಿರಸ್ಮರಣೆಗಾಗಿ ಸ್ಮಾರಕವೊಂದನ್ನು ರಚಿಸಬೇಕು ಎಂದು ನಾವು ನಮ್ಮ ೧೯೬೦ನೇ ಇಸವಿಯ ಪ್ರಜಾರಾಜ್ಯೋತ್ಸವ ಸಂಚಿಕೆಯಲ್ಲಿ ಸೂಚಿಸಿದ್ದೆವು. ಜಿಲ್ಲೆಯ ರಾಜಧಾನಿ ಮಂಗಳೂರಿನಲ್ಲಿ ಎ. ಬಿ. ಶೆಟ್ಟರ ಸ್ಮಾರಕ ನಿಧಿಯೊಂದು ರಚನೆಯಾಗಿ ಅದು ಈ ದಿಸೆಯಲ್ಲಿ ಕಾರ್ಯಪ್ರವೃತ್ತವಾಗುತ್ತಿರುವುದು ಸ್ವಾಗತಾರ್ಹವಿದೆ. ಈ ಸ್ಮಾರಕ ನಿಧಿಯ ಸಮಿತಿಯು ತಯಾರಿಸಿದ ದಿವಂಗತ ಶೆಟ್ಟರ ಶಿಲಾ ಪ್ರತಿಮೆಯೊಂದನ್ನು ಮುಂದಿನ ಜನವರಿ ಮೊದಲ ವಾರದಲ್ಲಿ ಸ್ಥಾಪಿಸಲು ನಿರ್ಧರಿಸಿದೆಯೆಂದೂ ಮದ್ರಾಸು ವಿಶ್ವವಿದ್ಯಾಲಯದ ಉಪಕುಲಪತಿ ಡಾ| ಎ. ಲಕ್ಷ್ಮಣಸ್ವಾಮಿ ಮುದಲಿಯಾರರು ಇದರ ಅನಾವರಣ ಮಾಡಲಿರುವರೆಂದೂ ಇದೇ ಸಂಚಿಕೆಯ ಬೇರೆ ಪುಟವೊಂದರಲ್ಲಿ ಪ್ರಕಟವಾಗಿದೆ. ಸಮಿತಿಯು ಕೈಗೊಂಡಿರುವ ಈ ಮಹತ್ಕಾರ್ಯವು ಸ್ತುತ್ಯವಿದೆ.

ಆದರೆ, ಸಮಿತಿಯು ಇದುವರೆಗೆ ಒಟ್ಟುಕೂಡಿಸಿದ ನಿಧಿ ಕೇವಲ ರೂ. ೯,೦೦೦ ದಷ್ಟು ಎಂದು ತಿಳಿದುಬರುತ್ತದೆ. ಈ ಮೊತ್ತವು ಈಗಾಗಲೇ ತಯಾರಿಸಿದ ಶಿಲಾಪ್ರತಿಮೆಯ ಸ್ಥಾಪನೆಗೂ ಸಾಲದೆಂಬಂತಿದೆ. ದಿವಂಗತ ಶೆಟ್ಟರ ಅಭಿಮಾನಿಗಳೂ, ಮುಕ್ತಹಸ್ತದಿಂದ ದಾನವೀಯುವ ಶಕ್ತಿಯುಳ್ಳವರೂ ಉದಾರಿಗಳೂ ಜಿಲ್ಲೆಯಲ್ಲಿ ಮಾತ್ರವಲ್ಲ, ಎಲ್ಲೆಲ್ಲೂ ಇದ್ದಾರೆ. ಇವರೆಲ್ಲರೆ ಸಹಕಾರ ದೊರೆಯಿತೆಂದರೆ, ಸಮಿತಿಯು ಇನ್ನೂ ಹಲವಾರು ಉಪಯುಕ್ತ ಕಾರ್ಯಗಳನ್ನು ಕೈಗೊಳ್ಳಬಹುದು. ಸ್ಮಾರಕ ನಿಧಿಯ ಸಮಿತಿಯವರು ಇಂತಹ ಜನರನ್ನು ಕಂಡು, ಅವರ ಸಂಪೂರ್ಣ ನೆರವನ್ನು ಪಡೆದುಕೊಳ್ಳುವುದು ಅಗತ್ಯ. ಕೇವಲ ಪ್ರಕಟಣೆ – ಹೇಳಿಕೆಗಳಿಂದಲೇ ಹಣ ಸಂಗ್ರಹವಾಗುವುದೆಂದು ನಾವು ನಿರೀಕ್ಷಿಸುವುದಿಲ್ಲ. ದಿವಂಗತ ಎ. ಬಿ ಶೆಟ್ಟರು ಮಾನವಾಗಿದ್ದು ಕ್ರಿಯಾಶೀಲರಾಗಿ ಹಲವಾರು ಸಂಘ ಸಂಸ್ಥೆಗಳನ್ನು ಕಟ್ಟಲು ನೆರವಾಗಿದ್ದರು. ಆದರೆ, ಇಂದಿನ ಪ್ರಚಾರ ಯುಗದಲ್ಲಿ ಎಲ್ಲರೂ ಪ್ರಚಾರ ಪ್ರಿಯರೆ; ಆ ಕ್ರಿಯಾಶೀಲತೆಯನ್ನು ಮರೆತು ಬಿಟ್ಟಂತೆ ತೋರುತ್ತದೆ. ಧನ ಸಂಗ್ರಹಿಸುವುದು ಸ್ಮಾರಕ ನಿಧಿಯ ಸಮಿತಿಯ ಕರ್ತವ್ಯ; ಸಹಾಯವೀಯುವುದು ದಿವಂಗತರ ಅಭಿಮಾನಿಗಳ ಕರ್ತವ್ಯ. ಇದು ವರೆಗೂ ಧನ ಸಹಾಯ ಮಾಡದಿರುವವರು ಕೊಡುಗೆಯಿಂದ ಸಹಾಯವಿತ್ತು ಸಮಿತಿಯಂತೆ ಹಲವಾರು ಲೋಕೋಪಯೋಗಿ ಕಾರ್ಯಗಳನ್ನು ಮಾಡಿಸುವಂತಾಗಲೆಂದು ಆಶೈಸೆ.

— —

ವಿದೇಶ ಪ್ರಯಾಣ—ಸೂಲ್ಕಿ ಕಳ್ಳಿಗತ್ತು ಶ್ರೀ ಚಂದಯ್ಯ ಶೆಟ್ಟಿ ಪುತ್ರ ಡಾ| ಯಂ. ವಸಂತ ಕುಮಾರ ಶೆಟ್ಟಿ B Sc.M.B.B.S D.M.R. ಇವರು, ಅಮೇರಿಕದ ಪಿಟ್ಸ್‌ಬರ್ಗ್ ವಿಶ್ವವಿದ್ಯಾಲಯದಲ್ಲಿ, "Paedatric Radiology"ಯಲ್ಲಿ ನೂತ್ಯರ್ ಗ್ರಿಯ, ಉಚ್ಚ ಶಿಕ್ಷಣ ಪಡೆಯಲು, ತಾ 27—11—61ರಲ್ಲಿ ಅಮೇರಿಕಕ್ಕೆ ತೆರಳಿರುವರು.

ಅಸ್ಥಮಾ ಪೀಡಿತರ ಗಮನಕ್ಕೆ

ಹಿಮಾಲಯದ ಪ್ರಸಿದ್ಧ ಅಸ್ಥಮಾ ನಿವಾರಕ ಮೂಲಿಕೆಯನ್ನು ದಿ. 21—12—61 ಹುಣ್ಣಿಮೆಯ ರಾತ್ರಿ ಹಾಲು ಮತ್ತು ಅಕ್ಕಿಯಿಂದ ತಯಾರಿಸಿದ ಪಾಯಸದಲ್ಲಿ ತೆಗೆದುಕೊಳ್ಳುವುದರಿಂದ ಅಸ್ಥಮಾ, ಗೂರಲು, ಕೆಮ್ಮು, ಉಬ್ಬಸ, ಮೇಲುಸಿರು ಮತ್ತು ಶ್ವಾಸ ಕಟ್ಟುವಿಕೆ ಇವುಗಳು ನಿವಾರಿಸಲ್ಪಡುತ್ತವೆ. ಕೂಡಲೇ ಇಂಗ್ಲಿಷಿನಲ್ಲಿ ಬರೆಯಿರಿ:

Shri Mahatma Sidh Baba Sewa Ashram
P. O. Chitrakot. (Uttar Pradesh

ಉಡುಪಿ ಡಿ ಮು. ಕೋರ್ಟಿನಲ್ಲಿ

O. P. 10/1961

ಶ್ರೀ. ವಿಠಲ ಮಂಜುನಾಥ ಕಾಮತ್ — ಅರ್ಜಿದಾರ.

ಮತ್ತು

ಡ್ರೈವರ್ ಶೀನ ಶೆಟ್ಟಿ— ಡ್ರೈವರ್ ಬಾಯಯ್ಯ ಶೆಟ್ರ ನೌಕರ- ಉಡ್ಪಿ ತಾಲೂಕ ಶಿವಳ್ಳಿ ಗ್ರಾಮದ ಮರದ ಬೆಟ್ಟು— ಎದ್ರಿ

ಸದ್ರಿ 2ನೇ ಎದ್ರಿಗೆ ಈ ಮೂಲಕ ತಿಳಿಯಪಡಿಸುವುದೇನಂದ್ರೆ—

2ನೇ ಎದ್ರಿ ಮೇಲೆ ಕೂಡಾ ಸಂಕ್ಷನ್ ಗೈರೆ ನಿವೃತ್ತಿ ಕೇಳಿ ಅರ್ಜಿದಾರನು ದಾಖಲು ಮಾಡಿದ ಮೇಲ್ಕಂಡ ಅರ್ಜಿಯು ತಾರೀಕ 2—12—61 ಕ್ಕೆ ನೋಟೀಸು ಬಗ್ಗೆಯಿಟ್ಟಿದೆ ಆ ಕುರಿತು ನಿಮಗೇನಾದರೂ ಉದಾಹರಿಸುವಂತಾದಿದ್ದರೆ ಆ ದಿವ್ಸ ಹಗಲು 11ಗಂಟೆ ಸರಿಯಾಗಿ ಈ ಕೋರ್ಟು ಮುಂದೆ ಬಂದು ಹಾಜ್ರಾಗಿ ಜ್ಯಾಹೀರು ನೂಡಿಕೊಳ್ಳತಕ್ಕದ್ದು.

(By Order of the Court)
P. N. Krishnamurthi Rao
Advocate for Petitioner.
ಉಡುಪಿ, ತಾ. 20-11-61.

ಉಡ್ಪಿ ಡಿ. ಮು. ಕೋರ್ಟಿನಲ್ಲಿ

O. S. 217/1961.

ಶ್ರೀ ಪಾಂಗಾಳ ಜನಾರ್ಧನ ದೇವರು ಟ್ರಸ್ಟಿ-U. ಲಕ್ಷ್ಮೀನಾರಾಯಣ ಭಟ್ಟ—ವಾದಿ

ಮತ್ತು

Dr P. ವಾಸುದೇವ ರಾವ್, ಪಾಂಗಾಳ ಸರ್ವೋತ್ತಮ ರಾಯರ ಮಗ—ಉಡ್ಪಿ ತಾ. ಎಲ್ಲೂ ಪಾಂಗಾಳಗ್ರಾಮ—ಈಗ ಹಾಲಿ ಸಾರದಲ್ಲಿರುವವ —ಪ್ರತಿವಾದಿ

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನಂದ್ರೆ—

ವಾದಿಯು ನಿಮ್ಮ ಮೇಲೆ ಅಸ್ತಿ ಸ್ವಾಧೀನತೆ ವಗೈರೆ ನಿವೃತ್ತಿ ಕೇಳಿ ವಾದಿಯು ದಾಖಲು ಮಾಡಿದ ಮೇಲ್ಕಂಡ ದಾವೆಯು ತಾ. 4—12—61 ಕ್ಕೆ ನಿಮ್ಮ ನೋಟೀಸಿನ ಬಗ್ಗೆ ಮುಂದಿಟ್ಟಿದೆ. ಆ ಕುರಿತು ನಿಮಗೇನಾದರೂ ಉದಾಹರಿಸುವಂತಾದಿದ್ದರೆ ಆ ದಿವ್ಸ ಹಗಲು 11ಗಂಟೆ ಕ್ಕೆ ಈ ಕೋರ್ಟು ಮುಂದೆ ಬಂದು ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು.

(By Order of the Court)
P. N Krishnamurthi Rao.
Advocate for Plaintiff.
Udipi, 23—11—1961.

ಜಗತ್ಪರ್ಯಟನ

ವಿಶ್ವಶಕ್ತಿ ನೆಹರು

ಒಂದೆಡೆ ಚೀನ ಮತ್ತೊಂದೆಡೆ ಪಾಕಿಸ್ತಾನ, ಹಿಂದುಗಡೆ ಪೋರ್ಚುಗಲ್‌ಗಳು ಭಾರತದ ಮೇಲೆ ಸೇಡು ತೀರಿಸುವ ಯೋಚನೆ ಮಾಡುತ್ತಿವೆ. ಇವೆಲ್ಲ ಬಾಹ್ಯವಿಘ್ನ ಎಡ್ಡೂರಗಳ ನಡುವೆ ಆಂತರಿಕ ಸಮಸ್ಯೆಗಳನ್ನೂ ಎದುರಿಸಿಕೊಂಡು ಪ್ರಧಾನಿ ನೆಹರೂ ಮುಂದುನಡೆಯುತ್ತಾರೆ. ನೆಹರು ಒಂದರೆ, ವ್ಯಕ್ತಿಯಲ್ಲ; ಒಂದು ಅಪೂರ್ವ ಶಕ್ತಿ. ಈ ಶಕ್ತಿಯ ಬಲದಿಂದಲೇ ಅವರು ವಿಶ್ವದ ಗೌರವಾದರಗಳಿಗೆ ಪಾತ್ರರಾಗಿದ್ದಾರೆ.

ಕೃಷ್ಣಮೆನನ್

ನೆಹರೂ ಬಲಗೈ ಬಂಟ ಕೃಷ್ಣಮೆನನ್ ದೇಶದಲ್ಲಿ ಮೂಲ್ರ ಕಮ್ಯುನಿಸ್ಟ್-ಪರ ಹೆಂಬ ಹೆಸರು ಪಡೆದುದಲ್ಲ; ವಿದೇಶೀಯರೂ ಅವರ ಮೇಲೆ ಸಾಮ್ಯವಾದಿಯೆಂದೇ ಅಭಿಪ್ರಾಯ. ಅವರು ಇತ್ತೀಚೆಗೆ ಸಂ. ರಾ. ಸಂಘದಲ್ಲಿ ಮಾಡಿದ ಭಾಷಣದ ಮೂಲಕ ಈ ಅಭಿಪ್ರಾಯವನ್ನು ಮತ್ತಷ್ಟು ಬೆಂಬಲಿಸಿತು; ಅದರೆ, ಕೆನ್ನೆಡಿಯವರನ್ನು ನೆಹರೂ ಅದೇಶದ ಮೇರೆಗೆ ಕರೆದು ಬಂದ ನಂತರ ಈ ದುರಭಿಪ್ರಾಯ ಸದಭಿಪ್ರಾಯವಾಗಿ ಮಾಡದಿದ್ದರೂ ತುಸು ದೂರವಾಯ್ತು.

ಅಲ್ಲಲ್ಲಿಯ ಸುದ್ದಿಸಾರ

ವಿವೇಕಾನಂದ ಮಂದಿರದ ಉದ್ಘಾಟನೆ

ಶ್ರೀ ವಿವೇಕಾನಂದ ಸ್ವಾಮಿಯವರ ಸ್ಮಾರಕವಾಗಿ ಉಡುಪಿಯಲ್ಲಿ ಶ್ರೀಮತಿ ಯು. ಸೀತಾ ಶೆಟ್ಟಿಯವರು ಕಟ್ಟಿಸಿರುವ ಶ್ರೀ ವಿವೇಕಾನಂದ ಮಂದಿರದ ಉದ್ಘಾಟನಾ ಸಮಾರಂಭವು ತಾ. 15—11—61ರಂದು ಕಾಂಗ್ರಾಂಗಾಡಿನ ಶ್ರೀ ವಿವೇಕಾನಂದ ಸ್ವಾಮಿಯವರಿಂದ ಶ್ರೀ ಟಿ. ಆರ್. ಎ. ಪೈಗಳ ಅಧ್ಯಕ್ಷತೆಯಲ್ಲಿ ಉದ್ಘಾಟಿಸಲ್ಪಟ್ಟಿತು. ಶ್ರೀಮತಿ ಯು ಸೀತಾ ಶೆಟ್ಟಿಯವರು ಸ್ವಾಗತಿಸುತ್ತಾ ಈ ಮಂದಿರವು ಸಾರ್ವಜನಿಕರ ಸೇವೆಗೆ ಮೀಸಲಾಗಿದ್ದು, ಜನತೆಯಲ್ಲಿ ಧಾರ್ಮಿಕ ಭಾವನೆ ಮೂಡಿಸಲು ಸಾಧ್ಯವಾಗಿ ಇದೆ. ಎಂದರು ಶ್ರೀಗಳಾದ ಕೆ. ಎಲ್. ಎಸ್. ಉಪಾಧ್ಯಾಯರೂ, ಬಿ. ಲಕ್ಷ್ಮಣ ದೇವ ವಿದ್ಯಾರ್ಥಿಯವರೂ ಮಾತನಾಡುತ್ತಾ ಶ್ರೀ ವಿವೇಕಾನಂದರ ಆದರ್ಶ ಮತ್ತು ಸಂದೇಶಗಳನ್ನು ವಿವರಿಸಿದರು. ಉದ್ಘಾಟಕರಾಗಿ ಶ್ರೀ ಕುಂಞಾಂಬು ಮಾಸ್ತರರು ಮಾತನಾಡುತ್ತಾ ಮಂದಿರದ ಕಾರ್ಯವನ್ನು ಕೊಂಡಾಡಿದರು. ಶ್ರೀ ಟಿ. ಆರ್. ಎ. ಪೈಯವರು ಮಾತನಾಡುತ್ತಾ ಶ್ರೀ ವಿವೇಕಾನಂದರ ಜೀವನ ಆದರ್ಶವನ್ನು ವಿವರಿಸಿ ಮಂದಿರವು ಭಕ್ತಜನರಿಗೆ ಸ್ಫೂರ್ತಿಯೋಜನಕಾರಿಯಾಗಲೆಂದರು. ಶ್ರೀ ಟಿ. ಎ. ವಾಸುದೇವನ್‌ರವರು ಅರಂಭದಲ್ಲಿ ಸಂದೇಶಗಳನ್ನು ಹಿಡಿದ್ದರಲ್ಲದೆ ಅಂತ್ಯದಲ್ಲಿ ಧನ್ಯವಾದಗಳನ್ನರ್ಪಿಸಿದರು ಅನಂತರ ಸಭಾಸ್ತಾರು ಜನರಿಗೆ ಭೋಜನಾ ಕೂಟ ನಡೆಯಿತು. ಮುಂಚಿನ ದಿನ ಶ್ರೀ ಜನಾನಂದ ಸ್ವಾಮಿಯವರಿಗೆ ಅಪೂರ್ವ ಸ್ವಾಗತ ಸಾರ ಮೆರವಣಿಗೆ ನೆರವೇರಿತು. ರಾತ್ರಿ ಭಜನೆ ಜರಗಿ ಶ್ರೀ ಕವಿರಾಜ ಎಂ. ಜಿ. ಶೆಣೈಯವರಿಂದ ವಂದನಾರ್ಪಣೆ ನಡೆಯಿತು. ಮಂದಿರವು ಸುಮಾರು 40 ಸಾವಿರ ರೂ. ವೆಚ್ಚದಲ್ಲಿ ನಿರ್ಮಿತವಾಗಿದ್ದು ಚಿತ್ತಾಕರ್ಷಕವಾಗಿದೆ.

ಮೈಂಟೆನೆನ್ಸ್ ಗ್ರಾಂಟಿನ ವಿಚಾರ- ಕುರುಕಾಲು, ಬಾಸಗಿ ಶಾಲೆಗಳ

ಮೈಂಟೆನೆನ್ಸ್ ಗ್ರಾಂಟಿನ ಕುರಿತು ಮೈಸೂರು ಸರಕಾರವು ಸ್ಪಷ್ಟ ಮಟ್ಟಿನ ಉದಾರತೆಯನ್ನು ನೀಡಿ ಹೊರಡಿಸಿದ ತಾ. 9—11—61ರ ಹುಕುಮಿನ ಸಾರಾಂಶವು ಹೀಗಿದೆ—

ದ. ಕ. ಜಿಲ್ಲಾ ಬಾಸಗಿ ಶಾಲಾ ಮೆನೇಜರರು ನಿವೇದಿಸಿಕೊಂಡ ಮೇರೆಗೆ ಡೈರೆಕ್ಟರರು ತಮ್ಮ ತಾ. 28—8—61ನೇ ಪತ್ರದಲ್ಲಿ ದಕ್ಷಿಣ ಕನ್ನಡ ಜಿಲ್ಲೆ, ಬಳ್ಳಾರಿ ಜಿಲ್ಲೆ, ಮತ್ತು ಕೊಳ್ಳೆಗಾಲ ತಾಲೂಕುಗಳಲ್ಲಿ ಕಳೆದ 1960ನೇ ಇಸವಿಯಲ್ಲಿ ಕೊಟ್ಟ ಮೈಂಟೆನೆನ್ಸ್ ಗ್ರಾಂಟಿನ ಶೇಕಡಾ 50% ರಷ್ಟು 1961ನೇ ಇಸವಿಯ ಬಗ್ಗೆ ಆಯಾಯ ಜಿಲ್ಲಾ ವಿದ್ಯಾಧಿಕಾರಿಗಳವರು ತಮ್ಮ ಮುನಾಸಬು ಮೇರೆಗೆ ಕೊಡಬಹುದೆಂಬುದಾಗಿ ಸೂಚಿಸಿರುವುದಾದರೂ, ಮೆನೇಜುಮೆಂಟುಗಳಿಂದ ಬರುತ್ತಿರುವ ಹಲವು ನಿವೇದನೆಗಳನ್ನು ಪರಾಮರ್ಶಿಸಿದ ಬಳಿಕ 1960ನೇ ಇಸವಿಯಲ್ಲಿ ಕೊಟ್ಟ ಮೈಂಟೆನೆನ್ಸ್ ಗ್ರಾಂಟಿನಲ್ಲಿ ಶೇ ಅಂಶಕ್ಕೆ ಮಿಕ್ಕಷ್ಟು ಮೈಂಟೆನೆನ್ಸ್ ಗ್ರಾಂಟನ್ನು ಮದ್ರಾಸು ವಿದ್ಯಾಮಸೂದೆಯ ರೂಲು 78 ಶರತ್ತುಗಳಿಗೊಳಪಟ್ಟು 1961ನೇ ವರ್ಷಕ್ಕೆ ಮಾತ್ರ ಕೊಡಬಹುದೆಂಬುದಾಗಿ ಸರಕಾರವು ಆಜ್ಞಾಪಿಸುತ್ತದೆ.

ದ. ಕ. ಜಿಲ್ಲಾ ಬಾಸಗಿ ಶಾಲಾ ಮೆನೇಜರರ ಸಂಘದ ಅಡಳಿತ ಮಂಡಳಿಯ ಸಭೆಯು ತಾ 17—11—61ರಲ್ಲು ಮೂನ್ಯ ರೆ.ಫಾ. ಬಿ. ಯಸ್. ಡಿಸೋಜರ ಅಧ್ಯಕ್ಷತೆಯಲ್ಲಿ ಉಡ್ಪಿಯಲ್ಲಿ ಜರಗಿ, ಸಂಘದ ವತಿಯಿಂದ ಬೆಂಗಳೂರಿಗೆ ಹೋದ ಶಿಷ್ಟಮಂಡಳಗಳ ವಾಸಕಿಗಳಿಗೆ ಉತ್ತರವಾಗಿ ಸರಕಾರದಿಂದ ಬಂದ ತಾ. 21—10—61ರ ಮತ್ತು ತಾ. 9—11—61ರ ಹುಕುಮುಗಳನ್ನು ಪರಾಮರ್ಶಿಸಿ, ಬಾಸಗಿ ಶಾಲೆಗಳಿಗೆ ಮೈಂಟೆನೆನ್ಸ್ ಗ್ರಾಂಟನ್ನು ಸಂಪೂರ್ಣಕೊಡಿಸುವ ವಿಚಾರದಲ್ಲಿಯೂ, ಸದ್ರಿ ಇಸವಿಗಳಲ್ಲಿರುವ ಇನ್ನಿತರ ವಿಷಯಗಳಲ್ಲಿಯೂ ಹಲವು ನಿರ್ಣಯಗಳನ್ನು ಮಹಾ ಸಭೆಯಲ್ಲಿ ಆಚರಿಸಿ ಮುಂದಿನ ಕಾರ್ಯಕ್ರಮವನ್ನು ಕೈಗೊಳ್ಳುವರೆ ತಾರೀಕು 16—12—61ರ ಪೂರ್ವಾಹ್ನ ಘಂಟೆ 10-30ಕ್ಕೆ ಜಿಲ್ಲಾ. ಸಂಘದ ಮಹಾ ಸಭೆಯನ್ನು ಉಡ್ಪಿ ರಾಮಕೃಷ್ಣ ಥಿಯೇಟರಿನಲ್ಲಿ ಜರಗಿಸ ಬೇಕಾಗಿ ನಿಶ್ಚಯಿಸಲಾಗಿದೆ ಎಂದು ಕಾರ್ಯದರ್ಶಿ ಕುರುಕಾಲು ಗಣಪಯ್ಯ ಶೆಟ್ಟರು ತಿಳಿಸುತ್ತಾರೆ.

ಉಡುಪಿಯ ಹಿಂದೀ ಪ್ರಚಾರ ಪರಿಷತ್ತಿನ— ಕಾರ್ಯಕಾರೀ ಸಮಿತಿಯು ಸಭೆ

ಸೇರಿ ಮುಂದಿನ ವರ್ಷದ ಪದಾಧಿಕಾರಿಗಳನ್ನು ಆರಿಸಿತು. ಶ್ರೀ ಎ. ವರದರಾಜ ಬಲ್ಲಾಳರು ಅಧ್ಯಕ್ಷರು, ಶ್ರೀ ಬಿ. ಎಸ್. ರಾಮರಾಯರು ಉಪಾಧ್ಯಾಕ್ಷರು, ಶ್ರೀ ಎಸ್. ಗೋಪೀಚಂದರಾಯರು ಪ್ರಧಾನ ಕಾರ್ಯದರ್ಶಿ ಮತ್ತು ಶ್ರೀ ರಾಜಗೋಪಾಲ ಅಚಾರ್ಯರು ಉಪಕಾರ್ಯದರ್ಶಿಯಾಗಿ ಆಯ್ಕೆಗೊಂಡರು.

ದೈವಜ್ಞ ಬ್ರಾಹ್ಮಣರ ಸಂಘ-ಸುಂ

ಗಳೂರಿನ ಈ ಸಂಘದ ವಾರ್ಷಿಕೋತ್ಸವವು ಇದೇ ತಾ12.11.61ರಲ್ಲಿ ಮಣಿಪಾಲದ ಶ್ರೀ ಎಸ್. ಎಸ್. ನಡೆಕರ್ ಸಾಹಿತ್ಯ ರತ್ನ ಇವರ ಅಧ್ಯಕ್ಷತೆಯಲ್ಲಿ ಲಕ್ಷ್ಮೀ ನಾರಾಯಣ ದೇವಸ್ಥಾನದ ವಟಾರದಲ್ಲಿ ಜರಗಿತು. ಶ್ರೀಯುತ. ಸುಬ್ರಾಯರಿಂದ ಸ್ವಾಗತ, ಶ್ರೀ ಎನ್. ಸಂಜೀವ ಶೇಟರಿಂದ ವರದಿವಾಚನ, ಶ್ರೀ ಎಸ್. ಎಲ್. ಶೇಟರಿಂದ ಗತ ವರ್ಷದ ಲೆಕ್ಕ ಪತ್ರ ಒಪ್ಪುಗೆಗಳಾದ ಮೇಲೆ ಬಹುಮಾನ ವಿತರಣೆ, ಅಧ್ಯಕ್ಷರ ಭಾಷಣವಾಗಿ ಕಾರ್ಯಕಾರಿ ಸಮಿತಿ ಆಯ್ಕೆಯಾಯಿತು ಶ್ರೀಗಳಾದ ಎಸ್. ಎಲ್. ಶೇಟ್ ಅಧ್ಯಕ್ಷ' ಎನ್. ಎಲ್. ಶೇಟ್. ಉಪಾಧ್ಯಕ್ಷ, ಎಸ್. ವೆಂಕಟ್ರಮಣ ರಾವ್ ಕಾರ್ಯದರ್ಶಿ, ಎಮ್. ಸುಬ್ಬರಾವ್ ಉಪಕಾರ್ಯದರ್ಶಿ, ಎನ್. ಸಂಜೀವ ಶೇಟ್, ಕೋಶಾಧ್ಯಕ್ಷ ಮತ್ತು ಇತರ 9 ಜನರು ಸದಸ್ಯರಾಗಿ ಆರಿಸಲ್ಪಟ್ಟರು.

ಜಾರ್ಕಳ ದಾಸಪ್ಪ ಹೆಗ್ಡೆಯವರ ನಿಧನ— ಪ್ರಸಿದ್ಧ ಬಂಟಿಮನೆತನಕ್ಕೆ ಸೇರಿ

ದವರೂ ಉಡುಪಿಯಲ್ಲಿ ಕೆಲವು ವರ್ಷಕಾಲ ಜವಳಿ ವ್ಯಾಪಾರಿಗಳಾಗಿದ್ದು ಕೊಂಡು ಜನಪ್ರಿಯರಾಗಿದ್ದವರೂ ಉಡುಪಿಯಲ್ಲಿ ಸ್ವಲ್ಪ ಸಮಯ ಗಾರ್ಡನ ಬೀಡ್ಸ್ ಮೆಜಿಸ್ಟ್ರೇಟರಾಗಿ ಸೇವೆ ಸಲ್ಲಿಸಿದ್ದವರೂ ಆದ ಶ್ರೀ ದಾಸಪ್ಪ ಹೆಗ್ಡೆಯವರು ತಮ್ಮ 75ನೇ ವಯಸ್ಸಿನಲ್ಲಿ ನಾರೆ ಬೈಲೂರಿನ ಸ್ವಂತ ಮನೆಯಲ್ಲಿ ತಾ. 22.11-61ರಂದು ನಿಧನರಾದರೆಂದು ತಿಳಿಸಲು ವಿಷಾದವಾಗುತ್ತದೆ.

ಉಡುಪಿ ತಾಲೂಕು ಕಾಂಗ್ರೆಸ್ ಕಮಿಟಿಯ ಸಭೆಯು—ಇದೇ ತಾ 25

ರಂದು ಅಧ್ಯಕ್ಷ ಶ್ರೀ ಬಾಳ್ಕಟ್ಟೆಬೀಡು ಕೃಷ್ಣ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ, ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯ ಚುನಾವಣೆ ಸಮಿತಿಯವರು ಉಡುಪಿ ತಾಲೂಕಿನ ಮತದಾರ ಕ್ಷೇತ್ರಗಳಿಗೆ ಪ್ರಚಾರಕ್ಕೆ ಮಾಡಿರುವ ಕಾಂಗ್ರೆಸ್ ಅಭ್ಯರ್ಥಿಗಳ ಯಾದಿಯ ಕುರಿತು ವಿಚಾರ ವಿನಿಮಯ ಮಾಡಲು ಸೇರಿತ್ತು. ಶ್ರೀಗಳಾದ ಎ. ಜಿ. ಅಲ್ಲೆ, ಡಾ. ಪಿ. ಜಿ. ಆಚಾರ್, ಕುರುಕಾಲು ಗಣಪಯ್ಯ ಶೆಟ್ಟಿ, ಪಿ. ಕರಿಯಣ್ಣ ಶೆಟ್ಟಿ, ಟಿ ವೆಂಕಟ್ರಮಣ ರಾವ್, ಪಿ. ಎಸ್ ಶೆಟ್ಟಿ, ಕೆ. ಆರ್. ಬಾಗೇರ ಬಿ. ರಾಮಾಚಾರ್, ಕವಿರಾಜ ಎಂ. ಜಿ. ಶೆಣೈ, ಮೊದಲಾದವರು ಅಭಿಪ್ರಾಯ ವ್ಯಕ್ತಪಡಿಸಿದ ಮೇಲೆ ಈ ಕೆಳಗಿನ ನಿರ್ಣಯ ಕೈಗೊಳ್ಳಲಾಯ್ತು.

1. ವೀಕ್ಷಕರ ಅಭಿಪ್ರಾಯ ಜಿಲ್ಲಾ ಕಾಂಗ್ರೆಸ್‌ಅಧ್ಯಕ್ಷರ ವರದಿಗಳಿಗೆ ಬೆಲೆ ಕೊಡದೆ, ಎ.ಐ.ಸಿ.ಸಿ. ನಿರ್ದೇಶಿಸಿರುವ ಸೂತ್ರಗಳ ಬೆಳಕಿನಲ್ಲಿ ಉಮೇದ್ವಾರಿಗಳ ಯೋಗ್ಯತೆಯನ್ನು ಪರೀಕ್ಷಿಸಿದ ಪ್ರಾದೇಶಿಕ ಚುನಾವಣಾ ಸಮಿತಿಯು ಸುಂದರ ರಾಜಕೀಯದ ಮೇರೆಯಂತ್ರಿಕವಾಗಿ ಓಟುಕೊಟ್ಟು ಮರುಯೋಗ್ಯ ಯಾದಿ ನಿರ್ಮಾಣವಾಗಿರುವುದು 2) ಸಮಾಜದ ಪ್ರತಿನಿಧಿತರೂ, ಕಾಂಗ್ರೆಸ್ ಕಾರ್ಯಕರ್ತರೂ ವೀಕ್ಷಕರೊಡನೆ ತಮ್ಮ ಅಭಿಪ್ರಾಯಗಳನ್ನು ಸ್ಪಷ್ಟಪಡಿಸಿದ್ದಾರೆ. ಇದನ್ನು ಸ್ವೀಕರಿಸಿದ್ದರೆ ಯೋಗ್ಯ ಹುರಿಯಾಳುಗಳ ಆಯ್ಕೆಯಾಗುತ್ತಿತ್ತಲ್ಲದೆ, ಆವರ ಜಯವೂ ಸುಲಭ ಸಾಧ್ಯವಿತ್ತು. ಆದರೆ ಅನೇಕ ಮತದಾರ ಕ್ಷೇತ್ರಗಳಲ್ಲಿ ಜನತಾ ಅಭಿಪ್ರಾಯವನ್ನು ಬೇಕೆಂದೇ ತಳ್ಳಿಬಿಡಲಾಗಿದೆ 3) ದ. ಕನ್ನಡದ ಮಟ್ಟಿಗೆ ಹೇಳುವುದಾದರೆ ಗುಂಪು ರಾಜಕೀಯ ಪಸ್ತು ರಾಜ್ಯತಗೊಳಿಸಲು ಯಾಗೂ ತನ್ನ ಅನುಯಾಯಿಗಳಿಗೆ ಟಿಕೇಟು ಕೊಡುವ ಆಕ್ಷಿಯುಳ್ಳ ಶ್ರೀ ಯು. ಎಸ್. ಮಲ್ಯರ ಅನಪೇಕ್ಷಿತ ಪಸ್ತ್ಕೇಪದಿಂದ ಬೇಡವಾದವರನ್ನು ಒಲ್ಲದ ಮತದಾರ ಕ್ಷೇತ್ರದ ಮೇಲೆ ಹೊರಿಸಲಾಗಿದೆ. ಮತದಾರರು ಬೇಕೆಂದು ಬಯಸಿದವರನ್ನು ಹೊರತಳ್ಳಲಾಗಿದೆ. ಇದು ಜನರಲ್ಲಿ ಹೆಚ್ಚಿನ ಬೇಸರವನ್ನುಂಟು ಮಾಡಿದೆ. ಇದರಿಂದ ಹೆಚ್ಚಿನ ತೊಂದರೆಗೊಳಗಾದುದು ಉಡುಪಿ ತಾಲೂಕಿನ ಮತದಾರ ಕ್ಷೇತ್ರಗಳಾಗಿವೆ ಆದುದರಿಂದ ಕೇಂದ್ರ ಚುನಾವಣಾ ಸಮಿತಿಯವರು ವೀಕ್ಷಕರ ಮತ್ತು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರ ವರದಿಯನ್ನು ತರಿಸಿ, ಇದೇ ಯಾದಿಯನ್ನು ಜನತಾ ಅಭಿಪ್ರಾಯಕ್ಕೆ ಸರಿಯಾಗಿ ಪರಿಷ್ಕರಿಸುವಂತಾಗಬೇಕು. ಈ ರೀತಿಯಲ್ಲಿನ್ನು ಕೇಂದ್ರ ಚುನಾವಣಾ ಸಮಿತಿಗೆ ಕಳಿಸಲು ಅಧ್ಯಕ್ಷರಿಗೆ ಅಧಿಕಾರ ಕೊಡಲಾಯಿತು.

ಕಾಳಿದಾಸ ಜಯಂತಿ—ಉಡುಪಿ

ಮೋಡರ್ನ್ ಹಾ. ಎ ಶಾಲೆಯಲ್ಲಿ ತಾ 18 ರಂದು ವಿದ್ವಾನ್ ಶ್ರೀ ಅನಂತಪದ್ಮನಾಭ ಐತಾಳರ ಅಧ್ಯಕ್ಷತೆಯಲ್ಲಿ ಕಾಳಿದಾಸ ಜಯಂತಿಯು ಆಚರಿಸಲ್ಪಟ್ಟಿತು. ಕಾಳಿದಾಸನ ಕೃತಿಗಳ ಕುರಿತು ಕಿರಿಯವಿದ್ಯಾರ್ಥಿಗಳೂ, ಕಾಳಿದಾಸನ ಜೀವನ ಮತ್ತು ಕೃತಿಗಳ ವಿಮರ್ಶೆಮಾಡಿ ವಿದ್ವಾನ್ ಶ್ರೀ ನಾರಾಯಣ ಬಲ್ಲಾಳರೂ ಭಾಷಣಮಿತ್ತರು.

ಕವಿಯೂಳಿ ಡಾ. ಎ. ಶಾಲಾ ಮಕ್ಕಳ ಕೂಟದ ವತಿಯಿಂದ ಕಾಳಿದಾಸ ಜಯಂತಿ ಮತ್ತು ಶಾಲಾ ಪತ್ರಿಕೆ ಬಿಡುಗಡೆ ಸಮಾರಂಭವು ತಾ. 18 ರಂದು ಶ್ರೀ ಬನ್ನಂಜೆ ಗೋವಿಂದಾಚಾರ್ಯರ ಅಧ್ಯಕ್ಷತೆಯಲ್ಲಿ ಶ್ರೀ ಎಸ್. ವೆಂಕಟ್ರಾಜರಿಂದ ನೆರವೇರಿಸಲ್ಪಟ್ಟಿತು. ಮುಖ್ಯೋಪಾಧ್ಯಾಯ ಶ್ರೀ ಗುರುರಾಜ ಭಟ್ಟರು ಸ್ವಾಗತಿಸಿ ಅಂದಿನ ಕಾರ್ಯಕ್ರಮದ ಮಹತ್ವವನ್ನು ವಿವರಿಸಿದರು. ಸಾಂಸ್ಕೃತಿಕ ಮಂತ್ರಿ ಅಚಿತ ಶೈ ವಂದಿಯನ್ನೋದಿದರು. ಸುನರಂಜನೆಯ ಕಾರ್ಯಕ್ರಮಗಳಾದ ಮೇರೆ ಕೆಲ ವಿದ್ಯಾರ್ಥಿಗಳು, ವಿದ್ವಾನ್ ಶ್ರೀ ಎಮ್. ರಾಮಚಂದ್ರ ಭಟ್ಟರು ಭಾಷಣವನ್ನಿತ್ತರು ಶ್ರೀ ಎಸ್. ವೆಂಕಟ್ರಾಜರು ಕಾಳಿದಾಸನ ದೇಶ, ಕಾಲ ಮತ್ತು ಕೃತಿಗಳ ಕುರಿತಾಗಿ ಮಾತನಾಡಿದ ಮೇರೆ ಅಧ್ಯಕ್ಷರ ಭಾಷಣವಾಗಿ ಮುಖ್ಯೋಪಾಧ್ಯಾಯರಿಂದ ಧನ್ಯವಾದ ಸಮರ್ಪಣೆಯೂ ಯಿತು.

ಉಡುಪಿ ಕರ್ನಾಟಕ ಸಂಘದ

ಒಂದೊಂದು ರೂಪಾಯಿ ಬೆಲೆಯ

ಮೂರು ಪ್ರಕಟಣೆಗಳು.

ತಂದ್ರಲೋಕಕ್ಕೆ ಪ್ರಯಾಣ

(ಯು.ರಾಘವೇಂದ್ರ ಆಚಾರ್ಯ, ಎಂ.ಎ.)

ಸಾಮಾನ್ಯ ರೋಗಗಳು

(ಡಾ. ಕೆ.ಎಲ್.ಪಿತಾಳ, ಎಂ.ಬಿ.ಬಿ.ಎಸ್ ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ

ಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ, ಉಡುಪಿಯಲ್ಲಿ ಪ್ರತಿಗಳುಸಿಗುವ ಸ್ಥಳ— ನವಭಾರತ ಪುಸ್ತಕ ಭಂಡಾರ, ಉಡುಪಿ.

ಅನ್ಯರ ಸಹಾಯವಿಲ್ಲದೆ ಸ್ವತಂತ್ರವಾಗಿ ಇಂಗ್ಲಿಷ್ ಪತ್ರವ್ಯವಹಾರ ಮಾಡಲು ಉಪಯುಕ್ತ ಪುಸ್ತಕ

Letter Writing Made Easy

ಸುಲಭದಲಿ ಪತ್ರಲೇಖನ

ವಿವಿಧ ಮಾದರಿಯ 75 ಇಂಗ್ಲಿಷ್ ಪತ್ರಗಳು.

ಬೆಲೆ: ರೂ. 1—25.

ಹೈಸ್ಕೂಲು ವಿದ್ಯಾರ್ಥಿಗಳಿಗೂ ಅಲ್ಪಸ್ವಲ್ಪ ಇಂಗ್ಲಿಷ್ ಮಾಹಿತಿಯುಳ್ಳ ವಯಸ್ಕರಿಗೂ ಅತ್ಯನುಕೂಲ ಕೈಪಿಡಿ.

ರೂ1-50 ಕಳಿಸಿದರೆ ೧ ಪ್ರತಿ ಬುಕ್ ಪೋಸ್ಟು ಮಾಡಬಹುದು.

ವಿಚಾರಿಸಿ—

ನವಯುಗ ಪ್ರೆಸ್, ಉಡುಪಿ, ಅಥವಾ ನವಭಾರತ ಬುಕ್ ಡಿಪೊ, ಉಡುಪಿ.

ವಿನಂತಿ

ಚಂದಾಹಣ ಬಾಕಿ ಇರುವ ನಮ್ಮ ಚಂದಾದಾರರಿಗೆಲ್ಲಾ ಈ ಮೊದಲೇ ಕಾರ್ಡು ಬರೆದಿರುತ್ತೇವೆ ಆದರಂತೆ ಕೆಲವರು ಈಗಾಗಲೇ ಚಂದಾಹಣವನ್ನು ಪಾವತಿ ಮಾಡಿರುತ್ತಾರೆ ಇನ್ನೂ ಪಾವತಿ ಮಾಡದವರು ದಯಮಾಡಿ ಆದಷ್ಟು ತ್ವರ್ಯ ಕಳುಹಿಸಿಕೊಡುವಂತೆ ವಿನ್ಯವಿಸುತ್ತೇವೆ ವಿ ಪಿ. ಮಾಡಿದರೆ 75 ನಯೇ ಪೈಸೆಯಷ್ಟು ಹೆಚ್ಚಿಗೆ ಬೀಳುವುದರಿಂದ ಎಲ್ಲರೂ ಮುಂದಾಗಿ ಮನಿಯಾರ್ಡರು ಮಾಡುವಂತೆ, ಇಲ್ಲವೇ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಕಟ್ಟುವಂತೆ ಅಪೇಕ್ಷಿಸುತ್ತೇನೆ. ಅಂತೂ ಚಂದಾ ಬಾರದಿದ್ದರೆ ಕ್ರಮವಾಗಿ ವಿ ಪಿ. ಮಾಡುತ್ತೇವೆ. —ಮೆನೇಜರ್.

ಉತ್ತರದ ಗಡಿಯಲ್ಲಿ ಮರಳಿ ಆಕ್ರಮಣ

(೩ನೇ ಪುಟದಿಂದ)

ನೆಹರುಗಳ ಮೇಲೆ ಅಪಪ್ರಚಾರದ ಮಳೆ ಸುರಿಸುವ ವ್ಯರ್ಥ ಸಾಹಸ ಮಾಡ ತೊಡಗಿದೆ. ಬೆಲ್ಗ್ರೇಡದಲ್ಲಿ ಸೇರಿದ್ದ ತಟಸ್ಥ ರಾಷ್ಟ್ರಗಳ ಪರಿಷತ್ತಿನಲ್ಲಿ ನೆಹರು ಮಾಡಿದ ಭಾಷಣದ ಬಗೆಗೆ ಜನತೆಯಲ್ಲಿ ತಪ್ಪು ತಿಳವಳಿಕೆಯೂಗುವಂತೆ ಅದನ್ನು ವ್ಯತ್ಯಸ್ತಗೊಳಿಸಲು ಒಂದೇ ಸವನೆ ಚೀನಿ ಪತ್ರಿಕೆಗಳಲ್ಲಿ ಅಪ ಪ್ರಚಾರ ನಡೆಸುತ್ತಿರುವುದನ್ನು ಸೌಹಾರ್ದ ಹಸ್ತವೆಂದು ಯೂರೋಪ್ಯರೂ ಅನ್ನಲಾರರು ಭಾರತ ಸರಕಾರದ ಆದರ್ಶ ಧೋರಣೆಗಳ ಮೇಲೆ ಅಪಾರ್ಥ ಪ್ರಚಾರ ಮಾಡುವುದೇ ಈ ರೀತಿಯ ಅದರ ದುಸ್ಸಾಹಸಕ್ಕೆ ಕಾರಣವೆಂಬುದು ನಿರ್ವಿವಾದ.

ಚೀನವಾದರೂ ತಾನೂ ಪಂಚಶೀಲದಲ್ಲಿ ವಿಶ್ವಾಸ ತೋರಿಸುತ್ತೇನೆಂದು ಪ್ರದರ್ಶಿಸಲು ಭಾರತದೊಡನಿರುವ ಸೀಮಾ ವಿವಾದದ ಸಂಬಂಧದಲ್ಲಿ ಹಲಬಾರಿ ವಿಚಾರ ವಿನಿಮಯಮಾಡಿತು. ಭಾರತದ ನೆರೆಕರೆಯಲ್ಲಿದ್ದು ಭಾರತಕ್ಕಿಂತ ಕಿರಿದಾದ ಕೆಲವೊಂದು ರಾಷ್ಟ್ರಗಳೊಡನೆ ಅದು ಸೀಮಾ ಸಂಬಂಧದ ವಿವಾದವನ್ನು ಬಗೆಹರಿಸಿಕೊಂಡು, ಭಾರತವೇ ಅಪರಾಧಿಯೆಂಬ ತನ್ನ ಸಿದ್ಧಾಂತವನ್ನು ಸಾಧಿಸ ಹೊರಟಿದೆ. ಆದರೆ, ಭಾರತ—ಚೀನ ವಿವಾದವು ಕೊನೆಗೊಳ್ಳ ಬೇಕಾದರೆ, ಅಕ್ರಮಿತ ಪ್ರದೇಶದಿಂದ ಚೀನ ಹೊರಹೋಗ ಬೇಕು, ಇದಕ್ಕದು ಸಿದ್ಧವಿದೆಯೆ? ಕಳೆದ ವರ್ಷದಿಂದಲೂ ಚೀನದ ಪ್ರತಿಯೊಂದು ವರ್ತನೆಯೂ ಅದರ ಮನೋಭಿಲಾಷೆ ಸ್ನೇಹದಲ್ಲವೆಂಬುದನ್ನು ತೋರಿಸಿಕೊಟ್ಟಿದೆ. ಹಾಗಾದರೆ ಭಾರತ ಸರಕಾರವು ಯಾವ ನೀತಿಯಿಂದ ತನ್ನ ಸಮಗ್ರತೆಯನ್ನು ಉಳಿಸಿಕೊಳ್ಳ ಬೇಕು?

ಭಾರತದ ಶಾಂತಿ—ಪಂಚಶೀಲ ತತ್ವಗಳು ಅದರ ನಿರ್ವೀರ್ಯತೆಯ ಪ್ರತೀಕವೆಂದು ಚೀನ ತಿಳಿದಿರ ಬಹುದು. ಶಾಂತ ಮೂರ್ತಿಯನ್ನು ಉದ್ರಿಕ್ತಗೊಳಿಸುವುದರ ಪರಿಣಾಮವೇನೆಂಬುದನ್ನು ಚೀನವು ಮೊದಲು ಮನವರಿಕೆ ಮಾಡಿಕೊಳ್ಳಬೇಕು. ವಿಚಾರ—ವಿನಿಮಯಗಳಿಂದಲೇ ದೂರವಾಗಬಹುದಾದ ಸಮಸ್ಯೆಗಳಿಗೋಸ್ಕರ ಶಕ್ತಿಪ್ರದರ್ಶನವನ್ನು ಮಾಡಬಾರದು ಎಂಬುದೇ ಭಾರತದ ನೀತಿ. ಆದರೆ, ಚೀನದ ಮುಂದೆ ಈ ನೀತಿ ಸಫಲವಾಗುವ ಸಲ್ಲಕ್ಷಣಗಳು ಗೋಚರವಾಗುವುದಿಲ್ಲ. ಗೋವೆಯ ಸಂಬಂಧದ ನೀತಿಯಲ್ಲಿ ಭಾರತವು ಸೈನಿಕ ಕಾರ್ಯಾಚರಣೆಗೂ ಸ್ವಾತಂತ್ರ್ಯತೆ ಚೀನದ ಬಗ್ಗಿನ ಧೋರಣೆಯಲ್ಲೂ ಇದಕ್ಕೆ ಪ್ರಾಶಸ್ತ್ಯ ನೀಡ ಬೇಕಾಗುತ್ತದೆ. ಆದರೆ, ಯುದ್ಧವೆಂದೊಡನೆಯೇ ಜನ ಹೃದಯ ಗದಗದ ನಡುಗುತ್ತಿರುವ ಈ ವಿಷಮ ಸಮಯದಲ್ಲಿ ಉಗ್ರ ನೀತಿಯನ್ನು ಕೈಕೊಳ್ಳುವುದಕ್ಕೆ ಮೊದಲು ಸಾಮನೀತಿಯ ಪ್ರಯೋಗವನ್ನು ಬಹಳಷ್ಟು ಮಾಡಬೇಕಾಗುತ್ತದೆ. ಭಾರತ ಸರಕಾರದ ಇಂಗಿತವಾದರೂ ಇದಕ್ಕಿಂತ ಬೇರೆಯಲ್ಲ.

ನಮ್ಮ ನಮ್ಮಲ್ಲಿ ಭಿನ್ನಾಭಿಪ್ರಾಯವಿರಬಹುದು. ಪ್ರಜಾಪ್ರಭುತ್ವವು ಹುಟ್ಟಿ ಬೆಳೆಯುವುದೂ ಭಿನ್ನಾಭಿಪ್ರಾಯಗಳ ಮಧ್ಯೆ. ಆದರೆ, ಭಾರತದ ಸಮಗ್ರತೆಯ ರಕ್ಷಣೆಯು ಭಿನ್ನಾಭಿಪ್ರಾಯದ ಪ್ರಶ್ನೆಯಲ್ಲ. ನಮ್ಮ ಉಳಿವು ಅಳಿವಿನ ಪ್ರಶ್ನೆ. ಇದನ್ನು ಮನವರಿಕೆ ಮಾಡಿಕೊಳ್ಳುವುದು ಮತ್ತು ಕಾರ್ಯಪ್ರವೃತ್ತನಾಗುವುದು ಪ್ರತ್ಯೇಕ ಭಾರತೀಯನ ಆದ್ಯ ಹಾಗೂ ಪರಮ ಕರ್ತವ್ಯ.

ಹಿಮಭರಿತ ಪರ್ವತ ಸೋಪಾನಗಳಲ್ಲಿ ಪೋಲೀಸರು ಮಾತೃ ಭೂಮಿಯ ರಕ್ಷಣೆಗಾಗಿ ಮುನ್ನಡೆಯುತಿದ್ದಾರೆ.

ಪುತ್ತೂರು ಡಿ. ಮುಂ. ಕೋರ್ಟ್‌ನಲ್ಲಿ

O. S. No. 287/1961.

ರಾಮಯ್ಯ ಬಲ್ಲಾಳ —ವಾದಿ.

ಈಶ್ವರ ಭಟ್ಟ —ಪ್ರತಿವಾದಿ.

ಪ್ರತಿವಾದಿ, ಈಶ್ವರ ಭಟ್ಟ, ಕೊಮ್ಮುಂಜಿ ಗೋವಿಂದ ಭಟ್ರ ಮಗ, ಕುಟುಂಬದ ಯಜಮಾನ ವ ಆಡಳ್ತಿದಾರ, ಬಂಟ್ವಾಳ ತಾಲ್ಲೂಕ ಮೂಡಲ ಗ್ರಾಮ. ಇವರಿಗೆ ಕೋರ್ಟ್ ಹುಕುಂ ಪ್ರಕಾರ ತಿಳಿಸುವುದೇನೆಂದರೆ—

ವಾದಿಯು ನಿಮ್ಮ ಮೇಲೆ ಡಿ. ಪ್ರೋ. ನೋಟಿನ ಐವತ್ತುಗಳನ್ನು ಬರಮಾಡಿಕೊಳ್ಳುವರೆ ದಾಕ್ಲುಮಾಡಿದ ಮೇಲಿನ ದಾವೆಯು ತಾ 22—12—61ಕ್ಕೆ ಇಟ್ಟಿರುವುದರಿಂದ ಅದಕ್ಕೆ ನಿಮ್ಮದೇನಾದರೂ ಆಕ್ಷೇಪಗಳಿದ್ದರೆ ಸದ್ರಿ ದಿನ್ಸ ಮಜ್ಕೂರು ಕೋರ್ಟ್ ಮುಂದೆ ನೀವು ಸ್ವತಹ ವ ವಕೀಲರ ದ್ವಾರಾ ಹಾಜರಾಗಿ ಉದಸರಿಸಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರು ಹಾಜರಿಯಿಂದ ತೀರ್ಮಾನಿಸಲಾದೀತು ಎಂತ ಈ ಮೂಲ್ಕ ತಿಳ್ಸಿದೆ.

(*Sd.*) C. S. Shastry,
Vakil for plff.

ಪುತ್ತೂರು, 25—11—61.

ದಿ ವಿಜಯ ಬೇಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬೇಂಕ್. ಸ್ಥಾಪನೆ: 1931

ರಿಜಿಸ್ಟರ್ಡ್ ಆಫೀಸು:

ವಿಜಯ ಬೇಂಕ್ ಬಿಲ್ಡಿಂಗ್, ಲೈಟ್ ಹೌಸ್ ಹಿಲ್ ರೋಡ್,

ಮಂಗಳೂರು-3, ಸೌತ್ ಕೆನರಾ.

ಕಾಯಂ ಠೇವಣಾತಿ ಬಡ್ಡಿ ದರವನ್ನು ಶೇಕಡ 5½ರ ವರೆಗೆ ಹೆಚ್ಚಿಸಲಾಗಿದೆ.

ಏಳು ದಿವಸದ ನೋಟೀಸಿನಲ್ಲಿ ಕೇಳಿದಾಗ್ಯೆ ಹಿಂದೆ ಪಡೆಯುವ ಡಿಪೋಸಿಟುಗಳನ್ನು (Call Deposits) ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸೋಣಾಗುತ್ತದೆ.

ಹೆಚ್ಚಿನ ಮಾಹಿತಿಗೆ ನಮ್ಮ ಶಾಖೆಗಳಲ್ಲಿ ದಯಮಾಡಿ ವಿಚಾರಿಸಿರಿ.

THE VIJAYA BANK LTD.

ಬಂಟರ ಯೊನೆ ನಾಡವರ ವಿದ್ಯಾವರ್ಧಕ ಸಂಘ, (ರಿಜಿಸ್ಟರ್ಡ್),

ಶಿರ್ವ, ದ. ಕ.

ವಿಶೇಷ ಮಹಾಸಭೆಯ ನೋಟೀಸು.

ಇದೇ ತಾ. 17—12—1961ನೇ ಆದಿತ್ಯವಾರ ಅಪರಾಹ್ನ ಘಂಟೆ 2ಕ್ಕೆ ಶಿರ್ವ ಹೈಸ್ಕೂಲ್ ಎಲಿಮೆಂಟರಿ ಶಾಲಾ "ನಿತ್ಯಾನಂದ ಸದನ"ದಲ್ಲಿ ಮೇಲಿನ ಸಂಘದ ವಿಶೇಷ ಮಹಾಸಭೆಯು ಜರಗಲಿರುವುದರಿಂದ ಸಂಘದ ಸದಸ್ಯರೆಲ್ಲರೂ ಹಾಜರಿರಬೇಕಾಗಿ ವಿನಂತಿ.

ಸಭೆಯಲ್ಲಿ ಬರತಕ್ಕ ವಿಷಯಗಳು:—

1. ಸಂಘದ ಮೆಮೊರಿಂಡಮ್ ಆಫ್, ಎಸೋಸಿಯೇಶನ್ ಮತ್ತು ಕ್ರಮ ನಿಬಂಧನೆಗಳ ಈ ಕೆಳಗಿನ ತಿದ್ದುಪಡಿಗಳು:—

ಮೆಮೊರಿಂಡಮ್‌ನ 1ರಲ್ಲಿ, 2ರಲ್ಲಿ, 2 (c)ಯಲ್ಲಿ 3ರಲ್ಲಿ, 4ರಲ್ಲಿ "ಬಂಟರ ಯೊನೆ ನಾಡವರ" ಎಂಬುದನ್ನು ಲೋಪಪಡಿಸುವುದು. 2 (f)ನಲ್ಲಿ "ಈಡು ಯೂ ಅಡವು ಮಾಡುವುದು" ಈ ವಾಕ್ಯ ಪೂರ್ತಿಯಾದ ಕೂಡಲೆ "ಕ್ರಯ ವ ಧರ್ಮಸಾಧನ ಯೂ ಪರಾಬರೆ ಕೊಡುವುದು" ಎಂಬುದನ್ನು ಸೇರಿಸುವುದು.

ಕ್ರಮ ನಿಬಂಧನೆಗಳ 1ರಲ್ಲಿ, 7ರಲ್ಲಿ "ಬಂಟರ ಯೊನೆ ನಾಡವರ" ಎಂಬುದನ್ನು ಲೋಪ ಪಡಿಸುವುದು 2ರಲ್ಲಿ "ಬಂಟರ ಯೊನೆ ನಾಡವರ ಸಮಾಜಕ್ಕೆ ಸೇರಿದವರಾಗತಕ್ಕದ್ದು" ಎಂಬುದನ್ನು ಲೋಪಪಡಿಸುವುದು. 5 (0) ಈ ವಾಕ್ಯವನ್ನು ಸಂಪೂರ್ಣ ಲೋಪಪಡಿಸುವುದು. (ಮಹಾಸಭೆಯಲ್ಲಿ ಬರುವ ಇತರ ತಿದ್ದುಪಡಿಗಳಿದ್ದರೆ)

2. ಗತವರ್ಷಗಳ ಚಾರ್ಟರ್ಡ್ ಎಕೌಂಟೆಂಟರಿಂದ ಪರಿಶೋಧಿಸಲ್ಪಟ್ಟ ಲೆಕ್ಕಪತ್ರ ಪರಿಶೀಲನೆ.

3. ಚಾಲ್ತಿ ವರ್ಷದ ಕಾರ್ಯಕಾರಿ ಮಂಡಳಿಯ ಆಯ್ಕೆ.

4. ಅಧ್ಯಕ್ಷರ ಅನುಮತಿಯ ಮೇರೆಗೆ ಬರುವ ಇತರ ವಿಷಯಗಳು.

ಶಿರ್ವ,
24-11-1961.

ಶಿರ್ವ ದುಗ್ಗಪ್ಪ ಹೆಗ್ಡೆ ಕೂಡ 16 ಮಂದಿ
ಕಾರ್ಯಕಾರಿ ಮಂಡಳಿಯ
ಸದಸ್ಯರು, ಮತ್ತಿತರರು.

ಪುಸ್ತಕ ವಿಮರ್ಶೆ

ವಿಮರ್ಶೆಗಾಗಿ ಪುಸ್ತಕಗಳನ್ನು ಕಳು
ವವರು ಎರಡೆರಡು ಪ್ರತಿಗಳನ್ನು ಕಳು
ಸಿಕೊಳ್ಳಿರಿ ವಿನಂತಿ. —ಸಂ. ಸ.]

ಹೃದಯ— (ಸಾಮಾಜಿಕ ಕಾದಂ
ಲೇಖಕರು ಮತ್ತು ಪ್ರಕಾಶಕರು:
ರಘುನಾಥ ಶೆಟ್ಟಿ, ಶ್ರೀ ಜಗನ್ನಾಥ
ನ, ಸ್ಟೇಶನ್ ರೋಡ್, ವಿಕ್ಟೋರಿಲಿ,
ಬಾಯಿ —೭೯. ಪುಟಗಳು: ೧೩೨.
ರೂ. ೨—೦೦.

ಂಕರ—ಸುನಂದೆಯರು ಅಣ್ಣತಂಗಿ
ಮಾತ್ರವಲ್ಲ, ಅವರು ಸಹೃದಯ
ಆಗಿದ್ದರು. ಎಳವೆಯಲ್ಲೇ ತಂದೆಯ
ಮುಂದೆ ತಾಯಿಯನ್ನು ಕಳೆದು
ಡ ಇವರ ಭ್ರಾತೃಪ್ರೇಮ ಅನ್ಯಾದೃ
ಗಿತ್ತು. ಕಾಲಾನುಕಾಲದಲ್ಲಿ ಶಂಕ
ಸುನಂದೆಗೆ ಮೊದಲೇ ವಿವಾಹಿತನಾ
ಕಾಯಿತು ಮಾತ್ರವಲ್ಲ, ಸುನಂದೆಯ
ಮವನ್ನು ತಪ್ಪು ತಿಳಿಯಲೂ ಬೇಕಾ
ಯಿ. ಹಲವಾರು ವಿಘ್ನವಿಡ್ಡೂರಗಳ
ಸಹಿಸಿದ ನಂತರ ಸುನಂದೆ ತಾನು
ಪ್ರೀತಿಸಿದ ಮಾಧವನನ್ನೇ ಕೈಹಿಡಿದು ಅವ
ಗೃಹಿಣಿಯಾಗಿ ಹುಟ್ಟಿದ—ಸೇರಿದ ಮ
ಕೀರ್ತಿಯನ್ನು ಬೆಳಗಿದರೆ, ಶಂಕರನ
ಪತ್ಯ ಜೀವನ ನೀರಸವಾಗುತ್ತ ಬಂ
ಸಹೃದಯೆಯಾಗಿದ್ದ ಸುನಂದೆ
ನ್ನು ತನ್ನ ಪತ್ನಿಯ ಕೊಂಡೆನುಡಿ
ತಿರಸ್ಕರಿಸಿದ ಶಂಕರನಿಗೆ ಆಕಯ
ತ ಜೀವನದಿಂದ ಪಾಠದ ಅರಿವಾ
ತ—ನಿಜವಾದ ಶಾಂತಿ ಸಿರಿವಂತಿಕೆ
ಲ್ಲಿ; ಅಮರ ಪ್ರೇಮದಲ್ಲಿದೆಯೆಂಬು
ಮನವರಿಕೆಯೂಯಿತು—ಈ ಕಥಾನ
ನ್ನು ಜೆನ್ನಾಗಿ ಪ್ರತಿಪಾದಿಸುವ ಕಾ
ಯರಿ 'ಸಹೃದಯ'.

ಾದಂಬರಿಯಲ್ಲಿ ಎನ್ನುವ ತೋರುವ
ತ್ರ ಸುನಂದೆಯದು. ಇದು ತುಂಬಿ
ದೆ. ಭ್ರಾತೃ ಸ್ನೇಹದ ಪರಾಕಾಷ್ಠೆ
ನ್ನದು ಮುಟ್ಟಿದೆ ಶಂಕರ - ಮಾಧವ
ತ್ರವು ತೃಪ್ತಿಕರವಾಗಿದೆ—ಜೀವಂ
ನ್ನುವಂತಿವೆ. ಸರಳವಾದ ಸಂಭಾಷಣೆ
ಸುಲಭ ಶೈಲಿಯೂ ಕಾದಂಬರಿಗೆ
ಭೆಯಿತ್ತಿದೆ. ಅಂದವಾದ ಹಾಲು
ದದಲ್ಲಿ ಸುಂದರವಾದ ಮುದ್ರಣವು
ರ್ಕವಿದೆ. 'ವಿದ್ಯಾರ್ಥಿಯಾಗಿದ್ದಾಗ
ಕನಾಗುವ ಹುಚ್ಚು ಕನ್ನಡ ವಾತಾ
ವಿಲ್ಲದ ಮುಂಬಯಿಯಲ್ಲೂ" ಶ್ರೀ
ರಿಂದ ಈ ಕಾದಂಬರಿ ಬರೆಸಿತು—ಈ
ಚ್ಚು ಸಾರ್ಥಕವಾಗಿದೆ. ಲೇಖಕರ ಭ
ಉಜ್ವಲವಿದೆ—ಆಶಾದಾಯಕವಿದೆ.

ಒಂದು ಕತ್ತೆಯ ಆತ್ಮ ಕಥೆ:—
ಕಂಬನಾತ್ಮಕ ಕಾದಂಬರಿ) ಮೂಲ
ಖಕರು:—ಶ್ರೀ ಕೃಷ್ಣಚಂದ್ರ. ಅನು
ವಕರು:— ಶ್ರೀ ಜಿ. ಜಿ. ಹೆಗಡೆ. ಪ್ರ
ಕರು: ಸಾಹಿತ್ಯ ಭಂಡಾರ, ಹುಬ್ಬ
ಪುಟಗಳು: ೧೩೭. ಬೆಲೆ. ರೂ.
೦೦.

ಒಂದು ಆತ್ಮದೃಷ್ಟಿತವಾದ ಮಾತಾಪಿ ಕ
ತ್ತೆಯ ಆತ್ಮ ಕಥೆಯಿದು. ತನ್ನ ಯಜಮಾ
ನನ ಬಡಪಾಯಿ ಮಡದಿ-ಮಕ್ಕಳ ಸಲು
ವಾಗಿ ಏನಾದರೂ ಸಹಾಯ ದೊರೆಯುವುದೋ
ಎಂಬ ಆಶೆಯಿಂದ ಭಾರತದ
ರಾಜಧಾನಿ ದಿಲ್ಲಿಗೆ ಹೋಗಿ ಅಲ್ಲಿನ ಸರಕಾ
ರಿ ಕಛೇರಿಗಳಲ್ಲಿ ವಿಚಿತ್ರ ಅನುಭವಗಳನ್ನು
ಗಳಿಸಿ, ಪ್ರಧಾನಿಗಳ ಭೇಟ್ಟಿಮಾಡಿ ವಿಶ್ವ
ಖ್ಯಾತಿಗಳಿಸಿದ ಅತ್ಯಪೂರ್ವ ಕತ್ತೆಯ ಆ
ತ್ಮಕಥೆಯಿದು. ಸಮಾಜವಾದ ಮಾದರಿ
ಯ ಕಲ್ಯಾಣರಾಷ್ಟ್ರವನ್ನು ಕಟ್ಟುವ ನ
ಮ್ಮ ನಾಯಕರ ಕನಸಿನ ಮನೆ ಭಾರತದ
ಲ್ಲಿ 'ಯೂರಿಗೆ ಯೂರುಂಟು' ಎಂಬ ದಾಸರ
ಪಲ್ಲವಿ ಗುಯ್‌ಗುಡುತ್ತಿದೆಯೆಂಬ ನಿತ್ಯಸ
ತ್ಯವನ್ನು ಪ್ರತಿಬಿಂಬಿಸುವ ವಿಡಂಬನಾತ್ಮ
ಕ ಕಾದಂಬರಿಯಿದು ಆದರ್ಶದ ಹೆಸರಿನ
ಲ್ಲಿ ಭಾರತೀಯರೆಲ್ಲರೂ ಬಾಯಿಬರುವ ಕ
ತ್ತೆಯಂತಾಗಿದ್ದಾರೆ ಎಂಬುದನ್ನು ಮೊ
ರ್ಮಿಕವಾಗಿ ನಿರೂಪಿಸುವ ಪ್ರಗತಿಶೀಲ
ಸಾಹಿತ್ಯ ಕೃತಿಯಿದು.

ಈ ಪುಸ್ತಕವನ್ನು ಓದುವುದರಿಂದ ನ
ಮ್ಮಲ್ಲಿ ವೈಚಾರಿಕ ಕ್ರಾಂತಿಯೂಗಬಲ್ಲುದು;
ನಮ್ಮ ನಮ್ಮವರ ನಮ್ಮ ರಾಜ್ಯದೇಶ
ಗಳ ಆಗುಹೋಗುಗಳ ಬಗ್ಗೆ ತುಸು ವಿಚಾ
ರಿಸಬೇಕೆಂಬ ತಹತಹ ಮೂಡಿಸುವುದುಸು
ರಸಕಾದಂಬರಿಯ ರೂಪದಲ್ಲಿರುವ ಈ ಆ
ತ್ಮಕಥೆಯಲ್ಲಿ ತಿಳಿಹಾಸ್ಯದ ಮಧುರ ಹಾಸ್ಯ
ವಿದೆ; ಜತೆಗೆ ವ್ಯಂಗ್ಯವೂ ಇದೆ. ಹಿಂದಿಯ
ಶ್ರೇಷ್ಠ ಸಾಹಿತ್ಯಕ ಶ್ರೀ ಕೃಷ್ಣಚಂದ್ರರ ಈ
ವಿಚಾರ ಪ್ರಚೋದಕ ಗ್ರಂಥವನ್ನು ಅನು
ವಾದ ಮಾಡಿದ ಶ್ರೀ ಹೆಗಡೆಯವರು ಕ
ನ್ನಡಿಗರೂ ತಮ್ಮಲ್ಲಿರುವ ಮಾನವತನ-
ಕತ್ತೆತನಗಳ ಕೂಳವನ್ನು ಅಳೆದು ನೋ
ಡುವ ಅವಶ್ಯಕತೆಯನ್ನು ಒತ್ತಿ ತಿಳಿಸಿ
ದ್ದಾರೆ. ಹಾಲು ಕಾಗದದಲ್ಲಿ ಅಂದವಾದ
ಮುದ್ರಣ, ಸರಳ ಮನಮೋಹಕ ಭಾಷಾ
ಶೈಲಿ, ಆಕರ್ಷಕ ರಕ್ಷಾ ಕವಚ ಮತ್ತು
ಅರ್ಥವತ್ತಾದ ಮುಖಚಿತ್ರ ಪುಸ್ತಕಕ್ಕೆ
ಮೆರಗು ಇತ್ತಿದೆ. ಓದು ಬರಹ ಬಲ್ಲ ಪ್ರತಿ
ಯೊಬ್ಬನೂ ಓದಲೇ ಬೇಕಾದ, ಆನಕ್ಷರ
ಸ್ಥನೂ ತಿಳಿಯ ಬೇಕಾದ ಕತ್ತೆಯ ಆತ್ಮ
ಕಥೆಯಿದು.

ರವೀಂದ್ರನಾಥರ ಕಿರುಗತೆಗಳು: ಅ
ನುವಾದಕರು: ಶ್ರೀ ಹನುಮಂತ ರಾವ್
ಮಾಂಜರೇಕರ. ಪ್ರಕಾಶಕರು: ನವಯು
ಗ ಎಂಟರ್‌ಪ್ರೈಸ್, ಲಿಮಿಟೆಡ್, ಉಡು
ಪಿ ಪುಟಗಳು ೫೦: ಬೆಲೆ: ರೂ.೦—೯೯೦.

ನೋಬಲ್ ಪಾರಿತೋಷಕ ವಿಜೇತ ವಿ
ಶ್ವಕವಿ ಟಾಗೋರರು ಹಲವಾರು ಕಿರುಗ
ತೆಗಳನ್ನು ಬರೆದಿದ್ದಾರೆ. ಇವು ಬೃಹತ್ಕಥೆ
ಇಲ್ಲವೇ ಕಾದಂಬರಿಗಳಿಗಿಂತ ಪರಿಣಾಮ
ಕಾರಿಯಾಗಿವೆ. ಕೇವಲ ಎರಡು—ಮೂ
ರು ಪುಟಗಳಲ್ಲಿ ಮುಗಿಯುವ ಇಪ್ಪತ್ತು ಕ
ಥೆಗಳು ಈ ಕಿರುಹೊತ್ತಗೆಯಲ್ಲಿ ಸಂಗ್ರಹಿ
ತವಾಗಿವೆ. ಇವು ಗಾತ್ರದಲ್ಲಿ ಕಿರಿದಾಗಿ
ದ್ದರೂ ಸೌಂದರ್ಯದಲ್ಲಿ, ಹೃದಯಸ್ಪರ್ಶ
ತೆ ಮತ್ತು ಭಾವಸ್ಪಂದನೆಯಲ್ಲಿ ಅತ್ಯುಚ್ಚ
ವಿವೆ; ಅಪೂರ್ವವಿವೆ. ಓದುವಾಗ ಭಾವ
ಕಥೆಗಳಂತೆ ಇವು ಭಾಸವಾಗುತ್ತವೆ; ಉ
ತ್ತರ ಕನ್ನಡದವರಾದ ಶ್ರೀ ಮಾಂಜರೇಕ
ರರ ಸರಳಸುಂದರ ಭಾಷೆಯು ಓದುಗನಲ್ಲಿ
ಪರಿಣಾಮ ಬೀರುತ್ತದೆ. ಅಂದವಾದ
ಮುದ್ರಣ, ನಿರ್ವಾಣಗಳಿಂದ ಮುಟ್ಟಿದೊ
ಡನೆಯೇ ಓದಿಬಿಡುವ ಎಂಬ ಉತ್ಸಾಹ
ಪಾಠಕರಲ್ಲಿ ಉದಿಸುತ್ತದೆ. ಅವಶ್ಯ ಸಂ
ಗ್ರಹಿಸಲೇಬೇಕಾದ ರವೀಂದ್ರಸಾಹಿತ್ಯದಲ್ಲಿ
ಒಂದು ಮಣಿಯಿದು; ಕನ್ನಡಿಗರು ಇದರ
ಪ್ರಯೋಜನವನ್ನು ಪಡೆದುಕೊಳ್ಳಲೇ
ಬೇಕು.

ಜ್ಯೋತಿರ್ವಾಣಿ:— ಧಾರವಾಡದಿಂದ
ಶ್ರೀ ಎನ್. ಕೆ. ಜೋಗಳೇಕರರು ಮುಖ್ಯ
ವಾಗಿ ಜೀವನೋಪಾಯದ ಸಾಧನವೆಂದು
ಬಗೆಯದೆ ಜ್ಞಾನಪ್ರಸಾರವನ್ನೇ ಗುರಿ
ಯಾಗಿಟ್ಟುಕೊಂಡು ಪ್ರಾರಂಭಿಸಿದ ಜ್ಯೋ
ತಿಷ್ಯ ಸಂಬಂಧಿಯಾದ ಈ ಮಾಸಪತ್ರಿಕೆ
ಯನ್ನು ಸ್ವಾಗತಿಸುತ್ತೇವೆ. ಇಂಗ್ಲಿಷ್ ಭಾ
ಷೆಯಲ್ಲಿ 'ಆಸ್ಟ್ರಾಲೋಜಿಕಲ್ ಮ್ಯಾಗ
ಜಿನ್' ಜ್ಯೋತಿಷ್ಯ ಪ್ರಸಾರಕ—ವಿಚಾರ
ಕ್ಷ ಪತ್ರಿಕೆಯಾಗಿ ದೇಶ ವಿದೇಶಗಳಲ್ಲಿ
ಖ್ಯಾತಿಪಡೆದುದನ್ನು ನಾವು ಮರೆಯುವಂ
ತಿಲ್ಲ. ಜ್ಯೋತಿಷ್ಯಕ್ಕೆ ಸಂಬಂಧಿಸಿದ ಕನ್ನಡ
ದ ಏಕಮಾತ್ರ ಪತ್ರಿಕೆಯಿನ್ನು ತಡವಾಗಿ
ಯಾದರೂ ಪ್ರಾರಂಭವಾದುದು ಅಭಿಮಾ
ನಾಸ್ಪದವಿದೆ. ಅಮೆರಿಕೆಯ ಅಧ್ಯಕ್ಷ ಕೆನ್ನೆ
ಡಿ, ಮಳೆ, ಕ್ರಿಕೆಟ್, ವಾಣಿಜ್ಯ, ವಿವಾಹ
ಚಲಚ್ಚಿತ್ರ, ಭಾವಿಚುನಾವಣೆ ಮೊದಲಾ
ದ ವಿವಿಧ ಕ್ಷೇತ್ರಗಳ ಜ್ಯೋತಿಷ್ಯ, ಮಾಸ
ಭವಿಷ್ಯ ಹಾಗೂ ಕಲಮೊಂದು ಲೇಖಗಳು
ಮೊದಲ ರಂಚಿಕೆ ಯಲ್ಲಿವೆ. ಆಕರ್ಷಕವಾ
ಗಿ ಪ್ರಕಟವಾಗುವ ಈ ಪತ್ರಿಕೆಯ ವಾರ್ಷಿ
ಕ ಚಂದಾ ರೂ. ೫—೦೦; ಬಿಡಿ ಪ್ರತಿ
ರೂ. ೦—೫೦. ವಿಳಾಸ: ರವಿವಾರ ಪೇಟೆ,
ಧಾರವಾಡ.

ಕನ್ನಡಿಗರ ಸಮ್ಪ್ರೋತ್ಸಾಹದಿಂದ ಜ್ಯೋತಿ
ರ್ವಾಣಿ ಜೀವನ ಜ್ಯೋತಿಯಾಗಿ ಬೆಳಗ
ಲೆಂದು ಹಾರೈಕೆ.

ರಂಜನೆ: (ಪಕ್ಷ ಪತ್ರಿಕೆ) ಸಂಪಾದಕ
ರು: ನಾಟ್ಯಾಚಾರ್ಯ ಕುವಾರ ವೆಂಕಣ್ಣ.
ವಾರ್ಷಿಕ ಚಂದಾ ರೂ. ೫. ಬಿಡಿ ಸಂ
ಚಿಕೆ: ರೂ. ೦—೨೦.

ತನು-ಮನಗಳ, ಹೃದಯ-ಆತ್ಮಗಳ,
ಭಾವನೆ-ಬುದ್ಧಿಗಳ ರಂಜನೆಗಾಗಿ ಅನ್ನ-ಬ
ಟ್ಟೆಯ ದಾಸನಾದ ಮಾನವನಿಗೆ ಆ ಬಗೆಗೆ
ನೆರವಾಗುವುದರ ಜತೆಗೆ ವಿಚಾರಶೀಲತೆ
ಯ ಪ್ರಾಮುಖ್ಯತೆಯ ಅರಿವು ಮೂಡಿ
ಕೊಡುವ, ಆತ್ಮದ, ಹೃದಯದ ನೆನಪ್ಪು
ಮಾಡುವ, ಮಾನವನಾಗಲು ಪುರುಷನೆನಿ
ಸಲು ಪುರುಷೋತ್ತಮನೆನಿಸಲು ನೆರವಾ
ಗುವ ಬಯಕೆಯಿಂದ ಡಾ. ಟಿ. ಪಾರ್ಥ
ಸಾರಥಿಯವರು ಪ್ರೋತ್ಸಾಹನೆಯಿಂದ ಚಲ
ಚ್ಚಿತ್ರರಂಗದಲ್ಲಿ ದುಡಿಯುತ್ತಿರುವ ಶ್ರೀ
ಕುವಾರ ವೆಂಕಣ್ಣನವರು ಈ ಹೊಸ ಪ
ತ್ರಿಕೆಯನ್ನು ಪ್ರಾರಂಭಿಸಿದ್ದಾರೆ. ನಮ್ಮ
ಕೈಸೇರಿದ 'ರಂಜನೆ'ಯ ಮೊದಲ ಸಂಚಿ
ಕೆಯ. ಉದ್ದೇಶಸಾದನೆಯ ಸಫಲವಲ್ಲದೆ
ಯೆಂದು ಹೇಳಬಹುದು. 'ರಂಜನೆ'ವು
ಜನರನ್ನು ಸರ್ವ ವಿಧವಲ್ಲೂ ರಂಜಿಸುತ್ತಿ
ರಲೆಂದು ಹಾರೈಸಿ ಈ ನೂತನ ಪತ್ರಿಕೆ
ಯನ್ನು ಸ್ವಾಗತಿಸುತ್ತೇವೆ — ಗೋರಾ.

ಕರ್ಮ ಸಾಧನೆಯಿಂದ ಪರಮಾತ್ಮನ ಪ್ರಾಪ್ತಿ

(೪೯೯ ಪುಟದಿಂದ)

ನದ ಸುಖ ದುಃಖ ದಾರಿದ್ರ್ಯದಿಗಳಲ್ಲಿ
ಯೂ ಸಹ, ಅವರು ವಿಜಯ ಪಡೆದವರಂ
ತೆ, ತಲೆಯನ್ನೆತ್ತಿಕೊಂಡೇ ಸಮಭಾವವ
ನ್ನು ಅನುಭವ ಮಾಡುತ್ತ ಮುಂದುವರಿ
ಯುತ್ತಾರೆ. ಮತ್ತು ತಮ್ಮ ರೂಪದ ಸಾ
ಕ್ಷಾತ್ಕಾರ ಹೊಂದುತ್ತ ಸದಾ ವರ್ಧಮಾ
ನವಾಗುತ್ತಿರುವ ತಮ್ಮ ಆತ್ಮ ಜ್ಯೋತಿ
ಯನ್ನು ಪ್ರಕಟಿಸುತ್ತ ಮುಂದಡಿಯಿಡು
ತ್ತಾರೆ. ಅವರ ಆತ್ಮಾನಂದವು ಅವರ ಜೀ
ವನದ ಅರ್ಥಾತ್ ವಿಶ್ವ ನಿರ್ವಾಣ ಯಾ
ವಿನಾಶರೂಪೀ ಆಟವನ್ನು ಆಡುತ್ತಿರುವ
ಆ ಶಕ್ತಿಯ ಆನಂದದೊಡನೆ, ವಿಕಸಿಸು
ವುದು. ಸೂರ್ಯನ ಪ್ರಕಾಶದ, ಮತ್ತು
ಸ್ವತಂತ್ರವಾದ ವಾಯು, ಇವುಗಳ ಆನಂ
ದವು ಅವರ ಜೀವನಾನಂದದೊಡನೆ, ಸೇ
ರಿಕೊಂಡು, ಬಾಹ್ಯ ಹಾಗೂ ಆಂತರಿಕ
ಜಗತ್ತಿನ ಅಣು ಅಣು ತನಕವೂ ವ್ಯಾಪ್ತ
ವಾಗಿ ಒಂದು ಸಂವಾದೀ ರಸದ ಉತ್ಪತ್ತಿ
ಯನ್ನು ಮಾಡುವುದು ಇಂತಹ ಈ ಶಕ್ತಿ
ಯನ್ನು ಪಡೆದ ಸಿದ್ಧ ಪುರುಷರೇ —"ಕು
ರ್ವನ್ನೇವೇಹ ಕರ್ಮಾಣಿ ಜಿಜೀವಿಷೇಚ್ಛತಂ
ಶಂ ಸಮಾಃ" ಅರ್ಥಾತ್, "ಕರ್ಮನಿರತ
ನಾಗಿದ್ದು ಕೊಂಡೇ ನೂರು ವರುಷ
ಬಾಳುವ ಇಚ್ಛೆಯುಳ್ಳವನಾಗು!" ಎಂದು
ಹೇಳಿರುವರು. —ಸಶೇಷ

ಉಳಿತಾಯದ ಬಲವೊಂದಿದ್ದರೆ.....

ಜೀವನದ ಜಡತ್ವ-ಜಗುಪ್ಸೆಗಳು ತಂತಾನೆ ಮಾಯವಾಗುವುವು; ಬದಲು, ಶರೀರದಲ್ಲಿನ ಸುಪ್ತ ಕ್ರಿಯಾಶಕ್ತಿಗಳಿಗೆ ಚೈತನ್ಯ-ಪ್ರೇರೇಪಣೆಗಳು ಸಿಕ್ಕಿ, ಜೀವನವು ಸಂಜೀವನವಾಗಿ, ಸುಖದ ಸುಪ್ಪತ್ತಿಗೆಯಾಗಿ ಮೆಲ್ಲನೆ ಮಾರ್ಪಡುವುದು.

— ಉಳಿತಾಯಕ್ಕಾಗಿ —

ಇದೇ.....ಈ ಕ್ಷಣವೇ.....ಒಂದು ಸೇವಿಂಗ್ಸ್ ಖಾತೆ ತೆರೆಯಿರಿ.

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ಸ್ಥಾಪನೆ: 1906)

ರಿಜಿಸ್ಟರ್ಡ್ ಆಫೀಸು: ಉಡುಪಿ | ಆಡಳಿತ ಆಫೀಸು: ಮಂಗಳೂರು

Tel: 'BLUEYAGAR'. —— ಚಿನ್ನ ಮತ್ತು ವಜ್ರಗಳ ಆಧುನಿಕ ತವರುಮನೆ —— Phone: 374.

ಕೆ.ಆರ್.ಕೆ.ಶೇಟ್ ಡಯಮಂಡ್ ಮಾರ್ಟ್

ಸ್ಥಾಪನೆ:1919] ಚಿನ್ನ ಮತ್ತು ವಜ್ರದ ವ್ಯಾಪಾರಿಗಳು,(ಗವರ್ನಮೆಂಟ್ ಕಾಲೇಜ್ ಎದುರುಗಡೆ)ಮಂಗಳೂರು. ಮಾಲಿಕ:ಕೆ.ಕೆ.ಆರ್.ಶೇಟ್

ನಾಸ್ತಿಕಯುಗದ ಆಸ್ತಿಕ ಸ್ವರೂಪ

(೩ನೇ ಪುಟದಿಂದ)

ದು ಮುಂದಿನ ದಾರಿಗಾಣದಾಗ ಸೈನಿಕರು ಅವರನ್ನು ಮುತ್ತಲು ಬೇಕಾದ ಏರ್ಪಾಡು ಅದರಲ್ಲಿತ್ತು. ಇದನ್ನೇ "ಚಕ್ರವ್ಯೂಹ" ಎಂದೆನ್ನಲಾಗುತ್ತದೆ. (ಆದರೆ ಈ ಕಿಲ್ಲೆಯು ಇಕ್ಕೇರಿ ಬಸವ ನಾಯಕನ ಕಾಲದಲ್ಲಿ ಟಿಪ್ಪು ಸುಲ್ತಾನನಿಂದ ಪರಾಜಿತಗೊಂಡಿತು). ಈ ಚಕ್ರ ವ್ಯೂಹವು ಸ್ವಾಮಿ ನಿತ್ಯಾನಂದರಿಂದಾಗಿ ಧ್ಯಾನ ಗುಹೆಯಾಗಿ ಪರಿವರ್ತಿಸಲ್ಪಟ್ಟಿತು. ಈ ಕಲ್ಲಿನಲ್ಲಿ ಕೊರೆಯಲ್ಪಟ್ಟ ೪೩ ಗುಹೆಗಳು ಸಾಧಕರಿಗಾಗಿ ಮೀಸಲಾಗಿರಿಸಲ್ಪಟ್ಟು ಅದುವೇ ಪ್ರಥಮ ನಿತ್ಯಾನಂದ ಆಶ್ರಮ ಕಾಂಞಂಗಾಡ್ ಎಂದೆಣಿಸಲ್ಪಟ್ಟಿತು. ಅಲ್ಲಿ ಕೆಲವಮಯ ನಿಂತು ಭಕ್ತರನ್ನಾಕರ್ಷಿಸಿ ಬಾಬಾ ಅವರು ಅಲ್ಲಿಂದ ಅದೃಶ್ಯರಾಗಿ ವಜ್ರೇಶ್ವರಿಯಲ್ಲಿ ಕಾಣಿಸಿಕೊಂಡರು. ೧೯೩೩ರಿಂದ ಕೊನೆಯ ತನಕವೂ ಬಾಬಾ ಅವರು ಅಲ್ಲಿಯೇ ನೆಲಸಿದರು.

ಈ ಪ್ರದೇಶವು ದಟ್ಟವಾದ ಕಾಡಾಗಿತ್ತು. ಇಲ್ಲಿಯ ಅದಿವಾಸಿಗಳು ಬಹುಕಷ್ಟಮಯ ಜೀವನ ಸಾಗಿಸುತ್ತಿದ್ದರು ದಿವ್ಯಜ್ಯೋತಿಯಂತೆ ಅಲ್ಲಿಗಾಗಮಿಸಿದ ಬಾಬಾ ಅವರು ಹಳ್ಳಿಗರಿಗಾಗಿ ಧರ್ಮಶಾಲೆ, ಶಾಲೆ, ಆಸ್ಪತ್ರೆ, ಪ್ರಸೂತಿಗೃಹ, ಉತ್ತಮ ಮಾರ್ಗಗಳನ್ನು ನಿರ್ಮಿಸಿದರು. ಅವರೆಂದೂ ಯಾರ ಹತ್ತಿರವೂ ಬಿಡಿ ಬಿಲ್ಲೆಯನ್ನೂ ಕೇಳಿಲ್ಲ. ಆದರೂ ಈ ಕೆಲಸಕ್ಕಾಗಿ ಅವರು ಸಾವಿರಾರು ರೂಪ್ಯಾ ಖರ್ಚುಗೈದರು. ಎಲ್ಲಿಂದ? ಎಂಬುದು ಯಾರಿಗೂ ತಿಳಿದಿಲ್ಲ. ಬಿಸಿ ನೀರಿನ ಬುಗ್ಗೆಗಳಿಗೆ ಕಟ್ಟೆಯನ್ನು ಕಟ್ಟಿಸಿ ಅವುಗಳನ್ನೆ "ಕುಂಡಗಳಾಗಿ" ನಿರ್ಮಿಸಿದರು.

ಉಸುಬಿನ ರಾಶಿಯ ಮೇಲೆ ತನ್ನ ಬೆರಳುಗಳಿಂದಲೇ ನಕ್ಷೆಯನ್ನು ತಯಾರಿಸಿ ಕೂಡಲೇ ಅದರ ಕೆಲಸವನ್ನು ಪ್ರಾರಂಭಿಸಿ ಬಿಡುತ್ತಿದ್ದರು. ಮತ್ತು ತನ್ನ ಲಂಗೋಟಿಯಿಂದ ಕಣವನ್ನು ಹೊರಗೆ ತೆಗೆಯುತ್ತಿದ್ದರು. ಆದರೆ ಅದರಲ್ಲಿ ಆ ಕೆಲಸಕ್ಕೆ ಎಷ್ಟು ಕಣ ಬೇಕೋ ಅಷ್ಟು ಮಾತ್ರ ಬರುತ್ತಿತ್ತು. ಇದೂ ಒಂದು ಪವಾಡವಲ್ಲದೇ? ಎಷ್ಟೋ ಸಲ ಜನರೂ ಸರಕಾರದವರೂ ಅವರು ಕರೆನ್ಸಿ ನೋಟುಗಳನ್ನು ತಯಾರಿಸುತ್ತಿದ್ದರೆಂದು ಸಂಶಯದಿಂದ ಪರೀಕ್ಷಿಸಿ ವಿಫಲರಾಗಿದ್ದರು. ಅದಕ್ಕೆಲ್ಲಾ ಕಾರಣವಿದೆ, ಅದರದೇ ಅದ ಮಾರ್ಗವಿದೆ ಎಂದನ್ನುತ್ತಾರೆ ಸ್ವಾಮಿ ಮುಕ್ತಾನಂದರು.

ಶಾಸ್ತ್ರಗಳಿಗನುಸಾರವಾಗಿ ಇದು ಬೇರೇನೂ ಅಲ್ಲ "ಸಂಕಲ್ಪ" (a mere wish). ಮೂನನ ದೇಶದ ಸಿದ್ಧ ಸುರುಷನು ತನ್ನ ಶಕ್ತಿಯ ಸಾಮರ್ಥ್ಯದಿಂದಾಗಿ ದೇವಪ್ರಭು—ಶಿವನಿಗೆ ಸಂಪೂರ್ಣನೆನಿಸುವುದರಿಂದ ಅವನಿಗೆ ನೋಟುಗಳನ್ನೂ ಟಿಕೇಟುಗಳನ್ನೂ ತಯಾರಿಸುವುದು ಮಕ್ಕಳಾಟದಂತೆ ಅತಿ ಸುಲಭಕಾರ್ಯ. ಈ ಸಿದ್ಧರು ತಮ್ಮ ಪವಾಡಗಳಿಂದ ಸಿದ್ಧಿಯ ಮಾರ್ಗವನ್ನು ಆಕ್ರಮಿಸುವುದಿಲ್ಲ. ಈ ಪವಾಡಗಳು ಜನರ ನಂಬುಗೆ ಗಳಿಸುವಂತೆ ಸಹಕರಿಸುತ್ತವೆ ಎಂದನ್ನುತ್ತಾರೆ ಸ್ವಾಮಿ ಮುಕ್ತಾನಂದರು.

೧೯೩೬ರಲ್ಲಿ ಸ್ವಾಮಿ ನಿತ್ಯಾನಂದರು ದಟ್ಟಡವಿಯ ಹೃದಯದಂತಹ ಮಧ್ಯ ಸ್ಥಳದಲ್ಲಿ ತಮ್ಮ ನಿವಾಸಕ್ಕಾಗಿ ಸ್ಥಾನವನ್ನಾರಿಸಿದರು. ಅಲ್ಲಿಯೇ ಹತ್ತಿರ ಒಂದು ನೀರಿನ ಸೆಳೆತವಿದೆ. ಅಂತೆಯೇ ಒಂದು ಈಶ್ವರನ ಮಂದಿರವಿದೆ. ವಿಷಯುಕ್ತ ಹಾವುಗಳು ಹೆಬ್ಬುಲಿಗಳು ವಾಸಿಸುವಂತಹ ಈ ಸ್ಥಳವನ್ನು ಅವು ಮುಂದೆ ಸಾವಿರಾರು ಮಂದಿಗೆ ಉಪದೇಶಕನಾಗಲಿರುವ ದೇವ ಸ್ವರೂಪಿಯಾಗಲಿರುವ ಈ ಮಹಾಯೋಗಿಗೆ ಬಿಟ್ಟುಕೊಟ್ಟವು. ಬರಡು ಕಾಡಾಗಿದ್ದ ಈ ಹಳ್ಳಿ ಇಂದು ಪ್ರತಿ ಮುಂಬೈಯೆನಿಸುವಂತಿದೆ.

ಬಾಬರ ದರ್ಶನಕ್ಕೆ ಬರುವ ಸಾವಿರಾರು ಮಂದಿಗೆ ಈ ಸ್ಥಾನವು ತೀರ್ಥಕ್ಷೇತ್ರವಾಯ್ತು. ಇಲ್ಲಿಗೆ ಬರುವವರನ್ನು ಎರಡು ರೀತಿಯಲ್ಲಿ ವಿಂಗಡಿಸಬಹುದು. ಒಂದು ಸಾಮಾನ್ಯರು. (ಆಶೀರ್ವಾದಾಕಾಂಕ್ಷಿಗಳು). ಇನ್ನೊಂದು ಸಾಧಕರು, ಮೊದಲನೆಯವರು ಅವರ ಆಶೀರ್ವಾದಗಳನ್ನು ತಮ್ಮ ಬೇಡಿಕೆಗಳ ಶೃಪ್ತಿಗಾಗಿಕೊಂಡರೆ, ಎರಡನೆಯವರು ಅವರ ಕೃಪೆಯನ್ನು ತಮ್ಮ ಸಾಧಕತನವಲ್ಲಿಯೇ ಸಿದ್ಧಿಯನ್ನು ಕಾಣಲಿಕ್ಕಾಗಿ ಉಪಯೋಗಿಸಿದರು. ಅದರೆ ಬಾಬಾ ಅವರಿಗೆ ಅವರಿಬ್ಬರೂ ಸರಿಸಮಾನರು. ಅವರು ಕಂಡುದು ಒಂದನ್ನೇ. ಅದೇ "ಸತ್, ಚಿತ್, ಆನಂದ" ಎಂಬುದು. ಅದುವೇ ಆನಂತ ಸತ್ಯ. ತನ್ನ ತತ್ವದಿಂದಾಗಿಯೇ ಅವರು ಅವನ್ನು ಸಾಧಿಸಿದರು. ಆ ಬ್ರಹ್ಮತತ್ವವನ್ನೇ ಅವರು ಸದ್ಗುರು ತತ್ವವಾಗಿ ಪರಿವರ್ತಿಸಿದರು.

ಅವರು ಎಲ್ಲರನ್ನೂ ಪ್ರೀತಿಸಿದರು, ಬಡವರ ಬಂಧು ಅವರು. ಹೊಟ್ಟೆಗಿಲ್ಲದವರಿಗೆ ಅನ್ನ ನೀಡುವುದೆಂದರೆ ಅವರಿಗೆ ಎಲ್ಲಿಲ್ಲದ ಸಂತಸ. ಮಕ್ಕಳ ಮೇಲೆ ಅವರಿಗಿರುವ ಪ್ರೀತಿಯು ಸರ್ವ ವಿದಿತವಿದೆ. ಇಂದು ಕೂಡಾ ಸಾಧಾರಣ ೬೦೦ ಮಕ್ಕಳಿಗೆ ದಿನೆಂಪ್ರತಿ ಮಧ್ಯಾಹ್ನದ ಊಟವು ಗಣೇಶಪುರಿಯ ಬಾಲಭೋಜನ ಗೃಹದಲ್ಲಿಯೇ ದೊರೆಯುತ್ತದೆ ವಿವಿಧ ಸಾಧಕರು, ಇತರರಿಂದ ಉಪದೇಶ ಪಡೆದವರು ಕೂಡಾ ಈ ಯೋಗಿಯ ಪವಾಡಕ್ಕೆ ಮಂತ್ರಮುಗ್ಧರಾಗಿ ಅವರ ಚರಣರಜದಲ್ಲಿ ತಮ್ಮ ಸಾಧಕತ್ವವನ್ನು ಶಕ್ತಿಪಥದ ಮೇಲೆ ನಡೆಸುತ್ತಿದ್ದಾರೆ.

ಇಂದು ಗಣೇಶಪುರಿಯು ಯಾತ್ರಾಕ್ಷೇತ್ರವಾಗಿದೆ, ಬರುವ ಯಾತ್ರಿಕರಿಗಾಗಿ ಅಲ್ಲಿ ಅರ್ಧ ಡಜನಿಗಿಂತಲೂ ಹೆಚ್ಚು ಹೊಟೇಲುಗಳಿವೆ ೪ ಬೋರ್ಡಿಂಗ್ ಲಾಜಿಂಗ್‌ಗಳಿವೆ. ಅಲ್ಲದೆ ಇನ್ನಿತರ ವೈಯಕ್ತಿಕ ಬಿಲ್ಡಿಂಗ್‌ಗಳಿವೆ. ಮುಂಬೈಯ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಹಲವಾರು ಮಂದಿ ಮನೆ ಮಾಡಿದುದರಿಂದ ಅಂತೆಯೇ ಗಣೇಶಪುರಿಯು ದೊಡ್ಡದಾಗುತ್ತ ಬರುತ್ತಿರುವುದರಿಂದ ಊರ ಹಳ್ಳಿಯ ಜನರೆಂದೂ ನಿರುದ್ಯೋಗಿಗಳಾಗಿರಲಿಲ್ಲ.

ಶಕ್ತಿಯು ಮುಂಚೆ ಒಂದೇ ಆಗಿತ್ತು. ಅನಂತರ ಅದಕ್ಕೆ ಅನೇಕವಾಗುವ ಬಯಕೆಯಾಯ್ತು—ಹಾಗಾದಾಗ ಅದು ಜಗತ್ತಾಯ್ತು ಎಂದು ಶಾಸ್ತ್ರಗಳನ್ನುತ್ತವೆ. ಇಂದು ಗಣೇಶಪುರಿಯನ್ನು ಕಂಡರೂ ಅದೇ ಮಾತು ನೆನಪಾಗುತ್ತದೆ. ಮೊತ್ತ ಮೊದಲು ಗಣೇಶಪುರಿಯು ಸರ್ವಶಕ್ತಿಗಳ ಸಾಮ್ರಾಟ್, ಆಗ ಒಂದು. ಅದೇ ಲಂಗೋಟಿಯ ಬಾಬಾ ಅವರು ಒಬ್ಬರೇ ಇದ್ದರು. ಈಗ ಲಕ್ಷಾಂತರ ಆಗಿರುವರು. ಇಂದು ಗಣೇಶಪುರಿಯಲ್ಲಿ ಅವರು ಕಾಣಸಿಗುವುದಿಲ್ಲ. ಆದರೆ ಅಲ್ಲಿ ಕಣ ಕಣಗಳಲ್ಲಿ ಅವರ ದಿವ್ಯತೆ, ಅವರ ನಾಮ, ನಿನಾದ ಝೇಂಕರಿಸುತ್ತದೆ. ವಿಶಾಲ ಭೂಮಾತೆಯ ಅಂಕದಲ್ಲಿ ಈ ಮಹಾನ್‌ಯೋಗಿಯ ಒಂದು ಸಣ್ಣ ಸಮಾಧಿಯು ಭಕ್ತರ ಬಿಂಧವಾಗಿದೆ.

ಬಾಬರ ಹಿಂಬಾಲಕರು ಇಂದು ಕೂಡಾ ವಜ್ರೇಶ್ವರಿಯನ್ನು ಪ್ರೇಕ್ಷಣೀಯ ಸ್ಥಾನವನ್ನಾಗಿ ಮಾಡಲುಹೆಣಗುತ್ತಿದ್ದಾರೆ ಹಳ್ಳಿಗೆ ಪ್ರವೇಶಿಸುತ್ತಲೇ ಮೊತ್ತ ಮೊದಲು ಕಾಣಿಸುವುದು ಗ್ರಾಮದೇವಿಯ ಗುಡಿ. ಅದರ ನುಗ್ಗುಲಿಗೇ ಹಿರಿಯ ಸಾಧಕರೆಂದೆನಿಸಿ ಸರ್ವಜನಮಾನ್ಯರಾಗಿರುವ ಶ್ರೀ ನಿತ್ಯಾನಂದ ಸ್ವಾಮಿಗಳ ಶಿಷ್ಯರಲ್ಲೊಬ್ಬರೂ ಪ್ರಮುಖರೂ ಆಗಿರುವ ಶ್ರೀ ಮುಕ್ತಾನಂದ ಸ್ವಾಮಿಗಳ ಶ್ರಮವಿದೆ. ಇಂದು ಅವರ ನೇತೃತ್ವದಲ್ಲಿಯೇ ಹಲವಾರು ಮಂದಿ ಶಕ್ತಿಪಥದ ಸಾಧನೆಗೈಯುತ್ತಿರುವರು.

ನಾನು ಹಲವಾರು ಸಿದ್ಧರ ಸಂಪರ್ಕವಿಲ್ಲದ್ದೇನಾದರೂ ಮುಕ್ತಾನಂದರನ್ನು ಹೆಚ್ಚು ಸನ್ಮಾನಿಸುತ್ತೇನೆ. ಯಾಕೆಂದರೆ ತಮ್ಮ ಗುರಂತವರು ಅವರು ಒಬ್ಬರೇ ಆಗಿರುವುದು. ಗುರುವಿನ ಪ್ರಾಣೋತ್ಕ್ರಮಣಸಮಯದಲ್ಲಿಯೂ ಅವರ ಹತ್ತಿರವಿದ್ದ ಶಿಷ್ಯರೆಂದು ಇಂಥವರು ಬಾಬಾರವರ ಕೀರ್ತಿಯನ್ನು ಹೆಚ್ಚಿಸುವ ಅಪೇಕ್ಷೆಯಿಂದ ಭಕ್ತ ಜನರನ್ನು ಆಕರ್ಷಿಸುತ್ತಾ ಗಣೇಶಪುರಿಯಲ್ಲಿರುವರು. ಅವರ ಕಾರ್ಯಕ್ರಮಕ್ಕೆ ಶ್ರೀ ಗುರುವಿನ ಕೃಪೆಯಿರಲಿ ಎಂದು ನಾವೂ ಹಾರೈಸೋಣ.

[The mirror ಎಂಬ ಆಂಗ್ಲ ಪತ್ರಿಕೆದಲ್ಲಿ ಶ್ರೀ ಪ್ರಕಾಶ ಯೋಂಡೇ ಅವರು ಬರೆದ ಲೇಖನದ ಭಾವಾನುವಾದ]

[ಬಾಬಾ ಅವರ ಸಮಾಧಿಯ ಬಲಕ್ಕೆ ಅವರ ಗುರುವಿಗಿಂತಲೂ ಮುಂಚೆ ಕೈವಲ್ಯವಾಸಿಯಾದ ದಯಾನಂದ ಸ್ವಾಮಿ ಅವರ ಸಮಾಧಿಯಿದೆ.

ಬಾಬಾ ಅವರ ಪ್ರಥಮ ಆಶ್ರಮವಾದ ಬಾಬಾ ಅವರ ಸಮಾಧಿಯ ದರ್ಶನದ ಬಳಿಕ ಇನ್ನೊಂದು ತೀರ್ಥಕ್ಷೇತ್ರವೆನಿಸಿರುವ ಕಾಂಞಂಗಾಡಿನಲ್ಲಿ ಬಾಬಾ ಅವರ ಪ್ರಥಮ ಶಿಷ್ಯರೂ, ಗಾಣಿಗಾಪುರ ಹಿಮಾಲಯಗಳಲ್ಲಿ ಕೆಲವರ್ಷ ತಪಸ್ಸು ಗೈದ ಮಹಾನ್ ಸಿದ್ಧ ಪುರುಷರೂ ಆದ ಶ್ರೀ ಜನಾನಂದ ಸ್ವಾಮಿಗಳಿರುವರು. ಬಾಬಾ ಅವರು ಕಾಂಞಂಗಾಡಿನಲ್ಲಿ ನಿರ್ಮಿಸಿದ ಗುಹೆಗಳನ್ನು ಸೂರ್ಣಗೊಳಿಸಿ ಪ್ರೇಕ್ಷಣೀಯಗೊಳಿಸಿ ಭಕ್ತಜನರ ಮನಸ್ಸಿನಲ್ಲಿ ಭಕ್ತಿಯ ಬೀಜವನ್ನು ಬಿತ್ತುವರು. ಬಾಬಾ ಅವರ ಪ್ರತಿಬಿಂಬದಂತಿರುವರು. ಬಾಬಾ ಅವರ ಭಕ್ತಜನ ತಂಡಿ 'ನಿತ್ಯಾನಂದ ದರ್ಶನ' ಎಂಬೊಂದು ಹೊಸ ಪತ್ರಿಕೆಯನ್ನು ಪ್ರೊ। ಜಿ. ಕುಲಕರ್ಣಿ ಅವರ ಸಂಪಾದಕತ್ವದಲ್ಲಿ ಮುಂಬೈಯಿಂದ ಪ್ರಕಟಿಸುತ್ತಿದ್ದಾರೆ. ಇದು ನಿತ್ಯಾನಂದರ ಉಪದೇಶ ಜೀವನ ಮುಂತಾದುವುಗಳ ಕುರಿತು ಯೋಚನೆಯನ್ನೂ ಪ್ರಕಟಿಸುತ್ತದೆ—ಅನುವಾದಕ.

ಓಂ ಶ್ರೀ ಸದ್ಗುರು ನಿತ್ಯಾನಂದಾಯ ನಮಃ
ಓಂ ಶಾಂತಿ: ಶಾಂತಿ: ಶಾಂತಿ:





ಪುತ್ತೂರು ಡಿ. ಮು. ಕೋರ್ಟಿನ

R. E. P. 316/61 in O. S. 434/5

ಅಲ್ಬರ್ಟ್ ಹೆನ್ರಿ ಪಿಂಟೋ—ಅರ್ಜಿದಾರ

ಅಂಮುಂಣಿ, ವಾಮುಂಹೂರು ಅಪ್ಪಯ್ಯ ಹೆಂಡ್ತಿ, ವಿಟ್ಲ ಕ್ಷಬಾ ಗ್ರಾಮ —ಎದ್ರಿ

ಎದ್ರಿಗೆ ಕೋರ್ಟು ಹುಕುಂ ಪ್ರಕಾರ ತಿಳಿಸುವುದೇನೆಂದ್ರೆ—

ವಾದಿಯು ಮೇಲ್ಕಂಡ O. S. 434/56 ನೇ ಡಿಕ್ರಿ ಮೇಲೆ ನಡ್ಸಿದ ಮೇಲ್ಕಂಡ ಜ್ಯಾರಿಯು ತಾರೀಕು 2—12—61 ಕ್ಕೆ ಆಗಿರುವುದರಿಂದ ಅದ್ರ ನಿಂಮದೇನಾದರೂ ಆಕ್ಷೇಪಗಳಿದ್ರೆ ಸದ್ರಿ ದಿವ್ಸ ಮಜ್ಕೂರು ಕೋರ್ಟಿನ ಮುಂದೆ ಹಾಜರಾಗಿ ಉಪಪರಿಸಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಂಮ ಗೈರು ಹಾಜರಿಯಲ್ಲಿ ತೀರ್ಮಾನಿಸಲಾದೀತು.

(Sd.) B. Ishwara Bhat
Advocate for petitioner

ಪುತ್ತೂರು, ತಾ. 6—11—61.

ಣ್ಣ ಬೇಡಿ ತೊಡಿಸಿದಳು

(೨ನೇ ಪುಟದಿಂದ)

"ಯಾರು? ನಾನೇ ವೈರಾಗಿ? ವಿರಾಗಿ ಕ್ಕ ಅಕ್ಕನ ಬಯಕೆ?"

"ವಿರಾಗಿಗೆ ಸ್ತ್ರೀ ಜನಾಂಗವೇ ಅಕ್ಕ ಗಿಯರೆಂದು ನೀನು ತಿಳಿದಂತಿಲ್ಲ"

ವಿರಾಗಿ ಯಾವುದನ್ನು ಬಯಸುವುದಿಲ್ಲ. ತ್ಯ, ತಾನು ವಿರಾಗಿ. ಸ್ತ್ರೀಯರನ್ನು ಡರೆ ತನಗೆ ಗೌರವ. ಎಂಬುದನ್ನು ರಿಸಿ ಕೊಡುವ ಆ ಸೋಗು"

"ಅಂದಂತೆ ನೀನು?"

ನನ್ನನ್ನು ಅದಕ್ಕೆ ತದ್ವಿರುದ್ಧ — ನಾ ನನ್ನ ಹೃದಯವನ್ನು ಅರಿಯುವ, ನ ನ್ನು ತಮ್ಮನೆಂದು ಸ್ವೀಕರಿಸಿ, ನನ್ನ ಸು ಸುಖದಲ್ಲಿ ಭಾಗಿಯಾಗಿ ಕಣ್ಣೀರು ಹ ವ, ಆತ್ಮೀಯ ಸಹೋದರಿಯನ್ನು ಬ ಯುತ್ತೇನೆ, ಅಕ್ಕಾ"

ಇದು ನಿನ್ನ ಸ್ವಾರ್ಥವಲ್ಲವೇ ತಮ್ಮ?"

"ಸ್ವಾರ್ಥವಲ್ಲ. ಈ ಪ್ರಪಂಚದಲ್ಲಿ ಹು ಟ ಪಾಪಕ್ಕೆ ವ್ಯಾಯಶ್ಚಿತ್ತ. ಈ ದೇಹ ದು ಬೆಂಡಾದಾಗ "ನೀನು ಬಹಳ ತಿದ್ದೀಯೂ" ಎಂದು ಸಂತೈಸುವ ಧುವಿನ ನಡಿಜೇನು ಹುಟ್ಟದುದು ರ್ಥಕ. ಬದುಕುಬೇಕು ಎಂದು ತೋರಿ ಕೊಡಬಲ್ಲುದು"

"ಅಕ್ಕನಾಗಿ ನಿನ್ನ ಸುಖದುಃಖಗಳಲ್ಲಿ ಗಿಯಾಗುವ ಮಹಿಳೆಯರು ಬಹಳ ಕ ಸಿ ತಮ್ಮಾ"

"ಇದೇನೆ ನಾನು ಈ ಸ್ಥಿತಿಗೆ ಬಂ ಮುಟ್ಟಿದೇನೆ ಅಕ್ಕಾ"

"ಹುಚ್ಚ ತಾಯಿಯ ಮಮತೆ ನಿನ್ನ ಲಿಗೆ ದೊರಕಿದುದು ಸುಳ್ಳೆ?"

"ಸುಳ್ಳಲ್ಲ ಅಕ್ಕ, ಸತ್ಯ.....ಮಮತೆ ಸವಿಜೇನನ್ನು ಸವಿದಿದ್ದೆ. ಜೀವನದ ಲಿ. ಕನಸನ್ನು ಕಂಡಿದ್ದೆ. ಆ ತಾಯಿ ತೃಪ್ತಿಗಾಗಿ, ನನ್ನ ಈ ದೇಹವನ್ನು ಡಿಪಾಗಿ ಅರ್ಪಿಸಿದೆ. ಮಗನ ಸುಖವ ಅವಳು ಯೋಚಿಸಲಿಲ್ಲ. ತನ್ನ ಸುಖ ನ್ನು ಅವಳು ಬಯಸಿದಳು"

"ಮಗ ತನಗೆ ಸುಖ ಕೊಡಬೇಕು, ಎ ಆಶೆ ತಾಯಿಗೆ ಸಹಜವಾಗಿಯೇ ಇ ರಲ್ಲವೆ?"

"ಸಹಜ, ಸಹಜ, ಆದರೆ ಅದರೊಂದಿ ಗೆ ಮಗ ಸುಖವಾಗಿರಬೇಕು ಎಂದು ಅವ ಕೂಡ ಭಾವಿಸಬೇಕು"

"ನಿನ್ನನ್ನು ಹತ್ತು ತಿಂಗಳು ಹೊತ್ತು ತ್ತು ಬೆಳೆಸಿದುದಕ್ಕಾಗಿ ಒಂದಿಷ್ಟು ತ್ಯಾ ಮಾಡಲಾರೆಯಾ ತಮ್ಮಾ"

"ಅಂತೆಯೇ ಅವಳಿಗಾಗಿ ಈ ಹೃದಯ ಯಾಯಿತು ಎಂದೆನಲ್ಲ"

"ತ್ಯಾಗ ಮಾಡಿ ಕೊರಗುವುದು ಮೂ ಕನವಲ್ಲವೇ ತಮ್ಮ?"

"ನಾನು ಕೊರಗುತ್ತಿಲ್ಲ, ಅಕ್ಕ. ನನ್ನ ಗಿಷ್ಟೆ ಅವಳು ಬೆಲೆ ಕೊಡಲಿಲ್ಲವಲ್ಲಾ ನು ಕೊರಗುತ್ತೇನೆ ಅಷ್ಟೆ"

"ಅದೇನು, ನಿನ್ನನ್ನು ಸರಿಯಾಗಿ ನಡೆ ಸಲೇ ನಿನ್ನ ತಾಯಿ?"

"ನಡೆಸಿದಳು. ಆದರೆ ಬಗ್ಗದ ಮಡದಿ ನ್ನು ಕಟ್ಟಿ ನನ್ನ ಬಾಳನ್ನು ಮರುಭೂ ಮಿಯನ್ನಾಗಿ ಮಾಡಿದಳು"

"ನಿನಗೆ ಮದುವೆ ಬೇರೆ ಆಗಿದೆ ನೋ?"

"ಹೌದು ಆಗಿದೆ. ಅದು ಪ್ರಾರಬ್ಧಕರ್ಮ ಡಿಸಿದ ಬೇಡಿ" ಎಂದು ವಿಲಕ್ಷಣವಾಗಿ

"ಹಾಗಾದರೆ ಕೈಹಿಡಿದವಳನ್ನು ಸರಿ ಯಾಗಿ ನಡೆಸಲಿಲ್ಲ"

"ಬೇಡಾದ ವಸ್ತುವನ್ನು ಹೇಗೆ ಕಣ್ಣೆ ದುರು ಇಟ್ಟುಕೊಳ್ಳಲಿ ಕೇಳು"

"ರೂಪವತಿಯಲ್ಲವೇ ಅವಳು?"

"ಸುಂದರಿಯೇ ಅನ್ನಬಹುದು."

'ಮತ್ತೆಕೆ ಹೇಳು ತಾತ್ಪರ್ಯ?'

"ನಾನು ಕೂಡ ಪ್ರೇಮದ ಸೆಳೆತಕ್ಕೆ ಸಿಕ್ಕಿಬಿದ್ದಿದೆ'

"ಮತ್ತೇನಾಯಿತು ಹೇಳು. ನಿನ್ನನ್ನು ಅವಳು ಕಡೆಗಣಿಸಿದಳೇ?'

"ಇಲ್ಲ. ಇಲ್ಲ. ನಾನೇ ಕಡೆಗಣಿಸಿದೆ. ನನ್ನ ತಾಯಿಯ ಕಣ್ಣೀರಿಗೆ ಕರಗಿ ಮತ್ತೊಬ್ಬಳ ಕೈಹಿಡಿದೆ. ಅವಳೇ ನನ್ನ ಮಡದಿ ಶಾಂತಿ. ನಮ್ಮ ಸಂಸಾರ ನೆಟ್ಟಗಾಗಲಿಲ್ಲವಕ್ಕಾ'

"ಈ ವಿಷಯದಲ್ಲಿ, ಈ ಪ್ರಪಂಚಕ್ಕೆ ನೀನು ಹೊಸಬನಲ್ಲ ತಮ್ಮಾ'

"ಅದರೆ ಅಕ್ಕಾ, ಕೈಹಿಡಿದವಳು ಕೂಡಾ, ನನ್ನನ್ನೇ ನಂಬಿರಲಿಲ್ಲ'

"ಕೈಗೆ ಬಂದದ್ದು ಬಂಗಾರವೆಂದು ನೀನು ಕಂಡುಕೊಳ್ಳಲಿಲ್ಲ'

"ಅದು ಬಾಯಿ ಮಾತಾಯಿತು ಅಕ್ಕಾ

"ನೀನು ಸರಿಯಾಗಿ ನಡೆಸಲಿಲ್ಲ. ಅವಳು ನಿನ್ನನ್ನೆ ನಂಬಲಿಲ್ಲ ಇದರಲ್ಲಿ ಆಶ್ಚರ್ಯವೇನು?'

'ಹಾಗೆಯೇ ಆಗಿರಬೇಕು ಅದು'

"ನೀನು ಯಾರೆಂದು ಹೇಳಲೇ ಇಲ್ಲವಲ್ಲ ಗುಳತೋಡದೆ ಮರನೆಟ್ಟಂತೆ ಆಯಿತಲ್ಲಾ"

"ಅದನ್ನ ಹೇಳಬೇಕೆಂದಿದೆ. ನಾನು ಯಾರೆಂದು ಮಾತ್ರವಲ್ಲ ನನ್ನ ಬಾಳಕತೆಯನ್ನು ನಿನ್ನ ಮುಂದಿಡುತ್ತೇನೆ ಅಕ್ಕಾ'

"ವೇದನೆ ಪಡುವಿಯಾದರೆ ಬೇಡ ತಮ್ಮಾ"

"ಅನುಭವಿಸಿದವನಿಗೆ ಇದು ಕಷ್ಟದ ವಿಷಯವಲ್ಲ ನಾನು ಶ್ರೀಮಂತಕುಟುಂಬದಲ್ಲಿಯೇ ಜನಿಸಿದ್ದು. ನನ್ನನ್ನು ಜಾಣ ಶೀಲನೆಂದು ಕರೆಯುತ್ತಿದ್ದರೂ, ನಾನು ಸೋಲನ್ನೇ ಅಪ್ಪಿಕೊಂಡು ಬಂದದ್ದು, ನನ್ನ ಕಾಲೇಜಿನ ಸಹಪಾಠಿನಿ ಚಂದ್ರಿಕೆ, ನಿಜವಾಗಿಯೂ ಚಂದ್ರಿಕೆಯೇ ಆಗಿದ್ದಳು. ಅವಳನ್ನು ನಾನು ಪ್ರೀತಿಸಿದೆ. ಅವಳೂ ನನ್ನನ್ನು ಮೆಚ್ಚಿದಳು. ವಿದ್ಯಾಭ್ಯಾಸ ಮುಗಿಸಿ ದಂಪತಿಗಳಾಗಬೇಕೆಂದು ಬಯಸಿದ್ದೆವು ನಾವು. ಆದರೆ ವಿಧಿ ಅಣಕಲಾಡಿಬಿಟ್ಟಿತು. ಬೇಡಾದ ಮಡದಿಯನ್ನು ತಂದು ಒಲಿದ ಮಡದಿಯನ್ನು ಕಿತ್ತೆಸೆದು ಬಿಟ್ಟಿತು. ಇದು ನನ್ನ ದೂರ್ಭಾಗ್ಯ ನನಗೆ ಪಿಸಿದ ಭಾಗ್ಯ. ಹಾಗೇ ಅವಳ ಋಣವೂ ಸಂದಿತು ಅನ್ನು. ಶಾಂತಿಯ ಕೈಹಿಡಿದ ಪತಿ ಸುಖವಾಗಿ ಬಾಳಲಿಲ್ಲ. ಚಂದ್ರಿಕೆಗೆ ನಾನಿತ್ತ ಕಾಣಿಕೆ ಕೃತಘ್ನತೆ, ವಂಚನೆ, ಮೋಸ ಇಷ್ಟೇ. ನನಗೆ ಹತ್ತು ಕಾಗದ ಬರೆದಳು. ನಾನು ಉತ್ತರ ಬರೆಯಲಿಲ್ಲ. ಕಡೆಗೊಂದು ದಿನ ನನ್ನನ್ನು ಕಾಣಲು ಬಂದೇ ಬಿಟ್ಟಳು. ಮನೆಯಿಡೀ ರಂಪಾಟವಾಯಿತು. ಮರುನೆಯ ಮೊದಲು ನನ್ನ ಅಡ್ಡಿಗೆ ಕಾರಣ ಕಂಡು ಹಿಡಿದರು. ಕೈಹಿಡಿದ ಶಾಂತಿ ಅಶಾಂತಿ ಹಬ್ಬಿಸಿ ಬಿಟ್ಟಳು. ನನ್ನನ್ನೇ ನಂಬಿ ಯೌವನದ ಒಯಿಕೆಗೆ ಬಲಿಯಾದ ನನ್ನಾ ಚಂದ್ರಿಕೆಯ ಪರಿಚಯವಿಲ್ಲವೆಂಬಂತೆ ವರ್ತಿಸಿದೆ. ಮನುಷ್ಯ ಪಶು ಅಕ್ಕಾ. ನಾಯಿಯನ್ನಾದರೂ ನಂಬ ಬಹುದು, ಮಾನವನನ್ನಲ್ಲ ಎಂಬ ಮಾತು ನನ್ನ ಪಾಲಿಗೆ ನಿಜವಾಯಿತು. ಚಂದ್ರಿಕೆ ಬೀದಿಯ ಭಿಕಾರಿಣಿಯಂತೆ ದೂಡಲ್ಪಟ್ಟಳು. ಕ್ಷಣಕಾಲದ ವೇದನೆಯಿಂದ ಅವಳ ಪ್ರತಿಯೊಂದು ಮಾತನ್ನು ಅಲ್ಲಗಳೆದೆ. ಒಪ್ಪೇನು, ಅವಳ ಪರಿಚಯವಿಲ್ಲವೆಂಬಂತೆ ವರ್ತಿಸಿದೆ. ಆ ಸಂದರ್ಭದಲ್ಲಿ ನಾನು ಮೂರ್ಖನಾಗಿದ್ದೆ" — ಎಂದು ಲೋಕವನ್ನೇ ತಿರಸ್ಕರಿಸುವಂತೆ ನಕ್ಕ. "ಅಂದಿನಿಂದ ನನ್ನ ಚಂದ್ರಿಕಾ ಬೀದಿ ಭಿಕಾರಿಣಿಯಾದಳು. ಕಡೆಗೊಂದು ದಿನ ಚರಂಡಿಯಲ್ಲಿ ಬಿದ್ದು ಸತ್ತು ಕೊಳೆತಳು. ಇದನ್ನು ಕೇಳಿದ ನಾನು ಹುಚ್ಚನಂತಾದೆ ಮನೆಮಂದಿ ಭೀಕರವಾಯಿತು. ನನ್ನ ಪಾಲಿಗೆ ಯಾರೂ ಇಲ್ಲವಾದರು. ನನ್ನ ಮಡದಿ ಶಾಂತಿ, ನನ್ನ ತಾಯಿಯ ಮುದ್ದಿನ ಸೊಸೆ ಶಾಂತಿ, ನನ್ನ ಕಣ್ಣೆದುರೇ ತನಗೊಬ್ಬ ಗಂಡನಿರುವನೆಂಬುದನ್ನೂ ಮರೆತಳು. ತನ್ನ ಇಷ್ಟ ಬಂದ ಹಾಗೇ ವರ್ತಿಸಿದಳು. ದಿನ ಕಳೆದಂತೆ ಅವಳ ಈ ಉದ್ಧಟತನವನ್ನು ಸಹಿಸುವ ಸಹನೆ ನನಗೆ ಉಳಿಯಲಿಲ್ಲ. ಅವಳ ಪ್ರತಿಯೊಂದು ಮಾತಿಗೂ ಸಿಡಿದು ಬೀಳುತ್ತಿದ್ದೆ. ಆಗ.....ಹೆಣ್ಣಿಗೂ ಸ್ವಾತಂತ್ರ್ಯವಿದೆಯೆಂಬುದನ್ನು ಮರೆತು ಬಿಟ್ಟಿದ್ದ- ಎಲ್ಲಿಂದಲೋ ಆಗೋಚರವಾದ ಸ್ವಳದಿಂದ "ನೀನು ಗಂಡ" ಎಂದು ದರ್ಪದಿಂದ ಸಾರಿಸಾರಿ ನುಡಿಯುತ್ತಿದ್ದಂತಿತ್ತು. ಹಾಗೇನೆ ಈಗ ಕೆಲವು ಗಂಟೆಗಳ ಮೊದಲುನನ್ನೀಕೈಗಳಿಂದಲೇಆಕೆಈಲೋಕವನ್ನು ತ್ಯಜಿಸಬೇಕಾಯಿತು. ಅದು ಹೇಗಂತೆಯಾ ಅಕ್ಕಾ—ಅವಳ ಒಂದೇ ಒಂದು ಮಾತಿಗಾಗಿ ಅವಳು ಸಾವನ್ನಪ್ಪ ಬೇಕಾಯಿತು. "ಎಲ್ಲಿಂದ ಬರುತ್ತಿದ್ದಿಯೂ ಮರ್ಯಾದೆಗೆಟ್ಟವಳೆ?" ಎಂದೆ. "ಅದು ನೀವು ಕಟ್ಟಿಕೊಟ್ಟದ್ದು" ಎಂದಳು. ಅದ

ಡಿ. ವಿಜಯಾ ಬ್ಯಾಂಕ್ ಲಿಮಿಟೆಡ್, ಕಾರ್ಕಳ.

ಏಲಂ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬ್ಯಾಂಕಿನಲ್ಲಿ ಚಿನ್ನಾಭರಣದ ಊಡಿನ ಮೇಲೆ ಸಾಲ ಪಡೆಕೊಂಡು ಕ್ಲಪ್ತ ವಾಯಿದೆಗೆ ಅಸಲು ಬಡ್ಡಿ ವಗೈರೆ ಕೊಡದೆ ಬಾಕಿಮಾಡಿಕೊಂಡಿರುವುದರಿಂದಲೂ, ಸದ್ರಿ ಸಾಲವನ್ನು ಬರಮಾಡಿಕೊಳ್ಳುವರೇ ಆಸರಿಗೆ ರಿಜಿಸ್ಟ್ರಿನೋಟೀಸು ಬಿಟ್ಟಲ್ಲಿಯೂ ಸದ್ರಿಯವುಗಳನ್ನು ಬಿಡಿಸಿಕೊಂಡು ಹೋಗುವರೆ ತಪ್ಪಿದ ಕಾರಣ ಸದ್ರಿಯವರ ಊಡಿಟ್ಟ ನಗಗಳನ್ನು ಇದೇ ಬರುವ ತಾರೀಕು 12—12—1961ನೇ ಮಂಗಳವಾರ ಮಧ್ಯಾಹ್ನ ಗಂಟೆ 4ಕ್ಕೆ ಸರಿಯಾಗಿ ಅಥವಾ ಬೇಂಕಿಗೆ ಯುಕ್ತಕಂಡ ಇತರ ಯಾವುದೇ ದಿನಗಳಲ್ಲಿ ಪುನಃ ನೋಟೀಸು ಕೊಡದೇನೇ ಬಹಿರಂಗವಾಗಿ ಏಲಂ ಮಾಡಲಾಗುವುದು ಏಲಂ ಮಿನಲ್ಲಿ ಹುಟ್ಟಬಂದ ಐವೇಜು ಸಾಲದ ಮೊಬಲಗಿಗೆ ಕಡಿಮೆಯಾದಲ್ಲಿ ಸಂಬಂಧಪಟ್ಟವರ ದೇಶ ಜವಾಬ್ದಾರಿಯಿಂದ ಬೇಂಕಿಗೆ ಬಹ ಐವೇಜನ್ನು ವಸೂಲು ಮಾಡಲಾದೀತೆಂಬುದನ್ನು ಈ ಮೂಲಕ ತಿಳಿಸೋಣಾಗಿದೆ.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ.	ತಾರೀಕು 30—9—1961ಕ್ಕೆ ಬರತಕ್ಕ ಮೊಬಲಗು
146/59	ಶ್ರೀ ಕೆ. ಹೆಚ್. ಲಕ್ಷ್ಮೀನಾರಾಯಣ ಪೈ, ಕೆ. ಹೆಚ್. ನರಸಿಂಹ ಪೈಯವರ ಮಗ, ಶಬರಿ ಆಶ್ರಮದ ಬಳಿ, ಕಾರ್ಕಳ.	37.69
280/59	ಡಾಕ್ಟರ್ ಟಿ. ಕೆ. ಶಂಕರ ಶೆಟ್ಟಿ, ರಿಜಿಸ್ಟರ್ಡ್ ಮೆಡಿಕಲ್ ಪ್ರಾಕ್ಟೀಶನರ್, ಬಜಗೋಳಿ.	41.13
640/59	ಶ್ರೀ ಗುಮ್ಮಣ್ಣ ಕಾಬಯ, ರಾಜು ಪೂಜಾರಿಯವರ ಮಗ, ಮರ್ಚಂಟ್, ಕೊಂಡಿಬೆಟ್ಟು ಗ್ರಾಮ, ನೆಲ್ಲಿಕಾರ್ ಪೋಸ್ಟು.	323.59
922/59	ಶ್ರೀ ಶಿವಪ್ಪ ಸುವರ್ಣ, ನಾಗಯ್ಯ ಪೂಜಾರಿಯವರ ಮಗ, ಮುಲ್ಕಾಡು ಮನೆ, ಯೆಳ್ಳಾರೆ ಗ್ರಾಮ, ಮುನಿಯಾಲು ಪೋಸ್ಟು	245.67
969/59	ಶ್ರೀ ಶಾಂತಿರಾಜ ಭಂಡಾರಿ, ಧರ್ಮರಾಜ ಭಂಡಾರಿಯವರ ಅಳಿಯ, ಕರಿಯಾಲು ಮನೆ, ನಲ್ಲೂರು ಗ್ರಾಮ ಬಜಗೋಳಿ.	126.98
1041/59	ಶ್ರೀ ಸುಬ್ಬಯ್ಯ ಶೆಟ್ಟಿಗಾರ, ಬಾಬಣ್ಣ ಶೆಟ್ಟಿಗಾರರ ಮಗ, ಗುಮಾಸ್ತ, ಪೆರ್ಮಾಜೆ, ಕಾರ್ಕಳ.	50.19
1055/59	ಶ್ರೀ ಕೆ. ಪಿ. ಪಾಂಡಿರಾಜ ಹೆಗ್ಡೆ, ಕೆ. ಪಿ ಪದ್ಮಯ ಹೆಗ್ಡೆಯವರ ಮಗ, ಮರ್ಚಂಟ್, ಹಿರಿಯಂಗಡಿ, ಕಾರ್ಕಳ.	451.93
224/60	ಶ್ರೀ ಕೆ. ಅನಂತ್ರಾಜ ಇಂದ್ರ, ಶಾಂತಿರಾಜ ಇಂದ್ರನವರ ಮಗ, ಅರಮನೆಯೆಂಟಲ್ಲಿರುವವರು, ಹಿರಿಯಂಗಡಿ, ಕಾರ್ಕಳ.	128.89
259/60	ಶ್ರೀ ಕೆ. ಶಂಕರ, ಮಹಾಲಿಂಗನವರ ಮಗ, ಫೋರೆಸ್ಟ್ ಗಾರ್ಡ್, ಪಣಂಬೇರಿ ಮೂಡಬಿದ್ರೆ ರೇಂಜ್, ನೆಲ್ಲಿಕಾರ್.	161.39
294/60	ಸಂಜೀವಿ ಶೆಟ್ಟಿ, ಕೋಚ ಯಾನೆ ನಾರಾಯಣ ಶೆಟ್ಟರ ಪತ್ನಿ, ಕಟ್ಟೆಬೆಟ್ಟು ಮನೆ, ಪಾಲಡ್ಕ ಗ್ರಾಮ, ಪಾಲಡ್ಕ ಪೋಸ್ಟು	33.59
376/60	ಡಾಕ್ಟರ್ ಟಿ. ಕೆ ಶಂಕರ ಶೆಟ್ಟಿ, ರೂರಲ್ ಡಿಸ್ಪೆನ್ಸರಿ, ಬಜಗೋಳಿ	400-79
445/60	ಡಾಕ್ಟರ್ ಟಿ. ಕೆ. ಶಂಕರ ಶೆಟ್ಟಿ, ಮೆಡಿಕಲ್ ಪ್ರಾಕ್ಟೀಶನರ್, ಬಜಗೋಳಿ ಪೋಸ್ಟು.	46.26
460/60	ಕೆ. ಪಿ. ಪದ್ಮರಾಜ ನಾಯ್ಕ, ಕೆ. ಪಿ. ನೇಮಿರಾಜ ಹೆಗ್ಡೆಯವರ ಮಗ ಪರೇಲ, ಕುತ್ಲೂರು ಗ್ರಾಮ, ಪೋಸ್ಟು ನಾರಾವಿ.	195.27

The Vijaya Bank, Ltd.,
KARKALA.

M. M Bhandary,
Agent.

Dated 24—11—1961

ಡಿ. ಕೆ. ಭಾರದ್ವಾಜರ

ಇಂಗ್ಲಿಷ್, ಇಂಗ್ಲಿಷ್-ಕನ್ನಡ

ಡಿಕ್ಷನರಿ

ಬೆಲೆ: ರೂ. ನಾಲ್ಕು.

ಐದು ರೂಪಾಯಿ ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟಿನಿಂದ ಕಳಿಸಲಾಗುವುದು.

ವಿಚಾರಿಸಿರಿ:

ನವಭಾರತ ಪುಸ್ತಕ ಭಂಡಾರ
ಉಡುಪಿ.

NAVAYUGA, UDIPI.
REGD. NO.BG. 176

30-11-1961

LICENSE NO. 31
Licensed to Post without Prepayment

ಕ್ಯಾಗಿಯೇ ಅವಳು ಅರ್ಧದಿಂದಲೇ ಈ ಲೋಕ ಬಿಡಬೇಕಾಯಿತು. ಆಗ ಅವಳ ಮಾತಿನಲ್ಲಿ ಅಡಕವಾಗಿದ್ದ ಸತ್ಯತೆ ನನಗೆ ಅರಿವಿಗೆ ಬರಲಿಲ್ಲ. ಅರಿವಿಗೆ ಬರುವಾಗ ಎಲ್ಲ ಮುಗಿದಿತ್ತು. ನಾನು ಏನು ಮಾಡಿದೆ ಎಂದು ತಿಳಿದಾಗ, ರೈಲ್ವೇ ಪ್ಲೇಟ್ ಫೋರ್ಮಿನಲ್ಲಿ ಓಡಾಡುತ್ತಿದ್ದ. ಎಲ್ಲಿಗೋ ಹೊರಡುವ ರೈಲಿನಲ್ಲಿ ಕುಳಿತುದೂ ಆಯಿತು. ನಿನ್ನಂತಹ ಅಕ್ಕನನ್ನು ಕಡೆಯ ಗಳಿಗೆಯಲ್ಲಾದರೂ, ಪಡೆದೆ. ಎಂಬ ತೃಪ್ತಿ ನನಗಾಗಿದೆ ಅಕ್ಕಾ".....ಎಂದು ಬಾಗಿ ಕಣ್ಣೀರು ಸುರಿಸಿದ.

"ನೀನು ಪಡೆದುಕೊಂಡು ಬಂದ ಭಾಗ್ಯ. ತಮ್ಮಾ" ಎಂದು ಸಂತೈಸಿದಳು. ಸಬಿತಾ, "ಎಲ್ಲಿಗೆ ಪಯಣ ನಿನ್ನದು?" ಎಂದು ಕೇಳ ಬೇಕೆನಿಸಿತು. ಅವಳಿಗೆ. ಆದರೆ ರೈಲು, ಮುಂದಿನ ಸ್ಟೇಶನಿನಲ್ಲಿ ನಿಂತಾಗ ಅತನನ್ನು ಬಂಧಿಸಲು ಪೋಲಿಸರು ಸಿದ್ಧರಾಗಿ ನಿಂತಿದ್ದರು. ಜಯಶೀಲ ಅವಳ ಕಾಲಿಗೆ ಬಿದ್ದು "ಹೋಗುತ್ತೇನೆ ಅಕ್ಕಾ! ಕಡೆಗಳಿಗೆಯಲ್ಲಿ ನಿನಗೆ ದೊರಕಿದ ತಮ್ಮನನ್ನು ಮರೆಯ ಬೇಡ" ಎಂದು ಪಾದ ಮುಟ್ಟಿ ಹೇಳಿದ. ಸಬಿತಾಗೆ ಅವನನ್ನು ತಡೆಯುವ ಶಕ್ತಿ ಬಂದಿರಲಿಲ್ಲ. ಅವಳು ಅವನನ್ನು ಹಿಡಿದೆತ್ತಿ, ಮೃದುವಾಗಿ ತಲೆಯನ್ನು ನೇವರಿಸಿ ನುಡಿದಳು, "ಹೋಗಿ ಬಾ ತಮ್ಮ, ಕಡೆಗಳಿಗೆಯಲ್ಲಿ ಬಂಧು ಪೊಬ್ಬನನ್ನು ಪಡೆದು ಕೂಡಲೇ ಬೇಳ್ಕೊಡ ಬೇಕಾಯಿತು. ಹೋಗಿ ಬಾ ಬಂಧು. ದೇವರು ನಿನ್ನನ್ನು ಕ್ಷಮಿಸಲಿ.... ಅವಳು ಕಣ್ಣೀರನ್ನು ತಡೆಗಟ್ಟಲು ಯತ್ನಿಸಿದಷ್ಟು ದುಃಖ ಉಮ್ಮಳಿಸಿ ಬಂತು. —"ಹೋಗಿ ಬಾ ಪ್ರಿಯ ತಮ್ಮ" ಎಂದು ಬಿಗಿಯಾಗಿ ತಬ್ಬಿ ಹಿಡಿದಳು, ತಾನು ಯಾವ ಪ್ರಪಂಚದಲ್ಲಿ ಇದ್ದೇನೆಂಬುದನ್ನೂ ಮರೆತು.

ಪೋಲೀಸು ವೇನು ರಭಸದಿಂದ ಹರಿಯಿತು. ಕಣ್ಣೀರ ಹೊಳೆಗಳು ಒಂದನ್ನೊಂದು ಸಂಗಮಿಸಿದುವು.

× × ×

ಸಬಿತಾ, ತನ್ನ ಮನೆಯಲ್ಲಿ ಕುಳಿತು ಪಶ್ಚಿಮ ದಿಗಂತವನ್ನು ನೋಡಿದಳು. ಕೆಂಬಣ್ಣಕ್ಕೆ ತಿರುಗಿತು ಆಕಾಶ. ನಸು ಕತ್ತಲಾಗಿತ್ತು ಭೂಮಿ. ಆ ನಸುಗತ್ತಲಲ್ಲಿ ಪಡು ದಿಗಂತದ ಬಳಿ ರತ್ನಸಿದ್ಧವಾಗಿದ್ದ ಆ ಗಸದ ಬಳಿ—ಎರಡು ಕರಿ ಛಾಯೆಗಳು ಮತ್ತೊಂದು ಮನುಷ್ಯಾಕೃತಿಯನ್ನು ಬಂಧಿಸಿ ಎಳೆದೊಯ್ಯುತ್ತಿದ್ದಂತೆ ಭಾಸವಾಯಿತು ಅವಳಿಗೆ. ಮಹಾ ಪುರುಷನೊಬ್ಬ ಈ ಪ್ರಪಂಚದ ಹೆಚ್ಚು ನೆಳೆತಕ್ಕೆ ಸಿಕ್ಕಿ ಬೇಸತ್ತು ಅದೃಶ್ಯನಾದಂತೆ ಭಾಸವಾಯಿತು ಅವಳಿಗೆ.

ಅಸ್ಥಮಾ ರೋಗಿಗಳ ತಿಳುವಳಿಕೆಗೆ

ರಿಜಿಸ್ಟ್ರಿಯಾದ ಚಿತ್ರಕೋಟ್ ಅಸ್ತಮಾ ನಿವಾರಕಔಷಧಿಯನ್ನು ತಾ. 21-12-61ನೇ ಮಣ್ಣಿಮೆ ರಾತ್ರಿ ಬೀರಿನೊಂದಿಗೆ ಸೇವಿಸುವುದರಿಂದ ಅಸ್ತಮಾ, ನೇವಸ, ಕೆಮ್ಮು, ನೆಗಡಿ ನಿವಾರಣೆಯಾಗುತ್ತದೆ. ಕೂಡಲೇ ಹುಣ್ಣಿಮೆಯ ಮೊದಲೇ ಬರೆಯಿರಿ.

Manager, Shri Mahatma Naga Baba Ayuruvedashram,
P. O. Chitrakot U. P.

ಪೋರ್ಚುಗೀಸರ ಗುಂಡು—ಭಾರತೀಯನ ಬಲಿ

(ಎನೇ ಪುಟದಿಂದ)

ರಾಮನ ಶರೀರಕ್ಕೆ ತಗುಲಿ ಅತನ ಎಡಗಾಲಿನ ಎಲುಬು ಮುರಿಯಿತೆಂದೂ ತಿಳಿಯುತ್ತದೆ.

ಗುಂಡು ತಾಗಿದೊಡನೆಯೇ ಕೋಳೇರಕರನ ಸಂಗಡಿಗರು ಸರ್ವ ಪ್ರಕಾರದ ಪ್ರಥಮ ಚಿಕಿತ್ಸೆಯನ್ನು ನೀಡಿ, ಕಾರವಾರದ ಮವಲೀಗಾಂಧಿನ ಬಳಿ ನೌಕೆಯನ್ನು ಮರಳಿ ತಂದರು. ಆಗ ರಾತ್ರೆ ಎರಡು ಗಂಟೆಯಾಗಿತ್ತು. ಸ್ವಲ್ಪವೇ ಹೊತ್ತಾದ ನಂತರ ಆ ಹತದೃಷ್ಟನು ಮೃತ್ಯು ಮುಖನಾದನು. ಪೋರ್ಚುಗಲ್ ಸಾಮ್ರಾಜ್ಯವಾದಿಗಳ ಗೋಳಿಬಾರಿಗೆ ಸಿಲುಕಿ, ಅವರಿಂದ ತನ್ನ ಪ್ರಾಣ ನೀಗಿದ ಭಾರತೀಯರಲ್ಲಿ ರಾಜಾರಾಮನೇ ಪ್ರಪ್ರಥಮನು. ಇದು ದುರಂತ ವಾರ್ತೆ ಮಾತ್ರವಲ್ಲದೆ ಚಿಂತನೀಯ ವಿಷಯವೂ ಆಗಿದೆ. ಪೋರ್ಚುಗಲ್ಲು ಭಾರತವನ್ನು ಕಾಲುಕೆರೆದು ಯುದ್ಧಕ್ಕೆ ಆಹ್ವಾನವೀಯುವಂತೆ ತೋರುತ್ತದೆ. ಇಂತಹ ಆಹ್ವಾನವನ್ನು ಭಾರತವು ಬೇಡವೆಂದರೂ ಸ್ವೀಕರಿಸಲೇ ಬೇಕಾಗುತ್ತದೆ ಇಲ್ಲವೇ ತನ್ನ ಸತ್ವವನ್ನು ಮರೆತು ಸುಮ್ಮನಿರ ಬೇಕಾಗುತ್ತದೆ.

ಸಬರ್ಮತಿ ಪ್ರವಾಸಿ ನೌಕೆಯ ಮೇಲೆ ಬಿದ್ದ ಗುಂಡಿನ ಸುದ್ದಿ ತಿಳಿದ ಕಾರವಾರದ ಪೋಲೀಸರು ವಿನುಗಾರರೆಲ್ಲರಿಗೂ ಅಂಜದೇವ ದ್ವೀಪದ ಬಳಿ ಹೋಗಬಾರದೆಂದು ಅಪಾಯದ ಮುನ್ಸೂಚನೆಯಿತ್ತಿದ್ದರೂ ಈ ಸೂಚನೆಯನ್ನು ಕಡೆಗಣಿಸಿದ್ದರಿಂದ ರಾಜಾರಾಮನು ಸಾವನ್ನಪ್ಪಿದನೆನ್ನುವುದು ಸತ್ಯವಾದರೂ ಪೋರ್ಚುಗೀಸರ ಈ ಬಗೆಯ ಅತ್ಯಾಚಾರವು ಅಸಹನೀಯವಿದೆಯೆಂಬು ನಿರ್ವಿವಾದ. ಭಾರತೀಯರ ಮೇಲೆ ಇಂತಹ ಗುಂಡೆಸತ ನಡೆಯುವುದೆಂದರೆ—ಅದರಲ್ಲೂ ನಿರಪರಾಧಿ ವಿನುಗಾರರ ಮೇಲೆ—ಭಾರತವನ್ನು ಎಂತಾದರೂ ಮಾಡಿ ಸಮರರಂಗಕ್ಕೆ ಎಳೆಯುವ ಆತುರವೇ ಪೋರ್ಚುಗಲ್ಲಿಗಿದೆಯೆನ್ನ ಬೇಕು. ಅವಶ್ಯಕತೆ ಕಂಡರೆ ಸೈನಿಕ ಕಾರ್ಯಾಚರಣೆಯನ್ನೂ ನಾವು ಕೈಗೊಳ್ಳುವೆವೆಂದು ಘೋಷಿಸುವ ನಮ್ಮ ನೇತಾರರು ಈ ಪ್ರಾಣಾಪಹರಣದ ಪ್ರಸಂಗವನ್ನು ಅತಿ ಲಘುವೆಂದು ಭಾವಿಸಬಾರದು.

ಪ್ರಾಣಿದಯೆ

ವಿಕ್ಟೋರಿಯಾ ಮಹಾರಾಣಿಯವರು ಹಳ್ಳಿಯ ಜೀವಿಗಳ ಆಗುಹೋಗುಗಳಲ್ಲಿ ಆಸ್ಥೆ ವಹಿಸುತ್ತಿದ್ದರು. ಒಮ್ಮೆ ಅವರೊಂದು ಹಳ್ಳಿಗೆ ಭೇಟಿಯಿತ್ತಾಗ ಒಬ್ಬನು ಭಾರವಾದ ಮೂಟೆಯನ್ನು ತನ್ನ ಬಡಕಲಾದ ಕತ್ತೆಯ ಮೇಲೆ ಹೇರಿಕೊಂಡು ಹೋಗುವುದನ್ನು ಕಂಡರು. ಮುಂದೆ ನಾಗಲು ಅವರಿಂದಾಗಲಿಲ್ಲ. ಕೃಶವಾದ ಆ ಕತ್ತೆ ಹಾಗೂ ಅದರ ಬೆನ್ನ ಮೇಲಿನ ಭಾರವಾದ ಮೂಟೆಯನ್ನೂ ಆ ಕತ್ತೆಯ ನಿರ್ದಯಿಯಾದ ಯಜಮಾನನ ವರ್ತನೆ ನೋಡಿ ಅವರ ಮನ ಮರುಗಿತು.

ವಿಕ್ಟೋರಿಯಾ-ಅವರು ಕತ್ತೆಯ ಯಜಮಾನನೊಡನೆ "ಏನಪ್ಪಾ, ಈ ಕತ್ತೆಯನ್ನು ಮಾರುವಿಯಾ?" ಎಂದು ಕೇಳಿದರು ರಾಣಿಯವರು ಈ ಕತ್ತೆಯನ್ನು ಖರೀದಿಸಲು ಹವಣಿಸಿದುದು ಅವರ ಪರಿಚಾರಕರಿಗೆ ಆಶ್ಚರ್ಯವಾಗಿತ್ತು.

ಕತ್ತೆಯ ಯಜಮಾನನು ವಂದಿಸುತ್ತಾ "ಯೋಗ್ಯ ಬೆಲೆ ದೊರೆತಲ್ಲಿ ಮಾರಬಹುದು" ಎಂದನು.

"ನೀನು ಖರೀದಿಸಿದ ಬೆಲೆಯ ಎರಡರಷ್ಟು ಹಣ ಕೊಡುವೆ. ಈ ಕತ್ತೆಗೆ ಇನ್ನು ಯಾತನೆಯಿಲ್ಲದಂತೆ ಮಾಡಲೇಬಿದ್ದೇನೆ. ನನಗೆ ಈ ಕತ್ತೆ ಕೊಟ್ಟುಬಿಡು" ಎಂದರು ರಾಣಿಯವರು. ಅದಕ್ಕೆ ಸಂತುಷ್ಟನಾದ ಕತ್ತೆಯ ಯಜಮಾನ ತನ್ನ ಕತ್ತೆಯನ್ನು ಮಾರಿದ.

ಮರು ವರ್ಷ ರಾಣಿಯವರು ಅದೇ ಹಳ್ಳಿಗೆ ತಿರುಗಾಡಲು ಹೋದಾಗ ಅವರ ಪರಿಚಾರಕರ ಆಶ್ಚರ್ಯದಲ್ಲಿದ್ದ ತನ್ನ ಕತ್ತೆಯನ್ನು ಆ ಹಳ್ಳಿಗನು ನೋಡಿದ! ಅದು ಮೊದಲಿನಂತಿರಲಿಲ್ಲ! ಅದರ ಪರಿಚಯ ಹಿಡಿಯುವದೂ ಕಠಿಣವಾಗಿತ್ತು. ಮೈ-ಕೈ ತುಂಬಿಕೊಂಡು-ಜರಿ, ಶಾಲು, ಬೆಳ್ಳಿಬಂಗಾರದ ಜೂಲು ಹೊದೆದ ದಷ್ಟಪುಷ್ಟವಾದ ಆ ತನ್ನ ಕತ್ತೆಯನ್ನು ನೋಡಿ ಅದರ ಹಳೆ ಯಜಮಾನನು ಮನದಲ್ಲಿಯೇ ಪರಿತಪಿಸಿಕೊಂಡು "ಕತ್ತೆಯ ಜೊತೆಗೆ ತನ್ನನ್ನೇ ಮಾರಿಕೊಂಡಿದ್ದರೆ ಒಳಿತಾಗಿತ್ತು. ನನಗಿಂತ ಕತ್ತೆಯೇ ಸುದೈವಿ"—ಎಂದುಕೊಂಡನು.

ತನ್ನಂತರ ಇದನ್ನರಿತ ಹಳ್ಳಿಗರು ರಾಣಿಯವರು ಬರುವರೆಂದು ಕೇಳುತ್ತಲೇ ತಮ್ಮ ಬಡಕಲು ಕತ್ತೆಗಳೊಡನೆ ಅವರನ್ನು ಕಾಣಲು ಪ್ರಾರಂಭಿಸಿದ್ದರಂತೆ! ರಾಣಿಯವರು ದುಡಿಯುವ ಪ್ರಾಣಿಗಳಿಗೆ ಹೊಟ್ಟೆತುಂಬಾ ದಾಣಿಕೊಡಲು ಜನರನ್ನು ವಿನಂತಿಸುತ್ತಿದ್ದರಂತೆ.

—ಸಿರಿಸತಿ.

ಅ ದಿನ.....
ಅತ್ಯಂತ ಸ್ಮಾಮುಖ್ಯವಾದುದು.

ಸಿ. ವಿದ್ಯಾರಂಭ, ಪರೀಕ್ಷೆಯಲ್ಲಿ ತೇರ್ಗಡೆ, ಉಪನಯನ, ಮದುವೆ, ಉದ್ಯೋಗಾರಂಭ, ಇವೇ ಮೊದಲಾದ ಕೆಲವು ದಿನಗಳು ಜೀವಮಾನದ ಒಳಿತು ಕೆಡುಕುಗಳನ್ನು ರೂಪಿಸುವಷ್ಟು ಮಹತ್ವದ ದಿನಗಳು.

ಡಿ. ಅಂತೆಯೇ ತಿಂಗಳ ವೇತನ ಕೈಗೆ ಬಂದೊಡನೆ ನಿಯಮಿತವಾಗಿ ಇಂತಿಷ್ಟನ್ನು ಉಳಿಸಬೇಕೆಂದು ನಿರ್ಧಾರ ಮಾಡಿದ ಮತ್ತು ಅದಕ್ಕಾಗಿ ಸಿಂಡಿಕೇಟ್ ಬ್ಯಾಂಕಿನಲ್ಲಿ ಒಂದು ಸಿ. ಡಿ. ಯನ್ನು ಆರಂಭಿಸಿದ ದಿನ ಕೂಡಾ.

ಎಷ್ಟು ಬೇಗ ಈ ದಿನ ನಿಮ್ಮ ಜೀವನದಲ್ಲಿ ಉದಯವಾಗುವುದೋ ಅಷ್ಟು ಹೆಚ್ಚು ನೀವು ನಿಮ್ಮ ಜೀವನದಲ್ಲಿ ಸಂತುಷ್ಟರಾಗಿರಬಲ್ಲಿರಿ.

ಕ್ಯುಮುಲೇಟಿವ್ ಡಿಪಾಜಿಟ್

ಯಾಕೆಂದರೆ ಸಿಂಡಿಕೇಟ್ ಬ್ಯಾಂಕಿನ ಕ್ಯುಮುಲೇಟಿವ್ ಡಿಪಾಜಿಟ್ ಯೋಜನೆ ಆ ರೀತಿಯಾಗಿ ರೂಪಿಸಲ್ಪಟ್ಟಿದೆ.

ಸಿಂಡಿಕೇಟ್ ಬ್ಯಾಂಕ್

ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್.

ಮಂಗಳೂರು ಸ್ಪೆಶಲ್ ಅಸಿಸ್ಟಾಂಟ್ ಕಮಿಶನರ ಕೋರ್ಟಿನಲ್ಲಿ

O. P. 931/1961

ಪಿ. ದೇವದಾಸ ನಾಯಕ್—ಅರ್ಜಿದಾರ,

ಮತ್ತು

ಚಂದು ಪೂಜಾರಿ—ರಾಮು ಪೂಜಾರಿಳ ಮಗ-ಉಡುಪಿ ತಾಲೂಕು ಉದಿಯಾವರ ಗ್ರಾಮ —ರೆಸ್ಪಾಂಡೆಂಟ್

ಯವರೊಳಗೆ

ಸದರಿ ರೆಸ್ಪಾಂಡೆಂಟ್ ಚಂದು ಪೂಜಾರಿಗೆ—

ರೆಸ್ಪಾಂಡೆಂಟನು ಅರ್ಜಿದಾರಗೆ ತಾರೀಖ 26.9.54ಲ್ಲಿ ಬರೆಕೊಟ್ಟ ಜಾಲಗೇಣಿ ದ್ರುನುಡಿಗೆ ಕಾರಣವಾದ ಆಸ್ತಿಯ ಬಾಬ್ತು ರ್ಪಾಂಡೆಂಟನಿಂದ ಅರ್ಜಿದಾರಗೆ ಬಹಾಕದ ಮನ್ಮಥ ಸಂ/ರೆದ ಆದಿ ಲ,ಗಾಯಿತಿನ ಣಿಯನ್ನು ಕೊಡದೆಯಿದ್ದ ಸಂಮ್ಮಂದ ಸದ ಆಸ್ತಿಸ್ವಾಧೀನ ಬಗ್ಗೆ ಅರ್ಜಿದಾರನು ರ್ಪಾಂಡೆಂಟನ ಮೇಲೆ ಮಾಡಿದ ಸದರಿ ಅರ್ಜಿಯ ತಾ 14_12_61ಕ್ಕೆ ಸದರಿ ಕೋರ್ಟ ಉಡ್ಪಿ ಮೊಕ್ಕಾಂನಲ್ಲಿ ತ್ಯಾಗೆ ಇಟ್ಟಿದೆ. ಆ ಸದರಿ ರೆಸ್ಪಾಂಡೆಂಟನು ಸದರಿ ಕೋರ್ಟು ಮುಂದೆ ಹಾಜರಾಗಲಿಕ್ಕೆ ತಪ್ಪಿದ್ದೆ ಆ ನ ಗೈರ್ ಹಾಜರಿಯಿಂದ ಸದರಿ ಅರ್ಜಿಯ ತೀರ್ಮಾನಿಸಲ್ಪಡುವದೆಂದು ಈ ಮೂಲ ತಿಳಿಯಪಡಿಸೋಣಾಗಿಯದೆ.

M. Damodar Kamath
Advocate for Petitioner.
ಉಡುಪಿ, ತಾ. 20-11-61.

ವರ್ಗ—ಊಳಿಗ
ಮೊದಲಾದ ಯಾವತ್ತೂ ತರದ
ಎಕೌಂಟ್ ಪುಸ್ತಕಗಳು
ಶಾಲಾ ರಿಜಿಸ್ಟ್ರಿಗಳು,
ಫಾರ್ಮುಗಳು,
ದೊರಯುತ್ತವೆ.
ವಿಚಾರಿಸಿರಿ—
ನವಯುಗ ಪ್ರೆಸ್, ಉಡುಪಿ

Edited Printed & Published by K. H. Shetty, at the Navayuga Press, Udipi, S. India.

ನಮ್ಮ ಯೊವತ್ತೂ
ದ್ರಣ ಕೆಲಸಗಳಿಗೆ
ಯಮಾಡಿ ವಿಚಾರಿಸಿರಿ:
ನವಯುಗ ಪ್ರೆಸ್,
ಉಡುಪಿ

ರಾಷ್ಟ್ರೀಯ ವಾರಪತ್ರಿಕೆ. ಬೆಲೆ: 13 ನ.ಪೈಸೆ

ನವಯುಗ

KANNADA — NAVAYUGA — WEEKLY

ವಿದ್ಯಾರ್ಥಿಗಳಿಗೆ
ಮತ್ತು ವಯಸ್ಕರಿಗೆ
ಅತ್ಯುಪಯೋಗೀ ಪುಸ್ತಕ
ಸುಲಭದಲ್ಲಿ ಇಂಗ್ಲಿಷ್
(ಆಂಗ್ಲ ಸ್ವಯಂಬೋಧಿನಿ)
ನವಭಾರತ ಪುಸ್ತಕ ಭಂಡಾರ
ಉಡುಪಿ

ಸಂಪುಟ ೪೧ ಸಂಚಿಕೆ ೧೩ | ಉಡುಪಿ 7—12—1961 ಗುರುವಾರ | Vol. 41 No. 13

ಅಹಿಂಸೆಯ ಪುನರಾಲೋಚನೆ

ಶೀ ಎಂ. ರಂಗರಾವ್.

ಅಹಿಂಸೆಯ ಮಹತ್ವ

ಸತ್ಯವನ್ನೇ ಮಾತಾಡ ಬೇಕೆಂಬುದು ಎಂತಹ ಕಳ್ಳನಿಗಾದರೂ ಗೊತ್ತಿರುವಂತಹ ಸರ್ವ ಸಾಧಾರಣವಾದ ಪ್ರಸಿದ್ಧ ನೀತಿ ವಾಕ್ಯ. ಅದರಂತೆ ಅಹಿಂಸೆಯೇ ಪರಮ ಧರ್ಮವೆಂಬ ಮಾತು ಕೂಡಾ ಎಲ್ಲರಿಗೂ ಗೊತ್ತಿರುವಂಥಾದ್ದೇ. ಚರಾಚರಾತ್ಮಕವಾದ ಈ ಸೃಷ್ಟಿಯಲ್ಲಿರುವ ಯಾವ ಪ್ರಾಣಿಗಳನ್ನೂ ಕೊಲ್ಲಬಾರದೆಂಬುದೇ ಅಹಿಂಸೆಯ ಅರ್ಥವೆಂದು ಸಾಮಾನ್ಯವಾದ ನಂಬುಗೆಯುಂಟು. ಪ್ರಾಣಿಗಳನ್ನು ಹುಟ್ಟಿಸುವ ಶಕ್ತಿಯಿಲ್ಲದವರೆಗೆ ಕೊಲ್ಲುವ ಅಧಿಕಾರ ಕೂಡಾ ಇಲ್ಲವೆಂಬುದು ಅದರ ತಾತ್ಪರ್ಯ. ಹುಟ್ಟಿದ ಪ್ರಾಣಿಗಳು ಸಹಜವಾಗಿಯೇ ಕ್ರಮೇಣ ಕಾಲಗತಿಯನ್ನೈದಿ ಮತ್ತೆ ಹುಟ್ಟುತ್ತವೆ; ಈ ವಿಧವಾಗಿ ಪ್ರಪಂಚದ ಸಮತೋಲವು ಪ್ರಕೃತಿ ಸಿದ್ಧವಾಗಿಯೇ ಕಾಪಾಡಲ್ಪಡುತ್ತದೆ. ಅದುವೇ ನಿಸರ್ಗನಿಯತಿ. ಅದುದರಿಂದ ಬಲವುಳ್ಳವರು ಬಲವಿಲ್ಲದ ಪ್ರಾಣಿಗಳನ್ನು ಕೊಲ್ಲುವುದು ಪ್ರಕೃತಿ ನಿಯಮಕ್ಕೆ ವಿರೋಧವಾದುದು, ಪಾಪ, ಮಹಾಪಾಪವೆಂದು ಎಲ್ಲಾ ಕಡೆ ರೂಢಿಯಾಗಿಹೋಗಿದೆ.

ಇದನ್ನು ಸ್ವಲ್ಪ ಪರಿತೀಲಿಸಿ ನೋಡುವಾಗ, ಈ ಮಾತು ಪೂರ್ಣ ನಿಜವೆನ್ನಲೂ ಬಾರದು, ಪೂರ್ಣ ಸುಳ್ಳೆನ್ನಲೂ ಬಾರದು.

ಮನುಷ್ಯನ ಹೊಂತಾಗಿ ಉಳಿದ ಪ್ರಾಣಿಕೋಟಿಗಳಿಗೆಲ್ಲಾ ನೀತಿಯ ಮಾತನ್ನು ಯಾರೂ ಕಲಿಸಿಕೊಡುವುದಿಲ್ಲವಷ್ಟೆ? ನಿಜವಾಗಿಯೂ ಪ್ರಕೃತಿ ನಿಯಮಕ್ಕೆ ಒಳಪಟ್ಟುಕೊಂಡು ಬದುಕಿಕೊಂಡು ಹೋಗುವ ಪ್ರಾಣಿಗಳೆಂದರೆ ಅವೇ ಪರಿ ಮನುಷ್ಯ ಕೂಡಾ ಅಂಥದೊಂದು ಪ್ರಾಣಿಯೇ ಆದರೂ, ಬುದ್ಧಿ ಪ್ರಧಾನಿಯಾಗಿದ್ದಾನೆ. ವಿಧಿನಿಯಮಕ್ಕೆ ವಿರೋಧವಾದ ಎಷ್ಟೋ ಕಾರ್ಯಗಳನ್ನು ಸಾಧಿಸುವವನು ಮನುಷ್ಯ. ಪ್ರಕೃತಿಶಕ್ತಿಗಳನ್ನು ತನ್ನ ಹಿಡಿತದೊಳಗೆ ತಂದುಕೊಂಡು ತನ್ನಿಷ್ಟಾನುಸಾರವಾಗಿ ನಡೆಸಲೆತ್ನಿಸುವವನು ಮನುಷ್ಯ. ಅದರಿಂದ ಇತರ ಪ್ರಾಣಿಗಳಿಗೆ ಹಿಂಸೆಯಾಗುವ, ಹಿಂಸೆಯಿಂದ ನಾಶವಾಗುವ ಸಂದರ್ಭಗಳುಂಟಾಗುತ್ತವೆ. ಆಗ ಪ್ರಪಂಚದ ಸಮತೋಲವು ತಪ್ಪಿ ಹೆಚ್ಚುಕಡಮೆಯಾಗುತ್ತದೆ. ಅದನ್ನು ಸರಿಗೊಳಿಸಲು ನಿಸರ್ಗವು ಮಾಡುವ ಕ್ರಿಯೆಗಳಿಂದಾಗಿ ಎಷ್ಟೋ ಅನಾಹುತಗಳು ಸಂಭವಿಸುತ್ತವೆ.

ಅಂತೆಯೇ ಅಹಿಂಸೆಯೇ ಪರಮ ಧರ್ಮವೆಂದು ವಿಚಾರಮಾಡಿಟ್ಟು ಹೆಕ್ಕಿತೆಗೆದ ನೀತಿಸಾರ. ಭಗವಾನ್ ಬುದ್ಧನು ಅತ್ತ್ವವನ್ನೇ ಎತ್ತಿ ಹಿಡಿದುಬೋಧಿಸಿದನು; ಅಶೋಕನು ಸಾರಿದನು. ಇದೇ ಮೊನ್ನೆ ಮೊನ್ನೆ ಮಹಾತ್ಮಾಗಾಂಧಿಯ ನಾಯಕತ್ವದಲ್ಲಿ ಅದು ಪುನಶ್ಚೇತನಗೊಂಡು ಸತ್ಯಾಗ್ರಹವೆಂಬ ರೂಪಾಂತರದ ಅಹಿಂಸಾ ಮಾರ್ಗದಲ್ಲಿಯೇ ನಮಗೆ ಸ್ವಾತಂತ್ರ್ಯವು ಸಿದ್ಧಿಸಿತು; ಪ್ರಜಾರಾಜ್ಯದ ಉದಯವಾಯಿತು.

ಹಿಂಸೆ-ಅಹಿಂಸೆ

ಅಹಿಂಸೆ ಎಂದೊಡನೆ ಯಾವುದೋ ಒಂದು ಬಗೆಯ ಭಾವಾವೇಗಕ್ಕೊಳಗಾಗಿ ಇನ್ನೊಂದು ವ್ರತವಾಗಿ ಮಾಡಿಕೊಳ್ಳುವ 'ನಿಷ್ಠ'ರೂ ಇದ್ದಾರೆ. ಅಂಥವರು ಅದನ್ನು 'ಅಹಿಂಸಾವ್ರತ'ವೆಂಬ ಪವಿತ್ರ ಹೆಸರಿನಿಂದ ಕರೆಯುತ್ತಾರೆ. ಇದರಂತೆ ಅದೊಂದು ವ್ರತವೇ ಆಗುವುದಾದರೆ ಕಠಿನವೇ ಆಯಿತಲ್ಲ! ವ್ರತವನ್ನು ಯಾವಾಗಲೂ ಎಲ್ಲರಿಂದಲೂ ಅನುಷ್ಠಿಸಲು ಸಾಧ್ಯವೆಂದು ಹೇಳಲಿಕ್ಕಾಗುತ್ತದೆಯೇ? ಒತ್ತಾಯಮಾಡಿ ಹೇಳಿದರೂ ಆ ಒತ್ತಾಯ ಎಲ್ಲಿಯ ತನಕ ನಡೆದೀತು? ಒಂದು ಮನೆಯಲ್ಲಿ ವ್ರತನಿಷ್ಠರಾದವರಿದ್ದರೆ ಎಲ್ಲಿಯೋ ಒಬ್ಬಿಬ್ಬರು ಮಾತ್ರ ಕಠಿಣ 'ಏಕಾದಶೀ ವ್ರತ' ಆಚರಿಸುವವರಿರಬಹುದು. ಅಹಿಂಸಾ ವ್ರತವನ್ನು ದೇಶದಾದ್ಯಂತ ಎಲ್ಲ ಪ್ರಜೆಗಳೂ ಅನುಷ್ಠಿಸಲು ಸಾಧ್ಯವೆ? ಸನಾತನಾಚಾರಶೀಲವಾದ ನಮ್ಮ ದೇಶದಲ್ಲಿ ಸಾಧಿಸಬಹುದೆಂದು ವಾದಕ್ಕೆ ಬೇಕಾದರೆ ಹೇಳಿದರೂ ವಿಜ್ಞಾನದ ವೇಗದಲ್ಲಿ ಓಡುತಿರುವ ಈ ಕಾಲದ ಪರಿಸ್ಥಿತಿಯಲ್ಲಿ ನಮ್ಮ ದೇಶವೊಂದನ್ನೇ ಹಿಡಿದುಕೊಂಡು ಮಾತಾಡಿ ಪ್ರಯೋಜನವಿಲ್ಲವಷ್ಟೆ? ನಾವು ಏನು ಮಾತಾಡುವುದಾದರೂ ಪ್ರಸಂಚದ ಗತಿಯನ್ನು ನೋಡಿಕೊಂಡೇ ಹೇಳಬೇಕಾಗಿದೆ. ಅದರಲ್ಲಿಯೂ ತೀವ್ರಾತಿತೀವ್ರವಾದ ಅಣು-ಪರಮಾಣುಗಳ ಸೂಕ್ಷ್ಮಾತಿಸೂಕ್ಷ್ಮ ಹಿಂಸೆಯ ಮೊನೆಗಳ ಭಯವು ಪ್ರತಿಕ್ಷಣವೂ ಪ್ರತಿಯೊಬ್ಬನನ್ನೂ ಕಾಡುತಿರುವ ದಿನಗಳಿವು.

ಈ ಸನ್ನಿವೇಶದಲ್ಲಿ ಅಹಿಂಸೆಯ ತತ್ವವನ್ನು ಕುರಿತು ಇನ್ನೊಮ್ಮೆ ಮನನಮಾಡಿಕೊಳ್ಳಬೇಕಾಗಿದೆ. ಮಹಾತ್ಮಾಗಾಂಧಿಯ ಕಾಲಕ್ಕೂ, ಇವತ್ತಿನ ದಿನಗಳಿಗೂ ಕಾಣುವ ಈ ಅಲ್ಪ ಕಾಲಾವಕಾಶದಲ್ಲಿಯೇ ವಿಜ್ಞಾನವೇಗವೂ ಅದರ ಪರಿಣಾಮವೂ ತುಂಬಾ ವ್ಯತ್ಯಾಸವಾಗಿವೆ. ಆ ಕಾಲದ ಅಹಿಂಸಾ ವ್ರತಾನುಷ್ಠಾನಗಳು ಈ ಕಾಲಕ್ಕೂ ಸರಿಹೋಗುವುದೇ? ಎಂದು ನಮ್ಮನ್ನು ನಾವೇ ಕೇಳಿಕೊಳ್ಳಬೇಕಾಗಿದೆ.

ನಮ್ಮ ಸ್ವಾತಂತ್ರ್ಯ ಪ್ರಾಪ್ತಿಗೆ ಕಾರಣವಾದ 'ಅಹಿಂಸಾ ಮಾರ್ಗ'ವನ್ನು ಅತಿಶಯವೆನಿಸುವಂತೆ ಭಾವುಕದೃಷ್ಟಿಯಿಂದ ಚಿತ್ರಿಸಿಕೊಳ್ಳುವುದರಿಂದಲೇ ಅದರ ಮೇಲೆ ಹೀಗೆ ಪ್ರಶ್ನೆಯನ್ನು ಹಾಕಿಕೊಳ್ಳಬೇಕಾಗಿ ಬಂತೆನ್ನಬಹುದು ''ಕತ್ತಿಯಿಲ್ಲದೆ ರಕ್ತವಿಲ್ಲದೆ ಸ್ವರಾಜ್ಯ ಬಂತು" ಎಂದು ಸರ್ವಸಾಮಾನ್ಯವಾಗಿ ಹೇಳಲಾಗುತ್ತದೆ

ಹಾಗಿದ್ದರೆ ಅಣು-ಪರಮಾಣುಗಳು ಕೂಡಾ ಕತ್ತಿ, ರಕ್ತಗಳ ಕಾಟವಿಲ್ಲದೆ ಸ್ವಾತಂತ್ರ್ಯವನ್ನು ತಂದುಕೊಟ್ಟಾವು ಎಂದೇ ಹೇಳಬೇಕಾದೀತು! ಅಬ್ಬಾ ಇದೆಂಥ ಅಹಿಂಸೆ! ಎಷ್ಟು ಭಯಂಕರ! ಹೀಗನ್ನಬಹುದೆ? ಕೂಡದು! ಕೂಡದು!

ನಾವೀಗ ನಮ್ಮ ಸ್ವಾತಂತ್ರ್ಯ ಸಂಗ್ರಾಮವನ್ನೇ ಸ್ವಲ್ಪ ನಿಂತು ನೋಡಿದರೆ, ಅದು ಕತ್ತಿಯಿಂದಲೇ ಪ್ರಾರಂಭವಾಯಿತೆಂಬುದು ಕಾಣುತ್ತದೆ. ರಕ್ತ ಹರಿದಿತ್ತು; ಎಷ್ಟೋ ಅಪೂರ್ವ ಪ್ರಾಣಗಳ ಬಲಿಯೂ ಆಗಿತ್ತು. ಮಹಾತ್ಮಾಗಾಂಧಿಯ ನಾಯಕತ್ವದಲ್ಲಿ ಕೂಡ ಅಮೂಲ್ಯ ಜೀವಗಳ ಬಲಿಯಾಗದ ಹೋಗಲಿಲ್ಲ. ನಿಜಕ್ಕೂ ಮಹಾತ್ಮಾಗಾಂಧಿ ಅಹಿಂಸೆಯನ್ನು ಒಂದು ವ್ರತದಂತೆ ಹಿಡಿದಿದ್ದರೆ ಯಾವ ಪ್ರಾಣಿಗಳಿಗೂ ಹಿಂಸೆಯಾಗದಂತೆ ನೋಡಿಕೊಳ್ಳಬೇಕಿತ್ತು. ಗಾಂಧಿಯಿಂದಾಗಿ ನಮ್ಮನ್ನಾಳಿದ ಪರಕೀಯರು ಎಷ್ಟೊಂದು ಹಿಂಸೆಯನ್ನನುಭವಿಸಿದರು! ಅವರೂ ಮಾನವರಲ್ಲವೆ? ಪ್ರಪಂಚದಿಂದಲೇ 'ಮಹಾತ್ಮ'ರೆಂದು ಒಪ್ಪಿಕೊಳ್ಳಲ್ಪಟ್ಟವರು, ಬೇರೊಂದು ಮಾನವರ ಜನಾಂಗವು ಹಿಂಸೆಯನ್ನು ಅನುಭವಿಸುವಂತೆ ಮಾಡಿದರೆ ಅವರು 'ಮಹಾತ್ಮ' ಪದಕ್ಕೆ ಹೇಗೆ ಯೋಗ್ಯರಾದಾರು? ಹೀಗೆ ವಿಚಾರಮಾಡಿದರೆ ಅಹಿಂಸೆಯೇ ಪರಮ ಧರ್ಮ ಎಂಬುದಕ್ಕೆ ಅರ್ಥವೇ ಇಲ್ಲ. ಮಹಾ ಭಾರತಾದಿ ಯುದ್ಧಗಳೆಲ್ಲವೂ ಹಿಂಸೆಯೇ ಅಲ್ಲವೆ?

ಯುದ್ಧದ ಮಾತೇಕೆ? 'ಜೀವೋ' ಜೀವಸ್ಯ ಜೀವನಂ' 'ಶರೀರಮಾದ್ಯಂ ಖಲುಧರ್ಮ ಸಾಧನಂ' ಎಂಬ ನಿಯತಿಯಂತೆ ಒಂದು ಜೀವವು ಉಳಿಯಬೇಕಾದರೆ ಇನ್ನೊಂದು ಜೀವನನ್ನು ತಿಂದೇ ತೀರಬೇಕಾಗಿದೆ. ಕೋಳಿಮೊಟ್ಟೆಗಳಿಂದ ಹಿಡಿದು ಮಾಂಸಾಹಾರದ ವರೆಗೆ ಪ್ರಾಣಿವಧೆಯ ಮಾತು ಜಾಗಿರಲಿ, ಸಸ್ಯಾಹಾರಗಳು ಕೂಡಾ ಒಂದು ಬಗೆಯ ಹಿಂಸೆಯೇ ಎಂದು ನಿಷ್ಠಾವಂತರು ಹೇಳುತ್ತಾರೆ ಹೀಗೆ ಅಹಿಂಸೆಯನ್ನು ವ್ರತದಂತೆ ಆಚರಿಸಹೋದರೆ ಎಲ್ಲರೂ ಉಪವಾಸಬಿದ್ದು ಸಾಯಬೇಕಾದೀತು. ಮಾತ್ರವಲ್ಲ, ಪ್ರತಿ ಪ್ರಾಣಿಯನ್ನೂ ಕೊಲೆಪಾತಕ ಪ್ರಾಣಿಯೆಂದು ವರ್ಜಿಸಲೂ ಬೇಕಾದೀತು.

ಅಂತೆಯೇ ಅಹಿಂಸೆಗೂ ಆಹಾರಕ್ಕೂ ಗಂಟು ಹಾಕಿ ಪ್ರಯೋಜನವಿಲ್ಲ; ಸಮಂಜಸವೂ ಅಲ್ಲ ಪೌರಾಣಿಕ ಕಾಲದಲ್ಲಿ ಕೂಡ ಆಹಾರಕ್ಕಾಗಿ ನೂಡುವ ಕೊಲೆಗಳನ್ನು ಹಿಂಸೆಯೆಂದು ಯಾರೂ ತಿಳಿದಿಲ್ಲ. ಅದು ಪ್ರಕೃತಿನಿಯಮ ದೊಡ್ಡ ಮೀನು ಸಣ್ಣ ಮೀನನ್ನು ನುಂಗುವ ನ್ಯಾಯದಂತೆ ಚಿಕ್ಕ ಶಕ್ತಿಗಳು ದೊಡ್ಡ ಶಕ್ತಿಯೊಳಗೆ ಚಿಕ್ಕ ಹೊಟ್ಟೆಗಳು ದೊಡ್ಡ ಹೊಟ್ಟೆಯೊಳಗೆ ಲೀನವಾಗುತ್ತಾ ಹೋಗುವುದೇ ಪ್ರಪಂಚದ ಗತಿಯಾಗಿದೆ.

ಹಿಂಸೆಯ ಮೂರು ಭಾಗಗಳು

ಒಟ್ಟಿನ ಮೇಲೆ ಮಾನವರು ಮಾಡುವ ಹಿಂಸೆಗಳನ್ನು ಮೂರು ವಿಧವಾಗಿ ವಿಂಗಡಿಸಬಹುದು: ೧. ಸಾತ್ವಿಕ, ೨. ರಾಜಸ, ೩. ತಾಮಸ. ಜೀವ ಹತ್ಯವಾಗದಂತೆ, ಹಣ್ಣು, ಕಾಯಿ, ಎಲೆ, ಕೊಂಬೆಗಳನ್ನು ಹರಿದುಕೊಳ್ಳುವಂಥಾದ್ದು ಸಾತ್ವಿಕ ಹಿಂಸೆ. ಮಾಂಸಾಹಾರಿಗಳು ಮಾಡುವ ವಧೆಗಳು ರಾಜಸ ಹಿಂಸೆ. ಅನಾವಶ್ಯಕವಾಗಿ, ದುರಾಶೆಯಿಂದ, ಕೋಪತಾಪಗಳಿಂದ, ಹಗೆಯಿಂದ, ಮೋಸದಿಂದ ನಾಶವನ್ನು ಬಯಸಿ ಬಾಧಿಸುವದು ಕೊಲ್ಲುವುದು ಮುಂತಾದುವುಗಳೆಲ್ಲವೂ ತಾಮಸ ಹಿಂಸೆಗಳು.

ಸಾಮಾನ್ಯವಾಗಿ ಮನುಷ್ಯನ ಹೊರತು ಇತರ ಪ್ರಾಣಿಗಳು ಸಾತ್ವಿಕ ಹಿಂಸೆ ಮಾಡುವಂಥವುಗಳೇ. ಹುಲಿಸಿಂಹಗಳ ಮಾತಾದರೂ ಅಷ್ಟೇ. ಅವು ಹಸಿವಾದಾಗ ಪ್ರೀತಿಯಿಂದಲೇ ಬೇಟೆಯಾಡಿ ಕೊಲ್ಲುತ್ತವೆ. ಮಾನವರು ಕೂಡಾ ಪ್ರಾಣಿಗಳನ್ನು ಪ್ರೀತಿಯಿಂದ ಬೆಳೆಸಿ ಪ್ರೀತಿಯಿಂದಲೇ ಕೊಂದು ತಿನ್ನುತ್ತಾರೆ ಕಾಯಿಸಲ್ಯಗಳನ್ನು ಪ್ರೀತಿಯಿಂದಲೇ ಬೆಳೆಸಿ, ತಿನ್ನುತ್ತಾರೆ ಈವ್ಯವಹಾರದಲ್ಲಿ ಹಗೆ ಮೊದಲಾದ ಇತರ ದುಸ್ವಗುಣಗಳ ಮಾತೇ ಇಲ್ಲ.

ಉಳಿದ ರಾಜಸ-ತಾಮಸ ಹಿಂಸಾ ಕೃತ್ಯಗಳನ್ನೆಸಗುವುದು ಕೂಡಾ ಬುದ್ಧಿ ಪ್ರಧಾನನಾದ ಮನುಷ್ಯನೇ ಹೊರತು ಇತರ ಪ್ರಾಣಿಗಳಲ್ಲ. ಮಾನವರು ಸುಸಂಸ್ಕೃತರಾದಂತೆ ತಾರತಮ್ಯಗಳನ್ನರಿತು ಸಾತ್ವಿಕತೆಯ ಕಡೆಗೆ ಸಾಗುತ್ತಾರೆ ಹಾಗೆ ಸಾಗಿಸಲಿಕ್ಕಾಗಿಯೇ ಅಹಿಂಸೆಯೇ ಪರಮ ಧರ್ಮ ಎಂಬ ನೀತಿಯ ಸಾರವನ್ನು ಹೆಕ್ಕಿ ತೆಗೆದಿದ್ದಾರೆ. ವೈದಿಕ ಕರ್ಮಗಳಲ್ಲಿ ಕೂಡಾ ಮಾಂಸ

(೧೨ ಪುಟ ನೋಡಿರಿ)

ದೇವೀ ಮಹಾತ್ಮೆ

ಶ್ರೀ ಪಿ. ಎಸ್. ರಾವ್, ಮಂಗಳೂರು.

ಆರು ರೂಪಾಯಿ ಹತ್ತಾಣೆ..... ತಿಂಗಳ ಸುರುವಿನಲ್ಲಿ ಕೈಗೆ ಬಂದ ಹಣ! ಲೆಕ್ಕಕ್ಕೆ ಆತ ಅರುವತ್ತು ರೂಪಾಯಿ ಸಂಬಳದ ಜೀತದ ಆಳು....ಆದರೆ ತಿಂಗಳ ಮೊದಲ ತೇದಿಯಂದು ದೊರೆತದ್ದು... ಕೇವಲ ಚಿಲ್ಲರೆ ಕಾಸು! ವಾರ ವಾರವೂ ಮುಂಗಡವಾಗಿ ಪಡೆದದ್ದನ್ನು ಕಳೆದು ಧನಿ ಆರು ರೂಪಾಯಿ ಹತ್ತಾಣೆ ಕೊಟ್ಟಿದ್ದರು.

ಮನೆಯಲ್ಲಿ ನಿತ್ಯ ಕಾಯಿಲೆಯಿಂದ ಬಳಲುವ ಮಡದಿ ...ವಾತದಿಂದ ಹಾಸಿಗೆ ಹಿಡಿದ ಹಿರಿಯ ಮಗ ..ಊಟ—ಉಪಚಾರ...ಪ್ರತಿಯೊಂದಕ್ಕೆ ಬೇಕು—ಹಣ! ಬಡವನ ಬದುಕಿನಲ್ಲಿ ಸುಖವಿಲ್ಲವೆ? ಶಾಂತಿಯಿಲ್ಲವೆ? ಶ್ರಮದ ಪರಿವೆಯಿಲ್ಲದೆ ದುಡಿದರೂ, ದಿನದ ತುತ್ತಿಗಾಗಿ ತಾಕಲಾಡಬೇಕೆ? ನಿತ್ಯವೂ 'ನಾಳಿನ ಬದುಕಿಗೇನು' ಎಂದು ಪರಿತಪಿಸುತ್ತಲೇ ಇರಬೇಕೆ? ಕೈಗೆ ಬರುವಂತಹ ಸಂಬಳ ಸಾಲದು! ಬದುಕಿನ ಮಾರ್ಗ ಕಾಣದು! ಹೆಂಡಿರು—ಮಕ್ಕಳ ಗೋಳು ಹೇಳಿ ತೀರದು! ಹಣವಿದ್ದರೆ ಮಾನವ—ಇಲ್ಲದಿದ್ದರೆ ಬದುಕಿರುವ 'ಹೆಣ'ವೇ ಸರಿ.

ಮಾನವನ ಅನಾಚಾರ—ಅತ್ಯಾಚಾರ—ವ್ಯಭಿಚಾರದ ತಡೆಗಾಗಿ ಈ 'ದೇವರು—ದಿಂಡರು, ಭೂತ-ಪ್ರೇತ'ಗಳ ಭೀತಿಯ ಪ್ರಚಾರವಾಯಿತು! ನಡು ಇರುಳಲ್ಲಿ ನಿರ್ಭೀತಿಯಿಂದ ನಡೆದು, ಮನಬಂದ ವಾಮ ಮಾರ್ಗ ಸಂಚಾರದ ತಡೆಗಾಗಿ ಭೂತ-ಪ್ರೇತಗಳ ಹೆದರಿಕೆ — ಹಿರಿಯರಿಂದ ಪ್ರಚಾರಕ್ಕೆ ಬಂದಿತು! ಬೆದರಿಕೆಯ ಸತ್ಯಕತೆಗಳು ಪ್ರಚಾರವಾಗಿ, ಕೆಟ್ಟ ಮಾರ್ಗ ಕೈಳಿದರೆ, ಪಡಬಾರದ ಯಾತನೆಯನ್ನು ಅನುಭವಿಸಬೇಕಾಗುತ್ತದೆ ಎಂದು ಊಹಾಪೋಹೆಗಳು ತಲೆತಲಾಂತರದಿಂದ ಹರಿದು ಬಂದಿತು.

ಮಾರಪ್ಪನ ವಿಚಾರ ಲಹರಿ ವಿಧವಿಧವಾಗಿ ಹರಿಯುತಿತ್ತು.

ಪರರ ವಸ್ತು-ಒಡವೆಗಳನ್ನು ಅಪಹರಿಸಿ ಬದುಕಿನ ಮಾರ್ಗ ಸುಗಮಗೊಳಿಸಲೆ? ಸರ್ವಾಂತರ್ಯಾಮಿಯಾಗಿ, ಸರ್ವ ಭಕ್ತರಿಂದಲೂ ಪೂಜಿಸಲ್ಪಡುತ್ತಿರುವ ಶ್ರೀ ಕೃಷ್ಣ ಕಳ್ಳನೆಂದು ನಾಮಾಂಕಿತನಾಗಿರಲಿಲ್ಲವೆ? ಕದ್ದವನಿಗೆ ಇಂದು ಶಿಕ್ಷೆ ತಪ್ಪಿದ್ದಲ್ಲ! ನೆರೆಮನೆ ವಾಸ ತಪ್ಪಿದ್ದಲ್ಲ. ಹಾಗೆಂದು ಕದಿಯುವ ಕಸಬುಗಾರರು ಕಳ್ಳತನ ಮಾಡದೆ ಇರುವರೆ? ಕದ್ದವರೆಲ್ಲರೂ ಸಿಕ್ಕಿ ಬಿದ್ದಿರುವರೆ? ಕೊಲೆಗೈದವರಿಗೆ ಪಾಶಿ! ಹಾಗೆಂದು ಕೊಲೆ ಮಾಡಲು ಹಿಂಜರಿಯುವರೇ?

ಮಾರಪ್ಪನಿಗೆ ಬದುಕಬೇಕಿತ್ತು. ಆದರೆ ನ್ಯಾಯವಾಗಿ ದುಡಿದು ದಿನ ದೂಡಲು ಅವನಿಂದ ಸಾಧ್ಯವಿಲ್ಲವೆಂದು ತಿಳಿದು ಬಂದಾಗ, ಬದುಕಿನ ಸಮಸ್ಯೆಯನ್ನು ಎದುರಿಸಲು ಕೈಕೊಳ್ಳಬಹುದಾದ ಕುತಂತ್ರಗಳನ್ನೆಲ್ಲ ತುಲನೆ ಮಾಡಿದ ಮನಸ್ಸಿನ ಹೊಯ್ಯಾಟ ಅದಾವುದೋ ನಿಶ್ಚಿತದ ಮೇಲೆ ಶಾಂತವಾಯಿತು! ಮಳೆ-ಸಿಡಿಲು-ಮಿಂಚು-ಬಿರುಗಾಳಿಯ ಹೊಡೆತದಿಂದ ಶಾಂತವಾದ ವಾತಾವರಣದಲ್ಲಿ, ಮೋಡ ದೆಡೆಗಳಿಂದ ಸೂಡಿ ಬಂದ ಸೂರ್ಯ ಬಿಸಿಲ ಕಿರಣಗಳನ್ನು ಹೆರಡಿ ಪ್ರಕಾಶಿಸುವಂತೆ, ಮಾರಪ್ಪನ ಮುಖದಲ್ಲಿ ಮುಗುಳುನಗೆ ಮೂಡಿ ನಲಿದಾಡುತಿತ್ತು.

೦೦ ೦೦

ಮಾರಪ್ಪನ ಮೈಮೇಲೆ 'ದೇವಿ' ಬಂದಿರುವಳಂತೆ! ಒಲಿದು ಬಂದ 'ದೇವಿ' ಮಾರಪ್ಪನ ಮನೆಯಲ್ಲಿ ನೆಲಸಿರುವಳಂತೆ! ಕನಸಿನಲ್ಲಿ ಕಂಡು ಆದೇಶವಿತ್ತ 'ದೇವಿ' ಮಾರನೆಯ ದಿನ ಮಾರಪ್ಪನ ಮೈಯಲ್ಲಿ ಕಾಣಿಸಿಕೊಂಡಳಂತೆ! ದಿನವಿಡಿ ನಡುಗುತ್ತ—ನಲಿಯುತ್ತ ಹೊರಳಾಡಿದ ಮಾರಪ್ಪನನ್ನು ಅಪಾರೋ ಜೋತಿಷ್ಯ ಶಿಖಾಮಣಿಯವರು 'ದೇವೀ ಪ್ರತಿಷ್ಠೆ' ಮಾಡಿದ ನಂತರ ವೈಯಿಂದ ಜಾರಿ ಬೊಂಬೆಯಲ್ಲಿ ವಿಲೀನವಾದಳಂತೆ—ಮಾರಪ್ಪನ ಮನೆಯ ಸುತ್ತ ಜನ ಜಾತ್ರೆಯೊಗುತ್ತಿದ್ದಂತೆ—ಅಲಂಕೃತಳಾದ ದೇವೀ ಪ್ರತಿಮೆಯನ್ನು ಕಂಡು ಭಯ-ಭಕ್ತಿಯಿಂದ ಕೈಮುಗಿದು, ಮೌನವಾಗಿ, ನಾಮರೂಢನಾಗಿ ಕುಳಿತಿರುವ ಮಾರಪ್ಪನಿಗೂ ಕೈಮುಗಿದು, ಎದುರಲ್ಲಿದ್ದ ಹರಿವಾಣದಿಂದ ಪ್ರಸಾದ ಪಡೆದುಕೊಂಡು, ಶಕ್ತ್ಯಾನುಸಾರ ಕಾಣಿಕೆ ಹಾಕುತ್ತಿದ್ದರು. ನೋಡ ಬಂದವರಿಂದ ನಾನಾ ವದಂತಿಗಳೂ ಹರಡುತ್ತಿದ್ದವು.

ಬಡತನದ ಬೇಗೆಯಲ್ಲಿ ಬೆಂದು ಹೇಳ ಹೆಸರಿಲ್ಲದೆ ಬಾಳಿದ ಮಾರಪ್ಪನ ಮನೆ, ಭಕ್ತರ ಬೀಡಾಯಿತು. ಕಂಡೂ—ಕೇಳದ ಮಾರಪ್ಪ ಜನತೆಯಿಂದ ಪೂಜಿಸಲ್ಪಡತೊಡಗಿದ ಮಾರಪ್ಪ 'ಭೂಸುರ'ನಾದ!

ಅವನಿಗೆ ಸುಖದ ಬಾಳು ಸಾಗಿಸಬೇಕಾಯಿತು. ಕಾಪಾಡುವ ದೇವರೆ ಒಲಿದು ಬಂದ ಮೇಲೆ ಬದುಕಿಗಾಗಿ ಬರದಾಡಬೇಕೆ?

ಮೊದಲನೆಯ ದಿನವೇ ಮಾರಪ್ಪನಿಗೆ ಅನಾಯಾಸವಾಗಿ ಹನ್ನೆರಡು ರೂಪಾಯಿಯ ಹರಿವಾಣ ಕಾಣಿಕೆ ಬಂದಿತ್ತು! ಮಾರನೆಯ ದಿನ ಹದಿನೈದು! ಎರಡು ರೂಪಾಯಿ ಸಂಪಾದಿಸಲು ತೊಳಲಾಡುತ್ತಿದ್ದ ಮಾರಪ್ಪನಿಗೆ ಕುಳಿತಲ್ಲಿಯೇ ಹಣ! ಮನಸ್ಸಿದ್ದರೆ ಮಾರ್ಗವಿದೆ! ಬದುಕಬೇಕೆಂದು ಬಯಸುವ ಎದೆಗಾರಿಕೆಯಿರುವವರಿಗೆ ಬದುಕಿ-ಬಾಳಲು ಕಷ್ಟವಿಲ್ಲ! ದೇವರು ಕಣ್ಣುತೆರೆದು ಮಾರ್ಗದರ್ಶಕನಾದರೆ ಬದುಕು ಕಷ್ಟವೆ?

ಜ್ವರದ ತಾಪದಿಂದ ಕಂಗಾಲಾಗಿದ್ದ ಮಾದಪ್ಪಯ್ಯ ಮಾಸ್ತರರ ಮಗುವಿಗೆ ಮಾರಪ್ಪ ನಿತ್ತ ತೀರ್ಥದಿಂದ ವಾಸಿಯಾಯಿತಂತೆ! ಪಾರ್ಶ್ವ ವಾಯುವಿನಿಂದ ಹಾಸಿಗೆ ಹಿಡಿದು ಮಲಗಿದ್ದ ಮಾರಪ್ಪನ ಮಗು—ಕುಂಕುಮದ ಸ್ಪರ್ಶದಿಂದ ಎದ್ದು ಓಡಾಡುವಂತಾಯಿತಂತೆ! ಒಂದು ವಾರದಿಂದ ಕಾಣೆಯಾಗಿದ್ದ ಅಂತೋಣಿ ಪರ್ಭಾರವರ ಎಮ್ಮೆಯ ನೆಲೆಯನ್ನು ತಿಳಿಸಿದನಂತೆ! ಮಹಮದ್ ಸಾಹೇಬರ ಓಡಿ ಹೋದ ಮಗ, ದೇವಿಗೆ ಹರಕೆ ಹೇಳಿಕೊಂಡ ಮಾರನೆಯ ದಿನ ಸಂಜೆ ತಿರುಗಿ ಮನೆಗೆ ಬಂದನಂತೆ! ಕೇರಳದಿಂದ ಬಂದ ಕುರುಡಿ ಕನ್ಯೆಯೋರ್ವಳಿಗೆ ದೃಷ್ಟಿ ಮೂಡಿದುವಂತೆ! ಕಿವಿ ಕೇಳದವನಿಗೆ ನುಡಿಗೇಳಿ ಬಂತಂತೆ! ಸಿದ್ದೆಗಣ್ಣಿನಲ್ಲಿ ಎದ್ದು ಓಡಿಯಾಡುವ ಪುರೋಹಿತ ಸುಬ್ಬಾಚಾರಿಯ ಮಗುವಿಗೆ ಗುಣವಾಯಿತಂತೆ! ಸತ್ತವನನ್ನು ಬದುಕಿಸಲು ಕೇಳ ಬಂದವನಿಗೆ ಮಾತ್ರ ಜೀವದಾನ ಮಾಡಲು ಮಾರಪ್ಪನಿಂದಾಗಲಿಲ್ಲವಂತೆ—ಮಾರಪ್ಪನ ಮನೆಗೆ ಒಲಿದು ಬಂದ 'ದೇವೀ ಮಹಾತ್ಮ್ಯೆ'ಯಿಂದ ಊರವರು ಪಡುತ್ತಿರುವ ಉಪಕಾರ—ಉಪಚಾರ ಕಿವಿಯಿಂದ ಕಿವಿಗೆ ಪ್ರಸಾರವಾಗುತ್ತಿತ್ತು.

'ಕಲ್ಲ ದೇವರಿಗೆ ಕೈ ಮುಗಿದರೇನು ಫಲ' ಎಂದು ಮೂಗುಮುರಿಯುವವರಿಗೂ 'ದೇವರಿದ್ದಾರೆ' ಎಂದು ಮಾರಪ್ಪ ತೋರಿಸಿಕೊಟ್ಟ' ಎಂದು ಹಲವರೆಂದರು. ಮಾರಪ್ಪನೋರ್ವ ಅವತಾರ ಪುರುಷನೆಂದು ಕೆಲವರು ಕೈ ಮುಗಿದರು.

ಶುಕ್ರವಾರ—ಮಂಗಳವಾರ ದೇವೀ ಪೂಜೆ ಬಹಳ ವಿಜೃಂಭಣೆಯಿಂದ ನಡೆಯುತಿತ್ತು. ಒಂದೊಂದು ದಿನದ ಧನ ಸಂಗ್ರಹ ನೂರರ ವರೆಗೂ ಹೋಗುತಿತ್ತು. ಪರವೂರುಗಳಿಂದಲೂ ಜನರು ಬಂದು, ದೇವಿ ಮುಂದೆ ತಮ್ಮ ಸಂಕಷ್ಟಗಳನ್ನರುಹಿ ಪ್ರಸಾದ ಸ್ವೀಕರಿಸಿಕೊಂಡು ತೆರಳುತ್ತಿದ್ದರು. ದೇವಿಯ ಅಪಾರವತಾರ ಮಾರಪ್ಪನಲ್ಲವೆ?

ತಿಂಗಳುಗಳ ಮೇಲೆ ತಿಂಗಳುಗಳು ಉರುಳಿದುವು. ಮಾರಪ್ಪನ ಮನೆಗೆ ಮಾಳಿಗೆ ಬಂದಿತ್ತು! ದೇವಿಗಾಗಿ ಪ್ರತ್ಯೇಕ ಕೋಣೆಯ ತೆರವೂ ಮಾಡಿತ್ತು! ಮಾರಪ್ಪ 'ದೇವೀ ಸ್ವರೂಪ'ನಾಗಿದ್ದ. ಹಣಕ್ಕಾಗಿ ಹೆಂಡಿರು—ಮಕ್ಕಳ ಕಾಟವಿರಲಿಲ್ಲ. 'ನಾಳೆಗೆ ಏನೂ, ಎಂಬ ಚಿಂತೆಯೂ ಇರಲಿಲ್ಲ. ಸಂ

(೧೧ನೇ ಪುಟ ನೋಡಿರಿ)

41 ವರ್ಷಗಳ ಭದ್ರ ಹಾಗೂ ಸಮರ್ಥ ಬೇಂಕಿಂಗ್ ಸೇವೆ.

ದಿ. ಪಾಂಗಾಳ ನಾಯಕ್ ಬೇಂಕ್ ಲಿ.

ನಮ್ಮ 3 ವರ್ಷ ವ್ಯಾದೆಯ ಕೇಶ್ ಸರ್ಟಿಫಿಕೇಟುಗಳಲ್ಲಿ ರೇವಣಿ ಮಾಡಿರಿ: ಬಡ್ಡಿ ಸೇಕಡಾ 5ರಂತೆ: ರೂ. 87—00 3 ವರ್ಷಗಳ ಅಂತ್ಯದಲ್ಲಿ ಬಡ್ಡಿ ಕೂಡಿ ರೂ. 100—00 ಬದಗಿಸುವುದು.

ಕರೆ, ಚಿಕ್ಕ ವ್ಯಾದೆ, ನಿರಖು ಶೇವಣಾತಿಗಳ ಮೇಲೆ ಆಕರ್ಷಣೀಯ ಶರ್ತಗಳು: ಬಡ್ಡಿ ಸೇಕಡಾ 5½ರ ವರೆಗೆ.

ತಾ 1—4—1961ರಿಂದ ಸೇವಿಂಗ್ಸ್ ಬೇಂಕ್ ಖಾತೆಗಳ ಮೇಲೆ ಬಡ್ಡಿ ಸೇಕಡಾ 3ರಂತೆ.

THE PANGAL NAYAK BANK LTD.

Estd: 1920

ESTD. 1921 ಸ್ಥಾಪನೆ

NAVAYUGA
KANNADA WEEKLY,
UDIPI.

Founder:

Late Sri A. B. Shetty

Former Minister for Public Health, Govt. of Madras & Govt. of Mysore.

ನವಯುಗ
ರಾಷ್ಟ್ರೀಯ ವಾರಪತ್ರಿಕೆ
ಉಡುಪಿ

ಗೌರವ ಸಂಪಾದಕರು:
ಎಸ್. ಗೋಪೀಚಂದ ರಾವ್,
ವಿದ್ವಾನ್.
ಬಿ. ಶಾಮರಾಯ ಶೆಟ್ಟಿ,
ಬಿ. ಎ., ಎಲ್.ಟಿ.

ಸಂಚಾಲಕ ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ.

○

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-50
ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3-50

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

○

1962ನೇ ಜನವರಿ 26
ನವಯುಗದ
ಪ್ರಜಾರಾಜ್ಯ
ವಿಶೇಷಾಂಕ

ಎಂದಿಗಿಂತಲೂ ಮಿಗಿಲಾದ ರೀತಿಯಲ್ಲಿ ಸಚಿತ್ರವಾಗಿಯೂ ಆಕರ್ಷಣೀಯವಾಗಿಯೂ ಪ್ರಕಟವಾಗಲಿದೆ.

ಸಂಘ, ಸಂಸ್ಥೆಗಳ ಸಂಕ್ಷಿಪ್ತ ಪರಿಚಯವನ್ನೂ ಕೊಡಲಾಗುವುದು.

ಜಾಹೀರಾತು ದರಗಳಿಗೂ ಹೆಚ್ಚಿನ ವಿವರಗಳಿಗೂ ಬರೆಯಿರಿ.

ಮೆನೇಜರ್,
ನವಯುಗ, ಉಡುಪಿ

ರವೀಂದ್ರವಾಣಿ—ಲೇಖಾಂಕ ೨೬—ವಿಶ್ವಕವಿ ರವೀಂದ್ರನಾಥ ಟಾಗೋರ್

ಕರ್ಮ ಸಾಧನೆಯಿಂದ ಪರಮಾತ್ಮನ ಪ್ರಾಪ್ತಿ

ಅನುವಾದಕರು: ಕೆ. ಎನ್. ಭಟ್, ಶಿರಾಡಿಸಾಲ್.

ಮನುಷ್ಯನ ಜೀವನದ ಪ್ರವೃತ್ತಿಯು ಆನಂದವು ನಿಜವಾದ ಆನಂದವಾಗಿದೆ. ಇದನ್ನು ಭ್ರಾಂತಿಜನಕ, ಅಥವಾ ಮಿಥ್ಯಾ ಆನಂದವೆನ್ನುವುದು, ಆತ್ಮವಂಚನೆಯೆನಿಸುವುದು. ಈ ಇಂತಹ ಆತ್ಮವಂಚನೆಯನ್ನು ತ್ಯಜಿಸದ ಹೊರತು, ನಾವು ಆತ್ಮ ಬೋಧದ ಮಾರ್ಗದ ಮೇಲೆ, ಮುನ್ನಡೆಯಲಾರೆವು. ಪ್ರವೃತ್ತಿಮಯವಾದ ಜಗತ್ತನ್ನು ತ್ಯಾಗಮಾಡಿ ನಾವು ಅಸೀಮವನ್ನು ತಿಳಿದುಕೊಳ್ಳಲು ಪ್ರಯತ್ನಪಡುವುದಾದರೆ, ಆ ಪ್ರಯತ್ನ ವ್ಯರ್ಥವೇ ಸರಿ.

ಮನುಷ್ಯನು ಕೇವಲ ಪರಾಧೀನತೆಯಲ್ಲಿ ಅನಿವಾರ್ಯವಾಗಿ ಕೆಲಸ ಮಾಡುತ್ತಾನೆಂಬುದು ಸತ್ಯವಲ್ಲ. ಉಪಯೋಗದ ದೃಷ್ಟಿಯು, ಮನುಷ್ಯನಿಗೆ ಕೆಲಸ ಮಾಡುವ ಪ್ರೇರಣೆಯನ್ನು ಕೊಡುವುದು. ಆದರೆ, ಅದೂಡನೆಯ ಆನಂದದ ಪ್ರೇರಣೆಯೂ ಇರುವುದು. ಇದರಿಂದಾಗಿ ಸಭ್ಯತೆಯ ವಿಕಾಸದೊಡನೆಯೇ ಮನುಷ್ಯನು ಸ್ವೇಚ್ಛೆಯಿಂದಲೇ ತನ್ನ ಪ್ರವೃತ್ತಿ ಹಾಗೂ ಕಾರ್ಯಗಳಲ್ಲಿ ತೊಡಗಿ, ಕಾರ್ಯ ಕ್ಷೇತ್ರವನ್ನು ವಿಸ್ತಾರಗೊಳಿಸುತ್ತ— ಮುಂದುವರಿಯುತ್ತಾನೆ. "ಪ್ರಕೃತಿ, ನಿಯಮದ ಹಸಿವು ತೃಪ್ತಿಗೇಳೇ ಮನುಷ್ಯನನ್ನು ಕಾರ್ಯಕ್ಷೇತ್ರಗಳಲ್ಲಿ ಪ್ರೇರೇಪಿಸುತ್ತವೆ" ಎಂದು ಕೆಲವರು ಆಲೋಚಿಸುವುದಿದೆ. ಆದರೆ ಇದು ಸರಿಯಲ್ಲ. ಮನುಷ್ಯನು ಕೇವಲ ಪಶುಪಕ್ಷಿಗಳಂತೆ, ಪ್ರಾಕೃತಿಕ ಪ್ರೇರಣೆಗೊಳಪಟ್ಟು ಕೆಲಸಮಾಡುವುದರಲ್ಲಿ ಸಂತೋಷಪಡುವವನಾಗಿರುವುದಿಲ್ಲ. ಏಕೆಂದರೆ— ಮನುಷ್ಯನು ಪಶು, ಪಕ್ಷಿಗಳಿಗಿಂತ ಬೇರೆಯೇ ಆಗಿರುತ್ತಾನೆ. ಅದಕ್ಕೆ ತಕ್ಕಂತೆ ಆತನ ಇಚ್ಛೆ—ಪ್ರೇರಣೆಗಳೂ ಬೇರೆ ಬೇರೆಯಾಗಿಯೇ ಇರುತ್ತವೆ. ಮನುಷ್ಯನು, ಸ್ವೇಚ್ಛೆಯಿಂದ ಕಷ್ಟಪಡುವಷ್ಟು ಇತರ ಯಾವ ಜೀವಿಗಳೂ ಕಷ್ಟ ಪಡಬೇಕಾಗುವುದಿಲ್ಲ

ಮನುಷ್ಯನು ಸದಾ ನಿರ್ಮಿಸುತ್ತಾನೆ-ನಾಶ ಮಾಡುತ್ತಾನೆ; ನಿಯಮಗಳನ್ನು ಮಾಡಿ, ಅವುಗಳನ್ನು ಸುಧಾರಣೆಗೆ ತರುತ್ತಾನೆ, ಉಪಕರಣಗಳನ್ನು ಒಟ್ಟುಗೂಡಿಸುತ್ತಾನೆ; ಹೀಗೆ ಪ್ರತಿಕ್ಷಣವೂ—ಹೊಸ ಹೊಸ ಆಲೋಚನೆಗಳಿಂದ ಚಿಂತಿತನಾಗಿದ್ದು ನವ್ಯಪಥ ನಿರ್ಮಾಣದ ಶೋಧದಲ್ಲಿ ತೊಡಗಿರುತ್ತಾನೆ. ಹೀಗೆ ಮನುಷ್ಯನ ಪ್ರಯತ್ನ ಮತ್ತು ಆಲೋಚನೆಗಳಿಗೆ ಅಂತ್ಯವೆಂಬುದೇ ಇಲ್ಲ. ಈ ಕ್ಷೇತ್ರದಲ್ಲಿ ಮನುಷ್ಯನು ಘೋರ ಸಂಗ್ರಾಮವನ್ನು ಮಾಡಿರುವನು. ಹೇಗೆಂದರೆ—ಆತ, ಮೃತ್ಯುವನ್ನು ಯಶಸ್ವಿಗೊಳಿಸಿದ್ದಾನೆ! ಹೊಸ ಜೀವನವನ್ನು ಪಡೆದಿದ್ದಾನೆ! ಮತ್ತು ಕಷ್ಟಗಳಿಂದ ಬಿಡುಗಡೆ ಹೊಂದುವ ಬದಲು, ಹೊಸ, ಹೊಸ, ಕಷ್ಟಗಳನ್ನು ಆಹ್ವಾನಿಸಿದ್ದಾನೆ! 'ತನ್ನ ಗೂಡಿನಲ್ಲಿ ಕಾರಾಗೃಹ ವಾಸಿಯಂತೆ ಇದ್ದು ತಾನು ಪೂರ್ಣತೆಯನ್ನು ಪಡೆಯಲು, ಸಾಧ್ಯವಿಲ್ಲ.' ಎಂದು ಮನುಷ್ಯನು ತಿಳಿದುಕೊಂಡಿದ್ದಾನೆ. ಆತನು ತನ ವರ್ತಮಾನ ಕಾಲದ ಸ್ಥಿತಿಗಿಂತ ಮೇಲ್ಮಟ್ಟದವನಾಗಿದ್ದಾನೆ ಮತ್ತು ಒಂದೇ ಸ್ಥಳದಲ್ಲಿದ್ದು ಕೊಂಡಿರುವುದು ಅವನಿಗೆ ವಿಶ್ರಾಂತಿದಾಯಕವೆನಿಸಬಹುದಾದರೂ, ಈ ವಿಶ್ರಾಂತಿ ಜೀವನದ ವಿಕಾಸಕ್ಕೆ—ಕಡೆಯನ್ನುಂಟು ಮಾಡುವುದು ಈ ವಿಕಾಸವೇ ಜೀವನದ ಧ್ಯೇಯವಾಗಿರುವುದು. ಇದನ್ನು ಪ್ರತಿಬಂಧಿಸುವುದು ಆತ್ಮಘಾತ ಮಾಡಿದಂತೆಯೇ ಸರಿ. ವಿಕಾಸದ ಪ್ರಗತಿಯನ್ನು ತಡೆಯುವುದೆಂದರೆ, ವಿನಾಶದ ಕಡೆಗೆ ನಡೆಯುವಂತೆ ಆಗಿರುವುದು.

ಈ ಮಹಾ ವಿನಾಶವನ್ನು ಮನುಷ್ಯನು ಸ್ವಾಗತಿಸಲಿಲ್ಲ. ಈ ಕಾರಣದಿಂದ ಆತನು ಸದಾ ಪ್ರಯತ್ನಶೀಲನಾಗಿರುತ್ತಾನೆ. ಈ ಪ್ರಯತ್ನದಿಂದ ಮನುಷ್ಯನು ಆತನ ವರ್ತಮಾನ ಕಾಲದ ಸ್ಥಿತಿಗಿಂತ ಮೇಲ್ಮಟ್ಟಕ್ಕೆ ತಲಪುವ ಮತ್ತು ಅಪೂರ್ಣವಾದ ಆಕಾಂಕ್ಷೆಗಳನ್ನು— ಪೂರ್ಣಗೊಳಿಸುವ ಧ್ಯೇಯವುಳ್ಳವನಾಗಿರುತ್ತಾನೆ. ಈ ಸಾಧನೆಯಲ್ಲಿಯೇ ಮನುಷ್ಯನ ಯಶಸ್ಸು, ಮತ್ತು ಸಾರ್ಥಕತೆ ಇರುವುದು. ಇದನ್ನು ತಿಳಿದುಕೊಂಡೇ ಮನುಷ್ಯನು ತನ್ನ ಪ್ರವೃತ್ತಿಗಳನ್ನು ವಿಶೇಷ ಕೀಳ್ಮಟ್ಟದವುಗಳೆಂದು ಭಾವಿಸಿಲ್ಲ. ತನ್ನ ಕ್ಷೇತ್ರವನ್ನು ವಿಸ್ತಾರಗೊಳಿಸುವಲ್ಲಿ ಮನುಷ್ಯನು ಸದಾ ತತ್ಪರನಾಗಿರುತ್ತಾನೆ. ನಮ್ಮ ಋಷಿಗಳು ನಮಗೆ—'ಜೀವಿಸುವುದಕ್ಕಾಗಿ ಕೆಲಸ ಮಾಡಬೇಕಾಗುವುದು, ಮತ್ತು ಕೆಲಸ ಮಾಡುವುದಕ್ಕಾಗಿ—ಜೀವಿಸಿ ಇರಬೇಕಾಗುವುದು.' ಎಂದು ಹೇಳಿರುವರು. ಜೀವನ ಮತ್ತು ಕರ್ಮ, ಇವುಗಳ ಸಂಬಂಧವು ಅಖಂಡವಾಗಿರುವುದು.

ಸ್ವಭಾವತಃ ಜೀವನವು ತನ್ನ ಎಲ್ಲೆಯೊಳಗೇ ಪೂರ್ಣವಾಗಿವಿಕಸಿತವಾಗಲಾರದು; ಅದು ತನ್ನ ಎಲ್ಲೆಯಿಂದ ಹೊರಗೆ ಬರಲು ಆಪೇಕ್ಷಿಸುವುದು. ಜೀವಿಸಿಕೊಂಡಿರುವುದಕ್ಕಾಗಿಯೇ— ನಾವು-ಹೊರಗಿನ ಶಕ್ತಿಗಳಾದ-ಗಾಳಿ ಬೆಳಕುಗಳನ್ನು ಅವಲಂಬಿಸಿಕೊಂಡಿರಬೇಕಾಗುವುದು. ನಮ್ಮ ಹೃದಯದೊಳಗಿನ ಪ್ರಯೋಗ ಶಾಲೆಯಲ್ಲಿಯೂ ಕೂಡ ನಾವು ಎಷ್ಟು ಉದ್ವಿಗ್ನರಾಗಿರುತ್ತೇವೆಂದರೆ— ಹೃದಯದ ಗತಿಯು ಒಂದು ಕ್ಷಣ ಕೂಡ ವಿಶ್ರಾಂತಿಯನ್ನು ಆಪೇಕ್ಷಿಸದೆ ಚಲಿಸುತ್ತಿರುತ್ತದೆ. ನಮ್ಮ ಪಚನಶಕ್ತಿಯ ಯಂತ್ರ, ಮೆದುಳು ಹಾಗೂ, ಅವಯವಾದಿಗಳಿಗೆ—ವಿಶ್ರಾಂತಿಯೇ ಇಲ್ಲದೆ ಕೆಲಸ ಮಾಡಬೇಕಾಗಿರುತ್ತದೆ. ಹೀಗೆ ವಿಶ್ರಾಂತಿ ಇಲ್ಲದೆ ಸದಾ ಕೆಲಸ ಮಾಡುತ್ತಿದ್ದರೂ, ನಾವು ನಮ್ಮ ಈ ಒಳಗಿನ ಪ್ರಯೋಗ ಶಾಲೆಯ ಯಂತ್ರಗಳ ಕುರಿತು ಸಂತೋಷಪಡುವುದಿಲ್ಲ. ಹಾಗೂ, ಹೊರಗಿನ ಜಲನ ವಲನಗಳನ್ನು ನಾವೇನೂ ಕಡಿಮೆಮಾಡಿಕೊಂಡಿರುವುದಿಲ್ಲ. ಹೀಗೆ ಒಂದು ಕ್ಷಣವಾದರೂ, ಈ ನಮ್ಮ ಉದ್ವಿಗ್ನತೆಯ—ಆಲೋಚನೆಯ ನೃತ್ಯವು, ಪೂರ್ಣವಾಯಿತೆಂಬುದೇ ಇಲ್ಲ.

ನಮ್ಮ ಆತ್ಮದ ಅವಸ್ಥೆಯೂ ಇದೇ ರೀತಿ ಆಗಿದೆ. ಆತ್ಮವೂ ಕೂಡ ಕೇವಲ ಆಂತರಿಕ ಅನುಭವಗಳ ಅಥವಾ ಕಲ್ಪನೆಗಳ ಮೇಲೆ—ಅವಲಂಬಿಸಿಕೊಂಡು ಇರಲಾರದು. ಅದಕ್ಕೂ ಕೂಡ ಹೊರಗಿನ ವಾತಾವರಣ ಹಾಗೂ ಧ್ಯೇಯ, ಇವುಗಳ ಆವಶ್ಯಕತೆ ಇರುವುದು. ತನ್ನ—ಶಕ್ತಿಯನ್ನು ವರ್ಧಿಸುವುದಕ್ಕಾಗಿ ಅಲ್ಲದಿದ್ದರೂ, ತನ್ನನ್ನು ಪ್ರವೃತ್ತ ಸ್ಥಿತಿಯಲ್ಲಿಡಲು ಅದಕ್ಕೆ ಈ ಸಂಬಂಧ ಬೇಕಾಗುವುದು ಈ ಪ್ರವೃತ್ತಿಯ ಧ್ಯೇಯವು ಕೇವಲ ವ್ಯಾಪ್ತಿಯೇ ಅಲ್ಲ, ಪ್ರಧಾನವೂ ಆಗಿರುವುದು.

'ನಾವು ಸತ್ಯವನ್ನು ಬೇರೆ ಬೇರೆಯಾಗಿ ವಿಭಾಗಿಸಲಾರೆವು' ಎಂಬುದಿದು, ಸತ್ಯವಾಗಿದೆ. ಸತ್ಯದ ವಿಚಾರದಲ್ಲಿ ನಾವು ಭೇದವನ್ನು ಕಲ್ಪಿಸಲಾಗದು. ಆಂತರಿಕ ಹಾಗೂ ಬಾಹ್ಯ ಇವೆರಡ ಗಳಿಂದಲೂ, ನಾವು ಸತ್ಯದ ಅಜ್ಞೆಯನ್ನು ಪಾಲಿಸಬೇಕಾಗಿದೆ. ನಾವು ಇ ಕ್ಕೆ ವಿರೋಧವಾಗಿ ನಡೆದರೇ ಆದರೆ, ಶಿಕ್ಷೆಗೆ ಗುರಿಯಾಗುತ್ತೇವೆ.

'ಮಾಹಂಬ್ರಹ್ಮ ನಿರಾಕರೋಮಿ ಮಾಮಾ ಬ್ರಹ್ಮ ನಿರಾಕರೋತ್' ಅಧಾರ್ತಾ ಬ್ರಹ್ಮನು ಬಿಡುವುದಿಲ್ಲವಾದರೆ ನಾವೂ ಬ್ರಹ್ಮನನ್ನು ಬಿಡಬಾರದು. ಈ ವಾಕ್ಯವು ನಮ್ಮ ಬಾಹ್ಯಾಂತರಗಳೆಗಿದರ ಮೇಲೂ ಪರಿಣಾಮಕಾರಿಯಾಗಿದೆ. ಕೇವಲ ಆತ್ಮ ಚಿಂತನ ಮತ್ತು ನಿರೀಕ್ಷಣಗಳಿಂದ ನಾವು ಬ್ರಹ್ಮನನ್ನು ಹೊಂದಬಹುದೆಂದು —ಯೋಚಿಸುತ್ತ ನಮ್ಮ ಬಾಹ್ಯ ಪ್ರವೃತ್ತಿಗಳಲ್ಲಿ ಆತನ ಧ್ಯಾನವನ್ನು ಅಲಕ್ಷಿಸಿದ್ದೇ ಆದರೆ, ಅಥವಾ ಆತನನ್ನು ಹೃದಯದ ಪ್ರೇಮ ಮಾತ್ರದಿಂದಲೇ ತಿಳಿಯಬಹುದು; ಹಾಗೂ, ಸ್ತುತಿ, ಉಪಾಸನೆ, ಮೊದಲಾದ ಬಾಹ್ಯ ಸಾಧನೆಗಳ ಅಗತ್ಯವಿಲ್ಲ, ಎಂದು ನಾವು ತಿಳಿದುಕೊಂಡರೆ— ಆಗ ಮಧ್ಯ ಮಾರ್ಗದಲ್ಲಿ ನಡೆಗುತ್ತ ಕೆಳಗುರುಳಿ ಬೀಳುವವರಂತೆ—ನಾವೂ ಬೀಳುತ್ತೇವೆ. ಆಗ ನಮ್ಮ ಸಾಧನೆ ಅಪೂರ್ಣವಾಗಿ ವಿಫಲವಾಗಬಹುದು.

—ಸಶೇಷ.



In the Court of the Subordinate Judge of South Kanara.

S. C. No. 176/1961.

Between.—

W. J. Rodricks —Plaintiff.

and

B. R. Hegde —Defendant.

To

The Defendant —

Sri B. R. Hegde, S/O V. Manjayya Hegde Lorry Owner, Ajjarkad Udipi, S. K.

Please take notice that the suit filed against you by the plaintiff for recovery of amounts due under a promissory note dated 19-9-1959 stands posted to 23rd day of December 1961 at 11 A. M. for you appearance in the above Court. Please note that if you fail to appear on the said date, either in person or through a pleader the suit will be decided exparte.

(By order of Court).

P. F. Rodrigues, B. A. LL. B,
Advocate for Plaintiff.

Mangalore, 30-11-1961.

ಜನಪದ ಸಾಹಿತ್ಯದ ಅಮೃತ ಬಿಂದು

ಶಿವ ಪಾರ್ವತಿಯರ ವಿನೋದ

ಶ್ರೀ ಗೋರಾ.

ಓದು ಬರಹವನ್ನರಿಯದ ಮುಗ್ಧ ಮನಸ್ಸಿನ ಜನತೆಯು ತನ್ನ ಮನಸ್ಸು ಆನಂದ ವರವಶವಾದಾಗ, ಭಾವಾವೇಶಗೊಂಡು, ಅದು ಉಕ್ಕಿ ಹರಿಯಲು ತನ್ನ ಕಂಡುಂಡ ಬಾಳ ಅನುಭವಗಳನ್ನು ಬಲು ಹಮ್ಮಸ್ಸಿನಿಂದ ಹಾಡುತ್ತದೆ. ಇದಕ್ಕೆ ಗ್ರಂಥಸ್ಥ ರೂಪವನ್ನು ಜನರು ಕೊಡುವುದಿಲ್ಲ. ಹಿಂದಿನಿಂದಲೂ ನಮ್ಮ ಜನರು ಇಂತಹ ಹಾಡುಗಳನ್ನು ಹಾಡುತ್ತ ಬಂದಿದ್ದಾರೆ. ಈ ಹಾಡುಗಳಲ್ಲಿ ಒಂದು ಪರಂಪರೆಯಿದೆ; ಸಂಸ್ಕಾರವಿದೆ. ಸಂಸ್ಕೃತಿಯ ಕಸುರೂ ಇದೆ; ನಾಗರಿಕತೆಯ ಲೇಪವೂ ಇದೆ. ಭಕ್ತಿ ರಸಾಯನವು ಮಹಾ ಸಮುದ್ರದಂತೆ ಉಕ್ಕುವ ಹಲವಾರು ಜಾನಪದ ಗೀತೆಗಳು ಕನ್ನಡದಲ್ಲಿವೆ. ಇವುಗಳನ್ನು ಸಂಗ್ರಹಿಸುವ ಮಹಾ ಸಾಹಸ ಕಾರ್ಯದಲ್ಲಿ ಕೆಲವರು ಮುಖ್ಯವಾಗಿ ಡಾ। ಗದ್ದಗೀಮಠರ, ಶ್ರೀ ಕ. ರಾ. ಕೃ, ಶ್ರೀ ಗೋರೂರು ಮತ್ತು ಶ್ರೀ ಮತ್ತಿಗಟ್ಟ ಕೃಷ್ಣಮೂರ್ತಿಯವರು ತೊಡಗಿದ್ದಾರೆ. ಈ ದಿಸೆಯಲ್ಲಿ ಯಶಸ್ವೀ ಪ್ರಯತ್ನ ನಡೆಯುವ ಸಲ್ಲಕ್ಷಣ ತೋರಿ ಬರುತ್ತಿದೆ.

ದಕ್ಷಿಣ ಕನ್ನಡವು ವಸ್ತುತಃ ತುಳುನಾಡಾದರೂ ಇಲ್ಲಿಯೂ ಹೊರನಾಡಿನವರ ಸಂಪರ್ಕವಶದಿಂದ ಕೆಲವೊಂದು ಕನ್ನಡ ಜಾನಪದ ಗೀತೆಗಳು ಪ್ರಚಾರದಲ್ಲಿವೆ. ನಮ್ಮತ್ತಗಡೆಯ ಹಳೆಯ ಮುದುಕಿಯರಲ್ಲಿ ಅಥವಾ ಪ್ರಾಚೀನ ಸಂಸ್ಕಾರ ಪ್ರಿಯರಲ್ಲಿ ಇಂತಹ ಗೀತೆಗಳ ಕಂತೆಯೇ ಇರುವುದುಂಟು. ಈ ಗೀತೆಗಳ ಮೇಲೆ ದಕ್ಷಿಣ ಕನ್ನಡದ ಸಾಹಿತ್ಯಿಕ ಭಾಷೆಯ ಪ್ರಭಾವವು ಬಹಳಷ್ಟು ಬೀರಿದೆ. ಆದರೂ ಅವುಗಳ ವಸ್ತು, ಭಾವ, ರೀತಿ, ಶೈಲಿ, ಛಂದಸ್ಸು, ಗುಣ ಮೊದಲಾದುವೆಲ್ಲವೂ ಜಾನಪದ ಪದ್ಧತಿಗೆ ಸೇರಿದೆಯೆಂಬುದು ನಿರ್ವಿವಾದ.

ಇಂತಹ ಒಂದು ಜಾನಪದ ಗೀತೆಯ ಪರಿಚಯವನ್ನು ಮಾಡಿಕೊಡುವುದೇ ಈ ಲೇಖನದ ಉದ್ದೇಶ. ಇದರಲ್ಲಿ ಅಡಕವಾದ ಕಥೆಯನ್ನೇ ಹೋಲುವ ಇದಕ್ಕೆ ಸಂವಾದಿಯಾಗಿರುವ ಒಂದು ಗೀತೆ ಡಾ। ಗದ್ದಗೀಮಠರ "ಲೋಕ ಗೀತೆಗಳು" ಎಂಬ ಪುಸ್ತಕದಲ್ಲಿ "ಶಿವ ಸಿಂಪಿಗೆ" ಎಂಬುದರಲ್ಲಿ ದೊರೆಯುತ್ತದೆ. ಆದರೆ, ಇವೆರಡರಲ್ಲಿ ತುಂಬ ಅಂತರವಿರುವುದನ್ನು ಅಲ್ಲಗಳೆಯುವುದು ಸಾಧ್ಯವಿಲ್ಲ.

ಶಿವ-ಪಾರ್ವತಿಯಲ್ಲಿ ಒಮ್ಮೆ ವಿವಾದ ಬೇಳುತ್ತದೆ. ಆಗ "ಗಾಳಿ ಬೆಳುದಿಂಗಳಲಿ ಭೂಮಿ ಬೆಳೆವಲ್ಲಿ ಭಾಮೆಯರೊಲವನರಿ ತವರುಂಟೆ?" ಎಂದು ಭಾಲೇಶರು ನುಡಿದರು. ಪಾರ್ವತಿ ಸುಮ್ಮನಿರುವಳೆ? "ಕಾವುಂಟೆ ಕಬ್ಬಿಗೆ? ಬೇರುಂಟೆ ಬೆಲ್ಲಕ್ಕೆ? ಕೀಳುಂಟೆ ಹರಿಯದಲದಲಿ? ಮೂಡೇವಿಯ ಚರಣ ನಂಬುವಗೆ ಭ್ರಮೆಯುಂಟೆ?" ಎಂದು ತಾನೇ ಮೇಲೆಂದು ವಾದಿಸುತ್ತಾಳೆ. ಶಿವ ಸಂಧಾನಕ್ಕೆ ಪ್ರಯತ್ನಪಟ್ಟು ಮಧ್ಯವರ್ತಿ ಮಾರ್ಗವನ್ನು ಅರಸಿ ಅರಸಿಗೆ ಸಮಾಧಾನ ಮಾಡುತ್ತಾನೆ: "ಗಾಳಿಗೆ ಎಲೆಯುಂಟೆ? ಎಲೆಗೆ ಬೀಜಗಳುಂಟೆ? ಕೊಳದ ನೀರೊಳಗೆ ಕುಳಿಯುಂಟೆ? ಮೂಡೇವಿ ಎನ್ನನಿನ್ನೊಳಗೆ ಭೇದವುಂಟೆ?"

ಆದರೆ, ಇದರಿಂದ ಪಾರ್ವತಿ ತೃಪ್ತಳಾಗುವುದಿಲ್ಲ. ವಿಷಯವನ್ನು ಸಲ್ಲಟಿಸಿ ಈಶ್ವರರು ಕಾಶಿಗೆ ಹೋಗಬೇಕಾಗಿದೆ ಎಂದು ಹೇಳಿ ಹೊರಟರು. ದೇವಲೋಕದಿಂದ ಒಂದು ಪಟ್ಟೆಯನ್ನೂ ಚಂದ್ರಲೋಕದಿಂದ ಒಂದು ಬಣ್ಣವನ್ನೂ ತಂದು ಮುಳ್ಳಿಗೆ ಉಡುಗೊರೆಯಿತ್ತು ಅವರು ಅಗಲಿ ಹೋದರು. ಮೂಷಿಕನಾಗಿ ಮೋಸದಿಂದಲೆ ಬಂದು ಅರಸಿಯ ಮನೆಯ ಒಳಗಿದ್ದ ಪಟ್ಟೆಯ ಕಪಟದಿಂದಲೆ ಪರಮಾತ್ಮತರಿದ ಪಟ್ಟೆ ಗಣಪಯ್ಯ ಪಟ್ಟೆಯನೆ ಬೇಡಿದ. ಅದನ್ನು ತಂದು ಹೊರಗಿಂಕೆ ನೋಡಿದರೆ ನೊಚ್ಚ ಕಟ್ಟಲಿಕೆ ಸ್ಥಳವಿಲ್ಲ! ಬಾಲ ಗಣಪಯ್ಯ ಬಣ್ಣವನ್ನು ಬೇಡಿದಾಗ, ಅದನ್ನು ಹೊರಗಿಂಕೆ ತಂದು ನೋಡಿದರೆ, ಮುತ್ತ ಕಟ್ಟಲಿಕ್ಕೆ ಸ್ಥಳವಿಲ್ಲ! ಕರಿಯ ಕಬ್ಬಿನ ಕೋಲು ಕಡಿದು ತುಂಡನೆ ಮಾಡಿ ತಟ್ಟಿಯಲಿ ತುಂಬಿ ಗಣಪನಿಗೆ ಕೊಟ್ಟರೆ, ಪಟ್ಟಿಯಿಲ್ಲದೆ ಮೆಲ್ಲೆನು ಎನ್ನುವ! ತಟ್ಟಿಯಲಿ ನೊರೆಹಾಲು ಬಟ್ಟಲಲಿ ಹೆರೆತುಪ್ಪ ಬಾಳೆಯ ಹಣ್ಣು ಸಕ್ಕರೆಯು ಕೊಟ್ಟರೆ, ಬಣ್ಣವಿಲ್ಲದೆ ಮೆಲ್ಲೆನು ಎನ್ನುವ! ಮೂಡೇವಿ ದಿಕ್ಕುತೋಚದೆ ತಲೆಗೆ ಕೈಹಿಡಿದು ಕುಳಿತಿರುವಾಗ,

ಕಂಬ್ಲಿಯೂ ಅಂಗಿಯು ಕಂಬ್ಲಿಯ ಟೊಪ್ಪಿಯು
ಸೂಜಿಯ ದಾರವ ಕೈಯಲ್ಲಿ ಹಿಡಿಕೊಂಡು
ಬಂದನೇ ಮೂಡೇವಿ ಮನೆಗಾಗಿ ||
ಬಂದನೇ ಹೊಲಿಗಾರ ನಿಂದನಂಗಣದಲ್ಲಿ
ಸೀರೆಗಳುಂಟೆ ಹೊಲಿವುದಕೆ ಎನುತಲೆ
ಕರೆದು ಕೇಳಿದನು ಮನೆಯಲ್ಲಿ ||

ಒಳಗಿದ್ದ ಮೂಡೇವಿ ಹೊರಗಿಂಕೆ ಬಂದು ಯಾರೆನ್ನ ಕರೆದಿರೇ ಎನ್ನುತಲೆ, ಹೊಲಿಗಾರ ನಾನು ಕರೆದೆ ಎಂದ. ದೇಶ ಕುಲ ಪರಿಚಯವಾದ ನಂತರ, ಕಂದನ ಪಟ್ಟೆ ಬಣ್ಣಗಳನ್ನು ಹೊಲಿಯಲು ಮೂಡೇವಿ ತಂದುಕೊಟ್ಟಳು. ಚಿನ್ನದ ಸೂಜಿಯಲಿ ಪಟ್ಟೆಯನ್ನು, ಮುತ್ತಿನ ಸೂಜಿಯಲಿ ಬಣ್ಣವನ್ನು ಹೊಲಿಗಾರ ಹೊಲಿದಾಗ ಉತ್ತಮ ಕುಲದ ಮೂಡೇವಿ ನೋಡಿ ನಕ್ಕಳು.

ಚಿನ್ನದ ಬುಟ್ಟಿಯಲಿ ಸಣ್ಣಕ್ಕಿಯನು ತುಂಬಿ ಉತ್ತಮ ಕುಲದ ಮೂಡೇವಿ ಕೊಟ್ಟರೆ, ಅಕ್ಕಿ ಯೂಕೆಂಬ ಹೊಲಿಗಾರ. ಹಾಗೆಯೇ ದುಡ್ಡುಕಾಸನು ತುಂಬಿಕೊಟ್ಟರೆ, ದುಡ್ಡು ಯೂಕೆಂಬ. ಹೊಲಿಗಾರ-ಮೂಡೇವಿಯ ಮನೆಬಿಡುವ ಲಕ್ಷಣ ಕಾಣಲಿಲ್ಲ. ಉಪಾಯಗಾಣದೆ ಸೋಮಶೇಖರ, ದೇವರು ಕಾಶಿಗೆ ಹೋಗಿದ್ದಾರೆ, ಇಂದು ಮಧ್ಯಾನ್ನಕ್ಕೆ ಬರುವರು ಹೊಲಿಗಾರ ಬೇಗನೆ ಹೊರಡು ಮನೆಯಿಂದ' ಎಂದು ಸಂಚುಹೂಡಿ ಎರಡು ಮಹಲ ಕೊಡಹೋದರೆ, ಹೊಲಿಗಾರ ಸುಮ್ಮನುಳಿಯುವನೆ? "ಕಾಶಿಗೆ ಹೋದವರು ಇಂದೀಗ ಬರುವರೇ ನಾರಿನೀ ಎನ್ನೊಡನೆ ಬರಿಮಾತು ಹೇಳುವೆಯೋ ಬಾರೆ ನೀನೆನ್ನ ಬಳಿಗೆ" ಎಂದು ಹೊಲಿಗಾರ ಸಂಚಿನ ಹೊಂಚರಿತವನೆಂ. ಹೇಳಿದ.

ನಾರೀ ಪಾತಿವ್ರತ್ಯ ಭಂಗಕ್ಕೆ ಹೆದರಿ ಕೋಣೆಯ ಮನೆಗೆ ನಡೆದಳು. ಮುತ್ತಿನ ಮಂಚದಲ್ಲಿ ಅಚ್ಚಹಾಸಿಗೆ ಹಾಸಿ ಸುತ್ತ ದೀಪಿಗೆ ಬೆಳಕು ಮಾಡಿದಳು. ಚಿನ್ನದ ಮಂಚಕ್ಕೆ ಅರಳು ಹಾಸಿಗೆ ಹಾಕಿ ಸುತ್ತ ದೀಪಿಗೆ ಬೆಳಕು ಮಾಡಿ ಕೂತುಕೊಂಡಳು. ಅದರೆ, ಹೊಲಿಗಾರ ಆಕೆಯ ಹಿಂದೆಯೇ ಮಂಚಕ್ಕೆ ಹೋಗಿ ಕೈಹಿಡಿದೇಬಿಟ್ಟ. ಆಗ ಆ ನಾರಿ, ಬೆಚ್ಚಬೆದರಿ,

ಗಡಗಡನೆ ನಡುಗಿದಳು ಕೆಡಹಿದಳು ಮೂರ್ಛೆಯಲಿ
ಬಿದ್ದಳು ಧರಣಿಯ ಮೇಲೆ ಮರನಾಗಿ ಮೂಡೇವಿ
ಮುಕ್ಕಣ್ಣ ಶಿವನ ನೆನೆದಳು||
ಪಟ್ಟೆಯೊಳೆ ಹರಿದುವೊ ಈ ಮೃತ್ಯ ವೆಲ್ಲಿಂದ ಬಂದನೋ
ಕೆಟ್ಟೆತು ತನ್ನ ಬಹುಮಾನನೆನುತಲೆ
ಮುಕ್ಕಣ್ಣ ಶಿವನ ನೆನೆದಾಳು||

ಮುಗ್ಧೆ ಗೌರಿಯ ಈ ಸ್ಥಿತಿಯನ್ನು ಕಂಡು ಈಶ್ವರರಿಂದ ತಡೆಯಲಾಗಲಿಲ್ಲ. ಆಕೆಯ ಕುರುಳನೇವರಿಸುತ್ತ ಸೂಸುವ ಬೆವರ ಒರಸುತ್ತ ನಿಜರೂಪ ತೋರಿದರು. ಸತ್ಯ ಸಂಗತಿಯನ್ನು ತಿಳಿಸಿದರು. ಆ ಸೂಚಿಲಿ ತಾನೇ ಗೆದ್ದೆನೆಂದು ಸಿದ್ಧಾಂತಿಸಿ ಅವರು ಕಾಶಿಗೆ ಹೋದರು.

ಹೆಣ್ಣು ಆಸ್ಪೊಂದು ಸುಲಭದಲ್ಲಿ ಸೋಲೊಪ್ಪುವ ಪ್ರಾಣಿ ಎಲ್ಲ ಅದುದರಿಂದ,

ಪಟ್ಟೆಯನು ಮಾಸಿದಳು ಸೊಪ್ಪನೇರಿ ಉಟ್ಟು
ನೋಡುವ ಶಿವನ ಗುಣವನೆನುತಲೆ ಪಾರ್ವತಿ
ಕೊರವತ್ತಿಯಾಗಿ ನಡೆದಳು ||
ಕಾಕೆಕರಿಮಣಿ, ಬೆಳೆಯ ಗುರುಗುಂಜಿ
ದಂಡೆ, ಕೊಂಳೊಳಗೆ ಕರಿಮಣಿಯ ಕೆ

(ಇನೆ ಪುಟ ನೋಡಿರಿ)

ಭಾರತದ ಪ್ರಧಾನಿ ಶ್ರೀ ನೆಹರು ತನ್ನ ಪುತ್ರಿ ಇಂದಿರಾ ಗಾಂಧಿಯೊಡನೆ ಅಮೇರಿಕಾ ಸಂಚಾರ ಕಾಲದಲ್ಲಿ ಅಮೆರಿಕದ ರಾಜ್ಯಾಂಗ ಕಾರ್ಯದರ್ಶಿ ಡೀನ್‌ರಸ್ಕ್ ದಂಪತಿಗಳು ಇತ್ತ ಭೋಜನ ಸಮಾರಂಭದಲ್ಲಿ ತೆಗೆದ ಭಾವ ಚಿತ್ರ. ಇದರಲ್ಲಿ ಎಡದಿಂದ ಬಲಕ್ಕೆ ಶ್ರೀಮತಿ ಇಂದಿರಾ ಗಾಂಧಿ, ಶ್ರೀಮತಿ ರಸ್ಕ್, ಶ್ರೀ ನೆಹರು ಮತ್ತು ಡೀನ್‌ರಸ್ಕ್.

ಉಳಿತಾಯದ ಬಲವೊಂದಿದ್ದರೆ.....

ಜೀವನದ ಜಡತ್ವ–ಜಿಗುಪ್ಸೆಗಳು ತಂತಾನೆ ಮಾಯವಾಗುವುವು; ಬದಲು, ಶರೀರದಲ್ಲಿನ ಸುಪ್ತ ಕ್ರಿಯಾಶಕ್ತಿಗಳಿಗೆ ಚೈತನ್ಯ–ಪ್ರೇರೇಪಣೆಗಳು ಸಿಕ್ಕಿ, ಜೀವನವು ಸಂಜೀವನವಾಗಿ, ಸುಖದ ಸುಪ್ತತ್ತಿಗೆಯಾಗಿ ಮೆಲ್ಲನೆ ಮಾರ್ಪಡುವುದು.

— ಉಳಿತಾಯಕ್ಕಾಗಿ —

ಇದೇ.....ಈ ಕ್ಷಣವೇ.....ಒಂದು ಸೇವಿಂಗ್ಸ್ ಖಾತೆ ತೆರೆಯಿರಿ.

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ಸ್ಥಾಪನೆ: 1906)

ರಿಜಿಸ್ಟರ್ಡ್ ಆಫೀಸು: ಉಡುಪಿ | ಅಡಳಿತ ಆಫೀಸು: ಮಂಗಳೂರು

ಅಸ್ಥಮಾ ಪೀಡಿತರ ಗಮನಕ್ಕೆ

ಹಿಮಾಲಯದ ಪ್ರಸಿದ್ಧ ಅಸ್ಥಮಾ ನಿವಾರಕ ಮೂಲಿಕೆಯನ್ನು ದಿ. 21—12—61 ಮಣ್ಣೆಸೆಯ ರಾತ್ರಿ ಹಾಲು ಮತ್ತು ಅಕ್ಕಿಯಿಂದ ತಯಾರಿಸಿದ ಖೀರಿನಲ್ಲಿ ತೆಗೆದು ಕೊಳ್ಳುವುದರಿಂದ ಅಸ್ಥಮಾ, ಗೂರಲು, ಕೆಮ್ಮು, ಉಬ್ಬಸ, ಮೇಲುಸಿರು ಮತ್ತು ಶ್ವಾಸ ಕಟ್ಟುವಿಕೆ ಇವುಗಳು ನಿವಾರಿಸಲ್ಪಡುತ್ತವೆ. ಕೂಡಲೇ ಇಂಗ್ಲಿಷಿನಲ್ಲಿ ಬರೆಯಿರಿ:

Shri Mahatma Sidh Baba Sewa Ashram
P. O. Chitrakot. (Uttar Pradesh)

ಭಾರತೀಯ ಸಂಸ್ಕೃತಿಯ ವಿಶ್ವರೂಪ

ಭೂಪಟ ಪುಸ್ತಕಗಳಲ್ಲಿ ಭಾರತವು ಅಂಕಿತವಾಗಿರುವುದನ್ನು ನೀವು ನೋಡಿದ್ದೀರಿ ಆದರೆ, ವಿಚಾರಶೀಲರಾಗಿ ನೀವು ಯೋಚಿಸುವುದಾದರೆ, ಭಾರತದ ಸೀಮೆಯು ಇಷ್ಟೇ ಅಲ್ಲವೆಂಬುದನ್ನು ನೀವು ಕಂಡುಕೊಳ್ಳುವಿರಿ. ಭಾರತದ ಸುತ್ತುಮುತ್ತಲಿನ ದೇಶಗಳನ್ನು ನೀವೊಮ್ಮೆ ಸುತ್ತಾಡಿ ಬಂದರೆ, ಅಲ್ಲೆಲ್ಲ ಭಾರತೀಯ ಸಂಸ್ಕೃತಿಯ ಪ್ರಭಾವ ಪ್ರಸಾರವಾದುದನ್ನು ನೀವು ಕಾಣುವಿರಿ. ಪೂರ್ವ ಭಾರತೀಯ ದ್ವೀಪಗಳನ್ನು ನೀವೊಮ್ಮೆ ತಿರುಗಾಡಿದರೆ ಅಲ್ಲಿನ ಪ್ರತಿಕಡೆಯಲ್ಲಿಯೂ ಭಾರತೀಯ ಸಂಸ್ಕೃತಿಯ ಮುದ್ರೆಯು ಅಚ್ಚಳಿಯದೆ ಸಿದ್ದಿರುವುದು ಗೋಚರಿಸುವುದು. ಜಾವಾ, ಬಾಲಿ, ಮಲಯೂ, ಇಂಡೊನೇಶ್ಯ ಮತ್ತು ವಿಯತನಾಮ ಮೊದಲಾದ ದೇಶಗಳಲ್ಲಿ ಇದು ಸತ್ಯವೆಂದು ಸಿದ್ಧವಾಗುತ್ತದೆ. ಇಲ್ಲಿ ಭ್ರಮಿಸುವಾಗ, ನಾವು ಯಾವುದೋ ವಿಚಿತ್ರದೇಶವೊಂದರಲ್ಲಿ ಪಾದಾರ್ಪಣ ಮಾಡಿದ್ದೇನೆಂಬ ಅನುಭವವಾಗುತ್ತದೆ. ಅಲ್ಲಿನ ದೃಶ್ಯ ದೃಶ್ಯವೂ ನಮಗೆ ಸಂಜೆತವಿರುವಂತೆ ಭಾಸವಾಗುವುದು. ಭಾರತದ ಅಯೋಧ್ಯೆ ಇಲ್ಲವೇ ಸಾರನಾಥದಂತೆ ಆ ದೇಶಗಳ ನಗರಗಳು ಕಟ್ಟಲ್ಪಟ್ಟಿವೆ

ಬಾಲಿದ್ವೀಪವು ಅಯೋಧ್ಯೆಯೇ ಎಂದು ಹೇಳಬಹುದು ರಾಮ-ಸೀತೆಯರ ಕಥೆಯನ ಇಲ್ಲವೇ ಶ್ರವಣಕ್ಕೆ ನಮ್ಮಲ್ಲಿ ಸಮಯವು ದೊರೆಯದಾಗಿದೆ. ಹೆಜ್ಜೇಕೆ, ಸ್ವಯಂ ಅಯ್ಯೋಧ್ಯಾ ನಿವಾಸಿಗಳೇ ಇಂದು, ತಮ್ಮ ದೈನಂದಿನ ಕಾರ್ಯಭಾರ ಮುಗಿದ ನಂತರ, ಆನಂದ ವಿಹಾರಕ್ಕಾಗಿ ಮನೆಯ ಮಂದಿರಗಳಿಗೆ ತೆರಳುತ್ತಾರೆ, ಇಲ್ಲವೇ ತಮ್ಮ ತಮ್ಮ ಮನೆಗಳನ್ನು ಹೊಕ್ಕು ಸುಖ ನಿದ್ರಾಲಿಪ್ತರಾಗುತ್ತಾರೆ ಸಂಸಾರಭಾರ ಸಂತಪ್ತರಾದ ಅಸಹಾಯಕರಿಗೆಯಾದರೂ ರಾಮಧ್ಯಾನ ಮಾಡುತ್ತಿರಬಹುದು; ಆದರೆ, ಬಾಲಿ ದ್ವೀಪದ ಪರಿಸ್ಥಿತಿ ಇದಕ್ಕೆ ಪೂರಾ ಪ್ರತಿರೋಧ. ಅಲ್ಲಿ ಪ್ರತ್ಯೇಕ ಸ್ಥಳವೂ ರಾಮಮಯವಾಗಿ ಗೋಚರಿಸುವುದು. ಅಲ್ಲಿನ ಪುರುಷನನ್ನು 'ರಾಮ', ನಾರಿಯನ್ನು 'ಸೀತೆ', ಅವರ ಮನೆಯನ್ನು 'ಪಂಚವಟಿ' ಎಂದು ಉಲ್ಲೇಖಿಸಿದರು, ಅತಿಶಯೋಕ್ತಿಯಾಗಲಾರದ.

ಬಾಲಿ ದ್ವೀಪದ ಪ್ರತಿಯೊಬ್ಬ ನಾಗರಿಕನೂ ಹಗಲಿನಲ್ಲಿಯಲ್ಲವಾದರೂ ರಾತ್ರೆ ಹೊತ್ತು 'ರಾಮಚರಿತ್ರದ, ಪ್ರದರ್ಶನದಲ್ಲಿ ತಪ್ಪದೆ ಭಾಗವಹಿಸುತ್ತಾನೆ. ಅಲ್ಲಿ ಎಲ್ಲ ಹೆಣ್ಣಿಗಳಲ್ಲಿಯೂ ಕೂಡ ಪಾರಿಗಳಲ್ಲಿಯೂ ರಾಮಲೀಲೋತ್ಸವ ನಡೆಯುತ್ತದೆ ಒಂದೆಡೆ ಸೀತಾ ಸ್ವಯಂವರ ನಡೆದರೆ, ಮತ್ತೊಂದೆಡೆ ಜನಕನಂದನೆಯು ಅಶೋಕ ವಾಟಿಕೆಯಲ್ಲಿ ಕುಳಿತು ಅಳುತ್ತಿರುತ್ತಾಳೆ. ಇನ್ನೊಂದು ಮೂಲೆಯಲ್ಲಿ ವನವಾಸವನ್ನು ಮುಗಿಸಿ ಮರಳಿ ಬಂದ ರಾಮನನ್ನು ಸ್ವಾಗತಿಸಲು ದೀಪದ ಹಬ್ಬವನ್ನು ಆಚರಿಸುತಿದ್ದರೆ, ಉಳಿದೊಂದೆಡೆ ಲಂಕಾದಹನದ ಭೀಕರ ದೃಶ್ಯ ದೃಗ್ಗೋಚರಿಸುತ್ತದೆ ಸುಮಧುರ ಸಂಗೀತದ ಅಲೌಕಿಕ ಲಯದಲ್ಲಿ ಶ್ರೋತೃಗಳೂ ಅಭಿನೇತೃಗಳೂ ಓತಪ್ರೋತರಾಗಿದ್ದಾರೆ. ಇಸ್ಲಾಂಧರ್ಮವಲಂಬಿಗಳೂ 'ರಾಮಚರಿತೆ'ಯ ಪ್ರದರ್ಶನದಲ್ಲಿ ಭಾಗವಹಿಸುತ್ತಿರುವುದು ಅತಿ ಚೋದ್ಯವಿದೆ. ನಮ್ಮ ದೇಶದಲ್ಲಿ ಇಂತಹ ಸುದ್ದಿಯನ್ನು ಕಲ್ಪಿಸುವುದೂ ಸಾಧ್ಯವೆಂಬಂತಿಲ್ಲ. ಈ ಸುದ್ದಿಯನ್ನು ಬಾಲಿವಾಸಿಗಳು ತಿಳಿದಾಗ ವಿಸ್ಮಿತರಾಗುವುದು ಸಹಜ. ಅಲ್ಲಿ ವರ್ಣವ್ಯವಸ್ಥೆಯು ಆದಿರೂಪದಲ್ಲಿ ಇನ್ನೂ ಬದುಕಿಕೊಂಡಿದೆ ಉಚ್ಚ ವರ್ಣದ ವೈಶ್ಯನೊಡನೆ ಮಾತಾಡುವಾಗ ಶೂದ್ರರು ಎಡೂ ಕೈಗಳನ್ನು ಮುಗಿದು ಕಣ್ಣುಮುಚ್ಚಿ ನಿಂತುಕೊಂಡಿರಬೇಕಾಗುತ್ತದೆ. ಆದರೂ ಅಲ್ಲಿ ಸಾಂಪ್ರದಾಯಕತೆಯೆಂಬುದು ಹೆಸರಿಗಾಗಿ ಮಾತ್ರ ಇರುವುದಲ್ಲ; ಆದುದರಿಂದಲೇ ಇದು ವಿಚಿತ್ರ ದೇಶ. ಧರ್ಮದ ಸಮಸ್ಯೆಗಳನ್ನು ಬಹಳ ಸುಲಭದಲ್ಲಿ ಬಗೆ ಹರಿಸಿಕೊಳ್ಳುತ್ತಾರೆ ಒಬ್ಬ ವೈಷ್ಣವನ ಮಗನು ಮುಸಲ್ಮಾನನೂ ಮೊಮ್ಮಗನು ಕ್ರೈಸ್ತನೂ ಆಗುವಷ್ಟು ಅವರ ಮನಸ್ಸು ಉದಾರವಾಗಿದೆ. ಈ ರೀತಿಯ ವ್ಯವಹಾರಿಕೆಯಿಂದ ಯಾರಿಗೂ ಯಾವುದೇ ವಿಧದ ಆಪತ್ತಿಯೊದಗುವುದಿಲ್ಲ ಮತ್ತು ದುರಾಗ್ರಹವೆಂಬುದರ ಗಂಧ ಗಾಳಿಯೂ ಇಲ್ಲ.

ಕಲೆ ಮತ್ತು ಸೌಂದರ್ಯದ ದೃಷ್ಟಿಯಿಂದ ವೀಕ್ಷಿಸುವುದಾದರೆ, ಬಾಲಿ ದ್ವೀಪವು ಸ್ವರ್ಗಸಮಾನವಾಗಿದೆ. ಪುರಾಣಗಳಲ್ಲಿ ವರ್ಣಿತವಾಗಿರುವ ನಂದನ ವನದ ಕಲ್ಪನೆಯನ್ನು ಈ ದ್ವೀಪದ ಆಧಾರದ ಮೇಲೆಯೇ ಮಾಡಿರಬಹುದು. ಇಲ್ಲಿನ ನರನಾರಿಯರ ಸೌಂದರ್ಯ ಮತ್ತು ಅಭಿರುಚಿಯು ಅಸಾಧಾರಣವಾದುವು ಇಂತಹ ಸ್ನಿಗ್ಧ ಸೌಂದರ್ಯ ಹಾಗೂ ಕಾಂತಿಯು ಎಲ್ಲಿಂದ ಬಂತೆಂದು ಹೇಗೆ ಹೇಳಬೇಕು?

ಡೆನ್ಪಸಾರ್ ಎಂಬ ನಗರದ ದಕ್ಷೇತ್ರದಲ್ಲಿ ವಕ್ಷದ ಮೇಲೆ ಸೆರಗು ಹೊದೆದುಕೊಳ್ಳುವುದು ಕಾನೂನು ರೀತಿಯಿಂದ ಅತ್ಯವಶ್ಯ. ಇಲ್ಲಿಂದ ೧೦—೧೫ ಮೈಲು ದೂರದ ಬಳನಾಡಿಗೆ ಹೋದರೆ, ಅಲ್ಲಿನ ನಾರಿಯರು ನಿರಾವರಣ ವಕ್ಷದಿಂದ ಪ್ರಕಟಿಸಾಗುತ್ತಾರೆ ಆಗ ನಮ್ಮ ಸುತ್ತಮುತ್ತಲೂ ನಿರ್ನಿರ್ಜ ಸೌಂದರ್ಯಸಾಗರವು ತರಂಗಿತವಾಗುತ್ತಿರುವಂತೆ ಕಾಣುವುದು. ಪ್ರಕೃತಿ ಮಾತೆಯ ತೊಡೆಯಲ್ಲಿ ನಿರ್ಮಲ ಗಿರಿನದಿ ಅಥವಾ ಕೆರೆಗಳಲ್ಲಿ ವಿಹಾರ ಕೈಗೊಳ್ಳುವುದು ಬಾಲಿನಿವಾಸಿಗರ ಜೀವನದ ಪ್ರಸಂಗವಾಗಿದೆ ಅಲ್ಲಿ ಎಲ್ಲ ಸ್ತ್ರೀ ಪುರುಷರೂ ಅಬೋಧ ಹುಡುಗರಂತೆ ಅನಾವೃತರಾಗಿರುತ್ತಾರೆ.

ಪೂರ್ವ ಜರ್ಮನಿಯಿಂದ ಸ್ವತಂತ್ರ ಜೀವನಕ್ಕಾಗಿ ಗಡಿದಾಟಿ ಪಶ್ಚಿಮಕ್ಕೆ ಬರುತ್ತಿರುವ ನಿರಾಶ್ರಿತರು.

ಬಾಲಿಯು ನಿಜವಾಗಿಯೂ ಪ್ರಕೃತಿಯ ಅನುಪಮ ಕ್ರೀಡಾ ಸ್ಥಳ ಅಲ್ಲಿನ ಗಾಳಿಯಲ್ಲಿ ಹೂಗಳ ಮಕರಂದ ತುಂಬಿರುತ್ತದೆ ಅಲ್ಲಿನ ಸರೋವರಗಳ ನೀರು ಅತೀವ ಸ್ವಚ್ಛವಾಗಿರುತ್ತವೆ. ಒಂದು ಪೈಸೆಯನ್ನು ಬೇಕಾದರೂ ಎಸೆದು ಸುಮಾರು ಮೂವತ್ತು ಅಡಿಗಳ ಆಳದಲ್ಲಿ ಸುಸ್ಪಷ್ಟವಾಗಿ ಕಾಣಬಹುದು.

ಹಸುರು ತುಂಬಿದ ಬಳ್ಳಿ ಮತ್ತು ಮರಗಳಿಂದ ಅಲ್ಲಿನ ಶೋಭೆಯು ಇಮ್ಮಡಿಸುತ್ತದೆ ಸಭೆನಕುಂಜಗಳ ನಡುವೆ ಸ್ಫಟಿಕ ಶಿಲೆಗಳ ಮೇಲೆ ಕುಣಿದಾಡುವ ನಿರ್ಮಲ ನೀರಿನಲ್ಲಿ ವಿಹರಿಸುತ್ತಿರುವ ಬಾಲೆಯರು ದೇವಕನ್ಯೆಯರೆಂದು ಪ್ರತೀತಿಯಾಗುತ್ತದೆ.

ಮಲಯೂ ಅರ್ಧ ದ್ವೀಪಕ್ಕೆ ಸೇರಿಕೊಂಡು ಪಾಂಕೊರ್ ಎಂಬ ಒಂದು ಎಳೆಯ ದ್ವೀಪವಿದ ಇಲ್ಲಿ ಕಾಲಿಟ್ಟೊಡನೆಯೇ ಪಾತಾಳಲೋಕಕ್ಕೆ ಒಂದಂತೆ ನಿಮಗನಿಸುತ್ತದೆ. ಅಲ್ಲಿ ಮೈಲುಗಟ್ಟಲೆ ನೀರು ಹರಡಿರುತ್ತದೆ.ಈ ನೀರಿನ ನಡುವೆ ಅಲ್ಲಲ್ಲಿ ಹಳ್ಳಿಗಳು ಗೋಚರಿಸುತ್ತವೆ ಹಳ್ಳಿಯ ಜನರು ದೋಣಿಗಳ ಮೇಲೆಯೋ ಮರದ ಕಂಬಗಳ ಮೇಲೆಯೋ ನಾಲ್ಕಾರು ಉಪ್ಪರಿಗೆಗಳ ಮನೆಗಳನ್ನು ಕಟ್ಟಿಕೊಂಡಿರುತ್ತಾರೆ. ಮೇಲುಪ್ಪರಿಗೆಯಲ್ಲಿ ನಿಂತು ಕೆಳನೋಡಿದಾಗ, ಇಡಿಯ ಹಳ್ಳಿಯು ಶತಪತ್ರಕಮಲವೆಂಬ ಭಾಸವಾಗುತ್ತದೆ ಅಲ್ಲಿ ನೆಲೆಯಾಗಿರುವ ಮಹಿಳೆಯರನ್ನು ಕಾಣುವಾಗ, 'ನಳಿನೀ' ಎಂಬ ಶಬ್ದದ ಸಾರ್ಥಕ್ಯದ ಅರಿವು ನಮಗಾಗುವುದು

ಮಲಯೂದ ಇಪೋನಗರ್, ಇದಕ್ಕೇನೂ ಹೊರತಲ್ಲ. ಅಲ್ಲಿರುವ ಬೌದ್ಧರ ಗುಹೆಗಳು ನಮ್ಮ ದೇಶದ ಅಜಂತಾ ಮತ್ತು ಎಲ್ಲೋರಾಗಳನ್ನು ಹೋಲುತ್ತವೆ. ಆ ಗುಹೆಗಳ ಸರಂಪರೆಯು ಉತ್ತುಂಗವಾಗಿ ಮುಂದುವರಿದಿದೆ ಈ ಗುಹೆಗಳಲ್ಲಿ ಒಂದನ್ನು ಕಲಾಕಾರ—ಅತಿಥಿಗಳಿಗೆಂದು ಕಾಯ್ದಿರಿಸಿದ್ದಾರೆ. ಇದರಲ್ಲಿ ವಿಶ್ವದ ಅನೇಕ ಕಲಾಕಾರರು ತಮ್ಮ ಹೆಸರ ಕೌಶಲವನ್ನು ಪ್ರದರ್ಶಿಸಿದ್ದಾರೆ. ಅಲ್ಲಿ ಬುದ್ಧನ ಆರಡಿ ಎತ್ತರ, ಐದಡಿ ಅಗಲದ ಒಂದು ತೈಲ ಚಿತ್ರವಿದ್ದು ಇದು ಮನೋಜ್ಞವಾಗಿದೆ

ನಮ್ಮ ದೇಶದ ಸಂಸ್ಕೃತಿಯ ಕುರುಹುಗಳು ನಮ್ಮಲ್ಲಿ ಕಂಡು ಬರುವುದು ಅಲ್ಪವಾದರೂ ಅದರ ಸುತ್ತುಮುತ್ತು ಅನೇಕ ದೇಶಗಳಲ್ಲಿ ಅದರ ವಿಶ್ವರೂಪ ದರ್ಶನವಾಗುತ್ತಿದೆ. ಭಾರತದ ಮೇಲೆ ಪರದೇಶೀಯರ ದಾಳಿಯಿಂದಾಗಿ ಇಂತಹ ಅವಶೇಷಗಳು ಭಗ್ನವಾದುವೆಂದು ಹೇಳುತ್ತಾರೆ ಕಾರಣಾಂತರಗಳಿಂದ ನಮ್ಮ ಸಂಸ್ಕೃತಿಯು ಅಖಂಡವಾಗಿದ್ದರೂ ಅದು ಶಿಥಿಲವಾಗುತ್ತ ಬಂದಿದೆ. ಬೃಹದ್ಭಾರತವೆನಿಸುವ ನೂರಾರು ಮೈಲು ದೂರದ ವಿವಿಧ ದೇಶಗಳಲ್ಲಿ ನಮ್ಮ ಸಂಸ್ಕೃತಿಯ ಅವಶೇಷಗಳು ಇಂದಿಗೂ ತಮ್ಮ ದೇಶ ಮತ್ತು ಭಾರತಗಳ ಸಂಬಂಧವನ್ನು ದಿಗ್ದಿಗಂತಗಳಿಗೆ ಸೊಳಗಿಸುತ್ತವೆ. ಪ್ರಕೃತಿಸೌಂದರ್ಯವು ಈ ಸಂಬಂಧವನ್ನು ಮತ್ತಷ್ಟು ಸುಂದರವಾಗಿಸಿ ಪ್ರತಿ ವರ್ಷವೂ ಸಾವಿರಾರು ಯಾತ್ರಿಕರನ್ನು ಆ ದೇಶಗಳಿಗೆ ಆಕರ್ಷಿಸುತ್ತದೆ

ಸುಲಭ ದರದಲ್ಲಿ
ಶಾಲೆಗಳಿಗೆ ಬೇಕಾಗುವ
ಯೊವತ್ತೂ ಫಾರ್ಮುಗಳೂ
ಹಾಜರಿ ರಿಜಿಸ್ಟ್ರಿಗಳೂ ಸಿಗುತ್ತವೆ
ನವಯುಗ ಪ್ರೆಸ್ ಉಡುಪಿ.

ನವಯುಗ

ವರುಷ ೪೧	ಉಡುಪಿ ೭-೧೨-೭೧	ವಾರ ೧೩

ವಿಶ್ವಾಸವಿಡಬಾರದೆ?

ಭಾರತದ ಪಶ್ಚಿಮ ಕರಾವಳಿಯಲ್ಲಿ ಸೈನಿಕ ಜಮೂವಣೆಯಿಂದಾಗಿ ಅಲ್ಲಿ ತೀವ್ರವಾದ ಚಟುವಟಿಕೆಗಳಿಂದು ಕಂಡುಬರತೊಡಗಿವೆ. ಪೋರ್ಚುಗೀಸ ವಸಾಹತು ಗೋವೆಯಲ್ಲಿ ವಸಾಹತು ಶಾಹಿತನವನ್ನು ಮತ್ತಷ್ಟು ಬಲಗೊಳಿಸುವ ಸಾಲಜಾರ ಪ್ರಭುವಿನ ಉತ್ಕಟೇಚ್ಛೆಯೇ ಇದಕ್ಕೆ ಕಾರಣವೆನ್ನಬೇಕು. ಗೋವೆಯಿಂದ ದಕ್ಷಿಣಕ್ಕೆ ಇದ್ದು ಪೋರ್ಚುಗಲ್ಲು ತನ್ನದೆಂದು ವಾದಿಸುವ ಅಂಜದೇವನಗುಡ್ಡೆಯ ಬಳಿಯ ಸಮುದ್ರದಲ್ಲಿ ಪ್ರಯಾಣಿಕರ ಹಡಗದ ಮೇಲೆ ಮೂಡಿದ ಗುಂಡೆಸೆತ ಹಾಗೂ ಕಾರವಾರದ ಮೀನುಗಾರನೊಬ್ಬನ ಮೇಲೆ ಎಸೆದ ಗುಂಡಿನ ಪರಿಣಾಮವಾಗಿ ಆತನ ಮರಣದ ಘಟನೆಗಳು ಪರಿಸ್ಥಿತಿಯನ್ನು ಹೆದರಿಸಿದಂತೆ ಮಾಡಿವೆ. ಅಷ್ಟು ಮಾತ್ರವಲ್ಲದೆ ಪೋರ್ಚುಗೀಸ ಸೈನಿಕರನ್ನು ಹೊತ್ತು ತಂದ ನಾಲ್ಕಾರು ಹಡಗುಗಳು ಅಲ್ಲಿಯೇ ಸುತ್ತ ತಳವೂರಿದುದು, ಗೋವೆಯಲ್ಲಿ ಪೋರ್ಚುಗೀಸರ ದಮನ ಕಾರ್ಯವು ತೀವ್ರವಾಗುತ್ತ ಬಂದುದು ಹಾಗೂ ಭಾರತ-ಗೋವೆಗಳ ಸೀಮೆಯಲ್ಲಿ ಪೋರ್ಚುಗಲ್ ಸೈನಿಕರ ಸಂಖ್ಯೆ ಮತ್ತು ಗಸ್ತಿಯ ಕ್ರಮದಲ್ಲಿ ಹೆಚ್ಚಳವಾದುದು ಯಾವನೇ ಒಬ್ಬನನ್ನು ಕಳವಳಗೊಳಿಸದಿರದು

ತನ್ನ ಹಾಗೂ ತನ್ನವರ ಭದ್ರತೆ ಮತ್ತು ರಕ್ಷಣೆಯನ್ನು ಭಾರತ ಸರಕಾರವು ಕಡೆಗಣಿಸುವಂತಿಲ್ಲ. ಈ ಕಾರಣದಿಂದ ತನ್ನ ಎರಡು ಯುದ್ಧನೌಕೆಗಳನ್ನೂ ಭಾರತವು ಕಾರವಾರಕ್ಕೆ ಕಳಿಸಿದೆ. ಗಡಿ ಪ್ರದೇಶದಲ್ಲಿ ಗುಜರಾತ ರಿಜರ್ವ ಪೋಲೀಸು ಪಡೆಯನ್ನು ಇರಿಸಿದೆ. ಪ್ರಧಾನಿ ನೆಹರು ಹೇಳುವಂತೆ ಭಾರತವು ಕೈಗೊಂಡಿರುವ ಕ್ರಮಗಳು ತನ್ನ ಭದ್ರತೆಯ ಸಲುವಾಗಿ ಮಾತ್ರವೇ ಹೊರತು, ಪೋರ್ಚುಗಲ್ಲಿನ ಮೇಲೆ ಸೈನಿಕ ಕಾರ್ಯಾಚರಣೆ ಕೈಗೊಳ್ಳುವುದಕ್ಕಲ್ಲ. ಪೋರ್ಚುಗಲ್ಲು ಮಾತ್ರ ಈ ಮುಂಜಾಗ್ರತೆಯ ಕ್ರಮವನ್ನು ತಪ್ಪು ತಿಳಿದುಕೊಂಡರೆ, ಅದಕ್ಕೆ ಭಾರತವು ಹೊಣೆಗಾರವಾಗುವುದರಲ್ಲಿ ಅರ್ಥವಿಲ್ಲ. ಭಾರತವು ಯಾರಿಗೂ ಯುದ್ಧ ಮಾಡಲು ಬಯಸುವುದಿಲ್ಲ ಪ್ರಪಂಚದ ಯಾವ ಮೂಲೆಯಲ್ಲಿಯಾದರೂ ಯುದ್ಧ ನಡೆಯಬೇಕೆಂಬುದನ್ನು ಬಯಸುವುದಿಲ್ಲ; ಅಲ್ಲಲ್ಲಿ ನಡೆದಿದ್ದ ಯುದ್ಧಗಳನ್ನು ಕೊನೆಗೊಳಿಸಲು ತನ್ನ ಶಕ್ತಿಮೀರಿ ಪ್ರಯತ್ನಿಸಿ ಸಫಲವಾದ ರಾಷ್ಟ್ರ ಭಾರತ. ಐಗುಪ್ತವು ಸುಯೇಜ ಕಾಲುವೆಯನ್ನು ರಾಷ್ಟ್ರೀಕರಣ ಮಾಡಿದಾಗ ಹೊಗೆದಿದ್ದ ಯುದ್ಧಭೀತಿಯನ್ನು ದೂರಮಾಡುವಲ್ಲಿ ಭಾರತ ಸರಕಾರವೂ ಅಮೂಲ್ಯ ಪಾತ್ರವಹಿಸಿದೆ ಯೆಂಬುದನ್ನು ಮರೆಯುವಂತಿಲ್ಲ. ಕಾಂಗೋವಿನಲ್ಲಾದರೂ ಸಮರಕ್ಕೆಂತ ಸಂಧಾನವನ್ನೇ ಸಾಧಿಸಲು ಭಾರತವು ಇಚ್ಛಿಸುತ್ತಿದೆ. ಪೂರ್ವಪಶ್ಚಿಮ ಬಣಗಳ ವೈಮನಸ್ಯದಿಂದ ಯುದ್ಧ ಭೀತಿಹೆಚ್ಚಿದಾಗ ಅವುಪರಸ್ಪರ ಸಮೀಪ ಸರ್ಕಿಯೂಗಬೇಕು; ತನ್ಮೂಲಕ ಸಾಮಂಜಸ್ಯ ವೇರ್ಪಡಬೇಕು ಎಂದು ಬಯಸುವ ರಾಷ್ಟ್ರಗಳಲ್ಲಿ ಭಾರತವು ಅಗ್ರಗಣ್ಯವಾಗಿದೆಂಬುದು ಜಗಜ್ಜನಿತವಿದೆ. ಅಹಿಂಸೆಯ ತಳಹದಿಯಲ್ಲಿ, ಬುದ್ಧನ ಅಮರ ತತ್ವಗಳ ಹಿನ್ನೆಲೆಯಲ್ಲಿ ನಿರೂಪಿತವಾಗಿರುವ ಭಾರತದ ಪಂಚಶೀಲ ವಿದೇಶನೀತಿಯು ಎಂದಿಗೂ ಯುದ್ಧ ನಡೆಯಲು ಅವ್ಕಾಶ ಕೊಡಲಾರದು. ಯುದ್ಧ ನಡೆಯುವುದರಿಂದ ಇಬ್ಬಣಗಳಲ್ಲಿ ಯಾರೊಬ್ಬನಿಗಾದರೂ ಲಾಭವಾಗುವ ಬದಲು ನಷ್ಟದ ಪರಿಮಾಣವೆ ಅಧಿಕವಾಗುವುದೆಂದು ತಿಳಿದುಕೊಂಡು, ಆದರಂತೆ ಕಾರ್ಯ ಪ್ರವೃತ್ತವಾಗುವ ಭಾರತವು ಸಮರಕ್ಕೆ ತೊಡಗುವ ಮಾತು ಅತಿ ದೂರವುಳಿಯಿತು ಆದರೂ ಪೋರ್ಚುಗಲ್ಲು ಈ ಸತ್ಯಾಂಶವನ್ನು ತಪ್ಪು ತಿಳಿದುಕೊಂಡ ವ್ಯರ್ಥವಾಗಿ ಭಾರತದ ಮೇಲೆ ಕಲ್ಲೆರಚಿ ಸಮರಕ್ಕೆ ಆಹ್ವಾನ ವೀಯುತ್ತಿರುವಂತೆ ಭಾಸವಾಗುತ್ತದೆ.

ಭಾರತೀಯರ ಮೇಲೆ ಅತ್ಯಾಚಾರವನ್ನೆಸಗಿ ಪೋರ್ಚುಗಲ್ಲು ಸಮರಕ್ಕೆ ನಾಂದಿಯಿಟ್ಟಿದೆಯೆಂದು ಹೇಳುವವರು ಕೆಲವರಿದ್ದಾರೆ. ಆದುದರಿಂದ ಇನ್ನೂ ಹೊತ್ತು ಮೂಡದೆ ಇದನ್ನೇ ಸೂಕ್ತಕಾಲವೆಂದು ಬಗೆದು ಗೋವೆಯ ವಿಮೋಚನೆಯನ್ನು ಸಾಧಿಸಲು ಸೈನಿಕ ಕಾರ್ಯಾಚರಣೆ ಕೈಗೊಳ್ಳಬೇಕು ಎಂಬುದು ಕೆಲವರ ಅಭಿಪ್ರಾಯ. ಯುದ್ಧವೆಂದರೆ ಇಂದು ಮಾರಣ ಹೋಮವಾಗಿ ರೂಪಾಂತರ ಪಡೆದಿದೆ. ಹೀಗಿರುವಾಗ ಯುದ್ಧದ ಭೀಕರ ಭಯಾನಕ ಪರಿಣಾಮವನ್ನು ಕಲ್ಪಿಸಬಲ್ಲವರಾರೂ ಇದರ ಮಾತನ್ನು ಎತ್ತುವುದಿಲ್ಲ. ಪ್ರಧಾನಿ ನೆಹರುರವರು ಇದರಿಂದಾಗಿ ಮಾತ್ರವಲ್ಲ, ಭಾರತದ ವಿದೇಶಿ ನೀತಿಯಂತೆ ತಾನಾಗಿ ಯುದ್ಧವನ್ನು ಘೋಷಿಸಲು ಮುಂದೆ ಬರುವುದಿಲ್ಲ; ಮಾತುಕತೆಗಳ ಮೂಲಕ ಸೌಹಾರ್ದಮಯ ವಾತಾವರಣದಲ್ಲಿಯೇ ಪ್ರಶ್ನೆಯನ್ನು ಬಗೆ ಹರಿಯುವ ಬಗ್ಗೆ ಅವರಲ್ಲಿ ಇನ್ನೂ ವಿಶ್ವಾಸವುಳಿದಿದೆ. ಆದರೆ, ಇದೆಷ್ಟು ಸಂಭವನೀಯವೆಂದು ಹೇಳಬರುವುದಿಲ್ಲ. ಕಳೆದ ೧೧ ವರ್ಷಗಳಿಂದಲೂ ಗೋವೊಂತಕರು ಸಾಲಜಾರ ದೊರೆಯ ನಿರಂಕುಶ ಪ್ರಭುತ್ವದಲ್ಲಿ ತಿಕ್ಷೆ-ದಂಡನೆಗಳನ್ನು ಅನುಭವಿಸಿದ್ದಾರೆ. ಇಂದಲ್ಲ ನಾಳೆಯಾದರೂ ವಸಾಹತು ವಾದಕ್ಕೆ ಕೊನೆಗಾಲವು ಬಂದು, ತಾವು ತಮ್ಮ ಮಾತೃ ಭೂಮಿಯೊಂದಿಗೆ ಸೇರಿಕೊಂಡೇವು ಎಂಬ ಆಶೆಯನ್ನವರು ಇರಿಸಿಕೊಂಡಿದ್ದಾರೆ. ಅವರ ಹೃದಯಾಂತರಾಳದಲ್ಲಿ ಜನಿಸಿದ ಆಶೆಯು ಪೂರ್ಣವಾಗುವ ಕಾಲ ಸನ್ನಿಹಿತವಾಗುತ್ತಿದೆ. ಗೋವೆಯಲ್ಲಿ ಇದೇ ಮೊದಲುಯಲ್ಲಿ ವಿದೇಶೀ ಸೇನೆಗಳು ಬಂದು ಸೇರಿದರೆ ಭಾರತೀಯ ಆಂತರಿಕ ಶಾಂತಿ—ವ್ಯವಸ್ಥೆಗಳಿಗೂ ವಿಘ್ನ ತಟ್ಟುವುದರಿಂದ, ಇದನ್ನು ಕಂಡೂ ಕಂಡೂ ಸುಮ್ಮನಿರುವುದು ಸಾಧ್ಯವಿಲ್ಲ. ಭಾರತದ ಶಾಂತಿ ಮಂತ್ರವನ್ನು ಅಂಜು ಬರುಕತನವೆಂದು ತಿಳಿಯದೆ, ಆಂತರಿಕ ಸತ್ವವೆಂದು ಮನವರಿಕೆ ಮಾಡಿ ಸಂಯುಕ್ತ ರಾಷ್ಟ್ರ ಸಂಘದ ನಿಯಮಾವಳಿಯನ್ನು ಮನ್ನಿಸಿ, ಪ್ರಮುಖ ಪಾಶ್ಚಾತ್ಯ ರಾಷ್ಟ್ರಗಳನ್ನು ಅನುಸರಿಸಿ ವಸಾಹತು ಸಾಮ್ರಾಜ್ಯಕ್ಕೆ ವಿಲೀನಗೊಳಿಸುವ ದೃಢ ನಿರ್ಧಾರ ಮಾಡಿದ್ದಾರೆ. ಸಂಯುಕ್ತ ರಾಷ್ಟ್ರ ಸಂಘವು ವಸಾಹತುಗಳೆಂದು ಹೆಸರಿಸಿರುವ ಗೋವೆ—ಒಮನ್, ಅಂಗೋಲಾ ಮೊದಲಾದ ಪ್ರದೇಶಗಳನ್ನು ತನ್ನ ಸಾರ್ವ ಭೌಮ ಪ್ರಭುತ್ವದ ಅಂಗಗಳೆಂದು ಸಾರಿ ಅಲ್ಲಲ್ಲಿ ರಕ್ತಪಾತ ಹರಿಯಲು ದೃಢ ನಿಲುಮೆ ತಳೆದಂತೆ ತೋರುತ್ತದೆ. ಗೋವೆಯಲ್ಲಿ ಮತ್ತು ಆದರ ಬಳಿಯ ಅಂಜದೇವದಲ್ಲಿ ಸೈನ್ಯ ಸಂಗ್ರಹ ಮತ್ತು ರಣನೌಕೆಗಳ ಚಲನ ವಲನಗಳಿಂದ ಸಾಲಜಾರ ಪ್ರಭು ರಣೋತ್ಸುಕನಿರುವಂತೆ ವ್ಯಕ್ತವಾಗುತ್ತಿದೆ. ಗೋವೆಯೊಳಗೆ ಹತ್ತು ಸಾವಿರಕ್ಕೂ ಹೆಚ್ಚಿನ ಪೋರ್ಚುಗೀಸ ಸೈನಿಕರಿರುವರೆಂದೂ ತಿಳಿದು ಬಂದುದರಿಂದ ಇಂದಲ್ಲ ನಾಳೆ ಭಾರತಕ್ಕೆ ಅಪಾಯವಿದೆಯೆಂಬುದು ಖಂಡಿತ.

ಪಂಚಶೀಲ ಜನಕ

ಚೀನದ ಆಕ್ರಮಣ, ಪಾಕಿಸ್ತಾನದ ಯುದ್ಧ ಭೀತಿ ಮತ್ತೀಗ ಗೋವೆಯಲ್ಲಿ ಯುದ್ಧದ ಸಿದ್ಧತೆ-ಈ ಜಂಜಾಟಗಳ ನಡುವೆ ಭಾರತ ಕಂಗೆಡುವಂತಿದ್ದರೆ, ಅಚ್ಚರ್ಯಪಡಬೇಕಿಲ್ಲ. ತನ್ನ ಸಾರ್ವಭೌಮತ್ವವನ್ನು ಸಂರಕ್ಷಿಸಲು, ದೇಶವನ್ನು ಉಳಿಸಲು ಭಾರತವು ಸೊಂಟಕಟ್ಟಬೇಕಾಗುವುದು ಅನಿವಾರ್ಯವೆಂಬಂತಾಗಿದೆ ಪಂಚಶೀಲಗಳ ಜನಕ ನಮ್ಮ ಪ್ರಧಾನಿ ನೆಹರುರವರ ಮೇಲೆ ಪ್ರತ್ಯಾಕ್ರಮಣದ ಬಲಾತ್ಕಾರ ಬೀಳತೊಡಗಿದ್ದರೂ ಅವರೇನೋ ನಿಶ್ಚಲರಿದ್ದಾರೆ-ಯುದ್ಧಕ್ಕೆ ತೊಡಗುವುದು ಸುಲಭ; ಮುಂದೆ ಅದರ ಪರಿಣಾಮವನ್ನು ಊಹಿಸುವುದೂ ಕಠಿಣವೆಂಬುದೇನೋ ನಿಜ. ನಮ್ಮಲ್ಲಿ ಸ್ವರಕ್ಷಣೆ ಮಾಡಿಕೊಳ್ಳುವ ಶಕ್ತಿಯಿದೆಯೆನ್ನುವವರು ಅನಿವಾರ್ಯ ಪ್ರಸಂಗ ಬಂದೊದಗಿದಾಗ ರಣಕಣಕ್ಕೆ ಉಳಿಯಲು ಹಿಂದು ಮುಂದು ನೋಡಲಾರರು ಎಂಬುದು ನಾಯಕರ ಮಾತುಗಳಿಂದ ವ್ಯಕ್ತವಾಗುತ್ತದೆ.

ಎಸ್. ಕೆ. ಪಾಟೀಲ

ಅಜಿತ ಪ್ರಸಾದ ಜೈನರು ಪ್ರಸಾದ ತಗಣೆಯ ಶಾಖೆಯನ್ನು ನಿರ್ವಹಿಸಲಾರದೆ ಉತ್ತರ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಪದವಿಯನ್ನು ಅಪ್ಪಿಕೊಂಡರು. ಅವ ಸ್ಥಾನಕ್ಕೆ ಬಂದ ಶ್ರೀ ಎಸ್. ಕೆ. ಪಾಟಿಲರು ಕಾಂಗ್ರೆಸ್ ಅಧ್ಯಕ್ಷ ಪದವಿಯಿಂದ ಮಂತ್ರಿಯಾದವರು. ಪ್ರಶ್ನೆಯನ್ನು ಅವಾಗಿ ಅಧ್ಯಯನ ನಡೆಸಿ ಅದಕ್ಕೆ ಉತ್ತರವನ್ನು ಕಂಡುಹಿಡಿಯುವಲ್ಲಿ ಇವರು ದಕ್ಷರೆನ್ನಿಸಿಕೊಂಡಿದ್ದಾರೆ. ಆಹಾರ ಧಾನ್ಯಗಳ ಸಾಗಾಣಿಕೆಯ ಸಂಬಂಧದ ನಿಯಂತ್ರಣವನ್ನವರು ಕಿತ್ತುಹಾಕಿದ್ದಾರೆ. ರಾಷ್ಟ್ರಮಟ್ಟದಲ್ಲಿ ಈಗ ಆಹಾರದ ಅಭಾವವಿಲ್ಲವೆಂದು ಅವರ ಅಂಬೋಣ. ಇದು ಬಹುಮಟ್ಟಿಗೆ ಸತ್ಯವೂ ಹೌದು. ಶ್ರೀ ಪಾಟಿಲರಷ್ಟು ಯಶಸ್ವಿಯೆನ್ನಿಸಿದ ಆಹಾರಮಂತ್ರಿಗಳು ಸ್ವತಂತ್ರ ಭಾರತದಲ್ಲಿ ಇದುವರೆಗೆ ಬಂದಿರ್ಲಿಲ್ಲವೆಂದು ಹೇಳಿದರೂ ಅತಿಶಯೋಕ್ತಿಯಾಗಲಾರದು.

ಅಶೋಕ ಮೆಹತಾ

ಸಂಸತ್ತಿನಲ್ಲಿ ಎಂದೂ ಇಲ್ಲದಂತೆ ಭಾರತದ ವಿದೇಶ ನೀತಿ-ಮುಖ್ಯವಾಗಿ ಗೋವೆ ಮತ್ತು ಚೀನಗಳ ನೀತಿಯ ಬಗ್ಗೆ ಚ

(೭ನೇ ಪುಟ ೪ನೇ ಕಲಂ)

ಜಗತ್ಪರ್ಯಟನೆ

ಸಾಲಜಾರ ಪ್ರಭು

ಪೋರ್ಚುಗಲ್ಲಿನ ಅನಭಿಷಿಕ್ತ ದೊರೆಯೆನಿಸಿದ ಹಳೆಯ ಮುತ್ಸದ್ಧಿ ಸಾಲಜಾರರು ಸಾಗರೋತ್ತರ ವಸಾಹತುಗಳನ್ನು

ವಾದ ಪೋರ್ಚುಗಲ್ಲು ಕೊನೆಗೊಳಿಸಬೇಕು. ವಸಾಹತುವಾದಕ್ಕೆ ಚಿಕ್ಕಾಸಿನ ಬೆಲೆಯೂ ದೊರೆಯಲಾರದ ಇಂದಿನ ಕಾಲದಲ್ಲಿ ತಾನೂ ಸಂಭಾವಿತನೆನ್ನಿಸಿಕೊಳ್ಳುವುದು ಪೋರ್ಚುಗಲ್ಲಿಗೆ ಶೋಭಕರ. ಇದಕ್ಕೆ ತಪ್ಪಿದರೆ, ಅಂತಾರಾಷ್ಟ್ರೀಯ ರಾಜನೀತಿಯಿಂದ ಹೊರಗೆ ನಿಂತು ತನ್ನ ಕೋಳಿಗೆ ಮೂರು ಕಾಲೆಂದು ಚಂಡಿಹಿಡಿಯುತ್ತ ಕುಳಿತರೆ, ಈ ಮೊಂಡುತನವು ಬೇಗನೇ ಅಂತ್ಯಗೊಳ್ಳಲೇ ಬೇಕಾಗುವುದೆಂಬುದು ಹಾಲಿನಷ್ಟು ತಿಳಿಯಾಗಿದೆ. ಭಾರತದ ಅವಿಭಾಜ್ಯ ಅಂಗವಾದ ಗೋವೆ ಮತ್ತಿತರ ನಡುಗುಡ್ಡೆಯ ಮೇಲೆ ಪೋರ್ಚುಗಲ್ಲಿಗೆ ಯಾವ ಅಧಿಕಾರವೂ ಇಲ್ಲವೆಂಬುದು ಲೋಕಜನಿತವಿದೆ. ಭಾರತೀಯರಾದರೂ ಉದ್ವೇಗಗೊಳ್ಳದೆ ತಮ್ಮ ನಾಯಕನಲ್ಲಿ ವಿಶ್ವಾಸವಿಡುವುದು ಅಗತ್ಯವಿದೆ.

ಟಿಕೇಟಿಗೆ ಪೈಪೋಟಿ

ರಾಜಿಯೂ ಭಾದಿನ ಸಾರ್ವಜನಿಕ ಸಭೆಯೊಂದರಲ್ಲಿ ಭಾಷಣಮಾಡುತ್ತಾ ಪ್ರಧಾನ ಮಂತ್ರಿ ನೆಹರುರವರು ಕೇಂದ್ರ ಹಾಗೂ ರಾಜ್ಯ ವಿಧಾನ ಸಭೆಗಳಿಗೆ ಟಿಕೇಟು ಪಡೆಯಲು ಪೈಪೋಟಿನಡೆಯುತ್ತಿರುವುದನ್ನು ಕಂಡು ತನಗೆ ವಿಷಾದನೆಯಾಗಿದೆಯೆಂದೂ ಈ ಟಿಕೇಟು ಪಡೆಯಲು ನಿಚ್ಚಿನ ಮಹತ್ವ ಕೊಡಬಾರದೆಂದೂ ಹೇಳಿದರೆಂದು ವರದಿಯಾಗಿದೆ. ವಿಧಾನ ಸಭೆಗಳು ಮಹತ್ವದ ಕೆಲಸವಾಡುತ್ತಿವೆಯೆಂಬುದು ನಿಜ; ಆದರೆ ರಾಜಕಾರಣಕ್ಕಿಂತ ಹೊರಗೆ ನಿಂತು ಸಾರ್ವಜನಿಕ ಸೇವೆಸಲ್ಲಿಸಲು ಹಲವಾರು ಕ್ಷೇತ್ರಗಳಲ್ಲಿ ಅವಕಾಶವಿದೆಯೆಂದೂ ಪ್ರಯೋಗ ಶಾಲೆಯಲ್ಲಿ ದುಡಿಯುವ ವಿಜ್ಞಾನಿ, ಸೇತುಕಟ್ಟುವ ಇಂಜಿನಿಯರ ಮೊದಲಾದವರು ಹೆಚ್ಚಿನ ಸೇವೆ ಸಲ್ಲಿಸುತ್ತಿದ್ದಾರೆಂದೂ ಅವರು ಹೇಳಿದರಂತೆ. ಇಲ್ಲಿ ಒಂದು ಮಾತನ್ನು ಅವಶ್ಯ ನೆನಪಿಗೆ ತಂದುಕೊಳ್ಳಬಹುದು. ಕಚ್ಚುವ ನಾಯಿ ಬೊಗಳುವುದಿಲ್ಲ; ಬೊಗಳುವ ನಾಯಿ ಕಚ್ಚುವುದಿಲ್ಲ ಹಾಗೆಯೇ ಟಿಕೇಟು ಪಡೆದು ಗೆದ್ದು ಬರುತ್ತೇವೆಯೆಂದು ಹಾರಾಡುತ್ತಿರುವ ಅನೇಕರು ತಮ್ಮ ಯೋಗ್ಯತೆ ಅರ್ಹತೆ—ಸಮರ್ಥತೆಗಳ ಬಗ್ಗೆ ಲವಲೇಶವೂ ಚಿಂತಿಸುತ್ತಿಲ್ಲ. ದೇಶಸೇವೆ ಮಾಡಬೇಕಾದರೆ, ರಾಜಕೀಯವೇ ಸಂಜೀವಿನಿಯೆಂಬ ಭಾವನೆ ನಮ್ಮ ಜನರಲ್ಲಿದೆ. ಏಕೆಂದರೆ, ವಿಧಾನ ಸಭೆಗಳಲ್ಲಿ ಪ್ರತಿನಿಧಿಯನಿಸುವುದರಿಂದ ತನ್ನ ಲಾಭವೂ ಸಾಕಷ್ಟುನಡೆಯುತ್ತಿದೆ. ಆದುದರಿಂದಲೇ ದೇಶ ಸೇವೆಗಿಂತಲೂ ಹೆಚ್ಚಾಗಿ ಸ್ವಾರ್ಥ ಸಾಧನೆಯನ್ನೇ ಉದ್ದೇಶವಾಗಿಟ್ಟುಕೊಂಡು ಟಿಕೇಟುಗಳಿಗಾಗಿ ಮೇಲಾಟ ನಡೆಯುತ್ತದೆ ನೆಹರೂರವರ ಉಪದೇಶ ಗಾಳಿಯಲ್ಲಿಯೇ ತೂರಿಹೋಗುತ್ತದೆ. ಎಂಬುದು ಗಾಳಿಯಷ್ಟೇ ವ್ಯಾಪಕವಿದೆ.

ಅಲ್ಲಲ್ಲಿಯ ಸುದ್ದಿಸಾರ

ಉಡುಪಿ ಕಲಾಮೃಂದದ-ಮಹಾಧಿವೇಶನವು

ಶ್ರೀ ಯು. ವಾಸುದೇವ ಆಚಾರ್ಯರ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ಜರಗಿ ಗತ ವರ್ಷದ ವರದಿಯನ್ನು ವಿಶದಿಸಿದ ಮೇಲೆ ನೂತನ ವರ್ಷಕ್ಕೆ ಶ್ರೀಗಳಾದ ಆರ್. ನರಸಿಂಹ ಆಚಾರ್ಯ, ಅಧ್ಯಕ್ಷ, ಕೆ. ಎನ್. ಎಸ್, ಉಪಾಧ್ಯಾಯ, ಉಪಾಧ್ಯಕ್ಷ, ಕೆ. ವೈ. ಸರಳಾಯ, ಗೌ. ಕಾರ್ಯದರ್ಶಿ ಟಿ. ಜಿ. ಕೃಷ್ಣಭಟ್ಟ, ಸುಸ್ತಕ ಭಂಡಾರದ ಕಾರ್ಯದರ್ಶಿ ಅಂಜನೇಯ ಮೂರ್ತಿ, ಕೋಶಾಧಿಕಾರಿ ಎ. ಕೆ. ಮೂರ್ತಿ, ಕಲಾಕಾರ್ಯದರ್ಶಿ ಮತ್ತು ಸರ್ವಶ್ರೀ ಎನ್. ಶ್ರೀಶ ಬಲ್ಲಾಳ, ಪಿ. ವಿ. ಆಚಾರ್ಯ, ಯು. ಎ. ಪಿ. ತಂತ್ರಿ, ಬಿ. ಕೆ. ಎಂ. ಸಾಮಿಗ, ಯು. ಎಚ್. ಭಟ್ಟ, ಎನ್. ಬಿ ಪಾಂಗಣ್ಣಾಯ ಇವರು ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಆಂಗೀಕೃತರಾದರು.

ಸಾಂತೀಯ ಹಿಂದೂ ಮಹಾಸಭಾ ಸಮ್ಮೇಲನ—ಮತ್ತು ವಸ್ತುಪ್ರದರ್ಶನ,

ಮಂಗಳೂರು. ಇದರ ಸ್ವಾಗತ ಸಮಿತಿಯ ಸಭೆಯು ತಾ. 10—11—61ರಲ್ಲು ಸೇರಿ, ಕೃತೀಯ ಕರ್ನಾಟಕ ಸಮ್ಮೇಲನವನ್ನು ದಶಂಬರ್ ತಿಂಗಳ ತಾ. 30, 31 ಜನವರಿ ತಾ 1 ಮತ್ತು 2ರಲ್ಲು ಮಂಗಳೂರು ಲಾಲ್‌ಬಾಗಿನ ಹತ್ತಿರ ಬಲ್ಲಾಳ ಮಹಲಿನ ಎದುರಿಗಿರುವ ಫೆಡ್ಡೆ ಕೃಷ್ಣಾಚಾರ್ಯ ಸಭಾಭವನದಲ್ಲಿ ಜರಗಿಸಬೇಕೆಂದಾಯಿತು. ಭೂಸುಧಾರಣೆ ಮತ್ತು ಆರ್ಥಿಕ ಪರಿಷತ್ತನ್ನು ಮದ್ರಾಸಿನ ಪೈಕೋರ್ಟು ವಕೀಲರು ಶ್ರೀ ಎಂ. ವಿ. ಗಣಪತಿಮಯರ ಅಧ್ಯಕ್ಷತೆಯಲ್ಲಿ ಶ್ರೀ ವಿಷ್ಣುಚಂದ್ರಶೇಟ್ ಎಂ. ಸಿ. ಅವರೂ, ಹಿಂದೂ ವಿಶ್ವಧರ್ಮ ಪರಿಷತ್ತನ್ನು ಕೊಟ್ಟಾಯಮಿನ ವಕೀಲ ಶ್ರೀ ಎನ್. ಕೃಷ್ಣ ಅಯ್ಯರ್ ಅವರು ಉದ್ಘಾಟಿಸುವರು. ಗೋವುರಕ್ಷಣಾ ಪರಿಷತ್ತನ್ನ ಅಧ್ಯಕ್ಷತೆಯನ್ನು ಕಲ್ಕತ್ತೆಯ ಶ್ರೀ ಬಾಬಾಜಿತ್ ನಾರಾಯಣ ಟೆನರ್ಜಿ ಮಹೋದಯ ಅವರೂ ವಹಿಸುವರು.

ದ. ಕ. ಬಂಟರ ಯಾನೆ ನಾಡವರ ಸಂಘ—ಇದರ ವಾರ್ಷಿಕ ಮಹಾ ಸಭೆಯು

ಇದೇ ದಶಂಬರ ತಾ. 17ನೇ ಆದಿತ್ಯವಾರ ಸಂಜೆ 4 ಗಂಟೆಗೆ, ಉಡುಪಿ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಡಾ. ಕೆ. ಸುಂದರ ನಾಥ ರೈ, F. R. C. S. D. M. R. (London) ಇವರ ಅಧ್ಯಕ್ಷತೆಯಲ್ಲಿ ಜರಗುವುದು. ಈ ಸಭೆಗೆ ಸರ್ವರೂ ಬರಬೇಕೆಂದೂ, ಬರಲಿಚ್ಛಿಸುವವರು ತಾ. 10ರೊಳಗೆ ಕಾರ್ಯದರ್ಶಿಗಳಿಗೆ ತಿಳಿಸಿದ್ದಲ್ಲಿ ಒಂದು ಬಸ್ಸಿಗೆ ಬೇಕಾಗುವಷ್ಟು ಜನರಿದ್ದರೆ, ಸ್ಪೆಶಲ್ ಬಸ್ಸಿನ ವ್ಯವಸ್ಥೆ ಮಾಡಲಾಗುವುದೆಂದೂ, ಕಾರ್ಯದರ್ಶಿ ಶ್ರೀ ಕೆ. ಸುಂದರ ರಾಮ ಶೆಟ್ಟರು ತಿಳಿಸುತ್ತಾರೆ.

ಎ. ಬಿ. ಶೆಟ್ಟಿ ಮೆಮೋರಿಯಲ್ ಕಮಿಟಿಯ—ಸಭೆಯು ತಾ. 1.12.61

ನ್ನು ಮಂಗಳೂರಲ್ಲಿ ಶ್ರೀ ವೆಂಕಪ್ಪ ಪೂಜಾರಿಯವರಲ್ಲಿ ಶ್ರೀ ಕೆ. ಟಿ. ಆಳ್ವರ ಅಧ್ಯಕ್ಷತೆಯಲ್ಲಿ ಜರಗಿ ದಿ| ಎ. ಬಿ. ಶೆಟ್ಟಿ ಶಿಲಾ ಪ್ರತಿಮೆಯನ್ನು ತಾ. 6-1-62ನೇ ಶನಿವಾರ ಸಂಜೆ ಮದ್ರಾಸಿನ ಡಾ| ಎ. ಲಕ್ಷ್ಮಣಸ್ವಾಮಿ ಮುದಲಿಯರಿಂದ ಅನಾವರಣ ಮಾಡಿಸುವರೆಂದೂ ಸಭೆಗೆ ಸಿ ಅ ಬಗ್ಗೆ ಶ್ರೀಗಳಾದ ಕೆ. ಟಿ. ಆಳ್ವ, ಯನ್. ಯಮ್. ಅಡ್ಯಂತಾಯ, ಎ. ಸೂಂಜ, ಪಿ. ಯಸ್. ತಿಮ್ಮಪ್ಪ ಶೆಟ್ಟಿ, ಆರ್. ಶೆಟ್ಟಿ ಮತ್ತು ಬಾಡೂರು ಜಗನ್ನಾಥ ಶೆಟ್ಟಿ ಇವರುಗಳನ್ನೊಳಗೊಂಡ ಒಂದು ಉಪ ಸಮಿತಿಯನ್ನು ನೇಮಿಸಲಾಯಿತು ಎ. ಬಿ. ಶೆಟ್ಟಿ ಮೆಮೋರಿಯಲ್ ಫಂಡಿಗೆ ಹಣ ಸಹಾಯ ಮಾಡಲಿಚ್ಛಿಸುವವರು ಫಂಡಿನ ಕೋಶಾಧಿಕಾರಿಗಳಿಗೆ ರವಾನಿಸುವಂತೆ ಕೇಳಿಕೊಳ್ಳುವ ನಿರ್ಣಯಿಸಲಾಯಿತು.

ದಿ. ಎ. ಬಿ. ಶೆಟ್ಟಿ ಜೀವನದ ಅನೇಕ ಶೆಟ್ಟಿಗಳ ಕಾರಿತು ಕನ್ನಡ ಮತ್ತು ಇಂಗ್ಲೀಷಿನಲ್ಲಿ ಜೀವನಗಳನ್ನು ಬರೆಯುವಂತೆ ಅ ಸ್ಥಿತಿಶರನ್ನೂ, ಇತರ ಬರಹಗಾರರನ್ನೂ ಕೇಳಿಕೊಳ್ಳಬೇಕೆಂದೂ ಒಳ್ಳೆಯ ಜೀವನ ಬರೆದವರಿಗೆ ಬಹುಮಾನವನ್ನು ಕೊಡಬೇಕೆಂದೂ ನಿರ್ಣಯಿಸಲಾಯಿತು.

ಜಿಲ್ಲೆಯ ಕಾಂಗ್ರೆಸ್ ಅಭ್ಯರ್ಥಿಗಳು—ಕೊನೆಯ ಗಳಿಗೆಯಲ್ಲಿ ಬಂದ ಪ್ರಕಾರ ಮೈಸೂರು ಪ್ರದೇಶ ಕಾಂಗ್ರೆಸಿನ ಚುನಾವಣಾ ಸಮಿತಿಯು ಈ ಕೆಳಗಿನವರನ್ನು ಕಾಂಗ್ರೆಸ್ ಉಮೇದ್ವಾರರನ್ನಾಗಿ ಕೇಂದ್ರ ಚುನಾವಣಾ ಸಮಿತಿಗೆ ಶಿಫಾರಸುಮಾಡಿದೆ. ಅಧಿಕೃತ ಯಾದಿಯನ್ನು ಕೇಂದ್ರ ಚುನಾವಣಾ ಸಮಿತಿಯು ಪ್ರಕಟಿಸುವುದು.

ಲೋಕ ಸಭೆಯ ಉತ್ತರ ಭಾಗಕ್ಕೆ—ಶ್ರೀ ಯು. ಶ್ರೀನಿವಾಸ ಮಲ್ಯ, ದಕ್ಷಿಣ ಭಾಗಕ್ಕೆ ಶ್ರೀ ಕೆ. ಶಂಕರ ಅಳ್ವ.

ವಿಧಾನ ಸಭೆಯ ಬೈಂದೂರು— ಶ್ರೀ ವೈ. ಸುಂಜಯ್ಯ ಶೆಟ್ಟಿ.

ಕುಂದಾಪುರ— ಶ್ರೀ ಎಸ್. ಎಸ್. ಕೊಕ್ಕೆಬೈಲು.

ಬ್ರಹ್ಮಾವರ— ಶ್ರೀ ಜಗಜೀವನದಾಸ್ ಶೆಟ್ಟಿ ಅಥವಾ ಶ್ರೀ ಧರ್ಮಸಾಮ್ರಾಜ್ಯ.

ಉಡುಪಿ—ಶ್ರೀಮತಿ ಪೈಲಾ ಟಿ.ಎ ಪೈ

ಕಾಪು— ಶ್ರೀ ಎಫ್. ಎಕ್ಸ್. ಡಿ. ಪಿಂಟೊ.

ಸುರತ್ಕಲ್— ಶ್ರೀ ಕೆ. ದೂಮಪ್ಪ ಅಥವಾ ಡಾ. ನಾಗಪ್ಪ ಅಳ್ವ

ಕಾರ್ಕಳ— ಡಾ. ಕೆ. ಕೆ. ಹೆಗ್ಡೆ.

ಮೂಡಬಿದ್ರೆ ರಿಜರ್ವ್— ಶ್ರೀ ಮಂಜಪ್ಪ ಉಳ್ಳಾಲ.

ಮಂಗಳೂರು ಒಂದು— ಶ್ರೀ ಕೆ. ಸೂರ್ಯನಾರಾಯಣ ಆಡಿಗ

ಮಂಗಳೂರು ಎರಡು- ಶ್ರೀ ಮಹಲಿಂಗ ಶ್ರೀನಿವಾಸ ನಾಯಕ.

ಪಾಣೆ ಮಂಗಳೂರು— ಡಾ ನಾಗಪ್ಪ ಅಳ್ವ ಅಥವಾ ಶ್ರೀ ಕೆ. ದೂಮಪ್ಪ

ಬೆಳ್ತಂಗಡಿ- ಶ್ರೀ ಬಿ ವೈಕುಂಠ ಬಾಳಿಗಾ

ಪುತ್ತೂರು. ಶ್ರೀ ಕೆ. ವೆಂಕಟರಮಣ ಗೌಡ.

ಸುಳ್ಯ ಕಾದಿಟ್ಟ ಸ್ಥಾನ—ಶ್ರೀ ಸುಬ್ಬಯ್ಯ ನಾಯ್ಕ.

ಆರೋಗ್ಯ ಸಚಿವ ಡಾ| ಹೆಗ್ಡೆಯವರ ಜಿಲ್ಲಾ ಸಂಚಾರ—ಪೈಸೂರಿನ

ಆರೋಗ್ಯ ಸಚಿವ ಡಾ| ಕೆ. ಕೆ. ಹೆಗ್ಡೆಯವರು ಕಳೆದ ತಾ. 27ರಂದು ಮಂಗಳೂರಿಗೆ ಆಗಮಿಸಿದ್ದು, ಅಂದೇ ಸಂಜೆ, ಫರಂಗಿ ಪೇಟೆಯ ಶ್ರೀರಾಮ ಹಾ. ಎ. ಶಾಲೆಯಲ್ಲಿ ಜಿಲ್ಲಾ ಕ್ಷಯ ರೋಗ ವಿರೋಧಿ ಸಂಘಗಳವರು ಏರ್ಪಡಿಸಿದ ಕ್ಷಯರೋಗ ವಿರೋಧಿ ಸಭೆಗೆ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಶ್ರೀಮತಿ ಕಲ್ಯಾಣಿ, ಡಿ. ಶೆಟ್ಟರ ಅಧ್ಯಕ್ಷತೆಯಲ್ಲಿ ಉದ್ಘಾಟಿಸಿದರು ಕ್ಷಯರೋಗ ವಿರೋಧಿ ಸಂಘಗಳ ಅಧ್ಯಕ್ಷರು. ಶ್ರೀ ಸಿ. ಜಿ. ಸುಬ್ರಹ್ಮಣ್ಯಂ ಸ್ವಾಗತಿಸಿದರು. ಡಾ| ಸುಂದರರಾಮ ಶೆಟ್ಟಿ, ಶ್ರೀ ಸಿ. ಎಲ್. ಭಟ್ಟರು ಭಾಷಣಮಾಡಿದರು ಶ್ರೀ ಡಿ. ಮೋಹನರಾಯರು ಧನ್ಯವಾದಗಳನ್ನರ್ಪಿಸಿದರು.

ಅನಂತರ ಮಂತ್ರಿಗಳು ಮಂಗಳೂರಿನ ಒಂದು ಗರಡಿಯ ಕಾಲೇಜಿನಲ್ಲಿ ಏರ್ಪಡಿಸಿದ ಯುವಜನರ ವಿಶೇಷ ಸಮ್ಮೇಳನ ಉದ್ಘಾಟಿಸಿ ಮಾಡಿದರು. ಜಿಲ್ಲಾ ಅಧಿಕಾರಿ ಶ್ರೀ ಸಿ. ಜಿ. ಸುಬ್ರಹ್ಮಣ್ಯಂರವರು ಸ್ವಾಗತಿಸಿದರು. ಅನಿಷ್ಟಾಂಗಿ ಕೆಮಿಸ್ಟರ್ ಶ್ರೀ ಕೆ. ಶಿವಗಣ್ಣಯ್ಯನವರು ಧನ್ಯವಾದಗಳನ್ನರ್ಪಿಸಿದರು.

ಮಂತ್ರಿಯವರು ಮಂಗಳೂರಿಗೆ ಬಂದ ಸಂದರ್ಭದಲ್ಲಿ ಮಂಗಳೂರು ಮೆಡಿಕಲ್ ಕಾಲೇಜಿನ ಸ್ಟೂಡೆಂಟ್ಸ್ (ಅಂಗಿಯಂದ ಮಹಿಳೆಯರು ಮಂಗಳೂರು ಮತ್ತು ಉದ್ಯಾಪಿಸಿದರು. ಜಿಲ್ಲಾ ಕಲೆಕ್ಟರ್ ಡಾ| ಪಿ. ಸಿ. ಸರಸಿಂಹಮಯ್ಯರು ಸ್ವಾಗತಿಸಿ, ಅಧ್ಯಕ್ಷತೆಯನ್ನು ವಹಿಸಿದರು. ಮಂತ್ರಿಗಳು ಮಾತನಾಡುತ್ತಾ ಈ ಆಸ್ಪತ್ರೆಯ ಅಭಿವೃದ್ಧಿಗೆ ಕಾರಣವಾದ ದಿ| ಎ. ಬಿ. ಶೆಟ್ಟಿಯವರ ಸೇವೆಯ ಮಹತ್ವ ಹೇಳಿದರು. ಈ ಆಸ್ಪತ್ರೆಗೆ ಅವಶ್ಯವಿರುವ ಹೆಚ್ಚಿನ ಸೌಕರ್ಯ ಕೊಡುವ, ಸರಕಾರದ ಪರವಾಗಿ ಸಾಧ್ಯವಿರುವ ಸಹಾಯ ಕೊಡುವೆ ಮತ್ತು ಜಿಲ್ಲಾ ಕಚೇರಿಯನ್ನು ಕೇಳಿಕೊಂಡರು. ಈ ಆಸ್ಪತ್ರೆಯ ಹೊರ ರೋಗಿಗಳ ವಿಭಾಗಕ್ಕೆ ೧ ಲಕ್ಷ ರೂ ಮಾಡಿಗಳ ಯೋಜನೆ ತಯಾರಾಗಿದ್ದು ಹೇಳಿದರು ಮಂಗಳೂರಿನಲ್ಲಿ ಸ್ಟೇಟ್ ಲೇಂಟ್ರಿ ಯೂನಿವರ್ಸಿಟಿ ಯವರ ಸಹಕಾರ ಪಡೆಯಲಿದೆ ಎಂದರು. ಲಕ್ಷ, ಕಟ್ಟಡಕ್ಕಾಗಿ 33 ಸಾವಿರ ರೂಪಾಯಿ ವೆಚ್ಚ ತಗಲಿರುವುದಾಗಿ ತಿಳಿದು ಬರುತ್ತದೆ.

ತಾಲೂಕು ಕೇಂದ್ರ ಡಾ. ಪೈ ಯವರು ಕಾರ್ಕಳಕ್ಕೆ ತೆರಳಿ, ಕಾರ್ಕಳದವರಿಗೆ ಹೇಳಿದ್ದು, ಅಲ್ಲಿಂದ ಉಡುಪಿಗೆ ಬಂದ್ದು, ಸರಕಾರ ಆಸ್ಪತ್ರೆಯನ್ನು ಹಸ್ತಾಂತರಿಸಿದ ಬಳ್ಳಿ, ಆಸ್ಪತ್ರೆಯ ಹೊರ ಆಸ್ಪತ್ರೆಯ ಕೆಲಸವನ್ನೂ ವೀಕ್ಷಿಸಿದರು.

ಮದ್ಯಪಾನ ನಿರೋಧ ಸಪ್ತಾಹ—ಉಡುಪಿ ತಾಲೂಕು ಮಟ್ಟದ ಮದ್ಯಪಾನ ನಿರೋಧ

ಮೊಂಟೆ ಕಮಿಟಿಯ ಮದ್ಯಪಾನ ನಿರೋಧ ವಿಭಾಗದಲ್ಲಿ ಸಮಿತಿಯ ಆಶ್ರಯದಲ್ಲಿ ಕಳೆದ ತಾ. 27ರಂದು ಉದ್ಘಾಟಿಸಲ್ಪಟ್ಟ ಮದ್ಯಪಾನ ನಿರೋಧ ಸಪ್ತಾಹ ಸಮಾರೋಪ ತ

ಮಾರಂಭವು ಇಲ್ಲಿ ತಾ. 3ರಂದು ಜರಗಿತು. ಸುಂದರಂತಾಯ ಪೈ ಸ್ಮಾರಕ ಮಂದಿರದಲ್ಲಿ ಶ್ರೀ ಎಂ. ಎಸ್. ಆದಿಕಾರಿಯವರ ಅಧ್ಯಕ್ಷತೆಯಲ್ಲಿ ನೆರವೇರಿತು. ತಾ| ಯು. ಶ್ರೀನಿವಾಸ ಆಚಾರ್ಯರು ಸ್ವಾಗತಿಸಿದ ಮೇಲೆ ಶ್ರೀಗಳಾದ ಶ್ರೀ. ಅಕ್ಕಣಬೀಡು ವಿಠ್ಠಲಾಚಾರ್ಯ, ಎ. ಎ. ಇಲ್ಲಿಯವರು ಭಾಷಣ ಮಾಡಿದರು. ಆ ದೃಷ್ಟಿಯಲ್ಲಿ ಶ್ರೀಗಳಾಗಿ ಮೇಲೆ ಶ್ರೀಗಳಾದ ಶ್ರೀ. ಎ. ಕೃಷ್ಣಮೂರ್ತಿಯವರು ಶ್ರೀ ಎ. ಶ್ರೀನಿವಾಸ ಮಲ್ಯರವರು ಶ್ರೀ ಎ. ಕೊಡಗನ್ನಯವರು ಧನ್ಯವಾದಗಳನ್ನರ್ಪಿಸಿದರು.

ಮಲ್ಪೆಗೆ ದಿನಾಚರಣೆ ನಾಡ—ಗುಡ್ಡೆ ಆಲಗಾಯಿಯಲ್ಲಿ ತಳಿಯ 14 ರಂದು ಮಲ್ಪೆಗೆ ದಿನಾಚರಣೆಯ ಗ್ರಾಮ ಸೇವಕ ಶ್ರೀ ವಿ. ಎಮ್. ಯರಕಲ್ಲ ಮಂಗಳ ನಿಗ್ಗ ಶ್ರೀ ಕೆ. ಆಚಾರ್ಯರವರು ಅಧ್ಯಾಪಕ ಶ್ರೀ ಎಲ್. ಮೇಲಾ, ಎಸ್. ಆರ್. ಆಚಾರ್ಯರು ಪ್ರಚಾರ ಸ್ವರೂಪ ಕೊಡಲಿದ್ದರು. ಶ್ರೀ ಸ್ವಾಮಿ ಸಾಲಿಯ ಸೆಟ್ಟಿ ಮೂಲಾಮ್ಮಗಳಿಗೆ ಸಿಹಿ ತಿಂಡಿ ಹಂಚಿದರು. ಇಂದಿನ ಕಾರ್ಯಾಧ್ಯಕ್ಷ ಶ್ರೀ ಸರಸಿಂಗ್ರಹ ಶ್ರೀ ಪ್ರಾಣ್ಯರಿಂದ ಬಹುಮಾನ ನೆರವೇರಿಗಾಯಿತು ಶ್ರೀ ಕೆ. ಶ್ರೀ ಎ. ಪಿ. ಸಾಂಗಲಿಂದ ಧನ್ಯವಾದ ಕೊಟ್ಟರೊಡನೆ ಕಾರ್ಯಕ್ರಮ ಮುಗಿಯಿತು.

ಮೊಳಕಾಲ್ ಕಾಮಗಾರಿಯ ಉದ್ಘಾಟನೆ ಮಾಡಿ—ಎಂಟನೆಯ ಮಾಲ್ಯ, ಅರಿಯಂಗಳ ಗ್ರಾಮದ ಮೊಳಕಾಲ್ಯಲ್ಲಿ ಇದೇ ಡಿಸೆಂಬರ ತಾ. 3ರಂದು ಸಂಜೆ 6ರಂದು ಆಯಾಯ ಗ್ರಾಮದ ಈ ಸಂಸ್ಥೆಯ ಸಭ್ಯ ಮಹಾಜನರು ಕಾರ್ಯಕ್ರಮ ಮಾಡಿಸಲಾಗಿದೆ ಮತ್ತು ಈ ಕಾರ್ಯಕ್ರಮಕ್ಕೆ ಸಿಹಿಯಾಗಿ ಸಂಗೀತ ಕಾರ್ಯಕ್ರಮ ಏರ್ಪಡಿಸಲಾಗಿದೆ ಆದುದರಿಂದ ಸಂಗೀತ ಪ್ರಿಯರು ಮತ್ತು ಸಾರ್ವಜನಿಕರು ಈ ಕಾರ್ಯಕ್ರಮಕ್ಕೆ ಹಾಜರಾಗಿ ಸಹಕರಿಸಬೇಕೆಂದು ಕೋರಲಾಗಿದೆ.

ದಮ್ಮ ಕೊಟ್ಟಿಗೆ—ಸುಮಾರು 300ರಷ್ಟು ಮಂದಿ ಮೊಗ್ಗಾಯಿಗಳನ್ನು ಶ್ರೀ ಎ. ಕಾಯ ಕೃಷ್ಣ ಮಯ್ಯರವರ ಅಧ್ಯಕ್ಷತೆಯಲ್ಲಿ ಶ್ರೀ ರಾಮಚಂದ್ರ ಆಚಾರ್ಯ ಇವರು ಉದ್ಘಾಟಿಸಿದರು. ಈ ಸಮಾರಂಭದಲ್ಲಿ ಮೇಲೆ ಶ್ರೀ ಎ. ಸಂಜೀವಯ್ಯನವರು ಮಾಡಿ ಮೊದಲಾದವರು ಮಾತನಾಡಿದರು.

ಪ್ರಯಾಣ ಮಿನ್ನಾಪಿಯಾಯ್ದು ಶ್ರೀ ಸೀಂಪ ಇಸ್ತ್ರಿ ಕಾರ್ಯಾಲಯದಲ್ಲಿ ಸ್ಟ್ಯಾಂಪ ಕೆ ಸ್ಟೈಲ್ ಕಲೋಕ ಸೆಹಾಯವಾದ ಮಾಡಿ ಮಾಡ್ಲಿ ಬಾರದ್ದು ಇಲ್ಲಿ ಬಗೆಗಾಯಿಯಾ ಕೂಡಾವೆ ಸ್ವಚ್ಛ ಕಾರ್ಯಾಚರಣೆಗಾಗಿ ಕೆಲ ಮಗಜೇರ್ಪಡು ಕೆಲಸಕ್ಕೆಂಡಿದ್ದಾನೆ. ಬಾಡ ತೀಯ ಮಾಡಾಯಾಗಿದ್ದು ಸ್ಟ್ಯಾಂಪ ಗಂಡಿಗೆ ಅಂತ ತೆಗೆಯಲ್ಪಟ್ಟು ಮಾಡ್ಲಿ ಕೆ ಸ್ಟೈಲ್ ಕಲೋಕ ಸೆಹಾಯವಾದ ಮಾಡಿ ಮಾಡ್ಲಿ ಇಲ್ಲಿ ಅಂತ್ಯಾಯಿಸಾಗ್ರ ಕ್ಷಾಯಾಯಾ. ಇಲ್ಲಿ ಸ್ಟ್ಯಾಂಪ ಇಲ್ಲ ಸ್ಟ್ಯಾಂಪ ಇಲ್ಲ ಇಲ್ಲ ಇಲ್ಲ

ಚಕ್ರವರ್ತಿ ರಾಜಗೋಪಾಲಾಚಾರಿ

ಶ್ರೀ ಎನ್. ನಾರಾಯಣ ಬಲ್ಲಾಳ

ಇಂದು ನಮ್ಮ ದೇಶದಲ್ಲಿ ರಾಜಾಜಿಯವರ ಹೆಸರನ್ನು ತಿಳಿಯದವರು ವಿರಳ. 'ರಾಜಾಜಿ' ಎಂಬ ಹೆಸರನ್ನು ಕೇಳುತ್ತಲೇ ನೀಲಿ ಕನ್ನಡಕವನ್ನು ಧರಿಸಿರುವ, ಉದ್ದ ಮೂಗಿರುವ, ಬಿಳಿ ಖದ್ದರ್ ಧೋತಿಯನ್ನು ಉಟ್ಟುಕೊಂಡಿರುವ, ಹೆಗಲ ಮೇಲೆ ಒಂದು ಖದ್ದರ್ ಶಾಲನ್ನು ಹಾಕಿಕೊಂಡಿರುವ ಲಾ ವರ್ಷದ ಯುವಕನ ಚಿತ್ರವು ನಮ್ಮ ಕಣ್ಣೆದುರಿಗೆ ಬಂದು ನಿಂತಂತಾಗುತ್ತದೆ. ಇವರು ನಮ್ಮ ಸ್ವತಂತ್ರ ಭಾರತದ ಪ್ರಥಮ ಭಾರತೀಯ ಗವರ್ನರ್ ಜನರಲ್‌ರಾಗಿದ್ದರು ಇವರು ಯಾವಾಗಲೂ ಹಸನ್ಮುಖಿ. ಇವರು ಕೊಂಗ್ರೆಸ್ಸಿಗಾಗಿಯೂ, ಸಮಾಜ ಸುಧಾರಣೆಗಾಗಿಯೂ ತುಂಬಾ ದುಡಿದಿದ್ದಾರೆ. ಇವರ ಜೀವನ ಮಕ್ಕಳಿಗೂ, ರಾಜನೀತಿಜ್ಞರಿಗೂ, ವಿಶಾಲ ಹೃದಯತೆ ಸಮಾಜ ಸುಧಾರಕರಿಗೂ ಮತ್ತು ಅವರ ಸರಳತೆ ಪ್ರತಿಯೊಬ್ಬನಿಗೂ ಅನುಕರಣೀಯವಾಗಿದೆ. ಇವರ ದೃಷ್ಟಿಯು ವಿಶಾಲವಾದುದು.

ರಾಜಾಜಿಯವರು ಮದ್ರಾಸ್ ರಾಜ್ಯದ ತಮಿಳು ನಾಡಿನ ಸೇಲಮ್ ಜಿಲ್ಲೆಯಲ್ಲಿ ಒಂದು ವೈಷ್ಣವ ಪರಿವಾರದಲ್ಲಿ ೧೮೭೮ ನೇ ಡಿಸೆಂಬರ ೧೩ರಂದು ಹುಟ್ಟಿದರು. ಬಾಲ್ಯದಿಂದಲೇ ಇವರ ಪ್ರತಿಭೆಯು ಎಲ್ಲಾ ಕ್ಷೇತ್ರಗಳಲ್ಲಿಯೂ ಪರಿಡಿತ್ತು. ಶಾಲೆ ಮತ್ತು ಕಾಲೇಜಿನಲ್ಲಿ ಇವರು ಒಬ್ಬ ಮೇಧಾವಿ ವಿದ್ಯಾರ್ಥಿಯಾಗಿದ್ದರು. ತರ್ಕವು ಇವರ ಪ್ರಿಯ ವಿಷಯವಾಗಿದೆ. ಆದುದರಿಂದಲೇ ಇವರು ಮುಂದಕ್ಕೆ ಹೋಗಿ ವಕೀಲರಾದರು. ಬಾಲ್ಯದಿಂದಲೇ ಇವರಲ್ಲಿ ಸಾರ್ವಜನಿಕ ಸೇವೆಯ ಭಾವನೆಯು ತುಂಬಿತುಳುಕುತ್ತಿತ್ತು. ಇವರು ಒಮ್ಮೆ ಸೇಲಮ್ ಮುನ್ಸಿಪಾಲಿಟಿಯ ಅಧ್ಯಕ್ಷರಾಗಿದ್ದರು. ಸ್ವಲ್ಪ ಸಮಯದ ನಂತರ ಇವರು ಮದ್ರಾಸಿಗೆ ಬಂದು, ಅಲ್ಲಿ ತನ್ನ ವಕಾಲತ್ತನ್ನು ಶುರುಮಾಡಿದರು. ಇವರು ಬೆಂಗಳೂರಿನ ಸೆಂಟ್ರಲ್ ಕೊಲೇಜಿನಿಂದ ಬಿ. ಎ. ಡಿಗ್ರಿಯನ್ನು ಪಡೆದರು. ಇವರ ತರ್ಕಬುದ್ಧಿಯ ಪ್ರಭಾವವು ಬಹಳ ವಿಶೇಷವಾಗಿತ್ತು. ಇದರಿಂದ ಇವರು ಬಹಳ ಲೋಕಪ್ರಿಯರಾದರು ಇವರು ಮದ್ರಾಸ್‌ನಲ್ಲಿಯೇ ರಾಜಕೀಯ ಕ್ಷೇತ್ರಕ್ಕಿಳಿದರು.

೧೯೧೭ರಲ್ಲಿ 'ಹೋಮ್‌ರೂಲ್' ಆಂದೋಲನವು ಮೊದಲಾದ ಕೂಡಲೇ ಸ್ವದೇಶಿ ಪ್ರೇಮಿ ರಾಜಾಜಿಗೆ ಅದನ್ನು ಬಿಟ್ಟಿರಲಾಗಲಿಲ್ಲ. ಇದೇ ಸಮಯದಲ್ಲಿ ಭಾರತದ ರಾಜಕೀಯ ಕ್ಷೇತ್ರಗಳಲ್ಲಿ ಗಾಂಧೀಜೀಯವರ ಸೂರ್ಯೋದಯವಾಯಿತು. ನಿದ್ದೆಮಾಡಿಕೊಂಡಿರುವ ಜನತೆಯು ಎಚ್ಚತ್ತು, ತನ್ನ ದೇಶಮಾತೆಯ ದಾಸ್ಯ ವಿಮುಕ್ತಿಗೋಸ್ಕರ ಸೊಂಟಕಟ್ಟಿತು ರಾಜಾಜಿಯವರು ಕೂಡಾ ಈ ಆಂದೋಲನದಲ್ಲಿ ಸೇರಿದರು ಅವರಲ್ಲಿ ಅಡಗಿರುವ ಚಾಣಾಕ್ಯತನ ಬುದ್ಧಿಯು ಎದ್ದು, ತನ್ನ ಸುಖ ವೈಭವವನ್ನು ತ್ಯಜಿಸಿ ಬಹಳ ಉತ್ಸಾಹದಿಂದ ರಾಷ್ಟ್ರದ ಮುಕ್ತಿಯಜ್ಞದಲ್ಲಿ ಪ್ರವೇಶಮಾಡಿದರು. ಮೊತ್ತ ಮೊದಲು ೧೯೨೭ರಲ್ಲಿ ಗಾಂಧೀಜೀಯವರೊಡನೆ ರಾಜಾಜಿಯವರ ಭೇಟಿಯಾಯಿತು. ಪ್ರಥಮ ದರ್ಶನದಲ್ಲೇ ಇಬ್ಬರೂ ಕೂಡಾ ಒಬ್ಬರನ್ನೊಬ್ಬರು ಆಕರ್ಷಿಸಿದರು. ಮಹಾತ್ಮಾ ಗಾಂಧೀಜೀಯವರ ಪರಿಚಯವಾದಂದಿನಿಂದ ಇವರು ಗಾಂಧಿಯವರ ಪ್ರೀತಿಯ ಮಿತ್ರರಾದರು. ಮಹಾತ್ಮಾ ಗಾಂಧೀಜೀಯವರು ಇವರ ಸೂಕ್ಷ್ಮ ಬುದ್ಧಿಯನ್ನು ಒಪ್ಪಿಕೊಳ್ಳುತ್ತಿದ್ದರು. ಗಾಂಧೀಜೀಯವರು ಎಷ್ಟೋ ಸಲ ಕೆಲವು ವಿಷಯಗಳಿಗೋಸ್ಕರ ರಾಜಾಜಿಯವರಿಂದ ಸಲಹೆಗಳನ್ನು ತೆಗೆದುಕೊಳ್ಳುತ್ತಿದ್ದರು. ಆಂದಿನಿಂದ ರಾಜಾಜಿಯವರು ಪ್ರಮುಖ ನೇತ್ರರಲ್ಲಿ ಒಬ್ಬರೆಂದು ಎಣಿಸಲ್ಪಟ್ಟರು.

೧೯೩೭ರಲ್ಲಿ ಕೊಂಗ್ರೆಸ್ ಕೌನ್ಸಿಲಿಗೆ ಹೋಗಬೇಕೆಂದು ನಿಶ್ಚಯಿಸಲಾಯಿತು. ಕೊಂಗ್ರೆಸ್ ಸರಕಾರವು ಸ್ಥಾಪನೆಯಾದನಂತರ, ಸನ್ ೧೯೩೭ರಲ್ಲಿ ರಾಜಾಜಿಯವರು ಮದ್ರಾಸು ಪ್ರಾಂತ್ಯದ ಮುಖ್ಯಮಂತ್ರಿಯಾದರು. ಆ ಸಮಯದಲ್ಲಿ ಇವರು ಮದ್ಯಪಾನ ಕ್ರಮವನ್ನು ನಿಲ್ಲಿಸಿ, ಶಾಲೆಗಳ್ಳಲ್ಲಿ ಹಿಂದಿಯನ್ನು ಕಲಿಸುವ ಏರ್ಪಾಡು ಮಾಡಿದರು.

ಎರಡನೇ ಮಹಾಯುದ್ಧದ ಸಮಯದಲ್ಲಿ ಕಾಂಗ್ರೆಸಿನಲ್ಲಿ ಮತಭೇದವುಂಟಾದ ಕಾರಣ, ಇವರು ಕೊಂಗ್ರೆಸು ಸದಸ್ಯತನಕ್ಕೆ ರಾಜಿನಾಮೆಯಿತ್ತುದಲ್ಲದೆ, ಕೊಂಗ್ರೆಸು ಮತ್ತು ಮುಸ್ಲಿಮ್‌ಲೀಗು ಒಟ್ಟಾಗಿರಬೇಕೆಂದು ಪ್ರಚಾರ ಮಾಡತೊಡಗಿದರು. "ಭಾರತವು ವಿಭಜನೆಯಾದ ನಂತರವೇ ಅದು ಸ್ವಾತಂತ್ರ್ಯವನ್ನು ಪಡೆಯುವುದು" ಎಂದು ಅವರು ಹೇಳಿದ್ದರು. ಅವರು ಹೇಳಿದ ೫-೬ ವರ್ಷಗಳ ನಂತರ ಅದದ್ದು ಕೂಡಾ ಹೀಗೆ.

ಪಂಡಿತ ನೆಹರು ಮತ್ತು ಶ್ರೀಮತಿ ಇಂದಿರಾಗಾಂಧಿಯವರನ್ನು ಶ್ವೇತಭವನದಲ್ಲಿ ಅಧ್ಯಕ್ಷ ಕೆನ್ನೆಡಿ ಮತ್ತು ಶ್ರೀಮತಿ ಕೆನೆಡಿಯವರು ಸ್ವಾಗತಿಸಿದರು.

ರಾಜಾಜಿಯವರ ನೇತೃತ್ವದಲ್ಲಿ ದಕ್ಷಿಣದಲ್ಲಿ ಅನೇಕ ರಚನಾತ್ಮಕ ಕಾರ್ಯಗಳು ನಡೆದುವು. ಹರಿಜನೋದ್ಧಾರ, ಖಾದೀ ಪ್ರಚಾರ ಮತ್ತು ಹಿಂದೀ ಪ್ರಚಾರ ಇವುಗಳಿಗೆ ಇವರು ತುಂಬಾ ಪ್ರೋತ್ಸಾಹ ಕೊಡುತ್ತಿದ್ದರು. ರಾಜಾಜಿಯವರು ಸೇಲಮ್‌ನ ಹತ್ತಿರ ತಿರುಚಂಗೋಡು ಎಂಬ ಹಳ್ಳಿಯಲ್ಲಿ 'ಗಾಂಧೀ ಆಶ್ರಮ, ಎಂಬ ಹೆಸರಿನ ಒಂದು ಆಶ್ರಮವನ್ನು ಸ್ಥಾಪಿಸಿದರು. ಆ ಆಶ್ರಮದಿಂದ ಹರಿಜನೋದ್ಧಾರ ಹಾಗೂ ಖಾದೀ ಪ್ರಚಾರ ಕೈಗೊಂಡರು. ಸ್ವಾತಂತ್ರ್ಯ ಪ್ರಾಪ್ತಿಯ ನಂತರ, ಕೊಂಗ್ರೆಸ್ ಸರಕಾರದ ಮಂತ್ರಿಮಂಡಳದಲ್ಲಿ ಇವರು ಒಬ್ಬರಾಗಿದ್ದರು. ಇವರು ಬಂಗಾಳದ ಗವರ್ನರ್, ಭಾರತದ ಪ್ರಥಮ ಗವರ್ನರ್—ಜನರಲ್ ಆಗಿದ್ದರು.

ರಾಜಾಜಿಯವರು ಬಹಳ ಪರಿಶ್ರಮಿ ಹಾಗೂ ಅಧ್ಯಯನ ಶೀಲ ವ್ಯಕ್ತಿ. ಸಾಹಿತ್ಯ, ಕಲೆ, ಸಂಗೀತ ಹಾಗೂ ಸಮಾಜ ಸುಧಾರಣೆ ಕಾರ್ಯದಲ್ಲಿ ಇವರಿಗೆ ವಿಶೇಷ ಅಭಿರುಚಿಯಿದೆ. ತಮಿಳಿನಲ್ಲಿ ಅನೇಕ ಗ್ರಂಥಗಳನ್ನು ಬರೆದಿದ್ದಾರೆ. ಬಾಲ ಸಾಹಿತ್ಯದಲ್ಲಿ ಕೂಡಾ ಇವರ ಬರವಣಿಗೆ ಸಾಗಿದೆ. ಬಾಲಕರ ಶಿಕ್ಷಣಕೋಸ್ಕರ ಸರಳ ಪದ್ಧತಿಯಲ್ಲಿ ಕೆಲವು ಪುಸ್ತಕಗಳನ್ನು ಬರೆದಿದ್ದಾರೆ.

ಸಮಾಜ ಸುಧಾರಣೆ ಕಾರ್ಯದಲ್ಲಿ ಇವರು ಸಾಕಷ್ಟು ಮುಂದುವರಿದಿದ್ದಾರೆ. ಇವರು ಅಸ್ಪೃಶ್ಯತಾ ನಿವಾರಣೆ ಹಾಗೂ ಜಾತಿ-ಭೇದವನ್ನು ತನ್ನ ಪಾರಿವಾರಿಕ ಜೀವನದಿಂದ ಮೊದಲೇ ದೂರಮಾಡಿದ್ದಾರೆ. ಇವರು ತನ್ನ ಮಕ್ಕಳಿಗೆ ಸಂಪೂರ್ಣವಾಗಿ ವಿಚಾರಮಾಡುವ ಸ್ವಾತಂತ್ರ್ಯವನ್ನು ಕೊಟ್ಟಿದ್ದಾರೆ. ಇವರು ತನ್ನ ಸುಪುತ್ರಿ ಲಕ್ಷ್ಮಿಯ ವಿವಾಹವನ್ನು ಮಹಾತ್ಮಾ ಗಾಂಧಿಯವರ ಸುಪುತ್ರ ಶ್ರೀ ದೇವದಾಸರೊಡನೆ ಮಾಡಿದ್ದಾರೆ.

ಇಂತಹ ರಾಜಾಜಿಯಿಂದು ಸ್ವತಂತ್ರ ಪಕ್ಷದ ಅಧ್ಯಕ್ಷರಾಗಿ ಕಾಂಗ್ರೆಸನ್ನು ವಿರೋಧಿಸುತಿದ್ದಾರೆ.

"ನಚಿಕೇತ"ರ
ಇನ್ನೊಂದು ನವೀನ ಕಾದಂಬರಿ—
ಋಣ ಯಾತ್ರೆ
ಇದೀಗ ಪ್ರಕಟವಾಗಿದೆ.
ಬೆಲೆ ರೂ. 1-50 ನ. ಪೈಸೆ.
ಮೊದಲು ಪ್ರಕಟವಾದ ಕಾದಂಬರಿ
ಭಾವಾರ್ಚನೆ
ಬೆಲೆ ರೂ. 1-25 ನ. ಪೈಸೆ.
ಪ್ರತಿಗಳು ಸಿಗುವ ಸ್ಥಳಗಳು:—
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.

ವಿಶ್ವಕವಿ ಟಾಗೋರರ ಪುಣ್ಯಸ್ಮರಣೆಗಾಗಿ
ಅವರ ಶತಮಾನೋತ್ಸವದ ಸುಸಂದರ್ಭದಲ್ಲಿ
ಪ್ರಕಟಿವಾದ ಕಿರುಗಾಣಿಕೆಗಳು
ಚಿತ್ರಾಂಗದೆ
ಬೆಲೆ: ೬೦ ನ. ಪೈಸೆ.
(ಶ್ರೀ ಕೆ. ಕೆ. ಶೆಟ್ಟಿ, ಎಂ. ಎಲ್. ಸಿ. ಅವರಿಂದ ಅನುವಾದಿತ)
ರವೀಂದ್ರನಾಥರ ಕಿರುಗತೆಗಳು
ಬೆಲೆ: ೯೦ ನ. ಪೈಸೆ.
(ಶ್ರೀ ಹನುಮಂತರಾವ್ ಮೊಂಜರೇಕರ, ಕಾರವಾರ ಅವರಿಂದ ಅನುವಾದಿತ)
ಪ್ರಕಾಶಕರು:
ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ನವಯುಗ ಪ್ರೆಸ್, ಉಡುಪಿ.

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.
ಚಂದ್ರಲೋಕಕ್ಕೆ ಪ್ರಯಾಣ
(ಯು. ರಾಘವೇಂದ್ರ ಆಚಾರ್ಯ, ಎಂ. ಎ)
ಸಾಮಾನ್ಯ ರೋಗಗಳು
(ಡಾ. ಕೆ. ಎಲ್. ಐತಾಳ, ಎಂ. ಬಿ. ಬಿ. ಎಸ್)
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಉಪಯುಕ್ತ ಪುಸ್ತಕ
ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.
ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ, ಉಡುಪಿ.

ಜೀವನದ ವಿವಿಧ ಘಟನೆಗಳನ್ನು ಹೃದಯ ಸ್ಪರ್ಶಿಯಾಗಿ ಚಿತ್ರಿಸುವ ಕಥಾಸಂಗ್ರಹ
ಮದುವೆ ಸೀರೆ
ಮದುವೆ ಕಾಲದಲ್ಲಿ ವಧೂವರರಿಗೆ ಉಡುಗೊರೆಯಾಗಿ ಕೊಡಲಿಕ್ಕೂ ಯೋಗ್ಯವಾದ ಪುಸ್ತಕ.
ಬೆಲೆ: ರೂಪಾಯಿ ಒಂದು.
ರೂ. 1-25 ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು
ನವಭಾರತ ಪುಸ್ತಕ ಭಂಡಾರ, ಉಡುಪಿ.

ಆಯುರ್ವೇದದಲ್ಲಿ

ಜ್ವರ ನಿವಾರಣಾ ಪ್ರಯೋಗಗಳು

ಶ್ರೀ ಅಚ್ಯುತ ಶ್ರೀನಿವಾಸ ಹೈ

ಮಲೇರಿಯಾಜ್ವರದ ಮೇಲೆ 'ಕ್ವಿನಾಯಿನ್'ನ ಬದಲಾಗಿ ಆಯುರ್ವೇದ ಔಷಧ ಪ್ರಭಾವಶಾಲಿ ಪ್ರಯೋಗಗಳು ಹಲವಾರು ಇವೆ. ಶೀತಜ್ವರಗಳ ಮೇಲೂ ದೇಶೀಯ ವೈದ್ಯಕದಲ್ಲಿ ಔಷಧ ಪ್ರಯೋಗಗಳು ಸರಳ, ಸುಲಭ, ಪರಿಣಾಮಕಾರಿಗಳಾಗಿವೆ.

ಬೇವಿನ ಬೀಜದ ಹಸ್ಪು ಮತ್ತು ಲವಂಗ ಸಮಭಾಗ ತುಳಸಿ ರಸದಲ್ಲೆರೆದು ಕಡಲೆ ಕಾಳಿನಷ್ಟು ಗಾತ್ರದ ಮಾತ್ರೆಗಳನ್ನು ತಯಾರಿಸಿ ಹಾಲಿನೊಂದಿಗೆ ತೆಗೆದುಕೊಳ್ಳುವುದರಿಂದ ಜ್ವರ ನಿವಾರಣೆ ಯಾಗುವದು.

ಬೇವಿನ ಬೀಜ, ಲವಂಗ, ತೈಲಯುಕ್ತ ದ್ರವ್ಯಗಳು, ಬೇವಿನ ಬೀಜದ ಎಣ್ಣೆಯಲ್ಲಿ ಗಂಧಕದ ಅಂಶ ಇರುವದು. ಖನಿಜ ಗಂಧಕಕ್ಕಿಂತಲೂ ಗುಣದಲ್ಲಿದು ಶ್ರೇಷ್ಠವಾದುದು.

ಕಹಿರಸವಿದ್ದು ಜ್ವರ, ರಕ್ತದೋಷಗಳನ್ನು ನಿವಾರಿಸುವುದು. ಯಕೃತ್ತಿಗೆ ಉತ್ತೇಜಕವಿದ್ದು ವಿಷಾಕದಲ್ಲಿ ಶೀತವೀರ್ಯವಾದುದು. ಆಮಾಶಯಸ್ಥ ಜ್ವರದೋಷ ದುಷ್ಟಿಯನ್ನು ಶಮನಗೊಳಿಸುವುದು. ರಕ್ತದಲ್ಲಿಯ ಕ್ರಿಮಿಗಳನ್ನು ಆ ಮೂಲಾಗ್ರವಾಗಿ ನಾಶಗೊಳಿಸುವ ಶಕ್ತಿಯೂ ಇದಕ್ಕಿದೆ. ಮೂರ್ತಿ ಸಣ್ಣದಾದರೂ ಕೀರ್ತಿ ನೊಡ್ಡದಿದೆ—ಈ ಬೇವಿನ ಬೀಜ, ಬೀಜದ ಎಣ್ಣೆಗೆ! ಲವಂಗವು ಪಾರರಸ, ಉಷ್ಣವೀರ್ಯ ಉಳ್ಳದ್ದಾಗಿದ್ದು ವಾತ ಕಫಗಳನ್ನು, ಆಮಾಶಯ, ಕರುಳು, ಗಂಟಲುಗಳಲ್ಲಿಯ ಶೈತ್ಯ ವಿಕಾರಗಳನ್ನು ಗುಣಪಡಿಸುವದು. ಅಗ್ನಿದೀಪಕ, ಆಮಪಾಚಕವಾಗಿದ್ದು ಹೊಸ ಜ್ವರಗಳಲ್ಲಿಯೂ, ಹಳೇ ಅಗ್ನಿಮಾಂದ್ಯದಲ್ಲಿಯೂ ತುಂಬಾ ಗುಣಲಾಭ ಕೊಡುವದು.

ರಸಜೀರ್ಣವು ಸಂಗ್ರಹವಾಗುತ್ತ ಆಮಾಶಯ, ಕರುಳು, ಯಕೃತ್ ರಸಧಾತು, ವಾತ ವಾಹಿನಿಗಳ ಮೇಲೂ ತುಂಬಾ ಪರಿಣಾಮಕಾರಿಯಾಗಿದೆ—ಈ ಸಣ್ಣ ಲವಂಗ! ರಸ ಜೀರ್ಣದುಷ್ಟಿಯು ವಾತ ಶ್ಲೇಷ್ಮದೊಷ ಪ್ರಧಾನವಾಗಿದ್ದರೆ ಮೂಲಾವರೋಧ, ಅಗ್ನಿಮಾಂದ್ಯ, ಅರುಚಿ, ತಂದ್ರಾ, ಯಕೃತ್ ವಿಕಾರ, ಮುಖಪಾಡಗಳಲ್ಲಿಯ ಶೋಥ ವಿಕಾರಗಳಿಗೆ ಮೂಲಕಾರಣವಾದ ರಸಜೀರ್ಣವು ಲವಂಗದಂತಹ ದೀಪನ, ಪಾಚನ ಔಷದದಿಂದ ಗುಣವಾಗಿ ವಿಕಾರನಾಶವಾಗುವುದು.

ಬೇವಿನ ಬೀಜದ ಎಣ್ಣೆಯನ್ನು ಹಳೇ ಮಲೇರಿಯಾ ಜ್ವರಗಳ ಮೇಲೆ ತುಂಬಾ ಪರಿಣಾಮಕಾರಿಯಾಗುವಂತೇ ಉಪಯೋಗಿಸಬಹುದು.

ತುಳಸಿಯು ಜ್ವರನಾಶಕ, ಸ್ವೇದಲ, ದುರ್ಗಂಧಿನಾಶಕ, ಕಫ, ಕೆಮ್ಮು, ನೆಮ್ಮು ದೈತ್ಯಗಳನ್ನು ನಿವಾರಿಸುವುದು. ಕ್ರಿಮಿನಾಶಕವೂ ಆಗಿದೆ. ಶೀತಪೂರ್ವಕ ವಿ. ಜ್ವರದ ಮೇಲೆ ತುಳಸಿ ರಸದ ಉಪಯೋಗ ಶಾರ್ಙ್ಗಧರಾಚಾರ್ಯರು ಪ್ರಯೋಗಿಸಿದ್ದಾರೆ. ಯಾವುದೇ ಜ್ವರಗಳಿಗೆ ಅಮೃತಾರಿಷ್ಟ ಮತ್ತು ದಶಮೂಲಾರಿಷ್ಟಗಳು ತೀಕ್ಷ್ಣಗುಣಕಾರಿ.

ಶಿವ ಪಾರ್ವತಿಯರ ವಿನೋದ

(ಳನೇ ಪುಟದಿಂದ)

ಕೊಂಡಳು. ಚಿನ್ನದ ವಾಲೆ ಮಾಸಿದಳು; ತಗರದ ವಾಲೆಯ ನುಟ್ಟಳು. ಚಿನ್ನದ ಬಳೆಯ ಮಾಸಿದಳು; ತಗರದ ಬಳೆಯ ತೊಟ್ಟಳು. ಚಂದ್ರಶೇಖರ ದೇವರು ಮಿಂದು ಬರುವ ದಾರಿಯಲಿ ಅಂಗನೆ ನಿಂತಳು. ಬಂದ ಈಶ್ವರರು ಚಾರಕರನ್ನು ಕರೆದು, ಕೂಡಲೆ ಬಂದರೆ ಬೇಡಿದ ವರವ ಕೊಡುವೆನು. ತಾನಾಗಿ ಬಂದರೆ ಅಂದಣವಿರಿಸುವೆ; ಮುಂದೆ ಸಾವಿರವ ಕೊಡಿಸುವೆ ಬೇಡುತಿಗೆ ದೇವೇಂದ್ರನ ಕೊಡೆ ಹಿಡಿಸುವೆ ಎಂದು ಅಮಿಷ ತೋರಿಸಿ ಕರೆತಲು ಹೇಳಿದರು ಅದರಿ, ಆಕೆ ಸಾಮಾನ್ಯಳೆ?

ಸೊಪ್ಪುಟ್ಟ ಹೊಲತಿಯ ಕರೆದರೆ
ಬರುವೆನೆ
ಮರುಳುಂಟೆ ಶಿವನ ಮನದಲ್ಲಿ
ಎನುತಲೆ
ದಿಟ್ಟೆಂದೊರಲಿ ನಗುವಳು! ||

ಹತಾಶರಾಗಿ ಸೇವಕರು ಮರಳಿ ಬಂದು ಈಶ್ವರರಿಗೆ ಆಕೆಯ ಮಾತುಗಳನ್ನು ತಿಳಿಸಲು; ಶಿವ ಸೊಪ್ಪುಟ್ಟ ಹೊಲತಿಗೆ ಸೊಕ್ಕೆತ್ತ ನೋಡಿರಿ ಕೊಲಬೇಕು ಅವಳ ಎನುತ ತಾವೇ ಹೊರಟರು. ದೂರದಿಂದಲೇ ಬರುವ ದೇವರನ್ನು ಕಂಡು ತನ್ನ ಗುಡಿಹೊಕ್ಕು ನಗ ತೊಡಗಿದಳು ಆ ಹೊಲತಿ. ಅದರೂ ಅವರನ್ನು ಸ್ವಾಗತಿಸಿ ಗುಡಿಯ ಜಗುಲಿಯಲ್ಲಿ ಕುಳ್ಳಿರ ಹೇಳಿದಳು. ಶಿವನಿಗೆ ಕುಳಿತು ಕೊಳ್ಳಲು ತಾಳ್ಮೆಯೆಲ್ಲಿರ ಬೇಕು?

ಬಾರೆಂದು ಕರೆದರೆ ಬಾರದೆ
ಉಳಿದಿಯೋ
ಮರುಳೆಂದು ಎನ್ನನೀ ಬೈದೆಯೋ
ಬೇಡುತಿ
ನಿನ್ನ ಬೆನ್ನ ಚರ್ಮಗಳ ತೆಗೆಸುವೆ ||

ಎಂದರು. ಕೊರವತ್ತಿ ಸುಮ್ಮನುಳಿವಳೆ? ಕೇಳಿಯೇ ಬಿಟ್ಟಳಾಕೆ;

ಬೆನ್ನ ಚರ್ಮಗಳ ತೆಗೆಸಲಿಕೆ ನಿಮ್ಮಲ್ಲಿ
ಕದ್ದೆನೆ
ನಿಮ್ಮವರ ಮುಂದೆ ಕದ್ದೇನೆ ದೇವರೆ,
ತಪ್ಪು ಮಾಡಿದ ಬಗೆಯೇನು?

ಬಂದ ಅತಿಥಿಯನ್ನು ಉಪಚರಿಸುವುದು ಧರ್ಮ. ಎಂತಲೇ ಒಂದು ಕಾಯನ್ನು ಒಡೆದು ಒಂಬತ್ತು ಹೋಳು ಮಾಡಿ ಬುಟ್ಟಿಯೊಳಗೆ ಹಾಕಿಕೊಟ್ಟಳು. ಆದರೆ, ಪರಮಾತ್ಮ ಬುಟ್ಟಿ ಹಿಡಿವ ಬದಲು ಕೈಹಿಡಿದ! ಕೈ ಕೊಸರುವ ಪ್ರಯತ್ನ ಮಾಡುತ್ತ ಕೊರವತ್ತಿ ವ್ಯಂಗ್ಯಬಾಣ ಬಿಟ್ಟಳು.

ಕೈಯ ಹಿಡಿಯಲಿಕೆ ಸರದಾರರೆ
ಮಗಳಲ್ಲ
ಊರ ಗುತ್ತಿನವರ ಮಗಳಲ್ಲ ದೇವರೇ
ಈ ಹೀನ ಕುಲಕೇನು ಬಯಸೀರಿ?

ಈ ಪ್ರಶ್ನೆಗೆ ಸದಾ ಸಿದ್ಧ ಉತ್ತರವಿದೆ ತಾನೆ?

ಕೀಳು ಮೇಲುವೆಂಬ ಭೇದವೇನಾಗಿಲ್ಲ
ಕಾದದೇ ನೀನು ಒಡಗೂಡಿ ಬಂದರೆ
ಬೇಡಿದ ವರವಕೊಡುವೆನು ||

ಪರಮಾತ್ಮನ ಉತ್ತರ ಕೇಳಿ, ಕೊರವತ್ತಿ ಹೊರಗೆ ಹೋದ ಹೊಲೆಯ ಬಂದರೆ, ನಿಮ್ಮನ್ನು ಕಡಿದು ಕೊಲ್ಲುವನು ಎಂದು ಭಯದೋರಿದಳು. ಆದರೆ, ಪ್ರೇಮವು ಮಾಡದ ಕಾರ್ಯವಾವುದು? ಎಂತಲೇ ಹರ

ಹೊಲೆಯಲ್ಲಿ ಬಂದರೆ ಹೊರಗಿಂಕೆ
ನಿಲ್ಲಿಸುವೆ
ದೂಡುವೆ ಅವನ ಗುಡಿಯಿಂದ
ಬೇಡುತಿ
ಬಾರೆ ನೀ ಎನ್ನ ಬಳಿಗೆಂದ ||

ಬೇಡಿದುದನ್ನು ಕೊಡುವೆನೆಂದ ಪರಮಾತ್ಮನ ಮಾತಿನಿಂದ ಬೇಡುತಿ "ದೇವರೇ, ನಿಮ್ಮ ಕೊರಳ ಪದಕವನು ಕೊಟ್ಟರೆ ಬರುವೆನು ಒಂದು ಗಳಿಗೆಗೆ" ಎಂದಳು. ತಾನು ಪತಿಯಿಂದಲೂ ಉತ್ತಮವಾಗಿ ಪಾತ್ರ ಅಭಿನಯಿಸಿದ ಬಗ್ಗೆ ತೃಪ್ತಿಯ ಸೆಲೆಯಿತ್ತು ಪಾರ್ವತಿಯ ಮುಖದಲ್ಲಿ. ಆಗ ಈಶ್ವರರೂ

ಮತ್ತೊಬ್ಬರಾದರೆ ಪದಕವನು
ಬೇಡುವರೆ?
ಪಾರ್ವತಿಯಲ್ಲದೆ ಇರರಲ್ಲ ಎನುತ
ಈಶ್ವರರು
ಧ್ಯಾನವ ಮಾಡಿ ಅರಿತರು ||

ಇದರಿಂದ ತೃಪ್ತರಾದ ಅವರು,

ನಾನು ನಿನ್ನನು ಗೆದ್ದೆ ನೀನು ನನ್ನನ್ನು
ಗೆದ್ದೆ
ನಮ್ಮಿಬ್ಬರಾಟವೂ ಸಮವಾಯ್ತು
ಎನುತಲೆ
ಮಡದಿಯ ಕೂಡೆ ನುಡಿದರು ||

ಪಾರ್ವತಿಯೂ ತನ್ನ ವೇಷವನ್ನು ಸಡಿಲಿಸಿದಳು; ಗೌರಿಯೊಡಲು ಆಗ ತಾನೇ ಅವರಿಗೆ ತಮ್ಮ ಕುಮಾರ ಗಣೇಶನ ನೆನಪಾಯ್ತು.

ನೀನು ಇತ್ತ ಬಂದೆ ನಾನು ಇತ್ತ ಬಂದೆ
ಕುಮಾರನೆತ್ತ ಪೋದನೇ ಎನುತಲೆ
ಮಡದಿಯ ಕೂಡೆ ನುಡಿದರು ||

ಅವನನ್ನು ಅರಸುತ್ತ ಪೋದರು. ಆ ಗಣಪತಿ ಎಲ್ಲರ ಮನೆಯಲ್ಲಿ ಬೆಲ್ಲ ಬಾಳೆಹಣ್ಣು ತಿಂದು ಉಂಡಾಡಿಯಾಗಿ ಬರುತಿದ್ದ ಬಯಲಲ್ಲಿ ಬರುವಾಗ, ಅಜ್ಜಿಯ ಮನೆಗೆ ಹೋದ ಅಲ್ಲಿ ಮೆದ್ದು ಬರುವಾಗ ಕಾಲ್ಜಾರಿ ಬಿದ್ದ; ಹೊಟ್ಟೆ ಒಡೆಯಿತು. ಅಷ್ಟರಲ್ಲೇ ತಾಯ್ತಂದೆಯರು ಅಲ್ಲಿ ಬಂದು ಮುಟ್ಟಿದ್ದರು. ಅವರು ಸರ್ಪನ ಹಿಡಿದು ಬಿಗಿದಪ್ಪಿ ಗಣಪನನ್ನು ಕೂಡಿ ಮನೆಯತ್ತ ಹೊರಟರು.

ಇದೇ ರೀತಿಯ ಹಲವಾರು ಸುಂದರ ಕಥೆಗಳು ನಮ್ಮ ಜಾನಪದ ಸಾಹಿತ್ಯದಲ್ಲಿವೆ. ಅವುಗಳ ಕ್ರೋಢೀಕರಣ ಕಾರ್ಯವು ನಡೆದರೆ, ಉತ್ತಮ ಮಟ್ಟದ ಸಾಹಿತ್ಯವಾಗುವದರಲ್ಲಿ ಸಂದೇಹವಿಲ್ಲ. ಆಸಕ್ತಿಯಿರುವವರು ಈ ಕಡೆಗೆ ಅವಶ್ಯ ಗಮನಗೊಟ್ಟು ಅಳಿಯುತ್ತಿರುವ ಈ ಅಪರ್ಘ್ಯ ಸಾಹಿತ್ಯ ರತ್ನಮಣಿಗಳನ್ನು ಜೋಪಾನವಾಗಿಟ್ಟು ಮುಂದಿನವರಿಗೂ ಉಳಿಸಿ ಕೊಡಬೇಕು.

ಮನೆಯೊಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್.ಐ.ಎಮ್ ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು

ನಿಮ್ಮಷ್ಟಕ್ಕೆ ನೀನೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ! ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ. ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.

ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ

ವಿ. ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0=25 N.P ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕಗಳಿಸಲಾಗುವುದು ನಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ನಮಗೆ ಬರೆಯಿರಿ.

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ, ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಹೊಸ ಪುಸ್ತಕ

LETTER WRITING MADE EASY
ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು, ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.

ಬೆಲೆ ರೂ. 1-4-0 (1=25).

ನವಭಾರತ ಪುಸ್ತಕ ಭಂಡಾರ, ಉಡುಪಿ.

ಅಧ್ಯಾತ್ಮ ದೃಷ್ಟಿಯಲ್ಲಿ ಭಾರತೀಯ ನಾಯಕ

ಆದರ್ಶ ಮಾನವ ಸೇವಕ-ಗಾಂಧೀಜಿ

ಶ್ರೀ ಎಂ. ಬಿ. ಶಂಕರರಾವ್, ಐ. ಎ. ಎಸ್. (ನಿವೃತ್ತ)

ಮಹಾತ್ಮಾ ಗಾಂಧಿಯವರ ಶೀಲದ ಪ್ರಮುಖ ಲಕ್ಷಣವು ಮಾನವ ಸೇವೆಯು ಎಂಬುದರಲ್ಲಿ ಎಳ್ಳಿನೇಳರಷ್ಟಾದರೂ ಸಂದೇಹವಿಲ್ಲ. ಅವರ ಜೀವಮಾನದ ಕೊನೆಯ ಐವತ್ತು ವರುಷಗಳಲ್ಲಿ ಈ ಪುಣ್ಯಾತ್ಮರು ಜನಸೇವೆಗಾಗಿಯೇ ತನ್ನ ದಿವ್ಯ ಶರೀರವನ್ನು ಅರ್ಪಿಸಿದರು.

ದರಿದ್ರರು, ಆರೋಗ್ಯಹೀನರು, ಕಷ್ಟಗಳಲ್ಲಿ ಬಳಲುವವರು ಮತ್ತು ನಿಷ್ಕಾಮ ಪ್ರೇಮಿಗಳು ಈ ಮಹಾತ್ಮರಿಂದ ಸುರಸ್ಕಾರವನ್ನು ಧಾರಾಳವಾಗಿ ಪಡೆದರು ಇಡಿ ಜಗತ್ತೇ ಇವರ ಅಗಾಧವಾದ ನಿಷ್ಕಾಮ ಪ್ರೇಮಕ್ಕೆ ಒಲಿದು ಈ ದಿನ 'ರಾಜಘಾಟ'ವು, ಒಂದು ಸುಪವಿತ್ರವಾದ ಕ್ಷೇತ್ರವಾಗಿ ಪರಿಣಮಿಸಿತು. ಅವರ ರಾಜಕೀಯ ಧ್ಯೇಯದಲ್ಲಿ ಕೂಡ ದರಿದ್ರರ ಕಷ್ಟನಿವಾರಣೆಯೇ ಪ್ರಮುಖವಾದ ಧರ್ಮವಾಗಿ ಬೆಳೆದಿತ್ತು. ತನ್ನ ಸತ್ಕರ್ಮಗಳನ್ನು ಧೈರ್ಯಗುಂದದೆ ಸಾಧಿಸಿ 'ದರಿದ್ರ ನಾರಾಯಣ'ನೆನ್ನುವ ನಾಮವನ್ನು ಇಡೀ ವಿಶ್ವವು ಉಚ್ಚರಿಸುವಂತೆ ಅವಕಾಶವಿತ್ತರು.

ಇಷ್ಟೆಲ್ಲ ಕರ್ಮಗಳನ್ನು ಸಾಧಿಸುವಾಗಲೂ, ಈ ಮಹಾತ್ಮರು ತನ್ನ ಆರೋಗ್ಯದ ಕಡೆಗೆ ಸದಾ ಕಾಲ ಚೆಲುವಾದ ಗಮನವನ್ನೀಯುತಿದ್ದರು. 'ಶರೀರಮಾದ್ಯಂ ಖಲುಧರ್ಮ ಸಾಧನಂ' ಎನ್ನುವ ನೈಜತತ್ವವು ಅವರಿಗೆ ಚೆನ್ನಾಗಿ ತಿಳಿದಿತ್ತು. ಶಾರೀರಿಕ ಅಭಿವೃದ್ಧಿಯು ಮಾನಸಿಕ ಶಾಂತತೆಗೆ ಅವಶ್ಯಕವೆಂಬುದು ಗಾಂಧಿಜಿಯವರ ಅನೇಕ ಭಾಷಣಗಳಿಂದ ಗೋಚರವಾಗುವುದು. ಶುದ್ಧವಾದ ಆರೋಗ್ಯರಕ್ಷಣೆಗಾಗಿ ಅವರು ಆರೋಗ್ಯಶಾಸ್ತ್ರದಲ್ಲಿ ವಿವರಿಸಿದಂತೆ—ಹಿತವಾದ, ಮಿತವಾದ ಆಹಾರವನ್ನು ಮಾತ್ರ ತಕ್ಕ ಕಾಲದಲ್ಲಿ ಮಾತ್ರ ಭುಂಜಿಸಿ, ತನ್ನ ಆರೋಗ್ಯವನ್ನು ಕೊನೆಯ ವರೆಗೆ ಸರಿಯಾಗಿ ಕಾಪಾಡಿಕೊಂಡಿದ್ದರು. ಆಕಸ್ಮಿಕ ಮರಣವು ಅವರ ವಿಧಿಯಾಗದೇ ಇದ್ದರೆ, ಈ ಪುಣ್ಯಾತ್ಮರು ನೂರು ವರುಷಗಳ ತನಕ ಬದುಕುತ್ತಿದ್ದರು ಎಂಬುದಾಗಿ ಹೆಲವು ಉತ್ತಮ ತರಗತಿಯ ವೈದ್ಯರ ಅಭಿಪ್ರಾಯವಿದೆ. ಅವರು ಅತಿ ಸ್ವಲ್ಪ ಬಟ್ಟೆಯನ್ನು ತೊಡುತಿದ್ದರು. ಬಿಸಿಲಿನ ಧಾವತಿಯನ್ನು ತಪ್ಪಿಸಿಕೊಳ್ಳಲು ಅವರು ಈ ರೀತಿ ವರ್ತಿಸಿದ್ದಲ್ಲ—ಸರಂತು ಭರತ ದೇಶದ ಮುಕ್ಕಾಲಂಶ ಜನರು ಬಟ್ಟೆಬರೆಗಳಿಲ್ಲದೆ ಕಷ್ಟಪಡುವ ವಿಷಯವನ್ನು ಚಿಂತಿಸಿ, ತಾನು ಕೂಡ ಬಡವನ ಉಡುಪನ್ನೆ ಧರಿಸಿ ತೃಪ್ತರಾಗುತಿದ್ದರು. ಮನೋವಾಕ್ಕಾರ್ಯಗಳಲ್ಲಿ ಏಕರೀತಿ ನಡೆಯುವ ಪುಣ್ಯಾತ್ಮರಿಗೆ ಮಾತ್ರ ಈ ವಿಧದ ತ್ಯಾಗವು ಸಾಧಿಸುವುದು. ಬಡವನಿಗೆ ಲಭಿಸದ ಉತ್ತಮ ತರಗತಿಯ ಉಡುವನ್ನು ತಾನು ಎಂದಿಗೂ ಧರಿಸಲಾರೆನೆಂದು ಅವರು ಶಪಥ ಹೂಡಿಕೊಂಡಂತೆ ಇತರರಿಗೆ ತೋರುತಿತ್ತು. ನೂಲುವ ರಾಟೆಯನ್ನು ಸದಾಕಾಲ ತನ್ನ ಬಳಿಯಲ್ಲಿ ಯೇ ಇಟ್ಟುಕೊಂಡು ಬಟ್ಟೆಯ ಬಡತನವು ಭಾರತ ದೇಶವನ್ನು ಕಾಡುವ ಪ್ರಸಂಗವನ್ನು ಇಡಿ ದೇಶಕ್ಕೆ ಆದರ್ಶರೂಪದಿಂದ ಪ್ರದರ್ಶಿಸಿದ ಇವರನ್ನು ಇವರ ಅನೇಕ ಅನುಯಾಯಿಗಳು ಅನುಕರಿಸಲೇ ಇಲ್ಲ.

ಆಹಾರ ಸೇವನೆಯ ಕಾಲದಲ್ಲೂ ತನ್ನನ್ನು ಕಾಣಲು ಬಂದ ಸ್ನೇಹಿತರಲ್ಲಿ ಸಂಭಾಷಣೆ ಮಾಡಿ, ತನಗೆ ಇತರರಿಂದ ಬಂದ ಯಾವತ್ತು ಪತ್ರಿಕೆಗಳಿಗೂ ಒಡನೆ ಉತ್ತರ ಬರೆದು ಕಳಿಸುತಿದ್ದರು. ಸ್ನೇಹಿತರ ಮನಸ್ಸನ್ನು ಯಾವ ವಿಧದಲ್ಲಿಯೂ ನೋಯಿಸುತ್ತಿಲ್ಲ. ಇತರರ ಸುಖವೇ ತನ್ನ ಸುಖವೆಂದು ಸದಾಕಾಲ ಭಾವಿಸಿ ಇತರರ ದುಃಖಗಳಲ್ಲಿ ಯಾವಾಗಲೂ ಭಾಗ ವಹಿಸಿ, ತನ್ನ ಭೌತಿಕ ಸುಖಗಳನ್ನು ಪೂರ್ಣಮರಿತು ಬಿಟ್ಟು, ಈ ಮಧ್ಯೆ ದೇಶದ ಸ್ವಾತಂತ್ರ್ಯಕ್ಕಾಗಿ ದಿನೇ ದಿನೇ ಆಹಿಂಸೆಯ ತಪವನ್ನು ಆಚರಿಸುತಿದ್ದರು. ಪ್ರಯಾಣವೂಡುವ ಕಾಲ ವೈದ್ಧಾಪ್ಯದಲ್ಲಿ ಕೂಡ ರೈಲ್ವೆಬಂಡಿಯ ಮೂರನೇ ತರಗತಿಯಲ್ಲಿಯೇ ಕೂತು, ಪ್ರಯಾಣದ ಕಷ್ಟಗಳನ್ನು ಸಂತೋಷ ಚಿತ್ತದಿಂದ ಅನುಭವಿಸುತಿದ್ದರು. ಪ್ರಯಾಣದ ಕಾಲದಲ್ಲಿ ಅವರ ದರ್ಶನ ಲಭಿಸಿದ ಬಡ ಮತ್ತು ಮಧ್ಯತರಗತಿಯ ಜನರಲ್ಲಿ ಉಲ್ಲಾಸವನ್ನು ಹುಟ್ಟಿಸಿ, ಅವರು ಕೇಳುವ ಪ್ರಶ್ನೆಗಳಿಗೆ ಯುಕ್ತವಾದ ಉತ್ತರಗಳನ್ನು ಕೊಟ್ಟು ಆದರಿಸುವ ಯೋಗ್ಯತೆಯು ಅವರಲ್ಲಿ ವಿಶಾಲವಾಗಿತ್ತು.

ಅವರಲ್ಲಿ ಅಡಕವಾಗಿದ್ದ ಸದ್ವಿದ್ಯೆಯು ದೇಶದಲ್ಲಿ ಐಕ್ಯತೆಯನ್ನು ಸಾಧಿಸುವ ಯಂತ್ರವಾಗಿತ್ತೆ ಹೊರತು ದೇಶವನ್ನು ಖಂಡ ಖಂಡಗಳಾಗಿ ತುಂಡುಮಾಡುವ ವೈಚಿತ್ರ್ಯವಾಗಿರಲಿಲ್ಲ. ಎಲ್ಲಾ ಭಾಷೆಗಳನ್ನಾಡುವ ಜನರು ಅವರನ್ನು ಏಕರೀತಿಯಲ್ಲಿ ಪ್ರೀತಿಸುವಾಗ, ಅವರು ಎಲ್ಲಾ ಭಾಷೆಗಳಲ್ಲೂ ಗುಣವೂ, ಚೆಲುವಿಕೆಯೂ ಇವೆ ಎಂದು ಪ್ರಶಂಸಿಸಿ ಅನೇಕ ಭಾಷೆಗಳನ್ನು ತಾನೇ ಕಲಿತು ಆನಂದಪಡುವುದು ಅವರ ಸ್ವಭಾವವು.

ಅವರ ಜೀವಮಾನದಲ್ಲಿ ಅತಿ ಪ್ರಮುಖವಾದ ವಿಷಯವು ಅವರ ಪಾರಮಾರ್ಥಿಕ ಜ್ಞಾನಭಾಗವು. ಉತ್ತಮವಾದ ಹಿಂದೂಧರ್ಮದ ವೈಷ್ಣವಕುಲದಲ್ಲಿ ಜನ್ಮವೆತ್ತಿ ತನ್ನ ಧರ್ಮದ ಸಾರವನ್ನು ಸರಿಯಾಗಿ ಉಂಡು, ಆ ಧರ್ಮದಂತೆ ನಡೆದು ಸದಾಕಾಲ ರಾಮನಾಮವೆಂಬ ಮೃತವನ್ನು ಸೇವಿಸಿ, ಶ್ರೀರಾಮನಲ್ಲಿಯೇ ತನ್ನ ಸರ್ವಸ್ವಕರ್ಮವನ್ನು ನಿಷ್ಠಾಮ ಬುದ್ಧಿಯಿಂದ ಅರ್ಪಿಸುತಿದ್ದರು. ಅಂತೆಯೇ ಈಶ್ವರ ದೇಹವನ್ನು ತ್ಯಜಿಸುವ ಕಾಲದಲ್ಲಿ ಕೂಡ ರಘುಪತಿ ರಾಘವ ರಾಜಾರಾಮನ ನಾಮವನ್ನೇ ಉಚ್ಚರಿಸಿ, ಕೈಲಾಸವಾಸಿಯೊದರು. ಇತರ ಮತಗಳಲ್ಲೂ ಅವರಿಗೆ ತುಂಬಾ ಅಭಿಮಾನವಿದ್ದುದರಿಂದಲೆ ಅವರು ನಮ್ಮ ದೇಶವು ವಿಭಾಗವಾಗದಂತೆ ಕೊನೆ ತನಕ ಹೋರಾಟ ಮಾಡಿದರು.

'ಸತ್ಯಮೇವ ಜಯತೇ' ಎಂಬುದೇ ಮಹಾತ್ಮರ ನಿತ್ಯ ಮಂತ್ರವು. ಇದೇ ಶುದ್ಧವಾದ ಮೂಲ ಮಂತ್ರವನ್ನು ನಮ್ಮ ಭರತ ದೇಶದ ಸಕಲ ಬಾಲಕರೂ, ಬಾಲಿಕೆಯರೂ ಸದಾಕಾಲ ಉಚ್ಚರಿಸುತ್ತ ಬಂದು, ಉತ್ತಮವಾದ ಮೆಲ್ಪಂಕ್ತಿಯನ್ನು ಹಾಕಿ ತಮ್ಮ ಜೀವನವನ್ನು ಸಾಗಿಸಿದರೆ ಭರತಖಂಡವು ಮುಂದಕ್ಕೆ ಉಜ್ವಲವಾಗಿ ಬೆಳಗಿ ಇಡಿ ಜಗತ್ತಿಗೇನೇ ಆದರ್ಶದೇಶವಾಗಿ ಪ್ರಕಾಶಗೊಳ್ಳುವುದರಲ್ಲಿ ಸಂಶಯವಿಲ್ಲ.

"ಪ್ರಾರ್ಥನೆ"

ಶ್ರೀ ಟಿ. ವಿಟ್ಟಪ್ಪ ಶೆಟ್ಟಿ ಮಂಜೇಶ್ವರ

●

ಅಷ್ಟಗ್ರಹದ ಯೋಗ ಭಯಂಕರಂತ ಮಿಗಿ
ಲಾದ ;
ಅಷ್ಟಮದಗಳೆಲ್ಲ ಮನದಿ ಮೂಡಿ |
ಲೋಕ। ನಷ್ಟಕಷ್ಟಕೆ ತಾವೇ ಹೇತು
ವಾಗಿ। ಬಲು।
ದುಷ್ಟ ಸ್ವಭಾವದ ಕೇತುವಾಗಿ ||
ನಷ್ಟಚೇತ ಸಂಗಾಟವೇಕಿದು ಜನತೆಯ |
ಪಾಪವೋ। ದೈವ। ಶಾಪವೊ || ೧ ||

ಉಪವಾಸ ಉಪದೇಶ ಸಂಘ ಸತ್ಯಾಗ್ರಹ
ದುಪಹಯೋಗ ಮಾರ್ಗವು ಬದಲಿಸಿದೆ|ಧನ|
ದಾಸೆಗೆ ಪದವಿಗೆ ಮನ ಜೋತಿದೆ| ಭಾಷೆ|
ಯಾಸೆಗೆ ದೇಶವು ಶಶುವಾಗಿದೆ||
ಮುಂದು-ಹಿಂದುಳಿಯೂಗಿ ಹಿಂದು-ಮುಂ
ದೆನಿಸಿದೆ।
ಶಾಂತಿಗೋ। ಲೋಕ। ಕ್ರಾಂತಿಗೊ|| ೨ ||

ನೀತಿಯನೀತಿಯು ಜಾತಿಯಜಾತಿಯೆಂ।
ಬಾತಿಶಯದ ಮಟ್ಟು ಬೆಳೆಯುತಿದೆ |
ನೀತಿ|
ಮಾತು ಮೂರ್ಖಾಲಾಪವೆನ್ನಿಸಿದೆ ।
ದೇಶ ।
ವಾತ್ಸಲ್ಯ ಮಾತೆಲ್ಲ ಜೋಲುತಿದೆ ||
ರಾಷ್ಟ್ರಭ್ರಾತುಕರಿಂದಲೆನವೆ ಲೋಕ
ದೊಳಿದು ।

ಮಾಟವೋ। ಕಾಲ। ಕೂಟವೊ || ೩ ||

ಕೋಲಾಹಲದ ಕಾಲ ಕಾಲಾ ಹಲವ
ಹಿಂಡಿ ।
ಬಾಳಬೇಕೆಂಬಾಸೆ ಹಲವರಲಿ| ವ್ಯಾಳ್ಯ|
ದಾಲಾಪದುಪದೇಶ ಕಲವರಲಿ| ಬಲು ।
ಕೇಳಾದ ಬೀಳಾದ ಬಾಳ್ವೆಯಲಿ ||
ಹಾಳಾದ ಹೋಳಾದ ಲೋಕರಕ್ಷೆಯ
ಭಾರ ।
ಎಮ್ಮದೋ । ದೇವ। ನಿಮ್ಮದೋ || ೪ ||

ಪ್ರಕೃತಿ ಪ್ರಕೋಪವೆ ಮತಜಾತಿ ದ್ವೇ
ಷದೆ ।
ಪ್ರತಿಪಕ್ಷ-ಪಕ್ಷದ ಗೊಂದಲದೆ| ಬಲು ।
ಹಸನಾದ ಸುಖಶಾಂತಿ ನಡುಗುತಿದೆ ।
ನಿತ್ಯ
ಹಸಿವಿನ ಬಾಧೆಯೊಳುಡುಗುತಿದೆ ||
ಅತಿರಾವಣೀಯ ಮತ್ತತಿ ಕೌರವೀಯದ
ಕಾಲಕೆ। ಬಲು। ಹೋಲಿಕೆ || ೫ ||

ಧರ್ಮ ಕರ್ಮಗಳೆಲ್ಲ ಸತ್ಯನೈತಿಕದ ಸ |
ತ್ಕರ್ಮ ಸನ್ಮಾರ್ಗ ಸುನ್ಮಾನಗಳು| ಜನ|
ಧರ್ಮ ಜೀವನದ ಸನ್ಮಾರ್ಗಗಳು ।
ಗಾಂಧಿ ।
ಧರ್ಮ ಜಾಲನದ ಸುಕೂತ್ರಗಳು ||
ದೇಶದ ಜನಮನ ಶಾಂತಿಸಾಧನವೆಲ್ಲ ।
ನೀಗಿವೆ । ದೂರ । ಸಾಗಿವೆ || ೬ ||

ಭಾರತಾಂಬೆಯ ದಾಸ್ಯಬಂಧನ
ಮೋಕ್ಷಕು ।
ದಾರತ್ಯಾಗವವೂಡಿ ಬಲುದಣಿದು| ಜನ್ಮ|
ದಾರಭ್ಯ ಸೆರೆಬಿದ್ದುನವೆನವೆದು | ರಾಮ ।
ರಾಜ್ಯದ ಕಾಂಕ್ಷೆಯ ನುರಿ ಪಿಡಿದು ||
ದಾಸ್ಯವ ಕಳೆದ "ಮಹಾತ್ಮ" ನಾತ್ಮಕೆ
ಪೂರ್ಣ ।
ಶಾಂತಿಯೋ | ನಿತ್ಯಾ | ಶಾಂತಿಯೊ
|| ೭ ||

ಭಾರತವ ಏಕತೆಯಂಗೊಳಿಸಿ ದೇಶವ
ನೊಂದು
ಸಾರ ಸರ್ವಸ್ವದ ಕೇಂದ್ರವಾಗಿ । ಬಲು
ಧೀರ ಗಂಭೀರದ ರಾಷ್ಟ್ರವಾಗಿ । ಶಾಂತಿ
ದಾರಿ ತೋರಿಪ ಜ್ಞಾನಭಾನುವಾಗಿ ||
ಮೆರೆವ ಭಾಗ್ಯವ ಕೂಡಿ ಮೆರೆಯುಲೆಮ
ಯ ಮಾತೆ
ಭಾರತೀ । ಸುಪ್ರೆ । ಭಾವತಿ || ೮ ||

"ಧರ್ಮವು ಅಡಗಿಯಧರ್ಮವು
ಬೆಳೆದಾಗ
ಧರ್ಮ ರಕ್ಷಣೆಗಾಗಿಯವತರಿಸಿ | ದುಷ್ಟ
ಕರ್ಮಿ ಕರ್ಮಗಳನ್ನೆ ಯವಗಡಿಸಿ |ನೀ|
ಕರ್ಮವನೆಲ್ಲವ ನುರೆಗುಡಿಸಿ ||
ಧರ್ಮವ ಸ್ಥಾಪಿಪೆನೆ"ಂದ ಮಾತನು
ಲೋ
ನಂಬಿದೆ । ಅಶೆ । ತುಂಬಿದೆ || ೯ ||

ಸಿಡಿದವು ಸಿಡಿದವು ಅಣುಬೋಂಬು
ಅಲ್ಲಲ್ಲಿ
ಕೆಡುವವು ಪೊಡವಿಯ ಜೀವಗಳು |ಬಲ|
ಗಡಬಡಿಗೆಡೆಯೊಯ್ತು ಲೋಕದೊಳು
ಭಯ ಕುಡಿಯಿಟ್ಟು ನಡೆ ನುಡಿಯುಡು
ಹುದು
ಜಡಜಾಕ್ಷ ದಯೆದೋರುಮೈದೋರು
ನಿನಗಿದೊ
ಸ್ವಾಗತಂ । ಓಂ । ಸುಸ್ವಾಗತಂ || ೧೦

ದಿ ವಿಜಯ ಬೇಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬೇಂಕ್. ಸ್ಥಾಪನೆ: 1931

ರಿಜಿಸ್ಟರ್ಡ್ ಆಫೀಸು:

ವಿಜಯ ಬೇಂಕ್ ಬಿಲ್ಡಿಂಗ್, ಲೈಟ್ ಹೌಸ್ ಹಿಲ್ ರೋಡ್,

ಮಂಗಳೂರು-3, ಸೌತ್ ಕೆನರಾ.

ಕಾಯಂ ಠೇವಣಾತಿ ಬಡ್ಡಿ ದರವನ್ನು ಶೇಕಡ 5½ರ ವರೆಗೆ ಹೆಚ್ಚಿಸಲಾಗಿದೆ.

ಏಳು ದಿವಸದ ನೋಟೀಸಿನಲ್ಲಿ ಕೇಳಿದಾಗ್ಯೆ ಹಿಂದೆ ಪಡೆಯುವ ಡಿಪೋಸಿಟುಗಳನ್ನು (Call Deposits) ಆಕರ್ಶಕ ಬಡ್ಡಿ ದರದಲ್ಲಿ ಸ್ವೀಕರಿಸೋಣಾಗುತ್ತದೆ.

ಹೆಚ್ಚಿನ ಮಾಹಿತಿಗೆ ನಮ್ಮ ಶಾಖೆಗಳಲ್ಲಿ ದಯಮಾಡಿ ವಿಚಾರಿಸಿರಿ.

THE VIJAYA BANK LTD.

ದೇವೀ ಮಹಾತ್ಮ್ಯೆ

(ಅನೇ ಪುಟದಿಂದ)

ಸದ ಸಗ್ಗದಲ್ಲಿ ಮೂರಪ್ಪ ಮೆರೆಯು ತ್ತಿದ್ದ.

ಮೂರಪ್ಪನ ಮನಸ್ಸಿನ ಹೊಯ್ದಾಟ ಡಿವೆಯಾಗಿತ್ತು! ಕುಳಿತಲ್ಲಿಯೇ ಹಣ ಹೊಳೆ 'ದೇವಿ' ಹರಿಸಿದ್ದಳು. ನಾಳಿನ ಂಜಿಗಾಗಿ ಧನಿಯಿಂದ ಮುಂಗಡ ಪಡೆ ಯುವ ಅವಶ್ಯತೆಯಿರಲಿಲ್ಲ. ಯೋಚಿಸಿದವ ಗೆ ಹಣ ಕೊಡುವ ಶಕ್ತಿವಂತನಾಗಿದ್ದ! ಹಣ ಕೈಯಲ್ಲಿ ಕುಣಿದಾಡುತ್ತಿದ್ದರೆ, ದನ್ನು ಖರ್ಚು ಮಾಡಲು ಮನವು ಕು ಹಲಿಗನಾಗಿರುತ್ತಾನೆ. ಯಾರು ಹಣ ನ್ನು ಪ್ರೀತಿಸಿ ಅದರ ಉಳಿತಾಯಕ್ಕಾ ಪರಿಪರಿಯಿಂದ ರಕ್ಷಿಸ ಪ್ರಯತ್ನಿಸು ತ್ತಾನೊ, ಅವನ ಬಳಿ ಮಾತ್ರ 'ಲಕ್ಷ್ಮಿ' ಉಳಿದಿರುತ್ತಾಳಂತೆ! ಹೆಚ್ಚಿನವರಿಗೆ ಹಣ ವಾಳ'ಗಾಗಿ ಉಳಿಸಿಡಬೇಕೆಂಬ ಚಿಂತೆ ಯಲ್ಲಿ! ಕೈಯಲ್ಲಿ ಹಣವಿದ್ದಾಗ ಮಾಡಿದ ಮಜ' ಬಂತೆಂದು, ನಾಳಿನ ಚಿಂತೆ ತೊ ದು, ಹೆಂಡಿರು-ಮಕ್ಕಳನ್ನು ತೊರೆದು ಕುಲ" ದೊರೆಯುವತ್ತ ತೆರಳುತ್ತಾನೆ. ದಕ್ಕಾಗಿ ತನ್ನ ಸರ್ವಸ್ವವನ್ನು ಸೂರೆಗೈ ಯಲು ಹಿಂಜರಿಯುವುದಿಲ್ಲ. ಹಣವಿದ್ದವನಿ ವಿವಿಧ ಚಪಲತೆಯಿಂದ. ಸರ್ವದುರ್ಗು ಣ ಸಂಪನ್ನರಾದ ಗೆಳೆಯರೂ ದೊರೆಯು ವ ಕಡಿಮೆ ಯಾಗಲಾರದು.

ಅಂತೆಯೆ ಮೂರಪ್ಪನ ಬದುಕು ಸಾಗಿ ತ್ತು! ಸಲ್ಲದ ಚಟಗಳು ಅವನನ್ನು ಆಕ್ರ ಮಿಸಿದ್ದುವು. ತೀರದ ಬಯಕೆಯನ್ನು ಸಂ ಪೂರ್ಣ ತೀರಿಸಿಕೊಳ್ಳಲು ಮುಂದಾದ! ವನನ್ನಾವರಿಸಿದ ಹುಚ್ಚು ಕುಡಿತ! ದು ಯುತ್ತಿರುವಾಗ, ಎಂದಾದರೊಂದು ನ, ಅದೂ ಮುಂಗಡ ದೊರೆತ ದಿನ ದೇ ರ ತೀರ್ಥದಷ್ಟು ಕುಡಿಯಲು ಶಕ್ತನಾ ಗಿದ್ದ. ಆದರೆ ಇಂದು....ಕಳ್ಳನಲ್ಲಿಯೇ ಎಂದು ಮೈವರಸಿಕೊಳ್ಳುವಂತಹ ಶಕ್ತಿ ಹೆದಿದ್ದ. ಅಂತಹ ಬಯಕೆಯೂ ಅವನ ನ್ನಾವರಿಸಿತ್ತು. ಅದಕ್ಕೆ ತಕ್ಕಂತೆ ಅವರ ಳೆಯರು! 'ದೇವಿ" ಹೆಸರಿನಲ್ಲಿ ನಡೆದ ಅಪಾದನೆಯ ಉತ್ಪಾದನೆ ಪರವೂರಿನ ಅತ್ತವು 'ಕಳ್ಳ"ಗಾಗಿ ಖರ್ಚಾಗು ತ್ತು. ಮನೆಯ ಮಡದಿಗಿಂತಲೂ ತಕ ಶೃಂಗಾರಿಗಳಾಗಿ, ಅಲಂಕಾರ ವಿ ಹರವರೆಸಿ, ಪರಿಪರಿಯ ಪ್ರಚೋದನೆ ಯಿಂದ ಪರಮಾನಂದವನ್ನೀಯುವ, ಹೆ ಣಕ್ಕಾಗಿ ಹೆಣಗಾಡುವ ನಾಲ್ಕೈದು ಸುಂ ದರಿಯರ ಸಖ್ಯವನ್ನು ಬೆಳೆಸಿದ್ದಾನೆ ಎಂಬ ವಂತೆ ಹರಡಿದ್ದರೂ, ಯಾರಿಗೂ ಧೈರ ಯದ ಮೂರಪ್ಪನ ಮೇಲೆ ಅಪವಾದದ ಮಾರೆಯನ್ನು ಹೇರುವಂತಹ ಎದೆಗಾರಿಕೆ ಯಿರಲಿಲ್ಲ! ಮೂರಪ್ಪ ಮುನಿದರೆ ದೇವಿ ಮುನಿದಂತೆಯೇ ಅಲ್ಲವೆ? ಅಂತೂ ರಾತ್ರಿ ಮಲಗಿರುತ್ತಾನೆ ಎಂದು ಯಾರಿಗೂ ಗೊತ್ತಿ ದೆ...ಮಡದಿ—ಮಕ್ಕಳನ್ನು ವಿಚಾರಿಸಿದ ರೆ ಮನೆಯಲ್ಲಿರುವುದಿಲ್ಲ ಎಂಬ ಉತ್ತರ ಕ್ಕೆ ದೊರೆಯುತ್ತದೆ. ಹಾಗಾದರೆ ಮೂ ರಪ್ಪ ರಾತ್ರಿ ಎಲ್ಲಿರುವನು? ಏನು ಮಾಡು ವನು? 'ಕಳ್ಳನ ಗುಂಪಿನ ಗೆಳೆಯರು" ಅ ರಿತಿದ್ದರೂ, ತಮಗೆ ದೊರೆಯುವ 'ಪ್ರಸಾ ದ'ಕ್ಕಾಗಿ ಮೌನದ ಮುದ್ರೆ ತಾಳಿರುತಿ ದ್ದರು.

o o o

ಅಂದು ಶುಕ್ರವಾರ ರಾತ್ರಿ! ಊರಿನ ಪ್ರಮುಖರೆಲ್ಲರೂ ವಿಶೇಷ ಪೂಜೆಗಾಗಿ ದೇವೀ ನಿಲಯದಲ್ಲಿ ಬಂದು ನೆರೆದಿದ್ದರು. ಊರಲ್ಲಿ ಹರಡುತ್ತಿದ್ದ ಅಂಟು ರೋಗದ ನಿವಾರಣೆಗೆ ತಕ್ಕ ಪರಿಹಾರಕಂಡು ಹಿಡಿ ದು, ದೇವೀ ಕೃಪಾಕಟಾಕ್ಷಿಗಳಾಗಬೇಕೆಂ ದು ಬಂದಿದ್ದರು.

ಪ್ರತಿ ಶುಕ್ರವಾರ—ಮಂಗಳವಾರ ದಿ ನಗಳಲ್ಲಿ ಸಂಜೆಯಾಗ ಬೇಕಿದ್ದರೆ, 'ದೇವಿ ಗೆ ದೀಪವಿರಿಸಿ, ಊದುಬತ್ತಿ ಹಚ್ಚಿಟ್ಟು, ಒಂದು ಗಂಟೆ ಮೌನವಾಗಿ ದೇವಿಯ ಎ ದುರು ಧ್ಯಾನಿಸುತ್ತ ಕುಳಿತಿರುವುದು ಮೂ ರಪ್ಪನ ರೂಢಿ. ಗಂಭೀರ ಮುಖದಿಂದ ಧ್ಯಾನಿಸುತ್ತ ಕುಳಿತ ಮೂರಪ್ಪನನ್ನು ಕಂ ಡೇ ಭಯ ಪಡಬೇಕಾಗಿತ್ತು!

ಕತ್ತಲಾಗಿ ಗಂಟೆಯ ಮೇಲೆ ಗಂಟೆ ಉರುಳಿದರೂ ಮೂರಪ್ಪ ಅಂದು ಪೂಜೆಗಾಗಿ ಬರಲಿಲ್ಲ. ಊರಿನ ಮೇಲೆಯೇ ಮುನಿದ ದೇವಿಯೇ ಮೂರಪ್ಪನನ್ನು ಮೂ ಯ ಮಾಡಿಸಿದೆ ಎಂದುಕೊಂಡರು ಕೆಲವ ರು! 'ದೇವಿ, ನಾನೇನು ತಪ್ಪು ಮಾಡಿದ್ದ ರೂ, ಸರ್ವರ 'ತಾಯಿ'ಯಾದ ನೀನು ಕ್ಷ ಮಿಸಿ, ನಮ್ಮನ್ನಾವರಿಸಲಿರುವ ಕುತ್ತದಿಂ ದ ಪಾರುಮಾಡು' ಎಂದು ಬೇಡಿಕೊಂ ಡರು!

ಸುಮಾರು ಒಂಬತ್ತು ಗಂಟೆಯ ವೇಳೆ ಗೆ ಮೂರಪ್ಪ ಮೈಮೇಲಿನ ಪರಿವೆಯಿಲ್ಲದೆ ಮೂಲುತ್ತ ಬಂದ. ವಾಸನೆ ವಾತಾವರ ಣದಲ್ಲಿ ಹರಡಿತ್ತು. ಅವನ ಅವಸ್ಥೆಯನ್ನು ಕಂಡು, ಪ್ರತಿಷ್ಠಿತ ಸ್ಥಳದತ್ತ ನಡೆಯುತ್ತಿ ದ್ದವನನ್ನು ತಡೆಯಲು ಮುಂದಾದೋ ರ್ವನಿಗೆ, ಹಿಂದಿನಿಂದ 'ದೇವಿ ಮೈ ಮೆ ಲೆ' ಬಂದಿರಬೇಕು, ಎಂದಾರೋ ಒದರಿ ದರು. ಆದರೆ....ಅಂದು ದೇವಿಯ ಮ ಹಾತ್ಮ್ಯೆ ಅಲ್ಲವೆಂದು ತಿಳಿದುಕೊಳ್ಳಲು ಕ ಡವಾಗಲಿಲ್ಲ.

"ಇದೇನು ಮೂರಪ್ಪ! ನಮ್ಮ ಮಾರ್ಗ ದರ್ಶಕನಾದ ನಿನ್ನ ಅವಸ್ಥೆ ಏನಿದು!" ಗುರ್ಕಾರ ತನಿಯಪ್ಪ ವಿಚಾರಿಸಿದ.

"ನಿಮ್ಮ ಹುಚ್ಚು! ನನ್ನ ಕೆಚ್ಚು!" ಮೂ ರಪ್ಪ ತಡವರಿಸುತ್ತ ನುಡಿದ.

"ಈ ಜಾಗದಲ್ಲಿ...ನೀನೀರೀತಿ ನಡೆ ಯಬಾರದು"

"ನನ್ನ ಮನೆಯಲ್ಲಿ ನಾನಾವ ರೀತಿ ಯಿಂದ ನಡೆದರೂ ನನ್ನನ್ನು ಕೇಳುವವ ನಾರು?"

"ಇಲ್ಲಿ ದೇವಿ ಪ್ರತಿಷ್ಠಿತಳಾಗಿದ್ದಾಳೆ"

"ಹೌದು....ಗೊತ್ತಿದೆ."

"ಇಂದು ವಿಶೇಷ ಪೂಜೆಯಾಗ ಬೇಕು ಊರಲ್ಲೆಲ್ಲ ಅಂಟುರೋಗ ಹ ರಡಿರುವುದು ನಿನಗೆ ತಿಳಿಯದೆ?"

"ಹಣ ಕೊಡಿ — ಪೂಜೆ ಮಾಡು ತ್ತೇನೆ."

"ದೇವಿ ಪೂಜೆಯೋ—ಊರ ಪೂ ಜೆಯೋ?"

"ಮೊದಲು ನನ್ನದರ—ಮತ್ತೆ ದೇವಿ ಮೊದಲು ಜೀವ—ಮತ್ತೆ ದೇವ!"

"ನೀನು ಕುಡಿದಿರುವೆ! ಬಾಯಿಗೆ ಬಂ ದಂತೆ ಮಾತಾಡಿ, ನಮ್ಮ ಊರಿಗೆ ಕಳಂಕ ತರಬೇಡ"

"ದೇವಿಯನ್ನು ಒಲಿಸಿಕೊಂಡವನ ಮೇಲೆ ನಿಮ್ಮ ಹಿಡಿತವೆ? ನೀನೇಕೆ ಬಂ ದಿರುವಿರಿ? ನಿಮಗೇನಾಗಬೇಕು?"

"ನಾವು ಪ್ರಸಾದ ಸ್ವೀಕಾರಕ್ಕಾಗಿ ಬಂ ದಿರುವೆವು."

"ಹಣ ಕೊಡಿ..ಪೂಜಿಸಿ ಪ್ರಸಾದ ಕೊಡುತ್ತೇನೆ."

"ಆದರೆ...ನೀನು ಕುಡಿದಿರುವಿ?"

"ಕುಡಿಯಬಾರದೆಂದು ಯಾವ ಶಾ ಸ್ತ್ರ ಬೋಧಿಸುತ್ತದೆ? ದೇವತೆಗಳ ಪ್ರಿಯ ವಸ್ತುವನ್ನು ಮಾನವರು ಸೇವಿಸಬಾರ ದೆಂಬ ನಿಯಮವಿಲ್ಲ"

"ನಾವು ಕಷ್ಟಪಟ್ಟು ದುಡಿದುದರಲ್ಲಿ 'ದೇವಿ'ಗಾಗಿ ತಂದುಕೊಟ್ಟುದನ್ನು ನೀನು ಕುಡಿದು ಹುಳು ಮಾಡುವೆಯೊ?"

"ನೀವು ಹಣ ತಂದು ಕಾಣಿಕೆ ಹಾಕು ವ, ಹಣವನ್ನು ಇದೇ ರೀತಿ ವಿನಿಯೋಗಿ ಸಬೇಕೆಂದು ನಿಯಮವಿಲ್ಲ. ಈ ಹರಿವಾ ಣಕ್ಕೆ ಬರುವ ಹಣದ ಒಡೆಯ ನಾನು! ನನ್ನಿಚ್ಛೆ—ದೇವಿಯ ಇಚ್ಛೆ!"

"ದೇವಿಗೆ ಈ ರೀತಿಯ ಅಪಕೃತ್ಯ ನ ಡೆಯಬಾರದು. ಮೈಲಿಗೆ ರೋಗ ಊರ ಲ್ಲಿ ಹರಡಲೂ ನೀನು ಮಾಡುತ್ತಿರುವ ಮೋಸವೇ ಕಾರಣ."

"ದೇವಿ! ನಾನು ಹೇಳಿದ ಹಾಗೆ ಕೇ ಳುತ್ತಾಳೆ! ನಾನು ತೋರಿದ ದಾರಿಯಲ್ಲಿ ನಡೆಯುತ್ತಾಳೆ! ಅವಳು ನನ್ನ ಕೈಗೊಂ ಬೆ! ನನ್ನ ಇಚ್ಛೆಯಂತೆ ನಡೆಯುವ ಬೊಂ ಬೆ! ಅವಳು ಸಂಪೂರ್ಣವಾಗಿ ನನ್ನ ಅಧೀ ನದಲ್ಲಿರುವಳು. ನಾನು ಅವಳ ತಲೆಯ ಮೇಲೆ ಕಾಲಿರಿಸಿದರೂ ಮೂ ತಾಡುವುದಿಲ್ಲ. ಬೇಕಾದರೆ ನೋಡಿ"... ಎಂದು ಒದರುತ್ತ ದೇವಿಯ ವಿಗ್ರಹದ ದ ಮೇಲೆ ಕಾಲಿರಿಯಲು ಮುಂದಾಗಿ... ಕಾಲೆತ್ತಿದ. ಹಿಂದಿನಿಂದ ಯಾರೋ ಅವ ನ ರಟ್ಟೆ ಹಿಡಿದು ಎಳೆದರು. ಇಲ್ಲದಿದ್ದರೆ ಮೂರಪ್ಪನ ಕಾಲು ದೇವಿಯ ವಿಗ್ರಹವ ನ್ನು ಸ್ಪರ್ಶಿಸುತಿತ್ತು.

ಕೈ ಹಿಡಿದೆಳೆದವನ ಮೇಲೆ ಮೂರಪ್ಪನಿ ಗೆ ಕೋಪವೇರಿತು.

"ನನ್ನ ಮೈ ಮುಟ್ಟುವ ಅಧಿಕಾರ ನಿನ ಗೇನಿದೆ?" ಎರದೇರಿಸುತ್ತ ಕೇಳಿದ ಮೂರ ಪ್ಪ' ಇದು ನನ್ನ ಮನೆ. ನನ್ನ ಮನುಬಂ ದಂತೆ ನಡೆಯಲು ಇಲ್ಲಿ ಯಾರ ಅಂತಕ ವೂ ಇರಲಾರದು. ನಿಮಗೆಲ್ಲರಿಗೂ ಹು ಚ್ಚು! ನಿಮ್ಮಂತಹ 'ದೇವರು—ದೇವಿ' ಎಂದು ಹೆದರಿ ಸಾಯುವ ಜನರಿಗಾಗಿ, ದೇವರಿಗಾಗಿ, ಶ್ರಮದಿಂದ ದುಡಿದ ಹಣ ವನ್ನು ತಂದು ಸುರಿಯುವ ನಿಮ್ಮಂತಹ ಮೂಢರಿಗಾಗಿ, ನನ್ನ ಬದುಕು ಬೆವರು ಸುರಿಸದೆ ಸಾಗಿಸಲಿಕ್ಕಾಗಿ ನಾನು ಈ ತಂ ತ್ರ ಹೂಡಿದ್ದು! ದೇವಿ ನನ್ನ ಮೈ ಮೇ ಲೂ ಬರಲಿಲ್ಲ!....ತಲೆ ಮೇಲೂ ಬೀಳಲಿ ಲ್ಲ! ಬದುಕಿಗಾಗಿ ಪಾಡು ಪಡುತ್ತಿದ್ದವನ ಬದುಕು 'ದೇವಿ"ಯಿಂದ ಪಾರಾಯಿತು ನೀವು ನಂಬಿದಿರಿ....ನಾನು ಬದುಕಿದೆ! ಸಾವಿರಾರು ರೂಪಾಯಿ ಸಂಪಾದಿಸಿದೆ" ಎಂದೆನ್ನುತ್ತ ಎದುರು ನಿಂತು ಕೇಳುತ್ತಿದ್ದ ವನನ್ನು ಹೊಡೆಯಲು ಪುನಃ ಕೈ ಎತ್ತಿದ.

ಲಮಲಿನ ಮತ್ತಿನಲ್ಲಿ ತನ್ನ ಮೋಸದ ಕೃತ್ಯವನ್ನೆಲ್ಲಾ ಒದರಿಬಿಟ್ಟ ಮೂರಪ್ಪ. ಜನತೆಯನ್ನು ಬೆದರಿಸಿ ಹಣ ಸುಲಿಯಲಿ ಕ್ಕಾಗಿ ತಾನು ಕೈಕೊಂಡ ಕೃತ್ಯವನ್ನು ಹೆಮ್ಮೆಯಿಂದ ಒದರಿದ. ಓಡಿಹೋಗಿ ದೇ ವಿಯ ತಲೆಯ ಮೇಲೆ ಕಾಲಿರಿಸಿ ಅಟ್ಟ ಹಾಸದಿಂದ ನಕ್ಕ.

'ಹಿಡಿಯಿರಿ — ಬಡಿಯಿರಿ" ಎಲ್ಲೆಡೆ ಯಿಂದಲೂ ಕೂಗು ಕೇಳಿಬಂತು. ಮೂ ರಪ್ಪ ದೇವಿಯ ವಿಗ್ರಹದ ತಲೆಯ ಮೇ ಲೆ ಕಾಲಿರಿಸಿ ನಿಂತು ನಗುತ್ತಿದ್ದ. ಮೋಸಮಾಡಿದ ಮೂರಪ್ಪನ ಮೇಲೆ, ಎ ಲ್ಲರ ಕೈಗಳೂ ಸೇಡು ತೀರಿಸಿಕೊಂಡವು. ತಾವು ದೇವೀ ಕೃಪೆಗಾಗಿ ನೀಡಿದ ಕಾಣಿ ಕೆಯನ್ನು ಮೂರಪ್ಪ ಮನಬಂದಂತೆ ವಿನಿ ಯೋಗಿಸಿಕೊಂಡರೆ ಯಾರಿಗೆ ತಾನೆ ಕೋ ಪ ಬಾರದಿರುವುದು?

ಮೂರಪ್ಪ ಬಿದ್ದಿದ್ದ. ಹೆಂಡಿರು-ಮ ಕ್ಕಳು ಬಹಳ ಪ್ರಯಾಸದಿಂದ ಒಳ ಕರ ದೊಯ್ದು ಶುಶ್ರೂಷೆ ಮಾಡಿದರು ಯಾ ರಿಗೂ ಬೇಡವಾದ ಮೂರಪ್ಪನನ್ನು ಮನೆ ಯವರು ಬಿಟ್ಟಾರೆ?

ದೇವಿಯ ಹೆಸರಲ್ಲಿ ಬದುಕಿದ ಮೂರಪ್ಪ ಚೇತರಿಸಿಕೊಂಡು ಎದ್ದು ತಿರುಗಾಡಲು ಒಂದು ತಿಂಗಳು ಹಿಡಿಯಿತು.

ತನ್ನ ಮೋಸಕೃತ್ಯದಿಂದ ನಾಚಿಕೊಂ ಡು ಮೂರಪ್ಪ, ಬದುಕಿನ ಮಾರ್ಗ ಕಂಡು ಹಿಡಿಯಲು, ತನ್ನ ಹೆಂಡಿರು ಮಕ್ಕಳನ್ನು ಕೂಡಿಕೊಂಡು ಎತ್ತಲೋ ಹೊರಟು ಹೋದ.

ಆ ಊರಿನಲ್ಲಿ ಅವನಿಗೆ ನೆಲೆಯಿರಲಿಲ್ಲ, ಅಲ್ಲಿ ಬದುಕುವ ಆಸೆಯೂ ಇರಲಿಲ್ಲ.



Tel: 'BLUEYAGAR'. —— ಚಿನ್ನ ಮತ್ತು ವಜ್ರಗಳ ಆಧುನಿಕ ತವರುಮನೆ —— Phone: 374.

ಕೆ.ಆರ್.ಕೆ.ಶೇಟ್ ಡಯಮಂಡ್ ಮಾರ್ಟ್

ಸ್ಥಾಪನೆ:1919] ಚಿನ್ನ ಮತ್ತು ವಜ್ರದ ವ್ಯಾಪಾರಿಗಳು,(ಗವರ್ನ್‌ಮೆಂಟ್ ಕಾಲೇಜ್ ಎದುರುಗಡೆ)ಮಂಗಳೂರು. ಮಾಲಿಕ:ಕೆ.ಕೆ.ಆರ್.ಶೇಟ್

NAVAYUGA, UDIPI.
REGD. NO.BG. 176

7-12-1961

LICENSE NO. 31
Licensed to Post without Prepayment

ಅಹಿಂಸೆಯ ಪುನರಾಲೋಚನೆ

(೧ನೇ ಪುಟದಿಂದ)

ವರು ಸುಸಂಸ್ಕೃತರಾಗುತ್ತಾ ಬಂದಂತೆ ಪ್ರಾಣಿವಧೆಗಳು ಕಡಮೆಯಾಗುತ್ತಾ ಬಂದ ಸೂಕ್ಷ್ಮವನ್ನು ಕಾಣಬಹುದು.

ಜೀವನಕ್ಕೆ ಅಗತ್ಯವಾದ ಈ ಹಿಂಸೆಯ ಸೂಕ್ಷ್ಮ ವಿಭಾಗಗಳನ್ನು ಸಂಗಣಿಸುವಾಗ ಅದನ್ನೊಂದು ವ್ರತವಾಗಿಅನುಷ್ಠಿಸಲು ಜನತೆಗೆ ಸಾಧ್ಯವಿಲ್ಲವೆಂಬ ನಿಜವು ಗೊತ್ತಾಗುತ್ತದೆ. ಏಕೆಂದರೆ ಸಿಂಹಾಹಾರಿಯಾಗಿ ಹರಯೋಗ ಹಿಡಿದವನು ಕೂಡ ತನ್ನನ್ನೆ ತಾನು ಹಿಂಸಿಸಿಕೊಂಡ ದೋಷಕ್ಕೆ ಒಳಗಾಗಬೇಕಾಗುತ್ತದೆ. ಅದನ್ನೆಲ್ಲಾ ವಿಚಾರಿಸಿ ನಿಂತಿರುವ ಮಾನವಾತೀತನಾದಆತ್ಮಜ್ಞಾನಿಗೇ ಅದು ಸಾಧ್ಯವೆನ್ನಬಹುದೋ ಏನೋ!

ಅಂತೆಯೇ ಅಹಿಂಸೆಯನ್ನು ಕುರಿತು ನಾವು ವಿಪರೀತ ಭಾವಾವೇಗಕ್ಕೆ ಒಳಗಾಗುವುದು ಅನಾವಶ್ಯಕ. ನಿಷ್ಕ್ರಿಯರಾಗಿ ಮಹಾ ನಿಗ್ರಹಿಗಳೆನಿಸುವುದೂ ಬೇಡ ಹಿಂಸೆಯೆಂದರೆ ಕೊಲೆಯೆಂದೂ, ಅಹಿಂಸೆಯೆಂದರೆ ಕೊಲೆ ಮಾಡದೇ ಇರುವುದೆಂದೂ ತಾಳುವ ಸರ್ವ ಸಾಮಾನ್ಯವಾದ ಭ್ರಾಂತಿಭಾವನೆಯನ್ನು ನಾವು ಬಿಟ್ಟುಬಿಡಬೇಕು.

ನಿಜವಾದ ಅಹಿಂಸೆ

ಲೋಕದೊಳಗಿನ ಅನೇಕ ರಾಜ್ಯಗಳು ತಮ್ಮ ತಮ್ಮ ದೇಶದ ಭೂಸ್ಥಿತಿ, ಹವಾಸ್ಥಿತಿಗನುಗುಣವಾಗಿ ಕಲಾಚಾರ ಪದ್ಧತಿಗಳನ್ನು ಅಳವಡಿಸಿಕೊಂಡಿರುತ್ತವೆ. ದುರಾಶೆಯಿಂದಲೋ ಮಹತ್ವಾಕಾಂಕ್ಷೆಯಿಂದಲೋ ಒಂದು ಪರದೇಶದವರು ಇನ್ನೊಂದು ಪರದೇಶವನ್ನು ಬಲಾತ್ಕಾರವಾಗಿ ಗೆದ್ದು ಅಥವಾ ಮೋಸದಿಂದ ವಶಪಡಿಸಿಕೊಂಡು ಅಲ್ಲಿ ತಮ್ಮ ದೇಶದ ಕಲಾಚಾರ ಪದ್ಧತಿಗಳನ್ನು, ಅಥವಾ ಮತಗಳನ್ನು ತುರುಕಲೆತ್ನಿಸುವುದು ನಿಸರ್ಗನಿಯತಿಗೂ, ಪ್ರಪಂಚ ನೀತಿಗೂ ವಿರುದ್ಧವಾದುದು. ಅದು ಅನೀತಿ, ಅಧರ್ಮ. ಆಗ ಯುದ್ಧ ಮಾಡಬೇಕಾಗುತ್ತದೆ. ಅಂತಹ ಪ್ರತಿಭಟನೆಯ ಯುದ್ಧಕ್ಕೆ ಧರ್ಮಯುದ್ಧವೆನ್ನುತ್ತಾರೆ. ಮಹಾಭಾರತಾದಿ ಯುದ್ಧಗಳು ಅಂತಹ ಧರ್ಮಯುದ್ಧಗಳು ಈ ಶತಮಾನದಲ್ಲಿ ಮುಗಿದ ನಮ್ಮ ಸ್ವಾತಂತ್ರ್ಯ ಸಮರ ಕೂಡಾ ಅಂತಹದೊಂದು ಧರ್ಮಯುದ್ಧವೇ ಸರಿ. ಸತ್ಯಾಗ್ರಹವೆಂಬ ಆತ್ಮಶಕ್ತಿಯ ಮೂಲಕ ಈ ಯುದ್ಧಸಾಗಿತ್ತು. ಅಂತೂ ಇದಿರಾಳಿಯನ್ನು ಜಿಂಸೆಗೆ ಒಳಪಡಿಸಿದುದರಿಂದಲೇ ವಿಜಯವೂ ಸಿಕ್ಕಿತು.

ಇದರಲ್ಲಿ ತಪ್ಪೇನೂ ಇಲ್ಲ. ನೀತಿ ತಪ್ಪಿದವರು ಹಿಂಸೆಗೆ ಒಳಗಾಗ ಬೇಕಾದುದು ಅನಿವಾರ್ಯ. ಅಂತೆಯೇ ಗಾಂಧಿಯವರ 'ಮಹಾತ್ಮ' ಪದವು ಕಳಂಕಿತವಾಗಲಿಲ್ಲ.

ಪ್ರಕೃತಿ ದೇವಿಯೂ ಕೆಲವು ವೇಳೆ ಭಯಂಕರ ಹಿಂಸೆಯನ್ನು ಮಾಡಿ ಬಿಡುತ್ತಾಳೆ ಉದಾಹರಣೆಗೆ ಭೂಕಂಪ. ಪ್ರಪಂಚದ ಹಿತದೃಷ್ಟಿಯಲ್ಲಿ ನೋಡುವಾಗ ಭೂಕಂಪದಂತಹ ಮಹಾಪಡಗಳು ಕೂಡಾ ಅಹಿಂಸೆಯ ಫಲವನ್ನೆ ಕೊಡುವಂಥಾವೆನ್ನಬಹುದು. ಆದರಿಂದ ಸಸ್ಯಾದಿ ಜೀವವರ್ಗಗಳಿಗೆ ಅಗತ್ಯವಾದ ರಾಸಾಯನಿಕ ಕ್ರಿಯೆಗಳುಂಟಾಗಿ ಭೂಸಾರವು ಒಳಿತಾಗುವುದಂತೆ ಹೀಗೆ ನೋಡುವಾಗ ಒಂದು ದೊಡ್ಡ ಅಧರ್ಮವನ್ನು, ಮಹಾ ನಾಶವನ್ನು, ಕಗ್ಗೊಲೆಯನ್ನು ತಪ್ಪಿಸಲು ಮಾಡಬೇಕಾಗಿ ಬರುವ ಹಿಂಸೆಯನ್ನು ಅಹಿಂಸೆ ಎನ್ನಬಹುದು. ಅದು 'ಸತ್ಯಾಗ್ರಹ'ವೆಂಬ ಆತ್ಮಶಕ್ತಿಯ ಮೂಲಕವಾಗಿ ಸಾಗಿದಾಗ ಉತ್ತಮೋತ್ತಮವಾದ ಸಾತ್ವಿಕ ಹಿಂಸೆಯೂಗುತ್ತದೆ. ವಿಜಯವಾದಾಗ ಸೋತವರೊಂದಿಗೆ ಹಗೆಯುಳಿಯುವುದಿಲ್ಲ. ಸ್ನೇಹವೇ ಮಿಗಿಲುತ್ತದೆ. ನಮ್ಮ ಮಹಾತ್ಮರು ಸಾಧಿಸಿದ ಪದ್ಧತಿಯ ಪರಿಣಾಮವು ಇಂಥಾದ್ದು.

ಹಿಂಸೆಯೆಂದರೇನು?

ಇನ್ನೊಬ್ಬರನ್ನು ಕಾಡಿಸುವುದೂ ಪೀಡಿಸುವುದೂ ಹಿಂಸೆ. ಅದು ಮಹಾ ಪಾಪ. ಏಕೆಂದರೆ ಹಿಂಸೆ ಮಾಡುವುದು ಮನುಷ್ಯರ ಮೂಲಸ್ವಭಾವದೊಂದು ಮೋಜು. ತಮಗಿಂತ ಕಡಮೆ ಬಲವುಳ್ಳ ಪ್ರಾಣಿಗಳನ್ನು ಹಿಂಸಿಸುವುದರಿಂದ ಒಂದು ಪೈಶಾಚಿಕಾನಂದವುಂಟಾಗುತ್ತದೆ. ಚಿಕ್ಕ ಮಕ್ಕಳು ನೊಣ, ಇರುವೆ ಮುಂತಾದುವನ್ನು ಹಿಚುಕಿಕೊಂದು ಸಂತೋಷಪಡುವುದಿಲ್ಲವೆ? ತಮಗಿಂತ ಕಡಿಮೆಬಲವುಳ್ಳ ಪ್ರಾಣಿಗಳನ್ನು ಹಿಂಸೆಪಡಿಸುವುದರಿಂದ ಒಂದು ಬಗೆಯ ಆನಂದ ಅವರಿಗಾಗುತ್ತದೆ. ಹಾಗೆಯೆ ಬೆಳೆದ ಮಾನವನು ಇನ್ನೊಂದು ವಿಧವಾಗಿಯೂ ಆನಂದಪಡುತ್ತಾನೆ. ತನಗಿಂತ ಬಲಶಾಲಿಯೂದವನನ್ನು ಕೂಡಾ, ತನಗೆ ಉಪಯೋಗವಿರಲಿ, ಇಲ್ಲದಿರಲಿ ಮರೆಮುಖವಾಗಿ ಕಾಡುತ್ತಾನೆ. ಆತನಿಗೆ ಕಷ್ಟನಷ್ಟಗಳುಂಟಾದರೆ ಈತನಿಗೆ ಸಂತೋಷವಾಗುತ್ತದೆ. ಈ ಬಗೆಯ ಭಾವನೆಗೆ ಮತ್ಸರವೆಂದು ಹೇಳುತ್ತಾರೆ ಮತ್ಸರದಿಂದಾಗುವ ಕಾರ್ಯಗಳೆಲ್ಲವೂ ಹಿಂಸೆಯೇ.

ಅನೀತಿಯುತವಾದ ಈ ಬಗೆಯ ಹಿಂಸೆಗಳಿಂದ ದೂರವಾಗಿ ಮಾನವರು ಪರಿಶುದ್ಧರಾಗಬೇಕಾದರೆ, ಅಹಿಂಸೆಯೇ ಪರಮ ಧರ್ಮ ಎಂಬ ನೀತಿಸಾರವನ್ನು ಗ್ರಹಿಸಿ, ಅದನ್ನು ಸ್ವಾನುಭವಕ್ಕೆ ಆಗಾಗ ಹೊಂದಿಸಿಕೊಂಡು ಬರಬೇಕು. ನಾಲ್ಕು ದಿನ ಕಸಬಳಿಯದಿದ್ದರೆ ಮತ್ತೆ ಮತ್ತೆ ಕಸ ಸೇರುವ ಹಾಗೆ, ಆಗಾಗ ನೀತಿಯ ಪರಿಶೀಲನೆ ಮಾಡಿಕೊಳ್ಳುತ್ತಾ ತಮ್ಮನ್ನು ತಾವೇ ಶುದ್ಧೀಕರಿಸಿಕೊಳ್ಳಬೇಕಾಗುತ್ತದೆ. ಬಾಯಿಪಾಠವಾಗಿ ಗೊತ್ತಿರುವ ನೀತಿಯನ್ನು ನೋಡುವುದೇನಿದೆ ಎಂದು ಅಲಕ್ಷ್ಯಮಾಡಿದರೆ, ಮನಸ್ಸು ಕಂಡ ಕಂಡ ಹಗೆಲ್ಲಿ ಹರಿದಾಡಿ, ಧೂಳು ಕಸಗಳನ್ನು ತುಂಬಿತಂದು ಸೇರಿಸಿ ಮಾನವರ ಹೃದಯವನ್ನು ಪಾಪಪಂಕವನ್ನಾಗಿ ಮಾಡಬಲ್ಲುದು. ಆಗ ಮಾನವರು ಕ್ರೂರ ಮೃಗ—ಅಲ್ಲಲ್ಲ—ಮೃಗಗಳಿಗಿಂತಲೂ ಮಹಾ ಘಾತಕರಾಗಿ ಪರಿಣಮಿಸುತ್ತಾರೆ.

ಏಕೆಂದರೆ ಮೃಗಗಳಿಗೆ ಬುದ್ಧಿಯ ಬಲವಿಲ್ಲ. ಅವು ಹಿಡಿದ ದಾರಿ ಬಿಡದ ಸಾಗುವಂಥವು. ಮನುಷ್ಯ ಕೂಡ ಒಂದು ಮೃಗವೆಂಬುದನ್ನು ಮರೆಯುವಂತಿಲ್ಲವಾದರೂ, ಕ್ರೂರ ಮೃಗಗಳನ್ನೂ ವಶಪಡಿಸಿ ಕುಣಿಸಬಲ್ಲವನಾದುದರಿಂದ, ನಿಜವಾದ ಮೃಗರಾಜ ಮಾನವನೇ ಸರಿ. ಮೂಲಸ್ವಭಾವವಂತೂ ಮೃಗಗಳಿಗೂ ಮನುಷ್ಯರಿಗೂ ಒಂದೇ ಅಲ್ಲವೆ? ತಿಳುವಳಿಕೆಯ ಎಚ್ಚರವಿರುವ ವರೆಗೆ ಮನುಷ್ಯ; ಈ ಎಚ್ಚರವಿಲ್ಲದ ಮನುಷ್ಯನ ಬುದ್ಧಿಯಲ್ಲಿ ಸುಳ್ಳು, ಕೋಪ, ಮದ, ಮಾತ್ಸರ್ಯ ಮೊದಲಾದ ದುಷ್ಟ ಪರಿಗಳು ಮುಚ್ಚಿ ಮಾನವನು ವ್ಯಗತನವನ್ನೂ ಮೀರಿ ಕ್ರೂರದಾನವನಾಗಿ ಹೋಗುತ್ತಾನೆ.

ಮಾಂಸಾಹಾರಿಗಳಾದ ಮಾನವರನ್ನಾಗಲೀ ಮೃಗಗಳನ್ನಾಗಲೀ ದುಷ್ಟರೆಂದೂ ಅಧಮರೆಂದೂ ನಿಂದಿಸುವ ಅಭ್ಯಾಸವು ನಮಗೆ ಬೇಡ ಎಷ್ಟೋ ಸುಷ್ಟ ಜನರ ಕೂಡಾ ಮಾಂಸಭಕ್ಷಕರಾಗಿದ್ದಾರೆ. ಪೌರಾಣಿಕ ಯುಗದಲ್ಲಿಯೂ ಅಷ್ಟೇ, ಈಗಲೂ ಅಷ್ಟೇ. ಪ್ರಾಣಿದಯೆ, ಆರೋಗ್ಯದೃಷ್ಟಿ ಮೊದಲಾದ ಅನೇಕ ಸತ್ಕಾರಣಗಳಿಂದ, ಮಾಂಸಾಹಾರ-ಶಾಖಾಹಾರಗಳ ಸಾಧಕಬಾಧಕ ವಿಷಯಗಳನ್ನು ಚರ್ಚಿಸುವರಂಗ ಬೇರೆ. ಅದಕ್ಕೂ ಅಹಿಂಸಾರಂಗಕ್ಕೂ ಸಂಬಂಧವೇನೂ ಇರುವಂತೆ ಕಾಣುವುದಿಲ್ಲ. ಅನಿವಾರ್ಯವಾದ, ನ್ಯಾಯವಾದ, ಪ್ರಕೃತಿಯ ನಿಯಮವಳಿಗೊಂದ ಕೊಲೆ, ವಧೆ, ಹತ್ಯಗಳಿಂದ ಪಾಪ ಸುತ್ತಿಕೊಳ್ಳುವುದೆಂಬ ಭೀತಿಯಿಂದ ಯಾರೂ ನಡುಗಬೇಕಾಗಿಲ್ಲ. 'ಕೊಂದ ಪಾಪತಿಂದು ಪರಿಹಾರ' ಎಂಬ ಸಾಮತಿಯೂ ಬೇಕಾದವರಿಗುಂಟು.

ಆದರೆ ಸ್ವಾರ್ಥದಿಂದ, ತಾನು ಮೇಲೆ ತನ್ನದೇ ಮೇಲಾಗಬೇಕೆಂಬ ಹೆಚ್ಚಳಕ್ಕಾಗಿ, ಕೋಪದಿಂದ ಹಗೆಯಿಂದ, ಮತ್ಸರದಿಂದ, ಉಂಟಾಗುವ ಹತ್ಯ, ಕೊಲೆ, ವಧೆ, ಕಾಟ, ಪೀಡೆ ನಾಶ, ಶೋಷಣಮಂತಾದ ಹ್ರಾಸಗಳೆಲ್ಲಾ ಘೋರ ಹಿಂಸೆಯೆಂದೂ ಮಹಾಪಾಪವೆಂದೂ ಎಲ್ಲರೂ ತಿಳಿದುಕೊಂಡಿದ್ದರೆ ಸಾಕು ಅದೇ ಯಥೇಷ್ಟ. ಯುಗಪುರುಷರೂ ಅವತಾರ ಪುರುಷರೂ ಕೋರಿಕೊಳ್ಳುವುದಾದರೂ ಇಷ್ಟೇ. ಶಾಸ್ತ್ರಗಳು ಹೇಳುವುದೂ ಇದನ್ನೇ. ಈ ಬಗೆಯ ಹಿಂಸೆಗಳಿಂದಾಗುವ ಪಾಪಕ್ಕೆ ಪ್ರಾಯಶ್ಚಿತ್ತವೇ ಇರಲಾರದು. ಈ ಅಣು ವಿಜ್ಞಾನದ ವೈಭವೋತ್ಪೇಕ್ಷವಾದ ಯುಗದಲ್ಲಿ ಪ್ರಪಂಚದ ಸೂತ್ರಚಾಲಕರಾದವರೇ ನಿಜವಾದ ಈ ಅಹಿಂಸೆಯ ತತ್ವವನ್ನು ಚೆನ್ನಾಗಿ ಅರಿತು ಪ್ರವರ್ತಿಸಬೇಕಾಗಿದೆ.

ಆಸ್ಥಮಾ ರೋಗಿಗಳ ತಿಳುವಳಿಕೆಗೆ

ರಿಜಿಸ್ಟ್ರಿಯಾದ ಚಿತ್ರಕೋಟ್ ಆಸ್ಥಮಾ ನಿವಾರಕಔಷಧಿಯನ್ನು ತಾ. 21-12-61ನೇ ಮಂಗಳವಾರ ರಾತ್ರಿ ಎರಡನೊಂದಿಗೆ ಸೇವಿಸುವುದರಿಂದ ಆಸ್ಥಮಾ, ನೆಗಡಿ, ಕೆಮ್ಮು, ನೆಗಡಿ ನಿವಾರಣೆಯಾಗುತ್ತದೆ. ಕೂಡಲೇ ಹುಣ್ಣಿಮೆಯ ಮೊದಲೇ ಬರೆಯಿರಿ.

Manager, Shri Mahatma Naga Baba Ayuruvedashram,
P. O. Chitrakot U. P.

"ಅತ್ಯುತ್ತಮ ಬ್ಯಾಂಕಿಂಗ್ ಸೇವೆ"

- ಸಿಗ್ನಿ
- ಕ್ಯುಮಲೇಟಿವ್
- ಇನ್ವೆಸ್ಟ್‌ಮೆಂಟ್ ಪಿಜಿನ್ಸಿ
- ಲಫ್ಟ್ರ್ ಮತ್ತು ಸಿಂಡಿಕೇಟ್ ಬ್ಯಾಂಕ್ ಕೇಶ್ ಸರ್ಟಿಫಿಕೇಟುಗಳು
- ಭದ್ರತಾ ಕೋಶಗಳು
- ವಿದ್ಯಾರ್ಥಿಗಳಿಗೆ ಮತ್ತು ಧರ್ಮ ಸಂಘ—ಸಂಸ್ಥೆಗಳಿಗೆ ವಿಶೇಷ ಸೌಕರ್ಯಗಳು

ಇನ್ನಿತರ ಎಲ್ಲಾ ವಿಧದ ಬ್ಯಾಂಕಿಂಗ್ ಸೇವೆಗಳು

ದಕ್ಷಿಣ ಭಾರತದಾದ್ಯಂತ ಹಬ್ಬಿರುವ 159 ಶಾಖೆಗಳು

ಸಿಂಡಿಕೇಟ್ ಬ್ಯಾಂಕ್

ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸ್: ಮುಕುಂದ ನಿವಾಸ, ಉಡುಪಿ, (ಮೈಸೂರು ರಾಜ್ಯ)
ಸ್ಥಾಪನೆ: 1925.

ವರ್ಗ—ಊಳಿಗ

ಮೊದಲಾದ ಯಾವತ್ತೂ ತರದ
ಎಕೌಂಟ್ ಪುಸ್ತಕಗಳು
ಶಾಲಾ ರಿಜಿಸ್ಟ್ರಿಗಳು,
ಫಾರ್ಮುಗಳು,
ದೊರೆಯುತ್ತವೆ.

ವಿಚಾರಿಸಿರಿ—
ನವಯುಗ ಪ್ರೆಸ್, ಉಡುಪಿ

ಸೂಚನೆ

"ನವಯುಗ"ದಲ್ಲಿ ಪ್ರಕಟಿಸಿಗ ಲೇಖನಗಳನ್ನು ಆಮಂತ್ರಿಸಲಾದೆ. ಇವು ಚಿಕ್ಕದಿರ ಬೇಕು ಕಾಗದದ ಒಂದೇ ಮಗ್ಗುಲಿನ ಬೇಕು. ಲೇಖಕಬಂಧುಗಳು ಗಮನಿಸಬೇಕಾಗಿ ವಿನಂತಿ. —ಸಂ

Edited Printed & Published by K. H. Shetty, at the Navayuga Press, Udipi, S. India.

ನಿಮ್ಮ ಯಾವತ್ತೂ
ಮುದ್ರಣ ಕೆಲಸಗಳಿಗೆ
ದಯಮಾಡಿ ವಿಚಾರಿಸಿರಿ;
ನವಯುಗ ಪ್ರೆಸ್,
ಉಡುಪಿ

ರಾಷ್ಟ್ರೀಯ ವಾರಪತ್ರಿಕೆ.

ಬೆಲೆ: 13 ನ.ಪೈಸೆ

ನವಯುಗ

KANNADA — NAVAYUGA — WEEKLY

ವಿದ್ಯಾರ್ಥಿಗಳಿಗೆ
ಮತ್ತು ವಯಸ್ಕರಿಗೆ
ಅತ್ಯುಪಯೋಗೀ ಪುಸ್ತಕ
ಸುಲಭದಲ್ಲಿ ಇಂಗ್ಲಿಷ್
(ಆಂಗ್ಲ ಸ್ವಯಂಬೋಧಿನಿ)
ನವಭಾರತ ಪುಸ್ತಕ ಭಂಡಾರ
ಉಡುಪಿ

ಸಂಪುಟ ೪೧ ಸಂಚಿಕೆ ೧೪ | ಉಡುಪಿ 14—12—1961 ಗುರುವಾರ | Vol. 41 No. 14

ಗೋವಾ ವಿಮೋಚನೆ ದೂರವಿಲ್ಲ?

ಭಾರತದಲ್ಲಿರುವ ಪೋರ್ಚುಗೀಸ ವಸಾಹತು ಗೋವೆಯಲ್ಲಿ ಉಂಟಾಗಿರುವ ದಾರುಣ ಪರಿಸ್ಥಿತಿಯನ್ನು ಕಂಡು ಭಾರತವು ತೆಪ್ಪಗೆ ಕುಳಿತಿರುವುದು ಸಾಧ್ಯವಿಲ್ಲ; ಅದು ಯಾವುದೇ ಬಗೆಯ ಆವಶ್ಯಕ ಕ್ರಮಗಳನ್ನು ಕೈಗೊಳ್ಳಲು ಸಕಲ ಸನ್ನಾಹಗಳನ್ನು ಮಾಡಲೇ ಬೇಕಾಗಿದೆ ಎಂದು ಪ್ರಧಾನ ಮಂತ್ರಿಯವರಿತ್ತ ಹೇಳಿಕೆಯಿಂದ ಪೋರ್ಚುಗಲ್ಲಿನ ಸತ್ತಾಧಿಕಾರಿಗಳು ಸಿಡಿಮಿಡಿಗೊಂಡಿದ್ದಾರೆ. ಗೋವೆಯ ಮೇಲೆ ಆಕ್ರಮಣ ಮಾಡಬೇಕೆಂಬ ಇಚ್ಛೆಯಿಂದ ಭಾರತವು ಗದರಿಕೆ-ಬೆದರಿಕೆಗಳನ್ನು ಹಾಕುತ್ತಿದೆಯೆಂದವರು ಹೇಳುತ್ತಾರೆ ಪೋರ್ಚುಗೀಸ ಸುದ್ದಿಗಾರನೊಬ್ಬನು ಭಾರತದೊಡನೆ ಮೂರು ಪ್ರಶ್ನೆಯನ್ನು ಹಾಕಿದ್ದಾನೆ: ಭಾರತವು ಪ್ರಚಲಿತ ಸ್ಥಿತಿಯನ್ನು ಯಾವ ಕಾರಣದಿಂದ ಸಹಿಸಲಾರದು?, ಹದಿನಾರು ವರ್ಷಗಳಿಗೆ ಮೊದಲಿದ್ದ ಪರಿಸ್ಥಿತಿಗೂ ಇಂದಿನದಕ್ಕೂ ಯಾವ ಅಂತರವಿದೆ?, ಕಳೆದ ಹದಿನಾರು ವರ್ಷಗಳಲ್ಲಿ ಭಾರತದ ಭದ್ರತೆಗೆ ಗೋವೆಯೇನಾದರೂ ಭಂಗವನ್ನು ತಂದುದಿದೆಯೆ? ಎಂಬಿವೇ ಈ ಮೂರು ಪ್ರಶ್ನೆಗಳು.

ಭಾರತದಲ್ಲಿ ಪೋರ್ಚುಗೀಸರು ವ್ಯಾಪಾರಕ್ಕಾಗಿ ಬಂದವರು ಇಲ್ಲಿನ ಕಲ್ಲಿಕೋಟೆಯ ಝಮೋರಿನ್ ಮತ್ತು ಕೊಚ್ಚಿಯ ಗುಡಾವರ್ಮರೆಂಬ ರಾಜರನ್ನು ಮೋಸದಿಂದ ವಂಚಿಸಿ, ಸೋಲಿಸಿ, ಭಾರತದ ಸಮುದ್ರದ ಮೂಲಕ ವ್ಯಾಪಾರವನ್ನು ನೂಡುತಿದ್ದ ಭಾರತೀಯರು ಮತ್ತು ಅರಬರನ್ನು ಬಗ್ಗು ಬಡೆದು, ತಮ್ಮ ಪ್ರಭುತ್ವವನ್ನು ಜಮಾಯಿಸಿದ ರೀತಿಯನ್ನು ಇತಿಹಾಸವು ಸಾರಿ ಹೇಳುತ್ತದೆ. ತಮ್ಮ ವ್ಯಾಪಾರಕ್ಕೆ ಅವಕಾಶವನ್ನು ದೊರಕಿಸಿ ಕೊಳ್ಳುವುದಕ್ಕಾಗಿ ವಾಸ್ಕೋಡಗಾಮನಾಸ್ಪತಕ ಅದೆಷ್ಟೊ ಭಾರತೀಯರನ್ನು ಚಿತ್ರಹಿಂಸೆಗೆ ಗುರಿಪಡಿಸಿರುವುದನ್ನು ಭಾರತವು ಮರೆಯಲಾರದು. ರಕ್ತತರ್ಪಣವನ್ನಿತ್ತೇ ಪೋರ್ಚುಗೀಸರು ಭಾರತವನ್ನು ಆಕ್ರಮಿಸಿದ್ದರು. ಸದ್ಯದ ಪರಿಸ್ಥಿತಿಯನ್ನು ಅವಲೋಕಿಸುವಾಗ, ಇದೇ ಮೊದಲಿಯ, ಇದಕ್ಕಿಂತಲೂ ಅಧಿಕತಮವೆನಿಸುವ ರಕ್ತಕಾಲುವೆಯನ್ನು ಹರಿಸದೆ ಕಾಲು ಕೀಳಲಾರರು ಎಂಬುದು ಖಂಡಿತವಿದೆ.

ಪೋರ್ಚುಗೀಸರನ್ನು ದಂಗುಬಡಿಸುವಂತಹ ಪರಿಸ್ಥಿತಿಯು ಗೋವೆಯಲ್ಲಿ ನಿರ್ಮಾಣಗೊಳ್ಳುವುದಕ್ಕೆ ಮುಖ್ಯ ಕಾರಣರು ಯಾರೆಂದು ಲೋಕವೇ ಅರಿತಿದೆ. ಗೋವೆಯಲ್ಲಿ ಸೈನ್ಯವನ್ನು ಒಗ್ಗೂಡಿಸಿ ಮೊದಲಿದ್ದ ಸ್ಥಿತಿಯನ್ನು, ಯುದ್ಧಭೀತಿಯನ್ನು ಮತ್ತೂ ಉದ್ರೇಕಿಸಿದುದು ಪೋರ್ಚುಗಲ್ಲೇ ಹೊರತು ಭಾರತವಲ್ಲ. ತನ್ನ ಗಡಿಯಲ್ಲಿ ಅಸಂಖ್ಯ ಸೇನೆಯು ಬಂದು ತಳವೂರುವಾಗ ಭಾರತವಾದರೂ ಮೌನವಾಗಿರುವುದು ಸಾಧ್ಯವಿಲ್ಲ. ತನ್ನವರಾದ ಗೋಮಾಂತಕರ ಮೇಲೆ ಅತ್ಯಾಚಾರ — ಅನಾಚಾರಗಳು ಅಮಾನವೀಯವೆಂಬಂತೆ ನಡೆಯುವುದನ್ನು ಕಂಡೂ ಕೇಳಿಯೂ ಸುಮ್ಮನಿರುವುದು ಭಾರತೀಯರ ಸಂಸ್ಕೃತಿಗೆ ಧರ್ಮಕ್ಕೆ ಪ್ರತಿರೋಧವಾದುದು. ಈ ಕಾರಣದಿಂದಲೇ ಭಾರತವೂ ಮುಂಜಾಗ್ರತೆಯ ಆವಶ್ಯಕ ಕ್ರಮಗಳನ್ನು ಕೈಗೊಳ್ಳಲೇ ಬೇಕಾಗಿದೆ. ಗೋವೆಯೊಳಗೆ ಹದಿನಾರು ವರ್ಷಗಳಿಂದಲ್ಲ, ಕಳೆದ ೪೬೦ ವರ್ಷಗಳಿಂದಲೂ ಪೋರ್ಚುಗೀಸರು ನಡೆಸಿದ ಅತ್ಯಾಚಾರವನ್ನು ಮತ್ತು ಅಲ್ಲಿ ಗಳಿಸಿದುದು ತಮ್ಮ ಲಾಭವನ್ನು. ಈ ಪರಿಸ್ಥಿತಿಯಲ್ಲಿ ಗೋವೆಯು ಅವರ ಅಧೀನದಲ್ಲಿರುವ ವರೆಗೆ ಯಾವ ಪರಿವರ್ತನೆಯೂ ಅಸಾಧ್ಯ. ಆದರೆ, ಅಮಾನುಷ ವರ್ತನೆಗೆ ತಿಲಕವಿಟ್ಟಂತೆ ಅಲ್ಲಿ ಆಗುತ್ತಿರುವ ಸೈನ್ಯ ಜಮಾವಣೆ— ನಾಗರಿಕರ ಸೆರೆ—ಕೊಲೆಗಳು ಅಸಹನೀಯವೇ ಎಂಬುದು ಸೂರ್ಯನಷ್ಟು ಸ್ಪಷ್ಟವಿದೆ.

ಗೋವೆಯೊಳಗೆ ಗೋಮಾಂತಕರ ಭೂಗತ ದಳದವರು ವಿಮೋಚನಾ ಆಂದೋಲನವನ್ನು ಬಲಪಡಿಸುವ ಸಾಹಸವನ್ನು ತೋರಿಸುತಿದ್ದಂತೆಯೇ ಪೋರ್ಚುಗೀಸ್ ಸೇನೆಯು ಅವನ್ನು ಸದೆಬಡೆಯುವ ಪ್ರಯತ್ನವನ್ನು ಮಾಡುತ್ತಿದೆ. ಆಂದೋಲನಗಾರರನ್ನು ಕೈದು ಮಾಡುವುದು ನಾಗರಿಕರಿಗೆ ಗುಂಡಿನ ಬೆದರಿಕೆ ತಾಕುವುದು, ಗೋವೆಯನ್ನು ಬಿಟ್ಟು ಹೊರಗೋಡುವವರನ್ನು ತಡೆದು ಹಿಂಸಿಸುವುದು ಮೊದಲಾದ ದುರಾಚಾರಗಳು ನಿರಂತರವೆಂಬಂತೆ ನಡೆಯುತ್ತಿವೆ. ಇವಕ್ಕೆ ಕಳಕ ವಿಡುವಂತೆ ಪೋರ್ಚುಗೀಸರು ಭಾರತದ ಗಡಿಯನ್ನು ಅತಿಕ್ರಮಿಸಿ ಧಾಳಿ ಮಾಡಿದುದೂ ಇದೆ. ಇದರಿಂದಾಗಿ ಇಬ್ಬಣಗಳ ನಡುವೆ ಕೆಲವೆಡೆ ಗುಂಡುಗಳ ಧ್ವನಿ—ಪ್ರತಿಧ್ವನಿ ಎದ್ದುದೂ ಇದೆ. ಆದರೂ, ಗೋವೆಯೊಳಗಡೆ ಪೋರ್ಚುಗೀಸರ ಅತ್ಯಾಚಾರದ ಪಾತ್ರತುಂಬುವ ವರೆಗೆ, ಅಥವಾ ಭಾರತದ ಮೇಲೆ ಆಕ್ರಮಣ ಮಾಡುವ ವರೆಗೆ ಭಾರತೀಯ ಸೈನಿಕರು ಧಾಳಿಮಾಡುವಂತಿಲ್ಲ.

ಭಾರತವು ತನ್ನ ಗಡಿಯಲ್ಲಿ ಜಲ ಮತ್ತು ನೆಲ ಸೇನೆಯ ಪರ್ಯಾಪ್ತ ಭಾಗಗಳನ್ನು ಇರಿಸಿದೆ; ಕೆಲವೆಡೆಯ ಪೋಲೀಸು ವಿಭಾಗದವರಿಗೆ ಇದ್ದ ರಜೆಯ ಸವಲತ್ತನ್ನು ಹಿಂತೆಗೆದುಕೊಂಡಿದೆ. ವಾಯುಸೇನೆಗೂ ಯಾವ ಕಾಲದಲ್ಲೂ ಸಿದ್ಧವಾಗಿರಬೇಕೆಂದು ಆಜ್ಞೆಯನ್ನು ಇತ್ತಿದೆ. ಇವೆಲ್ಲವನ್ನೂ ಗಮನಿಸುವಾಗ, ಗೆಳೆಯರ ಸಮ್ಮಂಬರ ತಿಂಗಳಲ್ಲಿ ಹೈದರಬಾದಿನ ಮೇಲೆ ಪೋಲೀಸು ಕಾರ್ಯಕ್ರಮ ನಡೆದಾಗಿನ ನೆನಪು ಬರುತ್ತಿದೆ. ಆ ಸಮಯದಲ್ಲಿಯೂ ಇದೇ ರೀತಿಯು ಸ್ವಾಸ್ತ್ಯವಿಕ ಜಾಗರೂಕತೆ ವಹಿಸಲಾಗಿತ್ತು. ಭಾರತವು ಮೇಜರ್ ಜನರಲ್ ಕೆ. ಪಿ. ಕಂಡೇಯರನ್ನು ಭಾರತ-ಗೋವಾ ಸೀಮೆಯ ಮೇಲೆ ಸತರ್ಕವಿರುವಂತೆ ಅಧಿಕಾರವಿತ್ತು ಭಾರತೀಯ ಸೇನಾಕಮಾನನ್ನು ಇವರಿಗೆ ಒಪ್ಪಿಸಿದೆ.

ಇದುವರೆಗಿನ ಗತಿವಿಧಿಗಳಿಂದ ಗೋವೆಯ ವಿಮೋಚನೆಯ ಸಮರವು ಎಂದು ತೀವ್ರಗೊಳ್ಳುವುದೆಂದು ಮತ್ತು ಅದು ಎಂದು ವಿಮೋಚನೆಗೊಳ್ಳುವುದೆಂದು ಹೇಳುವುದು ಕಷ್ಟವಾದರೂ ಕ್ರಿಸ್ಮಸ್ ದಿನದೊಳಗೆ ಗೋವೆಯು ಪೋರ್ಚುಗೀಸರ ಕಪಿಮುಷ್ಟಿಯಿಂದ ಮುಕ್ತವಾಗುವುದೆಂಬ ವಿಶ್ವಾಸವನ್ನು ಹೊರಗೆಡಹುವವರಿದ್ದಾರೆ. ಲೋಕನಾಯಕ ಕ್ರಿಸ್ತನ ಜನ್ಮದಿನದ ಕಾಣಿಕೆಯಾಗಿ ಭಾರತೀಯರಿಗೆ ಗೋವೆಯು ಲಭಿಸಿಯೇ ತೀರುವುದು ಎಂಬ ನಂಬುಗೆ ವ್ಯಕ್ತಪಡಿಸುವವರಿಗೂ ಕಡಿಮೆಯಿಲ್ಲ. ಭಾರತ ಸರಕಾರವು ಗೋವೆ-ಭಾರತ ಸೀಮೆಯ ಸಂಪೂರ್ಣ ಜವಾಬ್ದಾರಿಯನ್ನು ಸೇನಾಪತಿಗಳ ಮೇಲೆ ಹೊರಿಸಿದೆ. ಗೋವೆಯ ಪರಿಸ್ಥಿತಿಯು ಅತೀವ ವಿಸ್ಫೋಟ ಜನಕವೆನಿಸಿರುವುದರಿಂದ, ಸರಕಾರ ಪರಾಮರ್ಶೆಯಲ್ಲಿ ಸಮಯ ಕಳೆಯುವುದು ವ್ಯರ್ಥವೆಂದು ಭಾವಿಸಿದೆ. ಪೋರ್ಚುಗಲ್ ಅಧಿಕಾರಿಗಳ ಕಾರ್ಯಕ್ರಮವು ಮತ್ತಷ್ಟು ನಿರಂಕುಶವಾದರೆ, ಭಾರತೀಯ ಸೀಮಾಂತ ಪ್ರದೇಶದಲ್ಲಿ ಪೋರ್ಚುಗೀಸರು ಉತ್ತೇಜಜನಕ ಕಾರ್ಯಕ್ರಮವನ್ನು ಕೈಗೊಂಡರೆ, ಗೋವೆಯನ್ನು ಪ್ರವೇಶಿಸುವ ಭಾರತೀಯರೊಡನೆ ದುರ್ವ್ಯವಹಾರ ನಡೆಸಿದರೆ, ತನ್ನ ಕ್ಷೇತ್ರ ಮತ್ತು ನಾಗರಿಕರನ್ನು, ಅವರಲ್ಲಿಯೇ ಇರಲಿ, ರಕ್ಷಿಸಲು ಯಾವುದೇ ಕ್ರಮ ಕೈಗೊಳ್ಳುವ ಸ್ವಾತಂತ್ರ್ಯವನ್ನು ಭಾರತೀಯ ಸೇನೆಗೆ ಭಾರತ ಸರಕಾರವು ಒಪ್ಪಿಸಿಕೊಟ್ಟಿದೆ.

ಭಾರತವು ಕೈಗೊಂಡ ಎಚ್ಚರಿಕೆಯ ಕಾರ್ಯಕ್ರಮದಿಂದ ಮತ್ತು ಅದು ತಳೆದ ದೃಢವಾದ ನಿಲುವೆಯಿಂದ ಪೋರ್ಚುಗಲ್ಲು ದಂಗುಬಡೆದಿದೆ ಅದು ಈ ವಿಷಯವನ್ನು, ಪೋರ್ಚುಗೀಸ ಸಾಮ್ರಾಜ್ಯದ ಮೇಲೆ ಭಾರತವು ಆಕ್ರಮಣ ನಡೆಸುವ ಬೆದರಿಕೆ ಹಾಕುತ್ತಿದೆಯೆಂದು ನ್ಯಾಟೊ ರಾಷ್ಟ್ರಗಳಿಗೂ ಸಂಯುಕ್ತ ರಾಷ್ಟ್ರ ಸಂಘಕ್ಕೂ ದೂರಿಕೊಂಡಿದೆ. ಅಲ್ಲದೆ ಗೋವೆಯ ಸಂಬಂಧದಲ್ಲಿ ತನ್ನ ಸಾರ್ವಭೌಮಾಧಿಕಾರಕ್ಕೆ ಚ್ಯುತಿಯೊದಗದಂತೆ ಭಾರತದೊಡನೆ ಒಡಂಬಡಿಕೆ ಮಾಡಿಕೊಳ್ಳಲು ಬ್ರಿಟನ್ನು ಮಧ್ಯಸ್ಥಿಕೆ ವಹಿಸಬೇಕೆಂದು ಮೊರೆಯಿಟ್ಟಿದೆ. ಆದರೆ, ಗೋವೆಯು ಭಾರತದ ಸಾರ್ವಭೌಮಾಧಿಕಾರಕ್ಕೆ ಒಳಪಡುವುದೇ ಅಂತಿಮ ಪರಿಣಾಮ ಮತ್ತು ಯಾವುದೇ ಒಡಂಬಡಿಕೆಗೆ ಆಧಾರವಾಗಬೇಕೆಂದು ನೆಹರುರವರ ಹೇಳಿಕೆಯಿಂದಾಗಿ ಈ ಆಶೆಯು ಈಡೇರುವ ಲಕ್ಷಣವಿಲ್ಲ. ಬ್ರಿಟನ್ನು ಮತ್ತು ಅಮೆರಿಕೆಗಳು ವಸಾಹತುವಾದಕ್ಕೆ ವಿರೋಧವಿದೆಯೊದರೂ ಭಾರತವು ಗೋವೆಯ ಬಗ್ಗೆ ಬಲಪ್ರಯೋಗ ನಡೆಯುವುದನ್ನು ಅನಪೇಕ್ಷಣೀಯವೆಂಬಂತೆ ಅಭಿಪ್ರಾಯಪಟ್ಟಿವೆ.

ಲಿಬ್ಬನ್ ಸರಕಾರವು ಒಂದು ವಿಜ್ಞಾಪನೆಯನ್ನು ಹೊರಡಿಸಿ, ಭಾರತ—ಪೋರ್ಚುಗಲ್ ಸೀಮೆಯಲ್ಲಿ ಪೋರ್ಚುಗಲ್ ಸೇನೆಯು ಉದ್ರೇಕಕಾರಕ ಇಲ್ಲವೇ ಆಕ್ರಮಣಕಾರಕ ಕಾರ್ಯಕ್ರಮಗಳನ್ನು ಕೈಗೊಂಡಿಲ್ಲ. ಇದರ ಸತ್ಯಾಂಶಗಳನ್ನು ಪರಿಶೀಲಿಸಲು ಸೀಮೆಯ ಬಳಿಗೆ ಪ್ರೇಕ್ಷಕರನ್ನು ಕಳಿಸಬೇಕೆಂದು ಭಾರತವನ್ನು ಕೇಳಿಕೊಂಡಿದೆ. ಭಾರತದ ಶಾಂತಿ ಮತ್ತು ಭದ್ರತೆಗಳಿಗೆ ಭಂಗವೊದ್ದುವ ಯಾವ ಪರಿಸ್ಥಿತಿಯೂ ಅಲ್ಲಿ ನಡೆಯಲಿಲ್ಲ ಎಂದದು ತಿಳಿಸಿದೆ. ಇಷ್ಟು ಮಾತ್ರವಲ್ಲದೆ, ಸೀಮೆಯಲ್ಲಿ ಅಂತಾರಾಷ್ಟ್ರೀಯ ಸ್ವತಂತ್ರ ಪ್ರೇಕ್ಷಕರನ್ನು ಕಳಿಸಬಹುದೆಂದೂ ಅಲ್ಲಿ ನಡೆಯುವ ಯಾವುದೇ ಘಟನೆಯ ಸ್ವರೂಪ ಮತ್ತದರ ಹೊಣೆಗಾರಿಕೆಯು ಯಾರದೆಂದು ಅವರೇ ನಿರ್ಣಯಿಸಲೆಂದೂ ಪೋರ್ಚುಗಲ್ ವಿದೇಶ ಮಂತ್ರಿ ಶಾಖೆಯು ಪ್ರಾರ್ಥಿಸಿಕೊಂಡಿದೆ.

ಪೋರ್ಚುಗಲ್ಲಿನ ಇಂತಹ ಪ್ರಾರ್ಥನೆಯು ಅರ್ಥಹೀನವಾದುದೆಂದು ಪ್ರತ್ಯೇಕ ಹೇಳಬೇಕಾಗಿಲ್ಲ. ಈ ರೀತಿಯ ಹವ್ಯಾಸವು ನಿಷ್ಪ್ರಯೋಜಕ ಮತ್ತು ಅನುಪಯುಕ್ತವೆಂದು ಯಾರೊಬ್ಬನೂ ಅನ್ನಬಹುದು. ಗೋವೆಯು ಎಂದೆಂದಿಗೂ ಭಾರತದ್ದು. ಈಗ ಅಲ್ಲಿ ತಳವೂರಿರುವ ಪೋರ್ಚುಗೀಸರು ಕಂಬಿಕೀಳದ ಪರಿಸ್ಥಿತಿಯು ಶಾಂತಗೊಳ್ಳುವಂತಿಲ್ಲ ಎಂಬ ಪ್ರಧಾನಿ ನೆಹರೂರ ಉದ್ಗಾರದಲ್ಲಿ ೪೫ ಕೋಟಿ ಭಾರತೀಯರ ಸ್ವರಗೂಡಿದೆ. ಈ ಸಂಬಂಧದಲ್ಲಿ ಅವರು ಕೈಗೊಳ್ಳುವ ಯಾವುದೇ ಕ್ರಮಕ್ಕೆ ಎಲ್ಲ ಭಾರತೀಯರ ಸಕ್ರಿಯ ಸಹಾನುಭೂತಿ ಸದಾ ಸಿದ್ಧವಿದೆ.

ಕಂಡುದನ್ನು ಕಲ್ಪನೆ ಬಣ್ಣಿಸಿದಾಗ-

ಅಹಲ್ಯಾ, ಕುಂದಾಪುರ.

"ಒಂದು ತುಂಡು ನೀಲಿ ಸಾಬೂನು— ಒಂದು ಪಾವು ಫಾಟಿ ಮೆಣಸು— ಎರಡಾಣೆ ಬೆಳ್ಳುಳ್ಳಿ..."

ಕಿಟಕಿಯಲ್ಲಿ ಮುಖವಿಟ್ಟು ಹೊರಗೆ ಎತ್ತರದಲ್ಲಿ ಗಾಳಿಯಲ್ಲಿ ಹಾರಾಡುತ್ತಿದ್ದ ಅಜ್ಜನ ಗಡ್ಡ (ಎಕ್ಕೆಯ ಬೀಜ)ವನ್ನೆ ನೋಡುತ್ತಾ ಕುಳಿತಿದ್ದ ಕಸ್ತೂರಿ ಸ್ವರ ಕೇಳಿ ಛಂಗನೆ ನೆಗೆದು ನಿಂತಳು. ಅಲ್ಲಿಂದ ತುದಿಕಾಲಲ್ಲಿ ಸದ್ದುಮಾಡದೆ ನಡೆದುಕೊಂಡು ಬಾಗಿಲ ಸಮೀಪಕ್ಕೆ ಬಂದು ಹೊರಕ್ಕೆ ಇಣಿಕಿ ನೋಡಿದಳು. ಅಲ್ಲಿಂದಲೇ ಎಷ್ಟು ಇಣಿಕಿದರೂ ಅಂಗಡಿ ಕಾಣುವಂತಿರಲಿಲ್ಲ ಹೊರ ಜಗಲಿಗೇ ಬರಬೇಕಷ್ಟೆ. ಮನೆಯ ಒತ್ತಿನದೇ ಅಂಗಡಿ. ನಿಂತಲ್ಲಿಂದಲೇ ನೇರವಾಗಿ ಜಗಲಿಯ ಅಂಚಿನ ತನಕವೂ ಬಂದು ಕತ್ತು ಚಾಚಿ ನೋಡಿದಳು. ಅಲ್ಲೇ ಅಂಗಡಿಯ ಕಂಭಕ್ಕೆ ಒರಗಿ ನಿಂತಿದ್ದ ಅನಂತ. ಅಂಗಡಿ ಅವಳ ದೊಡ್ಡಪ್ಪನದು. ಅವರೇ ಅನಂತನೊಡನೆ ಕೇಳುತ್ತಿದ್ದರು.

"ದುಡ್ಡು ಎಷ್ಟು ತಂದಿದ್ದೀಯಪ್ಪಾ"?

'ಎಂಟಾಣೆ." ಅನಂತ ಪಾವಲಿಯನ್ನು ಚೇಬಿನಿಂದ ತೆಗೆದು ದೊಡ್ಡಪ್ಪನ ಕೈಗಿತ್ತ. ಕಸ್ತೂರಿ ನಿಂತುದು ದೊಡ್ಡಪ್ಪನಿಗೆ ಕಾಣಿಸುತ್ತಿರಲಿಲ್ಲ. ಒಂದೊಂದಾಗಿ ಸಾಮಾನುಗಳನ್ನು ವಿಚಾರಿಸಿ ಪೊಟ್ಟಣ ಕಟ್ಟಿ, ಬಾಕಿ ಚಿಲ್ಲರೆ ದುಡ್ಡಿನೊಂದಿಗೆ ಅವುಗಳನ್ನು ಅವನ ಕೈಯಲ್ಲಿಟ್ಟು ತಮ್ಮ ಕುರ್ಚಿಯಲ್ಲಿ ಕುಳಿತರು. ಅನಂತ ಚಿಲ್ಲರೆಯನ್ನೆಣಿಸುತ್ತಾ ಹೊರಟ. ಈ ವೇಳೆಗಾಗಲೇ ಕಸ್ತೂರಿ ಅಲ್ಲಿ ನಿಂತುದು ಅವನ ಗಮನಕ್ಕೆ ಬಂದಿರಬೇಕು. ಅದರೂ ಅವನು ಕಣ್ಣೆತ್ತಿ ಅವಳ ಕಡೆ ನೋಡಲಿಲ್ಲ ಅವಳು ಆತುರದಿಂದ ಅವನನ್ನೇ ನೋಡುತ್ತಿದ್ದಳು. ತನ್ನನ್ನು ನೋಡಿಯೂನೆಂದು. ಇಲ್ಲ ಅನಂತರ ಅವಳ ಮನೆಯ ಮೆಟ್ಟಲನ್ನೂದಾಟುವುದರಲ್ಲಿದ್ದ. ಕಸ್ತೂರಿಗೆ ತಡೆಯಲಾಗಲಿಲ್ಲ. 'ಶ್. ಅಂತೂ' ಎಂದು ಕರೆದೇ ಬಿಟ್ಟಳು. ಅಂತುವಿನ ಕತ್ತು ತಿರುಗಲಿಲ್ಲ. ಇನ್ನೂ ಎರಡು ಹೆಜ್ಜೆ ಅತ್ತ ಸರಿದು 'ಏಯ್, ಅನಂತಾ" ಎಂದಳು ತುಸು ಗಟ್ಟಿಯಾಗಿ. ಸರಕ್ಕನೆ ತಿರುಗಿತು ಅನಂತನ ತಲೆ. ಅದರೆ...ಆ ಕಣ್ಣಲ್ಲಿ ಸ್ನೇಹವಿತ್ತೆ? ತುಟಿಯಲ್ಲಿ ನಗುವಿತ್ತೆ? ಹೋಗಲಿ. ಬಾಕೆ ಕರೆದೆಯೆಂಬ ಸ್ವಲ್ಪ ಸ್ನೇಹವಾದರೂ ಇತ್ತೆ? ಥೂ! ಅವನೂನ. ಕಸ್ತೂರಿಯ ಮುಖ ಕೆಂಪಗಾಗಿ ಅಳು ಬರುವಂತಾಯಿತು. ಏಕೆಂದರೆ ತಿರುಗಿದ ಅನಂತನ ಮುಖದಲ್ಲಿ ಮೂಗು ಮುರಿದಿತ್ತು. ನಾಲಗೆ ಹೊರಬಂದಿತ್ತು. ಕಣ್ಣು ಮುಚ್ಚಿತ್ತು. ಕಸ್ತೂರಿಯ ಅಭಿಮಾನಕ್ಕೆ ಪೆಟ್ಟು ಬಿತ್ತು. ಅವಳನ್ನು ಅಲ್ಲಿ ಒಂದು ಕ್ಷಣವೂ ನಿಲ್ಲುವಂತಿರಲಿಲ್ಲ. ಸರ್ರನೆ ತಿರುಗಿ ಒಳಕ್ಕೆ ಓಡಿದಳು. ಹಿಂದಿನಂತೆ ಕಿಟಕಿಯ ಪಕ್ಕದಲ್ಲಿ ಕುಳಿತು ಹೊರಕ್ಕೆ ದಿಟ್ಟಿಸಿದಳು. ಅಜ್ಜನ ಗಡ್ಡವೆಲ್ಲೋ ಹಾರಿ ಹೋಗಿತ್ತು. ಹಿತ್ತಲಲ್ಲಿ ಬೇರಾವ ಆಕರ್ಷಣೆಯೂ ತೋರಿ ಬಾರದುದರಿಂದ ಮನಸ್ಸು ಮನಃ ಹಿಂದಿನದನ್ನೇ ಮೆಲುಕು ಹಾಕಲಾರಂಭಿಸಿತು. ಛೀ ಎಂತಹ ಕೆಟ್ಟ ಹುಡುಗ ಅನಂತ. ನಿನ್ನೆ ಆದುದನ್ನು ಮರೆತೇ ಇಲ್ಲ ಇನ್ನೂ. ಹಂ! ಮರೆಯುವಿರ ಬೇಕಾಗಿದ್ದವಳು ನಾನು. ಆದರೂ ಎರಡು ಮಾತನಾಡೋಣಾಂತ ಕರೆದರೆ".....ಆ ನೆನಪಿನಿಂದಲೇ ಮನಸ್ಸು ಮುದುಡಿತು.

ಹಿಂದಿನ ದಿನ ಮಧ್ಯಾಹ್ನ ಕಸ್ತೂರಿ ಅನಂತನ ಬೆನ್ನಿಗೆರಡು ಗುದ್ದಿ, ಕೆನ್ನೆ ಹಿಂಡಿ ನೋಯಿಸಿದ್ದಳು. ಅವರ ಕಿರಿಚಾಟ ಗುದ್ದಾಟಗಳನ್ನು ಕೇಳಿ ಅವಳಮ್ಮ ವಿಷಯವೇನೆಂದು ತಿಳಿಯಲು ಬಂದುದರಿಂದ ಅನಂತನಿಗೆ ಅವಳ ಮೇಲೆ ಸೇಡು ತೀರಿಸಿಕೊಳ್ಳಲಾಗದೆ ಮೆಲ್ಲನೆ ಹಿತ್ತಿಲ ಬಾಗಿಲಿನಿಂದ ಮನೆಯ ಕಡೆಗೆ ನುಸುಳಿಕೊಂಡಿದ್ದ (ಅವನ ಮಾತಿನಲ್ಲೇ ಹೇಳುವುದಾದರೆ "ಅವಳಿಗೆ 'ಬುದ್ಧಿ' ಕಲಿಸಲಾಗಿರಲಿಲ್ಲ") ಆದುದರಿಂದ ಹಿಂದಿನ ದಿನ ಕಸ್ತೂರಿಯ ಕೈ ಮೇಲಾಗಿತ್ತು. ಅದನ್ನು ಕೊಚ್ಚಿಕೊಳ್ಳಲೆಂದೇ ಇರಬೇಕು, ಈಗ ಸುನಃ ಬಂದು ಕರೆಯುತ್ತಿದ್ದಾಳೆ ಎಂದುಕೊಂಡು ಮುಖವನ್ನು ಕಿವುಚಿ ಅನಂತ ಅಣಕಿಸಿದ್ದ. ಆದರೆ ಕಸ್ತೂರಿಯ ದೃಷ್ಟಿಯಲ್ಲಿ ಹಿಂದಿನದಿನ ಹಾಗೂ ಈ ದಿನ ಎರಡರಲ್ಲೂ ಅನಂತನೇ ಅಪರಾಧಿ. "ಮತ್ತೆ ಅವನೇಕೆ ನನ್ನ ಬೊಂಬೆ ಮುರಿದದ್ದು? ಅದಕ್ಕಲ್ಲವೇ ನಾನವನ ಬೆನ್ನಿಗೆ ಬಾರಿಸಿದ್ದು? ನಾನವನ ರಥ ಮುರಿದೆನಂತೆ ಅಲ್ಲಾ, ಎಂಥಾ ರಥ! ನಮ್ಮ ಮಾವ ಇಲ್ಲಿರುತಿದ್ದರೆ ನನಗೆ ದಿನಾ ಅಂತಹ ರಥ ಮಾಡಿ ಕೊಡುತ್ತಿದ್ದರು ಅದರೆ ನನಗೆ ಪಸ್ಪ ಇನ್ನೊಂದು ಬೊಂಬೆ ತಂದು ಕೊಡುವವರೆಗೂ ಆಡಲಿಕ್ಕೆ ಬೊಂಬೆಯೇ ಇಲ್ಲ. ಬೊಂಬೆ ಇಲ್ಲದ ಮೇಲೆ ಎಂಥಾ ಆಟ! ಆ ಮೂಲೆಯಿಂದ ಧೂಳು ಹಿಡಿದ ಚಂದನದ ಬೊಂಬೆ ತಂದುಕೊಟ್ಟು, ಇದನ್ನು ಹಿಡಿದುಕೊಂಡು ಆಡು ಎಂದಿದ್ದರು ಅಮ್ಮ. ನಂಗೇನು ಬೇಡ ಆ ಕರೀ ಮೂತಿ ಬೊಂಬೆ. ಒಂದು ಕೈ ಬೇರೆ ಮುರಿದಿದೆ" ಅದರದು." ಹೀಗೆ ದೃಷ್ಟಿ ಹೊರಗಿನ ಆಕಾಶವನ್ನೇ ದಿಟ್ಟಿಸುತ್ತಿದ್ದರೂ ಮನಸ್ಸಿನಲ್ಲಿ ವಿಚಾರ ತರಂಗಗಳು ಒಂದರ ಹಿಂದೊಂದರಂತೆ ಎದ್ದು ಕಸ್ತೂರಿಯ ಮುಖವನ್ನು ಹುಳಿ ಹುಳಿಯಾಗಿಸಿತ್ತು.

ಹಿಂದಿನ ದಿನ ಅನಂತ ಯಾರಿಂದಲೋ ಚಂಡಲಿಕೆ ಮತ್ತು ಹಿಡಿಕಡ್ಡಿಯಿಂದ ಸುಟ್ಟದೊಂದು ರಥ ಮಾಡಿಸಿಕೊಂಡು ಬಂದು 'ಅಡೋಣ, ಬಾ' ಎಂದಿದ್ದ. ಹಿತ್ತಿಲಲ್ಲಿ ಕಡಿದುಹಾಕಿದ್ದ ಬಾಳೆಯ ಗಿಡದಿಂದ ಹಾಳೆಯ ತುಂಡೊಂದನ್ನು ಬಿಡಿಸಿಕೊಂಡು ಬಂದು ರಥದಲ್ಲಿ ಅಡ್ಡಲಾಗಿರಿಸಿ ಅದರ ಮೇಲೆ ಕಸ್ತೂರಿಯ ಬೊಂಬೆಯನ್ನಿರಿಸಿ ರಥವನ್ನೆಳೆಯುವ ಕಾರ್ಯದಲ್ಲಿ ತೊಡಗಿದರು. ಒಂದೆರಡು ಸುತ್ತು ತೆಗೆದ ಬಳಿಕ ಕಸ್ತೂರಿ, ಕೋಣೆಯ ಒಂದು ತುದಿಯಲ್ಲಿದ್ದ ಕುರ್ಚಿಯ ಸುತ್ತಲೂ ರಥವನ್ನು ಎಳೆದು ದೊಡ್ಡ ಸುತ್ತು ತೆಗೆಯೋಣವೆಂದಳು. ಅನಂತ ನಿರಾಕರಿಸಿ ಆ ಕೋಣೆಯಲ್ಲಿದ್ದ ಮೇಜಿನ ಸುತ್ತಲೂ ತಾನು ಎಳೆಯುವವನಿದ್ದೇನೆಂದು ಹೇಳಿದ. ಮೊದಲು ಕುರ್ಚಿಯ ಸುತ್ತಲೂ ಎಳೆದ ಬಳಿಕ ಮೇಜಿನ ಸುತ್ತು ಎಳೆಯೋಣ ಎಂದಳು ಕಸ್ತೂರಿ. ಅನಂತ ತಾನು ಹೇಳಿದಂತೇ ಆಗಬೇಕೆಂದ. ತನಗೆ ಸೋಲಾಗಬಾರದೆಂದು ಮೇಜು ಕುರ್ಚಿ ಎರಡನ್ನೂ ಬಳಸಿ ದೊಡ್ಡ ಸುತ್ತು ತೆಗೆಯೋಣವೆಂದಳು. ಅದನ್ನೂ ಒಪ್ಪದೆ ಅನಂತ "ಈ ಮೇಜಿನ ಸುತ್ತ ನಾನೇ ಎಳೀತೇನೆ" ಎಂದ. ಸಾಲದುದಕ್ಕೆ "ರಥ ನಂದು, ಬೇಕಾದಂತೆ ಎಳೆಯುವುದು ನನ್ನ ಖುಷಿ" ಎಂದ. ಕಸ್ತೂರಿಗೆ ಸಿಟ್ಟು ಬಂತು. 'ಬೊಂಬೆ ನಂದು. ರಥ ನಿಂಗೆ ಬೇಕಾದ ಹಾಗೇ ಎಳೆದುಕೋ; ನನ್ನ ಬೊಂಬೆ ನಾ ಕೊಡೋದಿಲ್ಲ" ಬೊಂಬೆಯನ್ನು ತೆಗೆದುಕೊಳ್ಳಲು ರಥದೆಡೆಗೆ ಸುಗ್ಗಿದಳು. ಕಾಲ ಮಿಂಚಿಹೋಗಿತ್ತು. ಕಂಥಾನಕ್ಕೆ ವೇಳೆ ಇರಲಿಲ್ಲ. ಅವಳ ಮಾತನ್ನು ಕಡೆಗಣಿಸಿ ಅನಂತನಾಗಲೇ ರಥವನ್ನೆಳೆಯಲು ಪ್ರಾರಂಭಿಸಿದ್ದ. ಅವಸರದಿಂದ ಬೊಂಬೆಯನ್ನು ಹೊರಕ್ಕೆಳೆಯುವಾಗ, ಹಿಡಿಕಡ್ಡಿಗಳು ಒಂದೆರಡು ಕಡೆಗಳಲ್ಲಿ ಕಿತ್ತಬಂದು ರಥ ಕುಸಿದುಬಿತ್ತು. ಅನಂತನಿಗೂ ಸಿಟ್ಟು ಕೆರಳಿತು. ಮನೆಯಲ್ಲಿ ತಮ್ಮ ಅಡೋಣವೆಂದು ಕರೆದಾಗಲೂ ಕೇಳದೆ ಜಂಭದಿಂದ ರಥವನ್ನು ಹಿಡಿದುಕೊಂಡು ಕಸ್ತೂರಿಯ ಮನೆಗೆ ಬಂದಿದ್ದ. ಇಷ್ಟು ಸ್ವಲ್ಪ ಹೊತ್ತಿನೊಳಗೇ ರಥ ಮುರಿದುಹೋಗಬೇಕೆ? ಪ್ರತೀಕಾರ ಬುದ್ಧಿ ಅನಂತನಲ್ಲಿ ಜಾಗೃತವಾಯಿತು. ಕಸ್ತೂರಿಯ ಕೈಯಲ್ಲಿದ್ದ ಬೊಂಬೆಯನ್ನು ಕಿತ್ತುಕೊಳ್ಳಲೆಂದು ಜೋರಾಗಿ ಎಳೆದ. ಆದರೆ ಕಸ್ತೂರಿಯ ಮುಷ್ಟಿ ಬೊಂಬೆಯ ತಲೆಯನ್ನು ಭದ್ರವಾಗಿ ಹಿಡಿದಿತ್ತು. ಅದೊಂದು ಪಿಂಗಾಣಿ ತಲೆಯ ವಸ್ತ್ರದ ವೈಯ್ಯ ಬೊಂಬೆ. ರುಂಡ ಕಸ್ತೂರಿಯ ಕೈಯಲ್ಲುಳಿದರೆ ಮುಂಡ ಕಳಚಿ ಅನಂತನ ಕೈಗೆ ಬಂತು. ಹೀಗಾಗಬಹು

(೧೨ನೇ ಪುಟ ನೋಡಿರಿ)

41 ವರ್ಷಗಳ ಭದ್ರ ಹಾಗೂ ಸಮರ್ಥ ಬೇಂಕಿಂಗ್ ಸೇವೆ.

ದಿ. ಪಾಂಗಾಳ ನಾಯಕ್ ಬೇಂಕ್ ಲಿ.

ನಮ್ಮ 3 ವರ್ಷ ವ್ಯಾದೆಯ ಕೇಶ್ ಸರ್ಟಿಫಿಕೇಟುಗಳಲ್ಲಿ ಠೇವಣಿ ಮಾಡಿರಿ: ಬಡ್ಡಿ ಸೇಕಡಾ 5ರಂತೆ: ರೂ. 87—00 3 ವರ್ಷಗಳ ಅಂತ್ಯದಲ್ಲಿ ಬಡ್ಡಿ ಕೂಡಿ ರೂ. 100—00 ಒದಗಿಸುವುದು.

ಕರೆ, ಚಿಕ್ಕ ವ್ಯಾದೆ, ನಿರಖು ಠೇವಣಾತಿಗಳ ಮೇಲೆ ಆಕರ್ಷಣೀಯ ಶರ್ತಗಳು: ಬಡ್ಡಿ ಸೇಕಡಾ 5½ರ ವರೆಗೆ.

ತಾ. 1—4—1961ರಿಂದ ಸೇವಿಂಗ್ಸ್ ಬೇಂಕ್ ಖಾತೆಗಳ ಮೇಲೆ ಬಡ್ಡಿ ಸೇಕಡಾ 3ರಂತೆ.

THE PANGAL NAYAK BANK LTD.

Estd: 1920

ESTD. 1921 ಸ್ಥಾಪನೆ

NAVAYUGA
KANNADA WEEKLY,
UDIPI.

Founder:
Late Sri A. B. Shetty
Former Minister for Public Health, Govt. of Madras & Govt. of Mysore.

ನವಯುಗ

ರಾಷ್ಟ್ರೀಯ ವಾರಪತ್ರಿಕೆ
ಉಡುಪಿ

ಗೌರವ ಸಂಪಾದಕರು:
ಎಸ್. ಗೋಪೀಚಂದ ರಾವ್,
ವಿದ್ವಾನ್.
ಬಿ. ಕಾಮರಾಯ ಶೆಟ್ಟಿ,
ಬಿ. ಎ., ಎಲ್.ಟಿ.

ಸಂಚಾಲಕ ಸಂಪಾದಕರು:
ಕೆ. ಹೊನ್ನಗ್ಯ ಶೆಟ್ಟಿ.

○

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-50
ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3-50

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

○

1962ನೇ ಜನವರಿ 26

ನವಯುಗದ
ಪ್ರಜಾರಾಜ್ಯ
ವಿಶೇಷಾಂಕ

ಎಂದಿಗಿಂತಲೂ ಮಿಗಿಲಾದ ರೀತಿಯಲ್ಲಿ ಸಚಿತ್ರವಾಗಿಯೂ ಆಕರ್ಷಣೀಯವಾಗಿಯೂ ಪ್ರಕಟವಾಗಲಿದೆ.

ಸಂಘ, ಸಂಸ್ಥೆಗಳ ಸಂಕ್ಷಿಪ್ತ ಪರಿಚಯವನ್ನೂ ಕೊಡಲಾಗುವುದು.

ಜಾಹೀರಾತು ದರಗಳಿಗೂ ಹೆಚ್ಚಿನ ವಿವರಗಳಿಗೂ ಬರೆಯಿರಿ.

ಮೆನೇಜರ್,
ನವಯುಗ, ಉಡುಪಿ

ರವೀಂದ್ರವಾಣಿ—ಲೇಖಾಂಕ ೨೭ – ವಿಶ್ವಕವಿ ರವೀಂದ್ರನಾಥ ಟಾಗೋರ್

ಕರ್ಮ ಸಾಧನೆಯಿಂದ ಪರಮಾತ್ಮನ ಪ್ರಾಪ್ತಿ

ಅನುವಾದಕರು: ಕೆ. ಎನ್. ಭಟ್, ಶಿರಾಡಿಪಾಲ್.

ಪಶ್ಚಿಮದ, ಮಹಾದೇಶಗಳಲ್ಲಿ ಆತ್ಮವು ಬಹಿರ್ಮುಖವಾದ ಪ್ರವೃತ್ತಿಗಳಲ್ಲಿ ತನ್ನ ವಿಸ್ತಾರವನ್ನು ಹುಡುಕುತ್ತಿರುವುದು ಕಂಡುಬರುವುದು. ಅದರ ವಿಶೇಷತೆಯು ವಿಸ್ತೃತ ಕ್ಷೇತ್ರಗಳಲ್ಲಿ ಶಕ್ತಿ ಸಂಗ್ರಹ ಮಾಡುವುದೇ ಆಗಿರುವುದು. ಅಲ್ಲಿ ಪೂರ್ಣತೆಯನ್ನು ಹೊಂದಲಪೇಕ್ಷಿಸುವ ಆತ್ಮದ ಹಸಿವನ್ನು ಉಪೇಕ್ಷಿಯ ದೃಷ್ಟಿಯಿಂದ ನೋಡಲಾಗುವುದು. ಈ ಪೂರ್ಣತೆಯೆಂಬುದನ್ನು ಪಾಶ್ಚಿಮಾತ್ಯರು ಒಪ್ಪುವುದೇ ಇಲ್ಲ. ಪಶ್ಚಿಮದ ವಿಜ್ಞಾನವು ಜಗತ್ತಿನ ವಿಕಾಸದ ಚರ್ಚೆಯನ್ನು ಮಾಡುತ್ತಲಿರುವುದು. ಈಶ್ವರನು ಪೂರ್ಣ ರೂಪದಿಂದ ಪೂರ್ಣನಾಗಿಯೇ ಇರುವನೆಂದು, ಅವರು ತಿಳಿದುಕೊಂಡಿಲ್ಲ! ಈಶ್ವರನೂ ವಿಕಾಸ ಹೊಂದುತ್ತಿದ್ದಾನೆ! ಎಂದೇ ಅವರು ಭಾವಿಸುವರು.

'ಅಳತೆ ಮಾಡುವ, ಅಥವಾ ತೂಕ ಮಾಡುವ ಒಂದು ಯಂತ್ರದ ಮೂಲಕ, ವಿಶ್ವವನ್ನು ತೂಕ, ಯೂ, ಅಳತೆ ಮಾಡುವುದು, ಸಾಧ್ಯವಿಲ್ಲ. ವಿಶ್ವವು ಪೂರ್ಣವಾಗಿದೆ.' ಎಂಬ ಈ ವಿಚಾರ ಅವರಿಗೆ ತಿಳಿದೇ ಇಲ್ಲ!

ಸಂಗೀತವು ಪೂರ್ಣತೆಯ ಪಥದಲ್ಲಿಗಾಯನ ರೂಪದಿಂದ ವಿಕಸಿತವಾಗುತ್ತಿರುವಂತೆ, ಬ್ರಹ್ಮನು, ಅತಂಲನೀಯನೂ, ಪೂರ್ಣನೂ ಆಗಿರುವನು. ಮತ್ತು ಅವನು ವಿಕಾಸಪೂರ್ಣನೂ ಆಗಿರುವನು. ನಾವು ಒಂದು ಗೀತವನ್ನು ಕೇಳುತ್ತಿರುವಾಗ, ಆ ಗೀತದ ಸ್ವರಗಳ ಏರಿಳಿತಗಳನ್ನು ಅನುಭವ ಮಾಡುತ್ತೇವೆ. ಮತ್ತು ಗೀತದ ವಿಕಾಸವನ್ನು ಕಾಣುತ್ತೇವೆ. ಆದರೆ ಆಗೀತವು ಗಾಯಕನ ಆತ್ಮದಲ್ಲಿ, ಅದರ ವಿಕಾಸದ ಸೀಳಿಯಲ್ಲಿಯೂ, ಪೂರ್ಣವಾಗಿಯೇ ಇರುವುದು.

ವಿಕಸಿತವಾಗುವ ಕ್ರಿಯೆಯನ್ನೇ ಸತ್ಯವೆಂದು ನಂಬುವ ಪಾಶ್ಚಿಮಾತ್ಯರು ಶಕ್ತಿ ಸಂಗ್ರಹದಲ್ಲಿ ಉನ್ಮತ್ತರಾಗಿರುತ್ತಾರೆ. ಅವರು ಎಲ್ಲವನ್ನೂ ಶಕ್ತಿಯ ಪ್ರಯೋಗ ಎಂದಲೇ ಪಡೆಯುವ ಪ್ರತಿಜ್ಞೆ ಮಾಡಿರುವರು. ಅಹಂಕಾರ, ಮತ್ತು ಅಜ್ಞಾನವು ಅವರಿಗೆ ಕರ್ತಾರರೆಂಬ ಅಭಿಮಾನವನು ಕೊಟ್ಟಿರುವುದು. ಅವರಿಗೆ ಪೂರ್ಣತೆಯ ಸೌಂದರ್ಯದ ಬಗೆಗೆ ಯಾವ ಪ್ರೇಮವೂ ಇಲ್ಲ. ಮತ್ತು ಪ್ರಕೃತಿಯ ಯಾವ ಕಾರ್ಯವನ್ನೂ ಅಂತಿಮ ಸತ್ಯವೆಂದು ಅವರು ಒಪ್ಪುವುದಿಲ್ಲ.

ನಮ್ಮ ದೇಶದಲ್ಲಿ ಇದಕ್ಕೆ ವಿರುದ್ಧವಾದ ಭಾವನೆ ಇರುವುದು. ನಾವು ಆಂತರಿಕ ಶಕ್ತಿಗಳಿಗೇ ಪ್ರಧಾನತೆಯನ್ನು ಕೊಡುವವರಾಗಿದ್ದು, ಆ ಮೂಲಕ ಎರಡನೆಯ ಅಂತದಲ್ಲಿರುತ್ತೇವೆ. ಶಕ್ತಿ ಸಂಗ್ರಹ, ವಿಸ್ತಾರ ಇವುಗಳನ್ನು ನಾವು ಉಪೇಕ್ಷೆ ಮಾಡುವವರಾಗಿರುತ್ತೇವೆ. ನಾವು ಕೇವಲ, ಧ್ಯಾನ, ಮನನ, ಚಿಂತನಗಳ ಮೂಲಕ ಬ್ರಹ್ಮನನ್ನು ಹೊಂದುವ ಕಲ್ಪನೆಯನ್ನು ಮಾಡುತ್ತೇವೆ. ಇದಕ್ಕಿಂತ ಹೊಂದಿನ ರೂಪದ ವಿಸ್ತಾರವನ್ನು ನಾವು ಅನುಭವ ಮಾಡಲಾರೆವು. ಈ ಕಾರಣದಿಂದ ನಾವು ನಮ್ಮ ಶೋಧಕರಲ್ಲಿ ಆತ್ಮಿಕ ಮಹೋನ್ನತ್ತತೆಯನ್ನು ಕಾಣುತ್ತೇವೆ. ಪಾಶ್ಚಿಮಾತ್ಯರಾದರೆ, ನಿಯಮಗಳ ಬಂಧನವನ್ನೂ ಕೂಡ, ಸ್ವೀಕರಿಸುವುದಿಲ್ಲ. ಮತ್ತು ಅವರ ಕಲ್ಪನೆಯು ವೇಗದಿಂದ ಮುಂದುವರಿಯುವುದು. ಅವರ ಬುದ್ಧಿಯು 'ಈಶ್ವರನ ಸೃಷ್ಟಿಯು, ಈಶ್ವರನಿಂದ ಪ್ರತ್ಯೇಕ'ವೆಂದು ಸಾಧಿಸಲು, ಬಹು ಪ್ರಯತ್ನ ಮಾಡುವುದು. ಆದರೆ ಇದು ತನಕವೂ ಅವರು ಮನುಷ್ಯನ ಚಾರಿತ್ರ್ಯದ ಉತ್ಥಾನ ಯಾ ಪತನದ ರೀತಿಯನ್ನು ಕಂಡುಹಿಡಿಯುವ ಒಂದೇ ಒಂದು ಯಂತ್ರವನ್ನಾದರೂ, ಕಂಡುಹಿಡಿದಿಲ್ಲ.

ನಿಜವಾದ ಅಧ್ಯಾತ್ಮಿಕ ಪ್ರವೃತ್ತಿಯೆಂದರೆ, ಅಂತರಕ ಮತ್ತು ಬಾಹ್ಯ ಶಕ್ತಿಗಳ ಸಮತೋಲದ ಸಂಬಂಧದಿಂದ ಕೂಡಿರುವುದು. ಸತ್ಯವೆಂಬುದು ನಿಯಮಗಳಿಂದಲೂ ಕೂಡಿದ್ದು, ಆನಂದವೂ ಕೂಡ ಅದರಲ್ಲೇ ಇರುವುದು. ಒಂದು ಕಡೆ ನಮ್ಮ ಗೀತಾಚಾರ್ಯರು 'ಭಯೂದಸ್ಯಾಗ್ನಿಸ್ತಪತಿ' ಅಂದರೆ, ಇದರ ಹೆದರಿಕೆಯಿಂದಲೇ ಅಗ್ನಿಯು ಪ್ರಜ್ವಲಿಸುತ್ತಿದೆ. ಎಂದು ಹೇಳಿರುವರು. ಇನ್ನೊಂದು ಕಡೆ—"ಆನಂದಾದ್ಧ್ಯೇವ ಖಲ್ವಿಮಾನಿ ಸರ್ವಾಣಿ ಭೂತಾನಿ ಜಾಯಂತೇ" ಅರ್ಥಾತ್—ಆನಂದದಿಂದಲೇ ಎಲ್ಲಾ ಜೀವಿಗಳೂ ಜನ್ಮ ಧಾರಣೆ ಮಾಡುತ್ತವೆ. ಬ್ರಹ್ಮನು ಒಂದು ಕಡೆಯಿಂದ ತನ್ನ ಸತ್ಯವೆಂಬ ನಿಯಮದಿಂದ ಕಟ್ಟಲ್ಪಟ್ಟಿರುತ್ತಾನೆ. ಆದರೆ, ಇನ್ನೊಂದು ಕಡೆಯಿಂದ ಆತನು ತನ್ನ ಆನಂದದಲ್ಲಿ—ಸ್ವತಂತ್ರನಾಗಿರುತ್ತಾನೆ.

ಸಿತಾರದ ತಂತಿಗಳು ಸ್ವರಗಳಿಂದ ಕಟ್ಟಲ್ಪಟ್ಟು ಸಂಗೀತ ರೂಪೀ ಆನಂದವನ್ನು ಕೊಡುವಂತೆ, ನಾವೂ ಕೂಡ ಸತ್ಯದ ನಿಯಮಗಳ ಮುಂದೆ ತಲೆ ಬಾಗಿದರೆ ಅದು ಸ್ವಾತಂತ್ರ್ಯ ರೂಪೀ ಆನಂದವನ್ನು ಕೊಡ ಬಲ್ಲದು. ಅದನ್ನು ನಾವು ಅನುಭವಿಸಬಲ್ಲೆವು. ಸಿತಾರದ ತಂತಿಗಳು ಪೂರ್ಣವಾಗಿ ಬಿಗಿಯಲ್ಪಟ್ಟಾಗ ಮಾತ್ರ ಅದರಿಂದ ಸ್ವರ ಸಾಧನೆ ಸಾಧ್ಯವಾಗುವುದು. ರಾಗಗಳ ಸ್ವರಗಳು ಹೊರಡುವುವು ಆಗ ಆ ತಂತಿಯು, ಸಂಗೀತದ ಸ್ವರಗಳನ್ನು ಯಥಾನುಕೂಲವಾಗಿ ಉತ್ಪತ್ತಿ ಮಾಡುತ್ತ, ಪ್ರತಿಯೊಂದು ಸ್ವರದಲ್ಲಿಯೂ, ಸ್ವಾತಂತ್ರ್ಯವನ್ನುಂಟುಮಾಡಲು ಪ್ರೇರಕವಾಗುತ್ತದೆ. ಒಂದು ದೃಷ್ಟಿಯಿಂದ ನೋಡಿದಾಗ, ಬಂಧನದಲ್ಲಿ ಪೂರ್ಣವಾಗಿ ಬಿಗಿಯಲ್ಪಟ್ಟ ಕಾರಣದಿಂದಲೇ ಆ ತಂತಿಗಳು ಸಂಗೀತದ ರಾಗಾನಂದದಲ್ಲಿ ಪೂರ್ಣವಾಗಿ ವಿಹರಿಸಬಲ್ಲವಾಗಿರುತ್ತವೆ. ಒಂದು ವೇಳೆ, ಆ ತಂತಿಗಳು ಸ್ವರಯುಕ್ತವಾದ ಸ್ಥಾನಗಳಲ್ಲಿ ಕಟ್ಟಲ್ಪಡದೆ ಹೋಗಿದ್ದರೆ, ಆ ಬಂಧನವು ಯೋಗ್ಯವಾದ ಬಂಧನವಾಗುತ್ತಿರಲಿಲ್ಲ. ಆಗಲಾರದು. ಆದರಿಂದ ಯೋಗ್ಯವಾದ ಸ್ವರಗಳು ಪ್ರತಿಧ್ವನಿತವಾಗಲಾರವು. ತಂತಿಗಳ ಬಂಧನವು ಸ್ವಲ್ಪ ಮಾತ್ರವೇ ಶಿಥಿಲವಾದರೂ, ಆ ತಂತಿಗಳಿಗೆ ಸಂಗೀತದ ಮೂಲಕ ಪ್ರಾಪ್ತವಾಗುವ ಸ್ವಾತಂತ್ರ್ಯವು ಲಭಿಸಲಾರದು ಆದುದರಿಂದ, ಆ ಬಂಧನವು ಬಿಗಿಮಾಗಬೇಕು. ಅದು ಬಿಗಿಯಾದರೆ ಮಾತ್ರ ,ಸ್ವಾತಂತ್ರ್ಯದ ಮೂಲಕ ಪ್ರಾಪ್ತವಾಗುವ ಆನಂದವು ಪ್ರಾಪ್ತವಾಗಬಹುದು.

ನಮ್ಮ ಕರ್ತವ್ಯದ ತಂತಿಗಳು, ಅಂದರೆ ಅವುಗಳ ಸ್ವರವು ಸತ್ಯದ ನಿಯಮಗಳೊಡನೆ ಬೆರೆಯುವ ತನಕ ಬಂಧನವೆಂದು ಹೇಳಲ್ಪಡುವುವು. ಕರ್ಮ ಹೀನವಾಗಿ ಶಿಥಿಲವಾದ ಕರ್ತವ್ಯ ತಂತಿಗಳನ್ನು ನಾವು ಸಮರ್ಥ ಸ್ವತಂತ್ರವೆಂದು ಹೇಳಲಾರೆವು. ಶಿಥಿಲತ್ವವು ಕರ್ಮ ಹೀನತ್ವವನ್ನುಂಟುಮಾಡುವುದೇ ಹೊರತು ಸ್ವಾತಂತ್ರ್ಯವನ್ನಲ್ಲ. ಈ ಕಾರಣದಿಂದಾಗಿ ನಾನು ಹೇಳುವುದೇನೆಂದರೆ, ಸತ್ಯ ಅಥವಾ ಧರ್ಮದ ಶೋಧದಲ್ಲಿ ಪ್ರತಿಯೊಂದು ಪ್ರಯತ್ನವೂ ವಿಶ್ವಾತ್ಮನ ಸ್ವರದೊಡನೆ ಸ್ವರದೊಡನೆ ಸ್ವರವಾಗಿ ಸೇರಿಸಲ್ಪಟ್ಟು ಮುಂದುವರಿಯ ಬೇಕಾಗಿದೆ.' ಆ ಪ್ರಯತ್ನದ ಉದ್ದೇಶವು—ಯಾವುದು ಮಾಡಲ್ಪಡುವುದೋ ಅದೆಲ್ಲವೂ 'ಬ್ರಹ್ಮಾರ್ಪಣ'ವೆಂಬ ಭಾವನೆ ಮಾಡಬೇಕು. ಅರ್ಥಾತ್, ಆತ್ಮಕ್ಕೆ ತನ್ನ ಕರ್ಮಗಳ ಮೂಲಕವೇ ಆತ್ಮಾರ್ಪಣೆಮಾಡಬೇಕಾಗುವುದು. ಈ ಅರ್ಪಣವೇ ಆತ್ಮದ ಸಂಗೀತವಾಗಿದೆ. ಇದರಲ್ಲಿಯೇ ಅದರ ಸ್ವಾತಂತ್ರ್ಯವಿರುವುದು. ಮಾಡತಕ್ಕ ಪ್ರತಿಯೊಂದು ಕರ್ಮವೂ ಬ್ರಹ್ಮಾರ್ಪಣದ ಭಾವನೆಯಿಂದ ಮಾಡಲ್ಪಟ್ಟರೆ, ಆಗ ಮಾತ್ರ ಆನಂದ ಪ್ರಾಪ್ತವಾಗುವುದು ಆತ್ಮವು ಪ್ರತಿ ಕ್ಷಣಕ್ಷಣಕ್ಕೂ ತನ್ನ ಅಪೇಕ್ಷೆಗಳ ಕಡೆಗೆ ಲಕ್ಷ್ಯಕೊಡುತ್ತ ಇರದಿದ್ದಾಗ ಪೂರ್ಣತೆಯು, ಲಭಿಸುವುದು, ಸ್ವಾತಂತ್ರ್ಯವೂ ಲಭಿಸುವುದು ಮತ್ತು ಈ ಜಗತ್ತು ಈಶ್ವರನ ರಾಜ್ಯವಾಗಿ ಮಾರ್ಪಡುವುದು.

—ಸಶೇಷ.



ನಿಮ್ಮ
ಕನಸುಗಳಿಗೆ
ಸಹಾಯ ಅವಶ್ಯಕ

ಉಳಿತಾಯ—ಕ್ರಮವಾದ
ಉಳಿತಾಯವೇ ಕನಸನ್ನು
ನನಸಾಗಿ ಪರಿವರ್ತಿಸಲು
ಒಳಿತಾದ ಮಾರ್ಗ

ನಿಮ್ಮ ಹಣವನ್ನು ಕೆನರಾ ಬ್ಯಾಂಕಿನಲ್ಲಿ ಉಳಿಸಿ
ಫಿಕ್ಸೆಡ್ ಡಿಪಾಸಿಟ್ ಮೇಲೆ ಶೇ. 5ರ ವರೆಗೆ
ಸೇವಿಂಗ್ಸ್ ಖಾತೆಯ ಮೇಲೆ ಶೇ. 3ರ ವರೆಗೆ
ಬಡ್ಡಿ ಸಂಪಾದಿಸಿರಿ

ಕ್ಯಾಷ್ ಸರ್ಟಿಫಿಕೇಟ್ ಮತ್ತು ಕ್ಯುಮುಲೇಟಿವ್ ಡಿಪಾಜಿಟ್‌ಗಳ
ಮೇಲೆ ಆಕರ್ಷಕ ಬಡ್ಡಿ ಸಂಪಾದಿಸಿರಿ

ನಿಮ್ಮ ಕನಸುಗಳು ನನಸಾಗಲು ನಮ್ಮ
ಸಹಾಯವನ್ನು ಪಡೆಯಿರಿ

ಕೆನರಾ ಬ್ಯಾಂಕ್ ಲಿ.

(ಸ್ಥಾಪನೆ. 1906)

— ನಿಮ್ಮ ಸೇವೆಯಲ್ಲಿ 115 ಶಾಖೆಗಳು —

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು. ರಾಘವೇಂದ್ರ ಆಚಾರ್ಯ, ಎಂ.ಎ.)

ಸಾಮಾನ್ಯ ರೋಗಗಳು
(ಡಾ. ಕೆ.ಎಲ್. ಐತಾಳ, ಎಂ.ಬಿ.ಬಿ.ಎಸ್)
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.
ಉಡುಪಿಯಲ್ಲಿ ಪ್ರತಿಗಳುಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ, ಉಡುಪಿ.

ಸಮಸ್ಯೆಯ ಮೇಲೊಂದು ಕ್ಷಕಿರಣ

ಅಂಜದೇವ ದ್ವೀಪ ಯಾರದು?

ಕಾರವಾರದಿಂದ ಎರಡು ಮೈಲು ಹಾಗೂ ಗೋವೆಯಿಂದ ಹತ್ತು ಮೈಲು ದೂರದಲ್ಲಿರುವ ಅಂಜದೇವ ನಡುಗುಡ್ಡೆಯ ಬಳಿಯಲ್ಲಿ ಪೋರ್ಚುಗೀಸ ಸೈನ್ಯ ಪಡೆಯು ಸಂಗ್ರಹಗೊಂಡುದು ಮತ್ತು ಸಬರ್ವತಿ ಪ್ರಯೂಜಿಕರ ಹಡಗ ಹಾಗೂ ಕಾರವಾರದ ವಿಮಾನಗಾರನೊಬ್ಬನ ಮೇಲೆ ಗುಂಡೆಸೆದುದರಿಂದ, ಈ ದ್ವೀಪದ ಬಗ್ಗೆ ಚರ್ಚೆ ನಡೆಯಹೊಗಿದೆ. ಈ ನಡು ಗುಡ್ಡೆಯು ತಮ್ಮದೆಂದು ಪೋರ್ಚುಗೀಸರು ಭಾವಿಸಿದ್ದಾರೆ; ಮತ್ತಲ್ಲಿ ಸೈನ್ಯ ಶೇಖರಿಸಲು ತೊಡಗಿದ್ದಾರೆ. ಜನವಾಸವಿಲ್ಲದ ಆ ಪುಟ್ಟ ದ್ವೀಪದ ಮೇಲೆ ಭಾರತವಾದರೂ ತನ್ನ ಸ್ವಭುತ್ವ ಸ್ಥಾಪಿಸಲು ಮುಂದೆ ಬಂದಿಲ್ಲ. ಆದರೆ, ನ್ಯಾಯವಾಗಿ ಅದು ಸಂಪೂರ್ಣ ಭಾರತಕ್ಕೆ ಸೇರಿದುದು; ಅಲ್ಲಿ ಪೋರ್ಚುಗೀಸರ ಕಾರಭಾರ ಪಡೆದರೆ, ಅದು ಅಕ್ರಮವನೆಸುವುದು.

ಉತ್ತರಕನ್ನಡ ಜಿಲ್ಲೆಯ ಸುಪ್ರಸಿದ್ಧ ಇತಿಹಾಸಜ್ಞರಾದ ಶ್ರೀ ಸೆವೆರಿನ್ ಸಿಲ್ವರು ಈ ಪ್ರಕರಣದ ಮೇಲೆ ತಿಳಿಯೂದ ಬೆಳಕನ್ನು ಜಿಲ್ಲಿದ್ದಾರೆ. ಸುಮೇರಿಯನ್ನರೂ ಇಜಿಪ್ಟಿಯನ್ನರೂ ಫೋನೀಸಿಯನ್ನರೂ ವ್ಯಾಪಾರದ ಉದ್ದೇಶದಿಂದ ಮೊದಲಿನಿಂದಲೂ ಈ ಅಂಜದೇವ ದ್ವೀಪಕ್ಕೆ ಅಗಾಗ ಬಂದು ಹೋಗುತಿದ್ದರು. ಈ ದ್ವೀಪದಲ್ಲಿದ್ದ ಗಂಧದ ಸಸಿಗಳನ್ನು ಇಜಿಪ್ಟವಲ್ಲಿ ನಾಟುವುದಕ್ಕಾಗಿ ಫರೋಂಕಾರ ಕಾಲದಲ್ಲಿ ಒಯ್ಯುತಿದ್ದರು. ದ್ವೀಪದ ಪ್ರಖ್ಯಾತಿಯನ್ನು ಕೇಳಿದ ವಾಸ್ಕೋಡ ಗಾಮನು ಇದನ್ನು ಸಂದರ್ಶಿಸುವ ಹಂಬಲವನ್ನಿಟ್ಟುಕೊಂಡಿದ್ದರೆ, ಆಶ್ಚರ್ಯವಿಲ್ಲ.

ಭಾರತಕ್ಕೆ ಜಲ ಮಾರ್ಗವಾಗಿ ಮೊತ್ತಮೊದಲು ಕಾಲಿಟ್ಟ ಪೋರ್ಚುಗೀಸ ನಾವಿಕ ವಾಸ್ಕೋಡಗಾಮನು ೧೪೯೮ರಲ್ಲಿ ಅಂಜದೇವ ದ್ವೀಪಕ್ಕೆ ಬಂದು ಇಲ್ಲಿ ಸುಮಾರು ಹದಿನೈದು ದಿವಸಗಳ ಕಾಲ ಉಳಿದುಕೊಂಡಿರಬೇಕು. ಆಗಿನ ಕಾಲದಲ್ಲಿ ವಿಜಾಪುರವು ನಾಕಪಡೆಯ ಅಧಿಪತಿಯಾಗಿದ್ದ ಬ್ರೇಜಿಲಿನ ಜೋಟಿಮೋಜಾನು ಹೊನ್ನಾವರದಿಂದ ಅಂಜದೇವಕ್ಕೆ ಬಂದನು. ಅತಿಥಿಗೆ ಕಟ್ಟಿನ ಹೊರೆಯ ಕಾಣಿಕೆಯನ್ನು ಅರ್ಪಿಸಿದನು. ಭಾರತದ ಕರಾವಳಿಯ ಸಂಪೂರ್ಣ ಪರಿಜ್ಞಾನವಿರುವ ಜೋಟಿಮೋಜಾನನ್ನು ಉಪಾಯಾಂತರದಿಂದ ಬಂಧಿಸಿ, ಸ್ವದೇಶಕ್ಕೆ ಒಯ್ದು ಅಲ್ಲಿ ಕ್ರೈಸ್ತ ಮತ ದೀಕ್ಷೆಯನ್ನು ಕೊಡಿಸಿ, ಗಾಸ್ಪರ ಡಗಾಮ ಎಂದು ನಾಮಕರಣ ಮಾಡಿದನು. ಈ ಗಾಸ್ಪರ ಡಗಾಮನು ೧೫೧೦ರಲ್ಲಿ ಗೋವೆಯನ್ನು ಗೆದ್ದುಕೊಳ್ಳುವಲ್ಲಿ ಪೋರ್ಚುಗೀಸ ಸೇನಾಧಿಪತಿ ಅಲ್ಬುಕರ್ಕ್ಯೂ ಅಲ್ಬುಕರ್ಕನಿಗೆ ಸಹಾಯ ಮಾಡಿದ್ದನು.

ವಾಸ್ಕೋಡ ಗಾಮನ ನಂತರ, ೧೫೦೩ರಲ್ಲಿ ಕಾಬ್ರಲ್ ಎಂಬವನೂ ಅಂಜದೇವ ದ್ವೀಪಕ್ಕೆ ಬಂದಿದ್ದನು. ಆ ಕಾಲದಲ್ಲಿ ಇಲ್ಲಿನ ಜನಸಂಖ್ಯೆ ಇಪ್ಪತ್ತು ಮಾತ್ರ. ಅಂದಿನಿಂದ ಅಂಜದೇವವು ತನ್ನದೆಂದು ಪೋರ್ಚುಗಲ್ ವಾದಿಸುತ್ತ ಬಂತು. ಆದರೆ, ಇದಕ್ಕೆ ಯಾವ ಆಧಾರವೂ ಇಲ್ಲದೆ ಇರುವುದರಿಂದ ಇದನ್ನು ದುರಾಗ್ರಹವೆಂದೇ ಹೆಸರಿಸಬೇಕಷ್ಟೆ. ೧೬೬೨ರಲ್ಲಿ ಬ್ರಿಟಿಷ ರಾಜನಿಗೆ ಬಳುವಳಿ ದೊರೆತ ಬೊಂಬಾಯಿ ನಗರನನ್ನು ಪೋರ್ಚುಗೀಸ ಗವರ್ನರನಿಂದ ಪಡೆದುಕೊಳ್ಳಲು ಬ್ರಿಟನ್ನಿನ ನೂರ್ಲ ಬರೊಡ್ಯೂಕನು ಹಡಗುಗಳೊಂದಿಗೆ ಬಂದಾಗ, ಗವರ್ನರನ ತನಗೆ ಯಾವ ಆಜ್ಞೆಯೂ ಬಂದಿಲ್ಲವೆಂದುದರಿಂದ ಡ್ಯೂಕನು ತನ್ನ ಹಡಗಗಳನ್ನು ಈ ಅಂಜದೇವ ದ್ವಿಪದ ಬಳಿಯಲ್ಲಿ ಲಂಗರು ಹಾಕಿಸಿದ್ದನು

ಈ ಬ್ರಿಟಿಷರ ಹಡಗುಗಳಲ್ಲಿ ೯೦೦ ಸೈನಿಕರಿದ್ದರು. ಇವರನ್ನು ನಡುಗುಡ್ಡೆಯಲ್ಲಿ ಇಳಿಸುವ ಹವಣಿಕೆ ನಡೆಯುತಿತ್ತು. ಆಗ ಅಂಕೋಲೆಯಲ್ಲಿದ್ದ ಬಿಜಾಪುರ ಸುಲ್ತಾನರ ಪ್ರತಿನಿಧಿಯು ಇದಕ್ಕೆ ಅಕ್ಷೇಪವೆತ್ತಿದನು ಆಗ, ನೂರ್ಲಬರೋ ಡ್ಯೂಕನು ಈತನಿಗೆ ಕಾಣಿಕೆಗಳನ್ನು ಅರ್ಪಿಸಿ, ತಾನು ತಾತ್ಕಾಲಿಕವಾಗಿ ಅಲ್ಲಿ ಇಳಿಯಲು ಅನುಮತಿ ಪಡೆದುಕೊಂಡನು. ಅಂದರೆ, ಅದು ವಿಜಾಪುರದ ಸುಲ್ತಾನರಿಗೆ ಸೇರಿತ್ತು. ಅನಂತರ, ಮೊಗಲ ಸಾಮ್ರಾಜ್ಯದಲ್ಲಿ ಸೇರಿಕೊಳ್ಳುವುದು ನ್ಯಾಯೋಚಿತವಿದೆ.

ಮೈಸೂರಿನಲ್ಲಿ ಟಿಪ್ಪು ಸುಲ್ತಾನನು ಪಟ್ಟವೇರಿದ ನಂತರ ಈ ದ್ವೀಪದಲ್ಲಿ ಕನ್ನಡ ಜಿಲ್ಲೆಯ ಕ್ರೈಸ್ತಿಯನ್ನರೂ ಸಾರಸ್ವತರೂ ತಮ್ಮ ಇಗರ್ಜಿ ಮತ್ತು ದೇವಾಲಯಗಳ ಅಪಾರ ಸಂಪತ್ತನ್ನು ಈ ಪುಟ್ಟ ನಡುಗುಡ್ಡೆಯಲ್ಲಿ ಅಡಗಿಸಿಟ್ಟಿರುವರೆಂಬ ಸುದ್ದಿಯನ್ನು ಕೇಳಿದನು. ಆತನಿಗೆ ಇದರ ಮೇಲೆ ಧಾಳಿ ಮಾಡುವ ಹಂಬಲವಾಯಿತು. ಆದರೆ, ಇದರಿಂದ ಟಿಪ್ಪುವು ಕೆಟ್ಟು ಹೋಗುವನೆಂದು ಪೇಶ್ವೆಯರು ಎಚ್ಚರಿಸಿದ್ದರಿಂದ, ಆತನು ತನ್ನ ಆಸೆಯನ್ನು ನುಂಗಿಕೊಳ್ಳಬೇಕಾಯ್ತು. ಎಂದರೆ, ಆಗ, ಈ ದ್ವೀಪವು ಪೇಶ್ವೆಗಳಿಗೆ ಸೇರಿದುದೋ ಟೀಪುವಿಗೆ ಸೇರಿದುದೋ ಎಂಬ ವಿವಾದ ಹುಟ್ಟಿದಂತೆ ಕಾಣುತ್ತದೆ. ಬ್ರಿಟಿಷರೊಡನೆ ಕಾದಾಡಿ ಟಿಪ್ಪು ಸುಲ್ತಾನನು ಅಮರನಾದ ಮೇಲೆ, ಈಸ್ಟ್ ಇಂಡಿಯಾ ಕಂಪೆನಿಯವರು ಇದರ ವಿಷಯ ತಲೆಗೆ ಹಾಕಿಕೊಳ್ಳಲಿಲ್ಲ. ಮನ್ರೋವು ಬೇಕೆಂದಿದ್ದರೆ, ಈ ಬಗ್ಗೆ ನಿರ್ಧಾರ ಮಾಡಿಕೊಳ್ಳಬಹುದಿತ್ತು. ಆದರೆ, ಆತನಿಗೆ ಇದು ಅಗತ್ಯವೆಂದು ತೋರಲಿಲ್ಲ.

ಅಂಜದೇವ ದ್ವೀಪವು ಪೋರ್ಚುಗೀಸರಿಂದ ಗೆಲ್ಲಲ್ಪಟ್ಟಿಲ್ಲ; ಅಥವಾ ಯಾವುದೇ ಒಡಂಬಡಿಕೆಯ ಮೂಲಕ ಅವರ ಕೈಗೆ ಸೇರಿದ್ದಿಲ್ಲ. ಹಾಗಿರುವಾಗ, ಇದು ಮೊಗಲ ಸಾಮ್ರಾಜ್ಯದ ಒಂದು ಅಂಗವಾಗಿಯೇ ಉಳಿದಿತ್ತು; ಅಂದರೆ, ಭಾರತದ ಭಾಗವಾಗಿತ್ತೇ ಹೊರತು ಅದು ಪೋರ್ಚುಗೀಸರ ಕೈ ಸೇರಿದ್ದಿಲ್ಲ. ಮೊಗಲರ ನಂತರ, ಬ್ರಿಟಿಷ್ ಇಂಡಿಯಾದ ಮತ್ತೀಗ ಭಾರತ ಒಕ್ಕೂಟದ ಅವಿಭಾಜ್ಯ ಅಂಗವಾಗಿಯೇ ಅದು ಇರುವುದಲ್ಲದೆ ಅಲ್ಲಿ ಪೋರ್ಚುಗೀಸರ ಪ್ರಭುತ್ವವಿರುವುದು ಸರ್ವಥಾ ಅಸಂಭವ. ಅಂಜದೇವವು ಭಾರತಕ್ಕೆ ಸೇರಿದುದು; ಪೋರ್ಚುಗಾಲವು ಅದು ತನ್ನದೆಂದರೆ, ಅದು ದುರಾಗ್ರಹವಲ್ಲದೆ ಬೇರೆಯಲ್ಲ. ಇದನ್ನು ಒಪ್ಪಿಕೊಳ್ಳುವುದಕ್ಕೆ ಯಾವುದೇ ಐತಿಹಾಸಿಕ ದಾಖಲೆಯಿರುವುದಿಲ್ಲ. ಪೋರ್ಚುಗಲ್ಲಿನ ಈ ವರ್ತನೆಯನ್ನು ದುರ್ವರ್ತನೆಯೆನ್ನಲೇ ಬೇಕಾಗುತ್ತದೆ.

ದಿ॥ ಶ್ರೀ ಎ. ಬಿ. ಶೆಟ್ರ ಸ್ಮಾರಕ ನಿಧಿ, ಮಂಗಳೂರು.

ಈ ನಿಧಿಗೆ ಇಷ್ಟರ ವರೆಗೆ ಧನ ಸಹಾಯ ಮಾಡಿದ ಮಹನೀಯರು

	ಹೆಸರು	ರೂ ನ.ಪೈ.
1.	ಡಾ॥ ಎಸ್. ಪಿ. ಅಡ್ಯಂತಾಯ, ಬೊಂಬಾಯಿ	1150=00
2	ರಾವ್ ಬಹದ್ದೂರ್ ಕೆ. ಟಿ. ಅಳ್ವ, ಮಂಗಳೂರು	1001=00
3.	ಡಾ॥ ಎಂ. ವಿ. ಶೆಟ್ಟಿ, ಮಂಗಳೂರು	1000=00
4.	ಡಾ. ಎಂ. ಡಿ ಅಡಪ್ಪ, ಅತ್ತಾವರ ಮಂಗಳೂರು	1000=00
5.	ಶ್ರೀ ಎ. ವಿ. ಪೂಂಜ ಮತ್ತು ಶ್ರೀ ಎ. ಎಸ್. ಪೂಂಜ, ಅತ್ತಾವರ ಮಂಗಳೂರು	1000=00
6.	,, ಕೆ. ಸುಂದರ ರಾವು ಶೆಟ್ಟಿ, ಎಡ್ವೆಕೇಟ್, ಮಂಗಳೂರು	750=00
7.	,, ಕೆ. ಅನಂತ ಶೆಟ್ಟಿ, ಸರ್ಕಸ್ ಮೆನೇಜರ್, ಎಚ್. ಟಿ. ಕೊ. ಪ್ರೈವೇಟ್ ಲಿ. ಉಡುಪಿ.	501=00
8.	,, ಪಿ ಸುಬ್ಬಯ್ಯ ನಾಯಕ್, ಟ್ರಾಲ್ ಮೆನ್ಯುಫೇಕ್ಚರರ್ ಬೋಕಾರ್, ಮಂಗಳೂರು	500=00
9.	,, ಪ್ರತಾಪ ಚಂದ್ರ ಶೆಟ್ಟಿ, ಎ. ಸಿ. ಎ., ಮದ್ರಾಸು	500=00
10.	ಡಾ॥ ಕೆ. ಬಿ. ಶೆಟ್ಟಿ, ಮಂಗಳೂರು	250=00
11.	ಶ್ರೀ ಜಸ್ಟಿಸ್ ಕೆ. ಎಸ್. ಹೆಗ್ಡೆ, ಬೆಂಗಳೂರು	250=00
12.	,, ಎನ್. ಕೆ. ಅಡ್ಯಂತಾಯ, ಐ ಎಲ್, ಓ. ಎಕ್ಸಾಸರ್ಟ್, (ರಜೆಯಲ್ಲಿ ಮಂಗಳೂರಿಲ್ಲಿರುವವರು)	250=00
13.	ರಾವ್ ಬಹದ್ದೂರ್ ಎನ್ ಎಂ ಅಡ್ಯಂತಾಯ, ಮಂಗಳೂರು	150=00
14.	ಶ್ರೀ ಕೆ. ಬಿ. ನಾಯಕ್ M/s. ನಾಯಕ್ ಸ್ಟೂಡಿಯೊ ಮಂಗಳೂರು	101=00
15	,, ಎಂ. ಕೆ. ಶೆಟ್ಟಿ, ಡಿಪ್ಟಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೋಲೀಸ್ ಮದ್ರಾಸು	101=00
16.	,, ಕೆ. ಎಸ್. ರಾಮಣ್ಣ ರೈ, ನಿವೃತ್ತ ಜಿಲ್ಲಾ ಕೃಷಿಅಧಿಕಾರಿ	101=00
17	,, ಪಿ. ಎಮ್. ಹೆಗ್ಡೆ, ಚಾರ್ಟರ್ಡ್ ಎಕೌಂಟಾಂಟ್, ಮಂಗಳೂರು-3	100=00
18.	ಡಾ. ಬಿ ರಾಮಮೂರ್ತಿ, ಎಂ. ಎಸ್., ಎಫ್. ಆರ್, ಸಿ. ಎಸ್., II ಮೈಸೂರ್‌ರೋಡ್, ಸಿ. ಐ. ಟಿ ಕೊಲೊನಿ, ಪೌಂಟ್ರೇಸ್ ರೋಡ್, ಮದ್ರಾಸು-4	100=00
19.	ಡಾ. ಕೆ. ಕೆ. ಹೆಗ್ಡೆ, ಆರೋಗ್ಯ ಮಂತ್ರಿಗಳು, ಬೆಂಗಳೂರು.	100=00
20.	ಶ್ರೀಮತಿ ಗಂಗಾ ಬಾಯಿ ಕೆ ಟಿ.ಅಳ್ವ C/o. ಶ್ರೀ ರಾವ್‌ಬಹದ್ದೂರ್ ಕೆ. ಟಿ. ಅಳ್ವ, ಮಂಗಳೂರು.	100=00
21.	ಶ್ರೀ ಬಿ. ನಾರಾಯಣ ಶೇಕ, ಜಮಿನ್ದಾರ್, ನಾವೂರು.	100=00
22.	ಡಾ. ಎಂ. ರಾಮಣ್ಣ ಶೆಟ್ಟಿ, ಮೂಲ್ಕಿ (ಮುಂಡ್ಕೂರ್.)	51=00
23.	ಶ್ರೀ ಕೆ. ಎಸ್. ಪಕ್ಕಳ, ನಿವೃತ್ತ ಸಬ್ ರಿಜಿಸ್ಟ್ರಾರ್, ಪಿಟ್ಲ.	51=00
24.	,, ಎಚ್. ದಾಸಣ್ಣ ಅಳ್ವ, ಬಿ ಎ ಬಿ. ಎಲ್. ವಕೀಲ್, ಮಂಗಳೂರು.	50=00
25.	,, ಕೆ. ಸಂಜೀವ ಅಳ್ವ, C/o. ಶ್ರೀ ರಾವ್‌ಬಹದ್ದೂರ್ ಕೆ ಟಿ. ಅಳ್ವ, ಮಂಗಳೂರು.	50=00
26.	,, ಮಂಜಯ್ಯ ಹೆಗ್ಡೆ, ಎಡ್ವೆಕೇಟ್, ಮಂಗಳೂರು.	50=00
27.	,, ಪಿ. ಜಯರಾಮ ಶೆಟ್ಟಿ, ಸೆಕ್ರಿಟರಿ, ವಿಜಯಾ ಬ್ಯಾಂಕ್, ಲಿ.	30=00
28.	,, ಲೋಕಯ್ಯ ಶೆಟ್ಟಿ, ನಿವೃತ್ತ ಡಿಸ್ಟ್ರಿಕ್ಟ ತಹಸಿಲ್ದಾರ್, ಮಂಗಳೂರು.	25=00
29.	,, ಬಾಡೂರು ಜಗನ್ನಾಥ ರೈ.	25=00
30	,, ಕಯ್ಯೂರ ಕಿಂಞಣ್ಣ ರೈ, ಎಂ. ಎ., ಪೆರಡಾಲ.	25=00
31.	,, ಪಿ ಟಿ. ಅಳ್ವ, ಬ್ಲಾಕ್ ಡೆವಲಪ್‌ಮೆಂಟ್ ಆಫೀಸರ್,	25=00
32.	,, ಕೆ. ಐತ್ಪಪ್ಪ ಪೂಂಜ, ಕರಿಯಂಗಳ	25=00
33.	,, ಕೆ. ಹೊನ್ನಯ್ಯ ಶೆಟ್ಟಿ, ಎಡಿಟರ್ ನವಯುಗ, ಉಡುಪಿ.	25=00
34.	,, ಬಿ. ಆರ್. ಕೃಷ್ಣ ರೈ, ದರ್ಬಿ ಹೌಸ್, ಸುತ್ತೂರು.	25=00
35	,, ಎಸ್. ಬಿ. ಶೆಟ್ಟಿ, ಮೆನೇಜರ್, ವಿಜಯಾ ಬ್ಯಾಂಕ್, ಲಿ. ಮೈಸೂರು.	10=00
36.	,, ಕೆ. ಪಿ. ಭವಾನಿ ಶಂಕರ ಶೆಟ್ಟಿ, ಬ್ರಾಂಚ್ ಸೆಕ್ರಿಟರಿ, ಟ್ರೈಟನ್ ಇನ್ಶೂರೆನ್ಸ್ ಕಂಪೆನಿ.	10=00
37.	,, ಎಂ. ಬಿ. ಶಂಕರ ರಾವ್, ರಿಟಾಯರ್ಡ್ ಕಲೆಕ್ಟರ್, ಉಡುಪಿ.	10=00
38.	,, ಪಿ. ವೀರ ರಾಘವನ್ ಮತ್ತು ಶ್ರೀ ಪಿ. ಸುಬ್ರಹ್ಮಣ್ಯಂ, ಕೊಸ್ಮೊಪೋಲಿಟನ್ ಕ್ಲಬ್, ಪೌಂಟ್ ರೋಡು, ಮದ್ರಾಸು.	5=00

ಜುಮ್ಲಾ ರೂ. 9,597=00

ಪ್ರತ್ಯೆಪ್ರತ್ಯೇಕವಾಗಿ ಕೇಳಿಕೊಳ್ಳಲಾಗುವುದಿಲ್ಲವಾದ್ದರಿಂದ ಸ್ಮಾರಕ ನಿಧಿಗೆ ಸಹಾಯ ಮಾಡಲಿಚ್ಛಿಸುವವರು ತಮ್ಮ ಸಹಾಯ ಧನವನ್ನು ಬೇಗನೇ ಕಳುಹಿಸಿಕೊಟ್ಟು ಸಹಕರಿಸುವಂತೆ ಅಪೇಕ್ಷಿಸುತ್ತೇವೆ

ಪಿ. ಎಮ್. ಹೆಗ್ಡೆ,
ಕೋಶಾಧಿಕಾರಿ.

ಕೆ. ಟಿ. ಅಳ್ವ,
ಅಧ್ಯಕ್ಷ

ವಿ. ಸೂ: ಸಹಾಯ ಧನವನ್ನು ದಯವಿಟ್ಟು ಈ ಕೆಳಗಿನ ವಿಳಾಸಕ್ಕೆ ಕಳುಹಿಸಿರಿ.

**ಶ್ರೀ ಪಿ. ಎಮ್. ಹೆಗ್ಡೆ,
ಚಾರ್ಟರ್ಡ್ ಎಕೌಂಟಾಂಟ್, ಕೊಡಿಯಾಲ್‌ಬೈಲು,
ಮಂಗಳೂರು-3**

ಕರ್ನಾಟಕದಲ್ಲಿ ಖಡ್ಡಾಯ ಶಿಕ್ಷಣ

ದೂರದೃಷ್ಟಿಯ ದಿವಂಗತ ಗೋವಾಲ ಕೃಷ್ಣ ಗೋಖಲೆಯವರು ಆಗಿನ ಇಂಪೀರಿಯಲ್ ಲೆಜಿಸ್ಲೇಟಿವ್ ಕೌನ್ಸಿಲಿನಲ್ಲಿ ಐವತ್ತು ವರ್ಷಗಳಿಗೂ ಮೊದಲು ಉಚಿತ ಅನಿವಾರ್ಯ ಶಿಕ್ಷಣವನ್ನು ಒಡಿಯ ದೇಶದಲ್ಲಿ ನೀಡಬೇಕೆಂಬ ಗೊತ್ತುವಳಿಯೊಂದನ್ನು ಮುಂದಿಡಲು ಪ್ರಯತ್ನಿಸಿದ್ದರು. ಆಗ ಅವರ ಮಿತ್ರರಲ್ಲಿಯೇ ಹಲವರು ಈ ಯೋಜನೆಯನ್ನು ಕಾರ್ಯಗತಗೊಳಿಸುವುದು ಅಸಾಧ್ಯವೆಂದು ಭಾವಿಸಿದ್ದರು. ಅಂದಿನ ಆ ಕನಸು ನನಸಾಗುವುದನ್ನು ಕಾಣಲು ನಾವು ಇದುವರೆಗೆ ಕಾಯಬೇಕಾಯಿತು. ತೃತೀಯ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಕೊಂಡಿರುವ ಅತಿ ಪ್ರಮುಖವಾದ ಕಾರ್ಯಕ್ರಮಗಳಲ್ಲಿ ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರಿಕ, ಉಚಿತ ಮತ್ತು ಅನಿವಾರ್ಯವಾಗಿ ಮಾಡಿ ವಿಸ್ತರಿಸುವ ಯೋಜನೆಯು ಒಂದಾಗಿದೆ ೬-೧೧ ವರ್ಷ ಪ್ರಾಯದ ಮಕ್ಕಳ ವರ್ಗಕ್ಕೆ ಈ ಖಡ್ಡಾಯ ಶಿಕ್ಷಣ ಯೋಜನೆಯನ್ನು ಅನ್ವಯಿಸಲು ನಿರ್ದೇಶಿಸಲಾಗಿದೆ.

ಮೈಸೂರು ರಾಜ್ಯವು ಈ ಯೋಜನೆಯನ್ನು ಕಾರ್ಯಗತಗೊಳಿಸಲು ಕಂಕಣಬದ್ಧವಾಗಿದೆ ಡೈರೆಕ್ಟರ್ ಆಫ್ ಪಬ್ಲಿಕ್ ಇನ್ಸ್ಟ್ರಕ್ಷನ್‌ರವರ ಕಾರ್ಯಾಲಯದಲ್ಲಿ ಖಡ್ಡಾಯ ಶಿಕ್ಷಣದ ವ್ಯವಹಾರವನ್ನು ನೋಡಿಕೊಳ್ಳಲು ಪ್ರತ್ಯೇಕ ವಿಭಾಗವೊಂದನ್ನು ತೆರೆಯಲಾಗಿದೆ. ತೃತೀಯ ಯೋಜನೆಯ ಅಂತ್ಯದೊಳಗೆ ೬ರಿಂದ ೧೧ ವರ್ಷ ಪ್ರಾಯದ ಒಟ್ಟು ಮಕ್ಕಳ ಸಂಖ್ಯೆಯು ಸುಮಾರು ೩೫ ಲಕ್ಷವೆಂದು ಅಂದಾಜು ಮಾಡಿದ್ದು, ಇವರಲ್ಲಿ ಸೇ. ೯೦ರಷ್ಟು ಎಂದರೆ, ೩೧॥ ಲಕ್ಷ ಮಕ್ಕಳನ್ನಾದರೂ ಶಾಲೆಗಳಲ್ಲಿ ದಾಖಲುಗೊಳಿಸುವ ಗುರಿಯಿದೆ. ಎರಡನೆಯ ಯೋಜನೆಯ ಅಂತ್ಯದಲ್ಲಿ ೨೧॥ ಲಕ್ಷ ಮಕ್ಕಳು ಶಾಲೆಗೆ ಸೇರಿರುತ್ತಾರೆ. ಆಗ ಮುಂದಿನ ೫ ವರ್ಷಗಳಲ್ಲಿ ಸುಮಾರು ೧೦ ಲಕ್ಷ ಮಕ್ಕಳನ್ನು ಮಾತ್ರ ಹೊಸತಾಗಿ ಪ್ರಾಥಮಿಕ ಶಾಲೆಗಳಿಗೆ ಹೆಚ್ಚು ಬೇಕಾಗುತ್ತದೆ

೧೯೬೧—೬೨ರಲ್ಲಿ ೬-೭ ವರ್ಷಗಳ ಮಕ್ಕಳಿಗೆ ಒತ್ತಾಯ ಪೂರ್ವಕವಾದರೂ ಶಿಕ್ಷಣ ನೀಡಬೇಕು, ಮತ್ತು ಮುಂದಿನ ವರ್ಷಗಳಲ್ಲಿ ಮುಂದಿನ ಪ್ರಾಯ ವರ್ಗದವರಿಗೂ ಇದನ್ನು ಹೇರಬೇಕು ಎಂದು ನಿಶ್ಚಯಿಸಲಾಗಿದೆ ಇದರಿಂದ ಮೂರನೆಯ ಪಂಚವಾರ್ಷಿಕ ಯೋಜನೆಯ ಕೊನೆಯಲ್ಲಿ ೬-೧೧ ವರ್ಷ ಪ್ರಾಯವರ್ಗದ ಮಕ್ಕಳೆಲ್ಲರೂ ಅನಿವಾರ್ಯ ಶಿಕ್ಷಣಪಡಿಯಲ್ಲಿ ಬರುವುದು ಸಾಧ್ಯವಾಗುವುದು. ೧೯೬೧—೬೨ರಲ್ಲಿ ಸುಮಾರು ಎರಡು ಲಕ್ಷ ಮಕ್ಕಳು ಹೊಸತಾಗಿ ಶಾಲೆಗಳಿಗೆ ಸೇರಬೇಕಾಗಿದೆ.

೧೯೬೧ನೆ ಮೈಸೂರು ಖಡ್ಡಾಯ ಪ್ರಾಥಮಿಕ ಶಿಕ್ಷಣ ವಿಧೇಯಕವು ಇದೇ ಎಪ್ರಿಲ್‌ನಲ್ಲಿ ಎರಡೂ ಶಾಸನ ಸಭೆಗಳಲ್ಲಿ ಮಂಜೂರಾಗಿದ್ದು, ಮೇ ೬ನೆಯ ದಿನಾಂಕ ರಾಜ್ಯಪಾಲರ ಸಮ್ಮತಿ ಪಡೆದಿದೆ. ಈ ಕಾನೂನಿನ ಮುಖ್ಯಾಂಶಗಳು ಈ ಕೆಳಗಿನಂತಿವೆ:

ರಾಜ್ಯದಲ್ಲಿ ಮಗುವಿನ ಮನೆಯಿಂದ ಒಂದು ಮೈಲು ನಡೆದೂರದೊಳಗೆ ಪ್ರಾಥಮಿಕ ಶಾಲೆಗಳನ್ನು ಸ್ಥಾಪಿಸುವುದು, ಮಂಜೂರುಪಡೆದ ಶಾಲೆಗೆ ತನ್ನ ಮಗುವನ್ನು ಕಳಿಸುವಂತೆ ಎಲ್ಲ ಹೆತ್ತವರನ್ನೂ ಜವಾಬ್ದಾರರನ್ನಾಗಿ ಮಾಡುವುದು, ದಾಖಲೆಯನ್ನು ಹೆಚ್ಚಿಸಲು ಅಟೆಂಡನ್ಸ್ ಅಧಿಕಾರಿಗಳನ್ನು ನೇಮಿಸುವುದು. ಶಾಲೆಯಲ್ಲಿ ಹಾಜರಾತಿಯನ್ನು ತಡೆಯಬಲ್ಲ ಮಕ್ಕಳ ಉದ್ಯೋಗ ನೇಮಕಗಳನ್ನು ತಡೆಯುವುದು, ಕಾನೂನಿನ ಕಲಂಗಳನ್ನು ಮೀರಿದವರನ್ನು ವಿಚಾರಣೆಗೆ ಗುರಿಪಡಿಸಲು ಪ್ರಾಥಮಿಕ ಶಾಲಾ ಪಂಚಾಯತು ಕೋರ್ಟನ್ನು ರಚಿಸುವುದು. ಕಾನೂನಿನಡಿಯಲ್ಲಿ ವಿಸ್ತೃತವಾದ ನಿಯಮಗಳನ್ನೂ ತಯಾರಿಸಲಾಗಿದೆ.

ಕಳೆದ ಜನವರಿ-ಫೆಬ್ರವರಿಯಲ್ಲಿ ಡಿಲ್ಲಿಯಲ್ಲಿ ಖಡ್ಡಾಯ ಪ್ರಾಥಮಿಕ ಶಿಕ್ಷಣದ ಮೇಲೆ ಎಲ್ಲ ರಾಜ್ಯಗಳ ಪ್ರತಿನಿಧಿಗಳಿಂದ ಕೂಡಿದ ವಿಚಾರಗೋಷ್ಠಿಯು ರಾಷ್ಟ್ರೀಯ ಮಟ್ಟದಲ್ಲಿ ನಡೆದಿತ್ತು. ಇದೇ ಮಾದರಿಯಲ್ಲಿ ರಾಜ್ಯಮಟ್ಟದಲ್ಲಿಯೂ ಒಂದು ಸಂಕೇರಣವು ಎಪ್ರಿಲ್ ೧೪ರಿಂದ ೧೬ರ ವರೆಗೆ ನಂದೀಬೆಟ್ಟಗಳಲ್ಲಿ ನಡೆಯಿತು ಖಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ವ್ಯವಸ್ಥಿತಗೊಳಿಸುವ ಯೋಜನೆಯನ್ನು ಆಮೂಲಾಗ್ರವಾಗಿ ಚರ್ಚಿಸಿ ಇಲ್ಲಿ ಹಲವಾರು ನಿರ್ಣಯಕ್ಕೆ ಬರಲಾಯಿತು. ವಿಚಾರ ಗೋಷ್ಠಿಯು ಶಿಫಾರಸು ಮಾಡಿದ ವಿಚಾರಗಳಲ್ಲಿ ಅತಿ ಮುಖ್ಯವಾದವುಗಳು:

೧. ಸರ್ವೆ ವರದಿಯು ಶಿಫಾರಸ್ಸು ಮಾಡಿರುವಂತೆ ಮುನ್ನೂರು ಜನಸಂಖ್ಯೆಯಿರುವ ಎಲ್ಲ ಹಳ್ಳಿಗಳಲ್ಲಿ, ಶಿಶುಸಂಖ್ಯೆಯು ವಿದ್ಯಾರ್ಥಿಗಳು ಲಭ್ಯಮಾನವಿರುವ ಇನ್ನಿತರ ಹಳ್ಳಿಗಳಲ್ಲಿ ತೆರೆಯುವ ಶಾಲೆಗಳಿಗೆ

೨. ಈಗ ಇರುವ ಪ್ರಾಥಮಿಕ ಶಾಲೆಗಳಿಗೆ ಹೆಚ್ಚಿನ ಅಧ್ಯಾಪಕರನ್ನು ನೇಮಿಸಿ ಅವನ್ನು ಬಲಪಡಿಸಲು.

೩. ದಾಖಲಾತಿಯನ್ನು ಹೆಚ್ಚಿಸುವ ಸಲುವಾಗಿ ಶಿಕ್ಷಣ ಮಂತ್ರಿಗಳು ಅಧ್ಯಕ್ಷರಾಗಿರುವ ರಾಜ್ಯಮಟ್ಟದ ಸಮಿತಿಯನ್ನು ರಚಿಸಬೇಕು. ಇದೇ ರೀತಿಯ ಸಮಿತಿಗಳನ್ನು ಜಿಲ್ಲೆ, ತಾಲೂಕು ಮತ್ತು ಗ್ರಾಮ ಮಟ್ಟದಲ್ಲಿಯೂ ಸಂಘಟಿಸಬೇಕು.

೪. ಮಧ್ಯಾಹ್ನ ಊಟ, ಪುಸ್ತಕಗಳ ಪೂರೈಕೆ, ಉಪಸ್ಥಿತಿ ಭಾತ್ಯವೃತ್ತಿ ಬದಲಾದ ಯೋಜನೆಗಳಲ್ಲಿ ಹೆಚ್ಚಿನ ಉದಾರ ನೀತಿಯನ್ನು ಅನುಸರಿಸಬೇಕು.

೫. ಹೆಚ್ಚಿನ ಪ್ರಭಾವಕಾರಿ ಮೇಲ್ವಿಚಾರಣೆ ಮತ್ತು ಮಾರ್ಗದರ್ಶನಗಳಿಗಾಗಿ ಪರಿಶೀಲನಾ ವ್ಯವಸ್ಥೆಯನ್ನು ಪುನರ್ಘಟಿಸಬೇಕು.

೬. ಶಾಲಾಭಿವೃದ್ಧಿ ಸಮಿತಿಯನ್ನು ಪ್ರತಿ ಶಾಲೆಗೂ ರಚಿಸಬೇಕು; ಮತ್ತು ಶಾಲಾ ಸುಧಾರಣಾ ಸಮ್ಮೇಳನಗಳು ತಾಲೂಕು ಮಟ್ಟದಲ್ಲಿ ಏರ್ಪಡಬೇಕು.

೭. ತಾಲೂಕು ಮತ್ತು ರಾಜ್ಯ ಮಟ್ಟದಲ್ಲಿ ಇದೇ ಮಾದರಿಯ ವಿಚಾರ ಗೋಷ್ಠಿಗಳನ್ನು ಏರ್ಪಡಿಸಿ ಖಡ್ಡಾಯ ಶಿಕ್ಷಣದ ಸಂದೇಶವು ಪ್ರತಿ ಪ್ರಾಥಮಿಕ ಶಾಲಾ ಶಿಕ್ಷಕನಿಗೂ ಮುಟ್ಟುವಂತೆ ಮಾಡಬೇಕು.

೮. ಖಡ್ಡಾಯ ಶಿಕ್ಷಣದ ಜವಾಬ್ದಾರಿಯನ್ನು ತಾಲೂಕು ಬೋರ್ಡುಗಳೂ ನಗರ ಸಭೆಗಳೂ ಹಾಲುಗೊಳ್ಳಬೇಕು; ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಪಟ್ಟ ಎಲ್ಲ ವಿಚಾರಗಳಲ್ಲಿ ಶಿಕ್ಷಣ ಶಾಖೆಯೊಂದಿಗೆ ಅವು ಸಹಕರಿಸಬೇಕು.

ಜಿಲ್ಲಾ ಮಟ್ಟದ ವಿಚಾರ ಗೋಷ್ಠಿಗಳನ್ನು ಪ್ರತಿ ಜಿಲ್ಲೆಯಲ್ಲಿಯೂ ಜಿಲ್ಲಾ ವಿದ್ಯಾಧಿಕಾರಿಗಳ ನೇತೃತ್ವದಲ್ಲಿ ನಡೆದುವು. ಇವುಗಳಲ್ಲಿ ಯೋಜನೆಯ ನಿಜವಾದ ಕಾರ್ಯಕರ್ತರಾದ ಪರಿಶೀಲನಾಧಿಕಾರಿಗಳು ಭಾಗ ವಹಿಸಿದ್ದು ತಮ್ಮ ಕರ್ತವ್ಯಗಳೇನೆಂಬುದನ್ನು ಸರಿಯಾಗಿ ತಿಳಿದುಕೊಂಡರು ಮೂದರಿ ತಾಲೂಕು ಮತ್ತು ತಾಲೂಕು ಅಥವಾ ಶ್ರೇಣಿ ಮಟ್ಟದ ಗೋಷ್ಠಿಗಳೂ ಎಲ್ಲೆಡೆಯೂ ನಡೆದಿವೆ.

ಇಡಿಯ ರಾಜ್ಯದಲ್ಲಿ ಕಳೆದ ಫೆಬ್ರವರಿ ತಿಂಗಳಲ್ಲಿ ಶಾಲಾ ಪ್ರಾಯದ ಮಕ್ಕಳ ಗಣನೆಯನ್ನು ಮಾಡಲಾಯಿತು. ಇದರಿಂದ ಎಷ್ಟು ಮಕ್ಕಳಿದ್ದಾರೆ, ಅವರಲ್ಲಿ ಯಾರನ್ನು ಎಲ್ಲಿಗೆ ದಾಖಲುಗೊಳಿಸಬೇಕು ಎಂಬ ಸಂಪೂರ್ಣ ವಿಚಾರವು ತಿಳಿಯಿತು ದಾಖಲಾತಿಯನ್ನು ಹೆಚ್ಚಿಸುವ ಕ್ರಮಗಳನ್ನು ಮುಂದೆ ಕೈಗೊಳ್ಳಲಾಯಿತು. ಶಾಲೆಗಳನ್ನು ತೆರೆದು ಆ ಮೇಲೆ ಮಕ್ಕಳನ್ನು ನಿರೀಕ್ಷಿಸುವುದು ಅವ್ಯವಹಾರ್ಯ. ಹೆತ್ತವರೇ ತಮ್ಮ ಮಕ್ಕಳನ್ನು ಶಾಲೆಗೆ ಕಳಿಸುವಂತೆ ಮಾಡಬೇಕು. ಶಿಕ್ಷಣದ ಹಿತವು ಅವರಿಗೆ ಅರ್ಥವಾಗುವಂತೆ ತಮ್ಮ ಮಕ್ಕಳ ಮುಂದಿನ ಬಿಡ್ಡಲ ಜೀವನದ ಪರಿಚಯವಾಗುವಂತೆ ಮನೆ ಮನೆಗೆ ಹೋಗಿ ಮಂದಬ್ಬ ಮಾಡುವುದರಿಂದ ಮಾತ್ರ ನಮ್ಮ ದೇಶದಲ್ಲಿದು ಸಾಧ್ಯ ಜುಲೈ ಮೊದಲನೆಯ ವಾರದಲ್ಲಿ ದಾಖಲಾತಿಯ ಪ್ರಚಾರವು ಪ್ರಾರಂಭವಾಗಿದೆ.

(ಮುಂದುವರಿಯುವುದು)

(Mysore Information ಕೃಪೆಯಿಂದ)

In the Court of the Special Assistant Commissioner (Tenancy) Mangalore

Vasudeva Nayak ... Petitioner

Loku Shetty and another ... Respondents

First respondent Loku Shetty son of Brahmayya Shetty residing at Ganadabettu in Sooda village of Karkala taluk is hereby informed that the petitioner has filed a petition before this court claiming possession of the property. Said petition has been posted to 22—12—'61 for your appearance before the court at Karkala If you fail to appear before the court on that date, the petition will be heard and decided in your absence

(By order of court)

M D Kamath & K J Kudva,
Advocates for petitioner.

Karkala, 6—12—1961.

ಉಳಿತಾಯದ ಬಲವೊಂದಿದ್ದರೆ.....

ಜೀವನದ ಜಡತ್ವ-ಜಿಗುಸ್ಸೆಗಳು ತಂತಾನೆ ಮಾಯವಾಗುವುವು; ಬದಲು, ಶರೀರದಲ್ಲಿನ ಸುಪ್ತ ಕ್ರಿಯಾಶಕ್ತಿಗಳಿಗೆ ಚೈತನ್ಯ-ಪ್ರೇರೇಪಣೆಗಳು ಸಿಕ್ಕಿ, ಜೀವನವು ಸಂಜೀವನವಾಗಿ, ಸುಖದ ಸುಪ್ತತ್ತಿಗೆಯಾಗಿ ಮೆಲ್ಲನೆ ನಾರ್ಪಡುವುದು

— ಉಳಿತಾಯಕ್ಕಾಗಿ —

ಇದೇ.....ಈ ಕ್ಷಣವೆ, ...ಒಂದು ಸೇವಿಂಗ್ಸ್ ಜಾತೆ ತೆರೆಯಿರಿ.

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ಸ್ಥಾಪನೆ: 1906)

ರಿಜಿಸ್ಟರ್ಡ್ ಆಫೀಸು: ಉಡುಪಿ | ಆಡಳಿತ ಆಫೀಸು ಮಂಗಳೂರು

ಪುತ್ತೂರು ಡಿ ಮುನ್ಸಿಫ್ ಕೋರ್ಟನಲ್ಲಿ

S C 283 1961

S N ದಾವಪ್ಪ ಗೌಡ— ವಾದಿ

ನಾರಾಯಣ ನಾಯಕ, ಮತ್ತು ಜೊತೆ ಬಾಲಂಣ ನಾಯಕರ ಮಗ ಪುತ್ತೂರು ತಾಲ್ಲೂಕಿನವರೂ ಗ್ರಾಮದ ಕಂಚಿಮಾರು ಎಂಬಲ್ಲಿರುವವರು—ಪ್ರತಿವಾದಿ.

ಸದ್ರಿ ಪ್ರತಿವಾದಿಗೆ ಈ ಸೂಚ್ಯ ತಿಳಿಯಪಡಿಸುವುದೇನಂದರೆ:—

ವಾದಿಯು ನಿಮ್ಮ ಮೇಲೆ ದಾಕ್ಲು ಮಾಡಿದ ಮೇಲಿನ ದಾವೆಯು ತಾ 16—12—61ಕ್ಕೆ ಇಟ್ಟಿರುವುದರಿಂದ ಇವು ಸದ್ರಿ ದಿವಸ ಪೂರ್ವಾಹ್ನ ಘಂಟೆ 11ಕ್ಕೆ ಮೇಲ್ಕಂಡ ಕೋರ್ಟು ಮುಂದೆ ಹಾಜ್ರಾಗಿ ನಿಮ್ಮ ಸ್ವೇಚ್ಛೆಯಿಂದ ಹಾಜ್ರುಪಡಿಸತಕ್ಕದ್ದು ತಪ್ಪಿದ್ರೆ ನಿಮ್ಮ ಗೈರುಹಾಜರಿಯಿಂದ ಸದ್ರಿ ದಾವೆಯನ್ನು ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು.

ಕೋರ್ಟು ಸ್ಟಾಂಪ್ ಪ್ರಕಾರ

Pundarik M K.
Advocate for Plaintiff,

ಮೊಕ್ಕಾಂ. ಪುತ್ತೂರು ತಾ. 6_12_1961

ವರ್ಗ—ಊಳಿಗ

ಮೊದಲಾದ ಯಾವತ್ತೂ ತರದ

ಎಕೌಂಟ್ ಪುಸ್ತಕಗಳು

ಶಾಲಾ ರಿಜಿಸ್ಟ್ರಿಗಳು,

ಫಾರ್ಮುಗಳು,

ದೊರೆಯುತ್ತವೆ.

ವಿಚಾರಿರಿ—

ನವಯುಗ ಪ್ರೆಸ್, ಉಡುಪಿ

ನವಯುಗ

ವರುಷ	ಉಡುಪಿ	ವಾರ
೪೧	೧೪-೧೨-೬೧	೧೪

ಮಹಾ ಚುನಾವಣೆ

ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಕೇಂದ್ರ ಚುನಾವಣಾ ಸಮಿತಿಯು ಮುಂಬರುವ ಮಹಾ ಚುನಾವಣೆಗಳಲ್ಲಿ ಪಕ್ಷದ ಹುರಿಯಾಳುಗಳಾಗಿ ಸ್ಪರ್ಧಿಸಲಿರುವವರ ಹೆಸರುಗಳನ್ನು ಅಂತಿಮವಾಗಿ ಪರಿಶೀಲಿಸಿ ಇಷ್ಟರಲ್ಲೇ ಪ್ರಕಟಿಸಲಿದೆ. ರಾಜ್ಯ ಮಟ್ಟದ ಚುನಾವಣಾ ಸಮಿತಿಗಳಲ್ಲಿ ಕೆಲವೆಡೆ ತೀವ್ರವಾದ ಭಿನ್ನಾಭಿಪ್ರಾಯಗಳು ಮುಂದೆ ಬಂದುದು ನಿಜವಾದರೂ ಕೊನೆಯುಗಳಿಗೆಯಲ್ಲಿ ಅವು ಶಾಂತಮಯವಾಗಿ ಬಗೆ ಹರಿದುದು ಸ್ವಾಗತಾರ್ಹ ವಿಚಾರವೇ. ಕರ್ನಾಟಕದ ಮಟ್ಟಿಗೆ ಹೇಳುವುದಾದರೆ, ಮೊದಲು ಅಪ್ರಸನ್ನರಾದ ಮುಖ್ಯ ಮಂತ್ರಿ ಜತ್ತಿಯವರು ಈಗ ಸಂತುಷ್ಟರಾಗಿದ್ದಾರೆ. ಅಂತಿಮವಾಗಿ ಪ್ರಕಟಿಸಿದ ಪಟ್ಟಿಯು ತೃಪ್ತಿಕರವಿದೆಯೆಂದೂ ಯಾವುದೇ ಗುಂಪಿನ ಮನೋಭಾವದಿಂದ ಅಭ್ಯರ್ಥಿಗಳನ್ನು ಈಗ ಆರಿಸಿಲ್ಲವೆಂದೂ ಅವರು ಹೇಳುತ್ತಾರೆ. ತೋರಿಕೆಯ ಮಟ್ಟಿಗೆ ನಮ್ಮ ರಾಜ್ಯದ ರಾಜಕೀಯ ನಾಯಕರಲ್ಲಿ ಸೌಹಾರ್ದಮಯ ಒಡಂಬಡಿಕೆಯೂಯಿತೆನ್ನ ಬಹುದಾದರೂ, ಈ ಭಿನ್ನಾಭಿಪ್ರಾಯ ಚುನಾವಣಾ ನಂತರ ಮರಳಿ ಭುಗಿಲೆನ್ನುವುದಿಲ್ಲವೆನ್ನಲು ಧೈರ್ಯಸಾಲದಾಗಿದೆ.

ಈ ಬಾರಿಯ ಚುನಾವಣೆಗಳು ಒಂದು ವಿಷಮ ಸನ್ನಿವೇಶದಲ್ಲಿ ನಡೆಯಲಿವೆ. ಇದಕ್ಕೆ ಬೇಕಾದ ಪೂರ್ವ ಸಿದ್ಧತೆಯು ಕೂಡ ವಿಚಿತ್ರ ರಾಜಕೀಯ ಸ್ಥಿತ್ಯಂತರಗಳ ನಡುವೆ ನಡೆಯಬೇಕಾಗಿ ಬಂದಿದೆ. ಕೇಂದ್ರ ಗೃಹ ಮಂತ್ರಿ ಲಾಲಬಹದೂರ ಶಾಸ್ತ್ರಿಗಳು ಹೇಳುವಂತೆ ಮುಂದಿನ ಹದಿನೈದು ದಿನಗಳು ಭಾರತಕ್ಕೆ ಸತ್ವ ಪರೀಕ್ಷೆಯ ಕಾಲ. ಗೋವೆಯ ಪರಿಸ್ಥಿತಿಯು ವಿಷಮಗೊಂಡಿತು ಎಂದಾದರೆ, ಭಾರತವು ಅದನ್ನು ತನ್ನಲ್ಲಿ ವಿಲೀನಗೊಳಿಸಲು ಆವಶ್ಯಕ ಕ್ರಮ ಕೈಗೊಳ್ಳುವುದು ಅನಿವಾರ್ಯವೆ. ಯಾವ ಗಳಿಗೆಯಲ್ಲಿ ರಾಜಕೀಯ ವಿದ್ಯಮಾನಗಳು ಯಾವ ರೂಪವನ್ನು ಧರಿಸುವುವು ಎಂದು ಹೇಳುವುದು ಈಗಾಗಲೇ ಯಾರಿಗೂ ಸಾಧ್ಯವಿಲ್ಲ. ಅದೇನೇ ಇದ್ದರೂ, ಮುಂದಿನ ಚುನಾವಣೆಗಳು ನಡೆಯುವುದಕ್ಕೆ ಮೊದಲು ಈ ಸಂಬಂಧದಲ್ಲಿ ಒಂದು ನಿಸ್ಪರ್ಶಿಯಾಗದೆ ಉಳಿಯದು; ಈ ನಿಸ್ಪರ್ಶಿಯು ತನ್ನ ಅಮಿತ ಪ್ರಭಾವವನ್ನು ಚುನಾವಣಾ ಫಲಿತಾಂಶದ ಮೇಲೆ ಬೀರದಿರುವುದು ಎಂದಿಗೂ ಸಾಧ್ಯವಿಲ್ಲ. ಸ್ವತಂತ್ರ ಪಕ್ಷದ ನಾಯಕಾಗ್ರಣಿ ರಾಜಗೋಪಾಲಾಚಾರಿಯವರು ಚುನಾವಣೆಯನ್ನು ದೃಷ್ಟಿಯಲ್ಲಿ ಇರಿಸಿಕೊಂಡೇ ಭಾರತವು ಗೋವೆಯ ನೀತಿಯನ್ನು ಕೊನೆಯ ಗಳಿಗೆಯಲ್ಲಿ ರೂಪಿಸಿದೆಯೆಂಬ ಆರೋಪವನ್ನು ಕಾಂಗ್ರೆಸ್ಸಿನ ಮೇಲೆ ಹೊರಿಸಿದ್ದಾರೆ. ಆದರೆ, ಗೋವೆಯಲ್ಲಿ ಉದ್ವೇಗಮಯ ವಾತಾವರಣವನ್ನು ಮೊತ್ತಮೊದಲಿಗೆ ನಿರ್ಮಾಣಮಾಡಿದುದು ಸ್ವಯಂ ಪೋರ್ಚುಗೀಸರೇ ಹೊರತು ಭಾರತವಲ್ಲವೆಂಬುದನ್ನವರು ಅರಿತುಕೊಳ್ಳಬೇಕಿತ್ತು.

ಕಾಂಗ್ರೆಸ್ ಪಕ್ಷದ ಹುರಿಯಾಳುಗಳನ್ನು ಆರಿಸುವಾಗ, ಹೊಸ ಮುಖಗಳಿಗೂ ಪ್ರಾಶಸ್ತ್ಯ ನೀಡಬೇಕೆಂಬುದನ್ನು ಸ್ವಲ್ಪ ಮಟ್ಟಿಗೆ ಚುನಾವಣಾ ಸಮಿತಿಯು ಈಗ ಒಪ್ಪಿಕೊಂಡು ಅದರಂತೆ ನಡೆದಿದೆ. ಆದರೆ, ಹೊಸಬರಿಗೆ ನೀಡಿದ ಸ್ಥಾನಗಳು ಸಾಕೆ? ಎಂಬ ಪ್ರಶ್ನೆಗೆ ಸಮರ್ಪಕ ಉತ್ತರವು ದೊರೆಯುವುದಿಲ್ಲ. ಹಾಗೆಯೇ ಹತ್ತು ವರ್ಷಗಳ ನಿಯಮವನ್ನೂ ಸಾಮಾನ್ಯವಾಗಿ ಅನುಸರಿಸಿದುದೂ ಗೋಚರಕ್ಕೆ ಬರುವುದಿಲ್ಲ. ಹಾಗಿದ್ದರೂ ಅಂತಿಮಘಟ್ಟಿಯು ತಯಾರಾಗುವ ವರೆಗೆ ಬೇರೆ ಬೇರೆಯವರ ಅಭಿಪ್ರಾಯಗಳು ಬೇರೆ ಬೇರೆಯಾಗಿರುವುದು ಒಪ್ಪತಕ್ಕುದಾದರೂ, ಇನ್ನು ಅಂತಹ ಭಿನ್ನಾಭಿಪ್ರಾಯಕ್ಕೆ ಎಡೆಯಿರುವುದಿಲ್ಲ. ಚುನಾವಣಾ ದಿನಗಳು ಅತಿ ಸಮೀಪಗತವಾಗುತ್ತ ಬರುತ್ತಿರುವಾಗ, ಕಾಂಗ್ರೆಸ್ಸು ತನ್ನ ಶಕ್ತಿಯನ್ನು ವ್ಯರ್ಥ ಹರಿಸುತ್ತ ಕೂತುಕೊಳ್ಳುವುದು ಸಲ್ಲದು. ದೇಶದ ಹಿತಸಾಧನೆ, ಆಂತರಿಕ ಅಭಿವೃದ್ಧಿಯು ಕಾಂಗ್ರೆಸ್ ಪಕ್ಷವೊಂದರಿಂದಲೇ ಆಗಬೇಕೆಂಬುದರಲ್ಲಿ ಕವಲಭಿಪ್ರಾಯವಿರುವುದಿಲ್ಲ. ಏಕೆಂದರೆ, ನಮ್ಮ ದೇಶದಲ್ಲಿರುವ ಯಾವುದೇ ವಿರೋಧಿ ಪಕ್ಷವಾದರೂ ಹೆಚ್ಚಿನ ರಾಜ್ಯಗಳಲ್ಲಿ ಯಾದರೂ ಅಧಿಕಾರ ಸ್ವೀಕರಿಸಲು ಆವಶ್ಯಕತೆನಿಸುವಷ್ಟು ಬಹುಮತ ಗಳಿಸುವ ನಿರೀಕ್ಷೆಯಿಲ್ಲ. ಈ ಧೈರ್ಯದಿಂದ ಕಾಂಗ್ರೆಸಿಗರು ಕರ್ತವ್ಯ ವಿಮುಖರಾಗಬಾರದು ಎಂದು ಸೂಚಿಸಿದರೆ ಅತಿಶಯವಾದ ವಾಗಲಾರದು.

ಪ್ರಬಲ ವಿರೋಧಿ ಪಕ್ಷವಿದ್ದರೆ ಪ್ರಜಾಪ್ರಭುತ್ವದ ಆರೋಗ್ಯ ನೆಟ್ಟಗಿರುವುದೆಂದು ಅನ್ನುವವರು ಇದ್ದಾರೆ. ಇದನ್ನು ಸರಿಯೆಂದೂ ಒಪ್ಪಿಕೊಳ್ಳಬಹುದು. ಹೀಗೆಂದ ಮಾತ್ರಕ್ಕೆ ಸಮರ್ಥ ವಿರೋಧಿ ದಳವಿಲ್ಲದ ನಮ್ಮಂತಹ ದೇಶಗಳಲ್ಲಿ ಸರಕಾರಿ ಪಕ್ಷದ ಹೊಣೆಗಾರಿಕೆ ಕಡಿಮೆಯಾಗುವುದಿಲ್ಲ; ಬದಲು ಹೆಚ್ಚೇ ಆಗುವುದು. ಈ ಕೋಟಿ ಭಾರತೀಯರನ್ನು ಉನ್ನತಿಯ ಪಥದಲ್ಲಿ ಮುನ್ನೆಡೆಸುವ ಗುರುತರ ಉತ್ತರದಾಯಿತ್ವವನ್ನು ಕಾಂಗ್ರೆಸ್ಸು ಹೊತ್ತುಕೊಳ್ಳಬೇಕಾಗಿದೆ. ವಿರೋಧಿ ನಳಗಳ ಅಪಪ್ರಚಾರಗಳಿಗೆ ಕಿವಿಗೊಡದೆ ದೇಶವನ್ನು ಸಮೃದ್ಧಿಯ ಗುರಿಯತ್ತ ಒಯ್ಯಬೇಕಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಕಾಂಗ್ರೆಸ್ಸಿಗರು ಅತೀವ ಜಾಗರೂಕತೆಯಿಂದ ನಡೆಯಬೇಕಾಗಿದೆ. ದೇಶದ ಮುಂದಿನ ಐದು ವರ್ಷಗಳ ಜೀವಿತ ವಿಧಾನ ಸೂಚಕವಾದ ಚುನಾವಣೆಗಳಲ್ಲಿ ತಮ್ಮ ಪಕ್ಷದ ಹುರಿಯಾಳುಗಳಿಗೆದ್ದುಬರುವಂತೆ ಅವರು ಶಾಸಕರಾಗಿ ತಮ್ಮ ಕರ್ತವ್ಯ ಯಶಸ್ವಿಯಾಗಿ ನಿರ್ವಹಿಸುವಂತೆ ನೋಡಿಕೊಳ್ಳಬೇಕಾಗಿದೆ.

ಮಲಯದ ಮಹಾರಾಜರು

ಮಲಯ–ಭಾರತಗಳ ಸಂಬಂಧ ಇಂದು ನಿನ್ನೆಯದಲ್ಲ. ಮಲಯದಲ್ಲಿ ಹೆಚ್ಚು ಕಡಿಮೆ ಸೇಕಡಾ ಹತ್ತರಷ್ಟು ಭಾರತೀಯ ಮೂಲದ ಪ್ರಜೆಗಳಿದ್ದಾರೆ. ಇವರಲ್ಲಿ ಹೆಚ್ಚಿನವರು ತಮಿಳುನಾಡಿನಿಂದ ತೆರಳಿದವರು ಭಾರತದ ಹತ್ತರದ ಗೆಳೆಯನಾದ ಈ ಮಲಯದ ಇತಿಹಾಸವು ಭಾರತೀಯ ಇತಿಹಾಸಕ್ಕೆ ಬಹಳಷ್ಟು ಸಂಬಂಧವಿರಿಸಿಕೊಂಡಿದೆ. ಅಲ್ಲಿನ ಮಹಾರಾಜ ತಂಕು ಅಬ್ದುಲ್ ರಹಮಾನ್ ದಂಪತಿಗಳು ಭಾರತದ ಸಂಚಾರವನ್ನು ಕೈಗೊಡ್ಡಿದ್ದಾರೆ. ಅವರು ಹೇಳುವಂತೆ ಮಲಯದಲ್ಲಿ ನೆಲೆಸಿರುವ ಭಾರತೀಯ ಮೂಲದವರು ತಾವು ಸೇರಿದ ದೇಶಕ್ಕೆ ಬಹಳಷ್ಟು ನಿಷ್ಠೆಯನ್ನು ತೋರಿಸುತ್ತಿದ್ದಾರೆ. ಪರಿಶ್ರಮ ಪಟುಗಳಾಗಿ ದುಡಿಯುತ್ತಾರೆ. ತಂಕು ಅಬ್ದುಲ್ ರಹಮಾನರು ಮಲಯದ ಅರಸರು. ಇವರು ಅರಸರಾದರೂ ಅಲ್ಲಿ ಪ್ರಜಾಸತ್ತಾತ್ಮಕ ವಿಧಾನದಲ್ಲಿಯೇ ಪ್ರಶಾಸನವು ನಡೆಯುತ್ತಿದೆ. ಮೂರು ವರ್ಷಗಳ ಹಿಂದೆ ಸ್ವತಂತ್ರವಾದ ಮಲಯಾ ಭಾರತದ ಸ್ವಾತಂತ್ರ್ಯ ಸಂಗ್ರಾಮಗಳಿಂದ ಸ್ಫೂರ್ತಿಗೊಂಡಿದೆ. ಇಲ್ಲಿ ನಡೆಯುತ್ತಿರುವ ಅಭಿವೃದ್ಧಿ ಯೋಜನೆಗಳು—ಸಮಾಜ ಹಿತಸಾಧನೆಗಳು ರಾಜದಂಪತಿಯವರನ್ನು ಆಕರ್ಷಿಸಿದುವು. ಮಲಯವು ಒಂದು ಪ್ರಮುಖ ಏಶ್ಯನ್ ರಾಷ್ಟ್ರ. ಇದರೊಂದಿಗೆ ಉತ್ತರ ಬೋರ್ನಿಯೋ ಮತ್ತು ಸಿಂಗಾಪುರಗಳೂ ವಿಲೀನಗೊಂಡರೆ, ನಿಶ್ಚಿತ ಪ್ರಭಾವಶಾಲೀ ರಾಷ್ಟ್ರಗಳಲ್ಲಿ ಇದು ಒಂದಾಗುವುದು. ಮಹಾರಾಜರ ಸಂದರ್ಶನದಿಂದ ಉಭಯ ದೇಶಗಳ ಸಂಬಂಧ ಮತ್ತಷ್ಟು ದೃಢಗೊಳ್ಳುವುದೆಂದು ಆಶಿಸಬಹುದು.

ಜಗತ್ಪರ್ಯಟನ

ಸುದ್ದಿಗಾರ ನೆಹರು

ಭಾರತದ ಗಡಿಯಲ್ಲಿ ಪೋರ್ಚುಗೀಸರ ಸೈನ್ಯ ಸಂಗ್ರಹ, ಸೈನಿಕರ ಮರ್ದನ ಕಾರ್ಯಗಳು ಅತಿಯಾಗುತ್ತ ಬಂದಂತೆ ಗೋವೆಯು ಭಾರತದಲ್ಲಿ ವಿಲೀನಗೊಳ್ಳಲೇ ಬೇಕೆಂಬುದಕ್ಕೆ ಮತ್ತಷ್ಟು ಬಲಬರತೊಡಗಿದೆ. ಪಂಡಿತ ನೆಹರು ಅಹಿಂಸಾವಾದಿಯೇನೋ ಹೌದು; ಅಹಿಂಸೆಯ ಬೆಲೆಯರಿಯದ ಕ್ರೂರ ಪೋರ್ಚುಗೀಸರಿಗೆ ಹಿಂಸೆಯ ಮಾರ್ಗವನ್ನಾದರೂ ಅವಶ್ಯಕಂಡರೆ ಹಿಡಿದು ಗೋಮಾಂತಕರ ವಿಮುಕ್ತಿ ಸಾಧಿಸುವ ದೃಢ ನಿಲುಮೆ ವಹಿಸಿದುದರಿಂದ ಒಂದು ಮಹತ್ವದ ಹೆಜ್ಜೆಯಿಟ್ಟಂತಾಗಿದೆ. ಈಗ ಕೋಟಿ ಭಾರತೀಯರು ಮಾತ್ರವಲ್ಲ ವಿಶ್ವದ ಮಾನವತಾವಾದಿಗಳು ನೆಹರು ಬಾಯಿಂದೇನು ಬರುತ್ತದೆಯೆಂದು ರೇಡಿಯೋ ಬಳಿ ಗುಂಪು ಸೇರಿದ್ದಾರೆ.

ಸೋತ ಸಾಲಝಾರ

ಭಾರತವು ಅವಶ್ಯ ಕಂಡರೆ, ಸೈನಿಕ ಕಾರ್ಯಾಚರಣೆಯನ್ನೂ ಗೋವೆಯ ಮೇಲೆ ತೆಗೆದುಕೊಳ್ಳಲು ಹಿಂಜರಿಯದು ಎಂದ ನೆಹರುರವರ ಒಂದು ಸಾಮಾನ್ಯ ವಾಕ್ಯ ಆಳರಸ ಸಾಲಝಾರರ ಹೃದಯ ನಡುಗಿಸಿತು. ಗೋವೆಯಲ್ಲಿ ಪರಿಸ್ಥಿತಿಯನ್ನು ವಿಕೋಪಕ್ಕೇರಿಸಿ, ಭಾರತವನ್ನು ಹೆದರಿಸುವ ಪ್ರಯತ್ನ ಅಲ್ಲಿ ನಡೆಯಿತು. ಆದರೆ, ದಮನ ನೀತಿಯ ಸಾಲಝಾರ ಪ್ರಭುಗಳಿಗೆ ಈಗ ಪೆಚ್ಚು ಹಿಡಿದಂತಾಗಿದೆ. ಯಾವ ಮಿತ್ರರೂ ಹಿತೈಷಿಗಳೂ ಪತ್ರಿಕೆಗಳೂ ತಮ್ಮ ಸಹಾಯಕ್ಕೆ ಸಿದ್ಧಹಸ್ತವನ್ನು ನೀಡಲಿರುವಾಗ, ಗೋವೆಯಲ್ಲಿರುವ ಪೋರ್ಚುಗೀಸ ಕುಟುಂಬಗಳನ್ನು ಮರಳಿ ಸ್ವದೇಶಕ್ಕೆ ಕರೆಸದೆ ಮತ್ತೇನ ಮಾಡಬೇಕು? ಇದು ಪೋರ್ಚುಗೀಸ ನಿರ್ಗಮನದ ಪೂರ್ವಸೂಚನೆಯಲ್ಲವೆ?

ಧರ್ಮಸಂಕಟ ಬ್ರಿಟನ್

ಪೋರ್ಚುಗೀಸ–ಭಾರತಗಳ ಹೋರಾಟದ ಸಿದ್ಧತೆಯಲ್ಲಿ ಧರ್ಮಸಂಕಟಕ್ಕೆ ನ್ಯಾಯವಾಗಿ ಬಿದ್ದುದು ಬ್ರಿಟನ್ ಮಾತ್ರ. ತನ್ನ ಅತಿ ಹತ್ತಿರದ ಮಿತ್ರ ಸಾಲಝಾರರ ವಸಾಹತುಗಳಿಗೆ ಅಂಟಿಕೊಳ್ಳುವ ನೀತಿಯನ್ನದು ಒಪ್ಪುವುದಿಲ್ಲ; ಆದರೆ, ಅದೀಗ ಎದುರಿಸಬೇಕಾದ ಸಮಸ್ಯೆಯನ್ನು ಕಂಡು ಸುಮ್ಮನಿರುವುದೂ ಅದಕ್ಕೆ ಸಾಧ್ಯವಿಲ್ಲ. ಎಂತಲೇ ಉಭಯತರರೂ ಒಡಂಬಡಿಕೆಗೆ ಸಿದ್ಧರಾದರೆ, ತಾನು ಅದನ್ನು ಸಾಧಿಸಲು ಸಿದ್ಧವೆಂದದು ಹೇಳಿತು. ಆದರೆ, ಎರಡೂ ಪಕ್ಷಗಳೂ ಗೋವೆ ತಮ್ಮದೆಂಬ ಮೂಲಸಿದ್ಧಾಂತವನ್ನು ಮನ್ನಿಸಿ ಮತ್ತೆ ಒಡಂಬಡಿಕೆ ಎಂದು ವಾದಿಸಿದುದರಿಂದ—ಮುಖ್ಯವಾಗಿ ಭಾರತದ ದೃಢ ಧೋರಣೆಯಿಂದ ಬ್ರಿಟನ್ನೂ ಅಧೀರವಾಗಿದೆ. ತನ್ನ ಹಳೆಯರಲ್ಲಿ ಹಳೆಯದಾದ ಗೆಳೆಯ ಪೋರ್ಚುಗಲ್ಲನ್ನು ಬೆಂಬಲಿಸಬೇಕೆ? ಕಾಮನ್‌ವೆಲ್ತಿನ ಮಹಾರಾಷ್ಟ್ರ ಭಾರತದ ಬಗ್ಗೆ ಆಸಕ್ತಿ ತಳೆಯಬೇಕೇ ಎಂಬುದನ್ನು ಅದೀಗ ನಿರ್ಧರಿಸಬೇಕಾಗಿದೆ.

ಅಧ್ಯಕ್ಷ ಕೆನ್ನೆಡಿ

ನೆಹರು ಮತ್ತು ಅಯೂಬರ ಅಮೆರಿಕಾ ಸಂಚಾರಾನಂತರ ಅಧ್ಯಕ್ಷ ಕೆನ್ನೆಡಿಯವರ ಧೋರಣೆಯು ತುಸು ಬದಲಾಗಿದೆ ಮುನ್ಸೂಚನೆಗಳು ತೋರಿಬರುತ್ತವೆ ಐಸನ್‌ಹಾವರರ ಅಧಿಕಾರಾವಧಿಯಲ್ಲಿ ಅಮೆರಿಕೆಯು ಪಾಕಿಸ್ತಾನದೊಡನೊಂದ ಸೈನಿಕ ಒಡಂಬಡಿಕೆಯನ್ನು ಮಾಡಿಕೊಂಡು, ಅದಕ್ಕೆ ಶಸ್ತ್ರಾಸ್ತ್ರಗಳ ಪೂರೈಕೆ ಮಾಡಿದುದನ್ನು ಭಾರತವು ಅದೆಷ್ಟು ವಿರೋಧಿಸಿದ್ದರೂ ಮುಂದುವರಿಯುತ್ತ ಬಂದಿತ್ತು. ಆದರೆ ಇತ್ತೀಚೆಗೆ ಅಧ್ಯಕ್ಷ ಕೆನ್ನೆಡಿಯವರು ಈ ಒಡಂಬಡಿಕೆಯನ್ನು ಸನ್ನ ವಿಮರ್ಶಿಸಲಿರುವರೆಂದೂ ಪಾಕ್‌ಗೆ ನೀಡುವ ಸೈನಿಕ ಸಹಾಯದ ಪ್ರಮಾಣವು ಇಳಿಯುವುದೆಂದೂ ತಿಳಿಯುತ್ತದೆ.

ಅಯೂಬ ಖಾನ್

ಪಾಕ್ ಮಿಲಿಟರಿ ಸರಕಾರದ ಅಧ್ಯಕ್ಷ ಅಯೂಬ್ ಖಾನ್ ಪಾಕಿಸ್ತಾನವನ್ನು ಒಂದು ರೀತಿಗೆ ತಂದವರು ಎಂಬುದನ್ನು ಒಪ್ಪಬೇಕು. ಆದರೆ, ತನ್ನ ಹಿಂದಿನವರಂತೆ ಇವರೂ ಕಾಶ್ಮೀರದ ಆಸೆಯನ್ನು ಬಿಟ್ಟುಕೊಟ್ಟಿಲ್ಲ. ಈ ಸಂಬಂಧದ ವಿವಾದವನ್ನು ಜನಮತದಂತೆ ಕೊನೆಗೊಳಿಸಿ ಪರಸ್ಪರ ಸಂರಕ್ಷಣಾ ಒಪ್ಪಂದವನ್ನು ಮಾಡಿಕೊಳ್ಳೋಣವೆಂದವರೀಗ ಮರಳಿ ಭಾರತವನ್ನು ಆಹ್ವಾನಿಸಿದ್ದಾರೆ. ಯಾವುದೇ ಪ್ರಾಂತದ ಮಿಲಿಟರಿ ಒಡಂಬಡಿಕೆಗೆ ಸೇರದಿಚ್ಛಿಸದ ಭಾರತದ ಮೇಲೆ ಈ ಆಹ್ವಾನ ವ್ಯರ್ಥವೆಂದು ಈ ಮೊದಲೇ ಹಲವು ಬಾರಿ ಕಂಡುಕೊಂಡ ಅಯೂಬ್‌ಖಾನರು ಮತ್ತೂ ಮತ್ತೂ ಅದನ್ನು ಪುನರುಚ್ಚರಿಸುವಲ್ಲಿ ಏನೋ ವಿಪರೀತಾರ್ಥ ಇರಬೇಕೆನಿಸುತ್ತದೆ.

ಅಲ್ಲಲ್ಲಿಯ ಸುದ್ದಿಸಾರ

ಧರ್ಮಸ್ಥಳದಲ್ಲಿ ಸರ್ವಧರ್ಮ ಮತ್ತು ಸಾಹಿತ್ಯ ಸಮ್ಮೇಳನಗಳು—

ದ. ಕನ್ನಡದ ಪ್ರಸಿದ್ಧ ಯಾತ್ರಾ ಸ್ಥಳಗಳ ಸ್ಥಾಪಿಸಿದ ಶ್ರೀ ಧರ್ಮಸ್ಥಳದಲ್ಲಿ ೨೧ನೇ ಸರ್ವಧರ್ಮ ಮತ್ತು ಕನ್ನಡ ಸಾಹಿತ್ಯ ಸಮ್ಮೇಳನಗಳು ಇದೇ ತಾ. 6 ಮತ್ತು 7ರಲ್ಲಿ ಜರುಗಲಿವೆ. ಈ ಸಂಭ್ರಮದ ಜಯಶೀಲವಾಗಿ ನೆರವೇರಿಸುವ ಮೈಸೂರು ರಾಜ್ಯ ವಿಧಾನ ಸಭಾಧ್ಯಕ್ಷ ಶ್ರೀ ಎಸ್. ಆರ್. ಕಂಠಿಯವರು ಸಮ್ಮೇಳನವನ್ನು ಉದ್ಘಾಟಿಸುತ್ತಾ ಪ್ರಾಚೀನ ಕಾಲದಿಂದಲೂ ರಾಜನೀತಿಯು ಧರ್ಮವನ್ನು ಅನುಸರಿಸಿಕೊಂಡಿರುವುದಾಗಿಯೂ ಮುಂದೆ ಕೂಡಾ ಅದು ಆಧ್ಯಾತ್ಮಿಕ ನೆಲೆಯಲ್ಲಿ ಮುಂದುವರೆಯಬೇಕಾಗಿದೆ ಎಂದೂ ಹಿಂದಿನ ಕಾಲದಂತೆ ಮುಂದಕ್ಕೂ ಸಾಹಿತ್ಯ ಕೂಡಾ ಭಾವೈಕ್ಯತೆಯನ್ನು ಸಾಧಿಸಬೇಕಾಗಿದೆ ಎಂದೂ ಮುಂದುವರಿಸಿ ಹೇಳಿದರು.

ಶ್ರೀ ಶಿವಗಂಗ ಮುರಿಗೆ ಶ್ರೀ ಶ್ರೀ ಶಿವಕುಮಾರ ಸ್ವಾಮಿಗಳವರು ಧರ್ಮ ಸಮ್ಮೇಳನದ ಅಧ್ಯಕ್ಷ ಭಾಷಣ ಮಾಡುತ್ತಾ ಧರ್ಮದಿಂದ ಅಭಾಗ್ಯವಾಗಿರುವ ರಾಜಕೀಯವಾದರೂ, ಧರ್ಮದ ಅಂಕುಶದಿಂದಲೇ ಮುಂದೆ ಸಾಗಬೇಕಾಗಿದೆ ಎಂದರು.

ಧರ್ಮವಿಕಾಸ ಮತ್ತು ರಾಜನೀತಿ ಎಂಬ ಕುರಿತು ಸ್ವಾಮಿ ಬುದ್ಧಿಕೃತ್ತ, ಡಾ. ಎಂ. ಪಿ. ಕೃಷ್ಣ ರಾವ್, ಎ. ಸುಬ್ರಯ್ಯ ಶಾಸ್ತ್ರಿ, ಪ್ರಿನ್ಸಿಪಾಲ್ ಶ್ರೀ ಸಂಪದಗಿರಿ ರಾವ್, ಎಂ. ಜಿ. ನಂಜುಂಡಾರಾಧ್ಯ, ಕುಮಾರಿ ವಿಮಲ, ಪಿ. ಎಂ ಇದಿನಬ್ಬ, ಸ್ವಾಮಿದಾಸ, ಕೆ ಎ. ಧರಣೇಂದ್ರಯ್ಯ ಮೊದಲಾದವರು ಭಾಷಣ ಮಾಡಿ, ಧರ್ಮವನ್ನು ಬಿಟ್ಟು ಪತನವಾಗುತ್ತಿರುವ ಇಂದಿನ ರಾಜಕಾರಣವನ್ನು ತಡೆಯಬೇಕಾದುದು ಅವಶ್ಯವೆಂದರು. ಅರಂಭದಲ್ಲಿ ಶ್ರೀ ರತ್ನವರ್ಮ ಹೆಗ್ಡೆ ಎಂ. ಎಲ್. ಎ. ಯವರು ಸ್ವಾಗತಭಾಷಣ ಮಾಡಿ, ಉದ್ಘಾಟನೆಗೆ ಒಪ್ಪಿಸಿದ ಮಾನಪತ್ರವನ್ನು ಶ್ರೀ ಡಿ. ಸುಬ್ಬಸ್ವಾಮಿಯವರೂ ಅಧ್ಯಕ್ಷರಿಗೆ ಒಪ್ಪಿಸಿದ ಮಾನಪತ್ರವನ್ನು ಶ್ರೀ ಜಿನರಾಜ ಶಾಸ್ತ್ರಿಗಳೂ ಓದಿದರು. ಇಂದು ಕಾವ್ಯವಾಚನ, ಸಂಗೀತ ಕಚೇರಿಗಳೂ ನಡೆದುವು. ತಾ. 7ರಂದು ಪ್ರಸಿದ್ಧ ಮತ್ತು ಹಿರಿಯ ಸಾಹಿತಿಗಳಾದ ಶ್ರೀ ಎ. ನ. ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಸಾಹಿತ್ಯ ಸಮ್ಮೇಳನವು ನೆರವೇರಿತು. ಅರಂಭದಲ್ಲಿ ಶ್ರೀಮತಿ ಲಲಿತಾ ಕುಲಕರ್ಣಿಯವರಿಂದ ಪ್ರಾರ್ಥನೆ, ಶ್ರೀ ರತ್ನವರ್ಮ ಹೆಗ್ಡೆಯವರಿಂದ ಸ್ವಾಗತ ಭಾಷಣ, ಅಧ್ಯಕ್ಷರಿಗೆ ಸನ್ಮಾನ ಪತ್ರಗಳಾದುವು. ಅಧ್ಯಕ್ಷ ಶ್ರೀ ಎ.ನ. ಕೃಷ್ಣರಾಯರು ಭಾಷಣ ಮಾಡುತ್ತಾ ಮಾನವನ ಮನಸ್ಸನ್ನು ನಿರ್ಮಲಗೊಳಿಸಿ, ಅದಕ್ಕೆ ಸಂಸ್ಕಾರಕೊಟ್ಟು ಅವನನ್ನು ಪುಣ್ಯಶಾಲಿಯನ್ನಾಗಿ ಮಾಡುವುದೇ ಸಾಹಿತ್ಯದ ಮೂಲೋದ್ದೇಶವೆಂದೂ ಕನ್ನಡ ಸಾಹಿತ್ಯದ 1700 ವರ್ಷಗಳ ದೀರ್ಘ ಅವಧಿಯ ಬೆಳವಣಿಗೆಯಲ್ಲಿ ಭಾವೈಕ್ಯತೆಯ ವಿಶೇಷ ಗುಣವಾಗಿರುವುದೆಂದೂ ಸಾಹಿತಿಗಳು ಸಾಧಿಸಿ ಬೆಳಸಿದ ಭಾವೈಕ್ಯವನ್ನು ರಾಜಕಾರಣಿಗಳು ಅಳಿಯುವಂತೆ ಮಾಡಿದರೆಂದೂ ಇಂದಿನ ಕರ್ನಾಟಕದ ಹೆಸರಿಗೂ ರಾಜಕಾರಣಿಗಳ ಸ್ವಾರ್ಥವೇ ಕಾರಣವಾಗಿದೆ ಎಂದೂ, ನಮ್ಮಲ್ಲಿ ಕನ್ನಡಭಾಷೆ ಮಾಡಿ, ನಮ್ಮ ರಾಜ್ಯದಲ್ಲಿ ಕನ್ನಡ ಸಾಹಿತ್ಯಗಳ ಹಾಗೂ ಕಲಾವಿದರ ಉದ್ಧಾರವಾಗುವಂತಾಗ ಬೇಕೆಂದೂ ಹೇಳಿದರು. ಶ್ರೀಗಳಾದಿ ಶ್ರೀ ಚೆನ್ನಬಸವೇಶ್ವರ. ಬಿ. ಎಸ್. ಕುಲಕರ್ಣಿ ದೇವೇಂದ್ರ ಹಕಾರಿ, ಬಿ. ನಾಗರಾಜ. ಬಿ. ಬೃಹ್ಮಪ್ಪ, ವೀರಕೇಸರಿ ರಾಮಮೂರ್ತಿ ಮೊದಲಾದವರು ಭಾಷಣ ಮಾಡುತ್ತಾ ಸಾಹಿತ್ಯವು ಭಾವೈಕ್ಯಸೂತ್ರವಾಗಿದೆ ಎಂದು ಹೇಳಿದರು. ಕೊನೆಯಲ್ಲಿ ಅಧ್ಯಕ್ಷರಿಂದ ಸಮಾರೋಪ ಭಾಷಣವಾಗಿ ಶ್ರೀ ಕೆ. ಎಸ್. ಧರಣೇಂದ್ರಯ್ಯನವರಿಂದ ಧನ್ಯವಾದ ಸಮರ್ಪಣೆಯಾಯಿತು. ಸಂಗೀತ ಕಚೇರಿ, ಕಾವ್ಯವಾಚನ ನಡೆಯಿತು.

ಜಿಲ್ಲೆಯ ಕಾಂಗ್ರೆಸ್ ಅಭ್ಯರ್ಥಿಗಳು—

ಮೈಸೂರು ಪ್ರದೇಶ ಕಾಂಗ್ರೆಸಿನ ಚುನಾವಣಾ ಸಮಿತಿಯು ಶಿಫಾರಸು ಮಾಡಿದ ಕಾಂಗ್ರೆಸ್ ಉಮೇದ್ವಾರಿಗಳ ಯಾದಿಯನ್ನು ಕೇಂದ್ರ ಚುನಾವಣಾ ಸಮಿತಿಯು ಪರಿಶೀಲಿಸಿ ಪ್ರಕಟಿಸಿದ ಅಧಿಕೃತ ಯಾದಿಯು ಈ ಕೆಳಗಿನಂತಿದೆ.

ಲೋಕ ಸಭೆಯ ಉತ್ತರ ಭಾಗಕ್ಕೆ— ಶ್ರೀ ಯು. ಶ್ರೀನಿವಾಸ ಮಲ್ಯ, ದಕ್ಷಿಣ ಭಾಗಕ್ಕೆ ಶ್ರೀ ಕೆ. ಶಂಕರ ಆಳ್ವ

ವಿಧಾನ ಸಭೆಯ ಬೈಂದೂರು— ಶ್ರೀ ವೈ. ಮಂಜಯ್ಯ ಶೆಟ್ಟಿ.

ಕುಂದಾಪುರ- ಶ್ರೀ ಎಸ್. ಎಸ್. ಕೊಳ್ಳೆಬೈಲು

ಬ್ರಹ್ಮಾವರ— ಶ್ರೀ ಎಸ್. ಧರ್ಮಸಾಮ್ರಾಜ್ಯ.

ಉಡುಪಿ— ಶ್ರೀಮತಿ ಪ್ರೇಮಾ ಟಿ.ಎ ಪೈ

ಕಾಪು— ಶ್ರೀ ಎಸ್. ಎಸ್. ಡಿ. ಪಿಂಟೊ.

ಸುರತ್ಕಲ್— ಶ್ರೀ ಕೆ. ದೂಮಪ್ಪ

ಕಾರ್ಕಳ— ಡಾ. ಕೆ. ಕೆ. ಹೆಗ್ಡೆ.

ಮೂಡಬಿದ್ರೆ ೧೨ವರ್ಷ—ಶ್ರೀ ಮಂಜಪ್ಪ ಉಳ್ಳಾಲ

ಮಂಗಳೂರು ಬಂದು—ಶ್ರೀ ಕೆ. ಸೂರ್ಯನಾರಾಯಣ ಅಡಿಗೆ.

ಮಂಗಳೂರು ಎರಡು—ಬಿ. ಎಂ. ಇದಿನಬ್ಬ.

ಪಾಣೆಮಂಗಳೂರು—ಡಾ ನಾಗಪ್ಪ ಆಳ್ವ.

ಬೆಳ್ತಂಗಡಿ—ಶ್ರೀ ಬಿ ವೈಕುಂಠ ಬಾಳಿಗಾ.

ಪುತ್ತೂರು—ಶ್ರೀ ಕೆ. ಬೆಳ್ಳಿಯಪ್ಪ ಗೌಡ.

ಸುಳ್ಯ ಕಾದಿಟ್ಟ ಸ್ಥಾನ— ಶ್ರೀ ಸುಬ್ಬಯ್ಯ ನಾಯ್ಕ.

ಬೊಂಬಾಯಿಯಲ್ಲಿ— "ಸಚೇತನ" ಕಥಾಸ್ಪರ್ಧೆಯ ಫಲಿತಾಂಶ: ಪ್ರಥಮ ಬಹುಮಾನ ರೂ. ೧೦೦/- "ಜಿಣ್ಣು ಮಗು" "ರಸಿಕ" ಮುತ್ತಿಗೆ (ಶ್ರೀ ಪಿ. ಸುಬ್ರಹ್ಮಣ್ಯ ಆಚಾರ್ಯ, ಭಟ್ಕಳ. ದ್ವಿತೀಯ ಬಹುಮಾನ ರೂ ೫೦/- "ಒಡ್ಡಿನ ಮೇಲೆ ಮೂತನಾಡಿದ್ದು" ಶ್ರೀ ವಿ. ಕೆ ಕುಲಕರ್ಣಿ, ಹಿರಿಯರ. ತೃತೀಯ ಬಹುಮಾನ ರೂ. ೨೫- "ನೀಲಾಂಬಿಕೆ" ಶ್ರೀ ಎನ್. ನಾರಾಯಣ ಬಲ್ಲಾಳ, ಉಡುಪಿ.

ಈ ಕೆಳಗಿನವರಿಗೆ ಆದರಣೀಯ ಬಹುಮಾನವಾಗಿ ಪ್ರತಿಯೊಬ್ಬರಿಗೆ ರೂ. ೧೦/=ರಂತೆ ಕೊಡಲಾಗುವುದು.

೧. ಶ್ರೀ ಎನ್. ವಿ. ಭಟ್, ಮೂಲ್ಕಿ, (ದ. ಕ.) "ಎರಡು ಮುಖ"

೨. ಶ್ರೀ ಶಿಶು ಕುಮಾರ, ಮಂಗಳೂರು, (ದ. ಕ) "ತಾಳ್ಮೆ"

೩. ಶ್ರೀಮತಿ "ಭೇರತಿ ಸುತೆ" ಮುಂಬಯಿ "ಪವಿತ್ರ ಪತಿತೆ"

೪. ಶ್ರೀ ಎಚ್. ರಾಮಕೃಷ್ಣ ಅಡಿಗ, ಕುಂದಾಪುರ "ಬ್ರಹ್ಮ ಸೃಷ್ಟಿ"

೫. ಶ್ರೀ ಕೆ. ಗೋಪಾಲಕೃಷ್ಣ ಹೆಗ್ಡೆ, ಸಿ ಸಿ, (ಉ. ಕ) "ಕೊಳೆರೋಗ ಬಂದಿತ್ತು"

ಪರಿಶೀಲಕರು— ೧) ಶ್ರೀ ವ್ಯಾಸರಾಯ ಬಲ್ಲಾಳ ೨) ಪ್ರೋ. ವಸಂತ ಕವಲಿ ಮತ್ತು ಶ್ರೀ ಶಂಕರ ಹೆಬ್ಬಾಡಿ.

ಬೆಳಗಾವಿ ಜಿಲ್ಲಾ ನಿರುದ್ಯೋಗೀ ಶಿಕ್ಷಕರ ಸಂಘ—ಈ ಸಂಘದ ನೇಗಿನ ಜಾಗ ಆಫೀಸಿಗೆ ದಿನಾಂಕ ೨೮ರಂದು ವಿಧಾನ ಸೌಧದಿಂದ ಶ್ರೀ ಕೇಶವ ರಾವ್ ಸಿಟ್ಟೂರ್ ರವರು, ಎಂ. ಎಲ್. ಸಿ. ಅವರಿಂದ ತಂತಿ ಮತ್ತು ಪತ್ರಗಳು ಬಂದಿದ್ದು ಅದರಲ್ಲಿ ಮಾನ್ಯ ಮಂತ್ರಿಗಳು ನಮ್ಮ ಬೇಡಿಕೆಗಳನ್ನು ಮಾನ್ಯ ಮಾಡಿ ಹುಕುಂ ಕೊಟ್ಟಿರುವದಾಗಿಯೂ, ಸಂಬಂಧಪಟ್ಟ ಶಿಕ್ಷಣ ಖಾತೆಯು ನಿರುದ್ಯೋಗೀ ಪ್ರಾಥಮಿಕ ಶಿಕ್ಷಕ-ಶಿಕ್ಷಕಿಯರನ್ನು ನೌಕರಿಗೆ ತೆಗೆದುಕೊಳ್ಳುವ ವಿಚಾರ ನಡೆದಿರುವದಾಗಿಯೂ ತಿಳಿದಿರುವದು. ಶಿಕ್ಷಕರನ್ನು ನೌಕರಿಗೆ ತೆಗೆದುಕೊಳ್ಳುವ ವಯೋಮಿತಿಯನ್ನು ೨೫ರಿಂದ ೨೮ರ ವರೆಗೆ ಏರಿಸಿರುವದಾಗಿಯೂ ಮಾನ್ಯ ಎಂ. ಎಲ್. ಸಿ. ಗಳು ಪ್ರತ್ಯೇಕ ತಿಳಿಸಿದ್ದಾರೆ. ಈ ಸಂಭವು ಎಲ್ಲಾ ಶಿಕ್ಷಕ ಸದಸ್ಯರೆ ಹಾಗು ಸಾರ್ವಜನಿಕರ ಸಾರ್ವತ್ರಿಕ ಸಲುವಾಗಿ ದಿ ಕೆನರಾ ಬ್ಯಾಂಕಿಂಗ್ ಕಾರ್ಪೋರೇಶನ್ ಬ್ಯಾಂಕಿನಲ್ಲಿ ತನ್ನ ಸೇವಿಂಗ್ಸ್ ಖಾತೆಯನ್ನು ತೆರೆದಿದ್ದು, ವರ್ಗಣೆ, ಸಹಾಯಧನ ಇತ್ಯಾದಿ ಹಣವನ್ನು ಸಮೀಪದ ಬ್ಯಾಂಕಿಗೆ ತುಂಬಬಹುದು. ದಿನಾಂಕ ೨೯ರಂದು ರಾಮದುರ್ಗ ನಾಗರಿಕರು ಅಲ್ಲಿಯ ನಿರುದ್ಯೋಗೀ ಶಿಕ್ಷಕ ಪ್ರತಿನಿಧಿಗಳ ಮೂಲಕ ಸಂಘಕ್ಕೆ ೪೫ ರೂಪಾಯಿಗಳನ್ನು ಸಹಾಯಧನವಾಗಿ ಮನಿಯೊರ್ಡರ ಮೂಲಕ ಕಳಿಸಿದ್ದಾರೆ ಸಂಘವು ಅವರಿಗೆ ತುಂಬಾ ಋಣಿಯಿದೆ. ರಿಟ್ ಅರ್ಜಿಯ ಬಗ್ಗೆ ಈಗಾಗಲೇ ಹಣವು ಸಂಗ್ರಹವಾಗಿದ್ದು ಉಳಿದವರು ತ್ವರೆ ಮಾಡಬೇಕೆಂದು ಸಂಘವು ಕೇಳಿಕೊಳ್ಳುತ್ತದೆ.

ನಾಟಕ ಪ್ರದರ್ಶನ— ಉಡುಪಿಯ ಶ್ರೀ ಗಣೇಶ ಚಿತ್ರಕಲಾ ಶಾಲೆಯ ನಾಟಕ ಶಾಖೆಯಾಗಿರುವ ಶ್ರೀ ಗಣೇಶ ಮಿತ್ರ ಮಂಡಳಿಯವರು ಇದೇ ತಾ. ೨೫ನೇ ರಾತ್ರಿ ಉಡುಪಿ ಶ್ರೀ ನರಸೇಂದ್ರ ಕಲಾಮಂದಿರದಲ್ಲಿ "ರಾಷ್ಟ್ರವೀರ" ಎಂಬ ಐತಿಹಾಸಿಕ ನಾಟಕವನ್ನು ಕಲಾಪೂರ್ಣ ಹಾಗೂ ಯಶಸ್ವಿಯಾಗಿ ಅಭಿನಯಿಸಿದರು. ಶ್ರೀ ಗಣಪತಿ ರಾವ್ ಪೈಂಟರ್‌ರ ಪರಿಶ್ರಮವು ಹೇಳತಕ್ಕದ್ದಾಗಿದೆ ನಾಟಕಾಂತ್ಯದಲ್ಲಿ ಪಾ. ಲ. ನಾ. ಉಪಾಧ್ಯಾಯರು ಸಹಕರಿಸಿದವರೆಲ್ಲರಿಗೂ ಧನ್ಯವಾದಗಳನ್ನರ್ಪಿಸಿದರು.

ಧನ್ವಂತರೀ ಜಯಂತಿ— ಉಡುಪಿಯ ಅಯುರ್ವೇದ ಕಾಲೇಜಿನಲ್ಲಿ ಶ್ರೀ ಧನ್ವಂತರೀ ಜಯಂತಿ ಸಮಾರಂಭವು ತಾ. ೧೧ರಂದು ಡಾ| ಪಿ. ರಾಘವೇಂದ್ರ ನಾಯ್ಕರ ಅಧ್ಯಕ್ಷತೆಯಲ್ಲಿ ನೆರವೇರಿತು. ಡಾ| ವಿಜಯೇಂದ್ರ ಮೂರ್ತಿಯವರಿಂದ ಸ್ವಾಗತ, ಪ್ರಿನ್ಸಿಪಾಲ್ ಜಿ ಬಿ ಸಣಗೂರುರವರಿಂದ ವರದಿವಾಚನಗಳಾದ ಮೇಲೆ, ಉಡುಪಿ ಲೋ ಕಾಲೇಜಿನ ಪ್ರಿನ್ಸಿಪಾಲ್ ಎಸ್. ಎಸ್. ಕೃಷ್ಣಮೂರ್ತಿಯವರು ಭಾಷಣವಿತ್ತರು. ಬಹುಮಾನ ವಿತರಣೆ, ಅಧ್ಯಕ್ಷರ ಭಾಷಣ, ಧನ್ಯವಾದ ಸಮರ್ಪಣೆಗಳಾದುವು.

ಉಡುಪಿಯ ಕವಿರಾಜ ದೇವಾಲಯದಲ್ಲಿ ಡಾ| ಕೆ. ಎಲ್. ಪಾಠಕರ ಅಧ್ಯಕ್ಷತೆಯಲ್ಲಿ ಧನ್ವಂತರೀ ಜಯಂತಿ ಪೂಜೆಯು ತಾ. ೧೧ರಂದು ನಡೆಯಿತು. ಇದೇ ಸಂದರ್ಭದಲ್ಲಿ ಆಯುರ್ವೇದಕ್ಕೆ ಸೇವೆ ಸಲ್ಲಿಸಿದ ದಿ ಟಿ. ಉಪೇಂದ್ರ ಅನಂತ ಪೈಯವರ ತೈಲಚಿತ್ರವನ್ನು ಡಾ. ಪಿ. ಆರ್. ನಾಯಕರೂ ದಿ ಪಾಂಗಾಳ ಕೇಶವ ನ್ಯಾಕರ ತೈಲಚಿತ್ರವನ್ನು ಶ್ರೀ ರಾಘವೇಂದ್ರ ಪೈಗಳೂ ದಿ. ಪಾಂಗಾಳ ಲಕ್ಷ್ಮೀನಾರಾಯಣ ನ್ಯಾಕರ ತೈಲಚಿತ್ರವನ್ನು ಶ್ರೀ ಎನ್. ವಿ. ಕಾಮತರೂ ಅನಾವರಣ ಮಾಡಿದರು. ಸಭಿಕರಲ್ಲಿ ಶ್ರೀಗಳಾದ ನಾಗೇಶ ರಾವ್, ಜಿ. ಎಸ್. ಸಮಣೂರ್, ಯು. ಎ. ಮಧ್ವಸ್ಥರು ಮೊತನಾಡಿದರು. ಅಧ್ಯಕ್ಷರ ಭಾಷಣವಾದ ಮೇಲೆ ಕವಿರಾಜ ಎಂ. ಜಿ. ಶೆಣೈಯವರು ವಂದಿಸಿದರು.

ನಂಜನಗೂಡಿನ ಸದ್ವೈದ್ಯಶಾಲಾ ಧನ್ವಂತರೀ ವಿಲಾಸದಲ್ಲಿ ಧನ್ವಂತರೀ ಜಯಂತಿಯು ತಾ. ೧೧ರಂದು ವಿಜೃಂಭಣೆಯಿಂದ ನೆರವೇರಿತು. ಶರೀರ, ಮನಸ್ಸುಗಳ ಸ್ವಸ್ಥತೆ ಮತ್ತು ಕಲೆಯ ಕುರಿತು ಪ್ರೊಫೆಸರ್, ಕೆ. ನಂ. ಶ್ರೀಕಂಠಯ್ಯನವರು ಭಾಷಣವಿತ್ತರು. ಅನಂತರ ಸಂಗೀತಕಚೇರಿ ನಡೆಯಿತು.

ಮೈಸೂರ್ ಸ್ಟೇಟ್ ಫಿಶರೀಸ್ ಎಡ್ವೈಸರೀ ಬೋರ್ಡಿನ ಸಭೆಯು ಕಳೆದ ತಾ. 30ರಂದು ಕಾರವಾರದಲ್ಲಿ ಬೋರ್ಡಿನ ಅಧ್ಯಕ್ಷ ಡಾ| ಚಂಪಾ, ಎಂ. ಎಲ್ ಸಿ. ಅವರ ಅಧ್ಯಕ್ಷತೆಯಲ್ಲಿ ಜರಗಿ, ಮೀನಿನ ವ್ಯವಸಾಯದ ಕುರಿತು ಮಹಾ ಮೈಸೂರು—ಮೀನುಗಾರರ ಪರಿಷತ್ತಿನ ಪರವಾಗಿ ಶ್ರೀ ಎಚ್. ಕೆ. ತಿಂಗಳಾಯರು ತಂದ ಈ ಕೆಳಗಿನ ಠರಾವುಗಳು ಅಂಗೀಕೃತವಾದವು.

ಪೋರ್ಚುಗೀಸ್ ಸರಕಾರದ್ದೆನ್ನಲಾದ ಅಂಜದೀಪದಿಂದ ಹಾರಿಸಲ್ಪಟ್ಟ ಗುಂಡಿನೇಟಿಗೆ ಬಲಿಯಾದ ರಾಜರಾಮ ಆಸ್ಕರ್‌ರಾಮ ಕೋಟ್ರೇಕರ ಮಾಬಾಳಿ ಇವರ ಅಕಾಲ ಮರಣಕ್ಕೆ ಈ ಸಭೆಯು ವಿಷಾದಿಸುತ್ತದೆಲ್ಲದೆ, ಕೇಂದ್ರ ಹಾಗೂ ರಾಜ್ಯ ಸರಕಾರ ಸಾಕ್ಷ್ಯ ಕಾರ್ಯಚರಣೆ ಗೈದು ಈ ವಿಷಯದ ಮೀನುಗಾರರ ಕಳವಳವನ್ನು ಹೋಗಲಾಡಿಸಬೇಕು. ಅಪರೀಕ್ಷಿತ ಅವಗಡಗಳಿಗೊಳಗಾಗಿ ಸೊತ್ತುಗಳನ್ನು ಕಳಕೊಳ್ಳುವ ಮೀನುಗಾರರ ಸಹಾಯಕ್ಕೆ ಪರಿಹಾರ ನಿಧಿಯೊಂದನ್ನು ನಿರ್ಮಿಸಬೇಕು, ಪಂಚವಾರ್ಷಿಕ ಯೋಜನೆಗಳನ್ನಯ ಮೀನುಗಾರಿಕೆಯ ಅಭಿವೃದ್ಧಿಯ ಕುರಿತು ವರದಿಯನ್ನು ಪ್ರಕಟಿಸುವಂತಾಗಬೇಕು ಮಂಗಳೂರು ಬಂದರೆವನ್ನು ಸರ್ವಋತು ಬಂದರೆವನ್ನಾಗಿ ಮಾಡುವಾಗ ಬೆಗರೆಯಿಂದ ತಣ್ಣೀರು ಬಾವಿ ತನಕ ಹಲವಾರು ಮೀನುಗಾರರ ಮನೆಗಳನ್ನು ವಲಸೆ ತೆಗೆಯಿಸುವ ಸಂಭಭವದಲ್ಲಿ ಅವರಿಗೆ ಸುನರ್ವಾವೇಶನದ ವ್ಯವಸ್ಥೆ ಸರಕಾರ ಕೈಗೊಳ್ಳಬೇಕು ಇತ್ಯಾದಿ.

ಶಾಗೋರ್ ಜಯಂತಿ—ಸಮಾರಂಭವು ಉಡುಪಿಯ ಶ್ರೀ ಪೂರ್ಣಪ್ರಜ್ಞಾ ಕಾಲೇಜಿನಲ್ಲಿ ತಾ ೨೧ರಂದು ನೆರವೇರಿತು. ಬೆಳಿಗ್ಗೆ ಪ್ರೊಫೆಸರ್ ಸಿ. ಆರ್. ಕೇರಳ ವರ್ಮರ ಅಧ್ಯಕ್ಷತೆಯನ್ನು ರಾಗೋರರ ಕುರಿತ ವಿಚಾರಗೋಷ್ಠಿಯಲ್ಲಿ ಡಾ ಕೆ. ಬಿ. ರಾಮ ಕೃಷ್ಣರಾವ್, ಶ್ರೀ ಎಚ್. ಕೆ. ರಾಮಚಂದ್ರಮೂರ್ತಿ, ಶ್ರೀ ಬಿ. ದಾಮೋದರ ರಾವ್, ಪ್ರೋ. ಪಿ. ಎಂ. ಇನಾಂದಾರ್ ಇವರು ಉಪನ್ಯಾಸವಿತ್ತರು. ಸಂಜೆ ಪ್ರಿನ್ಸಿಪಾಲ್ ಎಚ್. ಸುಂದರ ರಾಯರ ಅಧ್ಯಕ್ಷತೆಯಲ್ಲಿ ಡಾ| ಪಿ. ನಾಗರಾಜರಾಯರು ರಾಗೋರ್ ಶತಮಾನೋತ್ಸವ ಭಾಷಣಗೈದರು. "ರಾತ್ರಿ ಬಲಿಪಾನ" ನಾಟಕಾಭಿನಯವಾಯಿತು.

ಶ್ರೀ ಮಾನಂಜೆ ಕೇಪಗಿರಿರಾಯರ ಷಷ್ಟ್ಯಾಬ್ದಿ— ಸಮಾರಂಭದ ಸಲುವಾಗಿ ಉಡುಪಿ ಶ್ರೀ ಕೃಷ್ಣದೇವರ ಸನ್ನಿಧಾನದಲ್ಲಿ ಇದೇ ತಾ. ೨೦ರಿಂದ 192 ತನಕ ದಿನಂಪ್ರತಿ ಮಹಾ ಪೂಜೆ, ಮತ್ತು ಸಂತರ್ಪಣಾ ಸೇವೆ ನಡೆಯುತ್ತಿದೆ.

ಉಡುಪಿಯ ಹಿಂದೀ ಪ್ರಚಾರ ಪರಿಷತ್ತಿನ—ಆಶ್ರಯದಲ್ಲಿ "ಹಿಂದೀ ಸಾಹಿತ್ಯದಲ್ಲಿ ತುಲಸೀದಾಸನಿಗೆ ಇತ್ತಿರುವ ಸರ್ವೋಚ್ಚ ಸ್ಥಾನವು ಔಚಿತ್ಯ ಪೂರ್ಣವಾಗಿದೆ" ಎಂಬ ವಿಷಯದ ಮೇಲೆ ಒಂದು ವಿಚಾರಗೋಷ್ಠಿಯು ತಾ ೧೧ರಂದು ನಡೆಯಿತು. ಸರಕಾರಿ ಗಂಡುಮಕ್ಕಳ ತರಬೇತಿ ಶಾಲೆಯ ಹಿಂದೀ ಪಂಡಿತ ಶ್ರೀ ಬಿ ಎಸ್. ರಾಮರಾಯರು ವಿಷಯವನ್ನು ಸಮರ್ಥಿಸಿ ತುಲಸೀಯ ವ್ಯಕ್ತಿತ್ವ, ಶ್ರೇಷ್ಠತೆಗಳನ್ನು ವಿವರಿಸಿದರು. ಪೂರ್ಣ ಪ್ರಜ್ಞಕಾಲೇಜಿನ ಹಿಂದೀ ಉಪನ್ಯಾಸಕ ಶ್ರೀ ಎ. ವರದರಾಜ ಬಲ್ಲಾಳರು ಕವೀರನ ಸಾಹಿತ್ಯವನ್ನು ಪ್ರಕಟಿಸಿ, ಆತನ ಕೃತಿಯು ತುಲಸೀಗಿಂತಲೂ ಹಿರಿದೆಂದು ಪ್ರತಿಪಾದಿಸಿ, ಈತನಿಗೆ ಸರ್ವೋಚ್ಚಸ್ಥಾನವೇಕೆ ಕೊಡಬಾರದು ಎಂದು ಪ್ರಶ್ನಿಸಿದರು. ಶ್ರೀಯುತ ಲ. ಕಿಣಿಯವರು ಸೂರದಾಸನ ಕೃತಿಗಳ ಬಗ್ಗೆ ಮಾತಾಡಿದರು. ಅಧ್ಯಕ್ಷಸ್ಥಾನದಲ್ಲಿದ್ದ ಪರಿಷತ್ತಿನ ಕಾರ್ಯದರ್ಶಿ ಎಸ್. ಗೋಪೀಚಂದರಾಯರು ವಿಚಾರಗೋಷ್ಠಿಗಳ ಪ್ರಯೋಜನವನ್ನು ವಿವರಿಸಿ, ಪರಿಷತ್ತಿನ ಈ ಉದ್ಯಮದಲ್ಲಿ ನೆರವಾದವರಿಗೆ ಕೃತಜ್ಞತೆಯನ್ನರ್ಪಿಸಿದರು.

ಉದಯೋನ್ಮುಖ ಲೇಖಕ ಶ್ರೀ. ಪಿ ಎನ್. ಹೆಬ್ಬಾರ ('ಸಿರಿಪತಿ') ಅವರ ನವೀನ ಕೃತಿ—

ಕಪಾಳ ಮೋಕ್ಷ

(ಮುನ್ನುಡಿ— ಡಾ| ಟಿ. ಎಂ. ಎ. ಪೈ, ಎಂ. ಡಿ., ಡಿ. ಎಸ್.)

ಏಳು ಪ್ರಬಂಧ, ಎಂಟು ಸಣ್ಣ ಕತೆಗಳನ್ನೊಳಗೊಂಡ ಮೌಲಿಕ ಕೃತಿ. ಸ್ವೈಜ ಘಟನೆಗಳ ಆಧಾರದ ಮೇಲೆ ನೆಯ್ದ ವರ್ಣನಾತ್ಮಕ ಪ್ರಬಂಧಗಳಾದರೂ ಸಣ್ಣ ಕತೆಯಷ್ಟೇ ಸ್ವಾರಸ್ಯಪೂರ್ಣವಾಗಿವೆ. ಕತೆಗಳಲ್ಲಿ ಕತೆಗಾರರ ಸಹಜ ಸುಂದರ ಶೈಲಿ, ಸಾಮಾಜಿಕ ನ್ಯಾಯ—ಅನ್ಯಾಯ ಹಾಗೂ ವಿಧಿವಿಲಾಸದ ಸುಳಿವು ಹೊಳೆವುಗಳನ್ನು ಕಾಣಬಹುದು.

180 ಪುಟಗಳು — ಬಿಳಿ ಕಾಗದ — ಬೆಲೆ ರೂ. 2=00

ರೂ. 2=25 ನ. ಪೈಸೆ ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಬಹುದು

ನವಭಾರತ ಪುಸ್ತಕ ಭಂಡಾರ, ಉಡುಪಿ.

ಮದ್ರಾಸದ ಮಾದರಿ ಮುಂಗಡ ಪತ್ರ

ದಕ್ಷಿಣ ಭಾರತದ ಪ್ರಗತಿಗಾಮಿರಾಜ್ಯವೆನಿಸಿದ ಮದ್ರಾಸದಲ್ಲಿ ೧೯೬೧—೬೨ರ ಮಧ್ಯಾವಧಿ ಮುಂಗಡ ಪತ್ರವು ಸುಮಾರು ಏಳು ಕೋಟಿ ಕೊರತೆಯನ್ನು ಸೂಚಿಸುತ್ತಿದೆಯೂದರೂ ಅದರಲ್ಲಿ ಕೆಲವೊಂದು ಅತ್ಯಗತ್ಯದ ಯೋಜನೆಗಳು ಅಡಕವಾಗಿರುವುದು ಮಹತ್ವ ಪೂರ್ಣವಾಗಿದೆ. ಯಾವುದೇ ವಿಷಯದಲ್ಲಿ ದಕ್ಷಿಣದ ರಾಜ್ಯಗಳಿಗೆ ಮಾತ್ರವಲ್ಲ ದೇಶದ ಎಲ್ಲ ರಾಜ್ಯಗಳಿಗೂ ಮಾದರಿಯೆಂಬಂತಿರುವ ಮದ್ರಾಸದಲ್ಲಿ ಇಂತಹ ಯೋಜನೆಗಳು ಇತರ ರಾಜ್ಯ ಸರಕಾರಗಳ ಕಣ್ಣುಗಳನ್ನೂ ತೆರೆಸಬೇಕಾದುದು ಅಗತ್ಯವಿದೆ.

ಮದ್ರಾಸ ಸರಕಾರವು ಈಗಾಗಲೇ ಸರಕಾರಿ ನೌಕರ ಮತ್ತು ಅಧ್ಯಾಪಕರಿಗೆ ಸಹಾನುಭೂತಿಪರವಾದ ವರ್ತನೆಯನ್ನು ತೋರಿಸಿದೆ. ಈ ಮುಂಗಡ ಪತ್ರದಲ್ಲಿ ಇನ್ನೂ ಕೆಲವೊಂದು ಅವಶ್ಯಕ ಮತ್ತು ಉಪಯುಕ್ತ ಯೋಜನೆಗಳನ್ನು ಅವರಿಗೆ ಒದಗಿಸಿದೆ. ತಮ್ಮ ಬಡತನದ ಕಾರಣದಿಂದ ಅಧಿಕ ವೆಚ್ಚ ಬರುವ ಇಂಜನಿಯರಿಂಗ್, ಮೆಡಿಕಲ್, ಎಗ್ರಿಕಲ್ಚರಲ್ ಮತ್ತು ವೆಟರ್ನಿಟಿ ಮೊದಲಾದ ವೃತ್ತಿಪರ ಕಾಲೇಜುಗಳಲ್ಲಿ ಓದುವುದಕ್ಕೆ ಅಸಮರ್ಥರಾಗುವ ವಿದ್ಯಾರ್ಥಿಗಳಿಗೆ ನಿಬಡ್ಡಿಯಿಂದ ಸಾಲವನ್ನು ನೀಡುವ ಸೂಚನೆಯನ್ನು ಸರಕಾರವು ಪರಿಶೀಲಿಸುತ್ತಿದೆ. ಈ ಸಾಲದ ಮೊಬಲಗನ್ನು ಪಡೆದವನು ದುಡಿಯುವುದಕ್ಕೆ ಆರಂಭವಾದ ನಂತರ ಸುಲಭ ಕಂತುಗಳಲ್ಲಿ ಮರುಪಾವತಿ ಮಾಡಬೇಕಾಗಿದೆ. ಮುಂಗಡಪತ್ರದ ವರ್ಷದಲ್ಲಿ ಎನ್. ಜಿ. ಯೊ ಮತ್ತು ಅಧ್ಯಾಪಕರ ಮಕ್ಕಳಿಗೆ ರಿಯಾಯಿತಿಯನ್ನು ಮುಂದುವರಿಸಿ ಈ ಯೋಜನೆಯನ್ನು ಪ್ರಾಥಮಿಕವಾಗಿ ಪ್ರಾರಂಭಿಸುವುದು ರಾಜ್ಯ ಸರಕಾರದ ಉದ್ದೇಶವಿದೆ.

ಮದ್ರಾಸ ಸರಕಾರವು ವ್ಯಾಥಮಿಕ ಶಿಕ್ಷಣಕ್ಷೇತ್ರದಲ್ಲಿ ದುಡಿಯುವ ಅಧ್ಯಾಪಕರಿಗೆ ನಿವೃತ್ತಿವೇತನವನ್ನು ಈಗಾಗಲೇ ಕೊಡುತ್ತಿದೆ. ಮುಂದೆ ಅದು ಇಂತಹ ವೇತನದ ಖಾಸಗಿ ಕಾಲೇಜುಗಳ ಶಿಕ್ಷಕರಿಗೂ ಅದೇ ಪ್ರಮಾಣದ್ದನ್ನು ನೀಡಲು ಯೋಜನೆಯನ್ನು ತಯಾರಿಸಿದೆ. ಸದ್ಯದ ಪೆನ್ಶನ್ ನಿಯಮಗಳು ನಿವೃತ್ತಿ ಹೊಂದುವುದಕ್ಕೆ ಮೊದಲೇ ಮರಣಗೊಂಡವರ ಕುಟುಂಬಕ್ಕೆ ಯಾವ ಬಗೆಯ ಸಹಾಯ ಸಲ್ಲಿಸುವುದಕ್ಕೂ ಅನುಕೂಲವಿಲ್ಲವಾದುದರಿಂದ, ಮೂಲ ನಿಯಮಗಳನ್ನು ಸರಕಾರವು ತಿದ್ದುಪಡಿ ಮಾಡಿ ಅಂತಹರ ಅನಾಥ ಕುಟುಂಬಕ್ಕೂ ಕಿಂಚಿತ್ ಪರಿಹಾರ ದೊರೆಯುವಂತೆ ನೋಡಲು ನಿರ್ಧರಿಸಿದೆ.

ವಿಶೇಷ ಪರಿಸ್ಥಿತಿಗಳ ಒತ್ತಡದಿಂದ ಕಂಗೆಟ್ಟ ಅಧ್ಯಾಪಕರ ಸಹಾಯಕ್ಕೆಂದು ಕೇಂದ್ರ ಸರಕಾರವು ಒಂದು ಟ್ರಸ್ಟನ್ನು ಏರ್ಪಡಿಸುವ ಆಲೋಚನೆಯಲ್ಲಿದೆ. ಈ ಸಂಸ್ಥೆಯಿಂದ ಕಾನೂನುಬದ್ಧವಾಗಿ ರಚಿತಗೊಂಡ ಅಧ್ಯಾಪಕರ ಸಂಸ್ಥೆಗಳಿಗೆ ಸಹಾಯ ನೀಡಲಾಗುವುದು. ಪೋಲೀಸ್ ವಿಭಾಗದವರಿಗಾಗಿ ಮದ್ರಾಸ ಸರಕಾರವು ಈ ಮೊದಲೇ ಇದೇ ಮಾದರಿಯ ಸಹಾಯವನ್ನು ಕೊಡುತ್ತಿದೆ ಅಲ್ಲದೆ, ಈ ಯೋಜನೆಯು ತೃಪ್ತಿಕರವಾಗಿ ಫಲಪ್ರದವಾಗುತ್ತಿದೆ. ಇದನ್ನು ಮನಗಂಡ ಮದ್ರಾಸ ಸರಕಾರವು ಕೇಂದ್ರ ಸರಕಾರವು ಏರ್ಪಡಿಸುವ ಟ್ರಸ್ಟ್‌ಫಂಡಿನೊಂದಿಗೆ ಸಹಭಾಗಿಯಾಗಲು ಈಗ ಸಂತೋಷದಿಂದ ಒಪ್ಪಿಕೊಂಡಿದೆ.

ವೃದ್ಧಾಪ್ಯವೇತನದ ಹೊಸ ಯೋಜನೆಯನ್ನು ಮದ್ರಾಸ ಸರಕಾರವೀಗ ನಿಯೋಜಿಸಿದೆ. ಅರುವತ್ತೈದು ವರ್ಷಗಳಿಗೆ ಮೀರಿದ ವೃದ್ಧರಿಗೆ ಪ್ರತಿ ಮಾಹೆ ರೂ. ೨೦ರ ವೃದ್ಯಾಪ್ಯವೇತನವನ್ನು ನೀಡುವ ಉದ್ದೇಶವು ಸರಕಾರದ್ದಿದೆ. ಯಾವುದೇ ರೀತಿಯಿಂದ ಅಂಗವಿಕಲರಾದವರ ಮಟ್ಟಿಗೆ ಈ ವಯೋಮಿತಿಯನ್ನು ೬೦ಕ್ಕೆ ಇಳಿಸಲಾಗುವುದು. ಜಿಲ್ಲೆಯ್ಯಾಕಲೆಕ್ಟರರು ಈ ವೇತನವನ್ನು ಮಂಜೂರುಮಾಡಲು ಅಧಿಕಾರ ಪಡೆಯುವರು. ಆದರೆ, ಭಿಕ್ಷಾಟನೆಯನ್ನೇ ವೃತ್ತಿಯನ್ನಾಗಿ ಮಾಡಿಕೊಂಡಿರುವವರಿಗೆ ಈ ಯೋಜನೆಯ ಲಾಭವು ದೊರೆಯಲಾರದು.

ರಾಜ್ಯದಲ್ಲಿ ಕೇಂದ್ರ ಸರಕಾರದ ಸಹಾಯದಿಂದ ತಿರುಚಿರಪಳ್ಳಿಯಲ್ಲಿ ಪ್ರಾದೇಶಿಕ ಇಂಜಿನಿಯರಿಂಗ್ ಕಾಲೇಜು ಮುಂಗಡ ಪತ್ರದ ಅವಧಿಯಲ್ಲಿ ನಿರ್ಮಾಣಗೊಳ್ಳುವುದು. ಅದರೊಡನೆ ಸೇಲಂನಲ್ಲಿ ಇಂಜಿನಿಯರಿಂಗ್ ಕಾಲೇಜನ್ನೂ ತಿರುಚಿರಪಳ್ಳಿ, ದಿಂಡಿಗಲ್, ಪರಮಾಕುಡಿ ಮತ್ತು ಮೆಟ್ಟೂರುಗಳಲ್ಲಿ ಉದ್ಯಮ ತರಬೇತಿ ಶಾಲೆಗಳನ್ನೂ ಚುಟಿಕೋರಿನ್ ಹಾಗೂ ಮಯೂರಂಗಳಲ್ಲಿ ಸಾಮಾನ್ಯೋದ್ದೇಶಿತ ಇಂಜಿನಿಯರಿಂಗ್ ಕರ್ಮಶಾಲೆಗಳನ್ನೂ ಈ ವರ್ಷದಲ್ಲಿ ಪ್ರಾರಂಭಿಸುವ ಯೋಜನೆಗಳು ಮುಂಗಡ ಪತ್ರದಲ್ಲಿ ಅಡಕವಾಗಿವೆ.

ಒರಿಸ್ಸದ ಡಾಕ್ಟರರೊಬ್ಬರು ಮಗುವೊಂದನು ಪರಿಶೀಲಿಸುತ್ತಿರುವುದು. ಪ್ರತಿ ಮೂರು ತಿಂಗಳಿಗೊಮ್ಮೆ ಇಂತಹ ಪರಿಶೀಲನೆ ರಾಷ್ಟ್ರೀಯ ಯೋಜನೆಯಂತೆ ಅಲ್ಲಿ ನಡೆಯುವುದು.

ರಕ್ಷಣಾ ಮಂತ್ರಿ ಶಾಖೆಯ ಮೇಲ್ವಿಚಾರಣೆಯಲ್ಲಿ ರಾಜ್ಯದಲ್ಲಿ ಸೈನಿಕ ಶಾಲೆಗಳನ್ನು ತೆರೆದು ಮಕ್ಕಳಲ್ಲಿ ಸಶಸ್ತ್ರ ಸೇನೆಯನ್ನು ಸೇರುವ ಉತ್ಸಾಹ ಮೂಡುವಂತೆ ಮಾಡುವ ಗುರಿ ಮದ್ರಾಸ ಸರಕಾರದ್ದಿದೆ. ಬಡವರವರ್ಗಕ್ಕೂ ಉಪಕಾರವಾಗುವಂತೆ ಭಾತ್ರವೃತ್ತಿಯನ್ನು ಹೆಂಚುವಾಗ ಉದಾರ ನೀತಿಯನ್ನು ಅನುಸರಿಸುವುದು ಸರಕಾರದ ಉದ್ದೇಶವಿದೆ. ಯೋಜನೆಯಲ್ಲಿ ನಿರೂಪಿತವಾದಂತೆ ೬೦ರಿಂದ ೧೧ ವರ್ಷ ಪ್ರಾಯದ ಮಕ್ಕಳಿಗೆ ಖಡ್ಡಾಯ ಶಿಕ್ಷಣ ಮತ್ತು ಮಧ್ಯಾಹ್ನ ಊಟದ ಏರ್ಪಾಡುಗಳನ್ನು ಮುಂದುವರಿಸಿಕೊಂಡು ಹೋಗುವುದು, ಪ್ರತಿ ಜಿಲ್ಲೆಯ ಒಂದೊಂದು ಬ್ಲೋಕಿನಲ್ಲಿ ೨-೫ ವರ್ಷ ಪ್ರಾಯದ ಮಕ್ಕಳಿಗೆ ಪೂರ್ವ ಪ್ರಾಥಮಶಾಲಾ ತರಬೇತಿ ನೀಡುವ ಕೇಂದ್ರ ಸ್ಥಾಪಿಸುವುದು, ಮದ್ರಾಸದಲ್ಲಿ ಮಕ್ಕಳ ರೋಗಗಳಿಗೆ ಚಿಕಿತ್ಸೆ ನೀಡುವ ಆಧುನಿಕ ಆಸ್ಪತ್ರೆಯೊಂದನ್ನು ರಚಿಸುವುದು ಸರಕಾರದ ಎಣಿಕೆಯಲ್ಲಿದೆ.

ಒಳ್ಳೆಯದು ಎಷ್ಟಿದ್ದರೂ ಅದನ್ನು ಎಲ್ಲರೂ ಅವಶ್ಯ ಸ್ವಾಗತಿಸಲೇ ಬೇಕು. ನಮ್ಮ ಬುದ್ಧಿಗೆ ಹೊಳೆಯದೆ ಹೋದರೂ ಬುದ್ಧಿಯಿದ್ದವರಿಂದ ತಿಳಿದುಕೊಳ್ಳಬೇಕು. ನಮ್ಮ ಕರ್ನಾಟಕ ರಾಜ್ಯಸರಕಾರವಾದರೂ ತನ್ನ ಆರ್ಥಿಕ ಸ್ಥಿತಿಗತಿಗಳಿಗೆ ಅನುಸಾರವಾಗಿಯಾದರೂ ಮದ್ರಾಸ ಸರಕಾರವು ಕೈಗೊಂಡ ಅನುಕರಣೀಯವಾಗಿರುವ ಮತ್ತು ಅತ್ಯವಶ್ಯವಾಗಿರುವ ಯೋಜನೆಗಳನ್ನು ಯಾವ ಪೂರ್ವ ಗ್ರಹಕ್ಕೂ ಒಳಗಾಗದೆ ಮುಂದಿನ ವರ್ಷದಿಂದಲಾದರೂ ಸ್ವೀಕರಿಸಬೇಕು. ಸರಕಾರವು ಜನತೆಯ ಕಲ್ಯಾಣವನ್ನು ಸಾಧಿಸುವುದು ಅಪೇಕ್ಷಣೀಯವೆಂಬುದರಿಂದ ನೆರೆಯ ಮದ್ರಾಸದ ಮಾದರಿಯನ್ನು ಅನುಸರಿಸುವುದು ಅಂಧಾನುಕರಣೆಯಾಗಲಾರದು.

— — —

ಪುತ್ತೂರು ಡಿ. ಮು. (ರೆಂಟ್ ಕಂಟ್ರೋಲರರ) ಕೋರ್ಟಿನಲ್ಲಿ

R. I. A. 2033/61.

H. R. C. O. P. 14/61.

J. S. W. Coelho —ಅರ್ಜಿದಾರ.

ಫ್ರಾನ್ಸಿಸ್ ಡೊಮಿಲ್ಲೊ, ಬಿ. ಡೆಮೊಲ್ಲೊರ ಮಗ, ಪುತ್ತೂರು ಕಸಬಾ ಕಲ್ಲಾರೆ Post, Puttur. —ಎದ್ರಿಗೆ

ಎದ್ರಿಗೆ

ಅರ್ಜಿದಾರರ ಬಾಬ್ತು ನೀವು ಬಾಡಿಗೆಗೆಯಿರುವ ಮನೆಯಿಂದ ನಿಮ್ಮನ್ನು ಎಬ್ಬಿಸಿ ಸ್ವಾಧೀನತೆ ಕೊಡಿಸಬೇಕಾಗಿ ಮಾಡಿದ ಮೇಲಿನ ಅರ್ಜಿಯು ನಿಮ್ಮ ಉದಾಸರಣೆ ಬಗ್ಗೆ 20-12-61ಕ್ಕೆ ರುವದ್ರಿಂದ ನೀವು ಆ ದಿನ ಬೆಳಿಗ್ಗೆ ಗಂಟೆ 10ಕ್ಕೆ ಹಾಜರಾಗಿ ಉದಾಹರಿಸದಿದ್ದಲ್ಲಿ ನಿಮ್ಮನ್ನು ಶಿಕ್ಷೆಮಾಡಿ ತೀರ್ಮಾನಿಸಲಾದೀತೆಂತ ಈ ಮೂಲಕ ತಿಳಿಸಿಯದೆ.

(ಕೋರ್ಟು ಹುಕುಂ ಪ್ರಕಾರ.)

B. Sripati Rao,

Advocate for petitioner.

ಪುತ್ತೂರು, 6-12-61.

ವಿಶ್ವಕವಿ ಟಾಗೋರರ ಪುಣ್ಯಸ್ಮರಣೆಗಾಗಿ
ಅವರ ಶತಮಾನೋತ್ಸವದ ಸುಸಂದರ್ಭದಲ್ಲಿ
ಪ್ರಕಟಿಸಿದ ಕಿರುಗಾಣಿಕೆಗಳು

ಚಿತ್ರಾಂಗದೆ

ಬೆಲೆ: ೬೦ ನ. ಪೈಸೆ.

(ಶ್ರೀ ಕೆ. ಕೆ. ಶೆಟ್ಟಿ, ಎಂ. ಎಲ್. ಸಿ. ಅವರಿಂದ ಅನುವಾದಿತ)

ರವೀಂದ್ರನಾಥರ ಕಿರುಗತೆಗಳು

ಬೆಲೆ: ೯೦ ನ. ಪೈಸೆ.

(ಶ್ರೀ ಹನುಮಂತರಾವ್ ಮಂಜರೇಕರ, ಕಾರವಾರ ಅವರಿಂದ ಅನುವಾದಿತ)

ಪ್ರಕಾಶಕರು:
ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ನವಯುಗ ಪ್ರೆಸ್, ಉಡುಪಿ.

ಪುತ್ತೂರು ಡಿ ಮು. ಕೋರ್ಟಿನಲ್ಲಿ

R E P 318/1961

ಮಂಗಳೂರು ಮುನ್ಸಿಫ್ ಕೋರ್ಟು

O. S. 174/1956.

ಕೋಚಪ್ಪ ಶೆಟ್ಟಿ —ಅರ್ಜಿದಾರ

&

ತಿಂಮಪ್ಪಮಾಡ —ಎದ್ರಿ

ಎದ್ರಿ-ತಿಂಮಪ್ಪಮಾಡ, ಲಕ್ಷ್ಮಿ ಪೆಂಗ್ಸರ ಮಗ, ಕಾಸರಗೋಡು ತಾಲೂಕು ವರ್ಕಾಗ್ರಾಮದ ಸುಮಂಗಲ ಎಂಬಲ್ಲಿ—

ಮೇಲ್ಕಂಡ ಡಿಕ್ರಿಯಲ್ಲಿ ಜವಾಬ್ದಾರಿಯಿರುವ ನಿಮ್ಮ ಹಕ್ಕಿನ ಬಗ್ಗೆ ಗ್ರಾಮದ ಆಸ್ತಿ ಜಪ್ತಿ ಮುಂದರಿಸಿದ ಬಗ್ಗೆ ಸದ್ರಿ ಅರ್ಜಿದಾರನು ಸಲ್ಲಿಸಿದ ಮೇಲಿನ ಅರ್ಜಿಯು ತಾ. 28.12.61ಕ್ಕೆ ವ್ಯಾಜ್ಯವಿರುತ್ತದೆ. ನಿಮಗೇನಾದರೂ ಆಕ್ಷೇಪವಿದ್ದಲ್ಲಿ ಆ ದಿನ ಬೆಳಿಗ್ಗೆ 11 ಗಂಟೆಗೆ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗಿ ಉದಾಹರಿಸಿಕೊಳ್ಳತಕ್ಕದ್ದೆಂತಲೂ ತಪ್ಪಿದಲ್ಲಿ ನಿಮ್ಮನ್ನು ಶಿಕ್ಷಾಮಾಡಿ ಮುಂದರಿಸುವುದೆಂತಲೂ ಕೋರ್ಟು ಹುಕುಂ ಪ್ರಕಾರ ನಿಮಗೆ ಈ ಮೂಲಕ ತಿಳಿಸೋಣಾಗಿಯದೆ

(*Sd*) N. Subramanyan

Advocate for Petr.

ಮೊಕ್ಕಾಂ ಪುತ್ತೂರು, ತಾ. 7—12—61

ಸೂಚನೆ

"ನವಯುಗ"ದಲ್ಲಿ ಪ್ರಕಟಿಸಲಿಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ.ನ

ಷ್ಟು ಬರಹ

ಗುಡುಗುವ ರಾಯರು!

ರಾಯರು ರಾಜ ಠೀವಿಯಲ್ಲಿ, ಪಾಶ್ಚಾ
ಗತ್ಯ ಉಡುಗೆ-ತೊಡುಗೆಯಿಂದ ಗಂಭೀ
ಹೆಜ್ಜೆಯಿಕ್ಕಿ, ಮೂಳಿಗೆಯ ಮೆಟ್ಟಲೇರಿ
ಲೆ ಬರುವಾಗ, ಇಡೀ ಕಟ್ಟಡವೇ ನ
ಗಿದಂತಾಗುತ್ತಿತ್ತು! ರೇಶನ್ ಕಾಲದ
ಹುಟ್ಟಿಕೊಂಡು ಹಸನಾದ ಉಟೋಪ
ರವಿಲ್ಲದೆ, ಬೆಳೆದ ಜೀವಿಗಳಾಗಿ, ಅವ
ಅಡಿಯೊಳಾಗಿ ದುಡಿಯುವ ನೌಕರರು
ರಾಯರು ಬಂದರು ಮೂಳಿಗೆಗೆ' ಎಂದಾ
ಗ ಗಡಗಡ ನಡಗುತ್ತಿದ್ದರು. ಯಾವ
ಪಿಳ್ಳೆಗೂ ರಾಯರ ಎದುರು ನಿಂತು
ಯೂಗಿ ಉಸಿರಾಡುವಂತಹ ಎದೆಗಾರಿ
ಇಲ್ಲದಿರುವಾಗ, ರಾಯರ ಸಿಡಿ-ಕೆನ
ಭಾವವೆಷ್ಟು ಎಂದು ನೀವೇ ಊಹಿಸಿ
ಳ್ಳಿರಿ!

ಅಧಿಕಾರದ ಕುರ್ಚಿಯಲ್ಲಿ ಆಸನಾರೂ
ಾದೊಡನೆ, ಯಾರಿಗೆ ಕರೆ ಬರುವುದೇ
ಬ ಕಾತುರ ನೌಕರರಲ್ಲಿ! ಅಂದು ಯಾ
ವಾಲಿಗೆ ಶನಿ ಕಾಟವಿದೆಯೇ ಎಂದು
ದು ನೋಡುತ್ತಿದ್ದರು!

ರಾಯರು ಹಸನ್ಮುಖಿಗಳಾಗಿರುವ ದಿ
ಗಳು ಬೆರಳೆಣಿಕೆಯಷ್ಟು! ರಾಯರ ರಾ
ಣಾವತಾರ ತಿಳಿಯಲು ನಮಗೂ ಅಸ್ಪ
ವಿಯತಿತ್ತು. ಕಾರ್ಯಾಲಯಕ್ಕೆ ಬರುವ
ಾದಲು, ರಾಯರ ಮನೆಗೆ ಬೇಟಿಕೊ
ಟ್ಟು, ಬರುವ ಬೇಡೆಯಿಂದ 'ರಾಯರು
ಾಪ ಅವಸ್ಥೆಯಲ್ಲಿರುವರು ಎಂದು ತಿಳಿ
ಕೊಳ್ಳುತ್ತಿದ್ದರು. ಮನೆ ಸೇರಿದ ಪೇದೆ
ಮುಖ ಕಂಡೊನೆ ವಿನಾಕಾರಣ 'ಮು
ಸ್ತು' ಯಾದರೆ, ಅಂದು ಸರ್ವ ನೌಕ
ರಿಗೂ ಅದೇ ಕಾದಿದೆ ಎಂಬುದು ದಿಟ!

ಒಮ್ಮೆ, ರಾಯರು ಮೊದಲ ದಿನವೇ
ಸಿ ಹೋಗಿದ್ದ ಕಾಗದವನ್ನು ಟೈಪ್
ಾಡಿ ಸಿದ್ದಗೊಳಿಸಲು ತಿಳಿಸಿದ್ದು, ಕಾ
ರ್ಯಾಲಯಕ್ಕೆ ಬಂದೊಡನೆ ಕರೆಗಂಟೆಬಾ
ರಿಸಿ, ಪೇದೆಯ ಮೂಲಕ ಆದೇಶ ಕಳುಹಿ
ಸಿದರು. ಅಂದು ತಮ್ಮ ಬಳಗಕ್ಕೆ 'ಕರಿದಿ
ನ' ಎಂದು ಮೊದಲೇ ತಿಳಿದು ಬಂದಿತ್ತು.
ಬಲು ಜಾಗ್ರತೆಯಿಂದ, ಟೈಪ್ ಮಾಡಿದು
ದು ಸರಿಯಿದೆಯೇ ಎಂದು ಮೇಲಿಂದ
ಮೇಲೆ ಕಣ್ಣು ಹಾಯಿಸಿ ನೋಡಿ, ರಾ
ಯರ ಮುಂದೆ ಹಾಜರಾದ ಟೈಪಿಸ್ಟ್. ಆ
ವನ ದುರಾದೃಷ್ಟ, General body
meeting ಎಂದು ಟೈಪ್ ಮಾಡಿದ್ದು,
General Lady meeting ಎಂದು
ಅಕ್ಷಮ್ಯ ಅಪರಾಧವಾಗಿರಬೇಕೇ? ಮೊ
ದಲೇ ಕೋಪದಿಂದ ಉರಿ ಮುಸುಡರಾ
ದ ರಾಯರು ಸುರುಮೊಡಬೇಕೆ—ಸ್ತುತಿ
ಯ ಸುರಿಮಳೆ! ಪೀಠಿಕೆಯ ವಾರಾಯಣ
ಕ್ಕೆ ಅರ್ಥಗಂಟೆ ಹಿಡಿಯಿತು. ತಾತ—ಮು
ತ್ತಾತಂದಿರು ಬೈಗುಳ ದೆಡೆಯಲ್ಲಿ ನುಸು
ಳಿ ಹೋದರು ಅನ್ನ ದಂಡಕ್ಕೆ ಬದುಕು
ವುದ; ಇಂಥ ಬೇಜವಾಬ್ದಾರಿಗಳು ಹು
ಟ್ಟಿದಿರುತಿದ್ದಿದ್ದರೆ, ಭಾರತವಾದರೂ ರಾ
ಮರಾಜ್ಯವಾಗುತಿತ್ತು. ಬಿಕ್ಕೆ ಬೇಡಿ ಹೊ
ಟ್ಟೆ ಹೊನೆಯಬಹುದಲ್ಲವೆ? ದಕ್ಷತೆಯಿಂದ
ಕಾರ್ಯನಿರ್ವಹಣೆ ಮಾಡದಿದ್ದರೂ ಚಿಂ
ತಿಲ್ಲ; ಬೆಲೆ ಬಾಳುವ ವಸ್ತ್ರಾಲಂಕಾರ
ವೈಮೇಲಿರ ಬೇಕು—ಇಸ್ತ್ರಿಯಿಂದ ಹೊ
ಳೆಯುತ್ತಿರ ಬೇಕು! ಇನ್ನೂ ಏನೇನೋ
ಮಾತುಗಳು ಒಂದು ಗಂಟೆಕಾಲ ರಾಯರ
ಕೋಣೆಯಿಂದ ಹೊರ ಬರುತಿತ್ತು. ಕೊನೆ
ಯಮುಕ್ತಾಯವಾಗಿ ಸ್ಟುಪಿಡ್—ಗೆಟ್
ಔಟ್ ಎಂದು ಕೂಗಿಕೊಂಡರು. ಬಡ
ಟೈಪಿಸ್ಟ್ ತಲೆ ಬಾಗಿಕೊಂಡು ಹೊರ
ಬಂದ. ಗಂಡುಸಾಗಿದ್ದುದರಿಂದ ಕಣ್ಣಲ್ಲಿ
ನೀರು ಹರಿಯಲಿಲ್ಲ; ಲೇಡಿ ಟೈಪಿಸ್ಟ್ ಆ
ಗಿದ್ದರೆ ಗಂಗಾವತಾರವೇ ಆಗಿಹೋಗು
ತಿತ್ತು. ಉದ್ಯೋಗಂ ಪುರುಷ ಲಕ್ಷಣಂ
ಎಂಬಂತೆ, ಕೆಲಸ ಬೇಕೋ—ರಾಯರಿಂ
ದೆಸಿಸಿ ಕೊಂಡವರ ಅಡಿಯೊಳಾಗಿ, ಅವ
ರು ಹೇಳಿದಂತಹುದನ್ನು ಕೇಳುತ್ತಾ ಯು
ವರ್ ಮೋಸ್ಟ್ ಒಬೀಡಿಯಂಟ್ ಸರ್ವೆಂ
ಟ್' ಎಂದು ಬಾಯಿ ಮುಚ್ಚಿಕೊಂಡಿರ
ಬೇಕು. ಸರ್ವೆಂಟ್ ಹೋಗಿ ಸರ್ವೆಂಟ್
ಆಗ ಬಯಸಿದೊಡನೆ ಅಲ್ಲಿಂದ ಹೊರಡ
ಲೇ ಬೇಕು.

ಎಷ್ಟೇ ಜಾಗ್ರತೆ ವಹಿಸಿ, ದಕ್ಷತೆಯಿಂ
ದ, ತಲೆಬಾಗಿ ನಡೆದರೂ ಈ ರಾಯರೇಕೆ
'ಗುಡುಗುತ್ತಾರೆ ಎಂದು ಕಂಡು ಹಿಡಿಯ
ಬೇಕೆಂದು ನೌಕರ ವರ್ಗ ಪತ್ತೇದಾರಿಕೆಗೆ
ಮುಂದಾಯಿತು. ಪೇದೆಯೇ ಪತ್ತೇದಾರ
ನಾದ.....!

ರಾಯರು, ಕಾರ್ಯಾಲಯಕ್ಕೆ ಹೊರ
ಡುವ ಮೊದಲು ಅಮ್ಮಾವರೊಡನೆ ಪ್ರತಿ
ನಿತ್ಯ ಜಗಳಾಡಿಯೇ ಮನೆಯಿಂದ ಹೊರ
ಕಾಲಿಡುವುದು! ರಾಯರು ಗೇಟು ದಾಟು
ವ ವರೆಗೆ ಅಮ್ಮಾವರ ಸ್ವರ
ಕೇಳುತ್ತಿರುತಿತ್ತು. ಅನಂತರ, ಕಾ
ರ್ಯಾಲಯಕ್ಕೆ ಬಂದ ನಂತರ ನೌಕರರ
ಮುಂದೆ ರಾಯರ ಹಾರಾಟ ಪ್ರಾರಂಭ.

ಗಂಡು ವೀಸೆ ಧರಿಸಿ ಗುಂಡು ಹಾರಿ
ಸುವ ರಾಯರು ಮನೆಯಲ್ಲಿ ಅಮ್ಮಾವರ
ಮುಂದೆ ಇಲಿ! ಆಕ್ಕ—ಪಕ್ಕದಲ್ಲಿ ಮಲಗಿ
ದ ರಾಯರು—ಯಜಮಾನಿಯೊಟ್ಟಿಗೆ ಏ
ಳುವುದು. ಎದ್ದ ನಂತರ ರಾಯರು, ಅ
ಮ್ಮಾವರೊಡನೆ ಕೆಲಸಕಾರ್ಯದಲ್ಲಿ ಸಹ
ಕರಿಸಲೇ ಬೇಕು. ಗಂಡಿಗಿರುವಷ್ಟೆ ಸ್ವಾ
ತಂತ್ರ್ಯ ಭಾರತಕ್ಕೆ ಸ್ವಾತಂತ್ರ್ಯ ಬಂದ
ನಂತರ ಹೆಣ್ಣಿನಗೂ ದೊರೆತ ಕಾರಣ, ಹೆ
ಣ್ಣಿನಂತೆ ಗಂಡೂ, ಮನೆ ಕೆಲಸದಲ್ಲಿ ಸಹ
ಭಾಗಿಯಾಗಲೇ ಬೇಕೆಂದು ವಾದ! ಮನೆ
ಗೆಲಸದಲ್ಲಿ ಏನಾದರೂ ತಪ್ಪು ಕಂಡು ಬಂ
ದರೆ, ರಾಯರಿಗೆ ಅಮ್ಮಾವರೇ ಬುದ್ಧಿ ಕಲಿ
ಸಿ ಬಿಡುತ್ತಿದ್ದರು.

ಮುಸಣದಂತಹ ಮನೆಯಿಂದ ಹೊರ
ತೂರಿ ಬರುವ ರಾಯರು, ಹುಲಿಯಂತೆ
ಕಾರ್ಯಾಲಯದಲ್ಲಿ ಗುಡುಗುಡಿಸಿದರೆ ಅ
ದರರಲ್ಲೇನು ಆಶ್ಚರ್ಯ!

ಹೆಂಡತಿಗೆ ಹೆದರುವ ಗಂಡುಗಳು, ತ
ಮ್ಮ ಗಂಡಸುತನದ ಅಧಿಕಾರ ತೋರಿಸು
ವುದು, ತಮ್ಮ ಅಡಿಯೊಳಾಗಿ ದುಡಿಯು
ವ ನೌಕರರಲ್ಲಿ ಮಾತ್ರ!

ರಾಯರಿಗೆ, 'ಹೆಂಡತಿಗೆ ಹೆದರದೆ—
ಅವರನ್ನು ಹತೋಟಿಯಲ್ಲಿಡಿರಿ' ಎಂದು
ಹೇಳಿ, ನಾರಿಗೆ ತರಲು ಪ್ರಯತ್ನಿಸಲು
ಮುಂದಾಗ ಬೇಕೆಂದು ನೌಕರ ವೃಂದ
ಬಯಸಿತು, ಯಾರು ಮುಂದಾಗಿ ಹೋಗು
ವುದು ಎಂಬ ಎದೆ ಗಾರಿಕೆ ಇನ್ನೂ ಮೂಡಿ
ಬಂದಿಲ್ಲ.

—ಪಿ. ಎಸ್. ರಾವ್, ಮಂಗಳೂರು

ಉದಾತ್ತ ಧ್ಯೇಯ

ಸರಿಪತಿ

ಕಲಾಕಾರನೊಬ್ಬನ ಕೃತಿಯನ್ನು ನೋ
ಡಿ ಜನವೆಲ್ಲ ಬಾಯಿತುಂಬ ಹೊಗಳಿತು.
ನಾನೂ ನೋಡಿದೆ" ನೋಡಿ ಕಣ್ಣಾಡಿದು
ಆ ತರುಣ ಕಲಾವಿದನನ್ನು ಶ್ಲಾಘಿಸುತ್ತ
"ನಿಮ್ಮ ಕೃತಿಗಳು ಬಹು ಚನ್ನಾಗಿದೆ.
ತಾವು ಮುಂದೇನು ಮಾಡಬೇಕೆಂದಿದ್ದೀರಿ
ಎಂದು ಕೇಳಿದೆ.

ಅವರೆಂದರು "ತಮ್ಮೆಲ್ಲರ ಸಹಾನು
ಭೂತಿಯಿಂದ ಅಂದನ ಜಕಣಾಚಾರ್ಯ
ರಂತೆ ದೇಶದಲ್ಲಿ ಸಣ್ಣ ಪುಟ್ಟ ನಕ್ಷೆಯ
ಪ್ಪೇ ಅಲ್ಲದೆ—ದೊಡ್ಡ ದೊಡ್ಡ ಶಿಲ್ಪಿಯ ಕೆ
ಲಸ ಹಿಡಿದು—ಇದನ್ನು ಶಿಲ್ಪ ಶತಮಾನ
ವನ್ನಾಗಿ ಮಾಡಬೇಕೆಂದು ಆಶಿಸಿದ್ದೇನೆ"

—×—

ಹರಕುಚಣ್ಣ—ಚಿಂದಿ ಜುಬ್ಬವನ್ನು
ಧರಿಸಿ ದೊಬ್ಬ ವರ್ತಮಾನ ಪತ್ರಿಕೆ ಮಾ
ರಾಟ ಮಾಡುವ ಹುಡುಗನ ಜಾಣಾಕ್ಷತೆ
ಯನ್ನು ಕಂಡು ಅವನನ್ನು ವಿಚಾರಿಸಿದ.
"ಏನಪ್ಪಾ ನೀನು ದೊಡ್ಡವನಾದ ಮೇಲೆ
ಏನು ಮಾಡಬೇಕೆಂದಿರುವಿ?"

ಅವನು ನನ್ನನ್ನು ಪಿಳಿ ಪಿಳಿ ನೋಡಿ,
ಗಂಭೀರನಾಗಿ ಉತ್ತರಿಸಿದ. ನಾನು ಭಾ
ರತದ ಮುಖ್ಯ ಮಂತ್ರಿಯಾಗ ಬೇಕೆಂದಿ
ದ್ದೇನೆ. ಇದಕ್ಕೆ ತಮ್ಮೆಲ್ಲರ ಸಹಾನುಭೂ
ತಿ ಅವಶ್ಯಕ ಬೇಕು ಸ್ವಾಮಿ"—ಎಂದ.
"ಅವನ ಉಚ್ಚ ಧ್ಯೇಯವನ್ನು ಹೊಗಳ
ಲೇ ಬೇಕು. ಮಂತ್ರಿಯಾಗದಿದ್ದರೂ—
ವರ್ತಮಾನ ಪತ್ರಹಂಚುಗಾರನಾಗಂತೂ
ಅವನಿರುವಂತಿಲ್ಲ"

—×—

ವಿಶ್ವಕವಿ ರವೀಂದ್ರರು ತಮ್ಮ ಚುಟು
ಕು ಕವನ ಮೊಂದರಲ್ಲಿ 'ನನ್ನ ಗುರಿಯ
ನ್ನು ಮುಟ್ಟಲಾರದಾದೆ. ನನ್ನ ಕೃತಿಗಳು
ನಾನೆಣಿಸಿದಂತೆ ಪೂರ್ಣತೆಯನ್ನು ಪಡೆ
ದಿಲ್ಲ! ನನ್ನಲ್ಲಿ ಸಂತುಷ್ಟಿಯಿಲ್ಲ" ಎಂದಿ
ದ್ದಾರೆ

ಮಾನವನು ತನ್ನ ಜೀವನದಲ್ಲಿ ಉಚ್ಚ
ಧ್ಯೇಯವನ್ನಿಟ್ಟುಕೊಂಡು ತನ್ನ ಗುರಿಸಾ
ಧಿಸಲು ಹೆಣಗಬೇಕು. If we aim
at the ground, we shall
never reach the sky.

ಪ. ಕ. ಸ್ಪೆಶಲ್ ಅಸಿಸ್ಟಾಂಟ್
ಕಮಿಶನರ ಕೋರ್ಟಿನಲ್ಲಿ

O. P. 650/61

K. ಮಂಜುನಾಥ ಆಳ್ವಾಳ — ಅರ್ಜಿದಾರ.
ಶಿವರಾಮ ಶೆಟ್ಟಿ ಕೂಡಾ—ಎದ್ರಿರು

ಈ ಮೂಲ್ಕ ಎದ್ರಿಗೆ ತಿಳಿಯಪಡಿಸುವು
ದೇನೆಂದ್ರೆ:—

ಅರ್ಜಿದಾರನು ತನಗೆ ಎದ್ರಿರಿಂದ ಬರ
ತಕ್ಕ ಗೇಣಿ ಬಾಕಿ ಇರುವ ಕಾರಣ ಅವರ
ಸ್ವಾಧೀನ ಇರುವ ತನ್ನ ಮೂಲಿಕಕ್ಕಿನ ಸ್ಥಳ
ಗಳನ್ನು ತನ್ನ ಸ್ವಾಧೀನತೆಗೆ ಕೊಡಿಸಬೇಕೂಗಿ
ಪ್ರಾರ್ಥಿಸಿಕೊಂಡು ಸದ್ರಿ ಅರ್ಜಿ ದಾಖ್ಲು ಮಾ
ಡಿರುತ್ತಾನೆ. ಆ ಕುರಿತು ನಿಮ್ಮದೇನಾದರೂ
ಆಕ್ಷೇಪ ಇದ್ದಲ್ಲಿ ತಾ. 15-12-61ಕ್ಕೆ
ಕೋರ್ಟು ಮುಂದೆ ಹಾಜ್ರಾಗಿ ಜ್ಯಾಬೀರು
ಮಾಡಿಕೊಳ್ಳತಕ್ಕದ್ದು.

H. Laxminarayanayya,
Advocate for petitioner

ಕುಂದಾಪುರ, 7-12-61.

ಕಾಸರಗೋಡು ಮುನ್ಸಿಫ
ಕೋರ್ಟಿನಲ್ಲಿ

O. S. No. 182/1961

ಸ್ಸ. ರಾಮಚಂದ್ರ ಶ್ಯಾನುಭಾಗ— ವಾದಿ
ಮತ್ತು

ಸೂವಕ್ಕೆ ವಗೈರೆರು — ಪ್ರತಿವಾದಿರು

ತಿನೇ ಪ್ರತಿವಾದಿ ನಾರಾಯಣ, 4ನೇ
ತಿವಾದಿ ವಿಶ್ವನಾಥ— ಸೂವಕ್ಕೆ ಮಕ್ಕಳು
ಟೇಬಾಯಗಾರರು, ಪಾತೂರು ಗ್ರಾಮದಲ್ಲಿ
ವಸರಿಗೆ—

ಮೇಲ್ಕಂಡ ವಾದಿಯು ನಿಮ್ಮ ಮೇಲೆ
ಕ್ಲು ಮಾಡಿದ ಮೇಲ್ಕಂಡ ವ್ಯಾಜ್ಯವು
ರೀಕ್ಷ 20-12-1961ಕ್ಕೆ ನೀವು ಸ್ವತಃ
ಾ ವಕೀಲರ ಮುಖಾಂತ್ರ ಹಾಜ್ರು ಆಗ
ಕ್ಕೆ ಇಟ್ಟಿರುತ್ತದೆ. ಇದಕ್ಕೆ ತಪ್ಪಿದರೆ ನಿಮ್ಮ
ದುಪಾಜರಿಯಲ್ಲಿ ತೀರ್ಮಾನ ಮಾಡಲಾ
ತು

(ಕೋಟು= ಹ್ಯುಂ ಪ್ರಕಾರ)

K. Narayana Nayak,
Advocate.

ಸರಗೋಡು, 7-12-1961.

ವಿನಂತಿ

ಚಂದಾಹಣ ಬಾಕಿ ಇರುವ ಧರ್ಮ
ಚಂದಾದಾರರಿಗೆಲ್ಲಾ ಈ ಮೊವಲೇ
ಕಾರ್ಡು ಬರೆದಿರುತ್ತೇವೆ. ಅದರಂತೆ ಕೆಲ
ವರು ಈಗಾಗಲೇ ಚಂದಾಹಣವನ್ನು
ಪಾವತಿ ಮಾಡಿರುತ್ತಾರೆ. ಇನ್ನೂ ಪಾವ
ತಿ ಮಾಡದವರು ದಯಮಾಡಿ ಅವಷ್ಟು
ತ್ವರ್ಯ ಕಳುಹಿಸಿಕೊಡುವಂತೆ ವಿನ್ಮ
ವಿಸುತ್ತೇನೆ. ವಿ. ಪಿ. ಮಾಡಿದರೆ 75
ನಯೇಪೈಸೆಯಷ್ಟು ಹೆಚ್ಚಿಗೆ ಬೀಳುವುದ
ರಿಂದ ಎಲ್ಲರೂ ಮುಂದಾಗಿ ಮನಿಯೊ
ರ್ಡರು ಮಾಡುವಂತೆ, ಇಲ್ಲವೇ ಸಿಂಡಿ
ಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ
ಕಟ್ಟುವಂತೆ ಅಪೇಕ್ಷಿಸುತ್ತೇವೆ. ಅಂತೂ
ಚಂದಾ ಬಾರದಿದ್ದರೆ ಕ್ರಮಶಃ ವಿ ಪಿ.
ಮಾಡುತ್ತೇವೆ. —ಮೆನೇಜರ್.

Tel: 'BLUEYAGAR'. — ಚಿನ್ನ ಮತ್ತು ವಜ್ರಗಳ ಆಧುನಿಕ ತೆವರುಮನೆ — Phone: 374.

ಕೆ.ಆರ್.ಕೆ.ಶೇಟ್ ಡಯಮಂಡ್ ಮಾರ್ಟ್

ಸ್ಥಾಪನೆ:1919] ಚಿನ್ನ ಮತ್ತು ವಜ್ರದ ವ್ಯಾಪಾರಿಗಳು,(ಗವರ್ನ್‌ಮೆಂಟ್ ಕಾಲೇಜ್ ಎದುರುಗಡೆ)ಮಂಗಳೂರು. ಮಾಲಿಕ:ಕೆ.ಕೆ.ಆರ್.ಶೇಟ್

ಪ್ರಕೃತಿ ಮಾತೆಯ ವಿಚಿತ್ರ ಚಿತ್ರ

ಕರಡಿಗೆ ಮಕ್ಕಳನ್ನು ಕಂಡರಾಗದು!

ಮನುಷ್ಯನ ಹೊಸತಾಗಿ ಹುಟ್ಟಿದ ಮಗುವು ಸುಮಾರು ಏಳು ರಾತಲುಗಳಷ್ಟು ಭಾರವಿರುತ್ತದೆ. ಕುರಿಯ ಮರಿಯ ಭಾರ ಹತ್ತು ರಾತಲು. ದನದ ಕರು ಸುಮಾರು ಹದಿನೈದು ರಾತಲು ತೂಗುತ್ತದೆ. ಹಾಗಿರುವಾಗ, ದನದ ಗಾತ್ರದ್ದಾಗಿರುವ ಕರಡಿಯ ಮರಿಯ ಭಾರವಾದರೂ ಎಷ್ಟಿದ್ದೀತು?

ನೀವು ದನದ ಕರುವಿನಂತೆಯೇ ಮರಿ ಕರಡಿಯೂ ಸುಮಾರು ಹದಿನೈದು ರಾತಲು ಭಾರವಿರಬೇಕು ಎನ್ನುವುದು ಸಹಜ. ಆದರೆ, ಸತ್ಯ ಸಂಗತಿ ಹೀಗಿಲ್ಲ. ಈಗ ತಾನೇ ಜನಿಸಿದ ಕರಡಿಯ ಮರಿಯು ಕೇವಲ ಒಂದೇ ಒಂದು ರಾತಲು ಭಾರವಿದೆ. ನೋಡಲು ಅದೊಂದು ಮನೆ ಇಲಿಯಷ್ಟು ದೊಡ್ಡದಿರುತ್ತದೆ.

ಹುಟ್ಟುವುದಕ್ಕೆ ಮೊದಲಿನ ಹತ್ತು ದಿನಗಳಿಂದ ಕರಡಿ ಮರಿಯ ಭಾರವು ಕೇವಲ ಅರ್ಧ ರಾತಲುಗಳಷ್ಟು ಹೆಚ್ಚುವುದಾದರೆ, ಕುರಿ ಮರಿಯ ಭಾರವು ಕೆಲವಾರು ರಾತಲು ಹೆಚ್ಚುತ್ತದೆ ಇಂತಹ ಒಂದು ವಿಸ್ಮಯಕ್ಕೆ ಕಾರಣವಿದೆಯೇ? ಇದ್ದರೆ ಯಾವುದು ಎಂಬುದನ್ನು ತಿಳಿದುಕೊಳ್ಳುವ ಕುತೂಹಲ ನಮಗೆಲ್ಲರಿಗಿರುವುದು ಸ್ವಾಭಾವಿಕ. ಈ ವೈಚಿತ್ರ್ಯದಲ್ಲಿ ಪ್ರಕೃತಿಯು ತನ್ನ ಆಟವನ್ನು ಮಾಟವಾಗಿ ಆಡುತ್ತದೆ.

ಕರಡಿಗಳು ಹೆಚ್ಚಾಗಿ ಜನವರಿ ತಿಂಗಳಲ್ಲಿ ಮಾತ್ರ ಮರಿಯಿಡುತ್ತವೆ. ಚಳಿಯ ತಿಂಗಳುಗಳಲ್ಲಿ ಹೆಂಗರಡಿಯು ತನ್ನ ಗೂಡಿನಲ್ಲಿಯೇ ಇದ್ದು ಶರೀರದಲ್ಲಿ ಸಂಚಿತವಾಗಿರುವ ಚರ್ಬಿಯನ್ನು ಕರಗಿಸಿಕೊಂಡೇ ದಿನಗಳೆಯುತ್ತದೆ. ಈ ಕೊಬ್ಬು ಸೆಖೆಗಾಲದಲ್ಲಿ ಅದರ ದೇಹದಲ್ಲಿ ಕೂಡುತ್ತದೆ. ಚಳಿಗಾಲದಲ್ಲಿ ಅದು ಸ್ವಲ್ಪ ಸ್ವಲ್ಪವೇ ಕರಗಿ ಅದರ ಹೊಟ್ಟೆ ತುಂಬಿಸುತ್ತದೆ. ಚಳಿಗಾಲದಲ್ಲಿ ಹೆಂಗರಡಿಯು ನೀರಡಿಕೆಗಾಗಿ ಯಾವುದೂ ಗುಹೆಯಿಂದ ಹೊರಗೆ ಕಾಲಿಡುವುದಿಲ್ಲ; ದೇಹದ ಚರ್ಬಿಯೇ ಅದಕ್ಕೆ ನೀರಿನ ಪೂರೈಕೆಯನ್ನೂ ಮಾಡುವುದು.

ಪರಿಸ್ಥಿತಿ ಹೀಗಿರುವಾಗ, ಕರಡಿಯ ಮರಿಯು ಚಿಕ್ಕದಾಗಿದಿರುತ್ತಿದ್ದರೆ ತಾಯಿಗೆ ತನ್ನ ಹೊಟ್ಟೆ ಹೊತ್ತುಕೊಳ್ಳುವುದೇ ಅಸಂಭವವೆನಿಸುತಿತ್ತು. ದನದಕರು ಇಲ್ಲವೇ ಕುರಿಯ ಮರಿಗಳಂತೆ ಕರಡಿ ಕೂಸು ಕೂಡ ದೊಡ್ಡದಾಗಿರುವುದಾದರೆ, ಮರಿಗೆ ಬೇಕಾಗುವ ಹಾಲಿನ ಪ್ರಮಾಣವೂ ಹೆಚ್ಚಾಗಿ ಬೇಕು; ಇಷ್ಟೊಂದು ಹಾಲು ಎಲ್ಲಿಂದ ಬರಬೇಕು? ಈ ಕಾರಣದಿಂದಲೇ ದಯಾಮಯಿ ಪ್ರಕೃತಿಮಾತೆಯು ಚಳಿಗಾಲದಲ್ಲಿ ಹಾಲಿಲ್ಲದೆ ಸಾಯಬಾರದೆಂಬ ಆಸೆಯಿಂದ ಪ್ರಾರಂಭದಿಂದಲೇ ಅದರ ಕೂಸಿನ ಗಾತ್ರವನ್ನು ಕಡಿಮೆ ಮಾಡಿದ್ದಾಳೆ. ಹೆಂಗರಡಿಯ ಸ್ವಲ್ಪ ಪ್ರಮಾಣದ ಮೊಲೆ ಹಾಲಿನಿಂದಲೇ ಅದು ಬದುಕುವಂತೆ ಅನುಗ್ರಹಿಸಿದ್ದಾಳೆ. ಕುರಿಮರಿಯಂತೆ—ದನಕರುವಿನಂತೆ ದೊಡ್ಡ ಗಾತ್ರವು ಕರಡಿ ಕೂಸಿಗಿರುವುದಾದರೆ, ಅದರ ತಾಯಿ ಮೊಲೆ ಹಾಲು ಕೆಲವೇ ದಿನಗಳಲ್ಲಿ ಬತ್ತಿ ಹೋಗುವುದು; ಮತ್ತನಂತರ ಹಸಿವೆಯಿಂದ ಸತ್ತು ಹೋಗಲೇ ಬೇಕಾಗುವುದು.

ಚಳಿಗಾಲದ ದಿನಗಳಲ್ಲಿ ಕರಡಿಯ ಮಗು ಮಂದಗತಿಯಲ್ಲಿ ಬೆಳೆಯುವುದು. ಅದು ತನ್ನ ಮರಿಯನ್ನು ಬಿಟ್ಟು ಬಿಸಿಲಲ್ಲಿ ತಿರುಗಾಡಲು ಪ್ರಾರಂಭಿಸಿದಾಗ, ವಿಪುಲ ಪ್ರಮಾಣದಲ್ಲಿ ವಿಭಿನ್ನ ಪ್ರಕಾರದ ಆಹಾರ ಪದಾರ್ಥಗಳನ್ನು ತಿಂದು ತನ್ನ ಹೊಟ್ಟೆ ತುಂಬಿಸಿಕೊಳ್ಳಲು ತೊಡಗುವುದು. ಈ ಅವಸ್ಥೆಯಲ್ಲಿ ಮರಿಯು ತೀವ್ರ ಗತಿಯಿಂದ ಬೆಳೆಯುತ್ತ ಹೋಗುವುದು. ಹಣ್ಣು, ಕ್ರಿಮಿ, ಇರುವೆ, ಇಲಿ, ಮೀನು ಹೀಗೆ ಏನು ಸಿಗುವುದೋ ಅವನ್ನೆಲ್ಲ ಕರಡಿ ಮರಿ ನುಂಗುವುದು. ಈ ಕಾರಣದಿಂದಲೇ ಅದರ ಬೆಳವಣಿಗೆಯು ಅತ್ಯಂತ ವೇಗವಾಗಿ ನಡೆಯುವುದು.

ಹೊಸತಾಗಿ ಜನಿಸಿದ ಮರಿಯನ್ನು ಗಂಡು ಕರಡಿಯು ತಿರಸ್ಕಾರ ಭಾವದಿಂದ ಕಾಣುತ್ತದೆ ಎಂದರೆ ನಿಮಗೆ ಆಶ್ಚರ್ಯವಾಗುವುದಿಲ್ಲವೆ? ಮರಿಗಳ ತೆರೆದ ಕಣ್ಣುಗಳನ್ನು ಅದು ಕಾಣಲಾರದು. ಆದುದರಿಂದ ಮಕ್ಕಳು ಹುಟ್ಟುವುದಕ್ಕೆ ಮೊದಲು ಹೆಂಗರಡಿಯು ಕಾಡಿನ ನುರೆಯಲ್ಲಿ ಅಡಗಿಕೊಳ್ಳುತ್ತದೆ. ಮಗು ಜನಿಸಿದ ನಂತರ, ಅವು ದೊಡ್ಡ ಆಕಾರ ತಳೆಯುವುದಕ್ಕೆ ಮೊದಲು ಅದನ್ನು ಬೇರೆಯೇ ಗುಹೆಯಲ್ಲಿ ಇರಿಸುತ್ತದೆ. ಎರಡು ವರ್ಷಕೊಂದು ಬಾರಿ ಪ್ರಸವಿಸುವ ಪ್ರಕೃತಿಯಿರುವ ಹೆಂಗರಡಿಗಳು ಹೀಗೆಯೇ ಮಾಡಬೇಕಾಗುತ್ತದೆ.

ಮೊಸ್ಕೋವಿನ ಪಕ್ಷಿ ಸಂಗ್ರಹಾಲಯದಲ್ಲಿ ಒಂದು ಪ್ರಯತ್ನ ನಡೆಯಿತು. ಕರಡಿಯನ್ನು ಅದರ ಮರಿಗಳೊಡನೆಯೇ ಇಡಬೇಕು ಮತ್ತವನ್ನು ಪ್ರೀತಿಸುವಂತೆ ಮಾಡಬೇಕು ಎಂಬ ಆಶೆ ಅಲ್ಲಿನವರಿಗಿತ್ತು. ಆದುದರಿಂದ ಗಂಡು ಕರಡಿಯನ್ನೂ ಹೆಣ್ಣು ಕರಡಿಯ ಗೂಡಿನಲ್ಲಿಯೇ ಇರಿಸಲಾಯಿತು. ಚಳಿಗಾಲದಲ್ಲಿ ಹೆಂಗರಡಿಯು ಮೂರು ಮರಿಗಳನ್ನು ಇಟ್ಟಿತು. ಗಂಗರಡಿಯು ಇವನ್ನು ಕಂಡು ಹೇಸುತಿತ್ತು; ಮತ್ತು ಹಲವು ಬಾರಿ ಅವನ್ನು ಕೊಂದು ಹಾಕುವ ಪ್ರಯತ್ನ ಮಾಡಿತು. ಆದರೆ ಮರಿಗಳ ತಾಯಿಯು ಬಹಳ ಎಚ್ಚರಿಕೆಯಿಂದಿದ್ದು ಪ್ರತಿ ಸಲವೂ ಮರಿಗಳ ರಕ್ಷಣೆಗಾಗಿ ಬದ್ಧ ಕಂಕಣವಾಗುತಿತ್ತು. ತಂದೆಯು ಮರಿಗ ಕೊಲೆಗಾಗಿ ಧಾವಿಸುತ್ತಿರುವಾಗ ತಾಯಿ ನಡುವೆ ಬಂದು ನಿಲ್ಲುತಿತ್ತು. ಗಂಡುಕರಡಿಯು ಹೆಣ್ಣಿಗಿಂತ ಬಲಶಾಲಿಯಾಗಿತ್ತು. ಆಕಾರದಲ್ಲಿಯೂ ಇಮ್ಮಡಿಯಿತ್ತು. ಅತಿರೂ ಕ್ರೋಧಗೊಂಡಾಗ ಹೆಂಗಡಿಯು ಅದ ಭಯಾನಕವಾಗುತಿತ್ತು. ಅದು ಗಂಡಿನೊಡನೆ ಹೋರಾಡಿ ಅದನ್ನು ಸೋಲಿಸಿತು. ತನ್ನ ಮೇಲೆ ಬಲವಾದ ಆಕ್ರಮಣ ನಡೆದಾಗ, ತನ್ನ ಸೋಲು ನಿಶ್ಚಿತವೆಂದು ತಿಳಿದಾಗ ಗಂಡು ಹಿಂಜರಿದು ಹಿಂಗಾಲುಗಳ ಮೇಲೆ ಕೂತುಕೊಂಡಿತು. ತಲೆಗೆ ನೋವಾಗದಂತೆ ಮುಂಗಾಲಿನಿಂದ ಅದನ್ನು ಮುಚ್ಚಿಕೊಂಡಿತು.

ಇಂತಹ ಜಗಳ ಪ್ರತಿ ದಿನವೂ ನಡೆಯಿತು; ಕೊನೆಗೊಂದು ದಿನ ಗಂಡು ಸೋತುಹೋಯಿತು. ಮುಂದೆ ಎಂದಾದರೂ ಮರಿಗಳನ್ನದು ಕಂಡರೆ, ತಾಯಿಯ ಕಡೆಗೆ ಭಯ ವಿಹ್ವಲವಾಗಿ ನೋಡುತ್ತ ಅಲ್ಲಿಂದ ಓಡಲು ತೊಡಗುತಿತ್ತು-ಜೀವಂ ಭದ್ರಾಣಿ ಪಶ್ಯಂತಿ ಎಂಬಂತೆ.

ತನ್ನ ಕುಟುಂಬದೊಡನೆ ವಾಸಿಸುವುದನ್ನು ಕರಡಿಯು ಮೆಚ್ಚುವುದಿಲ್ಲ. ಅದರ ಪ್ರಕೃತಿಯಲ್ಲಿ ಪರಿವರ್ತನೆಯಾಗುವುದು ಸಾಧ್ಯವಿಲ್ಲ. ತಂದೆ-ತಾಯಿ-ಮೂರು ಮಕ್ಕಳು ಇರುವ ಮನೆಯ ಬಳಿಯಲ್ಲಿ ಒಂದು ಮರವಿತ್ತು. ಒಂದು ಮರಿ ಆ ಮರವನ್ನು ಹತ್ತಿತು. ಆಗ ತಾಯಿ ಮಲಗಿತ್ತು. ಕರಡಿಯದನ್ನು ಕಂಡು, ಮರವನ್ನು ಹತ್ತಿ ಮಗ-ವಿಗೆ ಎರಡು ಬಾರಿಸಿತು. ಅದು ಕೂಗುತ್ತ ಕೆಳಗುರುಳಿತು. ತಾಯಿಕರಡಿಗೆ ಎಚ್ಚರವಾಯಿತು. ಅದು ಗಂಡನ್ನು ಗದರಿಸಿತು. ಗಂಡು ಅಂಜುಬುರುಕನಂತೆ ಒಂದು ಮೂಲೆಯಲ್ಲಿ ಸರಿದು ಕೂತುಕೊಂಡಿತು.

ಕೆಲದಿನಗಳ ವರೆಗೆ ಯಾವ ಅಶಾಂತಿಯೂ ಕಾಣಿಸಲಿಲ್ಲ. ಈಗ ಹೆಂಗರಡಿಯು ಹಿಂದಿನಂತೆ ಸದಾ ಎಚ್ಚರದಿಂದಿರುತ್ತಿರಲಿಲ್ಲ. ಒಂದು ಮುಂಜಾನೆ ತಾಯಿ ಮಲಗಿತ್ತು. ಒಂದು ಸರೋವರದ ಬದಿಯಲ್ಲಿ ಮರಿ ಕೂತುಕೊಂಡಿರುವುದನ್ನು ಗಂಡು ಕಂಡಿತು. ಮರಿ ತನ್ನ ಮುಂಗಾಲುಗಳನ್ನು ನೀರಲ್ಲಿ ಮುಳುಗಿಸಿ ಆಡುತಿತ್ತು. ಗಂಡು ಮೆಲ್ಲ ಮೆಲ್ಲನೆ ಅತ್ತ ಸಂಯಿತು. ಮರಿಯ ಕುತ್ತಿಗೆ ಅಮುಕಿ ನೀರಲ್ಲಿ ತೇಕು ಮುಳುಗುವಂತೆ ಮಾಡಿತು. ಕೂಗಾಡುವುದಕ್ಕೂ ಅದಕ್ಕೆ ಅವಕಾಶ ದೊರೆಯಲಿಲ್ಲ. ಗಂಡೂ ಬಹಳ ಹೊತ್ತು ನೀರಲ್ಲಿ ನಿಲ್ಲಲಾಗದೆ ಮೇಲೆ ಬಂದಾಗ ಮರಿಗೂ ಸಂದರ್ಭ ದೊರೆಯಿತು. ಅದು ಆರ್ಭಟಿಸಿತು. ತತ್‌ಕ್ಷಣ ಹೆಂಗರಡಿಯು ಅಲ್ಲಿಗೆ ಓಡಿಬಂತು.

ಈ ದೃಶ್ಯ ನೋಡುವುದಕ್ಕೆ ಮನೋರಂಜಕವಾಗಿತ್ತು. ತನ್ನ ರಕ್ಷಣೆ ಮಾಡಿಕೊಳ್ಳುವುದೂ ಅಸಾಧ್ಯವೆಂಬಂತೆ ಗಂಡನ್ನು ಮರಿಣ್ಣು ನೋಯಿತು. ಕರಡಿಯನ್ನು ಕೆರೆಯ ಮತ್ತೊಂದು ಮೂಲೆಯಲ್ಲಿ ಓಡಿಸಿಬಿಟ್ಟಿತು. ಗಂಡು ಒಂದು ತಾಸು ನೀರಲ್ಲಿ ಕೂತುಕೊಂಡಿತು. ಹೆಣ್ಣು ಕೋಪಾರುಣನೇತ್ರಗಳಿಂದ ಅಲ್ಲೇ ಶತಪಥತಿರುಗುತಿತ್ತು. ಹೆಣ್ಣಿನ ಮುಂದುಗಡೆ ನೀರಿನಿಂದಮೇಲೇರುವ ಧೈರ್ಯಗಂಡಿರಲಿಲ್ಲ.

ಅದರ ನಂತರ ಗಂಡು ಯಾವ ಗಲಾಟೆಯನ್ನೂ ಮಾಡಲಿಲ್ಲ. ಹೆಣ್ಣಿನ ಬಲದ ಭಯ ಅದರ ಮನಸ್ಸಿನಲ್ಲಿ ಮನೆಮಾಡಿತ್ತು. ಹೆಣ್ಣಿಗೂ ಈಗ ಅದರ ಅಂಜಿಕೆಯಿರಲಿಲ್ಲ ಮಕ್ಕಳನ್ನೂ ಅದು ಸಮಾಧಾನ ಮಾಡುತ್ತಿರಲಿಲ್ಲ.

ಮರಳಿ ಚಳಿಗಾಲ ಬಂದಿತು. ತಾಯಿಯು ತನ್ನ ಮಕ್ಕಳೊಡನೆ ಮಲಗುತಿತ್ತು. ಅಲ್ಲಿಂದ ತುಸು ದೂರದಲ್ಲಿ ತನ್ನ ಕೋಣೆಯಲ್ಲಿ ಮಲಗುತಿತ್ತು. ಮಕ್ಕಳು ಆಗಾಗ ನಿರ್ಭಯರಾಗಿ ಆ ಕೋಣೆಗೂ ಹೋಗುತಿದ್ದುವು. ತಮ್ಮ ತಾಯಿಯಿಂದ ಈ ಮಕ್ಕಳು ಹೇಗಾದರೂ ಹೋಗಲಿ ಎಂದು ಗಂಡು ಬಯಸುತಿತ್ತು. ಈಗ ಅವೂ ದೊಡ್ಡವಾಗಿದ್ದುವು; ಶತ್ರುಗಳಿಂದ ತಮ್ಮ ರಕ್ಷಣೆ ಮಾಡಿಕೊಳ್ಳಲು ಶಕ್ತವಾದ್ದುವು.

ಕ್ರಮೇಣ ಮಕ್ಕಳು ಧೈರ್ಯದಿಂದ ತಿರುಗತೊಡಗಿದುವು. ಕೆಲ ದಿನಾನಂತರ ಅಲ್ಲೊಂದು ವಿಚಿತ್ರ ದೃಶ್ಯ ತೋರಿಬಂತು. ಕರಡಿ ಕೆರೆಯಲ್ಲಿತ್ತು. ಅದರ ಮಗು ಮೇಲೆ ನಿಂತು ನೋಡಿತು. ಕಂಡ ಕರಡಿ ನೀರಿನಿಂದ ಮೇಲೆ ಬರಲು ಹವಣಿಸಿತು; ತತ್‌ಕ್ಷಣ ಮಗುವು ಅದರ ಮೇಲೇರಿಗಿತು. ತಂದೆಯ ಮುಖದ ಮೇಲೆ ಮಗನು ನಲ್ಮೆ ತಪರಾಕಿ ಹೊಡೆದು ತಾಯಿ ಬಳಿ ಧಾವಿಸಿತು. ತನ್ನನ್ನು ಕೊಲ್ಲಲು ಹವಣಿಸಿದ್ದ ತಂದೆಯ ನೀಚತೆಗೆ ತಕ್ಕ ಪ್ರತಿಕಾರವನ್ನು ಅದು ಮಾಡಿತು.

ದಿ ವಿಜಯ ಬೇಂಕ್ ಲಿಮಿಟೆಡ್
ಶೆಡ್ಯೂಲ್ಡ್ ಬೇಂಕ್. ಸ್ಥಾಪನೆ: 1931
ರಿಜಿಸ್ಟರ್ಡ್ ಆಫೀಸು:
ವಿಜಯ ಬೇಂಕ್ ಬಿಲ್ಡಿಂಗ್, ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು-3, ಸೌತ್ ಕೆನರಾ.
ಕಾಯಂ ಠೇವಣಾತಿ ಬಡ್ಡಿ ದರವನ್ನು ಶೇಕಡ 5¼ರ ವರೆಗೆ ಹೆಚ್ಚಿಸಲಾಗಿದೆ.
ಏಳು ದಿವಸದ ನೋಟೀಸಿನಲ್ಲಿ ಕೇಳಿದಾಗ್ಯೆ ಹಿಂದೆ ಪಡೆಯುವ ಡಿಪೋಸಿಟುಗಳನ್ನು (Call Deposits) ಆಕರ್ಶಕ ಬಡ್ಡಿ ದರದಲ್ಲಿ ಸ್ವೀಕರಿಸಲಾಗುತ್ತದೆ.
ಹೆಚ್ಚಿನ ಮಾಹಿತಿಗೆ ನಮ್ಮ ಶಾಖೆಗಳಲ್ಲಿ ದಯಮಾಡಿ ವಿಚಾರಿಸಿರಿ.
THE VIJAYA BANK LTD.

"ನಚಿಕೇತ"ರ
ಇನ್ನೊಂದು ನವೀನ ಕಾದಂಬರಿ-
ಋಣ ಯಾತ್ರೆ
ಇದೀಗ ಪ್ರಕಟವಾಗಿದೆ.
ಬೆಲೆ ರೂ. 1-50 ನ. ಪೈಸೆ.
ಮೊದಲು ಪ್ರಕಟವಾದ ಕಾದಂಬರಿ
ಭಾವಾರ್ಚನೆ
ಬೆಲೆ ರೂ. 1-25 ನ. ಪೈಸೆ.
ಪ್ರತಿಗಳು ಸಿಗುವ ಸ್ಥಳಗಳು:-
ನವಯುಗ ಪ್ರೆಸ್, ಉಡುಪಿ,
ನವಭಾರತ ಬುಕ್ ಡಿಪೊ, ಉಡುಪಿ.

ಕಂಡದನ್ನು ಕಲ್ಪನೆ ಬಣ್ಣಿಸಿದಾಗ—

(೨ನೇ ಪುಟದಿಂದ)

ದೆಂದು ಅವಳು ಕನಸಿನಲ್ಲೂ ಎಣಿಸಿರಲಿಲ್ಲ. ನೆನೆಯದುದು ಆಗಿಹೋದಾಗ ಮನಸ್ಸಿಗೆ ಆಘಾತವಾಗಿ ಕೈಯಹಿಡಿತ ಸಡಿಲಾಯಿತು. ತತ್‌ಕ್ಷಣ ಆಧಾರ ತಪ್ಪಿದ ಬೊಂಬೆಯ ರೀತಿ ನೆಲಕ್ಕೆ ಅಪ್ಪಳಿಸಿ ನುಚ್ಚುನೂರಾಯಿತು. ನಿರಾಸೆ, ಸಿಟ್ಟು ದುಃಖ, ಅವಮಾನ ಎಲ್ಲವೂ ಸೇರಿತು. ಒಮ್ಮೆಲೇ ಕಸ್ತೂರಿ ಅನಂತನ ಬಳಿಗೆ ಹಾರಿ, ಬೆನ್ನಿಗೆರಡು ಗುದ್ದಿ ಕೆನ್ನೆಯನ್ನು ಹಿಂಡಿದಳು. ಎಲ್ಲವೂ ಎದೆಯಿಕ್ಕುವುದರೊಳಗೇ ನಡೆದುಹೋಗಿತ್ತು. ಅವಳಿಂದ ಕೊಸರಿ ಬಿಡಿಸಿಕೊಂಡು, ಅವಳ ಕೈಗೆ ಸಿಕ್ಕದಂತೆ ತಪ್ಪಿಸಿಕೊಂಡು ಅನಂತ ಅವಳ ಮೋಟು ಜಡೆಯೊಂದನ್ನು ಮುಷ್ಟಿಯಲ್ಲಿ ಬಿಗಿ ಹಿಡಿದು ಇನ್ನೊಂದು ಕೈಯಿಂದ ಇನ್ನೇನು ಬಡಿಯಬೇಕು ಎನ್ನುವಷ್ಟರಲ್ಲೇ ಅವಳ ಅಮ್ಮನ ಸ್ವರ ಕೇಳಿಸಿತ್ತು. ಎಲ್ಲೋ ಇದ್ದ ಅವರಿಗೆ ಈ ಮಕ್ಕಳ ಗಲಾಟೆ ಕೇಳಿಸಿ ನಡೆದುದೇನೆಂದು ವಿಚಾರಿಸಿಕೊಳ್ಳಲು ಬಂದಿದ್ದರು "ಏನೇ ಅದು?" ಎಂದ ಅವರ ಸ್ವರ ಕೇಳಿಸಿದೊಡನೆ ಅನಂತನ ಕೈಯ ಹಿಡಿತ ಅವಳ ಜಡೆಯನ್ನು ಬಿಟ್ಟಿತ್ತು. ಅವರು ಕೋಣೆಯೊಳಕ್ಕೆ ಬರುವ ಮೊದಲೇ ಹಿಂದಿನ ಬಾಗಿಲ ಮೂಲಕ ಹೊರಗೆ ಪಾರಾಗಿದ್ದ. ಆ ಬಳಿಕ ಕಸ್ತೂರಿಯ ಅಳುವನ್ನು ಸಮೂಧಾನಪಡಿಸಬೇಕಾದರೆ ಅಮ್ಮನಿಗೆ ನಾಕೆನಿಸಿಬಿಟ್ಟಿತ್ತು. ಸಮಜಾಯಿಸಿ ಕೊಟ್ಟಿದ್ದ ಚಂದನದ ಬೊಂಬೆಯನ್ನು ಮುಟ್ಟಿರಲಿಲ್ಲ. ಅದನ್ನು ಕಂಡರೆ ಮೊದಲಿನಿಂದಲೂ ಅಸಹ್ಯ ಅವಳಿಗೆ. ಎಲ್ಲಿಯ ನಂದ್ರ! ಕೈಕಾಲು ಅಡಿಸಲೇ ಬರುವುದಿಲ್ಲ ಅದಕ್ಕೆ.

ಈ ಹಳೆಯ ಘಟನೆಗಳೆಲ್ಲವೂ ಒಂದೊಂದಾಗಿ ಅವಳ ಮನಃಪಟಲದ ಮುಂದೆ ಹಾದುಹೋಗುತ್ತಿದ್ದವು. ಇನ್ನೊಂದು ಅಜ್ಜನ ಗಡ್ಡ ಎಕ್ಕೆಯ ಗಿಡದ ಗುಂಪಿನಿಂದ ಹೊರಟಿತ್ತು. ಆ ಮೊದರನ್ನು ಹುಡುಕಿ ಒಣಗಿದ ಕಾಯನ್ನು ಕಿತ್ತುಕೊಂಡು ಬಂದರೆ ಎಷ್ಟು ಹೊತ್ತು ಆಡಬಹುದಿತ್ತು! ಆದರೆ ಅಲ್ಲಿಗೆ ಹೋಗುವಂತೆಯೇ ಇಲ್ಲ. ಅಮ್ಮ ಮೊದಲೇ ಹೆದರಿಸಿಬಿಟ್ಟಿದ್ದರು "ಆ ಎಕ್ಕೆಯ ಮೊದರಿನ ಹತ್ತಿರ ಎಲ್ಲಾದರೂ ಹೋದೀಯೇ ಜಾಗ್ರತೆ! ಹಾವು ಗೀವು ಇದ್ದೀತು. ಅದೂ ಅಲ್ಲದೆ ಮುಳ್ಳು, ಕುಪ್ಪಿಚೂಡು ಎಲ್ಲಾ ಸಿಕ್ಕಾಪಟ್ಟೆಯಾಗಿ ಬಿದ್ದಿವೆ. ಕಾಲಿಗೇನಾದರೂ ಚುಚ್ಚಿಸಿಕೊಂಡು, ನನ್ನ ಜೀವ ತಿನ್ನಬೇಡ!" ಎಂದು. ಮತ್ತೆ ಕುಳಿತು ಬೇಸರವಾಗಿಲ್ಲದೆ ಎದ್ದು ಕೈಕಾಲು ಝಾಡಿಸಿದಳು.

'ಇವತ್ತಿನಿಂದ ನವರಾತ್ರಿ ಪ್ರಾರಂಭ ಎಂದಿದ್ದರು ಅಮ್ಮ. ಇನ್ನು ಹೊತ್ತಿದರೂ ಒಂದು ವೇಷವೂ ಬರಲಿಲ್ಲ. ರಸ್ತೆಬದಿನಿಂತು ಸ್ವಲ್ಪ ನೋಡೋಣ" ಎಂದುಕೊಂಡು ಮೆಲ್ಲನೆ ಹೊರಟಳು. ಆಗಲೇ ತೊಟ್ಟಿಲಿನಿಂದ ಮಗು ಕೂಗುತ್ತಿದ್ದುದು ಕೇಳಿಸಿತು. ಸ್ನಾನಕ್ಕೆ ಹೊರಡುವ ಮುನ್ನ ಅವಳಮ್ಮ, ಸದ್ದುಮಾಡಕೂಡದೆಂದೂ ಮಗು ಅತ್ತರೆ ತೊಟ್ಟಿಲನ್ನು ಮೆಲ್ಲನೆ ತೂಗಬೇಕೆಂದೂ ಎಚ್ಚರಿಸಿ ಹೋಗಿದ್ದರು. ಬಾಗಿಲ ಬಳಿಗೆ ಬಂದ ಕಸ್ತೂರಿಯ ಮನಸ್ಸು ಇಬ್ಭಾಗವಾಯಿತು; ಕಾಲು ಒಳಕ್ಕೆ ತೊಟ್ಟಿಲ ಕಡೆಗೆ ಎಳೆಯುತ್ತಿದ್ದರೆ ಮನಸ್ಸು ರಸ್ತೆಯ ಕಡೆಗೆ ಓಡ ತಿತ್ತು. ಮಗುವಿನ ಬಗ್ಗೆ ಉದಾಸೀನಳಾಗಲು ಅವಳಿಗೆ ಬೇರೊಂದು ಕಾರಣವಿತ್ತು. ಆಗಷ್ಟೇ ನಿದ್ರೆಯಿಂದೆದ್ದ ಅದನ್ನು ಸಮೂಧಾನಪಡಿಸಲು ತನ್ನಿಂದ ಸಾಧ್ಯವಿಲ್ಲವೆಂದು ಅವಳಿಗೆ ತಿಳಿದಿತ್ತು. ಬೇಗನೆ ರಸ್ತೆಯ ಕಡೆಗೊಮ್ಮೆ ಇಣಿಕಿಬಿಡೋಣವೆಂದು ಒಂದು ಹೆಜ್ಜೆ ಮುಂದಿಡುವಷ್ಟರಲ್ಲೇ ಅಮ್ಮನ ಕರೆ ಕೇಳಿಸಿತು." ಏ ಕಸ್ತೂರೀ....ತೊಟ್ಟಿಲು ಸ್ವಲ್ಪ ಅಲ್ಲಾಡಿಸೇ... ನಾನೀಗ ಬಂದೆ." ಇನ್ನು ಬಚಾವಿಲ್ಲ ಎನ್ನಿಸಿತು. ಒಳಗೋಡಿದಳು. ಮಗು ತೊಟ್ಟಿಲಿಗೆ ಕಾಲನ್ನಪ್ಪಳಿಸುತ್ತಾ ಒಂದೇ ಸವನೆ ಕೂಗುತಿತ್ತು. ನಾಲಗೆಯನ್ನು ಚಪ್ಪರಿಸಿ ಶಬ್ದ ಮಾಡುತ್ತಾ ತೊಟ್ಟಿಲನ್ನು ಮೆಲ್ಲನೆ ತೂಗಿದಳು. ಮಗುವಿನ ಸ್ವರ ತಾರಕಕ್ಕೇರಿತು; ಕಾಲು ಬಡಿಯುವುದೂ ನಡೆದೇ ಇತ್ತು. ಅದೇ ಸಮಯಕ್ಕೆ ಬೀದಿ ಬಾಗಿಲ ಬಳಿ ಕಿರ್‌ರ್... ....ಟಕ್, ಟಕ್ ಎಂಬ ಶಬ್ದವೂ ಜತೆಯಲ್ಲೇ ರಾಗವಾದ ಮಾತೂ ಕೇಳಿಸಿತು ಕಸ್ತೂರಿಗೆ. ಪವರಾತ್ರಿಯ ವೇಷವೇ ಯಾವುದೋ ಬಂದಿರಬೇಕೆಂದು ಸಂತೋಷದಿಂದ ಉಬ್ಬಿದಳು ಕಸ್ತೂರಿ. ಒಬ್ಬಳೇ ಹೊರಗೆ ಓಡುವಂತಿರಲಿಲ್ಲವಾದುದರಿಂದ ಬೇಗ ಬೇಗನೇ ತೊಟ್ಟಿಲನ್ನು ನಿಲ್ಲಿಸಿ ಅವಸರದಿಂದಲೇ ಆದರೂ ಜಾಗರೂಕತೆಯಿಂದ ಮಗುವನ್ನೆತ್ತಿ ಸೊಂಟಕ್ಕೇರಿಸಿಕೊಂಡು ಉತ್ಸಾಹದಿಂದ ತಲೆಬಾಗಿಲಿಗೆ ಬಂದಳು. ಆದರೆ ಅಲ್ಲಿ ಅವಳ ಕಣ್ಣಿಗೆ ಬಿದ್ದುದು ವೇಷವಲ್ಲ, ಬದಲಾಗಿ ಹಾಲಕ್ಕಿ ನರಸಣ್ಣನೊಬ್ಬ ಬುಡಬುಡಿಕೆಯನ್ನು ಅಲುಗಾಡಿಸುತ್ತಾ "ಜಯವಾಗುತ್ತೆತೆ, ಜಯವಾಗುತ್ತೆತೆ" ಎಂದು ಕೀರಿಚುತ್ತಿದ್ದ. ವೇಷವಲ್ಲದುದಕ್ಕೆ ಕಸ್ತೂರಿಗೆ ಸ್ವಲ್ಪ ನಿರಾಸೆಯಾದರೂ ಅದರೊಂದಿಗೇ ಮನಸ್ಸಿಗೆ ಸ್ವಲ್ಪ ಸಮೂಧಾನವೂ ಆಯಿತು. ಏಕೆಂದರೆ ನರಸಣ್ಣನ ಚಿತ್ರವಿಚಿತ್ರದ ಉಡುಪು, ರಾಗವಾದ ದನಿ ಹಾಗೂ ಬುಡುಬುಡಿಕೆಯ ಸದ್ದನ್ನು ಕಂಡು ಕೇಳಿದ ಮಗು ಮೋಡಿಗೊಂಡು ಅಳುವನ್ನು ನಿಲ್ಲಿಸಿತ್ತು. ಅಮ್ಮ ಬಂದು ನೋಡಿದಾಗ ಕಸ್ತೂರಿ ಮಗುವಿನ ಮುಖವನ್ನೊಮ್ಮೆ ನರಸಣ್ಣನ ಕಡೆಗೊಮ್ಮೆ ನೋಡಿ ನಗುತ್ತಿದ್ದರೆ, ಮಗು ಬೆರಳನ್ನು ಬಾಯಲ್ಲಿಟ್ಟು ಚೀಪುತ್ತಾ ಬಟ್ಟಲು ಕಣ್ಣುಗಳಿಂದ ನರಸಣ್ಣನನ್ನು ನಿಟ್ಟಿಸುತ್ತಿತ್ತು. ನರಸಣ್ಣನಂತೂ ತಾನು ಬಂದ ಕಾರ್ಯವನ್ನೇ ಮರೆತು ಮಗುವಿನ ನೋಟಕ್ಕೆ ಮರುಳಾದವನಂತೆ ಮಗುವಿನ ಮುಖವನ್ನೇ ನೋಡುತ್ತಾ ಬುಡುಬುಡಿಕೆಯನ್ನು ಅಲುಗಾಡಿಸುತ್ತಿದ್ದು ನಡು ನಡುವೆ 'ಛಿಕ್, ಛಿಕ್' ಎನ್ನುತ್ತಿದ್ದ.

ಪೂರ್ವ-ಪಶ್ಚಿಮ ಜರ್ಮನಿಗಳ ಗಡಿಯಲ್ಲಿ ತಡೆಹಿಡಿಯಲಾದ ಪೂರ್ವ ಜರ್ಮನರು

ಮನೆಯೆಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ಬರೆದವರು. ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್.ಎ.ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ.
ಹೆರಿಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ವಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.
ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ, ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಹೊಸ ಪುಸ್ತಕ

LETTER WRITING MADE EASY
ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು, ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ. 1-4-0 (1=25).

ವಿ. ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0=25 N P ಸೇರಿಸಿ ಮನಿಆರ್ಡರು ಮಾಡಿದರೆ ಪುಸ್ತಕಗಳಿಸಲಾಗುವುದು
ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ನಮಗೆ ಬರೆಯಿರಿ

ನವಭಾರತ ಪುಸ್ತಕ ಭಂಡಾರ, ಉಡುಪಿ.



ಉಡುಪಿ ಡಿ. ಮು. ಕೋರ್ಟಿನಲ್ಲಿ

R. C. O. P. No. 34/1961.

ಜುಲೆಖಾ ಬಿ —ಅರ್ಜಿದಾರಳು.

ಮತ್ತು

ಕೆ. ನಾರಾಯಣ ಶೆಟ್ಟಿ, ಪೇಜಪ್ಪ ಶೆಟ್ಟಿ ಮಗ, ಯಕ್ಷಗಾನ ಕಲಾಮಂಡಲಿ ಉಡುಪಿ. ಯದ್ರ ಸೆಕ್ರಟರಿ ಉಡುಪಿ ತಾಲ್ಲೂಕು ಶಿವಳ್ಳಿ ಗ್ರಾಮದ ಗುಂಡಿ ದೈಲು —ಯೆದ್ರಿ

—ಯಿವರೊಳಗೆ.

ಸದ್ರಿ ಎದ್ರಿಗೆ

ನೀವು ಅರ್ಜಿದಾರರ ಮಳಗೆ ಬಾಡಿಗೆಗೆ ಅನುಭವಿಸಿ ಬರುತ್ತಿದ್ದ ಕಟ್ಟೋಣವನ್ನು ಸ್ವಾಧೀನ ಕೇಳಿ ವಾಕ್ಸು ಮೂಡಿದ ನೋಟ್ಸಂಡ ಅರ್ಜಿಯು ತಾ. 16-12-61ಕ್ಕೆ ಈ ಕೋರ್ಟು ಮುಂದೆ ತನ್ನ ಬಗ್ಗೆ ಯಿಟ್ಟಿರುತ್ತದೆ. ಆ ಕುರಿತು ನಿಮ್ಮ ಆಕ್ಷೇಪವಿದ್ದಲ್ಲಿ ಆ ದಿನ ಬೆಳಿಗ್ಗೆ 10 ಗಂಟೆಗೆ ಈ ಕೋರ್ಟು ಮುಂದೆ ಹಾಜರ್ಾಗಿ ಜ್ಞಾಪಿಸುವುದಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರು ಹಾಜ್ರಾತಿಯಲ್ಲಿ ಸದ್ರಿ ಅರ್ಜಿ ತೀರ್ಮಾನಿಸಲ್ಪಡುವದೆಂಬ ಸಂಗತಿ ಈ ಮೂಲಕ ತಿಳಿಸೋಣಾಗುತ್ತದೆ.

(By order of Court)

M. D. Osman,
Vakil for petitioner

Udipi, 6—12—61.

NAVAYUGA, UDIPI.
REGD. NO.BG. 176

14-12-1961

LICENSE NO. 31
Licensed to Post without Prepayment

ಮುಸಲ್ಮಾನ ಅರಸರು ಮತ್ತು ಶ್ರೀಕಾರ

ಗೋರಿ ಮಹಮ್ಮದನು ಭಾರತದಲ್ಲಿ ಮುಸ್ಲಿಂ ಆಡಳಿತೆಯನ್ನು ಪ್ರಾರಂಭಿಸಿದನು. ಆಗ ಭಾರತದಲ್ಲಿ ಚಲಾವಣೆಯಲ್ಲಿದ್ದ ನಾಣ್ಯಗಳಲ್ಲಿ ನಂದಿ ಮತ್ತು ಕುದುರೆ ಸವಾರರ ಮೂರ್ತಿ ಹಾಗೂ ನಾಗರೀ ಲಿಪಿಯಲ್ಲಿ ರಾಜನ ಹೆಸರು ಅಂಕಿತವಾಗುತಿದ್ದುವು. ಮಹಮ್ಮದನು ಭಾರತೀಯ ನಾಣ್ಯಗಳನ್ನೇ ಮುಂದುವರಿಸಿದನು. ಅವುಗಳ ರೂಪರೇಖೆಯಲ್ಲಾಗಲೀ ಭಾರದಲ್ಲಾಗಲೀ ಯಾವುದೇ ಪರಿವರ್ತನೆಯನ್ನೆವನು ಮಾಡಲಿಲ್ಲ. ನಾಣ್ಯಗಳಲ್ಲಿ ಆತನ ಹೆಸರನ್ನೂ ನಾಗರೀಲಿಪಿಯಲ್ಲಿ ಕೆತ್ತಿಸಿದ್ದನು. ಈ ಹೆಸರಿನ ಮೊದಲು ಶ್ರೀ ಅಕ್ಷರವೂ ಇದ್ದಿತ್ತು.

ಕನೋಜದ ವಿಜಯಾನಂತರ ಆತನು ಗಹರವಾಲ ವಿಧಾನದ ಚಿನ್ನದ ನಾಣ್ಯಗಳನ್ನು ಪ್ರಚಾರಕ್ಕೆ ತಂದನು. ಇವುಗಳ ಮೇಲ್ಭಾಗದಲ್ಲಿ ಲಕ್ಷ್ಮಿಯ ಆಕೃತಿಯಿರುತಿತ್ತು. ಕೆಳಭಾಗದಲ್ಲಿ ಶ್ರೀ ಮಹಮ್ಮದ್ ಬಿನ್ ಎಂಬ ಹೆಸರು ಬರೆಯಲ್ಪಟ್ಟಿತ್ತು.

ಮಹಮ್ಮದ ಗೋರಿಯ ನಂತರ ಮಹಮೂದನು ಕುತುಬುದ್ದೀನನೆಂಬ ಹೆಸರನ್ನಿಟ್ಟುಕೊಂಡು ದೆಹಲಿಯ ಸಿಂಹಾಸನವನ್ನೇರಿದನು. ಈತನ ಕಾಲದ ನಾಣ್ಯಗಳಲ್ಲಿಯೂ ಹಿಂಬದಿಯಲ್ಲಿ ನಾಗರೀ ಅಕ್ಷರಗಳಲ್ಲಿ 'ಶ್ರೀ ಹಮೀರಾ' ಎಂದು ಬರಹವಿತ್ತು.

ಅಲ್ತಮಷನ ನಾಣ್ಯಗಳಲ್ಲಿಯೂ ನಂದಿಯ ಮೂರ್ತಿಯಿರುತ್ತಿತ್ತು. 'ಸುರತಾನ ಶ್ರೀ ಶಮಸುದ್ದೀನ್' ಎಂಬ ಉಲ್ಲೇಖವೂ ಇರುತಿತ್ತು. ಹಿಂಬದಿಯಲ್ಲಿ ಕುದುರೆ ಸವಾರನ ಚಿತ್ರ ಮತ್ತು 'ಶ್ರೀ ಹಮೀರಾ' ಎಂಬ ಅಕ್ಷರಗಳಿರುತಿದ್ದುವು. ಕೆಲವು ನಾಣ್ಯಗಳಲ್ಲಿ ನಂದಿಯ ಮೂರ್ತಿ ಹಾಗೂ ನಾಗರೀಲಿಪಿಯಲ್ಲದೆ ಆಗ ಭಾರತದಲ್ಲಿ ವ್ಯವಹಾರದಲ್ಲಿದ್ದ ವಿಕ್ರಮ ಸಂವತ್ಸರವನ್ನೂ ನಮೂದಿಸಿದ್ದುದು ಕಂಡು ಬಂದಿದೆ. ಅಲ್ತಮಷನು ಅಜ್ಮೀರದ ಬಳಿಯಲ್ಲಿ ಅಳಿಕೊಂಡಿದ್ದ ರಾಜಪೂತರಾಜ ಚೌಹಡ ದೇವನನ್ನು ಸೋಲಿಸಿದ ನಂತರ ಅಲ್ಲಿ ಅವನ ಹೆಸರಿನ ನಾಣ್ಯಗಳನ್ನೇ ಚಲಾವಣೆಗೆ ತರಲಾಯಿತು. ಈ ನಾಣ್ಯಗಳಲ್ಲಿ ನಂದಿ ಮತ್ತು ಕುದುರೆ ಸವಾರರ ಚಿತ್ರಗಳೂ 'ಶ್ರೀ ಸಮಸೀರಲ ದೇವ' ಎಂದೂ ಬರೆದಿರುವುದು ಕಂಡು ಬಂದಿದೆ.

ರುಕನುದ್ದೀನ್ ಫಿರೋಜಶಹನು ಕೂಡ ತನ್ನ ಪೂರ್ವಜರು ಮುಂದುವರಿಸಿಕೊಂಡು ಬಂದಿದ್ದ ಪರಂಪರೆಯನ್ನು ಕೈಬಿಡಲಿಲ್ಲ. ತನ್ನ ಅಂಕಿತವಿರುವಲ್ಲಿ 'ಶ್ರೀ' ಯೊಡನೆ ಕೂಡಿಸಿಯೇ ಈತನು ಬರೆಸುತಿದ್ದನು. ಒಂದೆಡೆ ಸುರತಾನ್ ಶ್ರೀ ರುಕನುದ್ದೀನ್ ಎಂಬೂ ಇನ್ನೊಂದೆಡೆ 'ಶ್ರೀ ಹಮೀರಾ: ಎಂದೂ ಈತನ ನಾಣ್ಯಗಳಲ್ಲಿ ತೋರಿಬರುತ್ತದೆ. ಫಿರೋಜ ಶಹನ ಸೋದರಿ ಸುಲ್ತಾನ ರಜಿಯಾ ಸಿಂಹಾಸನಾರೂಢೆಯಾದಾಗ ಆಕೆಯ ಹೆಸರಿನ ನಾಣ್ಯಗಳಲ್ಲಿಯೂ "ಶ್ರೀ ಹಮೀರಾ:" ಎಂಬ ಉಲ್ಲೇಖವಿರುತಿತ್ತು.

೧೨೪೦—೪೨ರ ಅವಧಿಯಲ್ಲಿ ಆಳಿದ ಮುಯಿಜುದ್ದೀನ್‌ನ ಬಹರಾಂ ಶಾಹನ ನಾಣ್ಯಗಳಲ್ಲಿ ಕೂಡಾ ಕುದುರೆ ಸವಾರನಂದಿಗಳ ಅಂಕಿತವಿದೆ. ಅರಸನ ಹೆಸರು ಶ್ರೀಕಾರದಿಂದ ಪ್ರಾರಂಭವಾಗಿದೆ. ಈತನ ನಂತರ ರಾಜ್ಯವಾಳಿದ ಅಲ್ಲಾವುದ್ದೀನ್ ಮಸೂದ್ ಶಾಹನು (೧೨೪೨—೪೬) ಇದೇ ಉಲ್ಲೇಖಗಳನ್ನು ಮುಂದುವರಿಸಿದ್ದನು. ನಾಗರೀ ಲಿಪಿಯಲ್ಲಿಯೇ ಅರಸನ ಹೆಸರು ಶ್ರೀಕಾರದೊಡನೆ ಗುರುತಿಸಲ್ಪಡುತಿತ್ತು.

ಮುಂದಿನ ೨೦ ವರ್ಷ ರಾಜ್ಯವಾಳಿದ ಸುಲ್ತಾನ್ ನಾಸಿರುದ್ದೀನ್ ಮಹಮ್ಮದ್ ಅವ್ವಲನು ತನ್ನ ನಾಣ್ಯಗಳಲ್ಲಿ ಅರಬೀ ಲಿಪಿಗೆ ಆಶ್ರಯವನ್ನು ಮೊತ್ತಮೊದಲಿಗೆ ಇತ್ತನು. ಆದರೂ ನಾಗರಿಲಿಪಿಯನ್ನು ಪೂರ್ಣರೂಪದಲ್ಲಿ ವರ್ಜಿಸುವುದು ಈತನಿಗೆ ಅಸಾಧ್ಯವಾಯಿತು. ಆದುದರಿಂದಲೇ 'ಶ್ರೀ ಹಮೀರಾ" ಎಂಬ ಅಂಕಿತ ಈತನ ನಾಣ್ಯಗಳಲ್ಲಿಯೂ ಇರುತಿತ್ತು. ೧೨೬೬-೮೭ರ ತನಕ ಅರಸನಾದ ಗಯಾಸುದ್ದೀನ ಬಾಲ್ಬನನ ನಾಣ್ಯಗಳಲ್ಲಿ ಸುಲ್ತಾನ್ ಶ್ರೀ ಗಯಾಸುದ್ದೀನ್ ಎಂಬ ಉಲ್ಲೇಖವೂ ಮುಯಿಜುದ್ದೀನನ ನಾಣ್ಯಗಳಲ್ಲಿ 'ಶ್ರೀ ಸುಲ್ತಾನ್ ಮುಯಿಜುದ್ದೀನ್" ಎಂಬ ಅಂಕಿತವೂ ದೇವನಾಗರಿಯಲ್ಲಿ ಕಂಡುಬರುತ್ತದೆ.

ಕ್ರೂರರಾದ ಖಿಲ್ಜಿಯವರ ಸಮಯದವರೆಗೂ ರಾಜನಾಮನೊಡನೆ ಶ್ರೀಕಾರ ಸೇರಿರುವ ಪರಿಪಾಠವಿತ್ತು. ಪ್ರಥಮ ಖಿಲ್ಜೀ ಸಾಮ್ರಾಟ ಜಲಾಲುದ್ದೀನನು 'ಶ್ರೀ ಸುಲ್ತಾನ್ ಜಲಾಲುದ್ದೀನ್' ಎಂದೂ ಅಲ್ಲಾವುದ್ದೀನನು ನಾಗರೀಲಿಪಿಯಲ್ಲಿಯೇ 'ಶ್ರೀ ಸುಲ್ತಾನ್ ಅಲ್ಲಾವುದ್ದೀನ್' ಎಂದೂ ಅಂಕಿಸಿದ್ದನು.

ಅಲ್ಲಾವುದ್ದೀನನ ನಂತರ 'ಶ್ರೀ ಎಂಬುದು ಶೇರ್‌ಶಹನ ನಾಣ್ಯಗಳಲ್ಲಿ ಮಾತ್ರ ತೋರುತ್ತದೆ. ಈತನು 'ಶ್ರೀ ಶೇರ್‌ಶಹ' ಎಂದು ನಾಗರಿಲಿಪಿಯಲ್ಲಿ ಉಲ್ಲೇಖಿಸಿದ್ದನು.

ಶ್ರೀ ಶ್ರೀಮತ್, ಶ್ರೀಯುತ ಶಬ್ದಗಳು ಸಂಪ್ರದಾಯವೆಂಬಂತೆ ನಡೆದು ಬರುತ್ತಿರುವುದು ಬಹು ಸಮಯಾನಂತರ ಮುಸಲ್ಮಾನರಿಗೆ ಅಪ್ರಿಯವೆನಿಸತೊಡಗಿತು. ಮುಸ್ಲಿಂಕಾಲಕ್ಕೆ ಮೊದಲು ಶ್ರೀ ಮೊದಲಾದ ಶಬ್ದಗಳನ್ನು ಹೆಸರಿನೊಡನೆ ಪ್ರಯೋಗಿಸುತಿದ್ದರೆಂದು ಹಳೆಯ ಕಾಗದ ಪತ್ರಗಳಿಂದ ಗೊತ್ತಾಗುತ್ತದೆ. ಈ ಪದ್ಧತಿಯು ಔರಂಗಜೇಬನ ಕಾಲದ ವರೆಗೆ ಮುಂದುವರಿಯಿತು. ದಿವಂಗತ ರಾಮಪ್ರಸಾದ ಚಂದಾ ಎಂಬವರು ಬಂಗಾಳಿ ಭಾಷೆಯಲ್ಲಿ ದಸ್ತಾವೇಜೊಂದನ್ನು ಪ್ರಕಟಪಡಿಸಿರುವರು. ಇದರಲ್ಲಿ ಔರಂಗ ಜೇಬನಿಗೆ 'ಮಹಾರಾಜಾಧಿರಾಜ ಶ್ರೀಮತ್‌ಸುಲ್ತಾನ್ ಬಾದಶಹ" ಎಂದೂ ಶಯಿಸ್ತಾ ಖಾನನಿಗೆ "ಶ್ರೀಯುತ ಶಹಾಸ್ತಾ ಖಾನ್"ನೆಂದೂ ಉಲ್ಲೇಖಿಸಲಾಗಿದೆ.

ಮುಸಲ್ಮಾನ ಅರಸರ ನಾಣ್ಯಗಳಲ್ಲಿ ಲಕ್ಷ್ಮಿ ಮತ್ತು ನಂದಿಯರ ಚಿತ್ರಣವಿತ್ತೆಂಬುದಕ್ಕೆ ನೂರಾರು ಪ್ರಮಾಣಗಳು ದೊರೆಯುತ್ತವೆ. ಅಕ್ಬರನು ತನ್ನ ಆಂಕಿತ ಕಾಲದಲ್ಲಿ "ರಾಮ-ಸೀತಾ" ಎಂಬ ಅಂಕಿತದೊಡನೆ ಕೆಲವೊಂದು ನಾಣ್ಯಗಳನ್ನು ಚಲಾವಣೆಗೆ ತಂದಿದ್ದನೆಂದೂ ತಿಳಿಯುತ್ತದೆ.



ಕಾರ್ಮಿಕರ ಹಿತಚಿಂತನೆ

ಮೇಲ್ಭಾಗದ ಎಡಗಡೆ ಚಿತ್ರ— ಮಹಾರಾಷ್ಟ್ರ ರಾಜ್ಯಸರ್ಕಾರವು ಕಾರ್ಖಾನೆಯಲ್ಲಿ ಕೆಲಸ ಮಾಡುವ ಕಾರ್ಮಿಕರಿಗಾಗಿ ಮುಂಬೈನಲ್ಲಿ ಕಟ್ಟಿಸಿರುವ ಆಧುನಿಕ ಫ್ಲಾಟ್‌ಗಳ ಒಂದು ದೃಶ್ಯ. ಮೇಲ್ಭಾಗದ ಬಲಗಡೆ ಚಿತ್ರ— ಧನಬಾದಿನ ಕಾರ್ಮಿಕರ ಹಿತರಕ್ಷಣಾ ಕೇಂದ್ರದವರು ಏರ್ಪಡಿಸಿರುವ ಕೇಂದ್ರವೊಂದರಲ್ಲಿ ನಡೆಯುತ್ತಿರುವ ಪಯಸ್ಸರ ಶಿಕ್ಷಣ ತರಗತಿಯ ಒಂದು ದೃಶ್ಯ. ಕೆಳಭಾಗದ ಎಡಗಡೆ ಚಿತ್ರ— ಬಿತ್ತರಂಜನದಲ್ಲಿರುವ ಕಸ್ತೂರಬಾ ಗಾಂಧಿ ಆಸ್ಪತ್ರೆಯಲ್ಲಿ ರೋಗಿಗಳಿಗೆ ನಡೆಸುತ್ತಿರುವ ಉಪಚಾರ. ಕೆಳಭಾಗದ ಬಲಗಡೆ ಚಿತ್ರ—ಬರಿಸ್ಸಾದ ಹಿರಾಕುಡ್‌ನಲ್ಲಿ ಕಾರ್ಮಿಕರ ಮಕ್ಕಳು ಸಾಮೂಹಿಕ ನ್ಯಾಯಾಮವೊಂದರಲ್ಲಿ ಭಾಗವಹಿಸಿರುವ ಒಂದು ದೃಶ್ಯ.

ಕೆಲವು ವರುಷಗಳ ನಂತರ...

- ನೀವು ಕೆಲಸದಿಂದ ನಿವೃತ್ತರಾದಾಗ, ವ
ದುಡಿದು ಉಣ್ಣಲು ಅಶಕ್ತರಾದಾಗ, ನಿಮ್ಮ ಜೀವನದ
ಹೊಣೆ ಹಗುರವಾಗಲಿಕ್ಕೆ,
- ನಿಮ್ಮ ಅಭಿರುಚಿಯ ಅಥವಾ ಆವಶ್ಯಕತೆಯ
ಯಾವುದಾದರೊಂದು ಕಾರ್ಯಕ್ರಮದ ಪೂರೈಕೆಗೆ,
- ನಿಮ್ಮ ಮಗಳ ಮದುವೆಯ ಅಥವಾ
ಮಗನ ವಿದ್ಯಾಭ್ಯಾಸದ ಸುಲಭ
ಪರಿಹಾರಕ್ಕೆ,

ಸಿಂಡಿಕೇಟ್ ಬ್ಯಾಂಕಿನಲ್ಲಿ
ಕ್ಯುಮುಲೇಟಿವ್ ಡಿಪಾಜಿಟನ್ನು
ಪ್ರಾರಂಭಿಸುವುದು ಉತ್ತಮ.

ಸಿ. ಡಿ.

ಕ್ಯುಮುಲೇಟಿವ್ ಡಿಪಾಜಿಟ್ ಯೋಜನೆ ಸುವ್ಯವಸ್ಥಿತವಾದ ಉಳಿತಾಯಕ್ಕೆ ಕೈಗಂಬವಾಗಿದೆ.

ಸಿಂಡಿಕೇಟ್ ಬ್ಯಾಂಕ್

ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸು: ಉಡುಪಿ.

Edited Printed & Published by K. H. Shetty, at the Navayuga Press, Udipi, S. India.

ರಾಷ್ಟ್ರೀಯ ವಾರಪತ್ರಿಕೆ. ಬೆಲೆ: 13 ನ.ಪೈಸೆ

ನವಯುಗ

KANNADA — NAVAYUGA — WEEKLY

ಸಂಪುಟ ೪೧ ಸಂಚಿಕೆ ೧೫ | ಉಡುಪಿ 21—12—1961 ಗುರುವಾರ | Vol. 41 No. 15

ನಿಮ್ಮ ಯಾವತ್ತೂ
ಮುದ್ರಣ ಕೆಲಸಗಳಿಗೆ
ಯಮಾಡಿ ವಿಚಾರಿಸಿರಿ;
ನವಯುಗ ಪ್ರೆಸ್,
ಉಡುಪಿ

ವಿದ್ಯಾರ್ಥಿಗಳಿಗೆ
ಮತ್ತು ವಯಸ್ಕರಿಗೆ
ಅತ್ಯುಪಯೋಗೀ ಪುಸ್ತಕ
ಸುಲಭದಲ್ಲಿ ಇಂಗ್ಲಿಷ
(ಆಂಗ್ಲ ಸ್ವಯಂಬೋಧಿನಿ)
ನವಭಾರತ ಪುಸ್ತಕ ಭಂಡಾ
ಉಡುಪಿ

ರಾಷ್ಟ್ರೀಕರಣ ಮತ್ತು ಪಠ್ಯಪುಸ್ತಕಗಳು

ಶೈಕ್ಷಣಿಕ ವಿಕಾಸವಾಗುತ್ತ ಬಂದಂತೆ ಶಾಲೆಗಳಲ್ಲಿ ವಿದ್ಯಾರ್ಥಿಗಳ ದಟ್ಟಣೆಯು ಹೆಚ್ಚುವುದು ಸ್ವಾಭಾವಿಕ. ಶಿಕ್ಷಣವು ಎಲ್ಲ ನಾಗರಿಕರ ಸೊತ್ತಾಗಿ ಪರಿಣಮಿಸಿರುವ ಈ ಖಡ್ಡಾಯ ಶಿಕ್ಷಣದ ಯುಗದಲ್ಲಿ ಪಠ್ಯಪುಸ್ತಕಗಳ ಉತ್ಪಾದನೆಯಲ್ಲಿಯೂ ಗಣನೀಯ ಪ್ರಗತಿಯಾಗಬೇಕಾದುದು ಅನಿವಾರ್ಯ. ಈ ಕಾರಣದಿಂದಲೇ ಪಠ್ಯಪುಸ್ತಕಗಳನ್ನು ರಾಷ್ಟ್ರೀಕರಿಸುವ ಮಾತು ಆಗಾಗ ಮುಂದೆ ಬರತೊಡಗಿದೆ. ಮಕ್ಕಳಲ್ಲಿ ರಾಷ್ಟ್ರೀಯತೆಯ ಭಾವವು ಪ್ರಾಥಮಿಕ ಶಿಕ್ಷಣದ ಅವಧಿಯಲ್ಲಿಯೇ ಮೂಡುವಂತೆ ಮಾಡುವುದಕ್ಕೋಸ್ಕರ ರಾಷ್ಟ್ರೀಯತೆಯನ್ನು ಪ್ರತಿಬಿಂಬಿಸುವಂತೆ ಪಠ್ಯ ಪುಸ್ತಕಗಳು ರೂಪಗೊಳ್ಳಬೇಕು; ಅವುಗಳನ್ನು ರಾಷ್ಟ್ರೀಕರಣ ಮಾಡಬೇಕು ಎಂಬ ಅಭಿಪ್ರಾಯ ಇತ್ತೀಚೆಗೆ ನವದೆಹಲಿಯಲ್ಲಿ ಸೇರಿದ್ದ ಶೈಕ್ಷಣಿಕ ಮಂತ್ರಿಗಳ ಸಮ್ಮೇಳನದಲ್ಲಿ ಹೊರಪಟ್ಟಿತ್ತು. ಮದ್ರಾಸದ ವಿಧಾನ ಸಭೆಯಲ್ಲಿಯೂ ವಿದ್ಯಾಮಂತ್ರಿ ಶ್ರೀ ಸುಬ್ರಹ್ಮಣ್ಯರುಪಾಠ್ಯ ಪುಸ್ತಕ ರಾಷ್ಟ್ರೀಕರಣವು ಪರಿಶೀಲನೆಯಲ್ಲಿದೆ ಎಂದು ಹೇಳಿದ್ದಾರೆ.

ಶ್ರೀಮಂತ ದರಿದ್ರರೆನ್ನದೆ ಎಲ್ಲ ಮಕ್ಕಳೂ ಖಡ್ಡಾಯ ಶಿಕ್ಷಣಯೋಜನೆಯನ್ವಯ ಶಾಲೆಗೆ ಹೋಗಲೇ ಬೇಕಾಗುವುದರಿಂದ ಪುಸ್ತಕಗಳನ್ನು ಸ್ವಂತವಾಗಿಯೂ ಕೊಂಡುಕೊಳ್ಳುವ ಆರ್ಥಿಕ ಸ್ಥಿತಿಯಿಲ್ಲದಿರುವವರು ಪುಸ್ತಕಗಳಿಗಾಗಿ ಹೆಚ್ಚುವ್ಯಯ ಮಾಡುವುದು ಅಸಾಧ್ಯವಾಗಿದೆ. ಇಂದು ವಿದ್ಯಾರ್ಥಿಗಳು ಕೊಂಡುಕೊಳ್ಳಬೇಕಾದ ಪುಸ್ತಕಗಳ ಸಂಖ್ಯೆಯೂ ಮೌಲ್ಯವೂ ಅತ್ಯಧಿಕವೆಂದೇ ಹೇಳಬೇಕಾಗುತ್ತದೆ. ರಚನೆ, ನಿರ್ಮಾಣ ಮತ್ತು ಮುದ್ರಣಗಳಲ್ಲಿ ಹೇಳಿಕೊಳ್ಳುವಷ್ಟು ಸೌಂದರ್ಯವು ನಮ್ಮ ಪಠ್ಯ ಪುಸ್ತಕಗಳಲ್ಲೂ ಇಲ್ಲ. ಪುಸ್ತಕಗಳ ಉತ್ಪಾದನೆಯು ಬೃಹತ್ ಪ್ರಮಾಣದಲ್ಲಿ ನಡೆದರೆ ಮಾತ್ರ ಅವನ್ನು ಸುಲಭದರದಲ್ಲಿ ಒದಗಿಸಬಹುದಾಗಿದೆ. ಇಂದು ನಮ್ಮ ರಾಜ್ಯ ಸರಕಾರವಾದರೂ ಭಾಷಾಪಠ್ಯ ಪುಸ್ತಕವೊಂದನ್ನು ತಾನೇ ಪ್ರಕಾಶಗೊಳಿಸುವ ವ್ಯವಸ್ಥೆ ಮಾಡಿ ಬೆಲೆಯನ್ನು ಕಡಿಮೆ ಮಾಡಿದೆ. ಈ ಪುಸ್ತಕವನ್ನು ರಾಜ್ಯದ ಎಲ್ಲ ಪ್ರಾಥಮಿಕ ಶಾಲೆಗಳಿಗೂ ಪಾಠ್ಯವೆಂದು ಗೊತ್ತು ಮಾಡಿದೆ. ರಾಜ್ಯದ ಕೆಲವೊಂದು ವಿಭಾಗಗಳನ್ನು ಮಾಡಿ, ಒಂದೊಂದು ವಿಭಾಗಕ್ಕೆ ಒಬ್ಬೊಬ್ಬ ಪ್ರಕಾಶಕರ ಪುಸ್ತಕಗಳನ್ನು ಉಳಿದ ಪಾಠಗಳ ಮಟ್ಟಿಗೆ ಶಿಫಾರಸು ಮಾಡಿದೆ.

ರಾಷ್ಟ್ರೀಕರಣದ ಹೆಸರಿನಲ್ಲಿ ಪಠ್ಯ ಪುಸ್ತಕಗಳು ಅಗ್ಗದ ದರದಲ್ಲಿ ದೊರೆಯುವ ಒಂದು ಸೌಲಭ್ಯವನ್ನುಳಿದು ಇತರ ಯಾವುದೇ ಪ್ರಯೋಜನ ಲಭಸುವುದು ದುಸ್ತರ. ಮಾತ್ರವಲ್ಲ, ಈಗ ಮಾಡಿರುವಂತೆ ಒಂದೊಂದು ವಿಭಾಗಕ್ಕೆ ಒಂದೊಂದು ಪುಸ್ತಕವೆಂದು ಗೊತ್ತು ಮಾಡುವುದರಿಂದಲೂ ಲಾಭಕ್ಕಿಂತ ಹಾನಿಯೇ ಹೆಚ್ಚು ಎಂಬುದು ಅನುಭವ ವೇದ್ಯ. ಪಠ್ಯ ಪುಸ್ತಕಗಳನ್ನು ಸರಕಾರವೇ ಪ್ರಕಾಶಪಡಿಸಲಿ ಅಥವಾ ಖಾಸಗಿ ಸಂಸ್ಥೆ ವ್ಯಕ್ತಿಗಳೇ ಪ್ರಕಟಿಸಲಿ, ಅವು ಪರಿಪೂರ್ಣವಾಗಿರಬೇಕೆಂಬುದರಲ್ಲಿ ಎರಡಭಿಪ್ರಾಯಗಳಿಲ್ಲ. ಸರಕಾರದ ಕಡೆಯಿಂದ ವಿದ್ಯಾ ಇಲಾಖೆಯ ಮೂಲಕ ತಯಾರಿಸುವ ಪುಸ್ತಕಗಳು ಪಾಠಪಟ್ಟಿಗನುಸಾರವಾಗಿ, ಸಾಮಾನ್ಯವಾಗಿ ಬರೆಯಲ್ಪಡುತ್ತವೆ; ಆದರೆ, ಅವುಗಳಲ್ಲಿ ಉತ್ಸಾಹ ಹುಟ್ಟಿಸುವ ಶಕ್ತಿಯಿರುವುದಿಲ್ಲ. ತೀರ ಜಡ ವಸ್ತುಗಳನ್ನೇ ಆರಿಸಿಕೊಂಡು ಜಡ ಶಬ್ದಸಂಜಗಳಿಂದಲೇ ಬರೆಯಲಾದ ಈಗಿನ ಕನ್ನಡ ಪಾಠ ಪುಸ್ತಕಗಳೊಂದೇ ಇದಕ್ಕೆ ಉದಾಹರಣೆ ಸಾಕು. ಇಂತಹ ಭಾಷಾಪಾಠ ಪುಸ್ತಕಗ ನೀರಸತೆಯು ಕಲಿಸುವವನಲ್ಲೂ ಕಲಿಯುವವನಲ್ಲೂ ಯಾವ ಪರಿಣಾಮವನ್ನುಂಟು ಮಾಡೀತು?

ಖಾಸಗಿ ವ್ಯಕ್ತಿ ಇಲ್ಲವೇ ಸಂಸ್ಥೆಗಳಿಂದ ಪ್ರಕಾಶಗೊಂಡ ಪಾಠ್ಯಪುಸ್ತಕಗಳು ಟೆಕ್ಸ್ಟ್ ಬುಕ್ ಕಮಿಟಿಯ ಮಂಜೂರಾತಿಯನ್ನು ಪಡೆಯಬೇಕು. ಪ್ರಾಥಮಿಕ ಪುತ್ತು ಪ್ರೌಢ ಶಾಲೆಗಳಿಗೆಂದು ಗೊತ್ತುಮಾಡಿದ ಪಾಠ್ಯಪುಸ್ತಕಗಳ ಪೈಲೆ ಬಂದಿರುವ ಟೀಕೆ ಟಿಪ್ಪಣಿಗಳಿಂದ ಹೇಳುವುದಾದರೆ, ಇವನ್ನು ಮಂಜೂರಾತಿ ಮಾಡುವಲ್ಲಿ ಕಮಿಟಿಯವರು ಹೆಚ್ಚಿನ ಗಮನ ಹರಿಸಿಲ್ಲವೆಂದೇ ಹೇಳಬೇಕಾಗುತ್ತದೆ. ಈ ರೀತಿಯ ಬೇಜವಾಬ್ದಾರಿತನದಿಂದ ಪಾಠ್ಯಪುಸ್ತಕಗಳನ್ನು ಗೊತ್ತುಮಾಡುವುದರಿಂದ, ವಿದ್ಯಾರ್ಥಿಗಳ ಭವಿಷ್ಯಕ್ಕೆ ಧಕ್ಕೆ ತಗಲದಿರುವುದು ಸಾಧ್ಯವಿಲ್ಲ.

ಸರಕಾರದ ಪ್ರಕಟನೆಗಳನ್ನು ಮಾತ್ರ ಪಾಠ್ಯವೆಂದು ನಿರ್ಧರಿಸಿದರೆ, ಪುಸ್ತಕ ನಿರ್ಮಾಣದಲ್ಲಿ ಸರಕಾರ ಹೆಚ್ಚಿನ ಅಸ್ಥೆ ವಹಿಸಬೇಕಾಗುತ್ತದೆ. ಆದರೆ, ಇಡೀಯ ರಾಜ್ಯದಲ್ಲಿ ವಿಕಲ್ಪರೀತಿಯ ಪಾಠ್ಯಗ್ರಂಥಗಳಿರುವುದು ಎಂದರೆ, ಎಲ್ಲರೂ ಒಂದೇ ಪುಸ್ತಕವನ್ನು ಓದಬೇಕೆಂದ ವತ್ತಾಯ ಹೇರಿದಂತೆ. ಇದರಿಂದ ಒಂದೇ ವಿಷಯವನ್ನು ಬೇರೆ ಬೇರೆ ರೀತಿಯಲ್ಲಿ ಹೃದಯಂಗವಾಗಿ ಹೇಳುವ ಸ್ಪರ್ಧೆಗೆ ಅವಕಾಶ ದೊರೆಯುವುದಿಲ್ಲ. ಸ್ಪರ್ಧಾಭಾವನೆಯಿಲ್ಲದೆ ಹೋದರೆ, ಉತ್ತಮ ಪುಸ್ತಕಗಳೂ ನಿರ್ಮಾಣಗೊಳ್ಳಲಾರವು. ಈ ಕಾರಣದಿಂದ ಅಯೈಗೆ ಅನುಕೂಲವಾಗುವಂತೆ ಒಂದಕ್ಕಿಂತ ಹೆಚ್ಚು ಪುಸ್ತಕಗಳು ಒಂದೇ ವಿಷಯದ ಮೇಲೆ ಬರೆದು ಪ್ರಕಟವಾಗುವುದು ಅನುಕೂಲ ಮತ್ತು ಅಪೇಕ್ಷಣೀಯ. ಇದಕ್ಕೆ ಅವಕಾಶ ನೀಡಬೇಕಾದರೆ, ಪಠ್ಯ ಪುಸ್ತಕಗಳನ್ನು ತಯಾರಿಸಿ ಮುದ್ರಿಸುವಲ್ಲಿ ಸರಕಾರ ಹಸ್ತಕ್ಷೇಪ ನಡೆಸುವುದು ಅನಪೇಕ್ಷಣೀಯ.

ನಮ್ಮ ರಾಜ್ಯದಲ್ಲಿ ಹಲವಾರು ಪುಸ್ತಗ ಪ್ರಕಾಶಕರಿದ್ದಾರೆ. ಹಿಂದಿನಿಂದಲೂ ಹಳೆಯ ಮೈಸೂರಿನ ಹೊರತು ಉಳಿದ ಪ್ರದೇಶಗಳಲ್ಲಿ ಇಂತಹ ಪ್ರಕಾಶಕರೇ ಎಲ್ಲ ಪುಸ್ತಕಗಳನ್ನೂ ಪ್ರತಿಭಾವಂತ ಅನುಭವೀ ಅಧ್ಯಾಪಕರಿಂದಲೇ ಬರೆಸಿ ಪ್ರಕಟಿಸುತಿದ್ದರು. ಇಂದಿಗೂ ಈ ಈ ಕಾರ್ಯ ಸ್ವಲ್ಪಮಟ್ಟಿಗೆ ನಡೆದುಕೊಂಡು ಬರುತ್ತಿದೆ. ಸರಕಾರದಿಂದ ನಿಯಮಿತವಾದ ಕಮಿಟಿಯು ಒಂದು ವಿಷಯದ ಮೇಲೆ ಬರೆಯಲಾದ ಕೆಲವಾರು ಪುಸ್ತಕಗಳನ್ನು ಮಾನ್ಯಮಾಡುತ್ತಿತ್ತು. ಅಧ್ಯಾಪಕರು ಇವನ್ನು ಓದಿನೋಡಿ ತಮಗೆ ಒಳ್ಳೆಯದೆಂದು ಕಂಡುಬಂದುದನ್ನು ಆರಿಸಿಕೊಂಡು ಪಾಠಮಾಡುತಿದ್ದರು. ಇದರಿಂದ ಅಧ್ಯಾಪಕರಿಗೂ ವಿದ್ಯಾರ್ಥಿಗಳಿಗೂ ಹಿತವೆನಿಸುತಿತ್ತು. ಕೆಲವೊಂದು ಖಾಸಗಿ ಸಂಸ್ಥೆಗಳು ಈ ವ್ಯವಸಾಯದಿಂದ ಹೆಚ್ಚಿನ ಲಾಭವನ್ನು ಗಳಿಸಿರಬಹುದು; ಆದರೆ, ಇದರಿಂದ ಅವರು ಇನ್ನಿತರ ಪುಸ್ತಕಪ್ರಕಾಶಕ್ಕೆ ಕೈಹಾಕುವುದು ಸಾಧ್ಯವಾಗುವುದು ಎಂಬುದನ್ನು ನಾವು ಮರೆಯಲಾರೆವು.

ಪುಸ್ತಕಗಳನ್ನು ರಾಷ್ಟ್ರೀಕರಣ ಮಾಡುವುದು ಅಷ್ಟೇನೂ ಒಳ್ಳೆಯ ಪ್ರವೃತ್ತಿಯೆನ್ನುವಂತಿಲ್ಲ. ಸರಕಾರವು ನಿರ್ಮಿಸಿದ ಪಾಠಪಟ್ಟಿಯನ್ನು ಸರಿಯಾಗಿ ಅನುಸರಿಸಿ ಬರೆಯಲ್ಪಟ್ಟಿ ಒಂದಕ್ಕಿಂತ ಹೆಚ್ಚು ಪುಸ್ತಕಗಳನ್ನು ಇಡೀಯ ರಾಜ್ಯದ ಉಪಯೋಗಕ್ಕೆಂದು ಮಾನ್ಯಮಾಡಬೇಕು. ಮಂಜೂರು ಮಾಡುವ ಕಮಿಟಿಯವರು ತಮ್ಮ ಗುರುತರ ಜವಾಬ್ದಾರಿಯನ್ನು ಅರಿತುಕೊಂಡು ತಮ್ಮ ಅಲಕ್ಷ್ಯದಿಂದ ವಿದ್ಯಾರ್ಥಿಗಳಿಗೂ ಸರಕಾರಕ್ಕೂ ಆಗುತ್ತಿರುವ ಅನ್ಯಾಯವನ್ನು ಮನಗಂಡು, ಕಾರ್ಯಕ್ಷಮರಾಗಬೇಕು.

ಖಂಡಿತವಾಗಿಯೂ....

.... ಈ ಯೋಜನೆ ನಿಮಗೊಂದು
ನಿಯತವಾದ ಸೊತ್ತನ್ನು ಸಂಪಾದಿಸಿಕೊಡುವುದು.

ಉದಾಹರಣೆಗೆ ನೀವು ತಿಂಗಳೊಂದಕ್ಕೆ ಕೇವಲ 10 ರೂಪಾಯಿಗಳನ್ನು ಸಕಾಲಿಕವಾಗಿ ಸಿ. ಡಿ ಯಲ್ಲಿ ಕೂಡಿಸುತ್ತಾ ಬರುವಿರೆನ್ನೋಣ; 5 ವರುಷಗಳ ಅಂತ್ಯದಲ್ಲಿ ಅದು ರೂ. 668-12 ನ. ಪೈ. ಗಳನ್ನು ನಿಮಗೆ ಒದಗಿಸಿ ಕೊಡುವುದು.

ಈ ಕೆಳಗೆಯನ್ನು ದಯಮಾಡಿ ನೋಡಿರಿ

ಪ್ರತಿ ತಿಂಗಳಿಗೆ 10 ರೂಪಾಯಿಗಳಂತೆ				
12	ತಿಂಗಳಿಗೆ	ಕಟ್ಟಿದರೆರೂ	134.25	ಬರುವುದು
24	,,	,,	,, 249.37	,,
36	,,	,,	,, 332.25	,,
48	,,	,,	,, 521 62	,,
60	,,	,,	,, 668.62	,,

ಸಿ. ಡಿ. — ಕ್ಯುಮಲೇಟಿವ್ ಡಿಪಾಜಿಟ್ ಯೋಜನೆ ಒಂದು ನಿಯತವಾದ ಫಲವನ್ನೀವ ಖಂಡಿತ ಆಶ್ವಾಸನೆ.

ಹೆಚ್ಚಿನ ವಿವರಗಳಿಗೆ ನಮ್ಮ 103 ಶಾಖೆಗಳಲ್ಲೊಂದರಲ್ಲಿ ದಯಮಾಡಿ ವಿಚಾರಿಸಿರಿ

ಸಿಂಡಿಕೇಟ್ ಬ್ಯಾಂಕ್

ಡಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸ್: ಮುಕುಂದ ನಿವಾಸ, ಉಡುಪಿ.

ಗೆಳೆಯನ ಮದುವೆ

ಶ್ರೀ "ಕು. ಗೋ."

ಸೃಷ್ಟಿಯಲ್ಲಿ ಹುಟ್ಟಿದವನು ಒಂದಲ್ಲ ಒಂದು ದಿನ ಸಾಯಲೇಬೇಕೆಂಬ ವಿಧಿ ನಿಯಮವಿದ್ದರೂ, ಹುಟ್ಟಿದವನು ದೊಡ್ಡವನಾದ ಮೇಲೆ ಮದುವೆಯಾಗಲೇ ಬೇಕೆಂಬ ಕಾನೂನೇನಾದರೂ ಉಂಟೇ? ಹಾಗೇನೂ ಇದ್ದಂತೆ ನನಗೆ ಕಾಣುವುದಿಲ್ಲ. ಆ ವಾಡಿಕೆ ಏನೋ ಉಂಟು. ಮದುವೆಯಾಗದೇ ಬ್ರಹ್ಮಚಾರಿಯಾಗಿಯೋ ಅಥವಾ ಪ್ರೈವೇಟ್ ಸಂಸಾರಿಯಾಗಿಯೋ ಇರುವ ಅನೇಕ ಮಹನೀಯರುಗಳು ಇದ್ದಾರೆ ನಮ್ಮ ಸಮಾಜದಲ್ಲಿ. ಆದರೂ ವಿಸೆ ಹುಟ್ಟಿದ ಮೇಲೆ, ತಾರುಣ್ಯ ಮೂಡಿದ ಮೇಲೆ ಮದುವೆಯಾಗಿ ಸಂಸಾರಿಯಾಗಿ ಬಾಳುವುದೇ ಚೆನ್ನು. "ಮಕ್ಕಳನ್ನು ಹೆಚ್ಚು ವರ್ಷದ ತನಕ ಒಂಟಿಯಾಗಿಯೇ ಬಿಡಬಾರದು. ಅಹಿರಾವಣನ ಹಾಗೆ ಬೆಳೆದಿರುವ ಮಗನನ್ನು ಬೀದಿ ಬಸವನಂತೆ ಬಿಟ್ಟರೆ ಯಾವ ಯಾವುದೋ ಹೊಲಗಳಿಗೆ ನುಗ್ಗಿ ಬೆಳೆಯನ್ನೆಲ್ಲಾ ಧ್ವಂಸ ಮಾಡಿಯಾನು. ಗಲ್ಲಿ ಗಲ್ಲಿ ಸುತ್ತಿ ಇಲ್ಲದ ತಾಪತ್ರಯವನ್ನು ತಂದಾನು. ಆದ್ದರಿಂದ ಅವನ ಮೂಗಿಗೆ ಹಗ್ಗ ಹಾಕಿಯಾವುದಾದರೂ ಒಂದು ಯೋಗ್ಯ ಹುಡುಗಿಯನ್ನು ಕುತ್ತಿಗೆಗೆ ಗಂಟು ಹಾಕಿದರೆ ಅದನ್ನೇ ನಂಬಿಕೊಂಡು, ಅದು ಹೇಳಿದಂತೆ ಕುಣಿದುಕೊಂಡು ಕುಲದ ಮರ್ಯಾದೆಯನ್ನು ಕಾಪಾಡಿಕೊಂಡು ಸುಖವಾಗಿದ್ದಾನು" ಎಂಬ ದೂರಾಲೋಚನೆ ಸುಮಾರು ವರ್ಷಗಳ ಹಿಂದೆಯೇ ನಮ್ಮ ನಾಗಪ್ಪನವರಲ್ಲಿ ಹುಟ್ಟಿ ಶಿವಮೊಗ್ಗದ ಒಂದು ಹುಡುಗಿಯನ್ನು ಆರಿಸಿ ಗೋವಿಂದನಿಗೆ ಮದುವೆ ಮಾಡಿಸಲು ನಿಶ್ಚೈಸಿ 'ಈ ಮದುವೆಗೆ ತಾವು ಸಕುಟುಂಬ ಸಪರಿವಾರ ಸಮೇತರಾಗಿ ದಯಮಾಡಿಸಿ ವಧೂವರರನ್ನು ಆಶೀರ್ವದಿಸಿ ನಮ್ಮ ವಂಸ್ಸಂತೋಷಪಡಿಸಬೇಕಾಗಿ ಕೋರುತ್ತೇವೆ' ಎಂದು ಲಗ್ನ ಪತ್ರಿಕೆಯಲ್ಲಿ ಅಚ್ಚು ಹಾಕಿಸಿಯೇ ಬಿಟ್ಟಿದ್ದರು. ಈ ದೂರಾಲೋಚನೆ ಅಲ್ಲ, ದೂರಾಲೋಚನೆಗಳಲ್ಲಿ ನಾಗಪ್ಪನವರು ತುಂಬ ಮುಂದೆ. ಗಟ್ಟಿಮುಟ್ಟಿನ ವ್ಯಕ್ತಿ, ದೇವರು ದಿಂಡರು ಎಂದರೆ ಬಹಳ ಭಯಭಕ್ತಿ. ಮೊದಲಿನಿಂದಲೂ ತಿರುಪತಿ ತಿಮ್ಮಪ್ಪನ ಹಾದವನ್ನೇ ನಂಬಿಕೊಂಡು ಬಂದವರು. ಆ ತಿಮ್ಮಪ್ಪನೂ ಇವರ ಕೈ ಬಿಟ್ಟಂತೆ ಕಾಣುವುದಿಲ್ಲ. ಒಳ್ಳೆಯ ಆರೋಗ್ಯ ಕೊಟ್ಟಿದ್ದ, ಸ್ವಲ್ಪ ಆಸ್ತಿಯನ್ನು ಕೈಗೆ ಕೊಟ್ಟಿದ್ದ, ಅದೂ ಅಲ್ಲದೆ ಎರಡು ಪುತ್ರರತ್ನಗಳನ್ನು ದಯಪಾಲಿಸಿದ್ದ. ಅವರಿಬ್ಬರಿಗೂ ಆ ತಿಮ್ಮಪ್ಪನಹೆಸರನ್ನೇ ಇಟ್ಟಿದ್ದರು ನಾಗಪ್ಪನವರು. ಹಿರಿಯ ಮಗ ವೆಂಕಟೇಶನಿಗೆ ಮದುವೆ ಮಾಡಿಸಿ ಮೂರು ವರ್ಷ ಆಗಿರಬಹುದು. ಈಗ ಮದುವೆಗೆ ನಿಶ್ಚಯವಾಗಿರುವುದು ಎರಡನೆಯ ಪುತ್ರ ಗೋವಿಂದನಿಗೆ. ಇವನಿಗೂ ಮದುವೆ ಮಾಡಿಸಿದರೆ ಮುಂದೆ ಏನೂ ತೊಂದರೆ ಬಾರದು. ತಮ್ಮ ತಮ್ಮ ನೌಕರಿ ನೋಡಿಕೊಂಡು ತಮ್ಮ ಹೆಂಡಿರು ಹೇಳಿದಂತೆ ಕೇಳಿಕೊಂಡು ಸುಖವಾಗಿ ಬಾಳುವುದನ್ನು ತಾವು ಕಣ್ತುಂಬ ನೋಡಿ ಸಂತೋಷದಿಂದ ಕಾಲ ಕಳೆಯಬಹುದು ಎಂಬ ನಿರ್ಧಾರ ಮಾಡಿದ್ದರು ಅವರು.

ಈ ಮದುವೆಯ ಗಂಡು ಗೋವಿಂದನಿಗೂ ನನಗೂ ಗೆಳೆತನ ಬೆಳೆದು ಅನೇಕ ವರ್ಷಗಳಾಗಿ ಅದು ತೀರ ಮುಂದುವರಿದು ಬಿಟ್ಟಿದೆ. ಹೆಚ್ಚುಕಮ್ಮಿ ನಾವಿಬ್ಬರೂ ಒಬ್ಬರಿಗೊಬ್ಬರು ಅಂಟಿಕೊಂಡೇ ಇದ್ದೆವು ಕೆಲವು ಸಮಯ. ಒಂದೇ ಊರಿನ ಒಂದೇ ಶಾಲೆಯಲ್ಲಿ, ಒಂದೇ ತರಗತಿಯಲ್ಲಿ, ಒಂದೇ ಬೆಂಚಿನಲ್ಲಿ ಒಟ್ಟೊಟ್ಟಿಗೆ ಕುಳಿತು ಒಂದೇ ಉಪಾಧ್ಯಾಯರಿಂದ ಒಂದೇ ಬೆತ್ತದಲ್ಲಿ ಪೆಟ್ಟು ತಿಂದದ್ದು ಉಂಟು. ಒಟ್ಟೊಟ್ಟಿಗೇ ತರಗತಿಯಿಂದ ತರಗತಿಗೆ ಪ್ರಥಮ ಶ್ರೇಣಿಯಲ್ಲೇ ಹಾರುತಿದ್ದೆವು. ನಾವು ಇಬ್ಬರೂ ಒಟ್ಟಿಗೆ ಓದುತಿದ್ದ ಸಮಯದಲ್ಲಿ ಪ್ರಥಮ ಹಾಗೂ ದ್ವಿತೀಯ ಸ್ಥಾನಗಳನ್ನು ನಮ್ಮಿಂದ ಕಸಿದುಕೊಳ್ಳುವ ಗಂಡುಗಲಿ ಯೂರೂ ಇರಲಿಲ್ಲವೆಂದೇ ಹೇಳಬೇಕು. ಅದರಲ್ಲಿ ಮಾತ್ರವಲ್ಲದೆ ಬೆಳೆಯುವುದರಲ್ಲೂ ನಾವು ಯೂರನ್ನೂ ಬಿಟ್ಟಿರಲಿಲ್ಲ ಅದರೆ ದೈವವಶಾತ್ ನಾನು ಕೂಡಾ ಅವನಷ್ಟೇ ಉದ್ದವಾಗಿ ಬೆಳೆದರೂ ಕೂಡ ಅವನ ಹಾಗೆ ದಷ್ಟನಾಗಲಿಲ್ಲ. ಅತ ಈಗ ಸಾಧಾರಣ ಮಟ್ಟಿಗೆ ವೇಣೂರಿನ ಗೋಮಟನಂತೆ ಕಂಡು ಬಂದರೆ ನಾನು ಖಾಸ್‌ಬಂಗಲೆಯ ಒಂಟೆಯಂತೆಯೇ ಕಂಡುಬಂದೇನು! ಅದೇ ಕೋ ಗೋವಿಂದ ಸಂಸಾರ ಸಾಗರದಲ್ಲಿ ನನಗಿಂತ ಮೊದಲೇ ಧುಮುಕಲು ನಿಶ್ಚೈಸಿಬಿಟ್ಟ. ನಾನು ಮಾತ್ರ ಹೇಡಿಯಾಗಿ ಆ ಸಾಗರದ ಅಂಚಿನಲ್ಲೆ ನಿಂತು ಸಾಗರದಲ್ಲಿ ಈಜುವ ಶೂರರನ್ನು ನೋಡಿ ಮರುಕಪಡತೊಡಗಿದ್ದೇನೆ.

ಗೋವಿಂದನ ಮದುವೆಗೆ ಹೋಗುವ ವಿಚಾರವನ್ನು ಕನಸಿನಲ್ಲೂ ನಾನು ಎಣಿಸಿರಲಿಲ್ಲ. ಅದರೆ ನಮ್ಮ ಸ್ನೇಹದ ಕೊಂಡಿ ಸುಮ್ಮನಿದ್ದೀತೇ? ಎಲ್ಲೋ ಇದ್ದವನನ್ನು ಎಳೆದು ತಂದಿತು ಎಲ್ಲಿಗೋ. ಅಲ್ಲಿಯೇ ವಿಚಾರವನ್ನು ತಿಳಿಸಿತು. 'ನೀನು ಗೋವಿಂದನ ಮದುವೆಗೆ ಹೋಗಲೇಬೇಕು' ಎಂದಿತು. ನಾನು ಮಾತ್ರ ಹೋಗಲೋ ಬೇಡವೋ ಎಂದು ವಿಮನಸ್ಕೇಷ ಎಣಿಸುತ್ತಾ ಕುಳಿತುಬಿಟ್ಟೆ. ಆ ವೇಳೆಗೆ ಹರ ಹರಾಂತ ವೆಂಕಟೇಶನ ಸವಾರಿ ಬಂದು ಬಿಡಬೇಕೆ? ವೆಂಕಟೇಶನ ಬಗ್ಗುಬಾರೇನೂ ಸಾಧಾರಣದ್ದಲ್ಲ. ಎಲ್ಲಿಗೆ ಬೇಕಾದರೂ ಹೋಗಿ ಏನನ್ನು ಬೇಕಾದರೂ ಮಾಡಿ ಬರಬಲ್ಲ ಆಸಾಮಿ ಆತ. ಅವನಿಗೆ ಮಾತನಾಡಲು ಮನುಷ್ಯರೂ ಕೂಡ ಬೇಕಾಗಿಲ್ಲ. ಕಲ್ಲುಬಂಡೆ ಸಿಕ್ಕಿದರೂ ಸಾಕು ಅದರ ಬೆನ್ನನ್ನೇ ಕಟ್ಟಿ ಅದನ್ನೂ ಮಾತನಾಡಿಸಿ ಬರುತ್ತಾನೆ ಸರಿ. ನಮಸ್ಕಾರ ಪ್ರತಿನಮಸ್ಕಾರಗಳು ಮುಗಿದುವು. ಕ್ಷೇಮ ಸಮಾಚಾರಗಳ ವಿನಿಮಯವಾಯ್ತು. ಕಾಫಿ, ಬೀಡಾಗಳ ಸಮರ್ಪಣೆಯೂ ಆಯ್ತು. ಈ ಮಧ್ಯೆ ನಾಲ್ಕಾರು ಬಾರಿ ನನ್ನ ಬೆನ್ನನ್ನು ತನ್ನ ವಜ್ರಮುಷ್ಟಿಯಿಂದ ಸವರಿಯೂ ಬಿಟ್ಟ ವೆಂಕಟೇಶ. ಕೊನೆಗೆ 'ಗೋವಿಂದನ ಮದುವೆಗೆ ನೀನೂ, ನಿನ್ನ ಮದುವೆಗೆ ಅವನೂ ಹೊಗದಿದ್ದರೆ ಸ್ವಾರಸ್ಯವಿಲ್ಲ. ಎಷ್ಟಾದರೂ ನೀವು ಲಂಗೋಟಿ ಸ್ನೇಹಿತರು. ನಾಳೆದ್ದು ಬುಧವಾರ ಮದುವೆ. ನಿನಗೆ ಗೊತ್ತೇ ಉಂಟು. ನೀನು ಖಂಡಿತವಾಗಿಯೂ ಮಂಗಳವಾರ ಸಂಜೆ ಅಲ್ಲಿ ಹಾಜರಿರಬೇಕು. ನೀನೇನೂ ಮಾಡಬೇಕಾಗಿಲ್ಲ ಅಲ್ಲಿ. ಸುಮ್ಮನೆ ಕೈ ಬಾಯಿಗಳನ್ನಾಡಿಸಿಕೊಂಡು ಇದ್ದರೆ ಸಾಕು. ನಾವೆಲ್ಲಾ ಇಂದೇ ಸಂಜೆ ಹೊರಡುತ್ತೇವೆ. ಮಧ್ಯಾಹ್ನ ಬಸ್ಸಿನಲ್ಲಿ ಕುಳಿತರೆ ಸಂಜೆ ಶಿವಮೊಗ್ಗದಲ್ಲಿ ಇರುತ್ತೀಯ ನೀನು, ತಕೊ, ಬಸ್‌ಭಾರ್ಜು ಎಂದು ಹೇಳಿ ಅದೆಷ್ಟೋ ರೂಪಾಯಿಗಳನ್ನು ಕೆನೆಗೆ ತುರುಕಿಸಿಯೇ ಬಿಟ್ಟ.

"ಅದೆಲ್ಲಾ ಸರಿ. ಶಿವಮೊಗ್ಗದಲ್ಲಿ ಯಾವ ಮನೆಗೇಂತ ಬರಲಿ. ನನಗೆ ಮದುವೆ ಮನೆಗೆ ದಾರಿ ತೋರಿಸುವವರಾದರೂ ಯಾರು?" ಎಂದು ಕೇಳಿದೆ.

"ಹೊ, ಮರೆತೇ ಬಿಟ್ಟೆ. ಅಲ್ಲಯ್ಯಾ, ಈ ಲಗ್ನಪತ್ರಿಕೆಯಲ್ಲೇ ಅಡ್ರೆಸ್ ಇದೆಯಲ್ಲಾ. ಅದೆಲ್ಲಾ ಬೇಡ ಬಿಡು. ಬಸ್ ಸ್ಟ್ಯಾಂಡಿನಲ್ಲಿ ಇಳಿದೊಡನೆಯೇ ದುರ್ಗಿಗುಡಿ ಪದ್ಮನಾಭಯ್ಯನವರ ಮನೆ ಯಾವುದೂಂತ ಕೇಳಿದರೆ ಯಾರು ಬೇಕಾದರೂ ತಿಳಿಸುತ್ತಾರೆ. ಒಂದು ತಂತಿಕಂಬದ ಹತ್ತಿರ ಕೇಳಿದರೂ ಅದು ನಿನಗೆ ದಾರಿ ತೋರಿಸುತ್ತದೆ. ಅದಿಲ್ಲದಿದ್ದರೆ ನಾನೇ ಬಸ್‌ಸ್ಟ್ಯಾಂಡಿನಲ್ಲಿ ನಿನಗಾಗಿ ಕಾದಿರುತ್ತೇನೆ, ಬಂದು ಬಿಡು" ಎಂದ. ನಾನು ಹೆಚ್ಚಿನ ಜಾಕಾತಿ ಮಾಡದೆ 'ಖಂಡಿತವಾಗಿಯೂ ಬರುತ್ತೇನೆ'ಂದು ಹೇಳಿ ಎಡಗೈಯಲ್ಲಿ ಹಣವನ್ನು ಮುಟ್ಟಿ ನೋಡಿಕೊಂಡೆ.

ಒಲ್ಲದ ಮನಸ್ಸಿನಿಂದಲೋ, ಇಲ್ಲದ

(೧೧ನೇ ಪುಟ ನೋಡಿರಿ)

41 ವರ್ಷಗಳ ಭದ್ರ ಹಾಗೂ ಸಮರ್ಥ ಬೇಂಕಿಂಗ್ ಸೇವೆ.

ದಿ. ಪಾಂಗಾಳ ನಾಯಕ್ ಬೇಂಕ್ ಲಿ.

ನಮ್ಮ 3 ವರ್ಷ ವ್ಯಾದೆಯ ಕೇಶ್ ಸರ್ಟಿಫಿಕೇಟುಗಳಲ್ಲಿ ರೇವಣೆ ಮಾಡಿರಿ: ಬಡ್ಡಿ ಸೇಕಡಾ 5ರಂತೆ: ರೂ. 87—00 3 ವರ್ಷಗಳ ಅಂತ್ಯದಲ್ಲಿ ಬಡ್ಡಿ ಕೂಡಿ ರೂ 100—00 ಒದಗಿಸುವುದು.

ಕರೆ, ಚಿಕ್ಕ ವ್ಯಾದೆ, ನಿರಖು ಠೇವಣಾತಿಗಳ ಮೇಲೆ ಆಕರ್ಷಣೀಯ ಶರ್ತಗಳು: ಬಡ್ಡಿ ಸೇಕಡಾ 5½ರ ವರೆಗೆ.

ತಾ. 1—4—1961ರಿಂದ ಸೇವಿಂಗ್ಸ್ ಬೇಂಕ್ ಖಾತೆಗಳ ಮೇಲೆ ಬಡ್ಡಿ ಸೇಕಡಾ 3ರಂತೆ.

THE PANGAL NAYAK BANK LTD.
Estd: 1920

ESTD. 1921 ಸ್ಥಾಪನೆ

NAVAYUGA
KANNADA WEEKLY,
UDIPI.

Founder:
Late Sri A. B. Shetty
Former Minister for Public Health, Govt. of Madras & Govt. of Mysore.

ನವಯುಗ
ರಾಷ್ಟ್ರೀಯ ವಾರಪತ್ರಿಕೆ
ಉಡುಪಿ

ಗೌರವ ಸಂಪಾದಕರು:
ಎಸ್. ಗೋಪೀಚಂದ ರಾವ್, ವಿದ್ವಾನ್
ಬಿ. ಶಾಮರಾಯ ಶೆಟ್ಟಿ, ಬಿ. ಎ., ಎಲ್.ಟಿ

ಸಂಚಾಲಕ ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ.

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-50
ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3-50

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

1962ನೇ ಜನವರಿ 26
ನವಯುಗದ
ಪ್ರಜಾರಾಜ್ಯ
ವಿಶೇಷಾಂಕ

ಎಂದಿಗಿಂತಲೂ ಮಿಗಿಲಾದ ರೀತಿಯಲ್ಲಿ ಸಚಿತ್ರವಾಗಿಯು ಆಕರ್ಷಣೀಯವಾಗಿಯೂ ಪ್ರಕಟವಾಗಲಿದೆ.

ಸಂಘ, ಸಂಸ್ಥೆಗಳ ಸಂಕ್ಷಿಪ್ತ ಪರಿಚಯವನ್ನು ಕೊಡಲಾಗುವುದು.

ಜಾಹೀರಾತು ದರಗಳಿಗೂ ಹೆಚ್ಚಿನ ವಿವರಗಳಿಗೂ ಬರೆಯಿರಿ.

ಮೆನೇಜರ್,
ನವಯುಗ, ಉಡುಪಿ

ಕರ್ಮ ಸಾಧನೆಯಿಂದ ಪರಮಾತ್ಮನ ಪ್ರಾಪ್ತಿ

ಅನುವಾದಕರು: ಕೆ. ಎನ್. ಭಟ್, ಶಿರಾಡಿಪಾಲ್.

ಪರಮಾತ್ಮನೊಡನೆ ಏಕಾತ್ಮ ಭಾವವನ್ನು ಸ್ಥಾಪಿಸುವುದೆಂದರೆ, ಏಕಾಂತದಲ್ಲಿ ತನ್ನ ಕಲ್ಪನೆಯ ಮೂಲಕ ಏಕಾತ್ಮಭಾವವನ್ನು ಕಲ್ಪಿಸಿ ವಿಹರಿಸಿದರೆ, ಪರಮಾತ್ಮನೊಡನೆ, ಏಕಾತ್ಮಭಾವ ಸ್ಥಾಪಿತವಾಗುವುದೆಂದು ತಿಳಿಯುವವನು ಅಜ್ಞಾನಿಯೂ ಆಗಿರುತ್ತಾನೆ. ಮಾನವತೆಯೆಂಬುದು-ಒಂದು ಗಗನಚುಂಬಿತವಾದ ಮಹಾ ಮಂದಿರವಾಗಿ ಮೂರ್ತಿಗೊಳ್ಳುತ್ತಿರುವುದು. ಮಾನವತೆ ಈ ಜಗತ್ತು ಗಾಳಿ ಮಳೆಗಳೆನ್ನದೆ, ಚಳಿ ಬಿಸಿಲೆನ್ನದೆ, ಕಠಿಣ ಪರಿಶ್ರಮದಿಂದ ಮಾನವತೆಯ ನಿರ್ಮಾಣ ಮಾಡುತ್ತಿರುವುದು. ಈ ಪರಿಶ್ರಮದಲ್ಲಿ ಸಹಭಾಗಿಯಾಗಿದೆ, ಒರ್ವನೇ ಒಂದು ಮೂಲೆಯಲ್ಲಿ ಕುಳಿತು, ಈಶ್ವರನ ಪ್ರೇಮ ಮಿಲನದ ಆಶೆಯನ್ನಿಟ್ಟುಕೊಳ್ಳುವುದಾದರೆ, ಅದು ದುರಾಶೆಯೇ ಸರಿ. ಈ ಪರಿಯ, ಏಕಾಂತ ಧ್ಯಾನ-ಚಿಂತನವನ್ನು ಧರ್ಮವೆಂದು ಒಪ್ಪುವುದು ಮೂರ್ಖತನವಾಗಿರುವುದು.

ಆತ್ಮಮದವೆಂಬ ಪಂಜಾನ್ನು ಕಾಡಿದು, ಉನ್ಮತ್ತನಾಗಿ ಮೂರ್ಛಾವಸ್ಥೆಗೆ ತಲಪಿದ ಓ ಸನ್ಯಾಸಿಯೇ! ಈ ಭೂಮಿಯ ನೋಲೆ ಹರಡಿರುವ ಸಸ್ಯ ಮತ್ತು ಬೆಳೆಯ ರೂಪದ ಈ ಪ್ರಯತ್ನದ ಮೂಲಕ ಮನುಷ್ಯನು ಆತ್ಮಿಕ ಯಾತ್ರೆಯಲ್ಲಿ ಮುಂದುವರಿಯುತ್ತಿರುವ—ಪಸಚಿಹ್ನೆಗಳು ನಿನಗೆ ಕಂಡುಬರುತ್ತಿಲ್ಲವೇ? ಆತನ ಪಾದಯಾತ್ರೆಯ ಶಬ್ದ ನಿನಗೆ ಕೇಳಿಸುತ್ತಿಲ್ಲವೇ? ಮನುಷ್ಯನ ಈ ವಿಜಯ ಯಾತ್ರೆಯ ಉತ್ಸವವು ಎಲ್ಲಾ ಬಗೆಯ ಎಡರು ತೊಡರುಗಳನ್ನು ತೊಡೆದು ಹಾಕಿ ಮುಂದುವರಿಯುತ್ತಿರುವುದು. ಪರ್ವತ ಶಿಖರವೂ ಕೂಡ ಈ ವಿಜಯ ಘೋಷದಿಂದ ಒಡೆದು ಹೋಗಿ ಈ ವಿಜಯ ಯಾತ್ರಿಕರಿಗೆ ಸ್ವರ್ಗಕ್ಕೆ ದಾರಿಯನ್ನು ಕೊಡಬಹುದು. ಸೂರ್ಯೋದಯವಾದ ಕೂಡಲೇ ಕತ್ತಲೆ ಓಡಿ ಹೋಗುವಂತೆ, ಭೌತಿಕ ವಸ್ತುಗಳ ಎಡೆತಡೆಗಳು ಈ ಯಾತ್ರಿಕರು ಬರುವ ಮುನ್ನವೇ ಅದೃಶ್ಯವಾಗುತ್ತವೆ! ಕಷ್ಟ,ರೋಗ ಅವ್ಯವಸ್ಥೆ ಇವುಗಳೂ ಕೂಡ ಅದೃಶ್ಯವಾಗುತ್ತಿರುವುವು! ಅಜ್ಞಾನದಿಂದುದಿಸಿದ ಎಲ್ಲಾ ಬಾಧೆಗಳೂ, ಒಂದು ಕಡೆ ಉರುಳಿ ಬೀಳುತ್ತಿವೆ! ಅಂಧಕಾರದ ಅಂಧತ್ವನಾಶವಾಗಿ ಹೋಗುತ್ತಿದೆ! ಅಲ್ಲಿ ನೋಡು! ಸೂರ್ಯನ ಪ್ರಥಮ ಪ್ರಕಾಶ ಕಿರಣಗಳೊಡನೆಯೇ, ಸಂಪತ್ತಿ-ಆರೋಗ್ಯ, ಕವಿತೆ, ಕಲೆ, ವಿಜ್ಞಾನ ಮತ್ತು ಸತ್ಯದ ಸ್ವರೂಪ! ಇವುಗಳೆಲ್ಲವೂ ಸ್ಪಷ್ಟವಾಗಿ ಕಂಡು ಬರುತ್ತಿವೆ. ಈ ವಿಜಯ ಯಾತ್ರೆಯ ಪಥಕ್ಕೆ ಯಾರೂ ಸಂಚಾಲಕರಿಲ್ಲ! ಇಂತಹ ಈ ಯಾತ್ರೆಯಲ್ಲಿ ಭಾಗಗೊಳ್ಳಲು ಮನಸ್ಸಿಲ್ಲವೆಂದು ಯಾರು ತಾನೆ ಹೇಳಬಲ್ಲರು? ದಿವ್ಯ ಸಂಗಮದಂತಿರುವ ಈ ಉತ್ಸವವನ್ನು ಬಿಟ್ಟು—ದೂರ ಹೋಗಿ ಏಕಾಂತವಾದ ಗುಹೆಯಲ್ಲಿ ಒಬ್ಬನೇ ಕುಳಿತು ಬ್ರಹ್ಮ ಸಾಕ್ಷಾತ್ಕಾರದ ಪ್ರಯತ್ನ ಮಾಡುವಂಥಹ ಯಾವ ಮೂರ್ಖನು ತಾನೆ ಇರಬಲ್ಲನು? ಇದೆಲ್ಲವೂ ಅಸಾಧ್ಯವೆಂದು ಹೇಳಬಲ್ಲ ಯಾವ ಘೋರ ಅಸತ್ಯವಾದಿಯು ಇರಬಲ್ಲನು? ಈ ವಿಜಯ ಯಾತ್ರೆಯನ್ನು ಮೋಸಗಾರಿಕೆ ಎಂದು ಹೇಳುತ್ತ ಈ ಪ್ರಪಂಚದಿಂದ ದೂರ ಓಡಿ ಹೋಗಿ ಈಶ್ವರನ ಸಾಕ್ಷಾತ್ಕಾರವನ್ನು ಪಡೆಯಬಲ್ಲವನು ಯಾವನಿರುವನು? ಈ ಪ್ರಪಂಚದಿಂದ ಬಹುದೂರದಲ್ಲಿ ಈಶ್ವರನನ್ನು ಪಡೆಯಬಹುದಾದ, ಅಂತಹ ಯಾವ ಪವಿತ್ರವಾದ ಸ್ಥಾನವಿದೆ? ಹೀಗೆ ದೂರ ಬಹುದೂರ ಹೋಗತಕ್ಕ ಅವನು ಈ ಪ್ರಪಂಚವನ್ನು ಬಿಟ್ಟು ಮತ್ತೆಲ್ಲಿಗೆ ಹೋಗಬಲ್ಲನು? ಮುಂದೆ ಮುಂದೆ ಹೋಗಿ ಮತ್ತೆ ಅವನೇನು ಹಾರಬಲ್ಲನೇ? ಹಾರಿ, ಮತ್ತೆ ರೂನ್ಯದೊಡನೆ ವಿಲೀನವಾಗಬಲ್ಲನೇ? ಇಲ್ಲ....ಇಲ್ಲ, ಆತನಿಂದ-ಇದೆಂದಿಗೂ ಸಾಧ್ಯವಿಲ್ಲ. ಆದರೂ, ಹೀಗೆ ಪ್ರಯತ್ನ ಮಾಡುವ ಹೇಡಿಯು, ಅವನೆಂದಿಗೂ, ಈಶ್ವರನ ಸಾಕ್ಷಾತ್ಕಾರವನ್ನು ಪಡೆಯಲು ಸಾಧ್ಯವಿಲ್ಲ.

'ನಾವು ಬ್ರಹ್ಮಸಾಕ್ಷಾತ್ಕಾರವನ್ನು ಈ ವೇಳೆಯಲ್ಲಿಯೇ ನಾವು ಇದ್ದಲ್ಲಿಯೇ ಪಡೆಯಬಲ್ಲೆವು!' ಎಂದು ಹೇಳುವ ಎದೆಗಾರಿಕೆ ನಮ್ಮಲ್ಲಿರಬೇಕು! ನಾವು ನಮ್ಮ ಕರ್ಮಗಳ ಮೂಲಕ ಆತ್ಮಬೋಧವನ್ನು ಪಡೆಯುವಂತೆಯೇ ನಮ್ಮ ಆತ್ಮದ ಮೂಲಕ ನಾವು—ವಿಶ್ವಾತ್ಮನ, ಅನುಭವ, ಸಾಕ್ಷಾತ್ಕಾರವನ್ನು ಪಡೆಯುತ್ತಿದ್ದೇವೆ ಎಂಬುದು ನಮಗೆ ತಿಳುವಳಿಕೆಯಾಗುತ್ತಿರಬೇಕು. ನಾವು ನಮ್ಮ ಪ್ರಯತ್ನಿಗಳ ಮೂಲಕ, ನಮ್ಮ ಪಥದಲ್ಲಿ ಬರುವ ಎಡರು ತೊಡರು, ನಿರುದ್ಯೋಗ, ಅಜ್ಞಾನ, ಅವ್ಯವಸ್ಥೆ ಮೊದಲಾದುವುಗಳನ್ನು—ತೊಲಗಿಸಿ, ಸಂದೇಹ ಮತ್ತು ಕಲ್ಮಶಗಳಿಗೆ ಎಡೆಗೊಡದೆ—'ನನ್ನ ಕೆಲಸಗಳ ಮೂಲಕವೇ, ನನಗೆ ಆನಂದ ಲಭಿಸುವುದು! ಈ ಆನಂದದಲ್ಲಿಯೇ ನನ್ನ ಪರಮಾನಂದವು ವಾಸವಾಗಿರುವುದು!" ಎಂದು ಭಾವಿಸಿ-ಹೇಳುವ ಸಾಹಸ ಮಾಡಬೇಕಾಗಿದೆ.

ಉಪನಿಷತ್ತುಗಳಲ್ಲಿ-"ಬ್ರಹ್ಮವಿದ್ಯಾಂ ವರಿಷ್ಠಃ" ಎಂದರೆ, ಬ್ರಹ್ಮಜ್ಞಾನಿಗಳಲ್ಲಿ ಯಾರು ಶ್ರೇಷ್ಠನೆನಿಸಲ್ಪಡುವನು?" ಎಂಬ ಪ್ರಶ್ನೆಗೆ—"ಆತ್ಮಕ್ರೀಡಾಃ ಆತ್ಮರತಿಃ ಆತ್ಮವಾನ್!" ಎಂದು ಹೇಳಿದೆ. ಅರ್ಥಾತ್ ಯಾರ ಆನಂದವು ಬ್ರಹ್ಮನಲ್ಲಿ ಇರುವುದೋ, ಅವನೇ ಶ್ರೇಷ್ಠನು- ಯಾವ ಆನಂದವು ಆನಂದದ ಆಟದಿಂದ ಶೂನ್ಯವಾಗಿರುವುದೋ, ಅದು ಆನಂದವಲ್ಲ; ಹಾಗೂ ಕರ್ಮರಹಿತವಾದ ಆಟವು ಆಟವಲ್ಲ! ಕರ್ಮವೇ ಆನಂದದ ಆಟವಾಗಿದೆ! ಯಾರ ಆನಂದವು ಬ್ರಹ್ಮಾನಂದವಾಗಿರುವುದೋ, ಆತನ ಕರ್ಮಗಳೆಲ್ಲವೂ ಬ್ರಹ್ಮಾರ್ಪಿತವಾಗಿರುತ್ತವೆ. ಕವಿಯ ಆನಂದ ಕಾವ್ಯದಲ್ಲಿ—ಕಲಾಕಾರನ ಆನಂದ ಕಲೆಯಲ್ಲಿ, ವೀರನ ಆನಂದ, ಶೌರ್ಯಪೂರ್ಣ ಕಾರ್ಯದಲ್ಲಿ, ಜ್ಞಾನಿಯ ಆನಂದ ಸತ್ಯಾನ್ವೇಷಣೆಯಲ್ಲಿ ಇರುವಂತೆ, ಆತ್ಮಜ್ಞಾನಿಯ ಆನಂದವು ದಿನನಿತ್ಯ ಮಾಡಬೇಕಾಗಿರುವ, ದೊಡ್ಡ-ಚಿಕ್ಕಪಟ್ಟಿ ಕಾರ್ಯಗಳಲ್ಲಿ, ಸತ್ಯದಲ್ಲಿ—ಸೌಂದರ್ಯದಲ್ಲಿ, ಮತ್ತು ಸುವ್ಯವಸ್ಥೆಯಲ್ಲಿ ಇದ್ದುಕೊಂಡು, ಬ್ರಹ್ಮನನ್ನು, ಬ್ರಹ್ಮಾನಂದವನ್ನು ಪ್ರಕಟೀಕರಿಸುವುದು.

ಬ್ರಹ್ಮನೂ ಕೂಡ ತನ್ನ ಆನಂದವನ್ನು

(ಗಂಟೆ ಪುಟ ನೋಡಿರಿ)

ಕ್ಷಯರೋಗಕ್ಕೆ ಗೃಹ ಚಿಕಿತ್ಸೆ

ಹೆಚ್ಚಿನ ಕ್ಷಯರೋಗಿಗಳಿಗೆ ಟಿ. ಬಿ ಕ್ಲಿನಿಕ್‌ನ ಹೋಮ್ ಸರ್ವೀಸ್ ಯೋಜನೆಯಂತೆ ಆಧುನಿಕ ಔಷಧಿಗಳ ಸಹಾಯದಿಂದ ತಮ್ಮ ಮನೆಯಲ್ಲಿಯೇ ಚಿಕಿತ್ಸೆ ನಡೆಸಬಹುದು.

ಇವರಲ್ಲಿ ಕೆಲವರನ್ನು ಮಾತ್ರ ಸಹವಾಸಿಗಳಾದ ಇತರರಿಗೆ ರೋಗ ತಗಲುವ ಅಪಾಯವನ್ನು ತಪ್ಪಿಸುವುದಕ್ಕಾಗಿ ಇಲ್ಲವೇ ಶಸ್ತ್ರ ಚಿಕಿತ್ಸೆಗಾಗಿ ಆಸ್ಪತ್ರೆಗೆ ಸೇರಿಸಬೇಕಾಗುವುದು.



ಗೃಹ ಚಿಕಿತ್ಸೆಯ ವಿಸ್ತರಣೆಗಾಗಿ ನಿಧಿ ಬೇಕಾಗಿದೆ.
ಟಿ. ಬಿ. ಮೊಹರು ಮಾರಾಟ ಚಳವಳಿಯು ಈ ಉದ್ದೇಶಕ್ಕಾಗಿ ಹಣ ಸಂಗ್ರಹಿಸಲು ಸಹಾಯ ಮಾಡುತ್ತದೆ. ಟಿ.ಬಿ. ಮೊಹರುಗಳನ್ನು ಕೊಂಡುಕೊಂಡು ನಿಮ್ಮ ರಾಜ್ಯದ ಕ್ಷಯರೋಗ ಸಂಸ್ಥೆಗಳಿಗೆ ಸಹಾಯಮಾಡಿರಿ.

ನಿಮ್ಮ ಸಂದೇಶ ಪತ್ರಗಳನ್ನು, ಉಡುಗೊರೆ ಪಾರ್ಸೆಲುಗಳನ್ನು ಮತ್ತು ನಿಮ್ಮ ಸ್ನೇಹಿತರಿಗೆ ಬರೆಯುವ ಸಾಮಾನ್ಯ ಪತ್ರಗಳನ್ನು ಟಿ. ಬಿ. ಮೊಹರುಗಳಿಂದ ಶೃಂಗರಿಸಿ ಕಳುಹಿಸಿಕೊಡಿರಿ. ಒಂದು ಟಿ. ಬಿ. ಮುದ್ರೆಯ ಬೆಲೆ 10 ನಯೇ ಪೈಸೆ ಮಾತ್ರ.

ಟಿ. ಬಿ ಮುದ್ರೆಗಳು ಸಿಗುವ ಸ್ಥಳಗಳು. 1. ದಿ ಮೈಸೂರ್ ಸ್ಟೇಟ್ ಟ್ಯೂಬರ್‌ಕ್ಯೂಲೋಸಿಸ್ ಎಸೋಸಿಯೇಶನ್, ಗವರ್ನಮೆಂಟ್ ಟಿ. ಬಿ ಸೆನಿಟೋರಿಯಂ, ಓಲ್ಡ್ ಮದ್ರಾಸ್ ರೋಡ್, ಬೆಂಗಳೂರ್-8, 2. ದಿ ಸೌತ್ ಕೆನರಾ ಡಿಸ್ಟ್ರಿಕ್ಟ್ ಟ್ಯೂಬರ್‌ಕ್ಯೂಲೋಸಿಸ್ ಎಸೋಸಿಯೇಶನ್, ಮಂಗಳೂರು ಮತ್ತು ಅವರ ಬೇರೆ ಬೇರೆ ಏಜನ್ಸಿಗಳು.

ಹನ್ನೆರಡನೇ ಟಿ. ಬಿ. ಸೀಲ್ ಮಾರಾಟ ಚಳವಳಿ

(ನ್ಯೂ ಢಿಲ್ಲಿಯಲ್ಲಿರುವ ಭಾರತ ಕ್ಷಯರೋಗ ಸಂಸ್ಥೆಯಿಂದ-ನಡೆಸಲ್ಪಡುವಂಥಾದ್ದು)

ಈ ಸ್ಥಳದ ಉದಾರ ದಾತೃಗಳು:

Devidayal Metal Industries Private Ltd., Bombay.

ತೀವ್ರ ಪಠನದ ಉಪಾಯಗಳು

ವೇಗವಾಗಿ ಓದಬೇಕಾದರೆ, ಕೆಲವೊಂದು ಸೂತ್ರಗಳನ್ನು ಅವಶ್ಯ ಅನುಸರಿಸಬೇಕು. ಈ ಸೂತ್ರೋಪಾಯಗಳನ್ನು ಶ್ರೀಮತಿ ವುಡ್ ಎಂಬವರು ಹಲವಾರು ಆಧಾರಗಳಿಂದ ಸೂಚಿಸಿದ್ದಾರೆ:

೧. **ತುಟಿಗಳಿಂದ ಓದಬಾರದು**—ನಿಮಗೆ ತುಟಿಗಳಿಂದ ಓದುವ ಅಭ್ಯಾಸವು ಇರುವುದಾದರೆ, ಓದುವಾಗ ಬಾಯಿಯಲ್ಲಿ ಶುಪಾರಿಯನ್ನೋ ಇನ್ನೇನನ್ನೋ ಜಗಿಯುತ್ತಿರಿ. ಬಾಯಿಯಲ್ಲಿ ಏನನ್ನೂ ಹಾಕಿಕೊಳ್ಳದೇನೇ ಜಗಿಯುವುದನ್ನು ಅಭ್ಯಾಸಮಾಡಬಹುದು. ಈ ಅಭ್ಯಾಸವನ್ನಿಟ್ಟುಕೊಳ್ಳುವುದರಿಂದ, ತುಟಿಗಳಲ್ಲಿ ಓದುವುದಕ್ಕೆ ವಿಘ್ನವೊಡ್ಡಿದಂತಾಗುತ್ತದೆ. ಮೆಲ್ಲಮೆಲ್ಲನೆ ಜಗಿಯುವುದನ್ನು ನಿಧಾನವಾಗಿ ಬಿಟ್ಟುಕೊಟ್ಟು, ಓದುವುದನ್ನು ತೀವ್ರಗೊಳಿಸುವುದು ಸಾಧ್ಯ.

೨. **ನಿಶ್ಶಬ್ದ ಉಚ್ಚಾರಣೆ ಮಾಡಬಾರದು**— ಮನಸ್ಸಿನಲ್ಲಿ ಓದುತ್ತಿರುವುದಾದರೂ ಹೆಚ್ಚಿನವರು ಎಲ್ಲ ಶಬ್ದಗಳನ್ನು ನಿಶ್ಶಬ್ದವಾಗಿ ಉಚ್ಚರಿಸುತ್ತಾರೆ. ಇದರಿಂದ ಧ್ವನಿಯು ಹುಟ್ಟುವುದಿಲ್ಲ; ಆದರೆ ಬಾಯಿಯ ಉಚ್ಚಾರಣೆಯ ಎಲ್ಲ ಕಾರ್ಯಗಳೂ ನಡೆಯುತ್ತಿರುತ್ತವೆ. ಕಿವಿಗಳ ಕೆಳಗೆ ಕೆನ್ನೆ ಮತ್ತು ದವಡೆಗಳು ಸೇರುವಲ್ಲಿ ಹೆಬ್ಬೆರಳು ಮತ್ತು ತೋರ್ಬೆರಳುಗಳನ್ನು ಇಟ್ಟುಕೊಂಡು ಮನದಲ್ಲಿ ಓದಲು ಪ್ರಾರಂಭಿಸಿರಿ. ಗಲ್ಲದಲ್ಲಿ ಕಂಪನದ ಅನುಭವ ನಿಮಗಾಯಿತೆಂದರೆ ಆಗ ನೀವು ನಿಶ್ಶಬ್ದ ಉಚ್ಚಾರಣೆ ಮಾಡುತ್ತಿರುವಿರಿ ಎಂದು ಅರ್ಥ. ಮುಖವು ಉಚ್ಚಾರಣ ಮಾಡದ ವರೆಗೆ ನಿಮ್ಮ ಕಣ್ಣುಗಳು ಮುಂದಿನ ಶಬ್ದವನ್ನು ಓದುವುದಿಲ್ಲ. ಹಲ್ಲುಗಳಿಡೆ ಪೆನ್ಸಿಲನ್ನು ಕಚ್ಚಿಕೊಂಡು ತೊಡಗಿರಿ; (ಪೆನ್ಸಿಲಿಗೆ ನಾಲಿಗೆಯನ್ನು ಮುಟ್ಟಿಸಬೇಡಿರಿ). ಆಗ ನಿಶ್ಶಬ್ದ ಉಚ್ಚಾರಣೆ ಮಾಡುವ ಅಭ್ಯಾಸವು ದೂರವಾಗುವುದು.

೩. **ಕಿವಿಗಳನ್ನು ಮುಚ್ಚುವುದು**—ಮನಸ್ಸಿನೊಳಗೆ ಶಬ್ದವನ್ನು ಉಚ್ಚರಿಸುವ ಮತ್ತು ಅದನ್ನು ಕೇಳುವ ಅಭ್ಯಾಸವನ್ನು ಬಿಟ್ಟು ಬಿಡಿ, ಮುಖದಲ್ಲಿ ಸೀಟಿ ಊದಿರಿ; ಇಲ್ಲವೇ 'ಸೂಸು' ಶಬ್ದ ಮಾಡುತ್ತ ಇರಿ. ಇದರಿಂದ ಮನಸ್ಸಿನಲ್ಲಿ ಉಚ್ಚರಿತವಾದ ಶಬ್ದಗಳು ನಮಗೆ ಕೇಳುವುದಿಲ್ಲ. ಶಬ್ದಗಳ ಧ್ವನಿಯು ಕಡಿಮೆ ಕೇಳುವಷ್ಟು ತೀವ್ರವಾಗಿ ನಾವು ಓದಬಹುದು.

೪ **ಕಣ್ಣು ಮತ್ತು ಬೆರಳು**—ಪ್ರತ್ಯೇಕ ಗೀಟಿನ ಕೆಳಗೆ ವೇಗದಿಂದ ಬೆರಳು ಚಲಿಸಿರಿ. ಕಣ್ಣುಗಳನ್ನು ಬೆರಳಿಗಿಂತ ಬೇಗ ಓಡಿಸಿರಿ- ಬೆರಳಿನ ಕಾರಣದಿಂದ ಕಣ್ಣಿನ ಓಟ ಕುಂಠಿತವಾಗುತ್ತಿದೆಯೆಂದು ಮನವರಿಕೆಯಾದಾಗ, ಬೆರಳನ್ನು ಪಂಕ್ತಿಯ ನಟ್ಟನಡುವೆ ಇಟ್ಟು ತೀವ್ರವಾಗಿ ಕೆಳಗಿನ ಸಾಲಿಗೆ ತನ್ನಿರಿ. ಬೆರಳು ಮೇಲಿನ ಗೀಟಿನಿಂದ ಕೆಳಗಿನ ಗೀಟಿನನ್ನು ಮುಟ್ಟುವುದರೊಳಗೆ, ಒಂದು ಗೀಟನ್ನು ಓದಿ ಮುಗಿಸುವ ಪ್ರಯತ್ನಮಾಡಿರಿ.

೫. **ಕಣ್ಣು ಮತ್ತು ಕಾಗದ**—ಓದುವ ವೇಳೆ ಕಣ್ಣುಗಳನ್ನು ಎಂದಿಗೂ ಹಿಂದಕ್ಕೆಳೆಯಬೇಡಿರಿ. ಕಾಗದ ಇಲ್ಲವೇ ಪೋಸ್ಟುಕಾರ್ಡನ್ನು ಇಟ್ಟು ಓದಿನ ಭಾಗವನ್ನು ಮುಚ್ಚಿಬಿಡಬೇಕು. ಈ ಹಾಳೆಯನ್ನು ಓದಿದಂತೆ ಕೆಳಗೆ ಜಾರಿಸುತ್ತ ಬನ್ನಿರಿ. ಆಗ ನಿಮ್ಮ ದೃಷ್ಟಿಯು ಓದಲಿರುವ ಗೀಟಿನಲ್ಲಿ ವೇಗವಾಗಿ ಓಡುವುದು.

೬. **ವಿಶಾಲ ದೃಷ್ಟಿ**— ದೃಷ್ಟಿಕ್ಷೇತ್ರವನ್ನು ವಿಶಾಲಗೊಳಿಸಿರಿ ಒಂದೇ ಸಲ ಹತ್ತು ಶಬ್ದಗಳ ಮೇಲೆ ದೃಷ್ಟಿಪಾತ ಮಾಡುವ ಪ್ರಯತ್ನ ಮಾಡಿರಿ.

೭. **ವಿಚಾರ ಕೇಂದ್ರಿತಗೊಳಿಸುವುದು**— ಓದುವಾಗ ನಿಮ್ಮ ಮನಸ್ಸು ಶಬ್ದಗಳ ಮೇಲೆ ಕೇಂದ್ರೀಕೃತವಾಗದೆ ವಿಚಾರವನ್ನು ಮಾತ್ರ ತಿಳಿದುಕೊಳ್ಳಲಿ. ಮುಖ್ಯ ಸಾರ ಮತ್ತು ವಿಚಾರಗಳನ್ನು ತಿಳಿದುಕೊಳ್ಳಬೇಕು. ಯಾವುದಾದರೂ ಅನುಪಯುಕ್ತ ಮಾತುಗಳು ಬಿಟ್ಟುಹೋದರೂ ಓದಿಗೇನೂ ಭಂಗವಿಲ್ಲ. ಲೇಖಕರೂ ಮನುಷ್ಯರೆಂಬುದು ನೆನಪಿರಲಿ. ಆದುದರಿಂದಲೇ ಅವರು ಪುನರುಕ್ತಿ, ಅನಾವಶ್ಯಕ ವಿಸ್ತಾರ ಮೊದಲಾದ ದೋಷಗಳಿಂದ ಎಂದಿಗೂ ಮುಕ್ತರಾಗುವುದು ಸಾಧ್ಯವಿಲ್ಲ.

೮. **ಪುಸ್ತಕದ ಪೂರ್ವ ಪರಿಚಯ**—ಪುಸ್ತಕವನ್ನು ಓದಲು ತೊಡಗುವುದಕ್ಕೆ ಮೊದಲು ಅದರ ವಿಷಯ ಸೂಚಿ, ಅಧ್ಯಾಯಗಳ ತಲೆಬರಹ ಮತ್ತು ಮರಿತಲೆಬರಹ ಮೊದಲಾದುವನ್ನು ಓದಿ ಲೇಖಕನ ವಿಚಾರ ಧಾರೆ ಮತ್ತು ಆತನ ತರ್ಕ ಪರಂಪರೆಯನ್ನು ತಿಳಿಯುವ ಪ್ರಯತ್ನ ಮಾಡಿರಿ. ವಿಷಯ ಮತ್ತು ವಿಚಾರ ಧಾರೆಗಳ ಪರಿಚಯ ನಿಮಗಾಯಿತೆಂದರೆ, ಅಕ್ಷರ—ಅಕ್ಷರ, ಶಬ್ದ—ಶಬ್ದಗಳನ್ನು ಸೇರಿಸಿ, ಓದುವ ಆವಶ್ಯಕತೆಯಿರುವುದಿಲ್ಲ. ಸ್ತುತಃ ಬಹುಶ್ರುತವಾಗುತ್ತಿರುವಂತೆ ವೇಗದಿಂದ ಓದುವುದು ಸಾಧ್ಯವಾಗುವುದು.

ಶ್ರೀಮತಿ ವುಡ್‌ರವರ ಈ ನಿರ್ದೇಶನಗಳನ್ನು ಪಾಲಿಸಿದ ಕೆಲವರು ಪ್ರತಿ ಮಿನಿಟಿಗೆ ೩,೦೦೦ ಶಬ್ದಗಳಷ್ಟು ಓದುವುದನ್ನು ಸಾಧಿಸಿಕೊಂಡಿದ್ದಾರೆ. ಈ ಸೂತ್ರಗಳನ್ನು ನೆನೆಪಿಟ್ಟು ಅಭ್ಯಾಸ ಮಾಡುವುದರಿಂದ ನಿಮ್ಮ ಓದಿನ ವೇಗವು ಹೆಚ್ಚುವುದು ಖಂಡಿತ. ಆದುದರಿಂದ, ನೀವೂ ಈ ಪ್ರಯತ್ನಗಳನ್ನು ಏಕೆ ಮಾಡಬಾರದು?

ಅಮೃತ ಬಿಂದು

ಕೆಟ್ಟದು ಮಾಡಬೇಕೆಂದು ಹೆಂಗಸು ಹಟತೊಟ್ಟು ನಿಂತರೆ ನರಕದಲ್ಲಿಯೂ ಕೂಡದ ಆಕೆಯನ್ನು ಸಮಗಟ್ಟುವವರು ದೊರೆಯರು. (ಹೋಮರ್)

ಂ ಂ ಂ

ಕೇವಲ ಬದುಕಲಿಕ್ಕಾಗಿ ಪ್ರಾಣಬಿಡುವಂತೆ ಕೆಲಸ ಮಾಡುವುದರಿಂದ ಪ್ರಯೋಜನವೇನು? (ಸೋಮಾರಿಯ ಪ್ರಶ್ನೆ)

ಂ ಂ ಂ

ಹಿಂಜರಿಯುವ ಗಂಡಸು ಸೋಲುತ್ತಾನೆ. ಹಿಂಜರಿಯುವ ಹೆಂಗಸು ಗೆಲ್ಲುತ್ತಾಳೆ.

ಂ ಂ ಂ

ನೀನು ಮಾಡಬೇಕಾದ ಕೆಲಸದ ಬಗ್ಗೆ ಮಾಡದೆ ಮಾತಾಡುವದು ಕುದಿಯುವ ಪಾತ್ರೆಯ ಮುಚ್ಚಳ ತೆಗೆದಂತೆ! ಕೆಲವು ಹುರುಪು ಅಕ್ಷರ ಮಟ್ಟಿಗೆ ಕುಗ್ಗುವದು (ವಿಲಿಯಂ ಸ್ಟರ್ಡಿ)

ಂ ಂ ಂ

ಮೇಲೆತ್ತಿದ ಮುಖಕ್ಕೆ ಯಾವಾಗಲೂ ಸೂರ್ಯನ ಬೆಳಕು ಬೀಳುವದಲ್ಲದೆ ತಗ್ಗಿಸಿದ ಮುಖಕ್ಕಲ್ಲ. (ಬೌನಿಂಗ್)

ಂ ಂ ಂ

ದೀರ್ಘ ಯೌವನದ ಗುಟ್ಟೆಂದು ವಿದಿತನದ ವಿಚಾರ ಆಲೋಚಿಸದಿರುವದು (ಕೇಥಂನ್ ಕಾರ್ನೆಲ್)

ಂ ಂ ಂ



ನಿಮ್ಮ
ಕನಸುಗಳಿಗೆ
ಸಹಾಯ ಅವಶ್ಯಕ

ಉಳಿತಾಯ—ಕ್ರಮವಾದ
ಉಳಿತಾಯವೇ ಕನಸನ್ನು
ನನಸಾಗಿ ಪರಿವರ್ತಿಸಲು
ಒಳಿತಾದ ಮಾರ್ಗ

ನಿಮ್ಮ ಹಣವನ್ನು ಕೆನರಾ ಬ್ಯಾಂಕಿನಲ್ಲಿ ಉಳಿಸಿ
ಫಿಕ್ಸೆಡ್ ಡಿಪಾಸಿಟ್ ಮೇಲೆ ಶೇ. 5ರ ವರೆಗೆ
ಸೇವಿಂಗ್ಸ್ ಖಾತೆಯ ಮೇಲೆ ಶೇ. 3ರ ವರೆಗೆ
ಬಡ್ಡಿ ಸಂಪಾದಿಸಿರಿ

ಕ್ಯಾಷ್ ಸರ್ಟಿಫಿಕೇಟ್ ಮತ್ತು ಕ್ಯುಮುಲೇಟಿವ್ ಡಿಪಾಜಿಟ್‌ಗಳ
ಮೇಲೆ ಆಕರ್ಷಕ ಬಡ್ಡಿ ಸಂಪಾದಿಸಿರಿ

ನಿಮ್ಮ ಕನಸುಗಳು ನನಸಾಗಲು ನಮ್ಮ
ಸಹಾಯವನ್ನು ಪಡೆಯಿರಿ

ಕೆನರಾ ಬ್ಯಾಂಕ್ ಲಿ.

(ಸ್ಥಾಪನೆ: 1906)

— ನಿಮ್ಮ ಸೇವೆಯಲ್ಲಿ 115 ಶಾಖೆಗಳು —

TO
GROW
WITH THE NATION
Advertise
in the 'NAVAYUGA'

Illustrated Kannada Weekly, Udipi.

Founded: 41 years ago.

The vast reading public behind 'NAVAYUGA' makes it worthwhile to insert your advertisements regularly in the Navayuga and its Special supplements issued from time to time.

One such issue of 26th January, 1962 is the REPUBLIC DAY SUPPLEMENT supported by many reputed writers and columnists of Mysore.

For best advertisement value advertise in NAVAYUGA.

ದುಡಿಮೆ ಮತ್ತು ಪ್ರಾಮಾಣಿಕತೆಯೇ ಜಯದ ಮೂಲ

ಡಾ| ಕೆ. ಮಂಜುನಾಥ ರೈ ಎಂ.ಬಿ., ಬಿ.ಎಸ್, ಎಫ್.ಆರ್.ಸಿ.ಎಸ್., ಡಿ.ಎಂ.ಆರ್.

(ತಾ. 17—12—80ರಂದು ಉಡುಪಿಯಲ್ಲಿ ನಡೆದ ಬಂಟರ ಯಾನೆ ನಾಡವರ ಸಂಘದ ಮಹಾಸಭೆಯ ಅಧ್ಯಕ್ಷಸ್ಥಾನದಿಂದ ಮಾಡಿದ ಭಾಷಣದ ಸಾರಾಂಶ)



ಡಾ| ಕೆ. ಮಂಜುನಾಥ ರೈ

* * *

"ಸಂಘೀಶಕ್ತಿಃ ಕಲೌಯುಗೇ" ಎಂಬ ನೀತಿಯ ಮೂಲ ಎಷ್ಟು ನಿಜವೆಂಬುದಕ್ಕೆ ನಮ್ಮ ಈ ಸಂಸ್ಥೆಯೇ ಸಾಕ್ಷಿ. ಇದೇ ಸತ್ಯವನ್ನು, "ಒಗ್ಗಟ್ಟಿನಲ್ಲಿ ಬಲವಿದೆ" ಎಂಬ ಸತ್ಯ ಇನ್ನೊಂದು ನಾಣ್ಣುಡಿಯೂ ಸಾರುವುದು.

ಐದು ದಶಕಗಳ ಹಿಂದೆ ನಮ್ಮ ಸಮಾಜದವರು ಅನೇಕ ವಿಷಯಗಳಲ್ಲಿ ಅಸಹಾಯಕ ಸ್ಥಿತಿಯಲ್ಲಿದ್ದರೆಂಬುದು ಸರ್ವವಿದಿತ. ಪರಿಸ್ಥಿತಿ ಹೀಗೆ ಪ್ರತಿಕೂಲವಿದ್ದಾಗ ಒಂದಿನ ನಮ್ಮ ಹಿರಿಯರಲ್ಲಿ ಕೆಲವರು—ದೂರದೃಷ್ಟಿಯುಳ್ಳವರು — ಮುಂಡೆ ಬಂದು 1908ರಲ್ಲಿ ಬಂಟರ ಯಾನೆ ನಾಡವರ ಸಂಘವನ್ನು ಸ್ಥಾಪಿಸಿ "ವಿದ್ಯಾರ್ಥಿ ನಿಧಿ"ವನ್ನು ಮಂಗಳೂರಲ್ಲಿ ಮುಂದಾಗಿ ಪ್ರಾರಂಭಿಸಿದರು. ಒಂದು ಬಡ ವಿದ್ಯಾರ್ಥಿ ನಿಧಿಯನ್ನೂ ಸ್ಥಾಪಿಸಿದರು. ಇವೆರಡು ಅಂದಿನಿಂದ ಇಂದಿನ ತನಕ ನಮ್ಮ ವಿದ್ಯಾರ್ಥಿಗಳಿಗೆ ಒದಗಿದ ರಕ್ಷಾಕವಚ. ಈಗ ನಾವು ನಮ್ಮನ್ನೇ ವಿಚಾರಮಾಡಿಕೊಳ್ಳುವ ಒಂದು ಅಂಶವೂ ಇದೆ. ಆಧುನಿಕ ವಿದ್ಯಾಭ್ಯಾಸದ ಗಂಧಗಾಳಿ ಕೂಡ ಇಲ್ಲದೆ ಹೋದ ಆ ಮಹಾನುಭಾವರು, ಅವರ ಉತ್ತರಾಧಿಕಾರಿಗಳಾದ ನಮಗೆ ದೂರದೃಷ್ಟಿಯಿಂದ ಇಷ್ಟಾದರೂ ಮಾಡಿಕೊಟ್ಟು ಹೋಗಿರುವಾಗ ವಿದ್ಯಾಭ್ಯಾಸದ ಅಧಿಕ ಸದುಪಯೋಜನವನ್ನು ಪಡೆದುಕೊಂಡಿರುವ ನಾವು ಈ ದಿಸೆಯಲ್ಲಿ ಏನನ್ನು ಸಾಧಿಸಿರುತ್ತೇವೆ? ಸಾಕಷ್ಟು ಮುಂದುವರಿದಿರುವೆವೆ? ಎಂಬುದು ಆತ್ಮಶೋಧನೆ ಮಾಡಿ ವಿಚಾರಿಸುವುದು ಅವಶ್ಯ.

ಹಿಂದಿನ ಕೆಲವು ವರ್ಷಗಳ ವರದಿಗಳನ್ನು ಪರಿಶೀಲಿಸಿದಾಗ ನನಗೆ ಒಂದು ವಿಷಯದಲ್ಲಿ ತುಂಬ ಖೇದವೂ, ಆಶ್ಚರ್ಯವೂ ಉಂಟಾಯಿತು. ನಮ್ಮ ಬಡ ವಿದ್ಯಾರ್ಥಿ ನಿಧಿಯಿಂದ ವೇತನ ಪಡೆದುಕೊಂಡು ಕಲಿತು ಇಂದು ಉತ್ತಮ ಸ್ಥಾನಗಳಲ್ಲಿರುವವರಲ್ಲಿ ಹಲವರು ಅವರ ವೇತನಗಳನ್ನು ಮರಳಿ ಸಂಘಕ್ಕೆ ಸಲಾಯಿಸಲಿಲ್ಲ. ಅವರು ಕಲಿಯುತ್ತಿರುವಾಗ ಕಷ್ಟದಲ್ಲಿದ್ದಂತೆ ಇಂದು ಕಷ್ಟದಲ್ಲಿರುವ, ವಿದ್ಯಾರ್ಥಿಗಳಿಗೆ ಅಂಥ ಸಹಾಯವನ್ನು ನೀಡುವುದಕ್ಕಾಗಿ ಅವರು ತಮ್ಮ ವೇತನ ಸಾಲಗಳನ್ನು ವ್ಯರ್ಥ ಸಲಾಯಿಸುವದಲ್ಲದೆ, ಸಾಧಾನುಶಕ್ತಿ ಸಂಘಕ್ಕೆ ಧನಸಹಾಯ ಗೈದು ಬಡ ವಿದ್ಯಾರ್ಥಿ ನಿಧಿಯನ್ನು ಅಭಿವೃದ್ಧಿಪಡಿಸುವುದು ಅವರ ಗೌರವ ಕರ್ತವ್ಯವೆಂಬುದಾಗಿ ನಾನು ಒತ್ತಿಹೇಳಲು ಬಯಸುತ್ತೇನೆ. ಶಿಕ್ಷಣ ಕಾರ್ಯಕ್ರಮ ಸರಿಯಾಯಿತೆಂದರೆ ಸಮಾಜಕ್ಕೆ ಎತ್ತಣ ಭಯ! ವಿದ್ಯೆಯೇ ಸರ್ವತ್ರ ಸಾಧನ

ಇಂದು ಎಲ್ಲರನ್ನೂ ಭಯಪಡಿಸುವ ಪೆಡಂಭೂತವೆಂದರೆ ಭೂಮಿಗೆ ಸಂಬಂಧಪಟ್ಟ ಹೊಸ ಶಾಸನ. ಪ್ರಾಚೀನ ಕಾಲದಿಂದಲೂ ನಮ್ಮ ಜನತೆ ಪ್ರಧಾನವಾಗಿ ಕೃಷಿಯನ್ನೇ ಅವಲಂಬಿಸಿದ್ದರು, ಜಿಲ್ಲೆಯ ಅರ್ಥಿಕದ ಬೆನ್ನೆಲುಬಿನಂತಿದ್ದರು. ನಮ್ಮವರು ಹೊಲದ ಮಕ್ಕಳಾಗಿದ್ದರು: ಆದುದರಿಂದಲೇ ನಮ್ಮನ್ನು ನಾಡವರೆನ್ನುವರು. ಆ ಹೊಲಗಳನ್ನು ಉತ್ತು ಬಿತ್ತಿ ಬೆಳೆಸುವುದರಿಂದ "ಒಕ್ಕಲಿಲಾಯೆ" ಎಂಬ ಬಿರುದನ್ನು ಪಡೆದೆವು, ಹಾಗೆಯೇ ಅಂಧಕಣಜಗಳನ್ನು ಕಾಪಿಡುವ ಶೂರರಾಗಿ ಬಂಟರೆನಿಸಿಕೊಂಡೆವು. 'ಆಯಿ ಒರಿ ಬಂಟೆ. ಕೊರಿನ ಪಾತೆರೊಗು ತಪ್ಪಯೆ, ಆಯನಾ ನಂಬೊಳಿ" ಎಂಬ ನುಡಿಯು ಈಗಲೂ ವಾಡಿಕೆಯಲ್ಲಿದೆ. ಆದರೆ ಹಳೆಯ ಸಂಪ್ರದಾಯಗಳು ಕಟ್ಟುನಿಟ್ಟುಗಳೆಲ್ಲ ಇಂದು ರೂಪಾಂತರಗೊಳ್ಳುತ್ತಿವೆ. ಸಾಮಾಜಿಕ, ರಾಜಕೀಯ, ಆರ್ಥಿಕ ಕಾರಣಗಳಿಂದ ನೂತನ ಶಾಸನಗಳು ತಲೆದೋರಿವೆ ಆ ಶಾಸನಗಳ ಪರಿಣಾಮವಾಗಿ ಮುಂದಿನ ಹಿಡುವಳಿಗಳು ಕುಗ್ಗುವವು. ಇತರ ಸಾಮೂಹಿಕ ಕೃಷಿ ಕ್ಷೇತ್ರಗಳು ರೂಪುಗೊಳ್ಳಬಹುದು. ಅದೇನೇ ಇರಲಿ, ಇದ್ದ ಕ್ಷೇತ್ರದಲ್ಲಿ ಅತ್ಯಧಿಕ ಉತ್ಪಾದನೆ ಮಾಡುವುದಕ್ಕೆ ಅನುಕೂಲವಾಗುವಂಥ ಆಧುನಿಕ ವೈಜ್ಞಾನಿಕ ಕೃಷಿತಜ್ಞತೆಯನ್ನು ಪ್ರತಿಯೊಬ್ಬ ಕೃಷಿಗಾರನೂ ಪಡೆಯಲೇಬೇಕು ಇಂಥವರು ನಮ್ಮ ಗ್ರಾಮ ಜೀವನದಲ್ಲಿ ಪ್ರಮುಖ ಪಾತ್ರವನ್ನು ವಹಿಸಲು ಸಮರ್ಥರಾಗುವರು. ಇನ್ನುಳಿದವರು ವ್ಯಾಪಾರ, ಕೈಗಾರಿಕೆ ಇತ್ಯಾದಿ ಕ್ಷೇತ್ರಗಳಲ್ಲಿ ತಡವೂಡದೆ ನುಗ್ಗುವುದಿಯಬೇಕು. ಸಣ್ಣ ಮಟ್ಟದ ಯಂತ್ರೋದ್ಯಮಗಳಿಗೆ ನಮ್ಮ ಜಿಲ್ಲೆಯಲ್ಲಿ ಬಹಳ ಅವಕಾಶವಿರುತ್ತದೆ. ಎಡೆಬಿಡದೆ ದುಡಿಮೆ ಮತ್ತು ಪ್ರಾಮಾಣಿಕತೆ—ಇವೆರಡು ಇದ್ದರೆ ಎಲ್ಲದರಲ್ಲಿಯೂ ಜಯಕಟ್ಟಿಟ್ಟದ್ದು. ನಮ್ಮ ಸಂಘವು ಸೂಕ್ತ ರೀತಿಯಲ್ಲಿ ಯೋಜನೆಯೊಂದನ್ನು ಕೈಕೊಂಡು ಈ ದಿಸೆಯಲ್ಲಿ ಈಗಿನಿಂದಲೇ ಕಾರ್ಯಕ್ರಮ ಕೈಕೊಳ್ಳಬೇಕೆಂಬುದಾಗಿ ನನ್ನ ಬಿನ್ನಹ. ಕೇವಲ ವೈಯಕ್ತಿಕ ಲಾಭ ನಷ್ಟದ ಮನೋಭಾವವನ್ನು ನಾವಿನ್ನು ಬಿಟ್ಟು ಸಾಮೂಹಿಕವಾಗಿ ಕೈಗಾರಿಕೋದ್ಯಮಗಳನ್ನು ಸ್ಥಾಪಿಸಲೆತ್ನಿಸಬೇಕು.

ಸನ್ಮಾನ್ಯರೂ ಪೂಜ್ಯರೂ ಆದ ದಿವಂಗತ ಎ. ಬಿ. ಶೆಟ್ಟಿಯವರ ಧವಳ ಕೀರ್ತಿ ಚಿರಸ್ಥಾಯಿಯಾಗಿರುವುದಕ್ಕೆ ಒಂದು ಸ್ಮಾರಕ ನಿಧಿಯನ್ನು ತೆರೆದೆವು ಅದು ಎಲ್ಲಿಗೆ ಬಂತು? ಬರಿಯ ರೂ. 9000/— ಮಾತ್ರ ಈ ತನಕ ಸಂಗ್ರಹವಾಗಿರುತ್ತದೆ. ನಾವು ಅವರ ಪ್ರತಿಮೆಯ ಅನಾವರಣದಿಂದಲೇ ತೃಪ್ತರಾಗಿ ಕುಳಿತುಬಿಡುವುದೇ—ಅಥವಾ ಬೇರಾವ ಸೂಕ್ತ ರೂಪದಲ್ಲಿ ಅವರ ಸ್ಮಾರಕವನ್ನು ಮಾಡಲಿರುವೆವೇ?

ಶೆಡ್ಯೂಲ್ಡ್ ಮತ್ತು ಲೈಸೆನ್ಸ್‌ಡ್ ಬ್ಯಾಂಕಾಗಿ ಯೋಗ್ಯತೆ ಪಡೆದಿರುವ ನಮ್ಮ ವಿಜಯ ಬ್ಯಾಂಕು ಅದಷ್ಟು ದಕ್ಷತೆಯಿಂದ ಕೆಲಸಮಾಡುತ್ತಾ ಸಮಾಜಕ್ಕೆ ದೊಡ್ಡ ಬೆಂಬಲವಾಗಿರುತ್ತದೆ. ಅದರ ಖಾಲುಗಳನ್ನು ಇತರ ಕೋಮಿನವರೂ ಈಗ ಕೊಡಲಾಗುತ್ತಿರುವಂತೆ ಆದಳಿತಿಯ ಬೋರ್ಡಿನಲ್ಲಿಯೂ ಇತರ ಕೋಮಿನ ದಕ್ಷವ್ಯಕ್ತಿಗಳನ್ನು ಸೇರಿಸಿಕೊಂಡಲ್ಲಿ ಬ್ಯಾಂಕಿನ ಭವಿಷ್ಯ ಮತ್ತಷ್ಟು ಚೆನ್ನಾಗಿ, ನಮ್ಮ ಕಾರ್ಯಕ್ರಮಗಳಲ್ಲಿನ ಜಾತ್ಯತೀತ ವ್ಯಕ್ತವಾಗುವುದೆಂದು ನನ್ನ ಅಭಿಪ್ರಾಯ.

ನಮ್ಮ ಪ್ರಜಾಪ್ರಭುತ್ವ ಮತಾತೀತ ಎಂಬುದು ತತ್ವದಲ್ಲೇನೋ ಚಂದ ಕಾಣಬಹುದು ಆದರೆ ಧಾರ್ಮಿಕ ಹಿನ್ನೆಲೆಯಿಲ್ಲದ ಮಗು ಮುಂದೆ ಉತ್ತಮ ಪೌರನಾಗಿ ಬಾಳಿ ಬದುಕುವನೆಂಬ ವಿಶ್ವಾಸ ನನಗಿರುವುದಿಲ್ಲ. ಅಂಥ ಅಮೂಲ್ಯ ಶಿಕ್ಷಣ, ಶಾಲೆಯಲ್ಲಿ ದೊರಕುವುದು ಸಾಧ್ಯವಿಲ್ಲದೆ ಹೋದರೆ, ವಿದ್ಯಾರ್ಥಿ ಭವನಗಳಲ್ಲಿಯಾದರೂ, ದೊರಕುವಂತೆ ಮಾಡಲೇಬೇಕೆಂಬುದಾಗಿ ನನ್ನ ಸಲಹೆ.

ರಾಜಕೀಯದಲ್ಲಿ ನಮ್ಮ ಕರ್ತವ್ಯವೇನು? ಸುತ್ತಮುತ್ತಲಿನ ಜಗತ್ತಿನ ವಿದ್ಯಮಾನಗಳನ್ನು ನಮ್ಮವರು ನಿಷ್ಪಕ್ಷಪಾತ ಬುದ್ಧಿಯಿಂದ ಪರಿಶೀಲಿಸುತ್ತ ನಮ್ಮ ರಾಜಕೀಯ ಹಕ್ಕು ಬಾಧ್ಯತೆಗಳ ವಿಷಯವಾಗಿ ಸರಿಯಾದ ತಿಳುವಳಿಕೆ ಪಡೆಯಬೇಕು. ಪೊಳ್ಳು ಪ್ರಚಾರಗಳಿಂದ ಮೋಸಹೋಗಬಾರದು ಪ್ರಾಯ ಒಂದವರಿಗೆ ಓಟಿನ ಹಕ್ಕಿರುವ ಯುಗವಿದು. ಓಟಿನ ಬೆಲೆಯನ್ನರಿತು, ಅರ್ಹರಾದವರನ್ನು ರಚನಾತ್ಮಕ ಕಾರ್ಯ ಸೂರಯಿಸಲು ಶಕ್ತರಾದವರನ್ನು, ಸಮಾಜಕ್ಕೆ—ದೇಶಕ್ಕೆ—ಕಲ್ಯಾಣವನ್ನುಂಟು ಮಾಡಲು ಶ್ರಮಿಸುವವರನ್ನು ಚುನಾಯಿಸಿ, ಶಾಸನ ಸಭೆಗಳಿಗೆ ಕಳುಹಿಸುವಂತೆ ನೋಡಿಕೊಳ್ಳಬೇಕು. ಊರವರ ಸುಖ ದುಃಖಗಳನ್ನು, ಆಗು ಹೋಗುಗಳನ್ನು ತಿಳಿದುಕೊಂಡು ತಕ್ಕಂತೆ ಸರಕಾರದ ಸಮ್ಮುಖದಲ್ಲಿ, ಧೈರ್ಯದಲ್ಲಿ ವರ್ತಿಸಬಲ್ಲಂಥ ಜನನಾಯಕರನ್ನು ನಾವು ಆಯ್ಕೆಮಾಡುವಂತಿರಬೇಕು. ನಾವೆಲ್ಲ ಶಿಸ್ತಿನ ಬೆಲೆಯನ್ನು ತಿಳಿದುಕೊಂಡವರಿರಬೇಕು. ತ್ರಿಕರಣವಾಗಿ-ಮನೋವಾಕ್ ಕಾಯಗಳಲ್ಲಿ—ಶಿಸ್ತು ಇರಲೇಬೇಕು. ಶಿಸ್ತು ಇಲ್ಲದ ಜನ ಏನನ್ನೂ ಸಾಧಿಸಲಾರರು. ಶಿಸ್ತು ಇಲ್ಲದಿದ್ದರೆ, ಎಲ್ಲವೂ ಹಾಳು ಎಂಬುದನ್ನು ನಮ್ಮ ವಿಶ್ವಕವಿ, ಸರ್ವಜ್ಞ ಹೀಗೆ ಹೇಳಿದುದನ್ನು ಇಲ್ಲಿ ನೆನೆಯಬಹುದು.

"ಆಳಾಗ ಬಲ್ಲವನು, ಆಳುವನು
ಅರಸನಾಗಿ
ಆಳಾಗಿ ಬಾಳಲರಿಯದವನು,
ಕೊನೆಯಲ್ಲಿ
ಹಾಳಾಗಿ ಹೋದ—ಸರ್ವಜ್ಞ."

ಹಾಗೆಯೇ Carlile ಹೀಗೆ ಅಂದಿದ್ದಾರೆ.

"To learn obeying is the fundamantal art of government" ಸ್ವಾಮಿ ವಿವೇಕಾನಂದರು ಇದನ್ನೇ ಸಾರಿ ಹೇಳಿದ್ದಾರೆ. ಉತ್ತಮ ಸೇವಕನೆ ಉತ್ತಮ ಯಜಮಾನನೆಂದು ಗಾಂಧಿಜಿ ಕೂಡ ಹೇಳಿದ್ದಾರೆ. ಈ ಮನೋಭಾವವನ್ನು ನಮ್ಮ ಜನರು ವ್ಯವಸಾಯ ಮಾಡಿ ಬೆಳೆಸಿಕೊಳ್ಳಬೇಕು.

ತಮ್ಮ ಸಮಾಜದ ಅಥವಾ ಸಂಘದ ಸದಸ್ಯರ ಡೈರೆಕ್ಟರಿಯೊಂದನ್ನು ತಯಾರಿಸಿ ಸದಸ್ಯರಿಗೆ ಆ ಡೈರೆಕ್ಟರಿಯನ್ನು ಸದಸ್ಯತನದ ಚಂದಾ ಹಣಕ್ಕೆ ವಿ. ಪಿ ಸಿ. ಮೂಲಕಳುಹಿಸಿ. ಸಂಘದ ಸದಸ್ಯ ಸಂಪತ್ತನ್ನೂ ಹೆಚ್ಚಿಸಬಹುದು.

ನಮ್ಮಲ್ಲಿ—ಯಾರೂ ಯಾವ ಕ್ಷೇತ್ರದಲ್ಲಿಯಾದರೂ ದುಡಿಯುತ್ತಿರಲಿ ಸಂಪೂರ್ಣ ಸೇವಾ ಬುದ್ಧಿಯಿಂದ ದುಡಿಯುತ್ತಿರಬೇಕು. ನಮ್ಮಲ್ಲಿ ಘನ ಧ್ಯೇಯಗಳಿರಬೇಕು. ನಮ್ಮ ತರುಣರು ಬುದ್ಧಿವಂತರಿದ್ದಾರೆ, ಶಕ್ತರಿದ್ದಾರೆ, ಪ್ರಾಮಾಣಿಕರಿದ್ದಾರೆ—ಆದರೆ ಬೇಕಾಗಿರುವುದು ಯೋಗ್ಯ ಮಾರ್ಗದರ್ಶನ ಮಹಾಮಹಿಮರ ವಿಭೂತಿ ಪುರುಷರ—ಶೀಲವಂತರ—ಆದರ್ಶವ್ಯಕ್ತಿಗಳ — ಭಾರತ ಹಾಗೂ ವಿಶ್ವದ ಅಂಥ ಇತರರ-ಜೀವನ ಚರಿತ್ರೆಗಳನ್ನು ಆದರದಿಂದ ಓದಬೇಕು ಆ ಭಾವನೆಗಳು ನಮ್ಮ ಜೀವನದ ಹಾಸುಹೊಕ್ಕುಗಳಾಗುವುವು. ಇದಕ್ಕೋಸ್ಕರ ನಮ್ಮ ಸಂಘದ ಸಂಸ್ಥಾಪಕರು, ಒಂದು ಉತ್ತಮ ಪುಸ್ತಕ ಭಂಡಾರವನ್ನು ನಮ್ಮ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಸ್ಥಾಪಿಸಿರುತ್ತಾರೆ. ವಿದ್ಯಾರ್ಥಿ ಭವನದ ಅಧಿಕಾರಿಗಳು ಈ ಕಾರ್ಯದಲ್ಲಿ ಇನ್ನೂ ಹೆಚ್ಚಿನ ಆಸ್ಥೆ ವಹಿಸಿ ತರುಣ ವಿದ್ಯಾರ್ಥಿಗಳು ಉತ್ತಮ ಧ್ಯೇಯವಂತರಾಗುವಂತೆ, ಉತ್ತಮ ಗ್ರಂಥ ಪಠನದಲ್ಲಿ ಅಭಿರುಚಿಯುಳ್ಳವರಾಗುವಂತೆ ನೋಡಿಕೊಳ್ಳಬೇಕಾಗಿ ನನ್ನ ದೈನ್ಯ ಸೂಚನೆ

ಮೊದಲಿನದು ನನ್ನ ಗುರುವರ್ಯರೊಬ್ಬರು ನನಗೆ ಬೋಧಿಸಿದ ಮಾತು. ನನ್ನ ಅನುಭವದ ಸಾರ, ಯಾವಾಗಲೂ ಕೆಲಸಮಾಡುತ್ತಿರು— ನಿನ್ನ ಯಶಸ್ಸಿಗೆ ಕೃತಕೃತ್ಯತೆಗೆ ಇರುವ ಮೂಲ ಮಂತ್ರವೆಂದರೆ ಕೆಲಸ—ಕೆಲಸ—ಕೆಲಸ. Work, hard work, hard work

Hard work has never killed any body. It is want of work that kills man—ಕೆಲಸಮಾಡಿ ಸೋತವರಿಲ್ಲ— ಸೋಲುವುದು ಕೆಲಸಮಾಡದೆಯೇ.—ಇದೇ ಉಪನಿಷತ್ತಿನ ಸಂದೇಶ.—ಉತ್ತಿಷ್ಠತ ಜಾಗ್ರತ! ಪ್ರಾಪ್ಯವರಾನ್ ನಿಬೋಧತಃ—

Thus spoke Swami Vivekananda— "Duty of any kind is not to be slighted.

(ಉಳಿದ ಪುಟ ನೋಡಿರಿ)

ನವಯುಗ

ವರುಷ ೪೧	ಉಡುಪಿ ೨೧-೧೨-೬೧	ವಾರ ೧೫

ಗೋವಾ ವಿಮೋಚನೆ

ಗೋವೆಯಲ್ಲಿ ಕಳೆದ ೪॥ ಶತಮಾನಗಳ ಪೋರ್ಚುಗೀಸರ ನಿರಂತರ ಗಬ್ಬಾಳಿಕೆಯು ಕೊನೆಗಾದರೂ ಕೊನೆಗೊಂಡಿತು; ದಬ್ಬಾಳಿಕೆಗಾರರ ಸದ್ಬುದ್ಧಿ ಪ್ರೇರಣೆಯಿಂದಲ್ಲ, ಗೋವಾಂತಕರ ಸ್ವಯಂ ಪ್ರಯತ್ನದಿಂದ ಮತ್ತು ಅವರ ಸಹ ರಾಷ್ಟ್ರೀಯರಾದ ಭಾರತೀಯರ ಸಹಕಾರದಿಂದ ಈ ವರ್ಷದ ಕೊನೆಯ ತಿಂಗಳಿನ ೧೯ನೆಯ ದಿನಾಂಕ ಭಾರತೀಯರ ಇತಿಹಾಸದಲ್ಲೊಂದು ಚಿರಸ್ಮರಣೀಯ ದಿನ. ಪೋರ್ಚುಗೀಸರ ಕಪಿ ಮುಷ್ಟಿಯೊಳಗೆ ಸಿಕ್ಕಿದು ಬವಣೆಬಡುತ್ತಿದ್ದ ಭಾರತೀಯರನ್ನು ವಿಮೋಚನೆ ಮಾಡಿದ ಪವಿತ್ರ ದಿನ. ಭಾರತದಲ್ಲಿದ್ದ ವಸಾಹತುವಾದದ ಕೊನೆಯ ಕಳಂಕವನ್ನು ತೊಡೆದು ಸಂಪೂರ್ಣ ಭಾರತಕ್ಕೆ ಸ್ವಾತಂತ್ರ್ಯವನ್ನು ತಂದುಕೊಟ್ಟ ಅಮರ ದಿನ. ಪೋರ್ಚುಗೀಸರ ನಿರಂಕುಶಾಧಿಕಾರವಡಿಯಲ್ಲಾದರೂ ವಸಾಹತುವಾದವು ಅಳಿದೇ ಹೋಗುವ ಸುದಿನವಿದೆಯೆಂಬುದನ್ನು ಲೋಕಕ್ಕೆ ಸಾರಿ ಹೇಳಿದ ಜಗತ್ಪ್ರಸಿದ್ಧ ದಿನ.

ಇತ್ತೀಚೆಗಿನ ವಿದ್ಯಮಾನಗಳಿಂದ ಪೋರ್ಚುಗೀಸರನ್ನು ಹೊಡೆದೋಡಿಸಲು ಭಾರತೀಯರು ಮಾಡಿದ ದೃಢ ನಿರ್ಧಾರವು ಜಗಜ್ಜನಿತವಾದಂತೆಯೇ ಪೋರ್ಚುಗಾಲವು ನಯಕ್ಕೆ ಬಾಗಲಾರದೆಂಬ ಸತ್ಯವೂ ತಿಳಿದಿತ್ತು. ತನ್ನ ಮಿತ್ರ ರಾಷ್ಟ್ರದ ಈ ಮೊಂಡುತನದಿಂದ ಅತೀವ ಪೇಚಿಗೆ ಬಿದ್ದ ರಾಷ್ಟ್ರವೆಂದರೆ ಬ್ರಿಟನ್ ಮಾತ್ರ. ಸಂಯುಕ್ತ ರಾಷ್ಟ್ರ ಸಂಘದ ಸದಸ್ಯ ರಾಷ್ಟ್ರಗಳಾದ ಬಾರತ-ಪೋರ್ಚುಗಲ್‌ಗಳು ತಮ್ಮ ವಿವಾದವನ್ನು ಸಂಧಾನದ ಮೂಲಕವೇ ಬಗೆಹರಿಸಬೇಕೆಂಬುದು ಪಾಶ್ಚಾತ್ಯ ರಾಷ್ಟ್ರಗಳ ಅಂಬೋಣ. ಆದರೆ, ಜಗತ್ತಿಗೆ ಜಗತ್ತೇ ಗೋವೆಯನ್ನು ಪೋರ್ಚುಗೀಸ ವಸಾಹತೆಂದು ಕರೆಯುತ್ತಿರುವಾಗ ತನ್ನ ಸಾಗರೋತ್ತರ ಪ್ರಾಂತ್ಯವೆಂಬ ವಿಚಿತ್ರ ಹೆಸರಿಂದ ಅದನ್ನು ಉಳ್ಳೇಬಿಸಿ, ಸತ್ಯನ್ಯಾಯ ಧರ್ಮಗಳಿಗೆ ಮಸಿಯೆರಚುವ ಸಾಹಸ ತೋರಿದ ಪೋರ್ಚುಗಲ್‌ನ ಅವಿವೇಕತನವನ್ನು ತಿದ್ದುವಲ್ಲಿ ಇಂತಹ ರಾಷ್ಟ್ರಗಳು ನಿಷ್ಕ್ರಿಯವೆನಿಸಿದುದು ಸಾಲಝಾರ ಪ್ರಭುವಿನ ಹಠವಾದದ ಹೆಗ್ಗುರುತಾಗಿದೆ. ಗೋವೆಯ ಮೇಲೆ ಸೈನಿಕ ಕಾರ್ಯಾಚರಣೆ ಕೈಗೊಳ್ಳಬೇಕೆಂದು ಭಾರತ ಸರಕಾರದ ಮೇಲೆ ಪ್ರಜೆಗಳ ಒತ್ತಾಯ ಬಲಗೊಳ್ಳುತ್ತಿದ್ದರೂ ನಯದ ಮಾರ್ಗದಲ್ಲಿ ಬ್ರಿಟಿಷ್ ಫ್ರೆಂಚರಂತೆ ಇವರೂ ಹಿಂದೆ ಹೋಗದಿರುವ ಎಂದು ನಂಬಿ ತಾಳ್ಮೆ ವಹಿಸಿದ್ದ ಭಾರತವು ಗೋವಾಗಡಿಯಲ್ಲಿ ಸೈನ್ಯ ಸಂಗ್ರಹವನ್ನು ಕಂಡೂ ಸುಮ್ಮನಿರಬೇಕೆಂದರೆ ಅದು ಅಸಾಧ್ಯವಾಯಿತು. ಗೋವಾಂತಕರಲ್ಲಿ ತಮ್ಮ ಮೇಲೆ ಅತೃಪ್ತಿ ಮೂಡಿದೆಯೆಂದು ಅರಿತ ಪೋರ್ಚುಗಲ್ ಅವರ ಮೇಲೆ ಬಲಪ್ರಯೋಗ—ಪಬ್ಬಾಳಿಕೆಗಳನ್ನು ಮಾಡಿತು. ಇನ್ನೂ ಹೆಚ್ಚಿನ ಸೇನೆಯನ್ನು ಕೂಡಿಹಾಕಿತು; ತತ್ಪರಿಣಾಮ ಯುದ್ಧ ಭೀತಿಯೊಡನೆ ಗೋವಾಂತಕರೂ ಆರ್ಥಿಕವಾಗಿ, ಸಾಮೂಹಿಕವಾಗಿ ಹಿಂಸೆಗೆ ಗುರಿಯಾಗಲೇ ಬೇಕಾಯಿತು. ಪರಿಸ್ಥಿತಿಯು ಕೆಡುವುದನ್ನು ಮನಗಂಡ ಭಾರತವು ತನ್ನ ಸಹೋದರರ ರಕ್ಷಣೆಗಾಗಿ ರಕ್ಷಣಾ ಸೈನ್ಯಪಡೆಯನ್ನು ಒಳಗೆ ಕಳಿಸಲೇ ಬೇಕಾಯಿತು. ಕೊನೆಯ ಗಳಿಗೆಯ ವರೆಗೂ ಸಂಧಾನದ ಬಾಗಿಲನ್ನು ತೆರೆದೇ ಕುಳಿತಿದ್ದ ಭಾರತದ ತಾಳ್ಮೆಗೂ ಮಿತಿಯಿದೆ; ಮತ್ತೂ ತಾಳ್ಮೆ ವಹಿಸುವುದರಿಂದ ಪರಿಸ್ಥಿತಿ ವಿಕೋಪಕ್ಕೆ ಹೋಗುತಿತ್ತು. ಇವನ್ನು ತಪ್ಪಿಸಿ, ಗೋವಾ, ದೀವೂ, ಡಮನ್‌ಗಳ ಭಾರತೀಯರನ್ನು ಸ್ವತಂತ್ರಗೊಳಿಸಿ ತನ್ನ ಸ್ವಾತಂತ್ರ್ಯದ ಸೀಮೆಯನ್ನು ಮುಟ್ಟಿತು. ಇದು ಅನಿವಾರ್ಯವಾಗಿತ್ತು; ಅತ್ಯವಶ್ಯವಾಗಿತ್ತು.

ಆದಷ್ಟು ಅಲ್ಪ ಹಾನಿಗಳಿಂದ ಭಾರತೀಯ ಸೇನೆಯು ಗೋವೆಯನ್ನು ತನ್ನ ವಶಕ್ಕೆ ತಂದಿತು. ಭೂ, ವಾಯು ಮತ್ತು ನೌಕಾ ಸೇನೆಗಳು ಹಿತಮಿತಗಳನ್ನು, ಉಚಿತಾನುಚಿತತೆಗಳನ್ನು ಅರಿತು ಬಲ ಪ್ರಯೋಗ ಮಾಡಿದುವು; ವಿಜಯಗಳಿಸಿದುವು. ಇದಕ್ಕಾಗಿ ನಮ್ಮ ಸೇನೆಯನ್ನು ನಾವು ಅಭಿನಂದಿಸಬೇಕಾಗಿದೆ. ಶರಣಾಗತರಾದ ಪೋರ್ಚುಗೀಸ ಸೈನಿಕರನ್ನೂ ಅಧಿಕಾರಿಗಳನ್ನೂ ಗೌರವಯುತವಾಗಿ ನಡೆಸಿಕೊಳ್ಳುವಲ್ಲಿ ನಮ್ಮ ಸೇನೆಯು ತಪ್ಪಲಾರದೆಂದೂ ಭಾರತೀಯ ಸೇನೆಯ ಸತ್ಪರಂಪರೆಯನ್ನದು ಮೀರಲಾರದೆಂದೂ ವಿಶ್ವಾಸವಿಡಬಹುದು. ಸತ್ಯ ಧರ್ಮವಿರುವಲ್ಲಿ ವಿಜಯ ಖಂಡಿತವಾದುದರಿಂದಲೇ ಪೋರ್ಚುಗೀಸರು ಕೊನೆಯ ಗಳಿಗೆಯಲ್ಲಿ ಅಸಹಾಯಕರಾಗಿಹಿಂಜಿದು ಶರಣಾಗತರಾಗಬೇಕಾಯಿತು. ಸ್ವಯಂ ಪೋರ್ಚುಗೀಸರಾದರೂ ತಾವು ಆಜಂದ್ರಾರ್ಕವಾಗಿ ಇಲ್ಲಿ ನೆಲೆ ನಿಲ್ಲುವುದು ಸಾಧ್ಯವಿಲ್ಲವೆಂದು ಅರಿತಿದ್ದರು; ತಮ್ಮ ಕಣ್ಣ ಮುಂದೆ, ಬ್ರಿಟನ್, ಫ್ರಾನ್ಸ್, ಅಮೆರಿಕಗಳು ವಸಾಹತುಗಳಿಗೆ ಸ್ವಾತಂತ್ರ್ಯವನ್ನು ನೀಡುತ್ತಿರುವುದನ್ನು ಕಂಡೂ ಕುರುಡರಂತೆ ವರ್ತಿಸುವ ಸಾಲಝಾರರ ಮನೀಷೆಯೇನಿತ್ತೋ ಅವರೂ ಅರಿತಿರಲಾರರು. ಭಾರತವು ಶಕ್ತಿ ಪ್ರಯೋಗ ಮಾಡುವುದಿಲ್ಲವೆಂಬ ನಿಶ್ಚಯದಿಂದಲೇ. ಅವರು ಮೈ ಮರೆತಿದ್ದರೂ ಇರಬಹುದು ಭಾರತದ ದೃಢನಿಲುವು ಮತ್ತು ಅದರ ಸತ್ಯತೆಗಳನ್ನಾದರೂ ಅರಿತು ಕೊನೆಯಗಳಿಗೆಯಲ್ಲಿಯಾದರೂ ಅವರು ಗೋವಾ ಬಿಟ್ಟು ಹೋಗುವ ಘೋಷಣೆಮಾಡಬೇಕಿತ್ತು. ಆದರೆ, ದೈವದ ಇಚ್ಛೆ ಬೇರೆಯಿತ್ತು ಯೆನೇ ಇದ್ದರೂ ಭಾರತದ ಗುರಿ ಈಡೇರಿತು. ಗೋವೆಯಲ್ಲಿನ ಅಧಿಕಾರವೀಗ ಭಾರತೀಯ ದಂಡಿನಡಿಯಿದ್ದರೂ ನಾಗರಿಕರ ಹಿತ ಚಿಂತನೆ ಸರಿಯಾಗಿ ನಡೆಯುವ ವ್ಯವಸ್ಥೆ ಈಗಾಗಲೇ ನಡೆದಿದೆ, ಗೋವಾಂತಕ ಭಾರತೀಯರ ಸಂಯುಕ್ತ ಸಹಕಾರ, ಪ್ರಧಾನಿ ಹಾಗೂ ಸಂರಕ್ಷಣಾ ಮಂತ್ರಿಗಳ ಅಚಲ ನಿರ್ಧಾರಗಳು ಸ್ಮರಣಾರ್ಹ.

ಕಾರವಾರದ ವಿನುಗಾರ ಕಾಥರೀಕರನ ಮೇಲೆ ಅನ್ಯಾಯವಾಗಿ ಗುಂಡೆಸೆದು ಪೋರ್ಚುಗೀಸರು ಮಾಡಿದ ಪಲ್ಲೆಯಿಂದ ರು. ಸ್ವಾತಂತ್ರ್ಯಾನಂತರ, ನೆಹರು ನಾಯಕತ್ವದಲ್ಲಿ ಭಾರತ ಬಲಿಷ್ಠ ರಾಷ್ಟ್ರವಾಗಿ ಬೆಳೆದು ಬರುತ್ತಿದೆಯೆಂಬುದಕ್ಕೆ ಇದೊಂದು ಸಾಕ್ಷಿ. ನೆಹರೂ ಎಂದರೆ ಭಾರತವೆಂಬ ಮಾತು ಖಂಡಿತ ಅರ್ಥವತ್ತಾಗಿದೆ.

ಸೇನಾನಾಯಕರು

ಭಾರತೀಯ ಶಾಂತಿಸ್ತ್ರಿಯ ಸರಕಾರದ ಉದ್ದೇಶ ಮತ್ತು ನೀತಿಯನ್ನು ಸರಿಯಾಗಿ ಅರ್ಥಮಾಡಿಕೊಂಡು, ಅದನ್ನು ಸೈನಿಕ ಕಾರ್ಯಾಚರಣೆಯಲ್ಲಿಯೂ ಅಳವಡಿಸಿಕೊಂಡ ಗೌರವ ಜೌಧರಿ, ಕಾಂಡೇಯ, ಸೋಮಣ್ಣಮೊದಲಾದ ನಮ್ಮ ಭೂ ವಾಯು ಜಲಸೇನೆಯ ಕಾರ್ಯಕರ್ತರಿಗೆ ಸಲ್ಲ ಜೇಕು. ವಿಭಾಗದ ಪ್ರಧಾನರಾದ ಧಾಸರ್, ಇಂಜಿನಿಯರ್, ಕರಾಂಯವರೂ ಪ್ರಶಂಸೀಯರೇ. ಇವರಂತೆಯೇ ನಿಷ್ಠಾವಂತ ಸೈನಿಕರನ್ನು ಮರೆಯುವುದು ಸಾಧ್ಯವೇ ಇಲ್ಲ. ಕೇವಲ ೩೬॥ ತಾಸುಗಳಲ್ಲಿಯೇ ಶಾಂ ವರ್ಷಗಳ ದಾಸ್ಯ ಬಂಧನದಿಂದ ಸಹೋದರರನ್ನು ಮುಕ್ತಗೊಳಿಸಿದ ಯಶಸ್ಸು ಇವರಿಗೆ ಸಲ್ಲುತ್ತದೆ. ಸೇನೆಯು ತನ್ನ ಘನತೆ—ಗೌರವಗಳನ್ನು ಮುಂದಕ್ಕೂ ಉಳಿಸಬೇಕು; ಅನ್ಯಾಯ, ಅಸತ್ಯ, ಅಧರ್ಮಗಳ ವಿರುದ್ಧ ಹೋರಾಡಲು ಕಂಕಣ ಬದ್ಧವಾಗ ಬೇಕು.

ಲಾರ್ಡ್ ಹೋಮ್

ನಾಟೊ ಸದಸ್ಯರಾಷ್ಟ್ರ ಪೋರ್ಚುಗಲ್‌ನ ವಸಾಹತು ಗೋವೆಯ ಮೇಲೆ ಭಾರತವು ಸೇನೆಕಳುಹಿಸಿದರೆ ಬ್ರಿಟನ್ನಿನ ನಿಲುಮೆಯೇನು ಎಂಬ ಪ್ರಶ್ನೆಗೆ ಧಾಳನಡೆದ ನಂತರವೇ ವಿದೇಶ ಸಂಬಂಧದ ಕಾರ್ಯದರ್ಶಿ ಲಾರ್ಡ್‌ಹೋಮರು ಸ್ಪಷ್ಟವಾಗಿ ಉತ್ತರ ಕೊಟ್ಟರು. ಮೊದ ಮೊದಲು ಈ ವಿಷಯದಲ್ಲಿ ಯಾವ ನಿರ್ದಿಷ್ಟ ನಿಲುಮೆಯಿರಲಿಲ್ಲವೆಂದೂ ಅರಿವಾಗುತ್ತದೆ. ಸೈನ್ಯ ಪ್ರೇಷಣೆಯನ್ನು ಬ್ರಿಟನು ನಿಷೇಧಿಸುವುದಾದರೂ ಪೋರ್ಚುಗಲ್ಲಿನ ಸಹಾಯಕ್ಕೆ ಬರಲಾರದೆಂದೂ ಅವರು ನುಡಿದಿದ್ದಾರೆ. ಆದರೆ, ಪೋರ್ಚುಗೀಸ ಸೈನಿಕ ಪಡೆಯನ್ನು ಹೇರಿದ್ದ ಹಡಗವೊಂದನ್ನು ಜಿಬ್ರಾಲ್ಟರಿನಲ್ಲಿ ಪ್ರವೇಶಮಾಡಲು ಬಿಟ್ಟದ್ದು ಅದರ ವಿಚಿತ್ರ ವರ್ತನೆಯನ್ನಿಸುತ್ತದೆ. ಸದ್ಭದ್ರತಾ ಸಮಿತಿಯ ಮುಂದಿರುವ ಪೋರ್ಚುಗಲಿನ ದೂರು ಯಾವ ರೀತಿಯ ಪರಿಣಾಮ ಬೀರುವುದೆಂದೂ ಗೋವಾ ವಿಜಯದ ಮೇಲೆ ಜಾಗತಿಕ ಪ್ರತಿಕ್ರಿಯೆ ಯೇನೆಂದೂ ನೋಡಬೇಕಾಗಿದೆ.

ಅಧ್ಯಕ್ಷ ನಸ್ಸೇರ್

ಬ್ರಿಟಿಷರು ದ್ವಿಮುಖ ಧೋರಣೆಯಿಂದ ಪೋರ್ಚುಗೀಸ್ ಹಡಗನ್ನು ಜಿಬ್ರಾಲ್ಟರ್ ಹಾಯಲು ಬಿಟ್ಟರೂ ಅದನ್ನು ಸಯೇಜದಲ್ಲಿ ತಡೆದು ನಿಲ್ಲಿಸಿದ ಕೀರ್ತಿ ಅಧ್ಯಕ್ಷ ನಸ್ಸೇರರಿಗೆ ಸೇರಬೇಕು. ವಸಾಹತುವಾದದ ಖಟ್ಟಾ ವಿರೋಧಿ ನಸ್ಸೇರರು ಭಾರತದ ಕ್ರಮವನ್ನು ಸಮರ್ಥಿಸಿದುದಲ್ಲದೆ ಅದಕ್ಕೆ ಅವ್ಯಕ್ತ ಸಹಾಯವನ್ನೂ ಸಲ್ಲಿಸಿದ್ದಾರೆ. ಇದಕ್ಕಾಗಿ ಭಾರತೀಯ ಜನತೆ ಅವರಿಗೆ ಕೃತಜ್ಞವಿದೆ.

ಸಿಲೋನಿನ ನಾಜಸರಣಿ

ಸೈನಿಕ ಪಡೆಗಳ ಚಲನವಲನವನ್ನು ಪ್ರತಿಪೇಧಿಸಿ ಸಿಲೋನು ಕೂಡ ಭಾರತಕ್ಕೆ ಸಹಾನುಭೂತಿ ತೋರಿಸಿದೆ. ಸಂಯುಕ್ತ ರಾಷ್ಟ್ರ ಸಂಘದ ಭದ್ರತಾ ಮಂಡಲದಲ್ಲಿ ಪೋರ್ಚುಗೀಸರ ದೂರಿನ ಬಗ್ಗೆ ಚರ್ಚೆ ನಡೆದಾಗ, ಸಿಲೋನು ಮೂರ್ಮಿಕವಾಗಿ ಮಾತಾಡಿ, ಭಾರತದ ಕಾರ್ಯಕ್ರಮವು ಅನಿವಾರ್ಯ ಮತ್ತು ನ್ಯಾಯಬದ್ಧವೆಂದು ವಾದಿಸಿತು.

ಜಗತ್ಪರ್ಯಟನನ

ಅದರ್ಶನಾಯಕ—ನೆಹರು

ಅಶಾಂತಿಯಲ್ಲಿಯೂ ಶಾಂತಿ ಸ್ಥಾಪಿಸಬೇಕೆನ್ನುವ ಪಂಡಿತ ನೆಹರು ಗೋವಾ ವಿಮೋಚನಾ ಕಾರ್ಯದಲ್ಲಿ ದೃಢ ಧೋರಣೆಯುಳ್ಳವರಾದುದು ವಿದೇಶೀಯರಿಗೆ ವಿಸ್ಮಯವನ್ನುಂಟು ಮಾಡಿದೆ. ಪಾಶ್ಚಾತ್ಯ ರಾಷ್ಟ್ರಗಳು ಇವರ ಮೇಲೆ ಟೀಕೆಯ ಸುರಿಮಳೆಯನ್ನೇ ಸುರಿಸಿದುವು. ಈ ಮಳೆಯ ಹಿಂದೆ ಕೃತಕತೆಯೆಷ್ಟಿದೆಯೆಂದು ಮಾತ್ರ ಹೇಳುವುದಕ್ಕಾಗುವುದಿಲ್ಲ. ಆದರೆ, ಭಾರತೀಯರ ದೃಷ್ಟಿಯಲ್ಲಿ ನೆಹರು ಪ್ರಶಂಸಾರ್ಹರೆನಿಸಿದ್ದಾರೆ. ಭಾರತದಲ್ಲಿ ಏನಿದೆ, ಅದರಿಂದ ಏನು ಸಾಧ್ಯವೆಂಬ ಪ್ರಶ್ನೆಗಳಿಗೆ ಭಾರತೀಯರು ಮಾತ್ರವಲ್ಲ, ವಿಶ್ವದ ಎಲ್ಲ ನಾಗರಿಕರೂ ಉತ್ತರವನ್ನೀಗ ಅರಸಬಲ್ಲರು.

ಈ ಪ್ರಕರಣ ಉಲ್ಬಣಗೊಂಡುದನ್ನು ನಾವು ಅವಶ್ಯ ಗಮನಿಸಬೇಕು. ವಿನುಗಾರನ ಬಲಿದಾನದೊಡನೆಯೇ ಗೋವಾ ವಿಮೋಚನೆಗೆ ನಾಂದಿಯಾಡಲಾಯಿತು. ಎಂತಲೇ ಈ ನವ್ಯ ಭಾರತದ ನಿಜಯದ ತಿಲಕ ಈ ವಿನುಗಾರನಿಗೆಸಲ್ಲಬೇಕಾಗಿದೆ. ಇವನನ್ನೂ ನಮ್ಮ ವಿಮೋಚನಾ ಸೇನೆಯಲ್ಲಿ ದೇಶಕ್ಕಾಗಿ ದೇಹ ಸವೆಸಿ ಅಮರರಾದವರನ್ನೂ ನಾವು ಮರೆಯಬಾರದು. ಗೋವಾ ವಿಮೋಚನೆಯು ಪೋರ್ಚುಗೀಸರ ಮತ್ತಿತರ ವಸಾಹತುಗಳ ಮುಕ್ತಿಗೂ ಪ್ರೇರಕವಾಗಿ ದಸಾವತುವಾದವು ನಿರ್ನಾಮವಾಗಲಿ; ಸಾಲಝಾರ ಪ್ರಭುವಿಗೆ ನವಯುಗದ ಸಂದೇಶವೇನೆಂಬುದರ ಮನವರಿಕೆ ಇನ್ನಾದರೂ ಆಗಲಿ.

ಥಾಂಟುರವರ ಕಾರ್ಯದಕ್ಷತೆ

ಕಟಾಂಗದ ಶೋಂಬೆಯನವರು ಬ್ರಿಟನ್-ಫ್ರಾನ್ಸ್‌ಗಳ ಅವ್ಯಕ್ತ ಉತ್ತೇಜನದಿಂದ ಸಂ. ರಾ. ಸಂಘದ ಪಡೆಯುಮೇಲೆ ಯುದ್ಧ ಸಾರಿದರೂ, ತಾತ್ಕಾಲಿಕಪ್ರಧಾನ ಕಾರ್ಯದರ್ಶಿ ಥಾಂಟುರವರಜಾಣಾಕ್ಷತೆಯಿಂದ ನಿಷ್ಕ್ರಿಯವೆಂಬಂತಾಗಿದ್ದಾರೆ. ಅಲ್ಲಿರುವ ಭಾರತೀಯ ಪಡೆಯು ತನ್ನ ಧರ್ಮ—ನೀತಿ—ವೀರ್ಯಗಳಿಂದ ಶಾಂತಿಪ್ರಿಯ ರಾಷ್ಟ್ರಗಳ ಮೆಚ್ಚುಗೆ ಗಳಿಸಿದೆ. ಅಮೆರಿಕೆ—ಬ್ರಿಟನ್‌ಗಳ ನಡುವೆ ಕಟಾಂಗ ಸಂಬಂಧದಲ್ಲಿ ಭಿನ್ನಾಭಿಪ್ರಾಯ ಹುಟ್ಟಿದುದರ ಪರಿಣಾಮವಾಗಿ ಬ್ರಿಟನ್ ಅಪಮಾನಿತವಾಗಿದೆ. ಇದೇ ಕಾರಣದಿಂದ ಕಟಾಂಗದ ಅಧ್ಯಕ್ಷರೆನಿಸಿದ ಶೋಂಬೆಯವರು ಥಾಂಟುರವರ ಹೇಳಿಕೆಯಂತೆ ಕಾಂಗೋ ಪ್ರಧಾನಿಯಾದ ಶ್ರೀ ಅಡೌಲರನ್ನು ಕಾಣಲು ಒಪ್ಪಿಕೊಂಡರು. ಒಮ್ಮೆ ಪಲಾಯನ ಸೂತ್ರ ಹಿಡಿದ ಶೋಂಬೆ ಮರುದಿನ ಕಾಣಿಸಿಕೊಂಡಂತೆ ಅವರ ಈ ರೀತಿಯ ಸೌಮ್ಯ ಧೋರಣೆ ರಾಜಕೀಯದುದ್ದೇಶದಿಂದ ಪ್ರೇರಿತವಾಗಿಲ್ಲವೆಂದು ನಂಬುವುದು ಕಷ್ಟಸಾಧ್ಯ. ಆದರೂ ಹೆಮ್ಮರ್‌ಶಿಲ್ಡರ ನಂತರ ಅವರ ರಿಕ್ತ ಸ್ಥಾನಾಪನ್ನರಾದ ಥಾಂಟುರವರು ತಮ್ಮದ ಕ್ಷತೆಯಿಂದ ಯಾವ ಅನಾಹುತಗಳನ್ನೂ ನಡೆಯಗೊಡರೆಂದು ನಂಬಬಹುದು; ಥಾಂಟುರವರ ಬಗ್ಗೆ ಲೋಕಾಭಿಪ್ರಾಯ ಉತ್ತಮಗೊಳ್ಳುತ್ತಿದೆ; ಸಂ. ರಾ. ಸಂಘದ ಕೀರ್ತಿ ಘನತೆಯೇರುತ್ತಿದೆ.

— ——

ಅಲ್ಲಲ್ಲಿಯ ಸುದ್ದಿಸಾರ

ಭುವನೇಂದ್ರ—ಸಿಂಡಿಕೇಟ್ ಪೆಂಡ್ಯಾಟಗಳ ಉದ್ಘಾಟನೆಯು ತಾ. 17 ರಂದು ಉಡುಪಿಯ ವಿಕ್ಟೋರಿಯ ಜುಬಿಲೀ ಯೂನಿಯನ್ ಕ್ಲಬ್ಬಿನಲ್ಲಿ ಡಾ| ಟಿ. ಎಂ. ಎ. ಪೈಯವರಿಂದ ಉಡುಪಿ ಲಾ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಎಸ್. ಎಸ್. ಕೃಷ್ಣಮೂರ್ತಿಯವರ ಅಧ್ಯಕ್ಷತೆಯಲ್ಲಿ ನೆರವೇರಿಸಲ್ಪಟ್ಟಿತು. ಶ್ರೀ ಕೆ. ಕೆ. ಪೈಯವರು ಸ್ವಾಗತಿಸಿದ ಬಳಿಕ ಶ್ರೀ ಡಿ ಎಸ್. ಸೋಮಸುಂದರ ಅವರು ಸಂದೇಶ ವಾಚನ ಮಾಡಿದರು. ಡಾ| ಪೈಗಳು ಭಾಷಣ ಮಾಡಿ, ಪಂದ್ಯಾಟಗಳನ್ನು ಉದ್ಘಾಟಿಸಿದ ಮೇಲೆ ಶ್ರೀ ಎನ್. ವಿ. ಕಾಮತರು ಧನ್ಯವಾದಗಳನ್ನಿತ್ತರು. ಬಳಿಕ ಉದ್ಘಾಟಿಸಿದ ಪಂದ್ಯಾಟಗಳಾಗಿ ಹೆಂಗಸರ ಚೆಂಡೆಸೆತ, ಗಂಡಸರ ಪೋಲಿಬೋಲ್ ಜರಗಿದವು.

ಪಾರ್ಲಿಮೆಂಟಿಗೆ ಹ್ರೀ| ಬಾಬಣಿ ಕೇಷಗಿರಿ ಪೈಯವರ ಉಮೇದ್ವಾರಿಕೆ—ವೇದ ಮತ್ತು ಮಹಾ ಭಾರತಗಳನ್ನು ಸಂಸ್ಕೃತ ಮೂಲದೊಂದಿಗೆ ಇಂಗ್ಲಿಷ್, ಕನ್ನಡ ಮತ್ತು ಕೊಂಕಣಿ ಭಾಷೆಗಳಲ್ಲಿ ಸಂಪಾದಿಸಿದವರೂ, ಇಲೆಕ್ಟ್ರಿಕಲ್ ಇಂಜಿನಿಯರ್ ಮತ್ತು ಇರೆಕ್ಟ್ರಿಕಲ್ ಇಂಜಿನಿಯರಿಂಗ್‌ನ ಪ್ರೊಫೆಸರರೂ, ವೇದಗಳನ್ನು ಪ್ರಕಟಿಸುತ್ತಿರುವ ಲಕ್ಷ್ಮಣ ಬಾಬಣಿ ಪೈ ಮೆನೇರಿಯಲ್ ಪಬ್ಲಿಕೇಷನ್ಸ್, ಹುಬ್ಬಳ್ಳಿ, ಮಣಿಪಾಲ ಮತ್ತು ಅಂಕೋಲ ಇವರ ಮೆನೇಂಟಿಂಗ್ ಪ್ರೊಪ್ರೈಟರರೂ ಆದ ಉತ್ತರ ಕನ್ನಡದ ಅಂಕೋಲೆಯ ಮತಕೇರಿಯ ಪ್ರೊಫೆಸರ್ ಬಾಬಣಿ ಕೇಷಗಿರಿ ಪೈಯವರು ಒಬ್ಬ ಸ್ವತಂತ್ರ ಉಮೇದ್ವಾರಿಯಾಗಿ ಕೆನರಾ (ಉತ್ತರ) ಕ್ಷೇತ್ರದಿಂದ 1962ರ ಜನವಾಣಿಯಲ್ಲಿ ಪಾರ್ಲಿಮೆಂಟಿನ ಸ್ಥಾನಕ್ಕೆ ಪ್ರಥಮ ಬಾರಿಯಾಗಿ, ಸ್ಪರ್ಧಿಸುತ್ತಾರೆಂದೂ, ಪುಸ್ತಕವೇ ಇವರ ಜನವಾಣಿ ಚಿಹ್ನೆ ಎಂದೂ ಆ ಕ್ಷೇತ್ರದ ಮತದಾರರು ಮತಗಳನ್ನಿತ್ತು ತನ್ನನ್ನು ಆರಿಸಬೇಕೆಂದೂ ಅವರ ವಿನಂತಿಯಿದೆ. ಜಿಲ್ಲೆಯ ಜನತೆ ಪರವಾಗಿ ಪಾರ್ಲಿಮೆಂಟಿನಲ್ಲಿ ಪ್ರತಿನಿಧೀಕರಿಸಿ ಕೆಲಸಮಾಡುವುದು, ಜನಸಾಮಾನ್ಯರ ಜೀವನ ಮಟ್ಟವನ್ನು ಉನ್ನತೀಕರಿಸಲು ಹೊಡ್ಡ, ಸಣ್ಣ ಮತ್ತು ಗೃಹ ಕೈಗಾರಿಕೆಗಳನ್ನು ಸ್ಥಾಪಿಸುವುದು, ಜಿಲ್ಲೆಯ ಜನರ ಸಾಂಸ್ಕೃತಿಕ ಮಟ್ಟವನ್ನೂ ವಿದ್ಯಾಸಂಸ್ಥೆಗಳನ್ನು ಸ್ಥಾಪಿಸಿ ವಿದ್ಯಾಮಟ್ಟವನ್ನೂ ಉನ್ನತೀಕರಿಸುವುದು ಮತ್ತು ಜಿಲ್ಲೆಯ ಸರ್ವಾಂಗೀಣ ಅಭಿವೃದ್ಧಿಗೆ ಪ್ರಯತ್ನಿಸುವುದೇ ಇವರ ಉದ್ದೇಶವಾಗಿದೆ. ಜನವಾಣಿ ಪ್ರಚಾರ ನಿಧಿಗೆ ಯಾವತ್ತೂ ಸಹಾಯವನ್ನು ಕೃತಜ್ಞತಾ ಪೂರ್ವಕ ಸ್ವೀಕರಿಸುವರು. ಅವರ ಸದ್ಯದ ವಿಳಾಸ: ಪ್ರೊಫೆಸರ್ ಲಕ್ಷ್ಮಣ ಬಾಬಣಿ ಪೈ, ಮಣಿಪಾಲ.

ಹೊಸ ಕಾರ್ಯಕಾರಿ ಮಂಡಳಿ—ಶಿವಮೊಗ್ಗ, 17-12-1961 – ದ. ಕ. ಜಿಲ್ಲಾ ಶಿವಮೊಗ್ಗ ಬಂಟರ ಯಾನೆ ನಾಡವರ ವಿದ್ಯಾವರ್ಧಕ ಸಂಘದ ವಿಶೇಷ ಮಹಾ ಸಭೆಯು ಶ್ರೀ ಎಸ್. ಸದಾಶಿವ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿ ಸಂಘದ ಸ್ಥಿತಿಯನು ತಿದ್ದುಪಡಿಗಳನ್ನು ಮಾಡಲಾಯ್ತಲ್ಲದೆ ಚಾಲ್ತಿ ವರ್ಷಕ್ಕೆ ಶ್ರೀಗಳಾದ ನಾಗಪ್ಪ ಶೆಟ್ಟಿ (ಅಧ್ಯಕ್ಷ), ಎಸ್. ಸದಾಶಿವ ಹೆಗ್ಡೆ (ಉಪಾಧ್ಯಕ್ಷ), ಕೆ. ವಾಸುದೇವ ಶೆಟ್ಟಿ (ಕಾರ್ಯದರ್ಶಿ), ಕೆ. ಜಗನ್ನಾಥ ಶೆಟ್ಟಿ (ಉಪಕಾರ್ಯದರ್ಶಿ), ಬಿ. ಜಯರಾಮ ಶೆಟ್ಟಿ, (ಕೋಶಾಧಿಕಾರಿ), ಮತ್ತಿತರ ಸದಸ್ಯರಿರುವ ಕಾರ್ಯಕಾರಿ ಮಂಡಳಿಯ ಆಯ್ಕೆಯಾಯಿತು. ಪರಿಶೀಲಿಸಲ್ಪಟ್ಟ ಲೆಕ್ಕಪತ್ರಗಳ ಸರಿಯೋಚನೆ ಮತ್ತು ಮಂಜೂರಾತಿ ಆದ ಅನಂತರ ಇಸಾಬೇಲ ಶೆಟ್ಟಿ ಧನ್ಯವಾದವನ್ನರ್ಪಿಸಿದರು.

ಪರೀಕ್ಷಾ ಫಲಿತಾಂಶ—ಮೈಸೂರು ಸರಕಾರದ ವತಿಯಿಂದ ಕಳೆದ ಅಕ್ಟೋಬರ ತಿಂಗಳಲ್ಲಿ ಜರಗಿದ ಪ್ರಥಮ ಡಿ. ಎಸ್ ಎ. ಸಿ. ಪರೀಕ್ಷೆಗೆ ಉಡುಪಿ ಆಯುರ್ವೇದ ಕಾಲೇಜಿನಿಂದ ಕುಳಿತ. 5 ಮಂದಿ ಉಮೇದ್ವಾರರಲ್ಲಿ 4 ಮಂದಿ ಅಂದರೆ ಸೇಕಡಾ 80ರಷ್ಟು ತೇಗಡೆ ಹೊಂದಿರುತ್ತಾರಾಗಿ ಕಾಲೇಜಿನ ಪ್ರಿನ್ಸಿಪಾಲರು ತಿಳಿಸುತ್ತಾರೆ.

ಜಿಲ್ಲಾ ಬಂಟರ ಯಾನೆ ನಾಡವರ ಸಂಘದ ಮಹಾಸಭೆಯು ಇದೇ ತಾ 17ರಂದು ಉಡುಪಿ ಶ್ರೀಕೃಷ್ಣಮಠದ ವಿದ್ಯಾರ್ಥಿಭವನದ ವರಾಂಡದಲ್ಲಿ ಸುಸಜ್ಜಿತವಾಗಿ ನಿರ್ಮಿಸಿದ ಸಭಾ ಮಂಟಪದಲ್ಲಿ ಡಾ ಕೆ. ಮಂಜುನಾಥ ರೈಯವರ ಅಧ್ಯಕ್ಷತೆಯಲ್ಲಿ ಜರಗಿತು ಸ್ವಾಗತಾಧ್ಯಕ್ಷ ಶ್ರೀ ಬಿ ಶೀನಪ್ಪ ಹೆಗ್ಡೆಯವರು ಸ್ವಾಗತ ಭಾಷಣಮಾಡುತ್ತಾ ಡಾ ರೈಗಳ ಸಂಸಾರಿಸಿದ ಗಣನೀಯ ಸ್ಥಾನಮಾನಗಳನ್ನು ವಿವರಿಸಿ, ಸ್ಥಳೀಯ ವಿದ್ಯಾರ್ಥಿ ಭವನದ ಜೀರ್ಣೋದ್ಧಾರಕ್ಕೆ ಸ್ವಜಾತಿ ಬಾಂಧವರ ಮತ್ತು ಸಂಘದ ಸಹಕಾರವನ್ನು ಕೋರಿದರು. ಶ್ರೀ ಕೆ. ಸುಂದರರಾಮ ಶೆಟ್ಟರು ಸಂದೇಶಗಳನ್ನೋದಿದರು ಅಧ್ಯಕ್ಷ ರೈಗಳು ತನ್ನ ಭಾಷಣವನ್ನು ಓದಿದರು (ಇದನ್ನು ಬೇರೆ ಕಡೆ ಪ್ರಕಟಿಸಲಾಗಿದೆ) ಸಂಘದ ಮತ್ತಿತ್ತರ ವರದಿಗಳನ್ನು ಶ್ರೀಗಳಾದ ಕೆ. ಸುಂದರರಾಮ್ ಶೆಟ್ಟಿ ಪಿ. ಎಸ್. ತಿಮ್ಮಪ್ಪ ಶೆಟ್ಟಿ, ಎಚ್. ಡಾಸಣ್ಣ ಅಳ್ವ, ಎ. ವಿಟ್ಟಲ ಸೂಂಜ, ಮೂಲ್ಕಿ ರಾಮಣ್ಣ ಶೆಟ್ಟಿ, ಪಿ. ಎಸ್. ಹೆಗ್ಡೆಯವರು ಓದಿದ ಬಳಿಕ ಮಂಜೂರು ಮಾಡಲಾಯಿತು ಸಂಘದ ಅಧ್ಯಕ್ಷ ರಾಮಾಬಳಿಕ್ಕೆಯ ಕೆ. ಟಿ. ಅಳ್ವರು ಪ್ರಾತನಾದಿ ಎ ಬಿ ಶೆಟ್ಟಿ ಸ್ಮಾರಕ ನಿಧಿಯ ಕುರಿತು ಪ್ರಸ್ತಾಪಿಸಿ ಜನವರಿ 6ಕ್ಕೆ ಎ ಬಿ. ಶೆಟ್ಟರ ಶಿಲಾಪ್ರತಿಮೆಯ ಅನಾವರಣ ಮಾಡುವ ವಿಚಾರವನ್ನೂ ತಿಳಿಸಿದರು. ಸದಸ್ಯರುಗಳಲ್ಲಿ ಶ್ರೀಗಳಾದ ಕೆ. ಸುಬ್ಬಣ್ಣ ಪಕಳ, ಬಿ ರಾಮೀಂದ್ರ ಹೆಗ್ಡೆ, ಬಿ ನಾರಾಯಣ ಶೇಕ, ಪಿ. ಎಸ್. ತಿಮ್ಮಪ್ಪ ಶೆಟ್ಟಿ, ಕೆ ಸುಂದರರಾಮ ಶೆಟ್ಟಿ, ಎಂ ಎನ್. ಚಾಟಿ, ಡಾ ಬಿ. ಬಿ. ಶೆಟ್ಟಿ ಮೊದಲಾದವರು ಪ್ರಾತನಾದಿ ಸಲಹೆ ಸೂಚನೆಗಳನ್ನಿತ್ತರು. ಬಳಿಕ ಅಡಳಿತೆ ಕಮಿಟಿಯ ಆಯ್ಕೆ ನಡೆಯಿತು. ಅಧ್ಯಕ್ಷರು ಸಮಾರೋಪ ಭಾಷಣ ಮಾಡುತ್ತಾ ಸಾರಿಗೆ ಸೌಕರ್ಯಗಳಿಲ್ಲದ ಹಿಂದಿನ ದಿನಗಳ ಮಹಾಸಭೆಗಳು ಉತ್ಸಾಹಪರ ವಾತಾವರಣದಲ್ಲಿ ವೈಭವದಿಂದ ಜರಗುತಿದ್ದುವೆಂದೂ, ಇಂದು ಅಂತಹ ಉತ್ಸಾಹ ತೋರದಿರುವುದು ವಿಷಾದಕರವೆಂದೂ ಸ್ಥಾಪಕರ ಉದ್ದೇಶಕ್ಕನುಗುಣವಾಗಿಯೂ ಇಂದಿನ ಪರಿಸ್ಥಿತಿಗನುಗುಣವಾಗಿಯೂ ಸಂಘದಲ್ಲಿಯೂ ವಿದ್ಯಾರ್ಥಿ ಭವನಗಳಲ್ಲಿಯೂ ಯುಕ್ತ ವ್ಯವಸ್ಥೆಯಾಗಿ ನವಚೇತನವುಂಟಾಗುವಂತಾಗಬೇಕೆಂದೂ ಡಾ. ಬಿ. ಬಿ. ಶೆಟ್ಟಿಯವರ ಉತ್ಸಾಹದಿಂದ ಇಲ್ಲಿಯ ಭವನದಲ್ಲಿ ಹೊಸ ಚೈತನ್ಯ ತೋರಿಬರುವುದು ಅಭಿನಂದನೀಯವೆಂದೂ ಹೇಳಿದರು. ಶ್ರೀ ಪಿ. ಶಿವಾಜಿ ಶೆಟ್ಟರು ಸರ್ವರಿಗೂ ಧನ್ಯವಾದಗಳನ್ನರ್ಪಿಸಿದರು. ಬಿ ಬಿ. ಶೆಟ್ಟಿ ಮತ್ತು ಶ್ರೀ ಶೀನಪ್ಪ ಹೆಗ್ಡೆಯವರು ಒಟ್ಟಿದರೆ ಉಡುಪಿಯ ಈ ಹಾಸ್ಟೆಲಿನಲ್ಲಿ ಎಷ್ಟೋ ಕೆಲಸಗಳನ್ನು ಸಾಧಿಸಬಹುದೆಂದರು. ಬೆಲ್ಲ ಸಂಘದ ಸರವಾಗಿ ಶ್ರೀ ಸುಂದರರಾಮ ಶೆಟ್ಟರು ಧನ್ಯವಾದವಿತ್ತರು ಆರಂಭದಲ್ಲಿ ಉಪಾಹಾರವಿತ್ತು.

ಕುಟುಂಬ ಯೋಜನಾ ದಿನಾಚರಣೆಯು – ಉಡುಪಿ ಸರಕಾರಿ ಆಸ್ಪತ್ರೆಯ ವರಾಂಡದಲ್ಲಿ ತಾ. 18ರಂದು ಶ್ರೀ ಟಿ. ರಮೇಶ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು ಡಾ ಆರ್. ವಿಟ್ಟಲ ರಾಯರು ಪ್ರಾಸ್ತಾವಿಕ ಭಾಷಣಮಾಡಿ, ಪರದಿಯನ್ನೋದಿದರು. ಶ್ರೀಗಳಾದ ಕು. ಶಿ ಹರಿದಾಸ ಭಟ್ಟ ಎ. ಜೆ ಆಳ್ವ ಡಾ. ಕೆ. ಎಲ್. ಖತಾಳ ಶ್ರೀ ಪಿ ಶೀನ ಶೆಟ್ಟಿ ಇವರು ಕುಟುಂಬ ಯೋಜನೆಯ ಕುರಿತು ಭಾಷಣವಿತ್ತರು ಅಧ್ಯಕ್ಷರ ಭಾಷಣವಾದ ಮೇಲೆ ಧನ್ಯವಾದ ಅರ್ಪಣೆಯಾಯಿತು, ಅಂದು ಬೆಳಿಗ್ಗೆ ಡಾ ಪಿ. ಆರ್. ನ್ಯಾಕರು ವಸ್ತು ಪ್ರದರ್ಶನದ ಅರಂಭೋತ್ಸವವನ್ನು ನೆರವೇರಿಸಿದ್ದರು.

ಯೋಜನಾ ದಿನಾಚರಣೆ— ಉಡುಪಿಯ ಸಮಾಜ ಅಭಿವೃದ್ಧಿ ಕ್ಷೇತ್ರದ ವತಿಯಿಂದ ಯೋಜನಾ ದಿನಾಚರಣೆಯು ತಾ. 18 ರಂದು ಡಾ ಯು ಸುಂದರರಾಮ ಪೈ ಸ್ಮಾರಕ ರಂಗಮಂಟಪದಲ್ಲಿ ಡಾ ಟಿ. ಮಾಧವ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎಂ. ಮಧ್ವರಾಜರು ಸ್ವಾಗತಿಸಿದ ಮೇಲೆ ಶ್ರೀಗಳಾದ ಕು. ಶಿ ಹರಿದಾಸ ಭಟ್ಟ, ಎ. ಜೆ. ಆಳ್ವಯವರು ಉಪನ್ಯಾಸ ಮಾಡಿದರು. ಅಧ್ಯಕ್ಷರ ಭಾಷಣವಾದ ಮೇಲೆ ಮನರಂಜನೆಯ ಕಾರ್ಯಕ್ರಮ ಜರಗಿ ಶ್ರೀ ಎ. ಕೊರಗಪ್ಪರವರಿಂದ ಧನ್ಯವಾದ ಸಮರ್ಪಣೆಯಾಯಿತು

ಪ್ರಶಸ್ತ ವಿದೇಶ ಪರ್ಯಟನ—ಭಾರತದ ಕ್ಷಯರೋಗ ಸಂಸ್ಥೆಯ ಕಾರ್ಯದರ್ಶಿ ಶ್ರೀ ಬಿ. ಎಮ್. ಕಾರ್ಯಪ್ಪನವರು ಕೊಲೊಂಬೊ ಪ್ಲೇನ್ ಫೆಬ್ರವರಿಯಾಂತೆ ಕೆನಡಾದಲ್ಲಿ ಪ್ರಶಸ್ತ ಪರ್ಯಟನ ಮಾಡಿ ಭಾರತಕ್ಕೆ ಹಿಂತಿರುಗಿರುವರು. ಅವರು ಕಳೆದ ಸಪ್ತಂಬರದಲ್ಲಿ ಕೆನಡಾದಲ್ಲಿ ಜರಗಿದ ಅಂತಾರಾಷ್ಟ್ರೀಯ ಕ್ಷಯರೋಗ ಪರಿಷತ್ತಿನಲ್ಲಿ ಭಾಗವಹಿಸಿ, ರಾಷ್ಟ್ರೀಯ ಕ್ಷಯರೋಗ ಸಂಘ ಮತ್ತು ಆದರ ಶಾಖಾ ವ್ಯವಸ್ಥಾಪನೆಗಳಲ್ಲಿ ನಡೆಯುವ ಕಾರ್ಯಚಟುವಟಿಕೆಗಳನ್ನು ಅಧ್ಯಯನಿಸಿದರು. ಅಲ್ಲದೆ ಹಲವು ಟಿ. ಬಿ. ಸಂಸ್ಥೆಗಳನ್ನು ಸಂದರ್ಶಿಸಿ ಕಾರ್ಯಾಕಲಾಪಗಳನ್ನು ಕಂಡುಕೊಂಡರು ಅನೇಕ ರೋಟರಿ ಮತ್ತಿತರ ಸಾಮಾಜಿಕ ಸಂಸ್ಥೆಗಳಲ್ಲಿ ಉಪನ್ಯಾಸವನ್ನಿತ್ತರು. ಮಾತ್ರವಲ್ಲದೆ ಕೆನಡಾ ಸರಕಾರದ ರೇಡಿಯೋ ಮತ್ತು ಟೆಲಿವಿಶುನ್‌ಗಳಲ್ಲಿ ಪ್ರಮುಖ ಭಾಗವಹಿಸಿದರು.

ಶ್ರೀ ಕಾರ್ಯಪ್ಪನವರು ಕ್ಷಯರೋಗ ನಿರೋಧ ಕಾರ್ಯದ ಅಧ್ಯಯನಕ್ಕಾಗಿ ನ್ಯೂಯಾರ್ಕ್ ಪಟ್ಟಣವನ್ನು ಸಂದರ್ಶಿಸಿದ್ದಾರೆ. ಅಲ್ಲಿ ರಾಷ್ಟ್ರೀಯ ಕ್ಷಯರೋಗ ಸಂಘಗಳ ಚಟುವಟಿಕೆಗಳನ್ನು ಸಹಾ ಅಭ್ಯಸಿಸುವ ಸುಯೋಗ ಸದಾ ದೊರಕಿತ್ತು. ಇದೀಗ ಶ್ರೀ ಕಾರ್ಯಪ್ಪನವರು ಕೆನಡಾ ನುತ್ತು ಯುನೈಟೆಡ್‌ಸ್ಟೇಟ್ಸ್‌ನ ಎರಡನೇ ಸಂದರ್ಶನವಾಗಿದೆ.

"ವೃಂದಾವನ"ದ ಉದ್ಘಾಟನೆ—ಕುಂದಾಪುರದಲ್ಲಿ ಶ್ರೀಗಳಾದ ಆಲಂಗಾರ್ ನಾರಾಯ ಹೆಗ್ಡೆ ಮತ್ತು ಕೊಳ್ಳೆಬೈಲ್ ಮಹಾಬಲ ಸೆಟ್ಟರು ಸುಮಾರು 2 ಲಕ್ಷ ರೂ. ವೆಚ್ಚದಲ್ಲಿ ಕಟ್ಟಿಸಿದ "ವೃಂದಾವನ"ವೆಂಬ ಆತ್ಯಾಧುನಿಕ ಭೋಜನ ಹಾಗೂ ವಸತಿಗೃಹದ ಉದ್ಘಾಟನೆಯು ತಾ 17ರಂದು ಪಕೇಲ್ ಶ್ರೀ ಟಿ. ಶಿವರಾಮ ಸೆಟ್ಟರ ಅಧ್ಯಕ್ಷತೆಯಲ್ಲಿ ಮೈಸೂರು ಸರಕಾರದ ಕಾನೂನು ಮತ್ತು ಕಾರ್ಮಿಕ ಮಂತ್ರಿ ಶ್ರೀ ಬಿ. ವೈಕುಂಠ ಬಾಳಿಗರಿಂದ ನೆರವೇರಿಸಲ್ಪಟ್ಟಿತು ಶ್ರೀಗಳಾದ ಎಸ್. ಎಸ್. ಪರಮೇಶ್ವರಯ್ಯ ಮತ್ತು ಟಿ. ರಮೇಶ ಪೈಗಳು ಸಭಿಕರ ಪರವಾಗಿ ಮಾತನಾಡಿ, ಮಿಚ್ಚುಗೆಯನ್ನು ವ್ಯಕ್ತಪಡಿಸಿದರು. ಆರಂಭದಲ್ಲಿ ಶ್ರೀ ನಾರಾಯಣ ಹೆಗ್ಡೆಯವರು ಸ್ವಾಗತಿಸಿದರು. ಅಂತ್ಯದಲ್ಲಿ ಕೆ. ಮಹಾಬಲ ಸೆಟ್ಟರು ಧನ್ಯವಾದವನ್ನರ್ಪಿಸಿದರು.

ಚರ್ಚಾಕೂಟ— ಉಡುಪಿ ಎಂ. ಜಿ. ಎಂ. ಕಾಲೇಜ್ ಯೂನಿಯನ್ನಿನ ಆಶ್ರಯದಲ್ಲಿ "ಭಾರತ ವಿದೇಶನೀತಿಯ ಕುರಿತು ಚರ್ಚಾಕೂಟವೊಂದು ತಾ. 12ರಂದು ಶ್ರೀ ಶ್ರೀಶ ಬಲ್ಲಾಳರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀಗಳಾದ ಸುಬ್ರಾಯ ಭಟ್ಟ, ಬಾಲಕೃಷ್ಣ ಪಂಗಣ್ಣಾಯ, ಪರೋಡಿ ರಘಪೇಂದ್ರ ರಾವ್, ಕೆ ದಿನಾಕರ ಹೆಗ್ಡೆ, ಇವರು ವಿಷಯದ ಪರವಾಗಿಯೂ, ಕೃಷ್ಣಮೂರ್ತಿ ಹೊಳ್ಳ, ಚಂದ್ರಶೇಖರ ಚಡಗ, ಪಿ. ವಿಶ್ವನಾಥ ಶೆಟ್ಟಿ ಇವರು ವಿರೋಧವಾಗಿಯೂ ಮಾತನಾಡಿದ ಮೇಲೆ ಅಧ್ಯಕ್ಷರು ತನ್ನ ಭಾಷಣದಲ್ಲಿ ಹಲವು ಸಲಹೆಗಳನ್ನಿತ್ತರು. ಕಾರ್ಯದರ್ಶಿ ಪರೋಡಿ ವಿಶ್ವನಾಥ ಶೆಟ್ಟರು ಧನ್ಯವಾದವನ್ನರ್ಪಿಸಿದರು.

ಉಡುಪಿ ಲಾ ಕಾಲೇಜಿಗ ದ್ವಿತೀಯ ಸ್ಥಾನ— ಕರ್ನಾಟಕ ವಿಶ್ವವಿದ್ಯಾನಿಲಯದ ವತಿಯಿಂದ ಇತ್ತೀಚೆಗೆ ನಡೆದ ಹನ್ನೆರಡನೇ ಅಂತರ್ವಲಯ ಕಾಲೇಜುಗಳ ಯುವಕ ಉತ್ಸವದ ಅಂಗವಾಗಿ ತಾ. 9ರಲ್ಲಿ ಜರಗಿದ ಕನ್ನಡ ಭಾಷಣ ಸ್ಪರ್ಧೆಯಲ್ಲಿ ಪ್ರಥಮ ಎಲ್. ಎಲ್. ಬಿ ಕಲಿಯುತ್ತಿರುವ ಶ್ರೀ ಶಿತಾರಿ ನಿಲಿಯಂ ವಿಂಟೋರವರು ವಿಶ್ವವಿದ್ಯಾನಿಲಯದಲ್ಲಿ ದ್ವಿತೀಯ ಸ್ಥಾನ ಗಳಿಸಿದ್ದರಿಂದ ಕರ್ನಾಟಕ ವಿಶ್ವವಿದ್ಯಾನಿಲಯದ 37 ಕಾಲೇಜುಗಳಲ್ಲಿ ಉಡುಪಿ ಲಾ ಕಾಲೇಜು ಕನ್ನಡ ಭಾಷಣಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ಪಡೆದಂತಾಯಿತು

TO COMMEMORATE

THE COMMENCEMENT OF THE LIBERATION OF GOA, Our ancient home-land, we hereby declare a 10 % (ten percent) REBATE to all the fortunate ladies and gentlemen who enroll for Rs. 200/- (Two hundred rupees) as our Life Members between now and 18—1—1962 for all the Four Vedas and the complete & unabridged Mahabharata with original Sanskrit text and the most authentic translation in Kannada being published by us in Eighty (80) superfine Volumes; so far, Seven (7) of these Volumes have been printed. Send the amount by M. O. or by crossed cheque.

LAXMAN BABANI PAI
MEMORIAL PUBLICATIONS,
MANIPAL.
DIST., SOUTH KANARA.

ಕರ್ನಾಟಕದಲ್ಲಿ ಖಡ್ಡಾಯ ಶಿಕ್ಷಣ

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಮುನ್ನೂರು ಅಥವಾ ಹೆಚ್ಚು ಜನಸಂಖ್ಯೆಯಿರುವ ಪ್ರತಿಯೊಂದು ಹಳ್ಳಿಯಲ್ಲೂ, ಸಮೀಪಸ್ಥ ವಾಸಸ್ಥಾನಗಳಲ್ಲಿ ಒಟ್ಟು ಮುನ್ನೂರು ಜನಸಂಖ್ಯೆಯಿದ್ದರೆ ಅಲ್ಲೂ ಶಾಲೆಗಳನ್ನು ತೆರೆಯಲಾಗುವುದು ಅಧ್ಯಾಪಕರು, ಪರಿಶೀಲನಾಧಿಕಾರಿಗಳು, ಗ್ರಾಮ ಪಂಚಾಯತುಗಳ ಸದಸ್ಯರು, ಮತ್ತಿತರ ಸಾಮೂಹಿಕ ಕಾರ್ಯಕರ್ತರ ನಿಕಟ ಸಹಕಾರದಿಂದ ಮಾತ್ರ ಇಷ್ಟೊಂದು ಅಧಿಕ ಸಂಖ್ಯೆಯ ಪ್ರಾಥಮಿಕ ಶಾಲೆಗಳನ್ನು ತೆರೆಯುವುದು ಸಾಧ್ಯ. ಎಲ್ಲ ಮಕ್ಕಳು, ಮುಖ್ಯವಾಗಿ ಹೆಮ್ಮಕ್ಕಳು ಶಾಲೆಗೆ ಬರುವಂತೆ ಅಧ್ಯಾಪಕರು ಪ್ರಯತ್ನಶೀಲರಾಗಬೇಕಾಗಿದೆ.

ಶಾಲೆಗೆ ಸೇರ್ಪಡೆಗೊಂಡನಂತರ, ಮಕ್ಕಳೆಲ್ಲರೂ ಶಾಲೆಗೆ ಬರುತ್ತಿರುವಂತೆ ಮಾಡಲು ಕೆಲವೊಂದು ಪ್ರಯತ್ನಗಳನ್ನು ಕೈಗೊಳ್ಳಲಾಗುತ್ತಿದೆ. ದರ್ಮಾರ್ಥ ಮಧ್ಯಾಹ್ನ ಊಟ, ಬಟ್ಟೆಬರೆಗಳು, ಪುಸ್ತಕ ಸ್ಲೇಟುಗಳು, ಹುಡುಗಿಯರಿಗೆ ಉಪಸ್ಥಿತಿ ಬಾತ್ರ ವೃತ್ತಿ, ಮೊದಲಾದುವುಗಳನ್ನು ಒದಗಿಸಲಾಗುವುದು. ಈ ಯೋಜನೆಗಳೆಲ್ಲವೂ ದೊರೆಯುವ ಹಣವನ್ನು ಹೊಂದಿಕೊಂಡು ಸೀಮಿತವಾಗಿರುವುವು. ಸರಕಾರದಿಂದ ನೀಡಲಾಗುವ ಆರ್ಥಿಕ ಸಹಾಯಕ್ಕೆ ಸಮನಾಗುವ ಸಹಾಯವು ಸ್ಥಳೀಯರಿಂದ ದೊರೆಯುವುದೆಂದು ನಿರೀಕ್ಷಿಸಲಾಗಿದೆ ಪ್ರಾಥಮಿಕ ಶಿಕ್ಷಣವು ಸಾಕಷ್ಟು ವಿಕಾಸವಾಗದಿರುವ ಕೆಲವೊಂದು ಪ್ರದೇಶಗಳಿದ್ದು, ಅವುಗಳಲ್ಲಿ ಇಂತಹ ಪ್ರಯತ್ನಗಳನ್ನು ಕೇಂದ್ರೀಕರಿಸಬೇಕೆಂದು ಯೋಜಿಸಲಾಗಿದೆ.

ಈ ಯೋಜನೆಯನ್ನು ಫಲಪ್ರದವಾಗಿ ಕಾರ್ಯಾನ್ವಿತಗೊಳಿಸಲು ಪ್ರತಿಯೊಂದು ಶಾಲೆಗೂ ಒಂದೊಂದು ಶಾಲಾಭಿವೃದ್ಧಿ ಸಮಿತಿಯೊಂದನ್ನು ರಚಿಸಲಾಗುವುದು. ಈ ಸಮಿತಿಯಲ್ಲಿ ಸ್ಥಳೀಯರಲ್ಲಿ ಪ್ರಭಾವಶಾಲಿಗಳೂ ಸಹಾಯಧನವಿತ್ತುವ, ದಾಖಲಾತಿಯನ್ನು ತೀವ್ರಗೊಳಿಸುವ ಮೊದಲಾದುವುಗಳಲ್ಲಿ ವ್ಯಕ್ತಿಗತ ಹಾಗೂ ವಿಶ್ವಾಸಾರ್ಹ ಅಭಿರುಚಿಯಿರುವವರೂ ಆದಷ್ಟು ಸದಸ್ಯರು ಇರುವರು ಹೊಸ ಯುಗದ ವಾಣಿಯಂತೆ ಶಾಲೆ ಮತ್ತು ಅದಿರುವ ಸಮೂಹದ ನಡುವೆ ಹೊಂದಾಣಿಕೆಯಿದ್ದ ಅವುತಂತಮ್ಮ ಕರ್ತವ್ಯಗಳನ್ನು ಪೂರೈಸಬೇಕು. ಶಾಲೆಯು ಸಮೂಹದ ಕೇಂದ್ರವಾಗಬೇಕು, ಸಮೂಹವು ಶಾಲೆಯು ತನಗೆ ಸೇರಿದುದೆಂದು ತಿಳಿಯಬೇಕು; ಮಹಾ ಸೂತ್ರಿಯಲ್ಲಿ ತಾವೀರ್ವರೂ ಸಹಯೋತ್ರಿಗಳೆಂದು ಇವು ತಿಳಿಯಬೇಕು.

ಖಡ್ಡಾಯ ಶಿಕ್ಷಣದ ಕಾರ್ಯಕ್ರಮದಂತೆ ತೆರೆಯಲಾಗುವ ಹೊಸ ಶಾಲೆಗಳಿಗೂ ಈಗ ಇರುವ ಶಾಲೆಗಳಿಗೂ ಸಮೀಪ ಭವಿಷ್ಯದಲ್ಲಿ ಕಟ್ಟಡಗಳನ್ನು ಕಟ್ಟಿಸುವುದು ಸರಕಾರದಿಂದ ಸಾಧ್ಯವಿರುವುದಿಲ್ಲ. ಶಾಲೆಗಳಿಗೆ ಅವಶ್ಯಕವಾದ ಕಟ್ಟಡಗಳನ್ನು ಕಟ್ಟಿಕೊಡುವ ಜವಾಬ್ದಾರಿಯು ತಾಲೂಕು ಬೋರ್ಡು ಅಥವಾ ಊರಿನ ಜನರಿಗೇ ಸೇರಿದುದು. ಕಡಿಮೆ ಪಕ್ಷಕ್ಕೆ ಸೂರ್ಯನ ಬಿಸಿಲು, ಗಾಳಿ ಮಳೆಗಳಿಂದ ರಕ್ಷಣೆಯೊಯುವ ಪರ್ಣಶಾಲೆಗಳನ್ನಾದರೂ ರಚಿಸಬೇಕು; ಯಾವುದೇ ಕಾರಣದಿಂದಾದರೂ ಇದಕ್ಕೆ ತಡವಾಗಬಾರದು

ಶಾಲಾ ಸಮಿತಿಗಳಲ್ಲದೆ, ಶಾಲಾಭಿವೃದ್ಧಿ ಸಮ್ಮೇಳನಗಳನ್ನು ಪ್ರತಿ ಜಿಲ್ಲೆಯಲ್ಲಿ ತಾಲೂಕು ಮಟ್ಟದಲ್ಲಿ ಏರ್ಪಡಿಸಬೇಕೆಂದು ನಿರ್ಧರಿಸಲಾಗಿದ್ದು, ತಾಲೂಕು ಬೋರ್ಡುಗಳ ಸಹಕಾರದಿಂದ ಇವನ್ನು ನಡೆಸಬೇಕೆಂದು ಡಿಪ್ಯುಟಿ ಕಮಿಶನರರಿಗೆ ಸರಕಾರವು ತಿಳಿಸಿದೆ. ಶಾಲಾ ಸಮಿತಿಗಳ ಪ್ರತಿನಿಧಿಗಳು ಸಮ್ಮೇಳನದಲ್ಲಿ ಪ್ರತಿಹಳ್ಳಿಯಲ್ಲಿ ದೊರೆತ ಸಹಾಯವನ್ನು ಘೋಷಿಸುವರು; ಮತ್ತು ಸ್ಥಳೀಯ ಜನತೆಯು ಶಾಲೆಯ ಅವಶ್ಯಕತೆಗಳನ್ನು ಎಷ್ಟರ ಮಟ್ಟಿಗೆ ಪೂರೈಸಿದೆಯೆಂದು ತಿಳಿಸುವರು

ಮೂರನೆಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಹೊಸತಾಗಿ ದಾಖಲಾಗುವ ೧೦ ಲಕ್ಷ ವಿದ್ಯಾರ್ಥಿಗಳಿಗಾಗಿ ೧೬,೮೦೦ ಅಧ್ಯಾಪಕರನ್ನು ನೇಮಿಸಬೇಕಾಗಬಹುದೆಂದು ಅಂದಾಜು ಮಾಡಲಾಗಿದೆ ಪ್ರಚಲಿತ ವರ್ಷದಲ್ಲಿ ೩,೬೦೦ ಹೆಚ್ಚಿನ ಅಧ್ಯಾಪಕರನ್ನು ನಿಯುಕ್ತಗೊಳಿಸಲಾಗಿದೆ. ಈ ಬಾಬಿನಲ್ಲಿ ಐದು ವರ್ಷಗಳಿಗೆ ಒಟ್ಟು ೬ ೩೪ ಕೋಟಿ ರೂಪಾಯಿಗಳು ವೆಚ್ಚ ಮಾಡಲಾಗುವುದು. ಹೆಚ್ಚಿನ ಮುಂದುವರಿದ ದೇಶಗಳಲ್ಲಿ ಪ್ರಾಥಮಿಕ ಶಾಲಾ ಮಕ್ಕಳ ಅಧ್ಯಾಪಕರಾಗಲು ಪುರುಷರಿಗಿಂತ ಸ್ತ್ರೀಯರೇ ಉತ್ತಮರೆಂಬ ಅಭಿಪ್ರಾಯದಿಂದ ಆಕೆಲಸವನ್ನು ಅವರೇ ಮಾಡುತ್ತಾರೆ. ಸ್ತ್ರೀ ವಿದ್ಯಾಭ್ಯಾಸದತ್ತ ನೀಡಲಾಗುತ್ತಿರುವ ಪ್ರಾಶಸ್ತ್ಯದಿಂದಾಗಿ ಪ್ರಾಥಮಿಕ ಶಿಕ್ಷಕಿಯರ ಸಮಸ್ಯೆಯು ಬಗೆಹರಿಯಬಹುದು. ಗ್ರಾಮೀಣ ಪ್ರದೇಶಗಳಲ್ಲಿ ಸೇವೆ ಸಲ್ಲಿಸಲು ಸಿದ್ಧರಿರುವ ಮಹಿಳಾ ವಿದ್ಯಾರ್ಥಿಗಳಿಗೆ ತರಬೇತಿ ಶಾಲೆಗಳಲ್ಲಿರೂ. ೪೦೦ ರ ವಿದ್ಯಾರ್ಥಿವೇತನವನ್ನೀಯಲಾಗುವುದು. ಹಳ್ಳಿಗಳ ಶಾಲೆಗಳ ಅಧ್ಯಾಪಿಕೆಯರಿಗಾಗಿ ವಸತಿಗೃಹವನ್ನು ರಚಿಸಲು ರೂ. ೧೪ ಲಕ್ಷವನ್ನು ತೆಗೆದಿರಿಸಲಾಗಿದೆ.

ಮೂರನೆಯ ಯೋಜನಾರಂಭದಲ್ಲಿ ಒಟ್ಟು ೭೨ ಸಾವಿರ ಉಪಾಧ್ಯಾಯರು ಕೆಲಸ ಮಾಡುತ್ತಿರುವರೆಂದು ಅಂದಾಜು ಮಾಡಲಾಗಿದೆ. ಇವರಲ್ಲಿ ಬರೇ ೪೪,೪೦೦ ಮಾತ್ರ(ಅಂದರೆ, ಸೇ ೬೧ ಕ) ತರಬೇತಿ ಪಡೆದವರು. ಖಡ್ಡಾಯ ಪ್ರಾಥಮಿಕ ಶಿಕ್ಷಣಕ್ಕಾಗಿ ಸೇರಿಸಲಾಗುವ ೧೬ ಲಂಂ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳಿಗೆ ಸೇರಿಸುವ ೪ ಸಾವಿರ ಹೆಚ್ಚಿನ ಅಧ್ಯಾಪಕರನ್ನು ಸೇರಿಸಿ, ೪೮ ೪೦೦ ಮಂದಿಗೆ ತರಬೇತಿಯ ಸೌಲಭ್ಯವನ್ನು ಮೂರನೆ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ನೀಡಬೇಕಾಗಿದೆ. ರಾಜ್ಯದಲ್ಲಿ ಈಗಾಗಲೇ ೬೫ ತರಬೇತಿ ಶಾಲೆಗಳಿವೆ; ತೃತೀಯ ಯೋಜನಾಂತ್ಯದೊಳಗೆ ಮತ್ತೆ ನಾಲ್ಕನ್ನು ಸ್ಥಾಪಿಸಲಾಗುವುದು ಮಹಿಳೆಯರಿಗಾಗಿ ಪ್ರತ್ಯೇಕ ತರಬೇತಿ ಶಾಲೆಗಳನ್ನೂ ತೆರೆಯಲಾಗುವುದು

ವಿದ್ಯಾ ಇಲಾಖೆಯ ಪರಿಶೀಲನಾ ವಿಭಾಗವನ್ನೂ ಬಲಪಡಿಸಲಾಗುತ್ತಿದೆ. ೩೨ ತಾಲೂಕುಗಳಿಗೆಗೊಂದು ಉಪವಿಭಾಗವನ್ನು ನಿರ್ಮಿಸಿ, ಇವುಗಳ ಪರಿಶೀಲನಾ ಕಾರ್ಯವನ್ನು ಸಹಾಯಕ ವಿದ್ಯಾಧಿಕಾರಿಗಳಿಗೆ ಒಪ್ಪಿಸಲಾಗುವುದು ಪ್ರತಿಯೊಬ್ಬ ಪರಿಶೀಲನಾಧಿಕಾರಿಗೂ ೭೫ ಶಾಲೆ ಅಥವಾ ೧೫೦ ಅಧ್ಯಾಪಕರಿಗಿಂತ ಹೆಚ್ಚಿನ ಪರಿಶೀಲನಾಕಾರ್ಯವು ಬೀಳದಂತೆ ಡಿಪ್ಯುಟಿ ಇನ್ಸ್ಪೆಕ್ಟರರ ಸಂಖ್ಯೆಯನ್ನೂ ಹೆಚ್ಚಿಸಲಾಗುವುದು ಆಗ ಪ್ರತಿ ತಾಲೂಕಿನಲ್ಲಿಯೂ ಅಲ್ಲಿರುವ ಶಾಲೆ ಮತ್ತು ಅಧ್ಯಾಪಕರ ಸಂಖ್ಯೆಗನುಗುಣವಾಗಿ ಡಿಪ್ಯುಟಿ ಇನ್ಸ್ಪೆಕ್ಟರು ಇರುವಂತಾಗುವುದು.

ಕೊನೆಯದಾಗಿ ಮುಂದಿನ ಐದು ವರ್ಷಗಳಲ್ಲಿ ನಾವು ಖಡ್ಡಾಯ ಶಿಕ್ಷಣದಡಿ ಬರುವ ೧೦ ಲಕ್ಷ ಮಕ್ಕಳೆಲ್ಲರನ್ನೂ ಶಾಲೆಗೆ ಬರುವಂತೆ ಮಾಡಿದರೂ, ಅಧ್ಯಾಪಕರನ್ನು ಪಡೆಯಲು ಶಕ್ತರಾದರೂ, ಒಂದಲ್ಪಾಂಶವನ್ನು ಮಾತ್ರ ಸಾಧಿಸಿದಂತಾಗುವುದೆಂಬುದನ್ನು ಮರೆಯುವಂತಿಲ್ಲ ೧೧ ವರ್ಷ ಪ್ರಾಯದವರೆಗೆ ಶಿಕ್ಷಣವನ್ನು ನೀಡುವುದು ಸದ್ಯದ ಖಡ್ಡಾಯ ಶಿಕ್ಷಣದ ಕಾಯದೆಯ ಗುರಿಯಾಗಿದೆ ಮುಂದೆ ೧೪ ವರ್ಷ ಪ್ರಾಯದವರೆಗೆ ಈ ಅನಿವಾರ್ಯ ಶಿಕ್ಷಣವನ್ನು ನೀಡುವುದೇ ನಮ್ಮ ಗುರಿಯಾಗಿದೆ.

(ಸಮಾಪ್ತಂ)

(Mysore Information ನ ಕೃಪೆಯಿಂದ)

ದುಡಿಮೆ ಮತ್ತು ಪ್ರಾಮಾಣಿಕತೆಯೇ ಜಯದ ಮೂಲ

(೫೯ ಪುಟದಿಂದ)

A man must not be judged by the nature of his duties but by the manner in which he does them A shoe maker who can turn out a strong nice pair of shoes in the shortest possible time is a better man according to his profession and his work, than a professor who talks nonsense every day of his life. Every duty is holy and devotion to duty is the highest form worship of God."

ಆದುದರಿಂದ ನಾವು ಸದಾ ಎಚ್ಚರಿಕೆಯಿಂದ ದುಡಿಯೋಣ. ದುಡಿಯುವುದು - ಯಾವ ಕ್ಷೇತ್ರದಲ್ಲಾದರೂ ಸರಿಯೇ ದುಡಿಮೆಗೆ ಸದಾ ಗೌರವವುಂಟೆಂಬುದನ್ನು ಕಲಿತುಕೊಳ್ಳೋಣ. ಹಾಗೆಯೇ ಆಚರಿಸೋಣ—

ನಮ್ಮ ಧ್ಯೇಯ ಸದಾ ಇದಾಗಿರಬೇಕು—ಇಂಗ್ಲಿಷಿನಲ್ಲಿ ಹೇಳುವ "ಸ"-ತ್ರಯಗಳು "Strive, Save, Serve" —"ದುಡಿಯಿರಿ, ಉಳಿಸಿರಿ, ಸೇವೆಸಲ್ಲಿಸಿರಿ" ಶ್ರೀಕೃಷ್ಣ ಪರಮಾತ್ಮನು ಗೀತೆಯಲ್ಲಿ ಅರ್ಜುನನಿಗೆ ಉಪದೇಶಿಸಿದ ನಿಷ್ಕಾಮ ಕರ್ಮವನ್ನು ನಾವು ನೆನಪಿನಲ್ಲಿಟ್ಟುಕೊಂಡು ಆಚರಿಸಿದರೆ ನಮಗೆ ಯಾವ ಬಾಧಕಗಳೂ ಬರಲಾರವು.—ಎಲ್ಲವೂ ಸಾಧಕಗಳೇ ಆಗುವುವು.

ಇನ್ನೊಂದು ಮಾತು—ಇಂಗ್ಲಿಷಿನಲ್ಲಿ ಹೇಳುವ Plain living and high thinking ಎಂಬ ನೀತಿಯನ್ನು ಸದಾನೆನಪಿನಲ್ಲಿಂಸಿಕೊಳ್ಳಬೇಕು. ಆಡಂಬರ ಆಟೋಪಗಳಿಗೆ ದುಡ್ಡನ್ನು ಹೋಲುಮಾಡಬಾರದು. ಸರಳ ಜೀವನವನ್ನು ನಡೆಸುತ್ತಾ ಉಪಯುಕ್ತವಾದವುಗಳಿಗೆ ಮಾತ್ರ ನಮ್ಮ ದ್ರವ್ಯ ವಿನಿಯೋಗವಾಗಬೇಕು ಎಲ್ಲ ರೀತಿಯ ಅನವ್ಯಯದ ವೆಚ್ಚಕ್ಕೆ ತಡೆಹಾಕಬೇಕು. ಪ್ರತಿಯೊಬ್ಬ ವ್ಯಕ್ತಿಗೂ ಪ್ರತಿಯೊಂದು ಕುಟುಂಬಕ್ಕೂ, ಪ್ರತಿಯೊಂದು ಸಂಸ್ಥೆಗೂ ಕಾರ್ಯಕ್ರಮದಲ್ಲಿ ಸಮರ್ಪಕವಾದ ಯೋಜನೆ (Plan) ಆಯವ್ಯಯದ ಅಂದಾಜು (budget) ಇರಲೇಬೇಕು-ಈ ಎರಡೂ ಮಾತುಗಳನ್ನು ನನ್ನ ಸ್ವಾನುಭವದಿಂದ ಹೇಳಿದ್ದೇನೆ ಹೀಗೆ ಉತ್ತಮ ರೀತಿಯಲ್ಲಿ ಕಾರ್ಯವೆಸಗಿ ನಮ್ಮ ಸಂಘಸಂಸ್ಥೆಗಳನ್ನು ಭದ್ರಪಡಿಸಿಕೊಂಡು ತನ್ಮೂಲಕ ಸಮಾಜ—ದೇಶ ಸೇವೆಗಳನ್ನು ಸಲ್ಲಿಸೋಣ.

॥ ಭದ್ರಂ ಶುಭಂ ಮಂಗಳಂ ॥

ವಿಶ್ವಕವಿ ಟಾಗೋರರ ಪುಣ್ಯಸ್ಮರಣೆಗಾಗಿ
ಅವರ ಶತಮಾನೋತ್ಸವದ ಸುಸಂದರ್ಭದಲ್ಲಿ
ಪ್ರಕಟವಾದ ಕಿರುಗಾಣಿಕೆಗಳು

ಚಿತ್ರಾಂಗದೆ

ಬೆಲೆ: ೬೦ ನ ಪೈಸೆ

(ಶ್ರೀ ಕೆ. ಕೆ. ಶೆಟ್ಟಿ, ಎಂ. ಎಲ್. ಸಿ. ಅವರಿಂದ ಅನುವಾದಿತ)

ರವೀಂದ್ರನಾಥರ ಕಿರುಗತೆಗಳು

ಬೆಲೆ. ೯೦ ನ. ಪೈಸೆ

(ಶ್ರೀ ಹನುಮಂತರಾವ್ ಮೊಂಜರೇಕರ, ಕಾರವಾರ ಅವರಿಂದ ಅನುವಾದಿತ)

ಪ್ರಕಾಶಕರು.

ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ನವಯುಗ ಪ್ರೆಸ್, ಉಡುಪಿ.

ಹಿರಿಯರ ದೃಷ್ಟಿಯಲ್ಲಿ ಆಯುರ್ವೇದ

ಶ್ರೀ ಅಚ್ಯುತ ಶ್ರೀನಿವಾಸ ಪೈ

ಪರಮ ಪೂಜ್ಯ ರಾಷ್ಟ್ರಪತಿ ಡಾ| ರಾಜೇಂದ್ರ ಬಾಬು ರವರು 'ಆಯುರ್ವೇದಲ್ಲಿ ಮಹಾ ಶಕ್ತಿ ಇದೆ. ಭಾರತೀಯರು ಇನ್ನೂ ತಿಳಿದುಕೊಳ್ಳಲೇ ಬೇಕಾದ ದಿವ್ಯ ಔಷಧಿಗಳು ಅದರಲ್ಲಿ ಅಡಕವಾಗಿವೆ. ಸಾರ್ವಜನಿಕರು ಆಯುರ್ವೇದವನ್ನು ತಮ್ಮದನ್ನಾಗಿ ಮಾಡಿಕೊಳ್ಳುವ ಸಮಯವು ಶೀಘ್ರದಲ್ಲಿಯೇ ಬರುವುದ"ಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಆಯುರ್ವೇದದಲ್ಲಿರುವ ತನ್ನ ನಂಬಿಕೆಯನ್ನೂ ಸ್ಪಷ್ಟಪಡಿಸಿದ್ದಾರೆ. ವೈದ್ಯರು ನಾಡಿ ಪರೀಕ್ಷೆ, ಮುಖ, ಮಲಮೂತ್ರ ಪರೀಕ್ಷಿಸಿ ರೋಗನಿದಾನವನ್ನು ಸುಲಭದಲ್ಲಿ ಶೋಧಿಸುತ್ತಿದ್ದರು ವೈದ್ಯರು ಅದನ್ನು ಮರೆತುಹೋಗಲು ಬಿಡದೆ ಪ್ರಚಾರದಲ್ಲಿ ತರಲೇ ಬೇಕು. ಆಯುರ್ವೇದ ಮರ್ಮ ಮತ್ತು ಗುಣಗಳನ್ನು ಶುದ್ಧಪಡಿಸತಕ್ಕ ಕಾಲವೋಗವು ಸನ್ನಿಹಿತವಾಗಿದೆ. ಆಯುರ್ವೇದವು 'ನಿರೋಗ'ಯಾಗಿರುವ ಸೂತ್ರಗಳನ್ನೇ ಅಂದಿನಿಂದ ಇಂದಿನ ವರೆಗೆ ಸಾರಿರುತ್ತದೆ. ದೇಶದಲ್ಲಿ ಚಿಕಿತ್ಸಾಲಯಗಳ ಆವಶ್ಯಕತೆಯೇ ಇಲ್ಲದಂತೆ ಮಾಡುವುದೇ ಆಯುರ್ವೇದದ ಧ್ಯೇಯವಾಗಿದೆ ಎಂಬ ಧೃಡ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ ಅಂತರಾಷ್ಟ್ರೀಯ ಖ್ಯಾತಿಯ ಪರಮ ಪೂಜ್ಯ ಪ್ರಧಾನಿ ಪಂಡಿತ ಜವಾಹರಲಾಲ ನೆಹರುರವರು, 'ಆಯುರ್ವೇದ ಚಿಕಿತ್ಸಾಪದ್ಧತಿಯ ಮಹತ್ವವೇನೂ ಕಡಿಮೆ ಇರುವುದಿಲ್ಲ. ಯಾರು ಆಯುರ್ವೇದವನ್ನು ಅವಿಜ್ಞಾನಿಕವೆನ್ನುತ್ತಾರೋ ಮತ್ತು ಹೀನವಾಗಿ ನೋಡುತ್ತಾರೋ ಅಂಥವರು ತಮ್ಮ ಅಜ್ಞಾನವನ್ನೇ ಪ್ರದರ್ಶಿಸುತ್ತಾರೆ ಇಂದು ಆಯುರ್ವೇದ ಸಂಬಂಧವಾಗಿ ಅನುಸಂಧಾನ ಕಾರ್ಯವು ನಡೆಯುತ್ತಾ ಇದೆ. ಅದು ಅತ್ಯಂತ ಉಪಯುಕ್ತವೂ ಆಗಿದೆ ಅದರ ಪರಿಣಾಮವೂ ಬಹಳ ಉತ್ತಮವಾದುದು. ಆಯುರ್ವೇದೀಯ ಮತ್ತು ಆಧುನಿಕ ಚಿಕಿತ್ಸೆಗಳ ಮಧ್ಯೆ ಯಾವ ತಾತ್ವಿಕವಾದ ವಿವಾದವು ನಡೆಯುತ್ತಿದೆಯೋ ಅದರ ಸಮಾಧಾನವನ್ನು ಎರಡೂ ಪದ್ಧತಿಯ ತುಲನಾತ್ಮಕವಾದ ಅಧ್ಯಯನದಿಂದ ಮಾಡಬೇಕಾಗಿದೆ" ಎಂಬ ಧೃಡ ಅಭಿಪ್ರಾಯ ಪಟ್ಟಿದ್ದಾರೆ. ಭಾರತಖಂಡದ ಉಪರಾಷ್ಟ್ರಾಧ್ಯಕ್ಷರಾದ ಡಾ| ಎಸ್. ರಾಧಾಕೃಷ್ಣನ್‌ರವರೂ ಆಯುರ್ವೇದವು ಈಗಿನ ವಿಜ್ಞಾನದಂತಲ್ಲ, ಅದು ಆರೋಗ್ಯಶಾಸ್ತ್ರವಾಗಿದೆ. ಅದರಲ್ಲಿ ಕೇವಲ ಶರೀರಕ್ಕೆ ಚಿಕಿತ್ಸೆಯನ್ನಷ್ಟೆ ವಿವೇಚಿಸಿಲ್ಲ ವಿದ್ಯೆ, ಬುದ್ಧಿ ಬಲಗಳನ್ನೂ ಹೆಚ್ಚಿ ಸತಕ್ಕ ವಿಷಯಗಳನ್ನು ವಿಪುಲವಾಗಿ ವಿವೇಚಿಸಿರುತ್ತದೆ. ಆದ್ದರಿಂದಲೇ ಪ್ರಾಚೀನ ಋಷಿಗಳು ಆಯುರ್ವೇದಕ್ಕೆ ಎಷ್ಟು ಮಹತ್ವವನ್ನು ಕೊಟ್ಟಿದ್ದಾರೋ ಆ ಮಹತ್ವವು ಇನ್ನಾವ ಪದ್ಧತಿಗೂ ದೊರೆಯತಕ್ಕದ್ದಲ್ಲ ಎಂದು ಅಭಿಪ್ರಾಯಪಟ್ಟಿದ್ದು ಅಭಿಮಾನ ಪಡತಕ್ಕದ್ದಾಗಿದೆ.

ಪಾಶ್ಚಾತ್ಯ ತಜ್ಞರಾದ ಪಾರ್ಡೆಲ್ಲೂಕಸ್, ಡಾ. ಅನ್ನಿಬೆಸೆಂಟ್, ಆಲ್ಬೆರುನಿ ಮೊದಲಾದವರೂ, ಆಯುರ್ವೇದ ಪದ್ಧತಿಯ ಚಿಕಿತ್ಸೆಯನ್ನು ತುಂಬಾ ಪ್ರಶಂಸಿಸಿದ್ದಾರೆ.

ಮೆದುಳಿನ ಸ್ವಾಸ್ಥ್ಯರಕ್ಷಣೆಗೆ ಬ್ರಾಹ್ಮಿ, ಭೃಂಗ, ಸಹದೇವಿ ಇತಿಲ ತೈಲದಲ್ಲಿ, ದನದ ಹಾಲು, ಜಾಯಿಕಾಯಿ, ಮಂಜಿಷ್ಟ, ಕರಿಜೀರಿಗೆ, ಶಾಂತಿಕಾಯಿ ಅಣಲೆ ಕಾಯಿ ನೆಲ್ಲಿಕಾಯಿ, ಮುಡಿವಾಳ, ನಾಗಕೇಶರ, ಕುಂಕುಮಕೇಶ್ರಿ ಮೇಲ್ಪುಡಿ, ಪಚ್ಚಕರ್ಪೂರ ಹಾಕಿ ತಯಾರಿಸಿದ ತೈಲವನ್ನು ನಿತ್ಯ ಉಪಯೋಗಿಸುವುದರಿಂದ ಸಮಸ್ತ ಮೆದುಳಿನ ದೋಷಗಳನ್ನು ನಿವಾರಿಸಿ ಮೆದುಳಿನ ಸ್ವಾಸ್ಥ್ಯರಕ್ಷಣೆಯಾಗುವುದಾಗಿ ತಜ್ಞರು ಏಕಾಭಿಪ್ರಾಯಪಟ್ಟಿದ್ದಾರೆ. ವಿಶ್ವಾಸೋ ಫಲದಾಯಕಃ ಎಂಬಂತೆ, ವಿಶ್ವಾಸವೇ ಫಲಕೊಡುವುದರಲ್ಲಿ ಪ್ರಾಧಾನ್ಯವಹಿಸುತ್ತದೆ.

ಅಮೇರಿಕದ ನ್ಯೂಯೋರ್ಕ್ ನಗರದಲ್ಲಿ ಭಾರತ ಪ್ರಧಾನಿ ನೆಹರೂರವರಿಗೆ ಸ್ವಾಗತಿಸುತ್ತ ಮೇಯರ್ ರಾಬರ್ಟ್ ಎಫ್. ವಾಗ್ನರ್‌ರು ಚಿನ್ನದ ಜಾವಿಯನ್ನು ಇತ್ತು ಗೌರವಿಸಿದರು

ಮೌರಣಾಸ್ತ್ರ ಶಬ್ದ

"ರಂಜನೆ", ಬೆಂಗಳೂರು.

ಸದ್ದಿಲ್ಲದ ಎಲ್ಲ ತಾರೆಗಳಿಗೂ ಎತ್ತರದ ಅಲ್ಲದೇವಾಕಾಳಕ್ಕೂ ಕೆಳಗಿರುವ ನಿಶ್ಶಬ್ದ ಸಾಮ್ರಾಜ್ಯವೇ ದೊಡ್ಡದು. ಮತ್ತೆಲ್ಲವೂ ಚಿಕ್ಕದು. —ಕಾರ್ಲೆಲ್.

ಶಬ್ದ (ಸದ್ದು) ಮಾನವ ಜನಾಂಗದ ಭಯಂಕರ ಅಂಟು ಜಾಡ್ಯ. ನಮ್ಮ ಅಸ್ತಿತ್ವದ ಕೆಟ್ಟ ವಿಷವೂ ಹೌದು.

ಸರ್ವ ಶಕ್ತ, ಭಗವಂತ ತನ್ನ ದಯಾರ್ದ್ರ ಹೃದಯದಿಂದ ರಾಜ ಗಂಭೀರದ ಆನೆಗೆ ಹಾಗೂ ನಿರತ ಕಷ್ಟ ಜೀವಿ ಕತ್ತೆಗೂ ಜೊರಗಿನ ಪ್ರಸಂಚದ ಈ ಶಬ್ದಗಳ ಹಾವಳಿಯಿಂದ ಸ್ವಲ್ಪವಾದರೂ ತಪ್ಪಿಸಿಕೊಳ್ಳಲು ಅಗಲ (ಮಂದ) ವಾದ ಕಿವಿಯನ್ನು ಕೊಟ್ಟ. ಆದರೆ ಬಡ ಮಾನವನಿಗೆ ಈ ಸೌಲಭ್ಯ ಇಲ್ಲವಾಯಿತು.

ಬಹು ಹತ್ತಿರದಲ್ಲಿ ಉಪಯೋಗಿಸಲಾದ ಸಿಳ್ಳುಲಿನ ಶಬ್ದವೊಂದೇ ಕಿವಿಯನ್ನು ಒಡೆಯಲು ಸಾಕು. ಅನಿರೀಕ್ಷಿತ ಶಬ್ದದಿಂದ ದೇಹದಾದ್ಯಂತ ಕೆಡಕುಗಳಾಗುವ ಸಂಭವವುಂಟು ರಕ್ತದ ಒತ್ತಡ ಹಾಗೂ ಆಂತರಿಕ ಕಫಾಲದ ಒತ್ತಡ ಹೆಚ್ಚಾಗುವಿಕೆಯಂತಹವೇ ಅಲ್ಲದೆ ಬೆನರು ಹೆಚ್ಚುವಿಕೆ, ಮೂಸಿ ಬುಡಗಳು ತೀಕ್ಷ್ಣವಾಗಿ ಸಂಕುಚಿತಗೊಳ್ಳುವುದು, ಲಾಲಾರಸ ಹಾಗೂ ಜಠರ ರಸಗಳ ಉತ್ಪಾದನೆ ತ್ವರಿತದಲ್ಲಿ ಕಡಿಮೆಯಾಗುವುದು ಮತ್ತು ಜೀರ್ಣ ಶಕ್ತಿ ಕಂದುವುದು ಇವೆಲ್ಲ ಅನಿರೀಕ್ಷಿತ ಶಬ್ದದಿಂದ ದೇಹದಲ್ಲುಗುವ ಕೆಡಕುಗಳಾಗಿವೆ

ವಿಮಾನ ಚಾಲಕನಂತೆ ಬಹಳ ಹೊತ್ತು ಗಿಯಿ ಡೆಸಿಬಲ್ಸ್ (ಶಬ್ದ ವರ್ಧಕ ಮಾಪಕದ ಕನಿಷ್ಠ ಅಳತೆ) ಹಾಗೂ ಹೆಚ್ಚಿನ ಶಬ್ದಕ್ಕೆ ನಿಮ್ಮ ಕಿವಿಯನ್ನು ಅಲಿಸಲು ಬಿಟ್ಟಿದ್ದೇ ಆದರೆ ಶಾಶ್ವತ ಕಿವುಡಾಗುವ ಸಂಭವವುಂಟು.

ಹೆಚ್ಚು ಶಬ್ದ ಅನೇಕ ರೀತಿಯ ಶರೀರದ ಅಸ್ವಸ್ಥತೆ, ಚಿತ್ತಕ್ಷೋಭೆಗಳನ್ನುಂಟುಮಾಡುವುದು. ಕಣ್ಣು ಗುಡ್ಡೆಗಳ ಹಾಗೂ ತಲೆಯ ಸುತ್ತುಂಟಾಗುವಿಕೆ ಇದರ ಉದಾಹರಣೆಗಳಾಗಿವೆ. ಕೆಲವೊಮ್ಮೆ ದೃಷ್ಟಿಯನ್ನು ಕಳೆದುಕೊಳ್ಳುವುದೇ ಅಲ್ಲದೆ ಸಮ ಚಿತ್ತತ್ವ ನಷ್ಟ ಹೊಂದುವುದು. ಚರ್ಮದ ಉಷ್ಣತೆ ಕೂಡ ಹೆಚ್ಚುವುದ.

೧೬೦ ಡೆಸಿಬಲ್ಸ್‌ನ ಶಬ್ದ ಇಲಿಗಳನ್ನು ಕೊಲ್ಲುವ ಶಕ್ತಿಯುಳ್ಳದ್ದಾಗಿದೆ. ಶಬ್ದಶಕ್ತಿ ಉಷ್ಣತಾಶಕ್ತಿಗೆ ಮಾರ್ಪಾಡಾಗಿ ದೇಹದ ಉಷ್ಣತೆ ಮಾರಣಕಾರಕ ಅಂಚನು ಮುಟ್ಟುವುದು. ಅಂತೆಯೇ ಅದು ಕೊಲ್ಲುತ್ತದೆ.

೩೦೦ ಡೆಸಿಬಲ್ಸ್‌ನ ಹತ್ತಿರದ ಹಾಗೂ ಹೆಚ್ಚು ಶಬ್ದದಿಂದ ಮನುಷ್ಯನ ಕಿವಿಯ ಮಧ್ಯದ ಮೂರು ಸೂಕ್ಷ್ಮ ಎಲುಬುಗಳಲ್ಲಿನ ಒಂದು ಎಲುಬು (Stirr-up) ಕೆಲವೊಮ್ಮೆ ಒಳಕಿವಿಗೆ ನುಗ್ಗಿ ಅದರಲ್ಲಿನ ದ್ರವವನ್ನು ಹೊಕ್ಕು ರಸ ಸ್ರಾವವಾಗಬಹುದು

ಶಬ್ದಪೂರ್ಣ ವಾತಾವರಣದಿಂದ ಮನೋವಿಕಾರ ಕಾಯಿಲೆ ಸಂಬಂಧವಾದಉಬ್ಬಳಿಕೆ, ವಾಕರಿಕೆ, ಅಜೀರ್ಣ, ಕಫಸೇರುವು, ನರದೌರ್ಬಲ್ಯತೆ ಅಲ್ಲದೇ ಶ್ರೈಂಗಿಕ ಅಶಕ್ತಿಯಲ್ಲಿ ಕುಂಠಿತವಾಗುವುದು.

ಶಬ್ದ ಮನುಷ್ಯನ ಕಾರ್ಯಪಟುತ್ವವನ್ನು ಪ್ರತಿರೋಧಿಸುತ್ತದೆ ಮಾನವನ ಹಸ್ತಕೌಶಲ್ಯ ದಕ್ಷತೆ ಹಾಗೂ ತಧ್ಯವನ್ನು ಬಲಗುಂದಿಸುತ್ತದೆ. ಒಂದು ಸಂಸ್ಥೆ ಶಬ್ದದ ಮಟ್ಟವನ್ನು ಶೇ| ೧೪. ೫ರಷ್ಟು ಕಡಿಮೆ ಮಾಡಿದ್ದರಿಂದ ಟೈಪಿಸ್ಟ್‌ನ ತಪ್ಪು ಶೇ| ೨೯ರಷ್ಟೂ ಯಂತ್ರ ಕೆಲಸಗಾರನ ತಪ್ಪು ಶೇ| ೫೨ರಷ್ಟೂ ಕಡಮೆಯಾಗಿ ಹೆಚ್ಚು ಕೆಲಸವೂ, ಅದನ್ನಲ್ಲದೆ ಗೈರು ಹಾಜರಿಯ ದಿನಗಳು ಕಡಿಮೆಯಾದವು.

ಶಬ್ದ ಪ್ರಾಬಲ್ಯವನ್ನು ಕಡಿಮೆಮಾಡುವುದರಿಂದ ಕೆಲಸವು ಹೆಚ್ಚುವುದಲ್ಲದೆ ಮಾನವನ ಸುಖ ಊರ್ಜಿತಗೊಳ್ಳುವುದು. ಇದಕ್ಕೆ ತೊಡಗಿಸುವ ಹಣಕ್ಕಿಂತಲೂ ಹೆಚ್ಚಿನ ಲಾಭವನ್ನು ಕೊಡುವುದಾಗಿ.

(ಭವನ್ಸ್ ಜರ್ನಲ್‌ನಿಂದ)

ಉಳಿತಾಯದ ಬಲವೊಂದಿದ್ದರೆ.....

ಜೀವನದ ಜಡತ್ವ-ಜಿಗುಪ್ಸೆಗಳು ತಂತಾನೆ ಮಾಯವಾಗುವುವು; ಬದಲು, ಶರೀರದಲ್ಲಿನ ಸುಪ್ತ ಕ್ರಿಯಾಶಕ್ತಿಗಳಿಗೆ ಚೈತನ್ಯ-ಸ್ಫೂರ್ತಿಪಡೆಗಳು ಸಿಕ್ಕಿ, ಜೀವನವು ಸಂಜೀವನವಾಗಿ, ಸುಖದ ಸುಪ್ತಿತ್ತಿಗೆಯಾಗಿ ಮೆಲ್ಲನೆ ಸಾರ್ಪಡುವುದು

— ಉಳಿತಾಯಕ್ಕಾಗಿ —

ಇಂದೇ .....ಈ ಕ್ಷಣವೇ.... .ಒಂದು ಸೇವಿಂಗ್ಸ್ ಖಾತೆ ತೆರೆಯಿರಿ.

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ಸ್ಥಾಪನೆ: 1906)

ರಿಜಿಸ್ಟರ್ಡ್ ಆಫೀಸು: ಉಡುಪಿ | ಆಡಳಿತ ಆಫೀಸು ಮಂಗಳೂರು

ಪುಸ್ತಕ ವಿಮರ್ಶೆ

[ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿ ವಿನಂತಿ —ಸಂ. ನ.]

ಕಪಾಳ ಮೋಕ್ಷ— ಲೇಖಕರು: ಸಿರಿಪತಿ. ಪ್ರಕಾಶಕರು: ನವಭಾರತ ಪುಸ್ತಕ ಭಂಡಾರ, ಉಡುಪಿ. ಪುಟಗಳು: ೧೭೫. ಬೆಲೆ: ರೂ. ೨-೦೦.

ಕನ್ನಡದ ಓದುಗರಿಗೆ ಈಗಾಗಲೇ ಪರಿಚಿತರಾಗಿರುವ ಶ್ರೀ ಸಿರಿಪತಿಯವರು ತಮ್ಮ ಹದಿನೈದು (ಕಥೆಗಳು, ಪ್ರಬಂಧ ೭) ಕೃತಿಗಳನ್ನು 'ಕಪಾಳ ಮೋಕ್ಷ'ವೆಂಬ ಹೆಸರಿನಿಂದ ಸಂಗ್ರಹಿಸಿದ್ದಾರೆ. ತಮ್ಮ ಕೆರಿಯರ್‌ಯಸ್ಸಿನಲ್ಲಿಯೇ ಅಖಿಲ ಭಾರತ ಸಂಚಾರ ಮಾಡಿರುವುದರ ಪ್ರಭಾವವೆಂಬಂತೆ ಇವರ ಕೃತಿಗಳಲ್ಲಿ ಭೋಪಾಲ, ಹೋಶಿಯಾರಪುರ, ಬನಾರಸ ಮೊದಲಾದ ಊರುಗಳ ವರ್ಣನೆಯೂ ಅಲ್ಲಿನ ಜನರ ಹೆಸರುಗಳೂ ಬರುತ್ತವೆ. ಕನ್ನಡದಲ್ಲಿ ಇಷ್ಟೊಂದು ವಿಶಾಲವಾದ ಕ್ಷೇತ್ರದಲ್ಲಿ ಸೌಲಿಕವಾಗಿ ಕೈಯಾಡಿಸಿದವರು ವಿರಳರೆನ್ನಬಹುದು.

ಲೇಖಕರು ಪ್ರಬಂಧವೆಂದು ಏಳು ಕೃತಿಗಳನ್ನು ಕರೆದರೂ ಅವುಗಳಲ್ಲಿ "ನಮ್ಮ ಊರು" ಒಂದನ್ನುಳಿದು ಮತ್ತಿನವು ಕಥೆಗಳಂತೆಯೇ ಭಾಸವಾಗುತ್ತವೆ. ಆ ದೃಷ್ಟಿಯಿಂದ "ನಮ್ಮ ಊರ"ನ್ನು ಕೈಬಿಟ್ಟೇ ಸಂಗ್ರಹ ಮಾಡುತಿದ್ದರೆ ಉತ್ತಮವಿತ್ತೆನಿಸುತ್ತದೆ. ಹೋಟೇಲಿಗೆ ಬರಲಿರುವ ಪೋಲೀಸು ಇನ್ಸ್‌ಪೆಕ್ಟರನೆಂದು ತಿಳಿದು ಮತ್ತೊಬ್ಬನನ್ನು "ಆದರಿಸಿ ಸೌರವಿಸಿ ನುಣುಚಿಕೊಳ್ಳುವ" ಹೋಟೇಲು ಮಾಲಿಕರ ಪ್ರವೃತ್ತಿಯು ಭೋಪಾಲ ಸ್ಟೇಶನ್ ಎಂಬ ಮೊದಲ ಕಥೆಯಲ್ಲಿದೆ. ಈ ಕಥೆಯಲ್ಲಿ ದರೋಡೆಗೆ ಸಿಕ್ಕಿದ ಆ ಪ್ರವಾಸಿಯ ಮೇಲೆ ದೈವದ ಅನುಗ್ರಹವಾದಘಟನೆಯೇ ಪ್ರಭಾವ ಬೀರುತ್ತದೆ. ಹೆತ್ತವರಿಗೆ ಹಗ್ಗಣ ಮುದ್ದು ಎಂಬಂತೆ ಲೇಖಕನಿಗೆ ತನ್ನ ಕೃತಿಯ ಮೇಲಿರುವ ಪೂಜ್ಯ ಭಾವನೆ ಕಪಾಳ ಮೋಕ್ಷದಲ್ಲಿ ಪ್ರಕಟವಾಗಿದ್ದು ಸಹಜವಿದೆ. ಆದಿನ ರಾತ್ರಿ, ಒಡೆದ ಮನೆ, ಹೋರ್ಸ್ ರೇಸ್—ಇವು ಕುತೂಹಲಕಾರಕವಾದ ಘಟನೆಗಳಿಂದ ಕೂಡಿ, ಮುಂದೇನು ಎಂಬುದನ್ನು ತಿಳಿಯುವ ಆತುರ ಪಾಠಕನಲ್ಲಿ ಹುಟ್ಟಿಸುತ್ತವೆ. ರೋಮಾಂಚಕವಾದ ಓದಿ ಮರೆತು ಬಿಡಲಾರದ ಕಥೆಗಳಾಗಿವೆ. ಉಳಿದುವು ಮಧ್ಯಮ ವರ್ಗದ ಕಥೆಗಳು.

ಸಣ್ಣ ಕಥೆಗಳಲ್ಲಿ ಭಾಷಾ ಶೈಲಿಯು ಹರಿತವಿರಬೇಕ; ಕಥೆಯು ರೇಸಿನ ಕುದುರೆಯಂತೆ ಓಡಬೇಕು; ಅದು ಭಾಷೆಯ ದೋಷದಿಂದಾಗಲೀ ವರ್ಣನೆಯ ಮರೆಯಲ್ಲಾಗಲೀ ಶೈಲಿಯ ಜಟಿಲತೆಯಿಂದಾಗಲೀ ಮುಗ್ಗರಿಸಬಾರದು. ಹೇಳಬೇಕಾದುದನ್ನು ಆದಷ್ಟು ಕಡಿಮೆ ಶಬ್ದಗಳಿಂದ ಆದಷ್ಟು ತೀವ್ರವಾಗಿ ಹೇಳಬೇಕು 'ಕಪಾಳ ಮೋಕ್ಷದ ಕೃತಿಗಳಲ್ಲಿ ಕೆಲವೆದೆ ಈ ಸಲ್ಲಕ್ಷಣಗಳಲ್ಲವೆಂಬಂತೆ ಭಾಸವಾಗುವುದು. ವಾರ ಪತ್ರಿಕೆಗಳ ಕಥೆಗಳೆಲ್ಲವೂ ಸಂಕಲನದ ಕಥೆಗಳಾಗಲಾರವು. ಸಂಕಲನ ಮಾಡುವಾಗ ಪ್ರಭಾವಕಾರಿ, ಸಾಹಿತ್ಯೋಪಯೋಗಿ ಕೃತಿಗಳನ್ನೇ ಆರಿಸಿಕೊಳ್ಳಬೇಕೆನಿಸುತ್ತದೆ.

ಕಪಾಳ ಮೋಕ್ಷದ ಕೃತಿಗಳು ಎಲ್ಲರೂ ಓದಬಹುದಾದ, ಒಂದು ಸಾಮಾನ್ಯ ಕೃತಿ ಕನ್ನಡಿಗರು ಲೇಖಕರಿಂದ ಇನ್ನೂ ಉತ್ತಮ ಕೃತಿಗಳನ್ನು ನಿರೀಕ್ಷಿಸಬಹುದು.

ಕವಿಕಾಮಿನಿ— ಮೂಲಲೇಖಕರು: ಶ್ರೀ ಜೊ. ಸ. ಆಳ್ವಾರಿಸ್. ಅನುವಾದಕರು: ಶ್ರೀ ಎಲ್. ಮಚಾದೊ, ಪ್ರಕಾಶಕರು: ದಿ. ಕೆ. ಎಸ್. ಪ್ರಕಾಶನ್, ಮೂಲ್ಕಿ ಪ್ರೆಸ್ ಬಿಲ್ಡಿಂಗ್, ಮೂಲ್ಕಿ,)ದ. ಕ. ನ್ನಡ)

ಆಂಗ್ಲ ಮತ್ತ ಕೊಂಕಣಿ ಭಾಷೆಗಳಲ್ಲಿ ಬರೆಯುವ ಅಭಿರುಚಿಯಿರುವ "ಮಿತ್ರ"ದ ಸಂವಾದಕರಾದ ಶ್ರೀ ಆಳ್ವಾರಿಸರು ಈಗಾಗಲೇ ಹದಿನಾಲ್ಕು ಗ್ರಂಥಗಳನ್ನು ಬರೆದಿದ್ದಾರೆ. ಇವರ ನಾಲ್ಕು ಕೃತಿಗಳು ಇಂಗ್ಲೆಂಡಿನ ಬ್ರಿಟಿಷ್ ಮ್ಯೂಜಿಯಂನಲ್ಲಿ ಪ್ರದರ್ಶಿಸಲ್ಪಡುತ್ತಿವೆ. ಶ್ರೀಯುತರ ಕೊಂಕಣಿ ಕಾದಂಬರಿಯೊಂದರ ಅನುವಾದವಾದ ಕವಿ-ಕಾಮಿನಿ'ಯೊಂದು ಪವಿತ್ರ ಹೃದಯದ ಪ್ರಣಯಿಗಳ ಸುಖಾಂತ ಕಥೆ.

ಬೊಂಬಾಯಿಗೆ ತೆರಳಿದ ಪ್ರಾಪ್ತವಯಸ್ಕೆಯಲ್ಲಿ ಅಜ್ಞಾತ ಕವಿಯೊಬ್ಬನ ಕೃತಿಗಳಿಂದ ಮುಗ್ಧಳಾಗಿ ಆತನನ್ನೇ ಹೊಂದಲು ಹಂಬಲಿಸುತ್ತಾಳೆ. ಆ ಕವಿ ಮತ್ತಾರೂ ಆಗಿರದೆ ತಾನು ನೆಲೆಸಿರುವ ಚಿಕ್ಕಪ್ಪನ ಮನೆಯಲ್ಲಿಯೇ ಇರುವ ವಿಲ್ಲಿಯೆಂದರಿಯಳು. ವಿಲ್ಲಿಯು ನೋಟಕ್ಕೆ ಸ್ಪರದ್ರೂಪಿಯಲ್ಲವಾದುದರಿಂದ ಲಿಲ್ಲಿಗೆ ಆತನನ್ನು ಕಂಡರಾಗದು ಅಜ್ಞಾತ ಕವಿಯಲ್ಲಿ ಅನುರಕ್ತಳಾದ ಲಿಲ್ಲಿ ಆತನನ್ನು ನೆನೆ ನೆನೆದು ಕೊರಗುತ್ತಿರಲು, ವಿಲ್ಲಿಯೂ ಸಂತೋಷದಿಂದ ತನ್ನನ್ನು ಮರೆಮಾಜಿ ಉತ್ತಮ ನಾಟಕವೊಂದನ್ನು ಆಡುತ್ತಾನೆ. ಈ ನಾಟಕದ ಯಶಸ್ವಿತೆಯಿಂದ ವಿಲ್ಲಿಯ ಮೇಲಿದ್ದ ದುರಭಿಪ್ರಾಯ ಮೆಲ್ಲ ಮೆಲ್ಲನೆ ಮಾಯವಾಗಿ ಕೊನೆಗೆ ಅದ್ಭುತ ರೀತಿಯಲ್ಲಿ ಸುಖಾಂತವಾಗಿ ಕೊನೆಗಾಣುತ್ತದೆ.

ಪ್ರಣಯದ ಕಥಾ ವಸ್ತುವನ್ನು ಹೊಸತೆನ್ನುವಂತಿಲ್ಲವಾದರೂ ಈ ಪ್ರಣಯವನ್ನು ಸುತ್ತಲೂ ಹೆಣೆದು ಮುಂದುವರಿಸಿದ ಜಾಣ್ಮೆ ಹೊಸದು. ಲಿಲ್ಲಿ ಮತ್ತು ವಿಲ್ಲಿಯರ ನಡುವೆ ಸಾಗರ ಪ್ರಮಾಣದ ಕಂದಕವಿರುವಾಗ, ಆಕೆಯ ಕನಸಿನ ಮನಸಿನ ಅರಗಿಳಿ ತಾನೆಂದು ವಿಲ್ಲಿ ಹೇಳದೆ, ಆ ಕಂದಕವನ್ನು ಸಣ್ಣದಾಗಿಸಲು ಮಾನಸಿಕ ಚಿಕಿತ್ಸೆಯನ್ನು ಕೈಗೊಳ್ಳುತಾನೆ. ಇಂತಹ ಚಿಕಿತ್ಸೆಗೆ ಅನುಗುಣವಾಗಿ ಘಟನೆಗಳು ಒಂದರ ಮೇಲೊಂದು ನಡೆದು ಸಾಗರವಿಡಿತುಂಬಿ ಬರುತ್ತಿದೆಯೆಂಬಾಗ ಅಘಾತವೊಂದು ಸಂಭವಿಸುತ್ತದೆ; ಇದರ ದೆಸೆಯಿಂದ ಲಿಲ್ಲಿಯೇ ಕಂದಕ ಮುಚ್ಚಲು ಕೊನೆಯ ಮುಷ್ಟಿ ಮಣ್ಣು ಸುರಿಯುತ್ತಾಳೆ—ವಿಲ್ಲಿ ಉತ್ತಮ ಅಭಿನಯ ಕುಶಲನೆಂಬ ಪ್ರಶಸ್ತಿಗೆ ಪಾತ್ರನಾಗುತ್ತಾನೆ.

ವಿಲ್ಲಿ— ಮತ್ತು ಲಿಲ್ಲಿಯರ ವಾಕ್ಪ್ರಗಳು ಪಂತಮ್ಮ ಸ್ವಭಾವ, ಪ್ರಕೃತಿಗಳಿಗನುಸಾರವಾಗಿಯೇ ರೂಪಿತವಾಗಿವೆ; ಯಶಸ್ವಿಯಾಗಿವೆ ಲಿಲ್ಲಿಯ ತಂದೆ ಚಿಕ್ಕಪ್ಪನವರದು ತೃಪ್ತಿಕರವಿವೆ. ಕಾದಂಬರಿಯ ಶೈಲಿಯು ಸರಳವೂ ಮನೋಹರವೂ ಆಗಿದ್ದು ಹೃದಯಂಗಮವಾದಿದೆ. ಕವಿ-ಕಾಮಿನಿ ಕನ್ನಡ ಸಾಹಿತ್ಯಕ್ಕೆ ಕ್ರೈಸ್ತ ಸಹೋದರರೊಬ್ಬರಿಂದ ಉಡುಗೊರೆಯಾಗಿ ಬಂದಿದೆ ಎಂಬುದು ಅಭಿಮಾನದ ಸಂಗತಿ. ಎಲ್ಲ ಕನ್ನಡಿಗರೂ ಅವಶ್ಯ ಓದಲೇ ಬೇಕಾದ ಕನ್ನಡ ಕಾದಂಬರಿಗಳಲ್ಲಿ ಈ ಅನುವಾದವು ಒಂದೆಂಬುದು ನಿಸ್ಸಂದೇಹ.

— ಗೋರಾ.

ಆಚರಣೆಯಲ್ಲಿಯ ವಿಜ್ಞಾನ

'ಸಿರಿಪತಿ'

ಅಂದು ರವಿವಾರ. ನಾನು ಆದೇನೋ ಓದುತ್ತ ಕುಳಿತಿದ್ದೆ! ಮನೆಯವರೆಲ್ಲ ಗುಡಿಗೆ ಹೋಗಿದ್ದರು. ಅಷ್ಟರಲ್ಲಿ ನೆರಮನೆಯ ರಾಮರಾಯರಲ್ಲಿ ಕೆಲಸ ಮಾಡುವ ಕಮಲಿ ಬಾಗಿಲಲ್ಲಿ ನಿಂತು 'ರಾಯರೇ" ತಟಕು ಕಂಡ ವಯಸ್ತ್ರೀನಿ. ಅವರ್ಯಾಗ ಪೊಟ್ಟಿ—ತೀರ್ಯದ" ಎಂದಳು. ನಮ್ಮ ಬಚ್ಚಲ ಮನೆಯಲ್ಲಿ ಕೆಂಡ ಯೊವಾಗಲೂ ಇರುವ ವಾಡಿಕೆ.

ನಾನು ಕಮಲಿಯನ್ನು ನೋಡಿ "ಏನವ್ವಾ, ಬರಿ ಕೈಲೆ ಬಂದಿದ್ದಿ ಕೆಂಡ ಹೇಗೊಯ್ಯೇದು. ಬೇಕಾದ್ರೆ ನಮ್ಮ ಪೊಟ್ಟನೇ ಕೊಂಡ್ಹೊಗು" ಎಂದು ಟೇಬಲ್ಲಿನ ಮೇಲಿದ್ದ ಕಡ್ಡಿ ಪೆಟ್ಟಿಗೆಯನ್ನು ಕೊಡಲೆಂದು ಎದ್ದೆ.

ಕಮಲಿ ಬಹು ಜಾಣೆ, "ನಗುತ್ತ" ಮತ್ತೇನ್ಬೇಕು, ಕೈಯಾಗೆ ಕೊಂಡೊಯ್ತೇನಿ. ನಿಮ್ಮ ಪೋಟ್ಟದಾಗೆ ಬೆಂಕಿ ಹಿಡಿಸಿದ್ಧಿಂತ ಕೆಂಡನೇ ವಾಸಿ" ಎಂದಳು.

ನನಗೆ ಆಶ್ಚರ್ಯವಾಯಿತು. ಈ ಹುಡುಗಿ ಬರಿಗೈಯಲ್ಲಿ ಬೆಂಕಿಕೆಂಡವನ್ನೊಯ್ಯುವದನ್ನು ನೋಡಲೆಂದು ಬಚ್ಚಲಿಗೆ ಹೋಗಿ ನೋಡಿದೆ. ಕಮಲಿ ಮೊದಲು ಅರಿದ ಬೂದಿಯನ್ನು ತನ್ನ ಬೊಗ್ಗೆಯಲ್ಲಿ ತುಂಬಿಕೊಂಡು ಅದರ ಮಧ್ಯದಲ್ಲಿ ಕೆಂಡವನ್ನು ಅಳವಡಿಸಿ ಇಟ್ಟುಕೊಂಡು ಸುಲಭವಾಗಿ ಕೆಂಡವನ್ನು ಕೊಂಡೊಯ್ದಳು. ನನಗೆ ನಾಚಿಕೆಯಾಯಿತು.! ಆ ಸಣ್ಣಹುಡಿಗಿಗೆ ಗೊತ್ತಿದ್ದ ವಿಜ್ಞಾನ ನನಗೆ ಹೊಳೆಯಲಿಲ್ಲ, ಬೂದಿಯು ಉಷ್ಣವಾಹಕವಲ್ಲವೆಂಬ ವಿಷಯ ಎಷ್ಟೋ ಬಾರಿ ಓದಿ ತಿಳಿದಿದ್ದರೂ ಈ ಪ್ರತ್ಯಕ್ಷಾನುಭವವೆನಗಿರಲಿಲ್ಲ!!"

ಪ್ರತ್ಯಾಕ್ಷಾಚರಣೆಯಲ್ಲಿ ಅನುಭವವಿದ್ದ ಚಿಕ್ಕವರೂ ಸಹ ಹಿರಿಯರಿಗಿಂತ ವಿಜ್ಞಾನಿಗಳಿರಬಹುದು. ಅವರ ತರ್ಕವನ್ನು ಸಣ್ಣವರ ಮಾತೆಂದು ಅಲ್ಲಗಳೆಯುವಂತಿಲ್ಲ—ಕೆಲವಿಜ್ಞಾನಗಳು ಓದದವರಲ್ಲಿಯೂ ಅಡಕವಾಗಿದೆ. ಇದು ಪ್ರತ್ಯಕ್ಷ ಆಚರಣೆಯ ಅನುಭವ.

(ಇನೇ ಪುಟದಿಂದ)

ಇದೇ ರೀತಿಯಿಂದ ಪ್ರಕಟೀಕರಿಸುತ್ತಾನೆ. ತನ್ನ ಬಹುವಿಧ ಶಕ್ತಿಗಳನ್ನು ಸಮಸ್ತ ದಿಕ್ಕುಗಳಲ್ಲಿಯೂ, ಪ್ರಸಾರಗೊಳಿಸುತ್ತ ಈಶ್ವರನು ತನ್ನ ಸೃಷ್ಟಿಯ ಜೀವರಾಶಿಗಳ ಆತ್ಮಸಿಹಿತ ಪ್ರಯೋಜನಗಳನ್ನು ಪೂರ್ಣಗೊಳಿಸುತ್ತಾನೆ. ಆ, ಆತ್ಮಸಿಹಿತ ಪ್ರಯೋಜನವೆಂದರೆ ಆತನೇ ಆಗಿರುವನು-ಮತ್ತು ಈ ರೀತಿ ಆತನು ತನ್ನನ್ನು ಬಹುರೂಪಗಳಿಂದ ಪ್ರಕಟಿಸಿಕೊಳ್ಳುತ್ತಾನೆ. ಆತನೂ ಕೆಲಸ ಮಾಡುತ್ತಾನೆ. ಏಕೆಂದರೆ, ಕಾರ್ಯಗೈಯ್ಯದ ಹೊರತು ಆತನು—ಸದಾ ತನ್ನ ಸಂಪತ್ ಶಕ್ತಿಗಳನ್ನು ಹೇಗೆ ತಾನೆ ದಾನಮಾಡಬಲ್ಲನು? ಈ ರೀತಿಯಿಂದ ಸದಾ ದಾನ ನೀಡುವುದರಲ್ಲಿಯೇ ಆತನ ಆನಂದವೂ ಅಡಗಿರುವುದು.

—(ಸರೇಸ)

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮುಗ್ಗುಲಿನಲ್ಲಿ ಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ.ನ

ದಿ ವಿಜಯ ಬೇಂಕ್ ಲಿಮಿಟೆಡ್
ಶೆಡ್ಯೂಲ್ಡ್ ಬೇಂಕ್. ಸ್ಥಾಪನೆ: 1931
ರಿಜಿಸ್ಟರ್ಡ್ ಆಫೀಸು:
ವಿಜಯ ಬೇಂಕ್ ಬಿಲ್ಡಿಂಗ್, ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು-3, ಸೌತ್ ಕೆನರಾ.
ಕಾಯಂ ಠೇವಣಾತಿ ಬಡ್ಡಿ ದರವನ್ನು ಶೇಕಡ 5½ರ ವರೆಗೆ ಹೆಚ್ಚಿಸಲಾಗಿದೆ.
ಏಳು ದಿವಸದ ನೋಟೀಸಿನಲ್ಲಿ ಕೇಳಿದಾಗ್ಯೆ ಹಿಂದೆ ಪಡೆಯುವ ಡಿಪೋಸಿಟುಗಳನ್ನು (Call Deposits) ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸೋಣಾಗುತ್ತದೆ.
ಹೆಚ್ಚಿನ ಮಾಹಿತಿಗೆ ನಮ್ಮ ಶಾಖೆಗಳಲ್ಲಿ ದಯಮಾಡಿ ವಿಚಾರಿಸಿರಿ.
THE VIJAYA BANK LTD.

Tel: 'BLUEYAGAR'. —— ಚಿನ್ನ ಮತ್ತು ವಜ್ರಗಳ ಆಧುನಿಕ ತವರುಮನೆ —— Phone: 374.
ಕೆ.ಆರ್.ಕೆ.ಶೇಟ್ ಡಯಮಂಡ್ ಮಾರ್ಟ್
ಸ್ಥಾಪನೆ:1919] ಚಿನ್ನ ಮತ್ತು ವಜ್ರದ ವ್ಯಾಪಾರಿಗಳು,(ಗವರ್ನ್‌ಮೆಂಟ್ ಕಾಲೇಜ್ ಎದುರುಗಡೆ)ಮಂಗಳೂರು. ಮಾಲಿಕ:ಕೆ.ಕೆ.ಆರ್.ಶೇಟ್

ಗೆಳೆಯನ ಮದುವೆ

(೨ನೇ ಪುಟದಿಂದ)

ಧೈರ್ಯದಿಂದಲೋ ನಾನು ವೈಸೂರಿನಿಂದ ಶಿವಮೊಗ್ಗಕ್ಕೆ ಯಾವ ಪರಿವಾರವೂ ಕುಟುಂಬವೂ ಇಲ್ಲದೆ ಒಂಟಿಯಾಗಿಯೇ ತೆರಳಿದೆ ಬಸ್ಸಿನಲ್ಲಿ ಕುಳಿತಾಗಲೆಲ್ಲ ಸುತ್ತ ಮುತ್ತಮುತ್ತಲೂ ನೋಡುವ ಒಂದು ದುರಭ್ಯಾಸ ನನ್ನಲ್ಲಿದೆ. ಅಂದರೆ ಮಾರ್ಗದ ಇಕ್ಕೆಲಗಳ ದೃಶ್ಯಾವಳಿಗಳನ್ನು ವೀಕ್ಷಿಸುವುದು ಅಂದು ಕೂಡಾ ಕಣ್ಣಿಗೆ ಬಿದ್ದ ಕಾಡು, ಗುಡ್ಡ, ಬೆಟ್ಟ, ಬಯಲು, ಗದ್ದೆ ತೋಟಗಳನ್ನೆಲ್ಲಾ ನೋಡಿ ಮಧ್ಯೆ ಮಧ್ಯೆ ಸಿಕ್ಕಿದ ಸಣ್ಣ ಸುಟ್ಟ ಊರುಗಳ ಹೆಸರುಗಳನ್ನು ಬರೆದುಕೊಂಡು ಶಿವಮೊಗ್ಗವನ್ನು ಸೇರಿದಾಗ ರಾತ್ರಿ ಏಳು ಘಂಟೆಯಾಗಿತ್ತು. ಬಸ್ಸಿನಿಂದಿಳಿದು ಸುತ್ತಮುತ್ತಲೂ ನೋಡಿದೆ. ಎಲ್ಲಾದರೂ ವೆಂಕಟೇಶನ ತಲೆ ಕಾಣುತ್ತದೊ ಎಂದು. ಆತ ಸ್ವಲ್ಪ ಕುಳ್ಳು ಮನುಷ್ಯನಾದ್ದರಿಂದ, ಬಸ್ ಸ್ಟ್ಯಾಂಡಿನಲ್ಲೇ ಮೂಲೆ ಮೂಲೆಗಳಲ್ಲಿ ಹುಡುಕಾಡಿದೆ. ಅವನ ತಲೆ ಕಾಣಲಿಲ್ಲ, ಆದರೆ, ದುರದೃಷ್ಟವಶಾತ್ ನಾನು ಹೋಗಬೇಕಾದಲ್ಲಿಗೆ ಹೋಗುವ ನಾಲ್ಕಾರು ಜನರ ಗುಂಪೊಂದು ಕಣ್ಣಿಗೆ ಬಿತ್ತು. ಅವರೊಂದಿಗೆ ನಾನೂ ಸೇರಿ ಶಿವಮೊಗ್ಗದಲ್ಲಿ ದುರ್ಗಿಗುಡಿ ಬಡಾವಣೆಯಲ್ಲಿ 'ಗಂಡಿನ ಕಡೆ"ಯವರು ಇಳಿದುಕೊಂಡಿದ್ದ ಮನೆಗೆ ಹೋದೆ. ಮನೆಯ ಮುಂದೆಯೇ ಸೂಟುಬೂಟು ಧಾರಿಯಾಗಿ ನಿಂತಿದ್ದ 'ಮದುವೆ ಗಂಡು' ಗೋವಿಂದ ನನ್ನ ಕೈ ಹಿಚುಕಿದ. ಹಲ್ಲು ಬಿಟ್ಟ. "ನೀನು ಬಂದದ್ದು ಬಹಳ ಸಂತೋಷವಾಯ್ತು" ಎಂದ. ಅಷ್ಟರಲ್ಲೇ ನಾಲ್ಕಾರು ಜನರು ನನ್ನನ್ನು ಮುತ್ತಿ ನಾನು ಕೈ ಕೊಡದಿದ್ದರೂ ನನ್ನ ಕೈಯನ್ನೆಳೆದು ಕುಲುಕಿ "I am glad to meet you, ಎನ್ನುತ್ತಾ ಹಲ್ಲುಗಿಂಜಿ ನಿಂತರು. ಅಂದರೆ ನನ್ನ ಪರಿಚಯವನ್ನು ಮೊದಲೇ ಅಲ್ಲಿದ್ದವರಿಗೆಲ್ಲಾ ತಿಳಿಸಿ "ಇಂಥಾ ಪ್ರಾಣಿಯೊಂದು ಇಲ್ಲಿಗೆ ಬರುತ್ತೆ ಇಂದು" ಎಂದು ಹೇಳಿ ಕಿತಾಪತಿ ನಡೆಸಿದ್ದ ನಮ್ಮ ಗೋವಿಂದ. ಅವರೆಲ್ಲಾ ಒಳಗೊಳಗೆ ಮಪ್ಪರ ಪಡುತ್ತಾ ಬಾಯಲ್ಲಿ ಮಾತ್ರ "I am glad to meet you" ಎನ್ನುತ್ತಿದ್ದಾರೆಂದು ನನಗೆ ಗೊತ್ತು. ಅವರ ಮಾತಿಗೆಲ್ಲಾ ತಲೆಯಾಡಿಸಿ ಆ ಮನೆಯೊಳಗೆ ಹೋಗಿ ನೀರು ಕಂಡು ಮುಖಕೈಕಾಲುಗಳನ್ನು ತೊಳೆದ ಕೊಂಡೆ. ಅನಂತರ ಅಲ್ಲಿದ್ದ ಕುರ್ಚಿಯೊಂದರ ಮೇಲೆ ಕುಳಿತು ನನ್ನ ಪರಿಚಯ ನ್ನು ಕೇಳಿದವರಿಗೆಲ್ಲಾ ಹೇಳಿ, ಅವರ ಪರಿಚಯವನ್ನು ಕೇಳಿ ಅಲ್ಲೇ ನುರೆತು ಬಿಟ್ಟೆ. ಗೋವಿಂದನ ಅಪ್ಪ, ಅಜ್ಜ, ಮಾವ, ಭಾವ ಇತ್ಯಾದಿ ಬಳಗವೆಲ್ಲಾ ನನ್ನನ್ನು ವಿಚಿತ್ರ ಪ್ರಾಣಿಯನ್ನು ನೋಡುವಂತೆ ನೋಡಿ ಮಾತನಾಡಿಸಿದರು. 'ನೀವು ಬಂದದ್ದು ಬಹಳ ಸಂತೋಷವಾಯ್ತು. ನೋಡಿ, ಗೋವಿಂದ ನಿಮ್ಮನ್ನೇ ನೆನೆಸುತ್ತಿದ್ದ' ಎಂದರು. "ಅದೆಲ್ಲಾ ಸುಳ್ಳು. ಆತ ಆ ಮದುವೆಯಾಗುವ ಹುಡುಗಿಯನ್ನೇ ನೆನೆಯುತ್ತಿದ್ದಾನೆ, ನನ್ನನ್ನಲ್ಲ" ಎಂದು ಛರ ವಸೆಯನ್ನಿತ್ತೆ ಅವರಿಗೆ.

ಸ್ವಲ್ಪ ಹೊತ್ತಿನ ಮೇಲೆ ಕಾಫಿ ಬಂತು ಕೆಲವು ಹೋಟೆಲುಗಳ ಕಾಫಿಯನ್ನೂ ಮದುವೆ ಮನೆಯ ಕಾಫಿಯನ್ನು ಕುಡಿಯಲು ಬಹಳ ಕಾಲದಿಂದಲೂ ಅಭ್ಯಾಸ ಮಾಡಿರಬೇಕು. ನನಗೆ ಆ ಅಭ್ಯಾಸ ಸ್ವಲ್ಪ ಮಟ್ಟಗಿದ್ದುದರಿಂದಲೇ ಆ ಕಾಫಿಯೆಂಬ ದ್ರವಾಶನವನ್ನು ಕಣ್ಣುಮುಚ್ಚಿ ಬಾಯಿ ತೆರೆದು ಗಂಟಲಿಗೆ ಸುರಿದುಕೊಂಡೆ.....

ಸ್ವಲ್ಪ ಹೊತ್ತು ಗೋವಿಂದನ ಹಿಂದೆ ಮುಂದೆ ಹೋಗಿ ಅವನ ವೇಷ ಭೂಷಣಗಳನ್ನು ವೀಕ್ಷಿಸಿದೆ. ಸುಂದರ ವಸ್ತ್ರವಿನ ಬಳಿ ಒಂದು ಕುರೂಪ ವಸ್ತ್ರವನ್ನು ಇಟ್ಟರೆ ಆ ಸುಂದರ ವಸ್ತ್ರವಿಗೆ ದೃಷ್ಟಿ ತಾಗುವುದಿಲ್ಲವಂತೆ. ಹಾಗೆಯೇ ಗೋವಿಂದನಿಗೂ ಯಾವ ಹೆಣ್ಣಿನ ದೃಷ್ಟಿಯೂ ತಾಗದಿರಲೆಂದು ಅದಕ್ಕಾಗಿ ನಾನು ಅವನ ಬಳಿ ಅವನ ಮದುವೆಯಾಗುವ ವರೆಗೂ ಇರಬೇಕೆಂದೂ ಕೆಲವರ ಅಭಿಪ್ರಾಯವಾಗಿತ್ತು. ಆ ಅಭಿಪ್ರಾಯವನ್ನು ಅವರು ಹೊರಗೆಡುಹದಿದ್ದರೂ ·ಅವನ ಬೇಪರ ಕಳೆಯಲಿಕ್ಕಾಗಿ' ಅವನ ಜತೆಯಲ್ಲಿರಲು ನಾನು ಒಪ್ಪಿದ್ದೆ. ಸ್ವಲ್ಪ ಹೊತ್ತು ಬೇಡದ ವಿಚಾರಗಳನ್ನೇ ಮೆಲುಕು ಹಾಕುತ್ತಾ ಅಲ್ಲಿ ಹರಿದಾಡುತಿದ್ದ ಜನಸ್ತೋಮವನ್ನು ವೀಕ್ಷಿಸುತ್ತಾ ಹೊತ್ತು ಕಳೆದೆ. ವೆಂಕಟೇಶನೂ ಬಂದು ಬೆನ್ನನ್ನು ತಬಲ ಬಾರಿಸುವಂತೆ ಬಾರಿಸಿ ·ಬಂದದ್ದು ಸಂತೋಷವಾಯ್ತು' ಎಂದ, ನಾನು ಹೋದ್ದ ಎಲ್ಲರಿಗೂ ಸಂತೋಷವಾದ್ದಕ್ಕೆ ನನಗೂ ಸಂತೋಷವೇ ಆಯ್ತು.

ಅದೆಂಥದೋ! ಕಾರ್ಯಕ್ರಮಗಳಿವೆಯೆಲ್ಲಾ ಮದುವೆಯ ಮುಂಚಿನ ದಿನ! ಅವೆಲ್ಲಾ ನಡೆಯುತಿದ್ದುವು. ಆ ವೇಳೆಗಾಗಲೇ ಇನ್ನು ಎಷ್ಟೋ ಜನ ನನ್ನ ಕೈಯನ್ನು ಹಿಚುಕಿ ನನ್ನ ಪರಿಚಯ ಪಡೆದು ನನ್ನನ್ನು ಅರೆ ಜೀವಿಯನ್ನಾಗಿ ಮಾಡಿದ್ದರು. ಹೆಣ್ಣಿನ ಮನೆಗೆ ಗಂಡನ್ನು ಕರೆದುಕೊಂಡು ಹೋದರು. ಹಿಂದೆ ಕಾಲಾಡಿಸಿಕೊಂಡು ಹೋಗುವವರ ಒಟ್ಟಿಗೆ ನಾನೂ ಹೋದೆ. ಅಲ್ಲೂ ಕೂಡ 'ಗೋವಿಂದನಿಗೆ ಏನೇನೋ ತೊಂದರೆಗಳನ್ನು ಕೊಡುತ್ತಿದ್ದರು, ಹೆಂಗಸರು ಹಾಗೂ ಪುರೋಹಿತರು. ಪಾಪ, ಆತ ಒಂದು ಹೆಣ್ಣಿನ ಕೈಹಿಡಿಯುವುದಕ್ಕಾಗಿ ಎಲ್ಲವನ್ನು ಸಹಿಸಿಕೊಂಡೇ ಕುಳಿತಿದ್ದ. ಸರಿ, ರಾತ್ರಿಯ ಊಟದ ಸಿದ್ಧತೆಯಾಯ್ತು. ಆ ಮನೆಯಲ್ಲಿ ಕುಳಿತವರ ಸಂಖ್ಯೆಗಿಂತ ಓಡಾಡುತಿದ್ದವರ ಸಂಖ್ಯೆಯೇ ಹೆಚ್ಚಾಗಿತ್ತು. ಗರ್ಭಿಣಿ ಹೆಂಗಸಿಗೆ ಹೊಟ್ಟೆ ನೋವು ಆರಂಭವಾದಾಗ ಔಷಧಿಗೆ, ಮಿಡ್‌ವೈಫ್‌ಗೆ, ನರ್ಸ್‌ಗೆ, ಕಾರಿಗೆ ಓಡಾಡುವಂತೆ ಆ ಮನೆಯಲ್ಲೂ ಗೋವಿಂದನ ಮದುವೆಗೆ ಎಲ್ಲರೂ ಯಾವುದೋ ಕಾರ್ಯದ ನೆವದಿಂದ ಓಡಾಡುತಿದ್ದರು. ಇದರಲ್ಲೂ ಹೆಚ್ಚು ಆ ಸಕ್ತಿಯನ್ನು ವಹಿಸುತಿದ್ದವರು ಹೆಣ್ಣು ಮಕ್ಕಳೇ! ಅವರ ಮಾತಿನಲ್ಲೇ ಹೇಳುವುದಾದರೆ 'ಭರ್ಜರಿಯ ಊಟ' ಮುಗಿಯಿತು. ಅನಂತರ ಶಯನದ ಸನ್ನದ್ಧತೆ. ಚಾಪೆ, ಹಾಸಿಗೆ, ಬೆಡ್‌ಶೀಟ್, ದಿಂಬುಗಳು ಅಲ್ಲಿಂದಿಲ್ಲಿಗೆ ಓಡಾಡಿದುವು. ನಾನು 'ಎಲ್ಲಿ ಬಿದ್ದುಕೊಳ್ಳಲಿ' ಎಂದು ಯೋಚಿಸುತ್ತಾ ತಲೆ ಕೆರೆದುಕೊಳ್ಳುತಿದ್ದಾಗ 'ಈ ರಾತ್ರಿ ನನ್ನೊಟ್ಟಿಗೆ ಮಲಗಣ್ಪಾ ರಾಜ' ಎಂದ ಗೋವಿಂದರಾಜ. 'ಈ ರಾತ್ರಿ ನಿನ್ನೊಟ್ಟಿಗೆ ಮಲಗಲು ಬಿಟ್ಟರೆ ನಾಳೆಯೂ ಮಲಗಲು ಬಿಟ್ಟಿಯ ನೀನು? ನಾಳೆಯಿಂದ ನನ್ನ ಗುರುತೇ ನಿನಗಿರಲಿಕ್ಕಿಲ್ಲ" ಎಂದೆ. "ಅದಕ್ಕಾಗಿಯೇ ಕಣಯ್ಯ ಇಂದು ನನ್ನೊಟ್ಟಿಗೆ ಮಲಗು ಎಂದು ಹೇಳಿದ್ದು" ಎಂದ. "ಸರಿ" ಎಂದೆ.

ಅವನಿಗಾಗಿಯೇ ಏರ್ಪಡಿಸಿದ್ದ ಸ್ಪೆಷಲ್ ರೂಮಿಗೆ ಹೋದೆ. ಗೋವಿಂದ ಮೊದಲಿನ ಗೋವಿಂದನಾಗಿರಲಿಲ್ಲ. ಅಗಲೇ ಏನೇನನ್ನೋ ಯೋಚಿಸಲು ಆರಂಭಿಸಿದ್ದ. ಅಷ್ಟರಲ್ಲಿ ಒಂದು ಹುಡುಗಿ ಬಂದು ಗೋವಿಂದನ ಪಾದಪದ್ಮಗಳನ್ನು ಮುಟ್ಟಿ ಕಣ್ಣಿಗೊತ್ತಿಕೊಂಡಿತು. ಅವನ ಭಾವೀ ಪತ್ನಿ ಅಕೆ ಎಂಬುದನ್ನು ನಾನು ಗುಣಾಕಾರ ಭಾಗಾಹಾರಗಳಿಂದ ತಿಳಿದೆ. "ಅಕೆಗೆ ಏನೆಂದು ಆಶೀರ್ವಾದ ಮಾಡಿದೆಯಯ್ಯ" ಎಂದು ಕೇಳಿದೆ. ಅವನು ನಕ್ಕ.

ಸಾಮಾನ್ಯವಾಗಿ ಒಂದು ಹೆಣ್ಣು ನಮಸ್ಕರಿಸಿದರೆ 'ದೀರ್ಘ ಸುಮಂಗಲೀ ಭವ" ಎಂದೋ 'ಸ ಪತ್ರವತೀಭವ' ಎಂದೋ ಗೊತ್ತಿಲ್ಲದ ಸಂಸ್ಕೃತದಲ್ಲಿ ಬೈದು ಬಿಡುವುದು ವಾಡಿಕೆ. ಗೋವಿಂದ ಮಾತ್ರ ಅಕೆ ತನ್ನನ್ನು ಅಪ್ಪಿಕೊಳ್ಳದೆ ತನ್ನ ಕಾಲನ್ನು ಮಾತ್ರ ಅಪ್ಪಿಕೊಂಡಳಲ್ಲಾ ಎಂದು ವೃಥೆ ಪಟ್ಟನೋ ಏನೋ!

ಅದು ಹೇಗೇ ಇರಲಿ, ಗೋವಿಂದನೊಡನೆ ಹಾಲು ಕುಡಿದು ಸ್ವಲ್ಪ ಹೊತ್ತು ಅವನ ಮಾವನ ವಿಚಾರವನ್ನು ವಿಚಾರಿಸಿ ಹಾಸಿಗೆಯ ಮೇಲೆ ಬಿದ್ದುಕೊಂಡೆ. ಮರುದಿನ ಎದ್ದು ನೋಡಿದಾಗ ಗೋವಿಂದ ಇರಲಿಲ್ಲ. ಆತ ಐದು ಘಂಟೆಗೇ ಎದ್ದು ಪುರೋಹಿತರ ಆಜ್ಞೆಯಂತೆ ನಡೆಯುತಿದ್ದ.

ನನಗೆ ಹೆಚ್ಚಿನ ಸಂತೋಷವಾದ್ದು ಗೋವಿಂದನ ಮಾವ ಪದ್ಮನಾಭಯ್ಯನವರ ವಿಚಾರ ತಿಳಿದು. ತುಂಬಿದ ಕೊಡ ಆ ವ್ಯಕ್ತಿ. ವಿದ್ಯೆ ವಿನಯ ಎರಡೂ ಇದೆ. ಮೇಲಾಗಿ ಸಾಯಿಬಾಬನ ಮಹಾಭಕ್ತನಂತೆ. ಹೈಸ್ಕೂಲು ಉಪಾಧ್ಯಾಯರಾಗಿ ಕೆಲವು ಸಮಯ ಕಳೆದು ಕೊನೆಗೆ ಅದೆಲ್ಲವನ್ನೂ ಬಿಟ್ಟು ವ್ಯವಸಾಯದಲ್ಲಿ ಹೆಚ್ಚಿನ ಆಸಕ್ತಿ ವಹಿಸಿ ಹತ್ತಾರು ಎಕರೆ ಭೂಮಿಯ ಮಾಲೀಕರು. ಶಿವಮೊಗ್ಗದಲ್ಲೇ ಹೊಸ ಮನೆ ಕಟ್ಟಿಸಿದ್ದಾರೆ. ಕಂಗು, ತೆಂಗು, ಭತ್ತ, ಜೋಳಗಳನ್ನು ಬೆಳೆಸಿ ತುಂಬ ಶ್ರದ್ಧೆಯಿಂದ ದುಡಿದು ದಿನೇದಿನೇ ಮೇಲೆ ಮೇಲೆ ಬರುತಿದ್ದಾರೆ. "ಅಂಧಾ ಮಾವನನ್ನು, ಅಂಧಾ ಮಾವನ ಮಗಳನ್ನು ಪಡೆದ ಗೋವಿಂದಾ, ನೀನು ಧನ್ಯ! ನಿನಗೆ ಕೊನೆಯ ತನಕವೂ ಶ್ರೇಯಸ್ಸು ಇದ್ದೇ ಇದೆ" ಎಂದೆ ಮನಸ್ಸಿನೊಳಗೇ.

ಮದುವೆಯ ಶುಭ ಕಾರ್ಯಗಳು ನಡೆಯುತ್ತಲೇ ಇದ್ದುವು, ರೇಶ್ಮೆಯ ಸಂಜೆಯನ್ನುಟ್ಟು, ರೇಶ್ಮೆಯ ವಲ್ಲಿಯನ್ನು ಹೊದ್ದು, ರುಮಾಲು ಧರಿಸಿ, ಜೋಳಿಗೆ ಸಿಡಿದು, ಬೂಟ್ಸ್ ಹಾಕಿಕೊಂಡು ಮದುವೆಯ ಗಂಡು "ಕಾಶೀ ಯಾತ್ರೆ"ಗೆ ಹೊರಟು ಫೋಟೋ ತೆಗೆಸಿಕೊಂಡು ಬರಿತು. ಅನಂತರ ಪರದೆಯ ಒಳಗೆ ನಿಲ್ಲಿಸಲ್ಪಟ್ಟ ಹೆಣ್ಣಿನ ಕೊರಳಿಗೆ ಮಾಲೆಯನ್ನು ಹಾಕಿತು ಗಂಡು. ಗಂಡಿನ ಕೊರಳಿಗೆ ಹೆಣ್ಣು ಮಾಲೆ ಹಾಕಿತು. ಆಗ ಮಾತ್ರ ಗೋವಿಂದ ತೀರಾ ಬಗ್ಗಿ ನಿಲ್ಲಬೇಕಾಯ್ತು. ಕೊನೆಗೆ ಏನೇನೋ ಉಂಟಲ್ಲಾ ಕಾರ್ಯಕ್ರಮ—ಜಾಳಿ ಕಟ್ಟುವುದು, ಸಪ್ತಪದಿ ನಡೆಯುವುದು ಇತ್ಯಾದಿ. ಅದರ ಮಧ್ಯೆ ಕೆಲವರು ಉಡುಗೊರೆ ತಂದು ಕೊಡತೊಡಗಿದರು. ಕೆಲವು ಟೆಲಿಗ್ರಾಂಗಳೂ ಒಂದು ವು ಗೋವಿಂದನಿಗೆ.

ಆ ಸಮಯಕ್ಕೆ ಸರಿಯಾಗಿ ಒಂದು ಮಹಾ ಸಮಸ್ಯೆ ಎದ್ದಿತು ನನ್ನಲ್ಲಿ—ಮದುವೆಯ ಶುಭ ಮುಹೂರ್ತದಲ್ಲಿ ಯಾವ ಉಡುಗೊರೆಯನ್ನು ಅರ್ಪಿಸಲಿ ನಾನು ಗೋವಿಂದನಿಗೆ? ಎಂಬ ದೊಡ್ಡ ಪ್ರಶ್ನೆ



NAVAYUGA, UDIPI.
REGD. NO.BG. 176

21-12-1961

LICENSE NO. 31
Licensed to Post without Prepayment

ಎದ್ದಿತು. ಎಲ್ಲರೂ ಸಾಮಾನ್ಯವಾಗಿ ಪುಸ್ತಕ, ಹಂಚೆ, ಶಾಲು, ಬೆಳ್ಳಿಯ ಲೋಟೆ, ತಟ್ಟೆ, ಸಿಗರೇಟ್ ಡಬ್ಬ ಇತ್ಯಾದಿಗಳನ್ನು ಉಡುಗೊರೆಯಾಗಿ ಕೊಡುತ್ತಾರೆ. ಅಂಥದೇ ಒಂದು ವಸ್ತುವನ್ನು ನಾನು ತಂದು ಕೊಟ್ಟರೆ ಸಾಕೇ? ನನ್ನ ಮತ್ತು ಆತನ ಸ್ನೇಹಕ್ಕೆ ಅಷ್ಟೇ ಬೆಲೆಯೇ? ಒಂದು ಸಾಮಾನ್ಯ ವಸ್ತುವನ್ನು ಉಡುಗೊರೆಯಾಗಿ ಕೊಟ್ಟರೆ ಅಷ್ಟರಲ್ಲೇ ಆತನಿಗೆ ತೃಪ್ತಿಯಾದೀತೇ? ಒಂದು ಪುಸ್ತಕವನ್ನೋ, ಒಂದು ಲೋಟವನ್ನೋ, ಅಥವಾ ಒಂದು ಶಾಲನ್ನೋ ಕೊಟ್ಟರೆ ನನ್ನ ಮನಸ್ಸಿಗಾದರೂ ತೃಪ್ತಿಯಾದೀತೇ? ಉಡುಗೊರೆಯ ಉದ್ದಿಶ್ಯವಾದರೂ ಏನು? ಆ ಉಡುಗೊರೆಯನ್ನು ಆತ ಬಯಸಿಯಾನೇ? ಅದರಲ್ಲಿ ಅವನಿಗೆ ಆಸೆ ಇದ್ದೀತೇ? ನನಗ ಏನೂ ತೋಚದಾಯಿತು.

ನಾನು ಯಾವ ಉಡುಗೊರೆಯನ್ನು ಕೊಡಲಿಲ್ಲ ಗೋವಿಂದನಿಗೆ ಅಲ್ಲಿದ್ದವರಿಗೆಲ್ಲಾ ಆಶ್ಚರ್ಯವಾಗಿರಬಹುದು ಕೆಲವರಿಗೆ ನನ್ನ ಮೇಲೆ ಕೋಪವೂ ಬಂತೋ ಏನೋ ಕೊನೆಗೆ ನಾನೊಂದು ನಿರ್ಧಾರಕ್ಕೆ ಬಂದೆ ಉಡುಗೊರೆ ಕೊಡಬೇಕು, ಆದರೆ ಗೋವಿಂದನಿಗಲ್ಲ. ಆತನ ಹಂಡತಿಗೂ ಅಲ್ಲ ಅವರ ಪ್ರೇಮ ದಾಂಪತ್ಯದಲ್ಲಿ ಜನಿಸುವ ಕೂಸಿಗೆ ಆ ನಿರ್ಧಾರ ಮಾಡಿಕೊಂಡು ಸುಮ್ಮನಾದೆ

ಮದುವೆಯ ಊಟ ನಾವು ಊಟಕ್ಕೆ ಕುಳಿತಿದ್ದರೆ ಗೋವಿಂದ ಪುಲಗಿದ್ದ ತಲೆ ನೋವಂತೆ, ಮೈ ಕೈ ನೋವಂತೆ, ಹೊಟ್ಟೆ ನೋವಂತೆ ಅಂತೆ ಅಂತೆ ನನಗೂ ಆ ಅಂತೆಗಳನ್ನು ಕೇಳಿ ಎಲೆಯಲ್ಲಿ ಬಡಿಸಿದ್ದು ಯಾವುದೂ ಹೊಟ್ಟೆಗೆ ಸಲೀಸಾಗಿ ಹೋಗಲು ಕೇಳಲಿಲ್ಲ. ಊಟದ ಶಾಸ್ತ್ರ ಮುಗಿಸಿ ಗೋವಿಂದನನ್ನು ನೋಡಿದೆ. ಆವನ ತಾಯಿ ಸಂಬೆ ಹಣ್ಣು ತಂದು ಅವನಿಗೆ ಸಿವಾಳಿಸಿ ಒಲೆಗೆ ಮೆಣಸಿನ ಕಾಯಿ ಹಾಕಿದ್ದರು ಸಮಾಚಾರವೇನೆಂದು ಕೇಳಿದೆ. "ದೃಷ್ಟಿ," ಎಂಬ ಉತ್ತರ ಬಂತು. ಗೋವಿಂದನಿಗೆ ದೃಷ್ಟಿಯಾಗಬೇಕಾದ್ದೆ. ಹೆಸೆ ಮಣೆಯಲ್ಲಿ ಕುಳಿತಿದ್ದ ಆ ಮನ್ಮಥನನ್ನು ಹೆಂಗಸರ ಗುಂಪೆಲ್ಲಾ ಒಂದೇ ದೃಷ್ಟಿಯಿಂದ ನೋಡುತ್ತಿದ್ದಾಗಲೇ ನಾನು ಊಹಿಸಿದ್ದ 'ಅವನಿಗೆ ಖಂಡಿತಾ ದೃಷ್ಟಿ ತಾಗುತ್ತದೆಂದು, ಅದರಲ್ಲೂ ಆ ಗುಂಪಿನಲ್ಲಿ ಹೆಚ್ಚು ಮದುವೆಯಾಗದ ಹೆಣ್ಣುಗಳೇ ಕುಳಿತಿದ್ದುವು. ಗೋವಿಂದನ ಹಿಂಭಾಗದಲ್ಲಿ ನಾನು ನಿಂತಿದ್ದರ ಅವನಿಗೆ ದೃಷ್ಟಿಯೇ ಆಗುತ್ತಿರಲಿಲ್ಲ ಆ ಪ್ಲಾನು (Plan) ಆಗ ಯಾರಿಗೂ ಹೊಳೆಯದಿದ್ದುದು ದುರದೃಷ್ಟವೇ ಸರಿ ಅಂತೂ ಗೋವಿಂದ ಸ್ವಲ್ಪ ಹುಶಾರಾದ ಗೆಳೆಯನ ಮದುವೆ ಧೂಂಧಾಂ ಆಗಿ ನೆರವೇರಿತು ಅಂದೇ ಸಂಜೆ ನಾನು ಊರಿಗೆ ಹೊರಟೆ

ನಾನು ಅವರಿಂದ ಬೀಳ್ಕೊಂಡು ಹೊರಟೆ. ಆದರೆ ಉಡುಗೊರೆಯ ವಿಷಯವನ್ನು ಗುಟ್ಟಾಗಿಯೇ ಇಟ್ಟಿದ್ದೇನೆ, ಯಾರಿಗೂ ಹೇಳ ಬೇಡಿ, ಗೋವಿಂದನ ಪ್ರಥಮ ಶಿಶುವಿಗೆ ಒಂದು 'ಮುತ್ತ'ನ್ನು ಉಡುಗೊರೆಯಾಗಿ ಕೊಡಬೇಕೆಂದಿದ್ದೇನೆ. ಆ ದಿನವನ್ನೇ ಕಾಯುತ್ತಿದ್ದೇನೆ. 'ಇದು 'ಭಾರೀ' ಉಡುಗೊರೆಯಲ್ಲವೇ?



ಭಾರತದ ವಿಮಾನವಾಹಕ ನೌಕೆ 'ವಿಕ್ರಾಂತ'

ಭಾರತೀಯ ನೌಕಾ ಸೇನೆಯ ಇತಿಹಾಸದಲ್ಲಿ ಹೊಸ ಅಧ್ಯಾಯವೊಂದು ಆರಂಭವಾಗಿದೆ 3 ಎನ್ ಎಸ್ "ವಿಕ್ರಾಂತ" ಎಂಬ ಹೆಸರಿನ ಪ್ರಪ್ರಥಮ ವಿಮಾನ ವಾಹಕ ನೌಕೆಯು ನವೆಂಬರ್ ತಿಂಗಳ ಆದಿಭಾಗದಲ್ಲಿ ಮುಂಬೈಗೆ ಆಗಮಿಸಿ ಭಾರತೀಯ ನೌಕಾ ಸೇನೆಯನ್ನು ಸೇರಿತು ಪ್ರಧಾನ ಮಂತ್ರಿ ಶ್ರೀ ಜವಾಹರಲಾಲ್ ನೆಹರೂ ಅವರೇ ಈ ಹೊಸ ನೌಕೆಯನ್ನು ಸ್ವಾಗತಿಸಿದರು

ಭಾರತೀಯ ನೌಕಾ ಸೇನೆಯು ೧೯೫೭ ರಲ್ಲಿಯೇ ಇಪ್ಪತ್ತು ಸಾವಿರಟನ್‌ಗಳ ಭಾರದ "ವಿಕ್ರಾಂತ" ನೌಕೆಯನ್ನು ಅಧಿಗ್ರಹಣ ಮಾಡಿತ್ತು ಆದರೆ ಸ್ವಾಧೀನಕ್ಕೆ ತೆಗೆದುಕೊಳ್ಳುವ ಪೂರ್ವದಲ್ಲಿ ಆ ಸಮರ ನೌಕೆಯನ್ನು ಉತ್ತರ ಐರ್‌ಲೆಂಡಿನ ವಿಖ್ಯಾತ ನೌಕಾ ನಿರ್ಮಾಣಕೇಂದ್ರಗಳ ಪೈಕಿ ಒಂದರಲ್ಲಿ ಸಂಪೂರ್ಣವಾಗಿ ಅತ್ಯಾಧುನಿಕ ಯುದ್ಧೋಪಕರಣಗಳಿಂದ ಸಜ್ಜುಗೊಳಿಸಲಾಯಿತು ಬ್ರಿಟನ್ನಿನಲ್ಲಿ ಭಾರತದ ಹೈಕಮಿಷನರಾಗಿದ್ದ ಶ್ರೀಮತಿ ವಿಜಯಲಕ್ಷ್ಮೀ ಪಂಡಿತ್ ಅವರು ಈ ವರ್ಷ ಮಾರ್ಚಿ ತಿಂಗಳಲ್ಲಿ ಈ ನೌಕೆಯನ್ನು ವಿದ್ಯುಕ್ತವಾಗಿ ಕಾರ್ಯಾಚರಣೆಗತೊಡಗಿಸಿದರು, ಕ್ಯಾಪ್ಟನ್ ವಿ ಎಸ್. ಮಹೀಂದ್ರೂ ಅವರೇ ವಿಮಾನ ವಾಹಕ ನೌಕೆಯ ಮೊದಲನೆಯ ದಳಪತಿಗಳಾಗಿದ್ದಾರೆ

ವಿಕ್ರಾಂತದ ಮೊದಲನೆಯ ಸ್ಕ್ವಾಡ್ರನ್ನಿನಲ್ಲಿ ಜೆಟ್ ಫೈಟರ್ ಬಾಂಬರ್ ವಿಮಾನಗಳಿರುವುವು ಎರಡನೆಯ ಸ್ಕ್ವಾಡ್ರನ್ನಿನಲ್ಲಿ ಜಲಂತರ್ಗಾಮಿ ನೌಕೆಗಳನ್ನು ಧ್ವಂಸಮಾಡುವ ಮತ್ತು ಸ್ಥಳಶೋಧಕ ವಿಮಾನಗಳಿರುವುವು ಈ ವಿಮಾನಗಳೇ ಅಲ್ಲದೆ "ವಿಕ್ರಾಂತ"ವು ಅತ್ಯಾಧುನಿಕ ರೀತಿಯ ವಿಮಾನ ಧ್ವಂಸಕ ಬಂದೂಕುಗಳಿಂದಲೂ ಯುದ್ಧೋಪಕರಣಗಳಿಂದಲೂ ಸುಸಜ್ಜಿತವಾಗಿದೆ.

ಆಧುನಿಕ ಉಪಕರಣಗಳು

೭೦೦ ಅಡಿಗಳ ಉದ್ದದ ಡೆಕ್ ಪಡೆದಿರುವ 'ವಿಕ್ರಾಂತ"ವು ಅನೇಕ ವಿಶೇಷಾಂಶಗಳಿಂದ ಕೂಡಿದೆ ಈ ನೌಕೆಯಲ್ಲಿರುವೂರು ೧೩೦೦ ಜನ ನೌಕಾಧಿಕಾರಿಗಳೂ ನಾವಿಕರೂ ಇರುವರು ಪ್ರತಿಯೊಬ್ಬರಿಗೂ ಒಂದು ಪ್ರತ್ಯೇಕವಾದ ವಾಸದ ಸ್ಥಳವಿದೆ ಈ ನೌಕೆಯ ಪಾಕಶಾಲೆಗಳು ಅತ್ಯಾಧುನಿಕ ಪರಿಕರಗಳಿಂದ ಸಜ್ಜುಗೊಂಡಿದ್ದು ಭಾರತೀಯ ಪಾಕಶೈಲಿಗೆ ಅನುಗುಣವಾಗಿವೆ.

ಈ ಹೆಡ್‌ನ ರಾಡಾರ್ ಮತ್ತು ಸಂಪರ್ಕ ವ್ಯೂಹಗಳು ಸಕಲ ಅತ್ಯಾಧುನಿಕ ರೀತಿಯದಾಗಿವೆ ವಿಮಾನಗಳ ರಕ್ಷಣೆ ಮತ್ತು ಚಿಕ್ಕ ಪುಟ್ಟ ದುರಸ್ತಿಗೆ ಅಗತ್ಯವಾಗುವ ಸೌಲಭ್ಯಗಳನ್ನು ಒದಗಿಸುವ ಒಂದು ಭಾರೀ "ಹ್ಯಾಂಗರ್" ಸಹಿತ ಈ ಜಹಜಿನಲ್ಲಿದೆ ಈ ಜಹಜು ಏರ್‌ಕಂಡೀಷನಿಂಗ್ ಸಲಕರಣೆಗಳಿಂದ ಕೂಡಿದೆ ಜೊತೆಗೆ ವಿದ್ಯುಚ್ಛಕ್ತಿ, ಯಾಂತ್ರಿಕ ಮತ್ತು ವಾತಾಯನ ವ್ಯವಸ್ಥೆಗಳೆಲ್ಲವೂ ತೀರ ಹೊಸದಾಗಿವೆ

ಈ ಪ್ರಬಲವಾದ ಸಮರ ನೌಕೆಯ ಭಾರತೀಯ ನೌಕಾ ಸೇನೆಯ ಜಗತ್ತಿನ ಅತ್ಯಾಧುನಿಕ ನೌಕಾ ಸೇನೆಗಳ ಶ್ರೇಣಿಯಲ್ಲಿ ತನ್ನ ಯಥೋಚಿತ ಸ್ಥಾನವನ್ನು ಪಡೆಯಲು ನೆರವಾಗಿದೆ

ಮೇಲ್ಬಾಗದ ಚಿತ್ರದಲ್ಲಿ 'ವಿಕ್ರಾಂತ" ನೌಕೆಯನ್ನೂ ಕೆಳಭಾಗದ ಚಿತ್ರದಲ್ಲಿ ಈ ನೌಕೆಯ ಅಧಿಕಾರಿಯೊಬ್ಬರು ಸ್ಟೀಯರಿಂಗ್ ಬೋರ್ಡನ್ನು ನಿಯಂತ್ರಿಸುತ್ತಿರುವುದನ್ನೂ ಕಾಣಬಹುದು.

(೧೧ನೇ ಪುಟದಿಂದ)

ಹೀಗೆ ಉತ್ತಮ ಪುಸ್ತಕಗಳನ್ನು ನಾವು ಸಿದ್ಧಗೊಳಿಸಬಹುದು; ಅವುಗಳಲ್ಲಿರಬೇಕಾದ ಚಿತ್ರಗಳು, ಮುದ್ರಣಕ್ಕೆ ಉಪಯೋಗಿಸಬೇಕಾದ ಕಾಗದ ಮತ್ತು ಅಚ್ಚುಕಟ್ಟಿತನಗಳ ಬಗ್ಗೆ ಮನ್ನಣೆ ನೀಡುವ ಸಮಿತಿಯ ಸೂಕ್ತ ನಿರ್ದೇಶನವೀಯಬೇಕು, ಮಾತ್ರವಲ್ಲ ನ್ಯಾಯವಾದ ಬೆಲೆಯಲ್ಲಿ ಅವು ವಿದ್ಯಾರ್ಥಿಗಳಿಗೆ ದೊರೆಯುವಂತೆ ದರ ನಿಗದಿ ಮಾಡಬೇಕು. ಹೀಗೆ ನಿಯಮಿತ ದರದಲ್ಲಿಯೇ ನಷ್ಟವಾಗದಂತೆ ಪುಸ್ತಕಗಳನ್ನು ಒದಗಿಸಬೇಕಾದರೆ, ಅವುಗಳ ಹೆಚ್ಚು ಪ್ರತಿಗಳು ಮಾರಿ ಹೋಗಬೇಕಾಗುವುದರಿಂದ, ಪುಸ್ತಕಗಳು ಉತ್ತಮ ಮಟ್ಟದಲ್ಲಿ ಹೊರಬರಲು ಅನುಕೂಲವಾಗುವುದು. ಚಂದಮಾಮ ಮಾಸ ಪತ್ರಿಕೆಯನ್ನು ಎಳೆಯ ಮಕ್ಕಳು ಪ್ರೀತಿಸುವಷ್ಟು ತಮ್ಮ ಪಠ್ಯ ಪುಸ್ತಕಗಳನ್ನು ಪ್ರೀತಿಸುವುದಿಲ್ಲವೆಂದರೆ, ನಮ್ಮ ಸರಕಾರವು ಭಾಷಾ ಪಾಠ ಪುಸ್ತಕ ಪಠಾಣವನ್ನು ತನ್ನ ಕೈಗೆ ತೆಗೆದುಕೊಂಡು ಇದುವರೆಗೆ ಸಾಧಿಸಿದುದು ಶೂನ್ಯವೆಂದೇ ಹೇಳಬೇಕು. ಕೆಲವು ಸಾವಿರ ಅಚ್ಚಾಗುವ ಆ ಪತ್ರಿಕೆ ವರ್ಣರಂಜಿತ ಚಿತ್ರಗಳಿಂದ ಕೂಡಿ ಆಕರ್ಷಕವಿದ್ದರೆ, ಲಕ್ಷ ಪ್ರತಿಗಳಾದರೂ ಅಚ್ಚಾಗಬಹುದಾಗ ಪ್ರಾಥಮಿಕ ತರಗತಿಗಳ ಕನ್ನಡ ಪಠ್ಯ ಪುಸ್ತಕದಲ್ಲಿ ಆ ಗುಣದ ಆಕರ್ಷಣೆಯಿದೆ ಇಂತಹ ಕೊರತೆಗಳನ್ನು ದೂರೀಕರಿಸಿ ನಮ್ಮ ಪುಸ್ತಕಗಳನ್ನೂ ಆಕರ್ಷಕಗೊಳಿಸುವುದು ಅಗತ್ಯವೆಂದು ಹೇಳಬಹುದು. ಇದಕ್ಕೆ ಖಾಸಗಿ ಸಂಸ್ಥೆಗಳಿಗೆ ಪ್ರೋತ್ಸಾಹ ಕೊಡುವುದೇ ಉತ್ತಮವಾಗಿದೆ.

—ಗೋರಾ

Edited Printed & Published by K. H. Shetty, at the Navayuga Press, Udipi, S. India.

ನಮ್ಮ ಯಾವತ್ತೂ
ಮುದ್ರಣ ಕೆಲಸಗಳಿಗೆ
ಯತ್ನಮಾಡಿ ವಿಚಾರಿಸಿ:
ನವಯುಗ ಪ್ರೆಸ್,
ಉಡುಪಿ

ರಾಷ್ಟ್ರೀಯ ವಾರಪತ್ರಿಕೆ. ಬೆಲೆ: 13 ನ.ಪೈಸೆ

ನವಯುಗ

KANNADA — NAVAYUGA — WEEKLY

ವಿದ್ಯಾರ್ಥಿಗಳಿಗೆ
ಮತ್ತು ವಯಸ್ಕರಿಗೆ
ಅತ್ಯುಪಯೋಗೀ ಪುಸ್ತಕ
ಸುಲಭದಲ್ಲಿ ಇಂಗ್ಲಿಷ್
(ಆಂಗ್ಲ ಸ್ವಯಂಬೋಧಿನಿ)
ನವಭಾರತ ಪುಸ್ತಕ ಭಂಡಾರ
ಉಡುಪಿ

ಸಂಪುಟ ೪೧ ಸಂಚಿಕೆ ೧೬. | ಉಡುಪಿ 28—12—1961 ಗುರುವಾರ | Vol. 41 No. 16

ಜಾಗತಿಕ ನಾಯಕತ್ವದ ಮೇಲೆ

ಗೋವಾ ವಿಮೋಚನೆಯ ಪ್ರಭಾವ

ಭಾರತದಲ್ಲಿದ್ದ ವಸಾಹತುವಾದದ ಕಳಂಕವನ್ನು ತೊಡೆದು ನಮ್ಮ ಸರ್ಕಾರ ಸಾಹಸದಕಾರ್ಯ ಮಾಡಿತೆಂದು ವಿಜಯೋತ್ಸವವನ್ನು ನಾವು ಆಚರಿಸುತಿದ್ದೇವೆ ಗೋವೆ, ದೀವು ಮತ್ತು ದಾಮನ್‌ಗಳಿಂದ ಪೋರ್ಚುಗೀಸ್ ಪ್ರಭುತ್ವವನ್ನು ಕಿತ್ತು ಅಲ್ಲಿನ ಭಾರತೀಯರನ್ನು ನಾವು ವಿಮೋಚನೆಮಾಡಿದ್ದೇವೆ. ಆದರೆ, ಗೋವಾ ವಿಜಯದ ಸಂಬಂಧದಲ್ಲಿ ಇತ್ತೀಚಿನ ವಾದವಿವಾದಗಳು ತೀರ ವಿಚಿತ್ರವೆಂಬಂತೆ ಕಂಡರೂ ಮುಂಬರುವ ಪರಿಸ್ಥಿತಿಗಳ ಸೂಚಕವೆಂದು ಭಾಸವಾಗುತ್ತದೆ.

ಅನಿವಾರ್ಯ ಬಲಪ್ರಯೋಗ

೫೦ ವರ್ಷಗಳಿಗೆ ಮೊದಲು ಬಂದು ಭಾರತದಲ್ಲಿ ವಸಾಹತುಗಳನ್ನು ಸ್ಥಾಪಿಸಿ, ಅಲ್ಲಿ ತಮ್ಮ ಪ್ರಭುತ್ವ ಜಮಾಯಿಸಿ ಬಹುಕಾಲ ಯಶಸ್ವಿಯಾದವರೆಂದರೆ, ಪೋರ್ಚುಗೀಸರು, ಇಂಗ್ಲಿಷರು ಮತ್ತು ಫ್ರೆಂಚರು. ಭಾರತದಂತಹ ಸುವಿಶಾಲ ದೇಶಕ್ಕೆ ಸ್ವಾತಂತ್ರ್ಯವಿತ್ತು ಇಂಗ್ಲಿಷರು ಹೊರಟುಹೋದರು. ಇವರನ್ನೇ ಫ್ರೆಂಚರೂ ಅನುಸರಿಸಿದರು. ಕಾನೂನು ಬದ್ಧವಾಗಿ ಇವರ ಮಾಜಿ ವಸಾಹತುಗಳು ಹಸ್ತಾಂತರವಾಗದಿದ್ದರೂ ಅದು ಸದ್ಯದಲ್ಲಿಯೇ ಆಗುವುದು. ಆದರೆ, ನಯದ ಮಾತಿಗೆ ಬಗ್ಗದ ಪೋರ್ಚುಗೀಸರು ತಾವಾಗಿಯೇ ಆ ಪ್ರಮಾಣದ ಬೆದರಿಕೆಯನ್ನು ತೋರಿಸಿದರು ಈ ಬೆದರಿಕೆಯು ಬಲವಾಗುತ್ತಾಬಂದುದರಿಂದ ತನ್ನ ಮತ್ತು ತನ್ನದಾದ ಗೋವಾ ಮೊದಲಾದುಗಳ ನಾಗರಿಕರ ರಕ್ಷಣೆಗಾಗಿ ಭಾರತವು ಬಲ ಪ್ರಯೋಗ ಮಾಡಲೇ ಬೇಕಾಯಿತು. ಒಂದೇ ಮಾತಿನಲ್ಲಿ ಹೇಳುವುದಾದರೆ, ಭಾರತವುಬಲಪ್ರಯೋಗ ಮಾಡುವುದು ಅನಿವಾರ್ಯವಾಗಿತ್ತು. ಪರಿಸ್ಥಿತಿಯ ಪ್ರಕೋಪದಂದಲೇ ಇಂತಹ ಕ್ರೂರಾಚರಣೆಗೆ ಭಾರತ ಇಳಿಯಿತು. ಆದರೂ ಇಕ್ಕಡೆಯಲ್ಲಿಯೂ ಬೆರಳಣಿಕೆಯ ನಾವು ನೋವುಗಳಾದುದು ಭಾರತೀಯ ಪಡೆಗಳ ಧರ್ಮನಿಷ್ಠತೆ ಮತ್ತು ಭಾರತೀಯತೆಗಳ ದ್ಯೋತಕವನ್ನೆ ಬಹುದು.

ಭಾರತದ ಹಿತಚಿಂತಕರು:

ಭಾರತವನ್ನು ಸಾಮ್ರಾಜ್ಯವಾದಿಯೆನ್ನುವ ಚೀನವು ಗೋವೆಯ ಮೇಲೆ ಕೈಗೊಂಡ ಕ್ರಮಕ್ಕೆ ಬೆಂಬಲವಿತ್ತಿರುವುದು ವಿಸ್ಮಯವನ್ನುಂಟುಮಾಡುತ್ತದೆ. ವೆಟೋ ಅಧಿಕಾರ ಸಂಪನ್ನರಶ್ಯದ ಅಧ್ಯಕ್ಷರು ಭಾರತದ ಸಂಚಾರದಲ್ಲಿದ್ದುಅವರು ಸಂಪೂರ್ಣವಾಗಿ ಸಮರ್ಥಿಸಿದ್ದಾರೆ. ಸಿಲೋನ್ ಮತ್ತು ಸಂಯುಕ್ತ ಅರಬ ಪ್ರಜಾರಾಜ್ಯಗಳು ಯುದ್ಧ ನೌಕೆಗಳನ್ನು ತಮ್ಮ ಕಾಲುವೆಗಳ ಬಳಿ ತಡೆದು ನಿಲ್ಲಿಸಿದುವು. ಮೊರಕ್ಕೊ ಇಂಡೋನೇಶ್ಯಗಳು ತಮ್ಮ ಸಹಾನುಭೂತಿಯನ್ನು ಪ್ರಕಟಿಸಿರುವುದು ಮಾತ್ರವಲ್ಲ, ಜಗತ್ತಿನಲ್ಲಿರುವ ವಸಾಹತು ಶಾಹಿಯ ಕೊನೆಗೆ ಇದು ನಾಂದಿಯೆಂಬಂತೆ ಕಾರ್ಯ ಪ್ರವೃತ್ತವಾಗಿವೆ ಜವಾನ್‌ನ ಪ್ರಧಾನಿ ಈ ಹೋರಾಟವು ಭಾರತದ ಸ್ವಾತಂತ್ರ್ಯವನ್ನು ಪೂರ್ಣಗೊಳಿಸಲು ಅಂತಿಮ ಮಾರ್ಗವೆಂದು ತಿಳಿದಿದ್ದಾರೆ. ಹೀಗೆ ಸರ್ವ ಸಾಮಾನ್ಯವಾಗಿ ಆಫ್ರೇಸ್ಯಾದ ಎಲ್ಲ ರಾಷ್ಟ್ರಗಳೂ ಭಾರತವು ತನ್ನದೇ ಆದ ಗೋವೆಯಿಂದ ಪೋರ್ಚುಗೀಸರನ್ನೋಡಿಸಲು ಮಾಡಿದ ಸೈನಿಕ ಕಾರ್ಯಾಚರಣೆಯ ಬಗ್ಗೆ ಸದಭಿಪ್ರಾಯ ವ್ಯಕ್ತಪಡಿಸಿವೆ.

ಜಾಗತಿಕ ಬೆಂಬಲ

ಇದಕ್ಕೆ ಇನ್ನೊಂದು ನಿದರ್ಶನವನ್ನೂ ಕೊಡಬಹುದು. ಪೋರ್ಚುಗಾಲವು ಭದ್ರತಾ ಮಂಡಳಕ್ಕೆ ದೂರಿತ್ತು. ಗೋವೆಯಲ್ಲಿ ಮುಗ್ಧದ ಭಾರತೀಯ ಸೇನೆಯನ್ನು ಹಿಂದೆ ಕರೆಯಬೇಕೆಂದು ಕೇಳಿಕೊಳ್ಳಲು ವಿನಂತಿಸಿತ್ತು. ಅಲ್ಲಿ ಅಮೆರಿಕೆಯ ಸ್ಟಿವನ್ಸನ್ನರು ಭಾರತವನ್ನು ಅಪ್ರಿಯ ವಚನಗಳಿಂದ ಟೀಕಿಸಿದರು; ಸಿಲೋನು ಸಮರ್ಥಿಸಿತು; ರಶ್ಯದ ವೆಟೊವಿನ ಮೆಗಟನ್‌ಬಾಂಬಿನಿಂದ ಪ್ರಸ್ತುತ ಗೊತ್ತುವಳಿ ನಿರರ್ಥಕವಾಯಿತು. ಮುಂದೆ, ಸಂ. ರಾ. ಸಂಘದ ಸಾಮಾನ್ಯ ಸಭೆಯಲ್ಲಿ ಬಹಳ ಸ್ವಾರಸ್ಯ ನಡೆಯಿತು. ಪೋರ್ಚುಗಲ್ಲಿನ ಸಹಾಯಕರೆಂದಿದ್ದ ರಾಷ್ಟ್ರಗಳೂ ಅಲ್ಲಿ ನಡೆದ ಮತದಾನದಲ್ಲಿ ಭಾಗವಹಿಸಲಿಲ್ಲ ಕೇವಲ ಬೆಂಬಲಿಕೆಯ ಮತ ಪಡೆದು ಪೋರ್ಚುಗಲ್ ಉಗುಳು ನುಂಗಬೇಕಾಯಿತು.

ಇದೇಕೆ ಹೀಗೆ?

ಇದೇಕೆ ಹೀಗೆ? ಸಂಯುಕ್ತ ರಾಷ್ಟ್ರ ಸಂಘದ ಸದಸ್ಯ ರಾಷ್ಟ್ರಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತ ಹೋಗುತ್ತಿರುವದು ಮತ್ತು ಹೊಸತಾಗಿ ಸ್ವಾತಂತ್ರ್ಯಗಳಿಸಿದ ಆಫ್ರೇಸ್ಯ ರಾಷ್ಟ್ರಗಳೇ ಇದರಲ್ಲಿ ಬೆಳೆಯುತ್ತಿರುವುದು ಗಮನಾರ್ಹವಾಗಿದೆ. ಸಾಂಪ್ರದಾಯಿಕ ರಾಷ್ಟ್ರಗಳ ಸಂಖ್ಯೆ ಪರಿಮಿತವಿದ್ದು ಅವುಗಳ ಮತ ಬಲವೂ ಮಿತವಾಗಿದೆ. ಈ ಕಾರಣದಿಂದ, ಆಫ್ರೇಸ್ಯಾಗಳ ಪ್ರಬಲ ಬೆಂಬಲಗಳಿಸಿದ ಭಾರತದ ಗೋವಾ ವಿಮೋಚನೆಯ ಕಾರ್ಯಕ್ರಮಕ್ಕೆ ಕಂಡು ಬಂದ ವಿರೋಧಾಭಿಪ್ರಾಯ ಕಠೋರ ವಾಕ್ಯಗಳಲ್ಲಿಯೇ ಪರ್ಯವಸಾನಗೊಳ್ಳುವಂತಾಯಿತು

ಸ್ವಾಭಾವಿಕ ಕೋಪ

ಇಂತಹ ಅನಿರೀಕ್ಷಿತ ಘಟನೆಗಳಿಂದ ಪಾಶ್ಚಾತ್ಯ ರಾಷ್ಟ್ರಗಳು ಗಲಿಬಿಲಿಗೊಂಡಂತಾಗಿವೆ ತನ್ನ ಹಳೆಯ ಮಿತ್ರ ಪೋರ್ಚುಗಲ್ಲಿನ ಬೆನ್ನು ಚಪ್ಪರಿಸುತಿದ್ದ ಬ್ರಿಟನ್ನು ತನ್ನ ಒಂಭತ್ತು ನಾಗರಿಕರ ಹಿತ ಸಂರಕ್ಷಣೆಗೆಂದು ಎಂದೆರಡು ಯುದ್ಧ ನೌಕೆಗಳನ್ನ ಕಳಿಸಿತು. ಅವುಗಳಲ್ಲಿ ಒಂದು ಸುಯೇಜಕಾಲುವೆಯಲ್ಲಿ ಮತ್ತೊಂದು ಸಿಲೋನಿನ ಬಳಿಯಲ್ಲಿ ತಡೆಯಲ್ಪಟ್ಟುವು ಗೋವಾದಲ್ಲಿರುವ ಭಾರತೀಯರಿಗಿಂತಲೂ ಪೋರ್ಚುಗೀಸರು ಮತ್ತು ಬ್ರಿಟಿಷರು ಸುರಕ್ಷಿತರಾಗಿರುವರು ಎಂಬ ನೆಪದಿಂದ ಮೊದಲೇ ಅವವೂ ನಿತವಾಗಿದ್ದ ಬ್ರಿಟನ್ನು ಆಫ್ರೇಸ್ಯಾಗಳ ದೃಷ್ಟಿಯಲ್ಲಿ ಮತ್ತೂ ನಾಚುವಂತಾಯಿತು. ವಿಶ್ವದಲ್ಲಿ ತನ್ನ ಪ್ರತಿಷ್ಠೆಗೆ ಕುಂದು ಉಂಟಾದ ಈ ಅಸಿದ್ಧಿತಿಯಿಂದ ಬ್ರಿಟನ್ನು ಕುಸಿತಗೊಳ್ಳುವುದು ಸ್ವಾಭಾವಿಕ.

ಗೋವೆಯು ನ್ಯಾಯವಾಗಿ ಭಾರತಕ್ಕೆ ಸೇರಬೇಕಾದುದೆಂದು ಅಮೆರಿಕೆಯು ಒಪ್ಪಿಕೊಳ್ಳುತ್ತದೆಯಾದರೂ ಅದನ್ನು ಸ್ವಾಧೀನಪಡಿಸಲು ಸೈನಿಕ ಕಾರ್ಯಕ್ರಮ ಕೈಗೊಂಡುದರಿಂದ ಅದು ಕ್ರುದ್ಧವಾಗಿದೆ. ವಿಮೋಚನಾ ಪೂರ್ವದ ಕೊನೆಯ ಗಳಿಗೆಯಲ್ಲೂ ರಾಯಭಾರಿ ಗಾಲ್‌ಬ್ರೈಥ್‌ರವರು ಪ್ರಧಾನಿ ನೆಹರುರವರೊಡನೆ ಸಮಾಲೋಚನೆ ನಡೆಸಿದ್ದರು. ಇನ್ನೂ ಸ್ವಲ್ಪ ಕಾಲ ಕಾಯ ಬೇಕಿತ್ತು ಎಂಬುದು ಅಮೆರಿಕೆಯ ವಾದವಷ್ಟೆ.

ಕೊಸ ಚಿಂತೆ

ಬ್ರಿಟನ್ ಮತ್ತು ಅಮೆರಿಕೆಗಳ ಸಂಬಂಧ ಸದ್ಯ ಕೆಟ್ಟುಹೋಗಿದೆ ಕಟ್ಟಾಂಗದಲ್ಲಿ ಬ್ರಿಟನ್ನು ಅವಹೇಳನಕ್ಕೆ ಗುರಿಯಾಗಿದೆ. ಆದರೂ ಭಾರತದ ನೀತಿಯ ಬಗ್ಗೆ ತೀವ್ರ ಬಾಣಗಳನ್ನು ಎರಡೂ ಕಾರುತಿವೆ. ಇದೇಕೆ? ಅಮೆರಿಕ-ಬ್ರಿಟನ್ನುಗಳು ಪ್ರಪಂಚದ ನಾಯಕಮಣಿಗಳೆಂದು ತಿಳಿದುಕೊಂಡಿವೆ. ತಮ್ಮ ಸಲಹೆ-ಅನುಮತಿಗಳಿಲ್ಲದೆ ಪ್ರಪಂಚದಲ್ಲಿ ಯಾವ ಮಹಾ ಘಟನೆಯೂ ನಡೆಯಬಾರದೆಂಬ ಮಾಡಾಸೆ ಅವುಗಳದು; ತಮ್ಮ ಬೆಂಬಲ ಪಡೆಯದ ಭಾರತದ ಕಾರ್ಯಾಚರಣೆಯನ್ನವು ಪ್ರತಿರೋಧಿಸುವುದು ತಪ್ಪೆಂದು ಹೇಳುವುದು ಸಾಧ್ಯವಿಲ್ಲ. ಭದ್ರತಾ ಸಮಿತಿಯಲ್ಲಾದ ಸೋಲು ಅವರಿಗೆ ನಿರೀಕ್ಷಿತವಾಗಿತ್ತು. ಆದರೆ, ಸಾಮಾನ್ಯಸಭೆಯಲ್ಲಿ ಆಫ್ರೇಸ್ಯಾ ರಾಷ್ಟ್ರಗಳ ಕಪಿ ಸೈನ್ಯದಿಂದ ತಮಗಾದ ಸೋಲಿನ ಕಹಿಯನ್ನವುಮರೆಯಬಂತಿಲ್ಲ. ಈ ಘಟನೆಯಿಂದಾಗಿ ಅವರನ್ನು ಹೊಸ ಚಿಂತೆಯೊಂದು ಕಾಡತೊಡಗಿದೆ.

ತಾವೇ ವಿಶ್ವನೇತಾರರು ಎಂದು ಪಾಶ್ಚಾತ್ಯ ಪ್ರಮುಖ ರಾಷ್ಟ್ರಗಳು ತಿಳಿದಿದ್ದ ಕಾಲವೊಂದಿತ್ತು; ಆದರೆ ಇಂದು ಜಾಗತಿಕ ನಾಯಕತನ ಬಹುಮತದ ಬಲ

(೧೨ನೇ ಪುಟ ನೋಡಿ)

ಇದೇ ೨೦ರಂದು ಅಧಿಕಾರಸೂತ್ರ ವಹಿಸಿಕೊಂಡ ರಾಷ್ಟ್ರಪತಿ ರಾಜೇಂದ್ರ ಪ್ರಸಾದರು.

"ಹಣೆಬರೆಹ"

ಶ್ರೀ "ಉಪ್ಪಾಡಿ"

"ಟಿ, ಬನ್ನಿ ಸಾವ್ಕಾರ್ರೇ" ಕಂಡಕ್ಟರ್ ನಾಗೇಶ್ವರಯ್ಯನವರನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿದ. ನಾಗೇಶ್ವರಯ್ಯ ಬಸ್ಸನ್ನೇರಿ ಕುಳಿತರು. ಬಸ್ಸು ಹೊರಟಿತು.

"ಎಲ್ಲಿಗೆ ಕೊಡಲಿ, ಸರ್"— ಕಂಡಕರನ ಮಾತಿನಲ್ಲಿ ವಿನಯ ತುಳುಕಾಡುತಿತ್ತು.

"ಉಡುಪಿ" ನಾಗೇಶ್ವರಯ್ಯ ಕೆಸೆಯಿಂದ ದುಡ್ಡು ತೆಗೆಯತೊಡಗಿದರು. ಬಸ್ಸಿನ ಹಿಂದಿನ ಸೀಟಿನಲ್ಲಿ ಸ್ಥಳವಿಲ್ಲದಿದ್ದರೂ ಸ್ಥಳ ಮಾಡಿಕೊಂಡು ಅವರು ಕುಳಿತಿದ್ದರು. ಹಾಗಾಗಿ ಕಂಡೆಕ್ಟರ್ ನಿಂತಿರಬೇಕಾಗಿತ್ತು.

ದುಡ್ಡು ಕೊಡಬಂದ ನಾಗೇಶ್ವರಯ್ಯರಿಗೆ ಕಂಡೆಕ್ಟರ್ ಏನೋ ಸಂಜ್ಞೆ ಮಾಡಿದ. ಆ ಸಂಜ್ಞೆ ಸಂಪೂರ್ಣ ಅರ್ಥವಾಗದಿದ್ದರೂ ನಾಗೇಶ್ವರಯ್ಯ ಮುಂದೆ ನೀಡಿದ ಕೈಯನ್ನು ಹಿಂದೆ ಸರಿಸಿ ತಣ್ಣಗೆ ಕುಳಿತರು

ಅವರು ಆ ಊರಿನ ಸುಪ್ರತಿಷ್ಠಿತ ವ್ಯಕ್ತಿ. ಒಂದು ಅಕ್ಕಿಯ ಮಿಲ್, ಒಂದು ಜವಳಿ ಮಳಿಗೆ, ಎರಡು ಜೀನಸಿನ ಅಂಗಡಿಗಳು ಅವರ ಹೆಸರಿನಲ್ಲಿ ನಡೆಯುತಿದ್ದುವು. ಬಾಲ್ಯದಿಂದಲೂ ಈ ನಮ್ಮ ಕಂಡೆಕ್ಟರ್ ಅವರ ಗೆಳೆಯನಾಗಿದ್ದ; ಸಹಪಾಠಿಯೂಗಿದ್ದ. ಅವರಿಬ್ಬರ ಜೀವನ ವೈತ್ರ್ಯದ ಬೆಳಗೆಯಿಂದ ಬೆಸೆದು ಹೋಗಿತ್ತು. ವಸ್ತುತಃ ಕಂಡೆಕ್ಟರನ ಸ್ಥಿತಿ ಚೆನ್ನಾಗಿರಲಿಲ್ಲ. ಕೆಲಸವಿಲ್ಲದೆ ನಿರುದ್ಯೋಗದಿಂದ ಅಲೆಯುತಿದ್ದಾಗ ನಾಗೇಶ್ವರಯ್ಯನೇ ಕಂಬ್ಯಾಂಡ್ ಬುಕ್ಕಿಂಗ್ ಏಜನ್ಸಿಯ ತಮ್ಮ ಪರಿಚಿತರಾರಿಗೋ ಪತ್ರ ಬರೆದು ಶಿಫಾರಸು ಮಾಡಿ ಈ ಮಾಧವನಿಗೆ ಕಂಡೆಕ್ಟರ್ ಕೆಲಸ ಕೊಡಿಸಿದ್ದರು. ಆ ಉದ್ಯೋಗ ದೊರೆತ ಬಾಗಾಯ್ತು ಮಾಧವ ಮನುಷ್ಯನೆನಿಸಿದ್ದ ಈ ಉಪಕಾರವನ್ನಾತ ಮರೆತಿರಲಿಲ್ಲ.

"ನಿಮ್ಮ ಉಪಕಾರದಿಂದಾಗಿ. ರಾಯರೇ. ನಾನೀಗ ತೃಪ್ತಿಯ ಕೂಳು ಕಾಣುವಂತಾಯಿತು."— ರಜೆಯ ದಿನ ನಾಗೇಶ ರಾಯರೊಡನೆ ಗಂಟೆಕಟ್ಟಿಟೆ ಹರಟೆ ಹೊಡೆಯುತ್ತಿರುವಾಗ ನಡು ನಡುವೆ ಉಪಕಾರ ಸ್ಮರಣೆಯನ್ನು ಮಾಡುತ್ತಿದ್ದ ಕಂಡೆಕ್ಟರ್.

"ಅದೇನು ಬಿಡು ಮಾಧು! ಮನುಷ್ಯ ಒಬ್ಬರಿಗೊಬ್ಬರು ಆಗದ ಮೇಲೆ ಮತ್ತೇನು ಮರ ಆತನ ಸಹಾಯಕ್ಕೆ ಬರುವುದೇ?" ನಾಗೇಶ್ವರಯ್ಯ ಆ ಮಾತನ್ನು ಹಾರಿಸಿ ಬಿಡುತ್ತಿದ್ದರು. ಆ ಹಿಂದಿನ ಗೆಳೆತನ ಇಂದೂ ಹಾಗೇ ಉಳಿದಿತ್ತು. ಸ್ಥಿತಿಗತಿಗಳ ವಿಚಾರದಲ್ಲಿ ಅವರಿಬ್ಬರೊಳಗೆ ತಾರತಮ್ಯವಿದ್ದರೂ ಅವರ ಮುಂಚಿನ ಆ ಸಲುಗೆ ಮಾಯವಾಗಿರಲಿಲ್ಲ.

ಅದೆಲ್ಲಿಂದಲೋ ಒಂದು ಕುಕ್ಕು ನಾಗೇಶ್ವರಯ್ಯನ ಪಾಲಿಗೆ ಒದಗಿ ಬಂದಿತ್ತು. ಅವರ ಹೆಂಡತಿ ಹಾಸಿಗೆ ಹಿಡಿದು ತಿಂಗಳೊಂದಾಗಿತ್ತು. ಇತ್ತೀಚೆಗಂತೂ ಕಾಯಿಲೆ ಉಲ್ಬಣಾವಸ್ಥೆಗೆ ತಲುಪಿತ್ತು. ಸಮೀಪದ ಕುಂದಾಪುರದ ಆಸ್ಪತ್ರೆಯಲ್ಲಿ ಏನೂ ಗುಣ ಕಾಣಿಸದೆ ಹೆಂಡತಿಯನ್ನು ಉಡುಪಿಯ ಆಸ್ಪತ್ರೆಗೆ ಸೇರಿಸಿದ್ದರು. ಔಷಧ ಟ್ರೀಟ್‌ಮೆಂಟ್‌ಗಳಿಗೆ ಹಣ ನೀರಿನಂತೆ ಖರ್ಚಾಗುತಿದ್ದರೂ ಅವರಿಗೆ ಗಣ್ಯವೇ ಇಲ್ಲ. ಅಂತೂ ಕಾಯಿಲೆ ಸಂಪೂರ್ಣ ವಾಸಿಯಾಗಲೆಂದು ದಿನವೂ ದೇವರೊಡನೆ ಪ್ರಾರ್ಥಿಸುತಿದ್ದರು.

ಅವರ ವ್ಯಾಪಾರ ವಹಿವಾಟಿನ ದೆಸೆಯಿಂದ ಬಿಡುವಿಲ್ಲದ ಪ್ರಯುಕ್ತ ವಾರಕ್ಕೊಂದು ಬಾರಿ ಉಡುಪಿಗೆ ಹೋಗಿ ಬರುತಿದ್ದರು. ಅವರ ಹಿರಿಯ ಮಗ ರಾಜೂ ಯಾವಾಗಲೂ ತಾಯಿಯ ಬಳಿಯಲ್ಲೇ ಇದ್ದು ರೋಗಿಯ ಆರೈಕೆಯನ್ನು ನೋಡಿಕೊಳ್ಳುತಿದ್ದ.

ಇಂದು ಅವರು ಬಸ್ ನಿಲ್ಲಿಸಿದಾಗ ಕಂಡೆಕ್ಟರ್ ಬಸ್ಸಿನ ಕಿಟಕಿಯಲ್ಲಿ ತಲೆ ಹೊರಹಾಕಿ ನೋಡಿದ. ಬಸ್ಸಿನಲ್ಲಿ ಸೀಟರಲಿಲ್ಲ. 40+10+2—ಒಟ್ಟಿಗೆ ಐವತ್ತೆರಡು ಸೀಟು ತುಂಬಿತ್ತು. ಎಂಟು ಹತ್ತು ಜನ ಕುಳ್ಳಿರಲು ಸ್ಥಳವಿಲ್ಲದೆ ನಡುವಿನಲ್ಲಿ ನಿಂತು ತೇಲಾಡುತಿದ್ದರು. ಆದರೂ ನಾಗೇಶ್ವರಯ್ಯನವರನ್ನು ನೋಡುತ್ತಲೇ ಬೇರೆ ಆಲೋಚನೆಯೇ ಇಲ್ಲದೆ ಬಸ್ಸಿಗೇರಿಸಿಕೊಂಡು ತನ್ನ ಸ್ಥಳದಲ್ಲಿ ಕುಳ್ಳಿರಿಸಿಕೊಂಡಿದ್ದ. ಬೇರೆ ಯೂರೇ ಆಗಿದ್ದರೂ "ಸೀಟಿಲ್ಲ" ಎಂದು ಡ್ರೈವರನಿಗೆ ಕೂಗಿ ಹೇಳಿ ಬಸ್ಸನ್ನು ಓಡಿಸಿ ಬಿಡುತಿದ್ದ.

ಆತನಿಗೂ ತಿಳಿದಿತ್ತು, ರಾಯರ ಹೆಂಡತಿಯ ಕಾಯಿಲೆಯ ವಿಷಯ!

ಆದರೆ ರಾಯರಿಗೆ ಟಿಕೆಟ್ ಕೊಡುವಂತಿರಲಿಲ್ಲ

ಮಧ್ಯಾಹ್ನದ ಬಿಸಿಲಿನ ಜಳಕ್ಕೆ ಪ್ರಯಾಣಿಕರ ಹಣೆ—ಮೈಗಳಿಂದ ಧಾರೆಯಾಗಿ ಬೆವರು ಸುರಿಯುತಿತ್ತು. ಸೀಟಿನ ಸಂಖ್ಯೆ ತುಂಬಿದ್ದರೂ ರಾಯರನ್ನು ಹತ್ತಿಸಿಕೊಂಡುದಂದ ಓರ್ವ ಮಹನೀಯರಿಗೆ ಅಸಮಾಧಾನವೆನಿಸಿತೋ ಏನೋ, ಕಂಡೆಕ್ಟರನನ್ನೇ ನೋಡುತ್ತಾ ಹಣೆಯ ಬೆವರನ್ನೊರಸುತ್ತಾ "ಶಽಽಽ" ಎಂದು ನಿಟ್ಟುಸಿರು ಬಿಟ್ಟರೇವಿನಾ ಬೇರೇನೂ ಮಾತನಾಡಲಿಲ್ಲ.

ಬಸ್ಸು ಭೋರೆಂದು ಸದ್ದೆಸಗುತ್ತಾ ಒಂದೇ ಸವನೆ ಧಾವಿಸುತಿತ್ತು.

ಮುಂದೊಂದು ಹೋಲೀಸ್ ಔಟ್ ಪೋಸ್ಟ್. ಬಸ್ಸಿನಲ್ಲಿರುವ ಜನ ಸಂಖ್ಯೆಗೂ ಹೇಳಿಕೆಯ ಪತ್ರ (ಸ್ಟೇಟ್ಮೆಂಟ್)ದಲ್ಲಿ ನಮೂದಿಸಿದುದಕ್ಕೂ ಸರಿಯಿದೆಯೆಂದು ಇನ್‌ಸ್ಪೆಕ್ಟರ ಸಹಿಯೂದರಾಯಿತು. ಕಂಡೆಕ್ಟರ್ ಬಸ್ಸಿಂದಿಳಿದು ಆತನ ಆಫೀಸಿಗೋಡಿದ. ಆತ ಕಣ್ಮುಚ್ಚಿ ಸಹಿ ಹಾಕಿದ.

ಮುಂದೆ ನಾಲ್ಕಾರು ಮೈಲು ಹೋಗುತ್ತಲೇ ಬಸ್ಸಿನಿಂದೊಬ್ಬನಿಳಿದು ಹೋದ. ಆದರೆ ಅದೇ ಸ್ಥಳದಲ್ಲಿ ಮತ್ತೊಬ್ಬ ಮೇಲೇರ ತೊಡಗಿದ ಆದರೆ ಕಂಡೆಕ್ಟರ್ ಆತನನ್ನು ತಡೆದು "ಸೀಟಿಜ್ಜಿ" ಎನ್ನುತಲೇ ಒಸ್ಸು ಹೊರಟಿತು.

ಒಬ್ಬಾತನಿಳಿದು ಹೋದರೂ ತನ್ನ ಪಾಲಿಗೆ ಸೀಟಿಲ್ಲದಾಯಿತಲ್ಲಾ ಎಂದು ಆ ಏರ ಬಂದ ಪ್ರಯಾಣಿಕನ ಮುಖ ನಿರಾಶೆಯಿಂದ ಕಪ್ಪಗಾಯಿತು.

ಅಲ್ಲಿಂದ ಉಡುಪಿಗೆ ಟಿಕೆಟು ಬರೆದು ಕೊಟ್ಟು ಕಂಡೆಕ್ಟರ್ ನಾಗೇಶ್ವರಯ್ಯನ ಕೈಯಿಂದ ದುಡ್ಡು ತೆಗೆದುಕೊಂಡ. ತನ್ನ ಬಗ್ಗೆ ಕಂಡೆಕ್ಟರ್ ತೋರಿದ 'ರಿಯಾಯಿತಿ'ಯನ್ನು ಸೂಕ್ಷ್ಮವಾಗಿ ಗಮನಿಸಿ ರಾಯರು ಮುಗುಳ್ನಕ್ಕರು.

ಂ ಂ ಂ

"ಸುಖ ಎನ್ನುವುದು ದುಡ್ಡು ಕೊಟ್ಟರೆ ಸಿಗುವುದಿಲ್ಲ ಮಾಧು...." ಮುಂದುವರಿಸಲಾಗದೆ ನಿಲ್ಲಿಸಿಬಿಟ್ಟರು ನಾಗೇಶರಾಯರು. ಆ ದಿನ ಕಂಡೆಕ್ಟರ್ ರಜೆಯಲ್ಲಿದ್ದ. ಹಾಗಾಗಿ ರಾಯರೊಡನೆ ವಿಹಾರಕ್ಕೆ ಹೊರಟಿದ್ದ.

ರಾಯರ ಮಾತಿಗೆ ಆತನೇನೂ ಹೇಳಲಾರದಾಗಿದ್ದ. ಮೌನವಾಗಿಯೇ ಹಿಂಬಾಲಿಸಿದ.

ಸಂಜೆಯ ನೆರಳು ಉದ್ದವಾಗತೊಡಗಿತ್ತು ಮೈದಾನಿನ ಶಿಲಾಸನದ ಮೇಲೆ ಇಬ್ಬರೂ ಹೋಗಿ ಕುಳಿತರು. ರಾಯರು ಯಾವುದೋ ಲೋಕದಲ್ಲಿದ್ದವರಂತೆ ಅನ್ಯಮನಸ್ಕರಾಗಿದ್ದರು. ಮಾಧವ ಅವರ ಮುಖವನ್ನೇ ದಿಟ್ಟಿಸಿದ. ಆ ಸಂಜೆಯ ಸೂರ್ಯನ ಹೊಂಬೆಳಕಿಗೆ ರಾಯರ ಕಣ್ಣಿನಿಂದಿಳಿದ ನೋವಿನ ಅಶ್ರುಧಾರೆ ಬಂಗಾರದ ಬಣ್ಣ ತಳೆದಿತ್ತು. ಕಂಡೆಕ್ಟರ್ ಅಸ್ವಸ್ಥನಾಗಿದ್ದ.

"ಸಂಸಾರದಲ್ಲಿ ನನ್ನ ಪಡಿನೆಳಲಾಗಿ ಹಿಂಬಾಲಿಸಿದ್ದ ಆಕೆಯನ್ನು ಉಳಿಸಿಕೊಳ್ಳುವ ಆಕೆಯಿಲ್ಲ ಮಾಧು"

—ಅವರ ಹೆಂಡತಿಯ ಆರೋಗ್ಯ ಇತ್ತೀಚೆಗೆ ತೀರ ಕೆಟ್ಟಿತ್ತು. ಕಾಯಿಲೆ ಕೈ ಮೀರಿ ಹೋಗಿತ್ತು. ಡಾಕ್ಟರರೂ ಕೂ ನಿರಾಶೆ ವ್ಯಕ್ತಪಡಿಸಿದ್ದರು. ಹಿರಿಯ ಮಗ ರಾಜೂ, ಮೊನ್ನೆ ಹೋದಾಗ ತೀರ ಧೈರ್ಯ ವ್ಯಕ್ತಪಡಿಸಿದ್ದ. ಅವನಿ ತಾನೇ ತನ್ನೆಲ್ಲದ ಧೈರ್ಯ ತುಂಬಿ ಹೊಟು ಬಂದಿದ್ದರು. ಆದರೆ ಮನೆಗೆ ಬಂ ಮೇಲೆ ರಾಯರಿಗೆ ಆಕೆಯನ್ನು ಆಂತ ಪರಿಸ್ಥಿತಿಯಲ್ಲಿ ಬಿಟ್ಟುಬಂದುದು ಸರಿಯಲ್ಲ ಎನ್ನಿಸತೊಡಗಿತು. ಮನಸ್ಸು ತೀರ ಗೊ ದಲಕ್ಕೇಡಾಯಿತು.

"ಆಗತ್ಯ ಕಾಣಿಸಿದರೆ ತಂತಿ ಬಿ ಬಂದುಬಿಡುತ್ತೇನೆ" ಎಂದು ಮಗನಿಗೆ ತರ್ತಮಾನ ಕಳಿಸಿದರು ಈಚೆಗೆ ತನ್ನ ವಾಟನ್ನೂ ಈ ಬೇಸಗೆಯ ಸುಸಂಳ ಲ್ಲಿ ತೊರೆದು ಬಿಡುವುದು ಸಾಧ್ಯವಿರಲಿಲ್ಲ

"ಒಂದು ಕೆಲಸ ಮಾಡುವಿಯಾ ಮಾ ಧು?"—ಬಹಳ ಹೊತ್ತಿನ ಮೇಲೆ ಮೌ ವನ್ನೊಡೆದರು ರಾಯರು.

"ಆಗತ್ಯವಾಗಿ ಹೇಳಿ, ಸಿದ್ಧನಿದ್ದೇನೆ" ಇತ್ತೀಚೆಗಂತೂ ಕಂಡೆಕ್ಟರ್ ರಾಯ

(೧೧ನೇ ಪುಟ ನೋಡಿರಿ)

41 ವರ್ಷಗಳ ಭದ್ರ ಹಾಗೂ ಸಮರ್ಥ ಬೇಂಕಿಂಗ್ ಸೇವೆ.

ದಿ. ಪಾಂಗಾಳ ನಾಯಕ್ ಬೇಂಕ್ ಲಿ.

ನಮ್ಮ 3 ವರ್ಷ ವ್ಯಾದೆಯ ಕೇಶ್ ಸರ್ಟಿಫಿಕೇಟುಗಳಲ್ಲಿ ರೇವಣಿ ಮಾಡಿರಿ: ಬಡ್ಡಿ ಸೇಕಡಾ 5ರಂತೆ: ರೂ. 87—00 3 ವರ್ಷಗಳ ಅಂತ್ಯದಲ್ಲಿ ಬಡ್ಡಿ ಕೂಡಿ ರೂ. 100—00 ಒದಗಿಸುವುದು.

ಕರೆ, ಚಿಕ್ಕ ವ್ಯಾದೆ, ನಿರಖು ರೇವಣಾತಿಗಳ ಮೇಲೆ ಆಕರ್ಷಣೀಯ ಶರ್ತಗಳು: ಬಡ್ಡಿ ಸೇಕಡಾ 5¼ರ ವರೆಗೆ.

ತಾ 1—4—1961ರಿಂದ ಸೇವಿಂಗ್ಸ್ ಬೇಂಕ್ ಖಾತೆಗಳ ಮೇಲೆ ಬಡ್ಡಿ ಸೇಕಡಾ 3ರಂತೆ.

THE PANGAL NAYAK BANK LTD.

Estd: 1920

ESTD. 1921 ಸ್ಥಾಪನೆ

NAVAYUGA

KANNADA WEEKLY, UDIPI.

Founder:

Late Sri A. B. Shetty

Former Minister for Public Health, Govt. of Madras & Govt. of Mysore.

ನವಯುಗ

ರಾಷ್ಟ್ರೀಯ ವಾರಪತ್ರಿಕೆ

ಉಡುಪಿ

ಗೌರವ ಸಂಪಾದಕರು:

ಎಸ್. ಗೋಪೀಚಂದ ರಾವ್, ವಿದ್ವಾನ್

ಬಿ. ಶಾಮರಾಯ ಶೆಟ್ಟಿ, ಬಿ. ಎ., ಎಲ್.ಟಿ

ಸಂಚಾಲಕ ಸಂಪಾದಕರು:

ಕೆ. ಹೊನ್ನಯ್ಯ ಶೆಟ್ಟಿ.

ಂ

ಜಾಹೀರಾತು ದರಗಳು:

ನಿಯಮಿತ (ಕಂಟ್ರಾಕ್ಟ್)

ಕಲಂ ಇಂಚಿಗೆ ರೂ. 2-50

ಅನಿಯಮಿತ (ಕೆಜುವಲ್)

ಕಲಂ ಇಂಚಿಗೆ ರೂ. 3-50

ಚಂದಾ:

ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75

ಬಿಡಿಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ರವೀಂದ್ರವಾಣಿ—ಲೇಖಾಂಕ ೨೯ – ವಿಶ್ವಕವಿ ರವೀಂದ್ರನಾಥ ಟಾಗೋರ್

ಕರ್ಮ ಸಾಧನೆಯಿಂದ ಪರಮಾತ್ಮನ ಪ್ರಾಪ್ತಿ

ಅನುವಾದಕರು: ಕೆ. ಎನ್. ಭಟ್, ಶಿರಾಡಿಪಾಲ್.

ಇದರಿಂದಾಗಿ, ಬ್ರಹ್ಮನ ಮತ್ತು ನಮ್ಮ ಸಾದೃಶ್ಯವು ತೋರಿಬರುವುದು ನಮಗೂ ಕೂಡ ಅನೇಕ ಕಾರ್ಯಾರ್ಥಗಳಿಂದ—ನಮ್ಮನ್ನು ನಾವೇ ಸ್ವತಃ ಅರ್ಪಿಸಿಕೊಳ್ಳಬೇಕಾಗುವುದು. ವೇದಗಳಲ್ಲಿ "ಪರಮೇಶ್ವರನಾದ ಪ್ರಭುವು ಆತ್ಮದಾ, ಮತ್ತು ಬಲದಾ, ಆಗಿರುವನು." ಎಂದು ಹೇಳಿದೆ. ಆತನು ತನ್ನನ್ನು ತಾನೇ ಅರ್ಪಿಸಿಕೊಂಡಿದ್ದೂ ಸಹ, ತೃಪ್ತನಾಗಿಲ್ಲ. ಆತ್ಮದಾನ ನೀಡಲೂ ಕೂಡ ಆತ ಸಮರ್ಥನು. ಆಗ ಉಪನಿಷತ್ತಿನ ರಚಕರಾದ ಋಷಿಗಳು ಆ ಪರಮೇಶ್ವರನಲ್ಲಿ—"ನಮಗೆ ಬುದ್ಧಿಯನ್ನು ನೀಡು!" ಎಂದು ಪ್ರಾರ್ಥಿಸಿದರು. ನಮ್ಮಲ್ಲಿಯೂ ಕೂಡ ಈ ಬುದ್ಧಿ ಇರುವುದಾದರೆ, ನಾವೂ, ನಾವೂ ಬ್ರಹ್ಮನೊಡನೆ ಕೂಡಿ, ಅರ್ಥಾತ್ ಆತನೊಡನೆ ಸಮಭಾವವನ್ನು ಸ್ಥಾಪಿಸಿ; ಜಗತ್ತಿನ ಕಾರ್ಯಕಲಾಪಗಳಲ್ಲಿ ಭಾಗವಹಿಸಬಹುದು. ಹೀಗೆ ಮಾಡಲು ಸಾಧ್ಯವಾದಾಗ ಮಾತ್ರ ಬ್ರಹ್ಮನೊಡನೆ, ನಿಜವಾದ ಏಕಾತ್ಮ ಭಾವ ಸ್ಥಾಪಿತವಾದಂತಾಗುವುದು.

ಇನ್ನೊಬ್ಬನ, (ಪರರ) ಸ್ವಾರ್ಥವನ್ನು ನಮ್ಮ ಸ್ವಾರ್ಥವೆಂದು—ಭಾವಿಸುವ ಬುದ್ಧಿಯೇ ನಿಜವಾದ ಪರೋಪಕಾರೀ ಬುದ್ಧಿಯಾಗಿರುವುದು. ಮಾನವನ ಕಲ್ಯಾಣದ ಕಾರ್ಯಗಳನ್ನು ಪೂರ್ಣವಾಗಿ ಮಾಡುತ್ತಿರುವುದೇ ನಮ್ಮ ಆನಂದ! ಎಂಬುದನ್ನು ಈ ಪರಿಯ ಪರೋಪಕಾರೀ ಬುದ್ಧಿಯು ತೋರಿಸಿಕೊಡುವಂಥದಾಗಿರುವುದು. ನಾವು ಈ ಪರೋಪಕಾರೀ ಬುದ್ಧಿಯ ನೇತೃತ್ವದಲ್ಲಿ ಕಾರ್ಯಗೈಯುತ್ತಿರುವಾಗ ಮಾತ್ರ, ನಮ್ಮ ಕಾರ್ಯಗಳು, ಸಂಯಮ ಯುಕ್ತವಾಗುತ್ತವೆ. ಅಂದರೆ, ಇದರಿಂದ, ಯಂತ್ರದಂತಹ ಜಡತ್ವ ಉಂಟಾಗುವುದೆಂದು, ಎಂದೂ ಭಾವಿಸಲಾಗದು. ಪರೋಪಕಾರೀ ಬುದ್ಧಿಯ ಪ್ರೇರಣೆಯ ಪ್ರವಾಹವು ನಮ್ಮ ಸ್ವಾರ್ಥ ಮತ್ತು ಆವಶ್ಯಕತೆಗಳಿಗಾಗಿ ಇರುವುದಲ್ಲ; ಅದರಿಂದ ಇದರಿಂದ ಆತ್ಮ ಸಂತೋಷ ಉಂಟಾಗುವುದು. ಇಂತಹ ಕಾರ್ಯಗಳಲ್ಲಿ ಅಂಧಾನುಕರಣೆ ಇರುವುದಿಲ್ಲ. ಪರಂಪರಾಗತವಾಗಿ ಬಂದ ಹೇಡಿತನ, ದಾಸ್ಯತ್ವ ಇತ್ಯಾದಿಗಳಿಗೆ ಅವಕಾಶವಿರದೆ, ಅದರಲ್ಲಿ ಸ್ವತಂತ್ರವಾದ ಅಂಶವಿರುತ್ತದೆ. ಇಂತಹ ಸ್ವತಂತ್ರ ಕಾರ್ಯಗಳೇ ಆನಂದ ಪ್ರದವಾಗಿರುತ್ತವೆ; ಆನಂದ ಪ್ರದವಾಗುತ್ತವೆ. ಹೀಗೆ ಕರ್ಮಶೀಲರಾದ ಬಳಿಕ ನಾವು—"ವಿಚೈತಿ ಚಾಂತೇ ವಿಶ್ವಮಾದಾ" ಅರ್ಥಾತ್—ಆರಂಭದಲ್ಲಿಯೂ, ಅಂತ್ಯದಲ್ಲಿಯೂ, ಒಂದೇ ರೀತಿಯ ಆನಂದವಿರುವುದನ್ನು—ನಾವು ಅನುಭವ ಪಡೆಯುತ್ತೇವೆ ಇದೇ ರೀತಿಯಿಂದ, "ನಮ್ಮ ಕೆಲಸವೇ ನಮಗೆ ಪ್ರೇರಕಶಕ್ತಿ' ಎಂಬುದನ್ನು ನಾವು ಮನಗಾಣುತ್ತೇವೆ. ಇಂತು—ಪರಿಪಕ್ವತೆ ಬಂದ ಮೇಲೆ, ಅಂತ್ಯದಲ್ಲಿ ಎಲ್ಲಾ ಕಾರ್ಯಗಳೂ, ಶಾಂತಿ ಕಲ್ಯಾಣ! ಮತ್ತು ಆನಂದ! ಇವುಗಳಿಂದ ಪ್ರೇರಕವಾಗಿ ಪರಿಪೂರ್ಣವಾಗುತ್ತವೆ.

ಉಪನಿಷತ್ತು "ಸ್ವಾಭಾವಿಕೀ ಜ್ಞಾನ ಬಲಕ್ರಿಯಾಶ್ಚ" ಎಂದು ಹೇಳಿದೆ. ಅರ್ಥಾತ್, ಜ್ಞಾನ—ಶಕ್ತಿ, ಮತ್ತು ಕಾರ್ಯ, ಇವು ಆತ್ಮಬೋಧ ಪಡೆದವರ ಗುಣಗಳಾಗಿವೆ. ಆದರೆ, ಈ ಸ್ವಾಭಾವಿಕತೆ, ನಮ್ಮ ಗುಣಗಳಲ್ಲಿ ಇರುವುದಿಲ್ಲ ಈ ಕಾರಣದಿಂದಲೇ ನಾವು ಕೆಲಸ—ಮತ್ತು ಆನಂದ ಇವುಗಳೊಳಗೆ ಭೇದವನ್ನು ಕಾಣುತ್ತೇವೆ. ನಮ್ಮ ಕೆಲಸದ ದಿನಗಳು ನಮ್ಮ ಆನಂದದ ದಿನಗಳಿಂದ ಬೇರೆಯೇ ಆಗಿರುತ್ತವೆ. ಈ ಕಾರಣದಿಂದ ನಮಗೆ—

ವಾರಕ್ಕೆ ಒಂದು ದಿನವಾದರೂ, ರಜೆ ಬೇಕಾಗುವುದು. ಆ ದಿನ ಮಾತ್ರವೇ ನಮ್ಮ ಆನಂದದ ದಿನವಾಗುತ್ತದೆ! ನಾವು ನಮ್ಮ ನಿತ್ಯದ ಕೆಲಸಗಳಲ್ಲಿ ಆನಂದದ ಅನುಭವವನ್ನು ಪಡೆಯದಿರುವುದರಿಂದ, ಇದು ಹೀಗಾಗುವುದು ನದಿ, ತನ್ನ ಪ್ರವಾಹದ ಮೂಲಕವೇ ಆನಂದವನ್ನು ಪಡೆಯುವುದು. ಅಗ್ನಿ ಜ್ವಾಲೆಯಾಗಿ ಏಳುವುದರಲ್ಲಿ, ಪುಷ್ಪವು ಅರಳಿ ಸುಗಂಧವನ್ನು ಬೀರುವುದರಲ್ಲಿ, ಆನಂದಪಡುತ್ತಿವೆ. ಆದರೆ ನಮ್ಮ ನಿತ್ಯದ ಕೆಲಸಗಳಲ್ಲಿ ಮಾತ್ರ ನಮಗೆ ಆನಂದ ಲಭಿಸುವುದಿಲ್ಲ! ಏಕೆಂದರೆ ನಾವು ನಮ್ಮ ಕೆಲಸವನ್ನು ಏಕಾಗ್ರತೆಯಿಂದ ಮೈಮರೆತು, ಅದರಲ್ಲೇ ತಲ್ಲೀನರಾಗಿ ಮಾಡುವುದಿಲ್ಲ. "ಈ ಕೆಲಸವು ನಮ್ಮ ಪವಿತ್ರವಾದ ಕೆಲಸ" ಎಂದು ತಿಳಿದು ಶ್ರದ್ಧೆಯಿಂದ ಮಾಡದಿರುವುದೇ ಹೀಗಾಗಲು ಮುಖ್ಯ ಕಾರಣವಾಗಿರುವುದು.

ಹೇ! ಆತ್ಮ ದಾನಿಯೇ! ಅಗ್ನಿಯು ಜ್ವಾಲೆಯಾಗಿ ಏಳುವಂತೆ, ನದಿಯು ಪ್ರವಾಹದಿಂದ ತುಂಬಿ ಪ್ರವಹಿಸುವಂತೆ, ತನ್ನ ಸೌಗಂಧರೂಪೀ ಶಕ್ತಿಯನ್ನು ಪುಷ್ಪವು ಸೌರಭ ರೂಪದಿಂದ ಹೊರಸೂಸುವಂತೆ, ಪ್ರಸಾರಮಾಡಲು, ನಮ್ಮ ಆತ್ಮವು ನಿನ್ನ ಆತ್ಮಾನುಭೂತಿಯಿಂದ, ಸಮರ್ಥವಾಗಲೀ! ನವಗೆ ಜೀವನದಲ್ಲಿ ಬರುವ ಸುಖ ದುಃಖ ದಾರಿದ್ರ್ಯ, ಲಾಭ, ನಷ್ಟ ಉತ್ಥಾನ ಮತ್ತು ಪತನ, ಇವುಗಳೊಡನೆ ಸಮತಾ ಭಾವವನ್ನಿತ್ತು ದಿವ್ಯವಾದ ಪ್ರೇಮವನ್ನು ಮತ್ತು ಜೀವನವನ್ನು ಪ್ರೇಮಿಸುವ ಸಾಮರ್ಥ್ಯವನ್ನು ಕೊಡು! ವಿಶ್ವದ ಅನುಭವ ಮಾಡಬಲ್ಲ, ಮತ್ತು ಪೂರ್ಣ ಮನೋಯೋಗದಿಂದ ವಿಶ್ವದ ಶಕ್ತಿಗಳೊಡನೆ, ಕಾರ್ಯಗೈಯ್ಯ ಬಲ್ಲ ದಿವ್ಯವಾದ ಶಕ್ತಿಯನ್ನು ನಮಗೆ ನೀಡು! ಜೀವನದಲ್ಲಿ ಹೇಡಿಗಳಾಗದೆ ಧೈರ್ಯದಿಂದ ವ್ಯವಹಾರ ಮಾಡುತ್ತ, ನಿನ್ನವರು ದಾನ ರೂಪವಾಗಿ ದೊರೆತ ಈ ಜೀವನವನ್ನು ಪೂರ್ಣರೂಪದಿಂದ ಸಾರ್ಥಕಗೊಳಿಸಿಕೊಳ್ಳುವಂತಹ ಚೈತನ್ಯವನ್ನು ನಮಗೆ ನೀಡು! ಆನಂದವು ನಮ್ಮ ನಿತ್ಯದ ಕೆಲಸ ಕಾರ್ಯಗಳಿಂದ ಬೇರೆಯೇ ಆಗಿರುವುದೆಂಬ ನಮ್ಮ ಈ ದುರ್ಬಲವಾದ ಭಾವನೆಯು ತೊಡೆದು ಹೋಗಲಿ! ಇದೇ ನಿನ್ನೊಡನೆ ನಮ್ಮ ಪ್ರಾರ್ಥನೆಯಾಗಿದೆ.

ರೈತನು, ಎಲ್ಲ ಶ್ರಮ ವಹಿಸಿ ಕೆಲಸ ಮಾಡಿದರೂ, ಆತನ ಆನಂದವು, ಭತ್ತ, ಗೋಧಾನ್ಯಗಳ ರೂಪದಿಂದ ಒಡೆದು ಬಂದು ಸ್ಪಷ್ಟವಾಗಿ ತೋರುವುದು ಮನುಷ್ಯನು ಮಹಾ ಅರಣ್ಯವನ್ನು ಕಡಿದು ಸಮತಟ್ಟಾಗಿ ಮಾರ್ಪಡಿಸಿ, ಗದ್ದೆ, ಅಥವಾ ಹೊಲಗಳ ರೂಪದಿಂದ ಬೆಳೆಗಳನ್ನು ಬೆಳೆಸುವುದಕ್ಕೆ—ಅಥವಾ, ಒಂದು ನಗರದ ರೂಪವಾಗಿ ಎಲ್ಲಿಯೇ ನಿರ್ಮಾಣ ಮಾಡಲಿ; ಅಲ್ಲಿ ಆತನ ಆನಂದವು ಶಾಂತಿ, ಸಂಪೃದ್ಧಿ ಮತ್ತು ವ್ಯವಸ್ಥೆ ಈ ರೂಪಗಳಿಂದ ಪ್ರಕಟವಾಗುವುದು.

ಹೇ! ವಿಶ್ವ ನಿರ್ಮಾಣದ ಅಖಿಲ ಕರ್ಮಕಾರನೇ! ನಿನ್ನಲ್ಲಿ ನಾವು ಪ್ರಾರ್ಥಿಸುವುದೇನೆಂದರೆ: — ನಿನ್ನ ವಿಶ್ವಶಕ್ತಿಯುತವಾದ ಚೇತನ ಪ್ರವಾಹವು ವರಂತ ಕಾಲದ ದಕ್ಷಿಣಾನಿಲನಂತೆ, ಸತತವಾಗಿ ಪ್ರವಹಿಸುತ್ತ ವಿಶ್ವದ ಸಮಸ್ತ ಮನುಷ್ಯರೂಪೀ ಬೆಳೆಯನ್ನು ಕಾಪಾಡಲಿ! ನಿನ್ನ ಈ ತಂಬೆಲರಿನ ಮೂಲಕ ವಿಶ್ವದ ಅನೇಕ ದೇಶಗಳ ಪುಷ್ಪ ಸುಗಂಧವು ನಮಗೆ ಲಭಿಸುತ್ತಿರಲಿ! ಈ ತಂಗಾಳಿಯು ನಮ್ಮ ಶುಷ್ಕ ಮತ್ತು ಅಚೇತನ ಯುಕ್ತವಾದ ಆತ್ಮಗಳಲ್ಲಿ ತನ್ನ ಮಧುರ ರಸವನ್ನು ತುಂಬಿಸಲಿ! ಇದರಿಂದ ನಮ್ಮ ಶಕ್ತಿಗಳು, ಎಚ್ಚರಗೊಂಡು, ಪೂರ್ಣತೆಯ ಅಪೇಕ್ಷೆಯಿಂದ ಜಾಗೃತಗೊಳ್ಳಲಿ!

(ಸಶೇಷ)

— ಮುಂದಿನ ಸಂಚಿಕೆಯಲ್ಲಿ —
"ಅನಂತದ ಸಾಧನೆ"

ಡಿಸ್ಸಿಲೇಂಡಿನಲ್ಲಿ ನೆಹರು, ಮತ್ತು ಇಂದಿರಾಗಾಂಧಿಯವರು ಇವರಿರುವ ಉಡುಗೊರೆ ಸ್ವೀಕರಿಸುತ್ತಿರುವದನ್ನೂ ಚಲಚಿತ್ರ ನಿರ್ಮಾಪಕ ವಾಲ್ಟ್‌ಡಿಸ್ನೀಯವರನ್ನೂ ಮೇಲಿನ ಚಿತ್ರದಲ್ಲಿ ಕಾಣಬಹುದು.

ದಿ ಸ್ಪೆಶಲ್ ಅಸಿಸ್ಟಾಂಟ್ ಕಮಿಶನರ್ ಟೆನೆನ್ಸಿ ಮಂಗಳೂರು

ಕುಂದಾಪುರ

O. P. 1195/1961.

ಶೀತಾರಾಮ ಕಾರಂತ —ಅರ್ಜೀದಾರರೆ.

1. ನಾಗಪ್ಪ ನ್ಯಾರಿ. 2. ಮಹಾಬಲ ನ್ಯಾರಿ.
—ಎದ್ರಿರು.

ಸದ್ರಿ ಅರ್ಜೀದಾರನು ಜ್ಞಾಪೀರು ಮಾಡಿಕೊಳ್ಳುವುದೇನೆಂದರೆ.

ಕುಂದಾಪುರ ತಾಲ್ಲುಕು ಕಿರಿಮಂಜೇಶ್ವರ ಗ್ರಾಮದಲ್ಲಿರುವ ಹಟ್ಟಿ ನಾಯಕ್ತ್ರಿ ಮಕ್ಕಳು ನಾಗಪ್ಪ ನ್ಯಾರಿ 1, ಮಹಾಬಲ ನ್ಯಾರಿ 1, ಕೂಡಾ ಇನರಿಗೆ ಈ ಮೂಲ್ಕು ತಿಳಿಯಪಡಿಸುವುದೇನೆಂದರೆ

ಸದ್ರಿ ವ್ಯವಹರಣೆಯಲ್ಲಿ ಎದ್ರಿರಿಂದ ಅರ್ಜೀದಾರನಿಗೆ ಕಳೆದ ವಿಳಂಬ, ವಿಕಾರಿ, ಶಾಶ್ವತ ಸಂವತ್ಸರಗಳ ಸೇಣ ಬಾಕಿ ವ ಅಸ್ತಿಸ್ವಾಧೀನತೆ ವಗೈರೆ ಬಗ್ಗೆ ಅರ್ಜೀದಾರನು ಎದ್ರಿರ ಮೇಲೆ ದಾಕ್ಲೆ ಮಾಡಿದ ಮೇಲಿನ ಅರ್ಜೀಯು ತಾ. 29-12-1961ಕ್ಕೆ ಮೇಲಿನ ಕೋರ್ಟ್‌ನಲ್ಲಿ ತನ್ನಿಗೆ ಇಟ್ಟಿರುತ್ತದೆ. ಆ ಕುರಿತು ಏನಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ದಿವ್ಸ ಪಗಲು 11 ಗಂಟೆಗೆ ಮೇಲಿನ ಕೋರ್ಟು ಮುಂದೆ ಹಾಜ್ರಾಗಿ ಜ್ಞಾಪೀರು ಮಾಡಿಕೊಳ್ಳತಕ್ಕದ್ದು.

N. S. Parameshwariah,
Advocate for Plaintiff.
Coondapoor. 15--12--11.

ಉಳಿತಾಯದ ಬಲವೊಂದಿದ್ದರೆ.....

ಜೀವನದ ಜಡತ್ವ-ಜಿಗುಪ್ಸೆಗಳು ತಂತಾನೆ ಮಾಯವಾಗುವುವು; ಬದಲು, ಶರೀರದಲ್ಲಿನ ಸುಪ್ತ ಕ್ರಿಯಾಶಕ್ತಿಗಳಿಗೆ ಚೈತನ್ಯ-ಪ್ರೇರೇಪಣೆಗಳು ಸಿಕ್ಕಿ, ಜೀವನವು ಸಂಜೀವನವಾಗಿ, ಸುಖದ ಸುಪ್ತಿತ್ತಿಗೆಯಾಗಿ ನೆಲ್ಲನೆ ಮಾರ್ಪಡುವುದು.

— ಉಳಿತಾಯಕ್ಕಾಗಿ —

ಇಂದೇ .....ಈ ಕ್ಷಣವೇ.... ...ಒಂದು ಸೇವಿಂಗ್ಸ್ ಖಾತೆ ತೆರೆಯಿರಿ.

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ಸ್ಥಾಪನೆ: 1906)

ರಿಜಿಸ್ಟರ್ಡ್ ಆಫೀಸು: ಉಡುಪಿ | ಆಡಳಿತ ಆಫೀಸು, ಮಂಗಳೂರು

ಜರ್ಮನರು ಅಪರಾಜಿತರು

ಯುರೋಪು ಭೂಖಂಡದಂತೆಯೇ ಅಲ್ಲಿರುವ ದೇಶಗಳೂ ಚಿಕ್ಕ ಚಿಕ್ಕವು. ಅಲ್ಲಿ ಯುದ್ಧದ ಪ್ರಭಾವ ಬೀಳದ ದೇಶ ಉಲ್ಲೇಖ ಮಾತ್ರಕ್ಕೂ ದೊರೆಯದು. ಆದರೂ ಪೂರ್ವ ಜರ್ಮನಿಯ ಮೇಲೆ ಯುದ್ಧವು ಪ್ರಭಾವ ಬೀರದಷ್ಟು ಮತ್ತಾವ ದೇಶಕ್ಕೂ ಬೀರಿಲ್ಲವೆಂದು ಎಲ್ಲರೂ ಹೇಳುತ್ತಾರೆ. ಜರ್ಮನಿಯಲ್ಲಿ ಸಮರದ ದೆಸೆಯಿಂದಾದಷ್ಟು ಅನಾಹುತ ಬೇರಾವೆಡೆಯೂ ಸಂಭವಿಸಿಲ್ಲವೆಂಬುದು ನಿಜ.

'ಮಾರ್ಶಲ್ ಯೋಜನೆ'ಯು ಜರ್ಮನಿಯ ಪುನಾರಚನೆಗೂ ಅಲ್ಲಿನ ಆರ್ಥಿಕ ಮತ್ತು ಔದ್ಯೋಗಿಕ ಪುನರ್ನಿರ್ಮಾಣಕ್ಕೂ ಹೆಚ್ಚಿನ ಸಹಾಯ ನೀಡಿತು. ಹಾಗಿದ್ದರೂ ಜರ್ಮನಿಯ ಯಾವುದೇ ನಗರದಲ್ಲಿ ಯುದ್ಧದ ನೆನಪು ತರುವ ಒಂದಲ್ಲ ಒಂದು ದೃಶ್ಯ ದೃಷ್ಟಿಗೋಚರವಾಗಿಯೇ ತೀರುತ್ತದೆ. ಯುದ್ಧದ ಅವಧಿಯಲ್ಲಿ ಗಾಯಗೊಂಡ ಹಲವಾರು ಸ್ತ್ರೀ ಪುರುಷರು ಇಂದಿಗೂ ಅಲ್ಲಿ ಇದ್ದಾರೆ. ಇಲ್ಲಿರುವಷ್ಟು ಅಂಗವಿಕಲರು ನಮಗೆ ಮತ್ತೆಲ್ಲಿಯೂ ಕಂಡು ಬರಲಾರರು. ಒಂದೂ ಕೈಯಿಲ್ಲದ ಕೆಲವಾರು ಮಂದಿ ಜರ್ಮನಿಯಲ್ಲಿದ್ದಾರೆ ಇವರೆಲ್ಲರೂ ಯುದ್ಧದ ಭೀಕರ ಪರಿಣಾಮಕ್ಕೆ ಒಳಗಾದವರು. ಒಂದೆಡೆ ಒಬ್ಬ ಎರಡೂ ಕೈಗಳಿಲ್ಲದ, ಕಾಲುಗಳೂ ಅರೆ ತುಂಡಾದ ದುರದೃಷ್ಟಶಾಲಿಯಿದ್ದಾನೆ. ಆದರೂ ಆತ ತನ್ನ ದೌರ್ಭಾಗ್ಯಕ್ಕಾಗಿ ಮರುಗುವುದಿಲ್ಲ. ಡಾಕ್ಟರರು ಆತನ ತೋಳಿನ ಮೇಲ್ಭಾಗವನ್ನೇ ಎರಡಾಗಿ ಸೀಳಿಕೊಟ್ಟಿದ್ದಾರೆ. ಈ ಸೀಳುಗಳನ್ನೇ ಆತ ಬೆರಳುಗಳಂತೆ ಉಪಯೋಗಿಸುತಿದ್ದಾನೆ. ವಸ್ತುಗಳನ್ನು ಹಿಡಿಯುವುದ ; ಆಹಾರವನ್ನು ಸೇವಿಸುವುದು ಎಲ್ಲವನ್ನೂ ಇವುಗಳ ಸಹಾಯದಿಂದಲೇ ಮಾಡುತ್ತಾನೆ ಹಾಗೆಯೇ ಒಂದು ಕೈಯ, ಒಂದು ಕಾಲಿನ ಜನರ ಸಂಖ್ಯೆ ಅಧಿಕವಿದೆ. ಆದರೂ ಅವರು ತಂತಮ್ಮ ಕಾರ್ಯಕಲಾಪವನ್ನು ಸ್ವತಂತ್ರವಾಗಿ ಮಾಡುತ್ತಿರುವುದೇ ಇಲ್ಲಿನ ವೈಶಿಷ್ಟ್ಯ.

ಇಡಿಯ ಜರ್ಮನಿಯನ್ನು ತಿರುಗಿ ಬಂದ ನಂತರ ಅಲ್ಲಿನ ಪ್ರಜೆಗಳ ಆತ್ಮವಿಶ್ವಾಸದ ಬಗ್ಗೆ ನಿಮಗೆ ಆಶ್ಚರ್ಯವಾಗುವುದು ಜೀವನದ ಪರಿಪೂರ್ಣ ಆನಂದವನ್ನು ಅನುಭವಿಸುವ ಸೌಭಾಗ್ಯ ನಮಗೆ ಪರಮಾತ್ಮ ನೀಡಿದ್ದಾನೆಂದು ಜರ್ಮನರೆಲ್ಲರೂ ವಿಶ್ವಾಸಪಡುತ್ತಾರೆ. ಕಾರ್ಯದವೇಳೆ ಕಾರ್ಯ, ಸಾಯಂಕಾಲದ ನಂತರ ಆರಾಮವೆಂಬುದೇ ಅವರ ತಿಳುವಳಿಕೆ. ಹಗಲಿನಲ್ಲಿ ಅವರು ನಿಮ್ಮೊಡನೆ ಮಾತುಕತೆ ನಡೆಸಲು ಸಮಯ ವ್ಯರ್ಥಗಳೆಯಲಾರರು. ಸಂಜೆಯೊಡರೂ ಮಾತಾಡಲು ಅವರು ಸಿದ್ಧರಿರಲಾರರು.

ಜರ್ಮನಿಯಲ್ಲಿ ಬಾಲ್ಯಾವಸ್ಥೆಯಲ್ಲೇ ರಸ್ತೆಯನ್ನು ದಾಟುವುದು, ಅದನ್ನು ನಿರ್ಮಲವಾಗಿಡುವುದು ಹೇಗೆ ಎಂಬುದನ್ನು ಕಲಿಸುತ್ತಾರೆ; ಇಲ್ಲಿ ನಮ್ಮ ದೇಶದಲ್ಲಿ ಇಂತಹ ಚಿಕ್ಕ ಸುಟ್ಟ ವಿಷಯಗಳನ್ನು ಕಲಿಸುವುದು ವ್ಯರ್ಥವೆಂದು ತಿಳಿಯುತ್ತೇವೆ. ನಮ್ಮ ದೇಶದಲ್ಲಿ ನಿರರ್ಥಕವೆಂದು ಅಥವಾ ತೀರ ಸಾಮಾನ್ಯವೆಂದು ತಿಳಿಯುವ ವಿಷಯಗಳು ಹಲವಿವೆ. ಯುರೋಪಿನ ಜನರ ಮೇಲೆ ಅವುಗಳ ಪ್ರಭಾವವು ಅತ್ಯಧಿಕವಾಗಿ ಬಿದ್ದಿದ್ದು, ಪ್ರಗತಿ ಸಾಧಿಸುವುದರಲ್ಲಿ ಬಹಳ ಸಹಾಯಕವಾಗಿವೆ. ಎಳವೆಯಲ್ಲಿಯೇ ಸಂಸ್ಕಾರ ಮತ್ತು ಪ್ರತಿಕ್ಷಣದ ಪ್ರಭಾವವು ಅಲ್ಲಿನ ಪ್ರತ್ಯೇಕ ವ್ಯಕ್ತಿಯೂ ತನ್ನ ಉತ್ತರದಾಯಿತ್ವದ ಅನುಭವವನ್ನು ತಂದು ಕೊಡುತ್ತದೆ.

ಜರ್ಮನಿಯಲ್ಲಿಯೂ ಪ್ರತ್ಯೇಕ ವ್ಯಕ್ತಿಯು ಅಧಿಕಾರಕ್ಕಾಗಿ ಹೋರಾಡುತ್ತಾನೆ; ಎಂದರೆ ವಿಶ್ವಾಸ ಘಾತ ಮಾಡುತ್ತಾನೆ ಎಂದರ್ಥವಲ್ಲ. ಅಲ್ಲಿಯೂ ಎಲ್ಲ ವಿಧದ ದ ಟ್ರೇಡ್ ಯೂನಿಯನ್‌ಗಳಿವೆ. ಆದರೆ ಅವು ಮಕ್ಕಳಾಟಿಕೆಯಂತೆ ಬೇಕೆಂಬಾಗ ಹರತಾಳ ಮಾಡುವುದಿಲ್ಲ ಮಜೂರರು ತಮ್ಮ ಅಧಿಕಾರವನ್ನರಿತಿರುವಂತೆಯೇ ಒಡೆಯರ ಅಧಿಕಾರಗಳನ್ನೂ ತಿಳಿದಿರುತ್ತಾರೆ. ಒಡೆಯನಾದವನು ತನ್ನ ಕಿಸೆಯಿಂದ ಏನನ್ನೂ ಕೊಡುವವನಲ್ಲ; ಸಂಪಾದನೆಯಿಂದಲೇ ಆತನೀಡಬೇಕಾಗುತ್ತದೆ; ಈಗಳಕೆಗೆ ಎಲ್ಲ ಮಜೂರರೂ ಸಹಾಯ ನೀಡಬೇಕು; ಆದುದರಿಂದ ಪ್ರತಿಯೊಬ್ಬನೂ ತಂತಮ್ಮ ಅಧಿಕಾರ ವ್ಯಾಪ್ತಿಗೆ ಒಳಪಟ್ಟುಗಳಿಸಿತನ್ನುತ್ತಾನೆ ಎಂಬುದನ್ನು ಅವರು ತಿಳಿದುಕೊಂಡಿದ್ದಾರೆ

ಯುರೋಪು ಉನ್ನತಿಯನ್ನು ಸಾಧಿಸಿದ್ದರೂ ಅದು ಸಾಧನೆಯಿಂದ ಮಾತ್ರ ಸಾಧ್ಯವಾಗಿದೆ. ರಕ್ತ-ಬೆವರು ಒಂದಾಗಿ ಮಾಡಿ, ಪರಿಶ್ರಮಪಟ್ಟು, ಅನುಶಾಸನ ಮತ್ತು ಸುಯೋಜಿತ ರೀತಿಯಿಂದ ದುಡಿದುದರಿಂದಲೇ ಇದು ಸಾಧ್ಯವಾಗಿದ. ಅಲ್ಲಿ ಪ್ರತಿಯೊಂದು ವಿಭಾಗವೂ ಒಂದು ವರ್ಷದಲ್ಲಿ ಸಾಧಿಸಬೇಕಾದ ಗುರಿಯೆಷ್ಟು ಎಂಬುದನ್ನು ನಿರ್ಧರಿಸಿಕೊಳ್ಳುತ್ತದೆ. ಮಜೂರ ಮತ್ತು ಮೂಲಿಕನು ಈ ಗುರಿ ಸಾಧನೆಗೆ ಒಂದಾಗಿ ದುಡಿಯುತ್ತಾರೆ. ಮೂಲಿಕನ ಅನುಪಸ್ಥಿತಿಯಲ್ಲಿ ಮಜೂರರು ಕಾರ್ಯದ ಜವಾಬ್ದಾರಿಯನ್ನು ಹೊತ್ತು ಸಂಪೂರ್ಣ ಮಾಡುತ್ತಾರೆ. ಚಿಕ್ಕ ದೊಡ್ಡ ಕಾರ್ಯಗಳೆಲ್ಲವೂ ಹೀಗಿಯೇ ನಡೆಯುತ್ತವೆ. ಸುಟ್ಟ ವಿಷಯಗಳ ಕಡೆಗೂ ವಿಶೇಷ ಗಮನವೀಯಲಾಗುತ್ತದೆ.

ಜರ್ಮನಿಯ ಮನೆಗಳು ಸ್ವಾವಲಂಬನದ ಪ್ರತೀಕದಂತಿವೆ. ಇಲ್ಲಿ ನೌಕರರನ್ನು ಇಟ್ಟುಕೊಳ್ಳುವುದಿಲ್ಲ. ಮನೆಯ ಯಜಮಾನಿಯೇ ಎಲ್ಲ ಕೆಲಸಗಳನ್ನೂ ಮಾಡುತ್ತಾಳೆ. ವಿವಾಹವಾದ ಮೊದಲ ಮೂರು-ನಾಲ್ಕು ವರ್ಷ ಪತಿಪತ್ನಿಯರು ಯಾವುದಾದರೂ ಉದ್ಯೋಗ ಮಾಡುತ್ತಾರೆ ಮನೆಯ ಆವಶ್ಯಕ ಪದಾರ್ಥಗಳನ್ನು ಕೊಂಡುಕೊಳ್ಳಬೇಕಾದುದರಿಂದ ಹಣಗಳಿಸಬೇಕಾಗುವುದು. ಜರ್ಮನರು ತಮ್ಮ ಮನೆಯನ್ನು ತಾವೇ ನಿರ್ಮಲವಾಗಿಡಬೇಕಾಗುವುದರಿಂದ ಅವು ಚಿಕ್ಕವಿರುತ್ತವೆ. ಎರಡೆರಡು ಕೋಣೆಗಳಿರುವ ಮನೆಯಲ್ಲಿ ಇಡಿಯ ಸಂಸಾರ ದಿನಗಳೆಯುವುದು. ರೀಲ್ಸ್ ಡಬ್ಬಿಗಳಲ್ಲಿ ಒಂದರ ಮೇಲ್ಗಡೆ ಮತ್ತೊಂದು ಮಲಗುವ ಸೀಟರುವಂತೆಯೇ ಗೋಡೆಗೆ ತಾಗಿ ಒಂದರ ಮೇಲೊಂದು ಹಾಸಿಗೆ ಬಿಡಿಸುವ ವ್ಯವಸ್ಥೆ ಅಲ್ಲಿನ ಮನೆಗಳಲ್ಲಿದೆ ಹಗಲು ಹೊತ್ತಿನಲ್ಲಿ ಈ ಹಾಸಿಗೆಗಳೆಲ್ಲವೂ ಗೋಡೆಗೆ ತಾಗಿ ತೂಗಾಡಿಸಲ್ಪಡುತ್ತವೆ.

ಜರ್ಮನಿಯ ದೊಡ್ಡವೆನಿಸುವ ನಗರಗಳಲ್ಲಿ ಸಂಗ್ರಹಾಲಯಗಳಿರುತ್ತವೆ. ಆದರೂ ಮ್ಯೂನಿಚ್‌ನ ಸಂಗ್ರಹಾಲಯವು ಅದ್ಭುತವಾದುದು. ಎಲ್ಲ ಬಗೆಯ ಹಿರಿಯ ಉದ್ಯೋಗಗಳ ಇತಿಹಾಸ ಮತ್ತು ಅವುಗಳ ಸಂಪೂರ್ಣ ಕಥೆಯನ್ನು ನಾವು ಇಲ್ಲಿ ತಿಳಿದುಕೊಳ್ಳಬಹುದಾದ ದೊಡ್ಡ ಔದ್ಯೋಗಿಕ ಸಂಗ್ರಹಾಲಯವಿದು. ಒಂದು ಉದ್ಯಮವು ಹೇಗೆ ಪ್ರಾರಂಭವಾಯಿತು, ಯಾವ ವಿಧಾನದಲ್ಲಿ ಅದು ಉನ್ನತಿ ಸಾಧಿಸಿತು, ಯಾವ ಯಾವ ಮಾರ್ಗದಲ್ಲಿ ಅದು ಮುಂದುವರಿಯಿತು ಮತ್ತು ಇಂದು ಅದು ಎಂತಹ ಸ್ಥಿತಿಗತಿಯಲ್ಲಿದೆ ಎಂಬೆಲ್ಲ ವಿಚಾರವೂ ನಮಗೆ ಈ ಸಂಗ್ರಹಾಲಯದಲ್ಲಿ ಲಭಿಸುತ್ತದೆ.

ಉದಾಹರಣೆಗಾಗಿ ಕಲ್ಲಿದ್ದಲು ಅಥವಾ ಕಬ್ಬಿಣವನ್ನೇ ತೆಗೆದುಕೊಳ್ಳಿರಿ. ನಾವೂ ನಮ್ಮ ಮಕ್ಕಳೂ ಇದನ್ನು ಪ್ರತಿ ನಿತ್ಯವೆಂಬಂತೆ ಕಾಣುತ್ತೇವೆ. ಇವು ಮಣ್ಣಿನಲ್ಲಿ ಅಶುದ್ಧರೂಪದಲ್ಲಿ ಸಿಗುತ್ತವೆಯೆಂದು ಒರ್ವ ಸಾಮಾನ್ಯ ಮನುಷ್ಯನೂ ಅರಿತುಕೊಂಡಿದ್ದಾನೆ. ಆದರೆ, ಯಂತ್ರಗಳೇ ಇಲ್ಲದಿದ್ದ ಹಿಂದಿನ ಕಾಲದಲ್ಲಿ ಕಬ್ಬಿಣ ಮತ್ತು ಇದ್ದಲುಗಳನ್ನು ಭೂವಿಯಿಂದ ಹೇಗೆ ತೆಗೆಯುತಿದ್ದರು ಮತ್ತು ಆ ಸಮಯದಲ್ಲಿ ಯಾವ ವಿಧದ ಅಪಾಯಗಳನ್ನೂ ಸಂಕಷ್ಟಗಳನ್ನೂ ಎದುರಿಸಬೇಕಾಗುತಿತ್ತು ಎಂಬುದರ ವಿವರಗಳನ್ನೂ ನಾವು ಈ ಸಂಗ್ರಹಾಲಯದಲ್ಲಿ ಪಡೆಯಬಹುದು. ಯಂತ್ರಾವಿಷ್ಕಾರ ನಡೆಯದಿದ್ದ, ಮನುಷ್ಯರು ವಿಷಗಾಳಿಯಲ್ಲಿಯೇ ಉಳಿದು ಕಾರ್ಯನಿರತರಾಗಿ ಗಿರಬೇಕಾದ ಮಯದಲ್ಲಿದ್ದಂತೆ ಭೂಮಿಯಡಿಯಲ್ಲಿ ನಿಗಳನ್ನು ತೋಡಿ, ಅವುಗಳಲ್ಲಿ ಕಾರ್ಯನಿರತ ಕೆಲಸಗಾರರ ಮೂರ್ತಿಯನ್ನು ಮಡಿಸಿ ಇಟ್ಟಿದ್ದಾರೆ. ಇದನ್ನು ಕಾಣುವಾಗ ಖಂಡಿತಕ್ಕೂ ಮಾನವರು ಅ ದುರ್ಗಂಧದಲ್ಲಿ ಕೆಲಸ ಮಾಡುತ್ತಿರುವರೆಂಬ ಭ್ರಾಂತಿಯುಂಟಾಗುವುದು.

ಈ ಸಂಗ್ರಹಾಲಯವನ್ನು ನೋಡುವುದರಿಂದ ಜನರಲ್ಲಿ ಎರಡು ಬಗೆಯ ಪ್ರಭಾವ ಬೀಳಬಲ್ಲುದು ಮೊದಲನೆಯದಾಗಿ ಪ್ರೇಕ್ಷಕನಿಗೆ ಆ ಸಂಬಂಧದ ತಿಳುವಳಿಯಾಗುತ್ತದು; ಎರಡನೆಯದಾಗಿ ಜೀವನವು ಅದೆಷ್ಟು ಕಠಿನವೆಂಬುದೂ ಮನವಾಕೆಯಾಗುವುದು. ಇಂದು ನಾವು ಮನೆಯಲ್ಲೇ ಉಳಿದುಕೊಂಡು ಪಡೆಯಬಹುದಾದ ವಸ್ತುಗಳನ್ನು ನಮ್ಮ ಪೂರ್ವಜರು ಅದೆಷ್ಟು ಪರಿಶ್ರಮಪಟ್ಟು ಗಳಿಸುತಿದ್ದರು ಎಂಬುದರ ಸಂಪೂರ್ಣ ಪರಿಜ್ಞಾನ ನಮಗೀ ಸಂಗ್ರಹಾಲಯದ ಪರ್ಯವೀಕ್ಷಣೆಯಿಂದ ಪ್ರಾಪ್ತವಾಗುವುದು ಮಕ್ಕಳು ಈ ಬಗೆಯ ಸಂಗ್ರಹಾಲಯಗಳನ್ನು ನೋಡುವುದರಿಂದ ಒಳ್ಳೆಯ ಪರಿಣಾಮವಾಗುವುದು. ಕಾರಖಾನೆಗಳಲ್ಲಿ ದುಡಿಯುತ್ತಿರುವವರು ಎಂತಹ ಕಷ್ಟಗಳನ್ನು ಎದುರಿಸಬೇಕಾಗುವುದೆಂಬುದನ್ನು ಅವರು ಈ ದೃಶ್ಯವನ್ನು ಕಂಡು ಊಹಿಸಿಕೊಳ್ಳಬಲ್ಲರು.

ಇವೆಲ್ಲವುಗಳಿಂದ ಜರ್ಮನ್ ಪ್ರಜೆಗಳ ಆಚರಣೆ ಮತ್ತು ಚರಿತ್ರವು ಸ್ಪಷ್ಟವಾಗುತ್ತದೆ. ಯುರೋಪಿನ ಯಾವುದೇ ದೇಶಿಯರು ಸೋಮರಿಗಳಲ್ಲ; ಹಾಗಿದ್ದರೂ ಅವರೆಲ್ಲರಿಗಿಂತಲೂ ಜರ್ಮನರು ಪ್ರಬಲಸಾಹಸಿಗರು. ಕಳೆದ ಐವತ್ತು ವರ್ಷಗಳಲ್ಲಿ ಎರಡು ಮಹಾ ಯುದ್ಧಗಳ ಅನಾಹುತಕ್ಕೆ ತುತ್ತರು ಮನೆಯೊಡೆದ ಜರ್ಮನಿಯರು ಇಂದು ಆ ಪರಾಜಯವನ್ನು ಮರೆತು ಅಭಿವೃದ್ಧಿ ಸಾಧಿಸಿದೆ; ಅದಕ್ಕೆ ಇತಿಹಾಸವನ್ನು ಓದಿ ಪರಾಜಯದ ಕಥೆಯನ್ನು ನೆನಪಿಸಿಕೊಡಬೇಕಾಗಿದೆ. ಆ ಜೀವನದ ವ್ಯವಹಾರದಲ್ಲಿ ನಿರಾಶೆ ಇಲ್ಲವೇ ಹೀನತೆಯು ನೆರಳಾದರೂ ಸೋಂಕುವುದಿಲ್ಲ.

ಹೀಗೆ ಕಳೆದರಡು ಮಹಾಯುದ್ಧಗಳ ಕಾರಣದಿಂದ ನಷ್ಟ, ಭ್ರಷ್ಟಕ್ಷಯವೆಂದೆನಿಸಿದ ಜರ್ಮನಿ ಅಲ್ಲಿನ ಪ್ರಜೆಗಳ ಕಾರ್ಯಕ್ಷಷ್ಟದ ಪ್ರತೀಕವಾಗಿ ಪ್ರಗತಿ ಸಾಧಿಸಿದೆ. ಒಂದೆಲ್ಲ ಕಾಲದಲ್ಲಿಯೇ ತನ್ನನ್ನು ತಾನು ಪುನಾರಚಿಸಿಕೊಂಡಿದೆ. ರಾಷ್ಟ್ರ ಪುನಾರಚನೆಯ ಮಹಾ ಕಾರ್ಯದಲ್ಲಿ ತೊಡಗಿರುವ ನಾವಾದರೂ ಜರ್ಮನರಿಂದ ಕಾರ್ಯನಿಷ್ಠೆ ಮತ್ತು ಕಾರ್ಯಕಷ್ಟಸಹಿಷ್ಣುತೆ ಪಾಠವನ್ನು ಕಲಿತುಗೊಳ್ಳಬೇಕು. ಈ ಪಾಠ ವ ಹತ್ವದಿಂದಲೇ ಜರ್ಮನಿ ಪರಾಜಿತಗೊಂಡಿದ್ದರೂ ತಾನು ಅಪರಾಜಿತವೆಂದು ತಲೆಯೆತ್ತಿ ಉದ್ಘೋಷಿಸುತ್ತದೆ. ಅಪರಾಜಿತ ಜರ್ಮನಿಯ ಆದರ್ಶನ ನಮ್ಮ ಮಾರ್ಗದರ್ಶಕವಾದರೆ, ಸಮೃದ್ಧ ಭಾರತವನ್ನು ಕಟ್ಟುವ ನಮ್ಮ ಗುರಿ ಬೇಗನೇ ಮುಟ್ಟೀತು

'ನಚಿಕೇತ'ರು ಬರೆದ ಭಾವಪೂರ್ಣ ಕಾದಂಬರಿ

ಭಾವಾರ್ಚನೆ

ಸುಮಧುರ ಗಂಭೀರ ಪರಿಣಾಮವನ್ನುಂಟುಮಾಡುವ
ಸರಳ ಶೈಲಿಯ ನೂತನ ಕಾದಂಬರಿ.

ಆಕರ್ಷಕ ಮುಖಪತ್ರ. ಬಿಳಿ ಕಾಗದ.
120 ಪುಟಗಳು. ಒಂದೂಕಾಲು ರೂಪಾಯಿ ಬೆಲೆ.

ಒಂದೂವರೆ ರೂಪಾಯಿ ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು

ಪ್ರಕಾಶಕರು: ನವಯುಗ ಎಂಟರ್‌ಪ್ರೈಸಸ್ ಲಿ., ಉಡುಪಿ.
ಮಾರಾಟಗಾರರು: ನವಭಾರತ ಬುಕ್ ಡಿಪೊ, ಉಡುಪಿ.

ನವಯುಗ ವಾರ ಪತ್ರಿಕೆಗೆ
ಚಂದಾದಾರರಾಗಿ ಪ್ರೋತ್ಸಾಹಿಸಿ

ನೇಪಾಳದ ವಿಚಿತ್ರ ಪದ್ಧತಿ

ಮಾನವ ದೇವತೆಯ ಪೂಜೆ

ಕಲ್ಲಿನ ಮೂರ್ತಿಗಳಲ್ಲಿ ದೇವತೆಗಳನ್ನು ಪ್ರತಿಷ್ಠೆ ಮಾಡುವುದು ಒಂದು ಪರಂಪರಾ ಪ್ರಾಪ್ತವಾದ ಮತ್ತುತೀರ ಸಾಮಾನ್ಯವಾದ ವಿಚಾರ ಆದರೆ, ವೈಚಿತ್ರ್ಯಪೂರ್ಣ ದೇಶವೆನಿಸಿದ ನೇಪಾಳದಲ್ಲಿ ಮನುಷ್ಯರಲ್ಲಿಯೂ ದೇವತೆಗಳನ್ನು ಪ್ರತಿಷ್ಠಿಸುವುದಿದೆ. ದೇವಮಂದಿರಗಳಲ್ಲಿ ಪೂಜಾರ್ಚನೆ ನಡೆಯುವಂತೆಯೇ ಇಂತಹ ವ್ಯಕ್ತಿಯನ್ನೂ ಅಕ್ಷತ ಕುಂಕುಮಗಳೊಡನೆ ಆರಾಧಿಸುತ್ತಾರೆ. ದರ್ಶನಕ್ಕೋಸ್ಕರ ಮಾನವ ಸ್ಥಾನದ ಬಾಗಿಲುಗಳು ಒಂದು ನಿಯಮಿತ ಸಮಯ ತೆರೆದಿರುತ್ತವೆ; ನೂರಾರು ಭಕ್ತ ಜನರು ದರ್ಶನ ಲಾಭ ಪಡೆದು ತಾವು ಕೃತಕೃತ್ಯರಾದೆವೆಂದೂ ಪುಣ್ಯ ಭಾಗಿಗಳಾದೆವೆಂದೂ ನಂಬುತ್ತಾರೆ.

ಪ್ರಾಚೀನ ಕಾಲದಲ್ಲಿ ಭಾರತದ ಗಣ ರಾಜ್ಯಗಳಲ್ಲಿ ನಗರವಧುವನ್ನು ಆರಿಸುವ ಪರಿಪಾಠವಿತ್ತು. ವೈಶಾಲಿಯ ನಗರವಧುವು ಇತಿಹಾಸ ಪ್ರಸಿದ್ಧವಾಗಿದ್ದಾಳೆ. ವಧುವಾಗಿದ್ದರೂ ಆಕೆ ಚಿರಕುಮಾರಿ ಮತ್ತು ಚಿರ ಯುವತಿಯಾಗಿರುತ್ತಿದ್ದಳು. ಜನ ಮನೋರಂಜನೆಯೇ ಆಕೆಯ ಏಕಮಾತ್ರ ಕಾರ್ಯವಾಗಿತ್ತು. ಬೂರದ ಜನರೆಲ್ಲರೂ ಈಕೆಯ ದರ್ಶನಕ್ಕಾಗಿ ಲಾಲಾಯಿತರಾಗುತ್ತಿದ್ದರು. ನೇಪಾಲದ ಈ ಸರ್ವಪೂಜಿತ ದೇವತಾತ್ಮಾ ಮಾನವ ಪ್ರತಿಮೆಯನ್ನು ಕಂಡಾಗ, ಆಕೆಯ ನೆನಪು ಆಗಿಯೇ ತೀರುತ್ತದೆ ಈ ದೇವತಾತ್ಮವು ನೇಪಾಳದ ನಗರ ವಧ ವಂತೂ ಅಲ್ಲ. ಆದರೆ, ಕೌಮಾರ್ಯ ಮತ್ತು ಸೌಂದರ್ಯಗಳ ಈ ಸಮನ್ವಯವನ್ನು ನೋಡಿ ಕಣ್ಣುಗಳು ದಣಿಯುವು. ಅದರಲ್ಲಿ ಭಾವೀ ವಧುವನ್ನು ಕಲ್ಪಿಸುವವರಿಂದಲೇ ಮನಸ್ಸು ರೋಮಾಂಚಿತವಾಗುತ್ತದೆ. ತಮ್ಮ ದೇವತೆವಗಳ ತೃಪ್ತಿಗೆ ನರಬಲಿಯನ್ನೂ ಈಯುವುದಕ್ಕೂ ಸಿದ್ಧರಾದ ನೇಪಾಳಿಗಳು ಮಾನವರನ್ನೂ ಪೂಜಿಸುತ್ತಿರುವುದು ವಿಸ್ಮಯಕಾರಿಯಲ್ಲವೆ?

ಯಾವ 'ಕುಮಾರಿ' ಶಬ್ದವನ್ನು ಸ್ಮರಿಸಿದೊಡನೆಯೇ ಒಂದು ನವನೀತ ಕೋಮಲ ಮತ್ತು ಅಕ್ಷತಯೌವನಿತನ್ವಂಗಿಯ ಆಕೃತಿ ಮನಸ್ಸಿನಲ್ಲಿ ನಾಟುವುದೋ ಆಕೆಯೇ ನೇಪಾಳದ ಈ ಮಾನವ ದೇವತೆ. ಭಾರತದಲ್ಲಿ ಈ ಕುಮಾರಿಯು ದೇವತೆಯ ಗೌರವವನ್ನು ಗಳಿಸಿರುವುದಿಲ್ಲ; ಆದರೂ ಕನ್ಯಾಸ್ವಾಮಿಯ ದಿನ ನಡೆಯುವ ಕನ್ಯಾಪೂಜೆಯಲ್ಲಿ ಆಕೆಯಲ್ಲಿ ದೇವತ್ವವನ್ನೂ ಆರೋಪಿಸಲಾಗುತ್ತದೆ. ನಮ್ಮ ಶಾಸ್ತ್ರಗಳಲ್ಲಿ "ಅಷ್ಟವರ್ಷಾ ಭವೇತ್ ಗೌರೀ ಎಂದು ಹೇಳಿದೆ. ಗೌರಿ ಎಂಬುದು ಪರ್ವತರಾಜನ ಮಗಳಾದ ಪಾರ್ವತಿಯ ಇನ್ನೊಂದು ಹೆಸರು ಆದುದರಿಂದ ಭಾರತೀಯ ಕುಮಾರಿಯು 'ಮಹಾಗೌರಿ" ಪದದಲ್ಲಿ ಅಲಂಕೃತಳಾಗಿಲ್ಲ. ಆದರೆ, ಮಾಜಾಭಾವನೆಯು ಮಾತ್ರ ಎರಡರಲ್ಲಿಯೂ ಸಮಾನವಾಗಿರುವುದು. ಮಂಗಲಮಯವಾದ ಆಕೆಯ ರೂಪವು ನೇಪಾಳದ ಮಂದಿರಗಳಲ್ಲಿ ದೇವತೆಯಂತೆ ಪ್ರತಿಷ್ಠಿತವಾಗಿರುತ್ತದೆ.

ನೇಪಾಳೀಯರ ಈ 'ಮಾನವ ದೇವತೆ' ಯು ಸ್ಥಾಯಿಯಾಗಿರುವುದಿಲ್ಲ. ಮಾನವರಲ್ಲಿ ದೇವತಾತ್ಮದ ಭಾವನೆಯು ಅಲ್ಲಿ ಚಿರಸ್ಥಾಯಿಯಾದರೂ ಆ ಭಾವನೆಗೆ ಪಾತ್ರರಾಗುವವರು ಸಾಲ್ಕೈದು ವರ್ಷಾನಂತರ ಬದಲುತ್ತಿರುತ್ತಾರೆ. ಒಬ್ಬಾಕೆ ಕುಮಾರಿಯು ದೇವತೆಯ ರೂಪದಲ್ಲಿ ಅಭಿಷಿಕ್ತಳಾದನಂತರ, ಆಕೆಯು ರಜಸ್ವಲೆಯಾಗುವ ವರೆಗೆ ದೇವತಾತ್ಮವು ಅಖಂಡಿತವಿರುವುದು. ರಜಸ್ವಲೆಯಾದ ಬಳಿಕ ಆಕೆಯ ಮುಂದೆ ಪೂಜಾದೀಪ ಬರಿಯುವುದಿಲ್ಲ; ಜನವಿರಾರು ಭಕ್ತರು ಬಂದು ದರ್ಶನ ಭಾಗ್ಯ ಪಡೆದು ನತಮಸ್ತಕರಾಗುವುದೂ ಇಲ್ಲ. ಒಂದೊಮ್ಮೆ ದೇವತೆಯ ಮಂಗಲ ಮೂರ್ತಿಯೆನಿಸಿ, ರಾಜಮಹಾರಾಜರ ಗೌರವ ಮತ್ತು ಭಕ್ತಿಯುಕ್ತ ಪೂಜೆಯನ್ನು ಪಡೆಯಲು ಪಾತ್ರಳಾದ ಕುಮಾರಿಯೊಬ್ಬಳು ಜೀವನದ ಒಂದು ರೇಖೆಯನ್ನು ದಾಟಿದ ಕೂಡಲೇ ಎಷ್ಟೊಂದು ಸಾಮಾನ್ಯಳೆನಿಸಿ ಹೋಗುತ್ತಾಳೆ? ಎಂಬುದನ್ನು ತಿಳಿದು ಅತೀವ ಆಶ್ಚರ್ಯವೆನಿಸುತ್ತದೆ.

ಟಬೇಟನಲ್ಲಿ ದಲಾಯಿಲಾಮಾರ ಪದವಿಗೆ ಯೋಗ್ಯ ವ್ಯಕ್ತಿಯನ್ನು ಅರಸುವಂತೆಯೇ ನೇಪಾಲದಲ್ಲಿಯೂ ಈ ದೇವತಾ ಕುಮಾರಿಯರನ್ನೂ ಹುಡುಕುತ್ತಾರೆ. ಈ ಸಂಬಂಧದಲ್ಲಿ ಹೀನ ಕುಲ ಅಥವಾ ಅಯು ಸ್ಪೃಶ್ಯರೂ ಆಯ್ಕೆಗೆ ಅರ್ಹರಲಾರರು. ಐದು ವರ್ಷಗಳ ವರೆಗೆ ದೇವತೆಯ ರೂಪದಲ್ಲಿ ಪ್ರತಿಷ್ಠಿತಳಾದವಳು ರಜಸ್ವಲೆಯಾದ ಪಂತರ, ಈ ವರ್ಷ 'ಜೀವಿತ ದೇವತೆ'ಯಾಗಿ ಅಭಿಷಿಕ್ತಳಾದ ಹುಡುಗಿ ಕೇವಲ ನಾಲ್ಕು ವರ್ಷದವಳು. ದೇವತೆಯ ರೂಪಸಿಯಾಗಬೇಕು. ಅದುದರಿಂದ ಈ ಬಗ್ಗೆ ಆಯ್ಕೆ ನಡೆಯುವಾಗ ಕುಮಾರಿಯ ರೂಪ ಲಾವಣ್ಯಗಳಿಗೆ ವಿಶೇಷ ದೃಷ್ಟಿಯನ್ನು ಹರಿಸಲಾಗುತ್ತಿದೆ. ಅನಿಂದ್ಯ ಸುಂದರಿ ಮತ್ತು ಸೌಮ್ಯಳಾದವಳು ಮಾತ್ರ ದೇವತಾ ಕುಮಾರಿಯಾಗಬಲ್ಲಳು. ನೇಪಾಳದಲ್ಲಿ ನೀವಾರಿಯೆಂಬ ಜಾತಿಯವರಿದ್ದಾರೆ. ಇವರಲ್ಲಿನ ಕನ್ಯೆಯರು ಅತೀವ ರಮಣೀಯರಾಗಿರುತ್ತಾರೆ "ಶುಷ್ಕೋ ವೃಕ್ಷಸ್ತಿಷ್ಠತ್ಯಗ್ರೇ" ಎಂಬವರು ಕೂಡ ಅವರ ಕಮನೀಯ ರೂಪವನ್ನು ಕಂಡು ಉದಾಸೀನರಾಗುವುದು ಕಷ್ಟಸಾಧ್ಯ. ಆದುದರಿಂದ ದೇವತಾ ಕುಮಾರಿಯಾಗುವ ಸೌಭಾಗ್ಯವು ಈ ನೀವಾರೀ ಕನ್ಯೆಯರಲ್ಲಿ ವಿಶಿಷ್ಟ ಗುಣಸಂಪನ್ನಳಾದವಳಿಗೆ ಪ್ರಾಪ್ತವಾಗುವುದು. ಈ ಸಪ್ರಾಣ ದೇವತೆಯ ಮುಂದೆ ತನ್ನನ್ನು ಪ್ರಾಣವಂತನೆಂದು ತಿಳಿದು ಕೊಳ್ಳಲಾರದವರು ವಿರಳರು.

ದೇವತೆಯ ಸ್ಥಾನ-ಗೌರವವು ಅತಿ ಉನ್ನತವಾದುದೇನೋ ಹೌದು. ಆದರೆ, ಈ ಪದವಿಯ ಅಮೃತದಲ್ಲಿ ವಿಷವೂ ಬೆರಸಿಕೊಂಡಿದೆ. ಕುಮಾರೀ ದೇವತೆಯೆಂದು ಅಭಿಷಿಕ್ತಳಾದವಳು ಆಜೀವಪರ್ಯಂತ ಕುಮಾರಿಯಾಗಿಯೇ ಉಳಿಯಬೇಕಾಗುವುದು. ಇದಕ್ಕಿಂತ ದೊಡ್ಡ ತಪಸ್ಸು ಏನಿದೆ? ಆಯ್ಕೆಯ ನೇಳಿ ಆಜೋಧ ಜಾಲಿಕೆಯಾಗಿರುವ ಈಕೆಯು ತಾನು ಮುಂದೆ ಯಾವ ಗೌರವವನ್ನು ಪಡೆಯುತ್ತೇನೆ ಮತ್ತು, ಅದರ ಫಲವಾಗಿ ಮುಂದೆ ಎಂತಹ ಕಠೋರ ವ್ರತವನ್ನು ಆಚರಿಸಬೇಕಾಗುವುದೆಂಬುದನ್ನು ಅಂತಿರುವುದಿಲ್ಲ. ಆಕೆಯನ್ನು ವಿವಾಹಮಾಡಿಕೊಳ್ಳುವ ಯಾವನೇ ವ್ಯಕ್ತಿಯನ್ನು ನೂಜಿ ಕುಮಾರಿ ದೇವತೆಯು ತಿಂದು ಬಿಡುವಳು ಎಂಬ ಕಲ್ಪನೆ ಎಲ್ಲ ನೇಪಾಳಿಯರದು. ಆದುದರಿಂದ ಅವಕಾಶ ಪ್ರಾಪ್ತ ಕುಮಾರಿ ದೇವತೆಯನ್ನು ಯಾರೂ ಕೈಹಿಡಿಯಲು ಮುಂದೆ ಬರುವುದಿಲ್ಲ. ಹೀಗಾಗಿ ಆಕೆಗೆ ತನ್ನ ದೀರ್ಘಾಯುಷ್ಯ ತಾರುಣ್ಯವನ್ನು ಪರ್ವತದಂತೆ ಏಕಾಕಿಯಾಗಿ ಕಳೆಯಬೇಕಾಗುವುದು. ಮಹಾರಾಜರು ಆಕೆಯ ಊಟೋಪಚಾರಾದಿಗಳಿಗೆ ಉಚಿತ ವ್ಯವಸ್ಥೆಯನ್ನು ಮಾಡಿಕೊಡುತ್ತಾರೆ. ಇದರಿಂದ ಹೊಟ್ಟೆಯ ಪ್ರಶ್ನೆ ಬಗೆಹರಿಯಬಹುದು. ಆದರೆ, ಮೊಳೆಯುತ್ತಿರುವ ಯೌವನದ ಹಸಿವೆ ಅದರಿಂದ ಶಾಂತವಾದೀತೆ? ತಾನೇ ದೇವತೆಯಾಗಿ ಸಹಸ್ರ ಸಂಖ್ಯೆಯ ಭಕ್ತರನ್ನು ಕರುಣಿಸಿ, ಅವರಿಗೆ ವರವೀಯಬಲ್ಲವಳಾಗಿದ್ದ ಈ ಕುಮಾರೀ ದೇವತೆ ಸ್ವಯಂ ತನ್ನ ಮೇಲೆ ಬಹು ದೊಡ್ಡ ಅಸಹ್ಯಕರವಾದ ಶಾಪವನ್ನು ಹೊತ್ತುಕೊಂಡಿರುತ್ತಾಳೆ.

ಇಂತಹ ತ್ಯಾಗಮಯಿ ಕುಮಾರಿ ತಪೋಮಯಿಯಾದರೆ ಮಾತ್ರ ಈ ಪ್ರಾಪಂಚಿಕ ಜಂಜಾಟದಿಂದ ಉಳಿಯಬಲ್ಲಳು. ಆದರೆ, ದೇವತೆಯಾಗಿ ಶಾಪಧಾರಣೆಮಾಡುವುದೆಂದರೆ ಅತ್ಯುನ್ನತ ಆತ್ಮ ತ್ಯಾಗವಲ್ಲವೆ?

ಮನೆಯೆಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್.ಐ.ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆಂಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ. ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು.
ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ, ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಹೊಸ ಪುಸ್ತಕ

LETTER WRITING MADE EASY
ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು, ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ. 1-4-0 (1=25).

ವಿ. ಸೂ.—ಅಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0=25 N P ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕಗಳಿಸಲಾಗುವುದು ನಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ನಮಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

Notice

IN THE COURT OF THE MUNSIFF OF KASARAGOD

S. E. A. No. 161/1961
in S. E. A. 89/1961
S. E. A. 88/1961
in S. C. 258/1960

Between,

M. Vaikunta Bhaktha, died, L.R M. Anantha Bhaktha—Petitioner

AND

Kallyani Hengsu &others —Respondents

To,

1. Babu, 2. Ananda. 3 Madhava. 5 Damodhara—Sons of Manappa Belchappada all are residing at Majhbail village, Kasargod Taluk (Respondants 2 to 4)

The above execution filed for Transfer of the decree to the regular side is posted for your notice by substituted service to13-1-1962

K. P. Anantha Roo
Advocate for petitioner

Kasaragod, Dated 23—12—1961.

ನವಯುಗ

ವರುಷ ೪೧	ಉಡುಪಿ ೨೮-೧೨-೭೦	ವಾರ ೧೬

ಸಾಟ್ನಾ ಅಧಿವೇಶನ

ಜನವರಿ ೫ನೆಯ ತಾರೀಕಿನಂದು ಪ್ರಾರಂಭವಾಗುವ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಅಧಿವೇಶನವು ಪಾಟ್ನದಲ್ಲಿ ನಡೆಯುವುದು. ಈ ಬಗ್ಗೆ ಕೇಂದ್ರದ ಮಂತ್ರಿ ಶ್ರೀ ಜಗಜ್ಜೀವನರಾಮರ ಹಿರಿತನದಲ್ಲಿ ಸ್ವಾಗತ ಸಮಿತಿಯು ನೇಮಿತವಾಗಿದ್ದು, ಪ್ರಧಾನಿ ನೆಹರುರವರ ಅಪೇಕ್ಷೆಯಂತೆ ಅಧಿವೇಶನದ ವೆಚ್ಚವನ್ನು ಸೂಕ್ಷ್ಮದೃಷ್ಟಿಯಿಂದ ಮಾಡಲಾಗುವುದು. ದೇಶದ ನಾನಾ ಕಡೆಗಳಿಂದ ಸುಮಾರು ಒಂದು ಸಾವಿರಕ್ಕೂ ಮಿಕ್ಕಿ ಪ್ರತಿನಿಧಿಗಳು ಬರಬಹುದೆಂದು ಸದ್ಯದ ನಿರೀಕ್ಷೆಯಿದೆ. ಸಾರ್ವತ್ರಿಕ ಚುನಾವಣೆಗೆ ತುರು ಪೂರ್ವಭಾವಿಯಾಗಿ ಸೇರುವ ಈ ಅಧಿವೇಶನದಲ್ಲಿ ಎ. ಐ. ಸಿ. ಸಿ. ಯು ತನ್ನ ಮಧುರೆಯ ಸಮ್ಮೇಳನದಲ್ಲಿ ಸ್ವೀಕರಿಸಿದ್ದ ಪಕ್ಷದ ಚುನಾವಣಾ ಘೋಷಣೆಯನ್ನು ಮಂಜೂರು ಮಾಡುವುದು ಅಗ್ರಗಣ್ಯ ಸ್ಥಾನವನ್ನು ಗಳಿಸುವ ಕಾರ್ಯಕ್ರಮವಾದರೆ, ಅಷ್ಟೇ ಪ್ರಾಮುಖ್ಯವಿರುವ ಇನ್ನಿತರ ಕೆಲವೊಂದು ಗೊತ್ತುವಳಿಗಳೂ ಅಧಿವೇಶನದ ಮುಂದೆ ಬರಲಿರುವುವು.

ಭಾರತವು ಗೋವಾ ಮತ್ತಿತರ ಪೋರ್ಚುಗೀಸ ವಸಾಹತುಗಳನ್ನು ಭಾರತದಲ್ಲಿ ವಿಲೀನಗೊಳಿಸುವ ಮಹಾಸಾಧನೆಯನ್ನು ಸಾಧಿಸಿದ ಅರುಣೋದಯದಲ್ಲಿ ನಡೆಯುವ ಈ ಅಧಿವೇಶನದಲ್ಲಿ ಗೋಮಾಂತಕರ ಬಿಡುಗಡೆ ಮತ್ತು ಅವರು ತಮ್ಮ ಭಾರತೀಯ ಸಹೋದರರೊಡನೆ ಕ್ರೈಸ್ತಸ್ ಹಬ್ಬವನ್ನು ಪ್ರಸನ್ನತೆಯಿಂದ ಆಚರಿಸುವಂತಾದ ಸಂತೋಷ ಸೂಚಕ ಗೊತ್ತುವಳಿಯನ್ನು ಪ್ರಧಾನಿ ನೆಹರುರವರು ತಯಾರಿಸುತಿದ್ದು ಇಡಿಯ ಜಗತ್ತಿನಲ್ಲಿ ವಸಾಹತುವಾದ ಅಳಿಯಬೇಕು ಎಂದಿದರಲ್ಲಿ ಕೇಳಲಾಗುವುದು. ಅಧಿವೇಶನದಲ್ಲಿ ಪ್ರಧಾನವಾಗಿ ಮೂರು ಗೊತ್ತುವಳಿಗಳು ಮುಂದೆ ಬರಲಿದ್ದು ಅವುಗಳಲ್ಲಿ ಒಂದು ಗೋವೆಗೆ ಸಂಬಂಧಪಟ್ಟುದಾಗಿದೆ. ಅಂತಾರಾಷ್ಟ್ರೀಯ ಸಂಬಂಧದ ಗೊತ್ತುವಳಿಯು ಅಂಗೋಲಾ, ಮೊಜಾಂಬಿಕ್ ಮತ್ತಿತರ ಪೋರ್ಚುಗೀಸರ ಅಫ್ರಿಕೆ, ದೂರಪ್ರಾಚ್ಯಗಳಲ್ಲಿರುವ ವಸಾಹತುಗಳು ಪ್ರಸ್ತಾವಿಸಲ್ಪಡುವುವು. ಹಾಗೆಯೇ ಕಾಂಗೊ ಮತ್ತು ಅಲ್ಜೀರಿಯದ ಸ್ವಾತಂತ್ರ್ಯ ಹೋರಾಟದ ವಿಚಾರವಾಗಿಯೂ ಉಲ್ಲೇಖಿಸಲಾಗುವುದು ಇದೇ ಗೊತ್ತುವಳಿಯಲ್ಲಿ ಚತುರ್ಮಹಾರಾಷ್ಟ್ರಗಳನ್ನು ಸಂಪೂರ್ಣ ಮತ್ತು ಸಾಮಾನ್ಯವಾದ ನಿಶ್ಶಸ್ತ್ರೀಕರಣವಾಗಬೇಕೆಂದು ಕೇಳಿಕೊಳ್ಳಲಾಗುವುದು. ಚೀನದ ಅತಿಕ್ರಮಣಕ್ಕೆ ಗುರಿಯಾದ ಭಾರತೀಯ ನೆಲ ಮತ್ತು ಈ ಆಕ್ರಮಣದ ಜನರ ನಿಲುಮೆಯೇನೆಂಬುದನ್ನು ಈ ಗೊತ್ತುವಳಿಯಲ್ಲಿ ಉಲ್ಲೇಖಿಸಲಾಗುವುದು. ಪಾಕಿಸ್ತಾನವು ಅಕ್ರಮವಾಗಿ ತನ್ನ ವಶವಿಟ್ಟುಕೊಂಡಿರುವ ಜಮ್ಮೂ ಕಾಶ್ಮೀರದ ಕುರಿತಾಗಿಯೂ ಈ ಗೊತ್ತುವಳಿಯಲ್ಲಿ ಪ್ರಸ್ತಾಪ ಮಾಡಲಾಗುವುದು. ವಿದೇಶ ವ್ಯವಹಾರ ಸಂಬಂಧವಾದ ಈ ಗೊತ್ತುವಳಿಗಳನ್ನು ಪ್ರಧಾನ ಮಂತ್ರಿ ನೆಹರು ಅವರೇ ತಯಾರಿಸುತಿದ್ದು ಅಧಿವೇಶನದಲ್ಲಿ ಮಂಡಿಸಲಿರುವುವು. ಇವುಗಳು ಸರ್ವಸಮ್ಮತಿಯಿಂದ ಸ್ವೀಕರಿಸಲ್ಪಡುವುವೆಂಬುದರಲ್ಲಿ ಸಂದೇಹವಿಲ್ಲ.

ಗೋವೆಯ ವಿಮೋಚನಾನಂತರ ಸೇರುವ ಈ ಅಧಿವೇಶನವು ಗೋಮಾಂತಕರನ್ನು ಭಾರತ ಒಕ್ಕೂಟಕ್ಕೆ ಸ್ವಾಗತಿಸಲು ಸಂತೋಷ ಪಡುವುದು; ಹಾಗೂ ಅಲ್ಲಿ ಬೇಗನೇ ನಾಗರಿಕ ಆಡಳಿತೆಯು ಸಮಾಧಾನಕರವೆಂಬಂತಿ ಸ್ಥಾಪಿತವಾಗಿ ಮಿಲಿಟರಿ ಆಡಳಿತೆಯನ್ನು ಹಿಂತೆಗೆಯುವ ಸುದಿನ ಬೇಗನೇ ಬರಲಿ ಎಂದು ಹಾರೈಸಬಹುದು. ಭಾರತೀಯ ಕಾಂಗ್ರೆಸ್ಸು ಸಂಪೂರ್ಣ ಸ್ವಾತಂತ್ರ್ಯವನ್ನು ಬಯಸಿ ರಾಷ್ಟ್ರವ್ಯಾಪಿ ಹೋರಾಟ ನಡೆಸಿತ್ತು ಈ ಹೋರಾಟವು ಅಹಿಂಸಾತ್ಮಕವಾಗಿ ಮುಂದುವರಿದು, ಇಲ್ಲಿ ಬೇರು ಬಿಟ್ಟದ್ದ ಬ್ರಿಟಿಷರು ಮುಂದಾಗಿ ಹಿಂದೆ ಸರಿದರು; ಫ್ರೆಂಚರು ಸಿಧಾನವಾಗಿಯಾದರೂ ಶಾಂತವಾಗಿಯೇ ಮರಳಿದರು. ಆದರೆ, ನಯ ವಿನಯದ ಕೇಳಿಕೆಯು ಪೋರ್ಚುಗೀಸರಿಗೆ ಕೇಳಲಿಲ್ಲ. ಯುಗವಾಣಿಯನ್ನು ಕುರುಡೆಂದು ಭಾವಿಸಿದ ಅವರನ್ನು ದಂಡೋಪಾಯದಿಂದಲೇ ಓಡಿಸಬೇಕಾಯ್ತು. ಭಾರತೀಯ ಕಾಂಗ್ರೆಸ್ ಘೋಷಿಸಿದ ಸಂಪೂರ್ಣ ಸ್ವಾತಂತ್ರ್ಯದ ಗುರಿ ಇದೀಗ ೧೯೬೧ರ ಸಂಧ್ಯಾಕಾಲದಲ್ಲಿ ಪರಿಪೂರ್ಣವಾಯಿತು. ಇಂತಹ ಸಂತಸದ ಸುಗ್ಗಿಯ ದಿನಗಳಲ್ಲಿ ಸಮ್ಮಿಲನಗೊಳ್ಳುವ ಕಾಂಗ್ರೆಸ್ ತನ್ನ ಮೂಲತಃ ಧ್ಯೇಯವಾದ ಸ್ವಾತಂತ್ರ್ಯ ಪ್ರಾಪ್ತಿಯನ್ನು ಗಳಿಸಿರುವುದರಿಂದ, ಇನ್ನು ಅದನ್ನು ಉಳಿಸುವತ್ತ ವಿಶೇಷ ದೃಷ್ಟಿ ಹರಿಸಬೇಕಾಗಿದೆ. ಮುಂದಿನ ಚುನಾವಣೆಯಲ್ಲಿಯೂ ಕಾಂಗ್ರೆಸ್ ದೇಶವ್ಯಾಪೀ ವಿಜಯಗಳಿಸುವುದರಲ್ಲಿ ಸಂದೇಹವುಳಿಯದುದರಿಂದ, ಅಧಿವೇಶನವು ನಿಷ್ಪಕ್ಷಪಾತ ತನದಿಂದ ವರ್ತಿಸಿ ಸಮಗ್ರ ರಾಷ್ಟ್ರದ ಉನ್ನತಿ-ಸತನಗಳನ್ನು ಪರಿಭಾವಿಸಿ ಹಿತಸಾಧನೆಗಾಗಿ ಸೂಕ್ತ ಮಾರ್ಗದರ್ಶನ ನೀಡುವುದೆಂದು ಅಪೇಕ್ಷಿಸಬಹುದು.

ಉಳಿವು—ಅಳಿವು

ಪೂರ್ವ ಪಶ್ಚಿಮ ರಾಷ್ಟ್ರಗಳನ್ನು ಪ್ರತ್ಯೇಕಿಸಿರುವ ಭಿನ್ನಾಭಿಪ್ರಾಯಗಳನ್ನು ನಿಶ್ಶಸ್ತ್ರೀಕರಣ ಮತ್ತು ಅಣ್ವಸ್ತ್ರ ಪ್ರಯೋಗ ಪ್ರತಿಬಂಧ ಯೋಜನೆಗಳು ಅಗ್ರಗಣ್ಯವಾಗಿವೆ. ೧೯೫೨ರಿಂದ ಮಹಾರಾಷ್ಟ್ರಗಳು ನಿಶ್ಶಸ್ತ್ರೀಕರಣವನ್ನು ಸಾಧಿಸಲು ಉತ್ಸುಕತೆಯನ್ನು ತೋರಿಸುತ್ತ ಮುಂದಿನ ಪ್ರತಿ ವರ್ಷವೂ ಈ ಸಂಬಂಧದಲ್ಲಿ ಮಾತುಕತೆ ನಡೆಸಿದ್ದರೂ ಪ್ರಶ್ನೆಯನ್ನು ಮತ್ತಷ್ಟು ಜಟಿಲಗೊಳಿಸುತ್ತ ಬಂದಿವೆಯೆಂಬುದು ಸತ್ಯಕ್ಕೆ ಎಳ್ಳಷ್ಟೂ ದೂರವಲ್ಲ. ಒಂದು ಪಂಗಡವು ಒಮ್ಮೆ ಮುಂದಿಟ್ಟ ಸೂಚನೆಯನ್ನು ಎರಡನೆಯದು ಒಪ್ಪದೆಯೂ ದ್ವೇಷ ಭಂಗವಾಗುವುದು; ಎರಡನೆಯದು ಅವನ್ನು ಒಪ್ಪಿತೆನ್ನುವಾಗ ಮೊದಲನೆಯದು ಅವಕ್ಕೆ ಸಿದ್ಧವಿಲ್ಲದಿರುವುದು—ಹೀಗೆ ನಾನಾ ವಿಧದ ಕಣ್ಣು ಮಚ್ಚಾಲೆಯ ಆಟವಾಡುವುದು ಸರ್ವಸಾಮಾನ್ಯವೆಂಬಂತಾಗಿದೆ.

ಜಗತ್ಪರ್ಯಟನೆ

ಜವಾಹರಲಾಲ

ಗೋವಾ ವಿಮೋಚನೆಯ ಗಳಿಗೆಯಲ್ಲಿ ಪ್ರಧಾನಿ ನೆಹರುರವರ ಮೇಲೆ, ಅವರ ಸಂಪತ್ತಿನ ಮೇಲೆ ತೀವ್ರ ವಾಕ್ಬಾಣಗಳ ಮೇಲೆ ಬಾಣಗಳನ್ನು ಸುರಿಸಿದವರು, ಆ ಸುದ್ದಿ ಹಳೆಯದಾಗುತ್ತ ಬಂದಂತೆ, ನೆಹರುರವರ ಅಸಹಾಯಕ ಪರಿಸ್ಥಿತಿಯನ್ನು ಕಂಡುಕೊಂಡವರಂತೆ ತಮ್ಮ ಮೂತಿನ ಸರಣಿಯನ್ನು ತಿರುಗಿಸುತ್ತ ಬರುತ್ತಾರೆ. ಆಕ್ರೇಯದ ಸಕಲರ ಬೆಂಬಲ ಗಳಿಸಿದ ಗೋವಾ ವಿಮೋಚನಾ ವಿಜಯಯಾತ್ರೆ ಕೆಲವೊಂದು ಪಾಶ್ಚಾತ್ಯರಿಗೆ ಮಾತ್ರ ಸರಿ ಬಂದಿರಲಿಲ್ಲ. ವಸ್ತುಸ್ಥಿತಿಯ ಅರಿವು ಅವರಿಗೆ ಇವ ಪರ್ಕವಾಗುತ್ತ ಬಂದಂತೆ ಅವರೂ ಸಮ್ಮನಾಳಿಯುವ ಉಳಿಯರು. ನೆಹರು ಎಂದರೆ ಒಂದು ಶಕ್ತಿ. ಅಹಿಂಸೆಯ ಮೂರ್ತಿಯೊಡನೂ ಅದು ಜೀವಂತ ಶಕ್ತಿವಂತ ಮೂರ್ತಿ, ಅವರ ಕೈಯಲ್ಲಿ ಭಾರತದ ಹಿತಾಸಕ್ತಿ ಇರುವಷ್ಟು ಭದ್ರವಾಗಿ ಮತ್ತಾರ ಕೈಯಲ್ಲಿಯೂ ಉಳಿಯುವುದೇ ಎಂಬುದು ಸಂದೇಹಾಸ್ಪದ.

ಸಾಲಝಾರ

ಗೋವೆಯಲ್ಲಿ ಭಾರತೀಯ ಸೇನೆಯೊಡನೆ ಪೋರ್ಚುಗೀಸರು ಭಯಂಕರವಾದ ಹೋರಾಟ ನಡೆಸುತಿದ್ದಾರೆ ಎಂದು ಗೋವಾ ಪತನವಾದ ಹಿಂದೆರಡು ದಿನಗಳ ವರೆಗೂ ಸಾರಿದ ಸಾಲಝಾರರ ಲಿಸ್ಬನ್ ರೇಡಿಯೋ ಕೊನೆಗೂ ಪಣಜಿಯು ಭಾರತದ ಕೈವಶವಾಯಿತು ಎಂಬುದನ್ನು ಒಪ್ಪಿಕೊಂಡಿತು. ಸಾಲಝಾರರು ಅಡಿಗೆ ಬಿದ್ದರೂ ಮೂಗು ಮೇಲೆಂಬಂತೆ ವರ್ತಿಸಹೊರಟಿರೂ ಅದೆಷ್ಟು ಸಮಯ ನಡೆದೀತು! ಭಾರತದಲ್ಲಿ ಉಳಿದಿರುವ ಪೋರ್ಚುಗೀಸ ಸೈನಿಕರು ಈಗ ಕೈದಿಗಳಾಗಿದ್ದಾರೆ. ಇವರನ್ನು ತಮ್ಮಲ್ಲಿಗೆ ಒಯ್ಯಲು ಸಾಲಝಾರರು ಯಾವ ಕ್ರಮಕೈಗೊಳ್ಳುತ್ತಾರೆ ಎಂದು ಜಗತ್ತು ನಿರೀಕ್ಷಿಸುತ್ತಿದೆ; ಗೋವಾ ಕಳೆದುಕೊಂಡ ಇವರು ಉಳಿದ ವಸಾಹತುಗಳನ್ನು ಕಾಪಿಡುವ ಹಂಚಿಕೆಯಲ್ಲೇ ನಿರತರಂದ್ದಾರೆ

ಸಂಜೀವ ರೆಡ್ಡಿ

ಇಂದಿರಾ ಗಾಂಧಿಯವರ ನಂತರ ಕಾಂಗ್ರೆಸ್ ಅಧ್ಯಕ್ಷರಾದ ನೀಲಂ ಸಂಜೀವ ರೆಡ್ಡಿಯವರು ತಮ್ಮ ನಿಯತ ಧೋರಣೆಯಿಂದಾಗಿ ಕಾಂಗ್ರೆಸ್ಸಿನ ಪ್ರೀತಿಯನ್ನು ಗಳಿಸಿಲ್ಲ. ಪ್ರೀತಿಯಿಲ್ಲದ ವ್ಯವಹಾರ ತನಗೇಕೆಂದು ಅವರು ತನ್ನನ್ನೇ ತಾನು ಪ್ರಶ್ನಿಸಿಕೊಂಡಿದ್ದೂ ಉಂಟು. ಆದುದರಿಂದ ಮರಳಿ ಆಂಧ್ರಕ್ಕೆ ಮುಖ್ಯಮಂತ್ರಿಯಾಗಿ ಹೋಗಬೇಕೆಂಬುದು ಅವರ ಆಲೋಚನೆಯಿತ್ತು. ಅಜಿತಪ್ರಸಾದ ಜೈನರು ಅವರ ಸ್ಥಾನವನ್ನು ಅಡರುವರೆಂದೂ ಊಹನೆಯಿತ್ತು. ಆದರೆ, ಕಾಂಗ್ರೆಸ್ ಅಧ್ಯಕ್ಷನ ಸ್ಥಾನವು ಅಲಂಕಾರದ ಉತ್ಸವ ಮೂರ್ತಿಯಂತೆ ಆಗಿರುವ ಈ ಕಾಲದಲ್ಲಿ ನೀಲಂ ಆದರೇನು, ಜೈನರಾದರೇನು? ಎಂತಲೇ ನೀಲಂರವರನ್ನೇ ಮುಂದಿನ ಒಂದು ವರ್ಷಕ್ಕೂ ಅಧ್ಯಕ್ಷರಾಗಿ ಮುಂದುವರಿಸುವ ಹವಣಿಕೆ ಸದ್ಯ ನಡೆದಿದೆ. ನೆಹರೂ ಸಮಾಧಾನ ಮಾಡಿದರೆ ನೀಲಂ ಒಪ್ಪದೆ ಇದ್ದಾರೆಯೆ?

ಕುಂದಣಗಾರ

ಗದಗದಲ್ಲಿ ಸೇರುವ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಗೊಂಡ ಪ್ರೊ. ಕುಂದಣಗಾರರು ಪ್ರಸಿದ್ಧ ಸಂಶೋಧಕರೆಂದು ಹೆಸರು ಪಡೆದಿದ್ದಾರೆ. ಕನ್ನಡದಲ್ಲಿ ಸಂಶೋಧನೆಯ ತೊಡಕಿನ ಕೆಲಸಕ್ಕೆ ಕೈಹಾಕುವುದರಲ್ಲಿ ಹಿಂದುಳಿಯುವವರ ನಡುವೆ ಕುಂದಣಗಾರರು ಮುಂದೆ ದುಮುಕಿ ಕನ್ನಡದ ಬಗ್ಗೆ ಹೆಚ್ಚಿನ ಆರವನ್ನು ಮುಖ್ಯವಾಗಿ ಕನ್ನಡಿಗರಿಗೆ ಮಾಡಿಕೊಟ್ಟಿದ್ದಾರೆ ಅವರ ಆಯ್ಕೆಯ ಸಂಬಂಧದಲ್ಲಿ ಕನ್ನಡಿಗರೆಲ್ಲರೂ ಪ್ರಸನ್ನರಾಗಿದ್ದಾರೆ. ಆದರೆ, ಸಮ್ಮೇಳನದ ಅಧ್ಯಕ್ಷನಿಗೆ ಸಮ್ಮೇಳನದ ಮೂರುದಿನಗಳಲ್ಲಿ ಮಾತ್ರ ದೊರೆಯುವ ಅಗ್ರಪಟ್ಟವಲ್ಲದೆ ಮತ್ತೂವ ಅಧಿಕಾರವೂ ಇಲ್ಲದಿರುವುದರಿಂದ ಸಾಹಿತ್ಯ ಪರಿಷತ್ತಿನ ಕಾರ್ಯಕಲಾಪಗಳು ಯಾವ ದಕ್ಷ ಸಮ್ಮೇಳನದ ಅಧ್ಯಕ್ಷನಾದರೂ ಒಂದೇ; ಮೆರವಣಿಗೆ ಭಾಗ್ಯಪಡೆದ ಉತ್ಸವ ಮೂರ್ತಿ ಮಾತ್ರ.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ.ನ.

ಅಲ್ಲಲ್ಲಿಯ ಸುದ್ದಿಸಾರ

ರವೀಂದ್ರ ಶತಮಾನೋತ್ಸವ ಹಾಗೂ ಮುದ್ದಣ ಜಯಂತಿ-

ಉಡುಪಿಯ ಮಹಾತ್ಮಾ ಗಾಂಧೀ ಮೆಮೋರಿಯಲ್ ಕಾಲೇಜಿನಲ್ಲಿ ದಿನಾಂಕ 15ರಂದು "ರವೀಂದ್ರ ಶತಮಾನೋತ್ಸವ"ವನ್ನೂ 16ರಂದು "ಮುದ್ದಣ ಜಯಂತಿ"ಯನ್ನೂ ವಿಜೃಂಭಣೆಯಿಂದ ನೆರವೇರಿಸಲಾಯಿತು. ಮೊದಲನೆಯ ದಿನದ ಉತ್ಸವವು ಪೂರ್ವಾಹ್ನ ಪ್ರಿನ್ಸಿಪಾಲ್ ಯು.ಆರ್. ಸುಂದರರಾವ್, ಎಂ. ಎ. ಇವರ ಅಧ್ಯಕ್ಷತೆಯಲ್ಲಿ ಜರಗಿ, ವಿದ್ಯಾರ್ಥಿನಿಯರಿಂದ ಪ್ರಾರ್ಥನೆ, ಶ್ರೀ ಯು.ಆರ್. ಕೆ. ರಾಮಚಂದ್ರ ಮೂರ್ತಿಯವರಿಂದ ಸ್ವಾಗತ ಭಾಷಣದ ಬಳಿಕ, ಡಾ. ಟಿ. ಯಂ. ಎ. ಪೈಯವರು ರವೀಂದ್ರ ಶತಮಾನೋತ್ಸವ ಹಾಗೂ ರವೀಂದ್ರ ಪುಸ್ತಕ ಪ್ರದರ್ಶನವನ್ನು ಉದ್ಘಾಟಿಸಿದರು. ಪ್ರೊ. ಪೈಕೆ ಎ. ರಾಮ ಅಯ್ಯರ್ ಇವರು ರವೀಂದ್ರರ ವ್ಯಕ್ತಿತ್ವದ ಹಿರಿಮೆ, ಕಲಾ ಪ್ರಾಥಮಿಯ ಕುರಿತು ಭಾಷಣವಿತ್ತರು. ವಿದ್ಯಾರ್ಥಿನಿಯರಿಂದ ಲಘು-ಸಂಗೀತದ ಬಳಿಕ ಅಧ್ಯಕ್ಷರು ತನ್ನ ಭಾಷಣದಲ್ಲಿ ರವೀಂದ್ರರ ಕೃತಿಗಳನ್ನು ವಿಮರ್ಶಿಸಿ, ಅವರು ತನ್ನ ಕೃತಿರತ್ನಗಳ ಮೂಲಕ ಜನತೆಗಿತ್ತ ಸಂದೇಶವನ್ನು ವಿಶದೀಕರಿಸಿದರು.

ಆಪರಾಹ್ನ ಪ್ರೊ. ರಾಮ ಅಯ್ಯರ್ ಇವರ ಹಿರಿತನದಲ್ಲಿ ಜರಗಿದ ಸಭೆಯಲ್ಲಿ ಶ್ರೀ ಯಬ್ ಕೆ. ರಾಮಚಂದ್ರ ಮೂರ್ತಿಯವರಿಂದ ಪ್ರಾರ್ಥನೆಯಾದ ನಂತರ, ಪ್ರೊ. ಕು. ಶಿ. ಹರಿದಾಸ ಭಟ್ಟರು ಪ್ರಧಾನ ಅತಿಥಿಗಳಾದ ಪ್ರೊ. ವೀ. ಸೀತಾರಾಮಯ್ಯ(ವೀ. ಸೀ) ನವರ ಪರಿಚಯ ಮಾಡಿಕೊಟ್ಟರು. ಶ್ರೀ ವೀ. ಸೀ.ಯವರು ರವೀಂದ್ರರ ಬಹು ಮುಖವಾದ ಪ್ರತಿಭೆ ಹಾಗೂ ಕಲೋಪಾಸನೆಯ ಕುರಿತು ವಿದ್ವತ್ಪೂರ್ಣ ಭಾಷಣವಿತ್ತರು. ಅಧ್ಯಕ್ಷರು ತನ್ನ ಭಾಷಣದಲ್ಲಿ ರವೀಂದ್ರರ ಉನ್ನತ ಆದರ್ಶ, ಹಾಗೂ ಕೆಲಾಕೃತಿಗಳನ್ನು ವಿವರಿಸಿದರು. ರಾತ್ರಿ ಕಾಲೇಜಿನ ವಿದ್ಯಾರ್ಥಿನಿಯರಿಂದ "ನಟೀ ಪೂಜಾ" ಎಂಬ ಕನ್ನಡ ರೂಪಕವು ಅಭಿನಯಿಸಲ್ಪಟ್ಟಿತು.

ಎರಡನೆಯ ದಿನ ಸೂರ್ಯಾಸ್ತ ಕಾಲೇಜಿನ ಆಂಗ್ಲ ಭಾಷಾ ಸಂಘದ ನೆಲೆಯಲ್ಲಿ ಶ್ರೀ ವೀ. ಸೀ ಯವರ ಅಧ್ಯಕ್ಷತೆಯಲ್ಲಿ ಪ್ರೊ. ಎ. ರಾಮ ಅಯ್ಯರ್ ಇವರು ಆಂಗ್ಲ ಭಾಷೆಯ ಕ್ರಮಿಕ ಅಧ್ಯಯನದ ಕುರಿತಾಗಿಯೂ, ಅಧ್ಯಕ್ಷರು ಆಂಗ್ಲ ಸಾಹಿತ್ಯದ ಹಿರಿಮೆಯ ಕುರಿತಾಗಿಯೂ ಭಾಷಣವಿತ್ತರು. ಅರಂಭದಲ್ಲಿ ಸಂಘದ ಉಪಾಧ್ಯಕ್ಷೆ ಶ್ರೀಮತಿ ತೆರೇಸಾ ಜೋಸೆಫ್ ಇವರು ಸ್ವಾಗತಿಸಿದ್ದರು

ಆಪರಾಹ್ನ ಶ್ರೀಮಾನ್ ಮಾಸ್ತಿ ವೆಂಕಟೇಶ ಅಯ್ಯಂಗಾರರ ಹಿರಿತನದಲ್ಲಿ ಸಭೆಯು ಜರಗಿ, ಪ್ರಾರ್ಥನೆ, ಶ್ರೀ ಯಸ್.ಕೆ. ಶ್ರೀಪತಿ ಆಚಾರ್ಯರಿಂದ ಸ್ವಾಗತ ಭಾಷಣವಾದ ಬಳಿಕ, ಪ್ರೊ. ಕೆ. ವೆಂಕಟರಾಮಪ್ಪ, ಎಂ. ಎ. ಇವರು ಪುರಂದರದಾಸರ ಕೃತಿಗಳ ಕುರಿತು ಸ್ವಾರಸ್ಯಕರವಾಗಿ ಭಾಷಣವಿತ್ತರು ಶ್ರೀಮಾನ್ ಮಾಸ್ತಿಯವರು ತನ್ನ ಅಧ್ಯಕ್ಷ ಭಾಷಣದಲ್ಲಿ ಕವಿ ಮುದ್ದಣನ ಜೀವಿತ, ಪ್ರತಿಭೆ, ಕಲಾ ಪ್ರಾಥಮಿಯ ಕುರಿತು ವಿವರಿಸಿದರು. ರಾತ್ರಿ ಮನೋರಂಜನೆಯ ಅಂಗವಾಗಿ ವಿದ್ಯಾರ್ಥಿನಿಯರಿಂದ "ಲಘು ಸಂಗೀತ" ಹಾಗೂ ವಿದ್ಯಾರ್ಥಿಗಳಿಂದ "ವಿಜಯ ನಗರದ ವೀರ ಪುತ್ರ"ವೆಂಬ ಚಾರಿತ್ರಿಕ ನಾಟಕದ ಅಭಿನಯದೊಂದಿಗೆ ಕಾರ್ಯಕ್ರಮವು ಮುಕ್ತಾಯವಾಯಿತು.

ದ. ಕ ಜಿಲ್ಲಾ ಖಾಸಗಿ ಶಾಲಾ ಮೆನೇಜರರ ಸಂಘದ ಮಹಾಸಭೆ

ಯು— ತಾ. 16—12—1961ರಲ್ಲಿ ಉಡ್ಪಿಯಲ್ಲಿ ಸಂಘದ ಅಧ್ಯಕ್ಷ ಶ್ರೀ ಟಿ. ವಿ. ಪೈಯವರ ನೇತೃತ್ವದಲ್ಲಿ ಜರಗಿತು. ಆ ಸಂಘದ ಕಾರ್ಯದರ್ಶಿ ಶ್ರೀ ಕುರುಕಾಲು ಗಣಪಯ್ಯ ಶೆಟ್ಟರು ಗೈಸಭಿಕರನ್ನು ಸ್ವಾಗತಿಸಿದ್ದಲ್ಲದೆ ಕಳೆದ ಮೇ ತಿಂಗಳಲ್ಲಿ ಮಂಡ್ಯಾಸು ಸರಕಾರದ ವಿದ್ಯಾ ಮಸೂದೆಯಲ್ಲಿ ಮೈಸೂರು ಸರಕಾರವು ಕೆಲವು ತಿದ್ದುಪಡಿಗಳನ್ನು ಮಾಡಿದ ದೆಸೆಯಿಂದಾಗಿ ಜಿಲ್ಲೆಯ ಖಾಸಗಿ ಶಾಲೆಗಳಲ್ಲಿ ಉಂಟಾದ ಕೋಲಾಹಲದ ನಿವಾರಣೆ ಬಗ್ಗೆ ಸಂಘದ ವತಿಯಿಂದ ಎರಡು ಸಲ ಬೆಂಗಳೂರಿಗೆ ಹೋದ ನಿಯೋಗದ ವಿಚಾರ ವಗೈರೆಯ ವರದಿಯನ್ನು ವಿವರಿಸಿ ಹೇಳಿದರು.

ಆ ಬಳಿಕ ಸಭಾಧ್ಯಕ್ಷರು ಸಂಘದ ಮಸಿವಿಗಳ ಕುರಿತು ತಾವು ಮಾಡಿದ ಪ್ರಯತ್ನಗಳನ್ನೂ ಇಂದಿನ ಮಹಾಸಭೆಯಲ್ಲಿ ಸಂಘವು ಕೈಕೊಳ್ಳಬೇಕಾದ ನಿರ್ಣಯಗಳ ಬಗ್ಗೆ ಅಗತ್ಯವುಳ್ಳ ಸಲಹೆಯನ್ನೂ ಸೂಚಿಸಿ ಬಾಷಣವಿತ್ತರು. ಸಭಿಕರಲ್ಲಿ ಹಲವರು ತಮ್ಮ ತಮ್ಮ ಅಭಿಪ್ರಾಯಗಳನ್ನಿತ್ತರು ಶಾಲೆಗಳ ಖಾಯಂ ಇಸಮುಗಳಲ್ಲಿ ಸ್ಥಳ ಕಾಲಿಯಾದರೆ ಹೊಸ ಅಧ್ಯಾಪಕರನ್ನು ನೇಮಿಸುವ ಅನುಕೂಲತೆ ಹೊಸತಾಗಿ ತೆರೆದ ಕ್ಲಾಸುಗಳಿಗೆ ಹೊಸ ಅಧ್ಯಾಪಕರನ್ನು ನೇಮಿಸುವಿಕೆವಿಕೆ ಖಾಸಗಿ ಶಾಲಾ ಅಧ್ಯಾಪಕರು ಒಂದು ಶಾಲೆಯನ್ನು ಬಿಟ್ಟು ಮತ್ತೊಂದು ಶಾಲೆಯನ್ನು ಸೇರುವಾಗ್ಯೆ ಅವರ ಸರ್ವಿಸು ವ ಭಡ್ತಿಯನ್ನು ಎಣಿಸುವಿಕೆ—ಅರ್ಧ ದಿನದ ಕೇಜುಲ್ ರಜೆಯನ್ನು ಪಡೆಯುವಿಕೆ—ಅಧ್ಯಾಪಕರಿಗೆ ಪರಿಪೂರ್ಣ ವೇತನ ಕೊಡಲೇ ಜಾರಿಗೂಳಿಸುವಿಕೆ—ಮುಖ್ಯ ಅಧ್ಯಾಪಕರಿಗೆ ಸ್ಪೆಶಲ್ ಎಲವೆನ್ಸು ಕೊಡಿಸುವಿಕೆ—ಎಲ್ಲಾ ಶಾಲೆಗಳ ಬಡಮಕ್ಕಳಿಗೂ ಮಧ್ಯಾಹ್ನದ ಗಂಜಿಯ ಏರ್ಪಾಡು ಮಾಡುವಿಕೆ—ಅಧ್ಯಾಪಕರಿಗೆ ನಿವೃತ್ತಿವೇತನ ಕೊಡಿಸುವಿಕೆ—ಹತ್ತು ಅಧ್ಯಾಪಕರಿಗೆ ಮಿಕ್ಕಿದ ಶಾಲೆಗಳಲ್ಲಿ ಪೇದೆಯನ್ನು ನೇಮಿಸುವಿಕೆ—ರಾಜ್ಯದ ಶಾಸನ ಸಭೆಗಳಲ್ಲಿ ಖಾಸಗಿ ಶಾಲಾ ಮೆನೇಜರರಿಗೆ ಪ್ರಾತಿನಿಧ್ಯ ಕೊಡಿಸುವಿಕೆ—ಬಳ್ಳಾರಿ ಜಿಲ್ಲೆಯಲ್ಲಿ ವೃತ್ತಿಪರ ಶಿಕ್ಷಕರಿಗೆ ಏರಿದ ಸ್ಟೇಲಿನಂತೆ ಗ್ರೇಂಟು ಕೊಡುತ್ತಿದ್ದಂತೆಯೇ ಈ ಜಿಲ್ಲೆಯ ವೃತ್ತಿಪರ ಶಿಕ್ಷಕರಿಗೂ ತಡೆ ಹಿಡಿಯಲ್ಪಟ್ಟ ಹಿಂದಿನ ಗ್ರಾಂಟನ್ನು ಏಕಗಂಟಿನಿಂದ ಕೊಡಿಸುವಿಕೆ ಇವೇ ಮೊದಲಾದ ನಿರ್ಣಯಗಳನ್ನು ಸಭೆಯು ಸರ್ವಸಮ್ಮತಿಯಿಂದ ಸ್ವೀಕರಿಸಿತು.

ಸರಕಾರವು ಜಿಲ್ಲಾ ಸಂಘದ ಕೇಳಿಕೆಗಳ ಪೈಕಿ ತಾ. 22—5—61ಕ್ಕೆ ಕೆಲಸದಲ್ಲಿರುವ ಒಂದು ವರ್ಷಕ್ಕೆ ಇದಿಮೆ ಸರ್ವಿಸಿರುವ ಎಲ್ಲಾ ಅಧ್ಯಾಪಕರ ಸರ್ವಿಸನ್ನು ಊರ್ಜಿತವಿರಿಸಿ ಅವರ ತಡೆಹಿಡಿಯಲ್ಪಟ್ಟ ಗ್ರೇಂಟನ್ನು ಏಕ ಗಂಟಿನಿಂದ ಕೊಡುವಂತೆ ದಯಪಾಲಿಸಿದ ಬಗ್ಗೆಯೂ, ಖಾಸಗಿ ಶಾಲೆಗಳಿಗೆ ಡೈಂಟೆನೆನ್ಸು ಗ್ರಾಂಟು ಕೊಡುವ ತತ್ವವನ್ನು ಒಪ್ಪಿ ಇತ್ತೀಚೆಗೆ ಹೊಸಮನಿಸ ಬಗ್ಗೆಯೂ ಕೃತಜ್ಞತೆಯನ್ನು ಅರ್ಪಿಸಿತು.

ಅದರೆ ಮೈಂಟೆನೆನ್ಸು ಗ್ರಾಂಟು ಶಿಕ್ಷಣಶಿದ ಮೈ ಪೂರ್ತಿ ಕೊಡುವಂತೆ ಸೂಚಿಸಿದ್ದರಿಂದ ಆ ಬಗ್ಗೆ ಸಭೆಯು ವಿಶಾಧಿಸಿ ಸಂಪೂರ್ಣ ಮೈಂಟೆನೆನ್ಸು ಗ್ರಾಂಟು ಕೊಡಬೇಕಾಗಿ ಆಗ್ರಹಪೂರ್ವಕ ವಿನಂತಿಸಿತು.

ಕಳದ ಮೇ ತಿಂಗಳಲ್ಲಿ ಮೈಸೂರು ಸರಕಾರವು ಮಾಡಿದ ತಿದ್ದುಪಡಿಗಳ ದೆಸೆಯಿಂದ ಖಾಸಗಿ ಶಾಲೆಗಳಿಗೆ ತುಂಬಾ ಅನ್ಯಾಯ ಉಂಟಾದ ಕಾರಣ, ಮೈಸೂರು ರಾಜ್ಯಕ್ಕೆ ಏಕ ರೂಪದ ಕಾನೂನು ಜಾರಿಗೆ ತರುವ ವರೆಗೆ ಸದ್ರಿ ತಿದ್ದುಪಡಿಗಳ ಹುಕುಮನ್ನು ಅನುನಾತುಗೊಳಿಸ ಬೇಕಾಗಿ ಈ ಸಭೆಯು ಕೇಳಿಕೊಂಡಿತು

ಸರಕಾರವು ಮೈಸೂರು ಪ್ರಾಂತ್ಯಕ್ಕೆ ಪ್ರಾಥಮಿಕ ವಿದ್ಯಾಸಂಬಂಧವಾದ ಮಸೂದೆಯನ್ನು ಜಾರಿಗೆ ತರುವ ಮೊದಲು ಸದ್ರಿರೂಲುಗಳ ಕುರಿತು ಈ ಸಂಘವು ತನ್ನ ಅಭಿಪ್ರಾಯವ ಸೂಚನೆಗಳನ್ನು ಮುಂದಾಗಿ ತಿಳಿಸುವರೇ ಅನುಕೂಲವಾಗುವಂತೆ ಸಾಕಷ್ಟು ಸಮಯಕಾಶಕೊಟ್ಟು ಸದ್ರಿ ರೂಲುಗಳ ಕರಡು ಪ್ರತಿಯನ್ನು ಕಳಿಹಿಸುವಂತೆ ಕೇಳಿಕೊಳ್ಳಲಾಯ್ತು.

ಮೇಲಿನ ನಿರ್ಣಯಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಕಾನೂನು ತಜ್ಞರ ಅಭಿಪ್ರಾಯವನ್ನು ತಿಳಿದು ಯುಕ್ತ ಕಂಡ ಮಾರ್ಗವನ್ನು ಅವಲಂಬಿಸುವಂತೆ ಸಂಘದ ಆಡಳಿತ ಮಂಡಳಿಗೆ ಸಂಪೂರ್ಣ ಅಧಿಕಾರವನ್ನು ಕೊಡಲಾಯ್ತು.

ಕೊನೆಗೆ ಶ್ರೀ ಬನ್ನಾಡಿ ಸುಬ್ಬಣ್ಣ ಹೆಗ್ಡೆಯವರು ಧನ್ಯವಾದವನ್ನಿತ್ತರು.

ಬೀಳ್ಕೊಡುವ ಸಮಾರಂಭ-

ಮುಂಬಾಯಿಯ ಕರ್ನಾಟಕ ಧರ್ಮಾರ್ಥ ರಾತ್ರಿ ಪ್ರೌಢ ಶಾಲಾ ಎಸ್. ಎಸ್. ಸಿ. ವಿದ್ಯಾರ್ಥಿಗಳು ದಿನಾಂಕ 17—12—61ರಂದು ತಮ್ಮ ಬೀಳ್ಕೊಡುವ ಸಮಾರಂಭವನ್ನು ಇಂಡೋ ಗೋವಿಯೆಟ್ ಕಲ್ಚರಲ್ ಸೊಸೈಟಿಯ ಹಾಲಿನಲ್ಲಿ ಮುಖ್ಯೋಪಾಧ್ಯಾಯ ಶ್ರೀ ಎಲ್. ಗೋಪಾಲ್ರಾವರ ಅಧ್ಯಕ್ಷತೆಯಲ್ಲಿ ಜರಗಿಸಿದರು. ಶ್ರೀ ಜಯರಾಮ ಶೆಟ್ಟಿಯವರ ಸ್ವಾಗತ ಭಾಷಣದ ನಂತರ ವಿದ್ಯಾರ್ಥಿ ವೃಂದದಿಂದ ಶ್ರೀ ರಮೇಶ ಯಂ ಶೆಟ್ಟಿ, ರಾಘವ ಶೆಟ್ಟಿ, ಸುಂದರ ಶೆಟ್ಟಿ, ಎಂ. ಸುಂದರ ಶೆಟ್ಟಿ, ಜಿ. ವಿ. ಶೆಟ್ಟಿಗಾರ್, ವಾಸು ದೇವಾಡಿಗ, ಸುಂದರ ಆಚಾರಿ, ಕೃಷ್ಣ ಶೆಟ್ಟಿ ಶೇಖರ ಎಸ್. ಶೆಟ್ಟಿ ಮತ್ತು ಶ್ರೀಪತಿ ಶ್ಯಾಮಲಾ ಕುಲಕರ್ಣಿ ಮುಂತಾದವರು ಅಧ್ಯಾಪಕರನ್ನು ವಂದಿಸಿದುದು ಮಾತ್ರವಲ್ಲದೆ ಶಾಲಾ ಆಡಳಿತಗಾರರಾದ ಬಂಟರ ಯಾನೆ ನಾಡವರ ಸಂಘದ ಉಪಕಾರ ಸ್ಮರಣೆ ಗೈದರು.

ಅಧ್ಯಾಪಕರಿಂದ ಶ್ರೀ ಶೇಖರ ಇಡ್ಯ, ಕೆ. ಶಾಮ ಶೆಟ್ಟಿ, ಎಂ. ಎಸ್. ಕರ್ಕೇರ, ಎಸ್. ಕೆ. ಕರ್ಕೇರ ಮತ್ತು ರಾಮಚಂದ್ರ ಜೋಶಿಯವರು ವಿದ್ಯಾರ್ಥಿಗಳಿಗೆ ಯಶವನ್ನು ಕೋರಿದರು. ವಿಶಿರೋಕ್ತ ಸಂಘ ಹಾಗೂ ಶಾಲಾ ಆಡಳಿತಗಾರರ ಪರವಾಗಿ ಶಾಲಾ ಸೆಕ್ರೆಟರಿ ಜಗನ್ನಾಥ ಶೆಟ್ಟಿಯವರು ವಿದ್ಯಾರ್ಥಿಗಳಿಗೆ ಶುಭಹಾರೈಕೆಗೈದರು. ವಿದ್ಯಾರ್ಥಿಗಳೇಪಾದಿಸಿದ ಭೋಜನಕೂಟದ ತರುವಾಯ ಸಭೆಯು ಕೊನೆಗೊಂಡಿತು

ರವೀಂದ್ರರ ಶತಮಾನೋತ್ಸವ—

ತಾ. 18—12—1961ರಂದು ಬ್ರಹ್ಮಾವರದ ಎಸ್ ಎಮ್. ಎಸ್. ಹೈಸ್ಕೂಲಿನಲ್ಲಿ ರವೀಂದ್ರರ ಶತಮಾನೋತ್ಸವವನ್ನು ಕನ್ನಡದ ಪ್ರಸಿದ್ಧ ಸಾಹಿತಿಗಳೂ, ಕತೆಗಾರರೂ ಆದ ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿಸಲಾಯಿತು. ಪ್ರಾಧಾನಾಧ್ಯಾಪಕರಾದ ಶ್ರೀ ಕೆ ಆರ್. ಹುಡೇರುಯವರು ಸ್ವಾಗತಿಸುತ್ತ ವಿಶ್ವ ಕವಿ ರವೀಂದ್ರರ ಶತಮಾನೋತ್ಸವಕ್ಕೆ, ಕನ್ನಡ ಸಾಹಿತ್ಯಕ್ಕೆ ವಿಶುಲವಾಗಿ ಸೇವೆ ಸಲ್ಲಿಸಿರುವ ಕನ್ನಡದ ರವೀಂದ್ರರಂತಿಯವ ಶ್ರೀ ಮಾಸ್ತಿಯವರು ಲಭಿಸಿದ್ದು ತಮ್ಮ ಭಾಗ್ಯವೆಂದು ಹೇಳಿದರು. ಶ್ರೀ ಬ್ರಿಕಾಡಿ ವೆಂಕಟಕೃಷ್ಣರಾಯರು ಮುಖ್ಯ ಅತಿಥಿಗಳ ಪರಿಚಯ ಮಾಡಿಕೊಟ್ಟರು ನಂತರ ಶ್ರೀ ಬಿ. ಪದ್ಮನಾಭ ವಾರಂಬಳ್ಳಿಯವರು ರವೀಂದ್ರರ ಮೇಲಿನ ಕವನಗಳನ್ನು ಓದಿದರು. ಶ್ರೀ ಮಾಸ್ತಿಯವರು ತಮ್ಮ ಭಾಷಣದಲ್ಲಿ ರವೀಂದ್ರ ಹುಟ್ಟು ಬೆಳವಣಿಗೆ, ಅವರು ಪಡೆದ ಸಂಸ್ಕಾರ, ಅವರ ಪ್ರತಿಭೆಯ ನಾನಾ ಬಗೆಗಳು, ಅವರ ಜೀವನ ವಿಶೇಷಗಳನ್ನು ಮಕ್ಕಳಿಗೆ ಮನಮುಟ್ಟುವಂತೆ ಹೃದಯಂಗಮವಾಗಿ ವಿವರಿಸಿದರು. ವಿದ್ಯಾರ್ಥಿ ಮುಖಂಡ ಶ್ರೀ ಶಿವರಾಮ ಶೆಟ್ಟಿಯ ವಂದನೆ ಅರ್ಪಿಸಿದ ತರುವಾಯ ರಾಷ್ಟ್ರಗೀತೆಯೊಂದಿಗೆ ಸಮಾರಂಭ ಕೊನೆಗೊಂಡಿತು.

ಗೀತಾ ಮಂದಿರ ಮಣಿಪಾಲ—

ತಾ 18—12—61ರಂದು ಗೀತಾ ಮಂದಿರದಲ್ಲಿ ಗೀತಾ ಜಯಂತಿಯನ್ನು ಡಾ. ಟಿ. ಎಂ. ಎ ಪೈಯವರ ಅಧ್ಯಕ್ಷತೆಯಲ್ಲಿ ಆಚರಿಸಲಾಯಿತು. ಉಪಾಧ್ಯಕ್ಷ ಶ್ರೀ ವಿ. ಚಂದ್ರಶೇಖರರು ಸ್ವಾಗತಿಸಿದ ತರುವಾಯ ಖಾರ್ಯದರ್ಶಿ ಶ್ರೀ ಆರ್. ಎಸ್. ಕಿಣಿಯವರು ವರದಿಯನ್ನೋದಿದರು. ಶ್ರೀ ಬನ್ನಂಜೆ ಗೋವಿಂದಾಚಾರ್ಯರು ಗೀತೋಪದೇಶದ ಕುರಿತು ಭಾಷಣವಿತ್ತರು ಗೀತಾಮಂದಿರದ ಮಾತೃ ಸಂಸ್ಥೆಯಾದ ಗ್ರಾಮ ಸೇವಾ ಪ್ರತಿಷ್ಠಾನದವರು ಪ್ರಕಟಿಸಿದ ಶ್ರೀ ತನಯರಿಂದ ಬರೆಯಲ್ಪಟ್ಟ "ಬದುಕಲು ಕಲಿಯಿರಿ" ಮತ್ತು ಮಲ್ಪೆ ಶ್ರೀ ಶಂಕರನಾರಾಯಣ ಸಾಮಗರಿಂದ ಬರೆಯಲ್ಪಟ್ಟ "ಯಕ್ಷಗಾನ ಪೌರಾಣಿಕ" ಎಂಬ ಎರಡು ಪೊತ್ತಗೆಗಳನ್ನು ಡಾ ಪೈಗಳು ಉದ್ಘಾಟಿಸಿದರು ಅಧ್ಯಕ್ಷರ ಸಮಯೋಚಿತ ಭಾಷಣ ಪೂಜಾ ಸಮಾರಂಭದ ತರುವಾಯ ರಾತ್ರಿ ಇದೇ ಆವರಣ ಭಜನೆಯು ಜರಗಿ ತಾ. 19ರಂದು ಪ್ರಾತಃ ಕಾಲ ಮಂಗಳಾಚರಣೆಯನ್ನು ಜರುಗಿಸಲಾಯ್ತು.

ತಾ. 18ರಂದು ಪ್ರಾಥಕಾಲ ಶಾಂಗ್ರಿಲಾ ಗಾರ್ಡನ್‌ನಲ್ಲಿ ಸೇರಿದ ಸದಸ್ಯರ ಸಭೆಯಲ್ಲಿ ಡಾ ಟಿ ಎಂ ಎ ಪೈಗಳನ್ನು ಮುಂದಿರದ ಅಧ್ಯಕ್ಷರಾಗಿ ಚುನಾಯಿಸಲಾಯ್ತು. ಶ್ರೀಮತಿ ಕನ್ನಮ್ಮ ಕೃಷ್ಣ ಸ್ವಾಮಿ, ಶ್ರೀ ವಿ. ಚಂದ್ರಶೇಖರ್ ಇವರು ಉಪಾಧ್ಯಕ್ಷರಾಗಿಯೂ, ಶ್ರೀ ಟಿ. ಸತೀಶ ಪೈಗಳು ಕೋಶಾಧಿಕಾರಿಗಳಾಗಿಯೂ ಶ್ರೀಗಳಾದ ಆರ್. ಎಸ್. ಕಿಣಿ, ರಾಮದಾಸ ಕಿಣಿ ಮತ್ತು. ಕುಮಾರಿ ಟಿ. ಪ್ರೇಮಲೀಲಾ ಪೈಯವರು ಕಾರ್ಯದರ್ಶಿಗಳಾಗಿಯೂ ಚುನಾಯಿತರಾದರು. ಶ್ರೀಮತಿಯರಾದ ಪ್ರೇಮಾ ಎ. ಪೈ ಶಾಂತಿ ಆರ್. ಪೈ, ರಾಧಾ ಶ್ರೀನಿವಾಸನ್, ಮಂಜುಳಾ ರಾವ್ ಮತ್ತು ಶ್ರೀಗಳಾದ ರಮೇಶ ಯು. ಪೈ, ಟಿ. ವಿಠಲ ಪೈ, ಬಿ. ಕೃಷ್ಣಯ್ಯ, ಎನ್. ಕೆ ಕುಡ್ವ, ಬಿ. ಪ್ರಭಾಕರ್ ಪೈ ಇವರು ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಚುನಾಯಿತರಾದರು.

ರವೀಂದ್ರ ಶತಮಾನೋತ್ಸವವು-

ಉಡುಪಿಯ ಕರ್ನಾಟಕ ಸಂಘ ಮತ್ತು ಉಡುಪಿ ಬೋರ್ಡ್ ಹೈಸ್ಕೂಲ್ ಹಳೆ ವಿದ್ಯಾರ್ಥಿ ಸಂಘದ ವತಿಯಿಂದ ತಾ. 17ರಂದು ಬೋರ್ಡ್ ಹೈಸ್ಕೂಲಿನ ಪಿಸತಾ ಭವನದಲ್ಲಿ ಡಾ. ಮಾಸ್ತಿ ವೆಂಕಟೇಶ ಅಯ್ಯಂಗಾರರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕು ಶಿ. ಹರಿದಾಸ ಭಟ್ಟರು ಸ್ವಾಗತಿಸಿದ ಬಳಿಕ ಶ್ರೀ ವಿ. ಸೀತಾ ರಾಮಯ್ಯನವರು ರಾಗೋರ್ಗರ ಕೃತಿಯಾಗಿಯೂ, ಶ್ರೀ ಕೆ. ವೆಂಕಟ ರಾಮಸ್ವಾಮಿಯವರು ದಿ. ಬಿ ಎಂ. ಶ್ರೀ ಕಂಠಯ್ಯನವರ ಕುರಿತಾಗಿಯೂ ವಿಚಾರ ಪೂರಿತ ಭಾಷಣ ಮಾಡಿದರು ಅಧ್ಯಕ್ಷರ ಭಾಷಣದ ಬಳಿಕ ಶ್ರೀ ನಾರಾಯಣ ಐತಾಳರು ಧನ್ಯವಾದ ಸಮರ್ಪಿಸಿದರು.

ಉಚ್ಚ ಶಿಕ್ಷಣಕ್ಕೆ ಅಮೇರಿಕಾ ಪ್ರಯಾಣ-

ಧಾರವಾಡದ ಎಗ್ರಿಕಲ್ಚರಲ್ ಕಾಲೇಜಿನ ಪ್ಲೇಂಟ್ ಫಿಜಿಯೊಲಜಿ ರೀಸರ್ಚ್ ಸ್ಕೀಮಿನಲ್ಲಿ ಕೆಲಸ ಮಾಡುತ್ತಿದ್ದ ಮಂಗಳೂರಿನ ಶ್ರೀ ಆತ್ತಾವರ ಮುತ್ತಪ್ಪನವರ ಪುತ್ರ ಶ್ರೀ ಎ. ಮನಮೋಹನ, ಎಂ ಎಸ್. ಸಿ(Ag)ಇವರು ಅಮೆರಿಕಾದ ಉಟಿಚ್ಸ್ಟೇಟ್ ಯೂನಿವರ್ಸಿಟಿಗೆ Ph D.ಡಿಗ್ರಿಯ ಉಚ್ಚ ಶಿಕ್ಷಣಕ್ಕಾಗಿ ತಾ. 22ರಂದು ಮುಂಬಾಯಿಯಿಂದ ಪರ್ ಇಂಡಿಯಾ ಇಂಟರ್ ನ್ಯಾಷನಲ್ ವಿಮಾನ ಮೂಲಕ ತೆರಳಿರುವರು.

ಕ್ರಿಸ್ತ ಜಯಂತಿ—

ಇದೇ ತಾ. 25ರಂದು ಹಂಗಾರಕಟ್ಟೆಯ ಕರ್ಣಾಟಕ ಸಂಘದವರು ಕ್ರಿಸ್ತ ಜಯಂತಿಯನ್ನು ಶ್ರೀ ಜಿ ಬಿ. ಲೂವಿಸ್ ಬಿ. ಎ. ಎಲ್. ಟಿ. ಇವರ ಅಧ್ಯಕ್ಷತೆಯಲ್ಲಿ ಆಚರಿಸಿದರು. ಸಂಘದ ಅಧ್ಯಕ್ಷ ಶ್ರೀ ಕೆ. ಶಿವರಾಮ ಶೆಟ್ಟರು ಸ್ವಾಗತಭಾಷಣ ಮಾಡಿದರು. ಕಾರ್ಯದರ್ಶಿ ಪಿ ಸಿ. ಚಡಗರು ವರದಿಯನ್ನೋದಿದರು. ಡಾ. ಕೆ. ಬಿ. ರಾಮಕೃಷ್ಣ ರಾಯರು ಕ್ರಿಸ್ತನ ತತ್ವಗಳ ವಿಚಾರವಾಗಿ, ಶ್ರೀ ಎಸ್. ಕೆ. ಶ್ರೀಪತಿ ಆಚಾರ್ಯರು ಬುದ್ಧನ ವಿಚಾರವಾಗಿ, ಶ್ರೀ ಕೆ ಸುಬ್ರಾಯ ಅಂಬಾಳರು ಗಾಂಧೀಜಿಯವರ ವಿಚಾರವಾಗಿ ಭಾಷಣವನ್ನಿತ್ತರು. ಅಧ್ಯಕ್ಷರ ಭಾಷಣದ ನಂತರ ಶ್ರೀ ಪಿ. ಜೆ ಹೆಗ್ಗೆಯವರು ಧನ್ಯವಾದಗಳನ್ನಿತ್ತರು.

ಕೆಲಂಡರ್ ಸ್ವೀಕಾರ-

ಮಣಿಪಾಲದಲ್ಲಿ ಇತ್ತೀಚೆಗೆ ಸ್ಥಾಪನೆಯಾದ ಮಣಿಪಾಲ ಇಂಡಸ್ಟ್ರೀಸ್ ಪ್ರೈವೇಟ್ ಲಿಮಿಟೆಡ್ ಇವರ 1962ನೇ ನೂತನ ವರ್ಷದ ಸುಂದರವಾದ ಕೆಲಂಡರನ್ನು ಅಕ್ಕಾವರದಿಂದ ಸ್ವೀಕರಿಸ್ದೇವೆ. ಸಂ. ನ.

ಕುಂದಾಪುರ—

ಆಲೂರು ಶ್ರೀ ರಾಮೇಶ್ವರ ದೇವರ ಸನ್ನಿಧಿಯಲ್ಲಿ ಆಸ್ಪ್ರಗ್ರಹಯೋಗದ ಸಲುವಾಗಿ ಶ್ರೀ ರಾಮ ಭಜನೆ, ಅಹೋರಾತ್ರಿ 7 ದಿನ ನಡೆದು ತಾ. 20ರಂದು ಮಂಗಳೋತ್ಸವ ಜರಗಿತು. ಶ್ರೀಗಳಾದ ಎ. ಲಕ್ಷ್ಮೀನಾರಾಯಣ ಜೋಯಿಸ, ಶ್ರೀನಿವಾಸ ಜೋಯಿಸ ಎ. ಅನಂತ ಸ್ವೈಕ, ಸುಬ್ರ

ಫೆಬ್ರವರಿಯಲ್ಲಿ ಚುನಾವಣೆಗಳು

ಐದು ವರ್ಷಗಳಿಗೊಮ್ಮೆ ನೆರವೇರುವ ಚುನಾವಣೆಯು ಭಾರತದಲ್ಲಿ ೧೯೬೨ರಲ್ಲಿ ಮೂರನೆಯ ಬಾರಿ ಜರಗುವುದು ಚುನಾವಣಾ ಆಯೋಗದವರು ಕೇಂದ್ರ ಮತ್ತು ರಾಜ್ಯ ಸರಕಾರಗಳೊಡನೆ ಪೂರ್ಣ ಲೋಚನೆ ನಡೆಸಿ ಸಾರ್ವತ್ರಿಕ ಚುನಾವಣೆಗಳು ೧೯೬೨ರ ಫೆಬ್ರವರಿ ಉತ್ತರಾರ್ಧವು ಅತ್ಯಂತ ಅನುಕೂಲವೆಂದು ಅಭಿಪ್ರಾಯಕ್ಕೆ ಬಂದಿದ್ದಾರೆ. ಅದರಂತೆ ವಿಧಾನ ಸಭೆ ಮತ್ತು ಲೋಕ ಸಭೆಗಳಿಗೆ ನಡೆಯಲಿರುವ ಚುನಾವಣೆಯ ಕಾರ್ಯಕ್ರಮಗಳನ್ನು ಸಿದ್ಧಪಡಿಸಿದ್ದಾರೆ. ಕೇರಳ ಮತ್ತು ಒರಿಸ್ಸ ರಾಜ್ಯಗಳಲ್ಲಿ ಮಧ್ಯಾವಧಿಯಲ್ಲಿ ವಿಧಾನ ಸಭೆಗಳಿಗೆ ಚುನಾವಣೆಯು ನಡೆದಿರುವುದರಿಂದ ೧೯೬೨ರಲ್ಲಿ ಅದು ಜರಗುವುದಿಲ್ಲ.

ಚುನಾವಣೆಗೆ ಕೇರಳ-ಒರಿಸ್ಸಗಳನ್ನುಳಿದ ಎಲ್ಲ ರಾಜ್ಯಗಳಲ್ಲಿ, ಮಣಿಪುರ ಮತ್ತು ತ್ರಿಪುರಗಳಲ್ಲಿ ಜನವರಿ ೧೫ರಂದು ಹಾಗು ಕೇರಳ, ಒರಿಸ್ಸ, ದೆಹಲಿ ಮತ್ತು ಹಿಮಾಚಲ ಪ್ರದೇಶಗಳಲ್ಲಿ ಜನವರಿ ೨೦ರಂದು ಕರೆಯೊಯುವ ಪ್ರಕಟಣೆ ಹೊರಡಿಸಲಾಗುವುದು. ಮೊದಲನೆಯ ಗುಂಪಿನ ರಾಜ್ಯಗಳಿಗೆ ಜನವರಿ ೨೦ ಮತ್ತು ಎರಡನೆಯವಕ್ಕೆ ಜನವರಿ ೨೭ ಉಮೇದ್ವಾರಿಕೆಯ ಪತ್ರಗಳನ್ನು ಸಲ್ಲಿಸುವ ಕೊನೆಯ ದಿನಾಂಕವಿರುವುದು ಜನವರಿ ೨೨ ಮತ್ತು ೨೯ರಲ್ಲಿ ಇವುಗಳ ಪರಿಶೀಲನೆಯು ನಡೆಯುವುದು. ನವೆಂಬರ ೨೫ರೊಳಗೆ ಮೊದಲನೆಯ ಗುಂಪಿನರಾಜ್ಯಗಳಲ್ಲಿ ಮತ್ತು ಫೆಬ್ರವರಿ ೧೯ರೊಳಗೆ ಉಳಿದೆಡೆಯಲ್ಲಿ ಉಮೇದ್ವಾರಿಕೆಯ ಪತ್ರಗಳನ್ನು ಹಿಂತೆಗೆದುಕೊಳ್ಳಬಹುದು. ಫೆಬ್ರವರಿ ೧೯ರಿಂದ ೨೫ರ ವರೆಗೆ ಕೇರಳ-ಪಂಜಾಬ ಬಟ್ಟುಳಿದ ರಾಜ್ಯಗಳಲ್ಲಿ, ಮಣಿಪುರ ಮತ್ತು ತ್ರಿಪುರಗಳಲ್ಲಿ ಫೆಬ್ರವರಿ ೨೪ರಂದು ಕೇರಳ ಮತ್ತು ಪಂಜಾಬಗಳಲ್ಲಿ, ೨೫ರಂದು ದೆಹಲಿ ಮತ್ತು ಹಿಮಾಚಲ ಪ್ರದೇಶದಲ್ಲಿ ಚುನಾವಣೆಗಳು ನಡೆಯುವುವು.

೨೫ರಿಂದ ಮುಂದಿನ ೧೦ ಅವಧಿಯಲ್ಲಿ ಮತಗಳನ್ನು ಎಣಿಸಿ ಫಲಿತಾಂಶವನ್ನು ಘೋಷಿಸುವುದೆಂದೂ ಎಲ್ಲ ಪರಿಣಾಮಗಳೂ ಮಾರ್ಚ ೨೦ ಒಳಗೆ ಘೋಷಿಸಲ್ಪಡುವುವೆಂದೂ ಆಯೋಗದ ನಿರೀಕ್ಷೆಯಿದ ಹಿಮಾಲಯ ತಪ್ಪಲಿನ ಆರು ಕ್ಷೇತ್ರಗಳಲ್ಲಿ ಚುನಾವಣೆಯನ್ನು ಎಪ್ರಿಲ್ ತಿಂಗಳ ಕೊನೆಯ ವರೆಗೆ ಮುಂದುವರಿಸಬೇಕಾಗುವುದು ವಿಶೇಷ ವ್ಯವಸ್ಥೆಯ ಸಹಾಯದಿಂದ ಬೇಗನೆ ಕಾರ್ಯ ಮುಗಿಸಿ ಮೇ ೩ರಂದು ಅಲ್ಲಿನ ಫಲಿತಾಂಶವನ್ನು ಹೊರಗೆಡಹುವರು ಇದರಿಂದಾಗಿ ಅಲ್ಲಿ ಚುನಾಯಿತರಾದವರೂ ರಾಷ್ಟ್ರಪತಿ ಮತ್ತು ಉಪರಾಷ್ಟ್ರಪತಿಗಳ ಆಯ್ಕೆಯಲ್ಲಿ ಭಾಗವಹಿಸಬಹುದು ಮಾರ್ಚ ೩ರಂದು ಹೊಸ ವಿಧಾನಸಭೆಗಳ ಸದಸ್ಯರ ನಾಮಾವಳಿಯನ್ನು ಚುನಾವಣಾ ಆಯೋಗದವರು ಪ್ರಕಟಿಸುವರು. ವಿಸರ್ಜನೆಗೊಳ್ಳಬೇಕಾದ ವಿಧಾನ ಸಭೆಗಳು ಮಾರ್ಚ ೧೧ರಂದು ಕೊನೆಗೊಳ್ಳುವುವು

ಹಿಮಾಚಲ ತಪ್ಪಲಿನ ೫ ಕ್ಷೇತ್ರಗಳನ್ನುಳಿದು ಇತರ ಎಲ್ಲೆಡೆಯ ಲೋಕ ಸಭಾ ಚುನಾವಣಾ ಪರಿಣಾಮವನ್ನು ಮಾರ್ಚ ಮೊದಲನೆಯ ವಾರ ೭ರಂಗಗೊಳಿಸಲಾಗುವುದು. ಅನಂತರ ೧೦ ದಿನಗಳಲ್ಲಿ ಹೊಸಮಂತ್ರಿ ಮಂಡಲವೇರ್ಪಟ್ಟುಮುಂದಿನ ವರ್ಷದ ಮುಂಗಡ ಪತ್ರವನ್ನು ಹೊಸ ಲೋಕಸಭೆಯ ಮುಂದಿಡುವುದು ಅಸಾಧ್ಯವಾದುದರಿಂದ ಹಿಂದಿನ ಬಾರಿಯಂತೆಯೇ ಮಾರ್ಚ ೩೧ರಂದು ಪ್ರಚಲಿತ ಲೋಕಸಭೆಯು ವಿಸರ್ಜನೆಗೊಳ್ಳುವುದು. ಆದುದರಿಂದ ಲೋಕಸಭೆಯ ಚುನಾವಣೆ ಮುಕ್ತಾಯಗೊಳ್ಳುವ ದಿನವನ್ನು ಎಪ್ರಿಲ್ ಒಂದು ಎಂದು ಗೊತ್ತುಮಾಡಲಾಗುವುದು. ಅದಾದ ಮೂರನೆಯ ದಿನ ರಾಜ್ಯಾಂಗದ ಮೇರೆಗೆ ಪ್ರಕಟಣೆ ಹೊರಡಿಸಲಾಗುವುದು.

ಮುಂದಿನ ಎಪ್ರಿಲ್ ೨ರ ವೇಳೆಗೆ ರಾಜ್ಯ ಸಭೆಯ ಚುನಾವಣೆಗಳನ್ನು ಮುಕ್ತಾಯಗೊಳಿಸುವ ದೃಷ್ಟಿಯಲ್ಲಿ ವಿಧಾನ ಸಭೆಗಳ ಚುನಾವಣಾ ಫಲಿತಾಂಶವನ್ನು ಮೊದಲೇ ಪ್ರಕಟಿಸುವ ನಿರ್ಣಯ ಕೈಗೊಂಡಿರುವುದು ರಾಜ್ಯ ಸಭೆಯ ಮರುನೆಯ ಒಂದು ಭಾಗದಷ್ಟು ಸದಸ್ಯರು ನಿವೃತ್ತರಾಗುತ್ತಾರೆ ಹೊಸ ವಿಧಾನ ಸಭೆಯ ೨ ರಾಜ್ಯ ಸಭೆಗಳಿಗೆ ಸದಸ್ಯರನ್ನು ಆರಿಸಬೇಕಾಗುವುದು. ಈ ಚುನಾವಣಾ ಕಾರ್ಯಕ್ರಮವು ಈ ರೀತಿಯಿದೆ

ಪ್ರಕಟಣೆ —	ಮಾರ್ಚ ೭
ನಾಮಪತ್ರ ಹಾಕುವುದು—	೧೪
ನಾಮಪತ್ರ ಪರಿಶೀಲನೆ—	೧೬
ನಾಮಪತ್ರ ಹಿಂದೆಗೆಯುವಿಕೆ—	೧೯
ಮತದಾನ —	೨೭
ಮುಕ್ತಾಯ—	೩೧

ರಾಷ್ಟ್ರಪತಿ ಮತ್ತು ಉಪರಾಷ್ಟ್ರಪತಿಗಳ ಅಧಿಕಾರಾವಧಿಯು ಮೇ ೧೨ರಂದು ಮುಕ್ತಾಯಗೊಳ್ಳುವುದು ಹೊಸ ರಾಷ್ಟ್ರಪತಿ ಮತ್ತು ಉಪ ರಾಷ್ಟ್ರಪತಿಗಳನ್ನು ಆ ದಿನಕ್ಕೆ ಮೊದಲು ಆರಿಸಿಕೊಳ್ಳಬೇಕಾಗಿದೆ. ಆದುದರಿಂದ ಈ ಸಂಬಂದದಲ್ಲಿ ಎಪ್ರಿಲ್ ೬ರ ಸುಮಾರಿಗೆ ಪ್ರಕಟಣೆಯನ್ನು ಹೊರಡಿಸಲಾಗುವುದು. ಅಗತ್ಯವೆಂದಾದಲ್ಲಿ ಮೇ ೮ರಂದು ಚುನಾವಣೆಯು ನಡೆದು ೧೦ರ ಒಳಗೆ ಫಲಿತಾಂಶವು ಹೊರಪಡುವುದು

ಹಿಂದಿನ ಚುನಾವಣೆಗಳು ನಡೆಯಲು ದೀರ್ಘಾವದಿ ಹಿಡಿದಿದ್ದರೆ, ಈ ಬಾರಿಯುವು ಒಂದೇ ವಾರದೊಳಗೆ ಮುಕ್ತಾಯಗೊಳ್ಳುವುವು. ಈ ಬಗ್ಗೆ ಅವಶ್ಯಕ ಕಾರ್ಯಕ್ರಮಗಳನ್ನು ಚುನಾವಣಾ ಆಯೋಗವು ಕೈಗೊಳ್ಳುವುದು



ವಿದ್ಯುತ್ ಚಾಲಿತ ಗಾಡಿಯನ್ನು ಪ್ರಧಾನ ನೆಹರು ಪರಿಶೀಲಿಸುತ್ತಿರುವುದನ್ನಿಲ್ಲಿ ಕಾಣಬಹುದು ಚಿತ್ತರಂಜನ ರೇಲ್ವೆ ಗಾಡಿಕಾರಖಾನೆಯಲ್ಲಿ ಇಂತಹ ಗಾಡಿಗಳು ಈಗ ತಯಾರಾಗುತ್ತಿವೆ

ಸಾದರ ಸ್ವೀಕಾರ

೧. ಕರ್ಮವೀರ-ಸಂಪಾದಕರು.ಶ್ರೀ ಹ ರಾ. ಪ.ರೋಹಿತ, ಹುಬ್ಬಳ್ಳಿ ಬೆಲೆ. ರೂ ೧=೫೦ (ದೀಪಾವಳಿ ಸಂಚಿಕೆ)

೨. ವಿಕ್ರಮ- ಸಂಪಾದಕರು: ಶ್ರೀ ಬಿ. ಎಸ್. ಎನ್ ಮಲ್ಯ ಚಾಮರಾಜಪೇಟೆ, ಬೆಂಗಳೂರು- ೧೮ ಬೆಲೆ ರೂ. ೧=೦೦ (ವಿಜಯದಶಮಿ ಸಂಚಿಕೆ.

೩. ಯುಗಪುರುಷ- ಸಂಪಾದಕರು ಶ್ರೀ ಕೊಡತ್ತೂರು ಅನಂತಪದ್ಮನಾಭ ಉಡುಪ, ಕಿನ್ನಿಗೋಳಿ ಬೆಲೆ: ರೂ. ೧ (ದಸರಾ ಸಂಚಿಕೆ.)

೪. ದರ್ಶನ- ಸಂಪಾದಕರು: ಶ್ರೀ ಎಂ ಬಿ. ದೇಸಾಯಿ, ಫುಲಬಾಗ್, ಬೆಳಗಾವಿ. ಬೆಲೆ: ೦=೫೦. (ದೀಪಾವಳಿ ಸಂಚಿಕೆ)

೫. ವಿಜಯವಾಣಿ- ಸಂಪಾದಕರು ಶ್ರೀ ಹೆಚ್ ಆಂ. ಗುಂಡೂರಾವ್, ತುಮಕೂರು. ಬೆಲೆ: ೦=೨೫. (ದಸರ ಸಂಚಿಕೆ)

ಈ ಮೇಲಿನವುಗಳಲ್ಲಿ ಮೊದಲಿನ ಮೂರು ಅಕಾರದಲ್ಲಿಯೂ ಪ್ರಮಾಣದಲ್ಲಿಯೂ ಮೌಲ್ಯದಲ್ಲಿಯೂ ಉತ್ಕೃಷ್ಟವಿದ್ದು ಹಿಂದಿನ ವರ್ಷಗಳಂತೆಯೇ ಈ ವರ್ಷವೂ ಓದುಗರಿಗೆ ಸಾಹಿತ್ಯದ ಪತ್ರಸದೌತಣವನ್ನು ನೀಡುತ್ತವೆ. ಆಕರ್ಷಕವಾದ ರಕ್ಷಾಪತ್ರ ಮತ್ತು ಮುಖಚಿತ್ರ ಮತ್ತು ಕಲಾಚಿತ್ರಗಳಿಂದ ಕೂಡಿವೆ. ಸಂಗ್ರಾಹ್ಯ ಸಂಚಿಕೆಗಳಾಗಿವೆ

ಕೊನೆಯ ಎರಡು ಗಾತ್ರದಲ್ಲಿ ಮಧ್ಯಮ ತರದಿದ್ದರೂ ವಿಚಾರ ಪರಿಪ್ಲುತವಾದ ಲೇಖನಗಳಿಂದ ಕೂಡಿವೆ. ಓದುಗರ ಜ್ಞಾನ ತೃಷೆಯನ್ನು ನೀಗಿಸುವಲ್ಲಿ ಸಮರ್ಥವಾಗಿವೆ.

ಮೇಲಿನ ಎಲ್ಲ ವಿಶೇಷ ಸಂಚಿಕೆಗಳನ್ನೂ ಹೃತ್ಪೂರ್ವಕ ಸ್ವಾಗತಿಸುತ್ತೇವೆ

—ಗೋರಾ.

ಉಡ್ಪಿ ಡಿ. ಮು ಕೋರ್ಟಿನಲ್ಲಿ

S. C S No 478/1961.

ಕೇಶವ ಚರ್ಚಸ್ಪ ಪ್ರಭು —ವಾದಿ

ಮತ್ತು

G. ನರಸಿಂಹ ಉಡ್ಪಿ ತಾಲ್ಕು ಪಡುಗ್ರಾಮದ ಕಾಪು-ಕ್ಸಬೆಯಲ್ಲಿರುವವ- ಪ್ರತಿವಾದಿ

ಸದ್ರಿ ಪ್ರತಿವಾದಿಗೆ ಈ ಮೂಲ್ಕ ತಿಳಿಯಪಡಿಸುವುದೇನೆಂದ್ರೆ—

ವಾದೀ ಅಂಗಡಿಯಲ್ಲಿ ಪ್ರತಿವಾದಿಯು ನಡ್ರಿದ ಲೇವಾದೇವಿ ಬಾಬ್ತು ಬರತಕ್ಕ ಅಸ್ಲು, ಬಡ್ಡಿ ವಗೈರೆಗೆ ವಾದಿಯು ದಾಕ್ಲು ಮಾಡಿದ ಮೇಲ್ಕಂಡ ವ್ಯಾಜ್ಯದ ಕುರಿತು ಪ್ರತಿವಾದಿಗೇ ನಾದರೂ ಆಕ್ಷೇಪಣೆಯಿದ್ದಲ್ಲಿ ಅದನ್ನು ತಾರೀಖು 22 -1 — 1962ಕ್ಕೆ ಹಗಲು ಗಂಟೆ 11 ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು ತಪ್ಪಿದರೆ ನಿಮ್ಮ ಗೈರುಹಾಜರಿಯಿಂದ ವ್ಯಾಜ್ಯವು ಏಕಮಾನಿಸಲ್ಪಡುವದು.

K. Varadaraya Pai
Advocate for plaintiff

ಉಡುಪಿ, ತಾ. 23—12—1961

ಬಂಟರ ಯಾನೆ ನಾಡವರ ವಿದ್ಯಾವರ್ಧಕ ಸಂಘ (ರಿಜಿಸ್ಟರ್ಡ್), ಶಿರ್ವ, ದ. ಕ

ವಿಶೇಷ ಮಹಾಸಭೆಯ ನೋಟೀಸು.

ಮೇಲಿನ ಸಂಘದ ವಿಶೇಷ ಮಹಾಸಭೆಯು ತಾ 21—1—1962ನೇ ಆದಿತ್ಯವಾರ ಅಪರಾಹ್ನ ಘಂಟೆ 2ಕ್ಕೆ ಶಿರ್ವ ಹಿಂದೂ ಹಾಯರ್ ಎಲಿಮೆಂಟರಿ ಶಾಲಾ ನಿತ್ಯಾನಂದ ಸದನದಲ್ಲಿ ಜರಗಲಿರುವುದರಿಂದ ಸಂಘದ ಸದಸ್ಯರೆಲ್ಲರೂ ಹಾಜರಿರಬೇಕಾಗಿ ವಿನಂತಿ.

ಸಭೆಯಲ್ಲಿ ಬರತಕ್ಕ ವಿಷಯಗಳು.-

1. ತಾ. 17-12-1961ರಂದು ಜರಗಿದ ಸಂಘದ ವಿಶೇಷ ಮಹಾ ಸಭೆಯಲ್ಲಿ ಸರ್ವಾನುಮತದಿಂದ ಮಂಜೂರು ಮಾಡಲ್ಪಟ್ಟ, ಸಂಘದ ಮೆಮೊರೆಂಡಮ್ ಆಫ್ ಎಸೋಸಿಯೇಶನ್ ಮತ್ತು ಕ್ರಮ ನಿಬಂಧನೆಗಳ ಈ ಕೆಳಗಿನ ತಿದ್ದುಪಡಿಗಳನ್ನು ಸ್ಥಿರಗೊಳಿಸುವುದು:—

ಮೆಮೊರೆಂಡಮಿನ 1ರಲ್ಲಿ, 2ರಲ್ಲಿ, 3 (c)ಯಲ್ಲಿ, 3ರಲ್ಲಿ. 4ರಲ್ಲಿ "ಬಂಟರ ಯಾನೆ ನಾಡವರ" ಎಂಬುದನ್ನು ಲೋಪಪಡಿಸುವುದು. 3 (f)ನಲ್ಲಿ "ಈಡು ಯಾ ಅಡವು ಮಾಡುವುದು" ಈ ವಾಕ್ಯ ಪೂರ್ತಿಯಾದ ಕೂಡಲೆ "ಕ್ರಯ ಯಾ ಧನಸಂಪಾದನೆ ಯಾ ಪರಾಬರೆ ಮಾಡುವುದು" ಎಂಬುದನ್ನು ಸೇರಿಸುವುದು.

ಕ್ರಮನಿಬಂಧನೆಗಳ 1ರಲ್ಲಿ, 7ರಲ್ಲಿ "ಬಂಟರ ಯಾನೆ ನಾಡವರ" ಎಂಬುದನ್ನು ಲೋಪಪಡಿಸುವುದು. 2ರಲ್ಲಿ "ಬಂಟರ ಯಾನೆ ನಾಡವರ ಸಮಾಜಕ್ಕೆ ಸೇರಿದವರಾಗಿರತಕ್ಕದ್ದು ಮತ್ತು" ಎಂಬುದನ್ನು ಲೋಪಪಡಿಸುವುದು. 5 (ಂ) ಈ ವಾಚಕವನ್ನು ಸಂಪೂರ್ಣ ಲೋಪಪಡಿಸುವುದು

2. ಅಧ್ಯಕ್ಷರ ಅನುಮತಿಯ ಮೇರೆಗೆ ಬರುವ ಇತರ ವಿಷಯಗಳು.

ಶಿರ್ವ, ದ. ಕ
23—12—1961

ಕೆ ವಾಸುದೇವ ಶೆಟ್ಟಿ, ಕಾರ್ಯದರ್ಶಿ.

ನಾಗಪ್ಪ ಶೆಟ್ಟಿ, ಅಧ್ಯಕ್ಷ.

ರಂಗನಾಥ ಸ್ವಾಮಿಯವರ ಸಂಕೇತ

ಶ್ರೀ ಎಂ. ಬಿ. ಶಂಕರ ರಾವ್, ಐ. ಎ. ಎಸ್. (ನಿವೃತ್ತ)

ನಟರಾಜಸ್ವಾಮಿಯು ನಾಟಕ ರಂಗ ಭೂಮಿಯ ರಾಜನಾದರೆ, ರಂಗನಾಥಸ್ವಾಮಿಯು ಅಂತೆಯೇ ನಾಟಕರಂಗದ ಸ್ವಾಮಿಯು. ಈ ನಾಟಕರಂಗವು ಮಾತ್ರ ಬ್ರಹ್ಮಾಂಡವಾಗಿರುತ್ತದೆ. ವಿಶ್ವಮಯವಾದ ಈ ಜಗತ್ತಿನಲ್ಲಿ ಅನೇಕಾನೇಕ ಕೋಟಿ ಮಾನವರ ದೇಹಗಳೂ, ಇಂದ್ರಿಯಗಳೂ ನಿತ್ಯ ನಿತ್ಯ ಚಲಿಸುತ್ತಲೇ ಇವೆ. ಈ ಚಲನೆದ ಸೂತ್ರಧಾರಿಯು ರಂಗನಾಥಸ್ವಾಮಿಯು. ಆತನೇ ಇನ್ನೊಂದು ಸ್ವರೂಪದಲ್ಲಿ ನಟರಾಜನೆಂದು ಕರೆಯಲ್ಪಡುತ್ತಾನೆ. ನಟರಾಜನ ಪ್ರಮುಖ ಕ್ಷೇತ್ರವು ದಕ್ಷಿಣ ಆರ್ಕಾಟು ಜಿಲ್ಲೆಯ ಚಿದಂಬರದಲ್ಲಿ ಶೋಭಿಸುತ್ತದೆ. ತಿರುಚಿನಾಪಳ್ಳಿಯ ಸ್ವರೂಪದಲ್ಲಿರುವ ಶ್ರೀರಂಗಪುರದಲ್ಲಿ ರಂಗನಾಥಸ್ವಾಮಿಯ ಕ್ಷೇತ್ರವಿದೆ. ನಟರಾಜನು ನಾಟ್ಯರೂಪದಲ್ಲಿ ತೋರುವನು. ರಂಗನಾಥನು ಹಾಲುಗಡಲಿನಲ್ಲಿ ನಿದ್ರಿಸಿದ ರೂಪದಲ್ಲಿ ಶೋಭಿಸುವನು. ಈ ಎರಡು ಸಂಕೇತಗಳಲ್ಲೂ ತುಂಬಾ ಅರ್ಥವಿದೆ.

ಹಾಲುಗಡಲು ಅಥವಾ ಕ್ಷೀರ ಸಾಗರವೆನ್ನುವ ಮಾತು ಪುರಾಣಗಳಲ್ಲಿ ಕಂಡು ಬಂದರೂ ಆ ಕಡಲು ಎಲ್ಲಿದೆ ಎಂಬ ವಿಚಾರವು ಕೆಲವು ಮಟ್ಟಿಗೆ ಸಂಶಯಕ್ಕೆ ಒಳಪಟ್ಟಿದೆ. ಕಲ್ಪವೃಕ್ಷ ಕಾಮಧೇನು, ಸ್ವರ್ಣಗಿರಿ ದೇವನದಿ, ಅಮರ ಐರಾವತಹಸ್ತಿ ಎಂಬುದಾಗಿ ತೆಂಗಿನ ಮರವನ್ನು, ಸೆಸುವನ್ನು ಹಿಮಾಲಯವನ್ನು, ಗಂಗೆಯನ್ನು, ಆನೆಯನ್ನು ವರ್ಣಿಸಿದಂತೆ, ಹಿಮಾಲಯದ ಬುಡದ ಬಯಲು ಪ್ರದೇಶಗಳನ್ನು ಫಲವತ್ತಾಗಿ ಮಾರ್ಪಡಿಸಿದ ಗಂಗಾ, ಬ್ರಹ್ಮಪುತ್ರ, ಸಿಂಧ, ಇತ್ಯಾದಿ ಘನ ನದಿಗಳೆಲ್ಲವೂ ಸೇರಿ ಅವುಗಳ ಸಮೂಹಕ್ಕೆ ಹಾಲುಗಡಲು ಎಂಬುದಾಗಿ ಉತ್ಪ್ರೇಕ್ಷೆಯಿಂದ ವರ್ಣಿಸಿರಬಹುದು ಎಂಬುದಾಗಿ ಕೆಲವು ಪ್ರಾಜ್ಞರ ಅಭಿಪ್ರಾಯವಿದೆ. ಆದರೆ ನಿಜವಾದ ಕ್ಷೀರ ಸಮುದ್ರವೆಂದರೆ ಏನು? ದೇಹದ ಅಭಿಮಾನವನ್ನು ಸಂಪೂರ್ಣವಾಗಿ ತ್ಯಜಿಸಿದಾಗ ಮಾತ್ರ ಕಡಲಿನ ಅಥವಾ ನದಿಯ ಉದಕವನ್ನು ಹಾಲೆಂದು ಅರಿತುಕೊಳ್ಳಬಹುದು. ಅದು ಬರೇ ಚಿತ್ತದ ಭಾವವು. ಈ ಹಾಲುಗಡಲಿನ ಮಹತ್ವವನ್ನು ಮನಸ್ಸಿನಲ್ಲಿಯೇ ತಿಳಿದುಕೊಂಡು ಸಂತೋಷಪಡಬೇಕಾದರೆ, ಆ ಮನಸ್ಸಿಗೆ ಸಂಪೂರ್ಣ ಶಾಂತಿಯು ಸುಖವಾಗಿ ಲಭಿಸಬೇಕು. ನವ ಗ್ರಹಗಳಿಂದ ಆವರಿಸಿ ಇರುವ ಈ ಭೂಲೋಕದಲ್ಲಿ ಪಾಲ್ಗಡಲಿನ ವೈಶಿಷ್ಟ್ಯವನ್ನು ಮನದಲ್ಲಿ ಮೂಡಿಕೊಳ್ಳಬೇಕಾದರೆ ಅಂತಹ ಮಾನವನು ಸಂಪೂರ್ಣ ತ್ಯಾಗಿಯಾಗಲೇ ಬೇಕು ಎಂಬುದಾಗಿ ತತ್ವಜ್ಞಾನಿಗಳು ಅಭಿಪ್ರಾಯಪಟ್ಟಿರುತ್ತಾರೆ.

ಪಾಲ್ಗಡಲಿನಿಂದ ಲಭಿಸಿದ ಅಮೃತಕ್ಕೆ ಜಾತಿ, ಮತ, ಜನನ, ಮರಣ, ಸ್ವಾತಂತ್ರ್ಯ, ಗುಲಾಮಗಿರಿ, ಭೇದ ಅಭೇದವೆಂದು ಯಾವ ವಿಚಾರಗಳೂ ಕಟ್ಟುವುದಿಲ್ಲ. ಶಾಂತಿಯನ್ನು ಭಂಗಮಾಡದೆ ಪವಿತ್ರವಾದ ಹರ್ಷೋನ್ಮಾದವೂ, ಅತ್ಯಾನಂದವೂ ಅಂತಹ ಅಮೃತದ ಭಾವನೆಯಿಂದ ತ್ಯಾಗಿಗಳಲ್ಲಿ ಅಂಕುರಿಸುವವು. ಭೂಪ್ರಳಯವಾದಾಗ, ಸಕಲವೂ ನಾಶವಾಗಿ ಪಾಲ್ಗಡಿನಲ್ಲಿ 'ಆದಿಶೇಷನು ಮಾತ್ರ ಉಳಿಯುವನು. ಆತನು ಸರ್ವರೂಪಿಯು, ಸಂಗೀತಪ್ರಿಯನು. ಶಿರದಲ್ಲಿ ಮಾಣಿಕ್ಯವನ್ನು ಧರಿಸಿದವನು. ಧಾನದಲ್ಲಿ ಸುಂದರನು. ನೇತ್ರಗಳಿಂದ ಶ್ರವಣಶಕ್ತಿಯನ್ನು ಪಡೆದವನು. ಮಂತ್ರನಾಯಕನು. ಹಿಂದುಗಳು ನಟರಾಜನನ್ನು ಈಶ್ವರನ ರೂಪದಲ್ಲೂ, ರಂಗನಾಥನನ್ನು ವಿಷ್ಣುವಿನ ರೂಪದಲ್ಲೂ ಅರಿತು ಆನಂದಪಡುವರು. ಇದು ಮಾನವನ ಗ್ರಾಹಕಶಕ್ತಿಯ ಕಲ್ಪನೆಯನ್ನು ಹೊಂದಿಕೊಂಡಿದೆ. ಜನನಕ್ಕೂ ಮರಣಕ್ಕೂ, ಆಕಾಶಕ್ಕೂ, ಭೂಮಿಗೂ ಸಂಬಂಧಿಸದೆ ಪ್ರತ್ಯೇಕವಾಗಿದ್ದು ಮಾನವನ ಚಿತ್ತಬಲವನ್ನು ಪರಿಶೋಧಿಸುವ ಪರಮಾತ್ಮನ ಸರ್ವವ್ಯಾಪನದ ಶಕ್ತಿಯೇ ಪಾಲ್ಗಡಲು ಎಂದು ತತ್ವಜ್ಞಾನಿಗಳು ಭಾವಿಸಿ, ಆ ಕಡಲಿನಲ್ಲಿ ನಿದ್ರಿಸಿದ ಶೇಷನಿಗೆ ವೈಶಿಷ್ಟ್ಯವನ್ನು ಕೊಟ್ಟು ಆ ಶೇಷನನ್ನು ಆಧರಿಸಿ ಶಯನರೂಪದಲ್ಲಿ ಶೋಭಿಸುವ ರಂಗನಾಥಸ್ವಾಮಿಯ ಸಂಕೇತವು ಬಹಳ ಗಂಭೀರವಾದ ಅರ್ಥವುಳ್ಳದ್ದು ಎನ್ನುವುದರಲ್ಲಿ ಹಿಂದುಗಳು ಸಂದೇಹಗೊಳ್ಳರು.

ಮಹಾವಿಷ್ಣುವು ಆ ಶೇಷನನ್ನೇ ಹಾಸಿಗೆಯನ್ನಾಗಿ ಮಾಡಿಕೊಂಡು ಸುಖಶಯನದಲ್ಲಿ ಪ್ರಕಾಶಿಸುತ್ತಾನೆ. ಆ ನಿದ್ರೆಯಲ್ಲಿ ಅಜ್ಞಾನವಿಲ್ಲ—ಲಜ್ಜೆಯಿಲ್ಲ—ಬಯಲಾಗಿ ಅದರಲ್ಲಿ ಕರ್ಮಬಲದ ಶೋಭೆಯಿದೆ—ಮೋದಗಳು ಪರಮಾತ್ಮನ ಈ ಶಯನವನ್ನು ಬಾಧಕಗೊಳಿಸವು. "ನಾನು ಸೃಷ್ಟಿಕರ್ತನಾಗಿದ್ದರೂ, ನನ್ನ ಕರ್ಮಗಳು ನನ್ನನ್ನು ಬಂಧಿಸಲಾರವು. ನನ್ನಿಂದ ಉಂಟಾದ ಯಾವತ್ತು ಕರ್ಮಗಳೂ ನನ್ನಿಂದ ದೂರವಾಗಿಯೇ ನಿಂತಿವೆ." ಎಂಬುದಾಗಿ ಶ್ರೀ ಕೃಷ್ಣನು ಗೀತೆಯಲ್ಲಿ ಸಂಕ್ಷೇಪವಾಗಿ ತನ್ನ ನಿರ್ಗುಣ ಸ್ವಭಾವವನ್ನು ತನ್ನ ಪರಮ ಭಕ್ತ ಪಾರ್ಥನಿಗೆ ಬೋಧಿಸಿರುವನು ನಮ್ಮನ್ನು ರಕ್ಷಿಸಲಿಕ್ಕೂ, ಶಿಕ್ಷಿಸಲಿಕ್ಕೂ ಪರಮಾತ್ಮನೇ ಕಾರಣಭೂತನಾಗಿರುವನು. ಈ ಭಾವದಲ್ಲಿಯೇ ರಂಗನಾಥ ಸ್ವಾಮಿಯು ಕ್ಷೀರ ಸಮುದ್ರದಲ್ಲಿ ಶೇಷಶಾಯಿಯಾಗಿ ತನ್ನ ಪ್ರಭೆಯನ್ನು ಬೀರುವನ ಕಣ್ಣಿಗೆ ಗೋಚರವಾಗದ ಆತ್ಮಬಲದಿಂದಲೇ ಅಣುಗಳಿಗೆ ಶಕ್ತಿಯೊದಗಿ ಆ ಅಣುಗಳ ಪ್ರಾಬಲ್ಯದಿಂದಲೇ ಪರಮಾತ್ಮನ ವಿಚಿತ್ರಮಯವಾದ ಮಹಾಶಕ್ತಿಯನ್ನು ಮಾನವರು ಕಂಡುಕೊಳ್ಳುವ ಅವಕಾಶವಿದೆ. ರಂಗನಾಥ ಸ್ವಾಮಿಯ ಆಭರಣಗಳಿಗೂ ತುಂಬಾ ಸ್ವಾರಸ್ಯವಾದ ಅರ್ಥವಿದೆ. ಕೌಸ್ತುಭ ಮಣಿಯು ನಾಶವಿಲ್ಲದ ಶುದ್ಧವಾದ ಇಡಿ ವಿಶ್ವದ ಆತ್ಮಪ್ರಭೆಯನ್ನು ಸಂಕೇತವಾಗಿ ತೋರಿಸುವುದು. ಜೀವನದ ಮಾನಸಿಕ ಸಮರದ ಚಿಹ್ನೆಯೇ ಗದೆಯು. ನಮ್ಮ ಅಹಂಕಾರ ಬುದ್ಧಿಯೇ ಶಂಖವೂ, ಬಿಲ್ಲೂ ಆಗಿ ತೋರುವವು. ಚಕ್ರವು ಮನಸ್ಸಿನ ಬಲವತ್ತರವಾದ ಚಾಂಚಲ್ಯ ಸ್ವಭಾವವನ್ನು ತೋರಿಸುವ ಸಂಕೇತವು. ರಂಗನಾಥನ ವೈಜಯಂತಿಯು ಪಂಚೇಂದ್ರಿಯಗಳ ಶಕ್ತಿಯನ್ನು ಸೂಚಿಸುವ ಸಂಕೇತವು. ಪಾರಿಜಾತ ಎನ್ನುವ ವೃಕ್ಷವನ್ನು ತುಂಡರಿಸುವ ಖಡ್ಗವೇ ವಿವೇಕವು. ಈ ವಿವೇಕಕ್ಕೆ ಸುಖ ದುಃಖಗಳು ಏಕ ಸಮಾನವಾಗಿ ತೋರುವುದು ಈ ಮಾಯೆಯೆನ್ನುವ ವೃಕ್ಷದ ಗೆಲ್ಲುಗಳೇ ಸತ್ಕರ್ಮ ಮತ್ತು ದುಷ್ಕರ್ಮಗಳು.

ಸಂಸಾರವೆನ್ನುವ ಮಹಾ ವೃಕ್ಷವನ್ನು ಧೈರ್ಯದಿಂದ ಕಡಿದು ಬಿಸುಡಬೇಕಾದರೆ ಮಾಯಾಜಾಲದಿಂದ ಬಿಡುಗಡೆಯಾಗಿ ವಿವೇಕ ಬುದ್ಧಿಯಿಂದ ವರ್ತಿಸಬೇಕು. ಹಾಗೆ ನಡೆದರೆ ಮಾತ್ರ ಸಂಸಾರಶರಧಿಯನ್ನು ಸಂಪೂರ್ಣವಾಗಿ ದಾಟಿ ಮೋಕ್ಷವನ್ನು ಲಭಿಸಲು ಸಾಧ್ಯವಿದೆ ಎಂಬುದಾಗಿ ಶ್ರೀ ಮಧ್ವಾಚಾರ್ಯರು ಬಹು ಸುಂದರವಾದ ರೀತಿಯಲ್ಲಿ ವಿವರಿಸಿರುವರು. ನೈತಿಕ ಸಂಪೂರ್ಣತೆಯು ಇಲ್ಲದೆ ಮಾನವ ಶಾಂತಿಯ ಧ್ಯೇಯವನ್ನು ಮನನ ಮಾಡಿಕೊಳ್ಳುವುದು ಕಷ್ಟ. ಸೃಷ್ಟಿಯ ಯಾವತ್ತು ಚರಾಚರ ವಸ್ತುಗಳಲ್ಲಿರುವ ಒಳ್ಳೆತನವನ್ನು ಶೋಧಿಸಿಕೊಂಡು, ಅವನ್ನು ರೂಪಾಂತರ ಮಾಡದೆ ಅನುಗೊಳಿಸಿದರೆ ಆತ್ಮಶುದ್ಧಿಯು ಸುಲಭವಾಗಿ ತೋರಬಹುದು. ಭೂತದಯೆಯಿಂದ ಮಿಗಿಲಾದ ಶಕ್ತಿಯಿಲ್ಲ ಸರ್ವಜನಾಂಗಗಳು ಸುಖವಾಗಿ ಬಾಳಬೇಕೆಂಬ ತತ್ವವನ್ನೇ ಮುಂದಾಗಿಸಿಕೊಂಡು, ಪರಮಾತ್ಮ ರಂಗನಾಥ ಸ್ವಾಮಿಯು ನಿರ್ಗುಣ ಕಲೆಯನ್ನು ಪ್ರಕೃತಿಯ ಎಲ್ಲಾ ಸುಂದರವಾದ ವಿಷಯಗಳಲ್ಲಿ ಗೋಚರಿಸಿ, ಮಾನವ ವರ್ಗವು ಮುನ್ನಡೆದರೆ ದೇಶದಲ್ಲಿ ಎಂದಿಗೂ ಕ್ಷೋಭೆಯುಂಟಾಗದು.

ತಾಳ್ಮೆ ಮತ್ತು ಧೈರ್ಯವೇ ಮಾನಸಿಕ ಶಾಂತಿಯ ಅಡಿಗಲ್ಲುಗಳು. ಪ್ರಜೆಗಳು ಸಹನಾ ಭಾವದಿಂದ ಕಷ್ಟಗಳನ್ನು ಸಹಿಸಿ ಧೈರ್ಯದಿಂದ ಮುನ್ನಡೆದರೆ. ಪರಮಾತ್ಮ ಅನುಗ್ರಹವು ಅವರಲ್ಲಿ ಕಾಲಕ್ರಮೇಣ ಹರಿದು ಬರುವುದರಲ್ಲಿ ಸಂಶಯವಿಲ್ಲ ಜಗತ್ತಿನ ಪ್ರಕೃತ ಕ್ಷೋಭೆಯ ಬಲವನ್ನು ತಿಳಿದುಕೊಳ್ಳಬೇಕಾದರೆ ಅಮೂಲ್ಯವಾದ ಲೋಕಜ್ಞಾನವೂ ಸಂಸ್ಕೃತಿಯೂ ಅವಶ್ಯಕವಾಗಿವೆ. ವಿದ್ಯಾವಿಹೀನನಿಗೆ ಯಾವ ಗೂಢವಾದ ತತ್ವಗಳೂ ಮನವರಿಕೆಯಾಗವು. ವಿದ್ಯಾವಂತನೂ, ಜ್ಞಾನಿಯೂ, ವಿವೇಕಿಯೂ ನಿಸ್ವಾರ್ಥಿಯೂ ಆಗಿ ಜೀವನ ನಡೇಸುವ ಮಾನವರಲ್ಲಿ ಕರ್ಮಯೋಗವು ಧೃತವಾಗಿ ಫಲಿಸುವುದು. ಕರ್ಮಬಲದಿಂದಲೇ ಜಗತ್ತು ವಿಕಾಸಗೊಳ್ಳುವುದು. ಈ ಸತ್ಯಮಾರ್ಗವನ್ನು ಭಗವಾನ್ ಶ್ರೀ ಕೃಷ್ಣನು ಭಗವದ್ಗೀತೆಯಲ್ಲಿ ಸಂಪೂರ್ಣವಾಗಿ ವಿವರಿಸಿರುವನು. ರಂಗನಾಥ ಸ್ವಾಮಿಯು ಅವತಾರಿಯಾದ ಶ್ರೀ ಕೃಷ್ಣ ಪರಮಾತ್ಮನು. ಭೇದಮಯವಾದ ಜಗತ್ತನ್ನು ಶುದ್ಧೀಕರಿಸಿ ಲೋಕಶಾಂತಿಯನ್ನು ಸೃಷ್ಟಿಸಲಿ ಎಂದು ನಿಶ್ಚಲಮನದಿಂದ ನಾವೆಲ್ಲ ದಿನ ನಿತ್ಯ ಆತನನ್ನು ಭಜಿಸಿದರೆ ಉತ್ತಮ.

ಅಮೃತ ಬಿಂದು

ಬಿಡುವಿನ ಸಮಯದ ನಮ್ಮ ಆಲೋಚನೆಯ ಬಣ್ಣವನ್ನೇ ನಮ್ಮ ಆತ್ಮವು ಪಡೆಯುವುದು (ಡಬ್ಲ್ಯು. ಇಂಜ್)

ಅನೇಕ ಸಲ ನಿನಗೆ ಸಹಾಯ ದೊರೆಯದಿರಬಹುದು. ಆದರೆ ಸಹಾಯವನ್ನು ನೀನು ಸದಾ ಕೊಡಬಲ್ಲುದು.

ಏನೂ ಮಾಡದೆ ಜಯಶಾಲಿಯಾಗುವುದಕ್ಕಿಂಥಾ ಏನಾದರೂ ಮಾಡಿ ಸೋಲನ್ನನುಭವಿಸುವುದು. ಹಿತಕರ (ಲಾಯಡ್ ಜೋನ್ಸ್)

ಅತೀ ಶಕ್ತಿಶಾಲಿಯಾದ ರಾಕ್ಷಸನಾದರೂ ಒಮ್ಮೆ ಆತ ಮಗು. ಮಹಾ ಕಟ್ಟಿಪಟ್ಟಾದರೂ ಪ್ರಥಮ ಒಂದು ಇಟ್ಟಿಗೆ. ಚಿಕ್ಕ ಪ್ರಾರಂಭದಿಂದಲೇ ದೊಡ್ಡ ಸಾಧನೆಯಾಗುತ್ತದೆ

ಭಗ್ನ ಪ್ರೇಮವು ಮನಸ್ಸಿಗೆ ಚಿಗುರಿದರೆ ಮೊದಲಿನದಕ್ಕಿಂಥಾ ಸುಂದರವೂ, ಬಲಶಾಲಿಯೂ, ಆಗಿ ಬೆಳೆಯುವದು. (ಶೇಕ್ಸ್‌ಪಿಯರ್)

ಹೆಂಗಸಿಲ್ಲದಿದ್ದರೆ ಜೀವನದ ಪ್ರಾರಂಭವು ನಿಸ್ಸಿಹಾಯಕ; ಯೌವನವು ಆನಂದರಹಿತ, ವೃದ್ಧಾಪ್ಯವು ಅಶಾಂತಿಪೂರಿತ.

ಎರಡು ಸಂದರ್ಭದಲ್ಲಿ ಹೆಂಗಸನ್ನು ಯಾರಿಗೂ ಅರ್ಥವಾಗುವದಿಲ್ಲ. ಒಂದು ಮದುವೆಗೆ ಮೊದಲು, ಇನ್ನೊಂದು ಮದುವೆಯ ನಂತರ.

ವಿಶ್ವಕವಿ ಟಾಗೋರರ ಪುಣ್ಯಸ್ಮರಣೆಗಾಗಿ
ಅವರ ಶತಮಾನೋತ್ಸವದ ಸುಸಂದರ್ಭದಲ್ಲಿ
ಪ್ರಕಟಿವಾದ ಕಿರುಗಾಣಿಕೆಗಳು

ಚಿತ್ರಾಂಗದೆ

ಬೆಲೆ: ೬೦ ನ. ಪೈಸೆ.

(ಶ್ರೀ ಕೆ. ಕೆ. ಶೆಟ್ಟಿ, ಎಂ. ಎಲ್. ಸಿ. ಅವರಿಂದ ಅನುವಾದಿತ)

ರವೀಂದ್ರನಾಥರ ಕಿರುಗತೆಗಳು

ಬೆಲೆ. ೧೦ ನ. ಪೈಸೆ.

(ಶ್ರೀ ಹನುಮಂತರಾವ್ ಮಾಂಜರೇಕರ, ಕಾರವಾರ ಅವರಿಂದ ಅನುವಾದಿತ)

ಪ್ರಕಾಶಕರು:

ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ನವಯುಗ ಪ್ರೆಸ್, ಉಡುಪಿ.

ಪರಿಪಕ್ವ ವ್ಯಕ್ತಿತ್ವ

ಶಾರೀರಿಕ ವಿಕಾಸವು ಸ್ತಬ್ಧವಾಗಿ ಕ್ರಮೇಣ ಆದು ಸ್ಖಲನಗೊಳ್ಳತೊಡಗುವ ಅನಿಷ್ಟ ಗಳಿಗೆಯು ಪ್ರತಿ ಮನುಷ್ಯನ ಜೀವನದಲ್ಲಿ ಒಂದಲ್ಲ ಒಂದು ಸಮಯ ಬಂದೇ ಬರುತ್ತದೆ. ಆದರೆ, ಮಾನಸಿಕ ವಿಕಾಸವು ಎಂದಿಗೂ ಯಾವ ಕಾರಣದಿಂದಲೂ ತಡೆಯಲ್ಪಟ್ಟಿರಲಾರದು; ಏಕೆಂದರೆ, ಅದಕ್ಕೆ ಪರಮ ಆಯುಷ್ಯವೆಂಬುದಿಲ್ಲ.

ಮನುಷ್ಯನ ಮಾನಸಿಕ ವಿಕಾಸದ ಕ್ಷಮತೆಯೆಷ್ಟೆಂಬುದನ್ನು ಅಳೆಯುವುದು ಅಸಾಧ್ಯ. ಒಂದೆಡೆ ನಾವು ಮಾನಸಿಕ ದುರ್ಬಲರನ್ನು ಕಾಣುತ್ತೇವೆ; ಆದರೆ, ಮತ್ತೊಂದೆಡೆ ಮೇಧಾವೀ ಪುರುಷರನ್ನೂ ನೋಡುತ್ತೇವೆ. ಬಾಲ ಗಂಗಾಧರ ತಿಲಕ, ಮಹಾತ್ಮಾ ಗಾಂಧೀಜಿಯವರ ಅಪರಿಮಿತ ಮಾನಸಿಕ ಶಕ್ತಿಯನ್ನು ನಾವು ಬಲ್ಲೆವು. ವಿಶ್ವ ಕವಿ ರವೀಂದ್ರನಾಥ ಟಾಗೋರರು ಮುದಿತನದ ಹರೆಯದಲ್ಲಿ ಚಿತ್ರಗಾರಿಕೆಗೆ ಕೈಹಾಕಿದರು, ಹಾಗೆಯೇ ಚರ್ಚಿಲ್ ಮಹಾಶಯರು ತನ್ನ ೭೦ನೆಯ ವರ್ಷಾನಂತರ ತೂಲಿಕೆ ಹಿಡಿದರು.

ಆದುದರಿಂದಲೇ ಮಾನವನ ಮಾನಸಿಕ ಬಲ ಅದ್ಭುತವಿದೆ. ಅದು ಪ್ರತಿ ನಿಮಿಷಕ್ಕೂ ಒಂದಲ್ಲವೊಂದು ಹೊಸ ವಿಚಾರವನ್ನರಿಯ ಬಲ್ಲದು; ನೂತನ ಅನುಭವಗಳಿಂದ ತನ್ನ ಜೀವನದ ಚರ್ಯೆಯನ್ನೇ ಬದಲಾಯಿಸಬಲ್ಲುದು., ಮುಂಬರಲಿರುವ ಸಮಸ್ಯೆಗಳ ಮೇಲೆ ನೂತ್ನವಿಧಾನಗಳಿಂದ ಆಲೋಚಿಸ ಬಲ್ಲುದು; ಆವುಗಳ ಪರಿಹಾರಕ್ಕೆ ಹೊಚ್ಚ ಹೊಸ ಮಾರ್ಗಗಳನ್ನು ಅರಸಬಲ್ಲುದು. ಹೊಸ ಪೀಳಿಗೆಯೊಡನೆ ಯಾವಾಗಲೂ ಹೆಜ್ಜೆಯೊಂದಿಗೆ ಹೆಜ್ಜೆ ಇಡಬಲ್ಲುದು. ಅದಕ್ಕೆ ಮಾರ್ಗದರ್ಶನವನ್ನೂ ಮಾಡಬಲ್ಲುದು. ಹೀಗಿದ್ದರೂಕೊನೆಯ ವರೆಗೂ ಪವಿತ್ರರಾಗಿ ಶಕ್ತಿಶಾಲಿಗಳಾಗಿ ಉಳಿದವರ ಸಂಖ್ಯೆ ಮಾತ್ರ ಬೆರಳೆಣಿಕೆಯಷ್ಟು.

ಪ್ರಪಂಚದಲ್ಲಿ ತಮ್ಮ ಮಾನಸಿಕ ಶಕ್ತಿಯನ್ನು ಸಂಪೂರ್ಣ ಉಪಯೋಗಿಸುವವರು ಅತ್ಯಲ್ಪ. ಅಧಿಕಾಂಶ ಜನರು, ತಾವು ಆಗ ಬಹುದಾದುದರಲ್ಲಿ ಅರ್ಧದಷ್ಟಾದರೂ ಆಗುವುದಿಲ್ಲ' ಎಂದು ಪ್ರಸಿದ್ಧ ಮನಶ್ಶಾಸ್ತ್ರಜ್ಞ ವಿಲಿಯಂ ಜೇಮ್ಸ್ ಎಂಬವರ ಅಭಿಪ್ರಾಯವಿದೆ;

ಶಾರೀರಿಕ ದೃಷ್ಟಿಯಿಂದ ಬಹಳ ತುಂಬಿದವರೂ ಪೂರ್ಣ ಶಕ್ತಿಶಾಲಿಗಳೆಂದು ತೋರಿ ಬರುವವರೂ ಮಾನಸಿಕ ದೃಷ್ಟಿಯಿಂದ ನಿರ್ಬಲರು ಅಥವಾ ಹಿಂದುಳಿದವರಾಗುವುದಿದೆ. ಇದರ ಪ್ರಮಾಣವರಸಲು ದೂರಹೋಗಬೇಕಾಗಿಲ್ಲ, ನಿಮ್ಮ ಆಸುಪಾಸಿನವರತ್ತ ನೋಟ ಹಾಯಿಸಿರಿ. ಅಧಿಕಾಂಶ ಜನರ ಮಾನಸಿಕ ವಿಕಾಸವು ಪರಿಪೂರ್ಣತೆ ಪಡೆಯದಿರುವುದರಿಂದಲೇ ರಾಷ್ಟ್ರದಲ್ಲಿ, ಸಮಾಜದಲ್ಲಿ ನಾಯಕತ್ವದ ಸಮಸ್ಯೆ ಎದ್ದು ನಿಲ್ಲುತ್ತವೆ

ಪೂರ್ಣ ಪುರುಷನೆಂದರೆಯಾರು? ಪ್ರಶ್ನೆಯಷ್ಟು ಸುಲಭದಲ್ಲಿ ಸಮಾಧಾನವಿರಲಾರದು. ಪ್ರಾಚೀನ ಕಾಲದಿಂದ ತೊಡಗಿ ಇಂದಿನ ವರೆಗೂ ವಿದ್ವಾಂಸರು ಈ ಬಗ್ಗೆ ವಿಚಾರಮಾಡಿದ್ದರು; ತಮ್ಮ ಕಾಲಕ್ಕೆ ಅನುಕೂಲವಾದ ಪರಿಪೂರ್ಣ ಪುರುಷನ ಪರಿಭಾಷೆ ಪ್ರಕಟಿಸಲು ಪ್ರಯತ್ನಿಸಿದರು ಪರಿಪೂರ್ಣ ಪುರುಷನ ಸಮಸ್ಯೆ ಪ್ರತಿಯುಗದ ವೈಶಿಷ್ಟ್ಯಪೂರ್ಣ ಸಮಸ್ಯೆಯೆನಿಸಿತ್ತು, ಆದ ದರಿಂದ ಪ್ರತಿಯುಗದಲ್ಲಿಯೂ ಆತನ ಲಕ್ಷಣ ನಿರ್ಧರಿಸುವ ಸಾಹಸ ನಡೆಯಿತು.

ಮಾನಸಿಕ ದೃಷ್ಟಿಯಲ್ಲಿ ತನ್ನ ವಿಷಯದಲ್ಲಿ ತಟಸ್ಥನಾಗಿ ನಿರಪೇಕ್ಷಭಾವದಿಂದ ಆಲೋಚಿಸಬಲ್ಲವನು ಮತ್ತು ಸ್ಪಷ್ಟ ದೃಷ್ಟಿಕೋಣವುಳ್ಳವನು ಪರಿಪೂರ್ಣ ಪುರುಷನೆನ್ನಬಹುದು. ಇಂತಹ ಪ್ರವೃತ್ತಿಯುಳ್ಳ ಮನುಷ್ಯನು ತಾನು ಯೋಚಿಸುವುದು, ಮಾಡುವುದು ಮಾತ್ರ ಸತ್ಯ, ಉಳಿದುವು ಮಿಥ್ಯ ಎಂದು ತಿಳಿದು ಸುಮ್ಮನಿರುವುದಿಲ್ಲ ಬೇರೆಯವರ ದೃಷ್ಟಿಕೋಣವೂ ಸರಿಯಿರ ಬಲ್ಲುದು; ಅವರೂ ನೇರ ಮಾರ್ಗದಲ್ಲಿ ವಿಚಾರಮಾಡಬಲ್ಲರು ಎಂದು ತಿಳಿಯುತ್ತಾನೆ. ಅನ್ಯರ ಭಾವನೆ ಅವರ ಸ್ವಭಾವ, ಆಕಾಂಕ್ಷೆ, ಆವಶ್ಯಕತೆ ಅಥವಾ ಅಧಿಕಾರಗಳ ಸಂಪೂರ್ಣ ಜ್ಞಾನವನ್ನು ಆತ ಪಡೆದಿರುತ್ತಾನೆ. ಯಾವುದೇ ಒಂದು ನಿರ್ಣಯಕ್ಕೆ ತಲಸುವ ಮೊದಲು ಆತನು ಇತರರ ಕಡೆಗೆ ಧ್ಯಾನ ಹರಿಸುತ್ತಾನೆ. ಅವರ ನೈಸರ್ಗಿಕ ಭಾವನೆಗಳನ್ನು ನಿಷ್ಪ್ರಯೋಜಕವೆಂದು ಕಡೆಗಣಿಸುವುದಿಲ್ಲ. ತಾನೊಬ್ಬನೇ ಪ್ರಪಂಚದ ಕೇಂದ್ರ ಬಿಂದು ಉಳಿದವರೆಲ್ಲರೂ ಇದಕ್ಕೆ ಪ್ರದಕ್ಷಿಣೆ ಹಾಕಬೇಕೆಂದು ಆತ ತಿಳಿಯುವುದಿಲ್ಲ.

ಇಂತಹ ವ್ಯಕ್ತಿಗಳು ತಮ್ಮ ಕ್ರಿಯಾಕಲಾಪ ಮತ್ತು ಸಫಲತೆಗಳನ್ನು ತುಲನಾತ್ಮಕವಾಗಿ ತೂಗಿ ನೋಡುವರು. ಉಪಯುಕ್ತ ಕಾರ್ಯವು ತಮ್ಮಿಂದ ಮಾತ್ರವೇ ಸಾಧ್ಯ, ಬೇರೆಯವರಿಂದಲ್ಲ ಎಂದು ತಿಳಿಯುವುದಿಲ್ಲ ಆತ್ಮಶ್ಲಾಘನೆಯ ನೆಪದಲ್ಲಿ ತಾನು ಪರಮಾತ್ಮನೆಂದೂ ಇತರರು ನಿರ್ಬಲರೆಂದೂ ಹೇಳುವುದಿಲ್ಲ. ಅಲ್ಲದೇ ಎಂದಾದರೂ ಅವರು ಪರಾಜಿತನಾದನೆಂದರೆ ಮೂರ್ಖನಂತೆ ನಮ್ಮನಿರುವುದಿಲ್ಲ; ತಪ್ಪಾಯಿತೆಂದರೆ, ಯಾವಾಗಲೂ ಅದನ್ನೇ ಚಿಂತಿಸುತ್ತ ಕೈಕಟ್ಟಿಕೊಂಡಿರುವುದಿಲ್ಲ ಅವರು ತಮ್ಮ ತಪ್ಪಿನಿಂದ ಪಾಠ ಕಲಿಯುವರು; ಮುಂದೆ ಇಂತಹ ತಪ್ಪಾಗಬಾರದೆಂದು ನಿಶ್ಚಯಿಸುವರು. ಒಂದೇ ತಪ್ಪನ್ನು ಚಿಂತಿಸುತ್ತಿರುವುದು ಅವರಿಗೆ ವರದಾನವಲ್ಲ, ಶಾಪ ಸಮಾನವಾದುದು. ಆದುದರಿಂದ ತನ್ನ ಕ್ರಿಯಾಕಲಾಪಗಳನ್ನು ನಿರ್ವಿಕಲ್ಪರಾಗಿ ವಿಚಾರ ಮಾಡುವುದೇ ಪರಿಪಕ್ವತೆಯ ಪ್ರಥಮ ಮತ್ತು ಮಹತ್ವಪೂರ್ಣ ಹೆಜ್ಜೆ.

ಮಾನಸಿಕ ದೃಷ್ಟಿಯಿಂದ ಪರಿಪಕ್ವವ್ಯಕ್ತಿ ಭಾವೋದ್ರಿಕ್ತನಾಗುವುದಿಲ್ಲ ತನ್ನ ಸಹಜ ವೃತ್ತಿಗಳನ್ನು ಗಾಳಿಗೆ ತೂರಿಬಿಡುವುದೂ ಇಲ್ಲ. ಪ್ರತಿಯೊಬ್ಬನೂ ಭಾವೋದ್ರಿಕ್ತನಾಗಬಾರದೆಂದು ಇದರ ತಾತ್ಪರ್ಯವಲ್ಲ ಏಕೆಂದರೆ, ಭಾವನೆಗಳೆಲ್ಲವನ್ನೂ ತಡೆಸಿ ತೆಪ್ಪಗಿರುವವನು ಬೇರೆಯವರಿಗೆ ಒಳಿತುಗೆಯ್ಯಲಾರನು. ಮಾನವತೆಯನು ಗೌರವ ಶಿಖರಕೊಯ್ಯಲು ನೆರವಿಗಲಾರನು ಉತ್ತೇಜಿತನಾಗದ ವ್ಯಕ್ತಿಯು ಏನನ್ನೂ ಮಾಡಲು ಅಶಕ್ತನಾಗುವನು. ಆದರೆ, ತನ್ನ ಭಾವನೆ-ಉದ್ವೇಗಗಳನ್ನು ಅಂಕಿತದಲ್ಲಿರಿಸಲಾರದವನು ಅವುಗಳಲ್ಲಿ ಮುಳುಗುವನು; ಅವುಗಳ ನೆರಳಲ್ಲಿ ಒಯ್ಯಲ್ಪಡುವನು. ಇದರಿಂದ ಯಾವ ಲಾಭವನ್ನೂ ಗಳಿಸಲಾರನು.

ಭಾವನೆ ಮತ್ತು ಉದ್ವೇಗಗಳನ್ನು ತಡೆದಿಟ್ಟುಕೊಳ್ಳುವವನು, ಶಕ್ತಿಯ ಸ್ರೋತವನ್ನು-ಶಕ್ತಿಯ ಸಂಗ್ರಹವನ್ನು-ಉಚ್ಚ ಆದರ್ಶ ಪೂರ್ತಿಗಾಗಿ ಬಳಸಿಕೊಳ್ಳುವವನು ಮಾತ್ರ ಪರಿಪಕ್ವ ವ್ಯಕ್ತಿಯಾಗಿದ್ದಾನೆ.

ಅಬ್ರಹಾಂ ಲಿಂಕನ್ನರು ಒಮ್ಮೆ ಪೇಟೆಗೆ ಹೋಗಿರು. ಆಗ ಗುಲಾಮರ ಬವಣೆಯನ್ನರಿತರು ತತ್‌ಕ್ಷಣ ಕ್ರೋಧಿತರಾಗಿ ದಾಸತೆಯನ್ನು ನಾಮಾವಶೇಷ ಮಾಡುವೆನೆಂದು ಪ್ರತಿಜ್ಞೆ ತೊಟ್ಟರು ದ[illegible] ನಿರ್ಮೂಲಕರಲ್ಲಿ ಇಂದಿಗೂ ಅವರ[illegible]ರು ಅಗ್ರಗಣ್ಯವಾಗಿದೆ ಆದುದರಿಂದ [illegible]ವುದೇ ಭಾವನೆ—ಉದ್ವೇಗವನ್ನು ನಿ[illegible]ಬಾರದು; ಅವಿಲ್ಲವಾದರೆ, ನಾವು [illegible]ರಿಗೆ ಸಮಾನರು ಅದರೆ, ಅವುಗಳ ವಿ[illegible] ವಿನಿಯಂತ್ರಣ ಅವಶ್ಯಬೇಕು. ನಮ್ಮ ದ್ವೇಗವು ನಮ್ಮ ಸ್ವಾಮಿಯಾಗಬಾರ[illegible] ಸೇವಕನಾಗಬೇಕು. ನಮ್ಮ ಧರ್ಮ[illegible]ಸ್ತ್ರ ಮೊದಲೇ ಸಾರಿದೆ. 'ಮನಸ್ಸು[illegible] ಬಂದು ಇಂದ್ರಿಯ ರೂಪದ ಹತ್ತು ಕ[illegible]ರೆಗಳ ಕಡಿವಾಣ ಜಗ್ಗಿ ಅವನ್ನು ನಿ[illegible]ದಾರಿಯಲ್ಲಿ ಹೊಡೆಯುವ ಸಾರ[illegible] ಎಂದು

ಪರಿಪಕ್ವ ವ್ಯಕ್ತಿತ್ವವು ತನ್ನ ಪ[illegible]ತಿಯ ಎಲ್ಲ ಸಮಸ್ಯೆಗಳನ್ನೂ ಕ್ರಿಯಾಲಾಪಗಳನ್ನು ತುಲನಾತ್ಮಕ ದೃಷ್ಟಿ[illegible]ದ ನೋಡುವುದು. ತನ್ನ ವಿಕಾಸಕ್ಕಾಗಿ[illegible]ನ್ನೊಂದನ್ನು ಉಪೇಕ್ಷಿಸುವುದಿಲ್ಲ. ಶಾ[illegible]ರಿಕ ದೃಷ್ಟಿಯಿಂದ ಪರಿಪೂರ್ಣರಾ[illegible]ರೂ ಮಾನಸಿಕವಾಗಿ ತುಂಬದವರು [illegible]ಲ್ಲೂ ದೃಗ್ಗೋಚರವಾಗುತ್ತಾರೆ. [illegible]ಯೇ ಹೆಸರಾಂತ ವಿದ್ವಾಂಸರು ಶಾರೀ[illegible]ವಾಗಿ ದುರ್ಬಲರಿದ್ದಾರೆ. ತನ್ನ ವೃತ್ತಿ[illegible]ದಲ್ಲಿ ಕುಶಲನಾಗಿದ್ದರೂ ಬೇರೆಯ[illegible]ಡನೆ ವರ್ತಿಸುವಾಗ ತಪ್ಪಿ ಬೀಳುವ[illegible] ಅನೇಕರಿದ್ದಾರೆ. ಇಂತಹ ಏಕಾಂಕವಿ[illegible]ಬಿಡುಗಡೆ ಹೊಂದುವುದು ಅವಶ್ಯ. [illegible]ಪಕ್ವ ವ್ಯಕ್ತಿಯು ತನ್ನ ಏಕ ಪಕ್ಷೀ[illegible]ವಿಕಾಸಕ್ಕಾಗಿ ಇತರ ಪಕ್ಷಗಳನ್ನು ಉ[illegible]ಕ್ಷಿಸುವುದಿಲ್ಲ

ಪರಿಪೂರ್ಣ ವ್ಯಕ್ತಿ ತನ್ನನ್ನು ವಿ[illegible] ಒಂದು ಅಂಗವೆಂದು ಭಾವಿಸುತ್ತ[illegible] ಇಂತಹವ್ಯಕ್ತಿಗೆ ಜೀವನ ದರ್ಶನವೂ[illegible]ರುತ್ತದೆ; ಧರ್ಮವೂ ನಿರುತ್ತದೆ.

ಈ ಜೀವನದರ್ಶನವಾವುದು, ಧ[illegible] ಯಾವುದು ಎಂಬ ಪ್ರಶ್ನೆಗಳೇಳುತ್ತ[illegible] ಇವುಗಳ ಉತ್ತರ ಶೋಧಿಸುವುದು [illegible]ಕರಿನ ಮಾನವ ಜೀವನವನ್ನು ಸಾಧ[illegible]ಗೊಳಿಸಲು ಕಲಿಸುವುದೇ ಧರ್ಮ. ಇ[illegible]ಹ ಜೀವನ ದರ್ಶನದ ಅಭಾವವಿರುವ[illegible] ಯಾವನೇ ವ್ಯಕ್ತಿಯು ಬದುಕುವುದೇ[illegible]ರಿ, ಕಟ್ಟು ಬಂದ ಕೊರಳಿನಲ್ಲಿ ಉಸಿರ[illegible]ವುದೇ ಮಾತ್ರ.

ಭಾರತದ ಭೂ ಸೇನೆಯ ಮುಖ್ಯಾಧಿ[illegible] ನಾಯಕ ಸಿ ಎನ್. ಥಾಪರ್.

ಉಡ್ಪಿ ಡಿ ಮುನ್ಸಿ. ಕೋರ್ಟಿನಲ್ಲಿ

R T. A. No. 16/1960

A. V. ಕಲ್ಯಾಣಮ್ಮ— ಅಪಿಲಾಂಟಳು

ಮತ್ತು

ಪಿಯೂದ ಶಿಲುವ ಕೂಡಾ — ರ್ಸ್ಪಾಂಡೆಂಟರು.

ಇದರೊಳಗೆ

ಸಪ್ಲಿಮೆಂಟ್ 4ನೇ ಎದ್ರಿ-ಪ್ರಾಂಶಿಸ್ಸ ಶಿಲುವ— 1ನೇ ಎದ್ರಿ ಪಿಯೂದ ಶಿಲುವನ ಮಗ, ಉಡುಪಿ ಕಾಪೊಳಕು, ಉದಿಯಾವರ ಗ್ರಾಮ.

ಮೇಲ್ಕಂಡ ವ್ಯವಹರಣೆಯಲ್ಲಿ ಸದ್ರಿ ಸಪ್ಲಿಮೆಂಟು 4ನೆ ಎದ್ರಿ ಪ್ರಾಂಶಿಸ್ಸ ಶಿಲುವನನ್ನು ಕಕ್ಷಿಯಲ್ಲಿ ಸೇರಿಸಬೇಕಾಗಿ ಕೊಟ್ಟ ಅರ್ಜಿಯು ತಾ. 12—1—62ಕ್ಕೆ ಇಟ್ಟರುವುದರಿಂದ ಆ ದಿವಸ ಸದ್ರಿ ಎದ್ರಿಯು ತನ್ನ ಆಕ್ಷೇಪ ಹೇಳುವದನ್ನು ಸದ್ರಿ ಕೋರ್ಟು ಮುಂದೆ ಹಾಜರಾಗಿಜ್ಞಾಪಿಸಲು ಮಾಡಿಕೊಳ್ಳತಕ್ಕದ್ದು.

P. Padmanabha Rao,
Vakil for Petitioner.

Udipi, Dated 21—12—61

ದಿ ವಿಜಯ ಬೇಂಕ್ ಲಿಮಿಟೆಡ್

ಶೆಡ್ಯೂಲ್ಡ್ ಬೇಂಕ್. ಸ್ಥಾಪನೆ. 1931

ರಿಜಿಸ್ಟರ್ಡ್ ಆಫೀಸು:
ವಿಜಯ ಬೇಂಕ್ ಬಿಲ್ಡಿಂಗ್, ಲೈಟ್ ಹೌಸ್ ಹಿಲ್ ರೋಡ್,
ಮಂಗಳೂರು-3, ಸೌತ್ ಕೆನರಾ

ಕಾಯಂ ರೇವಣಾತಿ ಬಡ್ಡಿ ದರವನ್ನು ಶೇಕಡ 5½ರ ವರೆಗೆ ಹೆಚ್ಚಿಸಲಾಗಿದೆ
ಏಳು ದಿವಸದ ನೋಟೀಸಿನಲ್ಲಿ ಕೇಳಿದಾಗ್ಯೆ ಹಿಂದೆ ಪಡಯುವ ಡಿಪೋಸಿಟುಗಳನ್ನು (Call Deposits) ಆಕರ್ಷಕ ಬಡ್ಡಿ ದರದಲ್ಲಿ ಸ್ವೀಕರಿಸೋಣಾಗುತ್ತದೆ.

ಹೆಚ್ಚಿನ ಮಾಹಿತಿಗೆ ನಮ್ಮ ಶಾಖೆಗಳಲ್ಲಿ ದಯಮಾಡಿ ವಿಚಾರಿಸಿರಿ.

THE VIJAYA BANK LTD.

"ಹಣೆಬರಹ"

(೨ನೇ ಪುಟದಿಂದ)

ಗೆ ಅತ್ಯಂತ ಋಣಿಯಾಗಿದ್ದ. ರಾಮದಾಸ ಕಿಣಿಯವರು ನಾಗೇಶ ರಾಯರಿಗೆ ಮೂರು ಅಸ್ತಿಯಲ್ಲಿ ಮಾಧವನ ಮನೆಯೂ ಸೇರಿತ್ತು. ಮಾಧವನ ತಂದೆಯ ಕಾಲದಿಂದಲೂ ಆ ಮನೆಯ ಬಾಬ್ತು ತಿಂಗಳಿಗೆ ಐದು ರೂಪಾಯಿಗಳನ್ನು ರಾಮದಾಸರಿಗೆ ಸಲ್ಲಿಸಬೇಕಿತ್ತು. ಈಗ ಅದರ ವಾರಿಕರು ನಾಗೇಶ ರಾಯರಾದ ಮೇಲೆ ಬಾಡಿಗೆ ಬೇಡವೆಂದು ರಿಯಾಯತಿ ತೋರಿಸಿದರಲ್ಲ ಮನೆಯ ಹಂದಿನ ತೋಟವನ್ನೂ ಏನೂ ಪ್ರತಿಫಲದ ಆಸೆಯಿಲ್ಲದೆ ಮಾಧವನ ಪಾಲಿಗೆ ಬಿಟ್ಟುಬಿಟ್ಟಿದ್ದರು. ಹೀಗೆಲ್ಲಾಆದ ನಂತರ ಮುಂಚಿನ ಗೆಳೆತನ ಮಾತ್ರವಲ್ಲ,ಹೊಸದಾಗಿ ಒಡೆಯ ಒಕ್ಕಲಿನ ಭಾವನೆಯೂ ಮೆಲ್ಲನೆ ಪ್ರವೇಶಿಸಿತ್ತು. ಆದರೂ ಅವರ ವ್ಯವಹಾರದಲ್ಲಿ ಆ ಭಾವನೆ ವ್ಯಕ್ತವಾಗುತ್ತಿದ್ದಿಲ್ಲ.

"ಬೇಕೇನಲ್ಲ. ನೀನು ಹೇಗೂ ಕುಂದಾಪುರದಿಂದ ಉಡುಪಿ, ಉಡುಪಿಯಿಂದ ಕುಂದಾಪುರಕ್ಕೆ ದಿನವೂ ಹಲವು ಬಾರಿ ತಿರುಗುವಿಯಲ್ಲ. ಆಗಾಗ ಉಡುಪಿಯ ಆಸ್ಪತ್ರೆಯ ಸುದ್ದಿ ತಲುಪಿಸುತ್ತಿರು".

"ಇಷ್ಟೆ ತಾನೇ? ಅದಕ್ಕೇನು? ಆಸ್ಪತ್ರೆಯಲ್ಲಿ ಇಳಿದೇ ವಿಚಾರಿಸಿಕೊಂಡು ಬರುತ್ತೇನೆ"

ಅತನಿಗೆ ಅದೇನೂ ಕಷ್ಟವಾಗಿರಲಿಲ್ಲ.

೦೦ ೦೦

"ತಾಯಿಗೆ ಸೀರಿಯಸ್. ಈ ಕೆಳಗಿನ ಇಂಜಕ್ಷನ್ ಔಷಧಗಳನ್ನು ಹಿಡಿದುಕೊಂಡು ಕೂಡಲೇ ಹೊರಟು ಬನ್ನಿ"

ಮಗನಿಂದ ಬಂದ ತಂತಿಯನ್ನು ಕಂಡು ಕಂಗೆಟ್ಟು ಹೋದರು ರಾಯರು. ಎದೆ ಡವಗುಟ್ಟುತಿತ್ತು. ಉಟ್ಟು ಬಟ್ಟೆಯಲ್ಲಿಯೇ ಮೆಡಿಕಲ್ ಹಾಲಿಗೆ ಧಾವಿಸಿದರು. ಅಲ್ಲಿ ಔಷಧಗಳನ್ನು ಕೊಂಡು ಪುನಃ ಮನೆಗೆ ಧಾವಿಸಿ ಬಂದರು. ಅವಶ್ಯಕ ವಸ್ತುಗಳನ್ನೂ ಸ್ವಲ್ಪ ಹಣವನ್ನೂ ಕೈಚೀಲ ಒಂದಕ್ಕೆ ಅನಸರನಲ್ಲೇ ತುರುಕಿ ಮನೆಯ ಮುಂದೆ ಬೀದಿಗೆ ಬಂದರು.

ಅದೇ ವೇಳೆ ಉಡುಪಿಯ ಬಸ್ ದೂರದಿಂದ ಬರುತ್ತಿರುವುದನ್ನು ಕಂಡು ರಾಯರು ಇನ್ನಷ್ಟು ಆತುರರಾದರು. ಬಸ್ಸಿನ್ನು ದೂರದಲ್ಲಿವಾಗಲೇ ಕೈ ಅಡ್ಡ ಹಿಡಿದರು. ಬಸ್ ನಿಲ್ಲಲಿಲ್ಲ. ಹೊಂಟೇ ಹೋಯಿತು.

ಅವರಿಗಾದ ನಿರಾಶೆ ಅಷ್ಟಿಷ್ಟಲ್ಲ. ಕಂಡೆಕ್ಟರ್ ಮಾಧವನಿದ್ದ ಬಸ್ಸಾಗಿದ್ದರೆ ಖಂಡಿತ ಅವರಿಗೆ ಎಡೆಯಿರುತಿತ್ತು; ಸೀಟಿಲ್ಲದಿದ್ದರೂ ಸೀಟಿರುತಿತ್ತು. ಎರಡು ಕ್ಷಣ ಮುಂಚೆತವಾಗಿ ಉಡುಪಿ ತಲುಪಬಹುದಿತ್ತು. ಆದರೆ ಆ ಬಸ್ಸಿನ್ನೂ ಕನಿಷ್ಠ ಕಾಲು ಗಂಟೆ ಕಾಯಬೇಕಿತ್ತು. 'ಆ ಕಾಲು ಗಂಟೆಯೆಂದರೆ ಅವರಿಗದೊಂದು ಯುಗವೇ ಆಗಿತ್ತು.

ಕೆಸೆಯಿಂದ ಟೆಲಿಗ್ರಾಫ್ ಕಾಗದವನ್ನು ತೆಗೆದು ಮತ್ತೊಮ್ಮೆ ಓದಿಕೊಂಡರು. 'ಅದರಲ್ಲಿ ಹೇಳಿದ ಔಷಧಿಗಳು ಉಡುಪಿಯಲ್ಲಿ ದೊರಕಿಲ್ಲವೋ ಏನೋ" ಎಂದು ಕೊಂಡರು "ಇನ್ನೊಂದು ಬಸ್ಸು ಬರುವ ತನಕ ನಿಧಾನಿಸಿದರೆ ಕಾರ್ಯ ಮಿಂಚಿ ಹೋಯಿತು" ಎಂಬ ಭಯದಿಂದ ಸಮೀಪದಲ್ಲೇ ಇರುವ ರಘುಪತಿಯವರ ಮನೆಯತ್ತ ನಡೆದರು.

ರಘುಪತಿರಾಯರ ಬಳಿ ಎರಡು ಟ್ಯಾಕ್ಸಿಗಳಿದ್ದುವು. ಒಂದನ್ನು ಬಾಡಿಗೆಗೆ ಕೇಳಿದರು, ನಾಗೇಶರಾಯರು ಶನಿ ಅಲ್ಲಿಯೂ ಕಾಡಬೇಕೇ?

"ಇಲ್ಲ ರಾಯರೇ, ಈ ಮದುವೆ ಮುಂಜಿಗಳ ಗಲಾಟೆಯಲ್ಲಿ ಟ್ಯಾಕ್ಸಿಗೆ ಒಂದು ಗಳಿಗೆ ಪುರಸೊತ್ತಿಲ್ಲ. ಬಾಡಿಗೆಗೆ ಹೋಗಿದ್ದಾವೆ" ಎಂಬ ಉತ್ತರ ಬಂತು.

"ಹೌದು, ಅದೇ ಗಲಾಟೆಯಲ್ಲಿ ಬಸ್ಸಿನಲ್ಲಿ ಸೀಟೂ ಸಿಕ್ಕುವುದಿಲ್ಲ" ಎಂದು. ನಿರಾಶೆಯಿಂದುಸುರಿ ನಾಗೇಶ ರಾಯರು ವಾಪಾಸ್ ಮರಳಿದರು

ಬೇಗ ತಲುಪಬೇಕೆಂಬ ಅವರ ಕಾತರತೆ ಎಷ್ಟತ್ತೋ ಪರಿಸ್ಥಿತಿಯೂ ಅಷ್ಟೇ ಪ್ರತಿಕೂಲವಾಗಿತ್ತು.

ದೂರದ ಊರಿನ ಆಸ್ಪತ್ರೆಯಲ್ಲಿ ರುಗ್ಣಶಯ್ಯೆಯ ಮೇಲೆ ಮಲಗಿ ವೃತ್ಯುವಿನ ಕರಾಳ ಪಾಶ ಶಕ್ತಿಯೊಡನೆ ಹೋರಾಡುವ ಅಬಲೆ ತನ್ನ ಸಹಧರ್ಮಿಣಿಯನ್ನು ನೆನೆಸಿಕೊಳ್ಳುತ್ತಲೇ ಅವರ ಕಂಠ ಬಿಗಿದು ಬಂತು. ಕಣ್ಣು ಮಂಜಾಗಿತ್ತು.

ಇಲ್ಲಿಯೇ ಕಾಯುತ್ತಾ ನಿಂತರೆ ಬಸ್ಸು ಸಿಗುವ ಹಾಗಿಲ್ಲವೆಂದುಕೊಂಡು ಅರ್ಧ ಮೈಲಿ ದೂರದಲ್ಲಿರುವ ಬಸ್ ನಿಲ್ದಾಣಕ್ಕೇನೇ ಹೆಜ್ಜೆ ಹಾಕತೊಡಗಿದರು.

ನಾಲ್ಕು ಮೂರು ಹೋಗಿದ್ದರಷ್ಟೇ; ಬಸ್ ಬಂತು.

ಅದೇ ಬಸ್ಸು; ಅದೇ ಬಸ್ಸಿನಲ್ಲಿ ಮಾಧವ ಕಂಡೆಕ್ಟರನಾಗಿದ್ದ. ನಾಗೇಶ್ವರ ರಾಯರ ಆಶಾಲತೆ ಕ್ಷಣಮಾತ್ರದಲ್ಲಿ ಸುಯ್ ಸುಯ್ಯನೆ ಸಾವಿರ ಕುಡಿಗಳನ್ನೊಡೆದು ಬೆಳೆದು ಗಗನ ವ್ಯಾಪಿಯಾಗಿ ಹೆಬ್ಬೆತು ಸೀಟಿಲ್ಲದಿದ್ದರೂ ತನ್ನ ಮಟ್ಟಿಗೆ ಈ ಬಸ್ಸಿನಲ್ಲಿ ಸೀಟಿದೆ ಎಂಬ ಧೈರ್ಯ ಅವರ ಆಶಾಲತೆಗೆ ನಾರ ಗೊಬ್ಬರಗಳಾಗಿದ್ದುವು ಅದೇ ಉತ್ಸಾಹದಿಂದ ಕೈ ಅಡ್ಡ ಹಿಡಿದರು.

ಬಸ್ಸು ನಿಂತಿತು. ಆದರೆ "ಸೀಟಿಲ್ಲ" ಎಂಬ ಧ್ವನಿ ಒಳಗಿನಿಂದ ಕೇಳಿ ಬಂತು. ಅದೇ ಧ್ವನಿ, ಮಾಧವನದೇ ಸ್ವರ. "ಸ್ವಾಮಿಯಃ ಅತ ನನ್ನನ್ನು ನೋಡಿರಲಿಕ್ಕಿಲ್ಲ" ಎಂದುಂದುಕೊಂಡು ಬಸ್ಸಿನ ಬಾಗಿಲಿಗೆ ಓಡಿ ಮುಖವನ್ನು ಒಳ ಚಾಚಿದರು

ಕಂಡೆಕ್ಟರ್ ನೋಡಿದ್ದ. ನೋಡಿಯೂ "ಸೀಟಿಲ್ಲ" ಎಂದಿದ್ದ. ಆದರೂ ಇವರು ಹತ್ತಲು ಬಂದುದನ್ನು ಕಂಡು ಬಾಗಿಲಿನ ಬಳಿಗೆ ಬಂದು ನಿಂತು, "ಇಳಿಯಿರಿ, ಸೀಟಿಲ್ಲ" ಎಂದುಬಿಟ್ಟ.

ಆತನ ಸ್ವರೂಪ ನಡುಗುತಿತ್ತು. ಹೃದಯದಲ್ಲಿ ಕೋಲಾಹಲವೆದ್ದಿತ್ತು. ಆದರೂ ಮತ್ತೊಮ್ಮೆ ಅದೇ ಮಾತನ್ನು ಗಟ್ಟಿಯಾಗಿ ಹೇಳಿದ.

ಇದೆಲ್ಲ ನಾಗೇಶ್ವರಯ್ಯನಿಗೆ ಕನಸಿನಂತೆ ಕಂಡಿತು. ತನ್ನ ಕಿವಿಯನ್ನು ತಾನೇ ನಂಬಲಿಲ್ಲ. "ಸೀಟಿಲ್ಲದಿರಬಹುದು; ಆದರೆ ತನಗೆ ಸೀಟಿಲ್ಲವೇ?" ಮಾಧವನ ಬಾಯಿಂದ ಆ ಮಾತನ್ನವರು ಎಂದೂ ಊಹಿಸಿರಲಿಲ್ಲ ದಂಗು ಬಡಿದು ಕ್ಷಣಕಾಲ ಬಸ್ಸಿನ ಕಂಬಿ ಹಿಡಿದು ಮಾಧವನನ್ನೇ ದಿಟ್ಟಿಸುತ್ತಾ ನಿಂತುಬಿಟ್ಟರು.

ಮಾಧವನ ಎದೆಯೂ ಡವಗುಟ್ಟುತಿತ್ತು, ಆದರೂ ಕರ್ತವ್ಯದ ಹಾದಿಯಲ್ಲಿದ್ದವನಂತೆ, "ಪೋಗುವ, ಡ್ರೈವರ್!" ಎಂದು ಬಿಟ್ಟ. ಬಸ್ಸು ಮೆಲ್ಲನೆ ಚಲಿಸತೊಡಗಿತು.

ನಾಗೇಶ ರಾಯರಿಗೆ ಕಣ್ಣುಗತ್ತಲೆ ಕಟ್ಟಿದಂತಾಯಿತು. ಹೃದಯದ ಮೇಲೆ ಬರೆ ಎಳೆದಂತಾಗಿತ್ತು. ಮೈ ಮೇಲಿನ ಪರಿವೆಯಿಲ್ಲದೆ. "ಮಾಧೂ ಅರ್ಜೆಂಟ್, ಉಡುಪಿಯಿಂದ.....,ಎನ್ನುತ್ತಿರುವಾಗಲೇ ಕುತ್ತಿಗೆ ಬಿಗಿದು ಬಂತು; ಮುಂದುವರಿಸಲಾಗಲಿಲ್ಲ.

ಕಂಡಕ್ಟರ್ ಸ್ವರ ಏರಿಸಿದ. "ಇಳಿಯಿರಿ ಎಂದೆನಲ್ಲನೇ, ಇಳಿಯಿರಿ! ಸೀಟಿಲ್ಲ,, ಎಂದು ರಾಯರನ್ನು ಬಲಾತ್ಕಾರವಾಗಿ ಕೆಳಗಿಳಿಸಿ ಡ್ರೈವರ್, ಎಂದ,

ಬಸ್ ಧಾವಿಸಿ ಕಣ್ಮರೆಯಾಯಿತು.

ನಾಗೇಶ ರಾಯರು ತಲೆಯ ಮೇಲೆ ಕೈಹೇರಿಸಿಕೊಂಡು ಅತ್ತಿಯೇ ಕುಸಿದು ಕುಳಿತರು. ಅವರಿಗೆ ಒತ್ತಟ್ಟಿನಿಂದ ದುಃಖ—ನಿರಾಶೆ, ಇನ್ನೊಂದು ಬದಿಯಿಂದ ಮಾಧವನ ಮೇಲೆ ಸಿಟ್ಟು, ಅಪಮಾನ—ಇವೆಲ್ಲ ಮುತ್ತಿಕೊಂಡುವು. ಹುಚ್ಚರಂತಾಗಿ ಮೈಮರೆತರು.

ಪಾಪ ಕಂಡೆಕ್ಟರನಾದರೂ ಏನು ಮಾಡಿಯಾನು? ಅದೇ ಬಸ್ಸಿನಲ್ಲಿ ಚೆಕ್ಕಿಂಗ್ ಇನ್‌ಸ್ಪೆಕ್ಟರ್, ಪೋಲೀಸ್, ಮತ್ತೂ ಆರೋ ಆಫೀಸರರೆಲ್ಲ ಕುಳಿತಿದ್ದರು!

ನಿರುಪಾಯರಾಗಿ ಬಸ್ ಸ್ಟೇಂಡಿನತ್ತ ಕಾಲೆಳೆಯುತ್ತಾ ಹೊರಟರು ನಾಗೇಶ ರಾಯರು.

೦ ೦ ೦

ರಾಜಾರಾಮ ವಿಪರೀತ ಚಡಪಡಿಸುತಿದ್ದ. ಒಮ್ಮೆ ತಾಯಿಯ ವೃತ್ಯುರಯ್ಯೆಯ ಬಳಿ, ಇನ್ನೊಮ್ಮೆ ಆಸ್ಪತ್ರೆಯ ಬೀದಿಯ ಬಾಗಿಲು, ಆ ಮೇಲೆ ಡಾಕ್ಟರರ ಬಳಿ—ಹೀಗೆ ಸರದಿ ಪ್ರಕಾರ ಓಡಾಡುತಿದ್ದ. ಎಷ್ಟು ಕಾದರೂ ತಂದೆಯ ಸುಳಿವಿಲ್ಲದುದನ್ನು ಕಂಡು ಬಹಳ ನಿರಾಶೆಗೊಂಡ.

ರೋಗಿಯ ಸ್ಥಿತಿ ಚಿಂತಾಜನಕವಾಗಿತ್ತು. ಇನ್ನೇನು, ಬಹಳ ಉದ್ದವಿಲ್ಲ; ಅಂತ್ಯಕಾಲದ ತೇಗು ಪ್ರಾರಂಭವಾಗಿತ್ತು. ಮೈಮೇಲಿನ ಪರಿವೆಯೇ ಇರಲಿಲ್ಲ. ಉಸಿರು ನಿಧಾನವಾಗಿ—ಕಟ್ಟಿ ಕಟ್ಟಿ ಬರುತಿತ್ತು ಅಂಗಾಲು ತಣ್ಣಗಾಗಿತ್ತು.

ಮತ್ತೆ ಏನು ನಿವಿಷ; ಅ ಮೇಲೆ ಎಲ್ಲವೂ ಮುಗಿದುಹೋಗಿತ್ತು. ರಾಜಾರಾಂ ಬಾಯಿಗೆ ನೀರೆರೆದ.

ಮತ್ತರ್ಧ ಗಂಟೆಯ ನಂತರ ನಾಗೇಶ ರಾಯರು ಬರುವಾಗ ಎಲ್ಲವೂ ಶೂನ್ಯವಾಗಿತ್ತು. ಹರಿದುಬಿದ್ದ ಆಕಾಶದ ಭಾವನ್ನು ತಾಳಲಾರದೆ ಅಲ್ಲಿಯೇ ಕುಸಿದುಬಿದ್ದರು ಅವರು.

೦ ೦ ೦

ಉತ್ತರಕ್ರಿಯೆಯೆಲ್ಲ ಮುಗಿದಿತ್ತು. ಈ ಹದಿನಾಲ್ಕು ದಿನಗಳಲ್ಲಿ ಮಾಧವ ಒಮ್ಮೆಯೂ ರಾಯರಿಗೆ ಮುಖ ತೋರಿಸುವ ಧೈರ್ಯ ಮಾಡಿರಲಿಲ್ಲ. ಇದು ರಾಯರಿಗೂ ಸಮಸ್ಯೆಯೇ ಆಗಿತ್ತು.

ಮಾಧವ ತನ್ನ ಮೇಲೆ ತಾನೇ ಜಿಗುಪ್ಸೆ ತಾಳಿದ್ದ. ರಾಯರಿಗೆ ಅವರ ಪತ್ನಿಯ ಅಂತ್ಯ ದರ್ಶನ ಲಭಿಸದಿದ್ದುದಕ್ಕೆ ತಾನೇ ಕಾರಣ—ಎಂಬುದನ್ನಾತ ಅರಿತಿದ್ದ.

ಹದಿನೈದನೆಯ ದಿನ ಮನೆಯ ಸಾಮಾನನ್ನೆಲ್ಲ ಮೂಟೆಕಟ್ಟಿ ಹೆಂಡತಿ ಮಕ್ಕಳೊಡನೆ ಮನೆಯಿಂದ ಹೊರಟಿದ್ದ. ನೇರಾಗಿ ರಾಮರಲ್ಲಿಗೆ ಹೋಗಿ ಅವರ ಕಾಲು ಹಿಡಿದು "ಸಾವುಕಾರರೇ, ಈ ನಿಭ್ಯಾಣ ಮನೆ ಬಿಟ್ಟು ಹೊರಡುತಿದ್ದಾನೆ, ಕಳಿಸಿಕೊಡಿ" ಎಂದು ಬಿಕ್ಕಳಿಸತೊಡಗಿದ.

ರಾಯರಿಗೆಲ್ಲ ತಿರ್ಥವಾಯಿತು. ಆ ದಿನದ ಘಟನೆ ನೆನಪಾಯಿತು. ಮಾಧವನ ಹೃದಯದ ಭಾವನೆಗಳೆಲ್ಲವನ್ನೂ ಅರಿತರು. ಆತನನ್ನು ಹಿಡಿದೆತ್ತಿ ಅಪ್ಪಿಕೊಂಡು, "ಮಾಧೂ, ಅವೆಲ್ಲ ನನ್ನ ಹಣೆಬರೆಹ. ನೀ ನೆಲ್ಲಾ ಹೋಗಬೇಡ" ಎಂದರು. ಅವರೂ ಬಿಕ್ಕಳಿಸುತ್ತಿದ್ದರು!

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ.ನ.



Tel: 'BLUEYAGAR'. —— ಚಿನ್ನ ಮತ್ತು ವಜ್ರಗಳ ಆಧುನಿಕ ತವರುಮನೆ —— Phone: 374.

ಕೆ.ಆರ್.ಕೆ.ಶೇಟ್ ಡಯಮಂಡ್ ಮಾರ್ಟ್

ಸ್ಥಾಪನೆ:1919] ಚಿನ್ನ ಮತ್ತು ವಜ್ರದ ವ್ಯಾಪಾರಿಗಳು,(ಗವರ್ನ್‌ಮೆಂಟ್ ಕಾಲೇಜ್ ಎದುರುಗಡೆ)ಮಂಗಳೂರು. ಮಾಲಿಕ:ಕೆ.ಕೆ.ಆರ್.ಶೇಟ್

NAVAYUGA, UDIPI.
REGD. NO.BG. 176

28-12-1961

LICENSE NO. 31
Licensed to Post without Prepayment

ಪುಸ್ತಕ ವಿಮರ್ಶೆ

[ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿ ವಿನಂತಿ —ಸಂ. ನ.]

ಧರ್ಮಶ್ರೀ—ಶ್ರೀ ಎಸ್. ಎಲ್. ಭೈರಪ್ಪನವರ ಸ್ವತಂತ್ರ ಸಾಮಾಜಿಕ ಕಾದಂಬರಿ; ಸಾಹಿತ್ಯ ಭಂಡಾರ, ಹುಬ್ಬಳ್ಳಿ ಇವರಿಂದ ಪ್ರಕಾಶಿತ. ಪುಟಗಳು. ೩೪೦ ಬೆಲೆ ರೂ. ೪—೫.

ಮಾನವನ ಬದುಕು ಹಲವು ಧಾರೆಗಳಲ್ಲಿ ಹರಿಯುತ್ತದೆ. ಇದನ್ನು ಸ್ವಾಭಾವಿಕವೆನ್ನಲೇ ಬೇಕು. ಬೆಳೆದು ಬಂದಂತೆ, ಆತನ ಮೇಲೆ ನಾನಾ ಪ್ರಕಾರದ ಪ್ರಭಾವಗಳು ಪರಿಣಾಮ ಬೀರುತ್ತವೆ. ವಿಘ್ನವಿಡ್ಡೂರಗಳು ಆತನನ್ನು ಎದುರಿಸುತ್ತವೆ; ಪ್ರಭಾವ ವಶದಿಂದ ಜೀವನ ಗತಿಯನ್ನೇ ಬದಲಾಯಿಸುವ ಸನ್ನಿವೇಶವೂ ಒದಗುತ್ತದೆ; ಈ ಬದಲಾದ ಸನ್ನಿವೇಶಕ್ಕೆಹೊಂದಿಕೊಂಡು ಜೀವಿಸುವವರು ಅತ್ಯಲ್ಪ ಮಂದಿ. ಪ್ರಭಾವಿತನಾಗಿ ತಾನು ಬದಲಿಸಿದ ಜೀವನಮಾರ್ಗದಲ್ಲಿಯೂ ತನಗೆ ಮಾನಸಿಕ ಸುಖ-ಶಾಂತಿಸಿಗದಿರಲು ಸೊಂದ ಕಂಗೆಟ್ಟು ದಿಕ್ಕು ಕಾಣದ ಒರ್ವ ವಿದ್ಯಾವಂತ ತರುಣನ ಚಿತ್ರವನ್ನೂ ಆತನು ಬಂಧಮುಕ್ತನಾಗುವುದನ್ನು ನಾವು ಧರ್ಮಶ್ರೀಯಲ್ಲಿ ಕಾಣಬಹುದು.

ಸತ್ಯನಾರಾಯಣ ಎಳವೆಯಲ್ಲೇ ಅನಾಥನೆಂತಾಗಿ ಹೆರವರ ಸಹಕಾರದಿಂದ ಪ್ರಯಾಸಪಟ್ಟು ಬಿ. ಎ. ಮುಗಿಸುತ್ತಾನೆ. ಕಲಿಯುತ್ತಿರುವಾಗ, ಆರ್. ಎಸ್ ಎಸ್. ನ ವೀರ ಜೀವಿ ಶಂಕರ ಆತನಲ್ಲಿ ವಿಚಾರದ ಬೆಂಕಿಯನ್ನುರಿಸುತ್ತಾನೆ. ಬಾಲ್ಯನ್ನೇ ಹಿತೆ ರಾಚಮ್ಮಳು ನಿಷ್ಕಲ್ಮಷ ಪ್ರೇಮದಿಂದ ಕಾಣುತ್ತಾಳೆ ಹಿಂದೂ ಧರ್ಮ, ಹಿಂದೂ ತತ್ವಗಳ ಅಧ್ಯಯನವನ್ನು ಇತರ ಧರ್ಮಶಾಸ್ತ್ರಗಳೊಡನೆ ತುಲನಾತ್ಮಕವಾಗಿ ವಿಮರ್ಶಿಸಿ, ಹಿಂದೂ ಧರ್ಮದ ಸಮರ್ಥಕನಾದ ಸತ್ಯ, ರಾಚಮ್ಮಳ ನಾದಿನಿ ಲಿಲ್ಲಿಯ ಮೇಲೆ ಸ್ವಭಾವ ಬೀರುತ್ತಾನೆ; ಕಟ್ಟಾ ಪಾಶ್ಚಾತ್ಯ ಹುಚ್ಚುಗೆಯೂಗಿದ್ದ ಆಕೆಯು ಹಿಂದೂ ವಹಿಳೆಯಾಗುವಂತೆ ಮಾಡುವಲ್ಲಿಸಮರ್ಥನಾಗುತ್ತಾನೆ. ಇದರಿಂದಾಗಿಯೇ ಅನುರಕ್ತಿ ಮೂಡಿ, ಆಕೆಯು ಕೈಹಿಡಿಯಲು ಕ್ರೈಸ್ತ ಮತವನ್ನು ಅಂಕರಾತ್ಮನಿಗೆ ವಿರೋಧವಾಗಿಯೇ ಸೇರುತ್ತಾನೆ. ಇದೇ ಆತನ ಜೀವನಕ್ಕೆ—ಶಾಂತಮಯಜೀವನಕ್ಕೆ ಮುಳುವಾಗುತ್ತದೆ. ಶರೀರಕ್ರಮುಖದಂತಾತ ಚಡ ಪಡಿಯುತ್ತಿರುವಾಗ, ಹಿಂದೂ ಬಂಧುಗಳು, ಸ್ನೇಹಿತರ ಮಾತ್ರವಲ್ಲ ಕ್ರೈಸ್ತರ ಅಸಮಾಧಾನಗಳಿಂದ ದಿಕ್ಕುಗೇಡಿಯಾಗಿ ಮಾನಸಿಕವಾಗಿ ತೊಳಲಾಡಿ ಕೊಟ್ಟಕೊನೆಗೆ ಆರ್ಯಸಮಾಜದ ಮೂಲಕ ಮರಳಿ ಹಿಂದೂ ದೀಕ್ಷೆಯನ್ನು ತೆಗೆದುಕೊಳ್ಳುತ್ತಾನೆ; ಈತನಿಗೆ ತಕ್ಕ ಮಡದಿಯಾದ ಲಿಲ್ಲಿಯೂ ಧರ್ಮಶ್ರೀ ಎಂದು ನಾಮಕರಣಪಡೆಯುತ್ತಾಳೆ.

ಕಥಾನಾಯಕ ಸತ್ಯನಾರಾಯಣನ ಮಾನಸಿಕ ಗೊಂದಲವೇ ಕಥೆಯ ತತ್ವ ಮತ್ತು ಸಾರ. ಗಂಡು ಹೆಣ್ಣಿನ ಆಕರ್ಷಣೆಗೆ ಜಾತಿಯ ಪ್ರಶ್ನೆ ಅಡ್ಡ ಬಂದಾಗ, ಒಂದೇ ನೀತಿಯ ಪ್ರಶ್ನೆ ಅಳಿಯುತ್ತದೆ; ಇಲ್ಲವೇ ಇಬ್ಬರಲ್ಲಿ ಒಬ್ಬರು ಜಾತಿಯನ್ನು ತ್ಯಜಿಸಲು ಸಿದ್ಧರಾಗಲೇ ಬೇಕಾಗುತ್ತದೆ ಜಾತಿ—ನೀತಿಗಳಲ್ಲಿ ತಮಗೆ ಯಾವುದು ಅಗತ್ಯವೆಂಬುದನ್ನು ಮೊದಲು ನಿರ್ಣಯಿಸಿಕೊಳ್ಳ ಬೇಕಾಗುತ್ತದೆ. ಸತ್ಯ ನೀತಿಯನ್ನೇ ಎತ್ತಿ ಹಿಡಿದ. ಈತನು ಕುಲಭೇದಲ್ಲಿ ಕ್ರೈಸ್ತನಾಗಬಹುದು: ಆದರ ಬಾಗಿಲು ಆತನಂತವನಿಗೆ ಸದಾ ತೆರೆದಿದೆ; ಆದರೆ, ಲಿಲ್ಲಿ ಸಾವಿರ ವ್ರತಾಚರಣೆ ಮಾಡಿದರೂ ಬ್ರಾಹ್ಮಣಿತಿಯಾಗಳು. ಹಿಂದೂ ಧರ್ಮದಲ್ಲಿನ ಈ ಕೊರತೆಯಿಂದ ಅಡೆಪ್ಪೋ ನೈತಿಕವಾದಿಗಳು ಬವಣೆಪಟ್ಟಿದ್ದಾರೆ; ವಿವಾಹಿತ ಸ್ತ್ರೀಯಂತೆ ಬಾಳಿ ಚಡಪಡಿಸುವವರೂ ಇದ್ದಾರೆ. ಹಿಂದೂ ಧರ್ಮದ ಉದಾರ ನೀತಿಯು ಈ ದಿಸೆಯಲ್ಲಿ ತೀರ ಕಟ್ಟುಪಾಡು ಮಾಡಿದಂತಿದೆ ಸತ್ಯ-ಲಿಲ್ಲಿಯರಿಗೆ ಮತ ಬೇಕಿಲ್ಲ; ಆದರೆ, ಅವರ ಮಕ್ಕಳೂ ಈ ಮತಭರಿತ ಪ್ರಸಂಗದಲ್ಲಿ ಬದುಕ ಬೇಕು. ಅದಕ್ಕಾಗಿ ಹೆಸರಿಗೊಂದು ಮತ — ಜಾತಿ ಬೇಕೇಬೇಕಾಯಿತು.

ಮತಾಂತರಗೊಂಡ ತನ್ನ ಅಣ್ಣನು ತಂದೆಯ ತಿಥಿಯ ದಿನ ಬಂದಿದ್ದರೂ ಪ್ರಸಾದ ಬಡಿಸಲು ಒಪ್ಪದೆ ತಂಗಿ ಶಕುಂತಲೆ ಎಲ್ಲ ಬಂಧುಬಳಗವನ್ನೂ ಪ್ರತಿಬಿಂಬಿಸುತ್ತಾಳೆ. ಹಾಗೆಯೇ ಮತಾಂತರಗೊಳ್ಳುವ ಕ್ರೈಸ್ತರಿಗೆ ನೀಡುವ ಸಹಾಯ-ತಮ್ಮ ಸ್ವಾರ್ಥಸಾಧನೆಗಾಗಿ-ಗಳನ್ನು ಬಿಷಪ್ಪರು ತೋರ್ಪಡಿಸುತ್ತಾರೆ. ಸತ್ಯದ ಮಾನಸಿಕ ಹೊಯ್ದಾಟವನ್ನು ಅರಿತು, ಆತನ ಜೀವನವು ಸುಖಮಯವಾಗಲಿಯೆಂದು ನಿರಂತರ ಶ್ರಮಿಸಿ ರಾಚಮ್ಮ ಹಿಂದೂ ಸಂಸ್ಕೃತಿಯ ಪ್ರಚಾರಕನಾಗಿ ದೇಶದ ಮಗನಾದ ಶಂಕರ ಇವರು ಕಾದಂಬರಿಯ ಪ್ರಧಾನ ಸೂರಕ ಪಾತ್ರಗಳು ಇವುಗಳ ಚಿತ್ರಣ ತುಂಬಿಬಂದಿದೆ; ರಾಚಮ್ಮನ ಗಂಡ ದೇವಪ್ಪಸಾವರ ನಿರೀಶ್ವರವಾದವೂ ಎದ್ದು ತೋರುತ್ತದೆ

ಶ್ರೀ ಭೈರಪ್ಪನವರು ಸತ್ಯನಾರಾಯಣನ ಪಾತ್ರವನ್ನು ಬಹು ಆದರ್ಶವೆಂಬಂತೆ ಚಿತ್ರಿಸಿದ್ದಾರೆ. ಇಂತಹ ಆದರ್ಶದ ಪ್ರಭಾವದಿಂದಲೇ ಲಿಲ್ಲಿಯ ಪಾತ್ರವೂ ಸತ್ಯನಮನಸೊಪ್ಪುವಂತೆ ರೂಪಿತವಾಯಿತು. ಲಿಲ್ಲಿ ಹುಟ್ಟಿನಲ್ಲಿ ಮತಾಂತರಗೊಂಡ ಹಿಂದು. ಆಕೆಯ ನಾಡಿನಾಡಿಯಲ್ಲಿ ಹರಿಯುತ್ತಿರುವುದು ಸತ್ಯನಂತೆಯೇ ವಿಶುದ್ಧ ಹಿಂದೂ ರಕ್ತ. ಹಾಗಿರುವಾಗ ಪತಿ ಪತ್ನಿಯರಂತೆ ಬಾಳಲು ಅವರಿಗೆ ಆತಂಕ ಮಾತ್ರ ಮತದ ಲೇಬಲ್! ಸತ್ಯನನ್ನು — ಜೀವನವನ್ನು ತಿಳಿದವನಿಗೆ ಮತದ ಪ್ರಶ್ನೆ ಅಡ್ಡಬರುವುದಿಲ್ಲ. ಸತ್ಯನ ತಂದೆ ಮತ್ತು ಗಂಗ ಮಾಟ ಒಂದೇ ಜಾತಿಯವರಲ್ಲ; ಕುಲದವರಲ್ಲ: ಆದರೆ, ಆತನು ಕುಡಿಸಿದ ನೀರನ್ನು ಸಾಯಲಿದ್ದ ತಂದೆ ಕುಡಿಯಲಿಲ್ಲವೆ? ಚಿತೆಗೆ ಅತನೇ ಬೆಂಕಿ ಯಿಡಲಿಲ್ಲವೆ? ಗಂಗ ಮಾಟನೇ ಹೇಳುತ್ತಾನೆ. "ಜಾತಿಯಾವುದೇ ಆದರೂ ಅಪ್ಪ ಮಗ ಅನ್ನೋದು ಓಕ್ತುದಾ? ಏಟಾದರೂ ಉಟ್ಟುಸ್ದ ಅಪ್ಪ ಅಲ್ವಾ" ಗಂಗ ಮಾಟನಂತಹ ಸಾಮಾನ್ಯ ವ್ಯಕ್ತಿ ತಿಳಿದ ಸತ್ಯವನ್ನು ಒಪ್ಪಿಕೊಳಲು ತಿಳಿವಳಿಕೆಯುಳ್ಳವರಲ್ಲಿ ಯಾರು ಸಿದ್ಧರಿದ್ದಾರೆ? ಸತ್ಯನ ಸತ್ಯಕಥೆಯೋದಿದ ಬಳಿಕ" "ಇದು ಹೀಗೇಕೆ ಆಯಿತು? ಹೀಗೆಯೇ ಏಕೆ ಆಗಬೇಕಿತ್ತು? ಇವನೇಕೆ ಹೀಗೆ ಮಾಡಿದ? ವಿಚಿತ್ರ ವ್ಯಕ್ತಿ ಈತನದೇ ತಪ್ಪು ಎಂದು ಮುಂತಾದ ಪ್ರಶ್ನೆ ತೀರ್ಮಾನಗಳನ್ನು ಮುಂದೆ ನೂಕುವುದಲ್ಲ; "ಹೀಗೆಯೇಆಗುತ್ತದೆ" ಎಂಬ ಅಂತಃಪ್ರೇರಣೆ ಪಾಠಕರಲ್ಲಿ ಬಂದೇ ಬರುತ್ತದೆ.

ಹೊಸ ಮಾದರಿಯ ವಸ್ತುವನ್ನು ಆಧರಿಸಿ, ಶ್ರೀ ಭೈರಪ್ಪನವರು ತಮ್ಮ ಸುಲಲಿತವಾದ ತಿಳಿಗನ್ನಡದಲ್ಲಿಹೆಣೆದ ಈಕಾದಂಬರಿ ಜೀವನಕ್ಕೆಂತ ಭಿನ್ನವಾಗಿರದೆ ಅದೊಂದು ಸಮಸ್ಯೆಯಂತೆಯೇ ಇದೆ; ಪರಿಹಾರವೂ ಇಲ್ಲಿ ಸೂಚಿತವಾಗಿದೆ. ಕನ್ನಡ ಸಾಹಿತ್ಯದಲ್ಲಿ ಬಂದಿರುವ ಈ ದಶಕದ ಕಾದಂಬರಿಗಳಲ್ಲಿ 'ಧರ್ಮ ಶ್ರೀ' ತನ್ನ ಸ್ಥಾನವನ್ನು ಅವಶ್ಯ ಭದ್ರಪಡಿಸಿಕೊಳ್ಳುತ್ತದೆ.

—ಗೋರಾ

(೧೧ನೇ ಪುಟದಿಂದ.)

ದಿಂದ-ತಮ್ಮ ಕಡೆಯಿಂದ ಆಫ್ರೋಏಶ್ಯಾಗಳತ್ತ ಸರಿಯುತ್ತಿದೆ ಎಂಬುದರ ಮನವರಿಕೆ ಅವರಿಗಾಯಿತು. ಇದರಿಂದವು ಕಳವಳಗೊಳ್ಳುತ್ತಿವೆ ಭಾರತದ ನೀತಿಯನ್ನ ಈಗ ತಾವು ಬೆಂಬಲಿಸಿದರೆ ಮುಂದೆ ಮಹಾಹತುಗಳೆಲ್ಲವೂ ಸ್ವತಂತ್ರವಾಗುವುದಲ್ಲದೆ, ತಮ್ಮ ಭದ್ರಮುಷ್ಟಿಯೂ ಅಭದ್ರವಾಗುವುದು ಎಂಬ ಸಹಜಭಯ ಅವುಗಳಿಗೆ. ಇದರಿಂದ ಅಸಹ್ಯ ನಾಟಕವೊಂದನ್ನವು ಅಭಿನಯಿಸ ತೊಡಗಿವೆ.

ಪ್ರತೀಕಾರ ಕಾರ್ಯ

ಈ ನಾಟಕದ ಪರಿಣಾಮವೇನು? ಭಾರತವನ್ನು ಹದಕ್ಕೆ ತರಲು ಸಂಚು ಹೂಡಬಹುದು. ಪಾಕಿಸ್ತಾನವನ್ನು ಈಗಾಗಲೇ ಇವು ತಮ್ಮ ಬಲೆಯಲ್ಲಿ ಸೆಳೆದುಕೊಂಡಿವೆ. ಅಯೂಬ ಖಾನಂತಾದರೂ ಆಟಕೆಯಂತಿದ್ದಾರೆ ಕಾಶ್ಮೀರದ ಮೇಲೆ ದಂಡೆತ್ತಿ ಹೋಗುವಂತೆ ಅವರಿಗೆ ಪ್ರೇರಣೆಯಿತ್ತು, ಭಾರತವನ್ನು ಸತ್ಯ ಪರೀಕ್ಷೆಗೆ ಗುರಿಮಾಡಿಯೂವೆಂಬ ಭಯ ಕೆಲವರಿಗೆ. ಆದರೆ, ಯುಕ್ತ ರಾಷ್ಟ್ರಸಂಘದಲ್ಲಿ ಕಾಶ್ಮೀರ ಪ್ರಶ್ನೆಯಿರುವುದರಿಂದ, ಪಾಕಿಸ್ತಾನದ ಇಂತಹ ಕ್ರಿಯೆಯು ಸಂಘದ ಅಂತ್ಯಕ್ರಿಯೆ ಮಾಡಿದಂತೆ ಇದು ಸದ್ಯ ನಡೆಯುವ ಮಹಾಸಹಾಸ.

ಆದರೆ, ಒಂದು ಮಾತು ಮಾತ್ರ ತಿಳಿಯಾಗುತ್ತದೆ. ಗೋವಾ ವಿಮೋಚನಾ ವಿಜಯಯಾತ್ರೆಯ ಕಾಲದಲ್ಲಿ ಬ್ರಿಟನ್-ಅಮೆರಿಕೆಗಳಲ್ಲಾದ ಪ್ರತಿಕ್ರಿಯೆಯನ್ನು ಆ ದೇಶಗಳಲ್ಲಿಯೂ ಒಪ್ಪದವರು ಇದ್ದಾರ ಇವರ ಆಗ್ರಹದಿಂದ ವಿಮೋಚನೆಯ ಪ್ರಶ್ನೆ ಹಳೆಯದಾಗುತ್ತ ಬಂದಂತೆ ಅಲ್ಲಿದ್ದ ಕಾವೂ ಕಡಿಮೆಯಾಗುತ್ತ ಬರಬಹುದು.

ಭೀಕರ ಪರಿಣಾಮ

ಈ ಶತಮಾನದಲ್ಲಿ ಪಾಶ್ಚಾತ್ಯ ರಾಷ್ಟ್ರಗಳು ಎರಡು ಬಾರಿ ಮಹಾ ಯುದ್ಧವನ್ನು ಮಾಡಿದುವು. ಮೂರನೆಯ ಯುದ್ಧ ಮಾಡಲು ಅವು ಅಶಕ್ತವಾಗುವುದು ಖಂಡಿತ. ರಾಜಾಭಿಲಾಷೆಯಿಂದ ಈ ಸಮರವೂ ಸಂಘಟಿಸದು. ಮೂರನೆಯ ಸಂಗರ ಸಡೆಯಾವುದು ಸಂಯುಕ್ತರಾಷ್ಟ್ರ ಸಂಘದ ನಾಯಕತನದ ಬಗ್ಗೆ ಪಾಶ್ಚಾತ್ಯ ಮತ್ತು ಪಾರ್ವಾತ್ಯ ರಾಷ್ಟ್ರಗಳ ನಡುವೆ —ಆದರೆ, ಇಂತಹ ಘೋರ ಯುದ್ಧ ನಡೆದರೆ, ಜಗತ್ತು ಅರ್ಥಕ್ಕರ್ಥ ಸರ್ವನಾಶಗೊಳ್ಳುವುದು-ಮುಖ್ಯವಾಗಿ ಪಾಶ್ಚಾತ್ಯ ರಾಷ್ಟ್ರಗಳ ನಾಗರಿಕತೆ ಮಣ್ಣಿನಲ್ಲಿ ಸೇರಿ ಹೋಗುವುದು. ಇದಕ್ಕೆ ಅಮೆರಿಕೆಯೂ ಸಿದ್ಧವಿಲ್ಲ; ಬ್ರಿಟನ್ನೂ ಉತ್ಸಾಹಿಯಾಗಿಲ್ಲ

ಸರ್ವೇ ಜನಾಃ ಸುಖಿನೋ ಭವಂತು

1962
ನೇ ವರುಷ
ಸುಖದಾಯಕ
ವಾಗಲಿ

ಸಿಂಡಿಕೇಟ್ ಬ್ಯಾಂಕಿನ
ಡೈರೆಕ್ಟರ್ ಮಂಡಳಿ ಮತ್ತು ಶಿಬಂಧಿ
ವರ್ಗವು ತಮ್ಮ ಸ್ನೇಹಿತ ಹಿತ
ಚಿಂತಕರೆಲ್ಲರಿಗೂ ಒಂದು ಸಂತಸದ
ಹೊಸ ವರುಷವನ್ನು
ಆಶಿಸುವುದು.

ಹೊಸ ವರುಷ ಸಮೃದ್ಧಿ, ಸಂತೃಪ್ತಿ ಶಾಂತಿಗಳನ್ನು
ತರಲಿ.

ಸಿಂಡಿಕೇಟ್ ಬ್ಯಾಂಕ್

ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸು: ಉಡುಪಿ.

ವರ್ಗ—ಊಳಿಗ
ಮೊದಲಾದ ಯಾವತ್ತೂ ತರದ
ಎಕೌಂಟ್ ಪುಸ್ತಕಗಳು
ಶಾಲಾ ರಿಜಿಸ್ಟ್ರಿಗಳು,
ಫಾರ್ಮುಗಳು,
ದೊರೆಯುತ್ತವೆ.
ವಿಚಾರಿಸಿರಿ—
ನವಯುಗ ಪ್ರೆಸ್, ಉಡುಪಿ

Edited Printed & Published by K. H. Shetty, at the Navayuga Press, Udipi, S. India